ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ಸದ್ಯ ಸಮಾಧಾನಕ್ಕೆ ಬಂದಿದೆ. ಹೊರಗಿನಿಂದ ಒರತಕ್ಕವರು ಕಾಯಿಲೆ ಬಿದ್ದು ತೀರಿಹೋಗುವರು. ಬಿಸಲು ಹೆಚ್ಚಾಗಿದೆ. ಸರ್ಕಾರದವರು ಅಲ್ಲಿನ ಪ್ಲೇಗ್ ಆಫೀಸಿನ ನಾಲ್ಕಾರು ನೌಕರರನ್ನು ವಜಾ ಮಾಡಿದ್ದಾರೆ.

ಗತಿಸಿದ ಸ್ವಾಮಿ ವಿವೇಕಾನಂದ ಎಂಬ ಹಿಂದೂ ಸನ್ಯಾಸಿಗಳ ಹೆಸರನ್ನು ಶಾಶ್ವತ ಪಡಿಸ ಬೇಕೆಂದು ಕೆಲವು ದೊಡ್ಡ ಮನುಷ್ಯರು ಮದ್ರಾಸಿನಲ್ಲಿ ಚಂದಾ ವಸೂಲ್ಮಾಡುತ್ತಿದಾರೆ. ಇದುವರೆಗೆ ಈ ಫಂಡಿಗೆ ೧,೪೩೦ ರೂ. ಚಂದಾ ವಸೂಲಾಗಿರುವದು.

ಮದರಾಸ್ ಗೌವರ್ನರ್ ಲಾರ್ಡ್ ಆಂಪ್ಟಿಲ್ ರವರು ಮುಂದಿನ ತಿಂಗಳಲ್ಲಿ ರಾಜಧಾನಿಗೆ ದಯಮಾಡುವವರಾಗಿದಾರೆ. ಇವರು ಊಟಕಮಂಡಲದಿಂದ ಕಾಕನಕೋಟೆಯಲ್ಲಿ ಶಿಕಾರಿ ಮಾಡಲು ಹೋಗುವರು. ಶ್ಯಾಂಪಿನ ವಿಚಾರವಾಗಿ ಮಿ॥ ಥಿಯೊಬಾಲ್ಡ್‌ರವರು ನೇಮಕವಾಗಿದಾರೆ.

ಶ್ರೀಮನ್ ಮಹಾರಾಜರವರು ರಾಜಧಾನಿಗೆ ದಯಮಾಡಿದ ಮೇಲೆ ರಾಜಧಾನಿಯ ಒಡ್ಡೋಲಗದ ಕೆಲಸಗಳು ಶೀಘ್ರವಾಗಿ ನಡೆಯುವವೆಂದು ತಿಳಿಯಬಂದಿದೆ. ಈಗ ಅರಮನೆಯವರುಗಳು ಕೆಲವು ಮೊಹಲ್ಲೆಗಳ ಆರೋಗ್ಯ ವಿಚಾರವನ್ನು ಕುರಿತು ತನಿಖೆ ಮಾಡುತ್ತಿರುವರು.

ಇಲ್ಲಿನ ಕೋರ್ಟು ರಾಜಬೀದಿಯಲ್ಲಿರುವ ಮಿ॥ ಕೃಷ್ಣ ಅರಸಿನವರ ಮನೆಯಲ್ಲಿ ಕಳವು ಮಾಡಿದಷ್ಟು. ಪೋಲೀಸಿನವರು ಪತ್ತೆ ಮಾಡಿದಾರೆ. ಕೆಲವರನ್ನು ಹಿಡಿದಿರುವರು. ಕಳುವಾದ ಕೆಲವು ಮಾಲುಗಳು ಸಿಕ್ಕಿರುತ್ತವೆ. ಇನ್ನೂ ಪೋಲೀಸ್ ತನಿಖೆ ಪೂರೈಸಲಿಲ್ಲವೆಂದು ಕೇಳುವೆವು.

ರಾಜಧಾನಿಯಲ್ಲಿ ಮೊನ್ನೆ ಸಾಹುಕಾರರಾಗಿದ್ದು ಗತಿಸಿ ಹೋದ ಲಕ್ಷ್ಮೀದೇವಮ್ಮನವರ ಕೆಲವು ಧರ್ಮಗಳನ್ನು ನಡೆಸಬೇಕೆಂದು ಗೊತ್ತು ಮಾಡಿದ್ದರು. ಈಗ ಅವರ ಪತ್ನಿಯವರು ಆಸ್ತಿಯಲ್ಲಿ ಸುಮಾರು ೩೦ ಸಹಸ್ರ ರೂಪಾಯಿಗಳನ್ನು ನಾನಾ ಧರ್ಮಕಾರ್ಯಗಳಿಗೆ ವಿನಿಯೋಗಿಸುವಂತೆ ಒಪ್ಪಿರುವದು ಸ್ತೋತ್ರಾರ್ಹವಾಗಿದೆ.

ಮಿ॥ ಎಂ. ಶಾಂತರಾಜೇ ಅರಸಿನವರು ಕಳೆದವಾರ ರಾಜಧಾನಿಗೆ ಬಂದು, ಚಾಮರಾಜನಗರದ ಸಬ್ ಡಿವಿಜನ್ ಛಾರ್ಜನ್ನು ಮಿ॥ ವೆಂಕಟರಾಮಯ್ಯನವರಿಂದ [illegible] ಕೆಲಸ ನೋಡುತ್ತಿದಾರೆ. ಮಿ॥ ವೆಂಕಟರಮಣಯ್ಯಂಗಾರ್ರವರು ರಜದ ಮೇಲೆ ಹೋಗಿದ್ದಾಗ ಮಿ॥ ಅರಸಿನವರು ಹುಣಸೂರಿಗೆ ವರ್ಗವಾಗುವರೆಂದು ಕೇಳುತ್ತೇವೆ.

ಬೆಂಗಳೂರು ಮುನಿಸಿಪ್ ಕೋರ್ಟಿನ ಹೆಡ್‌ಮುನ್ಷಿ ರಂಗರಾಯರವರು ಗೊಲ್ಲರ ಕುಪ್ಪುರಾಮನನ್ನು ಒಳದಾರಿ ಕೊಟ್ಟು ಸರ್ಕಾರಿ ಹಣವನ್ನು ಸ್ವಂತಕ್ಕೆ ವಿನಿಯೋಗಿಸಿಕೊಂಡರೆಂದು ಮೊಕದ್ದಮೆ ಆಗಿದೆಯಷ್ಟೆ. ಈ ಖಟಲೆಯಲ್ಲಿ ಆ ಗೊಲ್ಲರವನ ಮೇಲೆ ಅಪರಾಧವೇನೂ ತೋರುವದಿಲ್ಲವೆಂದು ಮ್ಯಾಜಿಸ್ಟ್ರೇಟರು ಆತನನ್ನು ಬಿಡಿಸಿದರು. ರಂಗರಾಯರವರ ಮೇಲೆ ಹೂಡಿರುವ ಮೊಕದ್ದಮೆಯು ಸೆಷನ್ ವಿಚಾರಣೆಗೆ ನಿಂತಿದೆ.

ಹೋದವಾರ ಹಗರಿಯಲ್ಲಿ ನಡೆದ ಭಾರೀ ಕೊಲೆ ಮೊಕದ್ದಮೆಯು ಮೊದಲು ವಿಚಾರಣೆ ಆದದ್ದರಲ್ಲಿ ಒಬ್ಬನು ವಿನಹ ಉಳಿದ ಅಪರಾಧಿಗಳೆಲ್ಲಾ ಖುಲಾಸೆ ಆಗಿತ್ತು. ಅದೇ ಮೊಕದ್ದಮೆಯನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಖನಿಜ [illegible], ಅಪರಾಧಿಗಳನ್ನು ಸೆಷನ್ ವಿಚಾರಣೆಗೆ ಗುರಿಪಡಿಸಿದರು. ಸೆಷನ್ ಜಡ್ಜಿಯವರು ಆರು ಮಂದಿ ಅಪರಾಧಿಗಳನ್ನೂ ದಯಪಾಲಿಸಿ, ಕಳೆದ ಶುಕ್ರವಾರ ಆ [illegible] ಮಂದಿಯ ಮೇಲೆ ಅಪರಾಧ ರುಜುವಾತಾಗಲಿಲ್ಲವೆಂದು ಅವರನ್ನು ಖುಲಾಸೆ ಮಾಡಿ, ಒಬ್ಬ ಅಪರಾಧಿಯ ಮೇಲೆ ಅಪರಾಧ ರುಜುವಾತಾಗಿದೆ ಎಂದು, ಅವನನ್ನು ಗಲ್ಲಿಗೆ ಹಾಕಬೇಕೆಂದು ಜಡ್ಜಮೆಂಟು ಕೊಟ್ಟರು. ಈ ತೀರ್ಮಾನವನ್ನು ಛೀಫ್ ಕೋರ್ಟಿನವರು ಮುಂದೆ ವಿಮರ್ಶೆ ಮಾಡುವರು.

## ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಸೀಮೆಯ ಪ್ರಾಚೀನ ಲಿಪಿಸ್ಪೆಷಲ್ ಆಫೀಸರವರ ಅಸಿಸ್ಟೆಂಟರಾದ ಮಿ॥ ಆರ್ ನರಸಿಂಹಾಚಾರ್, ಎಂ. ಎ. ಯವರಿಗೆ [illegible]ನೇ ಜನವರಿ ನೇ ತಾರೀಖಿನಾರಭ್ಯ ೧೫ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ವಿದ್ಯಾಭ್ಯಾಸದ ಇಲಾಖೆ ಇನ್ಸ್‌ಪೆಕ್ಟರ್ ಜನರಲ್ ಅವರ ಅಸಿಸ್ಟೆಂಟರಾದ ಮಿ॥ ಟಿ. ಆರ್. ವೆಂಕಟಸ್ವಾಮಿ ನಾಯುಡು ಅವರಿಗೆ ಕಳೆದ ಡಿಸೆಂಬರ್ ೨೫ನೇ ತಾರೀಖಿನ ಆಗಾಯಿತು ೪ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು.

ಮೈಸೂರು ತಾಲ್ಲೂಕಿನ ಅಮಲ್ದಾರ್ ಮಿ॥ ವಿ. [illegible]ರಾಯರಿಗೆ ಆಕ್ಟೋಬರು, ನವಂಬರು ಮಾಹೆಗಳಲ್ಲಿ ಕೊಟ್ಟಿದ್ದ ೧ ತಿಂಗಳ ೫ ದಿನಗಳ ಪ್ರಿವಿಲೇಜ್ ರಜವನ್ನು ನವೆಂಬರು ೧೨ನೇ ತಾರೀಖಿನಲ್ಲಿ ಉಪಯೋಗಿಸಿಕೊಂಡು ಆಕ್ಟೋಬರು ೩೧ನೇ ತಾರೀಖು ಕೆಲಸಕ್ಕೆ ವಾಪಸ್ ಬಂದಿರ ಕಾರಣ ಉಪಯೋಗಿಸಿಕೊಳ್ಳದ ರಜವು ರದ್ದುಮಾಡಲ್ಪಟ್ಟಿರುತ್ತದೆ.

ಮಡಿಕೇರಿ ಡಿವಿಜನ್ ನ ಅಸಿಸ್ಟೆಂಟ್ ಇಂಜಿನಿಯರ್ ಮಿ॥ [illegible]ಗರ ಡಾಕ್ಟರ್ಗೆ ಮಾಹೆ ಡಿಸೆಂಬರ್ ೨೫ನೇ ತಾರೀಖಿನ ಆಗಾಯಿತು [illegible] ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ೨ ವಾರ ಪ್ರಿವಿಲೇಜ್ ರಜಾ ಕೊಟ್ಟಿರುತ್ತದೆ.

ಮರಾಮತ್ತಿನ ಡಿವಿಜನ್ನಿಗೆ ಸೇರಿದ ಮೆಕಾನಿಕಲ್ ಇಂಜಿನಿಯರ್ ಮಿ॥ ಡಬ್ಲ್ಯು. ಜೆ. ವಿ. ಲ್ಲಿನ್‌ರವರಿಗೆ ಕೊಟ್ಟಿದ್ದ ೧ ತಿಂಗಳ ಪ್ರಿವಿಲೇಜ್ ರಜವನ್ನು ೫ ದಿನಗಳು ಜಾಸ್ತಿ ಮಾಡಿರುತ್ತದೆ. ಚಿತ್ರದುರ್ಗದ ಡಿವಿಜನ ಸಬ್ ಅಸಿಸ್ಟೆಂಟ್ ಇಂಜನಿಯರ್ ಮಿ॥ ಬಿ. [illegible] ರಾವ್ ಅವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ೧೫ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿರುವದು.

ಸಾಗರದ ತಾಲ್ಲೂಕು ಅಮಲ್ದಾರ್ ಮಿ॥ ಬಿ. ಹನುಮಂತರಾಯರಿಗೆ ಆಕ್ಟೋಬರು ೫ ಮಾಹೆಯಲ್ಲಿ ಕೊಟ್ಟಿದ್ದ ೪೦ ದಿನಗಳ ಪ್ರಿವಿಲೇಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾದ್ದರಿಂದ ಅದನ್ನು ರದ್ದು ಮಾಡಬೇಕೆಂದು ಅವರು ಕೇಳಿಕೊಂಡಿರುವ ಮೇರೆ ಈಗ ರಜವು ರದ್ದಾಗಿರುವುದು.

ಕಳೆದ ಏಪ್ರಿಲ್ ತಿಂಗಳಲ್ಲಿ ಯಳಂದೂರಿನ ತಾಲ್ಲೂಕು ಅಮಲ್ದಾರ್ ಮಿ॥ ಸಿ. ವಿ. ಕೃಷ್ಣಸ್ವಾಮಿರಾಯರಿಗೆ ಸ್ವಂತ ಕೆಲಸದ ಮೇಲೆ ೩ ತಿಂಗಳು ರಜಾ ಕೊಟ್ಟಿತ್ತು. ಈಗ ಪುನಃ ಸದರಿ ರಜವನ್ನು ೩ ತಿಂಗಳಿಗೆ ಹೆಚ್ಚಿಸಿ ಮೇಲ್ಕಂಡ ರಜದ ಎಲ್ಲಾ ಭಾಗವೂ ಫರ್ಲೋ ರಜವಾಗಿ ಎಣಿಸಲ್ಪಟ್ಟಿರುವುದು.

ಚಿತ್ರದುರ್ಗದ ಡಿಸ್ಟ್ರಿಕ್ಟ್‌ಗೆ ವರ್ಗವಾಗಿ ಹೋದ ಡೆಪ್ಯುಟಿ ಕಮಿಷನರ್ ಮಿ॥ ಎಚ್. ರಾಮಸ್ವಾಮಯ್ಯಂಗಾರ್ರು ಈ ತಿಂಗಳು ೨ನೇ ತಾರೀಖಿನ ದಿನ ಮೇಲೆ ಕಂಡ ಡಿಸ್ಟ್ರಿಕ್ಟಿನ ಛಾರ್ಜನ್ನು ವಹಿಸಿದರು.

## ಕರೆಸ್ಪಾಂಡೆನ್ಸ್.

ಯಾರೂ ಸಹಿ ಹಾಕದೆ ಬರೆದ ವರ್ತಮಾನಗಳಿಗೆ ನಾವು ಜಾಗ ಕೊಡಲಾರೆವು.

ತಿಮ್ಮಪ್ಪ, ಮೈಸೂರು—ನಿಮ್ಮ ಬರಹಕ್ಕೆ ಈ ಪತ್ರಿಕೆಯಲ್ಲಿ ಸ್ಥಳ ದೊರೆಯಲಾರದು.

ನ್ಯಾಯಾಧಿಪತಿಗಳು ಕೆಂಪಮ್ಮನವರೊಡನೆ ಕೊಟ್ಟಿ ಈ ಬಾತ್ಮೀದಾರರು ಕಂಡಾರೆ ಜನಗಳ ಕೆಳಗೆ ವಿಷಯದಲ್ಲಿ ರಘುನಾಥಯ್ಯ ನಾರಾಯಣಸ್ವಾಮಿ [illegible] ಗುರುವರು ಬರೆದದ್ದನ್ನು ನಿಜವೆಂದು ಹೇಳಿ, ಅದನ್ನೇ ಪುಷ್ಟೀಕರಿಸಿ ಬರೆದಿರುತ್ತಾರೆ. ಅದನ್ನು ಪ್ರಕಟಿಸಬೇಕಾದ ಆಗತ್ಯ ಕಾಣುವದಿಲ್ಲ.

ಕೊಳ್ಳೇಗಾಲದ ತಾಲ್ಲೂಕು ಚಿಕ್ಕವಾಡಿ ಎಂಬ ಗ್ರಾಮದ ಹತ್ತಿರ ಇರುವ ಬೆಟ್ಟವು ಇದ್ದಕ್ಕಿದ್ದಹಾಗೆ ೧೧—೧—೦೩ ನೇ ಶನಿವಾರ ಹಗಲು ೩ ಗಂಟೆ ಹೊತ್ತಿನಲ್ಲಿ ತನ್ನಷ್ಟಕ್ಕೆ ತಾನೇ ಗಡಗಡನೆ ನಡುಗಿತೆಂತಲೂ, ಸಮೀಪದಲ್ಲಿದ್ದ ಜನಗಳು ಶಬ್ದವೇನಾಗುತ್ತೇನೋ ಎಂದು ಹೆದರಿಕೊಂಡರೆಂತಲೂ, ಆದಿನ ಅಲ್ಲಿ ಸಂಜೆ ಸಹ ಕೂಡಿಕೊಂಡರೆಂತಲೂ, ಇದಕ್ಕೆ ಕಾರಣವೇನೆಂಬುದನ್ನು ತಿಳಿಸಬೇಕೆಂತಲೂ ಒಬ್ಬ ಬಾತ್ಮೀದಾರರು ಬರೆದು ಕೇಳುತ್ತಾರೆ. ಆ ದಿನ ಬೆಟ್ಟವು ನಡುಗಿದ್ದನ್ನು ಇತರರ್ಯಾರಾದರೂ ಕಂಡಿದ್ದರೆ ಬರೆದು ತಿಳಿಸ್ಬೇಕೆಂದು ಕೋರುತ್ತೇವೆ.

—ಎಡಿಟರ್.

## ಇಂದೋರ್ ಸಂಸ್ಥಾನವು.

### ಅದರ ಭೂವಿವರಣೆ.

ಇಂದೋರ್ ಸಂಸ್ಥಾನವು ಮಧ್ಯಹಿಂದುಸ್ಥಾನದ ಆಶ್ರಿತ ಸಂಸ್ಥಾನಗಳಲ್ಲಿ ಒಂದಾಗಿರುತ್ತದೆ. ಇದು ಹೋಳ್ಕರನ ರಾಜ್ಯ. ನರ್ಮದಾ ನದಿಯು ಉಭಯಪಾರ್ಶ್ವಗಳಲ್ಲೂ ಇದೆ. ಅದರ ವಿಸ್ತೀರ್ಣ ೮,೪೦೦ ಚದರಮೈಲಿ; ಸುಮಾರು ೧೦ಲಕ್ಷ ಪ್ರಜೆಗಳು ಈ ರಾಜ್ಯದಲ್ಲಿದಾರೆ. ಈ ಸಂಸ್ಥಾನವು ಬಹಳ ಫಲವತ್ತಾದದ್ದು. ಚಂಬಲ್ ನರ್ಮದಾ ನದಿಗಳು ಹರಿಯುತ್ತವೆ. ರೈತರು ಗೋಧಿ, ಕಡಲೇಕಾಳು, ಹತ್ತಿ, ಕಬ್ಬು ಮುಂತಾದವುಗಳನ್ನು ವಿಶೇಷವಾಗಿ ಬೆಳೆಯುತ್ತಾರೆ. ಮತ್ತು ಅಫೀಮು ಬಹಳವಾಗಿ ಆಗುತ್ತೆ.

### ಮಹಾರಾಜರವರು.

ಈ ಸಂಸ್ಥಾನಕ್ಕೆ ಸರ್ ಶಿವಾಜಿರಾವ್ ಹೋಳ್ಕಾರ್ ಯವರು ಮಹಾರಾಜರಾಗಿರುತ್ತಾರೆ. ಇವರು ೧೮೫೯ನೇ ಇಸವಿಯಲ್ಲಿ ಜನಿಸಿ, ೧೮೮೬ನೇ ಇಸವಿಯಲ್ಲಿ ಸಿಂಹಾಸನಕ್ಕೆ ಬಂದರು. ಇವರು ಮೊದಲಿನಿಂದಲೂ ಸ್ವೇಚ್ಛಾಪ್ರವೃತ್ತಿಗಳಾಗಿ ಪ್ರಜೆಗಳ ಯೋಗಕ್ಷೇಮಕ್ಕೆ ಗಮನ ಕೊಡದೆ ನಾನಾ ಪ್ರಕಾರವಾದ ನಡವಳಿಕೆಗಳಲ್ಲಿ ಆಸಕ್ತರಾಗಿದ್ದರು. ಕೆಲವು ವೇಳೆ ಅವರು ನಡಸಿದ ಕಾರ್ಯಗಳನ್ನು ನೋಡಿದರೆ ಅವರ ಬುದ್ಧಿ ಸ್ವಸ್ಥವಾಗಿತ್ತೋ ಇಲ್ಲವೋ ಎಂಬದಾಗಿ ಅನುಮಾನ ಉಂಟಾಗುವದು. ಒಂದೆರಡು ವರುಷಗಳ ಕೆಳಗೆ ಇವರು ಇದ್ದಕ್ಕಿದ್ದ ಹಾಗೆ ಹೇಳದ ಕೇಳದ ರಹಸ್ಯವಾಗಿ ಸಂಸ್ಥಾನವನ್ನು ಬಿಟ್ಟು ಹೋಗಿ ಕಾಶಿ, ಪ್ರಯಾಗ ಮೊದಲಾದ ಕ್ಷೇತ್ರಗಳಲ್ಲಿ ಅಲೆಯುತ್ತಿದ್ದರು. ಪ್ರಜಾಪೀಡಕರೂ ದುರ್ಬುದ್ಧಿಯುಳ್ಳವರು ಸ್ವೇಚ್ಛಾಪ್ರವರ್ತನೆಯಲ್ಲಿ ನಿರತರಾದವರ ಪ್ರಜೆಗಳ ಕಷ್ಟಗಳೂ ಅವರ ಗೋಳಾಟವೂ ಸಹಜವಾಗಿ ರಾಜ್ಯದ ಬಿಗಿಯು ತಪ್ಪಿಹೋಗುವದು. ಮಹಾರಾಜಾ ಸರ್ ಶಿವಾಜಿರಾವ್ ಯವರು ಅನೇಕಸಲ ತಾವು ರಾಜ್ಯವನ್ನು ತ್ಯಜಿಸಿ, ಎಲ್ಲಿ ಯಾದರೂ ಹೊರಟು ಹೋಗುವವರಾಗಿ ಹೇಳುತ್ತಲೇ ಇದ್ದರು. ಈ ಸಮಾಚಾರವು ಇಂಡಿಯಾ ಗೌವರ್ನಮೆಂಟಿನವರ ಕಿವಿಗೆ ಬಿದ್ದಿತು. ಪ್ರಜೆಗಳ ಶ್ರೇಯೋಭಿವೃದ್ಧಿಯು ನೆಲೆಗೊಳ್ಳಲು ಮಹಾರಾಜರು ಹೀಗೆ ಮಾಡುವದೇ ಒಳ್ಳೇದೆಂಬದಾಗಿ ಇಂಡಿಯಾ ಗೌವರ್ನಮೆಂಟಿನವರೂ ಹೋಳ್ಕರರ ಪ್ರಜೆಗಳೂ ಕುತೂಹಲಪಡುತ್ತಿದ್ದರು. ಹೋದ ವರುಷ ಆಗಸ್ಟ್ ತಿಂಗಳ [illegible] ವೈಸರಾಯಿ ಯವರು ಮ್ಹೌ ಎಂಬ ಪಟ್ಟಣಕ್ಕೆ ದಯಮಾಡಿದಾಗ ಅವರಿಗೂ ಹೋಳ್ಕಾರ್ ಮಹಾರಾಜರವರಿಗೂ ಕಾಗದ ಪತ್ರಗಳು ನಡೆದವು. ವೈಸರಾಯಿ ಯವರು ರಾಜಧಾನಿಯಾದ ಇಂದೋರಿಗೆ ಹೋಗದೇನೇ ಮಹಾರಾಜರವರನ್ನು ಮ್ಹೌ ಪಟ್ಟಣಕ್ಕೆ ಕರೆಸಿಕೊಂಡು, ಅವರಿಗೆ ಏನೋ ಹೇಳಿದರು. ಆಗ ಮಹಾರಾಜರವರು ಡಿಲ್ಲಿ ದರ್ಬಾರ್ ಆದನಂತರ ಸಂಸ್ಥಾನವನ್ನು ತಮ್ಮ ಕುಮಾರನಿಗೆ ವಹಿಸಿಕೊಟ್ಟು, ತಾವು ಪಿಂಛಿನ್ ಪಡೆದು ಸುಖವಾಗಿರುತ್ತೇನೆಂದು ಮಾತುಕೊಟ್ಟರು. ಡಿಲ್ಲಿ ದರ್ಬಾರಿಗೆ ಮಹಾರಾಜರು ಹೋಗಿ ವಾಪಸು ಬಂದು ಸಂಸ್ಥಾನದ ಗುರು ಹಿರಿಯರನ್ನು ಕರೆಸಿ, ತಮ್ಮ ಪುತ್ರನಿಗೆ ರಾಜ್ಯವನ್ನು ವಹಿಸುವದಕ್ಕೆ ಶುಭದಿನ ಲಗ್ನಗಳನ್ನು ಗೊತ್ತುಮಾಡಿದರು. ಇದೇ ಮಾಘಶುದ್ಧ ೩ಗೆ ಸರಿಯಾದ (ಅಂದರೆ ೧೯೦೩ನೇ ಜನವರಿ ೩೧ನೇ ತಾರೀಖು) ಮುಹೂರ್ತವೆಂದು ಜೋಯಿಸರು ನಿಶ್ಚಯ ಮಾಡಿದರು. ಈ ಕೆಲಸಕ್ಕೆ [illegible] ಗೌವರ್ನಮೆಂಟಿನವರೂ, ಇಂಡಿಯಾ ಸ್ಟೇಟ್ ಸೆಕ್ರೆಟರಿಯವರೂ ಒಪ್ಪಿಕೊಂಡರು.

### ಮಹಾರಾಜರು ರಾಜ್ಯಪದವಿಯನ್ನು ತ್ಯಜಿಸಿದ್ದು.

ಅದೇ ಪ್ರಕಾರ ಮಹಾರಾಜಾ ಸರ್ ಶಿವಾಜಿರಾವ್ ಹೋಳ್ಕಾರ್ ಯವರು ಜನವರಿ ೩೧ನೇ ತಾರೀಖು ಇಂದೋರ್ ನಗರದಲ್ಲಿರುವ ಲಾಲ್‌ಬಾಗ್ ಎಂಬ ಅರಮನೆಯೊಳಗೆ ಒಂದು ಭಾರಿ ದರ್ಬಾರನ್ನು ನಡಿಸಿದರು. ಈ ದರ್ಬಾರಿಗೆ ಗೌವರ್ನರ್ ಜನರಲ್‌ರವರ ಏಜಂಟ್ ಮಿ॥ ಸಿ. ಎಸ್. ಬೇಲಿಯವರು, ಇಂದೋರ್ ಸಂಸ್ಥಾನದ ರೆಸಿಡೆಂಟ್ ಮೇಜರ್ ಸಿಂಗ [illegible] ಯವರು ಅವರವರ ಪರಿವಾರದವರೊಡನೆ ಬಂದು ಕುಳಿತಿದ್ದರು. ಆ ಸಂಸ್ಥಾನದ ಮಂತ್ರಿಯವರಾದ ರಾಯಿ ನಾನಕ್ ಚಂದ್, ಸಿ. ಐ. ಇ. ಯವರು, ಕೌನ್ಸಿಲ್ ಮೆಂಬರುಗಳು, ಮಹಾರಾಜರ ರಕ್ತಸಂಬಂಧಗಳು, ಭಾರಿ ಭಾರಿ ಸರ್ದಾರರು ಮುಖ್ಯಸ್ಥರು, ಇತರ ದೊಡ್ಡ ಮನುಷ್ಯರು ಮುಂತಾದವರೆಲ್ಲಾ ಆ ದಿನ ದರ್ಬಾರಿನಲ್ಲಿ ಹಾಜರಾಗಿದ್ದರು. ದರ್ಬಾರ್ ಪ್ರಾರಂಭವಾಯಿತು. ಮಹಾರಾಜರು ಶಾಸ್ತ್ರೋಕ್ತವಾದ ಪೂಜೆ ಮೊದಲಾದವುಗಳನ್ನು ನೆರವೇರಿಸಿದರು. ತರುವಾಯ ಏಜಂಟರನ್ನೂ ದರ್ಬಾರಿಗಳನ್ನೂ ಕುರಿತು ಅಪ್ಪಣೆಕೊಡಿಸಿದ್ದೇನಂದರೆ:—

ಇಂದೋರ್ ಸಂಸ್ಥಾನದ ಮಹಾರಾಜನಾಗಿದ್ದುಕೊಂಡು, ರಾಜ್ಯದ ಕಾರುಬಾರುಗಳನ್ನೂ, ಸರ್ಕಾರಿ ಕೆಲಸಗಳನ್ನೂ ನೋಡಿಕೊಳ್ಳುವದು ನನಗೆ ತುಂಬಾ ಕಷ್ಟವಾಗಿ ತೋರಿಬರುವದರಿಂದ ಈಗ ನಾನು ಇಂಡಿಯಾ ಗೌವರ್ನಮೆಂಟಿನವರ ಸಮ್ಮತಿಯನ್ನು ಪಡೆದು, ಈ ಸಂಸ್ಥಾನದ ಧೊರೆತನವನ್ನು ನನ್ನ ಕುಮಾರನಾದ ತುಕೋಜಿರಾವ್ ಸಾಹೇಬರಿಗೆ ವಹಿಸಿಕೊಟ್ಟು, ನನ್ನ ಜವಾಬ್ದಾರಿಯನ್ನು ತಪ್ಪಿಸಿಕೊಂಡು, ಕೃತಾರ್ಥನಾಗಿರಬೇಕೆಂದು ಗೊತ್ತುಮಾಡಿದ್ದೇನೆ. ನಾನು ಈ ಕಾರ್ಯವನ್ನು ಮಾಡುವದು ತುಂಬಾ ಕ್ಷೇಮಕರವು. ಇಂಡಿಯಾ ಗೌವರ್ನಮೆಂಟಿನವರು ಚಿಕ್ಕವಯಸ್ಸಿನವನಾದ ನನ್ನ ಕುಮಾರನ ಯೋಗಕ್ಷೇಮವನ್ನು ನೋಡಿಕೊಂಡಾರೆಂತಲೂ, ಗೌವರ್ನರ್ ಜನರಲ್‌ರವರ ಏಜಂಟರೂ, ಈ ಸಂಸ್ಥಾನದ ರೆಸಿಡೆಂಟರೂ, ಮಂತ್ರಿಯವರೂ, ಕೌನ್ಸಿಲ್ ಮೆಂಬರುಗಳೂ ಬಾಲಾ ಸಾಹೇಬರ ಗಾರ್ಡಿಯನ್ ಕ್ಯಾಪ್ಟನ್ [illegible] ಯವರೂ ನನ್ನ ಕುಮಾರನನ್ನು ಕೃಪೆಯಿಟ್ಟು ಕಾಪಾಡುತ್ತಾ, ಅವನು ಪ್ರಾಪ್ತ ವಯಸ್ಕನಾಗಿ ರಾಜ್ಯಾಧಿಪತ್ಯವನ್ನು ವಹಿಸುವದಕ್ಕೆ ಸಕಲ ವಿಷಯಗಳಲ್ಲೂ ಯೋಗ್ಯನಾಗುವಂತೆ ನೋಡಿಕೊಳ್ಳುವರೆಂತಲೂ ನಾನು ನಂಬಿರುತ್ತೇನೆ. ನನ್ನ ಕುಮಾರನು ಮಹಾರಾಜನಾಗಿ ಪ್ರಜೆಗಳ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಳ್ಳುವದಕ್ಕೂ, ಒಳ್ಳೇ ಪ್ರಜಾಪಾಲಕನಾಗುವದಕ್ಕೂ, ಘನವನ್ನೈದಿದ ಮಹಾರಾಜಾ ಚಕ್ರವರ್ತಿ ಯವರ ಮೆಚ್ಚಿಕೆಗೆ ಅರ್ಹನಾಗುವದಕ್ಕೂ ವೇಲ್ಸಿನ ಸರದಾರರೂ ಅಧಿಕಾರಿಗಳೂ ಜವಾಬ್ದಾರರಾಗಿರುತ್ತಾರೆ. ಈಗ ಅವರ ಶ್ರೇಯೋಭಿವೃದ್ಧಿಗೂ ವಿದ್ಯಾಭ್ಯಾಸಕ್ಕೂ ಮಾಡಿರುವ ಏರ್ಪಾಡು ತೃಪ್ತಿಕರವಾದದ್ದಾಗಿದೆ. ಆದರೆ ಮತ ವಿಷಯದಲ್ಲಿ ಹಿತಿಯುಕ್ತವಾದ [illegible] ವಿಷಯದಲ್ಲೂ ನನ್ನ ಕುಮಾರನಿಗೆ ಚೆನ್ನಾಗಿ ಶಿಕ್ಷಣವಾಗಬೇಕೆಂದು ನಾನು ಬಹಳವಾಗಿ ಅಪೇಕ್ಷಿಸುತ್ತೇನೆ.

### ಕುಮಾರನಿಗೆ ಬುದ್ಧಿವಾದ ಹೇಳಿದ್ದು.

ತರುವಾಯ ಹೋಳ್ಕಾರ್ ಮಹಾರಾಜರು ತಮ್ಮ ಕುಮಾರನನ್ನು ಕುರಿತು ಹೇಳಿದ್ದೇನಂದರೆ —ಮಗನೆ! ಬ್ರಿಟಿಷ್ ಗೌವರ್ನಮೆಂಟಿನವರಿಂದ ಏನಾದರೂ ಆಗಬೇಕಾಗಿದ್ದರೆ ಅಂಥಾದ್ದನ್ನು ವಿನಯಪೂರ್ವಕವಾಗಿಯೂ ಗಂಭೀರಯುಕ್ತವಾಗಿಯೂ ಅವರನ್ನು ಕೇಳುವವನಾಗು. ಸಾರ್ವಭೌಮರ ವಿಷಯದಲ್ಲಿ ನೀನು ಅಂತರಂಗ ಬಹಿರಂಗಗಳಲ್ಲಿ ಸರ್ವದಾ ಸಂಪೂರ್ಣ ಸಹಾಯಕನಾಗಿರು. ನಿನ್ನ ಸಂಸ್ಥಾನದಲ್ಲಿ ಅನೇಕ ಕಾಲದಿಂದ ರೂಢಿಯಲ್ಲಿರುವ ವಿವಾಹವೇ ಮೊದಲಾದ ಸಮಸ್ತ ಆಚಾರಗಳನ್ನೂ ಪದ್ಧತಿಗಳನ್ನೂ, ನಿನ್ನ ಪೂರ್ವಿಕರ ಆಚಾರ ವಿಚಾರಗಳನ್ನೂ ಲೋಪ ಮಾಡದೆ ಅನುಸರಿಸಿಕೊಂಡು ಬಾ. ನೀನು ರಾಜ್ಯಪದವಿಯನ್ನು ಪಡೆಯುವಷ್ಟು ದೊಡ್ಡವನಾಗುವ ತನಕ ಕಷ್ಟಪಟ್ಟು ಮನಃಪೂರ್ವಕವಾದ ವಿದ್ಯಾಭ್ಯಾಸ ಮಾಡು. ಇಂಡಿಯಾ ಗೌವರ್ನಮೆಂಟಿನವರು ಈ ಸಂಸ್ಥಾನದ ಹಕ್ಕು ಬಾಧ್ಯತೆ ಸ್ವಾತಂತ್ರ್ಯಗಳನ್ನೆಲ್ಲಾ ಕೊಂಚವೂ ಲೋಪಿಸದೆ ಇನ್ನು ಮುಂದೆಯೂ ಕಾಪಾಡುತ್ತಾ ಬರುವರೆಂದು ನನಗೆ ಪೂರ್ಣ ಭರವಸೆಯುಂಟು. ಈ ಸಂಸ್ಥಾನದವರ ಸಂಗಡ ಅವರು ಮಾಡಿಕೊಂಡಿರುವ ತಹನಾಮೆಗಳನ್ನೂ ವಾಗ್ದಾನಗಳನ್ನೂ ಎಂದಿಗೂ ಅವರು ಮೀರಿ ನಡೆಯಲಾರರೆಂದು ನಂಬುತ್ತೇನೆ. ಇದಲ್ಲದೆ ಮುಂದೇನಾದರೂ ಈ ಸಂಸ್ಥಾನದ ಸಿಂಹಾಸನಕ್ಕೆ ಔರಸಪುತ್ರರು ಹುಟ್ಟದೆ ಹೋಗುವ ಪಕ್ಷದಲ್ಲಿ—ದೇವರು ಅಂಥಾ ಕಾಲ ಪ್ರಾಪ್ತವಾಗದಂತೆ ಮಾಡಲಿ—ಗೌವರ್ನಮೆಂಟಿನವರು ದತ್ತು ಸ್ವೀಕಾರದ ಹಕ್ಕನ್ನು ಕಾಪಾಡುತ್ತಾರೆನ್ನುವದಕ್ಕೆ ಸಂಶಯವಿಲ್ಲ.

### ಇತರ ವಿಷಯಗಳು.

ನಾನು ಬಹಳವಾಗಿ ಕುತೂಹಲಪಡುವ ವಿಷಯಗಳ್ಯಾವವೆಂದರೆ:—(೧) ಪ್ರಸ್ತುತದಲ್ಲಿ ಸರ್ಕಾರದವರೂ ನಮ್ಮ ವಂಶಸ್ಥರೂ ಆದ ಅಹಲ್ಯಾಬಾಯಿ ಸಾಹೇಬ ಯವರು ಸ್ಥಾಪಿಸಿ ನಡೆಯುತ್ತಾ ಬಂದಿರುವ ಸಕಲ ಧರ್ಮಗಳೂ ಲೋಪವಾಗದಂತೆ ಶಾಶ್ವತವಾಗಿ ನಡೆಯಬೇಕು. (೨) ಬೆಸ್ತಿಗಳನ್ನು ಯಾವನೊಬ್ಬನಿಗಾದರೂ ಭೋಗ್ಯಕ್ಕೆ ಕೊಡದೆ ಇರಬೇಕು. (೩) ಈ ಸಂಸ್ಥಾನದ ಅಧಿಕಾರಿಗಳ ಮತ್ತು ನೌಕರಿಯವರ ಹಕ್ಕುಗಳಿಗೆ ಲೋಪವಾಗದಂತೆ ನೋಡಿಕೊಳ್ಳತಕ್ಕದ್ದು. ಮುಖ್ಯವಾಗಿ ಇಂದೋರ್ ಸಂಸ್ಥಾನದ ನೈಜವಾದ ಪ್ರಜೆಗಳಿಗೇ ಇಲ್ಲಿನ ಸರ್ಕಾರಿ ನೌಕರಿಗಳು ಕೊಡಲ್ಪಡಬೇಕು. (೪) ಮೊದಲಿನವರನ್ನು ತಾವು ಈ ಸಂಸ್ಥಾನದ ನೌಕರಿಗೆ ಸೇರಿಸಬೇಕಾದದ್ದು ಅವಶ್ಯವಾಗಿದ್ದರೆ ಅಂಥವರನ್ನು ಬಾಲಾ ಸಾಹೇಬರು ರಾಜ್ಯಾಧಿಕಾರ ಪಡೆದ ನಂತರ ಕೆಲಸದಿಂದ ಬಿಡಿಸತಕ್ಕದ್ದು. (೫) ಈಚೆಗೆ ಅಲ್ಪ ಸಂಬಳಗಾರರಿಗೆ ಬಡ್ತಿ ಕೊಟ್ಟಿಲ್ಲವಾದ್ದರಿಂದ ಅವರ ಸಂಬಳಗಳನ್ನು ಜಾಸ್ತಿಮಾಡಬೇಕು. ಸಂಸ್ಥಾನದ ಖಜಾನೆಯಲ್ಲಿ ಹಣವನ್ನು ಶೇಖರಮಾಡಿಟ್ಟಿರುತ್ತೇನೆ. ಖಜಾನೆಯು ಉಚ್ಚ ಸ್ಥಿತಿಯಲ್ಲಿದೆ. ಆದಕಾರಣ ಯಾವಾಗಲೂ ಈ ಸಂಸ್ಥಾನಕ್ಕೆ ಸಾಲಮಾಡುವ ಸಂಭವ ಪ್ರಾಪ್ತವಾಗಕೂಡದೆಂಬುವದೇ ನನ್ನ ಅಭೀಷ್ಟ.

### ಏಜಂಟರು ಹೇಳಿದ್ದು.

ಈ ಪ್ರಕಾರ ಮಹಾರಾಜರವರು ಅಪ್ಪಣೆಕೊಡಿಸಿದ್ದನ್ನು ಕೇಳಿ ಗೌವರ್ನರ್ ಜನರಲ್‌ರವರ ಏಜಂಟ್ ಮಿ॥ ಬೇಲಿ ಸಾಹೇಬರು ಎದ್ದು ಮಹಾರಾಜರವರನ್ನು ಕುರಿತು ಹೇಳಿದ್ದೇನಂದರೆ:—ಮಹಾರಾಜರೇ, ಈ ದಿನ ನೀವು ಇಂದೋರ್ ಸಂಸ್ಥಾನದ ರಾಜ್ಯಾಧಿಕಾರವನ್ನು ತ್ಯಜಿಸುತ್ತೀರಷ್ಟೆ. ಇದನ್ನು ಇಂಡಿಯಾ ಗೌವರ್ನಮೆಂಟಿನವರ ಅನುಜ್ಞೆ ಪಡೆದು, ಅವರ ಪರವಾಗಿ ನಾನು ಈ ದಿನ ಒಪ್ಪಿಕೊಂಡಿರುತ್ತೇನೆ. ಮತ್ತು ನಿಮ್ಮ ಪದವಿಗೆ ನಿಮ್ಮ ಕುಮಾರರಾದ ಬಾಲಾ ಸಾಹೇಬ್ ತುಕೋಜಿ ರಾವ್ ಹೋಳ್ಕಾರ್ ಯವರು ಮಹಾರಾಜರಾಗಿ ಬಂದಿರುವದು ಒಪ್ಪಿಗೆಯೂ ಮಾಡಲ್ಪಟ್ಟಿರುತ್ತದೆ.

ಅನಂತರ ಮಹಾರಾಜರು ಸಿಂಹಾಸನದಿಂದ ಇಳಿದು ಬಂದು, ಬೇರೆ ಪೀಠದಲ್ಲಿ ಕುಳಿತುಕೊಂಡರು. ಮಿ॥ ಬೇಲಿಯವರು ಬಾಲಾಸಾಹೇಬ್ ಯವರನ್ನು ಕೈಹಿಡಿದು ಕರೆದುಕೊಂಡು ಹೋಗಿ ಸಿಂಹಾಸನದ ಮೇಲೆ ಕೂರಿಸಿ, ಇಂದೋರ್ ಮಹಾರಾಜರಾದಿರಿ ಎಂದು ಹೇಳಿ, ಅವರನ್ನು ಕುರಿತು ತಿಳಿಸಿದ್ದೇನಂದರೆ:—

ಮಹಾರಾಜಾ ತುಕೋಜಿರಾವ್ ಹೋಳ್ಕಾರ್ ಯವರೇ, ನಿಮಗೆ ಈಗ ಇಂದೋರ್ ಸಂಸ್ಥಾನದ ಧೊರೆತನ ದೊರಕಿದ್ದು ನಮಗೆಲ್ಲ ತುಂಬಾ ಸಂತೋಷವಾಯಿತು. ನೀವು ಚಿರಕಾಲ ಈ ರಾಜ್ಯವನ್ನು ನ್ಯಾಯಯುಕ್ತವಾಗುವಂತೆ ಆಳುವವರಾಗಬೇಕೆಂದು ಪ್ರಾರ್ಥಿಸುತ್ತೇನೆ. ನಿಮ್ಮ ಪಿತೃಗಳಾದ ಸರ್ ಶಿವಾಜಿರಾವ್ ಹೋಳ್ಕಾರ್ ಯವರು ರಾಜ್ಯಪದವಿಯನ್ನು ತ್ಯಜಿಸಿ ಪೃಥಕ್ಕಾಗಿರಬೇಕೆಂದು ಇಚ್ಛೈಸಿರುವದು ಸರಿಯಷ್ಟೆ. ಇನ್ನು ಮುಂದೆ ಅವರ ಶರೀರ ಸ್ಥಿತಿಯು ಅನುಕೂಲವಾಗಲೆಂತಲೂ, ಚಿರಕಾಲ ಅವರಿಗೆ ಸುಖಸೌಖ್ಯಗಳು ಲಭಿಸಲೆಂತಲೂ ನಾವೆಲ್ಲರೂ ಮನಃಪೂರ್ವಕವಾಗಿ ಹಾರೈಸುವವರಾಗಿದ್ದೇವೆ. ಅವರ ಅನುಕೂಲಕ್ಕೂ, ಸುಖಜೀವನಕ್ಕೂ, ಘನತೆಗೂ ಸ್ವಲ್ಪವೂ ಲೋಪಬಾರದಂತೆ ನೋಡಿಕೊಳ್ಳತಕ್ಕ ಭಾರವು ಈ ಸಂಸ್ಥಾನದ ಕಾರುಬಾರುಗಳನ್ನು ವಹಿಸಿರುವವರ ಮೇಲೆ ಇರುತ್ತದೆ. ಇದಕ್ಕೆ ಸರ್ಕಾರದ [illegible] ದ ಸರಿಯಾದ ಏರ್ಪಾಡು ಮಾಡಲಾಗಿದೆ. ಅವರ ಸ್ವಂತವೆಂಬ [illegible] ದ ಆಸ್ತಿಯೆಲ್ಲಾ ಅವರ ಸ್ವಾಧೀನಕ್ಕೆ ಕೊಡಲ್ಪಡುವದು. ಅವರ [illegible] ಬೇಕಾಗುವಷ್ಟು ದ್ರವ್ಯ ಅವರಿಗೆ [illegible] ಅವರೇ ಸಂಸ್ಥಾನದಲ್ಲಿ ಮೊದಲನೇ ಸ್ಥಾನಕ್ಕೆ ಅರ್ಹರಾಗಿರುತ್ತಾರೆ. ಅವರ ಇಷ್ಟಬಂಧುವರ್ಗವನ್ನು ತಮ್ಮ ಬಳಿಯಲ್ಲಿ ಇಟ್ಟುಕೊಳ್ಳುವದಕ್ಕೂ ಕಿತ್ತುಹಾಕುವದಕ್ಕೂ ಅವರೇ ಪೂರ್ಣ ಸ್ವತಂತ್ರರಾಗಿರುತ್ತಾರೆ. [illegible] ರ ಸಾಹೇಬರಲ್ಲಿ ಯಾರಾದರೂ ಕೃತ್ಯಗಳೆಂದು ಗೊತ್ತಾದರೆ [illegible] ಧವರನ್ನು ಅವರ ಕೈಕೆಳಗಣ ಮುಖ್ಯ ನೌಕರನು ಶಿಕ್ಷಿಸುವದಕ್ಕೆ ಅಧಿಕಾರ ಕೊಡಲ್ಪಡುವದು. ಸರ್ ಶಿವಾಜಿರಾವ್ ಹೋಳ್ಕಾರ್ ಯವರು ಈಗ ಹೇಳಿದ್ದನ್ನು ಕೇಳಿದೆವಷ್ಟೆ. ಅವರು ಕೆಲವು ವಿಷಯಗಳನ್ನು ತಮ್ಮ ಇಷ್ಟಪ್ರಕಾರ ನಡೆಯಬೇಕೆಂದು ಹೇಳಿದರು. ಕೌನ್ಸಿಲ್ ಮೆಂಬರುಗಳು ಆ ವಿಷಯಗಳನ್ನೆಲ್ಲಾ ಚೆನ್ನಾಗಿ ಪರ್ಯಾಲೋಚನೆ ಮಾಡುತ್ತಾರೆ. [illegible] ಭಾಗಗಳೆಲ್ಲಾ ಜಾರಿಗೆ ತರುವರು. ಇದಲ್ಲದೆ ಅವರು ನನ್ನ ಸಂಗಡ [illegible] ಗದಲ್ಲಿ ಬಂದು ವಿಷಯ ಹೇಳಿದರು. ಬಾಲ್ಯವಯಸ್ಸಿನ ಮಹಾರಾಜರ [illegible] ಜೀವಿತಿಯಲ್ಲಿ ಹುಟ್ಟಿದ (ಅವಳಿ) ಸಹೋದರಿಗೆ ಲಗ್ನಕ್ಕೆ ದ್ರವ್ಯ ಸಹಾಯ ಮಾಡಬೇಕೆಂದು ಹೇಳಿದರು. ಇಷ್ಟೇ ಅಲ್ಲ [illegible] ವಿಷಯವನ್ನು ಆಗಿಂದಾಗ್ಗೆ ಚರ್ಚಿಸಿ ಗೊತ್ತುಮಾಡಬೇಕಾಗಿದೆ. ನೀವು ಪ್ರಾಪ್ತವಯಸ್ಕರಾಗುವ ತನಕ ಕೆಲವು [illegible] ಬ್ಯಾಂಕಿನ [illegible] ನಿಮ್ಮ ಸಹೋದರಿಗೆ ಕೊಡಬಹುದೆಂದು ತೋರುತ್ತದೆ. [illegible] ನಾನೇನೂ ಬುದ್ಧಿವಾದ ಹೇಳಬೇಕಾಗಿಲ್ಲ. ನಿಮ್ಮ ಪಿತೃಗಳು ನಿಮಗೆ ಒಳ್ಳೇ ಬುದ್ಧಿಮಾತುಗಳನ್ನು ಈಗ ಹೇಳಿದರು. ಆ ಮಾತಿನಂತೆ ನೀವು ನಡಕೊಳ್ಳತಕ್ಕದ್ದೆಂದು ನಾನೂ ಹೇಳುತ್ತೇನೆ. ಅವರು ಹೇಳಿದ ಪ್ರಕಾರ ಇಂಗ್ಲಿಷ್ ಗೌವರ್ನಮೆಂಟಿನವರಲ್ಲಿ ಗುರುಭಾವವನ್ನಿಟ್ಟುಕೊಳ್ಳಿ. ನಿಮ್ಮ ಸಂಸ್ಥಾನದಲ್ಲಿ ರೂಢಿಯಾಗಿ ಬಂದಿರುವ ಆಚಾರ ಮತಸಂಬಂಧಗಳಂತೆ ನಡೆಯುತ್ತಿರಿ. ಸಕಲ ವಿಷಯಗಳಲ್ಲಿ ಸಚ್ಚರಿತ್ರೆಯುಳ್ಳವರಾಗುವಂತೆ ನಡೆಯಿರಿ. ನಿಮ್ಮ ಗುಣಸ್ವಭಾವಗಳು ಯಾವ ರೀತಿ ಇರುತ್ತವೋ ನಿಮ್ಮ ರಾಜ್ಯಭಾರವೂ ಅದರಂತೆ ಆಗುತ್ತದೆ. ವೈಸರಾಯಿ ಯವರು ನಿಮ್ಮ ವಿಷಯದಲ್ಲಿ ವಿಶೇಷ ಪ್ರೇಮವುಳ್ಳವರಾಗಿರುವದರಿಂದ ನಿಮ್ಮನ್ನು [illegible] ಕ್ಯಾಪ್ಟನ್ [illegible] ಎಂಬುವರನ್ನು [illegible] ಯಿಸಿ ಕಳುಹಿಸಿರುತ್ತಾರೆ. [illegible] ಸಂತೋಷವಾಗುವದು. [illegible] ವಿದ್ಯಾಭ್ಯಾಸ [illegible] ವೈಸರಾಯಿ ಯವರು ಬಯಸಿಕೊಳ್ಳುತ್ತಾರೆ. [illegible] ಡೆಪ್ಯೂಟಿ ಟ್ಯೂಟರ್ [illegible] ತ್ತಾರೆ. ಇದರಿಂದ [illegible] ಸಂಸ್ಥಾನದ [illegible] ಹಕ್ಕು ಬಾಧ್ಯತೆಗಳನ್ನು [illegible] ಇಂಡಿಯಾ ಗೌವರ್ನಮೆಂಟಿನವರು [illegible] ರವಾಗಿ ಈ ಸಂಸ್ಥಾನದ ಕಾರುಬಾರು [illegible] ಮಂತ್ರಿಯವರಿಗೂ ಕೌನ್ಸಿಲ್ ಮೆಂಬರುಗಳಿಗೂ ವಹಿಸಲಾಗುತ್ತೆ. [illegible] ಕೌನ್ಸಿಲ್ ಮೆಂಬರುಗಳು ತುಂಬಾ ಜವಾಬ್ದಾರರಾಗಿರುತ್ತಾರೆ. ಅವರು ರಾಜ್ಯವನ್ನು ಎಲ್ಲಾ ವಿಷಯಗಳಲ್ಲೂ ಅಭಿವೃದ್ಧಿಗೆ ತರುವ ರೀತಿ [illegible] ಪರೀಕ್ಷಿಸಲ್ಪಟ್ಟಿದೆ.

### ಇತರ ವಿಷಯಗಳು.

ಏಜಂಟರು ಈ ರೀತಿಯಾಗಿ ಹೊಸ ಮಹಾರಾಜರಿಗೆ ಬುದ್ಧಿ ಮಾತುಗಳನ್ನು ಹೇಳಿ ತಮ್ಮ ಸ್ಥಾನದಲ್ಲಿ ಕುಳಿತುಕೊಂಡರು. ಆ ನಂತರ ಸರ್ ಶಿವಾಜಿರಾವ್ ಹೋಳ್ಕಾರ್ ಯವರು ಎದ್ದು ಬಂದು ಸಿಂಹಾಸನದ ಮೇಲೆ ಕುಳಿತಿದ್ದ ಬಾಲ್ಯ ವಯಸ್ಸಿನ ಮಹಾರಾಜರಿಗೆ ನಮಸ್ಕಾರ ಮಾಡಿ ನಜರು ಒಪ್ಪಿಸಿದರು. ಸ್ವಲ್ಪ ಹೊತ್ತಿನಲ್ಲಿ [illegible] ದರ್ಬಾರು ಮುಗಿಸಿದರು. ದರ್ಬಾರ್ ಮುಗಿದ ಕೂಡಲೇ ಸರ್ ಶಿವಾಜಿರಾವ್ ಹೋಳ್ಕಾರ್ ಯವರು ದಿವ್ಯವಾದ ಸಾರೋಟಿನಲ್ಲಿ ಕುಳಿತು, ರಾಜಧಾನಿಯಾದ ಇಂದೋರಿನಿಂದ ೫೦ ಮೈಲಿ ದೂರದಲ್ಲಿ ನರ್ಮದಾ ನದೀ ತೀರದಲ್ಲಿರುವ ಬಾರವಾಹ ಎಂಬ ಪಟ್ಟಣಕ್ಕೆ ಹೋಗಿ, ಅಲ್ಲಿರುವ ತಮ್ಮ ಅರಮನೆಯಲ್ಲಿ ವಾಸಮಾಡುತ್ತಿದ್ದಾರೆ. ಅವರಿಗೆ ಇಂದೋರ್ ಸಂಸ್ಥಾನದ ಖಜಾನೆಯಿಂದ ವರುಷಕ್ಕೆ ನಾಲ್ಕು ಲಕ್ಷ ರೂಪಾಯಿಯಂತೆ ಅಲೊವೆನ್ಸು ಕೊಡತಕ್ಕದ್ದೆಂದು ಗೌವರ್ನಮೆಂಟಿನವರು ವಿಧಿಸುತ್ತಾರೆ. ಬಾಲ್ಯ ವಯಸ್ಸಿನ ಮಹಾರಾಜರಿಗೆ ಈಗ್ಗೆ ೧೨—೧೩ ವರುಷ ವಯಸ್ಸಾಗಿದೆ.

## ವಿಶೇಷ ವರ್ತಮಾನಗಳು.

ವಿಲಾಯತಿ ರಾಜ್ಯದ ಸ್ವಾಸ್ಥ್ಯಗಳ ಯೋಗಕ್ಷೇಮವನ್ನು ವಹಿಸಿಕೊಂಡಿರುವ ಸೆಕ್ರೆಟರಿ ಮಿ॥ ಛೇಂಬರ್ಲೆನ್ ಯವರು ದಕ್ಷಿಣ ಆಫ್ರಿಕಕ್ಕೆ ಸ್ವತಃ ಹೋದದ್ದರಿಂದ ತುಂಬಾ ಅನುಕೂಲವಾಯಿತು. ಈ ಅಧಿಕಾರಕ್ಕೆ ಹಿಂದೆ ನೇಮಕವಾದವರ ಪೈಕಿ ಸ್ವಾಸ್ಥ್ಯಗಳನ್ನು ಖುದ್ದಾಗಿ ನೋಡಿಕೊಂಡುಬಂದವರು ಯಾರೂ ಇಲ್ಲ. ಮಿ॥ ಛೇಂಬರ್ಲೆನ್ ಯವರು ದಕ್ಷಿಣ ಆಫ್ರಿಕಾ ಹೊಸಸ್ವಾಸ್ಥ್ಯಗಳ ವಿಷಯದಲ್ಲಿ ಅನೇಕ ಸಂಗತಿಗಳನ್ನು ಚರ್ಚಿಸುವ ಪ್ರಸಂಗ ಮಾಡಬೇಕಾಗಿದೆ. ಇದರಿಂದ ಅವರು ಸ್ವತಃ ಅಲ್ಲಿಗೆ ಹೋಗಿ ಸಂಗತಿಗಳನ್ನು ಸಾಕ್ಷಾತ್ತಾಗಿ ತಿಳಿದುಕೊಂಡು ಬರುತ್ತಾರಾದಕಾರಣ ಅವುಗಳ ಆಲೋಚನೆಯು ಸಮರ್ಪಕವಾಗುವುದೂ ಸಾಂಗವಾಗುವುದೂ ಇದ್ದೀತೆನ್ನುವದಕ್ಕೆ ಸಂಶಯವಿಲ್ಲ. ದಕ್ಷಿಣ ಆಫ್ರಿಕವು ಅಭಿವೃದ್ಧಿಗೆ ಬರಬೇಕಾದರೆ ಅಲ್ಲಿ ನೆಲಸಿರುವ ಎರಡು ತರದ ಬಿಳೀಜನರಿಗೂ (ಇಂಗ್ಲೀಷರು ಮತ್ತು ಬೋಅರರು) ಪರಸ್ಪರ ಸ್ನೇಹವಿರಬೇಕು. ಅವರು ಒಟ್ಟುಗೂಡಿ ಆ ದೇಶದ ಉತ್ಕರ್ಷದ ಸ್ಥಿತಿಯನ್ನು ಕುರಿತು ಸಾಹಸಪಟ್ಟು ಪರಿಶ್ರಮಪಡಬೇಕಾಗಿದೆ. ಇನ್ನು ಅನೇಕ ವರ್ಷಗಳ ತನಕ ಬೋಅರರು ಗ್ರಾಮಾಂತರಗಳಲ್ಲಿ ನೆಲೆಯಾಗಿ ನಿಂತು ಆ ವಿಷಯ ಸಾಧನೆ ಮುಂತಾದ್ದನ್ನು ನೋಡಿಕೊಳ್ಳಬೇಕಾಗಿದೆ. ಇಂಗ್ಲಿಷ ಪ್ರಜೆಗಳಾದರೋ ಪಟ್ಟಣಗಳಲ್ಲಿ ಗಣಿಗಳಲ್ಲಿ ನಿಂತು ಕಸಬುಗಳನ್ನು ಅವಲಂಬಿಸುತ್ತಾರೆ. ಮಿ॥ ಛೇಂಬರ್ಲೆನ್ ಯವರು ಅನೇಕ ವೇಳೆ ಉಪನ್ಯಾಸಮಾಡಿ ಆ ಎರಡು ತರದ ಬಿಳೀ ಜನರೂ ಇತರ ಸಂಗಡದವರೂ ಎಲ್ಲ ಸ್ನೇಹಿತರಾಗಿರಬೇಕೆಂತಲೂ ಪರಸ್ಪರ ದ್ವೇಷಾಸೂಯೆಗಳನ್ನು ನಿರ್ಜೀವ ಮಾಡಬೇಕೆಂತಲೂ ಹೇಳಿದರು. ಈ ಬುದ್ಧಿವಾದದಿಂದ ತುಂಬಾ ಪ್ರಯೋಜನವಾಯಿತು. ಇಂಗ್ಲಿಷರಿಗೂ ಬೋಅರರಿಗೂ, ಇಂಗ್ಲಿಷರಿಗೆ ಸರಕಾರದವರ ಮತ್ತು ಅವರ ಕಡೆ ನಿಂತು ಯುದ್ಧ ಮಾಡಿದ ಡಚ್ಚರಿಗೂ ಉಳಿದ ಬೋಅರರಿಗೂ ಇದ್ದ ದ್ವೇಷಾಸೂಯೆಗಳು ಕಡಿಮೆಯಾಗುತ್ತಾ, ಪರಸ್ಪರ ಪ್ರೀತಿವಾತ್ಸಲ್ಯಗಳು ಹುಟ್ಟುತ್ತಾ ಬಂದಿರುತ್ತದೆ.

* * *

ಈ ದಕ್ಷಿಣ ಆಫ್ರಿಕಾ ಯುದ್ಧಕ್ಕೆ ವಿಲಾಯಿತಿ ಗೌವರ್ನಮೆಂಟಿನವರು ಮಾಡಿದ ಸಾಲವನ್ನು ಹೊಸ ಸ್ವಾಸ್ಥ್ಯಗಳು ಎಷ್ಟು ಮಟ್ಟಿಗೆ ವಹಿಸಿಕೊಳ್ಳುತ್ತವೆಯೋ ಎಂಬದನ್ನು ಗೊತ್ತು ಮಾಡುವದಕ್ಕಾಗಿ ಮುಖ್ಯವಾಗಿಯೂ ಮಿ॥ ಛೇಂಬರ್ಲೆನ್‌ಯವರು ಅಲ್ಲಿಗೆ ಪ್ರಯಾಣಮಾಡಿದರು. ಅಲ್ಲಿರುವ ಬೋಅರರ ಪ್ರತಿನಿಧಿಗಳೂ, ಇಂಗ್ಲಿಷ್ ವರ್ತಕರ ಪ್ರತಿನಿಧಿಗಳೂ, ಪ್ರಿಟೋರಿಯಾ ಪಟ್ಟಣದಲ್ಲಿರುವ ಗಣೀ ಕಂಪನಿ ಡೈರೆಕ್ಟರುಗಳೂ ಗುಂಪುಗುಂಪಾಗಿ ಬಂದು ಮಿ॥ ಛೇಂಬರ್ಲೆನ್‌ಯವರನ್ನು ಕಂಡು ತಮ್ಮ ತಮ್ಮ ಸುಖದುಃಖಗಳನ್ನು ಅವರಿಗೆ ಅರಿಕೆ ಮಾಡಿಕೊಂಡರು. ಆಗ ಅವರಿಗೆಲ್ಲ—ನೀವು ಈ ಸ್ವಾಸ್ಥ್ಯಗಳ ರಕ್ಷಣೆಗಾಗಿಯೂ ಹೆಚ್ಚಾಗಿ ಮಾಡಿದ ಯುದ್ಧ ಖರ್ಚುಗಳ ಸಲುವಾಗಿ ಸರಕಾರದ ಸಾಲಗಳನ್ನು ನಿರ್ಧಾರವಾಗಿ ತೀರಿಸಬೇಕೆಂಬದಾಗಿ ಮಿ॥ ಛೇಂಬರ್ಲೆನ್‌ಯವರು ತಿಳಿಸಿದರು. ಅಲ್ಲದೆ ಬೋಅರ್ ಸ್ವಸ್ಥಾನಗಳನ್ನು ಕುರಿತು—ಟ್ರಾನ್ಸ್‌ವಾಲ್ ಮತ್ತು ಆರೇಂಜ್ ನದೀ ರಾಜ್ಯಗಳ ವಿಷಯಕ ಆಸ್ತಿಯೆಲ್ಲ ಯುದ್ಧದೊಟ್ಟಿಗೆ ಹಾಳಾಗಿಹೋಯಿತಷ್ಟೆ. ಅದು ಯಾವಾಗ ಪುನಃ ಈ ಸ್ಥಿತಿಗೆ ಬರುವದೋ ಇನ್ನೂ ಸರಿಯಾಗಿ ತಿಳಿಯಬರಲಿಲ್ಲ. ಆದಕಾರಣ ಆ ದೇಶದ ಪೂರ್ವಸ್ಥಿತಿಯನ್ನು ಹೊಂದುವದಕ್ಕೆ ನೀವು ಇಂಗ್ಲಿಷ್ ಗೌವರ್ನಮೆಂಟಿಗೆ ನಿಮ್ಮ ಕೈಲಾಗುವ ಸಹಾಯವನ್ನೆಲ್ಲ ಮಾಡಬೇಕೆಂದು ಸ್ಪಷ್ಟವಾಗಿ ಹೇಳಿದರು. ಸದ್ಯಕ್ಕೆ ಸುಮಾರು ೩೦ ಕೋಟಿ ರೂಪಾಯಿ ಸಾಲವನ್ನು ಟ್ರಾನ್ಸ್‌ವಾಲಿಗೆ ಹೊರಿಸುತ್ತಾರೆ. ಈ ಸಾಲ ತೀರುವದಕ್ಕೆ ಟ್ರಾನ್ಸ್‌ವಾಲ್ ಗೌವರ್ನಮೆಂಟಿನವರು ಹೊರತಾಗಿ ೧೫ ಕೋಟಿ ರೂಪಾಯಿ ಸಾಲಮಾಡಬೇಕು. ಹೊರತು ನೀವು ೧೫ ಕೋಟಿ ರೂಪಾಯಿಗಳನ್ನು ಗಣಿಗಳ ಕಂಪನಿಗಳವರೇ ಕೊಡಬೇಕು ಎಂತ ಗೌವರ್ನಮೆಂಟಿನವರು ಬೇರೆ ೧೫ ಕೋಟಿ ರೂಪಾಯಿ ಸಾಲಮಾಡುತ್ತಾರೆ. ಅಂತು ಇನ್ನು ಕೆಲವು ವರುಷಗಳೊಳಗಾಗಿ ೩೦ ಕೋಟಿ ರೂಪಾಯಿ ಸಾಲಮಾಡಿ, ಅದು ೧೫ ವರುಷಗಳಲ್ಲಿ ಟ್ರಾನ್ಸ್‌ವಾಲಿನಲ್ಲಿ ನೀರಾವರಿ ಮುಂತಾದ ಕೆಲಸಗಳನ್ನು ಮಾಡುವುದಕ್ಕೂ ಬೋಅರ್ ರೈತರಿಗೆ ವ್ಯವಸಾಯಾಭಿವೃದ್ಧಿಗೆ ಪ್ರಯತ್ನ ಮಾಡುವದಕ್ಕೂ ಉಪಯೋಗಿಸುತ್ತಾರೆಂದು ತಿಳಿಯುವದು.

* * *

ಇನ್ನು ದಕ್ಷಿಣ ಆಫ್ರಿಕಕ್ಕೆ ಬೇಕಾಗುವದು ಮಜೂರರ ಒಂದೇ. ಅಲ್ಲಿ ನೆಲಸಿರುವ ಕಪ್ಪು ಜನರು ಯುದ್ಧಮಾಡುವದೆಂದು ಹೊರತು ಪ್ರಯತ್ನದ ಕೆಲಸವನ್ನು ಮಾಡುವದಿಲ್ಲ. ಹೊಲದ ಕೆಲಸ ಮನೆಯ ಕೆಲಸಗಳೆಲ್ಲವೂ ಅವರ ಹೆಂಗಸರುಗಳೇ ಮಾಡುವರು. ಆ ಕಪ್ಪು ಮನುಷ್ಯನಿಗೆ ಬೇಕಾದಷ್ಟು ಸ್ವಲ್ಪ ಹಣ ಸಿಕ್ಕಿದರೆ ಆ ಹಣದಿಂದ ಅವನು ಕೊಳ್ಳುವ ಹೆಂಗಸನ್ನು ತಂದುಕೊಂಡು ಸುಖವಾಗಿ ಇದ್ದುಕೊಳ್ಳುವನು. ಅವನು ಮಾಡುವ ಕೆಲಸ ಅಲ್ಲಿಗೆ ಪೂರೈಸಿತು. ಉಳಿದ ಎಲ್ಲಾ ಕೆಲಸಗಳೂ ಅವನ ಹೆಂಡತಿಯಾದವಳೇ ನೋಡಿಕೊಳ್ಳುವಳು. ಗಂಡನು ಯಾವ ಉದ್ಯೋಗವನ್ನೂ ಮಾಡದೆ ಸೋಮಾರಿಯಾಗಿ ಕಾಲ ಕಳೆಯುವನು. ಆದ್ದರಿಂದ ಗಣಿ ಮುಂತಾದ ಕಡೆ ಕೂಲಿ ಮಾಡುವದಕ್ಕೆ ಈ ಕಪ್ಪು ಜನರು ಹೋಗುವದಿಲ್ಲ. ಗಣಿ ಕೆಲಸಗಳನ್ನು ಬಿಳೀ ಜನರನ್ನು ಕೆಲಸಕ್ಕೆ ಇಟ್ಟುಕೊಂಡರೆ ಅವರಿಗೆ ಕೂಲಿ ಹೆಚ್ಚಾಗಿ ಕೊಡಬೇಕು. ಕಪ್ಪು ಜನರು ಬರುವದಿಲ್ಲ. ಇದಕ್ಕೋಸ್ಕರ ಚೀನಾ ಜನರನ್ನು ಕರೆದು ತರಬೇಕೆಂದು ಕೆಲವರು ಯೋಚಿಸಿದರು. ಇದು ಕೂಡದೆಂದು ಅನೇಕರು ಪ್ರತಿಭಟಿಸುತ್ತಾರೆ. ಆದಕಾರಣ ಇದನ್ನು ಇಲ್ಲಿ ನಿಷೇಧಿಸಿ ಅಲ್ಲಿನ ಕಪ್ಪು ಜನರನ್ನೇ ಬಲಾತ್ಕರಿಸಿ ಕೆಲಸ ಮಾಡಿಸುವಂತೆಯೂ, ಯಾವದಾದರೊಂದು ಉದ್ಯೋಗವನ್ನು ಅವಲಂಬಿಸುವಂತೆಯೂ ಮಾಡುವದಕ್ಕಾಗಿ ಕೆಲವು ಕಾನೂನು ಜಾರಿಗೆ ತರಬೇಕೆಂತಲೂ, ಸೋಮಾರಿಗಳಾಗಿರತಕ್ಕವರನ್ನು ಶಿಕ್ಷಿಸಬೇಕೆಂತಲೂ ಕಾಣಬರುವದು.

* * *

ಹಿಂದುಸ್ಥಾನದ ತಮಿಳು ದೇಶದ ಜನರು ವಿಶೇಷವಾಗಿ ನೆಟಾಲಿನಲ್ಲಿ ಟ್ರಾನ್ಸ್‌ವಾಲಿನಲ್ಲಿ ಹೋಗಿ ಜೀವನಮಾಡುತ್ತಿದ್ದಾರೆ. ಅಲ್ಲಿ ವ್ಯಾಪಾರ, ಗುಮಾಸ್ತಗಿರಿ, ಸೇವಕವೃತ್ತಿ—ಇವೇ ಆ ತಮಿಳರ ಉದ್ಯೋಗವಾಗಿದೆ. ಕೆಲವು ಸಂದರ್ಭಗಳಲ್ಲಿ ಅವರ ಪಾಡು "ಅಸ್ಪೃಶ್ಯ"ರಿಗಿಂತಲೂ ಕಡೆಯಾಗಿದೆ. ಆದಕಾರಣ ಆ ತಮಿಳರ ಮುಖಂಡರು ನೆಟಾಲಿನಲ್ಲಿ ಮಿ॥ ಛೇಂಬರ್ಲೆನ್ ಯವರನ್ನು ಕಂಡು, ತಮ್ಮ ದುಃಖ ಕಷ್ಟಗಳನ್ನು ಅವರಿಗೆ ಅರಿಕೆ ಮಾಡಿಕೊಂಡರು. ಇಂಗ್ಲಿಷರಿಗೆ ದುಃಖಕಾರಕವಾದ ಇವರ ವ್ಯಾಪಾರವು ದಕ್ಷಿಣ ಆಫ್ರಿಕಕ್ಕೆ ಬೇಡ; ಹೀಗೆಂದು ಆ ಸಂಸ್ಥಾನದವರು ಹೇಳಿಕೆ ಕೊಟ್ಟರು. ಅನಿವಾರ್ಯವಾಗಿ ಬಂದಿರುವದರಿಂದ ಇದನ್ನು ಸಹಿಸಿಕೊಳ್ಳಬೇಕೆಂತಲೂ ಅವರಿಗೆ ಮಿ॥ ಛೇಂಬರ್ಲೆನ್ ಯವರನ್ನು ಕೇಳಿಕೊಂಡರು. ಈ ತಮಿಳರ ಬಹುಗಾಲದಿಂದ ಅಲ್ಲಿ ಕೂಲಿ ಮುಂತಾದ್ದು ಕೆಲಸಕ್ಕಾಗಿ ಸಿಕ್ಕುತ್ತದೆ. ಕೆಲವು ಕಾಲದಲ್ಲೇ ಅಲ್ಪಸ್ವಲ್ಪ ದುಡ್ಡು ಕೂಡಿಸಿ ಆಸ್ತಿಮಾಡಿಕೊಂಡು ವಾಸಿಸುತ್ತಾರೆ. ಹೀಗೆ ಬಂದ ಒಬ್ಬೊಬ್ಬರು ಕೂಲಿಯವರನ್ನು ನಾವು ನೋಡಿದ್ದೇವೆ. ಅವರು ತಮ್ಮ ಅಂಗಗಳಲ್ಲಿ ೬೦—೧೦೦ ಸವರಿನ್ ನಾಣ್ಯಗಳನ್ನು ಇಟ್ಟು ಹೊಲಿದುಕೊಂಡು ಬಂದಿದ್ದರು.

* * *

ಮಿ॥ ಛೇಂಬರ್ಲೆನ್ ಯವರು ದಕ್ಷಿಣ ಆಫ್ರಿಕದ ಪಶ್ಚಿಮ ಮುಖ್ಯವಾದ ಪಟ್ಟಣಗಳಿಗೂ ಸ್ಥಳಗಳಿಗೂ ಹೋಗಿ ನೋಡಿಕೊಂಡು, ಈ ತಿಂಗಳ ೨೫ನೇ ತಾರೀಖು ಮುತ್ತಿಗೆ ಕೇಪ್ ಟೌನ್ ನಗರಕ್ಕೆ ಬಂದು ತಲುಪಿದರು. ಅನಂತರ ಅಲ್ಲಿಂದ ಹಡಗು ಹತ್ತಿ ಹಿಂತಿರುಗಿ ವಿಲಾಯಿತಿಗೆ ಪ್ರಯಾಣಮಾಡುತ್ತಾರೆ.

* * *

ಇಂಗ್ಲಿಷ ವರ್ತಮಾನ ಪತ್ರಿಕೆಗಳಲ್ಲೆಲ್ಲಾ ದಿ ಟೈಂಸ್ ಎಂಬುದೇ ಪ್ರಧಾನವಾದದ್ದು. ಕಳೆದ ೩೦ ವರುಷಗಳಿಂದಲೂ ಬ್ಲೌವಿಟ್ಸ್ ಎಂಬವನು ಫ್ರಾನ್ಸ್ ದೇಶದ ರಾಜಧಾನಿಯಾದ ಪ್ಯಾರಿಸ್ ನಗರದಲ್ಲಿದ್ದುಕೊಂಡು, ಆ ವರ್ತಮಾನ ಪತ್ರಿಕೆಗೆ ಬಾತ್ಮಿಗಳನ್ನು ಕಳುಹಿಸುತ್ತಿದ್ದನು. ಈಗಿನ ಕಾಲದ ಪ್ಲೌವಿಟ್ಸನಷ್ಟು ಹೆಸರುವಾಸಿಯನ್ನು ಪಡೆದ ಬಾತ್ಮಿದಾರರು ಮತ್ಯಾರೂ ಇರುವದಿಲ್ಲ. ಇಂಥ ಪ್ರಸಿದ್ಧನಾದ ಪುರುಷನ ಚರಿತ್ರೆಯನ್ನು ಬರೆಯುವದು ವರ್ತಮಾನ ಒಂದಾಗುವದು. ಈ ದೊಡ್ಡ ಮನುಷ್ಯನ ಪೂರ್ವೋತ್ತರವನ್ನು ಸ್ವಲ್ಪ ಮಟ್ಟಿಗೆ ನಮ್ಮ ವಾಚಕರಿಗೆ ತಿಳಿಸಬೇಕೆಂದು ಅಪೇಕ್ಷಿಸುತ್ತೇವೆ. ಬ್ಲೌವಿಟ್ಸನು ಬೊಹಿಮಿಯಾ ನಗರದಲ್ಲಿ ಜನಿಸಿ, ಚಿಕ್ಕಂದಿನಲ್ಲೇ ತನ್ನ ವಿದ್ಯಾಭ್ಯಾಸವನ್ನು ಜರ್ಮನಿಯಲ್ಲಿ ಯೂರೋಪಿನ ರಾಜ್ಯಗಳಲ್ಲೆಲ್ಲಾ ಸಂಚಾರಮಾಡಿದನು, ಫ್ರೆಂಚ, ಜರ್ಮನ್, ಇಟೇಲಿಯನ್ ಮೊದಲಾದ ಭಾಷೆಗಳಲ್ಲಿ ಧಾರಾಳವಾಗಿ ಮಾತನಾಡುವದನ್ನು ಸಾಮರ್ಥ್ಯವನ್ನು ಪಡೆದುಕೊಂಡು ಕಡೆಗೆ ಬಂದು, ಫ್ರಾನ್ಸಿನಲ್ಲೇ ನಿಂತುಬಿಟ್ಟನು. ಇಂಗ್ಲಿಷ್ ಭಾಷೆಯಾದರೋ ಅವನಿಗೆ ಚೆನ್ನಾಗಿ ಬರುತ್ತಿರಲಿಲ್ಲ. ಅನಂತರ ಲಂಡನ್ ನಗರದಲ್ಲಿ ಇಂಗ್ಲಿಷಿನಲ್ಲೇ ಪ್ರಕಟವಾಗುತ್ತಿರುವ ದಿ ಟೈಂಸ್ ಎಂಬ ಪತ್ರಿಕೆಗೆ ಅವನು ಆಕಸ್ಮಿಕವಾಗಿ ಬಾತ್ಮಿದಾರನಾದನು. ಆವನು ಫ್ರಾನ್ಸ್ ಭಾಷೆಯಲ್ಲೇ ಬರೆದುಕಳುಹಿಸುವ ಬಾತ್ಮಿ ವರ್ತಮಾನಗಳನ್ನು ಲಂಡನ್ನಿಗೆ ಕಳುಹಿಸಿದರೆ ಆ ಪತ್ರಿಕೆಯ ಚಾಲಕರು ಅವನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿಕೊಂಡು, ಪ್ರಕಟಿಸುತ್ತಿದ್ದರು. ಆ ಕಾಲದಲ್ಲಿ ಬ್ಲೌವಿಟ್ಸನು ಬಹಳ ಕೀರ್ತಿಗಳಿಸಿದನು, ಎಂದರೆ ಆತ ಪ್ರಧಾನಾಧಿಕಾರಿಯಾದ ರಾಜರು, ಮಂತ್ರಿಗಳು ಮೊದಲಾದ ಜನರು, ಆತನ ಬುದ್ಧಿಕುಶಲತೆಯನ್ನೂ ವಿವೇಕವನ್ನೂ ಮೆಚ್ಚಿ ಬಹಳ ಗೌರವವಾಗಿಯೂ, ವಿನೋದವಾಗಿ ಮಾತನಾಡುತ್ತಿದ್ದರು. ಪುಸ್ತಕಗಳನ್ನು ಓದುವುದು ಕಡಿಮೆ. ಆದರೆ ಆತನ ಜ್ಞಾಪಕಶಕ್ತಿಯೂ ಅದ್ಭುತವಾಗಿತ್ತು. ರಾಜಕೀಯ ವಿಷಯಗಳಲ್ಲಿ ಎಷ್ಟೋ ವಿಷಯಗಳನ್ನು ಆತನು ಬಹಳ ಚೆನ್ನಾಗಿ ತಿಳಿದುಕೊಂಡಿದ್ದನು. ಎಷ್ಟೋ ರಹಸ್ಯಗಳಿಗೆ ಬಂದೊದಗಿದ ಪರಿಸ್ಥಿತಿಯೂ ಅವನ ಪೂರ್ವಾಪರ ಜ್ಞಾನವೂ ಎಲ್ಲಾ ಇವನಿಗೆ ಸಂಪೂರ್ಣವಾಗಿ ತಿಳಿದಿತ್ತು. ಅವನು ೧೮೭೮ನೇ ಇಸವಿಯಲ್ಲಿ ಪತ್ರಿಕಾ ಬಾತ್ಮಿದಾರರಲ್ಲೆಲ್ಲಾ ಮುಖ್ಯನೆನಿಸಿಕೊಂಡನು. ಅದು ಯಾಕೆಂದರೆ, ದಿ ಟೈಂಸ್ ಎಂಬುದರ ಪತ್ರಿಕೆಯಲ್ಲಿ ಬ್ಲೌವಿಟ್ಸನೂ ಸಿರಿ ಫ್ರಾನ್ಸ್ ರಾಜ್ಯದ ಪಾರ್ಲಿಮೆಂಟ್ ಸಭೆಯಲ್ಲಿ ಹೋದನು. ಆ ರಾತ್ರಿ ಆ ಸಭೆಗೆ ಎಂಬಾತನು ಪಾರ್ಲಿಮೆಂಟಿನಲ್ಲಿ ಬಹಳ ದೀರ್ಘವಾದ ಮತ್ತು ಮುಖ್ಯ ಸ್ವಾರಸ್ಯವುಳ್ಳ ಉಪನ್ಯಾಸ ಮಾಡಿದನು. ಅದನ್ನು ಈ ಉಪನ್ಯಾಸವನ್ನು ಕೇಳಿ ಬರೆಯಿಸುತ್ತಲೇ ಹಿಂತಿರುಗಿದರು. ಆ ರಾತ್ರಿಯೇ ಟೈಂಸ್ ಲಂಡನ್ನಿಗೆ ಪ್ರಯಾಣಮಾಡಬೇಕಾಯಿತು. ಬ್ಲೌವಿಟ್ಸನು ಸಂಗಡ ರೈಲ್ವೆ ಸ್ಟೇಷನ್ ತನಕ ಹೋಗಿ ಡಿಲೇನನು ರೈಲಿನಲ್ಲಿ ಕೂತು, ಹೊರಡುವ ಸಮಯದಲ್ಲಿ ಡಿಲೇನನು ಅವನನ್ನು ಕುರಿತು—ಎಂಥಾ ಅನ್ಯಾಯ! ಇಷ್ಟು ಒಳ್ಳೇ ಉಪನ್ಯಾಸವನ್ನು ನಾವು ಕೇಳಿ ಬಂದೆವು! ಅದನ್ನೆಲ್ಲ ನಾವು ನಾಳೆಯೇ ದಿ ಟೈಂಸ್ ಪತ್ರಿಕೆಯಲ್ಲಿ ಪ್ರಕಟಿಸುವದಕ್ಕಾಗುವದಿಲ್ಲವಲ್ಲ! ಎಂದು ಹೇಳಿ ನಿಟ್ಟುಸುರು ಬಿಟ್ಟು ಪ್ರಯಾಣಮಾಡಿದನು. ಬ್ಲೌವಿಟ್ಸನು ಅವನಿಗೆ ಯಾವ ಉತ್ತರವೂ ಹೇಳದೆ ಮೌನವಾಗಿ ಸ್ಟೇಷನ್ನಿನ ಹಿಂತಿರುಗಿ ಬಂದು, ಪ್ಯಾರಿಸ್ ಪಟ್ಟಣದ ಟೆಲಿಗ್ರಾಫ್ ಆಫೀಸಿಗೆ ಹೋಗಿ ಕುಳಿತುಕೊಂಡನು. ಅಲ್ಲೇ ಪಾರ್ಲಿಮೆಂಟು ಸಭೆ ಸೇರಿದ್ದ ಗೆಯ್ಯಿ, ಆ ಉಪನ್ಯಾಸ ಮಾಡಿದ್ದರಿಂದ ಆ ಉಪನ್ಯಾಸದ ಕೆಲವು ಭಾಗಗಳನ್ನು ಜ್ಞಾಪಕದಿಂದಲೇ ಬರೆದು ಸಂಗತಿಗಳನ್ನೂ ಉಪನ್ಯಾಸವನ್ನೂ ಟೆಲಿಗ್ರಾಫ್ ಮೂಲಕ ಲಂಡನ್ನಿಗೆ ಕಳುಹಿಸಿದನು, ಅದು ದಿಟ್ಟು ಕಡೆ ವರ್ತಮಾನ ಕೊಟ್ಟುಬಿಟ್ಟನು. ಮಾರನೇ ದಿನ ಬೆಳಿಗ್ಗೆ ಡಿಲೇನನು ಲಂಡನ್ ಪಟ್ಟಣಕ್ಕೆ ಹೋಗಿ ಇಳಿಯುವಷ್ಟರಲ್ಲಿ ತನ್ನ ಪತ್ರಿಕೆಯಲ್ಲಿ ಹಿಂದಲ್ಲದ ಉಪನ್ಯಾಸವೆಲ್ಲಾ ಸವಿಸ್ತಾರವಾಗಿ ಪ್ರಕಟವಾಗಿದ್ದನ್ನು ಕಂಡು ಬೆರಗಾದನು. ಅಂದಿನಿಂದ ಬ್ಲೌವಿಟ್ಸನ ಖ್ಯಾತಿಯು ವಿಸ್ತರಿಸುತ್ತಾ ಬಂತು.

* * *

ಇನ್ನೊಂದು ಸಂಗತಿಯು ಬ್ಲೌವಿಟ್ಸನ ಸಾಮರ್ಥ್ಯವನ್ನೂ, ಸಾಹಸವನ್ನೂ ಪ್ರಕಾಶಗೊಳಿಸುತ್ತದೆ. ಬರ್ಲಿನ್ ಕರಾರಿನ ನಕಲು ಒಂದು ಸಿಕ್ಕಿದರೆ ಸಾಕೆಂದು ಅವನು ಬಹಳ ಸಾಹಸಪಟ್ಟನು. ಅದರ ನಕಲು ಯಾರಿಗೂ ಸಿಕ್ಕದಂತೆ ಬಹಳ ಬಂದೋಬಸ್ತು ಇಟ್ಟಿದ್ದರು. ಬರ್ಲಿನ್ ನಗರದಲ್ಲಿ ಮಂತ್ರಿಗಳು ಸಭೆ ಸೇರಿ ಕರಾರಿಗೆ ಸಹಿ ಹಾಕುವದಕ್ಕೆ ಒಂದು ದಿನವನ್ನು ಗೊತ್ತು ಮಾಡಿದರು. ಅದಕ್ಕೆ ಹಿಂದಿನ ದಿನವೇ ಬ್ಲೌವಿಟ್ಸನು ಆ ಕರಾರಿನ ನಕಲನ್ನು ಎಲ್ಲಿಂದಲೋ ಸಂಗ್ರಹಿಸಿಕೊಂಡು, ಬರ್ಲಿನ್ನಿಗೆ—ಇವರ ಪತ್ರಿಕಾ ಬಾತ್ಮಿದಾರರಿಗೆ ನಕಲು ಸಿಕ್ಕಲಿಲ್ಲವಲ್ಲ ಎಂದು ವ್ಯಸನಾಕ್ರಾಂತರಾದವರಂತೆ ನಟಿಸಿ ಬರ್ಲಿನ್ ಪಟ್ಟಣದಿಂದ ಹೊರಟುಹೋದನು. ಅತ್ತಲಾಗಿ ಮಂತ್ರಿಗಳು ಕರಾರಿನ ಮೇಲೆ ರುಜು ಹಾಕುವದಕ್ಕೆ ಮಾರನೇ ದಿನ ಸಭೆ ಸೇರುವಷ್ಟರಲ್ಲೇ ಆ ಕರಾರಿನ ನಕಲೆಲ್ಲವೂ ಲಂಡನ್ ಪಟ್ಟಣದ ದಿ ಟೈಂಸ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಯಿತು ಎಂಬ ಸಂಗತಿ ತಿಳಿಯಿತು. ಇನ್ನು ಪತ್ರಿಕೆಯಲ್ಲಿ ಹೀಗೆ ವರ್ತಮಾನಗಳು ಪ್ರಕಟವಾಗಬೇಕೆಂಬುದನ್ನು ಬ್ಲೌವಿಟ್ಸನಿಗೆ ಇಷ್ಟು ಅಕಸ್ಮಾತ್ತಾಗಿ ತಿಳಿಸಿದ ಮನುಷ್ಯನು ಯಾರಾದರೂ ಗುಟ್ಟಾಗಿರಬೇಕಾದ್ದೆಂದು ಗೊತ್ತಾದರೂ ಅವನು ಯಾರೆಂದು, ಎಷ್ಟು ಮಾತ್ರಕ್ಕೂ ಪ್ರಕಟಿಸುತ್ತಿರಲಿಲ್ಲ. ಇದರಿಂದ ಆತನ ಘನತೆ ಹೆಸರುವಾಸಿಯೂ ತಿನ್ನಷ್ಟು ಹೆಚ್ಚಿತ್ತು. ಬರಬರುತ್ತಾ ಅವನನ್ನು ದಿ ಟೈಂಸಿನ ರಾಯಭಾರಿ ಎಂದು ಕರೆಯುವದಕ್ಕೆ ಆರಂಭಿಸಿದ್ದರು. ಆ ಹೊಸ ಹೊಸ ಸಂಗತಿಗಳ, ಬಹಳ ಮುಖ್ಯವಾದವುಗಳೆಂತಲೂ, ರಾಜವಾದವುಗಳೆಂತಲೂ ಇತರ ಪತ್ರಿಕೆಗಳವರು ನಕಲು ಮಾಡಿಕೊಂಡು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದರು.

* * *

ಬ್ರಿಟಿಷ್ ರಾಜ್ಯಭಾರದ ಪಶ್ಚಿಮೋತ್ತರ ಸೀಮೆಯ ಒಂದು ಭಾಗದಲ್ಲಿ ಯುದ್ಧಪ್ರಸಂಗವು ಇನ್ನೇನು ಆಗುವದು ಎಂಬ ಅನುಮಾನಗಳು ಬರುವಂತಾಗಿದೆ. ಸದ್ಯ ಈ ಮಾತು ಸ್ಥಿರವೆಂದು ತಿಳಿಯಲು ಬರುವದಿಲ್ಲವಾದರೂ, ಆ ಪ್ರಾಂತದಲ್ಲಿ ಈಗ ಇಂಗ್ಲಿಷರು ಎರಡು ಕಡೆ ಯುದ್ಧವನ್ನು ಮಾಡುತ್ತಾರೆ. ಸೋಮಾಲಿಲ್ಯಾಂಡಿನಲ್ಲಿ ಒಬ್ಬ ಮುಲ್ಲಾನು ಇಂಗ್ಲಿಷರನ್ನು ಎದುರಿಸುವದಕ್ಕೆ ತಯಾರಾಗಿದ್ದಾನೆ ಎಂಬುದನ್ನು ಅರಿಯುವದಕ್ಕೆ ಇಂಗ್ಲಿಷರು ಸೈನ್ಯವನ್ನು ಕಳುಹಿಸಿದ್ದಾರೆ. ಆ ಸುದ್ದಿಯು ಕಾಬೂಲ್ ಪ್ರಾಂತದ ಮೂಲಕ ಹಬ್ಬುತ್ತಾ, ಆತನ ಮಕ್ಕಳ ಮೇಲೆ ಸಿಟ್ಟಾಗಿ ಅವನು ಅವನ ಮೇಲೆ ಸವಾರಿ ಮಾಡುತ್ತಿದ್ದಾನೆ. ಆ ದೇಶವು ಮರುಭೂಮಿಯಾದ್ದರಿಂದ ಪ್ರತಿಕೂಲವಾಗುವ ಇಂಗ್ಲಿಷ್ ಸೈನ್ಯಗಳು ಅವರಿರುವ ಸ್ಥಳಕ್ಕೆ ಹೋಗಿ ತಲುಪಲಿಲ್ಲ. ಮತ್ತು ಅದು ಮರೆಗೆ ಅವನ ಆಹಾರಸಾಮಗ್ರಿಗಳು ಸಾಗಿಸುವದು ಇಂಗ್ಲಿಷರಿಗೆ ಅನುಕೂಲವಾಗಿಲ್ಲ. ಹೀಗೆ ಸ್ಥಾಪಿಸಿದ ಇಂಗ್ಲಿಷ್ ಸೈನ್ಯವನ್ನು ಬೆಂಬಲಕ್ಕೆ ಪ್ರಯಾಣಕ್ಕೆ ಕಳುಹಿಸಿ, ಸುಮಾರು ಎರಡು ತಿಂಗಳ ಕಾಲ ಹೋರಾಟ ನಡೆಸಿ ಆ ಪ್ರದೇಶದ ಸ್ಥಿತಿಯನ್ನು ಪ್ರತಿಸ್ಥಾಪಿಸುವ ಪ್ರಯತ್ನದಲ್ಲಿದ್ದಾರೆ. ಆ ಮುಲ್ಲಾ ಇಂಗ್ಲಿಷ್ ಸೈನ್ಯಗಳು ಹೊರಡುವ ಸ್ಥಳಗಳಿಗೆ ಹೊರಟು ಹೋಗಿದ್ದು ಕಷ್ಟವಾಯಿತು. ಆ ಮುಲ್ಲಾನ ಕಡೆ ಹೋಗುವದಕ್ಕೆ ಇಂಗ್ಲಿಷರು ಸೈನ್ಯಗಳನ್ನು ಕಳುಹಿಸುವ ಏರ್ಪಾಡು ಮಾಡುತ್ತಿದ್ದಾರೆ. ಇದು ಒಂದು ಮುಖ್ಯ ಯುದ್ಧವೆಂದು ವರ್ತಮಾನ ಪತ್ರಿಕೆಗಳು ಹೇಳುತ್ತವೆ. ವಿಲಾಯಿತಿ ಸರ್ಕಾರದವರು ಪಶ್ಚಿಮ ಆಫ್ರಿಕಾದ ಕಡೆಯಿಂದ ಸೈನ್ಯಗಳನ್ನು ಕಳುಹಿಸುವ ಹಾಗೆ ಈ ಪ್ರದೇಶಕ್ಕೆ ಕಳುಹಿಸಿದ್ದಾರೆ. ಪ್ರಸ್ತುತ ಸ್ವಲ್ಪ ಸೈನ್ಯ ಸೋಮಾಲಿಲ್ಯಾಂಡಿನ ಮಾರ್ಗವಾಗಿ ಇಂಗ್ಲಿಷರು ಆ ಮುಲ್ಲಾನ ಮೇಲೆ ಸವಾರಿ ಮಾಡುವದಾಗಿ ಬಂತು, ಪಶ್ಚಿಮ ಆಫ್ರಿಕಾದ ಮಾರ್ಗವಾಗಿಯೂ ಇರುವದಾಗಿ ಈ ಸೈನ್ಯಗಳೆಲ್ಲ ಎರಡು ಕಡೆಯಿಂದ ಮುಲ್ಲಾನ ಮೇಲೆ ಯುದ್ಧಮಾಡಲು ಹೊರಟಿವೆ ಎಂದು ತಿಳಿದಿದೆ. ಆ ಪ್ರಾಂತ್ಯದಲ್ಲಿರುವ ಒಬ್ಬ ಸುಲ್ತಾನನು ಹಿಂದೆ ಇಂಗ್ಲಿಷರ ಸಹಾಯಕನೆಂದು ನಟಿಸುತ್ತಾ, ಅಂತರಂಗವಾಗಿ ಮುಲ್ಲಾನ ಪಕ್ಷವನ್ನು ವಹಿಸಿ ಬೆಂಬಲಿಸಿಕೊಂಡು, ವರ್ತಮಾನಗಳನ್ನು ಅವನಿಗೆ ಕಳುಹಿಸುತ್ತಾ ಬಂದಿದ್ದಾನೆಂಬ ಸಂಗತಿ ಇಂಗ್ಲಿಷರಿಗೆ ತಿಳಿದು ಬಂತು. ಅಂಥಾ ಮಿತ್ರದ್ರೋಹಿಯನ್ನು ಈಗ ಇಂಗ್ಲಿಷರು ಹಿಡಿದು, ಅವರ ರಾಜ್ಯಕ್ಕೆ ಸೇರಿದ ಒಂದು ಯುದ್ಧದ ಹಡಗಿನಲ್ಲಿ ಕೂಡಿಸಿ, ಏಡನ್ ಪಟ್ಟಣಕ್ಕೆ ಕರೆದುಕೊಂಡು ಹೋಗುವವರಾಗಿದ್ದಾರೆ. ಅತ್ತಲಾಗಿ ಮುಲ್ಲಾನು ಇಂಗ್ಲಿಷ ಸರ್ಕಾರದ ಮೇಲೆ ದಂಗೆ ಏಳುವವರ ಮುಖಂಡನಾಗಿ ಆ ಪ್ರದೇಶದಲ್ಲಿ ಯುದ್ಧಸಾಮಗ್ರಿಗಳನ್ನು ತರಿಸಿಕೊಳ್ಳುತ್ತಿದ್ದಾನೆ. ಇದನ್ನು ನಿಲ್ಲಿಸುವ ಸಲುವಾಗಿ ಇಂಗ್ಲಿಷರು ಕೆಲವು ಹಡಗುಗಳನ್ನು ಸಮುದ್ರದಲ್ಲಿ ಕಾವಲಿಗೆ ನಿಲ್ಲಿಸಿ, ಸಾಮಾನು ಸಾಗಿಸುವಂತೆ ತಡೆಯುತ್ತಾರೆ. ಇದಕ್ಕೆ ಇವರು ಆ ಸಂದರ್ಭಗಳಲ್ಲಿ ಒಂದು ದೇಶ ಸೇನೆಯನ್ನು ತಮ್ಮ ಸ್ವಾಧೀನಪಡಿಸಿಕೊಂಡರು. ಅವರಲ್ಲಿ ಮುಖ್ಯ ಶಸ್ತ್ರಾಸ್ತ್ರ ಮುಂತಾದದ್ದು ಬಹಳವಾಗಿ ಸಿಕ್ಕಿದವು.

* * *

ಇದಲ್ಲದೆ ಏಡನಿನ ಕಡೆ ಇಂಗ್ಲಿಷರು ಹೋಗಿ ಯುದ್ಧಮಾಡಬೇಕಾಗಿದೆ. ಅದು ಅರೇಬಿಯ ಪ್ರಾಂತ್ಯದ ಪಶ್ಚಿಮದಲ್ಲಿ ಸ್ಥಿತವಾದ ಪಟ್ಟಣವು.

ಅಂಚಿನಲ್ಲಿ. ಕೆಲವು ವಾರಗಳ ಹಿಂದೆ ಕಾನೋ ಎಂಬ ಸಂಸ್ಥಾನದ ಸುಲ್ತಾನನ ಪ್ರಜೆಗಳು ಒಬ್ಬ ಇಂಗ್ಲಿಷ್ ಸೈನ್ಯಾಧಿಕಾರಿಯನ್ನು ಕೊಂದುಹಾಕಿದರು; ಮತ್ತು ಇಂಗ್ಲಿಷರಿಗೆ ಸೇರಿದ ಪ್ರದೇಶದಲ್ಲಿರುವ ಕೆಲವು ಜನರನ್ನು ಹಿಡಿದು ಹಿಂಸಿಸಿದರು. ಅಂಥಾ ದುಷ್ಟರನ್ನು ಶಿಕ್ಷಿಸಿ ಅವರಿಗೆ ವಿವೇಕ ಕಲಿಸುವದಕ್ಕೋಸ್ಕರ ಇಂಗ್ಲಿಷರು ೧,೫೦೦ ಮಂದಿ ಸೈನಿಕರನ್ನು ಕಾನೋ ಸಂಸ್ಥಾನಕ್ಕೆ ಈಗ ಕಳುಹಿಸಿರುತ್ತಾರೆ. ಈ ಸೈನಿಕರೆಲ್ಲಾ ಆಫ್ರಿಕಾ ಜನರು, ಇವರನ್ನು ಯುದ್ಧದಲ್ಲಿ ನಡಿಸತಕ್ಕವರು [illegible] ಸುಲ್ತಾನರ ಸೈನ್ಯ ಬಹಳ ದೊಡ್ಡದಾಗಿದೆ, ಬಹಳವಾಗಿದೆ ಮತ್ತು ಒಳ್ಳೇ ಆಯುಧಗಳನ್ನು ಪಡೆದಿರುವದು. ರಾಜಧಾನಿಯಾದರೋ ಬಹಳ ವಿಸ್ತಾರವಾದದ್ದು, ಸುತ್ತಲೂ ದಪ್ಪನಾದ ಮಣ್ಣಿನ ಗೋಡೆ ಹಾಕಿದೆ. ಹೆಸರಿಗೆ ಮಾತ್ರ ಈ ಸುಲ್ತಾನನು ಸೊಕೊಟೋ ಸುಲ್ತಾನನಿಗೆ ಅಧೀನನಾಗಿರುತ್ತಾನೆ; ಆದರೆ ಅನೇಕ ವರುಷಗಳಿಂದೀಚೆಗೆ ಸ್ವತಂತ್ರಾಧಿಕಾರಿಯಂತೆಯೇ ರಾಜ್ಯಭಾರ ನಡಿಸುತ್ತಿದ್ದಾನೆ. ಈ ಸಣ್ಣ ಸಣ್ಣ ಸಂಸ್ಥಾನಗಳನ್ನೆಲ್ಲಾ ಅಡಗಿಸಿದ ಹೊರತು ಆ ಪ್ರಾಂತ್ಯದಲ್ಲಿ ಸಮೃದ್ಧಿಯೂ ಅಭಿವೃದ್ಧಿಯೂ ಹೊಂದಿಕೊಳ್ಳಲಾರವೆಂಬುವದು ಸಿದ್ಧ.

## ತಾಲೂಕು ವರ್ತಮಾನಗಳು.

ನಾಗಮಂಗಲ.—ಇಲ್ಲಿ ಪ್ಲೇಗು ತಲೆದೋರಿ ೩ ತಿಂಗಳು ಆಯಿತು. ಈಗ ಒಂದು ತಿಂಗಳಿಂದ ಅದರ ರೋಷ ಹೆಚ್ಚಿ ಜನರೆಲ್ಲಾ ಇನ್ನೂ ಹೊರಗೆ ಗುಡಿಸಲುಗಳಲ್ಲಿ ವಾಸಿಸುತ್ತಾರೆ. ಈಗ ಈ ಊರು ನರಮನುಷ್ಯರಿಲ್ಲದ ಅರಣ್ಯ ಪ್ರದೇಶದ ಹಾಗೆ ತೋರುತ್ತದೆ.— ಈ ತಾಲೂಕಿನ ಮಾಡಿಗೆರೆ ಗ್ರಾಮದಲ್ಲಿ ಆಗುವ ಕರ್ಮಕಾಂಡಗಳು ವರ್ಣಿಸುವದು ಅಸಾಧ್ಯ. ಇದೇ ಗ್ರಾಮಕ್ಕೆ ಸೇರಿದ ಕೆರೆಯನ್ನು ಒಡೆದು ಹಾಕಿದರೆ ಬರುವ ಲಾಭ [illegible]. ಆದರಿಂದ ಜನರಿಗೆ ಉಂಟಾಗುವ ಕಷ್ಟವು ವರ್ಣಿಸುವದು ಸುಲಭವಲ್ಲ. ಕೆಲವು ಹಳ್ಳಿಹಳ್ಳಿಗಳಲ್ಲಿ ಜಾತಿ ಜನರನ್ನು ಒಡಗೂಡಿಸುವದೇ ಇಲ್ಲ. ಇನ್ನಾದರೂ ಪ್ಲೇಗು ಕಮ್ಮಿ ಆಗುವ ವರೆಗೆ, ಅಧಿಕಾರಿಗಳು ವಿಶೇಷವಾಗಿ ನಡಿಯುವರೆಂದು ಹಾರೈಸುತ್ತೇನೆ.

ತುಂಕೂರು.—ಊರಿನಿಗೆ ಹೋಬಳಿ ಸ್ಕೂಲಿನಲ್ಲಿ ಜನವರಿ ೨೯ನೆ ತಾರೀಖು ದಿನ ಮಿ॥ ಎಂ. ಡಿ. ಕೃಷ್ಣಸ್ವಾಮಯ್ಯಂಗಾರ್ಯರು ಮತ್ತು ಅಸಿಸ್ಟೆಂಟ್ ಡೆಪ್ಯುಟಿ ಇನಸ್ಪೆಕ್ಟರ್ ಮು॥ ಅವರುಗಳಿಂದ ಸ್ಕೂಲ್ ಇನಸ್ಪೆಕ್ಷನ್ ಆದನಂತರ ರಾತ್ರಿ ೩ ಘಂಟೆ ಆರಂಭವಾಯಿತು ೧೦ ಘಂಟೆ ವರೆಗೂ ಈ ಗ್ರಾಮದ ಬಿ. ಆರ್. ವಿ. ಸಾಹೇಬ್ ಅವರುಗಳಿಂದ ಮ॥ ಕೃಷ್ಣಸ್ವಾಮಯ್ಯಂಗಾರ್ಯರು ಸ್ಕೂಲ್ ವಿದ್ಯಾರ್ಥಿಗಳಿಗೂ, ಇಷ್ಟುಮಾತ್ರವಲ್ಲದೆ ಕೆಲವು ಜನ ದೊಡ್ಡಮನುಷ್ಯರಿಗೂ ಮಾಜಿಕ್ ಲ್ಯಾಂಟರ್ನ್ ಚಿತ್ರಗಳನ್ನೆಲ್ಲಾ ಸರಿಯಾಗಿ ತಿಳಿಯುವಂತೆ ಸರ್ವರಿಗೂ ವಿವರಿಸಿದರು. ಇದರಿಂದ ಸರ್ವರಿಗೂ ಅನೇಕ ಸಂಗತಿಗಳು ತಿಳಿಯುವುದಲ್ಲದೆ ಮುಖ್ಯವಾಗಿ ಸ್ಕೂಲ್ ವಿದ್ಯಾರ್ಥಿಗಳಿಗೆ ಚರಿತ್ರೆ ಮೊದಲಾದ್ದರಲ್ಲಿ ಬಹಳ ಉಪಯೋಗ. ಪೂರ್ವಿಕರ ಕಾಲಗಳಲ್ಲಿ ಕಟ್ಟಿಸಿದ್ದ ಕಟ್ಟಡಗಳು, ಇನ್ನು ಅನೇಕ ದೇವಾಲಯಗಳ ವಿಷಯ ನೀತಿ ಮಾರ್ಗಗಳು, ಇವುಗಳೆಲ್ಲ ಪ್ರತ್ಯಕ್ಷವಾಗಿ ನೋಡಿದಂತೆ ಸಂಪೂರ್ಣವಾಗಿ ವಿಶದಪಡಿಸಿದರು. ಅವರಿಗೆ ನಾವೆಲ್ಲರೂ ಕೃತಜ್ಞರಾಗಿದ್ದೇವೆ.

ತಿಪಟೂರು.—ನಮ್ಮ ಅಮಲ್ದಾರ್ಯರು ಮು. ಸಾಹೇಬ್ ಖಂಗ್ಹಿಯಂ ಅವರು ಸದ್ದಿಗೆ ದಯಮಾಡಿಸಿದರು. ಇಲ್ಲಿ ಇನ್ನು ಪ್ಲೇಗು ಸೋಂಕು ಸ್ವಲ್ಪ ಮಟ್ಟಿಗೆ ಇದೆ. ಕ್ಯಾಂಪುಗಳಲ್ಲಿ ಇಜಾರಾ ಗುಡಿಸಲುಗಳಲ್ಲಿ ದುಃಖದ ಜನರಿಗೆ ಆಯಾ ಸೌಕರ್ಯ [illegible] ಆಯಾರಮಕ್ಕೋಸ್ಕರ ಆಗುವದಿಲ್ಲ. ಕ್ಯಾಂಪುಗಳಲ್ಲಿ ಗಲೀಜು ತುಂಬಾ ಇರುತ್ತೆ. ಆದ್ದರಿಂದ ವೈದ್ಯ [illegible] ಚಿಕಿತ್ಸೆ ಬರಬೇಕಾಗಿದೆ — ಇಲ್ಲಿಗೆ ಕ್ರಿಶ್ಚಿಯನ್ನರು ಬಂದು ಹೊಸದಾಗಿ ಬಡಗರಿಗೆ, ಉಪದೇಶಗಳು ಬಂದು ಆಗುತ್ತಾರೆ. ಈ ತಾಲೂಕಿಗೆ ಸೇರಿದ ಕೆಲವು ಹಳ್ಳಿಗಳು ಮತ್ತು ಗ್ರಾಮವು ಬಂದು ಪ್ಲೇಗಿನಿಂದ ಹಾಳುಬಿದ್ದು ಇತ್ತು. ಈಗ ಏನು ಇಲ್ಲದ್ದರಿಂದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅವರ ಹುಕುಂ ಆಗಿದೆ. ಹಾಳುಬಿದ್ದ ಗ್ರಾಮಗಳಲ್ಲಿ ಪ್ಲೇಗು ಸಂಪೂರ್ಣವಾಗಿ ನಿಂತು ಹೋಗಿದೆ. ಗ್ರಾಮಕ್ಕೆ ಜನಗಳು ಇನ್ನು ಪ್ರವೇಶಿಸಿಲ್ಲ. ಎಲ್ಲಾ ಪಟ್ಟಣಗಳಲ್ಲಿ ವಾಸಮಾಡುತ್ತಾರೆ — ಗ್ರಾಮದೊಳಕ್ಕೆ ಪ್ರವೇಶಿಸಿ ಅಲ್ಲಿ ಜನಗಳು ಸುಗ್ಗಿ ಕೆಲಸಕ್ಕಾಗಿ ಹತ್ತಿರ ದಿನಗಳು ಇದ್ದಿರುವಂತೆ ತೋರಿಬಂದು ಆದುದರಿಂದ ಅದಕ್ಕೋಸ್ಕರ ಗ್ರಾಮಕ್ಕೆ ಜಾಗ್ರತೆ ಹೋಗಲು ಉದ್ಯುಕ್ತರಾಗಿದ್ದಾರೆ.

ಅರಸೀಕೆರೆ.—ಈಚೆಗೆ ಎರಡು ತಿಂಗಳಿಂದಲೂ ದೈವಾನುಗ್ರಹದಿಂದ ಈ ಊರು ಮತ್ತು ಆಸು ಪಾಸು ಗ್ರಾಮಗಳಲ್ಲಿ ಪ್ಲೇಗು ಕಾಲ್ದೆಸೆಯು ಕಡಿಮೆಯಾಗಿರುತ್ತೆ. ಭಗವಂತನು ಇದೇ ರೀತಿ ಕಾಪಾಡಲಿ ಎಂದು ಪ್ರಾರ್ಥಿಸುತ್ತೇನೆ. ಹೊಸದಾಗಿ ದಯಮಾಡಿರುವ ನಮ್ಮ ಅಮಲ್ದಾರ್ಯ ಮಿಸ್ಟರ್ [illegible] ವಿಚಾರದಲ್ಲಿ ಬಹಳ ಮುತುವರ್ಜಿ ವಹಿಸಿದ್ದಾರೆ. ಬಿನ್ನಹೋಗಿರತಕ್ಕ ಜನಗಳಿಗೂ ವಾಸವಾಗಿರತಕ್ಕ ಮನೆಗಳ ಮೇಲಿನ ಹಂಚು ಮುಂತಾದ್ದನ್ನು ತೆಗೆದು ತೊಳೆಸಿ ಕೊಡುವಂತೆ ಬರೆದು ಮಾಡಿರುವ ಅಪ್ಪಣೆಗೆ ಕೆಲವರು ವಿರೋಧವಾಗಿ ಎಣಿಸುತ್ತಾರೆ. ಇದು ನಮ್ಮಗಳ ಕ್ಷೇಮಕ್ಕಾಗಿ ಮಾಡತಕ್ಕದ್ದಾಗಿದೆ. ಇಂಥಾದ್ದರಲ್ಲಿ ಈ ರೀತಿ ಮಾಡದಂತೆ ಸರ್ಕಾರದ ಹುಕುಂನಂತೆ ನಡಿಸುವದರಲ್ಲಿ ತುಂಬಾ ಕ್ಷೇಮಕರವಾಗಿದೆ.— ನಿನ್ನೆ ದಿವಸ ಈ ಊರು ಬಾಲಿಕಾ ಪಾಠಶಾಲೆಯಲ್ಲಿ ನಮ್ಮ ತಾಲೂಕು ಸಿರಸ್ತೇದಾರ್ಯ ಮುಂತಾದ ದೊಡ್ಡ ಮನುಷ್ಯರು ಸಭೆಸೇರಿ, ಬಾಲಿಕೆಯರ ವಿದ್ಯಾ ಕೌಶಲತೆಯನ್ನು ಪರೀಕ್ಷಿಸಿ ಬಹುಮಾನಗಳನ್ನೂ ಫಲ ಹಾರ ಮುಂತಾದ್ದನ್ನು ಹಂಚಿಕೊಟ್ಟರು. ಈ ಪ್ಲೇಗಿನ ಗಲಾಟೆ ದಸೆಯಿಂದ ಸ್ಕೂಲಿಗೆ ಬರತಕ್ಕ ಬಾಲಿಕೆಯರ ಸಂಖ್ಯೆ ಕಡಿಮೆಯಾಗಿದ್ದಾಗ್ಯೂ [illegible]

ದಾವಣಗೆರೆ.—ಹವಾ ಆರೋಗ್ಯಕರವಾಗಿದೆ. ಪಡರು ಪ್ಲೇಗಿನ ದಾಳಿ ಅಡಂಗಿಸಲಾಗಿದೆ. ಈ ಸಂವತ್ಸರದ ಜಾತ್ರೆಯಲ್ಲಿ ಜನಕ್ಕೆ ಕಾಣಿಕೆಗಳು ವಿಶೇಷ. ದಾನ್ಯನು ಮಾಡುವದಕ್ಕಾಗಿ ಇಲ್ಲಿನ ವರ್ತಕರ ಖಂಡಿ ಬೆಳೆ, ಹೊಂಬಾಯಿ ಹತ್ತಿ ಕಡಿಮೆ.—ವೀರಶೈವ ಮಂಡಲಿಗೆ ಗುರುಗಳಾದ ಶ್ರೀಮದ್ಗುರು ಸ್ವಾಮಿಗಳವರು ಈ ವಾರ ಬ್ಯಾಡಗಿಯಲ್ಲಿ ಪ್ಲೇಗಿನಿಂದ ಸಂಚರಿಸುತ್ತಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಈ ತಾಲೂಕಿನಲ್ಲಿ ಕೆಲವು ಹಳ್ಳಿಗಳಿಗೆ ಪ್ಲೇಗು ಪ್ರವೇಶಿಸಿ ಹಾವಳಿಯನ್ನು ಮಾಡುತ್ತಿರುವದು. ಇಲ್ಲಿ ಮದಿವಾಳಪ್ಪನೆಂಬುವನ ಮನೆಯಲ್ಲಿ ಇಲಿ ಸತ್ತು ಆತನು ಗೃಹವನ್ನು ಬಿಟ್ಟು ಬೇರೆ ಕಡೆ ವಾಸವಾಗಿರುವನು. ಆದರೆ ಅದು ಪ್ಲೇಗಿನಿಂದ ಮೃತಪಟ್ಟಿತೆಂದು ನಿರ್ಧಾರ ಪಟ್ಟಿಲ್ಲ. ವ್ಯಾಪಾರದ ಹೊರಲ ಆಗಲಿ, ಎಲ್ಲರೂ ತಮ್ಮ ತಮ್ಮ ಎಚ್ಚರಿಕೆಯಲ್ಲಿರುವದು ಒಳ್ಳೇದು!—ಕಳೆದವಾರ ಇಲ್ಲಿ ನಿಲುಗಡೆಯಿಲ್ಲದ ಸೇರುಗಳ ಉಪಯೋಗದಿಂದ ಮೋಸವು ಸಾಧ್ಯವಾ ಪಡೆಯಲು ಅವಕಾಶವಾಗುವದೆಂದು ಪ್ರಕಟಿಸಿದ ವಿಷಯವು ಇಲ್ಲಿನ ವರ್ತಕರಲ್ಲಿ ಸ್ವಲ್ಪಮಟ್ಟಿಗೆ ಚಲನೆಯನ್ನುಂಟುಮಾಡಿ ಕೆಲವರೆಲ್ಲರೂ ತಮ್ಮ ತಮ್ಮ ಸೇರುಗಳನ್ನು ಕಳಿಸಿಕೊಟ್ಟು ಸರಿಮಾಡಿದಂತೆ ಕೇಳುವೆವು. ಉಳಿದವರೂ ಮೋಸಕ್ಕೆ ಅವಕಾಶ ವಿರಲು ಯಾಕೆ ಪ್ರಯತ್ನಪಡದಿರಬಾರದು!—ಇಲ್ಲಿನ ಪಾಠಶಾಲೆಯಲ್ಲಿ ಉಪಾಧ್ಯಾಯನಾಗಿದ್ದ ಮಿ॥ ಸುಬ್ಬಣ್ಣಾಚಾರ್ಯರು ಹರಿಹರಕ್ಕೆ ವರ್ಗವಾಗಿ ತೆರಳಿದರು. ಅವರು ತಮ್ಮ ಕಾರ್ಯಗಳನ್ನು ಪೂರ್ಣಾನುರಾಗದಿಂದಲೂ ಉತ್ಸಾಹದಿಂದಲೂ ನೆರವೇರಿಸುತ್ತಿದ್ದ ಬಾಲಕರ ತಂದೆ ತಾಯಿಗಳಲ್ಲಿಯೂ ಪೋಷಕರಲ್ಲಿಯೂ ಅಧಿಕ ಗೌರವವನ್ನು ಪಡೆದಿದ್ದರು.—ಕನ್ನಡ ಸೂಪರಿಂಟೆಂಡೆಂಟರಾದ ಮಿ॥ ರಾಮಯ್ಯಂಗಾರ್ಯರು ಇಲ್ಲಿಗೆ ದಯಮಾಡಿದ್ದರು. ಇಲ್ಲಿನ ದೊಡ್ಡ ಮನುಷ್ಯರೆಲ್ಲ ಸೇರಿ ತಮ್ಮ ವಿದ್ಯಾಶಾಲೆಯನ್ನು ತೋರಿಸಿ ಅವರು ಇಲ್ಲಿ ಅಮಲ್ದಾರರಾಗಿದ್ದ ವೇಳೆಯಲ್ಲಿ ಅವರಿಂದ ಪಡೆದ ಉಪಕೃತಿಗಳು ಅವರನ್ನು ಸಾಧ್ಯವಾ ಕೆಡಿಸುವಂತೆ ಮಾಡುತ್ತಿವೆಯೆಂದು ಹೊಗಳಿ ಕೊಂಡಾಡಿದರು. ಅದಕ್ಕೆ ಮಿ॥ ರಾಮಯ್ಯಂಗಾರ್ಯರು ಗಂಭೀರವಾದ ಕೆಲವು ಮಾತುಗಳಿಂದ ಸದುತ್ತರವನಿತ್ತು ಇವುಗಳ ಹಿರಿಯರಿಂದೂ ಬಂದಿರುವ ಸೌಜನ್ಯಸ್ವಭಾವವನ್ನು ಪರ್ಜನ್ಯರ ಸಹೋದರ ಭಾವದಿಂದ ಐಕಮತ್ಯವನ್ನು ಹೊಂದಿ ದೇಶೋನ್ನತಿಗೆ ಕಾರಣಭೂತರಾಗಬೇಕೆಂದು ಹೇಳಿದರು. ಅವರೊಡನೆ ಸಂಭಾಷಿಸಿ ನೋಡಿದಲ್ಲಿ ಇಲ್ಲಿನ ಪ್ರಜೆಗಳ ವಿಷಯದಲ್ಲಿ ಅಮೋಘವಾದ ಅಭಿಪ್ರಾಯ ವಿರುವಂತೆ ತಿಳಿಯುತ್ತದೆ.—ಇಲ್ಲಿನ ವರ್ತಕರಾದ ಮಿ॥ ಬಂಕಾಪುರಪ್ಪನವರು ಎಣ್ಣೆಯ ಕಾರ್ಖಾನೆಯನ್ನು ಪ್ರಾರಂಭಿಸಬೇಕೆಂದಿರುವರು. ಅದಕ್ಕಾಗಿ ಸುಮಾರು ನಾಲ್ಕು ಸಾವಿರ ರೂಪಾಯಿಗಳ ಯಂತ್ರವನ್ನು ಜಾಗ್ರತೆಯಲ್ಲಿಯೇ ತರಿಸುವವರಾಗಿದ್ದಾರೆ.—ಇಲ್ಲಿ ಈಚೆಗೆ ತಳಿಯಾ ಮೇಲೆ ತರುವ ಸಾದೆ ಹೊರೆಯೊಂದಕ್ಕೆ ೩ ಕಾಸಿನಂತೆ ಸುಂಕ ವಸೂಲು ಮಾಡುವ ಏರ್ಪಾಡಾಗಿದೆ. ಇದು ಯಾವ ಕಾರಣದಿಂದಾದುದೋ ತಿಳಿಯಲಿಲ್ಲ. ಗಾರ್ನ್ಮೆಂಟಿನಲ್ಲಿ ಪ್ರಸಿದ್ಧಿಯಾಗಿರುವಂತೆ ಅಲ್ಲ. ಇದರಿಂದ ಬಹಳ ತೊಂದರೆಯುಂಟಾಗಿರುವುದು. ಇಲ್ಲಿನ ಪ್ರಜೆಗಳು ಸರ್ಕಾರಕ್ಕೆ ಅರ್ಜಿಯನ್ನು ಬರೆದುಕೊಂಡರೆ ಅವರುಗಳ ಉದ್ದೇಶವು ನೆರವೇರುವದರಲ್ಲಿ ಸಂದೇಹವಿಲ್ಲ.

## ಇಂಡಿಯಾ ದೇಶದ ವೃತ್ತಾಂತಗಳು.

ಜನವರಿ ೧ ರಿಂದ ೧೭ ನೆ ತಾರೀಖುವರೆಗೆ ೧೯ದರ ಡಿಲ್ಲಿ ದರ್ಬಾರ್ ಕಾಲದಲ್ಲಿ ರೈಲ್ವೆ ಇಲಾಖೆಗೆ ೬ ಲಕ್ಷ ರೂಪಾಯಿ ಹುಟ್ಟಿತೆಂದು ಕೇಳುತ್ತೇವೆ.

ಮೈಸೂರಿನ ದಿವಾನರು ಅಕ್ಟೋಬರ್ ೨೫ ರ ತನಕ ಕಲ್ಕತ್ತೆಯಲ್ಲೇ ಇದ್ದು ಅನಂತರ ಸೀಲೋನ್ ಕಡೆಗೆ ಪ್ರಯಾಣ ಮಾಡುತ್ತಾರೆಂದು ತಿಳಿಯುತ್ತದೆ.

ದಿಲ್ಲಿ ದರ್ಬಾರಿನ ಸಕಲ ಕಲಾ ಪ್ರದರ್ಶನ ಶಾಲೆಯು ಈ ತಿಂಗಳ ೧೪ ನೆ ತಾರೀಖಿಗೆ ಮುಕ್ತಾಯವಾಗುವದು. ಅಲ್ಲಿರುವ ಸಾಮಾನುಗಳೆಲ್ಲಾ ತೆಗೆಯಲ್ಪಡುತ್ತವೆ.

ತಿರುಪತಿ ಸಂಸ್ಥಾನದಲ್ಲಿ ಹಾಡಿಪುರದಿಂದ ಕಾಶಿಯಾತ್ರೆಯವರಿಗೆ ರೈಲ್ ರಸ್ತೆ ಹಾಕುವದಕ್ಕೆ ೧,೬೫,೪೧,೦೦೦ ರೂ. ಖರ್ಚಾಯಿತು. ಕಾಮಗಾರಿ ಪೂರೈಸುತ್ತ ಬಂದಿದೆ.

ಅಫ್ಘಾನಿಸ್ಥಾನದ ಅಮೀರರು ಪೈಸಾಯಂತ್ರವನ್ನು ಕಾಬೂಲಿನಲ್ಲಿ ಸ್ಥಾಪಿಸಿ ಹೊಸ ನಾಣ್ಯವನ್ನು ಮಾಡಿಸಿಕೊಂಡು ಹೋಗುವದಕ್ಕೆ ಇಷ್ಟರಲ್ಲೇ ಹಿಂದುಸ್ಥಾನಕ್ಕೆ ಬರುವವರಾಗಿದ್ದಾರೆಂದು ಸಮಾಚಾರ ಹುಟ್ಟಿದೆ.

ಮ. ದರಾಪ್ ಗೌವರ್ನ್‌ಮೆಂಟಿನವರು ಪ್ರಪಂಚದ ಕೀರ್ತಿ ಪಡೆದ ಹೋಧನ ಮಾಡುವ ಒಬ್ಬ ದೊಡ್ಡ ಮನುಷ್ಯನನ್ನು ಸಂಬಳ ಕೊಟ್ಟು ನೇಮಿಸಿಕೊಳ್ಳಬೇಕೆಂದು ಗೊತ್ತುಮಾಡಿದಾರೆ.

ಕಳೆದವಾರ ಮುನಾಭಾವ, ಭೌನಗರಗಳಲ್ಲಿ ಭೂಕಂಪವಾಯಿತು. ಮುನಾಭಾವದಲ್ಲಿ ಭಯಂಕರವಾದ ಸುಂಟರಗಾಳಿಯೂ ಎದ್ದಿತು. ಪ್ರಜೆಗಳ ಗಾಬರಿಯು ವಿವರಿಸಲಾಗದು.

ದಕ್ಷಿಣ ಆಫ್ರಿಕಕ್ಕೆ ಸೇರಿದ ಕೇಪ್‌ಟೌನ್ ಪಟ್ಟಣದ ಭಾರೀ ಸಾಹುಕಾರನಾದ ಹಾಜೀ ಸಾಲೇಮಹಮ್ಮದ್ ಮಹಮೂದ್ ಎಂಬಾತನು ಗುಜರಾತಿನ ವಿದ್ಯಾಸಂಘಕ್ಕೆ ೨,೦೦೦ ರೂ. ಧರ್ಮ ಮಾಡಿರುತ್ತಾನೆ.

ದಿಲ್ಲಿ ದರ್ಬಾರ್ ಕಾಲದಲ್ಲಿ ಪೋಲೀಸಿನವರಿಗೂ ಸೈನಿಕರಿಗೂ ಜಗಳವಾಗಿ ಒಬ್ಬ ಪೋಲೀಸಿನವನು ಹತನಾದನಷ್ಟೆ. ಇದಕ್ಕಾಗಿ ಹ್ಯಾಂಪ್‌ಷೈರ್ ದಂಡಿನವರು ಒಬ್ಬ ಸೈನಿಕನಿಗೆ ಆರು ವಾರಗಳ ಸಜಾ ವಿಧಿಸಿದ್ದಾರೆ.

ಬರೋಡಾ ಸಂಸ್ಥಾನದ ಗಾಯಕವಾಡ್ ಮಹಾರಾಜರವರು ಬೊಂಬಾಯಿಯಲ್ಲಿರುವ ಮಹಾ ಮಾರ್ಕರಾಂ ಎಂಬೊಬ್ಬ ಕವಿಯ ಮೇಲೆ ಕರುಣವಿಟ್ಟು ಅವನಿಗೆ ೩೦೦ ರೂ. ಬಹುಮಾನ ಕಳುಹಿಸಿ ಕೊಟ್ಟಿದಾರೆ.

ಹೈದರಾಬಾದಿನ ನೈಜಾಮರವರು ದಿಲ್ಲಿ ಸಕಲ ಕಲಾ ಪ್ರದರ್ಶನಶಾಲೆಯಲ್ಲಿ ಈಚೆಗೆ ೩ ಲಕ್ಷ ರೂಪಾಯಿನ ಜವಾಹಿರಿ ಪದಗಳನ್ನೂ ೨ ಲಕ್ಷ ರೂಪಾಯಿನ ಇತರ ವಸ್ತುಗಳನ್ನೂ ಕೊಂಡುಕೊಂಡಿರುತ್ತಾರೆ.

ತಿರುವಾಂಕೂರ ದಕ್ಷಿಣ ಪ್ರಾಂತ್ಯದಲ್ಲಿ ಜಾನಾಡರು ಕಳೆದ ವಾರ ಬೊಂಬೆ ಜಗಳ ಮಾಡಿ ಅನೇಕರನ್ನು ಹೊಡೆದು ಗಾಯಮಾಡಿದರು; ಕೆಲೀಕ ಅಂಗಡಿಗಳನ್ನು ಲೂಟಿ ಮಾಡಿದರು; ಒಬ್ಬ ಪೋಲೀಸಿನವನಿಗೆ ಘೋರಾ ಏಟು ಬಿದ್ದಿದೆ.

ಮಧ್ಯ ಪ್ರಾಂತ್ಯಗಳಲ್ಲಿ ಕ್ಷಾಮ ಬಾಧೆಯು ಇನ್ನೂ ನಿವಾರಣೆಯಾಗಲಿಲ್ಲ. ಕಳೆದ ವಾರ ೨,೦೦೦ ಜನರು ಸರ್ಕಾರಿ ರಿಲೀಫ್ ಕಾಮಗಾರಿಗೆ ಬಂದು ಸೇರಿದರು. ಒಟ್ಟು ೨೨,೪೫೪ ಜನರು ಸರ್ಕಾರದವರ ಪೋಷಣೆಯಲ್ಲಿದ್ದಾರೆಂದು ತಿಳಿಯುವದು.

ಬೊಂಬಾಯಿನಲ್ಲಿ ಒಬ್ಬ ಹಿಂದೂವೂ ಆತನ ಹೆಂಡತಿಯೂ ಸೇರಿ ಒಬ್ಬ ಹುಡುಗನ ಪ್ರಾಣಹೋಗುವ ಒಡವೆಗಳ ಆಸೆಗೆ ಆತನನ್ನು ಕೊಂದುಹಾಕಿದರು. ಇದಕ್ಕೋಸ್ಕರ ಸರ್ಕಾರದವರು ಅವರಿಬ್ಬರನ್ನು ಗಲ್ಲಿಗೆ ಏತ್ತಿದರು. ಬೊಂಬಾಯಿನಲ್ಲಿ ಹೆಂಗಸನ್ನು ಗಲ್ಲಿಗೆ ಹಾಕಿದ್ದು ಇದೇ ಮೊದಲನೆಯದು.

ಮದರಾಸ್ ಗೌವರ್ನ್‌ಮೆಂಟಿನ ಬಾಲಿಕಾ ಪಾಠಶಾಲೆಗಳ ಮೇಲ್ವಿಚಾರಣಾ ಅಧಿಕಾರಿಯಾದ ಬ್ರಾಂಡ್ ಎಂಬಾಕೆಯು ಹಿಂದೂ ವಿಧವೆಯರಿಗೆ ವೇತನಗಳನ್ನು ಕೊಟ್ಟು ಅವರಿಗೆ ವಿದ್ಯೆ ಕಲಿಸಿ, ಅಧ್ಯಾಪಕಿಯರನ್ನಾಗಿ ನೇಮಿಸಬೇಕೆಂದು ಗೌವರ್ನ್‌ಮೆಂಟಿಗೆ ಸಲಹೆ ಕೊಟ್ಟಿರುತ್ತಾಳೆ. ಇದು ಜಾರಿಗೆ ಬರಬೇಕೆಂದು ಕೋರುತ್ತೇವೆ.

ಹಿಂದುಸ್ಥಾನದಲ್ಲಿ ಲೀಗ್ ಕರ್ಜನ್ ಮ. ವರು ವಿಕ್ಟೋರಿಯಾ ಮೆಮೋರಿಯಲ್ ಸ್ಕಾಲರ್‌ಷಿಪ್ ಫಂಡನ್ನು ಕಲ್ಪಿಸಿದಾರಷ್ಟೆ. ಈ ಫಂಡಿಗೆ ಕಾಶ್ಮೀರ ಮಹಾರಾಜರು ೫,೦೦೦ ರೂ., ಮೈ॥ ಫಿಪ್ಸ್ ಎಂಬ ಅಮೇರಿಕದವನು ೩೦,೦೦೦ ರೂ. ಕೊಟ್ಟಿದಾರೆ. ಅಂತು ಈಗ ಈ ಫಂಡಿನಲ್ಲಿ ೭ ಲಕ್ಷ ರೂಪಾಯಿ ಕೂಡಿದಂತಾಯಿತು.

ಮೊನ್ನೆ ಸೋಮವಾರದ ದಿನ ಬರ್ದವಾನಿನ ಮಹಾರಾಜಾಧಿರಾಜರಿಗೆ ಪಟ್ಟಾಭಿಷೇಕವಾಯಿತು. ಆಗ ಯೂರೋಪಿಯನ್ ಜಡ್ಜರು, ಶೇಠ್, ಸಾಹುಕಾರ, ಜಮೀನ್ದಾರ ಮೊದಲಾದ ಸಂಭ್ರಮಗಳೆಲ್ಲಾ ಬಹು ಅಟ್ಟಹಾಸದೊಡನೆ ನಡೆಸಲ್ಪಟ್ಟವು. ಆ ಸಂಸ್ಥಾನದ ಪ್ರಸಿದ್ಧ ಮಂತ್ರಿಯಾದ ರಾಜಾ ವನ ಬಿಹಾರಿ ಕಪೂರ್ ಮ. ವರು ಹೊಸ ರಾಜನನ್ನು ಪ್ರತಿಷ್ಠೆ ಮಾಡಿದರು.

ಪೂನೆಯಲ್ಲಿ ಪ್ಲೇಗ್ ಅಪಾಯವು ಬಹಳ ಹೆಚ್ಚಾಗಿದೆ. ಜನರೆಲ್ಲಾ ಊರನ್ನು ಖಾಲಿ ಮಾಡಿದ್ದರೂ ಅದು ನಿಲ್ಲಲಿಲ್ಲ. ಅನೇಕ ಶ್ರೀಮಂತ ಬ್ರಾಹ್ಮಣ ಸಂಸಾರಗಳು ಒಟ್ಟಿನಲ್ಲಿ ಸಮೂಲ ನಾಶವಾದವು. ಮಿ॥ ಬಾಲಗಂಗಾಧರ ತಿಲಕರವರ ಹಿರೀ ಮಗನು ಈ ರೋಗಕ್ಕೆ ತುತ್ತಾದನು. ಪಂಡಿತರುಗಳೆಲ್ಲಾ ರೋಗಿಗಳಿಗೆ ಔಷಧಾದಿಗಳನ್ನು ಧರ್ಮಕ್ಕೆ ಕೊಟ್ಟು ನೋಡಿಕೊಳ್ಳುತ್ತಿದ್ದಾರೆ.

೧೯೦೨—೧೯೦೩ನೆ ಸಾಲಿನಲ್ಲಿ ಹಿಂದುಸ್ಥಾನದ ರಾಜಾದಾಯವು ಖರ್ಚಿಗಿಂತ ಹೆಚ್ಚು ಗೊತ್ತಾದ ಮೇಲೆ, ಇದರಲ್ಲಿ ಕೆಲವು ಭಾಗದ ಕಂದಾಯವನ್ನು ಕಡಿಮೆಮಾಡಬೇಕೆಂದು ಪ್ರಾರ್ಥನಾಪೂರ್ವಕವಾಗಿ ಮಾಡಿ ಬಹುಮಾನದಂತೆಲ್ಲ, ಹೀಗೆ ಬಿಟ್ಟಾಗ್ಯೂ ಹುಟ್ಟುವ ಹಣ ಬಹಳ ಮಿಗುವದರಿಂದ ಈ ಹಣವನ್ನು ರೈಲ್ ರಸ್ತೆಗಳನ್ನು ಹೆಚ್ಚಿಸುವದಕ್ಕೆ ಪ್ರಯೋಗಿಸಬಹುದೆಂತಲೂ ಸಮಾಚಾರವಿದೆ.

ಹಿಂದುಸ್ಥಾನದಲ್ಲಿ ಕ್ರಿಕೆಟ್ ಎಂಬ ಚೆಂಡಾಟದಲ್ಲಿ ಪ್ರವೀಣರೆನಿಸಿಕೊಂಡಿರುವ ಹಿಂದು ಮುಸಲ್ಮಾನ್, ಪಾರ್ಸಿ ಜನರು ಸುಮಾರು ೧೫-೧೬ ಮಂದಿ ಸೇರಿ ವಿಲಾಯತಿ ಮುಂತಾದ ರಾಜ್ಯಗಳಿಗೆ ಹೋಗಿ ಅಲ್ಲಿನವರ ಸಂಗಡ ಪಂದ್ಯಗಳನ್ನು ಆಡಿ ಬರಬೇಕೆಂದು ಬೊಂಬಾಯಿನಲ್ಲಿ ಸನ್ನಾಹವಾಗುತ್ತಿದೆ. ಇದಕ್ಕೆ ಬೇಕಾಗುವ ಸುಮಾರು ೩೦,೦೦೦ ರೂಪಾಯಿಗಳನ್ನು ಅವರು ಚಂದಾ ಎತ್ತುತ್ತಾರೆ.

ಸಿಂಲಾ ಡಿಸ್ಟ್ರಿಕ್ಟಿಗೆ ಸೇರಿದ ಬೇಜಗಢವೆಂಬ ಸಣ್ಣ ಸಂಸ್ಥಾನದಲ್ಲಿ ಪ್ರಜೆಗಳು ಮಿಕ್ಕಾರರಾಗಿ ಸರ್ಕಾರದವರು ಕೇಳುವ ತೆರಿಗೆಯುಗಳನ್ನು ಕೊಡದೆ, ಸಹಾಲಾತಿಗೆ ಬರತಕ್ಕ ನೌಕರರ ಮೇಲೆ ಬಿದ್ದು ಹೊಡೆದು, ದಾಂಗ್ ಮಾಡುತ್ತಾ ಬಂದರು. ಇದನ್ನು ನೋಡಿ ಇಂಡಿಯಾ ಗೌವರ್ನ್‌ಮೆಂಟಿನವರು ಆ ಸಂಸ್ಥಾನಕ್ಕೆ ಕೆಲವು ಸದಾರರನ್ನು ನೇಮಿಸಿ ಕಳುಹಿಸಿ, ತಹಬಂದಿಗೆ ತರಬೇಕೆಂದು ಹುಕುಂ ಕೊಟ್ಟಿದಾರೆ.

ಕಳೆದವಾರ ಕಲ್ಕತ್ತೆಯವರ ಸಹೋದರಾದ ಹೋಲ್ಕರ್ ರಫ್ ಕನ್ನಾಟ್ ಮ. ವರು ಪತ್ನಿ ಸಹಿತ ಗ್ವಾಲಿಯರ್ ಸಂಸ್ಥಾನಕ್ಕೆ ಹೋ[illegible]

## ವಿದೇಶ ವರ್ತಮಾನಗಳು.

## ಜೈಮಿನಿ ಭಾರತವು

೧ನೆಯ ಭಾಗ (೧೮ ಸಂಧಿಗಳು)

ಕರ್ನಾಟಕ ಗ್ರಂಥವಾಲಾ ಆಫೀಸಾ ಪಂಡಿತರಿಂದ ಪರಿಶೋಧಿಸಿ ಚೆನ್ನಾಗಿ ಮುದ್ರಿಸಲ್ಪಟ್ಟಿದೆ. ಕ್ರಯ ೫ ಆಣೆ ಮಾತ್ರ. ಅಂಚೆಯಾಸಲು ಬೇರೆ ಕೊಡಬೇಕು.

೧೯೦೩ ನೆ ಲೋವರ್ ಸೆಕೆಂಡರಿ ಪರೀಕ್ಷೆ ಟೆಕಸ್ಟ್ ಮಿ|| ಲೀವಿಸ್ ರೈಸರವರ ಹಿಂದೂ ದೇಶದ ನಾಗರಿಕ ೧೦-೧೧-೧೩ ನೇ ಅಧ್ಯಾಯಗಳಿಗೆ ನೋಟ್ಸ್, ಮ|| ಎಸ್. ಟಿ. ನರಸಿಂಹಾಚಾರ್ಯರು, ಮತ್ತು ಮ|| ಆರ್. ಸುಬ್ಬರಾವ್ ಬಿ. ಎ. ಇವರಿಂದ ಮಿ|| ಭಾಷಾಂತರಕರ್ತರ ಅಪ್ಪಣೆ ಮೇರೆ ರಚಿಸಲ್ಪಟ್ಟಿರುವದು. ಕ್ರಯ ೩ ಆಣೆ ಮಾತ್ರ. ಫೆಬ್ರವರಿ ೧೫ ಕ್ಕೆ ಸಿದ್ಧವಾಗುವದು.

ವಿಳಾಸ:—ಗ್ರಾಜುಯೇಟ್ಸ್ ಟ್ರೇನಿಂಗ್ ಅಸೋಸಿಯೇಷನ್, ಮೈಸೂರು.

## ನಿಮ್ಮ ತಲೆಯಮೇಲಿರುವದೇನು? ಹಾಸನದ ಟೋಪಿ ಅಲ್ಲವೊ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11

ಒಳ್ಳೇ ಟೋಪಿಗಳು ಎಲ್ಲಿವೆ? ಯಾಕೆ, ಸಂಶೇಹವೇನು?

ಹಾಸನದ ಟೋಪಿಗಳೇ.

ಹಾಸನದ ಟೋಪಿಗಳು ಬೇರೆ ಎಲ್ಲಿ ತಯಾರಾದವು? ಎಲ್ಲಿಂದ ಇಷ್ಟು ಕಡೆಗಳಿಗೆ ಹರಡಿಕೊಂಡವು? ಖಂಡಿತವಾಗಿಯೂ ಹಾಸನ ದಿಂದಲೇ.

ಈಗ ಇತರ ಕಡೆಗಳಲ್ಲಿ ಮಾರಿ ಬರುತ್ತಿರುವ ಟೋಪಿಗಳ ಕಾಲಿನಲ್ಲಿ ಬೆಳೆದವು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೇಳಿ ಕೊಂಡು ಹೋಗುತ್ತಾರೆ.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಗಾತ್ರವೆಲ್ಲಾ ಸೆಟ್ಟಿಗೆ ನಿರ್ಣಯವಾಗಿಯೇ ಬರುವವು. (೨) ಟೋಪಿ ಗಳನ್ನು ಚೆನ್ನಾಗಿ ನಾನಾ ಬಣ್ಣಗಳನ್ನಾಗಿ ಹಾಕಿಸುತ್ತೇವೆ. ಬೇರೆ ಜನನ್ನಾಗಿರತಕ್ಕವುಗಳನ್ನೇ ಅರಿಸಿ ಅಪೇಕ್ಷಿಸುವವರಿಗೆ ಕಳುಹಿಸುತ್ತೇವೆ.

ಒಳ್ಳೇದಾದ, ಅನ್ಯ! ಹೊಸ, ಒಳ್ಳೆ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೆ ಕಾಗದ ಬರೆದು ತರಿಸಿಕೊಳ್ಳಿ. ಅಗ್ಗವಾದ ಕ್ರಯ ಜನಗಳೆಲ್ಲರಿಗೂ ದೊರೆತಕ್ಕದ್ದು ನಮ್ಮಲ್ಲಿ ದೊರೆಯುವದಿಲ್ಲ.

ಪಿ. ಪ್ರಾನ್ಸಿಸ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

## ಹೋಮಿಯೋಪತಿ

ಹಳೆ ಪುಸ್ತಕಗಳು ಮಾರಾಟ. ಕಾಗದಗಳ ಮೇಲೆ ಗುರುತು ಮಾಡಿ ಕೊಳ್ಳಲಾಗುತ್ತೆ.

ಈ ಔಷಧಿಯು ಮನೆ, ಆರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಆಫೀಸು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇಟ್ಟಿರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುದು ಲೋಕ ಪ್ರಸಿದ್ಧವಾಗಿದೆ.

ಈ ತೈಲವು ಅನೇಕರಲ್ಲಿ ಪ್ರಯೋಗಿಸಲ್ಪಟ್ಟು ಮಹತ್ತಾಗಿ ಸಿದ್ಧ ವಾಗಿದೆ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ. ನೋವು ಶಮನಕ್ಕೆ ಇದನು ಹಚ್ಚಿದ ಕೂಡಲೇ ನಿವಾರಣೆಯಾಗುವದು.

ಈ ತೈಲವು ತಲೆನೋವು, ನೆಗಡಿ, ಕಿವಿನೋವು, ಹಲ್ಲುನೋವು, ಮೈಕೈನೋವು, ಗಾಯಗಳು, ನರ ಬೇನೆ, ಕೀಲುವಾಯು, ಗಂಟುಗಳು, ಹುಳುಕಡ್ಡಿ, ಚೇಳು ಕಡಿತ, ಜಠರನೋವು, ಬೆನ್ನು ನೋವು, ಮುಂತಾದ ರೋಗಗಳನ್ನು ವಾಸಿಮಾಡುತ್ತದೆ. ಈ ತೈಲ ಗಾಯ—ಹುಣ್ಣು ಮೊದಲಾದ ನಾನಾ ವ್ಯಾಧಿಗಳನ್ನು ಹುಟ್ಟದಂತೆ ಮಾಡುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಬೆಳಿಗ್ಗೆ ಸ್ವಸ್ಥರಾಗಿರುವರು.

ಕ್ರಯ:—ಸಣ್ಣ ಡಬ್ಬಾ ೧ಕ್ಕೆ ೧೯ ಪೈ, ದೊಡ್ಡದಕ್ಕೆ ರೂ ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೇವೆ. ರೂ. ೨—೮ ಆ. ಬಾಟ್ಲಿ ಡಬ್ಬದಲ್ಲಿ ೧ ರೂ. ಡಬಾದಲ್ಲಿ ಒಂದರಂತೆ ೪ ಪಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

## ಹೋಮಿಯೋಪಥಿಕ್ ಯುಂಬ್ರೋಕೇಷನ್.

ಈ ತೈಲದ ಒಳ್ಳೇ ಗುಣ ಗಳಿಗೆ ಉಪಯೋಗಿಸತಕ್ಕದ್ದು. ಖರ್ಚು ಒಂದು ಆಣೆ ಇದನ್ನು ಹಚ್ಚಿಕೊಂಡರು. ಇದರಲ್ಲಿ ಹೋಮಿಯೋಪತಿ ಗುಣಗಳು ಚೆನ್ನಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೇನು ಗುಣಗಳಿಲ್ಲ ಹೊಸ ಭಾಗವಿರುತ್ತೆ. ಇದನ್ನು ಪರೀಕ್ಷೆ ಬಹು ಜನ ಮೆಚ್ಚಿಕೊಳ್ಳುವರು. ಡಬ್ಬಾಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಸಾಮಾನುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಪಟ್ಟಿಯನ್ನು ಅಪೇಕ್ಷಿಸಿದವರಿಗೆ ಕಳಿಸುವೆವು.

ವಿಳಾಸ:—ಹೋಮಿಯೋ ಹಾ ಕಂಪೆನಿ, ೨೭ ವೆಸ್ಟ್ ಪೇಟ್ ಸ್ಟ್ರೀಟ್, ಮದ್ರಾಸ್.

## ಗಣೇಶಸಂಜೀವಿನಿ,

6

ವೇ|| ಬಿ. ಕೃಷ್ಣಸ್ವಾಮಯ್ಯಂಗಾರ್ಯರಿಂದ ರಚಿಸಲ್ಪಟ್ಟಿದ್ದು ದ್ವಿತೀಯ ಮುದ್ರಣ. ಮೈಸೂರ್ ಸ್ಟಾರ್ ಆಫೀಸ್ ಮ್ಯಾನೇಜರಲ್ಲಿ, ಕೆ. ನರಸಿಂಹಯ್ಯ ಅಂಡ್ ಕೊ ಯವರಲ್ಲಿ ಬಿಕರಿಗೆ ಸಿದ್ಧವಾಗಿದೆ. ಪ್ರತಿ ಯೊಂದಕ್ಕೆ ರೂ ೧—೮—೦. ವಿ. ಪಿ. ಪಿ. ಮೂಲಕ ೧—೧೧—೦.

## ಹೊಸಪುಸ್ತಕವು! ಹೊಸಪುಸ್ತಕವು!! ಹೊಸಪುಸ್ತಕವು!!!

## ಬೋಯರ ಮಹಾಯುದ್ಧ.

13—11

ಡಾಕ್ಟರ್ ಕೋನನ್‌ಡಾಯಲ್ ವಿದ್ಯಾ ನಿಪುಣನು ಇಂಗ್ಲೀಷಿನಲ್ಲಿ ಬರೆದಿರುವ ಪುಸ್ತಕದ ಆಧಾರದ ಮೇಲೆ ರಚಿಸಲ್ಪಟ್ಟಿದೆ. ಇದನ್ನು ಓದಿದರೆ ಬೋಯರ ಯುದ್ಧದ ಕಾರಣಗಳು, ಯುದ್ಧ ನಡೆದರೀತಿ, ಫಲಿತಾಂಶಗಳು ಇವೇ ಮುಂತಾದ ಅನೇಕ ಸಂಗತಿಗಳೆಲ್ಲಾ ವಿಶದವಾಗಿ ತಿಳಿ ಯು ಬರುವವು.

ಇದರಲ್ಲಿ ಅಡಗಿರುವ ಅಧ್ಯಾಯಗಳನ್ನು ಸ್ವಲ್ಪ ನೋಡಿ:—(೧) ಬೋಯರರು. (೨) ಯುದ್ಧಕ್ಕೆ ಕಾರಣ. (೩) ಬ್ರಿಟಿಷರಿಗೂ ಬೋಯರರಿಗೂ ನಡೆದ ಸಲಹೆಗಳು. (೪) ಸಮಾಧಾನದ ವಿಷಯವಾಗಿ ಕಡೆಯ ಸಲಹೆಗಳು. (೫) ಬ್ರಿಟಿಷರಮೇಲೆ ಆರೋಪಿಸಲ್ಪಡುವ ಕೆಲವು ದೋಷಗಳು. (೬) ಬೋಯರ ಸಿಪಾಯಿಗಳ ಮೇಲೆ ಯಾವ ತಪ್ಪೂ ತೋರುವದಿಲ್ಲವೋ?

ಇದರ ಕ್ರಯ ಎರಡು ಆಣೆ ಮಾತ್ರ.

ಪುಸ್ತಕದ ನಾಲ್ಕೂಕಡೆ ಪ್ರಿಂಟಿಗೂ, ಬೈಂಡಿಗೂ, ವಿಶೇಷವಾಗಿ ಅದರಲ್ಲಿ ಅಡಗಿರುವ ಸಂಗತಿಗಳಿಗೂ ನಾಲ್ಕಾಣೆ ಕೊಟ್ಟರೂ ಸಾಲದು. ಒತ್ತಾಯಿಸಿ ನೋಡಿ! ಪುಸ್ತಕವು ಮುಗಿದು ಹೋಗುತ್ತೆ! ವಿ. ಪಿ. ಪಿ. ಮೂಲಕ ಪುಸ್ತಕದ ಕ್ರಯ ಪೋಸ್ಟೇಜ್ ಸಹಿತ ನಾಲ್ಕಾಣೆ ಆಗುತ್ತೆ.

ಪುಸ್ತಕ ವ್ಯಾಪಾರಸ್ಥರು ಹೆಚ್ಚಾಗಿ ಪ್ರತಿಗಳನ್ನು ತರಿಸಿಕೊಂಡರೆ ವಿಶೇಷವಾದ ಡಿಸ್ಕೌಂಟು ದೊರೆಯುವದು.

| | | |
|---|---|---|
| ಮ್ಯಾನೇಜರ್, ಮಿಡ್ಲ್ ಬುಕ್ ಡಿಪೋ, ಮೈಸೂರು. | ಅಥವಾ | ಮ್ಯಾನೇಜರ್, ಎವಿಡನ್ ಬುಕ್ ಡಿಪೋ, ಬೆಂಗಳೂರು ಸಿಟಿ. |

## ಜ್ವರಹರಿ.

18

ಇದು ಸಾಧಾರಣ ಜ್ವರ, ಚಳಿಜ್ವರ, ಮೈಲಿಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಇವೇ ಮೊದಲಾದವು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು. ಜ್ವರಹರಿಯನ್ನು ಸೇವಿಸುತ್ತಾ ಒಂದರ ಕಾರ್ಯಪ್ರವೃತ್ತಿಯನ್ನು ಕಡಿಮೆ ಮಾಡುವದು. ಪ್ರಯಾಣ ಮಾಡತಕ್ಕವರು ಈ ಔಷಧವನ್ನು ಅವಶ್ಯವಾಗಿ ಹತ್ತಿರ ಇಟ್ಟುಕೊಂಡಿರಬೇಕು. ಇದು ದೇಹವನ್ನು ಒಳ್ಳೆ ಕ್ರಮವಾದ ಸ್ಥಿತಿಯಲ್ಲಿ ಇಟ್ಟುಕೊಳ್ಳುವುದು. ಇದನ್ನು ಉಪಯೋಗಿಸಿದವರ ಸರ್ಟಿಫಿಕೇಟುಗಳನ್ನು ಅಪೇಕ್ಷಿಸಿದವರಿಗೆ ಕಳುಹಿಸುತ್ತೇವೆ. ಸಣ್ಣ ಮಕ್ಕಳು ದೊಡ್ಡ ಸೀಸೆಗಳಲ್ಲಿ ಹಾಕಿ ಬಿಕರಿ ಮಾಡುವದು.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ., ೧೫ ರೂ., ೨, ರೂ., ೧೧ ರೂ. ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

## ಅಮೃತಾಂಜನ ಕರ್ಪೂರ.



ಈ ಔಷಧವು ಅಜೀರ್ಣ, ಶೀತಭೇದಿ ಸಾಧಾರಣ ಹೊಟ್ಟೆ ಕಳಲುವದು, ವಾಂತಿಭೇದಿ, ಮತ್ತು ಇದರ ಹುಟ್ಟುನೋವುಗಳು—ಮುಂತಾದವುಗಳಿಗೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕಾರಿಯಾಗುವದು. ಇದು ಸಣ್ಣದಾದ ತೀಗಳಿಗೆ ಬೀರಾವಾಗಿ ಹೊರಗೆ ಬರುವಾಗ್ಯೇ ಹುಟ್ಟುನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಶ್ರೀ ದ ಪರವು ಜ್ವರಹರಿ ಎಂಬ ಔಷಧದಂತೆಯೇ, ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಯ್ಯನವರು—ಪ್ರಿಯ ಅಮೃತ ಕರ್ಪೂರವನ್ನು ಆನಾನು ನನ್ನ ತಾಲ್ಲೋಕಿನ ಜ್ವರಸಿಸಿ ಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಬೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇನೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ಎಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಡಾಕ್ಟರುಗಳಲ್ಲಿ, ಔಷಧ ವ್ಯಾಪಾರಿಗಳಲ್ಲಿಯೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕಳಗಿನ ವಿಳಾಸದಾರರಲ್ಲಿ ವಿಶೇಷ.—ಚೆನ್ನಯವರ ಗ್ರೇಟ್ ಇಂಡಿಯನ್ ಔಷಧ ಕಂಪನಿ, ಸೆಕೆಂಡ್ ಬೀಚ್ ಲೈನ್, ಮದರಾಸ್.

## ಮೈಸೂರು ಶೀಮೆಯಲ್ಲಿ ಪ್ಲೇಗಿನ ಸ್ಥಿತಿ.

23-1-1903 ರಿಂದ 30-1-1903 ರ ವರೆಗೆ

| ಸ್ಥಳ. | ಪ್ಲೇಗ್ ತಗಲಿದ್ದು. | ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | 117 | 83 | 138 | 112 |
| ಮೈಸೂರು ,, | 31 | 30 | 47 | 29 |
| ಬೆಂಗಳೂರು ಡಿಸ್ಟ್ರಿಕ್ಟು | 183 | 166 | 188 | 165 |
| ಮೈಸೂರು ,, | 312 | 220 | 317 | 228 |
| ಕೋಲಾರ್ ,, | 50 | 17 | 38 | 25 |
| ಕೋಲಾರ್ ಚಿನ್ನದ ಗಣಿಗಳು | 88 | 57 | 89 | 61 |
| ತುಂಕೂರು ಡಿಸ್ಟ್ರಿಕ್ಟು | 49 | 25 | 15 | 18 |
| ಹಾಸನ ,, | 52 | 42 | 100 | 77 |
| ಚಿತ್ರದುರ್ಗ ,, | 15 | 8 | 61 | 29 |
| ಕಡೂರ್ ,, | 59 | 56 | 54 | 88 |
| ಶಿವಮೊಗ್ಗ ,, | 84 | 65 | 76 | 58 |
| ಒಟ್ಟು | 1040 | 789 | 1104 | 860 |

ಶಾಲಿವಾಹನ ಶಕ ೧೮೨೪ ನೇ ಶುಭಕೃತುನಾಮ ಸಂವತ್ಸರದ ಮಾಘ ಶುದ್ಧ ಪೂರ್ಣಿಮಾ ಗುರುವಾರದಿಂದ ಮಾಘ ಬಹುಳ ಸಪ್ತಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಫೆಬ್ರವರಿ

| ತಾ | ವಾರ | ತಿಥಿ. | ಘಳಿಗೆ | ನಕ್ಷತ್ರ | ಘಳಿಗೆ | ಮೈಸೂರು ಸೂರ್ಯೋದಯ |
|---|---|---|---|---|---|---|
| 12 | ಗುರು | ಪೂರ್ಣಿಮಾ | 0 23 | ಮಖ | 05 35 | 1 |
| 13 | ಶುಕ್ರ * | ಪಾಡ್ಯ | 51-12 | ಪುಬ್ಬ | 56 10 | 2 |
| 14 | ಶನಿವಾರ ‡ | ಬಿದಿಗೆ | 18 40 | ಉತ್ತರ | 51 10 | 3 |
| 15 | ರವಿವಾರ | ತದಿಗೆ | 16-32 | ಹಸ್ತ | 51 11 | 4 |
| 16 | ಚಂದ್ರ † | ಚೌತಿ | 15 15 | ಚಿತ್ತ | 0 | 5 |
| 17 | ಕುಜವಾ | ಷಷ್ಠಿ | 15 08 | ಸ್ವಾತಿ | 7 0 | 6 |
| 18 | ಬುಧ | ಸಪ್ತಮಿ | 47 29 | ವಿ | 60 0 | 7 |

* ಉತ್ತರಾದಿಮಠ ಜಾತ್ರೆ. ‡ ಕಡಪ್ಪದ ನಿವಾಸಸ್ವಾಮಿ ರಥ.
† ಚಂದ್ರಶೇಖರ ಭಗವತ್ಪಾದ ಆರಾಧನೆ, ಮಹಾದೇವ ಜ

## ಪೇಟೆ ಧಾರಣೆ

| ದಿನಸಿ. | ಮೈಸೂರು | ಬೆಂಗಳೂರು |
|---|---|---|
| ಅಲ್ಲಿ ಅಕ್ಕಿ ಪಲ್ಲ ೧ಕ್ಕೆ ರೂ | [illegible] | [illegible] |
| ಕೆಂಪು ಕುಚಲಕ್ಕಿ | [illegible] | [illegible] |
| ತೊಗರಿ ಬೇಳೆ | [illegible] | [illegible] |
| ಸಾಂಬ್ರಾಣಿ ಅಕ್ಕಿ | [illegible] | [illegible] |
| ಸಣ್ಣ ಅವರೆ | [illegible] | [illegible] |
| ಹೆಸರು ಬೇಳೆ | [illegible] | [illegible] |
| ಹುರುಳಿ ಪಲ್ಲ ೧ಕ್ಕೆ | [illegible] | [illegible] |
| ಉದ್ದಿನ ಬೇಳೆ | [illegible] | [illegible] |
| ರಾಗಿ ಪಲ್ಲ ೧ಕ್ಕೆ | [illegible] | [illegible] |
| ಜೋಳ | [illegible] | [illegible] |
| ಹುರಳಿ | [illegible] | [illegible] |
| ಕಡಲೆ | [illegible] | [illegible] |
| ಹಲಸಂದೆ ಪಲ್ಲ ೧ಕ್ಕೆ | [illegible] | [illegible] |
| ಅವರೆ | [illegible] | [illegible] |
| ಹೆಸರು | [illegible] | [illegible] |
| ಉದ್ದು | [illegible] | [illegible] |
| ತೊಗರಿ | [illegible] | [illegible] |
| ಎಳ್ಳು | [illegible] | [illegible] |
| ಹುರುಳಿ | [illegible] | [illegible] |
| ಹರಳು ೧೨ ಸೇರಿಗೆ | [illegible] | [illegible] |
| ಒಣಮೆಣಸಿನಕಾಯಿ ಮಣ ೧ಕ್ಕೆ | [illegible] | [illegible] |
| ಸೋಜಿ | [illegible] | [illegible] |
| ಮೈದಾ | [illegible] | [illegible] |
| ಬೆಲ್ಲ ದೊಡ್ಡ ಅಚ್ಚು | [illegible] | [illegible] |
| ಬೆಲ್ಲದ ಮಣ ೧ಕ್ಕೆ | [illegible] | [illegible] |
| ಹರಳೆಣ್ಣೆ | [illegible] | [illegible] |
| ಎಳ್ಳೆಣ್ಣೆ | [illegible] | [illegible] |
| ತುಪ್ಪ | [illegible] | [illegible] |
| ಹುಣಿಸೇ ಹಣ್ಣು | [illegible] | [illegible] |
| ಕಬ್ಬು | [illegible] | [illegible] |
| ಹುಪ್ಪು | [illegible] | [illegible] |
| ತೆಂಗಿನಕಾಯಿ ೧೦೦ ಕ್ಕೆ | [illegible] | [illegible] |
| ಅಡಿಕೆ ಮಣ ೧ಕ್ಕೆ | [illegible] | [illegible] |
| ಎಲೆ ಕಟ್ಟು | [illegible] | [illegible] |
| ಹತ್ತಿ (ಕಾಟನ್) ಕಂಡಿ | [illegible] | [illegible] |
| ,, ,, ಬೀಜ | [illegible] | [illegible] |
| ,, ,, ಹಿಟ್ಟು ಕೊಳಗ ೧ಕ್ಕೆ | [illegible] | [illegible] |
| ಕೊಬ್ಬರಿ ಕೊಳಗ ೧೦೦ ಕ್ಕೆ | [illegible] | [illegible] |

Printed and Published by the Rev. E. W Thompson, for the Proprietor and Manager, Wesleyan Mission Press, Mysore 12/2 1903

# ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಮೈಸೂರು—ಸನ್ ೧೯೦೩ ನೇ ಇಸವಿ ಫೆಬ್ರವರಿ ತಾರೀಖು ೨೬ ನೇ ಗುರುವಾರ.



## MELLIN'S FOOD

ಮೆಲಿನ್ ಯವರು ಬಾಲ್ಯಗಳಿಂದರ್ಥೇ ತಯಾರು ಮಾಡಿದ ಪ ಆಹಾರ.

[illegible]

ಐಡನ್:—ಮೆ ಆಪ [illegible]

[illegible]

[illegible]

## ಬಹು ಅನುಕೂಲವಾದ ಸಮಯ.

[illegible]

CALCUTTA PROVIDENT INSTITUTION,
11—3, Harrison Road Calcutta

ದಯ ವಿಟ್ಟು ಗ್ರಹಿಸಿರಿ.

## ಗಣಿತ ಚಿಂತಾಮಣಿ ಭಾಗ I.

[illegible]

ವಿಳಾಸ.— ಕೆ. [illegible]

[illegible]

ಸನ್ ೧೯೦೩ ನೇ ಇಸವಿಯ

## ಪಾಕೆಟ್ ಡೈರಿ



[illegible]

## ಹೊಸ ಪುಸ್ತಕ! ಹೊಸ ಪುಸ್ತಕ!! ಹೊಸ ಪುಸ್ತಕ!!!

ದಾಂಡಿಗೆ ಸಿದ್ಧವಾಗಿದೆ.

[illegible]

ಭೂಮಿಯ ಆಳಿಕೆ

[illegible]

ಬೇಗ ಬರೆಯಿರಿ! ಬೇಗ ಬರೆಯಿರಿ!! ಬೇಗ ಬರೆಯಿರಿ!!!

ವಿಳಾಸ:— [illegible]

## ROBINSON'S

## PATENT BARLEY.

ರಾಬಿನ್‌ಸನ್‌ರವರ

ಬಾರ್ಲಿ ರೊಟ್ಟಿ.

[illegible]

BARROWS-HASKELL LECTURES.
BY DR. CUTHBERT HALL.
PRICE, FOUR ANNAS
For the above Book write to
THE MANAGER,
2 BOOK DEPOT,
MYSORE.

## ಗಣಿತಸಂಜೀವಿನಿ.

6

ಎಸ್. ಶ್ರೀ. ಕೃಷ್ಣಸ್ವಾಮಯ್ಯಂಗಾರ್ಯರಿಂದ ರಚಿಸಲ್ಪಟ್ಟದ್ದು. ದ್ವಿತೀಯ ಮುದ್ರಣ ಮೈಸೂರ್ ಸ್ಟಾರಾಫೀಸ್ ಮ್ಯಾನೇಜರಲ್ಲಿ, ಕೆ. ... ಅವ್ಯಂಗಾರ್ ಯವರಲ್ಲಿ ವಿಕರಿಗೆ ಸಿದ್ಧವಾಗಿದೆ. ಪ್ರತಿ ಪುಸ್ತಕಕ್ಕೆ ರೂ. ೧—೮—೦ ವಿ. ಪಿ. ಮೂಲಕ ರೂ. ೧—೧೧—೦

## ದೇಶೀಯ ವರ್ತಕರಿಗೆ!

ಇಂಗ್ಲೆಂಡಿನಲ್ಲಿ ತಯಾರಾಗುವ ಯಾವ ಸಾಮಾನು ಬೇಕಾದರೂ ಕಮಿಷನ್ ತಕ್ಕೊಂಡು ಕಳುಹಿಸುವದಕ್ಕೆ ಸಿದ್ಧವಾಗಿದ್ದೇವೆ. ಕಮಿಷನ್, ದರ ಮೊದಲಾದ ವಿಷಯಗಳನ್ನೆಲ್ಲಾ ಪರಸ್ಪರ ಒಡಂಬಟ್ಟು ತೀರ್ಮಾನಿಸಿಕೊಳ್ಳಬಹುದು. ಈ ವಿಷಯದಲ್ಲಿ ತಿಳಿಯಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಬೇಕೆಂದು ಕೋರುತ್ತೇವೆ.

A. J. BRIDE,
GENERAL AGENCY
29—35, City Road, LONDON.

## ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತದ ಕನ್ನಡ ಟೀಕು.

ಆದಿಪರ್ವ ೩ನೇ ಭಾಗ ೩ ರೂ, ವಿರಾಟಪರ್ವ ೧ ರೂ, ಭೀಷ್ಮಪರ್ವ ೩ ರೂ, ಸ್ತ್ರೀಪರ್ವ ೬ ಆಣೆ, ಅನುಶಾಸನೀಕಪರ್ವ ೩ ೧೨ ೦

## ಶ್ರೀ ಚಾಮರಾಜೋಕ್ತಿ ವಿಲಾಸವೆಂಬ ಕನ್ನಡ ರಾಮಾಯಣ.

ಬಾಲಕಾಂಡ ೧ ರೂ, ಅಯೋಧ್ಯಾಕಾಂಡ ೨ ರೂ, ಅರಣ್ಯಕಾಂಡ ೧ ರೂ, ಕಿಷ್ಕಿಂಧಾಕಾಂಡ ೧ ರೂ, ಸುಂದರಕಾಂಡ ೧ ರೂ, ಯುದ್ಧಕಾಂಡ ೨ ೮ ೧, ಉತ್ತರಕಾಂಡ ೧ ೮ ೦.

## ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಶ್ರೀಮದ್ಭಾಗವತದ ಕನ್ನಡ ಟೀಕು.

ಪ್ರಥಮ ದ್ವಿತೀಯ ತೃತೀಯಸ್ಕಂಧಗಳು. ೨ ರೂ, ಚತುರ್ಥ ಪಂಚಮಸ್ಕಂಧಗಳು ೧ ೧೨ ೦, ಷಷ್ಠ ಸಪ್ತಮ ಅಷ್ಟಮ ನವಮಸ್ಕಂಧಗಳು ೨ ೮ ೦, ದಶಮಸ್ಕಂಧ ೨ ೮ ೦, ಏಕಾದಶ ದ್ವಾದಶಸ್ಕಂಧಗಳು ೧ ೧೨ ೦.

ನಮ್ಮಲ್ಲಿ ದೊರೆಯುವ ಅಚ್ಚಾದ ಪುಸ್ತಕಗಳು ಮತ್ತು ಇತರ ಸಾಮಾನುಗಳ ಕ್ಯಾಟಲಾಗಿಗೋಸ್ಕರ ಬರೆಯಿರಿ.

ಎಂ. ರುದ್ರಪ್ಪ ಅಂಡ್ ಸನ್ಸ್,
ಲಾಲ್‌ಬಾಗ್ ರೋಡ್, ಬೆಂಗಳೂರು ಸಿಟಿ.

## ಮಹಾರಾಜರ ಪಟ್ಟಾಭಿಷೇಕ.

ಈ ಉತ್ಸವದ ವರ್ತಮಾನಗಳ ಪುಸ್ತಕ. ಮಹಾರಾಜರ ದೊಡ್ಡ ಫೋಟೋ, ಸಂಸ್ಥಾನದ ಮುಖ್ಯ ಉದ್ಯೋಗಸ್ಥರ ಫೋಟೋಗಳು, ಮೈಸೂರು ಬೆಂಗಳೂರುಗಳಲ್ಲಿರುವ ಅರಮನೆ ಮುಂತಾದ ಕಟ್ಟಡಗಳ ಫೋಟೋ - ಪುಸ್ತಕಗಳು ಕೆಲವು ಮಾತ್ರ ಇವೆ. ಬೇಗ ಬರೆದು ತರಿಸಿಕೊಳ್ಳಿ. ಕ್ರಯ ೮ ಆಣೆ, ಅಂಚೆ ಕೂಲಿ ೧ ಆಣೆ.

ವಿಳಾಸ:—ವೆಸ್ಲೇಯನ್ ಮಿಷನ್ ಬುಕ್ ಡಿಪೋ, ಮೈಸೂರು;
" " ಬೆಂಗಳೂರು.

## ಹೊಸ ಪುಸ್ತಕಗಳು.

೧. ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರ ಮಹಾರಾಣಿಯವರ ಜೀವಚರಿತೆ. ಸುಂದರವಾದ ಅನೇಕ ಚಿತ್ರಗಳುಳ್ಳದ್ದು. ಕ್ರಯ ೪ ಆಣೆ.

೨. ಪುರಾತನ ಗ್ರೀಕರ ಕಥೆಗಳು. ಹುಡುಗರೂ ಹುಡುಗಿಯರೂ ಓದಲು ಅತ್ಯಂತ ಉತ್ಸಾಹವನ್ನುಂಟುಮಾಡುವ ಪುಸ್ತಕ. ಅಗತ್ಯವುಳ್ಳದ್ದು. ಚಿತ್ರಗಳಿಂದ ತುಂಬಿ ಇದೆ. ಕ್ರಯ ೨ ಆಣೆ.

೩. ಪ್ರಾಚೀನ ಕಾಲದ ವಿಲಕ್ಷಣ ಜಾನವರುಗಳ ವರ್ಣನೆ. ಭೂಮಿಯ ಆದಿಭಾಗಗಳಲ್ಲಿ ಇದ್ದ ಪ್ರಾಣಿಗಳೂ, ಜಾನವರುಗಳೂ, ಪಕ್ಷಿಗಳೂ, ಜಲಚರಗಳೂ ಚಿತ್ರಸಹಿತವಾಗಿ ವಿವರಿಸಲ್ಪಟ್ಟಿವೆ. ಓದುವವರಿಗೆ ಬಹಳ ಉತ್ಸಾಹವನ್ನುಂಟುಮಾಡುವದು. ಕ್ರಯ ೨ ಆಣೆ.

೪. ಬಾಲ್ಯವಿವಾಹ. ಬಾಲ್ಯವಿವಾಹದಿಂದುಂಟಾಗುವ ಕಷ್ಟನಷ್ಟಗಳು ಮತ್ತು ಸಾಮಾಜಿಕ ಕೇಡು ಪರಿಹಾರಗಳನ್ನು ಸವಿಸ್ತಾರವಾಗಿಯೂ, ಸುಲಭವಾಗಿಯೂ ವಿವರಿಸಲ್ಪಟ್ಟಿವೆ. ಹೊಸ ಪುಸ್ತಕ. ಕ್ರಯ ೩ ಕಾಸು.

ಈ ಪುಸ್ತಕಗಳೆಲ್ಲಾ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವವು. ಬೇಗ ಬರೆದು ತರಿಸಿಕೊಳ್ಳಿ.

ವಿಳಾಸ:—ವೆಸ್ಲೇಯನ್, ಮಿಷನ್ ಬುಕ್ ಡಿಪೋ, ಮೈಸೂರು;
" " ಬೆಂಗಳೂರು.

## ಚೇಂಬರ್ಲೀನ್ ಯವರು ಕಂಡುಹಿಡಿದ ಕೆಮ್ಮು ಔಷಧಿ.

8

ಶೀತ, ಕೆಮ್ಮು, ಗಂಟಲು ಗೊರ್ರೆನ್ನುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ರೋಗಕ್ಕೆ ಈ ಔಷಧವು ಬಾಣವಾಕ್ಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಚಾತ್ರೆಕೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತವನ್ನು ಬಡಿದ ಪಕ್ಷದಲ್ಲಿ ಅದನ್ನು ಬೇಗನೆ ನಿವಾರಣೆ ಮಾಡಿಕೊಳ್ಳದೆ ಅಲಕ್ಷ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಒಣಗಿಹೋಗುವದು. ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮೌಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಮನೆಯಲ್ಲಿ ಒಂದು ಸೀಸೆಯನ್ನು ಇಟ್ಟುಕೊಳ್ಳಿ. ಕ್ರಯ ಸೀಸೆ ೧ಕ್ಕೆ ೧ ರೂ.; ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ:—

ಬಿ. ವಿ. ನರಸಿಂಹುಲು ಚೆಟ್ಟಿ,
ನಂ. ೬, ತಂಬುಸಾಯಕರ ಬೀದಿ,
ಮದರಾಸ್.

## ನೋಟು ಕಳವು; ಬಹುಮಾನ ಸಿಕ್ಕುತ್ತೆ.

2

ನಮ್ಮ ಅಂಚೆಯಲ್ಲಿ ೨-೧-೧೯೦೩ ಮತ್ತು ೬-೧-೧೯೦೩ ರ ಮಧ್ಯೆ ೪೦೦ ನಾಲ್ಕು ನೂರು ರೂಪಾಯಿನ ಆರೆ ನೋಟುಗಳು ಕೈಬಿಟ್ಟು ಆಗಿರುತ್ತೆ. ಇದು ಪತ್ತೆ ಮಾಡಿ ಕೊಟ್ಟವರಿಗೆ ಶೇಕಡಾ ೨೫ ಎಂದು ರೂಪಾಯಿನಂತೆ ಇನಾಮು ದೊರೆಯುತ್ತೆ.

ನೋಟು ನಂಬರುಗಳು:—

| | | |
|---|---|---|
| ಬಿ. ಯೆ. ೬೭ | ೮೯೩೭೨ ರೂ. ೧೦೦ | ಮದ್ರಾಸ್ ಭಾಗ. |
| ಬಿ. ಯೆ. ೬೭ | ೮೯೩೭೩ ರೂ. ೧೦೦ | |
| ಬಿ. ಯೆ. ೬೭ | ೮೯೩೭೪ ರೂ. ೧೦೦ | |
| ಬಿ. ಯೆ. ೬೭ | ೮೯೩೭೫ ರೂ. ೧೦೦ | |

ಬಿ. ವೆಂಕಟರಾವ್, ಪಿ. ಶಾಮರಾವ್,
ಜನರಲ್ ಅಂಡ್ ಯಾರನ್ ಮರ್ಚೆಂಟ್ಸ್,
ದೊಡ್ಡಪೇಟೆ ಬೆಂಗಳೂರು ಸಿಟಿ.


## ವೃತ್ತಾಂತ ಪತ್ರಿಕೆ.

ಈ ೧೯೦೩ನೇ ಇಸವಿ ಫೆಬ್ರುವರಿ ೨೬ನೇ ಗುರುವಾರ

## ಮ್ಯಾಸಿಡೋನಿಯಾ ಸೀಮೆಯಲ್ಲಿ ಗಲಭೆ ಯುಂಟಾಗಿರುವದು.

ಈಗ ಮ್ಯಾಸಿಡೋನಿಯಾ ಸೀಮೆಯಲ್ಲಿ ನಡೆದಿರುವ ಗಲಭೆಗೆ ಕಾರಣಗಳೇನೆಂಬುದನ್ನು ಕಳೆದ ವಾರ ಸೂಚಿಸಿದೆವಷ್ಟೆ. ಆ ಪ್ರಾಂತ್ಯದಲ್ಲಿ ತುರ್ಕಿಯವರ ಆಳಿಕೆಯು ಕೇವಲ ಅತೃಪ್ತಿಕರವಾಗಿರುವದರಿಂದ ಪ್ರಜಾಸಮುಕ್ಷೆ ಕಾರಣವಾದ ಒಳ್ಳೆ ಬದಲಾವಣೆಗಳನ್ನು ಜಾಗ್ರತೆಯಲ್ಲಿ ಮಾಡದೆ ಬಿಟ್ಟರೆ ಆ ಪ್ರಾಂತ್ಯದ ಎಲ್ಲಾ ಕಡೆಗಳಲ್ಲಿಯೂ ದಂಗೆಗಳುಂಟಾಗುವದರಲ್ಲಿ ಸಂಶಯವೇನೂ ಇಲ್ಲವೆಂದು ತೋರುತ್ತದೆ. ಇಂಥ ಅನಾಯಕ ಕಾಲಸ್ಥಿತಿಯನ್ನು ಒಂದೊದಗಿದರೆ ನೆರೆಹೊರೆಯವರುಗಳಾದ ಬಲ್ಗೇರಿಯಾ ಸರ್ವಿಯಾ ಎಂಬ ಚಿಕ್ಕ ಸೀಮೆಯ ರಾಜ್ಯಗಳು ಮ್ಯಾಸಿಡೋನಿಯದವರಿಗೆ ಸಹಾಯಕರಾಗುವರು. ಈ ಎರಡು ರಾಜ್ಯಗಳು ಪೂರ್ವದಲ್ಲಿ ತುರ್ಕಿಗೆ ಒಳಪಟ್ಟದ್ದು ಕೆಲವು ಕಾಲಕ್ಕೆ ಹಿಂದೆ ಸ್ವತಂತ್ರ ಸಂಸ್ಥಾನಗಳಾದವೆಂಬುದು ವಾಚಕರ ನೆನಪಿನಲ್ಲಿರಬಹುದು. ಹೀಗೆ ಈ ಮೂರು ಸೀಮೆಗಳವರು ಸೇರಿದರೆ ಕೂಡ ತುರ್ಕಿ ಸಂಸ್ಥಾನದ ಸೈನ್ಯಗಳ ಎದುರಿಗೆ ನಿಲ್ಲುವರೋ ನಿಲ್ಲಲಾರರೋ ಎಂಬ ಸಂದೇಹವುಂಟಾಗಿದೆ. ಒಂದು ವೇಳೆ ಮ್ಯಾಸಿಡೋನಿಯದವರು ಗೆದ್ದರೆ ಅವರು ಪ್ರತ್ಯೇಕ ರಾಜ್ಯವನ್ನು ಸ್ಥಾಪಿಸಿಕೊಳ್ಳುವರು ಅಥವಾ ಬಲ್ಗೇರಿಯ ಸಂಸ್ಥಾನಕ್ಕೆ ತಮ್ಮ ಸೀಮೆಯನ್ನು ಸೇರಿಸಿಬಿಡುವರು. ಹ್ಯಾಗೆ ಮಾಡಿದರೂ ಗ್ರೀಸ್ ಯೂರೋಪ್ ಖಂಡದ ಮಹಾ ರಾಜ್ಯಗಳಾದ ಆಸ್ಟ್ರಿಯ ರಷ್ಯಾಗಳ ಸ್ವಕಾರ್ಯಗಳಿಗೆ ಹಿತವಾಗಿರಲಾರದು. ಆದರೆ ಈ ಸಂಸ್ಥಾನಗಳ ಒಗ್ಗಟ್ಟಾಗಿ ನಡೆಸುವದಕ್ಕಿರುವ ಕಾರ್ಯಭಾಗದಲ್ಲಿ ಅನುಕೂಲವಾದರೆ ತುರ್ಕಿಯ ಸುಲ್ತಾನರನ್ನು ಸಂತೋಷಪಡಿಸುವದಕ್ಕೋಸ್ಕರ ಯೂರೋಪಿನ ಇತರ ರಾಜ್ಯಗಳು ಈ ಗ್ರೀಸ್ ದೇಶದವರ ವಿಷಯದಲ್ಲಿ ನೋಡಿಕೊಂಡ ಹಾಗೆ ಈಗಲೂ ಮ್ಯಾಸಿಡೋನಿಯದವರ ಸಹಾಯಕ್ಕೆ ಹೋಗಿ ಮಧ್ಯಸ್ಥಿಕೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಈಗ ಅನುಭವಿಸುತ್ತಿರುವ ಕಷ್ಟಗಳು ಇನ್ನು ಹೆಚ್ಚಾಗುವವು.

ಮ್ಯಾಸಿಡೋನಿಯದ ಸ್ಥಿತಿಯನ್ನು ಸಾವಧಾನವಾಯಿಂದ ಸಮಾಧಾನ ಮಾಡುವ ಉದ್ದೇಶದಿಂದ ಫ್ರೆಂಚ ಸರ್ಕಾರದವರು ಬಹುಕಾಲದಿಂದ ತುರ್ಕಿ ಸುಲ್ತಾನರವರನ್ನು ಪೀಡಿಸುತ್ತ ಬರುತ್ತಿದ್ದಾರೆ. ಇದಲ್ಲದೆ ರಷ್ಯಾ ಚಕ್ರಾಧಿಪತ್ಯಕ್ಕೆ ಸೇರಿದ ವಿದೇಶ ರಾಜಕೀಯ ಮಂತ್ರಿಯಾದ ಕೌಂಟ್ ಲಾಮ್ಸ್‌ಡಾರ್ಫ್ ಎಂಬಾತನು ಫ್ರೆಂಚರ ಸಹಾಯದಲ್ಲಿ ನಂತರ ಆಸ್ಟ್ರಿಯಾ ರಾಜಧಾನಿಯ ಇದ ವಿಯನ್ನಾ ಪಟ್ಟಣಕ್ಕೆ ಸರ್ವಿಯಾ ಬಲ್ಗೇರಿಯಾ ಸೀಮೆಗಳ ರಾಜಧಾನಿಗಳಿಗೂ ಹೋಗಿ ಆಲೋಚಿಸಿ, ಅತ್ಯವಶ್ಯವಾಗಿ ಇದೆ ಬೇಕಾದ ಕೆಲವು ಬದಲಾವಣೆಗಳನ್ನು ಸುಲ್ತಾನ ಅವರಿಗೆ ತಿಳಿಯಪಡಿಸಿದನು. ಆ ಬದಲಾವಣೆಗಳು ಇಂಥಿಂಥವುಗಳೆಂಬುದು ಈಗ ಪ್ರಕಟಿಸಲ್ಪಟ್ಟಿದೆ. ಕಾನ್‌ಸ್ಟಾಂಟಿನೋಪಲಿನಲ್ಲಿ ಈ ವಿಷಯದಲ್ಲಿ ಚರ್ಚೆ ಮಾಡುವಾಗ ಯೂರೋಪ್ ಖಂಡದ ಮಹಾ ರಾಜ್ಯಗಳ ಪ್ರತಿನಿಧಿಗಳೆಲ್ಲರೂ ಈ ಏರ್ಪಾಡುಗಳಿಗೆ ಒಪ್ಪಿದರು. ಇಂಗ್ಲೆಂಡ್, ಇಟಲಿ, ಜರ್ಮನಿ ರಾಜ್ಯಗಳವರೂ ಈ ಬದಲಾವಣೆಗಳು ನಡೆಯುವದು ಅವಶ್ಯವೆಂದು ಒಪ್ಪಿಕೊಂಡಿದ್ದಾರೆ. ಅವು ಯಾವವೆಂದರೆ—

೧. ಈಗ ದೇಶದ ನೆಮ್ಮದಿಯನ್ನು ಕಾಪಾಡುವದಕ್ಕೆ ನೇಮಿಸಲ್ಪಟ್ಟಿರುವ ತುರ್ಕಿ ದೇಶದ ಪೋಲೀಸಿನವರಿಗೆ ಬದಲಾಗಿ ಸ್ವದೇಶದ ಜನಗಳಿಂದ ಕಟ್ಟಲ್ಪಟ್ಟ ಪೋಲೀಸ್ ಸೇನೆಯನ್ನು ಇಡಬೇಕು. ಈ ಪೋಲೀಸ್ ಹುದ್ದೆದಾರರು ಬಹುಶಃ ರಷ್ಯಾ ಸೈನಿಕರಿಂದಾಗಲಿ ಅಥವಾ ದೇಶದೊಳಗಿಂದಾಗಲಿ ಆರಿಸಲ್ಪಡುವರು.

೨. ಕಂದಾಯ ವಸೂಲಾತಿಯು ಸ್ವತಂತ್ರ ಪ್ರತ್ಯೇಕವಾಗಿ ನಡೆಯಬೇಕು. ಯಾವ ವಿಧದ ಬಾಕಿಯಾದರೂ ಗ್ರಾಮಗಳಲ್ಲಿಯೇ ವಸೂಲಿ ಮಾಡಲ್ಪಡತಕ್ಕದ್ದು. ಹೀಗೆ ವಸೂಲಾದ ಹಣವನ್ನೆಲ್ಲಾ ಮ್ಯಾಸಿಡೋನಿಯಾ ಸೀಮೆಯ ಪುರೋಭಿವೃದ್ಧಿಗೋಸ್ಕರ ಮಾತ್ರ ವಿನಿಯೋಗಿಸಲ್ಪಡತಕ್ಕದ್ದು.

೩. ಹಣದ ವಿಚಾರವೂ ನ್ಯಾಯ ವಿಮರ್ಶೆಯ ಭಾಗವೂ ಇವೆರಡೂ ಐರೋಪ್ಯ ಮಹಾ ಶಕ್ತಿಗಳ ಹುದ್ದೆದಾರರಿಂದಲೇ ನಡೆಸಲ್ಪಡತಕ್ಕದ್ದು.

೪. ಸಂಸ್ಥಾನದ ಆಡಳಿತವೆಲ್ಲವೂ ಸಮರ್ಥನೂ ನಂಬಿಕೆಯುಳ್ಳವನೂ ಆದ ಒಬ್ಬ ಗವರ್ನರ್ ಜನರಲ್ ನಡೆಸತಕ್ಕದ್ದು. ಇವನನ್ನು ನೇಮಿಸುವ ಅಧಿಕಾರವು ಸುಲ್ತಾನರಿಗೆ ಸೇರತಕ್ಕದ್ದು. ಇವನ ಉದ್ಯೋಗದ ಕಾಲವು ತಪ್ಪದೇ ಐದು ನಿರ್ಣಯಿಸತಕ್ಕದ್ದು. ಆ ಕಾಲವು ಪೂರೈಸುವದಕ್ಕೆ ಮುಂಚೆ ಅವನನ್ನು ಉದ್ಯೋಗದಿಂದ ನಿವರ್ತಿ ಮಾಡಕೂಡದು.

ಕೋಲಾರ—ನಮ್ಮ ನಗರದಲ್ಲಿ ಸರ್ಕಾರದ ಶಿಲ್ಪದ ಪೇಟೆಯ ಕೆಲವು ಮನೆಗಳಲ್ಲಿ ಒಂದೆರಡು ವಾರಗಳಿಂದಲೂ ಇಲಿಗಳು ಸತ್ತುಬೀಳುತ್ತಿರುವ ಸಂಗತಿಯು ತಾಲ್ಲೋಕ್ ಅಮಲ್ದಾರ್ರಿಗೂ ಶಾಸ್ತ್ರಿ ಅಸಿಸ್ಟೆಂಟರಿಗೂ ತಿಳಿಯಬಂದು ಇವರೂ ಇನ್ಸ್‌ಪೆಕ್ಟರೂ ಪೇಟೆಯೊಳಗೆ ಬಂದು ಇಲಿಗಳು ಬಿದ್ದ ಮನೆಯವರೂ ಬೇರೆ ಮನೆಯವರೂ ತಮ್ಮ ತಮ್ಮ ಮನೆಗಳ ಮೇಲಿನ ಹೆಂಚುಗಳನ್ನು ತೆಗೆದು ಒಳಗೆ ಬಿಸಲು ಚನ್ನಾಗಿ ಬೀಳುವಂತೆ ಮಾಡಿಸಿದ್ದಲ್ಲದೆ ಹೊರಗೆ ಷೆಡ್ಡುಗಳನ್ನು ಕಟ್ಟಿಕೊಂಡು ವಾಸಮಾಡುವದಕ್ಕೆ ಬೇಕಾದ ಬಂಬುಗಳನ್ನು ಕೊಡಿಸಿದರು. ಇಲಿಬಿದ್ದ ಮನೆಯುವರು ಜೋಪಡಿಗಳನ್ನು ಕಟ್ಟಿಕೊಂಡು ವಾಸಮಾಡುತ್ತಾರೆ. ಆದರೆ ಇನ್ನೂ ಅನೇಕರು ಇಲಿ ಬೀಳಲಿಲ್ಲವೆಂದು ಮನೆಗಳನ್ನು ಬಿಡಲಿಲ್ಲ. ಹೀಗಿರುವಲ್ಲಿ ಊರಿನಲ್ಲಿದ್ದ ಕೆಲವರಿಗೆ ಪ್ಲೇಗ್ ತಗಲಿ ಮೃತರಾದರು. ಅದನ್ನು ಕಂಡ ಪೇಟೆಯ ವರ್ತಕರೂ ಷಾಪಿನವರೂ ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿ ಬೀಗ ಮುದ್ರೆಯನ್ನು ಹಾಕಿ ಬೇರೆ ಬೇರೆ ಊರುಗಳಿಗೆ ತಮ್ಮ ಸಾಮಾನು ಸಹಿತ ಹೊರಟುಹೋದರು. ಷೆಡ್ಡುಗಳಲ್ಲಿ ಒಂದೆರಡು ಕೇಸುಗಳಾದವು. ಆದರೆ ಅದು ಪ್ಲೇಗೋ ಅಲ್ಲವೋ ಎಂಬ ಸಂಶಯ ಉಂಟಾಗಿರುತ್ತೆ. ಈಗ ಪೇಟೆಯಲ್ಲಿ ಎರಡು ಮೂರು ಅಂಗಡಿಗಳವರು ಮಾತ್ರ ಇದ್ದಾರೆ. ಈ ಸಂತೆಯನ್ನು ತೀರಿಸಿಕೊಂಡು ಅವರೂ ಹೊರಡುವ ಯೋಚನೆಯಲ್ಲಿದ್ದಾರೆ. ಅವರೂ ಹೊರಟುಹೋದರೆ ಪೇಟೆಯೆಲ್ಲಾ ಖಾಲಿಯಾದಹಾಗಾಯಿತು. ಸಾರ್ವೆ ಕಡೆಯಿಂದ ಪ್ರಯಾಣಿಕನಾಗಿ ಹೋಗುತ್ತಿದ್ದ ಬ್ರಾಹ್ಮಣನೊಬ್ಬನು ಕೋಲಾರದ ಮೈಲಿ ಕಲ್ಲಿನ ಸಮೀಪದಲ್ಲಿ ಪ್ಲೇಗ್ ತಗಲಿ ಸತ್ತುಬಿದ್ದಿದ್ದನು. ಸರ್ಕಾರದವರು ಶವವನ್ನು ದಫನ್ ಮಾಡಿಸಿದರು. ಈ ತಾಲ್ಲೋಕು ತುಂಬಾ ಮಳೆನಾಡಾಗಿರುವದರಿಂದ ಈ ಬೇಸಿಗೆ ಕಾಲದಲ್ಲಿಯೇ ೬—೭ ತಿಂಗಳಿಗೆ ಬೇಕಾಗಿರುವ ಸೌದೆ, ಹುಲ್ಲು, ಮುಂತಾದ ಪದಾರ್ಥಗಳನ್ನು ಸಂಗ್ರಹ ಮಾಡಿಕೊಂಡು, ಮಳೆ ಛಳಿಗಳಿಂದ ತಮಗೆ ಯಾವ ಬಾಧೆಯೂ ಉಂಟಾಗದ ಹಾಗೆ ಮನೆಗಳನ್ನು ಭದ್ರವಾಗಿ ಕಟ್ಟಿಕೊಳ್ಳಬೇಕಾಗಿರುವದೆಲ್ಲಾ ತಪ್ಪಿ ಸದ್ಯ ಪ್ರಾಣಸಂರಕ್ಷಣೆಗಾಗಿ ಹೋಗಿರುವ ಜನರು ಮಳೆ ಬಿದ್ದ ತರುವಾಯ ಶಿಥಿಲವಾಗಿರುವ ತಮ್ಮ ಮನೆಗಳನ್ನು ಬರೀ ಕೈಯಲ್ಲಿ ಬಂದು ಸೇರಿದಮೇಲೆ ಉಂಟಾಗುವ ಕಷ್ಟನಷ್ಟಗಳೇನೆಂಬುದನ್ನು ವಾಚಕರೇ ಊಹಿಸಬೇಕಾಗಿರುತ್ತೆ.—ಕೆಲವು ವಾರಗಳ ಹಿಂದೆ ಇದೇ ಊರಿನ ಸಮೀಪ [illegible] ಹೋಗುವ ರಸ್ತೆಗೆ ಸುಮಾರು ನೂರು ಗಜಗಳ ದೂರದಲ್ಲಿ ಸತ್ತುಬಿದ್ದಿದ್ದ ಒಂದು ಶವವನ್ನು ೧೯ ವರುಷದ ಹುಡುಗನೊಬ್ಬನು ನೋಡಿ ತಿಳಿಸಿದ ನಂತರ ಪೋಲೀಸಿನವರು ಶ್ರಮ ವಹಿಸಿ ಸದರಿ ಶವವನ್ನು [illegible] ಕಳುಹಿಸಿದ್ದರು. ಈ ಶವವು ಬಹಳವಾಗಿ ಕೊಳತುಹೋಗಿತ್ತು. ಇದಕ್ಕೆ ತಲೆ ಮತ್ತು ಉಳಿದ [illegible] ಇದ್ದವು. ಈ ಶವವು ಸುಮಾರು [illegible] ದಿವಸಗಳ ಕೆಳಗೆ ಸತ್ತದ್ದಾಗಿ ತೋರುತ್ತೆ. ಇದು ಗಂಡೋ ಹೆಣ್ಣೋ ಗೊತ್ತಾಗುತ್ತಿಲ್ಲ. ಅಷ್ಟು ದಿನಗಳ ವರಿಗೆ [illegible] ಪೋಲೀಸಿನವರ ದೃಷ್ಟಿಗೂ ಬೀಳದೆ ಹಾಗೆ [illegible] ಗಳೂ [illegible] ತಿಳಿಸದೆ ಇದ್ದದ್ದು [illegible]

[illegible]—ಮೈಸೂರು [illegible]

[illegible]

ಸ್ಕೂಲಿಗೆ ಸೇರುವಲ್ಲಿಯೇ ಅನುಕೂಲವಾದ ಮತ್ತು ವಿಶಾಲವಾದ ಸ್ಥಳವನ್ನು ಒದಗಿಸುವದೆಂಬ ಆಶೆಯನ್ನು ವ್ಯಕ್ತಪಡಿಸಿದರು. ಆಲ್ಲದೆ ಮೇಷ್ಟರುಗಳಿಗೆ ಸಲ್ಲುತ್ತಿರುವ ಬಹಳ ಕಡಿಮೆಯಾದ ಸಂಬಳದಿಂದ ಅವರ ಹೀನಸ್ಥಿತಿಗಾಗಿ ಬಹಳ ವ್ಯಸನವನ್ನು ತೋರಪಡಿಸಿ, ಬಹು ಕಾಲದಿಂದಲೂ ಸರ್ಕಾರದವರ ಆಲೋಚನೆಯಲ್ಲಿರತಕ್ಕ ಈ ವಿಷಯಕ್ಕೆ ಸ್ವಲ್ಪ ಕಾಲದಲ್ಲಿಯೇ ತಕ್ಕ ವಿಧಾನಗಳು ನಡೆಯುವವು ಎಂದು ಆಶಿಸಿ ಹೇಳಿದರು. ಈ ಸ್ಕೂಲಿನ ವಿದ್ಯಾರ್ಥಿಗಳಲ್ಲಿ ಉತ್ತಮರಾದವರಿಗೆ ಕೌನ್ಸಿಲರವರು ತಮ್ಮ ಸ್ವಂತ ವೆಚ್ಚದಿಂದಲೂ ಬಹಳ ಬೆಲೆಯುಳ್ಳ ಪುಸ್ತಕಗಳನ್ನು ತರಿಸಿ, ವಿಶೇಷ ಬಹುಮಾನವನ್ನು ದಯಪಾಲಿಸಿ, ವಿದ್ಯಾರ್ಥಿಗಳಿಗೆ ವಿದ್ಯೆಯಲ್ಲಿ ಆಸಕ್ತಿಯನ್ನು ಇನ್ನೂ ಹೆಚ್ಚಿಸಿದ್ದರಿಂದ ಈ ಊರಿನ ನಿವಾಸಿಗಳೆಲ್ಲರೂ ಅವರಿಗೆ ತುಂಬಾ ಕೃತಜ್ಞರಾಗಿದ್ದೇವೆ. ತರುವಾಯ ಅವರು ಅಲ್ಲಿಂದ ಸ್ಕೂಲನ್ನು ಬಿಟ್ಟು ಪಟ್ಟಣದಲ್ಲಿ ಅಲಂಕರಿಸಿದ್ದ ವಿಶ್ವೋತ್ಸವವನ್ನು ನೋಡಿಕೊಂಡು, ಬಂಗಲೆಗೆ ದಯಮಾಡಿಸಿದರು. ಅಲ್ಲಿ ಈ ಗ್ರಾಮದ ನಿವಾಸಿಗಳೆಲ್ಲರೂ ಮುನಿಸಿಪಲ್ ಕೌನ್ಸಿಲ್ ಹಾಲಿ ಇರುವಂತೆ ಕೋಲಾರದಲ್ಲಿಯೇ ಖಾಯಂ ಇರಬೇಕೆಂತಲೂ, ಈ ಊರಿನ ಎಲ್ಲಾ ಭಾಗಗಳಿಗೂ ನೀರನ್ನು ಸರಬರಾಯಿ ಮಾಡಿಸಿಕೊಡಬೇಕೆಂತಲೂ ಬೇಡಿಕೊಂಡರು. ಮಾರನೇದಿನ ಪ್ರಾತಃಕಾಲ ಕಾರಂಜಿ ಕೆರೆಯನ್ನು ಪರ್ಯಾಲೋಚಿಸಿ, ಮುಳಬಾಗಿಲು ಶ್ರೀನಿವಾಸಪುರಕ್ಕೆ ದಯಮಾಡಿಸಿದರು.

ಸನ್ ೧೯೦೩ ನೆ ಇಸವಿಯ

ಪಂಚಾಂಗ ಸಮೇತವಾದ ಇಂಗ್ಲೀಷು— ಕನ್ನಡ 21

## ಪಾಕೆಟ ಡೈರಿ

**ಏನಾಮರ ಮಿನಂ! ಮಿನಂ! ಮಿನಂ!**

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟದಾರರು, ಮತ್ತು ದೊಡ್ಡ ಮನುಷ್ಯರು ಮುಂತಾದ ಸುಮಸ್ತರಿಗೂ ಉಪಯೋಗವಾಗಿರುತ್ತೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು: ಶೋಭಕೃತು ಸಂವತ್ಸರದ ಪಂಚಾಂಗ, ಕ್ಯಾಲೆಂಡರು, ಹಿಂದು ಹಬ್ಬಗಳು, ಮತ್ತು ರಜಾ ದಿನಗಳು, ರೇಲ್ವೆ ಚಾರ್ಜು, ಕೋರ್ಟುಗಳ ಸ್ಟ್ಯಾಂಪು, ಕೋರ್ಟು ಫೀಜು, ಪ್ರೋಸೆಸ್ ರುಸುಂ, ಸ್ಟ್ಯಾಂಪು, ರಜಿಸ್ಟರ್ ಫೀಜು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ತಲೆ ಮುಷ್ಟಿ ದವಸದ ಅಳತೆ, ಚಿನ್ನ ತೂಕದ ವಿವರ, ಗೌಳೀ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಗುಳಿಕ ಕಾಲ, ವಾರಶೂಲೆಯ ದಿನ, ನಗರ ಸಂಬಳದ ಪಟ್ಟಿ, ಇನ್ನೂ ಅನೇಕ ಮುಖ್ಯ ವಿಷಯಗಳಿವೆ. ತೆಳ್ಳ ಕಾಗದ, ಪ್ರತಿ ಪುಟಕ್ಕೂ ರೂಲುಹಾಕಿ, ಸೊಗಸಾಗಿ ಬೈಂಡು ಮಾಡಿ ಬಿಕರಿಗೆ ಸಿದ್ಧವಾಗಿದೆ. ಎ. ನಂಬರ್ ಪೆನಸಲ್ ಇಡತಕ್ಕ ಚಿಕ್ಕ ಸೈಜ್ ಡೈರಿ ೧ಕ್ಕೆ ೩ ಆಣೆ; ಬಿ ನಂಬರ್ ಪೆನಸಲ್ ಇಟ್ಟು ಮುಚ್ಚಳ ಹಾಕಿರುವದು ಚಿಕ್ಕ ಸೈಜು ಡೈರಿ ೧ಕ್ಕೆ ೫ ಆಣೆ; ಸಿ. ನಂಬರ್ ಪೆನಸಲ್ ಇಡತಕ್ಕ ದೊಡ್ಡ ಸೈಜ್ ಡೈರಿ ೧ಕ್ಕೆ ೬ ಆಣೆ; ಡಿ ನಂಬರ್ ಪೆನಸಲ್ ಇಟ್ಟು ಮುಚ್ಚಳ ಹಾಕಿರುವದು ದೊಡ್ಡ ಸೈಜು ಡೈರಿ ೧ಕ್ಕೆ ೮ ಆಣೆ; ೧೨ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡವರಿಗೆ ೧ ಡೈರಿ ಹೆಚ್ಚಾಗಿ ದೊರೆಯುವದು. ಪೋಸ್ಟ್ ಚಾರ್ಜು ಪ್ರತ್ಯೇಕವು. ಬೇಕಾದವರು ಈ ಕೆಳಗಿನ ವಿಳಾಸದಾರರಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,
ಶ್ರೀಕೃಷ್ಣವಿಲಾಸ ಪ್ರೆಸ್, ಮೈಸೂರು.

---

ಹೋಮಿಯೋಪತಿಯಾ.

ಈ ಔಷಧಿಯು ಮೂಲೆ, ಉಳುಕು, ಗಾಯ, ಅಸ್ಥಿ ವೈಫಲ್ಯ ಮುಂತಾದ ಸ್ಥಳಗಳಲ್ಲಿ ... ಇದ್ದರೆ ಇದರ ... ಇದಕ್ಕೆ ಸಮಾನವಾದ ಔಷಧ ವ್ಯವಹಾರ ಇಲ್ಲದೆ ಇರುವದು ಅನೇಕ ಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜನರಾಗಿಗಳಿಗೆ ಮುಖ್ಯವಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ನೂರ್ಕರು ಮನುಷ್ಯರು, ದಕ್ಕಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿರುವರು ನಾವು ಕಂಡಕಡೆ ಇದನ್ನು ಪಡೆದು ಕೊಳ್ಳಬಹುದು.

ಈ ತೈಲವು ಅತಿ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ದೌರ್ಬಲ್ಯವು ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮೈಕೈನೋವು, ಊದುಗಳು, ಗಡ್ಡೆಗಳು, ದಣಗಳು, ಮುಳುಕಟ್ಟು, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವುದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಕುಟ್ಟದಿರುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ ೧—೮ ಆ.; ಒಂದೇ ಸಲ 12 ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಮಾಡುತ್ತಾರೆ. ರೂ. ೨—೮ ಆ ಬಾಟ್ಲು ಡಬ್ಬದಲ್ಲಿ ೧ ರೂ. ದ ಡಬ್ಬದಲ್ಲಿರುವದಕ್ಕಿಂತ ೪ರಷ್ಟು ಹೆಚ್ಚು ಔಷಧಿಯಿತ್ತೆ. ಈ ರೂ. ೨ ೮ ಆ. ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮಾಫಿ ಬರುತ್ತೆ.

**ಹೋಮಿಯೋಸಿಯಾ ಯಂಬ್ರೊಕೇಶನ್.**

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳಿವೆ. ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಹೀರಿಕೊಳ್ಳಬಲ್ಲದು. ದ ಸೈಗಳಲ್ಲಿ ಕೂಡಿ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕ್ರಯ ಮಾಡಲ್ಪಡುವುದು. 12 ಡಬ್ಬಿ ತರಿಸಿಕೊಂಡರೆ ಟಪ್ಪಾಲು ಖರ್ಚು ಮಾಫು ಎಲ್ಲಾ ವಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳನೋಟಿಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಸಿಯಾ ಕಂಪೆನಿ, 37 ಸೆಕಂಡು ಬೀಚ್ ಲೈನ್, ಮದರಾಸ್.

---

**BARROWS-HASKELL LECTURES.**
**BY DR. CUTHBERT HALL.**
PRICE: FOUR ANNAS.
For the above Book write to
THE MANAGER,
BOOK DEPOT,
6 MYSORE

---

ಗಣಿತಸಂಜೀವಿನಿ.

10

ಮ. ಟಿ. ಕೃಷ್ಣಸ್ವಾಮಯ್ಯಂಗಾರ್ಯರಿಂದ ರಚಿಸಲ್ಪಟ್ಟದ್ದು, ದ್ವಿತೀಯ ಮುದ್ರಣ ಮೈಸೂರು ನ್ಯೂರಾಫಿಸ್ ವಸ್ತ್ರನೇಜರಲ್ಲೂ ಕೆ. ಸಂಪಂಗಯ್ಯ ಅಂಡ್ ಕೋ ಯವರಲ್ಲೂ ವಿಕರಿಗೆ ಸಿದ್ಧವಾಗಿದೆ ಪ್ರತಿ ೧ಕ್ಕೆ ರೂ. ೧—೦—೦; ವಿ. ಪಿ ಮೂಲಕ ರೂ. ೧—೨—೦

---

**ಹೊಸ ಪುಸ್ತಕ! ಹೊಸ ಪುಸ್ತಕ!! ಹೊಸ ಪುಸ್ತಕ!!!**

**ಮಾರಾಟಕ್ಕೆ ಸಿದ್ಧವಾಗಿದೆ.**

ಪ್ರತಿಯೊಬ್ಬ ರೈತ ಪಟೇಲ ಶಾನುಭೋಗರು, ರೆವಿನ್ಯೂ ಇಲಾಖೆಯ ಎಲ್ಲಾ ಉದ್ಯೋಗಸ್ಥರುಗಳಿಗೂ, ಅತ್ಯವಶ್ಯಕ ದ ಪುಸ್ತಕವಿದು. ಜಮೀನು ವ್ಯವಹಾರ ಸಂಬಂಧವಾಗಿ ಉದಾಹರಣೆಗಳೊಂದಿಗೆ ಎಪ್ಪತ್ತು ಚಿತ್ರಗಳು ಇವೆ. ಸ್ವಲ್ಪ ಓದು ಬರಹ ಬಂದವರು ಕೂಡ ಓದಿ ಗ್ರಹಿಸಬಹುದು.

**ಭೂಮಿಯ ಅಳತೆ.**

ಭೂಮಿ ಅಳೆಯುವ ಸಾಮಗ್ರಿ, ಅವುಗಳ ಸಮಾಚಾರ, ಅವುಗಳುಪಯೋಗಿಸುವ ರೀತಿ, ರೇಖಾ ಗಣನೆಗಳ ಉಪಯೋಗ, ಬೇರೆ ಬೇರೆ ಮದರಾಸು ಅಳತೆಗಳ ವ್ಯತ್ಯಾಸ ಸರಪಣಿ ಗುಂಟೆಗಳ ವಿಧ ಆಕಾರ ಭೂಮಿಯ ನಕ್ಷೆಯೆತ್ತುವದು, ನಕ್ಷೆಯ ಬೀಳುವ ಅಂತರ ಗುರುತಿಸುವ ರೀತಿ, ಇವೇ ಮುಂತಾದ ಅನೇಕ ಉಪಯುಕ್ತಾಂಶಗಳು ಪ್ರಶ್ನೋತ್ತರ ರೂಪವಾಗಿ ಬರೆಯಲ್ಪಟ್ಟಿವೆ.

ಕ್ರಯ:—ವಿ. ಪಿ. ಮೂಲಕ ಒಂದೇ ರೂಪಾಯಿ.

ಪ್ರಶ್ನೋತ್ತರಂತೆಯ್ಯಬೋಧಿನಿ

ವಿ. ಪಿ. ಮೂಲಕ ನಗದು ಪ್ರತಿ ೧—೩—೦; ಕೆಲವು ಪ್ರತಿ ೦—೧೨—೦.

ಈ ಪುಸ್ತಕಗಳು ನಮ್ಮ ವಿಳಾಸ ಚಿತ್ರದವರಲ್ಲಿಯೂ ದೊರೆಯುವವು.

ಬೇಗ ಬರೆಯಿರಿ! ಬೇಗ ಬರೆಯಿರಿ!! ಬೇಗ ಬರೆಯಿರಿ!!!

ವಿಳಾಸ:— ... ಸಂಪಂಗಯ್ಯ,
ಅಗ್ರಹಾರ ಗುಡ್ಡಿ ..., ಬೆಂಗಳೂರು ಸಿಟಿ.

---

ಜ್ವರಹರಿ. 24




ಇದು ಸಾಧಾರಣ ಜ್ವರ, ಚಳಿಜ್ವರ, ಮರೋಜ್ವರ, ಪಿತ್ತಜ್ವರ, ಶೀತಜ್ವರ, ನಾನಾಜ್ವರ, ಚಳಿ ನಿಮಿಷವಾದಮೇಲೆ ಬರುವ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು. ಜ್ವರಹರಿಯನ್ನು ಸೇವಿಸುತ್ತಾ ಬಂದರೆ ಕಾಮಾಲೆಯನ್ನು ಕೊಡುವದು. ಪ್ರಯಾಣ ಮಾಡತಕ್ಕವರು ಈ ಔಷಧವನ್ನು ಅವಶ್ಯವಾಗಿ ಹತ್ತಿರ ಇಟ್ಟುಕೊಂಡಿರಬೇಕು. ಇದು ದೇಹವನ್ನು ಬಹಳ ಒಳ್ಳೇ ಕ್ರಮವಾದ ಸ್ಥಿತಿಯಲ್ಲಿ ಇಟ್ಟುಕೊಳ್ಳಬಲ್ಲದು. ಇದನ್ನು ಉಪಯೋಗಿಸಿದವರು ಕಾಣದವನ್ನು ಅಪೇಕ್ಷಿಸಿದವರಿಗೆ ಕಳುಹಿಸುತ್ತೇವೆ. ಸಣ್ಣ ಮತ್ತು ದೊಡ್ಡ ಸೀಸೆಗಳಲ್ಲಿ ಹಾಕಿ ವಿಕರಿಯಾಗುವದು.

ಕ್ರಯ:—ಸೀಸೆ ೧ಕ್ಕೆ ೬ ಆಣೆ, ೧ ರೂ, ೧—೬ ರೂ., ೩ ರೂ., 11 ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಮಾಡಲಾಗುವದು.

ಅಮೃತಾಂಜನ.



ಈ ಔಷಧವು ಅಜೀರ್ಣ, ಆಗ್ನಿಮಾಂದ್ಯ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾವಿಧದ ಹೊಟ್ಟೆನೋವುಗಳು—ಮುಂತಾದವುಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕಡಿಮೆಗೆ ಗುಣಕೊಡುವದು. ಇದು ಹೆಂಗಸರ ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪಾವು ಜ್ವರವು ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟು ಸರ್ಜನ್ ಗಣಪತಿಯವರು—ಪ್ರತಿಯೊಬ್ಬ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಮನುಷ್ಯರಿಗೆ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಸ್ಥರಿಗೆ ಕೊಡುತ್ತೇವೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಿದೆ. ಇದು ಬಹು ಒಳ್ಳೇ ಔಷಧಿ ಎಂತ ಬರೆದಿರುತ್ತಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಳಾಸ:—ಹುಸ್ಸೆಯವರ ಗ್ರೇಟ ಇಂಡಿಯನ ಔಷಧಗಳ ಕಂಪೆನಿ, ಸೆಕಂಡ ಬೀಚಿ ಲೈನ್, ಮದರಾಸು.

---

**ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.**

6—3—1903 ರಿಂದ 13—3—1903 ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | 12 | 12 | 36 | 31 |
| ಮೈಸೂರು ,, | 7 | 4 | 8 | 10 |
| ಬೆಂಗಳೂರು ಡಿಸ್ಟ್ರಿಕ್ಟು | 125 | 104 | 82 | 70 |
| ಮೈಸೂರು ,, | 83 | 66 | 46 | 19 |
| ಕೋಲಾರ್ ,, | 16 | 18 | 44 | 31 |
| ಕೋಲಾರ್ ಚಿನ್ನದ ಗಣಿಗಳು | 29 | 16 | 27 | 96 |
| ತುಂಕೂರು ಡಿಸ್ಟ್ರಿಕ್ಟು | 18 | 7 | 14 | 15 |
| ಹಾಸನ ,, | 19 | 13 | 31 | 16 |
| ಚಿತ್ರದುರ್ಗ ,, | 15 | 17 | 22 | 13 |
| ಕಡೂರ್ ,, | 6 | 3 | 13 | 9 |
| ಶಿವಮೊಗ್ಗ ,, | 38 | 27 | 32 | 28 |
| ಜುಮ್ಲಾ | 353 | 292 | 405 | 328 |

ಶಾಲಿವಾಹನ ಶಕ ೧೮೨೪ ನೇ ಶುಭಕೃತು ನಾಮ ಸಂವತ್ಸರ ಫಾಲ್ಗುಣ ಬಹುಳ ಷಷ್ಠಿ ಗುರುವಾರದಿಂದ ೧೮೨೫ನೇ ಶೋಭಕೃತ್ನಾಮ ಸಂವತ್ಸರ ಚೈತ್ರ ಶುದ್ಧ ತ್ರಿತೀಯ ಬುಧವಾರದ ವರೆಗಿನ ವಾರದ ಪಂಚಾಂಗ.
೧೯೦೩ ನೇ ಇಸವಿ ಮಾರ್ಚಿ ಮತ್ತು ಏಪ್ರಿಲ್.

| ತಾ | ವಾರ | ತಿಥಿ. | ಘಳಿಗೆ | ನಕ್ಷತ್ರ | ಘಳಿಗೆ | ಶೋಂಗು ನಿವಾಸಿನೇದಿ. |
|---|---|---|---|---|---|---|
| 26 | ಗುರು | * ತ್ರಯೋದಶಿ | 57-2 | ಶ್ರ | 60 0 | 13 |
| 27 | ಶುಕ್ರ | ಚತುರ್ದಶಿ | 60-0 | ಶ್ರ | 3-56 | 14 |
| 28 | ಶನಿವಾ ¦ | ಚತುರ್ದಶಿ | 0-23 | ಪೂಭಾ | 6 16 | 15 |
| 29 | ರವಿವಾರ | ಅಮಾವಾ | 0-58 | ಉಭಾ | 8 55 | 16 |
| 30 | ಚಂದ್ರ ‡ | ಪಾಡ್ಯಮಿ | 0-15 | ರೇವತಿ | 56 16 | 17 |
| 31 | ಕುಜ ¶ | ಬಿದಿಗೆ | 51-50 | ಅಶ್ವ | 9 1 | 18 |
| 1 | ಬುಧ | ತದಿ | 50 16 | ಭ | 7-35 | 19 |

* ಪ್ರದೋಷ. ¦ ಸರ್ವತ್ರ ಅಮಾವಾಸ್ಯ ‡ ಚಂದ್ರೋದಯ, ಚಾಂದ್ರಸಂವತ್ಸರಾರಂಭ. ¶ ಸೌಭಾಗ್ಯಗೌರೀವ್ರತಂ

**ಪೇಟೆ ಧಾರಣೆ.**

| ವಿವರ | ಮೈಸೂರು | ಬೆಂಗಳೂರು. |
|---|---|---|
| ಸಣ್ಣ ಅಕ್ಕಿ ಪಲ್ಲ ೧ಕ್ಕೆ | [illegible] | [illegible] |
| ಕೆಂಪು ಭತ್ತ ಅಕ್ಕಿ ಅವಲ | [illegible] | [illegible] |
| ,, ದ ಮ್ಯಂ | [illegible] | [illegible] |
| ಜವಾರಿ ಅಕ್ಕಿ | [illegible] | [illegible] |
| ಸಣ್ಣಕ್ಕಿ ಅವಲ್ | [illegible] | [illegible] |
| ,, ದುಯಂ | [illegible] | [illegible] |
| ತೊಗರಿ ಬೇಳೆ ಪಲ್ಲ ೧ಕ್ಕೆ | [illegible] | [illegible] |
| ,, ದುಯಂ | [illegible] | [illegible] |
| ಮೈಸೂರ ರಾಗಿ ಪಲ್ಲ ೧ಕ್ಕೆ | [illegible] | [illegible] |
| ಕಾರ್ರಾಗಿ | [illegible] | [illegible] |
| ಜೋಳ | [illegible] | [illegible] |
| ಹಲಸಂದೆ ಪಲ್ಲ ೧ಕ್ಕೆ | [illegible] | [illegible] |
| ಬಿಳೀ ಅವರೆ | [illegible] | [illegible] |
| ಹೆಸರು | [illegible] | [illegible] |
| ಉದ್ದು | [illegible] | [illegible] |
| ಕಡಲೆ | [illegible] | [illegible] |
| ಎಳ್ಳು | [illegible] | [illegible] |
| ಹುರುಳಿ | [illegible] | [illegible] |
| ಹರಳು ೧ ಸೇರಿಗೆ | [illegible] | [illegible] |
| ಸೀಗೆ(ಕಾಯಿ) ಮಣ ೧ಕ್ಕೆ | [illegible] | [illegible] |
| ಮೆಣಸಿನಕಾಯಿ | [illegible] | [illegible] |
| ,, ದುಯಂ | [illegible] | [illegible] |
| ಬೆಲ್ಲ ದೊಡ್ಡ ಅಚ್ಚು | [illegible] | [illegible] |
| ಒಳ್ಳೆಣ್ಣೆ ಮಣ ೧ಕ್ಕೆ | [illegible] | [illegible] |
| ಹರಳೆಣ್ಣೆ ,, | [illegible] | [illegible] |
| ಕೊತ್ತುಂಬರಿ ಪಲ್ಲ ೧ಕ್ಕೆ | [illegible] | [illegible] |
| ಉಪ್ಪು ,, | [illegible] | [illegible] |
| ಮೆಣಸೇ ಹಣ್ಣು | [illegible] | [illegible] |
| ,, ಹಳೇದು | [illegible] | [illegible] |
| ತುಪ್ಪ | [illegible] | [illegible] |
| ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ | [illegible] | [illegible] |
| ತೆಂಗಿನಕಾಯಿ ೧೦೦ ಕ್ಕೆ | [illegible] | [illegible] |
| ಅಡಿಕೆ(ಕಾಯಿ) ಮಣ ೧ಕ್ಕೆ | [illegible] | [illegible] |
| ಅಂಟುವಾಳದಕಾಯಿ ಮಣ ೧ಕ್ಕೆ | [illegible] | [illegible] |
| ಚಿನ್ನ (ಪವನ್) ಕೆಂಪು | [illegible] | [illegible] |
| ,, ,, ಪಚ್ಚೆ | [illegible] | [illegible] |
| ,, ,, ಗಟ್ಟಿ ತೊಲ ೧ಕ್ಕೆ | [illegible] | [illegible] |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ | [illegible] | [illegible] |

Printed and Published by the Rev. E W. THOMPSON, M.A. the Proprietor and Manager, Wesleyan Mission Press, Mysore. 26/3/1903.

# ವೃತ್ತಾಂತ ಪತ್ರಿಕೆ.

REGISTERED

ಯ ೧ ದು ಡ್ಡು —:o:— ಕ್ರಯ ೧ ದು ಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೭ | ಮೈಸೂರು—ಸನ್ ೧೯೦೩ ನೇ ಇಸವಿ ಏಪ್ರೀಲ್ ತಾರೀಖು ೨ ನೇ ಗುರುವಾರ. | ಸಂಚಿಕೆ ೪೩

## MELLIN'S FOOD.

### ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

53

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ

೨ ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮೈ ಖಂಡಗಳೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ

೩ ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ

೪ ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಬಲವಾಗಿ ಜೀರ್ಣಿಸಿ, ಕಾಯಕ ಮಾನಸಿಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ

೫ ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆ ದೊರೆಯುತ್ತದೆ

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭ ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮ ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಹದ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಹಿತಕರ ಆಹಾರವಾದದ್ದಾಗುತ್ತದೆ

೯ ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ಪಿಷ್ಟವು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ

೧೦ ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಿಡುಬು ಹಾಕಿದ ಕಾಲದಲ್ಲಿಯೂ ಶೈಶವದಲ್ಲಿಯೂ ಬರತಕ್ಕ ಮಿಕ್ಕಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ

೧೧ ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ

೧೨ ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುರುತುಪದಾರ್ಥವು ಯಾವದೂ ಸೇರಿರುವದಿಲ್ಲ ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ

೧೩ ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ದಕ್ಷತೆ ಕೊಟ್ಟದ್ದಾಗಿದೆ

೧೪ ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ವೃದ್ಧಿಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ಬಹಳ ಮಟ್ಟಿಗೆ ಕಡಮೆಮಾಡುತ್ತದೆ

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಂದಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಷಾಪುಗಳಿಂದಲೂ ಬೇಕಾದರೆ ತರಿಸಿಕೊಳ್ಳಬಹುದು —

ಏಡನ್ —ಮೆ॥ ಕಾವಸಿ ದಿನ್‌ಷಾ ಬ್ರದರ್ಸ್

ಬೊಂಬಾಯಿ —ಮೆ॥ ಲೇಮಂ ಆಪೆರ್‌ಕ್ರಾಂಬಿ ಕಂಪೆನಿ.

ಕಲ್ಕತಾ —ಮೆ ಮೆಕ್ಕೆನ್‌ಜಿ ಲಾಯಲ್ ಕಂಪೆನಿ.

ಕೊಲಂಬೊ? —ಮೆ॥ ಸಾಲ್ ವಿಲ್ಸನ್ ಕಂಪೆನಿ

ಕರಾಚಿ —ಮೆ॥ ಎಚ್ ಜೆ ರುಸ್ತುಂಜಿ ಕಂಪೆನಿ

ಮದ್ರಾಸ್ —ಮೆ ಓಕ್ ಕಂಪೆನಿ

ರಂಗೂನ್ —ಲೇಷಂ ಬ್ಲಾಕ್ ಕಂಪೆನಿ.

### ಪಾಠಶಾಲಾ ಪುಸ್ತಕಗಳು! ಪಾಠಶಾಲಾ ಪುಸ್ತಕಗಳು!!

| | | | | |
|---|---|---|---|---|
| ಬಾಲಬೋಧೆ ೧ನೇ ಭಾಗ | ಕ್ರಯ | ೦ | ೧ | ೦ |
| ,, ೨ನೇ ಭಾಗ | | ೦ | ೨ | ೬ |
| ಕನ್ನಡ ಎರಡನೇ ರೀಡರ್ | | ೦ | ೩ | ೬ |
| ಭೂವಿವರಣೆ ೧ನೇ ಭಾಗ | | ೦ | ೪ | ೦ |
| ,, ೨ನೇ ಭಾಗ | | ೦ | ೪ | ೬ |
| ವ್ಯವಸಾಯಕ್ರಮಬೋಧಿನಿ | | ೦ | ೪ | ೦ |
| ವ್ಯವಸಾಯಬೋಧಿನಿ | | ೦ | ೪ | ೦ |
| ಸರಳ ವ್ಯವಸಾಯ ಸಾರ | | ೦ | ೧ | ೬ |
| ಆರೋಗ್ಯಶಾಸ್ತ್ರ | | ೦ | ೩ | ೬ |
| ಆರೋಗ್ಯಪ್ರವೇಶದಾಯಿನಿ | | ೦ | ೫ | ೦ |
| ಸರಳಾರೋಗ್ಯ ಸಾರ | | ೦ | ೧ | ೦ |
| ಮೈಸೂರು ಚರಿತ್ರೆ ೧ ಮತ್ತು ೨ ನೆ ಭಾಗಗಳು | | ೦ | ೨ | ೦ |
| ,, ,, ೩ ಮತ್ತು ೪ ನೆ ಭಾಗಗಳು | | ೦ | ೩ | ೦ |
| ಮೈಸೂರು ಚರಿತ್ರೆ ಸಾರ | | ೦ | ೨ | ೬ |
| ಅಂಕಗಣಿತ | | ೦ | ೮ | ೦ |
| ಗಣಿತಕಲಾನಿಧಿ | | ೦ | ೩ | ೬ |
| ಅಂಕಗಣಿತ ಸಂಗ್ರಹ | | ೦ | ೨ | ೦ |
| ಅಂಕಗಣಿತ ಬಲರೀತ್ರೆ | | ೦ | ೩ | ೦ |
| ಓಲಿಕೆ ಗೀತಮುಕ್ತಾವಳಿ | | ೦ | ೪ | ೦ |
| ಕಲ್ಯಾಣಿ ಕಾವ್ಯ | | ೦ | ೫ | ೦ |
| ಕರ್ಣಸಪ್ತತಿ | | ೦ | ೩ | ೦ |
| ಕಥಾಮಂಜರಿ | | ೦ | ೬ | ೦ |
| ಸಂಸ್ಕೃತ ಶಬ್ದಾವಳಿ | | ೦ | ೨ | ೬ |
| ಹೊಸಗನ್ನಡ ವ್ಯಾಕರಣ | | ೦ | ೨ | ೦ |
| ಶಬ್ದಸಾರ | | ೦ | ೪ | ೦ |
| ಪಂಚತಂತ್ರ | | ೦ | ೮ | ೦ |
| ದಮಯಂತೀ ಸ್ವಯಂವರ | | ೦ | ೧೨ | ೦ |
| ಶಾಕುಂತಲ ನಾಟಕ | | ೦ | ೧೨ | ೦ |
| ಹೊಸಪದ್ಯಸಾರ (೧೯೦೩ನೇ ವರುಷದ ಲೋವರ ಸೆಕೆಂಡರಿ ಪರೀಕ್ಷಾ ಜಾಗ್ರತೆ ನೋಡಿ) | | ೦ | ೭ | ೦ |
| ಶಬ್ದಮಣಿದರ್ಪಣ | | ೧ | ೮ | ೦ |
| ಹಳಗನ್ನಡ ವ್ಯಾಕರಣ ಸೂತ್ರಗಳು | | ೦ | ೬ | ೦ |
| ಬಾಲ ವ್ಯಾಕರಣ | | ೦ | ೫ | ೦ |
| ಖಗೋಳ ಸಂಗ್ರಹ | | ೦ | ೪ | ೦ |
| ಹಿಂದೂ ದೇಶದ ನಾಗರಿಕ (೧ನೇ ಮತ್ತು ೨ನೇ ಭಾಗ) | | ೦ | ೮ | ೦ |
| ನಾನಾವರ್ಣನ ಪಂಜಸ್ಸು | | ೧ | ೦ | ೦ |
| ಗ್ರೀಕರ ಚರಿತ್ರೆ | | ೦ | ೨ | ೦ |
| ಪ್ರಾಚೀನಕಾಲದ ದೇವರಾಜ್ಞರ ವರ್ಣನೆ | | ೦ | ೧ | ೦ |
| ಪಕ್ಷಿವರ್ಗ ವರ್ಣನೆ | | ೦ | ೧ | ೦ |
| ಖಗೋಳಶಾಸ್ತ್ರಸಿದ್ಧಾಂತ | | ೦ | ೧ | ೦ |
| ಎಡ್ವರ್ಡ್ ಮತ್ತು ಅಲೆಕ್ಸಾಂಡ್ರಾ ಚಕ್ರವರ್ತಿ ಮತ್ತು ಚಕ್ರವರ್ತಿನಿಯವರ ಚರಿತ್ರೆ | | ೦ | ೪ | ೦ |
| ಪ್ರಬೋಧ ಚಂದ್ರಿಕೆ | | ೦ | ೨ | ೦ |
| ಕ್ರಿಮಿವರ್ಗವರ್ಣನೆ | | ೦ | ೧ | ೦ |
| ಚಿಕ್ಕವರಿಗೆ ಹೇಳುವ ಕಥೆಗಳು | | ೦ | ೧ | ೦ |
| ಕಾಲಸಿ ಚರಿತ್ರೆ | | ೦ | ೧ | ೦ |
| Sangappa, Mallappa, Ankeli's Translation I. | | 0 | 5 | 0 |
| ,, ,, ,, ,, II. | | 0 | 9 | 0 |
| ,, ,, ,, ,, III. | | 0 | 10 | 0 |
| English, Kannese Dictionary | | ೩ | 0 | 0 |
| Kannese, English Dictionary | | 3 | 0 | 0 |
| Mangalore Anglo-Kanarese Primer | | 0 | 2 | 6 |

ಈ ಮೇಲ್ಕಂಡ ಪುಸ್ತಕವನ್ನು—ಮ್ಯಾನೇಜರ್, ಬುಕ್ ಡಿಪೋ, ಮೈಸೂರು—ಇವರಿಂದ ತರಿಸಿಕೊಳ್ಳಬಹುದು ಹಣವನ್ನು ಮುಂಗಡವಾಗಿ ಕಳುಹಿಸಬೇಕು ಅಥವಾ ಪುಸ್ತಕಗಳನ್ನು ವಿ ಪಿ ಪಿ ಮೂಲಕ ತರಿಸಿಕೊಳ್ಳತಕ್ಕದ್ದು ಕೆಲವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯದೆ ಹಾಗೆ ಗೀಚಿದ ಹಾಗೆ ಗೊಜಿಬಿಜಿಯಾಗಿ ಬರೆಯುತಾರೆ ಎಲ್ಲವನ್ನು ಸ್ಪಷ್ಟವಾಗಿ ಬರೆದರೆ ಪುಸ್ತಕಗಳು ಪ್ರತಿಯಲ್ಲಿ ತಲುಪುವವು. ವಿಳಾಸ — ಮ್ಯಾನೇಜರು, ಬುಕ್ ಡಿಪೋ ಮೈಸೂರು

### ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತದ ಕನ್ನಡ ಟೀಕು.

6

ಆದಿಪರ್ವ ೨ನೇ ಭಾಗ ೩ ರೂ ವಿರಾಟಪರ್ವ ೧ ರೂ ಭೀಷ್ಮಪರ್ವ ೨ ರೂ ಸ್ತ್ರೀಪರ್ವ ೬ ಆಣೆ ಅನುಶಾಸನಿಕಪರ್ವ ೩ ೧೨ ೦

### ಶ್ರೀ ಚಾಮರಾಜೋಕ್ತಿ ವಿಲಾಸವೆಂಬ ಕನ್ನಡ ರಾಮಾಯಣ.

ಬಾಲಕಾಂಡ ೧ ರೂ, ಅಯೋಧ್ಯಾಕಾಂಡ ೨ ರೂ, ಅರಣ್ಯಕಾಂಡ ೧ ರೂ, ಕಿಷ್ಕಿಂಧಾಕಾಂಡ ೧ ರೂ, ಸುಂದರಕಾಂಡ ೧ ರೂ, ಯುದ್ಧಕಾಂಡ ೨ ೮ ೦, ಉತ್ತರಕಾಂಡ ೧ ೮ ೦

### ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಶ್ರೀಮದ್ಭಾಗವತದ ಕನ್ನಡ ಟೀಕು.

ಪ್ರಥಮ ದ್ವಿತೀಯ ತೃತೀಯಸ್ಕಂಧಗಳು ೨ ರೂ ಚತುರ್ಥ ಪಂಚಮಸ್ಕಂಧಗಳು ೧ ೧೨ ೦ ಷಷ್ಠ ಸಪ್ತಮ ಅಷ್ಟಮ ನವಮ ಸ್ಕಂಧಗಳು ೨ ೮ ೦, ದಶಮಸ್ಕಂಧ ೨ ೮ ೦, ಏಕಾದಶ ದ್ವಾದಶ ಸ್ಕಂಧಗಳು ೧ ೧೨ ೦

ನಮ್ಮಲ್ಲಿ ದೊರೆಯುವ ಕಟ್ಟದ ಮಾದನ ಗಿಡಗಳು ಮತ್ತು ಇತರ ಗಿಡಗಳ ಕ್ಯಾಟಲಾಗಿಗೋಸ್ಕರ ಬರೆಯಿರಿ.

ಎಂ. ರಾಮಪ್ಪ ಅಂಡ್ ಸನ್,
ಲಾಲ್‌ಬಾಗ್ ರೋಡ್, ಬೆಂಗಳೂರು ಸಿಟಿ.

## ROBINSON'S
## PATENT BARLEY.

## ರಾಬಿನ್‌ಸನ್‌ಯವರ ಬಾರ್ಲಿ ಹಿಟ್ಟು.

### ಸರ್ಕಾರದಲ್ಲಿ ರಿಜಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಏವೆಗೋಧಿಯಿಂದ ಮಾಡಿದೆ ಹಸ್ತಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತಕಾರಿಯಾದ ಪಾನವಾಗುತ್ತದೆ

ಎಚ್ಚರಿಕೆ —ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾರೆ, ದ್ವರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಪ್ರಕಟಿಸಿದ ಮೇಲ್ಕಂಡ ಹೆಸರನ್ನು ಚೆನ್ನಾಗಿ ನೋಡಿ ತೆಗೆದುಕೊಳ್ಳಬೇಕು.

## ಮ್ಯುನಿಸಿಪಾಲಿಟಿ ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಈ ಶಹರಿನ ಬೀದಿಗಳಲ್ಲಿ ಅಲೆಯುವ ಪೋಲಿ ನಾಯಿಗಳನ್ನು ಇಂದಿನಿಂದ ಬರುವ ಜೂನ್ ೧೫ ನೇ ತಾರೀಖಿನ ವರೆಗೆ ವಿಷಹಾಕಿ ಕೊಲ್ಲುವದರಿಂದ ಸಾಕುವ ನಾಯಿಗಳನ್ನು ಮೇಲ್ಕಂಡ ದಿವಸದ ವರಿಗೂ ಬೀದಿಗೆ ಬಿಡದಂತೆ ಮಾಲೀಕರು ಎಚ್ಚರಿಕೆಯಿಂದ ನೋಡಿಕೊಳ್ಳ ಬೇಕೆಂದು ತಿಳಿಯಪಡಿಸಿದೆ.

ತಾ॥ ೩೦ ನೆ ಮಾರ್ಚಿ ೧೯೦೩ ನೆ ಇಸವಿ.

K. Srinivasa Rao,
*Vice President,*
*City Municipality,*
*Mysore.*

## THE FOREIGN MISSIONS AND GENERAL AGENCY.

4

ಮೇಲೆ ಕಂಡ ಏಜನ್ಸಿಯವರು ದೇಶೀಯ ವರ್ತಕರಿಗೂ ಇತರರಿಗೂ ಇಂಗ್ಲಾಂಡಿನಲ್ಲಿ ತಯಾರಾಗುವ ಯಾವ ಸಾಮಾನನ್ನು ಬೇಕಾದರೂ ಸುಲಭವಾದ ಕಮೀಷನ್ ತಕ್ಕೊಂಡು ಕಳುಹಿಸುವರು. ಆರ್ಡರು ತಲಪಿದ ಕೂಡಲೆ ಸಾಮಾನುಗಳು ಬಹು ಜಾಗ್ರತೆಯಾಗಿ ರವಾನೆ ಮಾಡಲ್ಪಡುವವು. ಈ ವಿಷಯದಲ್ಲಿ ತಿಳಿದುಕೊಳ್ಳಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕೆಂದು ಕೋರುತ್ತೇವೆ

A. J. Bride,
*Manager,*
*29-35, City Road, London*

## ದೇವಾಂಗ ವಂಶಸ್ತರಿಗೇನು

### ಅಗತ್ಯವಾಗಿ ಬೇಕಾದ ಗ್ರಂಥಗಳು.

1

ಸ್ವಲ್ಪ ಪ್ರತಿಗಳಿವೆ ಜಾಗ್ರತೆಪಟ್ಟರೆ ಸಿಕ್ಕುತ್ತೆ. ನಂತರ ಮುದ್ರಿಸಿ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುಖ್ಯರುಗಳು ಮುನಿಸ್ವಾಮಿಗಳು ರಚಿಸಿದ್ದು. ಅರ್ಥಸಹಿತ ದೇವಾಂಗಪುರಾಣ ಪ್ರಕಾಶಿಕೆ. ಸಮಸ್ತ ಪುರಾಣ ರತ್ನ ಸ್ವರೂಪವಾದ ೧೮ ಕಥೆಗಳಿವೆ ಪ್ರತ್ಯಕ್ಷ ನೋಡಿ ಸಂತೋಷಪಡಿ.

೧೮ ಚಿತ್ರ ಗಳುಳ್ಳ ಪ್ರತಿ ೧ ಕ್ಕೆ ವಿ. ಪಿ. ಪೋಸ್ಟೇಜು ಸಹ ರೂ. ೩—೮ ಚಿತ್ರಗಳಿಲ್ಲದ ಇದೇ ಪ್ರತಿ ೧ ಕ್ಕೆ ವಿ. ಪಿ. ಪೋಸ್ಟೇಜು ಸಹ ರೂ. ೨—೮. ವೇದ ಸಹಿತ ಅರ್ಥಸಹಿತ ಮುಗ್ಗಿ ಬ್ರಹ್ಮ ಸೂತ್ರ ೧ ಕ್ಕೆ ರೂ. ೨—೮

೧೦ ಪ್ರತಿಕ್ಕೆ ೧೦ ಪ್ರತಿ ೧ ವಿಳಾಸಕ್ಕೆ ಕಳುಹಿಸಿಕೊಂಡರೆ ೧ ಪ್ರತಿ ಬಹುಮಾನ ಸಿಕ್ಕುತ್ತೆ. ಹಣ ಬಂದಾಗ ವಿ. ಪಿ. ಯೂ ಕಳುಹಿಸುತ್ತೇವೆ

ಮೈಸೂರು ಬನಶಂಕರಿ ಬ್ರಹ್ಮಶ್ರೀ ಯಜಮಾನ ಸ್ವಾಮಿಗಳಲ್ಲಿ ಅಥವಾ ಬ್ರಹ್ಮಶ್ರೀ ಯಜಮಾನ ರಂಗಪ್ಪನವರಲ್ಲಿ ಈ ಗ್ರಂಥ ಸಿಕ್ಕುತ್ತೆ

## ಮೈಸೂರು ಜಂಗಲ್ ಉತ್ಪತ್ತಿಯ ಹರಾಜು.

ಮೈಸೂರು ಡಿಸ್ಟ್ರಿಕ್ಟಿನ ಫಾರೆಸ್ಟ್ ಡಿಪೋಗಳು ಮತ್ತು ಕೋಠಿಯಲ್ಲಿ ಕೆಳಗಣ ಪಟ್ಟಿಯಲ್ಲಿ ವಿವರಿಸಿರುವ ಮೇರೆ ಜಂಗಲೀ ಮಾಲುಗಳು ಆಯಾಯ ದಿವಸಗಳಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕರಿ ಮಾಡಲ್ಪಡುವವು.

| ಮಾಲ್ ವಿವರ. | ಮೈಸೂರು ಉಪ್ಪಿನಯಾರ್ಡು. ನಂ. | ಮೈಸೂರು ಉಪ್ಪಿನಯಾರ್ಡು. ಅಂದಾಜಾಸಲೆ ಅಡಿ | ನಂಜನಗೂಡು ಡಿಪೋ ನಂ | ನಂಜನಗೂಡು ಡಿಪೋ ಅಂದಾಜಾಸಲೆ ಅಡಿ | ಶ್ರೀರಂಗಪಟ್ಟಣದ ಕೋಠಿ | |
|---|---|---|---|---|---|---|
| ಸಾಗವಾನಿ ನಾಟಾ ಮತ್ತು ಜಂತಿಗಳು | 101 | 7306 | 260 | 2641 | | |
| ಮತ್ತಿಜಾತಿ ನಾಟಾ ಮತ್ತು ಜಂತಿಗಳು | 182 | 3291 | 36 | 657 | | |
| ಕಾಡುಜಾತಿ ನಾಟಾ ಮತ್ತು ಜಂತಿಗಳು | 6 | 125 | 121 | 1113 | | |
| | ಅಂ॥ ಮಣ | ಅಂ॥ ರಾತಲ್ | | | ಅಂ॥ ಮಣ | ಅಂ॥ ರಾತಲ |
| ಅಳಲೇಕಾಯಿ | 1169 | | | | 2255 | |
| ಅರಗು | | | | | 216 | 21 |
| ಗೋಂದು | 16 | 21 | | | | |
| ಜೇನುತುಪ್ಪ | 16 | 8 | | | | |
| ಜೇನುಮೇಣ | 11 | | | | | |
| ಜಿಂಕೆ ಕೊಂಬು | 8 | | | | | |
| ಹರಾಜು ತಾ॥ | 16—4—03 | | 20—4—03 | | 15—4—03 | |

ಹೆಚ್ಚು ಸಂಗತಿಗಳನ್ನು ತಿಳಿಯಲಪೇಕ್ಷಿಸುವವರು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಗೆ ಬರೆಯತಕ್ಕದ್ದು.

C. Krishna Rao,
for District Forest Officer,
Mysore District.

## ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

13




ಈ ಔಷಧವು ಪ್ರತಿ ಮನೆಯವರಿಗೂ ಅಗತ್ಯವಾಗಿ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಧದ ನೋವಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಪೆಟ್ಟು ಬಿದ್ದು ಗಾಯವಾಗಿ [illegible] ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. [illegible] ತಲೆನೋವು, ಹಲ್ಲುನೋವು, ಮಣಿನೋವು ಇದನ್ನು ಹಚ್ಚುವದರಿಂದ ವಾಸಿಯಾಗುವವು. ಈ ಔಷಧವು [illegible] ಕಿವಿನೋವು, ಎದೆನೋವು ನಿವಾರಣೆಯಾಗುವದು. ಆದರಿಂದ ಪ್ರತಿ ಮನೆಯವರೂ ಇದನ್ನು ಇಟ್ಟುಕೊಳ್ಳತಕ್ಕದ್ದು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೇನ್ ನೋವುಹರ ಔಷಧದ ಒಂದು ಬಾಟ್ಲಿಯನ್ನು ಅಗತ್ಯವಾಗಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚಿದರೆ ಬಹಳ ಗುಣ ಕಂಡು [illegible] ಮರೆಯಬಾರದು. ಕ್ರಯ ಬಾಟ್ಲಿ ೧ಕ್ಕೆ ೧ ರೂ.; ಶಹರ ಮೈಸೂರು ಮತ್ತು ಬೆಂಗಳೂರಿನಲ್ಲಿ, [illegible] ಅಂಗಡಿಯವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನು ತಮ್ಮ ವಿಳಾಸವನ್ನು ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದುವರೆಗೆ ಕೆಳಗಿನ ವಿಳಾಸಕ್ಕೆ [illegible]:

**ಬಿ. ವಿ. ನರಸಿಂಹಲು ಚೆಟ್ಟಿ,**
**ನಂ. ೨, ತಂಬುಚೆಟ್ಟಿನಾಯಕರ ಬೀದಿ,**
**ಮದರಾಸ್**

## ಯನ್. ಆರ್. ವೆಂಕಟಸುಬ್ಬಾಚಾರ್ಯರ ಲೋವರ್ ಸೆಕಂಡರಿ ಕನ್ನಡ ಟೆಕ್ಸ್ಟ್ ನೋಟ್ಸು.

2

೧೯೦೩ ನೆಯ ವರ್ಷದ್ದು. ಪ್ರಶ್ನೋತ್ತರಗಳೊಡನೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವದಕ್ಕೆ ಅತ್ಯಂತ ಸಹಾಯವಾಗುವಂತೆ ರಚಿಸಿದೆ, ಕ್ರಯ ೬ ಆಣೆ.

| | |
|---|---|
| ಮೈಸೂರು ಸಂಸ್ಥಾನದ ಭೂವಿವರಣೆ | ೦—೧—೦ |
| ಮೈಸೂರು, ಮದರಾಸು ಮೊದಲಾದ್ದರ ಭೂವಿವರಣೆ | ೦—೧—೬ |
| ೨ನೆಯ ತರಗತಿಯ ಪದ್ಯಸಂಗ್ರಹದ ನೋಟ್ಸು | ೦—೧—೬ |
| ೩ನೆಯ ತರಗತಿಯ ಪದ್ಯಸಂಗ್ರಹದ ನೋಟ್ಸು | ೦—೧—೬ |
| ಪತ್ರರತ್ನಾಕರ (ಪತ್ರಕ್ರಮ, ಸ್ಟಾಂಪಿನ ವಿವರದ್ದು) | ೦—೧೨—೦ |
| ಲೇಖ್ಯತತ್ವಪ್ರಕಾಶಿಕೆ (ಅರ್ಜಿಗಳ ಲೇಖನಕ್ರಮದ್ದು) | ೦—೪—೦ |

ಇವಕ್ಕೆಲ್ಲಾ ಡಿಸ್ಕೌಂಟು.—೧೦ ಕ್ಕೆ ೧, ೫೦ಕ್ಕೆ ೭, ೧೦೦ಕ್ಕೆ ೨೦

ವಿಳಾಸ — ೧. ಯನ್. ಆರ್. ವೆಂಕಟಸುಬ್ಬಾಚಾರ್ಯ, ಸುಬೋಧ ಗ್ರಂಥಾಲಯಾ, ಮೈಸೂರು,
೨. ಗ್ರಾಜುಯೇಟ್ಸ್ ಷಾಪು, ಮೈಸೂರು.
೩. ಮಿಷನ್ ಬುಕ್ ಡಿಪೋ, ಮೈಸೂರು.
೪. ಕೆ. ನರಸಿಂಹಯ್ಯ ಅಂಡ್ ಕೋ, ಮೈಸೂರು.
೫. ಸಂತೇಪೇಟೆ, ಡೋರ್ ನಂ॥ ೧೪೫೯ ಕೆ. ಸುಬ್ಬರಾವ್, ಮೈಸೂರು.
೬. ಜೆ. ಗಣಪ್ಪ ಅಂಡ್ ಕೋ, ಬೆಂಗಳೂರು.

## ವೃತ್ತಾಂತ ಪತ್ರಿಕೆ.

ಸನ್ ೧೯೦೩ ನೇ ಇಸವಿ ಏಪ್ರಿಲ್ ತಾ॥ ೨ ನೇ ಗುರುವಾರ.

## ವ್ಯವಸಾಯ ಶಾಸ್ತ್ರಬೋಧನಾಲಯ.

ವೈಸರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ಮೆಂಬರುಗಳು ಬಜೆಟ್ಟನ್ನು ಹಿಡಿದು ಚರ್ಚೆಮಾಡುವಾಗ್ಯೆ ಸರ್ ಡೆನ್‌ಜಿಲ್ ಇಬೆಟ್‌ಸನ್‌ಯವರು ತಿಳಿಸಿರುವದೇನಂದರೆ:—ಮಾ॥ ಫಿಪ್ಸ್ ಎಂಬ ಕೋಟ್ಯಾಧೀಶರನು ಹಿಂದೂಸ್ಥಾನದ ಶ್ರೇಯೋಭಿವೃದ್ಧಿಗಾಗಿ ಕೊಟ್ಟಿರುವ ಅಪಾರವಾದ ಹಣದಲ್ಲಿ ಇಂಡಿಯಾ ಗೌವರ್ನಮೆಂಟಿನವರು ವ್ಯವಸಾಯವನ್ನು ಕಲಿಸುವಂಥಾ ಒಂದು ಕಾಲೇಜನ್ನು ಪೂಸಾ ಎಂಬ ಪಟ್ಟಣದಲ್ಲಿ ಸ್ಥಾಪಿಸಿ ನಡಸುವರು. ಈ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ವ್ಯವಸಾಯ ಶಾಸ್ತ್ರದ ಸಕಲ ಭಾಗಗಳನ್ನೂ ಎಂ. ಏ. ತರಗತಿಯತನಕ ಹೇಳಿಕೊಟ್ಟು ಕಲಿಸುತ್ತಾರೆ. ಹೀಗೆ ಶಿಕ್ಷಿತರಾದ ಉಪಾಧ್ಯಾಯರುಗಳನ್ನು ಹಿಂದೂಸ್ಥಾನದಲ್ಲಿ ವ್ಯವಸಾಯ ಕಲಿಸುವಂಥಾ ಪಾಠಶಾಲೆಗಳಿಗೆ ಕಳುಹಿಸಿ ನೇಮಿಸುವರು. ಹೀಗೆ ಮಾಡುವದರಿಂದ ಸ್ವಲ್ಪಕಾಲದಲ್ಲೇ ಗ್ರಾಮಾಂತರಗಳ ಜಮೀನುದಾರರಿಗೂ ವ್ಯವಸಾಯಕ್ರಮಗಳು ಚನ್ನಾಗಿಯೂ ಲಾಭಕರವಾಗಿಯೂ ತಿಳಿಯುವದಕ್ಕೆ ಅನುಕೂಲವಾಗುವದು. ಆದಕಾರಣ ಭಾರೀ ಜಮೀನುದಾರರು ತಮ್ಮ ಮಕ್ಕಳಿಗೆ ವ್ಯವಸಾಯ ಶಾಸ್ತ್ರಾಭ್ಯಾಸ ಮಾಡಿಸಿ, ತಮ್ಮ ಜಮೀನುಗಳಲ್ಲಿ ನಿಲ್ಲಿಸಿ, ಶಾಸ್ತ್ರಕ್ರಮಾನುಸಾರವಾಗಿ ವ್ಯವಸಾಯ ಮಾಡಿಸುತ್ತಾ ಬರಬೇಕು.

ಪತ್ತಿ ಬೀಜದಿಂದಾಗುವ ಪ್ರಯೋಜನಗಳನ್ನು ಕುರಿತು ಈ ವಾರ ನಾವು ಇನ್ನೊಂದು ಕಡೆಯಲ್ಲಿ ಪ್ರಕಟಿಸಿರುತ್ತೇವೆ. ಜಮೀನುದಾರರು ಬೆಳೆಯುವ ಫಸಲುಗಳಲ್ಲಿ ಯಾವ ಯಾವದು ಯಾವ ಕೆಲಸಕ್ಕೆ ಉಪಯೋಗವಾಗುವದೋ, ಯಾವದರಲ್ಲಿ ಎಂಥಾ ಪ್ರಯೋಜನಾಂಶಗಳು ಇರುವವೋ, ಅವುಗಳನ್ನು ಯಾವರೀತಿಯಲ್ಲಿ ಉಪಯೋಗಿಸಿದರೆ ಲಾಭಕರವಾಗಿರುವದೋ, ಇದೆಲ್ಲಾ ಚನ್ನಾಗಿ ಪರಿಶೀಲಿಸಿನೋಡಿ ತಿಳಿಯಬೇಕಾಗಿರುವದು. ಆದಕಾರಣ ವ್ಯವಸಾಯದ ಉಪಭಾಗಗಳನ್ನೆಲ್ಲಾ ಶಾಸ್ತ್ರಕ್ರಮಾನುಸಾರವಾಗಿ ತಿಳಿದುಕೊಳ್ಳುವ ವಿಷಯದಲ್ಲಿ ನಮ್ಮ ಮೈಸೂರು ಸರ್ಕಾರದವರೂ ಈ ಸಂಸ್ಥಾನಕ್ಕೆ ಸೇರಿದ ಸಕಲ ರೈತರೂ ವಿಶೇಷವಾಗಿ ಗಮನಕೊಡುವರೆಂದು ಪ್ರಾರ್ಥಿಸುತ್ತೇವೆ.

## ಜನರಲ್ ಸರ್ ಹೆಕ್ಟರ್ ಮೆಕ್ಡಾನಲ್ಡ್ ಯವರು ಆತ್ಮಹತ್ಯಮಾಡಿಕೊಂಡದ್ದು.

ಬಹು ಯಶೋವಂತನಾದ ಶಿಪಾಯಿ ಎಂಬದಾಗಿ ಹೆಸರುವಾಸಿಗೆ ಬಂದಿದ್ದ ಜನರಲ್ ಸರ್ ಹೆಕ್ಟರ್ ಮೆಕ್ಡಾನಲ್ಡರು ಆತ್ಮಹತ್ಯ ಮಾಡಿಕೊಂಡದ್ದು ತುಂಬಾ ವಿಷಾದಕರವಾಗಿರುತ್ತದೆ. ಇವರು ಸಾಧಾರಣವಾದ ಶಿಪಾಯಿಯಾಗಿ ಸೈನ್ಯದಲ್ಲಿ ಸೇರಿ, ಗಾರ್ಡನ್ ಹೈಲೆಂಡರ್ ರೆಜಿಮೆಂಟಿನಲ್ಲಿ ಸಾರ್ಜಂಟಾದರು. ಅಪ್ಘಾನಿಸ್ಥಾನದ ಯುದ್ಧ ಕಾಲದ ಕಡೆಯಲ್ಲಿ ಕೆಲವು ಮಂದಿ ಸೈನಿಕರನ್ನು ಇವರು ಬಹು ಪರಾಕ್ರಮವಾಗಿಯೂ ಯುಕ್ತಿಯಿಂದಲೂ ನಡಿಸಿಕೊಂಡು ಜಯಿಸಿದ್ದನ್ನು ಕಂಡು, ಜನರಲ್ ರಾಬರ್ಟ್ಸ್ ಯವರು ಇವರಿಗೆ ಲೆಫ್ಟಿನೆಂಟ್ ಅಧಿಕಾರವನ್ನು ಕೊಟ್ಟರು. ತರುವಾಯ ಇವರು ಕ್ರಮಕ್ರಮವಾಗಿ ಸೈನ್ಯದಲ್ಲಿ ಮೇಲಕ್ಕೆ ಏರಿದರು. ಕರ್ತೂಮ್ ಕಡೆ ನಡೆಯುವ ಯುದ್ಧಗಳಿಗೆ ಈಜಿಪ್ಟ್ ದೇಶದ ಸೈನ್ಯಗಳನ್ನು ನಡಿಸಿಕೊಂಡು ಹೋಗಿ ಪ್ರಸಿದ್ಧವಾದ ಮಹದಿಯ ಮೇಲೆ ಅಂದು ಓಂಡರ್ಮನ್ ಎಂಬ ಸ್ಥಳದಲ್ಲಿ ಜಯಶೀಲರಾಗಿ ಯುದ್ಧವನ್ನು ಮಾಡಿ, ಲಾರ್ಡ್ ಕಿಚ್ನರ್ ಸಾಹೇಬರ ಕ್ರಮಗಳನ್ನು ಪ್ರಕಾಶಪಡಿಸಿದರು. ಇವರಿಂದ ಅಲ್ಲಿ ಇಂಗ್ಲೀಷರಿಗೆ ಜಯಪ್ರದವಾಯಿತೆಂದು ಹೇಳುತ್ತಾರೆ. ಅಲ್ಲಿಂದ ತರುವಾಯ ಸರ್ ಹೆಕ್ಟರ್ ಮೆಕ್ಡಾನಲ್ಡ್ ಯವರು ದಕ್ಷಿಣ ಆಫ್ರಿಕಾ ಯುದ್ಧದಲ್ಲಿ ಹೈಲೆಂಡ್ ಬ್ರಿಗೇಡೆಂಬ ಸೈನ್ಯವನ್ನು ನಡಿಸಿದರು. ಇದಕ್ಕಾಗಿ ಅವರಿಗೆ ಗೌವರ್ನಮೆಂಟಿನವರು ಸರ್ ಎಂಬ ಬಿರುದನ್ನು ದಯಪಾಲಿಸಿ, ಸಿಲೋನ್ (ಲಂಕಾ) ದ್ವೀಪಕ್ಕೆ ಇಂಗ್ಲಿಷ್ ಸೈನ್ಯಗಳ ಕಮ್ಯಾಂಡರಾಗಿ ನೇಮಿಸಿ ಕಳುಹಿಸಿದರು. ಈ ದ್ವೀಪದಲ್ಲಿ ಇವರ ಮೇಲೆ ಕೆಲವು ಅಪರಾಧಗಳು ಪ್ರಕಟವಾದಕಾರಣ ಇವರು ವಿಲಾಯಿತಿಗೆ ಹೋಗಿ ಪ್ಯಾರಿಸ್ ನಗರದ ಒಂದು ಹೋಟೆಲಿನಲ್ಲಿ ಆತ್ಮಹತ್ಯ ಮಾಡಿಕೊಂಡರೆಂದು ತಂತಿವರ್ತಮಾನಬಂತು. ಇದರಿಂದ ಅವರನ್ನು ಈ ದ್ವೀಪದಲ್ಲಿ ದಯಾದೃಷ್ಟಿ ಮಾಡಬೇಕೆಂದು ನಿಶ್ಚಯವಾಗಿದ್ದದ್ದು ನಿಂತಹೋಯಿತು. ಅಂಥಾ ಪರಾಕ್ರಮಿಯು ಈ ಲೋಕವನ್ನೇ ಬಿಟ್ಟು ಇರುವದರಿಂದ ಅವರ ಮೇಲೆ ಬಂದ ಅಪರಾಧಗಳು ಹೊರಿಸಲ್ಪಟ್ಟವೆ ಎಂದು ವಿಚಾರಿಸುವದಕ್ಕೆ ನಮಗೆ ಇಷ್ಟವಿರುವದಿಲ್ಲ. ಇಷ್ಟು ಯಶೋವಂತರೆಂದು ಖ್ಯಾತಿಪಡೆದು ಕಡೆಯಲ್ಲಿ ಇಂಥಾ ಅವಮಾನಕರವಾಗಿ ಪ್ರಾಣಕಳೆದುಕೊಂಡರಲ್ಲಾ ಎಂದು ನಾವು ವಿಷಾದಿಸುತ್ತೇವೆ.

## ಬಹುದೇಶದ ವೃತ್ತಾಂತಗಳು.

ಬರುವ ಗುರುವಾರದಿಂದ ಮೈಸೂರು ಸಂಸ್ಥಾನದ ಸಿವಿಲ್ ಕೋರ್ಟುಗಳಿಗೆಲ್ಲಾ ಬೇಸಿಗೆ ರಜಾ ಪ್ರಾರಂಭವಾಗುತ್ತದೆ.

ಈ ದಿನ ನಮ್ಮ ಮಹಾರಾಜರವರು ಪರಿವಾರಸಹಿತ ಬೇಸಿಗೆಯನ್ನು ಕಳೆಯುವ ಉದ್ದೇಶ್ಯ ನೀಲಗಿರಿಗೆ ದಯಮಾಡುವವರಾಗಿದ್ದಾರೆ.

ಬೆಂಗಳೂರು ಕುದುರೆ ಪೇಟೆ ಬಳಿ ಹಗಲುಹೊತ್ತಿನಲ್ಲೇ ಕಳ್ಳರು ಒಂದು ಮನೆಗೆ ನುಗ್ಗಿ ನಗನಾಣ್ಯಗಳನ್ನು ಅಪಹರಿಸಿದರು.

ಕೌನ್ಸಿಲರ್ ಮಿ॥ ವಿ ಪಿ ಮಾಧವರಾಯರು ಕಳೆದವಾರ ರಾಜಧಾನಿಯ ರೆವೆನ್ಯೂ ಕಛೇರಿಗಳ ಕಾರುಬಾರುಗಳನ್ನು ಪರಿಶೀಲನೆ ಮಾಡಿಬಂದರು.

ವಿದ್ಯಾಭ್ಯಾಸದ ಇಲಾಖೆಯ ಇ. ಪ. ಮಿ॥ ಭಾಭಾಯವರು ಕಳೆದವಾರ ರಾಜಧಾನಿಯ ಕೆಲವು ವಿದ್ಯಾಶಾಲೆಗಳನ್ನು ತನಿಖೆಮಾಡಿ, ಬೆಂಗಳೂರಿಗೆ ದಯಮಾಡಿದರು.

ವ [illegible]ಯಲ್ಲಿ ಸೈನಿಕರು ಇರುವದಕ್ಕೋಸ್ಕರ ಗಿಲ್ಗಿಟ್ ಮನೆಗಳನ್ನು ಕಟ್ಟಿಸಿಕೊಡುವದಕ್ಕಾಗಿ ಇಂಡಿಯಾ ಗವರ್ನಮೆಂಟಿನವರು ಒಂದು ಲಕ್ಷ ರೂಪಾಯಿ ಗ್ರ್ಯಾಂಟು ಮಾಡಿದ್ದಾರೆ.

---

ಮೈಸೂರು ಸಂಸ್ಥಾನದಲ್ಲಿ ಎಷ್ಟು ಎಕರೆ ಜಮೀನು ಹತ್ತಿ ವ್ಯವಸಾಯದಲ್ಲಿದೆ, ಬೆಳೆಯುವ ಹತ್ತಿ ಎಷ್ಟಾಗಬಹುದು, ಇದನ್ನೆಲ್ಲಾ ತನಿಖೆ ಮಾಡಿ ರಿಪೋರ್ಟ್ ಕೊಡಬೇಕೆಂಬದಾಗಿ ಗವರ್ನಮೆಂಟಿನವರು ಎಲ್ಲಾ ಡೆಪ್ಯುಟಿ ಕಮಿಷನರುಗಳಿಗೂ ತಿಳಿಸಿದ್ದಾರೆ.

---

ಸರ್ ಕೆ. ಶೇಷಾದ್ರಿ ಅಯ್ಯರವರ ಮೆಮೋರಿಯಲ್ ಫಂಡಿನ ವಿವರ [illegible] ಪ್ರಕಟವಾಗಿದೆ. ಇದನ್ನು ನೋಡಲಾಗಿ ಈ ಫಂಡಿಗೆ ಇದುವರೆಗೆ ೪೦ ಸಾವಿರ ರೂಪಾಯಿಗಳಿಗೆ ಚಂದಾ ವಸೂಲಾಗಿದೆ [illegible] ಸಾವಿರ ರೂಪಾಯಿಗಳ ಚಂದಾ ವಸೂಲಾಗಬೇಕಾಗಿದೆ ಎಂತಲೂ ಗೊತ್ತಾಗುವದು.

---

ಹಿಂದೆ ಸಮಾಚಾರ ಕೊಟ್ಟಂತೆ ಇತ್ತೀಚೆಗೆ [illegible] ಬೆಂಗಳೂರಿನಲ್ಲಿ ನಾಟಕವನ್ನು ಆಡಿದರು. ದಿವಾನರು, ಚೀಫ್ ಸೆಕ್ರೆಟರಿಯವರು, ಪ್ರೈವೇಟ್ ಸೆಕ್ರೆಟರಿಯವರು, ಡೈರೆಕ್ಟರ್ ವಗೈರೆಯವರು, ಕೆಲವು ಮಂದಿ ಯೂರೋಪಿಯನ್ ಅಧಿಕಾರಿಗಳು, ಸಿವಿಲ ಸರ್ಜನರು, ಪ್ರೆಸಿಡೆಂಟರು ಮೊದಲಾದವರೆಲ್ಲಾ ಹಾಜರಾಗಿದ್ದು [illegible], ಆ ನಾಟಕವನ್ನು ನೋಡಿ ಸಂತೋಷಪಟ್ಟರು.

---

ನಮ್ಮ ಮಹಾರಾಜರವರು ರಾಜ್ಯಭಾರವನ್ನು ವಹಿಸಿಕೊಂಡದಕ್ಕೆ ಜ್ಞಾಪಕಾರ್ಥವಾಗಿ [illegible] ಮಹಾರಾಣಿ [illegible]ಯವರ ಪ್ರತಿಬಿಂಬವನ್ನು ಗಂಧದ ಮರದಲ್ಲಿ ಕೆತ್ತಿಸಬೇಕೆಂಬದಾಗಿ ಅಪ್ಪಣೆಯಾಗಿದ್ದಿತು. ಅದನ್ನು ಈಗ [illegible] ಕೆತ್ತಿ ತಯಾರು ಮಾಡಿದ್ದಾರೆ. ಅದು [illegible] ಉದ್ದವಾಗಿರುವದು. ಅದನ್ನು ನೋಡಿದವರೆಲ್ಲಾ ಬಹಳ ಶ್ರೇಷ್ಠವಾಗಿದೆ ಎಂದು ಹೊಗಳುತ್ತಾರೆ. ಇದರ ಒಂದು ನಕ್ಷೆಯನ್ನು ತೆಗೆದು ಮೈಸೂರು ಪ್ರದರ್ಶನ [illegible]ಯಲ್ಲಿಡಬೇಕೆಂದು ಮಹಾರಾಣಿಯವರು ಅಪ್ಪಣೆ ಮಾಡಿದ್ದಾರೆ.

---

ಮದರಾಸ್ ಗವರ್ನರ್ ಲಾರ್ಡ್ ಆಂಪ್ಟಿಲ್‌ಯವರು ಕಳೆದ [illegible] ಶಿಕಾರಿ [illegible] ಬಂದಿದ್ದರು [illegible] ದಯಮಾಡಿದರು [illegible] ಅವರು [illegible] ಶಿಕಾರಿಗೆ ಹೋಗಿದ್ದರು. [illegible] ಒಂದು ಪಿರಂಗಿ [illegible] ಹುಲಿ ಬಂದ ಪರಿ [illegible] ಮತ್ತು [illegible] ಹುಲಿಗಳೆಲ್ಲಾ ಆ ಸ್ಥಳವನ್ನು ಬಿಟ್ಟು [illegible] ಜಾಗವು [illegible] ಮನುಷ್ಯರ ಸಂಚಾರ [illegible]

---

ಮೈಸೂರು [illegible] ಟರನ [illegible] ಗವರ್ನಮೆಂಟು [illegible] ಅಧಿಕಾರವೇ ಇದರಲ್ಲಿ [illegible] ಮತ್ತು [illegible] ಸೇರಿಸಿ ಇರುವ [illegible] ವಿಷಯ [illegible] ಈ ಸಂಬಂಧವಾದ ವಿಷಯವನ್ನು ಕುರಿತು ವಿಲಾಯತಿನ ಪಾರ್ಲಿಮೆಂಟ್ ಸಭೆಯಲ್ಲಿ ಸರ್ [illegible] ಅವರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಜಾರ್ಜ್ ಹ್ಯಾಮಿಲ್ಟನ್‌ರವರನ್ನು ಪ್ರಶ್ನೆ ಮಾಡಿದರು. [illegible] ವಿಷಯ ಇನ್ನೂ ಇತ್ಯರ್ಥವಾಗಿಲ್ಲ [illegible], ಅದನ್ನು ಮೈಸೂರು ಗವರ್ನಮೆಂಟಿನವರೇ ಇನ್ನೂ [illegible]ಯಲ್ಲಿ [illegible] ಸೆಕ್ರೆಟರಿ ಅವರು ಹೇಳಿದರು.

---

## ಕರೆಸ್ಪಾಂಡೆನ್ಸ್

### ಕಲ್ಲತ್ತಿಯ ಪ್ರಾವಿಡೆಂಟ್ ಸಂಘ

ಅಯ್ಯಾ,

ನಿಮ್ಮ ಪತ್ರಿಕೆಯಲ್ಲಿ [illegible] ವಿನಂತಿಸುವ [illegible] ಕಲ್ಲತ್ತಿಯ ಪ್ರಾವಿಡೆಂಟ್ [illegible] ರೂಪಾಯಿ [illegible] ಕೊಟ್ಟು [illegible] ಹಣವನ್ನು [illegible] ಕೊಡಬೇಕೆಂದು [illegible] ಕೊಟ್ಟಿದ್ದರೆ [illegible] ರೂಪಾಯಿ [illegible] ಸಭೆಯವರು [illegible] ಸಂಘದವರು [illegible] ರೂಪಾಯಿ [illegible] ನಮಗೆ [illegible] ಮಾಡಬೇಕು.

ಒಬ್ಬ ಸಭಿಕ.

[ಈ [illegible] ನಮಗೆ ಅನುಮಾನ [illegible] ವಿಷಯದಲ್ಲಿ [illegible] ಕೆಲವು [illegible] ಈ ಸಂಘದ [illegible] ನಮಗೆ [illegible] ಕೇಳಿಕೊಳ್ಳುತ್ತೇವೆ. ಅದರಿಂದ ನಮಗೆ ಉತ್ತರ [illegible] ದಯಮಾಡಿ [illegible] ಪತ್ರ [illegible]]

### ಕಳುವು ಪತ್ತೆಯಾಗಿದ್ದು

ಅಯ್ಯಾ,

ಇದೇ ಅರಸೀಕೆರೆಗೆ [illegible] ತಾಲ್ಲೂಕಿನಲ್ಲಿರುವ ಬೆಟ್ಟದಪುರದ ಗ್ರಾಮಕ್ಕೆ [illegible] ಪೋಲೀಸ್ ಇನ್ಸ್‌ಪೆಕ್ಟರ್ [illegible] ಮತ್ತು ಒಬ್ಬ ಕಾನಿಸ್ಟೇಬಲ್, ದಫೇದಾರ್, [illegible] ಒಂದಿದ್ದರು. [illegible] ಈಗ [illegible] ತಿಂಗಳಲ್ಲಿ ಬೆಂಗಳೂರು ತಾಲ್ಲೂಕಿನಲ್ಲಿ ದೊಡ್ಡ [illegible] ನಡೆದಿತ್ತು. ಅದನ್ನು [illegible] ಪತ್ತೆ [illegible] ಸಿದ್ದಲ್ಲಿ ಪತ್ತೆ [illegible] ಇರುವದು ಕೆಲವುಗಳ [illegible] ಇರುತ್ತೆ. ಈ ಕೇಸ್ ನಡು ಬೆಟ್ಟದಪುರದ ಗ್ರಾಮದಲ್ಲಿರುವ [illegible] ನಡೆಸಿದ್ದರೆಂದು ಗುಮಾನಿ ತಿಳಿಯಬಂದು [illegible] ಮನೆಗಳನ್ನು [illegible] ರೂಪಾಯಿ [illegible] ಗಳು [illegible] ಸಾಹುಕಾರ [illegible] ತಾಲ್ಲೂಕು [illegible] ಪೋಲೀಸ್ [illegible] ಬೆಟ್ಟದಪುರದ ಗ್ರಾಮಕ್ಕೆ [illegible] ತಾಲ್ಲೂಕಿನಲ್ಲಿ [illegible] ತಾಲ್ಲೂಕಿನಲ್ಲಿ [illegible] ಪತ್ತೆ [illegible] ಇನ್ಸ್‌ಪೆಕ್ಟರ್ [illegible] ಸಾಹಸ ಬುದ್ಧಿ [illegible] ಎಷ್ಟು [illegible]

ಪ್ರಜಾ ಹಿತಚಿಂತಕ.

---

### ಅಂಚೇ ವಿಷಯ

ಅಯ್ಯಾ,

[illegible] ಪೋಸ್ಟ್ [illegible] ಪೋಸ್ಟ್ [illegible] ೧ [illegible] ಗ್ರಾಮಗಳಿಗೆ [illegible] ಕ್ಕೆ [illegible] ಪೋಸ್ಟ್ [illegible] ಕಾಗದಗಳನ್ನು [illegible] ಪೋಸ್ಟ್ [illegible] ಅವರ [illegible] ಕಾರಣ [illegible]

[illegible] ಪೋಸ್ಟ್ ಮಾಸ್ಟರುಗಳು ತಮ್ಮ [illegible] ಪೋಸ್ಟ್ [illegible] ಗ್ರಾಮಕ್ಕೆ [illegible] ಒಂದು, ಎರಡು [illegible] ಅವರ [illegible] ಕಾಗದಗಳನ್ನು [illegible] ತೆಗೆದುಕೊಳ್ಳುತ್ತಾರೆ, [illegible] ಕಾಗದಗಳನ್ನು [illegible] ಪತ್ರಿಕೆ [illegible] ಅನೇಕ [illegible] ಪೋಸ್ಟ್ [illegible] ಗಳನ್ನು ಗಮನಕ್ಕೆ ತಂದ [illegible], ನಿವಾರಣೆ [illegible]

[illegible]

---

### ತನಾಸೆಯಾಟ ಜಾತ್ರೆ

ಅಯ್ಯಾ,

ಮಗ್ಗ [illegible] ತಾಲ್ಲೂಕು ಮಗ್ಗೆ ಗ್ರಾಮದಲ್ಲಿರುವ ಗ್ರಾಮದೇವತೆಯಾದ ಶ್ರೀ ತ್ರಿಪುರಸುಂದರಿ ಅಮ್ಮನವರ ಜಾತ್ರೆ [illegible] ಜಾತ್ರೆಯಲ್ಲಿ [illegible] ಬಂದಾವಸ್ತು [illegible], ಬಗದೀ [illegible] ಎಂತಲೂ [illegible] ವಿಷಯ [illegible] ನೇ ಏಪ್ರಿಲ್ ತಾರೀಖು [illegible]ನೇ ಶುಕ್ರವಾರ [illegible] ಗ್ರಾಮದ [illegible] ವಗೈರೆ ಸುತ್ತಮುತ್ತಣ [illegible] ಗ್ರಾಮದ ಅಕ್ಕ [illegible] ಒಂದು [illegible] ಬಂದು [illegible] ದೇವಸ್ಥಾನದ [illegible] ವಗೈರೆ [illegible] ಬಂದವರಿಗೆಲ್ಲ [illegible] ಕೆಲವರು [illegible] ಆ ದಿವಸ [illegible] ದೇವಸ್ಥಾನದ [illegible] ತ್ತಾರೆ. ಅಲ್ಲದೆ ಆ ದಿವಸ [illegible] ಗ್ರಾಮದಲ್ಲಿ [illegible] ಮಂಗಳವಾದ್ಯ [illegible] ಸುಮಾರು [illegible] ಒಂದು [illegible] ದೇವಸ್ಥಾನದ ಮುಂದುಗಡೆಯಲ್ಲಿ [illegible] ಜನಗಳ, [illegible]

ಭಯಭಕ್ತಿಯಿಂದ [illegible] ಜನಗಳು [illegible] ಹಿಡಿದುಕೊಂಡು ಮುಂಡಿಯಿಂದ [illegible] ಉಭಯ ಸ್ವಾಮಿಕರು [illegible] ಈ ಸಂತೋಷ [illegible] ನೋಡುವದಕ್ಕೆ ನಾನಾ ದೇಶಗಳಿಂದ ಸುಮಾರು ಒಂದು ಸಾವಿರ ಪ್ರಜೆಗಳವರೆಗೂ ಬರುತ್ತಾರೆ. ಆ ದಿವಸ ಸುಮಾರು [illegible] ರೂಪಾಯಿಗಳವರೆಗೆ ವ್ಯಾಪಾರ ನಡೆಯುತ್ತದೆ. ಈ [illegible] ಜಾತ್ರೆಯು ಪ್ರತಿ ವರುಷವೂ ತಪ್ಪದೆ ನಡೆಯುತ್ತದೆ.

ಕ. ವೆಂಕಟಸುಬ್ಬಯ್ಯ.

---

### ಹತ್ತಿಯ ಕಾಳು

ಅಯ್ಯಾ,

ಈಗ ಎರಡು ಸಂವತ್ಸರಗಳಿಂದ [illegible] ಇಂಡಿಯಾ ದೇಶದ ಹತ್ತಿಯ ಕಾಳು [illegible] ಇದೆಂದು [illegible] ಪತ್ರಿಕೆಗಳ [illegible] ಇದರ ಹತ್ತಿಯ ಕಾಳಿನ [illegible] ಉಪಯೋಗಿಸುತ್ತಾರೆ [illegible] ಬಹಳ [illegible]

ಪ್ರ್ಯಾಕ್ಷಾ.

[ಪಟ್ಟಣದ ಅನೇಕ [illegible] ಹತ್ತಿ [illegible] ಯೋಗ್ಯವಾದ [illegible] ತಿಳಿಸು ಕೊಂಡು, ಅದನ್ನು [illegible] ಹತ್ತಿ [illegible] ಹತ್ತಿಯನ್ನು [illegible] ಕೆಲವರು ಅದನ್ನು [illegible] ಕೆಲವರು ಅದನ್ನು [illegible] ಕೊಳ್ಳುತ್ತಾರೆ [illegible] ಕೆಲವರು ಹತ್ತಿ [illegible] ಕೆಲವು [illegible] ಹಾಕುತ್ತಿದ್ದರು [illegible] ಹತ್ತಿಯನ್ನು ಜೀರ್ಣಿಸುತ್ತಾರೆ [illegible] ಕೆಲವು ಕೋಟಿ [illegible] ಹತ್ತಿಯನ್ನು [illegible] ೧,೪೦ ಪೌಂಡು [illegible] ಆಗುತ್ತದೆ. ಅಲ್ಲಿಂದ [illegible] ಪೌಂಡು [illegible], ೬೦೦ ಪೌಂಡು ಹಿಂಡಿಯು [illegible] ಎಣ್ಣೆಯನ್ನು [illegible] ಎಣ್ಣೆಯನ್ನು [illegible] ಎಣ್ಣೆಯನ್ನು [illegible] ಹಿಂಡಿಯನ್ನು [illegible] ದನಗಳ [illegible] ಈ ಹಿಂಡಿಯನ್ನು [illegible] ಗೊಬ್ಬರವಾಗುವದು.

[ಅತ್ತಲಾಗಿ [illegible] ಹತ್ತಿಯನ್ನು [illegible] ಅದನ್ನು [illegible] ಉಪಯೋಗ [illegible] ಇದರ [illegible] ಈ [illegible] ಜನಗಳಿಗೆ [illegible] ಯಂತ್ರಗಳಿಗೆ [illegible] ಅದರಿಂದ [illegible] ಕಾಗದವನ್ನು [illegible] ಯಂತ್ರಗಳಿಗೆ [illegible] ದನಗಳಿಗೆ [illegible] ದನಗಳಿಗೆ [illegible] ಆ [illegible] ಜನಗಳು [illegible] ಗೊಬ್ಬರವಾಗಿ [illegible]

[ಮುಂದಿನ ಪ್ರಕಾರ ಹತ್ತಿ [illegible] ಯಂತ್ರಗಳಿಗೆ [illegible] ನಮ್ಮ [illegible] ಅದನ್ನು [illegible] ಗೆ [illegible]]

## ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆಸೇರಿ ತಿಂಗಳು ಕಳ್ಳಿನ ಮೀಟಿಂಗ್ ನಡಿಸಿದರು. ಪ್ರೆಸಿಡೆಂಟರು ಬಾರದಿದ್ದುದರಿಂದ ವೈಸ್ ಪ್ರೆಸಿಡೆಂಟರೇ ಆ ದಿನದ ಕಾರ್ಯಗಳನ್ನು ನಡಿಸಿದರು. ಪ್ರಾರಂಭದಲ್ಲಿ ಕಳೆದ ಫೆಬ್ರವರಿ ತಿಂಗಳ ಮ್ಯುನಿಸಿಪಲ್ ಜಮಾ ಖರ್ಚು ಮುಂತಾದ ಲೆಕ್ಕಗಳು ಓದಲಾದವು. ರೂ. ೧೧,೩೪೮—೧—೩ಪೈ ಜಮಾ, ರೂ. ೮,೯೬೪—೯—೯ಪೈ ಖರ್ಚು, ಜನನ ೧೨೬, ಮರಣ ೨೨೪; ಇನ್ನೂ ೩೬,೦೦೦ ರೂಪಾಯಿ ಮೊಹತರ್ಫಾ ಕಂದಾಯಗಳು ಬಾಕಿ ಉಳಿದಿವೆ ಎಂಬದಾಗಿ ತಿಳಿದು ಬಂತು.

ಬಲಪುರಿ, ಈದ್ಗಾ ಬಡಾವಣೆಗಳಲ್ಲಿ ಮನೆ ಕಟ್ಟಿಕೊಳ್ಳುವವರಿಗೆ ಕೊಟ್ಟಿರುವ ಅಡ್ವಾನ್ಸು ಮುಂತಾದ್ದನ್ನು ವಸೂಲ್ಮಾಡುವದಕ್ಕೆ ಇಬ್ಬರು ಸಬ್ ಓವರ್ಸಿಯರುಗಳು ನೇಮಕವಾಗಿದ್ದಾರೆ. ಇವರಿಗೆ ವಸೂಲಿ ಕೆಲಸ ೮—೧೦ ದಿನ ಮಾತ್ರ ಪ್ರತಿ ತಿಂಗಳಲ್ಲೂ ಇರುವದೆಂತಲೂ, ಉಳಿದ ದಿನಗಳಲ್ಲಿ ಅವರನ್ನು ಬವನ ಮೊಹತರ್ಫಾ ವಸೂಲಿ ಕೆಲಸಕ್ಕೆ ಕುಮುಕು ಕೊಡಬೇಕೆಂತಲೂ ಮೆಂಬರುಗಳು ಸೂಚಿಸಿದ ಪ್ರಕಾರ ತೀರ್ಮಾನವಾಯಿತು.

ಹೆಲ್ತ್ ಆಫಿಸರು ೮ ಮಂದಿ ನೌಕರರನ್ನು ನೇಮಿಸಿಕೊಂಡು ಅವರಿಂದ ಚರಂಡಿಗಳ ಮಣ್ಣು ಮುಂತಾದ್ದನ್ನು ತೆಗಸುತ್ತಾ ಇದ್ದಾರೆಂತಲೂ, ಇದಕ್ಕಾಗಿ ಅವರಿಗೆ ಮಾಸೆಯಾನಾ ೩೨ ರೂಪಾಯಿ ಸಂಬಳ ಸಲ್ಲುತ್ತಿದೆ ಎಂತಲೂ ತಿಳಿದು ಬಂತು. ಮೊಹಲೆಗಳಲ್ಲಿ ಕಸವ ಗುಡಿಸುವ ಕೆಲಸಕ್ಕೆ ನೇಮಕವಾಗಿರುವ ಸಿಬ್ಬಂದಿಯವರೇ ಮೊದಲು ಈ ಕೆಲಸಗಳನ್ನೂ ಮಾಡುತ್ತಿದ್ದರಾದಕಾರಣ ಈಗ ಹೊಸದಾಗಿ ೮ ಮಂದಿಯನ್ನು ಯಾಕೆ ನೇಮಿಸಿಕೊಳ್ಳಬೇಕೆಂದು ಮೆಂಬರುಗಳು ಆಕ್ಷೇಪಣೆ ಮಾಡಿ, ಆ ಸಿಬ್ಬಂದಿಯನ್ನು ವಜಾಮಾಡತಕ್ಕದ್ದೆಂದು ತೀರ್ಮಾನ ಮಾಡಿದರು.

ಹೆಲ್ತ್ ಆಫಿಸರು ವಾಸಮಾಡುವ ಮನೆಯಲ್ಲಿ ಸರಿಯಾದ ಅನುಕೂಲವಿಲ್ಲವೆಂದು ಅವರು ಪ್ರೆಸಿಡೆಂಟರಿಗೆ ಬರೆದದ್ದಕ್ಕಾಗಿ, ಮಾಜಿ ಪ್ರೆಸಿಡೆಂಟ್ ಮ॥ ರಾಮಾನುಜಯ್ಯಂಗಾರ್ಯರು ವೈಸ್ ಪ್ರೆಸಿಡೆಂಟರಿಗೆ ನಲ್ಲಿ ಇಡಿಸಿಕೊಡಬೇಕೆಂದು ಬರೆದು ಆಳಿಸಿದ ಮೇರೆಗೂ ಅವರಂತೆ ವೈಸ್ ಪ್ರೆಸಿಡೆಂಟರು ಹೆಲ್ತ್ ಆಫಿಸರ ಮನೆಗೆ ಮ್ಯುನಿಸಿಪಲ್ ಖರ್ಚಿನಿಂದ ನಲ್ಲಿ ಹಾಕಿಸಿಕೊಟ್ಟಿದ್ದಾಗ್ಯೂ, ಇದಕ್ಕೆ ಖರ್ಚಾದ ೫೦ ರೂಪಾಯಿ ಬೋರ್ಡಿನವರು ಸ್ಯಾಂಕ್ಷನ್ ಮಾಡಬೇಕೆಂತಲೂ ತಿಳಿದು ಬಂತು. ಮೆಂಬರುಗಳು ಈ ಖರ್ಚನ್ನು ಒಪ್ಪದೆ, ನಲ್ಲಿ ಇಟ್ಟುಕೊಡುವದಕ್ಕೆ ಖರ್ಚಾದ ಹಣವನ್ನು ಹೆಲ್ತ್ ಆಫಿಸರಿಂದ ವಸೂಲ್ಮಾಡಬೇಕೆಂಬದಾಗಿ ತೀರ್ಮಾನ ಮಾಡಿದಾರೆ.

ಇಟ್ಟಿಗೆಗೂಡಿನ ಸ್ಕೂಲ್ ಹೆಡ್‌ಮಾಸ್ಟರೂ, ಹೆಲ್ತ್ ಆಫಿಸರೂ, ಮ್ಯುನಿಸಿಪಲ್ ಸ್ಕೂಲ್ ಇನ್‌ಸ್ಪೆಕ್ಟರೂ ತಿಂಗಳು ತಿಂಗಳಿಗೆ ಕಳುಹಿಸುತ್ತಿದ್ದ ತಮ್ಮ ಕೆಲಸದ ರಿಪೋರ್ಟನ್ನು ಬೋರ್ಡಿಗೆ ಕಳುಹಿಸಿಕೊಡುವಂತೆ ಅವರಿಗೆ ತಿಳಿಸಬೇಕೆಂಬದಾಗಿ ಬೋರ್ಡಿನಲ್ಲಿ ತೀರ್ಮಾನವಾಗಿದೆ

ಪಟ್ಟಣದ ಕಚರಾ ಗುಡಿಸುವ ಜವಾನರಿಗೆ (ಕನ್‌ಸರ್ವೆನ್ಸಿ ಸಿಬ್ಬಂದಿಗೆ) ತಿಂಗಳು ತಿಂಗಳಿಗೆ ಸಂಬಳ ಬಟವಾಡೆ ಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಹೆಲ್ತ್ ಆಫಿಸರು ಎದುರಿಗಿದ್ದು ಬಟವಾಡೆ ಮಾಡಿಸುವದಿಲ್ಲವೆಂತಲೂ, ಇದರಿಂದ ನಾನಾ ವಿಧವಾದ ಪುಕಾರಿಗೆ ಆಸ್ಪದವಾಗಿದೆ ಎಂತಲೂ ಕೆಲವು ಮೆಂಬರುಗಳು ಸೂಚಿಸಿದರು. ಇನ್ನು ಮುಂದೆ ಹೆಲ್ತ್ ಆಫಿಸರು ಸರಾಫನನ್ನು ಎದುರಿಗಿಟ್ಟುಕೊಂಡೇ ಬಟವಾಡೆ ಮಾಡಿಸಬೇಕೆಂದು ಅವರಿಗೆ ತಿಳಿಸುವಂತೆ ಬೋರ್ಡಿನವರು ತೀರ್ಮಾನ ಮಾಡಿದಾರೆ.

೨. ಪಟ್ಟಣದಲ್ಲಿ ಜನರು ಹೊಸದಾಗಿ ಮನೆ ಕಟ್ಟುವ ಸಂದರ್ಭದಲ್ಲಿ ಅಂಥವರಿಗೆ ಲೈಸೆನ್ಸು ಕೊಡುವ ವಿಚಾರವನ್ನು ಹೆಲ್ತ್ ಆಫಿಸರು ನೋಡಿಕೊಳ್ಳಬೇಕೆಂತಲೂ, ಇರತಕ್ಕ ಮನೆಗಳಿಗೆ ಸಿಥಿಲವಾದ ಭಾಗಗಳನ್ನು ರಿಪೇರಿ ಮಾಡಿಸಿಕೊಳ್ಳುವದಕ್ಕೆ ಲೈಸೆನ್ಸು ಕೊಡಬೇಕಾದರೆ ಇದನ್ನು ಹೆಲ್ತ್ ಆಫೀಸರಿಗೆ ತಿಳಿಸಬೇಕಾದದ್ದಿಲ್ಲವೆಂತಲೂ, ಆಯಾ ಮೊಹಲಾ ಕಮಿಷನರಿಗೇನೇ ವಹಿಸಬೇಕೆಂತಲೂ ಮ॥ ಮಾದಪ್ಪನವರು ಸೂಚಿಸಿದ್ದನ್ನು ಮೆಂಬರುಗಳೆಲ್ಲಾ ಒಪ್ಪಿ, ಅದರಂತೆ ಗೊತ್ತು ಮಾಡಿದ್ದಾರೆ

೩. ಸಂತೇ ಪೇಟೆಯಲ್ಲಿರುವ ಗಳುವಿನ ಅಂಗಡಿ ಮಾದಪ್ಪನವರಿಗೆ ಸೇರಿದ ಖಾಲಿ ನಿವೇಶನದಲ್ಲಿ ಅವರು ಅಂಗಡಿ ಮಳಿಗೆಗಳನ್ನು ಕಟ್ಟಿಕೊಳ್ಳಬಹುದೆಂದು ಮೊದಲು ಮ್ಯುನಿಸಿಪಾಲಿಟಿಯವರು ಅವರಿಗೆ ಲೈಸೆನ್ಸು ಕೊಟ್ಟಿದ್ದರು. ಹೆಲ್ತ್ ಆಫಿಸರು—ಅವರಿಗೆ ಲೈಸೆನ್ಸು ಕೊಡಕೂಡದೆಂತಲೂ, ಕಟ್ಟಿದರೆ ಪ್ಲೇಗ್ ಉಪದ್ರ ಹೆಚ್ಚುವದಕ್ಕೆ ಅವಕಾಶವಾಗುತ್ತೆಂತಲೂ, ಅಲ್ಲಿ ಒಂದು ದೊಡ್ಡ ರಸ್ತೆ ಹಾಕುವದು ಒಳ್ಳೇದೆಂತಲೂ, ಕಟ್ಟಿದ ಮೇಲೆ ರಸ್ತೆ ಹಾಕುವದಕ್ಕೆ ಮ್ಯುನಿಸಿಪಾಲಿಟಿಗೆ ತುಂಬಾ ಹಣ ಖರ್ಚಾದೀತೆಂತಲೂ ಅಭಿಪ್ರಾಯಪಟ್ಟರು. ಬೋರ್ಡಿನಲ್ಲಿ ಈ ವಿಷಯ ಮತ್ತೆ ಚರ್ಚೆ ಆಗಿ ಮಾದಪ್ಪನವರಿಗೆ ಕಟ್ಟುವದಕ್ಕೆ ಲೈಸೆನ್ಸು ಕೊಡಬೇಕೆಂದು ತೀರ್ಮಾನವಾಯಿತು. ಆಚೆಗೆ ಗೌವರ್ನ್‌ಮೆಂಟಿನವರು ಬೋರ್ಡಿನವರ ತೀರ್ಮಾನವನ್ನೂ ಹೆಲ್ತ್ ಆಫೀಸರು ಪಟ್ಟಿರುವ ಅಭಿಪ್ರಾಯವನ್ನೂ ನೋಡಿ,—ಹೆಲ್ತ್ ಆಫೀಸರು ಬೇಡವೆಂದು ಹೇಳಿದ್ದರೂ ಬೋರ್ಡಿನವರು ಮಾದಪ್ಪನವರಿಗೆ ಲೈಸೆನ್ಸು ಯಾಕೆ ಕೊಟ್ಟರು? ಇದಕ್ಕೆ ಕಾರಣಗಳೇನೆಂದು ಬೋರ್ಡಿಗೆ ಬರೆದು ಕೇಳಿದರು. ಈ ವಿಷಯವು ಮೊನ್ನೆ ಶನಿವಾರ ಬೋರ್ಡಿನಲ್ಲಿ ಮತ್ತೆ ಚರ್ಚೆಯಾಯಿತು. ಬೋರ್ಡಿನವರು ಗೌವರ್ನ್‌ಮೆಂಟಿಗೆ ತಿಳಿಸಬೇಕೆಂದು ತೀರ್ಮಾನಿಸಿರುವ ನಾಲ್ಕು ಮುಖ್ಯ ಅಂಶಗಳೇನೆಂದರೆ —(೧) ರಿವ ಮಿಟುದಾರ್ ಮ॥ ಕೃಷ್ಣರಾಯರ ಮನೆಗೂ ಮಾದಪ್ಪನವರ ಖಾಲೀ ನಿವೇಶನಕ್ಕೂ ನಡುವೆ ಇರುವ ಸಣ್ಣಗಲಿಯು ಮಾದಪ್ಪನವರಿಗೇ ಸೇರಿದ್ದಾಗಿದೆ. ಮಾದಪ್ಪನವರೇ ಮ॥ ಕೃಷ್ಣರಾಯರಿಗೆ ಮೇಲ್ಗಡೆ ಕಿಟಿಕಿ ಇಟ್ಟುಕೊಳ್ಳುವಂತೆ ಒಪ್ಪಿ ಅವಕಾಶ ಕೊಟ್ಟಿದ್ದಾರೆ (೨) ಅಲ್ಲಿ ದೊಡ್ಡ ರಸ್ತೆ ಹಾಕಬೇಕಾದ ಪ್ರಮೇಯವೇನೂ ಬೀಳಲಾರದು. ರಸ್ತೆ ಹಾಕಿದ್ದರೂ ಅದರಿಂದ ಮ॥ ಕೃಷ್ಣರಾಯರೊಬ್ಬರಿಗಲ್ಲದೆ ಇನ್ಯಾರಿಗೂ ಪ್ರಯೋಜನ ಆಗುವದಿಲ್ಲ. ಆಚಾ ಬಾಜೂ ಇತರರ ಮನೆಗಳ್ಯಾವೂ ಇಲ್ಲ. (೩) ಮಾದಪ್ಪನವರು ಕಟ್ಟುವ ಅಂಗಡಿಯಲ್ಲಿ ಧಾನ್ಯವನ್ನು ತುಂಬಿ ವ್ಯಾಪಾರ ಮಾಡುತ್ತಾರೆ ಧಾನ್ಯ ತುಂಬಿದರೆ ಪ್ಲೇಗ್ ಹೆಚ್ಚಲು ಅವಕಾಶವಾಗಬಹುದು. ಅಲ್ಲಿರುವದು ಮಾದಪ್ಪನವರ ಒಂದೇ ಅಂಗಡಿಯಲ್ಲ. ರಸ್ತೆಯ ಉದ್ದಕ್ಕೂ ಎರಡು ಪಾರ್ಶ್ವಗಳಲ್ಲೂ ಧಾನ್ಯದ ಅಂಗಡಿಗಳಿರುತ್ತವೆ. ಪಕ್ಕದಲ್ಲಿ ವಾಸಮಾಡುವ ಮ॥ ಕೃಷ್ಣರಾಯರು ಕೂಡ ಅಂಗಡಿಗಳನ್ನು ಮಾಡಿ ಬಾಡಿಗೆಗೆ ಕೊಟ್ಟಿದ್ದಾರೆ. ಇವುಗಳಲ್ಲಿ ಬೇಕಾದಷ್ಟು ದವಸ ಧಾನ್ಯ ತುಂಬೇ ಇರುತ್ತೆ. (೪) ಪ್ಲೇಗ್ ಉಪದ್ರವನ್ನಿಟ್ಟುಕೊಂಡು ಮಾದಪ್ಪನವರೊಬ್ಬರಿಗೆ ಮಾತ್ರ ಅಂಗಡಿ ಕಟ್ಟಕೂಡದೆಂದು ಅಡ್ಡಿ ಮಾಡುವದು ಸಮಂಜಸವಾಗಿರಲಾರದು. ಈ ಕಾರಣಗಳಿಗೋಸ್ಕರ ಲೈಸೆನ್ಸು ಕೊಟ್ಟಿದ್ದೇವೆ ಎಂಬುವದೇ

೪ ರಾಜಧಾನಿಯ ಸಾಯರು (ಅಕ್ಟ್ರಾಯಿ) ಆಫೀಸು ಲಾಗಾಯತಿನಿಂದಲೂ ಕನ್ನಾಣಿ ದರ್ವಾಜಾ ಎದುರಿಗೆ ಇದೆಯಷ್ಟೆ. ಅಲ್ಲಿಗೆ ಮ್ಯುನಿಸಿಪಲ್ ಅಧಿಕಾರಿಗಳಾಗಲಿ ಕಮಿಷನರುಗಳಾಗಲಿ ಆಗಾಗ್ಗೆ ಹೋಗಿ ಮೇಲ್ವಿಚಾರಣೆ ನೋಡಿಕೊಳ್ಳುವದು ಕಷ್ಟವಾಗಿದೆ ಎಂತಲೂ, ವರುಷಕ್ಕೆ ೭೫ ರೂಪಾಯಿತನಕ ಹುಟ್ಟುವಳಿ ಆಗುವ ಈ ಸಾಯರ್ ಆಫೀಸನ್ನು ಮ್ಯುನಿಸಿಪಲ್ ಆಫೀಸಿನ ಬಳಿ ಮಾಡಿದರೆ ಎಷ್ಟೋ ಒಳ್ಳೇದೆಂತಲೂ, ಸದ್ಯ ದೇವರಾಜ ಮಾರ್ಕೆಟ್ಟಿನ ಕೆಲವು ಮಳಿಗೆಗಳಲ್ಲಿ ಸಾಯರ್ ಆಫೀಸು ಮಾಡಿ, ಮುಂದೆ ಇರುವ ಮೈದಾನದಲ್ಲಿ ಗಾಡಿ ಮುಂತಾದ್ದು ಬಿಟ್ಟುಕೊಳ್ಳುವಂತೆ ಆಗಬೇಕೆಂತಲೂ ಮ॥ ಸುಬ್ಬಣ್ಣನವರು ಸೂಚಿಸಿದರು. ಈ ವಿಷಯವು ಸ್ವಲ್ಪ ಹೊತ್ತು ಚರ್ಚೆ ಆಯಿತು. ಒಬ್ಬಿಬ್ಬರು ವಿನಾ ಉಳಿದವರೆಲ್ಲಾ ಸಾಯರಾಫೀಸನ್ನು ಮಾರ್ಕೆಟ್ಟಿನ ಒಂದು ಭಾಗದಲ್ಲೇ ಮಾಡಬೇಕೆಂದು ಒಪ್ಪಿ ತೀರ್ಮಾನ ಮಾಡಿದರು.

೫ ರಾಜಧಾನಿಯಲ್ಲಿರುವ ಬಾಡಿಗೆ ಗಾಡಿಯವರೂ ಇತರರೂ ಮೂಗು ಪ್ರಾಣಿಗಳನ್ನು ಬಹಳ ಹಿಂಸೆಪಡಿಸುತ್ತಾರಾದಕಾರಣ ಅಂಥವರನ್ನು ಹಿಡಿದು ಶಿಕ್ಷಿಸುವದಕ್ಕೆ ಸಹಾಯವಾದ ಕಾನೂನನ್ನು ರಾಜಧಾನಿಯಲ್ಲಿ ಜಾರಿಗೆ ತರಬೇಕೆಂಬದಾಗಿ ಮ॥ ಗಳಾದ ಮಾದಪ್ಪನವರು ಅನಂತರಾಜೈಯನವರು, ಅಬ್ದುಲ್ ಕರೀಂ ಸಾಹೇಬರು, ಹಸನಲ್ಲಿ ಬೇಗ್ ಯವರು ಸೂಚಿಸಿದರು. ಈ ಕಾನೂನು ಎಲ್ಲಾ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲೂ, ಬೆಂಗಳೂರು ಮೈಸೂರು ಮ್ಯುನಿಸಿಪಾಲಿಟಿಗಳಲ್ಲೂ ಜಾರಿಯಲ್ಲಿ ಇಲ್ಲದೇ ಇದೆ ಎಂತಲೂ, ಮ್ಯುನಿಸಿಪಾಲಿಟಿಯವರು ಆ ವಿಷಯದಲ್ಲಿ ಏನೂ ಮಾಡಲಾರರೆಂತಲೂ ವೈಸ್ ಪ್ರೆಸಿಡೆಂಟರು ತಿಳಿಸಿದರು. ಕೊನೆಗೆ ಈ ಸಂಗತಿಯು ಜಿಲ್ಲಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ತಿಳಿಸಿ, ಅವರಿಂದ ಪೋಲೀಸಿನವರಿಗೆ ಹುಕುಂ ಆಗುವಂತೆ ಮಾಡಿಸಬೇಕೆಂದು ಮೆಂಬರುಗಳು ತೀರ್ಮಾನಿಸಿರುತ್ತಾರೆ

೬. ರಾಜಧಾನಿಯಲ್ಲಿ ಮ್ಯುನಿಸಿಪಾಲಿಟಿಯವರು ಒಡೆಸಿಹಾಕಿಸಿದ ಕೆಲವು ಮನೆಗಳ ಮಾಲೀಕರಿಗೆ ಆಯಾ ಮನೆಗಳ ಒಳ್ಳೇ ಸಾಮಾನ್ ಬಿಕರಿ ಹಣದಲ್ಲಿ ಉಳಿವಾಸಿಯನ್ನು ಮನೆಗಳ ಮಾಲೀಕರಿಗೆ ಕೊಡಿಸಬೇಕೆಂದು ವೈಸ್ ಪ್ರೆಸಿಡೆಂಟರು ಸೂಚಿಸಿದ್ದನ್ನು ಬೋರ್ಡಿನವರು ಒಪ್ಪಿ ಹಾಗೆ ಮಾಡಬಹುದೆಂದು ಗೊತ್ತು ಮಾಡಿದರು.

೭. ಚಾಮರಾಜ ಪೇಟೆಯಲ್ಲಿ ಮ॥ ಎಚ್. ಲಿಂಗರಾಜೇ ಅರಸಿನವರು ಒಂದು ಬಂಗಲೆಯನ್ನು ಕಟ್ಟಿದಾರೆ ಅವರ ಪೂರ್ವಭಾಗದಲ್ಲಿರುವ ಮ್ಯುನಿಸಿಪಲ್ ಜಮೀನನ್ನು ತಮಗೆ ಕೊಡಿಸಬೇಕೆಂತಲೂ, ಅದರ ಮೇಲೆ ತಾವು ಕಟ್ಟಡ ಕಟ್ಟದೆ ತಮ್ಮ ಬಂಗಲೆಯೊಳಕ್ಕೆ ಸೇರಿಸಿಕೊಳ್ಳುತ್ತೇವೆಂತಲೂ, ಜಮೀನಿಗೆ ಕ್ರಯವನ್ನೂ ಕೊಡುತ್ತೇವೆಂತಲೂ ಗೌವರ್ನ್‌ಮೆಂಟಿಗೆ ಬರೆದುಕೊಂಡಿದ್ದರು ಗೌವರ್ನ್‌ಮೆಂಟಿನವರು—ಆ ಜಮೀನನ್ನು ಮ॥ ಲಿಂಗರಾಜೇ ಅರಸಿನವರಿಗೆ ಕೊಡಬಹುದೇ ಹ್ಯಾಗೆ ಎಂಬದಾಗಿ ಬೋರ್ಡಿಗೆ ಬರೆದು ಕೇಳಿದರು. ಈ ವಿಷಯವನ್ನು ಮೆಂಬರುಗಳು ಬಹಳ ಹೊತ್ತು ಚರ್ಚೆಮಾಡಿ, ಪ್ಲಾನ್ ತರಿಸಿ ಜಮೀನಿರುವ ಭಾಗವನ್ನು ನೋಡಿ, ಅದನ್ನು ಮ॥ ಅರಸಿನವರಿಗೆ ಕೊಡಬಹುದೆಂತಲೂ, ಅವರಿಂದ ಸರಿಯಾದ ಕ್ರಯವನ್ನು ತೆಗೆದುಕೊಳ್ಳಬೇಕೆಂತಲೂ ತೀರ್ಮಾನ ಮಾಡಿರುವರು.

೮ ಕೃಷ್ಣರಾಜ ಮೊಹಲ್ಲಾ ಸೊಪ್ಪಿನಕೊಳದ ಬೀದಿಯಲ್ಲಿ ಮ॥ ನರಸಿಂಹಸ್ವಾಮಿಯವರು ತಮ್ಮ ತಂದೆಯಾದ ಲೇಟ್ ಮ॥ ಕಾಳಿಂಗಶೆಟ್ಟರ ಹೆಸರಿನಮೇಲೆ ಒಂದು ನೀರಿನ ನಲ್ಲಿಯನ್ನಿಡಿಸಿ ತೊಟ್ಟಿ ಕಟ್ಟಿಸುವದಾಗಿಯೂ, ಅದನ್ನು ಪ್ರಜೆಗಳ ಉಪಯೋಗಕ್ಕೆ ಬಿಟ್ಟುಕೊಡುವದಾಗಿಯೂ ಬೋರ್ಡಿಗೆ ಬರೆದುಕೊಂಡರು. ಬೋರ್ಡಿನವರು ಅದಕ್ಕೆ ಆಗಬಹುದೆಂದು ಸಮ್ಮತಿಹಾಕಿ, ಇಂಥಾ ಧರ್ಮಕಾರ್ಯ ಮಾಡಿಸುವ ವಿಷಯದಲ್ಲಿ ತಾವೆಲ್ಲಾ ಮ॥ ನರಸಿಂಹಸ್ವಾಮಿಯವರನ್ನು ವಂದಿಸುತ್ತೇವೆಂದು ಅವರಿಗೆ ತಿಳಿಸುವಂತೆ ತೀರ್ಮಾನಮಾಡಿದ್ದಾರೆ.

೯ ರಸ್ತೆ ರಿಪೇರಿಗೂ, ಕಟ್ಟಡಗಳನ್ನು ದುರಸ್ತು ಮಾಡಿಸುವದಕ್ಕೂ ವೈಸ್ ಪ್ರೆಸಿಡೆಂಟರು ೫,೦೦೦ ರೂ. ಖರ್ಚುಮಾಡಬಹುದೆಂದು ಮೆಂಬರುಗಳೆಲ್ಲಾ ಒಪ್ಪಿ ಸ್ಯಾಂಕ್ಷನ್ ಮಾಡಿದರು.

## ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಕತ್ತೆಯಲ್ಲಿ ಲೇಟ್ ಸರ್ ಜಾನ್ ಉಡ್‌ಬರ್ನ್ ಯವರ ಪ್ರತಿಮೆಯನ್ನು ಕುದುರೆಯ ಮೇಲೆ ಕೂತಹಾಗೆ ಮಾಡಿ ನಿಲ್ಲಿಸುವರು. ಇದಕ್ಕೆ ವಸೂಲಾಗಿರುವ ಚಂದಾ ಹಣ ಬಹಳವಾಗಿದೆ

ಮಧ್ಯ ಪ್ರಾಂತ್ಯಗಳ ಕ್ಷಾಮ ಪೀಡಿತರ ಸಂಖ್ಯೆಯಲ್ಲಿ ಕಳೆದ ವಾರ ೩,೨೦೦ ಮಂದಿ ಕಡಿಮೆ ಯಾದರು. ಈಗ ಇನ್ನೂ ೨೧,೬೦೦ ಜನರು ರಿಲೀಫ್ ಕಾಮಗಾರಿ ಮಾಡುತ್ತಿದ್ದಾರೆ

ಕಲ್ಕತ್ತಾ ಪಟ್ಟಣದಲ್ಲಿ ಇದುವರೆಗೆ ಸೀಮೆ ಎಣ್ಣೆಗೆ ಮ್ಯುನಿಸಿಪಾಲಿಟಿಯವರು ಸುಂಕಾ ಹಾಕಿರಲಿಲ್ಲ. ಈ ಬಾಬಿನಿಂದ ವರುಷಕ್ಕೆ ಒಂದೂವರೆ ಲಕ್ಷ ರೂಪಾಯಿ ಹುಟ್ಟುವಳಿ ಆಗುವದೆಂದು ಅಂದಾಜು ಹಾಕಿದಾರೆ.

ವಿಲಾಯತಿ ಪಾರ್ಲಿಮೆಂಟ್ ಮೆಂಬರಾಗಿದ್ದು ಹಿಂದುಸ್ಥಾನದ ರಾಜಕೀಯ ವಿಷಯವನ್ನು ಕುರಿತು ಸರ್ಕಾರದವರ ಸಂಗಡ ಹೋರಾಡುತ್ತಿದ್ದ ಮೌ॥ ಕೇಯಿನ್ ಯವರು ಕಾಲವಾದರೆಂದು ತಿಳಿಸಲು ವಿಷಾದಿಸುವೆವು.

ಮಧ್ಯ ಪ್ರಾಂತ್ಯಗಳಲ್ಲಿ ಕಾಡು ನಾಯಿಗಳ ಕಾಟವು ದಿನೇ ದಿನೇ ವಿಪರೀತವಾಗುತ್ತಾ ಬಂದಿರುವದನ್ನು ನೋಡಿ ಸರ್ಕಾರದವರು ನಾಯಿ ಕೊಂದು ತಂದವರಿಗೆ ತಲಾ ೧॥ ರೂಪಾಯಿನಂತೆ ಇನಾಮು ಕೊಡುತ್ತೇವೆಂದು ಇಷ್ತಿಹಾರು ಕೊಟ್ಟಿದಾರೆ.

ಪೂನಾ ಪಟ್ಟಣದಲ್ಲಿ ನೌರೋಜಿ ಎಂಬೊಬ್ಬ ೧೭ ವಯಸ್ಸಿನ ಪಾರ್ಸಿ ಹುಡುಗನನ್ನು ಅವನ ತಂದೆಯು ಶಾಲೆಯಲ್ಲಿ ಓದಲಿಲ್ಲವೆಂದು ಹೇಳಿ ದಂಡಿಸಿದನಂತೆ. ಇದಕ್ಕೆ ಆ ಹುಡುಗನು ರೈಲ್ವೇ ಸ್ಟೇಷನ್ ಬಳಿ ಇರುವ ಭಾವಿಯೊಳಕ್ಕೆ ಬಿದ್ದು ಆತ್ಮ ಹತ್ಯ ಮಾಡಿಕೊಂಡನು.

ಕಲ್ಕತ್ತೆಯಲ್ಲಿ ಒಬ್ಬ ಹಿಂದುವು ತನ್ನ ಮಗಳನ್ನು ಮುದುಕನಿಗೆ ಕೊಟ್ಟು ವಿವಾಹ ಮಾಡುವದಾಗಿ ಮಾತು ಕೊಟ್ಟು ಅವನಿಂದ ಹಣ ತೆಗೆದುಕೊಂಡನು. ವಿವಾಹದ ದಿನ ಮಾತು ಮೀರಿ ಆಯಿತು. ಹುಡುಗಿಯ ತಂದೆ ಮುಂತಾದವರಿಗೆ ಮ್ಯಾಜಿಸ್ಟ್ರೇಟರು ಆರು ತಿಂಗಳ ಕಠಿಣ ಸಜಾ ವಿಧಿಸಿದರು.

ಕಲ್ಕತ್ತಾ ಪಟ್ಟಣದಲ್ಲಿರುವ ಶೋಭಾಬಜಾರ್ ರಾಜಾಸಂತತಿಯವರಲ್ಲಿ ಮುಖಂಡರಾಗಿದ್ದ ಮಹಾರಾಜಾ ಸರ್ ನರೇಂದ್ರ ಕೃಷ್ಣದೇವ ಯವರು ಕಳೆದ ವಾರ ಇದ್ದಕ್ಕಿದ್ದ ಹಾಗೇ ಕಾಲಾಧೀನರಾದರೆಂಬ ಸಮಾಚಾರ ಬಂದಿದೆ. ಇವರಿಗೆ ಇಂಡಿಯಾ ಗೌವರ್ನ್‌ಮೆಂಟಿನವರು ಕೆ. ಸಿ. ಐ. ಇ ಎಂಬ ದೊಡ್ಡ ಬಿರುದನ್ನು ದಯಪಾಲಿಸಿದ್ದರು

ಬರೋಡ ಸಂಸ್ಥಾನದ ಮಹಾರಾಜಾ ಸರ್ ಸಯ್ಯಾಜಿರಾವ್ ಗಾಯಕವಾಡ್ ಯವರು ಒಂದೇ ಕಂಬಿಯ ಮೇಲೆ ಹೋಗಿ ಬರುವಂಥಾ ರೈಲ್ ಗಾಡಿಗಳನ್ನು ತಮ್ಮ ಸಂಸ್ಥಾನದ ಕೆಲವು ಊರುಗಳಲ್ಲಿ ಇಡಿಸಬೇಕೆಂದು ಗೊತ್ತು ಮಾಡಿರುತ್ತಾರೆ. ಈ ರೈಲ್ ಗಾಡಿಗಳು ಮೊದಲು ಚಿತಾಲ್‌ನಿಂದ ಅಮ್ರೇಲಿ ನಗರದ ವರೆಗೆ ಹೋಗಿ ಬರುವಂತೆ ಏರ್ಪಾಡಾಗುವದು.

ಲಾಹೋರ್ ನಗರದಲ್ಲಿರುವ ಪುರಾತನ ಕಾಲದ ಮಹಮದೀಯರ ಮಸೀದಿಯನ್ನು ರಿಪೇರಿಮಾಡಿಸುವದಕ್ಕೆ ಇಂಡಿಯಾ ಗೌವರ್ನ್‌ಮೆಂಟಿನಿಂದ ೨೬,೦೦೦ ರೂ. ಸ್ಯಾಂಕ್ಷನ್ ಆಗಿದೆ. ಈ ಮಸೀದಿಗೆ ವೈಸರಾಯಿಯವರು ದಯಮಾಡಿದ್ದಾಗ ಖಾಜಿಗಳು ನಿಂತು ವೇದವನ್ನು ಓದಿಕೇಳುವದಕ್ಕೆ ಅನುಕೂಲಿಸುವಂಥಾ ಎತ್ತರವಾದ ಒಂದು ಮೇಜನ್ನು ಮಾಡಿಸಿ ಇನಾಮಾಗಿ ಕೊಡಿಸಿರುತ್ತಾರೆ.

ಕೊಚ್ಚಿ ಪಟ್ಟಣದಲ್ಲಿ ಹಿಂದಿನ ವಾರ ದೊಡ್ಡ ಬೀದಿಗೆ ಬೆಂಕಿ ಬಿದ್ದು ನಾಲ್ಕಾರು ಭಾರೀ ಮನೆಗಳೂ, ಎರಡು ಸಾಲು ಅಂಗಡಿಗಳೂ, ೫೦ ತೆಂಗಿನ ಮರಗಳೂ, ವಿಪರೀತ ಸಾಮಾನೂ ಎಲ್ಲಾ ಬೂದಿಯಾಯಿತು. ಬೆಂಕಿ ಆರಿಸುವದಕ್ಕೆ ೫ ಪಂಪುಗಳನ್ನು ತಂದಿಟ್ಟು ನೀರು ಹಾಕುತ್ತಿದ್ದರೂ ಜ್ವಾಲೆಗಳು ಬಹಳಹೊತ್ತು ಕಡಿಮೆಯಾಗಲಿಲ್ಲ. ಕೆಲವು ದನಗಳೂ ಬೆಂಕಿಯಲ್ಲಿ ಸಿಕ್ಕಿ ಸುಟ್ಟುಹೋದವು.

ಒಂದಾನೊಂದು ಸಂಸ್ಥಾನದಲ್ಲಿ ಸೋಹನ್ ಲಾಲನೆಂಬವನು ಯುವರಾಜನಾಗಬೇಕೆಂದು ಪ್ರಯತ್ನ ಪಟ್ಟು ಮೊಕದ್ದಮೆ ನಡಿಸಿ ಸೋತು ಹೋದನು. ಈ ಮೊಕದ್ದಮೆಯಲ್ಲಿ ಆಗ್ರಾ ಪಟ್ಟಣದ ಒಬ್ಬ ಬ್ಯಾರಿಸ್ಟರೂ ಒಬ್ಬ ಪ್ಲೀಡರೂ ಅಪಸಾಕ್ಷಿ ನುಡಿದಿರುತ್ತಾರೆಂತಲೂ, ಈಗ ಇವರಿಬ್ಬರ ಮೇಲೂ ಮೊಕದ್ದಮೆ ಮಾಡಬಹುದೆಂದು ಪ್ರಯಾಗದ ಸರ್ಕಸ್ ಜಡ್ಜರು ಸ್ಯಾಂಕ್ಷನ್ ಮಾಡಿದರೆಂತಲೂ ಪ್ರಕಟವಾಗಿದೆ.

ತಿರುಚನಾಪಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರು ಆ ಡಿಸ್ಟ್ರಿಕ್ಟಿನಲ್ಲಿ ಜಮೀನುಗಳ ಕಂದಾಯದ ಹುಟ್ಟುವಳಿ ಮೇಲೆ ರೂಪಾಯಿಗೆ ೩ ಪೈ ಪ್ರಕಾರ ರೈಲ್ವೆ ಸುಂಕವನ್ನು ಎತ್ತಿ ಈ ಹಣವನ್ನು ಕೆಲವು ವರುಷಗಳ ತನಕ ಕೂಡಿಹಾಕುತ್ತಾ ಬರಬೇಕೆಂತಲೂ, ಹಣ ಹೆಚ್ಚಾಗಿ ಕೂಡಿದ ನಂತರ ಅದರಿಂದ ಕೆಲವು ರೈಲ್ವೆ ರಸ್ತೆಗಳನ್ನು ಹಾಕಿಸಬೇಕೆಂತಲೂ ಮದರಾಸ್ ಸರ್ಕಾರದವರು ಅಪ್ಪಣೆ ಕೊಟ್ಟಿದಾರೆ. ಈ ಹುಕುಮು ಇದೇ ಏಪ್ರಿಲ್ ತಿಂಗಳಿಂದ ಜಾರಿಗೆ ಬರುವದು.

ಸಿಲೋನ್ (ಲಂಕಾ) ದ್ವೀಪದಲ್ಲಿ ಗೌವರ್ನರವರು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಒಂದು ಗ್ರಾಮದಲ್ಲಿ ದುಷ್ಟರ್‍ಯಾರೋ ಎಷ್ಟೋ ದೊಡ್ಡ ಕಲ್ಲುಗಳನ್ನು ಎತ್ತಿ ಕಂಬಿಗಳಮೇಲೆ ಹಾಕಿದ್ದರು. ಈಶ್ವರ ದಯದಿಂದ ಅಪಾಯ ಸಂಭವಿಸುವದಕ್ಕೆ ಮೊದಲೇ ಅದನ್ನು ಕಂಡು ಹಿಡಿದರು. ಅಪರಾಧಿಗಳು ಮಾತ್ರ ಸಿಕ್ಕಲಿಲ್ಲ. ಆದ್ದರಿಂದ ಗವರ್ನರವರು ಆ ಗ್ರಾಮಕ್ಕೆ ಕೆಲವು ಮಂದಿ ಪೋಲೀಸಿನವರನ್ನು ನೇಮಕಮಾಡಿ, ಇವರ ಸಂಬಳವನ್ನು ಆ ಗ್ರಾಮಸ್ಥರಿಂದಲೇ ವಸೂಲ್ಮಾಡುವಂತೆ ಹುಕುಂ ಕೊಟ್ಟರು.

---

ಕಳೆದ ತಿಂಗಳು ೧೪ ಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ ೩೯,೯೯೬ ಜನರು ಪ್ಲೇಗ್ ತಗಲಿ ಮೃತಪಟ್ಟರು. ಪ್ರತಿ ಪ್ರಾಂತ್ಯದ ಅಧಿಸಂಖ್ಯೆ ೩,೫೫೪, ಪಂಜಾಬ ೧೯,೧೩೩, ಸಂಯುಕ್ತ ಪ್ರಾಂತ್ಯ ೬,೧೫೫, ಬಂಗಾಳ ೪,೫೭೭, ಮಧ್ಯ ಪ್ರಾಂತ್ಯಗಳು ೧೦೫೫, ಪಟ್ಟಣ ೧,೧೦೫, ಕಲ್ಕತ್ತಾ ೪೧೫, ಹೈದರಾಬಾದ್ ಸಂಸ್ಥಾನ ೪೩೯, ಕಾಶ್ಮೀರ ೪೦೧, ಮದರಾಸು ಅಧಿಸಂಖ್ಯೆ ೭೯೧, ಮೈಸೂರು ಸಂಸ್ಥಾನ ೬೧೨, ರಾಜಪುತಾನಾ ೩— ಈ ಪ್ರಕಾರ ಇರುತ್ತವೆ.

ಮಹಮ್ಮದೀಯ ಮತದಲ್ಲಿ ಶಾಸ್ತ್ರವಿಧಿಗನುಸಾರವಾಗಿ ಯಾರೊಬ್ಬನೂ ನಾಲ್ವರಿಗಿಂತ ಹೆಚ್ಚಾಗಿ ಹೆಂಡಿರನು ಮಾಡಿಕೊಳ್ಳ ಕೂಡದು. ಈ ವಿಷಯವನು ಅಫ್ಘಾನಿಸ್ಥಾನದ ಅಮೀರರು ಹೊಸ ಕಾನೂನು ತನ್ನ ವಿವಾಹಕ್ಕೆ ಸೇರಿದ ಹೆಂಡಿರುಗಳನ್ನೆಲ್ಲಾ ನಾಲ್ವರು ಹೊರತು ಪರಿತ್ಯಾಗ ಮಾಡಿದರೆಂದು ವರ್ತಮಾನ ಬಂದಿದೆ. ಇದಲ್ಲದೆ ತನ್ನ ರಾಜ್ಯದಲ್ಲಿ ಈ ಹೊಸ ವಿಧಿಯನ್ನು ಯಾರಾದರೂ ಮೀರಿ ನಾಲ್ವರಿಗಿಂತ ಹೆಚ್ಚು ಹೆಂಡಿರನ್ನು ಮದುವೆಯಾದರೆ ಅಂಥಾ ಅಪರಾಧಿಗೆ ಶಿಕ್ಷೆ ವಿಧಿಸುವದಾಗಿ ಇಸ್ತಿಹಾರು ಹಾಕಿಸಿರುವರು.

---

ಗುಜ್ರಾನವಾಲಾ, ಗುಜರಾತ್ ನಗರಗಳಲ್ಲಿ ಸರ್ಕಾರದವರು ಇಲಿಗಳ ಕಾಟದಿಂದುಂಟಾಗುವ ವ್ಯಾಧಿಯನ್ನು ಅಡಗಿಸುವದಕ್ಕೆ ಸಹಾಯ ಮಾಡುತ್ತಿದ್ದಾರೆ. ಹಳ್ಳ ಕೊಳ್ಳಗಳಲ್ಲಾ ಮಣ್ಣು ಮುಚ್ಚಿ ಬಿಗಿಸಿದರು, ನೀರು ನಿಂತು ಕೊಳೆಯುವ ಸ್ಥಳಗಳಿಗೆ ದೀಪದೆಣ್ಣೆಯನ್ನು ಸುರಿದು ಸೊಳ್ಳೆಗಳನ್ನು ಕೊಲ್ಲಿಸಿದರು. ಫಿನೈಲ್ ಎಂಬ ದುರ್ವಾಸನೆ ತೆಗೆಯುವ ಕ್ರಿಮಿನಾಶಕರವಾದ ಔಷಧವನ್ನು ನೀರಿಗೆ ಬೆರಸಿ ಹಾಕಿ ದೊಡ್ಡ ದೊಡ್ಡ ಬಟ್ಟಲು ತರಂಗಗಳನ್ನೆಲ್ಲಾ ತೊಳೆಸಿದ್ದಾರೆ. ಇದರಿಂದ ಅನೇಕ ಕೋಟಿ ಸೊಳ್ಳೆಗಳು ನಾಶಹೊಂದಿದವು.

---

ಮುಂಬೈ ದೇಶದ ಸ್ವಾಮಿಕರು ವಿಲಾಯತಿಗೆ ಹೋಗಿ ಸಾಮ್ರಾಜ್ಯ ಚಕ್ರವರ್ತಿಯವರ ಅಂಗರಕ್ಷಕರಾಗಿರತಕ್ಕವರೆಂದು ಇಂಡಿಯಾ ಗೌವರ್ನಮೆಂಟಿನವರು ಚುನಾವಣೆ ಮಾಡಿರುತ್ತಾರೆ—ರಿಸಾಲ್ದಾರ್ ಮೇಜರ್ ಉಂದಾಸಿಂಗ್ (ಹಿಂದು ರಜಪುತ್), ರಿಸಾಲ್ದಾರ್ ಮೇಜರ್ ಲಕ್ಷ್ಮಣ ಪವಾರ್ (ಹಿಂದುಸ್ಥಾನಿನ ಸಲ್ಮಾನ್), ರಿಸಾಲ್ದಾರ್ ಅಹಮದ್ ಖಾನ್ (ಮುಸಲ್ಮಾನ್), ಸುಬೇದಾರ್ ಜಗಮಲ್ ಸಿಂಗ್ (ಜಾತ್ ಸಿಖ್), ಸುಬೇದಾರ್ ಮಹಮದ್ ಶರೀಫ್ (ದಖ್ಖನಿ ಮರಾಠಾ), ಸುಬೇದಾರ್ ಮೌಲ್ವಿ ಮಹಮದ್ ಅಬ್ಬಾಸ್ (ಮುಸಲ್ಮಾನ್).

---

ಲಕ್ನೋ ಪಟ್ಟಣದಲ್ಲಿ ಬಂಗಾಳಾ ಬ್ಯಾಂಕಿನ ದಾಖಲೆಯಿಂದಿರುವದು ಒಬ್ಬ ಜವಾನನು ಆ ಬ್ಯಾಂಕಿಗೆ ಒಂದು ಚೆಕ್ಕು ತಂದುಕೊಟ್ಟು ೧೦,೦೦೦ ರೂಪಾಯಿ ತೆಗೆದುಕೊಂಡು, ಎಣಿಸಿ ಕೊಟ್ಟುಕೊಂಡು ಹೋಗುತ್ತಿರುವಾಗ ಅವನನ್ನು ಯಾರೋ ಸ್ವಲ್ಪ ಹೆದರಿಸಿ ಜೋರಾಗಿ ಮಾತನಾಡಿಸಿದರು. ಅವನು ಅಷ್ಟಕ್ಕೇ ಹೆದರಿ ಹಣವನ್ನು ಬ್ಯಾಂಕಿನಲ್ಲೇ ಬಿಟ್ಟು ಓಡಿಹೋದನು. ಬ್ಯಾಂಕಿನವರು ಅನುಮಾನದ ಮೇಲೆ ಅವನನ್ನು ಹಿಡಿದು ತನಿಖೆ ಮಾಡಿದರು. ಅದೇ ಬ್ಯಾಂಕಿನಲ್ಲಿ ನೌಕರರಾಗಿದ್ದವರಿಬ್ಬರು ದೊಡ್ಡ ಸಾಹುಕಾರನ ರುಜುವಿನಂತೆ ಬರೆದು ಚೆಕ್ಕು ಆ ಜವಾನನ ಮೂಲಕ ಕಳುಹಿಸಿಕೊಟ್ಟದ್ದು ರುಜುವಾತಾಯಿತು. ಜಡ್ಜರು ಅವರಿಬ್ಬರಿಗೂ ೧೦—೫ ವರುಷಗಳ ಕಠಿಣ ಸಜಾ ವಿಧಿಸಿದರು.

---

ಮದರಾಸಿನಲ್ಲಿ ವೀರಾಸಾಮಿ ಮೊದಲಿ ಎಂಬುವನು ತನ್ನ ೧೦ ವರುಷದ ವಯಸ್ಸಿನ ಸಿಂಗಾರವೇಲೂ ಎಂಬ ಮಗನನ್ನು ಬೆತ್ತದಿಂದ ಬಹಳವಾಗಿ ಹೊಡೆದು ಹಗ್ಗಕಟ್ಟಿ ಕೆಡವಿ ಹೊರಟುಹೋದನು. ಸ್ವಲ್ಪ ಹೊತ್ತಿನ ಮೇಲೆ ಆ ಹುಡುಗನು ಸಂಕಟಪಟ್ಟು ತಾಯಿಯನ್ನು ಕೂಗಿ ಸ್ವಲ್ಪ ನೀರು ತರಿಸಿಕೊಂಡು ಕುಡಿದು ಹಾಗೇ ಪ್ರಾಣಬಿಟ್ಟನು. ಆ ಹುಡುಗನ ತಾಯಿ ನಡೆದ ಸಂಗತಿಯನ್ನೆಲ್ಲಾ ಕೋರ್ಟಿನಲ್ಲಿ ವಿವರಿಸಿ ಹೇಳಿದಳು. ಆ ಹುಡುಗನು ಕೆಲವು ನಗಗಳನ್ನೂ ಬಟ್ಟೆಗಳನ್ನೂ ಮನೆಯಿಂದ ಕದ್ದುಕೊಂಡು ಹೋಗಿ ದುರ್ವಿನಿಯೋಗಪಡಿಸಿದ್ದನಂತೆ. ಮ್ಯಾಜಿಸ್ಟ್ರೇಟರು ಆ ಕಟುಕನಾದ ತಂದೆಗೆ ೧೮ ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ. ಇದರಿಂದ ಆ ಹೆಂಗಸು ಮಗನನ್ನು ಕಳೆದುಕೊಂಡದ್ದಲ್ಲದೆ ಗಂಡನನ್ನೂ ಕಳೆದುಕೊಂಡಳು.

---

ದಕ್ಷಿಣ ಆಫ್ರಿಕಕ್ಕೆ ಸೇರಿದ ಕೇಪ್ ಕಾಲನಿಯಲ್ಲಿ ಬಹಳ ನುಣ್ಣಗಿರುವ ಮಣ್ಣಿನಲ್ಲಿ ಇಟ್ಟಿಗೆಗಳನ್ನು ತಯಾರ್ಮಾಡುವರು. ಅಂಥಾ ಇಟ್ಟಿಗೆಗಳಿಗೆ ೧,೦೦೦ ಕ್ಕೆ ೬೦ ರಿಂದ ೭೫ ರೂಪಾಯಿ ವರೆಗೆ ಖರೀದಿಯಾಗುತ್ತಿದೆ. ಇದನ್ನು ನೋಡಿ ವಿಲಾಯತಿಯವರು ಇಟ್ಟಿಗೆ ತಯಾರ್ಮಾಡಿಸಿ ಜಹಜುಗಳ ಮೇಲೆ ಅಲ್ಲಿಗೆ ಕಳುಹಿಸಿ ಬಿಕರಿ ಮಾಡಿಸಿ ಲಾಭ ಸಂಪಾದಿಸಬೇಕೆಂದು ಪ್ರಯತ್ನ ಪಟ್ಟಿರುವರು. ಇತ್ತಲಾಗಿ ಹಿಂದುಸ್ಥಾನದಲ್ಲಿ ಇಟ್ಟಿಗೆ ಮಾಡುವವರಿಗೆ ಲಾಭವೇನೂ ಹೆಚ್ಚಾಗಿ ಸಿಕ್ಕುತ್ತಾ ಇಲ್ಲ. ಮಂಗಳೂರು ಮುಂತಾದ ಕಡೆ ಬಹಳ ಒಳ್ಳೇ ಜೇಡಿ ಮಣ್ಣು ದೊರಕುವದು. ಆ ಪ್ರಾಂತ್ಯದ ಜನರು ಕಂಪನಿ ಮಾಡಿಕೊಂಡು, ಒಳ್ಳೇ ಇಟ್ಟಿಗೆಗಳನ್ನು ಕೊಯಿಸಿ ಸುಡಿಸಿ ಜಹಜುಗಳ ಮೇಲೆ ಕೇಪ್ ಕಾಲನಿಗೆ ಕಳುಹಿಸುತ್ತಾ ಬಂದರೆ ತುಂಬಾ ಲಾಭ ಸಂಪಾದನೆಯಾಗುವದರಲ್ಲಿ ಸಂಶಯವಿಲ್ಲ. ಆ ದೇಶಕ್ಕೆ ಬೇಕಾಗಿರುವ ಇಟ್ಟಿಗೆಗಳು ೯×೪½×೨½ ಅಂಗುಲ ಪ್ರಮಾಣವುಳ್ಳವುಗಳಾಗಿರಬೇಕು.

---

ಮಲಬಾರ್ ಪ್ರಾಂತ್ಯದಲ್ಲಿ ಅರುನಾಳಕುಟ್ಟಿ ಉರುಫ್ ಅಬ್ದುಲ್ ಖಾದರ್ ಎಂಬುವನು ಡಕಾಯಿತಿ ನಡಿಸುವದರಲ್ಲಿ ಪ್ರವೀಣನಾಗಿದ್ದನು. ಅವನನ್ನು ಸರ್ಕಾರದವರು ಹಿಡಿದು ಅವನಿಗೆ ಜೀವಾಂತ್ಯದ ತನಕ ಸಜಾ ಅನುಭವಿಸಬೇಕೆಂದು ಶಿಕ್ಷೆಯನ್ನು ವಿಧಿಸಿದ್ದರು. ಆದರೆ ಇವನು ಹ್ಯಾಗೋ ಜೈಲಿನಿಂದ ತಪ್ಪಿಸಿಕೊಂಡು ಓಡಿಹೋಗಿ ಇಲ್ಲಿಗೆ ೧೧ ವರುಷಗಳಾದವು. ಇದು ವರೆಗೆ ಇವನು ಯಾರಿಗೂ ಸಿಕ್ಕಲಿಲ್ಲ. ಇವನು ಸಂದಿಯಾಲಿನಲ್ಲಿ ಒಂದು ನಿಂತು ಐಶ್ವರ್ಯವಂತನೆನಿಸಿಕೊಂಡು ಪ್ರಜೆಗಳ ಪ್ರೀತಿ ಗೌರವಗಳನ್ನು ಸಂಪಾದಿಸಿದ್ದಲ್ಲದೆ ಆ ಪಟ್ಟಣದ ಮ್ಯುನಿಸಿಪಲ್ ಕಮಿಶನರನಾಗಿಯೂ ಚುನಾಯಿಸಲ್ಪಟ್ಟು ದೊಡ್ಡ ಮನುಷ್ಯನಾಗಿದ್ದನು. ಇವನೂ ಒಬ್ಬ ಪುರಾಧಿಕಾರಿಯಾಗಿ ಮ್ಯುನಿಸಿಪಾಲಿಟಿಯಲ್ಲಿ ಪ್ರಜೆಗಳ ಪಕ್ಷವನ್ನು ಹಿಡಿದು ಹೋರಾಡುತ್ತಾ ಬಂದನು. ಪೋಲೀಸಿನವರು ಹ್ಯಾಗೋ ಇವನ ಫೋಟೋಗ್ರಾಫನ್ನು ಕಂಡು ಕೊಂಡು, ೧೧ ವರುಷಗಳ ಕೆಳಗೆ ಜನ್ಮ ಸಜಾ ವಿಧಿಸಲ್ಪಟ್ಟು ತಲೆ ತಪ್ಪಿಸಿ ಕೊಂಡಿದ್ದ ಮನುಷ್ಯನು ಇವನೇ ಎಂದು ಪಡಿಯಚ್ಚಿನಿಂದ ಗೊತ್ತುಮಾಡಿ, ಅವನನ್ನು ಕಳೆದ ವಾರ ದಸ್ತಗಿರಿ ಮಾಡಿ, ಮದರಾಸಿಗೆ ರವಾನೆ ಮಾಡಿದರು. ಈಚೆಗೆ ಇವನನ್ನು ಅಂಡಮಾನ್ ದ್ವೀಪಕ್ಕೆ ಜಹಜಿನ ಮೇಲೆ ಕಳುಹಿಸುವ ಸಂಭವವಿದೆ. ನಾಚಿಕೆಗೇಡು, ಕಳ್ಳನಾದವನು ಹ್ಯಾಗಾದರೂ ಎಂದಾದರೂ ಸರ್ಕಾರದವರಿಗೆ ಸಿಕ್ಕಿ ಬೀಳುವನೆಂಬುವದಕ್ಕೆ ಇದಕ್ಕಿಂತಲೂ ಬೇರೆ ದೃಷ್ಟಾಂತ ಬೇಕೇ!

---

ಕಳೆದ ೨೪ ನೇ ತಾರೀಖಿನ ದಿನ ಟ್ರಿನಿಡಾಡಿನಿಂದ ಮುರ್ಕ್ ಎಂಬ ಹಡಗು ೬೩೪ ಮಂದಿ ಪ್ರಯಾಣಸ್ಥರನ್ನು ಕೂರಿಸಿಕೊಂಡು ಕಲ್ಕತ್ತೆಗೆ ಬಂದು ತಲಪಿತು. ಅವರೆಲ್ಲಾ ಹಿಂದುಸ್ಥಾನದೀಯರು. ಆ ದ್ವೀಪಕ್ಕೆ ಕೂಲಿನಾಲಿ ಮಾಡಿ ಜೀವಿಸುವದಕ್ಕೆ ಹೋಗಿದ್ದವರು. ಇವರ ಹತ್ತಿರ ನಾಣ್ಯ, ಒಡವೆ, ನೋಟುಗಳು ಒಂದು ವರೆ ಲಕ್ಷ ರೂಪಾಯಿ ನಷ್ಟು ಇದ್ದವು. ಕಳೆದ ೩೦ ವರುಷಗಳಿಂದಲೂ ಹಿಂದುಸ್ಥಾನದ ಜನರು ಟ್ರಿನಿಡಾಡ್, ಮಾರಿಷಸ್, ನಟಾಲ್ ಮುಂತಾದ ಕಡೆಗಳಿಗೆ ಹೋಗಿ ಅಲ್ಲಿ ನಾನಾ ತರದ ಕೆಲಸಗಳನ್ನು ಮಾಡಿ, ದ್ರವ್ಯ ಸಂಪಾದನೆ ಮಾಡಿಕೊಂಡು ಬರುತ್ತಿದ್ದಾರೆ. ಟ್ರಿನಿಡಾಡ್ ದ್ವೀಪಕ್ಕೆ ಹೋಗಿ ಬಂದಿರುವ ಈ ದೇಶದವರು ಇದುವರೆಗೆ ಒಟ್ಟು ೫೮ ಲಕ್ಷ ರೂಪಾಯಿ ವರೆಗೆ ಸಂಪಾದನೆ ಮಾಡಿಕೊಂಡು ಬಂದಿರುತ್ತಾರೆಂದು ಸರ್ಕಾರಿ ಲೆಕ್ಕಗಳಿಂದ ತಿಳಿದು ಬರುವದು. ಅವರು ಅಲ್ಲೇ ಇದ್ದು ಸಂಪಾದನೆ ಮಾಡಿ ತಮ್ಮ ನೆಂಟರಿಷ್ಟರಿಗೆ ಕಳುಹಿದ ಹಣ ಇದರಲ್ಲಿ ಸೇರಿಲ್ಲ. ಇದನ್ನೆಲ್ಲಾ ನೋಡಲಾಗಿ ಹಿಂದುಸ್ಥಾನದ ರೈತನಿಗೆ ಹೊರಗಡೆ ಹೋದಾಗ ಸಂಪಾದನೆ ಮಾಡಿ ಕೊಡುವಷ್ಟು ಬುದ್ಧಿಯೂ ತನ್ನ ಊರಿನಲ್ಲಿ ಇರುವಾಗ ಬರುವದಿಲ್ಲವಲ್ಲಾ ಎಂಬುವದೊಂದೇ ವ್ಯಸನ. ಅವನು ತನ್ನ ಊರಿನಲ್ಲಿ ತನ್ನ ಜನರ ಮಧ್ಯೆ ಇರುವಾಗ್ಯೆ ಹಿರಿಯರಿಂದ ನಡೆದು ಬಂದಿರುವಂತೆ ಕೆಲಸ ಕಾರ್ಯಗಳನ್ನು ಮಾಡಬೇಕಾಗಿರುವದರಿಂದ ಅವನು ಮಿತವರಿತು ಖರ್ಚು ವೆಚ್ಚ ಮಾಡಲಾರನೆಂಬುವದು ಗೊತ್ತಾಯಿತು. ಇತರ ಊರಿಗೆ ಅವನು ಹೋಗಿಬಿಟ್ಟರೆ ತಕ್ಕಮಟ್ಟಿಗೆ ಮಿತಶೀಲನಾಗಿ ಹಣ ಕೂಡಿಡುತ್ತಾ ಬರುವನು. ಕೆಲವು ವರುಷಗಳೊಳಗಾಗಿ ಅತ್ಯಂತ ಬಡವನಾಗಿದ್ದವನು ಕೂಡ ಐಶ್ವರ್ಯವಂತನಾದಾನೆನ್ನುವದಕ್ಕೆ ಸಂಶಯವಿಲ್ಲ.

## ವಿದೇಶ ವರ್ತಮಾನಗಳು.

---

ಆಸ್ಟ್ರೇಲಿಯಾ ದ್ವೀಪಕ್ಕೆ ಹೋಗಿ ಇಳುಕೊಳ್ಳುವ ಪ್ರತಿಒಬ್ಬ ಚೀನೀಯವನೂ ಅಲ್ಲಿನ ಸರ್ಕಾರಕ್ಕೆ ೧೦೦ ರಿಂದ ೫೦೦ ಡಾಲರ್ ತನಕ ತಲೆತೆರಿಗೆ ಪಾವತಿ ಮಾಡಬೇಕೆಂದು ಕಾನೂನು ಆಗುವದರಲ್ಲಿದೆ.

---

ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ ನ್ಯೂ ಸೌತ್ ವೇಲ್ಸಿನಲ್ಲಿ ದುರ್ಭಿಕ್ಷವು ಪ್ರಾಪ್ತವಾಗಿದೆ. ಪ್ರಜೆಗಳು ಹೊಟ್ಟೆಗಿಲ್ಲದೆ ಬಹಳ ಸಂಕಟಪಟ್ಟು ಅಲೆಯುತ್ತಿದ್ದಾರೆ. ಅನೇಕಾನೇಕರು ಆಹಾರವಿಲ್ಲದೆ ಮೃತಪಡುತ್ತಿರುವಂತೆ ಸಮಾಚಾರ ಬಂದಿದೆ.

---

ಇಂಗ್ಲೆಂಡ್ ರಾಜ್ಯದ ಚಕ್ರವರ್ತಿ ಸಾರ್ವಭೌಮರು ನಾಳೆಯ ದಿನ (ಏಪ್ರಿಲ್ ೩ ಕ್ಕೆ) ವಿಲಾಯತಿಯಿಂದ ಪೋರ್ಚುಗಲ್ ರಾಜ್ಯಕ್ಕೆ ಬಂದು ನಾಲ್ಕು ದಿನಗಳ ವರೆಗೆ ಅಲ್ಲಿದ್ದು ಹಿಂತಿರುಗಿ ಪ್ರಯಾಣ ಮಾಡುವರೆಂದು ತಂತೀವರ್ತಮಾನ ಬಂದಿದೆ.

---

ವಿಲಾಯತಿಗೆ ಸೇರಿದ ಸ್ಯಾಲಿಸ್‌ಬರಿ ಎಂಬ ಪಟ್ಟಣದ ಪ್ರಜೆಗಳಿಗೋಸ್ಕರ ಕೋಟ್ಯಾಧೀಶ್ವರನಾದ ಮಿ॥ ಕಾರ್ನೆಗಿಯು ಧರ್ಮಾರ್ಥವಾದ ಪುಸ್ತಕ ಭಂಡಾರವನ್ನು ಏರ್ಪಡಿಸಿಕೊಡುವದಕ್ಕೆ ೬೦ ಸಾವಿರ ರೂಪಾಯಿ ಮಂಜೂರು ಮಾಡಿರುತ್ತಾನೆ.

---

ಹಾಲೆಂಡಿನ ಉತ್ತರಭಾಗದಲ್ಲಿ ಸುಮಾರು ೨೫೦ ಮಂದಿ ಸಮುದ್ರದ ಮೇಲೆ ಹೋಗಿ ಮೀನು ಹಿಡಿಯುತ್ತಾ ಇದ್ದರು. ಆಕಸ್ಮಿಕವಾಗಿ ಮೇಲ್ಭಾಗದಿಂದ ಹಿಮಗಡ್ಡೆ ಕರಗಿ ಅವರನ್ನೆಲ್ಲಾ ಮುಳುಗಿಸಿಬಿಟ್ಟಿತು. ಅವರು ಬದುಕಿ ಬಂದರೆಂಬ ವರ್ತಮಾನ ತಿಳಿಯದೆ ಜನರು ಗಾಬರಿಪಡಲಾರಂಭಿಸಿದ್ದಾರೆ.

ಚೀನಾ ಚಕ್ರವರ್ತಿಯವರ ತಾಯಿಯವರಿಗೆ ಇನ್ನು ಕೆಲವು ದಿನಗಳಲ್ಲಿ ೭೦ ವರುಷ ತುಂಬುವದು. ಆಗ್ಯೆ ಚೀನದಲ್ಲಿ ಬುದ್ಧನ ಪ್ರತಿಮೆಗಳನ್ನು ೧೦೦ ಮಾಡಬೇಕೆಂತಲೂ, ಅದಕ್ಕಾಗಿ ಚಂದಾ ಎತ್ತಬೇಕೆಂತಲೂ ಆಕೆ ಚೀನಾ ದಲ್ಲೆಲ್ಲಾ ಸಾರಿಸಿರುತ್ತಾಳೆ.

---

ಅಮೇರಿಕದ ಭಾರೀ ಕಬ್ಬಿಣದ ಕಂಪನಿಯ ಮ್ಯಾನೇಜರಾದ ಮಿ॥ ಫಿಪ್ಸ್ ಎಂಬಾತನು ದಕ್ಷಿಣ ಆಫ್ರಿಕದಲ್ಲಿ ವ್ಯವಸಾಯದ ಅಭ್ಯುದಯ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ೧೦,೦೦೦ ಪೌಂಡುಗಳನ್ನು ದಾನಮಾಡಿರುತ್ತಾನೆ.

---

ಅಮೇರಿಕ ರಾಜ್ಯದ ಮುಖ್ಯ ನಗರವಾದ ನ್ಯೂಯಾರ್ಕ್ ಪಟ್ಟಣದಲ್ಲಿ ಗ್ರಾಮಸ್ಥರವರೆಲ್ಲಾ ಒಕ್ಕಟ್ಟಾಗಿ ಸಾಗಿಹೋಗುವಂತೆ ದೊಡ್ಡ ಸಣ್ಣ ಬಚ್ಚಲು ತರಂಗಗಳನ್ನು ಕಟ್ಟಿಸಬೇಕೆಂದು ತೀರ್ಮಾನಿಸಿ, ಅದಕ್ಕೆ ೩೦ ಕೋಟಿ ದ್ರವ್ಯವನ್ನು ಸ್ಯಾಂಕ್ಷನ್ ಮಾಡಿದಾರೆ.

---

ಅಮೇರಿಕಕ್ಕೆ ಸೇರಿದ ಚಿಲಿ ರಾಜ್ಯದಲ್ಲಿ ಫರ್ಡಿನಾಂಡ್ ಟೋರೋ ಎಂಬುವವನನ್ನು ಈಗ ಸರ್ಕಾರದವರು ಪನಾಮಾ ಪಟ್ಟಣದಲ್ಲಿ ದಸ್ತಗಿರಿ ಮಾಡಿರುತ್ತಾರೆ. ಅವನು ಸ್ಯಾಂಟಿಯಾಗೋ ನಗರದ ದೊಡ್ಡ ಬ್ಯಾಂಕಿಗೆ ಮೋಸಮಾಡಿ ೨೦ ಲಕ್ಷ ದ್ರವ್ಯವನ್ನು ಅಪಹರಿಸಿದನೆಂದು ತಿಳಿದುಬಂದಿದೆ.

---

ದಕ್ಷಿಣ ಆಫ್ರಿಕಕ್ಕೆ ವಿಲಾಯತಿಯಿಂದ ಸರ್ಕಾರದವರು ಹೆಂಗಸರನ್ನು ಕಳುಹಿಸಿಕೊಡುತ್ತಾರೆ. ಪ್ರತಿಒಬ್ಬ ಹೆಂಗಸಿಗೂ ೭ ಪೌಂಡು ಇನಾಮು ಕೊಟ್ಟು ಕಳುಹಿಸುವರು. ಇದಕ್ಕಾಗಿ ಇನ್ನು ಕೆಲವು ವರುಷಗಳತನಕ ವರುಷಕ್ಕೆ ೧೫,೦೦೦ ಸರ್ಕಾರದವರು ಪೌಂಡಿನಂತೆ ಖರ್ಚುಮಾಡುವದಕ್ಕೆ ಒಪ್ಪಿಕೊಂಡಿದ್ದಾರೆ.

---

ಕಳೆದ ತಿಂಗಳು ಇಟಾಲಿಯಲ್ಲಿ ಪ್ರಚಂಡವಾದ ಸಂಕಟದ ಗಾಳಿಯು ಬೀಸಿದ್ದರಿಂದ ಸುಮಾರು ೭೦೦ ಜನರ ವರೆಗೂ ಕೊಲ್ಲಲ್ಪಟ್ಟರು, ಸಾವಿರಾರು ಕಟ್ಟಡಗಳೂ ಮನೆಗಳೂ ನೆಲಸಮವಾದವು, ೩೦—೪೦ ಹಡಗುಗಳು ಕೊಚ್ಚಿಹೋಗಿ ನಷ್ಟವಾದವು, ಲಕ್ಷಾಂತರ ರೂಪಾಯಿನ ಮಾಲುಗಳು ನಾಶಹೊಂದಿದವು.

---

ಟ್ರಾನ್ಸ್‌ವಾಲಿನ ಮುಖ್ಯ ಪಟ್ಟಣವಾದ ಪ್ರಿಟೋರಿಯಾ ನಗರದ ಪೋಲೀಸಿನವರು ಅಲ್ಲಿರುವ ಹೋಟೆಲುಗಳಲ್ಲೆಲ್ಲಾ ನುಗ್ಗಿ ಒಳಗಿದ್ದ ಜನರನ್ನು ಹಿಡಿದು ಶೋಧನೆ ಮಾಡಿದರು. ೧೦೧ ಮಂದಿಯನ್ನು ದಸ್ತಗಿರಿ ಮಾಡಿದರು. ಈ ಪೈಕಿ ೭೬ ಮಂದಿ ಪರರಾಜ್ಯಗಳವರು. ಇವರಿಗೆಲ್ಲಾ ೭೨ ಗಂಟೆ ಹೊತ್ತಿನೊಳಗಾಗಿ ಟ್ರಾನ್ಸ್‌ವಾಲಿನಿಂದ ಹೊರಕ್ಕೆ ಹೋಗಬೇಕೆಂಬದಾಗಿ ಆಜ್ಞೆ ಮಾಡಿದರು.

---

ಆಫ್ರಿಕ ಖಂಡಕ್ಕೆ ಸೇರಿದ ಅಸ್ಸಿಯೆಲ್ ಬೆರ್ಗ್ ಎಂಬ ಸ್ಥಳದಲ್ಲಿ ಪ್ರಾತಃಕಾಲ ೬ ಗಂಟೆ ಹೊತ್ತಿನಲ್ಲಿ ೫೦೦ ಮಂದಿ ಮೂರಾ ಕೋಮಿನವರು ಒಂಟೆಗಳಮೇಲೆ ಸಾಗಿಹೋಗುತ್ತಿದ್ದ ಸಾಮಾನನ್ನು ಲೂಟಿ ಮಾಡಿದರು. ೨೦೦ ಒಂಟೆಗಳನ್ನು ಸ್ವಾಧೀನ ಪಡಿಸಿಕೊಂಡದ್ದಲ್ಲದೆ ಸವಾರರಲ್ಲಿ ಅನೇಕರನ್ನು ಕೊಂದುಹಾಕಿದರು. ಈಗ ಅವರನ್ನು ಹಿಡಿಸಿ ಶಿಕ್ಷಿಸಬೇಕೆಂದು ಪರರಾಜ್ಯಗಳವರು ಸೈನ್ಯವನ್ನು ಅಲ್ಲಿಗೆ ಕಳುಹಿಸಿದಾರೆ.

---

ಪ್ರಪಂಚಕ್ಕೆಲ್ಲಾ ಮೊದಲನೇ ನಗರವೆನಿಸಿರುವ ಲಂಡನ್ ಪಟ್ಟಣದಲ್ಲಿ ಥೇಮ್ಸ್ ನದಿಯಮೇಲೆ ಒಂದು ಭಾರೀ ಸೇತುವೆಯನ್ನು ಕಟ್ಟಿಸುತ್ತಾ ಇದಾರೆ. ಇದರ ಕಾಮಗಾರಿ ಮೂರು ವರ್ಷಗಳಿಂದ ನಡೆಯುತ್ತಿದೆ. ಇನ್ನು ಕೆಲವು ದಿನಗಳೊಳಗಾಗಿ ಅದು ಪೂರೈಸುವದು. ಅದನ್ನು ಮೇ ತಿಂಗಳ ೧ನೇ ತಾರೀಖಿನ ದಿನ ಚಕ್ರವರ್ತಿ ಸಾರ್ವಭೌಮರು ಚಕ್ರವರ್ತಿನಿಯವರ ಸಂಗಡ ಅಲ್ಲಿಗೆ ಹೋಗಿ ಪ್ರತಿಷ್ಠೆ ಮಾಡುವರಾಗಿದಾರೆ.

---

ಈಜಿಪ್ಟ್ ದೇಶದ ಖೇದೈವ್ ರಾಜನತಂಗಿಯಾದ ನಿಮತ್ ಅಲ್ಲಾ ಹಾನಂ ಎಂಬ ರಾಜಕುಮಾರಿಗೆ ಮದುವೆಯಾಗಿ ಆಕೆ ದಸ್ತಾನಿಯಲ್ಲಿದ್ದಳು. ಆಕೆಯ ಗಂಡನ ಹೆಸರು ಜೋಸೆಫ್ ತುರ್ಕ ಪಾಷಾ ಎಂಬ ರಾಜಕುಮಾರನು. ಮದುವೆಯಾಗಿ ಇಲ್ಲಿಗೆ ೬ ವರುಷಗಳಾದವು. ಈಗ ಆ ಯುವತಿಯು ಜನಾನಿಯಲ್ಲಿರುವದಕ್ಕೆ ಒಪ್ಪದೆ, ಆಸ್ಟ್ರಿಯಾ ರಾಜ್ಯದ ಒಬ್ಬ ದೊಡ್ಡ ಮನುಷ್ಯನ ಸಂಗಡ ಎಲ್ಲಿಗೋ ಹೊರಟುಹೋದಳೆಂತಲೂ, ಆಕೆ ಆ ದೊಡ್ಡ ಮನುಷ್ಯನನ್ನು ಮದುವೆ ಮಾಡಿಕೊಳ್ಳಬೇಕೆಂದಿದ್ದಾಳೆಂತಲೂ ಪ್ರಕಟವಾಗಿದೆ.

---

ದಕ್ಷಿಣ ಆಫ್ರಿಕಕ್ಕೆ ಸೇರಿದ ಜೋಹಾನಸ್ ಬರ್ಗ್‌ನಲ್ಲಿ ಗಾಂಧಸ ಕಚ್ಚೇರಿ ಅಧಿಕಾರಿಗಳಿಬ್ಬರು ೫,೦೦೦ ಪೌಂಡುಗಳನ್ನು ಚೀಲಗಳಲ್ಲಿ ತುಂಬಿ ಬ್ಯಾಂಕಿಗೆ ತೆಗೆದುಕೊಂಡು ಹೋಗುತ್ತಿದ್ದಾಗ ಇಬ್ಬರು ಕಳ್ಳರು ಹೋಗಿ ಅವರ ಕಣ್ಣಿಗೆ ಮೆಣಸಿನಹುಡಿ ಎರಚಿ, ಹಣದ ಚೀಲಗಳನ್ನು ಕಿತ್ತುಕೊಂಡು ಒಬ್ಬ ಕುದುರೆ ಸವಾರನ ವಶಕ್ಕೆ ಕೊಟ್ಟುಕಳುಹಿಸಿದರು. ಆದರೆ ಕುದುರೆ ಸವಾರನು ಆ ಹಣವನ್ನು ಒಯ್ಯಿಸಿಕೊಂಡು ಹೋಗುತ್ತಿದ್ದಾಗ ಕುದುರೆಯು ಎಡವಿ, ಸವಾರನನ್ನೂ ಹಣದ ಚೀಲಗಳನ್ನೂ ಕೆಡವಿಬಿಟ್ಟಿತು. ಕೂಡಲೇ ಬೆನ್ನಟ್ಟಿ ಹೋದ ಸರ್ಕಾರಿ ನೌಕರರಿಗೆ ಅವನು ಸಿಕ್ಕಿಬಿದ್ದನು.

## ರಾವ್ ಬಹದರ್ ಪಂಡಿತ ವೀರೇಶಲಿಂಗಂ ಪಂತುಲುಗಾರು, ಮತ್ತು ಅವರ ಪತ್ನಿಯವರು

ಪಾಟಿಯಾಲಾ ಸಂಸ್ಥಾನದ ಕನ್ಸಲ್ ಸಾಹೇಬರವರು ಕಸೌಲಿ ಪಟ್ಟಣದಲ್ಲಿರುವ ಹೊಸ ಆಸ್ಪತ್ರೆಗೆ ತಮ್ಮ ದೊಡ್ಡ ಬಂಗಲೆಯನ್ನು ಬಿಟ್ಟುಕೊಟ್ಟಿದ್ದಾರೆ ಈ ಆಸ್ಪತ್ರೆಯಲ್ಲಿ ನಾಯಿ ನರಿಗಳಿಂದ ಕಚ್ಚಿಸಿಕೊಂಡುಹೋದ ರೋಗಿಗಳಿಗೆ ಚಿಕಿತ್ಸೆ ಮಾಡುವರು

ಕಾಶೀ ಪಟ್ಟಣದಲ್ಲಿ ಒಬ್ಬ ಯುರೋಪಿಯನ್ ಸ್ತ್ರೀಯು ಕಳೆದ ವಾರ ತೀರಿಹೋದಳು ಆಕೆಯ ಇಷ್ಟಪ್ರಕಾರ ಶವವನ್ನು ಆಕೆಯ ಸಂಬಂಧಿಗಳು ಸುಟ್ಟು ದಹನ ಮಾಡಿ, ಬೂದಿಯನ್ನು ಮಾತ್ರ ತೆಗೆದುಕೊಂಡು ಹೋಗಿ ಒಂದು ಕಡೆ ಹೂತಿಟ್ಟರು

ಪಂಜಾಬ್ ಪ್ರಾಂತ್ಯಕ್ಕೆ ಸೇರಿದ ಶೋರ್ಕೋಟ ನಗರದಲ್ಲಿ ಕಳೆದ ವಾರ ಪಿರಾಚಿವಾರ್ ಬಜಾರ್ ಬೀದಿಗೆ ಬೆಂಕಿ ಬಿದ್ದು ಒಂಭತ್ತು ದೊಡ್ಡ ಅಂಗಡಿಗಳೂ, ಎರಡು ಭಾರೀ ಮನೆಗಳೂ ಸುಟ್ಟು ಹೋದವು. ವರ್ತಕರಿಗೆ ೪೦ ಸಾವಿರ ರೂಪಾಯಿಗಿಂತಲೂ ಹೆಚ್ಚಾಗಿ ನಷ್ಟವಾಯಿತು

ಈ ಸಲ ಲಂಕಾ ದ್ವೀಪದ ಬಳಿ ಸಿಕ್ಕಿದ ಮುತ್ತುಗಳು ಬಹಳ ಬೆಲೆಯುಳ್ಳವುಗಳೆಂದು ತಿಳಿದುಬರುವದು ಒಂದು ಮುತ್ತಿಗೆ

೧,೦೦೦ ರೂಪಾಯಿನಷ್ಟು ಇನ್ನೊಂದಕ್ಕೆ ೪೦೦ ರೂಪಾಯಿನಷ್ಟು ಕ್ಷೋಭನದಾಗಿ ವರ್ತಕರು ಕೇಳಿದಾಗ್ಯೂ ಮಾಲೀಕರು ತಿರಸ್ಕಾರ ಮಾಡಿದರು

---

ಹೈದರಾಬಾದ್ ಸಂಸ್ಥಾನದ ಅನೇಕ ಡಿಸ್ಟ್ರಿಕ್ಟುಗಳಲ್ಲಿ ಹುಲಿ ಚಿರತೆಗಳ ಕಾಟವು ಈಚೆಗೆ ತುಂಬಾ ಹೆಚ್ಚುತ್ತಾ ಬಂದಿದೆ ಎಂತಲೂ ಸರ್ಕಾರದವರು ಬದಲಾಗಿ ಯಾವ ಕಾನೂನಿನ ಪ್ರಕಾರವಿಲ್ಲವೆಂತಲೂ, ಷಿಕಾರಿ ಮಾಡುವವರಿಗೆ ಅನೇಕ ತೊಂದರೆಗಳುಂಟಾಗಿವೆ ಎಂತಲೂ ಪ್ರಕಟವಾಗಿದೆ

---

ತಿರುವಾಂಕೂರು ಸಂಸ್ಥಾನದ ಪ್ರಜಾ ಪ್ರತಿನಿಧಿ ಸಮಾಜವು ಈ ತಿಂಗಳ ೭ ನೇ ತಾರೀಖು ದರ್ಬಾರಿನ ಸಭೆಯಾಗಬೇಕಾಗಿತ್ತು. ಆದ ರೆ ಪ್ರಜಾ ಪ್ರತಿನಿಧಿಗಳ ಪ್ರಾರ್ಥನೆಯನ್ನು ಲಾಲಿಸಿ ಸರ್ಕಾರದವರು ಈ ಸಮಾಜವನ್ನು ಮುಂದಿನ ಮೇ ತಿಂಗಳ ೧ ನೆ ತಾರೀಖಿನ ದಿನ ಸಮಾವೇಶವಾಗಿದಾರೆ

---

ರ ಗ[illegible] ನಗರದಲ್ಲಿ ಹಡಗು ಕಂಪೆನಿಯ ಸ್ ಕರ[illegible] ರ ಶಿವಾಜಿನನೆಂಬವನು ಆ ಕಂಪೆನಿಯ ಹಣದಲ್ಲಿ ೧೪,೦೦೦ ರೂಪಾಯಿ ತಿಂದುಹಾಕಿ ತಲೆ ತಪ್ಪಿಸಿಕೊಂಡು ಹೋಗಿ ಏಳು ವರ್ಷಗಳಾದವು. ಕಳೆದವಾರ ಇವನನ್ನು ಪೋಲಿಸಿನವರು ಕಲ್ಕತ್ತೆಯಲ್ಲಿ ಗುರುತು ಹಿಡಿದು ದಸ್ತಗಿರಿ ಮಾಡಿ, ರಂಗೂನಿಗೆ ಕಳುಹಿಸಿಕೊಟ್ಟರು

---

ಕಳೆದ ವಾರದ ದರ್ಬಾರ್ ನಿಂದ ಹಿಂತಿರುಗಿದವರಿಗೆ ರಾತ್ರಿ ಬರುತ್ತಿದ್ದ ಮೆಯಿಲ್ ಗಾಡಿಗೆ ಒಂದು ಕಿರಬೆಕ್ಕು ಸಿಕ್ಕಿ ಸತ್ತು ಹೋಯಿತು. ಅದು ಆ ಮು ಕಂಬಿಗಳ ಮೇಲೆ ಮಲಗಿತ್ತೋ ಇಲ್ಲವೇ ರೈಲನ್ನು ನೋಡಿ ಬೆದರಿದ್ದು ಹತ್ತಿರದ ಕಂಬಿಗಳ ನಡುವೆ ಬಿದ್ದು ಸತ್ತಿತೋ ಗೊತ್ತಾಗಲಿಲ್ಲ

---

ಪ್ರತಿ ಕಾಲಿಗೆ ಒಂದು ಪ್ರೇತ ಪೀಠ ಸಾವಿ ಬಳಸುವಾಗುವ ಕ್ರೈಸ್ತ ಎಂಬ ಒಬ್ಬರ ಪಿಂಛನನ್ನು ಕೊಂಡು ದೋಣಿಯಲ್ಲಿ ಜನರು ಪ್ರಯೋಗಿಸುತ್ತಿರುವದನ್ನು ನೋಡಿ ನಮ್ಮ ಸಂಸ್ಥಾನದ ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಉಪಯೋಗಕ್ಕಾಗಿ ಇವನ್ನು ತರಿಸಿ ಪರೀಕ್ಷಿಸಿ, ಪ್ರಜೆಗಳಿಗೆ ಉಪಕಾರವಾದೀತೆಂದು ಆಲೋಚಿಸುತ್ತಾರೆ

---

ದೆಹಲಿ ದರ್ಬಾರಿನ ಜ್ಞಾಪಕಾರ್ಥವಾಗಿ ಪರ್ಗಣಿಯ ಸಂಸ್ಥಾನದ ಮಹಾರಾಜರು ಇಂಗ್ಲೀಷ್ ಪ್ರಜೆಗಳಿಗೆ ದಾಬಾಲ್ ವಿಕ್ಟೋರಿಯಾ ಆಸ್ಪತ್ರೆ ಒಂದು ಸ್ಥಾಪಿಸುವದು ಸರ್ಕಾರಕ್ಕೆ ತಿಳಿಸಿರುತ್ತಾರೆ. ಇದಾದರೆ ಚಕ್ರವರ್ತಿನಿಯವರು ಇಂಥಾ ಸರಕಾರದವರನ್ನು ಇಪ್ಪರಿಗೆ ಮಾತ್ರ ಬಹುಮಾನ ಮಾಡುವರೆಂದು ಅದು ತುಂಬಾ ಅಪೂರ್ವ ಸಾಧನೆ ಎಂದೂ ತಿಳಿಯುವದು

---

ಮಾ ರೇಷ್ಮೆವಸ್ತ್ರದ ಚಂದ್ರವತ್ತರೆಂಬ ಬಂಗಾಳಿ ಬಾಬುವು ಕಳೆದ ಮಾಘ ಪಾಲ್ಗುಣದಿಂದ ಬಡೋದೆಯ ಹೋಗಿ ಅಷ್ಟೋವಿಲಾಸ ದೊಡ್ಡ ದರ್ಬಾರ್ ಹಾಲಿನಲ್ಲಿ ಹಿಂದುಸ್ಥಾನದ ಪ್ರಾಚೀನ ಕಾಲದ ತಿಂಗಳುಗಳನ್ನು ಕುರಿತು ಉಪನ್ಯಾಸ ಮಾಡಿದರು. ಈ ಯುಕ್ತ ಸಭಾ ಸಹಾಯಿಕರು ಸಭಾ ಮುಕ್ತರಾಗಿ ಉಪನ್ಯಾಸವನ್ನು ಕೇಳಿ ತುಂಬಾ ಸಂತೋಷಪಟ್ಟರು

---

ದರ್ಭಾಂಗದ ಮಹಾರಾಜಾ ಬಹದೂರ್‌ಯವರ ಚಿಕ್ಕಪ್ಪನವರಾದ ಮಹಾರಾಜ ಕುಮಾರ್ ಬಾಬು ಗಣೇಶ್ವರ ಸಿಂಗರವರು ಕಳೆದ ವಾರ ಕಾಶೀ ಪಟ್ಟಣದಲ್ಲಿ ಕಾಲವಾದರು. ಅನೇಕ ಮಂದಿ ವೈದಿಕರು ಹೋಗಿ ಶವವನ್ನು ದಹನಮಾಡಿ ಬಂದರು. ಗತಿಸಿದವರು ಬಹಳ ಆಚಾರ ಶೀಲರಾಗಿದ್ದರೆಂತಲೂ, ಪಂಡಿತರ ಪ್ರೀತಿಗೌರವಗಳನ್ನು ಸಂಪಾದಿಸಿಕೊಂಡು, ವಿದ್ಯಾವಂತರಿಗೆ ತುಂಬಾ ಪ್ರಿಯರಾಗಿದ್ದರೆಂತಲೂ ತಿಳಿದು ಬಂದಿದೆ.

---

ಅಫ್ಘಾನಿಸ್ಥಾನದ ಅಮೀರರು ಕಾಬೂಲ್ ಪಟ್ಟಣದಲ್ಲಿ ಒಂದು ದೊಡ್ಡ ವಿದ್ಯಾಶಾಲೆಯನ್ನು ಸ್ಥಾಪಿಸಿ, ಲಾಹೋರ್ ಪಟ್ಟಣದ ಮಹಮದಿಯ ಪಾಠಶಾಲೆಯಿಂದ ಕೆಲವುಮಂದಿ ಉಪಾಧ್ಯಾಯರುಗಳನ್ನು ಕಾಬೂಲಿಗೆ ಕಳುಹಿಸಬೇಕೆಂದು ಹೇಳಿಕಳುಹಿಸಿದಾರೆ. ೩ ಮಂದಿ ವಿದ್ಯಾವಂತರಾದ ಮಹಮದಿಯ ಉಪಾಧ್ಯಾಯರುಗಳನ್ನು ಕಳುಹಿಸುವದಾಗಿ ತಿಳಿಸಿದಕ್ಕೆ ಅಮೀರರು ಒಪ್ಪಿಕೊಂಡಿರುವರು. ಇವರನ್ನೆಲ್ಲಾ ಕೂಡಲೇ ಕಾಬೂಲಿಗೆ ಕಳುಹಿಸುತ್ತಾರೆ

---

ಬೊಂಬಾಯಿ ನಗರದಲ್ಲಿ ಭಾಗೀರಥಿ ಎಂಬೊಬ್ಬ ಹೆಂಗಸು ಪ್ಲೇಗ್ ರೋಗಿಗಳನ್ನು ವಾಸಿಮಾಡುವದಾಗಿ ಪ್ರಖ್ಯಾತಿಗೆ ಬಂದಿದ್ದಳು. ಸರ್ಕಾರದವರು ಅವಳನ್ನು ಹಿಡಿದು ದಯಾರ್ಹಳ್ಳಿ ವಹಿಸಿ, ಎಂಗಳ ವರೆಗೆ ಅವಳು ಯಾರಿಗೂ ಚಿಕಿತ್ಸೆ ಮಾಡಕೂಡದೆಂದು ಕಟ್ಟು ಮಾಡಿದರು. ಆ ಹೆಂಗಸು ತನ್ನ ಬಳಿಗೆ ಯಾರೂ ಬಾರದಂತೆ ಸರ್ಕಾರದವರು ಅಡ್ಡಿ ಮಾಡಬೇಕೆಂದು ಡಾಕ್ಟರರನ್ನು ಕೇಳಿಕೊಂಡಳು. ಡಾಕ್ಟರರು ಅದೇ ಪ್ರಕಾರ ಹುಕುಂ ಮಾಡಿದಾರೆ

---

ಮದರಾಸ್ ಗೌವರ್ನರಾದ ಲಾರ್ಡ್ ಆಂಪ್ಟಿಲ್‌ಯವರು ಮೈಸೂರು ಸಂಸ್ಥಾನದಿಂದ ಹಿಂತಿರುಗಿ ಮದರಾಸಿಗೆ ಹೋಗಿ ಒಂದೆರಡು ದಿನ ಮೇಲೆ ದಕ್ಷಿಣದೇಶದ ಕಡೆ ಸಂಚಾರ ಹೊರಟರು. ಮಧುರೆಯಿಂದ ತಾಂಬನ್ನಿಗೆ ಹೋಗಿದ್ದರು. ರಾಮೇಶ್ವರ, ದರ್ಭಶಯನ, ಮಂಟಪ ಮುಂತಾದವುಗಳನ್ನು ನೋಡಿದರು. ರಾಮೇಶ್ವರದೇವಸ್ಥಾನದಲ್ಲಿ ಗೌವರ್ನರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು. ಹಿಂದುಸ್ಥಾನದಿಂದ ಸಿಲೋನ್ ದ್ವೀಪಕ್ಕೆ ರೈಲಿನಮೇಲೆ ಹೋಗುವಂತೆ ಅಲ್ಲಿ ಸೇತುವೆ ಕಟ್ಟುವ ವಿಚಾರವನ್ನು ನೋಡಿ ಕೊಂಡು ಬಂದರೆಂದು ಹೇಳುತ್ತಾರೆ

---

ಸುದರ್ಶನ್ ಪಟ್ಟಣದಲ್ಲಿರುವ ಮಿ ಆನಂದಾಚಾರ್ಲುಯವರು ಕಲ್ಕತ್ತೆಗೆ ಹೋಗಿದ್ದಾಗ ಭಾಟ್ಪಾರಾ ಎಂಬಲ್ಲಿ ಸಂಸ್ಕೃತ ಪಂಡಿತರ ಸಮುದಾಯವೊಂದು ಜರುಗಿತು. ಆ ಸಮಯಕ್ಕೆ ಮಿ ಆನಂದಾಚಾರ್ಲುಯವರು ಹೋಗಿ ಹಿಂದೂ ಮುಂತಾದ್ದನ್ನು ಕುರಿತು ಪಂಡಿತರುಗಳ ಸಂಗಡ ಮಾಡ್ರಾಸದವರು ಸಂಸ್ಕೃತದಲ್ಲಿ ತಮಗಿರುವ ಅಪಾರವಾದ ಪಾಂಡಿತ್ಯವನ್ನು ಪ್ರಕಾಶಪಡಿಸಿದರು. ಅಲ್ಲಿನ ಪಂಡಿತರು ತುಂಬಾ ಸಂತೋಷಪಟ್ಟುಕೊಂಡು ಅವರಿಗೆ ವಿದ್ಯಾರತ್ನ ಎಂಬ ಬಿರುದನ್ನು ಕೊಟ್ಟರುತ್ತಾರೆಂದು ತಿಳಿದುಬಂದಿದೆ

---

ಕಳೆದ ತಿಂಗಳ ೩೧ ನೆ ತಾರೀಖು ಸಾಯಂಕಾಲ ಕಲ್ಕತ್ತೆಯ ಬಳಿ ಇರುವ ಬಿಸ್ಟ್ ಬ್ಯಾಂಕಿನಲ್ಲಿ ಬೆಂಕಿಯು ಭರ್ತಿ ಆಗಿದ್ದ ಒಂದು ದೊಡ್ಡ ಗುದಾಮಿಗೆ ಬೆಂಕಿ ಬಿತ್ತು. ೩,೫೦೦ ಪೆಟ್ಟಿಗೆಗಳಲ್ಲಿ, ೩೩,೦೦೦ ಟಿನ್ ಗಳಲ್ಲಿ ಬೆಂಕಿಯೆಣ್ಣೆ ಭರ್ತಿ ಆಗಿದ್ದದ್ದಕ್ಕೆ ಬೆಂಕಿ ತಗಲಿ ಉರಿಯುತ್ತಾ ಇದೆ. ಬೆಂಕಿಯನ್ನು ಆರಿಸುವದಕ್ಕೆ ವಿಪರೀತವಾಗಿ ನೀರನ್ನು ಸುರಿಯುತ್ತಿದ್ದಾರೆ. ಕಟ್ಟಡವೆಲ್ಲಾ ನೀರಿನಲ್ಲಿ ಮುಚ್ಚಿಕೊಂಡರೂ ಉರಿ ಕಡಿಮೆಯಾಗಲಿಲ್ಲ. ಮಾಲುಗಳಿಗೆ ಇನ್‌ಷ್ಯೂರೆನ್ಸು ಬಿದ್ದು ಹೋದದ್ದು ಸುಮಾರು ೧೮—೨೦ ಲಕ್ಷ ರೂಪಾಯಿನ ಬೆಂಕಿ ಉರಿದುಹೋಯಿತು

---

ಬಂಗಾಳದ ಅಲಿಪುರ್ ನಿಂದ ಎಮಾರ್ ಡಿಸ್ಟ್ರಿಕ್ಟಿನಲ್ಲಿ ಪಾರ್ಲ್ಹಾಪುರ ಸೋಮೇಶ್ವರ ಎಂಬ ಸ್ಥಳದಲ್ಲಿ ಗೋಪಾಲಯ್ಯನು ಕಟ್ಟಿಗೆಯ ಬಲೆಯನ್ನು ಕಮಾಗಡಿ ಎಸೆಯುತ್ತಿದ್ದ ನದಿಯ ದಿನದಲ್ಲಿ ಸ್ನಾನಕ್ಕೆ ಹೋದನು. ಬಲೆಗೆ ಸಿಕ್ಕಿದ್ದೆಂದು ಗ್ರಾಮದವರೆಲ್ಲ ಹೇಳುತ್ತಿದ್ದರು. ಕಳೆದ ದಶಕದಲ್ಲಿ ಸಿಕ್ಕಿದ್ದನು. ಆ ಧಾಯಿ ಒಂದು ಹುಲಿ ಆತನನ್ನು ಹಿಡಿದು ಕೊಂಡುಹೋಯಿತು. ಕಲವು ದಿನಗಳನ್ನು ಕಳೆದ ಬಳಿಕ ಹಿಂದಿರುಗಿ ಬಂದನು. ಬಂದಾಗ ಒಂದು ಹುಲಿ ಮರಿ ಸಂಗಡಿಗನಾಗಿ ಸಿಕ್ಕಿದ್ದಿತು. ಗ್ರಾಮದವರು ಆಶ್ಚರ್ಯಪಟ್ಟರು. ಹಿಂದೂ ಕಾಸಿಗೆ ಬಂದು ಆ ನದಿಯ ತೀರದಲ್ಲಿ ಆತನ ನಡವಳಿಕೆ ಇನ್ನೂ ಹಾಗೆಯೇ ಇದೆಯೆಂದು ಹೇಳುತ್ತಾರೆ.

---

ಮದರಾಸ್ ಪಟ್ಟಣದ ಮಿ ಕೃಷ್ಣಸ್ವಾಮಿ ಬಾಲಮುಕುಂದದಾಸ್ ಎಂಬ ದೊಡ್ಡ ಗುಜರಾತಿ ವರ್ತಕನು ಚಕ್ರವರ್ತಿನಿಯವರ ಲೋಹ ಪ್ರತಿಮೆಯನ್ನು ಮಾಡಿಸಿ ವಿಲಾಯಿತಿಯಿಂದ ತರಿಸಿ, ಆ ಪಟ್ಟಣದಲ್ಲಿ ಪ್ರತಿಷ್ಠೆ ಮಾಡಿಸಿದ ಮಹಾಸಭೆಗೆ ಹೋಗಿದ್ದನಷ್ಟೆ. ಅದೇ ಪ್ರಕಾರ ಆ ಪ್ರತಿಮೆಯನ್ನು ತಯಾರಾಗಿ ಮದರಾಸಿಗೆ ಬಂದು ಇಳಿಯಿತು. ಅದನ್ನು ವಿಸರ್ಜಿಸುವದಕ್ಕೆ ಒಂದು ಪೀಠವನ್ನು ಮೈಸೂರಿನಲ್ಲಿ ತಯಾರುಮಾಡಿಸಿದರು. ಇದೀಗ ಮದರಾಸಿಗೆ ತಯಾರಾಗಿ ಹೋಯಿತು. ಕಳೆದ ವಾರ ಅದನ್ನು ಕಟ್ಟಿ, ಪ್ರತಿಮೆಯನ್ನು ನಿಲ್ಲಿಸಿದರು. ನಿನ್ನೆಯದಿನ ಗೌವರ್ನರವರು ಅದನ್ನು ಪ್ರತಿಷ್ಠೆಮಾಡಿದರೆಂದು ತಿಳಿದುಬಂದಿದೆ. ಇಂಥಾ ಪ್ರತಿಮೆಯಾಗಲಿ, ಅಷ್ಟು ಸುಂದರವಾದ ಪೀಠವಾಗಲಿ ಹಿಂದುಸ್ಥಾನದಲ್ಲೆಲ್ಲೂ ಮಾಡಿಸಿಲ್ಲವೆಂದು ಹೇಳುತ್ತಾರೆ

---

ಕಳೆದ ೧೮೭೩ನೇ ಡಿಸೆಂಬರ್ ೧೯ನೆ ತಾರೀಖಿನಲ್ಲಿ ಕಾಶ್ಮೀರದ ಒಬ್ಬ ಪಂಡಿತನು ನಿಜಾಮಯಿತಿಯ ಮಹಾರಾಜಾ ಚಕ್ರವರ್ತಿಯವರಿಗೆ ಒಂದು ವಿಚಿತ್ರವಾದ ಕಾಗದ ಬರೆದು ಹಾಕಿದನು. ಅದು ಈಗ ಪ್ರಕಟವಾಗಿದೆ. ಅದರಲ್ಲಿ ಆ ಪಂಡಿತನು ಬರೆದುಕೊಂಡಿರುವದೇನಂದರೆ — ನನ್ನ ಪ್ರಭುವೇ, ನಾನು ಗಯಾ ಡಿಸ್ಟ್ರಿಕ್ಟಿಗೆ ಸೇರಿದ ಮಾವ್ರದ್ ನಗರದಲ್ಲಿದ್ದೇನೆ. ನನ್ನ ಹೆಸರು ಪಂಡಿತ ದೇವದತ್ತಶರ್ಮ ಅಗ್ನಿಹೋತ್ರಿ. ಮುಂದೆ ಸಂಭವಿಸುವ ಸಂಗತಿಗಳನ್ನು ತಿಳಿದು ಪ್ರಕಟಿಸತಕ್ಕ ಶಕ್ತಿ ನನಗುಂಟು. ಹಿಂದುಸ್ಥಾನದಲ್ಲಿ ನಡೆಯುವ ದೆಹಲಿ ದರ್ಬಾರಿನಿಂದ ಕಾಲಕ್ರಮದಲ್ಲಿ ಹಿಂದುಸ್ಥಾನವೇ ನಾಶವಾಗುವದಕ್ಕೆ ಕಾರಣವಾಗುವದು. ಟ್ರಾನ್ಸ್‌ವಾಲ್ ಯುದ್ಧಪ್ರಾಪ್ತಿಯೂ, ಲೇಟ್ ಮಹಾರಾಜ್ಞಿಯವರ ಮರಣವೂ ಹಿಂದುಸ್ಥಾನದ ಕ್ಷಾಮವೂ, ಪ್ಲೇಗ್ ಉಪದ್ರವೂ—ಇವುಗಳೆಲ್ಲಾ ಪ್ರಾಪ್ತವಾಗುವವೆಂದು ಮುಂತಿಳಿಸಿದವನು ನಾನೇ. ನಾನು ಬೇಕಾದಾಗ ಮಳೆಯನ್ನು ಸುರಿಸಬಲ್ಲೆನು. ಬೆಂಕಿ ಇಲ್ಲದೇನೇ ಹೇಳಿದ ಕಡೆಯಲ್ಲಿ ಅಗ್ನಿಯನ್ನು ಹುಟ್ಟಿಸಬಲ್ಲೆನು. ಮಕ್ಕಳಿಲ್ಲದೆ ಬಂಜೆಯಾಗಿರತಕ್ಕ ಸ್ತ್ರೀಯರಿಗೆ ಮಕ್ಕಳ ಫಲವನ್ನು ಕೊಡಬಲ್ಲೆನು. ಮಂತ್ರೋಚ್ಚಾರಣೆಯ ಶಕ್ತಿಯಿಂದಲೇ ನಾನು ಇವನ್ನೆಲ್ಲಾ ಮಾಡುತ್ತೇನಾದ್ದರಿಂದ ಗೌವರ್ನಮೆಂಟಿನವರಿಗೆ ನಾನು ತುಂಬಾ ಸಹಾಯಕನಾಗಿರುವೆನು. ಯುದ್ಧದಲ್ಲಾದರೋ ನಾನು ಕೊಡುವ ಒಂದು ಬಳೆಯನ್ನು ತೋಳಿಗೆ ಹಾಕಿಕೊಂಡುಹೋಗಿ ಯುದ್ಧಕ್ಕೆ ನಿಲ್ಲುವವರಿಗೆ ಶತ್ರುಗಳ ಏಟು ಗಾಯಮಾಡಲಾರದು. ಹಿಂದುಸ್ಥಾನಕ್ಕೆ ಪ್ರಾಪ್ತವಾಗತಕ್ಕ ದುಷ್ಕಾಲವನ್ನು ನಾನು ಸಂಪೂರ್ಣವಾಗಿ ಪರಿಹರಿಸಬಲ್ಲೆನು. ಇದರ ಕ್ರಮವೆಲ್ಲಾ ನನಗೆ ತಿಳಿದಿರುತ್ತದೆ. ನನ್ನ ಮಾತಿನಲ್ಲಿ ನಂಬಿಕೆ ಹುಟ್ಟದೆ ಹೋಗುವದಾದರೆ ಕಾಲಾನು ಕಾಲದಲ್ಲಿ ಹಿಂದುಸ್ಥಾನವು ಶೋಚನಗತಿಗೆ ಬಂದೀತೆಂದು ನಾನು ಧೈರ್ಯದಿಂದ ಹೇಳುತ್ತೇನೆ. ಟ್ರಾನ್ಸ್‌ವಾಲ್ ಯುದ್ಧವು ನೀಚ ಕರಾರು ನಡೆಯುವಂತೆ ನಾನು ಪ್ರಯತ್ನಪಟ್ಟೆನು. ಅದರಂತೆ ಕರಾರು ನಡೆದಿದೆ. ನಾನು ಯಾವಾಗಲೂ ಗೌವರ್ನಮೆಂಟಿನವರ ಕ್ಷೇಮವನ್ನೇ ಬಯಸತಕ್ಕವನಾಗಿರುತ್ತೇನೆ

## ಪಾಪಕ್ಷಮೆ

ಪಾಪವು ಕ್ಷಮಿಸಲ್ಪಡುವದೆಂಬುದು ನಿಜವೋ? ಪಾಪಕ್ಷಮೆಯೆಂಬುದೆಲ್ಲಾ ಸುಳ್ಳು. ಅಂಥ ಕಾರ್ಯವೇ ಇಲ್ಲ ಎಂದು ಕೆಲವರು ಹೇಳುವುದು. ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತಬಾರದೇ? ನಾವು ಮಾಡಿದ ಕೃತ್ಯಕ್ಕೆ ತಕ್ಕ ಫಲವನ್ನು ಅನುಭವಿಸಿಯೇ ತೀರಬೇಕು. ನಾವು ಯಾವ ಬೀಜವನ್ನು ಬಿತ್ತುತ್ತೇವೋ, ಅದರಿಂದ ಹುಟ್ಟುವ ಹಣ್ಣನ್ನು ತಾನೇ ತಿನ್ನಬೇಕು. ಸಕಲವೂ ಕರ್ಮಾಧೀನವಾಗಿದೆ, ದೇವರುಗಳೇ ಕರ್ಮಾಧೀನರಾಗಿದ್ದಾರೆ. ಬ್ರಹ್ಮಾಂಡವೇ ಕರ್ಮಾಧೀನವಾಗಿರುತ್ತದೆ ಎಂದು ಹೇಳುವದು ಸರ್ವಸಂಧಾನವಾಗಿದೆಯಷ್ಟೆ. ಈ ನ್ಯಾಯದ ಪ್ರಕಾರ—ಯಾರು ಸರಿಯಾದ ನಡತೆಯುಳ್ಳವರಾಗಿರುತ್ತಾರೆಯೋ ಅವರು ಅದಕ್ಕೆ ಫಲವಾಗಿ ಸುಖಸಂತೋಷಗಳನ್ನು ಅನುಭವಿಸುವದು ಸ್ವಾಭಾವಿಕವಾಗಿದೆ. ಯಾರು ತಪ್ಪು ಕೆಲಸವನ್ನು ಮಾಡುತ್ತಾರೆಯೋ ಅವರು ತಮ್ಮ ತಪ್ಪಿಗೆ ತಕ್ಕ ದಂಡನೆಯನ್ನು ಹೊಂದದೆ ಇರಲಾರರೆಂಬುವದೂ ಅನುಭವಸಿದ್ಧವಾಗಿದೆ

ಯೇಸುಸ್ವಾಮಿಯು ಈ ವಿಷಯದಲ್ಲಿ ಹೇಳುವದೇನು? ಪಾಪಕ್ಷಮೆಯುಂಟೆಂದು ಆತನ ಬೋಧಿಸಿದನು. ಆತನು ಭೂಲೋಕದಲ್ಲಿ ಪ್ರಕಟವಾದದಕ್ಕೆ ಬಂದ ಸತ್ಯವಾದ ಅಂಶಗಳಲ್ಲಿ ಇದೂ ಒಂದು. ಪಾಪಗಳು ಕ್ಷಮಿಸಲ್ಪಡುತವೆಂದು ಹೇಳಿದರೆ ಯಾವ ಅರ್ಥದಲ್ಲಿ ಅವು ಕ್ಷಮಿಸಲ್ಪಡುತ್ತವೆಂದು ಹೇಳಬಹುದು? ಒಬ್ಬ ಯೌವನಸ್ಥನು ಚಿಕ್ಕವನಾಗಿರುವಾಗ ಒಳ್ಳೆದಾದ ಬೋಧಕಿಷ್ಟ ನನ್ನ ರು ವನ್ನೆಲ್ಲಾ ವ್ಯರ್ಥವಾಗಿ ಕಳೆದು ಬಿಟ್ಟು ದೊಡ್ಡವನಾದ ಮೇಲೆ ತನ್ನ ಆಲಸ್ಯಕ್ಕೆ ತಕ್ಕ ಫಲವಾಗಿ ದಾರಿದ್ರ್ಯ ಕಷ್ಟವನ್ನು ಅನುಭವಿಸ ಬೇಕಾಗಿ ಬರುವನು. ಅವನು ಆ ಸಮಯದಲ್ಲಿ ಪಶ್ಚಾತ್ತಾಪ ಪಟ್ಟು ವಿದ್ಯಾಭ್ಯಾಸವನ್ನು ಮಾಡಿ ಅದರ ಫಲವಾಗಿ ಸುಖಪಡುತ್ತಿರುವವರಂತೆ ತಾನೂ ಸುಖಪಡುವಂತೆ ದೇವರು ಅನುಗ್ರಹಿಸಬೇಕೆಂದು ತಿಳಿಯಬೇಕೇ? ಹಾಗೆ ಆತನು ಪಡುವದು ಯೋಗ್ಯವಾದದ್ದಕ್ಕೆ ವಿರೋಧವಾಗಿದೆ. ಭಗವಂತನು ನನ್ನ ಪಾಪವನ್ನು ಕ್ಷಮಿಸಿದ್ದಾನೆಂದು ಪ್ರಶಸ್ತವಾಗಿ ನಂಬಿರುವವನು ನನ್ನ ಬಾಲ್ಯವನ್ನು ನಷ್ಟ ಅಲಕ್ಷ್ಯವಾಗಿ ಬಿಟ್ಟೆನು! ಆ ವ್ಯರ್ಥದಲ್ಲಿ ಯೋಗ್ಯವಾಗಿ ನಡಕೊಂಡಿದ್ದರೆ ಈಗ ಎಷ್ಟೋ ಒಳ್ಳೆ ಸ್ಥಿತಿಯಲ್ಲಿರುತ್ತಿದ್ದೆನಲ್ಲ! ಎಂದು ದುಃಖಿಸುವದನ್ನು ಕೇಳಬಲ್ಲೆವಷ್ಟೆ. ವಿಷಯಾಸಕ್ತಿಯಿಂದಲೂ ಮದ್ಯಪಾನದಲ್ಲಿಯೂ ತನ್ನ ಬಲವನ್ನೆಲ್ಲಾ ಕಳೆದು ಬಿಟ್ಟಿರುವ ಪಾಪಿಯು ಕಡೆಗಾಲದಲ್ಲಿ ಎಷ್ಟು ಆರೋಗ್ಯವನ್ನಾಗಲಿ ತಾನು ಕಳಕೊಂಡಿರುವ ದೇಹ ಬಲವನ್ನಾಗಲಿ ಸೌಂದರ್ಯವನ್ನಾಗಲಿ ಭಗವಂತನು ಪುನಃ ದಯಪಾಲಿಸುತ್ತಾನೆಯೋ? ಇಲ್ಲವೇ ಇಲ್ಲ. ಯೌವನದಲ್ಲಿ ದುಷ್ಟರಾಗಿದ್ದ ಎಷ್ಟೋ ಮಂದಿ ವೃದ್ಧಾಪ್ಯದಲ್ಲಿ ತಮ್ಮ ದುಷ್ಟತನಗಳನ್ನು ಬಿಟ್ಟು ಸಜ್ಜನರಾಗಿ ಬದುಕುತ್ತಿರುವದನ್ನು ನಾವು ನೋಡಿದ್ದೇವೆ. ಭಗವಂತನು ತನ್ನ ಪಾಪಗಳನ್ನು ಸಂಪೂರ್ಣವಾಗಿ ಕೃಪೆಯಿಟ್ಟು ಕ್ಷಮಿಸಿದ್ದಾನೆಂದು ಅವರು ಅನುಭವಪೂರ್ವಕವಾಗಿ ತಿಳಿದು ಸಂಪ್ರೀತರಾಗಿದ್ದಾರೆ, ಆದರೂ ಯೌವನದಲ್ಲಿ ಪವಿತ್ರರಾಗಿ ವಿವೇಕಿಗಳಾಗಿ ಬದುಕಿದ್ದರೆ ಈ ವೃದ್ಧಾಪ್ಯದಲ್ಲಿ ಎಂಥವರಾಗಿರಬಹುದು, ದೇವರ ಸೇವೆಯಲ್ಲಿಯೂ ಮನುಷ್ಯರಿಗೆ ಉಪಕಾರ ಮಾಡುವದರಲ್ಲಿಯೂ ಎಷ್ಟು ಹೆಚ್ಚಾದ ಸಿದ್ಧಿಯನ್ನು ಪಡೆಯಬಹುದಾಗಿತ್ತು ಎಂದು ದುಃಖಪಡುವರಲ್ಲವೇ? ಹೀಗಿರುವದರಿಂದ ಭಗವಂತನು ಪಾಪದ ಫಲವಾಗಿ ಬರುವ ದುಃಖಪರಂಪರೆಗಳನ್ನೆಲ್ಲಾ ಪರಿಹಾರ ಮಾಡುತ್ತಾನೆಂದು ಎಂದಿಗೂ ಭಾವಿಸಬಾರದು

ಹಾಗಾದರೆ ದೇವರು ಪಾಪಕ್ಷಮೆಯನ್ನು ಕೊಟ್ಟು ಮನುಷ್ಯನಿಗೆ ಪರಿಹಾರ ಮಾಡುವದೆಂಥದ್ದು? ಯೇಸುಸ್ವಾಮಿಯು ನಮ್ಮ ದೇಶೀಯರಿಗೆ ಸರ್ವಸಾಧಾರಣವಾಗಿ ತಿಳಿದಿರುವ ಉಪಮಾನದಲ್ಲಿ ಈ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾನೆ. ತಂದೆಯ ಆಜ್ಞೆಯಲ್ಲಿರದದಕ್ಕೆ ಒಪ್ಪದೆ ಸ್ವೇಚ್ಛೆಯಾಗಿ ಬದುಕಬೇಕೆಂದು ಅಪೇಕ್ಷಿಸಿದ ಅ ದುಂದುಗಾರನಾದ ಮಗನು ಕಡೆಗೆ ತನ್ನ ತಪ್ಪನ್ನು ತಿಳಕೊಂಡು ತಂದೆಯ ಬಳಿಗೆ ಬರಲಾಗಿ ಅವನನ್ನು ಪುನಃ ತನ್ನ ಮಗನಾಗಿ ಅಂಗೀಕರಿಸಿದನು. ನಿನ್ನ ಮನೆಯ ಆಳುಗಳಲ್ಲಿ ಒಬ್ಬನಂತೆ ಭಾವಿಸಿದರೆ ಸಾಕೆಂದು ಹೇಳಿದವನನ್ನು ತಂದೆಯು ಆಳಾಗಿ ಭಾವಿಸದೆ ಹಿಂದಿನಂತೆ ಮಗನಾಗಿ, ಮನೆಗೆ ಬಾಧ್ಯನಾಗಿ ಅಂಗೀಕರಿಸಿದನು.

ತಂದೆಯು ಬಳಿಯಿಂದ ದೂರೀಕರಿಸಿಕೊಂಡಿದ್ದವನನ್ನು, ತಂದೆಯು ನ್ಯಾಯವಾದ ಕೋಪಕ್ಕೆ ಪಾತ್ರನಾಗಿದ್ದವನನ್ನು ಆತನು ಮನೆಯಲ್ಲಿ ಸೇರಿಸಿಕೊಂಡು ಮೊದಲಿನಂತೆ ಪ್ರೀತಿಸಿದನು. ಪಾಪಕ್ಷಮೆಯೆಂಬುದರಲ್ಲಿ ನಮಗೆ ತಿಳಿಯಬೇಕಾದ ವಿಶೇಷವಾದ ಬೋಧನೆ ಯಾವದಂದರೆ—ನಾವು ಭಗವಂತನ ಆಜ್ಞೆಗಳನ್ನು ಅನೇಕಾನೇಕ ಸಾರಿ ಉಲ್ಲಂಘಿಸಿ ಮಹಾ ಹೇಯವಾದ ಪಾಪಿಗಳೆನಿಸಿಕೊಂಡಿದ್ದಾಗ್ಯೂ ಪರಮ ಪ್ರೀತಿಯುಳ್ಳ ಆ ಭಗವಂತನು ನಮ್ಮನ್ನು ಪುನಃ ತನ್ನ ಮಕ್ಕಳಾಗಿ ಅಂಗೀಕರಿಸಿಕೊಳ್ಳುವದಕ್ಕೆ ಇಷ್ಟವುಳ್ಳವನಾಗಿದ್ದಾನೆ. ಪಾಪ ಮಾಡಿದವರ ಮೇಲೆ ಆತನು ನ್ಯಾಯವಾಗಿ ಕೋಪಮಾಡಬೇಕಾಗಿದ್ದರೂ ಆತನು ಆ ಕೋಪವನ್ನು ಬಿಡುತ್ತಾನೆ, ಪಾಪ ಮಾಡಿದವರಿಂದ ಭಗವಂತನು ದೂರವಾಗುತ್ತಾನಷ್ಟೆ, ಪಾಪಕ್ಷಮೆಯಾದರೆ ಭಗವಂತನಿಗೂ ಆ ಅಪರಾಧಿಗೂ ಸಾಮಿಪ್ಯವುಂಟಾಗುವಂತೆ ದೇವರು ಅನುಗ್ರಹಿಸುತ್ತಾನೆ.

ಆದರೆ ಇದೆಲ್ಲಾ ಸುಮ್ಮನೆ ಬರುವದಿಲ್ಲ. ಭಗವಂತನಿಗೂ ಮನುಷ್ಯನಿಗೂ ತಪ್ಪಿಹೋಗಿರುವ ಸಂಬಂಧವು ಪುನಃ ಬರಬೇಕಾದರೆ ಮನುಷ್ಯನಿಗೆ ದೇವರು ಒಂದು ನಿಬಂಧನೆಯನ್ನು ನೇಮಿಸಿರುತ್ತಾನೆ ಅದು ಯಾವದೆಂದು ಕೇಳುವಿರೋ? ಹೇಳುವೆವು ಕೇಳಿ. ಪವಿತ್ರನಾದ ಆ ಭಗವಂತನು ಪಾಪದ ವಿಷಯದಲ್ಲಿ ಎಂಥ ಮನಸ್ಸುಳ್ಳವನಾಗಿದ್ದಾನೋ ನಾವೂ ಅಂಥ ಮನಸ್ಸುಳ್ಳವರಾಗಬೇಕೆಂಬುವೇ ಆ ನಿಬಂಧನೆ. ಪಾಪವು ಭಗವಂತನಿಂದ ದ್ವೇಷಿಸಲ್ಪಡುವಂಥಾದ್ದು. ನಾವೂ ಅದನ್ನು ಹಗೆಮಾಡುವವರಾಗಬೇಕು. ಅದನ್ನು ಆತನು ಕೇವಲ ಅಶುದ್ಧವಾದ ಪದಾರ್ಥವಾಗಿ ತಿಳಿದು ಅಸಹ್ಯಪಡುತ್ತಾನೆ ಪಾಪದ ವಿಷಯದಲ್ಲಿ ನಮ್ಮ ಮನಸ್ಸೂ ಹೀಗೇ ಆಗಬೇಕು. ಅದು ವಿನಾಶಲಕ್ಷ್ಯವಾದದ್ದು ಸಾಭವಾದ ಅಕೃತ್ಯವೆಂದು ತಿಳಿದಿದ್ದಾನೆ. ನಾವೂ ಪಾಪದ ವಿಷಯದಲ್ಲಿ ಮನಃಪೂರ್ವಕವಾದ ಅಸಹ್ಯವನ್ನು ಹೊಂದುವವರಾಗಬೇಕು. ಪಾಪದ ವಿಷಯದಲ್ಲಿ ಇಂಥ ಭಾವವು ಮನುಷ್ಯನಲ್ಲುಂಟಾಗಬೇಕೆಂದು ಯಾವದರಲ್ಲಿ ಪ್ರಕಟವಾಗುತ್ತದೆಂದು ಕೇಳಿದರೆ, ಯೇಸುವಿನ ಮರಣವನ್ನು ದೃಷ್ಟಿಸಿ ನೋಡಿರಿ. ಪಾಪವೆಷ್ಟು ಭಯಂಕರವಾದ ಅಕೃತ್ಯವೆಂಬುವದೂ, ಪಾಪದ ಫಲವು ಮಹಾ ಭಯಂಕರವಾದದ್ದೆಂದೂ, ಪಾಪವನ್ನು ಕ್ಷಮಿಸುವದರಲ್ಲಿ ಆ ಭಗವಂತನಿಗೇ ಬಹು ಸಂಕಟವುಂಟಾಗುತ್ತದೆಂದೂ ಯೇಸುವಿನ ಮರಣದಲ್ಲಿ ಪ್ರಕಟವಾಗುತ್ತದಲ್ಲವೇ?

ತಂದೆಗೆ ವಿರೋಧವಾಗಿ ತಪ್ಪುಮಾಡಿದ ಮಗನು ಆ ತಂದೆಯ ಸಂಗಡ ಸಮಾಧಾನವಾಗುವದು ಹ್ಯಾಗೆ? ತಂದೆಯು ಮಗನನ್ನು ಕುರಿತು—ನಿನ್ನ ತಪ್ಪನ್ನು ಮನ್ನಿಸಿದ್ದೇನೆ ಎಂದು ಹೇಳಿದ ಮಾತ್ರಕ್ಕೆ ಇಬ್ಬರಿಗೂ ಸಮಾಧಾನವಾಯಿತೆನ್ನುವದಕ್ಕಾಗಿದೇ? ಇಲ್ಲ. ಆ ಮಗನು—ನಾನು ಯಾವ ತಪ್ಪನ್ನೂ ಮಾಡಲಿಲ್ಲ, ನನಗೆ ಕ್ಷಮೆಯು ಅವಶ್ಯವಿಲ್ಲ, ನಾನು ತಿರಿಗಿ ಅದೇ ಕಾರ್ಯವನ್ನು ಮಾಡುತ್ತೇನೆ ಎಂದು ಹೇಳುವವನಾದರೆ ಸಮಾಧಾನವಾಗುವದು ಅಸಾಧ್ಯವಲ್ಲವೇ? ಅಥವಾ, ಆ ಮಗನು—ನಾನು ಮಾಡಿದ್ದು ಅಷ್ಟೊಂದು ದೊಡ್ಡ ತಪ್ಪಲ್ಲ. ನನ್ನ ತಂದೆ ಇಷ್ಟು ಕೋಪಿಸಿಕೊಳ್ಳುವದು ಯಾತಕ್ಕೆ? ಎಂದು ಹೇಳಿದರೆ, ಹೊರಗೆ ಸಮಾಧಾನವಾದಂತೆ ಸ್ವಲ್ಪ ತೋರಿದಾಗ್ಯೂ ನಿಜವಾಗಿ ಸಮಾಧಾನವಾಗಲಿಲ್ಲವಷ್ಟೆ. ತಪ್ಪಿನ ವಿಷಯದಲ್ಲಿ ತಂದೆಗೆ ಯಾವ ಅಭಿಪ್ರಾಯವುಂಟೋ ಅದೇ ಅಭಿಪ್ರಾಯವನ್ನು ಆ ಮಗನೂ ಹೊಂದಿದರಲ್ಲವೇ ಸಮಾಧಾನವು ಸಾಧ್ಯವಾಗಿರುವದು ಅನಂತರ ತಪ್ಪುಮಾಡಿದವನ ಮನಸ್ಸೂ ತಂದೆಯ ಮನಸ್ಸೂ ಒಂದಾಗುವದು. ಈ ಉಪಮಾನವನ್ನು ನೋಡುವಲ್ಲಿ ಭಗವಂತನು ಪ್ರೀತಿಯುಳ್ಳವನಾಗಿದ್ದಾನೆ; ಪಾಪವನ್ನು ಮನ್ನಿಸುವದಕ್ಕೆ ಇಷ್ಟವುಳ್ಳವನಾಗಿದ್ದಾನೆ, ಅಂದರೆ ಪಾಪಿಷ್ಠನನ್ನು ಪುನಃ ತನ್ನ ಮಗನಾಗಿ ಅಂಗೀಕರಿಸುವದಕ್ಕೆ ಇಷ್ಟವುಳ್ಳವನಾಗಿದ್ದಾನೆ. ಆದರೆ ಆ ಪಾಪದ ವಿಷಯದಲ್ಲಿ ಭಗವಂತನಿಗೆ ಯಾವ ಅಭಿಪ್ರಾಯವುಂಟೋ ಮನುಷ್ಯನಿಗೂ ಅದೇ ಅಭಿಪ್ರಾಯವಿಲ್ಲದಿದ್ದರೆ ಭಗವಂತನಿಗೂ ಮನುಷ್ಯನಿಗೂ ಸಮಾಧಾನವಾಗಲಾರದು. ನಾವು ನಮ್ಮ ಪಾಪಗಳಿಗಾಗಿ ಯಥಾರ್ಥವಾದ ಪಶ್ಚಾತ್ತಾಪವನ್ನು ಹೊಂದಿ ಅದನ್ನು ಮನಃಪೂರ್ವಕವಾಗಿ ತುಚ್ಛೀಕರಿಸಿದರೆ ಆ ಪರಮ ತಂದೆಯು ನಮ್ಮ ಪಾಪಗಳನ್ನು ಮನ್ನಿಸುವನು. ಪಾಪದ ಫಲವು ನಮ್ಮನ್ನು ಬಿಟ್ಟು ಹೋಗಲಾರದೆಂಬುದು ನಿಜವೇ. ಹಿಂದಣ ಮೂರ್ಖತೆಯಿಂದ ಸಂಭವಿಸಿದ ನಷ್ಟಕ್ಕಾಗಿ ದುಃಖಪಟ್ಟರೂ ಚಿಂತೆಯಿಲ್ಲ; ನಮ್ಮನ್ನು ಪ್ರೀತಿಸಿ ಅಪರಾಧ ಕ್ಷಮೆಯನ್ನು ಕೊಟ್ಟಿರುವ ಆ ಭಗವಂತನ ದೃಷ್ಟಿಯಲ್ಲಿ ಸತ್ಯವಾಗಿ ನಡೆಯುವದಕ್ಕೆ ಪ್ರಯತ್ನಿಸುತ್ತಿದ್ದೇವೆಂಬ ಸಂತೋಷವು ನಮ್ಮಲ್ಲಿರುವದು, ನಮ್ಮ ಮೂರ್ಖತೆಯಿಂದ ನಮ್ಮ ಸನ್ಮಾರ್ಗ ಪ್ರವರ್ತನೆಗೆ ಉಂಟಾಗುವ ವಿಘ್ನಗಳನ್ನೆಲ್ಲಾ ಜಯಿಸುವಂತೆ ಭಗವಂತನ ಕೃಪಾಕಟಾಕ್ಷವು ನಮಗ ದೊರಕುವದೆಂಬ ಧೈರ್ಯವು ನಮ್ಮಲ್ಲಿರುವದು. ಯೇಸು ಸ್ವಾಮಿಯ ಮರಣದ ಫಲವು ನಮ್ಮೆಲ್ಲರಿಗೂ ದೊರಕಲಿ.

## ತಾಲ್ಲೋಕು ವರ್ತಮಾನಗಳು.

ಹೊಳೇನರಸೀಪುರ.—ಹಾಸನದ ತಾಲ್ಲೋಕು ಕಿತ್ತಾನೆಯಿಂದ ಈ ಊರಿಗೆ ಬಂದಿರುವ ಮೆ॥ ಕೃಷ್ಣಯ್ಯಂಗಾರ್ಯರು ಹರಿಕಥೆ ಬಹಳ ಚನ್ನಾಗಿ ಮಾಡುತ್ತಾರೆ. ಇವರು ಮಾರ್ಚ ೧೫ನೆ ಭಾನುವಾರ ಶ್ರೀ ಉತ್ತರಾದಿಮಠದಲ್ಲಿ ದ್ರೌಪದಿ ಸ್ವಯಂವರವೆಂಬ ಕಥೆ ಮಾಡಿದರು. ಅಲ್ಲಿ ಸೇರಿದ್ದ ದೊಡ್ಡಮನುಷ್ಯರೆಲ್ಲ ಬಹಳ ಸಂತೋಷಪಟ್ಟರು. ಪ್ಲೀಡರ್ ಮೆ॥ ಯರ್ರ. ಗರುಡಾಚಾರ್ಯರು ಅವರಿಗೆ ಬಹುಮಾನವಾಗಿ ಒಂದು ಉಂಗುರವನ್ನು ಕೊಟ್ಟರು.—ನಮ್ಮ ಅಮಲ್ದಾರರು ತಾಲ್ಲೋಕು ಕಛೇರಿ ಬಳಿ ಒಂದು ಅರವಟ್ಟಿಗೆ ಇಡಿಸಿರುತ್ತಾರೆ. ಬಿಸಲಿನಲ್ಲಿ ತಿರಿಗಿಕೊಂಡು ಬರತಕ್ಕ ಜನಗಳಿಗೆ ಒಳ್ಳೇ ಉಪಕಾರವಾಗಿರುತ್ತೆ ಮತ್ತು ಈ ಊರಿನಲ್ಲಿರುವ ಗಾಣಿಗರ ಮೆ॥ ವೆಂಕಟಪ್ಪನವರು ಪ್ರತಿ ಸೋಮವಾರ ಸಂತೆಗೆ ಬರತಕ್ಕ ಜನಗಳಿಗೋಸ್ಕರ ಅರವಟ್ಟಿಗೆಯನ್ನಿಡಿಸಿರುವವರಿಂದ ಬಹಳ ಜನಗಳಿಗೆ ಉಪಕಾರವಾಗಿರುತ್ತೆ.—ಕಳೆದ ೧೯ನೆ ಬೃಹಸ್ಪತಿವಾರ ಪ್ರಾತಃಕಾಲ ೬ ಘಂಟೆಗೆ ಹಾಸನದಿಂದ ಘನ ಮ್ಯಾನಾಂ ದೇವರೆಯವರು ಈ ಊರಿಗೆ ದಯಮಾಡಿ, ಇಲ್ಲಿನ ಮಿಷನ್ ಬಾಲಿಕಾ ಪಾಠಶಾಲೆ ವಗ್ಯೆರೆ ಇನಸ್ಪೆಕ್ಷನ್ ಮಾಡಿ ವಾಪಸ್ ತೆರಳಿದರು.—ಕಳೆದ ೩ನೇ ತಾರೀಖು ರಾತ್ರಿ ಬೆಳಮಗ್ಗದ ಕೆಲವು ಜನ ಪಟೇಲು ಆಡುತ್ತಿರುವದನ್ನು ಬೀಟ್ ಜವಾನನು ಕಂಡುಹಿಡಿದು ಎಲ್ಲರನ್ನು ಕರೆದುಕೊಂಡು ಹೋಗುತ್ತಿದ್ದನು. ಮುಂದೆ ನೋಡಬೇಕು.

ಕೊಪ್ಪ.—ಕಳೆದ ವಾರ ಕವರ್ನರ್ ಡೆಪ್ಟಿ ಕಮಿಷನರು, ಅ. ಕಮಿಷನರು, ಪೊ. ಸೂಪ್ರೆಂಟರು ಪ್ಲೇಗಿನ ವಿಚಾರಣೆ ಬಗ್ಯೆ ಈ ಕೊಪ್ಪಕ್ಕೆ ದಯಮಾಡಿಸಿ, ಅಮಲ್ದಾರ್ರ ಜೊತೆಯಲ್ಲಿ ಜನವಿಲ್ಲದೆ ಖಾಲಿಯಾಗಿರುವ ಕೆಳಗಿನ ಪೇಟೆಯನ್ನು ನೋಡಿಕೊಂಡು, ಮೇಲಿನ ಪೇಟೆಯವರಿಗೂ ದಯಮಾಡಿ. ಅಲ್ಲಿನ ಜನರಿಗೆ—ನಿಮ್ಮ ಮನೆಗಳಲ್ಲಿ ಇಲಿಗಳು ಸತ್ತು ಬೀಳುವದಕ್ಕೆ ಮೊದಲೇ ಬೇರೆ ಅನುಕೂಲವಾದ ಬೈಲುಪ್ರದೇಶಗಳಲ್ಲಿ ಜೋಪಡಿಗಳನ್ನು ಕಟ್ಟಿಕೊಂಡು, ಕೆಲವು ಕಾಲದವರಿಗೂ ವಾಸಮಾಡುವದಾದರೆ ನಿಮಗೆ ಕ್ಷೇಮಕರವೆಂದು ಆಜ್ಞಾಪಿಸಿ, ನಂತರ ಸರ್ಕಾರಿ ಸಮ್ಬಂಧವಾದ ಕಾರ್ಯಗಳನ್ನು ನೋಡಿಕೊಂಡು, ಮಾರನೆ ಸಾಯಂಕಾಲ ಯಡೆಹಳ್ಳಿ ಮಾರ್ಗವಾಗಿ ಹೊರಟುಹೋದರು. ಕೆಲವು ದಿನಗಳಿಂದಲೂ ಪ್ಲೇಗ್ ಕೇಸುಗಳೇನೂ ಇಲ್ಲದೆ ಇರುವದು ಜನರಲ್ಲಿ ಹೆಚ್ಚಾದ ಸಂತೋಷವನ್ನುಂಟುಮಾಡಿರುತ್ತೆ. ಇಲ್ಲಿನ ಪೋಲೀಸ್ ಜಮಾದಾರ್ ಅಸ್ತ್ರಾ[illegible]ಂಗರು ಕಳೆದ ತಿಂಗಳಿಂದಲೂ ಇಲ್ಲಿನ ಇನ್ಸ್ಪೆಕ್ಟರ್ ಕೆಲಸವನ್ನು ಬಹು ಮುತುವರ್ಜಿಯಿಂದ ನೋಡಿಕೊಳ್ಳುವದಲ್ಲದೆ ಪ್ಲೇಗ್ ವಿಚಾರವಾಗಿ ಊರಿನ ಜನರು ಧೈರ್ಯಗುಂದದೆ ಷೆಡ್ಡುಗಳಲ್ಲಿ ವಾಸಮಾಡುವಂತೆಯೂ ಅವರ ಮನೆಮಠಗಳನ್ನೂ ವಸ್ತು ಪದಾರ್ಥಗಳನ್ನೂ ನೆಮ್ಮದಿಯಾಗಿ ಕಾಪಾಡುವ ವಿಷಯದಲ್ಲಿ ತುಂಬಾ ನಿಗಾ ಇಟ್ಟು ಉಸ್ತುವಾರಿಯಿಂದ ಪ್ರಜೆಗಳ ವಿಶೇಷ ಗೌರವಗಳಿಗೆ ಪಾತ್ರನಾಗಿದ್ದಾರೆ.—ಕೊಪ್ಪಕ್ಕೆ ಒಂದು ಫರ್ಲಾಂಗ್ ದೂರದಲ್ಲಿ ನಡೆಯುತ್ತಿದ್ದ ಸಂತೆಯನ್ನು ಪ್ಲೇಗಿನ ನಿಮಿತ್ತ ನಮ್ಮ ಅಮಲ್ದಾರರು ಇಲ್ಲಿಗೆ ಸುಮಾರು ೨॥ ಮೈಲಿ ದೂರದಲ್ಲಿರುವ ಹಾಲ್ಮಡಿ ಕಟ್ಟೆಯ ಮುಂದೆ ನಡೆಯುವಂತೆ ಏರ್ಪಾಡುಮಾಡಿ, ೨—೩ ವಾರಗಳಿಂದಲೂ ಸಂತೆಯು ಅಲ್ಲಿ ಕೂಡುತ್ತಿದೆ. ಈ ಸಂತೆಗೆ ಕೊಪ್ಪದಿಂದಲೂ ತಳೀಕೆರೆ ಯಡೆಹಳ್ಳಿ ಮುಂತಾದ ಸ್ಥಳಗಳಿಂದಲೂ ಪದಾರ್ಥಗಳನ್ನು ಜನರು ತಂದು ಬಿಕರಿ ಮಾಡುತ್ತಾರೆ. ಇವರೆಲ್ಲರೂ ಪ್ಲೇಗ್ ಸೋಂಕುಳ್ಳ ಸ್ಥಳದವರಾಗಿರುವವರಿಂದ ಇವರ ಮುಖಾಂತ್ರ ಅರ್ಧಮೈಲು ದೂರದಲ್ಲಿರುವ ಹಾಲ್ಮಡಿಗೆ ಎಲ್ಲಿ ಪ್ಲೇಗ್ ಸೋಂಕು ತಟ್ಟುವದೋ ಎಂದು ಶಂಕಿಸಬೇಕಾಗಿರುತ್ತೆ.—ಇಲ್ಲದೆ ಕೂಡುವ ಜನರಿಗೆ ನೆರಳಿಲ್ಲದೆ ಬಿಸಲಿನಲ್ಲಿಯೇ ವ್ಯಾಪಾರವನ್ನು ಸಾಯಂಕಾಲದವರೆಗೆ ಕಳೆಯುವಿಕೆಯನ್ನು ಮನದಣಿಯೂ ಕಾಯಿದು ತಮ್ಮ ಪ್ರಕೃತಿಯನ್ನು ಕೆಡಿಸಿಕೊಳ್ಳುವದಲ್ಲದೆ ಕೆಟ್ಟ ದಿನಗಳಿಂದ ಸಾಮಾನುಗಳಿಗೆ ಕೇಡನ್ನುಂಟುಮಾಡುತ್ತಿದಾರೆಂಬ ಇತ್ಯಾದಿ ಸಂಗತಿಗಳನ್ನು ನಮ್ಮ ಅಮಲ್ದಾರ್ರ ಗಮನಕ್ಕೆ ತಂದು, ಅದರ ಪೂರ್ವ ಸ್ಥಳಕ್ಕೆ ಸಂತೆಯನ್ನು ರವಾನಿಸುವರೋ ಏನೋ ಮುಂದೆ ನೋಡತಕ್ಕದ್ದಾಗಿದೆ.—ಕೊಪ್ಪದಲ್ಲಿದ್ದ ಪೋಸ್ಟಾಫೀಸಿನಲ್ಲಿ ಇಲಿಗಳು ಸತ್ತಕಾರಣ ಪೋಸ್ಟಾಫೀಸನ್ನು ಹಾಲ್ಮಡಿ ಕಟ್ಟೆಯ ಒಂದು ಕೊಠಡಿಯಲ್ಲಿ ನಡೆಯುವಂತೆ ನಮ್ಮ ಅಮಲ್ದಾರ್ರ ಏರ್ಪಡಿಸಿದ್ದಾರೆ. ಟೆಲಿಗ್ರಾಂ ಕೊಪ್ಪದಲ್ಲಿಯೇ ಇರುತ್ತೆ. ಇದರಿಂದ ಪೋಸ್ಟ್ ಮಾಸ್ಟರಿಗೂ ಸಿಗ್ನಲರಿಗೂ ಉಂಟಾಗಿರುವ ತೊಂದರೆಯನ್ನು ಎಷ್ಟು ಹೇಳಿದರೂ ತೀರದು. ಪೋಸ್ಟ್ ಇಲಾಖಾ ಅಧಿಕಾರಿಗಳು ಈ ತೊಂದರೆಯನ್ನು ನಿವಾರಣೆ ಮಾಡುವದಾಗಿ ಶೀಘ್ರದಲ್ಲಿ ಇವೆರಡನ್ನೂ ಒಂದ. ಕಡೆ ಸೇರಿಸುವರೆಂದು ನಿರೀಕ್ಷಿಸುತ್ತೇವೆ.

ದಾವಣಗೆರೆ.—ಪ್ಲೇಗು ಎಂದಿನಂತೆಯೇ ಇದೆ. ೨೮ನೇ ತಾರೀಖಿನವರಿಗೆ ೪೩ ಜನಗಳಿಗೆ ತಗಲಿ, ೩೭ ಜನಗಳು ಮೃತರಾದರು. ಉಳಿದ ೬ ಜನರಲ್ಲಿ ೪ ಮಂದಿಗೆ ಮುಕ್ಕಾಲು ಪಾಲು ಗುಣವಾಗಿರುತ್ತೆ. ಮಿಕ್ಕ ೨ ಜನಗಳ ಸ್ಥಿತಿಯು ಅನುಮಾನವಾಗಿರುತ್ತೆ. ೧೦ ಆಣೆ ಭಾಗದವರು ಊರನ್ನು ಬಿಟ್ಟಿರುವರು. ತಾಲ್ಲೋಕು ಕಛೇರಿ ನೌಕರರನೇಕರು ಬಿಡದೆ ಇರುವದು ಆಶ್ಚರ್ಯವಾಗಿದೆ. ಪ್ಲೇಗು ಮೊದಲು ತಲೆದೋರಿದ ಚೌಕಿ ಪೇಟೆಯಲ್ಲಿ ತಮ್ಮ ಅದೃಷ್ಟವಿದ್ದಂತಾಗುವದೆಂದು ಮುಸ್ಕರ ಹಿಡಿದು ಗೃಹದಲ್ಲೇ ವಾಸವಾಗಿದ್ದ ಮೂರು ಕುಟುಂಬಗಳಲ್ಲಿ ಅನಾಹುತವಾಗಿ ಈಗ ಗುಡಿಸಲುಗಳಿಗೆ ಹೋಗಿರುವರು. ಅದೃಷ್ಟ ಪರೀಕ್ಷೆ ಮಾಡುವೆನೆಂದು ವ್ಯಾಘ್ರವನ್ನಾಲಂಗಿಸಬಹುದೇ?—ಉತ್ತರದೇಶದಲ್ಲೆಲ್ಲಾ ಬೆಳೆಯು ಚನ್ನಾಗಿರುವದರಿಂದ ಅಲ್ಲಿನ ಖರೀದಿಯು ಕಡಮೆಯಾಗಿ ಇಲ್ಲಿ ದಿನಸಿಗಳ ಧಾರಣೆಯು ಇಳಿದು ವ್ಯಾಪಾರದ ಸ್ಥಿತಿಯು ಮಂದವಾಗಿರುವದು. ರುಪಾಯಿಗೆ ರಾಗಿ ೪೪, ಜೋಳ ೩೩ ಸೇರುಗಳವರಿಗೂ ಕೊಡುತ್ತಲಿರುವರು.—ಇಲ್ಲಿನ ಅಸಿಸ್ಟೆಂಟು ಕಮಿಷನರ ಕೋರ್ಟನ್ನು ಚಿತ್ರದುರ್ಗಕ್ಕೆ ವರ್ಗಮಾಡಬೇಕೆಂದು ಡಿಪ್ಯುಟಿ ಕಮಿಷನರ್‌ರು ರೆವೆನ್ಯೂ ಕಮಿಷನರಿಗೆ ಸಿಫಾರಸು ಮಾಡಿದ್ದುದ್ದೂ ಇಲ್ಲಿನ ನಿವಾಸಿಗಳು ಹಾಗೆ ಮಾಡುವದರಿಂದ ಸ್ಥಳದ ಅಭಿವೃದ್ಧಿಗೆ ಕುಂದಕವುಂಟಾಗುವದೆಂದು ಮಹಾರಾಜರಿಗೂ, ದಿವಾನರಿಗೂ ತಾರು ಕೊಟ್ಟು ಅರ್ಜಿಗಳನ್ನು ಬರೆದುಕೊಂಡದ್ದೂ ಹಿಂದೆಯೇ ತಿಳಿಸಿದ್ದೆವಷ್ಟೆ. ಇದಕ್ಕೆ ದಿವಾನ್ ಸಾಹೇಬರಿಂದ ಈ ದಿವಸ ಗೌರನಮೆಂಟನವರಿಗೆ ಸದರಿ ಕೋರ್ಟನ್ನು ವರ್ಗಾಯಿಸುವ ಅಭಿಪ್ರಾಯವಿಲ್ಲವೆಂದು ಉತ್ತರವು ಬಂತು. ಇದು ಇಲ್ಲಿ ಎಲ್ಲರಿಗೂ ಆನಂದಕಾರಕವಾಗಿರುತ್ತೆ.— ಇಲ್ಲಿನ ಮುನಸಿಪಾಲಿಟಿ ಕಾರ್ಯಗಳು ಸಮರ್ಪಕವಾಗಿ ಜರುಗುವಂತೆ ಕಾಣುವದಿಲ್ಲ. ಪ್ಲೇಗು ಮುಂತಾದ ಜಾಡ್ಯಗಳು ಗ್ರಾಮದಲ್ಲಿ ತಲೆದೋರಿ ನಿವಾಸಿಗಳು ಗ್ರಾಮವನ್ನು ಬಿಟ್ಟಾಗ ಪುರಾಭಿವೃದ್ಧಿಯ ಕಾರ್ಯಗಳನ್ನು ಮಾಡಿಸುವದು ಅತಿ ಸುಲಭವಾದುದರಿಂದ ಮುನಸಿಪಾಲಿಟಿಯವರು ಇದಕ್ಕೆ ಗಮನಕೊಡುವದು ಅತ್ಯವಶ್ಯಕವಾಗಿರುವಲ್ಲಿ ಎಲ್ಲರೂ ಔದಾಸೀನ್ಯಭಾವದಿಂದಿರುವದು ಆಶ್ಚರ್ಯವನ್ನುಂಟುಮಾಡುತ್ತದೆ ಹಣವಿಲ್ಲವೆಂದು ಆಲೋಚಿಸುವಂತಿಲ್ಲ. ೨೩ ಸಾವಿರ ರುಪಾಯಿಗಳವರಿಗೂ ಇರುವದು. ಇಲ್ಲಿನ ವೈಸ್ ಪ್ರಸಿಡೆಂಟನ್ನು ಪ್ರಸಿಡೆಂಟರು ಗ್ರಾಮದಲ್ಲಿ ರಸ್ತೆ ವಗ್ಯೆರೆ ಹಾಕಬೇಕಾದ ಜಾಗಗಳ ವಿಷಯದಲ್ಲಿ ವಿಚಾರಮಾಡಿದಂತೆಯೂ ಅದಕ್ಕೆ ವೈಸ್ ಪ್ರಸಿಡೆಂಟರು ಯಾವದೂ ಇಲ್ಲವೆಂದು ಉತ್ತರವಿತ್ತಂತೆಯೂ ಕೇಳುವೆವು. ಇದು ಶೋಚನೀಯವಾದದ್ದೇ ಸರಿ. ಇಲ್ಲಿ ಪ್ಲೇಗು ಮೊದಲು ಅಂಕುರಿಸಿದ ಚೌಕಿ ಪೇಟೆ ಇದರ ಪಕ್ಕದಲ್ಲಿನ ತಂಬಾಕು ಪೇಟೆಗಳಲ್ಲಿನ ಮನೆಗಳಿಗೆ ಕಿತ್ತಲಿಲ್ಲದೆ ಒಂದಿರುವ ಬೈಲಿನಲ್ಲಿ ಎಲ್ಲಾ ಗೃಹಗಳ ಹೊಲಸೂ ಸೇರುತ್ತಲಿರುವದರಿಂದ ಇಲ್ಲಿ ಕನ್ಸರ್ವೆನ್ಸಿ ಸಂದಿ ಅತ್ಯಾವಶ್ಯಕ. ಕುರುಬರ ಕೇರಿಯಲ್ಲಿ ಸಾಧಾರಣವಾಗಿ ಪ್ರತಿಯೊಂದು ಗಲ್ಲಿಯನ್ನೂ ದೊಡ್ಡದು ಮಾಡಬೇಕು ಇಲ್ಲೂ ಅರೇಕ ಕೇರಿಯಲ್ಲೂ ಕೆಲವು ನಿಮಿಷಗಳಿದ್ದರೆ ತಲೆ ನೋವು ಬರುವದು. ಇಸಲಾಂ ಪೇಟೆಯಲ್ಲಿ ಚರಂಡಿಗಳ ಅವಶ್ಯಕತೆಯು ಅಧಿಕ. ಇಷ್ಟೇ ಅಲ್ಲ. ಇಲ್ಲಿನ ಗ್ರಾಮಾಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನೆಲ್ಲಾ ಬರೆಯಲು ಸ್ಥಳ ಸಂಕೋಚವಾಗಿದೆ — ಈಗ ೨೦ ದಿನಗಳಿಂದೀಚೆಗೆ ಕಳ್ಳತನವು ಪ್ರಬಲವಾಯಿತು. ಕಳೆದ ಸಂವತ್ಸರ ಪ್ಲೇಗಿನಲ್ಲಿ ಮೆ॥ ಸಾಹುಕಾರ್ ಸೋಮಣ್ಣನವರ ಗೃಹದಲ್ಲಿ ೧೦ ಸಾವಿರ ರುಪಾಯಿನಷ್ಟು ಕಳುವಾಗಿ ಪತ್ತೆಯಾಗಲೇ ಇಲ್ಲ. ಈ ವರುಷ ಸರಾಸರಿ ದಿನಕ್ಕೊಂದರಂತೆ ಕಳ್ಳತನ ನಡೆಯುತ್ತಲಿದ್ದರೂ ಒಂದೂ ಇದುವರಿಗೆ ಪತ್ತೆಯಾಗಿಲ್ಲ. ಬೆಳಗಾದರೆ ಜಾಡ್ಯದ ಸ್ಥಿತಿಯನ್ನು ವಿಚಾರಿಸುವದಕ್ಕೆ ಬದಲಾಗಿ ಯಾರ ಮನೆಯಲ್ಲಿ ಕಳ್ಳತನ, ಎಷ್ಟು ಕಳ್ಳತನವೆಂದು ವಿಚಾರಿಸಬೇಕಾಗಿದ ಸ್ಥಿತಿ ಬಂತಲ್ಲಾ. ಇಲ್ಲಿ ಟವನ್ ಪೋಲೀಸಿನವರು ೨೦ ಮಂದಿಯಿದ್ದು ಸಾಲದ್ದಕ್ಕೆ ನೂತನವಾಗಿ ಸಪ್ಪರದವರು ೧೭ ಜನಗಳನ್ನು ನೇಮಿಸಿಯೂ ಹೀಗೆ ಕಳುವಾಗುತ್ತಲಿದ್ದರೆ ಉಳಿವುಂಟೇ? ನೋಡಿದರೆ ಗುಡಿಸಲುಗಳ ವಾಸ; ಊರಿನಲ್ಲಿ ಪ್ಲೇಗಿನ ದಾಸ್ಯ. ಮನೆಗಳಲ್ಲಿ ಕಳ್ಳರ ಭಯವಂತ ಎಂದು ವಗ್ಯೆರೆ ಜನಗಳು ಎಲ್ಲಿನೋ ದಿನದೂಡಿಕೊಳ್ಳುತ್ತಿದ್ದಾರೆ. ಇರುವ ಆಸ್ತಿಪಾಸ್ತಿಗಳನ್ನು ಕಳಕೊಂಡು ಬಗೆಬಗೆಯ ಕಷ್ಟಗಳಿಗೆ ತುತ್ತಾಗಿರುವ ಜನಗಳು ಈ ಪರಿ ಮಾತನಾಡುವದೇನಾಶ್ಚರ್ಯ?—ಈ ವರುಷ ಪ್ಲೇಗಿನ ನಿಮಿತ್ತ ಮಹರಂ ಗಲಾಟೆಯು ವಿಶೇಷವಾಗಿಲ್ಲ.—ಬಕ್ಕೇಶನ ಉತ್ಸವವು ಊರೊಳಗಾಗಕೂಡದೆಂದು ಅಮಲ್ದಾರು ಹೇಳಿದ್ದರಿಂದ ೩ನೇ ತಾರೀಖಿನಲ್ಲಿ ಊರಹೊರಗೇ ರಥೋತ್ಸವವು ತಕ್ಕಮಟ್ಟಿಗೆ ನಡೆಯಿತು. ಮುರಿಗೆ ಮಠದಲ್ಲಿ ಜವಾಹಿರಿಗಳನ್ನು ಕದ್ದದ್ದಕ್ಕಾಗಿ ೧೮ ತಿಂಗಳು ಕಠಿನಶಿಕ್ಷೆ ವಿಧಿಸಲ್ಪಟ್ಟ ಕೈದಿಯನ್ನು ಬೆಂಗಳೂರಿಗೆ ಮೂರು ದಿನಗಳ ಕೆಳಗೆ ಕರೆದುಕೊಂಡು ಹೋಗುತ್ತಿದ್ದಾಗ ಅದಸಿಕರೆ ಹತ್ತಿರ ತಪ್ಪಿಸಿಕೊಂಡುಹೋದಂತೆ ತಿಳಿಯಬಂದಿರುವದು.

## ಲಾರ್ಡ್ ಕರ್ಜನ್‌ರವರು ಮಾಡಿದ ಉಪನ್ಯಾಸವು.

### ಹಿಂದುಸ್ಥಾನದ ಜಮಾಖರ್ಚು ಮುಂತಾದ್ದು.

ಕಳೆದ ತಿಂಗಳ ೨೫ನೇ ತಾರೀಖು ಬುಧವಾರ ಕಲ್ಕತ್ತಾ ಪಟ್ಟಣದಲ್ಲಿ ಮಂತ್ರಾಲೋಚನಾ ಸಭಾಮಂದಿರದಲ್ಲಿ ಮೆಂಬರುಗಳನ್ನು ಕುರಿತು ಅವರು ಮಾಡಿದ ಕೆಲವು ಆಕ್ಷೇಪಣೆಗಳಿಗೆ ಪ್ರತ್ಯುತ್ತರವಾಗಿ ವೈಸ್‌ರಾಯ ಲಾರ್ಡ್ ಕರ್ಜನ್ ಪ್ರಭುಗಳು ಅಪ್ಪಣೆಕೊಡಿಸಿದ ಕೆಲವು ಮುಖ್ಯ ವಿಷಯಗಳನ್ನು ನಮ್ಮ ವಾಚಕರ ತಿಳುವಳಿಕೆಗೋಸ್ಕರ ಇಲ್ಲಿ ಪ್ರಕಟಿಸಿರುತ್ತೇವೆ.

### ರಿಯಾಯತಿಗಳು.

ಹಿಂದುಸ್ಥಾನದ ಪ್ರಜೆಗಳು ಸರ್ಕಾರಕ್ಕೆ ಪಾವತಿಮಾಡುತ್ತಿರುವ ಕಂದಾಯ ಕೊಳಿಗೆಗಳು ಸ್ವಲ್ಪ ಭಾರವಾಗಿವೆ ಎಂತಲೂ, ಅವನ್ನು ತಕ್ಕಮಟ್ಟಿಗೆ ಕಡಿಮೆಮಾಡಿಕೊಡಬೇಕೆಂದು ಯೋಚಿಸುತ್ತಾ ಇದ್ದೇನೆಂತಲೂ ನಾನು ಮೊದಲನೇ ವರುಷದಲ್ಲೇ ಅಂದರೆ, ೧೮೯೯ನೆ ಇಸವಿಯ ಬಜೆಟ್ ಚರ್ಚೆಯ ಕಾಲದಲ್ಲೇ ಸೂಕ್ಷ್ಮವಾಗಿ ತಿಳಿಸಿರುತ್ತೇನೆ. ಈಚಿಗೆ ಕ್ಷಾಮವೂ ರೋಗಾದ್ಯುಪದ್ರಗಳೂ ಯುದ್ಧವೂ ಪ್ರಾಪ್ತವಾದದ್ದರಿಂದ ಆಗಲೇ ಇದಕ್ಕೆ ಗಮನಕೊಡಲು ಸಾಧ್ಯವಾಗಲಿಲ್ಲ. ಈಚಿಗೆ ಕಳೆದ ವರುಷ ರಾಜಾದಾಯದಲ್ಲಿ ಉಳಿದ ಶಿಲ್ಕು ಹೆಚ್ಚಾಗಿರುವದನ್ನು ಕಂಡು ಬಹಳ ಬಡವರಾದ ಪ್ರಜೆಗಳಿಗೂ ಪ್ರಯೋಜನವಾಗುವಂಥಾ ರಿಯಾಯತಿಯನ್ನು ತೋರಿಸಬೇಕೆಂದು ತೀರ್ಮಾನಿಸಿರುತ್ತೇವೆ. ಕ್ಷಾಮಡಾಮರಗಳಿಂದ ತುಂಬಾ ನಶಿಸಿಹೋಗಿರುವ ರೈತಾಪಿ ಜನರಿಗೆ ಅನುಕೂಲವಾಗುವಂತೆ ಎರಡು ಕೋಟಿ ರೂಪಾಯಿನಷ್ಟು ಕಂದಾಯಗಳನ್ನು ರಿಮಿಷನ್ ಮಾಡಿರುತ್ತೇವೆ. ಇದಲ್ಲದೆ ಸಕಲ ಪ್ರಜೆಗಳಿಗೂ ಈಗಾಗಲೇ ತಿಳಿದು ಬಂದಿರುವ ಪ್ರಕಾರ ಉಪ್ಪಿನ ಸುಂಕವನ್ನೂ ಆದಾಯದ ಮೇಲಣ ತೆರಿಗೆಯನ್ನೂ ಕಡಿಮೆಮಾಡಿರುತ್ತೇವೆ. ದೇಶೀಯ ರಾಜರುಗಳು ಇಂಡಿಯಾ ಗೌವರ್ನಮೆಂಟಿಗೆ ಪಾವತಿಮಾಡಬೇಕಾಗಿರುವ ಸಾಲದ ಬಡ್ಡೀ ಹಣವನ್ನು ಮೂರು ವರುಷಗಳ ತನಕ ಅವರು ಕೊಡಬೇಕಾಗಿಲ್ಲವೆಂದು ಬಿಟ್ಟಿರುವೆವು. ಹೀಗೆ ಈ ರಾಷ್ಟ್ರದಲ್ಲಿ ತೆರಿಗೆಯನ್ನು ಕಡಿಮೆಮಾಡಿಕೊಟ್ಟು ಇಲ್ಲಿಗೆ ೨೦ ವರುಷಗಳಾದವು. ಯಾವ ರೀತಿಯಲ್ಲಿ ನೋಡಿದಾಗ್ಯೂ ಹಿಂದುಸ್ಥಾನದ ಕಂದಾಯದ ದರವು ದುಬಾರಿಯಾಗಿರುವದಿಲ್ಲ. ಈಗ ಗೌವರ್ನಮೆಂಟಿನವರು ವರುಷಕ್ಕೆ ಎರಡೂಕಾಲು ಕೋಟಿ ರೂಪಾಯಿನಷ್ಟು ಕಂದಾಯ ಕಡಿಮೆಮಾಡಿರುತ್ತಾರೆ. ಇದರಿಂದ ಗೌವರ್ನಮೆಂಟಿನ

ಆದಾಯವು ಹೆಚ್ಚಿದಹಾಗೆಲ್ಲಾ ಪ್ರಜೆಗಳ ಭಾರವೂ ಕಡಿಮೆಯಾಗುತ್ತಾ ಬರುತ್ತದೆಂಬುದಕ್ಕೆ ಇದೇ ದೃಷ್ಟಾಂತವಾಗಿದೆ. ಆದರೂ ಈಗ ಕಡಿಮೆಮಾಡಿರುವ ಉಪ್ಪಿನ ಸುಂಕವು ಎಂದೆಂದಿಗೂ ಇದೇ ಪ್ರಕಾರ ಇದ್ದೀತೆಂದು ಭರವಸೆಕೊಡಲಾಗುವದಿಲ್ಲ. ಅವಶ್ಯ ಬೀಳುವಾಗ್ಯೆ ಅದನ್ನು ಮತ್ತೆ ಹೆಚ್ಚಿಸಲಾದೀತು.

### ಹಿಂದುಸ್ಥಾನದ ಬಡತನವು.

ಕೆಲವರು ಇಂಡಿಯಾ ಗವರ್ನಮೆಂಟಿನವರ ಮೇಲೆ ಆಕ್ಷೇಪಣೆ ಮಾಡುತ್ತಲೇ ಬಂದಿದಾರೆ. 'ಹಿಂದುಸ್ಥಾನದ ರೈತನು ದರಿದ್ರನು; ರಾಷ್ಟ್ರವು ಕ್ಷೀಣಗತಿಗೆ ಬರುತ್ತಿದೆ; ಕಡೆಗೆ ದೇಶವೆಲ್ಲಾ ಹಾಳಾಗುವದು; ಸರಕಾರದವರು ಪ್ರಕಟಿಸುವ ಲೆಕ್ಕಗಳು ನಂಬತಕ್ಕವುಗಳಲ್ಲ; ಅವರು ಹುಟ್ಟುವಳಿ ಜಾಸ್ತಿಯಾಯಿತೆಂದು ಹೇಳುವ ಮಾತು ನಿಜವಾದದ್ದಲ್ಲ; ಆಗಾಗ್ಯೆ ಅವರು ಪ್ರಯೋಗಿಸುವವರಿಗೆ ಗುಟುಕುಕೊಟ್ಟಂತ ಅಲ್ಪಸ್ವಲ್ಪ ರಿಯಾಯಿತಿಯನ್ನು ತೋರಿಸಿದರೂ ಪ್ರಯೋಜನವಿಲ್ಲ; ಶಾಶ್ವತವಾದ ರಿಯಾಯಿತಿಯನ್ನು ಕೊಟ್ಟಾಗಲ್ಲದೇ ಆಳುವವರ ಒಳ್ಳೆ ಸಮಾನ ಪ್ರಕಾಶವಾಗದು(?)' ಎಂಬದಾಗಿ ಆಕ್ಷೇಪಿಸತಕ್ಕವರು ಅನೇಕರಿರುತ್ತಾರೆ. ಇಂಥಾ ಆಕ್ಷೇಪಣೆಗೆ ಆಧಾರವೇನೂ ಇರುವದಿಲ್ಲ. ಆದರೂ ಈಗ ೨ ಕೋಟಿ ರೂಪಾಯಿನ ತೆರಿಗೆ ಮಾಫಿಬಿಟ್ಟಿರುವದರಿಂದ ಈ ರಾಷ್ಟ್ರವು ಐಶ್ವರ್ಯಯುಕ್ತವಾದದ್ದಾಗಿದೆ ಎಂದಾಗಲಿ, ಬಡತನವು ಇಲ್ಲವೇ ಇಲ್ಲವೆಂದಾಗಲಿ ನಾನು ಹೇಳಲಾರೆನು. ಬಡತನವು ಬೇಕಾದಷ್ಟು ಇದ್ದೇ ಇದೆ. ಈ ರಾಷ್ಟ್ರದಲ್ಲಿ ಪ್ರಜಾಸಂಖ್ಯೆಯು ಅಪಾರವಾಗಿರುವದು, ಮತ್ತು ಅದು ದಿನೇ ದಿನೇ ಹೆಚ್ಚುತ್ತಲೇ ಇದೆ. ಇಷ್ಟು ಪ್ರಜೆಗಳ ಜೀವನದ ಕ್ರಮವೂ, ಅವರ ಪೂರ್ವಾಚಾರ ಪದ್ಧತಿಗಳೂ, ಅವರ ಕಾಯಿಗಳೂ, ಅವರ ಮನೋಧರ್ಮವೂ ಆ ಬಡತನವನ್ನು ನೀಗಿಸಲಾರವು. ಆದರೆ ಅದು ದಿನೇ ದಿನೇ ಹೆಚ್ಚಿ ಹೆಚ್ಚಾಗಿ ಕ್ಷೀಣಗತಿಗೆ ಬರುತ್ತದೆಂಬ ಮಾತನ್ನು ಮಾತ್ರ ನಾನು ನಂಬುವದಿಲ್ಲ. ಅದು ಕ್ರಮಕ್ರಮವಾಗಿಯೂ ನಿಧಾನವಾಗಿಯೂ ಅಭಿವೃದ್ಧಿ ಹೊಂದುತ್ತದೆ. ಕಾಲಕ್ಕೆ ತಕ್ಕ ಸುಧಾರಣೆಯಾದದ್ದಲ್ಲಿ ಜನರ ನಮ್ಮದಿಗೂ ಅದರ ಪ್ರಗತಿಗೂ ಲೋಪವಿಲ್ಲ. ಆಕ್ಷೇಪಣೆ ಮಾಡತಕ್ಕವರೂ, ಆಡಳಿತೆಯ ಭಾರವನ್ನು ವಹಿಸತಕ್ಕವರೂ ಪರಸ್ಪರ ಸಹಾಯಕರಾಗುವ ಪಕ್ಷದಲ್ಲಿ ಹಿಂದುಸ್ಥಾನವು ಉಚ್ಛ್ರಾಯ ಸ್ಥಿತಿಗೆ ಬರುವದು ನಿಶ್ಚಿತ.

### ದೆಹಲಿ ದರ್ಬಾರು.

ಪ್ರಜೆಗಳು ಕ್ಷಾಮಕ್ಕೂ ಉಪದ್ರವಗಳಿಗೂ ಸಿಕ್ಕಿ ನರಳುತ್ತಿರುವಾಗ್ಯೆ ಅವರಿಗೆ ಯಾವದೊಂದು ರಿಯಾಯಿತಿಯನ್ನೂ ತೋರಿಸದೆ, ಗವರ್ನಮೆಂಟಿನವರು ರೈತನ ಹಣವನ್ನು ದೆಹಲಿ ದರ್ಬಾರಿಗೆ ವಿನಿಯೋಗಿಸಿ, ದುಂದುಖರ್ಚು ಮಾಡುತ್ತಾರೆಂಬದಾಗಿ ಅನೇಕರು ಆಕ್ಷೇಪಣೆ ಮಾಡಿದರಲ್ಲವೇ? ಅದಕ್ಕೆ ಎಷ್ಟು ಖರ್ಚಾಯಿತು, ಅದರ ಪ್ರಯೋಜನವೇನು ಎಂಬ ವಿಷಯಗಳನ್ನು ಕುರಿತು ಆಲೋಚನೆ ಮಾಡದೇನೇ ಹೀಗೆಲ್ಲಾ ಆಕ್ಷೇಪಣೆ ಮಾಡುವದು ಯೋಗ್ಯವಲ್ಲ. ಹೋದವರುಷ ಸೆಪ್ಟಂಬರಿನಲ್ಲಿ ಈ ದರ್ಬಾರಿಗೆ ೨೮" ಲಕ್ಷ ರೂಪಾಯಿ ಖರ್ಚಾಗಬಹುದೆಂತಲೂ, ಈ ಖರ್ಚಿನಲ್ಲಿ ಬಹಳಭಾಗ ಉತ್ಪತ್ತಿಯಾಗುವದೆಂತಲೂ ನಾನು ಹೇಳಿ ಇದ್ದೆನಷ್ಟೆ. ಇಷ್ಟು ದೊಡ್ಡ ರಾಷ್ಟ್ರದಲ್ಲಿ ಮಹಾ ಅಗಾಧವಾದ ದರ್ಬಾರು ನಡೆಸುವದಕ್ಕೆ ಇಷ್ಟು ಸ್ವಲ್ಪ ಹಣ ಸಾಕಾಗುವದಿಲ್ಲವೆಂದು ಅನೇಕರು ಸಹಜವಾಗಿ ತಿಳಿದಿದ್ದರು. ಈ ದರ್ಬಾರು ಪೂರೈಸಿತು. ಈಗಲಾದರೋ ಅದರ ಖರ್ಚು ಸುಮಾರು ೧೮॥ ಲಕ್ಷ ರೂಪಾಯಿ ಎಂದು ತಿಳಿದು ಬಂದಿದೆ. ೨೩ ಕೋಟಿ ಪ್ರಜಾಸಂಖ್ಯೆಯನ್ನು ಒಳಗೊಂಡಿರುವ ಈ ರಾಷ್ಟ್ರಕ್ಕೆ ೧೮॥ ಲಕ್ಷ ರೂಪಾಯಿ ದರ್ಬಾರಿಗೆ ಖರ್ಚಾದದ್ದು ಹೆಚ್ಚೆಂದು ಯಾರಾದರೂ ಹೇಳಿಯಾರು? ೪ ಕೋಟಿ ಪ್ರಜಾಸಂಖ್ಯೆಯುಳ್ಳ ವಿಲಾಯತಿಯಲ್ಲಿ ಕಿರೀಟಧಾರಣೆಯ ಉತ್ಸವಕ್ಕೆ ೧೫ ಲಕ್ಷ ರೂಪಾಯಿ ಖರ್ಚುಮಾಡಿದರಲ್ಲಾ! ಈ ಖರ್ಚನ್ನು ಪ್ರಜೆಗಳಿಗೆ ಹಂಚಿಹಾಕಿದರೆ ತಲೆಗೆ ೬ ಆಣೆಯಂತೆ ಬೀಳುವದು. ಇದಲ್ಲದೆ ಹಿಂದುಸ್ಥಾನದಿಂದ ಹೋಗಿದ್ದ ದೇಶೀಯ ರಾಜರೇ ಮುಂತಾದ ಪ್ರತಿನಿಧಿಗಳಿಗೆ ಔತಣಮಾಡಿದ್ದಕ್ಕೆ ವಿಲಾಯತಿಯವರು ೩೬,೦೦೦ ಪೌಂಡುಗಳು ಬೇರೆ ಖರ್ಚುಮಾಡಿದರು. ಹಿಂದುಸ್ಥಾನದಲ್ಲಾದರೋ ಮೇಲ್ಕಂಡ ದರ್ಬಾರಿನ ಖರ್ಚನ್ನು ಪ್ರಜೆಗಳಿಗೆ ಹಂಚಿಹಾಕಿದರೆ ತಲೆಗೆ ೨ ಕಾಸು ಬೀಳುವದು. ಚಕ್ರವರ್ತಿಗೆ ಕಿರೀಟಧಾರಣೆಯಾದ ಸಂಭ್ರಮವನ್ನು ದರ್ಬಾರು ಮೂಲಕ ಪ್ರದರ್ಶನಪಡಿಸುವದಕ್ಕೆ ಪ್ರಜೆಗಳು ತಲಾ ೨ ಕಾಸು ಕೊಡುವದು ದುಂದುಖರ್ಚೇ? ಹಿಂದುಸ್ಥಾನದ ದೇಶೀಯ ರಾಜರುಗಳು ತಮ್ಮ ವಿವಾಹ ಕಾಲಗಳಲ್ಲಿ ೧೫—೨೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿರುವದಿಲ್ಲವೇ? ಈ ದರ್ಬಾರಿನ ಫಲವೇನು? ರೈತರೇ ಮೊದಲಾದ ಸಕಲ ಪ್ರಜೆಗಳೂ ದರ್ಬಾರಿಗಾಗಿ ತಲಾ ೨ ಕಾಸು ಕೊಟ್ಟು, ಈಗ ಅದರ ಎಂಟರಷ್ಟು ಆದಾಯ ಪಡೆದಿರುತ್ತಾರೆ. ಆದಕಾರಣ ಈ ದರ್ಬಾರಿನಿಂದ ಖಂಡಿತವಾಗಿಯೂ ಪ್ರಯೋಜನ ಉಂಟಾಗಿರುವದು. ದೇಶೀಯ ರಾಜರುಗಳು ದರ್ಬಾರಿಗೋಸ್ಕರ ಬಹಳ ಹಣವನ್ನು ಖರ್ಚುಮಾಡಿದರೆಂದು ಹೇಳಬಹುದು. ಅವರು ಖರ್ಚುಮಾಡಿದ ಹಣದಲ್ಲಿ ಒಂದು ಕಾಸಾದರೂ ಈ ರಾಷ್ಟ್ರವನ್ನು ಬಿಟ್ಟು ಹೊರಗೆ ಹೋಗಿರುವದಿಲ್ಲ. ಅಂಥಾ ಸಂಸ್ಥಾನಗಳಲ್ಲಿ ಪ್ರಜೆಗಳು "ನಮ್ಮ ಮಹಾರಾಜರು ದುಂದುಖರ್ಚು ಮಾಡಿದರಲ್ಲಾ" ಎಂಬದಾಗಿ ಯಾರಾದರೂ ಗುಣುಗುಟ್ಟಿದ್ದುಂಟೇ?

### ಸಕಲಕಲಾ ಪ್ರದರ್ಶನೋತ್ಸವವು.

ಈ ರಾಷ್ಟ್ರದ ಸಕಲ ಕೈಗಾರಿಕೆ ವಸ್ತುಗಳನ್ನೂ ದೆಹಲಿ ದರ್ಬಾರಿನಲ್ಲಿ ಒಂದು ಕಡೆ ಕೂಡಿಸಿಟ್ಟದ್ದರಿಂದ ಈ ದೇಶದ ಕಸಬುಗಳಿಗೆ ತುಂಬಾ ಪ್ರೋತ್ಸಾಹವಾಯಿತೆನ್ನುವದಕ್ಕೆ ಸಂಶಯವಿಲ್ಲ. ಈ ಉದ್ದೇಶದಿಂದಲೇ ಆ ಚಿತ್ರವಸ್ತುಗಳನ್ನೆಲ್ಲಾ ತರಿಸಿ ಪ್ರದರ್ಶನ ಮಾಡಲಾಯಿತು. ಈ ಪ್ರದರ್ಶನದ ಪ್ರಯೋಜನವಿಂಥಾದ್ದೆಂದು ಕೆಲವರಿಗೆ ನಿರ್ದೇಶಿಸಿ ಹೇಳುವದು ಅಸಂಭವ. ಈ ದೇಶದ ಸಕಲ ದಿಕ್ಕುಗಳವರೂ, ಪರರಾಷ್ಟ್ರಗಳವರೂ ಅನೇಕವಾಗಿ ಬಂದು ಪ್ರದರ್ಶನದ ಚಿತ್ರವಸ್ತುಗಳನ್ನು ನೋಡಿ, ಈ ರಾಷ್ಟ್ರದಲ್ಲಿ ಕುಶಲವಿದ್ಯೆಗಳು ಬಹಳ ಒಳ್ಳೇ ಸ್ಥಿತಿಯಲ್ಲಿರುತ್ತವೆಂದು ತಿಳಿದುಕೊಳ್ಳುವಂತಾಯಿತು. ಈ ಪ್ರದರ್ಶನ ಶಾಲೆಯನ್ನು ಕೆಲವು ದಿನಗಳ ಮಟ್ಟಿಗೆ ತೆರೆದಿದ್ದರು. ಅಷ್ಟರಲ್ಲೇ ೪೮,೦೦೦ ಜನರು ಬಂದು ನೋಡಿಹೋದರು. ನೋಡುವವರು ತಲಾ ೩ ರೂಪಾಯಿಯಂತೆ ರುಸುಮನ್ನು ಕೊಟ್ಟಿದಾರೆ. ಸುಮಾರು ೩ ಲಕ್ಷ ರೂಪಾಯಿಗಳ ಚಿತ್ರವಸ್ತುಗಳು ಖರ್ಚಾಗುತ್ತವೆ. ಈ ಪ್ರದರ್ಶನ ಶಾಲೆಯಲ್ಲಿ ಒಟ್ಟು ೩ ಲಕ್ಷ ರೂಪಾಯಿ ಉತ್ಪತ್ತಿ ಆಯಿತು. ಅದರ ಕಟ್ಟಡಕ್ಕೆ ೧॥ ಲಕ್ಷ ರೂಪಾಯಿ ಖರ್ಚು ಮುಟ್ಟಿತು. ಎಲ್ಲಾ ಲೆಕ್ಕಾಚಾರಮಾಡಿ ನೋಡಿದ್ದರಲ್ಲಿ ಈ ಪ್ರದರ್ಶನೋತ್ಸವಕ್ಕೆ ಸರ್ಕಾರದವರ ಕೈಯಿಂದ ೨೦,೦೦೦ ರೂಪಾಯಿ ಮಾತ್ರ ಖರ್ಚಾಗಿರುವದೆಂದು ಕಂಡುಬಂತು. ಅದಕಾರಣ ಗವರ್ನಮೆಂಟಿನವರು ಬಹಳ ಸ್ವಲ್ಪ ಹಣ ಖರ್ಚುಮಾಡಿದ್ದರಿಂದಲೇ ಕುಶಲವಿದ್ಯೆಗಳಿಗೆ ತುಂಬಾ ಪ್ರೋತ್ಸಾಹ ಕೊಟ್ಟಂತಾಯಿತು. ಈ ರಾಷ್ಟ್ರದ ಕುಶಲವಿದ್ಯೆಗಳು ಇಂಥಿಂಥವುಗಳೆಂಬದು ಸುವರ್ತಿತವಾಗಿ(?) ಪ್ರಕಾಶಕ್ಕೆ ಬಂದಿತು. ಇದಲ್ಲದೆ ಅನೇಕರು ಈ ಚಿತ್ರವಸ್ತುಗಳನ್ನು ಕೊಂಡುಕೊಂಡು ಹೋಗಿ ತಮ್ಮ ಗೃಹ ಧಾಮಗಳಲ್ಲಿ ಪ್ರದರ್ಶನಶಾಲೆಗಳಲ್ಲೂ ಇಟ್ಟುಕೊಳ್ಳುವಂತಾಯಿತು.

### ಕ್ಷಾಮದ ಮೂಲೋತ್ಪಾಟನೆ ಅಸಾಧ್ಯ

ಈ ಸಭೆಯ ಮೆಂಬರಾದ ರಾಯ ಶ್ರೀರಾಮ ಬಹದೂರ್ ಎಂಬವರು— ಈ ರಾಷ್ಟ್ರದಲ್ಲಿ ಇನ್ನು ಮೇಲೆ ಎಂದೆಂದಿಗೂ ಕ್ಷಾಮವು(?) ಪ್ರಾಪ್ತವಾಗದಂತೆ ಅದರ ಮೂಲವನ್ನು ಕಂಡುಹಿಡಿದು ತಕ್ಕ ಪರಿಹಾರ ಮಾಡಬೇಕೆಂಬದಾಗಿ ನನಗೆ ತಿಳಿಸಿದರು. ಈ ಕ್ಷಾಮವೆಂಬ ವೃಕ್ಷದ ಮೂಲವು ಒಂದೇ ಆಗಿಯೂ, ಅದನ್ನು ಸರ್ಕಾರದವರು ಕಂಡುಹಿಡಿಯಬಹುದಾಗಿಯೂ ಇರುವ ಪಕ್ಷಕ್ಕೆ ಖಂಡಿತವಾಗಿಯೂ ಅವರು ಅದನ್ನು ಬೇರುಸಹಿತ ಕಿತ್ತು ಬಿಸಾಡುತ್ತಿದ್ದರೆನ್ನುವದಕ್ಕೆ ಸಂಶಯವಿಲ್ಲ. ನಾವು ಈಗ ಕಡಿಯುತ್ತಿರುವ ವೃಕ್ಷಗಳಾದರೋ ಆ ವೃಕ್ಷದ ಉಪಬೇರುಗಳಾಗಿರುತ್ತವೆ. ನೀರಾವರಿ ಕಾಮಗಾರಿಗಳನ್ನು ಹೆಚ್ಚಾಗಿ ಮಾಡಿಸುತ್ತೇವೆ. ಸದ್ವಿದ್ಯಾಭ್ಯಾಸವನ್ನು ವಿಶೇಷವಾಗಿ ಹರಡುತ್ತೇವೆ. ರೈತಾಪಿ ಜನರ ಸಾಲಸೋಲಗಳನ್ನು ಹರಿಸಿ ಸಾಹುಕಾರರ ಕೈಯಿಂದ ಬಿಡಿಸುತ್ತೇವೆ. ಇವುಗಳಲ್ಲದೆ ಬೆಳೆಗಳನ್ನು ಶೋಧನೆಮಾಡಿಸಿ, ಸ್ವಾತಂತ್ರವಾಗಿ ಬೆಳೆ ಮಾಡಲು ಕಲಿಸುತ್ತೇವೆ. ಕ್ಷಾಮವು ಪ್ರಾಪ್ತವಾಗುವಾಗ್ಯೆ ಅದರ ನಿವಾರಣೆಗಾಗಿ ನಾವು ಮಾಡಬೇಕಾಗುವ ಕಾರ್ಯಗಳನ್ನು ಕಾಲಾನುಗುಣ್ಯವಾಗಿ ಏರ್ಪಡಿಸಿ ಮಾಡುತ್ತಾ ಬರುವೆವು. ಈ ಕಾರ್ಯಗಳೆಲ್ಲಾ ಕ್ಷಾಮದ ರೌದ್ರವನ್ನು ಕಡಿಮೆಮಾಡತಕ್ಕವುಗಳೇ ಹೊರತು ಮತ್ತೆ ಬೇರೆ ಅಲ್ಲ. ಮತ್ತು ಇವುಗಳ ಮೂಲಕ ಕ್ಷಾಮಪೀಡಿತವಾಗುವ ಪ್ರದೇಶವು ದಿನೇ ದಿನೇ ಕಡಿಮೆಯಾಗುತ್ತಾ ಬರುವದು. ಈ ರಾಷ್ಟ್ರದಲ್ಲಿ ಮಳೆ ಸುರಿಯುವದು ಖಂಡಿತವಾದದ್ದಾಗಿಲ್ಲ. ಇಲ್ಲಿನ ಪ್ರಜಾಸಂಖ್ಯೆಯಾದರೋ ದಿನೇ ದಿನೇ ಹೆಚ್ಚುತ್ತಾ ಇದೆ. ಇಂಥಾದ್ದರಲ್ಲಿ ಸರ್ಕಾರದವರನ್ನು— "ನೀವು ದೇವರ ಕೈಯಿಂದ ಮೇಘರಾಜನ ಮೇಲಿನ ಅಧಿಕಾರವನ್ನು ಕಿತ್ತುಕೊಳ್ಳಿ" ಎಂಬದಾಗಿ ಕೇಳುವಂತಾಗುವದು. ಕಳೆದ ವರುಷ ಆಗಸ್ಟು ಸೆಪ್ಟಂಬರು ತಿಂಗಳುಗಳಲ್ಲಿ ದೇವರು ದಯಮಾಡಿದ್ದರಿಂದ ಮಳೆಬಂದು ಕ್ಷಾಮಬಾಧೆಯು ನಿವಾರಣೆಯಾಯಿತು. ಅದಕ್ಕಿಂತ ಮೊದಲೇ ಮಳೆಯನ್ನು ಬರಮಾಡುವದಕ್ಕೆ ಎಂಥಾ ಗವರ್ನಮೆಂಟಿನವರ ಕೈಯಿಂದಲೂ ಆಗಲಾರದು. ಎಂಥಾ ಗವರ್ನಮೆಂಟಿನವರೇ ಆಗಲಿ ಬರತಕ್ಕ ಮಳೆಯನ್ನು ನಿಲ್ಲಿಸಲಿಕ್ಕಾಗಲಾರರು. ಪೂರ್ವಕಾಲದಲ್ಲಿ ಕ್ಷಾಮವು ಈಗಿನಷ್ಟು ಭೀಕರವಾಗಿರಲಿಲ್ಲವೆಂತಲೂ, ಹಿಂದುಸ್ಥಾನವಲ್ಲದೆ ಇತರ ರಾಜ್ಯಗಳಲ್ಲಿ ಇಂಥಾ ದುರ್ಭಿಕ್ಷಗಳು ಪ್ರಾಪ್ತವಾಗುವದಿಲ್ಲವೆಂತಲೂ ಈ ಕೌನ್ಸಿಲ್ ಮೆಂಬರು ತಿಳಿಸುತ್ತಾರೆ. ಹಿಂದೆ ಈ ರಾಷ್ಟ್ರದಲ್ಲಿ ಕ್ಷಾಮಗಳು ಪ್ರಾಪ್ತವಾಗಿದ್ದಾಗ ಸರ್ಕಾರದವರು ಕಮಿಷನ್ ಜಡ್ಜಿಗಳ ಮೂಲಕ ತನಿಖೆಮಾಡಿಸಿ, ರಿಪೋರ್ಟುಗಳನ್ನು ಬರೆಸಿಟ್ಟದಾರೆ. ಇವುಗಳನ್ನು ಓದಿ ನೋಡಿದರೆ ಮೇಲ್ಕಂಡ ಮೆಂಬರ ಮೊದಲನೆ ಆಕ್ಷೇಪಣೆಗೆ ಆಧಾರವಿಲ್ಲವೆಂಬುದು ಸರಿಯಾಗಿ ಗೊತ್ತಾಗುವದು. ಆಮೇಲಾಗಿ ರಷ್ಯಾ ರಾಜ್ಯದ ಪೂರ್ವ ಚರಿತ್ರೆಯನ್ನು ಓದಿನೋಡಿದಲ್ಲಿ ಅದೇ ಮೆಂಬರು ಎರಡನೇ ಆಕ್ಷೇಪಣೆಯನ್ನು ಮಾಡಲಾರರು. ಆದಾಗ್ಯೂ ಇಂಡಿಯಾ ಗವರ್ನಮೆಂಟಿನವರು ಈ ರಾಷ್ಟ್ರದಲ್ಲಿ ಕ್ಷಾಮವನ್ನು ಮೂಲೋತ್ಪಾಟನೆ ಮಾಡದೆಹೋದರೂ ಅದರ ಕ್ರೌರ್ಯವು ದಿನೇ ದಿನೇ ಕಡಿಮೆಯಾಗುವಂತೆ ಮಾಡಲು ನಾನಾ ಕಾರ್ಯಗಳನ್ನು ನಡಸುತ್ತಾ ಬಂದಿರುವರು; ಮತ್ತು ಇನ್ನು ಮುಂದೆಯೂ ಮಾಡುತ್ತಾ ಬರುವರು.

### ವಿದ್ಯಾಭ್ಯಾಸ.

ಹಿಂದುಸ್ಥಾನದಲ್ಲಿ ವಿದ್ಯಾಭ್ಯಾಸ ವಿಷಯವು ಅಷ್ಟು ಸಮರ್ಪಕವಾಗಿಲ್ಲ. ಅನೇಕನೇಕರು ಇದನ್ನು ತಿಳಿದು, ಸರ್ಕಾರದವರು ಇದನ್ನು ಕ್ರಮಪಡಿಸುವದಿಲ್ಲವಲ್ಲಾ ಎಂಬದಾಗಿ ಆಕ್ಷೇಪಣೆ ಮಾಡುತ್ತಿದ್ದರು. ನಿಜಸ್ಥಿತಿಯನ್ನು ಆಮೂಲಾಗ್ರವಾಗಿ ತನಿಖೆಮಾಡಬೇಕೆಂದು ಸರ್ಕಾರದವರು ಈಗ ಕಮಿಷನರ್ ಜಡ್ಜಿಗಳನ್ನು ನೇಮಿಸಿರುತ್ತಾರೆ. ಇವರು ಅಲ್ಲಲ್ಲಿ ಜನರ ಸಾಕ್ಷ್ಯಗಳನ್ನು ಬರೆದುಕೊಂಡು, ಅದನ್ನು ಕ್ರೋಢೀಕರಿಸಿ ರಿಪೋರ್ಟು ಮಾಡುವವರಾಗಿದ್ದಾರೆ. ಮೊದಲು ಆಕ್ಷೇಪಣೆ ಮಾಡುತ್ತಿದ್ದವರು ವಿದ್ಯಾಭ್ಯಾಸಕ್ರಮವು ಮೊದಲಿದ್ದದ್ದೇ ಚನ್ನಾಗಿದೆ ಎಂತಲೂ, ಈಗ ಮಾಡಬೇಕೆಂದು ಸೂಚಿಸುವ ಬದಲಾವಣೆಗಳು ಸಮರ್ಪಕವಾಗಿಲ್ಲವೆಂತಲೂ ಮತ್ತೆ ಆಕ್ಷೇಪಣೆ ಮಾಡುತ್ತಿದ್ದಾರೆ. ಮೊದಲು ಬೇಕೆಂತಲೂ, ಈಗ ಅವಶ್ಯವಿಲ್ಲವೆಂತಲೂ ಈ ಜನರು ಹೇಳುವದು ಸಹಜವಲ್ಲ. ಹಿಂದುಸ್ಥಾನದಲ್ಲಿ ಸದ್ಯ ಇರುವ ವಿದ್ಯಾಭ್ಯಾಸಕ್ರಮಗಳು ಎಷ್ಟು ಮಾತ್ರ ಚನ್ನಾಗಿಲ್ಲ. ಅದನ್ನು ಗವರ್ನಮೆಂಟಿನವರು ಸರಿಯಾದ ರೀತಿಯಲ್ಲಿ ಬದಲಾವಣೆ ಮಾಡಿಯೇ ಮಾಡಬೇಕಾಗಿದೆ. ಇದಕ್ಕೋಸ್ಕರ ಸರ್ಕಾರದವರು ಇಷ್ಟರಲ್ಲೇ ಹೊಸ ಏರ್ಪಾಡುಗಳನ್ನು ಜಾರಿಗೆ ತರುವರು. ಜನರು ಈ ವಿಷಯದಲ್ಲಿ ಆತುರಪಡುವದೂ ಆಕ್ಷೇಪಣೆಮಾಡುವದೂ ಸಹಜವಲ್ಲ.

### ಪೋಲೀಸ್ ಸುಧಾರ.

ಈ ರಾಷ್ಟ್ರದ ಪೋಲೀಸ್ ಇಲಾಖೆಯು ಸಮರ್ಪಕವಾದ ಸ್ಥಿತಿಯಲ್ಲಿಲ್ಲ. ಇದನ್ನು ಕ್ರಮಪಡಿಸುವದಕ್ಕೆ ಗವರ್ನಮೆಂಟಿನವರು ಕಮಿಷನ್ ಜಡ್ಜಿಗಳನ್ನು ನೇಮಿಸಿ ಅವರಿಂದ ತನಿಖೆಮಾಡಿಸಿದರು. ಇವರು ರಿಪೋರ್ಟು ಬರೆದು ಕೊಡುವವರಲ್ಲಿದ್ದಾರೆ. ಈ ಇಲಾಖೆಯನ್ನು ಇಷ್ಟರಲ್ಲೇ ಕ್ರಮಪಡಿಸುತ್ತೇವೆ. ಪೋಲೀಸ್ ಇಲಾಖೆಗೆ ಸೇರಿರುವ ಮತ್ತು ಸೇರುವ ಜನರು ಇತರ ಪ್ರಜೆಗಳಂತೆಯೇ ನಡೆ ನುಡಿ ಗುಣ ಸ್ವಭಾವಗಳನ್ನುಳ್ಳವರಾಗಿರುತ್ತಾರೆ. ಜನರು ಸತ್ಯಸಂಧರಾಗಿಯೂ, ಪ್ರಾಮಾಣಿಕರಾಗಿಯೂ, ದುಷ್ಕಾರ್ಯವನ್ನು ವಿರೋಧಿಸತಕ್ಕವರಾಗಿಯೂ ಇರುವ ಪಕ್ಷದಲ್ಲಿ ಈ ಇಲಾಖೆಗೆ ಸೇರುವ ಜನರೂ ಹಾಗೆಯೇ ಇರುತ್ತಾರೆ. ಜನರೆಲ್ಲಾ ದುಷ್ಕಾರ್ಯ ಪ್ರವರ್ತಕರಾಗಿದ್ದರೆ ಅವರ ದುರ್ವರ್ತನೆಯನ್ನು ಅಡಗಿಸುವದಕ್ಕೆ ಅವರಿಂದಲೇ ಕೆಲವು ಜನರನ್ನು ಆರಿಸಿ ನೇಮಿಸುವದರಿಂದ ಒಳ್ಳೇದೇನೂ ಆಗಲಾರದು. ಆದಕಾರಣ ಮೊದಲು ಜನರು ವಿದ್ಯಾವಂತರಾಗಿಯೂ ಸತ್ಯಶೀಲರಾಗಿಯೂ ಆಗಬೇಕು.

### ವ್ಯವಸಾಯದ ಬ್ಯಾಂಕುಗಳು.

ಹಿಂದುಸ್ಥಾನದ ರೈತಾಪಿ ಜನರಿಗೆ ಸಹಾಯಮಾಡಿ ವ್ಯವಸಾಯವನ್ನು ಅಭಿವೃದ್ಧಿಗೆ ತರುವದಕ್ಕೆ ಸರ್ಕಾರದವರು ಎಲ್ಲಾ ಕಡೆಗಳಲ್ಲಿ ವ್ಯವಸಾಯದ ಬ್ಯಾಂಕುಗಳನ್ನು ಸ್ಥಾಪಿಸಬೇಕೆಂಬದಾಗಿ ಅನೇಕನೇಕರು ಸೂಚಿಸುತ್ತಿದಾರೆ. ಈ ವಿಷಯದಲ್ಲಿ ನಮ್ಮ ಲೋಕಲ್ ಗವರ್ನಮೆಂಟುಗಳ ಅಭಿಪ್ರಾಯವನ್ನು ತರಿಸಿಕೊಂಡಿರುತ್ತೇವೆ. ಎಲ್ಲಾ ಸಂಗತಿಗಳನ್ನೂ ಚೆನ್ನಾಗಿ ನೋಡಿ ಆಲೋಚನೆ ಮಾಡಿದರೆ ಈ ಬ್ಯಾಂಕ್ ಗಳನ್ನು ಎಂದಿಗೆ ಯಾವ ಕ್ರಮದಲ್ಲಿಟ್ಟು ಏರ್ಪಾಡು ಮಾಡಬೇಕೋ ತೋರುವದೇ ಕಷ್ಟವಾಗಿದೆ. ಬ್ಯಾಂಕುಗಳನ್ನು ಸ್ಥಾಪಿಸಿ ಬಿಡಿ ಎಂಬದಾಗಿ ಹೇಳುವದು ಬಹಳ ಸುಲಭ. ಈ ಸಲಹೆಯಂತೆ ಸ್ಥಾಪಿಸಿದರೆ ಅವು ಬೇಗನೇ ಬಿಟ್ಟುಹೋದಾವು. ಈ ಭಾಗದಲ್ಲಿ ಕೆಲವರು ಆಕ್ಷೇಪಣೆ ಮಾಡುವದೇನಂದರೆ— ಗ್ರಾಮಾಂತರಗಳ ಜನರಲ್ಲಿ ಪರಸ್ಪರ ಸಹಾಯಮಾಡುತ್ತಾ ಬರಬೇಕೆಂಬ ಕಾತರವು ಇಲ್ಲವೇ ಇಲ್ಲ. ಅಂಥಾ ಬ್ಯಾಂಕುಗಳನ್ನು ಸ್ಥಾಪಿಸಿದರೆ ಹಿಂದುಸ್ಥಾನದ ರೈತಜನರು ಅವುಗಳಿಂದ ಪ್ರಯೋಜನ ಹೊಂದುವ ಸ್ಥಿತಿಯಲ್ಲಿಲ್ಲ. ಸರ್ಕಾರದವರು ಇಟ್ಟಿರುವ ಸೇವಿಂಗ್ಸ್ ಬ್ಯಾಂಕುಗಳಿಗೇನೇ ಜನರು ಹಣ ಹಾಕುವದಿಲ್ಲ. ಇಂಥಾದ್ದರಲ್ಲಿ ವ್ಯವಸಾಯದ ಬ್ಯಾಂಕುಗಳ ಮೂಲಧನಕ್ಕೆ ಅವರು ಎಲ್ಲಿಂದ ಹಣವನ್ನು ತಂದುಹಾಕುವರು! ಇದನ್ನೆಲ್ಲಾ ನೋಡುವಾಗ ಅಂಥಾ ಬ್ಯಾಂಕುಗಳು ಈ ದೇಶದ ಸ್ಥಿತಿಗೆ ಅನುಕೂಲವಾಗಿಲ್ಲ ಎಂಬುವದೇ. ಇಂಥಾ ಆಕ್ಷೇಪಣೆಗಳನ್ನು ಕುರಿತು ಆಲೋಚನೆಮಾಡಿ ನೋಡಿದರೆ ಅವು ನಿರಾಧಾರವಾದವುಗಳೆಂದು ಹೇಳುವದಕ್ಕಾಗದು. ಅವುಗಳ ಮೇಲೆ ಅನೇಕ ಪ್ರಶ್ನೆಗಳು ಹುಟ್ಟುವವು. ಇಂಥಾ ಬ್ಯಾಂಕುಗಳನ್ನು ಮೊದಲು ಗ್ರಾಮಗಳಲ್ಲಿ ಪ್ರಾರಂಭಿಸಬೇಕೇ, ಇಲ್ಲವೇ ಪಟ್ಟಣಗಳಲ್ಲಿ ಇಡಬೇಕೋ! ಅಥವಾ ಎರಡು ಕಡೆಗಳಲ್ಲೂ ಇಡಬೇಕೋ? ಅವುಗಳಿಗೆ ಸರ್ಕಾರದವರು ಎಷ್ಟು ದಿನಗಳ ತನಕ ಎಷ್ಟು ಮಟ್ಟಿಗೆ ದ್ರವ್ಯಸಹಾಯ ಮಾಡಬೇಕು? ಸಾಲ ಕೊಡುವ ಸಂದರ್ಭಗಳು ಎಂಥೆಂಥವು? ಈ ಬ್ಯಾಂಕುಗಳಿಗೆ ಯಾವ ರಿಯಾಯಿತಿಯನ್ನು ತೋರಿಸಿ ಎಷ್ಟುಮಟ್ಟಿನ ಸ್ವಾತಂತ್ರ್ಯವನ್ನು ಕೊಡಬಹುದು? ಇಂಥಾ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳು ಗೋಚರವಾಗದವರೆಗೆ ಈ ಬ್ಯಾಂಕುಗಳ ಏರ್ಪಾಡುಮಾಡುವದು ಸಹಜವಲ್ಲ. ಈ ವಿಷಯದಲ್ಲಿ ನಾವು ಬಹಳ ನಿಧಾನವಾಗಿ ಯೋಚನೆ ಮಾಡುತ್ತಾ ಇದೇವೆ. ಈಗೀಗ ಅದರ ಮಾರ್ಗ ಹೊಳೆಯುತ್ತಾ ಬಂದಿದೆ. ಹಿಂದುಸ್ಥಾನದ ಗ್ರಾಮಾಂತರಗಳಲ್ಲಿರುವ ಜನರ ಕಟ್ಟುಪಾಡು ಒಂದು ಕಡೆ ಇದ್ದಂತೆ ಇನ್ನೊಂದು ಕಡೆ ಇಲ್ಲ. ಆದಕಾರಣ ಸಾರ್ವತ್ರಿಕವಾಗಿ ಒಂದೇ ತರದ ಕಾನೂನನ್ನು ಮಾಡುವದು ಅನುಕೂಲವಾಗಿಲ್ಲ. ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಕ್ರಮಗಳನ್ನು ಜಾರಿಗೆ ತರಬೇಕಾಗಿದೆ. ಆದರೆ ಎಲ್ಲಿ ನೋಡಿದರೂ ಈ ಬ್ಯಾಂಕುಗಳ ನಡವಳಿಕೆಯು ಬಹಳ ಸುಲಭವಾಗಿರಬೇಕು. ನಾವು ಈ ವಿಷಯದಲ್ಲಿ ಆತುರಪಡುವದು ಸರಿಯಲ್ಲ, ಸ್ವಲ್ಪ ಸ್ವಲ್ಪವಾಗಿ ಪ್ರಾರಂಭಿಸಿ, ಅನುಭವ ಬಂದಹಾಗೆಲ್ಲಾ ತಿದ್ದಿಕೊಳ್ಳುತ್ತಾ, ಹೊಸ ಹೊಸ ಏರ್ಪಾಡುಗಳನ್ನು ಮಾಡುತ್ತಾ ಈ ಬ್ಯಾಂಕುಗಳನ್ನು ರೂಪಿಸಬೇಕಾಗಿದೆ. ಇದಕ್ಕೆ ಸರ್ಕಾರದವರು ಕೈಲಾದಷ್ಟು ಸಹಾಯ ಮಾಡುವರು. ಆದರೆ ಪ್ರಜೆಗಳು ತಮ್ಮಲ್ಲಿ ತಾವೇ ಇವುಗಳನ್ನು ಅಭಿವೃದ್ಧಿಗೆ ತಂದು ಪರಸ್ಪರ ಸಹಾಯ ಹೊಂದಿ ಏಳಿಗೆಗೆ ಬರಬೇಕಾಗಿರುವದು. ಜನರು ಮುಂದೆ ಬಂದು ಪ್ರೋತ್ಸಾಹ ಕೊಟ್ಟು ಈ ಬ್ಯಾಂಕುಗಳನ್ನು ನಡಿಸಿಕೊಳ್ಳದೆಹೋದರೆ ಸರ್ಕಾರದವರಿಂದ ಏನೂ ಆಗಲಾರದು. ಈ ಭಾಗದಲ್ಲಿ ಒಂದು ಕಾನೂನು ಮಾಡುವವನಾಗಿದೇನೆ. ಇದಕ್ಕೆ ಅವಕಾಶವೇನೂ ಆಗಲಾರದೆಂದು ತೋರುವದು.

### ಅಂತ್ಯೋಕ್ತಿಗಳು.

ನಾನು ಈ ರಾಷ್ಟ್ರಕ್ಕೆ ಬಂದಮೇಲೆ ಪ್ರಾರಂಭಿಸಿರುವ ತಿದ್ದುಪಾಟುಗಳನ್ನೆಲ್ಲಾ ಬೇಗ ಬೇಗನೆ ಅಂದರೆ ನಾನು ಕೆಲಸ ಬಿಟ್ಟು ಹೋಗುವಷ್ಟರೊಳಗಾಗಿಯೇ ಪೂರೈಸಿ ಎಲ್ಲವನ್ನೂ ಜಾರಿಗೆ ತಂದುಬಿಡಬೇಕೆಂದು ಕುತೂಹಲಪಡುವವನಾಗಿದೇನೆ. ಇದಕ್ಕೆ ಯಾವ ಅಡ್ಡಿ ಅವಘಡಗಳೂ ಬಂದೊದಗಲಾರವೆಂದು ನಿರೀಕ್ಷಿಸುವೆನು.

ಸನ್ ೧೯೦೩ ನೆ ಇಸವಿಯ

ಬಳಸುವಿಕೆಗೆ ಸಿದ್ಧಪಡಿಸಿದ ಇಂಗ್ಲೀಷ - ಕನ್ನಡ

# ಪಾಕೆಟ್ ಡೈರಿ

**ಏನುಬೇಕ ಏನು! ಏನು! ಏನು!**

ಈ ಡೈರಿಗಳು ವರ್ತಕರು, ಉದ್ಯೋಗಸ್ಥರು, ಕಂಟ್ರ್ಯಾಕ್ಟುದಾರರು, ಮುಖ್ಯ ದೊಡ್ಡ ಮನುಷ್ಯರು ಹುಡುಗರು ಸ್ತ್ರೀಯರು ಎಲ್ಲರಿಗೂ ಉಪಯೋಗವಾಗಿರುತ್ತೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು: ಶೋಭಕೃತು ಸಂವತ್ಸರದ ಪಂಚಾಂಗ, ಕ್ಯಾಲೆಂಡರು, ಹಿಂದು ಹಬ್ಬಗಳು, ಮತ್ತು ರಜಾ ದಿನಗಳು, ರೇಲ್ವೆ ಬಾಬತು, ಕೋರ್ಟುಗಳ ಸ್ಟ್ಯಾಂಪು, ಕೋರ್ಟು ಫೀಜು, ಪ್ರೋಸೆಸ್ ರುಸುಂ, ಸ್ಟ್ಯಾಂಪು, ರಿಜಿಸ್ಟರ್ ಫೀಜು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ತಲೆ ಬುಕ್ಕಿ ಹವಾಮಾನದ ಅಳತೆ, ಚಿನ್ನ ತೂಕದ ವಿವರ, ಗೌಳಿ ಪಂಚಾಂಗ, ಪ್ರಶ್ನೆ ಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಗುಳಿಕ ಕಾಲ, ವಾರಶೂಲೆ ಇವುಗಳು, ದಿನಗಳ ಸಂಬಳದ ಪಟ್ಟಿ, ಇನ್ನೂ ಅನೇಕ ಮುಖ್ಯ ವಿಷಯಗಳನ್ನೂ ಒಳ್ಳೆ ಕಾಗದ, ಪ್ರತಿ ಪುಟಕ್ಕೂ ರೂಲುಹಾಕಿ, ಸೊಗಸಾಗಿ ಬೈಂಡು ಮಾಡಿ ಬಿಕರಿಗೆ ಸಿದ್ಧವಾಗಿದೆ. ಎ. ನಂಬರ್ ಪೆನಸಲ್ ಇವುಗಳ ಚಿಕ್ಕ ಸೈಜು ಪ್ರತಿ ೧ಕ್ಕೆ ೩ ಆಣೆ; ಬಿ ನಂಬರ್ ಪೆನಸಲ್ ಇಟ್ಟು ಪಾಕೆಟ್ ಹಾಕಿರುವದು ಚಿಕ್ಕ ಸೈಜು ಪ್ರತಿ ೧ಕ್ಕೆ ೫ ಆಣೆ; ಸಿ. ನಂಬರ್ ಪೆನಸಲ್ ಇವುಗಳ ದೊಡ್ಡ ಸೈಜು ಪ್ರತಿ ೧ಕ್ಕೆ ೬ ಆಣೆ; ಡಿ ನಂಬರ್ ಪೆನಸಲ್ ಇಟ್ಟು ಪಾಕೆಟ್ ಹಾಕಿರುವದು ದೊಡ್ಡ ಸೈಜು ಪ್ರತಿ ೧ಕ್ಕೆ ೮ ಆಣೆ, ೧೨ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡವರಿಗೆ ೧ ಡೈರಿ ಹೆಚ್ಚಾಗಿ ಕೊಡಲಾಗುವದು. ಪೋಸ್ಟ್ ಚಾರ್ಜು ಬೇರೆ ಬೀಳುತ್ತೆ. ಗ್ರಾಹಕರು ಈ ಕೆಳಗಿನ ವಿಳಾಸಕ್ಕೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

ಹೋಮೋಸಿಯಾ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಹೋಟೆಲ್, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇಟ್ಟಿರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜ್ವರಗಳಿಗೆ ಮಹತ್ತಾಗಿ ಸಿಕ್ಕುತ್ತ ಕ್ಕೆ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು. ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿರುತ್ತಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಸಂಧಿವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ನೋವಿನ ದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಾಯಗಳು, ರೋಗಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಬೆಟ್ಟರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡವರ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬದ ಲ್ಲಿ ೧ ರೂ. ಡಬ್ಬದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂ ತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಹೀರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೬೭ ಸೆಕೆಂಡು ಬೀಚ್ ಲೈನ್, ಮದರಾಸ್.

## THE FOREIGN MISSIONS AND GENERAL AGENCY.

ಸೀಮೆ ಬಂದ ವಿದ್ಯಾರ್ಥಿಗಳು ಪ್ರತಿಯೊಬ್ಬರಿಗೂ ಇತರರಿಗೂ ಇಂಗ್ಲೆಂಡಿನಲ್ಲಿ ತಯಾರಾಗುವ ಯಾವ ಸಾಮಾನನ್ನು ಬೇಕಾದರೂ ಸುಲಭವಾದ ಕಮಿಷನ್ ತಕ್ಕೊಂಡು ಕಳುಹಿಸುವೆವು. ಆದರೂ ತಲುಪಿದ ಕೂಡಲೆ ಮಾಲುಗಳು ಬಹು ಜಾಗ್ರತೆಯಾಗಿ ರವಾನೆ ಮಾಡಲ್ಪಡುವವು. ಈ ವಿಷಯದಲ್ಲಿ ತಿಳಿದುಕೊಳ್ಳಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕೆಂದು ಕೋರುತ್ತೇನೆ.

A. J. Bird,
*Manager,*
*29-35, City Road, London*

ಹೊಸ ಪುಸ್ತಕ! ಹೊಸ ಪುಸ್ತಕ!! ಹೊಸ ಪುಸ್ತಕ!!!

ಮಾರಾಟಕ್ಕೆ ಸಿದ್ಧವಾಗಿದೆ.

ಪ್ರತಿಯೊಬ್ಬ ರೈತ, ಜಮೀನುದಾರರು, ತೋಟಗಾರರು ಮುಖ್ಯವಾಗಿ ಎಲ್ಲಾ ಉಪಾಧ್ಯಾಯರುಗಳಿಗೂ, ಅತ್ಯವಶ್ಯಕವಾದ ಪುಸ್ತಕವಿದು. ವ್ಯವಸಾಯಕ್ಕೆ ಸಂಬಂಧವಾಗಿ ಉಪಯುಕ್ತವಾದ ವಿಷಯಗಳು ಇದರಲ್ಲಿ ಸ್ಪಷ್ಟವಾಗಿ ತಿಳಿಸಲ್ಪಟ್ಟಿರುವುದರಿಂದ ಕೊಂಡು ಓದಿ ಗ್ರಹಿಸಬಹುದು.

ಭೂಮಿಯ ಬಳಕೆ.

ಭೂಮಿ ಅಳೆಯುವ ಪ್ರಮಾಣ, ಅವುಗಳ ಪರಿಮಾಣ. ಅವುಗಳ ಉಪಯೋಗಿಸುವ ರೀತಿ, ರಂಗು ಮತ್ತಿತರ ಉಪಯೋಗ, ಬೊಂಬೈ ಮದರಾಸು ಅಳತೆಗಳ ವ್ಯತ್ಯಾಸ, ಸರಕಾರ್ ಗುರುತುಗಳ ವಿವರ, ಅಳೆದ ಭೂಮಿಯ ನಕ್ಷೆಯನ್ನು ಬರೆದು, ನಕ್ಷೆಯ ಮೇಲೆ ಅಳತೆ ಗುರುತಿಸುವ ರೀತಿ, ಇವೇ ಮುಂತಾದ ಅನೇಕ ಉದಾಹರಣೆಗಳನ್ನು ಪ್ರಶ್ನೋತ್ತರ ರೂಪವಾಗಿ ಬರೆಯಲ್ಪಟ್ಟಿದೆ.

ಕ್ರಯ ಎಸ್. ಪಿ. ಮೂಲಕ ಬೇಕಾದರೂ

ಪ್ರಶ್ನೋತ್ತರ ರತ್ನಮಾಲಿಕೆ.

ವಿ. ಪಿ. ಮೂಲಕ ಹಾಸನು ಪ್ರತಿ ೧—೪—೦; ಕೆರಿದು ಪ್ರತಿ ೦—೧೪—೦.

ಈ ಪುಸ್ತಕಗಳು ನನ್ನ ವಿನಾ ಬೇರೆ ಯಾರಲ್ಲಿಯೂ ದೊರೆಯಲಾರವು

ಬೇಗ ಬರೆಯಿರಿ! ಬೇಗ ಬರೆಯಿರಿ!! ಬೇಗ ಬರೆಯಿರಿ!!!

ವಿಳಾಸ:— ಭಾರತಿ ಸಂಪಂಗಿರಾಮ,
ಅಣ್ಣಸ್ವಾಮಿ ಗುಡಿ ಬಳಿ, ಬೆಂಗಳೂರು ಸಿಟಿ.

ಜ್ವರಹರಿ. ೧೬

ಇದು ಚಳಿಜ್ವರ, ಪೈತ್ಯ ಜ್ವರ, ಕಫಜ್ವರ, ಮಲೇರಿಯಾ ಜ್ವರ, ಈ ಜ್ವರ, ಶೀತಜ್ವರ, ವಾತಜ್ವರ, ಚಳಿ ಜ್ವರ ಇವುಗಳು ಮೊದಲಾದ ಎಲ್ಲ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು. ಜ್ವರ ಬರುವದನ್ನು ನಿಲ್ಲಿಸಬೇಕೆಂದರೆ ಕಾಯಿಲೆಯನ್ನು ಹೊಂದುವ ದು ಪ್ರಯಾಣ ಮಾಡತಕ್ಕವರು ಈ ಔಷಧವನ್ನು ಅವಶ್ಯವಾಗಿ ಹತ್ತಿರ ಇಟ್ಟುಕೊಂಡಿರಬೇಕು. ಇದು ಬೇಕಾದಷ್ಟು ದಿವಸ ಒಳ್ಳೆ ಕ್ರಮವಾದ ಸ್ಥಿತಿಯಲ್ಲಿ ಇಟ್ಟುಕೊಳ್ಳಬಹುದು. ಇದನ್ನು ಉಪಯೋಗಿಸುವ ರೀತಿಯನ್ನು ಅಪೇಕ್ಷಿಸಿದವರಿಗೆ ಕಳುಹಿಸುತ್ತೇವೆ. ಸಣ್ಣ ಮತ್ತು ದೊಡ್ಡ ಸೀಸೆಗಳಲ್ಲಿ ಬಿಕರಿ ಬರುವುದು.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೪ ರೂ., ೨ ರೂ., ೧೦ ರೂ., ಹನ್ನೆರಡು ಸೀಸೆ ತರಿಸಿಕೊಂಡವರ ಪೋಸ್ಟೇಜು ಮಾಫಿ ಬಿಡಲಾಗುವದು.

ಅಮೃತಾಂಜನ.

ಈ ಔಷಧವು ಅಜೀರ್ಣ, ಕೀಲುನೋವು, ಸಂಧಿವಾತ ಬೊಬ್ಬೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು— ಮುಂತಾದ್ದಕ್ಕೆಲ್ಲಾ ಮಹತ್ತರವಾಗಿ ಶಮನಿಸಿ, ಕೂಡಲೆ ಗುಣಕೊಡುವದು. ಇದು ಎಂಗಸರು ತಿಂಗಳಿಗೆ ಒಂದಾವರ್ತಿ ನೋವುಗಳಿಗೆ ಅನುವಾಗ್ಯ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪರವು ದ್ವಾದಶ ಎಂಬ ಔಷಧದಂತೆ ಯೇ. ಸೀಸೆಗಳಲ್ಲಿ ದೊರಕುವದು.

ಕವರದ ಆಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜನ್ನಿಯವರ ಒಂದು ಕುಪ್ಪಿಯನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಜನರುಗಳಿಗೆ ಉಪಯೋಗಿಸಿದೆವು, ಅಜೀರ್ಣ ಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ ಹೊಟ್ಟೆ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ.— ಜನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೆಕೆಂಡ್ ಬೀಚ್ ಲೈನ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೧—೩—೧೯೦೩ ರಿಂದ ೨೭—೩—೧೯೦೩ ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿ ಬಿದ್ದದ್ದು. | ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | 10 | 5 | 19 | 14 |
| ಮೈಸೂರು ,, | 7 | [illegible] | [illegible] | 8 |
| ಬೆಂಗಳೂರು ಡಿಸ್ಟ್ರಿಕ್ಟು | 70 | 60 | 61 | 47 |
| ಮೈಸೂರು ,, | [illegible] | [illegible] | [illegible] | [illegible] |
| ಕೋಲಾರ್ ,, | 10 | 8 | 19 | 14 |
| ಕೋಲಾರ್ ಚಿನ್ನದ ಗಣಿಗಳು | 7 | 11 | 9 | 13 |
| ತುಮಕೂರು ಡಿಸ್ಟ್ರಿಕ್ಟು | 6 | 8 | 20 | 7 |
| ಹಾಸನ ,, | 12 | 6 | 16 | 16 |
| ಚಿತ್ರದುರ್ಗ ,, | 11 | 5 | 1[illegible] | 1[illegible] |
| ಕಡೂರ್ ,, | 1[illegible] | 7 | 7 | 7 |
| ಶಿವಮೊಗ್ಗ ,, | 14 | 9 | 1[illegible] | 8 |
| ಜುಮ್ಲಾ. | 22[illegible] | [illegible] | 1[illegible] | 1[illegible] |

ಶಾಲಿವಾಹನ ಶಕ ೧೮೨೫ ನೇ ಶೋಭಕೃತ್ ನಾಮ ಸಂವತ್ಸರ ಚೈತ್ರ ಶುದ್ಧ ದ್ವಾದಶಿ ಗುರುವಾರದಿಂದ ಚೈತ್ರ ಬಹುಳ ಚೌತಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಏಪ್ರಿಲ್.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ಸೂರ್ಯೋದಯ ನಿಮಿಷ. |
|---|---|---|---|---|---|---|
| 9 | ಗುರು * | ದ್ವಾದಶಿ | 6 58 | ಪುಷ್ಯ | 36 32 | 27 |
| 10 | ಶುಕ್ರ | ತ್ರಯೋದಶಿ | 2 56 | ಆಶ್ಲೇಷ | 36 26 | 26 |
| 11 | ಶನಿವಾರ ‡ | ಚತುರ್ದಶಿ | 57 18 | ಮಘ | 34 18 | 29 |
| 12 | ರವಿವಾರ | ಹುಣ್ಣಿಮೆ | 56 16 | ಪುಬ್ಬ | 35 3 | 30 |
| 13 | ಚಂದ್ರ † | ಪಾಡ್ಯ | 57 18 | ಉತ್ತರ | 35 35 | [illegible] |
| 14 | ಕುಜ | ಬಿದಿಗೆ | 58 6 | ಹಸ್ತ | 38 10 | 2 |
| 15 | ಬುಧ ☛ | ತದಿಗೆ | 60 [illegible] | ಚಿತ್ತ | 42 3 | 3 |

* ಸ್ವರ್ಣದಾನ ರತ. ‡ ಚತುರ್ದಶಿ ವ್ರತ, ಚಂದ್ರಗ್ರಹಣ. † ಸಂವತ್ಸರಾರಂಭ. ☛ ಅಮೃತಸಿದ್ಧಿಯೋಗ.

ಪೇಟೆ ಧಾರಣೆ.

| ವಿನಸು. | | ಮೈಸೂರು. | ಬೆಂಗಳೂರು |
|---|---|---|---|
| ಕಲ್ಲು ಅಕ್ಕಿ ಪಲ್ಲ ೧ಕ್ಕೆ | ರೂ | ೧೦-೩-೦ | ೧೦-೦-೦ |
| ಕೆಂಬೂತಿ ಅಕ್ಕಿ ಅವಲ್ | .. | ೯-೧೨-೦ | ೧೦-೮-೦ |
| ,, ದುಯಂ | .. | ೯-೪-೦ | ೧೦-೦-೦ |
| ಜಾಬ್ರಸಿ ಅಕ್ಕಿ | .. | ೯-೭-೦ | ೧೨-೦-೦ |
| ಸಣ್ಣಕ್ಕಿ ಅವಲ್ | .. | ೧೧-೮-೦ | ೧೨-೮-೦ |
| ,, ದುಯಂ | .. | ೧೧-೩-೦ | ೧೧-೮-೦ |
| ತೊಗರೀ ಬೇಳೆ ಪಲ್ಲ ೧ಕ್ಕೆ | .. | ೧೧-೮-೦ | ೧೨-೮-೦ |
| ,, ದುಯಂ | .. | ೧೧-೩-೦ | ೧೧-೦-೦ |
| ಮೈಸೂರು ರಾಗಿ ಪಲ್ಲ ೧ಕ್ಕೆ | .. | ೩-೩-೦ | ೩-೩-೦ |
| ಕಾರ್ರಾಗಿ | .. | ೩-೦-೦ | ೩-೨-೦ |
| ಜೋಳ | .. | ೩-೩-೦ | ೫-೦-೦ |
| ಹಲಸಂದೆ ಪಲ್ಲ ೧ಕ್ಕೆ | .. | ೭-೦-೦ | ೮-೦-೦ |
| ಬಿಳೀ ಅವರೆ | .. | ೫-೧೨-೦ | ೬-೩-೦ |
| ಹೆಸರು | .. | ೭-೨-೦ | ೧೦-೮-೦ |
| ಉದ್ದು | .. | ೭-೧೨-೦ | ೯-೦-೦ |
| ಕಡಲೆ | .. | ೧೦-೦-೦ | ೧೦-೦-೦ |
| ಎಳ್ಳು | .. | ೧೫-೦-೦ | ೯-೩-೦ |
| ಹುರುಳಿ | .. | ೩-೧೩-೦ | ೩-೦-೦ |
| ಹರಳು ೧೨೪ ಸೇರಿಗೆ | .. | ೧೬-೩-೦ | ೫-೧೩-೦ |
| ಸೀಗೇಕಾಯಿ ಮಣ ೧ಕ್ಕೆ | .. | ೧-೧೨-೦ | ೧-೧೨-೦ |
| ನೆಣಸಿನಕಾಯಿ | .. | ೨-೩-೦ | ೨-೦-೦ |
| ,, ದುಯಂ | .. | ೧-೧೩-೦ | ೧-೩-೦ |
| ಬೆಲ್ಲ ದೊಡ್ಡ ಅಚ್ಚು | .. | ೩-೮-೦ | ಮ ೧-೨-೦ |
| ಒಳ್ಳೆಣ್ಣೆ ಮಣ ೧ಕ್ಕೆ | .. | ೩-೧೦-೦ | ೩-೮-೦ |
| ಹರಳೆಣ್ಣೆ ,, | .. | ೩-೩-೦ | ೩-೦-೦ |
| ಕೊತ್ತುಂಬರಿ ಪಲ್ಲ ೧ಕ್ಕೆ | .. | ೩-೬-೦ | ೩-೫-೦ |
| ಉಪ್ಪು ,, | .. | ೯-೦-೦ | ೯-೦-೦ |
| ಹುಣಸೇ ಹಣ್ಣು | .. | ೦-೧೧-೦ | ೦-೧೨-೦ |
| ,, ಹಳೇದು | .. | ೦-೧೦-೦ | ೦-೧೦-೦ |
| ತುಪ್ಪ | .. | ೧೧-೩-೦ | ೧೧-೦-೦ |
| ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ | .. | ೫-೨-೦ | ೩-೩-೦ |
| ತೆಂಗಿನಕಾಯಿ ೧೦೦ಕ್ಕೆ | .. | ೩-೨-೦ | ೩-೧೨-೦ |
| ಅಡಿಕೆಕಾಯಿ ಮಣ ೧ಕ್ಕೆ | .. | ೬-೧೪-೦ | ೬-೦-೦ |
| ಅಂಟುವಾಳದಕಾಯಿ ಮಣ ೧ಕ್ಕೆ | .. | ೦-೧೩-೦ | ೦-೧೦-೦ |
| ಚಿನ್ನ (ಪವನ್) ಕೆಂಪು | .. | ೧೫-೩-೦ | ೧೫-೩-೦ |
| ,, ,, ಪಸಿಮೆ | .. | ೧೫-೮-೦ | ೧೫-೮-೦ |
| ,, ,, ಗಟ್ಟಿ ತೊಲ ೧ಕ್ಕೆ | .. | ೨೩-೦-೦ | ೨೩-೮-೦ |
| ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ | .. | ೩೭-೦-೦ | [illegible] |

Printed and Published by the Rev. E. W. Thomson, the Proprietor and Manager, Wesleyan Mission Press, Mysore. 9/4/1903.

# ವೃತ್ತಾಂತ ಪತ್ರಿಕೆ.

REGISTERED

ಕ್ರಯ ೧ ರು ವರ್ಷ —:೦:— ಕ್ರಯ ೧ ರು ವರ್ಷ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೬. ಮೈಸೂರು—ಸನ್ ೧೯೦೩ ನೇ ಇಸವಿ ಏಪ್ರೆಲ್ ತಾರೀಖು ೧೬ ನೇ ಗುರುವಾರ. ಸಂಚಿಕೆ ೪೩೧



## MELLIN'S FOOD.

ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

೧ ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮೆದುಳೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩ ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪ ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಿಕಮಾನಸಿಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆ ಉಂಟಾಗುತ್ತದೆ.

೬ ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಾದರೂ ಯಾವದೇಶದವರಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಮಿಶ್ರ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಮಕ್ಕಳಿಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ವಸ್ತು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦ ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಸಿಡುಬು ತೆಗೆದ ಕಾಲದಲ್ಲಿಯೂ ಶೈಶವದಲ್ಲಿಯೂ ಒದಗುವ ಮಿಕ್ಕಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುರುತುಪದಾರ್ಥವು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ದಕ್ಕತಕ್ಕದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ಹೆಚ್ಚಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ಕಳೆ ಯುವದಕ್ಕೆ ಕಡಮೆಮಾಡುತ್ತದೆ

೧೫ ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಷಾಪುಗಳಿಗೂ ಬರೆದು ತರಿಸಿಕೊಳ್ಳಬಹುದು —

ಏಡನ್ .—ಮೆ॥ ಕಾವಸಿ ದಿನ್‌ಶಾ ಬ್ರದರ್ಸ್.
ಬೊಂಬಾಯಿ .—ಮೆ॥ ಲೇಡಂ ಅಬಿರ್‌ಕ್ರಾಂಬಿ ಕಂಪೆನಿ.
ಕಲ್ಕತ್ತಾ .—ಮೆ॥ ಮೆಕ್ಕೆನ್‌ಜೆ ಲಯಲ್ ಕಂಪೆನಿ.
ಕೋಳಿಕೋಡ :—ಮೆ॥ ಪಾಲ್ ವಿಲ್ಸನ್ ಕಂಪೆನಿ
ಕರಾಚಿ .—ಮೆ॥ ಎಚ್. ಜೆ. ರುಸ್ತುಂಜಿ ಕಂಪೆನಿ.
ಮದ್ರಾಸು .—ಮೆ॥ ಓಕ್ ಕಂಪೆನಿ.
ರಂಗೂನ್ :—ಲೇಡಂ ಬ್ಲಾಕ್ ಕಂಪೆನಿ



## ಪಾಠಶಾಲಾ ಪುಸ್ತಕಗಳು! ಪಾಠಶಾಲಾ ಪುಸ್ತಕಗಳು!!

| | | | |
|---|---|---|---|
| ಬಾಲಬೋಧೆ ೧ನೇ ಭಾಗ ಕ್ರಯ | ೦ | ೧ | ೦ |
| ,, ೨ನೇ ಭಾಗ | ೦ | ೨ | ೬ |
| ಕನ್ನಡ ಎರಡನೇ ರೀಡರ್ | ೦ | ೩ | ೬ |
| ಭೂವಿವರಣೆ ೧ನೇ ಭಾಗ | ೦ | ೪ | ೦ |
| ,, ೨ನೇ ಭಾಗ | ೦ | ೪ | ೬ |
| ವ್ಯವಸಾಯಕ್ರಮಬೋಧಿನಿ | ೦ | ೪ | ೦ |
| ವ್ಯವಸಾಯಬೋಧಿನಿ | ೦ | ೪ | ೦ |
| ಸರಳ ವ್ಯವಸಾಯ ಪಾಠ | ೦ | ೧ | ೬ |
| ಆರೋಗ್ಯಶಾಸ್ತ್ರ | ೦ | ೩ | ೬ |
| ಆರೋಗ್ಯಪ್ರವೇಶಪಾಠಾವಳಿ | ೦ | ೫ | ೦ |
| ಸರಳಾರೋಗ್ಯ ಪಾಠ | ೦ | ೧ | ೬ |
| ಮೈಸೂರು ಚರಿತ್ರೆ ೧ ಮತ್ತು ೨ ನೆ ಭಾಗಗಳು | ೦ | ೨ | ೦ |
| ,, ,, ೩ ಮತ್ತು ೪ ನೆ ಭಾಗಗಳು | ೦ | ೩ | ೦ |
| ಮೈಸೂರು ಚರಿತ್ರೆ ಸಾರ | ೦ | ೨ | ೬ |
| ಅಂಕಗಣಿತ | ೦ | ೮ | ೦ |
| ಗಣಿತಕಲಾನಿಧಿ | ೦ | ೩ | ೬ |
| ಅಂಕಗಣಿತ ಸಣ್ಣದು | ೦ | ೨ | ೦ |
| ಅಂಕಗಣಿತ ಬಾಲಶಿಕ್ಷೆ | ೦ | ೩ | ೦ |
| ಬಾಲಿಕಾ ಗೀತಮುಕ್ತಾಕಲಾಪ | ೦ | ೪ | ೦ |
| ಕಲ್ಯಾಣಗೀತಾವಳಿ | ೦ | ೭ | ೦ |
| ಕಥಾಸಪ್ತತಿ | ೦ | ೩ | ೦ |
| ಕಥಾಮಂಜರಿ | ೦ | ೬ | ೦ |
| ಸಂಸ್ಕೃತ ಶಬ್ದಾವಳಿ | ೦ | ೨ | ೬ |
| ಹೊಸಗನ್ನಡ ವ್ಯಾಕರಣ | ೦ | ೨ | ೦ |
| ಶಬ್ದದರ್ಪಣ | ೦ | ೪ | ೦ |
| ಪಂಚತಂತ್ರ | ೦ | ೮ | ೦ |
| ದಮಯಂತಿ ಸ್ವಯಂವರ | ೦ | ೧೨ | ೦ |
| ಶಾಕುಂತಳ ನಾಟಕ | ೦ | ೧೨ | ೦ |
| ಹೊಸಪದ್ಯಸಾರ (೧೯೦೩ನೇ ವರುಷದ ಲೋವರ್ ಸೆಕೆಂಡರಿ ಟೆಕ್ಸ್ಟ್, ಜಾಗ್ರತೆ ನೋಡಿ ) | ೦ | ೫ | ೦ |
| ಶಬ್ದಮಣಿದರ್ಪಣ | ೧ | ೮ | ೦ |
| ಹಳಗನ್ನಡ ವ್ಯಾಕರಣ ಸೂತ್ರಗಳು | ೦ | ೬ | ೦ |
| ಬಾಲ ವ್ಯಾಕರಣ | ೦ | ೫ | ೦ |
| ಭೂಗೋಳ ಸಂಗ್ರಹ | ೦ | ೪ | ೦ |
| ಹಿಂದೂ ದೇಶದ ನಾಗರಿಕ (೧ನೇ ಮತ್ತು ೨ನೇ ಭಾಗ.) | ೦ | ೮ | ೦ |
| ನಾಗವರ್ಮನ ಛಂದಸ್ಸು | ೧ | ೦ | ೧ |
| ಗ್ರೀಕರ ಚರಿತ್ರೆ | ೦ | ೨ | ೦ |
| ಪ್ರಾಚೀನಕಾಲದ ಜೀವಂತಿಗಳ ವರ್ಣನೆ | ೦ | ೧ | ೦ |
| ಪಕ್ಷಿವರ್ಗ ವರ್ಣನೆ | ೦ | ೧ | ೦ |
| ಖಗೋಳಶಾಸ್ತ್ರಸಿದ್ಧಾಂತ | ೦ | ೧ | ೦ |
| ಎಡ್ವರ್ಡ್ ಮತ್ತು ಅಲೆಕ್ಸಾಂಡ್ರಾ, ಚಕ್ರವರ್ತಿ ಮತ್ತು ಚಕ್ರವರ್ತಿನಿಯವರ ಚರಿತ್ರೆ | ೦ | ೪ | ೦ |
| ಪ್ರಬೋಧ ಚಂದ್ರಿಕೆ | ೦ | ೨ | ೦ |
| ಕ್ರಿಮಿವರ್ಗವರ್ಣನೆ | ೦ | ೧ | ೦ |
| ಚಿಕ್ಕವರಿಗೆ ಹೇಳದ ಕಥೆಗಳು | ೦ | ೧ | ೦ |
| ಪಾಲಸಿ ಚರಿತ್ರೆ | ೦ | ೧ | ೦ |
| Sangappa, Mallappa, Aukeli's Translation I. | 0 | 5 | 0 |
| ,, ,, ,, ,, II. | 0 | 9 | 0 |
| ,, ,, ,, ,, III. | 0 | 10 | 0 |
| English, Kanarese Dictionary | 3 | 0 | 0 |
| Kanarese, English Dictionary | 3 | 0 | 0 |
| Mangalore Anglo-Kanarese Primer | 0 | 2 | 6 |

ಈ ಮೇಲ್ಕಂಡ ಪುಸ್ತಕವನ್ನು—ಮ್ಯಾನೇಜರ್, ಬುಕ್ ಡಿಪೋ, ಮೈಸೂರು—ಇವರಿಂದ ತರಿಸಿಕೊಳ್ಳಬಹುದು. ಹಣವನ್ನು ಮುಂಗಡವಾಗಿ ಕಳುಹಿಸಬೇಕು ಅಥವಾ ಪುಸ್ತಕಗಳನ್ನು ವಿ. ಪಿ. ಪಿ. ಮೂಲಕ ತರಿಸಿಕೊಳ್ಳತಕ್ಕದ್ದು. ಕೆಲವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯದೆ ಕಾಗೆ ಗೀಚಿದ ಹಾಗೆ ಗೊಜಿಗೊಜಿಯಾಗಿ ಬರೆಯುತ್ತಾರೆ. ಎಲ್ಲವನ್ನು ಸ್ಪಷ್ಟವಾಗಿ ಬರೆದರೆ ಪುಸ್ತಕಗಳು ಜಾಗ್ರತೆಯಲ್ಲಿ ತಲಪುವವು. ವಿಳಾಸ.—ಮ್ಯಾನೇಜರ್, ಬುಕ್ ಡಿಪೋ, ಮೈಸೂರು.



## ಗಳಿತಸಂಜೀವಿನಿ.

ಮೆ॥ ಬಿ ಕೃಷ್ಣಸ್ವಾಮಯ್ಯಂಗಾರ್ಯರಿಂದ ರಚಿಸಲ್ಪಟ್ಟದ್ದು. ದ್ವಿತೀಯ ಮುದ್ರಣ. ಮೈಸೂರು ಸ್ಟೇಷನರೀಸ್ ಮ್ಯಾನೇಜರಲ್ಲೂ ಕೆ. ನರಸಿಂಹಯ್ಯ ಅಂಡ್ ಕೋ ಯವರಲ್ಲೂ ಬೆಲೆಗೆ ಸಿದ್ಧವಾಗಿದೆ ಪ್ರತಿ ೧ಕ್ಕೆ ರೂ ೧—೮, ವಿ ಪಿ ಮೂಲಕ ರೂ. ೧—೧೧.



## ದೇವಾಂಗ ಪ್ರಕರಣಗಳು

ಅಗತ್ಯವಾಗಿ ಬೇಕಾದ ಗ್ರಂಥಗಳು.

ಸ್ವಲ್ಪ ಪ್ರತಿಗಳಿವೆ ಜಾಗ್ರತೆಪಟ್ಟರೆ ಸಿಕ್ಕುತ್ತೆ. ನಂತರ ಬಂದಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು ಅರ್ಥಸಹಿತ ದೇವಾಂಗಮತಪ್ರಕಾಶಿಕೆ ಸಪ್ತಾವತಾರಕ್ಕೆ ಸುಂದರವಾದ ೧೪ ತಸ್ವೀರಿವೆ ಪ್ರತ್ಯಕ್ಷ ನೋಡಿ ಸಂತೋಷಪಡಿ.

೧೪ ತಸ್ವೀರಿರುವ ಪ್ರತಿ ೧ಕ್ಕೆ ವಿ ಪಿ ಖರ್ಚು ಸೇರಿ ರೂ ೩—೮.
ತಸ್ವೀರಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ ಖರ್ಚು ಸೇರಿ ರೂ ೨—೮.
ವೇದ ಉಪನಿಷತ್ತು ಅರ್ಥ ಸಹಿತ ಮೂಲಸ್ತಂಭ ೧ಕ್ಕೆ ರೂ ೨—೮.

೧೦ ಜನಕ್ಕೆ ೧೦ ಪ್ರತಿ ೧ ವಿಳಾಸಕ್ಕೆ ತರಿಸಿಕೊಂಡರೆ ೧ ಪ್ರತಿ ಬಹುಮಾನ ಸಿಕ್ಕುತ್ತೆ. ಮಣಿಆರ್ಡರಿಗೆ ವಿ.ಪಿ ಬಿಡುವ ಕಳುಹಿಸುತ್ತೇವೆ. ಮೈಸೂರು ಜನರು ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ, ಬ್ರಹ್ಮಶ್ರೀ ಯಜಮಾನ ಕಂಠಯ್ಯನವರಲ್ಲಿ ಈ ಗ್ರಂಥ ಸಿಕ್ಕುತ್ತೆ.



## ROBINSON'S PATENT BARLEY.

## ರಾಬಿನ್‌ಸನ್‌ಯವರ ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಎವೆಗೋಧಿಯಿಂದ ಮಾಡಿದೆ. ಹಸ್ತ ಸ್ಪರ್ಶದಿಂದ ಆದದ್ದಲ್ಲ

ಈ ಹಿಟ್ಟನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾರಾದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

## ಹೊಸಪುಸ್ತಕ! ಹೊಸಪುಸ್ತಕ!!

ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ.

ಕಳೆದ ವರ್ಷ ಲಂಡನ್ ನಗರದಲ್ಲಿ ನಡೆದ ಈ ಮಹೋತ್ಸವವನ್ನು ವಿವರಿಸಿರುವ ಈ ಪುಸ್ತಕವು ನೇತ್ರಾನಂದಕರವಾದ ಅನೇಕ ಚಿತ್ರಗಳಿಂದ ಶೋಭಿಸುತ್ತಿರುವದು. ಎಲ್ಲರೂ ಅವಶ್ಯವಾಗಿ ತರಿಸಿಕೊಂಡು ಓದತಕ್ಕ ಪುಸ್ತಕ. ಕ್ರಯ ೧॥ ಆಣೆ. ಹಾಸಲು ಪ್ರತ್ಯೇಕ.

ವಿಳಾಸ:—ಮ್ಯಾನೇಜರ್, ಬುಕ್ ಡಿಪ್ಪೋ, ಮೈಸೂರು.


ಕಂಡುಹಿಡಿದು ಕೊಟ್ಟವರಿಗೆ ಬಹುಮಾನ ಸಿಕ್ಕುತ್ತೆ.

ಸುಮಾರು ೨೫ ವರ್ಷದ ಯೌವನಸ್ಥನು, ಕೆಂಪು, ಮುಖದಲ್ಲಿ ಸಿಡುಬಿನ ಗುರುತಿದೆ, ಸುಮಾರು ೫ ಅಡಿ ಎತ್ತರ. ಹೆಸರು ಕಾಳಹಸ್ತಿ ಪಾಪಯ್ಯನವರ ಮಗ ಸುಬ್ಬಯ್ಯ, ಹುಣಸೂರಲ್ಲಿರುವ ನಾರಾಯಣಶಾಸ್ತ್ರಿಯವರ ಅಳಿಯ, ತೆಲುಗು ಮಾತ್ರ ಬರುವದು. ಜ್ಞಾನ ತಪ್ಪಿ ಎಲ್ಲೋ ಹೋಗಿದ್ದಾನೆಂದು ವರ್ತಮಾನವಿದೆ. ಮೇಲ್ಕಂಡ ಗುರುತುಗಳನ್ನು ನೋಡಿ ಕಂಡುಹಿಡಿದು ಪೋಲೀಸು ದ್ವಾರಾ ಕಳುಹಿಸಿಕೊಟ್ಟರೆ ರೂ॥ ೫ ಬಹುಮಾನ ಕೊಡುವೆನು.

೧೪—೪—೦೩. ಕೆ. ಮುನಿಸ್ವಾಮಿ ಮೊದಲಿಯಾರ್,
ಕಾಳಮ್ಮನ ಗುಡಿ ಬೀದಿ, ಮೈಸೂರು.

ಮೈಸೂರು ಸೀನೆಯ ಎಕ್ಸೈಜ್ ಕಮಿಷನರವರ ಆಫೀಸು.
ಬೆಂಗಳೂರು ೧೯೦೩ನೇ ಇಸವಿ ಮಾರ್ಚಿ ೩೧ನೇ ತಾರೀಖು.

ಇಸ್ತಿಹಾರ್ನಾಮೆ.

ಸನ್ ೧೯೦೩ನೇ ಎಪ್ರಯಲ್ ೩ನೇ ತಾರೀಖಿನಲ್ಲಿ ಪ್ರಾಯಶಃ ಮೈಸೂರು ಗೆಜೆಟಿನಲ್ಲಿ ಉಧಹರಿಸಲ್ಪಟ್ಟಿರುವ ಷರತ್ತುಗಳಿಗೆ ಒಳಪಟ್ಟು ಅದರಲ್ಲಿ ಕಂಡ ಸ್ಥಳಗಳಲ್ಲಿ ವ ತಾರೀಖುಗಳಲ್ಲಿ ೧೯೦೩ನೇ ಇಸ್ವಿ ಜುಲೈ ಗುರ್ರೀ—ಲಾಗಾಯ್ತು ೧೯೦೪ ನೇ ಇಸ್ವಿ ಜೂನ್ ೩೦ನೇ ತಾರೀಖಿಗೆ ಪೂರೈಸುವ ೧೨ ತಿಂಗಳಿಗೆ ಪ್ರತ್ಯೇಕ ಸಾರಾಯಿ ಅಂಗಡಿಗಳ ಮ ಗುತ್ತಿಗೆ ಟಿಕರಿ ಸ್ಟಿಪ್ಮಗಳ ಮತ್ತು ಶೇಂದಿ ಅಂಗಡಿಗಳ ಹರಾಜು ಆಯಾಯ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರುಗಳಿಂದಾಗಲಿ ಯಾ ಇವಕ್ಕಾಗಿ ಅವರಿಂದ ನೇಮಿಸಲ್ಪಡುವ ಪ್ರಾದ ಆಸಿಸ್ಟೆಂಟು ಕಮಿಷನರುಗಳಿಂದಲಾಗಲಿ ನಡೆಯು ಹಾಕಲ್ಪಡುತ್ತೆಂದು ಇದರಿಂದ ಸಮಸ್ತಜನರಿಗೂ ಪ್ರಕಟಿಸಲ್ಪಟ್ಟಿರುತ್ತೆ.

P. N. PURNAIYA,
Excise Commissioner
in Mysore

ಮೈಸೂರು ಜಂಗಲ್ ಉತ್ಪತ್ತಿಯ ಹರಾಜು.

ಮೈಸೂರು ಡಿಸ್ಟ್ರಿಕ್ಟಿನ ಫಾರೆಸ್ಟ್ ಡಿಪೋಗಳು ಮತ್ತು ಕೋಠಿಯಲ್ಲಿ ಕೆಳಗಣ ಕೋಷ್ಟಯಲ್ಲಿ ವಿವರಿಸಿರುವ ಮೇರೆ ಜಂಗಲೀ ಮಾಲುಗಳು ಆಯಾಯ ದಿವಸಗಳಲ್ಲಿ ಬಹಿರಂಗವಾದ ಹರಾಜು ಮೂಲಕ ಬಿಕರಿ ಮಾಡಲ್ಪಡುವವು

| ಮಾಲ್ ವಿವರ. | ಮೈಸೂರು ಉಡಿಯಾರ್ಡ್. ನಂ. | ಮೈಸೂರು ಉಡಿಯಾರ್ಡ್. ಅಂದಾಜಾಸಲೆ ಅಡಿ | ನಂಜನಗೂಡು ಡಿಪೋ ನಂ. | ನಂಜನಗೂಡು ಡಿಪೋ ಅಂದಾಜಾಸಲೆ ಅಡಿ | ಶ್ರೀರಂಗಪಟ್ಟಣದ ಕೋಠಿ | |
|---|---|---|---|---|---|---|
| ಸಾಗವಾನಿ ನಾಟಾ ಮತ್ತು ಜಂತಿಗಳು | 401 | 7306 | 260 | 2641 | | |
| ಮನ್ನಜಾತಿ ನಾಟಾ ಮತ್ತು ಜಂತಿಗಳು | 182 | 3294 | 36 | 657 | | |
| ಕಾಡುಜಾತಿ ನಾಟಾ ಮತ್ತು ಜಂತಿಗಳು | 6 | 125 | 123 | 1113 | | |
| | ಅಂ॥ ಮಣ | ಅಂ॥ ರಾತಲ್ | | | ಅಂ॥ ಮಣ | ಅಂ॥ ರಾತಲ |
| ಅಳಲೇಕಾಯಿ | 1169 | | | | 2255 | |
| ಅರಗು | | | | | 246 | 21 |
| ಗೋಂದು | 16 | 21 | | | | |
| ಜೇನುತುಪ್ಪ | 16 | 8 | | | | |
| ಜೇನುಮೇಣ | 14 | | | | | |
| ಜಿಂಕೆ ಕೊಂಬು | 8 | | | | | |
| ಹರಾಜು ತಾ॥ | 16—4—03 | | 20—4—03 | | 15—4—03 | |

ಹೆಚ್ಚು ಸಂಗತಿಗಳನ್ನು ತಿಳಿಯಲಪೇಕ್ಷಿಸುವವರು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಗೆ ಬರೆಯತಕ್ಕದ್ದು.

C. KRISHNA RAO,
for District Forest Officer,
Mysore District.


ಚೇಂಬರ್ಲಿನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

15




ಕಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಕೀಲುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. ಈಚಿಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ:—"ಕಳಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಒಂದುತ್ತೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ., ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚೆನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ.—

ಬಿ. ವಿ. ನರಸಿಂಹಲು ಚೆಟ್ಟಿ,
ನಂ. ೨, ತಂಬೂನಾಯಕರ ಬೀದಿ,
ಮದರಾಸ್.


ನೋಟೀಸ್.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—

೧. ಮೈಸೂರು ಶ್ರೀರಾಮಚಂದ್ರ ಬ್ಯಾಂಕ್ ಬಾಬತು ಮೈಸೂರು ಸಂತೇಪೇಟೇಲಿರುವ ಮನೆ, ನಂಜನಗೂಡು ತಾಲ್ಲೂಕು ಜೊಕ್ಕಹಳ್ಳಿ ಗ್ರಾಮದಲ್ಲಿರುವ ಹೊಲ, ಮತ್ತು ಆಧಾರ ಪತ್ರಗಳು, ಆಧಾರ ಡಿಕ್ರಿಗಳು, ವ್ಯವಸಾಲ ಪತ್ರಗಳು, ವ್ಯವಸಾಲ ಪ್ರೋನೋಟ್‌ಗಳು, ವ್ಯವಸಾಲಡಿಕ್ರಿಗಳು, ಸಹಾ ಈ ಕೆಳಗೆ ನಮೂದು ಮಾಡುವ ಷರತ್ತುಗಳಿಗೆ ಒಳಪಟ್ಟು ೧೯೦೩ನೇ ಇಸವಿ ಏಪ್ರಿಲ್ ಮಾಹೆ ೨೦ನೇ ತಾರೀಖು ಸೋಮವಾರದ ಲಾಗಾಯಿತು ಹರಾಜು ಪೂರೈಸುವ ವರಿಗೂ ಪ್ರತಿದಿನ ಬೆಳಿಗ್ಗೆ ೬ ಘಂಟೆ ಲಾಗಾಯಿತು ೧೦ ಗಂಟೆ ವರಿಗೂ ಮಧ್ಯಾಹ್ನ ೩ ಗಂಟೆ ಲಾಗಾಯಿತು ೬ ಗಂಟೆ ವರಿಗೂ ಮೈಸೂರು ಸಂತೇಪೇಟೆ ಜಗನ್ಮೋಹನಬಂಗ್ಲಾ ಸಮೀಪದಲ್ಲಿರುವ ಬ್ಯಾಂಕ್ ಇಟ್ಟಿದ್ದ ಗಂಜಾಂ ಕರಿಯಣ್ಣನ ಮನೇಲಿ ಹರಾಜು ಮಾಡಲ್ಪಡುವದು. ಇಷ್ಟವುಳ್ಳವರು ಹಾಜರಾಗಿ ಭಾಷದರಖಾಸ್ತು ಮೂಲಕ ಪಡೆಯಬಹುದು.

೨. ಆಫ್ಸೆಟ್ ಬೀಟಿನಲ್ಲಿ ತೆಗೆದುಕೊಂಡವರು ಮೊಬಲಗನ್ನು ಒಡನೆ ಲಿಕ್ವಿಡೇಟರಲ್ಲಿ ಪಾವತಿಮಾಡಿ, ಸ್ವತ್ತನ್ನು ತಮ್ಮ ಸ್ವಾಧೀನಕ್ಕೆ ತಗದುಕೊಳ್ಳಬೇಕು. ತಪ್ಪಿದಲ್ಲಿ ತಕ್ಷಣ ಹರಾಜ್ ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಬೀಟ್ ಕಮ್ಮಿಯಾದಲ್ಲಿ ಅಂಥಾ ಕಮ್ಮಿಯಾದ ಮೊಬಲಗನ್ನು ಮೊದಲು ದರಖಾಸ್ತು ಕೊಡುವವರು ಕೊಡಲು ಜವಾಬ್ದಾರರಾಗಿರುತ್ತಾರೆ. ಜಾಸ್ತಿಯಾದಲ್ಲಿ ಅವರಿಗೆ ಸಲ್ಲಬಾರದು.

೩. ಮೇಲ್ಕಂಡ ಮನೆ ಮತ್ತು ಹೊಲ ತಗದುಕೊಳ್ಳುವವರು ಮಾತ್ರ ಬೀಟ್ ಮೊಬಲಗು ಪೈಕಿ ೪ ರಲ್ಲಿ ೧ ಭಾಗವನ್ನು ತಕ್ಷಣ ಅಫಿಷಿಯಲ್ ಲಿಕ್ವಿಡೇಟರಲ್ಲಿ ರೇವಣೀ ಕಟ್ಟಿ ರಶೀತಿ ಪಡೆಯಬೇಕು. ಬಾಕಿ ಮೊಬಲಗನ್ನು ಒಂದು ವಾರದೊಳಗಾಗಿ ಪಾವತಿಮಾಡಿ ರಶೀತಿ ಪಡೆಯತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ರೇವಣಿ ಮೊಬಲಗನ್ನು ವಾಪಸು ಕೊಡುವದಿಲ್ಲ. ಮತ್ತು ಸ್ವತ್ತು ಪುನಹಾ ಹರಾಜ್ ಮಾಡಲ್ಪಡುವದು. ಹಾಗೆ ಎರಡನೇ ಹರಾಜಿನಲ್ಲಿ ಮೊದಲನೆಯ ಹರಾಜಿಗಿಂತಲೂ ಕಮ್ಮಿ ಮೊಬಲಗಿಗೆ ಹರಾಜ್ ಆದರೆ ಹಾಗೆ ಕಮ್ಮಿಯಾದ ಮೊಬಲಗಿಗೆ ಮೊದಲನೆಯ ಹರಾಜಿನಲ್ಲಿ ದರಖಾಸ್ತು ಮಾಡಿದವರು ಜವಾಬ್ದಾರರಾಗಿರುತ್ತಾರೆ.

೪. ಯಾವ ಸ್ವತ್ತನ್ನಾಗಲಿ ಹರಾಜಿನಲ್ಲಿ ಪಡೆದವರು ಕೂಡ್ಲೆ ಅಂಥಾವುಗಳನ್ನು ತಮ್ಮ ಸ್ವಾಧೀನಕ್ಕೆ ತಗದುಕೊಳ್ಳದೆ ತಪ್ಪಿ, ಲಿಮಿಟೇಷನ್ ವಗೈರೆ ನಷ್ಟ ಸಂಭವಿಸಿತೆಂದು ಹೇಳಿದಲ್ಲಿ ಅಂಥಾವುಗಳಿಗೆ ಲಿಕ್ವಿಡೇಟರು ಜವಾಬ್ದಾರರಾಗುವದಿಲ್ಲ.

೫ ಪತ್ರದ ಛಾಪಾಕಾಗದದ ಕಿಮ್ಮತ್ ರಿಜಿಸ್ಟ್ರೇಷನ್ ವಗೈರೆ ಖರ್ಚನ್ನೂ ಆಫ್ಸೆಟ್ ಬೀಟ್‌ನಲ್ಲಿ ಸ್ವತ್ತು ಪಡೆದವರೇ ವಹಿಸಬೇಕು.

ಸ್ವತ್ತು ಯಾ ಲೆಕ್ಕಪತ್ರಗಳನ್ನು ತಿಳಿಯಲಪೇಕ್ಷೆಯುಳ್ಳವರು ಲಿಕ್ವಿಡೇಟರಲ್ಲಿ ಹಾಜರಾಗಿ ತಿಳಿದುಕೊಳ್ಳಬಹುದು.

ತಾ॥ ೧೦ನೇ ಏಪ್ರಿಲ್ ಮಾಹೆ ೧೯೦೩ ನೇ ಇಸವಿ. ಎ. ವೆಂಕಟರಾವ್,
ಕಾಲೇಜ್ ರೋಡ್, ಮೈಸೂರು.
ಅಫಿಷಿಯಲ್ ಲಿಕ್ವಿಡೇಟರ್,
ಮೈಸೂರು ಶ್ರೀರಾಮಚಂದ್ರ ಬ್ಯಾಂಕ್.

## ವೃತ್ತಾಂತ ಪತ್ರಿಕೆ.

—:o:—

ಸನ್ ೧೯೦೩ ನೇ ಇಸವಿ ಏಪ್ರಿಲ್ ತಾ॥ ೧೬ನೇ ಗುರುವಾರ.

ದ್ರವ್ಯಾಪಹಾರ.

ನೆಲಮಂಗಲದ ಮುನ್ಸಿಫಲ್ ಕೋರ್ಟಿನಲ್ಲೂ ಬೆಂಗಳೂರು ಪ್ರಿನ್ಸಿಪಲ್ ಮುನ್ಸಿಫಲ್ ಕೋರ್ಟಿನಲ್ಲೂ ನೌಕರರು ಸರ್ಕಾರಿ ಹಣವನ್ನು ಸುಮಾರು ೪,೬೦೦ ರೂ. ತನಕ ತಿಂದುಹಾಕಿದ ವಿವರವನ್ನೂ, ಅವರ ಮೇಲೆ ಗಾವರ್ನಮೆಂಟಿನವರು ಕೊಟ್ಟಿರುವ ಹುಕುಮನ್ನೂ ಇನ್ನೊಂದು ಕಡೆಯಲ್ಲಿ ಪ್ರಕಟಿಸಿರುತ್ತೇವೆ. ಸರ್ಕಾರಿ ಕೋರ್ಟುಗಳಲ್ಲೂ ಕಛೇರಿಗಳಲ್ಲೂ ಮುಖ್ಯ ಮುದ್ದೇದಾರರೆನಿಸಿಕೊಂಡವರಲ್ಲಿ ಕೆಲವರು ತಮ್ಮ ಕರ್ತವ್ಯವನ್ನು ತಾವೇ ಮುತುವರ್ಜಿ ವಹಿಸಿ ಮಾಡದೆ, ಜವಾಬ್ದಾರಿಯನ್ನು ಕೈಕೆಳಗಿನ ಚಿಲ್ಲರೆ ನೌಕರರಿಗೆ ವಹಿಸಿಬಿಟ್ಟು ತಾವುಮಾತ್ರ ತನಖೆಯ ಪಕ್ಕಿಗಳೋಪಾದಿಯಲ್ಲಿ ಸಂಬಳದೊತ್ತಿಗೆ ಮೂರುಮೊಳ ನೇಯುತ್ತಾ, ಕಾಲ ಕಳೆಯುತ್ತಾರೆನ್ನುವದಕ್ಕೆ ಈ ಕೋರ್ಟುಗಳಲ್ಲಿ ನಡೆದಿರುವ ಕಾರ್ಯವೇ ದೃಷ್ಟಾಂತವಾಗಿದೆ. ನೌಕರರು ಲೆಕ್ಕಪತ್ರಗಳನ್ನು ತಬ್ದಿಲ್ ಮಾಡಿ ಹಣ ತಿನ್ನುತ್ತಾರೆಂಬುವದು ಅಕಸ್ಮಾತ್ತಾಗಿ ಹೊರಪಡಬೇಕಾಗಿದೆಯಲ್ಲದೆ ಜವಾಬ್ದಾರಿ ವಹಿಸಿರುವ ಮೇಲ್ಪಟ್ಟ ಮುದ್ದೇದಾರರಾಗಲಿ, ಸರ್ಕಾರದವರೇ ಆಗಲಿ ಕ್ರಮವಾಗಿ ಲೆಕ್ಕಗಳನ್ನು ಆಗಿಂದಾಗ್ಯೆ ತನಿಖೆ ಮಾಡುವದಿಲ್ಲವೆಂಬುವದೂ ಇದರಿಂದ ಗೊತ್ತಾಗುವದು. ಕೆಲವು ಸಂದರ್ಭಗಳಲ್ಲಿ ಕಚೇರಿ ಅಮಲು ತಿಳಿಯದೆ ಇರುವವರು ಮೇಲ್ಪಟ್ಟ ಮುದ್ದೇದಾರರಾಗಿರುವದೂ ಉಂಟು. ಸರ್ಕಾರದವರು ಪ್ರಯತ್ನಪೂರ್ವಕವಾಗಿ ಆಗಿಂದಾಗ್ಯೆ ಕೋರ್ಟು ಕಛೇರಿಗಳ ಲೆಕ್ಕಪತ್ರಗಳನ್ನೂ ಜಮಾಖರ್ಚನ್ನೂ ತನಿಖೆಮಾಡಿ ತಾಳೇ ನೋಡುತ್ತಿದ್ದರೆ ಇಷ್ಟುಮಟ್ಟಿಗೆ ದ್ರವ್ಯಾಪಹಾರವಾಗುವದಕ್ಕೆ ಅವಕಾಶವಿರುವದಿಲ್ಲ. ಆದರೂ ಅವರು ಈಗ ಕೊಟ್ಟಿರುವ ಹುಕುಮು ಅಕ್ರಮಗಳನ್ನು ತಕ್ಕಮಟ್ಟಿಗೆ ಅಡಗಿಸಿ, ಅಧಿಕಾರಿಗಳಲ್ಲೂ ನೌಕರರಲ್ಲೂ ದಿಗಿಲನ್ನು ಹುಟ್ಟಿಸೀತೆನ್ನುವದಕ್ಕೆ ಸಂದೇಹವಿರಲಾರದು.

ಈರೇಗೌಡರಿಗೂ ಪಾದ್ರಿಗೂ ನಡೆದ ಸಂಭಾಷಣೆ.

ನಾನು ಮೊನ್ನೆ ದಿವಸ ಸಿದ್ದಾಪುರಕ್ಕೆ ಹೋಗಿದ್ದೆ. ಊರು ದೊಡ್ಡದು, ಜನಗಳೂ ಬಹಳ ನೆಮ್ಮದಿ. ಊರು ಗೌಡರು ನನಗೆ ಬಹು ಪರಿಚಿತಿ. ನಾನು ಆ ಊರಿಗೆ ಹೋದಾಗೆಲ್ಲಾ ಬಹು ವಿಶ್ವಾಸದಿಂದ ಕಾಣುತ್ತಿದ್ದವರು ಮೊನ್ನೆಮಾತ್ರ ಬಹಳ ಸಿಟ್ಟಿನಿಂದ ಮಾತಾಡಿದರು. ಎಂದೂ ಹೀಗೆ ಇರಲಿಲ್ಲ, ಆದರೂ ಈ ಸಿಟ್ಟಿನ ಕಾರಣವನ್ನು ಬಹಳಹೊತ್ತು ಹೇಳದೆ ಇರಲಾರರು ಎಂದು ನಾನು ತಿಳಿದು ಜಗಲಿಯಮೇಲೆ ಗೌಡರ ಎದುರಿಗೆ ಕೂತುಕೊಂಡೆ. ಈ ಪ್ರಕಾರ ಒಂದೆರಡು ನಿಮಿಷ ಸುಮ್ಮನಿದ್ದ ಗೌಡರು ಕೈಯಲ್ಲಿ ಹಿಡಿದಿದ್ದ ಒಂದು ಪತ್ರಿಕೆಯನ್ನು ನನ್ನ ಕಡೆಗೆಸೆದು—ನೀವು ಸಂಸಾರಗಳನ್ನು ಹಾಳುಮಾಡುವವರು, ನಿಮ್ಮಂಥವರಿಗೂ ನನಗೂ ಬಹು ದೂರವಿರಬೇಕು. ನಮ್ಮ ನಿಮ್ಮ ವಿಶ್ವಾಸ ಈ ಪರ್ಯಂತರ ನಡೆದದ್ದೇನೋ ನಡೆಯಿತು. ಮುಂದೆ ನಡೆಯಲಾರದು.

ನಾನು—ಗೌಡರೇ, ತಮ್ಮ ಕೋಪಕ್ಕೆ ಕಾರಣವೇನೊ, ತಿಳಿಯದು.

ಈ.—ಕೆಲವು ಪಾದ್ರಿಗಳು ತಿನ್ನವೆಲ್ಲಿ ಸೀಮೆಯಲ್ಲಿ ಮಾಡಿದ ಕಾರ್ಯ ನಿಮಗೆ ಗೊತ್ತಿಲ್ಲವೇನು? ನಮ್ಮ ಕುರುಬರ ಜಾತಿಯ ಒಬ್ಬ ಹುಡುಗಿಯನ್ನು ಮೋಸಮಾಡಿ ಅವಳನ್ನು ತಂದೆತಾಯಿಗಳ ಬಳಿಯಿಂದ ಕರಕೊಂಡು ತಮ್ಮ ಬಂಗಲೆಗೆ ಹೋದರು. ಆ ಮೇಲೆ ಅವಳು ಕ್ರೀಸ್ತಮತಕ್ಕೆ ಸೇರಿಕೊಂಡಳು. ಇದೇನು, ಸಂಸಾರಗಳನ್ನು ಹಾಳುಮಾಡುವ ಕೆಲಸವೋ ಅಲ್ಲವೋ? ಆ ಕುರುಬರು ಪಾದ್ರಿಗಳ ಮೇಲೆ ದಾವಾ ಮಾಡಿದಾಗ್ಯೂ ನ್ಯಾಯವು ದೊರಕಲಿಲ್ಲವಾದ್ದರಿಂದ ಪಾದ್ರಿಗಳಿಗೆ ಚನ್ನಾಗಿ ನೇವೆಮಾಡಿಸಿದರಂತೆ ಒಳ್ಳೇ ಕೆಲಸ ಮಾಡಿಸಿದರಯ್ಯ! ಆ ಪಾದ್ರಿಗಳು ಹೀಗೆ ಮಾಡಬಹುದೇನ್ರಿ, ನಿಮ್ಮ ಯೇಸುಸ್ವಾಮಿ ಹೀಗೇ ಹೇಳಿದಾನೇನ್ರಿ?

ನಾ.—ಏನು ಗೌಡರೇ, ಏನೇನೋ ಸಿಟ್ಟಿನಿಂದ ಮಾತಾಡುತ್ತೀರಿ; ಚೆನ್ನಾಗಿ ಆಲೋಚನೆ ಮಾಡಿ ಮಾತಾಡಿ. ಕೋರ್ಟಿನಲ್ಲಿ ಮ್ಯಾಜಿಸ್ಟ್ರೇಟರು ಎಲ್ಲವನ್ನು ಬಹಿರಂಗವಾಗಿ ವಿಚಾರಿಸಿ, ಆ ಮಿಷನರಿ ಲೇಡಿಯು ಹುಡುಗಿಯನ್ನು ತನ್ನ ಬಂಗಲೆಗೆ ಬಲಾತ್ಕರಿಸಿ ಕರೆದುಕೊಂಡು ಹೋಗಲಿಲ್ಲವೆಂತಲೂ ಅವಳು ಸ್ವಂತ ರಾಜಿಯಿಂದ ಬಂದಳೆಂತಲೂ ಫೈಸಲ್ಮಾಡಿದರಲ್ಲ.

ಈ.—ಏನೋ, ಇರಬಹುದು. ಆದರೆ ಆ ಹುಡುಗಿಯನ್ನು ಮರುಳುಮಾಡಿ ಕರಕೊಂಡು ಹೋಗಿದ್ದರೂ ಇರಬಹುದು, ಯಾರಿಗೆ ಗೊತ್ತು !

ನಾ.—(ನಗುತ್ತ) ಅವಳಮೇಲೆ ಸ್ವಲ್ಪ ಮಂಕುಬೂದಿ ಚೆಲ್ಲಿ ಹಿಡಿದುಕೊಂಡು ಹೋಗಿರಬಹುದಲ್ಲವೇ ? ನೀವು ಹೇಳುವ ಮಾತು ಕೇಳಿದರೆ ಯಾರಿಗೆತಾನೆ ನಗು ಬರಲಾರದು ? ಮಂಕುಬೂದಿ ಚೆಲ್ಲಿ ಮತಕ್ಕೆ ಸೇರಿಸಿಕೊಳ್ಳುವರಾಗಿದ್ದರೆ, ಇಷ್ಟು ಕಾಲಕ್ಕೆ ಈ ದೇಶವನ್ನೆಲ್ಲಾ ಕ್ರೀಸ್ತಮತಕ್ಕೆ ಸೇರಿಸಿಬಿಡುತ್ತಿದ್ದರಲ್ಲ ! ನಿಮ್ಮನ್ನೂ ನಾನು ಇಷ್ಟು ದಿನಗಳತನಕ ಬಿಡುತ್ತಿದ್ದನೇ ?

ಅದನ್ನು ಕೇಳಿ ಈರೇಗೌಡರೂ ನಕ್ಕು—ಹೌದೌದು, ನೀವು ಮಂಕುಬೂದಿಯವರಲ್ಲ. ತಿಳಿಯದವರು ಆಡಿಕೊಳ್ಳುವ ಮಾತಿದು. ನಿಮ್ಮ ಯೇಸುಸ್ವಾಮಿಯವರ ಉತ್ಕೃಷ್ಟವಾದಂಥ ಸ್ತ್ರೀಪುರುಷರೆಲ್ಲರಿಗೆ ಯೋಗ್ಯವಾದಂಥ ದಿವ್ಯ ಬೋಧನೆಯೊಂದು ಮಹಾ ಮಂತ್ರವಲ್ಲವೆ ಇನ್ಯಾವ ಮಂತ್ರವೂ ನಿಮ್ಮಲ್ಲಿಲ್ಲ. ನಾನೇನು ಕಾಣೆನೇ? ನಿಮ್ಮ ಬೋಧನೆಯನ್ನು ಕೇಳುವದಕ್ಕೆ ನನಗೆಷ್ಟೋ ಸಂತೋಷ!

ನಾ.—ಹಾಗಾದರೆ, ನೀವು ಹೇಳಿದ ಆ ಕುರುಬರ ಹುಡುಗಿಯ ವಿಚಾರದಲ್ಲಿ ಪರೀಕ್ಷಿಸಿ ನೋಡಿದರೆ, ಎಲ್ಲವೂ ಇಷ್ಟೇ ಎಂದು ತೋರುತ್ತದೆ. ಏನೆಂದರೆ—ತಂದೆ ತಾಯಿಗಳು ಹೇಳಿದ್ದನ್ನೆಲ್ಲಾ ಮಕ್ಕಳು ಸ್ವಲ್ಪವೂ ಆಕ್ಷೇಪಿಸದೆ ಕೇಳಬೇಕೇ ? ಅಥವಾ ಕೆಲವು ಸಂದರ್ಭಗಳಲ್ಲಿ ಅವರ ಮಾತನ್ನು ತಳ್ಳುವದು ಸರಿಯಲ್ಲವೇ ?

ಈ.—ಹಿರಿಯರ ಮಾತಿನಂತೆ ನಡೆಯುವದಕ್ಕಿಂತ ವಿಶೇಷವಾದ ಧರ್ಮ ಬೇರೇನಿರುವದು ? ಹೊಸದಾಗಿ ಒಂದೆರಡು ವಿಷಯಗಳನ್ನು ಕಲಿತಮಾತ್ರಕ್ಕೆ ತಲೆತಿರುಗಿ ಅಹಂಕಾರಿಗಳಾದ ಹುಡುಗರೂ, ಮನಸ್ಸು ಬಂದಂತೆ ನಡೆಯುತಕ್ಕ ಸ್ವತಂತ್ರವಿದೆಯೆಂದು ಹೇಳಿಕೊಳ್ಳುವ ಹುಡುಗಿಯರೂ ತಮತಮಗೆ ಯೋಗ್ಯವಾಗಿ ಕಂಡ ಪ್ರಕಾರ ನಡದು ತಂದೆತಾಯಿಗಳಿಗೂ ಜಾತಿಯವರಿಗೂ ಅವಮಾನ ತರುವದು ಯಾವಧರ್ಮವೋ ನಾನರಿಯೆ.

ನಾ.—ಹಿರಿಯರ ಮಾತನ್ನು ಧಿಕ್ಕರಿಸಬೇಕೆಂದು ಕ್ರೀಸ್ತಧರ್ಮದಲ್ಲಿ ಬೋಧಿಸಿದೆಯೇನು ? ಮಕ್ಕಳು ತಂದೆ ತಾಯಿಗಳನ್ನು ಸನ್ಮಾನಿಸತಕ್ಕದ್ದೆಂದು ಕ್ರೀಸ್ತನು ಬೋಧಿಸಿದ್ದಾನೆಂಬುದು ನಿಮಗೇ ತಿಳಿದದೆಯಲ್ಲ. ತಂದೆ ತಾಯಿಗಳಿಗೆ ತಿಳಿಯದೆ ಇರುವ ಕರ್ತವ್ಯಗಳನ್ನು ದೇವರು ಒಂದೊಂದು ವೇಳೆ ಮಕ್ಕಳಿಗೆ ತಿಳಿಯಪಡಿಸುತ್ತಾನೆ. ಒಂದಾನೊಂದು ಕಾಲದಲ್ಲಿ ಯೇಸುಸ್ವಾಮಿಯು ಯೆರೂಸಲೇಮು' ಪಟ್ಟಣದೊಳಕ್ಕೆ ರಾಜವೈಭವದಿಂದ ಪುರಪ್ರವೇಶವನ್ನು ಮಾಡುವಲ್ಲಿ ಚಿಕ್ಕ ಮಕ್ಕಳು ಆತನ ಸ್ತೋತ್ರಾರ್ಥ ಗೀತ ಹಾಡುತ್ತ ಹೋದರಷ್ಟೆ. ಅದನ್ನು ಆ ಶಾಸ್ತ್ರಿಗಳು ನೋಡಿ ಸಹಿಸಲಾರದೆ—ಅವರನ್ನು ಸುಮ್ಮನಿರಿಸ ಹೇಳಿದರು. ಆದರೆ ಆತನು—ಕೂಸುಗಳ ಬಾಯಿಯಿಂದಲೂ, ಮೊಲೆ ಕುಡಿಯುವ ಕೂಸುಗಳ ಬಾಯಿಯಿಂದಲೂ ಸ್ತೋತ್ರವನ್ನು ಸಿದ್ಧಿಗೆ ತಂದಿ ಎಂಬುವದನ್ನು ನೀವು ಎಂದಾದರೂ ಓದಲಿಲ್ಲವೋ ಎಂದು ಪ್ರತ್ಯುತ್ತರವಾಗಿ ಹೇಳಲಿಲ್ಲವೇ ? ದೈವಿಕ ವಿಚಾರಗಳಲ್ಲಿ ಕೆಲವು ಸಂಗತಿಗಳು ಮಹಾ ಶಾಸ್ತ್ರಿಗಳಿಗೂ ದೊಡ್ಡವರಿಗೂ ತಿಳಿಯದಿದ್ದರೂ ಮಕ್ಕಳು ತಿಳುಕೊಳ್ಳುವಂತೆ ದೇವರುಮಾಡುತ್ತಾನೆ. ಪಾಪದಿಂದಲೂ ಅಹಂಕಾರದಿಂದಲೂ ಕಳಂಕವಾದ ಮನಸ್ಸಿಗೆ ತಿಳಿಯದಿರುವ ಕಾರ್ಯಗಳು ನಿಷ್ಕಪಟವಾದ ಮಕ್ಕಳಿಗೆ ತಿಳಿಯುತ್ತವೆ, ಕಂಡಿರಾ ?

ಈ.—ಏನಯ್ಯ ನೀವು ಹೇಳೋದು ! ಬುದ್ಧಿಯಿಲ್ಲದ ಒಬ್ಬ ಹುಡುಗಿಗೆ ತಂದೆ ತಾಯಿ ಕುಲದ ಯಜಮಾನರು ಇವರೆಲ್ಲರಿಗೆ ತಿಳಿಯುವದಕ್ಕಿಂತ ಹೆಚ್ಚಾಗಿ ಸನ್ಮಾರ್ಗ ವಿಚಾರ ತಿಳಿಯುತ್ತದೆಯೆಂದು ಹೇಳುತ್ತೀರೇನು!

ನಾ.—ಇದ್ದರೂ ಇರಬಹುದು. ದೇವರನ್ನು ಪ್ರೀತಿಸಿ ಆತನಿಗೆ ವಿಧೇಯರಾಗಿ ನಡೆಯಬೇಕಾದದ್ದು ಎಲ್ಲರಿಗೆ ಮೊದಲನೇ ಕರ್ತವ್ಯ. ಆ ಕರ್ತವ್ಯವೇನೆಂಬುದನ್ನು ದೊಡ್ಡವರಿಗೆ ಮಾತ್ರವಲ್ಲ, ಚಿಕ್ಕವರಿಗೂ ದೇವರು ಪ್ರಕಟಪಡಿಸುತ್ತಾನೆಂದು ಯೇಸುಸ್ವಾಮಿ ಬೋಧಿಸುತ್ತಾನೆ. ನಮ್ಮ ಇಂಗ್ಲಂಡ' ಸೀಮೆಯಲ್ಲಿರುವ ಒಬ್ಬ ದೊಡ್ಡ ನ್ಯಾಯಾಧಿಪತಿಯ ವಿಷಯದಲ್ಲಿ ಒಂದು ಇತಿಹಾಸವಿದೆ. ಹೇಳುತ್ತೇನೆ, ಕೇಳಿ. ಆತನಿಗೆ ಬಹು ರೂಪವತಿಯಾದ ಕೇವಲ ಪ್ರೀತಿಪಾತ್ರಳಾದ ಒಬ್ಬ ಮಗಳಿದ್ದಳು. ಆಕೆಯನ್ನು ಒಳ್ಳೇ ವರನಿಗೆ ಕೊಟ್ಟು ಮದುವೆ ಮಾಡಿಸಿ, ಮೊಮ್ಮಕ್ಕಳನ್ನು ಮುದ್ದಾಡುತ್ತ ತನ್ನ ವೃದ್ಧಾಪ್ಯದಲ್ಲಿ ಸಂತೋಷಪಡಬೇಕೆಂದು ಆ ದೊಡ್ಡ ಮನುಷ್ಯನು ಬಹುಕಾಲದಿಂದ ಆಶೆಯಿಟ್ಟುಕೊಂಡಿದ್ದನು. ಒಂದು ದಿನ ಆತನು ನ್ಯಾಯವಿಚಾರಣೆಯನ್ನು ಮಾಡುತ್ತಿರುವಾಗ್ಯೆ ಆ ಮಗಳ ಬಳಿಯಿಂದ ಒಂದು ಕಾಗದವು ಬಂದಿತು. ತಾನು ಸರ್ವಸಂಗ ಪರಿತ್ಯಾಗವನ್ನು ಮಾಡಿ ಸನ್ಯಾಸಿನಿಯಾಗಬೇಕೆಂದಿರುತ್ತೇನೆಂಬದಾಗಿ ಆಕೆ ಬರೆದಿರುವದನ್ನು ಆ ತಂದೆಯು ಕೇಳಿ, ಎದೆಯಲ್ಲಿ ಅಲಗುನೆಟ್ಟಂತಾಗಿ ತಾನು ಮಾಡಿಕೊಂಡ ಉದ್ದೇಶವೆಲ್ಲಾ ವ್ಯರ್ಥವಾಯಿತಲ್ಲ, ಪ್ರಾಣನ್ನ ಪ್ರಿಯ ಪುತ್ರಿಯ ಮುಖವನ್ನು ನಾನು ನೋಡಲಾರದಂತಾಯಿತಲ್ಲ ಎಂದು ಬಹು ದುಃಖಾಕ್ರಾಂತನಾದನು. ಆದರೂ ಆತನು ಆ ಮಗಳನ್ನು ನಿಂದಿಸಲಿಲ್ಲ, ಆಕೆ ಮಾಡಿದ್ದು ತಪ್ಪೆಂದು ನಿರ್ಣಯಿಸಲಿಲ್ಲ. ನ್ಯಾಯಸ್ಥಾನದ ಪೀಠದ ಮೇಲೆ ಕೂತಿರುವ ವೇಳೆಯಲ್ಲೇ ಆತನು ಆ ಮಗಳಿಗೆ ಅತ್ಯಂತ ಪ್ರೇಮರಸಭರಿತವಾದ ಕಾಗದವನ್ನು ಬರೆದು ಕಳುಹಿಸಿ—ಮಗಳೇ, ಈ ದಿನ ಮೊದಲಿಂದ ನನ್ನ ಮನಸ್ಸು ಬಹಳವಾಗಿ ನೊಂದಿತು. ಆದರೂ ನಿನ್ನ ತೀರ್ಮಾನಕ್ಕೆ ವಿರೋಧವಾಗಿ ನಾನು ಏನೂ ಹೇಳೆನು. ಈ ಸ್ಥಿತಿಯು ದೇವರಿಂದಲೇ ನಿನಗೆ ನೇಮಕವಾಯಿತೆಂದು ನೀನು ನಿಸ್ಸಂದೇಹವಾಗಿ ತಿಳುಕೊಂಡರೆ ನೀನು ವಿಧೇಯಿಸಲೇಬೇಕು ಎಂದು ಬರೆದನು.

ಈ ಇತಿಹಾಸವನ್ನು ಹೇಳಿ ಮುಗಿಸಿದ ಮೇಲೆ ನಾನು ಒಂದೆರಡು ನಿಮಿಷಗಳ ವರೆಗೂ ಸುಮ್ಮನಿದ್ದು—ಈರೇಗೌಡರೇ, ನಿಮಗೆ ಮಕ್ಕಳೇ ಇಲ್ಲವಾದುದರಿಂದ ನೀವು ಪುಣ್ಯವಂತರೆಂದು ಕೆಲವು ವೇಳೆಗಳಲ್ಲಿ ಹೇಳಿಕೊಳ್ಳುವದಿಲ್ಲವೇ ? ಎಂದು ಕೇಳಿದೆನು.

ಈ.—ಮಕ್ಕಳಿಲ್ಲದ್ದರಿಂದ ಪುಣ್ಯವಂತನೆಂದು ಹೇಳಿಕೊಂಡೆನೇ! ಚನ್ನಾಗಿ ಹೇಳಿದಿರಿ ! ಮಗನ ವರ ಪಡೆಯಬೇಕೆಂಬದಾಗಿ ನಾನೂ ನನ್ನ ನಿರ್ಭಾಗ್ಯಳಾದ ಹೆಂಡತಿಯೂ ಎಷ್ಟೆಷ್ಟೋ ಪುಣ್ಯ ಕಾರ್ಯಗಳನ್ನು ಮಾಡಿ ದೇವಸ್ಥಾನಗಳಿಗೆಲ್ಲಾ ಹೋಗಿ ನಮ್ಮ ಆಸ್ತಿಯನ್ನು ಖರ್ಚು ಮಾಡಿರುವಲ್ಲಿ ನಾನೊಬ್ಬ ಪುಣ್ಯವಂತನೆಂದು ಹೇಳಿಕೊಂಡೆನೇ ? (ನಿಟ್ಟುಸುರು ಬಿಟ್ಟು) ಏನೇನು ತಲೆಯಲ್ಲಿ ಬರೆದಿದೆಯೋ, ಅದೆಲ್ಲಾ ಅನುಭವಿಸಬೇಕಲ್ಲ !

ನಾ.—ನಾನಿದನ್ನು ಯಾಕೆ ಕೇಳಿದೆ, ತಿಳಿಯಿತೇ ? ಮಕ್ಕಳನ್ನು ಬೆಳಸುವ ಭಾರ ಬಹು ದೊಡ್ಡದು. ಯೇಸುಸ್ವಾಮಿ ಈ ವಿಷಯದಲ್ಲಿ ಹೇಳಿರುವ ಮಾತು ಭಯಂಕರವಾದದ್ದು. ಕೇಳಿ, ಹೇಳುತ್ತೇನೆ—ನನ್ನಲ್ಲಿ ನಂಬಿಕೆಯಿಡುವ ಈ ಚಿಕ್ಕವರಲ್ಲಿ ಒಬ್ಬನಿಗೆ ಯಾವಾತನು ಅಡ್ಡಿಯಾದರೆ ಅಂಥವನ ಕುತ್ತಿಗೆಗೆ ಬೀಸುವ ಕಲ್ಲು ಕಟ್ಟಿ ಅವನನ್ನು ಆಳವಾದ ಸಮುದ್ರದಲ್ಲಿ ಮುಣುಗಿಸಿಬಿಡುವದು ಅವನಿಗೆ ಹಿತವಾಗಿರುವದು ಎಂದು ಸ್ವಾಮಿ ಹೇಳಿದ್ದಾನೆ. ತನ್ನ ಮಗನಾದರೂ ಮಗಳಾದರೂ ತಮಗೆ ಬುದ್ಧಿ ಬಂದಮೇಲೆ ಸರಿಯೆಂದು ತಮಗೆ ತೋರಿದ ಪ್ರಕಾರ ಮಾಡುವ ವಿಷಯದಲ್ಲಿ ತಂದೆತಾಯಿಗಳು ಅಡ್ಡಿ ಮಾಡುವದಕ್ಕೆ ಎಷ್ಟು ಹೆದರಬೇಕು. ಆ ಕುರುಬರ ಹುಡುಗಿಯು ಮನೆಯನ್ನು ಬಿಟ್ಟು ಓಡಿಹೋದದ್ದು ಯಾಕೆ ? ಕ್ರೀಸ್ತಸ್ವಾಮಿಯು ನಮಗೆ ಬೋಧಿಸಿರುವ ಪ್ರಕಾರ ಆಕೆಯನ್ನು ತಂದೆ ತಾಯಿಗಳು ದೇವಾರಾಧನೆ ಮಾಡಗೊಡಿಸದೆ ಹೋದದರಿಂದಲ್ಲವೇ ? ನಮ್ಮ ಹಿರಿಯರು ಹೇಳಿರುವ ಪ್ರಕಾರ ದೇವರ ಪೂಜೆ ಮಾಡದೆ ಹೋದರೆ ಹೊಡೆಯುತ್ತೇನೆ ಎಂದು ಈಗಲೂ ಕೆಲವು ತಂದೆತಾಯಿಗಳು ಹೇಳುವದುಂಟು. ಆ ದೇವರುಗಳು ದೇವರಲ್ಲವೆಂದು ತಿಳಿದಿರುವ ಆ ಮಕ್ಕಳು ಕಾಟಕ್ಕೋಸ್ಕರ ಅಡ್ಡಬಿದ್ದು ಪೂಜಿಸುವವರಾಗಿದ್ದಾರೆ. ಈ ಪ್ರಕಾರ ನಮ್ಮ ಈ ದೇಶದಲ್ಲಿ ಹೇಡಿಗಳಾಗಿಯೂ [illegible] ಇರುವ ಜನರು ಹೆಚ್ಚುವದಕ್ಕೆ ಕಾರಣವಿದೆ. ಈ ಕಾರಣದಿಂದಲೇ ಹಿಂದೂ ಮತದಲ್ಲಿ ಬಲವೂ ಜೀವವೂ ಹೊರಟು ಹೋಗಿ ದಿನಕ್ರಮೇಣ ಅದು ಕ್ಷಯವಾಗುತ್ತಿದೆ. ಗೌಡರೇ ಸಂಸಾರಗಳನ್ನು ಹಾಳುಮಾಡುವವರು ಯಾರು ? ಈಗ ಹೇಳಿ ; ಮಕ್ಕಳನ್ನು ಸನ್ಮಾನಿಸಬೇಕೆಂದು ತಂದೆತಾಯಿಗಳಿಗೂ, ದೇವರನ್ನು ವಿಧೇಯಿಸಬೇಕೆಂದು ಮಕ್ಕಳಿಗೂ ಬೋಧಿಸುವವರು ಸಂಸಾರಗಳನ್ನು ಹಾಳುಮಾಡುತ್ತಾರೋ, ಅಥವಾ, "ಮಕ್ಕಳು ತಪ್ಪೆಂದು ತಿಳಿದಿರುವದನ್ನೂ ಮಾಡುವಂತೆ ಬಲಾತ್ಕರಿಸುವವರೋ? ನೀವೇ ನಿರ್ಣಯಿಸಿ ಹೇಳಿ.

## ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಣಿಯವರು ನಾಳೆ ಶನಿವಾರ ಬೆಳಿಗ್ಗೆ ಪರಿವಾರ ಸಹಿತ ಬೆಂಗಳೂರು ಮಾರ್ಗವಾಗಿ ನೀಲಗಿರಿಗೆ ದಯಮಾಡುವವರಾಗಿದಾರೆ.

****

"ಕೋಲಾರ' ಗಣಿ ಪ್ರದೇಶದಲ್ಲಿ ಜನರ ಆಹಾರಕ್ಕೆ ಉಪಯೋಗವಾಗುವ ಯಾವ ವಸ್ತುವನ್ನಾದರೂ ವಿಕ್ರಯಮಾಡುವದಕ್ಕೆ ಮುಂಚೆ ವರ್ತಕರು ಅಲ್ಲಿನ ಸ್ಯಾನಿಟರಿ ಬೋರ್ಡಿನಿಂದ ಲೈಸೆನ್ಸು ಪಡೆಯಬೇಕೆಂಬದಾಗಿ ಸರ್ಕಾರದವರು ಕಾನೂನು ಮಾಡಿರುತ್ತಾರೆ.

****

ಬೆಂಗಳೂರಿನ ನಂಜಶೆಟ್ಟಿ ಎಂಬವನು ಬೌರಿಂಗ' ಪೇಟೆಯಲ್ಲಿರುವಾಗ್ಯೆ ಪೋಲೀಸಿನವರು ಅವನನ್ನು ಹಿಡಿದು ಶೋಧಿಸಿದಾಗ ಅವನ ಬಳಿ ೩೦೦ ರೂಪಾಯಿನ ಗಣಿ ಚಿನ್ನ ಸಿಕ್ಕಿತು. ಮ್ಯಾಜಿಸ್ಟ್ರೇಟರು ಅವನಿಗೆ ೧ ವರುಷ ಕಠಿಣ ಸಜಾ, ೩೦೦ ರೂಪಾಯಿ ಜುಲ್ಮಾನೆಯನ್ನು ವಿಧಿಸಿದಾರೆ.

****

ಕಳೆದವಾರ ಕಡೂರಿನ ಹತ್ತಿರ ಮೆಯಿಲ' ಗಾಡಿಗೂ, ಸಾಮಾನು ಗಾಡಿಗೂ ಢಿಕ್ಕಾ ಬಡಿಯಿತು. ಆದರೆ ಪ್ರಯಾಣಿಕರಿಗೆ ಅಪಾಯವೇನೂ ಸಂಭವಿಸಲಿಲ್ಲ. ಗಾಡಿ ನಡಿಸುವವನಿಗೂ ಇನ್ನೊಬ್ಬ ರೈಲ' ನೌಕರನಿಗೂ ಬಹಳ ಜಖಂ ಆಯಿತು. ಕೆಲವು ಗಾಡಿಗಳು ಮುರಿದು ಸಾಮಾನುಗಳು ನಷ್ಟವಾದವು.

****

ಕಡೂರು ಡಿಸ್ಟ್ರಿಕ್ಟಿನಲ್ಲಿ ಪ್ರಸಿದ್ಧಿಹೊಂದಿದ ಚಿಕ್ಕಮಗಳೂರು ಲೇಟ' ಶೇಕ್ದಾರ' ಚನ್ನಪ್ಪಯ್ಯನವರ ಧರ್ಮಪತ್ನಿಯವರು ಕಳೆದ ಮಾರ್ಚಿ ೨೧ರಲ್ಲಿ ಕಾಲಗತಿಯನ್ನೈದಿದರು. ಇವರಲ್ಲಿದ್ದ ಪ್ರೀತಿ ದಯಾರಸಗಳಿಗಾಗಿ ಇಲ್ಲಿ ಸರ್ವರೂ ವ್ಯಸನಪಡುತ್ತಾರೆ ಎಂಬದಾಗಿ ಒಬ್ಬ ಬಾತ್ಮಿದಾರರು ಬರೆದಿರುವರು.

****

ಅಮೇರಿಕಕ್ಕೆ ಸೇರಿದ ಸೆಂಟ'ಲೂಯಿಸ' ನಗರದೊಳಗೆ ಬರುವ ವರುಷ ಒಂದು ದೊಡ್ಡ ಪ್ರದರ್ಶನೋತ್ಸವವು ನಡೆಯುವದು. ಸಂಸ್ಥಾನದಿಂದ ಕಸಬುದಾರರು ಆ ಪ್ರದರ್ಶನಶಾಲೆಗೆ ಬೇಕಾದ ವಸ್ತುಗಳನ್ನು ಕಳುಹಿಸಬಹುದೆಂತಲೂ, ಈ ಭಾಗದಲ್ಲಿ ಗೌವರ್ನಮೆಂಟಿನವರು ಸಾಧ್ಯವಾಗುವಮಟ್ಟಿಗೂ ಕಸಬುದಾರರಿಗೆ ಸೌಲಭ್ಯಗಳನ್ನು ಕಲ್ಪಿಸಿಕೊಡುವದಾಗಿಯೂ ಪ್ರಕಟವಾಗಿದೆ. ಈ ಸಂಗತಿಯನ್ನು ಈ ಸಂಸ್ಥಾನದ ಪ್ರಜೆಗಳಿಗೆ ತಿಳಿಸುವದಕ್ಕಾಗಿ ನಮ್ಮ ಸರ್ಕಾರದವರು ಗೆಜೆಟ್ಟಿನಲ್ಲಿ ಛಾಯಿಷ' ಮಾಡಿಸಿರುವರು.

****

ಬೌರಿಂಗ' ಪೇಟೆಯಲ್ಲಿ ಈಚೆಗೆ ಖೋಟಾ ನಾಣ್ಯಗಳನ್ನು ಮಾಡುವ ಜನರ ಸಂಖ್ಯೆಯು ಹೆಚ್ಚುತ್ತಾ ಬಂದಿದೆ. ಪೋಲೀಸಿನವರು ಇಬ್ಬರು ಕಾರಿಯುವವರನ್ನು ಹಿಡಿದು, ಅವರ ಜೋಪಡಿಯನ್ನು ಶೋಧನೆ ಮಾಡಿದರು. ಖೋಟಾ ನಾಣ್ಯಗಳನ್ನು ತಯಾರುಮಾಡುವದರಲ್ಲಿ ಅವರು ಉಪಯೋಗಿಸುತ್ತಿದ್ದ ಅಚ್ಚು, ದ್ರಾವಕ, ೪೩ ಖೋಟಾ ರೂಪಾಯಿ, ಎಂಟು ಮತ್ತು ನಾಲ್ಕಾಣೆಯ ಕೆಲವು ನಾಣ್ಯ—ಇವೆಲ್ಲಾ ಸಿಕ್ಕಿರುತ್ತವೆ. ಮ್ಯಾಜಿಸ್ಟ್ರೇಟರು ಅವರಿಬ್ಬರನ್ನೂ ಸ್ವಲ್ಪಮಟ್ಟಿಗೆ ದರ್ಯಾಫ್ತು ಮಾಡಿದರು. ಪೋಲೀಸಿನವರು ರುಜುವಾತು ಸಿದ್ಧಪಡಿಸಿಕೊಳ್ಳುತ್ತಿದಾರೆ.

****

ಮೈಸೂರು ಸಂಸ್ಥಾನಕ್ಕೆ ಸೇರಿದ ಉದ್ಯಾನವನಗಳ ಸೂಪರಿಂಟೆಂಡೆಂಟರಾದ ಮಿ॥ ಜೆ. ಕ್ಯಾಮಿರಾನ್ ಯವರು ಉದ್ಯಾನವನಗಳ ವಾರ್ಷಿಕ ರಿಪೋರ್ಟನ್ನು ಬರೆದು ಪ್ರಕಟಿಸಿರುತ್ತಾರೆ. ಅವರು ರಾಜಧಾನಿಯ ಮಧ್ಯ ಭಾಗದಲ್ಲಿ ಅಷ್ಟು ಬೇಗನೆ ಮನೋಜ್ಞವಾದ ಒಂದು ಉದ್ಯಾನವನ್ನು ಕಲ್ಪಿಸಿದ್ದಕ್ಕಾಗಿ ಶ್ರೀಮನ್ಮಹಾರಾಜರವರು ತುಂಬಾ ಸಂತೋಷಪಟ್ಟು ಅವರನ್ನು ಕೊಂಡಾಡಿರುವದಲ್ಲದೆ ಅವರಿಗೆ ಒಂದು ವಜ್ರದ ಉಂಗುರವನ್ನು ಬಹುಮಾನ ಮಾಡಿರುವರು. ಉದ್ಯಾನವನಗಳೆಲ್ಲಾ ಬಹಳ ಚನ್ನಾಗಿರುತ್ತವೆ ಎಂದು ಹೇಳಿ ಗೌವರ್ನಮೆಂಟಿನವರು ಅವರನ್ನು ವಂದಿಸಿರುತ್ತಾರೆ.

****

ಮೈಸೂರು ಸಂಸ್ಥಾನದಲ್ಲಿ ವರ್ತಕತನ, ಕಸಬುದಾರಿ ವಿದ್ಯೆಗಳನ್ನು ಅಭಿವೃದ್ಧಿಗೆ ತರಬೇಕೆಂದು ದಿವಾನರವರು ತೀರ್ಮಾನಿಸಿ, ಶ್ರೀಮನ್ಮಹಾರಾಜರವರ ಅನುಜ್ಞೆಯನ್ನು ಪಡೆದುಕೊಂಡಿರುತ್ತಾರೆ. ಈ ಸಂಸ್ಥಾನದಲ್ಲಿ ನೆಯ್ಗೆ ಕೆಲಸ ನಡಿಯುವ ಮುಖ್ಯ ಮುಖ್ಯ ಸ್ಥಳಗಳಲ್ಲಿ ನೆಯ್ಗೆಯನ್ನು ಕಲಿಸುವ ಪಾಠಶಾಲೆಗಳನ್ನೂ, ಇತರ ಕಡೆಗಳಲ್ಲಿ ರೇಷ್ಮೆ ವಸ್ತ್ರಗಳ ತಯಾರಿ, ಕಬ್ಬಿಣ ಕೆಲಸ, ಮರಕೆಲಸ, ಇವೇ ಮೊದಲಾದ ಕಸಬುಗಳನ್ನು ಕಲಿಸತಕ್ಕ ಪಾಠಶಾಲೆಗಳನ್ನೂ ಸ್ಥಾಪನೆ ಮಾಡುತ್ತಾರೆ. ಇದಲ್ಲದೆ ಈ ಕುಶಲವಿದ್ಯೆಗಳಲ್ಲಿ ಹೆಚ್ಚಾದ ಪರಿಶ್ರಮೆಯನ್ನು ಪಡೆಯಲೋಸ್ಕರ ಬುದ್ಧಿವಂತರಿಗೆ ವೇತನಗಳನ್ನು ಕೊಟ್ಟು, ಬೊಂಬಾಯಿಗೆ ಕಳುಹಿಸಿ, ಅಲ್ಲಿನ ವಿದ್ಯಾಶಾಲೆಗಳಲ್ಲಿ ತಯಾರಾಗಿ ಬರುವಂತೆ ಪ್ರೋತ್ಸಾಹ ಕೊಡುತ್ತಾರೆ.

****

ಡಾಕ್ಟರ' ಎ. ಲೀಮನ್ ಯವರು ಮೈಸೂರು ಸಂಸ್ಥಾನದ ವ್ಯವಸಾಯಶಾಸ್ತ್ರ ಪರಿಶೋಧಕರಾಗಿರುತ್ತಾರಷ್ಟೆ. ಇಂಡಿಯಾ ಗೌವರ್ನಮೆಂಟಿನ ವ್ಯವಸಾಯದ ಇಲಾಖಾ ಡೈರೆಕ್ಟರ' ಜನರಲ'ರಾದ ಮಿ॥ ಜೆ. ಮೊಲ್ಲಿಸನ್ರವರು ಹಿಂದಿನವಾರ ಮೈಸೂರು ಸಂಸ್ಥಾನಕ್ಕೆ ಬಂದು, ಡಾಕ್ಟರ' ಲೀಮನ್ ಯವರ ಸಂಗಡ ಬಾಬಾಬುಡನ್ಗಿರಿಗೆ ಹೋಗಿ ಅಲ್ಲಿರುವ ಸಾಂತವೇರಿ ಎಂಬ ಪ್ರಸಿದ್ಧವಾದ ಕಾಫೀ ತೋಟವನ್ನು ನೋಡಿಕೊಂಡು ಬಂದರು. ಕಾಫಿ ಗಿಡಗಳಿಗೆ ಹಿಡಿಯುವ ಹುಳು ಹುಪ್ಪಟೆ ರೋಗಾದಿಗಳನ್ನು ಕುರಿತು ಪರೀಕ್ಷೆ ಮಾಡಿದರು. ಇದಲ್ಲದೆ ಮಿ॥ ಲೆಫ್ರಾಯಿ ಎಂಬ ಇಂಡಿಯಾ ಗೌವರ್ನಮೆಂಟಿನ ಇನ್ನೊಬ್ಬ ಹುದ್ದೇದಾರರು ಇಷ್ಟರಲ್ಲೇ ಮೈಸೂರು ಸಂಸ್ಥಾನಕ್ಕೆ ಬರುವವರಾಗಿದ್ದಾರೆಂತಲೂ, ಅವರೂ ಡಾಕ್ಟರ' ಲೀಮನ್ ಯವರ ಸಂಗಡ ಕಲೆತು [illegible] ವಿಷಯವನ್ನು ಪರೀಕ್ಷೆ ಮಾಡಿಕೊಂಡು ಹೋಗುವವರಾಗಿದ್ದಾರೆಂತಲೂ ತಿಳಿದು ಬರುವದು.

****

ಮೈಸೂರು ಸಂಸ್ಥಾನದ ನೌಕರಿಯಲ್ಲಿದ್ದು ಪೆನ್ಷನ್ ಪಡೆದು ಕೆಲಸ ಬಿಟ್ಟಿರುವ ನವಾಬ' ವಿಜಾರ'ತಮಾಲುದ್ದೀನ್ ಆಲಿ ಖಾನ್ ಯವರು ಮುಹಮ್ಮದೀಯರ ಸ್ತ್ರೀಯರಿಗೋಸ್ಕರ ೬,೦೦೦ ರೂಪಾಯಿ ಖರ್ಚುಮಾಡಿ, ಒಂದು ಮುಸಾಫರ' ಖಾನೆಯನ್ನು ಮೈಸೂರು ಲಷ್ಕರ' ಮೊಹಲ್ಲಾದಲ್ಲಿ ಕಟ್ಟಿಸಿಕೊಡುವವರಾಗಿದಾರೆ. ಇವರ ಸಹೋದರರಾಗಿಯೂ ಎಕ್ಸೈಸ' ಅ ಕಮಿಷನರರಾಗಿಯೂ ಇರುವ ಮಿ॥ ಟಿ. ಎಂ. ವಿಜಾರ' ನಿಜಾಮುದ್ದೀನ್ ಆಲಿ ಖಾನ್ ಯವರು ಮೈಸೂರು ಚಾಮರಾಜ ಮೊಹಲ್ಲಾದಲ್ಲಿರುವ ತಮ್ಮ ಬಂಗಲೆಯನ್ನು ವರುಷೇವರುಷ ಪರೀಕ್ಷೆಗಾಗಿ ಇತರ ಕಡೆಗಳಿಂದ ರಾಜಧಾನಿಗೆ ಬರುವ ಮಹಮದೀಯ ವಿದ್ಯಾರ್ಥಿಗಳು ಇಳುಕೊಳ್ಳುವದಕ್ಕಾಗಿ ಬಿಟ್ಟುಕೊಡುವಂತೆ ತೀರ್ಮಾನಿಸಿರುತ್ತಾರೆ. ಇದಲ್ಲದೆ ಇವರು ಹಿಂದುಗಳಿಗೂ ಮಹಮದೀಯರಿಗೂ ಪ್ರತ್ಯೇಕವಾದ ಎರಡು ಮುಸಾಫರಖಾನೆಗಳನ್ನು ಸ್ವಂತ ಲಾಗವಡಿನಿಂದ ಕಟ್ಟಿಸಿಕೊಡುತ್ತೇವೆಂದು ಒಪ್ಪಿಕೊಂಡಿದಾರೆ.

## ಮೈಸೂರು ಗೆಜೆಟ್ ಸಂಗ್ರಹ.

ಸಿರಾ ತಾಲೂಕ' ಅಮಲ್ದಾರ' ಮಿ॥ ಟಿ. ವೆಂಕಟಕೃಷ್ಣಯ್ಯನವರಿಗೆ ಕೊಟ್ಟಿದ್ದ ೧೨ ದಿನಗಳ ಪ್ರಿವಿಲೇಜ' ರಜವನ್ನು ಇನ್ನು ೫ ದಿನ ಜಾಸ್ತಿ ಮಾಡಿದೆ.

ದಿವಾನರ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ಎ. ಆ. ಕ. ಮಿ॥ ವಿ. ರಂಗಾಚಾರ್ಯರಿಗೆ ಮಾರ್ಚಿ ೨೬ರ ಆರಾಭ್ಯ ಒಂದು ತಿಂಗಳ ಪ್ರಿವಿಲೆಜ' ರಜಾ ಕೊಟ್ಟಿದೆ.

ಮಿ॥ ಎಂ. ಆನಂದಾಳ್ವಾರ' ಯವರನ್ನು ೪೦ ರೂ. ತಲಬಿನ ಮೇಲೆ ೩ನೆ ಕ್ಲಾಸ' ಸಬ' ಆ. ಇಂಜನಿಯರಾಗಿ ನೇಮಿಸಿ, ಮೈಸೂರು ಅರಮನೆ ಡಿವಿಜನಿಗೆ ವರ್ಗಮಾಡಿದೆ.

ಮೈಸೂರು ಸಂಸ್ಥಾನದ ಛೀಫ' ಇಂಜನಿಯರ' ಮಿ॥ ಮೆಕ್ಹಚಿನ್ ಯವರನ್ನು ಕಳೆದ ಜನವರಿ ೩೧ ರಿಂದ ಎರಡನೆ ಕ್ಲಾಸ' ಸೂಪರಿಂಟೆಂಡಿಂಗ' ಇಂಜನಿಯರ ದರ್ಜೆಗೆ ಬ್ರಿಟಿಷ' ಸರ್ಕಾರದವರು ಬಡ್ತಿ ಮಾಡಿರುತ್ತಾರೆ.

## ಮೈಸೂರು ಸರ್ಕಾರಿ ಹುಕುಮುಗಳು.

### ರಿಜಿಸ್ಟ್ರೇಷನ್ ಇಲಾಖಾ ಕಾರ್ಯಗಳು

ಮೈಸೂರು ಸಂಸ್ಥಾನದ ರಿಜಿಸ್ಟ್ರೇಷನ್ ಇಲಾಖಾ ಇನ್‌ಸ್ಪೆಕ್ಟರ್ ಜನರಲ್‌ರವರು ತಮ್ಮ ಇಲಾಖೆಯ ೧೯೦೧—೧೯೦೨ನೆ ಸಾಲಿನ ವಾರ್ಷಿಕ ರಿಪೋರ್ಟನ್ನು ತಯಾರುಮಾಡಿ ಕಳೆದ ನವಂಬರ್ ೨೩ ರಲ್ಲಿ ಗವರ್ನಮೆಂಟಿಗೆ ಕಳುಹಿಸಿಕೊಟ್ಟರು. ಗವರ್ನಮೆಂಟಿನವರು ಆ ರಿಪೋರ್ಟನ್ನು ಓದಿನೋಡಿ, ಕಳೆದ ಫೆಬ್ರವರಿ ೨೮ ರಲ್ಲಿ ತಮ್ಮ ಅಭಿಪ್ರಾಯಗಳನ್ನು ಬರೆದು ಪ್ರಕಟಿಸಿದ್ದು ಕಳೆದ ವಾರ ನಮ್ಮಲ್ಲಿಗೆ ಬಂದಿರುವದು. ಇದರಲ್ಲಿ ಕಂಡುಬರುವ ಮುಖ್ಯವಿಷಯಗಳೇನಂದರೆ —

೧. ಕಳೆದ ೧೯೦೧—೧೯೦೨ನೆ ಸಾಲಿನಲ್ಲಿ ಚಿಕ್ಕನಾಯಕನಹಳ್ಳಿ, ಆಲೂರು, ಹರಿಹರ, ಹೊನ್ನಾಳಿ ಎಂಬೀ ಸ್ಥಳಗಳಲ್ಲಿ ಜಾಹೀರು ಮಾಡಿ ತಾತ್ಕಾಲಿಕ ಸ್ಪೆಷಲ್ ಸಬ್ ರಿಜಿಸ್ಟ್ರಾರ್ ಆಫೀಸುಗಳನ್ನು ಏರ್ಪಡಿಸಲಾಯಿತು.

೨. ಹಿಂದಿನ ಸಾಲಿನಲ್ಲಿ ೬೪,೯೦೧ ಪತ್ರಗಳು ರಿಜಿಸ್ಟರಾದವು. ಈ ಸಾಲಿನಲ್ಲಿ ೬೮,೦೩೩ ಪತ್ರಗಳು ರಿಜಿಸ್ಟರಾಗಿರುತ್ತವೆ. ಪ್ಲೇಗ್ ಉಪದ್ರವು ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಪ್ರಬಲವಾಗಿದ್ದದ್ದರ ದೆಸೆಯಿಂದ ರಿಜಿಸ್ಟರಾದ ಪತ್ರಗಳ ಸಂಖ್ಯೆಯು ಕಡಿಮೆಯಾಗಲು ಕಾರಣವಾಯಿತೆಂದು ತಿಳಿದುಬಂದಿದೆ. ಆದರೆ ರಿಜಿಸ್ಟರಾದ ಉಯಿಲುಗಳ ಸಂಖ್ಯೆಮಾತ್ರ ೩೨೨ರಿಂದ ೪೧೦ಕ್ಕೆ ಹೆಚ್ಚಿರುತ್ತದೆ.

೩. ಈ ಇಲಾಖೆಯ ಒಟ್ಟು ಹುಟ್ಟುವಳಿ ೧,೧೦,೪೬೧ ರೂಪಾಯಿ, ಅಂದರೆ, ಹಿಂದಿನ ಸಾಲಿನ ಹುಟ್ಟುವಳಿಗಿಂತ ೫,೬೯೩ ರೂಪಾಯಿ ಕಡಿಮೆ. ಈ ಇಲಾಖೆಯ ಒಟ್ಟು ಖರ್ಚುಮಾತ್ರ ೫೪,೨೨೪ ರೂಪಾಯಿ ಇದ್ದದ್ದು ೫೪,೬೧೦ ರೂಪಾಯಿಗೆ ಹೆಚ್ಚಿತು. ಹಿಂದಿನ ಸಾಲಿನ ಅಂತ್ಯದಲ್ಲಿ ಈ ಇಲಾಖೆಯಲ್ಲಿ ೫೬,೯೧೭ ರೂಪಾಯಿ ಉಳಿದಿದ್ದದ್ದು ಈ ಸಾಲ್ ಆಖೈರಿನಲ್ಲಿ ೫೬,೨೫೦ ರೂಪಾಯಿ ಮಾತ್ರ ಉಳಿಯುವಹಾಗಾಯಿತು.

೪. ಮೋಸದಿಂದ ಪತ್ರವನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂದು ಪ್ರಯತ್ನಪಟ್ಟಂತೆ ಎರಡು ಮೊಕದ್ದಮೆಗಳು ಆಗಿ ಅವೆರಡರಲ್ಲೂ ಅಪರಾಧಿಗಳಿಗೆಲ್ಲಾ ಶಿಕ್ಷೆ ವಿಧಿಸಲ್ಪಟ್ಟಿತು.

೫. ಈ ಸಾಲಿನಲ್ಲಿ ಇನ್‌ಸ್ಪೆಕ್ಟರ್ ಜನರಲ್‌ರವರು ಹತ್ತು ಸಬ್ ರಿಜಿಸ್ಟ್ರಾರ್ ಆಫೀಸುಗಳನ್ನೂ ಒಂದು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆಫೀಸನ್ನೂ ಹೋಗಿ ಪರೀಕ್ಷೆ ಮಾಡಿದಹಾಗೆ ಕಂಡುಬರುತ್ತದೆ. ಬೆಂಗಳೂರು ಮೈಸೂರು ವಿನಾ ಉಳಿದ ಡಿಸ್ಟ್ರಿಕ್ಟ್ ರಿಜಿಸ್ಟ್ರಾರುಗಳು ನಡೆಸಿದ ತನಿಖೆ ಕಾರ್ಯಗಳು ತೃಪ್ತಿಕರವಾಗಿವೆ. ಇನ್‌ಸ್ಪೆಕ್ಟರ್ ಜನರಲ್‌ರವರು, ಡಿಸ್ಟ್ರಿಕ್ಟ್ ರಿಜಿಸ್ಟ್ರಾರುಗಳೂ ಇನ್ನು ಹೆಚ್ಚಾಗಿ ತನಿಖೆಮಾಡುವದು ಅಪೇಕ್ಷಣೀಯವಾಗಿರುವಂತೆ ಗವರ್ನಮೆಂಟಿನವರು ಅಭಿಪ್ರಾಯಪಡುತ್ತಾರೆ.

---

### ಮುನಸಿಫ್ ಕೋರ್ಟುಗಳಲ್ಲಿ ಹಣ ತಿಂದುಹಾಕಿದ್ದು

ನೆಲಮಂಗಲದ ಮುನಸಿಫ್ ಕೋರ್ಟಿನಲ್ಲಿಯೂ, ಬೆಂಗಳೂರು ಪ್ರಿನ್ಸಿಪಲ್ ಮುನಸಿಫ್ ಕೋರ್ಟಿನಲ್ಲೂ ಕಕ್ಷಿಗಾರರು ಖಜಾನೆಗೆ ಕಟ್ಟಿದ್ದ ಹಣದ ಪೈಕಿ ಕೆಲವು ಮೊಬಲಗುಗಳು ಗೈರಿಕಲೆ ಆಗಿವೆ ಎಂತಲೂ, ಕೋರ್ಟು ನೌಕರರು ತಿಂದುಹಾಕಿರುತ್ತಾರೆಂತಲೂ, ಈ ಮೊಬಲಗುಗಳ ವಿಲೇವಾರಿಯ ಜವಾಬ್ದಾರಿಯನ್ನು ವಹಿಸಿರುವ ನೆಲಮಂಗಲದ ಮುನಸಿಫ್ ಕೋರ್ಟಿನ ಹೆಡ್ ಮುನಸಿ ಚಂದ್ರಶೇಖರಯ್ಯನನ್ನೂ, ಬೆಂಗಳೂರು ಪ್ರಿನ್ಸಿಪಲ್ ಮುನಸಿಫ್ ಕೋರ್ಟಿನ ನಾಜರ್ ಎಂ. ಕೃಷ್ಣಾರಾಯನನ್ನೂ ಕೆಲಸದಿಂದ ಡಿಸ್ಮಿಸ್ ಮಾಡಬೇಕೆಂಬದಾಗಿ ಹುಕುಂ ಕೊಡಲಾಗಿದೆ ಎಂತಲೂ, ಈ ಮೊಕದ್ದಮೆಗಳು ತೀರ್ಮಾನವಾಗುವದಕ್ಕಿಂತ ಮೊದಲು ಮೇಲ್ಕಂಡ ಮೊಬಲಗುಗಳನ್ನು ಕಕ್ಷಿಗಾರರಿಗೆ ಸರ್ಕಾರಿ ಖಜಾನೆಗಳಿಂದ ವಾಪಸಿ ಆಗುವಂತೆ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಬೇಕೆಂತಲೂ ಛೀಫ್‌ಕೋರ್ಟಿನ ರಿಜಿಸ್ಟ್ರಾರವರು ಗವರ್ನಮೆಂಟಿಗೆ ಬರೆದು ತಿಳಿಸಿದರು. ಇದುವರೆಗೆ ಲೆಕ್ಕಾಚಾರವಾದದ್ದರಲ್ಲಿ ಮೇಲ್ಕಂಡ ನೆಲಮಂಗಲದ ಕೋರ್ಟಿನಲ್ಲಿ ರೂ. ೩,೨೪೦—೧೨—೩ ಪೈಯೂ, ಬೆಂಗಳೂರು ಕೋರ್ಟಿನಲ್ಲಿ ರೂ. ೧,೩೬೦—೯—೧೦ ಪೈಯೂ ಗೈರಿಕಲೆ ಆಗಿರುವಂತೆ ತಿಳಿಯುವದು.

೨. ಗವರ್ನಮೆಂಟಿನವರು ಮೇಲ್ಕಂಡ ಸಂಗತಿಯನ್ನು ತಿಳಿದು, ಹಣವನ್ನು ಖಜಾನೆಯಿಂದ ವಾಪತಿಮಾಡತಕ್ಕದ್ದೆಂದು ಸ್ಯಾಂಕ್ಷನ್‌ಮಾಡಿ, ರಿಜಿಸ್ಟ್ರಾರವರಿಗೆ ತಿಳಿಸಿದ್ದೇನಂದರೆ —"ಈ ಹಣವನ್ನು ತಿಂದುಹಾಕಿದರೆಂದು ಗೊತ್ತಾಗುವ ನೌಕರರನ್ನು ದರ್ಯಾಫ್ತುಮಾಡಿ, ಶಿಕ್ಷೆವಿಧಿಸುವದು ಮಾತ್ರವೇ ಸಾಲದು; ಅಂಥವರಿಂದ ಅಷ್ಟು ಹಣವನ್ನೂ ವಸೂಲ್ಮಾಡಬೇಕಾಗಿದೆ. ಹಣವನ್ನು ತಿಂದುಹಾಕಿರುವ ನೌಕರರ ಜಾಮೀನು ಕೊಟ್ಟಿರಬೇಕಷ್ಟೆ. ಎಲ್ಲಾ ವಿಷಯಗಳನ್ನೂ ಚನ್ನಾಗಿ ತನಿಖೆ ಮಾಡಬೇಕು. ಹಣದ ಜವಾಬ್ದಾರಿ ವಹಿಸಿರುವ ನೌಕರರಿಂದಲೂ, ಆಗಿನಾಗ್ಯೆ ಅವರಮೇಲೆ ಹುದ್ದೇದಾರರಾಗಿದ್ದುಕೊಂಡು ದಮಾಲುಖರ್ಚು ಮುಂತಾದ್ದನ್ನು ಕವಿಚಿಮಾಡುತ್ತಿದ್ದ ಮುನಸಿಫರಿಂದಲೂ ಈ ಭಾಗದಲ್ಲಿ ವಾಪತ್ತುಗಳನ್ನು ಬರೆಸಿ ಕರಿಸಬೇಕು. ಈ ಮೋಸಕೃತ್ಯದಲ್ಲಿ ಆ ಹುದ್ದೇದಾರರೇ ಸ್ವತಃ ಕಾರಣರಲ್ಲವೆಂಬುವದಕ್ಕೆ ಸಾಕಾದಷ್ಟು ಕೃಪ್ತಿಕರವಾದ ಒಳ್ಳೇ ಸಮಾಧಾನಗಳು ಕಂಡುಬರದೇ ಹೋಗುವಪಕ್ಷದಲ್ಲಿ ಅಂಥಾ ಹುದ್ದೇದಾರರು ನ್ಯಾಯವಾಗಿ ಕಾವು ಮಾಡಬೇಕಾಗಿದ್ದ ಕರ್ತವ್ಯವನ್ನು ನಡಸದೆ ಬೇಜವಾಬ್ದಾರಿಯಾಗಿದ್ದದ್ದಕ್ಕಾಗಿ ಈಗ ನಷ್ಟವಾಗಿರುವ ಹಣವನ್ನು ಆಯಾ ಹುದ್ದೇದಾರರಿಂದ ವಸೂಲ್ಮಾಡಬೇಕಾಗುವದು. ಈ ಸಂಗತಿಯನ್ನೆಲ್ಲಾ ತನಿಖೆಮಾಡಿ ಗವರ್ನಮೆಂಟಿಗೆ ರಿಪೋರ್ಟು ಜಾಗ್ರತೆಯಾಗಿ ಕಳುಹಿಸಬೇಕು."

೩. ಮೇಲ್ಕಂಡ ಕೋರ್ಟುಗಳ ಹುದ್ದೇದಾರರುಗಳು ಬರೆದು ಕಳುಹಿಸಿರುವ ಸಮಾಧಾನಗಳನ್ನು ರಿಜಿಸ್ಟ್ರಾರವರು ಕಳುಹಿಸಿ, ತಿಳಿಸುವದೇನಂದರೆ — ನೆಲಮಂಗಲದ ಮುನಸಿಫ್ ಕೋರ್ಟಿನ ಹೆಡ್ ಮುನಷಿಯನನ್ನೂ ಬೆಂಗಳೂರು ಪ್ರಿನ್ಸಿಪಲ್ ಮುನಸಿಫ್ ಕೋರ್ಟಿನ ನಾಜರನನ್ನೂ ದರ್ಯಾಫ್ತು ಮಾಡಿ, ಅವರಿಬ್ಬರಿಗೂ ಶಿಕ್ಷೆ ವಿಧಿಸಲ್ಪಟ್ಟಿದೆ. ನೆಲಮಂಗಲದ ಹೆಡ್ ಮುನಷಿಯ ಜಾಮೀನುದಾರರಿಂದ ೩೦೦ ರೂಪಾಯಿ ವಸೂಲಾಯಿತು. ಬೆಂಗಳೂರು ಮುನಸಿಫ್ ಕೋರ್ಟಿನ ನಾಜರ ಮೇಲೆ ಸಬ್ ಜಡ್ಜ್ ಕೋರ್ಟಿನಲ್ಲಿ ದಾವಾ ಮಾಡಿದ್ದರಲ್ಲಿ ೩೦೦ ರೂಪಾಯಿ, ಕೋರ್ಟು ಖರ್ಚಿಗೆ ಅವನ ಮೇಲೆ ಡಿಕ್ರಿ ಪಡೆಯಲಾಯಿತು. ಅದನ್ನು ಎಗ್ಸಿಕ್ಯೂಷನ್ ಪ್ರಾಸಿಕ್ಯೂಟರು ಜಾರಿಮಾಡಿ, ನಾಜರಿಗೆ ಸೇರಿರುವ ೨ ಮನೆಗಳನ್ನೂ ೧ ನಿವೇಶನವನ್ನೂ ಜಪ್ತಿ ಮಾಡಿಸಿದಾರೆ.

೪. ಬೆಂಗಳೂರು ಮುನಸಿಫ್ ಕೋರ್ಟಿನಲ್ಲಿ ಹಣ ಗಲಿಬಿಲಿಯಾಗುವ ಸಮಯದಲ್ಲಿ ಮೆ। ಬಿ. ರಾಮಸ್ವಾಮಯ್ಯಂಗಾರ್ಯ ಮುನಸಿಫರಾಗಿದ್ದರು. ಇವರು ಬರೆದಿರುವ ಸಮಾಧಾನವೇನಂದರೆ —

ಡಿಕ್ರಿದಾರರಿಗೆ ಹಣ ವಾಪತಿಯಾಗಬೇಕೆಂದು ತಪ್ಪಾದ ಚೆಕ್ಕುಗಳನ್ನು ಬರೆದು ಕೊಟ್ಟಾಗ ನನ್ನ ಕೋರ್ಟಿನ ಅಧಿಕಾರವನ್ನು ವಹಿಸಿರಲಿಲ್ಲ. ನಾಜರು ಹೆಡ್ ಮುನಷಿಯಲ್ಲಿ ಆ ತಪ್ಪಾದ ಚೆಕ್ಕುಗಳನ್ನು ಖಜಾನೆಗೆ ಬರೆದು ಕಳುಹಿಸಿರಬಹುದು. ಖಜಾನೆಯ ಕೆಲವು ನೌಕರರೂ ಇದಕ್ಕೆ ಸೇರಿ ಆ ಚೆಕ್ಕುಗಳನ್ನು ಪಾಸ್ ಮಾಡಿಸಿ, ಬೇರೆ ಬಾಬುಗಳ ಹಣವನ್ನು ಎತ್ತಿ ಅನ್ಯರಿಗೆ ಕೊಟ್ಟಿರಬಹುದು. ಕಕ್ಷಿಗಾರರು ಖಜಾನೆಯಿಂದ ಹಣ ಪಡೆದು ಬಂದದ್ದಕ್ಕೆ ಕೋರ್ಟಿನ ಪುಸ್ತಕಗಳಲ್ಲಿ ಖಂಡಿತ ರುಜು ಮಾಡುತ್ತಾರೆ. ಆದಕಾರಣ ಈ ವಿಷಯಕ್ಕೆ ನನ್ನ ಜವಾಬ್ದಾರಿ ಏನೂ ಇರುವದಿಲ್ಲ. ಕೋರ್ಟಿನ ಮತ್ತು ಖಜಾನೆಯ ಲೆಕ್ಕಪತ್ರಗಳನ್ನು ನೋಡಿದಾಗ ಎರಡು ಕಡೆಯ ನೌಕರರೂ ಒಂದಾಗಿದ್ದಾರೆಂಬುವದು ಗೊತ್ತಾಗುತ್ತದೆ.

ಮೆ। ಪಿ. ಸಿಂಗ್ರಾಚಾರ್ಯರು ಬರೆದಿರುವ ಸಮಾಧಾನವೇನಂದರೆ —

ಪ್ರಿನ್ಸಿಪಲ್ ಮತ್ತು ಅಡಿಷನಲ್ ಮುನಸಿಫ್ ಕೋರ್ಟುಗಳೆರಡಕ್ಕೂ ಒಬ್ಬನೇ ನಾಜರನಿದ್ದನು. ಆಗ್ಗೆ ಚಲಾವಣೆಯಲ್ಲಿದ್ದ ಪದ್ಧತಿಯ ಪ್ರಕಾರ ಹಣದ ರಶೀತಿ ಅರ್ಜಿಯ ಮೇಲೆ ಖಜಾನೆಗೆ ಹೋಗುತ್ತಿರಲಿಲ್ಲ. ಚೆಕ್ಕಿನ ಮೂಲಕ ಕಕ್ಷಿಗಾರರಿಗೆ ವಾಪತಿ ಆಗುತ್ತಿತ್ತು. ಆದಕಾರಣ ಕೋರ್ಟಿನ ಹುದ್ದೇದಾರನು ವಿಪರೀತ ಎಚ್ಚರಿಕೆಯಿಂದ ಲೆಕ್ಕಗಳನ್ನೆಲ್ಲಾ ತಲಸ್ಪರ್ಶಿಯಾಗಿ ನೋಡಿ ಆ ಹೊತ್ತಗೆ ಪುಸ್ತಕಗಳಲ್ಲಿ ಬರೆದಿರುವ ಬಾಬುಗಳನ್ನು ತನಿಖೆ ಮಾಡುವದು ಅಸಾಧ್ಯವಾಗಿತ್ತು. ಮುನಸಿಫರಿಗೆ ಕೆಲಸ ವಿಪರೀತವಾಗಿದ್ದದರಿಂದ ಹೀಗೆಲ್ಲಾ ಮಾಡುವದು ಸಾಧ್ಯವಲ್ಲ. ಕೆಲವು ಸಂದರ್ಭಗಳಲ್ಲಿ ನಾಜರು ಕಕ್ಷಿಗಾರರ ರುಜುವನ್ನು ಸೃಷ್ಟಿಸಿಮಾಡಿದ್ದರಿಂದ ಫಿರ್ಯಾದುದಾರನ ಗೈರುಹಾಜರಿಯಲ್ಲಿ ಆ ರುಜುವಿನ ವಿಷಯವನ್ನು ಕಂಡು ಹಿಡಿಯುವದು ಸಾಧ್ಯವಾಗಿರಲಿಲ್ಲ. ಲೆಕ್ಕಪತ್ರಗಳು ಸರಿಯಾಗಿರುವ ವಿಷಯದಲ್ಲಿ ನಾಜರೇ ಜವಾಬ್ದಾರನಾಗಿರುತ್ತಾನೆ. ಆದಕಾರಣ ಹಣ ಗೈರಿಕಲೆಯಾಗಿರುವದನು ಆತನಿಂದಲೇ ಎತ್ತಿಕೊಳ್ಳಬೇಕಾಗಿರುತ್ತದೆ.

ಮೆ। ವ್ಯಾಂಡಲೂರ್ ವೆನ್‌ಯವರು ಹೇಳುವ ಸಮಾಧಾನವೇನಂದರೆ —

ಲೆಕ್ಕದ ಪುಸ್ತಕಗಳಾಗಲೀ ನೋಡುವ ಇತರ ಕಾಗದಗಳೂ ನನಗೆ ಸಿಕ್ಕುತ್ತಿರಲಿಲ್ಲವಾದ್ದರಿಂದ ಈ ವಿಷಯದಲ್ಲಿ ನಾನು ಪೂರಾ ಸಮಾಧಾನವನ್ನು ಕೊಡುವದು ಸಾಧ್ಯವಲ್ಲ. ಕೋರ್ಟಿನ ಹಣ ಗೈರಿಕಲೆಯಾಗದಂತೆ ಸಾಧ್ಯವಾದಷ್ಟು ಮಟ್ಟಿಗೂ ನಾನು ತನಿಖೆ ಮಾಡುತ್ತಿದ್ದೆನು. ಇಂಥಾದ್ದರಲ್ಲೂ ಹಣ ಗೈರಿಕಲೆ ಬಂದಿರುವದನ್ನು ನೋಡಿದರೆ ಅಕ್ರಮಗಳನ್ನೆಲ್ಲಾ ಕಂಡುಹಿಡಿಯುವದಕ್ಕೆ ಮನುಷ್ಯಮಾತ್ರದವನಿಗೆ ಅಸಾಧ್ಯವಾಗಿದೆ ಎಂದು ಕಾಣುತ್ತದೆ.

ಮೆ। ಬಿ. ಶ್ರೀನಿವಾಸರಾಯರು ಬರೆದಿರುವದೇನಂದರೆ —

ನಾನು ೧೮೯೮ ರಲ್ಲಿ ಕೋರ್ಟಿನ ಛಾರ್ಜನ್ನು ವಹಿಸುವಾಗ್ಯೆ ಕೋರ್ಟಿನ ರಿಕಾರ್ಡುಗಳು, ರಿಜಿಸ್ಟರ್ ಪುಸ್ತಕಗಳೇ ಮುಂತಾದವು ತುಂಬಾ ಗಲಿಬಿಲಿಯಾಗಿದ್ದವು. ಕೆಲವು ತಿಂಗಳಾದನಂತರ ಲೆಕ್ಕಪತ್ರಗಳನ್ನೆಲ್ಲಾ ಕ್ರಮಕ್ಕೆ ತಂದಿಟ್ಟೆನು. ನಾಜರು ಇಟ್ಟಿದ್ದ ರಿಜಿಸ್ಟರ್ ಪುಸ್ತಕಗಳಲ್ಲಿ ಅನೇಕ ಬಾಬುಗಳು ಬಿಟ್ಟುಹೋಗಿದ್ದದ್ದನ್ನು ಕಂಡುಹಿಡಿದ ಕೂಡಲೆ, ಛೀಫ್ ಕೋರ್ಟಿಗೆ ರಿಪೋರ್ಟು ಮಾಡಿ, ನಾಜರಿನ ಲೆಕ್ಕಗಳನ್ನು ತನಿಖೆಮಾಡಬೇಕೆಂತಲೂ ಕ್ರಮಕ್ಕೆ ತಂದಿಡಬೇಕೆಂತಲೂ ತಿಳಿಸಿರುತ್ತೇನೆ. ನಾನು ಕೋರ್ಟಿನ ಅರ್ಜಿದಾರರು ಕೊಟ್ಟು ಕಾಗದಗಳಿಗೂ ಚೆಕ್ಕುಗಳಿಗೂ ರುಜು ಹಾಕಿಕೊಟ್ಟಮೇಲೆ ನಾಜರು ನನಗೆ ತಿಳಿಸದೇನೇ ಅವುಗಳಲ್ಲಿ ತಿದ್ದಿ ಬಿಡುವುಮಾಡಿ ನಾನಾ ಬದಲಾವಣೆಗಳನ್ನು ಮಾಡಿರುತ್ತಾನೆ. ನಾಜರೂ ಖಜಾನೆ ನೌಕರರೂ ಒಂದಾಗಿ ಕೆಲವು ವರುಷಗಳಿಂದಲೂ ಹಣ ತಿಂದುಹಾಕಿರುತ್ತಾರೆ. ಇದನ್ನೆಲ್ಲಾ ಸಾಂಗೋಪಾಂಗವಾಗಿ ತನಿಖೆಮಾಡಿ ಕಂಡುಹಿಡಿಯುವದಕ್ಕೆ ಒಬ್ಬ ಅಧಿಕಾರಿಯಿಂದ ಸಾಧ್ಯವಲ್ಲ. ಆದಕಾರಣ ನಾನು ಈ ವ್ಯತ್ಯಾಸಕ್ಕೆಲ್ಲಾ ಜವಾಬ್ದಾರನಾಗಲಾರೆನು. ಮತ್ತು ಕಕ್ಷಿಗಾರರ ಪೈಕಿ ಯಾರೂ ಬಂದು ತಮಗುಂಟಾದ ನಷ್ಟವನ್ನು ಕುರಿತು ನನಗೆ ತಿಳಿಸಲೂ ಇಲ್ಲ.

ನೆಲಮಂಗಲದ ಮುನಸಿಫ್ ಕೋರ್ಟಿನಲ್ಲಿ ಮುಖ್ಯ ಅಧಿಕಾರಿಗಳಾಗಿದ್ದವರ ಪೈಕಿ ಮೆ। ಬಿ. ಎಸ್. ಕೃಷ್ಣಸ್ವಾಮಯ್ಯಂಗಾರ್ಯ ತಿಳಿಸಿರುವದೇನಂದರೆ —

ಇದಕ್ಕೆ ಮೊದಲೇ ನಾನು ಕೋರ್ಟಿನ ಲೆಕ್ಕಪತ್ರಗಳನ್ನೂ ಪುಸ್ತಕಗಳನ್ನೂ ಕ್ರಮಕ್ಕೆ ತರಬೇಕೆಂದು ನನ್ನ ಕೈಲಾದಷ್ಟು ಸಾಹಸಪಟ್ಟಿರುತ್ತೇನೆ. ಇದರಲ್ಲೇನಾದರೂ ಹೋಲಿಸಿದ್ದ ಪಕ್ಷದಲ್ಲಿ ಅದು ನನ್ನ ದೃಷ್ಟಿಗೆ ಬೀಳದೆ ಹೋಗಿರಬೇಕು. ಮತ್ತು ನನ್ನ ಆಫೀಸಿನ ಇತರ ವಿಶೇಷವಾದ ಮತ್ತು ಕಠಿಣವಾದ ಜಾಸ್ತಿ ಕೆಲಸಗಳ ಕಾರಣದಿಂದ ಅಂಥಾ ಲೋಪ ಉಂಟಾಗಿರಬೇಕಲ್ಲದೆ ಮತ್ತೇನೇ ಇಲ್ಲ. ನಾನೇನೋ ಮನಸ್ಪೂರಕತೆಯಿಂದ ಕೆಲಸದಲ್ಲಿ ಲೋಪಮಾಡಿದವನಲ್ಲ. ನೌಕರನು ಮೋಸಗಾರನಾಗಿರುವಲ್ಲಿ ಅವನ ದುಷ್ಕಾರ್ಯಕ್ಕೆ ನಾನು ಹೊಣೆಗಾರನಾಗಲಾರೆನು. ಒಂದುವೇಳೆ ಇದಕ್ಕೆಲ್ಲಾ ನನ್ನನ್ನೇ ಜವಾಬ್ದಾರನನ್ನಾಗಿ ಮಾಡಬೇಕಾಗಿರುವ ಪಕ್ಷಕ್ಕೆ ನಾನು ವಿಷಯವನ್ನೆಲ್ಲಾ ಚನ್ನಾಗಿ ಪರಿಶೀಲನೆ ಮಾಡಿ, ಸವಿಸ್ತಾರವಾದ ವಿವರಣೆಯನ್ನು ಬರೆದುಕಳುಹಿಸಲು ಪ್ರಯತ್ನಪಡುವೆನು.

ಮೆ। ಪಿ. ಶಿವಪ್ರಕಾಶಂ ಪಿಳ್ಳೆಯವರು ಹೇಳುವದೇನಂದರೆ —

ಈಗ ಕಂಡುಹಿಡಿದಿರುವ ಅಕ್ರಮಗಳು ಸ್ವಂತಃ ನಾನು ಮಾಡಿದವುಗಳಲ್ಲ. ಹೆಡ್ ಮುನಷಿಯೂ ತಾಲ್ಲೂಕು ಖಜಾನೆಯ ನೌಕರರೂ ಇದಕ್ಕೆ ಸಹಾಯಕರಾಗಿಲ್ಲದೆ ಈ ಕಾರ್ಯ ನಡೆಯಲಾರದು. ಮುಖ್ಯವಾಗಿ ಹೆಡ್ ಮುನಷಿಯು ಅಕ್ರಮಕಾರ್ಯಗಳನ್ನು ಕಂಡುಹಿಡಿದವನು ನಾನೇ ಎಂದು ಹೇಳಬಹುದು. ಇದನ್ನೆಲ್ಲಾ ರುಜುವಾತುಮಾಡುವದಕ್ಕೆ ನನ್ನಿಂದ ಆಗುವದೋ ಇಲ್ಲವೋ ಎಂಬ ಶಂಕೆಯಿಂದ ನಾನು ಮೊದಲೇ ರಿಪೋರ್ಟು ಮಾಡದೆ ಬಿಟ್ಟಿದ್ದೆನು. ಆದ್ದರಿಂದ ಹೆಡ್ ಮುನಷಿ ಮಾಡಿದ ಮೋಸಕ್ಕೆ ನನ್ನಿಂದ ಹಣ ವಸೂಲ್ಮಾಡಲಾರರೆಂದು ನಿರೀಕ್ಷಿಸುತ್ತೇನೆ.

೬. ಈ ಹುದ್ದೇದಾರರು ಯಾವ ಯಾವ ಭಾಗದಲ್ಲಿ ನಿಜವಾಗಿ ಮೋಸಮಾಡಿದರೋ ಅಂಥಾ ಭಾಗವನ್ನೆಲ್ಲಾ ಛೀಫ್ ಕೋರ್ಟಿನವರು ಕಂಡು, ಮೇಲ್ಕಂಡ ರೀತಿ ಅವರಿಗಿಲ್ಲದ ವಸ್ತುಸ್ಥಿತಿ, ಗವರ್ನಮೆಂಟಿಗೆ ನಷ್ಟಬರ ತಂದರೆಂಬ ತಾಕೀತು ಎಂಬುದಾಗಿ ತಿಳಿಸಿರುತ್ತಾರೆ.

೭. ಗವರ್ನಮೆಂಟಿನವರು ಈ ಕಾಗದ ಪತ್ರಗಳನ್ನೆಲ್ಲಾ ನೋಡಿ ಹುಕುಂ ಕೊಟ್ಟಿರುವದೇನಂದರೆ — ಈ ವಿಷಯಗಳನ್ನೆಲ್ಲಾ ನಾವು ಚನ್ನಾಗಿ ಆಲೋಚನೆಮಾಡಿ ನೋಡಿದ್ದರಲ್ಲಿ ಮೆ। ಬಿ. ರಾಮಸ್ವಾಮಯ್ಯಂಗಾರ್ಯವರು ವಿನಾ ಉಳಿದವರು ಮುಖ್ಯ ಹುದ್ದೇದಾರರಾಗಿರುವಾಗ್ಯೆ ತಮ್ಮ ಕೈಕೆಳಗಿನ ನೌಕರರು ಸರಿಯಾಗಿ ಕೆಲಸ ಮಾಡುತ್ತಿರುವರೋ ಇಲ್ಲವೋ ಎಂಬುದನ್ನು ಜವಾಬ್ದಾರಿ ವಹಿಸಿದ್ದರು. ಈ ಅಧಿಕಾರಿಗಳು ಸರಿಯಾಗಿ ಮೇಲ್ವಿಚಾರಣೆ ನೋಡಿದ್ದರೆ ಈ ಮೋಸ ನಡೆಯುತ್ತಿರಲಿಲ್ಲ. ಆದಕಾರಣ ಗವರ್ನಮೆಂಟಿನವರು ಈ ಲುಕ್ಸಾನಿಗೆ ಆ ಅಧಿಕಾರಿಗಳು ಕಾರಣರಲ್ಲವೆಂದು ತೀರ್ಮಾನಿಸಲಾರರು. ಅವರು ತಮ್ಮ ಕೋರ್ಟಿನ ಹಣ ಖರ್ಚಿನ ಲೆಕ್ಕಗಳನ್ನು ಸರಿಯಾಗಿಟ್ಟುಕೊಳ್ಳುವಂತೆ ಕಾಪಾಡಬೇಕು. ನೌಕರರ ಮೇಲೆ ಸರಿಯಾದ ಮೇಲ್ವಿಚಾರಣೆ ಇಟ್ಟು ಮುತುವರ್ಜಿವಹಿಸಿ ನೋಡಿಕೊಳ್ಳಬೇಕಾಗಿತ್ತು. ಅವರು ಹೀಗೆ ಮಾಡುತ್ತಾ ಬಂದಿದ್ದರೆ ನಾಜರುಗಳು ಇತರ ನೌಕರರುಗಳು ಅನೇಕ ವರುಷಗಳ ತನಕ ಸಿಕ್ಕಿಬೀಳದೇನೇ ಕೋರ್ಟಿನ ಹಣವನ್ನು ತಿಂದುಹಾಕುವದು ಸಾಧ್ಯವಾಗುತ್ತಿರಲಿಲ್ಲ, ಅಥವಾ ಅಷ್ಟು ಸುಲಭವಾಗಿ ಇಷ್ಟೊಂದು ಹಣವನ್ನು ಅವರು ಅಪಹರಿಸುವದಕ್ಕಾಗುತ್ತಿರಲಿಲ್ಲ. ಮುನಸಿಫರುಗಳು ತಕ್ಕ ಮಟ್ಟಿಗೆ ಮೇಲ್ವಿಚಾರಣೆ ನೋಡಿಕೊಳ್ಳದೆ ಹೋದದ್ದರಿಂದಲೇ ಕೋರ್ಟಿನ ಹಣ ಗೈರಿಕಲೆಯಾಗಲು ಕಾರಣವಾಯಿತೆಂಬದಾಗಿ ಛೀಫ್ ಕೋರ್ಟಿನವರು ತಿಳಿಸಿರುವ ಮಾತನ್ನು ಗವರ್ನಮೆಂಟಿನವರು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತಾರೆ. ಹಣ ತಿಂದುಹಾಕಿದ್ದಕ್ಕೆ ನಾಜರೇ ಮುಖ್ಯ ಕಾರಣನಾಗಿದ್ದಾಗ್ಯೂ ಆ ಹಣವನ್ನು ಕೈಯಿಂದ ಭರ್ತಿಹಾಕುವ ವಿಚಾರದಲ್ಲಿ ಮುನಸಿಫರೂ ಜವಾಬ್ದಾರರಾಗಿರುತ್ತಾರೆ. ಯಾಕಂದರೆ ಅವರೇ ಕೋರ್ಟಿನ ಮುಖ್ಯ ಅಧಿಕಾರಿಯಾಗಿದ್ದರು, ಅವರು ತಕ್ಕ ಹಾಗೆ ಲೆಕ್ಕ ಪತ್ರಗಳನ್ನು ಆಡಿಟ್ ಮಾಡದೆ ಅಲಕ್ಷ್ಯ ಮಾಡಿಬಿಟ್ಟರು. ಒಂದು ಭಾಗದಲ್ಲಿ ಕೆಲಸ ಜಾಸ್ತಿಯಾಗಿದ್ದದರಿಂದ ಇನ್ನೊಂದು ಭಾಗವನ್ನು ನೋಡುವದಕ್ಕೆ ಸಾಧ್ಯವಾಗಲಿಲ್ಲವೆಂಬ ಮಾತನ್ನು ಸರಿಯಾದಕಾರಣವೆಂದು ಗವರ್ನಮೆಂಟಿನವರು ಅಂಗೀಕರಿಸಲಾರರು. ಮೆ। ವ್ಯಾಂಡಲೂರ್‌ವೆನ್‌ಯವರು ಮತ್ತು ಮೆ। ಬಿ. ಎಸ್. ಕೃಷ್ಣಸ್ವಾಮಯ್ಯಂಗಾರ್ಯ ಬರೆದು ಕಳುಹಿಸಿರುವ ಸಮಾಧಾನಗಳನ್ನು ನೋಡಲಾಯಿತು. ಹೀಗೆ ಕೋರ್ಟಿನಲ್ಲಿ ಮೋಸಕೃತ್ಯ ನಡೆಯುತ್ತಾ ಇದೆ ಎಂಬ ಅಂಶವನ್ನು ಸರ್ಕಾರದವರು ಪ್ರಕಟಿಸುವದಕ್ಕೆ ಮೊದಲೇ ಇವರಿಬ್ಬರೂ ಕಾವಾಗಿಯೇ ತನಿಖೆ ಮಾಡುತ್ತೇವೆಂದು ರಿಪೋರ್ಟುಮಾಡಬೇಕಾಗಿತ್ತು. ಆದ್ದರಿಂದ ಮೆ। ಗಳಾದ ಸಿಂಗ್ರಾಚಾರ್ಯರು, ವ್ಯಾಂಡಲೂರ್‌ವೆನ್‌ಯವರು, ಶ್ರೀನಿವಾಸರಾಯರು, ಕೃಷ್ಣಸ್ವಾಮಯ್ಯಂಗಾರ್ಯ, ಶಿವಪ್ರಕಾಶಂ ಪಿಳ್ಳೆಯವರು, ಇವರಲ್ಲಿ ಪ್ರತಿ ಒಬ್ಬರೂ ಆಯಾ ಕೋರ್ಟುಗಳಲ್ಲಿ ಮುನಸಿಫರಾಗಿದ್ದಾಗ್ಯೆ ಎಷ್ಟೆಷ್ಟು ಹಣ ಗೈರಿಕಲೆ ಆಯಿತೋ ಅಷ್ಟಷ್ಟು ಹಣವನ್ನು ತಮ್ಮ ಕೈಯಿಂದ ಕೊಟ್ಟುಬಿಡತಕ್ಕದ್ದು. ಈ ಸಂಗತಿಯನ್ನು ಛೀಫ್ ಕೋರ್ಟ್ ರಿಜಿಸ್ಟ್ರಾರವರು ಕಂಟ್ರೋಲರವರಿಗೆ ತಿಳಿಸತಕ್ಕದ್ದು. ಮತ್ತು ಕಂಟ್ರೋಲರವರು ಆದೇ ಪ್ರಕಾರ ಹಣವನ್ನು ಅವರುಗಳಿಂದ ವಸೂಲ್ಮಾಡಿ ಖಜಾನೆಗೆ ಕಟ್ಟತಕ್ಕದ್ದು. ಆದರೂ ಮೆ। ಶಿವಪ್ರಕಾಶಂ ಪಿಳ್ಳೆಯವರು ನಾಜರಿಂದ ಹಣ ವಸೂಲ್ಮಾಡಿದ್ದಕ್ಕೆ ಅವರಿಗೆ ಗವರ್ನಮೆಂಟಿನವರು ಶಾಬಾಸ್‌ಗಿರಿ ಕೊಡುವರು. ಇವರೇ ಮೇಲ್ಕಂಡ ಅಕ್ರಮಗಳನ್ನು ಪತ್ತೆಮಾಡಿದವರೆಂದು ಛೀಫ್ ಕೋರ್ಟಿನವರು ತಿಳಿಸಿರುವರು.

೮. ಕೋರ್ಟಿನ ಹಣ ಹೀಗೆ ಗೈರಿಕಲೆಯಾದದ್ದು ತಾಲ್ಲೂಕು ಖಜಾನೆಯ ನೌಕರರ ಒಳಸಂಚು ಇಲ್ಲದೆ ನಡೆದಿರಲಾರದೆಂದು ಛೀಫ್ ಕೋರ್ಟಿನವರು ಅಭಿಪ್ರಾಯಪಡುತ್ತಾರೆ. ಕಂಟ್ರೋಲರವರು ಈ ವಿಷಯವನ್ನು ಚನ್ನಾಗಿ ಪರಿಶೀಲನೆಮಾಡಿ ಗವರ್ನಮೆಂಟಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಬೇಕಾಗಿರುವದು.

## ಇಂಡಿಯಾ ದೇಶದ ವೃತ್ತಾಂತಗಳು.

ಬರೋಡೆಯ ಗಾಯಕವಾಡ್ ಮಹಾರಾಜರವರು ಈ ಸಲ ಬೇಸಗೆಯನ್ನು ನೀಲಗಿರಿ ಬೆಟ್ಟದಲ್ಲಿ ಕಳೆಯುತ್ತಾರೆ

♦♦♦♦

ಬಂಗಾಳಾ ವ್ಯವಸಾಯದ ಇಲಾಖೆಯ ಮುಖ್ಯ ಉದ್ಯೋಗಸ್ಥರು ೧೬೦ ಗ್ರಾಮಗಳಲ್ಲಿ ವ್ಯವಸಾಯದ ಬ್ಯಾಂಕುಗಳನ್ನು ಸ್ಥಾಪಿಸಿದ್ದಾರೆ.

♦♦♦♦

ಚಿಗಟಗಳಿಂದ ಪ್ಲೇಗ್ ಉಪದ್ರವು ಜನರಿಂದ ಜನರಿಗೆ ಹರಡುವುದೆಂದು ಬೊಂಬಾಯಿನ ಇಬ್ಬರು ಡಾಕ್ಟರುಗಳು ಪರೀಕ್ಷೆ ಮಾಡಿ ತಿಳಿಸುತ್ತಾರೆ.

♦♦♦♦

ಸಿಲೋನ್ ದ್ವೀಪದಲ್ಲಿ ಈಗ ಮುತ್ತುಗಳನ್ನು ಸಮುದ್ರದಿಂದ ತೆಗೆಯುತ್ತಿದ್ದಾರಷ್ಟೆ. ೨೨ ದಿನಗಳಲ್ಲಿ ತೆಗೆದ ಮುತ್ತಿನ ಚಿಪ್ಪುಗಳ ೬೦ ಸೆಕೆಂಡರ್ಲ್ಲಿ ೫೩,೫೩ ೨೬೮ ರೂ. ಹುಟ್ಟಿದ್ದಾಗಿ ಆಯಿತು.

♦♦♦♦

ರಂಗೂನ್ ಪಟ್ಟಣದ ಸ್ಮಾಲ್ ಕಾಸ್ ಕೋರ್ಟಿನ ಜಡ್ಜಿಯು ಬಹು ಅಕ್ರಮ ಕಾರ್ಯಗಳನ್ನು ನಡಸಿದ ಪ್ರಕಾರ ಸರ್ಕಾರದವರು ವಿಚಾರಮಾಡುತ್ತಿರುವರು. ಸದ್ಯ ಆ ಜಡ್ಜಿಯನ್ನು ಸಸ್ಪೆಂಡು ಮಾಡಿರುತ್ತಾರೆ.

♦♦♦♦

ಪ್ರೆಸಿಡೆನ್ಸಿ ಪ್ರಾಂತಗಳ ಪತ್ನಿಯಾದ ಲೇಡಿ ಕರ್ಜನ್ ರವರು ವಿಕ್ಟೋರಿಯಾ ಮೆಮೋರಿಯಲ್ ಫಂಡಿಗೆ ೩೦,೯೩,೦೦೦ ರೂ. ಕೂಡಿಸಿದರು. ಇನ್ನೂ ೧೯,೯೩,೯೯೦ ರೂಪಾಯಿ ಬರಬೇಕಾಗುವಂತಿದೆ

♦♦♦♦

ಪಟ್ಯಾಲಂಗದ ಮಹಾರಾಜರವರು ಈಚೆಗೆ ಲಾಹೋರ್ ಪಟ್ಟಣಕ್ಕೆ ದಯಮಾಡಿದ್ದಾಗ ಅಲ್ಲಿನ ಹಿಂದುಗಳಿಗೂ ಸಿಖ್ ಜನರಿಗೂ ಯೋಗ್ಯವಾದ ಒಂದು ದೇವಸ್ಥಾನವನ್ನು ಕಟ್ಟಿಸಿಕೊಡಬೇಕೆಂದು ನಿರ್ಧರಿಸಿ, ಅದಕ್ಕೆ ೧೦,೦೦೦ ರೂಪಾಯಿ ಕೊಟ್ಟಿದ್ದಾರೆ.

♦♦♦♦

ಇಂಗ್ಲಿಷರಿಗೆ ಶರಣಾಗತರಾಗ ಬಾರದೆಂದು ಮುಸ್ಸೂರ ಹಿಡಿದಿರುವ ಬೋಅರ್ ಕೈದಿಗಳ ಪೈಕಿ ೧೯ ಮಂದಿಯನ್ನು ಇಂಗ್ಲಿಷ್ ಸರ್ಕಾರದವರು ಬಂಧನದಿಂದ ಬಿಡಿಸಿದರು. ಇವರು ಕೊಲಂಬೋದಲ್ಲಿ ಹಡಗು ಹತ್ತಿ ಸಿಂಗಪೂರದ ಮಾರ್ಗವಾಗಿ ಜಾವಾ ದ್ವೀಪಕ್ಕೆ ಪ್ರಯಾಣಮಾಡಿದರು.

♦♦♦♦

ಕಲ್ಕತ್ತೆಯ ಹತ್ತಿರ ಸಿರಾಂಪುರದ ಒಂದು ಭಾರೀ ಹತ್ತಿಯ ಕಾರ್ಖಾನೆಗೆ ಕಳೆದ ವಾರ ಬೆಂಕಿಬಿದ್ದು ಮಾರಿಕರಿಗೆ ಸುಮಾರು ಮೂರು ಲಕ್ಷ ರೂಪಾಯಿ ನಷ್ಟವಾಯಿತು. ೫೦೦ ಜನ ಕೂಲಿಯವರೂ ಪಾಲ್ಕಾರು ಪಂಪುಗಳನ್ನಿಟ್ಟುಕೊಂಡು ಬಹಳ ಸಾಹಸಪಟ್ಟು ಬೆಂಕಿಯನ್ನು ಆರಿಸಿದರು.

♦♦♦♦

ಕೂಚ್ ಬೆಹಾರ್ ಮಹಾರಾಜರವರು ತಮ್ಮ ಸಂಸ್ಥಾನದ ಜಂಗಲ್ಲಿ ಶಿಕಾರಿ ತಿರಿಗಿಕೊಂಡು ಈಗ ತಾನೇ ತಮ್ಮ ರಾಜಧಾನಿಗೆ ಬಂದು ಸೇರಿದರು. ಇವರು ಈ ಸಲ ೧೭ ಹುಲಿ, ೧ ಕಾಡುಕೋಣ, ೨೨ ಚಿರತೆ, ೧೫ ಕರಡಿ, ೩೦ ಜಿಂಕೆ, ೧೭ ಕಾಡು ಹಂದಿಗಳನ್ನು ಶಿಕಾರಿ ಮಾಡಿಕೊಂಡು ಬಂದರು.

♦♦♦♦

ಮದರಾಸ್ ಹೈಕೋರ್ಟಿನಲ್ಲಿ ಜಡ್ಜಿಯಾಗಿರುವ ಸರ್ ವಿ. ಭಾಷ್ಯಂ ಅಯ್ಯಂಗಾರ್ರಿಗೆ ೬೦ ವರುಷ ತುಂಬುವದರಿಂದ ಈ ಬೇಸಿಗೆ ರಜಾ ಪ್ರಾರಂಭವಾಗುವದಕ್ಕೆ ಮೊದಲೇ ಅವರು ಆ ಕೆಲಸಕ್ಕೆ ರಾಜೀನಾಮೆ ಕೊಡುವರು. ಅವರಿಗೆ ಬದಲಾಗಿ ಯಾರು ಬರುವರೋ ಇನ್ನೂ ಗೊತ್ತಾಗಿಲ್ಲ

♦♦♦♦

ಮಧ್ಯಪ್ರಾಂತ್ಯಗಳಲ್ಲಿ ಕ್ಷಾಮಬಾಧೆಯು ನಿವಾರಣೆಯಾಗಲಿಲ್ಲ. ಕಳೆದ ವಾರ ಇನ್ನೂ ೧೦,೭೭೦ ಜನರು ಸರ್ಕಾರದವರ ಪೋಷಣೆಗೆ ಬಂದು ಸೇರಿದರು. ಈಗ ಒಟ್ಟು ೪೭,೧೭೭ ಮಂದಿ ರಿಲೀಫ್ ಕಾಮಗಾರಿಯಲ್ಲಿರುತ್ತಾರೆ. ಇವರೆಲ್ಲಾ ಸ್ವಲ್ಪ ಹೆಚ್ಚುಕಡಮೆ ರಾಯಪುರವೆಂಬ ಒಂದೇ ಡಿಸ್ಟ್ರಿಕ್ಟಿಗೆ ಸೇರಿದವರೆಂದು ತಿಳಿಯಬಂದಿದೆ.

♦♦♦♦

ಕಲ್ಕತ್ತೆಯಲ್ಲಿ ಕಾಲವಾದ ಮಹಾರಾಜಾ ಸರ್ ನರೇಂದ್ರಕೃಷ್ಣರವರ ಜ್ಞಾಪಕಾರ್ಥವಾಗಿ ಅಲ್ಲಿ ಯೋಗ್ಯವಾದದೊಂದು ಉತ್ಕೃಷ್ಟವಾದ ಕಾರ್ಯವನ್ನು ನಡಸಬೇಕೆಂದು ಪ್ರಜೆಗಳೂ ದೊಡ್ಡ ಮನುಷ್ಯರೂ ಸಭೆ ಸೇರಿ ತೀರ್ಮಾನಿಸಿ ಅದಕ್ಕಾಗಿ ಚಂದಾ ವಸೂಲ್ಮಾಡುತ್ತಿದ್ದಾರೆ. ಲೆಫ್ಟಿನೆಂಟ್ ಗವರ್ನರವರು ಈ ಸಭೆಯ ಪೋಷಕರಾಗಿರುವರು.

♦♦♦♦

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಸಿಲ್ ಹಟ್ಟಸಲ್ಲಿ ಕಳೆದ ತಿಂಗಳ ೨೯ ನೆ ತಾರೀಖಿನ ಸಾಯಂಕಾಲ ಬಗ್ಗತದಂತಿದ್ದ ನೀರು ಮಳೆ ಸುರಿಯಿತೆಂತಲೂ, ಈಗ ಆ ಮನ್ನು ಒಣಗಿ ಎಲೆಗಳ ಮೇಲೆ ಕೂತಿರುವದನ್ನು ನೋಡಬಹುದೆಂತಲೂ, ಹೋದ ವರುಷವೂ ಇದೇ ಪ್ರಕಾರ ಮಳೆ ಬಂತೆಂತಲೂ ಒಬ್ಬ ವಾತ್ತಾದಾರರು ಬರೆದಿರುತ್ತಾರೆ.

♦♦♦♦

ಕಳೆದ ತಿಂಗಳ ೨೯ನೇ ತಾರೀಖಿಗೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆಲ್ಲಾ ಪ್ಲೇಗ್ ಉಪದ್ರದಿಂದ ೩೭,೦೫೮ ಜನರು ಮೃತಪಟ್ಟರು. ಹಿಂದಿನ ವಾರ ೨೯,೭೩೬ ಮಂದಿ ತೀರಿಹೋಗಿದ್ದರು. ಬೇಸಿಗೆ ಪ್ರಾರಂಭವಾದರೆ ಉಪದ್ರವ ಸಾವಳ ಕಡಿಮೆಯಾದೀತೆಂಬ ಭರವಸೆ ಇತ್ತು. ಈಗ ಈ ಸಂಖ್ಯೆಯನ್ನು ನೋಡಲಾಗಿ ಹಿಂದುಸ್ಥಾನದಲ್ಲಿ ಇಷ್ಟರಲ್ಲೇ ದಿನಕ್ಕೆ ೫,೦೦೦ ಜನರಂತೆ ಈ ರೋಗದಲ್ಲಿ ಸಾಯುವದನ್ನು ನಾವು ಕೇಳಬೇಕಾಗಿಯೇ ಇರುತ್ತದೆ.

♦♦♦♦

ಬೆಲೂಚಿ ಸೈನಿಕರ ಉದ್ಯೋಗದಾರನಾಗಿದ್ದ ಕರ್ನಲ್ ಯೇಟ್ ಎಂಬಾತನು ಇಬ್ಬರು ಶ್ರೀಮಂತ ಜವಾನರ ಸಂಗಡ ಚಾಮನ್ ನಗರದಿಂದ ಹೊರಟು, ಇಂಗ್ಲಿಷರ ಎಲ್ಲೆ ಕಟ್ಟಿನ ಆಚೆ ಸ್ವಲ್ಪ ದೂರಹೋಗಿ ತನ್ನ ಸಾಯಿಗಳಿಗೆ ಒಂದು ಕೊಳದಲ್ಲಿ ನೀರು ಕುಡಿಸುತ್ತಿರುವಾಗ ಆಫ್ಘನ್ ಖಾಸಾದಾರ್‍ಗಳು ಬಂದು ಸುತ್ತಿಕೊಂಡು ಆ ಮೂವರನ್ನು ಕೈಸೆರೆ ಹಿಡಿದುಕೊಂಡು ಹೋದರು. ಬೆಲೂಚಿಸ್ಥಾನದ ಏಜಂಟರು ಅವರನ್ನು ಬಿಡಿಸಿಕೊಂಡು ಬರುವ ತರದೂದು ಮಾಡುತ್ತಿದ್ದಾರೆ

♦♦♦♦

ಕಲ್ಕತ್ತೆಯಲ್ಲಿ ಎಲ್ಲಾ ಮಂದಿ ಕಾಬೂಲೀ ಜನರು ಪೋಲೀಸಿನವರನ್ನು ಹೊಡೆದಿದ್ದಲ್ಲದೆ ಸ್ಟೇಷನನ್ನು ಲೂಟಿ ಮಾಡಿದರೆಂತಲೂ ಇದಕ್ಕಾಗಿ ಮ್ಯಾಜಿಸ್ಟ್ರೇಟರು ೧೫ ಜನ ಮಂದಿಗೂ ತಲಾ ಏಳೇಳು ವರುಷದಂತೆ ಕಠಿಣ ಸಜ ವಿಧಿಸಿದರೆಂತಲೂ ತಿಳಿಸಿದ್ದೆವಷ್ಟೆ. ಇವರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಅಪೀಲ್ ಮಾಡಿದರು. ಜಡ್ಜಿಯವರು ಅವರ ವಾಜ್ಯೂಲಗಳನ್ನೆಲ್ಲಾ ಕೇಳಿ ಒಬ್ಬನಿಗೆ ಮಾತ್ರ ಖುಲಾಸ್ ಮಾಡಿಸಿ, ಉಳಿದವರಿಗೆ ಕೆಳ ಕೋರ್ಟಿನ ಶಿಕ್ಷೆಯನ್ನೇ ಖಾಯಂ ಮಾಡಿದರು.

♦♦♦♦

ಹೈದರಾಬಾದಿನ ಮಂತ್ರಿಗಳಾಗಿರುವ ಮಹಾರಾಜಾ ಕೃಷ್ಣಪ್ರಸಾದರವರು ಫಾತಿಮಾ ಬೇಗಂ ಎಂಬೊಬ್ಬ ಮೈನರ್ ಹುಡುಗಿಯನ್ನು ಕರೆದುಕೊಂಡು ಹೋಗಿ, ತಾ ಪ್ರಾಪ್ತನಾದ ಮೇಲು ಮತಕ್ಕೆ ಸೇರಿದವರೆಂದು ಹೇಳಿ, ಆ ಹುಡುಗಿಯನ್ನು ಮದುವೆಮಾಡಿಕೊಂಡ ಹಾಗೆ ಆ ಹುಡುಗಿಯ ಪೋಷಕನು ಫಿರ್ಯಾದು ಮಾಡಿದನು. ಸಿಕಂದರಾಬಾದಿನ ಮ್ಯಾಜಿಸ್ಟ್ರೇಟರು ತಾವು ಈ ಮೊಕದ್ದಮೆಯನ್ನು ಹಿಡಿಯುವದಿಲ್ಲವೆಂದು ವಜಾ ಮಾಡಿದರು. ಆ ಹುಡುಗಿಯು ಪೋಷಕನು ಮೊಕದ್ದಮೆಯನ್ನು ಅಷ್ಟಕ್ಕೇ ಬಿಡುವದಾಗಿ ತೋರುವದಿಲ್ಲ. ಅಂತು ಈ ಸುದ್ದಿಯು ಹೈದರಾಬಾದಿನಲ್ಲಿ ತುಂಬಾ ಕಳವಳವನ್ನು ಉಂಟುಮಾಡಿರುವದು.

♦♦♦♦

ಅಫ್ಘಾನಿಸ್ಥಾನದ ಅಮೀರರು ರಾಜಧಾನಿಯಾದ ಕಾಬೂಲಿನ ಸ್ತ್ರೀ ಪ್ರಜೆಗಳಿಗೆ ಈಚೆಗೆ ಒಂದು ಹೊಸ ತರದ ಹುಕುಮನ್ನು ಕೊಟ್ಟಿರುತ್ತಾರೆ. ಅದೇನೆಂದರೆ,— ಮುಸಲ್ಮಾನರೆಲ್ಲ ಕಾಲಿನ ಗೆಜ್ಜೆಗಳು ಕೇಳಿಸುವಂತೆ ಅವುಗಳಿಂದ ಮೇಲಕ್ಕೆ ಪರದೆಗಳನ್ನು ಹಾಕಿಕೊಳ್ಳಬೇಕು. ಶ್ರೀಮಂತರು ಬಹಳ ಅಟ್ಟಹಾಸವಾದ ಬಟ್ಟೆಬರೆಗಳನ್ನು ಹಾಕಿಕೊಳ್ಳಕೂಡದು. ಧಿರಸುಗಳಿಗೆ ಜಾಲರಿಗಳಾಗಲಿ ಜರತಾರಿಯಾಗಲಿ ಇರಕೂಡದು. ಜೋಡುಗಳಿಗೂ ಜರತಾರಿ ಬಂದಿರಬಾರದು. ಮುಸಲ್ಮಾನ ಸ್ತ್ರೀಯರು ಕಪ್ಪು ಬಣ್ಣದ ಬುರುಕೆಗಳನ್ನು ಹಾಕಿಕೊಳ್ಳಬೇಕು. ಇವರು ಉದ್ಯಾನವನಗಳಿಗೂ ಸಮಾಧಿಗಳಿಗೂ ಹೋಗುತ್ತಿರಬಾರದು. ಹಿಂದು ಸ್ತ್ರೀಯರೆಂದರೋ ಕೆಂಪಿನ ಅಥವಾ ಅರಿಸಿನ ಬಣ್ಣದ ಬುರುಕಿ ಹಾಕಿಕೊಳ್ಳಬೇಕು. ಹಿಂದುಗಳಲ್ಲಿ ಗಂಡಸರು ಅರಿಸಿನ ಬಣ್ಣದ ರುಮಾಲು ಸುತ್ತಿ, ನಡುವಿಗೆ ಒಂದು ದಪ್ಪ ಹುರಿಯನ್ನು ಕಟ್ಟಿಕೊಂಡಿರಬೇಕು. ಈ ಹುಕುಮು ಮೊನ್ನೆ ನೌರೋಜ್ ಹಬ್ಬವಾದ ಮೇಲೆ ಜಾರಿಗೆ ಬಂತು.

♦♦♦♦

ಕಳೆದ ವಾರ ಸುಮಾರು ೧೬೦ ಜನ ಕಾಬೂಲಿ ಕಂದಹಾರ ಜನರು ಹೆಂಗಸರು ಮಕ್ಕಳು ಸಹಿತ ಕೊಹಟ್ ಸಂಸ್ಥಾನಕ್ಕೆ ಸೇರಿದ ತ್ರಿಂಗಲ್ ಕೊಂಡಾ ಸ್ಟೇಷನ್ನಲ್ಲಿ ರೈಲುಹತ್ತಿ ರಾಜಧಾನಿಯಾದ ಪಿಷಾವರ್ ನಗರಕ್ಕೆ ಬಂದಿಳಿದರು. ಆ ಸ್ಟೇಷನ್ ಮಾಸ್ಟರು ರೈಲು ಹೊರಡಬೇಕಾದರೆ ಕೆಲವರು ಟಿಕೆಟ್ ಇಲ್ಲದೇನೇ ಗಾಡಿಯೊಳಗೆ ಕೂತಿದ್ದಾರೆ ಎಂಬದಾಗಿ ಮುಂದಿನ ಸ್ಟೇಷನ್ ಮಾಸ್ಟರಿಗೆ ತಂತೀ ವರ್ತಮಾನ ಕೊಟ್ಟನು. ಗಾಡಿ ಅಲ್ಲಿಗೆ ಹೋಗಿ ನಿಂತೊಡನೆ ಪೋಲೀಸಿನವರು ಸ್ಟೇಷನ್ನಲ್ಲಿ ಕಾದಿದ್ದು ಆ ಕಾಬೂಲಿ ಜನರನ್ನು ಗಾಡಿಯಿಂದ ಇಳಿಸಿಕೊಂಡರು. ಅವರು ಟಿಕೆಟ್ಟಾಗಲಿ, ಹಣವಾಗಲಿ ಕೊಡದೆ ಸ್ಟೇಷನ್ ಮಾಸ್ಟರನ್ನೇ ಹೊಡೆಯುವದಕ್ಕೆ ಬಂದರು. ಈ ವರ್ತಮಾನ ತಿಳಿದು ಸಂಸ್ಥಾನದ ದಿವಾನರು, ಅಧಿಕಾರಿಗಳು, ಸೈನಿಕರು ಮುಂತಾದವರೆಲ್ಲ ಬಂದು, ಆ ಜನಗಳನ್ನು ಹಿಡಿದು, ಅವರಿಂದ ರೈಲ್ ಛಾರ್ಜು ಕೊಡಿಸಿ, ಈಗ ಪ್ರತ್ಯೇಕವಾದ ಸ್ಥಳದಲ್ಲಿ ಅವರನ್ನು ಇಳಿಸಿ, ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ.

♦♦♦♦

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ತುಂಗಭದ್ರಾ ನದಿಗೆ ಪಿನ್ನೂರು ಎಂಬ ಸ್ಥಳದಲ್ಲಿ ಪೂರ್ವಕಾಲದಲ್ಲಿ ಅಣೆಕಟ್ಟು, ನೀರನ್ನು ಜಮೀನಿಗೆ ಹಾಯಿಸಿ, ಫಲೀಭವ ಮಾಡುತ್ತಿದ್ದರು ಈ ಅಣೆಕಟ್ಟು ಕಿತ್ತುಹೋಗಿ ಬಹಳಕಾಲವಾಯಿತು ಹೈದರಾಬಾದಿನಲ್ಲಿ ವಿಕ್ಟೋರಿಯಾ ಮೆಮೋರಿಯಲ್ ಫಂಡಿಗೆ ವಸೂಲಾಗಿರುವ ಚಂದಾ ಹಣವನ್ನು ಮುಟ್ಟಿಸಿ, ಗವರ್ನಮೆಂಟಿನವರು ಈ ಅಣೆಯನ್ನು ರಿಪೇರಿಮಾಡಿಸುತ್ತಾರೆ. ಇದಕ್ಕೆ ಇಂಡಿಯಾ ಗವರ್ನಮೆಂಟಿನವರು ಸಮ್ಮತಿಪಟ್ಟಿರುವರು ಇತ್ತಲಾಗಿ ಮದರಾಸ್ ಸರ್ಕಾರದವರು ನೈಜಾಮರವರಿಗೆ ತಿಳಿಸಿರುವದೇನೆಂದರೆ —ಈ ಅಣೆಯಿಂದ ಕಾಲಿಗಳ ಮೂಲಕ ನೀರನ್ನು ೧೦,೦೦೦ ಎಕರೆ ಜಮೀನಿಗೆ ಮಾತ್ರ ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳತಕ್ಕದ್ದು. ಅಷ್ಟಕ್ಕಿಂತಲೂ ಹೆಚ್ಚು ನೀರು ಉಪಯೋಗಿಸಿಕೊಳ್ಳಬೇಕಾದರೆ ಮೊದಲೇ ಇಂಡಿಯಾ ಗವರ್ನಮೆಂಟಿಗೆ ತಿಳಿಸಿ ಅವರ ಅನುಮತಿ ಪಡೆಯಬೇಕಾಗಿದೆ. ಪ್ರತಿ ವರುಷವೂ ಮಾರ್ಚಿ ರಿಂದ ಡಿಸೆಂಬರ್ ಆಖೈರಿನೊಳಗಾಗಿಯೇ ಬೇಕಾಗುವಷ್ಟು ನೀರನ್ನು ಹಾಯಿಸಿಕೊಳ್ಳಬೇಕೇ ಹೊರತು ಜನವರಿಯಿಂದ ಮಾರ್ಚಿವರೆಗೆ ನೀರು ತೆಗೆದುಕೊಳ್ಳಕೂಡದು.

## ವಿದೇಶ ವರ್ತಮಾನಗಳು.

ಈಜಿಪ್ಟಿನ ರಾಜಧಾನಿಯಾದ ಕೈರೋ ನಗರದಲ್ಲಿ ಪ್ರತಿ ೨೦ ಜನರಿಗೂ ಒಬ್ಬೊಬ್ಬ ಕುರುಡನಂತೆ ಸಿಕ್ಕುವನು.

♦♦♦♦

ಈಜಿಪ್ಟಿನ ಖಿಡೀವ್ ರಾಜರು ಜರ್ಮನಿಗೆ ಬರುವದಾಗಿ ಚಕ್ರವರ್ತಿಯವರ ಕಾಗದಕ್ಕೆ ಜವಾಬು ಕೊಟ್ಟಿದ್ದಾರೆ.

♦♦♦♦

ಬೋಅರ್ ದಳಪತಿಗಳಾಗಿದ್ದವರನ್ನು ಯೂರೋಪಿನ ಕೆಲವು ರಾಜ್ಯಗಳವರು ಕರೆಸಿ ಅವರಿಂದ ತಮ್ಮ ಸೈನ್ಯಗಳನ್ನು ತರಪೇತು ಮಾಡಿಸುವವರಾಗಿದ್ದಾರೆಂದು ಪ್ರಕಟವಾಗಿದೆ.

♦♦♦♦

ಮಿ॥ ಕಾರ್ನೆಗಿ ಎಂಬ ಕೋಟ್ಯಾಧಿಪತಿಯು ಎಂಥತ್ತು ಎಕರೆಯಷ್ಟು ವಿಸ್ತಾರವುಳ್ಳದ್ದಾಗಿರುವ ತನ್ನ ಒಂದು ಉದ್ಯಾನವನವನ್ನು ಸೆಂಟ್ ಆಂಡ್ರು ಎಂಬ ವಿದ್ಯಾಶಾಲೆಗೋಸ್ಕರ ಬಿಟ್ಟು ಕೊಟ್ಟಿರುತ್ತಾನೆ.

♦♦♦♦

ಅಮೇರಿಕ ರಾಜ್ಯದಲ್ಲಿ ೧೦೦ ವರುಷ ವಯಸ್ಸಾದವರು ೩,೬೩೬ ಜನರು ಇರುತ್ತಾರೆ. ಈ ಪೈಕಿ ೮ ಜನರು ೧೨೦ ವಯಸ್ಸಿನವರು, ೧೫ ಮಂದಿ ೧೩೦ ವರುಷದವರು. ಒಬ್ಬನಿಗೆ ೧೫೦ ವರುಷ ವಯಸ್ಸಾಗಿದೆ.

♦♦♦♦

ಚೀನಾ ಚಕ್ರಾಧಿಪತ್ಯದ ಪ್ರಜಾ ಸಂಖ್ಯೆಯು ಇದುವರೆಗೆ ೩೯ ಕೋಟಿಯೂ ೩೦ ಲಕ್ಷವೆಂದು ಹೇಳುತ್ತಿದ್ದರು. ಈಗಲಾದರೋ ೪೨ ಕೋಟಿಯೂ ೬ ಲಕ್ಷ ಪ್ರಜೆಗಳಿದ್ದಾರೆಂದು ಅಲ್ಲಿನ ರೆವೆನ್ಯೂ ಬೋರ್ಡಿನವರು ಪ್ರಕಟಿಸಿರುತ್ತಾರೆ.

♦♦♦♦

ಜೂಪಿಟರ್ನಲ್ಲಿ ಹಾಲ್ಬರ ದೊಡ್ಡ ನಕ್ಷತ್ರ ಆಕಾಶಬುಟ್ಟಿಯೊಳಗೆ ಕೂತುಕೊಂಡು ಅಂತರಿಕ್ಷದಲ್ಲಿ ಸಂಚರಿಸುತ್ತಿದ್ದರು. ಅದು ಆಕಸ್ಮಿಕವಾಗಿ ಬಿದ್ದುಬಿಟ್ಟಿತು. ಸಾಲ್ಕರಿಗೂ ಪ್ರಾಣ ಜಖಂ ಆಗಿರುತ್ತದೆ ಅವರಲ್ಲಿ ಮೂರು ಮಂದಿ ಬದುಕುವಹಾಗಿಲ್ಲ

♦♦♦♦

ಫಿನ್ಲೆಂಡಿನಲ್ಲಿ ಕ್ಷಾಮಬಾಧೆ ಬಹಳ ಕಾಣಬರುತ್ತಿದೆ. ಆ ದೇಶದವರು ೭೫,೦೦೦ ದ್ರವ್ಯವನ್ನು ಧರ್ಮ ಕೊಡದಿದ್ದರೆ ಅನೇಕ ಪ್ರಜೆಗಳು ಹೊಟ್ಟೆಗಿಲ್ಲದೆ ಸಾಯುತ್ತಿದ್ದರು. ಒಂದು ಲಕ್ಷ ಪ್ರಜೆಗಳನ್ನು ಧರ್ಮಾರ್ಥರು ರಕ್ಷಣೆ ಮಾಡಿ ಸಾಕುತ್ತಿದ್ದಾರೆ.

♦♦♦♦

ನಾಂಸೇರ್ ಎಂಬ ಊರಿನಲ್ಲಿ ಒಂದು ತರಹ ಹೊಸ ಜ್ವರ ಕಾಣಿಸಿಕೊಂಡಿದೆ. ಹತ್ತು ದಿನಗಳ ತನಕ ಈ ಜ್ವರ ಹಿಡಿದವರು ನಡುಗುತ್ತಿರುವರು. ತರುವಾಯ ಅವರಿಗೆ ವಾಸಿಯಾಗುವದು. ಆದರೆ ರೋಗಿಯ ತಲೇ ಕೂದಲೆಲ್ಲಾ ಬೋಳಾಗಿ ಉದುರಿಹೋಗುವದು.

♦♦♦♦

ಸಹರಾ ಎಂಬುವ ರಳ ಕಾಡಿನ ಒಂದು ಕೊನೆಯಲ್ಲಿ ಕೆಲವು ಫ್ರೆಂಚರು ಸಂಚಾರ ಮಾಡುತ್ತಿದ್ದರು. ಸುಮಾರು ೧೭೦ ಮಂದಿ ಅರಬ್ಬರು ಅವರ ಮೇಲೆ ಬಿದ್ದು ೧೧ ಜನರನ್ನು ಕೊಂದು ೧೩ ಜನರಿಗೆ ಗಾಯಗಳಾಗಿ ಅವರ ಬಳಿ ಇದ್ದ ೨೦ ಒಂಟೆಗಳನ್ನು ಕಿತ್ತುಕೊಂಡರು.

♦♦♦♦

ಪೋರ್ಚುಗಲ್ಲಿಗೆ ಸೇರಿದ ಕೊಯಂಬ್ರಾ ಪಟ್ಟಣದಲ್ಲಿ ಸರ್ಕಾರದವರು ಸುಂಕವನ್ನು ವಸೂಲ್ಮಾಡಬೇಕೆಂದು ಪ್ರಯತ್ನಪಟ್ಟರು. ಪ್ರಜೆಗಳು ಕೂಡಲೆ ಸರ್ಕಾರದವರ ಸೈನ್ಯದ ಮೇಲೆ ನುಗ್ಗಿ ಯುದ್ಧ ಮಾಡಿದರು. ಪ್ರಜೆಗಳಲ್ಲಿ ೮ ಮಂದಿ ಕೊಲ್ಲಲ್ಪಟ್ಟರು ಅನೇಕರಿಗೆ ಗಾಯಗಳಾದವು.

♦♦♦♦

ಆಫ್ರಿಕದಲ್ಲಿ ಕೆಲವು ಭಾಗವು ಜರ್ಮನಿಯವರಿಗೆ ಸೇರಿದೆ. ಅಲ್ಲಿಗೆ ಜರ್ಮನಿಯಿಂದ ಹೋಗುವದಕ್ಕೆ ಇಷ್ಟವುಳ್ಳ ರೈತರಿಗೆ ಸರ್ಕಾರದವರು ದ್ರವ್ಯಸಹಾಯ ಮಾಡುವದಾಗಿ ಒಪ್ಪಿರುತ್ತಾರೆ. ಈ ಬಾಬಿಗೆ ವರುಷಕ್ಕೆ ೧೯,೦೦೦ ಪೌಂಡು ಖರ್ಚುಮಾಡುವದಕ್ಕೆ ಜರ್ಮನ್ ರಾಜ್ಯಾಂಗದವರು ಮಂಜೂರು ಮಾಡಿದ್ದಾರೆ

♦♦♦♦

ಭೂಲೋಕದಲ್ಲೆಲ್ಲಾ ಜಲಪ್ರಪಾತಗಳಲ್ಲಿ ಮೊದಲನೆಯದೆನ್ನಿಸಿಕೊಂಡ ನಯಾಗರಾದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡತಕ್ಕದಕ್ಕೆ ಇನ್ನೊಂದು ಹೊಸ ಕಂಪನಿ ಏರ್ಪಾಡಾಗುವದು. ಅಲ್ಲಿಂದ ೯೦ ಮೈಲಿ ದೂರದಲ್ಲಿರುವ ಟೊರಾಂಟೋ ನಗರಕ್ಕೆ ತಂತಿಗಳ ಮೂಲಕ ೧,೨೫,೦೦೦ ಕುದುರೆಗಳ ಬಲದಷ್ಟು ವಿದ್ಯುಚ್ಛಕ್ತಿಯನ್ನು ಸಾಗಿಸಿಕೊಂಡು ಹೋಗಿ ಈ ಶಕ್ತಿಯನ್ನು ಮನೆಗೆಲಸದ ದೀಪಗಳಿಗೂ, ಇತರ ಅನೇಕ ಕಾರ್ಖಾನೆಗಳಿಗೂ ಉಪಯೋಗಿಸುವ ಹಾಗೆ ಏರ್ಪಾಡು ಮಾಡಿ ಲಾಭ ಸಂಪಾದಿಸಬೇಕೆಂದಿದ್ದಾರೆ.

♦♦♦♦

ಒಂದು ನೋರಿಯನ್ನು ಗಾತ್ರದ ಪಟಾಕಿಯನ್ನು ತಂದು ಒಂದು ಬಟ್ಟಲಿಗೆ ಹಾಕಿ ನೀರು ಬೆರಸಿ, ಈ ನೀರನ್ನು ಮುಖಕ್ಕೂ ಕೈಕಾಲುಗಳಿಗೂ ಮೆರುಗಾಗುವಂತೆ ಸವರಿಕೊಂಡು ಮಲಗಿದರೆ ರಾತ್ರಿಯೆಲ್ಲಾ ಒಂದು ಸೊಳ್ಳೆಯಾದರೂ ಹತ್ತಿರ ಸೇರುವದಿಲ್ಲವೆಂತಲೂ, ಸುಖನಿದ್ರೆ ಬರುವದೆಂತಲೂ ಒಬ್ಬನೊಬ್ಬ ಅನುಭವಿಯಾದ ಡಾಕ್ಟರು ತಿಳಿಸಿರುತ್ತಾನೆ. ಇಟಲಿ ಫ್ರಾನ್ಸ್ ಮುಂತಾದ ರಾಜ್ಯಗಳ ಕೆಲವು ಪ್ರದೇಶಗಳಲ್ಲಿ ಈ ಸೊಳ್ಳೆಗಳ ಕಾಟವು ಸಹಿಸಕೂಡದಾಗಿದೆ. ಅಂಥಾ ಪ್ರದೇಶಗಳಲ್ಲಿ ಮೇಲ್ಕಂಡ ವೈದ್ಯನು ಸಂಚಾರ ಮಾಡಿಕೊಂಡು ಬಂದಮೇಲೆ ತನ್ನ ಅನುಭವವನ್ನು ಪ್ರಕಟಿಸಿಕೊಂಡು ತಿಳಿಸಿರುತ್ತಾನೆ.

ಜರ್ಮನಿಯ ಚಕ್ರವರ್ತಿಯವರು ಡೇನ್ಮಾರ್ಕಿಗೆ ದಯಮಾಡಿ ದೊರೆಯವರ ಅತಿಥಿಗಳಾಗಿರುತ್ತಾರೆ. ಪ್ರಜೆಗಳು ಚಕ್ರವರ್ತಿಯವರಿಗೆ ಜಯಘೋಷಗಳೊಡನೆ ಸುಖಾಗಮನವನ್ನು ಬಯಸಿದರು.

◆◆◆◆◆

ರಷ್ಯಾ ರಾಜ್ಯದಲ್ಲಿ ದೊಡ್ಡಪಟ್ಟಣವೆನಿಸಿಕೊಂಡಿರುವ ನಿಜನಿ ನೌಗರಾಡಿನಲ್ಲಿ ಕೂಲೀ ಜನರು ದಂಗೆ ಎದ್ದು ಬಹಳ ಗಲಭೆ ಮಾಡಿದ್ದರಿಂದ ಸೋಜರುಗಳು ಅವರಮೇಲೆ ಫಿರಂಗಿಗಳನ್ನು ಎತ್ತಿಕಟ್ಟಿ ಹೊಡೆದರು. ಏಕ್‌ದಂ ೧೩೦ ಜನರು ಸತ್ತುಬಿದ್ದರು, ಇಲ್ಲವೇ ಗಾಯಪಟ್ಟರು.

◆◆◆◆

ಸೋಮಲಿಲ್ಯಾಂಡಿನಲ್ಲಿ ಇನ್ನೊಂದು ಕಡೆ ಕರ್ನಲ್ ಕಾಬ್‌ಯವರ ಸೈನಿಕರು ಮುಲ್ಲಾನಿನ ಕಡೆಯವರ ಮೇಲೆ ಯುದ್ಧ ಮಾಡಿದರು. ಮುಲ್ಲಾನಿನ ಕಡೆಯವರಲ್ಲಿ ೯೭ ಜನರನ್ನು ಕೊಂದು, ಅವರ ಬಳಿ ಸಿಕ್ಕಿದ ೨,೦೦೦ ಒಂಟೆಗಳನ್ನೂ ೬,೦೦೦ ಕುರಿಗಳನ್ನೂ ಹಿಡಿದುಕೊಂಡು ಬಂದರು.

◆◆◆◆

ಯುದ್ಧಕ್ಕೆ ಮೊದಲು ಟ್ರಾನ್ಸ್‌ವಾಲ್ ರಾಜ್ಯದಲ್ಲಿ ಸರ್ಕಾರಿ ಅಧಿಕಾರಿಗಳಾಗಿದ್ದ ದೊಡ್ಡಮನುಷ್ಯರೆಲ್ಲಾ ಈಗಿನ ಗವರ್ನಮೆಂಟಿಗೆ ತಮ್ಮ ಸ್ಥಿತಿಗತಿಗಳನ್ನು ಕುರಿತು ಅರ್ಜಿ ಬರೆದುಕೊಳ್ಳಬಹುದೆಂತಲೂ, ಯೋಗ್ಯರಾಗಿ ಕಂಡುಬರುವವರಿಗೆ ಪುನಃ ಸರ್ಕಾರಿ ನೌಕರಿ ಕೊಡಲ್ಪಡುವದೆಂತಲೂ ಗವರ್ನಮೆಂಟಿನವರು ಸಾರಿಸಿರುತ್ತಾರೆ.

◆◆◆◆

ವಿಲಾಯತಿಯ ಮಹಾರಾಜಾ ಚಕ್ರವರ್ತಿಯವರು ಪೋರ್ಚುಗಲ್ ರಾಜ್ಯಕ್ಕೆ ದಯಮಾಡಿ,—ಅಲ್ಲಿನ ದೊರೆಯವರ ಅತಿಥಿಗಳಾಗಿ ೪—೬ ದಿನಗಳಿದ್ದು ಅಲ್ಲಿಂದ ಇಟಲಿಯಲ್ಲಿರುವ ರೋಂ ನಗರಕ್ಕೆ ಹೊರಟುಹೋದರೆಂತಲೂ, ತರುವಾಯ ಫ್ರಾನ್ಸಿಗೆ ಬಂದು ಅಲ್ಲಿನ ಪ್ರೆಸಿಡೆಂಟರ ಆತಿಥ್ಯವನ್ನು ಸ್ವೀಕರಿಸಿ, ಹಿಂತಿರುಗಿ ವಿಲಾಯತಿಗೆ ಪ್ರಯಾಣ ಮಾಡುವವರಾಗಿದ್ದಾರೆಂತಲೂ ಸಮಾಚಾರವಿದೆ.

◆◆◆◆

ಆಫ್ರಿಕಕ್ಕೆ ಸೇರಿದ ನೈಜೀರಿಯಾ ದೇಶವು ಈಗತಾನೇ ಇಂಗ್ಲಿಷರ ಸ್ವಾಧೀನಕ್ಕೆ ಬಂತು. ಅವರ ರಾಜಧಾನಿಯಾದ ಸೊಕೊಟೊ ನಗರವು ಇಂಗ್ಲಿಷರ ವಶವಾಯಿತು. ಆ ದೇಶವು ಐದು ಲಕ್ಷ ಚದರ ಮೈಲಿ ವಿಸ್ತಾರವುಳ್ಳದ್ದಾಗಿದೆ; ಎರಡು ಕೋಟಿ ಪ್ರಜಾ ಸಂಖ್ಯೆಯನ್ನೊಳಗೊಂಡಿದೆ. ಒಂದುನೂರು ವರುಷಗಳಿಂದ ಸಾಹಸಪಟ್ಟದ್ದಕ್ಕೆ ಈಗ ಈ ದೇಶವು ಇಂಗ್ಲಿಷರ ಸ್ವಾಧೀನವಾಗಿರುತ್ತದೆ.

◆◆◆◆

ಸೌಫ್ರಿಯರ್ ಎಂಬ ಅಗ್ನಿ ಪರ್ವತದಿಂದ ಎರಚಲ್ಪಟ್ಟ ಬೂದಿಯು ಒಂದು ಡಿಸ್ಟ್ರಿಕ್ಟಿನಲ್ಲಿ ಎರಡೂವರೆ ಕೋಟಿ ಟನ್ನುಗಳ ಭಾರದಷ್ಟು ಬಿದ್ದಿದೆ. ಕಳೆದ ಎಂಟು ತಿಂಗಳಿಂದಲೂ ಅಗ್ನಿಯೂ ಬೂದಿ ಮುಂತಾದ್ದೂ ಈ ಪರ್ವತದಿಂದ ಸುರಿಯುತ್ತಿರುವದರಿಂದ ಅನೇಕ ಹೊಸ ಬದಲಾವಣೆಗಳುಂಟಾಗಿರುವವು. ಪರ್ವತದ ತಪ್ಪಲೆಲ್ಲಾ ಕರಗಿ ಹೋಯಿತು. ಈಗಲೂ ಅಗ್ನಿ ಕಾರುವದು ಹೆಚ್ಚಾಗಿದೆ.

◆◆◆◆

ಮೊದಲು ಹಿಂದುಸ್ಥಾನದ ವೈಸರಾಯ ಪದವಿಯಲ್ಲಿದ್ದು ವಿಲಾಯತಿಗೆ ಹೋಗಿರುವ ಲಾರ್ಡ್ ನಾರ್ತ್‌ಬ್ರೂಕ್‌ಯವರು ವಿಕ್ಟೋರಿಯಾ ಚಕ್ರವರ್ತಿನಿಯವರ ಜ್ಞಾಪಕಾರ್ಥವಾಗಿ ಲೀ ಎಂಬ ಪಟ್ಟಣದಲ್ಲಿ ತಮಗೆ ಸೇರಿರುವ ಏಳು ಎಕರೆ ಜಮೀನನ್ನು ಉದ್ಯಾನವನಕ್ಕೋಸ್ಕರ ಬಿಟ್ಟುಕೊಟ್ಟಿದ್ದಾರೆ. ಈ ಜಮೀನಿನಲ್ಲಿ ಹುಡುಗರೂ ಹುಡುಗಿಯರೂ ನಾನಾತರದ ಅಂಗಸಾಧನೆಗಳನ್ನೂ ಆಟಗಳನ್ನೂ ಆಡುವದಕ್ಕೆ ಅನುಕೂಲ ತುಂಬಾ ಇರುವದು.

◆◆◆◆

ಸೋಮಲಿಲ್ಯಾಂಡಿನಲ್ಲಿ ಇಂಗ್ಲಿಷ್ ಸೈನಿಕರಿಗೂ ಮುಲ್ಲಾನಿನ ಕಡೆಯವರಿಗೂ ಒಂದು ಯುದ್ಧವಾಯಿತು. ಇಂಗ್ಲಿಷರು ೬೦ ಮಂದಿ ಶತ್ರುಗಳನ್ನು ಕೊಂದು, ಅವರ ಬಳಿ ಇದ್ದ ೧,೦೦೦ ಒಂಟೆಗಳನ್ನೂ ೨,೫೦೦ ಕುರಿಗಳನ್ನೂ ಹಿಡಿದುಕೊಂಡು ಬಂದಿದ್ದಾರೆ. ಆ ಪ್ರಾಂತ್ಯ ಮಳೆಗಾಲ ಪ್ರಾರಂಭವಾಗುವಂತಿದೆ. ಬೋಹೊಟಲ್ ಎಂಬಲ್ಲಿ ಇಂಗ್ಲಿಷರು ಒಂದು ಕೋಟೆಯನ್ನು ಕಟ್ಟುತ್ತಿದ್ದಾರೆ. ಮುಲ್ಲಾನಿನ ಕಡೆ ಜನರು ಗಾಲಾದಿ ಎಂಬ ಸ್ಥಳದಲ್ಲಿ ಸೇರಿ ಇದ್ದಾರೆಂತಲೂ, ಆ ಸ್ಥಳದಲ್ಲಿ ಇಷ್ಟರೊಳಗೇ ಒಂದು ದೊಡ್ಡ ಯುದ್ಧವಾಗಬಹುದೆಂತಲೂ ನಿರೀಕ್ಷಿಸಲ್ಪಟ್ಟಿದೆ.

◆◆◆◆

ಬೆಲ್ಜಿಯಂ ರಾಜ್ಯದಲ್ಲಿ ನೊವಲ್ ಎಂಬೊಂದು ಸಣ್ಣ ಪಟ್ಟಣವಿದೆ. ಈ ಪಟ್ಟಣವು ತನ್ನಲ್ಲಿ ಜನನವಾಗುವಂತಾ ಶಿಶುಗಳನ್ನು, ಅವನ್ನು ಪ್ರೋತ್ಸಾಹನೆ ಮಾಡುವ ಪ್ರಯತ್ನದಲ್ಲಿದೆ. ಊರಿನಲ್ಲಿ ಹೊಸದಾಗಿ ಒಂದು ಮಗು ಹುಟ್ಟಿತೆಂದು ತಿಳಿದುಬಂದ ಕೂಡಲೇ ಪುರಾಧಿಕಾರಿಗಳು ಆ ಮಗುವಿನ ಹೆಸರಿನಲ್ಲಿ ಬ್ಯಾಂಕಿಗೆ ೨೦ ರೂಪಾಯಿ ಫಂಡು ಹಾಕುವರು. ಮಗುವು ಬೆಳೆದ ಹಾಗೆಲ್ಲಾ ಬ್ಯಾಂಕಿನಲ್ಲಿ ಆ ಫಂಡೂ ಬೆಳೆಯುತ್ತಾ ಬರುವದು. ಮಗುವು ಪ್ರಾಯಸ್ಥನಾದ ವೇಳೆಗೆ ಈ ಹಣ ದೊರಕುತ್ತದೆ. ಅದರಿಂದ ಅವನು ಯಾವುದಾದರೂ ಉದ್ಯೋಗ ಹಿಡಿದು ವೃದ್ಧಿಗೆ ಬರುವನು.

◆◆◆◆

ಲಂಡನ್ ಪಟ್ಟಣದಲ್ಲಿ ಚಿತ್ರ ವಿಚಿತ್ರವಾದ ಪ್ರಾಣಿಗಳನ್ನೆಲ್ಲಾ ಒಂದು ಉದ್ಯಾನವನದಲ್ಲಿ ಇಟ್ಟು ಸಾಕುತ್ತಾರೆ. ಅಲ್ಲಿದ್ದ ಒಂದು ದೊಡ್ಡ ಆನೆಯನ್ನು ಅಮೇರಿಕಕ್ಕೆ ಕೊಂಡುಕೊಂಡು ಹೋಗಬೇಕೆಂದು ಕೊಂಡುಕೊಂಡರು. ಅದರ ಕ್ರಯ ೧,೫೦,೦೦೦ ರೂಪಾಯಿ. ಅದನ್ನು ಹಡಗಿನ ಮೇಲೆ ಸಾಗಿಸಿಕೊಂಡು ಹೋಗುತ್ತಿರುವಾಗ್ಯೆ ಆನೆಗೆ ಖಾಯಿಲೆ ಹಿಡಿದು ಸಮುದ್ರದಲ್ಲಿಯೇ ಮೃತಪಟ್ಟಿತು. ಅದನ್ನು ಬದುಕಿಸಬೇಕೆಂದು ತುಂಬಾ ಚಿಕಿತ್ಸೆ ಮಾಡಿದರೂ ಪ್ರಯೋಜನವಾಗಲಿಲ್ಲ. ಅದರ ಸಂಗಡ ಮೇಲ್ಬಂದ ತೋಟದಲ್ಲಿ ಇನ್ನೊಂದು ಆನೆ ಇತ್ತು. ಅದು ಸ್ನೇಹಿತನನ್ನು ಬಿಟ್ಟು ಹೋಗಬೇಕಾಯಿತಲ್ಲಾ ಎಂದು ಕೊರಗಿ ಪ್ರಾಣಬಿಟ್ಟಿತೆಂದು ಹೇಳುತ್ತಾರೆ.

◆◆◆◆

ಆಫ್ರಿಕದ ಉತ್ತರ ಭಾಗದಲ್ಲಿರುವ ಅಲ್ಜೀರಿಯಾ ದೇಶದ ಸಮುದ್ರ ತೀರದಲ್ಲಿ ಬಹಳ ಸುಂದರವಾದ ಹವಳಗಳು ವಿಪರೀತವಾಗಿ ಸಿಕ್ಕುತ್ತವೆ. ಕಳೆದ ೧೬ನೆ ಶತಮಾನದಿಂದಲೂ ಅಲ್ಲಿ ಹವಳವನ್ನು ತೆಗೆಯುತ್ತಲೇ ಇದ್ದಾರೆ. ಸಿಸಿಲಿ, ಕಾರ್ಸಿಕಾ, ಸಾರ್ಡಿನಿಯಾ, ಸ್ಪೆಯಿನ್ ಮುಂತಾದ ಕಡೆಗಳಲ್ಲೂ ಹವಳ ಸಿಕ್ಕುವದು. ಸುಮಾರು ೩,೨೦೦ ಜನರು ೫೦೦ ಹಡಗುಗಳನ್ನಿಟ್ಟುಕೊಂಡು ಹವಳವನ್ನು ತೆಗೆಯುವರು. ಇಟಲಿ ದೇಶದಲ್ಲಿ ಹವಳಗಳ ತಯಾರಿಗಾಗಿ ೬೦ ದೊಡ್ಡ ಕಾರ್ಖಾನೆಗಳಿರುವವು. ಈ ಕಾರ್ಖಾನೆಗಳಲ್ಲಿ ೧೫,೦೦೦ ಜನರು—ಹೆಂಗಸರು ಮಕ್ಕಳೇ ವಿಶೇಷ—ಕೆಲಸ ಮಾಡಿ ಜೀವನ ಸಂಪಾದಿಸಿಕೊಳ್ಳುತ್ತಿದ್ದಾರೆ.

---

## ತಾಲ್ಲೂಕು ವರ್ತಮಾನಗಳು.

ಬೇಲೂರು.—ಈ ಊರಿನಲ್ಲಿ ಸುಮಾರು ೧೫ ದಿವಸಗಳಿಂದ ನಡೆಯುತ್ತಿರುವ ರಥೋತ್ಸವ ಸಮ್ಮಂಥವಾದ ಉತ್ಸವಗಳನ್ನು ನೋಡಲು ಬೇರೆ ಬೇರೆ ಸ್ಥಳಗಳಿಂದ ಬಹುಮಂದಿ ಯಾತ್ರಾರ್ಥಿಗಳು ಬಂದು, ಅಲ್ಲಲ್ಲಿ ಇಳಿದುಕೊಂಡಿರುವದರಿಂದ, ಈ ಊರು ಕೋಟೆಯಲ್ಲಿ ಬಹು ಗಲೀಜಾಗಿರುವದು. ಇಂಥಾ ಜನಬಾಹುಳ್ಯ ಕಾಲದಲ್ಲಿ ಮ್ಯುನಿಸಿಪಾಲಿಟಿಯವರು ಹೆಚ್ಚು ಸಿಬ್ಬಂದಿಯನ್ನಿಟ್ಟು ಊರನ್ನು ಕ್ಷಣೇ ಕ್ಷಣೇ ಶುಚಿಮಾಡಿಸುವದಕ್ಕೆ ಬದಲಾಗಿ, ಇರತಕ್ಕ ಸ್ವೀಪರುಗಳಿಗೂ ರಜಾ ಕೊಟ್ಟಿರುವರು ಆಶ್ಚರ್ಯವಾಗಿದೆ.—ಹಳೇ ಬೀಡಿನ ಬಳಿ ಬಸ್ತಿ ಎಂಬ ಗ್ರಾಮದಲ್ಲಿರುವ ಶ್ರೀ ಆದಿನಾಥ ತೀರ್ಥಂಕರರ, ಶ್ರೀ ಶಾಂತಿನಾಥ ತೀರ್ಥಂಕರರ ವಿಗ್ರಹಗಳಿಗೆ ಬಹುಕಾಲದಿಂದಲೂ ಪೂಜೆ ನಿಂತುಹೋಗಿದ್ದುದಲ್ಲದೆ, ಶ್ರೀ ಪಾರ್ಶ್ವನಾಥ ತೀರ್ಥಂಕರರ ವಿಗ್ರಹಕ್ಕೂ ಕಾರಣಾಂತರದಿಂದ ಈಚೆಗೆ ಪೂಜೆ ನಿಂತುಹೋಗಿತ್ತು. ತೋವಿನಕೆರೆ ಸಾಹುಕಾರ್ ನೇಮರಾಜಯ್ಯನವರೂ, ಅವರ ಗುರು ಇಂದ್ರವರ್ಗದ ಪಾಯಣ್ಣನವರೂ ಸುಮಾರು ೬—೭ ಸಾವಿರ ರೂಪಾಯಿ ಖರ್ಚುಮಾಡಿ ಬಹು ವಿಜೃಂಭಣೆಯಿಂದ ಈ ಮೂರು ದೇವಾಲಯಗಳಲ್ಲಿಯೂ ಪಂಚಕಲ್ಯಾಣ ಮಹೋತ್ಸವಪೂರ್ವಕವಾಗಿ ಪ್ರತಿಷ್ಠಾಪಿಸಲು ಸಂಕಲ್ಪಿಸಿರುವರು.—ಈ ಊರಿನ ಜಾತ್ರೆ ಪ್ರಾರಂಭವಾಗಿ ಎಲ್ಲಾ ಉತ್ಸವಗಳು ಗಂಭೀರದಿಂದಲೂ, ವರ್ಷ ವರ್ಷ ನಡೆಯುವ ರೀತಿಯಲ್ಲಿಯೇ ನಡೆದವು. ಪ್ಲೇಗಿನ ಭೀತಿಯಿಂದ ಜನಗಳು ಹೆಚ್ಚಾಗಿ ಸೇರಲು ಅನಾನುಕೂಲವಾಯಿತು. ಹೆಚ್ಚು ಕಡಮೆ ಊರಿನ ಜನಗಳೆಲ್ಲಾ ಬಂದು ಸೇರಿದ್ದಾರೆ. ಇಲ್ಲಿನ ಪ್ಲೇಗ್ ಡಾಕ್ಟರು ತುಂಬಾ ಶ್ರಮ ತಕ್ಕೊಂಡು ಡಿಸಿನ್‌ಫೆಕ್ಷನ್ನು ಮಾಡಿರುತ್ತಾರೆ. ಇದಲ್ಲದೆ ಸುತ್ತು ಮುತ್ತಿನ ಗ್ರಾಮಗಳಲ್ಲಿ ಸಹಾ ಇವರು ತುಂಬಾ ಮುತುವರ್ಜಿಯಿಂದ ಕೆಲಸ ನಡಸುತ್ತಾರೆ. ಈ ಊರಿನ ಮುನಿಸಿಪಾಲಿಟಿ ವಿಷಯ ತುಂಬಾ ವ್ಯಸನಪಡಬೇಕಾಗಿದೆ. ಪ್ರಾಸಂತೆ ಕೋಟೆ ಮತ್ತು ಪೇಟೆಯ ಅನೇಕ ಸಂದುಗೊಂದುಗಳಿಗೆ ಮುನಿಸಿಪಾಲಿಟಿಯ ದರ್ಶನವಿಲ್ಲದೇ ಇದೆ. ನಿತ್ಯ ಈ ಊರಿನಲ್ಲಿ ಕೌಲೆಯವರು ಮುನಿಸಿಪಲ್ ಜಾಡಮಾಲಿಗಳ ಕೆಲಸವನ್ನು ಮಾಡುತ್ತಾರೆ. ಸದರಿ ಜಾಡಮಾಲಿಗಳು ರಸ್ತೆಯಲ್ಲಿ ಹೇಸಿಗೆ ಮುಂತಾದ್ದನ್ನು ಕಂಡರೆ ಮಣ್ಣು ಹಾಕಿ ಮುಚ್ಚುತ್ತಾರೆ. ಚರಂಡಿಗಳಲ್ಲಿ ಗಲೀಜು ನೀರು ಮುಂತಾದ್ದನ್ನು ಗುಡಿಸುವದೇ ಇಲ್ಲ. ಇವರನ್ನು ನೀವು ಯಾಕೆ ಸರಿಯಾಗಿ ಶುದ್ಧಿಮಾಡುತ್ತಿಲ್ಲ ಎಂದು ಕೇಳಿದರೆ "ಅದೆಲ್ಲಾ ನಮ್ಮ ಕೆಲಸವಲ್ಲ; ಬರೀ ರಸ್ತೆ ಗುಡಿಸುವದೇ ನಮ್ಮ ಕೆಲಸ. ನಾವು ಚರಂಡಿ ಮತ್ತು ಹೇಸಿಗೆ ಮುಂತಾದ್ದನ್ನು ಶುದ್ಧ ಮಾಡಿದರೆ ನಮ್ಮನ್ನು ಜಾತಿಯಿಂದ ಹೊರಗೆ ಹಾಕುತ್ತಾರೆ" ಎಂದು ಹೇಳುತ್ತಾರೆ. ಇಂಥಾ ಜಾಡಮಾಲಿಗಳಿದ್ದರೆ ಊರಿನ ಶುಚಿ ಎಷ್ಟರ ಮಟ್ಟಿಗಿರುತ್ತೋ ವಾಚಕರೇ ಊಹಿಸಬಹುದು. ಸರ್ಕಾರದವರು ಬಡ ಪ್ರಜೆಗಳ ಮೇಲೆ ದಯವಿಟ್ಟು ಈ ಜಾಡಮಾಲಿಗಳನ್ನು ತೆಗೆದು ಬೇರೆ ಕಡೆಯಿಂದ ತೋಟಿಗಳನ್ನು ಕರೆಸಿದರೆ ಉತ್ತಮ. ಇಲ್ಲದಿದ್ದರೆ ಊರಿನ ಸಂದುಗೊಂದುಗಳು ಯಥಾ ಪ್ರಕಾರ ಹೇಸಿಗೆಯಿಂದಲೇ ತುಂಬಿರುತ್ತೆ. ಇದರಿಂದ ಜನಗಳಿಗೆ ಆರೋಗ್ಯ ಹಾನಿ. ಜನಗಳಾದರೋ ಮುನಿಸಿಪಾಲಿಟಿಯ ಮೇಲೆ ಆತುಕೊಂಡು ಮುನಿಸಿಪಲ್ ಕಂದಾಯವನ್ನು ದಂಡವಾಗಿ ತೆರುತ್ತಾ ಇರುವರು. ಬೇರೆ ಸಹ ನಿರ್ವಾಹವಿಲ್ಲ. ಹೇಸಿಗೆಯನ್ನು ತಾವೇ ಶುದ್ಧಮಾಡಿಕೊಳ್ಳಬೇಕಾಗಿದೆ. ಹೀಗಾದರೆ ಮುನಿಸಿಪಾಲಿಟಿಯಿಂದ ಪ್ರಯೋಜನವೇನು? ಆದ್ದರಿಂದ ತಾಲ್ಲೂಕು ಅಧಿಕಾರಿಗಳು ಈ ವಿಷಯಕ್ಕೆ ತುಂಬಾ ಗಮನಕೊಡಬೇಕಾಗಿದೆ.—ಇಲ್ಲಿನ ಆಕ್ಟಿಂಗ್ ಹಾಸ್ಪಿಟಲ್ ಅಸಿಸ್ಟೆಂಟರಾದ ಮಿ। ಎ. ಎಲ್. ಮ್ಯಾನ್ಯುಯಲ್‌ರವರನ್ನು ಇಲ್ಲಿ ಖಾಯಂ ಮಾಡಬೇಕೆಂದು ಪ್ರಜೆಗಳು ಬರೆದುಕೊಂಡ ಅರ್ಜಿಗೆ ಸೀನಿಯರ್ ಸರ್ಜನ್‌ರಿಂದ ಜವಾಬೇ ಇಲ್ಲದೆ ಇತ್ತು. ಇವರಮೇಲೆ ಪ್ರಜೆಗಳಲ್ಲಿ ಅನೇಕರು ಸೇರಿ ಟೆಲಿಗ್ರಾಂ ಕೊಟ್ಟರು. ಅದಕ್ಕೆ "ಅವರನ್ನು ಬೇಲೂರಿನಲ್ಲಿ ಖಾಯಂ ಮಾಡಲು ಆಗಲಾರದೆಂದು ವ್ಯಸನಪಡುತ್ತೇವೆ" ಎಂಬದಾಗಿ ಜವಾಬು ಕೊಟ್ಟರು. ರೈತರು ಮತ್ತು ಬಡಪ್ರಜೆಗಳ ಕೋರಿಕೆ ಎಷ್ಟುಮಾತ್ರ ನೆರವೇರಿಸುತ್ತಾರೆಂದು ಇದರಿಂದ ಗೊತ್ತಾಗುತ್ತೆ. ಇಂಥಾ ಸಮಾಚಾರಗಳು ಇಲ್ಲಿ ಇಲ್ಲದೆ ಹೋಗುತ್ತಾರೆಂದು ತುಂಬಾ ವ್ಯಸನಪಡಬೇಕಾಗಿದೆ. ಬಡರೈತರ ಮೇಲೆ ತುಂಬಾ ಪ್ರೀತಿಯನ್ನಿಟ್ಟಿರತಕ್ಕ ನಮ್ಮ ದಿವಾನರವರೂ ಈ ವಿಷಯಕ್ಕೆ ಗಮನಕೊಟ್ಟು ಪ್ರಜೆಗಳನ್ನು ಸಂತೋಷಪಡಿಸುವರೆಂದು ಪ್ರಾರ್ಥಿಸುತ್ತೇವೆ.

ಚನ್ನಪಟ್ಟಣ:—ಈಗ ಅರ್ಧ ಭಾಗದ ಜನರು ಊರಿಗೆ ಬಂದಿದ್ದಾರೆ. ಇನ್ನು ೨—೩ ದಿನದಲ್ಲಿ ಎಲ್ಲರೂ ಬರುತ್ತಾರಂತೆ. ಇಲ್ಲಿ ಸುಮಾರು ೨೦೦ ಜನರವರೆಗೆ ಪ್ಲೇಗಿನಿಂದ ಸತ್ತಿದ್ದಾರೆಂದು ಕೇಳಿದ್ದು. ಕನ್ನಡ ಸ್ಕೂಲುಗಳೆಲ್ಲಾ ತೆರೆಯಲ್ಪಟ್ಟವು. ಹುಡುಗರ ಸಂಖ್ಯೆ ಬಹು ಕಡಮೆಯಾಗಿದೆ. ಇಂಗ್ಲಿಷ್ ಸ್ಕೂಲನ್ನು ಮಾತ್ರ ಬಿಚ್ಚಲಿಲ್ಲ. ನೀರಿಗೆ ಆಧಾರವಾಗಿದ್ದ ಕನ್ನೂರು ಕಟ್ಟೆ ಸಂಪೂರ್ಣವಾಗಿ ಒಣಗಿದೆ. ಕೆಲವು ಬಾವಿಗಳಲ್ಲಿ ಸಹಾ ಜಲವಿಲ್ಲ. ಸಹಾ ಉಪ್ಪು ನೀರು ಬಾವಿಯಲ್ಲಿ ಸಹ ಗಡಿಗೆ ಮುಣುಗುವದಿಲ್ಲ. ನೀರಿಗೆ ಜನರು ಬಹಳ ಕಷ್ಟಪಡುತ್ತಾರೆ. ಸರ್ಕಾರದವರು ಏನು ಮಾಡುವದಕ್ಕಿದ್ದಾರೋ ತಿಳಿಯದು. ಇಲ್ಲಿ ಮುಸಾಫರ್ ಬಂಗ್ಲೆ, ಇಂಗ್ಲಿಷ್ ಕನ್ನಡ ಸ್ಕೂಲುಗಳಿಗೂ ಜನರು ವಾಸವಾಗುವ ಮನೆಗಳಿಗೂ ಮಧ್ಯೆ ಒಂದು ಹಳ್ಳವಿದೆ. ಇದರಲ್ಲಿ ಬೀದಿಯ ಕಸವನ್ನೂ ಈ ಪ್ಲೇಗಿನಲ್ಲಿ ಊರಿನ ಮನೆಗಳಲ್ಲಿ ಗುಡಿಸಿದ ಪ್ಲೇಗ್ ಸಮ್ಮಂಧ ಹರಕು ಬಟ್ಟೆ, ಹಾಸಿಗೆ, ದಿಂಬು, ಹರಕು ಚಾಪೆ ಮುಂತಾದವುಗಳನ್ನೆಲ್ಲಾ ಕಚಡಾ ಗಾಡಿಯವರು ತಂದು ಸುರಿಯುತ್ತಾರೆ. ಊರ ಮಧ್ಯೆ ಉದ್ಯಾನವನಗಳು ಇರುವದಕ್ಕೆ ಬದಲಾಗಿ ಊರಿನ ಕಸವೆಲ್ಲಾ ಸೇರಿ ಕಸದ ವನವಾಗಿದೆ. ಬಿರುಗಾಳಿ ಬೀಸಿದರೆ ಆ ಕಸವೇ ಮನೆಗಳ ಮೇಲೆ ಹಾರ್‍ಯಾಡುತ್ತವೆ. ಮತ್ತು ಮಳೆ ಬಂದರೆ ಇದು ಕೊಳೆತು ನಾತ ಬಡಿಯುತ್ತದೆ. ತರಗು ಇದೆ. ಇದರಿಂದ ಪ್ಲೇಗ್ ಪ್ರಾರಂಭವಾಗುವದಕ್ಕೆ ಕಾರಣವು ಆಗುವದರಲ್ಲಿ ಸಂಶಯವಿಲ್ಲ. ಮೇಲಿನ ಅಧಿಕಾರಿಗಳು ಯಾವಾಗ ಇದಕ್ಕೆ ಗಮನ ಕೊಡುತ್ತಾರೋ ತಿಳಿಯದು. ಬೇರೆ ಊರುಗಳಲ್ಲಿ ಕಸವನ್ನೆಲ್ಲಾ ಊರ ಹೊರಗೆ ಸಾಗಿಸಿ, ಪ್ರಾಂತ್ಯದಲ್ಲಿ ಸುಡಿಸುವದುಂಟು. ಇಲ್ಲಿ ಊರಿನ ಮಧ್ಯದಲ್ಲಿ ರಾಶಿ ಹಾಕುವದು ಆಶ್ಚರ್ಯವಾಗಿದೆ. ದೊಡ್ಡಮಳೂರಿನ ಅಪ್ರಮೇಯ ಸ್ವಾಮಿಯ ದೇವಸ್ಥಾನದಲ್ಲಿ ನಡೆಯತಕ್ಕ ಉತ್ಸವಾದಿಗಳನ್ನು ಸಕಾಲದಲ್ಲಿ ನಡಿಸುವದಕ್ಕೆ ಅಧಿಕಾರಿಗಳು ಗಮನಕೊಡುವದಿಲ್ಲವೆಂದು ಅಲ್ಲಿನ ಜನರು ಗೊಣಗುಟ್ಟುತ್ತಾರೆ. ರಥಸಪ್ತಮಿ ಉತ್ಸವ ನಡಿಸಲ್ಪಟ್ಟ ವಾಹನವನ್ನು ಈವರೆಗೂ ಸ್ವಸ್ಥಾನಕ್ಕೆ ಸೇರಿಸದೆ ಬೀದಿಯಲ್ಲಿ ಬಿಟ್ಟು ಇರುವದರಿಂದ ಬಿಸಿಲು ಮಳೆಯಲ್ಲಿ ನೆನೆದು ಶಿಥಿಲವಾಗಿ ಹೋಗುವದಕ್ಕೆ ಆಸ್ಪದವಾಗಿದೆ ಎಂತಲೂ, ಅಲ್ಲದೆ ದೇವಸ್ಥಾನದಲ್ಲಿದ್ದ ಗರುಡವಾಹನ [illegible] ಶಿಥಿಲವಾಗಿಯೂ ಹೊರಕ್ಕೆ ಬಾರದೇ ಇದೆ ಎಂತಲೂ ವ್ಯಸನಪಡುತ್ತಾರೆ.—ಉಪದೇಶಿ ಪ್ರಸಂಗಾಚಾರ್ಯರಾದ [illegible] ಫೆಬ್ರವರಿ ೪ ನೆ ತಾರೀಖು ವಿಶ್ರಾಂತಿ ದಿನದಲ್ಲಿ ಈ ಲೋಕದ ವಿಶ್ರಾಂತಿ ದಿನವನ್ನು ಬಿಟ್ಟು ಪರಲೋಕದ ವಿಶ್ರಾಂತಿಗೆ ಸೇರಿದರು. ಇವರು ಘನ [illegible] ಕಾಲದಲ್ಲಿ ಬಡಗಣದ ಹಳ್ಳಿಯಲ್ಲಿ ಕ್ರಿಸ್ತ [illegible]. ಆವಿನಿಂದ ಇದರಲ್ಲಿ ಸ್ಥಿರವಾಗಿದ್ದರು. [illegible] ಸ್ವಾಮಿಯ ವಾಕ್ಯ ಕೇಳುವದರಲ್ಲಿ [illegible] ಇದ್ದರೆಂದು ಕೇಳುವದರಲ್ಲಿ ಸಂಶಯವಿಲ್ಲ. ಇವರ ಸಾವಿನಲ್ಲಿ ಸಮಾಧಾನ ತುಂಬಿತ್ತು. ಉಪದೇಶಿ ಜೋನತಾನ್ಯೆಯವರು ಭಕ್ತಿಯ ವಿಷಯವಾಗಿ ಕೆಲವು ಪ್ರಶ್ನೆಗಳನ್ನು ಕೇಳಿದಾಗ, ಸ್ಪಷ್ಟವಾಗಿ ಉತ್ತರ ಕೊಟ್ಟರು. ಸಾಯುವದಕ್ಕೆ ಭಯವುಂಟೋ ಎಂದು ಕೇಳಿದ್ದಕ್ಕೆ ನನಗೇನೂ ಭಯವಿಲ್ಲ. ಭಯವೇಕೆ? ಕ್ರಿಸ್ತನು ನಮ್ಮವನು. ನಾನು ಕ್ರಿಸ್ತನವನು ಅಂದರು. ನನಗೆ ಏನು ಬೇಕಾಗುತ್ತಿರುವದು ಅದಕ್ಕೆ ಕರ್ತನನ್ನು ಬೇಡು, ನಿನಗೆ ಎಲ್ಲಾ ಕೊಡುತ್ತಾನೆಂದು ಹೇಳಿದರು. ಇವರಿಗೆ ಅಕ್ಷರ ಬಾರದೇ ಇದ್ದರೂ ಅನೇಕ ವೇದ ವಚನಗಳನ್ನೂ, ಜ್ಞಾನ ಕೀರ್ತನೆ ಸಂಗೀತಗಳನ್ನೂ ಕಂಠ ಪಾಠವಾಗಿ ಹಾಡುತ್ತಿದ್ದರು. ಮತ್ತು ಸಭೆಯ ಕ್ರಿಯೆಗಳಲ್ಲಿ ಕ್ರಿಸ್ತನನ್ನು ತೋರಿಸಬೇಕೆಂಬುವದೇ ಮುಖ್ಯ ಉದ್ದೇಶವೆಂದು ತಿಳಿದು ಇವರು ತಮ್ಮ ಊರಲ್ಲಿ ಕೆಲವು ಕಾಲ ಬೈಬಲ್ ಉಮನ್ ಕೆಲಸವನ್ನು ಮಾಡಿದರು. ಇವರ ಮರಣವಾದಾಗ ಕೇಳಿದ ಎಲ್ಲಾ ಸಭೆಯವರೂ ಬೇರೆ ಜನರೂ ಬಹು ಸಂತಾಪ ಪಟ್ಟರು. ಇವರ ವಿಷಯ ಒಬ್ಬ ಸ್ವದೇಶ ಪಾದ್ರಿಯವರು ಇಂಥ [illegible] ಲೋಕದಲ್ಲಿ ಸಿಕ್ಕುವದು ಅಪರೂಪವೆಂದು ಬರೆದಿದ್ದಾರೆ. ಇನ್ನೊಬ್ಬ ಉಪದೇಶಿಯವರು ಇವರ ಸದ್ಗುಣಗಳು ಈಗಲೂ ನಮ್ಮ ಮುಂದೆ ಇವೆ ಎಂದು ಬರೆದಿದ್ದಾರೆ. ಇನ್ನೊಬ್ಬರು—ಈ ಲೋಕದಲ್ಲಿ ನಿಮಗೂ ನಮಗೂ ಆ ಒಬ್ಬರೇ ತಾಯಿ ಇದ್ದದ್ದು, ಇಂದವರು ತೀರಿ ಹೋದರಲ್ಲಾ ಎಂದು ಬರೆದಿದ್ದಾರೆ.

---

## ಹಾಸ್ಯಾರ್ಣವ.

ಮಗು:- ಅಮ್ಮಾ, ಅಪ್ಪನ ಸಂಗಡ ಹೇಳಿದ್ದೇನೆ. ನಿನ್ನ ಸಂಗಡಲೂ ಕಿವಿಮಾತು ಹೇಳುತ್ತೇನೆ ತಾಳು—ಗಟ್ಟಿಯಾಗಿ ಹೇಳಿದರೆ ಅಪ್ಪನಿಗೆ ಕೇಳಿಸುತ್ತೆ.

◆◆◆◆◆

ಬುದ್ಧಿಗೆಟ್ಟ ಉಪಾಧ್ಯಾಯನು ಭೂಪಟದಲ್ಲಿ ಮದ್ರಾಸ್ ಪಟ್ಟಣಕ್ಕೆ ಬರೆದಿಟ್ಟ "ಇದೇ ಮದ್ರಾಸ್" ಎಲ್ಲರೂ ನೋಡಿ ಎಂದನು. ಬಾಲಕನೊಬ್ಬನು ಅತ್ಯಂತ ಆತುರದಿಂದ ತಿರುಗಿತು ತಿರುಗಿತೆಂದನು. ಹೇಗೆಂದು ಕೇಳಲು "ಮುಳುಗಿಬಿಟ್ಟಿತು, ೧ ಎಂದು" ಉತ್ತರವಿತ್ತನು. ಉಪಾಧ್ಯಾಯನ ನಗುವು ಬರಲೇ ಇದಕ್ಕೆ ಕಾರಣವಾಗಿತ್ತು.

◆◆◆◆◆

ರಾಮಾಚಾರ್ಯರು ಅಳುತ್ತಿರುವ ಮಗುವನ್ನು ನೋಡಿ ಸಿಟ್ಟಿನಿಂದ ಹೆಂಡತಿಯನ್ನು ಕುರಿತು—

ಗಂ:—"ಏಕೆ, ಯಾಕೆ ಮಗುವನ್ನು ಅಳಿಸುತ್ತಿ? ಹೊಟ್ಟೆ ಕೊಡಬಾರದೇ?"

ಹೆಂ:—"ಹಾಲು ಕುಡಿಯುವೊಲ್ಲದು."

ಗಂ:—"ಅವನಪ್ಪ ಕುಡಿದಾನು."

...ಟ್ಟರ್: ಸುತ್ತುಮುತ್ತಲೂ ಪ್ಲೇಗ್ ಕೇಸುಗಳು ಆಗುತ್ತಿರುವಾಗ ನೀವು ವಾಸವಾಗಿರುವದು ಅಪಾಯಕರ. ಕೂಡಲೆ ಮನೆಯನ್ನು ಬಿಡುವದು ಕ್ಷೇಮಕರ.

ನಿವಾಸಿ: ಮುಖ್ಯ ಈ ಜಾಡ್ಯಕ್ಕೆ ಜನಸಂಪರ್ಕವಿರಬಾರದು. ಪತ್ರ ಬೀದಿಯವರೆಲ್ಲಾ ಬಿಡುತ್ತಾರೆ ನಾವು ಪ್ರತ್ಯೇಕವಾಗಿದ್ದಂತಾಯೇ ಆಯಿತು.

◆◆◆◆

ಚೆನ್ನಿನ ಮೇಲೆ ಛಡಿ ಏಟುಗಳನ್ನು ತಿಂದ ಒಬ್ಬನೊಬ್ಬ ಶಿಷ್ಯನನ್ನು ಕುರಿತು ಒಬ್ಬನೊಬ್ಬ ಹಾಸಿಗಾರನು ಪ್ರಶ್ನೆಮಾಡಿದನು:

ಹಾ:—"ಶೃತನದ ಫಲವು ಯಾಗಿದೆ, ತಿಳಿಯಿತೋ ?"

ಶ:—"ತಿಳಿಯುವದೇನು, ಹಿಂದುಗಡೆ (ಬೆನ್ನು) ನಡೆದ ವಿಷಯಕ್ಕೆ ನಾನು ಲಕ್ಷ್ಯಮಾಡುವದಿಲ್ಲವೆಂಬುವದು ಗೊತ್ತಿಲ್ಲವೇ ?"

◆◆◆◆

ಒಂದಾನೊಂದು ದಿವಸ ಶಾಲೆಯಲ್ಲಿ ಇಬ್ಬರು ಬಾಲಕರು ಜಗಳವಾಡುತ್ತಿದ್ದುದನ್ನು ಕಂಡು ಉಪಾಧ್ಯಾಯರು ದೊಡ್ಡ ಹುಡುಗನನ್ನು ವಿಚಾರಿಸಲಾಗಿ ಚಿಕ್ಕವನು ತನ್ನನ್ನು ೧೩ ರಲ್ಲಿ ೧೦ ಕಳೆದರೆ ಏನು ಉಳಿಯಿತು ಹೇಳೆಂದು ಕೇಳಿದನೆಂದನು. ಚಿಕ್ಕವನನ್ನು ವಿಚಾರಿಸಲಾಗಿ ತನ್ನ ಹತ್ತಿರ ೧೩ ಗೋಲಿಗಳಿದ್ದುದರಿಂದಲೂ ಅದರಲ್ಲಿ ದೊಡ್ಡವನು ೧೦ ಗೋಲಿಗಳನ್ನು ತೆಗೆದುಕೊಂಡು ಹಿಂತಿರುಗಿ ಕೊಡದೆ ತಂಟೆಮಾಡುತ್ತಿದ್ದಂತೆಯೂ ತಿಳಿಯಬಂತು. ದೊಡ್ಡ ಹುಡುಗನನ್ನು ಯಾಕೆ ಕೊಡುವದಕ್ಕೆ ಒಪ್ಪಲಿಲ್ಲವೆಂದು ವಿಚಾರಿಸಿದ್ದಕ್ಕೆ ೧೩ ರಲ್ಲಿ ೧೦ ಕಳೆದರೆ ಏನು ಉಳಿಯುತ್ತದೆಂಬುವದನ್ನು ಮರೆಯದಂತೆ ಮಾಡುವದಕ್ಕೆಂದು ಉತ್ತರವಿತ್ತನು.

ವಿನೋದ.

---

## ಚಾತ್ರಿದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದ ಬರತಕ್ಕ ಚಾತ್ರಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಚಾತ್ರಿದಾರರು ನಮ್ಮ ವಿಳಾಸಕ್ಕೆ ಕಳುಹಿಸತಕ್ಕ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಚಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಚಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.

ಹಿತೈಷಿ—ದಾವಣಗೆರೆ, ಸಂವಾದ—ಹರಿಹರ, ವೆಂ. ವೆಂ. ಮೈಸೂರು, ಬಸಪ್ಪ—ಚಿತ್ರದುರ್ಗ, ಅಭಿಮಾನಿ—ದಾವಣಗೆರೆ, ಗೋವಿಂದರಾವ್ ಅರಕಲಗೂಡು, ಚಿಕ್ಕಶೆಟ್ಟಿ—ನಾಗರವಲಿ:—ಈ ಚಾತ್ರಿಗಳಿಗೆ ಈ ಪತ್ರಿಕೆಯಲ್ಲಿ ಅವಕಾಶ ದೊರಕಲಾರದು.

ಎಡಿಟರ್.

---

## ಕರೆಸ್ಪಾಂಡೆನ್ಸ್.

### ಪ್ರಶ್ನೋತ್ತರಗಳು.

ಪ್ರ.-ತಮ್ಮ ಪತ್ರಿಕೆಯಲ್ಲಿ ಹಿಂದೂಸ್ಥಾನದ ಸೈನ್ಯಕ್ಕೆ ಸೇರಿಕೊಂಡಿರುವ ಕೀಳುಜಾತಿ ಜನಗಳನ್ನೆಲ್ಲಾ ಕೆಲಸದಿಂದ ವಜಾ ಮಾಡಿ, ಉತ್ತಮ ಜಾತಿಯವರನ್ನು ಸೇರಿಸಿಕೊಳ್ಳಬೇಕೆಂದು ಗೌವರ್ನಮೆಂಟಿನವರು ಹುಕುಂ ಕೊಟ್ಟಿರುವದಾಗಿ ಬರೆದಿದೆ. ಯಾವುದರ ಕೀಳುಜಾತಿಯವರು ಯಾರು! ಉತ್ತಮ ಜಾತಿಯವರು ಯಾರು! ಹೀಗೆ ವಿಂಗಡ ಮಾಡುವದರಲ್ಲಿ ಹಿಂದೂ ಪ್ರಜೆಗಳು ಇನ್ನೂ ಹೆಚ್ಚಾಗಿ ದ್ವೇಷಾಸೂಯೆಯುಳ್ಳವರಾಗಿ ಬದುಕುವಂತೆ ಮಾಡಲು ಕಾರಣವಾಗಿಥೆಯಿಲ್ಲವೇ ?

ಉ.—ಸೈನ್ಯದ ಮುದ್ದೇದಾರರುಗಳ ಆಳುಗಳಿಗೆ ಅಂದರೆ ಆರ್ಡರ್ಲಿಗಳಿಗೆ ಕೊಟ್ಟ ಅಪ್ಪಣೆಯೇನಂದರೆ—ಆ ಆಳುಗಳು ಮೇಲುಜಾತಿಯವರಾಗಲಿ ಕೀಳುಜಾತಿಯವರಾಗಲಿ ಎಲ್ಲರೂ ಯಾವದಾದರೂ ಒಂದೇ ಒಂದು ಜಾತಿಯವರಾಗಿರಬೇಕು. ಒಬ್ಬ ಮುದ್ದೇದಾರನ ಬಳಿಯಲ್ಲಿರುವ ಆಳುಗಳು ಬೇರೆ ಬೇರೆ ಜಾತಿಯವರಾಗಿದ್ದರೆ ಬಂದು ಠಾಣ್ಯದಿಂದ ಬೇರೊಂದು ಠಾಣ್ಯಕ್ಕೆ ಪ್ರಯಾಣ ಮಾಡುವಾಗ ಬಹಳ ಅನನುಕೂಲವಾಗುತ್ತೆ. ಒಂದೇ ಜಾತಿಯವರಾಗಿದ್ದರೆ ಎಲ್ಲರೂ ಒಂದಾಗಿ ಊಟ ಉಪಚಾರಗಳನ್ನು ನಡಿಸಿಕೊಂಡರೆ ತಮಗೂ ಸುಖವಾಗಿರುವದು. ಮುದ್ದೇದಾರರುಗಳ ಕೆಲಸವೂ ಸರಾಗವಾಗಿ ನಡೆಯುವದು. ಯಾವದಾದರೂ ಒಂದು ಜಾತಿಯವರನ್ನು ಹೆಚ್ಚಿಸಬೇಕೆಂಬುದು ಈ ಅಪ್ಪಣೆಯ ಉದ್ದೇಶವಲ್ಲ. ಆಳುಗಳು ಯಾವ ಜಾತಿಯವರಾದರೂ ಆಗಬಹುದು. ಆದರೆ ಅವರೆಲ್ಲರೂ ಒಂದು ಜಾತಿಯವರಾಗಿರಬೇಕು. ಮದ್ರಾಸು ಕೋರಿಗೆ ಸೇರಿದ ಕೆಲವು ಪಟಾಲಮುಗಳನ್ನು ಸರ್ಕಾರದವರು ಕೆಲವು ಕಾಲಕ್ಕೆ ಹಿಂದೆ ಒಡೆದುಹಾಕಿದರು! ಯಾಕೆ? ಇವರೆಲ್ಲರೂ ಕೀಳುಜಾತಿಯವರೆಂದು ಒಡೆದುಹಾಕಿದರೋ? ಇಲ್ಲ. ಅವರು ಸೈನ್ಯಕ್ಕೆ ಅವಶ್ಯವಾದಷ್ಟು ಶೌರ್ಯ ದೇಹದಾರ್ಢ್ಯಗಳುಳ್ಳವರಾಗಿರಲಿಲ್ಲವೆಂಬುದೇ ಇದಕ್ಕೆ ಕಾರಣವೆಂದು ತಿಳಿಯಬೇಕಷ್ಟೆ.—ಎಡಿ.

ಪ್ರ.—ನಿಮ್ಮ ಮಾರ್ಚಿ ೧೨ ತಾರೀಖಿನ ೪೦ನೆ ಸಂಚಿಕೆಯ ೩ನೆ ಪೇಜಿನಲ್ಲಿ ಇಂಡಿಯಾ ಗೌವರ್ನರ್ ಜನರಲ್ ಲಾರ್ಡ್ ಕರ್ಜನ್ ಪ್ರಭುಗಳು ಪಕ್ಷಿಗಳನ್ನು ಕೊಲ್ಲಕೂಡದೆಂದು ಕಾನೂನ್ ಜಾರಿಗೆ ತಂದಿರುವದಾಗಿ ಪ್ರಕಟಿಸಿ ಇದೆ. ಯಾವ ಪಕ್ಷಿಗಳನ್ನು ಯಾವ ಕಾರಣದಿಂದ ಕೊಲ್ಲಕೂಡದು? ಕೋಳಿ ಬಾತು ಮೊದಲಾದ ಮನೆಯಲ್ಲಿ ಸಾಕುವ ಸುಂದರವಾದವುಗಳು ಪಕ್ಷಿ ಜಾತಿಗೇ ಅಲ್ಲವೇ? ಹಾಗಾದರೆ ಮಾಂಸಭೋಜನವೇ ಕೂಡದೆಂಬುವದೂ ಅವರ ಅಭಿಪ್ರಾಯ? ದಯವಿಟ್ಟು ತಾವು ಇದನ್ನು ಗ್ರಹಿಕೆ ಆಗುವಂತೆ ತಿಳಿಸಬೇಕು.

ಉ.—ಈ ಅಪ್ಪಣೆಯನ್ನು ಕೊಟ್ಟಿರುವದು ಯಾತಕ್ಕೆಂದರೆ— ಕಾಡಿನಲ್ಲಿರುವ ಕೆಲವು ಪಕ್ಷಿಗಳನ್ನು ಬೇಟೆಯವರು ಅವುಗಳ ಚಿತ್ರವಿಚಿತ್ರವಾದ ತುಪ್ಪಳಕ್ಕಾಗಿ ಅನೇಕವಾಗಿ ಕೊಂದು ಯೂರೋಪ್ ಖಂಡಕ್ಕೆ ಕಳುಹಿಸುವ ಪದ್ಧತಿಯುಂಟು. ಹೀಗೆ ಮಾಡುವದನ್ನು ನಿಲ್ಲಿಸುವದಕ್ಕೋಸ್ಕರವೇ ಈಗ ಈ ಅಪ್ಪಣೆಯನ್ನು ಕೊಟ್ಟಿದ್ದಾರೆ. ನಿಲ್ಲಿಸದೆಹೋದರೆ ಈ ಪಕ್ಷಿ ಜಾತಿಯೇ ಇಲ್ಲದೆಹೋಗುವದೆಂದು ತಿಳಿದು ಹೀಗೆ ಮಾಡಿದ್ದಾರೆ.—ಎಡಿ.

ಪ್ರ.—ಮದ್ರಾಸ್ ಗೌವರ್ನರ್ ಲಾರ್ಡ್ ಆಂಪ್ಟಹಿಲ್ ಸಾಹೇಬರು ಮದರಾಸ್ ಯೂನಿವರ್ಸಿಟಿ ಎಂಬ ವಿದ್ಯಾ ಪರೀಕ್ಷಕ ಮಂಡಲಿಯವರು ಅಗ್ರಾಸನವನ್ನು ಅಂಗೀಕರಿಸಿ, ಪೇರ್ಗಡೆಯಾದವರಿಗೆಲ್ಲಾ ಬಿರುದುಗಳನ್ನು ದಯಪಾಲಿಸಿದ ಮೇಲೆ ಅವರು ಒಂದು ಉಪನ್ಯಾಸ ಮಾಡಿದರಷ್ಟೆ. ಅದನ್ನು ಎತ್ತಿ ತಮ್ಮ ಪತ್ರಿಕೆಯಲ್ಲಿ ಬರೆದಿದ್ದೀರಿ. ಅದು ಯಥಾಪ್ರತಿಯೋ? ಯಾಕೆಂದರೆ, "ನಡೆಗನ್ನಡಿ" ಯ ಪತ್ರಿಕಾಕರ್ತರು ಅವರು ಮಾಡಿರುವ ಉಪನ್ಯಾಸವನ್ನು ಕುರಿತು ದೋಷಾರೋಪಣೆಯನ್ನು ಮಾಡಿರುತ್ತಾರೆ. ಸದುತ್ತರವನ್ನು ಪಾಲಿಸಿರಿ.

ಉ.—ಸರ್ಕಾರದವರು ನಡೆಸುವ ಕಾರ್ಯಗಳಲ್ಲಿ ನಿಜವಿದೆಯೋ ಇಲ್ಲವೋ ಎಂದು ಪರೀಕ್ಷೆಮಾಡಿ ಆಧಾರವಿದ್ದರೆ ಆಕ್ಷೇಪಣೆ ಮಾಡಬೇಕೆಂದೂ ನಿಜವಿಲ್ಲದೆ ಇದ್ದರೂ ಸ್ವಾರ್ಥಕ್ಕೋಸ್ಕರ ಸರ್ಕಾರದ ಮೇಲೆ ಆಕ್ಷೇಪಣೆ ಮಾಡುವ ಪತ್ರಿಕಾಕರ್ತರು ಅಪರಾಧಿಗಳಾಗಿದ್ದಾರೆಂದೂ ಲಾರ್ಡ್ ಆಂಪ್ಟಹಿಲ್ ಸಾಹೇಬರು ಹೇಳಿದರು. ಯೋಗ್ಯವಾದ ಯಾವ ಪತ್ರಿಕಾಕರ್ತರು ಇದಕ್ಕೆ ಆಕ್ಷೇಪಣೆ ಮಾಡುವರೋ ನಮಗೆ ಗೊತ್ತಾಗುವದಿಲ್ಲ.—ಎಡಿ.

ಪ್ರ.—ಮಾರ್ಚಿ ತಾ॥ ೧೩ ಸಂಚಿಕೆ ೩೨ ಉಳ್ಳ "ನಡೆಗನ್ನಡಿ" ಎಂಬ ಪತ್ರಿಕೆಯಲ್ಲಿ ಜರ್ಮನ್ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಪ್ರಕಟಿಸುವ ಕ್ರಾಯಿಟ್‌ಸಿಂಗ್ ಎಂಬ ಪತ್ರಿಕೆಯು ಬ್ರಿಟಿಷರ ಆಳ್ವಿಕೆಯನ್ನು ಹೀಯಾಳಿಸಿರುವದಲ್ಲದೆ ಬ್ರಿಟಿಷ್‌ನವರು ನಿಷ್ಕರುಣಿಗಳಾಗಿ ಇಂಡಿಯಾ ದೇಶೀಯರನ್ನು ಸುಲಿಗೆಗೊಳ್ಳುತ್ತಾರೆ. ಆದ್ದರಿಂದ ಇವರಿಗೆ ಮಹದ್ವಿಪತ್ತು ಚಿರಕಾಲದಲ್ಲಿಯೇ ಸಂಭವಿಸುವದೆಂದು ಪ್ರಕಟಿಸಿರುವ ಹಾಗೆ ಬರೆದಿದಾರೆ. ಅದೇ ಅಭಿಪ್ರಾಯದಿಂದ ಆ ಪತ್ರಿಕೆ ಬರೆದಿದೆಯೋ? ಹಾಗೆ ಬರೆಯಲು ಕಾರಣವೇನು? ಹಿಂದೂ ದೇಶೀಯರೇ ಬ್ರಿಟಿಷರನ್ನು ಅನೇಕ ಸಂದರ್ಭಗಳಲ್ಲಿ ಹೊಗಳುತ್ತಿರುವಾಗ್ಯೆ ಜರ್ಮನಿಯ ಪತ್ರಿಕೆ ಹಿಯಾಳಿಸುವದು ಅನುಚಿತವೆಂದು ತೋರುತ್ತೆ. ತಮ್ಮ ಅಭಿಪ್ರಾಯವನ್ನು ತಿಳಿಸಿರಿ.

ಉ.—ಜರ್ಮನಿ ದೇಶಸ್ಥರಿಗೂ ಬ್ರಿಟನಿನವರಿಗೂ ಈಗ ಅಷ್ಟು ಅನ್ಯೋನ್ಯವಿಲ್ಲ. ಬ್ರಿಟಿಷರ ಆಳ್ವಿಕೆಯ ವಿಷಯದಲ್ಲಿ ಜರ್ಮನಿಯ ಪತ್ರಿಕಾ ಕರ್ತರು ಪ್ರತಿಯೊಂದು ಕಾರ್ಯಕ್ಕೂ ಆಕ್ಷೇಪಣೆ ಮಾಡುವದು ಈಗ ಸ್ವಾಭಾವಿಕವಾಗಿದೆ. ಅವರ ಮಾತು ಹಾಗಿರಲಿ. ಇದೇ ದೇಶದಲ್ಲಿರುವವರು ತಮ್ಮ ಕಣ್ಣು ಮುಂದೆ ನಡೆಯುವ ಬ್ರಿಟಿಷರ ಆಳಿಕೆಯ ವಿಷಯದಲ್ಲಿ ಜರ್ಮನಿಯವರು ಹೇಳುವದೆಲ್ಲಾ ನಿಜವೋ ಸುಳ್ಳೋ ಎಂದು ಇತರರ ಸಹಾಯವಿಲ್ಲದೆ ಪರೀಕ್ಷಿಸಿ ಯಥಾರ್ಥವಾದ ಸಂಗತಿಯನ್ನು ತಿಳುಕೊಳ್ಳುವದಕ್ಕೆ ಅಭ್ಯಂತರವೇನೂ ಇಲ್ಲವಲ್ಲ!—ಎಡಿ.

◆◆◆◆

### ಪರಸ್ಪರ ಸಹಾಯ.

ಅಯ್ಯಾ,

ನನ್ನ ಮಗಳಾದ ಸೀತಮ್ಮನಿಗೆ ಪ್ಲೇಗ್ ಕಾಣಿಸಿಕೊಂಡು ಮೃತಪಟ್ಟಳು. ಮಧ್ಯಾಹ್ನ ೩ ಗಂಟೆವರೆಗೂ ಕಾಪರೂ ಯಾರೂ ಪತ್ತರವೇ ಬಾರದೆ ಹೋದ್ದರಿಂದ ನಾನೂ ನನ್ನ ಹೆಂಡತಿಯೂ ಶವವನ್ನು ಕಟ್ಟಿ ಹೊತ್ತುಕೊಂಡು ಹೋಗಿ ದಹನ ಮಾಡಿ ಬಂದೆವು. ಬ್ರಾಹ್ಮಣರು ಈ ಊರಲ್ಲಿ ಅನೇಕರಿದ್ದರೂ ಒಬ್ಬರಾದರೂ ಸಹಾಯ ಮಾಡದೆ ಹೋದರಲ್ಲಾ ಎಂದು ದುಃಖಪಡುತ್ತೇನೆ.

ಪಳ್ಳೂರು. ಗುಂಡಪ್ಪ.

[ಜನರು ಒಬ್ಬರಿಗೊಬ್ಬರು ಸಹಾಯಕರಾಗದೇ ಇರುವದು ತುಂಬಾ ದುಃಖಕರವೇ ಸರಿ. ಹೀಗಾಗುವದು ಸರ್ವಥಾ ಯೋಗ್ಯವಲ್ಲ. ಕಷ್ಟಕಾಲದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡಬೇಕಾದದ್ದೇ ಧರ್ಮ.—ಎಡಿ.]

◆◆◆◆

### ಚಿತ್ರದುರ್ಗದ ಸ್ಕೂಲು.

ಅಯ್ಯಾ,

ಈ ಸ್ಕೂಲಿನಲ್ಲಿ ಇಂಗ್ಲೀಷ್ ಸಾಲ್ಕನೆ ಕ್ಲಾಸಿನಲ್ಲಿ ವ್ಯಾಸಂಗ ಮಾಡುತ್ತಿರುವ ಪಾಳ್ಯಗಾರರ ಪುರಕೇರಿ ಎಂಬುವನಿಗೆ ಗವರ್ನಮೆಂಟಿನಿಂದ ತಿಂಗಳು ಒಂದಕ್ಕೆ ೩ ರೂಪಾಯಿ ಪ್ರಕಾರ ವೇತನ ಕೊಡುತ್ತಾರೆ. ಈ ಬಾಬತು ಇವನ ಸಂಬಳ ೬ ತಿಂಗಳದು ಇಲ್ಲಿಯ ಸ್ಕೂಲ್ ಹೆಡ್ಮಾಸ್ಟರ್ ಎಂ. ಬಿ. ಕೃಷ್ಣರಾಯರ ಸ್ವಾಧೀನದಲ್ಲಿಯೇ ಇತ್ತು. ಸದರಿ ದುಡ್ಡನ್ನು ಇವರು ಆ ಹುಡುಗನಿಗೆ ಪಾವತಿ ಮಾಡಿದೆನೆಂದು ಅವನ ರುಜುವಿಗೆ ಸೈನ್ ಮಾಡಿ ದುಡ್ಡನ್ನು ಎತ್ತಿಹಾಕಿ ತಿಂದಿದ್ದರಿಂದ ಅದು ಮೆ॥ ಛಾಪಾ ಸಾಹೇಬರವರಿಗೂ ತಿಳಿದು ಜೆ: ಮೆ: ಎಂ. ಬಿ. ಕೃಷ್ಣರಾಯರಿಗೆ ೩ ತಿಂಗಳ ಸಸ್ಪೆಂಟ್ ಆಗಿರುತ್ತೆ. ನೋಡಿ ಇದು ಎಂಥಾ ಮರ್ಯಾದೆ ಕೆಲಸ? ತಾವು ಸ್ವಲ್ಪ ಯೋಚಿಸಬೇಕಾಗಿರುತ್ತೆ. ಬಿ. ಸ.

[ಇದು ನಿಜವಾಗಿದ್ದರೆ ಶಿಕ್ಷೆ ಕೊಟ್ಟಿರುವದು ಸಾಕೇ ಎಂಬ ಅನುಮಾನ ಉಂಟಾಗಿದೆ.—ಎಡಿ.]

◆◆◆◆

### ಶರಾಬ್ ಕಳ್ಳಭಟ್ಟಿ ಪತ್ತೆ.

ಅಯ್ಯಾ,

ಪಾವಗಡದ ತಾಲ್ಲೂಕಿಗೆ ಸೇರಿದ ಕುಂಫಣಿ ಸರಹದ್ದಿನಲ್ಲಿರುವ ಗುಮ್ಮಗಟ್ಟೆ ಗ್ರಾಮದಲ್ಲಿ ದೇವಾಂಗದ ಸರಸುಂಗ್ಯಯು, ಈತನ ಚಿಕ್ಕಮ್ಮ ಸಂಜೀವಮ್ಮ, ಇವರ ರಾಜಮರ್ಯಾದೆಯಾದ ಈ ವ್ಯಾಪಾರವನ್ನು ಬಹು ಗುಪ್ತವಾಗಿ ಮಾಡುತ್ತಿದ್ದರು. ಈ ಗುಮ್ಮಗಟ್ಟೆ ಗ್ರಾಮದಲ್ಲಿ ಕುಡಿಯುವ ಜನರು ಬಹಳವಿದ್ದಾರೆ. ಹೀಗಿದ್ದಾಗ್ಯೂ ಸಮೀಪದಲ್ಲಾಗಿರುವ ಪರಾಬ್ ಅಂಗಡಿಯಲ್ಲಿ ಕ್ರಮೇಣ ಬಿಕ್ರಿ ಕಡಿಮೆಯಾಗುತ್ತಾ ಬಹು ಲುಕ್ಸಾನಿಗೆ ಕಾರಣವಾದದ್ದನ್ನು ಮಧುಗಿರಿ ಇನ್ಸ್‌ಪೆಕ್ಟರ್ ರಾಮರಾಯರು ಆಲೋಚಿಸಿ, ಎಲ್ಲಿಯೋ ಒಂದು ಗುಪ್ತವಾದ ಮದ್ಯಪಾನಸ್ಥಳವಿರಬೇಕೆಂದು ಊಹಿಸಿ, ಪತ್ತೆ ಹರದಾರರನ್ನು ಬಹು ಚಟುವಟಿಕೆಯಿಂದ ನಡಿಸಿದ್ದರ ಮೇಲೆ ದೇಲ್ಲಿಂಗನವರ ಮನೆಯೇ ಸದರಿ ಕೋಟೆಯ ಸ್ಥಳವೆಂದು ಗೊತ್ತಾಯಿತು. ಸದರಿ ರಾಮರಾಯರು, ಇವರ ಸಹಾಯಕ್ಕೆ ಪಾವಗಡದ ಇನ್ಸ್‌ಪೆಕ್ಟರ್ ಕೃಷ್ಣರಾಯರು, ಮಧುಗಿರಿ ಇನ್ಸ್‌ಪೆಕ್ಟರ್ ಸೀತಾರಾಮಯ್ಯರು ಇವರುಗಳ ಕೈಕೆಳಗಿನ ಬೇರೆ ನೌಕರರು ಸಹಾ ಬಹು ಸಾಹಸಮಾಡಿ, ಸದರಿ ಮನೆಯನ್ನು ಜಪ್ತಿ ಮಾಡಿದಾಗ ಶರಾಬ್ ಇಳಿಸುವ ಕಳ್ಳಭಟ್ಟಿ ತಯಾರ್ ಮಾಡಬೇಕಾದ ಸುಮಾರು ೫-೬ ಹರಿವೆ ಬೆಲ್ಲ ಬಾನಕ ನೆನೆ ಹಾಕಿ ಸಿದ್ಧವಾಗಿದ್ದದ್ದು ಅದಕ್ಕೆ ಅನುಕೂಲವಾದ ಎಲ್ಲಾ ಪದಾರ್ಥಗಳೂ ಸಿಕ್ಕಿದವು. ಸದರಿ ಮೊಕದ್ದಮೆಯನ್ನು ಪಾವಗಡದ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆ ಮಾಡಿಸಿದ್ದರ ಮೇಲೆ ಅಪರಾಧಿಗಳಿಗೆ ಚಾರ್ಜಾಗಿ ಜಡ್ಜ್‌ಮೆಂಟಿಗೆ ಇಟ್ಟಿರುತ್ತೆ.

ವಿದ್ಯಕ್ಷಪಾತಿ.

◆◆◆◆

### ಗಂಡಸೀ ಸಂತೆ ಅಭಿವೃದ್ಧಿಗೆ ಬಂದಿರುವದು.

ಅಯ್ಯಾ,

ಈ ಗಂಡಸೀ ಸಂತೆಯು ಹೊಸದಾಗಿ ೧೯೦೨ನೇ ಇಸವಿ ಅಕ್ಟೋಬರು ತಾರೀಖು ೨ನೇ ಗುರುವಾರದಿಂದ ಪ್ರತಿಗುರುವಾರ ಸಂತೆಯಾಗಲು ಗೌವರ್ನಮೆಂಟಿನವರ ಆರ್ಡರ್ ಪ್ರಕಾರ ಈ ಸಂತೆಯು ಪ್ರತಿ ವಾರಕ್ಕೂ ವರ್ತಕಜನ ಸಮೂಹವು ಅನೇಕ ಗಾಡಿಗಳು ಸೇರಿ ಸಂಪೂರ್ಣವಾಗಿ ವ್ಯಾಪಾರವು ನಡಿಯುತ್ತಾ ಬಂದಿರುತ್ತೆ. ಈ ಸಂತೆಗೆ ನಾಗಮಂಗಲ, ಶ್ರೀರಂಗಪಟ್ಟಣ, ಕೃಷ್ಣರಾಜಪೇಟೆ, ಹೊಳೆನರಸೀಪುರ, ಎಡತೊರೆ ಮೊದಲಾಗಿ ಇನ್ನೂ ಇತರ ಕಡೆಗಳಿಂದ ಹೋರಿಗಳು ಬಿಕರಿಗೆ ಕೂಡುವದರಿಂದಲೂ, ಕೊಳ್ಳತಕ್ಕವರು ಹರಿಹರ, ಹುಬ್ಬಳ್ಳಿ, ಧಾವಣಗೆರೆ, ಹಾವೇರಿ ಮೊದಲಾಗಿ ಇನ್ನೂ ಉತ್ತರದೇಶದ ಕಡೆ ಗಿರಾಕಿಗಳು ಸೇರುವದರಿಂದಲೂ, ಸುಮಾರು ಎರಡು ಮೂರು ಸಾವಿರ ರೂಪಾಯಿನ ವರಿಗೆ ಹೋರಿವ್ಯಾಪಾರ ಒಂದೇ ನಡಿಯುತ್ತೆ. ಈ ಸಂತೆಯಲ್ಲಿ ಕಣ್ಣಿಗೆಬೇಕಾದ ತರಹವಾರ್ ಹೋರಿಗಳನ್ನು ಕೊಂಡು ಬಹು ಫಾಯಿದೆಯನ್ನು ಹೊಂದಬಹುದು. ಈ ನಮ್ಮ ಹಾಸನ ಡಿಸ್ಟ್ರಿಕ್ಟಿನಲ್ಲಿ ಈ ಸಂತೆ ವಿನಹಾ ಬೇರೆ ಯಾವ ಸಂತೆಯಲ್ಲಿಯೂ ಇಷ್ಟರಮಟ್ಟಿಗೆ ಹೋರಿಗಳ ವ್ಯಾಪಾರ ನಡಿಯುವದಿಲ್ಲ.

ಈ ಸಂತೆಗೆ ಹಾಸನ, ತಿಪ್ಟೂರು ಅರಸೀಕೆರೆ, ಚನ್ನರಾಯಪಟ್ಟಣ, ವಗೈರೆ ಇತರೇ ಸ್ಥಳಗಳಿಂದ ಬಿಕರಿ ಮಾಡುವ ಮತ್ತು ಕೊಳ್ಳುವ ವರ್ತಕರು ಸೇರುವದರಿಂದ ಸಂತೆಯು ಬಹು ಜೋರಾಗಿ ರಾಗಿ, ಅವರೆ, ಹುರುಳಿ, ತೊಗರಿ, ಅಕ್ಕಿ, ಕೊಬ್ಬರಿ, ತೆಂಗಿನಕಾಯಿ, ಬಾಳೆಕಾಯಿ, ಕಬ್ಬಿಣಸಾಮಾನು ವಗೈರೆ ದಿನಸುಗಳಿಂದ ಎರಡು ಸಾವಿರ ರೂಪಾಯಿನ ವೈವಾಟು ನಡಿಯುತ್ತೆ. ಅಂತು ಈ ಸಂತೆಯಲ್ಲಿ ಸುಮಾರಾಗಿ ಪ್ರತಿಗುರುವಾರದಲ್ಲೂ ಐದುಸಾವಿರ ರೂಪಾಯಿವರೆಗೆ ವೈವಾಟು ನಡಿಯುತ್ತದೆಂದು ಈ ಹೋಬಳಿ ಶೇಕದಾರರು, ಶ್ಯಾನುಭೋಗರು, ಪಟೇಲರು ಅಂದಾಜುಮಾಡಿದ್ದಾರೆ. ಈ ಸಂತೆಯನ್ನು ನಡಿಸುವದಕ್ಕೆ ಪರೋಪಕಾರದಲ್ಲಿ ಪ್ರೀತಿಯಿಟ್ಟು ಮುಖ್ಯ ಉದ್ದೇಶಿಸಲ್ಪಟ್ಟ ಮೆ॥ ರಾ॥ ಹುಲಿಗಿಲ್ಹಾಡಿ ಮುದ್ದೇಗೌಡರ ಮಕ್ಕಳು ರಂಗೇಗೌಡರು ಈ ಸಂತೆಯಾಗತಕ್ಕ ಮೈದಾನದಲ್ಲಿ ಜನ ಪಶುಗಳಿಗೆ ನೆರಳಿಗೆ ಅನುಕೂಲ ಮಾಡಬೇಕೆಂದು ಬಹಳ ಮುನ್ನೂರು ನಾಲ್ಕು ನೂರು ಸಸಿಗಳನ್ನು ಹಾಕಿಸಿರುವದು ಮುಂದೆ ವರ್ಷ ಆಧವ ವರ್ಷದೊಳಗೆಯಲ್ಲಿಯೇ ನೆರಳಾಗುತ್ತೆ. ಈ ರಂಗೇಗೌಡರು ಇದೇ ಸ್ಥಳದಲ್ಲಿ ನೀರಿನ ಮಸತಿಗೆ ಒಂದೂವರೆ ಸಾವಿರ ರೂಪಾಯಿ ಖರ್ಚುಮಾಡಿ ಭಾವಿಯಾಗಿ ಅಂದರೆ ಬೇಸಿಗೆಯಲ್ಲಿ ನೀರಿನ ಕ್ಷಾಮ ಬಾರದಂತೆ ಕಟ್ಟಬೇಕೆಂದು ಅಂದಾಜು ಮಾಡಿಕೊಂಡಿದಾರೆ. ಇವರ ಈ ಪ್ರಯತ್ನವನ್ನೇ ಬೇಡಿಸಲು ಗಂಡಸೀ ದೇವೇಗೌಡರು, ಹುಲಿಗಿಲ್ಹಾಡಿ ಪಟೇಲ್ ವೀರೇಗೌಡರು, ನಾಗರಹಳ್ಳಿ ಪಟೇಲ್ ಹನುಮೇಗೌಡರು, ಬಾಗಿನ ಕೆರೆ ಪಟೇಲ್ ಸಂಪೇಗೌಡರು, ಚನ್ನಾಪುರದ ಪಟೇಲ್ ಚಿಕ್ಕೇಗೌಡರು, ಹೊನ್ನಮಾರ್ನಹಳ್ಳಿ ಕೆಂಪೇಗೌಡರು, ಬಾಚೇನಹಳ್ಳಿ ಕುರಿಲಿಂಗೇಗೌಡರು, ಇನ್ನೂ ಬಾಗುವಾಳು ಮರಿಲಿಂಗೇಗೌಡರು ಮೊದಲಾದ ಅನೇಕ ಜನ ಗೌಡರುಗಳು ಬಂದು ಹಾಕುತ್ತೇವೆಂದು ವಾಗ್ದಾನ ಮಾಡಿದಾರೆ. ಈ ಕೆಲಸವನ್ನು ಮುಂಗಾರು ಮಳೆ ಬಿದ್ದ ಕೂಡಲೆ ಪ್ರಾರಂಭಿಸಬಹುದು. ಈಗ ಬೇಸಿಗೆ ಕಾಲವಾದ್ದರಿಂದ ಈ ಸಂತೆಗೆ ಬರತಕ್ಕ ಜನಗಳ ದಾಹಶಾಂತಿಗಾಗಿ ಕಾಫಿ ಎಂಟು ವಾರದಿಂದಲೂ ಮೆ॥ ಗಂಡಸೀ ಸ್ಕೂಲ್ಮಾಸ್ಟರ್ ವೆಂಕಟಸುಬ್ಬಯ್ಯನವರು, ಹೆಗ್ಗಡ ಸಂಬುಂಡಪ್ಪರು, ಹೆಗ್ಗಡೆದೇವನಕೋಟೆ ಸಂಜ ಎಯ್ಯನವರು, ಕೊಂಡೇನಾಳು ಸಾವಕಾರ್ ವೆಂಕಟರಾಮಯ್ಯನವರು ಸೇರಿ ಒಂದು ಕಡೆಯಲ್ಲಿಯೂ, ಮೂಡೀಮನೆ ಸಾಹುಕಾರ್ ರುದ್ರಶೆಟ್ಟಿ, ಗರುಡೀಮನೆ ಶೆಟ್ಟಿ ಸಂಜಪ್ಪನವರು ಸೇರಿ ಒಂದು ಕಡೆಯಲ್ಲಿಯೂ, ನಾಗರಹಳ್ಳಿ ಪಟೇಲ್ ಕೆಂಪೇಗೌಡರು, ಧಂಡೀ ಚಿಕ್ಕೇಗೌಡರ ಮಗ ಹನುಮೇಗೌಡರು ಸೇರಿ ಒಂದು ಕಡೆಯಲ್ಲಿಯೂ ದಾತ ಲಾಗಾಯ್ತಿನಿಂದ ಪ್ರತ್ಯೇಕವಾಗಿ ಮೂರು ಅರವಟ್ಟಿಗೆಗಳನ್ನು ಇಡಿಸಿ ಸಮಸ್ತ ಜನಗಳಿಗೂ ದಾಹಶಾಂತಿಗೆ ಹಿತವಾದ ನೀರು ಮಜ್ಜಿಗೆ ಪಾನಕವನ್ನು ಕೊಡಿಸುತ್ತಾ ಇದಾರೆ. ಮುಂದೆ ಈ ಬೇಸಿಗೆ ದಿವಸ ತೀರುವವರೆಗೂ ಈ ಧರ್ಮಕಲಸವನ್ನು ಇವರೆಂದಿಗೂ ಬಿಡಲಾರರೆಂದು ನಂಬಿದ್ದೇನೆ. ಹೀಗಿರುವ ಈ ಸಂತೆಯಲ್ಲಿ ಪೋಲೀಸಿನವರ ಬಂದೋಬಸ್ತಾದ ತುಂಬಾ ನಡಿಯುವ ವಿಷಯದಲ್ಲಿ ಈಗ ಈ ಸ್ಥಳದಲ್ಲಿಗೆ ಪರ್ಗಣಪಟ್ಟ ಬಂದಿರತಕ್ಕ ಮೆ॥ ವೆಂಕಟರಾಮಯ್ಯನವರು ಇನ್ನೂ ಹೆಚ್ಚು ಗಮನಕೊಟ್ಟು ಪ್ರಕಾರಗಳಿಲ್ಲದಂತೆ ಏರ್ಪಾಡು ಮಾಡುತ್ತಾರೆಂದು ನಂಬಿದ್ದೇನೆ.

ನ.

ಜರ್ಮನಿಯ ಚಕ್ರವರ್ತಿಯವರು ಡೆನ್ಮಾರ್ಕಿಗೆ ದಯಮಾಡಿ ದೊರೆಯವರ ಅತಿಥಿಗಳಾಗಿರುತ್ತಾರೆ. ಪ್ರಜೆಗಳು ಚಕ್ರವರ್ತಿಯವರಿಗೆ ಜಯಘೋಷಗಳೊಡನೆ ಸುಖಾಗಮನವನ್ನು ಬಯಸಿದರು.

◆◆◆◆

ರಷ್ಯಾ ರಾಜ್ಯದಲ್ಲಿ ದೊಡ್ಡಪಟ್ಟಣವೆನಿಸಿಕೊಂಡಿರುವ ನಿಜನಿ ನೋಗರಾಡಿನಲ್ಲಿ ಕೂಲೀ ಜನರು ದಂಗೆ ಎದ್ದು ಬಹಳ ಗಲಭೆ ಮಾಡಿದ್ದರಿಂದ ಸೋಜರುಗಳು ಅವರಮೇಲೆ ಫಿರಂಗಿಗಳನ್ನು ಎತ್ತಿಕಟ್ಟಿ ಹೊಡೆದರು. ಏಕದಂ ೧೩೦ ಜನರು ಸತ್ತುಬಿದ್ದರು, ಇಲ್ಲವೇ ಗಾಯಪಟ್ಟರು.

◆◆◆◆

ಸೋಮಾಲಿಲಾಂಡಿನಲ್ಲಿ ಇನ್ನೊಂದು ಕಡೆ ಕರ್ನಲ್ ಕಾಬ್ಬೆಯವರ ಸೈನಿಕರು ಮುಲ್ಲಾನಿನ ಕಡೆಯವರ ಮೇಲೆ ಯುದ್ಧ ಮಾಡಿದರು. ಮುಲ್ಲಾನಿನ ಕಡೆಯವರಲ್ಲಿ ೧೯೮ ಜನರನ್ನು ಕೊಂದು, ಅವರ ಬಳಿ ಸಿಕ್ಕಿದ ೨,೦೦೦ ಒಂಟೆಗಳನ್ನೂ ೬,೦೦೦ ಕುರಿಗಳನ್ನೂ ಹಿಡಿದುಕೊಂಡು ಬಂದರು.

◆◆◆◆

ಯುದ್ಧಕ್ಕೆ ಮೊದಲು ಟ್ರಾನ್ಸ್‌ವಾಲ್ ರಾಜ್ಯದಲ್ಲಿ ಸರ್ಕಾರಿ ಅಧಿಕಾರಿಗಳಾಗಿದ್ದ ದೊಡ್ಡಮನುಷ್ಯರೆಲ್ಲಾ ಈಗಿನ ಗವರ್ನ್‌ಮೆಂಟಿಗೆ ತಮ್ಮ ಸ್ಥಿತಿಗತಿಗಳನ್ನು ಕುರಿತು ಅರ್ಜಿ ಬರೆದುಕೊಳ್ಳಬಹುದೆಂತಲೂ, ಯೋಗ್ಯರಾಗಿ ಕಂಡುಬರುವವರಿಗೆ ಪುನಃ ಸರ್ಕಾರಿ ನೌಕರಿ ಕೊಡಲ್ಪಡುವದೆಂತಲೂ ಗವರ್ನ್‌ಮೆಂಟಿನವರು ಸಾರಿಸಿರುತ್ತಾರೆ.

◆◆◆◆

ವಿಲಾಯತಿಯ ಮಹಾರಾಜರ ಚಕ್ರವರ್ತಿಯವರು ಪೋರ್ಚುಗಲ್ ರಾಜ್ಯಕ್ಕೆ ದಯಮಾಡಿ,—ಅಲ್ಲಿನ ದೊರೆಯವರ ಅತಿಥಿಗಳಾಗಿ ೪—೬ ದಿನಗಳಿದ್ದು ಅಲ್ಲಿಂದ ಇಟಲಿಯಲ್ಲಿರುವ ರೋಂ ನಗರಕ್ಕೆ ಹೊರಟಿರಾರೆಂತಲೂ, ತರುವಾಯ ಫ್ರಾನ್ಸಿಗೆ ಬಂದು ಅಲ್ಲಿನ ಪ್ರಸಿಡೆಂಟರ ಆತಿಥ್ಯವನ್ನು ಸ್ವೀಕರಿಸಿ, ಹಿಂತಿರುಗಿ ವಿಲಾಯತಿಗೆ ಪ್ರಯಾಣ ಮಾಡುವವರಾಗಿದ್ದಾರೆಂತಲೂ ಸಮಾಚಾರವಿದೆ.

◆◆◆◆

ಆಫ್ರಿಕಕ್ಕೆ ಸೇರಿದ ನೈಗೀರಿಯಾ ದೇಶವು ಈಗತಾನೇ ಇಂಗ್ಲಿಷರ ಸ್ವಾಧೀನಕ್ಕೆ ಬಂತು. ಅದರ ರಾಜಧಾನಿಯಾದ ಸೊಕೊಟೊ ನಗರವು ಇಂಗ್ಲಿಷರ ವಶವಾಯಿತು. ಆ ದೇಶವು ಐದು ಲಕ್ಷ ಚದರ ಮೈಲಿ ವಿಸ್ತಾರವುಳ್ಳದ್ದಾಗಿದೆ; ಎರಡು ಕೋಟಿ ಪ್ರಜಾ ಸಂಖ್ಯೆಯನ್ನೊಳಗೊಂಡಿದೆ. ಒಂದುನೂರು ವರುಷಗಳಿಂದ ಸ್ವತಂತ್ರವಾಗಿದ್ದದ್ದಕ್ಕೆ ಈಗ ಈ ದೇಶವು ಇಂಗ್ಲಿಷರ ಸ್ವಾಸ್ಥ್ಯವಾಗಿರುತ್ತದೆ.

◆◆◆◆

ಸೊಫ್ರಿಯರ್ ಎಂಬ ಅಗ್ನಿ ಪರ್ವತದಿಂದ ಎರಚಲ್ಪಟ್ಟ ಬೂದಿಯು ಒಂದು ಡಿಸ್ಟ್ರಿಕ್ಟಿನಲ್ಲಿ ಎರಡೂವರೆ ಕೋಟಿ ಟನ್ನುಗಳ ಭಾರದಷ್ಟು ಬಿದ್ದಿದೆ. ಕಳೆದ ಎಂಟು ತಿಂಗಳಿಂದಲೂ ಅಗ್ನಿಯೂ ಬೂದಿ ಮುಂತಾದ್ದೂ ಈ ಪರ್ವತದಿಂದ ಸುರಿಯುತ್ತಿರುವದರಿಂದ ಅನೇಕ ಹೊಸ ಬದಲಾವಣೆಗಳುಂಟಾಗಿರುವವು. ಪರ್ವತದ ತಪ್ಪಲೆಲ್ಲಾ ಕರಗಿ ಹೋಯಿತು. ಈಗಲೂ ಅಗ್ನಿ ಕಾರುವದು ಹೆಚ್ಚಾಗಿದೆ.

◆◆◆◆

ಮೊದಲು ಹಿಂದುಸ್ಥಾನದ ವೈಸರಾಯಿ ಪದವಿಯಲ್ಲಿದ್ದು ವಿಲಾಯತಿಗೆ ಹೋಗಿರುವ ಲಾರ್ಡ್ ನಾರ್ತ್‌ಬ್ರೂಕ್‌ಯವರು ವಿಕ್ಟೋರಿಯಾ ಚಕ್ರವರ್ತಿನಿಯವರ ಜ್ಞಾಪಕಾರ್ಥವಾಗಿ ಲೀ ಎಂಬ ಪಟ್ಟಣದಲ್ಲಿ ತಮಗೆ ಸೇರಿರುವ ಏಳು ಎಕರೆ ಜಮೀನನ್ನು ಉದ್ಯಾನವನಕ್ಕೋಸ್ಕರ ಬಿಟ್ಟುಕೊಟ್ಟಿದ್ದಾರೆ. ಈ ಜಮೀನಿನಲ್ಲಿ ಹುಡುಗರೂ ಹುಡುಗಿಯರೂ ನಾನಾತರದ ಅಂಗಸಾಧನೆಗಳನ್ನೂ ಆಟಗಳನ್ನೂ ಆಡುವದಕ್ಕೆ ಅನುಕೂಲ ತುಂಬಾ ಇರುವದು.

◆◆◆◆

ಸೋಮಾಲಿಲಾಂಡಿನಲ್ಲಿ ಇಂಗ್ಲಿಷ್ ಸೈನಿಕರಿಗೂ ಮುಲ್ಲಾನಿನ ಕಡೆಯವರಿಗೂ ಒಂದು ಯುದ್ಧವಾಯಿತು. ಇಂಗ್ಲಿಷರು ೪೦ ಮಂದಿ ಶತ್ರುಗಳನ್ನು ಕೊಂದು, ಅವರ ಬಳಿ ಇದ್ದ ೧,೨೦೦ ಒಂಟೆಗಳನ್ನೂ ೨,೪೦೦ ಕುರಿಗಳನ್ನೂ ಅಟ್ಟಿಕೊಂಡು ಬಂದಿದ್ದಾರೆ. ಆ ಪ್ರಾಂತ್ಯ ಮಳೆಗಾಲ ಪ್ರಾರಂಭವಾಗುವಂತಿದೆ. ಗೋಲೋಟಿಲ್ ಎಂಬಲ್ಲಿ ಇಂಗ್ಲಿಷರು ಒಂದು ಕೋಟೆಯನ್ನು ಕಟ್ಟುತ್ತಿದ್ದಾರೆ. ಮುಲ್ಲಾನಿನ ಕಡೆ ಜನರು ಗಾಲಾಡಿ ಎಂಬ ಸ್ಥಳದಲ್ಲಿ ಸೇರಿ ಇದ್ದಾರೆಂತಲೂ, ಆ ಸ್ಥಳದಲ್ಲಿ ಇಷ್ಟರೊಳಗೇ ಒಂದು ದೊಡ್ಡ ಯುದ್ಧವಾಗಬಹುದೆಂತಲೂ ನಿರೀಕ್ಷಿಸಲ್ಪಟ್ಟಿದೆ.

◆◆◆◆

ಬೆಲ್ಜಿಯಂ ರಾಜ್ಯದಲ್ಲಿ ಜೊಮಪ್ ಎಂಬೊಂದು ಸಣ್ಣ ಪಟ್ಟಣವಿದೆ. ಈ ಪಟ್ಟಣವು ತನ್ನಲ್ಲಿ ಜನತನವಿರಕೂಡದೆಂದು ನಿಶ್ಚಯಿಸಿ, ಅದನ್ನು ಪ್ರೋತ್ಸಾಹನೆ ಮಾಡುವ ಪ್ರಯತ್ನದಲ್ಲಿದೆ. ಊರಿನಲ್ಲಿ ಹೊಸದಾಗಿ ಒಂದು ಮಗು ಹುಟ್ಟಿತೆಂದು ತಿಳಿದುಬಂದ ಕೂಡಲೇ ಪುರಾಧಿಕಾರಿಗಳು ಆ ಮಗುವಿನ ಹೆಸರಿನಲ್ಲಿ ಬ್ಯಾಂಕಿಗೆ ೨೦ ರೂಪಾಯಿ ಧನವು ಹಾಕುವರು. ಮಗುವು ಬೆಳೆದ ಹಾಗೆಲ್ಲಾ ಬ್ಯಾಂಕಿನಲ್ಲಿ ಆ ಧನವೂ ಬೆಳೆಯುತ್ತಾ ಬರುವದು. ಮಗುವು ಪ್ರಾಯಸ್ಥನಾದ ನಂತರ ಈ ಹಣ ದೊರಕುತ್ತದೆ. ಆದರಿಂದ ಅವನು ಯಾವುದಾದರೂ ಉದ್ಯೋಗ ಹಿಡಿದು ವೃದ್ಧಿಗೆ ಬರುವನು.

◆◆◆◆

ಲಂಡನ್ ಪಟ್ಟಣದಲ್ಲಿ ಚಿತ್ರ ವಿಚಿತ್ರವಾದ ಪ್ರಾಣಿಗಳನ್ನೆಲ್ಲಾ ಒಂದು ಉದ್ಯಾನವನದಲ್ಲಿ ಇಟ್ಟು ಸಾಕುತ್ತಾರೆ. ಅಲ್ಲಿದ್ದ ಒಂದು ದೊಡ್ಡ ಆನೆಯನ್ನು ಅಮೇರಿಕೆಗೆ ತೆಗೆದುಕೊಂಡು ಹೋಗಬೇಕೆಂದು ಕೊಂಡುಕೊಂಡರು. ಅದರ ಕ್ರಯ ೧,೨೧,೦೦೦ ರೂಪಾಯಿ. ಅದನ್ನು ಜಹಜಿನ ಮೇಲೆ ಸಾಗಿಸಿಕೊಂಡು ಹೋಗುತ್ತಿರುವಾಗ್ಯೆ ಆನೆಗೆ ಖಾಯಿಲೆ ಹಿಡಿದು ನಡುದಾರಿಯಲ್ಲೇ ಮೃತಪಟ್ಟಿತು. ಅದನ್ನು ಬದುಕಿಸಬೇಕೆಂದು ತುಂಬಾ ಚಿಕಿತ್ಸೆ ಮಾಡಿದರೂ ಪ್ರಯೋಜನವಾಗಲಿಲ್ಲ. ಅದರ ಸಂಗಡ ಮೇಲ್ಕಂಡ ತೋಟದಲ್ಲಿ ಇನ್ನೊಂದು ಆನೆ ಇತ್ತು. ಅದು ಸ್ನೇಹಿತನನ್ನು ಬಿಟ್ಟು ಹೋಗಬೇಕಾಯಿತಲ್ಲಾ ಎಂದು ಕೊರಗಿ ಪ್ರಾಣಬಿಟ್ಟಿತೆಂದು ಹೇಳುತ್ತಾರೆ.

◆◆◆◆

ಆಫ್ರಿಕದ ಉತ್ತರ ಭಾಗದಲ್ಲಿರುವ ಆಲ್ಜೀರಿಯಾ ದೇಶದ ಸಮುದ್ರ ತೀರದಲ್ಲಿ ಬಹಳ ಸುಂದರವಾದ ಹವಳಗಳು ವಿಪರೀತವಾಗಿ ಸಿಕ್ಕುತ್ತವೆ. ಕಳೆದ ೧೬ನೆ ಶತಮಾನದಿಂದಲೂ ಅಲ್ಲಿ ಹವಳವನ್ನು ತೆಗೆಯುತ್ತಲೇ ಇದಾರೆ. ಸಿಸಿಲಿ, ಕಾರ್ಸಿಕಾ, ಸಾರ್ಡಿನಿಯಾ, ಸ್ಪೆಯಿನ್ ಮುಂತಾದ ಕಡೆಗಳಲ್ಲೂ ಹವಳ ಸಿಕ್ಕುವದು. ಸುಮಾರು ೪,೨೦೦ ಜನರು ೫೦೦ ಹಡಗುಗಳನ್ನಿಟ್ಟುಕೊಂಡು ಹವಳವನ್ನು ತೆಗೆಯುವರು. ಇಟಲಿ ದೇಶದಲ್ಲಿ ಹವಳಗಳ ತಯಾರಿಗಾಗಿ ೬೦ ದೊಡ್ಡ ಕಾರ್ಖಾನೆಗಳಿರುವವು. ಈ ಕಾರ್ಖಾನೆಗಳಲ್ಲಿ ೬,೦೦೦ ಜನರು—ಹೆಂಗಸರು ಮಕ್ಕಳೇ ವಿಶೇಷ—ಕೆಲಸ ಮಾಡಿ ಜೀವನ ಸಂಪಾದಿಸಿಕೊಳ್ಳುತ್ತಿದಾರೆ.

---

## ತಾಲ್ಲೋಕು ವರ್ತಮಾನಗಳು.

ಬೇಲೂರು.—ಈ ಊರನಲ್ಲಿ ಸುಮಾರು ೧೫ ದಿವಸಗಳಿಂದ ನಡೆಯುತ್ತಿರುವ ರಥೋತ್ಸವ ಸಮ್ಬಂಧವಾದ ಉತ್ಸವಗಳನ್ನು ನೋಡಲು ಬೇರೆ ಬೇರೆ ಸ್ಥಳಗಳಿಂದ ಬಹುಮಂದಿ ಯಾತ್ರಾರ್ಥಿಗಳು ಬಂದು, ಅಲ್ಲಲ್ಲಿ ಇಳಿದುಕೊಂಡಿರುವದರಿಂದ, ಈ ಊರು ಕೋಟೆಯಲ್ಲಿ ಬಹು ಗಲೀಜಾಗಿರುವದು. ಇಂಥಾ ಜನಬಾಹುಳ್ಯ ಕಾಲದಲ್ಲಿ ಮ್ಯುನಿಸಿಪಾಲಿಟಿಯವರು ಹೆಚ್ಚು ಸಿಬ್ಬಂದಿಯನ್ನಿಟ್ಟು ಊರನ್ನು ಕ್ಷಣೇ ಕ್ಷಣೇ ಶುಚಿಮಾಡಿಸುವದಕ್ಕೆ ಬದಲಾಗಿ, ಇರತಕ್ಕ ಸ್ವೀಪರುಗಳಿಗೂ ರಜಾ ಕೊಟ್ಟಿರುವದು ಆಶ್ಚರ್ಯವಾಗಿದೆ.—ಹಳೇ ಬೀಡಿನ ಬಸ್ತಿ ಬಸ್ತಿ ಎಂಬ ಗ್ರಾಮದಲ್ಲಿರುವ ಶ್ರೀ ಆದಿನಾಥ ತೀರ್ಥಂಕರರ, ಶ್ರೀ ಶಾಂತಿನಾಥ ತೀರ್ಥಂಕರರ ವಿಗ್ರಹಗಳಿಗೆ ಬಹುಕಾಲದಿಂದಲೂ ಪೂಜೆ ನಿಂತುಹೋಗಿದ್ದದಲ್ಲದೆ, ಶ್ರೀ ಪಾರ್ಶ್ವನಾಥ ತೀರ್ಥಂಕರರ ವಿಗ್ರಹಕ್ಕೂ ಕಾರಣಾಂತರದಿಂದ ಈಚೆಗೆ ಪೂಜೆ ನಿಂತುಹೋಗಿತ್ತು. ತೋವಿನಕೆರೆ ಸಾಹುಕಾರ್ ನೇಮಿರಾಜಯ್ಯನವರೂ, ಆದಗೂರು ಇಂದ್ರನಗರದ ಪಾಯಣ್ಣನವರೂ ಸುಮಾರು ೬—೭ ಸಾವಿರ ರೂಪಾಯಿ ಖರ್ಚುಮಾಡಿ ಬಹು ವಿಜೃಂಭಣೆಯಿಂದ ಈ ಮೂರು ದೇವಾಲಯಗಳಲ್ಲಿಯೂ ಪಂಚಕಲ್ಯಾಣ ಮಹೋತ್ಸವಪೂರ್ವಕವಾಗಿ ಪ್ರತಿಷ್ಠೆ ಮಾಡಲು ಸಂಕಲ್ಪಿಸಿರುವರು.—ಈ ಊರಿನ ಜಾತ್ರೆಯಾರಂಭವಾಗಿ ಎಲ್ಲಾ ಉತ್ಸವಗಳು ಗಂಭೀರದಿಂದಲೂ, ವರ್ಷ ವರ್ಷ ನಡೆಯುವ ರೀತಿಯಲ್ಲಿಯೇ ನಡೆದವು. ಪ್ಲೇಗಿನ ಭೀತಿಯಿಂದ ಜನಗಳು ಹೆಚ್ಚಾಗಿ ಸೇರಲು ಅನಾನುಕೂಲವಾಯಿತು. ಹೆಚ್ಚು ಕಡಮೆ ಊರಿನ ಜನಗಳೆಲ್ಲಾ ಬಂದು ಸೇರಿದ್ದಾರೆ. ಇಲ್ಲಿನ ಪ್ಲೇಗ್ ಡಿಫೇಡಾರರು ತುಂಬಾ ಶ್ರಮೆ ತಕ್ಕೊಂಡು ಇನಾಕ್ಯುಲೇಷನ್ ಮಾಡುತ್ತಾ ಬರುತ್ತಾರೆ. ಇದಲ್ಲದೆ ಸುತ್ತುಮುತ್ತಿನ ಗ್ರಾಮಗಳಲ್ಲಿ ಸಹಾ ಇವರು ತುಂಬಾ ಮುತುವರ್ಜಿಯಿಂದ ಕೆಲಸ ಮಾಡಿರುತ್ತಾರೆ. ಈ ಊರಿನ ಮುನಿಸಿಪಾಲಿಟಿ ವಿಷಯ ತುಂಬಾ ವ್ಯಸನಕರವಾಗಿದೆ. ಪ್ರಾಯಃ ದಂತೆ ಕೋಟೆ ಮತ್ತು ಪೇಟೆಯ ಅನೇಕ ಸಂದು ಗೊಂದು ಗಳು ಮುನಿಸಿಪಾಲಿಟಿಯ ದರ್ಶನವಿಲ್ಲದೇ ಇವೆ. ಮತ್ತು ಈ ಊರಿನಲ್ಲಿ ಹೊಲೆಯರು ಮುನಿಸಿಪಲ್ ಜಾಡಮಾಲಿಗಳ ಕೆಲಸವನ್ನು ಮಾಡುತ್ತಾರೆ. ಸದರಿ ಜಾಡಮಾಲಿಗಳು ರಸ್ತೆಯಲ್ಲಿ ಹೇಸಿಗೆ ಮುಂತಾದ್ದನ್ನು ಕಂಡರೆ ಮಣ್ಣು ಹಾಕಿ ಮುಚ್ಚುತ್ತಾರೆ. ಚರಂಡಿಗಳಲ್ಲಿ ಗಲೀಜು ನೀರು ಮುಂತಾದ್ದನ್ನು ಗುಡಿಸುವದೇ ಇಲ್ಲ. ಇವರನ್ನು ನೀವು ಯಾಕೆ ಸರಿಯಾಗಿ ಶುದ್ಧಮಾಡುವುದಿಲ್ಲ ಎಂದು ಕೇಳಿದರೆ "ಅದೆಲ್ಲಾ ನಮ್ಮ ಕೆಲಸವಲ್ಲ; ಬರೀ ರಸ್ತೆ ಗುಡಿಸುವದೇ ನಮ್ಮ ಕೆಲಸ. ನಾವು ಚರಂಡಿ ಮತ್ತು ಹೇಸಿಗೆ ಮುಂತಾದ್ದನ್ನು ಶುದ್ಧ ಮಾಡಿದರೆ ನಮ್ಮನ್ನು ಜಾತಿಯಿಂದ ಹೊರಗೆ ಹಾಕುತ್ತಾರೆ" ಎಂದು ಹೇಳುತ್ತಾರೆ. ಇಂಥಾ ಜಾಡಮಾಲಿಗಳಿದ್ದರೆ ಊರಿನ ಪಾಕೀಜು ಎಷ್ಟರಮಟ್ಟಿಗಿರುತ್ತೋ ವಾಚಕರೇ ಊಹಿಸಬಹುದು. ಸರ್ಕಾರದವರು ಬಡ ಪ್ರಜೆಗಳ ಮೇಲೆ ದಯವಿಟ್ಟು ಈ ಜಾಡಮಾಲಿಗಳನ್ನು ತೆಗೆದು ಬೇರೆ ಕಡೆಯಿಂದ ತೋಟಿಗಳನ್ನು ಕರಿಸಿದರೆ ಉತ್ತಮ. ಇಲ್ಲದಿದ್ದರೆ ಊರಿನ ಸಂದುಗೊಂದುಗಳು ಯಥಾ ಪ್ರಕಾರ ನೀಸಿಗೆಯಿಂದಲೇ ತುಂಬಿರುತ್ತೆ. ಇದರಿಂದ ಜನಗಳಿಗೆ ಅರೋಗ್ಯ ಹಾನಿ ಜನಗಳಾದರೋ ಮುನಿಸಿಪಾಲಿಟಿಯ ಮೇಲೆ ಆತುಕೊಂಡು ಮುನಿಸಿಪಲ್ ಕಂದಾಯವನು ದಂಡವಾಗಿ ತೆರುತ್ತಾ ಇರುವರು. ತಪ್ಪೊ ಸತ ನಿರ್ವಾಹವಿಲ್ಲ. ಹೇಸಿಗೆಯನ್ನು ತಾವೇ ಶುದ್ಧಮಾಡಿಕೊಳ್ಳಬೇಕಾಗಿದೆ. ಹಾಗಾದರೆ ಮುನಿಸಿಪಾಲಿಟಿಯಿಂದ ಪ್ರಯೋಜನವೇನು? ಆದ್ದರಿಂದ ತಾಲ್ಲೋಕು ಅಧಿಕಾರಿಗಳು ಈ ವಿಷಯಕ್ಕೆ ತುಂಬಾ ಗಮನಕೊಡಬೇಕಾಗಿದೆ.—ಇಲ್ಲಿನ ಆಕ್ಟಿಂಗ್ ಹಾಸ್ಪಿಟಲ್ ಅಸಿಸ್ಟೆಂಟರಾದ ಮೇ॥ ಎ. ಎಲ್. ಮ್ಯಾನ್ಯುಯಲ್‌ರವರನ್ನು ಇಲ್ಲಿ ಖಾಯಂ ಮಾಡಬೇಕೆಂದು ಪ್ರಜೆಗಳು ಬರೆದುಕೊಂಡ ಅರ್ಜಿಗೆ ಸೀನಿಯರ್ ಸರ್ಜನರಿಂದ ಜವಾಬೇ ಇಲ್ಲದೆ ಇತ್ತು. ಇದರಮೇಲೆ ಪ್ರಜೆಗಳಲ್ಲಿ ಅನೇಕರು ಸೇರಿ ಟೆಲಿಗ್ರಾಂ ಕೊಟ್ಟರು. ಅದಕ್ಕೆ "ಅವರನ್ನು ಬೇಲೂರಿನಲ್ಲಿ ಖಾಯಂ ಮಾಡಲು ಆಗುವದಿಲ್ಲವೆಂದು ವ್ಯಸನಪಡುತ್ತೇವೆ" ಎಂಬದಾಗಿ ಜವಾಬು ಕೊಟ್ಟರು. ರೈತರ ಮತ್ತು ಜನಪ್ರಜೆಗಳ ಕೋರಿಕೆ ಎಷ್ಟುಮಾತ್ರ ನೆರವೇರಿಸುತ್ತಾರೆಂದು ಇದರಿಂದ ಗೊತ್ತಾಗುತ್ತೆ. ಇಂಥಾ ಗಾಸಿಪಾಲಿಗಳು ಇಲ್ಲಿ ಇಲ್ಲದೆ ಹೋಗುತ್ತಾರೆಂದು ತುಂಬಾ ವ್ಯಸನಪಡಬೇಕಾಗಿದೆ. ಜನಪ್ರಿಯರ ಮೇಲೆ ತುಂಬಾ ಪ್ರೀತಿಯುಳ್ಳವರಾದ ನಮ್ಮ ದಿವಾನರವರೂ ಈ ವಿಷಯಕ್ಕೆ ಗಮನ ಕೊಟ್ಟು ಪ್ರಜೆಗಳನ್ನು ಸಂತೋಷಪಡಿಸ್ಯಾರೆಂದು ಹಾರೈಸುತ್ತೇವೆ.

ಚನ್ನಪಟ್ಟಣ:— ಈಗ ಅರ್ಧ ಭಾಗದ ಜನರು ಊರಿಗೆ ಬಂದಿದ್ದಾರೆ. ಇನ್ನು ೩—೪ ದಿನದಲ್ಲಿ ಎಲ್ಲರೂ ಬರುತ್ತಾರಂತೆ. ಇಲ್ಲಿ ಸುಮಾರು ೨೦೦ ಜನರವರಿಗೆ ಪ್ಲೇಗಿನಿಂದ ಸತ್ತಿದಾರೆಂದು ಹೇಳಬಹುದು. ಕನ್ನಡ ಸ್ಕೂಲುಗಳೆಲ್ಲಾ ತೆರೆಯಲ್ಪಟ್ಟವು. ಹುಡುಗರ ಸಂಖ್ಯೆಯು ಬಹು ಕಡಮೆಯಾಗಿದೆ. ಇಂಗ್ಲಿಷ್ ಸ್ಕೂಲನ್ನು ಮಾತ್ರ ಬಿಟ್ಟಿಲ್ಲ. ನೀರಿಗೆ ಆಧಾರವಾಗಿದ್ದ ಕನಿವೆ ಕಟ್ಟೆ ಸಂಪೂರ್ಣವಾಗಿ ಒಣಗಿದೆ. ಕೆಲವು ಬಾವಿಗಳಲ್ಲಿ ಸಹಾ ಜಲವಿಲ್ಲ. ಸರ್ಕಾರ ಉಪ್ಪು ನೀರು ಬಾವಿಯಲ್ಲಿ ಸಹ ಗಡಿಗೆ ಮುಳುಗುವದಿಲ್ಲ. ನೀರಿಗೆ ಜನರು ಬಹಳ ಕಷ್ಟಪಡುತ್ತಾರೆ. ಸರ್ಕಾರದವರು ಏನು ಮಾಡುವದಕ್ಕಿದ್ದಾರೋ ತಿಳಿಯದು. ಇಲ್ಲಿ ಮುನಸಫರ್ ಬಂಗ್ಲೆಗೂ ಇಂಗ್ಲಿಷ್ ಕನ್ನಡ ಸ್ಕೂಲುಗಳಿಗೂ ಜನರು ವಾಸಮಾಡುವ ಮನೆಗಳಿಗೂ ಮಧ್ಯೆ ಒಂದು ಹಳ್ಳವಿದೆ. ಇದರಲ್ಲಿ ಬೀದಿಯ ಕಸವನ್ನೂ ಈ ಪ್ಲೇಗಿನಲ್ಲಿ ಊರಿನ ಮನೆಗಳಲ್ಲಿ ಗುಡಿಸಿದ ಪ್ಲೇಗ್ ಸಮ್ಬಂಧದ ಪರಕು ಬಟ್ಟೆ, ಹಾಸಿಗೆ, ದಿಂಬು, ಪರಕು ಚಾಪೆ ಮುಂತಾದವುಗಳನ್ನೆಲ್ಲಾ ಕಟುವಾ ಗಾಡಿಯವರು ತಂದು ಸುರಿಯುತ್ತಾರೆ. ಊರ ಮಧ್ಯೆ ಉದ್ಯಾನವನಗಳು ಇರುವದಕ್ಕೆ ಬದಲಾಗಿ ಊರಿನ ಕಸವೆಲ್ಲಾ ಸೇರಿ ಕಸದ ವನವಾಗಿದೆ. ಬಿರುಗಾಳಿ ಬೀಸಿದರೆ ಕಸವೆಲ್ಲಾ ಮನೆಗಳ ಮೇಲೆ ಹಾರ್ಯಾಡುತ್ತವೆ. ಮತ್ತು ಮಳೆ ಬಂದರೆ ಇದು ಕೊಳೆತು ನಾತ ಬಡಿಯುತ್ತದೆ. ಎರಡನೆ ಸಮಯದ ಪ್ಲೇಗ್ ಪ್ರಾರಂಭವಾಗುವದಕ್ಕೆ ಕಾರಣವಾಗುವದರಲ್ಲಿ ಸಂಶಯವಿಲ್ಲ. ಮೇಲಿನ ಅಧಿಕಾರಿಗಳು ಯಾವಾಗ ಇದಕ್ಕೆ ಗಮನ ಕೊಡುತ್ತಾರೋ ತಿಳಿಯದು. ಬೇರೆ ಊರುಗಳಲ್ಲಿ ಕಸವನ್ನೆಲ್ಲಾ ಊರಾಚೆ ಸಾಗಿಸಿ, ಮನಾರ್ಹತ್ಯದಲ್ಲಿ [illegible] ಮಾಡಿಸುವದುಂಟು. ಇಲ್ಲಿ ಊರಿನ ಮಧ್ಯದಲ್ಲಿ ರಾಶಿ ರಾಶಿ ಹಾಕುವದು ಆಶ್ಚರ್ಯವಾಗಿದೆ. ದೊಡ್ಡ ಮಳೂರಿನ ಅಪ್ರಮೇಯ ಸ್ವಾಮಿಯ ದೇವಸ್ಥಾನದಲ್ಲಿ ಈ ಯಾತಕ್ಕೆ ಉತ್ಸವಾದಿಗಳನ್ನು ಸಕಾಲದಲ್ಲಿ ನಡಿಸುವದಕ್ಕೆ ಅಧಿಕಾರಿಗಳು ಗಮನಕೊಡುವದಿಲ್ಲವೆಂದು ಅಲ್ಲಿನ ಜನರು ಗುಣುಗುಟ್ಟುತ್ತಾರೆ. ರಥಸಪ್ತಮಿ ಉತ್ಸವ ನಡಿಸಲ್ಪಟ್ಟ ವಾಹನವನ್ನು ಈವರೆಗೂ ಸ್ವಸ್ಥಾನಕ್ಕೆ ಸೇರಿಸದೆ, ಬೀದಿಯಲ್ಲಿ ಬಿಟ್ಟು ಇರುವದರಿಂದ ಬಿಸಿಲು ಮಳೆಯಲ್ಲಿ ಒಣಗಿ ಶಿಥಿಲವಾಗಿ ಹೋಗುವದಕ್ಕೆ ಆಸ್ಪದವಾಗಿದೆ ಎಂತಲೂ, ಅಲ್ಲದೆ ದೇವಸ್ಥಾನದಲ್ಲಿದ್ದ ಗರುಡವಾಹನ ಕೊಡಪ್ಪ ರಿಗೆ ಹೋಗಿ ಮಳೆ ಗಾಳಿಯಿಂದ ಶಿಥಿಲವಾಗಿಯೂ ಹಿಂದಕ್ಕೆ ಬಾರದೇ ಇದೆ ಎಂತಲೂ ವ್ಯಸನಪಡುತ್ತಾರೆ.—ಉಪದೇಶ ಪ್ರಮುಖ ಸ್ವೆಳ್ಳಸ ತಾಯಿ ಲಿಡಿಯ ವ್ಯಸನರು ಪಬ್ರುವರಿ ೯ನೇ ತಾರೀಖು ವಿಶ್ರಾಂತಿ ದಿನದಲ್ಲಿ ಈ ಲೋಕದ ವಿಶ್ರಾಂತಿ ದಿನವನ್ನು ಬಿಟ್ಟು ಪರಲೋಕದ ವಿಶ್ರಾಂತಿಗೆ ಸೇರಿದರು. ಇವರು ಘನ ಬಿಷಪ್ ಕಾಲ್ಡ್‌ವೆಲ್ ದೊರೆಯವರ ಕಾಲದಲ್ಲಿ ಬಹುಪಾಠದ ಬಳ್ಳಿಯಲ್ಲಿ ಕ್ರೈಸ್ತರಾದರು. ಅಂದಿನಿಂದ ಇದರಲ್ಲಿ ಸ್ಥಿರವಾಗಿದ್ದರು. ಹೆಣ್ಣೆಯು ಮಾತ್ರ ಲಗಾಯಿತೇ ಸ್ವಾಮಿಯ ವಾಕ್ಯ ಕೇಳುವದರಲ್ಲಿ ಮುರಿಯದೆ ಇದ್ದರೆಂದು ಹೇಳುವದರಲ್ಲಿ ಸಂಶಯವಿಲ್ಲ. ಇವರು ಸಾವಿನಲ್ಲಿ ಸಮಾಧಾನ ತುಂಬಿತು. ಉಪದೇಶಕ ಜೋನನಾಸ್ಯರು ಮರಣದ ವಿಷಯವಾಗಿ ಕೆಲವು ಪ್ರಶ್ನೆಗಳನ್ನು ಕೇಳಿದಾಗ ಸ್ಪಷ್ಟವಾಗಿ ಉತ್ತರ ಕೊಟ್ಟರು. ಸಾಯುವದಕ್ಕೆ ಭಯವುಂಟೋ ಎಂದು ಕೇಳಿದ್ದಕ್ಕೆ ನನಗೇನೂ ಭಯವಿಲ್ಲ. ಭಯವೇಕೆ? ಕ್ರಿಸ್ತನು ನನ್ನ ರಕ್ಷಕನು, ನಾನು ಕ್ರಿಸ್ತನವಳು ಅಂದರು. ನನಗೆ ಪರಲೋಕ ಸಾಮ್ರಾಜ್ಯ ಅಂದಿದ್ದಕ್ಕೆ ಕರ್ತನು, ದೇವರು, ಪಿತನಿಗೆ ಎಲ್ಲಾ ಕೊಟ್ಟಿದ್ದಾನೆ, ಹೇಳಿದರು. ಇವರಿಗೆ ಅಕ್ಷರ ಬಾರದೇ ಇದ್ದರೂ ಅನೇಕ ವೇದ ವಚನಗಳನ್ನೂ, ಜ್ಞಾನ ಕೀರ್ತನೆ, ಸಂಗೀತಗಳನ್ನೂ ಕಂಠ ಪಾಠವಾಗಿ ಹೇಳುತ್ತಿದ್ದರು. ಮತ್ತು ನಡೆ, ನುಡಿ, ಕ್ರಿಯೆಗಳಲ್ಲಿ ಕ್ರಿಸ್ತನನ್ನು ತೋರಿಸಬೇಕೆಂಬುವನೇ ಮುಖ್ಯೋದ್ದೇಶವೆಂದು ತಿಳಿದು ಇದ್ದರು. ತಮ್ಮ ಕಾಲದಲ್ಲಿ ಕೆಲವು ಕಬೈಬಲ್ ಉಪಾರ್ ಕೆಲಸವನ್ನು ಮಾಡಿದರು. ಇವರ ಮರಣವಾರ್ತೆ ಕೇಳಿದ ಎಲ್ಲಾ ಸಭೆಯವರೂ ಬೇರೆ ಜನರೂ ಬಹು ಸಂತಾಪ ಪಡುತ್ತಾರೆ. ಇವರ ವಿಷಯ ಒಬ್ಬ ಸ್ನೇಹಿತಪ್ರಿಯರು ಇಂಥ ತಾಯವರು ಲೋಕದಲ್ಲಿ ಸಿಕ್ಕುವದು ಅಪರೂಪವೆಂದು ಬರೆದಿದಾರೆ. ಇನ್ನೊಬ್ಬ ಉಪದೇಶಿಯವರು, ಇವರ ಸದ್ಗುಣಗಳು ಈಗಲೂ ನಮ್ಮ ಮುಂದೆ ಇವೆ ಎಂದು ಬರೆದಿದಾರೆ. ಇನ್ನೊಬ್ಬರು—ಕಾಲದಲ್ಲಿ ನಿಮಗೂ ನಮಗೂ ಆ ಒಬ್ಬರೇ ತಾಯಿ ಇದ್ದದ್ದು, ಇವರು ತೀರಿ ಹೋದರಲ್ಲಾ ಎಂದು ಬರೆದಿದಾರೆ.

---

## ಹಾಸ್ಯೋಕ್ತಿ.

ಮಗು:- ಅಮ್ಮಾ, ಅಪ್ಪನ ಸಂಗಡ ಹೇಳಬೇಡ. ನಿನ್ನೆ ಗಡಲೂ ಕಿವಿಮಾತು ಕೇಳುತ್ತೇನೆ ತಾಳು—ಗಟ್ಟಿಯಾಗಿ ಹೇಳಿ ಅಪ್ಪನಿಗೆ ಕೇಳಿಸುತ್ತೆ.

◆◆◆◆

ಒಬ್ಬ ಸೊಟ್ಟ ಉಪಾಧ್ಯಾಯನು ಥೂಪ ವಲ್ಲಿ ಮುದ್ರಾಸ ಪ್ಲಟಣಕ್ಕೆ ಒಗಲಿಟ್ಟು "ಇದೇ ಮದ್ರಾಸ್" ಎಲ್ಲರೂ ನೋಡಿರಿ ಎಂದನು. ಬಾಲಕರೆಲ್ಲೊಬ್ಬನು ಅತ್ಯಂತ ಆತುರದಿಂದ ತಿರುಗಿಯೇ ಯಿತೆಂದನು. ಏನೆಂದು ಕೇಳಲು "ಮಳೂಕೋಟೆಟ್ಟು ೧ ಎಂದು" ಉತ್ತರವಿತ್ತನು. ಉಪಾಧ್ಯಾಯನ ಮೂಳೆಕು ಒರಲೇ ಇದಕ್ಕೆ ಕಾರಣವಾಗಿತ್ತು.

◆◆◆◆

ದಾಮಾಚಾರ್ಯರು ಅಳುತ್ತಿರುವ ಮಗುವನ್ನು ನೋಡಿ ತಮ್ಮ ಹೆಂಡತಿಯನ್ನು ಕುರಿತು—

ಗಂ:- "ಎಲೆ, ಯಾಕೆ ಮಗುವನ್ನು ಅಳಿಸುತ್ತಿ? ಹಾಲು ಕೊಡಬಾರದೇ?"

ಹೆಂ:—"ಹಾಲು ಕುಡಿಯಲೊಲ್ಲದು."

ಗಂ:—"ಅವರಪ್ಪ ಕುಡಿದಾನು."

ಡಾಕ್ಟರ್: ಸುತ್ತುಮುತ್ತಲೂ ಪ್ಲೇಗ್ ಕೇಸುಗಳು ಆಗುತ್ತಿರುವಾಗ ನೀವು ವಾಸವಾಗಿರುವದು ಅಪಾಯಕರ. ಕೂಡಲೆ ಮನೆಯನ್ನು ಬಿಡುವದು ಕ್ಷೇಮಕರ.

ನಿವಾಸಿ: ಮುಖ್ಯ ಈ ಜಾಡ್ಯಕ್ಕೆ ಜನಸಂಪರ್ಕವಿರಬಾರದು. ನಮ್ಮ ಬೀದಿಯವರೆಲ್ಲಾ ಬಿಡುತ್ತಾರೆ ನಾವು ಪ್ರತ್ಯೇಕವಾಗಿದ್ದಂತೆಯೇ ಆಯಿತು.

****

ಬನ್ನಿನ ಮೇಲೆ ಛಡಿ ಏಟುಗಳನ್ನು ತಿಂದ ಒಬ್ಬನೊಬ್ಬ ಕಳ್ಳನನ್ನು ಕುರಿತು ಒಬ್ಬನೊಬ್ಬ ಹಾದಿಗಾರನು ಪ್ರಶ್ನೆಮಾಡಿದನು:

ಹಾ:—"ಕಳ್ಳತನದ ಫಲವು ಹ್ಯಾಗಿದೆ, ತಿಳಿಯಿತೋ?"

ಕ:—"ತಿಳಿಯುವದೇನು, ಹಿಂದುಗಡೆ (ಬನ್ನು) ನಡೆದ ವಿಷಯಕ್ಕೆ ನಾನು ಲಕ್ಷ್ಯವಹಿಸುವದಿಲ್ಲವೆಂಬುವದು ಗೊತ್ತಿಲ್ಲವೇ?"

****

ಒಂದಾನೊಂದು ದಿನ ಶಾಲೆಯಲ್ಲಿ ಇಬ್ಬರು ಬಾಲಕರು ಜಗಳವಾಡುತ್ತಿದ್ದದನ್ನು ಕಂಡು ಉಪಾಧ್ಯಾಯರು ದೊಡ್ಡ ಹುಡುಗನನ್ನು ವಿಚಾರಿಸಲಾಗಿ ಚಿಕ್ಕವನು ತನ್ನನ್ನು ೧೨ ರಲ್ಲಿ ೧೦ ಕಳೆದರೆ ಏನು ಉಳಿಯಿತು ಹೇಳೆಂದು ಕೇಳಿದನೆಂದನು. ಚಿಕ್ಕವನನ್ನು ವಿಚಾರಿಸಲಾಗಿ ತನ್ನ ಹತ್ತಿರ ೧೨ ಗೋಲಿಗಳಿದ್ದುವೆಂತೆಯೂ ಅದರಲ್ಲಿ ದೊಡ್ಡವನು ೧೦ ಗೋಲಿಗಳನ್ನು ತೆಗೆದುಕೊಂಡು ಹಿಂತಿರುಗಿ ಕೊಡದೆ ತಂಟೆಮಾಡುತ್ತಿದ್ದಂತೆಯೂ ತಿಳಿಯಬಂತು. ದೊಡ್ಡ ಹುಡುಗನನ್ನು ಯಾಕೆ ಕೊಡುವದಕ್ಕೆ ಒಪ್ಪಲಿಲ್ಲವೆಂದು ವಿಚಾರಿಸಿದ್ದಕ್ಕೆ ೧೨ ರಲ್ಲಿ ೧೦ ಕಳೆದರೆ ಏನು ಉಳಿಯುತ್ತದೆಂಬುವದನ್ನು ಮರೆಯದಂತೆ ಮಾಡುವದಕ್ಕೆಂದು ಉತ್ತರವಿತ್ತನು.

ವಿನೋದ.

---

## ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.

ಮಿತ್ರಪ್ರಿಯ—ದಾವಣಗೆರೆ, ಸಂವಾದ—ಹರಿಹರ, ಮ್ಯ. ಪಂ. ಮೈಸೂರು, ನರಸಪ್ಪ—ಚಿತ್ರದುರ್ಗ, ಅಭಿಮಾನಿ—ದಾವಣಗೆರೆ, ಗೋವಿಂದರಾವ್ ಅರಕಲಗೂಡು, ಚಿಕ್ಕಶೆಟ್ರು—ನಾಗರನವಿಲೆ:—ಈ ಬಾತ್ಮಿಗಳಿಗೆ ಈ ಪತ್ರಿಕೆಯಲ್ಲಿ ಅವಕಾಶ ದೊರಕಲಾರದು.

ಎಡಿಟರ್.

---

## ಕರೆಸ್ಪಾಂಡೆನ್ಸ್.

### ಪ್ರಶ್ನೋತ್ತರಗಳು.

ಪ್ರ.-ತಮ್ಮ ಪತ್ರಿಕೆಯಲ್ಲಿ ಹಿಂದೂಸ್ಥಾನದ ಸೈನ್ಯಕ್ಕೆ ಸೇರಿಕೊಂಡಿರುವ ಕೀಳುಜಾತಿ ಜನಗಳನ್ನೆಲ್ಲಾ ಕೆಲಸದಿಂದ ವಜಾ ಮಾಡಿ, ಉತ್ತಮ ಜಾತಿಯವರನ್ನು ಸೇರಿಸಿಕೊಳ್ಳಬೇಕೆಂದು ಗೌವರ್ನಮೆಂಟಿನವರು ಹುಕುಂ ಕೊಟ್ಟಿರುವದಾಗಿ ಬರೆದಿದೆ. ಹಾಗಾದರೆ ಕೀಳುಜಾತಿಯವರು ಯಾರು? ಉತ್ತಮ ಜಾತಿಯವರು ಯಾರು? ಹೀಗೆ ವಿಂಗಡ ಮಾಡುವದರಲ್ಲಿ ಹಿಂದೂ ಪ್ರಜೆಗಳು ಇನ್ನೂ ಹೆಚ್ಚಾಗಿ ದ್ವೇಷಾಸೂಯೆಯುಳ್ಳವರಾಗಿ ಬದುಕುವಂತೆ ಮಾಡಲು ಕಾರಣವಾಗಿದೆಯಲ್ಲವೇ?

ಉ.—ಸೈನ್ಯದ ಮುದ್ದೇದಾರರುಗಳ ಆಳುಗಳಿಗೆ ಅಂದರೆ ಆರ್ಡರ್ಲಿಗಳಿಗೆ ಕೊಟ್ಟ ಅಪ್ಪಣೆಯೇನಂದರೆ—ಆ ಆಳುಗಳು ಮೇಲುಜಾತಿಯವರಾಗಲಿ ಕೀಳುಜಾತಿಯವರಾಗಲಿ ಎಲ್ಲರೂ ಯಾವದಾದರೂ ಒಂದೇ ಒಂದು ಜಾತಿಯವರಾಗಿರಬೇಕು. ಒಬ್ಬ ಮುದ್ದೇದಾರನ ಬಳಿಯಲ್ಲಿರುವ ಆಳುಗಳು ಬೇರೆ ಬೇರೆ ಜಾತಿಯವರಾಗಿದ್ದರೆ ಒಂದು ಠಾಣ್ಯದಿಂದ ಬೇರೊಂದು ಠಾಣ್ಯಕ್ಕೆ ಪ್ರಯಾಣ ಮಾಡುವಾಗ ಬಹಳ ಅನನುಕೂಲವಾಗುತ್ತೆ. ಒಂದೇ ಜಾತಿಯವರಾಗಿದ್ದರೆ ಎಲ್ಲರೂ ಒಂದಾಗಿ ಊಟ ಉಪಚಾರಗಳನ್ನು ನಡಿಸಿಕೊಂಡರೆ ತಮಗೂ ಸುಖವಾಗಿರುವದು. ಮುದ್ದೇದಾರರುಗಳ ಕೆಲಸವೂ ಸರಾಗವಾಗಿ ನಡೆಯುವದು. ಯಾವದಾದರೂ ಒಂದು ಜಾತಿಯವರನ್ನು ಹೆಚ್ಚಿಸಬೇಕೆಂಬುದು ಈ ಅಪ್ಪಣೆಯ ಉದ್ದೇಶವಲ್ಲ. ಆಳುಗಳು ಯಾವ ಜಾತಿಯವರಾದರೂ ಆಗಬಹುದು. ಆದರೆ ಅವರೆಲ್ಲರೂ ಒಂದು ಜಾತಿಯವರಾಗಿರಬೇಕು. ಮದ್ರಾಸು ಕೋರಿಗೆ ಸೇರಿದ ಕೆಲವು ಪಟಾಲಮುಗಳನ್ನು ಸರ್ಕಾರದವರು ಕೆಲವು ಕಾಲಕ್ಕೆ ಹಿಂದೆ ಒಡೆದುಹಾಕಿದರು! ಯಾಕೆ? ಇವರೆಲ್ಲರೂ ಕೀಳುಜಾತಿಯವರೆಂದು ಒಡೆದುಹಾಕಿದರೋ? ಇಲ್ಲ. ಅವರು ಸೈನ್ಯಕ್ಕೆ ಅವಶ್ಯವಾದಷ್ಟು ಧೈರ್ಯ ದೇಹದಾರ್ಢ್ಯಗಳುಳ್ಳವರಾಗಿರಲಿಲ್ಲವೆಂಬುದೇ ಇದಕ್ಕೆ ಕಾರಣವೆಂದು ತಿಳಿಯಬೇಕಷ್ಟೆ.—ಎಡಿ.

ಪ್ರ.—ನಿಮ್ಮ ಮಾರ್ಚಿ ೧೨ ತಾರೀಖಿನ ೪ನೆ ಸಂಚಿಕೆಯ ೬ನೆ ಪೇಜಿನಲ್ಲಿ ಇಂಡಿಯಾ ಗೌವರ್ನರ್ ಜನರಲ್ ಲಾರ್ಡ್ ಕರ್ಜನ್ ಪ್ರಭುಗಳು ಪಕ್ಷಿಗಳನ್ನು ಕೊಲ್ಲಕೂಡದೆಂದು ಕಾನೂನು ಜಾರಿಗೆ ತಂದಿರುವದಾಗಿ ಪ್ರಕಟಿಸಿ ಇದೆ. ಯಾವ ಪಕ್ಷಿಗಳನ್ನು ಯಾವ ಕಾರಣದಿಂದ ಕೊಲ್ಲಕೂಡದು? ಕೋಳಿ ಬಾತು ಮೊದಲಾದ ಮನೆಯಲ್ಲಿ ಸಾಕುವ ಸುಂದರವಾದವುಗಳು ಪಕ್ಷಿ ಜಾತಿಗಳೇ ಅಲ್ಲವೇ? ಹಾಗಾದರೆ ಮಾಂಸಭೋಜನವೇ ಕೂಡದೆಂಬುವದೋ ಅವರ ಅಭಿಪ್ರಾಯ? ದಯವಿಟ್ಟು ತಾವು ಇದನ್ನು ಗ್ರಹಿಕೆ ಆಗುವಂತೆ ತಿಳಿಸಬೇಕು.

ಉ.—ಈ ಅಪ್ಪಣೆಯನ್ನು ಕೊಟ್ಟಿರುವದು ಯಾತಕ್ಕೆಂದರೆ—ಕಾಡಿನಲ್ಲಿರುವ ಕೆಲವು ಪಕ್ಷಿಗಳನ್ನು ಬೇಟೆಯಾಡುವವರು ಅವುಗಳ ಚಿತ್ರವಿಚಿತ್ರವಾದ ತುಪ್ಪಳಕ್ಕಾಗಿ ಅನೇಕವಾಗಿ ಕೊಂದು ಯೂರೋಪ್ ಖಂಡಕ್ಕೆ ಕಳುಹಿಸುವ ಪದ್ಧತಿಯುಂಟು. ಹೀಗೆ ಮಾಡುವದನ್ನು ನಿಲ್ಲಿಸುವದಕ್ಕೋಸ್ಕರವೇ ಈಗ ಈ ಅಪ್ಪಣೆಯನ್ನು ಕೊಟ್ಟಿದ್ದಾರೆ. ನಿಲ್ಲಿಸದೆಹೋದರೆ ಈ ಪಕ್ಷಿ ಜಾತಿಯೇ ಇಲ್ಲದೆಹೋಗುವದೆಂದು ತಿಳಿದು ಹೀಗೆ ಮಾಡಿದ್ದಾರೆ.—ಎಡಿ.

ಪ್ರ.—ಮದ್ರಾಸ್ ಗೌವರ್ನರ್ ಲಾರ್ಡ್ ಆಂಪ್ಟಿಹಿಲ್ ಸಾಹೇಬರು ಮದರಾಸ್ ಯೂನಿವರ್ಸಿಟಿ ಎಂಬ ವಿದ್ಯಾ ಪರೀಕ್ಷಕ ಮಂಡಲಿಯವರು ಅಗ್ರಾಸನವನ್ನು ಅಂಗೀಕರಿಸಿ, ತೇರ್ಗಡೆಯಾದವರಿಗೆಲ್ಲಾ ಬಿರುದುಗಳನ್ನು ದಯಪಾಲಿಸಿದ ಮೇಲೆ ಅವರು ಒಂದು ಉಪನ್ಯಾಸ ಮಾಡಿದರಷ್ಟೆ. ಅದನ್ನು ಎತ್ತಿ ತಮ್ಮ ಪತ್ರಿಕೆಯಲ್ಲಿ ಬರೆದಿದ್ದೀರಿ. ಅದು ಯಥಾಪ್ರತಿಯೋ? ಯಾಕೆಂದರೆ, "ನಡೆಗನ್ನಡಿ" ಯ ಪತ್ರಿಕಾಕರ್ತರು ಅವರು ಮಾಡಿರುವ ಉಪನ್ಯಾಸವನ್ನು ಕುರಿತು ದೋಷಾರೋಪಣೆಯನ್ನು ಮಾಡಿರುತ್ತಾರೆ. ಸದುತ್ತರವನ್ನು ಪಾಲಿಸಿರಿ.

ಉ.—ಸರ್ಕಾರದವರು ನಡೆಸುವ ಕಾರ್ಯಗಳಲ್ಲಿ ನಿಜವಿದೆಯೋ ಇಲ್ಲವೋ ಎಂದು ಪರೀಕ್ಷೆಮಾಡಿ ಆಧಾರವಿದ್ದರೆ ಆಕ್ಷೇಪಣೆ ಮಾಡಬೇಕೆಂದೂ ನಿಜವಿಲ್ಲದೆ ಇದ್ದರೂ ಸ್ವಾರ್ಥಕ್ಕೋಸ್ಕರ ಸರ್ಕಾರದ ಮೇಲೆ ಆಕ್ಷೇಪಣೆ ಮಾಡುವ ಪತ್ರಿಕಾಕರ್ತರು ಅಪರಾಧಿಗಳಾಗಿದ್ದಾರೆಂದೂ ಲಾರ್ಡ್ ಆಂಪ್ಟಿಹಿಲ್ ಸಾಹೇಬರು ಹೇಳಿದರು. ಯೋಗ್ಯವಾದ ಯಾವ ಪತ್ರಿಕಾಕರ್ತರು ಇದಕ್ಕೆ ಆಕ್ಷೇಪಣೆ ಮಾಡುವರೋ ನಮಗೆ ಗೊತ್ತಾಗುವದಿಲ್ಲ.—ಎಡಿ.

ಪ್ರ.—ಮಾರ್ಚಿ ತಾ|| ೧೬ ಸಂಚಿಕೆ ೩೭ ಉಳ್ಳ "ನಡೆಗನ್ನಡಿ" ಎಂಬ ಪತ್ರಿಕೆಯಲ್ಲಿ ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಪ್ರಕಟಿಸುವ ಕ್ರಾಯಿಟ್'ಸಿಂಗ್ ಎಂಬ ಪತ್ರಿಕೆಯು ಬ್ರಿಟಿಷರ ಆಳ್ವಿಕೆಯನ್ನು ಹೀಯಾಳಿಸಿರುವದಲ್ಲದೆ ಬ್ರಿಟಿಷ್‌ನವರು ನಿಷ್ಠುರರಾಗಿ ಇಂಡಿಯಾ ದೇಶೀಯರನ್ನು ಸುಲಿಗೆಗೊಳ್ಳುತ್ತಾರೆ. ಆದ್ದರಿಂದ ಇವರಿಗೆ ಮಹದ್ವಿಪತ್ತು ಚಿರಕಾಲದಲ್ಲಿಯೇ ಸಂಭವಿಸುವದೆಂದು ಪ್ರಕಟಿಸಿರುವ ಹಾಗೆ ಬರೆದಿದಾರೆ. ಅದೇ ಅಭಿಪ್ರಾಯದಿಂದ ಆ ಪತ್ರಿಕೆ ಬರೆದಿದೆಯೋ? ಹಾಗೆ ಬರೆಯಲು ಕಾರಣವೇನು? ಹಿಂದೂ ದೇಶೀಯರೇ ಬ್ರಿಟಿಷರನ್ನು ಅನೇಕ ಸಂದರ್ಭಗಳಲ್ಲಿ ಹೊಗಳುತ್ತಿರುವಾಗ್ಯೆ ಜರ್ಮನಿಯ ಪತ್ರಿಕೆ ಹಿಯಾಳಿಸುವದು ಅನುಚಿತವೆಂದು ತೋರುತ್ತೆ. ತಮ್ಮ ಅಭಿಪ್ರಾಯವನ್ನು ತಿಳಿಸಿರಿ.

ಉ.—ಜರ್ಮನಿ ದೇಶಸ್ಥರಿಗೂ ಬ್ರಿಟನಿನವರಿಗೂ ಈಗ ಅಷ್ಟು ಅನ್ಯೋನ್ಯವಿಲ್ಲ. ಬ್ರಿಟಿಷರ ಆಳ್ವಿಕೆಯ ವಿಷಯದಲ್ಲಿ ಜರ್ಮನಿಯ ಪತ್ರಿಕಾ ಕರ್ತರು ಪ್ರತಿಯೊಂದು ಕಾರ್ಯಕ್ಕೂ ಆಕ್ಷೇಪಣೆ ಮಾಡುವದು ಈಗ ಸ್ವಾಭಾವಿಕವಾಗಿದೆ. ಅದರ ಮಾತು ಹಾಗಿರಲಿ. ಇದೇ ದೇಶದಲ್ಲಿರುವವರು ತಮ್ಮ ಕಣ್ಣು ಮುಂದೆ ನಡೆಯುವ ಬ್ರಿಟಿಷರ ಆಳಿಕೆಯ ವಿಷಯದಲ್ಲಿ ಜರ್ಮನಿಯವರು ಹೇಳುವದೆಲ್ಲಾ ನಿಜವೋ ಸುಳ್ಳೋ ಎಂದು ಇತರರ ಸಹಾಯವಿಲ್ಲದೆ ಪರೀಕ್ಷಿಸಿ ಯಥಾರ್ಥವಾದ ಸಂಗತಿಯನ್ನು ತಿಳುಕೊಳ್ಳುವದಕ್ಕೆ ಅಭ್ಯಂತರವೇನೂ ಇಲ್ಲವಲ್ಲ!—ಎಡಿ.

****

### ಪರಸ್ಪರ ಸಹಾಯ.

ಅಯ್ಯಾ,

ನನ್ನ ಮಗಳಾದ ಸೀತಮ್ಮನಿಗೆ ಪ್ಲೇಗ್ ಕಾಣಿಸಿಕೊಂಡು ಮೃತಪಟ್ಟಳು. ಮಧ್ಯಾಹ್ನ ೩ ಗಂಟೆವರಿಗೂ ಕಾದರೂ ಯಾರೂ ಹತ್ತಿರವೇ ಬಾರದೆ ಹೋದ್ದರಿಂದ ನಾನೂ ನನ್ನ ಹೆಂಡತಿಯೂ ಶವವನ್ನು ಕಟ್ಟಿ ಹೊತ್ತುಕೊಂಡು ಹೋಗಿ ದಹನ ಮಾಡಿ ಬಂದೆವು. ಬ್ರಾಹ್ಮಣರು ಈ ಊರಲ್ಲಿ ಅನೇಕರಿದ್ದರೂ ಒಬ್ಬರಾದರೂ ಸಹಾಯ ಮಾಡದೆ ಹೋದರಲ್ಲಾ ಎಂದು ದುಃಖಪಡುತ್ತೇನೆ.

ನಳ್ಳೂರು. ಗುಂಡಪ್ಪ.

[ಜನರು ಒಬ್ಬರಿಗೊಬ್ಬರು ಸಹಾಯಕರಾಗದೇ ಇರುವದು ತುಂಬಾ ದುಃಖಕರವೇ ಸರಿ. ಹೀಗಾಗುವದು ಸರ್ವಥಾ ಯೋಗ್ಯವಲ್ಲ. ಕಷ್ಟಕಾಲದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡಬೇಕಾದದ್ದೇ ಧರ್ಮ.—ಎಡಿ.]

****

### ಚಿತ್ರದುರ್ಗದ ಸ್ಕೂಲು.

ಅಯ್ಯಾ,

ಈ ಸ್ಕೂಲಿನಲ್ಲಿ ಇಂಗ್ಲೀಷ್ ಸಾಲ್ಜನೆ ಕ್ಲಾಸಿನಲ್ಲಿ ವ್ಯಾಸಂಗ ಮಾಡುತ್ತಿರುವ ಪಾಳ್ಯಗಾರರ ಮುದಕ್ಕೋರಿ ಎಂಬುವನಿಗೆ ಗವರ್ನಮೆಂಟಿನಿಂದ ತಿಂಗಳು ಒಂದಕ್ಕೆ ೬ ರೂಪಾಯಿ ಪ್ರಕಾರ ವೇತನ ಕೊಡುತ್ತಾರೆ. ಈ ಬಾಬತ್ತು ಇವನ ಸಂಬಳ ೨ ತಿಂಗಳದು ಇಲ್ಲಿಯ ಸ್ಕೂಲ್ ಹೆಡ್ಮಾಸ್ಟರ್ ಎಂ. ಬಿ. ಕೃಷ್ಣರಾಯರ ಸ್ವಾಧೀನದಲ್ಲಿಯೇ ಇತ್ತು. ಸದರಿ ದುಡ್ಡನ್ನು ಇವರು ಆ ಮುದಕ್ಕೋರಿಗೆ ಪಾವತಿ ಮಾಡಿದರೆಂದು ಅವನ ರುಜುವಿಗೆ ಸ್ವಹಸ್ತ ಮಾಡಿ ದುಡ್ಡನ್ನು ಎತ್ತಿ ಹಾಕಿರುವದರಿಂದ ಈ ಮೇ|| ಭಾಷಾ ಸಾಹೇಬರವರಿಗೂ ತಿಳಿದು ಹೆ: ಮಾ. ಎಂ. ಬಿ. ಕೃಷ್ಣರಾಯರಿಗೆ ೬ ತಿಂಗಳ ಸಸ್ಪೆಂಡ್ ಆಗಿರುತ್ತೆ. ನೋಡಿ ಇದು ಎಂಥಾ ಮರ್ಯಾದೆ ಕೆಲಸ? ತಾವು ಸ್ವಲ್ಪ ಯೋಚಿಸಬೇಕಾಗಿರುತ್ತೆ.

ಬಿ. ನ.

[ಇದು ನಿಜವಾಗಿದ್ದರೆ ಶಿಕ್ಷೆ ಕೊಟ್ಟಿರುವದು ಸಾಕೇ ಎಂಬ ಅನುಮಾನ ಉಂಟಾಗಿದೆ.—ಎಡಿ.]

****

### ಶರಾಬ್ ಕಳ್ಳಭಟ್ಟಿ ಪತ್ತೆ.

ಅಯ್ಯಾ,

ದಾವಣಗೆರೆ ತಾಲೂಕಿಗೆ ಸೇರಿದ ಕುಂಚಣೆ ಸರಪಟ್ಟನಹಳ್ಳಿಯ ಗುಮ್ಮಗಟ್ಟೆ ಗ್ರಾಮದಲ್ಲಿ ದೇವಾಂಗದ ನರಸಿಂಹಯ್ಯ, ಈತನ ಚಿಕ್ಕಮ್ಮ ಸಂಜೀವಮ್ಮ, ಇವರ ರಾಜದ್ರೋಹವಾದ ಈ ವ್ಯಾಪಾರವನ್ನು ಬಹು ಗುಪ್ತವಾಗಿ ಮಾಡುತ್ತಿದ್ದರು. ಈ ಗುಮ್ಮಗಟ್ಟೆ ಗ್ರಾಮದಲ್ಲಿ ಕುಡಿಯುವ ಜನರು ಬಹಳವಿದ್ದಾರೆ. ಹೀಗಿದ್ದಾಗ್ಯೂ ಸಮೀಪದವಾಗಿರುವ ಶರಾಬ್ ಅಂಗಡಿಯಲ್ಲಿ ಕ್ರಮೇಣ ಖರ್ಚು ಕಡಿಮೆಯಾಗುತ್ತಾ ಬಹು ಲುಕ್ಸಾನಿಗೆ ಕಾರಣವಾದದ್ದನ್ನು ಮದ್ದಗಿರಿ ಇನ್ಸ್‌ಪೆಕ್ಟರ್ ರಾಮರಾಯರು ಆಲೋಚಿಸಿ, ಎಲ್ಲಿಯೋ ಒಂದು ಗುಪ್ತವಾದ ಮದ್ಯಪಾನಸ್ಥಳವಿರಬೇಕೆಂದು ಊಹಿಸಿ, ಪತ್ತೆ ಹರಡಿದ್ದನ್ನು ಬಹು ಚಟುವಟಿಕೆಯಿಂದ ನಡಿಸಿದ್ದರ ಮೇಲೆ ಮೇಲ್ಕಂಡವರ ಮನೆಯೇ ಸದರಿ ಕೋಶಿಯ ಸ್ಥಳವೆಂದು ಗೊತ್ತಾಯಿತು. ಸದರಿ ರಾಮರಾಯರು, ಇವರ ಸಹಾಯಕ್ಕೆ ದಾವಣಗೆರೆ ಇನ್ಸ್‌ಪೆಕ್ಟರ್ ಕೃಷ್ಣರಾಯರ, ಮದ್ದಗಿರಿ ಇನ್ಸ್‌ಪೆಕ್ಟರ್ ಸೀತಾರಾಮಯ್ಯರು ಇವರುಗಳ ಕೈಕೆಳಗಿನ ಬೇರೆ ನೌಕರರು ಸಹಾ ಬಹು ಸಾಹಸಮಾಡಿ, ಸದರಿ ಮನೆಯನ್ನು ಜಫ್ತಿ ಮಾಡಿದಾಗ ಶರಾಬ್ ಇಳಿಸುವ ಕಳ್ಳಭಟ್ಟಿ ತಯಾರ್ ಮಾಡಬೇಕಾದ ಸುಮಾರು ೫—೬ ಹರವಿ ಚಕ್ಕೆ ಮಾನಕ ನೆನೆಹಾಕಿ ಸಿದ್ಧವಾಗಿದ್ದದ್ದು ಅದಕ್ಕೆ ಅನುಕೂಲವಾದ ಎಲ್ಲಾ ಪದಾರ್ಥಗಳೂ ಸಿಕ್ಕಿದವು. ಸದರಿ ಮೊಕದ್ದಮೆಯನ್ನು ದಾವಣಗೆರೆ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆ ಮಾಡಿಸಿದ್ದರ ಮೇಲೆ ಅಪರಾಧಿಗಳಿಗೆ ಚಾರ್ಜಾಗಿ ಇದ್ದು ಮುಂಟಿಗೆ ಇಟ್ಟಿರುತ್ತೆ.

ನಿಷ್ಪಕ್ಷಪಾತಿ.

****

### ಗಂಡಸೀ ಸಂತೆ ಅಭಿವೃದ್ಧಿಗೆ ಬಂದಿರುವದು.

ಅಯ್ಯಾ,

ಈ ಗಂಡಸೀ ಸಂತೆಯು ಹೊಸದಾಗಿ ೧೯೦೨ನೇ ಇಸವಿ ಅಕ್ಟೋಬರು ತಾರೀಖು ೨ನೇ ಗುರುವಾರದಿಂದ ಪ್ರತಿಗುರುವಾರ ಸಂತೆಯಾಗಲು ಗೌವರ್ನಮೆಂಟಿನವರ ಆರ್ಡರ್ ಪ್ರಕಾರ ಈ ಸಂತೆಯು ಪ್ರತಿ ವಾರಕ್ಕೂ ವರ್ತಕಜನ ಸಮೂಹವು ಅನೇಕ ಗಾಡಿಗಳು ಸೇರಿ ಸಂಪೂರ್ಣವಾಗಿ ವ್ಯಾಪಾರವು ನಡಿಯುತ್ತಾ ಬಂದಿರುತ್ತೆ. ಈ ಸಂತೆಗೆ ನಾಗಮಂಗಲ, ಶ್ರೀರಂಗಪಟ್ಟಣ, ಕೃಷ್ಣರಾಜಪೇಟೆ, ಹೊಳೇನರಸೀಪುರ, ಎಡತೊರೆ ಮೊದಲಾಗಿ ಇನ್ನೂ ಇತರ ಕಡೆಗಳಿಂದ ಹೋರಿಗಳು ಬಿಕರಿಗೆ ಕೂಡುವದರಿಂದಲೂ, ಕೊಳ್ಳತಕ್ಕವರು ಹರಿಹರ, ಹುಬ್ಬಳ್ಳಿ, ದಾವಣಗೆರೆ, ಹಾವೇರಿಯೇ ಮೊದಲಾಗಿ ಇನ್ನೂ ಉತ್ತರದೇಶದಕಡೆ ಗಿರಾಕಿಗಳು ಸೇರುವದರಿಂದಲೂ, ಸುಮಾರು ಎರಡು ಮೂರು ಸಾವಿರ ರೂಪಾಯಿನ ವರಿಗೆ ಹೋರೀವ್ಯಾಪಾರ ಒಂದೇ ನಡಿಯುತ್ತೆ. ಈ ಸಂತೆಯಲ್ಲಿ ಕಣ್ಣಿಗೆಬೇಕಾದ ತರಹವಾರಿ ಹೋರಿಗಳನ್ನು ಕೊಂಡು ಬಹು ಫಾಯಿದೆಯನ್ನು ಹೊಂದಬಹುದು. ಈ ನಮ್ಮ ಹಾಸನ ಡಿಸ್ಟ್ರಿಕ್ಟಿನಲ್ಲಿ ಈ ಸಂತೆ ವಿನಹಾ ಬಾಕಿ ಇನ್ಯಾವ ಸಂತೆಯಲ್ಲಿಯೂ ಇಷ್ಟರಮಟ್ಟಿಗೆ ಹೋರಿಗಳ ವ್ಯಾಪಾರ ನಡಿಯುವದಿಲ್ಲ.

ಈ ಸಂತೆಗೆ ಹಾಸನ, ತಿಪ್ಪೂರು ಅರಸೀಕೆರೆ, ಚನ್ನರಾಯಪಟ್ಟಣ, ವಗೈರೆ ಇತರೇ ಸ್ಥಳಗಳಿಂದ ಬಿಕರಿ ಮಾಡುವ ಮತ್ತು ಕೊಳ್ಳುವ ವರ್ತಕರು ಸೇರುವದರಿಂದ ಸಂತೆಯು ಬಹು ಜಂಗಿಯಾಗಿ ರಾಗಿ, ಅವರೆ, ಹುರಳಿ, ತೊಗರಿ, ಅಕ್ಕಿ, ಕೊಬರಿ, ತೆಂಗಿನಕಾಯಿ, ಮೆಣಸಿನಕಾಯಿ, ಕಬ್ಬಿಣಸಾಮಾನು ವಗೈರೆ ದಿವಸಿಗಳಿಂದ ಎರಡು ಸಾವಿರ ರೂಪಾಯಿನ ವೈವಾಟು ನಡಿಯುತ್ತೆ. ಅಂತು ಈ ಸಂತೆಯಲ್ಲಿ ಸುಮಾರಾಗಿ ಪ್ರತಿಗುರುವಾರದಲ್ಲೂ ಐದುಸಾವಿರ ರೂಪಾಯಿನವರಿಗೆ ವೈವಾಟು ನಡಿಯುತ್ತೆಂದು ಈ ಹೋಬಳಿ ಶೇಕದಾರ್ರು, ಶ್ಯಾನುಭೋಗರು, ಪಟೇಲರು ಅಂದಾಜುಮಾಡಿದ್ದಾರೆ. ಈ ಸಂತೆಯನ್ನು ನಡಿಸುವದಕ್ಕೆ ಪರೋಪಕಾರದಲ್ಲಿ ಪ್ರೀತಿಯುಳ್ಳ ಮುಖ್ಯ ಉದ್ದೇಶಿಸಲ್ಪಟ್ಟ ಮ|| ರಾ|| ಹುರಿಗಲ್ಪಾಡಿ ಮುಕ್ತೇಗೌಡರ ಮಕ್ಕಳು ರಂಗೇಗೌಡರು ಈ ಸಂತೆಯಾಗತಕ್ಕ ಮೈದಾನದಲ್ಲಿ ಜನ ದನಗಳಿಗೆ ನೆರಳಿಗೆ ಅನುಕೂಲ ಮಾಡಬೇಕೆಂದು ಬಹಳ ಮುನ್ನೂರು ಸಸ್ಯರಗಳನ್ನು ಹಾಕಿಸಿರುವದು ಮುಂದೆ ವರ್ಷ ಅಥವ ವರ್ಷಾವರಿಯಲ್ಲಿಯೇ ನೆರಳಾಗುತ್ತೆ. ಈ ರಂಗೇಗೌಡರು ಇದೇ ಸ್ಥಳದಲ್ಲಿ ನೀರಿನ ವಸತಿಗೆ ಒಂದೂವರೆ ಸಾವಿರ ರೂಪಾಯಿ ಮುಟ್ಟಿಸಿ ಛಾಂಯಾಗಿ ಅಂಥರೆ ಬೇಸಿಗೆಯಲ್ಲಿ ನೀರಿನ ಕ್ಷಾಮ ಬಾರದಂತೆ ಕಟ್ಟಿಸಬೇಕೆಂದು ಅಂದಾಜು ಮಾಡಿಕೊಂಡಿದಾರೆ. ಇವರ ಈ ಪ್ರಯತ್ನವನ್ನೇ ಹಿಡಿಸಲು ಗಂಡಸೀ ದೇವೇಗೌಡರು, ಹುರಿಗಲ್ಪಾಡಿ ಪಟೇಲ್ ವೀರೇಗೌಡರು, ನಾಗರಹಳ್ಳಿ ಪಟೇಲ್ ಹನುಮೇಗೌಡರು, ಟಾಗಿನಕೆರೆ ಪಟೇಲ್ ಸಂಜೀಗೌಡರು, ಚನ್ನಾಪುರದ ಪಟೇಲ್ ಚಿಕ್ಕೇಗೌಡರು, ಹೊನ್ನಮಾರ್ನಹಳ್ಳಿ ಕೆಂಪೇಗೌಡರು, ಬಾಣೇನಹಳ್ಳಿ ಕುರಿಲಿಂಗೇಗೌಡರು, ಇನಕ್ಷಿ ಬಾಗುವಾಳು ಮರಿಲಿಂಗೇಗೌಡರು ಮೊದಲಾದ ಅನೇಕ ಜನ ಗೌಡರುಗಳು ಚಂದಾ ಹಾಕುತ್ತೇವೆಂದು ವಾಗ್ದಾನ ಮಾಡಿದಾರೆ. ಈ ಕೆಲಸವನ್ನು ಮುಂಗಾರು ಮಳೆ ಬಿದ್ದ ಕೂಡಲೆ ಪ್ರಾರಂಭಿಸಬಹುದು. ಈಗ ಬೇಸಿಗೇ ಕಾಲವಾದ್ದರಿಂದ ಈ ಸಂತೆಗೆ ಬರತಕ್ಕ ಜನಗಳ ದಾಹಶಾಂತಿಗಾಗಿ ಈಗ್ಯೆ ಎಂಟು ವಾರದಿಂದಲೂ ಮ|| ಗಂಡಸೀ ಸ್ಕೂಲ್ ಮಾಸ್ಟರ್ ವೆಂಕಟಸುಬ್ಬಯ್ಯನವರು, ಹೆರಗಿನ ನಂಜುಂಡಭಟ್ಟರು, ಹೆಗ್ಗಟ್ಟದ ಶ್ಯಾನಭೋಗ್ ಸಂಜೀವಯ್ಯನವರು, ಕೊಂಡೇನಾಳು ಶಾನಭೋಗ್ ವೆಂಕಟದಾಸಯ್ಯನವರು ಸೇರಿ ಒಂದು ಕಡೆಯಲ್ಲಿಯೂ, ಮಡಿಕೇರಿ ಸಾಹುಕಾರ್ ರಂಗಶೆಟ್ರು, ಗರುಡೀಮನೆ ಶೆಟ್ರು ನಂಜಪ್ಪನವರು ಸೇರಿ ಒಂದು ಕಡೆಯಲ್ಲಿಯೂ, ನಾಗರಹಳ್ಳಿ ಪಟೇಲ್ ಕೆಂಪೇಗೌಡರು, ಧಂಡೀ ಚಿಕ್ಕೇಗೌಡರ ಮಗ ಹನುಮೇಗೌಡರು ಸೇರಿ ಒಂದು ಕಡೆಯಲ್ಲಿಯೂ ಪಾಟ್ ಲಾಗ್ಯಾಯಿತಿನಿಂದ ಪ್ರತ್ಯೇಕವಾಗಿ ಮೂರು ಅರವಟ್ಟಿಗೆಗಳನ್ನು ಇಡಿಸಿ ಸಮಸ್ತ ಜನಗಳಿಗೂ ಬಾಯಾರಿಕೆಗೆ ಹಿತವಾದ ಶೀತೋದಕವನ್ನು ಕೊಡಿಸುತ್ತಾ ಇದಾರೆ. ಮುಂದೆ ಈ ಬೇಸಿಗೆ ದಿವಸ ತೀರುವವರಿಗೂ ಈ ಧರ್ಮಕೆಲಸವನ್ನು ಇವರೆಲ್ಲರಿಗೂ ಬಿಡಲಾರರೆಂದು ನಂಬಿದೇನೆ. ಹೀಗಿರುವ ಈ ಸಂತೆಯಲ್ಲಿ ಪೋಲೀಸಿನವರ ಬಂದೋಬಸ್ತು ತುಂಬಾ ನಡಿಯುವ ವಿಷಯದಲ್ಲಿ ಈಗ ಈ ಸ್ಟೇಷನಿಗೆ ವರ್ಗಾಪಟ್ಟು ಬಂದಿರತಕ್ಕ ಮ|| ವೆಂಕಟಗಿರಿಯಪ್ಪನವರು ಇನ್ನೂ ಹೆಚ್ಚುಗಮನ ಕೊಟ್ಟು ಗಲಭೆಗಾಸ್ಪದವಿಲ್ಲದಂತೆ ಏರ್ಪಾಡು ಮಾಡ್ಯಾರೆಂದು ನಂಬಿದ್ದೇನೆ.

ನ.

ಸನ್ ೧೯೦೩ ನೆ ಇಸವಿಯು

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ 21

ಪಾಕೆಟ ಡೈರಿ



ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರ್ಯಾಕ್ಟುದಾರರು, ಮತ್ತು ದೊಡ್ಡ ಮನುಷ್ಯರು ಎಷ್ಟು ಬುದ್ಧಿವಂತರಿಗೂ ಉಪಯೋಗವಾಗಿರುತ್ತೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು:— ಶೋಭಕೃತು ಸಂವತ್ಸರದ ಪಂಚಾಂಗ, ಕ್ಯಾಲೆಂಡರು, ಹಿಂದು ಹಬ್ಬಗಳು, ಮತ್ತು ರಜಾ ದಿನಗಳು, ರೈಲ್ವೆ ಚಾರ್ಜು, ಕೋರ್ಟುಗಳ ಸ್ಟ್ಯಾಂಪು, ಕೋರ್ಟು ಫೀಜು, ಪ್ರಾಮಿಸರಿ ನೋಟು ಸ್ಟ್ಯಾಂಪು, ರಿಜಿಸ್ಟರ್ ಫೀಜು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ತೇರ ಮುಷ್ಟಿ ಇವಿಸಿನ ಅಳತೆ, ಚಿನ್ನ ತೂಕದ ವಿವರ, ಗೌರೀ ಪಂಚಾಂಗ, ವೃಕ್ಷಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಗುಳಿಕ ಕಾಲ, ವಾರಶೂಲೆಯು ದಿನ, ದಿನಗಟ್ಲೆ ಸಂಬಳದ ಪಟ್ಟಿ, ಇನ್ನೂ ಅನೇಕ ಮುಖ್ಯ ವಿಷಯಗಳಿವೆ. ಹಪ್ಪ ಕಾಗದ, ಪ್ರತಿ ಪುಟಕ್ಕೂ ರೂಲುಹಾಕಿ, ಸೊಗಸಾಗಿ ಬೈಂಡು ಮಾಡಿ ವಿಕರಿಗೆ ಸಿದ್ಧವಾಗಿದೆ. ಎ. ನಂಬರ್ ಪೆನಸಲ್ ಇಡತಕ್ಕ ಚಿಕ್ಕ ಸೈಜ್ ಡೈರಿ ೧ಕ್ಕೆ ೪ ಆಣೆ, ಬಿ ನಂಬರ್ ಪೆನಸಲ್ ಇಟ್ಟು ಮುಚ್ಚಳ ಹಾಕಿರುವದು ಚಿಕ್ಕ ಸೈಜು ಡೈರಿ ೧ಕ್ಕೆ ೫ ಆಣೆ; ಸಿ. ನಂಬರ್ ಪೆನಸಲ್ ಇಡತಕ್ಕ ದೊಡ್ಡ ಸೈಜ್ ಡೈರಿ ೧ಕ್ಕೆ ೬ ಆಣೆ, ಡಿ. ನಂಬರ್ ಪೆನಸಲ್ ಇಟ್ಟು ಮುಚ್ಚಳ ಹಾಕಿರುವದು ದೊಡ್ಡ ಸೈಜು ಡೈರಿ ೧ಕ್ಕೆ ೮ ಆಣೆ; ೧೨ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡವರಿಗೆ ೧ ಡೈರಿ ಹೆಚ್ಚಾಗಿ ದೊರೆಯುವದು. ಪೋಸ್ಟು ಚಾರ್ಜು ಬೇರೆ ಬೀಳುತ್ತೆ. ಬೇಕಾದವರು ಈ ಕೆಳಗಿನ ವಿಳಾಸದಾರ್ರಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,
ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು.

ಹೋಮೋಸಿಯಾ.

ಚಕ್ಷಣ ಪರಿಹಾರ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿರುತ್ತಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಚಾಕರ್ಣವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮಂಡಿನೋವು, ಊದುಗಳು, ಗಜ್ಜೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಪ್ಪರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್, ಖರ್ಚು ಮಾಫಿ ಬಿಡುತ್ತೆ.

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫು. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ —ಹೋಮೋಸಿಯಾ ಕಂಪೆನಿ, ೨೬ ಸೆಕೆಂಡು ಬೀಚ್ ಲೈನ್, ಮದರಾಸ್.

THE FOREIGN MISSIONS AND GENERAL AGENCY.

ಮೇಲೆ ಕಂಡ ಏಜನ್ಸಿಯವರು ದೇಶೀಯ ವರ್ತಕರಿಗೂ ಇತರರಿಗೂ ಇಂಗ್ಲಾಂಡಿನಲ್ಲಿ ತಯಾರಾಗುವ ಯಾವ ಸಾಮಾನನ್ನು ಬೇಕಾದರೂ ಸುಲಭವಾದ ಕಮಿಷನ್ ತೆಗೊಂಡು ಕಳುಹಿಸುವರು. ಆರ್ಡರು ಕಳುಹಿದ ಕೂಡಲೆ ಮಾಲುಗಳು ಬಹು ಜಾಗ್ರತೆಯಾಗಿ ರವಾನೆ ಮಾಡಲ್ಪಡುವವು. ಈ ವಿಷಯದಲ್ಲಿ ತಿಳಿದುಕೊಳ್ಳಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕೆಂದು ಕೋರುತ್ತೇವೆ

A. J. BRIDE,
*Manager,*
*29-35, City Road, London*

ಹೊಸ ಪುಸ್ತಕ! ಹೊಸ ಪುಸ್ತಕ!! ಹೊಸ ಪುಸ್ತಕ!!!

ಮಾರಾಟಕ್ಕೆ ಸಿದ್ಧವಾಗಿದೆ.

ಪ್ರತಿಯೊಬ್ಬ ರೈತ, ಪಟೇಲ ಶಾನುಭೋಗರು, ರೆವೆನ್ಯೂ ಇಲಾಖೆಯ ಎಲ್ಲಾ ಉದ್ಯೋಗಸ್ಥರುಗಳಿಗೂ, ಅತ್ಯವಶ್ಯಕವಾದ ಪುಸ್ತಕವಿದು. ಜಮೀನ್ ಮೋಜಣೀ ಸಂಬಂಧವಾಗಿ ಉದಾಹರಣೆಗಳೊಂದಿಗೆ ಎಪ್ಪತ್ತು ಚಿತ್ರಗಳು ಇವೆ. ಸ್ವಲ್ಪ ಓದು ಬರಹ ಬಂದವರು ಕೂಡ ಓದಿ ಗ್ರಹಿಸಬಹುದು.

ಭೂಮಿಯ ಅಳತೆ.

ಭೂಮಿ ಅಳೆಯುವ ಸಾಮಗ್ರಿ, ಅವುಗಳ ಪರಿಮಾಣ, ಅವುಗಳುಪಯೋಗಿಸುವ ರೀತಿ, ಕಂಡು ದುರ್ಬೀನುಗಳ ಉಪಯೋಗ, ಬೊಂಬೈ ಮದರಾಸು ಅಳತೆಗಳ ವ್ಯತ್ಯಾಸ, ಸರಹದ್ದು ಗುರುತುಗಳ ವಿಧಿ, ಅಳೆದ ಭೂಮಿಯ ನಕ್ಷೆಯೆತ್ತುವದು, ನಕ್ಷೆಯ ಮೇಲೆ ಅಳತೆ ಗುರಿತಿಸುವ ರೀತಿ, ಇವೇ ಮುಂತಾದ ಅನೇಕ ಉಪಯುಕ್ತಾಂಶಗಳು ಪ್ರಶ್ನೋತ್ತರ ರೂಪವಾಗಿ ಬರೆಯಲ್ಪಟ್ಟಿವೆ.

ಕ್ರಯ:—ವಿ. ಪಿ. ಮೂಲಕ ಒಂದೇ ರೂಪಾಯಿ.

ಪ್ರಶ್ನೋತ್ತರಲೇಖ್ಯಬೋಧಿನಿ.

ವಿ. ಪಿ. ಮೂಲಕ ಹಸನು ಪ್ರತಿ ೧—೩—೦; ಕಿರಿದು ಪ್ರತಿ ೦—೧೫—೦.

ಈ ಪುಸ್ತಕಗಳು ನಮ್ಮ ವಿನಾ ಬೇರೆ ಯಾರಲ್ಲಿಯೂ ದೊರೆಯಲಾರವು.

ಬೇಗ ಬರೆಯಿರಿ! ಬೇಗ ಬರೆಯಿರಿ!! ಬೇಗ ಬರೆಯಿರಿ!!!

ವಿಳಾಸ — ಭಾರತಿ ಸಂಪಂಗಿರಾಮು,
ಅಣ್ಣೆಮ್ಮನ ಗುಡಿ ಬಳಿ, ಬೆಂಗಳೂರು ಸಿಟೀ

ಜ್ವರಹರಿ. 27




ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ. ಶೀತಜ್ವರ, ವಾತಜ್ವರ. ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು. ಜ್ವರಹರಿಯನ್ನು ಸೇವಿಸುತ್ತಾ ಬಂದರೆ ಕಾಯಪುಷ್ಟಿಯನ್ನೂ ಕೊಡುವದು. ಪ್ರಯಾಣ ಮಾಡತಕ್ಕವರು ಈ ಔಷಧವನ್ನು ಅವಶ್ಯವಾಗಿ ಹತ್ತಿರ ಇಟ್ಟುಕೊಂಡಿರಬೇಕು ಇದು ದೇಶವನ್ನು ಬಹಳ ಒಳ್ಳೇ ಕ್ರಮವಾದ ಸ್ಥಿತಿಯಲ್ಲಿ ಇಟ್ಟುಕೊಳ್ಳಬಲ್ಲದು. ಇದನ್ನು ಉಪಯೋಗಿಸಿದವರ ಕಾಗದವನ್ನು ಅಪೇಕ್ಷಿಸಿದವರಿಗೆ ಕಳುಹಿಸುತ್ತೇವೆ ಸಣ್ಣ ಮತ್ತು ದೊಡ್ಡ ಸೀಸೆಗಳಲ್ಲಿ ಹಾಕಿ ವಿಕರಿಯಾಗುವದು.

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ, ೧—೮ ರೂ., ೨ ರೂ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪೆನ್ನಿಯವರ ಓಮಂ ಕರ್ಪೂರವನ್ನು ನಾನೂ ನನ್ನ ಹಾಸ್ಪಿಟಾಲರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರ್ರಲ್ಲಿ ವಿಶೇಷ:—

ಪೆನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

21—3—1903 ರಿಂದ 27—3—1903 ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು | |
|---|---|---|---|---|
| ಬೆಂಗಳೂರು ಪಟ್ಟಣ | 10 | 5 | 14 | 14 |
| ಮೈಸೂರು ,, | 1 | 4 | 6 | 6 |
| ಬೆಂಗಳೂರು ಡಿಸ್ಟ್ರಿಕ್ಟು | 70 | 60 | 61 | 47 |
| ಮೈಸೂರು ,, | 65 | 56 | 59 | 69 |
| ಕೋಲಾರ್ ,, | 10 | 8 | 18 | 14 |
| ಕೋಲಾರ್ ಚಿನ್ನದ ಗಣಿಗಳು | 7 | 11 | 9 | 13 |
| ತುಂಕೂರು ಡಿಸ್ಟ್ರಿಕ್ಟು | 4 | 8 | 10 | 7 |
| ಹಾಸನ ,, | 12 | 8 | 18 | 16 |
| ಚಿತ್ರದುರ್ಗ ,, | 11 | 8 | 10 | 10 |
| ಕಡೂರ್ ,, | 12 | 7 | 7 | 7 |
| ಶಿವಮೊಗ್ಗಾ ,, | 14 | 10 | 15 | 8 |
| ಜುಮ್ಲಾ. | 222 | 83 | 218 | 174 |

ಶಾಲೀವಾಹನ ಶಕ ೧೮೨೬ನೇ ಶೋಭಕೃನ್ನಾಮ ಸಂವತ್ಸರ ಚೈತ್ರ ಬಹುಳ ಚೌತಿ ಗುರುವಾರದಿಂದ ಚೈತ್ರ ಬಹುಳ ದಶಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಏಪ್ರಿಲ್.

| ತಾ | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ಮೇಷ ಮಾಸ ತೇದಿ. |
|---|---|---|---|---|---|---|
| 16 | ಗುರು | ಚೌತಿ | 1-2 | ಜ್ಯೇ | 47-7 | 4 |
| 17 | ಶುಕ್ರ | ಪಂಚಮಿ | 4 42 | ಮೂ | 52-51 | 5 |
| 18 | ಶನಿವಾ * | ಷಷ್ಠಿ | 9-20 | ಪೂಷಾ | 59 29 | 6 |
| 19 | ರವಿವಾರ ‡ | ಸಪ್ತಮಿ | 14-39 | ಉತ್ತಷಾ | 60 0 | 7 |
| 20 | ಚಂದ್ರ † | ಅಷ್ಟಮಿ | 19-46 | ಉತ್ತಷಾ | 5-16 | 8 |
| 21 | ಕುಜ | ನವಮಿ | 24-32 | ಶ್ರ | 12-19 | 9 |
| 22 | ಬುಧ | ದಶಮಿ | 28-28 | ಧ | 17 50 | 10 |

* ಮುದ್ದೂರು ನರಸಿಂಹಸ್ವಾಮಿ ರಥ. ‡ ಅಷ್ಟಮೀ ತಿಥಿ, ಭಾನುಸಪ್ತಮಿ. † ಶೂನ್ಯತಿಥಿ, ವ್ಯತ್ಯಯೋಗ.

## ಪೇಟೆ ಧಾರಣೆ.

| ದಿನಸಿ. | ಮೈಸೂರು. | ಬೆಂಗಳೂರು |
|---|---|---|
| ಸಿದ್ದೀ ಅಕ್ಕಿ ಪಲ್ಲ ೧ಕ್ಕೆ ರೂ. | ೧೦ ೪–೮ | ೧೦–೮– |
| ಕೆಂಬೂತಿ ಅಕ್ಕಿ ಅವಲ್ | ೯–೧೨–೦ | ೧೦–೮– |
| ,, ದಯಂ | ೯–೬–೦ | ೧೦–೦– |
| ಜಾಬಾಕ್ಷಿ ಅಕ್ಕಿ | ೯–೨–೦ | ೧೨–೦– |
| ಸಣ್ಣಕ್ಕಿ ಅವಲ್ | ೧೧ ೮–೦ | ೧೨–೮– |
| ,, ದಯಂ | ೧೧ ೪–೦ | ೧೧ ೮ |
| ತೊಗರೀ ಬೇಳೆ ಪಲ್ಲ ೧ಕ್ಕೆ | ೧೧ ೮ ೦ | ೧೩ ೦– |
| ,, ದಯಂ | ೧೧–೪–೦ | ೧೧–೮– |
| ಜೈರ್ ರಾಗಿ ಪಲ್ಲ ೧ಕ್ಕೆ | ೪ ೪–೦ | ೩–೩– |
| ಕಾರಾಗಿ | ೩–೦ ೦ | ೩–೨– |
| ಜೋಳ | ೪–೪–೦ | ೫–೦– |
| ಹಲಸಂದೆ ಪಲ್ಲ ೧ಕ್ಕೆ | ೬–೦–೦ | ೮–೦– |
| ಬಿಳೀ ಅವರೆ | ೫ ೧೨ ೦ | ೪–೮– |
| ಹೆಸರು | ೬ ೨–೦ | ೧೦–೦– |
| ಉದ್ದು | ೬ ೧೨ ೦ | ೯–೦– |
| ಕಡಲೆ | ೧೦–೦–೦ | ೧೦–೪– |
| ಎಳ್ಳು | ೧೫ ೦ ೦ | ೯–೧೨– |
| ಹುರುಳಿ | ೩–೧೪–೦ | ೪–೦– |
| ಹರಳು ೧೨೬ ಸೇರಿಗೆ | ೧೧–೪–೦ | ೫–೧೪– |
| ಸೀಗೇಕಾಯಿ ಮಣ ೧ಕ್ಕೆ | ೦–೨–೦ | ೦–೨– |
| ಮೆಣಸಿನಕಾಯಿ | ೨–೪–೦ | ೨–೦– |
| ,, ದಯಂ | ೦–೧೪–೦ | ೦–೮– |
| ಬೆಲ್ಲ ದೊಡ್ಡ ಅಚ್ಚು | ೪ ೮–೦ | ಮ ೦–೨– |
| ಒಳ್ಳೆಣ್ಣೆ ಮಣ ೧ಕ್ಕೆ | ೩–೧೦ ೦ | ೪–೮– |
| ಹರಳೆಣ್ಣೆ ,, | ೪–೪–೦ | ೩–೦– |
| ಕೊತ್ತುಂಬರಿ ಪಲ್ಲ ೧ಕ್ಕೆ | ೩–೬–೦ | ೩–೫– |
| ಉಪ್ಪು ,, | ೯–೦–೦ | ೮–೦– |
| ಹುಣಸೇ ಹಣ್ಣು | ೦ ೧೨–೦ | ೦–೧೨– |
| ,, ಹಳೇದು | ೦–೧೦–೦ | ೦–೧೦– |
| ತುಪ್ಪ | ೧೧ ೪–೦ | ೧೦–೦– |
| ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ | ೫ ೨–೦ | ೪–೫– |
| ತೆಂಗಿನಕಾಯಿ ೧೦೦ಕ್ಕೆ | ೪–೨–೦ | ೩–೧೨– |
| ಅಡಿಕೇಕಾಯಿ ಮಣ ೧ಕ್ಕೆ | ೦–೧೪ ೦ | ೦–೦– |
| ಅಂಟ್ವಾಳದಕಾಯಿ ಮಣ ೧ಕ್ಕೆ | ೦–೧೪–೦ | ೦–೧೪– |
| ಚಿನ್ನ (ಪವನ್) ಕೆಂಪು | ೧೫–೪–೦ | ೧೫–೩– |
| ,, ,, ಪಸಿಮೆ | ೧೫–೮–೦ | ೧೫–೬–೦ |
| ,, ,, ಗಟ್ಟಿ ತೊಲ ೧ಕ್ಕೆ | ೨೬–೦–೦ | ೨೪–೮–೦ |
| ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ | ೭೨–೦–೦ | ೭೨–೮–೦ |

Printed and Published by the Rev. E. W. THOMPSON, M.A. the Proprietor and Manager, Wesleyan Mission Press, Mysore. 16/4/1903.

# ವೃತ್ತಾಂತ ಪತ್ರಿಕೆ. REGISTERED

೪ ಯ ೧ ದು ಡ್ಡು ——— ಕ್ರಯ ೧ ದು ಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೬ | ಮೈಸೂರು—ಸನ್ ೧೯೦೩ ನೇ ಇಸವಿ ಏಪ್ರೆಲ್ ತಾರೀಖು ೨೩ ನೇ ಗುರುವಾರ. | ಸಂಚಿಕೆ ೪೬



## MELLIN'S FOOD.

ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

೧. ಮೆಲ್ಲಿನ್'ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್'ರು ಮಾಡಿರುವ ಆಹಾರವು ದೇಹದ ನರಗಳೂ ಮೂಳೆಗಳೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್'ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್'ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯುಕಮಾನುತಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್'ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆ ಉಂಟಾಗುತ್ತದೆ.

೬. ಮೆಲ್ಲಿನ್'ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್'ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್'ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ತಯಾರು ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಉಪಯೋಗಕ್ಕೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್'ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ವಸ್ತು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್'ರು ಮಾಡಿರುವ ಆಹಾರವು ಕೂಸುಗಳಿಗೆ ಸಿಹುಬ್ಬು ಕಚಿದ ಕಾಲದಲ್ಲಿಯೂ ಶೈಶವದಲ್ಲಿಯೂ ಒದಗುವ ಮಿಕ್ಕಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್'ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ

೧೨. ಮೆಲ್ಲಿನ್'ರು ಮಾಡಿರುವ ಆಹಾರದಲ್ಲಿ ಗುಂತುಪದಾರ್ಥವು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್'ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ದಕ್ಷತೆ ಕೊಡುತ್ತದೆ.

೧೪. ಮೆಲ್ಲಿನ್'ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ವೃದ್ಧಿಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ಮೀಳ ಪಟ್ಟಿಗೆ ಅವಶ್ಯಮಾಡುತ್ತದೆ

೧೫. ಮೆಲ್ಲಿನ್'ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಕೆಡುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡಬೇಕನ್ನುವರು ಕೆಳಗೆ ಸೂಚಿಸುವ ನಮ್ಮ ಏಜಂಟರುಗಳಿಗೆ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಅಂಗಡಿಗಳಿಗೂ ಬರೆದು ತರಿಸಿಕೊಳ್ಳಬಹುದು :—

ಮದ್ರಾಸ್ :—ಮೆ' ಶಾವ್, ವಿಸ್‌ಡಾ ಬ್ರದರ್ಸ್.

ಬೊಂಬಾಯಿ :—ಮೆ' ಲೇಡಲ ಆ ನಿಕಲ್ಸ್ ಕಂಪನಿ.

ಕಲ್ಕತ್ತಾ :—ಮೆ' ಮೆಕ್ಕಿನಜಿ ಲಯಲ್ ಕಂಪನಿ.

ಕೊಲಂಬೋ :—ಮೆ' ನೊಟ್ ವಿಲ್ಸನ್ ಕಂಪನಿ.

ಕರಾಚಿ :—ಮೆ' ಎಚ್. ಜೆ. ರುಸ್ತುಂಜಿ ಕಂಪನಿ

ಮೈಸೂರು :—ಮೆ' ಓಕ್ ಕಂಪನಿ.

ರಂಗೂನ್ :—ಲೇಡಲ ಬ್ರಾಕ್ ಕಂಪನಿ.


ಮೈಸೂರು ಶೀಮೆಯ ಎಕ್ಸೈಜ್ ಕಮಿಷನರವರ ಆಫೀಸು.
ಬೆಂಗಳೂರು ೧೯೦೩ನೇ ಇಸವಿ ಮಾರ್ಚಿ ೩೧ನೇ ತಾರೀಖು.

### ಇಸ್ತಿಹಾರ್‌ನಾಮೆ.

2

ಸನ್ ೧೯೦೩ನೇ ಏಪ್ರಯಲ್ ೩ನೇ ತಾರೀಖಿನಲ್ಲಿ ಛಾಯಿಪಾದ ಮೈಸೂರು ಗೆಜೆಟಿನಲ್ಲಿ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಒಳಪಟ್ಟು ಅದರಲ್ಲಿ ಕಂಡ ಸ್ಥಳಗಳಲ್ಲಿ ವ ತಾರೀಖುಗಳಲ್ಲಿ ೧೯೦೩ ನೇ ಇಸ್ವಿ ಜುಲೈ ಗುತ್ತೇ—ಬಾಗಾಯ್ತು ೧೯೦೩ ನೇ ಇಸ್ವಿ ಜೂನ್ ೩೦ನೇ ತಾರೀಖಿಗೆ ಪೂರೈಸುವ ೧೨ ತಿಂಗಳಿಗೆ ಪ್ರತ್ಯೇಕ ಸಾರಾಯಿ ಅಂಗಡಿಗಳ ವ ಗುತ್ತಿಗೆ ಬಿಕರಿ ಕಿರ್ದಿಗಳ ಮತ್ತು ಶೇಂದಿ ಅಂಗಡಿಗಳ ಹರಾಜು ಆಯಾಯ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರುಗಳಿಂದಾಗಲಿ ಯಾ ಇದಕ್ಕಾಗಿ ಅವರಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟು ಕಮಿಷನರುಗಳಿಂದಲಾಗಲಿ ಹರಾಜು ಹಾಕಲ್ಪಡುತ್ತೆಂದು ಇದರಿಂದ ಸಮಸ್ತಜನಗಳಿಗೂ ಪ್ರಕಟಿಸಲ್ಪಟ್ಟಿರುತ್ತೆ.

P. N. PURNAIYA
Excise Commissioner
in Mysore.

### ಇಸ್ತಿಹಾರ್‌ನಾಮೆ.

8

೧೯೦೩ನೆ ಇಸವಿ ಏಪ್ರಿಲ್ ತಾರೀಖು ೧ರ ಲಾಗಾಯತು ೧೯೦೩ನೆ ಮಾರ್ಚಿ ೩೧ರ ವರೆಗೆ ಒಂದು ವರುಷ—೧೯೦೩ನೆ ಇಸವಿ ಏಪ್ರಿಲ್ ತಾರೀಖು ೧ರ ಲಾಗಾಯತು ೧೯೦೬ನೆ ಮಾರ್ಚಿ ೩೧ರ ವರೆಗೆ ಮೂರು ವರುಷ ಅಥವಾ ೧೯೦೩ನೆ ಇಸವಿ ಏಪ್ರಿಲ್ ತಾರೀಖು ೧ರ ಲಾಗಾಯತು ೧೯೦೮ನೆ ಮಾರ್ಚಿ ತಾರೀಖು ೩೧ರ ವರೆಗೆ ಐದು ವರುಷಗಳ ಪರಿಮಿತಂತ್ರ ಕೋಲಾರ ಶೀಮೆಯಲ್ಲಿ ಕಂಟ್ರಿ ಪರಾಬ್ (Country Arrack) ತಯಾರಿ ಅಥವಾ ಆಮದು ಮತ್ತು ಬಿಟ್ಟು ಬಿಕ್ರಿ ಈ ವಿಷಯಗಳ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಹೊಂದಿ ಕೊಳ್ಳುವ ಬಗ್ಗೆ ದರಕಾಸ್ತುಗಳು ಅಪೇಕ್ಷಿಸಲ್ಪಡುತ್ತವೆ. ತಪಶೀಲ್ ಷರತ್ತುಗಳನ್ನು ಮಾಡಿಕೆರಿಯಲ್ಲಿ ಇರುವ ಕೊಡಗು ಕಮಿಷನರ್ ಸಾಹೇಬರವರಿಗೆ ದರಕಾಸ್ತು ಮಾಡಿಕೊಂಡಲ್ಲಿ ತಿಳಿಯಬಹುದು.

| | |
|---|---|
| ಕೊಡಗು ಚೀಫ್ ಕಮಿಷನರ್ | E. Shute, |
| ಸಾಹೇಬರವರ ಆಫೀಸ್. | For Secretary |
| ದರಬಾರ—ಬೆಂಗಳೂರು. | to the |
| ೧೨ನೇ ಜನವರಿ, ೧೯೦೩ | Chief Commissioner. |

### ಮಹಾರಾಜರ ಪಟ್ಟಾಭಿಷೇಕ.

ಈ ಉತ್ಸವದ ತಸ್ವೀರುಗಳ ಪುಸ್ತಕ. ಮಹಾರಾಜರ ದೊಡ್ಡ ಫೋಟೋ ತಸ್ವೀರು, ಸಂಸ್ಥಾನದ ಮುಖ್ಯ ಹುದ್ದೇದಾರರ ಫೋಟೋಗಳು, ಮೈಸೂರು ಬೆಂಗಳೂರಿನಲ್ಲಿರುವ ಅರಮನೆ ಮುಂತಾದ ಭಾರೀ ಕಟ್ಟಡಗಳು ಉಳ್ಳ ಈ ಫೋಟೋ ಪುಸ್ತಕಗಳು ಕೆಲವು ಮಾತ್ರ ಉಳಿದಿವೆ. ಬೇಗ ಬರೆದು ತರಿಸಿಕೊಳ್ಳಿ, ಕ್ರಯ ೮ ಆಣೆ, ಹಾಸಲು ೧ ಆಣೆ.

ವಿಳಾಸ —ಮ್ಯಾನೇಜರ್, ವಿಕರ್ ಬುಕ್ ಡಿಪೋ, ಮೈಸೂರು.
,, ,, ,, ಬೆಂಗಳೂರು.

### ಹೊಸ ಪುಸ್ತಕಗಳು.

೧. ಏಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರಾ ಮಹಾರಾಣಿಯವರ ಜೀವಚರಿತ್ರೆ. ಸುಂದರವಾದ ಅನೇಕ ಚಿತ್ರಗಳನ್ನುಳ್ಳದ್ದು ಕ್ರಯ ೪ ಆಣೆ.

೨. ಸ್ವರ ತಪ ರ್ಪ್ರೆಕರ ಕಥೆಗಳು ಹುಡುಗರೂ ಹುಡುಗಿಯರೂ ಓದಲು ಅತ್ಯಂತ ಉತ್ಸಾಹವನ್ನುಂಟುಮಾಡುವ ಪುಸ್ತಕ. ಅನೇಕ ಚಿತ್ರಗಳನ್ನೊಳಗೊಂಡಿದೆ. ಕ್ರಯ ೨ ಆಣೆ.

೩. ಪ್ರಾಣಿವರ್ಗ ಶಾಸ್ತ್ರ ವಿದ್ಯೆ ಜೀವರಾಶಿಗಳ ಮಾರ್ಗದ ಪ್ರಕಟನ ಅವಶ್ಯಕದಲ್ಲಿದ್ದ ಪ್ರಾಣಿಗಳು, ಜೀವರಾಶಿಗಳು, ಪಕ್ಷಿಪಾಡಿಗಳು, ಎಲ್ಲವುಗಳಿಗೂ ಚಿತ್ರ ಸಹಿತ ವಿವರಿಸಲ್ಪಟ್ಟಿದೆ ಇದು ವಿದ್ಯಾರ್ಥಿಗಳಿಗೆ ಬಹಳ ಉತ್ಸಾಹವನ್ನುಂಟುಮಾಡುವದು ಕ್ರಯ ೨ ಆಣೆ.

೪. [illegible] ಕ್ರಯ ೩ ಆಣೆ.

ಈ ಪುಸ್ತಕಗಳನ್ನು ಕೆಳಗಿನ ವಿಳಾಸದ ರವಸ್ಥೆ ಕಳ್ಳುಹಿಸಿ ಬೇಗನೆ ಬರೆದು ತರಿಸಿಕೊಳ್ಳಿ.

ವಿಳಾಸ —ಮ್ಯಾನೇಜರ್ ವಿಕರ್ ಬುಕ್ ಡಿಪೋ, ಮೈಸೂರು.
,, ,, ,, ಬೆಂಗಳೂರು.


## THE FOREIGN MISSIONS AND GENERAL AGENCY.

ಮೇಲೆ ಕಂಡ ಏಜನ್ಸಿಯವರು ದೇಶೀಯ ವರ್ತಕರಿಗೂ ಇತರರಿಗೂ ಇಂಗ್ಲಾಂಡಿನಲ್ಲಿ ತಯಾರಾಗುವ ಯಾವ ಸಾಮಾನನ್ನು ಬೇಕಾದರೂ ಸುಲಭವಾದ ಕಮಿಷನ್ ತಕ್ಕೊಂಡು ಕಳುಹಿಸುವರು. ಆರ್ಡರು ಕಳುಹಿದ ಕೂಡಲೆ ಸಾಮಾನುಗಳು ಬಹು ಜಾಗ್ರತೆಯಾಗಿ ರವಾನೆ ಮಾಡಲ್ಪಡುವವು. ಈ ವಿಷಯದಲ್ಲಿ ತಿಳಿದುಕೊಳ್ಳಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕೆಂದು ಕೋರುತ್ತೇವೆ.

A. J. Bride,
*Manager,*
*29-35, City Road, London*

## ಹೊಸಪುಸ್ತಕ! ಹೊಸಪುಸ್ತಕ!!

ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ.

ಕಳೆದ ವರ್ಷ ಲಂಡನ್ ನಗರದಲ್ಲಿ ನಡೆದ ಈ ಮಹೋತ್ಸವವನ್ನು ವಿವರಿಸುವ ಈ ಪುಸ್ತಕವು ನೇತ್ರಾನಂದಕರವಾದ ಅನೇಕ ಚಿತ್ರಗಳಿಂದ ಶೋಭಿಸುತ್ತಿರುವದು ಎಲ್ಲರೂ ಅವಶ್ಯವಾಗಿ ತರಿಸಿಕೊಂಡು ಓದತಕ್ಕ ಪುಸ್ತಕ. ಕ್ರಯ ೨॥ ಆಣೆ. ಹಾಸಲು ಪ್ರತ್ಯೇಕ.

ವಿಳಾಸ :—ಮ್ಯಾನೇಜರ್, ಬುಕ್ ಡಿಪೋ, ಮೈಸೂರು.

## ROBINSON'S

## PATENT BARLEY.

## ರಾಬಿನ್‌ಸನ್‌ಯವರ

## ಬಾರ್ಲಿ ರಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಏವೆಗೋಧಿಯಿಂದ ಮಾಡಿದೆ. ಹಸ್ತಸ್ಪರ್ಶದಿಂದ ಅದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ನಂತರ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ಬಾಧೆಪಡುತ್ತಿರುವವರಿಗೆ ಬಲಕಾರಿಯಾದುದು ಮತ್ತು ಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹಣ್ಣಿನ ರಸವನ್ನು ಸಕ್ಕರೆಯನ್ನು ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥವಾದ ತೋರುವ ರೀತಿಗಳ ವಸ್ತು ಹಸ್ತು ಕೊಂಡರು. ಮಾರುತ್ತಾರದ್ದರಿಂದ ಕಾಂಬಿ ಯವರ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೊಹರಿನ ಮೊದಲನ್ನೂ ಕೆಳಗೆ ನಮ್ಮ ರುಜುವನ್ನು ನೋಡಿ ತೆಗೆದುಕೊಳ್ಳಬೇಕು.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೦೩ ನೇ ಇಸವಿ ಏಪ್ರಿಲ್ ತಾ॥ ೨೩ನೇ ಗುರುವಾರ.

## ಆಲ್ಬೇನಿಯದ ಗಲಭೆಯು.

ಸದ್ಯ ತುರ್ಕೀ ಸುಲ್ತಾನರ ಮನಸ್ಸು ತುಂಬಾ ಕಳವಳಗೊಂಡಿದೆ; ಆದರೆ ಅವರಿಗೆ ಇದು ಅಸಹಜವಾದ ವಿಷಯವಲ್ಲ. ಅಬ್ದುಲ್ ಹಮೀದರು ಸುಲ್ತಾನ್ ಪದವಿಗೆ ಬಂದಾರಭ್ಯ ಬಾಲ್ಕನ ಭಿತರದ ದಂಗೆಗಳನ್ನೂ ಪರರಾಜ್ಯಗಳಿಂದ ಹುಟ್ಟಿಸಲ್ಪಡುವ ಭಯೋತ್ಪಾತಗಳನ್ನೂ ಅಡಗಿಸಿ ನಿವಾರಣೆ ಮಾಡಿಕೊಳ್ಳುವದೇ ಕಾರ್ಯವಾಗಿದೆ. ಮ್ಯಾಸಿಡೋನಿಯದಲ್ಲಿ ಪ್ರಜಾ ಸನ್ಮತಿಗೆ ಭಂಗವುಂಟಾಗಿರುವದರಿಂದಲೂ, ಟರ್ಕಿಷ್ ಅಧಿಕಾರಿಗಳು ಜನರನ್ನು ಆಳುವದರಲ್ಲಿ ಪ್ರೀತಿ ವಾತ್ಸಲ್ಯಗಳನ್ನಿಡದೆ ಕಂಟಕರಾಗಿರುವದರಿಂದಲೂ ಪರರಾಜ್ಯಗಳವರು ಸುಲ್ತಾನರನ್ನು ಒತ್ತಿದರು, ಅವರಿಂದ ರಾಜ್ಯಾಡಳಿತದಲ್ಲಿ ಕೆಲವು ಬಗ್ಗೆ ಬದಲಾವಣೆಗಳನ್ನು ಮಾಡಿಸಬೇಕೆಂದು ಗೊತ್ತುಮಾಡಿ, ಅವರಿಗೆ ತಿಳಿಸಿದರು. ಈ ಬದಲಾವಣೆಗಳು ಇಂಥಿಂಥವುಗಳೆಂಬದನ್ನು ಕೆಲವು ವಾರಗಳ ಹಿಂದೆ ನಮ್ಮ ವಾಚಕರಿಗೆ ತಿಳಿಯಪಡಿಸಿರುತ್ತೇವೆ. ಸುಲ್ತಾನರು ಈ ಬದಲಾವಣೆಗಳನ್ನು ಮಾಡಿ ಅದರಿಗೆ ತರಪಡೋದರ ಮ್ಯಾಸಿಡೋನಿಯದ ಪ್ರಜೆಗಳು ದಂಗೆಯೇಳುತ್ತಾರೆಂತಲೂ, ಅವರು ಕೆಲವು ಕಾಲದಿಂದ ಇದಕ್ಕಾಗಿ ಸನ್ನಾಹಮಾಡುತ್ತಿದ್ದಾರೆಂತಲೂ ಪರರಾಜ್ಯಗಳವರು ಸುಲ್ತಾನರಿಗೆ ತಿಳಿಸಿದರು. ಈಚೆಗೆ ನೋಡುವದರಲ್ಲಿ ಸುಲ್ತಾನರು ಇಂಥ ಬದಲಾವಣೆಗಳನ್ನು ಮಾಡುವದೇ ಪ್ರಜಾ ಸನ್ಮತಿಯನ್ನು ಕಾಪಾಡುವದಕ್ಕೆ ಸಾಕಾಗಿರುವಂತೆ ಕಾಣುವದಿಲ್ಲ. ಮ್ಯಾಸಿಡೋನಿಯದಲ್ಲಿ ಜನರು ತಮ್ಮ ಮೇಲೆ ತುರ್ಕೀಯವರ ಅಧಿಕಾರವೇ ಇಲ್ಲದಂತೆ ಮಾಡಿಕೊಳ್ಳಬೇಕೆಂಬುವರಾಗಿರುತ್ತಾರೆ; ಈಗ ಆಗಬೇಕೆಂದು ಸೂಚಿಸಿರುವ ಬದಲಾವಣೆಗಳಲ್ಲಿ ಅವರಿಗೆ ತೃಪ್ತಿ ಸಾಲದು. ಆದ್ದರಿಂದ ಬದಲಾವಣೆಗಳನ್ನು ಮಾಡುವದಾಗಿ ಸುಲ್ತಾನರು ಒಪ್ಪಿಕೊಂಡುದರೊಂದಿಗೆ ಮ್ಯಾಸಿಡೋನಿಯದವರು ತುರ್ಕೀ ಸುಲ್ತಾನರ ಸೈನಿಕರನ್ನು ಕೊಂದು, ಕೆಲವು ಸ್ಥಳದ ಆವಡಗಳನ್ನು ನಡಿಸಿರುತ್ತಾರೆ. ಈಗ ಹೊಸದಾದ ಆಲ್ಬೇನಿಯ ಗಲಭೆಯು ಬಹಳ ಹೆಚ್ಚಾಗಿರುವದು. ರಾಜ್ಯಾಡಳಿತದಲ್ಲಿ ಹೊಸ ಕ್ರಮಗಳನ್ನು ಮಾಡಬೇಕೆಂದು ಸುಲ್ತಾನರು ಪ್ರಯತ್ನಪಟ್ಟದ್ದು ಮ್ಯಾಸಿಡೋನಿಯದ ಪಶ್ಚಿಮಭಾಗದಲ್ಲಿರುವ ಆಲ್ಬೇನಿಯನ್ ಜನರಲ್ಲಿ ಕೋಪವನ್ನು ಹೆಚ್ಚಿಸಿತು. ಸುಲ್ತಾನರು ತಮ್ಮ ಮಿಟ್ರೊವಿಟ್ಸ ಪ್ರೋವಿನ್ಸಿನಲ್ಲಿಗೆ ಮಹಮ್ಮದೀಯರನ್ನು ಮಾತ್ರವೇ ಅಲ್ಲ, ಕ್ರೈಸ್ತರನ್ನೂ ಸೇರಿಸಿಕೊಳ್ಳಬೇಕೆಂಬುದಾಗಿ ಅಪ್ಪಣೆ ಕೊಟ್ಟರು. ಇದರಿಂದ ಕೆಲವು ಮಂದಿ ಕ್ರೈಸ್ತರು ಸೈನ್ಯಕ್ಕೆ ಸೇರಿಕೊಂಡರು. ಹೀಗೆ ಸೇರಿಕೊಂಡ ಪಡೆಯಲ್ಲಿ ಒಂದಾನೊಂದು ಮಂದಿಯನ್ನು, ಇದ್ದಕ್ಕಿದ್ದಂತೆ ೧೧ ಮಂದಿಯನ್ನು ಆಲ್ಬೇನಿಯದವರು ಕೈಸೆರೆ ಹಿಡಿದುಕೊಂಡು, ಹೋದ ವರುಷ ರಷ್ಯಾದವರು ತಮ್ಮ ರಾಯಭಾರಿಯನ್ನು ಕಳುಹಿಸಿಕೊಟ್ಟದ್ದ ಮಿಟ್ರೊವಿಟ್ಸ ಎಂಬ ಪಟ್ಟಣಕ್ಕೆ ಮುತ್ತಿಗೆಹಾಕಿ, ಸ್ವಾಧೀನಪಡಿಸಿಕೊಂಡರು. ಆ ಪಟ್ಟಣದ ಕಾವಲುಗಾರರಾದ ತುರ್ಕೀ ಸೈನಿಕರಿಗೂ ಆಲ್ಬೇನಿಯದವರಿಗೂ ಯುದ್ಧ ನಡೆಯಿತು. ಕಡೆಗೆ ಆಲ್ಬೇನಿಯದವರೇ ಸೋತು ಓಡಿಹೋದರು. ಯುದ್ಧವಾದ ಮೇಲೆ ರಷ್ಯಾ ರಾಯಭಾರಿಯು ಆ ಸ್ಥಳಕ್ಕೆ ಹೋಗಿದ್ದಾಗ ಅತನನ್ನು ಗಾಯಮಾಡಿದರು; ಅತನು ಅದರಲ್ಲೇ ಮೃತಪಟ್ಟನು.

ಈಗ ಗಲಭೆಯನ್ನು ಹುಟ್ಟಿಸಿರುವ ಈ ಆಲ್ಬೇನಿಯನ್ ಜನರು ಯಾರೆಂದು ಸ್ವಲ್ಪ ವಿಚಾರಮಾಡಿ ನೋಡೋಣ. ಆಲ್ಬೇನಿಯಾ ದೇಶವು ಸರ್ವತ ಬೆಟ್ಟಮಯವಾಗಿರುತ್ತದೆ; ಅದು ತುರ್ಕೀ ರಾಜ್ಯದ ಪಶ್ಚಿಮ ಮೂಲೆಯಲ್ಲಿರುವದು. ಜನರಾದರೋ ಮಹಾ ಶೌರ್ಯಶಾಲಿಗಳಾಗಿರುವವರು. ಇದುವರೆಗೆ ಈ ದೇಶವನ್ನು ಯಾರೂ ಹೋಗಿ ನೋಡಿ ಬಂದಿಲ್ಲ. ಅಲ್ಲಿ ರೈಲ್ ರಸ್ತೆಗಳೂ ಹಾಕಿಲ್ಲ, ಸಿದ್ಧವಾದ ಟೆಲಿಗ್ರಾಫ್ ತಂತಿಗಳೂ ಇಲ್ಲ; ಈ ದೇಶದ ತೀರದಲ್ಲಿರುವದು, ಪ್ರಜಾಸಂಖ್ಯೆ ೧೨ ಲಕ್ಷ; ಇವರಲ್ಲಿ ಕ್ರೈಸ್ತರು ಇರುವರು, ಮುಸಲ್ಮಾನರು ಪ್ರಧಾನರೂ ಇರುತ್ತಾರೆ. ಅವರಲ್ಲೇ ಬೇರೆ ಬೇರೆ ಗುಂಪುಗಳುಂಟಾಗಿ ಒಬ್ಬರಮೇಲೊಬ್ಬರು ಬಿದ್ದು ಕಲಹ ಮಾಡುತ್ತಲೇ ಬಂದಿದ್ದಾರೆ. ಇಂಥಾ ಕಲಹಪ್ರಿಯರಾದ ಆಲ್ಬೇನಿಯನ್ ಜನರು ಒಗ್ಗಟ್ಟಾಗಿ ತಮ್ಮಲ್ಲೇ ರಾಜ್ಯಕ್ರಮಗಳನ್ನು ಮಾಡಿಕೊಳ್ಳುವರೆಂದೇ? ಆದರೆ ಈ ಜನರನ್ನು ಅಡಗಿಸಿ ವಶತೋಟಿಗೆ ತರಬೇಕೆಂಬುದಾಗಿ ಸುಲ್ತಾನರೂ ಪರರಾಜ್ಯಗಳವರೂ ಪ್ರಯತ್ನಪಟ್ಟಾಗ ಆಲ್ಬೇನಿಯದವರೆಲ್ಲಾ ಒಗ್ಗಟ್ಟಾಗಿ ಅಂಥಾ ಪ್ರಯತ್ನವನ್ನು ಹಾಳುಮಾಡಿದರು. ಆಲ್ಬೇನಿಯದವರು ಮಹಾ ಪರಾಕ್ರಮಶಾಲಿಗಳಾದ್ದರಿಂದ ಅವರನ್ನು ಇದುವರೆಗೆ ಯಾರೂ ಸರಿಯಾಗಿ ಅಡಗಿಸಲಾರದೇ ಇದ್ದಾರೆ. ಬೇರೆಗೆ ಸೂತ್ರ ತುರ್ಕೀ ಸುಲ್ತಾನರೇ ಅವರನ್ನು ವಶಪಡಿಸಿಕೊಂಡಿದ್ದಾರೆ. ಅವರಲ್ಲಿ ಅನೇಕರು ಸುಲ್ತಾನರಿಗೆ ಕಂದಾಯ ಕೊಡುವದನ್ನು ಕೊಡುವದೇ ಇಲ್ಲ. ಮ್ಯಾಸಿಡೋನಿಯದ ಸುತ್ತಲ ರಕ್ಷಕ ಆಲ್ಬೇನಿಯದವರು ಮುಸಲ್ಮಾನರು. ಇವರಲ್ಲಿ ಜನಸಂಖ್ಯೆಯು ಹೆಚ್ಚಾಗಿ ಒಂದಿರುವದರಿಂದಲೂ, ರೋಮ ಕೆಥೊಲಿಕ ಮತದವರಿಗೆ ಇಷ್ಟವಿಲ್ಲದ ಯುದ್ಧಭೀತಿಗಳಾಗಿದ್ದದರಿಂದಲೂ ಇವರು ಗುಂಪುಗುಂಪಾಗಿ ಸುತ್ತ ಮ್ಯಾಸಿಡೋನಿಯದ ಕ್ರೈಸ್ತರ ಮೇಲೆ ಬಿದ್ದು ಅವರನ್ನು ಹಿಂಸಿಸುತ್ತಲೂ, ಅವರ ಗೋಧಿ ಮುಂತಾದವುಗಳನ್ನು ಹೊತ್ತುಕೊಂಡು ಹೋಗುತ್ತಲೂ ಬಂದಿದ್ದಾರೆ. ಇಂಥಾ ಹಿಂಸೆಯನ್ನು ಸುಲ್ತಾನರ ಗಮನಕ್ಕೆ ತಂದರೂ ನಿವಾರಣೆ ಮಾಡದೆ ಇದ್ದರಲ್ಲಾ ಎಂತಲೂ, ಆದ್ದರಿಂದ ಆ ಹಿಂಸೆಯನ್ನು ತಪ್ಪಿಸಿಕೊಳ್ಳಬೇಕೆಂದರೆ ಸುಲ್ತಾನರು ತಮ್ಮನ್ನು ರಕ್ಷಣೆಗೆ ಸೈನ್ಯಕ್ಕೆ ಸೇರಿಸಿಕೊಳ್ಳಬೇಕೆಂತಲೂ ಮ್ಯಾಸಿಡೋನಿಯದವರು ಗೊಣಗುಟ್ಟುತ್ತಾರೆ.

ಈ ಆಲ್ಬೇನಿಯದವರು ಭಾಷೆಯಿಂದಾಗಿ ಯಾವ ಕಟ್ಟಳೆಗೂ ಒಳಪಡತಕ್ಕವರಲ್ಲ. ಕ್ರಮಕ್ಕೆ ಸಿಕ್ಕಿದ್ದ ರೆ ಅವರು ಮಾಡುವ ಕೆಲಸವು ಹಠದಿಂದ ಹಿಂದೆ ಸರಿಯದವರು ಎಂಬುದಾಗಿ ಯೋಚಿಸುವವರಾಗಿದ್ದಾರೆ. ಮಿಟ್ರೊವಿಟ್ಸದಲ್ಲಿ ರಷ್ಯಾದವರು ರಾಯಭಾರಿಯನ್ನು ತಂದಿಟ್ಟದ್ದು ಆಲ್ಬೇನಿಯದವರಿಗೆ ಸಮ್ಮತವಾಗಲಿಲ್ಲ. ಯಾಕೆಂದರೆ ಈ ರಾಯಭಾರಿಯು ಅವರ ಸ್ವೇಚ್ಛಾಪ್ರವರ್ತನೆಗಳನ್ನು ಆಗಿಂದಾಗ್ಗೆ ಮೇಲಕ್ಕೆ ಬರೆದು ತಿಳಿಸುವನೆಂಬುದಾಗಿ ಅವರು ತಿಳಿದುಕೊಂಡಿದ್ದರು. ಆದ್ದರಿಂದಲೇ ಅವರು ಆ ಅಧಿಕಾರಿಯನ್ನು ಕೊಂದುಹಾಕಿರುತ್ತಾರೆ.

ಆಲ್ಬೇನಿಯದವರು ಸೇರಿಕೊಂಡಿರುವ ಸೈನ್ಯವೇ ತುರ್ಕೀ ಸುಲ್ತಾನರ ಸೈನ್ಯಗಳಲ್ಲೆಲ್ಲಾ ಬಹಳ ಉತ್ಕೃಷ್ಟವಾದದ್ದು. ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲಿನಲ್ಲಿ ಸುಲ್ತಾನರು ಈ ಆಲ್ಬೇನಿಯ ಸೈನಿಕರನ್ನೇ ತಮ್ಮ ಅಂಗರಕ್ಷೆಗೆ ನೇಮಿಸಿಕೊಂಡಿರುವರು. ಆದ್ದರಿಂದ ಈಗ ಗಲಭೆ ಮಾಡುತ್ತಿರುವ ಆಲ್ಬೇನಿಯ ಜನರನ್ನು ವಶತೋಟಿಗೆ ತರುವದಕ್ಕೆ ಅವರ ಸೈನಿಕರನ್ನೇ ಸುಲ್ತಾನರು ಕಳುಹಿಸಿಕೊಡುವದು ಸಮಂಜಸವಾಗಲಾರದು. ಆದರೆ ಮ್ಯಾಸಿಡೋನಿಯ ವಿಲಾಯತಿನಲ್ಲಿ ಈ ಜನರ ಕಲಹ ದರೋಡೆ ಹಿಂಸೆಗಳನ್ನು ನಿವಾರಣೆ ಮಾಡದ ಹೊರತು ಪ್ರಜೆಗಳು ಸಮ್ಮತಿಯವರಾಗಿರಲಾರರು. ಈ ಭಾಗದಲ್ಲಿ ಪರರಾಜ್ಯಗಳ ರಾಯಭಾರಿಗಳೆಲ್ಲಾ ಸೇರಿ ಸುಲ್ತಾನರಿಗೆ ಒತ್ತಿ ಹೇಳುತ್ತಿದ್ದಾರೆ. ಅವರೀಗ ಏನುಮಾಡುವರೋ ಮುಂದೆ ನೋಡಬೇಕು.

## ಚೇಂಬರ್ಲೇನ್ ಯವರು ಮಾಡಿದ ನೋವುಪರ ಔಷಧವು.




೨೧

ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಕರೀರಕ್ಕೆ ಮೂಗು ಪಟು ಬಿದ್ದರೂ ಹೋರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತ್ವರಿತ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ನೀರಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋಗುತ್ತೆ. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೇನ್ ನೋವುಪರ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಉಪಯೋಗಿಸಿದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ಒಕ್ಕೆ ೧ರೂ. ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಲ್ಲಿಯೂ ಸಿಕ್ಕುವದು —

ಬಿ. ವಿ. ನರಸಿಂಹುಲು ಚೆಟ್ಟಿ,
ನಂ. ೨, ತಂಬುಸಾಮುಕರ ಬೀದಿ,
ಮದರಾಸ್.

## ಬೇರೆ ದೇಶಗಳಲ್ಲಿ ಮದುವೆ.

ಸ್ವಾತ್ರ್ಯದ ಬಗ್ಗೆ ವಿಚಾರದಲ್ಲಿ ಒಂದು ಇಂಗ್ಲೀಷ್ ಮಾಸ ಪತ್ರಿಕೆಯು ಕೆಲವು ವಿಷಯಗಳನ್ನು ಬರೆದು ಇದೆ ಎಂತಲೂ, ಅದೆಲ್ಲಾ ನಿಜ [illegible] ಎಂತಲೂ ಈ ದಿನ ಒಬ್ಬ ಬರಹಗಾರರು ಬರೆಯುವ [illegible]ಯನ್ನು ಆ ಪತ್ರಿಕೆಯು ಇದೇ ದಿನ ಪ್ರಕಟಿಸಿ, ಇಲ್ಲಿ ಅವರ ಅನುಮಾನವನ್ನು ಪರಿಹರಿಸಲು ಉದ್ಯುಕ್ತವಾಗಿದೆ. ಈ ನಿಂದೆಯಾಗಿ ಆ ಪತ್ರಿಕೆಯು [illegible] ಮಾತುಗಳಲ್ಲಿ ಅನೇಕ ಸಂಗತಿಗಳು ನಿಜವಲ್ಲ. ಅದು ಹ್ಯಾಗಂದರೆ—

೧. ಹಿಂದೂಸ್ಥಾನದಲ್ಲಿ ಮದುವೆಯು ಬರೀ ಕಂದು ಎಂಬ ಮತವು ಅದು ವ್ಯಭಿಚಾರದಿಂದಾದ [illegible] ಎಂಬ ಮಾತೂ ನಿಜವಲ್ಲ. ಹಿಂದೂ ಮತಸ್ಥರೆಲ್ಲಾ (ಅಂದರೆ, ಯೂರೋಪಿನವರಲ್ಲದವರೆಲ್ಲಾ) ಅನೇಕ ನೇಮ ನಿಯಮಗಳಿಗೆ ಒಳಪಟ್ಟು ಶಾಸ್ತ್ರೋಕ್ತವಾದ ಗುರುಗಳ ನೀತಿ [illegible] [illegible] ಹೆಂಡತಿ ಬಹಳ ಘನವಾದ ಮಾತು ದೇವರಿಂದ ನೇಮಿಸಲ್ಪಟ್ಟ [illegible] ಎಂತಲೂ [illegible] ಸಾಗಿದೆ.

ಕೆಲವು ಹಿಂದೂಸ್ಥಾನ ರಾಜ್ಯಗಳಲ್ಲಿ— [illegible] ಅಲ್ಲದೆ [illegible] (ಅಥವಾ ದೇವಸ್ಥಾನಗಳ) ವಿವಾಹಗಳು ನಡೆಯುವದಕ್ಕೆ ಅವಕಾಶವಿರುತ್ತದೆ. [illegible] ಕ್ರೈಸ್ತಮತದಲ್ಲಿ ಸೇರದೆ ಇರತಕ್ಕ ಜನರಿಗೋಸ್ಕರವೇ [illegible] ಆ ಮತದವರಿಗೆ ಅಲ್ಲ. ಆದರೆ ಇಂಥಾ ಬರೀ ಕರಾರಿನ ಮದುವೆಗಳು ಬಹಳ ಸ್ವಲ್ಪವೇ ನಡೆಯುವವು. ನಾಸ್ತಿಕರು ಹಿಂದೂ ಧರ್ಮ ಸಿದ್ಧಾಂತದ ನಂಬಿಕೆಯಿಲ್ಲದವರು ಅನೇಕ ಸೇರಿಕೊಂಡಿರುತ್ತಾರೆ.

[illegible] ಸ್ತ್ರೀಪುರುಷರ [illegible] ವಿವಾಹಗಳು [illegible] ನಡೆಯುವ [illegible] ವಿವಾಹ ಸಂಬಂಧದ [illegible] ಗೊತ್ತಾಗುವದು. [illegible] ಹಿಂದೂಗಳ ತನಕ ಒಬ್ಬರನ್ನೊಬ್ಬರು ಬಿಟ್ಟುಬಿಡುವದು [illegible] ವಿವಾಹ ಸಂಬಂಧವನ್ನು ಇಂಗ್ಲೀಷ್ [illegible] ಬಿಡುವದು. [illegible] ರೋಮನ್ ಕೆಥೊಲಿಕ ಸಂಗಡದವರು—ವಿವಾಹವಾಗುವದಕ್ಕೆ ಹಿಂದಲೇ ಸ್ತ್ರೀಪುರುಷರ ಸಂಗತ್ಯವಾಗಿದ್ದರೆ ಅಂಥಾದ್ದೇ [illegible] ಎಂತಲೂ, ಅಂಥವರ ವಿವಾಹವು [illegible] [illegible] ಸ್ತ್ರೀಯಾಗಲಿ ಸ್ಥಾಪಿಸಿದರೆಂದು [illegible] ಅಂಥಾ ಸ್ತ್ರೀಪುರುಷರ [illegible] ವಿವಾಹ ಸಂಬಂಧವನ್ನು ಬಿಡಿಸುವರೆಂದು [illegible] [illegible] [illegible] ಇಂಗ್ಲೆಂಡಿನ ಚರ್ಚಿನವರು [illegible] ಸ್ತ್ರೀಪುರುಷರನ್ನು [illegible] ಸಂಬಂಧವನ್ನು [illegible] ಸ್ತ್ರೀಪುರುಷರನ್ನು [illegible] ಬಿಡುಗಡೆ ಇಲ್ಲ; ಮತ್ತು ಇಂಗ್ಲೀಷ್ [illegible] ಪ್ರಕಾರ [illegible] ಸ್ತ್ರೀಪುರುಷರ [illegible] ಅವಕಾಶವಿಲ್ಲ.

೩. ವಿವಾಹ ಸಂಬಂಧವನ್ನು ಬಿಡಿಸಿಕೊಳ್ಳುವದು ಹಿಂದೂ ರಾಜ್ಯಗಳಲ್ಲಿ [illegible] ಎಂಬ ಮಾತು ನಿಜವಲ್ಲ. [illegible] ರಾಜ್ಯಗಳಲ್ಲಿ ವಿವಾಹ ಸಂಬಂಧವು ತಪ್ಪುವದಕ್ಕೆ ಎಂದಿಗೂ ಅವಕಾಶವಿಲ್ಲ. ಇದಕ್ಕೆ ಒಂದು [illegible] ಅಧಿಕಾರಿಯಿಂದ ಪ್ರತ್ಯೇಕವಾದ ಅಪ್ಪಣೆಯನ್ನು ಸ್ತ್ರೀಪುರುಷರು ತರಬೇಕಾಗಿರುವದು. ಇಂಥಾ ಅಪ್ಪ

ಯುವವು ಹುಗಾ ಕಷ್ಟ. ಅತ್ಯಲಾಗಿ ವಿಲಾಯತಿ ರಾಜ್ಯದಲ್ಲಿ ವರುಷಕ್ಕೆ ಅಂಥಾ ನೀಕರದ್ದಮೆಗಳು ಸರಾಸರಿ ೫೦೦ ಬರುತ್ತ ವರುಷದಲ್ಲಿ ಜನರು ೨,೫೦,೦೦೦ ಮದುವೆಗಳು ನಡೆಯುವ ಇಲ್ಲಿ ಆ ವರ್ಷದಲ್ಲಿ ವಿವಾಹ ಸಂಬಂಧವನ್ನು ಬಿಡುವ್ಯಗ ೨ ಬಂದಕಲಾವೆಲ( ೧೦೦ಕೆ ಸ್ತ್ರೀಪುರುಷರು ಜನಾ [illegible] [illegible]ವು ಸಾಕ್ಷ್ಯವಲ್ಲ. ಕಡೇ ಸ್ಥ ಳಗ ಬಿಂಗಳೂರಿನ ಯುರೋಪ್.

೪. ವಿವಾಹ ಸಂಬಂಧವನ್ನು ಬಿಡಿಸಿಕೊಳ್ಳುವವರ ಸಂಖ್ಯೆಯು ಸ್ಟೀಡನಲ್ಲಿ ತುಂಬಾ ಹೆಚ್ಚು. ಅಷ್ಟು ಮಟ್ಟಿಗೆ ಯುರೋಪಿನ ವ [illegible] ಆಗುವದಿಲ್ಲ. ಆದರೆ ಸಾಂದರವರು ಬರು ಉವ ಲಕ್ಷಗಳನ್ನು ನೋಡಲಾಗಿ ವಿವಾಹಸಂಬಂಧ ಬಿಡುವ್ಯಗ ಬರತಕ್ಕವಲ್ಲಿ ಮಾತ್ರನೇ ಒಂದು ಹಾಡಿನಷ್ಟು ಸ್ತ್ರೀಪುರು ಷ ಪ್ರಸಂಗವಾಗಿ ವಾಜೀಕ ಇಷ್ಟವರೆಂದು ಗೊತ್ತಾಗುತ್ತದೆ.

"[illegible] ಇಂಗ್ಲೆಂಡಿನಲ್ಲಿ ವ್ಯಭಿಚಾರಕ್ಕೆ ಶಿಕ್ಷೆಯಿಲ್ಲ ಇಲ್ಲ" ಎಂದು [illegible] ಹೇಳುತ್ತಲಿದೆ. ಹಿಂದುಸ್ಥಾನದಲ್ಲಿ ಅದು [illegible] ಎಂದು ತಿಳಿಯುತ್ತದೆ. ವ್ಯಭಿಚಾರಿಗಳೆನಿಸಿಕೊಂಡ ಸ್ತ್ರೀ [illegible]ರನ್ನು ಇಲ್ಲಿ [illegible] ಸಾಕ್ಷಿನ್ಯಾಯದಲ್ಲಿ ಮನುಷ್ಯರು [illegible] ಶಿಕ್ಷೆ ಕೊಡುತ್ತಾರೆ. ಹಿಂದು [illegible]ನದಲ್ಲಿ ವ್ಯಭಿಚಾರಿಗಳನ್ನು ಈ ಕಾಲದಲ್ಲಿ ಶಿಕ್ಷೆಯನ್ನ ಮಾಡ ಬಹುದೇ? ಬಿಡಬೇಕಾದಿ ಕಾಲದೇ? ಅಥವಾ ಅಂಥವ [illegible] ನಾಶಿರುವುದೇ?

ಮುಖ್ಯವಾಗಿ ಪಶ್ಚಿಮ ರಾಜ್ಯಗಳಲ್ಲಿ ಗಂಡ ಹೆಂಡರು ಗಾಢಸ್ನೇಹ [illegible] ಸಂಬಂಧ ಸತಿಪತಿ ಎಂದು ಹೇಳುವುದೇ ಕಷ್ಟ. ವಿವಾಹದ [illegible]ನವನು ಪರಿತ್ಯಾಗ ಮಾಡಿ ಅವಮಾನಕ್ಕೀಡಾಗಿ ಅಡೆಯುವ ಸ ಬರಲ್ಲಿ ಕಲ್ಪ. ವಕೀಲ ಮಾತು ಪತ್ರಿಕೆಗಳು ಅಂಥವರ [illegible] [illegible] ನೆ ಪ್ರಕಟಿಸಿರುವತ್ತವೆ ಇವನ್ನು ಓದಿಕೊಂಡು, ನಿ [illegible] ಪ್ರಾಮಾಣಿಕರಾದವರು — ಇಂಥ ಮಾತ್ರವಲ್ಲ ವ [illegible]ವಂಥ [illegible] ಅನ್ನುತ್ತಲಿ ವಿರುದ್ಧ [illegible] ಲಿ [illegible] [illegible] ಗಂಡ ಹೆಂಡರು ನಿಯಮವಾಗಿ ಸಂಸಾರವನ್ನು ಮಾಡ [illegible] ಗುತ್ತಿರುವವು. ಆದರದರ ಹೆಚ್ಚಿನ ರಗಳೂ ಬ್ರಿಕೆಟ್ಟಿಯ ದ್ದಾರೆ ಇಲ್ಲ. ವಿದ್ಯೆಯ ಒಂದು ಸೀಮಾಂತ ಒಡೆದೇ ಹೋದ ವ [illegible] ನಿವೇಶಕೆಯ್ಯು [illegible] ಹೇಳಿದಂತೆ ಪ್ರಕಟವಾಗುದು. ಇದೇನು ಆಶ್ಚರ್ಯ ಇಲ್ಲ.

## ವಿದೇಶ ವರ್ತಮಾನಗಳು.

ಸೋಮಾಲಿಲಾಂಡಿನಲ್ಲಿ ಇಂಗ್ಲಿಷರು ಮುಲ್ಲಾನಿನ ಕಡೆಯ ಸೈನಿಕರನ್ನು ಸಂಧಿಸಿ ಸಣ್ಣ ಸಣ್ಣ ಯುದ್ಧಗಳನ್ನು ಮಾಡುತ್ತಾ ಒಂದು ಕಡೆ ಇಂಗ್ಲಿಷರು ಕೆಲವು ಪತ್ರಗಳನ್ನು, ೧೦೦ ಒಂ ಟೆಗಳನ್ನು [illegible] ಹಿಡಿದುಕೊಂಡರು. ಇನ್ನೊಂದು ಕಡೆ ಇಂಗ್ಲಿ ಷರು ಇನ್ನಿಗಳಲ್ಲಿ ೪೦ ಜನರನ್ನು ಕೊಂದು, ಮಂದಿಯನ್ನು ಹಿಡಿದು ಹಿಡಿದರು; ೧,೦೦೦ ಒಂಟೆಗಳನ್ನೂ, ೨,೦೦೦ ಕುರಿಗಳ ನ್ನು ಇಂಗ್ಲಿಷರು ಸೆರೆ ಹಿಡಿದರು. ಮಾರನೇ ಇಂಗ್ಲಿಷ್ ಸೈನಿಕರು ಶ ತ್ರುಗಳನ್ನು ಸಂಧಿಸಿ ಅವರ ಮೇಲೆ ಯುದ್ಧವನ್ನು ೧೦ ಜನರನ್ನು ೨,೦೦೦ ಒಂಟೆಗಳನ್ನೂ ೩,೦೦೦ ಕುರಿಗಳನ್ನು ಹೈಸಿಡಿ ಹಿಡಿದುಕೊಂಡು ಬಂದಿರಾರೆ. ಇತ್ತೀಚೆಗೆ ಮುಲ್ಲಾನಿನ ಕಡೆಯವರಿಗೂ ಇಂಗ್ಲಿಷರಿಗೂ ಒಂದು ದೊಡ್ಡ ಯುದ್ಧ ಸಂಭವಿಸಬಹುದೆಂದು ಸು ದ್ದಿಯಾಗ ಬಂದಿದೆ.

●●●●

## ಸಾಹಿತ್ಯದಿಯಾನ.

ದಕ್ಷಿಣ ಧ್ರುವವನ್ನು ಪರಿಕ್ಷೆಸುವದಕ್ಕೋಸ್ಕರ [illegible] ಇಂಗ್ಲೀಷ್ ಸರ್ಕಾರದವರು ಒಬ್ಬರ ಬರ್ಲಿ ಎಂಬ ಸಂಗದಿಗನ್ನು ಸಿಕ್ಕಲಿ ಸಂ ಮುದ್ರಗಳ ಮೇಲೆ ಕಳುಹಿಸಿಕೊಟ್ಟದ್ದಲ್ಲ. ಎಷ್ಟು ದಿನಗಳಾ ದರೂ ಅವರ ಸುದ್ದಿಯೇ ಇಲ್ಲ, ಸರ್ಕಾರದವರು ಮತ್ತೊಂದು ಹಡಗ ನ್ನು ಕಳುಹಿಸಿದರು. ಈ ಹಡಗಿನವರು ಒಪ್ಪದಿಡು ಎಂ ಬ ಹಡಗಿನವರನ್ನು ಕಳೆದ ಜನವರಿ ತಿಂಗಳ ೧೯ನೇ ತಾರೀಖಿನ ಲ್ಲಿ ಕಂಡು ಹಿಡಿದರು. ಅವರೆಲ್ಲರೂ ಸುರಕ್ಷಿತವಾಗಿದ್ದರು. ಹಡಗಿ ನಲ್ಲಿ ಒಬ್ಬನು ಮಾತ್ರ ಖಾಯಿಲೆಯಿಂದ ಸತ್ತಿದ್ದನು. ಈಗ ಈ ಹಡಗಿನವರು ಪ್ರಸ್ತಾಪವನ್ನು ಕಳೆಯುವದಕ್ಕಾಗಿ ಒಂದು ಕಡೆ ಹುಲ್ಲಿನಲ್ಲಿ ಉಳಿದುಕೊಂಡಿದ್ದಾರೆ. ಅವರು ತಕ್ಕೊಂಡು ಹೋಗಿದ್ದ ಆ ಹಾರ ಪದಾರ್ಥಗಳಲ್ಲಿ ಕೆಲವು ಭಾಗವು ಕೆಟ್ಟುಹೋಗಿದ್ದ ದರಿಂದ ಗಾಡಿಗಳನ್ನು ಎಳೆಯುವದಕ್ಕೋಸ್ಕರ ತಕ್ಕೊಂಡುಹೋಗಿದ್ದ ನಾ ಯುಗಳೆಲ್ಲಾ ಸತ್ತುಹೋಗಿದ್ದವು. ಅದರಿಂದ ಹಡಗಿನ ಯಜಮಾನ ನಾದ ಕನ್ಯಾಂಕರ್ ಸ್ಕಾಟನೂ ಇನ್ನಿಬ್ಬರೂ ಗಾಡಿಗಳನ್ನು ತಾವೇ ಎಳೆಯುತ್ತಾ ದಕ್ಷಿಣಕ್ಕೆ ೯೪ ಮೈಲುಗಳ ದೂರ ಪ್ರಯಾಣಮಾಡಿ ದರು. ದಕ್ಷಿಣ ೮೨ನೇ ಡಿಗ್ರಿಯ ವರೆಗೂ ಮನುಷ್ಯರು ಯಾರೂ ಹೋಗಿರಲಿಲ್ಲ. ನವೆಂಬರ್ ೩೦ನೇ ತಾರೀಖಿನಲ್ಲಿ ಅವರ ಪ [illegible] ಮಂಜುಗಡ್ಡೆಯಿಂದ ಸುತ್ತಲ್ಪಟ್ಟಿತು.

●●●●

## ಕಾಬೂಲ್ ಸಂಸ್ಥಾನವನ್ನು ಹಿಡಿದದ್ದು.

ಕಾಬೂಲ್ ರಾಜಧಾನಿಯನ್ನು ವಶಮಾಡಿಕೊಳ್ಳುವದಕ್ಕಾಗಿ ಕ ರ್ನಲ್ ಮ್ಯಾಕ್ಡೊನೆಲ್ಡನು ಸೈನ್ಯವನ್ನು ತಕ್ಕೊಂಡು ಹೋದ ನು. ಪರಿಯ ಪ್ರಾಂತ್ಯವನ್ನು ಬಿಟ್ಟು ಒಂದು ದಿನದ ಪ್ರಯಾಣ ಮಾಡುವದರೊಳಗಾಗಿ ಕಾಬೂಲ್ ದೊರೆಯ ರಾಜ್ಯಾಶ್ರಿ ಸಿಕ್ಕಿದರಿಂ ದ ಹತ್ತಿರ ಗಳಗೆಯಲ್ಲಿ ಶತ್ರುಗಳು ಮೇಲೆ ಬಂದು ಬಿಳುವರೋ ಎಂದು ಶಂಕೆಯಿಂದ ಬ್ರಿಟಿಷ್ ಸೈನಿಕರು ಬಹು ಎಚ್ಚರಿಕೆಯಿಂದ [illegible] ಹೋದರು. ೬ಗೆ ಅರ್ಧ ದೂರ ಹೋದ

ಮೇಲೆ ಘಾಟಿಯಿಂದ ಕೆಳೆಯ ಪಟ್ಟಣ ಸಿಕ್ಕಿತು. ಅದಕ್ಕೀಗ ಸ್ವ ಲ್ಪ ದೂರದಲ್ಲಿರುವಾಗಲೆ ಶತ್ರುಗಳ ಕಡೆಯ ಕೆಲವು ಜನರು ಎದುರಿ ಗೆ ಬಂದು ಯುದ್ಧಕ್ಕೆ ನಿಂತರು. ಸ್ವಲ್ಪ ಹೊತ್ತಿನಲ್ಲೇ ಬ್ರಿಟಿಷರು ಆ ವರನ್ನು ಓಡಿಸಿ [illegible] ಅವರು ಪಟ್ಟಣದೊಳಕ್ಕೆ ಹೋಗಿ ಮರೆ ಮಾಡಿಕೊಳ್ಳಲು ಪಟ್ಟಣದವರು ಬಾಗಿಲುಗಳನ್ನೆಲ್ಲಾ ಮುಚ್ಚಿಕೊಂ ಡರು. ಆಗ ಬ್ರಿಟಿಷರು ಬಾಗಿಲ ಮೇಲೆ ಫಿರಂಗಿ ಪ್ರಯೋಗಿಸಿದರು ಬಾಗಿಲನ್ನು ಸ್ವಲ್ಪ ಒಡೆದು ಒಳಕ್ಕೆ ನುಗ್ಗಿದರು. ಇಷ್ಟರಲ್ಲಿ ಆ ಘಾಟಿಯ ಧೊರೆಯೂ ಅವನ ಮುಖ್ಯಸ್ಥರಲ್ಲಿ ಮೂರು ಮಂದಿಯೂ ಮನೆಗೆ ಹೋಗಿದ್ದದರಿಂದ ಪಟ್ಟಣದವರು ಏನೂ ಅನ್ಯಾಯವಾದ ದೆ ಇಂಗ್ಲಿಷರಿಗೆ ಶರಣಾಗತರಾದರು. ಪಟ್ಟಣವನ್ನು ಕಾಯುತ್ತಿದ್ದ ಸವಾರರು ಮುಂತಾದವರು ಓಡಿಹೋದರು. ಆ ಏಷದ ಬ್ರಿಟಿಷರ ದಳಪತಿಯು ಆ ಘಾಟಿ ಊರಿನಲ್ಲಿ ಉಳಿದ್ದ ಮುಖ್ಯಸ್ಥರಲ್ಲಿ ಒಬ್ಬ ನನ್ನು ಅಧಿಕಾರಿಯಾಗಿ ನೇಮಿಸಿದನು.

ನಾಲ್ಕನೆ ದಿನ ಬ್ರಿಟಿಷರು ಪುನಃ ಹೊರಟು ೧೯ ಮೈಲಿಗಳು ನಡೆದು ಕಾಬೂಲ್ ರಾಜಧಾನಿಯ ಮುಂದೆ ನಿಂತುಕೊಂಡರು. ಪಟ್ಟಣದ ಗೋಡೆಯ ಎತ್ತರವು ೪೦ ಅಡಿಗಳು ದಪ್ಪವಾಗಿಯೂ ತುದಿಯಲ್ಲಿ ೩ ಅಡಿಗಳ ದಪ್ಪವಾಗಿಯೂ ಇದ್ದುದರಿಂದ ಬ್ರಿಟಿಷರು ತಕ್ಕ ಪ್ರಂಡು ಹೋಗಿದ್ದ ಸಾಧಾರಣವಾದ ಫಿರಂಗಿಗಳಿಂದ ಗೋಡೆಯನ್ನು ಕೆಡ ವ್ರನದಕ್ಕೆ ಆಗಲಿಲ್ಲ. ಬಾಗಿಲನ್ನು ಒಡೆಯುವದೂ ಅಸಾ ಧ್ಯವಾಯಿತು. ಆದರೂ ಇಂಗ್ಲಿಷರು ಗೋಡೆಯನ್ನು ಹಲ್ಲಾ ಮಾಡಿಯುವದಕ್ಕೆ ಪ್ರಯತ್ನಮಾಡ ಪ್ರಾರಂಭಿಸಿದರು. ಒಳಗಿದ್ದ ಸ ವಾರರು ಕಾಲ್ಬಲದವರು ಓಡಿಹೋದರು. ರಾಜನು ಸಹ ಒಂದು ತಿಂಗಳ ಹಿಂದೆಯೇ ಸೂಕೆಯು ಎಂಬಲ್ಲಿಗೆ ಓಡಿಹೋಗಿದ್ದನು. ಬ್ರಿಟಿಷರು ಪಟ್ಟಣದೊಳಗೆ ಬರುತ್ತಿಯಾಗಿದ್ದ ಅರಮನೆಗೂ ಹೋಗಿ ಅದನ್ನು ವಶಮಾಡಿಕೊಂಡರು. ಶತ್ರುಗಳ ಕಡೆಯಲ್ಲಿ ೧೦೦ ಮಂದಿ ಸವಾರರೂ, ೫೦೦ ಮಂದಿ ಪದಾತಿಗಳೂ ಇದ್ದರು. ಪಟಾಲಗಳಲ್ಲಿ ೪೦೦ ಮಂದಿ ಕೊಲ್ಲಲ್ಪಟ್ಟರು. ಬ್ರಿಟಿಷರಿಗೆ ೧೦ ಕಡೆ ರೆಗಳೂ, ಕೆಲವು ತುಪಾಕಿಗಳೂ, ಮದ್ದು ಗುಂಡಿನ ಬಹಳ ವಾಗಿ ಸಿಕ್ಕಿದವು. ಇವುಗಳಲ್ಲಿ ಪ್ರಾಯಶಃ ಸೇರಿದ ತೋಟಾಗಳು ಬಹಳವಾಗಿದ್ದವು. ಪಟ್ಟಣದವರ ವಿನೀ ಗಲಭೆಮಾಡದೆ ಇದ್ದಾರೆ. ಕರ್ನಲ್ ಮಾಕ್ಡಾನಲ್ಡ್ ಕೆಲವು ದಿನಗಳಲ್ಲಿ ಸೂಕೆಗೆ ಹೋಗುವ ವರು.

## ಬೆಂಗಳೂರಿನ ವೃತ್ತಾಂತಗಳು.

ಕಳೆದವಾರ ಶನಿವಾರ ಮೈಸೂರಿನವರು ಬೆಂಗಳೂರಿನಿಂದ ನೀ ಲಗಿರಿಗೆ ಪ್ರಯಾಣ ಮಾಡಿದರೆಂದು ಕೇಳುತ್ತೇವೆ.

●●●●

ಮೈಸೂರು ಸರ್ಕಾರದವರು ಗೆಜೆಟಿನಲ್ಲಿ ಹೀಗೆ ಸೇರಿದ ಬನ್ನಿದೊಡನ ದೊಡ್ಡ ಆಡೆಗಳನ್ನು ಹರಾಜು ಮಾಡ ಹದ ಕ್ಕೆ ೪೦ ನೇರ ರೂಪಾಯಿ ಕೈವೊಲ್ಡಲ್ ಮಾಡಿದಾರೆ.

●●●●

ಕಳೆದವಾರ ರಾಜಧಾನಿಗೆ ಸೇರಿದ ಹವಾಮಾನದಲ್ಲಿ ಮೇಘ ಡ ಮೇಲು ಮ್ಯಾಯಲ್ಲಿ ೧೦೦ ಡಿಗ್ರಿಯವರೆಗೆ ಬೇಸಿಗೆ ಒದ್ದು ಉರಿ ವಾಗಿ ದೆ. ಪ್ರಸಿದ್ಧವಾದ ಕಾರ್ಯಪಟ್ಟು ಬೇಸಿಗೆಯನ್ನು ಅರಿ ಸಿದರು.

●●●●

ರಾಜಧಾನಿಯಲ್ಲಿ ಬಿಸಿಲಿನ ಧಗೆಯು ಅಪಾರವಾಗಿರುವದು. ಇಷ್ಟು ಮಳೆಯು ಬಾರದೆಕಾರಣಗಳಿ, ಮೋಡವಾದವಾಗಲಿ ಸ್ವ ಲ್ಪವೂ ಕಾಣಲಿಲ್ಲ. ಆದರೆ ಬೇರೆ ಪ್ರದೇಶಗಳ ಹೊರಗೆ ಏನೂ ಇಲ್ಲ ದೆ ಪ್ರಜಾ ಆರೋಗ್ಯವು ಅನುಕೂಲವಾಗಿರುವದು.

●●●●

ಮೂರನೇ ರಾಜಕುಮಾರಿ ಯವರು ಈಗ ಕ್ಷೇಮಪೂರ್ವಕವಾಗಿ ಬಾಲ್ ಬ್ರೂಕಿನಲ್ಲಿರತ್ತಾರೆ. ಡಾಕ್ಟರ್ ಅರುಮುಗಂ ಮೊದಲಿ ಯಾರು ಅವರ ಪ್ರಕೃತಿಯನ್ನು ನೋಡಿಕೊಳ್ಳುತ್ತಿದ್ದಾರೆ. ಈ ರು ಬಾಲಾವತಿಯವರು ಆರೋಗ್ಯ ಹೊಂದುತ್ತಿರುವರೆಂದು ಕೇಳುತ್ತೇವೆ.

●●●●

ವಿಲಾಯತಿ ರಾಜ್ಯದ ಯುವದ್ವಿಟ ಅರಸರು ಸಕ್ಕರೆಗಳಿಗಾಗಿ ರುವ ಮನೆ ವ್ಯಾಪಾರಿಯವರಿಗಿನ್ನೂ ಹಿಂದುಸ್ಥಾನದ ಮೈಸೂರು ಪಡದಿಯ ನೆರವಿನ ಬಿಡುವ ಎಂಬುವಗೆ ಸುತ್ತಲು ಒಂದು ಬಲವಾದ ಪ್ರಬಂಧ ಹುಟ್ಟುತ್ತಿದೆ. ಈ ಮಾತು ಸರಿಯೆ ಹಿಡಿದು ಪಟ್ಟಣದಕ್ಕೆ ಹನೋ ಕಾರಣವಿದೆಯೆಂದು ತೋರುವದು.

●●●●

ರಾಜಧಾನಿಗೆ ಸೇರಿದ ಕೈಸ್ತಿಕೊಳ್ಳೆಯಲ್ಲಿ ಮಿ. ಶಾಂತರಾಜೇ ಅರಸಿನವರು ಒಂದು ದೊಡ್ಡ ಬಂಗಲೆಯನ್ನು ಕಟ್ಟಿಸುತ್ತಿದ್ದಾರೆ. ಕಳೆದವಾರ ಅಲ್ಲಿ ಸುಂಟರ ಗಾಳಿ ಹುಟ್ಟಿ, ತಗಡಿನ ಮೇಲ್ಛಾವ ಣಿಯನ್ನು ಹಾರಿಸಿ, ಹೊಸದಿದ್ದ ಮಂಗಳೂರು ಹೆಂಚುಗಳನ್ನೆಲ್ಲಾ ಪು ಡಿಪುಡಿ ಮಾಡಿತು. ಆಗ ದೇವರ ದಯದಿಂದ ಆ ಬಂಗಲೆಯಲ್ಲಿ ಯಾರೂ ಇರಲಿಲ್ಲ.

●●●●

ಇದುವರೆಗೆ ಬೆಂಗಳೂರು ದಿಟ್ಟಣಕ್ಕೆ ಸೇರಿ ನನ್ನ ಮಹಾರಾ ಜರ ಅಳ್ವಿಕೆಗೆ ಒಳಪಟ್ಟಿದ್ದ ಕೆಲವು ಭಾಗಗಳನ್ನು ನಮ್ಮ ಸರ್ಕಾರ ದವರು ಹಿಂದಿಗೆ ಸೇರಿಸಿಕೊಂಡು, ಹಿಂದಿನ ಎಲ್ಲೆಕಟ್ಟು ಇಂಥಾದ್ದೆಂ ಬುದಾಗಿ ವಿವರಿಸಿ, ಈ ವಾರದ ಗೆಜೆಟ್ಟಿನಲ್ಲಿ ಪ್ರಕಟಿಸಿದ್ದಾರೆ. ಆ ನ್ನು ಮುಂದೆ ಈ ಪಂಚಿನ ಅಳ್ವಿಕೆಯ ವಿಚಾರವನ್ನೆಲ್ಲಾ ಇಂಡಿಯಾ ಗೌವರ್ನಮೆಂಟಿನವರೇ ವಹಿಸಿಕೊಳ್ಳುವರು.

●●●●

ಕಳೆದ ಶನಿವಾರ ಬೆಳಗ್ಗೆ ಮಹಾ ಮಹಾಕ್ಷತ್ರಿ ಮಹಾರಾಣಿಯವರ ಸನ್ನಿಧಾನದವರೂ, ಅವರ ಜ್ಯೇಷ್ಠಪುತ್ರಿಯವರೂ, ಶ್ರೀಮನ್ ಮಹಾ ರಾಣಿಯವರೂ ಪರಿವಾರ ಸಹಿತ ಬೆಳಗ್ಗೆ ೯ ಗಂಟೆಗೆ ರಾಜಧಾನಿಯ ನ್ನು ಬಿಟ್ಟು ಬೆಂಗಳೂರಿಗೆ ದಯಮಾಡಿದರು. ಗೌರವಾರ್ಥವಾಗಿ ತೋಪುಗಳು ಹಾರಿಸಲ್ಪಟ್ಟವು. ಆ ದಿನವೇ ಅವರು ಅಲ್ಲಿಂದ ನೀಲಗಿ ರಿಗೆ ಪ್ರಯಾಣ ಮಾಡಿದರೆಂದು ತಿಳಿಯುವದು.

●●●●

ಬೆಂಗಳೂರು ಸ್ಟೇಷನ್ನಿನಲ್ಲಿ ಸುಬೇದಾರ್ ಮೇಜರಾಗಿದ್ದ ವಿಚಾರ್ ಅಲ್ಲಾಸ್ ಬಹದ್ದೂರ್ ಎಂಬಾತನು ಹಿಂದಿನವಾರ ಬೆಂಗಳೂರಿನಿಂ ದ ಬೊಂಬಾಯಿಗೆ ಹೋಗಿ ಅಲ್ಲಿಂದ ಹಡಗು ಹತ್ತಿ ವಿಲಾಯತಿಗೆ ಪ್ರಯಾಣ ಮಾಡಿದನು. ಚಕ್ರವರ್ತಿ ಸಾರ್ವಭೌಮರ ಶ್ರೀವ ತಿಗಾಗಿ ಆತನು ನೇಮಿಸಲ್ಪಟ್ಟಿರುತ್ತಾನೆ. ಆ ದಿನ ಬೆಂಗಳೂರಿನಲ್ಲಿ ಸ್ಟೇಷನಿನವರು ವಾ ದ್ಯಘೋಷಗಳಿಂದೊಡನೆ ಆತನನ್ನು ಸ್ವರ್ಗಾ ಕರೆದುಕೊಂಡು ಬಂದು, ಉತ್ಸಾಹಪೂರ್ವಕವಾಗಿ ಬೀಳ್ಕೊಟ್ಟರು.

●●●●

ಹಿಂದಿನವಾರ ಶನಿವಾರ ಬ್ಲಾಕ್ ರೈಲ್ ಗಾಡಿಗಳು ಡಿಕ್ಕಿಹೊಡೆದು ಅನಾಹುತವಾಯಿತಷ್ಟೆ. ಇದರಲ್ಲಿ ೧೩ ವಾಗನ್ ಭಂಗಗಳೂ, ಎರ ಡು ಎಂಜಿನ್ ಗಾಡಿಗಳೂ ಒಡೆದು ಹೋದವು. ಮತ್ತು ಈ ಅಪಾ ಯದ ದೆಸೆಯಿಂದ ೩೩ ಗಂಟೆಗಳ ಹೊತ್ತು ರಸ್ತೆಯು ಕಟ್ಟಿಹೋ ಗಿತ್ತು. ಕಂಪೆನಿಯವರಿಗೆ ಸುಮಾರು ೬೦,೦೦೦ ರೂಪಾಯಿ ನಷ್ಟ ವಾಗಿರುವಂತೆ ಕೇಳುತ್ತೇನೆ. ಬೆಂಗಳೂರಿನಿಂದ ಡಿಸ್ಟ್ರಿಕ್ಟ್ ಮ್ಯಾಜಿ ಸ್ಟ್ರೇಟರೂ, ಪೋಲೀಸ್ ಸೂಪರಿಂಟೆಂಡರೂ, ಮುಂತಾದ ರೈಲ್ವೆ ಕಂಪೆನಿಯ ಅಧಿಕಾರಿಗಳೂ ಅನಾಹುತ ನಡೆದ ಸ್ಥಳಕ್ಕೆ ಹೋಗಿ ಪರಿಶೋಧನೆ ಮಾಡಿ ಬಂದರು. ಇವರುಗಳ ತೀರ್ಮಾನ ಇನ್ನೂ ಪ್ರಕಟ ವಾಗಲಿಲ್ಲ.

●●●●

ಬೆಂಗಳೂರು ದಂಡಿನಲ್ಲಿ ಜನರು ಬಿಸಿಲ ಬಾಧೆಗಾಗಿ ಮನೆಗಳ ನ್ನು ಕಟ್ಟಿಕೊಂಡು ವಾಸಮಾಡುತ್ತಿರುವದರಿಂದಲೂ, ಬಚ್ಚಲ ನೀ ರು ಹರಿಯಲು ಸಾಧನಗಳು ಅವಕಾಶವಿಲ್ಲದಿರುವದರಿಂದಲೂ ತುಂಬಾ ಅನಾರೋಗ್ಯವುಂಟಾಗಿದೆ. ಆದ್ದರಿಂದ ಮನೆಗಳನ್ನು ಒಡೆದುಹಾಕಿ ವಿಶಾಲವಾದ ಬೀದಿಗಳನ್ನು ಕಟ್ಟಿಸುವಂತೆಯೂ, ಬಚ್ಚಲ ನೀರು ಹೋಗುವದಕ್ಕೆ ಚೆನ್ನಾದ ಚರಂಡಿಗಳನ್ನು ಮಾಡಿಸುವಂತೆಯೂ ಕಮಿಷನರವರು ಒಂದು ಸಲಹೆಯನ್ನು ಇಂಡಿಯಾ ಗೌವರ್ನಮೆಂಟಿಗೆ ಬರೆದು ಕಳುಹಿಸಿದಾರೆ. ಈ ಕೆಲಸಕ್ಕೆ ಪ್ರಾರಂಭಕ್ಕಾಗಿ ೧೫ ಲಕ್ಷ ರೂಪಾಯಿಗಳು ಬೇಕಾಗುವದಕ್ಕೆ ಗೌವರ್ನಮೆಂಟಿನವರು ೧೦,೦೦೦ ಅಷ್ಟು ರೂಪಾಯಿ ತಟ ಕ ಬರುವ ಮಾಡ ಹೇಳಿದ ಸಡು. ಇವರ ಮೇಲೆ ಇಂಡಿಯಾ ಗೌ ವರ್ನಮೆಂಟಿನವರ ತೀರ್ಮಾನವನ್ನೇ ಮುಂದೆ ನಿರ್ಧಾರ ಕೇಳಲಿ.

●●●●

ಚನ್ನಪಟ್ಟಣದ ಬಗ್ಗೆ ಬಂದಿರು ಒಂದು ಪತ್ರದಿಂದ ಈ ವರೆಗೆ — "ಇಲ್ಲಿ ಹುಚ್ಚುನಾಯಿಗಳ ಕಾಟ ಬಹಳವಾಗಿದೆ. ಹುಚ್ಚುನಾಯಿ ಕಡಿ ದು ೩ ಜನರು ಸತ್ತಿರುವದು ಇದ್ದಾರೆ. ನಾಯಿಗಳನ್ನು ನಾಶ ೯೦ ಸ ಮಾಡುವುದು ಮುನಿಸಿಪಲ್ ಮೆಂಬರುಗಳು ಮಾಡಬೇ ಕಾಯುವದನ್ನು ಇಷ್ಟವಿಲ್ಲವಂತೆ. ಈಗ ಇಂಥಾ ನಾಯಿಗಳ ದೆಸೆ ಯಿಂದ ಕಸ್ತೂರಿನ್ನಿ ಹುಲಿಸಿ, ೭ ಜನರನ್ನು ತಿಂದಿಕೊಂಡಿವೆ. ಆ ನ್ನು ಪಟ್ಟಣದ ಇನ್ನೆಲ್ಲ ನಿಂದು ಗವನಕೊಡುವದೆಂದು ನಂಬಿದ್ದೇವೆ. ಮುನಿಸಿಪಲ್ ಮೆಂಬರಾಗಿದ್ದ ಪೌಜಿನ್ಸ್ಪೆಕ್ಟರ್ ತಿಮ್ಮಯ್ಯನವ ರು ಇವರ ಒಬ್ಬ ಪೂರನ್ನು ನೇಮಿಸಿಕೊಂಡಿಲ್ಲ. ಇವನಿ ಬದ್ಧ ದಲ್ಲಿಗನ ಬುಡ್ಡಿ ಮೇಲೆ ರಾಮಾನುಜಯ್ಯಂಗಾರವರಕ್ಕೆ ನೇಮಿಸಿದರೆ ಒಳ್ಳೆಯದು. ಮುನಿಸಿಪಲ್ ಕೌನ್ಸಿಲ್ ನವರನ್ನು ನೇಮಿಸಿಕೊಂಡ ರೆ ಒಳ್ಳೆಯದೆಂದು ಮುಂದಿನ ಆಮಲ್ದಾರರು ಸಹ ಬೇಕಾದ್ದು. ಹಾಗಿ ದ್ದರೆ, ಇವರು ವಿದ್ವತ್ಸಂಗತ ನೀಡಿ ಸುಲಭವಾಗಿ ಹಿಡಿದುಕೊಳ್ಳಬಹುದು ಎಂದು ಮಾತಾಭಾವಿಸುವರು. ಇವರ ರೆ. ವಿದ್ಯಾ ಕೇಂದ್ರಿನವರ ಲ್ಲಿ ಒಬ್ಬೊಬ್ಬ ಮೆಂಬರು ಇದ್ದಾರೆ. ರಾಮನ್ ಶ್ರೀ ಯವರೂ ಎಲ್ಲಾ ವಿಷ್ಯದಿಂದ ಇವರನ್ನು ನೇಮಿಸುವದು ಒಳ್ಳೆಯದು."

## ಮೈಸೂರು ಗೆಜೆಟ್ ಸಂಗ್ರಹ.

ಬೆಂಗಳೂರು ಡಿಸ್ಟ್ರಿಕ್ಟ್ ಅ. ಕ. ಮಿ. ಎ. ಎಂ. ನರಸಿಂಗ ರಾಯರು ಸಾಕ್ಷಿಗಳ ಹೇಳಿಕೆಯನ್ನು ಇಂಗ್ಲಿಷಿನಲ್ಲಿ ಸ್ವಹಸ್ತದಿಂದ ಬರೆಕೊಳ್ಳುವ ಅಧಿಕಾರ ಕೊಡಲ್ಪಟ್ಟಿದೆ.

ಕೋಲಾರ ಡಿಸ್ಟ್ರಿಕ್ಟ್ ಅ. ಸರ್ಜನ್ ಮಿ. ಟಿ. ವಿ. ಕುಪ್ಪುಸಾ ಮಿ ನೆ ವಲಿಯಾರ್ರಿಗೆ ಪ್ರಿವಿಲೆಜ್ ರಜಾ ಕೊಟ್ಟಿರುವ ಕಾಲದಲ್ಲಿ — (೧) ಹಾಸನದ ಅ. ಸರ್ಜನ್ ಮಿ. ಸಿ. ಎ. ಪಂಚವ್ವನವರು ಕೆಲಸ ದಿನ ಸಿವಿಲ್ ಸರ್ಜನರಾಗಿಯೂ, (೨) ವಿಕ್ಟೋರಿಯಾ ಆಸ್ಪತ್ರೆ ಸೆಟ್ ಅ. ಸರ್ಜನ್ ಮಿ. ಸಿ. ಅಪ್ಪಾಜಿರೆ ಮೊದಲಿಯಾರು ಹಾಸ ನದ ಅ. ಸರ್ಜನರಾಗಿಯೂ ಕೆಲಸ ನೋಡತಕ್ಕದ್ದು.

ಮಾಲೂರು ತಾಲ್ಲೂಕು ಅಮಲ್ದಾರ್ ಮಿ. ಎಂ. ಕೃಷ್ಣಸ್ವಾ ಮ್ಯಾಯಂಗಾರಿಗೆ ಒಂದು ತಿಂಗಳೂ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಗೋರಿಬಿದನೂರು ತಾಲ್ಲೂಕು ಶಿರಸ್ತೇದಾರ್ [illegible] ಸ್ವಾಮಿಯವರು ಮಾಲೂರಿನ ಅಮಲ್ದಾರಾಗಿ ಕೆಲಸ ನೋಡತಕ್ಕದ್ದು.

ಫಾರೆಸ್ಟ್ ಅ. ಕನ್ಸರ್ವೇಟರ್ ಮತ್ತು ಶಿಂಘೋಗ ಡಿ. ಫಾರೆ ಸ್ಟ್ ಆಫೀಸರ್ ಮಿ. ಬಿ. ಶಿ ರಾಮಸಿಂಗ್ ಯವರಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿವಮೊಗ್ಗೆಯ ಫಾರೆಸ್ಟ್ ಸಬ್ ಅ. ಕನ್ಸರ್ವೇಟರ್ ಮಿ. ಎಂ. ಶ್ರೀನಿವಾಸಾಚಾರ್ಯರು ಕೋಲಾರು ಡಿ. ಫಾರೆಸ್ಟ್ ಆಫೀಸಿನ ಛಾರ್ಜ ನ್ನಿ ವಹಿಸತಕ್ಕದ್ದು.

ಮೈಸೂರು ಪಬ್ಲಿಕ್ ವರ್ಕ್ಸ್ ಅಕೌಂಟುಗಳ ಅ. ಎಕ್ಸಾಮಿನ ರ್ ಮಿ. ಎ. ಅಪ್ಪಾಜಿ ಮೊದಲಿಯಾರ್ರಿಗೆ ಒಂದು ತಿಂಗಳೂ ಹದಿನೈ ದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಹಾರಾಜವೆ ವರ್ಕ್ಸ್ ಸಬ್ ಇಂಜಿನಿಯರ್ ಮಿ. ಸಿ. ಟಿ. ಕ ಭಾಲ್ ಯವರಿಗೆ ೨೩ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

## ರೈಲ್ವೆ ಅನಾಹುತಗಳು.

(ಒಬ್ಬ ಬಾತ್ಮೀದಾರರು ಬರೆದದ್ದು.)

ಇದೇ ತಿಂಗಳು ೮ನೇ ತಾರೀಖು ಬುಧವಾರ ಪ್ರಾತಃಕಾಲ ಕಡೂರು ಸ್ಟೇಷನ ಬಳಿ ಎರಡು ಮಾಲು ಗಾಡಿಗಳು ಒಂದಕ್ಕೊಂದು ಅಭಿಮುಖವಾಗಿ ಬಡಿದಾಡಿ ಇಂಜನ್ ಗಳೂ, ಕೆಲವು ವ್ಯಾಗನ್ ಗಳೂ ಮುರಿದು ಬಹಳ ನಷ್ಟವಾಗಿರುವುದು ಎಲ್ಲರಿಗೂ ಪರಿತಾಪವನ್ನುಂಟುಮಾಡುವುದು. ಸುಮಾರು ಹತ್ತು ಮಾಸಗಳ ಕೆಳಗೆ ಯಶವಂತಪುರದ ಹತ್ತಿರ ಕೊಂಡಿ ಬಿಟ್ಟು ಹೋದದ್ದರಿಂದ ಹಿಂದಿನ ಗಾಡಿಗಳು ಮುಂದಿನ ಗಾಡಿಗಳಿಗೆ ಬಡಿದು ನಷ್ಟವಾದದ್ದೂ, ಕೆಲವು ಸಂವತ್ಸರಗಳ ಕೆಳಗೆ ಮಳೂರಿನ ಬಳಿ ಸೇತುವೆಯು ಪ್ರವಾಹದಿಂದ ಕೊಚ್ಚಿಕೊಂಡು ಹೋದದ್ದರಿಂದ ಗಾಡಿಯು ಪ್ರವಾಹದೊಳಗೆ ಬಿದ್ದು ಅನೇಕ ಪ್ರಾಣಗಳು ನಷ್ಟವಾದದ್ದೂ ಎಲ್ಲರ ನೆನಪಿನಲ್ಲಿಯೇ ಇರಬಹುದು. ಸದರನ್ ಮಹಾರಾಷ್ಟ್ರ ರೈಲ್ವೆಯಲ್ಲಿ ಒಂದು ವರ್ಷದ ಒಳಗಾಗಿ ಎರಡು ಸಲ ರೈಲ್ವೆ ಅನಾಹುತಗಳಾದಂತಾದವು. ಹೀಗೆ ಪದೇ ಪದೇ ಈ ರೈಲಿನಲ್ಲಿ ಅನಾಹುತಗಳು ಘಟಿಸಲು ಕಾರಣಗಳನ್ನು ಪರಿಭಾವಿಸಿ ನೋಡಲು ಕೆಲವು ಮುಖ್ಯ ಕಾರಣಗಳು ವ್ಯಕ್ತಪಡುವವು. ಸದರನ್ ಮಹಾರಾಷ್ಟ್ರದ ರೈಲ್ ರಸ್ತೆಯು ಮದರಾಸ್ ರೈಲ್ ರಸ್ತೆ, ಜಿ. ಐ. ಪಿ. ರೈಲ್ ರಸ್ತೆ ಮುಂತಾದುವುಗಳಂತೆ ನೇರವಾಗಿ ಇಲ್ಲ. ಇದರ ರಸ್ತೆಯು ಬಹಳ ಮಟ್ಟಿಗೆ ವಕ್ರವಾಗಿರುವುದು. ಹೀಗೆ ವಕ್ರವಾಗಿದ್ದ ಕಡೆಗಳಲ್ಲಿ ಭೂಮಿಯು ಮಟ್ಟಸವಾಗಿರುವದು ಅತ್ಯಾವಶ್ಯಕವಾಗಿದ್ದಾಗ್ಯೂ, ಅನೇಕ ಕಡೆಗಳಲ್ಲಿ ಇಳಿಜಾರಾಗಿರುವದರಿಂದ ಇಂಜನನ್ನು ಹತೋಟಿಗೆ ತರುವುದು ಸುಲಭವಲ್ಲ. ಇದಲ್ಲದೆ ಈ ವಕ್ರವಾಗಿರುವ ಭಾಗಗಳು ಲಂಬವಾಗಿಲ್ಲದೆ, ಕಡಿಮೆಯಾಗಿರುವದರಿಂದ ಮುಂದೆ ದೈವವಶಾತ್ ಅಭಿಮುಖವಾಗಿ ಗಾಡಿಗಳು ಬಂದರೆ ಅವುಗಳನ್ನು ನೋಡುವದಕ್ಕಾಗುವದಿಲ್ಲ. ರಸ್ತೆಯಲ್ಲಿ ಇದೊಂದು ದೊಡ್ಡ ಕೊರತೆಯೇ ಸರಿ. ಇದಲ್ಲದೆ ಇತರ ರೈಲ್ವೆಗಳಲ್ಲಿನ ಇಂಜನ್ ಗಳಿಗೆ ಇರುವಂತೆ ಇವುಗಳಿಗೆ ವ್ಯಾಕ್ಯುಯಂ ಬ್ರೇಕ್ ಇಲ್ಲದೆ ಇರುವದರಿಂದ ಗಾಡಿಗಳನ್ನು ಥಟ್ಟನೆ ನಿಲ್ಲಿಸಲಾಗುವದಿಲ್ಲ. ಇದಲ್ಲದೆ ಗಾಡಿ ನಡೆಯಿಸುವವರು ಕಂಪನಿ ವಿಧಾಯಕಗಳಿಗೆ ವಿರೋಧವಾಗಿ ಸೇತುವೆಗಳ ಮೇಲೂ, ಸ್ಟೇಷನ್ ಹತ್ತಿರದಲ್ಲಿಯೂ, ಅತ್ಯಂತ ವೇಗವಾಗಿಯೇ ಗಾಡಿಯನ್ನು ನಡೆಸುವರು. ಇದು ಅನೇಕರಿಗೆ ಅನುಭವಸಿದ್ಧವಾಗಿಯೇ ಇರುವದು. ಇದಿಷ್ಟೇ ಅಲ್ಲ. ಪ್ರತಿಯೊಂದು ಸ್ಟೇಷನ್ ಗೂ ಪ್ರತಿದಿನವೂ ಸಾಕಾದಷ್ಟು ಗಾಡಿಗಳು ತಿರುಗಾಡಲು ಕಾಲನಿಯಾಮಕ ಪಟ್ಟಿಯನ್ನು ಕಂಪನಿಯವರು ಮಾಡಿ, ಅನುಕೂಲಪಡಿಸಿದ್ದಾಗ್ಯೂ, ಕೆಲವು ಸ್ಟೇಷನ್ ಮಾಸ್ಟರುಗಳು ತಮ್ಮ ಬುದ್ಧಿ ಕೌಶಲ್ಯವನ್ನು ತೋರ್ಪಡಿಸುವದಕ್ಕಾಗಿಯೋ, ಇಲ್ಲವೇ ಮತ್ಯಾವ ಕಾರಣದಿಂದಲೋ, ಈ ಗಾಡಿಗಳನ್ನು ಹೊರಡಿಸದೆ ಮನಬಂದಾಗ ಸ್ಪೆಷಲ್ ಗಾಡಿಗಳನ್ನು ಹೊರಡಿಸುವ ಏರ್ಪಾಡು ಮಾಡುವರು. ಇಂಥಾ ವೇಳೆಗಳಲ್ಲಿ ಗಾಡಿಗಳು ಸಂಧಿಸುವ ಸ್ಟೇಷನ್ ಗೊತ್ತುಮಾಡಿ, ಇದನ್ನು ಆ ಸ್ಟೇಷನ್ ಮಾಸ್ಟರಿಗಾದರೂ ತಿಳಿಸುವ ಏರ್ಪಾಡು ಇಲ್ಲದೆ ಇರುವದರಿಂದ ಗಾಡಿಗಳು ಇಂಥಾ ಸ್ಟೇಷನ್ನಲ್ಲೇ ಸಂಧಿಸುತ್ತೇವೆಂಬ ನಿಯಾಮಕವಿಲ್ಲದೆ, ಅನೇಕ ಅವ್ಯವಸ್ಥೆಗಳಿಗೂ ಅಪಾಯಗಳಿಗೂ ಆಕರವಾಗುವದು. ಇದಲ್ಲದೆ ರೈಲಿನಲ್ಲಿ ಸೇರಿರುವವರಲ್ಲಿ ಬಹುಮಟ್ಟಿಗೆ ಅವಿದ್ಯಾವಂತರೂ, ಅರ್ಧ ವಿದ್ಯಾವಂತರೂ ಆಗಿರುವದರಿಂದ ಇವರಲ್ಲಿ ಬಹಳಮಟ್ಟಿಗೆ ಉದಾಸೀನ್ಯಭಾವವು ನೆಲೆಗೊಂಡಿರುವುದರಿಂದ ಸ್ವಲ್ಪಮಟ್ಟಿಗೆ ಕಾರ್ಯಗಳು ಸಮರ್ಪಕವಾಗಿ ನಡೆಯಲು ಕುಂದಕವಾಗಿರುವದು. ಇವೇ ಮೊದಲಾದವು ಸರ್ವರಿಗೂ ತಿಳಿಯುವ ಕಾರಣಗಳಾಗಿರುವವು. ಒಳ ಆಳತಗಳನ್ನು ನೋಡಲು ಅನೇಕ ಇತರ ಕಾರಣಗಳು ಸಿಕ್ಕುತ್ತವೆಂಬುವದರಲ್ಲಿ ಸಂದೇಹವಿಲ್ಲ. ಇವನ್ನೆಲ್ಲಾ ಕಂಪನಿಯವರು ಪರ್ಯಾಲೋಚಿಸಿ, ಇನ್ನು ಮುಂದೆ ಇಂಥಾ ಅನಾಹುತಗಳು ಒದಗದಂತೆ ಮಾಡಿಯಾರೆಂದು ಪ್ರಾರ್ಥಿಸುತ್ತೇನೆ.

---

## ಕ್ರೈಸ್ತರ ವೆಂಕಟಮ್ಮನ ಮರಣ.

ಚನ್ನರಾಯಪಟ್ಟಣ—ಕಳೆದ ಜೂನ್ ಸೆಪ್ಟೆಂಬರಿನಲ್ಲಿ ಪ್ಲೇಗ್ ರೋಗವು ಈ ಊರಿಗೆ ತಲೆಹಾಕುತ್ತಲೇ ಸಕಲ ಕೋಮಿನವರೂ ಊರು ಬಿಟ್ಟು, ಒಂದೊಂದು ಜಾತಿಯವರು ಸಾಧ್ಯವಾದ ಮಟ್ಟಿಗೂ ಒಂದೇ ಕಡೆ ವಾಸಮಾಡಲು ಜೋಪಡಿಗಳನ್ನು ಕಟ್ಟಿಕೊಂಡರು. ವೈಶ್ಯರಾದರೋ ತಮ್ಮ ತಮ್ಮಲ್ಲಿಯೇ ವಿಶ್ವಾಸವಿಲ್ಲದ್ದರಿಂದ ಒಬ್ಬೊಬ್ಬರು ಒಂದೊಂದು ಕಡೆ ಹೋಗಿ ಸೇರಿಕೊಂಡರು. ಈ ಸಮಯದಲ್ಲಿ ಮೈಲಾರಿ ಪಾಮಶೆಟ್ಟಿಯು ಸಹ ತನ್ನ ಅತ್ತಿಗೆಯಾದ ವೆಂಕಟಮ್ಮನನ್ನು ಬಿಟ್ಟು ತಿಪಟೂರಿಗೆ ಹೋದನು. ಆಕೆ ಒಬ್ಬಂಟಿಗಳೂ, ವಿಧವೆಯೂ, ದಿನಗತಿಸಿದವಳೂ ಆಗಿದ್ದಳು. ಆಕೆ ಕಷ್ಟಕಾಲದಲ್ಲಿ ತನ್ನ ಜಾತಿಯವರನ್ನು ಬೇಡಿಕೊಂಡಾಗ್ಯೂ ಯಾರೂ ಆಕೆಯನ್ನು ಸೇರಿಸಿಕೊಳ್ಳಲು ಇಷ್ಟಪಡಲಿಲ್ಲ. ಕಡೆಗೆ ತಾನು ಮೊದಲು ವಾಸವಾಗಿದ್ದ ಕನ್ನಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಹೋಗಿ ಅಲ್ಲಿ ಸತ್ತು ಬಿದ್ದಿದ್ದಳು. ಜನರು ಪುನಃ ಊರು ಸೇರುವವರಿಗೂ ಈ ಸಂಗತಿ ಯಾರಿಗೂ ತಿಳಿಯಲಿಲ್ಲ. ಈಗ್ಯೆ ಒಂದು ವಾರದ ಕೆಳಗೆ ವೈಶ್ಯರು ಅಮ್ಮನವರ ಪೂಜೆಗೆ ಹೋಗಿ ಬಾಗಿಲು ತೆಗೆಯಲು ಒಳಗಿನಿಂದ ದುರ್ವಾಸನೆ ಬಂದದರಿಂದ ಈ ಸಂಗತಿ ಪೋಲೀಸಿಗೆ ತಿಳಿಸಲಾಯಿತು. ಅಧಿಕಾರಿಗಳು ಪಂಚಾಯತದಮುಂದೆ ಮಹಜರು ಮಾಡಿದಾಗ, ಒಂದು ಮನುಷ್ಯ ಶರೀರವು ಅಂಗತಂಗನಾಗಿ ಬಿದ್ದಿರುವದು ಕಂಡು ಬಂತು. ಅದರಲ್ಲಿ ಚರ್ಮ ಮಾಂಸಾದಿಗಳೇನೂ ಇಲ್ಲದೆ, ಅಸ್ಥಿಪಂಜರಮಾತ್ರ ಉಳಿದಿದೆ. ಕೈಮೂಳೆಯಲ್ಲಿ ಕಡಗವೂ ಎನೇ ಮೇಲೆ ಸೀರೆ ತುಂಡಿನ ಗುರ್ತೂ ಇದ್ದದ್ದರಿಂದ ಆಕೆ ವೆಂಕಟಮ್ಮನೇ ಹೌದೆಂದು ನಿಷ್ಕರ್ಷಿಸಿದರು. ಆಕೆ ಸುಮಾರು ಐದಾರು ತಿಂಗಳ ಕೆಳಗೆ ಪ್ಲೇಗಿನಿಂದ ಸತ್ತಂತೆ ತೋರುತ್ತದೆ.

೧. ಆಕೆಯ—ಮರಣವು ಭಯಂಕರವಾಗಿದ್ದರೂ ದೇವರ ಕೃಪೆಯಿಂದ ಇಷ್ಟು ದೀರ್ಘಕಾಲ ಆಕೆ ಜೀವಿಸಿದ್ದಕ್ಕಾಗಿ ನಾವು ಬಹಳ ಸಂತೋಷಪಡಬೇಕು. ದೇವರು ಸೃಷ್ಟಿಕರ್ತನಾಗಿರುವದರಿಂದ ಸಮಸ್ತರನ್ನು ಆತನೇ ಸಾಕಿ ಸಲಹುತ್ತಾನೆ. ಮನುಷ್ಯನ ಶರೀರವನ್ನು ರಕ್ತ, ಮಾಂಸ, ಚರ್ಮಾದಿಗಳಿಂದ ಬಹು ಚೋದ್ಯವಾದ ರೀತಿಯಲ್ಲಿ ನಿರ್ಮಿಸಿ, ಅದರಲ್ಲಿ ವಜ್ರವೈಢೂರ್ಯಕ್ಕಿಂತಲೂ ಘನತರವಾದ ಆತ್ಮವನ್ನು ಇರಿಸಿದ್ದಾನೆ. ಈ ಲೋಕದಲ್ಲಿರುವ ಎಲ್ಲಾ ಸೃಷ್ಟಿಗಳಲ್ಲಿ ಮನುಷ್ಯನೇ ಮೇಲಾದವನಾಗಿಯೂ, ರೂಪು ಲಾವಣ್ಯಗಳಿಂದ ತುಂಬಿ ಶೋಭಿಸತಕ್ಕವನಾಗಿಯೂ ಇದ್ದಾನೆ. ದೇವರು ಮನುಷ್ಯನ ಸುಖಕ್ಕಾಗಿ ಈ ಲೋಕವನ್ನು ಅತಿರಮಣೀಯವಾದ ಉದ್ಯಾನವನದಂತೆ ನಿರ್ಮಿಸಿ, ಅದರಲ್ಲಿ ಪಶುಪಕ್ಷಿ ಮೃಗಾದಿಗಳನ್ನು ಉಂಟುಮಾಡಿದ್ದಾನೆ. ಕಾಲಕಾಲಕ್ಕೆ ಮಳೆ ಬೆಳೆ ಮೊದಲಾದ ಸಕಲ ಸಂಪತ್ತನ್ನು ಒದಗಿಸಿಕೊಡುತ್ತಾನೆ. ಮನುಷ್ಯನು ಚೈತನ್ಯಸ್ವರೂಪನಾಗಿ ಬದುಕುವದಕ್ಕೆ ಇವೆಗಳೆಲ್ಲಾ ಸಹಕಾರಿಗಳಾಗಿದ್ದರೂ, ಮನುಷ್ಯರ ಪ್ರಾಣಾಧಾರಕ್ಕೆ ದೇವರ ಕೃಪೆಯೇ ಪ್ರಾಮುಖ್ಯವಾಗಿದೆ. ದೇವರ ಕೃಪೆಯಿಂದಲೇ ಮನುಷ್ಯನು ಬದುಕುತ್ತಾನೆ, ಚಲಿಸುತ್ತಾನೆ, ಇರುತ್ತಾನೆ. ಈ ಲೋಕದಲ್ಲಿ ಅನೇಕರು ನೂರಾರು ವರ್ಷ ಬಾಳಿ ಪುತ್ರ ಪೌತ್ರಾದಿಗಳನ್ನು ಪಡೆಯುತ್ತಾರಲ್ಲಾ. ಅನೇಕರು ಕೋಟ್ಯಂತರ ದ್ರವ್ಯಾದಿಗಳನ್ನ ಗಳಿಸಿ, ಐಶ್ವರ್ಯಸಂಪನ್ನರಾಗಿದ್ದಾರಲ್ಲಾ. ಇವೆಲ್ಲಾ ಸ್ವಾಮಿಯ ದೊಡ್ಡ ಕೃಪೆಯಲ್ಲವೇ? ಹಾಗಾದರೆ ಸಕಲರು ಆ ಮಹಾಸ್ವಾಮಿಗೆ ಪೂರ್ಣಕೃತಜ್ಞತೆಯುಳ್ಳವರಾಗಿ ನಡೆಯಲು ಬಾಧ್ಯಸ್ಥರಾಗಿದ್ದಾರೆ.

೨. ವೆಂಕಟಮ್ಮನ ಮರಣವು ಅಗೋಚರವಾದದ್ದು.—ಆಕೆ ಯಾರಿಗೂ ತಿಳಿಯದಂತೆ ಒಂದು ಕತ್ತಲ ಕೋಣೆಯೊಳಗೆ ಸತ್ತು ಬಿದ್ದಿದ್ದಳು. ಪ್ರಾಯಶಃ ತನ್ನ ಮರಣವು ತನಗೆ ತಿಳಿದಿರಲಾರದು. ಆಕಸ್ಮಾತ್ತಾಗಿ ಪ್ರಾಣಬಿಟ್ಟಂತೆ ತೋರುತ್ತದೆ. ಹಾಗೆಯೇ ಮರಣವು ಸಕಲರಿಗೂ ಗೋಚರವಾಗಿದೆ. ದೇವರು ಮನುಷ್ಯನನ್ನು ಚಿರಂಜೀವಿಯಾಗಿ ನಿರ್ಮಾಣ ಮಾಡಿದ್ದರೂ, ಮನುಷ್ಯನು ಪಾಪವಾತಕನಾಗಿಯೇ ಮರಣವನ್ನು ತಂದುಕೊಂಡನು. ಪಾಪದ ಫಲವೇ ಮರಣವು. ಆತ್ಮವು ಶರೀರವನ್ನು ಬಿಟ್ಟಗಲುತ್ತಲೇ ಶರೀರವು, ವಾಸಕರು ಇಲ್ಲದ ಮನೆಯು ಹಾಳಾಗಿ ಹೋಗುವ ಪ್ರಕಾರ, ಮಣ್ಣಾಗಿ ಹೋಗುತ್ತದೆ. ಮರಣವು ಈ ಲೋಕದ ಎಲ್ಲಾ ಶತ್ರುಗಳಲ್ಲಿ ಕಡೇ ಶತ್ರು. ಕಳ್ಳನು ಮನೆಯ ಯಜಮಾನನಿಗೆ ತಿಳಿಯದಂತೆ, ಕನ್ನಾ ಕಾಕುವದಕ್ಕೆ ಬರುವಪ್ರಕಾರ ಮರಣವು ತಿಳಿಯದ ಸಮಯದಲ್ಲಿ ನಮಗೆ ಸಂಭವಿಸುತ್ತದೆ. ಮರಣವು ಯಾರನ್ನೂ ದಾಕ್ಷಿಣ್ಯ ನೋಡುವದಿಲ್ಲ. ಈ ಲೋಕದಲ್ಲಿ ಯಾರೂ ಅದಕ್ಕೆ ಎದುರಿಲ್ಲ. ರಾಜಾಧಿರಾಜರೂ! ಪರಾಕ್ರಮಶಾಲಿಗಳೂ ಧರೆಗತರಾಗಿ ಕೆ[illegible]ಗಿದ್ದಾರೆ. ನಾವೂ ಈ ಶತ್ರುವಿನ ನಾಶ ಹೊಂದತಕ್ಕವರಾಗಿಯೇ ಇದ್ದೇವೆ.

ಈ ಮರಣವು ಸಕಲರಿಗೂ ಪ್ರಾಪ್ತವಾದಾಗ್ಯೂ—ಪಾಪಿಷ್ಟರಿಗೆ ಮಾತ್ರ ಕೇಡಾಗುತ್ತದೆ. ದೈವಭಕ್ತರಿಗೆ ಪ್ರಯೋಜನವಾಗುತ್ತದೆ. ಸೈತಾನನು ಪಾಪಿಷ್ಟರ ಅರಸನಾಗಿದ್ದುಕೊಂಡು ಹಿಂದಿನಿಂದ ತನ್ನ ದೂತರನ್ನು ಕಳುಹಿಸಿ, ಈ ಲೋಕದಲ್ಲಿರುವ ಅನೇಕ ಜನರನ್ನು ಮೋಸಗೊಳಿಸುತ್ತಾ ಇದ್ದಾನೆ. ಆತನ ಮಾಯಾಕಾಂತರಾಗಿರುವವರು ದೇವರನ್ನು ವಿರೋಧಿಸಿ, ಅನುಕ್ರಮವಾಗಿ ಲೆಕ್ಕವಿಲ್ಲದಷ್ಟು ಪಾಪಗಳನ್ನು ಮಾಡಿ, ಬೂದಿ, ಕಾಳಿ, ದುರ್ಗಿ, ಮೊದಲಾದ ವಿಗ್ರಹಗಳನ್ನು ಆರಾಧಿಸಿ, ಅಂಧಕಾರದಲ್ಲಿ ಮುಳುಗಿದ್ದಾರೆ. ಮರಣ ಸಮೀಪಿಸುವಾಗ ಇವರು ಗಡಗಡನೆ ನಡುಗುತ್ತಾ ಕಿರಿಚುತ್ತಾ ಇರುತ್ತಾರೆ. ಇಂಥವರು ಸತ್ತ ಕೂಡಲೆ ಇವರ ಆತ್ಮಗಳು ನರಕಲೋಕಕ್ಕೆ ಪ್ರಯಾಣವಾಗುತ್ತವೆ. ಅಲ್ಲಿ ಆರದಂಥಾ ಅಗ್ನಿಯೂ ತೀರದಂಥಾ ದುಃಖವೂ ಅವರ ಪಾಲಾಗುವವು. ಆದರೆ ದೇವರು ಸದ್ಭಕ್ತರಪಕ್ಷವಾಗಿದ್ದಾನೆ. ಅವರು ಪಾಪಕ್ಕೆ ಭಯಪಟ್ಟು ನೀತಿಮಾರ್ಗದಲ್ಲಿ ಜೀವಿಸುತ್ತಿರುತ್ತಾರೆ. ದೇವರು ಇವರಿಗಾಗಿ ಮೋಕ್ಷಲೋಕದಲ್ಲಿ ವಾಸಸ್ಥಾನಗಳನ್ನು ಏರ್ಪಡಿಸಿದ್ದಾನೆ. ಇವರು ಈ ಲೋಕವನ್ನು ಬಿಟ್ಟ ಕೂಡಲೆ ತಮ್ಮ ತಂದೆಯ ಮನೆಯನ್ನು ಸೇರುವರು. ಆ ಸ್ಥಳದ ಸಂತೋಷವನ್ನು ವರ್ಣಿಸಲಸಾಧ್ಯವು. ಎಂದೆಂದಿಗೂ ಸಂತೋಷವೇ ನೆಲೆಗೊಂಡಿರುವದು. ಮರಣವು ಭಕ್ತರನ್ನು ಸ್ವರ್ಗಲೋಕಕ್ಕೆ ಸೇರಿಸುವ ಒಂದು ಇಕ್ಕಟ್ಟಾದ ಬಾಗಿಲು. ಆದ್ದರಿಂದಲೇ ಭಕ್ತರು ಮರಣಕ್ಕೆ ಸ್ವಲ್ಪವಾದರೂ ಅಂಜುವದಿಲ್ಲ. ಮರಣಕ್ಕೆ ಸಮೀಪಸ್ಥನಾಗಿದ್ದ ಒಬ್ಬ ಭಕ್ತನು—"ಈ ಮರ್ತ್ಯಶರೀರವನ್ನು ಬಿಟ್ಟು ಕ್ರಿಸ್ತಸ್ವಾಮಿಯವರ ಸನ್ನಿಧಾನದಲ್ಲಿರಬೇಕೆಂದು ನಾನು ಬಹಳವಾಗಿ ಅಪೇಕ್ಷಿಸಿದ್ದೆ; ಅಂಥಾ ಶುಭಕಾಲವು ಈಗ ನನಗೆ ಪ್ರಾಪ್ತಿಸುವದಕ್ಕಿರುವದರಿಂದ ಬಹಳ ಸಂತೋಷಪಡುತ್ತೇನೆ" ಎಂದು ಹಿಗ್ಗಿ ನುಡಿದಿದ್ದಾನೆ.

೩. ವೆಂಕಟಮ್ಮನ ತಿಥಿ. ಆಕೆಯ ವಾರಸುದಾರರು ಬಂದನಂತರ ತಿಥಿ ಮಸ್ಕಿರೆ ನಡೆಸುವರೆಂದು ತೋರುತ್ತದೆ. ದೇವರು ನಮ್ಮ ಸುಖಕ್ಕಾಗಿ ತಾಯಿತಂದೆಗಳನ್ನೂ ನೆಂಟರಿಷ್ಟರನ್ನೂ ದಯಪಾಲಿಸಿದ್ದಾನೆ. ನಾವು ಅವರನ್ನು ಸನ್ಮಾನಿಸಬೇಕು. ಅವರು ಮುದುಕರಾಗಿರುವಾಗ ಅವರನ್ನು ಕೈಬಿಡಬಾರದು. ವಾರ್ಧಕ್ಯದಲ್ಲಿ ಮನಸ್ಸು ಸ್ಥಿರವಾಗಿರುವದಿಲ್ಲವಾದರಿಂದ ಅವರು ಒಂದುವೇಳೆ ನಮ್ಮನ್ನು ಅವಮಾನಪಡಿಸಬಹುದು. ಆದಾಗ್ಯೂ ನಾವು ಅವುಗಳನ್ನೆಲ್ಲಾ ತಾಳಿಕೊಳ್ಳಬೇಕು. ನಾವು ಹೀಗೆ ನಡೆಯದೆಹೋದರೆ ಒಂದುವೇಳೆ ಅವರು ಸಾಯುವರು. ಇದರಿಂದ ನಮಗೆ ಪಾಪಬರುತ್ತದೆ. ಪಾಪಿಷ್ಟನು ತಾನು ಮುಕ್ತಿ ಸಂಪಾದಿಸಬೇಕೆ ಹೊರತು ಸತ್ತವರಿಗೆ ಉತ್ತರಕ್ರಿಯಾದಿಗಳನ್ನು ಮಾಡುವದರಿಂದ, ಅವರನ್ನು ಮೋಕ್ಷಕ್ಕೆ ಸೇರಿಸುತ್ತೇನೆ ಎಂದು ಹೇಳುವದು ಬುದ್ಧಿತಪ್ಪು. ಪಿಂಡವು ಕಾಗೆಗಳಿಗೂ, ಭೋಜನವು ಕುಲಸ್ಥರಿಗೂ, ದಕ್ಷಿಣೆ ಮೊದಲಾದದ್ದು ಜೋಯಿಸರಿಗೂ ಸೇರುತ್ತದೆಯೇ ಹೊರತು ಸತ್ತವರಿಗೆ ಯಾವದೂ ಸಿಕ್ಕುವದಿಲ್ಲ. ಅವರು ಪಾಪಿಷ್ಠರಾಗಿದ್ದರೆ, ಅದಕ್ಕೆ ತಕ್ಕ ಫಲವನ್ನು ಅನುಭವಿಸಬೇಕು; ನಾವು ಬಿಡಿಸಿಕೊಡಲಾರೆವು. ಒಪ್ಪತ್ತಿನ ಭೋಜನದಿಂದ ಮುಕ್ತಿ ಕೊಡುವದಾದರೆ, ಸ್ವರ್ಗಲೋಕವು ಒಂದೇ ಒಂದು ಅಂಗುಲದಲ್ಲಿ ಉಂಟೆಂದು ಹೇಳಿದ ಹಾಗಾಯಿತು. ಇದು ಸುಳ್ಳಲ್ಲವೇ? ಇನ್ನು ಅನೇಕರು ಆಚಾರಾದಿಗಳನ್ನು ತಪ್ಪದೆ ಕೈಕೊಳ್ಳುತ್ತಾ, ಕಾಶಿ, ತಿರುಪತಿ, ಮೊದಲಾದ ಪುಣ್ಯಕ್ಷೇತ್ರಗಳಿಗೆ ಹೋಗಿ, ಕಾವೇರಿ, ಗಂಗಾ, ಯಮುನಾ, ನದಿಗಳಲ್ಲಿ ಸ್ನಾನಮಾಡುತ್ತಾರೆ. ಆದಾಗ್ಯೂ ಮೋಕ್ಷರಾಗಲೇ ಇಲ್ಲ. ಸಮಸ್ತವಿಧವಾದ ಪಾಪವೂ ಅವರಲ್ಲಿ ತುಂಬಿದೆ. ಈ ಲೋಕದಲ್ಲಿ ಯಾವನಾದರೂ ತನ್ನ ಸ್ವಂತ ಶಕ್ತಿಯಿಂದ ಮುಕ್ತನಾಗಲಾರನು. ದೇವರು ತಾನೇ ನಮ್ಮ ಪಾಪಗಳನ್ನು ತೊಳೆದು ಮುಕ್ತಿ ಕೊಡಬಲ್ಲನು. ಯೇಸುಕ್ರಿಸ್ತಸ್ವಾಮಿಯು ಈ ಲೋಕದಲ್ಲಿ ಅವತರಿಸಿದಾಗ, ತನ್ನ ಬಲದಿಂದ ಅನೇಕ ಅದ್ಭುತ ಕ್ರಿಯೆಗಳನ್ನು ನಡೆಸಿದನು. ಜನರ ಪಾಪಗಳನ್ನು ಪರಿಹರಿಸಿದನು. ಎಷ್ಟೋ ಜನರು ಯೇಸು ಕ್ರಿಸ್ತನ ಭಕ್ತರಾಗಿದ್ದಾರೆ. ಇವರು ಪಾಪಕ್ಕೆ ಭಯಪಡುತ್ತಾ, ಒಬ್ಬರನ್ನೊಬ್ಬರು ಪ್ರೀತಿಮಾಡುತ್ತಾ, ಉಪಕಾರ ಮಾಡುತ್ತಾ ಇರುತ್ತಾರೆ. ಕ್ರಿಸ್ತನು ಇವರಲ್ಲಿ ಸಂತೋಷ ಸಮಾಧಾನಗಳನ್ನು ಹುಟ್ಟಿಸುತ್ತಾ ಬರುತ್ತಾನೆ. ಇವರು ಮುಕ್ತಿಗೆ ಸೇರುತ್ತೇವೆಂಬ ದೃಢಭರವಸೆಯುಳ್ಳವರಾಗಿದ್ದಾರೆ. ವಾಚಕರೇ, ನೀವು ಸಹ ಶ್ರೀ ಯೇಸು ಸ್ವಾಮಿಯವರ ಚರಿತ್ರೆಯನ್ನು ಓದಿ ಆತನ ಭಕ್ತರಾಗಿ ನಡೆಯಿರಿ.

---

## ಇಂಡಿಯಾ ದೇಶದ ವೃತ್ತಾಂತಗಳು.

ವಿಜಯನಗರದ ಬಾಲ್ಯ ವಯಸ್ಸಿನ ಮಹಾರಾಜರವರು ಕೂನೂರಿನಲ್ಲಿದ್ದು ಈ ಬೇಸಿಗೆಯನ್ನು ಕಳೆಯಬೇಕೆಂದು ಅಲ್ಲಿಗೆ ಬಂದಿರುತ್ತಾರೆ.

◆◆◆◆

ಸಿಂಲಾ ಪ್ರಾಂತ್ಯದಲ್ಲಿರುವ ಸಭಾ ಸಂಸ್ಥಾನದ ರಾಜರವರು ವೃದ್ಧಾಪ್ಯದ ನಿಮಿತ್ತ ರಾಜ್ಯಾಧಿಕಾರವನ್ನು ತಮ್ಮ ಕುಮಾರರಿಗೆ ವಹಿಸಿಕೊಡಬೇಕೆಂದು ಅಪೇಕ್ಷಿಸುತ್ತಾರೆಂಬದಾಗಿ ಅಲ್ಲಿನ ಪತ್ರಿಕೆಯು ತಿಳಿಸಿದೆ.

◆◆◆◆

ಹಿಂದಿನ ವಾರ ಪ್ಲೇಗ್ ಉಪದ್ರವದಲ್ಲಿ ಹಿಂದುಸ್ಥಾನದೊಳಗೆ ೩೩,೯೦೦ ಜನರು ಮೃತಪಟ್ಟರಷ್ಟೆ. ಕಳೆದ ವಾರ ಆ ಸಂಖ್ಯೆಯು ೨೭,೫೮೭ ಕ್ಕೆ ಇಳಿಯಿತು. ಈ ವರುಷ ಅದಕ್ಕಿಂತ ಇನ್ನು ಕಮ್ಮಿಯಾಗುವದಿಲ್ಲವೆಂದು ತೋರುವದು.

◆◆◆◆

ಪಟಿಯಾಲಾ ಸಂಸ್ಥಾನದ ಬಾಲ್ಯ ವಯಸ್ಸಿನ ಮಹಾರಾಜರಿಗೆ ವಿದ್ಯಾಭ್ಯಾಸ ಮಾಡಿಸುವದಕ್ಕೆ ಇಂಡಿಯಾ ಗವರ್ನಮೆಂಟಿನವರು ಪಂಜಾಬಿನಿಂದ ಮಾಸ್ಟರ್ ಸ್ಟೇರ್ಕ ಎಂಬವರನ್ನು ನೇಮಿಸಿ ಕಳುಹಿರುತ್ತಾರೆ.

◆◆◆◆

ಹಿಂದುಸ್ಥಾನದಲ್ಲಿ ಕ್ಷಾಮ ಪೀಡಿತರ ಸಂಖ್ಯೆಯು ಈಗ ೫೫,೦೦೦ ಕ್ಕೆ ಬಂದಿದೆ. ಸ್ವಲ್ಪ ಹೆಚ್ಚು ಕಡಿಮೆ ಇವರೆಲ್ಲಾ ಮಧ್ಯಪ್ರಾಂತ್ಯಗಳಿಗೆ ಸೇರಿದ ರಾಯಪೂರ ಡಿಸ್ಟ್ರಿಕ್ಟಿಗೆ ಸೇರಿದವರು. ಇತರ ಕಡೆಗಳಲ್ಲಿ ಕ್ಷಾಮ ಬಾಧೆಯು ನಿವಾರಣೆಯಾಗಿರುವಂತೆ ಸಮಾಚಾರ ಬಂದಿರುವದು.

◆◆◆◆

ಹಿಂದುಸ್ಥಾನದಲ್ಲಿ ಮತಪ್ರಚಾರ ಕಾರ್ಯದಲ್ಲಿ ಆಸಕ್ತರಾಗಿದ್ದ ಪಂಜಾಬಿನ ಸ್ವಾಮಿ ಉಪಾಧ್ಯಾಯ ಬ್ರಹ್ಮಬಾಂಧವ ಎಂಬವರು ಈಗ ವಿಲಾಯತಿಯಲ್ಲಿ ಸಂಚಾರಮಾಡುತ್ತಾ, ಮತ ವಿಷಯವನ್ನು ಕುರಿತು ಉಪನ್ಯಾಸಮಾಡುತ್ತಾ ಇದ್ದಾರೆ. ಇವರು ರೋಮನ್ ಕ್ರೈಸ್ತರೆಂದು ತಿಳಿಯುವದು.

◆◆◆◆

ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ಪ್ಲೇಗನ್ನು ನಿಲ್ಲಿಸುವ ಕಾರ್ಯಗಳಿಗೆ ಸರಕಾರದವರು ೧೯೦೩—೦೪ ನೆ ಸಾಲಿನಲ್ಲಿ ೭೫,೦೦೦ ರೂ. ಖರ್ಚುಮಾಡುವಂತೆ ಗೊತ್ತು ಮಾಡಿದರು. ಮದರಾಸ್ ಸರಕಾರದವರು ಅದೇ ಉದ್ದೇಶಕ್ಕೆ ೩೦,೦೦೦ ರೂ. ಸಹಾಯಮಾಡುತ್ತೇವೆಂದು ವಾಗ್ದಾನ ಮಾಡಿದಾರೆ.

◆◆◆◆

ಲಂಕಾದ್ವೀಪದ ಮುಖ್ಯ ನಗರವಾದ ಕೊಲಂಬೋದಲ್ಲಿ ವಜ್ರೈಶ್ವರ್ಯವಂತನೆನಿಸಿಕೊಂಡ ಮುತ್ತಯ್ಯನ ಸೇವಕನಾಗಿದ್ದ ಜೆಸನು ತನ್ನ ಯಜಮಾನನ ಮನೆಯಲ್ಲಿದ್ದ ನಗ ನಾಣ್ಯಗಳ ಪ ಒಂದೂವರೆ ಲಕ್ಷ ರೂಪಾಯಿನಷ್ಟು ಅಪಹರಿಸಿದನೆಂತಲೂ, ಆನಂದ ಅವನು ಸಿಲೋನ್ ನಿಂದ ತಲೆ ತಪ್ಪಿಸಿಕೊಂಡು ಹೊರಟುಹೋದನೆಂತಲೂ ತಿಳಿಯುವದು.

◆◆◆◆

ವಿಲಾಯತಿಯ ಮಹಾರಾಜಾ ಚಕ್ರವರ್ತಿಯವರ ಜ್ಯೇಷ್ಠಪುತ್ರರಾದ ಪ್ರಿನ್ಸ್ ಆಫ್ ವೇಲ್ಸ್ ರವರು ಪತ್ನಿಯುತರಾಗಿ ಈ ವರುಷದ ಅಕ್ಟೋಬರು ತಿಂಗಳಲ್ಲಿ ಹಿಂದುಸ್ಥಾನಕ್ಕೆ ಬರುವರಾಗಿದಾರೆಂದು ವರ್ತಮಾನ ಹುಟ್ಟಿತ್ತಷ್ಟೆ. ಅವರು ದಯಮಾಡುವದು ಯಾವಾಗಲೋ ಇನ್ನೂ ನಿಷ್ಕರ್ಷೆಯಾಗಿಲ್ಲವೆಂದು ಸಿಂಲಾ ಪಟ್ಟಣದ ಬಾತ್ಮೀದಾರನು ತಿಳಿಸುತ್ತಾನೆ.

◆◆◆◆

ಭೌನಗರದಲ್ಲಿ ಹಿಂದಿನವಾರ ಸಮುಪೇಟೆಗೆ ಬೆಂಕಿ ಬಿದ್ದು, ವರ್ತಕರಿಗೆ ಸೇರಿದ ಸುಮಾರು ೧೫ ಲಕ್ಷ ರೂಪಾಯಿನ ಮಾಲುಗಳು ಸುಟ್ಟು ಬೂದಿಯಾದವು. ಮೊ॥ ಬದಣೆ ಎಂಬೊಬ್ಬ ವರ್ತಕನಿಗೆ ೩೦

ವಿರ ರೂಪಾಯಿನ ಸರಕು ಈಗ ನಷ್ಟವಾಗಿದೆ. ಹೋದ ವರುಷ ಈತನಿಗೆ ಬೆಂಕಿಯ ದೆಸೆಯಿಂದ ೬೫,೦೦೦ ರೂಪಾಯಿ ನಷ್ಟವಾಗಿತ್ತು.

◆◆◆◆

ಮುಂಬಾಯಿಯಲ್ಲಿ ಒಂದು ಭಾರೀ ನೆಯ್ಗೆಯ ಕಾರ್ಖಾನೆಯು ಬಸ ನಡೆಯದೆ ಕಳೆದ ವಾರ ನಿಂತುಹೋಯಿತು. ಹತ್ತಿಯು ಅ ವಾದಹಾಗೆಲ್ಲಾ ನೂಲು ಅಗ್ಗವಾಗದೆಹೋದದ್ದೇ ಇದಕ್ಕೆ ಕಾರಣವೆಂದು ತಿಳಿಯುವದು. ಈ ಕಂಪನಿಯಲ್ಲಿ ಸುಮಾರು ಮೂರು ಲಕ್ಷ ರೂಪಾಯಿ ನಷ್ಟವಾದ್ದರಿಂದ ಕಾರ್ಖಾನೆ ಮುಚ್ಚಿಹೋಗಿ, ಕಂಪನಿಯು ದಿವಾಳಿಯಾಯಿತು.

◆◆◆◆

ಮಂಗಳೂರಿನಲ್ಲಿ ಮಹಾ ಐಶ್ವರ್ಯವಂತರೆಂದು ಹೆಸರು ಪಡೆದಿರುವ ಮೊ॥ ಕೆ. ನಾರಾಯಣಶೆಟ್ಟರ ಭಾರೀ ಮನೆಗೆ ಕಳೆದವಾರ ಬೆಂಕಿಬಿದ್ದು ಸಂಪೂರ್ಣವಾಗಿ ಸುಟ್ಟುಹೋಯಿತು. ಹೊಸ ಮನೆ ಕಟ್ಟಬೇಕೆಂದು ವಿಪರೀತ ಸಾಮಾನು ಕೂಡಿಸಿದ್ದರು. ಅದೂ ಸುಟ್ಟು ಬೂದಿಯಾಯಿತು. ಮನೆಯಲ್ಲಿದ್ದ ಕಾಗದ ಪತ್ರಗಳು ಕೂಡ ಸ್ವಲ್ಪವೂ ಉಳಿಯದಂತೆ ನಾಶವಾಗಿವೆ.

◆◆◆◆

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ಪಟ್ಟದ ರಾಣಿ ಪುತ್ರರುಗಳ ಸಹಿತ ಕಳೆದವಾರ ಪೂನೆಗೆ ಬಂದು ಅಲ್ಲಿ ಎಂಟು ದಿವಸಗಳ ತನಕ ಇದ್ದರು. ಸುತ್ತ ಮುತ್ತಲಿನ ರಾಜವರ್ಗದವರು ಹೋಗಿ ಮಹಾರಾಜರನ್ನು ಸಂಧಿಸಿ, ಯೋಗಕ್ಷೇಮಗಳನ್ನು ವಿಚಾರಿಸಿದರು. ಮಹಾರಾಜರವರು ತಮ್ಮ ಜ್ಯೇಷ್ಠ ಪುತ್ರನ ದೃಷ್ಟಿ ಸಿಂಗಲ ಜೀವನಿಗೆ ಸರಿಯಾದ ವಧುವನ್ನು ಹುಡುಕಿ ಗೊತ್ತು ಮಾಡುವ ಉದ್ದೇಶದಿಂದ ಅಲ್ಲಿ ನಿಂತರೆಂದು ತಿಳಿದು ಬಂದಿದೆ.

◆◆◆◆

ಬೆಂಗಳೂರು ಪಟ್ಟಣದಲ್ಲಿ ಜನರು ಸಾಯುವದು ಬಹಳ ಕಡಿಮೆಯಾಗಿದೆ. ವಾರಕ್ಕೆ ೨,೦೦೦ ಜನರು ಮೃತರಾದರು. ಈ ಪ್ರಾಂತ್ಯದ ಪ್ಲೇಗಿನಲ್ಲಿ ಸಾಯುವವರು ೧,೮೦೦ ಮಂದಿ. ಈ ತಿಂಗಳ ೪ನೇ ತಾರೀಖಿಗೆ ಅಖೈರಾದ ೧ ವಾರದಲ್ಲಿ ಹಿಂದೂಸ್ಥಾನದೊಳಗೆ ಒಟ್ಟು ೩೩,೦೦೦ ಜನರು ಪ್ಲೇಗಿನಲ್ಲಿ ಸತ್ತು ಇರುತ್ತಾರೆ. ಈ ಉಪದ್ರವು ಇನ್ನೆಂದಿಗೆ ಹಿಂದೂಸ್ಥಾನದಿಂದ ನಿರ್ಮೂಲಹೊಂದಿ, ಪ್ರಜೆಗಳು ನೆಮ್ಮದಿಯಾಗಿದ್ದಾರೋ ಎಂಬದಾಗಿ ಸಕಲರೂ ಚಿಂತಿಸುತ್ತಿದ್ದಾರೆ.

◆◆◆◆

ಮುಂಬಾಯಿಯಿಂದ ೧೬ ಮೈಲಿ ದೂರದಲ್ಲಿರುವ ಅಂಧೇರಿ ಸ್ಟೇಶನಿಗೆ ಕಳೆದವಾರ ರೈಲು ಗಾಡಿ ಹಳಿಯ ಮೇಲಿಂದ ಇಳಿದುಹೋದರು. ಆ ಗಾಡಿಯನ್ನು ನೌಕರರು ಕೊಳೆದು ಸಿದ್ಧಪಡಿಸುತ್ತಿದ್ದಾಗ ಮುಂಬಾಯಿಯಿಂದ ಇನ್ನೊಂದು ರೈಲು ಬಹು ವೇಗವಾಗಿ ಬಂದು, ಅದಕ್ಕೆ ಢಕ್ಕಾ ಬಡಿಯಿತು. ಇದರಲ್ಲಿ ಪ್ರಯಾಣಿಕರು ತುಂಬಿದ್ದರು. ಅದರಲ್ಲಿ ೧೧ ಮಂದಿಗೆ ಗಾಯಗಳಾದವು; ಆ ವ್ಯಕ್ತಿ ೪ ಮಂದಿ ಬದುಕುವದಾಗಿಲ್ಲ. ಎಂಜಿನ ಗಾಡಿಯೂ, ೩ನೆ ತರಗತಿಯ ಮೂರು ಡಬ್ಬಿಗಳೂ ಮುರಿದುಹೋದವು.

◆◆◆◆

ಪಾಂಡಿಚೇರಿಯಲ್ಲಿ ಒಬ್ಬ ಹಿಂದೂಭಿಕ್ಷುಕನು ಸ್ಟೇಶನಿನ ಬಳಿಯಲ್ಲಿ ಅಡ್ಡಾಡುತ್ತಿದ್ದನು. ಪತ ಬಿದ್ದವರು ಏಕೆ ಅಡ್ಡಾಡುತ್ತೀ ಎಂದು ಕೇಳಿದ್ದಕ್ಕೆ ಆ ಭಿಕ್ಷುಕನು—ಸತ್ತ ಹೆಣಗಳ ಮಾಂಸ ತಿನ್ನುವದಕ್ಕೆ ಬಹಳ ಪ್ರೀತಿ, ಇತರ ಪದಾರ್ಥಗಳ ಮೇಲೆ ನನಗೆ ಇಚ್ಛೆ ಇದ್ದಿಲ್ಲ. ಆದ್ದರಿಂದ ನರಮಾಂಸ ತಿನ್ನುವದಕ್ಕೆ ಸ್ಮಶಾನದ ಬಳಿಗೆ ಹೋಗುವದು ನನ್ನ ಸ್ವಭಾವ ಎಂದನು... [illegible]

◆◆◆◆

ಗೋದಾವರಿ ಜಿಲ್ಲಾ ರಾಜಮಹೇಂದ್ರಪುರ ತಾಲ್ಲೂಕಿಗೆ ಸೇರಿದ ಗ್ರಾಮವೊಂದರಲ್ಲಿ ಈ ತಿಂಗಳ ೧೧ನೇ ತಾರೀಖಿನ ದಿನ ಸಕ್ಕರೆ ಮಾರುವ ಒಬ್ಬ ಅಗಸನು ತನ್ನ ಹೆಂಡತಿ ತನ್ನ ಮಾತು ಕೇಳದೆ... ತನ್ನ ನಾಲ್ಕು ಮಂದಿ ಮಕ್ಕಳನ್ನೂ, ಒಬ್ಬ ಗಂಡಸನ್ನೂ, ಇಬ್ಬರು ಹೆಂಗಸರನ್ನೂ ಕೊಂದುಹಾಕಿ, ತನ್ನನ್ನು ತಾನೇ ನೂರಿ ಗಾಯಪಡಿಸಿಕೊಂಡನು. ಈ ವ್ಯಕ್ತಿ ನಾಲ್ಕು ಮಂದಿ ಬದುಕಲಿಲ್ಲ. ಸಬ್ ಮ್ಯಾಜಿಸ್ಟ್ರೇಟರಾದ ಚಿಲ್ಲರ ರಾಮಯ್ಯನವರು ಬಹಳ ಧೈರ್ಯದಿಂದ ಆ ಅಗಸನ ಮೇಲೆ ಬಿದ್ದು ಅವನನ್ನು ಹಿಡಿದು ಲಾಕಪ್ಪಿಗೆ ಕಳುಹಿಸಿದರು. ಎಲ್ಲರೂ ರಾಮಯ್ಯನವರನ್ನು ಕೊಂಡಾಡುತ್ತಿದ್ದಾರೆ.

◆◆◆◆

ಹಿಂದೂಸ್ಥಾನದಲ್ಲಿ ಕ್ರಿಕೆಟ್ ಎಂಬ ಚೆಂಡಾಟದಲ್ಲಿ ಪ್ರವೀಣರೆನಿಸಿಕೊಂಡಿರುವ ಯುವಕರನ್ನು ವಿಲಾಯಿತಿಗೆ ಕಳುಹಿಸಿ ಅಲ್ಲಿ ಅನೇಕ ಊರುಗಳಲ್ಲಿ ಪಂದ್ಯ (ಮ್ಯಾಚ್) ಆಡಿಸಬೇಕೆಂಬದಾಗಿ ಗೊತ್ತಾಗಿದೆ. ವಿಲಾಯಿತಿಗೆ ಹೋಗುವವರನ್ನು ಆರಿಸಿಯಾಯಿತು. ಇವರ ದಾರಿ ಖರ್ಚು ಮುಂತಾದ್ದಕ್ಕೆಲ್ಲಾ ಸುಮಾರು ೬೦ ಸಾವಿರ ರೂಪಾಯಿ ಬೇಕಾಗಿದೆ. ಇದನ್ನು ಚಂದಾ ಎತ್ತುತ್ತಿದಾರೆ. ಈಗಾಗಲೇ ೧೫,೦೦೦ ರೂ. ಕೂಡಿ ಇದೆ. ನೇಪಾಳದ ಮಹಾರಾಜರು ೫,೦೦೦ ರೂ. ಕೊಡುವದಾಗಿ ವಾಗ್ದಾನ ಮಾಡಿದಾರೆ. ಮಧ್ಯದೇಶದ ಒಬ್ಬ ಮಹಾರಾಜರು ೧೦,೦೦೦ರೂ ಕೊಡುವರಾಗಿದಾರೆ. ಮುಂಬಾಯಿನ ಸಾಹುಕಾರರ ಇದಕ್ಕೆ ಬಹಳ ಹಣಕೊಡುತ್ತಾರೆಂದು ತಿಳಿಸಿರುವರು.

◆◆◆◆

ಕೊಲ್ಹಾಪುರ ರಾಜರ ಮನೆತನಕ್ಕೆ ಸೇರಿದ ಒಬ್ಬ ರಾಜನು ತನ್ನ ಬಳಿ ಇದ್ದ ಒಬ್ಬ ಸೇವಕ ತನಗೆ ವಿಷ ಹಾಕಬೇಕೆಂದಿದ್ದನೆಂದು ಆತನನ್ನು ಹಿಡಿದು ಅಕ್ರಮವಾಗಿ ಬೈದುಮಾಡಿದನು. ಇದು ಮೋಸದ್ದಿನ್ನು ಆಗಿ ರುಜುವಾತಾಗದೆ ಹೋಯಿತಾದ್ದರಿಂದ ಆ ಸೇವಕನನ್ನು ಬಿಡುಗಡೆ ಮಾಡಿದರು. ತರುವಾಯ ಆ ಸೇವಕನು ರಾಜರ ಮೇಲೆ ಅವರು ತನ್ನನ್ನು ಅಕ್ರಮ ಬೈದುಮಾಡಿದ್ದರೆಂತಾ ಫಿರ್ಯಾದುಮಾಡಿದನು. ಹೆಡ್ ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ದರ್ಯಾಫ್ತು ಮಾಡಿ, ಆ ರಾಜನಿಗೆ ೬ ತಿಂಗಳ ಸಜಾ, ೫೦೦ ರೂಪಾಯಿ ಜುಲ್ಮಾನೆ ಎಂಬ ಶಿಕ್ಷೆಯನ್ನು ವಿಧಿಸಿದರು. ರಾಜನು ಡಿಸ್ಟ್ರಿಕ್ಟ್ ಜಡ್ಜರಲ್ಲಿ ಅಪೀಲ್ ಮಾಡಿಕೊಂಡನು. ಅವರು ದರ್ಯಾಫ್ತುಮಾಡಿ, ಕೆಳ ಕೋರ್ಟಿನ ತೀರ್ಪನ್ನೇ ಖಾಯಂಮಾಡಿರುತ್ತಾರೆ.

◆◆◆◆

ಮದರಾಸ್ ಹೈಕೋರ್ಟಿನಲ್ಲಿ ಜಡ್ಜಿಯಾಗಿರುವ ಸರ್ ವಿ. ಭಾಷ್ಯಂ ಐಯಂಗಾರರು ೬೦ ವರುಷ ವಯಸ್ಸು ಮೀರಿದವರಾಗಿರುವದರಿಂದ ಅವರು ಕಾನೂನಿನ ಪ್ರಕಾರ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಇರುತ್ತಾರೆಂಬದಾಗಿ ಕಳೆದವಾರ ತಿಳಿಸಿದ್ದೆವಷ್ಟೆ. ಈಗ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಅವರ ಪಾಂಡಿತ್ಯವನ್ನೂ ಕೆಲಸದ ಅನುಭವವನ್ನೂ ನೋಡಿ, ಸರ್ ಭಾಷ್ಯಂ ಐಯಂಗಾರರು ಇನ್ನೂ ಆರು ತಿಂಗಳು ಹೈಕೋರ್ಟಿನಲ್ಲಿ ಜಡ್ಜಿಗಳಾಗಿ ಕೆಲಸ ಮಾಡುತ್ತಿರಬಹುದು ಎಂಬದಾಗಿ ಹುಕುಂ ಕಳುಹಿಸಿದರು. ಅದ್ದರಿಂದ ಸರ್ ಭಾಷ್ಯಂ ಐಯಂಗಾರರು ಇನ್ನಾರುತಿಂಗಳ ತನಕ ಜಡ್ಜಿಗಳಾಗಿ ಕೆಲಸ ನೋಡುವವರಾಗಿಯಿದ್ದಾರೆ ಎಂದು ಸಂತೋಷಪಡುವೆವು.

◆◆◆◆

ಗೋದಾವರಿ ಜಿಲ್ಲೆಗೆ ಸೇರಿದ ಕೆಲವು ಗ್ರಾಮಗಳಲ್ಲಿ ಗೌಡಾಳಿಗಳಲ್ಲಿ ಒಂದು ವಿಚಿತ್ರವಾದ ಪದ್ಧತಿ ಇರುತ್ತದೆ. ಅವರಲ್ಲಿ ಮಕ್ಕಳು ಆಂಗಹೀನರಾಗಿ ಜನಿಸಿದರೆ ಅಂಥಾ ಮಕ್ಕಳನ್ನು ಮನೆಯಲ್ಲಿಟ್ಟುಕೊಳ್ಳದೆ ಬೇರೆ ಒಂದುಕಡೆ ಇಟ್ಟು, ಅದನ್ನು ನೋಡುವ ಜನರಿಗೆ ತಲಾ ಇಷ್ಟೆಂತಾ ಹಣವನ್ನು ಕೂಡುವರು. ಅಂಥಾ ಅಂಗಹೀನ ಮಕ್ಕಳಿಗೇನ ದರೂ ಮದುವೆಯಾದ್ದ ಪಕ್ಷದಲ್ಲಿ ಆ ವರನನ್ನು ಮನೆಯಲ್ಲೇ ಇಟ್ಟುಕೊಳ್ಳುತ್ತಾರಂತೆ. ಈಚೆಗೆ ಆ ಜನರಲ್ಲಿ ಒಬ್ಬ ಹೆಂಗಸು ತನ್ನ ಮೂರು ವರುಷ ವಯಸ್ಸಿನ ಅಂಗಹೀನನಾದ ಮಗನಿಗೆ ೫೦೦ ರೂಪಾಯಿ ಕೊಟ್ಟು ೨೦ ವರುಷದ ಒಂದು ಹುಡುಗಿಯನ್ನು ತಂದು ಮದುವೆಮಾಡಿಬಿಟ್ಟು, ಮಗನನ್ನು ಮನೆಯಲ್ಲೇ ಇಟ್ಟುಕೊಂಡಿದಾಳೆ. ಈಗ ಈ ವಿಷಯವು ಕೋರ್ಟಿಗೆ ಒಂದು ಸೆಷನ್ಸ್ ಜಡ್ಜರು ದರ್ಯಾಫ್ತು ನಡಿಸುತ್ತಿದಾರೆ.

◆◆◆◆

ಕಲ್ಕತ್ತಾ ಪಟ್ಟಣದ ಕೆಲವು ಭಾಗಗಳನ್ನು ಹೊಸದಾಗಿಯೂ ಪ್ರಜಾ ಆರೋಗ್ಯಕ್ಕೆ ಅನುಕೂಲವಾಗಿಯೂ ಕಟ್ಟುವ ವಿಚಾರದಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಈಗತಾನೇ ಒಂದು ಹುಕುಮನ್ನು ಕೊಟ್ಟಿರುತ್ತಾರೆ. ಇದರಿಂದ ತಿಳಿದು ಬರುವದೇನಂದರೆ—ಈ ಪಟ್ಟಣದಲ್ಲಿ ಹೊಸದಾಗಿ ರಸ್ತೆಗಳನ್ನು ಹಾಕುವದಕ್ಕೆ ಸುಮಾರು ಐದು ಕೋಟಿ ರೂಪಾಯಿ ಖರ್ಚುಮಾಡಬೇಕಾಗುವದು. ಅಂಗಡಿ ಮನೆ ಕಟ್ಟುವದಕ್ಕೆ ಜಾಗವನ್ನು ವಿಕ್ರಯಮಾಡುವದರಿಂದ ೨೫ ಲಕ್ಷ ರೂಪಾಯಿ ಹುಟ್ಟುವದು ಆಗುತ್ತೆ. ಉಳಿದ ಹಣವನ್ನು ಮ್ಯುನಿಸಿಪಲ್ ಕಮಿಟಿಯವರು ಹ್ಯಾಗೆ ಒದಗಿಸಬೇಕೆಂದರೆ, ಗವರ್ನಮೆಂಟಿನವರು ೫೦ ಲಕ್ಷ ರೂಪಾಯಿ ಗ್ರಾಂಟು ಕೊಡುತ್ತಾರೆ. ಸುಮಾರು ೨೫ ಲಕ್ಷ ರೂಪಾಯಿಗಳನ್ನು ಮ್ಯುನಿಸಿಪಾಲಿಟಿಯವರು ಸಾಲ ಮಾಡಬೇಕು. ಮತ್ತು ಇನ್ನೂ ಸಾಲದೆ ಬರುವ ಹಣವನ್ನು ಮ್ಯುನಿಸಿಪಲ್ ಉತ್ಪತ್ತಿಯಿಂದ ಕೊಡಬೇಕು. ಈ ಭಾಗದಲ್ಲಿ ಇಂಡಿಯಾ ಗವರ್ನಮೆಂಟಿನವರು ಸರಿಯಾದ ಒಂದು ಕಾನೂನು ಮಾಡುವವರಾಗಿದ್ದಾರೆ.

◆◆◆◆

ಲಾರ್ಡ್ ಕರ್ಜನ್ ಪ್ರಭುಗಳು ಹಿಂದೂಸ್ಥಾನದ ವೈಸರಾಯ ಪದವಿಗೆ ಬಂದು ನಾಳೆ ಜನವರಿಗೆ ಐದು ವರ್ಷಗಳಾಗುವವು. ಆಗ್ಯೆ ಅವರು ಕೆಲಸವನ್ನು ಬಿಟ್ಟು ವಿಲಾಯಿತಿಗೆ ಹೊರಟು ಹೋಗುತ್ತಾರಲ್ಲಾ. ಇವರು ಇನ್ನು ಕೆಲವು ಕಾಲ ವೈಸರಾಯ ಪದವಿಯಲ್ಲಿದ್ದರೆ ಹಿಂದೂಸ್ಥಾನದ ಕಾರ್ಯಭಾರಗಳು ಬಹಳ ಚೆನ್ನಾಗಿ ಆದಾವಲ್ಲಾ ಎಂಬದಾಗಿ ಸಕಲರೂ ಚಿಂತಿಸುತ್ತಿದಾರೆ. ಈ ಸಂದರ್ಭದಲ್ಲಿ ಸಿಂಲಾ ಪಟ್ಟಣದಲ್ಲಿ ಪ್ರಕಟವಾಗುವ ವರ್ತಮಾನಪತ್ರಿಕೆಯು ಒಂದು ಸಮಾಚಾರವನ್ನು ಕೇಳಿದ ಪ್ರಕಾರ ಪ್ರಕಟಿಸಿತು. ಅದೇನಂದರೆ—ಹಿಂದಿನ ರಾಜ್ಯದ ಮಂತ್ರಿಯವರು ಲಾರ್ಡ್ ಕರ್ಜನರವರನ್ನು ಇನ್ನು ಕೆಲವು ಕಾಲ ಹಿಂದೂಸ್ಥಾನದಲ್ಲಿ ಇರುವಂತೆ ಏರ್ಪಡಿಸಿ ಇಲ್ಲಿ ಅವರ ಪದವಿಗೆ ಅವಧಿಯನ್ನು ಹೆಚ್ಚಿಸಿರುವರು. ಇದರಿಂದ ಆ ಲಾರ್ಡ್ ಕರ್ಜನರವರು ಮುಂದಿನ ಮಾರ್ಚಿಯಿಂದ ಆಚೆಗೆ ಒಂದು ವರುಷ ಪರ್ಯಂತರವಾಗಿ ಇರುವರಾಗುವರೆಂತಾ ತಿಳಿದು ಬಂದಿದೆ. ಈ ಬುತ್ತದತನವನ್ನು ಸಕಲ ಪ್ರಜೆಗಳೂ ಸಂತೋಷದಿಂದ ಕೇಳುವರೆಂಬದರಲ್ಲಿ ಸಂದೇಹವಿಲ್ಲ.

◆◆◆◆

ಕಳೆದ ೧೮೯೬ ನೆ ಇಸವಿಯಲ್ಲಿ ಹಿಂದೂಸ್ಥಾನಕ್ಕೆ ಪ್ಲೇಗ್ ಉಪದ್ರವು ತಲೆ ಹಾಕಿತಷ್ಟೆ. ಅಲ್ಲಿಂದೀಚೆಗೆ ಅದರ ಸ್ಥಿತಿ ಹ್ಯಾಗಿದೆ ಎಂಬವನ್ನು ವಿಚಾರಿಸಲಾಗಿ ತಿಳಿದುಬರುವದೇನಂದರೆ—ಅದು ಮೊದಲು ಮುಂಬಾಯಿಯಲ್ಲಿ ಕಾಣಿಸಿಕೊಂಡಿತು. ಈ ಉಪದ್ರದ ದೆಸೆಯಿಂದ ೧೮೯೬ ರಲ್ಲಿ ೧,೭೦೦ ಜನರು, ೧೮೯೭ ರಲ್ಲಿ ೫೬,೦೦೦ ಜನರು, ೧೮೯೮ ರಲ್ಲಿ ೧,೧೮,೦೦೦ ಜನರು, ೧೮೯೯ ರಲ್ಲಿ ಜನರು ೧,೭೨,೦೦೦—ಜನರು ಈ ಪ್ರಕಾರ ವರುಷ ವರುಷಕ್ಕೆ ಹೆಚ್ಚುಹೆಚ್ಚಾಗಿಯೇ ಸಾಯುತ್ತಾ ಬಂದರು. ಮಾರನೇ ವರುಷ ಅಂದರೆ ೧೯೦೦ ರಲ್ಲಿ ಮರಣ ಸಂಖ್ಯೆಯು ೯೨,೦೦೦ ಸಾವಿರಕ್ಕೆ ಇಳಿಯಿತು. ಇದನ್ನು ನೋಡಿ ಸರ್ಕಾರದವರೂ ಪ್ರಜೆಗಳೂ ಇನ್ನು ಮೇಲೆ ಈ ಉಪದ್ರವು ಕಡಿಮೆಯಾಗುತ್ತಾ ಬರುವದೆಂದು ನಂಬಿಕೊಂಡಿದ್ದರು. ಆದರೆ ಆ ನಿರೀಕ್ಷೆಯು ನಿಷ್ಫಲವಾದದ್ದಾಗಿ ಪರಿಣಮಿಸಿತು. ಯಾಕಂದರೆ ಅಲ್ಲಿಂದೀಚೆಗೆ ಉಪದ್ರವು ಬಹಳ ಉಲ್ಬಣ ಸ್ಥಿತಿಗೆ ಬಂದು ಪ್ರತಿ ವರ್ಷದಲ್ಲೂ ಹೆಚ್ಚು ಹೆಚ್ಚಾಗಿ ಜನರನ್ನು ಕೊಂದು ಹಾಕುತ್ತಾ ಬಂದಿದೆ. ಹ್ಯಾಗಂದರೆ ೧೯೦೧ ನೆ ಇಸವಿಯಲ್ಲಿ ಪ್ಲೇಗ್ ಉಪದ್ರವ ದೆಸೆಯಿಂದ ೨,೭೩,೦೦೦ ಜನರೂ, ೧೯೦೨ ರಲ್ಲಿ ೫,೬೩,೦೦೦ ಜನರೂ ಮೃತಪಟ್ಟಿದಾರೆ. ಅಲ್ಲಿಂದೀಚೆಗೆ ಅಂದರೆ ೧೯೦೩ ನೆ ಇಸವಿ ಜನವರಿ ಆರಂಭದಿಂದ ಮಾರ್ಚಿ ಅಖೈರು ವರೆಗೆ ಮೂರು ತಿಂಗಳಲ್ಲಿ ಉಪದ್ರವ ಸ್ಥಿತಿಯು ಇನ್ನೂ ದುಃಖಕರವಾಗಿ ರುವದು. ಈ ಮೂರು ತಿಂಗಳಲ್ಲೇ ೩ ಲಕ್ಷ ಪ್ರಜೆಗಳು ಲಯವಾಗಿಹೋಗಿರುತ್ತಾರೆಂದು ಧಾರಾಳವಾಗಿ ಹೇಳಬಹುದು. ಅಂತು ಈ ಕಾಲು ಉಪದ್ರವ ದೆಸೆಯಿಂದ ಇದುವರೆಗೆ ೧೬ ಲಕ್ಷ ಪ್ರಜೆಗಳು ಮೃತಪಟ್ಟರೆಂದು ಹೇಳಿದರೆ ಅದು ತಪ್ಪಾಗಲಾರದು.

## ಚಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಚಾತ್ಮಿಗಳಿಗೆ ನಾವು ವಿಗಾ ಕೊಡಲಾರೆವು. ಆದಕಾರಣ ಚಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಚಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ವಿಗಾ ಕೊಡಲಾರೆವು.

ಚಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.

◆◆◆◆

ಸ. ನ ರಾವ್—ದಾವಣಗೆರೆ, ಕೇಚಲಿ ನರಸಿಂಗರಾವ್—ಒರಿಯಡಕ, ಚಂದಾದಾರ—ಸಾಗರನಾಲಿ—ಈ ಚಾತ್ಮಿಗಳಿಗೆ ಈ ಪತ್ರಿಕೆಯಲ್ಲಿ ಅವಕಾಶ ಸಿಕ್ಕಲಾರದು. ಎಡಿ.

## ಕರೆಸ್ಪಾಂಡೆನ್ಸ್.

ಕಟ್ಟಿಣದ ನೇಗಲುಗಳು ಬೇಕು.

ಅಯ್ಯಾ,

ಈ ಪ್ರಾಂತ್ಯ ಕೆಲವು ಜಮೀನ್ದಾರರು ಕಬ್ಬಿಣದ ನೇಗಲುಗಳನ್ನು ತರಿಸಿ ಉಪಯೋಗಿಸಬೇಕೆಂಬ ಇರಾದೆಯುಳ್ಳವರಾಗಿದಾರೆ. ಅವು ಎಲ್ಲಿ ಇವೆ ? ಅವುಗಳ ಕ್ರಯವೇನು ? ದಯವಿಟ್ಟು ಇದನ್ನು ತಿಳಿಸಬೇಕೆಂದು ಕೋರುತ್ತೇನೆ.

ತಾಯಲೂರು. ಚಂದಾದಾರ.

[ಈ ಕಬ್ಬಿಣದ ನೇಗಲುಗಳು ವ್ಯವಸಾಯಕ್ಕೆ ಬಹಳ ಅನುಕೂಲವೇ ಸರಿ. ನೇಗಲು ಒಕ್ಕೆ ೨೫ ರೂಪಾಯಿ ಕ್ರಯವಾದೀತೆಂದು ತೋರುವದು. ಇದನ್ನು ತರಿಸಬೇಕಾದವರೂ, ಇದರ ವಿಷಯದಲ್ಲಿ ಹೆಚ್ಚು ಸಂಗತಿಗಳನ್ನು ತಿಳಿಯಬೇಕೆನ್ನುವವರೂ ಕೋಲಾರದಲ್ಲಿರುವ ರೆವರೆಂಡ್ ವಲ್ಲಿಯ. ಪಿಟ್. ಜಾಲಿಸ್ಟರ್ ಯವರಿಗೆ ಬರೆದರೆ ಅವರು ಸದುತ್ತರವನ್ನು ಕೊಡುತ್ತಾರೆ.—ಎಡಿ.]

◆◆◆◆◆◆◆◆

ತಿಪಟೂರು ವರ್ತಮಾನಗಳು.

ಅಯ್ಯಾ,

ಮೊದಲು ಇದ್ದ ಇನ್ಸ್ಪೆಕ್ಟರ್ ಮೊ॥ ರಾಮಚಂದ್ರರಾಯರು ತಮ್ಮ ಸ್ವಂತಕ್ಕೆ ಹಾಕಿಕೊಂಡಿದ್ದ ಹಣವನ್ನು ಹೊಸ ಇನ್ಸ್ಪೆಕ್ಟರಿಗೆ ೨೩ ರೂಪಾಯಿಗಳಿಗೆ ಬರೀಬಿಗೆ ಕೊಟ್ಟು ಪರಿವಾರ ಸಹಿತ ಊರಿಗೆ ಪ್ರಯಾಣಮಾಡಿದರು.—ಇಲ್ಲಿನ ಸಂತೆಯಲ್ಲಿ ಕಳ್ಳಗೆಣಸಿನ ಸಾಮಾನ್ಯ ಬೆಂಗ್ಳೂಯರೆಂಬವನು ೩ ದಿವಸದ ಸೆರೆಯಲ್ಲಿ ಅಕ್ಕಿ ಅಳೆಯುತ್ತ ಇದ್ದದ್ದನ್ನು ನಮ್ಮ ಹೊಸ ಇನ್ಸ್ಪೆಕ್ಟರು ನೋಡಿದ ಹಾಗೂ, ಸದರೀ ಕಳ್ಳನೇರನ್ನು ತೆಗೆದುಕೊಂಡು ಹೋಗಿ ಮೊಕದ್ದಮೆ ನಡೆಸುತ್ತಿರುವ ಹಾಗೂ ಕೇಳುತ್ತೇನೆ.—ಇಲ್ಲಿ ೧ ತಿಂಗಳಿಂದ ದೇವರ ಕಟಾಕ್ಷದಿಂದ ಊರಲ್ಲಿ ಯಾವ ಗಲಾಟೆಯೂ ಇಲ್ಲದಿರುವದರಿಂದ ಜನಗಳು ತಮ್ಮ ತಮ್ಮ ಮನೆಗಳನ್ನು ಸೇರ್ದು ಬಿಳಿದು ಕೊಂಡು, ಊರು ಸೇರುತ್ತಿದ್ದಾರೆ.—ಈ ತಾಲ್ಲೂಕಿಗೆ ಸೇರಿದ ಹಾಲ್ಕುರಿಕೆ ಮೊಕದ್ದಮಾ ಡಿಸ್ಟ್ರಿಕ್ಟ್ ಸೆಷನ್ಸ್ ಕಮಿಷನ್ ಸಾಹೇಬರ ಕೋರ್ಟಿಗೆ ಕಮಿಟಾದ ಆಗಿರುತ್ತೆ.—ನಮ್ಮ ತಾಲ್ಲೂಕು ಬೋರ್ಡು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರಾದ ಮೆ॥ ಎಂ. ಎಸ್. ವಾರಾಯಣರಾಯರು ಪಾಮಾಂಬದಿಗೆ ದಯಮಾಡುವವರಾಗಿದ್ದಾರೆಂದು ವರ್ತಮಾನವಿರುತ್ತೆ. ವಿ. ನ.

◆◆◆◆◆◆◆◆

ವರ್ತಮಾನಪತ್ರದಲ್ಲಿ ಹುಮವಾ

ಅಯ್ಯಾ,

"ವೃತ್ತಾಂತ ಚಿಂತಾಮಣಿ" ಯ ೫—೩—೧೯೦೩ನೇ ಸಂಚಿಕೆಯಲ್ಲಿ ಒಬ್ಬ ಚಾತ್ಮಿದಾರರು ವರ್ತಮಾನಪತ್ರದ ಅಗ್ರವಿವಾರದಲ್ಲಿ ಬಹಳ ಅಶ್ಲೀಲವಾದ ಸಂಗತಿಗಳನ್ನು ಪ್ರಕಟಿಸಿರುವರು. "ಇವರಲ್ಲಿ ಪಡುವೆಯು ಬರೀ ಕರಾರು. ಈ ಪತ್ರಿಕೆ ಪತ್ರದ ಕೆಲವು ದೇಶಗಳಲ್ಲಿ ಮೂರು ತಿಂಗಳ ವರೆಗೂ ಪಡುವೆ. ಒಬ್ಬನ್ನ ತಿಂಗಳು, ಎರಡು ವರುಷಗಳ ವರೆಗೂ ಮದುವೆ. ಆ ತರುವಾಯ 'ನಿನ್ನ ಪಕ್ಕೆ ನೀನು, ನನ್ನ ಪಕ್ಕೆ ನಾನು' ಎಂಬ ರೀತಿಯ ಪಡುವೆ ಕಟ್ಟು ಕಟ್ಟುಗಳೂ ಉಂಟು. ಈ ರೀತಿಯಾಗಿ ಒಬ್ಬ ಹೆಂಗಸು ಎಷ್ಟು ಜೀವಮಾನಕಾಲದಲ್ಲಿ ಸುಮಾರು ಐವರಿಗೋ ಹತ್ತುಜನರಿಗೋ ಹೆಂಡತಿಯಾಗಬಹುದು. ಆದಕಾರಣದಿಂದಲೇ ಇಂಗ್ಲಾಂಡಿನಲ್ಲಿ ವ್ಯಭಿಚಾರಕ್ಕೆ ಕ್ರಿಮಿನಲ್ ಶಿಕ್ಷೆಯು ಇಲ್ಲವೇ ಇಲ್ಲ" ಎಂದು ಮುಂತಾಗಿ ಟೀಕೆಯನ್ನು ಬರೆದಿರುವರು. ಈ ವಿಷಯಗಳು ನಿಜವೆಂದು ಕೆಲವರು, ಸಟೆಯೆಂದು ಕೆಲವರು ತರ್ಕಿಸುತ್ತಿರುವದಾದುದರಿಂದ ಇದರ ಯಥಾರ್ಥ

ವಿಚಾರವನ್ನು ತಾವಾಗಲಿ, ಸನ್ಮಿತ್ರರಾದ ಮತ್ಯಾರಾಗಲಿ ತಿಳಿಯಪಡಿಸಿದರೆ ಕೃತಜ್ಞನಾಗಿರುವೆನು.

ಗುಣಗ್ರಾಹಿ.

[ಈ ಬಾತ್ಮಿಗೆ ಉತ್ತರವನ್ನು ಈ ಪತ್ರಿಕೆಯು ಇನ್ನೊಂದು ಭಾಗದಲ್ಲಿ ಪ್ರಕಟಿಸಿರುತ್ತೇವೆ.—ಎಡಿ.]

ಮತದಿಂದ ಮತಕ್ಕೆ ಸೇರುವದು ಯಾರಿಗೂ ಸರಿಯಲ್ಲ.

ಆರ್ಯ,

ಕಳೆದ ತಿಂಗಳ ೧೯ನೆ ತಾರೀಖಿನ "ವೃತ್ತಾಂತ ಪತ್ರಿಕೆ"ಯಲ್ಲಿ ಒಬ್ಬ ಯಾತ್ರಿಗಾರನು ಕ್ರೀಸ್ತನಾಗಿನೆಂಬ ಸಂಗತಿ ಓದಿದೆನು. ಪೂರ್ವದ ಆಗಾಯಿತು ಬಂದಿರುವ ಮತವನ್ನೂ ಆಚಾರವನ್ನೂ ಅವಲಂಬಿಸುವದೇ ಆಯಾಯ ಮತಸ್ಥರಿಗೆ ಉತ್ತಮ ಧರ್ಮವಾಗಿದೆ. ಯಾವ ಕರ್ಮವುಳ್ಳ ಯಾವ ಜನ್ಮದಲ್ಲಿ ಹುಟ್ಟುತ್ತಾನೋ ಅಂಥ ಮತವನ್ನೂ ಕರ್ಮವನ್ನೂ ಕಾಲಕಾಲದಲ್ಲಿ ಲೋಪವಿಲ್ಲದೆ ಮಾಡುವದೇ ಅವನ ಮುಖ್ಯ ಕೆಲಸವಾಗಿಯೂ, ಉತ್ತಮ ಗತಿಗೆ ಮಾರ್ಗವಾಗಿಯೂ ಇರುತ್ತೆ. ಅಂಥ ಮತವನ್ನು ಬಿಟ್ಟು ಬೇರೊಂದು ಮತಕ್ಕೆ ಪರೋಕ್ಷವಾಗಿಯಾಗಲಿ, ಅಪರೋಕ್ಷವಾಗಿಯಾಗಲಿ, ಮನಃಪೂರ್ವಕವಾಗಿಯಾಗಲಿ, ಮನಸ್ಸಿಲ್ಲದೆಯಾಗಿ ಆಗಲಿ, ಸೇರಿಕೊಂಡರೆ ಮತಭ್ರಷ್ಟ, ಜಾತಿಭ್ರಷ್ಟನಾಗುತ್ತಾನೆ. ಇಂಥವನಿಗೆ ಘಟಸ್ಫೋಟ ಮಾಡೋಣದರಿಂದ ದೇಹಾನುಬಂಧ, ಋಣಾನುಬಂಧ ಸಹ ತೊಲಗಿ ಹೋಗುತ್ತೆ. ತಾಯಿತಂದೆಗಳಿಗೆ ಮಾಡತಕ್ಕ ಕರ್ಮಗಳಿಗೆಲ್ಲಾ ಲೋಪಬರುತ್ತೆ. ಪುತ್ರ ಪೌತ್ರ ಪಾರಂಪರೆವರಿವಿಗೂ ಜಾತಿಭ್ರಷ್ಟನಾದನೆಂಬ ಲೋಕಾಪವಾದ ನೆಲೆಗೆ ನಿಲ್ಲುತ್ತೆ. ರೂಪ, ಬಣ್ಣ, ಗುಣ, ಕರ್ಮ, ಆಯಾಯ ಚೇತನಾಚೇತನ ವಸ್ತುಗಳಿಗೆ ಸಹಜವಾದ ಗುಣಗಳಾದ್ದರಿಂದ ಬದಲಾಯಿಸಿದರೆ ಭ್ರಷ್ಟತ್ವ ಹೊಂದುತ್ತೆಯೇ ಹೊರ್ತು ಶ್ರೇಷ್ಠತ್ವವನ್ನಾಗಲಿ, ಸ್ವಜತ್ವವನ್ನಾಗಲಿ ಹೊಂದುವದಿಲ್ಲ. ಹ್ಯಾಗೆಂದರೆ—ತಾಂಬ್ರದಲ್ಲಿ ಚೊಕ್ಕ ಬಂಗಾರ ಬೆರಸಿದರೂ ಸರಿಯೆ, ಅಥವಾ ಚೊಕ್ಕ ಬಂಗಾರದಲ್ಲಿ ತಾಂಬ್ರ ಬೆರಸಿದರೂ ಸರಿಯೆ. ಅಂತು ಮಿಶ್ರವಾಯಿತೇ ಶಿವಾಯಿ ತಾಂಬ್ರ ಮತ್ತು ಬಂಗಾರದ ಸಹಜಗುಣ, ರೂಪ, ಬಣ್ಣ ವ್ಯಕ್ತಪಡುವದಿಲ್ಲ. ಅನುಮಾನಕ್ಕೂ, ಕಮ್ಮಿಬೆಲೆಗೂ ಗುರಿಯಾಗುತ್ತೆ.

ಹೇಮರಾಜ ಎಂಬಾತನು—ಜಾತಿ ನಮೂದಿಲ್ಲ—ಬೈರಾಗಿಗಳ ಜೊತೆಯಲ್ಲಿ ಹೊರಟು, ಅವರಲ್ಲಿ ನಂಬಿಕೆ ವಿಶ್ವಾಸವಿಟ್ಟು, ಅವರಿಂದ ವೈರಾಗ್ಯದ ಉಪದೇಶವನ್ನು ಪಡೆದು, ಅವರ ಸಂಗಡಲೇ ಅನೇಕಾನೇಕ ಪುಣ್ಯನದಿ ಸ್ನಾನ, ಕ್ಷೇತ್ರ ದರ್ಶನವನ್ನು ಮಾಡಿ, ಆ ಬೈರಿಗೆ ಅವರ ಸಂಪ್ರದಾಯದಂತೆ ಆಚರಿಸಿದ್ದೆ, ತನ್ನ ಊರಾದ ಜಬ್ಬಲ್‌ಪುರಿಗೆ ವಾಪಸು ಬಂದು, ಪಲ್ಯ ಕಾಯಿ ಅಂಗಡಿಯಿಂದ ಜೀವನ ಮಾಡಹೇಳಾಯಿತು. ಇಲ್ಲಿ ಇವನು ಸೌಖ್ಯವಾಗಿದ್ದ ತನ್ನ ಮತವನ್ನು ಬಿಟ್ಟು, ಬೇರೊಂದು ಮತಕ್ಕೆ ಸೇರಿ, ಅಲ್ಲಿಯೂ ಕಷ್ಟ ನಷ್ಟಗಳನ್ನು ಹೊಂದಿದ್ದು, ಇವನ ಚಪಲಚಿತ್ತದಿಂದಲ್ಲವೇ? ಹೇಮರಾಜ ಎಂಬಾತನು—ಅನೇಕ ಪುಣ್ಯನದಿಗಳಲ್ಲಿ ಸ್ನಾನಮಾಡಿ, ಕ್ಷೇತ್ರದರ್ಶನ ಮಾಡಿದೆ. ನಾನು ಬೈಬಿಲ್, ಹೊಸ ಒಡಂಬಡಿಕೆ ಓದಿದ್ದರಿಂದ ನಂಬಿಕೆ ಉಂಟಾಯಿತು ಎಂದು ಹೇಳಿರುತ್ತಾನೆ. ಅನಾದಿಯಾದ ಪುಣ್ಯನದಿಗಳಲ್ಲಿ ಸ್ನಾನ ಮತ್ತು ಕ್ಷೇತ್ರ ದರ್ಶನ ಮಾಡುವದರಿಂದುಂಟಾಗುವ ಪುಣ್ಯಫಲಗಳು ಆಯಾಯ ಸ್ಥಳಮಾಹಾತ್ಮ್ಯಗಳಿಂದಲೇ ವ್ಯಕ್ತಪಡುತ್ತೆ. ಮೊದಲು ಈ ನಂಬಿಕೆಯನ್ನು ಇಟ್ಟುಕೊಂಡು, ಕೊನೆಗೆ ಬೈಬಿಲ್ ಎನ್ನುವದು ನೋಡಿದರೆ ಈತನಿಗೆ ಚಿತ್ತಭ್ರಮೆ ಉಂಟು ಎಂತ ಹೇಳಬಹುದು. ಎಲ್ಲಾ ಮತಕ್ಕು ಮುಖ್ಯವಾಗಿರುವದೊಂದೇ ಭಕ್ತಿ. ಭಕ್ತಿ ಶಿವಾಯಿ ಮುಕ್ತಿ ಇಲ್ಲ. ಈತನು ಬೈರಾಗಿಗಳ ಸಂಗಡ ಕಾಲಹರಣ ಮಾಡಿರುವದು ೧೯ ವರುಷಗಳು. ಬೋಧನೆಯನ್ನು ಕೇಳಿ, ಹೊಸ ಒಡಂಬಡಿಕೆಯನ್ನು ಓದಿಕೊಂಡು, ನಂಬಿಕೆ ಉಂಟಾದ ಕಾಲ ೬ ದಿವಸ. ೧೯ ವರುಷಗಳಿಂದ ಉಂಟಾಗದೆ ಇದ್ದ ಭಕ್ತಿ ೬ ದಿವಸಗಳಲ್ಲಿ ಉಂಟಾಯಿತು. ಬೋಧನೆಯನ್ನು ಕೇಳಿ, ಬುಕ್ಕನ್ನು ಓದಿಕೊಂಡಲಾಗಾಯಿತು ಇಷ್ಟು ಶೀಘ್ರದಲ್ಲಿ ಈತನಿಗೆ ಭಕ್ತಿ ಉಂಟು ಮಾಡಿರುವದು ಬುಕ್ಕೋ? ಅವುಗಳಲ್ಲಿರುವ ಮಾತುಗಳೋ? ಅಥವಾ ಪ್ರೇರೇಪಣೆಯೋ? ಗೊತ್ತಾಗುವದಿಲ್ಲ. ಇದು ಹಾಗಿರಲಿ. ೧೯ ವರುಷಗಳ ಕಾಲ ಬೈರಾಗಿಗಳ ಸಂಗಡ ಇದ್ದು, ಪುಣ್ಯಕ್ಷೇತ್ರಗಳಲ್ಲಿ ಸಂಚಾರ ಮಾಡುವಾಗ ಬೈರಾಗಿಗಳ ಬೋಧನೆ, ಇವರಲ್ಲಿಟ್ಟುಕೊಂಡಿರುವ ಪುರಾಣಪುಸ್ತಕಗಳ ಪಾರಾಯಣ, ಅವುಗಳಲ್ಲಿರುವ ದೇವರ ನಾಮಗಳು, ಈತನ ಮನಸ್ಸಿಗೆ ಹಿಡಿದು, ಅವುಗಳಿಂದ ಭಕ್ತಿ ಯಾತಕ್ಕೆ ಉಂಟಾಗಲಿಲ್ಲವೋ ಬಹು ಆಶ್ಚರ್ಯವೇ ಸರಿ! ಇಂಥ ಚಂಚಲ ಮನುಷ್ಯನು ಈಗ ಕ್ರೀಸ್ತಮತಕ್ಕೆ ಸೇರಿಕೊಂಡಿರುತ್ತಾನೆ. ಮೇಲ್ಕಂಡ ವಿದ್ಯಮಾನಗಳಿಂದ ಈತನು ಈ ಮತಕ್ಕಾದರೂ ಕೀರ್ತಿ ತರುತ್ತಾನೋ ಇಲ್ಲವೋ ವಾಚಕರೇ ಊಹಿಸಲಿ. ಈ ಮತದಿಂದ ಮತ್ತೊಂದು ಮತಕ್ಕೆ ಸೇರುವದಾದರೆ ಈ ಕ್ರೀಸ್ತಮತವನ್ನು ದೂಷಣೆ ಮಾಡುವದರಲ್ಲಿ ಸಂದೇಹ ತೋರುವದಿಲ್ಲ. ಮತದಿಂದ ಮತಕ್ಕೆ ಸೇರೋಣದರಿಂದ ಅಪಕೀರ್ತಿಯೂ, ಅವಮಾನವೂ, ವೈದಿಕವೂ, ದ್ರವ್ಯಹಾನಿಯೂ, ಕೊನೆಗೆ ಪ್ರಾಣಹಾನಿಯೂ ಆಗಬಹುದು.

ನ. ನರಸಿಂಗರಾವ್.

[ಒಂದು ಮತದಿರದ ಇನ್ನೊಂದು ಮತಕ್ಕೆ ಹೋಗಿ ಸೇರಿಕೊಳ್ಳಲೇ ಬಾರದು ಎಂಬುದಾಗಿ ಈ ನಮ್ಮ ಬಾತ್ಮಿದಾರರು ಹೇಳುತ್ತಾರಲ್ಲವೇ? ಈ ಮಾತನ್ನು ಅವರು ದೃಢವಾಗಿ ನಂಬಿಕೊಂಡಿರುವರೋ? ಹಾಗಾದರೆ ಅವರು ಸ್ವವಿಷಯವೇನೆಂಬದನ್ನು ಕುರಿತು ಯೋಚನೆ ಮಾಡಲಿ. ಅವರ ಪೂರ್ವಿಕರ ಮತವೂ ಅವರ ಈಗಿನ ಮತವೂ ಒಂದೇ ಅಲ್ಲವೆಂಬುವದು ಸ್ವತಃಸ್ಸಿದ್ಧವಾಗಿರುವದಲ್ಲಾ!

ಮತಾಂತರವೆಂಬುವದು ಇಲ್ಲದೆ ಹೋಗಿದ್ದ ಪಕ್ಷಕ್ಕೆ ಈಗ ಪ್ರಪಂಚದಲ್ಲಿರುವ ಬೇರೆ ಬೇರೆ ಮತಗಳು ಹ್ಯಾಗೆ ಹುಟ್ಟುತ್ತಿದ್ದವು? ಕ್ರೈಸ್ತಮತ, ಮಹಮ್ಮದಿಯ ಮತ, ಬೌದ್ಧಮತ, ಇವೆಲ್ಲಾ ಜನರು ಮತಾಂತರವನ್ನು ಹೊಂದುತ್ತಾ ಬಂದದ್ದರಿಂದಲೇ ಹುಟ್ಟಿ ಬೆಳೆದಿರುತ್ತವೆ; ಹಿಂದು ಮತದ ಒಳಭೇದಗಳ ಪೂರ್ವೋತ್ತರವೂ ಇದೇ ಅಲ್ಲವೋ? ನಮ್ಮ ಬಾತ್ಮಿದಾರರು ಹಿಂದು ದೇಶದ ಚರಿತ್ರೆಯನ್ನಾಗಲಿ, ಮೈಸೂರು ಸಂಸ್ಥಾನದ ಚರಿತ್ರೆಯನ್ನಾಗಲಿ ಎಂದಿಗಾದರೂ ಅಲ್ಪಸ್ವಲ್ಪವಾದರೂ ಓದಿ ಇಲ್ಲವೋ? ಹಾಗೆ ಓದಿ ಇರುವ ಪಕ್ಷದಲ್ಲಿ ಶೈವ ಮತ್ತು ವೈಷ್ಣವ ಮತಗಳ ಪ್ರಸಾರಕರು ಜನರಿಗೆ ತಮ್ಮ ತಮ್ಮ ಮತವಿಷಯಗಳನ್ನು ಬೋಧಿಸುತ್ತಲೂ, ಜನರನ್ನು ತಮ್ಮ ತಮ್ಮ ಮತಗಳಿಗೆ ಸೇರಿಸಿಕೊಳ್ಳುತ್ತಲೂ ಬರಲಿಲ್ಲವೇ? ಇದೇ ಮೈಸೂರು ಸಂಸ್ಥಾನದ ಪ್ರಾಚೀನ ರಾಜರುಗಳ ಪೈಕಿ ಒಬ್ಬ ರಾಜನು ಮತಾಂತರವನ್ನು ಹೊಂದಿದ ಕಥಾ ವೃತ್ತಾಂತವು ಸಕಲರಿಗೂ ಗೊತ್ತೇ ಇದೆಯಲ್ಲವೋ?

ಮನುಷ್ಯನು ಕೆಲವು ಸಂದರ್ಭಗಳಲ್ಲಿ ಚಪಲಚಿತ್ತನಾಗಿ ಮತಾಂತರವನ್ನು ಸೇರಿಕೊಳ್ಳುವದುಂಟು; ಆದರೆ ಯಥಾರ್ಥವಾಗಿ ಮತಾಂತರವನ್ನು ಹೊಂದುವವನು ಆದುವರೆಗೆ ಅವನಿಗೆ ಗೋಚರವಾಗದೆ ಇದ್ದ ಸತ್ಯದ ಮಾರ್ಗವನ್ನು ಕಂಡುಕೊಂಡ ಕೂಡಲೇ ಮತಾಂತರವನ್ನು ಹೊಂದುವನು. ಬುದ್ಧನೂ, ಅಪೊಸ್ತಲನಾದ ಪೌಲನೂ, ಮಾರ್ಟಿನ್ ಲೂಥರನೂ ಚಪಲಚಿತ್ತರಾಗಿದ್ದರೆಂದು ಹೇಳಬಹುದೇ? ಅವರು ಸಕಲ ಮನುಜರಲ್ಲಾ ಶ್ರೇಷ್ಠಪುರುಷರೆಂಬದಾಗಿ ಅವರ ಕಾಲಾನಂತರ ಹುಟ್ಟಿ ಬೆಳೆದವರೆಲ್ಲಾ ಹೊಗಳುತ್ತಿರುವರಲ್ಲಾ!

ಒಬ್ಬ ಪುರುಷನು ೫೦ ಇಲ್ಲವೇ ೧೦೦ ವರುಷಗಳ ತನಕ ಪುರಾಣಗಳನ್ನು ಓದಿಕೊಂಡಿದ್ದಾಗ್ಯೂ ಅವನಿಗಿಂತಲೂ ಇನ್ನೂ ಬಾಲಪಾಠಗಳನ್ನೋದುವ ಹುಡುಗನಿಗೆ ಭೂಗೋಳದ ಸ್ಥಿತಿಗತಿ ಇಂಥಾದ್ದೆಂದು ಚನ್ನಾಗಿ ತಿಳಿದಿರುವದು. ಇದೇ ಪ್ರಕಾರ ಒಬ್ಬನು ಹೊಸ ಒಡಂಬಡಿಕೆಯನ್ನು ಸ್ವಲ್ಪಕಾಲ ಮಾತ್ರವೇ ಓದುವದರಿಂದ ಜೀವಾಂತ್ಯದ ತನಕ ಹುಡುಕಿದರೂ ಗೋಚರವಾಗದೇ ಇರುವಂಥಾ ಮೋಕ್ಷಮಾರ್ಗವನ್ನು ಕಂಡುಕೊಳ್ಳಬಹುದಾಗಿದೆ.

ನಮ್ಮ ಬಾತ್ಮಿದಾರರು ಒಂದು ಕಡೆ ಹೇಳುವ ಮಾತನ್ನು ಇನ್ನೊಂದು ಕಡೆ ಅಲ್ಲವೆನ್ನುತ್ತಾರೆ. "ಭಕ್ತಿ ಶಿವಾಯಿ ಮುಕ್ತಿ ಇಲ್ಲ" ಎಂದು ಹೇಳುತ್ತಾರೆ. ಹಾಗಾದರೆ ಒಬ್ಬನಿಗೆ ಒಂದು ಮತದಲ್ಲಿ ಭಕ್ತಿ ಹೋಗಿಬಿಟ್ಟರೆ ಅವನಿಗೆ ಆ ಮತದಿಂದ ಆಗುವ ಪ್ರಯೋಜನವೇನು? ಅಥವಾ, ಅವನು ಆ ಮತಕರ್ತವ್ಯಗಳನ್ನು ನೆರವೇರಿಸಬೇಕಾದ್ದೆಲ್ಲಿ? ಇವೆರಡೂ ಅಸಾಧ್ಯವಲ್ಲವೋ?

ಯಥಾರ್ಥವಾದ ತತ್ವವನ್ನು ವಿಚಾರ ಮಾಡಿ ಕಂಡುಹಿಡಿಯುವದೂ, ಕಂಡುಹಿಡಿದ ಮೇಲೆ ಅದರಂತೆ ನಡೆದುಕೊಳ್ಳುವದೂ ಮನುಷ್ಯನ ಮುಖ್ಯ ಕರ್ತವ್ಯವೆಂಬದಾಗಿ ಸಕಲರಿಗೂ ಸಾಧಾರಣವಾಗಿ ಗೊತ್ತಾಗುವದು. ಈ ಭಾಗದಲ್ಲಿ ಹೊಸ ಒಡಂಬಡಿಕೆಯು ತಿಳಿಸುವದೇನಂದರೆ:—"ಎಲ್ಲವನ್ನೂ ಪರಿಶೋಧಿಸು; ಕಡೆಯಲ್ಲಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೋ"—ಎಡಿ.]

---

## ತಾಲ್ಲೋಕು ವರ್ತಮಾನಗಳು

ದಾವಣಗೆರೆ:— ಮಧ್ಯಾಹ್ನ ಬಿಸಿಲಿನ ಬೇಗೆಯಿಂದ ಎಲ್ಲರೂ ತಪಿಸುತ್ತಲಿರುವರು. ಸಾಯಂಕಾಲದಲ್ಲಿ ಮೋಡಗಳು ಆಡುತ್ತವೆ. ಜಾಗ್ರತೆಯಲ್ಲಿಯೇ ಮಳೆ ಬರಬಹುದಾಗಿ ತೋರುತ್ತೆ. ಹತ್ತಿಯು ಪೇಟೆಯಲ್ಲಿಯೇ ಬರಲು ಪ್ರಾರಂಭವಾಗಿರುವದು. ಪ್ರತಿ ದಿನವೂ ಎರಡು ೪ ವಿಧ ಮಣಗಳನ್ನು ಜೊತೆಯಾಕೆ, ಮಾಲು ಮುಂಬಯಿಗೆ ರವಾನೆಯಾಗುತ್ತಲಿದೆ. ದವಸದ ಭಾವವು ಮಂದವಾಗಿ ಗಿರಾಕಿಗಳಿಲ್ಲದೆ ಇದೆ.—ಈ ವಾರ ನಾಗಮಾರ್ ಬಿಸ್ಪೆಂಟ ೨೩ ಸಂವತ್ಸರದ ಕಾಯಸ್ಥನು ಪ್ಲೇಗಿನಿಂದ ಕಾಲವಾದನು. ಈತನು ಬಹಿಸ್ಟಿಗೆ ಬರುವವನಾಗಿಯೂ ಸಕಲರಲ್ಲಿಯೂ ಅನುರಾಗವುಳ್ಳವನಾಗಿಯೂ ಇದ್ದುದರಿಂದ ಈತನನ್ನು ನೋಡಿದ್ದವರೆಲ್ಲರೂ ಮರುಗದೆ ಇರಲಾರರು.—ಮೂರುದಿನಗಳ ಕೆಳಗೆ ಬಯಾನಹಟ್ಟಿಯಲ್ಲಿ ಹಾಕಿರುವ ಗುಡಿಸಲುಗಳಲ್ಲಿ ಕೆಲವು ಅಗ್ನಿಯಿಂದ ದಹಿಸಲ್ಪಟ್ಟವು. ಬಹಳ ನಷ್ಟವಾದಂತೆ ಕಾಣುವದಿಲ್ಲ. ಇಲ್ಲಿ ಕಳ್ಳತನಗಳು ಬಹಳವಾಗಿ ಆಗುತ್ತಾ ಬಂದುದರಿಂದ ಇಲ್ಲಿನ ಖಾಯಂ ಇನಸ್ಪೆಕ್ಟರನ್ನು ಸ್ಪೆಸಲ್ ಡ್ಯೂಟಿಗೆ ನೇಮಿಸಿ, ಹರಿಹರದ ಇನ್‌ಸ್‌ಪೆಕ್ಟರನ್ನು ಇಲ್ಲಿಗೆ ವರ್ಗಾಯಿಸಿರುವರು.—ಈ ಗ್ರಾಮಕ್ಕೆ ಸಾಕಾದಷ್ಟು ದರ್ಜಿಯವರು ಇಲ್ಲದೆ ಈಗಿರುವ ದರ್ಜಿಗಳಿಗೇ ಹೇರಳವಾಗಿ ಕೆಲಸವು ಬೀಳುವದರಿಂದ ಚಿಂಪಿಗರು ಬಹಳವಾಗಿ ಗರ್ವಿಸಿ, ತಮ್ಮ ಕೆಲಸದಲ್ಲಿ ಬಹಳ ಅಸಡ್ಡೆಯನ್ನು ತೋರ್ಪಡಿಸುತ್ತಲಿರುವರು. ಇಲ್ಲಿ ಇತರ ಸ್ಥಳದಿಂದ ಕೆಲವರು ಬಂದು ನೆಲೆಗೊಂಡರೆ ಪೂರ್ಣ ಕೆಲಸವು ದೊರೆತು ಫಾಯಿದೆಯಾದೀತು. ಸಂಖ್ಯೆಯು ಹೆಚ್ಚುವದರಿಂದ ಇಲ್ಲಿನವರ ಗರ್ವವೂ ಅಡಗೀತು.

ಹಾಸನ:—ಬಿಸಿಲಿನ ತಾಪ ಬಹು ಹೆಚ್ಚಾಗಿದೆ. ಮಳೆ ನೆನ್ನೆ ಮೊನ್ನೆಯಿಂದ ನಾಲ್ಕಾರು ಹನಿಗಳು ಮಾತ್ರ ಬೀಳುತ್ತಿದ್ದು, ಈ ದಿನ ಹದ ಮಳೆಯಾಗಿದೆ. ಪ್ಲೇಗಿನ ದೆಸೆಯಿಂದ ಹೆದರಿಕೊಂಡು ದಿಕ್ಕಾಪಾಲಾಗಿ ಓಡಿಹೋಗಿದ್ದ ಜನರೆಲ್ಲಾ ಪುನಃ ಊರು ಸೇರಿದ್ದಾರೆ. ಇಷ್ಟರಲ್ಲಿಯೇ ಒಬ್ಬ ಮುಸಲ್ಮಾನನಿಗೆ ಪ್ಲೇಗ್ ತಗಲಿ, ಅವನು ಚನ್ನಪಟ್ಟಣದ ಕೆರೆ ಬಳಿ ಇರುವ ಛತ್ರಕ್ಕೆ ವೈಯಲ್ಪಟ್ಟು, ಅಲ್ಲಿಯೇ ಮೃತನಾದನು. ಈ ಸುದ್ದಿ ತಕ್ಷಣವೇ ಊರಿಗೆ ಹರಡಿಕೊಳ್ಳಲು ಜನರು ಭೀತರಾಗಿ ಮುಂದೆ ಏನಾದೀತೋ ಎಂದು ಅನುಮಾನದಲ್ಲಿದ್ದಾರೆ. ಭಗವಂತನು ಮುಂದೆ ಅಂಥಾ ಹೆದರಿಕೆಗೆ ಆಸ್ಪದ ಕೊಡದೆ, ಸಕಲರನ್ನೂ ಕ್ಷೇಮದಿಂದ ರಕ್ಷಿಸಲೆಂದು ಪ್ರಾರ್ಥಿಸುತ್ತೇನೆ. ಡಿ॥ ಕಮಿಷನರವರು ಆಗಾಗ್ಯೆ ಖುದ್ದು ಊರೊಳಕ್ಕೆ ದಯಮಾಡಿಸಿ, ಅಶುಚಿಯಾದ ಭಾಗಗಳನ್ನೆಲ್ಲಾ ಶುಚಿಮಾಡಿಸುತ್ತಲಿದ್ದಾರೆ. ಡಾಕ್ಟರ್ ಸಂಜೀವಪ್ಪನವರಿಗೆ ಬದಲಿಯಾಗಿ ಬಂದಿರುವ ಅಪ್ಪಾದೊರೆ ಮೊದಲಿಯಾರ್ರು ಈ ವರಿಗೆ ಜನರ ಕ್ಷೇಮಚಿಂತನೆಯನ್ನೇ ಬಯಸಿ, ಹಗಲು ರಾತ್ರಿಯನ್ನದೆ ಕೆಲಸಮಾಡುತ್ತಲಿದ್ದಾರೆ. ಜನರೆಲ್ಲಾ ಊರನ್ನು ಬಿಟ್ಟು ಷೆಡ್ಡುಗಳಲ್ಲಿದ್ದಾಗ್ಯೆ ಯಾವ ಗುಡಿಸಲಿನಲ್ಲಾದರೂ ಕಳುವು ನಡೆಯದಂತೆ ಸರಕಾರದವರು ಏರ್ಪಾಡುಮಾಡಿ ಇದ್ದುದ್ದು ಜನರೆಲ್ಲಾ ನಿರ್ಭಯವಾಗಿದ್ದದ್ದು ಸ್ತೋತ್ರಾರ್ಹವಾದ ಸಂಗತಿಯಾಗಿದೆ.—ಪದ್ಧತಿ ಪ್ರಕಾರ ಕ್ರೈಸ್ತರ ಹಬ್ಬಕಾಲವಾದ ಈಸ್ಟರ್ ವಾರದಲ್ಲಿ ನಡೆಯುವ ವಿಶೇಷಾರಾಧನೆಗಳೂ ವಿವಿಧ ಕೂಟಗಳೂ ಈ ವಾರದಲ್ಲಿ ಅತ್ಯಾಸಕ್ತಿಯಿಂದ ನಡೆಯಲ್ಪಡುತ್ತಾ ಇವೆ. ಇದಕ್ಕಾಗಿ ಈ ಸರ್ಕ್ಯೂಟಿಗೆ ಸೇರಿದ ಉಪದೇಶಿಗಳೆಲ್ಲರು ಬಂದಿದ್ದಾರೆ. ಘನ ನ್ಯೂಹಾಂ ದೊರೆಯವರು ಕ್ರೈಸ್ತ ಮತಕ್ಕೆ ಆಧಾರಭೂತವಾದ ಬೋಧನೆಗಳ ಮೇಲೆ ಪ್ರಸಂಗಿಗಳಿಗೆ ಉಪನ್ಯಾಸಗಳನ್ನು ಮಾಡುತ್ತಲಿದ್ದಾರೆ. ಪ್ಲೇಗಿನ ಕಾಲದಲ್ಲಿ ಭಗವಂತನು ಇಲ್ಲಿನ ಕ್ರೈಸ್ತರಿಗೆ ತೋರಿಸಿದ ಮಹೋಪಕಾರದ ಸ್ಮರಣೆಗಾಗಿ ಈಸ್ಟರ್ ಭಾನುವಾರದ ಸಾಯಂಕಾಲ ಕೃತಜ್ಞತೆಯ ಆರಾಧನೆಯನ್ನು ಏರ್ಪಾಡು ಮಾಡಿದ್ದಾರೆ. ಇದರಲ್ಲಿ ಎಲ್ಲಾ ಸಭೆಯವರು ಕೃತಜ್ಞತೆ ಕಾಣಿಕೆಗಳನ್ನು ತಾವೇ ತಂದು ದೇವರ ಕೆಲಸಕ್ಕಾಗಿ ಸಲ್ಲಿಸುವ ವಹಿಸಿದ್ದಾರೆ. ಈ ವರಿಗೂ ಕ್ರೈಸ್ತರು ವಾಸಮಾಡುತ್ತಿದ್ದ ರಸ್ತೆಸಹರವೆಂಬ ಗ್ರಾಮದಲ್ಲಿ ಕ್ರೈಸ್ತರು ನಾಲ್ಕು [illegible] ಸಾಕಾದಷ್ಟು ಮನೆಗಳಿಲ್ಲದೆ ೪-೫ ಮನೆಗಳವರು ಇನ್ನೂ ಜೋಪಡಿಯಲ್ಲಿಯೇ ವಾಸಿಸುತ್ತಲಿರುವದರಿಂದ ಷೆಪ್ಪಡಿಲ್ಲಿಯೇ ನೂತನ ಬ್ಯಾಂಕ್ಷುರವೆಂಬ ಹೊಸ ಕ್ರೈಸ್ತ ಗ್ರಾಮವು ಕಟ್ಟುವದಕ್ಕೆ ಸಿದ್ಧವಾಗಿದೆ. ಆಗಲೇ ೩೦ ಮನೆಗಳಿಗೆ ಸರಕಾರದವರು ನ್ಯಾಯವಾದ ಸ್ಥಳದಲ್ಲಿ ನಿವೇಶನವನ್ನು ಕೊಟ್ಟು, ಪ್ರತಿ ಮನೆಯ ನಿವೇಶನವನ್ನು ಗುರುತು ಮಾಡಿದ್ದಾರೆ. ಕೆಲಸವು ಶೀಘ್ರದಲ್ಲಿಯೇ ಪ್ರಾರಂಭವಾಗಬಹುದು.

ಹರಿಹರ.—ಕಳೆದ ವರುಷ ಆದ ಹಾಗೆ ಮೊಹರಂ ಗಲಾಟೆ ಈ ಸಾಲಿನಲ್ಲಿ ಯಾವದೂ ನಡೆಯಲಿಲ್ಲ.—ಇದೇ ತಿಂಗಳು ೩ನೇ ತಾ॥ ರಾತ್ರಿ ಸುಮಾರು ೮ ಘಂಟೆ ಸಮಯದಲ್ಲಿ ಮಾದಿಗರ ಹಟ್ಟಿಯ ಒಂದು ಮನೆಯು ಸುಟ್ಟುಹೋಯಿತು. ಆಗ ಮಾಲೀಕನು ಇರಲಿಲ್ಲ. ಬೆಂಕಿ ಹತ್ತಿದ ಮೇಲೆ ಬಂದನು. ಒಳಗೆ ಕಟ್ಟಿದ್ದ ಎಮ್ಮೆಯ ಕರುವನ್ನು ಬಿಚ್ಚಿಬಿಡುವಷ್ಟರಲ್ಲಿ ಜ್ವಾಲೆ ಇಮ್ಮಡಿಯಾದ್ದರಿಂದ ಕೈಬಿಟ್ಟು ಓಡಿ ಬಂದುಬಿಟ್ಟನು. ಇನ್ನು ಮನೆಯಲ್ಲಿ ಕಟ್ಟಿದ್ದ ಒಂದು ಹಸು, ಅದರ ೩ ಕರುಗಳು, ಎಮ್ಮೆ ಕರ ಒಂದು. ಕೆಲವು ಕಾಳುಕಡ್ಡಿ, ಇವೆಲ್ಲಾ ಕೈಗೆ ಬಾರದೆ ಬೆಂಕಿಯ ಪಾಲಾದವು. ಪಕ್ಕದಲ್ಲಿದ್ದ ಇನ್ನು ಮನೆಗಳು ತಪ್ಪಿಹೋದವು. ಅವುಗಳಿಗೆ ಬೆಂಕಿ ಹತ್ತಿದ್ದ ಪಕ್ಷದಲ್ಲಿ ಜನರ ಆದ ನಷ್ಟವೇ ಕಾಲೂ ಹೆಚ್ಚಾಗುತ್ತಿತ್ತು.—ಅಕ್ಕಾಯ ಬಾಬನ್ನು ತೆಗೆಯುವ ವಿಚಾರದಲ್ಲಿ ಅನೇಕಾನೇಕ ಬಹುಜನಗಳು ಅರಿಕೆ ಮಾಡಿಕೊಂಡಾಯಿತು. ಮತ್ತೂ ಅರಿಕೆ ಮಾಡಿಕೊಳ್ಳುತ್ತಲಿದ್ದಾರೆ. ಗೌರ್ಮೆಂಟಿನವರಿಗೆ ಪ್ರಜೆಗಳ ಮೊರೆ ಯಾವಾಗ ಕಿವಿಯಲ್ಲಿ ಬೀಳುವದೋ ತಿಳಿಯದು. ಈಗಿನ ನಮ್ಮ ಹೊಸ ಅಮಲ್ದಾರರು ಈ ವಿಚಾರದಲ್ಲಿ ಮೇಲಿನವರಿಗೆ ಬರೆದು, ಬಡವರ ಕಷ್ಟವನ್ನು ತಪ್ಪಿಸಿ, ಕೀರ್ತಿವಂತರಾದಾರೆಂದು ಪ್ರಜೆಗಳ ಕೋರಿಕೆಯಾಗಿದೆ.—ಇಲ್ಲಿ ಮ್ಯುನಿಸಿಪಲ್ ಮೆಂಬರಾದ ಅನವಿಯಪ್ಪನವರು ಸರಕಾರದ ಉದ್ಯೋಗಸ್ತರು [illegible] ತಮ್ಮ ಮೆಂಬರ್ ಪದವಿಗೆ ರಾಜೀನಾಮಾ ಕೊಟ್ಟರೆಂದು ತಿಳಿಯಬಂದಿದೆ.—ಈ ಊರಲ್ಲಿ ಕಳೆದ ವಾರದಿಂದ ಪ್ಲೇಗ್ ಶುರುವಾದ ಹಾಗೆ ೩—೪ ಮರಣಗಳು ಆದಂತೆಯೂ ವರ್ತಮಾನವಿದೆ. ಕೆಲವರು ಆಗಲೆ ಜೋಪಡಿಗಳನ್ನು ಹಾಕುವ ತರದೂದಿನಲ್ಲಿದ್ದಾರೆ. ಕೆಲವರ ಮನೆಗಳಲ್ಲಿ ಇಲಿಗಳು ಸತ್ತು ಬೀಳುತ್ತಲಿವೆ. ಅವರ ಜೊತೆಯಲ್ಲಿ ಒಂದು ಹಾವು ಸಹಾ ಸತ್ತುಬಿದ್ದ ಹಾಗೆ ವರ್ತಮಾನವಿದೆ. ಪ್ಲೇಗ್ ರೋಗದ ಇಲಿಯನ್ನು ಒಂದು ವೇಳೆ ಈ ಹಾವು ನುಂಗಿದ್ದರಿಂದ ಸತ್ತಿರಬಹುದು. ಇಂಥ ಕಠೋರವಾದ ಬೇಸಿಗೆಯಲ್ಲಿ ಪ್ಲೇಗು ತಲೆಹಾಕಿರುವದು ದೇವರ ಚಿತ್ತವೆಂದು ಭಾವಿಸಬೇಕಾಗಿದೆ.—ಈ ತಾಲ್ಲೋಕಿಗೆ ಕೆಲವು ಮರಾಟ ಜನಗಳು ಬಂದಿರುವರು. ಇವರು ಅಡವಿಗಳಲ್ಲಿ ಸಂಚರಿಸಿಕೊಂಡು, ಅಲ್ಲಲ್ಲಿ ಕಳುವು ಕೆಲಸಗಳನ್ನು ನಡಿಸಿಕೊಂಡು ಇದ್ದು, ಕಡೆಯಲ್ಲಿ ಸರಕಾರದವರ ಕೈಗೆ ಸಿಕ್ಕಿ, ಅವರ ಮೇಲೆ ಚಾರ್ಜಾಗಿ ವಿಚಾರಣೆಯಲ್ಲಿದೆ. ಇವರ ಪೈಕಿ ಒಂದು ಪ್ಲೇಗು ಕೇಸು ನಡೆದದ್ದರಿಂದ ಇವರ ಗುಂಪನ್ನು ಬರೇಪೂರದ ಹತ್ತಿರ ಇಟ್ಟಿರುವರು.—ಇಲ್ಲಿಗೆ ಮೈಸೂರು ಪ್ಯಾಲೇಸ್ ಸರ್ಕಸ್ ಕಂಪನಿಯವರು ಬಂದು, ೬ ಆಟಗಳನ್ನು ಆಡಿ ತೋರಿಸಿ, ಹಾವೇರಿ ಕಡೆ ಪ್ರಯಾಣ ಮಾಡಿರುವರು.—ಪ್ಲೇಗು ಷೆಡ್ಡುಗಳನ್ನು ಕಟ್ಟಿಸುವದರಲ್ಲಿ ಹಣಸ್ಥರು ಮುಂದಾಗಿಯೆ ಸನ್ನಾಹಗಳನ್ನು ಮಾಡುತ್ತಾರೆ. ಬಡವರ ಗತಿ ಹ್ಯಾಗೋ ತಿಳಿಯದು. ಕಳೆದ ಸಾಲಿನಲ್ಲಿ ಪ್ಲೇಗು ಬಂದಾಗ ಮೆ॥ ನರಸಿಂಗಭಾರ್ಗ ಅಮಲ್ದಾರ್ರು ಬಡವರ ಮೇಲೆ ಕರುಣೆಯನ್ನಿಟ್ಟು, ಕೆಲವು ಗಳ, ಬಿಂಬು, ಈಚಲು ಚಾಪೆ, ಬಿದರು ಚಾಪೆ, ಮುಂತಾದ್ದನ್ನು ಕೊಟ್ಟದ್ದಲ್ಲದೆ ಕೆಲವು ದಿನಗಳವರಿಗೂ ಆಹಾರಕ್ಕೋಸ್ಕರ ಜೋಳವನ್ನು ಸಹ ಹಂಚಿ ಕೊಡುತ್ತಾ ಬಂದದ್ದನ್ನು ಬಡಜನಗಳು ಈಗಲೂ ನೆನಸುತ್ತಿರುವರು. ನಮ್ಮ ಈಗಿನ ಅಮಲ್ದಾರ್ರವರು ಬಡವರ ಸ್ಥಿತಿಗತಿಗಳನ್ನು ನೋಡಿ ಸುಮ್ಮನಿರುವರೋ? ಮಳೆಗಾಲ ಸಮೀಪಿಸಿರುವದರಿಂದ ಜೋಪಡಿಗಳನ್ನು ಕಟ್ಟಿಕೊಂಡು ಹ್ಯಾಗೆ ಕಾಲ ಕಳೆಯುವರೋ ತಿಳಿಯದು. ಇಲ್ಲಿ ೧—೨ ಮನೆಗಳನ್ನು ಡಿಸಿನ್‌ಫೆಕ್ಟ್ ಮಾಡಿರುವರು; ಇದಲ್ಲದೆ ಸಿಡುಬಿನ ರೋಗವು ಸಹ ಪ್ರಾರಂಭಿಸಿ, ಇದರಿಂದ ಕೆಲವು ಮಕ್ಕಳು ಸಹ ಮೃತಪಟ್ಟಿರುವರು.

ಶಿವಮೊಗ್ಗೆ.—ಇಲ್ಲಿ ಬಿಸಲಿನ ತಾಪವು ವಿವರಿಸಕೂಡದಷ್ಟು ವಿಪರೀತವಾಗಿದೆ. ಹೀಗಿದ್ದರೂ ಪ್ರತಿನಿತ್ಯವೂ ಟವುನಲ್ಲಿ ಒಂದೆರಡು ಪ್ಲೇಗ್ ಕೇಸುಗಳು ಆಗದೆ ಇರುವದಿಲ್ಲ. ಇಲ್ಲಿನ ಷಹಾಗೇ

ಲ್ಲಿಯೂ ಇಲಿಗಳು ಸತ್ತಬಿದ್ದಲ್ಲದೆ, ಒಂದೆರಡು ಪ್ಲೇಗ್ ಕೇಸುಗಳೂ ಆದಬಳಿಕವೇ, ಪಟ್ಟಣಗಳಲ್ಲಿ ವಾಸವಾಗಿದ್ದ ಮುಕ್ಕಾಲುಪಾಲು ಜನರು ಧನಪ ಊರೊಳಗೆ ತಮ್ಮ ಮನೆಗಳಿಗೆ ವಾಪಸ್ ಬಂದು ವಾಸಮಾಡುತ್ತಾ ಇದ್ದಾರೆ. ಮಳೆಗಾಲದಲ್ಲಿ ಪ್ಲೇಗ್ ಉಪದ್ರವವು ಎಲ್ಲಿ ಪ್ರಬಲವಾದೀತೋ ಎಂಬುದಾಗಿ ಜನರು ತುಂಬಾ ಶಂಕಿಸುವವರಾಗಿರುತ್ತಾರೆ. ಸರ್ಕಾರದವರು ಇದಕ್ಕಾಗಿಯೇ ಊರಿನ ಆಚೆ ಅಲ್ಲಲ್ಲಿ ಷಡ್ಡುಗಳನ್ನು ಹಾಕಿಸುತ್ತಾ ಇದ್ದಾರೆ.—ಈ ಸಲ ಮೈಸೂರು ಹಬ್ಬದಲ್ಲಿ ಪ್ರತಿಕಷ್ಟಿಗಳಾದ ಎರಡು ಗರಡಿಗಳಿಗೆ ಸೇರಿದ ಜನರಿಗೆ ಕಳೆದ ವರುಷದ ಪ್ರಕಾರ ತುಂಬಾ ವ್ಯಾಜ್ಯಮಾಡಿದ್ದಾಗಿ ಆ ಪೈಕಿ ಒಂದು ಪಾರ್ಟಿಗೆ ಸೇರಿದ ಒಂದೆರಡು ಜನರುಗಳಿಗೆ ಪೂರಾ ಜಖಂ ಆಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಿಕೊಳ್ಳುತ್ತಾ ಇದ್ದಾರೆ. ಮೈಸೂರು ಪಟ್ಟಣದ ಹಿಂದಿನ ವರ್ಷಗಳಲ್ಲಿ ಸಂಪ್ರದಾಯದಂತೆ ನಡೆದಂತೆ ಈ ಸಲ ನಡೆಯಲಿಲ್ಲ.—ನಮ್ಮ ದಯಾಳುವಾದ ಡೆಪ್ಯುಟಿ ಕಮಿಷನರ ಸವಾರಿಯು ಪಟ್ಟಣದ ಬಗ್ಗೆ ಸೂರಬಿದ ಪ್ರಾಂತ್ಯ ದಯಮಾಡಿದೆ. ಇಲ್ಲಿಗೆ ವರ್ಗವಾಗಿ ಬಂದಿರುವ ಡಿ. ಶಿರಸ್ತೇದಾರ್ ಮಿ॥ ಕೃಷ್ಣರಾಯರು ಮೂರು ತಿಂಗಳು ಪ್ರಿವಿಲೆಜ್ ರಜಾ ಪಡೆದಿರುವುದರಿಂದ ಮಿ॥ ನರಸಿಂಹ ರಾಯರು ಶಿರಸ್ತೆ ಕೆಲಸವನ್ನು ನೋಡುತ್ತಿದ್ದಾರೆ. ಈ ವಿಷಯದಲ್ಲಿ ಬಹಳ ದಿವಸಗಳಿಂದ ಬತ್ತಿ ಇಲ್ಲದೆ ಕೆಲಸಮಾಡತಕ್ಕ ನೌಕರರಿಗೆ ನಮ್ಮ ಡಿ॥ ಕಮೀಷನರು ಬತ್ತಿ ಕೊಟ್ಟಿರುತ್ತಾರೆ.—ಕಳೆದ ೧೦ನೆಯ ತಾರೀಖು ಶುಕ್ರವಾರ ಸಾಯಂಕಾಲ ೫ ಗಂಟೆಯಿಂದ ೯ ಗಂಟೆಯ ವರೆಗೂ ಮಿ॥ ಅಂಬಳೆ ವ್ಯಾಸಣ್ಣನವರ ಮನೆಯಲ್ಲಿ ಸಾಗರದಿಂದ ಇಲ್ಲಿಗೆ ಬಂದ ಒಬ್ಬ ಗವಾಯಿಯೂ ಕೆಲ ಸಂಗೀತಗಾರರು ಸಂಗೀತವಾದ್ಯವನ್ನು ಅಂದರೆ—ಪಿಟೀಲು, ತಂಬೂರಿ ವೀಣೆ, ಹಾರ್ಮೋನಿ, ಜಲತರಂಗ ವಾದ್ಯ ಬಹು ಚೆಂದಾಗಿ ನುಡಿಸಿದರು. ಇಲ್ಲಿನ ಅನೇಕ ರಸಿಕ ಮಹಾತ್ಮರಾದ ಗೃಹಸ್ಥರು ಹಾಜರ್ ಇದ್ದು ಅವರಿಗೆ ಬಹುಮಾನ ಮಾಡಿ, ಸಂತೋಷವನ್ನು ಹೊಂದಿದರು. ನಮ್ಮ ಹೊಸ ಪೋಲೀಸ್ ಸೂಪರಿಂಟೆಂಡೆಂಟರು ಕಳೆದ ತಿಂಗಳು ೭ನೇ ತಾರೀಖಿಗೆ ದಯಮಾಡಿಸಿ ಬಂದಿರುವರು. ದಿವಸಗಳಿದ್ದು ಸಾಗರದ ಕಡೆ ಸಂಚಾರ ಹೊರಟು, ಕೆಲ ಸ್ಥಳಗಳ ವಿಚಾರವನ್ನು ಬಗ್ಗೆ ಆ ಪ್ರಾಂತ್ಯ ದಯಮಾಡಿಸಿರುತ್ತಾರೆ.—ಕಳೆದ ತಿಂಗಳ ೨೦ನೇ ಮಂಗಳವಾರ ಬೆಳಿಗ್ಗೆ ೭ ಘಂಟೆ ಹೊತ್ತಿನಲ್ಲಿ ಇಲ್ಲಿನ ಡಿಸ್ಟ್ರಿಕ್ಟ್ ಆಫೀಸ್ ರೈಟರ್ ಮಿ॥ ಬಿ. ಬಸಪ್ಪಯ್ಯಂಗಾರ್ರವರ ಪತ್ನಿಯವರು ನದಿಗೆ ಸ್ನಾನಕ್ಕೆ ಹೋಗಿ, ಸ್ನಾನಮಾಡಿಕೊಂಡು, ಮಡಿ ಉಟ್ಟುಕೊಳ್ಳುವ ಉದ್ದೇಶ್ಯ ೧೦ ರೂಪಾಯಿ ಬಾಳತಕ್ಕ ಒಂದು ಬೆಳ್ಳಿ ತಂಬಿಗೆಯಲ್ಲಿ ೧೭ ಪವನ ತೂಕದ ಚಿನ್ನದ ಒಡವೆಗಳನ್ನು ಹಾಕಿ, ಸದರೀ ತಂಬಿಗೆಯನ್ನು ನದೀ ಮೆಟ್ಟಿನಮೇಲೆ ಇಟ್ಟು, ಮಡಿ ಉಟ್ಟುಕೊಂಡು ಹಿಂತಿರುಗಿ ನೋಡುವಷ್ಟರೊಳಗಾಗಿ ಯಾರೋ ಸದರೀ ತಂಬಿಗೆಯನ್ನು ಒಡವೆಗಳ ಸಹಿತ ಕಳ್ಳತನಮಾಡಿದ ಹಾಗೂ. ಇದರಿಂದ ಸದರೀ ಅಯ್ಯಂಗಾರ್ರಿಗೆ ೧೨೦೦ ರೂಪಾಯಿ ವರಿವಿಗೆ ನಷ್ಟಸಂಭವಿಸಿದಹಾಗಾ. ಈ ಮೋಕದ್ದಮೆ ಪತ್ತೆ ತರದೆ ನಿಗಾಗಿ ಸಾಗರದಿಂದ ವರ್ಗವಾಗಿ ಬಂದಿರುವ ನಾಗೇಶರಾಯರು ಬಹಳ ಪ್ರಾಕ್ರಮ ಪಡುತ್ತಾ ಇರುವರಾಗೂ ವರ್ತಮಾನವಿದೆ.—ಇಲ್ಲಿನ ಡಿ॥ ಫಾರೆಸ್ಟ್ ಆಫೀಸರಾದ ಮಿ॥ ಬಿ ಪ್ರರಾಯರಿಗೆ ಫಾರೆಸ್ಟ್ ಆಫೀಸಿನ ನೌಕರರೆಲ್ಲಾ ಸೇರಿ ಕೋರ್ಪೊರೇಷ್ ಛತ್ರದಲ್ಲಿ ಕಳೆದ ೯ನೆ ಬೃಹಸ್ಪತಿವಾರ ಒಂದು ಟೀ ಪಾರ್ಟಿ ಔತನ ಮಾಡಿಸಿದರಂತೆ. ಮಿ॥ ಪ್ರರಾಯರು ಇಷ್ಟರಲ್ಲೇ ಪ್ರಯಾಣ ಮಾಡುತ್ತಾರೆಂದು ವರ್ತಮಾನವಿದೆ.

ಕುಣಿಗಲು:—ಈಗ್ಗೆ ಕೆಲವು ದಿನಗಳ ಹಿಂದೆ ಸಿಟಿವರಿ ಬೆಂಗ್ಳೂರು ಹೋಗುವ ರಸ್ತೆಯಲ್ಲಿ ಬಹು ಜನ ಸಂಚಾರವುಳ್ಳ ರಾಜಮಾರ್ಗದ ಪಕ್ಕದಲ್ಲಿ ಒಂದು ಸತ್ತ ನಾಯಿ ಬಹು ದುರ್ಗಂಧವನ್ನು ಉಂಟುಮಾಡಿ. ಅಲ್ಲಿಯೇ ಬಿಣಗಿ ಗದ್ದಲಿನ ವ ಖಾದರೂ ಮುನಿಸಿಪಲ್ ಅಧಿಕಾರಿಗಳ ಗಮನಕ್ಕೆ ಬಾರದೆ ಹೋದದ್ದು. ಕಟ್ಟೋದ ಅನೇಕ ಟಿ.ಬಿ. ಬಿರಂಡಿಗಳು ಬಹು ಗಲೀಜಾಗಿರುವವೂ ಆಶ್ಚರ್ಯವನ್ನುಂಟುಮಾಡುತ್ತವೆ.—ಈ ಊರಿಗೆ ಮುಖ್ಯ ಜಲಾಧಾರಗಳಾದ ಚಿಕ್ಕಕೆರೆಯೂ ದೊಡ್ಡ ಕೆರೆಯೂ ಬೀಗುತ್ತಾ ಬಂದು. ಭಾವಿಗಳೆಲ್ಲಾ ಬತ್ತಿ ಜನರಿಗೆ ಬಹಳ ಚಿಂತೆಯನ್ನು ಉಂಟುಮಾಡುತ್ತಾ ಇದ್ದರೂ ಪಾಪಿಗಳ ಭಾವಿಯಲ್ಲಿ ಒಂದು ನಡುವಿನ ಮಟ್ಟ ನೀರಿದೆ ಎಂದು ಕೇಳಿ ಇದಕ್ಕೆ ಭಗವಂತನ ದಯವೇ ಕಾರಣವೇನೋ ಎಂದು ಆಶ್ಚರ್ಯವಾಗುತ್ತದೆ. ಯಾವ ಭಾವಿಯ ಹತ್ರ ನೋಡಿದರೂ ಅನೇಕ ಜನರು ನೀರಿಗಾಗಿ ಗುಂಪು ಗುಂಪಾಗಿ ಕಾದಿದ್ದು ಬೊಂಬುಗಳ ಮೂಲಕ ತೋಡಿ ಹಾಕಿಕೊಳ್ಳುತ್ತಾ ಇದ್ದಾರೆ. ಅವರ ಆಗಬಾಟ್ಲನ್ನು ನೋಡುವವರಿಗೆ ಆಗದು.—ಈಗ್ಗೆ ಕೆಲವು ದಿನಗಳ ಹಿಂದೆ ನೆಲಮಂಗಲದ ಪ್ರಾಂತ್ಯದಲ್ಲಿ ಒಬ್ಬ ಮೋಸಗಾರನು ಒಂದು ಮೋಸತನವನ್ನು ರಾತ್ರಿ ಕಾಲದಲ್ಲಿ ಒಂದೊಂದು ಮನೆಯ ಬಾಗಲಿಗೂ ಹೋಗಿ ಆ ಮನೆಯವರಿಂದ ಸುಣ್ಣವೂ ಹೊಗೆ ಮತ್ತು ಕತ್ತಿಗೆ ಕಾಣಿಕೆ ಕಟ್ಟುವ ಹರಿಯಂತ್ರ ಆ ಮನೆಯನ್ನು ಬಿಟ್ಟುಹೋಗದ ರೀತಿಯನ್ನು ಕಲಿಸಿ, ಅದಕ್ಕೆ ಪ್ಲೇಗ್ ಮಾರೀ ಎಂತಲೂ ಹೆಸರಿಟ್ಟು ಅವನ್ನು ಯಾರಾದರೂ ಹಿಡಿದುಕೊಂಡರೆ ಅವರ ಮನೆ ನಾಶವಾಗುತ್ತದೆಂಬ ಪ್ರಚಾರವನ್ನು ಹುಟ್ಟಿಸಿ, ನೆಲಮಂಗಲದ ಪ್ರಾಂತ್ಯದಿಂದ ಅನೇಕ ಗ್ರಾಮಗಳ ಜನಗಳನ್ನು ಮೋಸಗೊಳಿಸಿ, ಬೆಳಗಿನ ವರಿವಿಗೂ ಪಡೆದ ಹಣವನ್ನೆಲ್ಲಾ ತೆಗೆದುಕೊಂಡು, ಹಗಲೆಲ್ಲಾ ಅದನ್ನು ಮೇಯಿಸಿ, ಪುನಃ ರಾತ್ರಿಗೆ ಮೂರು ಕಾಸನ್ನೋ ಇಲ್ಲವೇ ಆರುಕಾಸನ್ನೋ ಕಟ್ಟಿ ಬಿಡುತ್ತಾ ಇದ್ದನು. ಈ ಮೋಸಗಾರನ ಮೇಲೆ ಹೋತವು ಈ ಊರಿನ ಸಮೀಪದಲ್ಲಿರುವ ಬಿದಿನಿಗೇರಿಗೆ ಬರಲು, ಕೆಲವರು ಭಯಪಟ್ಟು, ಸಾಂಬ್ರಾಣಿ ಹೊಗೆ ಕಾಣಿಕೆ ಮೊದಲಾದವುಗಳನ್ನು ಕಟ್ಟಿದರು. ಈ ಊರಿನಲ್ಲಿ ಕೊತ್ತವಾಲ್ ರಂಗೇಗೌಡರ ಮನೆಯ ಹತ್ರಕ್ಕೆ ಕಾಣಿಕೆಗಾಗಿ ಈ ಹೋತವು ಹೋಗಲು ಅನುಮಾನ ಹುಟ್ಟಿ, ಅದನ್ನು ಕಟ್ಟಹಾಕಲು, ಬೆಳಗಿನ ವರಿವಿಗೂ ನೋಡಿದ ಆ ಮೋಸಗಾರನು ತನ್ನ ಹೋತ ಬರಲಿಲ್ಲವಲ್ಲಾ ಎಂದು ಚಿಂತಿಸಿ, ಆ ಗೌಡರ ಹತ್ರ ಹೋಗಿ ಹೋತವು ನನ್ನದೆಂದು ಕೇಳಲು, ಆ ಮೋಸಗಾರನು ಓಡಿಹೋಗುವದಕ್ಕೆ ಬುದ್ಧಿ ಕಲಿಸಿ, ಅದರ ಕತ್ತಿನಲ್ಲಿದ್ದ ೧೦ ರೂಪಾಯಿಗಳಿಂದ ಬಡವರಿಗೆ ಅನ್ನ ಹಾಕಿಸಿ, ಆ ಹೋತವನ್ನು ತಿನ್ನುವವರ ಪಾಲುಮಾಡಿ, ಮುಂದೆ ಅದರ ಮೂಲಕ ಮೋಸಹೋಗುತ್ತಿದ್ದವರನ್ನು ತಪ್ಪಿಸಿದ್ದು ಬಹಳ ಉಪಕಾರವಾಯಿತು. **ಇದು ಕಥೆಯಲ್ಲ ; ನಿಜವಾಗಿ ನಡೆದದ್ದು.**—ಈ ಊರಿಗೆ ದೊಡ್ಡಬಳ್ಳಾಪುರದಿಂದ ಬಂದಿರುವ ಡಾಕ್ಟರು ಜನರ ಪ್ರೀತಿಯನ್ನು ಸಂಪಾದಿಸಿಕೊಂಡಿದಾರೆ. ಈಗ್ಗೆ ಮೂರು ತಿಂಗಳ ಹಿಂದೆ ಕಾಡು ಹಂದಿಯ ಬಾಯಿಯ ಮೂಲಕ ಸುಮಾರು ನೂರಕ್ಕೆ ಹೆಚ್ಚು ಬೆಟ್ಟು ಗಾಯಗಳನ್ನು ಹೊಂದಿದ್ದ ಮೋಹನ ಹಳ್ಳಿ ಮುಂತಾಗಿ ಗೌಡನನ್ನು ಬಹು ಮುತುವರ್ಜಿಯಿಂದ ಸ್ವಸ್ಥ ಮಾಡಿದರು. ಪ್ರತಿದಿನ ಬೆಳಿಗ್ಗೆ ಸಾಯಂಕಾಲಗಳಲ್ಲಿ ಆಸ್ಪತ್ರೆಯನ್ನು ತೆರೆದು ರೋಗಿಗಳಿಗೆ ಉಪಚಾರ ಮಾಡುವದರಲ್ಲೇ ವಿಶ್ರಾಂತಿ ಹೊಂದುವರು.—ಜಬ್ಬರ್‌ಖಾನ್ ಎಂಬವನು ಸುಮಾರು ೨೦ ವರ್ಷದ ಮುದುಕನು ಈತನು ಕುದುರೆಯ ಮೇಲಿನಿಂದ ಬಿದ್ದು, ಗಾಯ ತಗಲಿ, ೧೩ ನೆ ತಾರೀಖಿನಲ್ಲಿ ತೀರಿಹೋದನು.—ಎಡೆಯೂರು ಎಂಬುವದು ಈ ಚೆಗಲಿಗೆ ಸೇರಿದ ಒಂದು ಕಸಬೆ. ಅಲ್ಲಿ ಪ್ರತಿವರ್ಷವೂ ಒಂದು ದೊಡ್ಡ ಜಾತ್ರೆ ನಡೆಯುತ್ತದೆ. ಅದರಂತೆಯೇ ಕಳೆದವಾರ ಸುಮಾರು ೪ ಸಾವಿರ ಜನರು ಸೇರಿದ್ದ ಜಾತ್ರೆ ನಡೆಯಿತು.—ಈಗ ಹೊಸದಾಗಿ ಬಂದಿರುವ ಪೋಲೀಸ್ ಇನ್ಸ್‌ಪೆಕ್ಟರ ಒಳ್ಳೇ ಏರ್ಪಾಡಿನಿಂದ ಕಳ್ಳತನಗಳು ನಡೆಯಲು ಅನುಕೂಲಿಸಲಿಲ್ಲ.—ದೊಂಬರ ಆಟವನ್ನು ನೋಡುವದಕ್ಕಾಗಿ ಸೇರಿದ ಮೇಲಕ್ಕೆ ಹತ್ತಿದ್ದ ಒಬ್ಬ ಹುಡುಗನ ಸಿಗರೇಟಿನ ಬೆಂಕಿಯಿಂದ ಸೇರಿನ ಸುಮಾರು ನೂರು ರೂಪಾಯಿಗಳ ಬಟ್ಟೆಗಳು ಸುಟ್ಟುಹೋದವು. ಜನರೆಲ್ಲಾ ಬಂದು ಆರಿಸದೆ ಹೋಗಿದ್ದರೆ ಸುಮಾರು ನಾಲ್ಕು ಸಾವಿರ ರೂಪಾಯಿಗಳ ಬೆಲೆಯಷ್ಟು ಸುಟ್ಟುಹೋಗುತ್ತಿತ್ತು.

## ವಿದೇಶ ವರ್ತಮಾನಗಳು.

ಚೀನಾ ರಾಜಧಾನಿಯಾದ ಪೀಕಿಂಗ್ ಪಟ್ಟಣದಲ್ಲಿ ಒಂದು ಹೊಸ ವಿದ್ಯಾಶಾಲೆಯನ್ನು ೫ ಲಕ್ಷ ದ್ರವ್ಯ ವೆಚ್ಚಿಸಿ ಕಟ್ಟಿಸುತ್ತಾರೆ. ಇದರೊಳಗೆ ೧,೫೦೦ ಕೊಠಡಿಗಳು ಆಗುವವು.

◆◆◆◆

ರೋಂ ನಗರದಲ್ಲಿ ಕಾರ್ಖಾನೆಗಳೊಳಗೆ ಕೆಲಸ ಮಾಡುವ ೩೦,೦೦೦ ಜನರು ಕೆಲಸಕ್ಕೆ ಹೋಗದೆ ಸಟಹಿಡಿದು ನಿಂತುಬಿಟ್ಟರು. ಆದರೂ ಪ್ರಜಾ ನೆಮ್ಮದಿಗೆ ಭಂಗ ಉಂಟಾಗಲಿಲ್ಲ.

◆◆◆◆

ವಿಲಾಯತಿ ರಾಜ್ಯದವರು ದಕ್ಷಿಣ ಆಫ್ರಿಕಾ ಯುದ್ಧಕ್ಕೆ ೩೩೩ ಕೋಟಿ ರೂಪಾಯಿ ಖರ್ಚು ಮಾಡಿದಾರೆ. ಈಗ ಆ ಹೊಸ ರಾಜ್ಯವನ್ನು ಅಭಿವೃದ್ಧಿಗೆ ತರುವದಕ್ಕೆ ಮತ್ತೆ ೨೦ ಕೋಟಿ ರೂಪಾಯಿ ಖರ್ಚು ಮಾಡುವವರಾಗಿದಾರೆ.

◆◆◆◆

ಬರುವ ಜೂನ್ ಕಡೇ ವಾರದಲ್ಲಿ ವಿಲಾಯತಿಯ ಯುವರಾಜರಿಗೆ ಲಂಡನ್ ಯೂನಿವರ್ಸಿಟಿ ವಿದ್ಯಾಸಂಘದವರು ಮಾಸ್ಟರ್ ಆಫ್ ಲಾಸ ಎಂಬ ಬಿರುದನ್ನೂ, ಅವರ ಪತ್ನಿಯವರಿಗೆ ಅದೇ ದಿನ ಮಾಸ್ಟರ್ ಆಫ್ ಮ್ಯೂಸಿಕ್ (ಸಂಗೀತದಲ್ಲಿ ಪ್ರವೀಣೆ) ಎಂಬ ಬಿರುದನ್ನೂ ಕೊಡುವವರಾಗಿದಾರೆ.

◆◆◆◆

ಆರೆಸನಿ ಎಂಬೋದ ಹಡಗು ನ್ಯೂಯಾರ್ಕ್ ನಗರವನ್ನು ಬಂದು ತಲುಪಿತು. ಅದು ಸಮುದ್ರದ ಮೇಲೆ ಬರುತ್ತಿರುವಾಗ ಕೊಲಂಬಿಯಾ ರಾಜ್ಯದಲ್ಲಿರುವ ಡೆಕ್ಸಿಯರ್ರಾ ಫರ್ಮ ಎಂಬ ಪರ್ವತವು ಅಗ್ನಿಯನ್ನು ಕಾರುತ್ತಿದ್ದ ಹಾಗೆ, ಅದರಿಂದ ಬರ್ಯೊಫ್ರೊ ಎಂಬ ಗ್ರಾಮವು ನಾಶಹೊಂದಿ, ಸುಮಾರು ೧೦೦ ಜನರು ಹತರಾದ ಹಾಗೂ ಸಮಾಚಾರ ತಂದಿದೆ.

◆◆◆◆

ಅಂಟ್ಲಾರ್ಟಿಕ್ (ಭೂಗೋಳದ ದಕ್ಷಿಣಸಾಗರ) ಪ್ರದೇಶದಲ್ಲಿ ಭೂಪ್ರದೇಶವು ಎಲ್ಲಿವರೆಗೆ ಇದೆ ಎಂಬುವದನ್ನು ನೋಡಿಕೊಂಡು ಬರುವದಕ್ಕಾಗಿ ಕೆಲವರು ಡಿಸ್ಕವರಿ ಎಂಬ ಹಡಗಿನಲ್ಲಿ ಹೋಗಿದ್ದರು. ಇವರು ೭೦ನೇ ಡಿಗ್ರಿಯ ತನಕ ಹೋಗಿದ್ದರೆಂತಲೂ, ಇವರು ಹೋಗಿದ್ದಷ್ಟು ದೂರ ದಕ್ಷಿಣದಿಕ್ಕಿನಲ್ಲಿ ಇದುವರೆಗೆ ಯಾರೂ ಹೋಗಿಬರಲಿಲ್ಲವೆಂತಲೂ ತಿಳಿದುಬಂದಿದೆ.

◆◆◆◆

ಸ್ವಿಟ್ಜರ್ಲ್ಯಾಂಡಿನಲ್ಲಿ ದೊಡ್ಡ ಸಣ್ಣ ಗಡಿಯಾರಗಳನ್ನು ತಯಾರುಮಾಡುವ ಕಾರ್ಖಾನೆಗಳಲ್ಲಿ ೩೦,೦೦೦ ಜನರು ಕೂಲಿಮಾಡಿ ಜೀವಿಸಿಕೊಂಡಿದಾರೆ. ವಿಲಾಯತಿ, ಫ್ರಾನ್ಸು, ಸ್ವಿಟ್ಜರ್ಲ್ಯಾಂಡ್ ಎಂಬೀ ಮೂರು ರಾಜ್ಯಗಳಲ್ಲಿ ಒಂದು ವರುಷಕ್ಕೆ ೩೦ ಲಕ್ಷ ಪೌಂಡುಗಳ ಬೆಲೆಯುಳ್ಳ ಗಡಿಯಾರಗಳು ತಯಾರಾಗುತ್ತಿವೆ ಎಂತಲೂ, ಅಷ್ಟು ಬಿಕರಿ ಆಗುವವೆಂತಲೂ ತಿಳಿಯುವದು.

◆◆◆◆

ಫಿಲಿಪೈನ್ ದ್ವೀಪಗಳಲ್ಲಿ ಮಿಂಡನಾವೋ ಎಂಬ ಪ್ರಾಂತ್ಯದೊಳಗೆ ಲಿಮಾವೇಶಿಗಳಾದ ಮೋರೋ ಎಂಬ ಜನರು ಸೇರಿಕೊಂಡು, ಅಮೇರಿಕದವರಿಗೆ ತೊಂದರೆ ಕೊಡುತ್ತಿದ್ದರು. ಅಮೇರಿಕದವರು ಆ ಜನರನ್ನು ಸಂಧಿಸಿ ಯುದ್ಧಮಾಡಿ, ೧೦೦ ಮಂದಿಯನ್ನು ಕೊಂದು, ಅನೇಕರಿಗೆ ಗಾಯಗೊಳಿಸಿ, ಅವರ ಮುಖ್ಯ ಸ್ಥಳವಾದ ಬಾಕೊಲಾಡ್ ಪಟ್ಟಣವನ್ನು ಸ್ವಾಧೀನ ಪಡಿಸಿಕೊಂಡರು.

◆◆◆◆

ಮನಿಲಾದಲ್ಲಿ ಅಮೇರಿಕದವರು ಸ್ಪೇಯಿನವರ ಒಂದು ಹಡಗನ್ನು ಸೈನ್ಯ ಸಹಿತ ಮುಳುಗಿಸಿಬಿಟ್ಟಿದ್ದರು. ಅಮೇರಿಕದವರು ಈಗ ಆ ಹಡಗನ್ನು ಸಮುದ್ರದಿಂದ ಮೇಲಕ್ಕೆ ಎತ್ತಿದಾರೆ. ಅದರಲ್ಲಿ ೪೦ ಜನರ ಮೂಳೆಗಳು ಸಿಕ್ಕಿದವು. ಅವುಗಳನ್ನೆಲ್ಲಾ ಮರ್ಯಾದೆಪೂರ್ವಕವಾಗಿ ಸಮಾಧಿ ಮಾಡುತ್ತೇವೆಂದು ಸ್ಪೇಯಿನವರಿಗೆ ತಿಳಿಸಿದರು. ಅವರು ಒಪ್ಪದೆ ಅವುಗಳನ್ನು ಸ್ಪೇಯಿನಿಗೆ ಸಾಗಿಸಿಕೊಂಡು ಹೋಗುವದಾಗಿ ಕೇಳಿದರು.

◆◆◆◆

ವಿಲಾಯತಿಯ ಮಹಾರಾಜಾ ಚಕ್ರವರ್ತಿಯವರು ಪೋರ್ಚುಗಲ್ ರಾಜ್ಯದಲ್ಲಿ ಸಂಚಾರಮಾಡಿಕೊಂಡು, ಜಿಬ್ರಾಲ್ಟರ್ ಎಂಬ ತೀರಪಟ್ಟಣಕ್ಕೆ ಬಂದರು. ಅಲ್ಲಿನ ಇಂಗ್ಲಿಷ್ ಸೈನ್ಯಕ್ಕೆಲ್ಲಾ ಸರ್ ಜಾರ್ಜ್ ವೈಟ್ ಯವರು ಮುಖ್ಯಸ್ಥರಾಗಿರುತ್ತಾರೆ. ಚಕ್ರವರ್ತಿಯವರು ಭೋಜನ ಕಾಲದಲ್ಲಿ ಆ ಸೈನ್ಯಾಧಿಪತಿಯ ಸಾಹಸ ಪರಾಕ್ರಮಗಳನ್ನು ಹೊಗಳಿ, ಅವರಿಗೆ ಫೀಲ್ಡ್ ಮಾರ್ಷಲ್ ಎಂಬ ಬಿರುದನ್ನು ದಯಪಾಲಿಸಿ, ಬತ್ತಿ ಕೊಟ್ಟರು.

◆◆◆◆

ಪ್ರಪಂಚದ ಉತ್ತರಧ್ರುವದ ಕಡೆಗೆ ಅಮೇರಿಕದವರು ಹಡಗಿನಲ್ಲಿ ಹೋಗಿ ನೋಡಿಕೊಂಡು ಬರುವವರಾಗಿದಾರೆ. ಇದಕ್ಕೆ ಅಮೇರಿಕದ ಕೋಟ್ಯಾಧೀಶ್ವರರಾದ ಮಿ॥ ಜೀಗ್ಲರ್ ಎಂಬಾತನು ಬೇಕಾಗುವಷ್ಟು ದ್ರವ್ಯವನ್ನು ಒದಗಿಸಿಕೊಡುವದಾಗಿ ವಾಗ್ದಾನ ಮಾಡಿರುವನು. ಎರಡು ವರುಷಗಳ ತನಕ ಸಾಕಾಗುವಷ್ಟು ಸಾಮಾನುಗಳನ್ನೂ ಆಹಾರ ಪದಾರ್ಥಗಳನ್ನೂ ಈ ಪ್ರಯಾಣಕ್ಕಾಗಿ ಸಿದ್ಧಪಡಿಸಿಕೊಳ್ಳುತ್ತಿದಾರೆ.

◆◆◆◆

ಸೋಮಲಿಲ್ಯಾಂಡಿನಲ್ಲಿ ಮುಲ್ಲಾ ಎಂಬಾತನು ಇಂಗ್ಲಿಷರ ಮೇಲೆ ಯುದ್ಧಮಾಡುತ್ತಿರುವನಷ್ಟೆ. ಈತನು ಸೈನ್ಯಸಹಿತ ಮುಲ್ಡಾಲ್ ಎಂಬ ಸ್ಥಳವನ್ನು ಬಿಟ್ಟು, ಡಿಕ್ ಎಂಬ ಸ್ಥಳಕ್ಕೆ ಓಡಿ ಹೋಗಿರುವದಾಗಿಯೂ, ಇಟಲಿಯವರಿಗೆ ಆ ಕ್ಷೇತ್ರದಲ್ಲಿ ಸೇರಿರುವ ಭಾಗದೊಳಗೆ ಶತ್ರುಗಳ ಕಾಟ ತಪ್ಪಿತೆಂತಲೂ, ಇಂಗ್ಲಿಷ್ ಸೈನ್ಯವು ಗರ್ಲೋಗುಬಿ ಎಂಬ ಸ್ಥಳದಲ್ಲಿ ಶತ್ರುಗಳಮೇಲೆ ಯುದ್ಧ ಮಾಡಬೇಕೆಂದು ಪ್ರಯತ್ನ ಪಡುತ್ತಿರುವದಾಗಿಯೂ ಸಮಾಚಾರ ಬಂದಿದೆ.

◆◆◆◆

ಚೀಣಾದ ರಾಜಧಾನಿಯಾದ ಪೀಕಿಂಗ್ ನಗರದಲ್ಲಿ ಆಸ್ಟ್ರಿಯಾ ಮತ್ತು ಜರ್ಮನಿಯ ಸುಮಾರು ೧೦೦ ಜನ ಸೋಜರುಗಳು ಒಂದು ಹೋಟೆಲಿನಲ್ಲಿ ಸೇರಿದ್ದಾಗ ಜಗಳವಾಡಿ, ಇಟ್ಟಿಗೆ, ದೊಣ್ಣೆ, ಬಾಕುಗಳಿಂದ ಹೊಡೆದಾಡಿದರು. ಅನೇಕರಿಗೆ ಗಾಯಗಳಾಗಿ ಈಗ ಆಸ್ಪತ್ರೆಯಲ್ಲಿ ಬಿದ್ದುಕೊಂಡಿದಾರೆ. ಜರ್ಮನಿಯ ಮತ್ತು ಆಸ್ಟ್ರಿಯದ ಹೊಸ ಪಿಡಾಯಿಗಳು ಹೋಗಿ ಸಂಗೀನುಗಳನ್ನು ತೋರಿಸಿ, ಹೆದರಿಕೆ ಹುಟ್ಟಿಸಿ, ಆ ದಿನ ಜಗಳವನ್ನು ನಿಲ್ಲಿಸಿದರೆಂದು ತಂತೀ ವರ್ತಮಾನ ಬಂದಿದೆ.

◆◆◆◆

ವಿಲಾಯತಿಯ ಪಾರ್ಲಿಮೆಂಟ್ ಸಭೆಯನೆಗಳಲ್ಲಿ ಮೆಂಬರುಗಳಾಗಿರುವ ಕೆಲವು ಮಂದಿ ಲಾರ್ಡುಗಳೂ, ಕಾಮನ್ಸರುಗಳೂ ಇನ್ನು ಕೆಲವು ದಿನಗಳೊಳಗೆ ಕೆನಡಾ ರಾಜ್ಯವನ್ನು ಹೋಗಿ ನೋಡಿಕೊಂಡು ಬರುವವರಾಗಿದಾರೆ. ಕ್ವಿಬೆಕ್, ಮಾಂಟ್ರೀಲ್, ಒಟ್ಟಾವಾ, ವಿನ್ನಿಪೆಗ್, ರಾಕಿಪರ್ವತಗಳು, ವ್ಯಾನ್‌ಕೂವರ್, ವಿಕ್ಟೋರಿಯಾ, ಗ್ರೀಟ್‌ಲೇಕ್, ಟೊರಾಂಟೋ ಎಂಬೀ ನಗರಗಳನ್ನು ನೋಡಿ ಬರುವರು. ಕೆನಡಾ ರಾಜ್ಯದವರು ಇವರಿಗೆಲ್ಲಾ ತಕ್ಕಹಾಗೆ ಸನ್ಮಾನಮಾಡುವದಾಗಿ ಒಪ್ಪಿಕೊಂಡಿದಾರೆ.

◆◆◆◆

ವಿಲಾಯತಿಯ ದೊರೆಯವರು ಪೋರ್ಚುಗಲ್ ರಾಜ್ಯಕ್ಕೆ ದಯಮಾಡಿದ್ದಾಗ ಅವರೂ ಪೋರ್ಚುಗಲಿನ ದೊರೆಯವರೂ ಸೇರಿ ನಾಟಕ ಶಾಲೆಗೆ ಹೋಗಿರುವಾಗ್ಯೆ ವಿಲಾಯತಿಯ ದೊರೆಯವರನ್ನು ಗುಂಡಿನಿಂದ ಹೊಡೆದು ಕೊಲ್ಲಬೇಕೆಂದು ದಾಗಿ ಕೆಲವು ದುಷ್ಟರು ಮಸಲತ್ತು ಮಾಡಿಕೊಂಡಿದ್ದರು. ಆದರೆ ವಿಲಾಯತಿ ದೊರೆಯವರ ಸಂಗಡ ಅವರ ಅಂಗರಕ್ಷಕರಾಗಿ ಕೆಲವು ಮಂದಿ ಪ್ರವೀಣರೆನಿಸಿಕೊಂಡ ಪೋಲೀಸಿನವರು ಹೋಗಿದ್ದರು. ಇವರಿಗೆ ಆ ಪಿತೂರಿಯು ಗುಟ್ಟು ಗೊತ್ತಾಯಿತು. ರಾಜಕುಮಾರ ಅಲ್ಫಾನ್ಸೋ ಯವರ ಸೇವಕನೊಬ್ಬನು ಈ ಪಿತೂರಿಗೆ ಸೇರಿದ್ದನು. ಅವನನ್ನು ಆ ಪೋಲೀಸಿನವರು ಹಿಡಿದು ಬಂಧಮಾಡಿದರು.

◆◆◆◆

ಜರ್ಮನಿ ರಾಜ್ಯಕ್ಕೆ ಸೇರಿದ ಒಂದು ಸಣ್ಣ ಗ್ರಾಮದಲ್ಲಿ ಈಗಲೂ ಒಂದು ವಿಚಿತ್ರವಾದ ಪದ್ಧತಿ ಇದೆ. ಯಾವನಾದರೂ ಒಂದು ಅಪರಾಧ ಮಾಡಿದನೆಂಬ ಪಟ ರುಜುವಾತಾದ ಮೇಲೆ ಅವನಿಗೆ ಆ ಗ್ರಾಮದವರು ಒಂದು ತರದ ಉಡುಪನ್ನು ಹಾಕುವರು. ಅವನು ಗ್ರಾಮದ ಪ್ರತಿ ಮನೆಗೂ ಹೋಗಿ ಪ್ರವೇಶಮಾಡಿ "ನಾನು ಇನ್ನು ಮೇಲೆ ಎಂದಿಗೂ ಯಾವ ಅಪರಾಧವನ್ನೂ ಮಾಡುವದಿಲ್ಲ" ಎಂಬದಾಗಿ ಹೇಳಿಕೊಂಡು ಬರಬೇಕು. ಮತ್ತು ಗ್ರಾಮದಲ್ಲಿ ಯಾವದಾದರೂ ಸಂತೆ ಉತ್ಸವವಾದರೆ, ಗ್ರಾಮದ ಮೆರವಣಿಗೆಯಾಗಿ ಆ ಗುಮಾಸ್ತೆ ಈ ಅಪರಾಧಿಗಳು ತಮ್ಮ ತಲೆ ತಗ್ಗಿಸಿ ತಿರುಗಿ ನಿಲ್ಲಬೇಕು ಬೇಕು.

◆◆◆◆

ಅಮೇರಿಕಾ ರಾಜ್ಯದ ಪ್ರೆಸಿಡೆಂಟರಾದ ರೂಸ್‌ವೆಲ್ಟ್ ಯವರು ಡಾಕ್ಟರ್ ಕ್ರಂ ಎಂಬೊಬ್ಬ ಕಪ್ಪು ಮನುಷ್ಯನಿಗೆ ಒಂದು ಪಟ್ಟಣದಲ್ಲಿ ಕಂದಾಯ ವಸೂಲ್ಮಾಡುವ ಅಧಿಕಾರವನ್ನು ಕೊಟ್ಟರು. ಅಮೇರಿಕದ ಬಿಳೀ ಜನರೆಲ್ಲಾ ಕಪ್ಪು ಜನರಿಗೆ ಅಧಿಕಾರ ಕೊಡಕೂಡದೆಂದು ಆಕ್ಷೇಪಣೆಮಾಡಿದಾಗ್ಯೂ, ಪಾರ್ಲಿಮೆಂಟಿನಲ್ಲಿ ಅನೇಕರು ಅವನಿಗೆ ಅಧಿಕಾರ ಕೊಟ್ಟದ್ದನ್ನು ಒಪ್ಪದೆಹೋದರು. ಆದರೆ ಪ್ರೆಸಿಡೆಂಟರು ಪ್ರತಿಜ್ಞೆಯನ್ನು ನಡೆಸಿದಾರೆ. ಅವನಿಗೆ ಅಧಿಕಾರವನ್ನು ಕೊಡಲೇಬೇಕೆಂತಾ ಹಟಹಿಡಿದಿರುವರು.—ಅಮೇರಿಕದ ಪ್ರೆಸಿಡೆಂಟರು ಈ ತಿಂಗಳ ಪ್ರಾರಂಭದಿಂದ ಸಂಚಾರ ಹೊರಟಿದಾರೆ. ಇವರು ೬೦ ದಿವಸಗಳ ತನಕ ಸಂಚಾರ ಮಾಡುವರೆಂತಲೂ, ೨೫ ಡಿಸ್ಟ್ರಿಕ್ಟುಗಳಿಗೆ ಹೋಗಿಬರುತ್ತಾರೆಂತಲೂ ಹೇಳುವರು.

ಬರುವ ತಿಂಗಳು ೧ನೇ ತಾರೀಖಿಗೆ ವಿಲಾಯಿತಿಯ ದೊರೆಯವರು ಸಂಚಾರಮಾಡುತ್ತಾ ಫ್ರಾನ್ಸ್ ರಾಜಧಾನಿಯಾದ ಪ್ಯಾರಿಸ್ ಪಟ್ಟಣಕ್ಕೆ ದಯಮಾಡುವವರಾಗಿದಾರೆ. ಅಗ್ಯೆ ಫ್ರಾನ್ಸಿನ ಪ್ರೆಸಿಡೆಂಟರೂ ಮಂತ್ರಿಗಳೂ ರೈಲ್ವೇ ಸ್ಟೇಷನಲ್ಲಿ ಕಾದಿದ್ದು, ದೊರೆಯವರನ್ನು ಎದುರ್ಗೊಂಡು ಸನ್ಮಾನ ಮಾಡಬೇಕೆಂತಲೂ, ಎಲಿಸೀ ಎಂಬ ನೇತ್ರಾನಂದಕರವಾದ ಅರಮನೆಯಲ್ಲಿ ಅವರಿಗೆ ಭಾರೀ ಔತನವನ್ನು ಮಾರನೇ ದಿನ ಮಾಡಬೇಕೆಂತಲೂ ಕ್ಯಾಬಿನೆಟ್ ಕೌನ್ಸಿಲ್ ಮೆಂಬರುಗಳು ತೀರ್ಮಾನಿಸಿದ್ದಾರೆ

*****

ವಿಲಾಯತಿಯಲ್ಲಿ ಮೆ॥ ಜೆ ಕೆ. ರೀಸ್ ಸಾಹೇಬರು ಕೆಲವು ದಿನಗಳ ಹಿಂದೆ ಘನ ಪಂಡಿತರುಗಳ ಸಭೆಯಲ್ಲಿ ಹಿಂದುಸ್ಥಾನದ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ಆಗ ಅವರು ತಿಳಿಸಿದ ಅಭಿಪ್ರಾಯವೇನಂದರೆ —ನಮ್ಮ ಶತ್ರುಗಳು ದಂಡುಕಟ್ಟಿಕೊಂಡು ಉತ್ತರದಿಕ್ಕಿನಿಂದ ನುಗ್ಗಿಬರುವದು ಅಸಾಧ್ಯ. ವಾಯುವ್ಯದಿಕ್ಕಿನ ಕಣಿವೆಗಳ ಮಾರ್ಗವಾಗಿ ನುಗ್ಗಿಬರುವದು ಯಾರಿಂದಲೂ ಆಗಲಾರದು; ಅದರಲ್ಲೂ ಈಗ ರಷ್ಯಾದವರು ಬಂದುನಿಂತಿರುವ ಪ್ರದೇಶದಿಂದ ನುಗ್ಗಿಬರುವದು ಬಹಳ ಕಷ್ಟ. ಆದರೆ ಪರ್ಷಿಯಾದ ಮೂಲಕವೇ ನುಗ್ಗಿಬರಬಹುದಾಗಿದೆ, ಅಲ್ಲಿ ಇದುವರೆಗೆ ವಿಲಾಯತಿಯವರು ಕ್ರಮೇಣ ಬಲಪಡಿಸಿಕೊಳ್ಳದೆ ಡೀಲಾ ಬಿಡುತ್ತಾ, ಇತರರಿಗೆ ಅವಕಾಶ ಕೊಡುತ್ತಾ ಬಂದಿದಾರೆ ವಿಲಾಯತಿ ಸರ್ಕಾರದವರು ಇದಕ್ಕೆ ವಿಶೇಷವಾದ ಗಮನ ಕೊಡಬೇಕಾಗಿರುವದು.

*****

ವಿಲಾಯತಿ ರಾಜ್ಯಕ್ಕೆ ಸೇರಿದ ನಾಟಿಂಗ್ಹಾಂ ಷೈರಿನಲ್ಲಿ ಹಕ್ನಾಲ್ ತರ್ಕಾರ್ಡೆಂಬ ಊರು ಇರುವದು ಅಲ್ಲಿ ಸಿಡುಬಿನ ಉಪದ್ರ ಕಾಣಿಸಿಕೊಂಡಿತು. ಸರ್ಕಾರದವರು ಒಂದು ಪ್ರತ್ಯೇಕವಾದ ಆಸ್ಪತ್ರೆಯನ್ನು ಕಟ್ಟಿ, ಜನರಿಗೆ ಸಾರಿಸಿದರು. ಸಾವಿರಾರು ಜನರು ಹೋಗಿ ವೈದ್ಯರಿಂದ ಒಂದೇ ದಿನದಲ್ಲಿ ಸಿಡುಬು ಹಾಕಿಸಿಕೊಂಡು ಬಂದರು. ಡಾಕ್ಟರು ಸಿಡುಬು ಹಾಕುವದಕ್ಕೆ ಬೆಳಿಗ್ಗೆ ೭ ಗಂಟೆಗೆ ಪ್ರಾರಂಭಿಸಿ ರಾತ್ರಿ ೧೨ ಗಂಟೆಯ ತನಕ ಹಾಕುತ್ತಲೇ ಇದ್ದನು ಜನರು ಒಬ್ಬರಮೇಲೊಬ್ಬರು ಬಿದ್ದು ನಾನುಮುಂದು, ತಾನುಮುಂದು ಎಂದು ನುಗ್ಗಿಹೋಗಿ ಸಿಡುಬು ಹಾಕಿಸಿಕೊಂಡರು ಸಮರಾತ್ರಿಯಲ್ಲಿ ನೋಡಿದಾಗ ಇನ್ನೂ ಅನೇಕರು ಉಳಿದು ಹೋಗಿದ್ದರು ಈ ಮೇಲಾಟದಲ್ಲಿ ಅನೇಕರಿಗೆ ಪೆಟ್ಟು ಆಯಿತು. ಹುಡುಗರೂ ಹುಡುಗಿಯರೂ ಸ್ಕೂಲಿನಿಂದ ಬರುತ್ತ ತಮ್ಮ ತಂದೆ ತಾಯಿಗಳನ್ನು ಕೇಳದೇನೇ ನುಗ್ಗಿ ಸಿಡುಬು ಹಾಕಿಸಿಕೊಂಡರು. ಇದರಿಂದ ಜನರು ಎಷ್ಟುಮಟ್ಟಿಗೆ ಜಾಗರೂಕರಾಗಿದಾರೆಂಬುವದು ಗೊತ್ತಾಗುತ್ತೆ.


ಜ್ವರಹರಿ ೨೫



ಇದು ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು ಜ್ವರಹರಿಯನ್ನು ಸೇವಿಸುತ್ತಾ ಬಂದರೆ ಕಾಯಪುಷ್ಟಿಯನ್ನೂ ಕೊಡುವದು. ಪ್ರಯಾಣ ಮಾಡತಕ್ಕವರು ಈ ಔಷಧವನ್ನು ಅವಶ್ಯವಾಗಿ ಹತ್ತಿರ ಇಟ್ಟುಕೊಂಡಿರಬೇಕು. ಇದು ದೇಹವನ್ನು ಬಹಳ ಒಳ್ಳೇ ಕ್ರಮವಾದ ಸ್ಥಿತಿಯಲ್ಲಿ ಇಟ್ಟುಕೊಳ್ಳಬಲ್ಲದು. ಇದನ್ನು ಉಪಯೋಗಿಸಿದವರ ಕಾಗದವನ್ನು ಅಪೇಕ್ಷಿಸಿದವರಿಗೆ ಕಳುಹಿಸುತ್ತೇವೆ. ಸಣ್ಣ ಮತ್ತು ದೊಡ್ಡ ಸೀಸೆಗಳಲ್ಲಿ ಮಾರಿ ಬಿಕರಿಯಾಗುವದು.

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ, ೧–೮ ರೂ., ೨ ರೂ, ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

*********

ಅಮೃತಾಂಜನ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ. ನಾನಾ ತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಾಂಪ್ ಡಂಪ್ ಡ್ರಾಪರ್ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಶವಪಡ ಅಸಿಸ್ಟೆಂಟ್ ಸರ್ಜನ್ ಗೋಪಾಲಕೃಷ್ಣಯ್ಯನವರು—ಅಮೃತಾಂಜನವನ್ನು ನಾನು ನನ್ನ ಆಸ್ಪತ್ರೆಯಲ್ಲಿ ಅನೇಕ ರೋಗಿಗಳಿಗೆ, ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡ ತ್ತೇವೆ ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಪಾಪುಗಳಲ್ಲೂ, ದೊಡ್ಡ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—

ಪನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.



ಸನ್ ೧೯೦೩ ನೆ ಇಸವಿಯ

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ ಡೈರಿ

ಎನಾಮಲ ಬಿನಂ॥ ಸಿನಂ॥ ಡಿನಂ॥

ಈ ಡೈರಿಗಳು ವರ್ತಕರ, ಉದ್ಯೋಗಸ್ಥರು, ಕಂಟ್ರಾಕ್ಟದಾರರು, ಮತ್ತು ದೊಡ್ಡ ಮನುಷ್ಯರು ಪಾಕೆಟ್ ಬುಕ್ ನಂತೆ ಉಪಯೋಗಿಸಬಹುದು, ಇವುಗಳಲ್ಲಿ ಅಡಕವಾಗಿರುವ ವಿಷಯಗಳು: ಶೋಭಕೃತು ಸಂವತ್ಸರದ ಪಂಚಾಂಗ, ಕ್ಯಾಲೆಂಡರು, ಹಿಂದು ಹಬ್ಬಗಳು, ಮತ್ತು ರಜಾ ದಿನಗಳು, ರೇಲ್ವೆ ಟೇಬಲ್, ಕೋರ್ಟುಗಳ ಸ್ಟಾಂಪು ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು, ರಜಿಸ್ಟರ್ ಫೀಜು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ತಾರೀಖು ದಿನ ಜವಾನಿನ ಅಳತೆ, ಚಿನ್ನ ತೂಕದ ವಿವರ, ಗಾರೀ ಬಾಡಿಗೆ, ಬ್ರಿಕ್ಸ್ ಟೇಸ್ಟ್, ಹಲ್ಲಿ ಬಿದ್ದ ಫಲ, ರಾಹುಗುಳಿಕ ಕಾಲ, ವಾರಶೂಲೆ ಯ ದಿನ, ದಿನಗಟ್ಟಲೆ ಸಂಬಳದ ಪಟ್ಟಿ, ಇನ್ನೂ ಅನೇಕ ಮುಖ್ಯ ವಿಷಯಗಳಿವೆ. ದಪ್ಪ ಕಾಗದ, ಪ್ರತಿ ಪುಟಕ್ಕೂ ರೂಲುಹಾಕಿ, ಸೊಗಸಾಗಿ ಬೈಂಡು ಮಾಡಿ ಬಿಕರಿಗೆ ಸಿದ್ಧವಾಗಿದೆ. ಎ. ನಂಬರ್ ಪೆನಸಲ್ ಇವತಕ್ಕ ಚಿಕ್ಕ ಸೈಜ್ ಡೈರಿ ೧ಕ್ಕೆ ೩ ಆಣೆ; ಬಿ ನಂಬರ್ ಪೆನಸಲ್ ಇಟ್ಟು ಮುಚ್ಚಳ ಹಾಕಿರುವದು ಚಿಕ್ಕ ಸೈಜು ಡೈರಿ ೧ಕ್ಕೆ ೪ ಆಣೆ; ಸಿ. ನಂಬರ್ ಪೆನಸಲ್ ಇವತಕ್ಕ ದೊಡ್ಡ ಸೈಜ್ ಡೈರಿ ೧ಕ್ಕೆ ೬ ಆಣೆ; ಡಿ ನಂಬರ್ ಪೆನಸಲ್ ಇಟ್ಟು ಮುಚ್ಚಳ ಹಾಕಿರುವದು ದೊಡ್ಡ ಸೈಜು ಡೈರಿ ೧ಕ್ಕೆ ೮ ಆಣೆ; ೧೨ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡವರಿಗೆ ೧ ಡೈರಿ ಹೆಚ್ಚಾಗಿ ದೊರೆಯುವದು. ಪೋಸ್ಟ್ ಚಾರ್ಜ್ ಬೇರೆ ಕೊಳುತ್ತೆ. ಬೇಕಾದವರು ಈ ಕೆಳಗಿನ ವಿಳಾಸದಾರರಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,

ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರ.



ಹೋಮೋಸಿಯಾ.

ತಕ್ಷಣ ಪರಿಹಾರ.

ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟ, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಚ್ಚಿದದ್ದು, ಚಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬಿ ೧ಕ್ಕೆ ೧ ರೂ, ದೊಡ್ಡದಕ್ಕೆ ರೂ ೨–೮ ಆ; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ ಖರ್ಚು ಮಾಫಿ ಬಿಡುತ್ತಾರೆ ರೂ. ೨–೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨–೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್, ಖರ್ಚು ಮಾಫಿ ಬಿಡುತ್ತೆ.

*********

ಹೋಮೋಸಿಯಾ ಯಂಬ್ರೂಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೊಂದು ಗುಣವುಳ್ಳ ಹೊಸ ಭಾಗವಿರುತ್ತೆ ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ೪ ಆಣೆಗೆ, ೧ ರೂ ಗೆ ಬಂದವರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಪಾತ್ರಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟಿಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು

ವಿಳಾಸ:—ಹೋಮೋಸಿಯಾ ಕಂಪೆನಿ, ೨೩ ಸೆಕೆಂಡು ಬೀಚ್ ಲೈನ್, ಮದರಾಸ್.


## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೧೭—೩—೧೯೦೩ ರಿಂದ ೩—೪—೧೯೦೩ ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | 4 | 3 | 10 | 5 |
| ಮೈಸೂರು ,, | 2 | 1 | 5 | 4 |
| ಬೆಂಗಳೂರು ಡಿಸ್ಟ್ರಿಕ್ಟ್ | 47 | 30 | 70 | 60 |
| ಮೈಸೂರು ,, | 39 | 34 | 65 | 56 |
| ಕೋಲಾರ್ ,, | 12 | 11 | 10 | 6 |
| ಕೋಲಾರ್ ಚಿನ್ನದ ಗಣಿಗಳು | 3 | 2 | 7 | 11 |
| ತುಂಕೂರು ಡಿಸ್ಟ್ರಿಕ್ಟ್ | 6 | 6 | 6 | 8 |
| ಹಾಸನ ,, | 9 | 7 | 12 | 6 |
| ಚಿತ್ರದುರ್ಗ ,, | 10 | 9 | 11 | 8 |
| ಕಡೂರ್ ,, | 8 | 6 | 12 | 7 |
| ಶಿವಮೊಗ್ಗ ,, | 10 | 9 | 4 | 10 |
| ಜುಮ್ಲಾ. | 152 | 129 | 2[illegible] | 183 |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಚೈತ್ರ ಬಹುಳ ಏಕಾದಶಿ ಗುರುವಾರದಿಂದ ವೈಶಾಖ ಶುದ್ಧ ಬಿದಿಗೆ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ನೇ ಇಸವಿ ಏಪ್ರಿಲ್.

| ತಾ. | ವಾ. | ತಿಥಿ. | ಘಳಿಗೆ. | ನಕ್ಷತ್ರ | ಘಳಿಗೆ. | ಮೇಷ ಮಾಸ ತೇದಿ. |
|---|---|---|---|---|---|---|
| 23 | ಗುರು * | ಏಕಾದಶಿ | 31 21 | ಶ | 22 26 | 11 |
| 24 | ಶುಕ್ರ | ದ್ವಾದಶಿ | 32 4 | ಪೂಭಾ | 25 18 | 12 |
| 25 | ಶನಿವಾ ‡ | ತ್ರಯೋದ | 33 13 | ಉಭಾ | 28 12 | 13 |
| 26 | ರವಿವಾರ † | ಚತ್ರುದಶಿ | 33 20 | ರೇ | 29 12 | 14 |
| 27 | ಚಂದ್ರ ¶ | ಅಮಾವಾ | 31-4 | ಅ | 29 8 | 15 |
| 28 | ಕುಜ | ಪಾಡ್ಯಮಿ | 28-2 | ಭ | 27 51 | 16 |
| 29 | ಬುಧ | ಬಿದಿಗೆ | 24 10 | ಕೃ | 25 18 | 17 |

* ಸರ್ವತ್ರ ಏಕಾದಃ ‡ ಶನಿಪ್ರದೋಷ. † ಶ್ರೀರಂಗನಾಥಸ್ವಾಮಿ ರಥ. ¶ ಕಂಗವಾಸ, ಅಮಾಸೋಮವಾರ ವ್ರತ.

## ಪೇಟೆ ಧಾರಣೆ.

| ದಿನಸಿ. | | ಮೈಸೂರು. | ಬೆಂಗಳೂರು |
|---|---|---|---|
| ಕಚ್ಚಿ ಅಕ್ಕಿ ಪಲ್ಲ ೧ಕ್ಕೆ | ರೂ. | ೧೮ ೪–೦ | ೧೮–೦–೦ |
| ಕೆಂಬೂತಿ ಅಕ್ಕಿ ಅವಲ್ | .. | ೯ ೧೨ ೦ | ೧೦–೮–೦ |
| ,, ಮಧ್ಯಂ | .. | ೯–೪–೦ | ೧೮–೦–೦ |
| ಜಾಪತ್ರಿಣಿ ಅಕ್ಕಿ | .. | ೭–೧೨–೦ | ೧೨–೦–೦ |
| ಸಣ್ಣಕ್ಕಿ ಅವಲ್ | .. | ೧೧ ೮ ೦ | ೮–೨–೮ ೦ |
| ,, ಮಧ್ಯಂ | .. | ೧೧ ೪–೦ | ೧೧ ೮ ೦ |
| ತೊಗರೀ ಬೇಳೆ ಪಲ್ಲ ೧ಕ್ಕೆ | .. | ೧೨ ೦ ೦ | ೧೩ ೦–೦ |
| ,, ಮಧ್ಯಂ | .. | ೧೧ ೮–೦ | ೧೦–೮–೦ |
| ಕೈರ್ ರಾಗಿ ಪಲ್ಲ ೧ಕ್ಕೆ | .. | ೩ ೬–೦ | ೩–೩–೦ |
| ಕಾರ್ರಾಗಿ | .. | ೩–೨ ೦ | ೩–೭–೦ |
| ಜೋಳ | .. | ೩–೧೦–೦ | ೫–೦–೦ |
| ಹಲಸಂದೆ ಪಲ್ಲ ೧ಕ್ಕೆ | .. | ೩–೮–೩ | ೮–೦–೦ |
| ಬಿಳೀ ಅವರೆ | .. | ೩ ೦ ೦ | ೪–೮–೦ |
| ಹೆಸರು | .. | ೧೦ ೦–೦ | ೧೮–೦–೦ |
| ಉದ್ದು | .. | ೮ ೦ ೦ | ೯–೦–೦ |
| ಕಡಲೆ | .. | ೧೦ ೦–೦ | ೧೦–೪–೦ |
| ಎಳ್ಳು | .. | ೧೫ ೧೨ ೦ | ೯–೧೭–೦ |
| ಹುರುಳಿ | .. | ೩–೮ ೦ | ೪–೦–೦ |
| ಹರಳು ೧೭೩ ಸೇರಿಗೆ | .. | ೮–೮–೦ | ೫–೧೪–೦ |
| ಸೀಗೇಕಾಯಿ ಮಣ ೧ಕ್ಕೆ | .. | ೦–೪–೦ | ೦–೭–೦ |
| ಮೆಣಸಿನಕಾಯಿ | .. | ೭–೧೭–೦ | ೭–೦–೦ |
| ,, ಮಧ್ಯಂ | .. | ೭–೨ ೦ | ೦–೮–೦ |
| ಬೆಲ್ಲ ದೊಡ್ಡ ಅಚ್ಚು | .. | ೩ ೧೭–೦ ಮ | ೦–೭–೦ |
| ಒಳ್ಳೆಣ್ಣೆ ಮಣ ೧ಕ್ಕೆ | .. | ೪–೪ ೦ | ೪–೮–೦ |
| ಹರಳೆಣ್ಣೆ ,, | .. | ೩–೧೭–೦ | ೩–೦–೦ |
| ಕೊತ್ತಂಬರಿ ಪಲ್ಲ ೧ಕ್ಕೆ | .. | ೩–೧೮–೦ | ೩–೧೬–೩ |
| ಉಪ್ಪು ,, | .. | ೮ ೪–೦ | ೮–೦–೦ |
| ಹುಣಸೇ ಹಣ್ಣು | .. | ೦ ೧೭–೦ | ೦–೧೭–೦ |
| ,, ಹಳೇದು | .. | ೦–೧೦–೦ | ೦–೧೦–೦ |
| ತುಪ್ಪ | .. | ೧೧ ೧೭–೦ | ೧೦–೦–೦ |
| ಸಿಮೆಯಿಂಡಿ ಪಟ್ಟ ೧ಕ್ಕೆ | .. | ೭ ೪–೦ | ೪–೧–೭ |
| [illegible] ೧ಕ್ಕೆ | .. | ೪–೪ ೦ | ೩–೧೭–೦ |
| ಅಡಿಕೆ [illegible] ಮಣ ೧ಕ್ಕೆ | .. | ೦–೧೪ ೦ | ೧–೦–೦ |
| ಅಂಟುವಾಳದಕಾಯಿ ಮಣ ೧ಕ್ಕೆ | .. | ೦–೧೪–೦ | ೦–೪–೦ |
| ಚಿನ್ನ (ಪೌನ್) ಕೆಂಪು | .. | ೦೫–೪–೦ | ೦೫–೩–೯ |
| ,, ,, ಪಸಿಮೆ | .. | ೦೫–೮–೦ | ೦೫–೭–೦ |
| ,, ,, ಗಟ್ಟಿ ತೊಲ ೧ಕ್ಕೆ | .. | ೨೬–೦–೦ | ೨೪–೮–೦ |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ | .. | ೩೭–೦–೦ | ೩೭–೮–೦ |

Print d and Published by the Rev E W. Thomson, for the Proprietor and Manager, Wesleyan Mission Press, Mysore 23/4 1903

# ವೃತ್ತಾಂತ ಪತ್ರಿಕೆ.

REGISTERED M. 20.

ಕ್ರಯ ೧ ದುಡ್ಡು —:0:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೬ ಮೈಸೂರು—ಸನ್ ೧೯೦೩ ನೇ ಇಸವಿ ಏಪ್ರಿಲ್ ತಾರೀಖು ೩೦ ನೇ ಗುರುವಾರ. ಸಂಚಿಕೆ ೪೭



## MELLIN'S FOOD.

ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

67

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮೂಳೆಗಳೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾರ್ಯಕಮಾಡುತಕ್ಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆ ದೊರೆಯುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಹದ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಕೂಸುಗಳಿಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ವಸ್ತುಗಳು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಬಿಸಿಲು ಕಾಲದಲ್ಲಿಯೂ ಶೈಶವದಲ್ಲಿಯೂ ಬರುವ ಮಿಕ್ಕಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುರುತುಪದಾರ್ಥವು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ರಕ್ಷಕವಾದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ವೃದ್ಧಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ಕಳೆ ಮಟ್ಟುಗೆ ಕಾವಲುಮಾಡುತ್ತದೆ.

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಪಾವುಗಳಿಗೂ ಬರೆದು ತರಿಸಿಕೊಳ್ಳಬಹುದು :—

ಮದನ್.—ಮೆ॥ ಕಾವಸಿ ದಿನ್‌ಷಾ ಬ್ರದರ್ಸ್.

ಬೊಂಬಾಯಿ :—ಮೆ॥ ಲೀಡಂ ಅಬೆರ್‌ಕ್ರಾಂಬಿ ಕಂಪೆನಿ.

ಕಲ್ಕತ್ತಾ.—ಮೆ॥ ಮೆಕ್ಕೆನ್‌ಜಿ ಲಯಲ್ ಕಂಪೆನಿ.

ಕೋಕನಾಡ.—ಮೆ॥ ಹಾಲ್ ವಿಲ್ಸನ್ ಕಂಪೆನಿ.

ಕರಾಚಿ.—ಮೆ॥ ಎಚ್. ಜೆ. ರುಸ್ತುಂಜಿ ಕಂಪೆನಿ.

ಮದ್ರಾಸು.—ಮೆ॥ ಓಕ್ ಕಂಪೆನಿ.

ರಂಗೂನ್ :—ಲೀಡಂ ಬ್ಲಾಕ್ ಕಂಪೆನಿ.


ಮೈಸೂರು ಶ್ರೀಮಯ ಎಕ್ಸೈಜ್ ಕಮಿಷನರರ ಆಫೀಸು.
ಬೆಂಗಳೂರು ೧೯೦೩ನೇ ಇಸವಿ ಮಾರ್ಚಿ ೩೧ನೇ ತಾರೀಖು.

ಇಸ್ತಿಹಾರ್‌ನಾಮೆ.

3

ಸನ್ ೧೯೦೩ನೇ ಏಪ್ರಯಿಲ್ ೩ನೇ ತಾರೀಖಿನಲ್ಲಿ ಹಾಯದಾದ ಮೈಸೂರು ಗೆಜೆಟಿನಲ್ಲಿ ಉಧಹರಿಸಲ್ಪಟ್ಟ ೮-ವ ಪಟ್ಟಿಗೆ ಒಳಪಟ್ಟ ಅದರಲ್ಲಿ ಕಂಡ ಸ್ಥಳಗಳಲ್ಲಿನ ತಾರೀಖುಗಳಲ್ಲಿ ೧೯೦೩ ನೇ ಇಸ್ವಿ ಜುಲೈ ಗುತ್ತಿ—ಬಾಗಾಯ್ತು ೧೯೦೪ ನೇ ಇಸ್ವಿ ಜೂನ್ ೩೦ನೇ ತಾರೀಖಿಗೆ ಪೂರೈಸುವ ೧೨ ತಿಂಗಳಿಗೆ ಪ್ರತ್ಯೇಕ ಸಾರಾಯಿ ಅಂಗಡಿಗಳ ವ ಗುತ್ತಿಗೆ ಬಿಕರಿ ಹಿರಾಜುಗಳ ಮತ್ತು ಕೇಂದಿ ಅಂಗಡಿಗಳ ಹರಾಜು ಆಯಾ ಡಿಸ್ಟ್ರಿಕ್ಟ್‌ಗಳ ಡೆಪ್ಯುಟಿ ಕಮಿಷನರುಗಳಿಂದಾಗಲಿ ಯಾ ಇದಕ್ಕಾಗಿ ಅವರಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟು ಕಮಿಷನರುಗಳಿಂದಲಾಗಲಿ ಹರಾಜು ಹಾಕಲ್ಪಡುತ್ತೆಂದು ಇದರಿಂದ ಸಮಸ್ತಜನಗಳಿಗೂ ಪ್ರಕಟಿಸಲ್ಪಟ್ಟಿರುತ್ತೆ

P. N. PURNAYA.
Excise Commissioner
*in Mysore*


## ದೇವಾಂಗವಂಶಸ್ಥರಿಗೋಸ್ಕರ

ಅಗತ್ಯವಾಗ ಬೇಕಾದ ಗ್ರಂಥಗಳು.

6

ಸ್ವಲ್ಪ ಪ್ರತಿಗಳಿವೆ. ಜಾಗ್ರತೆಪಟ್ಟರೆ ಸಿಕ್ಕುತ್ತೆ. ಅಂತರ ಬಂದಿತ ಸಿಕ್ಕುವದಿಲ್ಲ ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು. ಅರ್ಥಸಹಿತ ದೇವಾಂಗಪುರಾಣ ಟೀಕೆ. ಸಚಿತ್ರ ತಾರಕ್ಕ ಸುಂದರವಾದ ೧೪ ತಸ್ವೀರಿವೆ. ಸ್ವಮತತತ್ವವಿಚಾರದ ಪ್ರಕಾಶದರ್ಪಣವು. ಪ್ರತ್ಯಕ್ಷ ನೋಡಿ ಸಂತೋಷಪಡಿ

೧೪ ತಸ್ವೀರಿರುವ ಪ್ರತಿ ೧ಕ್ಕೆ ವಿ ಪಿ ಖರ್ಚು ಸೇರಿ ರೂ. ೩—೮.
ತಸ್ವೀರಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೨—೮.
ವೇದ ಉಪನಿಷತ್ತು ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ ೨—೮.

೧೦ ಜನಕ್ಕೆ ೧೦ ಪ್ರತಿ ೧ ವಿಳಾಸಕ್ಕೆ ತರಿಸಿಕೊಂಡರೆ ೧ ಪ್ರತಿ ಬಹುಮಾನ ಸಿಕ್ಕುತ್ತೆ. ಮುಂಗಡರವರಿಗೆ ವಿ.ಪಿ. ಲೂ ಕಳುಹಿಸುತ್ತೇವೆ. ಮೈಸೂರು ಜವಳಿ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟನುಲ್ಲಯ್ಯ, ಬ್ರಹ್ಮಶ್ರೀ ಯಜಮಾನ ಸಂಕರ್ರೆಯನವರಲ್ಲಿ ಈ ಗ್ರಂಥ ಸಿಕ್ಕುತ್ತೆ.

### ಮಹಾರಾಜರ ಪಟ್ಟಾಭಿಷೇಕ.

ಈ ಉತ್ಸವದ ತಸ್ವೀರುಗಳ ಪುಸ್ತಕ. ಮಹಾರಾಜರ ಪ್ರೊಟೋ ಚಿತ್ರ ಫೋಟೋ ತಸ್ವೀರು, ಸಂಸ್ಥಾನದ ಮುಖ್ಯ ಹುದ್ದೇದಾರರ ಫೋಟೋಗಳು, ಮೈಸೂರು ಬೆಂಗಳೂರಿನಲ್ಲಿರುವ ಅರಮನೆ ಮುಂತಾದ ಭಾರೀ ಕಟ್ಟಡಗಳು ಉಳ್ಳ ಈ ಫೋಟೋ ಪುಸ್ತಕಗಳು ಕೆಲವು ಮಾತ್ರ ಉಳಿದಿವೆ ಬೇಗ ಬರೆದು ತರಿಸಿಕೊಳ್ಳಿ, ಕ್ರಯ ೮ ಆಣೆ, ಹಾಸಲು ೧ ಆಣೆ.

ವಿಳಾಸ —ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಮೈಸೂರು.
„ „ „ ಬೆಂಗಳೂರು.

### ಹೊಸ ಪುಸ್ತಕಗಳು.

೧. ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರಾ ಮಹಾರಾಣಿಯವರ ಜೀವಚರಿತ್ರೆ. ಸುಂದರವಾದ ಅನೇಕ ಚಿತ್ರಗಳನ್ನುಳ್ಳದ್ದು. ಕ್ರಯ ೪ ಆಣೆ.

೨. ಪುರಾತನ ಗ್ರೀಕರ ಕಥೆಗಳು ಹುಡುಗರೂ ಹುಡುಗಿಯರೂ ಓದಲು ಅತ್ಯಂತ ಉತ್ಸಾಹವನ್ನುಂಟುಮಾಡುವ ಪುಸ್ತಕ. ಆಗತ್ಯ ಓದತಕ್ಕದ್ದು ಚಿತ್ರಗಳಿಂದ ತುಂಬಿ ಇದೆ ಕ್ರಯ ೨ ಆಣೆ.

೩. ಪ್ರಾಚೀನ ಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ ಪ್ರಪಂಚದ ಆದಿಭಾಗದಲ್ಲಿದ್ದ ಪ್ರಾಣಿಗಳೂ, ಜೀವರಾಶಿಗಳೂ, ಪಕ್ಷಿಪಕ್ಷಿಗಳೂ, ಜಲಚರಗಳೂ ಚಿತ್ರಸಹಿತವಾಗಿ ವಿವರಿಸಲ್ಪಟ್ಟಿವೆ ಇದ ಓದುತ್ತ ಓದುತ್ತಾ ಬಹಳ ಉತ್ಸಾಹವನ್ನುಂಟುಮಾಡುವದು ಕ್ರಯ ೧ ಆಣೆ

೪. ಬಾಲ್ಯವಿವಾಹ. ಬಾಲ್ಯವಿವಾಹದಿಂದುಂಟಾಗುವ ಶಾರೀರಕ ಕೇಡುಪರಂಪರೆಗಳು ಸವಿಸ್ತಾರವಾಗಿಯೂ ಮತ್ತು ಸಾಂಸರ್ಗಿಕ ಸುಲಭವಾಗಿಯೂ ವಿವರಿಸಲ್ಪಟ್ಟಿವೆ. ಹೊಸ ಪುಸ್ತಕ ಕ್ರಯ ೩ ಪೈ

ಈ ಪುಸ್ತಕಗಳೆಲ್ಲಾ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವವು. ಬೇಗನೆ ಬರೆದು ತರಿಸಿಕೊಳ್ಳಿ.

ವಿಳಾಸ —ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಮೈಸೂರು.
„ „ „ ಬೆಂಗಳೂರು.

## THE FOREIGN MISSIONS AND GENERAL AGENCY.

8

ಮೇಲೆ ಕಂಡ ಏಜನ್ಸಿಯವರು ದೇಶೀಯ ವರ್ತಕರಿಗೂ ಇತರರಿಗೂ ಇಂಗ್ಲಾಂಡಿನಲ್ಲಿ ತಯಾರಾಗುವ ಯಾವ ಸಾಮಾನನ್ನು ಬೇಕಾದರೂ ಸುಲಭವಾದ ಕಮಿಷನ್ ತಕ್ಕೊಂಡು ಕಳುಹಿಸುವರು. ಆರ್ಡರು ತಲಪಿದ ಕೂಡಲೆ ಮಾಲುಗಳು ಬಹು ಜಾಗ್ರತೆಯಾಗಿ ರವಾನೆ ಮಾಡಲ್ಪಡುವವು. ಈ ವಿಷಯದಲ್ಲಿ ತಿಳಿದುಕೊಳ್ಳಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕೆಂದು ಕೋರುತ್ತೇವೆ.

A. J. BRIDE,
*Manager,*
*29-35, City Road, London*

## ಹೊಸಪುಸ್ತಕ! ಹೊಸಪುಸ್ತಕ!!

ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ.

ಕಳೆದ ವರ್ಷ ಲಂಡನ್ ನಗರದಲ್ಲಿ ನಡೆದ ಈ ಮಹೋತ್ಸವವನ್ನು ವಿವರಿಸಿರುವ ಈ ಪುಸ್ತಕವು ನೇತ್ರಾನಂದಕರವಾದ ಅನೇಕ ಚಿತ್ರಗಳಿಂದ ಶೋಭಿಸುತ್ತಿರುವದು ಎಲ್ಲರೂ ಅವಶ್ಯವಾಗಿ ತರಿಸಿಕೊಂಡು ಓದತಕ್ಕ ಪುಸ್ತಕ. ಕ್ರಯ ೨॥ ಆಣೆ. ಹಾಸಲು ಪ್ರತ್ಯೇಕ.

ವಿಳಾಸ :—ಮ್ಯಾನೇಜರ್, ಬುಕ್ ಡಿಪೋ, ಮೈಸೂರು

## ROBINSON'S

## PATENT BARLEY.

## ರಾಬಿನ್‌ಸನ್‌ಯವರ

## ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಎವೆಗೋಧಿಯಿಂದ ಮಾಡಿದೆ. ಹಸ್ತಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾರಾದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಹೆಸರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತಗೆದುಕೊಳ್ಳಬೇಕು.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಜಡ್ಜಿರವರ ಕೋರ್ಟಿನಲ್ಲಿ

ಅಸಲ್ ನಂಬರು ೬೫ / ೧೮೯೫—೯೬.

ಅಮಲ್‌ಜಾರಿ ನಂಬರು ೪೦ / ೧೯೦೨—೦೩.

ವಾದಿ. ಮೆ॥ ಅರಬತ್‌ನಾಟ ಕಂಪನಿ, ಮದ್ರಾಸ್. | ಪ್ರತಿವಾದಿ. ಗಣಪತಿ ಶಿಬಾರ ಮ್ಯೆನರನ ಗಾರ್ಡಿಯನ್ ಮತ್ತು ತಾಯಿ ಸಾವಿತ್ರಮ್ಮ.

ಮೇಲ್ಕಂಡ ಮೊಕದ್ದಮೆಯಲ್ಲಿ ವಾದಿಯು ಪ್ರತಿವಾದಿಮೇಲೆ ಪಡೆದ ಡಿಕರಿ ಖರ್ಚು ದೇಖಲ್ 6,71,691—15—8 ರೂಪಾಯಿಯನ್ನು ಪ್ರತಿವಾದಿಯು ಸಮಾಧಾನಪಡಿಸದೆ ಇರುವದರಿಂದ ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ.

ಕೋರ್ಟು ಆರ್ಡರ ಮೇರೆಗೆ—ಈ ಕೆಳಗೆ ಕಂಡ ಪ್ರತಿವಾದಿ ಬಾಬತು ಸೊತ್ತುಗಳನ್ನು ಮತ್ತು ಅದರಲ್ಲಿ ಇರತಕ್ಕ ಅದಕ್ಕೆ ಸಂಬಂಧಪಟ್ಟ ಕೆಳಗೆ ತಪಶೀಲ್ ಕಂಡ ಚರಸೊತ್ತುಗಳನ್ನು ಶಿವಮೊಗ್ಗಾ ಡಿಸ್ಟ್ರಿಕ್ಟ್ ಡಿಸ್ಟ್ರಿಕ್ಟ್ ಕೋರ್ಟು ರೂಬರೂಬು 1903 ನೇ ಇಸವಿ ಜುಲೈ ತಿಂಗಳು 14 ನೇ ತಾರೀಖು ದಿವಸ 11 ಘಂಟೆ ಲಾಗಾಯತು ಶಿವಮೊಗ್ಗಾ ಸೆಂಟ್ರಲ್ ನಾಜರವರು ವಿಕ್ರಯಿಸುತ್ತಾರೆ.

ಸಿವಿಲ್ ಪ್ರೊಸೀಜರ ಕೋಡ್ 289 ನೇ ಸೆಕಷನ್ ಪ್ರಕಾರ ಹರಾಜು ಇಸ್ತಿಹಾರಿನಲ್ಲಿ ಕಂಡ ಸೊತ್ತುಗಳ ಬಾಬತು ವಿಶೇಷ ತಪಶೀಲ್‌ಗಳನ್ನು ತಿಳುಕೊಳ್ಳಬೇಕಾದವರು ಕೋರ್ಟಿನಿಂದ ಮೊಕರರಾಗಿರುವ ರಿಸೀವರು ಮತ್ತು ವಾದೀರ ಕಂಪನಿ ಏಜಂಟ್ ಮೆ॥ ಎಚ್. ಎಫ್. ಸ್ಟ್ರಿಕ್ಲೆಂಡ ಸಾಹೇಬರವರಿಗೆ ಬರದುಕೊಂಡು ತಿಳುಕೊಳ್ಳಬಹುದು.

ಸೊತ್ತುಗಳ ತಪಶೀಲ್.

1. ಮಲ್ಲೇಶನ ಗುಡ್ಡದ ಕಾಫಿ ಯಸ್ಟೇಟು—ಕಡೂರು ಡಿಸ್ಟ್ರಿಕ್ಟ್ ಮೂಡಗೆರೆ ತಾಲ್ಲೂಕು ಕೆಳಗೂರು ಗ್ರಾಮದಲ್ಲಿ ಇರತಕ್ಕ ಸರ್ವೆ ನಂಬರು 62 ಪೈಕಿ ನಂಬರು 66—71—72, ಬಿಮ್ಮಕ್ಕಿ ಗ್ರಾಮದಲ್ಲಿರತಕ್ಕ ಸರ್ವೆ ನಂಬರು 15—25—26—137 149 150 119, ಪೈಕಿ ನಂಬರು 1 ಮತ್ತು 151, ಈ ಜಮೀನುಗಳ ಒಟ್ಟು ಎಕರೆ 330 ಗುಂಟೆ 15, ಆಕಾರ 713 -11 6 ರೂಪಾಯಿ, ಈ ಪೈಕಿ 303 ಯಕರೆ ಸಾಗಿನಲ್ಲಿ ಇದೆ.

ಈ ಯಸ್ಟೇಟಿನ ಸಂಗಡಲೆ ಅದರಲ್ಲಿ ಇರತಕ್ಕ ಕಟ್ಟಡಗಳು ಚರನೀಚರ ಸಾಮಾನುಗಳು ಹತ್ಯಾರುಗಳು ಪೊರ್ಷ ಸಹ ಯಾವೆ ಯಂತ್ರಗಳು ಸ್ಟೋರ ಜಿನಸಿಗಳು ಮತ್ತು ಸಾಮಾನುಗಳು ವಗೈರೆ ಈ ಹರಾಜು ಮಾಡಲ್ಪಡುತ್ತೆ.

ಕಲ್‌ಮುಡಿ ಕಾಫಿ ತೋಟ.

2. ಕಡೂರು ಡಿಸ್ಟ್ರಿಕ್ಟ್ ಮೂಡಗೆರೆ ತಾಲ್ಲೂಕು ಮಾವಿನಕೆರೆ ಗ್ರಾಮದಲ್ಲಿ ಇರತಕ್ಕ ಸರ್ವೆ ನಂಬರು 156- 157 158 ಪೈ ನಂ. 112 ಒಟ್ಟು ಯಕ್ರೆ 197, ಗುಂಟೆ 31, ಆಕಾರ ರೂ. 65—5—9 ಪೈ. ಈ ಪೈಕಿ 170 ಯಕ್ರೆ ಸಾಗಿನಲ್ಲಿ ಇರುತ್ತೆ.

ಈ ಯಸ್ಟೇಟಿನ ಸಂಗಡಲೆ ಅದರಲ್ಲಿ ಇರತಕ್ಕ ಕಟ್ಟಡಗಳು ಚರನೀಚರ ಸಾಮಾನುಗಳು ಮೆಷೀನರಿ ಯಾವೆ ಯಂತ್ರಗಳು ಸ್ಟೋರ ಜಿನಸಿಗಳು ಮತ್ತು ಸಾಮಾನುಗಳು ವಗೈರೆ ಸಹ ಹರಾಜು ಮಾಡಲ್ಪಡುತ್ತೆ.

ಅಂಬಿನ ಕೊಡಿಗೆ ಕಾಫಿ ತೋಟ.

3. ಕಡೂರು ಡಿಸ್ಟ್ರಿಕ್ಟ್ ಮೂಡಗೆರೆ ತಾಲ್ಲೂಕು ಅಂಬಿನಕೊಡಿಗೆ ಗ್ರಾಮದಲ್ಲಿ ಇರತಕ್ಕ ಸರ್ವೆ ನಂಬರು 2—10, ಕೆಳಗೂರು ಗ್ರಾಮದಲ್ಲಿ ಇರತಕ್ಕ ಸರ್ವೆ ನಂಬರು 68—70 ಮತ್ತು ಮಾವಿನಕೆರೆ ಗ್ರಾಮದಲ್ಲಿ ಇರತಕ್ಕ ಸರ್ವೆ ನಂಬರು 699—707—13—715—716—717—674 ಈ ಜಮೀನುಗಳ ಒಟ್ಟು ಯಕರೆ 81 ಗುಂಟೆ 32, ಆಕಾರ 119—1—3, ಈ ಪೈಕಿ 66 ಯಕರೆ ಸಾಗಿನಲ್ಲಿ ಇದೆ.

ಈ ಯಸ್ಟೇಟಿನ ಸಂಗಡಲೆ ಅದರಲ್ಲಿ ಇರತಕ್ಕ ಕಟ್ಟಡಗಳು ಚರನೀಚರ ಸಾಮಾನು ವಗೈರೆ ಮೇಲ್ಕಂಡ ಪ್ರಕಾರ ಹರಾಜು ಮಾಡಲ್ಪಡುತ್ತೆ.

ಮಕಲ್‌ಗೋಡ್ ಕಾಫಿ ಯಸ್ಟೇಟ್.

4. ಕಡೂರ್ ಡಿಸ್ಟ್ರಿಕ್ಟ್ ಕೊಪ್ಪ ತಾಲ್ಲೋಕ್ ಮೇಗುಂದ ಗ್ರಾಮದಲ್ಲಿ ಇರುವ ಸರ್ವೆ ನಂಬರು 47-56-57-45—ಈ ಜಮೀನುಗಳ ಒಟ್ಟು ಯಕರೆ 323 ಗುಂಟೆ 27, ಆಕಾರ 531-8-3. ಈ ಪೈಕಿ 30 ಯಕರೆ ಸಾಗಿನಲ್ಲಿ ಇದೆ.

ಈ ಯಸ್ಟೇಟಿನ ಸಂಗಡಲೆ ಅದರಲ್ಲಿ ಇರತಕ್ಕ ಕಟ್ಟಡಗಳು ಚರನೀಚರ ವಗೈರೆ ಸಾಮಾನು ಮೇಲ್ಕಂಡ ಪ್ರಕಾರ ಹರಾಜು ಮಾಡಲ್ಪಡುತ್ತೆ.

5. ಮೇಲ್ಕಂಡ ಕಾಫಿ ಯಸ್ಟೇಟ್‌ಗಳ ಶಿವಾಯಿ ಈ ಕೆಳಗೆ ಕಮೂದಿಸಿ ಇರತಕ್ಕ ತರಿ ಖುಷ್ಕಿ, ಮತ್ತು ಬಾಗಾಯ್ತು ಜಮೀನುಗಳನ್ನು ಹರಾಜು ಹಾಕಲ್ಪಡುತ್ತೆ :—

| ಡಿಸ್ಟ್ರಿಕ್ಟು | ತಾಲ್ಲೂಕು | ಗ್ರಾಮ | ಸರ್ವೆ ನಂಬರು | ತರಿ, ಖುಷ್ಕಿ ಅಥವಾ ಬಾಗಾಯ್ತು | ವಿಸ್ತೀರ್ಣ ಯಕರೆ | ಗುಂಟೆ | ಆಕಾರ ರೂ | ಆ | ಪೈ |
|---|---|---|---|---|---|---|---|---|---|
| ಕಡೂರು | ಮೂಡಗೆರೆ | | 8 | ತರಿ | 9 | 11 | 23 | 0 | |
| | | | 12 | ಅಡಿಕೆತೋಟ | 1 | 32 | 21 | 8 | |
| | | | 12 | ಖುಷ್ಕಿ | 1 | 10 | 0 | 8 | |
| | | | 14 | ತರಿ | 6 | 7 | 15 | 0 | |
| | | | 15 | ,, | 7 | 21 | 15 | 0 | |
| | | | 27 | ,, | 8 | 31 | 23 | 0 | |
| | | | 31 | ತರಿ | 0 | 35 | 2 | 1 | |
| | | | 35 | ,, | 10 | 33 | 28 | 0 | |
| | | | 37 | ,, | 1 | 20 | 1 | 8 | |
| | | | 40 | ,, | 3 | 11 | 1 | 8 | |
| | | | 41 | ,, | 8 | 21 | 22 | 0 | |
| | | | 45 | ,, | 3 | 18 | 8 | 8 | |
| | | | 61 | ,, | 10 | 21 | 16 | 0 | |
| | | | 89 | ಅಡಿಕೆತೋಟ | 0 | 5 | 1 | 0 | |
| | | | 41 | ತರಿ | 4 | 28 | 9 | 8 | |
| | | | 118 | ,, | 6 | 2 | 9 | 4 | |
| | | | 118 | ಅಡಿಕೆತೋಟ | 0 | 38 | 1 | 12 | |
| | | | 551 | ತರಿ, ಬಾಗಾ. | 6 | 17 | 58 | 0 | |
| | | | 559 | ತರಿ | 0 | 23 | 1 | 4 | |
| | | | 560 | ,, | 6 | 26 | 16 | 4 | |
| | | | 563 | ಅಡಿಕೆತೋಟ | 1 | 19 | 4 | 12 | |
| | | | 573 | ತರಿ | 0 | 5 | 0 | 4 | |
| | | | 579 | ಅಡಿಕೆತೋಟ | 0 | 5 | 0 | 8 | |
| | | | 580 | ತರಿ | 2 | 25 | 5 | 8 | |
| | | | 582 | ,, | 1 | 22 | 1 | 0 | |
| | | | 584 | ,, | 0 | 39 | 2 | 8 | |
| | | | 585 | ,, | 5 | 6 | 13 | 0 | |
| | | | 586 | ಅಡಿಕೆತೋಟ | 3 | 7 | 38 | 0 | |
| | | | 587 | ತರಿ | 1 | 8 | 2 | 4 | |
| | | | 592 | ,, | 0 | 27 | 1 | 12 | |
| | | | 607 | ಅಡಿಕೆತೋಟ | 0 | 21 | 6 | 0 | |
| | | | 603 | ,, | 1 | 8 | 12 | 0 | |
| | | | 625 | ,, | 2 | 15 | 19 | 0 | |
| | | | 627 | ತರಿ | 2 | 7 | 6 | 8 | |
| | | | 633 | ಅಡಿಕೆತೋಟ | 0 | 13 | 2 | 0 | |
| | | | 633 | ತರಿ | 2 | 28 | 6 | 5 | |
| | | | 635 | ,, | 4 | 1 | 11 | 0 | |
| | | | 641 | ಅಡಿಕೆತೋಟ | 1 | 0 | 40 | 0 | |
| | | | 641 | ತರಿ | 1 | 17 | 1 | 0 | |
| | | | 645 | ಅಡಿಕೆತೋಟ | 0 | 22 | 1 | 8 | |
| | | | 646 | ತರಿ | 3 | 7 | 8 | 8 | |
| | | | 675 | ಅಡಿಕೆತೋಟ | 3 | 7 | 32 | 0 | |
| | | | 708 | ,, | 0 | 39 | 12 | 0 | |
| | | | 709 | ,, | 3 | 23 | 32 | 0 | |
| | | | 710 | ತರಿ | 1 | 15 | 2 | 12 | |
| | | | 711 | ಅಡಿಕೆತೋಟ | 5 | 8 | 47 | 0 | |
| ಕಡೂರು | ಮೂಡಗೆರೆ | | 714 | ,, | 1 | 7 | 12 | 0 | |
| | | | 594 | ತರಿ | 1 | 23 | 1 | 0 | |
| | | | 643 | ,, | 4 | 8 | 10 | 0 | |
| | | | 648 | ,, | 2 | 16 | 6 | 8 | |
| | | | 681 | ಅಡಿಕೆತೋಟ | 2 | 38 | 23 | 8 | |
| | | | 796 | ಖುಷ್ಕಿ | 1 | 27 | 1 | 12 | |
| | | | 112 | ತರಿ | 2 | 13 | 1 | 8 | |
| | | | 112 | ಅಡಿಕೆತೋಟ | 0 | 15 | 1 | 8 | |
| | | | 11 | ,, | 2 | 1 | 25 | 0 | |
| | | | 53 | ತರಿ | 2 | 35 | 1 | 0 | |
| | | | 54 | ,, | 1 | 9 | 3 | 0 | |
| | | | 55 | ,, | 1 | 11 | 2 | 8 | |
| | | | 56 | ,, | 3 | 16 | 8 | 8 | |
| | | | 57 | ಅಡಿಕೆತೋಟ | 1 | 3 | 11 | 0 | |
| | | | 67 | ಖುಷ್ಕಿ | 1 | 9 | 0 | 4 | |
| | | | 67 | ಅಡಿಕೆತೋಟ | 3 | 0 | 11 | 12 | |
| | | | 9 | ತರಿ | 5 | 33 | 8 | 8 | |
| | | | 9 | ಅಡಿಕೆತೋಟ | 0 | 6 | 0 | 8 | |
| | | | 11 | ತರಿ | 1 | 10 | 8 | 0 | |
| | | | 12 | ,, | 3 | 6 | 6 | 0 | |
| | | | 12 | ,, | 3 | 31 | 7 | 4 | |
| | | | 11 | ,, | 2 | 0 | 1 | 12 | |
| | | | 46 | ,, | 8 | 0 | 11 | 0 | |
| | | | 112 | ಕಾಫಿತೋಟ | 5 | 20 | 6 | 0 | |
| | | | 91 | ತರಿ | 0 | 24 | 1 | 8 | |
| | | | 99 | ,, | 2 | 20 | 6 | 8 | |
| | | | 100 | ತರಿ | 2 | 12 | 6 | 0 | |
| | | | 100 | ಅಡಿಕೆತೋಟ | 0 | 10 | 2 | 8 | |
| | | | 114 | ,, | 7 | 6 | 64 | 0 | |
| | | | 115 | ತರಿ | 5 | 15 | 14 | 0 | |
| | | | 135 | ,, | 0 | 12 | 3 | 8 | |
| | | | 135 | ,, | 0 | 38 | | | |
| | | | 151 | ಅಡಿಕೆತೋಟ | 0 | 23 | 4 | 8 | |
| | | | 151 | ತರಿ | 2 | 37 | 7 | 8 | |
| | | | 28 | ಅಡಿಕೆತೋಟ | 0 | 5 | 0 | 8 | |
| | | | 28 | ತರಿ | 12 | 8 | 31 | 8 | |
| | | | 41 | ,, | 4 | 32 | 12 | 0 | |
| | | | 83 | ,, | 7 | 28 | 21 | 0 | |
| | | | 1 | ಖುಷ್ಕಿ | 1 | 3 | 0 | 8 | |
| | | | 1 | ತರಿ | 1 | 7 | 1 | 2 | |
| | | | 1 | ಅಡಿಕೆತೋಟ | 2 | 0 | 15 | 12 | |
| | | | 6 | ,, | 1 | 0 | 6 | 0 | |
| | | | 8 | ,, | 4 | 11 | 25 | 12 | |
| | | | 8 | ಖುಷ್ಕಿ | 0 | 39 | 0 | 4 | |
| | | | 12 | ತರಿ | 3 | 19 | 6 | 12 | |
| | | | 13 | ಖುಷ್ಕಿ | 9 | 18 | 2 | 4 | |
| | | | 6 | ತರಿ | 4 | 33 | 7 | 0 | |
| | | | 12 | ,, | 0 | 18 | 0 | 12 | |
| | | | 10 | ,, | 4 | 38 | 11 | 0 | |
| | | | 11 | ,, | 2 | 27 | 4 | 0 | |
| | | | 13 | ,, | 0 | 14 | 3 | 0 | |
| | | | 15 | ,, | 1 | [illegible] | | | |
| | | | 11 | ತರಿ | 2 | 18 | 5 | 0 | |
| | | | 14 | ,, | 0 | 30 | | | |
| | | | 16 | ,, | 2 | 37 | 8 | 0 | |
| | | | 9 | ,, | 7 | 20 | 1 | 8 | |
| | | | 37 | ,, | 1 | 29 | 13 | 0 | |
| | | | 38 | ,, | 7 | 39 | 17 | 0 | |
| | | | 39 | ,, | 6 | 39 | 20 | 0 | |
| | | | 41 | ,, | 1 | 11 | 2 | 12 | |
| | | | 44 | ಅಡಿಕೆತೋಟ | | | | | |
| | | | 40 | ತರಿ | 10 | 30 | 30 | 0 | |
| | | | 42 | ,, | 9 | 0 | 25 | 0 | |
| | | | 43 | ಅಡಿಕೆತೋಟ | 0 | 21 | 2 | 8 | |
| | | | 44 | ತರಿ | 2 | 23 | 5 | 8 | |
| | | | 46 | ಅಡಿಕೆತೋಟ | 3 | 5 | 21 | 12 | |
| | | | 48 | ತರಿ | 7 | 1 | 19 | 0 | |
| | | | 49 | ,, | 7 | 35 | 17 | 0 | |
| | | | 50 | ,, | 6 | 25 | 18 | 0 | |
| | | | 51 | ,, | 10 | 0 | 27 | 0 | |
| | | | 1 | ಖುಷ್ಕಿ | 0 | 36 | 0 | 4 | |
| | | | 1 | ತರಿ | 3 | 17 | 7 | 4 | |
| | | | 18 | ಖುಷ್ಕಿ | 1 | 8 | 0 | 4 | |
| | | | 18 | ತರಿ | 3 | 17 | 7 | 4 | |
| | | | 18 | ಬಾಗಾಯ್ತು | 0 | 1 | 0 | 8 | |
| | | | 3 | ಖುಷ್ಕಿ | 1 | 1 | 0 | 1 | |
| | | | 3 | ತರಿ | 3 | 37 | 8 | 4 | |
| | | | 5 | ,, | 1 | 13 | 3 | 8 | |
| | | | 8 | ,, | 1 | 7 | 1 | 12 | |
| | | | 10 | ,, | 1 | 13 | 9 | 0 | |
| | | | 11 | ,, | 7 | 27 | 21 | 0 | |
| | | | 16 | ಖುಷ್ಕಿ | 0 | 25 | 6 | 4 | |
| | | | 16 | ತರಿ | 2 | 4 | 5 | 12 | |
| | | | 17 | ಖುಷ್ಕಿ | 0 | 6 | 5 | 8 | |
| | | | 17 | ತರಿ | 2 | 21 | | | |
| | | | 59 | ,, | 6 | 22 | 17 | 0 | |
| | | | 60 | ,, | 2 | 4 | 1 | 0 | |
| | | | 61 | ಅಡಿಕೆತೋಟ | 3 | 23 | 9 | 8 | |
| | | | 70 | ,, | 2 | 15 | 26 | 8 | |
| | | | 72 | ,, | 3 | 36 | 16 | 12 | |
| | | | 74 | ,, | 1 | 20 | 18 | 0 | |
| | | | 76 | ,, | 1 | 37 | 59 | 0 | |
| | | | 79 | ತರಿ | 1 | 14 | 1 | 0 | |
| | | | 80 | ,, | 1 | 11 | 1 | 0 | |
| | | | 81 | ,, | 1 | 35 | 6 | 8 | |
| | | | 83 | ,, | 0 | 35 | 1 | 12 | |
| | | | 81 | ಅಡಿಕೆತೋಟ | 5 | 19 | 65 | 12 | |
| | | | 82 | ತರಿ | 1 | 36 | 18 | 0 | |
| | | | 82 | ಅಡಿಕೆತೋಟ | 0 | 29 | | | |
| | | | 119 | ತರಿ | 3 | 21 | 7 | 8 | |
| | | | 151 | ,, | 3 | 30 | 7 | 8 | |

By Order.

*District Court,* A. SESHA IYENGAR,
*Hassan.* *Sirastedar.*


ಯಸ್. ಆರ್. ವೆಂಕಟಸುಬ್ಬಾಚಾರ್ಯರ ಲೋವರ್ ಸೆಕಂಡರಿ ಕನ್ನಡ ಟೆಕ್‌ಸ್ಟ್ ನೋಟ್ಸು.

೧೯೦೩ ನೆಯ ವರ್ಷದ್ದು. ಪ್ರಶ್ನೋತ್ತರಗಳೊಡನೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವದಕ್ಕೆ ಅತ್ಯಂತ ಸಹಾಯವಾಗುವಂತೆ ರಚಿಸಿದೆ, ಕ್ರಯ ೬ ಆಣೆ

ಮ್ಯೆಸೂರು ಸಂಸ್ಥಾನದ ಭೂವಿವರಣೆ ೦—೧—೦
ಮ್ಯೆಸೂರು, ಮದರಾಸು ಮೊದಲಾದ್ದರ ಭೂವಿವರಣೆ ೦—೧—೬
೨ನೆಯ ತರಗತಿಯ ಪದ್ಯಸಂಗ್ರಹದ ನೋಟ್ಸು ೦—೧—೬
೩ನೆಯ ತರಗತಿಯ ಪದ್ಯಸಂಗ್ರಹದ ನೋಟ್ಸು ೦—೦—೬
ಪತ್ರರತ್ನಾಕರ (ಪತ್ರಕ್ರಮ, ಸ್ಟಾಂಪಿನ ವಿವರದ್ದು) ೦—೧೨—೦
ಲೇಖ್ಯತತ್ವಪ್ರಕಾಶಿಕೆ (ಅರ್ಜಿಗಳ ಲೇಖನಕ್ರಮದ್ದು) ೦—೪—೦
ಇವಕ್ಕೆಲ್ಲಾ ಡಿಸ್ಕೌಂಟು:—೧೦ ಕ್ಕೆ ೧, ೫೦ಕ್ಕೆ ೭, ೧೦೦ಕ್ಕೆ ೨೦
ವಿಳಾಸ.—೧. ಯಸ್. ಆರ್. ವೆಂಕಟಸುಬ್ಬಾಚಾರ್ಯ, ಸುಬೋಧ ಗ್ರಂಥಾಲಯಾ, ಮ್ಯೆಸೂರು,
೨. ಗ್ರಾಜುಯೇಟ್ಸ್ ಷಾಪು, ಮ್ಯೆಸೂರು.
೩. ಮಿರ್ಜಾ ಬುಕ್ ಡಿಪೊ, ಮ್ಯೆಸೂರು.
೪. ಕೆ. ನರಸಿಂಹಯ್ಯ ಅಂಡ್‌ಕೋ, ಮ್ಯೆಸೂರು.
೫. ಸಂತೇಪೇಟೆ, ಡೋರ್ ನಂ॥ ೧೪೪೯ ಕೆ. ಸುಬ್ಬರಾವ್, ಮ್ಯೆಸೂರು.
೬. ಜಿ. ಗಣಪ್ಪ ಅಂಡ್‌ಕೋ, ಬೆಂಗಳೂರು.


## ವೃತ್ತಾಂತಪತ್ರಿಕೆ.

—:೦:—

ಸನ್ ೧೯೦೩ ನೇ ಇಸವಿ ಏಪ್ರಿಲ್ ತಾ॥ ೩೦ ನೇ ಗುರುವಾರ.

### ಸೋಮಾಲಿ ಲ್ಯಾಂಡಿನ ಯುದ್ಧವು.

ಆಫ್ರಿಕಾ ಖಂಡಕ್ಕೆ ಸೇರಿದ ಸೋಮಾಲಿ ಲ್ಯಾಂಡಿನಲ್ಲಿ ಮಹಮ್ಮದ್ ಅಬ್ದುಲ್ಲಾ ಎಂಬ ಮುಲ್ಲಾವು ಇಂಗ್ಲಿಷರ ಮೇಲೆ ದಂಡುಕಟ್ಟಿ ಪ್ರಜಾಕಂಟಕನಾಗಿರುವದೂ, ಇಂಗ್ಲಿಷರು ಆ ಮುಲ್ಲಾವಿನ ದಾಂಧಳೆಯನ್ನು ನಿಲ್ಲಿಸಬೇಕೆಂದು

ಚೇಂಬರ್ಲಿನ್ ಯವರು ಕಂಡುಹಿಡಿದ ಕೆಮ್ಮು ಔಷಧವು.

17




ಶೀತ, ಕೆಮ್ಮು, ಗಂಟಲು ಗೂರೆಸ್ಸುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿತಕ್ಕೆ ಈ ಔಷಧವು ಬಹಳ ಶ್ರೇಷ್ಠವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ, ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ತೋರುವದು. ಶೀತವು ಬಿಟ್ಟ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಅಲಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಒಣಗಿಹೋಗುವದು. ಇದರಿಂದಲೇ ಅನೇಕಾನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನೌಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಈ ಪರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಈ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ಒಕ್ಕೆ ೧ ರೂ., ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ —

ಪಿ. ವಿ. ನರಸಿಂಹಲು ಚೆಟ್ಟಿ,
ನಂ. ೨, ತಂಬುಸಾಮಿಯಾಚರ ಬೀದಿ,
ಮದರಾಸ್.


ಸೈನ್ಯವನ್ನು ಕಳುಹಿಸಿರುವದೂ ನಮ್ಮ ವಾಚಕರಿಗೆ ತಿಳಿಸಿದ್ದೇವಷ್ಟೆ. ಈಚೆಗೆ ಇಂಗ್ಲೀಷರಿಗೂ ಮುಲ್ಲಾವಿನ ಸೈನಿಕರಿಗೂ ಮೂರು ಕಡೆ ದೊಡ್ಡ ಯುದ್ಧಗಳು ಸಂಭವಿಸಿದವೆಂದು ಈ ವಾರದಲ್ಲಿ ತಂತೀವರ್ತಮಾನ ಬಂದಿದೆ.

ಗುಂಬೂರು ಎಂಬ ಸ್ಥಳದಲ್ಲಿ ಕರ್ನಲ್ ಪ್ಲಂಕೆಟ್ ಯವರು ದಂಡು ಹಾಕಿಕೊಂಡಿದ್ದರು. ಅವರ ಬಳಿ ೨೨೦ ಮಂದಿ ಸೈನಿಕರು ಎರಡು ಫಿರಂಗಿಗಳನ್ನು ಇಟ್ಟುಕೊಂಡಿದ್ದರು. ಮುಲ್ಲಾವಿನ ಕಡೆಯವರು ೨,೦೦೦ ಸವಾರರೂ, ೧೦,೦೦೦ ಭರ್ಜಿ ಹಿಡಿದವರೂ ಹೋಗಿ ಬೈಲು ಪ್ರದೇಶದಲ್ಲಿ ಆ ಸಣ್ಣ ಇಂಗ್ಲೀಷ್ ಸೈನ್ಯವನ್ನು ಸುತ್ತಿಕೊಂಡು ವಿಪರೀತವಾಗಿ ಗುಂಡು ಹೊಡೆಯುತ್ತಾ ಬಂದರು. ಇಂಗ್ಲೀಷರಾದರೋ ತಮ್ಮಲ್ಲಿದ್ದ ಮದ್ದು ಗುಂಡೆಲ್ಲಾ ತೀರಿಹೋಗುವ ತನಕ ಬಹು ಪರಾಕ್ರಮದಿಂದ ಯುದ್ಧ ಮಾಡಿದರು. ಕಡೆಗೆ ಅವರ ಮದ್ದೆಲ್ಲಾ ಮುಗಿಯಿತು. ಸಂಗೀನುಗಳನ್ನು ಎತ್ತಿ ಹಿಡಿದು ನಿಂತುಕೊಂಡರು, ಅಸಂಖ್ಯಾತರಾದ ಮುಲ್ಲಾವಿನ ಕಡೆ ಸೈನಿಕರು ನುಗ್ಗಿ ಅನೇಕರನ್ನು ಕೊಂದುಹಾಕಿದರು. ಈ ಯುದ್ಧದಲ್ಲಿ ಇಂಗ್ಲೀಷರ ಕಡೆ ೧೦ ಮಂದಿ ಹುದ್ದೇದಾರರೂ, ೧೯೦ ಮಂದಿ ಸೈನಿಕರೂ ಮಡಿದುಹೋದರು. ಈ ಸೈನಿಕರಲ್ಲಿ ೩೭ ಮಂದಿ ಮಾತ್ರ ಉಳಿದು ಬಂದಿರುತ್ತಾರೆ.

ಈಚೆಗೆ ಮುಲ್ಲಾವಿನ ಕಡೆಯ ಸೈನಿಕರು ಕರ್ನಲ್ ಕಾಬ್ಬೆಯವರನ್ನೂ ಅವರ ಕೈಕೆಳಗಿನ ಸೈನಿಕರನ್ನೂ ಸುತ್ತಿಕೊಂಡು, ಕೈಸೆರೆ ಹಿಡಿಯಬೇಕೆಂದು ಪ್ರಯತ್ನಪಡುತ್ತಿರುವಂತೆಯೂ, ಅವರನ್ನು ಬಿಡಿಸಿಕೊಂಡು ಬರುವದಕ್ಕಾಗಿ ಜನರಲ್ ಮ್ಯಾನಿಂಗ್ ಯವರು ಸೈನ್ಯ ಸಹಿತ ಅಲ್ಲಿಗೆ ಹೋಗಿರುತ್ತಾರೆಂತಲೂ ತಿಳಿದಿತ್ತು. ಈಗ ಜನರಲ್ ಮ್ಯಾನಿಂಗ್ ಯವರು ಶತ್ರುಗಳನ್ನು ಸಂಧಿಸಿ ಯುದ್ಧ ಮಾಡಿ ಮುಲ್ಲಾವಿನ ಕಡೆಯವರಲ್ಲಿ ೨,೦೦೦ ಮಂದಿಯನ್ನು ಕೊಂದುಹಾಕಿ, ಕರ್ನಲ್ ಕಾಬ್ಬೆಯವರನ್ನೂ ಅವರ ಸೈನಿಕರನ್ನೂ ಬಿಡಿಸಿಕೊಂಡು ಬಂದಿರುತ್ತಾರೆ. ಈ ವರ್ತಮಾನವು ಇಂಗ್ಲೀಷ್ ರಾಜ್ಯಭಾರದವರಲ್ಲೆಲ್ಲಾ ತುಂಬಾ ಸಂತೋಷವನ್ನುಂಟುಮಾಡಿದೆ.

ಇನ್ನೊಂದು ಕಡೆ ದಾನಾಪ್ ಎಂಬ ಸ್ಥಳದಲ್ಲಿ ಮೇಜರ್ ಗಾಫ್ ಯವರು ಸೈನ್ಯ ಸಹಿತ ಮುಲ್ಲಾವಿನ ಸೈನಿಕರನ್ನು ಸಂಧಿಸಿ ಯುದ್ಧ ಮಾಡಿ, ಸೋಲಿಸಿರುತ್ತಾರೆ. ಈ ಯುದ್ಧವು ನಾಲ್ಕು ಗಂಟೆ ಹೊತ್ತು ನಡೆಯಿತು. ಇಂಗ್ಲೀಷರ ಕಡೆ ೨೦೦ ಮಂದಿಯೂ, ಮುಲ್ಲಾವಿನ ಕಡೆ ೧,೦೦೦ ಮಂದಿಯೂ ಇದ್ದರು. ಇಂಗ್ಲೀಷ್ ಸೈನ್ಯದಲ್ಲಿ ಇಬ್ಬರು ಹುದ್ದೇದಾರರೂ, ೧೧ ಮಂದಿ ಸೈನಿಕರೂ ಕೊಲ್ಲಲ್ಪಟ್ಟರು; ಮತ್ತು ನಾಲ್ಕು ಮಂದಿ ಹುದ್ದೇದಾರರಿಗೆ ಗಾಯಗಳಾದವು. ಮುಲ್ಲಾವಿನ ಕಡೆಯಲ್ಲಿ ೨೦೦ ಮಂದಿ ಕೊಲ್ಲಲ್ಪಟ್ಟರು.

ಈಗ ಮುಲ್ಲಾವಿನ ಕೈಕೆಳಗೆ ಜನರು ವಿಪರೀತವಾಗಿ ಸೇರಿಕೊಂಡಿದ್ದಾರೆಂತಲೂ, ಇದುವರೆಗೆ ೪೩,೦೦೦ ಸೈನಿಕರು ಇರಬಹುದೆಂದೂ ಹೇಳುತ್ತಾರೆ. ಅವರ ಆಯುಧಗಳೂ, ಕುದುರೆಗಳೂ ಬಹಳ ಚನ್ನಾಗಿರುತ್ತವೆ.

## ಒಳದೇಶದ ವೃತ್ತಾಂತಗಳು.

ನಮ್ಮ ಸಂಸ್ಥಾನದ ಇಬ್ಬರು ಕೌನ್ಸಲರುಗಳೂ ಬೇಸಿಗೆಯನ್ನು ಕಳೆಯುವದಕ್ಕಾಗಿ ನೀಲಗಿರಿ ಬೆಟ್ಟದ ಮೇಲಕ್ಕೆ ದಯಮಾಡಿದ್ದಾರೆ.

❖❖❖❖

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯಲ್ಲಿ ಒಂದು ಹದ ಮಳೆ ಸುರಿಯಿತು. ಈಚೆಗೆ ಮಳೆ ಇಲ್ಲದ್ದರಿಂದ ಬಿಸಿಲಿನ ತಾಪ ಹೆಚ್ಚಾಗಿದೆ.

❖❖❖❖

ರಾಜಧಾನಿಯ ಜಗನ್ಮೋಹನ ಬಂಗಲೆ ಮೈದಾನಿನಲ್ಲಿದ್ದ ಒಂದು ಸರ್ವೇ ಮರಕ್ಕೆ ಮೊನ್ನೆ ಶನಿವಾರ ಸಿಡಿಲು ಬಡಿದು, ಮರವನ್ನು ಸೀಳಿಬಿಟ್ಟಿತು.

❖❖❖❖

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲೇ ನೇತ್ರ ವೈದ್ಯಶಾಲೆಯನ್ನು ಕಟ್ಟಿಸುವದಕ್ಕೆ ಸರ್ಕಾರದವರು ೧,೧೫೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

❖❖❖❖

ಮೈಸೂರು ಚೀಫ್ ಕೋರ್ಟಿನ ಚೀಫ್ ಜಡ್ಜರಾದ ಮೇ॥ ರಾಮಚಂದ್ರ ಐಯರವರು ಶೃಂಗೇರಿಗೂ, ಮೇ॥ ರಂಗಸ್ವಾಮೈಯಂಗಾರ್ಯರು ಮದರಾಸಿನ ಮೇಲೆ ನೀಲಗಿರಿಗೂ ಪ್ರಯಾಣ ಮಾಡಿರುತ್ತಾರೆ.

❖❖❖❖

. ಚಿತ್ರದುರ್ಗದ ರೆವಿನ್ಯೂ ಶಿರಸ್ತೇದಾರ್ ಮೇ॥ ಬಸವಾರಾಧ್ಯರು ಕಾಯಿಲೆ ರಜಾ ಪಡೆದು ರಾಜಧಾನಿಗೆ ಬಂದಿದ್ದಾರೆ. ಸರ್ಕಾರದವರು ಇವರಿಗೆ ಪುನಃ ಮುನ್ಸಿಫ್ ಕೆಲಸ ಕೊಡುತ್ತಾರೆಂದು ವರ್ತಮಾನವಿದೆ.

❖❖❖❖

ಕಳೆದ ಫೆಬ್ರವರಿ ತಿಂಗಳಲ್ಲಿ ಕೋಲಾರ್ ಚಿನ್ನದ ಗಣಿಗಳಲ್ಲಿ ಉತ್ಪತ್ತಿಯಾದ ೨೫,೦೦,೪೦೨ ರೂಪಾಯಿ ಚಿನ್ನವನ್ನು ಕಂಪನಿಯವರು ಬೊಂಬಾಯಿ ಮಾರ್ಗವಾಗಿ ವಿಲಾಯತಿಗೆ ಕಳುಹಿಸಿರುತ್ತಾರೆ.

❖❖❖❖

ಮೈಸೂರು ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರ್ ಎಂಬ ಸೈನ್ಯಕ್ಕೆ ಸರ್ಕಾರದವರು ೩೦೦ ಹೇಸರ ಕತ್ತೆಗಳನ್ನು ರವಾಲ್ಪಿಂಡಿಯಿಂದ ೬೦,೦೦೦ ರೂಪಾಯಿ ಕೊಟ್ಟು ತರಿಸಿದ್ದಾರೆ.

❖❖❖❖

ದಕ್ಷಿಣ ಹಿಂದುಸ್ಥಾನದ ಅಂಗಸಾಧನಾ ಪ್ರೋತ್ಸಾಹಕ ಸಮಾಜಕ್ಕೆ ನಮ್ಮ ಶ್ರೀಮನ್ ಮಹಾರಾಜರವರೂ, ತಿರುವಾಂಕೂರು ಸಂಸ್ಥಾನದ ಮಹಾರಾಜರವರೂ ಪೋಷಕರಾಗಿರುತ್ತೇವೆಂದು ಒಪ್ಪಿಕೊಂಡಿದ್ದಾರೆ.

❖❖❖❖

ಮೈಸೂರು ರೋಮಾಯ ಕ್ರೈಸ್ತ ಜನರ ಗುರುವಾಗಿದ್ದ ಫಾದರ್ ವಿಟೋಹಿಕ್ ಯವರು ಕಳೆದ ವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಹಿಂದುಸ್ಥಾನಕ್ಕೆ ಬಂದು ೧೫ ವರುಷಗಳಾಯಿತೆಂದು ತಿಳಿದುಬಂದಿದೆ.

❖❖❖❖

ಬೆಂಗಳೂರು ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು ಸ್ತ್ರೀಜನಗಳಿಗೆ ಬಲಾತ್ಕರಿಸಿ ಸಿಡುಬು ಹಾಕುವ ಕಾನೂನನ್ನು ಜಾರಿಗೆ ತರಬೇಕೆಂದು ಗೊತ್ತುಮಾಡಿದರಷ್ಟೆ. ಈಗ ಈ ಕಾನೂನಿನ ಮಸೂದೆಯನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟ ಮಾಡಿಸಿರುತ್ತಾರೆ.

❖❖❖❖

ಬೀರೂರು ಕಡೂರಿನ ನಡುವೆ ರೈಲ್ವೆ ಅಪಾಯತ ನಡೆದದ್ದನ್ನು ಕುರಿತು ಸರ್ಕಾರದವರು ತನಿಖೆ ಮಾಡಿದ್ದರಲ್ಲಿ ಇಬ್ಬರು ತಪ್ಪಿತಸ್ಥರೆಂದು ಕಂಡುಬಂದಹಾಗೂ, ಬೀರೂರಿನ ಅಸಿಸ್ಟೆಂಟ್ ಸ್ಟೇಷನ್ ಮಾಸ್ಟರನ್ನೂ, ಸಿಗ್ನಲರನ್ನೂ ಸಸ್ಪೆಂಡು ಮಾಡಿದ್ದಲ್ಲದೆ ಅವರನ್ನು ಹಿಡಿದು ಪೋಲೀಸಿನವರ ವಶಕ್ಕೆ ಕೊಟ್ಟಿರುವದಾಗೂ ಕೇಳುತ್ತೇವೆ.

❖❖❖❖

ದಕ್ಷಿಣ ಕನ್ನಡಾ ಜಿಲ್ಲೆಯ ಹೊಸಂಗಡಿಯಿಂದ ಒಬ್ಬ ಖಾತ್ರಿಬಾರರು ಬರೆದಿರುವದೇನಂದರೆ—"ನಮ್ಮ ಕುಂದಾಪುರ ತಾಲ್ಲೂಕಿನ ಹೊಸಂಗಡಿಯಲ್ಲಿ ನೆನ್ನೆ ೨೦ನೆ ತಾ॥ ಸೋಮವಾರ ಬೆಳಗ್ಗೆ ೩ ಗಂಟೆಗೆ ಸಧ್ಬೂರವಾದ ಸಣ್ಣ ಮಳೆಯು ಬಂತು. ಈ ಮಳೆಗೆ ಬಿದ್ದ ನೀರಿನ ಹನಿಗಳು ಅರಿಶಿನ ವರ್ಣವಾಗಿ ಅದು ಒಣಗಿದಲ್ಲಿ ಅಂದರೆ, ಹಂಚಿನ ಮೇಲೂ ಎಲೆಗಳ ಮೇಲೂ ಅಂಗಳದಲ್ಲೂ, ತುಂಬೂ ಹರಿದಿರುವ ಕುರುಹು ಹಾಗೆ ಹಳದೀ ವರ್ಣದ ಹುಡಿಯು ಒಣಗಿರುತ್ತದೆ. ಹಿಂದೆ ಎಲ್ಲಾದರೂ ಬಿದ್ದ ಸಂಗತಿ ನಾವು ಕೇಳಲಿಲ್ಲವೆಂದು ಹಿರಿಯರು ಹೇಳುತ್ತಾರೆ."

❖❖❖❖

ಲೇಟ್ ದಿವಾನ್ ಸರ್ ಶೇಷಾದ್ರಿ ಐಯರವರ ಮೆಮೋರಿಯಲ್ ಫಂಡಿಗೆ ೩೬,೩೪೪ ಚಿಲ್ಲರೆ ರೂಪಾಯಿ ವಸೂಲಾಗಿದೆ ಎಂತಲೂ, ಇನ್ನೂ ೧೪,೩೬೭ ಚಿಲ್ಲರೆ ರೂಪಾಯಿ ವಸೂಲಾಗುವಂತೆ ಜನರು ವಾಗ್ದಾನಮಾಡಿದ್ದಾರೆಂತಲೂ ಸೆಕ್ರೆಟರಿಯವರು ಪ್ರಕಟಿಸಿರುತ್ತಾರೆ.

❖❖❖❖

ಬೆಂಗಳೂರಿಂದ ಚಿಕ್ಕಬಳ್ಳಾಪುರಕ್ಕೆ ಸಣ್ಣ ರೈಲ್ ರಸ್ತೆ ಹಾಕುವದಕ್ಕೆ ಒಂದು ಕಂಪನಿ ಏರ್ಪಾಡಾಗಿರುವದೂ, ಈ ಕಂಪನಿಯವರು ಷೇರುಗಳನ್ನು ಬಿಕರಿಮಾಡುತ್ತಿರುವದೂ ವಾಚಕರಿಗೆಲ್ಲಾ ಗೊತ್ತಿದೆಯಷ್ಟೆ. ಈ ರಸ್ತೆ ಹಾಕುವದಕ್ಕೆ ಲೈನ್ ಸರ್ವೆ ಮಾಡುವ ಹಕ್ಕನ್ನು ಮೇಲ್ಕಂಡ ಕಂಪನಿಯವರಿಗೆ ಶ್ರೀಮನ್ ಮಹಾರಾಜರವರು ವಹಿಸಿರುತ್ತಾರೆ.

❖❖❖❖

ಸಂಸ್ಥಾನದ ಮುಜರಾಯಿ ಇಲಾಖಾ ಭಾರವನ್ನು ವಹಿಸಿರುವ ಮೇ॥ ಅನಂತಸ್ವಾಮಿರಾಯರು ತಾಲ್ಲೂಕುಗಳ ಮೇಲೆ ಸರ್ಕೀಟು ಹೊರಟಿದ್ದಾರೆ. ಅವರು ಸೋಸಲೆ, ತಿರಮಕೂಡ್ಲು ನರಸೀಪುರ, ನಂಜನಗೂಡು, ತಲಕಾಡು, ಚಾಮುಂಡಿ ಬೆಟ್ಟ ಈ ಮುಂತಾದ ಕಡೆಗಳಿಗೆ ಹೋಗಿ ಸತ್ರ ದೇವಾಲಯಗಳ ಕಾರುಬಾರುಗಳನ್ನು ತನಿಖೆ ಮಾಡಿಕೊಂಡು ಬರುತ್ತಿದ್ದಾರೆ.

❖❖❖❖

ಹಿಂದಿನ ವಾರ ಕೋಲಾರದ ಚಿನ್ನದಗಣಿ ಡಾಕ್ಟರಾದ ಮೇ॥ ಕೃಷ್ಣಸ್ವಾಮಿ ಐಯರವರೂ, ಪ್ಲೇಗ್ ಇನ್‌ಸ್ಪೆಕ್ಟರ್ ಮೇ॥ ರಾಡ್ರಿಗ್ಸ್ ಯವರೂ ಇವರ ಸಂಸಾರದವರೂ, ಪೋಲೀಸ್ ಇನ್‌ಸ್ಪೆಕ್ಟರ್ ರಾಬಿನ್‌ಸನ್ ರವರೂ ಅವರ ಹೆಂಡತಿ ಮಕ್ಕಳೂ ವಿಹಾರಾರ್ಥವೆಂಬ ಸ್ಥಳಕ್ಕೆ ಹೋಗಿ, ಕಲಾಯಿ ಇಲ್ಲದ ಪಾತ್ರೆಯಲ್ಲಿ ಮಾಡಿದ ಪದಾರ್ಥಗಳನ್ನು ಫಲಾಹಾರ ಮಾಡಿಕೊಂಡು ವಾಪಸು ಬಂದರು. ಆ ಸಾಯಂಕಾಲವೇ ಅವರಿಗೆಲ್ಲಾ ವಾಂತಿ ಭೇದಿ ಪ್ರಾರಂಭವಾಗಿ ಎಲ್ಲರೂ ಬಹಳ ಗಾಬರಿಪಟ್ಟರು. ಆಸ್ಪತ್ರೆಯೊಳಗೇ ಏನೋ ಇಲಾಜುಮಾಡಿದ್ದರಿಂದ ಮರುದಿನ ಅವರಿಗೆ ವಾಸಿಯಾಯಿತು.

❖❖❖❖

ಬೆಂಗಳೂರು ಕಬ್ಬನ್ ಪಾರ್ಕಿನಲ್ಲಿ ನಿಲ್ಲಿಸುವ ಲೇಟ್ ಚಕ್ರವರ್ತಿನಿಯವರ ಪ್ರತಿಮೆಯ ವಿಷಯವಾಗಿ ಬೊಂಬಾಯಿನ ಪತ್ರಿಕೆಯು ಹೇಳುವದೇನಂದರೆ —ಈ ಪ್ರತಿಮೆಯನ್ನು ಮಾಡಿ ಕಳುಹಬೇಕೆಂದು ಲಂಡನ್ ನಗರದ ರೀಜಂಟ್ ಪಾರ್ಕಿನ ಮೇ॥ ಥಾಮಸ್ ಬ್ರಾಕ್ ಎಂಬಾತನಿಗೆ ವಹಿಸಿದ್ದಾರೆ. ಅದರ ಖರ್ಚು ೧೫,೦೦೦ ರೂ. ಆಗುವದು. ಅದಕ್ಕೆ ಪೀಠವನ್ನು ಮೈಸೂರಿನಲ್ಲೇ ಶಿಲೆಯಿಂದ ಮಾಡಿಸುವರು. ಪ್ರತಿಮೆಯು ಬಿಳೀ ಕಲ್ಲಿನಲ್ಲಿ ಬಹು ಸುಂದರವಾಗಿ ತಯಾರಾಗುತ್ತೆ. ೧೯೦೪ ನೆ ಇಸವಿ ಮೇ ತಿಂಗಳೊಳಗಾಗಿ ಅದು ತಯಾರಾಗಿ ಬೆಂಗಳೂರಿಗೆ ಬಂದೀತೆಂದು ಹೇಳುತ್ತಾರೆ. ಭೂಮಿಯಿಂದ ಮೇಲಕ್ಕೆ ಪೀಠವನ್ನು ೧೩ ಅಡಿ ಎತ್ತರವಾಗಿ ಕಟ್ಟಿ, ಅದರ ಮೇಲೆ ೧೧ ಅಡಿ ಎತ್ತರವುಳ್ಳ ಪ್ರತಿಮೆಯನ್ನು ನಿಲ್ಲಿಸುತ್ತಾರೆ. ಈ ಕೆಲಸಕ್ಕೆ ಒಟ್ಟು ೭೫,೦೦೦ ರೂ. ಬೇಕಾಗುವದು. ಈ ಪೈಕಿ ೧೦,೦೦೦ ರೂಪಾಯಿಯನ್ನು ಬೆಂಗಳೂರು ಫಂಡಿನಲ್ಲಿ ಕೂಡಿಟ್ಟಿದ್ದಾರೆ. ಪ್ರತಿಮೆಯನ್ನು ಕಬ್ಬನ್ ಪಾರ್ಕಿನಲ್ಲಿ ಇಡಿಸುವದಾದರೆ ಬಾಕಿ ೬೫,೦೦೦ ರೂಪಾಯಿಯನ್ನು ತಾವೇ ಕೊಡುವದಾಗಿ ಸರ್ ಕೃಷ್ಣಮೂರ್ತಿಯವರು ವಾಗ್ದಾನ ಮಾಡಿದ್ದಾರೆ.

## ಮೈಸೂರು ಗೆಜೆಟ್ ಸಂಗ್ರಹ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಅ. ಕಮಿಷನರ್ ಮೇ॥ ಸಿ. ಎಸ್. ಬಾಲಸುಂದರಂ ಐಯರವರನ್ನು ಹಂಗಾಮಿಯಾಗಿ ಸಾಗರ, ಸೊರಬ, ನಗರವೆಂಬೀ ತಾಲ್ಲೂಕುಗಳನ್ನೊಳಗೊಂಡ ಸಬ್ ಡಿವಿಜನಿಗೆ ನೇಮಕಮಾಡಿದೆ. ಇವರು ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಚಲಾಯಿಸತಕ್ಕದ್ದು.

ಕಡೂರ್ ಡಿಸ್ಟ್ರಿಕ್ಟ್ ಅ. ಕಮಿಷನರ್ ಮೇ॥ ಪಿ. ಜಿ. ಡಿಸೌಜಾಯವರು ನೋಕದ್ದಮೆಗಳನ್ನು ದರ್ಯಾಫ್ತು ಮಾಡುವಾಗ್ಯೆ ಸಾಕ್ಷಿಗಳ ವಾಙ್ಮೂಲವನ್ನು ಇಂಗ್ಲೀಷಿನಲ್ಲಿ ಬರೆದುಕೊಳ್ಳಲು ಅಧಿಕಾರ ಕೊಡಲ್ಪಟ್ಟಿದ್ದಾರೆ.

ಗವರ್ನಮೆಂಟ್ ಆಕ್ಟಿಂಗ್ ನೇತ್ರವೈದ್ಯರಾದ ಮೇ॥ ಟಿ. ಎಸ್. ನಂಜಪ್ಪನವರು ಬೆಂಗಳೂರು ಸೆಂಟ್ರಲ್ ಜೈಲ್ ವೈದ್ಯ ಇಲಾಖಾ ಚಾರ್ಜನ್ನು ನೋಡಿಕೊಳ್ಳತಕ್ಕದ್ದು.

ಅ. ಸರ್ಜನ್ ಮೇ॥ ಬಿ. ಡಿ. ರಾಘವೇಂದ್ರರಾಯರಿಗೆ ನಾಲ್ಕು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ. ಸರ್ಜನ್ ಮೇ॥ ಎಸ್. ರಂಗಣ್ಣನವರನ್ನು ಕೋಲಾರದಿಂದ ಮೈಸೂರಿಗೆ ಆರವನೆ ಕೆಲಸಕ್ಕೆ ವರ್ಗಮಾಡಿದೆ.

ಸಬ್ ಅ. ಸರ್ಜನ್ ಮೇ॥ ಎಂ. ಆರ್. ಪೊನ್ನಸ್ವಾಮಿಪಿಳ್ಳೆಯವರು ಕೋಲಾರ್ ಆಸ್ಪತ್ರೆಯ ಛಾರ್ಜಿನಲ್ಲಿರತಕ್ಕದ್ದು.

ಹುಜೂರು ಹೆಡ್ ಶಿರಸ್ತೇದಾರ್ ಮೇ॥ ಸಿ. ರಾಮರಾಯರಿಗೆ ಆರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ರಜದ ಮೇಲಿರುವ ಅ. ಕಮಿಷನರ್ ಮೇ॥ ಸಿ. ದೇವರಾಜೇ ಅರಸಿನವರನ್ನು ಹಂಗಾಮಿಯಾಗಿ ಮೈಸೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ.

ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅ. ಕನ್ಸರ್ವೇಟರ್ ಮೇ॥ ಎಚ್. ಶ್ರೀನಿವಾಸರಾಯರಿಗೆ ೮ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮಾರಿಕಣಿವೆ ಡಿವಿಜನ್ ಸಬ್ ಅ. ಇಂಜನಿಯರ್ ಮೇ॥ ಕೆ. ಆರ್. ಶೇಷಾಚಾರ್ರಿಗೆ ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

## ರಾಜಧಾನಿಯ ಮ್ಯುನಿಸಿಪಲ್ ವಿಷಯಗಳು.

ಕಳೆದ ಶನಿವಾರ ಬೆಳಗ್ಗೆ ರಾಜಧಾನಿಯ ಮ್ಯುನಿಸಿಪಲ್ ಕಮಿಷನರು ಟೌನ್‌ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಚ್ಚೇರಿಯ ವ್ಯಾಪಾರಂಗಳನ್ನು ಜರುಗಿಸಿದರು. ಕಳೆದ ಮಾರ್ಚಿ ತಿಂಗಳ ಜಮಾ ಖರ್ಚು ನೋಡಲಾಗಿ ರೂ. ೧೧,೬೦೩—೧೫—೩ ಪೈ ಜಮಾ ಆಯಿತೆಂತಲೂ, ರೂ. ೮,೬೯೭—೧೦—೫ ಪೈ ಖರ್ಚಾಯಿತೆಂತಲೂ ಜನನ ೧೭೭, ಮರಣ ೧೫೪, ಈ ಪೈಕಿ ಪ್ಲೇಗ್ ೭೫, ಸಿಡುಬು ೫ ಎಂತಲೂ ತಿಳಿದುಬಂತು

ಕುಡಿಯುವ ನೀರಿನ ಇಲಾಖೆಯ ಸಿಬ್ಬಂದಿಗೆ ಸೇರಿದ ಟರ್ನ್‌ಕೀಗಳಿಗೆ ನಲ್ಲಿ ಹಾಕುವದಕ್ಕೆ ಕೂಲಿ ತೆಗೆದುಕೊಳ್ಳಲು ಅವಕಾಶ ಕೊಡಬೇಕೆಂತಾ ವೈಸ್ ಪ್ರೆಸಿಡೆಂಟರು ಶಿಫಾರಸು ಮಾಡಿದರು. ಅವರೆಲ್ಲಾ ತಲಬುದಾರರಾದ್ದರಿಂದ ಇದುವರೆಗೆ ವಸೂಲಾಗಿ ಬಾಕಿ ಉಳಿದಿರುವ ೧೦ ರೂಪಾಯಿಗಳನ್ನು ಅವರಿಗೆ ಹಂಚಿಕೊಟ್ಟು, ಇನ್ನು ಮೇಲೆ ಈ ಬಾಬಿನಲ್ಲಿ ಅವರಿಗೆ ರುಸುಂ ಏನೂ ಸಿಕ್ಕಲಾರದೆಂತಾ ತಿಳಿಸಬೇಕು ಎಂಬದಾಗಿ ಮೆಂಬರುಗಳೆಲ್ಲಾ ಒಪ್ಪಿ ತೀರ್ಮಾನಿಸಿರುತ್ತಾರೆ.

ರೈಲ್ವೆ ಸ್ಟೇಷನ್ ಬಳಿ ಇರುವ ಜೀವನರಾಯನ ಕಟ್ಟೆಯನ್ನು ಒಡೆದು ಚಕ್ಕಡಾಗಿ ಮಾಡುವದಕ್ಕೆ ಇಂಜನಿಯರ್ ಇಲಾಖೆಯವರು ೬,೦೦೦ ರೂ. ಖರ್ಚಾಗಬಹುದೆಂದು ಅಂದಾಜು ಹಾಕಿದ್ದರು. ಗೌವರ್ನಮೆಂಟಿನವರು ಈ ಹಣವನ್ನು ತಾವೇ ಕೊಡುವದಾಗಿ ಒಪ್ಪಿಕೊಂಡಿದ್ದರು. ಈಗ ಅದನ್ನು ಸರಿಮಾಡುವದಕ್ಕೆ ೩,೭೯೦ ರೂ. ಆಗುತ್ತೆಂಬದಾಗಿ ಇಂಜನಿಯರ್ ಇಲಾಖೆಯವರು ತಿಳಿಸಿರುತ್ತಾರೆ. ಮೆಂಬರುಗಳು ಅಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯದಲ್ಲಿ ಅಸಂತೃಪ್ತತೆಯನ್ನು ತೋರಪಡಿಸಿ, ಈ ಖರ್ಚನ್ನು ಸರ್ಕಾರದವರೇ ವಹಿಸಿಕೊಳ್ಳತಕ್ಕದ್ದರಿಂದ ಬೋರ್ಡಿನವರಿಗೆ ಅದನ್ನು ತಿಳಿಸಬೇಕಾಗಿಲ್ಲವೆಂಬದಾಗಿ ತಿಳಿಸುವಂತೆ ತೀರ್ಮಾನ ಮಾಡಿದಾರೆ.

ಕೃಷ್ಣರಾವ ಮೊಹಲ್ಲಾ ಸೊಪ್ಪಿನಕೆರೆ ಬೀದಿಯಲ್ಲಿ ಜನರ ಪ್ರಯೋಜನಕ್ಕಾಗಿ ಮ್ಯುನಿಸಿಪಲ್ ಕಮಿಷನರ್ ಮೆ॥ ೨೦. ಸದ ಸುಂದರಸ್ವಾಮಿಯವರು ತಮ್ಮ ತಂದೆಯವರ ಹೆಸರಿನ ಮೇಲೆ ಒಂದು ನೀರಿನ ಕೊಳಾಯಿಯನ್ನು ಕಟ್ಟಿಸುವದಾಗಿ ಗೊತ್ತುಮಾಡಿ, ಇದನ್ನು ಮಾಡಿಸಿಕೊಡಬೇಕೆಂದು ಬೋರ್ಡಿಗೆ ಬರೆದುಕೊಂಡರು. ಮೆಂಬರುಗಳೆಲ್ಲಾ ಇದನ್ನು ಒಪ್ಪಿಕೊಂಡು, ಇದಕ್ಕಾಗಿ ಅವರನ್ನು ವಂದಿಸುತ್ತೇವೆಂತಾ ರಿಕಾರ್ಡು ಮಾಡಿದಾರೆ.

ಮ್ಯುನಿಸಿಪಾಲಿಟಿಗೆ ಕಂಟ್ರಾಕ್ಟರ್ ರಹಿಮತುಲ್ಲಾ ಅಹಮದ್ ಸೇಟರು ಕೀಮೆಯೆಣ್ಣೆಯನ್ನು ಸರಬರಾಯಿ ಮಾಡುವದಾಗಿ ಒಪ್ಪಿಕೊಂಡು, ಕಂಟ್ರಾಕ್ಟಿನಲ್ಲಿ ಕಾಣಿಸಿರುವಂಥಾ ಎಣ್ಣೆಯನ್ನು ಕೊಡದೆ ಬೇರೆ ತರದ ಎಣ್ಣೆ ಕೊಡುತ್ತಿದ್ದಾರೆಂಬಂಶವನ್ನು ವೈಸ್ ಪ್ರೆಸಿಡೆಂಟರು ಬೋರ್ಡಿಗೆ ತಿಳಿಸಿ, ಈಗ ಕೊಡುವ ಎಣ್ಣೆ ಕ್ರಯವನ್ನು ಎರಡು ಆಣೆ ಕಮ್ಮಿ ಮಾಡಿರುತ್ತಾರೆಂದು ಹೇಳಿದರು. ಮೆಂಬರುಗಳು ಈಗ ಕಂಟ್ರಾಕ್ಟರು ಕೊಡುತ್ತಿರುವ ಎಣ್ಣೆಯನ್ನೇ ಅಂಗೀಕರಿಸಬಹುದೆಂದು ಒಪ್ಪಿಕೊಂಡಿದಾರೆ.

ಸೂಪರ್ವೈಜರ್ ಮೆ॥ ಬಾಲಕೃಷ್ಣರಾಯರು ೪—೫ ತಿಂಗಳ ವರೆಗೆ ಮ್ಯುನಿಸಿಪಾಲಿಟಿಯಲ್ಲಿ ಕೆಲಸ ಮಾಡಿದಾರೆಂತಲೂ, ಅದಕ್ಕಾಗಿ ಅವರ ತಲಬು ಅಲೋವೆನ್ಸು ೩ ತಿಂಗಳದು ಅವರಿಗೆ ಮ್ಯುನಿಸಿಪಾಲಿಟಿಯಿಂದ ಪಾವತಿ ಆಗಬೇಕೆಂತಲೂ ಸರ್ಕಾರದವರು ಬರೆದರು. ಮೆಂಬರುಗಳು ತೀರ್ಮಾನಿಸಿರುವದೇನಂದರೆ—ಅವರಿಂದ ೬ ತಿಂಗಳವರೆಗೆ ಕೆಲಸ ತೆಗೆದುಕೊಳ್ಳುತ್ತೇವೆಂದು ಮೊದಲು ಗೊತ್ತು ಮಾಡಿದ್ದೆವು. ಅದೇ ಪ್ರಕಾರ ಆ ೬ ತಿಂಗಳಿಗೆ ಅವರಿಗೆ ಸಲ್ಲಬೇಕಾದ್ದನ್ನು ಕೊಟ್ಟಿದೇವೆ. ಉಳಿದ ತಿಂಗಳುಗಳ ಸಂಬಳ ಮುಂತಾದ್ದನ್ನು ಸರ್ಕಾರದವರೇ ವಹಿಸಿಕೊಂಡು ಅವರಿಗೆ ಪಾವತಿ ಮಾಡಬೇಕು

ದೊಡ್ಡಕೆರೆಯಲ್ಲಿ ಗಾಳಿಯಲ್ಲಿರತಕ್ಕ ದೋಷಗಳನ್ನು ನಿವಾರಣೆ ಮಾಡುವಂಥಾ ಕರ್ಪೂರದ ಗಿಡಗಳನ್ನು ಹಾಕಿಸಿದಾರಷ್ಟೆ. ಇದರ ಪೋಷಣೆಗಾಗಿ ಮ್ಯುನಿಸಿಪಾಲಿಟಿಯವರು ೫ ರೂ. ತಲಬುಳ್ಳ ಒಬ್ಬ ಜವಾನನನ್ನು ನೇಮಿಸಿರುತ್ತಾರೆ. ಆ ಭಾಗವನ್ನು ಹುಲ್ಲುಗಾವಲು ಮಾಡಿ ಹುಲ್ಲು ಕಂಟ್ರಾಕ್ಟು ಕೊಟ್ಟು ಬಿಡುವರು. ಈಗ ಆ ಗಿಡಗಳು ದೊಡ್ಡವಾಗಿರುವದರಿಂದ ಜವಾನನು ಅವಶ್ಯವಿಲ್ಲವೆಂತಲೂ, ಕಂಟ್ರಾಕ್ಟುದಾರನೇ ಅವುಗಳನ್ನು ನೋಡಿಕೊಳ್ಳುವಂತೆ ಮಾಡಬೇಕೆಂತಲೂ ಮೆಂಬರುಗಳು ಒಪ್ಪಿ ತೀರ್ಮಾನಿಸಿದರು.

ಮೆ॥ ಲಕ್ಷ್ಮೀಕಾಂತೇ ಅರಸಿನವರ ಬಂಗಲೆಯಿಂದ ನೀರಿನ ನಲ್ಲಿಗಳನ್ನು ಬಸಾವಣೆ ಮಾಡಿ ಪಡುವಾರಹಳ್ಳಿಗೆ ಹಾಕಿಸುವದು ಸಾಧ್ಯವೇ, ಇದಕ್ಕೆ ಖರ್ಚೆಷ್ಟಾದೀತು ಎಂಬದಾಗಿ ಸರ್ಕಾರದವರು ಕೇಳಿದ್ದರು. ಈ ವಿಷಯವು ಸಾಧ್ಯವೇ ಸರಿ; ಆದರೆ ಅದಕ್ಕೆ ೧,೦೦೦ ರೂಪಾಯಿ ತನಕ ಬೇಕಾಗುವದು. ಮ್ಯುನಿಸಿಪಾಲಿಟಿಯಲ್ಲಿ ಸದ್ಯ ಹಣವಿಲ್ಲದಿರೋಣದರಿಂದ ಮುಂದಿನ ವರುಷದ ರಿಜರ್ವಿಂಗ್ ಟಿಕ್ಕಿನಲ್ಲಿ ಖರ್ಚುಮಾಡಬಹುದೆಂತಾ ಸರ್ಕಾರದವರು ಅಪ್ಪಣೆ ಕೊಡಿಸಿದರೆ ಈ ಕೆಲಸವನ್ನು ಮಾಡಿಸುತ್ತೇವೆ ಎಂಬದಾಗಿ ಬೋರ್ಡಿನವರು ತೀರ್ಮಾನಿಸಿರುತ್ತಾರೆ.

ಮ್ಯುನಿಸಿಪಲ್ ಇಂಜನಿಯರೂ, ಮ್ಯುನಿಸಿಪಲ್ ಓವರ್ಸಿಯರೂ ತುಂಬಾ ಸಾಹಸಪಟ್ಟು ಕೆಲಸಮಾಡತಕ್ಕವರಾದ್ದರಿಂದ ಅವರ ಮೆಹನತ್ತಿಗೆ ತಕ್ಕಂತೆ ಮೊದಲನೆಯವರಿಗೆ ೬೦ ರೂ., ಎರಡನೆಯವರಿಗೆ ೧೦ ರೂ. ಈ ಪ್ರಕಾರ ಸಂಬಳ ಬಡ್ತಿ ಮಾಡಬೇಕೆಂತಾ ಮೊದಲೇ ಬೋರ್ಡಿನವರು ತೀರ್ಮಾನ ಮಾಡಿ, ಗೌವರ್ನಮೆಂಟಿನವರ ಮಂಜೂರಾತಿಗಾಗಿ ಕಳುಹಿಸಿದ್ದರು. ಗೌವರ್ನಮೆಂಟಿನವರು ಅದಕ್ಕೆ ಮ್ಯುನಿಸಿಪಾಲಿಟಿಯ ಹಣದ ಸ್ಥಿತಿಯು ಸಮರ್ಪಕವಾಗಿಲ್ಲವಾದ್ದರಿಂದ ಈ ಬಡ್ತಿಗಳನ್ನು ಸ್ಯಾಂಕ್ಷನ್ ಮಾಡಲಾರೆವು ಎಂಬ ಜವಾಬು ಕೊಟ್ಟರು. ಈ ವಿಷಯವು ಮತ್ತೆ ಬೋರ್ಡಿನಲ್ಲಿ ಚರ್ಚೆಯಾಗಿ ಅವರಿಗೆ ಜನರಲ್ ಸೇವಿಂಗ್ಸ್ ಎಂಬ ಬಾಬಿನಿಂದ ಈ ಬಡ್ತಿಯನ್ನು ಕೊಡಲು ಸ್ಯಾಂಕ್ಷನ್ ಆಗಬೇಕೆಂಬದಾಗಿ ಗೌವರ್ನಮೆಂಟಿಗೆ ತಿಳಿಸುವಂತೆ ತೀರ್ಮಾನಿಸಿರುತ್ತಾರೆ.

ಬೆಂಗಳೂರಿನಲ್ಲಿ ಹ್ಯಾಗೋ ಹಾಗೆ ಮೈಸೂರಿನಲ್ಲೂ ರಾತ್ರಿ ಹೊತ್ತು ಲಾಂದ್ರಿಗಳಲ್ಲಿ ದೀಪ ಹಚ್ಚುವದನ್ನು ಕಂಟ್ರಾಕ್ಟ ಕೊಡುವ ವಿಷಯದಲ್ಲಿ ಬೋರ್ಡಿನವರ ಅಭಿಪ್ರಾಯವೇನೆಂದು ಸರ್ಕಾರದವರು ಕೇಳಿದರು. ಮುಂದಿನ ವರುಷ ಹಾಗೆ ಕಂಟ್ರಾಕ್ಟ ಕೊಟ್ಟು ಅಜಮಾಯಿಸಿ ನೋಡೋಣವೆಂತಾ ಬೋರ್ಡಿನವರು ತೀರ್ಮಾನ ಮಾಡಿದಾರೆ.

ಸಿದ್ದಪ್ಪನೇ ಮೊದಲಾದ ಕೆಲವು ಮಂದಿ ಪ್ರಜೆಗಳು ರಾಜಧಾನಿಯಲ್ಲಿ ಮರಾಟಿ ಗುಜರಾತಿ ಭಾಷೆಗಳನ್ನು ಕಲಿಸುವ ಪಾಠಶಾಲೆಗಳನ್ನು ಇಡಿಸಿಕೊಡಬೇಕೆಂದು ಗೌವರ್ನಮೆಂಟಿಗೆ ಅರ್ಜಿ ಬರೆದುಕೊಂಡರು. ಈ ಅರ್ಜಿಯನ್ನು ಅವರು ಬೋರ್ಡಿನವರು ಇತ್ಯರ್ಥ ಮಾಡಬೇಕೆಂದು ಕಳುಹಿಸಿದರು. ಬೋರ್ಡಿನವರು ಈ ವಿಷಯವನ್ನು ಚರ್ಚಿಸಿ ಅಂಥಾ ಪಾಠಶಾಲೆಗಳನ್ನು ಬೋರ್ಡಿನವರು ಇಡಿಸಬೇಕಾದ ಅಗತ್ಯ ಕಂಡುಬರುವದಿಲ್ಲವೆಂಬದಾಗಿ ತೀರ್ಮಾನಿಸಿರುತ್ತಾರೆ.

ಮೈಸೂರು ರೈಲ್ವೆ ಸ್ಟೇಷನ್ ಬಳಿ ರಸ್ತೆಯ ಉಭಯಪಾರ್ಶ್ವಗಳಲ್ಲೂ ಇರುವ ಖಾಲಿ ನಿವೇಶನಗಳನ್ನು ಕೊಂಡುಕೊಳ್ಳುವದಕ್ಕೆ ಕೊಡಿಸಿಕೊಡಬೇಕೆಂಬದಾಗಿ ಕೆಲವರು ಗೌವರ್ನಮೆಂಟಿಗೆ ಬರೆದುಕೊಂಡರು. ಈ ವಿಷಯದಲ್ಲಿ ಬೋರ್ಡಿನವರು ತೀರ್ಮಾನ ಮಾಡಿರುವದೇನೆಂದು ಸರ್ಕಾರದವರು ಬೋರ್ಡಿನವರನ್ನು ಕೇಳಿದರು. ರೈಲ್ವೆ ಸ್ಟೇಷನ್‌ನಿಂದ ಅರ್ಧ ಮೈಲಿ ಫಾಸಲೆಯೊಳಗೆ ಯಾರೂ ಕಟ್ಟಡವನ್ನು ಕಟ್ಟಕೂಡದೆಂತಾ ನಿಭಂಧನೆ ಮಾಡಿರೋಣದರಿಂದ ಈ ವಿಷಯದಲ್ಲಿ ನಾವು ಹಿಂದೆ ಯಾವ ತೀರ್ಮಾನವನ್ನೂ ಮಾಡಲಿಲ್ಲವೆಂಬದಾಗಿ ಬೋರ್ಡಿನವರು ಒಪ್ಪಿಕೊಂಡರು.

ಪಟ್ಟಣದ ಕಸವಾ ಮುಂತಾದ್ದನ್ನು ಗುಡಿಸುವದಕ್ಕೆ ಮ್ಯುನಿಸಿಪಾಲಿಟಿಯವರು ಹೆಚ್ಚು ಸಿಬ್ಬಂದಿಯನ್ನು ತಂಗಾಮಿಯಾಗಿ ನೇಮಿಸಿಕೊಂಡಿದಾರೆ. ಈ ಸಿಬ್ಬಂದಿಯನ್ನು ಖಾಯಮಾಗಿ ನೇಮಿಸುವದು ಅವಶ್ಯಕೆಂಬದಾಗಿ ಹೆಲ್ತ್ ಆಫೀಸರು ಬರೆದಿದ್ದರು. ಬೋರ್ಡಿನವರು ಈ ವಿಚಾರವನ್ನು ಚರ್ಚೆ ಮಾಡಿ ಆ ಸಿಬ್ಬಂದಿಯನ್ನು ಮುಂದಿನ ಜೂನ್ ಆಖೈರ್ ವರೆಗೆ ಇಟ್ಟುಕೊಂಡಿರಬೇಕೆಂತಲೂ, ತರುವಾಯ ಅವರ ಆವಶ್ಯಕತೆಯ ವಿಷಯದಲ್ಲಿ ಒಂದು ರಿಪೋರ್ಟು ಕಳುಹಿಸಬೇಕೆಂತಲೂ ಹೆಲ್ತ್ ಆಫೀಸರಿಗೆ ತಿಳಿಸುವಂತೆ ಗೊತ್ತುಮಾಡಿದರು.

ಸರ್ಕಾರದವರು ಬಳಗೋಳದಲ್ಲಿ ನೀರು ಎತ್ತುವದಕ್ಕೆ ಹೊಸದಾಗಿ ಯಂತ್ರಗಳನ್ನು ಸೀಮೆಯಿಂದ ತಂದು, ತರಿಸಿಕೊಟ್ಟು ಅದರ ಕ್ರಯವನ್ನು ಮ್ಯುನಿಸಿಪಾಲಿಟಿಯವರು ಕೊಡಬೇಕಾದದ್ದಿಲ್ಲವೆಂದು ತಿಳಿಸಿದಾರೆ. ಬೋರ್ಡಿನವರು ಈ ಹುಕುಮನ್ನು ಬಹು ಸಂತೋಷದಿಂದ ರಿಕಾರ್ಡು ಮಾಡಿಕೊಂಡರು.

ಹತ್ತು ರೂಪಾಯಿ ವರೆಗೆ ತಲಬುಳ್ಳ ಮ್ಯುನಿಸಿಪಲ್ ನೌಕರರು ತಾವು ನೌಕರಿ ಮಾಡುತ್ತಿರುವಾಗ ಪ್ಲೇಗಿನಿಂದ ಸತ್ತರೆ ಅಂಥವರಿಗೆ ಒಂದು ತಿಂಗಳ ಸಂಬಳ ಮುಫತ್ತಾಗಿ ಕೊಡಬೇಕೆಂಬದಾಗಿ ಬೋರ್ಡಿನವರು ಹಿಂದೆಯೇ ಶಿಫಾರಸು ಮಾಡಿದ್ದರು. ಗೌವರ್ನಮೆಂಟಿನವರು ಈ ಶಿಫಾರಸಿನಂತೆ ಸ್ಯಾಂಕ್ಷನ್ ಮಾಡಿರುತ್ತಾರೆ.

ಮೈಸೂರು ಇಂಟಿಜನರ್ ಆಸ್ಪತ್ರೆಯ [illegible] ಸಂಬಳವನ್ನು ಬೋರ್ಡಿನವರ ಶಿಫಾರಸಿನಂತೆ ಸರ್ಕಾರದವರು ೭೫ ರೂಪಾಯಿಗೆ ಬಡ್ತಿ ಮಾಡಿರುವದಾಗಿಯೂ ಈ ಹಣವನ್ನು ಮ್ಯುನಿಸಿಪಲ್ ಬೋರ್ಡಿನವರೂ ಲೋಕಲ್ ಫಂಡ್ ಬೋರ್ಡಿನವರೂ ಸಮಭಾಗ ಪ್ರಕಾರ ಕೊಡಬೇಕೆಂತಲೂ ಹುಕುಂ ಕೊಟ್ಟಿರುವರು. ಇದನ್ನು ರಿಕಾರ್ಡು ಮಾಡಿಕೊಂಡರು.

ದೊಡ್ಡ ಕೆರೆ ಕೆಳಗೆ ಇರುವ ಮ್ಯುನಿಸಿಪಲ್ ತರಕಾರಿ ತೋಟವನ್ನು ವರುಷಕ್ಕೆ ೪೦ ರೂ. ಬರುವಂತೆ ವ್ಯವಸಾಯಕ್ಕೆ ಕೊಟ್ಟಿದಾರೆ. ವ್ಯವಸಾಯಗಾರರು ಅಲ್ಲಿ ೫—೬ ಬಾವಿಗಳನ್ನು ತೆಗೆದಿರುವರು. ಈಗ ಅವರನ್ನು ಬಿಡಿಸುವದಾದರೆ ಆ ಬಾವಿಗಳನ್ನು ತೆಗೆದ ಮಜೂರಿಗಾಗಿ ಅವರಿಗೆ ಮ್ಯುನಿಸಿಪಾಲಿಟಿಯವರು ೧೧೦ ರೂ. ಕೊಡಬೇಕಾಗುತ್ತೆ. ಅವರಿಗೇ ಮತ್ತೆ ೫ ವರುಷಗಳವರೆಗೆ ಸಾಗುವಳಿಗೆ ಕೊಡುವದಾದರೆ ಈ ಹಣವನ್ನು ಅವರು ಕೇಳುವದಿಲ್ಲವೆಂತಲೂ, ವರುಷಕ್ಕೆ ೪೦ ರೂ. ನಂತೆ ಪಾವತಿ ಮಾಡುವದಾಗಿಯೂ ತಿಳಿಸಿದರು. ಬೋರ್ಡಿನವರು ಹಾಗೇ ಆಗಲಿ ಎಂಬದಾಗಿ ಒಪ್ಪಿಕೊಂಡಿರುತ್ತಾರೆ.

ನಾಗಣ್ಣನೆಂಬೊಬ್ಬ ವರ್ತಕನು ಮ್ಯುನಿಸಿಪಾಲಿಟಿಯವರು ಕಂದಾಯ ಹಾಕಿರುವ ಕ್ರಮ ಸರಿಯಾಗಿಲ್ಲವೆಂತಲೂ, ಅದನ್ನು ತಾನು ಕೊಡುವದಿಲ್ಲವೆಂತಲೂ ಮ್ಯುನಿಸಿಪಾಲಿಟಿಯವರ ಮೇಲೆ ದಾವಾ ಮಾಡಿದನು. ಕೋರ್ಟಿನಲ್ಲಿ ಅವನ ಪರವಾಗಿಯೇ ಫೈಸಲಾಯಿತು. ತೆರಿಗೆ ಹಾಕಿದ ಕ್ರಮ ಸರಿಯಾಗಿಲ್ಲವೆಂತಲೂ, ವಾದಿಯ ಖರ್ಚನ್ನು (ಸುಮಾರು ೫೦ ರೂ.) ಮ್ಯುನಿಸಿಪಾಲಿಟಿಯವರು ಕೊಟ್ಟುಬಿಡಬೇಕೆಂತಲೂ ಜಡ್ಜಮೆಂಟು ಆಗಿದೆ. ಬೋರ್ಡಿನವರು ಈ ವಿಷಯವನ್ನು ಕುರಿತು ಯೋಚನೆ ಮಾಡಿದರು. ಮೆ॥ ಶ್ರೀಕಂಠೈಯನವರು ಎದ್ದು—ಕಂದಾಯ ಗೊತ್ತುಮಾಡಿದ ವಿಧಾನವು ಅಕ್ರಮವಾಗಿದ್ದಲ್ಲಿ ಅದಕ್ಕಾಗಿ ಖರ್ಚಾದ ಹಣವನ್ನೆಲ್ಲಾ ಯಾರು ಕೊಡಬೇಕು? ಯಾರ್ಯಾರು ಇದು ಸರಿಯಾಗಿದೆ ಎಂದು ಹೇಳಿ ಹಣ ಖರ್ಚುಮಾಡಿಸಿದರೋ ಅವರಿಂದ ವಸೂಲ್ಮಾಡುವದು ನ್ಯಾಯವಲ್ಲವೇ? ಇಲ್ಲದಿದ್ದರೆ ಮ್ಯುನಿಸಿಪಾಲಿಟಿಗೆ ದುಬಾರಿ ಖರ್ಚು ಬೀಳುವದಲ್ಲಾ ಎಂಬದಾಗಿ ಹೇಳಿದರು. ವೈಸ್ ಪ್ರೆಸಿಡೆಂಟರು—ಹಿಂದೆ ಕಂದಾಯ ಗೊತ್ತುಮಾಡಿದವರು ತಾವು ಮಾಡಿದ ಕಾರ್ಯಗಳೆಲ್ಲಾ ಕಾನೂನಿಗೆ ಅನುಸಾರವಾಗಿಯೇ ಇವೆ ಎಂಬದಾಗಿ ನಂಬಿ ಹಾಗೆ ಮಾಡಿದರು. ವಿರೋಧವಾದದ್ದೆಂದು ತಿಳಿದಿದ್ದರೆ ಅವರು ಆ ಪ್ರಕಾರ ಕಾರ್ಯ ನಡೆಸುತ್ತಲೇ ಇರಲಿಲ್ಲ. ಈ ಖರ್ಚನ್ನು ಮ್ಯುನಿಸಿಪಾಲಿಟಿಯವರೇ ವಹಿಸಿಕೊಳ್ಳಬೇಕು ಎಂಬದಾಗಿ ಸಮಾಧಾನ ಹೇಳಿದರು. ಕಡೆಯಲ್ಲಿ ಈ ವಿಷಯ ತೀರ್ಮಾನವಾದದ್ದು ಹ್ಯಾಗೆಂದರೆ—ಈಗ ವಾದಿಯ ಕೋರ್ಟು ಖರ್ಚನ್ನು ಮ್ಯುನಿಸಿಪಾಲಿಟಿಯಿಂದ ಕೊಡಬೇಕು. ಅಪೀಲ್ ಮಾಡಬೇಕಾದ ಅಗತ್ಯವಿಲ್ಲ. ಕಾನೂನಿಗೆ ಅನುಸಾರವಾಗಿ ಪುನಃ ಕಂದಾಯಗಳನ್ನು ಗೊತ್ತುಮಾಡುವದಕ್ಕೆ ಸ್ಯಾಂಕ್ಷನ್ ಆಗಬೇಕೆಂದು ಗೌವರ್ನಮೆಂಟಿನವರನ್ನು ಕೇಳಿಕೊಳ್ಳಬೇಕು.

ಮೈಸೂರು ಕರ್ನಾಟಕ ಆಸ್ಪತ್ರೆಯ ಗುಂಡಾಪಂಡಿತರು ತಮ್ಮ ತಲಬನ್ನು ೧೫ ರಿಂದ ೪೦ ರೂ. ಗೆ ಬಡ್ತಿ ಮಾಡಿಕೊಡಬೇಕೆಂತಲೂ, ವಿಶ್ವನಾಥ ಶಾಸ್ತ್ರಿಯವರು ತಮ್ಮ ತಲಬನ್ನು ಬಡ್ತಿ ಮಾಡಿಕೊಡಬೇಕೆಂತಲೂ ಅರ್ಜಿ ಬರೆದುಕೊಂಡಿದ್ದರು. ಗುಂಡಾಪಂಡಿತರಿಗೆ ೫ ರೂ. ಇಜಾಫೆ ಕೊಡಬಹುದೆಂಬದಾಗಿಯೂ, ವಿಶ್ವನಾಥ ಶಾಸ್ತ್ರಿಯವರಿಗೆ ಆಗಾಗ್ಯೆ ಬಡ್ತಿ ಕೊಟ್ಟಿರುವದರಿಂದ ಸದ್ಯಕ್ಕೆ ಅವರ ಸಂಬಳ ಜಾಸ್ತಿ ಮಾಡಬೇಕಾಗಿಲ್ಲವೆಂಬದಾಗಿಯೂ ಬೋರ್ಡಿನವರು ತೀರ್ಮಾನ ಮಾಡಿದರು.

ಚಿಟ್ಟಿ ಕ್ಯಾಂಪಿನಲ್ಲಿರುವ ಮ್ಯುನಿಸಿಪಲ್ ಕಟ್ಟಡಗಳನ್ನು ರಿಪೇರಿ ಮಾಡಿದ್ದಕ್ಕೆ ೪೦೦ ಚಿಲ್ಲರೆ ರೂಪಾಯಿಗಳನ್ನು ಕಂಟ್ರಾಕ್ಟರಿಗೆ ಪಾವತಿ ಮಾಡಬಹುದೆಂಬದಾಗಿ ಮೆಂಬರುಗಳು ಒಪ್ಪಿರುತ್ತಾರೆ.

ಪ್ಲೇಗ್ ತಗಲಿದ ಮನೆಗಳನ್ನು ದ್ರಾವಕಗಳಿಂದ ಮೊದಲಿನಂತೆ ಶುದ್ಧಿ ಮಾಡುವದಿಲ್ಲವಾದ್ದರಿಂದ ಅದಕ್ಕಾಗಿ ನೇಮಿಸಿರುವ ಸಿಬ್ಬಂದಿಯನ್ನು ಕಡಿಮೆ ಮಾಡಬೇಕೆಂದು ಮೆ॥ ಶ್ರೀಕಂಠೈಯನವರು ಸೂಚಿಸಿದರು. ಈ ವಿಷಯದಲ್ಲಿ ಹೆಲ್ತ್ ಆಫೀಸರ ಅಭಿಪ್ರಾಯವನ್ನು ಕೇಳಬೇಕೆಂಬದಾಗಿ ಬೋರ್ಡಿನವರು ಗೊತ್ತುಮಾಡಿದರು.

ಪರಕಾಲಸ್ವಾಮಿಯವರ ಮಠದ ಬೀದಿಯಲ್ಲಿರುವ ಶ್ರೀನಿವಾಸ ದೇವರ ಗುಡಿ ಧ್ವಜಸ್ತಂಭಕ್ಕೆ ಎದುರಾಗಿ ಒಂದು ಹೆಬ್ಬಾಗಿಲನ್ನು ಕಟ್ಟಿಸುವದಕ್ಕೆ ಮ್ಯುನಿಸಿಪಾಲಿಟಿಯವರು ೭೯೦ ರೂ. ಕೊಡಬೇಕೆಂಬ ವಿಷಯ ಚರ್ಚೆ ಆಯಿತು. ದೇವಸ್ಥಾನದ ಕೆಲಸವಾದ್ದರಿಂದ ಮುಜರಾಯಿ ಖಾತೆಯಿಂದ ಈ ಹಣ ಕೊಡುವದು ನ್ಯಾಯವಾಗಿದೆ ಎಂತಲೂ, ಇದು ಮ್ಯುನಿಸಿಪಾಲಿಟಿಗೆ ಸಂಬಂಧಪಡುವದಿಲ್ಲವೆಂತಲೂ ಬೋರ್ಡಿನಲ್ಲಿ ತೀರ್ಮಾನವಾಗಿದೆ.

ದೊಡ್ಡ ದನಕರುಗಳ ಬಂದೇ ಖರ್ಚನ್ನು ವಿನಾಃ ಮ್ಯುನಿಸಿಪಾಲಿಟಿಯವರು ಮುತ್ತಪ್ಪೇರಿಗಳಿಗೆ ಪಾವತಿ ಮಾಡುವದಕ್ಕಿಂತಲೂ ಬೆಂಗಳೂರಿನಲ್ಲಿರುವಂತೆ ತಿಂಗಳಿಗೊಂದಾವರ್ತಿ ಕೊಡುವದು ಉತ್ತಮವಲ್ಲವೇ ಎಂಬದಾಗಿ ಪ್ರೆಸಿಡೆಂಟರು ಪ್ರಶ್ನೆ ಮಾಡಿದ್ದರು. ಬೋರ್ಡಿನವರು ಹಾಗೆ ಆಗಲಿ ಎಂದು ತೀರ್ಮಾನ ಮಾಡಿ, ಮಾಲೀಕರಿಂದ ದಂಡವನ್ನೂ ಬಂದೇ ಖರ್ಚನ್ನೂ ವಸೂಲ್ಮಾಡಬೇಕೆಂದು ತಿಳಿಸಿದರು.

[illegible]ಯಲ್ಲಿರುವ [illegible]ರು ತಮ್ಮ ಅಂಗಡಿ ಭಾಗದ ಖಾಲಿ ನಿವೇಶನವನ್ನು ಕೊಡಬೇಕೆಂಬದಾಗಿ ಅರ್ಜಿ ಬರೆದುಕೊಂಡಿದ್ದರು. ಅದನ್ನು ಕೆಲವು ಮೆಂಬರುಗಳು ಅವರಿಗೇ ಕೊಡಬಹುದೆಂತಲೂ, ಕೆಲವರು ಕೊಡಕೂಡದೆಂತಲೂ ಅಭಿಪ್ರಾಯ ಪಟ್ಟದ್ದರಿಂದ ನಿವೇಶನವನ್ನು ನೋಡಿ ಈ ವಿಷಯ ತೀರ್ಮಾನ ಮಾಡಬೇಕೆಂದು ತೆಗೆದಿಟ್ಟರು.

ರಾಜಧಾನಿಯ ಪಶ್ಚಿಮ ಬಡಾವಣೆಯಲ್ಲಿ [illegible]ರು ಮನೆಗಳನ್ನು ಕಟ್ಟಿಕೊಂಡಿರಷ್ಟೆ. ಅವರಿಗೆ ಪ್ಲೇಗ್ ಫಂಡಿನಿಂದ ಸ್ವಲ್ಪ ಸ್ವಲ್ಪ ಸಹಾಯ ದ್ರವ್ಯವನ್ನು ಸಾಲ ಕೊಟ್ಟು ಪತ್ರ ಬರೆಸಿಕೊಂಡು, ತಿಂಗಳು ತಿಂಗಳಿಗೆ ಕಂತಿನ ಪ್ರಕಾರ ವಸೂಲ್ಮಾಡಿಕೊಳ್ಳುತ್ತಿದ್ದರು. ಇದುವರೆಗೆ ಅವರು ಅರೆವಾಸಿ ಹಣವನ್ನು ಪಾವತಿ ಮಾಡಿರುತ್ತಾರೆ. ಈಗ ಶ್ರೀಮನ್ಮಹಾರಾಜರವರಿಗೆ ಪಟ್ಟಾಭಿಷೇಕವಾದದ್ದರ ಜ್ಞಾಪಕಾರ್ಥವಾಗಿ ಬಾಕಿ ಉಳಿದಿರುವ ಹಣವನ್ನು ಮಾಫಿ ಬಿಡಬೇಕೆಂಬದಾಗಿ ಅವರೆಲ್ಲಾ ಗೌವರ್ನಮೆಂಟಿಗೆ ಅರ್ಜಿ ಬರೆದುಕೊಂಡಿದ್ದರು. ಸರ್ಕಾರದವರು ಆ ಅರ್ಜಿಯನ್ನು ಮ್ಯುನಿಸಿಪಾಲಿಟಿಗೆ ಕಳುಹಿಸಿ, ಅವರ ಅಭಿಪ್ರಾಯವೇನೆಂದು ಕೇಳಿದರು. ಬೋರ್ಡಿನವರೆಲ್ಲಾ ಈ ಅಲ್ಪ ಹಣವನ್ನು ಅವರಿಗೆ ಮಾಫಿ ಬಿಡುವದೇ ಒಳ್ಳೇದೆಂಬದಾಗಿ ಶಿಫಾರಸು ಮಾಡಿರುತ್ತಾರೆ.

ಪಾರ್ಸಿ ಜನರು ತಮ್ಮ ಜನರ ಶವಗಳನ್ನು ದಫನ್ ಮಾಡುವದಕ್ಕೆ ಬಿಟ್ಟದ ಕಿಬ್ಬಿಯಲ್ಲಿ ಈಗ ಇರುವ ಸ್ಥಳ ಸಾಕಾಗುವದಿಲ್ಲವೆಂತಲೂ, ಬಾಜೂದಲ್ಲಿರುವ ಸ್ವಲ್ಪ ಸ್ಥಳವನ್ನೂ ಕೊಡಿಸಿಕೊಡಬೇಕೆಂತಲೂ ಅರ್ಜಿ ಬರೆದುಕೊಂಡಿದ್ದರು. ಬೋರ್ಡಿನವರು ಸ್ಥಳವನ್ನು ಹೋಗಿ ನೋಡಿ ಬಂದು ಇತ್ಯರ್ಥ ಮಾಡೋಣವೆಂದು ತೆಗೆದಿಟ್ಟಿರುತ್ತಾರೆ.

ತಿಮ್ಮಯ್ಯನವರ ಸತ್ರ ಮೊದಲಾದ ಧರ್ಮಕಾರ್ಯಗಳಿಗೆ ಲೋಪ ಬಾರದಂತೆ ಅವುಗಳನ್ನೆಲ್ಲಾ ಮ್ಯುನಿಸಿಪಾಲಿಟಿಯವರು ವಹಿಸಿಕೊಂಡು ನಡಿಸಬೇಕೆಂಬದಾಗಿ ಮುದ್ದಯ್ಯನವರು ಅರ್ಜಿ ಬರೆದಿದ್ದರು. ಬೋರ್ಡಿನವರು ತಾವೇ ಇದನ್ನೆಲ್ಲಾ ವಹಿಸಿಕೊಳ್ಳುವದು ಅವಶ್ಯವೆಂದು ತೀರ್ಮಾನ ಮಾಡಿರುತ್ತಾರೆ.

ಕನ್ನಡ ಇಂಗ್ಲೀಷ್ ಭಾಷೆಗಳೆರಡನ್ನೂ ಹೇಳಿಕೊಡುವ ರಾಜಧಾನಿಯ ಪಾಠಶಾಲೆಗಳ ಮತ್ತು ಸ್ಕೂಲುಗಳ ವಿಷಯದಲ್ಲಿ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರು ಒಂದು ಕಾಗದವನ್ನು ಬರೆದು, ೩ ನೆ ತರಗತಿಗೆ ಬರುವ ವರೆಗೆ ವಿದ್ಯಾರ್ಥಿಗಳಿಗೆ ಇಂಗ್ಲೀಷನ್ನು ಹೇಳಿಕೊಡಕೂಡದೆಂದು ತಿಳಿಸಿದ್ದರು. ಮ್ಯುನಿಸಿಪಲ್ ಸ್ಕೂಲ್ ಕಮಿಟಿ ಮೆಂಬರುಗಳು ಈ ವಿಷಯವನ್ನು ಚರ್ಚಿಸಿ ಕೆಲವು ಆಕ್ಷೇಪಣೆಗಳನ್ನು ಮಾಡಿ ಒಂದು ರಿಪೋರ್ಟು ಬರೆದು ಬೋರ್ಡಿಗೆ ಕಳುಹಿಸಿದರು. ಈ ರಿಪೋರ್ಟಿನ ವಿಚಾರದಲ್ಲಿ ಮೆಂಬರುಗಳು ಚರ್ಚೆ ಮಾಡಿ, ಅದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ, ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಕಳುಹಿಸುವಂತೆ ತೀರ್ಮಾನ ಮಾಡಿರುತ್ತಾರೆ.

## ಇಂಡಿಯಾ ದೇಶದ ವೃತ್ತಾಂತಗಳು.

ಸೋಮಾಲಿಲ್ಯಾಂಡಿನ ಯುದ್ಧ ಕಾರ್ಯಕ್ಕೆ ಇದುವರೆಗೆ ಹಿಂದೂಸ್ಥಾನ ಸರ್ಕಾರದವರಿಗೆ ೧,೫೬,೦೦೦ ಪೌಂಡು ಖರ್ಚಾಗಿರುವದು.

◆◆◆◆

ಉತ್ತರ ದೇಶದಲ್ಲಿ ಇನ್ನೂ ೫೮,೦೦೦ ಜನರು ಕ್ಷಾಮಪೀಡಿತರಾಗಿ ಸರ್ಕಾರದವರ ರಿಲೀಫ್ ಕಾಮಗಾರಿಗಳಲ್ಲಿ ಸೇರಿಕೊಂಡು ಜೀವನಮಾಡುತ್ತಿದ್ದಾರೆ.

◆◆◆◆

ರೇವಾ ಸಂಸ್ಥಾನದ ಜಂಗಲುಗಳಲ್ಲಿ ಹಿಂದಿನವಾರ ವೈಸರಾಯಿಯವರು ೫— ಹುಲಿಗಳನ್ನು ಶಿಕಾರಿ ಮಾಡಿಕೊಂಡು, ಕಳೆದವಾರ ಸಿಮ್ಲಾ ಪಟ್ಟಣವನ್ನು ಹೋಗಿ ಸೇರಿಕೊಂಡರು.

◆◆◆◆

ಅಸ್ಸಾಮಿಗೆ ಸೇರಿದ ಗೌಹಟ್ಟಿಯಲ್ಲಿ ಬೆಂಕಿ ಬಿದ್ದು ಅಂಗಡಿಬೀದಿಯೆಲ್ಲಾ ಸುಟ್ಟುಹೋಯಿತು. ಇದರಿಂದ ವರ್ತಕರಿಗೆ (ಮಾರ್ವಾಡಿಗಳಿಗೇ ಹೆಚ್ಚು) ೬ ಲಕ್ಷ ರೂಪಾಯಿ ನಷ್ಟವಾಯಿತು.

◆◆◆◆

ರಂಗೂನ್ ಪಟ್ಟಣದಲ್ಲಿ ಒಬ್ಬ ಬರ್ಮೀಸನು ಇಟ್ಟು ನಡಸುತ್ತಿದ್ದ ಅಕ್ಕಿ ಕುಟ್ಟುವ ಗಿರಣೀ ಕಾರ್ಖಾನೆಗೆ ಬೆಂಕಿ ಬಿದ್ದು ಎಲ್ಲಾ ಸುಟ್ಟುಹೋಯಿತು. ಮಾಲೀಕನಿಗೆ ೧,೯೦,೦೦೦ ರೂ. ನಷ್ಟವಾಗಿದೆ.

◆◆◆◆

ದೆಹಲಿ ನಗರದಲ್ಲಿ ಜನರಲ್ ನಿಕಾಲ್ಸನ್ ರವರ ಪ್ರತಿಮೆಯನ್ನು ಸ್ಥಾಪಿಸುವದಕ್ಕೆ ಕಟ್ಟಿಸಬೇಕಾಗಿದೆಯಷ್ಟೆ. ಗವರ್ನಮೆಂಟಿನವರು ಕೆಲವು ಹಳೇ ಫಿರಂಗಿಗಳನ್ನು ಮುಫತ್ತಾಗಿ ಕೊಡುವವರಾಗಿದ್ದಾರೆ.

◆◆◆◆

ಲಕ್ನೋ ನಗರದ ಚಾರ್‌ಬಾಗ್ ಎಂಬ ಸ್ಥಳದಲ್ಲಿ ಪ್ಲೇಗ್ ಸೆಗ್ರಿಗೇಷನ್ ಕ್ಯಾಂಪಿಗೆ ಬೆಂಕಿ ಬಿದ್ದು ಎಲ್ಲಾ ಉರಿದುಹೋಯಿತು. ಒಬ್ಬ ಕಾಯಿಲೆಯವನೂ, ಒಬ್ಬ ಪ್ರೀತಿಪಾತ್ರನೂ ಉರಿಯಲ್ಲಿ ಸಿಕ್ಕಿ ಸುಟ್ಟುಹೋದರು.

◆◆◆◆

ಲಾಹೋರ್ ಪಟ್ಟಣದ ಮ್ಯುನಿಸಿಪಾಲಿಟಿಯ ಲೆಕ್ಕಪತ್ರಗಳ ವಿಚಾರ ನೆಟ್ಟಗಾಗಿಲ್ಲ. ಸರ್ಕಾರದವರು ತನಿಖೆಮಾಡಿದರು. ಮ್ಯುನಿಸಿಪಲ್ ಸೆಕ್ರೆಟರಿಯವರು ರಾಜೀನಾಮೆ ಕೊಟ್ಟರು. ಬಹುಶಃ ಅವರನ್ನು ಕೆಲಸದಿಂದ ಬರತರಫ್ ಆಗಿದೆ.

◆◆◆◆

ನೀಲಗಿರಿ ಬೆಟ್ಟದ ಮೇಲಿನ ರಸ್ತೆಗಳನ್ನು ಚೆನ್ನಾಗಿ ರಿಪೇರಿ ಮಾಡುವದಕ್ಕೆ ಇದುವರೆಗೆ ಮದರಾಸ್ ಸರ್ಕಾರದವರು ವರುಷಕ್ಕೆ ೬೦೦ ರೂ. ಕೊಡುತ್ತಿದ್ದರು. ಈ ವರುಷ ೧೦ ಸಾವಿರ ರೂಪಾಯಿ ಕೊಡುವದಾಗಿ ಸ್ಯಾಂಕ್ಷನ್ ಮಾಡಿದಾರೆ.

◆◆◆◆

ಬರೋಡ ಸಂಸ್ಥಾನದಲ್ಲಿ ಮೊದಲು ಚೀಫ್ ಜಡ್ಜರಾಗಿದ್ದು ಈಗ ರುಟ್ಲಾಂ ಸಂಸ್ಥಾನದಲ್ಲಿ ದಿವಾನಗಿರಿ ನೋಡುತ್ತಿದ್ದ ಖಾನ್ ಬಹದೂರ್ ಕರ್ಸೆಟ್‌ಜಿ ರುಸ್ತುಂಜಿ ಮೋದಿ ಎಂಬುವರು ಕಳೆದ ಭಾನುವಾರ ಬೊಂಬಾಯಿನಲ್ಲಿ ಕಾಲವಾದರು.

◆◆◆◆

ಕಲ್ಕತ್ತೆಯಲ್ಲಿ ಪ್ಲೇಗ್ ಉಪದ್ರವದ ದೆಸೆಯಿಂದ ಈಗಲೂ ದಿನ ೧೯೦—೨೦೦ ಜನರಂತೆ ಸತ್ತುಹೋಗುತ್ತಿದ್ದಾರೆ. ಪ್ಲೇಗ್ ಅಡಚಣೆಯ ನಿವಾರಣೆಗಾಗಿ ವಿಧಿಸಲಾಗಿರುವ ಇಲಾಖೆಯನ್ನು ಮ್ಯುನಿಸಿಪಾಲಿಟಿಯವರು ಈಗಲೇ ತೆಗೆಯಕೂಡದೆಂಬದಾಗಿ ತೀರ್ಮಾನಮಾಡಿದೆ.

◆◆◆◆

ಇಂಗ್ಲಿಷರಿಗೆ ಶರಣಾಗತರಾದೆವೆಂದು ಒಪ್ಪಿ ರಮಜಾನ ಕಡೆಯಿರುವ ಬೋಯರ್ ಖೈದಿಗಳು ಇನ್ನೂ ೧೦ ಮಂದಿ ಅಹಮದ್‌ನಗರದಲ್ಲಿ ಇರುತ್ತಾರೆ. ಇವರಿಗೆ ತಮ್ಮ ಸ್ವದೇಶಕ್ಕೆ ಹೋಗುವದಕ್ಕಿಂತಲೂ ಇಲ್ಲಿದ್ದುಕೊಂಡು ಸ್ವಂತ ಜೀವನ ನಡಸಿಕೊಂಡು ಹೋಗುವದೇ ತೃಪ್ತಿಕರವಾಗಿರುವಂತೆ ಕಾಣುವದು.

◆◆◆◆

ಸಿಲೋನ್ ದ್ವೀಪದ ಗವರ್ನರವರು ಸಮುದ್ರದಲ್ಲಿ ಮುತ್ತಿನ ಚಿಪ್ಪುಗಳನ್ನು ತೆಗೆಯುವದನ್ನು ಕಂಟ್ರಾಕ್ಟು ಕೊಟ್ಟುಬಿಟ್ಟರು. ಅವರು ಸುಮಾರು ೩೦ ದಿನ ಕೆಲಸಮಾಡಿ ಮುತ್ತಿನ ಚಿಪ್ಪುಗಳನ್ನು ಗೆದ್ದದ್ದರಲ್ಲಿ ಸರ್ಕಾರಕ್ಕೆ ಎಂಭತ್ತೆಂಟು ಲಕ್ಷ ರೂಪಾಯಿ ಉತ್ಪನ್ನ ಆಗಿದೆ. ಸದ್ಯಕ್ಕೆ ಆ ಕೆಲಸ ನಿಂತುಹೋಯಿತು.

◆◆◆◆

ಸಿಲೋನ್ ದ್ವೀಪಕ್ಕೆ ಸೇರಿದ ರತ್ನಾಪುರದಲ್ಲಿ ಒಬ್ಬನಿಗೆ ಒಂದು ಗೋಮೇಧಿಕವು ಸಿಕ್ಕಿತು. ಅದು ೫ ರೂಪಾಯಿ ತೂಕವಿದೆ. ಅದು ಸಿಕ್ಕಿದ ೨ನೇ ದಿನ ಅಬ್ದುಲ್ ಲತೀಫ್ ಎಂಬ ಭಾರೀ ವರ್ತಕನು ಅದಕ್ಕೆ ೬,೦೦೦ ರೂ. ಕೊಟ್ಟು ತೆಗೆದುಕೊಂಡನು. ಈಗ ಆ ಗೋಮೇಧಿಕವು ೩೦ ಸಹಸ್ರ ರೂಪಾಯಿ ಬಾಳುತ್ತದೆ.

◆◆◆◆

ನಾಯಿನರಿ ಮುಂತಾದ ಪ್ರಾಣಿಗಳಿಂದ ಕಚ್ಚಿಸಿಕೊಂಡ ರೋಗಿಗಳು ಈಚೆಗೆ ಮದರಾಸ್ ಆಧಿಪತ್ಯದಿಂದಲೂ ಉತ್ತರ ದೇಶದಲ್ಲಿರುವ ಕಸೌಲಿ ಆಸ್ಪತ್ರೆಗೆ ಚಿಕಿತ್ಸೆಮಾಡಿಸಿಕೊಳ್ಳುವದಕ್ಕೆ ಹೋಗುವದು ಹೆಚ್ಚುತ್ತಾ ಬಂದಿರುವದನ್ನು ನೋಡಿ ಮದರಾಸ್ ಸರ್ಕಾರದವರು ಆ ಆಸ್ಪತ್ರೆಗೆ ೭,೦೦೦ ರೂ. ಕೊಡುವಂತೆ ಸ್ಯಾಂಕ್ಷನ್ ಮಾಡಿದಾರೆ.

◆◆◆◆

ಭಾವನಗರದಲ್ಲಿ ಬೆಂಕಿಬಿದ್ದು ಅಂಗಡಿಬೀದಿಯೂ ದರ್ಬಾರ್‌ಖಾನೆಯೂ ಸುಟ್ಟುಹೋದವಷ್ಟೆ. ಸರ್ಕಾರದವರು ಅದಕ್ಕಾಗಿ ೭ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿ, ಆ ಪೈಕಿ ೪ ಲಕ್ಷದಲ್ಲಿ ಹೊಸ ದರ್ಬಾರ್‌ಖಾನೆಯನ್ನು ಕಟ್ಟಿಸಬೇಕೆಂತಲೂ, ೩ ಲಕ್ಷವನ್ನು ನಷ್ಟಪಟ್ಟ ವರ್ತಕರಿಗೆ ಹಂಚಿಕೊಡಬೇಕೆಂತಲೂ ಹುಕುಂ ಮಾಡಿದಾರೆ.

◆◆◆◆

ಬರ್ಮಾ ಪ್ರಾಂತ್ಯಕ್ಕೆ ಸೇರಿದ ಕಾಥಾ ಎಂಬ ಊರಿನಲ್ಲಿ ಬೆಂಕಿಬಿದ್ದು ಕಾಲುಪಾಲು ಪಟ್ಟಣವೇ ಸುಟ್ಟುಹೋಯಿತು. ಆ ಭಾಗದಲ್ಲಿ ಒಂದು ಮಸೀದಿಯೂ, ಟೆಲಿಗ್ರಾಫ್ ಆಫೀಸ್ ಕಟ್ಟಡವೂ ಉಳಿದುಕೊಂಡವು. ನೂರಾರು ಸಂಸಾರಗಳು ನಿಲ್ಲುವದಕ್ಕೆ ನೆರಳಿಲ್ಲದೆ ಅಲೆಯುವಹಾಗಾಯಿತು. ಸುಮಾರು ೩—೬ ಲಕ್ಷ ರೂಪಾಯಿ ಮಾಲು ನಷ್ಟವಾಗಿರಬೇಕು.

◆◆◆◆

ಕಲ್ಕತ್ತಾ ಪಟ್ಟಣದ ಮ್ಯುನಿಸಿಪಾಲಿಟಿಯವರು ೧೫ ಲಕ್ಷ ರೂಪಾಯಿ ಸಾಲ ಬೇಕೆಂದು ಕಳೆದವಾರ ಅಲ್ಲಿನ ವರ್ತಕ ಮಂಡಲಿಯವರಿಗೆಲ್ಲಾ ಇಸ್ತಿಹಾರು ಕೊಟ್ಟು ತಿಳಿಸಿದರು. ಸಾಹುಕಾರರು ಆ ದಕ್ಷಿಣೆಂತಲೂ ಪತ್ರ ಇಟ್ಟರೂ ಕೊಡುತ್ತೇವೆಂದು ದರಖಾಸ್ತು ಕೊಟ್ಟರು. ಮ್ಯುನಿಸಿಪಾಲಿಟಿಯವರು ತಮಗೆ ಬೇಕಾದಷ್ಟು ದರಖಾಸ್ತುಗಳನ್ನು ಅಂಗೀಕರಿಸಿ ಉಳಿದವುಗಳನ್ನು ನಿರಾಕರಿಸಿರುತ್ತಾರೆ.

◆◆◆◆

ದೆಹಲಿ ದರ್ಬಾರ್‌ನಲ್ಲಿ ಹಿಂದುಸ್ಥಾನದ ಕುಶಲ ವಿದ್ಯೆಗಳ ಪ್ರದರ್ಶನವೊಂದು ನಡೆಯಿತಷ್ಟೆ. ಆ ಪ್ರದರ್ಶನಶಾಲೆಯೊಳಗೆ ಸಂದರ್ಶಕರಿಗೆ ಉಳಿಸಿದ್ದ ಸಾಮಾನುಗಳನ್ನೆಲ್ಲಾ ಕಳೆದ ವಾರ ಒಟ್ಟಾಗಿ ಹರಾಜು ಹಾಕಿದರು. ಕಪ್ಪಾದ ಲಡ ಮುಸಾಫರಖಾನೆಯವರು ಅವುಗಳನ್ನೆಲ್ಲಾ ಎಪ್ಪತ್ತು ಸಹಸ್ರ ರೂಪಾಯಿಗೆ ಕೊಂಡುಕೊಂಡರು. ಅವುಗಳನ್ನು ಬೆಲೆಯಿಂದಾಗಿ ಬಿಕರಿಮಾಡಿದ್ದರೆ ೫೦ ಸಾವಿರ ರೂಪಾಯಿ ಉತ್ಪತ್ತಿ ಆಗುತ್ತಿತ್ತು.

◆◆◆◆

ಕಳೆದ ೧೯೦೨ನೇ ಇಸವಿಯಲ್ಲಿ ಪೂನ ಡಿಸ್ಟ್ರಿಕ್ಟಿನಲ್ಲಿ ಪ್ಲೇಗ್ ಉಪದ್ರವು ಬಹಳ ಜೋರಾಗಿದ್ದು ಅನೇಕರನ್ನು ಕೊಂದುಬಿಟ್ಟಿತು. ಗ್ರಾಮಾಂತರಗಳ ಆರೋಗ್ಯ ವಿಚಾರವು ತುಂಬಾ ಶೋಚನೀಯವಾಗಿದೆ. ಪ್ರತಿ ಒಂದು ಗ್ರಾಮವನ್ನೂ ಆರೋಗ್ಯಕರ ಸ್ಥಳ ಪ್ರದೇಶಗಳಲ್ಲಿ ಕಟ್ಟಿ, ಜನರಿಗೆ ಆರೋಗ್ಯ ವಿಚಾರವನ್ನು ಕಲಿಸಬೇಕಾದ್ದು ಗವರ್ನಮೆಂಟಿನವರ ಮೇಲೆ ಬಿದ್ದ ಭಾರವಾಗಿದೆ ಎಂಬದಾಗಿ ಡಾಕ್ಟರ್ ಸೇನ್ ರವರು ರಿಪೋರ್ಟು ಬರೆದಿದಾರೆ.

◆◆◆◆

ಈ ಸಲ ಪಂಢರಪುರದಲ್ಲಿ ನಡೆದ ಕಾರ್ತಿಕಮೇಳಾ ಎಂಬ ಉತ್ಸವದ ದಿನ ಎರಡು ಲಕ್ಷ ಪ್ರಜೆಗಳು ಸೇರಿದ್ದರು. ಅಲ್ಲಿನ ಆರೋಗ್ಯ ವಿಚಾರವನ್ನು ನೋಡಿಕೊಳ್ಳುವದಕ್ಕೆ ಪ್ರತಿ ಒಬ್ಬ ಯಾತ್ರಿಕನಿಂದಲೂ ಒಂದಾಣೆಯಂತೆ ಸರ್ಕಾರದವರು ವಸೂಲ್ಮಾಡಿದರು. ಇಷ್ಟು ದೊಡ್ಡ ಜನರಿಗೆ ಟಿಕೆಟ್ ಕೊಟ್ಟು ರೈಲಿನ ಮೇಲೆ ಸಾಗಿಸುವದಕ್ಕೆ ರೈಲ್ವೆ ಕಂಪನಿಯವರು ಟಿಕೆಟು ೧ಕ್ಕೆ ಒಂದು ಆಣೆಯಂತೆ ಹೆಚ್ಚು ಚಾರ್ಜ್ ವಸೂಲ್ಮಾಡಿದರು. ಪ್ರಜೆಗಳ ನೆಮ್ಮದಿಗಾಗಲಿ ಅವರ ಆರೋಗ್ಯಕ್ಕಾಗಲಿ ಈ ಸಲ ಸ್ವಲ್ಪವೂ ಕುಂದಕವಿಲ್ಲದಂತೆ ಉತ್ತಮವಾದ ಏರ್ಪಾಡು ಇಟ್ಟು ನೋಡಿಕೊಂಡರು.

◆◆◆◆

ಕಳೆದವಾರ ಬೊಂಬಾಯಿ ಪಟ್ಟಣದ ಭುಲೇಶ್ವರವೆಂಬ ಭಾಗದಲ್ಲಿರುವ ಲಾಲ್‌ಬಾಗ್‌ನಲ್ಲಿ ಜೈನಮತಸ್ಥರ ಮುಖಂಡರೆಲ್ಲಾ ಒಂದು ದೊಡ್ಡ ಸಭೆ ಸೇರಿದ್ದರು. ಪಾಲಿಟಾನಾ ರಾಜರ ಕಡೆಯ ಪೋಲೀಸಿನವರು ಮೋಜಣಿಕಾಲಿನಲ್ಲಿ ಆದೇಶ್ವರ ದೇವಸ್ಥಾನದೊಳಕ್ಕೆ ನುಗ್ಗಿ ಒಳಗೆ ಬೂಟ್ಸು ಮುಂತಾದ್ದು ಸಹ ಅನುಚಿತವಾಗಿ ಇಟ್ಟರೆಂತಲೂ, ಇವರಿಂದ ಆದೇಶ್ವರ ದೇವಸ್ಥಾನವನ್ನು ಶುದ್ಧಿಮಾಡಿಸಬೇಕೆಂತಲೂ ಚರ್ಚೆ ಮಾಡಿದರು. ಶ್ರೀ ಮೋತಿಲಾಲ್ ಜೀವನ್‌ರಾಜ್ ಯವರು ಸಭಾನಾಯಕರಾಗಿದ್ದರು. ಕಾಠಿಯವಾಡದ ಪೊಲಿಟಿಕಲ್ ಏಜೆಂಟರಿಗೆ ಒಂದು ಅರ್ಜಿ ಬರೆಯಬೇಕೆಂದು ಆ ದಿನ ನಿಶ್ಚಯ ಮಾಡಿರುತ್ತಾರೆ.

◆◆◆◆

ಹಿಂದುಸ್ಥಾನದ ಪೋಸ್ಟಾಫೀಸಿನವರು ಅರ್ಧಾಣೆ ಸ್ಟಾಂಪಿಗೆ ಅರ್ಧತೊಲಾ ತೂಕದ ಕಾಗದಗಳನ್ನು ಊರಿಂದೂರಿಗೆ ಕಳುಹಿಸಿ ವಿಳಾಸದಾರರಿಗೆ ಬಟವಡೆಮಾಡಿಸುತ್ತಿದ್ದಾರಷ್ಟೆ. ಈಗ ಬೊಂಬಾಯಿ ಆಧಿಪತ್ಯದ ಕೆಲವು ಮಂದಿ ದೊಡ್ಡ ಮನುಷ್ಯರು ಈ ವಿಷಯವನ್ನು ಚರ್ಚಿಸಿ ಇನ್ನುಮೇಲೆ ಪೋಸ್ಟ ಆಫೀಸಿನವರು ಅರ್ಧಾಣೆಗೆ ಒಂದು ತೊಲೆ ತೂಕವಿರುವಷ್ಟು ಕಾಗದವನ್ನು ಅಂಗೀಕರಿಸುವಂತೆ ಒಪ್ಪಬೇಕು ಎಂತಲೂ, ಇದರಿಂದ ಅನೇಕ ಪ್ರಜೆಗಳಿಗೂ ವ್ಯಾಪಾರಾಭಿವೃದ್ಧಿಗೂ ತುಂಬಾ ಸಹಾಯವಾಗುವದೆಂತಲೂ, ಗವರ್ನಮೆಂಟಿನವರು ಈ ವಿಷಯವನ್ನು ಚನ್ನಾಗಿ ಪರ್ಯಾಲೋಚಿಸಬೇಕೆಂತಲೂ ತಿಳಿಸಿರುತ್ತಾರೆ.

◆◆◆◆

ತಿನ್ನವೆಲ್ಲಿ ಡಿಸ್ಟ್ರಿಕ್ಟಿಗೆ ಸೇರಿದ ಆಚಚನ್ನಲೂರಿನಲ್ಲಿ ಪೂರ್ವಕಾಲದ ಕಟ್ಟಡಗಳಿರುತ್ತವೆ. ಸರ್ಕಾರದವರು ಅದನ್ನೆಲ್ಲಾ ಪರಿಶೋಧನೆ ಮಾಡುತ್ತಿದ್ದಾರೆ. ಭೂಮಿಯೊಳಗೆ ಚಿನ್ನ, ಕಂಚು, ಕಬ್ಬಿಣ, ಜೇಡಿಮಣ್ಣು ಮೊದಲಾದವುಗಳಲ್ಲಿ ಮಾಡಿದ ಅನೇಕ ಚಿತ್ರ ವಸ್ತುಗಳು ದೊರಕಿದವು. ಸುಮಾರು ೩,೦೦೦ ಪದಾರ್ಥಗಳನ್ನು ಅಲ್ಲಿಂದ ಮದರಾಸ್ ಪಟ್ಟಣದ ಪ್ರದರ್ಶನಶಾಲೆಯಲ್ಲಿಡುವದಕ್ಕೆ ಕಳುಹಿಸಿದಾರೆ. ಮನುಷ್ಯರ ತಲೆ ಬುರುಡೆಗಳೂ ಭಿನ್ನವಾಗದೇ ಸಿಕ್ಕಿರುತ್ತವೆ. ಇವುಗಳನ್ನು ಅಭ್ಯಾಸಮಾಡಿ ನೋಡಿದರೆ ಆ ಜನರು ಯಾವಕಾಲದಲ್ಲಿದ್ದವರೋ ಅವರ ನಾಗರಿಕ ಚರಿತ್ರೆ ಮುಂತಾದ್ದು ಎಂಥಾದ್ದೋ ಗೊತ್ತಾಗುವದು.

◆◆◆◆

ಕಲ್ಕತ್ತೆಯ ಹತ್ತಿರ ಬರ್ದ್ವಾನ್ ಡಿಸ್ಟ್ರಿಕ್ಟಿಗೆ ಸೇರಿದ ಹಾರೋವಾ ಎಂಬೊಂದು ದೊಡ್ಡ ಊರಿನಲ್ಲಿ ಒಬ್ಬ ಜಮೀನ್ದಾರನು ಲೇವಾದೇವಿ ಮಾಡುತ್ತಿದ್ದನು. ಕಳೆದ ವಾರ ೭೦ ಮಂದಿ ಕಳ್ಳರು ಆಯುಧಪಾಣಿಗಳಾಗಿ ಪಂಜು ಹಿಡಿದು ನುಗ್ಗಿ ಮನೆ ಬಾಗಿಲನ್ನು ಒಡೆದು ಕಳುವುಮಾಡುವದಕ್ಕಾರಂಭಿಸಿದರು. ಮನೆಯವರು ಎದ್ದು ಅರಚಿಕೊಂಡಾಗ ಸುತ್ತಮುತ್ತಲಿನ ಜನರು ಕೆಲವರು ಬಂದರು. ಕಳ್ಳರಿಗೂ ಅವರಿಗೂ ಘೋರ ಮಾರಾಮಾರಿ ನಡೆದು ಕೆಲವರಿಗೆ ಪ್ರಾಣಾಪಾಯ ಬಿದ್ದಿದೆ. ಕಡೆಗೆ ಕಳ್ಳರು ಸುಮಾರು ೧೭—೧೩ ಸಾವಿರ ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿಕೊಂಡೇ ಹೋದರು. ಪೋಲೀಸಿನವರು ತನಿಖೆಮಾಡುತ್ತಿದ್ದಾರೆ. ಆದರೆ ಕಳ್ಳರ ಪೈಕಿ ಒಬ್ಬನಾದರೂ ಸಿಕ್ಕಲಿಲ್ಲ.

◆◆◆◆

ಪ್ಲೇಗ್ ಉಪದ್ರವು ಹಿಂದುಸ್ಥಾನವನ್ನು ಬಿಟ್ಟು ತೊಲಗುವಂತೆ ಕಾಣುವದಿಲ್ಲ. ಆಶ್ಚರ್ಯಕರವಾಗಿ ಹೋದವಾರ ಸತ್ತವರ ಸಂಖ್ಯೆಯು ಬಹಳ ಹೆಚ್ಚಾಗಿದೆ. ೧೯ನೇ ತಾರೀಖಿಗೆ ಆಖೈರಾದ ೭ ದಿನಗಳಲ್ಲಿ ಹಿಂದುಸ್ಥಾನದೊಳಗೆ ೩೭,೦೫೯ ಜನರು ಆ ಉಪದ್ರವದಲ್ಲಿ ಕಾಲವಾದರು. ಈ ಪೈಕಿ ಪಂಜಾಬ್ ಆಧಿಪತ್ಯದಲ್ಲಿ ೧೯,೪೮೯ ಜನರು, ವಾಯುವ್ಯಪ್ರಾಂತ್ಯ ೪,೩೯೭, ಬೊಂಬಾಯಿ ಆಧಿಪತ್ಯ ೩,೯೧೭, ಬಂಗಾಳ ೭,೦೪೩, ಬೊಂಬಾಯಿ ಪಟ್ಟಣ ೧೩೩೧, ಕರಾಚಿ ೧೨೭, ಮದರಾಸ್ ಆಧಿಪತ್ಯ ೦೫೭. ಕಲ್ಕತ್ತಾ ೫೮೯, ಮಧ್ಯಪ್ರಾಂತ್ಯಗಳು ೪೫೯, ಮೈಸೂರು ೩೨, ಹೈದರಾಬಾದು ೧೭೯, ಬೇರಾರ್ ೧೧೧. ಮಧ್ಯ ಇಂಡಿಯಾ ೬೧೭, ಕಾಶ್ಮೀರ ೧೯, ರಾಜಪುಟಾನಾ ೯೦, ಬೆಲೂಚಿಸ್ಥಾನ ೯—ಈ ಪ್ರಕಾರ ಮರಣಗಳಾಗಿರುತ್ತವೆ.

---

## ತಾಲ್ಲೂಕು ವರ್ತಮಾನಗಳು.

ಚಿಕ್ಕಮಗಳೂರು.—ಬಿಸಲಿನ ಧಗೆ ಅತಿ ಹೆಚ್ಚಾಗಿದೆ. ಮಳೆಯ ಮೋಡಗಳಿಲ್ಲವು. ಗಾಳಿಯು ಸ್ತಂಭವನ್ನುಂಟುಮಾಡುತ್ತಿದೆ. ಕಳೆದವಾರ ಕೆಲವು ಮಳೆ ಹನಿಗಳು ಮಾತ್ರ ಬಿದ್ದವು. ಎರಡು ಮಳೆ ಬಾರದಿದ್ದರೆ ಕಾಫಿ ಬೆಳೆಯು ಮುಂಗಾರು ಪೈರುಗಳೂ ನಷ್ಟವಾಗುತ್ತವೆಂತ ಜನರು ಚಿಂತಿಸುತ್ತಿದ್ದಾರೆ. ಸರ್ಕಾರಿ ಗರ್ಲ್ಸ್ ಸ್ಕೂಲಿನ ಹೆಡ್ಮಾಸ್ಟರ್ ನರಸಿಂಗರಾವ್ ಎಂಬುವನು ಕೆಲವು ಲೆಕ್ಕ ವ್ಯತ್ಯಾಸ ಮಾಡಿದಂತೆಯೂ, ಅಧಿಕಾರಿಗಳ ಎದುರಿಗೆ ಅವಮರ್ಯಾದೆಯಾಗಿ ನಡಕೊಂಡಂತೆಯೂ, ಇನ್ಸ್ಪೆಕ್ಟರ್ ಮೋಹನ್ ಭಾಭಾ ಯವರು ಕಳೆದ ಒಂದು ತಿಂಗಳಿಂದಲೂ ಈ ನರಸಿಂಗರಾವ್ ಎಂಬುವನನ್ನು ಕೆಲಸದಿಂದ ಪ್ರತ್ಯೇಕಿಸಿ ಸಸ್ಪೆಂಡ್ ಮಾಡಿರುವದು ಸರಿಯಷ್ಟೆ. ಈಚೆಗೆ ಡೆಪ್ಯುಟಿ ಇನ್ಸ್ಪೆಕ್ಟರವರು ಬಂದು ಕ್ರಮವಾಗಿ ಎಲ್ಲವನ್ನೂ ವಿಚಾರಿಸಿ ರಿಪೋರ್ಟು ಕಳುಹಿಸಿರುವಂತೆಯೂ ಶೀಘ್ರದಲ್ಲೇ ರಿಪೋರ್ಟಿನ ಫಲಿತಾಂಶವು ಪ್ರಕಟಕ್ಕೆ ಬರುವಂತೆಯೂ ತಿಳಿಯಬಂದಿದೆ.—ಇಲ್ಲಿನ ಸುಂಕದ ಕಟ್ಟೆಗಳ ಪೈಕಿ ಹಿರೇಹಟ್ಟಿಯಲ್ಲಿ ಜನರಿಗೆ ಬಹಳ ಜಾಸ್ತಿ ಎಂತಲೂ, ಅಂತರ ಹಿಂಸೆ ಎಂತಲೂ ಜನರು ಹೇಳಿಕೊಳ್ಳುವದಲ್ಲದೆ ಈ ಹಿರೇಹಟ್ಟಿಯಲ್ಲಿ ಮಣೆಗಾರನಾಗಿರುವ ಜನ ನಡತೆಯು ಅಕ್ರಮವಾಗಿದ್ದದ್ದಕ್ಕೋಸ್ಕರ ಕ್ರಿಮಿನಲ್ ಶಿಕ್ಷೆ ಈತನಿಗಾಗಿರುವಂತೆಯೂ ತಿಳಿಯಬಂದಿದೆ. ಇಲ್ಲಿನ ವರ್ತಕವರ್ಗಗಳ ಪೈಕಿ ಬಸವನಹಳ್ಳಿ ಪ್ರೆಸ್ ಜ್ಞಾನಪ್ರಕಾಶಿಕೆಯವರಿಗೆ ಎಲವಂಕಕಣ್ಣಿ ಸಕ್ರೆಪಟ್ಟಣದ ಪ್ರೆಸ್ಸನ್ನು ಬಸವನಹಳ್ಳಿಗೂ ವರ್ಗಮಾಡಿದ್ದಾರೆ. ಪುಣ್ಯಪ್ರಕಾಶಂ ಯವರು ಬಹುಮಂದಿಗೆ ಪ್ರಯೋಜನವನ್ನುಂಟುಮಾಡಿರುವದರಿಂದ ಇವರ ಉಪಕಾರವು ಚಿರಕಾಲ ಸ್ಮರಣೀಯ ಯೋಗ್ಯವಾಗಿದೆ. ಡಿ. ಇನ್ಸ್ಪೆಕ್ಟರವರು ಕಳೆದವಾರ ಎಲ್ಲಾ ಸ್ಕೂಲ್‌ಗಳನ್ನು ಪರೀಕ್ಷೆ ಮಾಡಿ ವಾಪಸ್ ಹಾಸನಕ್ಕೆ ದಯಮಾಡಿದರು. ಎಗ್ಸಿಕ್ಯೂಟಿವ್ ಇಂಜನೀರ್ ಸಾಹೇಬರೂ, ಡಿ. ಕ. ಸಾಹೇಬರೂ ಯಾವಾಗಲೂ ಮುನಿಸಾಫ್ ಸರ್ಕ್ಯೂಟ್ ಕೆಲಸಗಳಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ. ಪ್ಲೇಗ್ ರೂಲ್‌ಗಳು ಜಾರಿಗೆ ಬಂದಿರುವದರಿಂದ ಕೊಪ್ಪದ ಪ್ರಾಂತ್ಯದಿಂದಾಗಲೀ ಮತ್ಯಾವ ಕಡೆಯಿಂದಾಗಲೀ ಪ್ಲೇಗ್ ಸೋಂಕನ್ನು ಜನರು ಚಿಕ್ಕಮಗಳೂರಿಗೆ ತಾರದಂತೆ ಪೋ. ಸೂ. ರವರು ತುಂಬಾ ಜೋಪಾನತ್ತು ಮಾಡುತ್ತಿದ್ದಾರೆ. ಇವರಿಗೆ ಬೆಂಗಳೂರಿಗೆ ವರ್ಗವಾಗಿರುವಂತೆ ತಿಳಿಯಬಂದಿದೆ. ಕೆಲವು ತಿಂಗಳು ಲಾಗಾಯಿತು ಈ ಚಿಕ್ಕಮಗಳೂರಿನ ರಸ್ತೆಗಳು ಸ್ವಲ್ಪ ನೆಟ್ಟಗಾಗಿ ಕೆಡುತ್ತಾ ಬಂದಿವೆ. ಕಚರಾ ಕೊಳೆಗಳೂ ಸಂದುಗೊಂದು ಮೂಲೆಗಳಲ್ಲಿ ಅಭಿವೃದ್ಧಿಯಾಗುತ್ತಿವೆ. ಯೂರೋಪಿಯನ್ನರಿಗೆ ಯಾವಾಗಲೂ ಪಟ್ಟೆ ಅಲಂಕಾರವೂ ಶುಚಿಯೂ ಆಗಿರುವದು ಇಷ್ಟ. ಅದರಂತೆ ಡೆ. ಕಮಿಷನರವರು ಪ್ರಯತ್ನಿಸುವರಾದರೆ ಚಿಕ್ಕಮಗಳೂರು ಶ್ರೇಷ್ಠಸ್ಥಿತಿಗೆ ಬರಲಾರದು.—ಸಂತೆ ರಸ್ತೆಯಲ್ಲಿ ಕೊಳೆ ಕೊಂಚವೂ ಕಮ್ಮಿ ಆಗಿಲ್ಲ. ಕೆಟ್ಟ ವಾಸನೆಯನ್ನು ಮೂಗು ಮುಚ್ಚದೇ ತಪ್ಪಿಸಲ್ಲ. ಬರಬರ ಈ ರಸ್ತೆಯೂ. ಅದರ ಬಾಜುಗಳಲ್ಲಿರುವ ಹೊಲಗೇರಿಗಳೂ ತುಂಬಾ ಅಸಹ್ಯವನ್ನುಂಟುಮಾಡುತ್ತಿವೆ. ನೀರಿನ ಸರಬರಾಯಿ ಸಾಧಾರಣವಾಗಿದೆ. ಆದರೆ ಅನಾವಶ್ಯಕ ಸ್ಥಳದಲ್ಲಿ ಹೆಚ್ಚು ನಲ್ಲಿಗಳೂ, ಅತ್ಯಂತ ಅವಶ್ಯ ಸ್ಥಳದಲ್ಲಿ ನೀರಿಗೆ ಅಭಾವವೂ ಪ್ರಾಪ್ತವಾಗಿದೆ. ಯಾರಿಗೆ ಹೇಳಿದರೂ ಪ್ರಯೋಜನವಿಲ್ಲವೆಂತಲೂ, ಬಡವರ ಕೂಗು ಗಿರಿಗೆ ಮುಟ್ಟಲಾರದೇ ಎಂತಲೂ ಕೆಲವರು ವ್ಯಸನಪಡುತ್ತಾರೆ.

**ಅರಕಲಗೂಡು.**—ನಮ್ಮ ಆಸ್ಪಿಟಲ್ ಅಸಿಸ್ಟೆಂಟರು ಇಲ್ಲಿನ ಆಸ್ಪತ್ರೆಯ ಪೂರ್ವದಿಕ್ಕಿನ ಜಗಲಿಯ ಮೇಲೆ ವಾಸಿಸುತ್ತಾ, ಈ ಆಸ್ಪತ್ರೆಗೆ ಸೇರಿದ ರಾಮಸ್ವಾಮಿ ಕಟ್ಟಿ ಬಾಬ್ತು ಕೆಂಚನ ಗುಡಾರ ಚಟ್ಟು ಮನೆಯಲ್ಲಿ ತಮ್ಮ ಬಾಬ್ತು ಕುದುರೆಯನ್ನು ಕಟ್ಟುತ್ತಲೂ, ಕುದುರೆಗೆ ಹುರುಳಿ ಬೇಯಿಸುತ್ತಲೂ, ಸ್ನಾನಪಾನಾದಿಗಳಿಗೆ ಬಿಸಿನೀರು ಕಾಯಿಸಿಕೊಳ್ಳುತ್ತಲೂ ಇದ್ದರು. ಈ ಮನೆಯಲ್ಲಿ ಸುಮಾರು ಒಂದು ಗಾಡಿಯಷ್ಟು ಹುಲ್ಲು, ಸವುದೆ, ತೊಗರಿಕಡ್ಡೀ ಹೊರೆಗಳು, ಇವುಗಳನ್ನೆಲ್ಲಾ ಒಟ್ಟುಕೊಂಡು, ತಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರು. ಮಾರ್ಚಿ ತಾರೀಖು ೨೮ನೇ ಶನಿವಾರ ರಾತ್ರಿ ಹುರಳಿ ಬೇಯಿಸುವಾಗಲೋ ಅಥವಾ ನೀರು ಕಾಯಿಸುವ ಸಂದರ್ಭದಲ್ಲೋ ಸದರೀ ಮನೆಗೆ ಬೆಂಕಿಬಿದ್ದು, ಮನೆಯು ಸುತ್ತಲೂ ಸೂರಂಚು ಪರಿಸ್ತರಣ ವಿನಹಾ ಮನ್ಯರಾಶ್ಯವೆಲ್ಲಾ ಅಂದರೆ, ಗಳು, ಪಂಚು, ಇಟ್ಟಿಗೆ, ಮೇಲ್ಮಂದ ಸಾಮಾನುಗಳು ಎಲ್ಲವೂ ಸುಟ್ಟು ಬಿದ್ದುಹೋಗಿರುತ್ತೆ. ಮತ್ತು ಕುದುರೆಗೆ ಸಹ ಸ್ವಲ್ಪ ಜಖಂ ಆಗಿ ಹೊರಕ್ಕೆ ಹ್ಯಾಗೋ ತಪ್ಪಿಸಿಕೊಂಡು ಬಂತು. ಹೀಗೆ ಬೆಂಕಿಯಿಂದ ನಷ್ಟಹೊಂದಿದ್ದರ ಮೇಲೆ ಯಾರೋ ಒಬ್ಬ ಬಡಪಾಯಿಯ ಮೇಲೆ ತಾಲ್ಲೂಕು ಕೋರ್ಟಿನಲ್ಲಿ ಫಿರ್ಯಾದು ನಮ್ಮ ಡಾಕ್ಟರು ದಾಖಲ್ಮಾಡಿರುವದಾಗಿಯೂ, ವಿಚಾರಣೆಯಾಗುತ್ತೆಂತಲೂ ಕೇಳುತ್ತೇನೆ. ಇದರ ಫಲಿತಾಂಶ ಮುಂದೆ ಗೊತ್ತಾಗಬೇಕು. ಈಗ ಆಸ್ಪಿಟಲ್ ಅಸಿಸ್ಟೆಂಟರು ಕೋಟೆ ಹೊರಗಣ ನಂಜುಂಡಶೆಟ್ಟಿ ಮನೆಯಲ್ಲಿ ಸಂಸಾರ ಸಮೇತ ವಾಸಮಾಡಲು ದಯಮಾಡಿಸಿದಾಗ್ಯು ಇವರು ದಯಮಾಡಿಸಿದ ಕೆಲವು ದಿವಸದಲ್ಲೇ ಅವರು ಕಾರಣಾಂತರದಿಂದ ಇದೇ ಮಾರ್ಚಿ ೩೧ನೇ ಸಾಯಂಕಾಲ ಈ ಅರಕಲಗೂಡನ್ನು ಬಿಟ್ಟು, ಇಲ್ಲಿಗೆ ೪ ಮೈಲಿ ಫಾಸಲೆಯಲ್ಲಿ ನದೀ ಆಚೆ ಇರುವ ಗೊರೂರಲ್ಲಿ ವಾಸಮಾಡಲು ಸಂಸಾರ ಸಮೇತ ಪ್ರಯಾಣ ಮಾಡಿದ ಹಾಗೆ ತಿಳಿಯಬರುತ್ತೆ. ಇಂಥಾ ಕಾಯಿಲೇ ಕಾಲದಲ್ಲಿ ಸ್ಥಳದಲ್ಲಿ ವಾಸಮಾಡದೇ ಗೊರೂರಲ್ಲಿ ವಾಸಮಾಡಿದರೆ ಕಾಯಿಲೇ ಜನಗಳಿಗೆ ಔಷಧ ದೊರಿಯತಕ್ಕದ್ದು ಹೇಗೋ ತಿಳಿಯಬಿಲ್ಲ.—ಮ್ಯುನಿಸಿಪಲ್ ತೆರಿಗೆಗಳನ್ನು ಈ ಊರಿನಲ್ಲಿ ಕ್ಯಾನುಭೋಗ ಪಟೇಲರೇ ವಸೂಲ್ಮಾಡುತ್ತಾರೆ. ರೆವಿನ್ಯೂ ಕಂದಾಯದ ವಸೂಲಾತಿಯ ಹಾಗೆ ಮ್ಯುನಿಸಿಪಲ್ ಕಂದಾಯಕ್ಕೂ ಕುರೆವಿನ್ಯೂ ಅಧಿಕಾರಿಗಳಿಗೆ ಜಪ್ತಿ ಮಾಡಲು ಸ್ವಾತಂತ್ರ್ಯ ಉಂಟೋ ಇಲ್ಲವೋ ಯಾವದೂ ತಿಳಿಯದೇ ಅನೇಕ ಜನಗಳು ದುಃಖಪಡುತ್ತಾರೆ.

**ಹರಿಹರ.**—ಕಳೆದ ವಾರ ಅಂದರೆ ಏಪ್ರಿಲ ತಿಂಗಳು ತಾ ೨೦ರಲ್ಲಿ ಕೆಲವು ಪ್ಲೇಗ್ ಕೇಸುಗಳಾದದ್ದರ ಸಂಗತಿ ಅಮಲ್ದಾರರ ತಿಳುವಳಿಕೆಗೆ ಬಂದ ಪ್ರಯುಕ್ತ ಇಲ್ಲಿನ ಮ್ಯಾಜಿಸ್ಟ್ರೇಟರಲ್ಲಿ ತಾವಾಗಿಯೇ ಖುದ್ದುಹೋಗಿ ಅವರಿಗೆ ತಿಳಿಸಿದ್ದ ಸಂಗತಿ—ಇಲ್ಲಿ ಪ್ಲೇಗ್ ಶುರುವಾದಹಾಗೆ ತೋರುತ್ತೆ. ಈ ದಿವಸ ೨—೩ ಹೊಸಕೇಸುಗಳು ಆದಹಾಗೆ ತಿಳಿದುಬಂದಿರುವದು. ವರ್ತಕರಾದ ಶೇಟ್ರುಗಳೆಲ್ಲ ಈಗಿನಿಂದಲೇ ಜೋಪಡಿಗಳನ್ನು ಕಟ್ಟಿಕೊಳ್ಳುವ ಪ್ರಯತ್ನದಲ್ಲಿರಬೇಕು. ಯಾವಾಗ ಊರನ್ನು ಬಿಡಬೇಕೆಂದು ಹೇಳುತ್ತೇವೋ ಕೂಡಲೇ ಬಿಡಬೇಕಾಗಿರುವದೆಂದು ಪ್ರತಿಒಬ್ಬ ವ್ಯಾಪಾರಿಗೂ ಬಾಯಿಮಾತಿನಿಂದ ತಿಳಿಸಿರುವರು. ಇದು ಒಳ್ಳೇ ಎಚ್ಚರಿಕೆಮಾತೇಸರಿ. ಆದರೆ ನಮ್ಮ ಅಮಲ್ದಾರ್ರು ಎಚ್ಚರಿಕೆ ಕೊಡುವದಕ್ಕೆ ಮೊದಲೇ ಕೆಲವರು ತಮ್ಮತಮ್ಮ ಜೋಪಡಿ ಗುಡುಸಲುಗಳನ್ನು ಸಿದ್ಧಪಡಿಸಿಕೊಳ್ಳುವದರಲ್ಲಿದ್ದಾರೆಂದು ಕಳೆದ ವಾರದ ಪತ್ರಿಕೆಯಲ್ಲಿ ಪ್ರಕಟಿಸಿದ್ದಾಯಿತು. ಇನ್ನು ಕೆಲವರಿಗೆ ಈ ಸಂಗತಿ ತಿಳಿದಿರಲಾರದಕಾರಣ ಅಮಲ್ದಾರರಿಂದ ಅನೇಕರು ತಿಳಿದಹಾಗಾಯಿತು. ಗುಡಿಸಲುಗಳನ್ನು ಕಟ್ಟಿಕೊಂಡಿರುವದರ ವಿಷಯ ಅನೇಕರು ಚಿಂತಿಸುತ್ತಾರೆ. ಯಾಕಂದರೆ ಮಳೆಕಾಲದ ದೆಸೆಯಿಂದಲೇ ಪ್ರವಾಹ ಬರುವದಕ್ಕಿಂತ ಮೊದಲೇ ಅಣೆಕಟ್ಟು ಅವಶ್ಯಕವಾಗಿರುವ ಪ್ರಕಾರ ಪ್ಲೇಗ್ ರೋಗವು ಹೆಚ್ಚುವದಕ್ಕೆ ಮುಂಚೆಯೇ ಜಾಗ್ರತೆಯಾಗಿರುವದು ಉತ್ತಮ. ಕೆಲವರು ಗುಡಿಸಲು ಕಟ್ಟುವದನ್ನು ಬಿಟ್ಟು, ದುಬಾರಿ ಬಾಡಿಗೆ ಕೊಟ್ಟು, ಲಕ್ಷರ್, ಸುತ್ತೂರು, ಬಿರಂಪೂರು, ಈ ಕಡೆಗಳಲ್ಲಿ ಮನೆಗಳನ್ನು ಹುಡುಕುತ್ತಿರುವರು. ಜೋಪಡಿಗಳನ್ನು ಕಟ್ಟಿಕೊಂಡರೆ ಮಳೆಯಿಂದ ತೊಂದರೆ ಪಡಬೇಕಾಗುತ್ತೆಂಬ ಆಲೋಚನೆಯು ಹೊರ್ತು ಬೇರೆ ಇಲ್ಲ. ಖಾಲಿ ಮನೆಗಳಲ್ಲಿರುವ ಬಾಡಿಗೆ ಜನಗಳನ್ನು ಎಲ್ಲಿಗೆ ಹೊರಡಿಸಿಯಾರೋ ತಿಳಿಯದು. ಇಂಥಾ ಕೆಟ್ಟಕಾಲದಲ್ಲೂ ದುಬಾರಿ ಹಣದಮೇಲೆ ಆಸೆಯಾಗಿದೆ ಎಂದು ಹೇಳಬೇಕಾಗಿದೆ. ಬಡವರ ಕಷ್ಟವನ್ನು ಚಿಂತಿಸುವವರ್ಯಾರು? ಅವರ ಮೊರೆಯನ್ನು ಕೇಳುವವರು ಯಾರು? ಇಲ್ಲಿನ ವೈಶ್ಯರಲ್ಲಿ ಕೆಲವರು ಊರು ಬಿಟ್ಟು ಹಳ್ಳಿಗಳಲ್ಲಿ ಸೇರಿಕೊಂಡರು. ಇನ್ನು ಕೆಲವರು ಹಿಂದು ಮುಂದು ಯೋಚನೆಯಲ್ಲಿರುವರು.—ನಮ್ಮ ಅಮಲ್ದಾರ್ರಿಗೆ ಒಂದು ದಿನದ ಜ್ವರಬಂದು ಈಗ ಗುಣವಾಗಿದ್ದಾರೆಂದು ಕೇಳಿ ಸಂತೋಷಪಡುತ್ತೇವೆ.—ಇಲ್ಲಿ ಕೆಲವರಿಗೆ ಸಾಧಾರಣವಾದ ಜ್ವರಬಂದರೂ ಅದು ಪ್ಲೇಗಿನ ಜ್ವರವೆಂದು ನೆನಸಿ ಘಾಬರಿಪಡುತ್ತಿರುವರು. ಈಗಿನ ಕಾಲದಲ್ಲಿ ಗ್ರಾಮ ಪಕೀಜಾ ವಿಚಾರದಲ್ಲಿ ಮೇಲಿನವರು ತುಂಬಾ ನಿಗಾಕೊಡುವದು ಒಳ್ಳೇದಾಗಿದೆ. ಮುನಿಸಿಪಲ್ ಜಾಡಮಾಲಿಗಳು—ಹತ್ತು ಹದಿನಾಲ್ಕು ಜನರು—ಈ ಟವುನಿಗೆ ನೇಮಕವಾಗಿದ್ದರು. ಕೆಲವರುಮಾತ್ರ ಹೊತ್ತಾರೆ ಅಲ್ಲಲ್ಲಿ ಸ್ವಲ್ಪ ಗುಡಿಸಿರುವದನ್ನು ನೋಡಬಹುದೇ ಹೊರ್ತು ಮಿಕ್ಕಾದವರೆಲ್ಲಾ ಎಲ್ಲಿಗೆ ಪಲಾಯನವಾದರೋ ತಿಳಿಯದು.—ಬೇಸಿಗೆ ಕಾಲವಾದದರಿಂದ ಇಲ್ಲಿನ ಎ. ವಿ. ಸ್ಕೂಲನ್ನು ಒಂದು ತಿಂಗಳವರಿಗೂ ಮುಚ್ಚಿರುವರು. ಹಿಂದುಸ್ಥಾನಿ ಸ್ಕೂಲನ್ನೂ ಮಿಷನ್ ಬಾಲಿಕಾ ಪಾಠಶಾಲೆಯನ್ನೂ ಒಂದು ಹೊತ್ತಿನ ಪ್ರಕಾರ ರಜಾ ಬಿಟ್ಟಿರುವರು.

**ಚಿತ್ರದುರ್ಗ.**—ಪ್ಲೇಗಿನ ದೆಸೆಯಿಂದ ಊರುಬಿಟ್ಟು ಹೋಗಿದ್ದವರೆಲ್ಲಾ ಒಬ್ಬೊಬ್ಬರಾಗಿ ಬಂದು ಊರು ಸೇರುತ್ತಿರುವರು. ಹೊಸ ರೀತಿಯಲ್ಲಿ ಮಾಡುವ ಡಿಸ್ಇನ್ಫೆಕ್ಷನ್ ಕೆಲಸವು ಅತಿ ಜಾಗ್ರತೆಯಾಗಿಯೂ, ಮುತುವರ್ಜಿಯಿಂದಲೂ ನಡೆಯುತ್ತಿದೆ. ಇದಕ್ಕಾಗಿ ನೇಮಕವಾಗಿರುವ ರಾಮರಾಯರು, ದಫೇದಾರ್ರು ಹಾಸ್ಪಿಟಲ್ ಅಸಿಸ್ಟೆಂಟರು ಅತಿ ಹುಷಾರಿಂದ ಕೆಲಸ ನಡಿಸುತ್ತಿರುವರು. ಪ್ಲೇಗಿನ ಸೋಂಕು ಸುತರಾಂ ನಿಂತುಹೋದಂತೆ ಕಾಣುವದು. ಇನ್ನು ಒಂದು ತಿಂಗಳಲ್ಲಿ ಎಲ್ಲರೂ ಊರು ಸೇರಬಹುದು.—ಮಳೆಯು ಬಹು ಜಾಗ್ರತೆಯಲ್ಲಿಯೇ ಬೀಳುವಂತೆ ಆಕಾಶದಲ್ಲಿ ಚಿಹ್ನೆಗಳು ತೋರುವವು. ನೆನ್ನೇದಿವಸ ಸಾಯಂಕಾಲ ಆಕಾಶವು ಮೋಡ, ಗುಡುಗು ಮಿಂಚುಗಳಿಂದ ಘೋರವೆಯುತ್ತಾ ಕೆಲವು ಹನಿಗಳನ್ನು ಮಾತ್ರ ಉದುರಿಸಿತು.—ಕಳೆದ ವಾರ ಮಧ್ಯಾಹ್ನದ ವೇಳೆಯಲ್ಲಿ ಮೆ॥ ರಾಮರಾಯರ ಕ್ಯಾಂಪಿಗೆ ಬೆಂಕಿಬಿದ್ದು ಸುಮಾರು ೫೦೦ ರೂ ಸಾಮಾನುಗಳು ನಷ್ಟವಾದವೆಂದೂ ಅಗ್ನಿ ಹೆಂಗಸರೇ ಹೊರ್ತು ಗಂಡಸರು ಯಾರೂ ಕ್ಯಾಂಪಿನಲ್ಲಿ ಇಲ್ಲದಕಾರಣ ಇಷ್ಟು ನಷ್ಟಕ್ಕೆ ಕಾರಣವಾಯಿತೆಂದೂ ಕೇಳಿ ವಿಷಾದಿಸಬೇಕಾಗಿದೆ.—ನೆನ್ನೆ ಶನಿವಾರ ಕೇಶವರ ದೇವಸ್ಥಾನದ ಬಳಿ ಕ್ಯಾಂಪು ಹಾಕಿಕೊಂಡು ವಾಸಮಾಡುತ್ತಿದ್ದ ಸಂಸ್ಕೃತ ಪಂಡಿತರು ಮೆ॥ ರಾಮಶಾಸ್ತ್ರಿಗಳು ಕುಟುಂಬ ಸಮೇತ ಈ ಬೇಸಿಗೆ ರಜಾದಲ್ಲಿ ಮೈಸೂರಿಗೆ ಹೋಗಲು ಸಿದ್ಧಮಾಡಿಕೊಂಡು, ಹೊರಡುವದಕ್ಕೆ ಸ್ವಲ್ಪ ಹೊತ್ತಿಗೆ ಮುಂಚೆ ತಮ್ಮ ಮಿತ್ರವರ್ಗದವರನ್ನು ಕಂಡು ಅವರಿಂದ ಅಪ್ಪಣೆ ತೆಗೆದುಕೊಂಡು ಹೋಗುವದಕ್ಕಾಗಿ ಕಚೇರಿಯ ಕಡೆ ದಯಮಾಡಿಸಿರಲು, ಮನೆಯಲ್ಲಿದ್ದ ಇವರ ಕುಟುಂಬವು ಸಮೀಪದಲ್ಲಿದ್ದ ದೊಡ್ಡ ಕೊಳದೊಳಕ್ಕೆ ಕೊಡವನ್ನು ತೆಗೆದುಕೊಂಡು ಹೋಗಿ ಇಳಿದು, ಹ್ಯಾಗೋ ಜಾರಿ ಒಳಗೆ ಮುಳುಗಿಬಿಡಲು. ಅಷ್ಟರಲ್ಲೇ ಸಮೀಪದಲ್ಲಿದ್ದ ಅನೇಕ ಬ್ರಾಹ್ಮಣರು ಆಕೆ ಭಾವಿಯೊಳಗೆ ಇಳಿದು ಮುಳುಗುತ್ತಾ ಏಳುತ್ತಾ ಇದ್ದಾಗ್ಯೂ, ಯಾರೂ ಆಕೆಯನ್ನು ಮೇಲಕ್ಕೆ ಎತ್ತಲಿಲ್ಲ. ನಂತರ ಪೋಲೀಸ್ ಸೂಪರಿಂಟೆಂಡೆಂಟರು, ಇನಸ್ಪೆಕ್ಟರು, ಜವಾನರು ವಗೈರೆಯವರೆಲ್ಲಾ ಬಂದು ತುಂಬಿದರು. ಇವರಲ್ಲಿ ಒಬ್ಬ ಮುಸಲ್ಮಾನರ ಕಾನ್‌ಸ್ಟೆಬಲ್ ಬಾವಿಯೊಳಕ್ಕೆ ಇಳಿದು, ಆಕೆಯು ಮುಳುಗಿದ ಜಾಗದಲ್ಲಿ ಮುಳುಗಿ ಆಕೆಯ ತಲೆ ಕೂದಲನ್ನು ಹಿಡಿದು, ಮೇಲಕ್ಕೆ ತಂದನು. ಇವನ ಸಾಹಸಕ್ಕಾಗಿ ಕಣ್ಣಾರ ನೋಡಿದ ಪೋಲೀಸ್ ಸೂಪರಿಂಟೆಂಡೆಂಟರು ಇವನಿಗೆ ಯಾವ ರೀತಿಯಲ್ಲಾದರೂ ಒಳ್ಳೇದನ್ನು ಮಾಡದೆ ಇರಲಾರರೆಂದು ನಿರೀಕ್ಷಿಸಲ್ಪಟ್ಟಿರುತ್ತೆ. ಆಕೆಯು ಬಿದ್ದು ಇಲ್ಲಿಗೆ ಅರ್ಧ ಘಂಟೆಯಾಗಿರಬಹುದು. ಕೂಡಲೇ ಪೋಲೀಸ್ ಸೂಪರಿಂಟೆಂಡೆಂಟರು ಡಾಕ್ಟರನ್ನು ಕರೆಕಳುಹಿಸಿದರು. ಡಾಕ್ಟರವರು ಪರೀಕ್ಷೆಗೆ ದಯಮಾಡಿಸಿದ್ದರೆಂದು ತಿಳಿದುಬಂದದ್ದರಮೇಲೆ ಆಸ್ಪತ್ರೆ ಅಸಿಸ್ಟೆಂಟರಿಬ್ಬರು ಬಂದು ತಮ್ಮ ಸಾಧನವನ್ನೆಲ್ಲಾ ಉಪಯೋಗಿಸಿದಾಗ್ಯೂ ಎಲ್ಲಾ ನಿರರ್ಥಕವಾಯಿತು. ನಂತರ ಮಹಜರ್‌ಗೆ ಅಪ್ಪಣೆ ಮಾಡಿ, ಸೂಪರಿಂಟೆಂಡೆಂಟರು ಕಛೇರಿಯ ಕಡೆ ಹೊರಟರು. ಪ್ರಯಾಣ ಹೊರಡುವ ವೇಳೆಯಲ್ಲಿ ಅಷ್ಟು ದೊಡ್ಡ ಬಾವಿಗೆ ಇಳಿದು, ಕೊಡವನ್ನು ನೀರು ತುಂಬುವದಕ್ಕೆ ಮೊದಲೇ ಯಾವ ಕಾರಣದಿಂದ ಯಾ ಯಾವ ರೀತಿಯಿಂದ ಆಕೆಯು ಬಾವಿಯೊಳಕ್ಕೆ ಬಿದ್ದಿರಬಹುದೋ ಗೊತ್ತಾಗುವದಿಲ್ಲ. ಅಂತು ಪತ್ನಿವಿಯೋಗ ದುಃಖವು ಶಾಸ್ತ್ರಿಗಳಿಗೆ ಉಂಟಾಗಿರುವದಕ್ಕಾಗಿ ಎಲ್ಲರೂ ವ್ಯಸನಪಡುತ್ತಾರೆ.

## ಸೊಕೋಟೋ ರಾಜ್ಯವು ಇಂಗ್ಲಿಷರಿಗೆ ಸೇರಿದ್ದು

ಯೂರೋಪ್ ಖಂಡದ ರಾಜ್ಯಗಳವರು ಆಫ್ರಿಕಾ ಖಂಡವನ್ನೆಲ್ಲಾ ತಮ್ಮಲ್ಲೇ ಹಂಚಿಕೊಂಡಿರುತ್ತಾರೆ. ಆ ರಾಜ್ಯಗಳಲ್ಲಿ ಮುಖ್ಯವಾದವು ಫ್ರಾನ್ಸ್ ಜರ್ಮನಿ, ವಿಲಾಯಿತಿ. ಇವರು ಒಂದಾಗಿ ಆಫ್ರಿಕಾ ಖಂಡವನ್ನು ಕೆಲವು ಡಿಸ್ಟ್ರಿಕ್ಟುಗಳಾಗಿ ವಿಭಾಗಿಸಿ ಹಂಚಿಕೊಂಡು, ಆಯಾ ಡಿಸ್ಟ್ರಿಕ್ಟಿನಲ್ಲಿ ತಮ್ಮತಮ್ಮ ಅಧಿಕಾರಕ್ಕೊಳಪಟ್ಟ ಪ್ರದೇಶಗಳಲ್ಲಿ ರಾಜ್ಯವನ್ನು ವಿಸ್ತರಿಸಿಕೊಳ್ಳಬಹುದೆಂತಲೂ, ಇದಕ್ಕೆ ಪರರಾಜ್ಯಗಳವರ್ಯಾರೂ ಅಡ್ಡಿ ಆಟಂಕಗಳನ್ನು ಮಾಡುವದಿಲ್ಲವೆಂತಲೂ ಒಪ್ಪಂದವನ್ನು ಮಾಡಿಕೊಂಡಿರುತ್ತಾರೆ.

ಸುಮಾರು ೨೦ ವರುಷಗಳ ಕೆಳಗೆ ಆಫ್ರಿಕಾದ ಪಶ್ಚಿಮತೀರದಲ್ಲಿ ವಿಸ್ತಾರವಾದ ಪ್ರದೇಶವೂ, ನೈಗರ್ ನದಿಯ ತೀರಗಳಲ್ಲಿರುವ ಪ್ರಾಂತ್ಯವೂ ಯೂರೋಪಿನ ಯಾವರಾಜ್ಯದವರಿಗೂ ಸೇರದೆ ಸ್ವತಂತ್ರವಾಗಿಯೇ ಇದ್ದವು. ನೈಗರ್ ನದಿಯು ಸಾಗರಕ್ಕೆ ಹೋಗಿ ಸೇರಿಕೊಳ್ಳುವ ನದೀ ಮುಖದಲ್ಲಿ ಫ್ರೆಂಚರ ಕೆಲವು ವರ್ತಕರು ದಾಣ್ಯಗಳನ್ನು ಹಾಕಿಕೊಂಡು, ಅಲ್ಲಿಂದ ಒಳದೇಶದವರ ಸಂಗಡ ವ್ಯಾಪಾರ ಮಾಡುತ್ತಿದ್ದರು. ಆ ಪ್ರಾಂತ್ಯದಲ್ಲಿರುವ ದಂತ, ರಬ್ಬರ್ ಇವೇ ಮೊದಲಾದ ಅನೇಕ ಸರಕುಗಳನ್ನು ಕೂಡಿಸಿ ಸಾಗಿಸಿಕೊಂಡು ಹೋಗುತ್ತಾ ವ್ಯಾಪಾರ ನಡುಸುತ್ತಾ ಬಂದರು. ಕೆಲವು ಕಾಲದಮೇಲೆ ಗೋಲ್ಡೀ ಎಂಬೊಬ್ಬ ಇಂಗ್ಲಿಷನು—ಈತನಿಗೆ ಈಚೆಗೆ ಸರ್ ಎಂಬ ಬಿರುದುಬಂದಿದೆ—ಅಲ್ಲಿ ಬಹಳ ಚನ್ನಾಗಿ ವ್ಯಾಪಾರ ನಡೆಯುತ್ತೆಂಬ ಸಂಗತಿಯನ್ನು ತಿಳಿದುಕೊಂಡು ಬಂದು, ಅದಕ್ಕಾಗಿ ಒಂದು ವ್ಯಾಪಾರದ ಕಂಪನಿಯನ್ನು ಪ್ರಾರಂಭಿಸಿದನು. ಅದಕ್ಕೆ ನೈಗರ್ ವ್ಯಾಪಾರ ಕಂಪನಿ ಎಂಬ ಹೆಸರಾಯಿತು. ಈ ಕಂಪನಿಯವರು ಅಲ್ಲಿ ವ್ಯಾಪಾರನಡಸುತ್ತಿದ್ದ ಫ್ರೆಂಚ್ ವರ್ತಕರಿಂದ ಅವರ ಹಕ್ಕು ಬಾಧ್ಯತೆಗಳನ್ನೆಲ್ಲಾ ಕೊಂಡುಕೊಂಡು. ತಾವೇ ಅಲ್ಲಿ ವ್ಯಾಪಾರ ನಡಸುವಂತೆ ಸ್ವಾತಂತ್ರ್ಯವನ್ನು ಪಡೆಸಿದರು. ಈ ಕಂಪನಿಯವರು ದಿನೇ ದಿನೇ ವ್ಯಾಪಾರ ಸಾಪಾರ ಮಾಡುವದರಲ್ಲಿ ತಮ್ಮ ಪ್ರದೇಶವನ್ನು ವಿಸ್ತರಿಸಿಕೊಳ್ಳುತ್ತಾ ಬಂದರು.

ಸುಮಾರು ೧೮೮೫ನೆ ಇಸವಿಯಲ್ಲಿ ಜರ್ಮನಿಯವರಿಗೆ ಈ ಡಿಸ್ಟ್ರಿಕ್ಟಿನ ಮೇಲೆ ಕಣ್ಣುಬಿದ್ದಿತು. ಕೆಲವು ಮಂದಿ ಜರ್ಮನಿಯವರು ತಮ್ಮ ಕಡೆಯಿಂದ ಒಬ್ಬ ರಾಯಭಾರಿಯನ್ನು ಸೊಕೋಟೋ ಸುಲ್ತಾನರ ಬಳಿಗೆ ಹೋಗಿ ಅಂತರಂಗದಲ್ಲೇ ಅವರಿಂದ ಒಂದು ಕರಾರು ಬರೆಸಿಕೊಳ್ಳುವದಕ್ಕೋಸ್ಕರ ಕಳುಹಿಸಿಕೊಟ್ಟರು. ಆ ಒಳದೇಶದಲ್ಲೆಲ್ಲಾ ಸೊಕೋಟೋ ಸುಲ್ತಾನರೇ ಪ್ರಮುಖರೆನಿಸಿಕೊಂಡವರಾಗಿರುತ್ತಾರೆ. ಆದರೆ ಅಲ್ಲಿದ್ದ ಮೇಲ್ಕಂಡ ಇಂಗ್ಲಿಷ್ ಕಂಪನಿಯವರಿಗೆ ಜರ್ಮನಿಯ ರಾಯಭಾರಿಯೊಬ್ಬನು ಬರುತ್ತಾನೆಂಬ ಸಮಾಚಾರವನ್ನು ತಿಳಿದುಕೊಂಡು, ಆತನು ಬರುವದಕ್ಕಿಂತ ಮೊದಲೇ ತಾವು ಸೊಕೋಟೋ ಸುಲ್ತಾನರ ಬಳಿಗೆ ಹೋಗಿ, ಅವರ ದೇಶದಲ್ಲೆಲ್ಲಾ ವ್ಯಾಪಾರ ಮಾಡತಕ್ಕ ಹಕ್ಕನ್ನೂ, ಅಲ್ಲಿಗೆ ಇಂಗ್ಲಿಷರಲ್ಲದೆ ಇನ್ನ್ಯಾರೂ ಒಂದು ವ್ಯಾಪಾರ ಮಾಡಕೂಡದೆಂಬ ರಿಯಾಯಿತಿಯನ್ನೂ, ಸುಲ್ತಾನರು ಪರರಾಜ್ಯಗಳವರ ಸಂಗಡ ಕಾಗದ ಪತ್ರಗಳನ್ನು ನಡಸತಕ್ಕದ್ದಲ್ಲಿ ಅವರು ಇಂಗ್ಲಿಷರ ಮೂಲಕವಾಗಿಯೇ ನಡಸಬೇಕೆಂಬ ಅಧಿಕಾರವನ್ನೂ ಪಡೆದುಕೊಂಡು ಬಂದರು. ಇಂಥಾ ಅಧಿಕಾರಗಳನ್ನು ಸಂಪಾದಿಸಿಕೊಂಡು ಬಂದಮೇಲೆ ನೈಗರ್ ಕಂಪನಿಯು ವಿಶೇಷ ಪ್ರಾಮುಖ್ಯತೆಗೆ ಬಂದಿತು. ಪೂರ್ವದಲ್ಲಿ ಈಸ್ಟ್ ಇಂಡಿಯಾ ಕಂಪನಿಯವರು ಹ್ಯಾಗೆ ವಿಲಾಯಿತಿ ರಾಜ್ಯದಿಂದ ಹಿಂದೂಸ್ಥಾನದಲ್ಲಿ ವ್ಯಾಪಾರ ನಡೆಸಲು ಸನ್ನದು ಹಕ್ಕನ್ನು ಪಡೆದುಕೊಂಡಿದ್ದರೋ ಅದೇ ರೀತಿಯಾಗಿ ಈ ನೈಗರ್ ಕಂಪನಿಯವರೂ ಈಚೆಗೆ ರಾಜಾಜ್ಞೆಯನ್ನು ಸಂಪಾದನೆ ಮಾಡಿಕೊಂಡರು. ಈ ಕಂಪನಿಗೆ ಸೇರಿದ ಪ್ರದೇಶಗಳೂ ಅವರು ವ್ಯಾಪಾರ ನಡೆಸತಕ್ಕ ಪ್ರಾಂತ್ಯಗಳೂ ಬಹಳ ಹೆಚ್ಚಾದವು. ಕಡೆಗೆ ೧೯೦೦ನೆ ಇಸವಿಯಲ್ಲಿ ಈ ಪ್ರದೇಶವೆಲ್ಲ ಇಂಗ್ಲಿಷ [illegible]ವಾಗಿ ರೂಪಾಂತರ ಹೊಂದಿತು. ಅದು ವಿಲಾಯಿತಿ ರಾಜ್ಯಕ್ಕೆ ಸೇರಿದ ಒಂದು ಅಂಗವಾಯಿತು.

ಆದರೆ ಆ ಪ್ರಾಂತ್ಯದ ಸ್ಥಿತಿಗತಿಗಳನ್ನು ನೋಡಲಾಗಿ ಈ ಇಂಗ್ಲಿಷ್ ಸ್ವಾಸ್ಥ್ಯದವರಿಗೂ ಅವರ ಸುತ್ತಮುತ್ತ ಇರುವವರಿಗೂ—ಅಂದರೆ, ಸೊಕೋಟೋ ಕಾನೋ ಎಂಬ ರಾಜ್ಯಗಳಿಗೂ—ಕಲಹ ಉಂಟಾಗಬಹುದೆಂದು ತೋರುತ್ತಿತ್ತು. ಯಾಕಂದರೆ ಅಲ್ಲಿ ಗುಲಾಮರನ್ನು ಹಿಡಿದು ಮಾರುವ ಪದ್ಧತಿಯನ್ನು ಇಂಗ್ಲಿಷರು ನಿಲ್ಲಿಸಬೇಕೆಂದು ಪ್ರಯತ್ನಪಡುತ್ತಾ ಬಂದರು. ಇದು ಸೊಕೋಟೋ ಸುಲ್ತಾನರ ಮನಸ್ಸಿಗೆ ಹಿಡಿಸಲಿಲ್ಲ. ಅವರು ದಂಡಯಾತ್ರೆ ಹೊರಟು ಹಿಡಿದು ತರುವ ಬ್ರಿಟಿಷ ಪ್ರಜೆಗಳನ್ನೆಲ್ಲಾ ಗುಲಾಮರನ್ನಾಗಿ ಕ್ರಯಕ್ಕೆ ಕೊಟ್ಟು ಬಿಡುವದೆ ನ್ಯಾಯವೆಂಬ ಪದ್ಧತಿಯನ್ನು ಇಟ್ಟುಕೊಂಡಿದ್ದರು. ಇದಲ್ಲದೆ ಈಚೆಗೆ ಅಲ್ಲಿದ್ದ ಒಬ್ಬ ಇಂಗ್ಲಿಷ ಹುದ್ದೇದಾರನನ್ನು ಅವರು ಹಿಡಿದು ಕೊಂದುಹಾಕಿದರು. ಈ ಕೃತ್ಯವೇ ಆ ರಾಜ್ಯ ನಾಶವಾಗುವದಕ್ಕೆ ಕಾರಣವಾಯಿತು. ಇಂಗ್ಲಿಷ್ ಸೈನ್ಯಾಧಿಪತಿಗಳು ಅಲ್ಪ ಸೈನ್ಯವನ್ನು ನಡಿಸಿಕೊಂಡು ಹೋಗಿ, ಸೊಕೋಟೋ ಕಾನೋ ಎಂಬ ಎರಡು ರಾಜ್ಯಗಳನ್ನೂ ಗೆದ್ದು ಸ್ವಾಧೀನಪಡಿಸಿಕೊಂಡರು. ಈಗ ಇವೆರಡು ರಾಜ್ಯಗಳೂ ಇಂಗ್ಲಿಷರ ಅಧಿಕಾರಕ್ಕೊಳಪಟ್ಟಿರುತ್ತವೆ.

ಇದನ್ನು ನೋಡಿ ಕೆಲವರು ಇಂಗ್ಲಿಷರ ಮೇಲೆ ಆಕ್ಷೇಪಣೆ ಮಾಡಿ ಅವರು ರಾಜ್ಯವನ್ನು ವಿಸ್ತರಿಸಬೇಕೆಂತಲೂ ಐಶ್ವರ್ಯವನ್ನು ಹೆಚ್ಚಿಸಿಕೊಳ್ಳಬೇಕೆಂತಲೂ ದುರಾಶೆಯಿಂದ ತುಂಬಿದವರಾಗಿ ಈಗ ಇವೆರಡು ರಾಜ್ಯಗಳನ್ನೂ ಅನ್ಯಾಯವಾಗಿ ಆಕ್ರಮಿಸಿಕೊಂಡಿರುತ್ತಾರೆಂದು ಗುಣಗುಟ್ಟುತ್ತಾರೆ. ಈ ಅಭಿಪ್ರಾಯವು ಸರಿಯಾದದ್ದೆಂದು ನಾವು ಒಪ್ಪುವದಿಲ್ಲ. ಪ್ರಪಂಚದಲ್ಲಿ ನಡೆಯುವದನ್ನು ನೋಡಲಾಗಿ ಅತ್ಯಂತ ನಾಗರಿಕರೆನಿಸಿಕೊಂಡ ಜನಾಂಗದವರೇ ಪ್ರಪಂಚದಲ್ಲಿ ಹೆಚ್ಚು ಕೆಟ್ಟದ ಭಾಗಗಳನ್ನು ಆಳತಕ್ಕವರಾಗಬೇಕೆಂಬುವದು ಸ್ವತಃಸಿದ್ಧವಾದ ಮಾತಾಗಿದೆ. ಮತ್ತು ವಿಲಾಯಿತಿಗೆ ಸೇರಿದ ಸ್ವಾಸ್ಥ್ಯಗಳಲ್ಲಿ ಹ್ಯಾಗೋ ಹಾಗೇ ಪ್ರಜಾಪಾಲನೆಯು ಕ್ರಮ ನೀತಿ, ನ್ಯಾಯಗಳುಳ್ಳದ್ದಾಗಿರುವ ಪಕ್ಷಕ್ಕೆ ರಾಜ್ಯವನ್ನು ಆಕ್ರಮಿಸಿಕೊಳ್ಳುವದು ಅಲ್ಲಿನ ಜನರ ಅಭ್ಯುದಯಾಭಿವೃದ್ಧಿಗೆ ಕಾರಣವಾಗುವದು. ನಾಗರಿಕವಂತರು ಹೋಗಿ ಆಕ್ರಮಿಸಿಕೊಳ್ಳುವದಕ್ಕೆ ಮೊದಲು ಆ ಪ್ರಾಂತ್ಯವಲ್ಲಿ ಕಲಹ, ಯುದ್ಧ, ಕೊಲೆ, ಹಿಂಸೆ ಮೊದಲಾದ ಅಕ್ರಮಗಳೆಲ್ಲಾ ತುಂಬಿರುತವೆ. ಇಂಥಾ ಸ್ಥಿತಿಯನ್ನು ತಪ್ಪಿಸಿ ಅವುಗಳಿಗೆ ಬದಲಾಗಿ ಪ್ರಜಾ ನೆಮ್ಮದಿಯನ್ನೂ, ರಾಜ್ಯಭಾರಕ್ರಮವನ್ನೂ ಕಸಬುದಾರಿಗಳನ್ನೂ ನಾಗರಿಕವಂತರು ಸ್ಥಾಪಿಸಿದರೆ ಅದು ಅನ್ಯಾಯವೆಂದು ಹೇಳಬಹುದೋ? ಆದರೆ ತುಂಬಾ ಬಲಿಷ್ಠರಾದವರು ಹೋಗಿ ಒರಟರನ್ನೂ, ಕಾಡುಜನರನ್ನೂ ಹೊಡೆದು ಹಿಂಸೆಗೆ ಗುರಿಮಾಡಿ, ಅವರ ಆಸ್ತಿಪಾಸ್ತಿಗಳನ್ನು ಅಪಹರಿಸಿದರೆ ಆಗ ಆ ಕೃತ್ಯವು ಅನ್ಯಾಯವೆನಿಸಿಕೊಳ್ಳುತ್ತದೆ.

ಸೊಕೋಟೋ ರಾಜ್ಯದ ವಿಷಯದಲ್ಲಿ ಇನ್ನೊಂದು ಸಂಗತಿ ತಿಳಿದುಕೊಳ್ಳತಕ್ಕದ್ದಾಗಿದೆ. ಈಗಿನ ಸುಲ್ತಾನರು ಆ ದೇಶದವರಲ್ಲ. ಅವರು ಬೇರೇ ವಂಶಕ್ಕೆ ಸೇರಿದವರು. ಇವರ ಹಿರಿಯರು ಕಳೆದ ಶತಮಾನದಲ್ಲಿ ಅಲ್ಲಿಗೆ ಹೋಗಿ ಆ ರಾಜ್ಯವನ್ನು ಗೆದ್ದುಕೊಂಡು ಆಳ್ವಿಕೆ ನಡಸುತ್ತಾ ಬಂದರು. ಇಂಥಾ ರಾಜ್ಯವನ್ನು ಈಗ ನಿರ್ವಾಹವಿಲ್ಲದೆ ಇಂಗ್ಲಿಷರು ಹೋಗಿ ಗೆದ್ದು ತಮ್ಮ ಸ್ವಾಧೀನಕ್ಕೆ ತಂದುಕೊಂಡಿರುತ್ತಾರೆ. ಇಂಗ್ಲಿಷ್ ಹುದ್ದೇದಾರರು ಕಾನೋ, ಸೊಕೋಟೋ ರಾಜ್ಯಗಳಲ್ಲಿರುವ ಪ್ರಜೆಗಳಿಗೆ ಸಾರಿಸಿರುವ ವಿಷಯಗಳೇನಂದರೆ —

(೧) ಗುಲಾಮರನ್ನು ಕೊಂಡು ಮಾರುವ ಪದ್ಧತಿಯನ್ನು ನಿಲ್ಲಿಸಿದೆ. ಇನ್ನುಮೇಲೆ ಯಾರಾದರೂ ಈ ಭಾಗದಲ್ಲಿ ಮಾರಿದರೆ ಇಂಗ್ಲಿಷರು ಶಿಕ್ಷಿಸುವರು.

(೨) ಮದ್ದು ಗುಂಡು ಕತ್ತಿ ಮೊದಲಾದ ಯುದ್ಧ ಸಾಮಗ್ರಿಗಳನ್ನು ಯಾರೂ ಕೊಂಡು ಮಾರಕೂಡದು.

(೩) ಗೌರ್ನಮೆಂಟಿನವರು ಪ್ರಜೆಗಳ ಮತಕೃತ್ಯಗಳ ವಿಷಯದಲ್ಲಿ ಸ್ವಲ್ಪವೂ ತಲೆಹಾಕುವದಿಲ್ಲ.

ಮೊದಲನೇ ಮತ್ತು ಎರಡನೇ ಸಂಗತಿಗಳು ಹಿಂದೆ ೧೮೯೦ರಲ್ಲಿ ಬ್ರಸಲ್ಸ್ ನಗರದಲ್ಲಿ ನಡೆದ ರಾಜ್ಯಾಧಿಪತಿಗಳ ಸಮಾಜದಲ್ಲಿ ತೀರ್ಮಾನವಾಗಿರುವ ವಿಷಯಗಳಾಗಿರುತ್ತವೆ. ಆ ಸಮಾಜದವರ

ಫ್ರಿಕಾ ಖಂಡದಲ್ಲಿ ತಮತಮಗೆ ಸೇರಿರುವ ಭಾಗಗಳಲ್ಲಿ ಗುಲಾಮರ ವ್ಯಾಪಾರವನ್ನೂ ಅಫೀಮುಗಳ ಪ್ರಯೋಗವನ್ನೂ ನಿಲ್ಲಿಸಬೇಕೆಂಬುದಾಗಿ ಪರಸ್ಪರ ಒಪ್ಪಿಕೊಂಡಿರುತ್ತಾರೆ. ಇದಲ್ಲದೆ ಅವರು ಮದ್ಯಪಾನಕಗಳ ವ್ಯಾಪಾರವನ್ನೂ ನಿಲ್ಲಿಸಬೇಕೆಂದು ನಿಷ್ಕರ್ಷೆ ಮಾಡಿರುವರು.

## ಹಿಂದೂ ಮತದ ದೋಷಗಳು.

(Communicated)

ಹಿಂದುಸ್ಥಾನದಲ್ಲಿ ಅನೇಕ ಮತಗಳಿರುವವು. ಎಲ್ಲಾ ಒಟ್ಟಾಗಿ ಹಿಂದೂ ಮತವೆಂದು ಕರೆಯುವುದುಂಟು. ದೇವರಿದ್ದಾನೆಂದು ಒಪ್ಪಿಕೊಳ್ಳುವ ಆಸ್ತಿಕರಿಗೆ ಮಾತ್ರಕ್ಕೆ ಈ ನಾಮವು ಸಲ್ಲುವದು. ದೇವರನ್ನಿಲ್ಲದ ನಾಸ್ತಿಕರೂ ಹಿಂದೂ ಜನರಲ್ಲಿ ಸರಿಬೆರಿಕೆಯವರಾಗಿದ್ದಾರೆ. ಆಸ್ತಿಕರೆಂಬವರಲ್ಲಿಯು ಆ ಕಾಲಾಂತರದಲ್ಲಿ ನಾಸ್ತಿಕರಿಂದ ಪ್ರೇರೇಪಿಸಲ್ಪಟ್ಟವರಾಗಿಯು ಸರಿಯಾದ ದೈವಿಕ ಶಕ್ತಿಗಳನ್ನೂ ಪ್ರಕೃತಿಯನ್ನೂ ಆಸ್ತಿಕತೆಯು ಮತ್ತು ಇತರ ವಿಷಯಗಳನ್ನೂ ತಿಳಿಯದವರೇ ಉಳಿದಿರುವದರಿಂದ, ಇವರೆಲ್ಲರೂ ತಾವು ಪೂರ್ವದಲ್ಲಿ ಆಚರಿಸುತ್ತಿದ್ದ ನಾಸ್ತಿಕ ಮತದ ನಿಬಂಧನೆಯಂತೆ ಹೊರರೂ, ಶೋಕೋಪಶಮಕ ಸುಸ್ವರಯುತರೂ, ಪ್ರಾಮಾಣ್ಯರೂ, ಆದವರನ್ನೇ ದೇವರೆಂದು ಆರಾಧಿಸುವ ಸಂಪ್ರದಾಯಗಳನ್ನು, ಜನರನ್ನು ಮರುಳುಮಾಡುವದಕ್ಕಾಗಿ ಇಲ್ಲದೇ ಇದ್ದ ಮಹತ್ವವನ್ನು ಕಲ್ಪಿಸಿ ಸುಳ್ಳುಸುಳ್ಳಾಗಿ ಬರೆಯುವ ಗ್ರಂಥಗಳಲ್ಲಿ ವಿಶ್ವಾಸವನ್ನಿಡುವಿಕೆಯನ್ನು, ಕಟ್ಟುಕತೆಗಳನ್ನು ಕಲ್ಪಿಸುವಿಕೆಯನ್ನೂ ಕಲಿತುಕೊಂಡರು. ಇವರಿಂದಲೇ ವಿಷ್ಣುವೆಂದು ತಾವು ಅಂದುಕೊಂಡ ನಾಲ್ಕು ಕೈಗಳುಳ್ಳ ದೇವರಿಗೆ ಜೈನರ ತೀರ್ಥಂಕರರ ಸಂಖ್ಯೆಗೆ ಸರಿಯಾಗಿ ಅವತಾರಗಳನ್ನು ಕಲ್ಪಿಸಿದರು. ಇದರಂತೆಯೇ ಸುಳ್ಳು ಕಲ್ಪನೆಯಾಗಿ ಹುಟ್ಟಿದ ಪುರಾಣಗಳೆಂಬ ಗ್ರಂಥಗಳು ಸೃಷ್ಟಿಯು ಸ್ವಭಾವದ ಮೇರೆ ಎಂದೆಂದೂ ಸಂಭವಿಸಲಾರದ ಕಲ್ಪನಾ ಭಾಗಗಳಿಂದಲೇ ತುಂಬಿವೆ. ಇವುಗಳ ಮಾತು ಹಾಗಿರಲಿ; ಇವುಗಳನ್ನೇ ಪ್ರಾಮಾಣ್ಯವಾಗಿ ಹಿಡಿದು ತಮ್ಮದು ಒಂದು ಸರ್ವೋತ್ತಮ ಮತವೆಂದು ಭ್ರಾಂತರಾಗಿ ಮುಖ್ಯವಲ್ಲದ ಅಪ್ರಯೋಜನ ವಸ್ತುಗಳನ್ನು ಹಾಕಿಕೊಂಡು ಜನರ ನಡೆಯನ್ನು ಸಹ ಲಕ್ಷಿಸದೆ ತಾವೇ ಶ್ರೇಷ್ಠರೆಂದು ಅಂದುಕೊಳ್ಳುವ ಪೌರಾಣಿಕ ಮತದವರ ದುಸ್ಥಿತಿಯು ಶೋಚನೀಯವಾದದ್ದು.

ಹಿಂದುಗಳಲ್ಲಿ ಪೌರಾಣಿಕ ಮತದಲ್ಲಿಲ್ಲದವರ್ಯಾರೂ ಇಲ್ಲ. ಶೈವ, ವೈಷ್ಣವ, ಗಾಣಪತ್ಯ, ಸೌರ, ಶಾಕ್ತೇಯ, ರಾಮ, ರಾಧಾ, ಕೃಷ್ಣ ಮುಂತಾದ್ದರ ಉಪಾಸಕ ಮತ ಮುಂತಾದ ಅನೇಕ ಪೌರಾಣಿಕ ಮತದಲ್ಲಿ ಪ್ರತಿ ಒಬ್ಬರೂ ಒಂದೊಂದಕ್ಕಾಗಲಿ ಎರಡು ಮೂರು ನಾಲ್ಕಕ್ಕಾಗಲಿ ಸೇರಿರುವವರೇ ಆಗಿರುತ್ತಾರೆ. ಶ್ಲೋಕ॥ ಅಂತಶ್ಶಾಕ್ತಾಃ ಬಹಿಶ್ಶೈವಾಃ ಸಭಾಮಧ್ಯೇ ಚ ವೈಷ್ಣವಾಃ। ನಾನಾರೂಪಧರಾಃ ಕೌಲಾಃ ವಿಚರಂತಿ ಮಹೀತಲೇ। ಎಂಬಂತೆ ಅನೇಕರು ಅಂತರಂಗದಲ್ಲಿ ಮದ್ಯ, ಮಾಂಸ, ಮತ್ಸ್ಯ, ಮುದ್ರಾ, ಮೈಥುನವೆಂಬ ಪಂಚಮಕಾರಗಳನ್ನಾಚರಿಸುವ ಶಾಕ್ತೇಯರಾಗಿದ್ದು, ಹೊರಗೆ ನೋಡುವವರಿಗೆ ಭಸ್ಮ, ರುದ್ರಾಕ್ಷಿಧಾರಣೆ ಮಾಡಿ "ಶಿವ ಶಿವ" ಎಂಬ ಜಪಮಾಡುತ್ತಾ ಶೈವರಾಗಿ ತೋರ್ಪಡಿಸಿಕೊಳ್ಳುತ್ತಾರೆ. ಸಭಾ ಮಧ್ಯದಲ್ಲಿ ಮಾತ್ರ ಇವರೇ ವಿಷ್ಣು ಸರ್ವೋತ್ಕೃಷ್ಟತೆಯನ್ನು ಸ್ಥಾಪಿಸಿ ತಮ್ಮ ಪಾಂಡಿತ್ಯವನ್ನು ವೈಷ್ಣವ ಪಕ್ಷದಲ್ಲಿಯೂ ಮೆರೆಸುತ್ತಾರೆ. ಹೀಗೆ ಕೌಲರೆಂಬ ಶಾಕ್ತೇಯರು ನಾನಾವೇಷದಿಂದಲೂ ಜೀವಿಸುತ್ತಾ ಇದ್ದಾರೆ.

ಈ ಪೌರಾಣಿಕ ಮತ ಪ್ರವರ್ತಕವಾದ ಮೂರ್ತಿ ಪೂಜೆಯು ಮೊದಲಿಂದಲೂ ಪ್ರಾರಂಭಿಸಿ ಬರೆದ ವಿಷಯವನ್ನೇ ಬರೆಯುವದರಲ್ಲಿಯೂ, ತಿಳಿಯುವವರಲ್ಲಿಯೂ, ಲಜ್ಜೆಯು ಇವರನ್ನು ಬಿಟ್ಟು ಮತ್ತೆಲ್ಲಿಯೂ ತೋರಲಾರದು. ಯಾಕೆಂದರೆ ಇದು ಬಹು ನಾಚಿಕೆಕರವಾದದ್ದೇ! ವಿಷ್ಣುವೊದಲು ಅಜ್ಞಾನದಿಂದ ದೇಶದಲ್ಲಿ ಸರಿಯಾದ ವಿದ್ಯಾಭ್ಯಾಸವು, ಪಂಡಿತರನ್ನ ಸೇವೆಯೂ ತಪ್ಪಿಹೋದ ಕಾಲದಲ್ಲಾಯಿತು ಲಾಭಕರವಾದ ಮಾತಿನಿಂದ ಜನರನ್ನು ವಶಮಾಡಿಕೊಂಡು ಬ್ರಾಹ್ಮಣರೆಂಬವರು ತಾವು ಮೂಢರಾದ್ದರಿಂದ ತಮ್ಮ ಶಿಷ್ಯರನ್ನೂ ಮೂಢತ್ವದಲ್ಲಿಯೇ ಇಟ್ಟು ಅವರಿಗೆ "ನಮ್ಮ ನಾವಪೂಜೆಯೇ ನಿಮ್ಮ ಮೋಕ್ಷಾದಿ ಶ್ರೇಯಸ್ಸಿಗೆ ಕಾರಣವಾದದ್ದು, ಇದಕ್ಕಾಗಿ ನಿಮ್ಮ ತನುಮನ ಧನದಿಂದಲೂ ನಮ್ಮನ್ನು ತೃಪ್ತಿಪಡಿಸಿರಿ; ಇಲ್ಲವಾದರೆ ನಿಮಗೆ ಶ್ರೇಯಸ್ಸಾಗಲಾರದು" ಎಂದು ಬೋಧಿಸುತ್ತಾ ತಮ್ಮನ್ನು ಬಹುವಾಗಿ ಸೇವಿಸಿಕೊಳ್ಳುತ್ತಾ ಬಂದರು. ಹೀಗೆ ಬರಬರ ಎಲ್ಲಾ ಜನರೂ ಮಾಯಾ ಮಾರ್ಗಗಳಿಗೆ ಬಿದ್ದರೆಂದು ತಿಳಿದು, ಆಗ ಪರಸ್ಪರ ಜಂಘಪರಂಪರೆಯಿಂದ ವಿಷಯಾತುರರಾಗಿ ಶಾಕ್ತೇಯ ಮತವನ್ನು ನಿರ್ಮಿಸಿ ಚಕ್ರಬಂಧನ ಮಾಡಿ ಅನೇಕ ಕಾರ್ಯಗಳನ್ನು ಮಾಡುತ್ತಾ ಮಾಂಸ ಸೇವನೆ ಮದ್ಯಪಾನ ಮಾಡುತ್ತಾ ಬಂದರು. ಇದೇ ವಿಗ್ರಹಾರಾಧನೆಗೆ ಮೊದಲು. ಈ ಶಾಕ್ತೇಯರ ಸಂಪ್ರದಾಯವು ಇನ್ನೂ ಈ ಇಂಡಿಯಾ ದೇಶದಲ್ಲಿ ಇರುತ್ತದೆ.

ಆ ಮೇಲೆ ಜೈನಮತದವರಿಗೆ ವಿರೋಧಿಗಳಾಗಿ ಅವರ ಶಾಂತವಾದ ವಿರಕ್ತ ವಿಗ್ರಹಗಳಿಗೆ ಪ್ರತಿಯಾಗಿ ವಿಷಯಾನುರಕ್ತ ಸ್ತ್ರೀಲೋಲ ವಿಗ್ರಹಗಳನ್ನು ಕಲ್ಪಿಸಿ ತಮ್ಮ ಶಿಷ್ಯರು ಜೈನಮಂದಿರಗಳಿಗೆ ಹೋಗುತ್ತಿದ್ದದನ್ನು ತಪ್ಪಿಸಲು ವೈಷ್ಣವ ಮತವು ಇನ್ನೂ ವಿಕಾರ ವಿಕಾರವಾದ ವಿಗ್ರಹ ಮತಗಳೂ ಪ್ರಬಲವಾಗುತ್ತಾ ಬಂದು ಈಗ ಲೆಕ್ಕವಿಲ್ಲದ ವಿಗ್ರಹಾರಾಧಕ ಮತಗಳಿರುವವು.

ಇವರ ಅವಾಂತರದಿಂದ ನಮ್ಮ ದೇಶದಲ್ಲಿ ನಿಜವಾದ ಶಾಸ್ತ್ರ ರೀತಿಗಳು ಹುಟ್ಟುವದಕ್ಕೆ ಬದಲಾಗಿ ಅವರ ದುಷ್ಟ ಕ್ರಿಯೆಗಳನ್ನೆಲ್ಲಾ ಬಿಟ್ಟುಬಿಟ್ಟು ಒಳ್ಳೆಯದಾಗಿದ್ದವರ ಜೊತೆಗೆ ಬೇಕಾದಷ್ಟು ಇಲ್ಲದ್ದನ್ನು ಸೇರಿಸಿ ಪುರಾಣಗಳನ್ನು ಬರೆಯುವ ನಾಚಿಕೆಯುಂಟಾಗಿ ಅಸತ್ಯವನ್ನು ನಂಬುವವರನ್ನಾಗಿ ಮಾಡಿ ನಮ್ಮನ್ನೆಲ್ಲಾ ಹಾಳು ಮಾಡುವದಕ್ಕೆ ಮೂಲವಾಯಿತು.

ಷಡ್ದರ್ಶನಗಳೆಂಬ ಯುಕ್ತಿವಾದ ಶಾಸ್ತ್ರಗಳನ್ನು ಸಹ ಈ ಮಹನೀಯರು ತಮ್ಮ ತಮ್ಮ ಮತಾನುಸಾರವಾಗಿ ಅರ್ಥ ಮಾಡುವದರಲ್ಲಿ ಉಪನಿಷತ್ತುಗಳಾಗಿ ವೇದಾಂತಸೂತ್ರ ಒಂದಕ್ಕೆ ಇಪ್ಪತ್ತು ಇಪ್ಪತ್ತೊಂದು ಭಾಷ್ಯಗಳನ್ನು ಬರೆದಿರುವರು. ಈ ಭಾಷ್ಯಕಾರರಲ್ಲಿ ಮೂವರು ಮಾತ್ರ ಪ್ರಸಿದ್ಧರಾಗಿ ದ್ವೈತ—ಅದ್ವೈತ—ವಿಶಿಷ್ಟಾದ್ವೈತವೆಂಬ ತಮ್ಮ ಸಿದ್ಧಾಂತಗಳನ್ನು ಪ್ರದರ್ಶಿಸಿರುವರು.

ಶಂಕರಾಚಾರ್ಯರ ಅದ್ವೈತಸಿದ್ಧಾಂತ ಭಾಷ್ಯದಿಂದ ನಿರಾಕಾರಿಯಾದ ಬ್ರಹ್ಮ ಒಂದೇ ಅನಿರ್ವಚನೀಯವಾದ ಅನಾದಿ ಮಾಯಾವರಣದಿಂದ ಇರುವದು. ಕಾಣುವ ಈ ಪ್ರಪಂಚವೆಲ್ಲಾ ಆ ಮಾಯೆಯ ಆಟವಲ್ಲದೆ ನಿಜವಲ್ಲವೆಂಬ ಒಂದು ನವೀನ ಮತವನ್ನು ಸ್ಥಾಪಿಸಲು ಉಪನಿಷತ್ತುಗಳೆಂಬ ಋಷಿ ಕಲ್ಪಿತ ಉಪನ್ಯಾಸಗಳನ್ನು ತನ್ನ ಪರವಾಗಿ ಅರ್ಥ ಮಾಡಿಕೊಂಡು ಅದರಾಧಾರದಿಂದ ತನ್ನ ಸಿದ್ಧಾಂತವನ್ನು ಬಲಪಡಿಸಿರುವರು. ಜೀವಾತ್ಮನು ಮಾಯಾ ಬದ್ಧನಾದ ಪರಮಾತ್ಮನೇ! ತನ್ನನ್ನಾವೇಷ್ಟಿಸಿರುವ ಮಾಯೆಯನ್ನರಿತು ತಾನ್ಯಾರೆಂಬವನ್ನು ವಿಚಾರ ಮಾಡತೊಡಗಿದರೆ ಅದರಿಂದ ಸ್ವರೂಪಜ್ಞಾನ ಹುಟ್ಟಿ ಪರಮಾತ್ಮನಲ್ಲಿ ಲಯವಾಗಿ ಮೋಕ್ಷವನ್ನು ಪಡೆಯುವನೆಂದು ಹೇಳುವರು. ಈ ಮತದವರೂ ಪಾಂಡಿತ್ಯಕ್ಕಾಗಿ ಈ ತಮ್ಮ ಸಿದ್ಧಾಂತವನ್ನು ಸಭಾ ಜಯಪ್ರದದ ಅಸ್ತ್ರವಾಗಿಟ್ಟುಕೊಂಡಿರುವರಲ್ಲದೆ ಇವರೂ ಶಾಕ್ತೇಯ ಶೈವ, ವೈಷ್ಣವ, ಗಾಣಪತ್ಯಾದಿ ಎಲ್ಲಾ ಪೌರಾಣಿಕ ಮತವನ್ನೂ ಅನುಸರಿಸುತ್ತಾರೆ. ತಾವು ಆ ರೂಪಿಯೆಂದೆನ್ನುವ ದೇವರನ್ನು ಅನೇಕರು ಪೂಜಿಸುತ್ತಾ ಇದ್ದಾರೆ. ಅದು ಹಾಗಿರಲಿ, ಅವರ ಸಿದ್ಧಾಂತದಲ್ಲಿ ಏನಾದರೂ ಸತ್ಯವಿರುವದೋ ಪರಿಶೀಲಿಸೋಣ—ಬ್ರಹ್ಮ ಒಂದೇ ಹೊರತು ಬೇರೆ ಏನೂ ಇಲ್ಲವೆಂದೆನ್ನುವದಾದರೆ ಜಗತ್ತೆಲ್ಲ ಚೇತನವ್ಯಾಕೆ ಆಗಲಿಲ್ಲ! ಮಾಯಾಬದ್ಧನಾದ ಈ ಪರನೇ ಜೀವನಾಗಿರುವನೆಂದರೆ ಮನುಷ್ಯರಂತೆಯೇ ಮೃಗಾದಿ ಜಂಗಮಪ್ರಾಣಿಗಳಿಗೂ ಸ್ಥಾವರಗಳಿಗೂ ಸಮಸ್ತ ಶಕ್ತಿಯು ಯಾಕೆ ಸಿಕ್ಕಲಿಲ್ಲ ಮತ್ತು ಭೇದವಾಗಿ ಪರಸ್ಪರ ಯಾಕಿರುವವು? ಜಗತ್ತೇ ಸುಳ್ಳೆನ್ನುವಲ್ಲಿ ನವ ಘನ ವಿಜ್ಞಾನಶಾಸ್ತ್ರವು ಪದಾರ್ಥಗಳ ಜ್ಞಾನ ವೈದ್ಯಶಾಸ್ತ್ರವೂ ಮಿಥ್ಯ ಆಗಬೇಕಲ್ಲವೇ! ಶ್ರಮಾನುಸಾರವಾಗಿ ರೂಪ ಹೊಂದಿದ ಪದಾರ್ಥಗಳೂ ಜಗತ್ತಿನ ಸ್ಥಿತಿಯೂ ಗಿರಿಗಳಲ್ಲಿ ಇವನ್ನರಿಯದೆ ಎಲ್ಲಾ ಮಾಯೆ ಸುಳ್ಳೇ ಎಂದೆನ್ನುವ ಸಿದ್ಧಾಂತವೇ ಮಾಯೆ ಮತ್ತು ಸುಳ್ಳು ಸಹ ಆಗಿದೆಯಲ್ಲವೆ!

ದ್ವೈತಮತದ ಸಿದ್ಧಾಂತವೇನೆಂದರೆ—ಇವರು ಪ್ರಕೃತಿಯ ಗೊತ್ತಿಲ್ಲದವರನ್ನೂ, ಜೀವ ತತ್ವ ಮೊದಲಾದ ಶಕ್ತಿಯನ್ನೂ, ಚತುರ್ಭುಜಧಾರಿಯಾಗಿ ವೈಕುಂಠವಾಸಿಯಾದ ಲಕ್ಷ್ಮೀಸಮೇತನಾದ ನಾರಾಯಣನೆಂಬ ಪರಮಾತ್ಮನನ್ನೂ ಅನಾದಿಯಾಗಿ ತಿಳಿಯುತ್ತಾರೆ. ಕರಚರಣಾದ್ಯವಯವಯುಕ್ತನಾದ ಲಕ್ಷ್ಮೀನಾರಾಯಣನನ್ನೇ ಮಾಯಾಂಕಿತ ಪರಮಾತ್ಮನೆಂದು ಸಾಧಿಸುವದಕ್ಕಾಗಿ ಋಷಿಕಲ್ಪಿತ ಉಪನ್ಯಾಸ ಗ್ರಂಥಗಳೆಂಬ ಉಪನಿಷತ್ತುಗಳನ್ನೇ ತಮ್ಮ ಪರವಾಗಿ ತಿರುಗಿಸಿ ಅರ್ಥವನ್ನು ಮಾಡಲು ಪ್ರಯುಕ್ತಿಸಿ ಸ್ಥಾಪಿಸುವ ಬಗೆಯಲ್ಲಿ ತಾವೇ ಕೆಲವು ಉಪನಿಷದ್ವಾಕ್ಯಗಳನ್ನು ಕಲ್ಪಿಸಿ ಬರೆದಿರುವರು. ಶಂಕರಾಚಾರ್ಯರ ಕಾಲದಲ್ಲಿದ್ದ ಪಠನೀಯ ಉಪನಿಷತ್ತುಗಳು ಮಧ್ವಾಚಾರ್ಯರ ಕಾಲದಲ್ಲಿ ಎರಡರಷ್ಟು ವೃದ್ಧಿ ಮಾಡಲ್ಪಟ್ಟವು. ಇವರಿಗೆ ಹಿಡಿದಂತೆ ಪುರಾಣ ಪ್ರತ್ಯೇಕವು ಮತಾಂತರವನ್ನೂ ಬಾಧಿಸುತ್ತಿರಲಿಲ್ಲ. ದೇವರುಗಳು ಅನೇಕವೆಂತಲೂ, ಅವುಗಳನ್ನೆಲ್ಲ ಏಕರೂಪವಾಗಿ ಆರಾಧಿಸಬೇಕೆಂತಲೂ. ವಿಷ್ಣುವಿನ ಮನೆಯ ದೇವರುಗಳೇ ಬಾಕಿಯು ದೇವರಿಗಿಂತ ಶ್ರೇಷ್ಠರೆಂತಲೂ. ಇವರ ಮತ. ಇವರ ಮತದಲ್ಲಿ ಒಂದನೆ ಮಾನಸಿಕ ಧ್ಯಾನವೂ ಇಲ್ಲ. ಎಲ್ಲಾ ಮರುಳುತನವೇ ಆಗಿದೆ. ಪ್ರಕಾರವಾದ ನಾರಾಯಣನನ್ನು ಎಲ್ಲಾ ವಸ್ತುಗಳ ಅಂತರ್ಯಾಮಿಯಾಗಿರುವನೆಂದು ಹೇಳುವ ಹುಚ್ಚು ಇವರನ್ನೂ, ಹಾಗೆಯೇ ರಾಮಾನುಜಾಚಾರ್ಯರನ್ನೂ ಬಾಧಿಸುತ್ತಾ ಇದೆ. ಜೀವಗಳು ಸ್ವಭಾವವಾಗಿ ಸತ್ವರಜಸ್ತಮೋಭೇದಗಳುಳ್ಳವುಗಳಾಗಿಯೂ ಇರುವವಂತೆ. ಸತ್ವಗುಣದ ಜೀವಗಳಿಗೇನೇ ಮೋಕ್ಷವಂತೆ. ಹಾಗಾದರೆ ಈಶ್ವರನು ರಜಸ್ತಮೋಗುಣ್ಯ ಜೀವಗಳನ್ನು ಸೃಷ್ಟಿಯಲ್ಲಿ ಶರೀರವನ್ನಿತ್ತು ಕಳುಹಿಸಿದ್ದು ಮೂರ್ಖತನವಲ್ಲವೆ!

ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಸಿದ್ಧಾಂತವು ಮಧ್ವಾಚಾರ್ಯರ ಸಿದ್ಧಾಂತದಂತೆ ಸಾಕಾರನಾದ ಲಕ್ಷ್ಮೀನಾರಾಯಣನ ಪರಮೇಶ್ವರತ್ವವನ್ನು ಒಪ್ಪಿಕೊಂಡು ಭಗವದಂಶವುಳ್ಳ ಜೀವಾತ್ಮಗಳಿಗೆ "ತಾಪ, ಪುಂಡ್ರ, ನಾಮ, ಮಾಲಾ, ಮಂತ್ರ" ಗಳೆಂಬ ಪಂಚಸಂಸ್ಕಾರವುಳ್ಳ ಜೀವಗಳಿಗೇ ಮೋಕ್ಷವನ್ನು ಹೇಳುತ್ತಾರೆ. ಇವರ ಮತ್ತು ಮಧ್ವಾಚಾರ್ಯರ ಮತವು ಎರಡೂ ವೈಷ್ಣವಮತವೇ ಆದರೂ ರಾಮಾನುಜಾಚಾರ್ಯರು ವಿಷ್ಣು ರಾಮ ಈ ಎರಡು ದೇವರಲ್ಲಿ ವಿಶೇಷ ಭಕ್ತಿಯನ್ನು ತೋರಿಸುತ್ತಾರೆ. ಮಧ್ವಾಚಾರ್ಯರು ಕೃಷ್ಣದೇವರಲ್ಲಿ ಬಹು ಭಕ್ತಿ ತೋರಿಸುತ್ತಾರೆ.

ಇನ್ನೂ ಶುದ್ಧಾದ್ವೈತ ವಿಶಿಷ್ಟಾದ್ವೈತ ಮುಂತಾದ ಅನೇಕ ಮತಗಳಿರುವವು. ಎಲ್ಲರೂ ಪೌರಾಣಿಕಮತದವರೇ. ತಮ್ಮ ಪಾಂಡಿತ್ಯವನ್ನು ಜಗತ್ಪ್ರಸಿದ್ಧ ಪಡಿಸಬೇಕೆಂಬ ತಾತ್ಪರ್ಯದಿಂದ ದೇವರಲ್ಲಿ ಜೀವನಲ್ಲಿ ಐಕ್ಯತೆ ಭಿನ್ನತೆ ಮುಂತಾದ್ದನ್ನು ಸಭಾ ಜಯಪ್ರಾಂಥ್ಯದಲ್ಲಿ ಪ್ರತಿಪಾದಿಸುವವರಾಗಿರುವರಲ್ಲದೆ ಎಲ್ಲರೂ ಒಂದೇ ವಿಧವಾದ ಆಚರಣೆಯುಳ್ಳವರಾಗಿದ್ದಾರೆ. ಜೈನಮತದವರಿಂದ ಇವರಿಗುಂಟಾಗಿರುವ ಸಂಸ್ಕಾರವು ಸುಳ್ಳು ಗ್ರಂಥಗಳನ್ನೂ ಸುಳ್ಳು ದೇವರುಗಳನ್ನು ನಂಬುವಂತೆ ಮಾಡಿ ಪಾಪಪರಿಹಾರಕ್ಕಾಗಿ "ಶಿವಶಿವ," "ರಾಮ ರಾಮ" "ಕೃಷ್ಣ ಕೃಷ್ಣ" "ಪರದೇವಿ" ಮುಂತಾದ ನಾಮೋಚ್ಚಾರಣಾಸ್ತ್ರಗಳನ್ನು ಕೊಟ್ಟು ಪಾಪಮಾಡಲು ಧೈರ್ಯವುಳ್ಳವರನ್ನಾಗಿ ಮಾಡಿರುವದು. ಇಂಥಾ ಆಸ್ತಿಕರಾಗಿರುವದಕ್ಕಿಂತಲೂ ತಾವು ಪೂರ್ವದಲ್ಲಿದ್ದಂತೆ ನಾಸ್ತಿಕರಾಗಿದ್ದರೇನೇ ಒಳ್ಳೇದಾಗಿತ್ತು.

ಇವರು ತುಟಿಗಳಿಂದ ದೇವರನ್ನು ನಂಬುತ್ತಾರೆ. ಹೃದಯದಿಂದ ದೇವರನ್ನು ತಿರಸ್ಕರಿಸುತ್ತಾರೆ. ತಮ್ಮ ಕರ್ತವ್ಯಗಳಿಂದಲೋ ದೇವರನ್ನೇ ಹೆದರಿಸುತ್ತಾರೆ. ಇಂಥಾ ಜನರು ನಾಸ್ತಿಕರೆಂದು ಹೇಳಿಕೊಂಡರೂ ತೀರದಾಗಿದೆ.

"ಹೇ ಪರಮಪಿತಾ, ಈ ದುಷ್ಟ ಸಂತತಿಯನ್ನು ಯಾವಾಗ ಸನ್ಮಾರ್ಗಕ್ಕೆ ತಿರುಗಿಸುವೆ!"

## ವಿಶೇಷ ವಿಷಯಗಳು.

ವಿಲಾಯತಿ ರಾಜ್ಯದ ಸ್ವಸ್ಥಾನಗಳ ಸೆಕ್ರೆಟರಿಯವರಾದ ಮಿ॥ ಛೇಂಬರ್ಲೇನ್ ಯವರು ಪತ್ನಿಸಹಿತ ಅಮೇರಿಕಕ್ಕೆ ಹೋಗಿಬರುವವರಾಗಿದ್ದಾರೆ.

* * * *

ಸಹರಾ ಮರಳು ಕಾಡಿನಲ್ಲಿರುವ ಮುಸಲ್ಮಾನರು ಸರ್ಕಾರದವರ ಮೇಲೆ ಯುದ್ಧಕ್ಕೆ ಹೊರಟಿದ್ದಾರೆ. ಅವರನ್ನು ಅಣಗಿಸುವದಕ್ಕೆ ಫ್ರೆಂಚರು ಅಲ್ಲಿಗೆ ಸೈನ್ಯವನ್ನು ಕಳುಹಿಸಿದ್ದಾರೆ

* * * *

ಚಕ್ರವರ್ತಿಯವರ ವರುಷ ವರ್ಧಂತಿ ಉತ್ಸವವು ವಿಲಾಯತಿಯಲ್ಲಿ ಜೂನ್ ೨೬ಕ್ಕೇ ನಡೆಯುವದು. ಇತರ ಸ್ವಸ್ಥಾನಗಳಲ್ಲಿ ಅವರ ಜನ್ಮ ದಿನವಾದ ನವೆಂಬರ್ ೯ ರಲ್ಲಿ ನೆರವೇರುತ್ತದೆ.

* * * *

ರಷ್ಯ ಚಕ್ರವರ್ತಿಯವರು ಗ್ರಾಮಾಂತರಗಳ ರೈತಾಪಿ ಜನರ ಕ್ಷೇಮವನ್ನು ಬಯಸಿ ಅವರಿಂದ ಸರ್ಕಾರಕ್ಕೆ ಸಲ್ಲಬೇಕಾಗಿದ್ದ ೧೦೫ ಲಕ್ಷ ಪೌಂಡುಗಳ ಕಂದಾಯಗಳನ್ನು ಮಾಫಿ ಬಿಟ್ಟಿರುತ್ತಾರೆ.

* * * *

ವಿಲಾಯತಿಯಲ್ಲಿ ೧೮೯೬ನೇ ಇಸವಿಯಲ್ಲಿ ಆದಾಯದ ಮೇಲಣ ತೆರಿಗೆಯು ೫,೩೭೦,೦೦೦ ಪೌಂಡು ವಸೂಲಾಗುತ್ತಿತ್ತು. ಈಗಲಾದರೋ ಈ ಬಾಬಿನಲ್ಲಿ ೩,೮೦,೦೦,೦೦೦ ಪೌಂಡು ವಸೂಲಾಗುತ್ತಿದೆ.

* * * *

ಸ್ವೀಡೆನ್ ಎಂಬಾತನು ಮಧ್ಯ ಏಷ್ಯದಲ್ಲಿ ಸಂಚಾರವಾಡಿಕೊಂಡು ಹೋಗಿ ಈಗ ಆ ವಿಷಯದಲ್ಲಿ ಪುಸ್ತಕಗಳನ್ನು ಬರೆದು ಪ್ರಕಟಿಸುವದಕ್ಕೆ ಸ್ವೀಡನ್ ಸರ್ಕಾರದವರು ಅವನಿಗೆ ೬೫,೦೦೦ ರೂ. ಸಹಾಯದ್ರವ್ಯವನ್ನು ಕೊಡಿಸಿರುತ್ತಾರೆ.

* * * *

ಟ್ರಾನ್ಸ್ವಾಲ್ ಮುಖ್ಯಪಟ್ಟಣವಾದ ಪ್ರಿಟೋರಿಯಾದಲ್ಲಿರುವ ಇಂಗ್ಲಿಷ್ ಸೈನಿಕರ ಪೈಕಿ ಹತ್ತು ಜನರು ಕಾನೂನಿಗೆ ವಿರೋಧವಾದ ಕಾರ್ಯದಲ್ಲಿ ಆಸಕ್ತರಾಗಿದ್ದರು. ಇದಕ್ಕಾಗಿ ಐದು ಮಂದಿಯನ್ನು ಕೊಂದುಹಾಕಿ, ಉಳಿದ ಐದು ಮಂದಿಗೆ ಖುಲಾಸೆ ಮಾಡಿರುತ್ತಾರೆ.

* * * *

ವಿಲಾಯತಿ ರಾಜ್ಯದಿಂದ ೬,೦೦೦ ಜನರು ೩,೦೦,೦೦೦ ಪೌಂಡಿನಷ್ಟು ಆಸ್ತಿ ಸಹಿತವಾಗಿ ಹೊರಟು ಕೆನಡಾ ರಾಜ್ಯದಲ್ಲಿ ಹೋಗಿ ನಿಲ್ಲುವವರಾಗಿದ್ದಾರೆ. ಇವರಲ್ಲಿ ವ್ಯವಸಾಯಗಾರರು, ವೈದ್ಯರು, ವಕೀಲರು, ವರ್ತಕರು, ವೈದಿಕರು ಗುಮಾಸ್ತರು ಮೊದಲಾದವರೆಲ್ಲಾ ಸೇರಿಹೋಗುತ್ತಾರೆ.

* * * *

ಸ್ವೀಡನ್ ರಾಜ್ಯದ ದೊರೆಯವರು ಕಾಯಿಲೆ ನಿಮಿತ್ತವಾಗಿ ರಾಜ್ಯಾಧಿಕಾರವನ್ನು ತಮ್ಮ ಪುತ್ರರಿಗೆ ಕಳೆದ ಜನವರಿಯಲ್ಲಿ ವಹಿಸಿದ್ದರು. ಈಗ ಅವರು ಸೌಖ್ಯವಾಗಿರುವದರಿಂದ ಯಥಾಪ್ರಕಾರ ದೊರೆತನವನ್ನು ವಹಿಸಿ ಚಲಾಯಿಸುತ್ತಿದ್ದಾರೆ. ಇದುವರೆಗೆ ಅವರು ಹೀಗೆ ಮಾಡಿದ್ದು ಮೂರುಸಲವಾಯಿತು.

* * * *

ಫ್ರಾನ್ಸಿನ ತೀರಪಟ್ಟಣವಾದ ಮಾರ್ಸೇಲ್ಸ್‌ನಿಂದ ಬೊಂಬಾಯಿ ಎಂಬ ಹಡಗು ವ್ಯಾಪಾರ ಸರಕುಗಳನ್ನು ಭರ್ತಿಮಾಡಿಕೊಂಡು ಸೆನೆಗಲ್ಲಿಗೆ ಪ್ರಯಾಣ ಹೋಗುತ್ತಿರುವಾಗ್ಯೆ ದಾರಿಯಲ್ಲಿ ಒಳಗಿದ್ದ ಸಾಮಾನು ಹತ್ತಿಕೊಂಡು ಉರಿದುಹೋಯಿತು. ಅದರೊಳಗೆ ಪ್ರಯಾಣ ಮಾಡಿದ ೪೦ ಜನರು ಏನಾದರೋ ಇನ್ನೂ ತಿಳಿದುಬರಲಿಲ್ಲ.

* * * *

ಜರ್ಮನ್ ರಾಜ್ಯದಲ್ಲಿ ಗಾಜು ಕನ್ನಡಿಗಳನ್ನು ತಯಾರುಮಾಡುವದಕ್ಕಾಗಿ ಒಂದು ಕಾರ್ಖಾನೆ ಸ್ಥಾಪಿಸಲ್ಪಟ್ಟಿದೆ. ಇದಕ್ಕೆ ಸರ್ಕಾರದವರು ದ್ರವ್ಯ ಸಹಾಯ ಮಾಡುತ್ತಿರುವರು. ಪರದೇಶಗಳಿಂದ ಆ ವಿದ್ಯೆ ಕಲಿತವರನ್ನು ತಂದು ನೇಮಿಸಿಕೊಂಡಿದ್ದಾರೆ. ಸುಮಾರು ೩೬ ಮಂದಿ ಹೋಗಿ ಕೆಲಸವನ್ನು ಅಲ್ಲಿನ ಜನರಿಗೆ ಕಲಿಸಿಕೊಡುತ್ತಿದ್ದಾರೆ.

* * * *

ಆಸ್ಟ್ರೇಲಿಯದ ಕೆಲವು ಜನರು ಆಸ್ತಿ ತೆಗೆದುಕೊಂಡು ಹೋಗಿ ದಕ್ಷಿಣ ಆಫ್ರಿಕದಲ್ಲೇ ನಿಂತುಬಿಡಬೇಕೆಂದು ಅಲ್ಲಿಗೆ ಹೋದರು ಅಲ್ಲಿ ಕೆಲವು ದಿನವಿರುವಷ್ಟರೊಳಗಾಗಿ ಅಲ್ಲಿನ ಕಾರುಬಾರುಗಳು ಕೆಲವರಿಗೆ ಸರಿಬೀಳಲಿಲ್ಲ. ೧೬ ಮಂದಿ ೩೦,೦೦೦ ಪೌಂಡಿನ ಆಸ್ತಿಯನ್ನು ತೆಗೆದುಕೊಂಡು ವಾಪಸು ಆಸ್ಟ್ರೇಲಿಯಕ್ಕೆ ಹೊರಟು ಹೋದರು.

* * * *

ಯುದ್ಧ ಕಾಲದಲ್ಲಿ ವಿಲಾಯತಿ ರಾಜ್ಯಕ್ಕೆ ಈಗಿನಂತೆ ಆಹಾರ ಪದಾರ್ಥಗಳು ರಫ್ತಾಗಿ ಬರುವದಿಲ್ಲವೆಂತಲೂ, ಅಂಥಾ ವೇಳೆಗಳಲ್ಲಿ ಏನು ಮಾಡಬೇಕೆಂಬುವದನ್ನು ಗೊತ್ತುಮಾಡಿ ತಿಳಿಸಬೇಕೆಂತಲೂ ಚಕ್ರವರ್ತಿಯವರು ಅಪ್ಪಣೆ ಕೊಟ್ಟು, ತನಿಖೆ ಮಾಡುವದಕ್ಕಾಗಿ ಕೆಲವು ಮಂದಿ ದೊಡ್ಡ ಮನುಷ್ಯರನ್ನೂ ಉದ್ಯೋಗಸ್ಥರನ್ನೂ ನೇಮಿಸಿರುತ್ತಾರೆ.

ಚೀನಾ ರಾಜ್ಯಕ್ಕೆ ಸೇರಿದ ಕ್ವಾಂಗ್‍ಸಿ ಎಂಬ ಡಿಸ್ಟ್ರಿಕ್ಟಿನಲ್ಲಿ ಕ್ಷಾಮದ ಪೀಡೆಯಿಂದ ಪ್ರಜೆಗಳು ಲಯವಾಗಿಹೋದರು. ಆ ಪ್ರಾಂತ್ಯವೆಲ್ಲಾ ಬಯಲಾಗಿ ಬೆಂಗಾಡಾಗಿದೆ. ಬೆಟ್ಟಗುಡ್ಡಗಳೇ ಬಹಳ ಹೆಚ್ಚು. ಕಣಿವೆಗಳಲ್ಲಿ ಜನರು ಅಲ್ಪಸ್ವಲ್ಪ ಬೇಸಾಯ ಮಾಡುತ್ತಾರೆ. ಇಂಥಾ ಪ್ರದೇಶಗಳಲ್ಲಿ ಮಳೆ ನಿಂತುಹೋದಕಾರಣ ಜನರೆಲ್ಲಾ ಹೊಟ್ಟೆಗಿಲ್ಲದೆ ಲಯವಾದರು.

◆◆◆◆◆

ಆಸ್ಟ್ರೇಲಿಯದವರು ಕಪ್ಪು ಜನರನ್ನು ತಮ್ಮ ದೇಶದೊಳಕ್ಕೆ ಸೇರಿಸಿಕೊಳ್ಳುವದಿಲ್ಲವೆಂಬದಾಗಿ ಒಂದು ಕಾನೂನು ಮಾಡಿಕೊಂಡಿದ್ದಾರೆ. ಈ ಕಾನೂನನ್ನು ಅನುಸರಿಸಿ ಅಲ್ಲಿನ ಸರ್ಕಾರದವರು ಆ ದೇಶದಲ್ಲಿರುವ ಕಪ್ಪು ಜನರನ್ನೆಲ್ಲಾ ಹೊರಕ್ಕೆ ಹೊರಡಿಸಿಬಿಡಬೇಕೆಂತಲೂ, ಅವರನ್ನು ಹಡಗುಗಳಲ್ಲಿ ಕೂರಿಸಿ ಕರೆದುಕೊಂಡು ಹೋಗಿ ಕೆಲವು ದ್ವೀಪಗಳಿಗೆ ಬಿಟ್ಟು ಬರಬೇಕೆಂತಲೂ ಯೋಚಿಸುತ್ತಾರೆ. ಆ ದ್ವೀಪಗಳಲ್ಲಿರತಕ್ಕ ಜನರಾದರೋ ನರಮಾಂಸ ಭಕ್ಷಕರು. ಇವರನ್ನು ಅಲ್ಲಿ ಬಿಟ್ಟು ಬರುವದೂ ಸಮುದ್ರಕ್ಕೆ ದೊಬ್ಬಿಕೊಂದುಹಾಕುವದೂ ಎರಡೂ ಒಂದೇ ಎಂಬದಾಗಿ ಒಬ್ಬ ಅಧಿಕಾರಿಯು ತಿಳಿಸುತ್ತಾನೆ.

◆◆◆◆◆

ಚೀನಾ ರಾಜ್ಯದ ಚಕ್ರವರ್ತಿಯವರು ಪೀಕಿಂಗ್ ನಗರದಲ್ಲಿ ಮಳೆ ಬರಲಿ ಎಂಬದಾಗಿ ದೇವಸ್ಥಾನಕ್ಕೆ ಹೋಗಿ ದೇವರನ್ನು ಕುರಿತು ಬೇಡಿಕೊಂಡರು. ಮಳೆ ಬರಲೇ ಇಲ್ಲ. ಇದನ್ನು ನೋಡಿ ಚಕ್ರವರ್ತಿಯವರು ಆಜ್ಞಾಪಿಸಿರುವದೇನಂದರೆ—ಚಕ್ರವರ್ತಿಯವರು ಮಳೆ ಬರಲೆಂದು ಪ್ರಾರ್ಥನೆ ಮಾಡಿದಾಗ್ಯೂ ಮಳೆ ಸುರಿಯಲೇ ಇಲ್ಲ. ಆದಕಾರಣ ಅವರು ಮತ್ತೊಂದು ಸಲ ಪರಿವಾರಸಹಿತರಾಗಿ ದೇವಸ್ಥಾನಕ್ಕೆ ಹೋಗಿ ದೇವರನ್ನು ಈ ರೀತಿ ಬೇಡಿಕೊಳ್ಳುವವರಾಗಿದ್ದಾರೆ. ಆ ದಿನ ರಾಜವರ್ಗದವರೂ ಮುಖ್ಯಾಧಿಕಾರಿಗಳೂ ಸಕಲರೂ ಆ ದೇವಸ್ಥಾನದಲ್ಲಿ ಹಾಜರಾಗಿರಬೇಕು ಎಂಬದಾಗಿ. ಅತ್ತಲಾಗಿ ಕ್ಯಾಂಟನ್ ಪಟ್ಟಣದಲ್ಲಿ ಮಳೆ ವಿಪರೀತವಾಗಿ ಸುರಿಯುತ್ತಲೇ ಬಂದಿದೆ. ಅದನ್ನು ನಿಲ್ಲಿಸುವದಕ್ಕೋಸ್ಕರ ಅಲ್ಲಿನ ವೈಸ್ರಾಯಿಯೆಂಬ ಒಬ್ಬ ಚೀನಾ ದೊಡ್ಡ ಮನುಷ್ಯನು ಪ್ರಜೆಗಳ ಮುಖಂಡರನ್ನೆಲ್ಲಾ ದೇವಸ್ಥಾನದಲ್ಲಿ ಸೇರಿಸಿ, ತಾನು ಸಹ ದೇವರಿಗೆ ಪ್ರಾರ್ಥನೆ ಮಾಡಿದನು. ಮಳೆಬಿಟ್ಟು ಬಿಸಲು ಕಾಂಬದೆ ಸಾಕಲ್ಲಾ ಎಂಬದಾಗಿ ಹಂಬಲಿಸುತ್ತಿದ್ದಾರೆ.

ಜ್ವರಹರಿ. 19




ಇದು ಸಾಧಾರಣ ಜ್ವರ, ಹಳೇಜ್ವರ, ಮರೋಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೬೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೬೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮುಖಾಂತರ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ೬ ರೂ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

◆◆◆◆◆◆◆◆◆

ಅಮೃತ ಕರ್ಪೂರ.

Amum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹಾ ಔಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಬಹಿಷ್ಠೆಯಾಗುವ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯವು ಪರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕವಸಡ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜೆನ್ರಿಯು ಅಮೃತ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲು, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಜೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕಂಡ್ ಬೀಚ್ ಲೈನ್, ಮದರಾಸ್.

ಸನ್ ೧೯೦೩ ನೆ ಇಸವಿಯ
ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

# ಪಾಕೆಟ್ ಡೈರಿ

ಎ ನಂಬರ್ ಬಿ ನಂ|| ಸಿ ನಂ|| ಡಿ ನಂ||

ಈ ಡೈರಿಗಳು ವರ್ತಕರು, ಲಾಯರಗಳು, ಕಂಟ್ರಾಕ್ಟದಾರರು, ಮತ್ತು ದೊಡ್ಡ ಮನುಷ್ಯರು ಮುಂತಾದ ಸಮಸ್ತರಿಗೂ ಉಪಯೋಗವಾಗಿರುತ್ತೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು:— ಶೋಭಕೃತು ಸಂವತ್ಸರದ ಪಂಚಾಂಗ, ಕ್ಯಾಲೆಂಡರು, ಹಿಂದು ಹಬ್ಬಗಳು, ಮತ್ತು ರಜಾ ದಿನಗಳು, ರೈಲ್ವೆ ಚಾರ್ಜು, ಕೋರ್ಟುಗಳ ಕಚ್ಚೇರಿ, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು, ರಿಜಿಸ್ಟರ್ ಫೀಜು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ತುಲಾ ಮುಷ್ಟಿ ಪದಿಪನಿನ ಅಳತೆ, ಚಿನ್ನ ತೂಕದ ವಿವರ, ಗೌರೀ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಗುಳಿಕ ಕಾಲ, ವಾರಶೂಲೆಯ ದಿನ, ದಿನಗಟ್ಟಲೆ ಸಂಬಳದ ಪಟ್ಟಿ, ಇನ್ನೂ ಅನೇಕ ಮುಖ್ಯ ವಿಷಯಗಳಿವೆ. ದಪ್ಪ ಕಾಗದ, ಪ್ರತಿ ಪುಟಕ್ಕೂ ರೂಲುಹಾಕಿ, ಸೊಗಸಾಗಿ ಬೈಂಡು ಮಾಡಿ ಬಿಕರಿಗೆ ಸಿದ್ಧವಾಗಿದೆ. ಎ ನಂಬರ್ ಪೆನಸಲ್ ಇಡತಕ್ಕ ಚಿಕ್ಕ ಸೈಜ್ ಡೈರಿ ೧ಕ್ಕೆ ೩ ಆಣೆ; ಬಿ ನಂಬರ್ ಪೆನಸಲ್ ಇಟ್ಟು ಮುಚ್ಚಳ ಹಾಕಿರುವದು ಚಿಕ್ಕ ಸೈಜು ಡೈರಿ ೧ಕ್ಕೆ ೪ ಆಣೆ; ಸಿ. ನಂಬರ್ ಪೆನಸಲ್ ಇಡತಕ್ಕ ದೊಡ್ಡ ಸೈಜ್ ಡೈರಿ ೧ಕ್ಕೆ ೬ ಆಣೆ; ಡಿ ನಂಬರ್ ಪೆನಸಲ್ ಇಟ್ಟು ಮುಚ್ಚಳ ಹಾಕಿರುವದು ದೊಡ್ಡ ಸೈಜು ಡೈರಿ ೧ಕ್ಕೆ ೮ ಆಣೆ; ೧೨ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡವರಿಗೆ ೧ ಡೈರಿ ಹೆಚ್ಚಾಗಿ ದೊರೆಯುವದು. ಪೋಸ್ಟ್ ಚಾರ್ಜ್ ಬೇರೆ ಬೀಳುತ್ತೆ. ಬೇಕಾದವರು ಈ ಕೆಳಗಿನ ವಿಳಾಸದಾರರಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

ಹೋಮೋಸಿಯಾ.

ಕಷ್ಟನಿವಾರಣ.

ತಗಲುತ್ತಲೇ ನೋವು ಮಾಫಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಚೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಕ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಕ್ಷಣೆಗೋಸ್ಕರವಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಹೊಟ್ಟೆನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಾಯಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಪ್ಪರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತರ ಸೇರುವದಿಲ್ಲ.

ಕ್ರಯ.—ಸಣ್ಣ ಡಬ್ಬಾ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೬—೮ ಆ.; ಒಂದೇ ಸಲ ೧೨ ಡಬ್ಬಾ ತರಿಸಿಕೊಂಡರೆ ಟಪ್ಪಾಲ ಖರ್ಚು ಮಾಫಿ ಬಿಡುತ್ತಾರೆ. ರೂ. ೬—೮ ಆಣೆ ಬಾಬ್ತು ಡಬ್ಬಾದಲ್ಲಿ ೧ ರೂ. ಡಬ್ಬಾದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೬—೮ ಆ. ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

◆◆◆◆◆◆◆◆◆

ಹೋಮೋಸಿಯಾ ಯಂಬ್ರೊಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆವ ಕತೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಾಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಬಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೬೭ ಸೆಕಂಡು ಬೀಚ್ ಲೈನ್, ಮದರಾಸ್.

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

10—4—1903 ರಿಂದ 17—4—1903 ರ ವರೆಗೆ.

| ಸ್ಥಳ. | | ಪ್ಲೇಗ್ ತಗಲಿದ್ದು | ಪ್ಲೇಗ್ ಸತ್ತದ್ದು | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|---|
| ಬೆಂಗಳೂರು ಪಟ್ಟಣ | | 1 | 2 | 3 | 3 |
| ಮೈಸೂರು | ,, | 1 | 3 | 2 | 1 |
| ಬೆಂಗಳೂರು ಡಿಸ್ಟ್ರಿಕ್ಟು | | 21 | 20 | 16 | 13 |
| ಮೈಸೂರು | ,, | 40 | 29 | 33 | 19 |
| ಕೋಲಾರ್ | ,, | 8 | 5 | ? | 7 |
| ಕೋಲಾರ್ ಚಿನ್ನದ ಗಣಿಗಳು | | 2 | 2 | 7 | 5 |
| ತುಂಕೂರು ಡಿಸ್ಟ್ರಿಕ್ಟು | | 4 | 6 | 4 | 4 |
| ಹಾಸನ | ,, | 5 | 3 | 8 | 7 |
| ಚಿತ್ರದುರ್ಗ | ,, | 16 | 9 | 9 | 5 |
| ಕಡೂರ್ | ,, | 1 | 9 | 1 | 0 |
| ಶಿವಮೊಗ್ಗ | ,, | 10 | 8 | 10 | 7 |
| ಜುಮ್ಲಾ. | | 110 | 89 | 102 | 70 |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ವೈಶಾಖ ಶುದ್ಧ ತದಿಗೆ ಗುರುವಾರದಿಂದ ವೈಶಾಖ ಶುದ್ಧ ದಶಮಿ ಬುಧವಾರದ ವರೆಗಿನ ವಾರದ ಪಂಚಾಂಗ

೧೯೦೩ನೇ ಇಸವಿ ಏಪ್ರಿಲ್ ವ ತ್ತು ಮೇ

| ತಾ. | ವಾರ | ತಿಥಿ | ಘಳಿಗೆ. | ನಕ್ಷತ್ರ. | ಘಳಿಗೆ | ಮೇಷ ಪಹಸ ತೇದಿ. |
|---|---|---|---|---|---|---|
| 30 | ಗುರು * | ತದಿಗೆ | 19 20 | ರೋ | 22 53 | 18 |
| 1 | ಶುಕ್ರ | ಚೌತಿ | 11 2 | ಮೃ | 19 28 | 19 |
| 2 | ಶನಿವಾ | ಪಂಚಮಿ | 8 18 | ಆ | 15 39 | 20 |
| 3 | ರವಿವಾರ† | ಷಷ್ಠಿ | 2 10 | ಪುನರ್ | 53 59 | 21 |
| 4 | ಚಂದ್ರ | ಅಷ್ಟಮಿ | 19 5 | ಪುಷ್ಯ | 7 18 | 22 |
| 5 | ಕುಜ | ನವಮಿ | 14 12 | ಶ್ಲೇ | 3 30 | 23 |
| 6 | ಬುಧ‡ | ದಶಮಿ | 30 28 | ಮ | 0 2 | 24 |

* ತಿಥಿದ್ವಯಂ, ಅಕ್ಷಯತೃತೀಯ ಉತ್ತರಾಷಾಢ ಗ.
† ಅಗ್ನಿನಕ್ಷತ್ರಪ್ರವೇಶ ‡ ಮಂಡ್ಯದ ಜನಾರ್ದನಸ್ವಾಮಿ ರಥ

## ಪೇಟೆ ಧಾರಣೆ.

| ಸಿನಸಿ | ಮೈಸೂರು | ಬೆಂಗಳೂರು |
|---|---|---|
| ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ | ರೂ. ೧೦ ೪—೦ | ೧೦—೦—೦ |
| ಕೊಂಬೂತಿ ಅಕ್ಕಿ ಅವಲ್ | ೯—೧೨—೦ | ೧೦—೮—೦ |
| ,, ದುಯಂ | ೯—೪—೦ | ೧೦—೦—೦ |
| ಜಾವಾನಿ ಅಕ್ಕಿ | ೮—೧೨—೦ | ೧೨—೦—೦ |
| ಸಣ್ಣಕ್ಕಿ ಅವಲ್ | ೧೦ ೮ ೦ | ೧೨—೮ ೦ |
| ,, ದುಯಂ | ೧೦ ೪—೦ | ೧೦ ೮ ೦ |
| ತೊಗರೀ ಬೇಳೆ ಪಲ್ಲಾ ೧ಕ್ಕೆ | ೧೨ ೦ ೦ | ೧೩ ೦ ೦ |
| ,, ದುಯಂ | ೧೧ ೮—೦ | ೧೧—೮—೦ |
| ರ್‍ಯಾಕ ರಾಗಿ ಪಲ್ಲಾ ೧ಕ್ಕೆ | ೩ ೬—೦ | ೩—೩—೦ |
| ಕಾರಾಗಿ | ೩—೭ ೦ | ೩—೭—೦ |
| ಜೋಳ | ೩—೧೬—೦ | ೫—೦—೦ |
| ಹಲಸಂದೆ ಪಲ್ಲಾ ೧ಕ್ಕೆ | ೭—೮—೦ | ೮—೦—೦ |
| ಬಿಳೀ ಅವರೆ | ೭ ೦ ೦ | ೪—೮—೦ |
| ಹೆಸರು | ೧೦ ೦—೦ | ೧೦—೦—೦ |
| ಉದ್ದು | ೮ ೦ ೦ | ೯—೦—೦ |
| ಕಡಲೆ | ೧೦ ೦—೦ | ೧೦—೪—೦ |
| ಎಳ್ಳು | ೧೫—೧೨ ೦ | ೯—೧೨—೦ |
| ಹುರುಳಿ | ೩—೮ ೦ | ೪—೦—೦ |
| ಹರಳು ೧೭ ಸೇರಿಗೆ | ೮—೮—೦ | ೫—೧೪—೦ |
| ಸೀಗೇಕಾಯಿ ಮಣ ೧ಕ್ಕೆ | ೧—೪—೦ | ೧—೭—೦ |
| ಮೆಣಸಿನಕಾಯಿ | ೭—೧೨—೦ | ೭—೦—೦ |
| ,, ದುಯಂ | ೬—೬ ೦ | ೦—೮—೦ |
| ಬೆಲ್ಲ ದೊಡ್ಡ ಅಚ್ಚು | ೩—೧೨—೦ ಮ | ೧—೭—೦ |
| ಒಳ್ಳೆಣ್ಣೆ ಮಣ ೧ಕ್ಕೆ | ೪—೪ ೦ | ೪—೮—೦ |
| ಹರಳೆಣ್ಣೆ ,, | ೩—೧೭—೦ | ೩—೦—೦ |
| ಕೊತ್ತುಂಬರಿ ಪಲ್ಲ ೧ಕ್ಕೆ | ೩—೧೦—೦ | ೩—೫—೦ |
| ಉಪ್ಪು ,, | ೮—೪—೦ | ೮—೦—೦ |
| ಹುಣಸೇ ಹಣ್ಣು | ೦ ೧೭—೦ | ೦—೧೭—೦ |
| ,, ಹಳೇದು | ೦—೧೦—೦ | ೦—೧೦—೦ |
| ತುಪ್ಪ | ೧೦ ೧೭—೦ | ೧೦—೦—೦ |
| ಸೀಮೆಯೆಂಣೆ ಪೆಟ್ಟಿ ೧ಕ್ಕೆ | ೬ ೪—೦ | ೪—೫—೦ |
| ತೆಂಗಿನಕಾಯಿ ೧೦೦ ಕ್ಕೆ | ೪—೪—೦ | ೩—೧೭—೦ |
| ಅಡಲೇಕಾಯಿ ಮಣ ೧ಕ್ಕೆ | ೦—೧೪ ೦ | ೦—೦—೦ |
| ಅಂಟುವಾಳದಕಾಯಿ ಮಣ ೧ಕ್ಕೆ | ೦—೧೪—೦ | ೦—೧೪—೦ |
| ಚಿನ್ನ (ಪವನ್) ಕೆಂಪು | ೧೫—೪—೦ | ೧೫—೩—೦ |
| ,, ,, ಪಸಿಮೆ | ೧೫—೮—೦ | ೧೫—೭—೦ |
| ,, ,, ಗಟ್ಟಿ ತೊಲ ೧ಕ್ಕೆ | ೨೬—೦—೦ | ೨೪—೮—೦ |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ | ೭೭—೦—೦ | ೭೭—೮—೦ |

Printed and Published by the Rev. E. W Thompson, M.A the Proprietor and Manager, Wesleyan Mission Press Mysore. 30/1,1903.

# ವೃತ್ತಾಂತ ಪತ್ರಿಕೆ.

REGISTERED M. 20.

ಯ ೧ ದುಡ್ಡು —:o:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೬ | ಮೈಸೂರು—ಸನ್ ೧೯೦೩ ನೇ ಇಸವಿ ಮೇ ತಾರೀಖು ೭ ನೇ ಗುರುವಾರ. | ಸಂಚಿಕೆ ೪೮



## MELLIN'S FOOD.

ಮೆಲಿನ್ ಎಂಬವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮೂಳೆಗಳೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಿಕಮಾನಸಿಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತದೆ.

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಹಾಕಿ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಕೂಸುಗಳಿಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ಹಸು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಸಿಡುಬು ಹಾಕಿದ ಕಾಲದಲ್ಲಿಯೂ ಜ್ವರದಲ್ಲಿಯೂ ಒದಗುವ ಮಿಕ್ಕಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತದೆ.

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುರುತುಪದಾರ್ಥವು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ದಕ್ಷತೆಯುಳ್ಳದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ವೃದ್ಧಿಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ಬಹಳ ಮಟ್ಟಿಗೆ ಕಡಿಮೆಮಾಡುತ್ತದೆ.

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಷಾಪುಗಳಿಗೂ ಬರೆದು ತರಿಸಿಕೊಳ್ಳಬಹುದು.—

ಏಡನ್ .—ಮೆ॥ ಕಾವಸಿ ದಿನ್‌ಷಾ ಬ್ರದರ್ಸ್.

ಬೊಂಬಾಯಿ :—ಮೆ॥ ಲೇದಂ ಆಬೆರ್‌ಕ್ರಾಂಬಿ ಕಂಪೆನಿ.

ಕಲ್ಕತ್ತಾ .—ಮೆ॥ ಮೆಕ್ಕೆನ್‌ಜಿ ಲಯಲ್ ಕಂಪೆನಿ.

ಕೊಲಂಬೊ :—ಮೆ॥ ಸಾಲ್ ವಿಲ್ಸನ್ ಕಂಪೆನಿ.

ಕರಾಚಿ :—ಮೆ॥ ಎಚ್. ಜೆ. ರುಸ್ತುಂಜಿ ಕಂಪೆನಿ.

ಮದ್ರಾಸು :—ಮೆ॥ ಓಕ್ ಕಂಪೆನಿ.

ರಂಗೂನ್ :—ಲೇಹಂ ಬ್ಲ್ಯಾಕ್ ಕಂಪೆನಿ.


## ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ಮ್ಯುನಿಸಿಪಲ್ ಲಾಂದ್ರಗಳನ್ನು ಹಚ್ಚತಕ್ಕ ಬಗ್ಗೆ ಟೆಂಡರು. ಇಸ್ತಿಹಾರನಾಮೆ.

ತಾರೀಖು ೨೦ ನೆ ಮಾರ್ಚಿ ಏಪ್ರಿಲ್ ೧೯೦೩ ನೆ ಇಸವಿ.

೧೯೦೩ ನೇ ಇಸವಿ ಜುಲೈ ತಾರೀಖು ೧ ರ ಲಾಗಾಯಿತು ೧೯೦೪ ನೇ ಇಸವಿ ಜೂನ್ ತಾರೀಖು ೩೦ ರ ವರೆಗೆ ಮೈಸೂರು ಷಹರು ಮ್ಯುನಿಸಿಪಲ್ ಸರಹದ್ದಿನ ಒಳಗೆ ರಸ್ತೆಗಳ ಬಾಜೂವಲ್ಲಿಯೂ, ಮತ್ತು ಗಲ್ಲಿಗಳಲ್ಲಿಯೂ, ಸಹ ಇರತಕ್ಕ ಮ್ಯುನಿಸಿಪಲ್ ಲಾಂದ್ರಗಳನ್ನು ಶೀಮೆಯೆಣ್ಣೆಯಿಂದ ಹಚ್ಚಿಸುವ ಕಂಟ್ರ್ಯಾಕ್ಟು ಬಾಬಿಗಾಗಿ ಅರಗು ಮೊಹರು ಮಾಡಿದ ಟೆಂಡರುಗಳನ್ನು ೧೯೦೩ ನೇ ಇಸವಿ ಮೇ ತಾರೀಖು ೧೫ ನೇ ಶುಕ್ರವಾರದ ದಿನ ಮಧ್ಯಾಹ್ನ ೩ ಘಂಟೆಯ ವರೆಗೂ ಈ ಕೆಳಗೆ ರುಜು ಮಾಡಿರುವವರಿಂದ ತೆಗೆದುಕೊಳ್ಳಲ್ಪಡುವದು.

೨. ಟೆಂಡರು ಇರತಕ್ಕ ಪ್ರತಿ ಒಂದು ಕವರಿನ ಮೇಲೂ, "ಮೈಸೂರು ಸಿಟಿ ಮ್ಯುನಿಸಿಪಲ್ ಲಾಂದ್ರಗಳನ್ನು ಹಚ್ಚತಕ್ಕ ಬಗ್ಗೆ ಟೆಂಡರು" ಎಂದು ಬರೆದು, ಮೈಸೂರು ಸಿಟಿ ಮ್ಯುನಿಸಿಪಲ್ ಕಮೀಷನ್ ಪ್ರೆಸಿಡೆಂಟರವರ ಹೆಸರಿಗೆ ವಿಳಾಸ ಬರೆಯಬೇಕು. ಕಂಟ್ರ್ಯಾಕ್ಟರು ಟೆಂಡರಿನ ಸಂಗಡ ಒಂದುನೂರು ರೂಪಾಯಿಗಳನ್ನು ನಗದಾಗಿಯೇ ಆಗಲಿ ಅಥವಾ ಕರೆನ್ಸಿ ನೋಟುಗಳ ರೂಪವಾಗಿಯೇ ಆಗಲಿ, ಡಿಪಾಜಿಟ್ಟು ಬಗ್ಗೆ ಹಾಜರುಮಾಡಬೇಕು. ಅಥವಾ ಕಂಟ್ರ್ಯಾಕ್ಟುದಾರನ ಟೆಂಡರು ಮಂಜೂರಾಗದಿದ್ದರೆ, ಡಿಪಾಜಿಟ್ ಬಗ್ಗೆ ಹಾಜರುಮಾಡಲ್ಪಟ್ಟ ಮೊಬಲಗು ವಾಪಸ್ಸು ಮಾಡಲ್ಪಡುವದು.

೩. ಪ್ರತಿ ಒಂದು ಟೆಂಡರಿನಲ್ಲಿಯೂ, ಈ ಕೆಳಗೆ ನಮೂದಿಸಿರತಕ್ಕ ಪಟ್ಟಿಯಲ್ಲಿ ಕಂಡಿರುವ ಕಾಲವನ್ನು ಅನುಸರಿಸಿ, ಲಾಂದ್ರ ಹಚ್ಚಿಸುವದಕ್ಕೆ ಮಾಹೆಯಾನಾ, ಪ್ರತಿ ಒಂದು ಲಾಂದ್ರಕ್ಕೆ ಇರುವ ವೆಟ್ಟು ಒಪ್ಪಿಕೊಳ್ಳುವ ಮೊಬಲಗಿನ ದರವನ್ನು ಸ್ಪಷ್ಟವಾಗಿ ನಮೂದು ಮಾಡಬೇಕು.

೪. ಈ ಲಾಂದ್ರಗಳಿಗೆ ಬೇಕಾಗುವ ಬಿರ್ಡರುಗಳನ್ನು ಮ್ಯುನಿಸಿಪಾಲಿಟಿಯವರು ಸಪ್ಲೈ ಮಾಡುತ್ತಾರೆ. ಚಿಮಿಣಿಗಳಲ್ಲಿ ಉರಿಸತಕ್ಕ ಬತ್ತಿಗಳು ಪ್ರತಿ ಒಂದೂ, ಒಂದು ಅಂಗುಲ ಅಗಲ ಉಳ್ಳದ್ದಾಗಿಯೂ, ೧೨೫ ಡಿಗ್ರಿಗಳ ಶೀಮೆಯೆಣ್ಣೆಯು ಹಚ್ಚಿಯೊಡನೆ, ೧೮ ಮೇಣದ ಬತ್ತಿಗಳ ಕಾಂತಿಯನ್ನು ಬೆಳಕುಳ್ಳದ್ದಾಗಿಯೂ ಇರಬೇಕು.

೫. ಕಂಟ್ರ್ಯಾಕ್ಟುದಾರನು ತನ್ನ ಖಾತಲಾಗವಿನಿಂದ ಚಿಮಿಣಿಗಳನ್ನು ಸರಬರಾಜು ಮಾಡಿಕೊಳ್ಳಬೇಕು. ಅಲ್ಲದೆ, ಅಂಥಾ ಚಿಮಿಣಿಗಳನ್ನು ನಿರ್ಮಲವಾಗಿಯೂ ಒಳ್ಳೇ ಸ್ಥಿತಿಯಲ್ಲಿಯೂ, ಇಟ್ಟುಕೊಂಡಿರಬೇಕು. ಮತ್ತು ಮ್ಯುನಿಸಿಪಾಲಿಟಿಗೆ ಸಂಬಂಧಪಟ್ಟ ಸಾಮಾನುಗಳು ಅಂದರೆ, ದರೋಬಸ್ತು ಲಾಂದ್ರಗಳೂ, ಲಾಂದ್ರದ ಕಂಭಗಳೂ, ಮತ್ತು ವಿಶಿಷ್ಟ ಪದಾರ್ಥಗಳನ್ನೂ ಕಂಟ್ರ್ಯಾಕ್ಟಿನ ಅವಧಿ ಪೂರೈಸುವ ವರೆಗೂ ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡದ್ದು, ಅಂಥಾ ಮಿಯಾದೆ ಪೂರೈಸಿದ ಕೂಡಲೆ ಮೇಲ್ಕಂಡ ದರೋಬಸ್ತು ಸಾಮಾನುಗಳನ್ನೂ ಉತ್ತಮಸ್ಥಿತಿಯಲ್ಲಿ ಮ್ಯುನಿಸಿಪಲ್ ಪ್ರೆಸಿಡೆಂಟರವರ ವಶಕ್ಕೆ ಒಪ್ಪಿಸಿಕೊಡಲು ಬದ್ಧನಾಗಿರತಕ್ಕದ್ದು.

೬. ಕಂಟ್ರ್ಯಾಕ್ಟುದಾರನು ತನ್ನ ಸ್ವಂತ ಖರ್ಚಿನಿಂದ ಪ್ರೆಸಿಡೆಂಟರವರಿಗೆ ತೃಪ್ತಿಕರವಾಗಿ ಕಂಡುಬರುವಂತೆ, ಅತ್ಯುತ್ತಮವಾದ ಸಾಮಾನುಗಳಿಂದ ಕಂಟ್ರ್ಯಾಕ್ಟು ಮಿಯಾದೆ ಒಳಗೆ. ಒಂದು ಸಾರಿ ಮ್ಯುನಿಸಿಪಲ್ ಲಾಂದ್ರಗಳನ್ನೂ, ಲಾಂದ್ರದ ಕಂಭಗಳನ್ನೂ ನಂಬರು ಹಾಕಿಸಿ, ಅಥವಾ ಬಣ್ಣ ವಗೈರೆ ಹಾಕಿಸಿ, ರಿಪೇರಿ ಮಾಡುವದಕ್ಕೂ ಬದ್ಧನಾಗಿರಬೇಕು.

೭. ಹಾಲಿ ಈ ಮ್ಯುನಿಸಿಪಾಲಿಟಿಯಲ್ಲಿ ೯೦೦ ಲಾಂದ್ರದ ಕಂಭಗಳು ಇರುತ್ತವೆ. ಈ ಸಂಖ್ಯೆಯು ಪ್ರಾಯಶಃ ಇನ್ನೂ ಹೆಚ್ಚಬಹುದು.

೮. ಮೇಲ್ಕಂಡ ಕಂಟ್ರ್ಯಾಕ್ಟು ಬಗ್ಗೆ ಉಪಯೋಗಿಸತಕ್ಕ ಸಾಮಾನುಗಳ ವಗೈರೆ ವಿಷಯಕವಾದ ಯಾವ ತಪಶೀಲುಗಳನ್ನೇ ಆಗಲಿ ಈ ಕೆಳಗೆ ರುಜು ಮಾಡಿರುವವರ ಹೆಸರಿಗೆ ಬರೆದು, ಆ ಮೂಲಕ ತಿಳಿದುಕೊಳ್ಳಬಹುದು.

### ಪಟ್ಟಿ.

ಪ್ರತಿ ಒಂದು ಹಿಂದೂ ಮಾಸದ ಬಹುಳ ಬಿದಿಗೆಯ ಲಾಗಾಯಿತು ಮುಂದಣ ಹಿಂದೂ ಮಾಸದ ಶುದ್ಧ ಪಂಚಮಿಯ ವರೆಗೆ (ಆಖೈರು ದಿವಸಗಳೂ ಸೇರಿ) ಅಂದರೆ ೧೮ ದಿವಸಗಳ ಕಾಲಕ್ಕೆ —

| ಪಂಚರ ನಂಬರ್ | ತಿಥಿಯ ಹೆಸರು. | ಘಂಟೆ ಯಿಂದ | ಘಂಟೆ ವರೆಗೆ | ಷರಾ. |
|---|---|---|---|---|
| ೧ | ಬಹುಳ ಬಿದಿಗೆ | ೬ P. M | ೯ P. M. | |
| ೨ | ,, ಚವತಿ | ,, | ,, | |
| ೩ | ,, ಪಂಚಮಿ | ,, | ೧೨ P.M. | |
| ೪ | ,, ಷಷ್ಠಿ | ,, | ,, | |
| ೫ | ,, ಸಪ್ತಮಿ | ,, | ,, | |
| ೬ | ,, ಅಷ್ಟಮಿ | ,, | ,, | |
| ೭ | ,, ನವಮಿ | ,, | ,, | |
| ೮ | ,, ದಶಮಿ | ,, | ೩ A. M. | |
| ೯ | ,, ಏಕಾದಶಿ | ,, | ,, | |
| ೧೦ | ,, ದ್ವಾದಶಿ | ,, | ,, | |
| ೧೧ | ,, ತ್ರಯೋದಶಿ | ,, | ,, | |
| ೧೨ | ,, ಚತುರ್ದಶಿ | ,, | ,, | |
| ೧೩ | ,, ಅಮಾವಾಸ್ಯೆ | ,, | ,, | |
| ೧೪ | ಶುದ್ಧ ಪಾಡ್ಯಮಿ | ,, | ,, | |
| ೧೫ | ,, ಬಿದಿಗೆ | ,, | ,, | |
| ೧೬ | ,, ತದಿಗೆ | ,, | ,, | |
| ೧೭ | ,, ಚವತಿ | ,, | ,, | |
| ೧೮ | ,, ಪಂಚಮಿ | ,, | ,, | |

K. SREENIVASA RAO,
*For President.*


## ROBINSON'S PATENT BARLEY.

### ರಾಬಿನ್‌ಸನ್‌ರವರ ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಧಾನ್ಯದಿಂದ ಮಾಡಿದೆ. ಹಸ್ತಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ಬಾಧೆಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನು ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾರಾದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

# ನೋಟೀಸ್.

ಗೋತ್ರೋದಯ ಪ್ರಕಾಶಿಕಾ ಮತ್ತು ಕರ್ನಾಟಕ ಕೇಸರಿಯು ಈಗ ದೊಡ್ಡದಾಗಿ ಬಹಳ ಚಮತ್ಕಾರವಾಗಿದೆ. ಚಂದಾ ವರುಷ ೧ ಕ್ಕೆ ಒಂದೇ ರೂಪಾಯಿ. ಟಪಾಲುಹಾಸಲು ೦—೧೩—೦ ಇದಿ ಮುರಾಣೆ. ಕೆಲವು ದಿವಸಗಳು ಓದಿದರೆ ಗೊತ್ತಾಗುವದು. ಕನ್ನಡದಲ್ಲಿ ಇಷ್ಟು ಧೈರ್ಯವಾಗಿ ಬರೆಯುವದು ಯಾವದೂ ಇಲ್ಲ.

ಪ್ರೊಪ್ರೈಟರ್,
೧೨೮. ಅರಳೆಪೇಟೆ, ಬೆಂಗಳೂರು ಸಿಟಿ.



## ಓಂ.
### ಆರ್ಯಮತಗ್ರಂಥ ಪ್ರವರ್ಧನೀ ಸಭಾ,
### ಮೈಸೂರು.

ಆಸ್ತಿಕ ಶಿರೋಮಣಿಗಳಾದ ಆರ್ಯರೇ,

ಯಾವ ಮತವು ಸಕಲ ಮತಗಳಿಗೂ ಆದಿಯಾಗಿರುವುದೋ, ಯಾವುದು ಈ ಕಾಲದಲ್ಲಿ ನ್ಯಾಯಪ್ರಭುಗಳೆನಿಸಿದ ಶ್ರೀಹೂಣಸಾರ್ವಭೌಮರಿಂದಲೂ ಕೂಡ ಹೊಗಳಲ್ಪಡುತ್ತಿರುವುದೋ ಆ ಮತವೇ ಆರ್ಯಮತವೆಂಬುವುದು. ಈ ಆರ್ಯಮತವು ಆಚಂದ್ರಾರ್ಕಸ್ಥಾಯಿಯಾಗಿರಬೇಕೆಂದುದ್ದೇಶಿಸಿ, ತತ್ಸಾಧನಾರ್ಥವಾಗಿ ಭವಿಷ್ಯದಾಲೋಚನೆಯಿಂದ ಯಾವ ಮಹಾಪುರುಷರು ತದ್ಬೋಧಕಗಳಾದ ಸದ್ಗ್ರಂಥಗಳನ್ನು ಬರೆದಿರುವರೋ ಆ ಮಹನೀಯರೇ ಸತ್ಯವಂತರಾದ ಆರ್ಯ ಋಷಿಗಳು. ಹೀಗೆ ಅತ್ಯಂತ ಪ್ರಸಿದ್ಧರಾಗಿ ಆರ್ಯಋಷಿಗಳಿಂದ ಬರೆಯಲ್ಪಟ್ಟಿರುವ ಗ್ರಂಥಗಳೆಲ್ಲವೂ ಸಂಸ್ಕೃತಭಾಷೆಯಲ್ಲಿ ಗೂಢಾರ್ಥಂಗಳಾಗಿರುವುದರಿಂದ ಆ ಭಾಷಾವ್ಯುತ್ಪತ್ತಿಯಿಲ್ಲದ ಕರ್ನಾಟಕ ಭಾಷಾ ಪ್ರವರ್ತಕರಾದ ತದಪೇಕ್ಷಿಗಳಾದ ಸಕಲರಿಗೂ ಅವುಗಳು ಸುಗಮವಾಗಿಯೂ ಸುಲಭವಾಗಿಯೂ ಇಲ್ಲದ ಈ ದೋಷ ವಿಷಾದವು ಮೈಸೂರು ದೇಶೀಯ ವಿದ್ವತ್ಸಂಘದವರಲ್ಲನೇಕರ ಹೃತ್ಕಮಲದೊಳ್ ನೆಲೆಗೊಂಡಿದ್ದುದರಿಂದ ಈ "ಆರ್ಯಮತಗ್ರಂಥ ಪ್ರವರ್ಧನೀ ಸಭಾ" ಎಂಬ ಸಾರ್ಥಕನಾಮಧೇಯ ಸಭೆಯು ಸ್ಥಾಪಿತವಾಯಿತು.

ಈ ಸಭೆಯ ಕಾರ್ಯಾಲಯದಿಂದ ಪ್ರಚಾರವಾಗುತ್ತಿರುವ "ಆರ್ಯಮತೋದ್ಧಾರಿಣೀ" ಎಂಬ ಮಾಸಪತ್ರಿಕೆಯಲ್ಲಿ ಸಕಲರುಪಯೋಗಕರವಾಗಿಯೂ, ಧರ್ಮಾರ್ಥ ಕಾಮ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥ ಸಾಧಕಗಳಾಗಿಯೂ ಇರುವ ಪ್ರಾಚೀನ ಶ್ರುತಿ, ಸ್ಮೃತಿ ಉಪನಿಷತ್ತು, ಪುರಾಣ, ಇತಿಹಾಸ, ಕಾವ್ಯ ನಾಟಕಾದಿಗ್ರಂಥಗಳನ್ನು ಕನ್ನಡಿಗರಿಗೆ ಅತ್ಯಂತ ಸುಲಭವಾಗಿ ತಿಳಿಯುವಂತೆ ಕನ್ನಡ ವಚನರೂಪವಾಗಿ ಪ್ರಕಟಿಸುತ್ತಿದ್ದೇವೆ. ಇದಕ್ಕೆ ಸ್ವಮತಾಭಿಮಾನಿಗಳಾದ ಅನೇಕ ವಿದ್ವಜ್ಜನಗಳೂ ಮತ್ತು ಸಾಹುಕಾರಿ ಜನಗಳೂ ಆ ಪ್ರಾರ್ಥಿತರಾಗಿ ಬಂದು ಸಹಾಯಸೂಚಿಸಿರುವ ಭಾರಿ ಮೂಲಧನದ ಸಹಾಯದಿಂದ, ಈ ಮಾಸಪತ್ರಿಕೆಯು ಚಂದಾದಾರರನ್ನೆದುರು ನೋಡದೆ ಕೆಲವು ವರ್ಷಗಳಾದರೂ ವಿಚ್ಛಿನ್ನವಿಲ್ಲದೆ ನಡೆಯಲ್ಪಡುವಷ್ಟು ಚೈತನ್ಯವನ್ನುಂಟಾಗಿರುವುದರಿಂದ ಇದು ರೂಢಮೂಲವಾಗಿ ನಡೆಯತಕ್ಕದ್ದಾಗಿದೆ. ಇದಕ್ಕನುಗುಣವಾಗಿ ಶ್ರೀ ಧರ್ಮಪೀಠ ಪ್ರಭುಗಳೂ, ಸದ್ಭಕ್ತಿಯುಳ್ಳ ಪ್ರಜೆಗಳೂ ಸ್ವಮತ ಸ್ವಜನ ಸ್ವದೇಶಾಭಿಮಾನವುಳ್ಳ ಆಸ್ತಿಕರಾದ ಸರ್ವರೂ ಇದನ್ನು ಅನುಮೋದಿಸಿ, ಲೋಕೋಪಕಾರವಾದ ಈ ಮಹತ್ಪ್ರಯತ್ನಕ್ಕೆ ಸಂಪೂರ್ಣ ಸಹಾಯಮಾಡಿ, ನಮ್ಮ ಪ್ರಯತ್ನೋದ್ದೇಶಂಗಳನ್ನು ಸಫಲಗೊಳಿಸುವರೆಂದು ನಂಬಿದ್ದೇವೆ. ಇದಕ್ಕೆ ಚಂದಾದಾರರಾಗತಕ್ಕವರಿಗೆ ಅಮೂಲ್ಯವಾದ ಒಂದು ಗ್ರಂಥವು ಉಚಿತವಾಗಿ ಕೊಡಲ್ಪಡುತ್ತದೆ. ಪ್ರಚುರವಾಗುತ್ತಿರುವ ಈ ಮಾಸ ಪತ್ರಿಕೆಯು ಡೆಮ್ಮಿ ಎಂಟು ಪುಟಗಳ ಸೈಜುಳ್ಳ ೫ ಫಾರಂಗಳು; ಅಂದರೆ, ೪೦ ಪುಟಗಳುಳ್ಳದ್ದಾಗಿದೆ. ಮಹನೀಯರಾದ ವಾಚಕರ ಪ್ರೋತ್ಸಾಹವು ಹೇಗೆ ಹೆಚ್ಚುವುದೋ ಹಾಗೆ ಪತ್ರಿಕೆಯೂ ಕೂಡ ದೊಡ್ಡದಾಗುತ್ತಾ ಬರುವುದು.

—ಪತ್ರಿಕೆಯ ಪ್ರತಿವರ್ಷದ ಚಂದಾವಿವರ—

| | ರೂ—ಆ—ಪೈ. |
|---|---|
| ಮೈಸೂರುಪಟ್ಟಣದಲ್ಲಿರತಕ್ಕವರಿಗೆ ........ | ೨—೮—೦ |
| ,, ವಿದ್ಯಾರ್ಥಿಗಳಿಗೆ ........ | ೨—೦—೦ |
| ಪರಸ್ಥಳದಲ್ಲಿರತಕ್ಕವರಿಗೆ ಹಾಸಲುಸಹಿತ ........ | ೨—೧೪—೦ |
| ,, ವಿದ್ಯಾರ್ಥಿಗಳಿಗೆ ........ | ೨—೬—೦ |

ವಿದ್ಯಾರ್ಥಿಗಳೆಲ್ಲರೂ ತಮ್ಮ ಪಾಠಶಾಲೆಯ ಹೆಡ್ಮಾಸ್ಟರ ಮೂಲಕವಾಗಿಯೇ ತರಿಸಿಕೊಳ್ಳಬೇಕು. ಚಂದಾ ಮೊಬಲಗನ್ನು ಆಂಟೇ ಟೇಬಲ್'ಗಳ ಮೂಲಕವಾಗಿ ಕಳುಹಿಸುವವರು ಮಾತ್ರ ರೂ. ೧ ಕ್ಕೆ ಅರ್ಧಾಣೆಯನ್ನು ಹೆಚ್ಚಾಗಿ ಕಳುಹಿಸಬೇಕು. ಕಾಗದಗಳನ್ನೂ ಚಂದಾ ಮೊಬಲಗನ್ನೂ ಈ ಕೆಳಗಿನ ವಿಳಾಸದಾರರಿಗೆ ಕಳುಹಿಸುವುದು:— ಬಿ. ಎಚ್. ನರಸಿಂಹಯ್ಯ,

ಮ್ಯಾನೇಜರ್. ಆ. ಮ. ಗ್ರಂ. ಪ್ರ. ಸಭಾ,
ಮೈಸೂರು.


## ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

### ಇಸ್ತಿಹಾರನಾಮೆ.

ತಾರೀಖು ೨೩ ನೆ ಮಾಹೆ ಏಪ್ರಿಲ್ ೧೯೦೩.

ಸರ್ ೧೯೦೩ ನೆ ಇಸವಿ ಜುಲೈ ಮಾಹೆ ತಾರೀಖು ೧ ರ ಲಾಗಾಯತು ೧೯೦೪ ನೆ ಇಸವಿ ಜೂನ್ ಮಾಹೆ ತಾರೀಖು ೩೦ ರ ವರೆಗೆ ಈ ಕೆಳಗಿನ ಎ. ಷೆಡ್ಯೂಲಿನಲ್ಲಿ ನಮೂದಾಗುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲ್ ಗೇಟುಗಳ ಮುಖಾಂತರ ಸಿಟಿ ಒಳಕ್ಕೆ ಬರುವ ಗಾಡಿಗಳು ಜಾನವರುಗಳು ವಗೈರೆಗಳ ಮೇಲೆ ಬಿ. ಷೆಡ್ಯೂಲಿನಲ್ಲಿ ನಮೂದಾಗುವ ದರದಂತೆ ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ ೪೯ ಮತ್ತು ೫೧ ನೆ ಸೆಕ್ಷನ್‌ಗಳಲ್ಲಿ ನಮೂದಿಸಿರುವ ಷರತ್ತುಗಳಿಗೆ ಒಳಪಡಿಸಿ ಟೋಲ್ ಅಥವಾ ಸುಂಕವನ್ನು ವಸೂಲ್ಮಾಡುವ ಬಾಬನ್ನು ಸರ್ ೧೯೦೩ ನೆ ಇಸವಿ ಮೇ ಮಾಹೆ ತಾರೀಖು ೧೨ ನೆ ಮಧ್ಯಾಹ್ನ ೧ ಘಂಟೆ ಲಾಗಾಯತು ರಂಗಾಚಾರ್ಲು ಯವರ ಮೆಮೋರಿಯಲ್ ಹಾಲ್‌ನಲ್ಲಿ ಪ್ರಸಿಡೆಂಟರವರಿಂದ ಯಾ ಅವರಿಂದ ಸ್ಪೇಷಲ್ ಆಗಿ ನೇಮಿಸಲ್ಪಟ್ಟ ಇತರ ಆಫೀಸರುಗಳಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

೨ ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲ್‌ನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ಒಳಕ್ಕೆ ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು. ಕವಾಯ ಪ್ರಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಹಾಲ್ ಮಾಹೆ ತಾರೀಖು ನಿಶಿ ಟೋಲ್ ಬಾವತಿ ಮಾಡತಕ್ಕ ಆಸಾಮಿಗಳಿಗೆ ರಶೀತಿ ಕೊಡಬೇಕು.

೩ ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲಿ ಮಂಜೂರು ಮಾಡುವ ಅಧಿಕಾರವು ಪ್ರಸಿಡೆಂಟರವರಲ್ಲಿ ಇರುತ್ತದೆ.

೪ ಪ್ರತಿ ತಿಂಗಳು ೧೦ ನೆ ತಾರೀಖು ಒಳಗಾಗಿ ಹಿಂದಣ ಮಾಹೆಯ ಬಿಸ್ತು ಮೊಬಲಗನ್ನು ಬಾವತಿ ಮಾಡಬೇಕು. ಹರಾಜು ಆಖೈರು ಆದ ಕೂಡಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟದಾರನು ಎರಡು ಮಾಹೆಗಳ ಬಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಿಟ್ಟು ಬಗ್ಯೆ ಹಾಜರು ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ ಡಿಪಾಜಿಟ್ಟಿನಲ್ಲಿ ಇರುವ ಮೊಬಲಗನ್ನು ಆಖೈರು ೨ ಮಾಹೆಗಳ ಬಿಸ್ತು ಬಗ್ಯೆ ಜಮೆಗೆ ತೆಗೆದುಕೊಳ್ಳುತ್ತೆ.

೫ ಹರಾಜು ಆಖೈರು ಆದ ಕೂಡಲೆ ಡಿಪಾಜಿಟ್ ಬಗ್ಯೆ ಮೊಬಲಗನ್ನು ಹಾಜರು ಮಾಡದೆ ಇದ್ದರೆ ಖರ್ಚಿಗು ಮತ್ತು ಲುಕ್ಸಾನಿಗೆ ಅವಲ್ ಕಂಟ್ರಾಕ್ಟದಾರನನ್ನು ಗುರಿಪಡಿಸಿ, ಪುನಹ ಹರಾಜು ಮಾಡಿಸುತ್ತೆ. ಬಿಸ್ತು ಮೊಬಲಗನ್ನು ವಾಯಿದೆ ಒಳಗೆ ಹಾಜರು ಮಾಡಲು ತಪ್ಪಿದರೆ ಡಿಪಾಜಿಟ್ಟು ಮೊಬಲಗನ್ನು ದಂಡವಾಗಿ ತೆಗೆದುಕೊಂಡು, ಬಾಬನ್ನು ದುಸರಾ ಹರಾಜು ಮಾಡಿಸಿ, ಅದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವಲ್ ದರಖಾಸ್ತುದಾರನನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ ಮೊದಲು ಕಂಟ್ರಾಕ್ಟದಾರನಿಗೆ ಸದರಿ ನಫೆಯು ಹಕ್ಕು ಇರುವದಿಲ್ಲ.

೬ ಪ್ರತಿ ಒಬ್ಬ ಕಂಟ್ರಾಕ್ಟುದಾರನು ರೋಡಿನ ಟೋಲ್ ಗೇಟುಗಳ ಮುಖಾಂತರ ಪ್ರವೇಶ ಮಾಡುವ ತರಹವಾರಿ ಗಾಡಿಗಳು ಯಾ ಜಾನವರುಗಳು ಇವುಗಳ ಮೇಲೆ ವಸೂಲಾದ ಟೋಲ್ ಯಾನೆ ಸುಂಕ ಇವುಗಳ ತಪಶೀಲು ತೋರಿಸುವ ಲೆಕ್ಕವನ್ನು ಪ್ರಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿ ಇಟ್ಟು ಅಂಥಾ ಲೆಕ್ಕವನ್ನು ಕಂಟ್ರಾಕ್ಟರೇ ಪ್ರತಿ ವಾರೆಯಲ್ಲಿಯೂ ಪ್ರಸಿಡೆಂಟರವರ ಇನ್ಸ್‌ಪೆಕ್ಷನ್ ಬಗ್ಯೆ ಹಾಜರು ಮಾಡಬೇಕು. ಸದರಿ ಸಾಹೇಬರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಕ್ಕಗಳನ್ನು ಅವರ ಇನ್ಸ್‌ಪೆಕ್ಷನ್ ಬಗ್ಯೆ ಹಾಜರು ಮಾಡುವದಕ್ಕೆ ಬದ್ಧರಾಗಿರತಕ್ಕದ್ದು.

೭ ಪ್ರತಿ ಒಬ್ಬ ಕಂಟ್ರಾಕ್ಟುದಾರನು ಟೋಲ್ ಗೇಟು ಮುಖಾಂತರ ಬರತಕ್ಕ ಗಾಡಿ ಯಾ ಜಾನವರುಗಳ ತಪಶೀಲು ಲೆಕ್ಕವನ್ನು ೬ ನೆ ಕಲಂನಲ್ಲಿ ನಮೂದಿಸಿದ ಪ್ರಕಾರ ಇಡತಕ್ಕ ಬಗ್ಯೆ ಆಯಾಯ ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಪ್ರತಿಯೊಂದು ಟೋಲ್ ಗೇಟಿನಲ್ಲಿಯೂ ಒಪ್ಪೊಬ್ಬ ಮುತ್ಸದ್ದಿಯನ್ನು ಇಡುವದಕ್ಕೆ ಬದ್ಧನಾಗಿರತಕ್ಕದ್ದು.

೮ ಹಾಲಿ ಇರುವ ಟೋಲ್ ಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರಾಕ್ಟರೇ ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಂಡು ಅವುಗಳನ್ನು ಉಪಯೋಗ ಮಾಡಿಕೊಳ್ಳಬಹುದು.

೯ ಈ ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ಕಂಟ್ರಾಕ್ಟು ಬಾಬನ್ನು ಸರಿಯಾಗಿ ನಡಿಸಿಕೊಂಡು ಹೋಗತಕ್ಕ ವಿಚಾರದಲ್ಲಿ ಪ್ರತಿ ಒಬ್ಬ ಕಂಟ್ರಾಕ್ಟುದಾರನು ಪ್ರಸಿಡೆಂಟರವರಿಂದ ವಿಧಾಯಕವಾದ ನಮೂನೆಯಲ್ಲಿ ಛಾಪಾಕಾಗದಲ್ಲಿ ರೂಲ್ಸು ಪ್ರಕಾರ ಮುಚ್ಚಳಿಕೆ ಬರದುಕೊಡಬೇಕು.

೧೦ ಈ ಕೆಳಗೆ ನಮೂದಾಗುವವುಗಳ ಮೇಲೆ ಕಂಟ್ರಾಕ್ಟುದಾರನು ಟೋಲ್ ಯಾನೆ ಸುಂಕವನ್ನು ವಸೂಲ್ಮಾಡಕೂಡದು.—

(೧) ಮ್ಯುನಿಸಿಪಾಲಿಟಿಗೆ ತೆರಿಗೆ ಬಾವತಿ ಮಾಡಿ ನಂಬರು ಹಾಕಿಸಿಕೊಂಡಿರತಕ್ಕ ಗಾಡಿಗಳು ಅಥವಾ ಕ್ಯಾರೇಜುಗಳು, ಮ್ಯುನಿಸಿಪಾಲಿಟಿಯಿಂದ ಪಡೆದಿರತಕ್ಕ ಪ್ಯಾಸುಗಳನ್ನು ಹಾಜರು ಮಾಡುವ ಗಾಡಿಗಳು, ಅಥವಾ ಜಾನವರುಗಳು ಮತ್ತು ಗವರ್ನಮೆಂಟು ಯಾ ಮ್ಯುನಿಸಿಪಲ್ ಕಮಿಷನರ್‌ಗೆ ಸೇರಿದ ಅಥವಾ ಸಾಮಾನು ವಗೈರೆ ಸಾಗಿಸುವದಕ್ಕಾಗಿ ಮೊಕರಾರ್ಮಾಡಲ್ಪಟ್ಟ ಕ್ಯಾರೇಜುಗಳು, ಗಾಡಿಗಳು, ಮತ್ತು ಜಾನವರುಗಳ ಮೇಲೆ ಮತ್ತು ಒಂದು ದಿವಸದಲ್ಲಿ ೨೪ ಘಂಟೆ ಕಾಲಗಳ ಒಳಗಾಗಿ ಅಂದರೆ ಒಂದು ಮಧ್ಯರಾತ್ರಿಯಿಂದ ಇನ್ನೊಂದು ಮಧ್ಯರಾತ್ರಿ ವರಿಗೂ ಯಾ ಯಾವ ಕ್ಯಾರೇಜು, ಗಾಡಿ ಅಥವಾ ಜಾನವರುಗಳ ಮೇಲೆಯೇ ಆಗಲಿ ಒಂದು ಸಾರಿಗಿಂತಲೂ ಹೆಚ್ಚಾಗಿ ಟೋಲ್ ವಸೂಲ್ ಮಾಡಕೂಡದು.

(೨) ಟೋಲ್ ಮುಖಾಂತರ ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗೈರೆ ಸಾಗಿಸತಕ್ಕ ಬಗ್ಯೆ ಉಪಯೋಗಿಸುವ ಗಾಡಿ ಅಥವಾ ಜಾನವರುಗಳ ಮೇಲೆ ಮಿಲಿಟರಿ ಅಥವಾ ಗವರ್ನ್‌ಮೆಂಟ್ ಸ್ಟೋರಿಗೆ ಸಾಗಿಸಲ್ಪಡುವ ಸಾಮಾನುಗಳು ಇರತಕ್ಕ ಗಾಡಿ ಅಥವಾ ಜಾನುವರುಗಳ ಮೇಲೆ ಸರ್ಕಾರಿ ಡ್ಯೂಟಿ ಮೇಲೆ ಬರತಕ್ಕ ಪೋಲೀಸು ಆಫೀಸರು, ನೌಕರಮಾನೇರು, ಅವರ ಕ್ಯಾರೇಜುಗಳು, ಗಾಡಿಗಳು, ಮತ್ತು ಜಾನವರುಗಳು, ಇವುಗಳ ಮೇಲೆ ಮತ್ತು ಅರಮನೆ ಇಲಾಖೆಗೆ ಸೇರಿದ ಗಾಡಿ, ಕ್ಯಾರೇಜುಗಳು, ಜಾನವರುಗಳು, ಇವುಗಳ ಮೇಲೆ ಸಹಾ.

| ನಂ. | ಷೆಡ್ಯೂಲ್ A | |
|---|---|---|
| ೧ | ರೈಲ್ವೆ ಸ್ಟೇಷನ್ ರಸ್ತೆ | ಬಳಗೊಳದ ರಸ್ತೆ ಮತ್ತು ಸಿಕ್ಸ್‌ಮೈಲ್ ರಸ್ತೆ ಇವೆರಡು ಜಂಕ್ಷನ್ ಆಗುವ ಸ್ಥಳದಲ್ಲಿ ಇರುವ ಉಕ್ಕಡಾ |
| ೨ | ಬಳಗೊಳದ ರಸ್ತೆ | ಕೆಂಪನಕಟ್ಟೆ ಉಕ್ಕಡ |
| ೩ | ಶ್ರೀರಂಗಪಟ್ಟಣದ ರಸ್ತೆ | ಎರೆಕಟ್ಟೆ ಉಕ್ಕಡ |
| ೪ | ಬೆಂಗಳೂರು ರಸ್ತೆ | ವೀರನಗೆರೆ ಉಕ್ಕಡ |
| ೫ | ಸಮಪೇರಿ ರಸ್ತೆ | ಬಂಗ್ಲೆ ಸಂತ್ರಿ ಉಕ್ಕಡ |
| ೬ | ಮಹದೇವಪುರದ ರಸ್ತೆ | ಜಲಪುರಿ ಉಕ್ಕಡ. |
| ೭ | ಆಲನಹಳ್ಳಿ ರಸ್ತೆ | ಇಟ್ಟಿಗೆಗೂಡು ಉಕ್ಕಡ |
| ೮ | ರೇಸು ಕೋರಸು ರಸ್ತೆ | ರೋಗಿಸಂತ್ರಿ ಉಕ್ಕಡ |
| ೯ | ನಂಜನಗೂಡು ರಸ್ತೆ | ನಂಜನಗೂಡು ಉಕ್ಕಡ |
| ೧೦ | ಡಿಟೋ | ಹಾಲಿ ಉಕ್ಕಡದ ಬಳಿ ವಿಧಾಯಕ ಮಾಡುವಂತೆ ನಾಚನಹಳ್ಳಿ ಉಕ್ಕಡ |
| ೧೧ | ಮಾನಂದವಾಡಿ ರಸ್ತೆ | ಚಟ್ಟನಹಳ್ಳಿ ಉಕ್ಕಡ |
| ೧೨ | ವೈಸರಾಯ ರಸ್ತೆ | ಹೊಲಗೇರಿ ಉಕ್ಕಡ |
| ೧೩ | ಚಾಮರಾಜ ಅಗ್ರಹಾರದ ಹಿಂದಣ ರಸ್ತೆ | ಡಿಟೋ |
| ೧೪ | ಡ್ಯೂವಲಿ ರಸ್ತೆ | ಕುಕ್ಕನಹಳ್ಳಿ ಉಕ್ಕಡ |
| ೧೫ | ಇಲವಾಲದ ರಸ್ತೆ | ಮ್ಯುನಿಸಿಪಲ್ ಸರಹದ್ದು ಹೈದು ಆಗುವ ಬಳಿ ಹಾಲಿ ಈ ರಸ್ತೆ ಪಕ್ಕದಲ್ಲಿ ವಿಧಾಯಕ ಮಾಡುವ ಉಕ್ಕಡಾ. |

•••••••••

| ನಂ. | ಷೆಡ್ಯೂಲ್ B | ರೂ. | ಆ. | ಪೈ. |
|---|---|---|---|---|
| | ಟೋಲ್ ಗೇಟುಗಳಲ್ಲಿ ವಸೂಲ್ಮಾಡತಕ್ಕ ದರಗಳ ತಪಶೀಲು. | | | |
| ೧ | ಸ್ಪ್ರಿಂಗ್ ಇರತಕ್ಕ ೪ ಚಕ್ರದ ಪ್ರತಿ ಒಂದು ಗಾಡಿಗೆ. | ೦ | ೪ | ೦ |
| ೨ | ಡಿಟೋ ೨ ಚಕ್ರದ ಗಾಡಿಗೆ. | ೦ | ೨ | ೦ |
| ೩ | ಮನುಷ್ಯರು ಯಾ ಎತ್ತುಗಳು, ಕುದುರೆಗಳು, ಹೇಸರಕತ್ತೆಗಳು ಇವುಗಳಿಂದ ಎಳೆಯಲ್ಪಟ್ಟ ಭರ್ತಿಗಾಡಿಗಳು ಪ್ರತಿ ಗಾಡಿ ೧ ಕ್ಕೆ. | ೦ | ೨ | ೦ |
| ೪ | ಡಿಟೋ ಖಾಲಿ ಇರತಕ್ಕ ಗಾಡಿಗೆ. | ೦ | ೧ | ೦ |
| ೫ | ಡಿಟೋ ಹೇರು ಹೇರಿಕೊಂಡು ಬರತಕ್ಕ ಕೋಣ ಯಾ ಎತ್ತು ೧ ಕ್ಕೆ. | ೦ | ೦ | ೬ |
| ೬ | ಡಿಟೋ ಸವಾರಿ ಅಥವಾ ಹೇರು ಹೇರಿಕೊಂಡು ಬರತಕ್ಕ ೧೩ ಹಿಡಿಗಿಂತ ಮೀರಿದ ಕುದುರೆ ೧ ಕ್ಕೆ. | ೦ | ೧ | ೦ |
| ೭ | ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಬರತಕ್ಕ ಕುದುರೆ ೧ ಕ್ಕೆ. | ೦ | ೦ | ೬ |
| ೮ | ೧೩ ಹಿಡಿಗಳು ಅಥವಾ ಅದಕ್ಕಿಂತ ಕಮ್ಮಿಯಾಗಿ ಇರತಕ್ಕ ಸವಾರಿ ಅಥವಾ ಹೇರು ಇರುವ ಕುದುರೆ ೧ ಕ್ಕೆ. | ೦ | ೦ | ೬ |
| ೯ | ಡಿಟೋ ಆನೆ ೧ ಕ್ಕೆ | ೦ | ೮ | ೦ |
| ೧೦ | ಡಿಟೋ ಒಂಟೆ ೧ ಕ್ಕೆ. | ೦ | ೧ | ೦ |

K. Srinivasa Rao,
*For President.*

# ವೃತ್ತಾಂತಪತ್ರಿಕೆ.

—:o:—

ಸರ್ ೧೯೦೩ ನೇ ಇಸವಿ ಮೇ ತಾ॥ ೭ ನೇ ಗುರುವಾರ.

## ಐಗುಪ್ತ ರಾಜ್ಯದ ಭಾಗ್ಯೋದಯವು.

ಆಫ್ರಿಕಾ ಖಂಡದಲ್ಲಿ ನೈಲ್ ನದಿಯ ಪ್ರಾಂತ್ಯದಲ್ಲಿರುವ ಐಗುಪ್ತ (ಈಜಿಪ್ಟ್) ರಾಜ್ಯಕ್ಕೆ ಲಾರ್ಡ್ ಕ್ರೋಮರ್ ಎಂಬುವರು ಗೌವರ್ನರಾಗಿದ್ದುಕೊಂಡು ಆಳುತ್ತಿದ್ದಾರಷ್ಟೆ. ಇವರು ಈಗ ಆಳಿಕೆಯ ರಿಪೋರ್ಟನ್ನು ಪ್ರಕಟಿಸಿರುತ್ತಾರೆ. ಇದನ್ನು ನೋಡಲಾಗಿ ಇಂಗ್ಲಿಷರು ಆಳುವದಕ್ಕಾರಂಭಮಾಡಿದಾರಭ್ಯ ಐಗುಪ್ತ ರಾಜ್ಯದಲ್ಲಿ ಭಾಗ್ಯವೂ ಪ್ರಜಾ ಸೌಖ್ಯವೂ ವಿಚ್ಛಿತ್ತಿಯಿಲ್ಲದೆ ಒಂದೇ ಸಮನಾಗಿ ವೃದ್ಧಿ ಹೊಂದುತ್ತಿರುವವೆಂದು ಗೊತ್ತಾಗುವದು. ಐ

ಚೇಂಬರ್ಲಿನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

18




ಕೆಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಕೀಲುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಸುತ್ತಿ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ:—"ಕೆಳಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ —

ಬಿ. ವಿ. ನರಸಿಂಹಲು ಚೆಟ್ಟಿ,
ನಂ. ೨, ತಂಬೂಸಾಯಕರ ಬೀದಿ,
ಮದರಾಸ್.


ಹೈದರೆಂಬ ರಾಜನ ನವಲತ್ತು ಹೋಗಿ ಅದಾದಿ ರಾಜ್ಯದ ವಿನ ದೊಡ್ಡ ದಂಗೆಯನ್ನು ಅಣಗಿಸಿದಂದಿನಿಂದಲೂ ಇಂಗ್ಲಿಷರು ಆ ರಾಜ್ಯವನ್ನು ಆಳುತ್ತಾ, ಕ್ರಮ ಕ್ರಮವಾಗಿ ಮಹಾ ದೊಡ್ಡ ಕಾರ್ಯಗಳನ್ನು ಸಿದ್ಧಿಗೆ ತರುತ್ತಿರುವ ಸಾಹಸಶಕ್ತಿ ದಾರೆ ಎಂಬದಾಗಿ ಆಗಸ್ಟ್ ಕೆಪ್ಟನ್ ಡಾರ್ ಯವರು ತಿಳಿಸಿರುವರು. ಅವು ಯಾವನಂದರೆ—(೧) ಅಂದಾಯ ಕಾಲುವೆಗಳನ್ನು ಕಟ್ಟಿಸುವದಾಗಿರುವದು. ಈ ಉದ್ದೇಶವು ಈಗ ನೆರವೇರಿದೆ. ಜಮೀನ್ ಕಂದಾಯವು ಮೊದಲಿದ್ದದಕ್ಕಿಂತಲೂ ಈಗ ಬಹಳ ಕಡಿಮೆಯಾಗಿರುವದು. ಪ್ರಜೆಗಳಿಗೆ ತುಂಬಾ ಹಿಂಸೆಯನ್ನುಂಟುಮಾಡುತ್ತಿದ್ದ ಅನೇಕ ಜುಲುಮಿ ಕಂದಾಯಗಳನ್ನು ವಜಾ ಮಾಡಿರುತ್ತಾರೆ. (೨) ಪ್ರಜಾ ಸೌಕರ್ಯಕ್ಕೆ ಭಾರೀ ನೀರಾವರಿ ಕಾಲುವೆಗಳನ್ನು ಮಾಡಿಸಬೇಕೆಂಬುವದು. ಇದೂ ಸಿದ್ಧಿಗೆ ಬಂದು ಇದೆ. ಇದರಿಂದ ಸರ್ಕಾರದ ಬೊಕ್ಕಸವನ್ನು ಸೇರಿಸಿರುತ್ತಾರೆ. ಈಗ ಬಿಹಾರಿಯಲ್ಲಿ ವಾಣಿ ಬೆಳೆಯುವಂತಾಯಿತು. ಹೊರಗಿನಿಂದ ಸಾಲ ತಂದು ಕೆಲಸ ಮಾಡಿಸಬೇಕಾದ ಆಗತ್ಯವೇ ಇಲ್ಲ. ರಾಜಧಾನಿಯಲ್ಲಿ ಜರ್ಜ್ ಜಾತಾ ಉಳಿಯುವ ಬಿಲ್ಲು ಹಣದಿಂದಲೇ ಪ್ರಜೋಪಕಾರ ಕಾರ್ಯಗಳನ್ನು ಮಾಡಿಸುತ್ತಿದ್ದಾರೆ. ನೈಲ್ ನದಿಗೆ ಅಣೆಕಟ್ಟೆಗಳನ್ನು ಹಾಕಿಸಿ, ನೀರನ್ನು ಭಾರೀ ತಲಾವುಗಳಲ್ಲಿ ಬಂದು ನಿಲ್ಲುವಂತೆಯೂ, ಅವುಗಳಿಂದ ಜಮೀನುಗಳಿಗೆ ಹಾಯುವಂತೆಯೂ ಮಾಡಿಸಿರುವರು. ಇದು ಮಹಾ ಅಗಾಧವಾದ ಕಾರ್ಯವಾಗಿರುತ್ತದೆ. ಈ ಅಣೆಕಟ್ಟೆಗಳ ವಿಚಾರವನ್ನು ಕೆಲವು ಕಾಲಕ್ಕೆ ಮುಂಚೆ ಈ ಪತ್ರಿಕೆಯಲ್ಲಿ ನಾವು ವಿವರಿಸಿರುವದನ್ನು ವಾಚಕರು ಮರೆತಿರಲಾರರು. ಈ ನೀರಾವರಿ ಕಾಮಗಾರಿಯಿಂದ ನೈಲ್ ನದೀ ಪ್ರಾಂತ್ಯದಲ್ಲಿರುವ ಪ್ರದೇಶಗಳಿಗೆಲ್ಲಾ ತುಂಬಾ ಪ್ರಯೋಜನವಾಗುವದೆಂದು ನಿರೀಕ್ಷಿಸಲ್ಪಟ್ಟಿದೆ. ಆದರೆ ಮುಂದೆ ೧೯೦೩ನೇ ಇಸವಿಯಿಂದಾಚೆಗೆ ಈ ಬಾಬಿನಲ್ಲಿ ಹುಟ್ಟುವಳಿಯಾಗುವದೇ ಹೊರತು ಅದಕ್ಕೆ ಮುಂಚೆ ಆಗಲಾರದು. (೩) ಒಳದೇಶದ ಆಳ್ವಿಕೆಯ ವಿಚಾರವನ್ನು ಕ್ರಮಪಡಿಸುವದು. ಪೋಲೀಸ್, ಕೋರ್ಟು ಕಛೇರಿಗಳು, ಆರೋಗ್ಯ ವಿಚಾರ, ಈ ಬಾಬುಗಳನ್ನು ವಿಶೇಷವಾಗಿ ಕ್ರಮಕ್ಕೆ ತಂದಿಟ್ಟಿದ್ದಾರೆ. ಜಗತ್ತು ರಾಜ್ಯದಲ್ಲಿ ಮೊದಲಿದ್ದ ಅಧಿಕಾರಿಗಳು ತುಂಬಾ ಲಂಚಕೋರರೆಂಬುವದೂ, ಬಡಪ್ರಜಾ ಹಿಂಸಕರೆಂಬುವದೂ ಪ್ರಖ್ಯಾತಿಗೆ ಬಂದಿತ್ತು. ಆಗಲಾದರೋ ಪ್ರಜಾಕ್ಷೇಮಕ್ಕೆ ಅನುಕೂಲವಾಗಿ ನಡೆಯುವಂಥಾ ನೌಕರರನ್ನು ಇಂಗ್ಲಿಷರು ನೇಮಿಸಿರುತ್ತಾರೆ. ಇದಕ್ಕೆ ಇಂಗ್ಲಿಷ್ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚು ಮಾಡಿ ಇಲ್ಲ. ಸ್ವದೇಶೀಯರಲ್ಲೇ ದೊಡ್ಡ ದೊಡ್ಡ ಹುದ್ದೆಗಳಿಗೆ ಸೇರುವಂಥಾ ಜನರಿಗೆ ವಿದ್ಯಾಬುದ್ಧಿಗಳನ್ನು ಕಲಿಸಿ, ಅವರನ್ನೇ ಅಧಿಕಾರಗಳಿಗೆ ನೇಮಿಸುತ್ತಾ ಬಂದಿದ್ದಾರೆ. ಎಲ್ಲೆಲ್ಲೂ ವಿದ್ಯಾಶಾಲೆಗಳು ಹೆಚ್ಚುತ್ತಾ ಬಂದಿವೆ. ಪ್ರಜೆಗಳು ವಿದ್ಯಾಭ್ಯಾಸ ಮಾಡುವದರಲ್ಲಿ ಆಸಕ್ತಿಯನ್ನು ತೋರಿಸುತ್ತಿರುವರು. ಈಚೆಗೆ ಹೊಸದಾಗಿ ಇಂಗ್ಲಿಷರು ಸೇರಿದ ಸೌಡಾನ್ ಸೀಮೆಯಲ್ಲೂ ನಾಲ್ಕು ದೊಡ್ಡ ವಿದ್ಯಾಶಾಲೆಗಳಿರುತ್ತವೆ. ಅಲ್ಲಿನ ಬಾಲಕರು ವಿಶೇಷವಾಗಿ ವಿದ್ಯೆ ಕಲಿಯುತ್ತಲೂ, ಸತ್ಪ್ರಜೆಗಳ ಕರ್ತವ್ಯಗಳನ್ನು ತಿಳಿದುಕೊಳ್ಳುತ್ತಲೂ ಬಂದಿದ್ದಾರೆ.

## ಒಳದೇಶದ ವೃತ್ತಾಂತಗಳು.

ಕೆಲವರು ಕೆಲಸವಿಲ್ಲದೆ ಕೋಲಾರ್ ಚಿನ್ನದ ಗಣಿಗಳಲ್ಲಿ ಕೆಲಸ ಮಾಡುವದಕ್ಕೆ ಹೋಗಿ ಇರುತ್ತಾರೆ.

◆◆◆◆

ನಮ್ಮ ಮಹಾರಾಜರವರು ಈ ತಿಂಗಳ ೧೫ನೇ ತಾರೀಖು ಗುರುವಾರದ ದಿನ ನೀಲಗಿರಿಯಲ್ಲಿರುವ ಊಟಕಮಂಡ್ ಅಂದರೆ ಶ್ರೀಮದ್ ದೊಡ್ಡ ಮನುಷ್ಯರನ್ನೆಲ್ಲಾ ಕರೆದು, ಔತಣವನ್ನು ಮಾಡುತ್ತಾರೆಂದು ತಿಳಿಯುವದು.

◆◆◆◆

ಮೈಸೂರು ಟೌನ ಮುನಿಸಿಪಲ್ ಮೆಂಬರುಗಳು ಬೆಂಗಳೂರಿನಲ್ಲಿರುವಾಗ್ಯೆ ಮೀಟಿಂಗ್ ನಡಸತಕ್ಕ ಕಛೇರಿಯ ಕೊಠಡಿಯೊಳಗೆ ಲೇಟ್ ಸರ್ ಕೆ. ಶೇಷಾದ್ರಿ ಐಯರವರ ಭಾವ ಚಿತ್ರವನ್ನು ಬರೆಸಿ ಕಳೆದವಾರ ತಗಲಿಸಿರು ಕಟ್ಟಿದರೆಂದು ಕೇಳುತ್ತೇವೆ.

◆◆◆◆

ಪ್ರತಿ ವರುಷವೂ ಜೂನ್ ತಿಂಗಳ ೩ ನೆ ತಾರೀಖಿನ ದಿನ ಸರ್ಕಾರದ ಕಛೇರಿಗಳಿಗೂ ಸ್ಕೂಲುಗಳಿಗೂ ರಜಾ ಕೊಡಬೇಕೆಂತಲೂ, ಆ ದಿನವನ್ನು ಪ್ರಿನ್ಸ್ ಆಫ್ ವೇಲ್ಸರವರ ಜನ್ಮ ದಿನವಾಗಿ ಆಚರಿಸಬೇಕೆಂತಲೂ ಮೈಸೂರು ಸರ್ಕಾರದವರು ಹುಕುಂಕೊಟ್ಟಿದ್ದಾರೆ.

◆◆◆◆

ಹಾಸನದ ಡೆಪ್ಯುಟಿ ಕಮಿಷನರಾದ ಮಿ॥ ದೇವರಾಜೇ ಅರಸಿನವರು ಮೊನ್ನೆ ಸೋಮವಾರ ಮಧ್ಯಾಹ್ನ ರಾಜಧಾನಿಗೆ ದಯಮಾಡಿದರು. ಮನೆಯಲ್ಲಿ ಒಂದು ಶುಭಕಾರ್ಯವನ್ನು ತೀರಿಸಿಕೊಂಡು ೨—೩ ದಿನಗಳೊಳಗೇ ಹಾಸನಕ್ಕೆ ಪ್ರಯಾಣಮಾಡುವವರಾಗಿದ್ದಾರೆ.

◆◆◆◆

ಶ್ರೀಮನ್ ಮಹಾರಾಜರವರು ದಿಲ್ಲಿಯಿಂದ ಕೊಂಡುಕೊಂಡು ತಂದ ಕೆಲವು ಅಪೂರ್ವವಾದ ಸಾಮಾನುಗಳು ಸಾಗಣೆಗೆ ಬಂದವೆಂತಲೂ ಇವುಗಳನ್ನು ಚನ್ನಾಗಿ ಕಟ್ಟದೆ ಹೋದಕಾರಣ ಆ ಪೈಕಿ ಕೆಲವೆಲ್ಲಾ ಒಡೆದು ಕೆಟ್ಟುಹೋದವೆಂತಲೂ ಕೇಳುತ್ತೇವೆ.

◆◆◆◆

ಶಿವಸಮುದ್ರದ ವಿದ್ಯುಚ್ಛಕ್ತಿಯ ಇಲಾಖಾ ಮೊದಲ ಸರದಾರರ ಲೆಫ್ಟಿನೆಂಟ್ ಜೆ. ಸಿ. ಹಂಟರ್ ಯವರನ್ನು ಇನ್ನು ಮೂರು ವರುಷಗಳ ತನಕ ಮೈಸೂರು ಸರ್ಕಾರದವರು ಅದೇ ಕೆಲಸದಲ್ಲಿ ನೇಮಿಸಿಕೊಂಡಿರಬಹುದೆಂದು ಇಂಡಿಯಾ ಗವರ್ನಮೆಂಟಿನವರು ಒಪ್ಪಿರುತ್ತಾರೆ.

◆◆◆◆

ಫ್ರೆಂಚ್‌ರಾಕ್ಸ್ ಡೆಪ್ಯುಟಿ ಅಮಲ್ದಾರ್ ಮಿ॥ ಷೇಕ್ ಅಬ್ದುಲ್ಲಾ ಯವರನ್ನು ಹುಣಸೂರು ತಾಲ್ಲೂಕ್ ಅಮಲ್ದಾರಿಗೂ ಇಲ್ಲಿನ ಡೆಪ್ಯುಟಿ ಕಮಿಷನರ್ ಆಫೀಸ್ ಹೆಡ್ ಕ್ಲಾರ್ಕ್ ಮಿ॥ ಟಿ. ಡೋನೆಸ ವಿಲಿಯಮ್ಸ್ ಯವರನ್ನು ಫ್ರೆಂಚ್‌ರಾಕ್ಸಿನ ಡೆಪ್ಯುಟಿ ಅಮಲ್ದಾರಿಗೂ ಸರ್ಕಾರದವರು ನೇಮಿಸಿ ಕಳುಹಿಸಿರುತ್ತಾರೆ.

◆◆◆◆

ಚಿನ್ನದ ಗಣಿಗಳ ಪೋಲೀಸಿನವರು ಒಬ್ಬ ಮುದುಕಿಯ ಮನೆಯನ್ನು ಅನುಮಾನದ ಮೇಲೆ ಶೋಧನೆ ಮಾಡುತ್ತಿದ್ದಾಗ ಅವಳು ಏನೋ ಎತ್ತಿ ನುಂಗಿಬಿಟ್ಟಳು. ಕೂಡಲೆ ಅವಳನ್ನು ಇದು ವಾಂತಿ ಮಾಡಿಸಿದರು. ಚಿನ್ನದ ಗೋಲಿಗಳು ನ ಲ್ಯಾರು ಬಿದ್ದವು. ಗಣಿಗಳ ಚಿನ್ನವೆಂದು ಹೇಳಿ ಆ ಹೆಂಗಸನ್ನು ಹಿಡಿದು ವರ್ತನೆ ಮಾಡುತ್ತಿದ್ದಾರೆ.

◆◆◆◆

ವಿದ್ಯುಚ್ಛಕ್ತಿಯ ಕಾರ್ಯದ ವಿಚಾರವನ್ನೆಲ್ಲಾ ಕಲಿತುಕೊಂಡು ಬರಲು ಮೈಸೂರು ಸರ್ಕಾರದವರು ಮೂರು ಮಂದಿಯನ್ನು ಅಮೇರಿಕಕ್ಕೆ ವೇತನ ಕೊಟ್ಟು ಕಳುಹಿಸಿರುತ್ತಾರಷ್ಟೆ. ಇವರಿಗೆ ಇದುವರೆಗೆ ವರುಷಕ್ಕೆ ೩೬೦ ಡಾಲರ್‌ಗಳು ವೇತನವಿದ್ದದ್ದು ಸಾಲದೆಂತ ಕಂಡುಬಂದ ಕಾರಣ ಅದನ್ನು ೬೦೦ ಡಾಲರಿಗೆ ಏರ್ಪ ಮಾಡಿರುತ್ತಾರೆ.

◆◆◆◆

ಅರಸೀಕೆರೆಯಿಂದ ಮಂಗಳೂರಿಗೆ ರೈಲು ರಸ್ತೆ ಹಾಕಿದರೆ ವಿಪರೀತ ಹಣ ಖರ್ಚಾಗುವದೆಂತಲೂ, ಅದಕ್ಕೆ ಸರಿಯಾದ ಬಡ್ತಿ ಉತ್ಪತ್ತಿಯಾಗುವದು ಕಷ್ಟವೆಂತಲೂ, ಈ ವಿಷಯದಲ್ಲಿ ಮೇರು ದಾರರಿಗೆ ಗವರ್ನಮೆಂಟಿನವರು ಜಾಮೀನು ದಾರರಾಗುವದು ಸರಿಯಲ್ಲವೆಂತಲೂ ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿಗೆ ತಿಳಿಸಿದ್ದಾರೆ.

ನಮ್ಮ ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರು ಕಳೆದ ಬುಧವಾರ ಬೆಂಗಳೂರಿಂದ ನೀಲಗಿರಿಗೆ ಪ್ರಯಾಣಮಾಡಿದರೆಂದು ಕೇಳುತ್ತೇವೆ.

◆◆◆◆

ನೀಲಗಿರಿಯಲ್ಲಿ ಮದರಾಸ್ ಗವರ್ನರವರು ನಮ್ಮ ಮಹಾರಾಜರವರು ಇಳುಕೊಂಡಿರುವ ಬಂಗಲೆಗೆ ದಯಮಾಡಿ, ಭೇಟಿ ಕೊಟ್ಟು ಹೋದರೆಂದು ಸಮಾಚಾರ ಬಂದಿದೆ.

◆◆◆◆

ನಮ್ಮ ಶ್ರೀಮನ್ ಮಹಾರಾಜರವರಿಂದ "ವೈಣಿಕ ಶಿಖಾಮಣಿ" ಎಂಬ ಬಿರುದನ್ನು ಪಡೆದಿರುವ ಮಿ॥ ಎಸ್. ಶೇಷಣ್ಣನವರು ಮದರಾಸಿನಲ್ಲಿ ನಡೆಯುವ ಒಂದು ಸಂಗೀತ ಸಭೆಗೆ ಹೋಗಿರುತ್ತಾರೆ. ಅಲ್ಲಿಂದ ಬರೋಡಾ ಸಂಸ್ಥಾನಕ್ಕೆ ಹೋಗಿಬರುವವರಾಗಿದ್ದಾರೆ. ಮಹಾರಾಜರವರು ಕಾಗದ ಬರೆದು ಬರಮಾಡಿಕೊಂಡಿದ್ದಾರೆಂದು ತಿಳಿದುಬಂದಿದೆ.

◆◆◆◆

ಕಾಫಿ ಬೆಳೆಯುವ ಪ್ರಾಂತ್ಯದಲ್ಲಿ ಅರಕಲಗೂಡು ಮಧ್ಯ ಪ್ರದೇಶವಾಗಿದೆ. ಅಲ್ಲಿಂದ ಸಕಲೇಶಪುರದ ಮೇಲೆ ಹಾಸನಕ್ಕೆ ಹೋಗಿಬರುವಂತೆ ಯಾವಾದರೂ ಸರಿಯಾದ ಜಟಕಾ ಗಾಡಿಗಳಿಟ್ಟರೆ ಅಂಚೆ ಸಾಗಿಸುವ ಕಂಟ್ರಾಕ್ಟೂ ಅವರಿಗೆ ಸಿಕ್ಕುವದೆಂತಲೂ ಪ್ರಯಾಣಿಕರಿಗೆ ತುಂಬಾ ಅನುಕೂಲವಾಗುವದೆಂತಲೂ ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

◆◆◆◆

ರಾಜಧಾನಿಯ ಕೋಟೆಯಲ್ಲಿರುವ ಮಿ॥ ಅಯ್ಯಂಗಾರ್ ಚಿಕ್ಕದೇವರಾಜೇ ಅರಸಿನವರು ತಮ್ಮ ಮೂರನೇ ಕುಮಾರಿ ಪುಟ್ಟಕೆಂಪನಂಜಮ್ಮಣ್ಣಿಯನ್ನು ಲೇಟ್ ಶ್ರೀಕಂಠರಾಜ ಅರಸಿನವರ ಕುಮಾರ ಬಸವರಾಜ ಅರಸಿನವರಿಗೆ ಕೊಟ್ಟು ನೆನ್ನೆ ದಿನ ವಿವಾಹ ಮಾಡಿದರು. ನೂರಾರು ಮಂದಿ ದೊಡ್ಡ ಮನುಷ್ಯರು ವಿವಾಹ ಮಂಟಪವನ್ನು ಅಲಂಕರಿಸಿ ನೂತನ ವಧೂವರರಿಗೆ ಆಶೀರ್ವಾದ ಮಾಡಿದರು.

◆◆◆◆

ಕೋಲಾರ್ ಚಿನ್ನದಗಣಿಗಳಿಗೆ ಕುಡಿಯುವ ನೀರು ಸರಬರಾಜು ಮಾಡುವದಕ್ಕಾಗಿ ಸರ್ಕಾರದವರು ಬೇತಮಂಗಲದ ಕೆರೆಯನ್ನು ಅಚ್ಚುಕಟ್ಟು ಮಾಡಬೇಕೆಂದು ಗೊತ್ತು ಮಾಡಿರುತ್ತಾರಷ್ಟೆ. ಈ ಕೆರೆಯ ಒಳಗೆರೆಗೆ ವಿಪರೀತ ಜಮೀನು ಸೇರುವದು. ಸುಮಾರು ೪೦೦ ಎಕರೆ ತರೀಜಮೀನೂ, ೧೦೦ ಎಕರೆ ಖುಷ್ಕಿ ಜಮೀನೂ ಆ ಕೆರೆಗೆ ಸೇರುವದು; ಅಂದರೆ, ಸುಮಾರು ೬೦೦೦ ರೂಪಾಯಿನ ಕಂದಾಯ ಹುಟ್ಟುವಳಿ ಆಗುವದು ನಿಂತುಹೋಗುವದು.

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ನಮ್ಮ ಲೇಟ್ ಮಹಾರಾಜರವರ ಹೆಸರಿನ ಮೇಲೆ ಕಟ್ಟಿಸುತ್ತಿದ್ದ ಸೋಪಾನಗಳೂ ದೇವಸ್ಥಾನವೂ ಪೂರ್ತಿಯಾಗಿ ತಯಾರಾಗಿರುತ್ತವೆ. ಇದಕ್ಕೆ ೩—೪ ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಪ್ರಕಟವಾಗಿದೆ. ಇತ್ತಲಾಗಿ ಅದೇ ಉದ್ದೇಶದಿಂದ ಶ್ರೀರಂಗಪಟ್ಟಣದ ಕಾವೇರೀತೀರದಲ್ಲಿ ಒಂದು ಸತ್ರವು ತಯಾರಾಗಿದೆ. ಸೋಪಾನಪಟ್ಟಿಯು ಇನ್ನೂ ತಯಾರಾಗುತ್ತಿರುವದು. ಇವೆರಡಕ್ಕೂ ಒಂದು ಲಕ್ಷ ರೂಪಾಯಿ ಖರ್ಚಾಗಬಹುದು.

◆◆◆◆

ಇಂಪೀರಿಯಲ್ ಸರ್ವಿಸ್ ರೆಜಿಮೆಂಟುಗಳ ಇನ್ಸ್‌ಪೆಕ್ಟಿಂಗ್ ಆಫೀಸರಾದ ಕ್ಯಾಪ್ಟನ್ ಮೆಕ್ಲಾಯಿಡ್ ಯವರು ಹುಲಿ ಶಿಕಾರಿ ಮಾಡುವದರಲ್ಲಿ ಹೆಸರುವಾಸಿಗೆ ಬಂದಿದ್ದಾರೆ. ಇವರು ಕಳೆದ ವಾರ ಒಬ್ಬ ಶೈನಾತಿ ಸವಾರನನ್ನು ಕರೆದುಕೊಂಡು ಕಾಲೀಸ್ ಪೇಟೆ ಕಾಡಿನಲ್ಲಿ ಹೋಗಿ ಒಂದು ಗೂಳಿಯನ್ನು ಕಂಡು ಗುಂಡಿನಿಂದ ಹೊಡೆದರು. ಏಟು ತಿಂದ ಹುಲಿ ಓಡಿಹೋಗಿ ಒಂದು ಪೊದೆಯೊಳಗೆ ಸೇರಿಕೊಂಡಿತು. ಆ ಸವಾರನು ಅದನ್ನು ಅಟ್ಟಿಸಿಕೊಂಡು ಹೋಗಿ ಕೆಣಕಿದನು. ಅದು ಹಾರಿ ಅವನನ್ನು ಹಿಡಿದುಕೊಂಡಿತು. ಅಷ್ಟರಲ್ಲೇ ಕ್ಯಾಪ್ಟನ್‌ರವರು ಹೋಗಿ ಹುಲಿ ಅವನನ್ನು ಹಿಡಿದಿದ್ದಹಾಗೇ ಅದಕ್ಕೆ ಗುರಿಯಿಟ್ಟು ಗುಂಡು ಹೊಡೆದು ಕೆಡವಿದ್ದರು. ಆದರೆ ಅವನಿಗೆ ಜಾಸ್ತಿ ಪರಚಿದ ಗಾಯವಾಗಿದೆ. ಈಗ ಬೆಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದಾನೆ.

◆◆◆◆

ಕೋಲಾರ್ ಚಿನ್ನದ ಗಣಿ ಪೋಲೀಸಿನವರು ಒಂದು ಭಾರೀ ಚಿನ್ನದ ಕಳ್ಳತನವನ್ನು ಪತ್ತೆ ಮಾಡಿರುತ್ತಾರೆ. ಇದುವರೆಗೆ ಇಷ್ಟು ಜಾಸ್ತಿಯಾಗಿ ಯಾರೂ ಚಿನ್ನವನ್ನು ಕದ್ದಿದ್ದು ಇಲ್ಲ. ಪತ್ತೆ ಮಾಡಿದ ಚಿನ್ನಕ್ಕೆ ೪೦೦೦ ತೊಲಾ ತೂಕವಿದ್ದಿತೆಂತಲೂ, ಸುಮಾರು ೧೦,೦೦೦ ರೂ. ಕ್ರಯ ಬಾಳುವದೆಂತಲೂ ತಿಳಿದು ಬಂದಿದೆ. ನ್ಯೂವ್ ಪೋರ್ಟ್ ಡಾಕಿಂ ಸಾಲಿಟ್, ಕಲ್ಯಾಣ್ಯ ಆಚಾರಿ, ಸೂಸೆ ಎಂಬೀ ಮೂರು ಮಂದಿಯ ಬ್ಯಾಗಿನಲ್ಲೂ ಚಿನ್ನದ ಬಂದು ಇಟ್ಟಿಗೆ ಗಟ್ಟಿ ಇದೆ ಎಂದು ಗೊತ್ತಾಯಿತು. ಮೂವರು ಅದನ್ನು ಅವರಿಂದ ಕೊಂಡುಕೊಳ್ಳುತ್ತೇವೆಂದು ನಂಬಿಕೆ ಹುಟ್ಟಿಸಿ, ಅವರನ್ನು ಜೋಲಾರ್ ಪೇಟೆ ಸ್ಟೇಷನ್ ಬಳಿಗೆ ಬರುವಂತೆ ಮಾಡಿದರು. ಅವರು ಚಿನ್ನದ ಗಟ್ಟಿಯನ್ನು ಅಲ್ಲಿಗೆ ತೆಗೆದುಕೊಂಡು ಹೋದರು. ಅಲ್ಲಿ ಕೊಂಡುಕೊಳ್ಳುವವರು ಮೇಲ್ಕಂಡ ಮೂರು ಮಂದಿಯೂ ಅದನ್ನು ಕರೆದು ಕೊಂಡು ಹೋಗಿ ೫,೦೦೦ ರೂ. ಪೋಲೀಸಿಯನ್ನು ಅವರಿಗೆ ತೋರಿಸಿದರು. ಕೂಡಲೇ ಕಳ್ಳರು ತಮ್ಮ ಬಳಿ ಇದ್ದ ಚಿನ್ನದ ಗಟ್ಟಿಯನ್ನು ಹೊರಕ್ಕೆ ತೆಗೆದು ತೋರಿಸಿದರು. ಆಗ ಒಂದು ಸೀಟಿ ಧ್ವನಿ ಕೇಳಿ ಬಂತು. ತಕ್ಷಣ ಪೋಲೀಸಿನವರು ಕಾಣಿಸಿಕೊಂಡು ಆ ಕಳ್ಳರನ್ನು ಹಿಡಿದರು. ಕಳ್ಳರಿಗೂ ಪೋಲೀಸಿನವರಿಗೂ ಸ್ವಲ್ಪಹೊತ್ತು ಗುದ್ದಾಟವಾಯಿತು. ಕಡೆಗೆ ಅವರೆಲ್ಲಾ ಸಿಕ್ಕಿಬಿದ್ದು ಈಗ ಲಾಕಪ್ಪಿನಲ್ಲಿ ಇರುತ್ತಾರೆ. ಚಿನ್ನವನ್ನು ಅಮಾನತಾಗಿ ಇಟ್ಟು ಮೈಸೂರು ಗವರ್ನಮೆಂಟಿನ ಛೀಫ್ ಇನ್ಸ್‌ಪೆಕ್ಟರ ಬಳಿಗೆ ಕಳುಹಿಸಿದ್ದಾರೆ.

## ಕ್ರೈಸ್ತ ಮತಾಧಾರದ ಬೋಧನಾ ಸಿದ್ಧಾಂತ.

### ೧ ನೇ ಭಾಗ.—ದೇವರ ವಿಷಯವಾದದ್ದು.

ದೇವರ ವಿಷಯ ತಿಳಿಸುವಂಥ ಬೋಧನೆಯು ಎಲ್ಲವುಗಳಿಗಿಂತ ಅತ್ಯಂತ ಪ್ರಧಾನ್ಯವಾದದ್ದಾಗಿದೆ. ದೇವರಿಲ್ಲವೆಂದು ಹೇಳುವ ನಾಸ್ತಿಕ ಜನರ ಸಂಖ್ಯೆಯು ಈ ದೇಶದಲ್ಲಿ ಬಹು ಕೊಂಚವೆಂತ ಹೇಳಬೇಕಾಗಿದೆ. ಈ ದೇಶದಲ್ಲಿಯೇ ಅಲ್ಲದೆ ಇತರ ದೇಶಗಳಲ್ಲಿಯೂ ಸರಿಯಾದ ನಾಸ್ತಿಕ ಜನರು ಈ ಕಾಲದಲ್ಲಿ ಸಿಕ್ಕುವದು ಅಪರೂಪವಾಗಿದೆ. ಎಲ್ಲಾ ಸ್ಥಳಗಳಲ್ಲಿಯೂ ದೇವರನ್ನು ಜ್ಞಾಪಕ ಮಾಡಿಸುವ ಗುರುತುಗಳೂ ತೋರುವ ವಿವೇಕಗಳೂ ಕಂಡುಬರುತ್ತವೆ. ಇವುಗಳಿಂದ ಒಬ್ಬ ದೇವರಿದ್ದಾನೆಂಬ ನೆನಪು ಎಲ್ಲರಲ್ಲಿಯೂ ಹುಟ್ಟಿರುತ್ತದೆಂದು ನಾವು ಅನುಮಾನವಿಲ್ಲದೆ ತಿಳುಕೊಳ್ಳುತ್ತೇವೆ.

ಜನರು ದೇವರಿದ್ದಾನೆಂದು ನಂಬುತ್ತಾರಷ್ಟೆ. ಆದರೆ ಆತನು ಇದ್ದಾನೆಂದು ನಂಬುವದು ಮಾತ್ರ ಸಾಕಾಗಿದೆಯೋ? ಸುಮ್ಮನೆ ಒಬ್ಬ ದೇವರು ಇದ್ದಾನೆಂದು ನಂಬುವದರಲ್ಲಿಯಾಗಲೀ ಅಥವ ಭಗವಂತ ಭಗವಂತ ಎಂದು ಉಚ್ಚರಿಸುವ ಬಾಯುಪಚಾರದ ಭಕ್ತಿಯಲ್ಲಾಗಲೀ ಏನಾದರೂ ಪ್ರಯೋಜನವಾದೀತೇ? ಎಂದಿಗೂ ಇಲ್ಲ. ದೇವರಿಲ್ಲವೆಂದು ಹೇಳುವ ನಾಸ್ತಿಕನೂ ದೇವರು ಇದ್ದಾನೆಂದು ನಂಬಿ ಆತನನ್ನು ಸರಿಯಾಗಿ ತಿಳುಕೊಳ್ಳದೆ, ಆರಾಧಿಸದೆ ಇರುವ ಆರಾಧಕನೂ ಇಬ್ಬರೂ ಒಂದೇ ಎಂದೂ ಉಭಯತ್ರರಿಂದಲೂ ಏನೂ ಪ್ರಯೋಜನವಾಗುವದಿಲ್ಲವೆಂದೂ ಬುದ್ಧಿವಂತರು ತಿಳಿದಿದ್ದಾರೆ. ನಮ್ಮ ದೇಶದಲ್ಲಿ ಭಗವಂತ ಎಂಬ ಹೆಸರು ಚಿಕ್ಕ ಹುಡುಗ ಹುಡುಗಿಯರಿಗೂ ಗೊತ್ತಿರುವಷ್ಟು ರಹಸ್ಯವಿಲ್ಲವೆ. ಹೀಗಿದ್ದರೂ ಈ ದೇಶಸ್ಥರು ನಿಜದೇವರನ್ನು ತಿಳುಕೊಂಡಿರುವದರ ವಿಷಯದಲ್ಲಿ ವಿಸ್ತರಿಸುವುದಕ್ಕೆ ಪ್ರಯತ್ನ ಮಾಡಿದಾರೆಂಬುವದು ಬಹು ಅನುಮಾನಾಸ್ಪದವಾದ ಸಂಗತಿಯಾಗಿದೆ. ನಾನು ಒಂದು ಮನೆಯನ್ನು ನೋಡಿ ಅದನ್ನು ಕಟ್ಟುವವನೊಬ್ಬನಿರಬೇಕೆಂದು ತೀರ್ಮಾನಿಸುತ್ತೇನಷ್ಟೆ? ಅದರಂತೆ ಜಗತ್ತನ್ನು ನೋಡಿ ಇದನ್ನು ನಿರ್ಮಿಸಿ ಪ್ರಯೋಗಿಸಿರುವ ಸ್ವಾಮಿ ಒಬ್ಬನಿರುವನೆಂತ ನಂಬುತ್ತೇನೆ. ಹೀಗೆ ನಂಬುವದು ಒಳ್ಳೇದೇ ಸರಿ. ಆದರೆ ಇಷ್ಟರಲ್ಲೇ ನನ್ನ ತೃಪ್ತಿಪಟ್ಟುಕೊಂಡಿರುವದು ಒಳ್ಳೇದೋ? ಎಷ್ಟು ಮಾತ್ರಕ್ಕೂ ಇಲ್ಲ.

ನನ್ನ ವಾಸಕ್ಕಾಗಿ ಒಂದು ಮನೆಯನ್ನು ಕಟ್ಟಿಸಬೇಕೆಂದು ನಾನು ಆಲೋಚಿಸುವಾಗ ಬರೇ ಇಟ್ಟಿಗೆಗಳನ್ನು ಒಂದರಮೇಲೊಂದು ಪೇರಿಸುವಂತ ಒಬ್ಬ ಗಾರೆಯವನಿಗೆ ನಾನು ಅದನ್ನು ಕೊಡುವದಿಲ್ಲ. ಹೀಗೆ ಮಾಡಿದ್ದಾದರೆ ನನ್ನ ಮನೆಗೆ ಸೋರುವ ಕೊಡಲಿ... ಬೀಳುವ... ಗೋಡೆಗಳ ನನ್ನ ಮೇಲೆ ಬಿದ್ದು... ಬಿಡಬಹುದು. ಆದ್ದರಿಂದ ಮನೆ ಕಟ್ಟಲಿಕ್ಕೆ ಒಬ್ಬ ಬುದ್ಧಿವಂತನಾದ ಕೆಲಸಗಾರನನ್ನು ಹುಡುಕುತ್ತೇನೆ. ಇದರಂತೆ ಒಬ್ಬ ದೇವರಿದ್ದಾನೆಂತ ನಾನು ಸಾಧಾರಣವಾಗಿ ನಂಬುವದೂ ಇಷ್ಟರಲ್ಲಿಯೇ ನಾನು ಯಾವಾಗಲೂ ತೃಪ್ತಿಪಟ್ಟುಕೊಂಡಿರುವದೂ ಗಾರೆ ಅಥವ ಕೆಸರು ಉಪಯೋಗಿಸದೆ ಸುಮ್ಮನೆ ಇಟ್ಟಿಗೆಗಳನ್ನು ಒಂದರಮೇಲೊಂದು ಪೇರಿಸುವದಕ್ಕೆ ಸಮವಾಗಿರುವದು. ಈ ದೇಶದ ಜನರು ಸೃಷ್ಟಿಕರ್ತನಾದ ದೇವರನ್ನು ತಿಳಿಯ ತಕ್ಕ ರೀತಿಯಲ್ಲಿ ತಿಳಿದಿಲ್ಲ. ಅಥವ ಸರಿಯಾದ ರೀತಿಯಲ್ಲಿ ಆ ಸ್ವಾಮಿಯನ್ನು ತಿಳುಕೊಳ್ಳುವದಕ್ಕೆ ಪ್ರಯತ್ನ ಮಾಡುವದೂ ಇಲ್ಲ.

ಭಗವಂತನ ವಿಷಯ ನಾವು ಸರಿಯಾಗಿ ಧ್ಯಾನಿಸಬೇಕಾದರೆ ಆತನ ಪರಾಮರಿಕೆ ಎಂಥಾದ್ದು, ಆತನು ಎಂಥಾ ಕರ್ತನು, ಆತನ ಲಕ್ಷಣಗಳು ಯಾವವು, ಆತನಿಗೂ ನಮಗೂ ಯಾವ ಸಮ್ಮಂಧವಿದೆ, ಈ ಕರ್ತನ ಸ್ವಂತ ಅಧಿಕಾರವು ಎಂಥಾದ್ದು ಎಂಬೇ ಮೊದಲಾದ ಸಂಗತಿಗಳನ್ನು ನಾವು ತಿಳಿದು ಧ್ಯಾನಿಸದೆ ಹೋದರೆ ನಮಗೆ ಎಳ್ಳಷ್ಟೂ ಪ್ರಯೋಜನವಾಗುವದಿಲ್ಲ. ಸುಮ್ಮನೆ ಒಬ್ಬ ದೇವರಿದ್ದಾನೆಂಬ ಒಂದೇ ಸಂಗತಿಯನ್ನು ಮಾತ್ರ ನಾವು ತಿಳಿಯಲಪೇಕ್ಷಿಸಿದರೆ ಅದಕ್ಕಾಗಿ ನಾವು ಬಹಳ ಕಷ್ಟಪಡುವದು ಏನೂ ಅಗತ್ಯವಿರುವದಿಲ್ಲ. ಅದಕ್ಕಾಗಿ ನಾನಾ ಪುಸ್ತಕಗಳನ್ನು ಪಾರಾಯಣ ಮಾಡುವದೂ ಆವಶ್ಯಕವಿಲ್ಲ. ಒಬ್ಬ ದೇವರಿದ್ದಾನೆಂಬ ಒಂದೇ ಸಂಗತಿಯನ್ನು ನಾವು ತಿಳಿಯಬೇಕಾಗಿದ್ದರೆ ಕಾಡೇ ಪಕ್ಷಿ ಒಂದು ಇರುವೆ ಅದನ್ನು ನಮಗೆ ಕಲಿಸಬಹುದು. ಆದ್ದರಿಂದ ದೇವರಿದ್ದಾನೆಂಬ ತಿಳುವಳಿಕೆ ಮನುಷ್ಯನಿಗೆ ಉಂಟಾದ ಕೂಡಲೆ ಆ ಸ್ವಾಮಿಯನ್ನು ಕುರಿತು ಆವನು ವಿಚಾರಿಸಿ ಆತನನ್ನು ತಾನು ಯುಕ್ತವಾಗಿ ಆರಾಧಿಸುವದಕ್ಕೆ ಕಲಿಯಬೇಕು.

ಈ ಹಿಂದೂ ದೇಶದಲ್ಲಿ ಹಿಂದೂ ಜನರು ಮಾತ್ರ ದೇವರ ವಿಷಯ ಬೋಧಕರಿಲ್ಲ. ಇವರಿಗೆ ಆತನ ವಿಷಯದಲ್ಲಿ ಏನೋ ಒಂದು ತರವಾದ ನಂಬಿಕೆ ಇದೆ. ಈ ನಂಬಿಕೆ ಇವರನ್ನು ಯಾವ ಸ್ಥಿತಿಗೆ ತಂದಿದೆಯೆಂದೂ ಇದರಿಂದ ಇವರಿಗೆ ಯಾವ ಮೇಲು ಉಂಟಾಗಿದೆಯೆಂದೂ ವಿಚಾರಿಸಬೇಕು. ಇವರ ನಂಬಿಕೆಯು ಇವರನ್ನು ಪಾರಮಾರ್ಥಿಕವಾಗಿಯೂ ಲೌಕಿಕವಾಗಿಯೂ ಯಾವ ಸ್ಥಿತಿಗೆ ತಂದು ಬಿಟ್ಟಿದೆ? ಹಿಂದೂಗಳು ಮೂರು ನಾಲ್ಕು ಸಾವಿರ ವರ್ಷಗಳಿಂದ ಒಬ್ಬ ದೇವರಿದ್ದಾನೆಂತ ನಂಬುತ್ತಲೇ ಬಂದಿದ್ದಾರೆ. ಆದರೆ ಆತನನ್ನು ಸರಿಯಾಗಿ ತಿಳಿದು ಆತನಿಗೆ ಸಲ್ಲತಕ್ಕ ಆರಾಧನೆಯನ್ನು ಸಲ್ಲಿಸ ಇನ್ನೂ ಕಲಿತಿಲ್ಲ. ಇದರಿಂದ ಅವರ ಸ್ಥಿತಿಯು ಬರಬರುತ್ತ ಅವರನ್ನು ಕನಿಷ್ಠ ಸ್ಥಿತಿಗೇನೇ ತರುತ್ತ ಇದೆ. ಕ್ರೈಸ್ತರು ನಿಜದೇವರನ್ನು ಸರಿಯಾದ ರೀತಿಯಲ್ಲಿ ತಿಳುಕೊಂಡಿದ್ದಾರೆಂದು ಹೇಳುವದರಲ್ಲಿ ಯಾವ ತಪ್ಪೂ ಇರಲಾರದು. ಯುರೋಪ್ ಖಂಡದಲ್ಲಿರುವ ಕ್ರೈಸ್ತ ರಾಜ್ಯಗಳು ಅತಿ ಉತ್ಕೃಷ್ಟವಾದ ಸ್ಥಿತಿಗೆ ಬಂದಿರುವದೂ ಅವರ ಬುದ್ಧಿ, ಬಲ, ಧನ, ವ್ಯಾಪಾರಗಳಿಂದಲ್ಲ; ಆದರೆ ಅವರು ನಂಬಿರುವ ದೇವರ ವಿಷಯವಾದ ಜ್ಞಾನವೂ ತಿಳುವಳಿಕೆಯೂ ಅವರನ್ನು ಈ ಉನ್ನತವಾದ ಪದವಿಗೆ ತಂದು ಬಿಟ್ಟಿತು. ನಮ್ಮ ವಾಚಕರಲ್ಲನೇಕರು, ಓಹೋ—ದೇವರ ವಿಷಯ ತಿಳುವಳಿಕೆ ನಮಗಿಲ್ಲವೇ? ಈ ವರೆಗೂ ನಾವು ತಿಳಿದದ್ದು ಏನೂ ಇಲ್ಲವೋ? ಹಾಗಾದರೆ ನಾವು ಬುದ್ಧಿ ಮೂಢರೋ! ಎಂದು ಆಕ್ಷೇಪಿಸಬಹುದು. ಆದರೆ ಮುಂದಿನ ಉಪನ್ಯಾಸವನ್ನು ನಾವು ಓದುವಾಗ ದೇವರನ್ನು ನಾವು ಯಾವ ರೀತಿ ತಿಳುಕೊಂಡು ನಂಬಿ ಆರಾಧಿಸಬೇಕಾಗಿತ್ತು, ಯಾವ ವಿಷಯದಲ್ಲಿ ಮೋಸ ಹೋಗಿದ್ದೇವೆ? ಕ್ರೈಸ್ತ ಮತಕ್ಕೂ ಹಿಂದೂ ಮತಕ್ಕೂ ದೇವರ ವಿಷಯದಲ್ಲಿರುವ ದೊಡ್ಡ ಹೆಚ್ಚು ಕಡಿಮೆ ಏನಿದೆ? ಎಂಬೀ ವಿಷಯಗಳು ವೇದ್ಯವಾಗುವವು.

---

## ನಮ್ಮ ಪುಸ್ತಕ ಭಂಡಾರವು.

### ೧. "ವೀರೇಂದ್ರ." ೨. "ಸರೋಜಿನಿ ನಾಟಕ."

ಧಾರವಾಡ ಜಿಲ್ಲಾ ಅಣ್ಣಿಗೇರಿ ರಾ॥ ರಾ॥ ರಾಘವೇಂದ್ರ ಕೃಷ್ಣ ಇನಾಮತಿಯವರು ಇವೆರಡು ಕಥೆಗಳನ್ನೂ ರಚಿಸಿ, ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿರುತ್ತಾರೆ. ಜನರು ಅಭಿರುಚಿಗೆ ಕಥೆಗಳನ್ನೂ ನಾಟಕಗಳನ್ನೂ ದೇಶಭಾಷೆಯಲ್ಲಿ ಓದಲು ಕುತೂಹಲಪಡುತ್ತಾರೆಂಬುವದಕ್ಕೆ ಪುಸ್ತಕಗಳನ್ನು ಪ್ರಕಟಿಸುತ್ತಿರುವದೇ ದೃಷ್ಟಾಂತವಾಗಿದೆ. ಮೈಸೂರು ದೇಶದ ಕನ್ನಡಕ್ಕೂ ಧಾರವಾಡ ಜಿಲ್ಲೆಯ ಕನ್ನಡಕ್ಕೂ ಸ್ವಲ್ಪ ಹೆಚ್ಚು ಕಡಿಮೆ ಇದ್ದಾಗ್ಯೂ ಈ ಕಥೆಗಳು ಓದುವವರಿಗೆ ಅರ್ಥವಾದಾವೆಂತಲೂ, ಅವುಗಳಲ್ಲಿ ಕಂಡ ನೀತಿಗಳು ಗ್ರಾಹ್ಯಕ್ಕೆ ಬಂದಾವೆಂತಲೂ ಹೇಳಬಹುದು.

### "ಪ್ಲೇಗ್ ರೋಗದ ಚಿಕಿತ್ಸೆಯು."

ಈ ಸಣ್ಣ ಪುಸ್ತಕವನ್ನು ಹುಬ್ಬಳ್ಳಿ ಮಿಷನ್ ಕಂಪೌಂಡು ರಾ॥ ರಾ॥ ಮಾಧ್ವ ಸೋಲೋಮೋನಪ್ಪ ದೇವಧರ ಇವರು ಬರೆದು ಪ್ರಕಟಿಸಿರುತ್ತಾರೆ. ಪ್ಲೇಗ್ ಉಪದ್ರವನ್ನು ಆರಿಸುವದಕ್ಕೆ ಹಿಂದುಸ್ಥಾನದಲ್ಲಿರತಕ್ಕ ಇಂಗ್ಲಿಷ್, ಯುನಾನಿ, ಹಿಂದು ವೈದ್ಯರುಗಳೆಲ್ಲಾ ತುಂಬಾ ಸಹಾಸಪಟ್ಟು ತಮ್ಮ ಚತುರತೆಯನ್ನೆಲ್ಲಾ ವೆಚ್ಚಮಾಡುತ್ತಿದ್ದರೂ ಎಲ್ಲಾ ನಿಷ್ಫಲವಾಗಿ ಪರಿಣಮಿಸಿರುವದು. ಆದರೂ ಈ ರೋಗದ ಸ್ಥಿತಿಗತಿಯನ್ನೂ, ಅದರ ಲಕ್ಷಣಗಳನ್ನೂ, ಅದಕ್ಕೆ ನಾನಾ ವೈದ್ಯರು ಹೇಳುವ ಚಿಕಿತ್ಸೆಗಳನ್ನೂ ತಿಳಿದಿರುವದು ಅನುಕೂಲವೇ ಸರಿ. ಇವರು ಹೇಳುವ ಔಷಧವು ಕಲ್ಕತ್ತದಲ್ಲಿರುವ ಹೋಮಿಯೋಪಥಿಕ್ ರಸಾಯನ ಶಾಸ್ತ್ರಜ್ಞರಿಂದ ತಯಾರಾದದ್ದೆಂತಲೂ. ಅದನ್ನು ಹಲವು ವರ್ಷಗಳಿಂದ ರೋಗಿಗಳಿಗೆ ಕೊಟ್ಟು ವಾಸಿಮಾಡಿರುವದಾಗಿಯೂ ಗ್ರಂಥಕರ್ತರು ತಿಳಿಸುತ್ತಾರೆ.

### "ಚಕ್ರವರ್ತಿಗಳವರ ಕಿರೀಟೋತ್ಸವ."

ಮೈಸೂರು ಸಂಸ್ಥಾನದ ಹಿಂದಿನ ದಿನಗಳನ್ನು ನೋಡಿ ಅಥವ ಮಾಡುವ ಮೇಸ್ತ್ರಿಯ ಯಾವದ ಅಧಿಕಾರಸ್ಥರಾದ ಮ. ರಾ. ಜೈನ ಬ್ರಾಹ್ಮಣ ಪದ್ಮರಾಜ ಪಂಡಿತರು ಎಡ್ವರ್ಡ್ ಚಕ್ರವರ್ತಿಗಳ ರತ್ನಕಿರೀಟಧಾರಣೆಯನ್ನು ಕುರಿತು ೩೮ ಶ್ಲೋಕಗಳನ್ನು ರಚನಮಾಡಿ ಪ್ರಕಟಿಸಿರುತ್ತಾರೆ. ಈ ಪುಸ್ತಕದಲ್ಲಿ ಚಕ್ರವರ್ತಿಯವರ ಜಾತಕವೂ ಬರೆಯಲ್ಪಟ್ಟಿರುವದು. ಸಂಸ್ಕೃತ ಶ್ಲೋಕಕ್ಕೆ ಇಂಗ್ಲಿಷು, ಕನ್ನಡಭಾಷೆಗಳಲ್ಲಿ ಅರ್ಥ ತಾತ್ಪರ್ಯಗಳನ್ನೂ ಬರೆದಿರುವರು.

### "ಜೈಮಿನಿ ಭಾರತ."

ಇದರಲ್ಲಿ ಪ್ರಥಮದ ನಾಲ್ಕು ಸಂಧಿಗಳು ಮಾತ್ರ ಅಡಕವಾಗಿವೆ. ಇದನ್ನು ಪಾಠಶಾಲೆಗಳ ಉಪಯೋಗಾರ್ಥವಾಗಿ ಹಳ್ಳಿಕೆರೆಯ ನಾಮುಂಡಿರಾಜರ ವಿದ್ಯಾಶಾಲೆಯಲ್ಲಿ ಉಪಾಧ್ಯಾಯರಾದ ಮ. ರಾ॥ ಗುಬ್ಬಾಟ ಶಿವರಾವ್, ಬಿ. ಎ., ಇವರು ಶೋಧಿಸಿ, ಹಳ್ಳಿಕೆರೆ ಪೆಸ್ಟ್ ಕೋರ್ಟ್ ಮುದ್ರಾಲಯದಲ್ಲಿ ಅಚ್ಚುಹಾಕಿಸಿರುತ್ತಾರೆ. ಗ್ರಂಥಕರ್ತರು ಪೀಠಿಕೆಯಲ್ಲಿ ತಿಳಿಸುವದೇನಂದರೆ—"ಜೈಮಿನಿ ಭಾರತದ ಮುದ್ರಿಸಿದ ಎಲ್ಲಾ ಪ್ರತಿಗಳನ್ನು ಶೋಧಿಸಿ, ಅತ್ಯಂತ ಗ್ರಾಹ್ಯವೆಂದು ತೋರುವ ಪಾಠಾಂತರಗಳನ್ನು ಇದರಲ್ಲಿ ಕೊಟ್ಟಿದೆ. ತರುಣರು ಓದಲಿಕ್ಕೆ ಯೋಗ್ಯವಾಗುವಂತೆ ಅಶ್ಲೀಲವಾದ ಪದ್ಯಗಳನ್ನು ಲೋಪಿಸಿ; ಅಂಥ ಪದ್ಯಗಳ ಬದಲಾಗಿ ಅರ್ಥವಾಗಲಿ ಛಂದಸ್ಸಾಗಲಿ ಕೆಡದಂತೆ ಬೇರೆ ಪದ್ಯಗಳನ್ನು ಸೇರಿಸಿದೆ." ಈ ಪುಸ್ತಕವು ಪಾಠಶಾಲೆಗಳಿಗೆ ತುಂಬಾ ಉಪಯುಕ್ತವಾದದ್ದು; ಬಹಳ ಚನ್ನಾಗಿ ದಪ್ಪಕಾಗದದಮೇಲೆ ಪ್ರಿಂಟುಮಾಡಿದೆ. ವಿದ್ಯಾಇಲಾಖೆಯವರು ಇದನ್ನು ಬಾಲಕರು ಓದುವಂತೆ ವಿಧಿಸಲು ಅನುಕೂಲವಾಗಿದೆ.

### "ಲಘು ವ್ಯಾಕರಣ."

ಈ ಸಣ್ಣ ಪುಸ್ತಕವನ್ನು ನಾಗಮಂಗಲ ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮ॥ ರಾ॥ ಕೆ. ರಾಮಸ್ವಾಮಿಯಂಗಾರ್ಯರು ರಚಿಸಿರುತ್ತಾರೆ. ಈ ಪುಸ್ತಕವು ವ್ಯಾಕರಣವನ್ನು ಗೋಪ್ಯವಾಗಿ ತಿಳಿಸುವದು ವಾಕ್ಯ, ವಾಚಕಗಳು, ಮುಖ್ಯ ಸಂಜ್ಞೆಗಳು, ನೆನಪಿನಲ್ಲಿಡಬೇಕಾದ ಪದ್ಯಗಳು—ಈ ವಿಷಯಗಳನ್ನು ಬಹು ಸಂಕ್ಷೇಪವಾಗಿ ತಿಳಿಸುವದು. ೧೦ ಪುಟಗಳನ್ನು ಓದುವದರಿಂದಲೇ ಕನ್ನಡ ವ್ಯಾಕರಣವನ್ನು ಕಲಿತುಕೊಳ್ಳುವವರಿಗೆ ಈ ಪುಸ್ತಕವು ಸಹಾಯಮಾಡುವದು. ಗ್ರಂಥಕರ್ತರು—"ಪದಗಳ ಕ್ರಮವಾದ ಪ್ರಯೋಗವನ್ನು ತಿಳಿಸುವದು ವ್ಯಾಕರಣ" ಎಂಬದಾಗಿ ಹೇಳುತ್ತಾರೆ. ಮುಖ್ಯವಾಗಿ ಈ ಸಣ್ಣ ಪುಸ್ತಕವು ಬಾಲಕರಿಗೋಸ್ಕರ ರಚಿಸಲ್ಪಟ್ಟಂತೆ ಕಾಣುವದು.

### "ಅಂಕಗಣಿತ ಪ್ರಶ್ನಪತ್ರಿಕೆಗಳು."

ಚಿಕ್ಕಬಳ್ಳಾಪುರದ ಎ. ವಿ. ಸ್ಕೂಲ್ ಹೆ. ಮಾಸ್ಟರ್ ಮ॥ ರಾ॥ ಸಿ. ಕೃಷ್ಣಯ್ಯನವರು ಈ ಪುಸ್ತಕವನ್ನು ರಚಿಸಿರುತ್ತಾರೆ. ಇದರಲ್ಲಿ ಈಗಿನ ಮೈಸೂರು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಸಹಾಯವಾಗುವಂತೆ ೧೮೯೩ ನೆ ಇಸವಿಯಿಂದ ೧೯೦೧ ನೆ ಇಸವಿವರೆಗೆ ೧೦ ವರುಷಗಳ ಅಂಕಗಣಿತ ಪ್ರಶ್ನೆಗಳನ್ನೂ ಅವುಗಳಿಗೆ ಸರಿಯಾದ ಉತ್ತರಗಳನ್ನೂ ಬರೆದಿರುವರು. ಒಳ್ಳೇ ಕಾಗದದ ಮೇಲೆ ಚನ್ನಾಗಿ ಪ್ರಿಂಟು ಮಾಡಿದೆ. ಪರೀಕ್ಷೆಗೆ ಹೋಗುವ ಉಮೇದುವಾರರಾದ ವಿದ್ಯಾರ್ಥಿಗಳು ಈ ಪುಸ್ತಕವನ್ನು ತರಿಸಿಕೊಳ್ಳುವದರಿಂದ ಗ್ರಂಥಕರ್ತರಿಗೆ ಪ್ರೋತ್ಸಾಹಕೊಟ್ಟಂತಾಗುವದು.

### "ಬಸವರಾಜವಿಜಯಂ."

ಈ ಪುಸ್ತಕದಲ್ಲಿ ಬಸವೇಶನ ಚರಿತವೂ, ೪೦—೪೫ ಮಂದಿ ಶಿವಭಕ್ತರ ಕಥೆಗಳೂ ಬರೆಯಲ್ಪಟ್ಟಿವೆ. ಪುಸ್ತಕವು ೩೮ ಅಧ್ಯಾಯಗಳಾಗಿ ವಿಂಗಡಿಸಲ್ಪಟ್ಟಿದೆ. ಶಿವಭಕ್ತರ ಕಥೆಗಳೆಲ್ಲಾ ಅನೇಕ ಗ್ರಂಥಗಳಾಗಿರುವದರಿಂದಲೂ, ಸಂಸ್ಕೃತ, ಆಂಧ್ರಭಾಷೆಗಳಲ್ಲಿರುವದರಿಂದಲೂ ಸಾಮಾನ್ಯ ಅಕ್ಷರಸ್ಥರನೇಕರಾಗಿರುವ ಕನ್ನಡಿಗರಿಗೆ ಆ ಗ್ರಂಥಗಳಲ್ಲಿ ಅಡಕವಾಗಿರುವ ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲವಾದ್ದರಿಂದಲೂ ರಾಜಧಾನಿಯ ದೊಡ್ಡ ಪೇಟೆಯಲ್ಲಿರುವ ಮ॥ ರಾ॥ ಎನ್. ಆರ್. ಕರಿಬಸವ ಶಾಸ್ತ್ರಿಯವರು ಈ ಪುಸ್ತಕವನ್ನು ರಚಿಸಿರುತ್ತಾರೆ. ದೊಡ್ಡ ದೊಡ್ಡ ಗ್ರಂಥಗಳಲ್ಲಿರತಕ್ಕ ವಿಷಯಗಳನ್ನು ಸಂಗ್ರಹಮಾಡಿ, ಸುಲಭವಾದ ಕನ್ನಡ ಪದಗಳಿಂದ ರಚಿಸಿರುವರು. ಈ ಪುಸ್ತಕದಲ್ಲಿ ಅಡಕವಾಗಿರುವ ಕಥೆಗಳು ಬಹ ಲಲಿತವಾಗಿರುತ್ತವೆ. ಶೈವಮತಸಂಬಂಧವೋ, ಅದರ ಬಲದಿಂದ ಜನರು ಯಾವ ಯಾವ ತರದ ಆ ಕಾರ್ಯಗಳನ್ನು ಮಾಡಿದರೋ, ಇವೇ ಮೊದಲಾದ ಸಂಗತಿಗಳನ್ನು ಈ ಕಥೆಗಳಿಂದ ಸ್ವಲ್ಪಮಟ್ಟಿಗನರೂ ತಿಳಿದುಕೊಳ್ಳಬಹುದು. ಗ್ರಂಥಕರ್ತರು ತುಂಬಾ ಶ್ರಮಪಟ್ಟು ಈ ಪುಸ್ತಕವನ್ನು ರಚಿಸಿರುತ್ತಾರೆ. ಮೇಲ್ಕಂಡ ವಿಷಯಗಳನ್ನು ತಿಳಿಯಲಪೇಕ್ಷಿಸುವವರೆಲ್ಲಾ ಪುಸ್ತಕವನ್ನು ತರಿಸಿಕೊಳ್ಳುವವರ ಮೂಲಕ ಗ್ರಂಥ ರಚಕರಿಗೆ ಪ್ರೋತ್ಸಾಹಕೊಟ್ಟಾರೆಂದು ನಿರೀಕ್ಷಿಸುತ್ತೇವೆ. ಪುಸ್ತಕವು ಚನ್ನಾಗಿ ಪ್ರಿಂಟಾಗಿದೆ; ನೂರ್ವತ್ತಕ್ಷರ ೨೦೦ ಪುಟಗಳುಳ್ಳದ್ದು. ಇದರ ಕ್ರಯ ಪ್ರತಿ ೧ ಕ್ಕೆ ೧ ರೂಪಾಯಿ.

---

## ಕಸೌಲಿ ಪಶ್ಚರನ ಆಸ್ಪತ್ರೆ.

ಈ ಆಸ್ಪತ್ರೆಯ ವಿಷಯವಾಗಿ ಸಕಲ ಪ್ರಜೆಗಳೂ ತಿಳಿಯಬೇಕಾದ ಕೆಲವು ಮುಖ್ಯ ಸಂಗತಿಗಳಿರುತ್ತವೆ. ಮದರಾಸ್ ಸರ್ಕಾರದವರು ಆ ಸಂಗತಿಗಳನ್ನು ಗವರ್ನಮೆಂಟ್ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ. ಅದರಲ್ಲಿ ಕಂಡ ಮುಖ್ಯ ವಿಷಯಗಳನ್ನು ನಮ್ಮ ವಾಚಕರಿಗೋಸ್ಕರ ಈ ಮೂಲಕ ತಿಳಿಯಪಡಿಸುವೆವು.

ಈ ಆಸ್ಪತ್ರೆಯು ೧೯೦೦ ನೆ ಇಸವಿ ಆಗಸ್ಟ್ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು. ಹುಚ್ಚು ಹಿಡಿದ ನಾಯಿ, ನರಿಗಳಿಂದ ಕಚ್ಚಿಸಿಕೊಂಡವರಿಗೆ ಮಾತ್ರ ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡುತ್ತಾರೆ. ಅಂಥಾ ರೋಗಿಗಳು ಯಾವ ಸ್ಥಾನದ ಯಾವ ಊರಿನವರಾದರೂ ಆಗಬಹುದು ಚಿಕಿತ್ಸೆ ಮಾಡಿಸಿಕೊಳ್ಳುವದಕ್ಕೆ ಯಾರೂ ಏನೂ ರುಸುಂ ಕೊಡಬೇಕಾಗಿರುವದಿಲ್ಲ.

ಮಾಮೂಲು ರೋಗ ಕಚ್ಚಿರುವದು ಸಾಧಾರಣವಾಗಿದ್ದರೆ ಅಂಥಾ ರೋಗಿಗಳಿಗೆ ೧೪ ದಿನ ೨೦ ದಿನಗಳ ತನಕ ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡುವದರಿಂದ ಗುಣವಾಗುವದು. ಕಚ್ಚಿದ್ದು ಬಹಳ ಜೋರಾಗಿದ್ದರೆ ಇನ್ನೂ ನಾಲ್ಕಾರು ದಿನ ಚಿಕಿತ್ಸೆ ಹೆಚ್ಚಾಗಿ ಮಾಡಿಸಿಕೊಳ್ಳಬೇಕಾಗುವದು. ಅಂಥ ರೋಗಿಗಳನ್ನು ಅಲ್ಲೇ ಇಟ್ಟುಕೊಂಡು ಔಷಧ ಕೊಡುವದಕ್ಕೆ ಆಸ್ಪತ್ರೆಯಲ್ಲಿ ಸ್ಥಳವಿಲ್ಲ. ರೋಗಿಗಳು ಆಸ್ಪತ್ರೆಯಲ್ಲೇ ಇದ್ದುಕೊಂಡು ಔಷಧ ಪಡೆಯಬೇಕಾದ ಅಗತ್ಯವೇನೂ ಇರುವದಿಲ್ಲ. ಅವರು ದಿನವಹಿ ಬೆಳಗ್ಗೆ ೧೦ ಗಂಟೆಯ ಹೊತ್ತಿಗೆ ಆಸ್ಪತ್ರೆಗೆ ಹೋಗಿ ಔಷಧ ಹಾಕಿಸಿಕೊಂಡು ಬಂದರೆ ಸಾಕಾಗಿದೆ.

ಸೈನ್ಯಕ್ಕೆ ಸೇರಿದ ಸಿಪಾಯಿಗಳಲ್ಲದೆ ಇರತಕ್ಕ ರೋಗಿಗಳು ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುವಾಗ್ಯೆ ಇಳುಕೊಳ್ಳುವದಕ್ಕೆ ಸ್ಥಳವನ್ನೂ ಊಟ ಉಪಚಾರಗಳ ವಿಷಯವನ್ನೂ ತಾವೇ ಪ್ರತ್ಯೇಕವಾಗಿ ಏರ್ಪಾಡು ಮಾಡಿಕೊಳ್ಳಬೇಕು. ಇಂಗ್ಲಿಷ್ ಸೈನಿಕರಾದರೆ ಅವರನ್ನು ಬೇರೆ ಆಸ್ಪತ್ರೆಯಲ್ಲಿ ಇಳಿಸಿ ಸರ್ಕಾರದವರು ನೋಡಿಕೊಳ್ಳುತ್ತಾರೆ. ದೇಶೀಯ ಸೈನಿಕರಾದವರನ್ನು ಅಂಗಡಿ ಬೀದಿಯಲ್ಲಿ ಒಂದು ದೊಡ್ಡ ಮನೆಯಲ್ಲಿ ಇಳಿಸಿ, ಅವರ ಊಟ ಉಪಚಾರಗಳನ್ನು ನೋಡಿಕೊಳ್ಳುತ್ತಾರೆ. ಬಡವರಾಗಿರತಕ್ಕ ರೋಗಿಗಳು ಚಿಕಿತ್ಸೆ ಮಾಡಿಸಿಕೊಳ್ಳುವದಕ್ಕೆ ಈ ಆಸ್ಪತ್ರೆಗೆ ಹೋಗುವದಾದರೆ ಅವರು ಇಳುಕೊಳ್ಳುವದಕ್ಕೆ ಆ ಊರಿನ ಅಂಗಡಿ ಬೀದಿಯಲ್ಲಿ ೨೪ ದೊಡ್ಡ ಕೋಣೆಗಳುಳ್ಳ ಒಂದು ದೊಡ್ಡ ಕಟ್ಟಡವನ್ನು ಏರ್ಪಾಡು ಮಾಡಿದೆ. ಅಲ್ಲಿ ಯಾವ ಜಾತಿಯವರು ಬೇಕಾದರೂ ಹೋಗಿ ಇಳುಕೊಳ್ಳಬಹುದು. ತಕ್ಕಮಟ್ಟಿಗೆ ಘನ್ಯವಂತರಾದ ರೋಗಿಗಳು ಹೋಗಬೇಕಾದರೆ ಅವರಿಗೆ ಅಲ್ಲಿ ಇಳುಕೊಳ್ಳುವದಕ್ಕೆ ಅನೇಕ ಹೋಟೇಲುಗಳೂ ಮನೆಗಳೂ ಸಿಕ್ಕುತ್ತವೆ.

ಕಸೌಲಿ ಎಂಬ ಪಟ್ಟಣವು ಹಿಮಾಚಲ ಪರ್ವತದ ತಪ್ಪಲಲ್ಲಿ ಸಮುದ್ರಮಟ್ಟಕ್ಕಿಂತ ೬೦೦೦ ಅಡಿ ಎತ್ತರವಾಗಿರುವದರಿಂದ ಅಲ್ಲಿ ಚಳಿ ಹೆಚ್ಚಾಗಿದೆ. ಆದ್ದರಿಂದ ಅಲ್ಲಿಗೆ ಹೋಗತಕ್ಕವರು ಚಳಿ ತಡೆಯುವದಕ್ಕೆ ಅನುಕೂಲವಾದ ಸತ್ತು ಬೆಚ್ಚಗಿರುವ ಬಟ್ಟೆಬರೆಗಳನ್ನು ತೆಗೆದುಕೊಂಡು ಹೋಗಬೇಕು.

ಮದರಾಸಿನಿಂದ ಕಸೌಲಿಗೆ ಹೋಗುವದಕ್ಕೆ ನೇರವಾದ ರಸ್ತೆಯೂ, ರೈಲ್ ಚಾರ್ಜ್ ಕೆಳಗೆ ಕಾಣಿಸಿದೆ—

ಮದರಾಸ್ ರೈಲು—ಮದರಾಸಿನಿಂದ ರಾಯಚೂರು.

ಜಿ. ಐ. ಪಿ. ರೈಲು—ರಾಯಚೂರು, ಧೋಂಡ್, ಮನ್ಮಾಡ್, ಇಟಾರ್ಸಿ. ಝಾನ್ಸಿ. ತಂಡ್ಲ.

ಇ. ಐ. ರೈಲು—ತಂಡ್ಲದಿಂದ ದೆಹಲಿ.

ಎ. ಅ. ಕ. ರೈಲು—ದೆಹಲಿಯಿಂದ ಕಾಲ್ಕಾ.

ಕಾಲ್ಕಾದಿಂದ ಕಸೌಲಿಗೆ ೯ ಮೈಲಿ ರಸ್ತೆ, ಗಾಡಿ ಅಥವಾ ಕುದುರೆಯ ಮೇಲೆ ಹೋಗಬಹುದು

ರೈಲ್ ಚಾರ್ಜ್, ಮದರಾಸಿನಿಂದ ಕಾಲ್ಕಾಕ್ಕೆ—೧ನೇ ಕ್ಲಾಸು ರೂ. ೧೭೩—೩—೦ಪೈ. ೨ನೇ ಕ್ಲಾಸು ರೂ. ೩೧—೦೦—೦ಪೈ.

[illegible] ಕ್ಲಾಸು (ಮೇಯಿಲ್) ರೂ. ೨೪—೩—೦ಪೈ. ೩ನೇ ಕ್ಲಾಸು (ಸಾಧಾರಣ) ರೂ. ೭೦—೮—೦ ಪೈ.

## ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಖಿಮ್ದಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

## ಕರೆಸ್‌ಪಾಂಡೆನ್ಸ್

ಚಿತ್ರದುರ್ಗದ ಡಿ. ನ. ರಾ. ಎಂಬ ಬಾತ್ಮಿದಾರರು—ಒಬ್ಬ [illegible] ಪಂಡಿತರು ತಮ್ಮ ಹೆಂಡತಿಗೆ ಸರಿಯಾದ ಬಟ್ಟೆ ಬರೆ ಕೊಡದೆ ಕಾಲಕಾಲಕ್ಕೆ ಯೋಗ್ಯವಾದ ಆಹಾರ ಪಾಕನೆಯೂ ಕಷ್ಟಪಡಿಸುತ್ತಾರೆಂತಲೂ, ಸ್ವಲ್ಪಕ್ಕೆ ಹೆಂಡತಿಯನ್ನು ಹೊಡೆಯುತ್ತಾರೆಂತಲೂ, ವಿದ್ಯಾವಂತರೇ ಹೀಗೆ ಮಾಡುವದು ತುಂಬಾ ಶೋಚನೀಯವಾಗಿದೆ ಎಂತಲೂ ಬರೆದಿರುವರು. ಈ ಬಾತ್ಮಿಯನ್ನು ಪ್ರಕಟಿಸಲು ನಮಗೆ ಇಷ್ಟವಿಲ್ಲ. ಇಂಥಾ ಸಂಗತಿಗಳನ್ನು ನಾವು ಆಗಿಂದಾಗ್ಯೆ ಕೇಳುತ್ತಲೂ, ಓದುತ್ತಲೂ ಬಂದಿರುವೆವು. ಮುಖ್ಯ ಪಟು [illegible] ವಿದ್ಯಾವಂತರ [illegible] ಕೊಡಿದ. [illegible] ಕಷ್ಟಪಡಿಸುವದು ಸರ್ವಥಾ ಶ್ರೇಯಸ್ಕರವಲ್ಲ. [illegible] ಉತ್ತಮವೆನಿಸಿಕೊಂಡ ಉದ್ಯೋಗವ್ಯವ [illegible] ಅರ್ಥವಾಗಿಯಿಲ್ಲವೇ? ಈ ವಿಷಯ [illegible] ಬರೆಯಲು ನಮಗೆ ಅಸಹ್ಯವಾಗುವದು.—ಎಡಿಟರ್.

◆◆◆◆◆◆◆◆

ಹಿಂಗಳೂರು ಪೇಟೆಯ ಬಳ್ಳಾಪುರದ ಸಣ್ಣ ರೈಲು

ಮಹಸ್ವಾ.

ಬಳ್ಳಾಪುರಕ್ಕೆ ಸಣ್ಣ ರೈಲ್ ಸ್ಟೇಶನಿನಕ್ಕೆ ಒಂದು ಕೆಂಪ [illegible] ವಾಗಿದೆ ಎಂದೂ, ಅದಕ್ಕೆ ಸೇರುಗಳನ್ನು [illegible] ಪದೆ [illegible] ರೂಪಾ ಹೀಗೆ ೧ ಸೇರು ಅದರ ಪರತ್ತುಗಳು ಏನು, ಸಾನ್ಯವಾದರೆ ತಮ್ಮ ನಾಳೆ ವಾರದ ಪತ್ರಿಕೆಯಲ್ಲಿ ತಿಳಿಸಿ. ನಾಗಿ [illegible] ಬೆಂಗಳೂರಲ್ಲಿ ತಿಳಿದುಕೊಳ್ಳ ಬೇಕೋ ಅದನ್ನು ಪರೂ ನಾಳೆ ಸಂಚಿಕೆಯಲ್ಲಿ ತಿಳಿಸಬೇಕಾಗಿ ಪ್ರಾರ್ಥನೆ.

ದೊಡ್ಡಬಳ್ಳಾಪುರ, ಸರಾಫ್ ಚಿಕ್ಕ ಸೇರಶೆಟ್ಟಿ.

೧—೫—೧೯೦೩

[ನಮ್ಮ ಬಾತ್ಮಿದಾರರು ಕೇಳುವ ಮೇಲ್ಕಂಡ ವಿಷಯಗಳು ನಮಗೆ ಪರಿಷ್ಕಾರವಾಗಿ ತಿಳಿಯಲ್ಲವಾದ್ದರಿಂದ ಅವರು ಎಲ್ಲಾ ವಿಷಯಗಳನ್ನೂ ಮುಂದಿನ ವಿಳಾಸದಾರರಿಗೆ ಬರೆದು ತಿಳಿದುಕೊಳ್ಳಬಹುದೆಂದು ಹೇಳುತ್ತೇವೆ—(ಬೆಂಗಳೂರು ಚಾಮರಾಜಪೇಟೆ [illegible] ನೇ ನಂಬರು ೬ನೇ ಬೀದಿಯಲ್ಲಿರುವ ಪ್ಯಾಸೆಂಜರ್ ಪ್ರೆಫೆಕ್ಟರ್ ಮೇ. ಪಿ. ಸುಬ್ಬರಾಯರು)—ಎಡಿಟರ್.]

◆◆◆◆◆◆◆◆

## ಮಡಿಕೇರಿ ಪ್ಲೇಗ್ ವಿಚಾರಗಳು.

ಮಹಸ್ವಾ.

ಈ ವಾರದಲ್ಲಿ ವೀರರಾಜೇಂದ್ರಪೇಟೆಯಲ್ಲಿ ಯಾರೋ ಒಬ್ಬಿಬ್ಬರು ಪ್ಲೇಗು ತಗಲಿ ಸತ್ತರಂತೆ. ಇಲ್ಲಿ ಹೆಗ್ಗಣಗಳು ಸತ್ತು ಬೀಳುತ್ತವಂತೆ. ಮಡಿಕೇರಿಯಿಂದ ಹೊರಡುವ ಗಾಡಿಗಳು ಹಿಂತಿರುಗಿ ಬಾರದೆ ಇರುವವು. ಕೊರೆಂಟೈನ್ ಏರ್ಪಟ್ಟಿರಬಹುದು. ಮುಂದೆ ನಿಜಸ್ಥಿತಿ ಗೊತ್ತಾಯಿತು. ಏಕೆಂದರೆ ಫೀಜಿಶಿಯನ್‌ಗಳು ಓಡ್ಯಾಡುತ್ತಿವೆ. ಪ್ಲೇಗು ಹೌದೆಂತಲೂ ಅಲ್ಲವೆಂತಲೂ ಸಂಶಯ ಮಾಡುತ್ತಾರೆ. ಹಾಗಾದರೆ ಕೊಡಗಿನಲ್ಲಿ ಪ್ರಸರವಾಯಿತು. ಪ್ಯಾಗೂ ಇರಲಿ.

ಪಗ್ರಿಗೇಷನ್ ಕ್ಯಾಂಪಾದರೆ ಸರಕಾರದವರು ಸಾಕ್ಯಾರು. ಊರ ಹೊರಗೆ ಷೆಡ್ಡುಗಳನ್ನು ಕಟ್ಟಿಕೊಳ್ಳಬೇಕಾಗಿ ಬಂದರ ಕೂಲಿ ಜನರಿಗೂ, ಬೇರೆ ಕಸಬುದಾರರಿಗೂ ಉದ್ಯೋಗವಿಲ್ಲವಾಗಲು ಸರಕಾರದವರು ಸಾಕ್ಯಾರೋ! ಉಪವಾಸವೋ? ಇವರ ಗತಿ ಏನಾಗಬಹುದು? ಇಂಥ ಬಡ ಗತಿಹೀನರನ್ನು ಸಂರಕ್ಷಣೆಗಾಗಿ ನ್ಯೂಸೂರು ಮುಂತಾದ ದೇಶಗಳಲ್ಲಿ ಏನು ಏರ್ಪಾಡು ಉಂಟು? ದಯವಿಟ್ಟು ಉತ್ತರ ಕೊಡಿಸಿ.

ಮಡಿಕೇರಿ. ಜ. ಕೆ. ರಾ.

[ಈ ಪ್ರಕಾರ ಕ್ಯಾಂಪುಗಳಲ್ಲಿ ಪ್ರಯಾಣಸ್ಥರನ್ನು ಸರ್ಕಾರದವರು ತಡೆದು ನಿಲ್ಲಿಸಿಕೊಂಡರೆ ಹಾಗೆ ತಡೆಯಲ್ಪಟ್ಟ ಜನರಿಗೆಲ್ಲಾ ಸರ್ಕಾರದವರೇ ಜೀವನ ನಡಿಸುತ್ತಾರೆ. ಪ್ಲೇಗ್ ಉಪದ್ರದ ನಿಮಿತ್ತ ಜನರು ಊರುಬಿಟ್ಟು ಹೊರಗೆ ಜೋಪಡಿ ಕಟ್ಟಿಕೊಳ್ಳಬೇಕಾದರೆ ಜನರೇ ಹಾಗೆ ಲಾಗೋಡಿನಿಂದ ಕಟ್ಟಿಕೊಳ್ಳಬೇಕು. ಇದಕ್ಕೆ ಬೇಕಾಗುವ ಕಾಡು ಸಾಮಾನುಗಳನ್ನು ಮಾತ್ರ ಸರ್ಕಾರದವರು ಸುಲಭ ಕ್ರಯಕ್ಕೆ ಕೊಡುವರು; ಬಡವರಿಗೆ ಸುಮ್ಮನೇ ಕೊಡಿಸುವರು. ಪ್ರಜೆಗಳಲ್ಲಿ ಶ್ರೇಷ್ಠರೂ ಧರ್ಮಿಷ್ಠರೂ ಬಡಬಗ್ಗರ ಜೀವನಕ್ಕೆ ತಕ್ಕ ಏರ್ಪಾಡು ಮಾಡುವದು ರೂಢಿಯಾಗಿದೆ. ಇದು ಸರ್ಕಾರದವರಿಗೆ ಸಾಧ್ಯವಲ್ಲ. ಅಂಥಾ ಕಷ್ಟಕಾಲದಲ್ಲಿ ಮೈಸೂರಿನ ದೊಡ್ಡ ಮನುಷ್ಯರು ಚಂದಾ ಎತ್ತಿ, ಅಕ್ಕಿ ರಾಗಿ ಕೊಂಡು ತರಿಸಿ, ಬಡ ಪ್ರಜೆಗಳಿಗೆ ಅಗ್ಗವಾಗಿ ವಿಕರಿಮಾಡುತ್ತಲೂ, ತುಂಬಾ ದರಿದ್ರರಿಗೆ ಸುಮ್ಮನೆ ಭತ್ಯ ಅಳೆದುಕೊಡುತ್ತಲೂ ಸಹಾಯ ಮಾಡಿ, ಕೀರ್ತಿ ಪಡೆದರು.—ಎಡಿ.]

## ಇಂಡಿಯಾ ದೇಶದ ವೃತ್ತಾಂತಗಳು.

ಮಧ್ಯಪ್ರಾಂತ್ಯಗಳಲ್ಲಿ ಕ್ಷಾಮಪೀಡಿತರ ಸಂಖ್ಯೆಯು ಕಳೆದ ವಾರ ೫೮,೧೩೭ ರಿಂದ ೭೫,೦೫೦ ಕ್ಕೆ ಹೆಚ್ಚಿತು.

◆◆◆◆

ಲಕ್ನೋ ನಗರಕ್ಕೆ ಪ್ಲೇಗ್ ಕಾಲುಹಾಕಿತು; ಈಗ ತುಂಬಾ ಜೋರಾಗಿದೆ. ಒಂದು ವಾರದಲ್ಲಿ ಒಂದು ಸಹಸ್ರ ಜನರು ಸಾಯುತ್ತಾರೆ.

◆◆◆◆

ಅಫ್ಘಾನಿಸ್ಥಾನದ ಅಮೀರರು ಷಿಕಾರಿ ಮಾಡಿಕೊಂಡು ಬರುವದಕ್ಕಾಗಿ ಕಾಬೂಲ್ ನಗರದಿಂದ ಕೊಹಿಸ್ಥಾನದ ಪ್ರಾಂತ್ಯಕ್ಕೆ ದಯಮಾಡಿದಾರೆಂದು ವರ್ತಮಾನ ಬಂದಿದೆ.

◆◆◆◆

ಸಿಂಧು ದೇಶಕ್ಕೆ ಸೇರಿದ ಹೈದರಾಬಾದ್ ನಗರದಲ್ಲಿ ಇಂಗ್ಲಿಷ್ ಸೈನಿಕರ ಲೈನ್ ಮನೆಗಳನ್ನು ಸರ್ಕಾರದವರು ೪೦,೦೦೦ ರೂಪಾಯಿ ಮುಟ್ಟಿಸಿ ದುರಸ್ತು ಮಾಡಿಸಿದಾರೆ.

◆◆◆◆

ಬೊಂಬಾಯಿ ಪಟ್ಟಣಕ್ಕೆ ಸೇರಿದ ಬೈಕಲ್ಲಾದಲ್ಲಿ ಪ್ರಜೆಗಳು ಚಂದಾಹಾಕಿ ಒಂದು ಆಸ್ಪತ್ರೆಯನ್ನು ಕಟ್ಟಿದಾರೆ. ಇದಕ್ಕೆ ಮರಾಟಾ ಪ್ಲೇಗ್ ಆಸ್ಪತ್ರೆ ಎಂದು ಹೆಸರಿಟ್ಟಿದಾರೆ.

◆◆◆◆

ಬೊಂಬಾಯಿ ಪಟ್ಟಣದ ತಾರದೇವ್ ಎಂಬ ಭಾಗದಲ್ಲಿ ಮೋತಿಲಾಲ್ ಮಿಲ್ಸ್ ಎಂಬ ಒಂದು ದೊಡ್ಡ ನೂಲಿನ ಕಾರ್ಖಾನೆಗೆ ಬೆಂಕಿಬಿದ್ದು, ೫,೦೦೦ ರೂಪಾಯಿನ ಹತ್ತಿ ಉರಿದುಹೋಯಿತು.

◆◆◆◆

ಸೋಮಾಲಿಲ್ಯಾಂಡಿನಲ್ಲಿ ಯುದ್ಧಕ್ಕಾಗಿ ಹೋಗಿರುವ ಇಂಗ್ಲಿಷ್ ಸೈನಿಕರಿಗೋಸ್ಕರ ಇಂಡಿಯಾ ಗವರ್ನಮೆಂಟಿನವರು ೮,೦೦೦ ಜೊತೆ ಖಾಕಿ ಉಡುಪುಗಳನ್ನು ಕಳುಹಿಸಿರುತ್ತಾರೆ.

◆◆◆◆

ಕಲ್ಕತ್ತಾ ಪಟ್ಟಣದ ಸೆಂಟ್ರಲ್ ಬಂದೀಖಾನೆಯ ಅಸಿಸ್ಟೆಂಟ್ ಜೈಲರಾದ ರಘುನಂದನ [illegible] ಕೈದಿಗಳಿಂದ ಲಂಚ ತಿನ್ನುತ್ತಾನೆಂಬದಾಗಿ ಒಬ್ಬ [illegible] ಆತನ ಮೇಲೆ ಫಿರ್ಯಾದು ತಂದಿದ್ದಾನೆ.

◆◆◆◆

ಅಫ್ಘಾನಿಸ್ಥಾನದ ಅಮೀರರಿಗೆ ಪಟ್ಟಾಭಿಷೇಕೋತ್ಸವವು ಕಳೆದ ೨೧ನೇ ತಾರೀಖಿನ ದಿನ ನಡೆಯಬೇಕಾಗಿತ್ತು. ಅವರ ಅಧಿಕಾರಕ್ಕೊಳಪಟ್ಟ ದೊಡ್ಡ ಮನುಷ್ಯರೆಲ್ಲಾ ಆ ಉತ್ಸವಕ್ಕಾಗಿ ಕಾಬೂಲಿಗೆ [illegible] ಇದ್ದರು.

◆◆◆◆

ಗಯಾ ಪಟ್ಟಣದಲ್ಲಿರುವ ವಿಕ್ಟೋರಿಯಾ ಜನಾನಾ ಆಸ್ಪತ್ರೆಯ ಫಂಡಿಗೆ ಬಾಬೂ ಬಾಲದೇವ ಲಾಲಾ ಎಂಬ ದೊಡ್ಡ ಮನುಷ್ಯನು ೧೫,೦೦೦ ರೂಪಾಯಿ ಧರ್ಮ ಕೊಟ್ಟಿದಾನೆ. ಬಂಗಾಳಾ ಗವರ್ನಮೆಂಟಿನವರು ಆತನ ಉದಾರಬುದ್ಧಿಯನ್ನು ನೋಡಿ ವಂದಿಸಿರುತ್ತಾರೆ.

◆◆◆◆

ಮಧ್ಯಪ್ರಾಂತ್ಯಗಳಿಗೆ ಸೇರಿದ ಸಾಂಬಲ್‌ಪುರದಲ್ಲಿ ಹುಲಿಗಳು ಜನರನ್ನು ಹಿಡಿದು ತಿನ್ನುತ್ತ ಬಂದಿವೆ. ಇದಕ್ಕಾಗಿ ಸರ್ಕಾರದವರು ಹುಲಿ ೧ಕ್ಕೆ ೪೦೦ ರೂಪಾಯಿಯಂತೆ ಇನಾಮು ಕೊಡುತ್ತೇವೆಂದು ಇಸ್ತಿಹಾರು ಹಾಕಿಸಿದಾರೆ. ಷಿಕಾರಿಗಳಿಗೆ ಇದು ಒಳ್ಳೇ ಸಮಯವೇ ಸರಿ.

◆◆◆◆

ಲಾಹೋರಿನ ಹತ್ತಿರ ಇರುವ ಆ ಹೋಶಾರಿನಲ್ಲಿ ಲಾಲಾ ಪ್ರಭುದಯಾಳು ಎಂಬ ಧನಿಕಕಾರನು ಒಂದು ಭಾರೀ ಹತ್ತಿಯ ಕಾರ್ಖಾನೆಯನ್ನು ಕಳೆದ ವಾರ ಸ್ಥಾಪಿಸಿದನು. ಆ ಸಾಹುಕಾರನು ಜಮೀನ್‌ದಾರರಿಗೆಲ್ಲಾ ಹಣ ಅಡ್ವಾನ್ಸು ಕೊಟ್ಟು, ರೈತರಿಂದ ಹತ್ತಿ ಬೆಳೆ ಮಾಡಿಸಬೇಕೆಂದು ಗೊತ್ತು ಮಾಡಿದಾನೆ.

◆◆◆◆

ಕೊಯಮುತ್ತೂರುಜಿಲ್ಲೆಗೆ ಸೇರಿದ ಪಲ್ಲಾದಂ ಎಂಬ ಊರಿನಲ್ಲಿ ಸಬ್ ಮ್ಯಾಜಿಸ್ಟ್ರೇಟರೂ ಪೊಲೀಸ್ ಇನ್ಸ್‌ಪೆಕ್ಟರೂ, ಅಸ್ಸಿಸ್ಟೆಂಟ್ ಸ್ಟೇಷನ್ ಹೌಸ್ ಆಫೀಸರೂ ಸೇರಿ ಅಪರಾಧಿಗಳನ್ನು ಹಿಂಸೆ ಬಲಾತ್ಕಾರಗಳಿಗೆ ಗುರಿಮಾಡಿ, ಅವರಿಂದ ಲಂಚ ತಿಂದರೆಂದು ಒಂದು ಮೊಕದ್ದಮೆ ಆಗಿದೆ. ಅವರನ್ನು [illegible] ವಿಚಾರಣೆ ಮಾಡಬೇಕೆಂಬದಾಗಿ ಸರ್ಕಾರದವರು ಸಸ್ಪೆಂಡ್ ಮಾಡಿರುತ್ತಾರೆ.

◆◆◆◆

ಇಂದೂರು ಸಂಸ್ಥಾನದ ಸಿಂಹಾಸನದ ಪದಚ್ಯುತಿಯನ್ನು ಹೊಂದಿದ ಮಹಾರಾಜಾ ಹೋಲ್ಕರ್ ಯವರೂ, ಕಾಶ್ಮೀರದ ಮಹಾರಾಜರವರೂ ಕುಂಭ ಮೇಳಾಕಾಲದಲ್ಲಿ ಹರಿದ್ವಾರದಲ್ಲಿ ಹಾಜರಾಗಿದ್ದರು. ಸ್ನಾನಘಟ್ಟಗಳಲ್ಲಿ ಸೇರಿದ ಭಕ್ತಾದಿಗಳ ಸಂಖ್ಯೆಯು ಅಪಾರವಾಗಿತ್ತು. ಆದರೆ ಯಾವದೊಂದು ಅನಾಯುತವೂ ಇಲ್ಲದಂತೆ ಈ ಸಲ ಜಾಗ್ರತೆ ನಡೆದದ್ದು ಸ್ತೋತ್ರಾರ್ಹವಾಗಿರುತ್ತದೆ.

◆◆◆◆

೧೮೩೦ನೆ ಇಸವಿ ಛಾಪ ಉಳ್ಳ ಒಂದು ಕೋಟಿ ಹಳೇ ರೂಪಾಯಿಗಳನ್ನು ಸರ್ಕಾರದವರು ಚಲಾವಣೆಯಿಂದ ತೆಗೆದು ಹೊಸರೂಪಾಯಿ ಹಾಕಿಸಬೇಕೆಂದು ಕಂಗಿಸಿರುತ್ತಾರೆ. ಅದರೂ ಚಲಾವಣೆಗೆ ರೂಪಾಯಿ ಈಗ ಇರುವದು ಸಾಲದು. ಆದ್ದರಿಂದ ಸುಮಾರು ೩೦ ಲಕ್ಷ ರೂಪಾಯಿಗಳನ್ನು ಹೊಸದಾಗಿ ಛಾಪಿಸಬೇಕೆಂದು ಇಂಡಿಯಾ ಗವರ್ನಮೆಂಟಿನವರು ಹುಕುಂ ಕೊಟ್ಟಿರುತ್ತಾರೆ.

◆◆◆◆

ಕಳೆದ ವಾರ ಮದರಾಸಿನಲ್ಲಿ ಇಬ್ಬರು ಬಿಳಿಯ ಹೆಂಗಸರು ಪಟ್ಟ ಕಾಳಗವಾಡಿದರು. ಸಾವಿರಾರು ಜನರು ಹೋಗಿ ನೋಡಿದರು. ಸುಮಾರು ೧೫ ನಿಮಿಷಗಳ ತನಕ ಕಾಳಗವಾಯಿತು. ಕಡೆಗೆ ಗುಲ್ ಬಾವೂಸ್ ಎಂಬವಳು ಗುಲ್ ಬಾದ್‌ಷಾ ಎಂಬವಳನ್ನು ಕೆಡವಿ ಜಯಪ್ರದ ಹೊಂದಿದಳು. ಗೆದ್ದವಳಿಗೆ ೭೫ ರೂ., ಸೋತವಳಿಗೆ ೫೦ ರೂ. ಇನಾಮು ಕೊಡಲಾಯಿತು.

◆◆◆◆

ಕಾಶೀಪಟ್ಟಣದ ಸಂಸ್ಕೃತ ಕಾಲೇಜಿನಲ್ಲಿ ಕೆಲವುಮಂದಿ ಪಾಶ್ಚಾತ್ಯರೂ ಬಂದು ಸಂಸ್ಕೃತವನ್ನು ಕಲಿಯುತ್ತಿದ್ದಾರೆಂದು ತಿಳಿಯುವದು. ಈ ಸಲ ನಡೆದ ಪರೀಕ್ಷೆಗಳಲ್ಲಿ ಅಮೇರಿಕದ ಮೆ. ಸ್ಮಿತ್ ಎಂಬಾತನು ತೇರ್ಗಡೆ ಹೊಂದಿದನೆಂದು ಪ್ರಕಟವಾಗಿದೆ. ಇದರಿಂದ ಪಶ್ಚಿಮ ರಾಜ್ಯಗಳವರಿಗೆ ಸಂಸ್ಕೃತವನ್ನು ಕಲಿಯಬೇಕೆಂಬುವದರಲ್ಲಿ ತುಂಬಾ ಕುತೂಹಲವಿದೆ ಎಂದು ಗೊತ್ತಾಗುವದು.

◆◆◆◆

ನಮ್ಮ ವೈಸರಾಯಿ ಲಾರ್ಡ್ ಕರ್ಸನ್ ಪ್ರಭುಗಳಿಗೆ ಅವರು ಇನ್ನು ಎರಡುವರುಷಗಳ ತನಕ ವೈಸರಾಯಿ ಪದವಿಯಲ್ಲಿ ಇರಬೇಕೆಂಬದಾಗಿ ಹುಕುಂ ಕೊಟ್ಟಿರುವಂತೆಯೂ, ಅವರು ೩ ತಿಂಗಳು ರಜಾ ಪಡೆದು ವಿಲಾಯಿತಿಗೆ ಹೋಗಿ ಬರುವವರಾಗಿದಾರೆಂತಲೂ ವಿಲಾಯಿತಿಯಲ್ಲಿ ಪ್ರಕಟವಾಗುವ ವೆಸ್ಟರ್ನ್ ಮಾರ್ನಿಂಗ್ ನ್ಯೂಸ್ ಎಂಬ ಪತ್ರಿಕೆಯು ಹೇಳುವದು. ಇದೆಲ್ಲಾ ಬರೀ ವರ್ತಮಾನವೇ ಆಗಿದೆ ಎಂದು ತೋರುವದು.

◆◆◆◆

ಬೊಂಬಾಯಿನಲ್ಲಿ ಅಬ್ದುರ್ ರಹಮಾನ್ ಹುಸೇನ್ ಎಂಬಾತನು ಕಳೆದ ವಾರ ಮಸೀದಿಗೆ ಹೋಗಿದ್ದಾಗ್ಯೆ ಇಬ್ಬರು ಹೆಂಗಸರೂ ಮೂರುಮಂದಿ ಗಂಡಸರೂ ಸೇರಿ ಆತನ ಮನೆಗೆ ನುಗ್ಗಿ ಸುಮಾರು ೭೦,೫೦೦ ರೂಪಾಯಿಯಷ್ಟು ನಗನಾಣ್ಯಗಳನ್ನು ದೋಚಿಕೊಂಡು ಹೋದರು. ಆ ಕೂಡಲೇ ಪೊಲೀಸಿಗೆ ತಿಳಿದದ್ದರಿಂದ ಅವರು ಆ ಕಳ್ಳರನ್ನು ಹಿಡಿದರು. ಅವರ ಬಳಿ ೧೮,೦೦೦ ರೂಪಾಯಿನ ಮಾಲು ಸಿಕ್ಕಿತು. ಮೊಕದ್ದಮೆ ನಡೆಯುತ್ತಾ ಇದೆ.

◆◆◆◆

ಮದರಾಸ್ ಸರ್ಕಾರದವರು ಅಲ್ಲಿನ ಮಹಮದೀಯ ಜನರ ವಿದ್ಯಾಭ್ಯಾಸಕ್ಕಾಗಿ ವರುಷಕ್ಕೆ ೫,೦೦೦ ರೂಪಾಯಿ ಕೊಡುತ್ತಾ ಬರುವೆವೆಂತಲೂ, ಆ ವಿದ್ಯಾಸಂಘದವರು ಈ ಫಂಡಿಗೆ ಕಡೇ ಪಕ್ಷ ವರುಷಕ್ಕೆ ೬,೦೦೦ ರೂಪಾಯಿಗಳನ್ನು ಚಂದಾ ಕೊಡಿಸಬೇಕೆಂತಲೂ, ಈ ಒಟ್ಟು [illegible] ಮಹಮದೀಯ ಬಾಲಕರಿಗೆ ಕಸಬುದಾರಿ ವಿದ್ಯೆಗಳನ್ನು ಕಲಿಸುವಂತೆ ಏರ್ಪಾಡು ಮಾಡಬೇಕೆಂತಲೂ ಹುಕುಂ ಕೊಟ್ಟಿದಾರೆ.

◆◆◆◆

ಭಾವನಗರದ ಮಹಾರಾಜರವರು ಕಳೆದ ವಾರ ತಮ್ಮ ವರುಷ ವರ್ಧಂತಿ ಉತ್ಸವದ ದಿನ ತಮ್ಮ ಸಂಸ್ಥಾನದ ಸ್ಕೂಲ್ ಹುಡುಗರಿಗೂ, ಹುಡುಗಿಯರಿಗೂ ತಿಂಡಿ ಪದಾರ್ಥಗಳನ್ನು ಕೊಡಿಸಿದರು. ಸುಮಾರು ೬೦೦ ರೂಪಾಯಿನ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಇನಾಮು ಕೊಡಿಸಿದರು. ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಾಗುವಂತೆ ಕೆಲವು ವಿದ್ಯಾವೇತನಗಳನ್ನು ಕೊಡುವದಾಗಿ ವಾಗ್ದಾನ ಮಾಡಿದರು. ಜೀವನಕ್ಕಿಲ್ಲದೆ ಕಷ್ಟಪಡುತ್ತಿದ್ದ ೩೩ ಮಂದಿ ವಿಧವೆಯರಿಗೆ ಮಾಸಾಶನವನ್ನು ಕಲ್ಪಿಸಿದರು. ಸೈನ್ಯದವರಿಗೆಲ್ಲಾ ಒಂದು ದಿನದ ಸಂಬಳವನ್ನು ಇನಾಮಾಗಿ ಕೊಡಿಸಿದರು.

◆◆◆◆

ಮಧ್ಯಪ್ರಾಂತ್ಯಗಳಿಗೆ ಸೇರಿದ ಸಂಬಲ್‌ಪುರದಲ್ಲಿ ೮ ಮಂದಿ ಯಾತ್ರಿಕರು ಒಂದು ಕಡೆ ಇಳುಕೊಂಡಿದ್ದರು. ಅವರಲ್ಲಿ ಒಬ್ಬನು ಮಾತ್ರ ನೇಪಾಳದ ಬ್ರಾಹ್ಮಣನಾಗಿದ್ದನು. ಇವರೆಲ್ಲಾ ಜಗನ್ನಾಥದಿಂದ ಬಂದವರು. ಆ ಬ್ರಾಹ್ಮಣನು ಅಡಿಗೆಮಾಡಿ ಅವರಿಗೆ ಊಟಕ್ಕೆ ಬಡಿಸಿದನೆಂತಲೂ, ಅವರೆಲ್ಲಾ ಉಂಡಮೇಲೆ ಜ್ಞಾನತಪ್ಪಿ ಬಿದ್ದುಕೊಂಡಾಗ, ಅವರ ಬಳಿಯಲ್ಲಿದ್ದ ಹಣಕಾಸನ್ನು ಆ ಬ್ರಾಹ್ಮಣನು ಅಪಹರಿಸಿಕೊಂಡು ಓಡಿಹೋದನೆಂತಲೂ, ಈಗ ಪೊಲೀಸಿನವರು ಅವನನ್ನು ಹುಡುಕುತ್ತಿದಾರೆಂತಲೂ, ಊಟಮಾಡಿದವರಲ್ಲಿ ನಾಲ್ಕುಮಂದಿ ಸತ್ತುಹೋದರೆಂತಲೂ ತಿಳಿದುಬಂದಿದೆ.

◆◆◆◆

ಪೂನಾ ಪಟ್ಟಣದಲ್ಲಿ ದೇಶೀಯ ಸ್ತ್ರೀಯರುಗಳು ವಿದ್ಯಾಭ್ಯಾಸ ಮಾಡುವ ಸ್ಕೂಲಿಗೆ ಗಾಯಕವಾಡ ಮಹಾರಾಜರವರು ದಯಮಾಡಿ ನೋಡಿಕೊಂಡು ಬಂದರು. ಆಗ್ಯೆ ಆ ಸ್ಕೂಲಿನ ಒಂದು ಬಾಲಕಿಯರನ್ನು ಕುರಿತು ಮಹಾರಾಜರವರು ತಿಳಿಸಿದ್ದೇನಂದರೆ—ಸ್ತ್ರೀಯರು ಆಸಕ್ತಿಯಿಂದ ವಿದ್ಯೆ ಕಲಿಯಬೇಕು. ಸಣ್ಣಮ್ಮ ವಿಚಾರವಷ್ಟರೊಳಗಾಗಿ ಕಷ್ಟಪಟ್ಟು ಅವರು ವಿದ್ಯಾಸಂಪನ್ನೆಯರಾಗತಕ್ಕದ್ದು. ಅವರು ಪಾಠಶಾಲೆಯಲ್ಲಿ ಕಲಿತ ವಿದ್ಯೆಯನ್ನು ಮನೆಯಲ್ಲಿ ಓದುವ ಪುಸ್ತಕಗಳ ವಿವೇಕವನ್ನೂ ಗೃಹಕೃತ್ಯದ ವಿಚಾರದಲ್ಲಿ ರೂಢಿಗೆ ತರಬೇಕಾದದ್ದು ತುಂಬಾ ಅವಶ್ಯ. ಸ್ತ್ರೀಯರು ವಿದ್ಯಾವತಿಯರಾಗಬೇಕೆಂಬುವದರಲ್ಲಿ ನನಗೆ ತುಂಬಾ ಕುತೂಹಲವಿದೆ. ಹಿಂದು ಸ್ತ್ರೀಯರೆಲ್ಲಾ ವಿದ್ಯಾಸಂಪನ್ನೆಯರಾದಾರೇ ಎಂಬದಾಗಿ ನಾನು ಬಹಳವಾಗಿ ನಿರೀಕ್ಷಿಸುತ್ತೇನೆ.

◆◆◆◆

ಪೊಲೀಸ್ ಕಮಿಷನರ್ ದಿವ್ಯಗಳು ಕಲ್ಕತ್ತಾ ಪಟ್ಟಣದ ಸಂಸ್ಕೃತ ಇಂಗ್ಲಿಷ್ ಸಾಹಿತ್ಯದ ಒಬ್ಬ ಪಂಡಿತನನ್ನು ಕರೆಸಿ, ಹಿಂದುಸ್ಥಾನದ ಪೊಲೀಸ್ ನೌಕರರು ಲಂಚಕೋರರಾಗಿದ್ದಂತೆಯೂ, ಅನ್ಯಾಯಗಾರರಾಗಿದ್ದಂತೆಯೂ ಇರುವದಕ್ಕೆ ಏನುಮಾಡಬೇಕೆಂದು ಕೇಳಿದರು. ಅದಕ್ಕೆ ಆ ಪಂಡಿತನು ಕೊಟ್ಟ ಉತ್ತರವೇನಂದರೆ—ಸ್ವಪ್ರಯೋಜನವೆಂಬ ನೀಚ ಲಕ್ಷಣವು ಪೊಲೀಸಿನವರನ್ನು ಹಿಡಿದಿರುತ್ತದೆ. ಅವರಿಗೆ ದೇವರ ಮೇಲೆ ಭಕ್ತಿಯಾಗಲಿ ಪ್ರೀತಿಯಾಗಲಿ ಇಲ್ಲ. ಅವರ ಹೃದಯಗಳು ಬಹಳ ನೀಚವಾದವುಗಳು. ಆದಕಾರಣ ಎಲ್ಲಾ ಜನರನ್ನೂ ಕಂಡಕಮ್ಮಿಯವರನ್ನೇ ಪೊಲೀಸ್ ನೌಕರಿಗೆ ಸೇರಿಸಿಕೊಳ್ಳಕೂಡದು. ಕ್ರೈಸ್ತರು, ಮುಸಲ್ಮಾನರು,

## ಕ್ರೈಸ್ತ ಮತಾಧಾರದ ಬೋಧನಾ ಸಿದ್ಧಾಂತ.

೧ ನೇ ಭಾಗ.—ದೇವರ ವಿಷಯವಾದದ್ದು.

ದೇವರ ವಿಷಯ ತಿಳಿಸುವಂಥ ಬೋಧನೆಯು ಎಲ್ಲವುಗಳಿಗಿಂತ ಅತ್ಯಂತ ಪ್ರಾಧಾನ್ಯವಾದದ್ದಾಗಿದೆ. ದೇವರಿಲ್ಲವೆಂದು ಹೇಳುವ ನಾಸ್ತಿಕ ಜನರ ಸಂಖ್ಯೆಯು ಈ ದೇಶದಲ್ಲಿ ಬಹು ಕೊಂಚವೆಂತ ಹೇಳಬೇಕಾಗಿದೆ. ಈ ದೇಶದಲ್ಲಿಯೇ ಅಲ್ಲದೆ ಇತರ ದೇಶಗಳಲ್ಲಿಯೂ ಸರಿಯಾದ ನಾಸ್ತಿಕ ಜನರು ಈ ಕಾಲದಲ್ಲಿ ಸಿಕ್ಕುವದು ಅಪರೂಪವಾಗಿದೆ. ಎಲ್ಲಾ ಸ್ಥಳಗಳಲ್ಲಿಯೂ ದೇವರನ್ನು ಪ್ರಕಾಶ ಮಾಡಿಸುವ ಗುರುತುಗಳೂ ತೋರುವ ವಿವೇಕಗಳೂ ಕಂಡುಬರುತ್ತವೆ. ಇವುಗಳಿಂದ ಒಬ್ಬ ದೇವರಿದ್ದಾನೆಂಬ ನೆನವು ಎಲ್ಲರಲ್ಲಿಯೂ ಹುಟ್ಟಿರುತ್ತದೆಂದು ನಾವು ಅನುಮಾನವಿಲ್ಲದೆ ತಿಳುಕೊಳ್ಳುತ್ತೇವೆ.

ಜನರು ದೇವರಿದ್ದಾನೆಂದು ನಂಬುತ್ತಾರಷ್ಟೆ. ಆದರೆ ಆತನು ಇದ್ದಾನೆಂದು ನಂಬುವದು ಮಾತ್ರ ಸಾಕಾಗಿದೆಯೋ? ಸುಮ್ಮನೆ ಒಬ್ಬ ದೇವರು ಇದ್ದಾನೆಂದು ನಂಬುವದರಲ್ಲಿಯಾಗಲೀ ಅಥವ ಭಗವಂತ ಭಗವಂತ ಎಂದು ಉಚ್ಚರಿಸುವ ಬಾಯುಪಚಾರದ ಭಕ್ತಿಯಲ್ಲಾಗಲೀ ಏನಾದರೂ ಪ್ರಯೋಜನನಾದೀತೇ? ಎಂದಿಗೂ ಇಲ್ಲ. ದೇವರಿಲ್ಲವೆಂದು ಹೇಳುವ ನಾಸ್ತಿಕನೂ ದೇವರು ಇದ್ದಾನೆಂದು ನಂಬಿ ಆತನನ್ನು ಸರಿಯಾಗಿ ತಿಳುಕೊಳ್ಳದೆ, ಆರಾಧಿಸದೆ ಇರುವ ಆರಾಧಕನೂ ಇಬ್ಬರೂ ಒಂದೇ ಎಂದೂ ಉಭಯತ್ರರಿಂದಲೂ ಏನೂ ಪ್ರಯೋಜನವಾಗುವದಿಲ್ಲವೆಂದೂ ಬುದ್ಧಿವಂತರು ತಿಳಿದಿದ್ದಾರೆ. ನಮ್ಮ ದೇಶದಲ್ಲಿ ಭಗವಂತ ಎಂಬ ಹೆಸರು ಚಿಕ್ಕ ಜನರ ಹುಡುಗ ಹುಡುಗಿಯರಿಗೂ ಗೊತ್ತಿರುವಷ್ಟು ರೂಢಿಯಲ್ಲಿದೆ. ಹೀಗಿದ್ದರೂ ಈ ದೇಶಸ್ಥರು ನಿಜದೇವರನ್ನು ತಿಳುಕೊಂಡಿರುವದರ ವಿಷಯದಲ್ಲಿ ಎಷ್ಟರಮಟ್ಟಿಗೆ ಪ್ರಯತ್ನ ಮಾಡಿದ್ದಾರೆಂಬುವದು ಬಹು ಅನುಮಾನಾಸ್ಪದವಾದ ಸಂಗತಿಯಾಗಿದೆ. ನಾನು ಒಂದು ಮನೆಯನ್ನು ನೋಡಿ ಅದನ್ನು ಕಟ್ಟಿದವನೊಬ್ಬನಿರಬೇಕೆಂದು ತೀರ್ಮಾನಿಸುತ್ತೇನಷ್ಟೆ? ಅದರಂತೆ ಜಗತ್ತನ್ನು ನೋಡಿ ಇದನ್ನು ನಿರ್ಮಿಸಿ ಶೃಂಗರಿಸಿರುವ ಸ್ವಾಮಿ ಒಬ್ಬನಿರುವನೆಂತ ನಂಬುತ್ತೇನೆ. ಹೀಗೆ ನಂಬುವದು ಒಳ್ಳೇದೇ ಸರಿ. ಆದರೆ ಅಷ್ಟರಲ್ಲೇ ನಾನು ತೃಪ್ತಿಪಟ್ಟುಕೊಂಡಿರುವದು ಒಳ್ಳೇದೋ? ಎಷ್ಟು ಮಾತ್ರಕ್ಕೂ ಇಲ್ಲ.

ನನ್ನ ವಾಸಕ್ಕಾಗಿ ಒಂದು ಮನೆಯನ್ನು ಕಟ್ಟಬೇಕೆಂದು ನಾನು ಆಲೋಚಿಸುವಾಗ ಬರೇ ಇಟ್ಟಿಗೆಗಳನ್ನು ಒಂದರಮೇಲೊಂದು ಪೇರಿಸುವಂತ ಒಬ್ಬ ಗಾರೆಯವನಿಗೆ ನಾನು ಅದನ್ನು ಕೊಡುವದಿಲ್ಲ. ಹೀಗೆ ಮಾಡಿದ್ದಾದರೆ ನಾನು ಮನೆಗೆ ಹೊಕ್ಕೊಂಡ ಕ್ಷಣ ಹೊಡತದಿಂದ ಗೋಡೆಗಳು ನನ್ನ ಮೇಲೆ ಕುಸಿದುಕೊಂಡು ಬೀಳಬಹುದು. ಆದದ್ದರಿಂದ ಮನೆ ಕಟ್ಟಲಿಕ್ಕೆ ಒಬ್ಬ ಬುದ್ಧಿವಂತನಾದ ಕೆಲಸಗಾರನನ್ನು ಹುಡುಕುತ್ತೇನೆ. ಇದರಂತೆ ಒಬ್ಬ ದೇವರಿದ್ದಾನೆಂಬ ನಾನು ಸಾಧಾರಣವಾಗಿ ನಂಬುವದೂ ಅಷ್ಟರಲ್ಲಿಯೇ ನಾನು ಯಾವಾಗಲೂ ತೃಪ್ತಿಪಟ್ಟುಕೊಂಡಿರುವದೂ ಗಾರೆ ಅಥವ ಕೆಸರು ಉಪಯೋಗಿಸದೆ ಸುಮ್ಮನೆ ಇಟ್ಟಿಗೆಗಳನ್ನು ಒಂದರಮೇಲೊಂದು ಪೇರಿಸುವದಕ್ಕೆ ಸಮವಾಗಿರುವದು. ಈ ದೇಶದ ಜನರು ಸೃಷ್ಟಿಕರ್ತನಾದ ದೇವರನ್ನು ತಿಳಿಯತಕ್ಕ ರೀತಿಯಲ್ಲಿ ತಿಳಿದಿಲ್ಲ. ಅಥವ ಸರಿಯಾದ ರೀತಿಯಲ್ಲಿ ಆ ಸ್ವಾಮಿಯನ್ನು ತಿಳುಕೊಳ್ಳುವದಕ್ಕೆ ಪ್ರಯತ್ನ ಮಾಡುವದೂ ಇಲ್ಲ.

ಭಗವಂತನ ವಿಷಯ ನಾವು ಸರಿಯಾಗಿ ಧ್ಯಾನಿಸಬೇಕಾದರೆ ಆತನ ಪರಾಮರಿಕೆ ಎಂಥಾದ್ದು, ಆತನು ಎಂಥಾ ಕರ್ತನು, ಆತನ ಲಕ್ಷಣಗಳು ಯಾವವು, ಆತನಿಗೂ ನಮಗೂ ಯಾವ ಸಮ್ಮಂಧವಿದೆ, ಈ ಕರ್ತನ ಮಹತ್ತೂ ಅಧಿಕಾರವೂ ಎಂಥಾದ್ದು ಎಂಬೀ ಮೊದಲಾದ ಸಂಗತಿಗಳನ್ನು ನಾವು ತಿಳಿದು ಧ್ಯಾನಿಸದೆ ಹೋದರೆ ನಮಗೆ ಎಳ್ಳಷ್ಟೂ ಪ್ರಯೋಜನವಾಗುವದಿಲ್ಲ. ಸುಮ್ಮನೆ ಒಬ್ಬ ದೇವರಿದ್ದಾನೆಂಬ ಒಂದೇ ಸಂಗತಿಯನ್ನು ಮಾತ್ರ ನಾವು ತಿಳಿಯಲಪೇಕ್ಷಿಸಿದರೆ ಅದಕ್ಕಾಗಿ ನಾವು ಬಹಳ ಕಷ್ಟಪಡುವದು ಏನೂ ಅಗತ್ಯವಿರುವದಿಲ್ಲ. ಅದಕ್ಕಾಗಿ ನಾನಾ ಪುಸ್ತಕಗಳನ್ನು ಪಾರಾಯಣ ಮಾಡುವದೂ ಅವಶ್ಯಕವಿಲ್ಲ. ಒಬ್ಬ ದೇವರಿದ್ದಾನೆಂಬ ಒಂದೇ ಸಂಗತಿಯನ್ನು ನಾವು ತಿಳಿಯಬೇಕಾಗಿದ್ದರೆ ಕಡೇ, ಪಕ್ಷಿ ಒಂದು ಇರುವೆ ಅದನ್ನು ನಮಗೆ ಕಲಿಸಬಹುದು. ಆದ್ದರಿಂದ ದೇವರಿದ್ದಾನೆಂಬ ತಿಳುವಳಿಕೆ ಮನುಷ್ಯನಿಗೆ ಉಂಟಾದ ಕೂಡಲೆ ಆ ಸ್ವಾಮಿಯನ್ನು ಕುರಿತು ಅವನು ವಿಚಾರಿಸಿ ಆತನನ್ನು ತಾನು ಯುಕ್ತವಾಗಿ ಆರಾಧಿಸುವದಕ್ಕೆ ಕಲಿಯಬೇಕು.

ಈ ಹಿಂದೂ ದೇಶದಲ್ಲಿ ಹಿಂದೂ ಜನರು ಮಾತ್ರ ದೇವರ ವಿಷಯ ಚಿಂತಿಸುವದಿಲ್ಲ. ಇವರಿಗೆ ಆತನ ವಿಷಯದಲ್ಲಿ ಏನೋ ಒಂದು ತರವಾದ ನಂಬಿಕೆ ಇದೆ. ಈ ನಂಬಿಕೆ ಜನರನ್ನು ಯಾವ ಸ್ಥಿತಿಗೆ ತಂದಿದೆಯೆಂದೂ ಇದರಿಂದ ಇವರಿಗೆ ಯಾವ ಮೇಲು ಉಂಟಾಗಿದೆಯೆಂದೂ ವಿಚಾರಿಸಬೇಕು. ಇವರ ನಂಬಿಕೆಯು ಇವರನ್ನು ಪಾರಮಾರ್ಥಿಕವಾಗಿಯೂ ಲೌಕಿಕವಾಗಿಯೂ ಯಾವ ಸ್ಥಿತಿಗೆ ತಂದು ಬಿಟ್ಟಿದೆ? ಹಿಂದುಗಳು ಮೂರು ನಾಲ್ಕು ಸಾವಿರ ವರ್ಷಗಳಿಂದ ಒಬ್ಬ ದೇವರಿದ್ದಾನೆಂತ ನಂಬುತ್ತಲೇ ಬಂದಿದ್ದಾರೆ. ಆದರೆ ಆತನನ್ನು ಸರಿಯಾಗಿ ತಿಳಿದು ಆತನಿಗೆ ಸಲ್ಲತಕ್ಕ ಆರಾಧನೆಯನ್ನು ಸಲ್ಲಿಸ ಇನ್ನೂ ಕಲಿತಿಲ್ಲ. ಇದರಿಂದ ಅವರ ಸ್ಥಿತಿಯು ಬರಬರುತ್ತ ಅವರನ್ನು ಕನಿಷ್ಠ ಸ್ಥಿತಿಗೇನೇ ತರುತ್ತ ಇದೆ. ಕ್ರೈಸ್ತರು ನಿಜದೇವರನ್ನು ಸರಿಯಾದ ರೀತಿಯಲ್ಲಿ ತಿಳುಕೊಂಡಿದ್ದಾರೆಂದು ಹೇಳುವದರಲ್ಲಿ ಯಾವ ತಪ್ಪೂ ಇರಲಾರದು. ಯುರೋಪ್ ಖಂಡದಲ್ಲಿರುವ ಕ್ರೈಸ್ತ ರಾಜ್ಯಗಳು ಅತಿ ಉತ್ಕೃಷ್ಟವಾದ ಸ್ಥಿತಿಗೆ ಬಂದಿರುವದೂ ಅವರ ಬುದ್ಧಿ, ಬಲ, ಚಮತ್ಕಾರಗಳಿಂದಲ್ಲ; ಆದರೆ ಅವರು ನಂಬಿರುವ ದೇವರ ವಿಷಯವಾದ ಜ್ಞಾನವೂ ತಿಳುವಳಿಕೆಯೂ ಅವರನ್ನು ಈ ಉನ್ನತವಾದ ಪದವಿಗೆ ತಂದು ಬಿಟ್ಟಿತು. ನಮ್ಮ ವಾಚಕರಲ್ಲನೇಕರು, ಓಹೋ—ದೇವರ ವಿಷಯ ತಿಳುವಳಿಕೆ ನಮಗಿಲ್ಲವೇ! ಈ ವರೆಗೂ ನಾವು ತಿಳಿದದ್ದು ಏನೂ ಇಲ್ಲವೋ? ಹಾಗಾದರೆ ನಾವು ಶುದ್ಧ ಮೂಢರೋ? ಎಂದು ಆಕ್ಷೇಪಿಸಬಹುದು. ಆದರೆ ಮುಂದಿನ ಉಪನ್ಯಾಸವನ್ನು ನಾವು ಓದುವಾಗ ದೇವರನ್ನು ನಾವು ಯಾವ ರೀತಿ ತಿಳುಕೊಂಡು ನಂಬಿ ಆರಾಧಿಸಬೇಕಾಗಿತ್ತು, ಯಾವ ವಿಷಯದಲ್ಲಿ ಮೋಸ ಹೋಗಿದ್ದೇವೆ! ಕ್ರೈಸ್ತ ಮತಕ್ಕೂ ಹಿಂದೂ ಮತಕ್ಕೂ ದೇವರ ವಿಷಯದಲ್ಲಿರುವ ದೊಡ್ಡ ಹೆಚ್ಚು ಕಡಿಮೆ ಏನಿದೆ! ಎಂಬೀ ವಿಷಯಗಳು ವೇದ್ಯವಾಗುವವು.

---

## ನಮ್ಮ ಪುಸ್ತಕ ಭಂಡಾರವು.

೧. "ವೀರೇಂದ್ರ," ೨. "ಸರೋಜಿನಿ ನಾಟಕ."

ಧಾರವಾಡ ಜಿಲ್ಲಾ ಅಣ್ಣಿಗೇರಿ ರಾ॥ ರಾ॥ ರಾಘವೇಂದ್ರ ಕೃಷ್ಣ ಇನಾಮತಿಯವರು ಇವೆರಡು ಕಥೆಗಳನ್ನೂ ರಚಿಸಿ, ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿರುತ್ತಾರೆ. ಜನರು ಈಚೀಚೆಗೆ ಕಥೆಗಳನ್ನೂ ನಾಟಕಗಳನ್ನೂ ದೇಶಭಾಷೆಯಲ್ಲಿ ಓದಲು ಕುತೂಹಲಪಡುತ್ತಾರೆಂಬುವದಕ್ಕೆ ಪುಸ್ತಕಗಳನ್ನು ಪ್ರಕಟಿಸುತ್ತಿರುವದೇ ದೃಷ್ಟಾಂತವಾಗಿದೆ. ಮೈಸೂರು ದೇಶದ ಕನ್ನಡಕ್ಕೂ ಧಾರವಾಡ ಜಿಲ್ಲೆಯ ಕನ್ನಡಕ್ಕೂ ಸ್ವಲ್ಪ ಹೆಚ್ಚುಕಡಿಮೆ ಇದ್ದಾಗ್ಯೂ ಈ ಕಥೆಗಳು ಓದುವವರಿಗೆ ಅರ್ಥವಾದಾವೆಂತಲೂ, ಅವುಗಳಲ್ಲಿ ಕಂಡ ನೀತಿಗಳು ಗ್ರಹಿಕೆಗೆ ಬಂದಾವೆಂತಲೂ ಹೇಳಬಹುದು.

"ಪ್ಲೇಗ್ ರೋಗದ ಚಿಕಿತ್ಸೆಯು."

ಈ ಸಣ್ಣ ಪುಸ್ತಕವನ್ನು ಹುಬ್ಬಳ್ಳಿ ಮಿಷನ್ ಕಂಪೌಂಡು ರಾ॥ ರಾ॥ ಹಂಪ್ರಿ ಹೊಲೊಮೋನಪ್ಪ ದೇವಧರ ಇವರು ಬರೆದು ಪ್ರಕಟಿಸಿರುತ್ತಾರೆ. ಪ್ಲೇಗ್ ಉಪದ್ರವನ್ನು ಹೋಗಿಸುವದಕ್ಕೆ ಹಿಂದೂಸ್ಥಾನದಲ್ಲಿರತಕ್ಕ ಇಂಗ್ಲಿಷ್, ಯುನಾನಿ, ಹಿಂದು ವೈದ್ಯರುಗಳೆಲ್ಲಾ ತುಂಬಾ ಸಾಹಸಪಟ್ಟು ತಮ್ಮ ಚತುರತೆಯನ್ನೆಲ್ಲಾ ವೆಚ್ಚಮಾಡುತ್ತಿದ್ದರೂ ಎಲ್ಲಾ ನಿಷ್ಫಲವಾಗಿ ಪರಿಣಮಿಸಿರುವದು. ಆದರೂ ಈ ರೋಗದ ಸ್ಥಿತಿಗತಿಯನ್ನೂ, ಅದರ ಲಕ್ಷಣಗಳನ್ನೂ, ಅದಕ್ಕೆ ನಾನಾ ವೈದ್ಯರು ಹೇಳುವ ಚಿಕಿತ್ಸೆಗಳನ್ನೂ ತಿಳಿಯುವದು ಅನುಕೂಲವೇ ಸರಿ. ಇವರು ಹೇಳುವ ಔಷಧವು ಕಲ್ಕತ್ತೆಯಲ್ಲಿರುವ ಹೋಮಿಯೋಪತಿಕ್ ರಸಾಯನ ಶಾಸ್ತ್ರಜ್ಞರಿಂದ ತರಿಸತಕ್ಕದ್ದೆಂತಲೂ, ಅದನ್ನು ನಾಲ್ಕು ವರ್ಷಗಳಿಂದ ರೋಗಿಗಳಿಗೆ ಕೊಟ್ಟು ವಾಸಿಮಾಡಿ ಲಾಭವಾಗಿರುವಂತೆಯೂ ಗ್ರಂಥಕರ್ತರು ತಿಳಿಸುತ್ತಾರೆ.

"ಚಕ್ರವರ್ತಿಗಳವರ ಕಿರೀಟೋತ್ಸವ."

ಮೈಸೂರು ಸಂಸ್ಥಾನದ ಶಿಲಾಶಾಸನಗಳನ್ನು ನೋಡಿ ಅಚ್ಚುಮಾಡುವ ಮಿ॥ ರೈಸ್ ಯವರ ಆಫೀಸಿನಲ್ಲಿರುವ ಮ॥ ರಾ॥ ಜೈನ ಬ್ರಾಹ್ಮಣ ಪದ್ಮರಾಜ ಪಂಡಿತರು ಎಡ್ವರ್ಡ್ ಚಕ್ರವರ್ತಿಗಳ ರತ್ನಕಿರೀಟಧಾರಣೆಯನ್ನು ಕುರಿತು ೪೮ ಶ್ಲೋಕಗಳನ್ನು ರಚನೆಮಾಡಿ ಪ್ರಕಟಿಸಿರುತ್ತಾರೆ. ಈ ಪುಸ್ತಕದಲ್ಲಿ ಚಕ್ರವರ್ತಿಯವರ ಜಾತಕವೂ ಬರೆಯಲ್ಪಟ್ಟಿರುವದು. ಸಂಸ್ಕೃತ ಶ್ಲೋಕಕ್ಕೆ ಇಂಗ್ಲಿಷು, ಕನ್ನಡಭಾಷೆಗಳಲ್ಲಿ ಅರ್ಥ ತಾತ್ಪರ್ಯಗಳನ್ನೂ ಬರೆದಿರುವರು.

"ಜೈಮಿನಿ ಭಾರತ."

ಇದರಲ್ಲಿ ಪ್ರಥಮದ ನಾಲ್ಕು ಸಂಧಿಗಳು ಮಾತ್ರ ಅಡಕವಾಗಿವೆ. ಇದನ್ನು ಪಾಠಶಾಲೆಗಳ ಉಪಯೋಗಾರ್ಥವಾಗಿ ಕಲ್ಲಿಕೋಟೆ ಸಾಮೂತಿರಿ ರಾಜರ ವಿದ್ಯಾಶಾಲೆಯಲ್ಲಿ ಉಪಾಧ್ಯಾಯರಾದ ಮ॥ ರಾ॥ ಗುಲ್ವಾಡಿ ಶಿವರಾವ್, ಬಿ. ಎ., ಇವರು ಶೋಧಿಸಿ, ಕಲ್ಲಿಕೋಟೆ ವೆಸ್ಟ್ ಕೋಸ್ಟ್ ಮುದ್ರಾಲಯದಲ್ಲಿ ಅಚ್ಚುಹಾಕಿಸಿರುತ್ತಾರೆ. ಗ್ರಂಥಕರ್ತರು ಪೀಠಿಕೆಯಲ್ಲಿ ತಿಳಿಸುವದೇನಂದರೆ—"ಜೈಮಿನಿ ಭಾರತದ ಮುದ್ರಿತದ ಎಲ್ಲಾ ಪ್ರತಿಗಳನ್ನು ಶೋಧಿಸಿ, ಅತ್ಯಂತ ಗ್ರಾಹ್ಯವೆಂದು ತೋರುವ ಪಾಠಾಂತರಗಳನ್ನು ಇದರಲ್ಲಿ ಕೊಟ್ಟಿದೆ. ತರುಣರು ಓದಲಿಕ್ಕೆ ಯೋಗ್ಯವಾಗುವಂತೆ ಅಶ್ಲೀಲವಾದ ಪದ್ಯಗಳನ್ನು ಲೋಪಿಸಿ, ಅಂಥ ಪದ್ಯಗಳ ಬದಲಾಗಿ ಅರ್ಥವಾಗಲಿ ಛಂದಸ್ಸಾಗಲಿ ಕೆಡದಂತೆ ಬೇರೆ ಪದ್ಯಗಳನ್ನು ಸೇರಿಸಿದೆ." ಈ ಪುಸ್ತಕವು ಪಾಠಶಾಲೆಗಳಿಗೆ ತುಂಬಾ ಉಪಯುಕ್ತವಾದದ್ದು; ಬಹಳ ಚೆನ್ನಾಗಿ ಪಪ್ಪಕಾಗದದಮೇಲೆ ಪ್ರಿಂಟುಮಾಡಿದೆ. ವಿದ್ಯಾ ಇಲಾಖೆಯವರು ಇದನ್ನು ಬಾಲಕರು ಓದುವಂತೆ ವಿಧಿಸಲು ಅನುಕೂಲವಾಗಿದೆ.

"ಲಘು ವ್ಯಾಕರಣ."

ಈ ಸಣ್ಣ ಪುಸ್ತಕವನ್ನು ಮಾಗಡಿ ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮ॥ ರಾ॥ ಕೆ. ರಾಮಸ್ವಾಮಯ್ಯಂಗಾರ್ಯರು ರಚಿಸಿರುತ್ತಾರೆ. ಈ ಪುಸ್ತಕವು ವ್ಯಾಕರಣವನ್ನು ಗೋಷ್ಠಿಯಾಗಿ ತಿಳಿಸುವದು. ವಾಕ್ಯ, ವಾಚಕಗಳು, ಮುಖ್ಯ ಸಂಜ್ಞೆಗಳು, ಜನಪದನ್ನಿದ ಕೇಳಾದ ಪದ್ಯಗಳು—ಈ ವಿಷಯಗಳನ್ನು ಬಹು ಸಂಕ್ಷೇಪವಾಗಿ ತಿಳಿಸುವದು. ೧೦ ಪುಟಗಳನ್ನು ಓದುವದರಿಂದಲೇ ಕನ್ನಡ ವ್ಯಾಕರಣವನ್ನು ಕಲಿತುಕೊಳ್ಳುವವರಿಗೆ ಈ ಪುಸ್ತಕವು ಸಹಾಯಮಾಡುವದು. ಗ್ರಂಥಕರ್ತರು—"ಪದಗಳ ಕ್ರಮವಾದ ಪ್ರಯೋಗವನ್ನು ತಿಳಿಸುವುದು ವ್ಯಾಕರಣ" ಎಂಬದಾಗಿ ಹೇಳುತ್ತಾರೆ. ಮುಖ್ಯವಾಗಿ ಈ ಸಣ್ಣ ಪುಸ್ತಕವು ಬಾಲಪಾಠಕ್ಕಾಗಿ ರಚಿಸಲ್ಪಟ್ಟಂತೆ ಕಾಣುವದು.

"ಅಂಕಗಣಿತ ಪ್ರಶ್ನಪತ್ರಿಕೆಗಳು."

ಚಿಕ್ಕಬಳ್ಳಾಪುರದ ಎ. ವಿ. ಸ್ಕೂಲ್ ಅ. ಮಾಸ್ಟರ್ ಮ॥ ರಾ॥ ಸಿ. ಪುಟ್ಟಯ್ಯನವರು ಈ ಪುಸ್ತಕವನ್ನು ರಚಿಸಿರುತ್ತಾರೆ. ಇದರಲ್ಲಿ ಈಗಿನ ಮೈಸೂರು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಸಹಾಯವಾಗಿರುವಂತೆ ೧೮೮೬ ನೆ ಇಸವಿಯಿಂದ ೧೯೦೦ ನೆ ಇಸವಿ ವರೆಗೆ ೧೫ ವರುಷಗಳ ಅಂಕಗಣಿತ ಪ್ರಶ್ನೆಗಳನ್ನೂ ಅವುಗಳಿಗೆ ಸರಿಯಾದ ವರ್ಕಿಂಗನ್ನೂ ಬರೆದಿರುವರು. ಒಳ್ಳೇ ಕಾಗದದ ಮೇಲೆ ಚೆನ್ನಾಗಿ ಪ್ರಿಂಟು ಮಾಡಿದೆ. ಪರೀಕ್ಷೆಗೆ ಹೋಗುವ ಉಮೇದುವಾರರಾದ ವಿದ್ಯಾರ್ಥಿಗಳು ಈ ಪುಸ್ತಕವನ್ನು ತರಿಸಿಕೊಳ್ಳುವದರಿಂದ ಗ್ರಂಥಕರ್ತರಿಗೆ ಪ್ರೋತ್ಸಾಹಕೊಟ್ಟಂತಾಗುವದು.

"ಬಸವರಾಜವಿಜಯಂ."

ಈ ಪುಸ್ತಕದಲ್ಲಿ ಬಸವೇಶನ ಚರಿತ್ರವೂ, ೮೦—೮೫ ಮಂದಿ ಶಿವಭಕ್ತರ ಕಥೆಗಳೂ ಬರೆಯಲ್ಪಟ್ಟಿವೆ. ಪುಸ್ತಕವು ೪೮ ಅಧ್ಯಾಯಗಳಾಗಿ ವಿಂಗಡಿಸಲ್ಪಟ್ಟಿದೆ. ಶಿವಭಕ್ತರ ಕಥೆಗಳೆಲ್ಲಾ ಅನೇಕ ಗ್ರಂಥಗಳಾಗಿರುವದರಿಂದಲೂ, ಸಂಸ್ಕೃತ, ಆಂಧ್ರಭಾಷೆಗಳಲ್ಲಿರುವದರಿಂದಲೂ ಸಾಮಾನ್ಯ ಅಕ್ಷರಸ್ಥರೆನಿಸಿಕೊಂಡಿರುವ ಕನ್ನಡಿಗರಿಗೆ ಆ ಗ್ರಂಥಗಳಲ್ಲಿ ಅಡಕವಾಗಿರುವ ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಲ್ಲವಾದ್ದರಿಂದಲೂ ರಾಜಧಾನಿಯ ದೊಡ್ಡ ಪೇಟೆಯಲ್ಲಿರುವ ಮ॥ ರಾ॥ ಎನ್. ಆರ್. ಕರಿಬಸವ ಶಾಸ್ತ್ರಿಯವರು ಈ ಪುಸ್ತಕವನ್ನು ರಚಿಸಿರುತ್ತಾರೆ. ದೊಡ್ಡ ದೊಡ್ಡ ಗ್ರಂಥಗಳಲ್ಲಿರತಕ್ಕ ವಿಷಯಗಳನ್ನು ಸಂಗ್ರಹಮಾಡಿ, ಸುಲಭವಾದ ಕನ್ನಡಪದಗಳಿಂದ ರಚಿಸಿರುವರು. ಈ ಪುಸ್ತಕದಲ್ಲಿ ಅಡಕವಾಗಿರುವ ಕಥೆಗಳು ಬಹು ಲಲಿತವಾಗಿರುತ್ತವೆ. ಶಿವಮತವೆಂಥಾದ್ದೋ, ಅದರ ಬಲದಿಂದ ಜನರು ಯಾವ ಯಾವ ತರಹ ಕಾರ್ಯಗಳನ್ನು ಮಾಡಿದರೋ, ಇವೇ ಮೊದಲಾದ ಸಂಗತಿಗಳನ್ನು ಈ ಕಥೆಗಳಿಂದ ಸ್ವಲ್ಪಮಟ್ಟಿಗಾದರೂ ತಿಳಿದುಕೊಳ್ಳಬಹುದು. ಗ್ರಂಥಕರ್ತರು ತುಂಬಾ ಶ್ರಮಪಟ್ಟು ಈ ಪುಸ್ತಕವನ್ನು ರಚಿಸಿರುತ್ತಾರೆ. ಮೇಲ್ಕಂಡ ವಿಷಯಗಳನ್ನು ತಿಳಿಯಲಪೇಕ್ಷಿಸುವವರೆಲ್ಲಾ ಪುಸ್ತಕವನ್ನು ತರಿಸಿಕೊಳ್ಳುವದರಮೂಲಕ ಗ್ರಂಥ ರಚಕರಿಗೆ ಪ್ರೋತ್ಸಾಹಕೊಟ್ಟಾರೆಂದು ನಿರೀಕ್ಷಿಸುತ್ತೇವೆ. ಪುಸ್ತಕವು ಚೆನ್ನಾಗಿ ಪ್ರಿಂಟಾಗಿದೆ, ದೊಡ್ಡಕ್ಷರ, ೨೦೦ ಪುಟಗಳುಳ್ಳದ್ದು. ಇದರ ಕ್ರಯ ಪ್ರತಿ ೧ ಕ್ಕೆ ೧ ರೂಪಾಯಿ.

---

## ಕಸೌಲಿ ಪಟ್ಟಣದ ಆಸ್ಪತ್ರೆ.

ಈ ಆಸ್ಪತ್ರೆಯ ವಿಷಯವಾಗಿ ಸಕಲ ಪ್ರಜೆಗಳೂ ತಿಳಿಯಬೇಕಾದ ಕೆಲವು ಮುಖ್ಯ ಸಂಗತಿಗಳಿರುತ್ತವೆ. ಮದರಾಸ್ ಸರ್ಕಾರದವರು ಆ ಸಂಗತಿಗಳನ್ನು ಗವರ್ನಮೆಂಟ್ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ. ಅದರಲ್ಲಿ ಕಂಡ ಮುಖ್ಯ ವಿಷಯಗಳನ್ನು ನಮ್ಮ ವಾಚಕರಿಗೋಸ್ಕರ ಈ ಮೂಲಕ ತಿಳಿಯಪಡಿಸುವೆವು.

ಈ ಆಸ್ಪತ್ರೆಯು ೧೯೦೦ ನೆ ಇಸವಿ ಆಗಸ್ಟು ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು. ಹುಚ್ಚು ಹಿಡಿದ ನಾಯಿ, ನರಿಗಳಿಂದ ಕಚ್ಚಿಸಿಕೊಂಡವರಿಗೆ ಮಾತ್ರ ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡುತ್ತಾರೆ. ಅಂಥಾ ರೋಗಿಗಳು ಹಿಂದೂಸ್ಥಾನದ ಯಾವ ಊರಿನವರಾದರೂ ಆಗಬಹುದು. ಚಿಕಿತ್ಸೆ ಮಾಡಿಸಿಕೊಳ್ಳುವದಕ್ಕೆ ಯಾರೂ ಏನೂ ರುಸುಂ ಕೊಡಬೇಕಾಗಿರುವದಿಲ್ಲ.

ಹುಚ್ಚು ನಾಯಿಗಳು ಕಚ್ಚಿರುವದು ನಿಶ್ಚಯವಾಗಿದ್ದರೆ ಅಂಥಾ ರೋಗಿಗಳಿಗೆ ೧೮ ರಿಂದ ೨೦ ದಿನಗಳ ತನಕ ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುವದರಲ್ಲೇ ವಾಸಿಯಾಗುತ್ತೆ. ಕಚ್ಚಿದ್ದು ಬಹಳ ಜೋರಾಗಿದ್ದರೆ ಇನ್ನೂ ನಾಲ್ಕಾರು ದಿನ ಚಿಕಿತ್ಸೆ ಹೆಚ್ಚಾಗಿ ಮಾಡಿಸಿಕೊಳ್ಳಬೇಕಾಗುವದು. ಅಂಥಾ ರೋಗಿಗಳನ್ನು ಅಲ್ಲೇ ಇಟ್ಟುಕೊಂಡು ಔಷಧ ಕೊಡುವದಕ್ಕೆ ಆಸ್ಪತ್ರೆಯಲ್ಲಿ ಸ್ಥಳವಿಲ್ಲ. ರೋಗಿಗಳು ಆಸ್ಪತ್ರೆಯಲ್ಲೇ ಇದ್ದುಕೊಂಡು ಔಷಧ ಪಡೆಯಬೇಕಾದ ಅಗತ್ಯವೇನೂ ಇರುವದಿಲ್ಲ. ಅವರು ದಿನವಹಿ ಬೆಳಿಗ್ಗೆ ೧೦ ಗಂಟೆಯ ವೇಳೆಗೆ ಆಸ್ಪತ್ರೆಗೆ ಹೋಗಿ ಔಷಧ ಹಾಕಿಸಿಕೊಂಡು ಬಂದರೆ ಸಾಕಾಗಿದೆ.

ಸೈನ್ಯಕ್ಕೆ ಸೇರಿದ ಸಿಪಾಯಿಗಳಲ್ಲದೆ ಇರತಕ್ಕ ರೋಗಿಗಳು ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುವಾಗ್ಯೆ ಇಳುಕೊಳ್ಳುವದಕ್ಕೆ ಸ್ಥಳವನ್ನೂ ಊಟ ಉಪಚಾರಗಳ ವಿಷಯವನ್ನೂ ತಾವೇ ಪ್ರತ್ಯೇಕವಾಗಿ ಏರ್ಪಾಡು ಮಾಡಿಕೊಳ್ಳಬೇಕು. ಇಂಗ್ಲಿಷ್ ಸೈನಿಕರಾದರೆ ಅವರನ್ನು ಬೇರೆ ಆಸ್ಪತ್ರೆಯಲ್ಲಿ ಇರಿಸಿ ಸರ್ಕಾರದವರು ನೋಡಿಕೊಳ್ಳುತ್ತಾರೆ. ದೇಶೀಯ ಸೈನಿಕರಾದವರನ್ನು ಅಂಗಡಿ ಬೀದಿಯಲ್ಲಿ ಒಂದು ದೊಡ್ಡ ಮನೆಯಲ್ಲಿ ಇಳಿಸಿ, ಅವರ ಊಟ ಉಪಚಾರಗಳನ್ನು ನೋಡಿಕೊಳ್ಳುತ್ತಾರೆ. ಬಡವರಾಗಿರತಕ್ಕ ರೋಗಿಗಳು ಚಿಕಿತ್ಸೆ ಮಾಡಿಸಿಕೊಳ್ಳುವದಕ್ಕೆ ಈ ಆಸ್ಪತ್ರೆಗೆ ಹೋಗುವವರಾದರೆ ಅವರು ಇಳುಕೊಳ್ಳುವದಕ್ಕೆ ಆ ಊರಿನ ಅಂಗಡಿ ಬೀದಿಯಲ್ಲಿ ೧೬ ದೊಡ್ಡ ಕೋಣೆಗಳುಳ್ಳ ಒಂದು ದೊಡ್ಡ ಕಟ್ಟಡವನ್ನು ನಿರ್ಮಾಣ ಮಾಡಿದೆ. ಅಲ್ಲಿ ಯಾವ ಜಾತಿಯವರು ಬೇಕಾದರೂ ಹೋಗಿ ಇಳುಕೊಳ್ಳಬಹುದು. ತಕ್ಕಮಟ್ಟಿಗೆ ಪುಣ್ಯವಂತರಾದ ರೋಗಿಗಳು ಹೋಗಬೇಕಾದರೆ ಅವರಿಗೆ ಅಲ್ಲಿ ಇಳುಕೊಳ್ಳುವದಕ್ಕೆ ಅನೇಕ ಹೋಟೆಲುಗಳೂ ಮನೆಗಳೂ ಸಿಕ್ಕುತ್ತವೆ.

ಕಸೌಲಿ ಎಂಬ ಪಟ್ಟಣವು ಹಿಮಾಚಲ ಪರ್ವತದ ತಪ್ಪಲಲ್ಲಿ ಸಮುದ್ರಮಟ್ಟಕ್ಕಿಂತ ೬೩೨೨ ಅಡಿ ಎತ್ತರವಾಗಿರುವದರಿಂದ ಅಲ್ಲಿ ಚಳಿ ಹೆಚ್ಚಾಗಿದೆ. ಆದ್ದರಿಂದ ಅಲ್ಲಿಗೆ ಹೋಗತಕ್ಕವರು ಚಳಿ ತಡೆಯುವದಕ್ಕೆ ಅನುಕೂಲವಾದ ವಸ್ತ್ರ ಹೆಚ್ಚಾಗಿರುವ ಬಟ್ಟೆಬರೆಗಳನ್ನು ತೆಗೆದುಕೊಂಡು ಹೋಗಬೇಕು.

ಮದರಾಸಿನಿಂದ ಕಸೌಲಿಗೆ ಹೋಗುವದಕ್ಕೆ ನೇರವಾದ ರಸ್ತೆಯೂ, ರೈಲ್ ಚಾರ್ಜೂ ಕೆಳಗೆ ಕಾಣಿಸಿದೆ —

ಮದರಾಸ್ ರೈಲು—ಮದರಾಸಿನಿಂದ ರಾಯಚೂರು.

ಜಿ. ಐ. ಪಿ. ರೈಲು—ರಾಯಚೂರು, ಧೋಂಡ್, ಮನ್ಮಾಡ್, ಇಟಾರ್ಸಿ, ಝಾನ್ಸಿ, ತಂಡ್ಲಾ.

ಇ. ಐ. ರೈಲು—ತಂಡ್ಲಾದಿಂದ ಡೆಹಲಿ.

ಡಿ. ಯು. ಕೆ. ರೈಲು—ಡೆಹಲಿಯಿಂದ ಕಾಲ್ಕಾ.

ಕಾಲ್ಕಾದಿಂದ ಕಸೌಲಿಗೆ ೯ ಮೈಲಿ ರಸ್ತೆ, ಗಾಡಿ ಅಥವಾ ಕುದುರೆಯ ಮೇಲೆ ಹೋಗಬಹುದು.

ರೈಲ್ ಚಾರ್ಜು, ಮದರಾಸಿನಿಂದ ಕಾಲ್ಕಾಕ್ಕೆ—೧ನೇ ಕ್ಲಾಸು ರೂ. ೧೨೩—೪—೦ಪೈ ೨ನೇ ಕ್ಲಾಸು ರೂ. ೬೧—೧೦—೦ಪೈ.

ಫಸ್ಟ್ ಕ್ಲಾಸು (ಮೇಯಿಲ್) ರೂ. ೨೪—೭—೦ ಪೈ. ೩ನೇ ಕ್ಲಾಸು (ಸಾಧಾರಣ) ರೂ. ೨೦—೯—೦ ಪೈ.

## ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು. ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಖಿಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ.

## ಕರೆಸ್‌ಪಾಂಡೆನ್ಸ್

ಚಿತ್ರದುರ್ಗದ ಬಿ. ನ. ರಾ ಎಂಬ ಬಾತ್ಮಿದಾರರು—ಒಬ್ಬ ಹೊಟ್ಟೆ ಪಂಡಿತರು ತಮ್ಮ ಹೆಂಡತಿಗೆ ಸರಿಯಾದ ಬಟ್ಟೆಬರೆ ಕೊಡದೇನೆ ಕಾಲಕ್ಕೆ ಯೋಗ್ಯವಾದ ಆಹಾರ ಹಾಕದೆಯೂ ಕಷ್ಟಪಡಿಸುತ್ತಾರೆಂತಲೂ, ಸೂಳೆಯ ಕ್ಕೆ ಹೆಂಡತಿಯನ್ನು ಕೊಡಲೆಣಿಸುತ್ತಾರೆಂತಲೂ, ವಿದ್ಯಾವಂತನೇ ಹೀಗೆ ಮಾಡುವದು ತುಂಬಾ ಶೋಚನೀಯವಾಗಿದೆ ಎಂತಲೂ ಬರೆದಿರುವರು. ಈ ಬಾತ್ಮಿಯನ್ನು ಪ್ರಕಟಿಸಲು ನಮಗೆ ಇಷ್ಟವಿಲ್ಲ. ಇಂಥಾ ಸಂಗತಿಗಳನ್ನು ನಾವು ಆಗಿಂದಾಗ್ಯೆ ಕೇಳುತ್ತಲೂ, ಓದುತ್ತಲೂ ಬಂದಿರುವೆವು. ಮನುಷ್ಯ ಪರುಷರುಗಳ ಮಂಗಳರನ್ನು ವಿದ್ಯಾವಂತರ ಸಂಗದವರೂ ಕೂಡ ಕೋಪಿಸಿ ಒಡೆದು ಕಷ್ಟಪಡಿಸುವದು ಸರ್ವಥಾ ಶ್ರೇಯಸ್ಕರವಲ್ಲ. ಅವರಿಗೆ ಇದಕ್ಕಿಂತಲೂ ಉತ್ತಮವೆನಿಸಿಕೊಂಡ ಉದ್ಯೋಗವ್ಯವಹಾರ ಇಲ್ಲವೇ ? ಪಂಡಿತರು ಅಥವಾ ಬಗೆಯುಳ್ಳವೇ ? ಈ ವಿಷಯವಾಗಿ ನಾವು ಇದಕ್ಕಿಂತಲೂ ಹೆಚ್ಚು ಬರೆಯಲು ನಮಗೆ ಅಸಹ್ಯವಾಗುವದು — ಎಡಿಟರ್.

♦♦♦♦♦♦♦♦

ಬೆಂಗಳೂರು ಹೊಸ್ಪೇಟೆ ಪುರದ ಸಣ್ಣ ರೈಲು.

ಅಯ್ಯಾ,

ಚಿಕ್ಕಬಳ್ಳಾಪುರಕ್ಕೆ ಸಣ್ಣ ರೈಲ್ ಹಾಕುವದಕ್ಕೆ ಒಂದು ಕಂಪನಿ ಏರ್ಪಾಡಾಗಿದೆ ಎಂದೂ, ಅದಕ್ಕೆ ಷೇರುಗಳನ್ನು ಮಾರಬೇಕಾದರೆ ಎಷ್ಟು ರೂಪಾಯಿಗೆ ಒಂದು ಷೇರು. ಅದರ ಷರತ್ತುಗಳು ಏನು, ಷೇರು ಬೇಕಾದರೆ ತಮ್ಮ ಮುಂದಿನ ವಾರದ ಪತ್ರಿಕೆಯಲ್ಲಿ ತಿಳಿಸಿ. ಹಾಗೆ ಇಲ್ಲದಿದ್ದರೆ ಯಾರಲ್ಲಿ ತಿಳುಕೊಳ್ಳಬೇಕೋ ಅದನ್ನಾದರೂ ತಿಳಿಸಬೇಕೆಂದು ಪ್ರಾರ್ಥನೆ

ದೊಡ್ಡಬಳ್ಳಾಪುರ, ಸದಾಫಲ್ ಚಿಕ್ಕ ಷೇರಶೆಟ್ಟಿ.

೧—೫—೧೯೦೩

[ನಮ್ಮ ಬಿ ತ್ರಿ ದ ರರು ಕೇಳುವ ಮೇಲ್ಕಂಡ ವಿಷಯಗಳು ನಮಗೆ ಪರಿಷ್ಕಾರವಾಗಿ ಗೊತ್ತಿಲ್ಲವಾದ್ದರಿಂದ ಅವರು ಎಲ್ಲಾ ವಿಷಯಗಳನ್ನೂ ವಾಟ್ಸನ ಸಾಹೇಬರಿಗೆ ಬರೆದು ತಿಳಿದುಕೊಳ್ಳಬಹುದೆಂದು ಹೇಳುತ್ತೇವೆ —(ಬೆಂಗಳೂರು ಬಿಡಾರ ಬಜಾರಿನ ೯೪ ನೇ ನಂಬರು ೭ನೇ ಬೀದಿಯಲ್ಲಿರುವ ಮ್ಯಾನೇಜಿಂಗ್ ಡೈರೆಕ್ಟರ್ ಮೆ. ವ. ಸುಬ್ರಾಯರು )—ಎಡಿಟರ್.]

♦♦♦♦♦♦♦♦

ಮಡಿಕೇರಿ ಪ್ಲೇಗ್ ವಿಷಯಗಳು

ಅಯ್ಯಾ

ಈ ವಾರದಲ್ಲಿ ವೀರರಾಜೇಂದ್ರಪೇಟೆಯಲ್ಲಿ ಯಾರೋ ಒಬ್ಬರು ಪ್ಲೇಗು ತಗಲಿ ಸತ್ತರಂತೆ. ಇಲ್ಲಿ ಹೆಗ್ಗಣಗಳು ಸತ್ತುಬೀಳುತ್ತವಂತೆ ಮಡಿಕೇರಿಯಿಂದ ಕೆಂದ ಗಾಡಿಗಳು ಹಿಂತಿರಿಗಿ ವಾಪಸೇ ಬಂದವು. ಕೊರಂಟೈನ್ ಏರ್ಪಟ್ಟಿರಬಹುದು. ಮುಂದೆ ವಿಪತ್ತಿ ಗೊತ್ತಾಗಿಯಿತು ಏಕದಮ್ ಎಲಿಗ್ರೈಸ್ಟಗಳು ಓಡ್ಯಾಡುತ್ತವೆ. ಪ್ಲೇಗು ಹರಡೆಂತಲೂ ಇಲ್ಲವೆಂತಲೂ ಸಂಶಯ ಮಾಡುವರು. ಹಾಗಾದರೆ ಕೊಡಗಿನಲ್ಲಿ ಪ್ರಸರಿಸಿಯಿತು. ಸ್ವಾಗತ ಇರಲಿ.

ಸರ್ಕಾರದಲ್ಲಿ ಕ್ಯಾಂಪಾದರೆ ಸರಕಾರದವರು ಸಾಕ್ಷ್ಯರು. ಊರ ಹೊರಗೆ ಷೆಡ್ಡುಗಳನ್ನು ಕಟ್ಟಿಕೊಳ್ಳಬೇಕಾಗಿ ಬಂದರೆ ಕೂಲಿ ಜನರಿಗೂ, ಬೇರೆ ಕಸಬುದಾರರಿಗೂ ಉದ್ಯೋಗವಿಲ್ಲದಾಗಲು ಸರಕಾರದವರು ಸಾಕುವರೋ ? ಉಪವಾಸವೋ ? ಇವರ ಗತಿ ಏನಾಗಬಹುದು ? ಇಂಥ ಬಡ ಗತಿಹೀನರನ್ನು ಸಂರಕ್ಷಣೆಗಾಗಿ ಮೈಸೂರು ಮುಂತಾದ ದೇಶಗಳಲ್ಲಿ ಏನು ಏರ್ಪಾಡು ಉಂಟು ? ದಯಮಾಡಿ ಉತ್ತರ ಕೊಡಿಸಿ.

ಮಡಿಕೇರಿ ಪ. ಕೆ. ರಾ.

[ಈ ಪ್ರಕಾರ ಕ್ಯಾಂಪುಗಳಲ್ಲಿ ಪ್ರಯಾಣಸ್ಥರನ್ನು ಸರ್ಕಾರದವರು ತಡೆದು ನಿಲ್ಲಿಸಿಕೊಂಡರೆ ಹಾಗೆ ತಡೆಯಲ್ಪಟ್ಟ ಜನರಿಗೆಲ್ಲಾ ಸರ್ಕಾರದವರೇ ಜೀವನ ನಡಿಸುತ್ತಾರೆ. ಪ್ಲೇಗ್ ಉಪದ್ರವ ನಿಮಿತ್ತ ಜನರು ಊರುಬಿಟ್ಟು ಹೊರಗೆ ಶೆಡ್ಡು ಕಟ್ಟಿಕೊಳ್ಳಬೇಕಾದರೆ ಜನರೇ ಹಾಗ್ ಬಾಗೋಲಿನಿಂದ ಕಟ್ಟಿಕೊಳ್ಳಬೇಕು. ಇದಕ್ಕೆ ಬೇಕಾಗುವ ಕಾಡು ಸಾಮಾನುಗಳನ್ನು ಮಾತ್ರ ಸರ್ಕಾರದವರು ಸುಲಭ ಕ್ರಯಕ್ಕೆ ಕೊಡುಸುವರು ; ಬಡವರಿಗ ಸುಮ್ಮನೇ ಕೊಡಿಸುವರು. ಪ್ರಜೆಗಳಲ್ಲಿ ಪುಷ್ಕರೂ ಧರ್ಮಿಷ್ಠರೂ ಬಡಬಗ್ಗರ ಜೀವನಕ್ಕೆ ತಕ್ಕ ಏರ್ಪಾಡು ಮಾಡುವದು ರೂಢಿಯಾಗಿದೆ. ಇದು ಸರ್ಕಾರದವರಿಗೆ ಸಾಧ್ಯವಲ್ಲ. ಅಂಥಾ ಕಷ್ಟಕಾಲದಲ್ಲಿ ಮೈಸೂರಿನ ಶಿಷ್ಟ ಮನುಷ್ಯರು ಎಂದಾ ಎತ್ತಿ, ಅಕ್ಕಿ ರಾಗಿ ಕೊಂಡು ತರಿಸಿ, ಬಡ ಪ್ರಜೆಗಳಿಗೆ ಅಗ್ಗವಾಗಿ ವಿಕ್ರಯಮಾಡುತ್ತಲೂ, ತುಂಬಾ ಬಡವರಿಗೆ ಸುಮ್ಮನೆ ಧರ್ಮ ಅಳೆದುಕೊಡುತ್ತಲೂ ಸಹಾಯ ಮಾಡಿ, ಕೀರ್ತಿ ಪಡೆದರು.—ಎಡಿ.]

## ಇಂಡಿಯಾ ದೇಶದ ವೃತ್ತಾಂತಗಳು.

ಮಧ್ಯಪ್ರಾಂತ್ಯಗಳಲ್ಲಿ ಕ್ಷಾಮಪೀಡಿತರ ಸಂಖ್ಯೆಯು ಕಳೆದ ವಾರ ೩೯,೧೫೩ ರಿಂದ ೬೩,೦೪೧ ಕ್ಕೆ ಹೆಚ್ಚಿತು.

♦♦♦♦

ಲಕ್ನೋ ನಗರಕ್ಕೆ ಪ್ಲೇಗ್ ಕಾಲುಹಾಕಿತು; ಈಗ ತುಂಬಾ ಜೋರಾಗಿದೆ. ಒಂದು ವಾರದಲ್ಲಿ ಒಂದು ಸಹಸ್ರ ಜನರು ಸಾಯುತ್ತಾರೆ.

♦♦♦♦

ಅಫ್ಘಾನಿಸ್ಥಾನದ ಅಮೀರರು ಶಿಕಾರಿ ಮಾಡಿಕೊಂಡು ಬರುವದಕ್ಕಾಗಿ ಕಾಬೂಲ್ ನಗರದಿಂದ ಕೋಹಿಸ್ತಾನದ ಪ್ರಾಂತ್ಯಕ್ಕೆ ದಯಮಾಡಿದಾರೆಂದು ವರ್ತಮಾನ ಬಂದಿದೆ.

♦♦♦♦

ಸಿಂಧು ದೇಶಕ್ಕೆ ಸೇರಿದ ಹೈದರಾಬಾದ್ ನಗರದಲ್ಲಿ ಇಂಗ್ಲಿಷ್ ಸೈನಿಕರ ಬ್ಯಾರಕ್ ಮನೆಗಳನ್ನು ಸರ್ಕಾರದವರು ೭೦,೦೦೦ ರೂಪಾಯಿ ವೆಚ್ಚಿಸಿ ದುರಸ್ತು ಮಾಡಿಸಿದಾರೆ.

♦♦♦♦

ಬೊಂಬಾಯಿ ಪಟ್ಟಣಕ್ಕೆ ಸೇರಿದ ಬೈಕಲ್ಲಾದಲ್ಲಿ ಪ್ರಜೆಗಳು ಚಂದಾಹಾಕಿ ಒಂದು ಆಸ್ಪತ್ರೆಯನ್ನು ಕಟ್ಟಿದಾರೆ. ಇದಕ್ಕೆ ಮರಾಟಾ ಪ್ಲೇಗ್ ಆಸ್ಪತ್ರೆ ಎಂದು ಹೆಸರಿಟ್ಟಿದಾರೆ.

♦♦♦♦

ಬೊಂಬಾಯಿ ಪಟ್ಟಣದ ತಾರ್‌ದೇವ್ ಎಂಬ ಭಾಗದಲ್ಲಿ ಮೊರಾರ್‌ಜಿ ಮಿಲ್ ಎಂಬ ಒಂದು ದೊಡ್ಡ ನೂಲಿನ ಕಾರ್ಖಾನೆಗೆ ಬೆಂಕಿಬಿದ್ದು ೭೫,೦೦೦ ರೂಪಾಯಿನ ಹತ್ತಿ ಉರಿದುಹೋಯಿತು.

♦♦♦♦

ಸೋಮಾಲಿಲ್ಯಾಂಡಿನಲ್ಲಿ ಯುದ್ಧಕ್ಕಾಗಿ ಹೋಗಿರುವ ಇಂಗ್ಲಿಷ್ ಸೈನಿಕರಿಗೋಸ್ಕರ ಇಂಡಿಯಾ ಗವರ್ನಮೆಂಟಿನವರು ೧,೦೦೦ ಜೊತೆ ಬೂಟು ಜೋಡುಗಳನ್ನು ಕಳುಹಿಸಿರುತ್ತಾರೆ.

♦♦♦♦

ಕಲ್ಕತ್ತಾ ಪಟ್ಟಣದ ಸೆಂಟ್ರಲ್ ಬಂದೀಖಾನೆಯ ಅಸಿಸ್ಟೆಂಟ್ ಜೈಲರಾದ ರಘುನಂದನ ಎಂಬುವನು ಕೈದಿಗಳಿಂದ ಲಂಚ ತಿನ್ನುತ್ತಾನೆಂಬದಾಗಿ ಒಬ್ಬ ಕೈದಿಯು ಆತನ ಮೇಲೆ ಫಿರ್ಯಾದು ತಂದಿದನೆ

♦♦♦♦

ಅಫ್ಘಾನಿಸ್ಥಾನದ ಅಮೀರರಿಗೆ ಪಟ್ಟಾಭಿಷೇಕೋತ್ಸವವು ಕಳೆದ ೭ನೇ ತಾರೀಖಿನ ದಿನ ನಡೆಯಬೇಕಾಗಿತ್ತು. ಅವರ ಅಧಿಕಾರಕ್ಕೊಳಪಟ್ಟ ದೊಡ್ಡ ಮನುಷ್ಯರೆಲ್ಲಾ ಆ ಉತ್ಸವಕ್ಕಾಗಿ ಕಾಬೂಲಿಗೆ ಹೋಗಿ ಇದ್ದರು.

♦♦♦♦

ಗಯಾ ಪಟ್ಟಣದಲ್ಲಿರುವ ವಿಕ್ಟೋರಿಯಾ ಜನಾನಾ ಆಸ್ಪತ್ರೆಯ ಫಂಡಿಗೆ ಬಾಬೂ ಬಾಲದೇವ ಲಾಲ್ ಎಂಬ ದೊಡ್ಡ ಮನುಷ್ಯನು ೧೫,೦೦೦ ರೂಪಾಯಿ ಧರ್ಮ ಕೊಟ್ಟಿದಾನೆ. ಬಂಗಾಳಾ ಗವರ್ನಮೆಂಟಿನವರು ಆತನ ಉದಾರ ಬುದ್ಧಿಯನ್ನು ಸೋಡಿ ಮೆಚ್ಚಿಸಿರುತ್ತಾರೆ.

♦♦♦♦

ಮಧ್ಯಪ್ರಾಂತ್ಯಗಳಿಗೆ ಸೇರಿದ ಹೋಶಂಗಾಬಾದ್‌ಪುರದಲ್ಲಿ ಹುಲಿಗಳು ಜನರನ್ನು ಹಿಡಿದು ತಿನ್ನುತ್ತಾ ಬಂದಿವೆ. ಇದಕ್ಕಾಗಿ ಸರ್ಕಾರದವರು ಹುಲಿ ಒಂದಕ್ಕೆ ೫೦೦ ರೂಪಾಯಿನಂತೆ ಇನಾಮು ಕೊಡುತ್ತೇವೆಂದು ಇಸ್ತಿಹಾರು ಹಾಕಿಸಿದಾರೆ ಶಿಕಾರಿಗಳಿಗೆ ಇದು ಒಳ್ಳೇ ಸಮಯವೇ ಸರಿ.

♦♦♦♦

ಲಾಹೋರಿನ ಹತ್ತಿರ ಇರುವ ಅಮೋಹಾರಿನಲ್ಲಿ ಲಾಲಾ ಪ್ರಭುದಯಾಳು ಎಂಬ ಸಾಹುಕಾರನು ಒಂದು ಭಾರೀ ಹತ್ತಿಯ ಕಾರ್ಖಾನೆಯನ್ನು ಕಳೆದ ವಾರ ಸ್ಥಾಪಿಸಿದನು. ಆ ಸಾಹುಕಾರನು ಜಮೀನ್‌ದಾರರಿಗೆಲ್ಲಾ ಹಣ ಅಡ್ವಾನ್ಸು ಕೊಟ್ಟು, ರೈತರಿಂದ ಹತ್ತಿ ಬೆಳೆ ಮಾಡಿಸಬೇಕೆಂದು ಗೊತ್ತು ಮಾಡಿದಾನೆ.

♦♦♦♦

ಕೊಯಮುತ್ತೂರು ಜಿಲ್ಲೆಗೆ ಸೇರಿದ ಪಲ್ಲಾಡಂ ಎಂಬ ಊರಿನಲ್ಲಿ ಸಬ್ ಮ್ಯಾಜಿಸ್ಟ್ರೇಟರ, ಪೋಲೀಸ್ ಇನ್ಸ್‌ಪೆಕ್ಟರರ, ಆಸ್ಪತ್ರೆ ಅಸಿಸ್ಟೆಂಟರೂ, ಪೋಸ್ಟ್ ಹೌಸ್ ಆಫೀಸರೂ ಸೇರಿ ಅಪರಾಧಿಗಳನ್ನು ಹಿಂಸೆ ಬಲಾತ್ಕಾರಗಳಿಗೆ ಗುರಿಮಾಡಿ, ಅವರಿಂದ ಲಂಚ ತಿಂದಿರೆಂದು ಒಂದು ಮೊಕದ್ದಮೆ ಆಗಿದೆ ಅವರನ್ನು ಕಡು ದಯಾರ್ಹರನ್ನಾಗಿ ಮಾಡಬೇಕೆಂಬದಾಗಿ ಸರ್ಕಾರದವರು ಸ್ಪೆಷಲ್ ವಿಚಾರಣೆ ಮಾಡುತ್ತಾರೆ.

♦♦♦♦

ಇಂದೂರು ಸಂಸ್ಥಾನದ ಸಿಂಹಾಸನದ ಪದಚ್ಯುತಿಯನ್ನು ಹೊಂದಿದ ಮಹಾರಾಜಾ ಹೋಳ್ಕರ್ ಯವರೂ, ಕಾಶ್ಮೀರದ ಮಹಾರಾಜರವರೂ ಕುಂಭಮೇಳಾ ಕಾಲದಲ್ಲಿ ಹರಿದ್ವಾರದಲ್ಲಿ ಹಾಜರಾಗಿದ್ದರು. ಸ್ನಾನಘಟ್ಟಗಳಲ್ಲಿ ಸೇರಿದ ಯಾತ್ರಿಕರ ಸಂಖ್ಯೆಯು ಅಪಾರವಾಗಿತ್ತು. ಆದರೆ ಯಾವದೊಂದು ಅನಾಯುತವೂ ಇಲ್ಲದಂತೆ ಈ ಸಲ ಜಾಗ್ರತೆ ನಡೆದದ್ದು ಸಂತೋಷಕರವಾಗಿರುತ್ತದೆ.

♦♦♦♦

೧೯೦೨ನೇ ಇಸವಿ ಫೆಬ್ರವರಿನಲ್ಲಿ ಒಂದು ಕೋಟಿ ಹಳೇ ರೂಪಾಯಿಗಳನ್ನು ಸರ್ಕಾರದವರು ಚಲಾವಣೆಯಿಂದ ತೆಗೆದು ಹೊಸದಾಗಿ ಮಾಡಿಸಬೇಕೆಂದು ಕಂಗಿಸಿದ್ದಾರೆ ಆದರೂ ಚಲಾವಣೆಗೆ ರೂಪಾಯಿ ಈಗ ಇರುವದು ಸಾಲದು. ಆದ್ದರಿಂದ ಸುಮಾರು ೭೦ ಲಕ್ಷ ರೂಪಾಯಿಗಳನ್ನು ಹೊಸದಾಗಿ ಛಾಪಿಸಬೇಕೆಂದು ಇಂಡಿಯಾ ಗವರ್ನಮೆಂಟಿನವರು ಹುಕುಂ ಕೊಟ್ಟಿರುತ್ತಾರೆ.

♦♦♦♦

ಕಳೆದ ವಾರ ಮದರಾಸಿನಲ್ಲಿ ಇಬ್ಬರು ಬೀಲಾಯಿತಿ ರಂಗಸವಾರರು ಬಲೂನು ಹತ್ತಿ ಆಕಾಶಗಮನ ಮಾಡಿದರು. ಸಾವಿರಾರು ಜನರು ಹೋಗಿ ನೋಡಿದರು. ಸುಮಾರು ೧೫ ನಿಮಿಷಗಳ ತನಕ ಕಾಣಿಸಿಕೊಂಡಿತು. ಈ ಹೆಗ ಗುಲ್ ಬಾನೂನ್ ಎಂಬುವಳು ಗುಲ್ ಬಾದ್‌ಷಾ ಎಂಬುವಳನ್ನು ಕೆಡವಿ ಜಯಪ್ರದ ಹೊಂದಿದಳು. ಗೆದ್ದವಳಿಗೆ ೭೫ ರೂ., ಸೋತವಳಿಗೆ ೫೦ ರೂ. ಇನಾಮು ಕೊಡಲಾಯಿತು.

♦♦♦♦

ಕಾಶೀಪಟ್ಟಣದ ಸಂಸ್ಕೃತ ಕಾಲೇಜಿನಲ್ಲಿ ಕೆಲವುಮಂದಿ ಪಾಶ್ಚಿಮಾತ್ಯರೂ ಬಂದು ಸಂಸ್ಕೃತವನ್ನು ಕಲಿಯುತ್ತಿದಾರೆಂದು ತಿಳಿಯುವದು. ಈ ಸಲ ನಡೆದ ಪರೀಕ್ಷೆಗಳಲ್ಲಿ ಅಮೇರಿಕದ ಮೆ|| ಸ್ಪೂನರ್ ಎಂಬಾತನು ತೇರ್ಗಡೆ ಹೊಂದಿದನೆಂದು ಪ್ರಕಟವಾಗಿದೆ. ಇದರಿಂದ ಪಶ್ಚಿಮ ರಾಜ್ಯಗಳವರಿಗೆ ಸಂಸ್ಕೃತವನ್ನು ಕಲಿಯಬೇಕೆಂಬುವದರಲ್ಲಿ ತುಂಬಾ ಕುತೂಹಲವಿದೆ ಎಂದು ಗೊತ್ತಾಗುವದು.

♦♦♦♦

ನಮ್ಮ ವೈಸರಾಯಿ ಲಾರ್ಡ್ ಕರ್ಸನ್ ಪ್ರಭುಗಳಿಗೆ ಅವರು ಇನ್ನು ಎರಡುವರುಷಗಳ ತನಕ ವೈಸರಾಯಿ ಪದವಿಯಲ್ಲಿ ಇರಬೇಕೆಂಬದಾಗಿ ಹುಕುಂ ಕೊಟ್ಟಿರುವಂತೆಯೂ, ಅವರು ೬ ತಿಂಗಳ ರಜಾ ಪಡೆದು ವಿಲಾಯಿತಿಗೆ ಹೋಗಿ ಬರುವವರಾಗಿದಾರೆಂತಲೂ, ವಿಲಾಯಿತಿಯಲ್ಲಿ ಪ್ರಕಟವಾಗುವ ವೆಸ್ಟರ್ನ್ ಮಾರ್ನಿಂಗ್ ನ್ಯೂಸ್ ಎಂಬ ಪತ್ರಿಕೆಯು ಹೇಳುವದು. ಇದೆಲ್ಲಾ ಬರೀ ವರ್ತಮಾನವೇ ಆಗಿದೆ ಎಂದು ತೋರುವದು.

♦♦♦♦

ಬೊಂಬಾಯಿನಲ್ಲಿ ಅಬ್ದುಲ್ ರಹಮಾನ್ ಹುಸೇನ್ ಎಂಬಾತನು ಕಳೆದ ವಾರ ಮಸೀತಿಗೆ ಹೋಗಿದ್ದಾಗ್ಯೆ ಇಬ್ಬರು ಹೆಂಗಸರೂ ಮೂರುಮಂದಿ ಗಂಡಸರೂ ಸೇರಿ ಆತನ ಮನೆಗೆ ನುಗ್ಗಿ ಸುಮಾರು ೭೦,೫೦೦ ರೂಪಾಯಿನಷ್ಟು ನಗನಾಣ್ಯಗಳನ್ನು ದೋಚಿಕೊಂಡು ಹೋದರು. ಆ ಕೂಡಲೇ ಪೋಲೀಸಿಗೆ ತಿಳಿದದ್ದರಿಂದ ಅವರು ಆ ಕಳ್ಳರನ್ನು ಹಿಡಿದರು. ಅವರ ಬಳಿ ೧೯,೦೦೦ ರೂಪಾಯಿನ ಮಾಲು ಸಿಕ್ಕಿತು ಮೊಕದ್ದಮೆ ನಡೆಯುತ್ತಾ ಇದೆ.

♦♦♦♦

ಮದರಾಸ್ ಸರ್ಕಾರದವರು ಅಲ್ಲಿನ ಮಹಮ್ಮದೀಯ ಜನರ ವಿದ್ಯಾಭ್ಯಾಸಕ್ಕಾಗಿ ವರುಷಕ್ಕೆ ೫೫,೦೦೦ ರೂಪಾಯಿ ಕೊಡುತ್ತಾ ಬರುವೆವೆಂತಲೂ, ಆ ವಿದ್ಯಾಸಂಘದವರು ಈ ಫಂಡಿಗೆ ಇದೇ ಪಕ್ಷ ವರುಷಕ್ಕೆ ೩,೦೦೦ ರೂಪಾಯಿಗಳನ್ನು ಚಂದಾ ಕೊಡಿಸಬೇಕೆಂತಲೂ, ಈ ಒಟ್ಟು ಹಣದಿಂದ ಮಹಮ್ಮದೀಯ ಬಾಲಕರಿಗೆ ಕಸಬುದಾರಿ ವಿದ್ಯೆಗಳನ್ನು ಕಲಿಸುವಂತೆ ಏರ್ಪಾಡು ಮಾಡಬೇಕೆಂತಲೂ ಹುಕುಂ ಕೊಟ್ಟಿದಾರೆ.

♦♦♦♦

ಭಾವನಗರದ ಮಹಾರಾಜರವರು ಕಳೆದ ವಾರ ತಮ್ಮ ವರುಷ ವರ್ಧಂತಿ ಉತ್ಸವದ ದಿನ ತಮ್ಮ ಸಂಸ್ಥಾನದ ಸ್ಕೂಲ್ ಹುಡುಗರಿಗೂ, ಹುಡುಗಿಯರಿಗೂ ತಿಂಡಿ ಪದಾರ್ಥಗಳನ್ನು ಕೊಡಿಸಿದರು. ಸುಮಾರು ೬೦೦ ರೂಪಾಯಿನ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಇನಾಮು ಕೊಡಿಸಿದರು. ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಾಗುವಂತೆ ಕೆಲವು ವಿದ್ಯಾ ವೇತನಗಳನ್ನು ಕೊಡುವದಾಗಿ ವಾಗ್ದಾನ ಮಾಡಿದರು. ಜೀವನಕ್ಕಿಲ್ಲದೆ ಕಷ್ಟಪಡುತ್ತಿದ್ದ ೩೭ ಮಂದಿ ವಿಧವೆಯರಿಗೆ ಮಾಸಾಶನವನ್ನು ಕಲ್ಪಿಸಿದರು. ಸೈನ್ಯದವರಿಗೆಲ್ಲಾ ಒಂದು ದಿನದ ಸಂಬಳವನ್ನು ಇನಾಮಾಗಿ ಕೊಡಿಸಿದರು

♦♦♦♦

ಮಧ್ಯಪ್ರಾಂತ್ಯಗಳಿಗೆ ಸೇರಿದ ಹೋಶಂಗಾಬಾದ್‌ಪುರದಲ್ಲಿ ೯ ಮಂದಿ ಯಾತ್ರಿಕರು ಒಂದು ಕಡೆ ಇಳುಕೊಂಡಿದ್ದರು. ಅವರಲ್ಲಿ ಒಬ್ಬನು ಮಾತ್ರ ನೇಪಾಳದ ಬ್ರಾಹ್ಮಣನಾಗಿದ್ದನು, ಇವರೆಲ್ಲಾ ಜಗನ್ನಾಥದಿಂದ ಬಂದವರು. ಆ ಬ್ರಾಹ್ಮಣನು ಅಡಿಗೆಮಾಡಿ ಅವರಿಗೆ ಊಟಕ್ಕೆ ಬಡಿಸಿದನೆಂತಲೂ, ಅವರೆಲ್ಲಾ ಉಂಡಮೇಲೆ ಪ್ರಜ್ಞೆತಪ್ಪಿ ಬಿದ್ದುಕೊಂಡಾಗ, ಅವರ ಬಳಿಯಲ್ಲಿದ್ದ ಹಣಕಾಸನ್ನು ಆ ಬ್ರಾಹ್ಮಣನು ಅಪಹರಿಸಿಕೊಂಡು ಓಡಿಹೋದನೆಂತಲೂ, ಈಗ ಪೋಲೀಸಿನವರು ಆತನನ್ನು ಹುಡುಕುತ್ತಿದಾರೆಂತಲೂ, ಊಟಮಾಡಿದವರಲ್ಲಿ ನಾಲ್ಕುಮಂದಿ ಸತ್ತುಹೋದರೆಂತಲೂ ತಿಳಿದುಬಂದಿದೆ.

♦♦♦♦

ಪೂನಾ ಪಟ್ಟಣದಲ್ಲಿ ದೇಶೀಯ ಸ್ತ್ರೀಯರುಗಳು ವಿದ್ಯಾಭ್ಯಾಸ ಮಾಡುವ ಸ್ಕೂಲಿಗೆ ಗಾಯಕವಾಡ ಮಹಾರಾಜರವರು ದಯಮಾಡಿ ನೋಡಿಕೊಂಡು ಬಂದರು. ಆಗ್ಯೆ ಆ ಸ್ಕೂಲಿನ ಹಿಂದೂ ಬಾಲಿಕೆಯರನ್ನು ಕುರಿತು ಮಹಾರಾಜರವರು ತಿಳಿಸಿದ್ದೇನಂದರೆ — ಸ್ತ್ರೀಯರು ಆಸಕ್ತಿಯಿಂದ ವಿದ್ಯೆ ಕಲಿಯಬೇಕು. ವಯಸ್ಸು ಮೀರುವದರೊಳಗಾಗಿ ಕಷ್ಟಪಟ್ಟು ಅವರು ವಿದ್ಯಾಸಂಪನ್ನೆಯರಾಗತಕ್ಕದ್ದು. ಅವರು ಪಾಠಶಾಲೆಯಲ್ಲಿ ಕಲಿತ ವಿದ್ಯೆಯನ್ನು ಮನೆಯಲ್ಲಿ ಓದುವ ಪುಸ್ತಕಗಳ ವಿಶೇಷವನ್ನೂ ಗೃಹಕೃತ್ಯದ ಕಾರ್ಯದಲ್ಲಿ ರೂಢಿಗೆ ತರಬೇಕಾದದ್ದು ತುಂಬಾ ಅವಶ್ಯ. ಸ್ತ್ರೀಯರು ವಿದ್ಯಾವತಿಯರಾಗಬೇಕೆಂಬುವದರಲ್ಲಿ ನನಗೆ ತುಂಬಾ ಕುತೂಹಲವಿದೆ. ಹಿಂದೂ ಸ್ತ್ರೀಯರೆಲ್ಲಾ ವಿದ್ಯಾಸಂಪನ್ನೆಯರಾಗಬೇಕೆಂಬದಾಗಿ ನಾನು ಬಹಳವಾಗಿ ನಿರೀಕ್ಷಿಸುತ್ತೇನೆ.

♦♦♦♦

ಪೋಲೀಸ್ ಕಮಿಷನರ್ ಜಾತಿಗಳು ಕಲ್ಕತ್ತಾ ಪಟ್ಟಣದ ಸಂಸ್ಕೃತ ಇಂಗ್ಲಿಷ್ ಪಾಠಶಾಲೆಯ ಒಬ್ಬ ಪಂಡಿತನನ್ನು ಕರೆಸಿ, ಹಿಂದೂಸ್ಥಾನದ ಪೋಲೀಸ್ ನವರು ಲಂಚಕೋರರಾಗಿದ್ದಂತೆಯೂ, ಅನ್ಯಾಯಗಾರರಾಗಿದ್ದಂತೆಯೂ ಇರುವದಕ್ಕೆ ಏನುಮಾಡಬೇಕೆಂದು ಕೇಳಿದರು. ಅದಕ್ಕೆ ಆ ಪಂಡಿತನು ಕೊಟ್ಟ ಉತ್ತರವೇನಂದರೆ —ನ್ಯಾಯೋಪಜೀವನವೆಂಬ ನೀಚ ಪಂಕ್ತಿಯನ್ನು ಪೋಲೀಸಿನವರನ್ನು ಹಿಡಿದಿರುತ್ತಾನೆ. ಅವರಿಗೆ ದೇವರ ಮೇಲೆ ಭಕ್ತಿಯಾಗಲಿ ಭೀತಿಯಾಗಲಿ ಇಲ್ಲ. ಅವರ ಹೃದಯಗಳು ಬಹಳ ನೀಚವಾದ್ದವುಗಳು. ಆದಕಾರಣ ಎಲ್ಲಾ ಜನರನ್ನೂ ಕುಲಕನ್ಯಾಪರದೆ ಪೋಲೀಸ್ ನೌಕರಿಗೆ ಸೇರಿಸಿಕೊಳ್ಳಕೂಡದು. ಕ್ರೈಸ್ತರು, ಮುಸಲ್ಮಾನರು,

ಹಿಂದುಗಳಲ್ಲಿ ೩ ಮುಖ್ಯ ಪಂಗಡಗಳವರು—ಈ ಜನರನ್ನು ನೂತನ ಪೋಲೀಸಿಗೆ ಸೇರಿಸಿಕೊಳ್ಳಿ. ಮೊದಲು ಪೋಲೀಸಿನವರಿಗೆ ಮುಖ್ಯವಾದ ಸಂಗತಿಗಳನ್ನು ಒಂದು ವರುಷದ ತನಕಲಾದರೂ ಕಲಿಸಬೇಕು. ಇದರಿಂದ ಅವರ ಮನಸ್ಸುಗಳು ಸದ್ಬುದ್ಧಿಯುಳ್ಳವಾಗುವವು ಮತ್ತು ಪ್ರತಿಒಬ್ಬ ಪೋಲೀಸಿನವನೂ ಗೃಹಕೃತ್ಯಕ್ಕಾಗಿ ಮಾಡುವ ಜಮಾಖರ್ಚನ್ನು ಬರೆದಿಟ್ಟು, ತಿಂಗಳು ತಿಂಗಳಿಗೆ ಆ ಪಟ್ಟಿಯನ್ನು ತನ್ನ ಗುರು ಹಿರಿಯರಿಗೆ ತೋರಿಸಿ, ಅವರ ರುಜು ಪಡೆದು, ಸರ್ಕಾರಕ್ಕೆ ಹಾಜರುಮಾಡಬೇಕೆಂಬದಾಗಿ ವಿಧಿಸಬೇಕು. ಹೀಗೆ ಮಾಡೋಣದರಿಂದ ಅವರಲ್ಲಿ ಲಂಚಕೋರತನವು ನಿರ್ನಾಮವಾಗುವದು.

◆◆◆◆

ದೆಹಲಿ ದರ್ಬಾರನ್ನು ಹೋಗಿ ನೋಡಿ ಬಂದ ಮಿ॥ ಮೆರ್ಕಜೆ ಎಂಬೊಬ್ಬ ಚಿತ್ರಗಾರನು ಈ ದರ್ಬಾರನ್ನು ಕಂಡದ್ದು ಕಂಡಹಾಗೆಯೇ ಸಿಂಹ ಪಟ್ಟಣದಲ್ಲಿ ಚಿತ್ರ ಬರೆಯುತ್ತಿದ್ದಾನೆ.

◆◆◆◆

ಅಮೀರರು ಆಜ್ಞೆ ಮಾಡಿದ್ದರಿಂದ ಕೈಸೆರೆ ಹಿಡಿದಿದ್ದ ಕರ್ನಲ್ ಹೋಟ್ ಎಂಬ ಇಂಗ್ಲಿಷ್ ಉದ್ಯೋಗಸ್ಥನನ್ನು ಬಿಡುಗಡೆ ಮಾಡಿದರು. ಅವರು ಯಥಾ ಪ್ರಕಾರ ಚಾಮರ್ನ್ ಎಂಬ ರಾಜ್ಯಕ್ಕೆ ಬಂದರು.

◆◆◆◆

ಮದರಾಸ್ ಅಧಿಸತ್ಯಕ್ಕೆ ಸೇರಿದ ಯಾವ ಪ್ರದೇಶದಲ್ಲಿ ಹೈವೇ ರಾಬರಿ ಅಂದರೆ ಕಳ್ಳರು ಹಾದಿಗಾರರನ್ನು ಕಡಿದು ಕೊಳ್ಳೆ ಮಾಡಿದರೆ ಅಂಥಾ ಪ್ರತಿಒಂದು ಸಂಗತಿಯನ್ನೂ ಗವರ್ನಮೆಂಟಿಗೆ ಆ ಕೂಡಲೆ ರಿಪೋರ್ಟು ಮಾಡಬೇಕೆಂಬದಾಗಿ ಹುಕುಂ ಕೊಟ್ಟಿದ್ದಾರೆ.

◆◆◆◆

ಹಿಂದುಸ್ಥಾನದಲ್ಲಿ ಹಿಂದಿನವಾರ ಪ್ಲೇಗ್ ಉಪದ್ರದಿಂದ [illegible] ಮಂದಿ ಕಾಲವಾಗಿದ್ದರಷ್ಟೆ. ಈ ವಾರವಾದರೋ [illegible] ಜನರು ಆ ರೋಗಕ್ಕೆ ತುತ್ತಾದರು. ಹೀಗೆಯೇ ಇನ್ನು ಕೆಲವು ಕಾಲದತನಕ ಈ ಉಪದ್ರದ ಜೋರು ಕಡಿಮೆಯಾಗಬಹುದೆಂದು ತೋರುವದು.

◆◆◆◆

ಹಿಂದುಸ್ಥಾನದ ಕಾರ್ಖಾನೆಗಳಲ್ಲಿ ನಾನಾ ವಸ್ತುಗಳನ್ನು ತಯಾರ್ಮಾಡುವಾಗ್ಯೆ ಉಪ್ಪನ್ನು ಉಪಯೋಗಿಸುವದುಂಟು. ಇಂಥಾ ಉಪ್ಪನ್ನು ಹಿಂದುಸ್ಥಾನದಿಂದಲಾಗಲಿ, ಪರರಾಜ್ಯಗಳಿಂದಲಾಗಲಿ ತರಿಸಿಕೊಂಡಲ್ಲಿ ಅದಕ್ಕೆ ಸರ್ಕಾರದವರು ಸುಂಕವನ್ನು ವಸೂಲ್ಮಾಡುವದಿಲ್ಲವೆಂಬದಾಗಿ ಅಪ್ಪಣೆ ಕೊಟ್ಟಿದ್ದಾರೆ.

◆◆◆◆

ಬೊಂಬಾಯಿನಲ್ಲಿರುವ ಐಶ್ವರ್ಯವಂತರಾದ ಮಿ॥ ತಾತಾ ಎಂಬ ಪಾರ್ಸಿ ಸಾಹುಕಾರರು ಅಲ್ಲಿ ಒಂದು ಹೋಟೆಲನ್ನು ಹೊಸ ಮಾದರಿಯಾಗಿ ಕಟ್ಟಿಸುತ್ತಿದ್ದಾರೆ. ಕಟ್ಟಡವು ೭ ಅಂತಸ್ತುಗಳುಳ್ಳದ್ದು. ಮೇಲ್ಗಡೆ ನೇತ್ರಾನಂದಕರವಾದ ಗುಮ್ಮಟ ಬರುವದು. ಅದಕ್ಕೆ ತಾಜ್ ಮಹಲ್ ಅರಮನೆ ಹೋಟೆಲು ಎಂಬದಾಗಿ ಹೆಸರಿಟ್ಟಿದ್ದಾರೆ.

◆◆◆◆

ನಾಗಪಟ್ಟಣದ ಮ್ಯುನಿಸಿಪಲ್ ಕಮಿಷನರಾಗಿದ್ದ ಸುಬ್ರಹ್ಮಣ್ಯ ಪಿಳ್ಳೆ ಎಂಬವನು ಅಕ್ರಮವಾಗಿ ದುರಭಿಪ್ರಾಯದಿಂದ ಕೆಲವು ಮಂದಿ ಬಾಲಿಕೆಯರನ್ನು ಹಿಡಿದು ಗುಟ್ಟಾಗಿ ಇಟ್ಟುಕೊಂಡಿದ್ದದ್ದು ಪ್ರಕಾಶಕ್ಕೆ ಬಂತು. ತಂಜಾವೂರಿನ ಸೆಷನ್ಸ್ ಜಡ್ಜರು ಅವನನ್ನು ಪರ್ಯಾಪ್ತಿ ಮಾಡಿ ಅವನಿಗೆ ೩ ವರುಷ ಕಠಿಣ ಸಜಾ, ೨,೦೦೦ ರೂಪಾಯಿ ದುಲ್ಮಾನೆಯನ್ನು ವಿಧಿಸಿ, ದುಲ್ಮಾನೆ ಕೊಡದಿದ್ದರೆ ಇನ್ನೊಂದು ವರುಷ ಸಜಾ ಅನುಭವಿಸಬೇಕೆಂದು ಹೇಳಿದ್ದಾರೆ.

## ಮೈಸೂರು ಗೆಜೆಟ್ ಸಂಗ್ರಹ.

ಡಿವಾನ್ ಆಫೀಸಿನಲ್ಲಿ ಕೆಲಸ ಮಾಡುತ್ತಿರುವ ಅ॥ ಕಮಿಷನರ್ ಮಿ। ಬಿ. ವೆಂಕೋಬರಾಯರನ್ನು ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ. ಅವರಿಗೆ ಡಿಸ್ಟ್ರಿಕ್ಟ್ ಖಜಾನೆಯ ಭಾರವನ್ನು ವಹಿಸತಕ್ಕದ್ದು.

ಮೈಸೂರು, ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಜಂಗಲಿನಿಂದ ಸಾಗಿಸಲ್ಪಡುವ ಪ್ರತಿ ತಲೆಹೊರೆಯ ಸೌದೆಗೂ ಮೂರು ಕಾಸಿನಂತೆ ಸುಂಕ ವಸೂಲ್ಮಾಡಬೇಕೆಂಬದಾಗಿ ಕಳೆದ ೧೯೦೧ನೇ ಇಸವಿ ಆಗೋಸ್ಟು ೨೩ ರಲ್ಲಿ ಹುಕುಂ ಕೊಟ್ಟಿತ್ತಷ್ಟೆ. ಈ ಸುಂಕವನ್ನು ವಜಾಮಾಡತಕ್ಕದ್ದೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

ಚಿತ್ರದುರ್ಗ ಡಿವಿಜನ್ ಅ॥ ಇಂಜನಿಯರ್ ಮಿ। ಕೆ. ಶ್ರೀಪತ್ತಾಯ ದುಂಗರಷಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಮೂರು ತಿಂಗಳ ಕಾಯಲೆ ರಜಾ ಕೊಟ್ಟಿದೆ.

ತುಮಕೂರು ಅ॥ ಕಮಿಷನರ ಕೋರ್ಟಿನಲ್ಲಿ ಪೋಲೀಸಿನವರು ಬೂಸಿಗನೆಂಬವನ ಮೇಲ್ಕಂಡ ಕಳುವಿನ ಮೊಕದ್ದಮೆ ತಂದರು. ಇದು ದರ್ಯಾಪ್ತಿ ಆಗುವಾಗ್ಯೆ ಬೂಸಿಗನ ಮನೆಯಲ್ಲಿ ವಿಪರೀತವಾಗಿ ನಗನಾಣ್ಯಗಳು ಸಿಕ್ಕಿರುತ್ತವೆ ಇವೆಲ್ಲಾ ಯಾರಿಗೆ ಸೇರಿರುತ್ತವೋ ಅಂಥವರು ಅರ್ಜಿಕೊಟ್ಟು ಪಡೆಯಬಹುದಾಗಿದೆ

ಸೀರಾ ತಾಲ್ಲೂಕಿಗೆ ಸೇರಿದ ಕಲ್ಲುಕೋಟೆ ಗ್ರಾಮದಲ್ಲಿ ಒಂದು ಎ. ವಿ. ಸ್ಕೂಲ್ ಕಟ್ಟಡವನ್ನು ಕಟ್ಟುವದಕ್ಕೆ ನಾಲ್ಕು ಎಕರೆ ಜಮೀನು ಸರ್ಕಾರಕ್ಕೆ ಬೇಕಾಗಿದೆ.

ಕೈದರಾಬಾದಿಗೆ ಸೇರಿದ ಹಿರೆಹಾಳ್ ಸ್ಥಳವಂದಿಗನಾದ ಶಿವಬಸ್ಸಯನೆಂಬೊಬ್ಬ ಜಂಗಮನು ಚಿತ್ರದುರ್ಗದ ಮುರಿಗೇಂದ್ರ ಸ್ವಾಮಿಗಳು ದಾವಣಗೆರೆಯಲ್ಲಿದ್ದಾಗ್ಯೆ ಅವರ ಶಿಷ್ಯನಾಗಿ ಸೇರಿಕೊಂಡಿದ್ದಾಗ ನಡಸಿದ ಅಪರಾಧಕ್ಕೋಸ್ಕರ ಅವನಿಗೆ ದಾವಣಗೆರೆ ಅ॥ ಕಮಿಷನರು ೧೮ ತಿಂಗಳ ಕಠಿಣ ಸಜಾ ವಿಧಿಸಿದ್ದರು. ಇವನನ್ನು ಪೋಲೀಸಿನವರು ದಾವಣಗೆರೆಯಿಂದ ಬೆಂಗಳೂರು ಸೆಂಟ್ರಲ್ ಜೈಲಿಗೆ ರೈಲ್ ಗಾಡಿಯಲ್ಲಿ ಕರತರುತ್ತಿರುವಾಗ ಅವನು ಎಲ್ಲಿಯೋ ತಪ್ಪಿಸಿಕೊಂಡು ಹೋಗಿರುತ್ತಾನೆಂಬದಾಗಿ ಘಾಯುಟಾಗಿದೆ

## ತಾಲ್ಲೋಕು ವರ್ತಮಾನಗಳು.

ನೆಲಮಂಗಲ.—ನೆಲಮಂಗಲದ ತಾಲ್ಲೋಕ್ ಬೇಗೂರು ಹೋಬಳಿ ಜೋಡಿ ಕೆಂಪಾರದ ಅಗ್ರಹಾರಕ್ಕೆ ಈಗ್ಯೆ ಎರಡು ತಿಂಗಳ ಕೆಳಗೆ ಪ್ಲೇಗ್ ತಗಲಿ ಗ್ರಾಮಸ್ಥರು ಊರಾಚೆ ಮೂರು ಪಂಗಡವಾಗಿ ಗುಡಿಸಲುಗಳನ್ನು ಹಾಕಿಕೊಂಡಿದ್ದರು. ಈ ಪೈಕಿ ವರ್ಗದಾರರಾದ ಪಟೇಲ್ ಬೈರೆಗೌಡರು ವಗೈರೆಯರು ಹಾಕಿಕೊಂಡಿದ್ದ ಗುಡಿಸಲುಗಳಿಗೆ ಏಪ್ರಲ್ ಮಾಹೆ ತಾರೀಖು ೩೦ನೆ ಹಗಲು ೩॥ ಘಂಟೆ ಸುಮಾರಿನಲ್ಲಿ ಆಕಸ್ಮಾತ್ ಗುಡಿಸಲುಗಳಿಗೆ ಬೆಂಕಿ ತಗಲಿ, ಹನ್ನೆರಡು ಗುಡಿಸಲುಗಳು ಪೂರ್ತಿಯಾಗಿ ಅಗ್ನೀಶ್ವರನಿಗೆ ಆಹುತಿಯಾದವು. ಇದರಿಂದ ಮಾಲೀಕರಿಗೆ ಸುಮಾರು ೧೮,೦೦೦ ಹದಿನೆಂಟು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಆಸ್ತಿಗಳು ನಷ್ಟವಾಗಿರುತ್ತವೆ. ಇವರ ಶ್ರಮವನ್ನು ಸರ್ವೇಶ್ವರನು ಒಬ್ಬನು ವಿನಾ ಮತ್ತಾರಿಂದ ವರ್ಣಿಸಲು ಸಾಧ್ಯವಿಲ್ಲ. ಈ ಪೈಕಿ ಬೈರೇಗೌಡರೆಂಬುವರು ಎಳು ಗ್ರಾಮಗಳಿಗೆ ಪಟೇಲರಾಗಿಯೂ, ಮೈಸೂರು ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರಾಗಿ ಹೋಗಿದ್ದವರ ಪೈಕಿ ಒಬ್ಬರಾಗಿಯೂ ಇದ್ದ ಇವರು ಮತ್ತು ಇವರ ತಮ್ಮ ದೊಡ್ಡೇಗೌಡ ವಗೈರೆಯರು ತಮ್ಮ ಯಾವದ್ವಿಷಿಷ್ಟ ಜೆಂಬಿನೆಗಳನ್ನೂ ಕಳದುಕೊಂಡು ತುಂಬಾ ಶ್ರಮಪಡುತ್ತಲಿದ್ದಾರೆ. ಆದರೆ ಭಗವಂತನ ಕೃಪಾ ಕಟಾಕ್ಷದಿಂದ ಜನಗಳ್ಯಾರಿಗೂ ಪ್ರಾಣನಷ್ಟ ಮತ್ತು ಅಪಾಯವೇನೂ ಸಂಭವಿಸಲಿಲ್ಲ. ಈ ಆಹುತಿಗೆ ಒಂದು ಹಸು. ಒಂದು ಕರುವು, ಎರಡು ಮೇಕೆ ಮಾತ್ರ ತುತ್ತಾದವು. ಇಂಥಾ ತೊಂದರೆಯಲ್ಲಿ ಸಿಕ್ಕಿ ನರಳುತ್ತಿರುವ ಪರೋಪಕಾರ ಹಿತೈಷಿಗಳಾದ ಇವರಿಗೆ ದೇವರು ಜಾಗ್ರತೆಯಾಗಿ ಮೊದಲಿನ ಸುಖವನ್ನು ಒದಗಿಸಿಕೊಟ್ಟು ಕಾಪಾಡಲೀ ಎಂದು ಸರ್ವದಾ ಪ್ರಾರ್ಥಿಸುವೆವು.

ಚಿಕ್ಕಮಗಳೂರು.—ಕಳೆದ ಶನಿವಾರ ಒಂದು ಹದ ಮಳೆ ಆಗಿ ಕಾವೆಲ್ಲಾ ಹೊರಟುಹೋಗಿ ಪ್ರಜಾಕ್ಷೇಮಕ್ಕೆ ಕುಂದಕವನ್ನುಂಟುಮಾಡಿದೆ, ಬಿಸಲಿನಧಗೆ ಸಹಿಸಲಶಕ್ಯವಾಗಿ ಕಳೆದ ಸೋಮವಾರ ಬೆಳಗ್ಗೆ ಅಪರೂಪವಾಗಿ ಮುಂಜು ಭೂಮಿಯನ್ನು ಆವರಿಸಿತು.—ಈ ತಿಂಗಳು ೧೯ ರಲ್ಲು ಮುಂದಣ ವರ್ಷದ ಕಂಟ್ರಾಕ್ಟು ಕೂಗುತ್ತಾರಂತೆ. ಕಳೆದ ವರ್ಷ ನಾಗಡಿ ಕಸರಿಗೌಡನು ಬಹು ಜಾಸ್ತಿ ಮೊಬಲಗಿಗೆ ಒಪ್ಪಿ ಸಾವಿರ ಚಿಲ್ಲರೆ ರೂಪಾಯಿ ಸರ್ಕಾರಕ್ಕೆ ಬಾಕಿದಾರನಾಗಿ ಕೊಡಲಾರದೆ ಈತನ ಒಂದು ಆಸ್ತಿ ಎಲ್ಲಾ ಜಪ್ತಿಮಾಡಿದಾಗ್ಯೂ ನೋಬ್ಬನು ವಸೂಲಾಗುವದಿಲ್ಲವೆಂತ ತಿಳಿಯಬಂದಿದೆ. ಆದ್ದರಿಂದ ಮುಂದಣ ಕಂಟ್ರಾಕ್ಟಿನಲ್ಲಿ ಜನರು ದಂಭಾಚಾರವಾಗಿ ಹಾಕಿಕೊಂಡು ಬರುವ ಬಟ್ಟೆ ಉಡಿಗೆಗಳಿಗೆ ಸರ್ಕಾರದವರು ಮರುಳಾಗದೆ ನಿಜವಾಗಿ ಆಸ್ತಿವಂತರೂ ಮಾತುಭಾರಿಗಳೂ ಆಗಿರುವವರಿಗೆ ಕೇಂದಿ ಕಂಟ್ರಾಕ್ಟು ಕೊಟ್ಟು ಅವರಿಂದ ಒಂದು ವರ್ಷದ ಮೊಬಲಗನ್ನಾಗಲೀ ಕಡೆಗೆ ೬ ತಿಂಗಳ ಹಣವನ್ನಾಗಲೀ ಪಡೆದು ಕಂಟ್ರಾಕ್ಟ್ ಕೊಡುವದಾದರೆ ಸರ್ಕಾರಕ್ಕೆ ನಷ್ಟವಾಗಲಾರದು.—ವೆಸ್ಲೆಯನ್ ಮೆಥೊಡಿಸ್ಟ್ ಧರ್ಮಗುರುಗಳಾದ ಸ್ಯಾಮ್ಸನ್, ಹಾಪ್ಸ್, ಹಂಪರ್, ಬೂಟ್, ಈ ೪ ಮಂದಿ ದೊರೆಗಳು ಈ ವಾರದಲ್ಲಿ ತಮ್ಮ ಪ್ರಸಂಗ ಪ್ರಯಾಣವನ್ನು ಚಿಕ್ಕಮಗಳೂರು ಕಡೆ ತಿರುಗಿ ಮಾಡತಕ್ಕ ಕರ್ತವ್ಯಗಳನ್ನು ಮುಗಿಸಿ ಸಂತೆಯಲ್ಲಿ ಬಹುಮಂದಿಗೆ ರಕ್ಷಕನಾದ ಯೇಸುವಿನ ವಿಷಯ ಪ್ರಸಂಗಿಸಿ, ಸಂತೆಮೇಡಿ ಮೂಲಕ ಶಿವಮೊಗ್ಗೆಗೆ ತೆರಳಿದರು.—ಡಾ॥ ಬೆಸರ್ ಸಾಹೇಬರವರು ನಿನ್ನೆ ಸಾಯಂಕಾಲ ಇನ್ಸ್ಪೆಕ್ಷನ್ ಡ್ಯೂಟಿಮೇಲೆ ದಯಮಾಡಿಸಿದ್ದಾರೆ. ಇವರು ಇಲ್ಲಿನ ಆಸ್ಪತ್ರೆಗಳನ್ನು ಪರಾಂಬರಿಸಿ, ಮುಂದೆ ತೆರಳುವರು.—ಈ ಸಾರಿ ಚಿಕ್ಕಮಗಳೂರಿನ ಎಲ್ಲಾ ಸ್ಕೂಲುಗಳು ಬಿಸಲು ಕಾಲದಲ್ಲಿ ಒಪ್ಪತ್ತು ಮಾತ್ರ ಕೆಲಸಮಾಡುವಂತೆ ಮಿ॥ ಭಾಭಾ ಸಾಹೇಬರವರು ಏರ್ಪಾಡು ಮಾಡಿದ್ದಾರೆ. ಇದು ಕಳೆದ ವರ್ಷ ೬ ತಿಂಗಳು ಸ್ಕೂಲುಗಳನ್ನು ಮುಚ್ಚಿದ್ದರ ಫಲ.

ಚಿತ್ರದುರ್ಗ.—ಬಿಸಲಿನ ಧಗೆ ಜಾಸ್ತಿ. ಈ ವರಿಗೂ ಈ ಊರು ನಿರ್ಜನ ಪ್ರದೇಶವಾದ ಬೀದಿಗಳಲ್ಲಿ ಜನರು ತಿರುಗಾಡಲು ಭಯಪಡುತ್ತಿದ್ದರು. ಈಗ ಆಯಾ ಬೀದಿಗಳಲ್ಲಿ ಕೆಲಕೆಲವು ಕುಟುಂಬಗಳು ವಾಸಮಾಡುತ್ತಿರುವದರಿಂದ, ಊರು ಕಳೆಯಿಂದ ತುಂಬಿರುವದು. ಗ್ರಾಮಗಳಿಂದ ವ್ಯಾಪಾರಕ್ಕಾಗಿ ಜನರು ನಿರ್ಭಯವಾಗಿ ಬರಲು ಧೈರ್ಯಪಡುತ್ತಿರುವದರಿಂದ ಮೊಸರು ಬೆಣ್ಣೆ ಕಟ್ಟಿಗೆ ಹುಲ್ಲು ಸೊಪ್ಪು ವಗೈರೆ ಪದಾರ್ಥಗಳು ಸಲೀಸಾಗಿ ಸಿಕ್ಕಲು ಅವಕಾಶವಾಯಿತು. ಪ್ಲೇಗಿನ ಸುದ್ದಿ ಏನೂ ಇಲ್ಲದಂತೆ ತೋರುವದು. ಮದಕಲ್ಲಿಯ ಒಂದು ದೇವಸ್ಥಾನದಲ್ಲಿ ಮಾತ್ರ ಭಿಕ್ಷುಸಾಗರದ ಒಂದು ಗ್ರಾಮದ ಪಟೇಲನು ಈ ಊರಿಗೆ ಇರಸಾಲ್ ತರುತ್ತಾ ಸದರಿ ಸ್ಥಳದಲ್ಲಿ ಇಳುಕೊಂಡು ಮೃತಪಟ್ಟನೆಂದು ವರ್ತಮಾನವಿದೆ. ಯಾವ ಕಾಯಿಲೆಯಿಂದಲೋ ತಿಳಿಯದು.—ಟವರ್ನಲ್ಲಿ ಕೆಲವು ನಲ್ಲಿಗಳು ಕೆಟ್ಟಿರುವವು. ಕಳೆದ ಒಂದೆರಡು ವಾರಗಳ ಹಿಂದೆ ವೈ॥ ಪ್ರೆಸಿಡೆಂಟರು ಬಂದು ನೋಡಿಹೋದರೂ ಈ ವರಿಗೂ ರಿಪೇರಿ ನಡೆದಿಲ್ಲ. ನೀರು ವ್ಯರ್ಥವಾಗಿ ಚೆಲ್ಲಿಹೋಗುವದು. ಇನ್ನೂ ಕೆಲವು ಕಡೆ ಅನೇಕ ಜನರು ವಾಸಮಾಡುತ್ತಿರುವ ಸ್ಥಳದಲ್ಲಿ, ಒಂದೇ ಕೊಳವೆಯಿಂದ ನೀರು ತುಂಬಬೇಕಾಗಿರುವದು. ಒಂದು ಕೊಡ ನೀರಿಗೋಸ್ಕರ ಬಹಳಹೊತ್ತು ಕಾಯಬೇಕಾಗುವದರಿಂದ ಅಂಥಾ ಸ್ಥಳದಲ್ಲಿ ನಾಲಿ ಬಂದ್ಮಾಡಿರತಕ್ಕ ಬೇರೆ ಕೊಳವೆಗಳನ್ನು ತೆಗದುಕೊಟ್ಟಲ್ಲಿ ಪ್ರಜೆಗಳಿಗೆ ತುಂಬಾ ಸೌಲಭ್ಯವುಂಟಾಗುವದು. ಈ ವಿಷಯದಲ್ಲಿ ವೈ॥ ಪ್ರೆಸಿಡೆಂಟರು ತುಂಬಾ ನಿಗಾಕೊಡತಕ್ಕದ್ದಾಗಿದೆ.—ಇಲ್ಲಿನ ಕಟುಕರು ತುಂಬಾ ದುರ್ಬಲವಾದ ಕುರಿಗಳನ್ನು ಕೊಂದು ಅವುಗಳ ಮಾಂಸವನ್ನು ಬಿಕರಿಮಾಡುತ್ತಿದ್ದಾಗ್ಯೂ ಯಾರೂ ಕೇಳುವವರೇ ಇಲ್ಲ. ಇಂಥಾ ಮಾಂಸವನ್ನು ಜನರು ಕೊಂಡು ತಿನ್ನುವದರಿಂದ ಬೇರೆ ಬೇರೆ ಕಾಯಿಲೆಗೆ ಒಳಪಡುವರು. ಈ ವಿಷಯಕ್ಕೆ ಇಲ್ಲಿನ ವೈ॥ ಪ್ರೆಸಿಡೆಂಟರು ತಕ್ಕ ನಿಗಾಕೊಟ್ಟು, ಮಾಂಸದ ಪರೀಕ್ಷೆಗಾಗಿ ತಕ್ಕವರೊಬ್ಬರನ್ನು ನೇಮಕಮಾಡಿ, ಒಳ್ಳೇ ಕುರಿಗಳನ್ನೇ ಕೊಯಿದು ಅವುಗಳ ಮಾಂಸವನ್ನು ಬಿಕರಿಮಾಡುವಂತೆಯೂ ಇದಕ್ಕೆ ತಪ್ಪಿದರೆ ಅಂಥಾವರಿಗೆ ಪ್ರಾಸಿಕ್ಯೂಷನ್ ಮಾಡುವಂತೆಯೂ ಏರ್ಪಾಡು ಮಾಡದೆಹೋದರೆ ಜನರ ಆರೋಗ್ಯಕ್ಕೆ ಕುಂದಕವುಂಟಾಗುವದು. ಬಹುಕಾಲದಿಂದಲೂ ಈ ಊರಿನಲ್ಲಿ ಮಾಂಸ ಪರೀಕ್ಷೆಯನ್ನು ಮಾಡಿದವರ್ಯಾರೂ ಇಲ್ಲವೆಂದು ತೋರುತ್ತೆ.—ಅ॥ ಕ ಮಿ। ವೆಂಕೋಬರಾಯರು ಈ ಊರಿಗೆ ಒಂದೆರಡು ದಿನಗಳಲ್ಲಿಯೇ ಬಂದು ಟ್ರೆಜರಿ ಚಾರ್ಜನ್ನು ವಹಿಸುವವರಾಗಿದ್ದಾರೆ.—ಪ್ಲೇಗ್ ತಲೆತೋರಿದಲಾಗಾಯ್ತು ಈ ಊರಿನ ಸ್ಕೂಲುಗಳಿಗೆ ತಿಂಗಳು ಗಟ್ಟಲೆ ರಜಾ ದೊರಕಿತು. ಇಂಗ್ಲೀಷ್ ಸ್ಕೂಲ್ ಊರು ಹೊರಗೆ ಇರುವದರಿಂದ ಒಂದೆರಡು ತಿಂಗಳಿಂದ ಕೆಲಸವೇನೋ ನಡೆಯುತ್ತಲೇ ಇತ್ತು. ಈಚೆಗೆ ಎ. ವಿ. ಸ್ಕೂಲ್ ಸಹ ಸದರಿ ಇಂಗ್ಲಿಷ್ ಸ್ಕೂಲಿನಲ್ಲಿಯೇ ಬೇಗಿನ ಕೊಠಡಿಯಲ್ಲಿ ನಡೆಸತಕ್ಕದ್ದೆಂದು ಗೊತ್ತಾಗಿ ಕಳೆದ ೩ ವಾರ ಒಂದು ತಿಂಗಳಿಂದಲೂ ಹಾಗೆಯೇ ಕೆಲಸ ನಡಿಯುತ್ತಿರುವದು. ಗರ್ಲ್ಸ್ ಸ್ಕೂಲ್ ಮಾತ್ರ ಈ ವರಿಗೂ ಮುಚ್ಚಲ್ಪಟ್ಟು, ನಿನ್ನೆ ಒಂದನೇ ತಾರೀಖಿನಲ್ಲಿ ಸ್ಕೂಲ್ ಬಾಗಲನ್ನು ತೆಗೆದು ಕೆಲಸ ಶುರುಮಾಡಿದಾರೆಂದು ತೋರುತ್ತೆ.

ಕೊಳ್ಳೇಗಾಲ.—ಕೊಳ್ಳೇಗಾಲದ ತಾಲ್ಲೋಕು ಬೋರ್ಡ್ ನಿಂದ ಕೊಯಮುತ್ತೂರ್ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಿಗೆ ಹೋಗಲು ಇದುವರೆಗೆ ಅಫಿಷಿಯಲ್ ಮೆಂಬರುಗಳಲ್ಲಿ ಒಬ್ಬ ಮೆಂಬರನ್ನು ಚುನಾಯಿಸುತ್ತಾ ಬಂದರು. ಇಲ್ಲಿಂದ ನಾನ್ ಅಫಿಷಿಯಲ್ ಮೆಂಬರನ್ನು ಚುನಾಯಿಸಕೂಡದು ನಾನ್ ಅಫಿಷಿಯಲ ಮೆಂಬರನ್ನು ಚುನಾಯಿಸಬೇಕೆಂದು ಗವರ್ನಮೆಂಟು ಆರ್ಡರ್ ಬಂದದ್ದರಿಂದಲೂ, ನಾಲಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗೂ ತಹಶೀಲದಾರಾಗೂ ಇದ್ದ ಮಿ। ಕೆ. ರಾಜಗೋಪಾಲಾಚಾರ್ಯರು ನವಾನಿಗೆ ವರ್ಗವಾಗಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರು ಸ್ಥಾನ ಖಾಲಿಯಾದ್ದರಿಂದ ಆ ಸ್ಥಾನದ ಮೆಂಬರ್ ನೇಮಿಸುವದಕ್ಕಾಗಿ ಕಳೆದ ಏಪ್ರಲ್ ಮಾಹೆ ೨೯ನೆ ತಾರೀಖು ದಿನ ೪—೩೦ ಕ್ಕೆ ಇಲ್ಲಿನ ತಾಲ್ಲೋಕು ಬೋರ್ಡಿನಲ್ಲಿ ಒಂದು ಸ್ಪೆಷಲ್ ಮೀಟಿಂಗು ನಡೆಸಲ್ಪಟ್ಟಿತು. ಮೀಟಿಂಗಿನಲ್ಲಿ ನಮ್ಮ ಡೆಪ್ಯುಟಿ ಕಲೆಕ್ಟರ್ ಮುಂತಾದವರು ಹಾಜರಾಗಿದ್ದರು. ಡಿ. ಬಿ. ಮೆಂಬರನ್ನು ಚುನಾಯಿಸುವ ವಿಷಯವಾಗಿ ಡಿಸ್ಟ್ರಿಕ್ಟ್ ಬೋರ್ಡ್ ನಿಂದ ಬಂದು ಇದ್ದ ಆರ್ಡರನ್ನು, ಎಲೆಕ್ಷನ್ ರೂಲ್ಸನ್ನು ಪ್ರೆಸಿಡೆಂಟು ಓದಿ ಹೇಳಿದ ಮೇಲೆ ಗ್ರಾಮ ಮುನಸೀಫ್ ಮಿ। ಸುಬ್ರಮಣ್ಯಯ್ಯರವರು ಕಾಂಡಿಡೇಟುಗಳಾಗಿ ಇರುವದಾಗಿಯು ತಿಳಿಸಿದರು. ಕೊನ್ಲೆ ರೆವರೆಂಡ್ ಸಾಹೇಬರವರು ಎದ್ದು ಮಹಮ್ಮದ್ ಖಲಂದರ್ ಸಾಹೇಬ್ ಬಹಾದ್ದೂರವರನ್ನು ಚುನಾಯಿಸಬಹುದೆಂದು ಪ್ರಪೋಸ್ ಮಾಡಿದ್ದಕ್ಕೆ ಮಿ। ಲಬಿಗಾರ ಸೆಕೆಂಡ್ ಅನುಮೋದಿಸಿದರು. ಮಿ॥ ಸುಬ್ರಮಣ್ಯಯ್ಯರನ್ನು ಚುನಾಯಿಸಬೇಕೆಂದು ಮಿ। ರಾಮಕೃಷ್ಣಶೆಟ್ಟಿ ಪ್ರಪೋಸ್ ಮಾಡಿ. ಮಿ। ಗಂಪಿಶ ವಲ್ಲಿಕಾರು ನಪ್ಪನವರು ಅನುಮೋದಿಸಿದರು. ಹೀಗೆ ಪರಸ್ಪರ ಬಲು ಪ್ರಪೋಸಲಿಗೆ ಸಮ್ಮತಪಟ್ಟವರು ಕೈಯೆತ್ತಬಹುದೆಂದು ಪ್ರೆಸಿಡೆಂಟು ಹೇಳಿದ್ದರಿಂದ ಆರು ಮಂದಿ ಬಲದಕೈಗಳನ್ನು ಮೇಲಕ್ಕೆ ಎತ್ತಿದರು. ಎರಡನೆ ಪ್ರಪೋಸಲಿಗೆ ಮಿ। ರಾಮಕೃಷ್ಣಶೆಟ್ಟಿ, ಮಿ। ಗಂಪಿಶ ವಲ್ಲಿಕಾರು. ನಪ್ಪನವರು ಮಾತ್ರ ಕೈಗಳೆತ್ತಿದರು. ತಾವು ಮಹಮ್ಮದ್ ಖಲಂದರ್ ಸಾಹೇಬ್ ಬಹದೂರವರಿಗೆ ಓಟು ಬಂದು ಮೆಜಾರಟಿಯಾದ್ದರಿಂದ ಅವರನ್ನು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿ ಚುನಾಯಿಸಲ್ಪಟ್ಟಿತೆಂದು ಪ್ರೆಸಿಡೆಂಟರಿಂದ ಬಹಿರಂಗಪಡಿಸಿ, ರಜಲೂಷನ್ ಮಾಡಲ್ಪಟ್ಟಿತು. ಮೊದಲು ಪ್ರಪೋಸಲ್ ನಡೆದನಂತರ ಮತ್ತೊಬ್ಬ ಮೆಂಬರ್ ಮಿ। ಮಟಂ ಶೇಷಾದ್ರಿ ಮೀಟಿಂಗ್ ಹಾಲಿಗೆ ಬಂದದ್ದರಿಂದ ಅವರನ್ನು ವಿಲೆಕ್ಷನ್ ಗೆ ಸೇರಿಸಲಿಲ್ಲ. ಪ್ರೆಸಿಡೆಂಟರವರು ತಮ್ಮ ಓಟು ಯಾರಿಗೂ ಕೊಡದೆ, ಮೆಜಾರಿಟಿ ಇರುವದರಿಂದ ಅದನ್ನು ಕುರಿತು ಮಿ॥ ಜೇವಣರಾಂ ರವರು ಪ್ರಶ್ನೆಮಾಡಿದ್ದರಲ್ಲಿ ತನ್ನ ಓಟು ಅನಾವಶ್ಯವೆಂದು ಪ್ರೆಸಿಡೆಂಟರು ಉತ್ತರ ಕೊಟ್ಟರು. ಎಲೆಕ್ಷನ್ ಕಾಲದಲ್ಲಿ ಅನೇಕ ಪ್ರಜೆಗಳು ನೋಡುವದಕ್ಕಾಗಿ ಮೀಟಿಂಗ್ ಹಾಲ್ಗೆ ಬಂದು ಇದ್ದರು. ಮಹಮ್ಮದ್ ಖಲಂದರ್ ಸಾಹೇಬ್ ಬಹದ್ದೂರವರನ್ನು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿ ಚುನಾಯಿಸಿದ ವಿಷಯದಲ್ಲಿ ಇಲ್ಲಿನ ಸಮಸ್ತ ಪ್ರಜೆಗಳಿಗೂ ಸಂತೋಷವಾಗಿದೆ. ಇವರು ಪ್ರಖ್ಯಾತಿಹೊಂದಿದ ಲೇಟ್ ಬಾಬಾಮಿಯಾಂ ಸಾಹೇಬ್ರವರ ದ್ವಿತೀಯ ಕುಮಾರರು, ದೊಡ್ಡಮನುಷ್ಯರಾಗಿಯೂ ಸದ್ಗುಣವುಳ್ಳವರಾಗಿಯೂ ಇರುವಲ್ಲದೇ ಇವರು ಕೊಳ್ಳೇಗಾಲದ ಯೂನಿಯನ್ ಪಂಚಾಯತಿನಲ್ಲೂ, ತಾಲ್ಲೋಕು ಬೋರ್ಡಿನಲ್ಲೂ ಮೆಂಬರಾಗಿರುವಲ್ಲಿ ಇಂಥಾ ಮಹನೀಯರನ್ನು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿ ಚುನಾಯಿಸಿ ದೊಡ್ಡ ಪದವಿಕೊಟ್ಟದ್ದು ಸಮಂಜಸವಾಗಿರುತ್ತೆ. ಇಲ್ಲಿನ ಪ್ರಜೆಗಳ ಕಷ್ಟ ನಿಷ್ಠೂರಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಚರ್ಚಿಸಿ, ಕೀರ್ತಿ ಪಡೆಯುವರೆಂದು ನಂಬಿದ್ದೇವೆ. ಈ ಎಲೆಕ್ಷನ್ ವಿಷಯವಾಗಿ ೨ ನೆ ಕಾಂಡಿಡೇಟ್ ಮಿ॥ ಸುಬ್ರಮಣ್ಯಯ್ಯರವರು ಎಲೆಕ್ಷನ್ ರದ್ದುಪಡಿಸಿ ಮದಕೂರ್ ಪದವಿ ತನಗೆ ಕೊಡಬೇಕೆಂದು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಅಪೀಲ್ ಮಾಡಿದ್ದರಿಂದ ಅವರಿಗೆ ವಿರೋಧವಾಗಿ ಅಪೀಲ್ ವಜಾಮಾಡಲ್ಪಟ್ಟಿತೆಂದು ತಿಳಿದುಬಂದು ಇದೆ. ಇತ್ತಲಾಗಿ ನಮ್ಮ ಮದರಾಸ್ ಗವರ್ನರ್ ಪ್ರಭುಗಳಿಂದ ಮಹಮ್ಮದ್ ಎಲೆಕ್ಷನ್ ಮಂಜೂರ್ ಮಾಡಲ್ಪಟ್ಟು ಮಹಮ್ಮದ್ ಖಲಂದರ್ ಸಾಹೇಬ್ ಬ

...ಪ್ಪುರವರನ್ನು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್‌ಗಿ ನೇಮಿಸಲ್ಪಟ್ಟಿದೆ ಎಂದು ಫೋರ್ಟ್ ಸೆಂಟ್ ಜಾರ್ಜ್ ಗೆಜೆಟ್ಟಿನಲ್ಲಿ ಈ ವಾರ ಇಸ್ತಾರ್‌ನಾಮೆ ಪ್ರಚುರಪಡಿಸಲ್ಪಟ್ಟಿದೆ —ವರ್ಗವಾದ ಈಶ್ವರ(ಲ್)ಡು ರಿಗೆ ಬದಲಾಗಿ ಮೆ॥ ಆರ್. ಸುಬ್ರಹ್ಮಣ್ಯಯ್ಯರವರು ಬಂದು ಇರೆ ಇವರು ದೊಡ್ಡಮನುಷ್ಯರು ಮತ್ತು ಗುಣಶಾಲಿಗಳು. ಕಳೆ ವಾರದ ಗೆಜೆಟ್ಟಿನಲ್ಲಿ ಇವರನ್ನು ತಾಲ್ಲೂಕ್ ಬೋರ್ಡ್ ವೈಸ್ ಪ್ರಸಿಡೆಂಟರ ಪದವಿಗೆ ನೇಮಕವಾಗಿದೆ ಎಂದು ಪ್ರಚುರಪಡಿಸಲ್ಪಟ್ಟಿದೆ. ನಮ್ಮ ಡಿಪ್ಟಿ ಕಲೆಕ್ಟರ್ ತಿರುಚನಾಪಳ್ಳಿಗೆ ವರ್ಗವಾಗಿ ಅವರಿಗೆ ಬದಲಾಗಿ ಮೆ॥ ಕೃಷ್ಣರಾವ್ ಪಂತಲು ಎಂಬುವವರನ್ನು ತಿರುಚನಾಪಳ್ಳಿಯಿಂದ ವರ್ಗಮಾಡಿದಾರೆ. ಇವರು ಮೈಸೂರು ಶೀಮೆಯಲ್ಲಿ ಉನ್ನತ ಉದ್ಯೋಗದಲ್ಲಿದ್ದ ಮೆ॥ ಚಂಚಲರಾವ್ ಪಂತಲುರವರ ಮಗನೆಂದು ಹೇಳುತ್ತಿದಾರೆ. ಅವರು ಈ ವಾರ ಇಲ್ಲಿಗೆ ಬಂದು ಡಿಪ್ಟಿ ಲೆಕ್ಟರ್ ಮತ್ತು ಡಿಸ್ಟ್ರಿಕ್ಟ್ ಮುನಸೀಫ್ ಚಾರ್ಜ್ ವಹಿಸುವರಾಗಿದ್ದಾರೆ.

## ವಿದೇಶ ವರ್ತಮಾನಗಳು.

ಪ್ರಷ್ಯಾರಾಜ್ಯದಲ್ಲಿ ಯಾರಾದರೂ ಕೋಣವನ್ನು ಹೊಡೆದರೆ ದಂಡ ಮಾಡಿದರೆ ಅಂಥವರಿಗೆ ಸರ್ಕಾರದವರು ಶಿಕ್ಷೆ ವಿಧಿಸುತ್ತಾರೆಂದು ಸ್ತಿಹಾರು ಕೊಟ್ಟದಾರೆ.

◆◆◆◆

ಫ್ರಾನ್ಸ್ ರಾಜ್ಯದ ಪ್ರಸಿಡೆಂಟ್ ಲೋಬೇ ಯವರು ಬರುವ ಜುಲೈ ತಿಂಗಳಲ್ಲಿ ಲಂಡನ್ ಪಟ್ಟಣಕ್ಕೆ ದಯಮಾಡಿ, ೩ ದಿನ ಇದ್ದು ರುತ್ತಾರೆಂದು ಸಮಾಚಾರವಿದೆ.

◆◆◆◆

ಫಿನ್‌ಲಾಂಡಿನಲ್ಲಿರುವ ೩೦,೦೦೦ ಜನರು ಟ್ರಾನ್ಸ್‌ವಾಲಿಗೆ ಹೋಗಿ ಅಲ್ಲೇ ನಿಂತು ಬಿಡಬೇಕೆಂದು ತೀರ್ಮಾನಿಸಿ ಸರ್ಕಾರದವರ ಅನುಮತಿಯನ್ನು ಕೇಳಿದಾರೆ. ಇವರು ಅಲ್ಲಿಗೆ ಹೋದರೆ ಕೂಲಿ ದರಿಗೆ ಗೊತ್ತಿರಲಾರದೆಂದು ಹೇಳುವರು.

◆◆◆◆

ರಷ್ಯಾ ರಾಜ್ಯದ ಮುಖ್ಯಪಟ್ಟಣವಾದ ಸೆಂಟ್ ಪೀಟರ್ಸ್‌ಬರ್ಗ್ ನಗರವನ್ನು ಕಟ್ಟಿ ಈ ತಿಂಗಳಿಗೆ ೨೦೦ ವರ್ಷಗಳಾದವು. ಆದ್ದರಿಂದ ಈ ಎರಡನೇ ಶತಮಾನೋತ್ಸವವನ್ನು ಈ ತಿಂಗಳಲ್ಲಿ ಮೂರು ದಿನಗಳ ವರಿಗೆ ನಡಸತಕ್ಕದ್ದೆಂದು ಏರ್ಪಾಡಾಗಿದೆ.

◆◆◆◆

ಮೂಗು ಪ್ರಾಣಿಗಳ ಹಿಂಸೆಯನ್ನು ತಪ್ಪಿಸುವದಕ್ಕೆ ವಿಲಾಯಿತಿಯಲ್ಲಿ ಒಂದು ದೊಡ್ಡ ಸಂಘ ಸಮಾವೇಶವಾಗಿರುವದು. ಈ ಸಂಘದ ಕಾರ್ಯಕ್ಕಾಗಿ ಜಾರ್ಜ್ ಲಾಂಗ್ ಎಂಬಾತನು ತನ್ನ ಸ್ವತ್ತಿಯಲ್ಲಿ ... ರೂಪಾಯಿಗಳನ್ನು ವಿನಿಯೋಗಿಸಬೇಕೆಂದು ಉಯಿಲು ಬರೆದಿಟ್ಟದಾನೆ.

◆◆◆◆

ಜೇಮ್ಸ್‌ಟಾಲಿಯಲ್ಲಿ ತಯಾರಾಗಿ ಟ್ರಾನ್ಸ್‌ವಾಲಿಗೆ ರಫ್ತಾಗುವ ಪದಾರ್ಥಗಳಿಗೆ ಅಲ್ಲಿ ಸುಂಕ ವಸೂಲ್ಮಾಡುವದಿಲ್ಲವೆಂದು ಸರ್ಕಾರದವರು ಹುಕುಂ ಕೊಟ್ಟದಾರೆ. ಆದರೆ ದ್ರಾಕ್ಷರಸಗಳು ... ಗದ ಪದಾರ್ಥಗಳು, ಗೋಧಿಹಿಟ್ಟು ಮುಂತಾದವುಗಳಿಗೆ ಮಾತ್ರ ಸುಂಕ ವಿಧಿಸಿದಾರೆ.

◆◆◆◆

ತುರ್ಕಿ ಸುಲ್ತಾನರಿಗೆ ಸೇರಿದ ಆಲ್ಬೇನಿಯಾ ಪ್ರಜೆಗಳು ಸರ್ದಾರರನ್ನು ಕೈಸೆರೆ ಹಿಡಿದು ಇಟ್ಟದಾರೆ. ಅವರನ್ನು ಬಿಡಿಸಿ ಬರಬೇಕೆಂದು ಸುಲ್ತಾನರು ೭—೪ ಸಹಸ್ರ ಸೈನಿಕರನ್ನು ಕಳುಹಿಸಿರುವರು. ಪರರಾಜ್ಯಗಳ ರಾಯಭಾರಿಗಳು ಆ ಜನರನ್ನು ಸಮಾಧಾನಪಡಿಸುವಂತೆ ಸುಲ್ತಾನರಿಗೆ ಹೇಳುತ್ತಾ ಬಂದಿದಾರೆ.

◆◆◆◆

ಅಮೇರಿಕದ ಮಾಯಾಮ್ಯ ಪ್ರಾಂತ್ಯಕ್ಕೆ ಸೇರಿದ ಅಲ್ಬರ್ಟಾ ನಗರದಲ್ಲಿ ಅಗ್ನಿಪರ್ವತವು ಬೆಂಕಿಯನ್ನು ಕಾರಿ ಅನಾಹುತವಾಯಿತೆಂತಲೂ, ಅದರಲ್ಲಿ ೨೫ ಜನರು ಸಿಕ್ಕಿ ಸುಟ್ಟುಹೋದರೆಂತಲೂ, ಆಸ್ತಿಪಾಸ್ತಿಗಳು ವಿಪರೀತವಾಗಿ ನಾಶಹೊಂದಿದವೆಂತಲೂ ವರ್ತಮಾನ ಬಂದಿದೆ.

◆◆◆◆

ಅಮೇರಿಕಕ್ಕೆ ಸೇರಿದ ಮಸಾಚುಸೆಟ್ಸ್ ಡಿಸ್ಟ್ರಿಕ್ಟಿನಲ್ಲಿ ಲೊವೆಲ್ ಎಂಬ ನಗರದೊಳಗೆ ಬಹು ಭಾರೀ ಹತ್ತಿಯ ಕಾರ್ಖಾನೆಗಳಿರುವವು. ಇವುಗಳಲ್ಲಿ ಕೂಲಿ ಮಾಡುವ ಸುಮಾರು ೧೭,೦೦೦ ಜನರುಗಳಿಗೆ ಕೂಲಿ ಜಾಸ್ತಿ ಕೊಡಬೇಕೆಂತಲೂ, ಕೊಡದಿದ್ದರೆ ಕೆಲಸ ಬರುವದಿಲ್ಲವೆಂತಲೂ ಹೇಳಿ ನಿಂತುಬಿಟ್ಟರು. ಕಾರ್ಖಾನೆಗಳ ಬಾಗಿಲುಗಳು ಮುಚ್ಚಿಹೋದವು.

◆◆◆◆

ರಷ್ಯಾರಾಜ್ಯದವರು ಚೀನಾಕ್ಕೆ ಸೇರಿದ ಮಂಚೂರಿಯಾ ದೇಶವನ್ನು ಆಕ್ರಮಿಸಿಕೊಂಡಿದ್ದರಷ್ಟೆ. ಈಗ ಆ ದೇಶವನ್ನು ತಿರುಗಿ ಬಿಟ್ಟುಕೊಡಬೇಕೆಂತಲೂ, ಅಲ್ಲಿಗೆ ವ್ಯಾಪಾರಕ್ಕಾಗಿ ಇನ್ಯಾವ ಯೂರೋಪ್ ರಾಜ್ಯಗಳವರನ್ನೂ ಬಿಡಕೂಡದೆಂತಲೂ ಚೀನಾ ಅಧಿಕಾರಿಗಳಿಗೆ ತಿಳಿಸಿದಾರೆ. ಈ ವಿಷಯಕ್ಕೆ ಚೀನಾಯವರು ಇನ್ನೂ ರುಜು ಹಾಕಲಿಲ್ಲ. ಪರರಾಜ್ಯಗಳವರು ಈ ಸಂಗತಿಯನ್ನು ಕೇಳಿ, ಅದಕ್ಕೆ ತಕ್ಕ ಪ್ರತೀಕಾರವನ್ನು ಯೋಚಿಸುತ್ತಿರುವರು.

◆◆◆◆

ಫ್ರಾನ್ಸ್ ದೇಶದಲ್ಲಿ ಲೂಯಿ ಪಾರಿಯಟ್ ಎಂಬಾತನು ಒಂದು ತರಹ ದ್ರಾವಕವನ್ನು ಕಂಡುಹಿಡಿದು ತಯಾರುಮಾಡಿರುವನು. ಈ ದ್ರಾವಕದಲ್ಲಿ ಮೊಟ್ಟೆಗಳನ್ನು ೧೨ ವರುಷಗಳ ತನಕ ಹಾಕಿಟ್ಟದ್ದಾಗ್ಯೂ ಅವು ಕೆಟ್ಟುಹೋಗುವದಿಲ್ಲವೆಂತಲೂ ೧,೦೦೦ ಮೊಟ್ಟೆಗಳನ್ನು ಅರ್ಧ ರೂಪಾಯಿ ಮಾತ್ರ ಖರ್ಚುಮಾಡಿದರೆ ತಯಾರಾಗುವ ಆ ದ್ರಾವಕದಲ್ಲಿ ಹಾಕಿ ಇಟ್ಟಿರಬಹುದೆಂತಲೂ, ಅದರಲ್ಲಿ ಇಟ್ಟದ್ದ ಮೊಟ್ಟೆಯಿಂದ ಒಂದು ವರುಷದ ಮೇಲೆ ಮರಿಮಾಡಿರುತ್ತೇನೆಂತಲೂ ಆತನು ತಿಳಿಸುತ್ತಾನೆ.

◆◆◆◆

ದಕ್ಷಿಣ ಅಮೇರಿಕಕ್ಕೆ ಸೇರಿದ ಇಕ್ವಿಕ್ ಎಂಬ ನಗರದಿಂದ ಉತ್ತರಕ್ಕೆ ೩೪ ಮೈಲಿ ದೂರದಲ್ಲಿರುವ ಪೈಸಾಗುವಾ ಎಂಬ ಪಟ್ಟಣಕ್ಕೆ ಬೆಂಕಿಬಿದ್ದು ಸಂಪೂರ್ಣವಾಗಿ ಸುಟ್ಟುಹೋಯಿತು. ನೂರಾರು ಪ್ರಜೆಗಳು ಲಯವಾದರು. ಪಟ್ಟಣದಲ್ಲಿ ಒಂದು ಕಟ್ಟಡವಾದರೂ ಉಳಿಯಲಿಲ್ಲ. ಇದಕ್ಕೆ ಮೊದಲು ೧೮೬೮ ರಲ್ಲಿ ಸಮುದ್ರದ ನೀರು ಎದ್ದು ಈ ಪಟ್ಟಣದಮೇಲೆ ಹೊರಳಿ ನಾಶಹೊಂದಿತು. ಪ್ರಜೆಗಳು ಪುನಹ ಪಟ್ಟಣವನ್ನು ಕಟ್ಟಿಕೊಂಡಿದ್ದರು. ಅಲ್ಲಿಂದೀಚೆಗೆ ಚಿಲ್ಲಿಯವರೂ ಪೆರೂಯವರೂ ಯುದ್ಧಮಾಡಿದಾಗ ಚಿಲ್ಲಿಯವರು ಈ ಪಟ್ಟಣಕ್ಕೆ ಬೆಂಕಿ ಹಾಕಿ ಉರಿಸಿಬಿಟ್ಟರು. ಈಗ ಮೂರನೇ ಸಲ ಆ ಪಟ್ಟಣವು ನಾಶಹೊಂದಿದೆ ಎಂಬದಾಗಿ ವರ್ತಮಾನ ಕೇಳುತ್ತೇವೆ.

◆◆◆◆

ಕೆನಡಾ ರಾಜ್ಯದ ಒಬ್ಬ ದೊಡ್ಡ ಮನುಷ್ಯನು ಇಲಿ ಹೆಗ್ಗಣಗಳ ಕಾಟವನ್ನು ತಪ್ಪಿಸುವದಕ್ಕಾಗಿ ಒಂದು ವಿಧವಾದ ಆಹಾರವನ್ನು ಕಂಡು ಹಿಡಿದಿರುತ್ತಾನೆ. ಇದನ್ನು ಇಟ್ಟರೆ ಇಲಿ ಹೆಗ್ಗಣಗಳು ವಿನಹಾ ಇನ್ಯಾವ ಪ್ರಾಣಿಗಳೂ ಅದನ್ನು ಮುಟ್ಟುವದಿಲ್ಲವೆಂತಲೂ, ಅವೇ ಬಹು ಬೇಗನೆ ತಿಂದುಬಿಡುತ್ತವೆಂತಲೂ, ತಿಂದ ೧—೭ ಗಂಟೆಗಳೊಳಗಾಗಿ ಅಸ್ತಿ ಪಂಜರಗಳು ವಿನಾ ಇಲಿ ಹೆಗ್ಗಣಗಳ ಹೆಸರೇ ಇರುವದಿಲ್ಲವೆಂತಲೂ, ಇದರಿಂದ ಸತ್ತ ಇಲಿ ಹೆಗ್ಗಣಗಳ ವಾಸನೆಗೂ ಅವಕಾಶವಾಗುವದಿಲ್ಲವೆಂತಲೂ ತಿಳಿಸಿರುತ್ತಾನೆ. ಹಿಂದುಸ್ಥಾನದ ಪ್ಲೇಗ್ ಇಲಾಖೆಯವರು ಈ ಔಷಧವನ್ನು ತರಿಸುವವರಾಗಿದಾರೆಂದು ಕೇಳುತ್ತೇವೆ. ಲಂಡನ್ ಪಟ್ಟಣದಲ್ಲಿ ಈ ಔಷಧದಿಂದ ಸಾವಿರಾರು ಇಲಿ ಹೆಗ್ಗಣಗಳನ್ನು ಕೊಂದುಹಾಕಿದಾರೆಂದು ವರ್ತಮಾನ ಬಂದಿದೆ.

## ಪ್ರಕಟನೆಗಳು.

### ಇಸ್ತಿಹಾರ್‌ನಾಮೆ.

೧೯೦೩ನೇ ಇಸವಿ ಏಪ್ರಿಲ್ ತಾರೀಖು ೧ರ ಲಾಗಾಯಿತು ೧೯೦೪ನೇ ಮಾರ್ಚಿ ೩೧ರ ವರೆಗೆ ಒಂದು ವರುಷ—೧೯೦೩ನೇ ಇಸವಿ ಏಪ್ರಿಲ್ ತಾರೀಖು ೧ರ ಲಾಗಾಯಿತು ೧೯೦೬ನೇ ಮಾರ್ಚಿ ೩೧ರ ವರೆಗೆ ಮೂರು ವರುಷ ಅಥವಾ ೧೯೦೩ನೇ ಇಸವಿ ಏಪ್ರಿಲ್ ತಾರೀಖು ೧ರ ಲಾಗಾಯಿತು ೧೯೦೮ನೇ ಮಾರ್ಚಿ ತಾರೀಖು ೩೧ರ ವರೆಗೆ ಐದು ವರುಷಗಳ ಪರಿಯಂತ್ರ ಕೋಲಾರ ಶೀಮೆಯಲ್ಲಿ ಕಂಟ್ರಿ ಪಡಾಪ್ (Country Vend) ತೈಯಾರಿ ಅಥವಾ ಆಮದು ಮತ್ತು ಒಟ್ಟು ಬಿಕ್ರಿ ಈ ವಿಷಯಗಳ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಹೊಂದಿಕೊಳ್ಳುವ ಬಗ್ಗೆ ದರಖಾಸ್ತುಗಳು ಅಪೇಕ್ಷಿಸಲ್ಪಡುತವೆ. ತಪಶೀಲ್ ಷರತ್ತುಗಳನ್ನು ಮುಡಿಕೇರಿಯಲ್ಲಿ ಇರುವ ಕೊಡಗು ಕಮಿಷನರ್ ಸಾಹೇಬರವರಿಗೆ ದರಖಾಸ್ತು ಮಾಡಿಕೊಂಡಲ್ಲಿ ತಿಳಿಯಬಹುದು.

| | |
|---|---|
| ಕೊಡಗು ಚೀಫ್ ಕಮಿಷನರ್ ಸಾಹೇಬರವರ ಆಫೀಸ್, ದಂಡಾಗ—ಬೆಂಗಳೂರು, ೧೨ನೇ ಜನವರಿ, ೧೯೦೩. | E. Shaw, For Secretary to the Chief Commissioner. |

## ಪ್ರಕಟನಪತ್ರಿಕೆ.

ಘನವಸ್ತೆಯಾದ ಮೈಸೂರು ಮಹಾರಾಜಾ ಸರ್ಕಾರದವರ ೨೪—೧೧—೧೯೦೨ನೇ ಮರ್‍ನಂ $\frac{೧೦೬೯}{೯೩೩—೧೧}$ ನೇ ನಂಬರ್ ಆರ್ಡರ್ ಪ್ರಕಾರ ಸಂಪ್ರದಾಯಪರ್ಯವಾಗಿ ಪ್ರಾಪ್ತವಾದ ಶ್ರೀಗುರು ದತ್ತಾತ್ರೇಯ ಪೀಠದ ಸಜ್ಜಾದೇವಸ್ಥಾನದಲ್ಲಿ ನಿಯಮಿತವಾಗಿರುವ ಸಯ್ಯದ್ ಮುರ್ತುಜಾ ಶಾಖಾದ್ರಿಗಳವರು, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ —ನಮ್ಮ ಪೂರ್ವದ ಸಜ್ಜಾದೆಯವರಾಗಿದ್ದ ಸಯ್ಯದ್ ಗೌಸ್ ಶಾಖಾದ್ರಿಗಳವರಿಂದ ಅವರ ಕಾರ್ಬಾರವನ್ನು ವಹಿಸಿ, ನಡೆಸುವಂತೆ ಅಧಿಕಾರವನ್ನು ಹೊಂದಿದ್ದ ಜಾವಿದ್ ಸೇಠ್ ಸಾಹೇಬರ ಮೊಹಿದ್ದೀನ್‌ನ ಮೇಯು, ಆ ಗುರುಗಳವರು, ದೈವಾಧೀನರಾದ ಕೂಡಲೇ ಕಂ ಚಿಕ್ಕ ೨೦೧ ನೇ ನಂ. ಪ್ರಕಾರ, ನಮ್ಮ ಸರ್ಕಾರದವರಿಂದ ವಜಾ ಮಾಡಲ್ಪಟ್ಟಿದೆ. ಆದಕಾರಣ ಇವರಿಗೆ ನಮ್ಮ ಮಠಕ್ಕೆ ಸಂಬಂಧಪಟ್ಟ ಯಾವ ಅಧಿಕಾರವೂ ಇರುವುದಿಲ್ಲ. ಮತ್ತು ಇವರು, ನಮ್ಮ ಇಷ್ಟವಿನಹಾ ಇದುವರಿವಿಗೆ ಯಾವ ಕೆಲಸ ಮಾಡಿದ್ದರೂ, ಅಥವಾ ಮುಂದೆ ಮಾಡಿದರೂ, ಅದು ಅಂಗೀಕರಿಸಲ್ಪಡಲಾರದು.

| | |
|---|---|
| ತಾ. ೭—೪—೧೯೦೩, ಬಾಬಾಬುಡನ್‌ಗಿರಿ. | (ಹಿಂದುಸ್ಥಾನಿ ರುಜು) ಸಯ್ಯದ್ ಮುರ್ತುಜಾ ಶಾಖಾದ್ರಿ |

## ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

### ಇಸ್ತಿಹಾರುನಾಮೆ

ತಾರೀಖು ೩ನೇ ಮಾರ್ಚಿ ೧೯೦೩ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ — ಸಿಟಿ ಮುನಿಸಿಪಾಲಿಟಿಗೆ ಸೇರತಕ್ಕ ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದಾಗುವ ದರೋಬಸ್ತು ಬಾಬುಗಳೂ, ಸನ್ ೧೯೦೩—೧೯೦೪ನೇ ಸಾಲಿಗೆ ಆಯಾಯ ಸ್ಥಳಗಳಲ್ಲಿ ಆಯಾಯ ಬಾಬುಗಳಿಗೆ ಎದುರಾಗಿ ನಮೂದಿಸಿರುವ ತಾರೀಖುಗಳಲ್ಲಿ ಹರಾಜುಮಾಡಿಸಲ್ಪಡುವವು. ಇಷ್ಟವುಳ್ಳವರು ಆ ಕಾಲಕ್ಕೆ ಸರಿಯಾಗಿ ಹಾಜರಾಗಿ ಕೂಗಿ ಕೊಳ್ಳುವ ಹೋಟೆಯಿಂದ ಪಡೆಯಬಹುದು.

ಹರಾಜು ಖೈದಾದ ಕೂಡಲೆ ಖರೀದಿದಾರನು ಇಸ್ತಿಹಾರು ಷರತ್ತಿನಂತೆ ಪೂರಾ ಮೊಬಲಗು ಅಥವಾ ಡಿಪಾಜಿಟ್ ಮೊಬಲಗನ್ನು ಹಾಜರ್ಮಾಡಿ, ಬಾಬು ಸುಪರ್ದಿಗೆ ತೆಗೆದುಕೊಳ್ಳಬೇಕು. ತಪ್ಪಿದರೆ ಸದರಿ ಬಾಬನ್ನು ದುಸರಾ ಹರಾಜು ಮಾಡಿಸಿ, ಹರಾಜಿನ ನಷ್ಟಕ್ಕೆ ಮೊದಲಿನ ದರಖಾಸ್ತುದಾರನನ್ನು ಗುರಿಪಡಿಸುತ್ತೆ. ಜಾಸ್ತಿಯಾಗಿ ಬಂದಲ್ಲಿ, ಮೊದಲಿನ ದರಖಾಸ್ತುದಾರನಿಗೇನೂ ಹಕ್ಕು ಇರುವದಿಲ್ಲ. ತಿಳಿಯುವದು.

| ತಾ. | ಸಾರಕಾಲ | ಹರಾಜು ಮಾಡಿಸಲ್ಪಡತಕ್ಕ ಬಾಬುಗಳು. |
|---|---|---|
| ೨೦—೫—೧೯೦೩ | ಬೆಳಿಗ್ಗೆ ೮ A. M. | ದೇವರಾಜ ಮಾರ್ಕೆಟ್ ಡೆಯಿಲಿ ಫೀಜು ಕಂಟ್ರಾಕ್ಟು. |
| | | ಖಸಾಬಿನ ಅಂಗಡಿಗಳಿಂದ ಬಾಡಿಗೆ ವಸೂಲ್ಮಾಡಿಕೊಳ್ಳುವ ಹಕ್ಕು |
| | | ಮಂಡಿ ಮಾರ್ಕೆಟ್ ಡೆಯಿಲಿ ಫೀಜಿನ ಕಂಟ್ರಾಕ್ಟು |
| | | ಮಂಡಿ ಮೊಹಲ್ಲಾ ಸ್ಲಾಟರ್ ಹೌಸ್ ಕಂಟ್ರಾಕ್ಟು |
| | | ಮಂಡಿ ಮಾರ್ಕೆಟ್ ಖಸಾಬಿನ ಅಂಗಡಿಗಳಿಂದ ಬಾಡಿಗೆ ವಸೂಲ್ಮಾಡಿಕೊಳ್ಳುವ ಹಕ್ಕು |
| | | ವೀರನಗೆರೆ ಬುಲಕ್ ಸ್ಲಾಟರ್ ಹೌಸ್ ಕಂಟ್ರಾಕ್ಟು |
| | | ವೀರನಗೆರೆ ಗಾಯಿಖಸಾಬ್ ಮಾರ್ಕೆಟ್ ಅಂಗಡಿಗಳಿಂದ ಬಾಡಿಗೆ ವಸೂಲ್ಮಾಡಿಕೊಳ್ಳುವ ಹಕ್ಕು |
| | | ಜೇವಣರಾಯನ ಕಟ್ಟೆ ಕೆಳಗಿನ ಸಂತೆ ಕಂಟ್ರಾಕ್ಟು |
| | | ,, ಬಂಡಿ ಮೋಟಿನಲ್ಲಿ ಬಂದು ನಿಲ್ಲುವ ಗಾಡಿಗಳಿಂದ ಫೀಜು ವಸೂಲಿ |
| | | ,, ಹುಲ್ಲು ಅಂಗಡಿ ಜಾಗದ ಬಾಬು |
| | | ,, ಗೊಬ್ಬರ ಸಾಗಿಸಿಕೊಂಡು ಹೋಗುವ ಬಾಬು |
| ೨೧—೫—೧೯೦೩ | ಬೆಳಿಗ್ಗೆ ೮ A. M. | ದೇವರಾಜಮೊಹಲ್ಲಾ ಶ್ರೀ॥ ನಾರಾಯಣರಾಯರ ಮನೆಯ ಹಿಂದೆ ಇರುವ ೧ ತೆಂಗಿನ ಮರದ ಫಸಲು |
| | | ಡಿಟೋ ಅಷರಫ್ ಮಿಯಾ ಸಾಹೇಬರ ಗಲ್ಲಿಯಲ್ಲಿರುವ ೨ ತೆಂಗಿನ ಮರದ ಫಸಲು |
| | | ಫೀಪಲ್ಸ್ ಪಾರ್ಕಿನಲ್ಲಿ ಬೆಳೆಯುವ ಹುಲ್ಲನ್ನು ಕುದುರೆ ಗೋಲಿನಿಂದ ಕೊಯಿದುಕೊಂಡು ಹೋಗುವದು |
| | | ಡಿಟೋ ೧೪ ಹುಣಸೇ ಮರಗಳಲ್ಲಿ ಬಿಡತಕ್ಕ ಫಸಲು |
| | | ಡಿಟೋ ತೆಂಗು ಮತ್ತು ಹುಣಸೇ ಫಸಲು |
| | | ದೊಡ್ಡಕೆರೆ ಒಳಗೆರೆಯ ಕರ್ನಾಟಕ ಗೆದ್ದ ಕಾವಲಿನಲ್ಲಿ ಬೆಳೆಯುವ ಹುಲ್ಲನ್ನು ಕೊಯಿದುಕೊಂಡು ಹೋಗುವದು. |
| ೨೨—೫—೧೯೦೩ | ಬೆಳಿಗ್ಗೆ ೮ A. M. | ಕಿಲ್ಲೆ ಮೊಹಲ್ಲಾ ಸೂಯೇಜು ಫಾರಂನಲ್ಲಿರುವ ತೆಂಗು ಮತ್ತು ಹುಣಸೇ ಫಸಲು |
| | | ದೊಡ್ಡಕೆರೆ ಏರಿ ಕೆಳಗಿನ ಬಂಡಿ ಮೋಟಿನಲ್ಲಿ ರೋಜೇನಾ ಬೀಳುವ ಗೊಬ್ಬರ |
| | | ಬಂಡಿಮೋಟಿನಲ್ಲಿರುವ ತೆಂಗು ಮತ್ತು ಹುಣಸೇ ಫಸಲು |
| | | ಅಗ್ರಹಾರದ ಮಿಷನ್ ಗರಲ್ಸ್ ಸ್ಕೂಲು ಪಕ್ಕದಲ್ಲಿರುವ ೩ ತೆಂಗಿನ ಮರಗಳ ಫಸಲು |
| | | ಸೊಪ್ಪಿನ ಕೊಳದ ಅಶ್ವತ್ಥಕಟ್ಟೆಯಲ್ಲಿರುವ ೩ ತೆಂಗಿನ ಮರದ ಫಸಲು |
| ೨೩—೫—೧೯೦೩ | ಬೆಳಿಗ್ಗೆ ೮ A. M. | ಕಿಲ್ಲೆ ಮೊಹಲ್ಲಾ ಮುನಿಯಾ ಪಟ್ಟ ಗರಡಿ ಬೀದಿ ಆಸ್ಪತ್ರೆ ರಿನಲ್ಲಿರುವ ಮ್ಯುನಿಸಿಪಲ್ ತೋಟದ ಸಾಗುವಳಿ ಬಾಬು |
| | | ಹೊಸರುದ್ರ ಭೂಮಿಯಲ್ಲಿ ಬೆಳೆಯತಕ್ಕ ಹುಲ್ಲು ಮತ್ತು ಆಮದಾಯಿ |
| | | ಬಾರ್ ಲೈನಲ್ಲಿ ರೋಜೇನಾ ಬೀಳತಕ್ಕ ಗೊಬ್ಬರ |
| | | ರಾಜಾಬಾರ್ ಬೀದಿಯಲ್ಲಿರುವ ೧ ತೆಂಗಿನ ಮರದ ಫಸಲು |
| | | ಮುತ್ತ್ಯಾಯನ ಕಟ್ಟೆಯಲ್ಲಿರುವ ೧ ಹುಣಸೇ ಮರ ಮತ್ತು ೧ ತೆಂಗಿನ ಮರದ ಫಸಲು |
| | | ಇಟ್ಟಿಗೆ ಗೂಡು ತೋಪಿನಲಿ ರೋಜೇನ ಬೀಳತಕ್ಕ ಗೊಬ್ಬರ |
| ೨೪—೫—೧೯೦೩ | ಬೆಳಿಗ್ಗೆ ೮ A. M. | ವೀವರ್ಸ್ ಲೈನ್ ಮುಂಭಾಗದ ಮೈದಾನದಲ್ಲಿರುವ ೧೨ ತೆಂಗಿನ ಮರಗಳಲ್ಲಿ ಬಿಡತಕ್ಕ ಫಸಲು |
| | | ಡಿಟೋ ಮೈದಾನದಲ್ಲಿ ಬೆಳೆಯತಕ್ಕ ಹುಲ್ಲಿಗೆ ದನ ಬಿಟ್ಟು ಮೇಯಿಸಿಕೊಳ್ಳುವ ಬಾಬು |
| | | ವೀರನಗೆರೆ ಉಕ್ಕಡದ ಬಳಿ ರೋಜೇನಾ ಬೀಳತಕ್ಕ ಗೊಬ್ಬರ |
| ೨೫—೫—೧೯೦೩ | ಬೆಳಿಗ್ಗೆ ೮ A. M. | ಮಂಡಿ ಮೊಹಲ್ಲಾ ಜೋಡುತೆಂಗಿನ ಮರದ ತೋಟದಲ್ಲಿ ಬೆಳೆಯತಕ್ಕ ಹುಲ್ಲಿಗೆ ದನ ಬಿಟ್ಟು ಮೇಯಿಸುವದು |
| | | ಲಷ್ಕರ್ ಮೊಹಲ್ಲಾ ವೀರನಗೆರೆ ಬುಲಕ್ ಸ್ಲಾಟರ್ ಹೌಸ್ ಬಳಿ ಇರುವ ಗೊಬ್ಬರದ ಗುಂಡಿಯಿಂದ ರೋಜೇನಾ ಗೊಬ್ಬರ ಸಾಗಿಸಿಕೊಂಡು ಹೋಗುವ ಬಾಬು |

K. Shreenivasa Rao,
*For President.*

## ಶ್ರೀ ಕೃಷ್ಣವಿಲಾಸ ಪ್ರೆಸ್.

27

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡು, ನೋಟೀಸ್ ಫಾರಂ, ಟ್ಯಾಬಲ್ಸ್, ಬಿಲ್ಸ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಛಾರ್ಜುಗಳಿಗೆ ಮಾಡಲ್ಪಡುತ್ತವೆ.

ರೋಜು, ವರ್ಗ, ಮುಂತಾದ ಬಾಕೀ ಪುಸ್ತಕಗಳು; ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು; ಇನ್ನೂ ಇತರವಾದ ಸಮೂನೆಯ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿನಂತೆ ಬಹು ಅಂದವಾಗಿ ತಯಾರ್ಮಾಡಲ್ಪಡುತ್ತವೆ.

ಲಾಯರುಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್, ವಕಾಲತ್‌ನಾಮಾ, ಜಾಮೀ, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಬಿಕರಿಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯಿತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ಅತ್ಯಂತರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಇಷ್ಟಪಡುವವರು ಟಪ್ಪಾಲು ಖರ್ಚನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯುತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಅಗ್ರಹಾರ ಮೊಹಲ್ಲಾ ದೊಡ್ಡ ಪೇಟೆ ೩೯ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೆ.

ವಿಳಾಸ—ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

---

ಜ್ವ ರ ಹ ರಿ. :0

ಇದು ಸಾಧಾರಣ ಜ್ವರ, ಚಳಿಜ್ವರ, ಮೊರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು. ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಆಫೀಸರ ಕಛೇರಿಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರರು—ನಿಮ್ಮ ಕೆಳಗೆ ದಿನಗಳ ಹಿಂದೆ ಕಳುಹಿಸಿಕೊಟ್ಟ ೫೦ ಬೇಸಿನ ಸೀಸೆಯು ತಿಂಗಳಿಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಬೇಗನೆ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೫೦ ಬೇಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ಡಜ. ೧—೮ ರೂ., ೩ ಡಜ. ೧೧ ರೂ.; ಇನ್ನೂ ರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಓ ಮ ೦ ಕ ರ್ಪೂ ರ.

[ಆರ್. ಕೆ. ಲೇಬಲ್]

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ಸಂಗ್ರಹಣಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೋಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಬೆಂಗಳೂರು ತಿಂಗಳಿಗೆ ಒಂದಾವರ್ತಿ ಬರುವರಿಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಧರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕನಕದ ಅಸಿಸ್ಟೆಂಟ್ ಸರ್ಜನ್ ಗೋಪಾಲಯ್ಯನವರು—ಜ್ವರ ಓಮಂ ಕರ್ಪೂರವನ್ನು ನಾನಾ ನನ್ನ ಕಾಹೀಧಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ. ಹೊಟ್ಟೆಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ವ್ಯಾಪಾರಿಗಳಲ್ಲಿ, ಔಷಧ ವ್ಯಾಪಾರಿಗಳಲ್ಲಿ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಕ್ರಯ:—

೧. ಜೆನ್ಮಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

## THE FOREIGN MISSIONS AND GENERAL AGENCY.

9

ಮೇಲೆ ಕಂಡ ಏಜನ್ಸಿಯವರು ಮೇಲೆಯೂ ವರ್ತಕರಿಗೂ ಇತರರಿಗೂ ಇಂಗ್ಲೆಂಡಿನಲ್ಲಿ ಆಯಾಯಾಗುವ ಯಾವ ಸಾಮಾನನ್ನು ಬೇಕಾದರೂ ಸುಲಭವಾದ ಕಮಿಷನ್ ತಕ್ಕೊಂಡು ಕಳುಹಿಸುವರು. ಅತ್ಯಲ್ಪ ತಲಪಿದ ಕೂಡಲೆ ಪದಾರ್ಥಗಳು ಬಹು ಜಾಗ್ರತೆಯಾಗಿ ರವಾನೆ ಮಾಡಲ್ಪಡುವವು. ಈ ವಿಷಯದಲ್ಲಿ ತಿಳಿದುಕೊಳ್ಳಬೇಕಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬೇಕೆಂದು ಕೋರುತ್ತೇವೆ.

A. J. Burns,
*Manager,*
*29-35, City Road, London.*

---

ಯನ್. ಆರ್. ವೆಂಕಟಸುಬ್ಬಾಚಾರ್ಯರ ಲೋವರ್ ಸೆಕಂಡರಿ ಕನ್ನಡ ಟೆಕ್‌ಸ್ಟ್ ನೋಟ್ಸು.

೧೯೦೩ ನೆಯ ವರ್ಷದಲ್ಲಿ ಸ್ಕೂಲ್ ಪ್ರಶ್ನೆಗಳನ್ನು ಪರೀಕ್ಷೆಯಲ್ಲಿ ತೇರ್ಗಡೆಯಾಗುವದಕ್ಕೆ ಅತ್ಯಂತ ಸಹಾಯವಾಗುವಂತೆ ರಚಿಸಿದ ಕ್ರಯ ೬ ಆಣೆ.

| | |
|---|---|
| ... ಸಂಸ್ಕೃತದ ಭಾಷಾವಿವರಣೆ | ೦—೦—೦ |
| ... ಮದರಾಸು ಮೊದಲಾದ್ದರ ಭಾಷಾವಿವರಣೆ | ೦—೧—೬ |
| ೬ನೆಯ ತರಗತಿಯ ಪದ್ಯಸಂಗ್ರಹದ ನೋಟ್ಸು | ೦—೦—೬ |
| ೭ನೆಯ ತರಗತಿಯ ಪದ್ಯಸಂಗ್ರಹದ ನೋಟ್ಸು | ೦—೦—೬ |
| ಪತ್ರರತ್ನಾಕರ (ಪತ್ರಗಳು, ಪ್ಲಾಂಚಿನ ವಿವರದಲ್ಲಿ) | ೦—೧—೦ |
| ದೇವ್ಯತತ್ವಪ್ರಕಾಶಿಕೆ (ಅರ್ಜಿಗಳ ರೀತಿಬರೆಯುವದು) | ೦—೮—೦ |

ಇವಕ್ಕೆಲ್ಲಾ ಡಿಸ್ಕೌಂಟು:—೧೦ ಕ್ಕೆ ೧, ೫೦ಕ್ಕೆ ೫, ೧೦೦ಕ್ಕೆ ೨೦

ವಿಳಾಸ.—೧. ಯನ್. ಆರ್. ವೆಂಕಟಸುಬ್ಬಾಚಾರ್ಯ, ಸುಬೋಧ ಗ್ರಂಥಾಲಯ, ಮೈಸೂರು,

೨. ಗ್ರಾಮಡಿಯೆಲ್ಸ್ ಬಿಲ್ಡಿಂಗ್, ಮೈಸೂರು.

೩. ವಿಜ್ಞರ ಬುಕ್ ಡಿಪೋ, ಮೈಸೂರು.

೪. ಕೆ ನರಸಿಂಹಯ್ಯ ಅಂಡ್ ಕೋ, ಮೈಸೂರು.

೫. ಸಂತೇಪೇಟೆ, ಡೋರ್ ನಂ ೧೯೯ ಕೆ. ಸುಬ್ಬರಾವ್, ಮೈಸೂರು.

೬. ಜಿ. ಗಣಪ್ಪ ಅಂಡ್ ಕೋ, ಬೆಂಗಳೂರು.

---

ಹೊಸೋಮೋ ಸಿಯಾ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಫ್ಯಾಕ್ಟರೀಸ್ ರೈಲು, ವಿದ್ಯಾಶಾಲೆ, ಹೋಟೆಲು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಕಾಣುವದು ಇಲ್ಲವೆಂಬುವದು ಬೋಧಕ್ಕನ್ನವಾಗದೆ.

ಈ ತೈಲವು ತಕ್ಷಣದಲ್ಲಿ ಜನಾಂಗಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಕೊಂಡಾಡಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೆ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಮಣಕಾಲಿನ ವಾಯು, ಮೂಳೆವ್ಯಾಧಿ, ಉಳುಕು, ವಾಯುಗಳು, ನರ ಹೊರಳುವದು, ಉಬ್ಬಸ, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರೋಗಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಬಿಸಿಲು ರುವದು, ಬೆಂಕಿಯಲ್ಲಿ ಸುಟ್ಟ ಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ.—ಸಣ್ಣ ಪೆಟ್ಟಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೬ ಪೆಟ್ಟಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬದಲ್ಲಿ ೧ ರೂ. ಡಬ್ಬಾದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್, ಖರ್ಚು ಮಾಫಿ ಬಿಡುತ್ತೆ.

ಹೊಸೋಮೋಸಿಯಾ ಯೂಜಿಪ್ಷಿಕೇಷನ್.

ಈ ತೈಲವು ಚಳಿ ರೋಗಗಳಿಗೆ ಉಪಯೋಗಿಸತಕ್ಕದ್ದು. ಅರ್ಧ ಬಿರಿದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೊಸೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕೆ ಕೂಡ ಇದರಲ್ಲಿ ಇನ್ನೆರಡು ಗುಣಗಳಲ್ಲ ಹೊಸ ಭಾಗವಿರುತ್ತೆ. ಇದನ್ನು ಆನ್ಯರವು ಬಹು ಬೇಗನೆ ಸಹಿಸಿಕೊಳ್ಳಬಲ್ಲದು. ಪೆಟ್ಟಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೊಸೋಮೋಸಿಯಾ ಕಂಪೆನಿ, ೫. ಸೆಕೆಂಡು ಬೀಚ್ ಲೈನ್, ಮದರಾಸ್.

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೧೭—೪—೧೯೦೩ ರಿಂದ ೨೪—೪—೧೯೦೩ ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | | | 1 | 1 |
| ಮೈಸೂರು ,, | | | 1 | 1 |
| ಬೆಂಗಳೂರು ಡಿಸ್ಟ್ರಿಕ್ಟ್ | 18 | 14 | 91 | 20 |
| ಮೈಸೂರು ,, | 18 | 7 | 40 | 10 |
| ಕೋಲಾರ್ ,, | 7 | 4 | 6 | 5 |
| ಕೋಲಾರ್ ಚಿನ್ನದ ಗಣಿಗಳು | | 1 | 2 | 1 |
| ತುಮಕೂರು ಡಿಸ್ಟ್ರಿಕ್ಟ್ | | | 4 | 4 |
| ಹಾಸನ ,, | 6 | 4 | 5 | 3 |
| ಚಿತ್ರದುರ್ಗ ,, | 16 | 17 | 16 | 9 |
| ಕಡೂರ್ ,, | | | 1 | 1 |
| ಶಿವಮೊಗ್ಗ ,, | 2 | 3 | 10 | 6 |
| ಜುಮ್ಲಾ. | 67 | 54 | 110 | 60 |

ಶಾಲಿವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ವೈಶಾಖ ಶುದ್ಧ ಏಕಾದಶಿ ಗುರುವಾರದಿಂದ ವೈಶಾಖ ಬಹುಳ ಬಿದಿಗೆ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಮೇ.

| ತಾ. | ವಾರ. | ತಿಥಿ. | ಘಳಿಗೆ. | | ನಕ್ಷತ್ರ. | ಘಳಿಗೆ. | | ಮೋಹ ರಮ ತೇದಿ. |
|---|---|---|---|---|---|---|---|---|
| 7 | ಗುರು * | ಏಕಾದಶಿ | 35 | 15 | ಪುಬ್ಬ | 51 | 58 | 25 |
| 8 | ಶುಕ್ರ † | ದ್ವಾದಶಿ | 32 | 3 | ಉತ್ತರ | 53 | 11 | 26 |
| 9 | ಶನಿವಾ ‡ | ತ್ರಯೋದಶಿ | 29 | 50 | ಹಸ್ತ | 53 | 26 | 27 |
| 10 | ರವಿವಾರ | ಚತುರ್ದಶಿ | 28 | 16 | ಚಿತ್ತ | 55 | 1 | 28 |
| 11 | ಚಂದ್ರ ¶ | ಪೌರ್ಣಿಮಾ | 28 | 50 | ಸ್ವಾತಿ | 57 | 37 | 29 |
| 12 | ಕುಜ | ಪಾಡ್ಯಮಿ | 30 | 18 | ವಿಶಾಖ | 60 | 0 | 30 |
| 13 | ಬುಧ | ಬಿದಿಗೆ | 32 | 58 | ವಿಶಾಖ | 0 | 40 | 31 |

* ಸರ್ವತ್ರ ಏಕಾದಶಿ. † ಪ್ರದೋಷ. ‡ ಬ್ರಹ್ಮಗಿರಿ ರಂಗನಾಥಸ್ವಾಮಿ ರಥ. ¶ ವ್ಯಾಸಪೂರ್ಣಿಮಾ, ಶ್ರೀ ಲಕ್ಷ್ಮೀರಮಣಸ್ವಾಮಿ ರಥ.

---

ಪೇಟೆ ಧಾರಣೆ.

| ವಿನಸಿ. | ಮೈಸೂರು. | ಬೆಂಗಳೂರು. |
|---|---|---|
| ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ | ರೂ. ೧೧ ೪—೦ | ೧೦—೮—೮ |
| ಕೆಂಬೂತಿ ಅಕ್ಕಿ ಅವಲ್ | .. ೯ ೧೨ ೦ | ೧೦—೮—೮ |
| ,, ದಾಯಂ | .. ೯—೪—೦ | ೧೦—೮—೮ |
| ಬಾಪಾಸ್ ಅಕ್ಕಿ | .. ೯—೧೨—೦ | ೧೨—೪—೮ |
| ಸಣ್ಣಕ್ಕಿ ಅವಲ್ | .. ೧೨ ೦ ೦ | ೧೩—೦ ೦ |
| ,, ದಾಯಂ | .. ೧೦ ೮—೦ | ೧೧ ೮ ೮ |
| ಬೋಗಾರೇ ಬೇಳೆ ಪಲ್ಲಾ ೧ಕ್ಕೆ | .. ೧೨ ೦ ೦ | ೧೪ ೦—೮ |
| ,, ದಾಯಂ | .. ೧೧ ೧೨—೦ | ೧೩—೦—೮ |
| ಕೈರ್ ರಾಗಿ ಪಲ್ಲಾ ೧ಕ್ಕೆ | .. ೩ ೧೦—೦ | ೨—೯—೩ |
| ಕಾಡ್ರಾಗಿ | .. ೩—೪ ೦ | ೨—೩—೮ |
| ಜೋಳ | .. ೩—೮—೦ | ೪—೮—೦ |
| ಹಲಸಂದೆ ಪಲ್ಲಾ ೧ಕ್ಕೆ | .. ೭—೯—೦ | ೮—೪—೮ |
| ಬಿಳೀ ಅವರೆ | .. ೩ ೧೨ ೦ | ೬—೦—೮ |
| ಹೆಸರು | .. ೧೦ ೦—೦ | ೧೧—೦—೦ |
| ಉದ್ದು | .. ೮ ೪ ೦ | ೮—೮—೮ |
| ಕಡಲೆ | .. ೧೦ ೪—೦ | ೯—೮—೮ |
| ಎಳ್ಳು | .. ೧೫ ೧೨ ೦ | ೯—೧೨—೮ |
| ಹುರುಳಿ | .. ೩—೮—೦ | ೪—೦—೮ |
| ಹರಳು ೧೨. ಸೇರಿಗೆ | .. ೯—೪—೦ | ೫—೩—೮ |
| ಸೀಗೇಕಾಯಿ ಮಣ ೧ಕ್ಕೆ | .. ೦—೩—೦ | ೦—೦—೮ |
| ಮೆಣಸಿನಕಾಯಿ | .. ೨—೧೦—೦ | ೨—೦—೮ |
| ,, ದಾಯಂ | .. ೨—೬ ೦ | ೦—೮—೮ |
| ಬಿಲ್ಲು ದೊಡ್ಡ ಅಚ್ಚು | .. ೩—೧೨—೦ ಮ | ೦—೦—೮ |
| ಬೆಳ್ಳುಳ್ಳಿ ಮಣ ೧ಕ್ಕೆ | .. ೪—೨ ೦ | ೪—೮—೮ |
| ಹರಳೆಣ್ಣೆ ,, | .. ೩—೧೨—೦ | ೩—೦—೮ |
| ಕೊತ್ತುಂಬರಿ ಪಲ್ಲ ೧ಕ್ಕೆ | .. ೩—೧೬—೦ | ೩—೮—೮ |
| ಉಪ್ಪು ,, | .. ೮—೦—೦ | ೨—೧೦—೮ |
| ಹುಣಸೇ ಹಣ್ಣು | .. ೦ ೧೨—೦ | ೦—೧೪—೮ |
| ,, ಹಳೇದು | .. ೦—೧೦—೦ | ೦—೧೨—೮ |
| ತುಪ್ಪ | .. ೧೦ ೧೨—೦ | ೧೧—೦—೮ |
| ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ | .. ೪—೧೨—೦ | ೪—೪—೮ |
| ತೆಂಗಿನಕಾಯಿ ೧೦೦ ಕ್ಕೆ | .. ೪—೪ ೦ | ೩—೪—೮ |
| ಅಡಕೇಕಾಯಿ ಮಣ ೧ಕ್ಕೆ | .. ೦—೧೪ ೦ | ೦—೧೨—೮ |
| ಅಂಟುವಾಳದಕಾಯಿ ಮಣ ೧ಕ್ಕೆ | .. ೦—೧೪—೦ | ೦—೧೨—೮ |
| ಚಿನ್ನ (ಪೌನ್) ಕೆಂಪು | .. ೧೫—೪—೦ | ೧೫—೪—೮ |
| ,, ,, ಪಸಿಮೆ | .. ೧೫—೮—೦ | ೧೫—೩—೮ |
| ,, ,, ಗಟ್ಟಿ ತೊಲ ೧ಕ್ಕೆ | .. ೨೬—೦—೦ | ೨೪—೮—೮ |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ | .. ೭೨—೦—೦ | ೭೨—೮—೮ |

Printed and Publishedby the Rev. E. W. Thompson, M. the Proprietor and Manager, Wesleyan Mission Pre Mysore. 7/5/1903.

# ವೃತ್ತಾಂತ ಪತ್ರಿಕೆ.

REGISTERED M. 20.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೬. ಮೈಸೂರು—ಸನ್ ೧೯೦೩ ನೇ ಇಸವಿ ಮೇ ತಾರೀಖು ೧೪ ನೇ ಗುರುವಾರ. ಸಂಚಿಕೆ ೪೯




## MELLIN'S FOOD.

ಮೆಲಿನ್ ರವರು ಧಾನ್ಯಗಳಿಂದಲೇ ತಯಾರು

ಮಾಡಿರುವ ಆಹಾರ.

೧. ಮೆಲ್ಲಿನ್‍ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್‍ರು ಮಾಡಿರುವ ಆಹಾರವು ದೇಹದ ನರಗಳೂ ಮೂಳೆಯೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್‍ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್‍ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಜಾಯಮಾನಾನುಕೂಲ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್‍ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆ ಉಂಟಾಗುತ್ತದೆ.

೬. ಮೆಲ್ಲಿನ್‍ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಹವಾ ವ್ಯತ್ಯಾಸದಿಂದ ಬೇರೆ ಆಗುವದಿಲ್ಲ.

೭. ಮೆಲ್ಲಿನ್‍ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‍ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ನೀರು ಸೇರಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಮಗುವಿಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‍ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ವಸ್ತು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಉಪಯೋಗವಾಗುತ್ತದೆ.

೧೦. ಮೆಲ್ಲಿನ್‍ರು ಮಾಡಿರುವ ಆಹಾರವು ಕೂಸುಗಳಿಗೆ ಬೇಸಗೆ ಕಾಲದಲ್ಲಿಯೂ ಶೈತ್ಯದಲ್ಲಿಯೂ ಬರುವ ಮಿಕ್ಕಾದ ರೋಗಗಳಲ್ಲಿಯೂ ನಿಶ್ಯಕ್ತಿಯನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್‍ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‍ರು ಮಾಡಿರುವ ಆಹಾರದಲ್ಲಿ ಗುರುತು ಪದಾರ್ಥವು ಯಾವದೂ ಸೇರಿರುವದಿಲ್ಲ. ತಾಯಿ ಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‍ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ರಕ್ಷಕವಾದ್ದಾಗಿದೆ.

೧೪. ಮೆಲ್ಲಿನ್‍ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ವೃದ್ಧಿಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ಬಹಳ ಮಟ್ಟಿಗೆ ಕಡಮೆಮಾಡುತ್ತದೆ.

೧೫. ಮೆಲ್ಲಿನ್‍ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಕೊಡುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಷಾಪುಗಳಿಗೂ ಬರೆದು ತರಿಸಿಕೊಳ್ಳಬಹುದು :—

ಮದ್ರಾಸ್ :—ಮೆ॥ ಕಾವಸ ದಿನ್‍ಷಾ ಬ್ರದರ್ಸ್.

ಬೊಂಬಾಯಿ :—ಮೆ॥ ಕೇಂಪ್ ಅಂಡ್ ಕಂಪೆನಿ.

ಕಲ್ಕತ್ತಾ :—ಮೆ॥ ಮೆಕ್ಕೆನ್‍ಜಿ ಲಯಲ್ ಕಂಪೆನಿ.

ಕೋಲ್ಕನಾಡ :—ಮೆ॥ ಜಾನ್ ವಿಲ್ಸನ್ ಕಂಪೆನಿ.

ಕರಾಚಿ :—ಮೆ॥ ಎಚ್. ಜಿ. ರುಸ್ತುಂಜಿ ಕಂಪೆನಿ.

ಮದ್ರಾಸು :—ಮೆ॥ ಓಕ್ ಕಂಪೆನಿ.

ಕೊಲಂಬ :—ಕೇವ್ ಬ್ರಾಕ್ ಕಂಪೆನಿ.

## ಶ್ರೀ ಕೃಷ್ಣವಿಲಾಸ ಪ್ರೆಸ್.

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಗ್ರಂಥಪತ್ರಿಕೆ, ಬಿಲ್‍ಫಾರಂ, ವಿಜಿಟಿಂಗ್ ಕಾರ್ಡ್ಸ್, ನೋಟೀಸ್ ಫಾರಂ, ಬ್ಯಾಲನ್ಸ್ ಷೀಟ್, ಪುಸ್ತಕಗಳು, ಇನ್ನೂ ಮೊದಲಾದ ವಿಸದವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಧಾರಣೆಗಳಿಗೆ ಮಾಡಲ್ಪಡುತ್ತವೆ.

ಕೋರ್ಟು, ನಗರ, ಮುಂತಾದ ಖಾಲೀ ಪುಸ್ತಕಗಳು; ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು ; ಇನ್ನು ಇತರವಾದ ಸಮೂಹ ನೆಯ ಬೈಂಡು ಕೆಲಸಗಳು ಇಂಗ್ಲೀಷು ಬೈಂಡ್ ನಂತೆ ಬಹು ಅಂದವಾಗಿ ತಯಾರು ಮಾಡಲ್ಪಡುತ್ತವೆ.

ಲಾಯರುಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್, ವಕಾಲತ್‍ನಾಮಾ, ಚಾರ್ಜ್, ರಸೀದಿ ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಮಾರಾಟಕ್ಕೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯತರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಜವಾಬು ಬಯಸುವವರು ತಿಳಿಯಲು ಜವಾಬನ್ನು ಅಪೇಕ್ಷಿಸುವವರು ಟಪಾಲು ಹಾಸಲನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡಪೇಟೆ ೧೧ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ.

ವಿಳಾಸ —ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,

ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

### ಮಹಾರಾಜರ ಪಟ್ಟಾಭಿಷೇಕ.

ಈ ಉತ್ಸವದ ತಸ್ವೀರುಗಳ ಪುಸ್ತಕ. ಮಹಾರಾಜರ ದೊಡ್ಡ ಫೋಟೋ ತಸ್ವೀರು, ಸಂಸ್ಥಾನದ ಮುಖ್ಯ ಹುದ್ದೇದಾರರ ಫೋಟೋಗಳು, ಮೈಸೂರು ಬೆಂಗಳೂರಿನಲ್ಲಿರುವ ಅರಮನೆ ಮುಂತಾದ ಭಾರೀ ಕಟ್ಟಡಗಳು ಉಳ್ಳ ಈ ಫೋಟೋ ಪುಸ್ತಕಗಳು ಕೆಲವು ಮಾತ್ರ ಉಳಿದಿವೆ. ಬೇಗ ಬರೆದು ತರಿಸಿಕೊಳ್ಳಿ, ಕ್ರಯ ೮ ಆಣೆ, ಹಾಸಲು ೧ ಆಣೆ.

ವಿಳಾಸ :—ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಮೈಸೂರು.

„ „ „ ಬೆಂಗಳೂರು.

### ಹೊಸ ಪುಸ್ತಕಗಳು.

೧. ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರಾ ಮಹಾರಾಣಿಯವರ ಜೀವಚರಿತ್ರೆ. ಸುಂದರವಾದ ಅನೇಕ ಚಿತ್ರಗಳನ್ನುಳ್ಳದ್ದು. ಕ್ರಯ ೪ ಆಣೆ.

೨. ಪುರಾತನ ಗ್ರೀಕರ ಕಥೆಗಳು. ಹುಡುಗರೂ ಹುಡುಗಿಯರೂ ಓದಲು ಅತ್ಯಂತ ಉತ್ಸಾಹವನ್ನುಂಟುಮಾಡುವ ಪುಸ್ತಕ. ಅಗತ್ಯ ಓದತಕ್ಕದ್ದು. ಚಿತ್ರಗಳಿಂದ ತುಂಬಿ ಇದೆ. ಕ್ರಯ ೨ ಆಣೆ.

೩. ಪ್ರಾಚೀನ ಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ ಪ್ರಪಂಚದ ಆದಿಭಾಗದಲ್ಲಿದ್ದ ಪ್ರಾಣಿಗಳೂ, ಜೀವರಾಶಿಗಳೂ, ಪಕ್ಷಿಪಕ್ಷಿಗಳೂ, ಜಲಚರಗಳೂ ಚಿತ್ರಸಹಿತವಾಗಿ ವಿವರಿಸಲ್ಪಟ್ಟಿವೆ. ಇದು ಓದುತ್ತ ಓದುತ್ತಾ ಬಹಳ ಉತ್ಸಾಹವನ್ನುಂಟುಮಾಡುವದು ಕ್ರಯ ೧ ಆಣೆ.

೪. ಬಾಲ್ಯವಿವಾಹ. ಬಾಲ್ಯವಿವಾಹದಿಂದುಂಟಾಗುವ ಶಾರೀರಕ ಕೇಡುಪರಂಪರೆಗಳು ಸವಿಸ್ತಾರವಾಗಿಯೂ ಮತ್ತು ಸಾಂಸರ್ಗಿಕ ಸುಲಭವಾಗಿಯೂ ವಿವರಿಸಲ್ಪಟ್ಟಿವೆ. ಹೊಸ ಪುಸ್ತಕ. ಕ್ರಯ ೩ ಪೈ.

ಈ ಪುಸ್ತಕಗಳೆಲ್ಲಾ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವವು. ಬೇಗನೆ ಬರೆದು ತರಿಸಿಕೊಳ್ಳಿ.

ವಿಳಾಸ :—ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಮೈಸೂರು.

„ „ „ ಬೆಂಗಳೂರು.

## ನೋಟೀಸ್.

ಸೂರ್ಯೋದಯ ಪ್ರಕಾಶಿಕಾ ಮತ್ತು ಕರ್ಣಾಟಕ ಕೇಸರಿಯು ಈಗ ದೊಡ್ಡದಾಗಿ ಬಹಳ ಚಮತ್ಕಾರವಾಗಿದೆ. ಚಂದಾ ವರುಷ ೧ ಕ್ಕೆ ಒಂದೇ ರೂಪಾಯಿ. ಟಪಾಲುಹಾಸಲು ೦—೧೩—೦ ಸಹಿ ಮುಂಗಡ. ಕೆಲವು ದಿನಗಳು ಓದಿದರೆ ಗೊತ್ತಾಗುವದು. ಕನ್ನಡದಲ್ಲಿ ಇಷ್ಟು ಧೈರ್ಯವಾಗಿ ಬರೆಯುವದು ಯಾವದೂ ಇಲ್ಲ.

ಪ್ರೊಪ್ರೈಟರ್,

೧೩೮, ಅರಳೇಪೇಟೆ, ಬೆಂಗಳೂರು ಸಿಟಿ.

## ಹೊಸಪುಸ್ತಕ ! ಹೊಸಪುಸ್ತಕ !!

ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ.

ಕಳೆದ ವರ್ಷ ಲಂಡನ್ ನಗರದಲ್ಲಿ ನಡೆದ ಈ ಮಹೋತ್ಸವವನ್ನು ವಿವರಿಸುವ ಈ ಪುಸ್ತಕವು ನೇತ್ರಾನಂದಕರವಾದ ಅನೇಕ ಚಿತ್ರಗಳಿಂದ ಶೋಭಿಸುತ್ತಿರುವದು. ಎಲ್ಲರೂ ಅವಶ್ಯವಾಗಿ ತರಿಸಿಕೊಂಡು ಓದತಕ್ಕ ಪುಸ್ತಕ. ಕ್ರಯ ೨॥ ಆಣೆ. ಹಾಸಲು ಪ್ರತ್ಯೇಕ.

ವಿಳಾಸ :—ಮ್ಯಾನೇಜರ್, ಬುಕ್ ಡಿಪೋ, ಮೈಸೂರು.

## ROBINSON'S

## PATENT BARLEY.

## ರಾಬಿನ್‍ಸನ್‍ಯವರ

## ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಜವೆಗೋಧಿಯಿಂದ ಮಾಡಿದೆ. ಹಸ್ತಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮುಂದವಾದ ನಂತರ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ಕೆಲವು ಕಳಪೆ ವಸ್ತುವನ್ನು ಕೆಲವರು ಮಾರುತ್ತಾ ಇರುವದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ತಗಡಿನ ಡಬ್ಬಿಗಳ ಮೇಲೆ 'ಬುಲ್ಲಿನ' ಚಿತ್ರವನ್ನು ಕೆಳಗೆ ಹೆಸರು ಇರುವದನ್ನು ನೋಡಿ ತೆಗೆದುಕೊಳ್ಳಬೇಕು.

ವೃತ್ತಾಂತ ಪತ್ರಿಕೆ.

೧೯೦೩ ನೇ ಇಸವಿ ಮೇ ತಾ॥ ೧೪ ನೇ ಗುರುವಾರ.

## ಕುಷ್ಟರೋಗಬರಲು ಕಾರಣವೇನು ?

ಕೆಲವು ದಿನಗಳ ಹಿಂದೆ ವಿಲಾಯಿತಿಯಿಂದ ಒಬ್ಬ ದೊಡ್ಡ ವೈದ್ಯನು ಹಿಂದುಸ್ಥಾನಕ್ಕೆ ಬಂದಿರುತ್ತಾನೆಂತಲೂ, ಆತನು ಈ ಕೆಟ್ಟ ಕುಷ್ಟರೋಗಕ್ಕೆ ಕಾರಣಗಳನ್ನು ಕುರಿತು ಈ ದೇಶದಲ್ಲೂ ಪರಿಶೋಧನೆಮಾಡುತ್ತಿದ್ದಾನೆಂತಲೂ ನಮ್ಮ ವಾಚಕರಿಗೆ ತಿಳಿಸಿರುತ್ತೇವಷ್ಟೆ.

ಡಾಕ್ಟರ್ ಹಚ್ಚಿನ್‌ಸನ್ ಎಂಬವರು ಇತರ ದೇಶಗಳಲ್ಲಿ ಈ ರೋಗವನ್ನು ಪರಿಶೋಧನೆ ಮಾಡಿದ್ದರಲ್ಲಿ ಆ ರೋಗದ ಕ್ರಿಮಿಗಳು, ಕೊಳೆಯುವಂಥಾ ಮೀನಿನಲ್ಲಿ ವಿಶೇಷವಾಗಿ ಬೆಳೆಯುತ್ತವೆಂತಲೂ, ಈ ರೋಗವು ಮನುಷ್ಯನ ದೇಹಕ್ಕೆ ಅನ್ನಕೋಶದ ಮೂಲಕ ವ್ಯಾಪನೆಯಾಗುವುದೆಂತಲೂ ಗೊತ್ತುಮಾಡಿದರು. ಅವರು ಹೀಗೆ ತೀರ್ಮಾನಿಸುವದಕ್ಕೆ ಕಾರಣಗಳೇನೆಂದರೆ—ಮೀನಿನ ಮಾಂಸವನ್ನು ಆಹಾರವಾಗಿ ಉಪಯೋಗಿಸುವಂಥಾ ಜನಗಳೂ, ವಿಶೇಷವಾಗಿಯೂ ಅಗ್ಗವಾಗಿಯೂ ಮೀನು ಸಿಕ್ಕುವಂಥಾ ಸಮುದ್ರತೀರಪಟ್ಟಣಗಳ ಜನಗಳೂ ಈ ಕುಷ್ಟರೋಗದಲ್ಲಿ ಬೀಳುತ್ತಾರೆ. ದೃಷ್ಟಾಂತವಾಗಿ ಯೂರೋಪ್ ಖಂಡಕ್ಕೆ ಸೇರಿದ ನಾರ್ವೇ ದೇಶದಲ್ಲಿ ಸಮುದ್ರತೀರಪ್ರದೇಶವು ವಿಸ್ತಾರವಾಗಿರುವದು; ಜನರು ಮೀನನ್ನು ಅಪಾರವಾಗಿ ಆಹಾರಮಾಡುತ್ತಾರೆ. ಅದ್ದರಿಂದ ಆ ಜನರಲ್ಲಿ ಕುಷ್ಟರೋಗವು ಇತರ ದೇಶಗಳಲ್ಲಿರುವದಕ್ಕಿಂತ ಬಹಳ ಹೆಚ್ಚಾಗಿದೆ. ಡಾಕ್ಟರ್ ಹಚ್ಚಿನ್‌ಸನ್ ಎಂಬವರು—ಈ ಕುಷ್ಟರೋಗವು ಹಿಡುಬಿನ ಉಪದ್ರವಷ್ಟು ಕಠಿಣವಾದ ಸಾಂಕ್ರಾಮಿಕ ಜಾಡ್ಯವಲ್ಲವೆಂದು ಹೇಳುತ್ತಾರೆ. ಅವರೆ ಕುಷ್ಟರೋಗಿಯು ಮುಟ್ಟಿರುವಂಥಾ ಆಹಾರಪದಾರ್ಥವನ್ನು ರೋಗಿಯಲ್ಲದವನು ಭಕ್ಷಿಸಿದರೆ ಆ ಮೂಲಕ ಅವನಿಗೂ ಆ ರೋಗವು ಸಂಭವಿಸುವದು. ಈ ರೋಗ ಬರುವದಕ್ಕೆ ಇದೊಂದು ಮುಖ್ಯವಾದದ್ದು. ಕುಷ್ಟರೋಗಿಯು ಅಡಿಗೆ ಮಾಡಿದರೂ, ಕೈಗಳಲ್ಲಿ ಕುಷ್ಟವಿರುವವನು ಅಡಿಗೆಯನ್ನು ಊಟಕ್ಕೆ ಬಡಿಸಿದರೂ ಆ ರೋಗದ ಕ್ರಿಮಿಗಳು ಆರೋಗ್ಯವಾಗಿರುವವನ ದೇಹಕ್ಕೆ ವ್ಯಾಪನೆಯಾಗುವವು. ಹೀಗಲ್ಲದೆ ಇನ್ನಾವ ರೀತಿಯಲ್ಲೂ ಒಬ್ಬನಿಂದ ಒಬ್ಬನಿಗೆ ಈ ರೋಗವು ಹೋಗುವದಿಲ್ಲ. ಕುಷ್ಟರೋಗಿಯು ಶರೀರವನ್ನು ಸುಮ್ಮನೆ ಸ್ಪರ್ಶಮಾಡುವದರಿಂದಲಾಗಲಿ, ಅವನ ಮನೆಯಲ್ಲಿಯೇ ವಾಸಮಾಡಿಕೊಂಡಿರುವಂತೆ ಇಟ್ಟುಕೊಳ್ಳುವದರಿಂದಾಗಲಿ, ಅಥವಾ ಅವನು ಬಿಡುವ ಉಸುರನ್ನು ಇತರರು ಸೇದಿಕೊಳ್ಳುವದರಿಂದಲಾಗಲಿ ಒಬ್ಬನಿಂದೊಬ್ಬನಿಗೆ ಆ ರೋಗವು ಬರುವದೇ ಇಲ್ಲವೆಂದು ಈ ವೈದ್ಯರು ಹೇಳುತ್ತಾರೆ.

ಮೇಲೆ ಹೇಳಿರುವ ಸಂಗತಿಗಳೆಲ್ಲಾ ಡಾಕ್ಟರ್ ಹಚ್ಚಿನ್‌ಸನ್ ಎಂಬವರು ಕಂಡುಹಿಡಿದವುಗಳಾಗಿರುತ್ತವೆ. ಇದಕ್ಕೆ ವಿರೋಧವಾಗಿ ಹಿಂದುಸ್ಥಾನದಲ್ಲಿ ಒಂದು ಅಭಿಪ್ರಾಯ ಹುಟ್ಟಿತು. ಅದೇನೆಂದರೆ—ಹಿಂದೂದೇಶದಲ್ಲಿರುವ ಕುಷ್ಟರೋಗಿಗಳಲ್ಲಿ ಬಹು ಮಂದಿ ಮಾಂಸಾಹಾರಿಗಳಲ್ಲವಲ್ಲಾ ಎಂಬ ಶಂಕೆ ಹುಟ್ಟಿತು. ಕೆಲವರು ಹುಟ್ಟಿದಾರಭ್ಯ ಮೀನನ್ನು ತಿಂದವರೇ ಅಲ್ಲವಾಗಿರುವರು ಎಂಬದಾಗಿ ಆಕ್ಷೇಪಣೆ ಮಾಡಿದರು. ಇದನ್ನು ಕುರಿತು ಪರಿಶೋಧಿಸಬೇಕೆಂದೇ ಈ ಡಾಕ್ಟರ್ ಹಚ್ಚಿನ್‌ಸನ್ ಎಂಬವರು ಹಿಂದುಸ್ಥಾನಕ್ಕೆ ಬಂದರು; ಕುಷ್ಟರೋಗಿಗಳಿರುವ ಅನೇಕ ಆಸ್ಪತ್ರೆಗಳನ್ನೂ ಆಲಯಗಳನ್ನೂ ನೋಡಿದರು; ಇಲ್ಲಿನ ವೈದ್ಯರುಗಳ ಸಂಗಡ ಸೇರಿ ಬಹಳವಾಗಿ ಆಲೋಚನೆ ಮಾಡಿದರು; ಬಹು ಮಂದಿ ಕುಷ್ಟರೋಗಿಗಳನ್ನು ಪರೀಕ್ಷೆ ಮಾಡಿದರು; ಕೊಲಂಬೋ, ಮದರಾಸ್, ಕಲ್ಕತ್ತಾ, ಲಾಹೋರ್, ಬೊಂಬಾಯಿ, ಇವೇ ಮೊದಲಾದ ಅನೇಕ ದೊಡ್ಡ ಪಟ್ಟಣಗಳಲ್ಲಿ ಸಭೆ ಸೇರಿಸಿ, ಉಪನ್ಯಾಸಗಳನ್ನು ಮಾಡಿದರು; ಸಕಲ ಜನರ ಅಭಿಪ್ರಾಯಗಳನ್ನೂ ಸಂಗ್ರಹಮಾಡಿಕೊಂಡರು. ಈಗ ಇಷ್ಟೆಲ್ಲಾ ಮಾಡಿಕೊಂಡು ಸಂಗ್ರಹಿಸಿದಾಗ್ಯೂ ಡಾಕ್ಟರ್ ಹಚ್ಚಿನ್‌ಸನ್ ಎಂಬವರು ತಮ್ಮ ಮೊದಲನೇ ಅಭಿಪ್ರಾಯವನ್ನು—ಅಂದರೆ, ಆಹಾರರೂಪವಾದ ಮೀನಿನ ಮೂಲಕವೇ ಈ ರೋಗವು ಜನರನ್ನು ಹಿಡಿಯುತ್ತದೆ ಎಂಬುದನ್ನು—ಇನ್ನೂ ಇಟ್ಟುಕೊಂಡೇ ಇದ್ದಾರೆ. ವಿಚಾರಣೆಮಾಡುತ್ತಾ ಬಂದದ್ದರಲ್ಲಿ ಒಂದಲ್ಲ ಒಂದು ವೇಳೆ ಮೀನು ತಿನ್ನದ ಇದ್ದಂಥಾ ಕುಷ್ಟರೋಗಿಗಳು ಬಹಳ ಕೊಂಚ ಮಂದಿ ಇದ್ದಾರೆಂಬ ಸಂಗತಿ ಗೊತ್ತಾಯಿತು. ಒಂದು ಆಸ್ಪತ್ರೆಯಲ್ಲಿ ವಿಚಾರಿಸುವಾಗ್ಯೆ ಅಲ್ಲಿನ ಡಾಕ್ಟರು ಕುಷ್ಟರೋಗಿಗಳ ವಿಷಯವಾಗಿ—ಶೇಕಡ ೮೦ ರಷ್ಟು ಮಂದಿಗಿಂತಲೂ ಕಡಮೆ ರೋಗಿಗಳು ಒಂದಾನೊಂದು ಕಾಲದಲ್ಲಿಯೂ ಮೀನು ತಿಂದವರಲ್ಲವೆಂಬದಾಗಿ ಹೇಳಿದರು. ಆದರೆ ಡಾಕ್ಟರ್ ಹಚ್ಚಿನ್‌ಸನ್ ಎಂಬವರು ಮುದ್ದಾಗಿ ಆ ರೋಗಿಗಳನ್ನು ಕರೆದು ಚೆನ್ನಾಗಿ ವಿಚಾರಣೆಮಾಡಿ ನೋಡಿದಾಗ ಅವರಲ್ಲಿ ಅನೇಕ ಮಂದಿ ಆಗಾಗ್ಗೆ ಮೀನು ತಿನ್ನುತ್ತಿದ್ದದ್ದು ಒಪ್ಪಿಕೊಂಡರು. ಸಿಲೋನ್, ಮದರಾಸ್, ಬೊಂಬಾಯಿ ಇವುಗಳ ಸಮುದ್ರತೀರಪಟ್ಟಣಗಳಲ್ಲಿ ಕುಷ್ಟರೋಗವು ಸರ್ವಸಾಧಾರಣವಾಗಿದೆ. ಬೊಂಬಾಯಿನ ಉತ್ತರ ಸಮೀಪ ಕ್ರೈಸ್ತರೆಂಬ ರೋಮನ್ ಕ್ಯಾಥೋಲಿಕ್ ಮತಾವಲಂಬಿಗಳಾದ ಸ್ವದೇಶೀಯರಲ್ಲಿ ಬಹು ಮಂದಿ ಈ ರೋಗಪೀಡಿತರಾಗಿದ್ದರೆಂತಲೂ, ಅವರೆಲ್ಲಾ ಮೀನು ಹಿಡಿಯುವದೇ ಉದ್ಯೋಗವಾಗಿಟ್ಟುಕೊಂಡಿದ್ದಾರೆಂತಲೂ ತಿಳಿದುಬಂದಿದೆ. ಆ ಪ್ರಾಂತ್ಯದಲ್ಲಿರುವ ಇತರ ಪಂಗಡಗಳ ಕ್ರೈಸ್ತರಲ್ಲಿ ಈ ಉಪದ್ರವು ಅಷ್ಟು ಪ್ರಬಲವಾಗಿಲ್ಲ. ಆದರೂ ಹುಟ್ಟಿದಾರಭ್ಯ ಮೀನು ತಿನ್ನದೇನೇ ಇದ್ದ ರೋಗಿಗಳು ಕೆಲವರು ಇದ್ದಾರೆಂದು ಡಾಕ್ಟರ್ ಹಚ್ಚಿನ್‌ಸನ್ ಎಂಬವರಿಗೆ ತಿಳಿದುಬಂತು. ಅಂಥಾವರಿಗೆ ಈ ರೋಗ ಬಂದಿರುವದನ್ನು ನೋಡಿದರೆ ಕುಷ್ಟರೋಗಿಗಳಿಂದ ಸ್ಪರ್ಶಮಾಡಲ್ಪಟ್ಟ ಆಹಾರವನ್ನು ಯಾವಾಗಲೋ ಅವರು ತಿಂದಿರಬೇಕೆನ್ನುವದರಲ್ಲಿ ಸಂದೇಹ ತೋರುವದಿಲ್ಲ.

ಆದಕಾರಣ ಈ ರೋಗದ ಉತ್ಪತ್ತಿಯ ವಿಷಯವಾಗಿ ಡಾಕ್ಟರ್ ಹಚ್ಚಿನ್‌ಸನ್ ಎಂಬವರು ಹೇಳುವ ಮಾತು ನಿಜವಾಗಿದ್ದಲ್ಲಿ ನಾವುಗಳೆಲ್ಲಾ ಎರಡು ವಿಷಯಗಳಲ್ಲಿ ತುಂಬಾ ಜಾಗರೂಕರಾಗಿರುವದು ಅವಶ್ಯ. ಅವು ಯಾವವೆಂದರೆ—

(೧) ಕುಷ್ಟರೋಗಿಗಳಿಂದ ಅಡಿಗೆ ಮಾಡಿಸಕೂಡದು; ಇತರರು ತಿನ್ನುವ ಆಹಾರಪದಾರ್ಥಗಳನ್ನು ಅವರು ಮುಟ್ಟಲೂ ಕೂಡದು. ಅದರೆ ಆ ರೋಗಿಗಳನ್ನು ಬೇರೆ ಸ್ಥಳದಲ್ಲಿ ಇಡಬೇಕಾದ ಅವಶ್ಯಕತೆ ಕಂಡುಬರುವದಿಲ್ಲ.

(೨) ಆಹಾರಪದಾರ್ಥಗಳಲ್ಲಿ ಮೀನನ್ನೂ ಸೇರಿಸಿಕೊಂಡು ಊಟಮಾಡುವ ಜನರು ಬಹಳ ಜಾಗರೂಕರಾಗಿರಬೇಕು; ಅಂದರೆ, ಅವರು ತಿನ್ನುವ ಮೀನು ಒಳ್ಳೇದಾಗಿಯೂ, ಚನ್ನಾಗಿ ಕ್ರಮ ಪ್ರಕಾರ ಅಡಿಗೆ ಮಾಡಿದ್ದಾಗಿಯೂ ಇರಬೇಕು.

ಚೇಂಬರ್ಲೀನ್ ಎಂಬವರು ಮಾಡಿದ ನೋವುಹರ ಔಷಧವು.




ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಪಟು ಬಿದ್ದರೂ ಚೂರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜುವದರಿಂದ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋಯಿತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೀನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ೧ಕ್ಕೆ ೧ ರೂ.; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು:—

ಬಿ. ಬಿ. ನರಸಿಂಹಲು ಚೆಟ್ಟಿ,
ನಂ. ೨, ತಂಬೂನಾಯಕರ ಬೀದಿ,
ಮದರಾಸ್.

## ಕ್ರೈಸ್ತ ಮತಾಧಾರದ ಶೋಧನಾ ಸಿದ್ಧಾಂತಗಳು.

### II ನೇ ಭಾಗ. ದೇವರ ಗುಣಸ್ವಭಾವಗಳು.

ಹಿಂದಿನ ಉಪನ್ಯಾಸವನ್ನು ಓದಿರುವಂಥ ನಮ್ಮ ವಾಚಕರೆಲ್ಲರೂ, ಜಗತ್ತನ್ನು ಸೃಷ್ಟಿಸತಕ್ಕ ಒಬ್ಬ ದೇವರು ಇದ್ದಾನೆಂದೂ, ಇಂಥ ಕರ್ತನನ್ನು ಯಾವ ಜನಾಂಗದವರು ತಿಳಿಕೊಂಡು ಆತನ ಸೃಷ್ಟಿಯಾಗಿದ್ದಾರೆಂದೂ, ಅವರು ಆ ಸ್ವಾಮಿಯ ಭಕ್ತರಾದದರಿಂದ ಅವರಿಗೂ ಅವರ ದೇಶಕ್ಕೂ ಉಂಟಾದ ಭಾಗ್ಯವೇನೆಂದೂ ಸ್ವಲ್ಪವಾದ್ರೂ ತಿಳಿದುಕೊಂಡಿರುವರು. ಈ ಉಪನ್ಯಾಸದಲ್ಲಿ ಒಬ್ಬನೇ ನಿಜವಾದ ದೇವರನ್ನು ನಾವು ಯಾವ ರೀತಿ ತಿಳಿದು ಆತನ ಸೇವೆ ಮಾಡಬೇಕೆಂದು ನೋಡಬೇಕಾಗಿದೆ. ಯಾಕೆಂದರೆ ನಾವು ಪೂಜಿಸುವ ಇಂಥಾ ನಮ್ಮ ಆರಾಧನೆಗೆ ಯೋಗ್ಯನಾಗಿರುವ ದೇವರ ಗುಣಸ್ವಭಾವಗಳನ್ನು ನಾವು ತಿಳಿಯದೇಹೋದರೆ ಆತನನ್ನು ನಾವು ಸರಿಯಾಗಿ ಆರಾಧಿಸಲಾರೆವು. ಒಬ್ಬನು ತನ್ನ ತಂದೆತಾಯಿಯನ್ನು ಸನ್ಮಾನಿಸಬೇಕಾದರೆ ಮೊದಲು ತನ್ನ ತಂದೆ ತಾಯಿ ಇಂಥವರೇ ಎಂದೂ, ಅವರ ಗುಣಸ್ವಭಾವ ಇಂಥಾದ್ದೇ ಎಂದೂ, ತನ್ನನ್ನು ಯಾವ ರೀತಿ ಪ್ರೀತಿಸಿದರೋ ಅದನ್ನು ತಿಳಿದಹೊರತು ಅವರನ್ನು ಸನ್ಮಾನಿಸುವದಕ್ಕೆ ಉದ್ಯುಕ್ತನಾಗಲಾರನು. ಅದರಂತೆ ನಮ್ಮ ಆರಾಧನೆ ಯೋಗ್ಯನಾಗಿರುವ ಸ್ವಾಮಿಯನ್ನು ನಾವು ಅರಿಯುವದು ಬಹು ವಿಶೇಷವಾದದ್ದಾಗಿದೆ.

ದೇವರ ಗುಣಸ್ವಭಾವಗಳ ವಿಷಯದಲ್ಲಿ ಅನೇಕರು ತಿಳಿಯಬೇಕಾದ ಸಂಗತಿಗಳನ್ನು ತಿಳಿದಿಲ್ಲ. ಒಬ್ಬ ಭಗವಂತನಿದ್ದಾನೆಂತ ವಿಚಾರ ಕೇಳುವದೇ ಹೊರತು ಆತನನ್ನು ಜೀರ ಪರೀಕ್ಷಿಸಿ ತಿಳಿದಿಲ್ಲ. ಅದ್ದರಿಂದಲೇ ಜನರಲ್ಲಿ ವಿವಿಧಾಭಿಪ್ರಾಯಗಳೂ ನೂತನತರವಾದ ಪ್ರಾಯಗಳೂ ಹೊರಡುವದಕ್ಕೆ ಕಾರಣವಾಯಿತು. ಒಬ್ಬ ಹಳ್ಳಿಯವನನ್ನು ದೇವರ ವಿಷಯ ಕೇಳಿದರೆ ಅವನು ಏನೂ ಹೇಳಲಾರನು. ಒಂದು ವೇಳೆ ಹೇಳಿದರೂ ತನ್ನ ಬುದ್ಧಿಗೆ ತೋಚಿದುದನ್ನು ಹೇಳುವನೇ ಹೊರತು ಸತ್ಯವನ್ನು ಪರೀಕ್ಷಿಸಿ ಹೇಳುವದಿಲ್ಲ. ಕ್ರೈಸ್ತಮತಕ್ಕೆ ಆಧಾರವಾದ ಬೈಬಲ್ ಎಂಬ ಸತ್ಯವೇದವನ್ನು ಓದಿದರೆ ಅದರಲ್ಲಿ ದೇವರ ವಿಷಯ ಯಥಾರ್ಥವಾಗಿ ತಿಳಿಸತಕ್ಕ ಸಂಗತಿಗಳುಂಟು. ಅವುಗಳಲ್ಲಿ ಈಗ ೬ ಸಂಗತಿಗಳನ್ನು ಮಾತ್ರ ವಾಚಕರ ಪ್ರಯೋಜನಕ್ಕಾಗಿ ಉದಾಹರಿಸುತ್ತೇವೆ.

೧ನೇದು, ದೇವರಿಗೆ ಪುರುಷತ್ವ ಉಂಟೆಂದು ಅಥವ ದೇವರು ವ್ಯಕ್ತಿಯಾಗಿದ್ದಾನೆಂದು ತಿಳಿಯಬೇಕು. ಪುರುಷತ್ವ ಮತ್ತು ವ್ಯಕ್ತಿ ಎಂಬ ಪದಗಳನ್ನು ಇಲ್ಲಿ ಉಪಯೋಗಿಸುವಾಗ ಅವುಗಳ ಸರಿಯಾದ ಅರ್ಥವನ್ನು ಗ್ರಹಿಸಬೇಕು. ಜನರು ಪುರುಷತ್ವ ಎಂಬ ಮಾತಿಗೆ ಸಾಧಾರಣವಾದ ಅರ್ಥವನ್ನು ಮಾಡಿಕೊಂಡರೆ ಇಲ್ಲವೇ ಲೋಕದಲ್ಲಿ ಪುರುಷತ್ವ ಎಂಬ ಮಾತಿಗೆ ರೂಢಿಯಾಗಿರುವ ಅರ್ಥವನ್ನು ಅನ್ವಯಿಸಿದರೆ ವೈದಿಕವಾದ ಈ ಮಾತಿನ ಅರ್ಥವು ಕೆಟ್ಟುಹೋಗುತ್ತೆ. ನಾವು ವೈದಿಕ ಕಾರ್ಯಗಳನ್ನು ತಿಳಿಯುವದಕ್ಕಾಗಲೀ ಅವುಗಳನ್ನು ವಿವರಿಸುವದಕ್ಕಾಗಲೀ ನಮಗೆ ಬುದ್ಧಿ ಸಾಲದು. ಈ ಲೋಕದಲ್ಲಿರುವ ತತ್ವಜ್ಞಾನ ಶಾಸ್ತ್ರಿಗಳೆಲ್ಲರು ಈ ಕಾಲದಲ್ಲಿ ಒಂದಾಗಿ ಸೇರಿ, ದೇವರನ್ನೂ ಆತನ ಕಾರ್ಯಗಳನ್ನೂ ತಿಳಿಯಬೇಕೆಂದು ಯೋಚಿಸಿದರೂ ಅದು ವ್ಯರ್ಥವೇ ಆಗುವದು. ಹೀಗಿರುವಲ್ಲಿ ದೇವರ ವಿಷಯ ಹೀಗೆಯೇ ಉಂಟೆಂತ, ಅಥವ ಆತನು ಹೀಗೆಯೇ ಇದ್ದಾನೆಂತ ಸಿದ್ಧಾಂತ ಮಾಡುವದು ಬಹು ಅಸಾಧ್ಯ ಕಾರ್ಯವಾಗಿದೆ. ದೇವರು ಪರಿಶುದ್ಧ ಗ್ರಂಥದಲ್ಲಿ ಎಷ್ಟರಮಟ್ಟಿಗೆ ತನ್ನನ್ನು ಪ್ರಕಟಿಸಿದ್ದಾನೋ ಅಷ್ಟು ಮಾತ್ರ ಮನುಷ್ಯನು ತಿಳಿಯಬೇಕಾಗಿದೆ. ದೇವರಿಗೆ ಪುರುಷತ್ವ ಉಂಟು ಇಲ್ಲವೇ ದೇವರು ವ್ಯಕ್ತಿಯಾಗಿದ್ದಾನೆಂದು ನಾವು ಓದುವಾಗ, ಮಾನುಷ್ಯ ಸ್ವಭಾವದ ಲಕ್ಷಣಗಳಾದರೂ, ಅಥವ ರಕ್ತ ಮಾಂಸಗಳಿಗೆ ಸಂಬಂಧಪಟ್ಟ ಯಾವ ಗುರುತುಗಳಾದರೂ ಆ ಪುರುಷತ್ವಕ್ಕೆ ಉಂಟೆಂದು ನಾವು ತಿಳಿಯಬಾರದು. ಮನುಷ್ಯ ಜಾತಿಗೆ ಲಿಂಗಭೇದ ಉಂಟು. ಆದರೆ ದೇವರಿಗೆ ಲಿಂಗಭೇದವಿಲ್ಲ. ಪುರುಷತ್ವ ಎಂಬ ಮಾತಿನಲ್ಲಿ ಲಿಂಗಭೇದವಾದರೂ ಶರೀರವೃದ್ಧಿಯಾದರೂ ಇರುವದಿಲ್ಲ. ದೇವರನ್ನು ವಿವರಿಸತಕ್ಕ ಪದಗಳಾದರೂ

ಶಬ್ದಗಳಾದರೂ ಮನುಷ್ಯ ಭಾಷೆಯಲ್ಲಿ ಸಿಕ್ಕುವದು ಕಷ್ಟವಾಗಿದೆ. ಯಾವ ಶಬ್ದವನ್ನು ತೆಗೆದುಕೊಂಡು ಬರೆದರೂ ಆ ಶಬ್ದದಲ್ಲಿ ಕೊರತೆ ಇದ್ದೇ ಇರುತ್ತೆ. ಆದ್ದರಿಂದ ಪುರುಷತ್ವ, ವ್ಯಕ್ತಿ ಎಂಬೀ ಎರಡು ಪದಗಳನ್ನು ಯೋಚಿಸಿ ಅವುಗಳಲ್ಲಿ ಗರ್ಭಿತವಾದ ಅರ್ಥವನ್ನು ನಾವು ತಿಳಿಯಬೇಕು. ದೇವರ ಪರಿಶುದ್ಧವಾದ ಹೆಸರುಗಳು, ಆತನ ಕಾರ್ಯಗಳು, ಕೆಲಸಗಳು, ಆತನ ಲಕ್ಷಣಗಳು, ಇವುಗಳಿಂದ ಆತನಲ್ಲಿ ಈ ಸ್ವಭಾವ ಉಂಟೆಂದು ತಿಳಿಯುತ್ತೇವೆ.

ಅನೇಕ ಜನರು, ದೇವರು ನಿರ್ಗುಣನೆಂದೂ ಅಂದರೆ ಗುಣರಹಿತನೆಂದೂ ಹೇಳುತ್ತಾರೆ. ಅವರು ಹೇಳುವಂತೆ ದೇವರು ಗುಣರಹಿತನಾದ ಗುಣವುಳ್ಳ ಮನುಷ್ಯನು ದೇವರಿಗಿಂತ ಹೆಚ್ಚಿನವನಾಗುತ್ತಾನೆ. ಆದರೆ ಇದು ಒಪ್ಪತಕ್ಕ ಕಾರ್ಯವಲ್ಲ. ದೇವರೂ ಸೃಷ್ಟಿಯೂ ಒಂದೆಯೋ ಅಥವ ಬೇರೆಯೋ? ವೇದಾಂತಿಗಳು ಇದನ್ನು ಕುರಿತು ನಿಶ್ಚಯವಾಗಿ ತಿಳಿಸಿಕೊಳ್ಳಲಿಲ್ಲ. ಆತನು ಸರ್ವಸೃಷ್ಟಿಯನ್ನು ವ್ಯಾಪಿಸಿಕೊಂಡವನೆಂದೂ, ಅವರೊಳಗೆ ಆತನು ವಾಸವಾಗಿರುವ ಆತ್ಮನೆಂದೂ ಹೇಳುತ್ತಾರೆ. ಇದು ನಮ್ಮ ಬುದ್ಧಿಗೆ ಬಿಡ್ಡದ ಮಾತಾಗಿರುತ್ತದೆ. ದೇವರು ಆತ್ಮನೆಂದೂ, ಆತನು ಸರ್ವವನ್ನು ಆಳಿ ಪಾಲಿಸುತ್ತಿರುವನೆಂದೂ ಹೇಳುವದೆ ಅದು ನ್ಯಾಯವಾಗಿದೆ. ದೇವರು ಮನುಷ್ಯನಿಗೂ ಸೃಷ್ಟಿಗೂ ಪ್ರತ್ಯೇಕನಾಗಿರುವದರಿಂದಲೂ, ಸಕಲ ಸುಗುಣಗಳು ಆತನಲ್ಲಿರುವದರಿಂದಲೂ ಆತನನ್ನು ಪ್ರಕಾಶಪಡಿಸತಕ್ಕ ಲಕ್ಷಣಗಳು ಆತನು ವ್ಯಕ್ತಿಯಾದವನೆಂದು ಹೇಳುವದರಿಂದಲೂ, ನಾವು ಅದನ್ನು ಯೋಚಿಸಿ ತಿಳಿಯಬೇಕು. ಈ ಸಂಗತಿಯು ಅತಿ ಕಷ್ಟಕರವಾಗಿರುವದರಿಂದ ಅದನ್ನು ತಿಳಿಯುವ ಕೆಂದು ಅಪೇಕ್ಷಿಸುವ ವಾಚಕರು ಈ ವಿಷಯದಲ್ಲಿ ಬರೆದಿರುವ ಅನೇಕ ಪುಸ್ತಕಗಳನ್ನು ಓದಬೇಕಾಗಿದೆ.

ಎರಡನೇದು. ದೇವರು ಪರಿಶುದ್ಧನಾಗಿದ್ದಾನೆಂದು ನಾವು ತಿಳಿಯಬೇಕು. ಬೈಬಲ್ ಎಂಬ ಸತ್ಯವೇದದಲ್ಲಿಯೇ ಹೊರತು ದೇವರ ಪರಿಶುದ್ಧತ್ವವನ್ನು ಕುರಿತ ವಿವರವಾದ ಮತಗುರುಗಳೇ ಗ್ರಂಥಗಳಾಗಲೀ ಇಲ್ಲವೇ ಇಲ್ಲವೆಂದು ಹೇಳಬೇಕಾಗಿದೆ. ನಾವು ಹಿಂದೆಯೇ ಬಲ್ಲ ಮನುಷ್ಯರು ಯಾವ ದೇವರನ್ನು ನಂಬಿಕೊಂಡಿದ್ದನೆಂ ಆ ದೇವರ ಗುಣಸ್ವಭಾವಗಳು ಅವನಿಗೂ ಬರುವವೆಂದು ಪ್ರಸ್ತಾಪಿಸಿದ್ದೇವೆ. "ವಿಗ್ರಹಗಳನ್ನು ಪೂಜಿಸುವವರೂ ಅವುಗಳಲ್ಲಿ ನಂಬಿಕೆ ಇಡುವವರೂ ಅವುಗಳಂತೆಯೇ ಇದ್ದಾರೆ" ಎಂದಿದೆಯಂದ. ಕೃತಿ ವಾಕ್ಯವಿದೆ. ದೇವರು ಮಹಾ ಪರಿಶುದ್ಧನೆಂದೂ ಆರ ಪೃತ್ಯವು ಆತನ ಬಳಿ ಸೇರಕೂಡದೆಂದೂ ಎಲ್ಲರೂ ಮನಸ್ಸಾರೆ ಅಳುಕೊಂಡಿದ್ದರೆ ಅನೇಕ ಜನರು ಕೆಟ್ಟುಹೋಗುತ್ತಿರಲಿಲ್ಲ. ಸತ್ಯದೇವರ ವಿಷಯವಾದ ಪರಿಶುದ್ಧತ್ವದ ಗುಣವೇ ಅವರಿಗೆ ತಿಳಿಯದೇ ಇದೆ. ಅದರಿಂದಲೇ ಅವರು ತಮ್ಮ ಮನಸ್ಸೇಚ್ಛೆ ಪಾಪಗಳಲ್ಲಿ ಪ್ರವರ್ತಿಸುವದಕ್ಕೆ ಕಾರಣವಾಯಿತು. ಇಲ್ಲದೇ ನಾವು ಆರಾಧಿಸುತ್ತಿರುವ ಬೇರೆ ದೇವರುಗಳ ವಿಷಯದಲ್ಲಿ ಬರೆದಿರುವ ಅಪ್ರಶಸ್ತವಾದ ಕಾರ್ಯಗಳನ್ನು ಕೇಳಿ ಆನಂತರ ನಾವು ಸಹ ಪಾಪದಲ್ಲಿ ಪ್ರವರ್ತಿಸುವದಕ್ಕೆ ಧೈರ್ಯಗೊಂಡರು. ನಿಜದೇವರ ಪರಿಶುದ್ಧತೆಯು ಮನುಷ್ಯನಿಗೆ ಗೊತ್ತಾಗಿದ್ದರೆ ಎಷ್ಟುಗೂ ಅವನು ದುಷ್ಕಾರ್ಯಗಳಲ್ಲಿ ಪ್ರವರ್ತಿಸುವದಕ್ಕೆ ಎಷ್ಟು ಯಾವಾಗ ಈ ದೇಶದಲ್ಲಿರುವ ಜನರು ತಾವು ಆರಾಧಿಸುವ ದೇವರುಗಳ ವಿಷಯದಲ್ಲಿ ಅನೇಕ ಅಪ್ರಶಸ್ತವಾದ ಕಥೆಗಳನ್ನು ಕೇಳಿ ತಲಾಂತರಗಳಿಂದ ಅವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬಂದಿರುವದರಿಂದ ಪಾಪವನ್ನಾಡುವದು ಅನೇಕರಿಗೆ ಬೀತಿಯಾಗಿದೆ. ತಮ್ಮ ದೇವರುಗಳೇ ಪಾಪಕಾರ್ಯಗಳಲ್ಲಿ ಬಿದ್ದಮೇಲೆ ನಾವು ಅವರಂತೆ ಪಾಪ ಮಾಡುವದು ಅವರಿಗೂ ಚನ್ನಾಗಿ ಕಂಡಿತು. ಮನುಷ್ಯನ್ನ ಭಾವನೆ ಪಾಪದ ಕಡೆಗೆ ಯಾವಾಗಲೂ ಓಡುತ್ತದೆ. ಇಂಥಾದ್ದರಲ್ಲಿ ಅವರು ಪಾಪದಲ್ಲಿ ಬೀಳಲಿಕ್ಕೆ ಮತ್ತಷ್ಟು ಆಸ್ಪದವಾದರೆ ಹೇಳಬೇಕಾದ್ದೇನಿದೆ? ಒಬ್ಬ ಮನುಷ್ಯನು ಕೃಷ್ಣನ ಕಥೆಗಳನ್ನು ಎಷ್ಟು ಸಾರಿ ಕೇಳುತ್ತಾನೋ ಅಷ್ಟು ಅಧಿಕವಾಗಿ ಅಕೃತ್ಯಗಳಲ್ಲಿ ಸೇರ ಧೈರ್ಯಗೊಳ್ಳುತ್ತಾನೆ. ಈ ಹಿಂದು ದೇಶದಲ್ಲಿ ಅನೇಕರಿಗೆ ಈ ಕಾಲದಲ್ಲಿ ಉಂಟಾಗಿರುವ ಧೈರ್ಯವು ಇದೇ. ಮನುಷ್ಯನು ಕೆಟ್ಟುಹೋಗಲಿಕ್ಕೆ ದೇವರು ಕಾರಣನಾಗಿದ್ದಾನೋ? ಹಾಗೆ ಕಾರಣನಾಗಿದ್ದರೆ ಅಂಥವನು ನಿಜವಾದ ದೇವರಾಗಬಹುದೋ? ಬುದ್ಧಿವಂತರೇ ಇದನ್ನು ತೀರ್ಮಾನಿಸಲಿ. ನಿಜವಾದ ದೇವರನ್ನೂ ಆತನ ಮಹಾ ಪರಿಶುದ್ಧತ್ವವನ್ನೂ ಅರಿತವರಾದ ಕ್ರೈಸ್ತ ಗೌರ್ನ್ಮೆಂಟಿನವರು ಈ ಭರತಖಂಡದಲ್ಲಿ ಅನೇಕ ಕ್ರೂರತರವಾದ ಪಾಪಗಳನ್ನು ನಿಲ್ಲಿಸದೆ ಹೋಗಿದ್ದರೆ ಈ ಹಿಂದು ದೇಶವು ಇನ್ನೆಷ್ಟು ಪಾಪದಲ್ಲಿ ಬೀಳುತ್ತಿತ್ತು. ಆದ್ದರಿಂದ ನಮ್ಮನ್ನು ನಾವು ತಿಳಿದುಕೊಂಡು ದೇವರು ಮಹಾ ಪರಿಶುದ್ಧನೆಂದು ನಾವು ನಂಬಬೇಕು. ಅನೇಕರು ಇದಕ್ಕೆ ಒಪ್ಪುತ್ತಾರೆ. ದೇವರು ಪರಿಶುದ್ಧನಾದ ಮೇಲೆ ಆತನನ್ನು ಆರಾಧಿಸುವವರು ಸಹ ಪರಿಶುದ್ಧರಾಗಬೇಕೆಂದು ಅಗತ್ಯವಾಗಿ ಗ್ರಹಿಸಬೇಕಾಗಿದೆ.

ಮೂರನೇದು. ದೇವರು ಪ್ರೀತಿಯುಳ್ಳವನಾಗಿದ್ದಾನೆಂದು ನಾವು ತಿಳಿಯಬೇಕು. ಹಿಂದು ಶಾಸ್ತ್ರದಲ್ಲಿ ಯಾವ ಋಷಿಯಾದರೂ ದೇವರ ಮಹಾ ಶ್ರೇಷ್ಠ ಪ್ರೀತಿಯ ವಿಷಯ ಬರೆದ ಲಿಲ್ಲ. ಹಿಂದು ಜನರಲ್ಲಿ ಅನೇಕರು ತಾವು ಆರಾಧಿಸುತ್ತಿರುವ ವಿಗ್ರಹಗಳಿಗೆ ಭಯಂಕರವಾದ ರೂಪುಗಳನ್ನು ಮಾಡಿ, ಅದನ್ನು ನೋಡಿದ ಮಾತ್ರಕ್ಕೆ ಜನರು ಹೆದರಿಕೊಳ್ಳಬೇಕೆಂದು ತೋರಿಸುತ್ತಾರೆ. ಇಂಥವರು ದೇವರ ಪ್ರೀತಿಯನ್ನು ಏನೂ ತಿಳಿದಿಲ್ಲ. ದೇವರು ಯಾವಾಗಲೂ ಕ್ರೂರಸ್ವಭಾವದವನೆಂದು ತಿಳಿದಿದ್ದಾರೆ ಏನೂ ತಿಳಿಯದು. ಈ ದೇಶದಲ್ಲಿ ಅನೇಕರಿಗೆ ಯಾವಾಗಲೂ ಕ್ರೂರಸ್ವಭಾವವೂ, ಕೊಲೆ, ಹಿಂಸೆ ಮೊದಲಾದ ಕ್ರೂರಕೃತ್ಯಗಳನ್ನು ಮಾಡುವಷ್ಟು ಧೈರ್ಯವೂ ಇರುವಲ್ಲಿ ಇದು ಅವರು ಪೂಜಿಸುವ ದೇವರುಗಳೇ ಅಥವ ಅವರು ನೋಡುವ ವಿಗ್ರಹದ ಆಕಾರಗಳೇ ಕಾರಣವೆಂದು ಹೇಳಿದರೆ ಯಾವ ತಪ್ಪು ಇರಲಾರದು. ದೇವರ ಗುಣ ಲಕ್ಷಣಗಳಲ್ಲಿ ಆತನ ಪ್ರೀತಿಯು ಮುಖ್ಯ ವಿಶೇಷವಾದದ್ದು. ಸತ್ಯವೇದವೆಂಬ ಗ್ರಂಥದಲ್ಲಿ ದೇವರ ಮಹಾ ಪ್ರೀತಿಯನ್ನು ಕುರಿತಂಥಾ ಸಂಗತಿಗಳು ಅನೇಕ ಸ್ಥಳಗಳಲ್ಲಿ ಸಿಕ್ಕುತ್ತವೆ. ದೇವರು ಮಹಾ ಪ್ರೀತಿಯುಳ್ಳವನಾದದರಿಂದಲೇ ಈ ಲೋಕವನ್ನು ನಿರ್ಮಿಸುವದಕ್ಕೆ ಮನಸ್ಸು ಮಾಡಿದನು. ಮತ್ತು ಪಾಪಾತ್ಮನು ನ್ಯಾಯವಾಗಿ ಮೊದಲು ದೇವರನ್ನು ಹುಡುಕಬೇಕಾಗಿದೆ. ಇಂಥಾದ್ದರಲ್ಲಿ ದೇವರೇ ಮನುಷ್ಯನನ್ನು ಹುಡುಕಿ ರಕ್ಷಿಸುವದಕ್ಕೆ ಪ್ರಯತ್ನಿಸಿದನೆಂದು ಹೇಳುವಲ್ಲಿ ದೇವರ ಪ್ರೀತಿಯು ಇನ್ನು ಎಷ್ಟು ದೊಡ್ಡದೆಂದು ಹೇಳಬೇಕು? ದೇವರ ಎಲ್ಲಾ ಗುಣಲಕ್ಷಣಗಳನ್ನು ಕೇಳುವದಕ್ಕಿಂಥ ಆತನ ಪ್ರೀತಿಯನ್ನು ಕೇಳುವದು, ಪಾಪಾತ್ಮನಿಗೆ ಎಷ್ಟು ಸಂತೋಷವಾಗಿದೆ. ಗಲ್ಲಿಗೆ ಹೋಗತಕ್ಕವನಿಗೆ ಬಿಡುಗಡೆಯು ಸಮಾಚಾರವು ಎಲ್ಲವುಗಳಿಗಿಂತ ಹ್ಯಾಗೆ ಪ್ರಿಯಕರವಾದದ್ದೋ ಹಾಗೆಯೇ ದೇವರ ಪ್ರೀತಿಯ ವಾಕ್ಯಗಳು ಮನುಷ್ಯನಿಗೆ ಅತ್ಯಂತ ಪ್ರಿಯಕರವಾದದ್ದಾಗಿವೆ. ದೇವರನ್ನು ವಿಶ್ವಾಸದಿಂದ ನಂಬುವವರೆಲ್ಲರಿಗೂ ಇದೇ ಮಹಾ ಆನಂದಕರವಾದ ಶಬ್ದವು. ದೇವರು ತೋರಿಸಿದ ಆತನ ಎಲ್ಲಾ ಪ್ರೀತಿಯಲ್ಲಿ ಯೇಸುಸ್ವಾಮಿಯನ್ನು ಈ ಲೋಕಕ್ಕೆ ಪರಿಶುದ್ಧ ಯಜ್ಞವಾಗುವಂತೆ ಕಳುಹಿಸಿದ್ದು ಮಹಾ ದೊಡ್ಡ ಪ್ರೀತಿ.

ಈಗ ಸಂಕ್ಷೇಪವಾಗಿ ವಿವರಿಸಿದ ದೇವರ ವಿಷಯವಾದ ಈ ಉಪನ್ಯಾಸಗಳ ನಮ್ಮ ವಾಚಕರೆಲ್ಲರೂ ವಿಶೇಷ ಪ್ರಯೋಜನವನ್ನು ಹೊಂದುವವರಾಗಲಿ!

---

## ಸ್ವದೇಶದ ವೃತ್ತಾಂತಗಳು.

ಕಳೆದ ವಾರ ಎರಡು ದಿನ ಒಳ್ಳೇ ಮಳೆ ಸುರಿಯಿತು. ಎಲ್ಲಿ ಬಿಸಿಲು ಹೆಚ್ಚಾಗಿ ಕಾಣಿಸುತ್ತಿದೆ. ಆದರೆ ಬಿಸಿಲಿನ ತಾಪ ಇನ್ನೂ ಕಡಿಮೆಯಾಗಿಲ್ಲ. ಆರೋಗ್ಯ ಸ್ಥಿತಿ ಚನ್ನಾಗಿದೆ.

❖❖❖❖

ಮುಂದಿನ ವರುಷ ಮೈಸೂರು ಪ್ರದರ್ಶನದಲ್ಲಿ ೯೬ ಸಾವಿರ ದೂಪಾಯುಗಳನ್ನು ರೇಂದಿ ಬಟ್ಟಿನಲ್ಲಿ ಉತ್ಪತ್ತಿ ಮಾಡಬಹುದೆಂದು ಮಿ॥ ಬಿಲ್ಲೆನವರು ಕಂಟ್ರಾಕ್ಟು ಪಡೆದುಕೊಂಡಿದ್ದಾರೆ.

❖❖❖❖

ಈವರೂ ಮೈಸೂರು ಎಂಬ ಚಿನ್ನದ ಗಣಿಗಳ ಕಂಪನಿ ಷೇರುಗಳಲ್ಲಿ ೨೮,೦೦೦ ಷೇರುಗಳು ಮೈಸೂರು ಸರ್ಕಾರಕ್ಕೆ ಸೇರಿರುತ್ತವೆ. ಈ ಷೇರುಗಳನ್ನು ಲಾಭ ಬರುವಂತೆ ಜಾಗ್ರತೆಯಿಂದ ಬಿಕರಿ ಮಾಡಬೇಕೆಂದು ಸರ್ಕಾರದವರು ಲಂಡನ್ ಪಟ್ಟಣದಲ್ಲಿರುವ ತಮ್ಮ ಕಡೆ ಸಭಾಸದರಿಗೆ ಬರೆದಿರುತ್ತಾರೆ.

❖❖❖❖

ಮೇಲುಕೋಟೆಯಲ್ಲಿ ಒಂದು ಆಸ್ಪತ್ರೆಯನ್ನು ಇಡುವದಕ್ಕೆ ವರುಷಕ್ಕೆ ೭೦೦ ರೂಪಾಯಿ ಖರ್ಚಾಗುವದೆಂತಲೂ, ಅದರಲ್ಲಿ ಎಷ್ಟು ಹಣ ಕೊಡುತ್ತೀರೆಂತಲೂ ಸರ್ಕಾರದವರು ಪ್ರೆಂಚ್ ರಾಕ್ಸ್ ಸಬ್ ಡಿವಿಜನ್ ಆಫೀಸರನ್ನು ಕೇಳಿದರು. ಅದಕ್ಕೆ ಅವರು ವರುಷಕ್ಕೆ ೧೦೦ ರೂಪಾಯಿಗಿಂತಲೂ ಹೆಚ್ಚಾಗಿ ಕೊಡುವದಕ್ಕಾಗುವದಿಲ್ಲವೆಂದು ತಿಳಿಸಿದಾರೆ.

❖❖❖❖

ಈವರೂ ಪ್ಲೇಗ್ ಆಫೀಸರ್ ಕೊರಟಗೆರೆ ಪಾಂಡುರಂಗರಾವ್, ವೆಂಕಟಸ್ವಾಮಿ ಎಂಬುವರನ್ನು ಬೆಂಗಳೂರು ಜಿಲ್ಲೆಯ ಮ್ಯಾಜಿಸ್ಟ್ರೇಟರು ಮುಂದಿನ ವಿಚಾರಣೆ ಮಾಡಿ, ಅವರಿಬ್ಬರಿಂದಲೂ ಲಂಚ ತಕ್ಕೊಂಡರೆಂದು ಅವರಮೇಲೆ ಛಾರ್ಜ್ ಮಾಡಿದ್ದಾರೆ. ಈ ವಿಚಾರದಲ್ಲಿ ಅವರು ಕೇಳಿದ ಸಾಂಗತ್ಯಗಳನ್ನು ನಾಳೆ ಮಂಗಳ ವಾರ ಕೇಳುವರು.

❖❖❖❖

ಗೋವಿಂದನೂರು ಸ್ಪೆಷಲ್ ಸಬ್ ರೆಜಿಸ್ಟ್ರಾರಾದ ಮಿ॥ ಎಸ್. ನಾರಾಯಣರಾವ್, ಬಿ. ಎ. ಯವರು ದೆಹಲಿಯಲ್ಲಿ ನಡೆದ ಕಿರೀಟಧಾರಣೆಯ ದರ್ಬಾರನ್ನು ಕುರಿತು ಇಂಗ್ಲಿಷಿನಲ್ಲಿ ಒಳ್ಳೇ ೧೮ ಪದ್ಯಗಳನ್ನು ಕವನಮಾಡಿ, ಅದರ ಸುತ್ತಾ ಚಿನ್ನದ ರೇಖೆಯ ಹೂವುಗಳು ಹಾಕಿಸಿ, ಚಂದವಾಗಿ ಪ್ರಿಂಟು ಮಾಡಿಸಿ, ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿರುತ್ತಾರೆ.

❖❖❖❖

ಕಳೆದ ವಾರ ಕೋಲಾರದ ಚಿನ್ನದಗಣಿ ಪೋಲೀಸ್ ಇಲಾಖೆಯವರು ೪೪೦ ಔನ್ಸು ತೂಕವುಳ್ಳ ೧೧,೦೦೦ ರೂಪಾಯಿನ ಚಿನ್ನವನ್ನು ಬಿಕರಿಮಾಡುತ್ತಿದ್ದ ಮೂರು ಮಂದಿ ಕಳ್ಳರನ್ನು ರೈಲ್ವೆ ಸ್ಟೇಷನ್ ಬಳಿ ಹಿಡಿದರೆಂದು ತಿಳಿಸಿದ್ದೆವಷ್ಟೆ. ಈಚೆಗೆ ಪರೀಕ್ಷೆ ಮಾಡುವದರಲ್ಲಿ ಆ ಗಟ್ಟಿಯು ತಾಂಬ್ರದ ಗಟ್ಟಿಯೆಂದು ಗೊತ್ತಾದ ಹಾಗೂ, ಆ ಮೂರು ಮಂದಿಯೂ ಅವರನ್ನು ಮೋಸಮಾಡಬೇಕೆಂದು ಪ್ರಯತ್ನಪಟ್ಟಹಾಗೂ ಅಲ್ಲಿನ ಪತ್ರಿಕೆಯು ತಿಳಿಸುವದು.

❖❖❖❖

ಇಂಜನಿಯರ್ ಇಲಾಖೆಗೆ ಸೇರಿದ ೧೪ ಮಂದಿ ನೌಕರರು ರಾಜಧಾನಿಯನ್ನೆಲ್ಲಾ ಸರ್ವೆ ಮಾಡಿ, ಪುರಾಭಿವೃದ್ಧಿಯನ್ನು ಕುರಿತು ರಿಪೋರ್ಟ್ ಬರೆದಿರುತ್ತಾರೆ. ಪಟ್ಟಣದಲ್ಲೆಲ್ಲಾ ಆರೋಗ್ಯಕರವಾದ ಏರ್ಪಾಡುಗಳನ್ನು ಮಾಡಬೇಕಾದರೆ ಈ ರಿಪೋರ್ಟಿನ ಪ್ರಕಾರ ೩೦—೪೦ ಲಕ್ಷ ರೂಪಾಯಿ ಖರ್ಚಾಗಬೇಕು. ರಾಜಧಾನಿಯಾದ್ದರಿಂದ ಶ್ರೀಮನ್ ಮಹಾರಾಜರವರು ಇದನ್ನು ಆರೋಗ್ಯಕರವಾಗಿ ಮಾಡುವದಕ್ಕೆ ಸರ್ಕಾರಿ ಖಜಾನೆಯಿಂದ ಅರ್ಧ ಹಣ ಕೊಡಬಹುದು. ಉಳಿದದ್ದನ್ನು ಮ್ಯುನಿಸಿಪಾಲಿಟಿಯವರು ಒದಗಿಸಬೇಕಾದೀತು.

❖❖❖❖

ಮೊನ್ನೆ ಶನಿವಾರ ನೀಲಗಿರಿಯಿಂದ ನಮಗೆ ಬಂದ ತಂತೀವರ್ತಮಾನವೇನಂದರೆ—"ಕಳೆದ ಬುಧವಾರದ ದಿನ ಶ್ರೀಮನ್ ಮಹಾರಾಜರವರು ಕುದುರೆ ಸವಾರಿ ಮಾಡುತ್ತಾ ಪೋಲೋ ಎಂಬ ಚೆಂಡಾಟವನ್ನು ಆಡುತ್ತಿದ್ದಾಗ ಕುದುರೆಯಿಂದ ಬಿದ್ದುಬಿಟ್ಟರು. ಶರೀರವೂ ತಲೆಯೂ ಸ್ವಲ್ಪ ಅಲುಗಿದ್ದಲ್ಲದೆ ಮತ್ಯಾವ ಅಪಾಯವೂ ಅವರಿಗೆ ಸಂಭವಿಸಲಿಲ್ಲ. ದಿನೇದಿನೇ ವಾಸಿಯಾಗುತ್ತಿರುವದು. ಗಾಬರಿಪಡಲು ಯಾವ ಕಾರಣವೂ ಕಂಡುಬರುವದಿಲ್ಲ." ಈಚೆಗೆ ಅವರಿಗೆ ವಾಸಿಯಾಗಿ ಹೊರಕ್ಕೆ ಹೋಗಿಬರುತ್ತಿದ್ದಾರೆಂದು ಕೇಳುತ್ತೇವೆ.

❖❖❖❖

ಭೂಗರ್ಭ ಶಾಸ್ತ್ರವನ್ನು ಕಲಿತುಕೊಂಡು ಬರುವದಕ್ಕಾಗಿ ಮೈಸೂರು ಸರ್ಕಾರದವರು ಮಿ॥ ಬಿ. ಜಯರಾಂ ಎಂಬುವರನ್ನು ವಿಲಾಯತಿಗೆ ವೇತನ ಕೊಟ್ಟು ಕಳುಹಿಸಿದಾರೆ. ಇವರು ಕ್ರಿಕೆಟ್ ಎಂಬ ಚೆಂಡಾಟವನ್ನು ಚನ್ನಾಗಿ ಆಡತಕ್ಕವರಾದ್ದರಿಂದ ವಿಲಾಯತಿಯಲ್ಲಿ ಪಂದ್ಯ (ಮ್ಯಾಚ್) ಆಡಲು ಅವರಿಗೆ ಮೈಸೂರು ಸರ್ಕಾರದವರು ೧೯೦೪ನೇ ಇಸವಿ ನವಂಬರಿನಿಂದ ಅವರು ಹಿಂದುಸ್ಥಾನಕ್ಕೆ ಬರುವತನಕ ರಜಾ ಕೊಡುತ್ತೇವೆಂದೂ, ಅವರ ಪೂರಾ ಸಂಬಳವನ್ನು ಬಾವತಿಮಾಡುತ್ತೇವೆಂದೂ ಹುಕುಂ ಕೊಟ್ಟಿದಾರೆ.

❖❖❖❖

ಇಂಡಿಯಾ ಗೌವರ್ನಮೆಂಟಿನವರ ಸ್ಯಾಂಕ್ಷನ್ ಪಡೆದು, ಮೈಸೂರು ಸರ್ಕಾರದವರು ಮಿ॥ ಎಚ್. ಹಿಲ್ಲಿಂಗ್‌ಟನ್ ಯವರನ್ನು ಕಾರ್ಖಾನೆಗಳ ಇನ್ಸ್‌ಪೆಕ್ಟರ್ ಕೆಲಸಕ್ಕೆ ಎರಡು ವರುಷಗಳ ವರೆಗೆ ನೇಮಿಸಿಕೊಂಡಿದಾರೆ. ಇವರ ಸಂಬಳ ಮುಂತಾದ ಖರ್ಚೆಲ್ಲಾ ಸಕ್ಕರೆ, ಚರ್ಮದಗಳಿರುಗಳ ವ್ಯವಸಾಯದ ಬ್ಯಾಂಕುಗಳೇ ವಹಿಸುವವು. ಮಿ॥ ಹಿಲ್ಲಿಂಗ್‌ಟನ್ ಯವರು ಪ್ಲಾಂಟರುಗಳಿಗೆ ವ್ಯವಸಾಯ ವಿಷಯದಲ್ಲಿ ವಿವೇಕವನ್ನು ಹೇಳಿಕೊಡಬೇಕು. ಮತ್ತು ಸರ್ಕಾರದವರು ಪ್ಲಾಂಟರುಗಳಿಗೆ ಸಾಲ ಕೊಟ್ಟಿರುವ ಹಣವನ್ನು ಬರಮಾಡಿಕೊಳ್ಳುವ ವಿಚಾರದಲ್ಲಿ ಅವರು ಡೆಪ್ಯುಟಿ ಕಮಿಷನರಿಗೆ ಸಹಾಯಮಾಡಬೇಕು.

❖❖❖❖

ಶಿವಸಮುದ್ರದಲ್ಲಿ ನೀರಿನ ಪ್ರವಾಹವು ಹೊಳೆಯಲ್ಲಿ ತುಂಬಾ ಕಡಿಮೆಯಾಗಿದೆ. ನೀರಿನ ಚಕ್ರಗಳಿಗೆ ಸಾಕಾಗುವಷ್ಟಕ್ಕಿಂತಲೂ ಹೆಚ್ಚಾಗಿಲ್ಲ. ಆದ್ದರಿಂದ ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನು ಇನ್ನು ಹೆಚ್ಚುಮಾಡುವದು ಸದ್ಯಕ್ಕೆ ಅನುಕೂಲವಾಗಿಲ್ಲ. ಆದ್ದರಿಂದ ಕೋಲಾರದ ಗಣಿಗಳಲ್ಲಿ ಪ್ರತಿ ಒಂದಕ್ಕೂ ಒಂದೊಂದು ಸ್ಥಳ ಗೊತ್ತುಮಾಡಿ, ವಿದ್ಯುಚ್ಛಕ್ತಿಯನ್ನು ಹಂಚಿಕೊಡುತ್ತಿದಾರೆ. ಇನ್ನು ಮೇಲೆ ಇದನ್ನು ತಪ್ಪಿಸಬೇಕೆಂದು. ಗಣಿಗಳಲ್ಲಿ ಒಂದೇ ಒಂದು ದೊಡ್ಡ ಮನೆಯಿಂದ ವಿದ್ಯುಚ್ಛಕ್ತಿಯನ್ನು ಹಂಚಿಕೊಡಬೇಕೆಂತಲೂ, ಇದಕ್ಕಾಗಿ ಒಂದು ದೊಡ್ಡ ಮನೆಯನ್ನು ಕಟ್ಟಿ ಯಂತ್ರಗಳನ್ನು ತಂದಿಡಬೇಕೆಂತಲೂ ಈಗ ಗೊತ್ತುಮಾಡಿರುತ್ತಾರೆ.

❖❖❖❖

ಈ ತಿಂಗಳ ೬ನೇ ತಾರೀಖಿನಲ್ಲಿ ಮೇಲುಕೋಟೆಯೊಳಗೆ ಉಭಯ ವೇದಾಂತ ಪ್ರವರ್ತನ ಸಭಾ ಮೆಂಬರುಗಳು ಸಭೆಸೇರಿ ಎರಡನೇ ವಾರ್ಷಿಕ ರಿಪೋರ್ಟನ್ನು ಮಿ॥ ಆರ್. ನರಸಿಂಹಾಚಾರ್ಯರಿಂದ ಓದಿ ಕೇಳಿದರು. ಈ ಸಲ ಪರೀಕ್ಷೆಗಳಲ್ಲಿ ೧೩ ಮಂದಿ ತೇರ್ಗಡೆ ಹೊಂದಿ, ಬಹುಮಾನಗಳನ್ನು ಪಡೆದರು. ಈ ಸಭೆಯ ಕಾರ್ಯಗಳಿಗೆ ೨,೦೦೦ ರೂ. ಚಂದಾ ವಸೂಲಾಯಿತೆಂತಲೂ, ೬,೦೦೦ ರೂ. ವಸೂಲಾಗುವದರಲ್ಲಿದೆ ಎಂತಲೂ ಗೊತ್ತಾಯಿತು. ಈ ಸಭೆಗೆ ಮೈಸೂರು, ಬೆಂಗಳೂರು, ಶಿವಮೊಗ್ಗ, ಮದರಾಸು ಮುಂತಾದ ಕಡೆಗಳಿಂದ ಸುಮಾರು ೬೪೦ ಮಂದಿ ಮೆಂಬರುಗಳು ಬಂದು, ಸಭೆಯ ಕಾರ್ಯಗಳನ್ನು ಅಗಮಾಡಿಸಿದರು. ವಿದ್ವಾನ್ ಕಾಶ್ಯಪ ಜಯಂಗಾರ್ರು ಸಭಾಧ್ಯಕ್ಷರಾಗಿದ್ದರು.

---

## ಮೈಸೂರು ಗೆಜೆಟ್ ಸಂಗ್ರಹ.

ಕುಣಿಗಲ್ ತಾಲ್ಲೂಕಿಗೆ ಸೇರಿದ ಹುತ್ರಿದುರ್ಗದಲ್ಲಿ ಕಳೆದ ಎಳು ತಿಂಗಳಿಂದಲೂ ಪಟೇಲರ ಉದ್ಯೋಗ ಖಾಲಿಯಿರುವ ಹಾಗೆ ಕೆಲಸವೂ ಇಲ್ಲವೆಂದು ತಿಳಿಯುವದು.

ಮಿ॥ ಷೇಕ್ ಇಬ್ರಾಹಿಂ ಸಾಬ್ ಯವರನ್ನು ಮತ್ತೂ ಮೂರು ವರುಷ ಮೈಸೂರು ನಜರ್‌ಬಾದ್ ಮೊದಲಾ ಮ್ಯುನಿಸಿಪಲ್ ಕಮಿಷನರಾಗಿರುವಂತೆ ನೇಮಿಸಿದೆ.

ಮಿ॥ ಸಿ. ನಾರಾಯಣರಾಯರನ್ನು ರೆವೆನ್ಯೂ ಇಲಾಖೆಗೆ ವರ್ಗ ಮಾಡಿರುವದರಿಂದ ಪೋಲೀಸ್ ಸೂಪರೆಂಟ್ ಮಿ॥ ಸಿ. ನಾಡಿಗರಾಯರನ್ನು ಬೆಂಗಳೂರಿನಿಂದ ಶಿವಮೊಗ್ಗೆಗೆ ವರ್ಗಮಾಡಿದೆ.

ಸಿಟಿ ಪೋಲೀಸ್ ಇನ್ಸ್‌ಪೆಕ್ಟರ್ ಮಿ॥ ಸೈಯದ್ ಉದ್ದೀನ್ ಹುಸೇನ್ ಯವರನ್ನು ೬ನೆ ಕ್ಲಾಸ್ ಪೋಲೀಸ್ ಅಸಿಸ್ಟೆಂಟ್ ಸೂಪರೆಂಟ್ ಕೆಲಸಕ್ಕೆ ಬಡ್ತಿಮಾಡಿ ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ. ಕೂಡಲೇ ಕೆಲಸದ ಛಾರ್ಜು ಪಡೆಯತಕ್ಕದ್ದು.

ಮಿ॥ ಚಿಕ್ಕ ಸುಬ್ಬಯ್ಯನವರನ್ನು ಚನ್ನರಾಯ ಪಟ್ಟಣದ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ನೇಮಿಸಿದೆ.

ಶಿವಮೊಗ್ಗಾ ಎಕ್ಸೈಸ್ ಡಿವಿಜನ್ ಛಾರ್ಜಿನಲ್ಲಿರುವ ಅ॥ ಕಮಿಷನರ್ ಮಿ॥ ಬಿ. ರಾಮಣ್ಣನವರಿಗೆ ಏಳು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು.

೧ನೆ ಕ್ಲಾಸ್ ಪೋಲೀಸ್ ಅ॥ ಸೂಪರೆಂಟ್ ಮಿ॥ ಸಿ. ನಾರಾಯಣರಾಯರನ್ನು ಎಕ್‌ಸ್ಟ್ರಾ ಅ॥ ಕಮಿಷನರ ಕೆಲಸಕ್ಕೆ ನೇಮಿಸಿ ರೆವೆನ್ಯೂ ಇಲಾಖೆಗೆ ವರ್ಗಮಾಡಿದೆ. ಇವರು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಕೆಲಸ ಮಾಡತಕ್ಕದ್ದು.

ಇಂಜನಿಯರ್ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿವೆ:—

(೧) ಎಕ್ಸಿಕ್ಯುಟಿವ್ ಇಂಜನಿಯರ್ ಮಿ॥ ಎ. ಅರುಣಾಚಲ ಮೊದಲಿಯಾರರನ್ನು ಕಡೂರಿನಿಂದ ಮೈಸೂರು ಡಿಸ್ಟ್ರಿಕ್ಟಿಗೂ,

(೨) ಅ॥ ಇಂಜನಿಯರ್ ಮಿ॥ ಎಚ್. ಜೆ. ನೆಲ್ಲಯ್ಯನವರನ್ನು ಕಡೂರು ಡಿವಿಜನ್‌ಗೂ ವರ್ಗಮಾಡಿದೆ.

ಪಬ್ಲಿಕ್ ವರ್ಕ್ಸ್ ಸೂ॥ ಇಂಜನಿಯರ್ ಕ್ಯಾಪ್ಟನ್ ಎ. ಜೆ. ಡಿ ಲಾಟಿನಿಯರ್ ಯವರಿಗೆ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

## ಸೂರ್ಯಬಿಂಬದಲ್ಲಿರುವ ಮುದ್ರೆಗಳು.

### ಅವಕ್ಕೂ ಭೂಮಿಯ ವೃಷ್ಟಿ ಅನಾವೃಷ್ಟಿಗೂ ಇರುವ ಸಂಬಂಧ.

ಸೂರ್ಯಬಿಂಬದಲ್ಲಿ ಈಚೆಗೆ ತುಂಬಾ ವ್ಯತ್ಯಾಸಗಳುಂಟಾಗುತ್ತಿರುವಂತೆ ಕಂಡುಬರುವದಾಗಿಯೂ, ಇದರಿಂದ ಭೂಮಿಯ ಮೇಲೆ ಈ ರಾಷ್ಟ್ರದಲ್ಲಿ ಬಿಸಲಿನ ಬೇಸಿಗೆ ಬಹಳ ಹೆಚ್ಚಾಗಿರುವದೆಂತಲೂ ಉತ್ತರದೇಶದಲ್ಲಿ ಹಿಮಾಚಲದ ತಪ್ಪಲಲ್ಲಿರುವ ಸಿಂಲಾ ಪಟ್ಟಣದ ಸರ್ಕಾರೀ ಖಗೋಳ ಶಾಸ್ತ್ರಸಿದ್ಧಾಂತಿಯು ತಿಳಿಸುತ್ತಾನೆ. ಇತ್ತಲಾಗಿ ದಕ್ಷಿಣದೇಶದಲ್ಲಿರುವ ಕೋಡೈಕನಾಲ್ ಪಟ್ಟಣದ ಸರ್ಕಾರಿ ಜ್ಯೋತಿಷ್ಕನು—ಸೂರ್ಯಬಿಂಬದ ಪೂರ್ವಭಾಗದಲ್ಲಿ ಇದುವರೆಗೆ ಇದ್ದ ಮುದ್ರೆಯು ಈಗ ಬಹಳ ವಿಸ್ತಾರವಾಗಿರುವಂತೆ ಕಾಣುವದೆಂತಲೂ, ಇದು ಚನ್ನಾಗಿ ಕಾಣಿಸಿಕೊಳ್ಳುತ್ತದೆ ಎಂತಲೂ ಹೇಳಿರುವನು. ಇದನ್ನು ನೋಡಿ ಜನರು—ಹಾಗಾದರೆ ಈ ಭೂಮಿಯ ಮೇಲೆ ಅನಾವೃಷ್ಟಿ ಪ್ರಾಪ್ತವಾಗುವದೋ ಎಂಬದಾಗಿ ಕೇಳುತ್ತಾರೆ. ಈ ಮುದ್ರೆಯ ವಿಷಯವನ್ನು ಕುರಿತು ಪರಿಶೋಧನೆ ಮಾಡುತ್ತಿರುವ ಸಿದ್ಧಾಂತಿಗಳಲ್ಲಿ ಕೆಲವರು ಅದರಿಂದ ಮಳೆಯಾಗುವದಿಲ್ಲವೆಂತಲೂ, ಕೆಲವರು ಅದರಿಂದ ತುಂಬಾ ಮಳೆ ಸುರಿಯುವದೆಂತಲೂ ಭಿನ್ನಾಭಿಪ್ರಾಯ ಪಡುವವರಾಗಿದ್ದಾರೆ. ಖಗೋಳ ಸಿದ್ಧಾಂತಿಗಳಲ್ಲಿ ಪ್ರಖ್ಯಾತರೆನಿಸಿಕೊಂಡಿರುವ ಸರ್ ನಾರ್ಮನ್ ಲಾಕ್ಯರ್ ಯವರೂ, ಗತಿಸಿದ ಪ್ರೊಫೆಸರ್ ಫ್ರಾಕ್ಟರ್ ಯವರೂ ಹೇಳಿರುವ ಅಭಿಪ್ರಾಯಗಳು ಒಂದಕ್ಕೊಂದು ವಿರೋಧವಾಗಿರುತ್ತವೆ. ಒಬ್ಬರು ಸೂರ್ಯಬಿಂಬದಲ್ಲಿ ಹುಟ್ಟಿರುವ ಮುದ್ರೆಯಿಂದ ಭೂಮಿಯ ಮೇಲೆ ಇನ್ನು ಮುಂದೆ ಮಳೆ ವಿಶೇಷವಾಗಿ ಸುರಿಯುತ್ತದೆಂತಲೂ, ಇನ್ನೊಬ್ಬರು ಇನ್ನು ಮೇಲೆ ಬೇಸಿಗೆ ಕಾಲ ಹೆಚ್ಚುತ್ತಾ ಬರುವದಲ್ಲದೆ ಬಿಸಲಿನ ತಾಪವು ಅಧಿಕವಾಗುವದೆಂತಲೂ ಹೇಳಿರುವರು. ಸರ್ ಆಲಿವರ್ ಲಾಡ್ಜ್ ಎಂಬ ಇನ್ನೊಬ್ಬ ಸಿದ್ಧಾಂತಿಯು—ಸೂರ್ಯಬಿಂಬದಲ್ಲಿ ಉರಿಯೂ ಪ್ರಕಾಶವೂ ಹೆಚ್ಚಿರುವದನ್ನು ನೋಡಿದರೆ ಇನ್ನು ಒಂದೆರಡು ಸಂವತ್ಸರಗಳ ತನಕ ಭೂಪ್ರಪಂಚದ ಮೇಲೆಲ್ಲಾ ಬಿಸಲಿನ ತಾಪ ಜೋರಾಗಿರುವದೆಂದು ಕಾಣುತ್ತೆ ಎಂಬದಾಗಿ ಈಚೆಗೆ ಬರೆದಿರುತ್ತಾರೆ. ಇತ್ತಲಾಗಿ ಫ್ರಾನ್ಸ್ ರಾಜ್ಯದ ರಾಜಧಾನಿಯಾದ ಪ್ಯಾರಿಸ್ ನಗರದಲ್ಲಿ ಅಬ್ಬೇ ಮೊರೊ ಎಂಬೊಬ್ಬ ಸಿದ್ಧಾಂತಿ ಇರುವನು. ಈತನೂ ಎಲ್ಲೆಲ್ಲೂ ಹೆಸರುವಾಸಿಗೆ ಬಂದಿರುತ್ತಾನೆ. ಈ ಸಿದ್ಧಾಂತಿಯು ಪರಿಷ್ಕೆ ಮಾಡುವದರಲ್ಲಿ ಸೂರ್ಯಬಿಂಬದೊಳಗೆ ಉರಿಯು ಪ್ರಕಾಶವು ಈಚೆಗೆ ಬಹಳವಾಗಿ ಹೆಚ್ಚಿರುತ್ತದೆಂದೂ, ಅದೆಲ್ಲಾ ಒಂದೇ ಕಡೆಯಲ್ಲಿ ಸೇರಿಕೊಂಡಿರುತ್ತದೆಂತಲೂ, ಹೀಗೆ ಹೆಚ್ಚಿರುವ ಬಿಂಬಾಂಶವು ಸ್ವಲ್ಪ ಹೆಚ್ಚುಕಡಿಮೆ ೧೯,೨೫೦ ಮೈಲಿಯಷ್ಟು ವಿಸ್ತಾರವುಳ್ಳದ್ದಾಗಿದೆ ಎಂತಲೂ, ಇಂಥಾ ಬಿಂಬಾಂಶದ ವಿಸ್ತಾರವು ಇನ್ನು ಮುಂದೆ ಹೀಗೇ ಹೆಚ್ಚುತ್ತಾ ಬರುವದೆಂದು ಧೈರ್ಯವಾಗಿ ಹೇಳಬಹುದೆಂತಲೂ ಕಂಡು ಹಿಡಿದು ಪ್ರಕಟಿಸಿರುತ್ತಾನೆ. ಸರ್ ನಾರ್ಮನ್ ಲಾಕ್ಯರ್ ಯವರೂ, ಇವರ ಕುಮಾರರಾದ ಡಾಕ್ಟರ್ ವಿಲ್ಯಂ ಲಾಕ್ಯರ್ ಯವರೂ ಸೂರ್ಯಬಿಂಬದ ಪತನವನ್ನಿಟ್ಟುಕೊಂಡು, ಕೆಲವು ವರುಷಗಳಿಂದ ವಿಚಾರ ಮಾಡುತ್ತಾ ಪರಿಶೋಧಿಸುತ್ತಾ ಗುಣಿಸುತ್ತಾ ಈ ವಿಷಯದಲ್ಲಿ ತಮಗೆ ಕಂಡು ಬಂದಿರುವ ಸಂಗತಿಗಳನ್ನು ಕುರಿತು ಅನೇಕ ಸಲ ಪಂಡಿತರುಗಳ ಮಂಡಲಿಯಲ್ಲಿ ಉಪನ್ಯಾಸ ಮಾಡಿರುತ್ತಾರೆ. ಅಲ್ಲಿಂದೀಚೆಗೆ ಡಾಕ್ಟರ್ ಲಾಕ್ಯರ್ ಯವರು ಹೇಳಿರುವದೇನಂದರೆ—ಸೂರ್ಯಬಿಂಬದಲ್ಲಿ ಕಂಡುಬರುವ ಮುದ್ರೆಗಳಿಗೂ, ಈ ಭೂಪ್ರಪಂಚದ ಮೇಲುಂಟಾಗುವ ಬಿಸಲು ಮಳೆ ಹಿಮಗಳಿಗೂ ವಿಶೇಷ ಸಂಬಂಧವಿದೆ ಎಂಬ ವಿಷಯದಲ್ಲಿ ಅನುಮಾನವೇನೂ ಕಂಡುಬರುವದಿಲ್ಲ; ಆದರೆ ಮಳೆಗಾಲ ಬೇಸಿಗೆ ಕಾಲಗಳು ವಿಶೇಷವಾಗಿ ಹೆಚ್ಚಾಗುವಂತೆ ಕಾಣಬರುವದಿಲ್ಲ; ಇವೆರಡೂ ದಿನ ದಿನಕ್ಕೆ ವ್ಯತ್ಯಾಸವಾದಂತೆ ಕಂಡುಬರದೆ ಹೋದರೂ ವರುಷದಿಂದ ವರುಷಕ್ಕೆ ವ್ಯತ್ಯಾಸವಾಗೇ ಆಗುವವು.

---

## ಹೈದರಾಬಾದಿನ ಮಂತ್ರಿವರ್ಯರ ಮೇಲೆ ಬಂದಿದ್ದ ಮೊಕದ್ದಮೆಯು.

ಹೈದರಾಬಾದು ಸಂಸ್ಥಾನದ ಮಂತ್ರಿಶ್ರೇಷ್ಠರಾದ ಮಹಾರಾಜಾ ಸರ್ ಕೃಷ್ಣಪ್ರಸಾದ್ ಬಹದೂರ್ ಯಾಮಿನಸ್ ಸಲ್ತಾನತ್ ಯವರು ಗೋಸಿಯಾ ಬೇಗಂ ಎಂಬ ಯುವತಿಯನ್ನು ಅವಳ ತಾತನ ಮನೆಯಿಂದ ಕರೆದುಕೊಂಡು ಹೋಗಿ ಮೋಸದಿಂದ ಅವಳನ್ನು ಮದುವೆ ಮಾಡಿಕೊಂಡರೆಂಬದಾಗಿ ಅವಳ ತಾತನಾದ ಮೌ॥ ಸೈಯದ್ ಸಿರಾಜುಲ್ ಹಸನ್ ಎಂಬಾತನು ಮಂತ್ರಿಯವರ ಮೇಲೆ ಸಿಕಂದ್ರಾಬಾದಿನ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಿದ್ದನೆಂತಲೂ, ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ದರ್ಯಾಫ್ತು ಮಾಡಿದರೆಂತಲೂ, ಈ ಮೊಕದ್ದಮೆ ವಜಾ ಆಯಿತೆಂತಲೂ ಮೊದಲೇ ತಿಳಿಸಿರುತ್ತೇವಷ್ಟೆ. ಈ ವಿಷಯವನ್ನೆಲ್ಲಾ ಆ ಹುಡುಗಿಯ ತಾಯಿಯಾದ ಫ್ಯುರ್ನಿಸಾ ಬೇಗಂ ಎಂಬ ಗೋಷಾ ಸ್ತ್ರೀಯು ಈಚೆಗೆ ಡೇಲಿ ಮುಷೀರಿ ದೆಕ್ಕನ್ ಎಂಬ ಪತ್ರಿಕೆಗೆ ಒಂದು ಬಾತ್ಮಿಯನ್ನು ಬರೆದಿರುತ್ತಾಳೆ. ಇದರಿಂದ ಈ ಮೊಕದ್ದಮೆಯನ್ನೆಲ್ಲಾ ಸಾಂಗೋಪಾಂಗವಾಗಿ ತಿಳಿದುಕೊಳ್ಳಬಹುದು. ಆಕೆಯು ಬರೆದಿರುವದೇನಂದರೆ:—

ಈ ಮೊಕದ್ದಮೆಯ ವಿಷಯದಲ್ಲಿ ಅನೇಕ ಕುತ್ಸಿತ ಜನರು ದುರಭಿಪ್ರಾಯದಿಂದ ಸುಳ್ಳು ಸುಳ್ಳಾದ ಅನೇಕ ಸಂಗತಿಗಳನ್ನು ಹುಟ್ಟಿಸಿ ಹರಡುತ್ತಿದ್ದಾರೆ. ನಾನು ಪರ್ದಾ (ಗೋಷಾ) ಸ್ತ್ರೀಯಾಗಿರುವ ಕಾರಣ ಈ ವಿಷಯವು ನನಗೆ ಈಗತಾನೇ ತಿಳಿದುಬಂದಿದೆ. ನನ್ನ ಮಗಳು ಗೋಸಿಯಾ ಬೇಗಂ ಮೇಲೆ ಅನೇಕ ಜನರು ಇಟ್ಟುಕೊಂಡಿರುವ ದುರಭಿಪ್ರಾಯಗಳನ್ನು ಹೋಗಲಾಡಿಸಬೇಕೆಂಬ ಉದ್ದೇಶದಿಂದ ಈಗ ನಾನು ಈ ಬಾತ್ಮಿಯನ್ನು ಬರೆಯುತ್ತೇನೆ.

ಗತಿಸಿದ ಮೌ॥ ಸೈಯದ್ ಪೂರ್ದಿಲ್ ಮತ್ತು ನಾನು ಈ ಗೋಸಿಯಾ ಬೇಗಮಿನ ಜನಕ ತಂದೆ ತಾಯಿಗಳು. ಆ ಮಗುವನ್ನು ತಂದೆ ತಾಯಿಗಳಾದ ನಾವೇ ಸಾಕಿ ಸಲಹಿ ಬೆಳೆಸಿರುತ್ತೇವೆ. ತಂದೆ ಕಾಲವಾದಂದಿನಿಂದೀಚೆಗೆ ಅವಳು ನನ್ನ ಅಧೀನದಲ್ಲೇ ಇದ್ದುಕೊಂಡಿರುತ್ತಾಳೆ. ಮತ್ತು ನನ್ನ ಪತಿಯು ತೀರಿಹೋದಾರಭ್ಯ ಕಳೆದ ಎರಡು ತಿಂಗಳ ತನಕ ಅವಳು ತಾಯಿಯಾದ ನನ್ನ ಪೋಷಣೆಯಲ್ಲೇ ಇದ್ದಳು.

ಗೋಸಿಯಾ ಬೇಗಂಗೆ ಈಗ ೨೧ ವರುಷ ವಯಸ್ಸಾಗಿದೆ. ಅವಳು ದೊಡ್ಡವಳಾಗಿ ಇಲ್ಲಿಗೆ ಐದು ಸಂವತ್ಸರಗಳಾದವು. ಮೌ॥ ಸೈಯದ್ ಸಿರಾಜುಲ್ ಹಸನ್ ಎಂಬಾತನು ಅವಳ ತಾತನಾಗಿದ್ದಾಗ್ಯೂ ಅವಳು ಯಾವಾಗಲೂ ಆತನ ಪೋಷಣೆಯಲ್ಲಿರಲಿಲ್ಲ. ಮತ್ತು ಅವಳು ಯಾವಾಗಲೂ ಒಂದು ತಿಂಗಳ ತನಕಲಾದರೂ ಆತನ ಮನೆಗೆ ಹೋಗಿ ಇದ್ದು ಬಂದಿರುವದಿಲ್ಲ. ನಾನೂ ನನ್ನ ಕುಮಾರನಾದ ಮೌ॥ ಸೈಯದ್ ಮುಹಿಯುದ್ದೀನ್ ಎಂಬಾತನೂ ಈ ಹುಡುಗಿಯನ್ನು ಬಹು ಕಾಲದ ವರೆಗೆ ಬೀದರಿನಲ್ಲೇ ಇಟ್ಟುಕೊಂಡಿದ್ದೆವು. ನಾನು ಈ ನನ್ನ ಮಗಳನ್ನು ಕರೆದುಕೊಂಡು ಹೈದರಾಬಾದಿಗೆ ಬಂದದ್ದು ಅಪರೂಪ.

ಪ್ರಾಯಸ್ಥಳಾದ ಗೋಸಿಯಾ ಬೇಗಂ ಎಂಬೀ ನನ್ನ ಮಗಳನ್ನು ನಾನಾಗಿಯೇ ನನ್ನ ಮನಃಪೂರ್ತಿ ಮಹಾರಾಜಾ ಸರ್ ಕೃಷ್ಣಪ್ರಸಾದ್ ಬಹದೂರ್ ಯವರಿಗೆ ಕೊಟ್ಟು ವಿವಾಹ ಮಾಡುವದಾಗಿ ನಿಶ್ಚೈಸಿರುತ್ತೇನೆ. ಇದಕ್ಕೆ ನನ್ನ ಕುಮಾರನೂ, ಆ ಹುಡುಗಿಯೂ ಆಗಬಹುದೆಂದು ಮನಃಪೂರ್ವಕವಾಗಿ ಒಪ್ಪಿಕೊಂಡಿರುತ್ತಾರೆ. ಈ ವಿಷಯದಲ್ಲಿ ನಮಗೂ ಅವರಿಗೂ ಒಂದು ವರುಷದಿಂದ ಮಾತುಕಥೆ ನಡೆಯುತ್ತಿತ್ತು. ಈ ಸಂಗತಿಯೆಲ್ಲಾ ಮೌ॥ ಸೈಯದ್ ಸಿರಾಜುಲ್ ಹಸನ್ ಎಂಬಾತನಿಗೆ ಮಾತ್ರವೇ ಅಲ್ಲ; ನಮ್ಮ ಬಳಗ ಸಂಬಂಧಿಗಳಿಗೆಲ್ಲಾ ಚನ್ನಾಗಿ ತಿಳಿದಿರುತ್ತವೆ. ಆದರೆ ಈಚೆಗೆ ಮೌ॥ ಸೈಯದ್ ಸಿರಾಜುಲ್ ಹಸನ್ ಎಂಬಾತನು ದ್ವೇಷದಿಂದಲೋ, ದುಷ್ಟಜನರ ಚಿತಾವಣೆಯಿಂದಲೋ ಸುಳ್ಳು ಸುಳ್ಳಾಗಿ ಕಾರಣವಿಲ್ಲದ ಫಿರ್ಯಾದನ್ನು ತಂದು ಇರುತ್ತಾನೆ. ಆತನು ಮಹಾರಾಜಾ ಬಹದೂರ್ ಯವರ ಮೇಲೆ ಫಿರ್ಯಾದು ತಂದಿರುವ ವಿಷಯಗಳಲ್ಲಿ ನಿಜವಾದ ಸಂಗತಿ ಒಂದಾದರೂ ಇರುವದಿಲ್ಲ. ನಾನಾಗಲಿ, ನನ್ನ ಮಗಳಾಗಲಿ ಸಿಕಂದ್ರಾಬಾದಿಗೆ ಹೋದವರಲ್ಲ. ನನ್ನ ಮಗಳನ್ನು ಯಾವ ಲೇಡಿಯೂ ಬಲಾತ್ಕಾರ ಮಾಡಿ ಕರೆದುಕೊಂಡು ಹೋಗಲಿಲ್ಲ. ಮತ್ತು ಮೌ॥ ಸೈಯದ್ ಸಿರಾಜುಲ್ ಹಸನ್ ಎಂಬಾತನು ಯಾವಾಗಲೂ ನನ್ನ ಮಗಳನ್ನು ತನ್ನ ಪೋಷಣೆಯಲ್ಲಿ ಇಟ್ಟುಕೊಂಡಿರಲಿಲ್ಲ. ಇದಲ್ಲದೆ ಮಹಾರಾಜಾ ಸರ್ ಕೃಷ್ಣಪ್ರಸಾದ್ ಬಹದೂರ್ ಯವರು ತಮ್ಮ ವೈದಿಕ ಮತಾಭಿಪ್ರಾಯದ ವಿಷಯದಲ್ಲಿ ಎಂದಿಗೂ ನನ್ನ ಸಂಗಡ ಸುಳ್ಳಾದ ಸಂಗತಿಗಳನ್ನು ಹೇಳಿ ನನ್ನನ್ನು ಮೋಸಪಡಿಸಿರುವದಿಲ್ಲ. ಈ ಸಂಗತಿಗಳೆಲ್ಲಾ ನನ್ನ ಪೂರ್ಣ ಒಪ್ಪಿಗೆಯಿಂದಲೇ ನಡೆದಿರುತ್ತವೆ. ಮತ್ತು ನಮಗೂ ಅವರಿಗೂ ನಡೆಯುತ್ತಿದ್ದ ಮಾತುಕಥೆಗಳೆಲ್ಲಾ ಸೈಯದ್ ಸಿರಾಜುಲ್ ಹಸನ್ ಎಂಬಾತನಿಗೂ ಗೊತ್ತಾಗಿದ್ದವು.

---

## ಪ್ರಶ್ನೋತ್ತರಗಳು.

ಈ ಬೇಸಿಗೆ ಪ್ರಾರಂಭವಾದಲಾಗಾಯಿತು. ನಮ್ಮ ಪ್ರಾಂತ್ಯದಲ್ಲಿ ಚೇಳುಗಳ ಬಾಧೆಯಿಂದ ಅನೇಕ ಜನರು ನಿರಂತರವೂ ಬಹಳ ವ್ಯಥೆಪಡುತ್ತಿರುವರು. ಇದಕ್ಕಾಗಿ ಬೊಂಬಾಯಿ ಮೆಸರ್ಸ್ ಗಣೇಶ ರಾಮಚಂದ್ರ ಕಶಿರ್ ಕಂಪನಿಯಿಂದಲೂ, ಮದ್ರಾಸ್ ವಿಕ್ಟೋರಿಯಾ ಕಂಪನಿಯಿಂದಲೂ, ಇನ್ನೂ ಬೇರೆ ಬೇರೆ ಸ್ಥಳಗಳಿಂದಲೂ ಯಾವ ಔಷಧಿಯನ್ನು ತರಿಸಿದಾಗ್ಯೂ ಯಾವದರಲ್ಲಿಯೂ ಗುಣ ಹೊಂದದೆ ಬಹಳ ವ್ಯಥೆಪಡುತ್ತಿರುವರು. ಇದಕ್ಕೆ ಈ ಪತ್ರಿಕೆಯನ್ನು ಅನೇಕರು ತರಿಸಿ ನೋಡುತ್ತಿರುವದರಿಂದ ಯಾವ ವಾಚಕರೇ ಆಗಲಿ ಈ ನನ್ನ ಪ್ರಾರ್ಥನೆಯನ್ನು ದಯವಿಟ್ಟು ನೋಡಿ, ಯಾವ ಸ್ಥಳದಲ್ಲಿ ಸರಿಯಾದಂಥಾ ಅಂದರೆ ಶೀಘ್ರದಲ್ಲಿ ಗುಣಪಡಿಸತಕ್ಕಂಥಾ ಔಷಧಿಯು ದೊರೆಯುತ್ತದೆಯೋ ಆ ಸ್ಥಳವನ್ನು ಸರಿಯಾದ ಅಡ್ರೆಸ್ ಸಿನ ಮುಂದಿನ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂಬುದೇ ನನ್ನ ಸವಿನಯ ಪ್ರಾರ್ಥನೆ. ಗಂಗಾಧರಯ್ಯ.

ಉತ್ತರ.—ಮಾರ್ಟ್ ವಿನಿಗರ್ ಎಂಬ ದ್ರಾವಕವನ್ನು ಒಂದು ಸೀಸೆಯನ್ನು ತರಿಸಿಟ್ಟುಕೊಂಡು, ಚೇಳು ಕಡಿದ ಸ್ಥಳಕ್ಕೆ ಸ್ವಲ್ಪ ಸ್ವಲ್ಪವಾಗಿ ಹಾಕಿ ೨—೩ ಸಲ ಉಜ್ಜಿದರೆ ಕೂಡ್ಲೆ ಬೇನೆ ಬಾಧೆಯೆಲ್ಲಾ ಸಂಪೂರ್ಣವಾಗಿ ಗುಣವಾಗುವದು. ಈ ದ್ರಾವಕವು ಅಷ್ಟೇನೂ ಹೆಚ್ಚು ಬೆಲೆಯುಳ್ಳದ್ದಾಗುವದಿಲ್ಲ. ಔಷಧ ದ್ರಾವಕಗಳನ್ನು ಮಾರುವ ಅಂಗಡಿಗಳಲ್ಲೆಲ್ಲಾ ಇದು ಸಿಕ್ಕುವದು —ಎಡಿ.

◆◆◆◆

ಮೌ॥ ಟಾಟಾ ಯವರು ಬೆಂಗಳೂರಿನಲ್ಲಿ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸುವರೆಂತಲೂ. ಅದಕ್ಕಾಗಿ ಗವರ್ನಮೆಂಟಿನವರು ಸಹಾಯಕರೆಂತಲೂ ಪ್ರಕಟಿಸಿರುತ್ತೀರಷ್ಟೆ. ಆದರೆ ಸದರಿ ಧರ್ಮಕೆಲಸವನ್ನು ಮಾಡಿಸುವ ಧರ್ಮಾತ್ಮರಾದ ಮೌ॥ ಟಾಟಾ ಯವರ ವಿಳಾಸವ್ಯಾವದು? ಅವರ ವೃತ್ತಿ ಏನು? ಇದಕ್ಕೆಲ್ಲಾ ಅಂದರೆ ಅವರ ಸರಿಯಾದ ಅಡ್ರೆಸನ್ನು ತಿಳಿಸಿರಿ. ಗಂಗಾಧರಯ್ಯ.

ಉತ್ತರ.—ಮೌ॥ ಜೆ. ಎನ್. ಟಾಟಾ ಯವರು ಬೊಂಬಾಯಿಯಲ್ಲಿರುವ ಪಾರಸೀ ಐಶ್ವರ್ಯವಂತರು. ಇವರು ನೂಲಿನ ಕಾರ್ಖಾನೆಯೇ ಮುಂತಾದವುಗಳನ್ನಿಟ್ಟು ಐಶ್ವರ್ಯವನ್ನು ಸಂಪಾದಿಸಿದರು. ಇವರ ಕುಮಾರರಿಗೆ ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್‌ರವರಾದ ಮೌ॥ ಎಚ್. ಜೆ. ಭಾಭಾ ಯವರು ತಮ್ಮ ಕುಮಾರ್ತೆಯನ್ನು ಕೊಟ್ಟು ವಿವಾಹ ಮಾಡಿರುತ್ತಾರೆ. ಅವರ ವಿಳಾಸ ಮೌ॥ ಜೆ. ಎನ್. ಟಾಟಾ ಯವರು, ಬೊಂಬಾಯಿ. ಇಷ್ಟೇ ಸಾಕಾಗಿದೆ.—ಎಡಿ.

◆◆◆◆

ಥೀಬ್ಸ್ ಪಟ್ಟಣದ ಭೂಶೋಧನಾ ಕಾಲದಲ್ಲಿ ಒಂದು ರಥವೂ ರಥದ ಮೇಲೆ ಫೇರೋ ಎಂಬುವವರ ಶವವೂ ಸಿಕ್ಕಿರುತ್ತದೆಂತಲೂ, ಅದನ್ನು ಹೂತಿಟ್ಟು ೩,೫೦೦ ವರುಷಗಳಾದಾಗ್ಯೂ ಸ್ವಲ್ಪವೂ ಕೊಳೆಯದೆ ಇರುತ್ತದೆಂತಲೂ ಪ್ರಕಟಿಸಿರುತ್ತೀರಷ್ಟೆ. ಸದರಿ ಫೇರೋ ಎಂಬುವರು ಆಗ್ಯೆ ಯಾರಾಗಿರಬಹುದು? ಅವರು ಆ ಗೋರಿಯಲ್ಲಿ ಯಾವ ರೀತಿ ಮರಣವನ್ನು ಹೊಂದಿರಬಹುದು? ಮತ್ತು ಆ ಶವವು ೩,೫೦೦ ವರುಷಗಳಿಂದಲೂ ಸ್ವಲ್ಪವೂ ಕೊಳೆಯದೆ ಯಾವ ಆಧಾರದಿಂದ ಇತ್ತು? ಇದನ್ನು ತಿಳಿಸಿ. ಗಂಗಾಧರಯ್ಯ.

ಉತ್ತರ.—ಫೇರೋ ಎಂಬುವರು ಈಜಿಪ್ಟ್ ರಾಜ್ಯವನ್ನಾಳುತ್ತಿದ್ದ ದೊರೆಗಳು. ಆಗಿನ ಕಾಲದ ಈಜಿಪ್ಟ್ ಜನರು ಶವಗಳನ್ನು ಕಲ್ಲಿನ ಪೆಟ್ಟಿಗೆಗಳೊಳಗೆ ಸಮಾಧಿಗಳನ್ನು ತೋಡಿ ಇಡುವದೂ, ಶವಗಳು ಕೊಳೆಯದಂತೆ ಅವುಗಳಿಗೆ ಸುವಾಸನಾ ದ್ರವ್ಯಗಳನ್ನು ಬೆರಸಿ ಸವರಿ ಇಡುವದೂ ಬಹಳ ರೂಢಿಯಲ್ಲಿತ್ತು. ಯಾವ ಯಾವ ದ್ರವ್ಯಗಳನ್ನು ಎಷ್ಟೆಷ್ಟು ಬೆರಸಿ ಯಾವ ರೀತಿಯಲ್ಲಿ ತಯಾರುಮಾಡುತ್ತಿದ್ದರೋ ಈಗಿನ ಕಾಲದ ಜನರಿಗೆ ಚನ್ನಾಗಿ ತಿಳಿದು ಬಂದಿಲ್ಲ. ಅಂತು ಈ ದ್ರವ್ಯಗಳನ್ನು ಶವಗಳಿಗೆ ಸವರುವದರಿಂದ ಅವು ಕೊಳೆಯದಂತೆ ಬಹುಕಾಲ ಹಾಗೇ ಇರುತ್ತಿದ್ದವು.—ಎಡಿ.

◆◆◆◆

ಬೆಂಗಾಳಾ [illegible] ಸೇರಿದ [illegible] ಸಲ್ಲಿ ಬಗ್ಗಡವಾದ ನೀರು ಮಳೆ ಸುರಿಯಿತೆಂತ ಪ್ರಕಟಿಸಿರುತ್ತೀರಷ್ಟೆ. ಇಂಥಾ ಬಗ್ಗಡವಾದ ನೀರ ಮಳೇ ರೂಪವಾಗಿ ಸುರಿಯಲು ಕಾರಣವೇನಿರಬಹುದು? ತಿಳಿಸಿ. ಗಂಗಾಧರಯ್ಯ.

ಉತ್ತರ. ಇದೇನೂ ಆಶ್ಚರ್ಯಕರವಾದ ಸಂಗತಿಯಲ್ಲ. ಆ ಪ್ರಾಂತ್ಯಕ್ಕೆ ಸೇರಿದ ಸುತ್ತಮುತ್ತಲಿನ ಪ್ರದೇಶದಲ್ಲೆಲ್ಲಾ ಸುಂಟರಗಾಳಿ ಹುಟ್ಟಿ ಭೂಮಿಯಿಂದ ಕೆಮ್ಮಣ್ಣೆಲ್ಲಾ ಅಂತರಿಕ್ಷಕ್ಕೆ ಎತ್ತಲ್ಪಟ್ಟು, ಮಳೆ ಸುರಿಯುವಾಗ ನೀರಿನ ಸಂಗಡ ಬೆರೆತು, ಬಗ್ಗಡವಾದ ನೀರು ಮಳೆ ಸುರಿದಿರಬೇಕು. ಇಷ್ಟೇ ಅಲ್ಲದೆ ವಿಶೇಷವಾದ ಕಾರಣವೇನೂ ಇಲ್ಲ.—ಎಡಿ.

◆◆◆◆

ಅಮೇರಿಕಾ ದೇಶದಲ್ಲಿ ೪೯ ಜನಗಳು ೧೨೦ ವರುಷ ವಯಸ್ಸಿನವರೆಂತಲೂ, ೧೬ ಜನರು ೧೩೦ ವರುಷ ವಯಸ್ಸಿನವರೆಂತಲೂ, ಒಬ್ಬ ೧೫೦ ವರುಷ ವಯಸ್ಸಿನವನೆಂತಲೂ ಪ್ರಕಟಿಸಿರುತ್ತೀರಷ್ಟೆ. ಹಾಗಾದರೆ ಆ ದೇಶದಲ್ಲಿ ಜನಗಳಿಗೆ ಜೀವಮಾನವು ಜಾಸ್ತಿಯಾದಂತೆ ಗೊತ್ತಾಯಿತು. ಹೀಗೆ ಆ ದೇಶದಲ್ಲಿನ ಪ್ರಜೆಗಳಿಗೆ ಜೀವಮಾನವು ಹೆಚ್ಚಾಗಿಯೂ, ಈ ನಮ್ಮ ಹಿಂದೂ ದೇಶದಲ್ಲಿನ ಪ್ರಜೆಗಳಿಗೆ ಜೀವಮಾನವು (ಆಯುಸ್ಸು) ಬಹಳ ಕಡಿಮೆಯಾಗಿಯೂ ಅಂದರೆ, ೧೦೦ ವರುಷಕ್ಕಿಂತ ಅಧಿಕವಾಗಿ ಜೀವಿಸತಕ್ಕವರು ಬಹಳ ಅಲ್ಪವಾಗಿ ಇದ್ದಾರಷ್ಟೆ. ಹೀಗಿರಲು ಕಾರಣವೇನು?

ಗಂಗಾಧರಯ್ಯ.

ಉತ್ತರ.— ಅಮೇರಿಕ ಜನರ ಸಂತತಿಯು ಆಯುಷ್ಯವುಳ್ಳದ್ದಾದದ್ದು. ಆ ಜನರು ಚಿಕ್ಕಂದಿನಿಂದಲೂ ಮೈ ಬೆವರು ತೆಗೆಯುವಂತೆ ಕಷ್ಟದ ಕೆಲಸ ಮಾಡಿ, ಅಂಗಾಂಗಗಳನ್ನು ಗಟ್ಟಿಮಾಡಿಕೊಳ್ಳುತ್ತಾರೆ. ಅವರಲ್ಲಿ ಎಳೇತನದಲ್ಲಿ ಗಂಡಸರಾಗಲಿ ಹೆಂಗಸರಾಗಲಿ ಪ್ರಾಯಪ್ರಾಪ್ತಿಯಾಗುವವರೆಗೂ ಮದುವೆ ಮಾಡಿಕೊಳ್ಳುವದಿಲ್ಲ. ಮುಖ್ಯವಾಗಿ ಅವರು ಆರೋಗ್ಯಶಾಸ್ತ್ರಗಳಿಗನುಸಾರವಾಗಿಯೇ ಆಹಾರ, ನಿದ್ದೆ, ವ್ಯಾಯಾಮ ಮುಂತಾದವುಗಳನ್ನು ಕ್ರಮದಲ್ಲಿ ಇಟ್ಟುಕೊಂಡಿರುತ್ತಾರೆ. ಇದರಿಂದ ಅವರು ದೀರ್ಘಾಯುಗಳಾಗಿ ಬದುಕಲು ಸಹಕಾರಿಯಾಗುವದು. ಇತ್ತಲಾಗಿ ಹಿಂದೂಸ್ಥಾನವು ಉಷ್ಣ ದೇಶ; ಜನರ ದೇಹದಾರ್ಢ್ಯವು ಅಷ್ಟು ಚನ್ನಾಗಿಲ್ಲ; ಕೆಲಸ ಕಾರ್ಯಗಳನ್ನು ಮಾಡುವವರಲ್ಲಿ ಜನರು ಯಾವ ಕ್ರಮವನ್ನೂ ಇಟ್ಟುಕೊಂಡಿಲ್ಲ; ಅಂಗಸಾಧನೆ, ಆಹಾರ, ನಿದ್ರೆಗಳಲ್ಲಿ ಸ್ವೇಚ್ಛಾವಿಹಾರಿಗಳಾಗಿರುವದರಿಂದಲೂ, ಪ್ರಾಯಪ್ರಾಪ್ತಿಯಾಗುವದಕ್ಕೆ ಮೊದಲೇ ಬಾಲ್ಯದಲ್ಲಿ ಮದುವೆಗಳು ನಡೆಯುವದರಿಂದಲೂ ಜನರ ಆಯುಸ್ಸಿನ ಪರಿಮಿತಿಯು ಅದಕ್ಕೆ ತಕ್ಕಂತೆ ಕಡಿಮೆಯಾಗುತ್ತಾ ಬರುವದು.—ಎಡಿ.

◆◆◆◆

ಕಲ್ಲಿಕೋಟೆ ಮತ್ತು ಮಂಗಳೂರು, ಈ ಪ್ರಾಂತ್ಯಗಳಲ್ಲಿ ಈ ಯಾಗಸದ ಚಕ್ಕಗಳು ಜತೆ ನಿ ಮಗ್ಗಗಳು ಎಲ್ಲಿ ತಯಾರಾಗುತ್ತವೆ ಮತ್ತು ಎಲ್ಲಿರುತ್ತವೆ? ನಮಗೆ ಬೇಕಾಗಿರುತ್ತೆ. ಆದಕಾರಣ ಅದು ನಮಗೆ ಬೇಕಾದರೆ ಯಾವ ಸ್ಥಳಕ್ಕೆ ಬರೆದರೆ ಸಿಕ್ಕುತ್ತೆ? ಅದರ ಬೆಲೆ ಪಟ್ಟಿ ಮತ್ತು ನಮೂನೆ ಎಲ್ಲಿ ಸಿಕ್ಕುತ್ತೆ? ನಮಗೆ ಈ ವಿಷಯ ತಿಳಿಯದ ಪ್ರಯುಕ್ತ ತಮ್ಮಲ್ಲಿಗೆ ಬರೆದುಕೊಂಡಿರುತ್ತೇವೆ. ನಾವುಗಳು ಈಗ ೧೦ ವರ್ಷಗಳಿಂದ ಕಲ್ಲಿಕೋಟೆ, ಮಂಗಳೂರು ಈ ಪ್ರಾಂತ್ಯಗಳಲ್ಲಿ ತಯಾರಾಗುವ ಬಟ್ಟೆಗಳ ನಮೂನೆಯನ್ನು ಇಲ್ಲಿ ನೆಲಮಗ್ಗಗಳಲ್ಲಿಯೇ ಅಭ್ಯಾಸಮಾಡುತ್ತಿದ್ದೇವೆ. ಇದನ್ನು ತಪ್ಪಿಸಿ, ಮಿಶ್ರ ಮಗ್ಗಗಳನ್ನಿರಿಸಿ. ಆ ಮೂಲಕ ಈ ಕೈಗಾರಿಕೆ ಕೆಲಸವನ್ನು ವೃದ್ಧಿಪಡಿಸಬೇಕಾಗಿರುವದರಿಂದ ತಾವು ದಯವಿಟ್ಟು ಜವಾಬು ಕೊಡುತ್ತೀರಾಗಿ ನಂಬಿರುತ್ತೇವೆ. ಜಿ. ಲಕ್ಷ್ಮಣಶೆಟ್ಟಿ.

ಉತ್ತರ.—ಈ ಯಂತ್ರಗಳು ಎಲ್ಲಿ ದೊರಕುವವೋ ನಮಗೆ ತಿಳಿಯದು. ಬೇಕಾದವರು ಈ ವಿಷಯವನ್ನು ಕುರಿತು—ಮ್ಯಾನೇಜರ್, ಬಾಸಿಲ್ ಮಿಷನ್ ವೀವಿಂಗ್ ಎಸ್ಟಾಬ್ಲಿಷ್‌ಮೆಂಟ್, ಮಂಗಳೂರು, ಎಂಬೀ ವಿಳಾಸದಾರರಿಗೆ ಕಾಗದ ಬರೆದು ಅವರಿಂದ ಜವಾಬು ಪಡೆಯಬಹುದು.—ಎಡಿ.

ತಮ್ಮ ಹಿಂದಿನ ಒಂದು ಪತ್ರಿಕೆಯಲ್ಲಿ ಫ್ರೆಂಚರ ಇಂಡ್ಯಾದಲ್ಲಿರುವ ಪುದುಚೇರಿಯಲ್ಲಿ ಆರಟೀಷಿಯನ್ಸು ಎಂಬುವ ಭಾವಿಗಳಿಂದ ಕೆಳಗಿನ ಜಲವು ತಾನಾಗಿಯೇ ಉಕ್ಕಿಬರುವಂತೆ ಈ ಸೀಮೆಗಳಲ್ಲಿ ಯಾರೂ ಪ್ರಯತ್ನಪಟ್ಟದ್ದು ನೋಡಲಿಲ್ಲ. ಈಚಿಗೆ ಕಲ್ಕತ್ತೆಕ್ಕೆ ಬಂದು ಇರುವ ಮಿ॥ ವಾರ್ಮ್ಸ್ ಎಂಬುವ ಸಾಹೇಬರು ಸರ್ಕಾರದವರ ಅಪ್ಪಣೆ ಪಡದು, ಸದರಿ ಭಾವಿಯನ್ನು ತೋಡುತ್ತಾರೆಂತಾ ಬರಿಸಿ ಇದ್ದಾರೆ. ಈಚಿಗೆ ಕೆಳಗಿನ ಜಲವು ಪುದುಚೇರಿಯಲ್ಲಿ ಬಂದಂತೆ ಉಕ್ಕಿ ಬಂತೇ ಇಲ್ಲವೇ ಎಂಬುವದನ್ನೂ ಪುದುಚೇರಿಯಿಂದ ಕೆಲಸಗಾರರನ್ನು ಕರೆದುಕೊಂಡು ಬಂದು, ಸ್ವಂತವಾಗಿ ಭಾವಿತೋಡಿಸಿದರೆ ಪ್ರಯೋಜನವಾಗುತ್ತದೋ ಇಲ್ಲವೇ ಎಂಬುವದನ್ನೂ ದಯವಿಟ್ಟು ತಮ್ಮ ಪತ್ರಿಕೆಯಲ್ಲಿ ಬರಸಬೇಕೆಂತಾ ಬೇಡುವ

ಪಿ॥ ಸಂಜೀವಗೌಡ.

ಉತ್ತರ.—ಮಿ॥ ವಾರ್ಮ್ಸ್ ಯವರು ಜರ್ಮನ್ ದೇಶದಲ್ಲಿ ಸಂಚಾರ ಮಾಡಿ, ಅಲ್ಲಿನ ವ್ಯವಸಾಯಗಾರರು ಆರ್ಟೀಸಿಯನ್ ಭಾವಿಗಳನ್ನು ತೆಗೆದು ಕೊಳವೆಗಳ ಮೂಲಕ ನೀರು ಎತ್ತಿಕೊಂಡು ಸಾಗುವಳಿ ಮಾಡುತ್ತಿರುವದನ್ನು ನೋಡಿ ಬಂದಿರುತ್ತಾರೆ. ಹಿಂದುಸ್ಥಾನದಲ್ಲೂ ಅಂಥಾ ಭಾವಿಗಳನ್ನು ತೋಡುವದು ಸಾಧ್ಯವೋ ಇಲ್ಲವೋ ಎಂಬುವದನ್ನು ಅವರೇ ಪರೀಕ್ಷೆ ಮಾಡಬೇಕಾಗಿರುವದು. ಇದಕ್ಕೆ ಇಂಡಿಯಾ ಗೌವರ್ನಮೆಂಟಿನವರು ಅವರಿಗೆ ಬೇಕಾಗುವ ಸಹಾಯ ಸಂಪತ್ತನ್ನು ಒದಗಿಸಿಕೊಡುವದಕ್ಕೆ ಒಪ್ಪಿಕೊಂಡಿದಾರೆ. ಅವರ ಪ್ರಯತ್ನದ ಫಲಿತಾಂಶವು ಇನ್ನೂ ಪ್ರಕಟವಾಗಲಿಲ್ಲ. ಇತ್ತಲಾಗಿ ಪುದುಚೇರಿಯಲ್ಲಿ ಅಂಥಾ ಭಾವಿಗಳನ್ನು ತೆಗೆಯುವದೇನೋ ನಿಜ. ಆದರೆ ೨೦೦—೩೦೦—೪೦೦ ಅಡಿ ಆಳವುಳ್ಳವುಗಳಾಗಿವೆ. ಈ ಬಾವಿ ತೋಡುವದಕ್ಕೆ ಅನುಕೂಲವಾದ ಯಂತ್ರಗಳು ಬೇಕು. ಈ ಯಂತ್ರಗಳು ಮೈಸೂರು ಸಂಸ್ಥಾನದಲ್ಲಿ ಎಲ್ಲೂ ಇಲ್ಲ. ಈ ವಿಷಯವಾಗಿ ಇವಕ್ಕಿಂತಲೂ ಹೆಚ್ಚು ಸಂಗತಿಗಳನ್ನು ತಿಳಿಯಬೇಕಾದ ಜನರು ದಾವರ ಮುಂತಾದವರು—ಮೈಸೂರು ಗೌವರ್ನಮೆಂಟಿನ ವ್ಯವಸಾಯ ಶಾಸ್ತ್ರಜ್ಞರಾದ ಇಲಾಖಾ ಸೆಕ್ರೆಟರಿಯವರಿಗೆ ಪಾ॥ ಡೈರೆಕ್ಟರವರಿಗೆ ಕಾಗದ ಬರೆದು ಜವಾಬು ತರಿಸಿಕೊಳ್ಳಬಹುದು.—ಎಡಿ.

---

## ಬಾತ್ಮೀದಾರರಿಗೆ ನೋಟೀಸು.

ಬೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ವಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ಕಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ವಿಗಾ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

---

## ಕರೆಸ್‌ಪಾಂಡೆನ್ಸ್.

### ಉದ್ಯೋಗಗಳ ವಿಮರ್ಶೆ.

ಅಯ್ಯಾ,

ಕಡೂರು ಡಿಸ್ಟ್ರಿಕ್ಟ್ ಆಫೀಸಿನಲ್ಲಿಯೂ, ಈ ಡಿಸ್ಟ್ರಿಕ್ಟಿಗೆ ಸೇರಿದ ತಾಲ್ಲೂಕುಗಳಲ್ಲಿಯೂ ಖಾಲಿಯಾದ ಉದ್ಯೋಗಗಳನ್ನು ಭರ್ತಿಮಾಡುವ ಸಂದರ್ಭಗಳಲ್ಲಿ ಬಹುಕಾಲದ ವರೆಗೂ ಖಾಲಿಯಾದ ಉದ್ಯೋಗಗಳ ಕೆಳತರಗತಿಯಲ್ಲಿರುವವರ ಅನುಭವ, ಯೋಗ್ಯತೆ, ಮತ್ತು ಅವರು ಆ ತರಗತಿಯಲ್ಲಿದ್ದ ಕಾಲ, ಇವುಗಳನ್ನು ಪರೀಕ್ಷಿಸಿ, ಕ್ರಮವಾಗಿ ಮೇಲುದ್ಯೋಗಗಳನ್ನು ಹಂಚಿಕೊಡುತ್ತ ಬರುತ್ತಿರುವ ವಾಡಿಕೆಯಾಗಿತ್ತು. ಈ ವಾಡಿಕೆಯು ಸರ್ವಸಮ್ಮತವಾಗಿಯೂ ನ್ಯಾಯವಾಗಿಯೂ ಇದ್ದುದರಿಂದ ಯಾವ ವಿಧವಾದ ಗಲಭೆಗೂ ಅವಕಾಶವಿರಲಿಲ್ಲ. ಈಗ ಎರಡುವರ್ಷದಿಂದೀಚೆಗೆ ಈ ಭಾಗದಲ್ಲಿ ಪಕ್ಷಪಾತವು ನೆಡೆಯುತ್ತಾ ಬಂದು, ಈಗೀಗ ಅದು ಬಹಳ ಗಲಭೆಗೆ ಅವಕಾಶವನ್ನುಂಟುಮಾಡಿರುವದು ಅತ್ಯಂತ ಶೋಚನೀಯಕವಾಗಿದೆ. ಮೊದಲು ಮೊದಲು ಉದ್ಯೋಗಗಳನ್ನು ಭರ್ತಿಮಾಡುವಾಗ ಗಾಳಿಬಂದಾಗಲೇ ತೂರಿಕೊಳ್ಳಬೇಕು ಎಂಬ ನ್ಯಾಯವನ್ನು ಅನುಸರಿಸಿ, ಕೆಳತರಗತಿಯಲ್ಲಿದ್ದವರ ಉದ್ಯೋಗಕಾಲ, ಅನುಭವ, ಯೋಗ್ಯತೆಗಳನ್ನು ಲಕ್ಷಿಸದೆ, ಅಧಿಕಾರಿಗಳು ಸ್ವೇಚ್ಛೆಯಾಗಿ ಪ್ರವರ್ತಿಸುವುದಕ್ಕೆ ತೊಡಗಿ, ಸ್ವಸಂಬಂಧ, ಸಂಬಂಧಸಂಬಂಧ, ಸ್ವಗ್ರಾಮ ಸಂಬಂಧಗಳನ್ನು ಆರಿಸಿ, ಖಾಲಿಯಾದ ಉದ್ಯೋಗಗಳಿಗೆ ಭರ್ತಿ ಮಾಡುತ್ತಾ ಬಂದರಂತೆ. ಈ ಪ್ರಜಾತಪ್ರವೃತ್ತಿಗೆ ಬರಬಾರದೆಂಬ ಯೋಚನೆಯಿಂದಲೋ ಏನೋ, ಆ ಅನುಭವಿಗಳ ಕೆಸರಿನ ಅಂತ್ಯದಲ್ಲಿರತಕ್ಕ ಪ್ರತ್ಯಯಗಳನ್ನು ತೆಗೆದುಹಾಕಿ ಅಂದರೆ, ಆಚಾರ್, ಐಯ್ಯಂಗಾರ್, ರಾವ್ ಎಂಬವುಗಳನ್ನು ಬಿಟ್ಟುಬಿಟ್ಟು, ಕೃಷ್ಣಮೂರ್ತಿ, ರಾಮಸ್ವಾಮಿ, ಲಕ್ಷ್ಮೀಕಾಂತ ಎಂಬದಾಗಿ ಪ್ರಕೃತಿಗಳನ್ನು ಮಾತ್ರ ಪ್ರಯೋಗಿಸಿ, ಉತ್ತರಗಳನ್ನು ಬರೆಯುತ್ತಾ, ಮತ್ತು ಗೌರ್ನಮೆಂಟಿಗೂ ಅದೇ ರೀತಿ ರಿಪೋರ್ಟು ಮಾಡುತ್ತಾ ಬಂದಂತೆ ಕಾಣಿಸಿದೆ. ಎಲ್ಲಿ ನೋಡಿದರೂ ಮುಖ್ಯ ಅಧಿಕಾರಿಯ ಯಜಮಾನತ್ವಕ್ಕೆ ಆ ಮೇರೆಗೆ ಆ ಸ್ಥಳದ ಉದ್ಯೋಗಗಳಲ್ಲಿ ಹೆಚ್ಚಾಗಿ ಸೇರಿರುವುದೇ ಪ್ರಾಬಲ್ಯವಾಗುತ್ತಾ ಬಂದಿದೆ. ಈಗ ಸೇರಿದ್ದವರಲ್ಲಿ ಸಾಮಾನ್ಯದ ಪ್ರತ್ಯಯಗಳನ್ನು ತೆಗೆದು ಅಲ್ಲಿಸಿ ಹೆಸರು ಕೊಟ್ಟಿದೆ, ಬೇರೆ ಮನುಷ್ಯನು ಇಂಥವನಾದುದರಿಂದ ಸರಿ ಎಂಬ ನಿಶ್ಚಯವು ಗೊತ್ತಾಗದಂತೆ ಮಾಡುತ್ತಿದ್ದರೇ ಎಂದು ತೋರುತ್ತದೆ. ಈಗಲಾದರೋ ಈ ಭಯವು ತೊಲಗಿಹೋಗಿ ಸ್ವಕೀಯರನ್ನೂ, ಸ್ವಾಶ್ರಿತರನ್ನೂ ಸ್ವಾಶ್ರಿತಾಶ್ರಿತರನ್ನೂ ಧಾರಾಳವಾಗಿ ತಾವಿರುವ ಉದ್ಯೋಗಗಳಿಗೆ ತಂದಿರುವುದರಿಂದ ಆ ಖಾಲಿಯಾದ ಉದ್ಯೋಗಗಳನ್ನು ಹೊಂದುವದಕ್ಕೆ ತಕ್ಕ ಯೋಗ್ಯತೆಯೂ, ಅನುಭವವೂ ಉಳ್ಳ ಮತ್ತು ಬಡ್ತಿಗಾಗಿ ನಿರೀಕ್ಷಿಸಿಕೊಂಡಿದ್ದ ಬಹು ಉದ್ಯೋಗಸ್ಥರು ಮೇಲಕ್ಕೆ ಬರದೇ ಹಾಗೆಯೇ ಕೊಳೆಯುತ್ತಿರುವದಾಗಿ ತಿಳಿದು ಬಂತು. ಒಂದು ಡಿಸ್ಟ್ರಿಕ್ಟಿನ ಚಾರ್ಜಿನಲ್ಲಿರುವ ದೊಡ್ಡಮನುಷ್ಯರು ತಮ್ಮ ಅಧೀನದಲ್ಲಿರುವ ಚಿಲ್ಲರೆ ಉದ್ಯೋಗಗಳನ್ನು ಅವರವರಿಗೆ ಇರುವಂಥ ಯೋಗ್ಯತೆ, ದೀರ್ಘಕಾಲದ ಅನುಭವ, ಇವುಗಳಲ್ಲಿ ಪಕ್ಷಪಾತವಿಲ್ಲದೆ ನ್ಯಾಯವನ್ನು ತಪ್ಪದೆ ಕೊಡದೇ, ವಶೀಲಿಯಿಂದ ಕೊಡುವದಾದರೆ ತಮ್ಮ ಮೇರೆಯ ಗೌರ್ನಮೆಂಟಿಗೆ ಅರ್ಜಿಗಳು ಹೋಗುವದಕ್ಕೆ ಇದೇ ಅಸ್ಪದವಾಗುತ್ತದೆಯಲ್ಲವೇ ? ತಮ್ಮ ಡಿಸ್ಟ್ರಿಕ್ಟ ಅಧಿಕಾರದವರು ಇದನ್ನು ಕಂಡು ನ್ಯಾಯಾನುಸಾರವಾಗಿ ವರ್ತಿಸುವರಾಗಲಿ ಎಂದು ಕೋರುವೆನು.

ನ್ಯಾಯವಾದಿ.

---

### ದಾನವಿಷಯದ ವಿಚಾರ.

ಅಯ್ಯಾ,

ತಮ್ಮನ್ನು ಬೇಡುವ ಬಡಜನಗಳಿಗೆ ಭಿಕ್ಷವನ್ನಿಡುವದರಿಂದ ಪುಣ್ಯ ಬರುತ್ತದೆಂದು ಯೋಚಿಸುವ ಸಜ್ಜನರು ಅನೇಕರುಂಟು. ಆದರೆ ಅವರು ಇದರಿಂದ ಜನರುಗಳಿಗೆ ಯಾವ ಫಲವುಂಟಾಗುತ್ತದೆಂದು ಯೋಚಿಸುವದಿಲ್ಲ. ಭಿಕ್ಷವನ್ನು ಹಾಕಿದಾಗ ಭಿಕ್ಷುಗಾರನು ಪಡುವ ಸಂತೋಷವನ್ನು ಅವರು ನೋಡುತ್ತಾರೆ. ಆದರೆ ಅನಂತರ ಏನಾಗುತ್ತದೆಂದು ಅವರು ನೋಡುವದಿಲ್ಲ. ಅದು ಯಾವದೆಂದರೆ, ಪೂರ್ವಕ್ಕಿಂತಲೂ ಭಿಕ್ಷುಗಾರರ ಸಂಖ್ಯೆ ಹೆಚ್ಚುವದು. ಪೂರ್ವಕಾಲದಲ್ಲಿ ಅವಿವೇಕದಿಂದ ದಾನ ಮಾಡಿದ್ದರಿಂದಲೇ ಈಗ ಪ್ರಬಲವಾಗಿರುವ ಬಡತನ ಮತ್ತು ತಪ್ಪುಗಳುಂಟಾಗಿವೆ. ಇದರಿಂದಲೇ ಅನೇಕರು ವಿದ್ಯೆ ಕಲಿಕೆ ಇಲ್ಲದವರಾಗಿಯೂ, ವಿವೇಕವಿಲ್ಲದವರಾಗಿಯೂ, ಸೋಮಾರಿಗಳಾಗಿಯೂ ಇದ್ದಾರೆ. ಇಂಥಾವರು ಬುದ್ಧಿಶಕ್ತಿಗೂ ಕಾಯಶಕ್ತಿಗೂ ಅನುಗುಣವಾದ ಕಾರ್ಯಗಳನ್ನು ಮಾಡಿ, ಮನುಷ್ಯರಿಗೆ ಸಾಧ್ಯವಾಗಬಹುದಾದ ಸುಖವನ್ನು ಸಂಪಾದಿಸಿಕೊಳ್ಳುವದಕ್ಕೆ ಹಿಂದಿರಿದು, ಆಲಸ್ಯದಿಂದ ಶ್ರೀಮಂತರ ಈ ಪ್ರವೃತ್ತಿಯೇ ಸದ್ವೃತ್ತಿಯೆಂತಲೂ, ಸುಖಕರವಾದುದೆಂತಲೂ, ಸತ್ಯಸ್ವಭಾವಯುಕ್ತವಾದುದೆಂತಲೂ ಭಾವಿಸಿ, ನಿಶ್ಚಿಂತರಾಗಿರುವರು. ಹೀಗಾಗುವದಕ್ಕೆ ಶಾಸ್ತ್ರಾರ್ಥದ ಸಾರಾಂಶಗಳು ತಿಳಿಯದೆ ಇರೋಣವೇ ಮುಖ್ಯಕಾರಣಗಳು. ಆದುದರಿಂದ ಔದಾರ್ಯ ಗುಣಮಂತರಾ ಮಂತ್ರಿಕರಾಗಿಯೂ, ಸುಧೀಜನ ಮನೋಭೀಷ್ಟ ಕಲ್ಪವೃಕ್ಷವಾಗಿಯೂ ಇರುವ ಸಮಸ್ತ ಮಹನೀಯರಿಗೆ ವಿನಯಪೂರ್ವಕ ಸೂಚಿಸುವದೇನೆಂದರೆ—ಜನಗಳಿಗೆ ಆಲೋಚಿಸಿದೆ, ಸ್ಕೂಲುಗಳಲ್ಲಿ ಭಿಕ್ಷವನ್ನಿಡುವದಕ್ಕೆ ಬದಲಾಗಿ ಜನಗಳಿಗೆ ವಿದ್ಯಾಭಿವೃದ್ಧಿಯನ್ನು ಮಾಡಬೇಕೆಂತಲೂ ಕೆಲಸವನ್ನು ಮಾಡಿ, ತಮ್ಮ ತಮ್ಮ ಜೀವನಗಳನ್ನು ಸಂಪಾದಿಸಿಕೊಳ್ಳುವದಕ್ಕೆ ಕಲಿಸಬೇಕೆಂತಲೂ, ಮುದಿತನದಲ್ಲಿ ಜೀವನ ಮಾಡುವದಕ್ಕೆ ಅನುಕೂಲವಾಗಿ ಕೊಂಚವನ್ನು ಮಿಗಿಸಿಡುವದಕ್ಕೆ ಕಲಿಸಬೇಕೆಂತಲೂ ಸಂಪತ್ ಶಾಸ್ತ್ರಜ್ಞರು ರುಜುಮಾಡುತ್ತಾರೆ. ಆದಕಾರಣ ಈ ಸೋಮಾರಿಗಳಿಗಿಯೂ ಅವಿವೇಕಿಗಳಿಗಿಯೂ ಜನಗಳಿದ್ದರೆ ಆದರ ಫಲಗಳನ್ನು ಅವರು ಅನುಭವಿಸಲೇಬೇಕು. ಇದು ಕಠಿಣ ಹೃದಯರು ಮಾಡುವ ಕೃತ್ಯವಾಗಿ ತೋರಬಹುದಾದರೂ ಮೃದುಹೃದಯರಿಂದ ಕಷ್ಟಜನಗಳು ಸಂಪತ್ ಶಾಸ್ತ್ರಕಾರರನ್ನು ನಿಂದಿಸುತ್ತಾರೆ. ಈ ಶಾಸ್ತ್ರವು ದುರಾಲೋಚನೆಯುಳ್ಳದ್ದೆಂತಲೂ, ಘೋರವಾದದ್ದೆಂತಲೂ ಹೇಳುತ್ತಾರೆ ಮತ್ತು ಇದರಿಂದ ಸಾಹುಕಾರರಿಗೆ ಮತ್ತಷ್ಟು ಹಣ ಹೆಚ್ಚುತ್ತದೆಂತಲೂ, ಬಡವರಾದವರು ನಾಶವಾಗುತ್ತಾರೆಂತಲೂ ಹೇಳುತ್ತಾರೆ. ಇದೆಲ್ಲಾ ದೊಡ್ಡ ತಪ್ಪು. ಸಂಪತ್ ಶಾಸ್ತ್ರಕಾರನು ಸಂಪತ್ತನ್ನು ಪಡೆಯಲಿಕ್ಕೆ ಅತ್ಯಂತ ಸುಲಭವಾದ ದಾರಿ ಯಾವದೆಂದು ವಿಚಾರಮಾಡುತ್ತಿರುವಲ್ಲಿ ಧನಿಕನು ಲೋಭಿಯಂತೆ ತನ್ನ ಹಣವನ್ನು ಭದ್ರಪಡಿಸಬೇಕೆಂತಾಗಲಿ, ದುಂದುಗಾರನಂತೆ ವಿಷಯೋಪಭೋಗಗಳಿಗೆ ಖರ್ಚುಮಾಡಬೇಕೆಂತಲಾಗಲಿ, ಆತನು ಬೋಧಿಸುವದಿಲ್ಲ. ಔದಾರ್ಯದಿಂದಲೂ, ವಿವೇಕದಿಂದಲೂ ತನ್ನ ಸಂಪತ್ತನ್ನು ಖರ್ಚುಮಾಡುವ ಧನಿಕನನ್ನು ವಿರೋಧಿಸಲು ಶಾಸ್ತ್ರದಲ್ಲಿ ಯಾವ ವಿಧವಾದ ಉದ್ದೇಶವೂ ಇಲ್ಲ. ಆತನು ತನ್ನ ಬಂಧುಗಳಿಗೂ, ಸ್ನೇಹಿತರಿಗೂ ವಿವೇಕದಿಂದ ಸಹಾಯಮಾಡಬಹುದು. ವೇತನವಿಲ್ಲದ ಪುಸ್ತಕ ಭಂಡಾರಗಳು, ಸರ್ವಜನಸ್ತ್ರೀ ಪ್ರದರ್ಶನಾಲಯಗಳು ಚಿತ್ರ ಶಾಲೆಗಳು ಉದ್ಯಾನವನಗಳೂ, ಆಸ್ಪತ್ರೆಗಳೂ, ಅನಾಥಾಲಯಗಳೂ, ಇವೇ ಮೊದಲಾದ ಪ್ರತಿಷ್ಠೆಗಳನ್ನು ಜನಗಳ ಉಪಯೋಗಕ್ಕಾಗಿ ಆತನು ಮಾಡಬಹುದು. ಶಿಕ್ಷಾ ಶಿಬಿರಗಳನ್ನು ಕಲಿಸುವ ವಿದ್ಯಾಶಾಲೆಗಳನ್ನು ಆತನು ಕಲ್ಪಿಸಬಹುದು. ತಾವಾಗಿಯೇ ಸಹಾಯಮಾಡಿಕೊಳ್ಳಲು ಅಶಕ್ತರಾದವರಿಗೆ ಆಪತ್ತುಗಳು ಸಂಭವಿಸಿದರೆ ಅವರನ್ನು ಕಾಪಾಡುವದೂ, ಆಗಬೇಕಾದದ್ದನ್ನು ಕೊಡುವದೂ, ತನ್ನನ್ನು ತಾನೇ ಸಂರಕ್ಷಿಸಿಕೊಳ್ಳಲು ಶಕ್ತಿಯಿಲ್ಲದವರೂ, ವಿದ್ಯಾರ್ಥಿಗಳೂ ಇವರೇ ಧನಿಕನ ದಾನಕ್ಕೆ ಸತ್ಪಾತ್ರರು. ಸಂಪತ್ ಶಾಸ್ತ್ರಕಾರನು ಮುಖ್ಯವಾಗಿ ಹೇಳುವದು ಯಾತಕ್ಕೆಂದರೆ—ಸೋಮಾರಿತನದಿಂದ ಮೈಗಳ್ಳರಾಗಿ ಬರುವವರು ದುಡಿಯದೆ ಹಣವನ್ನು ಸಂಪಾದಿಸಿಕೊಂಡು, ಸುಖವಾಗಿ ಬಾಳಬೇಕೆಂದು ಇರುವವರಿಗೆ ಈ ಭಿಕ್ಷಾವೃತ್ತಿಯು ಇಲ್ಲ. ಒಂದುವೇಳೆ ಈ ವೃತ್ತಿಯನ್ನವಲಂಬಿಸಿದವರಿಗೆ ಕಾಯಕಷ್ಟದಿಂದ ಆಕ್ರಮಿಸಲ್ಪಟ್ಟ ಹಣ ಸಿಕ್ಕುಲಿಕ್ಕೆ ಇವರಲ್ಲಿ ಅತ್ಯಂತ ಕಷ್ಟವಾದುದಾಗಲಿ, ಆ ಸ್ಥಿತಿಯಿಂದ ಬರುವ ಆಯಾಸವು ಹಿಡಿಯಲಾಗದ ನೋವಾಗಿ, ಪ್ರಯೋಜನವಾಗುವದು, ಆದುದರಿಂದ ದುಡಿಯದ ಜನರು ಹಸಿವಿನಿಂದ ಇರಬೇಕು. ಮತ್ತು ಆದುದರಿಂದ ಇವರಿಗೆ ಸಹಾಯಮಾಡಿಗೀರದೇ ಬಿಡಬೇಕೆಂದು ಉಪದೇಶಿಸಲ್ಪಟ್ಟಿರುತ್ತದೋ, ಅಂಥವರಿಗೆ ಹಣವನ್ನುಂಟುಮಾಡುವವರಾಗಿರಕೂಡದು. ಉಪಕಾರವನ್ನು ಮಾಡಬೇಕೆಂದು ಅಪೇಕ್ಷಿಸುವಂಥವರಿಂದ ಇತರರಿಗೂ ಬಹಳ ಕೇಡು ಸಂಭವಿಸುವದೆಂದು ಯೋಚಿಸಲು ಯೋಗ್ಯತೆಯುಂಟಾಗುತ್ತದೆ.

ಜೆ. ವಿ. ಆರ್.

---

### ವಿಗ್ರಹಾರಾಧನೆ.

ಅಯ್ಯಾ,

ತಮ್ಮ ಈ ವಾರದ ವೃತ್ತಾಂತ ಪತ್ರಿಕೆಯಲ್ಲಿ ಕ್ರೈಸ್ತರು ಹೇಳುವಂತೆ ನಮ್ಮ ಮತವೆಂಬ ಉಪನ್ಯಾಸದಲ್ಲಿ ವಿಗ್ರಹಗಳನ್ನು ಆರಾಧಿಸುವ ಅಂಧಕಾರದಲ್ಲಿ ಮುಳುಗಿದ್ದಾರೆ ಎಂತಾ ಬರೆದಿರುತ್ತೀರಿ.

| ಮೈಸೂರು ಪ್ರಭುತ್ವದ | 31[illegible] | 731 | 2[illegible] | 47[illegible] | [illegible] | 94 | 63 | 72 | | | | | 25-5-1903 |
| ಕಂಚನಗಲ್ | 252 | 2[illegible] | 5[illegible] | [illegible] | | 145 | | | | | | | [illegible]-5-1903 |
| ಗುಂಡಲ್ ಡಿಪೋ | | | 2 | [illegible] | | | 100 | 132 | 1[illegible] | 500 | 1[illegible] | 30[illegible] | [illegible]-1-1903 |
| ಚಾಮರಾಜನಗರ ಡಿಪೋ | 1 | 1[illegible] | 21 | [illegible] | 2 | 1[illegible] | 3 | 1[illegible] | 1[illegible] | 69[illegible] | 51[illegible] | 762 | 20-5-1903 |
| ಹುಣಸೂರು ಡಿಪೋ | 8 | 202 | 125 | [illegible] | 17 | 3[illegible]9 | 632 | 1[illegible] | 242 | 16[illegible] | 30[illegible] | 720 | 17-[illegible]-1903 |
| ಅಂತರಸಂತೆ ಡಿಪೋ | [illegible] | 29[illegible] | 1[illegible] | 50[illegible] | 1 | 35 | 137 | 102 | 32 | 226 | [illegible] | 10 | 2[illegible]-[illegible]-1903 |
| [illegible] ಡಿಪೋ | | | | | | | 745 | 1847 | 7 | 17 | 2 | 19 | 30-5-1903 |
| [illegible] | 3[illegible] | 27[illegible] | - | | [illegible] | - | 72 | [illegible] | 1[illegible] | 138 | | | 31-5-1903 |
| [illegible] | 1[illegible] | 1[illegible] | | | | | 1[illegible] | [illegible] | [illegible] | 257 | | | 28-5-1903 |
| ಕರಗೂರು ಡಿಪೋ | 11 | 16 | 1 | 19 | 7 | 16 | 29[illegible] | 4[illegible] | 35 | 76 | 42 | 76 | 6-6-1903 |
| [illegible] | 40 | 102[illegible] | 2[illegible] | [illegible] | 2 | 5[illegible] | 29 | 150 | 4 | 14 | 1 | 11 | [illegible]-6-1903 |
| [illegible] ಡಿಪೋ | | | 10[illegible] | 310 | 9 | 7[illegible] | [illegible] | 12[illegible] | 7 | [illegible] | 137 | 141 | 2[illegible]-5-1903 |

(Sd.) C. [illegible]
District Forest Officer,
Mysore District.


## MELLIN'S FOOD.

ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಅಂಗಗಳು ಚೆನ್ನಾಗಿ ಬೆಳೆಯುವಂತೆ ಪೋಷಿಸುತ್ತದೆ.

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ [illegible] ಅಂಗಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, [illegible] ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ [illegible] ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ [illegible] ಕಾಲವಾದರೂ [illegible]

೭. ಮೆಲ್ಲಿನ್‌ರು ಮಾಡಿರುವ ಆಹಾರವು [illegible] ಆಗಾಗ ಉಪಯೋಗಿಸಬೇಕಾದಲ್ಲಿ ಬದಲು [illegible] ಶ್ರೇಷ್ಠವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಹಾಲ ಸಂಗಡ ಸೇರಿಸಿ [illegible] ಹಾಲಿಗೆ ಸಮಾನವಾಗಿ [illegible] ಮಕ್ಕಳಿಗೆ ಉಪಕಾರವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ [illegible] ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ [illegible] ಮಾಗುವದರಿಂದ ಅದು ಶೀಘ್ರ ದೇಹದ [illegible]ವಾಗುತ್ತದೆ.

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ [illegible] ಹಾಕಿದ ಕಾಲದಲ್ಲಿಯೂ ಜ್ವರದಲ್ಲಿಯೂ ಒದಗುವ ಮಿಕ್ಕಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುರುತು ಪದಾರ್ಥವನ್ನು ಯಾವದೂ ಸೇರಿಸಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ತಕ್ಕುದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ವೃದ್ಧಿಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ತಡೆ ಹಿಡಿಯುವಂತೆ ಅಡಮೆ ಮಾಡುತ್ತದೆ.

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಶಾಖೆಗಳಿಗೂ ಬರೆದು ಕೇಳಿಕೊಳ್ಳಬಹುದು.—

ಮದ್ರಾಸ್ —ಮೆ॥ ಕಾವಸ ದಿನ್‌ಶಾ ಬ್ರದರ್ಸ್.

ಬೊಂಬಾಯಿ :—ಮೆ॥ ಕೇಪಂ ಅಬೆರ್‌ಕ್ರಾಂಬಿ ಕಂಪೆನಿ.

ಕಲ್ಕತ್ತಾ :—ಮೆ॥ ಮೆಕ್ಕೆವಿಕ್ ಬಯಲ್ ಕಂಪೆನಿ.

ಕೊಲೊಂಬೋ :—ಮೆ॥ ಜಾನ್ ವಿಲ್ಸನ್ ಕಂಪೆನಿ.

ಕರಾಚಿ :—ಮೆ॥ ಎಚ್. ಜೆ. ರುಸ್ತುಂಜಿ ಕಂಪೆನಿ.

ರಂಗೂನು :—ಮೆ॥ ಓಕ್ ಕಂಪೆನಿ.

ಸಿಂಗಪೂರ್ :—ಮೆ॥ [illegible] ಕಂಪೆನಿ.



## ROBINSON'S PATENT BARLEY.

### ರಾಬಿನ್‌ಸನ್‌ರವರ ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಎಣೆಗೋಧಿಯಿಂದ ಮಾಡಿದೆ ವಸ್ತು ಸ್ವರೂಪದಿಂದ ಬದಲಿಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ಕ್ಷಾಮಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಸೇರಿಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ಕಳಪೆ ವಸ್ತುವನ್ನು ಕೆಲವರು ಮಾಡುತ್ತಾ ಇರುವ ಕಾರಣ ನಿಜವಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಗುರುತನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.



## THE FOREIGN MISSIONS AND GENERAL AGENCY.

20

ಮೇಲೆ ಕಂಡ ಏಜನ್ಸಿಯವರು ಮಿಷನರಿ ವರ್ತಕರಿಗೂ ಇತರರಿಗೂ ಇಂಗ್ಲೆಂಡಿನಲ್ಲಿ ತಯಾರಾಗುವ ಯಾವ ಸಾಮಾನನ್ನು ಬೇಕಾದರೂ ಸುಲಭವಾದ ಕಮಿಷನ್ ತೆಗೆದುಕೊಂಡು ಕಳುಹಿಸುವರು. ಆರ್ಡರು ತಲುಪಿದ ಕೂಡಲೆ ಸಾಮಾನುಗಳು ಬಹು ಜಾಗ್ರತೆಯಾಗಿ ರವಾನೆ ಮಾಡಲ್ಪಡುವವು. ಈ ವಿಷಯದಲ್ಲಿ ತಿಳಿದುಕೊಳ್ಳಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕೆಂದು ಕೋರುತ್ತೇವೆ.

A. J. Bride,
*Manager,*
*29-35, City Road, London*


## ಯನ್. ಆರ್. ವೆಂಕಟೇಸುಬ್ಬಾಚಾರ್ಯರ ಪೋಟ್ ಸಂಬಂಧವಾದ ಕನ್ನಡ ಟೆಕ್ಸ್ಟ್ ನೋಟ್ಸು.

೧೯೦೩ ನೆಯ ವರ್ಷದ್ದು. ಪ್ರವೇಶ ಪರೀಕ್ಷೆಗಳೊಡನೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವದಕ್ಕೆ ಅತ್ಯಂತ ಸಹಾಯವಾಗುವಂತೆ ರಚಿಸಿದೆ, ಕ್ರಯ ೬ ಆಣೆ.

| | |
|---|---|
| ಮೈಸೂರು ಸಂಸ್ಥಾನದ ಭೂವಿವರಣೆ | ೦—೧—೦ |
| ಮೈಸೂರು, ಮದರಾಸು ಮೊದಲಾದ್ದರ ಭೂವಿವರಣೆ | ೦—೧—೬ |
| ೨ನೆಯ ತರಗತಿಯ ಪದ್ಯಸಂಗ್ರಹದ ನೋಟ್ಸು | ೦—೯—೬ |
| ೩ನೆಯ ತರಗತಿಯ ಪದ್ಯಸಂಗ್ರಹದ ನೋಟ್ಸು | ೦—೧—೬ |
| ಪತ್ರರತ್ನಾಕರ (ಪತ್ರಕ್ರಮ, ಸ್ಟಾಂಪಿನ ವಿವರದ್ದು) | ೦—೧—೦ |
| ಲೇಖ್ಯಪತ್ರಪ್ರಕಾಶಿಕೆ (ಅರ್ಜಿಗಳ ಲೇಖನಕ್ರಮದ್ದು) | ೦—೪—೬ |

ಇವೆಲ್ಲಕ್ಕೂ ಡಿಸ್ಕೌಂಟು:—೧೦ ಕ್ಕೆ ೧, ೫೦ ಕ್ಕೆ ೭, ೧೦೦ ಕ್ಕೆ ೨೦

ವಿಳಾಸ — ೧. ಯನ್. ಆರ್. ವೆಂಕಟೇಸುಬ್ಬಾಚಾರ್ಯ, ಸುಬೋಧ ಗ್ರಂಥಾಲಯ, ಮೈಸೂರು,

೨. ಗ್ರಾಜುಯೇಟ್ಸ್ ಶಾಪು, ಮೈಸೂರು.

೩. ಮಿರ್ಜ ಯುಸುಫ್ ಡಿಪೋ, ಮೈಸೂರು.

೪. ಕೆ. ನರಸಿಂಹಯ್ಯ ಅಂಡ್ ಕೋ, ಮೈಸೂರು.

೫. ಸಂಕೇಸವೇರಿ, ಹೋರ್ ಹಾಲ್ ೧೯೪೯ ಕೆ. ಸುಬ್ಬರಾವ್, ಮೈಸೂರು.

೬. ಜಿ. ಗಣಪ್ಪ ಅಂಡ್ ಕೋ, ಬೆಂಗಳೂರು.

# ಹೊಸಪುಸ್ತಕ! ಹೊಸಪುಸ್ತಕ!!

**ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ.**

ಕಳೆದ ವರ್ಷ ಲಂಡನ್ ನಗರದಲ್ಲಿ ನಡೆದ ಈ ಮಹೋತ್ಸವವನ್ನು ವಿವರಿಸುವ ಈ ಪುಸ್ತಕವು ನೇತ್ರಾನಂದಕರವಾದ ಅನೇಕ ಚಿತ್ರಗಳಿಂದ ಶೋಭಿಸುತ್ತಿರುವದು. ಎಲ್ಲರೂ ಅವಶ್ಯವಾಗಿ ತರಿಸಿಕೊಂಡು ಓದತಕ್ಕ ಪುಸ್ತಕ. ಕ್ರಯ ೨ ಆಣೆ. ಹಾಸಲು ಪ್ರತ್ಯೇಕ.

ವಿಳಾಸ:—ಮ್ಯಾನೇಜರ್, ಬುಕ್ ಡಿಪೋ, ಮೈಸೂರು.



## ಚೇಂಬರ್ಲೆನ್ ಯವರು ಕಂಡುಹಿಡಿದ ಕೆಮ್ಮಿನ ಔಷಧವು.

20




ಶೀತ, ಕೆಮ್ಮು, ಗಂಟಲು ಗೊರಲನ್ನುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿತಕ್ಕೆ ಈ ಔಷಧವು ಬಹಳ ಪ್ರಾಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತಪಾ ಬಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಉಪೇಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಒಣಗಿಹೋಗುವದು. ಇದರಿಂದಲೇ ಅನೇಕಾನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನೌಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ನೂತನವೂ ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಈ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ಒಕ್ಕೆ ೧ ರೂ., ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ:—

ಬಿ. ವಿ. ನರಸಿಂಹಲು ಚೆಟ್ಟಿ,
ನಂ. ೭, ತಂಬೂನಾಯಕರ ಬೀದಿ,
ಮದರಾಸ್.



## ಇಸ್ತಿಹಾರ್‌ನಾಮ.

10

೧೯೦೩ನೆ ಇಸವಿ ಏಪ್ರಿಲ್ ತಾರೀಖು ೧ರ ಲಾಗಾಯತು ೧೯೦೪ನೆ ಮಾರ್ಚಿ ೩೧ರ ವರೆಗೆ ಒಂದು ವರುಷ—೧೯೦೩ನೆ ಇಸವಿ ಏಪ್ರಿಲ್ ತಾರೀಖು ೧ರ ಲಾಗಾಯತು ೧೯೦೬ನೆ ಮಾರ್ಚಿ ೩೧ರ ವರೆಗೆ ಮೂರು ವರುಷ ಅಥವಾ ೧೯೦೩ನೆ ಇಸವಿ ಏಪ್ರಿಲ್ ತಾರೀಖು ೧ರ ಲಾಗಾಯತು ೧೯೦೮ನೆ ಮಾರ್ಚಿ ತಾರೀಖು ೩೧ರ ವರೆಗೆ ಐದು ವರುಷಗಳ ಪರಿಯಂತ್ರ ಕೊಡಗು ಸೀಮೆಯಲ್ಲಿ ಕಂಟ್ರಿ ಶರಾಬು (Country Arrack) ತ್ಯಾರಿ ಅಥವಾ ಆಮದು ಮತ್ತು ಒಟ್ಟು ಬಿಕ್ರಿ ಈ ವಿಷಯಗಳ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಹೊಂದಿಕೊಳ್ಳುವ ಬಗ್ಗೆ ದರಕಾಸ್ತುಗಳು ಅಪೇಕ್ಷಿಸಲ್ಪಡುತ್ತವೆ. ತಪಶೀಲ್ ಷರತ್ತುಗಳನ್ನು ಮಡಿಕೇರಿಯಲ್ಲಿ ಇರುವ ಕೊಡಗು ಕಮೀಷನರ್ ಸಾಹೇಬರವರಿಗೆ ದರಕಾಸ್ತು ಮಾಡಿಕೊಂಡಲ್ಲಿ ತಿಳಿಯಬಹುದು.

| | |
|---|---|
| ಕೊಡಗು ಚೀಫ್ ಕಮಿಷನರ್ ಸಾಹೇಬರವರ ಆಫೀಸ್, ದರಜಿಂಗ—ಬೆಂಗಳೂರು, ೨೬ನೇ ಜನವರಿ, ೧೯೦೩. | E. Shivo, For Secretary to the Chief Commissioner. |



## ವೃತ್ತಾಂತಪತ್ರಿಕೆ.

ಸನ್ ೧೯೦೩ ನೇ ಇಸವಿ ಮೇ ತಾ॥ ೨೧ ನೇ ಗುರುವಾರ


## ಕಸಬುದಾರಿ ವಿದ್ಯಾಭಿವೃದ್ಧಿಯು.

ಮೈಸೂರು ಸಂಸ್ಥಾನ ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್‌ರವರಾದ ಮಿ॥ ಎಚ್. ಜೆ. ಭಾಭಾ ಯವರು ಈ ಸಂಸ್ಥಾನದಲ್ಲಿ ಕಸಬುದಾರಿ ವಿದ್ಯೆಗಳನ್ನೂ ಕುಶಲವಿದ್ಯೆಗಳನ್ನೂ ಅಭಿವೃದ್ಧಿಗೆ ತರಬೇಕೆಂಬ ಕುತೂಹಲಯುಕ್ತರಾಗಿ ಈಗ ಮದರಾಸ್ ಅಧಿಪತ್ಯದಲ್ಲೆಲ್ಲಾ ಸಂಚಾರವಮಾಡಿಕೊಂಡು ಬಂದು ಇರುತ್ತಾರೆ. ಇವರು ದಕ್ಷಿಣದೇಶದಲ್ಲಿರುವ ಕಸಬುಗಳ ಪಾಠಶಾಲೆಗಳನ್ನೂ ಅವುಗಳ ಕ್ರಮಗಳನ್ನೂ ಮಂದಟ್ಟುಮಾಡಿಕೊಂಡು ಬಂದರು. ಇದಲ್ಲದೆ ಈ ಸಂಸ್ಥಾನದಲ್ಲೂ ಇರುವ ಕಸಬುಗಳ ಪಾಠಶಾಲೆಗಳನ್ನು ಹೋಗಿ ತನಿಖೆ ಮಾಡಿಕೊಂಡು ಬಂದರು. ಕಡೆಯಲ್ಲಿ ಅವರು ಈ ವಿಷಯವಾಗಿ ಒಂದು ರಿಪೋರ್ಟನ್ನು ಬರೆದು ಗೌವರ್ನಮೆಂಟಿಗೆ ಕಳುಹಿಸಿಕೊಟ್ಟರು. ಈ ರಿಪೋರ್ಟಿನಲ್ಲಿ ಕಂಡುಬರುವ ಕೆಲವು ಮುಖ್ಯಾಂಶಗಳನ್ನು ಕುರಿತು ಸಂಕ್ಷೇಪವಾಗಿ ಈ ವಾರ ಪ್ರಸ್ತಾಪಮಾಡುವೆವು.

ಈಗ ಮೈಸೂರು ಸಂಸ್ಥಾನದೊಳಗೆ ಕಸಬಿನ ಪಾಠಶಾಲೆಗಳು ಏಳು ಇರುತ್ತವೆ. ಈ ಪೈಕಿ ಮೈಸೂರು, ಹಾಸನಗಳಲ್ಲಿರತಕ್ಕವುಗಳನ್ನು ಗೌವರ್ನಮೆಂಟಿನವರೇ ನಡಸುತ್ತಲೂ, ಹಾಸನ, ಮೈಸೂರು, ಮೇಲುಕೋಟೆ, ತುಮಕೂರು, ಕೋಲಾರಗಳಲ್ಲಿರುತಕ್ಕವುಗಳಿಗೆ ಗೌವರ್ನಮೆಂಟಿನವರು ಸಹಾಯದ್ರವ್ಯವನ್ನು ಕೊಡುತ್ತಲೂ ಬಂದಿದಾರೆ. ಈಗ ಈ ತರದ ಕಸಬುದಾರಿ ವಿದ್ಯೆಗಳಿಗೆ ಇನ್ನೂ ಹೆಚ್ಚು ಪ್ರೋತ್ಸಾಹಕೊಡುವದು ಅವಶ್ಯವೆಂದು ಕಾಣುವದು. ಬೇರೆಬೇರೆ ಕಸಬುಗಳನ್ನು ಬೇರೆಬೇರೆ ಸ್ಥಳಗಳಲ್ಲಿ ಜನರಿಗೆ ಕಲಿಸುವಂತೆ ಏರ್ಪಾಡುಮಾಡುವದೇ ತುಂಬಾ ಅನುಕೂಲವೆಂದು ತೋರುವದು. ಮರಗೆಲಸ, ನೆಯ್ಗೆ, ರೇಷ್ಮೆತಯಾರಿ, ಕಬ್ಬಿಣಕೆಲಸ, ಚಿತ್ತ ಬರೆಯುವದು, ಬಣ್ಣದ ಸಾಮಾನುಗಳನ್ನು ಮಾಡುವದು—ಇವೇ ಮೊದಲಾದ ಕಸಬುದಾರಿ ವಿದ್ಯೆಗಳನ್ನು ಬಾಲಕರು ಆಯಾ ಪಾಠಶಾಲೆಗಳಲ್ಲಿ ಕಲಿತು ಯೋಗ್ಯತೆಪಡೆದು, ಸ್ವತಂತ್ರವಾಗಿ ಜೀವನ ನಡಿಸಿಕೊಂಡು ಹೋಗುವಂತೆ ಆದರೆ ಗೌವರ್ನಮೆಂಟಿನವರ ಉದ್ದೇಶವು ಸಫಲವಾದೀತು. ಈ ಪಾಠಶಾಲೆಗಳನ್ನು ವರ್ತಕರ ಅಂಗಡಿಗಳಂತೆ ನಡಸಬೇಕು; ಅಂದರೆ, ಅವುಗಳಲ್ಲಿ ತಯಾರಾಗುವ ಪದಾರ್ಥಗಳು ಜನರಲ್ಲಿ ಸುಲಭವಾಗಿ ಬಿಕರಿಯಾಗಿ ಅವುಗಳಿಂದ ಪಾಠಶಾಲೆಯ ಕಾರ್ಯಗಳು ಸಾರೋದ್ಧಾರವಾಗಿ ನಡೆಯುವಂತಾಗಬೇಕು. ಹೀಗಾದರೆ ಜನರು ಬೇಗನೆ ಕಸಬುದಾರರಾಗಿ ಸಂಸ್ಥಾನದ ಐಶ್ವರ್ಯವನ್ನು ವೃದ್ಧಿಗೆ ತಂದಾರೆನ್ನುವದಕ್ಕೆ ಸಂಶಯವಿಲ್ಲ.

ಸಾಹುಕಾರಿ ಜನಗಳು ಅಲ್ಲಲ್ಲಿ ಸೇರಿ ಇಂಥಾ ಕಸಬುಗಳನ್ನು ಕಲಿಸುವ ಪಾಠಶಾಲೆಗಳನ್ನಿಡಿಸಿ ಸರಿಯಾಗಿ ನಡಿಸಿಕೊಂಡು ಬಂದರೆ ಅಂಥವುಗಳಿಗೆ ಗೌವರ್ನಮೆಂಟಿನವರು ತುಂಬಾ ಸಂತೋಷದಿಂದ ದ್ರವ್ಯಸಹಾಯ ಮಾಡುತ್ತೇವೆಂಬದಾಗಿ ತಿಳಿಸುತ್ತಾರೆ. ಆಯಾ ಪಾಠಶಾಲೆಯಲ್ಲಿ ತಯಾರಾಗುವ ಪದಾರ್ಥಗಳ ಬಿಕರಿಯಿಂದಲೇ ಇತರ ಖರ್ಚನ್ನು ಮಾಡಿಕೊಳ್ಳಬಹುದಾಗಿದೆ. ಇದಕ್ಕೋಸ್ಕರ ಗೌವರ್ನಮೆಂಟಿನವರು ಚನ್ನಪಟ್ಟಣ, ಸಾಗರ, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ ಎಂಬೀ ಸ್ಥಳಗಳಲ್ಲಿ ಮೊದಲು ಬಳ್ಳೊಳೇ ಕಸಬುದಾರಿ ಪಾಠಶಾಲೆಗಳನ್ನು ಸ್ಥಾಪಿಸುವರು. ಈಗಲೇ ಆ ಪೈಕಿ ಕೆಲವು ಕಡೆಗಳಲ್ಲಿ ಅಂಥಾ ಪಾಠಶಾಲೆಗಳಿರುತ್ತವೆ. ಅವುಗಳನ್ನು ಸರಿಯಾಗಿಯೂ, ಕ್ರಮವಾಗಿಯೂ ಬದಲಾಯಿಸಿ ಇಡಬೇಕು. ಇನ್ನು ಕೆಲವು ಕಡೆಗಳಲ್ಲಿ ಪರ್ಗಮನುಷ್ಯರನ್ನು ಕೂಡಿಸಿ, ಈ ವಿಷಯವನ್ನು ಅವರಿಗೆಲ್ಲಾ ಹೇಳಿ, ಅವರಿಂದ ಇಂಥಾ ಕಸಬಿನ ಪಾಠಶಾಲೆಗಳನ್ನು ಇಟ್ಟು ನಡಿಸುವಹಾಗೆ ಅವರಿಗೆ ಪ್ರೋತ್ಸಾಹ ಕೊಡಬೇಕು. ಮರಗೆಲಸವನ್ನೂ ಕಬ್ಬಿಣ ಕೆಲಸವನ್ನೂ ಹೇಳಿಕೊಡುವ ಪಾಠಶಾಲೆಗಳಲ್ಲಿ ಹೊಸಮಾದರಿ ನೇಗಿಲು, ಗಾಡಿ, ವ್ಯವಸಾಯಕ್ಕೆ ಅನುಕೂಲಿಸುವ ಇತರ ಪದಾರ್ಥಗಳನ್ನು ಅಗ್ಗವಾಗಿ ಮಾಡಿಸುವಂತೆ ಏರ್ಪಾಡು ಮಾಡುವದು ಬಹಳ ಅಪೇಕ್ಷಣೀಯವಾದದ್ದು.

ಮೈಸೂರು ಸಂಸ್ಥಾನದಲ್ಲಿ ಕಲಿತುಕೊಳ್ಳುವದಕ್ಕೆ ಅವಕಾಶವಿಲ್ಲದೆ ಇರುವಂಥಾ ಕುಶಲವಿದ್ಯೆಗಳನ್ನು ಕಲಿಯುವದಕ್ಕೆ ಇಷ್ಟಪಡುವವರನ್ನು—ಸುಮಾರು ೧೫—೨೦ ಮಂದಿಯನ್ನು—ತಲಾ ೧೫—೨೦ರೂ. ಸಂತೆ ವೇತನಕೊಟ್ಟು ಕಲಿತುಕೊಂಡು ಬರುವಂತೆ ಮದರಾಸಿಗಾಗಲಿ, ಬೊಂಬಾಯಿಗಾಗಲಿ ಗೌವರ್ನಮೆಂಟಿನವರು ಕಳುಹಿಸಿಕೊಡುವದಕ್ಕೆ ಸಿದ್ಧರಾಗಿರುತ್ತೇವೆಂದು ಹೇಳುತ್ತಾರೆ. ಈ ಭಾಗದಲ್ಲೂ ಚುರುಕುಬುದ್ಧಿಯುಳ್ಳ ಹುಡುಗರು ಸಹಾಯಮೊಂದಿ ಮುಂದಕ್ಕೆ ಬರಬಹುದಾಗಿದೆ.

ಗೌವರ್ನಮೆಂಟಿನವರು ಹೊಳೇನರಸೀಪುರ, ದೊಡ್ಡಬಳ್ಳಾಪುರ, ಚಿಕ್ಕನಾಯಕನಹಳ್ಳಿ, ಮೊಳಕಾಲ್ಮುರು ಎಂಬೀ ಸ್ಥಳಗಳಲ್ಲಿ ನೆಯ್ಗೆಯನ್ನು ಕಲಿಸುವ ಪಾಠಶಾಲೆಗಳನ್ನು ಅಪಮಾಯಿಷಿ ತರೀಖು ಎರಡು ವರುಷಗಳ ವರೆಗೆ ಇಟ್ಟು ನಡಸುವರು. ಈ ಪಾಠಶಾಲೆಯೊಳಗೆ ನೆಯ್ಗೆಯೊಂದೇ ಅಲ್ಲ; ಮರಗೆಲಸವನ್ನೂ, ಚಿತ್ರ ಬರೆಯುವದನ್ನೂ, ಕಾಲಕ್ರಮದಲ್ಲಿ ಬಣ್ಣ ಹಾಕುವದನ್ನೂ ಕಲಿಸಿಕೊಡುವರು.

ಅತ್ತಲಾಗಿ ಬೆಂಗಳೂರಿನ ಹತ್ತರ ಮೆ॥ ತಾತಾಯವರು ರೇಷ್ಮೆ ತಯಾರಿಗಾಗಿ ಒಂದು ಭಾರೀ ಕಾರ್ಖಾನೆಯನ್ನು ಸ್ಥಾಪಿಸಿರುತ್ತಾರಷ್ಟೆ. ಇದುವರೆಗೆ ಅವರು ೨೫,೦೦೦ ರೂಪಾಯಿಗಿಂತಲೂ ಹೆಚ್ಚಾಗಿಯೇ ಅದಕ್ಕೆ ಖರ್ಚುಮಾಡಿರುವರು, ಆದರೆ ತವಲ್ ವರೆಗೂ ಅದರಲ್ಲಿ ಅವರಿಗೆ ವಿಶೇಷ ಲಾಭವೇನೂ ಕಂಡುಬಂದಿಲ್ಲ. ನಮ್ಮ ಸರ್ಕಾರದವರು ಈ ಕಾರ್ಖಾನೆಗೆ ಕೆಲವು ಸ್ಕೂಲ್ ಮಾಸ್ತರುಗಳನ್ನು ವೇತನಕೊಟ್ಟು ಕಳುಹಿಸಿ, ರೇಷ್ಮೆತಯಾರಿ, ಹುಳು ಸಾಕುವದು, ನೂಲು ತೆಗೆಯುವದು, ಹಿಪ್ಪನೇರಲೇ ಬೆಳೆಯುವದು, ಇವೇ ಮುಂತಾದ ಭಾಗಗಳನ್ನೆಲ್ಲಾ ಸಾಕ್ಷಾತ್ತಾಗಿ ನೋಡಿ ಕಲಿತುಕೊಂಡು ಬರುವಂತೆ ಮಾಡುವರು. ಅವರು ಕಲಿತುಕೊಂಡು ತಮ್ಮ ತಮ್ಮ ಗ್ರಾಮಗಳಿಗೆ ಹೋದಮೇಲೆ ರೈತರೇ ಮುಂತಾದವರಿಗೆ ಈ ಕಸಬನ್ನು ವೃದ್ಧಿಪಡಿಸುವದಕ್ಕೆ ಅನುಕೂಲವಾದ ಸಲಕರಣೆಗಳನ್ನು ಹೇಳಿಕೊಡಲು ಸಹಾಯವಾದೀತೆನ್ನುವದರಲ್ಲಿ ಸಂಶಯವಿಲ್ಲ.

ಬೆಂಗಳೂರಿನಲ್ಲಿ ಮಿ॥ ಲಕ್ಷ್ಮೀ ನಾರಸ್ಯಯ್ಯನವರು ವ್ಯಾಪಾರ ವಿಷಯ, ಲೆಕ್ಕಾಚಾರ, ಭೂಗೋಳ ಮುಂತಾದವುಗಳನ್ನು ಕಲಿಸುವಂಥಾ ಒಂದು ಪಾಠಶಾಲೆಯನ್ನು ಇಟ್ಟಿದಾರೆ. ಇದು ಬಹಳ ತೃಪ್ತಿಕರವಾದ ಸ್ಥಿತಿಯಲ್ಲಿದೆ ಎಂತಲೂ ಜನರಿಗೆ ಇದರಿಂದ ತುಂಬಾ ಪ್ರಯೋಜನವುಂಟಾಗುತ್ತಿದೆ ಎಂತಲೂ ಕೇಳಿ ಸಂತೋಷಪಡುವೆವು. ಇದಕ್ಕೆ ಗೌವರ್ನಮೆಂಟಿನವರು ತಿಂಗಳಿಗೆ ೩೦ ರೂಪಾಯಿ ನಂತೆ ದ್ರವ್ಯ ಸಹಾಯಮಾಡುತ್ತಿದಾರೆ. ಈ ಪಾಠಶಾಲೆಯ ಪುರೋಭಿವೃದ್ಧಿಯನ್ನು ಚನ್ನಾಗಿ ನೋಡಿಕೊಳ್ಳುತ್ತಾ ಇರಬೇಕೆಂದು ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ತಿಳಿಸುವರು.

ಈ ಪ್ರಕಾರ ಮೈಸೂರು ಸರ್ಕಾರದವರು ಕಸಬುದಾರಿ ವಿದ್ಯೆಗಳನ್ನು ತಮ್ಮ ಪ್ರಜೆಗಳಿಗೆ ಕಲಿಸಿಕೊಡಲು ಕುತೂಹಲಗೊಂಡಿರುವದಕ್ಕಾಗಿ ನಾವು ತುಂಬಾ ಸಂತೋಷಪಡುವೆವು. ಈಗ ಹಿಂದುಸ್ಥಾನವು ಏಳಿಗೆಗೆ ಬರಬೇಕಾದರೆ ಜನರು ಸಧಾರಣ ವಿದ್ಯೆಯನ್ನು ಸ್ವಲ್ಪಮಟ್ಟಿಗೆ ಕಲಿತು, ತರುವಾಯ ಯಾವುದಾದರೊಂದು ಕಸಬನ್ನು ಅವಲಂಬಿಸಿನಡಬೇಕು. ಇದು ಬಿಟ್ಟು ಜನರು ಸುಮ್ಮನೆ ವಿದ್ಯೆಕಲಿತು ಸರ್ಕಾರಿ ಉದ್ಯೋಗಗಳಿಗೆ ಎದುರುನೋಡುತ್ತಾ ಕಾಲಕಳೆಯುವದರಿಂದ ಪ್ರಯೋಜನವಿಲ್ಲ.

## ಕ್ರೈಸ್ತಮತಾಧಾರದ ಬೋಧನಾ ಸಿದ್ಧಾಂತಗಳು.

III ನೇ ಭಾಗ. ಮನುಷ್ಯನನ್ನು ಕುರಿತದ್ದು.

ಈ ದೇಶದಲ್ಲಿರುವ ಬೇರೆ ಬೇರೆ ಜನರು ಮನುಷ್ಯ ಜನ್ಮದ ವಿಷಯವು ಕಡೆಯಲ್ಲಿ ಇದಕ್ಕೆ ಉಂಟಾಗುವದಕ್ಕಿರುವ ಗತಿಯ ವಿಷಯವೂ, ದೇವರಿಗೂ ಮನುಷ್ಯನಿಗೂ ಯಾವ್ಯಾವ ಸಂಬಂಧಗಳುಂಟು, ಎಷ್ಟು ವ್ಯತ್ಯಾಸಗಳುಂಟು. ಮನುಷ್ಯ ಜನ್ಮವು ಯಾವ ರೀತಿಯಲ್ಲಿ ಉಂಟಾಯಿತು. ಇದರಿಂದ ಮನುಷ್ಯನ ಮೇಲೆ ಬಿದ್ದಿರುವ ಕರ್ತವ್ಯಾಂಶಗಳೇನು ಎಂಬೀ ಮೊದಲಾದ ಸಂಗತಿಗಳನ್ನು ಬೇರೆ ಬೇರೆ ರೀತಿಯಲ್ಲಿ ತಮಗೆ ತೋಚಿದಂತೆ ಹೇಳುತ್ತಾರೆ. ಅಲ್ಪಗ್ರಮಾಂತರಗಳಲ್ಲಿ ವಾಸಮಾಡುವ ಜನರಾದರೂ ತಮ್ಮ ನಿರ್ಮಾಣವನ್ನೂ ಅದರ ಉದ್ದೇಶವನ್ನೂ ತಮ್ಮ ಜೀವಿತ ಕಾಲದಲ್ಲಿ ಒಂದು ಸಾರಿಯಾದರೂ ಧ್ಯಾನಿಸುತ್ತಾರೆ ಇಲ್ಲವೋ ಎಂಬ ಸಂಶಯವುಂಟು. ಮೃಗಗಳು ಈ ಪ್ರಪಂಚದಲ್ಲಿ ಹ್ಯಾಗೆ ಕೆಲವು ದಿವಸಗಳು ಕಾಲಕಳೆ ಮಾಡುತ್ತವೋ, ಅವು ಬದುಕಿರುವ ಕಾಲದ ವರೆಗೂ ತಿನ್ನುವದು ಕುಡಿಯುವದು ಮಲಗುವದು ಕೆಲಸಮಾಡುವದು ಹ್ಯಾಗೆ ಅವುಗಳ ಪಾಲಿಗೆ ಬಂತೋ ಅದರಂತೆ ಅನೇಕಾನೇಕ ಜನರು ತಮ್ಮ ವಿಷಯದಲ್ಲಿ ಅತಿ ನಿಶ್ಚಿಂತರಾಗಿದ್ದಾರೆಂದು ಹೇಳಬಹುದು. ಆದರೆ ಮನುಷ್ಯರಾದ ನಾವು ನಮ್ಮ ವಿಷಯ ಸರಿಯಾಗಿ ತಿಳುಕೊಳ್ಳುವದಕ್ಕೆ ಪ್ರಯತ್ನಿಸಿದರೆ ಪಾರಮಾರ್ಥಿಕ ರೀತಿಯಾಗಿ ನಾವು ಎಷ್ಟೋ ಗೌರವಾಗಿ ಜೀವಿಸಬೇಕಾಗಿದೆ ಎಂಬ ವಿಚಾರವು ನಮಗೆ ತಿಳಿಯುವದು.

ಭಗವಂತನು ಈ ಜಗತ್ತಿನಲ್ಲಿರುವ ಎಲ್ಲಾ ಇತರ ಜೀವರುಗಳನ್ನು ನಿರ್ಮಾಣಮಾಡಿರುವಹಾಗೆ ಮನುಷ್ಯನನ್ನು ಸಹ ಉಂಟುಮಾಡಿ

ದ್ದಾನೆ. ಆದರೆ ದೇವರಿಂದ ಸೃಷ್ಟಿಸಲ್ಪಟ್ಟ ಎಲ್ಲಾ ಜೀವಜಂತುಗಳಿಗೂ ಮನುಷ್ಯನಿಗೂ ಅಪಾರವಾದ ವ್ಯತ್ಯಾಸವಿರುತ್ತದೆ. ದೇವರ ವಿಷಯವಾದ ತಿಳುವಳಿಕೆಯು ಯಾವ ಪಶುಗಳಿಗಾದರೂ, ಪಕ್ಷಿಗಳಿಗಾದರೂ ಇಲ್ಲವೇ ಇಲ್ಲ. ಯಾಕೆಂದರೆ ದೇವರ ವಿಷಯವಾಗಿ ಆಲೋಚಿಸಿ ತಿಳುಕೊಳ್ಳತಕ್ಕ ಶಕ್ತಿಗಳನ್ನು ಸೃಷ್ಟಿಸಿ ಅವಕ್ಕೆ ಕೊಡಲಿಲ್ಲ. ಆದ್ದರಿಂದ ಅವು ಈ ಲೋಕದಲ್ಲಿ ಯಾವಾಗ್ಯೂ ನಿತ್ಯಾಭಾವದಲ್ಲಿ ಬದುಕುವದು ನ್ಯಾಯವಾಗಿದೆ. ಆದರೆ ಜಗತ್ಕರ್ತನು ಮನುಷ್ಯನನ್ನು ಸೃಷ್ಟಿಸಿದಾಗ್ಯೆ ತನ್ನ ಹೋಲಿಕೆಯನ್ನು ಈ ಅಪರೂಪ ನರಜನ್ಮಕ್ಕೆ ಕೊಟ್ಟಿದ್ದಾನೆಂದು ನಂಬುತ್ತೇವೆ. ಇದಕ್ಕೆ ಪರಿಶುದ್ಧ ವೇದದ ಮೊದಲನೇ ಪುಸ್ತಕವಾಗಿರುವ "ಉತ್ಪತ್ತಿ" ಎಂಬ ಗ್ರಂಥದಲ್ಲಿ ವಿವರಣೆ ಉಂಟು. ಈ ಪುಸ್ತಕದಲ್ಲಿ ಆದಿಭಾಗದಲ್ಲಿ, ದೇವರು ಮನುಷ್ಯನನ್ನು ತನ್ನ "ರೂಪು" ಮತ್ತು "ಹೋಲಿಕೆ" ಗಳಲ್ಲಿ ಉಂಟುಮಾಡಿದ್ದಾನೆಂದು ಹೇಳಿ ಇದೆಯಷ್ಟೆ. ರೂಪು, ಹೋಲಿಕೆ ಎಂಬ ಪದಗಳು ಶಾರೀರಕ ರೀತಿಯಲ್ಲಿ ಮಾತ್ರ ಅನ್ವಯಿಸಿಕೊಳ್ಳಬಾರದು. ಯಾಕೆಂದರೆ ಭಗವಂತನು ನಮ್ಮಂತೆ ರಕ್ತ ಮಾಂಸಗಳನ್ನುಳ್ಳವನಾಗಿರುವವನಲ್ಲ. ಈ ಮೇಲ್ಕಂಡ ಎರಡು ಪದಗಳು ಮನುಷ್ಯನ ಒಳ ಸ್ವಭಾವವನ್ನು ಸೂಚಿಸುವವುಗಳಾಗಿವೆ. ಅಂದರೆ ಪ್ರಾರಂಭದಲ್ಲಿ ದೇವರು ಮನುಷ್ಯೋತ್ಪತ್ತಿಯನ್ನು ಮಾಡಿದಾಗ ದೇವರು ಮನುಷ್ಯನಲ್ಲಿ ಒಂದು ಶ್ರೇಷ್ಠವಾದ ಜೀವಾತ್ಮವನ್ನಿಟ್ಟು ಅದಕ್ಕೆ ದೇವರ ಹೋಲಿಕೆಯನ್ನು ಅಂದರೆ ಜ್ಞಾನ, ಪರಿಶುದ್ಧತ್ವ, ಸ್ವತಂತ್ರತೆ ಮೊದಲಾದ ಸುಲಕ್ಷಣಗಳನ್ನು ಕೊಟ್ಟದ್ದಲ್ಲದೆ, ದೇವರಿಗೆ ಪ್ರತಿನಿಧಿಯಂತಿರುವ ಒಂದು ಮನಸ್ಸಾಕ್ಷಿಯನ್ನೂ ಇಟ್ಟು ಕೊಟ್ಟನು. ಮನುಷ್ಯನೊಳಗೆ ಇರುವ ಮನಸ್ಸಾಕ್ಷಿ ಎಂಬ ರಾಯನು, ಮನುಷ್ಯನು ನಡಿಸುವ ಕೆಟ್ಟತನಗಳಿಗೂ, ಪಾಪಗಳಿಗೂ ಹೋಗದಂತೆ ಒಳಗಿದ್ದುಕೊಂಡು ಎಚ್ಚರಿಕೆ, ಭಯವನ್ನು ಹುಟ್ಟಿಸುತ್ತಾನೆ. ಅನೇಕರು, ತಾವು ಸ್ವತಂತ್ರರಾಗಿರುವದರಿಂದ, ದೇವರ ರಾಜಪ್ರತಿನಿಧಿಯಂತಿರುವ ಈ ಸಾಕ್ಷಿಯನ್ನು ಅಣಗಿಸಿ ಬಿಟ್ಟು ದುಷ್ಕಾರ್ಯಗಳಿಗೆ ಪ್ರವೇಶಿಸುತ್ತಾರೆ. ಈವರೆಗೂ ಪ್ರಸ್ತಾಪಿಸಿದ ಈ ಸಂಗತಿಗಳಿಂದ ಮನುಷ್ಯ ನಿರ್ಮಾಣ, ಪ್ರಾಣಿವರ್ಗಗಳಿಗಿಂತ ಅತ್ಯಂತ ಶ್ರೇಷ್ಠವಾದದ್ದೆಂದೂ, ಮನುಷ್ಯ ಜೀವರಾಶಿಗಳಲ್ಲಿ ಮನುಷ್ಯನು ಪ್ರತ್ಯೇಕವಾದವನೆಂದು ತಿಳಿಯಬರುವದು.

ಮನುಷ್ಯನನ್ನು, ದೇವರು ಇಷ್ಟು ಘನವಾದವನನ್ನಾಗಿ ಉಂಟುಮಾಡಿದ್ದರಲ್ಲಿ ಆತನ ಉದ್ದೇಶವೇನಿರಬಹುದೆಂದು ವಿಚಾರಿಸಬೇಕು. ದೇವರು ಈ ಲೋಕದಲ್ಲಿ ಯಾವ ಯಾವ ವಸ್ತುವನ್ನಾದರೂ ವ್ಯರ್ಥವಾಗಿ ಉಂಟುಮಾಡಲಿಲ್ಲ. "ದೇವರು ಉಂಟುಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಒಳ್ಳೇದಾಗಿ ದೇವರಿಗೆ ಕಂಡು ಬಂತು" ಎಂದು ಶ್ರುತಿಯಲ್ಲಿ ಬರೆದಿದೆ. ಹೀಗಿದ್ದ ಮೇಲೆ ಸೃಷ್ಟಿಯಲ್ಲಿ ರತ್ನದಂತೆ ಶೋಭಿಸುವ ಮನುಷ್ಯನನ್ನು ದೇವರು ಯಾತಕ್ಕೆ ಉಂಟುಮಾಡಬೇಕು? ಕೆಲವು ಕಾಲ ಈ ಲೋಕದಲ್ಲಿ ಬದುಕಿ ತಿಂದು ಕುಡಿದು ಆನಂದಪಟ್ಟು ನಷ್ಟವನ್ನು ಗೈದು, ಅನ್ನ ಸಂಪಾದಿಸಿ ಮಿಗಿಸಿಟ್ಟು ಒಂದು ದಿನ ಒಂದು ದಿನ ಸತ್ತಂತೆ ನಾಶವಾಗುವದಕ್ಕಾಗಿಯೋ? ಇಲ್ಲವೇ ವಿದ್ಯೆ ಕಲಿತು ಪಂಡಿತನೆಂಬ ಹೆಸರು ಹೊಂದಿ ಇಲ್ಲವೇ ಹುದ್ದೇದಾರನಾಗಿ ದೊಡ್ಡ ಸಂಬಳದಿಂದಲೂ ಪ್ರಖ್ಯಾತನೆನಿಸಿಕೊಂಡು, ವಯಸ್ಸಾದ ಮೇಲೆ ಬೇರೆ ಒಂದು ದಿನ ಒಂದು ವರುಷ ಸತ್ತಂತೆ ನಾಶವಾಗುವದಕ್ಕಾಗಿಯೋ! ಯಾತಕ್ಕೆ? ಇವನ್ನೇ ಮುಖ್ಯವಾಗಿ ಯೋಚಿಸಿ, ತನ್ನ ನಿರ್ಮಾಣದ ಸಂಕಲ್ಪವೇನಾಗಿರಬಹುದೆಂದು ಯೋಚಿಸಬೇಕು. ಇದಕ್ಕೆ ಪರಿಶುದ್ಧ ವೇದವೆಂಬ ಗ್ರಂಥದಲ್ಲಿ, ಮನುಷ್ಯನು ತನಗಿರುವ ಐಶ್ವರ್ಯದ ಬಲಗಳಿಂದ ತನ್ನನ್ನು ತಿಳಿದು ತನ್ನ ಸೃಷ್ಟಿಕರ್ತನನ್ನು ತಿಳಿದು ತನ್ನ ಸೃಷ್ಟಿಕನಿಗೆ ಭಯಪಟ್ಟು ಆರಾಧಿಸಿ ಆತನ ಸೇವೆ ಮಾಡತಕ್ಕ ಜೀವಿಗನನ್ನಾಗಿದ್ದಾನೆಂದು ಇದೆಯಾಗಿಯೇ ಆತನು ನಿರ್ಮಾಣವಾದನೆಂದು ಹೇಳಿಯದೆ ಮನುಷ್ಯರಲ್ಲಿ ಈ ತಿಳುವಳಿಕೆಯೇ ಬಹು ಅಪರೂಪವಾಗಿದೆ. ಒಂದು ವೇಳೆ ಅಲ್ಪಸ್ವಲ್ಪ ಇದ್ದರೂ ಅದನ್ನು ಕುರಿತು ಚಿಂತಿಸುವದೇ ಇಲ್ಲ. ಮನುಷ್ಯನು ತನ್ನ ಇಷ್ಟದಿಯಾಗಿ ಸ್ವತಂತ್ರವಾಗಿ ಬದುಕಲಿಕ್ಕೆ ದೇವರು ಇವನನ್ನು ಬಿಟ್ಟಿಲ್ಲ. ಇವನಿಗೆ ದೇವರು ಜವಾಬ್ದಾರನಾಗಿದ್ದಾನೆ. ತನ್ನ ಕ್ರಿಯೆ, ನಡವಳಿಕೆ ಕೆಲಸ ಇವುಗಳಿಗಾಗಿ ದೇವರಿಗೆ ಜವಾಬ್ ಕೊಡಬೇಕಾಗಿದೆ. ಆದರೆ ಮನುಷ್ಯರ ನಡವಳಿಕೆಯನ್ನು ನೋಡಿದರೆ ಅವರಲ್ಲಿ ಎಷ್ಟೋ ನಿರ್ಭಂತೆಯು ಅನವರಿಸಿಕೊಂಡಿದೆ. ಅವರ ತಿಳುವಳಿಕೆಯು ಕಣ್ಣು ಕುರುಡಾಗಿದೆ. ಕಿವಿ ಮಂದವಾಗಿದೆ. ಅನೇಕರು, ತಾವು ತಮ್ಮ ಕರ್ತನಿಗೆ ಜವಾಬ್ದಾರರೆಂದು ತಿಳಿಯದೆ ತಮ್ಮ ನಿರ್ಮಾಣವೇ ದೇವರ ಒಂದು ಅಂಶವೆಂದೂ, ತಾವು ಏನುಮಾಡಿದರೂ ಅದು ದೇವರು ಮಾಡಿಸುವಂಥಾದ್ದೆಂದು ವಾದಿಸುವವರಾಗಿದ್ದಾರೆ.

ವೇದಾಂತದ ಪ್ರಕಾರ, ಮನುಷ್ಯನ ಆತ್ಮನೂ ಪರಮಾತ್ಮನಾದ ದೇವರೂ ಒಂದೇ ಎಂದೂ ಇದು ಅಜ್ಞಾನವಶಾತ್ ಮನುಷ್ಯನಿಗೆ ತಿಳಿಯದೆ ಇದೆ ಎಂದೂ ತಿಳಿದುಬರುತ್ತದೆ. ಚನ್ನಾಗಿ ಯೋಚನೆಮಾಡಿ ನೋಡಿದರೆ ಇದು ಒಂದು ವಿಧವಾದ ದೈವದೂಷಣೆಯಾಗಿರುತ್ತೇ ಹೊರ್ತು ಮತ್ತೆ ಬೇರೆ ಅಲ್ಲ. ಮನುಷ್ಯನ ಆತ್ಮವೂ ಪರಮಾತ್ಮನೂ ಒಂದೇಯಾದರೆ ಆ ಪಕ್ಷದಲ್ಲಿ ದೇವರು ಅಖಂಡನಲ್ಲವೆಂತಲೂ ತುಂಡು ತುಂಡಾಗಿ ವಿಂಗಡವಾಗತಕ್ಕ ವಸ್ತುವಲ್ಲವೆಂತಲೂ ಭಾವಿಸಬೇಕಾಗುತ್ತದೆ, ಮತ್ತು ಇವರಿಬ್ಬರು ಒಂದೇಯಾದರೆ ದೇವರಲ್ಲಿರುವ ಜ್ಞಾನ, ಸಾಮರ್ಥ್ಯ, ಶುದ್ಧತ್ವ ಮನುಷ್ಯನಲ್ಲಿ ಇರಬೇಕಲ್ಲವೆ? ಪಾಪ ಮಾಡುವಾಗ ತನ್ನಲ್ಲಿ ದೇವರೇ ಖುದ್ದು ಮಾಡಿಸುತ್ತಾನೆಂದು ಹೇಳಬೇಕಾಗಿದೆ. ಆದರೆ ದೇವರು ಪರಿಶುದ್ಧನೆಂದು ನ್ಯಾಯವಾಗಿ ಎಲ್ಲರೂ ಒಪ್ಪಬೇಕಲ್ಲ? ಹೀಗಿದ್ದರೆ ಆತನು ಪಾಪಕ್ಕೆ ಕಾರಣನಾಗುವದು ಹ್ಯಾಗೆ? ಇದಕ್ಕೆ ವೇದಾಂತಿಗಳು ನಾನಾ ದೃಷ್ಟಾಂತಗಳನ್ನು ಕೊಟ್ಟು ಸಾಧಿಸಿ ತಮ್ಮದೇ ಶ್ರೇಷ್ಠವೆಂದು ವಾದಿಸಬರುವರು. ಈ ವಿಷಯ ಈ ಉಪನ್ಯಾಸದಲ್ಲಿ ಹೆಚ್ಚಾಗಿ ಬರೆಯಲು ಆಗುವದಿಲ್ಲ. (ಇದಕ್ಕೆ ತಕ್ಕ ವಿವರಣೆಯು ಮಹಾ ಪಂಡಿತರಾದ ನೀಲಕಂಠಶಾಸ್ತ್ರಿಯವರು ರಚಿಸಿರುವ "ವೇದಾಂತ ದರ್ಶನ" ವೆಂಬ ಪುಸ್ತಕದಲ್ಲಿ ಉಂಟು. ವಾಚಕರು ಆ ಪುಸ್ತಕವನ್ನು ತರಿಸಿ ಓದುವವರಾಗಲಿ.) ಈ ಲೋಕದ ತಂದೆಗಳೇ ತಮ್ಮ ಮಕ್ಕಳಿಗೆ ದುರಭ್ಯಾಸಗಳನ್ನು ಕಲಿಸಿಕೊಡದ ಪಕ್ಷಕ್ಕೆ ಪರಮ ತಂದೆಯಾದ ಭಗವಂತನಿಂದ ಹ್ಯಾಗೆ ಪಾಪಬಂದೀತು? ಸೂರ್ಯನಿಂದ ಕತ್ತಲೆ ಬರುವದುಂಟೆ?

ಕಡೆಯಲ್ಲಿ ಹೀಗೇನಾಗಿ ಮನುಷ್ಯನು ತಾನು ನಿರ್ಮಾಣವಾದ ಸ್ಥಿತಿಯಲ್ಲಿ ಇಲ್ಲವೆಂದೂ ತಾನು ನಿರ್ಮಿಸಲ್ಪಟ್ಟ ಭಾಗ್ಯಕರವಾದ ಸ್ಥಿತಿಯಲ್ಲಿಂದ ಬಿದ್ದು ಹೋದನೆಂದೂ ತಿಳಿಯಬೇಕು. ಈ ಲೋಕದಲ್ಲಿ ಮನುಷ್ಯನ ಜಾಯಮಾನವು ಮುಂದಿನ ಒಂದು ಘನವಾದ ಸ್ಥಿತಿಯನ್ನು ಅಪೇಕ್ಷಿಸುತ್ತದೆಂದು ನಮ್ಮ ಅನುಭವ ತಿಳಿಸುತ್ತದೆ. ಇದು ಯಾತಕ್ಕೆ? ಯಾತಕ್ಕೆಂದರೆ ನಮ್ಮ ಆದಿ ತಂದೆಯಾದವನು ತನ್ನ ಅವಿಧೇಯತ್ವದಿಂದ, ದೇವರು ಈ ಲೋಕದಲ್ಲಿ ನಡೆಸಬೇಕಾಗಿದ್ದ ಆತನ ಒಳ್ಳೇ ಉದ್ದೇಶಗಳನ್ನೂ ಕ್ರಿಯೆಗಳನ್ನೂ ಕೆಡಿಸಿಬಿಟ್ಟು ದೇವರಿಗೆ ವಿರೋಧವಾಗಿ ಪಾಪಮಾಡಿದನು. ಆತನ ವಂಶದಲ್ಲಿ ಉತ್ಪನ್ನರಾದ ಸಮಸ್ತ ಮನುಷ್ಯ ಜಾತಿಯವರು ಪಾಪದಲ್ಲಿಯೇ ಹುಟ್ಟುವದರಿಂದಲೂ ತರುವಾಯ ಪಾಪವನ್ನು ನೀರಿನಂತೆ ಕುಡಿಯುವದರಿಂದಲೂ ಮನುಷ್ಯನ ವಂಶವೇ ಕೆಟ್ಟುಹೋಯಿತು. ಮನುಷ್ಯನು ಪಾಪವಿಲ್ಲದವನಾಗಿರುವಾಗಲೇ ದೇವರಿಗೆ ಜವಾಬ್ದಾರನಾಗಿದ್ದ ಮೇಲೆ ಈಗ ಎಷ್ಟೋ ಅಧಿಕವಾಗಿ ದೇವರಿಗೆ ಅಧೀನನಾಗಿದ್ದಾನೆ. ಮತ್ತು ಮನುಷ್ಯನು ತನ್ನ ಪಾಪದ ದೆಸೆಯಿಂದ ಈ ಲೋಕದ ಎಲ್ಲಾ ಕೇಡುಗಳಿಗೆ ಗುರಿಯಾಗಿದ್ದಾನೆ. ಇವನೊಳಗೆ ಪೂರ್ಣ ತೃಪ್ತಿ ಈಗ ಇಲ್ಲ. ಜೀವರಾಶಿಗಳಾದರೂ ತಮ್ಮ ತಮ್ಮ ಸ್ಥಿತಿಯಲ್ಲಿ ತೃಪ್ತಿ ಹೊಂದಿ ಜೀವಿಸುತ್ತವೆ. ದೃಷ್ಟಾಂತ್ರವಾಗಿ ಪಕ್ಷಿಗೆ ರೆಕ್ಕೆ ಇರುವದರಿಂದ ಅಂತರಿಕ್ಷದಲ್ಲಿ ಹಾರ್‍ಯಾಡುವದು ಅದಕ್ಕೆ ಸಂತೋಷ. ಮೀನಿಗೆ ನೀರಿನಲ್ಲಿ ಈಜಾಡುವದು ಅದಕ್ಕೆ ಆನಂದ. ಅದರಂತೆ ಮನುಷ್ಯನಿಗೆ ನಿಜವಾದ ಸಂತೋಷವಿಲ್ಲ. ಈ ಸ್ಥಿತಿಯಲ್ಲಿಂದ ಮತ್ತೊಂದು ಮುಂದಿನ ಶ್ರೇಷ್ಠ ಪದವಿಗೆ ಹೋಗಬೇಕೆಂದು ಎದುರುನೋಡುತ್ತಿರುತ್ತಾನೆ. ಹೀಗೆ ಮನುಷ್ಯನು ದೇವರ ಉದ್ದೇಶವನ್ನು ಕೆಡಿಸಿಬಿಟ್ಟನು. ದೇವರ ಕೋಪಕ್ಕೆ ಪಾತ್ರನಾಗಿ ಆತನಿಗೆ ದೂರವಾಗಿದ್ದಾನೆ. ಈಗ ಮನುಷ್ಯನನ್ನು ತಿರಿಗಿ ದೇವರ ಹತ್ತಿರ ಸೇರಿಸುವವರೊಬ್ಬರು ಇಲ್ಲದ ಪಕ್ಷಕ್ಕೆ ಇವನ ಸ್ಥಿತಿಯು ಕೇವಲ ದೌರ್ಭಾಗ್ಯವಾದದ್ದೇ ಸರಿ ಎಂತ ಹೇಳಬೇಕಾಗಿದೆ. ಆದರೆ ಮನುಷ್ಯನು ತಿರಿಗಿ ದೇವರ ಕೃಪೆಗೆ ಪಾತ್ರನಾಗಲಿಕ್ಕೆ ಮಾರ್ಗವಿಲ್ಲವೋ ಎಂಬುವದನ್ನೂ, ಹಾಗೆ ಇವನು ಸ್ವಾಮಿಯ ದಯಕ್ಕೆ ಪಾತ್ರನಾಗಲಿಕ್ಕೆ ಮಾಡತಕ್ಕ ಕರ್ತವ್ಯವೇನೆಂಬುವದನ್ನೂ ನಾಳಿನ ಉಪನ್ಯಾಸದಲ್ಲಿ ಓದಬೇಕಾಗಿದೆ.

## ಒಳನಾಡಿನ ವರ್ತಮಾನಗಳು.

ರಾಜಧಾನಿಯ ಸುತ್ತಮುತ್ತ ಇರುವ ೨೩ ಗ್ರಾಮಗಳಲ್ಲಿ ಪ್ಲೇಗ್ ರೋಗವು ಕಾಣಿಸಿಕೊಳ್ಳುತ್ತಾ ಬಂದಿರುವದು.

❖❖❖❖

ಕಳೆದವಾರ ಬೆಂಗಳೂರಿನಲ್ಲಿ ಒಂದು ರಥೋತ್ಸವವಾಯಿತು. ಒಬ್ಬ ಹುಡುಗನು ಜನರು ರಥದ ಮೇಲೆ ಎಸೆದ ಬಾಳೇ ಹಣ್ಣನ್ನು ಆರಿಸಿಕೊಳ್ಳುವದಕ್ಕೆ ಹೋಗಿ ರಥದ ಚಕ್ರದ ಕೆಳಕ್ಕೆ ಸಿಕ್ಕಿ ಮೃತಪಟ್ಟನು.

❖❖❖❖

ರಾಜಧಾನಿಯ ವೀರನಗೆರೆ ಆಸ್ಪತ್ರೆಯ ಬಳಿ ಒಬ್ಬ ಹೆಂಗಸು ಬಂದು ಮರದಡಿಯಲ್ಲಿ ಕುಳಿತು ವಿಶ್ರಮಿಸಿಕೊಳ್ಳುತ್ತಿರುವಾಗ್ಯೆ ಆ ಮರದಲ್ಲಿ ಒಂದು ರೆಂಬೆಯು ಮುರಿದು ಆಕೆಯ ಮೇಲೆ ಬಿದ್ದು ಕೊಂದುಬಿಟ್ಟಿತು.

❖❖❖❖

ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗಿ ಚುನಾಯಿಸಲ್ಪಡುವದಕ್ಕೆ ಅವರು ಕೊಡತಕ್ಕ ಜಮೀನ್ ಕಂದಾಯದ ಜೊತೆಗೆ ಲೋಕಲ್ ಮತ್ತು ಇನ್‌ಕಮ್ ಟಾಕ್ಸುಗಳನ್ನೂ ಕೂಡಿಸಬೇಕೆಂಬದಾಗಿ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

❖❖❖❖

ನಮ್ಮ ಶ್ರೀಮನ್ ಮಹಾರಾಜರವರ ವರ್ಧಂತಿ ಉತ್ಸವವು ಜೂನ್ ತಿಂಗಳ ೫ನೇ ತಾರೀಖು ಶುಕ್ರವಾರ ನಡೆಯುವದಾದ್ದರಿಂದ ಅವರ ಪರಿವಾರಸಹಿತ ಈ ತಿಂಗಳ ಆಖೈರಿನೊಳಗಾಗಿ ನೀಲಗಿರಿಯಿಂದ ರಾಜಧಾನಿಗೆ ದಯಮಾಡುವವರಾಗಿದ್ದಾರೆ.

❖❖❖❖

ರಾಜಧಾನಿಯ ಮಂಡಿ ಮೊಹಲ್ಲಾದಲ್ಲಿ ಲಿಂಗಾಚಾರಿ ಎಂಬವನ ಮನೆಯನ್ನು ಸರ್ಕಾರದವರು ಭರಣಿಹಾಕಿ ಸುಡುತ್ತಿರುವಾಗ್ಯೆ ಮನೆ ಹತ್ತಿಕೊಂಡು ಒಳಗಿದ್ದ ಸಾಮಾನೆಲ್ಲಾ ಉರಿದುಹೋಯಿತು. ಮಾಲೀಕನಿಗೆ ಉಂಟಾದ ನಷ್ಟವನ್ನು ಸರ್ಕಾರದವರು ಕೊಡಿಸ್ಯಾರೆಂದು ನಿರೀಕ್ಷಿಸಲ್ಪಟ್ಟಿದೆ.

❖❖❖❖

ಕಳೆದ ಗುರುವಾರ ಸಾಯಂಕಾಲ ನೀಲಗಿರಿಯಲ್ಲಿ ನಮ್ಮ ಮಹಾರಾಜರವರು ಯೂರೋಪಿಯನ್ ಸರದಾರರನ್ನೂ ಅವರ ಪತ್ನಿ ಪುತ್ರಿಗಳನ್ನೂ ತಮ್ಮ ಬಂಗಲೆಗೆ ಕರೆಸಿ, ಪದ್ಧತಿಯ ಪ್ರಕಾರ ಅವರಿಗೆಲ್ಲಾ ನಾನಾ ವಿನೋದಗಳನ್ನು ಕಲ್ಪಿಸಿ, ಫಲಾಹಾರಮಾಡಿಸಿ, ಕಳುಹಿಸಿಕೊಟ್ಟರೆಂದು ತಿಳಿದುಬಂದಿದೆ.

❖❖❖❖

ನಾಳೆ ೨೩ನೆ ತಾರೀಖು ಶನಿವಾರ ಯುವರಾಜರವರ ವರ್ಧಂತಿ ಉತ್ಸವವು ರಾಜಧಾನಿಯಲ್ಲಿ ನಡೆಯಬೇಕಾಗಿತ್ತು. ಆ ಕಾಲಕ್ಕೆ ಶ್ರೀಮನ್ ಮಹಾರಾಜರವರೇ ಮೊಂತಾದವರೆಲ್ಲಾ ರಾಜಧಾನಿಗೆ ದಯಮಾಡುವವರಾಗಿಲ್ಲ ವಾದಕಾರಣ ಈ ಉತ್ಸವವನ್ನು ಬರುವ ತಿಂಗಳಲ್ಲಿ ನಡಸುವಂತೆ ಗೊತ್ತುಮಾಡಿದಾರೆಂದು ಕೇಳುತ್ತೇವೆ.

ಒಬ್ಬ ಬಾತ್ಮಿದಾರರು ಬರೆಯುವದೇನಂದರೆ:—"ತಾರೀಖು ೪-೫ ರಲ್ಲಿ ಮಳೆ ಗಾಳಿ ದೆಸೆಯಿಂದ ಚೆನ್ನರಾಯಪಟ್ಟಣದ ತಾಲ್ಲೂಕ್ ಹಾಗನವಿಲೆ ಗ್ರಾಮದಲ್ಲೂ, ಸವಿಾಪದ ಗ್ರಾಮಗಳಲ್ಲೂ ಸುಮಾರು ೧೨೦ ತೆಂಗಿನ ಮರಗಳು ಮುರಿದು ಬಿದ್ದುಹೋದವು. ಅದೂ ಅಲ್ಲದೆ ಇನ್ನೂ ಅನೇಕ ಜಾತಿಯ ಮರಗಳು ಬಿದ್ದುಹೋದವು."

❖❖❖❖

ಕಳೆದ ವಾರವೆಲ್ಲಾ ರಾಜಧಾನಿಯಲ್ಲಿ ಮಳೆ ಬಹಳವಾಗಿ ಸುರಿಯಿತು. ಇನ್ನೂ ಮಳೆ ಬಿಟ್ಟಿಲ್ಲ. ೨೩ ದಿನದಿಂದ ಸೂರ್ಯ ರಶ್ಮಿಯೇ ದುರ್ಲಭವಾಗಿದೆ. ಬೇಸಗೆ ಹುಟ್ಟುವದಕ್ಕೆ ಮುಂಚೆಯೇ ಜಡಿಮಳೆ ಪ್ರಾರಂಭವಾಯಿತು. ಈ ಸಂಸ್ಥಾನದ ಅನೇಕ ಕಡೆಗಳಲ್ಲಿ ಕಳೆದ ವಾರ ಮಳೆ ಸುರಿದಿರಬೇಕೆಂದು ನಿರೀಕ್ಷಿಸುವೆವು. ರಾಜಧಾನಿಯಲ್ಲಿ ಪ್ರಜಾ ಆರೋಗ್ಯವು ಚನ್ನಾಗಿದೆ.

❖❖❖❖

ಸರ್ಕಾರಿ ಅಧಿಕಾರಿಗಳು ಹಿರ್ಘಣ ಪಡೆದು ಕೆಲಸಮಾಡುವಾಗ್ಯೆ ಅವರಿಗೆ ಪ್ರಿವಿಲೇಜ್ ರಜಾ ಕೊಡುವದು ವಾಡಿಕೆಯಾಗಿದೆಯಷ್ಟೆ. ಹೀಗೆ ಎಲ್ಲರಿಗೂ ಒಂದೇ ಸಮನಾಗಿ ಪ್ರಿವಿಲೆಜ್ ರಜಾ ಕೊಡುವದು ಸರಿಯಲ್ಲವೆಂತಲೂ, ಕೆಲಸವಿತಕಕ್ಕೆ ಅಧಿಕಾರಿಗೆ ಎಷ್ಟು ಪ್ರಿವಿಲೆಜ್ ರಜಾ ಕೊಡಬಹುದೋ ಅಷ್ಟೇ ಕೊಡಲ್ಪಡುವದೆಂತಲೂ ಸರ್ಕಾರದವರು ತೀರ್ಮಾನಮಾಡಿದಾರೆ.

❖❖❖❖

ಯಾದತೂರೆ ತಾಲ್ಲೂಕು ದಕ್ಷಕಲ್ಲಳ್ಳಿಯ ಸಂಜಮ್ಮನೆಂಬ ಹೆಂಗಸನ್ನು ಆಕೆಯ ಗಂಡನಾದ ಸಿದ್ಧಪ್ಪನು ಕಳೆದ ೧೦ನೇ ತಾರೀಖಿನ ದಿನ ಹೊಡೆದು ಕೊಂದುಹಾಕಿ, ಅದೇ ಕತ್ತಿಯಿಂದ ಆತ್ಮಹತ್ಯ ಮಾಡಿಕೊಳ್ಳಬೇಕೆಂದು ತನ್ನ ಕತ್ತಿಗೆ ಹೊಡಕೊಂಡು, ಜ್ಞಾನತಪ್ಪಿ ಬಿದ್ದುಬಿಟ್ಟನು. ಪೋಲೀಸಿನವರು ಅವನನ್ನು ಹಿಡಿದುಕೊಂಡು ಇಲ್ಲಿನ ಜೈಲ್ ಆಸ್ಪತ್ರೆಯ ಸ್ಥಳಕ್ಕೆ ಇಲಾಜು ಮಾಡುತ್ತಿದ್ದಾರೆ. ವಾಸಿಯಾದನಂತರ ಅವನ ಮೇಲೆ ಮೊಕದ್ದಮೆ ನಡಸುವರು.

❖❖❖❖

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಾ ಬಂದಿರುವದನ್ನು ನೋಡಿ, ಸರ್ಕಾರದವರು ಅಲ್ಲಿನ ಸಿಬ್ಬಂದಿ ಖರ್ಚನ್ನು ಹೆಚ್ಚಿಸಿದ್ದಾರೆ. ಇದುವರೆಗೆ ೪೦ ಮಂದಿ ನರ್ಸರು ಇದ್ದರು; ಅವರಿಗೆ ಮಾಹೇವಾರು ರೂ. ೧೦೩-೧೪ ಚಿಲ್ಲರೆ ಖರ್ಚಾಗುತ್ತಿತ್ತು. ಬರುವ ಜುಲೈ ಗುರ್ರ ೩೦ಕ್ಕೆ ೧೦೩ ಮಂದಿ ನರ್ಸರನ್ನು ನೇಮಿಸಿಕೊಳ್ಳಬಹುದೆಂತಲೂ ಅವರ ತಲಬಿಗಾಗಿ ತಿಂಗಳಿಗೆ ೧,೨೫೮ ರೂ. ಖರ್ಚಿನ ಮಂಜೂರಿಯು ದೊರೆತಲೂ ಸ್ಯಾಂಕ್ಷನ್ ಆಗಿದೆ.

❖❖❖❖

ನಾಗರಪಲ್ಲಿ ಮರಗೆಲಸ ಮಾಡುವ ಜನರು ಸಿಕ್ಕುವದು ತುಂಬಾ ಕಷ್ಟ. ಪಟ್ಟಣಗಳಿಂದ ಅಲ್ಲಿಗೆ ಬರತಕ್ಕ ಬಡಗಿಗಳನ್ನು ಜನರು ಎದುರುನೋಡಬೇಕಾಗಿದೆ. ಸರ್ಕಾರದವರು ಅಲ್ಲಿ ಮರಗೆಲಸ ಕಲಿಸುವಂಥಾ ಒಂದು ಪಾಠಶಾಲೆಯನ್ನು ಇಡಿಸಿಕೊಡಬೇಕೆಂತಲೂ, ಇದಕ್ಕೆ ೧,೫೦೦ ರೂಪಾಯಿ ಕೂಡಿಸಿಕೊಡುವದಕ್ಕೆ ಸಿದ್ಧರಾದೇವೆಂತಲೂ ಅಲ್ಲಿನ ಜನರು ಅರ್ಜಿ ಬರೆದುಕೊಂಡಿದಾರೆ. ಇದನ್ನು ನೋಡಿ ಸರ್ಕಾರದವರು ಅಲ್ಲಿ ಒಂದು ಪಾಠಶಾಲೆಯನ್ನು ಸ್ಥಾಪಿಸುವ ತಜವೀಜು ನಡಸುತ್ತಿರುವರು.

❖❖❖❖

ರಾಜಧಾನಿಯಲ್ಲಿ ಇನ್ನೊಂದು ತಿಂಗಳಿಗೆ ಸರ್ಕಾರದವರು ಒಂದು ಇಂಜನಿಯರ್ ಸ್ಕೂಲನ್ನು ಇಟ್ಟು ನಡಸುವವರಾಗಿದಾರೆ. ಈ ಸ್ಕೂಲಿನಲ್ಲಿ ಸಬ್ ಓವರ್, ಸರ್ವೆ ಮಾಡುವವರು, ಡ್ರಾಫ್ಟ್ಸ್‌ಮನ್, ತಾಲ್ಲೂಕ್ ಮೇಸ್ತ್ರಿ, ಟ್ಯಾಂಕ್ ಇನ್ಸ್‌ಪೆಕ್ಟರ್—ಇವೇ ಮೊದಲಾದ ಪ್ರದರ್ಜೆಗೆ ಹುಡುಗರನ್ನು ತಯಾರುಮಾಡುವರು. ವಿದ್ಯಾರ್ಥಿಗಳು ಅದಕ್ಕಾಗಿ ಫೀಜು ಕೊಟ್ಟು ಓದಬೇಕು. ತೇರ್ಗಡೆಯಾಗುವವರನ್ನು ಸರ್ಕಾರಿ ಇಲಾಖೆಗಳಲ್ಲಿ ಆಯಾ ಕೆಲಸಗಳು ಖಾಲಿಯಾದರೆ ನೇಮಿಸಿಕೊಳ್ಳುತ್ತಾ ಬರುವರು. ವಿದ್ಯಾರ್ಥಿಗಳಿಗೆ ವೇತನವೇನೂ ದೊರೆಯುವದಿಲ್ಲ. ಈ ಸ್ಕೂಲಿಗೆ ಸೇರುವಾಗ್ಯೆ ವಿದ್ಯಾರ್ಥಿಗಳ ವಯಸ್ಸು ೧೬ ವರುಷಕ್ಕಿಂತ ಕಡಿಮೆಯಾಗಿರಕೂಡದು; ೨೦ ವರುಷಕ್ಕೆ ಮೇಲ್ಪಟ್ಟಿರಕೂಡದು. ತಾಲ್ಲೂಕ್ ಮೇಸ್ತ್ರಿ, ಟ್ಯಾಂಕ್ ಇನ್ಸ್‌ಪೆಕ್ಟರ್ ಕೆಲಸಗಳನ್ನು ಕಲಿಯತಕ್ಕವರು ಇಂಗ್ಲೀಷಿನಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರಬೇಕು. ಉಳಿದವರು ಮೆಟ್ರಿಕ್ಯುಲೇಷನ್ ಮಾಡಿರಬೇಕು, ಇಲ್ಲವೇ ಆ ತರಗತಿಗೆ ಹೋಗುವಷ್ಟು ಯೋಗ್ಯತೆ ಪಡೆದಿರಬೇಕು.

❖❖❖❖

ಮಡಿಕೇರಿ ಬಾತ್ಮಿದಾರರು ಬರೆಯುವದೇನಂದರೆ:—"ಈ ದಿನ ಬೆಳಿಗ್ಯೆ ಕೊಡಗು ಕಮಿಷನರೂ, ಸರ್ಜನರೂ ಮಡಿಕೇರಿ ದೊಡ್ಡ ಪೇಟೆಗೆ ಬಂದರು. ಕಪನಿ ಶೆಟ್ರಿ ಮಂಜೈಯ್ಯನವರ ಮನೇ ಬಾಗಿಲಲ್ಲಿ ರೋಡಿನಲ್ಲಿ ಸೌದೆ ಒಟ್ಟಲ್ಪಟ್ಟಿದ್ದನ್ನು ನೋಡಿ, ತೆಗದು ಒಳಕ್ಕೆ ಹಾಕಿರಿ ಎಂಬದಾಗಿ ಮನೆಯವರಿಗೆ ಹೇಳಿದರು. ಮನೆಯವರ್‍ಯಾರೂ ತಕ್ಷಣ ಪ್ರವರ್ತಿಸದಿರಲು ಕಮಿಷನರು ತಾವೇ ಒಂದು ತುಂಡು (ಸೌದೆ) ಯನ್ನು ಎತ್ತಿ ಒಳಕ್ಕೆ ಹಾಕಿದರು! ಅದರ ಮುಂದುಗಡೆ ಮನೇ ಜಗಲಿಯ ಮೇಲೆ ೨ ಜನ ಯಜಮಾನರುಗಳೂ, ಡಿ. ಸಿ. ಕೋರ್ಟ್ ಶಿರಸ್ತೇದಾರರೂ, ಇನ್ನು ಅನೇಕರೂ ಇದ್ದವರು ಇದನ್ನು ಕಂಡು, ಅವರನ್ನು ನಾನಾ ವಿಧವಾಗಿ ಹೊಗಳುತ್ತ ಬರಹದವರು. ೨ ನಿಮಿಷದೊಳಗಾಗಿ ಸೌದೆ ಎಲ್ಲವೂ ಒಳಕ್ಕೆ ಸೇರಿತು! ಮುಂಚ್ಚಾಗ್ರತೆ ಅನೇಕ ಜನರು ಸೇರಿ ಸೌದೆ ಸಾಗಿಸಿಕೊಟ್ಟರು!! ಇದೆಲ್ಲವಿರಲಿ; ಕಮಿಷನರರು ಚನ್ನಾಗಿ ಕನ್ನಡ ಮಾತಾಡಿದ್ದೇ ಬಹಳ ಜನರಿಗೆ ಧೈರ್ಯವಾಯಿತು. ಅವರು ಏನು ಬೇಗನೇ ಮಾತಾಡ ಕಲಿತಿಲ್ಲ! ವಿಲಾಯತಿಯವರಿಗೆ ಅನ್ಯಭಾಷೆ ಕಲಿಯಲಿಕ್ಕೆ ೫-೬ ತಿಂಗಳು ಸಾಕಾಗುತ್ತೆ. ವಿಲಾಯತಿಯ ಇಂಗ್ಲೀಷು ಭಾಷೆ ಮಾತ್ರ ಕಲಿಯಲಿಕ್ಕೆ ೧೨ ವರುಷವೂ ಸಾಕಾಗುತ್ತಿಲ್ಲವಲ್ಲಾ."

ಆಫ್ರಿಕಾ ಖಂಡಕ್ಕೆ ಸೇರಿದ ಸೊಕೋಟೋ ಮತ್ತು ಕಾನೋ ರಾಜ್ಯಗಳ ಗಂಡಸರೂ ಹೆಂಗಸರೂ

ಅಧಿಕಾರಿಗಳು ಸರ್ಕಾರಿ ಕಾಗದಪತ್ರಗಳಿಗೆ ರುಜು ಮಾಡುತ್ತಾರಷ್ಟೆ. ಈ ರುಜುವನ್ನು ನೋಡಿ ಇಂಥಾವರೇ ರುಜು ಹಾಕಿದ್ದಾರೆಂದು ಅವರ ಹೆಸರನ್ನು ಗೊತ್ತುಮಾಡುವದು ಅಸಾಧ್ಯವೆಂದು ಕಂಡು ಬಂದದ್ದರಿಂದ ಇನ್ನು ಮೇಲೆ ರುಜುವಿನ ಪಕ್ಕದಲ್ಲಿ ಅದು ಇಂಥಾವರ ರುಜುವೆಂದು ತಿಳಿಯುವಂತೆ ವಿವರವಾಗಿ ಬರೆಯತಕ್ಕದ್ದೆಂಬದಾಗಿ ಇಂಡಿಯಾ ಗೌವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ.

◆◆◆◆

ಅಫ್ಘಾನಿಸ್ಥಾನದ ಅಮೀರರು ಯೂರೋಪಿನಿಂದ ತರಿಸಿರುವ ಯುದ್ಧ ಸಾಮಗ್ರಿಗಳೆಲ್ಲಾ ಪೆಶಾವರಿನಲ್ಲೇ ಇಂಗ್ಲೀಷರ ಸ್ವಾಧೀನದಲ್ಲಿರುವವು. ಅವುಗಳನ್ನು ಕಾಬೂಲಿಗೆ ತರಿಸಿಕೊಳ್ಳುವ ವಿಷಯದಲ್ಲಿ ಅಮೀರರಿಗೂ ಇಂಡಿಯಾ ಗೌವರ್ನಮೆಂಟಿಗೂ ಕಾಗದ ಪತ್ರ ನಡೆಯುತ್ತಿದೆ. ಅಮೀರರಿಗೆ ಇಂಡಿಯಾ ಸರ್ಕಾರದಿಂದ ರವಾನೆಯಾಗುವ ಪದಾರ್ಥಗಳು ಕೆಲವು ವರುಷಗಳಿಂದ ನಿಂತಿದೆ. ಇದನ್ನೆಲ್ಲಾ ಅಮೀರರು ಒಟ್ಟಿಗೆ ಬರೆದು ತರಿಸಿಕೊಳ್ಳುವವರಾಗಿದ್ದಾರೆ.

## ಇಂಡಿಯಾ ದೇಶದ ವೃತ್ತಾಂತಗಳು.

ಈಗ ಹಿಂದೂಸ್ಥಾನದಲ್ಲೆಲ್ಲಾ ಒಟ್ಟು ೨,೫೦ ೦೦,೦೦೦ ಮಂದಿ ವಿಧವೆಯರಿರುತ್ತಾರೆಂದು ಪ್ರಕಟವಾಗಿದೆ.

◆◆◆◆

ಬೊಂಬಾಯಿನಲ್ಲಿ ಸೀತಾರಾಂ ಲಕ್ಷ್ಮಣನೆಂಬೊಬ್ಬ ಕಂಟ್ರಾಕ್ಟುದಾರನು ತಿಮ್ಮೋಜಿರಾಯನೆಂಬ ಇನ್ನೊಬ್ಬ ಕಂಟ್ರಾಕ್ಟುದಾರನನ್ನು ಅವಮಾನಪಡಿಸಿದ್ದಕ್ಕಾಗಿ ಮ್ಯಾಜಿಸ್ಟ್ರೇಟರು ಅವನಿಗೆ ೧೦೦೦ ರೂ ಜುಲ್ಮಾನೆ ವಿಧಿಸಿದರು.

◆◆◆◆

ತಕ್ಸೀರು ಮಾಡಿದವರನ್ನು ಕಂಡುಹಿಡಿದುಕೊಟ್ಟ ಜನರಿಗೆ ಮದರಾಸ್ ಸರ್ಕಾರದವರು ೧೯೦೨ನೇ ಇಸವಿಯಲ್ಲಿ ೩,೪೨೭ ರೂ. ಇನಾಮು ಕೊಟ್ಟಿದ್ದಾರೆ. ಹಿಂದೆಯಾವ ವರುಷದಲ್ಲೂ ಇಷ್ಟು ಹಣ ಈ ಬಾಬಿಗೆ ಖರ್ಚಾಗಿಲ್ಲ.

◆◆◆◆

ಗ್ವಾಲಿಯರ ಸಂಸ್ಥಾನದ ಮಹಾರಾಜರವರು ಸ್ವಂತ ಹಣವನ್ನು ಖರ್ಚುಮಾಡಿ ಪ್ರಜೆಗಳ ಪ್ರಯೋಜನಕ್ಕಾಗಿ ಒಂದು ಪುಸ್ತಕಭಂಡಾರವನ್ನು ಸ್ಥಾಪಿಸಿರುತ್ತಾರೆ. ಇದಲ್ಲದೆ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಬಂಗಲೆಯನ್ನೂ ರಾಜಧಾನಿಯಲ್ಲಿ ಕಟ್ಟಿಸಿರುವರು.

◆◆◆◆

ಉದಕಮಂಡಲ ಡಿಸ್ಟ್ರಿಕ್ಟಿಗೆ ಸೇರಿದ ನಿಡುವಟ್ಟಂ ಎಂಬ ಸ್ಥಳದಲ್ಲಿರುವ ಮಿ॥ ಕಾರ್ಲಿಸ್ ಎಂಬವರು ಕಳೆದ ವಾರ ಏಕಕಾಲದಲ್ಲಿ ನಾಲ್ಕು ಹುಲಿಗಳನ್ನು ಗುಂಡಿನಿಂದ ಹೊಡೆದು ಕೊಂದುಹಾಕಿದರು. ಈ ಹುಲಿಗಳೆಲ್ಲಾ ಬಹಳ ಬಲಿಷ್ಠವಾದವುಗಳೆಂತಲೂ, ಹೆಣ್ಣು ೨, ಗಂಡು ೨ ಆಗಿದ್ದುವೆಂತಲೂ ತಿಳಿದುಬಂದಿದೆ.

◆◆◆◆

ಇಂಡಿಯಾ ಗೌವರ್ನಮೆಂಟಿನವರು ಹಿಂದೂಸ್ಥಾನದಲ್ಲಿ ರೈಲ್ ರಸ್ತೆಗಳನ್ನು ಬಹಳವಾಗಿ ಬದಲಾವಣೆ ಮಾಡಬೇಕೆಂದು ಗೊತ್ತುಮಾಡಿದ್ದಾರೆ. ಇದಕ್ಕೋಸ್ಕರ ಈ ವರುಷ ಅನೇಕ ಸಾವಿರ ಟನ್‌ಗಳ ಭಾರದಷ್ಟು ಕಬ್ಬಿಣದ ಕಂಬಿಗಳನ್ನೂ, ಎಂಜಿನ್ ಎಂಬ ಗಾಡಿಗಳನ್ನು ವಿಲಾಯತಿಯಲ್ಲಿ ಮಾಡಿಸಿ ತರಿಸುವವರಾಗಿರುವರು.

◆◆◆◆

ಕಳೆದ ೧೯೦೧ನೇ ಇಸವಿಯಲ್ಲಿ ಸೆನ್ಸಸ್ ಲೆಕ್ಕಗಳನ್ನು ನೋಡಲಾಗಿ ಬಂಗಾಳದಲ್ಲಿ ೧೨ ತಿಂಗಳು ತುಂಬದೇ ಇರುವ ೪೩೩ ಮಂದಿ ಹೆಣ್ಣುಮಕ್ಕಳು ವಿಧವೆಗಳಾಗಿದ್ದಾರೆಂತಲೂ, ಐದುವರುಷ ತುಂಬದೇ ಇರುವ ೬,೨೬೬ ಮಂದಿ ಹುಡುಗಿಯರು ಪತಿವಿಯೋಗವನ್ನು ಅನುಭವಿಸುತ್ತಿದ್ದಾರೆಂತಲೂ ತಿಳಿದುಬರುವದು.

◆◆◆◆

ಕುಂಭಕೋಣದಲ್ಲಿದ್ದ ಮಿ॥ ಎಸ್. ವೈದ್ಯನಾಥ ಐಯರ್, ಎಂ ಎ ಯವರು ಕಾಲವಾದರೆಂದು ತಿಳಿದುಬಂದಿದೆ. ಇವರು ಸುಪ್ರಸಿದ್ಧ ಉಪಕಾರಿಗಳೆಂದು ಹೆಸರುಪಡೆದು ಇದ್ದರು. ಅವರು ಅಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ತಮ್ಮ ಆಸ್ತಿಯಲ್ಲಿ ಹತ್ತುಸಾವಿರ ರೂಪಾಯಿ ಕೊಟ್ಟಿರುತ್ತಾರೆ.

◆◆◆◆

ಗೋದಾವರಿ ಡಿಸ್ಟ್ರಿಕ್ಟಿನ ಸರ್ವೆ ಸೆಟ್ಲ್ ಮೆಂಟು ಮಾಡಿದ್ದಾಯಿತು. ಇದಕ್ಕೆ ೫ ವರುಷಗಳು ಹಿಡಿದವು. ಇದಕ್ಕಾಗಿ ಸರ್ಕಾರದವರಿಗೆ ೬ ೧೮,೯೪೪ ರೂಪಾಯಿ ಖರ್ಚಾಗಿದೆ. ಈ ಸೆಟ್ಲ್ ಮೆಂಟು ಪೂರೈಸಿದ್ದರಿಂದ ಆ ಡಿಸ್ಟ್ರಿಕ್ಟಿನ ಜಮಾಬಂದಿ ಕಂದಾಯವು ಮೊದಲಿದ್ದದ್ದಕ್ಕಿಂತಲೂ ೩,೩೪,೨೧೫ ರೂಪಾಯಿ ಜಾಸ್ತಿ ಆಗಿದೆ.

◆◆◆◆

ವಿದ್ವಾನ್ ಬಹದೂರ್ ವಿ. ಕೃಷ್ಣಮಾಚಾರ್ಯರವರು ತಮಿಳಿನಲ್ಲಿ ಚಕ್ರವರ್ತಿಯವರ ಜೀವಚರಿತ್ರೆ, ಅವರ ಕಿರೀಟಧಾರಣೆಯ ಉತ್ಸವದ ವಿಷಯ ಮುಂತಾದ್ದನ್ನು ಬರೆದು ಪ್ರಕಟಿಸಿರುತ್ತಾರೆ. ಈ ಪುಸ್ತಕವನ್ನು ಎಲ್ಲಾ ಡಿಸ್ಟ್ರಿಕ್ಟಿನ ಸ್ಕೂಲುಗಳಿಗೂ ಕೊಂಡು ಇನಾಮು ಕೊಡಬೇಕೆಂಬದಾಗಿ ಮದರಾಸ್ ಸರ್ಕಾರದವರು ಸ್ಯಾಂಕ್ಷನ್ ಮಾಡಿರುತ್ತಾರೆ.

◆◆◆◆

ಲಂಕಾ ದ್ವೀಪದ ಪ್ಲಾಂಟರುಗಳು ಚಿಕ್ಕಚಿಕ್ಕ ಮಕ್ಕಳನ್ನು ಟೀ ತೋಟಗಳಲ್ಲಿ ಇಟ್ಟುಕೊಂಡು, ಅವರಿಂದ ಬಹಳ ಕಠಿಣವಾಗಿ ಕೆಲಸತೆಗೆದುಕೊಳ್ಳುತ್ತಾರೆಂಬ ವಿಷಯ ವಿಲಾಯತಿ ಪಾರ್ಲಿಮೆಂಟ್ ಮೆಂಬರುಗಳಿಗೆ ತಿಳಿದು ಬಂದದ್ದರಿಂದ ಕೆಲವರು ಅದು ನಿಜವೇ ಎಂದು ಸೆಕ್ರೆಟರಿಯವರನ್ನು ಕೇಳಿದರು. ಸೆಕ್ರೆಟರಿಯವರು ಈ ವಿಷಯದಲ್ಲಿ ಲಂಕಾ ದ್ವೀಪಕ್ಕೆ ಬರೆದು ಜವಾಬು ತರಿಸುತ್ತೇವೆಂದು ಸಮಾಧಾನ ಹೇಳಿದರು.

◆◆◆◆

ಪಾಟಿಯಾಲಾ ಸಂಸ್ಥಾನದ ಜೈಲ್ ಖಾನೆಯಲ್ಲಿ ಕಳೆದ ವಾರ ಖೈದಿಗಳೆಲ್ಲಾ ದಂಗೆಮಾಡಿ, ತಮ್ಮ ಜೊತೆಯಲ್ಲಿದ್ದ ವಾರ್ಡರುಗಳನ್ನು ಹಿಡಿದು ಕೆಡವಿಕೊಂಡು ಚೆನ್ನಾಗಿ ಹೊಡೆದು, ಕೆಲವರು ತಪ್ಪಿಸಿಕೊಂಡು ಓಡಿಹೋದರು. ಅಷ್ಟರಲ್ಲೇ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಹೋಗಿ ಗುಂಡುಹೊಡೆದು ಇಬ್ಬರು ಖೈದಿಗಳನ್ನು ಕೊಂದು, ಉಳಿದವರನ್ನೆಲ್ಲಾ ಹಿಡಿದು ಬಂದೀಖಾನೆಯಲ್ಲಿ ಹಾಕಿಸಿದರು. ತಪ್ಪಿಸಿಕೊಂಡು ಹೋಗಿದ್ದವರನ್ನು ಹಿಡಿದು ತರಿಸಿರುತ್ತಾರೆ.

◆◆◆◆

ಬಿಹಾರ್ ಡೆ ಪಕ್ಕ ಸೇರಿದ ಸಿಂಗ್ಬೂಮ್ ಪಟ್ಟಣದಿಂದ ಒಬ್ಬ ವರ್ತಕನು ನಾಲ್ಕು ಕರೆನ್ಸಿ ನೋಟುಗಳನ್ನು ರಿಜಿಸ್ಟರ್ ಆಫೀಸಿನಲ್ಲಿಟ್ಟು ರಂಗೂನಿನಲ್ಲಿ ಒಬ್ಬ ವರ್ತಕನಿಗೆ ಕಳುಹಿಸಿದನು. ಆ ಕವರ್ ಪೋಸ್ಟ್‌ದಾರನಿಗೆ ತಲುಪಿತು. ಒಡೆದು ನೋಡಿದಾಗ ಒಳಗೆ ಮೂರು ತುಂಡು ಬರೀ ಕಾಗದಗಳಿದ್ದುವು. ಹೊರಗಿನ ಮುದ್ರೆಗಳೆಲ್ಲಾ ಸ್ವಲ್ಪವೂ ವ್ಯತ್ಯಾಸವಾಗಿರಲಿಲ್ಲ. ಈಗ ಈ ವಿಚಿತ್ರವಾದ ಕಳುವನ್ನು ಪೋಲೀಸಿನವರು ಹ್ಯಾಗೆ ಪತ್ತೆ ಮಾಡುವರೋ ನೋಡಬೇಕು.

◆◆◆◆

ಇಂದೋರ್ ಸಂಸ್ಥಾನದ ಹೋಲ್ಕರ್ ಮಹಾರಾಜರವರ ಪತ್ನಿಯವರ ಸಂಗಡ ಇದ್ದುಕೊಂಡು, ಅವರಿಗೆ ಒಳ್ಳೇ ಬುದ್ಧಿ ವಿವೇಕಗಳನ್ನು ಕಲಿಸುವದಕ್ಕೋಸ್ಕರ ವಿದ್ಯಾವತಿಯಾದ ಒಬ್ಬ ಹಿಂದೂ ಸ್ತ್ರೀಯು ಬೇಕಾಗಿದೆ ಎಂತಲೂ, ವಿದ್ಯಾವತಿಯರಾದ ಹಿಂದೂ ಸ್ತ್ರೀಯರು ಈ ಕೆಲಸಕ್ಕೆ ಅರ್ಜಿ ಬರೆದುಕೊಳ್ಳಬಹುದೆಂತಲೂ ಪ್ರಕಟಿಸಿರುತ್ತಾರೆ. ನಮ್ಮ ಮಹಾರಾಜರವರ ಕಾಲೇಜಿನಲ್ಲಿರುವ ಸ್ತ್ರೀಯರಲ್ಯಾರಾದರೂ ಅರ್ಜಿ ಬರೆದುಕೊಳ್ಳುವ ಪಕ್ಷಕ್ಕೆ ಅವರಿಗೆ ಈ ಕೆಲಸವು ದೊರಕೀತೆಂದು ಊಹಿಸುತ್ತೇವೆ.

◆◆◆◆

ಬೆಳ್ಳೋರಿನಲ್ಲಿರುವ ಮಿ॥ ಸಿ. ವೀರರಾಘವರಾಯರು ಒಂದು ತರಹಾ ಹಾವುಸೊಪ್ಪನ್ನು ಕಂಡುಹಿಡಿದಿರುವರಾಗಿಯೂ, ಆ ಸೊಪ್ಪಿನ ರಸವನ್ನು ನಾಗರಹಾವು ಕಡಿದವರ ಮೂಗಿಗೆ ಕೊಂಚವೇ ಬಿಂದುಬಿಟ್ಟು ಹಿಂಡಿದರೆ ಕೂಡಲೆ ಪ್ರಾರಂಭವಾಗಿ ವಿಷವು ನಿವಾರಣೆಯಾಗುತ್ತದೆಂತಲೂ, ಕೂಡಲೆ ಮಾಡದಿದ್ದರೆ ಬದುಕುವದಿಲ್ಲವೆಂತಲೂ, ಹಾವುಕಡಿದ ನೂರಾರು ಜನರಿಗೆ ಈ ಚಿಕಿತ್ಸೆ ಮಾಡಿರುವರಾಗಿಯೂ, ಆ ಸೊಪ್ಪನ್ನು ಎಲ್ಲರೂ ಬಂದು ಕೊಂಡುಕೊಳ್ಳಬಹುದೆಂತಲೂ ದೇಶೋಪಕಾರಿ ಎಂಬ ಪತ್ರಿಕೆಗೆ ಬರೆದಿದ್ದಾರೆ. ಇದು ಆಶ್ಚರ್ಯವೇ ಸರಿ.

◆◆◆◆

ಚೆಂಗಲ್ಪಟ್ಟಿನಲ್ಲೂ ಅದರ ಸುತ್ತುಮುತ್ತಲಿನ ಗ್ರಾಮಾಂತರಗಳಲ್ಲೂ ಸರ್ಕಾರದವರ ದೃಷ್ಟಿಗೆ ತಪ್ಪಿಹೋಗಿರುವಂತೆ ಕಾಣುವದು. ಆಗಾಗ್ಯೆ ಪುಂಡುಕಳ್ಳರು ಮನೆಗಳನ್ನೂ ಗ್ರಾಮಗಳನ್ನೂ ನುಗ್ಗಿ ಪ್ರಜೆಗಳನ್ನು ನಾನಾ ಕಷ್ಟಗಳಿಗೆ ಗುರಿಮಾಡಿ, ಸರ್ವಸ್ವವನ್ನೂ ದೋಚಿಕೊಂಡು ಹೋಗುತ್ತಿದ್ದಾರೆ. ಅಲ್ಲಿನ ಪ್ರಜೆಗಳ ಪಾಡು ನಾಯಿಪಾಡಾಗಿ ಗೋಳಾಡುತ್ತಾರೆ. ಸರ್ಕಾರದವರು ಬೇಗನೆ ಪ್ರಜಾಕಂಟಕರನ್ನು ಹಿಡಿಸಿ ನಿಗ್ರಹಿಸದಿದ್ದರೆ ತುಂಬಾ ಅನಾಹುತವಾಗುವದೆಂಬದಾಗಿ ಅಲ್ಲಿನ ಒಬ್ಬ ಯಾತ್ರಿಕರು ಮದರಾಸ್ ಪತ್ರಿಕೆಗೆ ಬರೆದಿರುವರು.

◆◆◆◆

ಮೆಣಸು ಬೆಳೆಯುವದು ಮದರಾಸ್ ಅಧಿಪತ್ಯದಲ್ಲಿ ವಿಶೇಷ ಮಧುರೆ, ಮಲಬಾರ್, ದಕ್ಷಿಣ ಕನರಾ ಡಿಸ್ಟ್ರಿಕ್ಟುಗಳಲ್ಲಿ. ಅದನ್ನು ಬೆಳೆಯುವದು ಜನರು ಒಟ್ಟು ೬,೨೬೦ ಎಕರೆ ಜಮೀನಿನಲ್ಲಿ ಮೆಣಸಿನ ವ್ಯವಸಾಯ ಮಾಡುತ್ತಾರೆ. ಮಲಬಾರಿನಲ್ಲಿ ಎಕರೆಗೆ ೧೩ ಪೌಂಡಿನಷ್ಟೂ, ಮಧುರೆಯಲ್ಲಿ ಎಕರೆಗೆ ೧೩೬ ಪೌಂಡಿನಷ್ಟೂ, ಕೊಯಮತ್ತೂರಿನಲ್ಲಿ ೨೫೦ ಪೌಂಡಿನಷ್ಟೂ, ಕೊಂಡಾಪುರದಲ್ಲಿ ೬೦೦ ಪೌಂಡಿನಷ್ಟೂ ಮೆಣಸನ್ನು ಬೆಳೆ ಮಾಡುತ್ತಾರೆ. ಈ ಸುವಾಸನಾ ದ್ರವ್ಯವನ್ನು ಮದರಾಸಿನಿಂದ ವಿಲಾಯತಿ, ತುರ್ಕಿ, ನೇಪಾಲ್, ಈಜಿಪ್ಟ್, ಅರೇಬಿಯ, ಸಿಲೋನ್, ಪರ್ಷಿಯ, ಆಸ್ಟ್ರೇಲಿಯ ಮುಂತಾದ ದೇಶಗಳಿಗೆ ರಫ್ತುಮಾಡುತ್ತಾರೆ.

ಮೈಸೂರು ಪ್ರಾಂತ್ಯದಲ್ಲಿ ಪ್ಲಾಂಟರುಗಳು ಮೆಣಸು ಬೆಳೆಯುವದು ಹೆಚ್ಚು. ಈ ದಿವಸಗಳಲ್ಲಿ ಅದಕ್ಕೆ ಒಂದು ತರಹಾ ಹುಳು ಹತ್ತಿದ್ದು ದಿವಸೇ ಹೆಚ್ಚುತ್ತಾ ಬಂದಿದೆ. ಇದನ್ನು ಸರ್ಕಾರಿ ಅಧಿಕಾರಿಯಾದ ಮಿ॥ ಬಾರ್ಬರ್ ಎಂಬವರು ಹೋಗಿ ಚೆನ್ನಾಗಿ ಪರೀಕ್ಷೆಮಾಡಿಕೊಂಡು ಬಂದು, ಈಗ ತಿಳಿಸಿರುವದೇನೆಂದರೆ — ಈ ಹುಳುಗಳು ಮೆಣಸಿನ ಬಳ್ಳಿಗಳ ಬೇರುಗಳನ್ನೇ ತಿನ್ನುತ್ತವೆ. ಜನರು ಬೇರುಗಳ ಮೇಲೆ ಬಹಳವಾಗಿ ಬರೀ ಮಣ್ಣನ್ನು ಹಾಕಿ ಮುಚ್ಚುವದು ವಾಡಿಕೆಯಾಗಿದೆ. ಇದು ಒಳ್ಳೇದಲ್ಲವೆಂದು ತೋರುತ್ತೆ. ಈ ಮಣ್ಣಿನ ಸಂಗಡ ಸ್ವಲ್ಪ ಸುಣ್ಣವನ್ನು ಬೆರಸಿ ಹಾಕಿದರೆ ಹುಳು ಹಿಡಿಯಲಾರದೆಂತಾ ಕಾಣುವದು. ಪ್ಲಾಂಟರುಗಳು ಇವರು ಹೇಳಿರುವಂತೆ ಮಾಡಿ ನೋಡಿಯಾರೆಂದು ನಿರೀಕ್ಷಿಸಲ್ಪಟ್ಟಿದೆ.

◆◆◆◆

ಅಯೋಧ್ಯೆ ಮತ್ತು ರೋಹಿಲ್ ಖಂಡದ ರೈಲ್ವೇ ಕಂಪನಿಯ ಟ್ರಾಫಿಕ್ ಮ್ಯಾನೇಜರಾದ ಮಿ॥ ಫೋರ್ಡ್ ಎಂಬವರು ರೈಲ್ ಗಾಡಿಗಳ ಮೂರನೆ ತರಗತಿಯಲ್ಲಿ ಪ್ರಯಾಣ ಮಾಡತಕ್ಕ ಪ್ರಜೆಗಳ ಅನಾನುಕೂಲಗಳೇನೆಂಬದನ್ನು ತಿಳಿದುಕೊಳ್ಳುವದಕ್ಕೆ ಇಷ್ಟರಲ್ಲೇ ಲಕ್ನೋ ಪಟ್ಟಣದಲ್ಲಿ ಒಂದು ಪ್ರತಿನಿಧಿಸಭೆಯನ್ನು ನಡಿಸುವವರಾಗಿದ್ದಾರೆ. ರೈಲು ಹೋಗಿಬರತಕ್ಕ ಪ್ರದೇಶಗಳಲ್ಲಿರುವಂಥಾ ಪ್ರಜೆಗಳ ಮುಖಂಡರೆಲ್ಲಾ ಇಂಗ್ಲೀಷ್ ತಿಳಿಯದವರಾದಾಗ್ಯೂ ಲಕ್ನೋ ಪಟ್ಟಣಕ್ಕೆ ಬಂದು ಆ ಸಮಾಜದಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸಬಹುದೆಂದು ಇಸ್ತಿಹಾರು ಕೊಟ್ಟಿದ್ದಾರೆ. ಆ ಪ್ರಾಂತ್ಯದ ಜನರು ತುಂಬಾ ಸಂತೋಷದಿಂದ ಆ ಸಭೆಗೆ ಹೋಗಿ ತಮಗಿರುವ ಕೊರತೆಗಳನ್ನು ತಿಳಿಸಿ ಬರಬೇಕೆಂದು ಉತ್ಸಾಹವುಳ್ಳವರಾಗಿದ್ದಾರೆ. ಇದರಿಂದ ಇತರ ರೈಲ್ವೇ ಕಂಪನಿಗಳ ಮುಖಂಡರಿಗೂ ಒಳ್ಳೇ ಮೇಲ್ಪಂಕ್ತಿ ಹಾಕಿಕೊಟ್ಟಂತಾಯಿತು.

◆◆◆◆

ತಿರುನೆಲ್ವೇಲಿ ಡಿಸ್ಟ್ರಿಕ್ಟಿಗೆ ಸೇರಿದ ಇಕ್ಕವೂರ್ ಎಂಬ ಗ್ರಾಮದಲ್ಲಿ ಮಿ॥ ಇಮಾಮ್ ಎಂಬವರು ಪಂಚಮರ ಹುಡುಗರಿಗೋಸ್ಕರ ಒಂದು ಬೋರ್ಡಿಂಗ್ ಸ್ಕೂಲನ್ನು ಸ್ಥಾಪಿಸುತ್ತಾರೆ. ಇದಕ್ಕೆ ಗೌವರ್ನಮೆಂಟಿನವರು ೩,೦೦೦ ರೂ ಸಹಾಯವನ್ನು ಮಂಜೂರು ಮಾಡಿದರು ... ಅವರು ... ದ್ವೀಪದಲ್ಲಿ ಪ್ರಕಟವಾಗುವ ... ಎಂಬ ವರ್ತಮಾನ ಪತ್ರಿಕಾ ಮುಖೇನ ಆ ... ಮಂದಿ ... ಹಾಗೆ ... ಇದನ್ನು ... ಆಗಿ ... ಉಳಿದವರು ... ಅನುಕೂಲವಾಗಿದೆ.

◆◆◆◆

ಕಲ್ಕತ್ತಾ ಪಟ್ಟಣದಲ್ಲಿರುವ ... ಆಗಿ ಅಲ್ಲಿನ ... ಎಂಬ ವರ್ತಮಾನಪತ್ರಿಕೆಯು ... ಹೇಳುತ್ತಾರೆ — ... ಅಲ್ಲಿ ... ಅದು ... ಅಂಗಡಿಗಳಲ್ಲಿ ವರ್ತಕರು ... ಕೆಟ್ಟ ಪದಾರ್ಥಗಳು ... ಜನರು ಯಾತ್ರಿಕರನ್ನು ಸುಲಿದು ತಿನ್ನುವ ... ಅವರು ... ಕಷ್ಟಗಳನ್ನು ನಿವಾರಿಸಿದರು ... ಒಪ್ಪಿಕೊಂಡು ... ಪ್ರತ್ಯಕ್ಷಗಳು ... ಇದೇ ... ಧಾರಾಳವಾಗಿ ಹೇಳಬಹುದು.

ಆಫ್ರಿಕದಲ್ಲಿ ಜನರು ಗುಲಾಮರನ್ನು ಹಿಡಿದು ಅವರಿಂದ ಕೆಲಸ ಮಾಡಿಸಿಕೊಳ್ಳುವದುಂಟಷ್ಟೆ. ಈ ಗುಲಾಮರು ತಪ್ಪಿಸಿಕೊಂಡು ಓಡಿಹೋಗದಂತೆ ಅವರ ಯಜಮಾನರು ಅವರ ಕತ್ತಿಗೆ ಈ ಚಿತ್ರದಲ್ಲಿ ತೋರಿಸಿರುವಂತೆ ಕಟ್ಟಿಗೆಗಳನ್ನು ಮಾಡಿ ಹಾಕುವದು ರೂಢಿ. ನಮ್ಮ ದೇಶದಲ್ಲೂ ತುಂಟರಾದ ಹಸುಗಳಿಗೆ ಕತ್ತಿನ ಕೊರಡುಗಳನ್ನು ಕಟ್ಟಿ ಕಾಯುಗಳು ಹಾಕುವದುಂಟಷ್ಟೆ.

## ವಿದೇಶ ವರ್ತಮಾನಗಳು.

ಎಪ್ಪತ್ತು ಸಂವತ್ಸರಗಳ ಕೆಳಗೆ ಈ ಪ್ರಪಂಚವು ೭೪ ಕೋಟಿ [illegible] ೯೦ ಲಕ್ಷ ಪ್ರಜೆಗಳನ್ನುಳ್ಳದ್ದಾಗಿತ್ತು. ಈಗಲಾದರೋ ಪ್ರಪಂಚದಲ್ಲಿ ೧೫೦ ಕೋಟಿ ಪ್ರಜೆಗಳಿರುವರು.

❖❖❖❖

ಸಿಂಗಪೂರದಲ್ಲಿ ಕೆಲವು ಮಂದಿ ದುಷ್ಟರು ಜಪಾನ್ ಹುಡುಗಿಯರನ್ನು ಹಿಡಿದು ತಂದು ತಲಾ ೧೦೦ ರೂಪಾಯಿಗೆ ದಾಸ್ಯಕ್ಕಾಗಿ ಮಾರುತ್ತಿದ್ದಾರೆಂದು ಸಮಾಚಾರ ಬಂದಿದೆ.

❖❖❖❖

ಕ್ಯಾಂಟನ್ ನಗರದ ಆಯುಧ ಶಾಲೆಯ ಕಾರ್ಖಾನೆಯಲ್ಲಿ ವಿಶೇಷವಾಗಿ ಮದ್ದು ಹತ್ತಿಕೊಂಡು ಮಹಾ ಶಬ್ದದಿಂದ ಹಾರಿ ಸುಮಾರು ೧೪೦೦ ಮಂದಿ ಕೆಲಸದವರು ಹತರಾದರು.

❖❖❖❖

ಮಹಮದೀಯರೆಲ್ಲರೂ ತುರ್ಕಿ ಸುಲ್ತಾನರ ತಾಯಿಯವರನ್ನು [illegible] ಹೊರಗೆ ಹೋದದ್ದು ಇಲ್ಲ. ಆಕೆ [illegible] ಹೊರಗೆ ಬಂದು ದೊಡ್ಡ ಮನುಷ್ಯರಿಗೆ ಭೇಟಿ ಕೊಡಬೇಕಾಗಿದೆ.

❖❖❖❖

ಅಮೇರಿಕಾದ ಉತ್ತರ ಭಾಗದಲ್ಲಿರುವ ಕೆನಡಾ ರಾಜ್ಯದಲ್ಲಿ [illegible] ಎಂಬ ಊರಿನೊಳಗೆ ಒಂದು ಅಗ್ನಿಪರ್ವತವು ಬೆಂಕಿಯನ್ನು ಕಾರಿಸಿದ್ದರಿಂದ ೬೪ ಜನರು ಹತರಾದರು. ಅನೇಕ ಆಸ್ತಿಗಳು ವಿಶೇಷವಾಗಿ ನಾಶಹೊಂದಿದವು.

❖❖❖❖

ಅಮೇರಿಕದಲ್ಲಿ ಮಿ॥ ವಾಂಡರ್ ಬಿಲ್ಟ್ ಎಂಬೊಬ್ಬ ಧನಿಕನು ತನ್ನ ವಾಸಕ್ಕೋಸ್ಕರ ಒಂದು ಮನೆಯನ್ನು ಕಟ್ಟಿಸುತ್ತಾನೆ. ಇದಕ್ಕೆ ೩೮ ಲಕ್ಷ ರೂಪಾಯಿ ಖರ್ಚಾಗುವದು. ಕಟ್ಟಡವೆಲ್ಲಾ ಬಿಳೀ ಕಲ್ಲಿನಲ್ಲೇ ಕಟ್ಟುತ್ತಿದ್ದಾರೆ.

❖❖❖❖

ಪೆಸಿಫಿಕ್ ಸಮುದ್ರತೀರದಲ್ಲಿ [illegible] ಎಂಬೊಂದು ದ್ವೀಪವಿರುವದು. ಅದರಲ್ಲಿ ಒಂದು ಭಾರೀ [illegible] ವೃಕ್ಷ ಇದೆ. ಇದರಷ್ಟು ಹಳೇದಾದ ವೃಕ್ಷವು ಇನ್ನೊಂದಿಲ್ಲವೆಂದು ಹೇಳುತ್ತಾರೆ. ಇದಕ್ಕೆ ಕನಿಷ್ಠ ೬,೫೦೦ ವರುಷಗಳಾಗಿವೆಯಂತೆ. ಇದರ ಬುಡದ ಸುತ್ತಳತೆಯು ೭೦ ಅಡಿ ಆದೀತು.

❖❖❖❖

ಲಂಡನ್ ಪಟ್ಟಣದಲ್ಲಿರುವ ಹ್ಯಾಂಪ್ಟನ್ ಕೋರ್ಟ ಎಂಬ ಅರಮನೆಯ ಉದ್ಯಾನವನದಲ್ಲಿ ೧೨೩ ವರುಷ ಪರ್ಯಂತ ಒಂದು ದ್ರಾಕ್ಷೇ ಗಿಡವಿರುವದು. ಅದರ ಬುಡದ ಸುತ್ತಳತೆಯು ೩ ಅಡಿ [illegible]. ಈ ವರುಷ ಅದರಲ್ಲಿ ೨೦೦ ಗೊಂಚಲು ದ್ರಾಕ್ಷೆ ಹಣ್ಣು ಬಿಟ್ಟಿವೆ. ಹೋದ ವರುಷ ೧೫೦೦ ಗೊಂಚಲು ಬಿಟ್ಟಿತ್ತು.

❖❖❖❖

ಮುಂದಿನ ವರುಷದಿಂದ ಇಂಗ್ಲಿಷ್ ಪೋಸ್ಟಾಫೀಸುಗಳಲ್ಲಿ [illegible] ಬರುವದು. ಅದರಲ್ಲಿ [illegible] ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ [illegible] ಅದನ್ನು [illegible] ಬಿಟ್ಟುಹೋಗುತ್ತಾರೆ.

❖❖❖❖

ವಿಲಾಯಿತಿಯ ಮಹಾರಾಜಾ ಚಕ್ರವರ್ತಿಯವರು ಕಳೆದ [illegible] ರಾಜ್ಯಗಳಲ್ಲಿ [illegible] ಸೈನ್ಯವನ್ನು [illegible] ೫೦,೦೦೦ ಸೈನ್ಯವನ್ನು [illegible] ಪರಾಂಬರಿಸಿದರು.

❖❖❖❖

[illegible] ಪ್ರಾಂತ್ಯಕ್ಕೆ ಸೇರಿದ ಒಂದು ಡಿಸ್ಟ್ರಿಕ್ಟಿನಲ್ಲಿ ಬೇಟೆಯವರು ನದಿಯ ಮರವನ್ನು ಕಡಿದು, [illegible] ಉದ್ಯೋಗ ಮಾಡುವರು. ಈಚೆಗೆ ಆ ಪ್ರಾಂತ್ಯಕ್ಕೆ [illegible] ದವರ ಸೈನಿಕರು ಹೋದರು. ಇವರಿಗೂ ಬೇಟೆಯವರಿಗೂ ಯಾವದೋ ಕಾರಣಕ್ಕಾಗಿಯೋ ಜಗಳ ಹುಟ್ಟಿ, ಸೈನಿಕರು ಸುಮಾರು ೩೦೦ ಮಂದಿ ಬೇಟೆಯವರನ್ನು ಕೊಂದುಹಾಕಿದರು.

❖❖❖❖

ಉತ್ತರ ಅಮೇರಿಕಕ್ಕೆ ಸೇರಿದ ರಾಕೀ ಪರ್ವತದ ತಪ್ಪಲಲ್ಲಿ ಫ್ರಾಂಕ್ ಎಂಬೊಂದು ಸಣ್ಣ ಪಟ್ಟಣವಿರುವದು. ಕಳೆದ ವಾರ ಆ ಪರ್ವತದ ಮೇಲಿನಿಂದ ಒಂದು ಅಗಾಧವಾದ ಬಂಡೆಯು ಪಟ್ಟಣದ ಮೇಲೆ ಉರುಳಿ ಬಿದ್ದಿತು. ಒಂದು ಗಣಿಯಲ್ಲಿದ್ದ ಸುಮಾರು [illegible] ಜನರು ಈ ಬಂಡೆಯ ಕೆಳಗೆ ಸಿಕ್ಕಿ ಸತ್ತರು. ನದಿಯು ಮುಚ್ಚಿಹೋಯಿತು. ನೀರು ಊರನ್ನೆಲ್ಲಾ ಮುಳುಗಿಸಿರುತ್ತದೆ.

❖❖❖❖

ರಾಜ್ಯರಾಜ್ಯಗಳಿಗೆ ಪರಸ್ಪರ ಮನಸ್ತಾಪಗಳುಂಟಾದರೆ ಆ ಮನಸ್ತಾಪಗಳನ್ನು ಕುರಿತು ವಿಚಾರಣೆ ಮಾಡಿ ನ್ಯಾಯವನ್ನು ನಿರ್ಣಯಿಸುವದಕ್ಕೋಸ್ಕರ ಹೇಗ್ ನಗರದಲ್ಲಿ ಒಂದು ಪಂಚಾಯತಿ ಕೋರ್ಟು ಏರ್ಪಾಡಾಗಿರುವದಷ್ಟೆ. ಈ ಕೋರ್ಟಿನವರು ಬೇಕಾದ ಪುಸ್ತಕ ಮುಂತಾದ್ದನ್ನು ತರಿಸಿಟ್ಟುಕೊಳ್ಳುವದಕ್ಕೋಸ್ಕರ ಮಿ॥ ಆಂಡ್ರು ಕಾರ್ನೆಗಿ ಎಂಬ ಕೋಟ್ಯಾಧೀಶನು ಈಚೆಗೆ ನೂರು ಲಕ್ಷ ಪೌಂಡುಗಳನ್ನು ದಾನಕೊಟ್ಟಿರುತ್ತಾನೆ.

❖❖❖❖

ಅಮೇರಿಕಾ ರಾಜ್ಯದ ರಾಜಧಾನಿಯಾದ ನ್ಯೂಯಾರ್ಕಿನಲ್ಲಿ [illegible] ಅಂತಸ್ತುಗಳುಳ್ಳ ಒಂದು ದೊಡ್ಡ ಬಂಗಲೆ ಇರುವದು. ಇದರಷ್ಟು ದೊಡ್ಡ ಬಂಗಲೆ ಇನ್ನೆಲ್ಲೂ ಇರುವದಿಲ್ಲ. ಅದರಲ್ಲಿ [illegible] ಕಚೇರಿಗಳನ್ನು ನಡೆಸುತ್ತಾರೆ. ೬,೦೦೦ ಕೆಲಸಗಾರರು ಕೆಲಸ ಮಾಡುವರು. ಕೆಳಗಿನ ಅಂತಸ್ತಿನಿಂದ ಮೇಲಕ್ಕೆ ಹೋಗುವದಕ್ಕೆ ಯಂತ್ರಗಳ ತೊಟ್ಟಿಲುಗಳನ್ನಿಟ್ಟಿರುತ್ತಾರೆ. ದಿನಕ್ಕೆ ಈ ತೊಟ್ಟಿಲುಗಳು ೮೫,೦೦೦ ಜನರನ್ನು ಮೇಲಿನ ಅಂತಸ್ತುಗಳಿಗೆ ಸಾಗಿಸುವವು.

❖❖❖❖

ಜರ್ಮನಿ ರಾಜ್ಯದ ದಕ್ಷಿಣ ಪ್ರಾಂತ್ಯಗಳಲ್ಲಿ ಕಳೆದ ಮೂರು ತಿಂಗಳಿಂದ ಜನರು [illegible]. ರೈತರೇ ಮುಂತಾದವರು ನಾಯಿಗಳನ್ನು ಕೊಂದು, ಅವುಗಳ ಮಾಂಸವನ್ನು ಭಕ್ಷಿಸುವರು. ಸರಕಾರದವರು ಇದನ್ನು ನೋಡಿ, [illegible] ಎಂಬ ಪಟ್ಟಣದಲ್ಲಿ ಪ್ರತ್ಯೇಕವಾದ ಒಂದು ಕಸಾಯಿಖಾನೆಯನ್ನು ಏರ್ಪಾಡು ಮಾಡಿ, ಆಹಾರಕ್ಕಾಗಿ ಕೊಲ್ಲುವ ನಾಯಿಗಳನ್ನೆಲ್ಲಾ ಅಲ್ಲಾಗಿ ಪರಿಶೋಧಿಸುತ್ತಿದ್ದಾರೆ. ರೋಗವುಳ್ಳ ನಾಯಿಗಳನ್ನು ಕೊಂದು ಮಾರುವವರಿಗೆ ಶಿಕ್ಷೆ ವಿಧಿಸುವರು.

❖❖❖❖

ದಕ್ಷಿಣ ಆಫ್ರಿಕದಲ್ಲಿ ವಿವಾಹ ಮಾಡಿಕೊಳ್ಳುವವರು ಸರಕಾರಕ್ಕೆ ತೆರಿಗೆ ಕೊಡಬೇಕು. ಅಮೇರಿಕದ ಕೆಲವು ಪ್ರಾಂತ್ಯಗಳಲ್ಲಿ ವಿವಾಹ ಮಾಡಿಕೊಳ್ಳದೆ ಇರತಕ್ಕವರೆಲ್ಲಾ ಒಂದು ತೆರಿಗೆಯನ್ನು ಕೊಡಬೇಕು. ಇತ್ತಲಾಗಿ ರೋಮೇನಿಯಾ ದೇಶದಲ್ಲಿ ವಿವಾಹ ಸಂಬಂಧವನ್ನು ಪರಿತ್ಯಾಗ ಮಾಡಿಕೊಳ್ಳಬೇಕೆನ್ನುವ ಸ್ತ್ರೀ ಪುರುಷರು ಸರಕಾರಕ್ಕೆ ತೆರಿಗೆಯನ್ನು ಕೊಡಬೇಕಾಗಿದೆ. ಇದನ್ನೆಲ್ಲಾ ನೋಡಲಾಗಿ ಜನರ ಮನೋಧರ್ಮಗಳು ಚಿತ್ರವಿಚಿತ್ರವಾದದ್ದೆನ್ನುವದು ದೃಷ್ಟಾಂತಪಡುವದು.

❖❖❖❖

ಆಸ್ಟ್ರೇಲಿಯಾದಲ್ಲಿ ಈಚೆಗೆ ಬೇಬಿ ಹಣ್ಣುಗಳನ್ನು ಬೆಳೆಯುವದು ಬಹಳ ಹೆಚ್ಚಾಗಿದೆ. ವಿಲಾಯಿತಿಯಲ್ಲಿ ಈ ಹಣ್ಣು ಸಿಕ್ಕುವದೇ ಕಷ್ಟ. ಆದ್ದರಿಂದ ಆಸ್ಟ್ರೇಲಿಯದವರು ಬೆಳೆದ ಹಣ್ಣನ್ನೆಲ್ಲಾ ಕೆಡದಂತೆ ಪೆಟ್ಟಿಗೆಗಳಲ್ಲಿ ಭರ್ತಿಮಾಡಿ, ಹಡಗುಗಳ ಮೇಲೆ ವಿಲಾಯಿತಿಗೆ ಕಳುಹಿಸಿ ವಿಕ್ರಿ ಮಾಡಿಸಿ, ತುಂಬಾ ಲಾಭ ಸಂಪಾದಿಸಿಕೊಳ್ಳುತ್ತಿದ್ದಾರೆ. ಕಳೆದ ವಾರ ಒರಾಂಟಿಸ್ ಎಂಬ ಹಡಗು ೬೩,೦೦೦ ಪೆಟ್ಟಿಗೆಗಳಲ್ಲಿ ಭರ್ತಿಯಾದ ಬೇಬಿ ಹಣ್ಣುಗಳನ್ನು ವಿಲಾಯಿತಿಗೆ ಸಾಗಿಸಿಕೊಂಡು ಹೋಯಿತು.

❖❖❖❖

ಯುರೋಪ್ ಖಂಡದ ಉತ್ತರ ಭಾಗದಲ್ಲಿರುವ ನಾರ್ವೆ ರಾಜ್ಯದಿಂದ ಸಂವತ್ಸರಕ್ಕೆ ಬಹುಮಂದಿ ಕಾರ್ಮಿಕರು ಅಮೇರಿಕಕ್ಕೆ ಹೊರಟುಹೋಗುತ್ತಿರುವದರಿಂದ ಆ ರಾಜ್ಯದಲ್ಲಿ [illegible] ಆಗುವದೆಂದು ಸರಕಾರದವರು ನಿರ್ಣಯಿಸಿ, ಅದನ್ನು ನಿಲ್ಲಿಸುವದಕ್ಕೆ ಕೆಲವು ಉಪಾಯಗಳನ್ನು ಮಾಡುವದಕ್ಕೆ ತಯಾರಾಗಿದ್ದಾರೆ. ಹೋದ ವರುಷ ೩೦,೦೦೦ ಸಂಸಾರಗಳು ನಾರ್ವೆಯಿಂದ ಅಮೇರಿಕಕ್ಕೆ ಹೊರಟುಹೋದವು; ಈ ವರುಷದಲ್ಲಿ ೩೦,೦೦೦ ಸಂಸಾರಗಳು ಪ್ರಯಾಣಮಾಡಿರುತ್ತವೆ.

❖❖❖❖

ಅಮೇರಿಕದ ಮಿ॥ ಆಸ್ಟರ್ ಎಂಬೊಬ್ಬ ಕೋಟ್ಯಾಧೀಶ್ವರನಿಗೆ ಒಂದೇ ಒಂದು ಸಣ್ಣ ಮಗು ಇರುವದು. ಈ ಮಗುವಿಗೆ ೬ ವರುಷ ವಯಸ್ಸಾಗಿದೆ. ಅದರ ಕಂಠದ ಭಾಗದಲ್ಲಿ ಚಿಕ್ಕಂದಿನಿಂದ [illegible] ಸಾವಿರಾರು ಮಂದಿ ಡಾಕ್ಟರುಗಳಿಂದ ಚಿಕಿತ್ಸೆ ಮಾಡಿಸಿದರೂ ವಾಸಿಯಾಗದೆ ಇತ್ತು. ಇದಕ್ಕಾಗಿ ಯುರೋಪಿನಿಂದ ಆ ಮಗುವಿನ ತಂದೆಯು ಒಬ್ಬ ಡಾಕ್ಟರನ್ನು ಪ್ರಯಾಣದ ಖರ್ಚು ಕೊಟ್ಟು ಕರೆಸಿಕೊಂಡು ಚಿಕಿತ್ಸೆ ಮಾಡಿಸಿದನು. ಇದಕ್ಕೆ ಈ ವೈದ್ಯನಿಗೆ ಇದುವರೆಗೆ ೭ ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಇನಾಮು ಕೊಟ್ಟನು. ಆದರೂ ಆ ಕೋಟ್ಯಾಧೀಶ್ವರನಿಗೆ ಇನ್ನೂ ೩ ಕೋಟಿ ದ್ರವ್ಯವಿರುತ್ತದೆ. ಈಗ ಆ ಮಗುವಿನ ರೋಗ ವಾಸಿಯಾಯಿತೆಂದು ತಿಳಿದುಬಂದಿದೆ.

❖❖❖❖

ಇಂಡಿಯನಾಪೊಲಿಸ್ ಎಂಬಲ್ಲಿ ಡಾಕ್ಟರುಗಳು ಒಬ್ಬ ಮನುಷ್ಯನ ವಿಚಿತ್ರವಾದ ಸ್ವಭಾವವನ್ನು ನೋಡಿ, ಅದಕ್ಕೆ ಕಾರಣ ತಿಳಿಯದೆ ಕಂಗಾಲಾಗುತ್ತಿದ್ದಾರೆ. ಆ ಮನುಷ್ಯನು [illegible] ಆತನ [illegible] ಬಿದ್ದಿರುವ ಸ್ವಭಾವವಿದೆ. ಪ್ರತಿ ವರುಷವೂ ಅವನ [illegible] ಅಲ್ಲ, ಅವನ [illegible] ಪ್ರಪಂಚದಲ್ಲಿ ಇದು ವಿಚಿತ್ರ ಸೃಷ್ಟಿಯೇ ಸರಿ.

❖❖❖❖

ರಷ್ಯಾರಾಜ್ಯದ ಮುಖ್ಯಪಟ್ಟಣವಾದ ಸೆಂಟ್ ಪೀಟರ್ಸ್ ಬರ್ಗ್‌ನಲ್ಲಿ ಸ್ತ್ರೀಯರಿಗೆ ವೈದ್ಯವನ್ನು ಕಲಿಸುವ ದೊಡ್ಡ ಪಾಠಶಾಲೆಯೊಂದಿರುವದು. ಅವರನ್ನು [illegible] ಸರಕಾರದವರು ಏನೋ ಬದಲಾವಣೆಗಳನ್ನು ಮಾಡಿದ್ದರು. ಇದನ್ನು ಒಪ್ಪದೆ ಆ ಪಾಠಶಾಲೆಯ ಸುಮಾರು ೬೦೦ ಮಂದಿ ವಿದ್ಯಾರ್ಥಿನಿಯರು ಒಂದು ಸಭೆ ಸೇರಿ, ಪೋಲೀಸಿನವರ ಮೇಲೆ ತಿರುಗಿ ಬಿದ್ದರು. ಆ ಪೈಕಿ ೬೩ ಮಂದಿ ಹುಡುಗಿಯರಿಗೆ ಶಿಕ್ಷೆ ವಿಧಿಸಿದರು. ೩೦೦ ಮಂದಿಗೆ ಎಚ್ಚರಿಕೆ ಹೇಳಿದರು. ಡೈರೆಕ್ಟರವರು ವಿದ್ಯಾರ್ಥಿನಿಯರನ್ನೆಲ್ಲಾ ತಮ್ಮ ಬಳಿಗೆ ಬಂದು ತಮ್ಮನ್ನು ಕಂಡು ಹೋಗಬೇಕೆಂದು ಹೇಳಿ ಕಳುಹಿಸಿದರು. ಒಬ್ಬ ಹುಡುಗಿ ವಿನಹಾ ಉಳಿದವರ್‍ಯಾರೂ ಹೋಗಲೇ ಇಲ್ಲ. ಆದ್ದರಿಂದ ತಪ್ಪಿಸಿಕೊಂಡವರನ್ನೆಲ್ಲಾ ಸ್ಕೂಲಿನಿಂದ ವಜಾ ಮಾಡಿರುತ್ತಾರೆ. ಈ ವಿದ್ಯಾರ್ಥಿನಿಯರು ಪ್ರತಿಭಟಿಸಿದ್ದು ನ್ಯಾಯವಾಗಿದೆ ಎಂತಲೂ, ಅವರು ಅಪೇಕ್ಷಿಸುವ ಪ್ರಕಾರ ಪರೀಕ್ಷೆಯ ಕ್ರಮಗಳನ್ನು ಬದಲಾಯಿಸಬೇಕೆಂತಲೂ ಸುಮಾರು ೪೦೦ ಮಂದಿ ಹುಡುಗರು ಒಂದು ಸಭೆ ಸೇರಿ ಗೊತ್ತುಮಾಡಿ ಸರಕಾರಕ್ಕೆ ತಿಳಿಸಿದರು. ಹುಡುಗರ ಧುರೀಣರಾದವರನ್ನು [illegible] ಸರಕಾರದವರು ಅವರಲ್ಲಿ ಮುಖ್ಯರಾಗಿದ್ದ ೬೦ ಮಂದಿಯನ್ನು ಸ್ಕೂಲಿನಿಂದ ವಜಾ ಮಾಡಿದರು.

❖❖❖❖

ಲಂಡನ್ ಪಟ್ಟಣದ ಕ್ವೀನ್ ವಿಕ್ಟೋರಿಯಾ ಬೀದಿಯಲ್ಲಿ ಒಂದು ದೊಡ್ಡ ಬಂಗಲೆಯೊಳಗೆ ಕಳೆದ ೪೦ ವರುಷಗಳಿಂದಲೂ ಒಂದು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕು ಇಟ್ಟು ನಡೆಸುತ್ತಿದ್ದರು. ಈಗ ವೆಸ್ಟ್ ಕೆನ್ಸಿಂಗ್ಟನ್ ಎಂಬಲ್ಲಿ ಅದಕ್ಕಾಗಿಯೇ ಪ್ರತ್ಯೇಕವಾದ ಒಂದು ಭಾರಿ ಬಂಗಲೆಯನ್ನು ೩೮ ಲಕ್ಷ ರೂಪಾಯಿ ವೆಚ್ಚದಿಂದ ಕಟ್ಟಿಸಿ, ಬ್ಯಾಂಕನ್ನು ಕಳೆದ ವಾರ ಅಲ್ಲಿಗೆ ವರ್ಗಮಾಡಿದರು. ೪೦ ವರುಷಗಳ ಕೆಳಗೆ ಈ ಬ್ಯಾಂಕನ್ನು ಪ್ರಾರಂಭಿಸುವಾಗ ೪೦ ಜನರು ಮಾತ್ರ ಅಲ್ಲಿ ನೌಕರರಾಗಿದ್ದರು. ಈಗ ೩,೦೦೦ ಮಂದಿ ನೌಕರರು ಆ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಬ್ಯಾಂಕಿಗೆ ಈಗ ೯೦ ಲಕ್ಷ ಜನರು ದುಡ್ಡು ಹಾಕಿ, ಲೇವಾದೇವಿ ನಡೆಸುತ್ತಾರೆ. ಇದಕ್ಕಾಗಿ ೩೦,೦೦೦ ಲೆಡ್ಜರ್ ಪುಸ್ತಕಗಳನ್ನು ಬ್ಯಾಂಕಿನವರು ಇಟ್ಟುಕೊಂಡಿದ್ದಾರೆ. ಸಾಧಾರಣವಾಗಿ ದಿನವಹಿ ೧ ಲಕ್ಷ ಕಾಗದಗಳು ಈ ಬ್ಯಾಂಕಿಗೆ ಬಂದು ಜವಾಬು ಹೊಂದುವವು. ಕೆಲವು ವೇಳೆ ದಿನಕ್ಕೆ ೫ ಲಕ್ಷ ಕಾಗದಗಳು ಬರುವದೂ ಉಂಟು. ಆ ನೌಕರರಲ್ಲಿ ಅರವಾಸಿಯೆಲ್ಲಾ ಹೆಂಗಸರೇ ಆಗಿದ್ದಾರೆ. ಈ ಬ್ಯಾಂಕಿನ ಮೇಲ್ವಿಚಾರಣೆಯು ಮಿಸ್ ಸ್ಮಿತ್ ಎಂಬಾಕೆಯು ನೋಡುತ್ತಾ, ಬಹಳ ಚಟುವಟಿಕೆಯಿಂದ ಕಾರ್ಯಗಳನ್ನು ನಡೆಸುತ್ತಾ ಬಂದಿದ್ದಾರೆ. ಚಕ್ರವರ್ತಿಯವರು ಈ ಲೇಡಿ ಸೂಪರಿಂಟೆಂಡೆಂಟಿಗೆ ಈಚೆಗೆ ಒಂದು ಬಿರುದನ್ನು ದಯಪಾಲಿಸಿರುವರು.

ಯುರೋಪ್ ಖಂಡದಲ್ಲಿ ತುರ್ಕಿ ಸುಲ್ತಾನರ ಅಧಿಕಾರಕ್ಕೊಳಪಟ್ಟ ಅಲ್ಬೇನಿಯಾ [illegible] ಜನರಲ್ಲಿ ಯುದ್ಧಸನ್ನದ್ಧನಾಗಿ [illegible] ಒಬ್ಬನು.

## ಬಾಗ್ದಾದ್ ರೈಲ್ವೆ.

ಕಳೆದ ವಿಕ್ಟೋರಿಯಾ ಮಹಾರಾಣಿಯವರು ಇಂಗ್ಲೆಂಡ್ [illegible] ಆಧಿಪತ್ಯವನ್ನು ಆಳುವದಕ್ಕೆ ಪ್ರಾರಂಭಮಾಡಿದ ಕಾಲದಲ್ಲಿ [illegible] ವಿಲಾಯಿತಿಯಿಂದ ಹಿಂದುಸ್ತಾನಕ್ಕೆ ಬರಬೇಕಾದರೆ ಪ್ರಯಾಣ [illegible] ತಿಂಗಳುಗಳು ಹಿಡಿಯುತ್ತಿತ್ತು. ಮತ್ತು ಸಮುದ್ರದ ಮೇಲೆ [illegible] ಪ್ರತಿಕೂಲವಾಗಿದ್ದ [illegible] ಕೆಲವು ದಿನಗಳ ತನಕ [illegible]. ಈಚೆಗೆ [illegible] ಯಂತ್ರಗಳು [illegible] ಸುಯೆಜ್ [illegible] ಹಡಗುಗಳು ತಿರುಗುವದಕ್ಕೆ [illegible] ಬರುತ್ತಿರುವವು.

ಈಗ ಬಾಗ್ದಾದಿಗೆ ಹೋಗುವ ಮಾರ್ಗದ ಮೇಲೆ ರೈಲು ರಸ್ತೆ ಹಾಕಬೇಕೆಂದು ಜರ್ಮನಿ ಸರಕಾರದವರು [illegible] ಮಾಡಿದ್ದಾರೆ. ಇದು ಸಿದ್ಧಿಯಾದ ಪಕ್ಷಕ್ಕೆ ವಿಲಾಯಿತಿಯಿಂದ ಹಿಂದುಸ್ತಾನಕ್ಕೆ ಇರುವ ದೂರವು ೨೦೦೦ ಮೈಲಿಯಷ್ಟು ಕಡಿಮೆಯಾಗುತ್ತದೆ. ಮತ್ತು ಸಮುದ್ರಪ್ರಯಾಣವು [illegible] ಅನುಕೂಲವಾಗುತ್ತದೆ. ವಿಲಾಯಿತಿಯಿಂದ ಹಿಂದುಸ್ತಾನಕ್ಕೆ [illegible] ಕಾಗದಗಳೂ [illegible] ಬೇಗನೆ ಬರುವಂತೆ [illegible]. ಈ ಹೊಸ ಮಾರ್ಗದಿಂದ ವಿಲಾಯಿತಿಗೂ ಹಿಂದುಸ್ತಾನಕ್ಕೂ [illegible].

ಯಾವ ಊರುಗಳ ಮೇಲೂ ರೈಲ್ ರಸ್ತೆ ಹಾಕುವದಕ್ಕೆ ಸಾಧ್ಯವಾಗಿಲ್ಲ; ಸ್ವಭಾವಸಿದ್ಧವಾದ ಅನೇಕ ಅಡಚಣೆಗಳು ಇರುತ್ತವೆ. ಇಂಥಾ ಹೊಸ ರೈಲ್ ರಸ್ತೆಯು ೧,೩೦೦ ಮೈಲಿ ದೂರ ಉಳ್ಳದ್ದಾಗುವದು. ಈಗ ಸ್ಕುಟಾರಿ ಎಂಬ ಸಮುದ್ರ ತೀರಪಟ್ಟಣದಿಂದ ಕೋನಿಯಾ ನಗರದ ವರೆಗೆ ರೈಲ್ ಗಾಡಿಗಳು ಹೋಗಿಬರುತ್ತಿರುವವು. ಈ ರೈಲ್ ರಸ್ತೆಯು ಜರ್ಮನಿಯವರಿಗೆ ಸೇರಿರುವದು. ಹೊಸದಾಗಿ ಹಾಕಬೇಕೆಂದು ಉದ್ದೇಶಪಟ್ಟಿರುವ ರೈಲ್ ರಸ್ತೆಯು ಕೋನಿಯಾ ನಗರದಿಂದ ಬಾಗ್ದಾದಿನ ಮೇಲೆ ಬಾಸ್ರಾ ಪಟ್ಟಣದ ವರೆಗೆ ಬರುವದು. ಇದಾದ ಮೇಲೆ ಅದೇ ಕಂಪನಿಯವರು ಬಾಸ್ರಾ ಪಟ್ಟಣದಿಂದ ಪಾರ್ಸಿಖಾರಿಯಲ್ಲಿ ಇಂಗ್ಲಿಷರಿಗೆ ಸೇರಿರುವ ಕೋವೆಯಟ್ ಎಂಬ ತೀರಪಟ್ಟಣಕ್ಕೆ ಕಂಬಿಹಾಕಿ ರೈಲು ಗಾಡಿಗಳನ್ನು ಬಿಡಬೇಕೆಂದು ಯೋಚಿಸಿಕೊಂಡಿದಾರೆ.

ಈ ಹೊಸ ರೈಲುರಸ್ತೆ ತಯಾರಾಗುವ ಪಕ್ಷದಲ್ಲಿ ವಿಲಾಯತಿಯಿಂದ ಬರತಕ್ಕವರು ಡೋವರ್ ಜಲಸಂಧಿಯಲ್ಲಿ ಹೊರಟು, ಯೂರೋಪ್ ಖಂಡದ ಪಟ್ಟಣಗಳನ್ನು ದಾಟಿಸಿ, ಕಾನ್ಸ್ಟೆಂಟಿನೋಪಲ್ ಎಂಬ ತೀರಪಟ್ಟಣಕ್ಕೆ ಬಂದು, ಅಲ್ಲಿಂದ ಕೋವೆಯಟ್ ನಗರವನ್ನು ತಲಪಿ, ಅಲ್ಲಿಂದ ಹಡಗಿನಲ್ಲಿ ೧,೩೦೦ ಮೈಲಿ ದೂರ ಪ್ರಯಾಣಮಾಡಿಕೊಂಡು ಬಂದರೆ ಹಿಂದುಸ್ಥಾನದ ಪಶ್ಚಿಮ ತೀರಪಟ್ಟಣವಾದ ಕರಾಚಿ ನಗರವನ್ನು ತಲಪುವರು. ಇದರಿಂದ ಸಮುದ್ರಪ್ರಯಾಣವು ನಾಲ್ಕು ದಿನಗಳಿಗೆ ಇಳಿಯುವದು.

ಈ ಹೊಸ ರೈಲ್ವೇ ಕಂಪನಿಯವರು ಮೊದಲು ೧೦೫ ಮೈಲಿ ದೂರದ ರಸ್ತೆಯನ್ನು ಎರಡು ವರ್ಷಗಳಲ್ಲಿ ಕಟ್ಟಿ ಪೂರೈಸುತ್ತೇವೆಂತಲೂ, ಈ ಲೈನೆಲ್ಲಾ ಹಾಕುವದಕ್ಕೆ ಎಂಟು ವರುಷಗಳು ಮಾತ್ರ ಹಿಡಿಯುವವೆಂತಲೂ ನಂಬುತ್ತಾರೆ.

ಈ ಹೊಸ ರೈಲ್ ರಸ್ತೆಯನ್ನು ಹಾಕುವದಕ್ಕೆ ವಿಪರೀತ ಹಣ ಬೇಕಾಗಿದೆ. ಮೊದಲನೇ ೧೦೫ ಮೈಲಿ ತಯಾರಾಗುವದಕ್ಕೆ ಎರಡು ಕೋಟಿ ರೂಪಾಯಿ ಖರ್ಚಾದೀತೆಂತಲೂ, ಆ ಲೈನೆಲ್ಲಾ ಕಟ್ಟಿ ಪೂರೈಸುವಷ್ಟರಲ್ಲಿ ಕಡೇ ಪಕ್ಷ ಮುವ್ವತ್ತೈದು ಕೋಟಿ ರೂಪಾಯಾದರೂ ವ್ಯಯವಾಗುತ್ತದೆಂತಲೂ ಅಂದಾಜು ಹಾಕಿದಾರೆ. ಇಷ್ಟು ಅಪಾರವಾದ ಹಣವನ್ನು ಪ್ರಪಂಚದಲ್ಲಿ ಯಾವ ರಾಜ್ಯದವರೂ ಒದಗಿಸುವದು ಸಾಧ್ಯವಲ್ಲ. ಆದಕಾರಣ ಈ ರೈಲ್ವೆ ಕಂಪನಿಯವರು ವಿಲಾಯತಿ ರಾಜ್ಯದವರನ್ನು ಹಣ ಕೊಡಿ ಎಂಬದಾಗಿ ಕೇಳುತ್ತಿದಾರೆ. ಇಂಥಾ ಕಾರ್ಯಸಾಧನೆಗೆ ಇಂಗ್ಲಿಷ್ ಗೌವರ್ನಮೆಂಟಿನವರು ದ್ರವ್ಯವನ್ನು ಸಾಲ ಕೊಡುವದರಿಂದ ಪ್ರಯೋಜನವಾದೀತೋ ಇಲ್ಲವೋ ಸ್ವಲ್ಪಮಟ್ಟಿಗೆ ವಿಚಾರಮಾಡಿ ನೋಡೋಣ.

ಇಂಗ್ಲಿಷ್ ಗೌವರ್ನಮೆಂಟಿನವರು ಈ ರೈಲ್ವೆ ಕಂಪನಿಗೆ ಹಣ ಸಾಲಕೊಡುವದಾದರೆ ಈ ರೈಲು ಹಾಕುವದಕ್ಕೆ ಮುಖಂಡರಾಗಿರುವ ಇತರ ಗೌವರ್ನಮೆಂಟಿನವರ ಸಂಗಡ ಅದರ ಆಳ್ವಿಕೆಯ ವಿಚಾರದಲ್ಲಿ ಸರಿಸಮಾನವಾದ ಹಕ್ಕು ಬಾಧ್ಯತೆಗಳನ್ನು ತಾವೂ ಪಡೆಯಬೇಕೆಂದು ಇಂಗ್ಲಿಷರು ಅಪೇಕ್ಷಿಸುತ್ತಾರೆ. ಹೀಗೆ ಇಂಗ್ಲಿಷರನ್ನೂ ಮೇಲ್ವಿಚಾರಣೆಯ ಅಧಿಕಾರಕ್ಕೆ ಸೇರಿಸಿಕೊಳ್ಳುವದರಲ್ಲಿ ಆ ಕಂಪನಿಯವರು ಇಷ್ಟಪಡುವದಿಲ್ಲ. ಈ ರೈಲ್ವೆಯ ಆಳಿಕೆ ಮುಂತಾದ್ದೆಲ್ಲಾ ಜರ್ಮನಿಯವರಿಗೇನೇ ಸೇರಿರಬೇಕೆಂತಲೂ, ಹಣ ಕಾಸುಗಳ ವಿಚಾರದಲ್ಲಿ ಇತರರು ಪ್ರವೇಶಿಸಬಹುದೆಂತಲೂ ಕಂಪನಿಯವರು ಹೇಳುತ್ತಾರೆ. ಆದ್ದರಿಂದ ಇಂಥಾ ಕರಾರಿನ ಪ್ರಕಾರ ಕಂಪನಿಯವರಿಗೆ ಭಾರೀ ಹಣವನ್ನು ಸಾಲ ಕೊಡುವದು ಇಂಗ್ಲಿಷ್ ಗೌವರ್ನಮೆಂಟಿನವರಿಗೆ ಯೋಗ್ಯವಾಗಿಲ್ಲವೆಂದು ಹೇಳಬಹುದು.

ಇಂಗ್ಲಿಷರಿಗೆ ಸೇರಿದ ಕೋವಿಯಟ್ ನಗರದಿಂದ ಇಂಗ್ಲಿಷರು ವ್ಯಾಪಾರ ಸರಕುಗಳನ್ನು ಒಳದೇಶಕ್ಕೆ ಸಾಗಿಸಿಕೊಂಡು ಹೋಗಿ ತುರ್ಕಿಯವರಿಗೆ ಸೇರಿದ ದಕ್ಷಿಣ ಪ್ರಾಂತ್ಯದಲ್ಲೆಲ್ಲಾ ವ್ಯಾಪಾರ ವ್ಯವಹಾರಗಳನ್ನು ನಡಿಸುತ್ತಾ ಬಂದಿರುವರು. ಈ ಹೊಸ ರೈಲು ರಸ್ತೆಯನ್ನು ಕೋವಿಯಟ್ಟಿನಿಂದ ಹಾಕುವದಾದರೆ ಇಂಗ್ಲಿಷರ ವ್ಯಾಪಾರವು ಇನ್ನೂ ಹೆಚ್ಚಾದೀತು; ಮತ್ತು ಈ ಏರ್ಪಾಡಿನಿಂದ ಇಂಗ್ಲಿಷರಿಗೆ ತುಂಬಾ ಪ್ರಯೋಜನವಾದೀತೆನ್ನುವದಕ್ಕೆ ಸಂಶಯವಿಲ್ಲ. ಆದರೆ ಆ ಕಂಪನಿಯವರು ಈ ತೀರಪಟ್ಟಣದಿಂದ ರೈಲು ಹಾಕುವದಕ್ಕೆ ಪ್ರಾರಂಭಮಾಡದೆ ಇನ್ನೊಂದು ಕಡೆಯಿಂದ ಹಾಕುತ್ತೇವೆಂದು ಹೇಳುವರು. ಹೀಗಾದರೆ ಇಂಗ್ಲಿಷ್ ಗೌವರ್ನಮೆಂಟಿನವರು ಹಣ ಕೊಡುವದರಿಂದ ಯೂರೋಪಿನ ರಾಜ್ಯಗಳವರಿಗೆ ಪ್ರಯೋಜನವಾದೀತಲ್ಲದೆ ಇವರಿಗೇನೂ ಆದಾಯ ಕಂಡುಬರುವದಿಲ್ಲ. ಈ ಲೈನನ್ನು ಅವರು ಕೋವಿಯಟ್ಟಿಗೆ ತಂದು ಸೇರಿಸುವಾಗ್ಯೆ ಅದರಿಂದ ಇಂಗ್ಲಿಷರಿಗೆ ಪ್ರಯೋಜನವಾಗುವದು. ಆದ್ದರಿಂದ ಹಣವಿಲ್ಲದೇನೋ, ಯುದ್ಧ ಪ್ರಾಪ್ತವಾಗುವದರಿಂದಲೋ, ಅಥವಾ ತುರ್ಕಿ ಗೌವರ್ನಮೆಂಟಿನವರು ಕರಾರಿನಂತೆ ನಡೆಯದೆ ಹೋಗುವದರಿಂದಲೋ ಈ ರೈಲುರಸ್ತೆ ಪೂರೈಸದೆ ನಿಂತುಬಿಟ್ಟರೆ ಇಂಗ್ಲಿಷರಿಗೆ ಹಣ ಕೊಟ್ಟದ್ದೊಂದೇ ನಷ್ಟ; ಅದರಿಂದ ಯೂರೋಪಿನ ರಾಜ್ಯಗಳವರಿಗೇನೇ ಪ್ರಯೋಜನವಾದೀತು. ಇದಲ್ಲದೆ ಇದರಿಂದ ಇಂಗ್ಲಿಷರಿಗೆ ಕೆಡಕಾದರೂ ಆಗಬಹುದು.

ಅತ್ತಲಾಗಿ ಇಂಗ್ಲಿಷ್ ಗೌವರ್ನಮೆಂಟಿನವರ ಸಂಗಡ ಮಾಡಿಕೊಂಡಿರುವ ಕರಾರಿನ ಪ್ರಕಾರ ತುರ್ಕಿ ಸರ್ಕಾರದವರು ನಡೆಯದೆ ತಪ್ಪಿಹೋಗುವ ಸಂದರ್ಭದಲ್ಲಿ ಇಂಗ್ಲಿಷರಿಗೆ ಪ್ರತೀಕಾರಮಾಡುವ ಅವಕಾಶವೇ ತಪ್ಪಿಹೋಗುವದು. ಮತ್ತು ತುರ್ಕಿ ಗೌವರ್ನಮೆಂಟಿನವರು ತಮ್ಮ ಸೈನ್ಯಗಳನ್ನು ಇಂಗ್ಲಿಷರಿಗೆ ಸೇರಿರುವ ಪಟ್ಟಣಗಳ ಕಡೆಗೆ ಕಳುಹಿಸಿಕೊಂಡು ಹೋಗಲು ತುಂಬಾ ಸರಾಗವಾಗುತ್ತದೆ. ಆದಕಾರಣ ಇಂಗ್ಲಿಷರಿಗೆ ಈ ಏರ್ಪಾಡು ಅನುಕೂಲವಾಗಿ ತೋರದು.

ಅಂಚೆ ಕಾಗದ ಪತ್ರಗಳು ಹಿಂದುಸ್ಥಾನಕ್ಕೂ ವಿಲಾಯತಿಗೂ ಬಹು ಜಾಗ್ರತೆಯಾಗಿ ಹೋಗಿ ಬರಲು ಅನುಕೂಲಿಸುವದೆಂದು ಹೇಳುವ ಮಾತೂ ಅಷ್ಟೇನೂ ನಂಬತಕ್ಕದ್ದಾಗಿಲ್ಲ. ಮೊದಲನೇದಾಗಿ ಈ ರಸ್ತೆಯು ಪ್ರಯಾಣಕ್ಕೆ ಸುರಕ್ಷಿತವಾಗಿರುವದು ಎನ್ನುವ ಮಾತಿನಲ್ಲಿ ನಂಬಿಕೆ ಸಾಲದು. ಇಂಗ್ಲಿಷ್ ಗೌವರ್ನಮೆಂಟಿನವರು ತುರ್ಕಿಯ ಸರ್ಕಾರದವರನ್ನು ನಂಬುವದಕ್ಕೆ ಇನ್ನೂ ಧೈರ್ಯ ಸಾಲದು. ಹೀಗಿರುವಾಗ್ಯೆ ಇಂಗ್ಲಿಷರು ತಮ್ಮ ಅಂಚೆ ಕಾಗದ ಪತ್ರಗಳನ್ನು ಅವರ ಸ್ವಾಧೀನ ಮಾಡುವದು ಸಾಧ್ಯವಲ್ಲ. ಮತ್ತು ಯುದ್ಧವೇನಾದರೂ ಪ್ರಾಪ್ತವಾಗುವದಾದರೆ ಇಂಗ್ಲಿಷರಿಗೆ ಆ ಮಾರ್ಗವೇ ಕಟ್ಟಿಹೋದೀತು. ಆದಕಾರಣ ವಿಲಾಯತಿ ಸರ್ಕಾರದವರು ತಮ್ಮ ಅಂಚೆ ಬಸ್ತುಗಳನ್ನು ಇನ್ನೂ ಜಾಗ್ರತೆಯಿಂದ ಸಾಗಿಸುವ ಭಾಗದಲ್ಲಿ ಈಗಿರುವ ಕಂಪನಿಯವರಲ್ಲೇ ಹೊಸ ಏರ್ಪಾಡನ್ನು ಮಾಡಿಕೊಳ್ಳುವವರಾಗಿದಾರೆ.

ಅತ್ತಲಾಗಿ ಜನರು ಈ ಹೊಸ ರೈಲ್‌ರಸ್ತೆಯ ಮೂಲಕ ಪ್ರಯಾಣಮಾಡುವದಕ್ಕೆ ತುಂಬಾ ಸರಾಗವಾಗುತ್ತದೆಂದು ಹೇಳುವ ಮಾತಿನಲ್ಲೂ ಅಷ್ಟೇನೂ ಪ್ರಯೋಜನವಿಲ್ಲ. ಈಗ ಪ್ರಯಾಣಿಕರು ಹಡಗುಗಳಲ್ಲಿ ಬರುವಾಗ್ಯೆ ಕೆಂಪು ಕಡಲಿನ ತಾಪವು ಸಹಿಸಕೂಡದ್ದಾಗಿದೆ. ಆದರೆ ಈ ರೈಲಿನಲ್ಲಿ ಪ್ರಯಾಣ ಮಾಡುವದು ಅದಕ್ಕಿಂತಲೂ ಬಹಳ ಕಷ್ಟ. ಬೇಸಿಗೆಯಲ್ಲಿ ರೈಲ್‌ಗಾಡಿಗಳೊಳಗೆ ಒತ್ತೊತ್ತಾಗಿ ಜನರನ್ನು ಕೂಡಿಸಿ, ಮಹಾ ಉಷ್ಣರಾಜ್ಯದಲ್ಲಿ ಗಾಡಿಯನ್ನು ಓಡಿಸುವರು. ಈ ತಾಪವು ಪ್ರಯಾಣಿಕರಿಗೆ ಸಹಿಸಕೂಡದ್ದಾಗಿದ್ದೀತು. ಆದ್ದರಿಂದ ಇಂಥಾ ರೈಲುಗಾಡಿಗಳಲ್ಲಿ ಹೋಗಿಬರುವದಕ್ಕಿಂತಲೂ ಹಡಗುಗಳ ಮೇಲೆ ತಿರುಗಾಡುವದೇ ಎಷ್ಟೋ ಕ್ಷೇಮ.

ಈ ಹೊಸ ರೈಲ್ ರಸ್ತೆಯ ವಿಷಯದಲ್ಲಿ ಇನ್ನೊಂದು ಸಂಗತಿ ತಿಳಿಯಬೇಕಾಗಿದೆ. ರಷ್ಯಾದವರು ಪಾರ್ಷಿಯಾ ಮೇಲೆ ಬಂದು ವ್ಯಾಪಾರ ಮುಂತಾದ್ದನ್ನು ನಡಸಬೇಕೆಂಬದಾಗಿ ಬಹುಕಾಲದಿಂದ ಸಾಹಸಪಡುತ್ತಿದ್ದರೂ ಇಂಗ್ಲಿಷರು ಅವರಿಗೆ ಅವಕಾಶ ಕೊಟ್ಟಿಲ್ಲ. ಇಂಥಾದ್ದರಲ್ಲಿ ಈಗ ಇಂಗ್ಲಿಷರು ಈ ಹೊಸ ರೈಲ್ವೆಗೆ ಹಣ ಹಾಕಿದರೆ ಅದರಿಂದ ಜರ್ಮನಿಯವರು ಪಾರ್ಷಿಯಾ ಮೇಲೆ ಬಂದು ವ್ಯಾಪಾರ ನಡಸಲು ಇಂಗ್ಲಿಷರು ತಾವಾಗಿ ಅವಕಾಶವನ್ನು ಕಲ್ಪಿಸಿಕೊಟ್ಟಂತಾಗುವದು. ಇದರಿಂದ ಇಂಗ್ಲಿಷರಿಗೂ ರಷ್ಯಾದವರಿಗೂ ನಿಷ್ಕಾರಣವಾಗಿ ಮನಸ್ತಾಪ ಉಂಟಾಗುತ್ತದೆ. ಇಂಥಾ ಮನಸ್ತಾಪ ಹುಟ್ಟಿದರೆ ಸಾಕಲ್ಲಾ ಎಂಬದಾಗಿ ಜರ್ಮನಿಯವರು ಕಾದಿರುತ್ತಾರೆ. ಆದರೆ ಇದಕ್ಕೆ ಇಂಗ್ಲಿಷರು ಅವಕಾಶ ಕೊಟ್ಟಿಲ್ಲ.

ಈ ಪ್ರಕಾರ ರಾಜ್ಯರಾಜ್ಯಗಳವರೇ ಸೇರಿ ಈ ರೈಲ್ ರಸ್ತೆ ಹಾಕಿಸದೇನೂ, ಅದಕ್ಕೆ ಹೆಚ್ಚು ಹಣ ಕೊಡತಕ್ಕ ರಾಜ್ಯಗಳವರಿಗೆ ಆ ರೈಲಿನ ಆಡಳಿತಗಳನ್ನು ವಹಿಸಿಕೊಡದೇನೂ ಹೋಗುವ ಪಕ್ಷದಲ್ಲಿ ಇಂಗ್ಲಿಷ್ ಗೌವರ್ನಮೆಂಟಿನವರು ಅದಕ್ಕೆ ಹಣ ಕೊಡುವದು ನಿಷ್ಪತ್ರಕ್ಕೆ ಯೋಗ್ಯವಲ್ಲವೆಂದೂ, ಅವರು ಅದಕ್ಕೆ ಪ್ರೋತ್ಸಾಹ ಕೊಡುವದು ಸರಿಯಲ್ಲವೆಂದೂ ನಮಗೆ ತೋರುತ್ತದೆ. ಆದರೂ ಈ ರೈಲುರಸ್ತೆ ಆಗೇ ಆಗುವದು. ಅದು ತಯಾರಾದಾಗ ಹಿಂದುಸ್ಥಾನಕ್ಕೂ ವಿಲಾಯತಿಗೂ ಅದಕ್ಕಿಂತಲೂ ಸಮೀಪವಾದ ರಸ್ತೆ ಮತ್ತೊಂದಿರಲಾರದು. ಆದಕಾರಣ ಇಂಥಾ ರಾಜಕೀಯ ಸಂಬಂಧವಾದ ರೈಲ್ ರಸ್ತೆಯು ಒಂದೇ ರಾಜ್ಯದವರಿಗೆ ಸೇರಿರಕೂಡದೆಂತಲೂ, ಅನೇಕ ರಾಜ್ಯಗಳವರು ಸೇರಿ ಅದನ್ನು ಪಾಲಿಸುವಂತೆಯೂ ನೋಡಿಕೊಳ್ಳುವದು ತುಂಬಾ ಅವಶ್ಯವಾಗಿರುತ್ತದೆ.

ಈಚೆಗೆ ಬಂದಿರುವ ವರ್ತಮಾನವನ್ನು ನೋಡಲಾಗಿ ವಿಲಾಯತಿ ಗೌವರ್ನಮೆಂಟಿನವರು ಇತರ ಗವರ್ನಮೆಂಟುಗಳವರ ಸಂಗಡ ಸರಿಸಮಾನವಾಗಿ ಸೇರಿ, ಈ ರೈಲ್ವೆಯ ಆಡಳಿತಗಳನ್ನು ನೋಡಿಕೊಳ್ಳುವಂತೆ ಆಗದಿದ್ದರೆ ತಾವು ಅದಕ್ಕೆ ಹಣ ಹಾಕುವದಿಲ್ಲವೆಂದು ಇಂಗ್ಲಿಷರು ತಿಳಿಸಿರುತ್ತಾರೆಂಬದಾಗಿ ಗೊತ್ತಾಗಿದೆ. ಈ ಒಳ್ಳೆ ಸುದ್ದಿಯನ್ನು ತಿಳಿಯಪಡಿಸಲು ನಾವು ಸಂತೋಷಪಡುತ್ತೇವೆ.

## ಮೈಸೂರು ಸರ್ಕಾರಿ ಹುಕುಮು.

ಗೌರಿಬಿದನೂರು ತಾಲ್ಲೂಕು ರೆವಿನ್ಯೂ ಗುಮಾಸ್ತೆ ನರಸಪ್ಪನವರನ್ನು ರಿಟೈರ್ ಮಾಡಿದ ಸಂಗತಿಯನ್ನು ಕುರಿತು ಕೋಲಾರದ ಡೆಪ್ಟಿ ಕಮಿಷನರ್‌ರು ಗೌವರ್ನಮೆಂಟಿಗೆ ಬರೆದು ತಿಳಿಸಿದರು. ಇದನ್ನು ನೋಡಿ ಗೌವರ್ನಮೆಂಟಿನವರು ಕೊಟ್ಟಿರುವ ಹುಕುಮಿನ ಮುಖ್ಯಾಂಶಗಳೇನಂದರೆ.—

೩೦ ವರುಷ ಸರ್ವಿಸು ಮಾಡಿರುವದಾಗಿಯೂ, ಪೆನ್ಷನ್ ಕೊಡಿಸಬೇಕೆಂತಲೂ ನರಸಪ್ಪನವರು ಕೇಳಿಕೊಂಡ ಪ್ರಕಾರ ಅವರನ್ನು ಕೆಲಸದಿಂದ ತೆಗೆದಿರುವದಾಗಿ ತಿಳಿದುಬರುತ್ತೆ. ಆದರೆ ಅವರ ಪೆನ್ಷನ್ ಅರ್ಜಿಯನ್ನು ಕಂಟ್ರೋಲರವರು ನೋಡಿದಾಗ ೩೦ ವರುಷ ಸರ್ವಿಸ್ ಪೂರೈಸಲಿಲ್ಲವೆಂತಲೂ, ಅವರು ಇನ್ನೂ ೨ ತಿಂಗಳೂ ೬ ದಿನಗಳೂ ಸರ್ವಿಸ್ ಮಾಡಬೇಕಾಗಿದೆ ಎಂತಲೂ ಗೊತ್ತಾಯಿತು. ಆದರ ಮೇಲೆ ಈಗಲೇ ಅವರನ್ನು ಪೆನ್ಷನ್ ಮೇಲೆ ತೆಗೆಯುವ ವಿಷಯದಲ್ಲಿ ಅವರ ಶರೀರಸ್ಥಿತಿ ಚನ್ನಾಗಿರುವದೋ ಇಲ್ಲವೋ ತಿಳಿಸಬೇಕೆಂದು ಡಾಕ್ಟರಿಂದ ಪರೀಕ್ಷೆಮಾಡಿಸಿದ್ದಾಯಿತು. ಡಾಕ್ಟರು ಪರೀಕ್ಷೆಮಾಡಿ ನರಸಪ್ಪನವರ ಕಾಯಪುಷ್ಟಿ ಚನ್ನಾಗಿದೆ ಎಂತಲೂ, ಅವರು ಇನ್ನೂ ಕೆಲಸಮಾಡಬಹುದೆಂತಲೂ ತಿಳಿಸಿದಾರೆ. ಅತ್ತಲಾಗಿ ಸಬ್ ಡಿವಿಜನ್ ಆಫೀಸರು ನರಸಪ್ಪನವರಿಗೆ ಕೆಲಸ ಮಾಡುವದಕ್ಕೆ ಶಕ್ತಿಯೇ ಇಲ್ಲವೆಂದು ಹೇಳುತ್ತಾರೆ. ಡೆಪ್ಟಿ ಕಮಿಷನರು ನರಸಪ್ಪನವರಿಗೆ ಸರ್ವಿಸ್ ಕೂಡಿಸಿಕೊಟ್ಟು ಪೆನ್ಷನ್ ಕೊಡಬಹುದೆಂತಾ ಶಿಫಾರಸು ಮಾಡಿದಾರೆ.

ನರಸಪ್ಪನವರು ೩೦ ವರುಷ ಸರ್ವಿಸ್ ಮಾಡಿಲ್ಲವಾದ್ದರಿಂದ ಅವರಿಗೆ ಪೆನ್ಷನ್ ಕೊಡಲು ಅವಕಾಶವಿಲ್ಲ. ಅವರಿಗೆ ೫೫ ವರುಷ ವಯಸ್ಸೂ ಮುಗಿದಿಲ್ಲ. ಮೊದಲೇ ಕೆಲಸದಿಂದ ತೆಗೆಯುವದಕ್ಕೆ ಅವರಿಗೆ ಕಾಯಶಕ್ತಿಯೂ ಕಡಿಮೆಯಾಗಿಲ್ಲ. ಡಾಕ್ಟರ ಅಭಿಪ್ರಾಯವನ್ನು ತಳ್ಳಪಡಿಮಾಡಿ, ಅವರನ್ನು ಕೆಲಸಬಿಡಿಸಿದ್ದು ಸಬ್ ಡಿವಿಜನ್ ಆಫೀಸರಿಗೆ ಸರಿಯಲ್ಲ. ಈ ರೆವಿನ್ಯೂ ಗುಮಾಸ್ತರನ್ನು ಕೂಡಲೇ ಕೆಲಸಕ್ಕೆ ಸೇರಿಸಿಕೊಳ್ಳಬೇಕು. ಅವರು ಕೆಲಸಮಾಡದೆ ಇರುವ ಕಾಲದಲ್ಲಿ ಅವರಿಗೆ ಸಲ್ಲತಕ್ಕ ಸಂಬಳದ ವಿಚಾರದಲ್ಲಿ ಪ್ರತ್ಯೇಕವಾದ ಹುಕುಂ ಕೊಡಲಾಗುವದು.

## ಮೈಸೂರು ಗೆಜೆಟು ಸಂಗ್ರಹ.

ಚಿತ್ರದುರ್ಗ ಡಿಸ್ಟ್ರಿಕ್ಟ್ ಅ. ಕ. ಮೆ॥ ಎ. ಸುಬ್ರಹ್ಮಣ್ಯಯ್ಯನವರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪ್ರೊ. ಅ. ಕ. ಮೆ॥ ಬಿ. ವೆಂಕೋಬರಾಯರು ತಮ್ಮ ಇತರ ಕೆಲಸಗಳೊಂದಿಗೆ ಜನರಲ್ ಡ್ಯೂಟಿಯ ಛಾರ್ಜನ್ನು ವಹಿಸತಕ್ಕದ್ದು.

ಗುಬ್ಬಿ ತಾಲ್ಲೂಕ್ ಅಮಲ್ದಾರ್ ಮೆ॥ ರಂಗರಾಯರಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಹೆಡ್ ಕ್ವಾರ್ಟರ್ಸ್ ಇನಸ್ಪೆಕ್ಟರ್ ಗೋಪಾಲರಾಯರು ಗುಬ್ಬಿಯ ಅಮಲ್ದಾರರಾಗಿ ಕೆಲಸನೋಡತಕ್ಕದ್ದು.

ತರೀಕೆರೆ ತಾಲ್ಲೂಕ್ ಅಮಲ್ದಾರ್ ಮೆ॥ ನಾಡಿಗ ಸುಬ್ಬರಾಯರಿಗೆ ಮೂರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಯಡೆಹಳ್ಳಿ ಡೆಪ್ಟಿ ಅಮಲ್ದಾರ್ ಬಿ. ಜಗನ್ನಾಥರಾಯರು ತರೀಕೆರೆ ಅಮಲ್ದಾರರಾಗಿ ಕೆಲಸನೋಡತಕ್ಕದ್ದು.

ಕೊಪ್ಪದ ಅಮಲ್ದಾರರು ಯಡೆಹಳ್ಳಿಯ ಸಬ್ ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು.

ಹುಣಸೂರು ತಾಲ್ಲೂಕ್ ಅಮಲ್ದಾರ್ ಮೆ॥ ಗುಲಾಂ ಮೊಹಿದ್ದೀನ್ ಖಾನ್ ಯವರನ್ನು ಇತರ ಕೆಲಸದ ಮೇಲೆ ನೇಮಿಸಿರುವ ಕಾಲದಲ್ಲಿ ಮುಂದೆ ಹೇಳುವ ಬದಲೀ ಏರ್ಪಾಡು ಹುಕುಂ ಮಾಡಲ್ಪಟ್ಟಿದೆ:—

ಫ್ರೆಂಚ್‌ರಾಕ್ಸ್ ಡೆಪ್ಟಿ ಅಮಲ್ದಾರ್ ಶೇಕ್ ಅಬ್ದುಲ್ಲಾ ಯವರು ಹುಣಸೂರಿನ ಅಮಲ್ದಾರರಾಗಿ ಕೆಲಸ ನೋಡತಕ್ಕದ್ದು.

ಮೈಸೂರು ಡೆಪ್ಟಿ ಕಮಿಷನರ ಆಫೀಸ್ ಹೆಡ್ ಕ್ಲರ್ಕ್ ಟಿ. ದೊರೆಸ್ವಾಮಿಪಿಳ್ಳೆಯವರು ಫ್ರೆಂಚ್‌ರಾಕ್ಸಿನ ಡೆಪ್ಟಿ ಅಮಲ್ದಾರರಾಗಿ ಕೆಲಸನೋಡತಕ್ಕದ್ದು.

ತುಮಕೂರು ತಾಲ್ಲೂಕು ಊರ್ಡಿಗೆರೆ ಹೋಬಳಿ ಕೋಡಿಗೇನಹಳ್ಳಿ ಗ್ರಾಮದಲ್ಲಿ ಮನೆಗಳನ್ನು ಕಟ್ಟುವದಕ್ಕೆ ಗೋಮಾಳ್ಯದಿಂದ ಖಾತೇದಾರನಿಗೆ ಸೇರಿರುವ ೨ ಎಕರೆ ಜಮೀನಿನಲ್ಲಿ ೧೪ ಗುಂಟೆ ಜಮೀನು ಸರ್ಕಾರಕ್ಕೆ ಬೇಕಾಗಿರುವದು.

## ತಾಲ್ಲೂಕು ವರ್ತಮಾನಗಳು.

ಸಿರಾ.—ಗತಸಾಲಿನಲ್ಲಿ ಈ ಊರಿನಲ್ಲಿ ಮೊಹರಂ ಹಬ್ಬದಲ್ಲಿ ತುಂಬಾ ಕೋಲಾಹಲವೂ, ಗಲಾಟೆಯೂ, ಸರ್ದಾರರವರಿಗೆ ಬಹಳ ಚಿಂತೆಯೂ ಇತ್ತು. ಆದಕಾರಣ ಈ ಸಾಲಿನಲ್ಲಿ ನಮ್ಮ ಅಮಲ್ದಾರ್ ಇನಸ್ಪೆಕ್ಟರ್ ಮುಂತಾದವರು ಜಾಗ್ರತೆ ತೆಗೆದುಕೊಂಡು, ತುಮಕೂರಿನಿಂದ ಸಾಮಗ್ರಿಗಾಗಿ ರಿಸರ್ವ್ ಪೋಲೀಸ್ ಇನಸ್ಪೆಕ್ಟರವರನ್ನೂ, ಸ್ವಲ್ಪ ಪೋಲೀಸನ್ನೂ ತರಿಸಿಕೊಂಡು, ಹಿಂದಿನ ಮಾಮೂಲಿನಂತೆ ಉಬ್ಬುತಗ್ಗುಗಳು ಏನಾಗದಂತೆ ಸಲೀಸಾಗಿ ನಡಿಸಿದರು. ಪ್ರತಿವರ್ಷವೂ ಈ ರೀತಿ ಆದರೆ ಬಹು ಚನ್ನಾಗಿರುತ್ತೆನ್ನುವದಕ್ಕೆ ಸಂಶಯವಿಲ್ಲ.—ಇಲ್ಲಿಗೆ ೯—೧೦ ಮೈಲಿ ದೂರದಲ್ಲಿರುವ ಗೋಪಾಲದೇವರಹಳ್ಳಿ ಎಂಬ ಸ್ಥಳದಲ್ಲಿ ಒಕ್ಕಲಿಗರ ಹುಟ್ಟಪ್ಪ, ಹೆಣ್ಣುದಾಸ, ಇವರಿಬ್ಬರೂ ಜಗಳದ ಹುಟ್ಟು ಇದ್ದದಾಗಿಯೇ ಹೆಣ್ಣುದಾಸಿಯ ಏಟಿನಿಂದ ಮತ್ತೊಬ್ಬನು ಸತ್ತುಹೋದನೆಂದು ಅಮಲ್ದಾರ್, ಇನಸ್ಪೆಕ್ಟರ್, ಆಸ್ಪತ್ರೆ ಅಸಿಸ್ಟೆಂಟರು, ಎಲ್ಲರು ಹೋಗಿ ಜಡಿ ಮಾಡಿ ಪೈಯಿಂದ ಕೇಸ್ ಕಮಿಟ್ ಮಾಡಿದರು. ಹೆಣ್ಣುದಾಸಿ ಎಂಬವನಿಗೆ ೬ ತಿಂಗಳು ಸಜಾ, ೫೦ ರೂಪಾಯಿ ಜುಲ್ಮಾನೆ ಆಯಿತು.—ಕೆಲವು ದಿನಗಳ ಕೆಳಗೆ ಸೀಬಿಯಕ್ಕೆ ಸೇರಿದ ಜಂಗಮಪ್ಪ ನಾಮಪ್ಪ ರಾಮನೆಂಬವನು ಬೇರೇ ಗ್ರಾಮಕ್ಕೆ ಹೋಗಿ ಅಲ್ಲಿಂದ ಒಂದು ಎತ್ತನ್ನು ಕದ್ದು ಇದ್ದನು. ಅದು ಕಳವಿನದೆಂದು ಅಲ್ಲಿಂದ ಪತ್ತೆ ತರಬೂದು ಮಾಡಿಕೊಂಡು, ಬಂದವರು ಹಿಡಿದು ಚಾರ್ಜ್ ಮಾಡಲು ಇಲ್ಲಿನ ಅಮಲ್ದಾರರು ನ್ಯಾಯ ವಿಚಾರಣೆಮಾಡಿ ೧೪ ದಿನ ಕಠಿಣಸಜಾ ವಿಧಿಸಿದರು. ಇದು ಬಾಯಿಷ್ ಮಾಡಿ ಮೇಲಕ್ಕೆ ಅಪೀಲ್ ಮಾಡಿಕೊಳ್ಳಲು ಇದುವರೆಗೂ ಅನುಭವಿಸಿದ ೭ ದಿನದ ಸಜಾ ಜಾರಿಯಾಗಿ ೯ ದಿನಗಳ ಸಜಾಕ್ಕೆ ಬದಲಾಗಿ ೨೫ ರೂಪಾಯಿ ಜುಲ್ಮಾನೆ ವಿಧಿಸಿದೆಂಬದಾಗಿ ಮೇಲಿನಿಂದ ಹುಕುಂ ಬಂತು.—ಸಿರಾ ತಾಲ್ಲೂಕು ಬರಗೂರು ಸಮ್ಮತು ಒಕ್ಕಲಿಗರ ಚಿಕ್ಕೀರ, ಹುಸೇನಸಾಬಿ, ಚಿಕ್ಕ ಭೀಮನಾಯ್ಕ ಎಂಬ ಮುವ್ವರು ಕೆಲವು ಬಾಳೆ ಎಲೆ, ಕೆಲವು ತೆಂಗಿನಕಾಯಿ, ಕೆಲವು ಹಲಸಿನಕಾಯಿ ಇವುಗಳನ್ನು ಕಳವು ಮಾಡಿದ್ದಕ್ಕಾಗಿ ಅವರಿಗೆ ೭ ದಿನಗಳ ಕಠಿಣಸಜಾ ಆಯಿತು.—ಇಲ್ಲಿ ಮಳೆ ಇಲ್ಲದೆ ಬಹಳ ಧಗೆಯಾಗಿದೆ. ಸೆಕೆಯನ್ನು ಸಹಿಸಲು ಆಗುವದಿಲ್ಲ. ಮೋಡಗಳು ವಿಪರೀತ ಬೆಳ್ಳಗಾಗಲೇ ಗಾಳಿ ಎದ್ದು ಅವನ್ನು ಚದರಿಸಿ ಬಿಡುತ್ತದೆ ಈಗ ೬—೫ ದಿನಗಳಿಂದ ಸುತ್ತಲೂ ಸ್ವಲ್ಪ ಮಳೆಯಾಗುತ್ತೆ. ಕೀರ್ಯದಲ್ಲಿ ಮಾತ್ರ ಆಗಲಿಲ್ಲ.

ತುಮಕೂರು.—ಈಗಿನ ಬಿಸಲಿನ ತಾಪವನ್ನು ಸಹಿಸಲಶಕ್ಯವಾಗಿದೆ ಹಲ್ವಾರಿವಿಗೂ ಮಳೆಯೆಂಬುವ ಸೊಲ್ಲು ಇಲ್ಲವಾಗಿದೆ ದಿನಸಿಗಳ ಧಾರಣೆ ಬಡವರಿಗೆ ಅನುಕೂಲವಾಗಿದೆ. ಇಲಿಗಳ ಮರಣವು ಬಹು ಅಧಿಕವಾಗಿದೆ ಶಿಕ್ಕೇರಿಯಲ್ಲಿ ಪ್ಲೇಗು ತಲೆದೋರಿದೆ. ಈಗ್ಯೆ ಕೆಲವು ದಿನಗಳ ಹಿಂದೆ ಬಾರ್ ಸಿಪಾಯಿಗಳ ಶ್ರೇಣಿಯಲ್ಲಿ ಇದು ತಲೆದೋರಿ, ಈಗ ಅಲ್ಲಿ ನಿಂತುಹೋಗಿದೆ. ಇಲಿಗಳ ಮರಣ ಸ್ಥಾನಗಳನ್ನು ತಿಳಿದು, ಸರ್ಕಾರದವರು ವಿಷನಾಶಕ ದ್ರವ್ಯಗಳಿಂದ ಆ ಸ್ಥಳಗಳನ್ನು ಶುದ್ಧಿಮಾಡುತ್ತಾ ಬರುತ್ತಿದ್ದಾರೆ. ಇಷ್ಟಾದರೂ ಕೋಟೆಯಲ್ಲಿ ಒಂದು ಸಣ್ಣ ಇಲಿಯಾದರೂ ಸತ್ತ ಸಮಾಚಾರವೇ ಇಲ್ಲ. ಇದರಿಂದ ಅಲ್ಲಿನ ಆರೋಗ್ಯಕರವಾದ ಏರ್ಪಾಡು ಚನ್ನಾಗಿದೆ ಎಂದು ಸ್ಪಷ್ಟವಾಗುತ್ತೆ. ಏಕೆಂದರೆ, ಅಲ್ಲಿನ ಡೆಪ್ಟಿ ಕಮಿ

ಷನರ್ ಮೆ॥ ನಾರಾಯಣರಾಯರು ಬಹಳ ಮುತುವರ್ಜಿ ವಹಿಸಿ, ಕಪ್ಪು ಕಲ್ಲುಗಳಿಂದ ಕೋಟೆಯ ಮುಖ್ಯ ಬೀದಿಗಳಲ್ಲೆಲ್ಲ ಚರಂಡಿಗಳನ್ನು ಕಟ್ಟಿಸಿರುವದಲ್ಲದೆ, ಸಣ್ಣ ಸಣ್ಣ ಗಲ್ಲಿಗಳಲ್ಲೂ ಕೂಡ ಸಾಧಾರಣ ಕಲ್ಲುಗಳಿಂದ ಚರಂಡಿಗಳನ್ನು ಕಟ್ಟಿಸಿ, ಬಚ್ಚಲ ನೀರು ಬಹು ಜಾಗ್ರತೆಯಾಗಿ ಹರಿದುಹೋಗುವಂತೆ ಏರ್ಪಾಡು ಮಾಡಿರುವರು.—ಪೂರ್ವದಲ್ಲಿ ಸಂತೆಯು ಸೇರುತ್ತಿದ್ದ ಸ್ಥಳವು ಬಹಳ ಇಕ್ಕಟ್ಟಾದ್ದೆಂದು ತಿಳಿದು, ಬಹು ವಿಶಾಲವಾದ ಸ್ಥಳದಲ್ಲಿ ಸಂತೆಯು ಸೇರುವಂತೆ ಏರ್ಪಾಡು ಮಾಡಿದರು. ಈಗ ನಮ್ಮ ಡೆಪ್ಯೂಟಿ ಕಮಿಷನರ ಗಮನವು ಕೆಳಕೋಟೆಯ ಕಡೆಗೆ ತಿರುಗಿದೆ, ಅಲ್ಲಿ ಎರಡು ದೊಡ್ಡ ರಸ್ತೆಗಳನ್ನು ಹಾಕಬೇಕೆಂದು ಏರ್ಪಾಡು ಮಾಡಿದ್ದಾರೆ. ಈ ಉದ್ದೇಶವು ಎಷ್ಟು ಮುಖ್ಯವಾದದ್ದೆಂದು ಲಿಖಿತಮೂಲಕ ವಿವರಿಸಲಶಕ್ಯ. ಇವರ ಮಾಡಿರುವ ಕಾರ್ಯಗಳಲ್ಲಿ ಮತ್ತೊಂದು ಶ್ಲಾಘ್ಯವಾದದ್ದು ಯಾವದೆಂದರೆ, ಕೃಷ್ಣಪಕ್ಷ ಪಕ್ಷಗಳೆರಡರಲ್ಲೂ ತಿಂಗಳ ಬೆಳಕು ಹೋದನಂತ್ರವೂ ಬರುವತನಕವೂ ಮುನ್ಸಿಪಲ್ ಲಾಂದ್ರಗಳು ಉರಿಯುವಂತೆ ಮಾಡಿರುತ್ತಾರೆ. ಆದರೆ ಕೋಟೆಯ ಚರಂಡಿಗಳ ವಿಷಯದಲ್ಲಿ ಮಾಡಿರುವ ಏರ್ಪಾಡನ್ನು ಪೇಟೆಯಲ್ಲಿ ಯಾವಾಗ ಮಾಡುವರೋ ಎಂದು ಪೇಟೆಯ ನಿವಾಸಿಗಳು ನಿರೀಕ್ಷಿಸುತ್ತಿದ್ದಾರೆ. ಇಲ್ಲಿನ ಜನಗಳಿಗೆ ನೀರಿನ ವಿಷಯದಲ್ಲಿ ಉಂಟಾಗಿರುವ ಶ್ರಮಬಾಧೆಯನ್ನು ವಿವರಿಸಲಸಾಧ್ಯ. ಈ ವಿಷಯದಲ್ಲಿ ನಮ್ಮ ಪ್ರೆಸಿಡೆಂಟರು ಹೆಚ್ಚಾದ ಗಮನ ಕೊಟ್ಟು, ಹೊಸದಾಗಿ ಭಾವಿಗಳನ್ನು ತೆಗಸುವದರ ಮೂಲಕವೂ, ಹಳೇ ಭಾವಿಗಳನ್ನು ಇನ್ನೂ ಆಳವಾಗಿ ಇಳಿಸುವದರ ಮೂಲಕವೂ ಪ್ರಜೆಗಳಿಗೆ ಸಹಾಯ ಮಾಡಿದರೆ ಈ ಉಪಕಾರವನ್ನು ಇಲ್ಲಿನವರು ಎಂದಿಗೂ ಮರೆಯುವದಿಲ್ಲ.—ಈಚೆಗೆ ಇಲ್ಲಿನ ಅಡ್ವೋಕೇಟ್ ಮೆ॥ ಪಿ. ಮಹಾದೇವಯ್ಯನವರಿಗೂ ಮೈಸೂರು ಸ್ಟಾರ್ ಪತ್ರಿಕಾ ಕರ್ತರಿಗೂ ಬೀಗತನ ಉಂಟಾದದ್ದು ಸುವರ್ಣಕ್ಕೆ ಸುವಾಸನೆ ಉಂಟಾದಂತಾಯಿತು.—ಈ ಊರಿನ ಪ್ರತಿ ಗಂಡು ಮಕ್ಕಳ ಪಾಠಶಾಲೆಯ ಮಗ್ಗುಲಲ್ಲಿ ರೆವರೆಂಡ್ ಎಡ್ವರ್ಡ್ಸ್ ದೊರೆಯವರು ಮಿಷನ್ ಬುಕ್ ಡಿಪೋ ಪ್ರತ್ಯೇಕವಾಗಿ ಇಡಿಸಿದ್ದು ಇಲ್ಲಿನ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಯಿತು.—ಈಚೆಗೆ ಮುನ್ಸಿಪಾಲಿಟಿಯವರು ಪ್ರಜೆಗಳು ಯಾವ ಕಟ್ಟಡ ಕಟ್ಟಬೇಕಾದರೂ ಲೈಸೆನ್ಸು ಪಡೆಯಬೇಕೆಂದು ನಿರ್ಣಯಿಸಿರುತ್ತಾರೆ. ಈ ವಿಷಯವು ಹೊಸ ಕಟ್ಟಡಗಳ ವಿಷಯದಲ್ಲಿ ಮಾತ್ರವೋ ಅಥವಾ ಹಳೇ ಕಟ್ಟಡಗಳನ್ನು ರಿಪೇರಿ ಮಾಡಲೂ ಸಹ ಲೈಸೆನ್ಸ್ ಪಡೆಯಬೇಕೋ ಯಾವದೂ ಪ್ರಜೆಗಳಿಗೆ ತಿಳಿಸಿಲ್ಲ. ಸುಮ್ಮನೆ ನಿರ್ಬಂಧಿಸುತ್ತಿರುವರು.

ಕುಲೀಸ್‌ಪೇಟೆ.—ಈವರೆವಿಗೂ ಬಿಸಿಲಿನತಾಪ ಹೆಚ್ಚಾಗಿತ್ತು. ಭಗವಂತನ ಕಟಾಕ್ಷದಿಂದ ಇಲ್ಲಿ ಒಂದು ಹದ ಮಳೆಯಾಯಿತು, ಭೂಮಿ ತಂಪಾಗಿದೆ. ಬೇಸಿಗೆಯಲ್ಲಿ ನೀರುಬಂದಕಾರಣ ನೀರಿನ ಕ್ಷಾಮವು ಸ್ವಲ್ಪಮಟ್ಟಿಗೆ ತಪ್ಪಿತು. ಸರ್ಕಾರದಿಂದ ಏರ್ಪಾಡಾಗಿರುವ ನಲ್ಲಿಗಳ ನೀರು ಹೆಚ್ಚಾಗಿ ಬೇಕಾಗಿರುವ ಸ್ಥಳಗಳಲ್ಲಿ ಇರುವದೇ ಇಲ್ಲ. ಕೆಲವು ಸಮಯಗಳಲ್ಲಿ ಯಾವಕಾರಣದಿಂದಲೋ ನಲ್ಲಿಗಳಲ್ಲಿ ನೀರು ನಿಂತುಹೋಗುತ್ತೆ. ಆಗ್ಗೆ ಜನರಕಷ್ಟ ಏನೆಂದುಹೇಳುವ. ಕಾರಂಜಿಗಳಲ್ಲಿ ನೀರುತುಂಬಿ ದುರ್ವಾಸನೆ ಬರುವಮಟ್ಟಿಗೂ ಅದನ್ನು ಹೊರಗೆ ತೆಗೆಯುವವರಿಲ್ಲ. ಯಾರಾದರೂ ಕಾಯಿಲೆಬಿದ್ದರೆ ಅವರ ಗತಿಯನ್ನು ದೇವರೇ ಬಲ್ಲ. ಈ ವಿಷಯಕ್ಕೆ ನಮ್ಮ ಅಮಲ್ದಾರರು ನಿಗಾಕೊಟ್ಟು ಕಾರಂಜಿಗಳ ಮೇಲ್ವಿಚಾರಣೆಗೆ ಒಬ್ಬರನ್ನು ನೇಮಿಸ್ಯಾರೆಂದು ಪ್ರಾರ್ಥಿಸುತ್ತೇವೆ.—ಇಲ್ಲಿ ಹತ್ತು ಹನ್ನೊಂದು ವರ್ಷಗಳ ಲಾಗಾಯಿತು ಎಲ್ಲಾ ಜನರ ಪ್ರೀತಿಗೌರವಗಳಿಗೆ ಪಾತ್ರರಾಗಿ ಜನರಿಗೆಲ್ಲಾ ಸೌಲಭ್ಯವನ್ನು ಉಂಟುಮಾಡಿದ ಆಸ್ಪತ್ರೆ ಅಸಿಸ್ಟೆಂಟ್ರವ ಮೆ॥ ಮಾಸಿಲಾಮಣಿ ಮೊದಲಿಯಾರ್ರಿಗೆ ಫ್ರೇಜರ್‌ಪೇಟೆಗೆ ವರ್ಗವಾದ ವಿಷಯ ಜನರಿಗೆ ತುಂಬಾ ವಿಷಾದವನ್ನು ಉಂಟುಮಾಡಿದೆ. ಇವರಿಗೆ ಕೃತಜ್ಞತೆಯನ್ನು ತೋರಿಸುವದಕ್ಕೋಸ್ಕರ ೧೫ನೇ ತಾ॥ ಶುಕ್ರವಾರ ಸಾಯಂಕಾಲ ೭ ಗಂಟೆಯ ಸಮಯದಲ್ಲಿ ಪೂರ್ಣಯ್ಯನವರ ಛತ್ರದಲ್ಲಿ ಅಮಲ್ದಾರರೇ ಮುಂತಾದ ದೊಡ್ಡಮನುಷ್ಯರು ಒಂದು ಪಾರ್ಟಿಯನ್ನು ಏರ್ಪಡಿಸಿ, ಸದರಿ ಮಾಸಿಲಾಮಣಿ ಮೊದಲಿಯಾರ್ರನ್ನು ಅಲ್ಲಿಗೆ ಬರಮಾಡಿಕೊಂಡು, ಇಂಗ್ಲೀಷ್‌ನಲ್ಲಿಯೂ, ಕನ್ನಡದಲ್ಲಿಯೂ ಮೂರು ಅಡ್ರೆಸ್‌ಗಳನ್ನು ಓದಿದರು. ಬಂದಿದ್ದ ಜನರಿಗೆಲ್ಲಾ ಲಾಡು, ಚಿರೋಟಿ, ಟೀ ಮುಂತಾದ್ದನ್ನು ಹಂಚಿ, ಕಡೆಯಲ್ಲಿ ಪುಷ್ಪ, ಗಂಧ ತಾಂಬೂಲಗಳನ್ನು ಕೊಡಲಾಯಿತು. ಅನಂತರ ಅವರನ್ನು ಬ್ಯಾಂಡಿನೊಂದಿಗೆ ಬೀದಿಯಲ್ಲಿ ಮೆರವಣಿಗೆಯಿಂದ ಹಗಲುಬತ್ತಿ, ಬಿರುಸು ಮುಂತಾದ್ದನ್ನು ಹಚ್ಚಿ ಬಹು ವಿಜೃಂಭಣೆಯಿಂದ ಅವರ ಬಿಡಾರಕ್ಕೆ ೯ ಗಂಟೆಗೆ ಸೇರಿಸಿದರು, ಇವರು ೧೬ನೇ ಶನಿವಾರ ರೈಲಿನಲ್ಲಿ ತಮ್ಮ ಸ್ಥಳಕ್ಕೆ ಪ್ರಯಾಣಬೆಳಸಿದರು. ಮೇಲೆಕಂಡವರ ವಿಷಯ ಜನರಿಗೆ ಇಷ್ಟು ವ್ಯಸನವಿದ್ದಾಗ್ಯೂ ಅವರ ಸ್ಥಾನಕ್ಕೆ ಬಂದಿರುವ ಆಸ್ಪತ್ರೆ ಅಸಿಸ್ಟೆಂಟರಾದ ಮೆ॥ ಜೆ. ಸಾಮುವೇಲರವರ ಪರಾಂಬರಿಕೆಯಿಂದ ಆದರಣೆ ಹೊಂದುತ್ತಾರೆ. ಈ ಮಹನೀಯರೂ ಸತ್ಯವಾದಿಗಳು, ನಿಷ್ಪಕ್ಷಪಾತಿಗಳು, ವಿಶೇಷವಾಗಿ ಬಡಜನರ ಆದರಕರು.—ಇಲ್ಲಿ ಸಾಹುಕಾರರಾಗಿಯೂ, ಮುನಿಸಿಪಲ್ ಕಮಿಷನರಾಗಿಯೂ ಇರುವ ಮೆ॥ ಅವಲ್ಯೆಯನ ಸುಬ್ಬುಶೆಟ್ಟರ ಮನೆಯಲ್ಲಿ ಏಪ್ರಿಲ್ ೨೧ ರಿಂದ ಮೆ ೨ನೇ ತಾರೀಖಿನ ವರಿವಿಗೆ ಎರಡು ವಿವಾಹಗಳು ಅತ್ಯಂತ ವೈಜೃಂಭಣೆಯಿಂದ ನಡಿಸಲ್ಪಟ್ಟವು. ಈ ವಿವಾಹಗಳಿಗೆ ಅವರು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರು. ಈ ಊರಿನ ಮತ್ತು ಪರಸ್ಥಳದ ಅನೇಕ ಜನಗಳಿಗೆ ಅವರವರ ಮರ್ಯಾದಾನುಸಾರವಾಗಿ ಭತ್ಯವನ್ನು ಪ್ರತಿ ದಿವಸದಲ್ಲೂ ಕೊಟ್ಟು, ಜನರಿಗೆ ಸಂತೋಷವನ್ನು ಉಂಟುಮಾಡಿದರು. ಈ ಮಹನೀಯರು ೩೦ನೇ ತಾ॥ ಗುರುವಾರದ ರಾತ್ರಿ ೮ ಗಂಟೆ ಸಮಯದಲ್ಲಿ ಬಹು ಸಂತೋಷದಿಂದ ವಧೂವರರನ್ನು ಮೆರವಣಿಗೆ ಮಾಡಿಸಿಕೊಂಡು, ದೊಡ್ಡಪೇಟೆ ಚೌಕಕ್ಕೆ ಬಂದಾಗ ಅದಕ್ಕೆ ಮುಂಚೆ ಏರ್ಪಡಿಸಿದ್ದ ಅನೇಕ ಬಾಣ ಬಿರುಸುಗಳು ಹಚ್ಚಿದ್ದು ಮಾತ್ರವಲ್ಲದೆ ೨—೩ ತಾಮಾಷೆಮೊದಲ ಬಾಣಗಳನ್ನು ಹಚ್ಚಿದ ಬಳಿಯೇ ಯಾವಕಾರಣದಿಂದಲೋ ಇಲ್ಲಿನ ಫಾರೆಸ್ಟ್ ರೇಂಜರ್ ಮೆ॥ ಗೋವಿಂದರಾಯರ ಕುದುರೆ ಲಾಯಕ್ಕೆ ಬೆಂಕಿಬಿದ್ದು ಸುಟ್ಟುಹೋಯಿತು. ಕಟ್ಟಿದ ಕುದುರೆಗೂ ಸ್ವಲ್ಪ ಗಾಯವಾಯಿತು. ಅಷ್ಟರಲ್ಲಿಯೇ ಅಮಲ್ದಾರರ ಹುಕುಮಿನಂತೆ ಸುಡುವ ಮದ್ದನ್ನು ನಿಲ್ಲಿಸಿದರು. ೨ನೇ ತಾರೀಖು ಶನಿವಾರ ಸಾಯಂಕಾಲ ೭ ಗಂಟೆ ಸಮಯದಲ್ಲಿ ಸದರಿ ಸಾಹುಕಾರರಿಂದ ಕರೆಯಲ್ಪಟ್ಟ ದೊಡ್ಡಮನುಷ್ಯರಿಗೆ ಮಾತ್ರ ಭೋಜನ ನಡಿಸಲ್ಪಟ್ಟಿತು. ಆಗ ಬಾಣಬಿರುಸುಗಳು ಅನೇಕವಾಗಿ ಹಾರಿಸಲ್ಪಟ್ಟವು. ಈ ವೈಭೋಗವನ್ನು ನೋಡುವದಕ್ಕೆ ಅನೇಕ ಬಡಜನರು ಬಂದು ಸಂತೋಷವುಳ್ಳವರಾದರು.

ಚಿತ್ರದುರ್ಗ.—ತೀಕ್ಷ್ಣವಾದ ಬಿಸಿಲು ಜನರನ್ನು ಸುಡುತ್ತಿತ್ತು. ಇದರ ಫಲಿತಾಂಶವು ಜನಗಳಲ್ಲಿ ರೋಗಾದಿಗಳ ರೂಪವಾಗಿ ಅಂಕುರಿಸಿತ್ತು. ಆದರೆ ದೈವಕೃಪೆಯಿಂದ ಮಳೆಯು ನಿನ್ನೆ ರಾತ್ರಿ ಸಾಧಾರಣವಾಗಿ ಸುರಿದು, ಜನರ ಹಾಹಾಕಾರವನ್ನೂ ಮತ್ತು ರೋಗಗಳನ್ನೂ ಸ್ವಲ್ಪಮಟ್ಟಿಗೆ ತಗ್ಗಿಸಿತು. ಧಾನ್ಯಗಳ ಧಾರಣೆಯು ಬಡವರಿಗೆ ಅನುಕೂಲವಾಗುವಷ್ಟು ಕಡಿಮೆಯಾಗಿದೆ. ಅಕ್ಕಿ ೧೨ ರಿಂದ ೧೪ ಸೇರು, ರಾಗಿ ೩೨, ತುಪ್ಪ ಮಣ ೧ಕ್ಕೆ ೯ ರೂ. ಬ್ಯಾಳೆ ಧಾರಣೆ ಮಾತ್ರ ಬಹಳ ದುಬಾರಿಯಾಗಿದೆ. ಕಳೆದ ವರುಷದ ಅದ್ಭುತವಾದ ಘೋರ ವಿಕ್ರಮವಾದ ಮಳೆಯೇ ಈ ಅನಾಹುತಕ್ಕೆ ಕಾರಣ. ಜಿ॥ ೨ನೇ ಕೌನ್ಸಿಲರಾಗಿರುವ ಮೆ॥ ಶ್ರೀನಿವಾಸಯ್ಯಂಗಾರ್ಯರು ಈ ಡಿ॥ ನಲ್ಲಿ ಡೆ॥ ಕ॥ ಆಗಿದ್ದ ಕಾಲದಲ್ಲಿ ಜನೋಪಯೋಗಾರ್ಥವಾಗಿ ಈ ಪಬ್ಲಿಕ್ ಪಾರ್ಕಿನ ಏರ್ಪಾಡನ್ನು ಮಾಡಿದರು. ಆದರೆ ಪ್ರಾರಂಭವಾದ ಮೂರು ನಾಲ್ಕು ತಿಂಗಳಲ್ಲಿ ಸದರಿ ಮೆ॥ ಅಯ್ಯಂಗಾರ್ಯರಿಗೆ ರೆ॥ ಸೆ॥ ಕೆಲಸ ನೇಮಕವಾಯಿತು. ಡಿ॥ ಮತ್ತು ಈ ಪಾರ್ಕಿನ ಚಾರ್ಜನ್ನು ಮೆ॥ ಎಮ್. ಎಸ್. ನಾರಾಯಣರಾಯರವರ ವಶಕ್ಕೆ ಒಪ್ಪಿಸಿದರು. ಇವರು ಊರಿನ ಮುನಿಸಿಪಾಲಿಟಿಯನ್ನು ಉತ್ತಮ ಸ್ಥಿತಿಗೆ ತರುವ ಕಾರ್ಯದಲ್ಲಿ ಈ ಕೆಲಸಕ್ಕೆ ಗಮನವೇ ಕೊಡಲಿಲ್ಲ. ಹಾಕಿಸಿದ ಗಿಡಗಳು ಒಣಗಿದವು. ಕೆಲವು ವರುಷಗಳ ನಂತರ ಕೆಲವು ಭಾಗದಲ್ಲಿ ಗುರ್ತೇ ಇಲ್ಲದಹೋಯಿತು. ಈ ಸ್ಥಿತಿಯಲ್ಲಿ ಮೆ॥ ಎಮ್. ನಾರಾಯಣರಾಯರು ಡೆ॥ ಕ॥ ರಾದರು. ಇವರ ನಿಧಾನವೂ ಮೌನವೂ ಎಲ್ಲರಿಗೂ ತಿಳಿದೇ ಇರುವದು. ಇದ್ದಬೇಲಿ ಹಾರಿಹೋಯಿತು. ಕೆಲವು ಗಿಡಗಳು ದನಗಳ ಪಾಲಾದವು. ಶುಭಮುಹೂರ್ತದಲ್ಲಿ ಪ್ರಾರಂಭಿಸಿದ ಇಂಥಾ ಕಾರ್ಯವನ್ನು ಯಾರು ನೆರವೇರಿಸುವರೋ ಎಂದು ಚಿಂತಿಸುತ್ತಿದ್ದೆವು. ಮ॥ ರಾ॥ ರಾಮಾನುಜಯ್ಯಂಗಾರ್ಯರು ಈ ಕಾರ್ಯಕ್ಕೆ ಗಮನಕೊಟ್ಟಿರುವದು ಶುಭಸೂಚಕವಲ್ಲವೇ? ಈ ಕೆಲಸವನ್ನು ಸಾಂಗೋಪಾಂಗವಾಗಿ ಪೂರೈಸಿ ಜನರ ಪ್ರೀತಿಗೆ ಪಾತ್ರರಾಗಲೆಂದು ಕೋರುತ್ತೇವೆ.—ಪ್ರೊ॥ ಅ॥ ಸೂಪರೆಂಟರು ಬಹಳ ಮುತುವರ್ಜಿಯಿಂದ ಕೆಲಸ ಮಾಡುತ್ತಾರೆಂದು ಕೇಳುತ್ತೇವೆ. ಈ ಮುತುವರ್ಜಿಯು ಬಹಳ ಜನ ಪ್ರೊ॥ ನವರಿಗೆ ತೊಂದರೆಯಾಗಿದೆಯಂತೆ. ಪ್ರೊ॥ ನವರಿಗೆ ಅವರ ದಿರಸು ಶುಚಿಯಾಗಿಯೂ, ನೋಡುವದಕ್ಕೆ ಹರ್ಷವಾಗಿಯೂ ಇರುವಂತೆ ಅಪ್ಪಣೆಮಾಡಿದ್ದಾರಂತೆ. ಶುಚಿಯಾಗಿಲ್ಲದಿದ್ದರೆ ಜುಲ್ಮಾನೆ ಹಾಕುತ್ತಾರಂತೆ. ಇದು ನ್ಯಾಯವಾದದ್ದೇ ಸರಿ. ಆದರೆ ಬಡವರ ಸಂಬಳವೆಲ್ಲಾ ಜುಲ್ಮಾನೆಗೆ ಹೋದರೆ ತಿಂಬುವದೇನು ಎಂಬ ಸಂಶಯ ಮಾತ್ರ ಇದೆ. ಹೀಗೆ ಅವರು ಎಂದಿಗೂ ಮಾಡಲಾರರೆಂದು ನಂಬಿದ್ದೇವೆ. ಗುಂಡಿ, ಬಲ್ಟು, ಟೊಪ್ಪಿ, ಈ ಮೂರು ಪದಾರ್ಥಗಳ ವಿಚಾರದಲ್ಲಿ ಮಾತ್ರ ರಾತ್ರಿ ಹಗಲು ಗಮನ ಕೊಡುವದು ಅಷ್ಟು ಮುಖ್ಯವಾದದ್ದಲ್ಲ. ಇವರ ಬುದ್ಧಿ ಕುಶಲತೆಯನ್ನೆಲ್ಲಾ ಕೇಸುಗಳಲ್ಲಿ ಉಪಯೋಗಿಸುವದು ಒಳ್ಳೇದಲ್ಲವೆ? ಹಿ॥ ಇ॥ ಶಾಮೈಯ್ಯಂಗಾರ್ಯರು ಇರುವಾಗ ಕಾಗದ ಪತ್ರಗಳ ಫೈಸಲ್ ವಿಷಯವಾಗಿ ತೊಂದರೆಯೇನೂ ಬರಲಿಲ್ಲ. ಬಾಕಿ ಕೇಸುಗಳ ವಿಚಾರವಾಗಿ ಸಾಹೇಬರವರು ಬಹಳ ಮನಸ್ಸು ತಗದುಕೊಳ್ಳುತ್ತಾರೆಂದು ನಂಬುತ್ತೇವೆ.—ಕಳೆದ ವಾರ ನೀಲಗಿರಿಯಲ್ಲಿ ನಮ್ಮ ಮಹಾರಾಜರವರು ಪೋಲೋ ಆಡುತ್ತಿರುವಾಗ್ಯೆ ಕುದುರೆಯ ಮೇಲಿಂದ ಬಿದ್ದರೆಂಬ ವರ್ತಮಾನವನ್ನು ಚಿತ್ರದುರ್ಗದ ನಿವಾಸಿಗಳು ಪತ್ರಿಕಾದ್ವಾರ ತಿಳಿದು, ಮಹಾರಾಜರವರನ್ನು ಗಂಡಾಂತ್ರದಿಂದ ಪಾರುಮಾಡಿದ್ದಕ್ಕಾಗಿಯೂ, ಇವರಿಗೆ ಇದರಿಂದ ಸಂಭವಿಸಿರತಕ್ಕ ಸ್ವಲ್ಪ ಬಾಧೆಯನ್ನು ಭಗವಂತನು ಜಾಗ್ರತೆ ಹೋಗಲಾಡಿಸಿ ಆರೋಗ್ಯ ಕೊಡುವಂತೆಯೂ ಭಗವಂತನಿಗೆ ವಿನಯಪೂರ್ವಕವಾಗಿ ನಾವುಗಳೆಲ್ಲರೂ ಪ್ರಾರ್ಥನೆ ಮಾಡುತ್ತೇವೆಂದು, ನಿನ್ನೆ ದಿನ ತಂತಿವರ್ತಮಾನ ಕೊಟ್ಟರು. ಭಗವಂತನು ಜಾಗ್ರತೆಯಲ್ಲಿ ನಮ್ಮ ಮಹಾರಾಜರವರ ದೇಹಾಲಸ್ಯವನ್ನು ಹೋಗಲಾಡಿಸಿ ಆರೋಗ್ಯವನ್ನುಂಟುಮಾಡಲಿ! ಕಳೆದ ವಾರ ಸಾವುಕಾರ್ ಕಾಡಪ್ಪನವರಿಗೆ ಪುತ್ರೋತ್ಸವವಾಯಿತು. ಇವರಿಗೆ ಬಹುಕಾಲದಿಂದಲೂ ಪುತ್ರಸಂತಾನವಿಲ್ಲದ್ದರಿಂದಲೂ, ಈ ಮೂರನೇ ಸಂಬಂಧದಲ್ಲಿ ದೈವಕೃಪೆಯಿಂದ ಪುತ್ರಸಂತಾನವಾದದ್ದಕ್ಕಾಗಿಯೂ ಸಾವುಕಾರರು ಕೇವಲ ಸಂತೋಷಾಬ್ಧಿಯಲ್ಲಿ ಮುಳುಗಿ ಹನ್ನೊಂದನೇ ದಿನದಲ್ಲಿ ತಮ್ಮ ಸಂತೋಷಸೂಚನಾರ್ಥವಾಗಿ ಊರವರಿಗೆಲ್ಲಾ ಯಥೋಚಿತವಾಗಿ ಸಕ್ಕರೆ ವಗೈರೆ ಹಂಚಿ ಎಲ್ಲರ ಬಾಯಿ ಸಿಹಿಮಾಡುವರೆಂದು ಕೇಳುತ್ತೇವೆ. ಮಗುವನ್ನೂ ಬಾಣಂತಿಯನ್ನೂ ದೇವರು ಕಾಪಾಡಲಿ.—ಹೆಂಗಸರ ಆಸ್ಪತ್ರೆಯು ಕಳೆದ ಮೂರು ನಾಲ್ಕು ವರುಷಗಳಲ್ಲಿದ್ದ ಸ್ಥಿತಿಗೂ ಈಗ್ಯೂ ತುಂಬಾ ವ್ಯತ್ಯಾಸ ತೋರುವದು. ಇಲ್ಲಿನ ಸ್ತ್ರೀಯರನೇಕರಿಗೆ ಇದು ಆಸ್ಪತ್ರೆಯೆಂದು ತಿಳಿಯದೇ ಇದ್ದದ್ದರಿಂದಲೂ, ಹಿಂದೇ ಇದ್ದವರು ಪ್ರಜಾನುರಾಗವನ್ನು ಸಂಪಾದಿಸಿಕೊಳ್ಳಲು ಲಕ್ಷ್ಯಕೊಡದೆ ಇದ್ದದ್ದರಿಂದಲೂ ಅದರ ಕೆಲಸಕ್ಕೆ ತಕ್ಕಷ್ಟು ಪ್ರೋತ್ಸಾಹ ತೋರದೆ ಹೋದ್ದು ಆಶ್ಚರ್ಯವಲ್ಲ. ಜನರು ಕಷಾಯಕ್ಕಿಂತ ಔಷಧವನ್ನೇ ಆಸ್ಪತ್ರೆ ಔಷಧಕ್ಕಿಂತಲೂ ಹೆಚ್ಚಾಗಿ ನಂಬಿ ಅದನ್ನೇ ಸೇವನೆ ಮಾಡುತ್ತಾ ಬಂದರು. ಈಚೆಗೆ ಲೇಡಿ ಡಾ॥ ಮಿಸೆಸ್ ಥರ್ಸಿಂಗ್ ಎಂಬುವರು ಈ ಆಸ್ಪತ್ರೆ ಚಾರ್ಜ ವಹಿಸಿದ ಹತ್ತು ತಿಂಗಳ ಲಾಗಾಯಿತು ಇವರು ಜನರಲ್ಲಿ ಸಂಪಾದಿಸಿಕೊಂಡಿರುವ ವಿಶ್ವಾಸ ಅನುರಾಗದಿಂದ ಇವರ ಕೆಲಸಕ್ಕೆ ತುಂಬಾ ಪ್ರೋತ್ಸಾಹವು ಉಂಟಾಗಿರುವದು.

ಶಿವಮೊಗ್ಗೆ.—ಈ ವಾರ ಒಂದೆರಡು ಹದ ಮಳೆ ಆಯಿತು. ಆದರೂ ಕೆಲವು ಕಡೆ ರೈತರು ಉಳುವದಕ್ಕೆ ಸಾಕಾದಷ್ಟು ಮಳೆಯಾಗಿಲ್ಲವೆಂದು ಹೇಳುತ್ತಾರೆ. ಈಗ ಒಂದೆರಡು ದಿವಸಗಳಿಂದ ಆಕಾಶವೆಲ್ಲಾ ಮೋಡ ಮುಚ್ಚಿಕೊಂಡು, ಮಳೆಗಾಲ ಪ್ರಾರಂಭವಾಯಿತೋ ಎನ್ನುವ ಹಾಗೆ ತೋರುತ್ತೆ. ಇಷ್ಟು ದಿವಸಗಳಿಂದೀಚೆಗೆ ಭಗವದನುಗ್ರಹದಿಂದ ಒಂದು ಪ್ಲೇಗ್ ಕೇಸಾದರೂ ನಡೆದಿಲ್ಲ. ಭಗವಂತನು ಇದೇ ರೀತಿ ಮುಂದೆಯೂ ನಡಿಸಿ, ಪ್ಲೇಗ್ ಬಾಧೆಯನ್ನು ಸಂಪೂರ್ಣವಾಗಿ ನಿವಾರಣೆಮಾಡಲೆಂದು ಜನರು ಹಾರೈಸಿ ಆತನಿಗೆ ಪ್ರಾರ್ಥನೆ ಮಾಡುವವರಾಗಿರುತ್ತಾರೆ.—ನಮ್ಮ ಡೆಪ್ಯುಟಿ ಕಮಿಷನರವರ ಸವಾರಿಯು ಸೊರಬದ ಪ್ರಾಂತ್ಯ ಜಮಾಬಂದಿಗೆ ದಯಮಾಡಿಸಿತ್ತೆಂದು ಹಿಂದೆಯೇ ತಿಳಿಸಿದ್ದೆವಷ್ಟೆ. ಅವರು ಜಮಾಬಂದಿಯನ್ನು ತೀರಿಸಿಕೊಂಡು ಕಳೆದ ೪ನೆಯ ತಾರೀಖು ಇಲ್ಲಿಗೆ ಕ್ಷೇಮದೊಂದಿಗೆ ದಯಮಾಡಿಸಿದರು.—ನಮ್ಮ ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ನಾರಾಯಣರಾಯರಿಗೆ ತಮ್ಮ ಡಿಪಾರ್ಟ್‌ಮೆಂಟಿನಿಂದ ರೆವಿನ್ಯೂ ಇಲಾಖೆಗೆ ವರ್ಗವಾಗಿ ಮುಂದೆ ಟ್ರೆಜರಿ ಆಫೀಸರಾಗಿರಬೇಕೆಂತಲೂ, ಟ್ರೆಜರಿಗೆ ಮುಖ್ಯಸ್ಥರಾಗಿದ್ದ ಮೆ॥ ಚೊಕ್ಕಣ್ಣನವರು ೨ನೆಯ ಅಸಿಸ್ಟೆಂಟ್ ಕಮಿಷನರಾಗಿರಬೇಕೆಂತಲೂ, ೨ನೆಯ ಅಸಿಸ್ಟೆಂಟರಾದ ಮೆ॥ ಬಾಲಸುಂದರಂ ಅಯ್ಯರವರು ಸಾಗರ ಸಬ್‌ಡಿವಿಜನ್ನಿಗೆ ವರ್ಗವಾಗಿ ಹೋಗಬೇಕೆಂತಲೂ ಏರ್ಪಾಡಾಗಿದೆ ಎಂದು ವರ್ತಮಾನ ಕೇಳುತ್ತೇವೆ. ಇಲ್ಲಿನ ಪೋಲೀಸ್ ಅಸಿಸ್ಟೆಂಟರ ಕೆಲಸಕ್ಕೆ ಬೆಂಗಳೂರಿನಿಂದ ಮೆ॥ ಹಾಡಿನ್ ಸಾಹೇಬರವರು ಬರುವರಾಗಿ ವರ್ತಮಾನವಿದೆ. ಟ್ರೆಜರಿ ಆಫೀಸರಾದ ಮೆ॥ ಚೊಕ್ಕಣ್ಣ ಬಿ. ಎ. ಯವರ ಬದಲಾವಣೆ ವಿಷಯದಲ್ಲಿ ಅವರ ತಾಬೇ ನೌಕರರ್ಯಾವತ್ತೂ ತುಂಬಾ ವ್ಯಸನಾಕ್ರಾಂತರಾಗಿದ್ದಾರೆ. ಈ ರೀತಿಯಲ್ಲಿ ವ್ಯಸನಪಡುವದಕ್ಕೆ ನೌಕರರಲ್ಲಿ ಮೆ॥ ಚೊಕ್ಕಣ್ಣನವರಾಗಿದ್ದ ಭೂತದಯಾ ಪಕ್ಷಪಾತವೇ ಕಾರಣವೆಂದು ಹೇಳಬಹುದು. ಮಾತಾಪಿತೃಗಳು ತಮ್ಮ ಮಕ್ಕಳನ್ನು ಪ್ರೀತಿಯಿಂದ ಪಾಲನೆ ಮಾಡುವುದಕ್ಕಿಂತಲೂ ಅತಿಶಯವಾಗಿ ಅವರು ನೌಕರರನ್ನು ಕಾಪಾಡಿಕೊಂಡು ಬಂದರೆಂಬುವುದರಲ್ಲಿ ಸಂದೇಹವಿಲ್ಲ.—ನಮ್ಮ ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ನಾರಾಯಣರಾಯರು ಇಲ್ಲಿಗೆ ದಯಮಾಡಿಸಿದ ನಂತರ, ಇಲ್ಲಿನ ಪೋಲೀಸ್ ವಿಚಾರಗಳು ತೃಪ್ತಿಕರವಾಗಿ ನಡೆಯುತ್ತಾ ಬಂದವಲ್ಲದೆ, ಅಪ್ರಮಾಣಿಕತೆ, ಅಕ್ರಮ ಇದ್ದಲ್ಲಿ ಮೆ॥ ನಾರಾಯಣರಾಯರು ತುಂಬಾ ನಿಗಾಕೊಟ್ಟು ಅಧಿಕಾರಿಗಳಿಗೆ ಅಗ್ಯ ಶಿಕ್ಷೆ ವಿಧಿಸುತ್ತಾ ಇದ್ದರೆಂತ ಕೇಳಿ ಸಂತೋಷಪಡಬೇಕಾಗಿದೆ. ಈ ಮಹಾನುಭಾವರ ಅಧಿಕಾರದಲ್ಲಿ ತುಂಬಾ ಪ್ರಜಾಕ್ಷೇಮವುಂಟಾಗಬಹುದೆಂಬ ನಿರೀಕ್ಷೆ ಜನರಲ್ಲಿತ್ತು. ಆದರೂ ಇವರಿಗೆ ಪ್ರತಿಯಾಗಿ ಬರುವ ಮೆ॥ ಹಾಡಿನ್ ಸಾಹೇಬರು ಇದೇ ರೀತಿ ನಡಿಸುವರೆಂಬುವ ಸಂತೋಷ ಎಲ್ಲರಿಗೂ ಇದೆ.—ರಲೀವಿಂಗ್ ಮಿಷ್‌ಪ್ಸೆಫ್ ಸೊಬೀನಾ, ಇವರ ತಮ್ಮ ಥಾಮಸ್ ಡಿಸೋಜಾ ಯವರುಗಳ ಮೇಲೆ ಟವರ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಮೊಖದ್ದಮಾ ಆಗಿ ವಿಚಾರಣೆ ನಡೆಯುತ್ತಾ ಇತ್ತೆಂದು ಹಿಂದಿನ ವಾರದಲ್ಲಿ ತಿಳಿಸಿದ್ದೆವಷ್ಟೆ. ೧೭ನೆಯ ತಾ॥ ಕೇಸ್ ಆರ್ಗ್ಯುಮೆಂಟಾಗಿ ೧೯ನೆಯ ತಾ॥ ೧ನೆಯ ಅಪರಾಧಿ ಥಾಮಸ್ ಎಂಬಾತನಿಗೆ ೩ ತಿಂಗಳು ಕಠಿಣ ಸಜಾ ಮತ್ತು ೧೦ ರೂಪಾಯಿ ಜುಲ್ಮಾನೆ, ೨ನೆಯ ಅಪರಾಧಿಯಾದ ಸೊಬೀನಾ ಯವರಿಗೆ ೨೦ ರೂಪಾಯಿ ಜುಲ್ಮಾನೆಯೂ, ಇವರುಗಳ ತಾಯಿಯಾದ ೩ನೆಯ ಅಪರಾಧಿಗೆ ೨೦ ರೂಪಾಯಿ ಜುಲ್ಮಾನೆಯೂ.—ಈ ರೀತಿ ಜಡ್ಜ್‌ಮೆಂಟ್ ಆದದ್ದರ ಮೇಲೆ ಮೇಲ್ಕಂಡ ಅಪರಾಧಿಗಳ ಕಡೆ ಅಡ್ವೊಕೇಟರಾದ ಮೆ॥ ಸೀತಾರಾಮಯ್ಯನವರು ಕೂಡ್ಲೇ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರವರ ಕೋರ್ಟಿನಲ್ಲಿ ಅಪೀಲ್ ದಾಖಲ್ಮಾಡಿ, ಸಜಾ ಹೊಂದಿದ ೧ನೆಯ ಅಪರಾಧಿ ಥಾಮಸ್ ಡಿಸೋಜಾಗೆ ಸೆಂಟೆನ್ಸ್ ಸಸ್ಪೆಂಡು ಮಾಡಿಸಿರುವದಾಗಿ ಕೇಳುತ್ತೇವೆ. ಇದರ ಪರಿಣಾಮ ಹೇಗಾಗುತ್ತೋ ಮುಂದೆ ನೋಡಬೇಕು.—ಇಲ್ಲಿನ ಸಾಹುಕಾರ್ ಮ॥ ಹರಿಹರದ ಗುಂಡೇರಾಯರು ಶಿವಮೊಗ್ಗ ಮುನ್ಸೀಫ್ ಕೋರ್ಟಿನಲ್ಲಿ ಬಂದಾವರ್ ಫೈಸಲಾಗಿ ಡಿಕ್ರಿ ಕೊಟ್ಟ ಹಣಕ್ಕೆ ಪುನಹಾ ದಾವಾ ದಾಖಲ್ಮಾಡಿದ್ದಂತೆಯೂ, ಹೀಗೆ ೨ನೇ ಸಾರಿ ತಂದ ದಾವಾ ಸುಳ್ಳಾದ್ದರಿಂದ, ಮುನ್ಸೀಫರವರು ಇದರ ಮೇಲೆ ಪ್ರಾಸಿಕ್ಯೂಷನ್ ನಡಿಸ 'ಶಾಗ ಆರ್ಡರ್' ಮಾಡಿದ್ದರ ಮೇಲೆ, ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಾದ ಮೆ॥ ಆನಂದರಾಯರ ಕೋರ್ಟಿನಲ್ಲಿ ಈಗ ೬ ತಿಂಗಳ ಕೆಳಗೆ ಮೊಖದ್ದಮೆ ವಿಚಾರಣೆಯಾಗಿ ಸರಿಯಾದ ರುಜುವಾತ್ ಇದ್ದದ್ದರಿಂದ ಡಿಸ್‌ಚಾರ್ಜ್ ಮಾಡಿದ್ದಂತೆಯೂ, ಈಗ ಪುನಹ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರವರ ಕೋರ್ಟಿನಲ್ಲಿ ಈ ಕೇಸ್ ಅಪೀಲ್ ಆಗಿ ಕಳೆದ ೧೫ನೇ ತಾ॥ ಪಿರ್ಯಾದಿ ಕಡೆ ಪ್ಲೀಡರ್ ಮೆ॥ ಎಂ. ಬಿ. ಶ್ರೀನಿವಾಸಯ್ಯಂಗಾರ್ಯರೂ ಅಪರಾಧಿ ಕಡೆ ಮೆ॥ ಬಾಪೂರಾಯರೂ ಆರ್ಗ್ಯುಮೆಂಟ್ ಮಾಡಿದರು. ಇದರ ಫಲಿತಾಂಶಗಳನ್ನು ತಿಳಿಯಲು ಜನಗಳು ತುಂಬಾ ಕುತೂಹಲವುಳ್ಳವರಾಗಿದ್ದಾರೆ.—ಪೂರ್ವದಲ್ಲಿ ಇಲ್ಲಿ ಎಗ್ಜಿಕ್ಯೂಟಿವ್ ಇಂಜನಿಯರಾಗಿದ್ದ ಮೆ॥ ನಾಗವಾರ್ ಸಾಹೇಬರು ಇಲ್ಲಿಗೆ ದಯಮಾಡಿಸಿ, ಇಲ್ಲಿನ ಮುಖ್ಯವಾದ ಕಟ್ಟಡಗಳನ್ನು ಪರಾಂಬರಿಸಿ, ಅವುಗಳಿಗೆ ಆಗಬೇಕಾದ ಕಾಂಗಾರಿ ವಿಷಯದಲ್ಲಿ ಏರ್ಪಾಡು ಮಾಡಿದ್ದಲ್ಲದೆ ಹೊಸದಾಗಿ ಸಲಹೆ ನಡಿಸುತ್ತಿರುವ ಭದ್ರಾ ಪ್ರಾಜೆಕ್ಟ್ ವಿಷಯದಲ್ಲಿ ಸ್ಥಳ ಅಜಮಾಯಿಷಿ ವಗೈರೆ ವಿಚಾರಣೆಯಿಂದ ಆತುರ ಮಾಡಿಕೊಂಡಿರುವುದಲ್ಲದೆ, ಈ ಪ್ರಾಜೆಕ್ಟ್ ನಡಿಸಿಕೊಡುವ ಇರಾದೆ ಇವರಲ್ಲಿ ತುಂಬಾ ಇದೆಯೆಂದು ವರ್ತಮಾನವಿದೆ. ಆ ರೀತಿ ಈ ಭದ್ರಾ ಪ್ರಾಜೆಕ್ಟ್ ನೆರವೇರಿದ ಪಕ್ಷದಲ್ಲಿ ಬಹಳ ಜಮೀನುಗಳಿಗೆ ಅನುಕೂಲವಾಗುವದರಿಂದ ಈ ಭಾಗದಲ್ಲಿ ಮೆ॥ ನಾಗವಾರ್ ಸಾಹೇಬರು ದೊಡ್ಡ ಸಹಾಯಕ್ಕಾಗಿ ಬಹು ಜನಗಳು ಕೃತಜ್ಞರಾಗಿರುವುದರಲ್ಲಿ ಸಂದೇಹವಿಲ್ಲ.

## ಶ್ರೀ ಕೃಷ್ಣವಿಲಾಸ ಪ್ರೆಸ್.

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಆಹ್ವಾನಪತ್ರಿಕೆ, ಬಿಲ್‌ಫಾರಂ, ವಿಸಿಟಿಂಗ್ ಕಾರ್ಡ್ಸ್, ನೋಟೀಸ್ ಫಾರಂ, ಬ್ಯಾಲನ್ಸ್ ಷೀಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಭಾಮಾನಗಳಿಗೆ ಮಾಡಲ್ಪಡುತ್ತವೆ.

ರೋಜು, ವರ್ಗ, ಮುಂತಾದ ಖಾಲೀ ಪುಸ್ತಕಗಳು; ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು ; ಇನ್ನು ಇತರವಾದ ನಮೂನೆಯ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿನಂತೆ ಬಹು ಅಂದವಾಗಿ ತಯಾರ್ಮಾಡಲ್ಪಡುತ್ತವೆ.

ಲಾಯರ್‌ಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್, ವಕಾಲತ್‌ನಾಮಾ, ಜಾಮೀ, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಬಿಕರಿಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ ರಮ್ಯತರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಜವಾಬನ್ನು ಅಪೇಕ್ಷಿಸುವವರು ಜವಾಬು ಕಾಗದವನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಅಗ್ರಹಾರ ಹೊಸಬಾಗಿಲು ದೊಡ್ಡಪೇಟೆ ೨೭ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದ್ದೇವೆ.

ವಿಳಾಸ—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ ಮತ್ತು ಕಂಪನಿ.

ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

---

ಜ್ವರಹರಿ. ೩೨

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೀಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟು ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಬಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೬೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೬೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ೨ ರೂ., ೧೧ ರೂ.; ಇನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

❖❖❖❖❖❖❖❖❖

ಬಿ ಮು ೦ ಕ ಪ್ರೂ ರ ರ.




ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಹುಳಿಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗೋಪತಿಯವರು—ಕರ್ಪೂರಂ ಕರ್ಪೂರವನ್ನು ನಾನೂ ನನ್ನ ಜಾಬೇದಾರರೂ ನ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲಿ, ಔಷಧ ವ್ಯಾಪಾರಿಗಳಲ್ಲಿ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಬ್ರಿಯಾಂಡರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೇಂಟ್ ಥಾಮಸ್ ಸ್ಟ್ರೀಟ್, ಬೇಕ್ ಮದರಾಸ್.

---

### ಮಹಾರಾಜರ ಪಟ್ಟಾಭಿಷೇಕ.

ಈ ಉತ್ಸವದ ತಸ್ವೀರುಗಳ ಪುಸ್ತಕ. ಮಹಾರಾಜರ ದೊಡ್ಡ ಫೋಟೋ ತಸ್ವೀರು, ಸಂಸ್ಥಾನದ ಮುಖ್ಯ ಉದ್ಯೋಗಸ್ಥರ ಫೋಟೋಗಳು, ಮೈಸೂರು ಬೆಂಗಳೂರಿನಲ್ಲಿರುವ ಅರಮನೆ ಮುಂತಾದ ಭಾರೀ ಕಟ್ಟಡಗಳು ಉಳ್ಳ ಈ ಫೋಟೋ ಪುಸ್ತಕಗಳು ಕೆಲವು ಮಾತ್ರ ಉಳಿದಿವೆ. ಬೇಗ ಬರೆದು ತರಿಸಿಕೊಳ್ಳಿ, ಕ್ರಯ ೮ ಆಣೆ, ಅಂಚೆ ಖರ್ಚು ೧ ಆಣೆ.

ವಿಳಾಸ:—ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಮೈಸೂರು.
,, ,, ,, ಬೆಂಗಳೂರು.

### ಹೊಸ ಪುಸ್ತಕಗಳು.

೧. ವಿಕ್ಟೋರಿಯಾ ಚಕ್ರವರ್ತಿನಿಯವರ ಮತ್ತು ಅಲೆಕ್ಸಾಂಡ್ರಾ ಮಹಾರಾಣಿಯವರ ಜೀವಚರಿತ್ರೆ. ಸುಂದರವಾದ ಅನೇಕ ಚಿತ್ರಗಳನ್ನುಳ್ಳದ್ದು. ಕ್ರಯ ೪ ಆಣೆ.

೨. ಪುರಾತನ ಗ್ರೀಕರ ಕಥೆಗಳು. ಹುಡುಗರೂ ಹುಡುಗಿಯರೂ ಓದಲು ಅತ್ಯಂತ ಉತ್ಸಾಹವನ್ನುಂಟುಮಾಡುವ ಪುಸ್ತಕ. ಅಗತ್ಯ ಓದತಕ್ಕದ್ದು. ಚಿತ್ರಗಳಿಂದ ತುಂಬಿ ಇದೆ. ಕ್ರಯ ೨ ಆಣೆ.

೩. ಪ್ರಾಚೀನ ಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ ಪ್ರಪಂಚದ ಆದಿಭಾಗದಲ್ಲಿದ್ದ ಮೃಗಗಳೂ, ಜೀವರಾಶಿಗಳೂ, ಪಕ್ಷಿಪಕ್ಷಿಗಳೂ, ಜಲಚರಗಳೂ ಚಿತ್ರಸಹಿತವಾಗಿ ವಿವರಿಸಲ್ಪಟ್ಟಿವೆ. ಇದು ಓದುತ್ತ ಓದುತ್ತಾ ಬಹಳ ಉತ್ಸಾಹವನ್ನುಂಟುಮಾಡುವದು. ಕ್ರಯ ೧ ಆಣೆ.

೪. ಬಾಲ್ಯವಿವಾಹ. ಬಾಲ್ಯವಿವಾಹದಿಂದುಂಟಾಗುವ ಅನೇಕ ಕೇಡುಗಳೂ ಸಂಗತಿಗಳೂ ಸವಿಸ್ತಾರವಾಗಿಯೂ ಸುಲಭವಾಗಿಯೂ ವಿವರಿಸಲ್ಪಟ್ಟಿವೆ. ಹೊಸ ಪುಸ್ತಕ. ಕ್ರಯ ೬ ಪೈ.

ಈ ಪುಸ್ತಕಗಳೆಲ್ಲಾ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವವು. ಬೇಗನೆ ಬರೆದು ತರಿಸಿಕೊಳ್ಳಿ.

ವಿಳಾಸ:—ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಮೈಸೂರು.
,, ,, ,, ಬೆಂಗಳೂರು.

---

### ಹೋಮೋಸಿಯಾ.

ತಕ್ಷಣ ಪರಿಹಾರ.

ತಗಲುತ್ತಲೇ ನೋವು ಮಾಯ, ವಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕಛೇರಿ, ಕಾರಾಗೃಹ, ಮುಂತಾದ ಸ್ಥಳಗಳಲ್ಲೆಲ್ಲಾ ಇರಬೇಕು. ಇದಕ್ಕೆ ಸಮಾನವಾದ ಔಷಧವು ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಉಪಕಾರಿಯಾಗಿ ಸಿದ್ಧವಾದ ಔಷಧ. ಇದನ್ನು ಉಪಯೋಗಿಸಿದ ವೈದ್ಯರು, ಪಾದ್ರಿಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅತಿ ತಲೆನೋವು, ಸೊಂಟನೋವು, ವಾಯುರ್ನಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಸೆಳೆಯುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಡ್ಡೆಗಳು, ರೋಗಗಳು, ಮುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತವೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚ ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪಾಲ್, ಖರ್ಚ ಮಾಫಿ ಬಿಡುತ್ತೆ.

❖❖❖❖❖❖❖❖❖

### ಹೋಮೋಸಿಯಾ ಯೂಕಲಿಪ್ಟೋಲ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚ ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪನಿ, ೨೩ ಸೇಂಟು ಜಾರ್ಜ್ ಸ್ಟ್ರೀಟ್, ಮದರಾಸ್.

---

### ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

1—5—1903 ರಿಂದ 8—5—1903 ರ ವರೆಗೆ.

| ಸ್ಥಳ. | | ಪ್ಲೇಗ್ ತಗಲಿದ್ದು. | ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|---|
| ಬೆಂಗಳೂರು ಪಟ್ಟಣ | | | | 2 | |
| ಮೈಸೂರು | ,, | | | 1 | 1 |
| ಬೆಂಗಳೂರು ಡಿಸ್ಟ್ರಿಕ್ಟು | | [illegible]3 | 13 | [illegible]5 | 13 |
| ಮೈಸೂರು | ,, | 15 | 11 | 18 | [illegible] |
| ಕೋಲಾರ | ,, | | | 4 | 5 |
| ಕೋಲಾರ್ ಚಿನ್ನದ ಗಣಿಗಳು | | | | | |
| ತುಂಕೂರು ಡಿಸ್ಟ್ರಿಕ್ಟು | | 7 | 7 | 2 | 2 |
| ಹಾಸನ | ,, | [illegible] | 4 | 19 | [illegible] |
| ಚಿತ್ರದುರ್ಗ | ,, | 3 | 1 | 5 | 5 |
| ಕಡೂರು | ,, | | | 1 | 1 |
| ಶಿವಮೊಗ್ಗ | ,, | 4 | 2 | 2 | 3 |
| ಜುಮ್ಲಾ. | | [illegible] | [illegible]8 | [illegible] | [illegible] |

ಶಾಲಿವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರದ ವೈಶಾಖ ಬಹುಳ ನವಮಿ ಗುರುವಾರದಿಂದ ಜ್ಯೇಷ್ಠ ಶುದ್ಧ ಪಾಡ್ಯಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಮೇ.

| ತಾ. | ವಾರ. | ತಿಥಿ | ಘಳಿಗೆ. | ನಕ್ಷತ್ರ. | ಘಳಿಗೆ. | ಸೌರಮಾಸ ತೇದಿ. |
|---|---|---|---|---|---|---|
| 21 | ಗುರು * | ನವಮಿ | 35 | ಪೂರ್ವಾಭಾ | [illegible] | 8 |
| 22 | ಶುಕ್ರ | ದಶಮಿ | [illegible] | ಉತ್ತರಾಭಾ | [illegible] | 9 |
| 23 | ಶನಿ † | ಏಕಾದಶಿ | [illegible] | ರೇ | [illegible] | 10 |
| 24 | ರವಿವಾರ | ದ್ವಾದಶಿ | [illegible] 31 | ಅಶ್ವಿ | 8 2 | 11 |
| 25 | ಚಂದ್ರ | ತ್ರಯೋದಶಿ | [illegible] | ಭರಣಿ | 7 10 | 12 |
| 26 | ಕುಜ ¶ | ಅಮಾವಾ | 57 [illegible] | ಕೃ | [illegible] | [illegible] |
| 27 | ಬುಧ | ಪಾಡ್ಯಮಿ | 50 10 | ರೋ | 43 30 | 1[illegible] |

* ಪತ್ರೇಯರ ಜಯಂತಿ. † ಸರ್ವತ್ರ ಏಕಾದಶಿ ಯಾವ ರಾಜರ ಪುಣ್ಯತಿಥಿ. ¶ ಸರ್ವತ್ರ ಅಮಾವಾಸ್ಯೆ.

### ಪೇಟೆ ಧಾರಣೆ.

| ಜಿನಸು. | ಮೈಸೂರು. | ಬೆಂಗಳೂರು. |
|---|---|---|
| ಕಮೋದ ಅಕ್ಕಿ ಪಲ್ಲ ೧ಕ್ಕೆ | ರೂ. ೧೦ ೪—೦ | ೧೦—೮—೦ |
| ಸಾಂಬಾರ ಅಕ್ಕಿ ಅವಲ್ | ೯—೧೨—೦ | ೧೦—೮—೦ |
| ,, ದುಯಂ | ೯—೩—೦ | ೧೦—೩—೦ |
| ಜಾವಾಳಿ ಅಕ್ಕಿ | ೮—೮—೦ | ೮—೧೨—೦ |
| ಸಣ್ಣಕ್ಕಿ ಅವಲ | ೧೨ ೦ ೦ | ೧೨—೧೦—೦ |
| ,, ದುಯಂ | ೧೦ ೮—೦ | ೧೦ ೦ ೦ |
| ತೊಗರಿ ಬೇಳೆ ಪಲ್ಲ ೧ಕ್ಕೆ | ೧೨ ೮ ೦ | ೧೪ ೦ ೦ |
| ,, ದುಯಂ | ೧೨—೦—೦ | ೧೨—೮—೦ |
| ಕೈ ರಾಗಿ ಪಲ್ಲ ೧ಕ್ಕೆ | ೩ ೧೪—೦ | ೩—೯—೦ |
| ಕಡಲೆ | ೩—೮ ೦ | ೩—೪—೦ |
| ಜೋಳ | ೩—೧೨—೦ | ೩—೦—೦ |
| ಹಲಸಂದೆ ಪಲ್ಲ ೧ಕ್ಕೆ | ೩—೧೦ ೦ | ೮—೦—೦ |
| ಬಿಳಿ ಅವರೆ | ೩—೨ ೦ | ೬—೪—೦ |
| ಹೆಸರು | ೧೦ ೦—೦ | ೧೦—೦—೦ |
| ಉದ್ದು | ೮ ೪—೦ | ೯—೦—೦ |
| ಕವಲೆ | ೧೦ ೪—೦ | ೧೦—೪—೦ |
| ಎಳ್ಳು | ೧೦ ೦ ೦ | ೧೦—೧೫—೯ |
| ಹುರುಳಿ | ೩—೮—೦ | ೪—೫—೦ |
| ಹರಳು ೧೨೮ ಸೇರಿಗೆ | ೯—೮—೦ | ೫—೧೪—೦ |
| ಸೀಗೆಕಾಯಿ ಮಣ ೧ಕ್ಕೆ | ೧—೨—೦ | ೧—೩—೦ |
| ಮೆಣಸಿನಕಾಯಿ | ೨—೮—೦ | ೨—೦—೦ |
| ,, ದುಯಂ | ೨—೪ ೦ | ೧—೮—೦ |
| ಬೆಲ್ಲ ದೊಡ್ಡ ಅಚ್ಚು | ೩—೧೪—೦ | ಮ ೧—೨—೦ |
| ಒಳ್ಳೆಣ್ಣೆ ಮಣ ೧ಕ್ಕೆ | ೪—೯ ೦ | ೪—೮—೦ |
| ಹರಳೆಣ್ಣೆ ,, | ೩—೧೦—೦ | ೩—೦—೦ |
| ಕೊತ್ತುಂಬರಿ ಪಲ್ಲ ೧ಕ್ಕೆ | ೩—೧೨—೦ | ೩—೧೨—೦ |
| ಉಪ್ಪು ,, | ೮—೨—೦ | ೮—೦—೦ |
| ಹುಣಸೇ ಹಣ್ಣು | ೦ ೧೨—೦ | ೦—೧೪—೦ |
| ,, ಹಳೇದು | ೦—೧೦—೦ | ೦—೧೩—೦ |
| ತುಪ್ಪ | ೧೦-೧೨—೦ | ೧೧—೦—೦ |
| ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ | ೪ ೮—೦ | ೪—೪—೩ |
| ತೆಂಗಿನಕಾಯಿ ೧೦೦ಕ್ಕೆ | ೪—೪-೦ | ೪—೦—೦ |
| ಅಳಲೇಕಾಯಿ ಮಣ ೧ಕ್ಕೆ | ೦—೧೪ ೦ | ೦—೧೪—೦ |
| ಅಂಟುವಾಳದಕಾಯಿ ಮಣ ೧ಕ್ಕೆ | ೦—೧೪—೦ | ೦—೧೬—೦ |
| ಚಿನ್ನ (ಪೌನ್) ಕೆಂಪು | ೧೫—೬—೦ | ೧೫—೪—೬ |
| ,, ,, ಬಿಳುಪು | ೧೫—೮—೦ | ೧೫—೩—೦ |
| ,, ,, ಗಟ್ಟಿ ತೊಲ ೧ಕ್ಕೆ | ೨೩—೦—೦ | ೨೪—೮—೦ |
| ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ | ೩೭—೦—೦ | ೩೯—೦—೦ |

Printed and Publishedby the Rev. E. W. Thompson, M.A., the Proprietor and Manager, Wesleyan Mission Press, Mysore. 21/5/1903.

# ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು ———:೦:——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೭ | ಮೈಸೂರು—ಸನ್ ೧೯೦೩ ನೇ ಇಸವಿ ಮೇ ತಾರೀಖು ೨೮ ನೇ ಗುರುವಾರ. | ಸಂಚಿಕೆ ೫೦


## ಮೈಸೂರು ಜಂಗಲ್ ಉತ್ಪತ್ತಿಯ ಹರಾಜು.

ಮೈಸೂರು ಡಿಸ್ಟ್ರಿಕ್ಟಿನ ಡಿಪೋಗಳಲ್ಲಿ ಕೆಳಗಣ ತಖ್ತೆಯಲ್ಲಿ ವಿವರಿಸಿರುವ ಪೋರೆ ಜಂಗಲ್ ಮಾಲುಗಳು ಆಯಾಯ ದಿವಸಗಳಲ್ಲಿ ಬಹಿರಂಗವಾದ ಹರಾಜುಮೂಲಕ ವಿಕ್ರಯಮಾಡಲ್ಪಡುವವು.

### ಮರಗಳ ತಪಸೀಲ್.

| ಡಿಪೊ ಹೆಸರು | ಸಾಗ್ವನಿ ನಾಟು | | ಮುಸ್ನಾ ಜಾತಿ ನಾಟು | | ಕಾಡುಜಾತಿ ನಾಟು | | ಸಾಗ್ವನಿ ಸರ ವಗ್ಯೆರೆ | | ಮುಸ್ನಾ ಜಾತಿ ಸರ ವಗ್ಯೆರೆ | | ಕಾಡುಜಾತಿ ಸರ ವಗ್ಯೆರೆ | | ಹರಾಜು ತಾರೀಖು. |
|---|---|---|---|---|---|---|---|---|---|---|---|---|---|
| | ಅದದು | ಅಡಿ | ಅದದು | ಅಡಿ | ಅದದು | ಅಡಿ | ಅದದು | ಅಡಿ | ಅದದು | ಅಡಿ | ಅದದು | ಅಡಿ | |
| ಮೈಸೂರು ಫೋರ್‌ಯಾರ್ಡ್ | 343 | 7315 | 211 | 3785 | 6 | 94 | 63 | 72 | | | | | 25-5-1903 |
| ನಂಜನಗೂಡು | 252 | 2606 | 51 | 903 | 8 | 115 | | | | | | | 29-5-1903 |
| ಗುಂಡಲ್ ಡಿಪೊ | | | 2 | 39 | | | 130 | 132 | 152 | 300 | 12 | 30 | *18-5-1903 |
| ಚಾಮರಾಜನಗರ ಡಿಪೊ | 1 | 18 | 21 | 615 | 2 | 44 | 3 | 13 | 13 | 699 | 514 | 762 | 20-5-1903 |
| ಹುಣಸೂರು ಡಿಪೊ | 8 | 202 | 124 | 2521 | 17 | 369 | 632 | 1461 | 212 | 1689 | 364 | 790 | 15-6-1903 |
| ಅಂತರಸಂತೆ ಡಿಪೊ | 9 | 209 | 13 | 303 | 1 | 35 | 437 | 1029 | 35 | 226 | 3 | 10 | 25-5-1903 |
| ಬೇಗೂರು ಡಿಪೊ | | | | | | | 743 | 1817 | 7 | 47 | 2 | 19 | 30-5-1903 |
| ಬೇಗೂರು ಕಾಡು | 14 | 273 | 10 | 219 | 1 | 24 | 72 | 605 | 15 | 138 | | | 31-5-1903 |
| ಆಲಟಿಮರದ ಕಾಡು | 16 | 132 | 5 | 88 | | | 114 | 653 | 25 | 255 | | | 28-5-1903 |
| ಸರಗೂರು ಡಿಪೊ | 1 | 16 | 1 | 19 | 1 | 16 | 298 | 453 | 15 | 76 | 12 | 76 | 6-6-1903 |
| ಹೋಮೇಶ್ವರ ಕಾಡು | 49 | 1638 | 28 | 698 | 2 | 56 | 25 | 180 | 4 | 31 | 1 | 14 | 8-6-1903 |
| ಸಂತೆ ಮರಹಳ್ಳಿ ಡಿಪೊ | | | 102 | 2210 | 3 | 78 | 80 | 125 | 27 | 313 | 107 | 164 | 22-5-1903 |

(Sd) C. Appaiya,
District Forest Officer,
Mysore District.


## ROBINSON'S PATENT BARLEY.

## ರಾಬಿನ್‌ಸನ್‌ಯವರ ಬಾರ್ಲಿ ರೊಟ್ಟಿ.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಎವೆಗೋಧಿಯಿಂದ ಮಾಡಿದೆ. ಹಸ್ತಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಹಾಕಿಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ಠಕ್ಕಿನ ವಸ್ತುವನ್ನು ಕೆಲವರು ಮಾಡುತ್ತಾರಾದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲುಗಡೆ ಮೇಲ್ಕಂಡ ಹೆಸರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.



## THE FOREIGN MISSIONS AND GENERAL AGENCY.

ಮೇಲ್ಕಂಡ ಏಜನ್ಸಿಯವರು ದೇಶೀಯ ವರ್ತಕರಿಗೂ ಇತರರಿಗೂ ಇಂಗ್ಲಾಂಡಿನಲ್ಲಿ ತಯಾರಾಗುವ ಯಾವ ಸಾಮಾನನ್ನು ಬೇಕಾದರೂ ಸುಲಭವಾದ ಕಮಿಷನ್ ತೆಗೆದುಕೊಂಡು ಕಳುಹಿಸುವರು. ಆರ್ಡರು ತಲುಪಿದ ಕೂಡಲೆ ಮಾಲುಗಳು ಬಹು ಜಾಗ್ರತೆಯಾಗಿ ರವಾನೆ ಮಾಡಲ್ಪಡುವವು. ಈ ವಿಷಯದಲ್ಲಿ ತಿಳಿದುಕೊಳ್ಳಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕೆಂದು ಕೋರುತ್ತೇವೆ.

A. J. Bride,
*Manager,*
*29-35, City Road, London*



## ಯಸ್. ಆರ್. ವೆಂಕಟಸುಬ್ಬಾಚಾರ್‍ರ ಲೋವರ್ ಸೆಕಂಡರಿ ಕನ್ನಡ ಟೆಕ್ಸ್ಟ್ ನೋಟ್ಸು.

೧೯೦೩ ನೆಯ ವರ್ಷದ್ದು. ಪ್ರಶ್ನೋತ್ತರಗಳೊಡನೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವದಕ್ಕೆ ಅತ್ಯಂತ ಸಹಾಯವಾಗುವಂತೆ ರಚಿಸಿದೆ, ಕ್ರಯ ೬ ಆಣೆ.

| | |
|---|---|
| ಮೈಸೂರು ಸಂಸ್ಥಾನದ ಭೂವಿವರಣೆ | ೦—೧—೦ |
| ಮೈಸೂರು, ಮದರಾಸು ನೊದಲಾದ್ದರ ಭೂವಿವರಣೆ | ೦—೧—೬ |
| ೨ನೆಯ ತರಗತಿಯ ಪದ್ಯಸಂಗ್ರಹದ ನೋಟ್ಸು | ೦—೧—೬ |
| ೩ನೆಯ ತರಗತಿಯ ಪದ್ಯಸಂಗ್ರಹದ ನೋಟ್ಸು | ೦—೧—೬ |
| ಪತ್ರರತ್ನಾಕರ (ಪತ್ರಕ್ರಮ, ಸ್ಟಾಂಪಿನ ವಿವರದ್ದು) | ೦—೧೨—೦ |
| ಲೇಖ್ಯತತ್ವಪ್ರಕಾಶಿಕೆ (ಅರ್ಜಿಗಳ ಲೇಖನಕ್ರಮದ್ದು) | ೦—೮—೦ |

ಇವಕ್ಕೆಲ್ಲಾ ಡಿಸ್ಕೌಂಟು:—೧೦ ಕ್ಕೆ ೧, ೫೦ಕ್ಕೆ ೭, ೧೦೦ಕ್ಕೆ ೨೦

ವಿಳಾಸ:— ೧. ಯಸ್. ಆರ್. ವೆಂಕಟಸುಬ್ಬಾಚಾರ್ಯ, ಸುಬೋಧ ಗ್ರಂಥಾಲಯ, ಮೈಸೂರು.
೨. ಗ್ರಾಜುಯೇಟ್ಸ್ ಡಾಪು, ಮೈಸೂರು.
೩. ಮಿಷನ್ ಬುಕ್ ಡಿಪೊ, ಮೈಸೂರು.
೪. ಕೆ. ನರಸಿಂಹಯ್ಯ ಅಂಡ್ ಕೊ, ಮೈಸೂರು.
೫. ಸಂತೇಪೇಟೆ, ಡೋರ್ ನಂ ೧೮೪೯ ಕೆ. ಸುಬ್ಬರಾವ್, ಮೈಸೂರು.
೬. ಜೆ. ಗಣಪ, ಅಂಡ್ ಕೊ, ಬೆಂಗಳೂರು.



## MELLIN'S FOOD.

### ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮೂಳೆಯೂ ಚೆನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಿಕಮಾನಸಿಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಪಾಕ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಕೂಸುಗಳಿಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ಹಿಟ್ಟು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಸಿಡುಬು ಹಾಕಿದ ಕಾಲದಲ್ಲಿಯೂ ಜ್ವರದಲ್ಲಿಯೂ ಒದಗುವ ವಿಕ್ಕಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುರುತುಪದಾರ್ಥವು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ದಕ್ಕತಕ್ಕದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ದೃಢಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ತಡೆದು ಮಟ್ಟಿಗೆ ಕಡಮೆಮಾಡುತ್ತದೆ.

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಷಾಪುಗಳಿಗೂ ಬರೆದು ತರಿಸಿಕೊಳ್ಳಬಹುದು:—

ಏಡನ್:—ಮೆ॥ ಕಾವಸಿ ದಿನ್‌ಷಾ ಬ್ರದರ್ಸ್.
ಕೊಲಂಬೊ:—ಮೆ॥ ಲೇಡಂ ಆಪಿಕ್ರಾಂಬಿ ಕಂಪೆನಿ.
ಕಲ್ಕತ್ತಾ:—ಮೆ॥ ಮೆಕ್ಕೆಂಜಿ ಲಯಲ್ ಕಂಪೆನಿ.
ಕೋಚಿನಾಡ:—ಮೆ॥ ಹಾರ್ ವಿಲ್ಸನ್ ಕಂಪೆನಿ.
ಕರಾಚಿ:—ಮೆ॥ ಎಚ್. ಜೆ. ರುಸ್ತುಂಜಿ ಕಂಪೆನಿ.
ಮದ್ರಾಸು:—ಮೆ॥ ಓಕ್ ಕಂಪೆನಿ.
ರಂಗೂನ್:—ರೇಡಂ ಬ್ರಾಕ್ ಕಂಪೆನಿ.

# ಹೊಸಪುಸ್ತಕ! ಹೊಸಪುಸ್ತಕ!!

ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ.

ಕಳೆದ ವರ್ಷ ಲಂಡನ್ ನಗರದಲ್ಲಿ ನಡೆದ ಈ ಮಹೋತ್ಸವವನ್ನು ವಿವರಿಸಿರುವ ಈ ಪುಸ್ತಕವು ನೇತ್ರಾನಂದಕರವಾದ ಅನೇಕ ಚಿತ್ರಗಳಿಂದ ಶೋಭಿಸುತ್ತಿರುವದು. ಎಲ್ಲರೂ ಅವಶ್ಯವಾಗಿ ತರಿಸಿಕೊಂಡು ಓದತಕ್ಕ ಪುಸ್ತಕ. ಕ್ರಯ ೨॥ ಆಣೆ ಹಾಸಲು ಪ್ರತ್ಯೇಕ.

ವಿಳಾಸ:—ಮ್ಯಾನೇಜರ್, ಬುಕ್ ಡಿಪೋ, ಮೈಸೂರು.

# ದೇವಾಂಗ ವಂಶಸ್ಥರಿಗೆ ನೆ ಬೇಕಾದ್ದು

8

ಸ್ವಲ್ಪ ಪ್ರತಿಗಳಿವೆ. ಜಾಗ್ರತೆಪಟ್ಟರೆ ಸಿಕ್ಕುತ್ತೆ. ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು ಅರ್ಥಸಹಿತ ದೇವಾಂಗಮತಪ್ರಕಾಶಿಕೆ. ಸಭ್ಯಾವಕಾರಕ್ಕೆ ಸುಂದರವಾದ ೧೪ ತಸ್ವೀರಿಧೆ ಸ್ವಮತತತ್ವವಿಚಾರದ ಪ್ರಕಾಶದರ್ಪಣವು. ಪ್ರತ್ಯಕ್ಷ ನೋಡಿ ಸಂತೋಷಪಡಿ.

೧೪ ತಸ್ವೀರಿರುವ ಪ್ರತಿ ೧ಕ್ಕೆ ವಿ. ಪಿ ಖರ್ಚು ಸೇರಿ ರೂ. ೩—೮.

ತಸ್ವೀರಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೨—೮.

ವೇತ ಉಪನಿಷತ್ತು ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ. ೨—೮.

ತಕ್ಷಣವೇ ಮಣಿಆರ್ಡರಿಗೂ ವಿ. ಪಿ ಲೂ ಕಳುಹಿಸುತ್ತೇವೆ. ಮೈಸೂರು ಜವಳಿ ಅಂಗಡಿ ಬ್ರಹ್ಮಶ್ರೀ ಯಜಮಾನ ಭುಟ್ಟಮಲ್ಲಯ್ಯ, ಬ್ರಹ್ಮಶ್ರೀ ಯಜಮಾನ ಶಂಕರಯ್ಯನವರಲ್ಲಿ ಈ ಗ್ರಂಥ ಸಿಕ್ಕುತ್ತೆ.

ಸರಸ್ವತೀಕರ ಕಸ್ತೂರಿ ಮಾತ್ರೆಯು.

ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥಾವರಿಗೆ ಅತ್ಯಂತ ಉಪಯುಕ್ತವಾದದ್ದು. ಈ ಮಾತ್ರೆ ೧—೨ ತಾಂಬೂಲದ ಸಂಗಡ ಸೇವಿಸುವದರಿಂದ ಬಾಯಿಯ ಸುವಾಸನೆ, ಬಾಯಿಯ ದುರ್ಗಂಧ, ಅಜೀರ್ಣ, ಉಷ್ಣರೋಗ, ಬಾಯಿಯ ಜೊಲ್ಲು, ಉಗ್ಗಿಸುತ್ತಾ ಮಾತಾಡುವದು, ವಾಯು ಶೀತ ಪಿತ್ಥ, ಮಲಬದ್ಧ, ದಂತದೋಷ, ಬಾಯಿಹುಣ್ಣು, ಹಸಿವು, ಜ್ವರ, ಛಳಿ, ನೆಗಡಿ, ತಲೆನೋವು ಇತ್ಯಾದಿ ಅನೇಕ ರೋಗಗಳಿಗೆಲ್ಲಾ ರಾಮಬಾಣದಂತಿರುವದು. ಹೆಂಗಸರ ಗುಪ್ತವಾದ ಅನೇಕ ಜಾಡ್ಯಗಳಿಗೆ ವಜ್ರಾಯುಧದಂತಿರುವದು. ಚಿಕ್ಕ ಮಕ್ಕಳಿರುವ ಮನೆಯಲ್ಲಿ ಈ ಮಾತ್ರೆಯು ಸಂಜೀವನವು. ಈ ಮಾತ್ರೆಯು ನಿಮ್ಮಲ್ಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸ್ವಾಧೀನದಲ್ಲಿದ್ದಂತೆಯೇ. ೨೦೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೬ ಆಣೆ, ೬ ಆಣೆ ಔಷಧವು ೨ ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವು ನಮಗೆ ಬರೆಯುವದಾಗಿ ಬಲಾತ್ಕಾರಪಡಿಸುವದು.

ಸಿ. ಪಿ. ಅಂಡ್ ಕಂಪೆನಿ, ಬೆಂಗಳೂರು ಸಿಟಿ.



ಚೇಂಬರ್ಲಿನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

21




ಕೆಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಕೀಲುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ.—"ಕೆಳಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ ; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ —

ಬಿ. ವಿ. ನರಸಿಂಹಲು ಚೆಟ್ಟಿ,
ನಂ. ೨, ತಂಬೂನಾಯಕರ ಬೀದಿ,
ಮದರಾಸ್.


ವೃತ್ತಾಂತಪತ್ರಿಕೆ.

ಸ೯ ೧೯೦೩ ನೇ ಇಸವಿ ಮೇ ತಾ॥ ೨೮ ನೇ ಗುರುವಾರ

ಬರೋಡಾ ಸಂಸ್ಥಾನದ ಹೊಸ ಕಾನೂನು.

ಬರೋಡಾ ಸಂಸ್ಥಾನದಲ್ಲಿ ಬಾಲ್ಯವಿವಾಹವನ್ನು ನಿರೋಧಿಸುವದಕ್ಕೆ ಒಂದು ಹೊಸ ಕಾನೂನು ಮಾಡುವದರಲ್ಲಿದ್ದಾರೆ. ಈ ಕಾನೂನಿನ ಉದ್ದೇಶವನ್ನೂ ಅದಕ್ಕೆ ಕಾರಣಗಳನ್ನೂ ಅದರ ಕಲಮುಗಳನ್ನೂ ಈ ಪತ್ರಿಕೆಯ ಇನ್ನೊಂದು ಭಾಗದಲ್ಲಿ ಪ್ರಕಟಿಸಿರುತ್ತೇವೆ. ಈ ಭಾಗದಲ್ಲಿ ಗಾಯಕವಾಡ್ ಗೌವರ್ನಮೆಂಟಿನವರ ಉದ್ದೇಶವು ಸಹಜವಾದದ್ದೆಂದು ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ. ವಿವಾಹವಾಗತಕ್ಕ ವಧುವರರು ವಿವಾಹ ಸಂಬಂಧದ ಗೌರವವನ್ನೂ ಗಂಡಹೆಂಡರ ಕರ್ತವ್ಯಾಂಶಗಳನ್ನೂ ತಿಳಿದುಕೊಳ್ಳುವಷ್ಟು ವಯೋಗುಣ ಸಂಪನ್ನರಾಗಿರಬೇಕೆಂಬುವದೇ ಗೌವರ್ನಮೆಂಟಿನವರ ಮುಖ್ಯ ಉದ್ದೇಶ. ವೇದಗಳ ಕಾಲದಲ್ಲಿ ನಡೆಯುತ್ತಿದ್ದ ವಿವಾಹಗಳು ಈ ಉದ್ದೇಶಕ್ಕೆ ಅನುಸಾರವಾಗಿಯೇ ಇದ್ದವೆಂದು ಅವರು ಹೇಳುತ್ತಾರೆ. ಆಗ್ಯೆ ವಿವಾಹಕಾಲದಲ್ಲಿ ವಧುವರರು ಹೇಳುವ ಮಂತ್ರಗಳನ್ನು ಅವರು ಚನ್ನಾಗಿ ಮುಂದಟ್ಟುಮಾಡಿಕೊಳ್ಳುವ ಸ್ಥಿತಿಯಲ್ಲಿದ್ದರು. ಈ ಕಾನೂನು ಬಾಲ್ಯವಿವಾಹದಿಂದುಂಟಾಗುವ ಎರಡು ಮುಖ್ಯವಾದ ಕೆಡಕುಗಳನ್ನು ಹೋಗಲಾಡಿಸಬೇಕೆಂದು ಉದ್ದೇಶಪಡುವದು. ಅವು ಯಾವವಂದರೆ.—ಚಿಕ್ಕಂದಿನಲ್ಲೇ ಮದುವೆಯಾಗುವದರಿಂದ ಬಾಲವಿತಂತುಗಳಿಗುಂಟಾಗುವ ಹಿಂಸೆಗಳೆಲ್ಲಾ ನಿರ್ಮೂಲವಾಗುವವು. ೧೯೦೧ನೇ ಇಸವಿಯ ಸೆನ್ಸಸ್ ಲೆಕ್ಕಗಳನ್ನು ತೆಗೆದು ನೋಡಿದರೆ ಬಂಗಾಳಾ ಒಂದರಲ್ಲೇ ೧೦ ವಯಸ್ಸಿನೊಳಗಿರುವ ವಿಧವೆಯರು ೪೦,೦೦೦ ಮಂದಿ ಎಂಬುವದು ಗೊತ್ತಾಗುತ್ತೆ. ಮದುವೆಯಾಗತಕ್ಕವರ ವಯಸ್ಸನ್ನು ಹೆಚ್ಚು ಮಾಡಿದರೆ ಬಾಲವಿತಂತುಗಳ ಸಂಖ್ಯೆ ಕಡಿಮೆಯಾದೀತೆನ್ನುವದಕ್ಕೆ ಸಂಶಯವಿಲ್ಲ. ತಂದೆತಾಯಿಗಳಿಗೂ ಅವರ ಬಾಲವಿತಂತುಗಳಿಗೂ ಉಂಟಾಗುವ ದುಃಖಗಳೂ ಕಷ್ಟಪರಂಪರೆಗಳೂ ನಿರ್ಮೂಲವಾಗುವವು. ಇದಲ್ಲದೆ ಚಿಕ್ಕಂದಿನಲ್ಲೇ ಮಕ್ಕಳು ಗಂಡಹೆಂಡರಾಗುವದರಿಂದ ಅವರ ಶರೀರ ಸ್ಥಿತಿಯು ಬಹಳ ಕೆಟ್ಟುಹೋಗುತ್ತದೆ. ಇದೂ ತಪ್ಪಿಹೋದೀತು. ಚಿಕ್ಕ ವಯಸ್ಸಿನವರು ಮಾತಾಪಿತೃಗಳ ಸ್ಥಾನವನ್ನು ಪಡೆಯುವದರಿಂದ ಅವರ ಶರೀರಧರ್ಮವು ಕೆಟ್ಟುಹೋದೀತು; ಅವರ ಮಕ್ಕಳು ರೋಗಿಷ್ಟರೂ ಬಲಹೀನರೂ ಆದಾರು. ಆದಕಾರಣ ಬಾಲ್ಯವಿವಾಹ ನಿಂತರೆ ಈ ಕೇಡುಗಳೆಲ್ಲಾ ಪರಿಹರವಾಗುವವು.

ಈ ಕಾನೂನಿನ ಉದ್ದೇಶಗಳನ್ನೇನೋ ನಾವು ಒಪ್ಪಿಕೊಳ್ಳುತ್ತೇವೆ; ಆದರೆ ಆ ಉದ್ದೇಶಗಳು ಕೈಗೂಡುವವೇ ಎಂಬ ಅನುಮಾನವು ನಮ್ಮನ್ನು ಬಾಧಿಸುವದು. ವಿವಾಹ ಕರ್ಮದ ವಿಷಯದಲ್ಲಿ ಜನರಿಗೆ ಘನತರವಾದ ಮತ್ತು ನೂತನವಾದ ಅಭಿಪ್ರಾಯಗಳನ್ನು ಕಲಿಸುವದು ಗೌವರ್ನಮೆಂಟಿನವರ ಕೆಲಸವಲ್ಲ. ಈ ಕಾರ್ಯವು ಜನರ ಮುಖಂಡರಿಗೂ ಗುರುಗಳಿಗೂ ಸೇರಿದ್ದಾಗಿರುತ್ತದೆ. ಗುರುಗಳೂ ಜಾತಿಗಳ ಮುಖಂಡರೂ ತಮ್ಮ ತಮ್ಮ ಶಿಷ್ಯವರ್ಗಕ್ಕೆ ಸೇರಿದ ಜನರಿಗೆಲ್ಲಾ ಈ ವಿಷಯದಲ್ಲಿ ಚನ್ನಾಗಿ ವಿವೇಕ ಹೇಳಿಕೊಟ್ಟು, ಜನರನ್ನು ಒಪ್ಪಿಸದೆಹೋದರೆ ಈ ಕಾನೂನು ನಿಷ್ಪ್ರಯೋಜನವಾದೀತೇನೋ ಎಂಬದಾಗಿ ನಾವು ಅನುಮಾನಪಡುವೆವು. ಆಗ್ಯೆ ಅದು ಅಪಹಾಸ್ಯವಾದೀತಲ್ಲವೇ.

ಇದಲ್ಲದೆ ಗಂಡಸಿಗೆ ೧೮ನೇ ವಯಸ್ಸಿಗೆ ಮುಂಚೆಯೂ, ಹುಡುಗಿಗೆ ೧೪ನೇ ವಯಸ್ಸಿಗೆ ಮುಂಚೆಯೂ ವಿವಾಹವಾಗಕೂಡದೆಂದು ಕಾನೂನು ವಿಧಿಸುತ್ತದೆ. ಇದೇ ಕಾನೂನಿನಲ್ಲಿ ಹೇಳಿರುವ ವಿನಾಯತಿಗಳನ್ನು ನೋಡಿದರೆ ಬಾಲ್ಯ ವಿವಾಹಗಳು ಎಂದಿನಂತೆಯೇ ನಡೆಯಲು ಅವಕಾಶವಿದ್ದೇ ಇರುವದು. ಚಿಕ್ಕತನದಲ್ಲಿ ವಿವಾಹ ಮಾಡುವದು ಪದ್ಧತಿಯಾಗಿದೆ ಎಂಬ ದೊಡ್ಡ ಕಾರಣವನ್ನು ಯಾರಾದರೂ ಹೇಳಿ ರುಜುವಾತು ಕೊಟ್ಟರೆ ಅಂಥವರಿಗೆ ಲೇಸನ್ಸು ಕೊಡಲೇಬೇಕಾಗುವದು.

ಲೇಸನ್ಸು ಪಡೆಯಬೇಕು, ಮ್ಯಾಜಿಸ್ಟ್ರೇಟರ ಮುಂದೆ ಹೋಗಿ ನಿಲ್ಲಬೇಕು, ಮೂರು ಮಂದಿ ಪಂಚಾಯಿತರಿಗೆ ತಮ್ಮ ಸಂಸಾರದ ಕಷ್ಟಸುಖಗಳನ್ನು ಹೇಳಿಕೊಳ್ಳಬೇಕು—ಈ ಮೊದಲಾದ ವಿಘ್ನಗಳು ಇಟ್ಟಿರುವದರಿಂದ ಬಾಲ್ಯವಿವಾಹಗಳು ಕಡಿಮೆಯಾದರೂ ಆಗಬಹುದು. ಆದರೆ ಈ ಕಾನೂನನ್ನು ಕ್ರಮವಾಗಿ ಜಾರಿಗೆ ತಂದಾಗ ಜನರು—ಸರ್ಕಾರದವರು ನಮ್ಮ ಗೃಹಕೃತ್ಯವಿಚಾರದಲ್ಲಿ ಇಷ್ಟೊಂದು ವಿಶೇಷವಾಗಿ ಪ್ರವೇಶ ಮಾಡುವದು ಯಾಕೆ ಎಂಬದಾಗಿ ಪ್ರತಿಭಟಿಸುವರು. ಒಂದುವೇಳೆ ಕಾನೂನನ್ನು ಅಷ್ಟು ಕ್ರಮವಾಗಿ ಜಾರಿಗೆ ತರದೆಹೋದರೆ ಸರ್ಕಾರದವರ ಮೇಲೆ ಪ್ರಜೆಗಳಲ್ಲಿ ಇರತಕ್ಕ ಭಯಭಕ್ತಿಗಳಿಗೆ ಕುಂದಕ ಉಂಟಾಗುತ್ತದೆ. ಕ್ರಮವಾಗಿ ಜಾರಿಗೆ ತರುವದಕ್ಕಾಗದೇ ಇರುವಂಥಾ ಕಾನೂನುಗಳನ್ನು ಮಾಡುವದು ಯಾವ ಗೌವರ್ನಮೆಂಟಿಗೂ ಒಳ್ಳೇ ಹೆಸರನ್ನು ತರಲಾರದು. ಈಗ ಇರತಕ್ಕ ಒಳ್ಳೇ ಹೆಸರಿಗೂ ಈ ತರದ ಕಾನೂನಿನಿಂದ ಲೋಪ ಬಂದೀತು.

ಸಕಲ ಹಿಂದೂ ಜನರೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿರುವ ದೊಡ್ಡ ವಿಷಯವ್ಯಾವದಂದರೆ.—ಪ್ರತಿ ಮನೆಯವರೂ ತಮ್ಮ ಗೃಹಕೃತ್ಯ ವ್ಯಾಪಾರವನ್ನು ತಾವೇ ಕ್ರಮಕ್ಕೆ ತಂದಿಟ್ಟುಕೊಳ್ಳಬೇಕಾಗಿದೆ: ಇದು ಮನೆಯವರ ಮೇಲೆ ಬಿದ್ದ ಭಾರ. ಈ ಕಾರ್ಯವು ಸರ್ಕಾರದವರಿಗೆ ಸಾಧ್ಯವಲ್ಲ. ದುಷ್ಟ ಪದ್ಧತಿಗಳು ಪ್ರಜೆಗಳನ್ನು ದುರ್ಬಲರನ್ನಾಗಿಯೂ ನಿರ್ಗತಿಕರನ್ನಾಗಿಯೂ ಮಾಡುತ್ತಿರುವವು. ಇಂಥಾ ದುಷ್ಟ ಪದ್ಧತಿಗಳನ್ನು ಜನರು ತಾವಾಗಿಯೇ ನಿರ್ಮೂಲಮಾಡಿಕೊಳ್ಳಬೇಕಾಗಿದೆ; ಗೌವರ್ನಮೆಂಟಿನವರು ಇದಕ್ಕೆ ಪ್ರವೇಶಿಸುವದು ಸಾಧ್ಯವಲ್ಲ.

ಕ್ರೈಸ್ತಮತಾಧಾರದ ಬೋಧನಾ ಸಿದ್ಧಾಂತಗಳು.

೪ ನೇ ಭಾಗ. ಪಾಪಪರಿಹಾರವು, ಮಾನಸಾಂತರವು, ನಂಬಿಕೆಯು.

ಹಿಂದಿನ ಉಪನ್ಯಾಸದಲ್ಲಿ, ಮನುಷ್ಯನು ದೇವರಿಗೆ ವಿರೋಧವಾಗಿ ಪಾಪಮಾಡಿ ಹ್ಯಾಗೆ ಕೆಟ್ಟುಹೋದನೆಂದೂ, ಮನುಷ್ಯಜಾತಿಯೂ, ಸಂತಾನವೂ ಹ್ಯಾಗೆ ಪಾಪಾಂಧಕಾರದಲ್ಲಿ ಬಿದ್ದು, ದೇವರು ಮನುಷ್ಯನನ್ನು ನಿರ್ಮಾಣಮಾಡಿದ್ದರ ಉದ್ದೇಶಗಳನ್ನು ಹ್ಯಾಗೆ ಕೆಡಿಸಿಬಿಟ್ಟತೆಂದೂ ನೋಡಿದ್ದೇವೆ. ಇದರಲ್ಲಿ ಕೆಟ್ಟುಹೋಗಿರುವ ಮನುಷ್ಯನು ತಿರಿಗಿ ಉದ್ಧಾರವಾಗುವದಕ್ಕೆ ಮಾರ್ಗವಿದೆಯೊ ಇಲ್ಲವೊ ಎಂಬುವದನ್ನು ನೋಡೋಣ.

ಮನುಷ್ಯನು ಭ್ರಷ್ಟನಾಗಿದ್ದಾನೆಂದು ದೇವರೂ ಮತ್ತು ಶ್ರುತಿಯೂ ಹೇಳುವದೇ ಸಾಲದು. ಆದರೆ ಪ್ರತಿಮನುಷ್ಯನ ಮನಸ್ಸಾಕ್ಷಿಯು ಇದಕ್ಕೆ ಆಧಾರವಾಗಿರುತ್ತದೆ. "ಮಾಡಿದ ಪಾಪಕ್ಕೆ ಮನವೇ ಸಾಕ್ಷಿ, ಹೋಡಿದ ಭಾವಿಗೆ ಜಲವೇ ಸಾಕ್ಷಿ" ಎಂಬ ಗಾದೆಗೆ ಸರಿಯಾಗಿ ಪ್ರತಿಮನುಷ್ಯನು ತಾನು ಪಾಪಿ ಎಂಬುದನ್ನು ಸ್ವಭಾವಸಿದ್ಧವಾಗಿ ಒಪ್ಪಿಕೊಳ್ಳುತ್ತಾನೆ. ಎಲ್ಲರೂ ಇದಕ್ಕೆ ಒಪ್ಪಿಕೊಳ್ಳುವದರಿಂದಲೂ ನಾನಾತರದ ಬಲಿ, ಅರ್ಪಣೆ, ಜಪತಪ, ಶರೀರದಂಡನೆ, ಉತ್ಸವ, ಮೊದಲಾದವುಗಳು ಇದನ್ನು ರುಜುವಾತು ಪಡಿಸುವವುಗಳಾಗಿರುವದರಿಂದ ಈ ವಿಷಯದಲ್ಲಿ ಹೆಚ್ಚು ದೃಷ್ಟಾಂತಪಡಿಸಲಿಕ್ಕೆ ಅಗತ್ಯವಿರುವದಿಲ್ಲ. ಹೀಗೆ ಕೆಟ್ಟುಹೋಗಿ ಪಾಪಮಾಡಿರುವ ನರಸಂತಾನವನ್ನು ದೇವರೇ ರಕ್ಷಿಸುವದಕ್ಕೆ ಮಾರ್ಗಮಾಡಿದ್ದಾನೆಂಬುವದು ಈ ಉಪನ್ಯಾಸದ ಮೊದಲನೇ ಸಂಗತಿಯಾಗಿದೆ. ಕೆಟ್ಟುಹೋದ ಮನುಷ್ಯನು ತನ್ನನ್ನು ತಾನೇ ರಕ್ಷಿಸಿಕೊಳ್ಳಲಾರನೆಂಬುವದನ್ನು ತಾನು ಮಾಡುವ ನಾನಾತರವಾದ ಪುಣ್ಯಕಾರ್ಯಗಳಾದರೂ ಸುಕೃತ ಮಾರ್ಗವಾದರೂ ತನಗೆ ಪಾಪಪರಿಹಾರ ಉಂಟುಮಾಡುವದಿಲ್ಲವೆಂಬುವದು ಕ್ರೈಸ್ತಮತದ ಪ್ರಧಾನ ಸಂಗತಿಯಾಗಿದೆ. ಈ ವಿಷಯದಲ್ಲಿ ಕ್ರೈಸ್ತಮತಕ್ಕೂ ಇತರ ಮತಗಳಿಗೂ ಬಹು ದೊಡ್ಡ ವ್ಯತ್ಯಾಸಕಾಣುತ್ತದೆ. ಇತರ ಮತಗಳವರು ಯಾವಾಗಲೂ ತಮ್ಮ ಪುಣ್ಯಕಾರ್ಯಗಳಮೇಲೆ ಭರವಸವಿಡುತ್ತಾರೆ. ದೇವರ ಉಚಿತವಾದ ಕೃಪೆಗಿಂತ ತಮ್ಮ ಕಾರ್ಯಗಳನ್ನು ಘನಪಡಿಸುತ್ತಾರೆ. ಕ್ರೈಸ್ತ ಮತದಲ್ಲಿ, ತಮ್ಮ ಕೆಲಸಗಳೆಲ್ಲಾ ಹರಕುಬಟ್ಟೆಗೆ ಸಮಾನವೆಂತಲೂ, ದೇವರ ಉಚಿತವಾದ ಕರುಣೆಯೇ ಒಂದೇ ಪಾಪಾತ್ಮನಿಗೆ ಆಧಾರವೆಂಬದಾಗಿ ಕ್ರೈಸ್ತರು ನಂಬುತ್ತಾರೆ. ನಮ್ಮ ಕೆಲಸಗಳಿಂದ ನಮಗೆ ಮುಕ್ತಿ ದೊರಕದ ಮನುಷ್ಯನು ದೇವರಲ್ಲಿ ತುಂಬಾ ಭರವಸವಿಡಬೇಕಾದ ಅಗತ್ಯ ಕಾಣಬರುತ್ತ

ಲ್ಲ. ಪಾಪಿಯು ತಾನು ಎಷ್ಟು ಕೆಲಸಗಳನ್ನು ನಡಸಿದರೂ, ಎಂಥ ಪುಣ್ಯಕ್ರಿಯೆಗಳನ್ನು ನಡಿಸಿದರೂ ಅವು ಪಾಪಪರಿಹಾರಕ್ಕೆ ತಕ್ಕ ಈಡಾಗಿರುವದಿಲ್ಲ. ಈ ಭೂಲೋಕದಲ್ಲಿರುವ ಗಾವೆಲ್ಲವೂ, ಎಲ್ಲಾ ಕುರಿ ದನಗಳು ಸಹ ಸರ್ವ ಪದಾರ್ಥಗಳು ದೇವರವೇ. ದೇವರು ಕೊಟ್ಟಿರುವದರಲ್ಲಿ ಒಂದು ಭಾಗವನ್ನು ದೇವರಿಗೆ ಕೊಟ್ಟು ಇದು ನನ್ನ ಪಾಪಕ್ಕೆ ತಕ್ಕ ಈಡು ಎಂದು ಹೇಳಿದರೆ ಅದು ಸರಿಯೋ? ಇಲ್ಲವೇ ಪಾಪಿಷ್ಟನು ತಾನು ಆಶ್ರಮದಲ್ಲಿ ಜೀವಿಸುವಾಗಲೇ ದೇವರಿಗೆ ಮೆಚ್ಚಿಕೆಯಾಗಬಹುದೊ? ಪಾಪಪರಿಹಾರವು ಒಂದು ಹುಡುಗಾಟದಂತೆ ಇದೆ ಎಂದು ಅನೇಕರು ನೆನಸುವ ಇಲ್ಲವೇ ಮಾಡುವ ಅವರ ಕೃತ್ಯಗಳಿಂದ ಕಂಡು ಬರುತ್ತೆ. ಮನುಷ್ಯನು ಪಾಪಿಯಾಗಿರುವದರಿಂದಲೂ ಇವನ ಜನ್ಮಾದ್ಯಂತವೂ ಪಾಪದ ಮುದ್ದೆಯಾಗಿರುವದರಿಂದಲೂ, ಇವನು ಏನುಮಾಡಿದರೂ ಪಾಪವು ಅದರಲ್ಲಿ ಬೆಂಕಿಯಾಗುವದರಿಂದಲೂ, ಮನುಷ್ಯನು ತನ್ನ ಸ್ವನೀತಿಯಿಂದ ತನ್ನ ಪರಿಹಾರವನ್ನು ಹುಡುಕುವದು ಅಸಾಧ್ಯವೆಂತ ದೇವರು ತನ್ನ ವಾಕ್ಯದಲ್ಲಿ ಹೇಳಿರುವದರಿಂದಲೂ, ಪ್ರತಿ ಒಬ್ಬನೂ ಇದನ್ನು ಯೋಚಿಸಿ ದೇವರಮೇಲೆ ತಾನು ಆತುಕೊಳ್ಳಬೇಕು.

ಎರಡನೇದು, ಭಗವಂತನು ಮನುಷ್ಯನಿಗೆ ರಕ್ಷಣೆಯನ್ನು ಯೇಸುಸ್ವಾಮಿ ಮೂಲಕ ಉಂಟುಮಾಡಿದ್ದಾನೆ. ದೇವರು ಇದೇ ರೀತಿಯಲ್ಲಿ ಈ ಕಾರ್ಯ ತೀರಿಸಬೇಕಾಗಿತ್ತೊ? ಬೇರೆ ಮಾರ್ಗವಿರಲಿಲ್ಲವೋ? ಎಂಬದಾಗಿ ಬಹಳರು ಆಕ್ಷೇಪಿಸಬಹುದು. ಮನುಷ್ಯನಿಗೆ ವಿಮೋಚನಾ ಕಾರ್ಯವನ್ನು ಮಾಡಲಿಕ್ಕೆ ದೇವರು ಇದೊಂದೇ ಕಾರ್ಯವನ್ನು ಮಾಡಬೇಕಾಗಿತ್ತು. ಈ ಒಂದು ಕಾರ್ಯ ಮಾತ್ರ ದೇವರ ನೀತಿಗೆ ತೃಪ್ತಿಯಾಗಿತ್ತು. ಮನುಷ್ಯನು ಅವನ ಸಂತಾನವು ಕೆಟ್ಟುಹೋದಮೇಲೆ ಅವನ್ನು ನೆಟ್ಟಗೆ ಮಾಡುವದು ದೇವರ ಪಾಲಿಗೆ ಬಂತು. ಮನುಷ್ಯನು ಏನುಮಾಡಿದರೂ ತಾನು ನೆಟ್ಟಗಾಗಲಾರನು. ನೆಟ್ಟಗಾಗಕೂಡದು. ಯಾನಿಮಾಡಿದ ಕೃತಿಯನ್ನು ನಲ್ಲಿಗೆ ಹಾಕುವದು ನ್ಯಾಯಮಷ್ಟೆ. ಈ ಕೃತಿ ಏನುಮಾಡಿದರೂ ಇವನಿಗೆ ಪರಿಹಾರವಿಲ್ಲ; ಮತ್ತು ಬಿಡುಗಡೆಯೂ ಸಿಕ್ಕುವದಿಲ್ಲ. ಒಂದು ಕೋಟಿ ರೂಪಾಯಿ ಖರ್ಚುಮಾಡುತ್ತೇನೆಂದೂ, ಸಾವಿರ ಯಾಗಗಳನ್ನು ನೆರವೇರಿಸುವದಾಗಿಯೂ, ಇಲ್ಲವೇ ಇಂಥಿಂಥ ಪುಣ್ಯಕ್ರಿಯೆಗಳನ್ನು ಮಾಡುತ್ತೇನೆಂದರೂ, ನ್ಯಾಯಾಧಿಪತಿಯು ಇವನ ಮಾತನ್ನು ಅಂಗೀಕರಿಸುವದಿಲ್ಲ. ಒಂದುವೇಳೆ ಈ ಕೊಲೆಪಾತಕನು ಹಾಗೆ ಮಾಡಿದರೂ, ಇವನು ನಡಿಸಿದ ಕೊಲೆಗೆ ಅದು ತಕ್ಕ ಪರಿಹಾರವಲ್ಲ. ಮತ್ತು ಇವನಂತೆ ನರಹತ್ಯ ಮಾಡಿದಂಥಾ ಇತರ ವ್ಯಕ್ತಿಗಳು ಒಂದು ಸಾವಿರ ಜನರು ಬಂದು ಜಾಮೀನಾಗುತ್ತೇವೆಂದರೂ ಅದು ನ್ಯಾಯಕ್ಕೆ ಸಲ್ಲುವದಿಲ್ಲ. ಅದರಂತೆ ಮನುಷ್ಯ ಸಂತಾನವೇ ಹಾಳಾಗಿ ಹೋಗಿರುವಾಗ ಇದನ್ನು ಪಾವನಮಾಡುವದಕ್ಕಾಗಿ, ದೇವರು ನರಾವತಾರ ಎತ್ತಿ ಮನುಷ್ಯನನ್ನು ರಕ್ಷಿಸಬೇಕಾಗಿ ಬಂದದ್ದರಿಂದ ಮನುಷ್ಯನ ಸ್ವಭಾವವನ್ನು ಧರಿಸಿ ಅವನಂತೆ ರಕ್ತಮಾಂಸಗಳಲ್ಲಿ ಪಾಲುಗಾರನಾಗಿ ಈ ಲೋಕಕ್ಕೆ ಬಂದನೆಂದು ಪರಿಶುದ್ಧ ವೇದದಲ್ಲಿ ಹೇಳಿದೆ. ಇದನ್ನು ಎಲ್ಲಾ ಕ್ರೈಸ್ತರು ನಂಬಿದ್ದಾರೆ. ಅವರ ಮತಕ್ಕೆ ಇದೇ ಆಸ್ತಿವಾರವಾಗಿದೆ. ಇದೊಂದು ಯತ್ನವನ್ನು ದೇವರು ಮಾಡದೆಹೋಗಿದ್ದರೆ ಬೇರೆ ಯಾವದೂ ಇರಲಿಲ್ಲ. ಅನೇಕ ತಲಾಂತರಗಳಿಂದ ಜನರೊಳಗೆ ಬಂದ ನಾನಾ ತರವಾದ ಬಲಿ ಆಚರಣೆಗಳು ಎಲ್ಲಾ ಯಜ್ಞಗಳು ಅಸಂಪೂರ್ತಿಯಾದವುಗಳಾಗಿದ್ದವು. ಇವೆಲ್ಲಾ ಯೇಸುಸ್ವಾಮಿ ನೆರವೇರಿಸಿದ ಒಂದೇ ಮಹಾ ಯಜ್ಞಕ್ಕೆ ಮುಂಗುರುತಾಗಿಯೂ ನೆರಳಾಗಿಯೂ ಇದ್ದವು. ಯಾಕಂದರೆ ನಾನಾ ಅರ್ಪಣೆಗಳಾದರೂ ಕುರಿ, ಹೋತು, ದನಗಳು, ರಕ್ತವಾದರೂ ಮನುಷ್ಯನ ಬಂಧ ವಿಮೋಚನೆಗೆ ಸಾಕಾದಷ್ಟು ಶಕ್ತಿಯುಳ್ಳವುಗಳಲ್ಲ. ಆದ್ದರಿಂದ ಪ್ರಾಚೀನ ಕಾಲದ ಆರ್ಯರಾದರೂ ಇಲ್ಲವೇ ಯೆಹೂದ್ಯ ಜನರಾದರೂ, ಇತರ ಯಾವ ಜನಾಂಗವಾದರೂ ನೆರವೇರಿಸುತ್ತಿದ್ದವುಗಳೆಲ್ಲಾ ಸದ್ಯಕ್ಕೆ ಅನುಕೂಲವಾಗಿದೆಯೇ ಹೊರ್ತು ಅವರಲ್ಲಿ ತಕ್ಕ ಶಕ್ತಿ ಇರಲಿಲ್ಲ. ಇದರಿಂದ ಯೇಸುಸ್ವಾಮಿಯಂಥಾ ದೇವರ ಮಗನು, ಮಹಾ ಪರಿಶುದ್ಧನೂ, ನಿಜವಾದ ದೇವರೂ ನಿಜವಾದ ಮನುಷ್ಯನೂ ಆದ ಸ್ವಾಮಿಯು ಸತ್ತು ಆತನ ರಕ್ತ ಚೆಲ್ಲಲ್ಪಟ್ಟು ಈ ಮೂಲಕ ಮನುಷ್ಯನಿಗೆ ಬಿಡುಗಡೆ ಸಿಕ್ಕಬೇಕೆಂದು ದೇವರು ಆದಿಯಲ್ಲಿ ಸಂಕಲ್ಪಿಸಿದ ಕಾರ್ಯವು ಸಿದ್ಧಿಗೆ ಬಂದು ಹತ್ತೊಂಬತ್ತು ಶತಮಾನಗಳ ಕೆಳಗೆ ಈ ಮಹಾ ಕಾರ್ಯ ನೆರವೇರಿತೆಂದು ಸಮಸ್ತರು ತಿಳಿದಿದ್ದಾರೆ.

ಮೂರನೇದಾಗಿ, ದೇವರು ತನ್ನ ಬರೀ ಉಚಿತವಾದ ಕರುಣೆಯಿಂದ ಈ ಕಾರ್ಯವನ್ನು ಅಂದರೆ ರಕ್ಷಣಾ ಕಾರ್ಯವನ್ನು ನೆರವೇರಿಸಿದ್ದರೂ ಯಾರು ಮಾತ್ರ ಅದನ್ನು ಹೊಂದಿ ಪಾಪಬಂಧನದಿಂದ ಬಿಡುಗಡೆ ಹೊಂದಬಹುದೆಂದು ನೋಡಬೇಕು. ದೇವರು ರಕ್ಷಣೆಯನ್ನು ಸಿದ್ಧಮಾಡಿದ್ದರಿಂದ ಪ್ರತಿ ಒಬ್ಬನು ಏನೊಂದು ಕಷ್ಟವಿಲ್ಲದೆ ಪ್ರಯತ್ನವಿಲ್ಲದೆ ಅದನ್ನು ಹೊಂದಬಹುದು ಎಂಬುವದು ಸತ್ಯವೇದದ ಬೋಧನೆಯಲ್ಲ. ಒಬ್ಬನು ಉಚಿತವಾಗಿ ಔತಣವನ್ನು ಮಾಡಿಸಿದ್ದರೂ ಮತ್ತೊಬ್ಬನು ಆ ಔತಣವನ್ನು ನೋಡಿದ ಮಾತ್ರಕ್ಕೆ ಅವನಿಗೆ ತೃಪ್ತಿಯಾಗುವದಿಲ್ಲ, ಅವರು ಉಣ್ಣಬೇಕಾಗಿದೆ. ಒಬ್ಬ ರೋಗಿಷ್ಠನಿಗೆ, ಅವನಿಗಿರುವ ರುಜಾರ್ಥಿಗೆ ತಕ್ಕ ಔಷಧವು ತಯಾರಾಗಿದ್ದರೂ, ರೋಗಿ ಅದನ್ನು ಸೇವನೆಮಾಡದೆಹೋದರೆ ಪ್ರಯೋಜನವೇನು? ಅದರಂತೆ ದೇವರು ಎಲ್ಲರಿಗೂ ಪಾಪಪರಿಹಾರದ ಮಾರ್ಗವನ್ನು ತೆರೆದಿದ್ದರೂ, ಆತನು ಪ್ರತಿ ಒಬ್ಬರನ್ನು ಬಲವಂತದಿಂದ ಅದರಲ್ಲಿ ಸೇರಿಸುವದಿಲ್ಲ. ಮತ್ತು ಪಾಪಿ ತನಗೆ ರಕ್ಷಣೆ ಮಾರ್ಗ ಆಗಿದೆ ಎಂದು ತಿಳುಕೊಳ್ಳುವದರಿಂದಲೂ ಫಲವಿಲ್ಲ. ಇದನ್ನು ಹೊಂದಿಕೊಂಡು ರಕ್ಷಣೆ ಹೊಂದುವದಕ್ಕಾಗಿ ಏನುಮಾಡಬೇಕೆಂಬುದೇ ವಿಶೇಷ ಸಂಗತಿಯಾಗಿದೆ. ಇದಕ್ಕೆ ದೇವರು ಪ್ರತಿಯೊಬ್ಬನಿಗೂ ಅಪ್ಪಣೆಕೊಡಿಸಿರುವದೇನಂದರೆ—ಮಾನಸಾಂತರಪಟ್ಟು ಯೇಸುಸ್ವಾಮಿಯಲ್ಲಿ ನಂಬಿಕೆ ಇಡು ಎಂಬುವದೇ. ಮಾನಸಾಂತರವಂದರೆ ಒಬ್ಬನು ತನ್ನ ದುರಾಚಾರತನವನ್ನು ಯೋಚಿಸಿ ತನ್ನ ಪಾಪಕ್ಕಾಗಿ ನಿಜವಾದ ಪಶ್ಚಾತ್ತಾಪಪಟ್ಟು ಕಣ್ಣೀರ, ಸುರಿಸಿ ಪಾಪ ವಿಸರ್ಜನೆ ಮಾಡಿ ದೇವರಿಗೆ ಮೆಚ್ಚಿಕೆಯಾಗಿ ಬದುಕುವದೇ ಆಗಿದೆ. ಮಾನಸಾಂತರ ಎಂಬುವದು ಮನುಷ್ಯನು ನೆರವೇರಿಸತಕ್ಕ ಅವನ ಹಂಗಾಗಿದೆಯೇ ಹೊರ್ತು ಇದು ಯಾವ ವಿಧದಲ್ಲಿ ಪುಣ್ಯಕಾರ್ಯವಾಗಿರುವದಿಲ್ಲ. ನಾನು ಮಾನಸಾಂತರ ಪಟ್ಟದ್ದರಿಂದಲೇ ಇದು ನನಗೆ ಲಭಿಸಿತು ಎಂಬ ಮಾತು ಇಲ್ಲ. ರೋಗಿಯು, ತನ್ನ ರೋಗಕ್ಕೆ ಮದ್ದು ತಿನ್ನುವದು ಅವನ ಹಂಗೇ ಹೊರ್ತು ಅದನು ಮಾಡುವ ಪುಣ್ಯಕಾರ್ಯವಲ್ಲ. ಸಮಸ್ತ ಮೇಲುಗಳನ್ನು ದೇವರು ಉಚಿತವಾಗಿ ನಮಗೆ ದಯಪಾಲಿಸುತ್ತಾನೆ.

ಹಿಂದು ಜನರಲ್ಲಿ ಮಾನಸಾಂತರ ಎಂಬದರ ವಿಚಾರವನ್ನೆ ಅರಿಯದೇ ಇದ್ದಾರೆ. ಎಷ್ಟೋ ಜನರು, ತಾವು ಪಾಪಿಷ್ಠರಾಗಿದ್ದೇವೆಂದು ತಿಳಿದರೂ ಅದಕ್ಕೆ ತಕ್ಕ ಕಾರ್ಯವನ್ನು ಮಾಡದೆ ಇದ್ದಾರೆ. ಅನೇಕ ಹುಡುಗಾಟದಂತಿರುವ ಕೆಲಸಗಳನ್ನು ಉತ್ಸವಗಳಲ್ಲಿಯೂ ಜಾತ್ರೆ ಪರಿಷೆಗಳಲ್ಲಿಯೂ ಇತರ ಸಮಯಗಳಲ್ಲಿಯೂ ಮಾಡಿದ ಮೇಲೆ ನನ್ನ ಪಾಪ ಹೋಯಿತೆಂದು ಹೇಳುತ್ತಾರೆ. ಆದರೆ ತಿರಿಗಿ ಅದೇ ದಿನದಿಂದ ತಿರಿಗಿ ಯಥಾಪ್ರಕಾರ ಪಾಪಮಾಡುತ್ತಲೇ ಬರುತ್ತಾರೆ. ಸಾವಿರನಾಲು "ಪಾಪೋಹಂ ಪಾಪಕರ್ಮಾಹ ಪಾಪಾತ್ಮಾ ಪಾಪಸಂಭವಃ" ಎಂದು ಹೇಳಿದರೂ, ಸುಳ್ಳು, ಲಂಚ, ಮೋಸ, ಹಾದರತನ, ಎಂಬುವದು ತಪ್ಪಲೇ ಇಲ್ಲ. ಯಾಕೆ? ಯಾಕಂದರೆ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಜನರು ತಿಳಿಯದೆ ಇರುವದರಿಂದಲೇ. ನಿಜವಾಗಿ ಮಾನಸಾಂತರಪಟ್ಟು, ಭಕ್ತ ತಿರಿಗಿ ಪಾಪಕ್ಕೆ ಸೇರುವದಿಲ್ಲ. ಯಾಕಂದರೆ ನಿಜವಾದ ಮಾನಸಾಂತರವು ಆತ್ಮೀಯವಾದ ಪುನರ್ಜನ್ಮಕ್ಕೆ ಅವನನ್ನು ಎಳೆದು ತಿರಿಗಿ ಪಾಪಮಾಡಗೊಡದಂತ ಅವನನ್ನು ಅಡ್ಡಿಮಾಡಿಸುತ್ತದೆ. ಪಾಪಪರಿಹಾರಕ್ಕೆ ನಿಜವಾದ ಮಾನಸಾಂತರವು ರಕ್ಷಕನಲ್ಲಿಡುವ ಭರವಸವು ತಕ್ಕ ಆಧಾರವಾಗಿದೆ. ಮನುಷ್ಯನು ಪೂರ್ಣವಾಗಿ ಬದಲಾಗಬೇಕು. ಜಗದ್ರಕ್ಷಕನು ಈ ಲೋಕದಲ್ಲಿದ್ದಾಗ್ಯೆ ಒಂದು ದಿನ ಒಬ್ಬ ಮಹಾ ಬಸ್ತ್ರಿಯನ್ನು ನೋಡಿ "ತಿರಿಗಿ ಹುಟ್ಟಬೇಕು. ಇಲ್ಲವಾದರೆ ಪರಲೋಕವು ಸಿಕ್ಕುವದಿಲ್ಲ" ಎಂದು ಹೇಳಿದ ಕೂಡಲೆ ಈ ಮಹಾ ಪಂಡಿತನು ಈ ಸಂಗತಿ ಕೇಳಿ ತಿರಿಗಿ ಹುಟ್ಟುವದು ಹ್ಯಾಗೆ? ನೂತನ ಜನ್ಮವಂದರೇನು? ದ್ವಿಜನಾಗುವದು ಹ್ಯಾಗೆ? ಎಂದು ಕೇಳಿದನು. ಆಗ ಸ್ವಾಮಿಯು ಸತ್ಯವನ್ನು ಆವನಿಗೆ ವಿವರಿಸಿ ಪಾಪಿಯು ಪರಿಶುದ್ಧನಾಗಬೇಕಾದರೆ ದೀಕ್ಷಾಸ್ನಾನದಿಂದಲೂ, ದೇವರ ಆತ್ಮದಿಂದಲೂ ಹುಟ್ಟಬೇಕೆಂದೂ ಅದರಿಂದಲೇ ನಿಜವಾದ ಪರಿಹಾರವು ಸಿಕ್ಕುತ್ತದೆಂದೂ ಹೀಗೆ ಹುಟ್ಟಿದವನೇ ನಿಜವಾದ ಭಕ್ತನೆಂದೂ ತಿಳಿಸಿದನು. ಈಗ ಸಂಕ್ಷೇಪವಾಗಿ ವಿವರಿಸಿದ ಈ ಪ್ರಾಮುಖ್ಯವಾದ ಬೋಧನೆಯನ್ನು ವಾಚಕರು ಆಲೋಚಿಸಿ, ಪಾಪಪರಿಹಾರಕ್ಕೆ ನಿಜವಾದ ಮಾನಸಾಂತರವೂ ದೇವರಲ್ಲಿ ನಂಬಿಕೆಯೂ ಎಷ್ಟು ಅವಶ್ಯವೆಂತಲೂ, ಹೊರಗಿನ ಮತಸ್ಥರು ಪಾಪವಿಸರ್ಜನೆ ವಿಷಯದಲ್ಲಿಯೂ, ಪಾಪಪರಿಹಾರವಾಯಿತೆಂಬ ಅಭಿಪ್ರಾಯದಲ್ಲಿಯೂ ಹ್ಯಾಗೆ ಮೋಸಹೋಗುತ್ತಾರೆಂದು ತಿಳಿಯುವವರಾಗಲಿ!

---

## ಒಳದೇಶದ ವೃತ್ತಾಂತಗಳು.

ಶ್ರೀಮತ್ ಮಹಾರಾಜರವರು ಪರಿವಾರಸಹಿತ ನೀಲಗಿರಿಯಿಂದ ಈ ವಾರದಲ್ಲಿ ರಾಜಧಾನಿಗೆ ದಯಮಾಡುವವರಾಗಿದ್ದಾರೆ.

❖❖❖❖

ಚಾಮರಾಜನಗರದ ತಾಲ್ಲೂಕಿನಲ್ಲಿ ಕಳೆದ ವಾರ ಒಂದು ದರೋಡೆ ಕಳ್ಳತನ ನಡೆದಿರುವದು. ಪೋಲೀಸಿನವರು ನಾಲ್ಕಾರು ಮಂದಿಯನ್ನು ಹಿಡಿದು ತನಿಖೆ ಮಾಡುತ್ತಿದ್ದಾರೆ

❖❖❖❖

ಕಳೆದ ೪ನೇ ತಾರೀಖಿನ ದಿನ ಕೋಲಾರ್ ಚಿನ್ನದಗಣಿಗಳಿಗೆ ಸೇರಿದ ಛಾಂಫಿಯರ್ ರೀಫ್‌ನಲ್ಲಿ ಒಂದು ಅನಾಹುತವಾಯಿತು. ಮೂರು ಮಂದಿ ಪ್ರಾಣ ಕಳಕೊಂಡರು; ಇನ್ನು ಕೆಲವರಿಗೆ ಪೂರಾ ಪೆಟ್ಟು ಆಗಿದೆ

❖❖❖❖

ಮೈಸೂರು ಸಂಸ್ಥಾನದ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾದ ಮ॥ ಸಿ. ಮಾದಯ್ಯನವರು ಈ ಡಿಸ್ಟ್ರಿಕ್ಟಿನ ಪೋಲೀಸನ್ನು ಇನ್ಸ್‌ಪೆಕ್ಷನ್ ಮಾಡಿಕೊಂಡು ಹೋಗುವದಕ್ಕೆ ರಾಜಧಾನಿಗೆ ನೆನ್ನೆ ದಯಮಾಡುವವರಾಗಿದ್ದರು

❖❖❖❖

ಮೂಡಿಗೆರೆ ತಾಲ್ಲೂಕು ಜಾವಳಿ ಎಸ್ಟೇಟಿನ ಮ॥ ಕಿಂಗ್ ಯವರಿಗೆ ಗೋಣಿಬೀಡಿನಲ್ಲಿರುವ ಬಂಗಲೆಯನ್ನು ೩೦೦ ರೂಪಾಯಿಗೆ ಕೊಂಡುಕೊಳ್ಳಬೇಕೆಂತಲೂ, ಅದನ್ನು ಮುಸಾಫರ ಬಂಗಲೆಮಾಡಿ, ಸದ್ಯಕ್ಕೆ ಪಟೇಲನ ಜವಾಬ್ದಾರಿಯಲ್ಲಿ ಬಿಡಬೇಕೆಂತಲೂ ತೀರ್ಮಾನವಾಗಿದೆ

❖❖❖❖

ಮಡಿಕೇರಿ ತಾಲ್ಲೂಕು ಹಾರೇರಿನಾಡು ಕಡಂದಾಳು ಗ್ರಾಮದಲ್ಲಿರುವ ಬಡಿಗಿ ತಿಮ್ಮನ ಹೆಂಡತಿ ಮುದ್ದಿ ಎಂಬುವಳು ಕಳೆದ ೩೦ನೇ ತಾರೀಖಿನ ದಿನ ಮೂರು ಮಕ್ಕಳನ್ನು ಹೆತ್ತಿರುತ್ತಾಳೆ. ಮಕ್ಕಳೂ ತಾಯಿಯೂ ಸೌಖ್ಯವಾಗಿರುತ್ತಾರೆ ಎಂಬವಾಗಿ ಒಬ್ಬ ಬಾತ್ಮಿದಾರರು ಕಳೆದ ೨೨ನೇ ತಾರೀಖಿನಲ್ಲಿ ಬರೆದಿರುವರು.

❖❖❖❖

ಮಾಗಡಿ ತಾಲ್ಲೂಕು ತಿರುಮಲೆ ಶ್ರೀ ರಂಗನಾಥಸ್ವಾಮಿ, ಬಿಸಿಲು ಮಾರಮ್ಮ. ಸಾವಂದುರ್ಗದ ನರಸಿಂಹಸ್ವಾಮಿ, ವೀರಭದ್ರ ದೇವರು, ಈ ದೇವರುಗಳಿಗೆ ಭಕ್ತಾದಿಗಳಿಂದ ಬಂದಿರುವ ಉಪಯೋಗವಾದ ಸುಮಾರು ೪೨೦ ರೂ. ಬಾಳುವ ನಗಗಳನ್ನು ಸರ್ಕಾರದವರು ಮಾಗಡಿ ಕಸಬಾ ಚಾವಡಿಯಲ್ಲಿ ಜೂನ್ ೧೮ನೇ ತಾರೀಖು ಲಿಲಾಂಮು ಹರಾಜು ಹಾಕುತ್ತಾರೆ.

❖❖❖❖

ಬೆಂಗಳೂರು ತಾಲ್ಲೂಕು ಕಾಯಂಗುತ್ತಾ ಗೋವಿಂದಪುರ ಗ್ರಾಮದ ಇನಾಂದಾರರಾದ ಮ॥ ಜೆ. ಪಾಟ್ರಿಡ್ಜ್ ಯವರು ಆ ಗ್ರಾಮದಲ್ಲಿ ಹಿಪ್ಪನೇರಲೇ ಗಿಡಗಳ ವ್ಯವಸಾಯ ಮಾಡುವದಕ್ಕೂ ರೇಷ್ಮೆ ತಯಾರಿಗೆ ಕೆಲವು ಬಂಗಲೆಗಳನ್ನು ಕಟ್ಟಿಕೊಳ್ಳುವದಕ್ಕೂ ಸರ್ಕಾರದಿಂದ ಈ ಮೊದಲೇ ಸಾಲ ಪಡೆದುಕೊಂಡಿರುತ್ತಾರಷ್ಟೆ. ಈಚಿಗೆ ಮತ್ತೆ ಅದೇ ಉದ್ದೇಶಕ್ಕೆ ಅವರಿಗೆ ೪,೦೦೦ ರೂ. ಸಾಲವನ್ನು ಕೊಟ್ಟಿರುವರು.

❖❖❖❖

ಮೂಡಿಗೆರೆ ತಾಲ್ಲೂಕು ಕಳಸದ ಆಸ್ಪತ್ರೆ ಅಸಿಸ್ಟೆಂಟರು ಆಗಾಗ್ಯೆ ಬಾಳೆಹೊಳೆಗೆ ಬಂದು ತಾಳಗೋಡು, ಕೋಟಿದೂರು ಎಂಬೀ ಗ್ರಾಮಗಳ ಜನರಿಗೆ ಔಷಧಗಳನ್ನು ಕೊಡುವಂತೆ ಮಾಡಿಕೊಡಬೇಕೆಂದು ಜನರು ಅರ್ಜಿ ಬರೆದುಕೊಂಡಿದ್ದರು. ಅಲ್ಲಿಗೆ ಆಸ್ಪತ್ರೆ ಅಸಿಸ್ಟೆಂಟರನ್ನು ಕಳುಹಿಸುವದು ಅನುಕೂಲಪಡುವದಿಲ್ಲವೆಂಸಲೂ, ಬಾಳೇ ಹೊಳೆಯ ಪಟೇಲನ ವಶಕ್ಕೆ ಜ್ವರ, ಆಮಶಂಕೆ, ಭೇದಿ, ಇವುಗಳಿಗೆ ಕೊಡುವಂಥಾ ಚೂರ್ಣ ಮಾತ್ರೆಗಳನ್ನು ಕಳುಹಿಸತಕ್ಕದ್ದೆಂತಲೂ, ಪಟೇಲನು ಆ ಔಷಧಗಳನ್ನು ರೋಗಿಗಳಿಗೆ ಧರ್ಮಕ್ಕೆ ಕೊಡುತ್ತಾ ಬರಬೇಕೆಂತಲೂ ಗೊತ್ತುಮಾಡಿದಾರೆ.

❖❖❖❖

ತಾಡಪತ್ರಿಯಿಂದ ಒಬ್ಬ ಜವಳಿ ವ್ಯಾಪಾರಸ್ಥನು ಉರಿಗಾಂ ಗ್ರಾಮಕ್ಕೆ ಬಂದು. ತನ್ನಲ್ಲಿದ್ದ ಸುಮಾರು ೩೪ ರೂಪಾಯಿನ ಜವಳಿಯನ್ನು ಬಹಳ ಸಂತೋಷದಿಂದ ಕೆಲವು ಗಣಿ ಕೂಲಿಯವರಿಗೆ ಬಿಕರಿಮಾಡಿ ಅವರಿಂದ ಅಷ್ಟು ಚಿನ್ನವನ್ನು ತೆಗೆದುಕೊಂಡನು. ಅದನ್ನು ಬಿಕರಿ ಮಾಡಿದರೆ ೨೫೦ ರೂಪಾಯಿ ಬರುವದೆಂದು ಯೋಚಿಸಿದ್ದನು ಆದರೆ ಮನೆಗೆ ಹೋಗಿ ನೋಡುವಲ್ಲಿ ಅದು ಚಿನ್ನವಲ್ಲ. ತಾಂಬ್ರವೆಂದು ಗೊತ್ತಾಯಿತು. ಕೂಡಲೇ ಅವನು ಬಿಕ್ಕಿಬಿಕ್ಕಿ ಅಳುವದಕ್ಕಾರಂಭಿಸಿದನು. ಪೋಲೀಸಿನವರು ಬಂದು ವಿಚಾರಿಸಿ, ಆ ತಾಂಬ್ರದ ಗಟ್ಟಿಯನ್ನು ತೆಗೆದುಕೊಂಡು ಮೋಸಗಾರರನ್ನು ತಲಾಷು ಮಾಡುತ್ತಿದ್ದಾರೆ.

❖❖❖❖

ಚಕ್ರವರ್ತಿಯವರ ಜನ್ಮದಿನದ ಜ್ಞಾಪಕಾರ್ಥವಾಗಿ ಇದೇ ಮೇ ತಿಂಗಳ ೨೪ನೇ ತಾರೀಖು ರವಿವಾರ ಹಿಂದೂಸ್ಥಾನದಲ್ಲೆಲ್ಲಾ ರಜಾ ಕೊಡಲ್ಪಡುತ್ತೆಂಬದಾಗಿ ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಈಚಿಗೆ ಮಹಾರಾಜಾ ಚಕ್ರವರ್ತಿಯವರು ಹುಕುಂ ಕೊಟ್ಟ ಪ್ರಕಾರ ಆ ದಿನ ರಜಾ ಕೊಡುವದಿಲ್ಲವೆಂತಲೂ ಯಾವ ದಿನ ಆ ಉತ್ಸವ ನಡಸಬೇಕೆಂದು ಗೊತ್ತುಮಾಡುವರೋ ಮುಂದೆ ತಿಳಿಸಲಾಗುವದೆಂತಲೂ ಇಂಡಿಯಾ ಗವರ್ನಮೆಂಟಿನವರು ಪ್ರಕಟಿಸಿರುತ್ತಾರೆ. ಈ ಹುಟ್ಟಿದ ಹಬ್ಬದ ಜ್ಞಾಪಕಾರ್ಥವಾಗಿ ವೈಸ್‌ರಾಯಿಯವರು ಯೂರೋಪ್ಯರಿಗೆ ನಾಡಿದ್ದು ಸಿಮ್ಲಾಪಟ್ಟಣದಲ್ಲಿ ಔತಣ ಮಾಡಬೇಕೆಂದು ಗೊತ್ತುಮಾಡಿ, ಆಹ್ವಾನಪತ್ರಿಕೆಗಳನ್ನು ಸಹಾ ಎಲ್ಲಾ ದೊಡ್ಡಮನುಷ್ಯರಿಗೂ ಕಳುಹಿಸಿದ್ದರು. ಈಗ ಈ ಏರ್ಪಾಡು ನಿಂತುಹೋಯಿತು

❖❖❖❖

ಚಿಕ್ಕಮಗಳೂರು, ಸಕಲೇಶಪುರಗಳಲ್ಲಿರುವ ವ್ಯವಸಾಯದ ಬ್ಯಾಂಕುಗಳಲ್ಲಿ ಮೂಲಧನವಿಲ್ಲದೆ ಕ್ಷೀಣಗತಿಗೆ ಬರುತ್ತಿದ್ದವು. ಈ ಬ್ಯಾಂಕುಗಳಿಂದ ಸಾಲ ಪಡಕೊಂಡ ಎಸ್ಟೇಟುಗಳೂ ಒಳ್ಳೇ ಸ್ಥಿತಿಯಲ್ಲಿರಲಿಲ್ಲ. ಬೆಳೆಯ ಮೇಲೆ ಸಾಲ ತೆಗೆದುಕೊಳ್ಳುವಂತೆ ಮೆಂಬರುಗಳಿಗೆ ಸರ್ಕಾರದವರು ಅವಕಾಶ ಕೊಟ್ಟರು. ಅದಕೆ ಅನುಕೂಲವಾಗಿ ಯಾರೂ ಬೇಕಾದಷ್ಟು ಹಣ ಕೊಡಲಿಲ್ಲ. ಬೆಳೆಗಳು ಕೆಟ್ಟುಹೋಗುತ್ತಾ ಬಂದದ್ದನ್ನು ನೋಡಿ, ಸರ್ಕಾರದವರು ಕಡೂರು ಬ್ಯಾಂಕಿಗೆ ೭೦,೦೦೦ ರೂಪಾಯಿಗಳನ್ನೂ, ಹಾಸನದ ಬ್ಯಾಂಕಿಗೆ ೩೦,೦೦೦ ರೂಪಾಯಿಗಳನ್ನು ಇನ್ನೂ ಎರಡು ವರುಷಗಳ ವರಗೆ ಪ್ರತಿ ವರುಷವೂ ಸಾಲ ಕೊಡುತ್ತೇವೆಂದು ಒಪ್ಪಿರುತ್ತಾರೆ ಮತ್ತು ಈ ಮೇಲ್ಕಂಡ ತೊಂದರೆಗಳನ್ನೆಲ್ಲಾ ನೋಡಿ, ಸರಿಯಾಗಿ ಮೇಲ್ವಿಚಾರಣೆ ನೋಡಿಕೊಳ್ಳಬೇಕೆಂದು ಸರ್ಕಾರದವರು ಮ॥ ಪಿಲ್ಕಿಂಗ್‌ಟನ್ ಯವರನ್ನು ಗವರ್ನಮೆಂಟ್ ಇನ್ಸ್‌ಪೆಕ್ಟರಾಗಿ ನೇಮಕಮಾಡಬೇಕಾಗಿ ಬಂತು.

---

## ಮೈಸೂರು ಗೆಜೆಟ್ ಸಂಗ್ರಹ.

ಅರಸೀಕೆರೆ ತಾಲ್ಲೂಕು ಅಮಲ್ದಾರ್ ಮ॥ ಜಿ. ಆರ್. ಶ್ರೀನಿವಾಸಯ್ಯಂಗಾರ್ರಿಗೆ ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿರಸ್ತೇದಾರರು ಮತ್ತೊಂದು ಹುಕುಂ ಕೊಡಲ್ಪಡುವತನಕ ತಾಲ್ಲೂಕ್ ಟ್ರಾನ್ಸಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಚಿಂತಾಮಣಿ ತಾಲ್ಲೂಕು ಅಮಲ್ದಾರ್ ಮ॥ ಟಿ. ರಾಮಸ್ವಾಮಯ್ಯನವರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿರಸ್ತೇದಾರ್ ಸೂರ್ಯನಾರಾಣಪ್ಪನವರು ಮತ್ತೊಂದು ಹುಕುಂ ಕೊಡಲ್ಪಡುವತನಕ ತಾಲ್ಲೂಕ್ ಛಾರ್ಜನ್ನು ವಹಿಸಿ, ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

ಅಸಿಸ್ಟೆಂಟ್ ಪ್ರೊಫೆಸರ್ ಮ॥ ಎಂ. ಪಿಷ್ಟುಪಂತ್ ಬಾದಾಮಿಯವರಿಗೆ ೯ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪಬ್ಲಿಕ್ ವರ್ಕ್ಸ್ ಸೂಪರಿಂಟೆಂಡಿಂಗ್ ಇಂಜನಿಯರ್ ಕ್ಯಾಪ್ಟನ್ ಎ. ಜೆ. ಡಿಲಾಬಿನಿಯರ್ ಯವರಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

# ಹೊಸಪುಸ್ತಕ! ಹೊಸಪುಸ್ತಕ!!

ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ.

ಕಳೆದ ವರ್ಷ ಲನ್‌ಡನ್ ನಗರದಲ್ಲಿ ನಡೆದ ಈ ಮಹೋತ್ಸವವನ್ನು ವಿವರಿಸಿರುವ ಈ ಪುಸ್ತಕವು ನೇತ್ರಾನಂದಕರವಾದ ಅನೇಕ ಚಿತ್ರಗಳಿಂದ ಶೋಭಿಸುತ್ತಿರುವದು. ಎಲ್ಲರೂ ಅವಶ್ಯವಾಗಿ ತರಿಸಿಕೊಂಡು ಓದತಕ್ಕ ಪುಸ್ತಕ. ಕ್ರಯ ೬ ಆಣೆ. ಹಾಸಲು ಪ್ರತ್ಯೇಕ.

ವಿಳಾಸ:—ಮ್ಯಾನೇಜರ್, ಬುಕ್ ಡಿಪ್ಪೋ, ಮೈಸೂರು.

# ದೇವಾಂಗ ವಂಶಸ್ಥರಿಗೆನ ಬೇಕಾದ್ದು

8

ಸ್ವಲ್ಪ ಪ್ರತಿಗಳಿವೆ. ಜಾಗ್ರತೆಪಟ್ಟರೆ ಸಿಕ್ಕುತ್ತೆ. ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು. ಅರ್ಥಸಹಿತ ದೇವಾಂಗಮತಪ್ರಕಾಶಿಕೆ. ಸಪ್ತಾವತಾರಕ್ಕೆ ಸುಂದರವಾದ ೧೩ ತಸ್ವೀರಿಧೆ. ಸ್ವಮತತತ್ವವಿಚಾರದ ಪ್ರಕಾಶದರ್ಪಣವೂ, ಪ್ರತ್ಯಕ್ಷ ನೋಡಿ ಸಂತೋಷಪಡಿ.

೧೩ ತಸ್ವೀರಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೩—೮.

ತಸ್ವೀರಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೨—೮.

ವೇದ ಉಪನಿಷತ್ತು ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ. ೨—೮.

ತಕ್ಷಣವೇ ಮಣಿಆರ್ಡರಿಗೂ ವಿ. ಪಿ. ಯೂ ಕಳುಹಿಸುತ್ತೇವೆ. ಮೈಸೂರು ಜವಳಿ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ, ಬ್ರಹ್ಮಶ್ರೀ ಯಜಮಾನ ಶಂಕರಯ್ಯನವರಲ್ಲಿ ಈ ಗ್ರಂಥ ಸಿಕ್ಕುತ್ತೆ.

## ಸರಸ್ವತೀಕರ ಕಸ್ತೂರಿ ಮಾತ್ರೆಯು.

ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥಾವರಿಗೆ ಅತ್ಯಂತ ಉಪಯುಕ್ತವಾದದ್ದು. ಈ ಮಾತ್ರೆ ೧—೨ ತಾಂಬೂಲದ ಸಂಗಡ ಸೇವಿಸುವದರಿಂದ ಬಾಯಿಯ ಸುವಾಸನೆ, ಬಾಯಿಯ ದುರ್ಗಂಧ, ಅಜೀರ್ಣ, ಉಷ್ಣರೋಗ, ಬಾಯಿಯ ಜೊಲ್ಲು, ಉಗ್ಗಿಸುತ್ತಾ ಮಾತಾಡುವದು, ವಾಯು, ಶೀತ. ಪಿತ್ಥ, ಮಲಬದ್ಧ, ದಂತದೋಷ, ಬಾಯಿಹುಣ್ಣು, ಹಸಿವು, ಜ್ವರ, ಛಳಿ, ನೆಗಡಿ, ತಲೆಬೇನೆ ಇತ್ಯಾದಿ ಅನೇಕ ರೋಗಗಳಿಗೆಲ್ಲಾ ರಾಮಬಾಣದಂತಿರುವದು. ಪೆಂಗಸರ ಗುಪ್ತವಾದ ಅನೇಕ ಜಾಡ್ಯಗಳಿಗೆ ವಜ್ರಾಯುಧದಂತಿರುವದು. ಚಿಕ್ಕ ಮಕ್ಕಳಿರುವ ಮನೆಯಲ್ಲಿ ಈ ಮಾತ್ರೆಯು ಸಂಜೀವನವು. ಈ ಮಾತ್ರೆಯು ನಿಮ್ಮಲ್ಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸ್ವಾಧೀನದಲ್ಲಿದ್ದಂತೆಯೇ. ೨೦೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೫ ಆಣೆ, ೫ ಆಣೆ ಔಷಧವು ೨ ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವು ನಮಗೆ ಬರೆಯುವಹಾಗೆ ಬಲಾತ್ಕಾರಪಡಿಸುವದು.

ಸಿ. ಪಿ. ಅಂಡ್ ಕಂಪೆನಿ, ಬೆಂಗಳೂರು ಸಿಟಿ.

## ಚೇಂಬರ್ಲೀನ್ ಯವರು ಹೊಟ್ಟೆಶೂಳೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

21




ಕೆಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಕೀಲುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ:—"ಕಳ ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಕ್ಷಣವೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ್ನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ—

ಬಿ. ವಿ. ನರಸಿಂಹಲು ಚೆಟ್ಟಿ,
ನಂ. ೨, ತಂಬೂನಾಯಕರ ಬೀದಿ,
ಮದರಾಸ್.


## ವೃತ್ತಾಂತಪತ್ರಿಕೆ.

—:೦:—

ಸನ್ ೧೯೦೩ ನೇ ಇಸವಿ ಮೇ ತಾ॥ ೨೮ ನೇ ಗುರುವಾರ

## ಬರೋಡಾ ಸಂಸ್ಥಾನದ ಹೊಸ ಕಾನೂನು.

ಬರೋಡಾ ಸಂಸ್ಥಾನದಲ್ಲಿ ಬಾಲ್ಯವಿವಾಹವನ್ನು ನಿರೋಧಿಸುವದಕ್ಕೆ ಒಂದು ಹೊಸ ಕಾನೂನು ಮಾಡುವದರಲ್ಲಿದ್ದಾರೆ. ಈ ಕಾನೂನಿನ ಉದ್ದೇಶವನ್ನೂ ಅದಕ್ಕೆ ಕಾರಣಗಳನ್ನೂ ಅದರ ಕಲಮುಗಳನ್ನೂ ಈ ಪತ್ರಿಕೆಯ ಇನ್ನೊಂದು ಭಾಗದಲ್ಲಿ ಪ್ರಕಟಿಸಿರುತ್ತೇವೆ. ಈ ಭಾಗದಲ್ಲಿ ಗಾಯಕವಾಡ್ ಗೌವರ್ನಮೆಂಟಿನವರ ಉದ್ದೇಶವು ಸಹಜವಾದದ್ದೆಂದು ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ. ವಿವಾಹವಾಗತಕ್ಕ ವಧುವರರು ವಿವಾಹ ಸಂಬಂಧದ ಗೌರವವನ್ನೂ ಗಂಡಹೆಂಡರ ಕರ್ತವ್ಯಾಂಶಗಳನ್ನೂ ತಿಳಿದುಕೊಳ್ಳುವಷ್ಟು ವಯೋಗುಣ ಸಂಪನ್ನರಾಗಿರಬೇಕೆಂಬುವದೇ ಗೌವರ್ನಮೆಂಟಿನವರ ಮುಖ್ಯ ಉದ್ದೇಶ. ವೇದಗಳ ಕಾಲದಲ್ಲಿ ನಡೆಯುತ್ತಿದ್ದ ವಿವಾಹಗಳು ಈ ಉದ್ದೇಶಕ್ಕೆ ಅನುಸಾರವಾಗಿಯೇ ಇದ್ದವೆಂದು ಅವರು ಹೇಳುತ್ತಾರೆ. ಆಗ್ಯೆ ವಿವಾಹಕಾಲದಲ್ಲಿ ವಧುವರರು ಹೇಳುವ ಮಂತ್ರಗಳನ್ನು ಅವರು ಚನ್ನಾಗಿ ಮಂದಟ್ಟುಮಾಡಿಕೊಳ್ಳುವ ಸ್ಥಿತಿಯಲ್ಲಿದ್ದರು. ಈ ಕಾನೂನು ಬಾಲ್ಯವಿವಾಹದಿಂದುಂಟಾಗುವ ಎರಡು ಮುಖ್ಯವಾದ ಕೆಡಕುಗಳನ್ನು ಹೋಗಲಾಡಿಸಬೇಕೆಂದು ಉದ್ದೇಶಪಡುವದು. ಅವು ಯಾವವಂದರೆ:—ಚಿಕ್ಕಂದಿನಲ್ಲೇ ಮದುವೆಯಾಗುವದರಿಂದ ಬಾಲವಿತಂತುಗಳಿಗುಂಟಾಗುವ ಹಿಂಸೆಗಳೆಲ್ಲಾ ನಿರ್ಮೂಲವಾಗುವವು. ೧೯೦೧ನೇ ಇಸವಿಯ ಸೆನ್‌ಸಸ್ ಲೆಕ್ಕಗಳನ್ನು ತೆಗೆದು ನೋಡಿದರೆ ಬಂಗಾಳಾ ಒಂದರಲ್ಲೇ ೧೦ ವಯಸ್ಸಿನೊಳಗಿರುವ ವಿಧವೆಯರು ೪೦,೨೦೦ ಮಂದಿ ಎಂಬುವದು ಗೊತ್ತಾಗುತ್ತೆ. ಮದುವೆಯಾಗತಕ್ಕವರ ವಯಸ್ಸನ್ನು ಹೆಚ್ಚು ಮಾಡಿದರೆ ಬಾಲವಿತಂತುಗಳ ಸಂಖ್ಯೆ ಕಡಿಮೆಯಾದೀತೆನ್ನುವದಕ್ಕೆ ಸಂಶಯವಿಲ್ಲ. ತಂದೆತಾಯಿಗಳಿಗೂ ಅವರ ಬಾಲವಿತಂತುಗಳಿಗೂ ಉಂಟಾಗುವ ದುಃಖಗಳೂ ಕಷ್ಟಪರಂಪರೆಗಳೂ ನಿರ್ಮೂಲವಾಗುವವು. ಇದಲ್ಲದೆ ಚಿಕ್ಕಂದಿನಲ್ಲೇ ಹುಡುಗರು ಗಂಡಹೆಂಡರಾಗುವದರಿಂದ ಅವರ ಶರೀರ ಸ್ಥಿತಿಯು ಬಹಳ ಕೆಟ್ಟು ಹೋಗುತ್ತದೆ. ಇದೂ ತಪ್ಪಿಹೋದೀತು. ಚಿಕ್ಕ ವಯಸ್ಸಿನವರು ಮಾತಾಪಿತೃಗಳ ಸ್ಥಾನವನ್ನು ಪಡೆಯುವದಾದರೆ ಅವರ ಶರೀರಧರ್ಮವು ಕೆಟ್ಟುಹೋದೀತು; ಅವರ ಮಕ್ಕಳು ರೋಗಿಷ್ಟರೂ ಬಲಹೀನರೂ ಆದಾರು. ಆದಕಾರಣ ಬಾಲ್ಯವಿವಾಹ ನಿಂತರೆ ಈ ಕೇಡುಗಳೆಲ್ಲಾ ಪರಿಹರವಾಗುವವು.

ಈ ಕಾನೂನಿನ ಉದ್ದೇಶಗಳನ್ನೇನೋ ನಾವು ಒಪ್ಪಿಕೊಳ್ಳುತ್ತೇವೆ; ಆದರೆ ಆ ಉದ್ದೇಶಗಳು ಕೈಗೂಡುವವೇ ಎಂಬ ಅನುಮಾನವು ನಮ್ಮನ್ನು ಬಾಧಿಸುವದು. ವಿವಾಹ ಕರ್ಮದ ವಿಷಯದಲ್ಲಿ ಜನರಿಗೆ ಘನತರವಾದ ಮತ್ತು ನೂತನವಾದ ಅಭಿಪ್ರಾಯಗಳನ್ನು ಕಲಿಸುವದು ಗೌವರ್ನಮೆಂಟಿನವರ ಕೆಲಸವಲ್ಲ. ಈ ಕಾರ್ಯವು ಜನರ ಮುಖಂಡರಿಗೂ ಗುರುಗಳಿಗೂ ಸೇರಿದ್ದಾಗಿರುತ್ತದೆ. ಗುರುಗಳೂ ಜಾತಿಗಳ ಮುಖಂಡರೂ ತಮ್ಮ ತಮ್ಮ ಶಿಷ್ಯವರ್ಗಕ್ಕೆ ಸೇರಿದ ಜನರಿಗೆಲ್ಲಾ ಈ ವಿಷಯದಲ್ಲಿ ಚನ್ನಾಗಿ ವಿವೇಕ ಹೇಳಿಕೊಟ್ಟು, ಜನರನ್ನು ಒಪ್ಪಿಸದೆಹೋದರೆ ಈ ಕಾನೂನು ನಿಷ್ಪ್ರಯೋಜನವಾದೀತೇನೋ ಎಂಬದಾಗಿ ನಾವು ಅನುಮಾನಪಡುವೆವು. ಆಗ್ಯೆ ಅದು ಅಪಹಾಸ್ಯವಾದೀತಲ್ಲವೇ.

ಇದಲ್ಲದೆ ಗಂಡಸಿಗೆ ೧೮ನೇ ವಯಸ್ಸಿಗೆ ಮುಂಚೆಯೂ, ಹುಡುಗಿಗೆ ೧೪ನೇ ವಯಸ್ಸಿಗೆ ಮುಂಚೆಯೂ ವಿವಾಹವಾಗಕೂಡದೆಂದು ಕಾನೂನು ವಿಧಿಸುತ್ತದೆ. ಇದೇ ಕಾನೂನಿನಲ್ಲಿ ಹೇಳಿರುವ ವಿನಾಯತಿಗಳನ್ನು ನೋಡಿದರೆ ಬಾಲ್ಯ ವಿವಾಹಗಳು ಎಂದಿನಂತೆಯೇ ನಡೆಯಲು ಅವಕಾಶವಿದ್ದೇ ಇರುವದು. ಚಿಕ್ಕತನದಲ್ಲಿ ವಿವಾಹ ಮಾಡುವದು ಪದ್ಧತಿಯಾಗಿದೆ ಎಂಬ ದೊಡ್ಡ ಕಾರಣವನ್ನು ಯಾರಾದರೂ ಹೇಳಿ ರುಜುವಾತು ಕೊಟ್ಟರೆ ಅಂಥವರಿಗೆ ಲೇಸನ್‌ಸು ಕೊಡಲೇಬೇಕಾಗುವದು.

ಲೇಸನ್‌ಸು ಪಡೆಯಬೇಕು, ಮ್ಯಾಜಿಸ್ಟ್ರೇಟರ ಮುಂದೆ ಹೋಗಿ ನಿಲ್ಲಬೇಕು. ಮೂರು ಮಂದಿ ಪಂಚಾಯಿತರಿಗೆ ತಮ್ಮ ಸಂಸಾರದ ಕಷ್ಟಸುಖಗಳನ್ನು ಹೇಳಿಕೊಳ್ಳಬೇಕು—ಈ ಮೊದಲಾದ ವಿಧಿಯನ್ನು ಇಟ್ಟಿರುವದರಿಂದ ಬಾಲ್ಯವಿವಾಹಗಳು ಕಡಿಮೆಯಾದರೂ ಆಗಬಹುದು. ಆದರೆ ಈ ಕಾನೂನನ್ನು ಕ್ರಮವಾಗಿ ಜಾರಿಗೆ ತಂದಾಗ ಜನರು—ಸರ್ಕಾರದವರು ನಮ್ಮ ಗೃಹಕೃತ್ಯವಿಚಾರದಲ್ಲಿ ಇಷ್ಟೊಂದು ವಿಶೇಷವಾಗಿ ಪ್ರವೇಶ ಮಾಡುವದು ಯಾಕೆ ಎಂಬದಾಗಿ ಪ್ರತಿಭಟಿಸುವರು. ಒಂದುವೇಳೆ ಕಾನೂನನ್ನು ಅಷ್ಟು ಕ್ರಮವಾಗಿ ಜಾರಿಗೆ ತರದೆಹೋದರೆ ಸರ್ಕಾರದವರ ಮೇಲೆ ಪ್ರಜೆಗಳಲ್ಲಿ ಇರತಕ್ಕ ಭಯಭಕ್ತಿಗಳಿಗೆ ಕುಂದಕ ಉಂಟಾಗುತ್ತದೆ. ಕ್ರಮವಾಗಿ ಜಾರಿಗೆ ತರುವದಕ್ಕಾಗದೇ ಇರುವಂಥಾ ಕಾನೂನುಗಳನ್ನು ಮಾಡುವದು ಯಾವ ಗೌವರ್ನಮೆಂಟಿಗೂ ಒಳ್ಳೇ ಹೆಸರನ್ನು ತರಲಾರದು. ಈಗ ಇರತಕ್ಕ ಒಳ್ಳೇ ಹೆಸರಿಗೂ ಈ ತರದ ಕಾನೂನಿನಿಂದ ಲೋಪ ಬಂದೀತು.

ಸಕಲ ಹಿಂದೂ ಜನರೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿರುವ ದೊಡ್ಡ ವಿಷಯವ್ಯಾವದಂದರೆ:—ಪ್ರತಿ ಮನೆಯವರೂ ತಮ್ಮ ಗೃಹಕೃತ್ಯ ವಿಚಾರವನ್ನು ತಾವೇ ಕ್ರಮಕ್ಕೆ ತಂದಿಟ್ಟುಕೊಳ್ಳಬೇಕಾಗಿದೆ; ಇದು ಮನೆಯವರ ಮೇಲೆ ಬಿದ್ದ ಭಾರ. ಈ ಕಾರ್ಯವು ಸರ್ಕಾರದವರಿಗೆ ಸಾಧ್ಯವಲ್ಲ. ದುಷ್ಟ ಪದ್ಧತಿಗಳು ಪ್ರಜೆಗಳನ್ನು ದುರ್ಬಲರನ್ನಾಗಿಯೂ ನಿರ್ಗತಿಕರನ್ನಾಗಿಯೂ ಮಾಡುತ್ತಿರುವವು. ಇಂಥಾ ದುಷ್ಟ ಪದ್ಧತಿಗಳನ್ನು ಜನರು ತಾವಾಗಿಯೇ ನಿರ್ಮೂಲಮಾಡಿಕೊಳ್ಳಬೇಕಾಗಿದೆ; ಗೌವರ್ನಮೆಂಟಿನವರು ಇದಕ್ಕೆ ಪ್ರವೇಶಿಸುವದು ಸಾಧ್ಯವಲ್ಲ.

## ಕ್ರೈಸ್ತಮತಾಧಾರದ ಬೋಧನಾ ಸಿದ್ಧಾಂತಗಳು.

IV ನೇ ಭಾಗ. ಪಾಪಪರಿಹಾರವು, ಮಾನಸಾಂತರವು, ನಂಬಿಕೆಯು.

ಹಿಂದಿನ ಉಪನ್ಯಾಸದಲ್ಲಿ, ಮನುಷ್ಯನು ದೇವರಿಗೆ ವಿರೋಧವಾಗಿ ಪಾಪಮಾಡಿ ಹ್ಯಾಗೆ ಕೆಟ್ಟುಹೋದನೆಂದೂ, ಮನುಷ್ಯಜಾತಿಯೂ, ಸಂತಾನವೂ ಹ್ಯಾಗೆ ಪಾಪಾಂಧಕಾರದಲ್ಲಿ ಬಿದ್ದು, ದೇವರು ಮನುಷ್ಯನನ್ನು ನಿರ್ಮಾಣಮಾಡಿದ್ದರ ಉದ್ದೇಶಗಳನ್ನು ಹ್ಯಾಗೆ ಕೆಡಿಸಿಬಿಟ್ಟನೆಂದೂ ಓದಿದ್ದೇವೆ. ಇದರಲ್ಲಿ ಕೆಟ್ಟುಹೋಗಿರುವ ಮನುಷ್ಯನು ತಿರಿಗಿ ಉದ್ಧಾರವಾಗುವದಕ್ಕೆ ಮಾರ್ಗವಿದೆಯೊ ಇಲ್ಲವೊ ಎಂಬುವದನ್ನು ನೋಡೋಣ.

ಮನುಷ್ಯನು ಭ್ರಷ್ಟನಾಗಿದ್ದಾನೆಂದು ದೇವರೂ ಮತ್ತು ಕ್ರೈಸ್ತರೂ ಹೇಳುವದೇ ಸಾಲದು. ಆದರೆ ಪ್ರತಿಮನುಷ್ಯನ ಮನಸ್ಸಾಕ್ಷಿಯು ಇದಕ್ಕೆ ಆಧಾರವಾಗಿರುತ್ತದೆ. "ಮಾಡಿದ ಪಾಪಕ್ಕೆ ಮನವೇ ಸಾಕ್ಷಿ, ಓಡಿದ ಭಾವಿಗೆ ಜಲವೇ, ಸಾಕ್ಷಿ" ಎಂಬ ಗಾದೆಗೆ ಸರಿಯಾಗಿ ಪ್ರತಿಮನುಷ್ಯನು ತಾನು ಪಾಪಿ ಎಂಬುದನ್ನು ಸ್ವಭಾವಸಿದ್ಧವಾಗಿ ಒಪ್ಪಿಕೊಳ್ಳುತ್ತಾನೆ. ಎಲ್ಲರೂ ಇದಕ್ಕೆ ಒಪ್ಪಿಕೊಳ್ಳುವದರಿಂದಲು ನಾನಾತರದ ಬಲಿ, ಅರ್ಪಣೆ, ಜಪತಪ, ಶರೀರದಂಡನೆ, ಉತ್ಸವ ಮೊದಲಾದವುಗಳು ಇವನ್ನು ರುಜುವಾತು ಪಡಿಸುವವುಗಳಾಗಿರುವದರಿಂದ ಈ ವಿಷಯದಲ್ಲಿ ಹೆಚ್ಚು ಸ್ಥಾಪಿಸಲಿಕ್ಕೆ ಅಗತ್ಯವಿರುವದಿಲ್ಲ. ಹೀಗೆ ಕೆಟ್ಟುಹೋಗಿ ಪಾಪಮಾಡಿರುವ ನರಸಂತಾನವನ್ನು ದೇವರೇ ರಕ್ಷಿಸುವದಕ್ಕೆ ಮಾರ್ಗಮಾಡಿದ್ದಾನೆಂಬುವದು ಈ ಉಪನ್ಯಾಸದ ಮೊದಲನೇ ಸಂಗತಿಯಾಗಿದೆ. ಕೆಟ್ಟುಹೋದ ಮನುಷ್ಯನು ತನ್ನನ್ನು ತಾನೇ ರಕ್ಷಿಸಿಕೊಳ್ಳಲಾರನೆಂಬುವದನ್ನು ತಾನು ಮಾಡುವ ನಾನಾತರವಾದ ಪುಣ್ಯಕಾರ್ಯಗಳಾದರೂ ಸುಕೃತ ಮಾರ್ಗವಾದರೂ ತನಗೆ ಪಾಪಪರಿಹಾರ ಉಂಟುಮಾಡುವದಿಲ್ಲವೆಂಬುವದು ಕ್ರೈಸ್ತಮತದ ಪ್ರಧಾನ ಸಂಗತಿಯಾಗಿದೆ. ಈ ವಿಷಯದಲ್ಲಿ ಕ್ರೈಸ್ತಮತಕ್ಕೂ ಇತರ ಮತಗಳಿಗೂ ಬಹು ದೊಡ್ಡ ವ್ಯತ್ಯಾಸಕಾಣುತ್ತದೆ. ಇತರ ಮತಗಳವರು ಯಾವಾಗಲೂ ತಮ್ಮ ಪುಣ್ಯಕಾರ್ಯಗಳ ಮೇಲೆ ಭರವಸಿಡುತ್ತಾರೆ. ದೇವರ ಉಚಿತವಾದ ಕೃಪೆಗಿಂತ ತಮ್ಮ ಕಾರ್ಯಗಳನ್ನು ಘನಪಡಿಸುತ್ತಾರೆ. ಕ್ರೈಸ್ತಮತದಲ್ಲಿ, ತಮ್ಮ ಕೆಲಸಗಳೆಲ್ಲ ಹರಕುಬಟ್ಟೆಗೆ ಸಮಾನವೆಂತಲೂ; ದೇವರ ಉಚಿತವಾದ ಕರುಣೆಯೇ ಒಂದೇ ಪಾಪಾತ್ಮನಿಗೆ ಆಧಾರವೆಂಬದಾಗಿ ಕ್ರೈಸ್ತರು ನಂಬುತ್ತಾರೆ. ನಮ್ಮ ಕೆಲಸಗಳಿಂದ ನಮಗೆ ಮುಕ್ತಿ ದೊರಕರೆ ಮನುಷ್ಯನು ದೇವರಲ್ಲಿ ತುಂಬಾ ಭರವಸವಿಡಬೇಕಾದ ಅಗತ್ಯ ಕಾಣಬರುತ

ಲ್ಲ. ಪಾಪಿಯು ತಾನು ಎಷ್ಟು ಕೆಲಸಗಳನ್ನು ಮಾಡಿದರೂ, ಎಂಥ ಪುಣ್ಯಕ್ರಿಯೆಗಳನ್ನು ಸಲ್ಲಿಸಿದರೂ ಅದು ಪಾಪಪರಿಹಾರಕ್ಕೆ ತಕ್ಕದ್ದಾಗಿರುವದಿಲ್ಲ. ಈ ಭೂಲೋಕದಲ್ಲಿರುವ ಜೀವಸ್ವತ್ತು, ಎಲ್ಲಾ ಧನದನಗಳು ಸಮಸ್ತ ಪದಾರ್ಥಗಳು ದೇವರವೇ. ದೇವರು ಕೊಟ್ಟಿರುವದರಲ್ಲಿ ಒಂದು ಭಾಗವನ್ನು ದೇವರಿಗೆ ಕೊಟ್ಟು ಇದು ನನ್ನ ಪಾಪಕ್ಕೆ ತಕ್ಕ ಈಡು ಎಂದು ಹೇಳಿದರೆ ಅದು ಸರಿಯೇ? ಇಲ್ಲವೇ ಮನುಷ್ಯನು ತಾನು ಬಳ್ಳುವದರಲ್ಲಿ ಜೀವಿಸುವಾಗಲೇ ದೇವರಿಗೆ ಮೆಚ್ಚಿಕೆಯಾಗಬಹುದೋ? ಪಾಪಪರಿಹಾರವು ಒಂದು ಹುಡುಗಾಟದಂತೆ ಅಲ್ಲ ಎಂದು ಅನೇಕರು ನಿಸುವ ಇಲ್ಲವೇ ಮಾಡುವ ಅವರ ಕೃತ್ಯಗಳಿಂದ ಕಂಡು ಬರುತ್ತದೆ. ಮನುಷ್ಯನು ಪಾಪಿಯಾಗಿರುವದರಿಂದಲೂ, ಅವನ ಜನ್ಮಸ್ವಭಾವವೇ ಪಾಪದ ಮುದ್ದೆಯಾಗಿರುವದರಿಂದಲೂ, ಅವನು ಏನುಮಾಡಿದರೂ ಪಾಪವು ಅದರಲ್ಲಿ ಬೆರೆತಿರುವದರಿಂದಲೂ, ಮನುಷ್ಯನು ತನ್ನ ಸ್ವನೀತಿಯಿಂದ ತನ್ನ ಪರಿಹಾರವನ್ನು ಹುಡುಕುವದು ಅಸಾಧ್ಯವೆಂತ ದೇವರು ತನ್ನ ವಾಕ್ಯದಲ್ಲಿ ಹೇಳಿರುವದರಿಂದಲೂ, ಪ್ರತಿ ಒಬ್ಬನೂ ಇದನ್ನು ಯೋಚಿಸಿ ದೇವರಮೇಲೆ ತಾನು ಆತುಕೊಳ್ಳಬೇಕು.

ಎರಡನೇದು, ಭಗವಂತನು ಮನುಷ್ಯನಿಗೆ ರಕ್ಷಣೆಯನ್ನು ಯೇಸುಸ್ವಾಮಿ ಮೂಲಕ ಉಂಟುಮಾಡಿದ್ದಾನೆ. ದೇವರು ಇದೇ ರೀತಿಯಲ್ಲಿ ಈ ಕಾರ್ಯ ನಡೆಯಿಸಬೇಕಾಗಿತ್ತೋ? ಬೇರೆ ಮಾರ್ಗವಿರಲಿಲ್ಲವೋ? ಎಂಬದಾಗಿ ಒಬ್ಬರು ಆಕ್ಷೇಪಿಸಬಹುದು. ಮನುಷ್ಯನಿಗೆ ವಿಮೋಚನಾ ಕಾರ್ಯವನ್ನು ಮಾಡಲಿಕ್ಕೆ ದೇವರು ಇದೊಂದೇ ಕಾರ್ಯವನ್ನು ಮಾಡಬೇಕಾಗಿತ್ತು. ಈ ಒಂದು ಕಾರ್ಯ ಮಾತ್ರ ದೇವರ ನೀತಿಗೆ ತೃಪ್ತಿಯಾಗಿತ್ತು. ಮನುಷ್ಯನು ಅವನ ಸಂತಾನವು ಕೆಟ್ಟುಹೋದಮೇಲೆ ಅವನ್ನು ನೆಟ್ಟಗೆ ಮಾಡುವದು ದೇವರ ಪಾಲಿಗೆ ಬಂತು. ಮನುಷ್ಯನು ಏನುಮಾಡಿದರೂ ತಾನು ನೆಟ್ಟಗಾಗಲಾರನು. ನೆಟ್ಟಗಾಗಕೂಡದು. ಖೂನಿಮಾಡಿದ ಕೈದಿಯನ್ನು ಗಲ್ಲಿಗೆ ಹಾಕುವದು ನ್ಯಾಯವಷ್ಟೆ. ಈ ಕೈದಿ ಏನುಮಾಡಿದರೂ ಇವನಿಗೆ ಪರಿಹಾರವಿಲ್ಲ; ಮತ್ತು ಬಿಡುಗಡೆಯೂ ಸಿಕ್ಕುವದಿಲ್ಲ. ಒಂದು ಕೋಟಿ ರೂಪಾಯಿ ಜುಲ್ಮಾನೆಯಾಗುತ್ತೇನೆಂದೂ, ಸಾವಿರ ದಾನಗಳನ್ನು ನೆರವೇರಿಸುವದಾಗಿಯೂ, ಇಲ್ಲವೇ ಇಂಥಿಂಥ ಪುಣ್ಯಕ್ರಿಯೆಗಳನ್ನು ಮಾಡುತ್ತೇನೆಂದರೂ, ನ್ಯಾಯಾಧಿಪತಿಯು ಇವನ ಮಾತನ್ನು ಅಂಗೀಕರಿಸುವದಿಲ್ಲ. ಒಂದುವೇಳೆ ಈ ಕೊಲೆಪಾತಕನು ಹಾಗೆ ಮಾಡಿದರೂ, ಇವನು ನಡಿಸಿದ ಕೊಲೆಗೆ ಅದು ತಕ್ಕ ಪರಿಹಾರವಲ್ಲ. ಮತ್ತು ಇವನಂತೆ ನರಹತ್ಯ ಮಾಡಿದಂಥಾ ಇತರ ಕೈದಿಗಳು ಒಂದು ಸಾವಿರ ಜನರು ಬಂದು ಜಾಮೀನಾಗುತ್ತೇವೆಂದರೂ ಅದು ನ್ಯಾಯಕ್ಕೆ ಸಲ್ಲುವದಿಲ್ಲ. ಆದದರಿಂದ ಮನುಷ್ಯ ಸಂತಾನವೇ ಹಾಳಾಗಿ ಹೋಗಿರುವಾಗ ಇದನ್ನು ಪಾವನಮಾಡುವದಕ್ಕಾಗಿ, ದೇವರು ನರಾವತಾರ ಎತ್ತಿ ಮನುಷ್ಯನನ್ನು ರಕ್ಷಿಸಬೇಕಾಗಿ ಬಂದದ್ದರಿಂದ ಮನುಷ್ಯನ ಸ್ವಭಾವವನ್ನು ಧರಿಸಿ ಅವನಂತೆ ರಕ್ತಮಾಂಸಗಳಲ್ಲಿ ಪಾಲುಗಾರನಾಗಿ ಈ ಲೋಕಕ್ಕೆ ಬಂದನೆಂದು ಪರಿಶುದ್ಧ ವೇದದಲ್ಲಿ ಹೇಳಿದೆ. ಇದನ್ನು ಎಲ್ಲಾ ಕ್ರೈಸ್ತರು ನಂಬಿದ್ದಾರೆ. ಅವರ ಮತಕ್ಕೆ ಇದೇ ಅಸ್ತಿವಾರವಾಗಿದೆ. ಇದೊಂದು ಯತ್ನವನ್ನು ದೇವರು ಮಾಡದೆಹೋಗಿದ್ದರೆ ಬೇರೆ ಯಾವದೂ ಇರಲಿಲ್ಲ. ಅನೇಕ ಕಾಲಾಂತರಗಳಿಂದ ಜನರ ಒಳಗೆ ಬಂದ ನಾನಾ ತರವಾದ ಬಲಿ ಆಚರಣೆಗಳು ಎಲ್ಲಾ ಯಜ್ಞಗಳು ಅಸಂಪೂರ್ತಿಯಾದವುಗಳಾಗಿದ್ದವು. ಇವೆಲ್ಲಾ ಯೇಸುಸ್ವಾಮಿ ನೆರವೇರಿಸಿದ ಒಂದೇ ಮಹಾ ಯಜ್ಞಕ್ಕೆ ಮುಂಗುರುತಾಗಿಯೂ ನೆರಳಾಗಿಯೂ ಇದ್ದವು. ಯಾಕಂದರೆ ನಾನಾ ಅರ್ಪಣೆಗಳಾದರೂ ಕುರಿ, ಹೋತು, ಪಶುಗಳು, ರಕ್ತ ಇವುಗಳಾದರೂ ಮನುಷ್ಯನ ಬಂಧ ವಿಮೋಚನೆಗೆ ಸಾಕಾದಷ್ಟು ಶಕ್ತಿಯುಳ್ಳವುಗಳಲ್ಲ. ಅದ್ದರಿಂದ ಪ್ರಾಚೀನ ಕಾಲದ ಆರ್ಯರಾದರೂ ಇಲ್ಲವೇ ಯೆಹೂದ್ಯ ಜನರಾದರೂ, ಇತರ ಯಾವ ಜನಾಂಗವಾದರೂ ನೆರವೇರಿಸುತ್ತಿದ್ದವುಗಳೆಲ್ಲಾ ಸದ್ಯಕ್ಕೆ ಅನುಕೂಲವಾಗಿದ್ದವೇ ಹೊರತು ಅದರಲ್ಲಿ ತಕ್ಕ ಶಕ್ತಿ ಇರಲಿಲ್ಲ. ಇದರಿಂದ ಯೇಸುಸ್ವಾಮಿಯಂಥಾ ದೇವರ ಮಗನು, ಮಹಾ ಪರಿಶುದ್ಧನೂ, ನಿಜವಾದ ದೇವರೂ ನಿಜವಾದ ಮನುಷ್ಯನೂ ಆದ ಸ್ವಾಮಿಯು ಸತ್ತು ಆತನ ರಕ್ತ ಚೆಲ್ಲಲ್ಪಟ್ಟು ಈ ಮೂಲಕ ಮನುಷ್ಯನಿಗೆ ಬಿಡುಗಡೆ ಸಿಕ್ಕಬೇಕೆಂದು ದೇವರು ಆದಿಯಲ್ಲಿ ಸಂಕಲ್ಪಿಸಿದ ಕಾರ್ಯವು ಸಿದ್ಧಿಗೆ ಬಂದು ಹತ್ತೊಂಬತ್ತು ಶತಮಾನಗಳ ಕೆಳಗೆ ಈ ಮಹಾ ಕಾರ್ಯ ನೆರವೇರಿತೆಂದು ಸಮಸ್ತರು ತಿಳಿದಿದ್ದಾರೆ.

ಮೂರನೇದಾಗಿ, ದೇವರು ತನ್ನ ಬಲೀ ಉಚಿತವಾದ ಕರುಣೆಯಿಂದ ಈ ಕಾರ್ಯವನ್ನು ಅಂದರೆ ರಕ್ಷಣಾ ಕಾರ್ಯವನ್ನು ನೆರವೇರಿಸಿದ್ದರೂ ಯಾರು ಮಾತ್ರ ಅದನ್ನು ಹೊಂದಿ ಪಾಪಬಂಧನದಿಂದ ಬಿಡುಗಡೆ ಹೊಂದಬಹುದೆಂದು ನೋಡಬೇಕು. ದೇವರು ರಕ್ಷಣೆಯನ್ನು ಸಿದ್ಧಮಾಡಿದ್ದರಿಂದ ಪ್ರತಿ ಒಬ್ಬನು ಏನೊಂದು ಕಷ್ಟವಿಲ್ಲದೆ ಪ್ರಯತ್ನವಿಲ್ಲದೆ ಅದನ್ನು ಹೊಂದಬಹುದು ಎಂಬುವದು ಸತ್ಯವೇದದ ಬೋಧನೆಯಲ್ಲ. ಒಬ್ಬನು ಉಚಿತವಾಗಿ ಔತಣವನ್ನು ಮಾಡಿದ್ದರೂ ಹಸಿದವನು ಆ ಔತಣವನ್ನು ನೋಡಿದ ಮಾತ್ರಕ್ಕೆ ಅವನಿಗೆ ತೃಪ್ತಿಯಾಗುವದಿಲ್ಲ. ಉಂಡು ಉಣ್ಣಬೇಕಾಗಿದೆ. ಒಬ್ಬ ರೋಗಿಷ್ಠನಿಗೆ, ಅವನಿಗಿರುವ ವ್ಯಾಧಿಗೆ ತಕ್ಕ ಔಷಧವು ತಯಾರಾಗಿದ್ದರೂ, ರೋಗಿ ಅದನ್ನು ಸೇವನೆಮಾಡದೆಹೋದರೆ ಪ್ರಯೋಜನವೇನು? ಆದಕಾರಣ ದೇವರು ಎಲ್ಲರಿಗೂ ಪಾಪಪರಿಹಾರದ ಮಾರ್ಗವನ್ನು ತೆರೆದಿದ್ದರೂ, ಆತನು ಪ್ರತಿ ಒಬ್ಬರನ್ನು ಬಲವಂತದಿಂದ ಅದರಲ್ಲಿ ಸೇರಿಸುವದಿಲ್ಲ. ಮತ್ತು ಪಾಪಿ ತನಗೆ ರಕ್ಷಣೆ ಮಾರ್ಗ ಆಗಿದೆ ಎಂದು ತಿಳುಕೊಳ್ಳುವದರಿಂದಲೂ ಫಲವಿಲ್ಲ. ಅದನ್ನು ಹೊಂದಿಕೊಂಡು ರಕ್ಷಣೆ ಹೊಂದುವದಕ್ಕಾಗಿ ಏನುಮಾಡಬೇಕೆಂಬುವದೇ ವಿಶೇಷ ಸಂಗತಿಯಾಗಿದೆ. ಅದಕ್ಕೆ ದೇವರು ಪ್ರತಿಯೊಬ್ಬರಿಗೂ ಅಪ್ಪಣೆಕೊಡಿಸಿರುವದೇನಂದರೆ—ಮನಸಾಂತರಪಟ್ಟು ಯೇಸುಸ್ವಾಮಿಯಲ್ಲಿ ನಂಬಿಕೆ ಇಡು ಎಂಬುವದೇ. ಮನಸಾಂತರವೆಂದರೆ ಒಬ್ಬನು ತನ್ನ ದುರ್ಮಾರ್ಗತನವನ್ನು ಯೋಚಿಸಿ ತನ್ನ ಪಾಪಕ್ಕಾಗಿ ನಿಜವಾದ ದುಃಖಪಟ್ಟು ಕಣ್ಣೀರು ಸುರಿಸಿ ಪಾಪ ವಿಸರ್ಜನೆ ಮಾಡಿ ದೇವರಿಗೆ ಮೆಚ್ಚಿಕೆಯಾಗಿ ಬದುಕುವದೇ ಆಗಿದೆ. ಮನಸಾಂತರ ಎಂಬುವದು ಮನುಷ್ಯನು ನೆರವೇರಿಸತಕ್ಕ ಆತನ ಹಂಗಾಗಿದೆಯೇ ಹೊರತು ಅದು ಯಾವ ವಿಧದಲ್ಲಿ ಪುಣ್ಯಕಾರ್ಯವಾಗಿರುವದಿಲ್ಲ. ನಾನು ಮನಸಾಂತರ ಪಟ್ಟದ್ದರಿಂದಲೇ ಇದು ನನಗೆ ಲಭಿಸಿತು ಎಂಬ ಮಾತು ಅಲ್ಲ. ರೋಗಿಯು, ತನ್ನ ರೋಗಕ್ಕೆ ಮದ್ದು ತಿನ್ನುವದು ಆತನ ಹಂಗೇ ಹೊರತು ಅವನು ಮಾಡುವ ಪುಣ್ಯಕಾರ್ಯವಲ್ಲ. ಸಮಸ್ತ ಮೇಲುಗಳನ್ನು ದೇವರು ಉಚಿತವಾಗಿ ನಮಗೆ ದಯಪಾಲಿಸುತ್ತಾನೆ.

ಹಿಂದು ಜನರಲ್ಲಿ ಮನಸಾಂತರ ಎಂಬದರ ವಿಚಾರವನ್ನು ಅರಿಯದೇ ಇದ್ದಾರೆ. ಎಷ್ಟೋ ಜನರು, ತಾವು ಪಾಪಿಷ್ಠರಾಗಿದ್ದೇವೆಂದು ತಿಳಿದರೂ ಅದಕ್ಕೆ ತಕ್ಕ ಕಾರ್ಯಗಳನ್ನು ಮಾಡದೆ ಇದ್ದಾರೆ. ಅನೇಕ ಹುಡುಗಾಟದಂತಿರುವ ಕೆಲಸಗಳನ್ನು ಉತ್ಸವಗಳಲ್ಲಿಯೂ ಜಾತ್ರೆ ಪರಿಷೆಗಳಲ್ಲಿಯೂ ಇತರ ಸಮಯಗಳಲ್ಲಿಯೂ ಮಾಡಿದ ಮೇಲೆ ನನ್ನ ಪಾಪ ಹೋಯಿತೆಂದು ಹೇಳುತ್ತಾರೆ. ಆದರೆ ತಿರಿಗಿ ಅದೇ ದಿನದಿಂದ ತಿರಿಗಿ ಯಥಾಪ್ರಕಾರ ಪಾಪಮಾಡುತ್ತಲೇ ಬರುತ್ತಾರೆ. ಸಾವಿರಸಾರಿ "ಪಾಪೋಽಹಂ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಃ" ಎಂದು ಹೇಳಿದರೂ, ಸುಳ್ಳು, ಲಂಚ, ಮೋಸ, ಹಾದರತನ, ಎಂಬುವದು ತಪ್ಪಲೇ ಇಲ್ಲ. ಯಾಕೆ? ಯಾಕಂದರೆ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಜನರು ತಿಳಿಯದೆ ಇರುವದರಿಂದಲೇ. ನಿಜವಾಗಿ ಮನಸಾಂತರಪಟ್ಟು, ಭಕ್ತ ತಿರಿಗಿ ಪಾಪಕ್ಕೆ ಸೇರುವದಿಲ್ಲ. ಯಾಕಂದರೆ ನಿಜವಾದ ಮನಸಾಂತರವು ಆತ್ಮೀಯವಾದ ಪುನರ್ಜನ್ಮಕ್ಕೆ ಅವನನ್ನು ಎಳೆದು ತಿರಿಗಿ ಪಾಪಮಾಡಗೊಡದಂತೆ ಅವನನ್ನು ಆಳ್ವಿಕೆ ಮಾಡುತ್ತದೆ. ಪಾಪಪರಿಹಾರಕ್ಕೆ ನಿಜವಾದ ಮನಸಾಂತರವು ರಕ್ಷಕನಲ್ಲಿರುವ ಭರವಸವು ತಕ್ಕ ಆಧಾರವಾಗಿದೆ. ಮನುಷ್ಯನು ಪೂರ್ಣವಾಗಿ ಬದಲಾಗಬೇಕು. ಜಗದ್ರಕ್ಷಕನು ಈ ಲೋಕದಲ್ಲಿದ್ದಾಗ್ಯೆ ಒಂದು ದಿನ ಒಬ್ಬ ಮಹಾ ಶಾಸ್ತ್ರಿಯನ್ನು ನೋಡಿ "ತಿರಿಗಿ ಹುಟ್ಟಬೇಕು. ಇಲ್ಲವಾದರೆ ಪರಲೋಕವು ಸಿಕ್ಕುವದಿಲ್ಲ" ಎಂದು ಹೇಳಿದ ಕೂಡಲೆ ಈ ಮಹಾ ಪಂಡಿತನು ಈ ಸಂಗತಿ ಕೇಳಿ ತಿರಿಗಿ ಹುಟ್ಟುವದು ಹ್ಯಾಗೆ? ನೂತನ ಜನ್ಮವೆಂದರೇನು? ದ್ವಿಜನಾಗುವದು ಹ್ಯಾಗೆ? ಎಂದು ಕೇಳಿದನು. ಆಗ ಸ್ವಾಮಿಯು ಸತ್ಯವನ್ನು ಅವನಿಗೆ ವಿವರಿಸಿ ಪಾಪಿಯು ಪರಿಶುದ್ಧನಾಗಬೇಕಾದರೆ ದೀಕ್ಷಾಸ್ನಾನದಿಂದಲೂ, ದೇವರ ಆತ್ಮದಿಂದಲೂ ಹುಟ್ಟಬೇಕೆಂದೂ ಅದರಿಂದಲೇ ನಿಜವಾದ ಪರಿಹಾರವು ಸಿಕ್ಕುತ್ತದೆಂದೂ ಹೀಗೆ ಹುಟ್ಟಿದವನೇ ನಿಜವಾದ ಭಕ್ತನೆಂದೂ ತಿಳಿಸಿದನು. ಈಗ ಸಂಕ್ಷೇಪವಾಗಿ ವಿವರಿಸಿದ ಈ ಪ್ರಾಮುಖ್ಯವಾದ ಬೋಧನೆಯನ್ನು ವಾಚಕರು ಆಲೋಚಿಸಿ, ಪಾಪಪರಿಹಾರಕ್ಕೆ ನಿಜವಾದ ಮನಸಾಂತರವೂ ದೇವರಲ್ಲಿ ನಂಬಿಕೆಯೂ ಎಷ್ಟು ಆವಶ್ಯವೆಂತಲೂ, ಹೊರಗಿನ ಮತಸ್ಥರು ಪಾಪವಿಸರ್ಜನೆ ವಿಷಯದಲ್ಲಿಯೂ, ಪಾಪಪರಿಹಾರವಾಯಿತೆಂಬ ಅಭಿಪ್ರಾಯದಲ್ಲಿಯೂ ಹ್ಯಾಗೆ ಮೋಸಹೋಗುತ್ತಾರೆಂದು ತಿಳಿಯುವವರಾಗಲಿ!

## ಒಳದೇಶದ ವೃತ್ತಾಂತಗಳು

ಶ್ರೀಮನ್ ಮಹಾರಾಜರವರು ಪರಿವಾರಸಹಿತ ನೀಲಗಿರಿಯಿಂದ ಈ ವಾರದಲ್ಲಿ ರಾಜಧಾನಿಗೆ ದಯಮಾಡುವವರಾಗಿದಾರೆ.

••••

ಚಾಮರಾಜನಗರದ ತಾಲ್ಲೂಕಿನಲ್ಲಿ ಕಳೆದ ವಾರ ಒಂದು ದರೋಡೆ ಕಳ್ಳತನ ನಡೆದಿರುವದು. ಪೋಲೀಸಿನವರು ನಾಲ್ಕಾರು ಮಂದಿಯನ್ನು ಹಿಡಿದು ತನಿಖೆ ಮಾಡುತ್ತಿದಾರೆ.

••••

ಕಳೆದ ೯ನೇ ತಾರೀಖಿನ ದಿನ ಕೋಲಾರ ಚಿನ್ನದ ಗಣಿಗಳಿಗೆ ಸೇರಿದ ಛಾಂಪಿಯನ್ ರೀಫ್‌ನಲ್ಲಿ ಒಂದು ಅನಾಹುತವಾಯಿತು. ಮೂರು ಮಂದಿ ಪ್ರಾಣ ಕಳಕೊಂಡರು, ಇನ್ನು ಕೆಲವರಿಗೆ ಪೂರಾ ದಖಲ ಆಗಿದೆ.

••••

ಮೈಸೂರು ಸಂಸ್ಥಾನದ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾದ ಮಿ॥ ... ಮಾಡಿದ್ದು... [illegible] ನಮ್ಮ ... ರಾಜಧಾನಿಗೆ ... [illegible] ಮಾಡುವವರಾಗಿದ್ದಾರೆ.

••••

ಮೂಡಿಗೆರೆ ತಾಲ್ಲೂಕು ... [illegible] ... ಬೀದಿಯನ್ನು ... [illegible] ... ತೀರ್ಮಾನವಾಗಿದೆ.

••••

ಮಂಡ್ಯ ತಾಲ್ಲೂಕು ... [illegible] ... ಕೆಲವು ... [illegible] ... ಕಳೆದ ... ತಾರೀಖಿನಲ್ಲಿ ... [illegible]

••••

ಮಾಗಡಿ ತಾಲ್ಲೂಕು ... [illegible] ... ಬೀಲು ... [illegible]

ಭದ್ರ ... [illegible], ಈ ದೇವಸ್ಥಾನಕ್ಕೆ ಭಕ್ತಾದಿಗಳಿಂದ ಬಂದಿರುವ ಅನುಪಯೋಗವಾದ ಸುಮಾರು ... ರೂ. ಬಾಳುವ ನಗಗಳನ್ನು ಸರ್ಕಾರದವರು ಮಾರಿ ... [illegible] ... ತಾರೀಖು ... [illegible] ... ಮಾಡುತ್ತಾರೆ.

••••

ಬೆಂಗಳೂರು ತಾಲ್ಲೂಕು ಕಾಯಂಗುತ್ತಾ ಗೋವಿಂದಪುರ ಗ್ರಾಮದ ಇನಾಂದಾರರಾದ ಮಿ॥ ಜೆ. ಪಂಟ್ರಿಯಾರ್ ಯವರು ಆ ಗ್ರಾಮದಲ್ಲಿ ಹಿಪ್ಪನೇರಳೇ ಗಿಡಗಳ ವ್ಯವಸಾಯ ಮಾಡುವದಕ್ಕೂ ರೇಷ್ಮೆ ತಯಾರಿಗೆ ಕೆಲವು ಬಂಗಲೆಗಳನ್ನು ಕಟ್ಟಿಕೊಳ್ಳುವದಕ್ಕೂ ಸರ್ಕಾರದಿಂದ ಈ ಮೊದಲೇ ಸಾಲ ಪಡಕೊಂಡಿರುತ್ತಾರಷ್ಟೆ. ಈಚೆಗೆ ಮತ್ತೆ ಅದೇ ಉದ್ದೇಶಕ್ಕೆ ಅವರಿಗೆ ೪,೦೦೦ ರೂ ಸಾಲವನ್ನು ಕೊಟ್ಟಿರುವರು.

••••

ಮೂಡಿಗೆರೆ ತಾಲ್ಲೂಕು ಕಳಸದ ಆಸ್ಪತ್ರೆ ಅಸಿಸ್ಟೆಂಟರು ಆಗ್ಯೆ ಬಾಳೆಹೊಳೆಗೆ ಬಂದು ತಾಳಗೋಡು, ಕೋಟೆಬೂರು ಎಂಬ ಗ್ರಾಮಗಳ ಜನರಿಗೆ ಔಷಧಗಳನ್ನು ಕೊಡುವಂತೆ ಮಾಡಿಕೊಳ್ಳಬೇಕೆಂದು ಅವರು ಅರ್ಜಿ ಬರೆದುಕೊಂಡಿದ್ದರು. ಅಲ್ಲಿಗೆ ಆಸ್ಪತ್ರೆ ಅಸಿಸ್ಟೆಂಟರನ್ನು ಕಳುಹಿಸುವದು ಅನುಕೂಲವಾದದ್ದಲ್ಲವೆಂತಲೂ, ಬಾಳೇಹೊಳೆಯ ಪಟೇಲನ ವಶಕ್ಕೆ ಜ್ವರ, ಅಮಶಂಕೆ ಭೇದಿ, ಇವುಗಳಿಗೆ ಕೊಡುವಂಥಾ ಕ್ವಿನೈನ್ ಮಾತ್ರೆಗಳನ್ನು, ಕಳುಹಿಸತಕ್ಕದ್ದೆಂತಲೂ, ಪಟೇಲನು ಆ ಔಷಧಗಳನ್ನು ರೋಗಿಗಳಿಗೆ ಧರ್ಮಾರ್ಥ ಕೊಡುತ್ತಾ ಬರಬೇಕೆಂತಲೂ ಗೊತ್ತುಮಾಡಿದೆ.

••••

ಕಾಡಬೆಟ್ಟಿಯಿಂದ ಒಬ್ಬ ಬಿಸಾಯಿ ... [illegible] ... ಗ್ರಾಮಕ್ಕೆ ಬಂದು ತನ್ನಲ್ಲಿದ್ದ ... [illegible] ... ಬಹಳ ಸಂತೋಷದಿಂದ ಕೆಲವರಿಗೆ ಕೊಡುವರು ... [illegible] ... ಬಿಸ್ಕತ್ತನ್ನು ತಿಂದುಕೊಂಡನು ... [illegible] ... ಆವರ ಮನೆಗೆ ಹೋಗಿ ನೋಡುವಷ್ಟು ... [illegible] ... ಆ ತಾಂಬ್ರದ ಗಟ್ಟಿಯನ್ನು ತೆಗೆದುಕೊಂಡು ... [illegible] ... ನಡೆಸುತ್ತಿದೆ.

••••

ಚಕ್ರವರ್ತಿಯವರ ಜನ್ಮದಿನದ ... [illegible] ... ಮೇ ತಿಂಗಳು ... [illegible] ... ರಜಾ ಕೊಡಲ್ಪಡುತ್ತದೆ ... [illegible] ... ಈಚೆಗೆ ... ಚಕ್ರವರ್ತಿ ... [illegible] ... ಪ್ರಕಾರ ಆ ದಿನ ರಜಾ ಕೊಡುವದಿಲ್ಲ ... [illegible] ... ದಿನ ... [illegible] ... ಈ ಹುಟ್ಟಿದ ಹಬ್ಬದ ... [illegible] ... ಸಬೇಕೆಂದು ಗೊತ್ತುಮಾಡಿ ... [illegible] ... ಎಲ್ಲಾ ದೊಡ್ಡ ಮನುಷ್ಯರಿಗೂ ... [illegible] ... ನಿಂತುಹೋಯಿತು.

••••

ಚಿಕ್ಕಮಗಳೂರು ... [illegible]

## [illegible]

[illegible]

## ಗತಿಸಿದ ಮಹಾರಾಜಾ ಗಜಪತಿರಾಯರು.

ಮಹಾರಾಜಾ ಜೆ. ಎಮ್. ಗಜಪತಿರಾವ್, ಸಿ. ಐ. ಇ. ಯವರು ಕಳೆದ ವಾರ ಕಾಲವಾದರೆಂದು ತಿಳಿಸಲು ತುಂಬಾ ವಿಷಾದಿಸುವೆವು. ಇವರು ತಮ್ಮ ತಂದೆಯವರಂತೆಯೂ ತಾತಂದಿರಂತೆಯೂ ಸತ್ಕಾರ್ಯಗಳನ್ನು ನಡಸುವದರಲ್ಲಿ ವಿಶೇಷ ಸಂತೋಷಪಡತಕ್ಕವರಾಗಿದ್ದು, ಹಿಂದುಸ್ಥಾನದಲ್ಲೆಲ್ಲಾ ತುಂಬಾ ಕೀರ್ತಿ ಸಂಪಾದಿಸಿಕೊಂಡಿದ್ದರು. ಜಾತಿ ಮತಗಳ ಪಕ್ಷಪಾತವು ಇವರಿಗೆ ಎಳ್ಳಷ್ಟೂ ಇರಲಿಲ್ಲ. ಪ್ರಜೆಗಳಿಗೆ ಸೌಕರ್ಯಗಳನ್ನುಂಟುಮಾಡಿಕೊಡಬೇಕೆಂಬುವದೇ ಅವರ ಮುಖ್ಯ ಕುತೂಹಲವಾಗಿತ್ತು. ಅವರು ಅಂತರ್ಯದಲ್ಲಿ ಸಚ್ಚರಿತ್ರರೆನಿಸಿಕೊಂಡಿದ್ದರು. ಲಾರ್ಡ್ ಕಾನಿಮೆರಾ ಎಂಬ ಮದರಾಸ್ ಗೌವರ್ನರವರು ಹೇಳಿರುವ ಪ್ರಕಾರ ಅವರ ಧರ್ಮ ಬುದ್ಧಿಯು ಅವರನ್ನು ಸತ್ಯಂಕಜರನ್ನಾಗಿ ಮಾಡಿತ್ತು.

ಮಹಾರಾಜಾ ಗಜಪತಿರಾಯರು ಕಳೆದ ೧೮೨೮ನೆ ಇಸವಿ ಡಿಸೆಂಬರಿನಲ್ಲಿ ಜನಿಸಿದವರು. ಆದ್ದರಿಂದ ಅವರಿಗೆ ಅಂತ್ಯಕಾಲದಲ್ಲಿ ೭೪ ವರುಷ ತುಂಬಿ ಇತ್ತು. ಇಷ್ಟು ಪೂರ್ಣಾಯುಸ್ಸನ್ನು ಜೀವಿತದಲ್ಲಿ ಸರಿಯಾಗಿ ಅವರು ಸಂಪಾದಿಸಿಕೊಂಡ ಘನತರವಾದ ಬಿರುದುಗಳೂ, ಸಂಪಾದಿಸಿದ ಯಶಸ್ಸೂ ಅಮೋಘವಾಗಿದೆ ಎನ್ನುತ್ತವೆ. ಉತ್ತರ ಸರ್ಕಾರಕ್ಕೆ ಸೇರಿದ ವಿಶಾಖಪಟ್ಟಣದ ಪ್ರಸಿದ್ಧ ಗೋಡೇ ಎಂಬ ವಂಶದಲ್ಲಿ ಹುಟ್ಟಿ, ಚಿಕ್ಕಂದಿನಲ್ಲೇ ಕಲ್ಕತ್ತೆಗೆ ಹೋಗಿ ಅಲ್ಲಿನ ಹಿಂದೂ ಕಾಲೇಜ್ ಎಂಬ ವಿದ್ಯಾಶಾಲೆಯಲ್ಲಿ ಓದಿದರು. ಅವರ ತಂದೆಯವರಾದ ಶ್ರೀ ಗೋಡೇ ಸೂರ್ಯನಾರಾಯಣರಾಯರು ಕಾಲವಾದ ನಂತರ ೧೮೪೫ನೆ ಇಸವಿಯಲ್ಲಿ ಇವರು ಅಂಕನಪಲ್ಲಿ ಮೊದಲಾದ ಜಮೀನ್ದಾರಿಗಳಿಗೆ ಮುಖಂಡರಾದರು. ೧೮೬೮ರಲ್ಲಿ ಅವರನ್ನು ಮದರಾಸ್ ಅಧಿಪತ್ಯದ ಮಂತ್ರಾಲೋಚನಾ ಸಭೆಗೆ ಮೆಂಬರಾಗಿ ಸೇರಿಸಿಕೊಂಡರು. ಹಾಗೇ ಮದರಾಸ್ ಯೂನಿವರ್ಸಿಟಿ ಎಂಬ ವಿದ್ಯಾ ಸಂಘದ ಮೆಂಬರ ಕೆಲಸವೂ ಅವರಿಗೆ ದೊರೆಯಿತು. ಮಹಾರಾಜಾ ಗಜಪತಿರಾಯರು ಅನೇಕ ಪಾಠಶಾಲೆಗಳನ್ನು ಇಡಿಸಿ ನಡಸುತ್ತಾ ಬಂದದ್ದಲ್ಲದೆ, ವಿದ್ಯಾಶಾಲೆಗಳಿಗೆ ದ್ರವ್ಯ ಸಹಾಯವನ್ನೂ ವಿಶೇಷವಾಗಿ ಮಾಡುತ್ತಾ, ಪ್ರಜಾ ಸೌಕರ್ಯಾಭಿವೃದ್ಧಿಯ ಕಾರ್ಯಗಳಿಗೆ ತುಂಬಾ ಹಣಕಾಸು ಧರ್ಮಕೊಡುತ್ತಾ, ಜಾತಿಯ ಪಕ್ಷಪಾತವಿರದೆ ಹಿಂದು, ಮುಸಲ್ಮಾನ್, ಕ್ರೈಸ್ತ ಪ್ರಜೆಗಳಿಗೆಲ್ಲಾ ಏಕಪ್ರಕಾರವಾಗಿಯೂ ನಾನಾ ಸಂದರ್ಭಗಳಲ್ಲಿ ಸಹಾಯಮಾಡುತ್ತಾ ಬಂದಿದ್ದರು. ಕಳೆದ ೧೮೮೭ನೆ ಇಸವಿಯಲ್ಲಿ ಲೇಟ್ ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿನಿಯವರ ಜೂಬಿಲಿ ಮಹೋತ್ಸವದ ಜ್ಞಾಪಕಾರ್ಥವಾಗಿ ಮಹಾರಾಜಾ ಗಜಪತಿರಾಯರು ಆಕೆಯವರ ಒಂದು ಲೋಹಪ್ರತಿಮೆಯನ್ನು ಮಾಡಿಸಿ, ಮದರಾಸ್ ಪಟ್ಟಣಕ್ಕೆ ಬಹುಮಾನವಾಗಿ ಕೊಡಿಸಿದರು ಮತ್ತು ಅವರು ವಿಶಾಖಪಟ್ಟಣದ ರೋಮಾನ ಕ್ರೈಸ್ತ ಪ್ರಜೆಗಳಲ್ಲಿ ತುಂಬಾ ಅನುರಾಗವುಳ್ಳವರಾಗಿ ಅವರಿಗೆ ನಾನಾ ಉಪಕಾರಗಳನ್ನು ಮಾಡುತ್ತಿದ್ದದ್ದನ್ನು ಕೇಳಿ ಅತ್ಯಂತ ಸಂತೋಷಪಟ್ಟು ಯೂರೋಪಿನಲ್ಲಿರುವ ಮತಾಧಿಪತಿಗಳಾದ ಪೋಪರು ಅವರಿಗೆ ೧೮೯೧ರಲ್ಲಿ ಘನತರವಾದ ಬಿರುದನ್ನು ದಯಪಾಲಿಸಿದರು.

ಮಹಾರಾಜಾ ಗಜಪತಿರಾಯರ ರಾಜಭಕ್ತಿ ಪ್ರಜಾಪ್ರೀತಿಗಳನ್ನೂ ಅವರ ಉದಾರ ಚಿತ್ತವೃತ್ತಿಯನ್ನೂ ಇಂಡಿಯಾ ಗೌವರ್ನಮೆಂಟಿನವರು ನೋಡಿ, ೧೮೮೧ರಲ್ಲಿ ಅವರಿಗೆ ರಾಜಾ ಎಂಬ ಬಿರುದನ್ನು ದಯಪಾಲಿಸಿದರು. ಅನಂತರ ಅವರಿಗೆ ೧೮೯೨ರಲ್ಲಿ ಸಿ. ಐ. ಇ. ಎಂಬ ಬಿರುದು ಕೊಡಲಾಯಿತು. ಆ ಮೇಲೆ ೧೮೯೮ರಲ್ಲಿ ವೈಸರಾಯಿಯವರು ಅವರ ಮೇಲೆ ಪೂರ್ಣ ವಿಶ್ವಾಸವನ್ನಿಟ್ಟು ಅವರಿಗೆ ಮಹಾರಾಜಾ ಎಂಬ ಬಿರುದು ಕೊಟ್ಟರು. ಇಂಥಾ ಮಹನೀಯರು ಈಗ ಕಾಲವಾದ ಸಂಗತಿಯು ಹಿಂದುಸ್ಥಾನದಲ್ಲೆಲ್ಲಾ ಹರಡಿಕೊಂಡು ಸಕಲರಲ್ಲೂ ಸ್ವಜನಾದ ದುಃಖವನ್ನುಂಟುಮಾಡಿರುತ್ತದೆ. ಆದರೆ "ಸತ್ಪುರುಷನಿಗೆ ಸಾವಿಲ್ಲ" ಎಂಬ ಲೋಕೋಕ್ತಿಯಂತೆ ಅವರ ಹೆಸರು ಚಿರಸ್ಮರಣೀಯವಾಗಿದ್ದೀತೆನ್ನುವದಕ್ಕೆ ಸಂಶಯವಿಲ್ಲ.

## ಕಾನೋ ಯುದ್ಧವು.

೪೪ ಮಂದಿ ೩,೦೦೦ ಸೈನಿಕರನ್ನು ಸೋಲಿಸಿದ್ದು.

ಆಫ್ರಿಕಾ ಖಂಡಕ್ಕೆ ಸೇರಿದ ಕಾನೋ ರಾಜ್ಯದಲ್ಲಿ ಇಂಗ್ಲಿಷರಿಗೂ ಅಲ್ಲಿನ ಸೈನಿಕರಿಗೂ ನಡೆದ ಒಂದು ಯುದ್ಧದ ಸಮಾಚಾರವು ಈಗ ಪ್ರಕಟವಾಗಿರುವದು. ಲೆಫ್ಟಿನೆಂಟರುಗಳಾದ ರೈಟ್ ಮತ್ತು ವೆಲ್ಸ್ ಎಂಬವರು ಒಂದು ಸಣ್ಣ ಇಂಗ್ಲಿಷ್ ಸೈನ್ಯವನ್ನು ನಡಿಸಿಕೊಂಡು ಹೋಗುತ್ತಿದ್ದರು. ಕಾನೋ ಸೈನಿಕರಲ್ಲಿ ೧,೨೦೦ ಮಂದಿ ಸವಾರರೂ, ೨,೦೦೦ ಮಂದಿ ಕಾಲ್ಬಲದವರೂ ಇದ್ದರು. ಆದಾಗ್ಯೂ ಇಂಗ್ಲಿಷರು ಇಷ್ಟು ಅಪಾರವಾಗಿದ್ದ ಕಾನೋ ಸೈನಿಕರನ್ನು ಸೋಲಿಸಿ ಓಡಿಸಿಬಿಟ್ಟಿದ್ದಾರೆ. ಇದು ಹ್ಯಾಗೆ ನಡೆಯಿತೆಂದರೆ:—

ಜನರಲ್ ಕೆಂಬಾಲ್‌ಯವರು ೪೪ ಮಂದಿ ಕುದುರೆ ಸವಾರರನ್ನು ರೈಟ್, ವೆಲ್ಸ್ ಎಂಬೀ ಸುಬ್ಬೇದಾರರ ವಶಕ್ಕೆ ಕೊಟ್ಟು, ಶತ್ರುಗಳ ಠಾಣ್ಯವನ್ನು ಗೊತ್ತುಮಾಡಿಕೊಂಡು ಬರುವದಕ್ಕಾಗಿ ಕಳುಹಿಸಿಕೊಟ್ಟರು. ಇವರು ಕೊಟೊಕೊರೋಷಿ ಎಂಬ ಸ್ಥಳಕ್ಕೆ ಹೋಗಿ ಕಾನೋ ಅಮೀರರ ಕಾರುಬಾರುಗಳನ್ನು ವಿಚಾರಿಸಿಕೊಂಡು ಬರುತ್ತಿದ್ದರು. ಇವರು ೨೭ ಮೈಲಿ ದೂರ ಹೋಗುವಷ್ಟರೊಳಗಾಗಿ ಅವರನ್ನು ಸಂಧಿಸುವದಕ್ಕೆ ಕಾನೋ ಸೈನ್ಯವು ಅವರ ಮೇಲೆ ಹೋಗುತ್ತಾ ಇವೆ ಎಂಬದಾಗಿ ಜನರಲ್ ಕೆಂಬಾಲ್‌ಯವರಿಗೆ ಸಮಾಚಾರ ಬಂತು. ಆಗ ಜನರಲ್‌ಯವರು ಕ್ಯಾಪ್ಟನ್ ಪೋರ್ಟರ್‌ಯವರನ್ನೂ ಅವರ ಸಂಗಡ ಡಾಕ್ಟರುಗಳು, ಔಷಧಗಳು, ಮುಂತಾದವುಗಳನ್ನೂ ಕಳುಹಿಸಿಕೊಟ್ಟರು. ಅತ್ತಲಾಗಿ ರೈಟ್‌ಯವರು ಕೊಟೊಕೊರೋಷಿಯನ್ನು ತಲುಪಿ, ಅಲ್ಲಿ ವಿಚಾರಣೆಮಾಡುತ್ತಿರುವಷ್ಟರಲ್ಲೇ ಕಾನೋ ಸೈನ್ಯವು ವಿಪರೀತವಾಗಿ ಅವರ ಮೇಲೆ ನುಗ್ಗಿ ಬರುತ್ತಿದೆ ಎಂದು ಒಬ್ಬ ಚಾರನು ಬಂದು ಹೇಳಿದನು. ರೈಟ್‌ಯವರಿಗೆ ಏನು ಮಾಡುವದಕ್ಕೂ ಅವಕಾಶವಿರಲಿಲ್ಲ. ಅವರು ಎದುರೆ ಹತ್ತುವದರೊಳಗಾಗಿ ಕಾನೋ ಸೈನಿಕರು ಬಂದು ಕೇರಾಯಿಸಿಕೊಂಡರು. ಅವರಲ್ಲಿ ಕುದುರೇ ಸವಾರರು ೨೬೦ ಮಂದಿಯೂ, ಕಾಲ್ಬಲ ೨೦೦ ಮಂದಿಯೂ ಬಂದರು. ತಕ್ಷಣವೇ ರೈಟ್‌ಯವರು ತಮ್ಮ ಕೈಕೆಳಗಿದ್ದ ೪೪ ಮಂದಿ ಇಂಗ್ಲಿಷ್ ಸವಾರರನ್ನೂ ವ್ಯೂಹಕಟ್ಟಿ ನಿಲ್ಲಿಸಿಕೊಂಡು ಯುದ್ಧ ಕೊಡಲಾರಂಭಿಸಿ, ಸ್ವಲ್ಪ ಹೊತ್ತಿನೊಳಗಾಗಿ ಶತ್ರು ಸೈನ್ಯದಲ್ಲಿ ೩೦ ಮಂದಿಯನ್ನು ಕೊಂದು ಕೆಡವಿದರು. ಉಳಿದ ಸೈನ್ಯವೆಲ್ಲಾ ಪಲಾಯನವಾಯಿತು. ಆ ರಾತ್ರಿ ಲೆಫ್ಟಿನೆಂಟ್ ರೈಟ್‌ಯವರು ಒಂದು ಗ್ರಾಮದಲ್ಲಿ ತಂಗಿದ್ದು, ಮರುದಿನ ಬೆಳಗ್ಗೆ ಸೈನ್ಯವನ್ನು ಚಚ್ಚೌಕನಾಗಿ ನಿಲ್ಲಿಸಿಕೊಂಡು, ನಡಿಸುತ್ತಾ ಒಂದು ಪೊದೆಯ ಆಸರೆಯಲ್ಲೇ ಹೋದರು. ಅಷ್ಟರಲ್ಲೇ ಕಾನೋ ಸೈನ್ಯದವರು ಅನೇಕ ಮಂದಿ ಸೇರಿ ಇವರ ಮೇಲೆ ನುಗ್ಗಿ ಬಂದರು. ಆಗ ರೈಟ್‌ಯವರು ತಮ್ಮ ಸವಾರರನ್ನೆಲ್ಲಾ ಕುದುರೆಯಿಂದ ಇಳಿಸಿ ಚೌಕನಾಗಿ ನಿಲ್ಲಿಸಿ, ನಡುವೆ ಖೈದಿಗಳನ್ನೂ ಚಾಕರರನ್ನೂ ಕುದುರೆಗಳನ್ನೂ ನಿಲ್ಲಿಸಿ, ಶತ್ರುಗಳ ಮೇಲೆ ಗುಂಡುಗಳನ್ನು ಹೊಡೆಯುವದಕ್ಕಾರಂಭಿಸಿದರು.

ಶತ್ರುಗಳ ಕುದುರೆ ಸವಾರರು ದಶಾವರ್ತಿ ಇಂಗ್ಲಿಷರ ಮೇಲೆ ನುಗ್ಗಿ ಬಂದರು. ಕೆಲವು ವೇಳೆ ಅವರೂ ಇವರೂ ಮೂರು ಗಜಗಳಷ್ಟು ಹತ್ತಿರ ಕೂಡಿದ್ದರು. ಈ ಯುದ್ಧವು ಎರಡು ಗಂಟೆ ಹೊತ್ತು ಬಹು ಘೋರವಾಗಿ ನಡೆಯಿತು. ಶತ್ರು ಸೈನ್ಯದಲ್ಲಿ ೩೦೦ ಮಂದಿ ಹತರಾದರು. ಕುದುರೆ ಸವಾರರಲ್ಲಿ ೩೬ ಜನ ಸತ್ತರು. ಅಮೀರರ ಕೈ ಕೆಳಗಿನ ೧೧ ಮಂದಿ ಮುಖ್ಯ ಯುದ್ಧ ಭಟರೂ ಮೃತಪಟ್ಟರು. ಇಂಗ್ಲಿಷರ ಕಡೆಯಾದರೋ ಒಬ್ಬ ಸವಾರನಿಗೆ ಏಟುಬಿದ್ದಿದೆ; ಮೂರು ಕುದುರೆಗಳು ಕೊಲ್ಲಲ್ಪಟ್ಟವು. ಶತ್ರುಸೈನ್ಯದಲ್ಲಿ ಉಳಿದವರೆಲ್ಲಾ ದಿಕ್ಕಾಪಾಲಾಗಿ ಓಡಿಹೋದರು. ರೈಟ್‌ಯವರ ಸಣ್ಣ ಸೈನ್ಯದ ಸ್ವಾಧೀನದಲ್ಲಿ ವಿಶೇಷ ಮದ್ದು ಗುಂಡು ಇರಲಿಲ್ಲವಾದ್ದರಿಂದ ಅವರು ಶತ್ರುಗಳನ್ನು ಹಿಂದಟ್ಟಿಸಿಕೊಂಡು ಹೋಗಲಿಲ್ಲ. ಆದಕಾರಣ ಅವರು ಯುದ್ಧ ಭೂಮಿಯಲ್ಲೇ ಠಾಣ್ಯಹಾಕಿಕೊಂಡು ನಿಂತರು. ಆದರೆ ಕಾನೋ ಸೈನ್ಯವು ಓಡಿಹೋಗುತ್ತಿದ್ದಾಗ ದಾರಿಯಲ್ಲಿ ೨೫ ಮಂದಿ ಸವಾರರನ್ನು ಕಟ್ಟಿಕೊಂಡು ಬರುತ್ತಿದ್ದ ಕ್ಯಾಪ್ಟನ್ ಪೋರ್ಟರ್‌ಯವರು ಅವರನ್ನು ತಡೆದು, ಯುದ್ಧ ಮಾಡಿ ಶತ್ರುಗಳಲ್ಲಿ ೨೦ ಮಂದಿಯನ್ನು ಕೊಂದುಹಾಕಿ, ಉಳಿದವರನ್ನೆಲ್ಲಾ ಚದರಿಸಿ ಓಡಿಸಿರುತ್ತಾರೆ.

## ಹಿಂದುಸ್ಥಾನದ ರೈಲ್ವೆಗಳ ಸ್ಥಿತಿ.

ಮಿ॥ ರಾಬರ್ಟ್‌ಸನ್ ಯವರು ಬರೆದಿರುವ ರಿಪೋರ್ಟ್.

ಹಿಂದುಸ್ಥಾನದ ರೈಲ್ವೆಗಳ ಕಾರುಬಾರುಗಳನ್ನೂ ಸ್ಥಿತಿಗತಿಗಳನ್ನೂ ಪರಿಶೋಧಿಸಿ, ಮುಂದೆ ಯಾವ ತರಹಾ ಹೊಸ ಕ್ರಮಗಳನ್ನು ರೂಢಿಗೆ ತರಬೇಕೆಂಬುವದನ್ನು ಕುರಿತು ರಿಪೋರ್ಟ್ ಮಾಡಬೇಕೆಂದಾಗಿ ಇಂಡಿಯಾ ಗೌವರ್ನಮೆಂಟಿನವರು ಮಿ॥ ರಾಬರ್ಟ್‌ಸನ್‌ಯವರನ್ನು ವಿಲಾಯತಿಯಿಂದ ಕರೆಸಿ ನೇಮಿಸಿದರು. ಇವರಿಗೆ ಸ್ಪೆಷಲ್ ರೈಲ್ವೇ ಕಮಿಷನರೆಂಬ ಹೆಸರು ಕೊಟ್ಟರು. ಈಗ ಮಿ॥ ರಾಬರ್ಟ್‌ಸನ್ ಯವರು ತಮ್ಮ ಕಾರ್ಯವನ್ನು ಪೂರೈಸಿ ಒಂದು ರಿಪೋರ್ಟ್ ಬರೆದು ಗೌವರ್ನಮೆಂಟಿಗೆ ಒಪ್ಪಿಸಿರುತ್ತಾರೆ. ಈ ರಿಪೋರ್ಟಿನಲ್ಲಿ ಕಂಡ ಕೆಲವು ಮುಖ್ಯಾಂಶಗಳನ್ನು ಮಾತ್ರ ಇಲ್ಲಿ ತಿಳಿಯಪಡಿಸುವೆವು. ಮಿ॥ ರಾಬರ್ಟ್‌ಸನ್ ಯವರು ಹೇಳಿರುವದೇನಂದರೆ:—

ನಾನು ಹಿಂದುಸ್ಥಾನದ ರೈಲ್ವೆಗಳ ಮೇಲೆಲ್ಲಾ ಬಹಳವಾಗಿ ಸಂಚಾರ ಮಾಡಿರುತ್ತೇನೆ. ಆಯಾ ರೈಲ್ವೆಗಳ ಸ್ಥಿತಿಗತಿಗಳನ್ನೂ ಕಾರುಬಾರುಗಳನ್ನೂ ಬಹಳ ಸಂಪೂರ್ಣವಾಗಿ ಅಜಮಾಯಿಷಿ ಮಾಡಿರುತ್ತೇನೆ. ಗೌವರ್ನಮೆಂಟಿನವರ ಇರಾದೆಯಂತೆ ನಾನು ಅಮೇರಿಕದಲ್ಲೂ, ಕೆನಡಾರಾಜ್ಯದಲ್ಲೂ ಸಂಚಾರಮಾಡಿ ಆಯಾ ಕಡೆಗಳ ರೈಲ್ವೆಗೆ ಸಂಬಂಧಪಟ್ಟ ವಿದ್ಯಮಾನಗಳನ್ನೆಲ್ಲಾ ಚನ್ನಾಗಿ ಮನದಟ್ಟು ಮಾಡಿಕೊಂಡು ಬಂದಿರುವೆನು. ಕಳೆದ ೧೯೦೧ನೆ ಇಸವಿ ಅಕ್ಟೋಬರಿನಲ್ಲಿ ನಾನು ವಿಲಾಯತಿಯನ್ನು ಬಿಟ್ಟಲಾಗಾಯಿತು ಹಿಂತಿರುಗಿ ಹೋಗುವಷ್ಟರೊಳಗಾಗಿ ೩೩,೦೦೦ ಮೈಲಿಗಳ ಮೇಲೆ ರೈಲ್ ಪ್ರಯಾಣ ಮಾಡಿದಂತಾಗುವದು. ಸರ್ವಸಾಮಾನ್ಯವಾಗಿ ನೋಡಿದರೆ ಹಿಂದುಸ್ಥಾನದಲ್ಲಿ ರೈಲ್ವೆಗಳ ಆಡಳಿತಗಳೂ ಕ್ರಮಗಳೂ ಅಷ್ಟೇನೂ ತೃಪ್ತಿಕರವಾಗಿಲ್ಲವೆಂದು ನನಗೆ ಕಾಣುವದು. ಇದು ರೈಲ್ವೆ ಕಂಪೆನಿಗಳವರ ತಪ್ಪೆಂತಲಾಗಲಿ, ಗೌವರ್ನಮೆಂಟ್ ಅಧಿಕಾರಿಗಳ ತಪ್ಪೆಂತಲಾಗಲಿ ಹೇಳಲಾಗದು. ರೈಲ್ವೆಗಳ ಅಸ್ತಿಭಾರ ಕ್ರಮವೇ ಸರಿಯಾಗಿಲ್ಲವೆಂದು ಹೇಳುತ್ತೇನೆ. ಈ ರೈಲ್ವೆ ಅಸ್ತಿಭಾರ ಕ್ರಮಗಳನ್ನು ತಿದ್ದದ ಹೊರತು ಯಾವ ಶಾಶ್ವತವಾದ ಪ್ರಯೋಜನವೂ ಉಂಟಾಗಲಾರದೆಂದು ನನಗೆ ತೋರುವದು. ಹಿಂದುಸ್ಥಾನದಲ್ಲಿ ರೈಲ್ವೆಗಳು ಅಭಿವೃದ್ಧಿ ಹೊಂದಬೇಕಾಗಿಯೂ ಅವುಗಳಿಂದ ಪ್ರಜೆಗಳಿಗೆ ಪ್ರಯೋಜನವಾಗಬೇಕಾಗಿಯೂ ಇರುವ ಪಕ್ಷದಲ್ಲಿ ಅವುಗಳ ಮೇಲೆ ಸರ್ಕಾರದವರು ಅಧಿಕಾರ ನಡೆಸುವದನ್ನು ತಪ್ಪಿಸಬೇಕು. ರೈಲ್ವೆಗಳು ಸಾಹುಕಾರಿಯಾಗಿ ನಡೆಯುವಂತೆ ಅವುಗಳಿಗೆ ಸ್ವಾತಂತ್ರ್ಯಕೊಡಬೇಕು.

ಸರ್ಕಾರದವರು ಮೇಲ್ವಿಚಾರಣೆಯ ಅಧಿಕಾರಿಗಳನ್ನು ನೇಮಿಸಿರೋಣದರಿಂದ ರೈಲ್ವೆ ಕಂಪೆನಿಯವರು ಅವರ ಸಂಬಳ ಮುಂತಾದ್ದಕ್ಕೆ ವಿಪರೀತ ಹಣ ಕೊಡಬೇಕಾಗಿದೆ ಎಂಬದಾಗಿ ಕಂಪೆನಿಯವರು ಗೋಳಿಟ್ಟುತ್ತಾರೆ. ಈ ಬಾಬಿಗಾಗಿ ೧೯೦೧ರಲ್ಲಿ ಕಂಪೆನಿಯವರಿಗೆ ೧೧,೧೫,೩೦೬ ರೂಪಾಯಿ ಖರ್ಚಾಗಿರುವದು. ಇದಲ್ಲದೆ ಸರ್ಕಾರಿ ರೈಲ್ವೆ ಇಂಜನಿಯರುಗಳು, ಕಂಪೆನಿಯವರು ನಡಸುವ ಚಿಲ್ಲರೆ ಕೆಲಸಗಳಿಗೆಲ್ಲಾ ತಲೆಹಾಕುತ್ತಾರೆ. ಇದರಿಂದ ಕಂಪೆನಿಯ ಕಾರ್ಯಗಳು ಸರಾಗವಾಗಿಯೂ ಜಾಗ್ರತೆಯಿಂದಲೂ ನಡೆಯಲು ಅಡಚಣೆಯಾಗಿದೆ. ಈ ಇಂಜನಿಯರುಗಳು ತಮ್ಮ ಹೆಡ್ ಕ್ವಾರ್ಟರುಗಳಲ್ಲಿ ಯಾವಾಗಲೂ ಇರದೆ ಹವಾ ಬದಲಾಯಿಸಿದ ಹಾಗೆಲ್ಲಾ ಊರೂರು ತಿರುಗುತ್ತಿರುವರು. ಅವರ ಸಮಯ ನೋಡಿ ಅವರಿಂದ ಅಪ್ಪಣೆ ಪಡೆದು ಕಂಪೆನಿಯವರು ಕಾರ್ಯಗಳನ್ನು ನಡಸಬೇಕಾಗಿರುವದು. ಅತ್ತಲಾಗಿ ಈ ಇಂಜನಿಯರುಗಳನ್ನು ಆಗಾಗ್ಯೆ ಸರ್ಕಾರದವರು ಬದಲಾಯಿಸುತ್ತಾ ಇರುವರು. ಹೊಸಬರು ಬಂದು ಕೆಲಸದ ಮಾಹೆತ್ತು ಪಡೆಯುವದರೊಳಗಾಗಿ ಅವರನ್ನು ಇನ್ನೊಂದು ಕಡೆಗೆ ವರ್ಗಮಾಡಿಬಿಡುವರು. ಇದರಿಂದ ಒಂದು ಕೆಲಸ ನಡೆಯುವದಕ್ಕೆ ಬಹಳ ಸಾವಕಾಶವೇ ಆಗುತ್ತೆ. ಈ ಇಂಜನಿಯರುಗಳಾದರೋ ಬಹಳ ಅನುಭವಿಗಳಾದ ಕಂಪೆನಿ ಉದ್ಯೋಗಸ್ಥರ ಮೇಲೂ ಆಕ್ಷೇಪಣೆ ಮಾಡಿ ಅವರ ಕೈಯನ್ನು ಕಟ್ಟಿಬಿಡುತ್ತಾರೆ. ಈ ಪ್ರಕಾರ ಗೌವರ್ನಮೆಂಟಿನವರ ಮೇಲ್ವಿಚಾರಣೆಯು ಬಹಳ ಕಠಿಣವಾಗಿರುವದರಿಂದ ಈ ರೈಲ್ವೆಗಳು ಪ್ರಜೆಗಳಿಗಾಗಲಿ, ಕಂಪೆನಿಯ ಷೇರುದಾರರಿಗಾಗಲಿ, ಗೌವರ್ನಮೆಂಟಿನವರಿಗೇ ಆಗಲಿ ಪ್ರಯೋಜನಕಾರಿಗಳಾಗಿಲ್ಲ. ಕಂಪೆನಿಗಳವರು ತಮ್ಮ ಕಡೆಯ ಅಧಿಕಾರಿಗಳಿಂದ ಕೆಲಸ ನಡಸುತ್ತಾ ಇದ್ದಾರೆ. ಇದು ಸಾಲದೆಂದು ಹೇಳಿ ಸರ್ಕಾರದವರು ತಮ್ಮ ಕಡೆಯ ಅಧಿಕಾರಿಗಳನ್ನು ನೇಮಿಸಿ ಕಳುಹಿಸುವರು. ಹೀಗೆ ಒಂದು ವಿಷಯಕ್ಕೆ ಇಬ್ಬರು ತಲೆಹಾಕುವದರಿಂದ ತುಂಬಾ ಅನನುಕೂಲ ಉಂಟಾಗುವದು. ಆದ್ದರಿಂದ ಸರ್ಕಾರದವರು ಇದಕ್ಕಾಗಿ ಇಟ್ಟಿರುವ ಸಿಬ್ಬಂದಿಯನ್ನು ತೆಗೆದುಬಿಡುವದು ಉತ್ತಮ. ಹೀಗೆ ಮಾಡಿದರೆ ಈ ರೈಲ್ವೆ ಕಂಪೆನಿಗಳು ಸಕಲರಿಗೂ ಪ್ರಯೋಜನವನ್ನುಂಟುಮಾಡುವವು.

ಹಿಂದುಸ್ಥಾನದಲ್ಲಿ ರೈಲ್ವೆ ಬಾಬನ್ನು ಉಚ್ಛ್ರಾಯ ಸ್ಥಿತಿಗೆ ತರಬೇಕಾದರೆ ಅವುಗಳ ಮೇಲ್ವಿಚಾರಣೆಗೆ ಒಂದು ಸಂಘವನ್ನು ಕಲ್ಪಿಸಬೇಕು. ರೈಲ್ವೆ ವಿಚಾರದಲ್ಲಿ ತುಂಬಾ ಪರಿಶ್ರಮವಿರತಕ್ಕ ೩—೪ ಮಂದಿಯನ್ನು ಈ ಸಂಘಕ್ಕೆ ಮೆಂಬರಾಗಿ ಸೇರಿಸಬೇಕು. ಗೌವರ್ನಮೆಂಟಿನವರು ಈ ಏರ್ಪಾಡನ್ನು ಮಾಡಿದರೆ ವರುಷಕ್ಕೆ ೫ ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿಯೇ ಮಿಗತೆ ಆದೀತು. ಪ್ರತಿ ರೈಲ್ವೆ ಕಂಪೆನಿಯ ಮ್ಯಾನೇಜರರೂ ಏಜಂಟರೂ ಚನ್ನಾಗಿ ಕೆಲಸದ ಅನುಭವವಿರತಕ್ಕವರಾಗಬೇಕು. ಈಗ ಇಂಥಾ ಅನುಭವವು ಅವರಿಗೆ ಇರುವದಿಲ್ಲ. ಕಂಪೆನಿಗೆ ಮೇಲ್ಪಟ್ಟ ಅಧಿಕಾರಿಗಳು ಆಗಿಂದಾಗ್ಯೆ ವಿಲಾಯತಿಯಿಂದ ಬಂದು, ಕಾರ್ಯಗಳು ಸರಿಯಾಗಿ ನಡೆಯುತ್ತಿರುವದನ್ನೂ ಹೊಸ ಏರ್ಪಾಡುಗಳನ್ನೂ ಕಣ್ಣಾರ ನೋಡಿಕೊಂಡು ಹೋಗುತ್ತಿರಬೇಕು. ಇಷ್ಟು ಮಾತ್ರವೇ ಅಲ್ಲ. ಹಿಂದುಸ್ಥಾನದ ರೈಲ್ವೆಗಳಲ್ಲಿ ಮಾಡಿಸಬೇಕಾಗಿರುವ ಹೊಸ ಬದಲಾವಣೆಗಳು ಅನೇಕವಾಗಿರುತ್ತವೆ. ಅವು ಯಾವವೆಂದರೆ:—

(೧) ಹಿಂದುಸ್ಥಾನಕ್ಕೆ ತಕ್ಕಷ್ಟು ರೈಲ್ವೆ ಲೈನುಗಳಿಲ್ಲ, ಹೊಸ ರೈಲ್ ರಸ್ತೆಗಳನ್ನು ಬೇಗ ಬೇಗನೆ ಕಾಮಗಾರಿ ಮಾಡಿಸಬೇಕು. (೨) ಗೌವರ್ನಮೆಂಟಿನವರು ಒಂದು ರೈಲ್ವೇ ಫಂಡನ್ನು ಪ್ರಾರಂಭಿಸಿ, ಕಂಪೆನಿಯ ಷೇರುದಾರರಿಗೆ ಸಲ್ಲುವ ಬಡ್ಡಿ ಹಣಕ್ಕೆ ಲೋಪವುಂಟಾಗದಂತೆ ನೋಡಿಕೊಳ್ಳಬೇಕು. ಈ ಫಂಡಿನಲ್ಲಿ ೧೫ ಕೋಟಿ ರೂಪಾಯಿ ಮೂಲಧನವಾಗಿಟ್ಟರೆ ತುಂಬಾ ಕ್ಷೇಮ. (೩) ಹಿಂದುಸ್ಥಾನದಲ್ಲಿ ರೈಲ್ವೆಗಳು ಹುಟ್ಟಿ ಐವತ್ತು ವರುಷಗಳಾಗಿದ್ದಾಗ್ಯೂ ರೈಲ್ ಗಾಡಿಗಳನ್ನು ಅತಿ ವೇಗವಾಗಿ ಓಡಿಸುವದಿಲ್ಲ. ಈಗ ಗಂಟೆಗೆ ೨೦—೩೦ ಮೈಲಿ ಪ್ರಕಾರ ಹೋಗುವ ರೈಲೇ ಬಹಳ ವೇಗವೆನಿಸಿಕೊಂಡಿದೆ. ಸಾಧಾರಣವಾಗಿ ಎಲ್ಲಾ ರೈಲ್ ಗಾಡಿಗಳೂ ಗಂಟೆಗೆ ೩ರಿಂದ ೧೨ ಮೈಲಿಯಷ್ಟು ನಿಧಾನವಾಗಿ ಹೋಗುವವು. ಅಮದು ರಸ್ತೆ ಹೆಚ್ಚಾಗಿಲ್ಲವಾದ್ದರಿಂದ ಗಾಡಿಗಳನ್ನು ವೇಗವಾಗಿ ಬಿಡುವದಿಲ್ಲವೆಂದು ಹೇಳುವ ಕಾರಣವು ಯೋಗ್ಯವಾದದ್ದಲ್ಲ. ಯಾಕೆಂದರೆ ಈ ರಾಷ್ಟ್ರದ ರೈಲ್ ಗಾಡಿಗಳಲ್ಲಿ ಜನರು ಪ್ರಯಾಣಮಾಡುವಷ್ಟು ಪ್ರಪಂಚದ ಇನ್ಯಾವ ದೇಶದಲ್ಲೂ ಇಲ್ಲ. ವ್ಯಾಪಾರಾಭಿವೃದ್ಧಿಗೂ ಪ್ರಜಾ ಸೌಕರ್ಯಕ್ಕೂ ಕಂಪೆನಿಯವರು ರೈಲ್ ಗಾಡಿಗಳ ವೇಗವನ್ನು ಬಹಳವಾಗಿ ಹೆಚ್ಚು ಮಾಡಬೇಕು. (೪) ಹಿಂದುಸ್ಥಾನದಲ್ಲಿ ರೈಲ್ ಕಂಪೆನಿಯವರು ಮೂರನೇ ತರಗತಿಯ ಪ್ರಯಾಣಿಕರ ವಿಷಯದಲ್ಲಿ ಅಷ್ಟೇನೂ ಮಮಕಾರವಿಟ್ಟಿರುವದಿಲ್ಲ. ೧—೨ನೇ ತರಗತಿಗಳ ಪ್ರಯಾಣಿಕರಿಂದ ಬರುವ ವರಮಾನ ಬಹಳ ಸ್ವಲ್ಪವಾಗಿದ್ದರೂ ಕಂಪೆನಿಯವರು ಅವರಿಗೆ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತಾರೆ. ೩ನೆ ತರಗತಿಯ ಪ್ರಯಾಣಿಕರಿಂದಲೇ ರೈಲು ನಿಂತಿದೆ ಎಂದು ಹೇಳಬೇಕಾಗಿರುವದರಿಂದ ಅವರಿಗೆ ಅನುಕೂಲಗಳನ್ನು ಹೆಚ್ಚು ಹೆಚ್ಚಾಗಿ ಕಲ್ಪಿಸಿಕೊಡಬೇಕು. ಒಂದು ಗಾಡಿಯಲ್ಲಿ ಹಿಡಿಯುವಷ್ಟಕ್ಕಿಂತಲೂ ಹೆಚ್ಚು ಜನರನ್ನು ಕೂಡಿಸಬೇಕೊಡದು. ಯಾತ್ರಾರ್ಥಿಗಳನ್ನು ವಾಗನ್ ಬಂಡಿಗಳಲ್ಲಿ ಕೂಡಿ ಊರಿಂದೂರಿಗೆ ಸಾಗಿಸುತ್ತಾರೆ. ಇದರಿಂದಲೇ ರೈಲ್ವೆಯವರು ಸರಿಯಾದ ಕ್ರಮಗಳನ್ನು ಅನುಸರಿಸುವದಿಲ್ಲವೆಂಬುವದು ವ್ಯಕ್ತಪಡುತ್ತೆ. ೩ನೆ ತರಗತಿಯ ಪ್ರಯಾಣಿಕರಿಗಾಗಿ ಇಟ್ಟಿರುವ ಗಾಡಿಗಳು ಸಾಲವು. ಇದಲ್ಲದೆ ಅವರನ್ನು ನಾನಾ ಕಷ್ಟಗಳಿಗೆ ಗುರಿಪಡಿಸುತ್ತಾರೆ. ಅಲ್ಪ ನೌಕರರು ಅವರನ್ನು ಬಯ್ಯುವದು, ಹೊಡೆಯುವದು, ಅವಮಾನಕರವಾಗಿ ಅನ್ನುವದು, ಅವರಿಂದ ದುಡ್ಡು ಕಿತ್ತುಕೊಳ್ಳುವದು, ಇವೇ ಮೊದಲಾದ ಅನೇಕ ಅಕೃತ್ಯಗಳನ್ನು ನಡಿಸುತ್ತಾರೆ. ಈ ಭಾಗವು ಬೇಗನೆ ಕಂಪೆನಿಯವರ ದೃಷ್ಟಿಗೆ ಬರಬೇಕು; ಮತ್ತು ಕಂಪೆನಿಯವರು ಅವರಿಗೆ ಬೇಕಾಗಿರುವ ಸೌಕರ್ಯಗಳನ್ನೆಲ್ಲಾ ಶೀಘ್ರವಾಗಿ ಕಲ್ಪಿಸಿಕೊಡಬೇಕು. (೫) ಇನ್ನು ೫ ವರುಷಗಳೊಳಗಾಗಿ ಎಲ್ಲಾ ರೈಲು ಗಾಡಿಗಳಲ್ಲೂ ರಾತ್ರಿ ಹೊತ್ತು ವಿದ್ಯುಚ್ಛಕ್ತಿಯ ದೀಪಗಳು ಉರಿಯುವಂತೆಯೂ, ಹಗಲು ಹೊತ್ತಿನಲ್ಲಿ ವಿದ್ಯುಚ್ಛಕ್ತಿಯ ಸಹಾಯ

ದಿಂದ ಗಾಡಿಗಳಲ್ಲಿ ಬೇಕಾಗಿಗೆಗಳು ಹಾಕುತ್ತಿರುವಂತೆಯೂ ಸರ್ಕಾರದವರು ಕಂಪನಿಯವರಿಗೆ ಹುಕುಂ ಕೊಟ್ಟು ಮಾಡಬೇಕು. (೬) ಸಾಮಾನುಗಾಡಿ ಹೋಗುವದನ್ನು ಇನ್ನೂ ವೇಗಮಾಡಬೇಕು. ಈಗ ಅಂಥಾ ರೈಲ್‌ಗಾಡಿಗಳು ಗಂಟೆಗೆ ೬ ಇಲ್ಲವೇ ೭ ಮೈಲಿಯಂತೆ ಓಡುವವು. ಇದು ಸಹಿಸಕೂಡದಷ್ಟು ಸಾವಕಾಶವಾಗಿರುತ್ತದೆ. (೭) ಪ್ರಯಾಣಿಕರಿಂತಲೂ ಸಾಮಾನುಗಳಿಗೂ ಕಂಪನಿಯವರು ವಸೂಲ್ಮಾಡುವ ಭಾಡಿಗೆ ದರಗಳು ಬಹಳ ಹೆಚ್ಚಾಗಿರುತ್ತವೆ. ಈ ದರವು ವಿಲಾಯತಿಯಲ್ಲಿರುವದಕ್ಕಿಂತಲೂ ಹೆಚ್ಚು. ಪ್ರಯಾಣಿಕರಿಗೆ ಈಗ ಗೊತ್ತುಮಾಡಿರುವ ಭಾಡಿಗೆಯಲ್ಲಿ ಶೇಕಡ ೧೮ ರಿಂದ ೪೦ ತನಕ ಕಡಿಮೆ ಮಾಡಬಹುದು; ಸಾಮಾನುಗಳ ಭಾಡಿಗೆಯನ್ನು ೩೦ ರಿಂದ ೬೦ ರ ವರೆಗೆ ಕಡಿಮೆ ಮಾಡಬಹುದು; ಮತ್ತು ಕಲ್ಲಿದ್ದಿಲ ದರವನ್ನು ಶೇಕಡ ೪೦ ರಿಂದ ೬೦ ರ ತನಕ ಕಮ್ಮಿ ಮಾಡಬಹುದು. (೮) ಹಗಲು ಹೊತ್ತಿನಲ್ಲಿ ರೈಲ್ ಗಾಡಿ ವೇಗವಾಗಿ ಹೋಗುವಾಗ್ಯೆ ಧೂಳು ವಿಪರೀತವಾಗಿ ನುಗ್ಗಿ ಪ್ರಯಾಣಿಕರಿಗೆ ಜಿಗುಪ್ಸೆಯನ್ನುಂಟುಮಾಡುವದು. ಆದ್ದರಿಂದ ಅಮೇರಿಕದಲ್ಲಿ ಹ್ಯಾಗೋ ಹಾಗೆ ಈ ರಾಷ್ಟ್ರದಲ್ಲೂ ರೈಲ್ ರಸ್ತೆಗಳಿಗೆ ಯಣ್ಣೆಯನ್ನು ಎರಚಬೇಕು. (೯) ರೈಲ್ವೆ ಸಿಗ್ನಲರುಗಳನ್ನು ಚನ್ನಾಗಿ ತರಬೇತು ಮಾಡಿ, ಯೋಗ್ಯರಾದವರಿಗೇನೇ ಆ ಕೆಲಸ ಕೊಡಬೇಕು — ಇತ್ಯಾದಿ.

ಈ ಮೇಲ್ಕಂಡ ವಿಚಾರಗಳಿಗೆಲ್ಲಾ ಸರಕಾರದವರೂ ರೈಲ್ವೆ ಕಂಪನಿಗಳವರೂ ಕೂಡಲೇ ಗಮನಕೊಟ್ಟು, ಆ ಪ್ರಕಾರ ನಡೆಯುವಂತಾದರೆ ರೈಲ್ವೆಗಳಿಂದ ಪ್ರಜೆಗಳಿಗೂ, ಕಂಪನಿಯವರಿಗೂ, ಗೌವರ್ನಮೆಂಟಿನವರಿಗೂ ತುಂಬಾ ಪ್ರಯೋಜನವಾಗುವದಲ್ಲದೆ ರೈಲ್ವೆಗಳು ತುಂಬಾ ಉಚ್ಛ್ರಾಯಸ್ಥಿತಿಗೆ ಬಂದಾವು.

ಈ ಪ್ರಕಾರ ಮಿ॥ ರಾಬರ್ಟ್‌ಸನ್ ಯವರು ರಿಪೋರ್ಟ್ ಬರೆದು ಇಂಡಿಯಾ ಗೌವರ್ನಮೆಂಟಿಗೆ ಕಳುಹಿಸಿರುತ್ತಾರೆ. ಗೌವರ್ನಮೆಂಟಿನವರಾದರೋ ಅದನ್ನು ೧೫೦ ಪ್ರತಿ ಮಾಡಿಸಿ, ಹಿಂದುಸ್ಥಾನದ ದಕಲುದ್ದೇದಾರರಿಗೂ, ರೈಲ್ವೆ ಕಂಪನಿಗಳ ಮುಖಂಡರಿಗೂ ಒಂದೊಂದು ಪ್ರತಿಯನ್ನು ಕಳುಹಿಸಿಕೊಟ್ಟು, ಅವರಲ್ಲಿ ಕಂಡ ವಿಷಯಗಳ ಮೇಲೆ ಪ್ರತಿ ಒಬ್ಬರೂ ತಮ್ಮ ತಮ್ಮ ಅಭಿಪ್ರಾಯವನ್ನು ಬರೆದು ತಿಳಿಸಬೇಕೆಂದು ಆಜ್ಞೆ ಮಾಡಿರುತ್ತಾರೆ.

## ಇಂಡಿಯಾ ದೇಶದ ವೃತ್ತಾಂತಗಳು.

ಕಾಶೀ ಪಟ್ಟಣದಲ್ಲಿ ಧೋಬಿಗಳು ಸಮಾಧಾನ ಹೊಂದಿ ತಮ್ಮ ಕಸಬನ್ನು ಮಾಡಲಾರಂಭಿಸಿದಾರೆ. ಜನರಿಗೆ ಅನುಕೂಲವಾಗಿರುವದು.

❖❖❖❖

ಕಳೆದ ಶುಕ್ರವಾರ ಬೆಳಿಗ್ಗೆ ರಂಗೂನ್ ಪಟ್ಟಣದ ಧೋಬಿ ಲೈನ್ ಮನೆಗಳಿಗೆ ಬೆಂಕಿ ಬಿದ್ದು ಸುಮಾರು ೧೫,೦೦೦ ರೂ. ಸಾಮಾನುಗಳು ಸುಟ್ಟು ಹೋದವು.

❖❖❖❖

ರೇವಾ ಸಂಸ್ಥಾನದ ಮಹಾರಾಣಿಯವರು ನೀಲಗಿರಿಬೆಟ್ಟಕ್ಕೆ ಬಂದಿದಾರೆ. ಮದರಾಸ್ ಗವರ್ನರವರು ಕಳೆದ ವಾರ ಆಕೆಯವರನ್ನು ಕಂಡು, ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬಂದರು.

❖❖❖❖

ಜಯಪುರದ ಮಹಾರಾಜರವರು ಮುಂದಿನ ತಿಂಗಳಲ್ಲಿ ಸಿಮ್ಲಾ ಪಟ್ಟಣಕ್ಕೆ ಹೋಗುವವರಾಗಿದಾರೆ. ದರ್ಭಾಂಗದ ಮಹಾರಾಜರು ಅವರಿಗೆ ತಮ್ಮ ಬಂಗಲೆಯಲ್ಲಿ ಇಳುಕೊಳ್ಳಬಹುದೆಂದು ತಿಳಿಸಿರುವರು.

❖❖❖❖

ಕಲ್ಕತ್ತೆಯಲ್ಲಿ ಒಬ್ಬ ವಾದಿಯು ಕೋರ್ಟಿನಲ್ಲಿ ಜಡ್ಜಿಗಳ ಮುಂದೆ ಗಂಗಾನದಿಯ ನೀರನ್ನು ಹಿಡಿದು ಪ್ರಮಾಣಮಾಡಿ, ಪ್ರತಿವಾದಿಯಿಂದ ತನಗೆ ಬರಬೇಕಾಗಿದ್ದ ಸಾಲವನ್ನು ವಸೂಲ್ಮಾಡಿಕೊಂಡನು.

❖❖❖❖

ಮಡಿಕೇರಿಯಲ್ಲಿ ಕೊಡಗರ ಸೈನಿಕರನ್ನು ಜಮಾಯಿಸಿ ಇಟ್ಟಿದಾರಷ್ಟೆ. ಇವರಿರುವದಕ್ಕೆ ಲೈನ್ ಮನೆಗಳನ್ನು ಕಟ್ಟಬೇಕೆಂದು ಇಂಡಿಯಾ ಗವರ್ನಮೆಂಟಿನವರು ೨,೧೮,೭೭೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

❖❖❖❖

ಕನಡಾ ರಾಜ್ಯದ ಗವರ್ನರ್ ಜನರಲ್‌ರಾಗಿರುವ ಲಾರ್ಡ್ ಮಿಂಟೋ ಯವರು ಹಿಂದುಸ್ಥಾನಕ್ಕೆ ವೈಸರಾಯಿಯವರಾಗಿ ದಯಮಾಡುತ್ತಾರೆಂದು ವರ್ತಮಾನ ಹುಟ್ಟಿದೆ. ಅವರು ಅಲ್ಲಿ ಗವರ್ನರ್ ಜನರಲ್‌ರಾಗಿ ೫ ವರುಷಗಳು ತುಂಬಿದವು.

❖❖❖❖

ಈ ತಿಂಗಳು ೩೦ ನೇ ತಾರೀಖು ಶನಿವಾರದ ದಿನ (ನಾಡಿದ್ದು) ಹಿಂದುಸ್ಥಾನದಲ್ಲೆಲ್ಲಾ ಮಹಾರಾಜಾ ಚಕ್ರವರ್ತಿಯವರ ಜನ್ಮದಿನದ ಜ್ಞಾಪಕಾರ್ಥವಾಗಿ ರಜಾ ದೊರೆಯುವದು. ಆ ದಿನ ಸರ್ಕಾರಿ ಕೋರ್ಟ್ ಕಛೇರಿಗಳೂ ಸ್ಕೂಲುಗಳೂ ಮುಚ್ಚಲ್ಪಡುವವು.

❖❖❖❖

ರಾಮುಲಾಲ ವರ್ಮನೆಂಬೊಬ್ಬ ಬಂಗಾಳಿಯು ಈಚೆಗೆ ಹಿಂದುಸ್ಥಾನದಲ್ಲೆಲ್ಲಾ ಸಂಚಾರಮಾಡುತ್ತಾ, ತಾನು ದೊಡ್ಡ ದೊಡ್ಡ ಕಂಪನಿಗಳ ಏಜಂಟೆಂದು ಹೆಸರಿಟ್ಟುಕೊಂಡು, ಮದರಾಸ್, ಬೊಂಬಾಯಿ, ಕಲ್ಕತ್ತೆ, ಅಲಹಾಬಾದು ಮುಂತಾದ ನಗರಗಳಲ್ಲಿ ವರ್ತಕಮಂಡಲಿಯವರನ್ನೂ ಇತರ ಸಾಹುಕಾರರನ್ನೂ ಮೋಸಪಡಿಸುತ್ತಿದ್ದನು. ಕಳೆದ ವಾರ ಕಲ್ಕತ್ತೆಯಲ್ಲಿ ಇವನು ಸಿಕ್ಕಿಬಿದ್ದನು. ಇವನಿಗೆ ೫ ವರುಷ ಕಠಿಣ ಸಜಾ ಆಗಿರುವದು.

ಹೈದರಾಬಾದ್ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾಗಿರುವ ಸರ್ ಡೇವಿಡ್ ಬಾರ್ ಯವರ ಅಧಿಕಾರದ ಅವಧಿಯು ಬರುವ ನವಂಬರಿಗೆ ಆಖೈರಾಗುವದೆಂತಲೂ, ಅವರನ್ನೇ ಮತ್ತೆ ಮುಂದಿನ ಮಾರ್ಚ ಆಖೈರು ವರೆಗೆ ರೆಸಿಡೆಂಟರಾಗಿ ಕೆಲಸ ನೋಡುವಂತೆ ಹುಕುಂ ಆಗುವದೆಂತಲೂ ಪ್ರಕಟವಾಗಿದೆ.

❖❖❖❖

ಬೊಂಬಾಯಿ ಪಟ್ಟಣದ ರಾವ್ ಸಾಹೇಬ್ ಚಂದೂಲಾಲ್ ಲಲ್ಲೂಭಾಯಿ ಯವರ ಮನೆಯಲ್ಲಿ ವಾಸಮಾಡಿಕೊಂಡಿದ್ದ ಶ್ರೀಸ್ವರ್ಣಾನಂದ ಭಾಗೀರಥಿ ಮಹಾರಾಜರವರು ಕಳೆದ ವಾರ ಕಾಲವಾದರು. ಇವರಿಗೆ ಮರಣಕಾಲದಲ್ಲಿ ೧೧೯ ವರುಷ ವಯಸ್ಸಾಗಿತ್ತು. ಸಾಯುವ ತನಕ ಅವರು ಬ್ರಹ್ಮಚಾರಿಗಳಾಗಿಯೇ ಇದ್ದರು.

❖❖❖❖

ಹೈದರಾಬಾದಿನ ಕಾಡುಗಳಲ್ಲಿ ಈ ವರುಷ ೨೩ ಭಾರಿ ಹುಲಿಗಳನ್ನು ಶಿಕಾರಿ ಮಾಡಿರುತ್ತಾರೆ. ಅವು ಇನ್ನೂ ಅನೇಕವಾಗಿದ್ದು ಜನರಿಗೂ ಗೋಕಾಯಿಗಳಿಗೂ ಬಹಳ ಕಷ್ಟನಷ್ಟಗಳನ್ನುಂಟುಮಾಡುತ್ತಿರುವವೆಂದು ಪ್ರಕಟವಾಗಿದೆ. ಶಿಕಾರಿಯ ಉದ್ದಿಶ್ಯ ನೈಜಾಮರವರೂ ಮೊನ್ನೆ ಶನಿವಾರ ಪ್ರಯಾಣಮಾಡಿರುತ್ತಾರೆ.

❖❖❖❖

ಡಾರ್ಜಿಲಿಂಗ್ ನಗರದಲ್ಲಿ ವಿಕ್ಟೋರಿಯಾ ಮೆಮೋರಿಯಲ್ ಆಸ್ಪತ್ರೆ ಕಟ್ಟ ತಯಾರಾಯಿತು. ಕಳೆದ ವಾರ ಬಂಗಾಳಾ ಲೆಫ್ಟಿನೆಂಟ್ ಗವರ್ನರವರು ಅದನ್ನು ಪ್ರತಿಷ್ಠೆ ಮಾಡಿದರು. ನೂರಾರು ಮಂದಿ ಯೂರೋಪ್ಯನ್ ಸರ್ದಾರರೂ, ಹಿಂದೂ ದೊಡ್ಡ ಮನುಷ್ಯರೂ ಆ ದಿನ ಸೇರಿದ್ದು ಕಾರ್ಯವನ್ನು ಆಗಮಾಡಿಸಿದರು.

❖❖❖❖

ಚಿಟ್ಟೆಗಳು ವಿಪರೀತವಾಗಿ ಹೆಚ್ಚಿ ಪಶ್ಚಿಮಘಟ್ಟಗಳಲ್ಲಿ ಬೆಳದಿರುವ ಗಿಡ ಮರಗಳ ಎಲೆಗಳನ್ನೆಲ್ಲಾ ತಿಂದು ಬರಿದು ಮಾಡಿ, ಈಗ ಬೆಲ್ಗಾಂವ ಡಿಸ್ಟ್ರಿಕ್ಟಿನ ಕಡೆ ಬಂದಿರುತ್ತವೆ. ಅಲ್ಲಿಯೂ ಈಗತಾನೇ ಚಿಗುರಿರುವ ಮರಗಳನ್ನೆಲ್ಲಾ ಹಾಳುಮಾಡುತ್ತಿರುವವು. ಅವು ಕಳೆದ ವರುಷ ಇದೇ ಕಾಲದಲ್ಲಿ ಹುಟ್ಟ ಬೆಳೆಗಳನ್ನು ನಾಶಮಾಡಿದ್ದವು.

❖❖❖❖

ಲಂಕಾ ದ್ವೀಪಕ್ಕೆ ಸೇರಿದ ಪಂಡನೂರಿನಲ್ಲಿ ಜಡ್ಜಿಯು ಕೋರ್ಟಿನೊಳಗೆ ಒಂದು ಮೊಕದ್ದಮೆಯನ್ನು ಫೈಸಲ್ಮಾಡಿ ವಾದಿಗೆ ಡಿಕ್ರಿಕೊಟ್ಟನು. ಕೂಡಲೇ ಪ್ರತಿವಾದಿಗೆ ಕೋಪಬಂದು ಒಂದು ಚಾಕುವಿನಿಂದ ವಾದಿಯನ್ನು ನಾಲ್ಕಾರುಸಲ ತಿವಿದು ಕೋರ್ಟಿನಲ್ಲೇ ಕೆಡವಿದನು. ವಾದಿಯು ಆಸ್ಪತ್ರೆಯಲ್ಲಿದಾನೆ; ಬದುಕುವ ಹಾಗಿಲ್ಲ.

❖❖❖❖

ಕಳೆದ ೧೯೦೨ನೇ ಇಸವಿಯಲ್ಲಿ ಮದರಾಸ್ ಆಧಿಪತ್ಯದೊಳಗೆ ಹಾವು ಕಡಿದು ಸತ್ತವರ ಸಂಖ್ಯೆಯು ಹಿಂದಿನ ಸಾಲಿಗಿಂತ ೨೮೮ ಹೆಚ್ಚು. ತಿರುಚನಾಪಲ್ಲಿ, ವಾಲ್ಯ, ದಕ್ಷಿಣ ಆರ್ಕಾಟುಗಳಲ್ಲೇ ಬಹಳ ಜನರು ಹಾವುಕಡಿದು ಸತ್ತರು. ಕಳೆದ ವರುಷ ಜನರು ೮೧೩ ಕಾಡು ಮೃಗಗಳನ್ನು ಕೊಂದದ್ದಕ್ಕೆ ಸರ್ಕಾರದವರು ಇನಾಮು ಕೊಟ್ಟದಾರೆ.

❖❖❖❖

ಕಲ್ಲೀಕೋಟೆಯ ಬಳಿ ಫೀರೋಕವೆಂಬ ಸ್ಥಳದಿಂದ ಕೆಲವರು ಒಂದು ದೊಡ್ಡ ಮೊಸಳೆಯನ್ನು ಹಿಡಿದುಕೊಂಡು ಬಂದರು. ಅದರ ಹೆಸರು ಮಕರಮತ್ಸ್ಯವಂತೆ. ಅದು ೧೮ ಅಡಿ ಉದ್ದವಾಗಿಯೂ ೭ ಅಡಿ ಗಾತ್ರವಾಗಿಯೂ ಇರುವದು. ಜನರು ಇದನ್ನು ಕೊರೆದು ಕೊಂದು, ಅದರ ಹೊಟ್ಟೆಯನ್ನು ಬಿಚ್ಚಿದಾಗ ದೊಡ್ಡ ಬೂದಿಕುಂಬಳಕಾಯಿನಷ್ಟು ಗಾತ್ರವುಳ್ಳ ಕೊಬ್ಬು ಸಿಕ್ಕಿತು.

❖❖❖❖

ಕೊಚ್ಚಿ ಸಂಸ್ಥಾನವು ಮದರಾಸ್ ಬ್ಯಾಂಕಿಗೆ ೪ ಲಕ್ಷ ರೂಪಾಯಿ ಸಾಲ ಕೊಡಬೇಕು. ಆ ಸಂಸ್ಥಾನದ ದೇವಸ್ಥಾನಗಳ ಮೂಲಧನದಿಂದ ೨ ಲಕ್ಷ ರೂಪಾಯಿ ಸಾಲ ತೆಗೆದುಕೊಂಡಿದಾರೆ. ಇದಲ್ಲದೆ ಫಾರೆಸ್ಟ್ ರೈಲ್ವೆ ಕಾಮಗಾರಿಗೋಸ್ಕರ ೪ ಲಕ್ಷ ರೂಪಾಯಿ ಬೇಕಾಗಿದೆ. ಈ ಬಾಬುಗಳಿಗೋಸ್ಕರ ಸರ್ಕಾರದವರು ಹತ್ತು ಲಕ್ಷ ರೂಪಾಯಿ ಹೊರಗಿನಿಂದ ಸಾಲತರಬೇಕೆಂದು ಗೊತ್ತುಮಾಡಿರುತ್ತಾರೆ.

❖❖❖❖

ಪಂಜಾಬಿಗೆ ಸೇರಿದ ಮುಲ್ಕೋವಾಳೆಂಬ ಗ್ರಾಮದಲ್ಲಿ ಸರ್ಕಾರದವರು ಪ್ಲೇಗ್ ಲಿಂಫನ್ನು ಕೆಲವರಿಗೆ ಹಾಕಿದ್ದರಿಂದ ೧೯ ಜನರು ಮೃತಪಟ್ಟದ್ದೂ, ಅದಕ್ಕೆ ಕಾರಣ ಮುಂತಾದ್ದನ್ನು ಕುರಿತು ಕಮಿಷನ್ ಜಡ್ಜಿಗಳು ತನಿಖೆಮಾಡುತ್ತಿದ್ದದ್ದೂ ನಮ್ಮ ವಾಚಕರಿಗೆ ತಿಳಿದೆಯಷ್ಟೆ. ಈ ಜಡ್ಜಿಗಳು ರಿಪೋರ್ಟ್ ಬರೆದು ವಿಲಾಯತಿಗೆ ರವಾನೆ ಮಾಡಿರುತ್ತಾರೆ. ಅದು ಹಿಂದುಸ್ಥಾನದಲ್ಲಿ ಪ್ರಕಟವಾಗುವದೋ ಇಲ್ಲವೋ ಸಂಶಯವಾಗಿದೆ.

❖❖❖❖

ಟ್ರಾವನ್‌ಕೂರು ಸಂಸ್ಥಾನದಲ್ಲಿರುವ ಕಸಬುದಾರಿ ಪಾಠಶಾಲೆಯ ಸೂಪರಿಂಟೆಂಡಾದ ಮಿ॥ ಕೆ. ನಾರಾಯಣಯ್ಯರು ಬಾಳೇನಾರಿನಲ್ಲಿ ಬಹು ಶುಭ್ರವಾದ ಮತ್ತು ತುಂಬಾ ಹಗುರವಾದ ರುಮಾಲುಗಳನ್ನೂ ಟೋಪಿಗಳನ್ನೂ ಮಾಡಿಸಬಹುದೆಂತಲೂ, ಇವು ತುಂಬಾ ಅಗ್ಗವಾಗಿಯೂ ಬಾಳಿಕೆಯಾಗಿಯೂ ಇರುವವೆಂತಲೂ ಪರೀಕ್ಷೆ ಮಾಡಿ ಪ್ರಕಟಿಸಿರುತ್ತಾರೆ. ಈ ರಾಷ್ಟ್ರದಲ್ಲಿ ಬಾಳೇನಾರು ವಿಪರೀತವಾಗಿ ಸಿಕ್ಕುವದು; ಜನರು ಅದನ್ನು ವ್ಯರ್ಥವಾಗಿ ಎಸೆದುಬಿಡುವರು. ಯಾರಾದರೂ ಮೇಲ್ಕಂಡ ಪಾಠಶಾಲೆಗೆ ಹೋಗಿ ಈ ನಾರಿನಿಂದ ಬಟ್ಟೆ ತಯಾರ್ಮಾಡುವ ವಿಧಾನವನ್ನು ಕಲಿತುಕೊಂಡು ಬಂದರೆ ಎಷ್ಟೋ ಪ್ರಯೋಜನವಾದೀತು.

ತಿರುವಾಂಕೂರು ಸಂಸ್ಥಾನದ ಸೆನ್ಸಸ್ ರಿಪೋರ್ಟ್ ಪ್ರಕಟವಾಗಿದೆ. ಅದು ೭,೦೯೧ ಚದರ ಮೈಲಿ ವಿಸ್ತಾರವುಳ್ಳ ಸಂಸ್ಥಾನವಾಗಿದೆ. ಈ ಪೈಕಿ ೯೬೨ ಚದರ ಮೈಲಿ ಜಮೀನಿನಲ್ಲಿ ಯೇಲಕ್ಕಿಯನ್ನು ಬೆಳೆಯುತ್ತಾರೆ. ಕಳೆದ ೧೮೯೧ನೇ ಇಸವಿಯಲ್ಲಿ ಆ ಸಂಸ್ಥಾನದಲ್ಲಿ ೨೫,೫೭,೭೩೬ ಪ್ರಜೆಗಳಿದ್ದರು. ಈಗಲಾದರೋ ೧೯೦೧ ನೇ ಇಸವಿಯ ಖಾನೇಷುಮಾರಿ ಲೆಕ್ಕದ ಪ್ರಕಾರ ಅದು ೨೯,೫೨,೧೫೭ ಪ್ರಜಾಸಂಖ್ಯೆಯನ್ನುಳ್ಳದ್ದಾಗಿರುತ್ತೆ.

❖❖❖❖

ಕಳೆದ ೧೮೯೯ನೇ ಇಸವಿ ಸೆಪ್ಟಂಬರ್ ೮ ರಲ್ಲಿ ಬೊಂಬಾಯಿ ಕೋಟೆ ಪೋಸ್ಟಾಫೀಸಿನಲ್ಲಿ ಒಬ್ಬನು ಅಲ್ಲಿಂದ ೩೦೦ ಗಜ ದೂರದಲ್ಲಿರುವ ತನ್ನ ಸ್ನೇಹಿತನಿಗೆ ಒಂದು ಕಾಗದವನ್ನು ಹಾಕಿದನು. ಈ ಕಾಗದ ವಿಳಾಸದಾರನಿಗೆ ಕಳೆದ ವಾರ ತಲುಪಿತಂತೆ. ಆದರೆ ಆ ಕಾಗದ ಬರೆದವನು ಸತ್ತುಹೋಗಿ ಎರಡು ವರುಷಗಳಾದವು. ಆವನು ಬದುಕಿದ್ದ ಪಕ್ಷದಲ್ಲಿ ತನ್ನ ಕಾಗದವು ತನ್ನ ಸ್ನೇಹಿತನಿಗೆ ತಲುಪಿತೆಂಬುವದನ್ನು ಕೇಳಿ ತೃಪ್ತಿಪಡಬಹುದಾಗಿತ್ತು.

❖❖❖❖

ಕಾಫಿ ಮೊದಲಾದ ಪ್ಲಾಂಟೇಷನ್‌ಗಳಲ್ಲಿ ಕೂಲಿ ಮಾಡುವವರು ಓಡಿಹೋಗದಂತೆ ಪ್ಲಾಂಟರುಗಳ ಕೊರತೆಗಳನ್ನು ನೀಗಿಸುವ ಒಂದು ಕಾನೂನನ್ನು ಮದರಾಸ್ ಸರ್ಕಾರದವರು ಪ್ಯಾಸ್‌ಮಾಡಿ ವರುಷದ ಮೇಲಾಯಿತು. ಇದನ್ನು ಇಂಡಿಯಾ ಗೌವರ್ನಮೆಂಟಿನವರೂ ಒಪ್ಪಿರುತ್ತಾರೆ. ಇದು ಸಮಂಜಸವಾಗಿಲ್ಲವೆಂತಲೂ ಇದನ್ನು ಜಾರಿಗೆ ತರಕೂಡದೆಂತಲೂ ಕೆಲವು ಮಂದಿ ಪ್ಲಾಂಟರುಗಳೇ ಹೇಳುತ್ತಿದಾರೆ. ಅಂತೂ ಈ ಕಾನೂನು ಇನ್ನೂ ಜಾರಿಗೆ ಬಂದಿಲ್ಲ.

❖❖❖❖

ರಂಗೂನ್ ಪಟ್ಟಣದಲ್ಲಿ ತುಂಬಾ ದರಿದ್ರನೆಂದು ಹೇಳಿಕೊಳ್ಳುತ್ತಿದ್ದ ಒಬ್ಬ ಜವಾನನು ಕಳೆದ ವರುಷ ಸತ್ತುಹೋದನು. ಪೋಲೀಸಿನವರು ಹೋಗಿ ಆಜಮಾಯಿಷಿ ಮಾಡಿದಾಗ ಅವನ ತಲೆದಿಂಬಿನ ಕೆಳಗೆ ೫,೦೦೦ ರೂ. ಸಿಕ್ಕಿದವು. ಅವನು ಪೋಸ್ಟ್ ಆಫಿಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ೨,೦೦೦ ರೂ. ಹಾಕಿರುವದೂ ಗೊತ್ತಾಯಿತು. ಇದಲ್ಲದೆ ಅವನು ಜನರಿಗೆ ೪—೬ ಸಾವಿರ ರೂಪಾಯಿ ಸಾಲಕೊಟ್ಟಿದ್ದನು. ಅವನಿಗೆ ವಾರಸುದಾರರ್ಯಾರೂ ಇಲ್ಲವೆಂದು ಗೊತ್ತಾದ್ದರಿಂದ ಸರ್ಕಾರದವರು ಆ ಹಣವನ್ನೆಲ್ಲಾ ಅವನ ಹೆಸರಿನಮೇಲೆ ಧರ್ಮಕಾರ್ಯಗಳಿಗೆ ವಿನಿಯೋಗಪಡಿಸಿರುತ್ತಾರೆ.

❖❖❖❖

## ವಿದೇಶ ವರ್ತಮಾನಗಳು.

ಕಾನೋ ರಾಜ್ಯದ ಅಮೀರರನ್ನು ಇಂಗ್ಲಿಷರು ಕೈಸೆರೆ ಹಿಡಿದಿರುತ್ತಾರೆಂದು ಈ ವಾರ ತಂತೀವರ್ತಮಾನ ಬಂದಿದೆ.

❖❖❖❖

ಟ್ರಾನ್ಸ್‌ವಾಲಿನಲ್ಲಿ ೬೭ ಕ್ಯಾರಟ್ ತೂಕವುಳ್ಳ ಒಂದು ಭಾರೀ ವಜ್ರವು ಸಿಕ್ಕಿತು. ಇದು ಸುಮಾರು ೪೫,೦೦೦ ರೂ. ಕ್ರಯ ಬಾಳುವದು.

❖❖❖❖

ಇಂಡಿಯಾ ಗೌವರ್ನಮೆಂಟಿನ ಖಜಾನಾ ಬಕ್ಷಿಯವರಾಗಿದ್ದು ವಿಲಾಯತಿಗೆ ಹೋದ ಸರ್ ಜೇಮ್ಸ್ ವೆಸ್ಟ್‌ಲೆಂಡ್ ಯವರು ಕಳೆದ ವಾರ ಕಾಲವಾದರು.

❖❖❖❖

ಕೊರಿಯಾದವರಿಗೂ ಜಪಾನವರಿಗೂ ಯುದ್ಧ ಪ್ರಾಪ್ತವಾಗುವವರಲ್ಲಿದೆ. ಜಪಾನವರು ಆ ಪರ್ಯಾಯ ದ್ವೀಪದಲ್ಲಿ ವಿಪರೀತ ಯುದ್ಧಸಾಮಗ್ರಿಗಳನ್ನು ಕೂಡಿಸುತ್ತಲೂ, ಸೈನಿಕರನ್ನು ಅಲ್ಲಿಗೆ ಕಳುಹಿಸುತ್ತಲೂ ಬಂದಿದಾರೆ.

❖❖❖❖

ವಿಲಾಯತಿ ರಾಜ್ಯದ ಸ್ವಾಸ್ಥ್ಯಗಳ ಆಡಳಿತಗಳನ್ನು ನೋಡುವ ಮಿ॥ ಛೇಂಬರ್ಲೀನ್‌ರವರ ಸಹೋದರಿಯು ವೈದ್ಯದಲ್ಲಿ ತುಂಬಾ ಪರಿಶ್ರಮವನ್ನು ಪಡೆದು, ಲಂಡನ್ ಪಟ್ಟಣದ ಒಂದು ದೊಡ್ಡ ಆಸ್ಪತ್ರೆಯ ಮುಖ್ಯ ಡಾಕ್ಟರಾಗಿ ನೇಮಿಸಲ್ಪಟ್ಟದಾರೆ.

❖❖❖❖

ಕನಡಾ ರಾಜ್ಯಕ್ಕೆ ಸೇರಿದ ಒಟ್ಟಾವಾ ಪಟ್ಟಣದಲ್ಲಿ ಯಾರೋ ಬೇಕೆಂದು ಬೆಂಕಿ ಹಾಕಿದರೆಂತಲೂ, ಇದರಿಂದ ೩೦೦ ಮನೆಗಳೂ ವಿಪರೀತ ಆಸ್ತಿಯೂ ಸುಟ್ಟುಹೋದವೆಂತಲೂ, ಮಾಲೀಕರಿಗೆ ೪೫ ಲಕ್ಷ ರೂಪಾಯಿ ತನಕ ನಷ್ಟವಾಗಿದೆ ಎಂತಲೂ ತಿಳಿದು ಬಂದಿದೆ.

❖❖❖❖

ಹಾಂಡ್ಯೂರಾಸ್ ರಾಜ್ಯದಲ್ಲಿ ಜನರು ದಂಗೆಯೆದ್ದು ತಮ್ಮ ಮಾಜಿ ಪ್ರೆಸಿಡೆಂಟನನ್ನು ಹಿಡಿದು ಶಿರಚ್ಛೇದನ ಮಾಡಿದ್ದಲ್ಲದೆ, ಈಗ ಪ್ರೆಸಿಡೆಂಟಾಗಿದ್ದ ಆರಿಯಸ್ ಎಂಬಾತನನ್ನು ಸೆರೆಮನೆಯಲ್ಲಿ ಹಾಕಿರುತ್ತಾರೆ. ರಾಜ್ಯದ ಕಾರುಬಾರುಗಳೆಲ್ಲಾ ಅಲ್ಲಕಲ್ಲೋಲವಾಗಿರುವವು.

❖❖❖❖

ಕಬ್ಬಿನಲ್ಲಿ ಸಕ್ಕರೆ ತಯಾರ್ಮಾಡುವದು ವಾಡಿಕೆಯಷ್ಟೆ. ಈಗ ದಕ್ಷಿಣ ಆಫ್ರಿಕದಲ್ಲಿ ಒಂದು ತರಹಾ ಗಿಡವನ್ನು ಕಂಡುಹಿಡಿದಿರುತ್ತಾರೆ. ಈ ಗಿಡದಿಂದ ವಿಪರೀತವಾಗಿ ಸಕ್ಕರೆ ತಯಾರ್ಮಾಡಬಹುದೆಂದು ಕಾಣುವದು. ಜರ್ಮನಿಯವರು ಅದನ್ನು ಪರೀಕ್ಷೆ ಮಾಡುತ್ತಿರುವರು.

ಅಲೆಕ್ಸಾಂಡ್ರಾ ಮಹಾರಾಜ್ಞೀರವರು ೩ ವಾರಗಳ ಕೆಳಗೆ ತಮ್ಮ ತೌರುಮನೆಯಾದ ಡೇನ್ಮಾರ್ಕಿಗೆ ದಯಮಾಡಿದ್ದರು. ಅಲ್ಲಿಂದ ವಾಪಸು ವಿಲಾಯತಿಗೆ ಬರುವಾಗ್ಯೆ ತಮ್ಮ ತಂದೆಯವರ (ಡೆನ್ಮಾರ್ಕ್ ದೊರೆಯವರ) ಒಂದು ಶಿಲಾ ಪ್ರತಿಮೆಯನ್ನು ಸಂಗಡ ತಂದಿರುತ್ತಾರೆ.

ಆಫ್ರಿಕಕ್ಕೆ ಸೇರಿದ ಅಲ್ಜೀರಿಯಾ ಪ್ರಾಂತ್ಯದಲ್ಲಿ ಫ್ರೆಂಚ್ ವರ್ತಕರು ಒಂಟೆಗಳ ಮೇಲೆ ವ್ಯಾಪಾರ ಸರಕನ್ನು ಸಾಗಿಸಿಕೊಂಡು ಹೋಗುತ್ತಿದ್ದರು. ಅಲ್ಲಿನ ಸ್ವದೇಶೀಯರು ಅವರನ್ನು ಹಿಡಿದು ಲೂಟಿ ಮಾಡಿ, ಫ್ರೆಂಚರಲ್ಲಿ ೩೦ ಮಂದಿಯನ್ನು ಕೊಂದು, ೧೮ ಜನರಿಗೆ ಗಾಯಮಾಡಿದರು.

◆◆◆◆

ಯೂಗಾಂಡಾ ಸೀಮೆಯಲ್ಲಿ ಪ್ರಬಲವಾಗುತ್ತಿರುವ ನಿದ್ರಾರೋಗವನ್ನು ಪರೀಕ್ಷೆಮಾಡಿದ ಹಾರ್ಸ್ ಬೇರ್ನ್ ಎಂಬೊಬ್ಬ ವೈದ್ಯನು— ಅಲ್ಲಿನ ಜನರು ಒಂದು ತರಹಾ ಆಹಾರ ಪದಾರ್ಥವನ್ನು ಸೇವನೆ ಮಾಡುತ್ತಾರೆ; ಇದರಲ್ಲಿ ಪ್ರಜ್ಞೆ ತಪ್ಪಿಸುವ ವಸ್ತುಗಳು ವಿಶೇಷವಾಗಿರುವವು; ಇದರಿಂದಲೇ ಆ ಕಠಿಣವಾದ ರೋಗ ಪ್ರಾಪ್ತಿಯಾಗುವದು ಎಂಬದಾಗಿ ಹೇಳಿರುತ್ತಾನೆ.

◆◆◆◆

ವಿಲಾಯತಿ ಮಹಾರಾಜಾ ಚಕ್ರವರ್ತಿಯವರು ಮಹಾರಾಜ್ಞಿಯವರ ಸಹಿತವಾಗಿ ಕಳೆದ ವಾರ ಸ್ಕಾಟ್ಲೆಂಡಿಗೆ ದಯಮಾಡಿ, ಡಾಲ್ಕೀತ್ ಕ್ಯಾಸಲ್ ಎಂಬ ಅರಮನೆಯಲ್ಲಿದ್ದು ಸಕಲ ಮರ್ಯಾದೆಗಳೊಡನೆ ಎಡಿಂಬರೋ ಪಟ್ಟಣವನ್ನು ಪ್ರವೇಶಮಾಡಿ. ಪ್ರಜೆಗಳ ಅಭಿನಂದನವನ್ನು ಸ್ವೀಕರಿಸಿ, ಹೋಲಿರೂಡ್ ಎಂಬ ಅರಮನೆಯಲ್ಲಿ ಸ್ಕಾಟ್ಲೆಂಡಿನ ದೊಡ್ಡ ಮನುಷ್ಯರನ್ನೆಲ್ಲಾ ಕರೆಸಿ ಅವರಿಗೆ ದರ್ಶನ ಕೊಟ್ಟು, ಮೂರು ದಿನಗಳು ಇದ್ದು ವಾಪಸು ದಯಮಾಡಿರುತ್ತಾರೆ.

◆◆◆◆

ಆಫ್ರಿಕಕ್ಕೆ ಸೇರಿದ ಮೊರಾಕೋ ಸೀಮೆಯಲ್ಲಿ ಜನರು ಸುಲ್ತಾನರ ಮೇಲೆ ದಂಗೆ ಎದ್ದು ಅನೇಕ ಅನಾಹುತಗಳನ್ನು ನಡಸುತ್ತಿದಾರೆ. ೧೦,೦೦೦ ಜನರು ಆಯುಧಪಾಣಿಗಳಾಗಿ ಟಿಟುವಾನ್ ಎಂಬೊಂದು ಪಟ್ಟಣಕ್ಕೆ ಬಲವಾಗಿ ಮುತಿಗೆ ಹಾಕಿಕೊಂಡಿರುವರು. ಗುಂಡುಗಳು ಹೊಡೆಯುವ ಶಬ್ದವೂ ಮನೆ ಮಠಗಳು ಹತ್ತಿ ಉರಿಯುವದೂ ಬಹಳ ದೂರಕ್ಕೆ ಕಾಣುವವೆಂದು ಹೇಳುತ್ತಾರೆ. ಈ ದಂಗೆಯನ್ನು ಅಣಗಿಸುವದಕ್ಕೆ ಟಾಂಜೇರಿನಿಂದ ಸರ್ಕಾರಿ ಸೈನ್ಯವನ್ನು ಕಳುಹಿಸಿದಾರೆ.

◆◆◆◆

ಆಸ್ಟ್ರೇಲಿಯಾ ದ್ವೀಪದಲ್ಲಿ ವೀರಕ್ಷಾಮವು ಪ್ರಾಪ್ತವಾಗಿದೆ ಎಂದು ಹಿಂದಿನ ವಾರಗಳಲ್ಲಿ ತಿಳಿಸಿರುತ್ತೇವಷ್ಟೆ. ಸಿಡ್ನಿ, ಮೆಲ್ಬೋರ್ನ್ ಈ ಮೊದಲಾದ ಪಟ್ಟಣಗಳಲ್ಲಿ ಕ್ಷಾಮನಿವಾರಣೆಗಾಗಿ ಜನರು ತಾವಾಗಿಯೇ ಚಂದಾ ಕೊಟ್ಟರು. ೪—೬ ವಾರಗಳೊಳಗಾಗಿ ೧೫ ಲಕ್ಷ ರೂಪಾಯಿ ಕೂಡಿತು. ವಿಲಾಯತಿಗೆ ತಿಳಿಸಿ ಅಲ್ಲಿಂದ ಧರ್ಮವನ್ನು ಎತ್ತಿ ತರಿಸಬೇಕೆಂಬುದರಲ್ಲಿ ಆ ಜನರಿಗೆ ಅಭಿಪ್ರಾಯವಿಲ್ಲ. ಆದ್ದರಿಂದ ತಾವು ತಾವೇ ಸೇರಿ ಚಂದಾ ಕೊಟ್ಟು, ಕ್ಷಾಮನಿವಾರಣೆ ಮಾಡಿಕೊಳ್ಳುತ್ತಿದಾರೆ.

◆◆◆◆

ಅಲೂಗೆಡ್ಡೆಯನ್ನು ಒಣಗಿಸಿ ಎಂದೆಂದಿಗೂ ಕೆಟ್ಟುಹೋಗದಂತೆ ಇಡುವದಕ್ಕೆ ಬಹಳ ಸುಲಭವಾದ ಉಪಾಯ ಕಂಡುಹಿಡಿದು ಕೊಟ್ಟವರಿಗೆ ೩೦,೦೦೦ ದ್ರವ್ಯವನ್ನು ಇನಾಮು ಕೊಡುವದಾಗಿ ಜರ್ಮನಿಯ ಒಂದಾನೊಂದು ಕಾರ್ಖಾನೆಯವರು ಪ್ರಸಿದ್ಧಪಡಿಸಿದರು. ನೂರು ಕಾರ್ಖಾನೆಗಳವರು ಅದಕ್ಕೆ ಬಹು ಸುಲಭವಾದ ಉಪಾಯವನ್ನು ಕಂಡುಹಿಡಿದಿರುತ್ತಾರೆ. ಅವರಿಗೆ ಆ ಹಣವನ್ನು ಹಂಚಿಕೊಡಬೇಕೆಂದು ತೀರ್ಮಾನವಾಗಿದೆ. ೧೧೨ ಪೌಂಡು ತೂಕದಷ್ಟು ಅಲೂಗೆಡ್ಡೆಗಳನ್ನು ಕೆಡದಂತೆ ಇಡುವದಕ್ಕೆ ೧॥ ಆಣೆ ಮಾತ್ರವೇ ಖರ್ಚಾಗುವದು.

◆◆◆◆

ಚೀಣಕ್ಕೆ ಸೇರಿದ ಕ್ವಾಂಗ್‌ಸೀ ಪ್ರಾಂತ್ಯದಲ್ಲಿ ವೀರಕ್ಷಾಮವು ಪ್ರಾಪ್ತವಾಗಿರುವಂತೆ ಕಾಣುವದು. ಹೆಂಗಸರು ಹೊಟ್ಟೆಗಿಲ್ಲದೆ ಗುಲಾಮರಾಗಿ ತಮ್ಮ ದೇಹವನ್ನು ಇತರರಿಗೆ ವಿಕ್ರಯ ಮಾಡುತ್ತಿದಾರೆ. ತಾಯಂದಿರು ತಮ್ಮ ಹೆಣ್ಣು ಮಕ್ಕಳನ್ನೂ, ಗಂಡಸರು ತಮ್ಮ ಹೆಂಡತಿಯರನ್ನೂ, ಮಕ್ಕಳನ್ನೂ ವಿಕ್ರಯಿಸುತ್ತಿರುವರು. ಕ್ಷಾಮ ಪ್ರಾಪ್ತವಾಗಿರುವ ಪ್ರಾಂತ್ಯಕ್ಕೆ ಕ್ಯಾಂಟನ್, ಹಾಂಕಾಂಗ್, ಸಿಂಗಪುರ, ಮೊದಲಾದ ಅನೇಕ ಕಡೆಗಳಿಂದ ವ್ಯಾಪಾರಸ್ಥರು ಹೋಗಿ ಹೆಂಗಸರನ್ನೂ ಹೆಣ್ಣುಮಕ್ಕಳನ್ನೂ ಬಹಳವಾಗಿ ಕೊಂಡುಕೊಳ್ಳುತ್ತಿದಾರೆಂದು ಸಮಾಚಾರಬಂದಿದೆ.

◆◆◆◆

ರಷ್ಯಾ ಚಕ್ರಾಧಿಪತ್ಯದಲ್ಲಿ ಯಹೂದ್ಯರು ಅಪಾರವಾಗಿರುತ್ತಾರೆ. ರಷ್ಯನ್ ಜನರಿಗೆ ಅವರನ್ನು ಕಂಡರಾಗದು. ಅವರನ್ನು ನಾನಾ ತರದ ಹಿಂಸೆಗಳಿಗೆ ಗುರಿಮಾಡುತ್ತಿರುವರು. ಸರ್ಕಾರಿ ಅಧಿಕಾರಿಗಳು ಅವರನ್ನು ಕಾಪಾಡದೇನೂ ಹಿಂಸೆಮಾಡತಕ್ಕವರನ್ನು ಹಿಡಿದು ಶಿಕ್ಷಿಸದೇನೂ ಇರುವದರಿಂದ ಯಹೂದ್ಯರ ಕಷ್ಟನಷ್ಟಗಳು ಹೆಚ್ಚುತ್ತಿರುವವು. ಈ ಹಿಂಸೆಯನ್ನು ತಪ್ಪಿಸಿಕೊಳ್ಳಬೇಕೆಂದು ೩೩,೦೦೦ ಮಂದಿ ಯಹೂದ್ಯರು ಸಂಸಾರಸಹಿತ ಆ ರಾಜ್ಯವನ್ನೇ ಬಿಟ್ಟು ವಿಲಾಯತಿ, ಅಮೇರಿಕ ಮೊದಲಾದ ರಾಜ್ಯಗಳಿಗೆ ಹೊರಟು ಹೋಗುತ್ತಿರುವರೆಂದು ತಿಳಿದುಬಂದಿದೆ.

◆◆◆◆

ಅಮೇರಿಕದಲ್ಲಿ ಗಾಜಿನಿಂದ ತಟ್ಟೆ ಬಟ್ಟಲು ಪಾತ್ರೆಗಳನ್ನು ತಯಾರ್ಮಾಡುವ ಒಂದು ಕಾರ್ಖಾನೆಯಲ್ಲಿ ೨,೮೦೦ ಜನರು ಕೂಲಿಮಾಡಿ ಹೊಟ್ಟೆ ಹೊರಕೊಳ್ಳುತ್ತಿರುವರು. ಈಗ ಆ ಕಾರ್ಖಾನೆಯಲ್ಲಿ ಒಂದು ನವೀನವಾದ ಯಂತ್ರವನ್ನು ಮಾಡಿಟ್ಟುಕೊಂಡಿರುವದಾಗಿಯೂ, ಈ ಯಂತ್ರದಿಂದಲೇ ಸಕಲ ಪದಾರ್ಥಗಳನ್ನೂ ಮಾಡಿಕೊಳ್ಳಬಹುದಾಗಿದೆ ಎಂತಲೂ, ಇನ್ನು ಮೇಲೆ ಆ ಕಾರ್ಖಾನೆಯವರು ೨,೮೦೦ ಮಂದಿ ಕೂಲಿಯವರನ್ನೂ ಕೆಲಸಬಿಡಿಸಿ ಕಳುಹಿಸುವರೆಂತಲೂ ತಿಳಿದು ಬಂದಿದೆ. ಯಂತ್ರಗಳು ಬರಬರುತ್ತಾ ಎಂಥಾ ಕೆಲಸಗಳನ್ನು ಮಾಡುವದರಲ್ಲಿರುತ್ತವೆಯೋ ಹೇಳುವದಕ್ಕಾಗುವದಿಲ್ಲ.

ಚೀಣಾದಲ್ಲಿ ಹಾಂಕೋ—ಕ್ಯಾಂಟನ್ ರೈಲ್ವೆ ಲೈನನ್ನು ಹಾಕುವದಕ್ಕಾಗಿ ಐದುಮಂದಿ ಅಮೇರಿಕದ ಇಂಜನಿಯರುಗಳೂ ಐದು ಮಂದಿ ಜರ್ಮ ಇಂಜನಿಯರುಗಳೂ ಸೇರಿ ಕೆಲಸಮಾಡುತ್ತಿರುವಾಗ್ಯೆ ಚೀಣಯವರು ಗುಂಪಾಗಿ ಬಂದು ಅವರಮೇಲೆ ನುಗ್ಗಿ ಅವರನ್ನು ಹೊಡೆಯುವದಕ್ಕೆ ಪ್ರಯತ್ನಪಟ್ಟರು. ಅವರು ಓಡಿಹೋಗಿ ಒಂದು ದೇವಸ್ಥಾನದೊಳಗೆ ಸೇರಿಕೊಂಡು ಪ್ರಾಣವನ್ನು ಉಳಿಸಿಕೊಂಡರು. ಚೀಣಯವರು ಅದರ ಸುತ್ತಾ ಸುತ್ತಿಕೊಂಡಿದಾರೆ. ಅವರನ್ನು ಬಿಡಿಸಿಕೊಂಡು ಬರುವದಕ್ಕಾಗಿ ಅಮೇರಿಕದ ಕೆಲವು ಸೈನಿಕರು ಅಲ್ಲಿಗೆ ಹೋಗಿರುವರು.

◆◆◆◆

ಚಳದೀ ಜ್ವರವೆಂಬ ರೋಗವು ಸೊಳ್ಳೆಗಳಿಂದ ಜನರಿಗೆ ಬರುತ್ತದೆಂಬದನ್ನು ದೃಷ್ಟಾಂತ ಪಡಿಸುವದಕ್ಕೆ ಡಾಕ್ಟರುಗಳು ನಾಲ್ಕಾರುಮಂದಿ ಇಟಲೀ ಜನರನ್ನು ಒಪ್ಪಿಸಿ ಒಂದು ಕಡೆ ಇಟ್ಟು, ಸೊಳ್ಳೆಗಳಿಂದ ಅವರನ್ನು ಕಡಿಸಿದರು. ಜ್ವರವು ಅವರನ್ನು ಹಿಡಿದು ತುಂಬಾ ನರಳಿಸಿತು. ಆದರೆ ದೈವವಶಾತ್ತು ಅವರ್ಯಾರೂ ಸಾಯಲಿಲ್ಲ. ಡಾಕ್ಟರುಗಳು ಅವರಿಗೆ ಬಹಳ ಹಣ ಪ್ರತಿಫಲಕೊಟ್ಟು ಸಮಾಧಾನಪಡಿಸಿ ಅವರ ಕಾಯಿಲೆಯನ್ನು ವಾಸಿಮಾಡಿ ಕಳುಹಿಸಿದರು. ಒಂದು ವೇಳೆ ಅವರು ಸತ್ತುಹೋಗಿದ್ದರೆ ಕೊಲೆ ಪಾತಕದ ಶಿಕ್ಷೆ ಆ ಡಾಕ್ಟರುಗಳಿಗೆ ವಿಧಿಸಲ್ಪಡುತ್ತಿತ್ತೆಂದು ಹೇಳುವರು.

◆◆◆◆

ವಿಲಾಯತಿ ರಾಜ್ಯದ ಸ್ವಾಸ್ಥ್ಯಗಳ ಸೆಕ್ರೇಟರಿಯವರಾದ ಮಿ॥ ಛೇಂಬರ್ಲೇನ್‌ಯವರು ದಕ್ಷಿಣ ಆಫ್ರಿಕವನ್ನು ಆಬಾದಿಗೆ ತರುವದಕ್ಕೆ ಸಧ್ಯ ಮೂರುವರೆ ಕೋಟಿ ಪೌಂಡು ಬೇಕಾಗಿದೆ ಎಂತಲೂ, ಇನ್ನು ಮುಂದೆ ಅದೇ ಕಾರ್ಯಕ್ಕೆ ನೂರಾರು ಕೋಟಿ ಪೌಂಡುಗಳು ಬೇಕಾಗುವವೆಂತಲೂ ಪಾರ್ಲಿಮೆಂಟನಲ್ಲಿ ತಿಳಿಸಿದರು. ಈ ಹಣದಿಂದ ರೈಲ್ ರಸ್ತೆಗಳನ್ನು ಹಾಕಿಸಿ, ನೀರಾವರಿ ಕಾಮಗಾರಿಗಳನ್ನು ಹೇರಳವಾಗಿ ಮಾಡಿಸಿ, ಜಮೀನು ವ್ಯವಸಾಯವನ್ನು ಅಭಿವೃದ್ಧಿಗೆ ತರುವವರಾಗಿದಾರೆ ಮೆಂಬರುಗಳು ಅಷ್ಟು ಹಣವನ್ನು ಸಾಲ ಮಾಡಬಹುದೆಂದು ಸಮ್ಮತಿಪಟ್ಟರು. ಅದಕ್ಕಿಂತ ೮ ರಷ್ಟಾದರೂ ಸಾಲ ಕೊಡುತ್ತೇವೆಂದು ವರ್ತಕರು ಅರ್ಜಿ ಕೊಟ್ಟರು.

◆◆◆◆

ಆಸ್ಟ್ರೇಲಿಯಾ ದ್ವೀಪದಲ್ಲಿ ರೈಲ್ವೆ ನೌಕರರೆಲ್ಲಾ ತಮಗೆ ಕಂಪನಿಯವರು ಹೆಚ್ಚಾಗಿ ಸಂಬಳ ಕೊಡಬೇಕೆಂದು ಹೇಳಿ ಕೆಲಸಕ್ಕೆ ಹೋಗದೆ ನಿಂತುಬಿಟ್ಟದಾರೆ. ಇದರಿಂದ ಜನರಿಗೆ ಪ್ರಯಾಣ ನಿಂತುಹೋಗಿ ತುಂಬಾ ತೊಂದರೆಯುಂಟಾಗಿರುವದು. ಜಿನಸುಗಳ ಆಮದು ರಫ್ತು ನಿಂತು ಧಾರಣೆವಾಸಿಗಳು ಬಹಳವಾಗಿ ಕಟ್ಟಿಬಿಟ್ಟವು. ಸರ್ಕಾರದವರು ಇವನ್ನೆಲ್ಲಾ ನೋಡಿ. ಪಾರ್ಲಿಮೆಂಟ್ ಮೆಂಬರುಗಳನ್ನು ಕರೆದು ಆಲೋಚನೆ ಮಾಡಿ, ಇನ್ನು ಮುಂದೆ ಹೀಗೆಲ್ಲಾ ತೊಂದರೆ ಕೊಡತಕ್ಕ ಜನರನ್ನು ದಂಗೆಕೋರರೆಂದು ಭಾವಿಸಿ ಅವರಿಗೆ ಶಿಕ್ಷೆ ವಿಧಿಸಬೇಕೆಂದು ಒಂದು ಕಾನೂನು ಮಾಡಿಕೊಂಡಿದಾರೆ. ಈಚೆಗೆ ನೌಕರರೆಲ್ಲಾ ತಮ್ಮ ತಮ್ಮ ಕೆಲಸಗಳಮೇಲೆ ಹಾಜರಾಗಿರುತ್ತಾರೆ.

◆◆◆◆

ರಷ್ಯಾದವರು ಮಾಂಚೂರಿಯಾ ಸೀಮೆಯನ್ನು ಆಕ್ರಮಿಸಿಕೊಂಡು, ಅಲ್ಲಿಗೆ ಪರರಾಜ್ಯಗಳವರ್ಯಾರನ್ನೂ ವ್ಯಾಪಾರ ಮುಂತಾದ್ದನ್ನು ನಡಸುವದಕ್ಕೆ ಬಿಡುವದಿಲ್ಲವೆಂತಲೂ, ನಿಯೂಚ್ವಾಂಗ್ ಎಂಬ ಪಟ್ಟಣದ ಕೋಟೆಗಳನ್ನು ಅವರು ದುರಸ್ತು ಮಾಡಿಸಿ ಫಿರಂಗಿಗಳನ್ನು ಹತ್ತಿಸಿ ರಷ್ಯಾ ಸೈನ್ಯಗಳನ್ನು ಅಲ್ಲಿಗೆ ಬಹಳವಾಗಿ ಕಳುಹಿಸಿ ಯುದ್ಧಸನ್ನದ್ಧರಾಗುತ್ತಿದಾರೆಂತಲೂ, ಪರರಾಜ್ಯಗಳವರು ಅಂದರೆ ವಿಲಾಯತಿ, ಅಮೇರಿಕ, ಜಪಾನ್ ರಾಜ್ಯಗಳವರು ರಷ್ಯಾದವರ ಮೇಲ್ಕಂಡ ನಡವಳಿಕೆಗಳನ್ನು ನೋಡಿ, ಏನು ಮಾಡಬೇಕೆಂದು ಯೋಚಿಸುತ್ತಿದಾರೆಂತಲೂ ಹಿಂದಿನ ವಾರ ಪ್ರಕಟಿಸಿದ್ದೆವಷ್ಟೆ. ಈಚೆಗೆ ಈ ವಿಚಾರವಾಗಿ ವಿಲಾಯತಿ ರಾಜ್ಯದ ಅಧಿಕಾರಿಗಳು ತಿಳಿಸಿರುವದೇನಂದರೆ—ರಷ್ಯಾದವರು ಪರರಾಜ್ಯಗಳವರ ಸಂಗಡ ಯುದ್ಧ ಮಾಡಬೇಕೆಂದಿಲ್ಲ. ಪರರಾಜ್ಯಗಳವರಿಗೂ ಅವರಿಗೂ ಇರುವ ಸ್ನೇಹ ಭಾವವನ್ನು ತಪ್ಪಿಸಿಕೊಳ್ಳಬೇಕೆಂದು ಅಪೇಕ್ಷಿಸುವದಿಲ್ಲ. ಮಾಂಚೂರಿಯಾವನ್ನು ರಷ್ಯಾದವರು ಕ್ರಮ ಕ್ರಮವಾಗಿ ಬಿಟ್ಟುಬಿಡುತ್ತಾ ಬಂದಿದಾರೆ. ಪರರಾಜ್ಯಗಳವರ್ಯಾರಾದರೂ ಅಲ್ಲಿ ಹೋಗಿ ವ್ಯಾಪಾರ ಮುಂತಾದ್ದನ್ನು ನಡಸಲು ಅವರು ಅಡ್ಡಿ ಮಾಡುವದಿಲ್ಲ. ಮತ್ತು ನಿಯೂಚ್ವಾಂಗಿಗೆ ಅವರು ಸೈನ್ಯ ಕಳುಹಿಸಿ ಯುದ್ಧಸನ್ನದ್ಧರಾಗುತ್ತಿದಾರೆಂಬ ಮಾತು ನಿಜವಲ್ಲ.

---

## ಬರೋಡಾ ಸಂಸ್ಥಾನವೂ ಬಾಲ್ಯವಿವಾಹವೂ.

### ಬಾಲ್ಯ ವಿವಾಹವನ್ನು ನಿರೋಧಿಸುವ ಕಾನೂನು.

### ಅದಕ್ಕೆ ಕಾರಣಗಳು.

೧. ಜನರ ಸಾಂಸರ್ಗಿಕವಾದ ಏರ್ಪಾಡುಗಳಲ್ಲಿ ವಿವಾಹವೆಂಬುವದು ಬಹು ಶ್ರೇಷ್ಠವಾದದ್ದಾಗಿರುವದರಿಂದ ಪ್ರತಿ ಒಂದು ಜನಾಂಗದವರೂ ವಿವಾಹಿತರಾಗತಕ್ಕವರ ವಯಸ್ಸು ಇಷ್ಟೇ ಆಗಿರಬೇಕೆಂಬದಾಗಿ ನಿರ್ಬಂಧವನ್ನು ಕಲ್ಪಿಸಿಕೊಳ್ಳುತ್ತಾ ಬಂದಿದಾರೆ. ಈ ನಿರ್ಬಂಧವನ್ನು ಮೀರಿ ಯಾರಾದರೂ ವಿವಾಹ ಮಾಡಿಕೊಂಡರೆ ಅಂಥಾ ವಿವಾಹವು ಸಿದ್ಧಿಯಾಗುವದಿಲ್ಲ.

೨. ಈ ದೇಶದಲ್ಲಾದರೋ ಅಂಥಾ ನಿರ್ಬಂಧವು ಸರ್ಕಾರದವರಿಂದಲಾಗಲಿ, ಪ್ರಜೆಗಳು ತಮ್ಮ ತಮ್ಮಲ್ಲೇ ಆಗಲಿ ಮಾಡಿರುವದಿಲ್ಲ. ಇದರಿಂದ ಎಳೇ ಮಕ್ಕಳಿಗೂ ಕೂಡ ವಿವಾಹಮಾಡಿಬಿಡಲು ಅವಕಾಶವಿದೆ. ಕಳೆದ ೧೯೦೧ನೇ ಇಸವಿಯಲ್ಲಿ ಬರೋಡಾ ಸಂಸ್ಥಾನದ ಸೆನ್ಸಸ್ ಲೆಕ್ಕಗಳನ್ನು ತೆಗೆದುನೋಡಿದರೆ ಒಂದು ವರುಷವೂ ತುಂಬದೆ ಇರುವ ಮಕ್ಕಳಿಗೆ ಮದುವೆಮಾಡಿರುತ್ತಾರೆ. ಇಂಥಾ ಗಂಡು ಮಕ್ಕಳು ೧೪೩ ಇದಾರೆಂತಲೂ, ಹೆಣ್ಣುಮಕ್ಕಳು ೧೮೭ ಇದಾರೆಂತಲೂ ತಿಳಿಯುವದು. ಐದು ವರುಷದೊಳಗಿರುವಂಥಾ ೫,೮೩೧ ಮಂದಿ ಮಕ್ಕಳಿಗೆ ವಿವಾಹವಾಗಿದೆ. ಈ ಪೈಕಿ ೨,೨೯೭ ಮಂದಿ ಹೆಣ್ಣು ಮಕ್ಕಳು, ೩,೫೩೪ ಮಂದಿ ಗಂಡು ಮಕ್ಕಳು. ಈ ಸಂಖ್ಯೆಯಲ್ಲಿ ಗಂಡಹೆಂಡಿರನ್ನು ಕಳೆದುಕೊಂಡತಕ್ಕ ಮಕ್ಕಳ ಸಂಖ್ಯೆಯು ಸೇರಿ ಇಲ್ಲ. ೨೦ ಮಂದಿ ಎಳೇ ಮಕ್ಕಳು ಹೆಂಡಿರನ್ನು ಕಳಕೊಂಡಿದಾರೆ, ೨೬ ಮಂದಿ ಎಳೇ ಮಕ್ಕಳು ಆಗಲೇ ಗಂಡಂದಿರನ್ನು ಕಳೆದುಕೊಂಡಿದಾರೆ; ಐದು ವರುಷ ತುಂಬಿದ ಮಕ್ಕಳಲ್ಲಿ ೩೩೭ ಮಂದಿ ಹೆಂಡತಿಯರನ್ನು ಕಳೆದುಕೊಂಡಿರುವರು, ೩೪೩ ಮಂದಿ ವಿಧವೆಯರಾಗಿರುವರು.

೩. ಈ ವಿಧವಾದ ಬಾಲ್ಯವಿವಾಹಗಳು ಪ್ರಾಚೀನ ಕಾಲದಲ್ಲಿ ರೂಢಿಯಲ್ಲಿದ್ದಂತೆ ಕಂಡು ಬರುವದಿಲ್ಲ. ಪುರಾಣಗಳೇ ಮುಂತಾದ ಗ್ರಂಥಗಳು ಇದಕ್ಕೆ ವಿರೋಧವಾದ ಅಭಿಪ್ರಾಯಗಳನ್ನು ಕೊಡುವವು. ವಿವಾಹ ಕಾಲದಲ್ಲಿ ಗಂಡು ಹೆಣ್ಣು ಪರಸ್ಪರ ಹೇಳಬೇಕಾಗಿರುವ ಮಂತ್ರಗಳ ಅರ್ಥವನ್ನು ನೋಡಿದರೆ ಅವು ಐದು ವರುಷದ ಮಕ್ಕಳು ಹೇಳುವಂಥಾ ಮಾತುಗಳಾಗಿಲ್ಲ ಧರ್ಮಶಾಸ್ತ್ರಗಳೂ ಕೂಡ ಬಾಲ್ಯ ವಿವಾಹಗಳನ್ನು ನಿರೋಧಿಸುವವು.

೪. ಸಂತಾನಾಭಿವೃದ್ಧಿಯೇ ವಿವಾಹದ ಮುಖ್ಯ ಉದ್ದೇಶವಾಗಿರುವದರಿಂದ ೧೨ ಅಥವಾ ೧೩ನೇ ವಯಸ್ಸಿನಲ್ಲಿ ಹುಡುಗಿಯರು ಮಾತೃಸ್ಥಾನಕ್ಕೆ ಅರ್ಹರಾಗುವಷ್ಟು ಮಟ್ಟಿಗೆ ಕಾಯಪುಷ್ಟರಾಗಿರುತ್ತಾರೆಂದು ಹೇಳುವದಕ್ಕಾಗುವದಿಲ್ಲ. ಅದಕ್ಕಿಂತಲೂ ಚಿಕ್ಕ ವಯಸ್ಸಿನವರು ಮಕ್ಕಳನ್ನು ಹೆರುವದಾದರೆ ಆ ಮಕ್ಕಳು ಸಕಲ ವಿಷಯಗಳಲ್ಲೂ ಅಶಕ್ತರಾಗಿದ್ದಾರು.

೫. ಈಗಿನ ಸ್ಥಿತಿಯನ್ನು ನೋಡಲಾಗಿ ವಿವಾಹ ಕಾರ್ಯಗಳಲ್ಲಿ ಬದಲಾವಣೆ ಮಾಡುವದು ಅವಶ್ಯವೆಂದು ಕಂಡು ಬರುವದು. ವಿವೇಕಿಗಳಾದವರು ಈ ಅಭಿಪ್ರಾಯವನ್ನು ಒಪ್ಪಿಕೊಂಡು, ತಮ್ಮಲ್ಲಿ ತಾವೇ ಬದಲಾವಣೆ ಮಾಡಿಕೊಳ್ಳುವದು ಉತ್ತಮ. ಈಗಿನ ಸಂದರ್ಭಗಳನ್ನು ನೋಡಿದರೆ ಜನರಲ್ಲಿ ವಿವಾಹ ಕಾಲವನ್ನು ಮುಂದು ಮುಂದಕ್ಕೆ ಇಡಬೇಕೆಂಬ ಅಭಿಪ್ರಾಯವೇ ನೆಲೆಗೊಳ್ಳುತ್ತಾ ಬಂದಿದೆ. ಈಗಿನ ಖಾನೇಸುಮಾರಿ ಲೆಕ್ಕದ ಪ್ರಕಾರ ಗುಜರಾತಿ ಬ್ರಾಹ್ಮಣರಲ್ಲಿ ೧೫ ವರುಷ ವಯಸ್ಸಾಗಿಯೂ ವಿವಾಹವಾಗದೆ ಇರತಕ್ಕ ಹುಡುಗಿಯರು ೧,೩೦೭ ಮಂದಿ ಇದ್ದಾರೆಂತಲೂ, ದಖನಿ ಬ್ರಾಹ್ಮಣರಲ್ಲಿ ೧೯೨ ಮಂದಿ ಅಂಥಾ ಹುಡುಗಿಯರಿರುತ್ತಾರೆಂತಲೂ ಗೊತ್ತಾಗುವದು. ಹೀಗೆ ವಿವಾಹವನ್ನು ಮುಂದಕ್ಕೆ ಹಾಕುವದು ಸರ್ವಸಾಧಾರಣವಾಗಿಲ್ಲ; ಅಪರೂಪವೆಂದು ಕಾಣುತ್ತಿದೆ. ವಯಸ್ಸು ಹೆಚ್ಚಾದ ಮೇಲೆ ವಿವಾಹ ನಡೆಯಬೇಕೆಂಬುವದೇ ಈ ಕಾನೂನಿನ ಮುಖ್ಯ ಕಾರಣ

೬. ಹೆಣ್ಣು ಮಕ್ಕಳಿಗೆ ೧೨ನೇ ವಯಸ್ಸಿಗೆ ಮುಂಚೆಯೂ, ಗಂಡುಹುಡುಗರಿಗೆ ೧೮ನೇ ವಯಸ್ಸಿಗೆ ಮುಂಚೆಯೂ ವಿವಾಹವಾಗಬೇಕೆಂದು ಗೊತ್ತು ಮಾಡಿದಾಗ್ಯೂ ಆ ವಯಸ್ಸಿಗೂ ಅವರ ಕಾಯಪುಷ್ಟಿಯು ಅಷ್ಟೇನೂ ಚನ್ನಾಗಿರುವದಿಲ್ಲ. ಆದರೂ ಸಧ್ಯ ಅಷ್ಟಕ್ಕೆ ವಿಧಿಮಾಡಿಟ್ಟರೆ ಇದನ್ನು ಸಕಲರೂ ಒಪ್ಪಿಕೊಳ್ಳುವರೆಂದು ನಿರೀಕ್ಷಿಸಲ್ಪಟ್ಟಿದೆ.

೭. ೧೨ನೆ ೧೮ನೆ ವಯಸ್ಸಿಗೆ ಮುಂಚೆ ನಡೆಯುವ ವಿವಾಹಗಳಿಗೆ ಮಾತ್ರ ಈ ಕಾನೂನು ಸಂಬಂಧಪಡುವದು. ಅದರ ಕೆಲವು ಪ್ರತಿಷೇಧಗಳಿಗೂ ಅವಕಾಶ ಕೊಟ್ಟಿದೆ. ಈ ವಯಸ್ಸಿಗೆ ಮುಂಚೆಯೇ ವಿವಾಹಗಳು ನಡೆಯಬೇಕಾದ ಸಂದರ್ಭ ಕಂಡುಬಂದಾಗ ಮ್ಯಾಜಿಸ್ಟ್ರೇಟರು ಆಯಾ ಪಂಗಡದ ಮುಖ್ಯಸ್ಥರನ್ನು ಕರೆಸಿ, ಅವರ ಅಭಿಪ್ರಾಯವನ್ನು ಕೇಳಿ, ವಿವಾಹವಾಗಬಹುದೆಂದು ಹುಕುಂ ಕೊಡಬಹುದಾಗಿದೆ. ಈ ಕಾನೂನಿಗೆ ವಿರೋಧವಾಗಿ ವಿವಾಹ ನಡೆದ ಪಕ್ಷದಲ್ಲಿ ಶಿಕ್ಷೆಯಾಗುವದೇ ಹೊರತು ವಿವಾಹ ಸಂಬಂಧವು ತಪ್ಪಿಹೋಗುವದಿಲ್ಲ. ಜನರಿಗೆ ವಿಶೇಷ ಜುಲುಂ ಉಂಟಾಗದಂತೆ ಶಿಕ್ಷೆಯನ್ನು ಜುಲ್ಮಾನೆ ಹಾಕುವಷ್ಟಕ್ಕೇ ನಿಲ್ಲಿಸಿದೆ.

೮. ಈ ವಿಷಯಕ್ಕೆ ಸರ್ಕಾರದವರು ಕಾನೂನು ಮಾಡಬೇಕಾದ ಅಗತ್ಯವಿರಲಿಲ್ಲ. ಪ್ರಜೆಗಳೇ ಈ ವಿಧವಾದ ಬದಲಾವಣೆಯನ್ನು ಮಾಡಿಟ್ಟುಕೊಂಡು ರೂಢಿಗೆ ತರಬೇಕಾದದ್ದು. ಆದರೆ ಜನರಲ್ಲಿ ಇಂಥಾ ಬದಲಾವಣೆಯ ಅಪೇಕ್ಷೆ ಹುಟ್ಟುವದು ತುಂಬಾ ಸಾವಕಾಶವಾಗಿದೆಯಾದಕಾರಣ ಸಾಂಸರ್ಗಿಕವಾದ ಅಭಿವೃದ್ಧಿಗೆ ಪ್ರೋತ್ಸಾಹವುಂಟಾಗಲೆಂಬ ಉದ್ದೇಶದಿಂದ ಈ ಕಾನೂನು ಮಾಡಲ್ಪಟ್ಟಿರುವದು.

೯. ಮೇಲ್ಕಂಡ ಉದ್ದೇಶದಿಂದಲೇ ಈ ಕಾನೂನು ೧೦ ವರುಷಗಳ ವರೆಗೆ ಮಾತ್ರ ಜಾರಿಯಲ್ಲಿರಬೇಕೆಂದು ವಿಧಿಸಿದೆ. ಇಷ್ಟು ಕಾಲದಲ್ಲಿ ಜನರು ಇದರ ಪ್ರಯೋಜನವನ್ನು ಅನುಭವ ಪೂರ್ವಕವಾಗಿ ಹೊಂದುವರೆಂದು ನಿರೀಕ್ಷಿಸಲ್ಪಟ್ಟಿದೆ.

೧೦. ಈ ಕಾನೂನು ಮಾಡುವದಕ್ಕೆ ಮೊದಲು ಪ್ರಜೆಗಳ ಮುಖಂಡರ ಅಭಿಪ್ರಾಯಗಳನ್ನೆಲ್ಲಾ ಕೇಳಿರುತ್ತೇವೆ. ಆದರೂ ಇನ್ನೂ ಯಾರುಬೇಕಾದರೂ ತಮ್ಮ ಅಭಿಪ್ರಾಯವನ್ನು ಧಾರಾಳವಾಗಿ ತಿಳಿಸಲಿ ಎಂಬ ಉದ್ದೇಶವಿರುವದು. ಈ ಲಾಗಾಯತು ಇನ್ನು ಎರಡು ತಿಂಗಳ ತನಕ ಇಷ್ಟವಿದ್ದವರು ತಮ್ಮ ಅಭಿಪ್ರಾಯಗಳನ್ನು ಬರಹ ಮೂಲಕವಾಗಿ ನಾಯಬ್ ದಿವಾನರಿಗೆ ತಿಳಿಸಬಹುದಾಗಿದೆ.

ವಿ. ಜೆ. ಭಂಡಾರ್ಕರ್.

### ಕಾನೂನು.

೧. ಇದಕ್ಕೆ ಬಾಲ್ಯವಿವಾಹ ನಿರೋಧಕ ಕಾನೂನು ಎಂಬ ಹೆಸರುಕೊಟ್ಟಿದೆ.

೨. ಇದು ೧೯೦೪ನೇ ಇಸವಿಯಿಂದ ೧೯೦೪ನೇ ಇಸವಿ ವರೆಗೆ ಜಾರಿಯಲ್ಲಿರಬೇಕು.

೩. ೧೪ ವರುಷ ತುಂಬದೆ ಇರುವ ಹುಡುಗಿಯನ್ನೂ ೧೮ ವರುಷ ತುಂಬದ ಹುಡುಗನನ್ನೂ ಮೈನರ್ ಎಂದು ಎಣಿಸಲ್ಪಟ್ಟಿದೆ. ಇಂಥಾ ಮೈನರುಗಳ ಮದುವೆಯು ಬಾಲ್ಯವಿವಾಹವೆನಿಸುವದು.

೪. ವಿವಾಹ ಮಾಡುವದಕ್ಕೆ ಮೊದಲು ತಂದೆತಾಯಿಗಳಾಗಲಿ, ಪೋಷಕರಾಗಲಿ ಮಾಡಬಹುದೆನ್ನುವದಕ್ಕೆ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಕೊಟ್ಟು ಅಧಿಕಾರಹೊಂದಬೇಕು.

೫. ಅಂಥಾ ಅರ್ಜಿಗೆ ಸ್ಟಾಂಪು ಹಚ್ಚಿ ಕೊಡಬೇಕು.

೬. ಅರ್ಜಿಯಲ್ಲಿ ಹೆಸರು ಮುಂತಾದ್ದನ್ನೂ ಮದುವೆಗೆ ತಕ್ಕ ಕಾರಣಗಳನ್ನೂ ಬರೆದಿರಬೇಕು.

೭. ಮ್ಯಾಜಿಸ್ಟ್ರೇಟರು ಅಂಥಾ ಅರ್ಜಿಯನ್ನು ದಾಖಲ್ ಮಾಡಿಕೊಂಡು, ಅರ್ಜಿಕೊಟ್ಟ ತಾರೀಖಿನಿಂದ ೧೫ ದಿನಗಳಿಗೆ ಮೀರದಂತೆ ಹೀರಿಂಗ್ ದಿನ ಗೊತ್ತುಮಾಡಿ, ಅರ್ಜಿದಾರರ ಗುಂಪಿಗೆ ಸೇರಿರುವ ಮೂರು ಮಂದಿ ಮುಖ್ಯಸ್ಥರನ್ನು ಪಂಚಾಯಿತರಾಗಿ ಕರೆಸಿ, ಅದೇ ಹೀರಿಂಗ್ ದಿನವನ್ನೂ ತೀರ್ಮಾನವನ್ನೂ ತಿಳಿಸಬೇಕು.

೮. ಮ್ಯಾಜಿಸ್ಟ್ರೇಟರು ಪಂಚಾಯಿತರನ್ನಿಟ್ಟುಕೊಂಡು, ಅರ್ಜಿದಾರನೂ, ಅವನ ಕಡೆಯ ಸಾಕ್ಷಿಗಳೂ ಹೇಳುವ ಕಾರಣಗಳನ್ನೆಲ್ಲಾ ಕೇಳಿ,ಆಲೋಚನೆ ಮಾಡಿ, ಮದುವೆಮಾಡಬಹುದೆಂಬುದಾಗಿ ತಾವೂ ಇಬ್ಬರು ಪಂಚಾಯಿತರೂ ಸಮ್ಮತಿಪಡುವಪಕ್ಷದಲ್ಲಿ ಅರ್ಜಿದಾರನಿಗೆ ಲೇಸನ್ಸು ಬರೆದು, ಮೊಹರು ಹಾಕಿದ ಲಕೋಟೆಯಲ್ಲಿಟ್ಟು ಕೊಡಬೇಕು. ಮದುವೆಮಾಡಬಹುದೆಂಬುದಕ್ಕೆ ರುಜುವಾತಾಗಬೇಕಾಗಿರುವ ಮುಖ್ಯ ವಿಷಯಗಳೇನಂದರೆ—(೧) ಲೇಸನ್ಸು ಕೊಡದೆ ಇದ್ದರೆ ಅರ್ಜಿದಾರನನ್ನು ಅವನ ಗುಂಪಿನವರು ಬಹಿಷ್ಕಾರ ಮಾಡುತ್ತಾರೆಯೋ, (೨) ಆ ವಿವಾಹವು ಈಗ ನಡೆಯದೆ ನಿಂತ ಪಕ್ಷದಲ್ಲಿ ಇನ್ನು ೧೨ ವರುಷಗಳ ತನಕ ನಿಂತು ಹೋಗುವ ಸಂಭವವಿರುವದೋ; ಬಾಲ್ಯವಿವಾಹ ಮಾಡದೆ ಹೋದರೆ ಮಹಾಪಾತಕವಾಗಲಿ, ಪೋಷಕರಾಗಲಿ ನಿತ್ಯನರಕವಾಗಲಿ ಸಂಭವಿಸುವದೆಂಬ ನಂಬಿಕೆ ಉಂಟೋ, (೪) ಇನ್ನೂ ಇತರ ಮುಖ್ಯ ಕಾರಣಗಳೇನಾದರೂ ಉಂಟೋ.

೯. ಮ್ಯಾಜಿಸ್ಟ್ರೇಟರ ಅಭಿಪ್ರಾಯಕ್ಕೂ ಪಂಚಾಯಿತರ ಅಭಿಪ್ರಾಯಕ್ಕೂ ವಿರೋಧವಿರುವಂತೆ ಕಂಡುಬಂದಲ್ಲಿ ಆ ಕಕ್ಷಿಯನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಬಳಿಗೆ ಕಳುಹಿ ಅವರಲ್ಲಿ ತೀರ್ಮಾನ ಹೊಂದಬೇಕು.

೧೦. ಮೇಲ್ಕಂಡ ೮ನೆ ಕಲಮಿಗೆ ವಿರೋಧವಾಗಿ ಯಾರಾದರೂ ವಿವಾಹ ಮಾಡಿದಲ್ಲಿ ಅವರೂ, ಅವರಿಗೆ ಸಹಾಯ ಮಾಡಿದವರೂ ೧೦೦ ರೂಪಾಯಿಗೆ ಮೀರದಷ್ಟು ಜುಲ್ಮಾನೆ ಕೊಡಬೇಕೆಂಬ ಶಿಕ್ಷೆಗೆ ಗುರಿಯಾಗುತ್ತಾರೆ.

೧೧. ಬಾಲ್ಯ ವಿವಾಹವು ನಡೆದು ಎರಡು ವರ್ಷಗಳಾಗಿ ಹೋದರೆ ಯಾವ ಮ್ಯಾಜಿಸ್ಟ್ರೇಟರೂ ಅಂಥಾ ವಿವಾಹವನ್ನು ಕುರಿತು ಮೊಕದ್ದಮೆ ನಡಿಸಬೇಕಾದದ್ದಿಲ್ಲ.

೧೨. ಪ್ರತಿ ಗ್ರಾಮಾಧಿಕಾರಿಯೂ ಪೋಲೀಸಿನವರೂ ತಮ್ಮ ಸರಹದ್ದಿನಲ್ಲಿ ಬಾಲ್ಯ ವಿವಾಹವಾಯಿತೆಂದು ಕೇಳಿದ ಕೂಡಲೆ ಮ್ಯಾಜಿಸ್ಟ್ರೇಟರಿಗೆ ತಿಳಿಸಬೇಕು.

೧೩. ಆ ಕೂಡಲೇ ಮ್ಯಾಜಿಸ್ಟ್ರೇಟರು ಮೊಕದ್ದಮೆಯನ್ನು ಹಿಡಿದು, ಮುಂದಿನ ಕ್ರಮಗಳನ್ನು ಜರುಗಿಸತಕ್ಕದ್ದು.

೧೪. ಶಿಕ್ಷೆ ವಿಧಿಸಿದ ಮಾತ್ರಕ್ಕೇನೇ ವಿವಾಹ ಸಂಬಂಧವು ತಪ್ಪಿಹೋಗುವದಿಲ್ಲ.

---

## ತಾಲ್ಲೋಕು ವರ್ತಮಾನಗಳು.

ತಿಪಟೂರು.—ಈ ತಾಲ್ಲೂಕಿನ ರೈತರಿಗೆ ಬಹಳ ಕಷ್ಟ ಬಂದಿದೆ. ಅದೇನಂದರೆ—ಊರ ಹೊರಗೆ ೨—೩ ಫರ್ಲಾಂಗು ದೂರದಲ್ಲಿ ಗೊಬ್ಬರವನ್ನ ಸರ್ಕಾರಿ ಜಮೀನಿನಲ್ಲಿ ಹಾಕಕೂಡದೆಂತಲೂ ಊರೊಳಗೆ ಹುಲ್ಲು ಹಾಕಕೂಡದೆಂತಲೂ ತಾಲ್ಲೂಕ್ ಆಫೀಸರು ತೊಂದರೆ ಕೊಟ್ಟಿದ್ದಾರೆ. ಗೊಬ್ಬರ ಹುಲ್ಲು ಸಹ ನಿಮ್ಮ ಹೊಲಗಳಲ್ಲಿ ಹಾಕಿ ಎಂದು ಹುಕುಂ ಮಾಡಿದರು. ಹುಕುಂನಂತೆ ನಡೆಯಲು ದಿನವೂ ದನದಿನಸಸವನ್ನು ಹೊತ್ತುಕೊಂಡು ಹೊಲಗಳಿಗೆ ಹಾಕಬೇಕಾದರೆ ಊರಿಗೆ ೧—೨ ಮೈಲಿ ದೂರ ಇರುವ ಹೊಲಗಳಿಗೆ ಹಾಕುವದು ಹ್ಯಾಗೆ? ಮನೆಯಲ್ಲಿ ಆಳು ಇರುವವರು ತೆಗೆದುಕೊಂಡು ಹೋಗಿ ಹಾಕುತ್ತಾರೆ. ಒಬ್ಬಂಟಿಗರಾಗಿ ಇರುವವರು ಹ್ಯಾಗೆ ಮಾಡುವದು? ಹುಲ್ಲು ಹೊಲದಲ್ಲಿ ಹಾಕಿದರೆ ರೈತನಿಗೆ ಬಿಟ್ಟಾರೆ? ಊರೊಳಗೆ ಬಿಟ್ಟರೆ ಕದ್ದುಕೊಂಡು ಹೋಗುತ್ತಾರೆ. ಹೊರಗೆ ಅವರವರ ಹೊಲಗಳಲ್ಲಿ ೧—೨ ಮೈಲಿ ಹೊಲಗಳಲ್ಲಿ ಹಾಕಿದರೆ ಒಂದು ಕಡ್ಡಿಯಾದರೂ ಬಿಟ್ಟಾರೇ? ತೂಗಡಿಸುವವನಿಗೆ ಮೃದುವಾದ ಹಾಸಿಗೆ ಕೊಟ್ಟಂತೆ ಕಳ್ಳರಿಗೆ ಅನುಕೂಲಿಸುತ್ತೆ.—ಕೆಲವು ಜನ ಛಾಪಾಕಾಗದ ಮಾರತಕ್ಕ ಬಿಕರಿದಾರ್ರು ಅನ್ಯಾಯ ಮಾಡುತ್ತಾರೆ. ೧೦೦ ರೂಪಾಯಿಗೆ ಸರಕಾರದಿಂದ ೫ ರೂಪಾಯಿ ಡಿಸ್‌ಕೌಂಟ್ ಕೊಡುತ್ತಾರೆ. ಅದೇ ಸಾಕಾಗಿದೆ. ಛಾಪಾಕಾಗದ ಕೊಡಿ ಎಂದು ಕೇಳಿದರೆ ರೂಪಾಯಿನ ಕಾಗದಕ್ಕೆ ನಾಲ್ಕು ಆಣೆ ಕೊಟ್ಟರೆ ಕೊಡುತ್ತಾರೆ. ಕೊಡುವದಿಲ್ಲ ಎಂದು ಹೇಳಿದರೆ ನೀನು ಕೇಳತಕ್ಕ ಕಾಗದ ನಮ್ಮಲ್ಲಿ ಇಲ್ಲವೆಂತ ಹೇಳಿ ಕೊನೆಗೆ ಕೊಟ್ಟರೆ ಕಾಗದ ಕೊಡುತ್ತಾರೆ. ನಮ್ಮ ಮಹರಾಜ ಸರ್ಕಾರದವರು ಖಂಡಿತವಾದ ಹುಕುಂ ಕೊಟ್ಟಲ್ಲಿ, ಗ್ರಾಮಗಳಲ್ಲಿ ಸರ್ವರಿಗೂ ತಿಳಿಯುವಂತೆ ದಂಡೂರ ಮೂಲಕ ಪ್ರಸಿದ್ಧಪಡಿಸಿದರೆ ಪ್ರಜೆಗಳು ಬದುಕುತ್ತಾರೆ.

ಶಿಡ್ಲಘಟ್ಟ.—ಇಲ್ಲಿ ಎರಡು ಮೂರು ತಿಂಗಳ ಲಾಗಾಯ್ತು ಪ್ಲೇಗು ಇರುವದಿಲ್ಲ. ದಯಾಳು ದೇವರು ತನ್ನ ಕೃಪೆಯಿಂದ ಇಲ್ಲಿಯ ವರೆಗೂ ಸುರಕ್ಷಿತವಾಗಿ ಕಾದಿದ್ದಾನೆ. ಫೆಬ್ರವರಿ ಮಾರ್ಚಿ ತಿಂಗಳುಗಳಲ್ಲಿ ಪ್ಲೇಗಿನ ದೆಶೆಯಿಂದ ಹೊರಗೆ ಹೋದವರು ಕೆಲವರು ತಿರಿಗಿ ಊರೊಳಗೆ ಬಂದಿರುತ್ತಾರೆ. ಮಳೆಯು ಕಳೆದ ವಾರದಿಂದ ಆಗಾಗ್ಯೆ ಆಗುತ್ತಲಿದೆ. ಎರಡು ಸಲ ಹದಕ್ಕೆ ತಕ್ಕ ಮಳೆ ಬಂತು ಅನ್ನಬಹುದು. ರೈತರು ಹೊಲಗಳನ್ನು ಉತ್ತುವದು ಹಸನು ಮಾಡುವದು ಇದೇ ಕೆಲಸದಲ್ಲಿದ್ದಾರೆ. ೨೧ ನೇ ತಾರೀಖಿನಲ್ಲಿ ಮಾತ್ರ ಸ್ವಲ್ಪ ಬಿಸಿಲು ಬಿದ್ದಿತು. ಇಲ್ಲಿಯ ಬೇಸಿಗೆ ಕಾಲದ ರಜೆಗಾಗಿ ಮುಚ್ಚಲ್ಪಟ್ಟಿದ್ದ ಸರ್ಕಾರಿ ಶಾಲೆಗಳು ತಿರಿಗಿ ಪ್ರಾರಂಭಿಸಿಯವೆ. ಮತ್ತು ಇಲ್ಲಿಯ ಆಸ್ಪಿಟಲ್ ಅಸಿಸ್ಟೆಂಟರಾದ ತಿರುಮಲಾಚಾರರಿಗೆ ಮೈಸೂರು ಡಿಸ್ಟ್ರಿಕ್ಟ್ ಚಾಮರಾಜನಗರಕ್ಕೂ, ಚಾಮರಾಜನಗರದ ಆಸ್ಪಿಟಲ್ ಅಸಿಸ್ಟೆಂಟರಾದ ಕುಮಾರಸ್ವಾಮಿ ಮೊದಲಿಯಾರರಿಗೆ ಇಲ್ಲಿಗೂ ವರ್ಗವಾಗಿದೆ. ನಾಲ್ಕೈದು ವರ್ಷಗಳಿಂದ ವೈದ್ಯ ಕೆಲಸ ನೋಡುತ್ತಿದ್ದ ಈ ತಿರುಮಲಾಚಾರರಿಗೆ ವರ್ಗವಾದದ್ದು ಎಷ್ಟೋ ಬಡಜನಗಳಿಗೆ ದುಃಖಾಸ್ಪದವಾಗಿದೆ. ಯಾಕಂದರೆ ಇವರು ಬಹು ಮುತುವರ್ಜಿಯಿಂದ ತಮ್ಮ ಕೆಲಸ ನೋಡುತ್ತಿದ್ದರು. ಇವನು ದರಿದ್ರನು, ಇವನು ಐಶ್ವರ್ಯವಂತನು ಎಂಬೀ ತಾರತಮ್ಯ ನೋಡದೆ ಮುಖ್ಯವಾಗಿ ಬಡವರ ಕಡೆಗೆ ಬಹು ಶಾಂತವಾಗಿಯೂ ದಯಾಳುವಾಗಿಯೂ ಆಸ್ಪತ್ರೆಯಲ್ಲಿ ಮದ್ದು ಕೊಡುತ್ತಿದ್ದರು. ಪ್ಲೇಗಿನ ಕಾಲದಲ್ಲಿಯಂತೂ ಗುಡುಸಲುಗಳಿಗೂ ಹಳ್ಳಿಗಳಿಗೂ ಹೋಗಿ ರೋಗ ಸೋಂಕಿದವರನ್ನು ನೋಡಿ ಔಷಧ ಕೊಟ್ಟು ಪರಾಂಬರಿಸಿದರು. ಹಸು ಕೂಸಿನ ಸ್ವಭಾವವೇ ಇವರದು. ಇಂಥವರನ್ನು ಇಲ್ಲಿಂದ ವರ್ಗಮಾಡಿದ್ದಕ್ಕೆ ಎಷ್ಟೋ ಜನಗಳು ಮುಖ್ಯವಾಗಿ ಬಡವರು ಬಹು ದುಃಖಪಡುತ್ತಾರೆ.

ತರೀಕೆರೆ.—ಈ ವಾರ ೨—೩ ದಿವಸ ಸ್ವಲ್ಪ ಮಳೆ ಬಂದದರಿಂದ ಬಿಸಲಿನ ತಾಪ ಕಮ್ಮಿಯಾಗಿದೆ. ಜನರಿಗೆ ಯಾವ ವಿಧವಾದ ಬಾಯಿಲೆಯು ಇಲ್ಲ. ಸದ್ಯಕ್ಕೆ ಪ್ಲೇಗಿನ ಭೀತಿಯು ತಪ್ಪಿರುವದರಿಂದ ಗುಡಿಸಲಿನಲ್ಲಿದ್ದ ಜನರು ಊರೊಳಗೆ ಕೊಂಚ ಕೊಂಚವಾಗಿ ಬರುತ್ತಲಿದ್ದಾರೆ. ಸ್ಕೂಲ್‌ಗಳೆಲ್ಲಾ ತೆರೆಯಲ್ಪಟ್ಟಿರುತ್ತವೆ. ಆದರೆ ಹುಡುಗರ ಮತ್ತು ಹುಡುಗಿಯರ ಸಂಖ್ಯೆ ಕಮ್ಮಿಯಾಗಿರುತ್ತದೆ. ಮ್ಯುನಿಸಿಪಾಲಿಟಿಯವರು ಲ್ಲಲ್ಲಿ ಮನೆಗಳನ್ನು ಒಡೆದು ಹೊಸ ರೋಡುಗಳನ್ನು ಮಾಡಿಸುತ್ತಾರೆ.—ಇಲ್ಲಿ ಪ್ರತಿ ವಾರದಲ್ಲಿ ಸಂತೆ ಕ್ರಮವಾಗಿ ನಡಿಯುತ್ತಲಿದೆ. ಧಾರಣೆವಾಸಿಗಳು ಒಂದೇಪ್ರಕಾರವಾಗಿರುತ್ತವೆ. ಸಂತೆಯಲ್ಲಿ ಜೂಜಾಡುವದು ಬಹಳವಾಗಿ ಇದೆ. ಇದಕ್ಕೆ ಪೋಲೀಸಿನವರು ಚನ್ನಾಗಿ ನಿಗಾಕೊಡಬೇಕು.—೧೯೦೨ ನೇ ಇಸವಿ ಫೆಬ್ರವರಿ ತಿಂಗಳಲ್ಲಿ ಕಡೂರು ಡಿಸ್ಟ್ರಿಕ್ಟಿಗೆ ಸೇರಿದ ತರೀಕೆರೆ ಕೂಪ್ಪ ರೋಡಿನಲ್ಲಿ ನಡೆದ ಮೆಯಿಲ್ ಟಾಂಗಾ ದಕಾಯಿತಿಯೂ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿಯೂ ಸಂತೆಬೀರಿಯಲ್ಲಿಯೂ ನಡೆದ ಪ್ರಬಲವಾದ ದಕಾಯಿತಿ ಕೇಸುಗಳ ಅಪರಾಧಿಗಳನ್ನು ಪತ್ತೆಮಾಡಲು ಈ ವರಿಗೂ ಸ್ಪೆಷಲಾಗಿ ನೇಮಕಮಾಡಿದ್ದ ಇನಸ್ಪೆಕ್ಟರ ಮೆ॥ ಸಿ. ನರಸಿಂಹ ಶಾಸ್ತ್ರಿಗಳು ತುಂಬಾ ಮೆಹನತ್ತು ಮಾಡಿ, ಸಾಂಗಲಿ ಇಲಾಖೆಯಲ್ಲಿ ೧೦ ಜನ ಕೊರಚರನ್ನು ದಸ್ತಗಿರಿಮಾಡಿ. ಅಲ್ಲಿನ ಪೋಲೀಸಿನವರ ವಶಕ್ಕೆ ಕೊಟ್ಟರು. ದಕಾಯಿತಿ ಕಳ್ಳರು ದಾರಿಯಲ್ಲಿ ಬರುವಾಗ ಪೋಲೀಸ್‌ನವರನ್ನೇ ಹೊಡೆದು, ಕೆಲವರು ಓಡಿಹೋದರು. ಇನ್ನೂ ಕೆಲವರನ್ನು ಹೈದರಾಬಾದು ಸರಹದ್ದಿನಲ್ಲಿಯೂ ದಸ್ತಗಿರಿ ಮಾಡಿ ಅವರನ್ನೆಲ್ಲಾ ಚಿಕ್ಕಮಗಳೂರಿಗೆ ತನಿಖೆಗ್ಯೆ ಕರತಂದರು. ಮೇಜಿಸ್ಟ್ರೇಟರು ಈ ದಕಾಯಿತಿ ಕಳ್ಳರನ್ನೆಲ್ಲಾ ದರ್ಯಾಫ್ತಿಮಾಡಿ, ಅವರನ್ನು ಜೈಲಿನಲ್ಲಿ ಹಾಕಿದ್ದರು ಈಗ ಕಳ್ಳರು ಯಾರಿಗೂ ತಿಳಿಯದಹಾಗೆ ರಾತ್ರಿಕಾಲದಲ್ಲಿ ಏಕಾ ಏಕಿ ಓಡಿಹೋದರು. ತಿರುಗಿ ಇವರನ್ನು ಹಿಡಿಯುವದಕ್ಕಾಗಿ ತರೀಕೆರೆಯಲ್ಲಿರುವ ಕಸಬಾ ಫಡೆದಾರ್ರನ್ನು ಮತ್ತು ಮುಂಚೆ ಮೆಹನತ್ತು ಮಾಡಿದಂಥಾ ಇನಸ್ಪೆಕ್ಟರನ್ನು ನೇಮಿಸಿರುತ್ತಾರೆ.

ಶ್ರೀರಂಗಪಟ್ಟಣ(?).—ಅಕ್ಟ್ರಾಯಿ ಬಾಬು ಒಂದು ತಿಂಗಳಿಂದ ಇಲ್ಲಿ ಜಾರಿಯಿದೆ. ಇದರಿಂದ ಪ್ರಜೆಗಳಿಗೂ ಕೇವಲ ಬಡ ವ್ಯಾಪಾರಿಗಳಿಗೂ ತುಂಬಾ ಶ್ರಮವಿದೆಯೆನ್ನುವದರಲ್ಲಿ ಯಾವ ಸಂದೇಹವೂ ಇಲ್ಲ. ಸದ್ಯಕ್ಕೆ ವೀಳ್ಯದೆಲೆ, ತೆಂಗಿನಕಾಯಿ, ಬೇಳೆ, ಕೇಮೆಯಿನ್ನೆ—ಈ ನಾಲ್ಕು ಜಾರೀಲಿವೆ. ಇವುಗಳಿಂದ ಸುಮಾರು ೧೦೦ ಚಿಲ್ಲರೆ ರೂಪಾಯಿ ಸರ್ಕಾರಕ್ಕೆ ವಸೂಲಾಗಿದೆ. ರಾಜಮಾರ್ಯದ ಭರ್ತಿ ವಿಷಯ ಯಾವ ಆಕ್ಷೇಪಣೆಯೂ ಇಲ್ಲ. ಆದರೆ ಪ್ರಜೆಗಳ ಮತ್ತು ಸ್ಥಳದ ನಿಜಸ್ಥಿತಿಯನ್ನರಿತು ತೆಗೆಯುವದು ಧರ್ಮವಾಗಿದೆ. ಹಾಗಿಲ್ಲದೆ ಇದ್ದರೆ ಅಧರ್ಮವಾಗಿ ರಾಜಮಾರ್ಯಕ್ಕೆ ಕುಂದಕವೂ, ಪ್ರಜೆಗಳಿಗೆ ಕೇಡೂ ಆಗುತ್ತೆ. ಜೋಳಕ್ಕೆ ೧೦೦ ರೂಪಾಯಿಗೆ ೨ ರೂಪಾಯಿ ತೆರಿಗೆ ಇದೆ. ಆದರೆ ಹೊಗೆಸೊಪ್ಪು ಮಣ ೧ಕ್ಕೆ ಕ್ರಯ ೩ ರೂ., ೨ ರೂ. ಇಳಿದಿದೆ. ಇದಕ್ಕೆ ತೆರಿಗೆ ಮಣ ೧ಕ್ಕೆ ೧ ರೂಪಾಯಿ ನೇಮಿಸಿರುವ ಕಾರಣ ಇದು ತುಂಬಾ ಅನ್ಯಾಯವೂ, ಅಧರ್ಮವೂ ಆಗಿದೆ. ಸದ್ಯಕ್ಕೆ ಈ ಬಾಬ್ತೇ ಇನ್ನೂ ವಸೂಲಿಯಲ್ಲಿಲ್ಲ. ಈ ಹೊಗೇಸೊಪ್ಪಿನ ಬಾಬು ವಿಲ್ಲಿಸಬೇಕೆಂದು ಮಹಾರಾಜರವರಿಗೂ ಅರ್ಜಿಗಳು ಹೋಗಿವೆ. ಇನ್ನೂ ೨ ತಿಂಗಳು ಯೋಚನೆ ಮಾಡಿ ಹೇಳುತ್ತೇವೆಂದು ಅಪ್ಪಣೆಯಾಗಿದೆ. ತೆರಿಗೆ ಆದ ಭಾಗಾಯ್ತು ಊರಿಗೆ ಬೇಕಾದ ಎಷ್ಟೋ ಕಾಣಾಚನ್ನು ಅಸರೂಪವಾಗಿದೆ. ಅಲ್ಲದೆ ಯಾರಾದರೂ ಒಬ್ಬರಿಟ್ಟರು ತಂದು ಇಟ್ಟಿದ್ದರೆ ಒಂದಕ್ಕೆರಡು ಕ್ರಯ ಕೊಡಬೇಕು. ಹಾಗೆ ಕೊಟ್ಟಾಗ್ಯೂ ಕೀಳಾಯ ಚಿಕ್ಕವುಗಳು. ಆದಕಾರಣ ಈ ಅನ್ಯಾಯವನ್ನು ಮ್ಯುನಿಸಿಪಾಲಿಟಿಯವರು ಪರೀಕ್ಷಿಸಿ, ಮಾರಾಟಕ್ಕೆ ಕ್ರಮವಾಗಿ ಏರ್ಪಡಿಸಿದರೆ ದೊಡ್ಡ ಉಪಕಾರವಾದೀತು. ವೀಳ್ಯದೆಲೆ ಕೇತ್ರ ತೋಟದವರಿಗೆ ಅಷ್ಟಾಗಿ ಲಕ್ಷ್ಯವಿಲ್ಲ. ತೋಟದವರು ಕೆಲವರೇ. ಅವರ ಬಳಿ ಕೊಂಡು ಮಾರುವವರು ಬಹಳ ಮಂದಿ. ಇವರುಗಳು ೧ ಕಟ್ಟಿಗೆ ೨ ಕಾಸಿನಂತೆ ಸುಂಕಾ ತೆರಿಸಬೇಕಾಗಿದೆ. ಸ್ವಂತ ಮಾಲೀಕರು ಸುಲಭ ಕ್ರಯಕ್ಕೆ ತಮ್ಮ ಪದಾರ್ಥವನ್ನು ಖರ್ಚುಮಾಡಿಕೊಂಡು ಹೋಗುತ್ತಾರೆ. ಆದರೆ ಕೊಂಡು ಮಾರುವವರಿಗೆ ಗಂಟು ಸಹ ಆಗದೆ ಗೋಳಾಡುತ್ತಾ ಹೋದದ್ದನ್ನು ನನ್ನ ಸ್ವಂತ ಕಣ್ಣಿನಿಂದ ನೋಡಿದ್ದಲ್ಲದೆ ಅನೇಕರು ಆ ವೃತ್ತಿಯನ್ನೇ ಬಿಟ್ಟಿದ್ದಾರೆ. ಅವರುಗಳ ಜೀವನಕ್ಕೆ ತುಂಬಾ ಕಷ್ಟಬಂದಿದೆ. ಆದಕಾರಣ ಈ ರೀತಿ ಬಡ ವ್ಯಾಪಾರ ಮಾಡಿ ಜೀವಿಸುವವರಿಗೆ ಏನಾದರೂ ರಿಯಾಯಿತು ತೋರಿಸಿದರೆ ಭಗವತ್ಕೃಪೆ ಅವರ ಮೇಲಿರುತ್ತೆನ್ನುವದಕ್ಕೆ ಸಂಶಯವಿಲ್ಲ.—ಎರಡು ಸಾರಿ ಶೀಘ್ರದಲ್ಲಿ ಸ್ವಲ್ಪ ಮಟ್ಟಿಗೆ ಮಳೆ ಬಂತು. ಈಗ ಸುಮಾರು ತಂಪಾಗಿದೆ, ಅಷ್ಟೇ. ಸುತ್ತು ಮುತ್ತು ಪ್ರಾಂತ್ಯಗಳಲ್ಲಿ ಜನರು ಹೊಲ ಗೆಯ್ಯುತ್ತಿದ್ದಾರೆ. ಕೆಲವು ಕೆರೆಗಳಿಗೆ ೩—೪ ತಿಂಗಳುಗಳ ನೀರು ಸಹ ಬಂದಿದೆ.

ಚಿಕ್ಕಮಗಳೂರು.—ಚಡಿಮಳೆ ಪ್ರಾರಂಭವಾಗಿದೆ. ಇಲ್ಲಿಗೆ ಸುಮಾರು ೬ ಮೈಲು ದೂರದಲ್ಲಿ ತಿರಿಗಿ ಪ್ಲೇಗ್ ಪ್ರಾರಂಭಿಸಿ ಕೆಲವು ಕೇಸುಗಳಾದಂತೆಯೂ ಅಮಲ್ದಾರ್ರವರ ಸವಾರಿ ಅತ್ತಕಡೆ ಅಭಿಮಾಯಿಷಿಗೋಸ್ಕರ ಪದೇ ಪದೇ ಖುದ್ದು ದಯಮಾಡಿಸಿ ಬಹು ಒಳ್ಳೇ ಏರ್ಪಾಡುಗಳನ್ನು ಸಮರ್ಪಕವಾದ ರೀತಿಯಲ್ಲಿ ನಡಿಸಿದಂತೆಯೂ ತಿಳಿಯಬಂದಿದೆ.—ಹೈಸ್ಕೂಲಿನ ಹೆಡ್ಮಾಸ್ಟರವರು ತಮ್ಮ ಸಹಾಯೋಪಾಧ್ಯಾಯರೊಡನೆಯೂ ವಿದ್ಯಾರ್ಥಿಗಳೊಡನೆಯೂ ಚಂದ್ರದ್ರೋಣ ಪರ್ವತಕ್ಕೆ ಹೊರಟು ಅಲ್ಲಲ್ಲಿ ವಿದ್ಯಾರ್ಥಿಗಳಿಗೆ ಅವಶ್ಯವಾದ ಉಪನ್ಯಾಸಗಳನ್ನು ಮಾಡುತ್ತಾರೆಂತ ಕೇಳುತ್ತೇವೆ.—ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಧರ್ಮದಾಯರ ಹೆಡ್‌ಮುನ್ಷಿ ಕೆಲಸಕ್ಕೆ ಕಡೂರು ಸಿರಸ್ತೆದಾರ್ರು ಭೀಮರಾಯರು ದಯಮಾಡುವಂತೆ ತಿಳಿಯಲಾಗಿದೆ. ಎಗ್ಸಿಕ್ಯೂಟಿವ್ ಇಂಜನಿಯರ್ ಮೆ॥ ಮುಲಾಯಿಯವರು ಕಡೂರು ಡಿವಿಜನ್ ಛಾರ್ಜನ್ನು ಮೆ॥ ಅರುಣಾಚಲಂ ಮೊದ್ಲಿಯರಿಂದ ಅಂಗೀಕರಿಸಿದರು.—ಡಾಕ್ಟರ್ ನಂಜಪ್ಪನವರು ೩ ತಿಂಗಳಿಗೋಸ್ಕರ ಮಾತ್ರ ಬಿಡ್ಡಿ ನೋಡುವರೆಂತಲೂ ತರುವಾಯ ಡಾ॥ ಕುಪ್ಪುಸಾಮಿ ಮೊದ್ಲಾರ್ರು ವಾಪಸ್ ಬರುವಂತೆಯೂ ಪ್ರವಾದವಿದೆ. ಆದರೆ ಕಳೆದಸಾರಿ ಡಾಕ್ಟರ್ ಬೆರ್ನ್ ಸಾಹೇಬರು ಚಿಕ್ಕಮಗಳೂರಿಗೆ ದಯಮಾಡಿಸಿದ್ದಾಗ್ಗೆ ಪರಾಂಬರಿಸಿದ ವಿಷಯಗಳಲ್ಲಿ ಪಟ್ಟ ಸಂತೋಷಗಳಲ್ಲೂ ಅವರು ಹೊಸ ಯೋಚನೆ ಮಾಡಿರುವಂತೆಯೂ ಈಗಿರುವ ಕೊಡಗು ನಂಜಪ್ಪನವರನ್ನೇ ಇಲ್ಲಿಗೆ ಸಿವಿಲ್ ಸರ್ಜನರಾಗಿ ಏರ್ಪಡಿಸಲಿಕ್ಕೆ ತಕ್ಕ ತರದೂದುಗಳು ನಡಿಯುತ್ತವೆಂತಲೂ ಪ್ರವಾದವಾಗಿದೆ.—ಕಾಫಿ ಧಾರಣೆ ಬಡ ಬರ ತಗ್ಗುತ್ತಾ ಇದೆ. ಈಗ ಮಣ ೧ಕ್ಕೆ ೬॥ ರೂ., ೬॥। ಮಾತ್ರ ಉಂಟು. ತೊಗರಿಬೇಳೆ ರೂಪಾಯಿಗೆ ೬ ಸೇರು ಸಿಕ್ಕುವದು ದುಸ್ತರವಾಗಿದೆ. ಜೈಲ್ ಲಾಕಪ್ಪಿನಲ್ಲಿದ್ದು ತಪ್ಪಿಸಿಕೊಂಡು ಓಡಿಹೋಗಿರುವ ದರೋಡೆ ಕಳ್ಳರು ಈ ವರಿಗೂ ಪತ್ತೆಯಾಗಿಲ್ಲ.—ಈಗ ಕೋರ್ಟುಗಳೂ ಸ್ಕೂಲುಗಳೂ ತಮ್ಮ ಬೇಸಿಗೆ ವಿಶ್ರಾಂತಿಯನ್ನು ಅನುಭವಿಸಿ ಮುಗಿಸಿ ಪುನಹ ಕೆಲಸಕ್ಕೆ ಪ್ರಾರಂಭಿಸಿವೆ. ಎಕ್ಸೈಜ್ ಇಲಾಖೆಯಲ್ಲಿ ತಮ್ಮ ಕೆಳಗೆ ಕೆಲಸ ಮಾಡುವ ಸಣ್ಣ ನೌಕರರನ್ನು ಕೆಲವರು ಮನೆ ಕೆಲಸಕ್ಕೆ ಉಪಯೋಗಿಸುವದು ಈಚಿಗೆ ಜಾಸ್ತಿಯಾಗುತ್ತಿದೆ ಎಂತಲೂ, ಅದಕ್ಕೋಸ್ಕರ ಅವರಿಗೆ ಏನೂ ರುಸುಂ ಸಿಕ್ಕುವದಿಲ್ಲವೆಂತಲೂ ಗುಪ್ತದಲ್ಲಿ ಕೆಲಸ ಜಲಾವಣೆ ಆಗುತ್ತದೆಂತಲೂ ಹೇಳುತ್ತಾರೆ.—ಈ ಊರು ಜೈಲ್ ಲಾಕಪ್ಪಿನಿಂದ ಕಳೆದ ೩ನೆ ರಾತ್ರಿ ೪ ಮಂದಿ ದರೋಡೆಕಳ್ಳರು ತಪ್ಪಿಸಿಕೊಂಡು ಹೋಗಿದ್ದಾರೆ. ಇವರನ್ನು ಚಿತ್ರದುರ್ಗದ ಪೋ॥ ಇನ್ಸ್‌ಪೆಕ್ಟರ್ ನರಸಿಂಹಶಾಸ್ತ್ರಿಯವರು ತುಂಬಾ ಮೆಹನತ್ತಿನಿಂದ ಪತ್ತೆ ತರದೂದು ನಡಿಸಿ, ಬಳ್ಳಾರಿ ಕಡೆಯಿಂದ ಹಿಡಿದು ತಂದಿದ್ದರು. ಇವರು ಮುಂಚೆ ದೇಶದ ದೊಡ್ಡ ದರೋಡೆ ಗುಂಪಿಗೆ ಸೇರಿದವರು. ೩ನೆ ರಾತ್ರಿ ಇದರ ಕಳ್ಳರು ಲಾಕಪ್ಪಿನ ಗಡಾರಿಗಳು ಅವರ ಶಕ್ತಿಗೆ ಬಳಪಟ್ಟಿದ್ದರಿಂದ ಅವುಗಳನ್ನು ಮುರಿದು, ಪಲಾಯನ ಮಾಡುವಾಗ್ಯೆ ಕಾವಲುಗಾರರು ಕಂಡರಂತೆ. ಅವರನ್ನು ಕೊಲ್ಲುತ್ತೇವೆಂತ ಧಮಕಾಯಿಸಿ ಹೊರಗೆ ಬಂದು ಪರಾಗೋಪೆಹತ್ತಿ ಓಡಿದರಂತೆ. ಅದೇ ಕಾಲದಲ್ಲಿ ಡಾಕ್ಟರ್ ಬೆರ್ನ್ ಸಾಹೇಬರವರು ಈ ಟೌನಿನಲ್ಲಿ ಹಾಜರಿದ್ದರು. ಅಂತು ಪುನಃ ಅವರನ್ನು ಹಿಡಿಯುವದೇ ಮುಖ್ಯಕೆಲಸ, ಮತ್ತು ಅಂಥ ಹುಂಬರನ್ನು ಸಾಧಾರಣ ಲಾಕಪ್ಪಿನಲ್ಲಿ ತಕ್ಕಷ್ಟು ಕಾವಲು ಮತ್ತು ಭದ್ರತೆ ಇಲ್ಲದೆ ಕಾಪಾಡುವದು ಅಪಾಯವೆಂತ ಪ್ರತ್ಯಕ್ಷವಾಯಿತು.—ಎಗ್ಸಿಕ್ಯೂಟಿವ್ ಇಂಜನೀರ್ ಮೆ॥ ಅರುಣಾಚಲಂ ಮೊದ್ಲಿಯರಿಗೆ ಮೈಸೂರು ಡಿವಿಜನಿಗೆ ವರ್ಗವೆಂತಲೂ, ಇಲ್ಲಿಗೆ ಮೆ॥ ಮುಲಾಯಿಸ್ವಾಮಿಯವರು ಬರುವರೆಂತಲೂ ಕೇಳುತ್ತೇನೆ ಡ. ಕ. ಮೆ॥ ಎಂ. ನಾರಾಯಣರಾಯರವರು ಡಾ॥ ಬೆರ್ನ್ ಸಾಹೇಬರವರ ಸಂಗಡ ಸರ್ಟಿಫಿಕೇಟ್ ಪಡೆದಿದ್ದಾರಂತೆ. ಮೆ॥ ಎಂ. ನಾರಾಯಣರಾಯರು ಕೇವಲ ಪಾರಮಾರ್ಥಿಕರೆಂತಲೂ, ಮೃದುಸ್ವಭಾವಿಗಳೆಂತಲೂ ತೋರುತ್ತೆ. ಮ್ಯುನಿಸಿಪಲ್ ಇಲಾಖೆಯಲ್ಲಿ ತಿರಿಗಿ ಸಣ್ಣ ನೌಕರರಿಗೆ ಅಲ್ಲಿಂದಲ್ಲಿಗೆ ವರ್ಗವಾಗುತ್ತಾ ಬಂದಿದೆ. ಸದ್ಯಕ್ಕೆ ಈ ಪಟ್ಟಣವೂ ಸುತ್ತಲಿನ ಗ್ರಾಮಗಳೂ ಪ್ಲೇಗ್ ಬಾಧೆಯಿಂದ ಸಂಪೂರ್ತಿಯಾಗಿ ತಪ್ಪಿಸಲ್ಪಟ್ಟಿದೆ.—ಈ ಊರಿನ ಮಧ್ಯದಲ್ಲಿ ಒಬ್ಬ ಹೋಲೆಯರವನು ಕೇವಲ ಮಲಿನ್ಯನಾಗಿ ಬುದ್ಧಿ ವಿಕಲ್ಪತೆಯಿಂದ ದೇಶವಾದ್ಯಂತವ್ಯಾಪಿಸ್ತನ್ನು ಮಾರ್ಗದಲ್ಲಿ ತಿರುಗಾಡುವ ದಿವಾನಿಷ್ಟರಾದ ಸ್ತ್ರೀಪುರುಷರಿಗೆ ವ್ಯಥೆ ಪಡಿಸುತ್ತಾ ತಿರಿದುಂಡುತ್ತಾ ಮನೆಗಳ ಮುಂದೆ ಮೊಂಡುಬಿದ್ದು ಕಾಡುತ್ತಿದ್ದಾನೆ. ಇವನ ಮೈತುಂಬಾ ನೆಣಗಳು ಮುತ್ತಿಕೊಳ್ಳುತ್ತವೆ. ಇಂಥವನನ್ನು ಪೋಲೀಸಿನವರಾಗಲೀ, ಮುನಿಸಿಪಾಲಿಟಿಯವರಾಗಲೀ ಹುಚ್ಚರ ಆಸ್ಪತ್ರೆಗೆ ಕಳುಹಿಸಿದರೆ ವಾಸಿ. ಪೇಟೆಯಲ್ಲಿ ವರ್ತಕರು ಬಹುಕಟ್ಟಿ ತುಪ್ಪವನ್ನೂ ಕೆಳತ ಪದಾರ್ಥಗಳನ್ನೂ ಮಾರುತ್ತಿದ್ದಾರೆ. ಪ್ಲೇಗ್ ನಿಂತು ಹೋದದ್ದರಿಂದ ಜೂಜಾಟ ಪ್ರಬಲವಾಗಿದೆ. ಜನರ ಕ್ಷೇಮ ಚನ್ನಾಗಿದೆ. ಮಳೆ ಮೋಡಗಳು ಆಗಾಗ್ಗೆ ಉಂಟು. ಆಗಾಗ ಅತಿ ವಿಜೃಂಭಣೆಯಿಂದ ನಡೆಯುತ್ತವೆ. ವೈಶ್ಯರ ಮದುವೆಗಳೇ ಜಾಸ್ತಿಯಾಗಿವೆ.

## ಶ್ರೀ ಕೃಷ್ಣವಿಲಾಸ್ ಪ್ರೆಸ್.

30

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡ್ಸ, ನೋಟೀಸ್ ಫಾರಂ, ಬ್ಯಾಲನ್ಸ್ ಷೀಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಛಾರ್ಜುಗಳಿಗೆ ಮಾಡಲ್ಪಡುತ್ತವೆ.

ರೋಜು, ವರ್ಗ, ಮುಂತಾದ ಖಾಲೀ ಪುಸ್ತಕಗಳು; ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು; ಇನ್ನು ಇತರವಾದ ನಮೂನೆಯ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿನಂತೆ ಬಹು ಅಂದವಾಗಿ ತಯಾರ್ಮಾಡಲ್ಪಡುತ್ತವೆ.

ಲಾಯರ್‌ಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್, ವಕಾಲತ್‌ನಾಮಾ, ಜಾರೀ, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಬಿಕರಿಗೆ ಸಿದ್ಧವಾಗಿರುತ್ತವೆ

ನಮ್ಮ ಕಂಪನಿಗೆ ವಿಲಾಯಿತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯತರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಜವಾಬನ್ನು ಅಪೇಕ್ಷಿಸುವವರು ಟಪ್ಪಾಲು ಹಾಸಲನ್ನು ಕಳುಹಿಸಬೇಕು ಕಾಗದಗಳನ್ನು ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡಪೇಟೆ ೨೫ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ.

ವಿಳಾಸ —ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

---

ಜ್ವರಹರಿ. 33

ಇದು ಸಾಧಾರಣ ಜ್ವರ, ಹಳೇಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಹಾಮಹ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ, ೧—೮ ರೂ., ೨ ರೂ., ೧೧ ರೂ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

❖❖❖❖❖❖❖❖❖

ಓಮಂ ಕರ್ಪೂರ.

mum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಲೈನ್, ಬೀಚ್ ಮದರಾಸ್.


## ಮಹಾರಾಜರ ಪಟ್ಟಾಭಿಷೇಕ.

ಈ ಉತ್ಸವದ ತಸ್ವೀರುಗಳ ಪುಸ್ತಕ. ಮಹಾರಾಜರ ದೊಡ್ಡ ಫೋಟೋ ತಸ್ವೀರು. ಸಂಸ್ಥಾನದ ಮುಖ್ಯ ಹುದ್ದೇದಾರರ ಫೋಟೋಗಳು, ಮೈಸೂರು ಬೆಂಗಳೂರಿನಲ್ಲಿರುವ ಅರಮನೆ ಮುಂತಾದ ಭಾರೀ ಕಟ್ಟಡಗಳು ಉಳ್ಳ ಈ ಫೋಟೋ ಪುಸ್ತಕಗಳು ಕೆಲವು ಮಾತ್ರ ಉಳಿದಿವೆ. ಬೇಗ ಬರೆದು ತರಿಸಿಕೊಳ್ಳಿ, ಕ್ರಯ ೮ ಆಣೆ, ಹಾಸಲು ೧ ಆಣೆ.

ವಿಳಾಸ:—ಮ್ಯಾನೆಜರ್, ಮಿಷನ್ ಬುಕ್ ಡಿಪೋ, ಮೈಸೂರು.
,, ,, ,, ಬೆಂಗಳೂರು.

### ಹೊಸ ಪುಸ್ತಕಗಳು.

೧. ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರಾ ಮಹಾರಾಣಿಯವರ ಜೀವಚರಿತ್ರೆ. ಸುಂದರವಾದ ಅನೇಕ ಚಿತ್ರಗಳನ್ನುಳ್ಳದ್ದು. ಕ್ರಯ ೪ ಆಣೆ.

೨. ಪುರಾತನ ಗ್ರೀಕರ ಕಥೆಗಳು. ಹುಡುಗರೂ ಹುಡುಗಿಯರೂ ಓದಲು ಅತ್ಯಂತ ಉತ್ಸಾಹವನ್ನುಂಟುಮಾಡುವ ಪುಸ್ತಕ. ಅಗತ್ಯ ಓದತಕ್ಕದ್ದು. ಚಿತ್ರಗಳಿಂದ ತುಂಬಿ ಇದೆ ಕ್ರಯ ೨ ಆಣೆ.

೩. ಪ್ರಾಚೀನ ಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ ಪ್ರಪಂಚದ ಆವಿಭಾಗದಲ್ಲಿದ್ದ ಪ್ರಾಣಿಗಳೂ, ಜೀವರಾಶಿಗಳೂ, ಹಕ್ಕಿಪಕ್ಷಿಗಳೂ. ಜಲಚರಗಳೂ ಚಿತ್ರಸಹಿತವಾಗಿ ವಿವರಿಸಲ್ಪಟ್ಟವೆ. ಇದು ಓದುತ್ತ ಓದುತ್ತಾ ಬಹಳ ಉತ್ಸಾಹವನ್ನುಂಟುಮಾಡುವದು ಕ್ರಯ ೧ ಆಣೆ

೪. ಬಾಲ್ಯವಿವಾಹ, ಬಾಲ್ಯವಿವಾಹದಿಂದುಂಟಾಗುವ ಶಾರೀರಕ ಕೇಡುಪರಂಪರೆಗಳು ಸವಿಸ್ತಾರವಾಗಿಯೂ ಮತ್ತು ಸಾಂಸರ್ಗಿಕ ಸುಲಭವಾಗಿಯೂ ವಿವರಿಸಲ್ಪಟ್ಟವೆ. ಹೊಸ ಪುಸ್ತಕ. ಕ್ರಯ ೩ ಪೈ

ಈ ಪುಸ್ತಕಗಳೆಲ್ಲಾ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವವು ಬೇಗನೆ ಬರೆದು ತರಿಸಿಕೊಳ್ಳಿ.

ವಿಳಾಸ.—ಮ್ಯಾನೆಜರ್, ಮಿಷನ್ ಬುಕ್ ಡಿಪೋ, ಮೈಸೂರು
,, ,, ,, ಬೆಂಗಳೂರು

---


## ಹೋಮಿಯೋಸಿಯಾ.

ತಕ್ಷಣ ಪರಿಹಾರ.



ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅಂಗಡಿ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಬೆಂಗಳೂರಿನ ಬಳಿಯಲ್ಲಿ ಕೆಲವು ಬಂಜರು ಭೂಮಿಗಳಲ್ಲಿ ಪರದೇಶದ ಹುಲ್ಲನ್ನು ಬೆಳೆಯಿಸಿ ಪರೀಕ್ಷಿಸಿದ ವಿಷಯವೂ ಈ ರಿಪೋರ್ಟಿನಲ್ಲಿ ಬರೆದಿದೆ. ಬಂಜರು ಭೂಮಿಯನ್ನು ಉಳುವದರಿಂದ ಅದು ಫಲವತ್ತಾಗುತ್ತದೆಂದೂ ಅದರ ಮೇಲೆ ಬೆಳೆಯುವ ಹುಲ್ಲೂ ಉತ್ತಮತರವಾಗುತ್ತದೆಂದೂ ಅಮೆರಿಕದಲ್ಲಿ ನಮ್ಮ ಕಣ್ಣಿಗೆ ಬಂದಿದೆ. ಬೆಂಗಳೂರಿನಲ್ಲಿ ಇದನ್ನನುಸರಿಸಿ ಮಾಡಿದ ಪ್ರಯತ್ನದಿಂದ ಫಲವಾಗಲಿಲ್ಲ. ಭೂಮಿಯನ್ನು ಹೀಗಾಯ ಮಾಡಿ ಹುಲ್ಲು ನಟ್ಟು ನೀರು ಹಾಕುತ್ತ ಬಂದರೂ ನಟ್ಟವಾಗಿ ಬೆಳೆಯಲಿಲ್ಲ; ಮಳೆಗಾಲ ಮುಗಿದೊಡನೆ ಬಗೆ ಹುಲ್ಲು ಹೊರತು ಉಳಿದವುಗಳೆಲ್ಲಾ ಬೇಸಗೆಯಲ್ಲಿ ಸತ್ತುಹೋಗಿದ್ದವು. ಆ ಭೂಮಿಯಲ್ಲಿ ಹುಲ್ಲು ಬೆಳೆಸುವುದಕ್ಕೆ ಅವಶ್ಯವಾದ ಯಾವದೋ ಒಂದು ವಸ್ತು ಇಲ್ಲವೆಂಬುದು ಈ ಪರೀಕ್ಷೆಯಿಂದ ಗೊತ್ತಾಯಿತೇ ಹೊರತು ಸ್ಪೋಟಕದಲ್ಲಿ ಯಾವ ತಪ್ಪು ಇರಲಿಲ್ಲವೆಂದು ಡಾ. ಲೇಮನರು ಹೇಳುತ್ತಾರೆ.

ವ್ಯವಸಾಯದ ವಿಷಯದಲ್ಲಿ ರೈತರು ತಮಗೆ ತಿಳಿಯಬೇಕಾದ ಯಾವ ಅಂಶವನ್ನಾದರೂ ಬರೆದು ಕೇಳಬೇಕೆಂದು ಡಾ. ಲೇಮನರು ಈ ರಿಪೋರ್ಟಿನಲ್ಲಿ ಪ್ರೋತ್ಸಾಹಿಸಿ ಬರೆದಿರುವದನ್ನು ನೋಡಿ ನಾವು ಬಹಳ ಸಂತೋಷಪಡುತ್ತೇವೆ. ಕಳೆದ ವರ್ಷದಲ್ಲಿ ಹಲವು ಬಗೆ ರೈತರು ಬರೆದುಕೊಂಡ ನೂರಾರು ಕಾಗದಗಳಿಗೆ ಪ್ರತ್ಯುತ್ತರವನ್ನು ಕಳುಹಿಸಿರುವದಲ್ಲದೆ, ಬೆಂಗಳೂರಿನಲ್ಲಿರುವ ಪರೀಕ್ಷೆಯ ಕ್ಷೇತ್ರ ತೋಟವನ್ನು ನೋಡಬೇಕೆಂದು ಬಂದ ಕೆಲವು ಮಂದಿಯನ್ನು ಅವರು ಅಂಗೀಕರಿಸಿದ ವಿಷಯವೂ ಬಹು ಸಂತೋಷಕರವಾಗಿದೆ.

## ಕಲ್ಲಿನ ಗಣಿಗಳಲ್ಲಿ ಅನಾಹುತವು.

[illegible] ಸಂಸ್ಥಾನದಲ್ಲಿ [illegible] ಎಂಬ [illegible] ಒಂದು ಕಲ್ಲಿದ್ದಲು ಗಣಿ ಇದೆ. ಈ ಗಣಿಯಲ್ಲಿ ಒಂದು ಕಾಲದಲ್ಲಿ [illegible] ಕಲ್ಲಿದ್ದಲನ್ನು ಅಗೆದು ತೆಗೆಯುತ್ತ ಬಂದಿದ್ದಾರೆ. [illegible] ಈ ಗಣಿಯಲ್ಲಿ ಕಳೆದ ವಾರ [illegible] ಗಣಿಯೊಳಗೆ ೩೪೮ ಜನರು (ಗಂಡಸರು, ಹೆಂಗಸರು, ಹುಡುಗರು) ಕೆಲಸ ಮಾಡುತ್ತಿದ್ದರು. [illegible] "ಆಗ ಗಣಿಯೊಳಗೆ ಕೆಲಸ ಮಾಡುತ್ತಿದ್ದ [illegible] ನಿಂತಿದ್ದೆವು. [illegible] ಗಣಿಯಿಂದ ಎದ್ದು ಬಂದ ಹೊಗೆಯು [illegible] ಸುಮಾರು ೪೦೦ ಅಡಿ [illegible] ಕೆಲಸ ಮಾಡುತ್ತಿದ್ದೆವು. [illegible] ಹೊರಗೆ ಬಂದೆವು. [illegible] ೩೪೮ ಜನರ ಪೈಕಿ [illegible] ಬಂದರು; [illegible] ಮಂದಿಗೆ ಏನೂ ಗಾಯವಾಗಿಲ್ಲ. [illegible] ಹೆಂಗಸರು, [illegible] ಬೆಂಗಳೂರಿನ ಪೇಟೆಯಿಂದ [illegible] ಅಲ್ಲಿಗೆ ಹೋಗಿದ್ದರು. ಅಲ್ಲಿ ಉಂಟಾದ ಭೂಕಂಪದ ದೆಸೆಯಿಂದ ರೈಲ್ ಕಂಬಿಗಳು ನೆಲದಲ್ಲಿ ಇಳಿದುಹೋದವು. ಕೆಲವು ಕಡೆ ಭೂಮಿಯು ಅರ್ಧ ಮೈಲಿ ಉದ್ದ ಬಿರುಕು ಬಿಟ್ಟಿದೆ. ಅನೇಕ ಬಂಗಲೆಗಳೂ ಕಟ್ಟಡಗಳೂ, ರೈಲ್ ಸ್ಟೇಷನ್ನೂ ಬಿದ್ದುಹೋಗಿವೆ. ಈ ಅನಾಹುತದ ದೆಸೆಯಿಂದ ಗಣಿಯ ಕೆಲಸವೆಲ್ಲ ಸದ್ಯಕ್ಕೆ ನಿಂತಿದೆ ಎಂದು ತಿಳಿದುಬರುವದು.

## ದೇಶಾಂತರದ ವಿಶೇಷ ಸಮಾಚಾರಗಳು.

ಇಂಗ್ಲೆಂಡಿನಲ್ಲಿ ಪ್ರಸಿದ್ಧರಾದ ಚಿತ್ರಗಾರರು ಬರೆದ ಚಿತ್ರಗಳು ಮಾರವಾರವೂ ಹರಾಜಾಗುತ್ತವೆ. ಕಳೆದ ತಿಂಗಳಲ್ಲಿ ಹರಾಜಾದ ಚಿತ್ರಗಳಲ್ಲಿ ಒಂದು ಎರಡುವರೆ ಅಡಿ ಉದ್ದವೂ ಎರಡು ಅಡಿ ಅಗಲವೂ ಇತ್ತು. ಅದರಲ್ಲಿ ಎರಡು ದೊಡ್ಡ ಬಂಧ್ಯಗಳೂ ನಿದ್ದ ಹಳ್ಳಿ ದಾಗಿತ್ತು. ಇದನ್ನು ಇಟ್ಟುಕೊಂಡು ಚಿತ್ರಗಳ ವ್ಯಾಪಾರಸ್ಥನಿಗೆ ಮಾರುವದಕ್ಕೆ ಹೋಗಲಾಗಿ ಅವನು ಅದಕ್ಕೆ ೫೦ ಪೌನು ಸಹ ಕೊಡಲಾರೆನೆಂದನು. ಕಡೆಯಾಯ ಅದನ್ನು ಆಳೆಯು ಹರಾಜು ಹಾಕುವವರ ಬಳಿಯಲ್ಲಿ ಕೊಡಲಾಗಿ ಅದು ಕೆಲವು ಕ್ಷಣಗಳಲ್ಲಿ ಆಯಿತು; ಹರಾಜಿನಲ್ಲಿ ೫೦೦ ಗಿನಿಗಳಿಂದ ೯,೦೦೦ ಗಿನಿಗಳ ವರೆಗೂ ಏರಿತು. ೯,೦೦೦ ಗಿನಿಗೆ ೧,೪೧,೭೫೦ ರೂಪಾಯಿಯಾಯಿತು. ಮತ್ತೊಂದು ಚಿತ್ರವು ೯,೬೦೦ ಗಿನಿಗಳ ಕ್ರಯಕ್ಕೆ ಹೋಯಿತು. ಇದನ್ನು ಬರೆದವನಿಗೆ ೧,೭೪೯ ರಲ್ಲಿ ೩೦ ಗಿನಿಗಳು ಮಾತ್ರ ಸಿಕ್ಕಿದವು.

ಇಂಗ್ಲೆಂಡಿನಲ್ಲಿ ಮ್ಯಾಂಚೆಸ್ಟರಿನಿಂದ ಲಿವರ್ಪೂಲ್ ಪಟ್ಟಣಕ್ಕೆ ಕೆಲವು ಕಾಲದೊಳಗಾಗಿ ಒಂದೇ ಒಂದು ರೈಲು ಕಂಬಿಯ ಮೇಲೆ ವಿದ್ಯುಚ್ಛಕ್ತಿಯ ಬಲದಿಂದ ಓಡುವ ಗಾಡಿಗಳನ್ನು ಓಡಿಸಬೇಕೆಂಬ ಪ್ರಯತ್ನವು ನಡೆಯುತ್ತಿದೆ. ಇದಕ್ಕೆ ಕೆಲವು ಸಾಹುಕಾರರು ಒಂದು ಕಂಪೆನಿಯನ್ನು ಏರ್ಪಡಿಸಿಕೊಂಡಿದ್ದಾರೆ. ಈ ಹೊಸದಾದ ಗಾಡಿಯು ೧ ಗಂಟೆ ಹೊತ್ತಿನಲ್ಲಿ ೧೧೦ ಮೈಲುಗಳು ಓಡುವದು. ಎಷ್ಟು ವೇಗವಾಗಿ ಓಡುವ ಗಾಡಿಯಲ್ಲಿ ಕುಳಿತುಕೊಂಡರೂ ಪ್ರಯಾಣವು ಮುಗಿಯುವದಕ್ಕೆ ಈಗ ೪೦ ನಿಮಿಷಗಳು ಹಿಡಿಯುತ್ತದೆ; ಆಗ ೨೦ ನಿಮಿಷಗಳೇ ಸಾಕಾಗುವದಂತೆ.

ನ್ಯೂಜೀಲಂಡು ದ್ವೀಪದ ಪೂರ್ವನಿವಾಸಿಗಳಾದ ಮೊದಲು ಒಬ್ಬ ಅರಸನಿದ್ದನು. ಆ ದೇಶವನ್ನು ಇಂಗ್ಲೀಷರು ಆಕ್ರಮಿಸಿಕೊಂಡಿದ್ದರೆ [illegible] ಅರಸನಾದ [illegible] ಎಂಬಾತನ ದೊಡ್ಡ ಮಗನು ಈಗ ನ್ಯೂಜೀಲಂಡಿನ ಪಾರ್ಲಿಮೆಂಟ್ ಸಭೆಯಲ್ಲಿ ಒಬ್ಬ ಮೆಂಬರಾಗಿದ್ದಾನೆ. ಇವನ ಕಡೆಯಿಂದ ೬೦ ವರ್ಷ ಕಾಲದ ಆಗಿನ ಯಾತು ಪ್ರತ್ಯೇಕರಾಗಿದ್ದ ಪೂರ್ವನಿವಾಸಿಗಳಾದ ಮಾವೋರಿಗಳೆಂಬವರೆಲ್ಲ ಈಗ ಒಂದು ಬಗೆಯಾಗಿ ಇಂಗ್ಲೀಷ್ ರಾಜ್ಯಾಂಗಕ್ಕೆ ಒಳಪಟ್ಟು ಸಾಗುತ್ತಿದ್ದಾರೆ. ಈ ಸ್ಥಲವನ್ನು ನಿರೀಕ್ಷಿಸುತ್ತ ಬಹಳ ಜನಗಳು ಕಷ್ಟಪಟ್ಟ ದೊಡ್ಡ ಮನುಷ್ಯರಿಗೆ ಈಗ ಸಂತೋಷವಾಯಿತು.

[illegible] ದೇಶದ [illegible] ಎಂಬಲ್ಲಿ ಪ್ರಜೆಗಳು ಗಲಭೆ ಮಾಡಿದರು. [illegible] ಎಂಬ ಪ್ರಾಂತ್ಯದಲ್ಲಿದ್ದ ಸರ್ಕಾರದ ಸಾಂಕರ ಕಟ್ಟಡವನ್ನು [illegible] ಬಂಗಲೆಯನ್ನೂ [illegible] ಎಂಬ ಪ್ರಯತ್ನ ನಡೆಯಿತು. [illegible] ಈ ಗಲಭೆ ಹುಟ್ಟಿತೆಂದು ಗೊತ್ತಾಯಿತು. [illegible] ಈ ಗಲ್ಲು ಹುಟ್ಟದ ಹಾಗೆ [illegible] ಸರ್ಕಾರದವರು [illegible] ಈ ಗಲಭೆಯು [illegible] ಅವರ [illegible] ಮಾಡಿದರು, ಇದಕ್ಕೆ ಸಂಬಂಧಪಟ್ಟ [illegible] ತಕ್ಕ ಶಿಕ್ಷೆಗಳನ್ನು ವಿಧಿಸಿದರು. [illegible] ಇಂಗ್ಲೀಷ್ ಸರ್ [illegible] ಸರ್ಕಾರದವರು ಮಂಡನೆಗಳನ್ನು [illegible] ಸಿದರು

## ಊಳಿಗದ [illegible].

ಕಳೆದ ಬುಧವಾರ ರೆಸಿಡೆಂಟರವರು ನೀಲಗಿರಿಯಿಂದ ಬೆಂಗಳೂರಿಗೆ ಬಂದು, ಮತ್ತೆ ಧಾರವಾಡ [illegible] ದಯಮಾಡಿದರು.

❖❖❖❖

ವಿಜಯನಗರದ ಮಹಾರಾಜ ಚಕ್ರವರ್ತಿ ಯವರ [illegible] ಉತ್ಸವ ಈ ತಿಂಗಳು ೨೬ ನೆ [illegible] ಹಿಡಿದು [illegible] ಕೊಡುವದಕ್ಕೆ [illegible]

❖❖❖❖

ರಾಜಧಾನಿಯ [illegible] ತಿಂಗಳು [illegible] ಕಳೆದ [illegible] ತಮ್ಮ [illegible] ವಿವಾಹವನ್ನು ಮಾಡಿದರು. [illegible] ಅಲಂಕರಿಸಿ, [illegible]

❖❖❖❖

ಮೈಸೂರು [illegible] ಕಳೆದ [illegible] ತಮ್ಮ [illegible] ಶ್ರೀ [illegible] ಸ್ವೀಕರಿಸಿ [illegible] ಕೊಂಡರು

❖❖❖❖

[illegible] ಸರ್ಕಾರದವರು [illegible] ಮಾಡುತ್ತಿದ್ದರು. ಸರ್ಕಾರದವರು [illegible] ಎಂತಲೂ, [illegible] ಅಗಬೇಕೆಂತಲೂ ಹುಕುಂ ಮಾಡಿದಾರೆ.

❖❖❖❖

ನಮ್ಮ ಸಂಸ್ಥಾನದ ಕೌನ್ಸಿಲ್ ಮೆಂಬರುಗಳು ಸರ್ಕಾರಿ ಕೆಲಸಗಳನ್ನು ತಮ್ಮ ತಮ್ಮ ಮನೆಯಲ್ಲೇ ಇಟ್ಟುಕೊಂಡು ನಡಸುತ್ತಾ ಬಂದಿರುತ್ತಾರೆ. ಈ ಪದ್ಧತಿಯು ನಿಲ್ಲಿಸಲ್ಪಡುವದೆಂತಲೂ, ಇವರು ಗೊತ್ತಾದ ಕಾಲಕ್ಕೆ ದಿವಾನ್ ಕಚೇರಿಗೆ ಹೋಗಿ ಕೆಲಸ ಮಾಡುವಂತೆ ಏರ್ಪಡುವದೆಂತಲೂ ಪ್ರಕಟವಾಗಿದೆ.

❖❖❖❖

ಇಂಡಿಯಾ ಗವರ್ನ್ಮೆಂಟಿನವರು ೩ ಕಾಸಿನ ಪೋಸ್ಟ್ ಕಾರ್ಡುಗಳ ಉದ್ದ ಅಗಲವನ್ನು ಹೆಚ್ಚು ಮಾಡಿರುತ್ತಾರೆ. ಇನ್ನು ಮೇಲೆ ೫½ ಅಂಗುಲ ಉದ್ದವೂ ೩½ ಅಂಗುಲ ಅಗಲವೂ ಉಳ್ಳ ಕಾರ್ಡಿನಲ್ಲಿ ಜನರು ಸಮಾಚಾರಗಳನ್ನು ಬರೆದು, ಅದಕ್ಕೆ ೩ ಕಾಸಿನ ಸ್ಟಾಂಪನ್ನು ಹಚ್ಚಿ, ಬೇಕಾದ ಊರಿಗೆ ರವಾನೆ ಮಾಡಬಹುದು. ಕಾರ್ಡು ಮಾತ್ರ ಹೆಚ್ಚು ದಪ್ಪನಾಗಿರಬೇಕು.

❖❖❖❖

ರಾಜಧಾನಿಯಲ್ಲಿ ಬಸವನಗುಡಿ [illegible] ಕಟ್ಟಡದಲ್ಲಿ ಕಟ್ಟುತ್ತಿದ್ದ ಪಠಶಾಲೆ ಮುಗಿದು ಪೂರ್ತಿಯಾಯಿತು. ಕಳೆದ ಬುಧವಾರ ಶ್ರೀ

ಸ್ವಾಮಿಗಳು ಮಠಕ್ಕೆ ಜಯಮಾಡಿ, ಪ್ರತಿಷ್ಠೆ ಮಾಡಿದರು. ಆಗ್ಗೆ ಬ್ರಾಹ್ಮಣ ಸಮಾರಾಧನೆ ಮುಂತಾದವುಗಳೆಲ್ಲಾ ಜಯಪ್ರದವಾದವು. ಸ್ವಾಮಿಗಳು ಮಠವನ್ನು ಕಟ್ಟಿಸಿದ ಇಂಜನಿಯರುಗಳೇ ಮುಂತಾದ ಕೆಲವು ಮಂದಿ ಮುಖ್ಯಸ್ಥರಿಗೆ ಇನಾಮನ್ನು ದಯಪಾಲಿಸಿದರು.

❖❖❖❖

ಕಳೆದವಾರ ನಡೆದ ಮೈಸೂರು ಸರ್ಕಾರಿ ಉಪಾಧ್ಯಾಯ ಪರೀಕ್ಷೆಯಲ್ಲಿ ಒಂಭತ್ತು ಮಂದಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದರು. ಈ ಸ್ಥಿತಿ ಐದು ಮಂದಿ ಹೆಣ್ಣಿಯು ಕ್ರೈಸ್ತರಾಗಿದ್ದಾರೆ. ಇವರಲ್ಲಿ ದೇವದಾಸ್ ಬಾನಿಯೇಲ್ ಎಂಬ ವಿದ್ಯಾರ್ಥಿಯು ಬಿ.ಎ. ಪರೀಕ್ಷೆಯಲ್ಲೂ, ಜೇಕಬ್ ಕೇಲೆಬ್ ಎಂಬ ವಿದ್ಯಾರ್ಥಿಯು ಪ್ರ್ಯಾಕ್ಟಿಕಲ್ ಪರೀಕ್ಷೆಯಲ್ಲೂ ಮೊದಲನೇ ತರಗತಿಯಲ್ಲಿ ತೇರ್ಗಡೆ ಹೊಂದಿದರೆಂದು ಕೇಳಿ ಸಂತೋಷಿಸುತ್ತೇವೆ.

❖❖❖❖

ಒಬ್ಬ ಬಾತ್ಮೀದಾರರು ಬರೆಯುವದೇನೆಂದರೆ:—"ತೀರ್ಥಹಳ್ಳಿ ತಾಲ್ಲೂಕು ಕೊಂಡದೂರಿನಲ್ಲಿ ನೀರಿನ ಕ್ಷೋಭೆಯಿಂದ ಜನರು ಸರ್ಕಾರಕ್ಕೆ ಅರಿಕೆ ಮಾಡಿಕೊಂಡದ್ದಕ್ಕೆ ಬಸವಣ್ಣ ದೇವಸ್ಥಾನದ ಮುಂದೆ ೪೫ ಅಡಿ ಭಾವಿ ತೆಗೆಯಲು ೩೫೦ ರೂ. ಸ್ಯಾಂಕ್ಷನ್ ಆಯಿತು. ಕಂಟ್ರಾಕ್ಟರು ೩೫ ಅಡಿ ಭಾವಿ ತೋಡುವಷ್ಟರಲ್ಲಿ ಮಳೆ ಬಂದು ಅಲ್ಲಿಗೇ ನಿಲ್ಲಿಸಿದ್ದರು. ಈ ಭಾವಿಯಿಂದ ಗ್ರಾಮಸ್ಥರಿಗೆ ನೀರು ದೊರಕುವಂತಿಲ್ಲ. ಇದರಿಂದ ಸರ್ಕಾರಕ್ಕೆ ಹಣ ನಷ್ಟವಾಯಿತಲ್ಲದೆ ಪ್ರಜೆಗಳಿಗೆ ಉಪಕಾರವಾದಂತಿಲ್ಲ."

❖❖❖❖

[illegible] ರಾಜಧಾನಿಯಲ್ಲಿ ಒಂದು ಬಳ್ಳೀ [illegible] ಬೆಳೆಯುವ [illegible] ಮಿ॥ ಪುರುಷೋತ್ತಮ [illegible] ಇವರು [illegible] ಪುರುಷೋತ್ತಮನ [illegible] ಅದನ್ನು ೩೮,೦೦೦ ರೂಪಾಯಿಗೆ ಕೊಂಡುಕೊಂಡರು. [illegible] ತಮಗೆ ಕೊಡಿಸಬೇಕೆಂತಲೂ [illegible] ಕೋರ್ಟಿನಲ್ಲಿ ದಾವಾ ಮಾಡಿರುತ್ತಾರೆ. ಈ ವಿಷಯ [illegible] ಗಲಭೆಯನ್ನು ಉಂಟುಮಾಡುವದು.

❖❖❖❖

ಪೀರಲದೇವರ [illegible] ಬಾತ್ಮೀದಾರರು ಬರೆಯುವದೇನೆಂದರೆ —"ಈ ಊರಲ್ಲಿ ಒಂದು ತಿಂಗಳಿಂದ ಪ್ರತಿ ಮನೆಯಲ್ಲೂ ಇಲಿಗಳು ಸಾಯುತ್ತಾ ಇವೆ. ಮತ್ತು ದಿನಕ್ಕೆ ೩—೪ ಜನರು ಸಾಯುತ್ತಾರೆ. [illegible] ಬಂದಿದೆ, [illegible] ಪ್ಲೇಗು [illegible] ಇವರು [illegible] ಜನರು ಅತಿ ಹೆದರಿ [illegible] ಇದಕ್ಕೆ ಮುನಿಸಿಪಾಲಿಟಿಯವರು ಗಮನ ಕೊಟ್ಟಿಲ್ಲ. ಇದರಿಂದ ಪ್ಲೇಗು ಅಧಿಕವಾಯಿತು. ಸರ್ಕಾರದವರು ಕೂಡಲೆ [illegible] ಪ್ಲೇಗ್ ಇದೆ ಎಂದು [illegible] ಪ್ಲೇಗ್ ಡ್ಯೂಟಿ [illegible] [illegible] ರಲ್ಲಿ [illegible] ವಂತೆ [illegible] ಸಾಯುತ್ತಾ [illegible] ಗಳು ಎಲ್ಲಾ [illegible] ಜನರು ಗಾಬರಿಪಟ್ಟರು. ಹುಡುಗರು ಮರುದಿವಸ [illegible] ಬಂದಂತೆ ಬಂದೊದಗಿದೆ."

## ಮೈಸೂರು ಗೆಜೆಟ್ ಸಂಗ್ರಹ.

ಅರಸೀಕೆರೆ ತಾಲ್ಲೂಕು [illegible] ವೆಂಕಟಾಪುರ [illegible] ಸಾಮಾನ್ಯವಾಗಿ ಬರ [illegible] ಆಗಿರುವದರಿಂದ ಪ್ಲೇಗ್ ಇರುವ ಊರುಗಳಿಂದ ಜನರು ಅಲ್ಲಿಗೆ ಹೋಗಕೂಡದು.

ಮುಂದೆ ಹೇಳುವ ಮೆಂಬರುಗಳು ಐದು ವರುಷ [illegible] ಮ್ಯುನಿಸಿಪಲ್ ಮೆಂಬರಾಗಿ ನೇಮಿಸಲ್ಪಟ್ಟರು:—ಮಿ॥ [illegible] ರಾಮಯ್ಯ [illegible], ಸುಂಗುಂಟಪ್ಪ [illegible], [illegible] ಸವರು.

ಮಿ॥ ಟಿ. ಎಸ್. ಸಿದ್ಧಪ್ಪನವರು ಮೂರು ವರುಷ [illegible] ಅವರನ್ನು ಸಬ್ [illegible] ಕ್ಲಾಸಿಗೆ ಬಡ್ತಿ ಮಾಡಿದೆ.

ಮುಂದೆ ಹೇಳುವ ಸಬ್ ರಿಜಿಸ್ಟ್ರಾರುಗಳ ವರ್ಗ [illegible] ಮಾಡಲ್ಪಟ್ಟಿದೆ:—ಎ. ಪಿ. [illegible] ಮೈಸೂರಿನಿಂದ ಬೆಂಗಳೂರಿಗೆ, ಎಚ್. [illegible] ನಂಜನಗೂಡಿನಿಂದ ಮೈಸೂರಿಗೆ.

[illegible] ತಾಲ್ಲೂಕು [illegible] ಮಿ॥ [illegible] ಇವರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

[illegible] ತಾಲ್ಲೂಕಿನ [illegible] ಕೆಲಸಗಳ [illegible] ವಹಿಸಲಾಗಿದೆ.

[illegible] ಮಿ॥ ಟಿ. ಆರ್. [illegible] ಗಳಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮಿ॥ [illegible] ಮಿ॥ [illegible] ಕೆಲಸವನ್ನು ನೋಡಿಕೊಳ್ಳತಕ್ಕದ್ದು.

[illegible] ಮತ್ತು [illegible] ಡಿಸ್ಟ್ರಿಕ್ಟುಗಳ [illegible] ಮಿ॥ ಬಿ. ರಾಮಸ್ವಾಮಿ ಅಯ್ಯಂಗಾರಿಗೆ ಕಳೆದ [illegible] ೧ ರಿಂದ ೨೦ ನೆ ತಾರೀಖಿನ ವರೆಗೆ ಪ್ರಿವಿಲೆಜ್ ರಜಾ ಕೊಟ್ಟಿದ್ದು.

## ಚಾಮುದಾಸಯ್ಯ ಗುರುದಾಸಯ್ಯನಾದದ್ದು.

(ತಾನೇ ಬರೆದ ವೃತ್ತಾಂತ.)

[ನಾನು ಈ ಭಕ್ತರನ್ನು ನನ್ನ ಬಾಲ್ಯದಿಂದ ಬಲ್ಲೆ. ಅವರು ...ಕ್ಕೆ ಬರೆದ ಈ ಚರಿತ್ರೆಯನ್ನು ನೋಡಿದರೆ ಅವರೇ ...ನ್ನ ಮುಂದೆ ನಿಂತು ಮಾತಾಡುವ ಹಾಗಿದೆ. ಅವರಲ್ಲಿದ್ದ ದೃಢ ...ನನ್ನೂ ಸತ್ಯತೆಯೂ ಎಂಥವುಗಳೆಂಬುದು ಇದನ್ನೋದುವವರಿಗೆ ...ತಿಯೊಂದು ಪಂಕ್ತಿಯಲ್ಲಿಯೂ ವ್ಯಕ್ತವಾಗದಿರಲಾರದು. ನಿಜ ...ಗಿ ಸತ್ಯಾಪೇಕ್ಷಿಗಳಾಗಿರುವ ಸತ್ಪುರುಷರಿಗೆ ಭಗವಂತನು ತನ್ನ ...ನ್ನು ಪ್ರಕಟಿಸಿಕೊಳ್ಳುತ್ತಾನೆಂಬುದಕ್ಕೆ ಈ ಗುರುದಾಸಯ್ಯನವರ ...ತ್ತಾಂತವು ಒಳ್ಳೇ ದೃಷ್ಟಾಂತವಾಗಿದೆ. ಇವರು ಅನೇಕ ವರ್ಷ ...ಕ ವರೆಗೂ ಬೆಂಗಳೂರು, ನೆಲಮಂಗಲ, ಚಿತ್ರದುರ್ಗ ಮೊದಲಾ ...ಸ್ಥಳಗಳಲ್ಲಿ ತಮ್ಮ ಗುರುವಾದ ಯೇಸುಸ್ವಾಮಿಯ ದಿವ್ಯವಾರ್ತೆ ...ಯನ್ನು ಸಾರುತ್ತ ಉಪದೇಶಕರಾಗಿದ್ದು ಕಳೆದ ಮೇ ತಿಂಗಳ ಅಂ ...ತ್ಯಭಾಗದಲ್ಲಿ ಆ ಸ್ವಾಮಿಯ ಪರಿವಾರದಿಂದದ ನಿತ್ಯ ಸೇವೆಗೆ ತೆರಳಿ ...ರು. ಅವರ ಮರಣಕ್ಕೆ ಒಂದು ವಾರ ಮುಂಚಿತವಾಗಿ ನಾನು ...ವರಿಂದ ಬಲಾತ್ಕರಿಸಿ ತೆಗೆದುಕೊಂಡ ಈ ಚರಿತ್ರೆಯನ್ನು, ನಾ ...ಬ ಅವರಲ್ಲಿಟ್ಟಿದ್ದ ವಿಶ್ವಾಸಕ್ಕೆ ಸಾಕ್ಷಿಯಾಗಿ ಗುರುವರ್ಯರಾದ ...ಯೇಸುಸ್ವಾಮಿಯನ್ನು ಅನೇಕರು ಸತ್ಯವಾಗಿ ಹುಡುಕಿ ಕಂಡು ...ಹಿಡಿಯುವಂತೆ ಸುಪ್ರೇರಣೆಯನ್ನು ಹೊಂದಲೆಂಬ ಅಪೇಕ್ಷೆಯಿಂದ ...ಓದುಗರ ಲಕ್ಷ್ಯಕ್ಕೆ ಒಪ್ಪಿಸಿರುವೆನು.—ಸಜ್ಜನ ವಿಧೇಯ,

ಬಿ. ವೇದಮಿತ್ರಯ್ಯ.]

೧. ನನ್ನಲ್ಲಿ ಗುರುವು ಬೇಕೆಂಬ ಆಶೆ ಹುಟ್ಟಿದ್ದು.

ನಾನು ಹುಟ್ಟಿದ್ದು ಮೈಸೂರು. ನನ್ನನ್ನು ಹೆತ್ತವರು ನೇಗಿಕೆ ...ಲಸವನ್ನು ಮಾಡುವವರಲ್ಲಿ ದೇವಾಂಗದ ಜಾತಿಯವರು. ನನ್ನ ಮೊ ...ದಲನೇ ಹೆಸರು ಚಾಮುದಾಸಯ್ಯ.

ನಾನು ಚಿಕ್ಕ ಪ್ರಾಯದಲ್ಲಿ ಎಲ್ಲಾ ಹುಡುಗರ ಹಾಗೆ ಆಟಕ್ಕೆ ...ಮನಸ್ಸನ್ನು ಕೊಡದೆ ಸ್ವಲ್ಪ ಮಟ್ಟಿಗೆ ವಿದ್ಯಾಭ್ಯಾಸವನ್ನು ಮಾಡು ...ತ್ತಾ ನನ್ನ ಹಿರಿಯರಂತೆ ನಾನೂ ಸಹ ಸಾಯಂಕಾಲದ ಹೊತ್ತಿನ ...ಲ್ಲಿ ಶಿವದೇವಸ್ಥಾನಗಳಿಗೂ ವಿಷ್ಣು ದೇವಸ್ಥಾನಗಳಿಗೂ ಹೋಗು ...ತ್ತಾ ಅಲ್ಲಿನ ಜನರನ್ನು ನೋಡಿಕೊಂಡು ಭಕ್ತಿಯುಳ್ಳವನಂತೆ ಹರ ...ಹರ ಶಿವಶಿವ ಶಂಭೋಶಂಕರ ಎಂದೂ, ಹರಿಹರಿ ರಾಮಕೃಷ್ಣ ...ಗೋವಿಂದ ನೀನೇ ಗತಿ ಎಂದೂ ಸ್ತೋತ್ರಮಾಡಿ ಅಷ್ಟಬಿದ್ದು ಕೈ ...ಮುಗಿದು ಮನೆಗೆ ಹೋಗುತ್ತಾ ಇದ್ದೆ. ಭಕ್ತಿ ಅಂದರೆ ಏನೋ ...ನನಗೆ ತಿಳಿಯುತ್ತಾ ಇರಲಿಲ್ಲ. ಆದರೆ ನಾನು ಹೋಗುತ್ತಿದ್ದ ದೇ ...ವಸ್ಥಾನಗಳಲ್ಲಿ ಗಂಡು ಹೆಣ್ಣಿನ ಎರಡು ರೂಪಗಳ ವಿಗ್ರಹಗಳನ್ನು ...ಬೇರೆ ಬೇರೆ ಕಟೆಗಳಲ್ಲಿ ನಿಲ್ಲಿಸಿ ಪೂಜಿಸುತ್ತಾ ಇದ್ದರು. ಮತ್ತು ...ಆ ದೇವಸ್ಥಾನಗಳಲ್ಲಿ ವರುಷಕ್ಕೆ ಒಂದುಸಾರಿ ಅಂದರೆ ರಥೋತ್ಸ ...ವ ಕಾಲಗಳಲ್ಲಿ ಗಿರಿಜಾಕಲ್ಯಾಣವೆಂದು ಆ ಎರಡು ವಿಗ್ರಹಗಳಿಗೆ ...ಪುಸ್ತವನ್ನು ಸಹ ಮಾಡಿಸುತ್ತಾ ಇದ್ದರು. ಆದರೆ ಆ ಹೆಣ್ಣು ವಿಗ್ರ ...ಹಕ್ಕೆ ಗಂಡು ವಿಗ್ರಹದ ಕೈಯಲ್ಲಿ ತಾಳಿಯನ್ನು ಕಟ್ಟಿಸುವದಕ್ಕೆ ...ಯತ್ನವಿಲ್ಲದೆ ಪೂಜಾರಿಯೇ ಕಟ್ಟುತ್ತಾ ಇದ್ದನು. ಇದನ್ನು ನಾ ...ನು ನೋಡುವಾಗ ಆ ಹೆಣ್ಣು ವಿಗ್ರಹಕ್ಕೆ ತಾಳಿಯನ್ನು ಕಟ್ಟಿದಂಥ ...ಪೂಜಾರಿಯೇ ಗಂಡನೋ ಇಲ್ಲವೆ ಸುಮ್ಮನೆ ನಿಂತಿದ್ದ ಆ ಗಂಡು ವಿ ...ಗ್ರಹವೇ ಗಂಡನೋ ಎಂಬ ಸಂಶಯವು ಆಗಲೇ ನನ್ನ ಮನಸ್ಸಿನ ...ಲ್ಲಿ ತಲೆದೋರುತ್ತಾ ಇತ್ತು. ಆದರೆ ಆಗ ನಡೆಯುತ್ತಿದ್ದ ಪದ್ಧತಿ ...ಯು ಈಗಲೂ ಎಲ್ಲಾ ದೇವಸ್ಥಾನಗಳಲ್ಲಿ ನಡೆಯುವದನ್ನು ಪ್ರತಿ ...ವರುಷದಲ್ಲಿಯೂ ನೋಡಬಹುದು. ಆಗ್ಯೆ ನನ್ನ ಪ್ರಾಯವು ಸು ...ಮಾರು ೧೦ ವರುಷಗಳಾಗಿರಬಹುದು.

ಇದಲ್ಲದೆ ಆಗ ನನಗೆ ಅಷ್ಟು ಚಿಕ್ಕ ವಯಸ್ಸಾಗಿದ್ದರೂ ರಾತ್ರಿ ...ಕಾಲದಲ್ಲಿ ಪುರಾಣಿಕರು ಬೀದಿಗಳಲ್ಲಿರುವ ಅಂಗಡಿ ಮಳಿಗೆಗಳಲ್ಲಿ ...ಕೂತುಕೊಂಡು ರಾಮಾಯಣ ಮಹಾಭಾರತ ಹರಿಶ್ಚಂದ್ರಾದಿಗಳ ...ಕಥೆ ಚರಿತ್ರೆಗಳನ್ನು ಎಲ್ಲಿ ಓದುತ್ತಾರೋ ಅಲ್ಲಿಗೆ ಹೋಗಿ ಮೂರು ...ಘಂಟೆಯ ವರೆಗೂ ನಿದ್ರೆಯನ್ನು ನೋಡದೆ ವಿಶ್ವಾಸ ಆಶೆಯಿಂದ ...ಕೇಳುತ್ತ ಇದ್ದೆ. ಹತ್ತು ಜನರು ಕೂಡಿಕೊಂಡು ಯಾವ ಕಥೆಗಳ ...ನ್ನಾದರೂ ಎಲ್ಲಿ ಓದಿ ಅರ್ಥ ಮಾಡುತ್ತಾರೋ ಅಲ್ಲಿಗೂ ಹೋಗಿ ...ಕೇಳುತ್ತಾ ಇದ್ದೆ. ಈ ಪ್ರಕಾರ ನಾನು ಕೇಳಿದಂಥ ಪೂರ್ವಿಕರ ...ಚರಿತ್ರೆಗಳಿಗೂ ಅಜ್ಜಿ ಕಥೆಗಳಿಗೂ ಲೆಕ್ಕವೇ ಇಲ್ಲ. ಆದರೆ ಅವುಗ ...ಳಲ್ಲಿ ಪುರಾಣಿಕರು ಹೇಳುವಂಥ ಬೇರೆ ಬೇರೆ ವಿಷಯಗಳನ್ನು ಬಿ ...ಟ್ಟು ದೈವಸಮ್ಬಂಧವಾದ ವಿಷಯಗಳನ್ನು ನೋಡಿದರೆ, ಹಿಂದು ...ಮತಕ್ಕೆ ಮುನ್ನೂರು ಮುಕ್ಕೋಟಿ ದೇವತೆಗಳೆಂದೂ ಅವರಲ್ಲಿ ...ಸೃಷ್ಟಿ ಸ್ಥಿತಿ ಲಯಗಳಿಗೆ ಬ್ರಹ್ಮ ವಿಷ್ಣು ಶಿವ ಎಂಬವರು ಮುಖ್ಯ ...ಸ್ಥರೆಂದೂ ಮಳೆಯನ್ನು ಬರಮಾಡುವದಕ್ಕೆ ಇಂದ್ರನೆಂದೂ ಭಾ ...ಗ್ಯಗಳನ್ನು ತಿಳಿಸುವದಕ್ಕೆ ನವಗ್ರಹಗಳೆಂದೂ ಪಾಪಕ್ಕೆ ಶಿಕ್ಷೆ ಕೊ ...ಡುವದಕ್ಕೆ ಯಮನೆಂದೂ ಹೇಳುತ್ತಾ ಇದ್ದರು. ಆದರೆ ಇವುಗಳ ...ನ್ನು ಕುರಿತು ನಾನು ಯೋಚಿಸುವಾಗ ನನ್ನ ಮನಸ್ಸಿಗೆ ಬಹು ಗಲಿ ...ಬಿಲಿಯಾಗಿ ತೋರುತ್ತಾ ಬಂತು. ಅದೇನಂದರೆ—ದೇಶಕ್ಕೆ ಒಬ್ಬ ...ಅರಸನು, ಕುಟುಂಬಕ್ಕೆ ಒಬ್ಬ ಯಜಮಾನನು ಇರುವ ಪ್ರಕಾರ ...ದೇವರೆಂಬವನು ಸಹ ಲೋಕಕ್ಕೆ ಒಬ್ಬನಾಗಿರಬೇಕಲ್ಲ; ಹಾಗಾ ...ದರೆ ಅನೇಕ ದೇವರುಗಳು ಎಲ್ಲಿಂದ ಬಂದರು? ಇದರ ವಿಷಯದ ...ಲ್ಲಿ ಪುರಾಣಿಕರಿಂದ ಅನುಭವಕ್ಕೆ ಬರುವದಿಲ್ಲ. ಜನರ ತಿಳುವಳಿಕೆ ...ಯಿಂದ ವಿಚಾರಿಸಿ ನೋಡಬೇಕೆಂದು ಆಲೋಚಿಸಿಕೊಂಡೆ. ಹಿರಿ ...ಯರು ಬುದ್ಧಿವಂತರಾಗಿ ಕಾಣುವಂಥ ಜನರ ಬಳಿಗೆ ಹೋಗಿ— ...ವಿನಹ್ನ್ನು, ಜನರು ನಾನಾ ವಿಧವಾಗಿ ದೇವರುಗಳನ್ನು ಪೂಜಿಸುತ್ತಾ ...ರೆ. ಅವುಗಳ ಹೆಸರುಗಳನ್ನು ಲೆಖ್ಖವಿಲ್ಲದ ಹಾಗೆ ಹೇಳುತ್ತಾರೆ. ...ಹಾಗಾದರೆ ದೇವರು ಅಂದರೆ ಒಬ್ಬನೋ ಅನೇಕರೋ ಎಂದು ಕೇ ...ಳುತ್ತಾ ಬಂದೆ. ಅದಕ್ಕೆ ಅವರು ಹೇಳುತ್ತಾ ಬಂದದ್ದೇನಂದರೆ.—

ದೇವರು ಒಬ್ಬನೆಂದೇ ಎಲ್ಲರು ಒಪ್ಪಿಕೊಳ್ಳುತ್ತಾರೆ. ಆದಾಗ್ಯೂ ಅವನು ಹೀಗಿದ್ದಾನೆಂದು ಮನುಷ್ಯರ ಕಣ್ಣಿಗೆ ಕಾಣದ್ದರಿಂದ ಕಂಡದ್ದನ್ನೆಲ್ಲಾ ದೇವನೇ ಎಂದು ಭಾವಿಸಿಕೊಂಡು—ಇದು ಅಂಥಾ ದೇವರು, ಅದು ಇಂಥಾ ದೇವರು ಎಂದು ಪೂಜಿಸುತ್ತಾರೆ; ಏನು ಮಾಡಬೇಕು? ನೀನು ಚಿಕ್ಕ ವಯಸ್ಸಿನಲ್ಲಿ ಇಂಥಾ ವಿಚಾರಕ್ಕೆ ಹೋಗಬಾರದಪ್ಪಾ, ನಮ್ಮ ಹಿರಿಯರು ನಡೆದಂತೆ ನಾವು ಸಹ ನಡೆಯಬೇಕೆಂದು ಬುದ್ಧಿ ಹೇಳುತ್ತಾ ಬಂದರು. ಈ ಪದ್ಧತಿಯು ಈಗಲೂ ಹಿಂದು ಜನರಲ್ಲಿ ಬಹು ರೂಢಿಯಾಗಿರುವದನ್ನು ದೃಷ್ಟಾಂತಗಳಿಂದ ನೋಡಬಹುದು. ಆದರೆ ಅವರು ಹೇಳಿದಂತ ಬುದ್ಧಿ ಮಾತುಗಳಿಂದ ನನ್ನ ಮನಸ್ಸಿನ ಸಂದೇಹವು ನಿವೃತ್ತಿಯಾಗದೆ ದೇವರು ಒಬ್ಬನಾಗಿರಬೇಕೆಂಬುವದೇ ನನ್ನ ಮನೋಭಾವವಾಗಿತ್ತು. ಇದರಿಂದ ಬ್ರಹ್ಮ ವಿಷ್ಣು ಶಿವ ಎಂಬ ಹೆಸರುಗಳು ಬಂದು ಪೇಳೆ ಕಲ್ಪನೆಯು ಮಾತ್ರವಾಗಿರಬಹುದೆಂದು ನಿರ್ಧಾರಿಸಿಕೊಂಡು, ಅವರ ಗುಡಿಗಳಿಗೆ ಹೋಗಿ ಕೈಮುಗಿದು ಅಡ್ಡಬೀಳುವದನ್ನೂ, ಅವರ ಹೆಸರುಗಳನ್ನು ನನ್ನ ಬಾಯಿಯಲ್ಲಿ ಎತ್ತುವದನ್ನೂ ಸಂಪೂರ್ಣವಾಗಿ ಬಿಟ್ಟುಬಿಟ್ಟೆನು. ಯಾಕಂದರೆ ಅವರಿಗೆ ಮನುಷ್ಯರ ಹಾಗೆ ಹೆಂಡರು, ಮಕ್ಕಳು, ಸೂಳೆಯರು ಸಹ ಉಂಟೆಂದು ನಾನು ಕೇಳುತ್ತಾ ಬಂದದರಿಂದ ಆ ಕಾಲದಲ್ಲಿ ನನಗೆ ಪುರಾಣಗಳಿಂದ ದೇವರೇ ಇಲ್ಲದ ಹಾಗೆ ತಿಳಿಯಬಂತು. ಮತ್ತು ನನ್ನ ಹಿರಿಯರು ಸಹ ಪ್ರತಿ ಶನಿವಾರಗಳಲ್ಲಿ ವಿಷ್ಣುವನ್ನು ಪೂಜಿಸುವದಕ್ಕಾಗಿ ಮನೆಯಲ್ಲಿ ಮಡಗಿದ್ದ ತಾಂಬ್ರದ ವಿಗ್ರಹವನ್ನು ತೆಗೆದು, ಇದು ಎಂಥಾ ದೇವರೋ, ಏನು ಮಾಡುತ್ತದೋ ನೋಡಬೇಕೆಂದು ಒಲೆಗೆ ಹಾಕಿ ಕರಗಿಸಿ ಕೊಟ್ಟು ಅದರಲ್ಲಿದ್ದ ನನ್ನ ಮನಸ್ಸಿನ ಕಳವಳವನ್ನು ನಿರ್ಮೂಲ ಮಾಡಿಕೊಂಡೆ. ಆದಾಗ್ಯೂ ಒಬ್ಬನಾದ ದೇವರ ವಿಷಯದಲ್ಲಿ ನನ್ನ ಮನಸ್ಸಿನಲ್ಲಿದ್ದ ಕಳವಳವನ್ನು ಸಹ ಅವನು ಎಲ್ಲಿ ಇದ್ದಾನೆ? ಹ್ಯಾಗೆ ಇದ್ದಾನೆ? ಅವನನ್ನು ತಿಳಿಯುವದು ಹ್ಯಾಗೆ? ಇದನ್ನು ತಿಳಿಸುವವರು ಯಾರೂ ಇಲ್ಲವಲ್ಲ, ಏನು ಮಾಡಬೇಕೆಂಬ ಚಿಂತೆಯು ಮಾತ್ರ ನನ್ನಲ್ಲಿ ಉಳಿಯುತ್ತಾ ಬಂತು. ಈ ಕ ಪದ್ಧತಿ ನನ್ನ ಜೀವನದ ಚಿಂತೆಯನ್ನು ಮರೆಯಲೇ? ಇಲ್ಲವಲ್ಲಿ ನನ್ನ ಕಸಬಿನ ನೇಗೆ ಕೆಲಸವನ್ನು ಸಹ ಕಲಿತುಕೊಂಡು ಕಾಲಕ್ಷೇಪವನ್ನು ಮಾಡುವ ವಯಸ್ಸಿಗೆ ಬಂದೆ. ಆಗ ನನಗೆ ಲಗ್ನವಾಯಿತು. ಆದಾಗ್ಯೂ ನಾನು ಸಂಸಾರದಲ್ಲಿ ಮಗ್ನನಾಗಿರದೆ, ಮೊದಲಿನ ವಿಚಾರವನ್ನು ಬಿಡದೆ, ದೈವಸಮ್ಬಂಧವಾದ ವಿಷಯದಲ್ಲಿ ಬಹು ಕಳವಳವಾಗಿ ಕೆಲವರ ಸಂಗಡಲೆಲ್ಲಾ ಸಂಭಾಷಿಸುತ್ತ, ಆದಾಗ್ಯೂ ನನ್ನ ಸಂಶಯವನ್ನು ನಿವರ್ತಿಸುವವರು ಯಾರೂ ಸಿಕ್ಕಲಿಲ್ಲ. ಮತ್ತು ಅಲ್ಲಿ ನನಗೆ ತಕ್ಕ ಕೆಲಸವನ್ನು ಸಹ ಮಾಡಿಸುವವರು ಇರಲಿಲ್ಲ. ಯಾಕಂದರೆ ಆಗ್ಯೆ ನಾನು ಭಾರಿ ಉದ್ಯೋಗವನ್ನು ಕಲಿತುಕೊಂಡಿದ್ದೆ. ಈ ಎರಡು ಕಾರಣಗಳಿಂದ ನಾನು ಮೈಸೂರನ್ನು ಬಿಟ್ಟು ಭಾರಿ ಕೆಲಸಗಳು ನಡೆಯುತ್ತಿದ್ದ ಬೆಂಗಳೂರಿಗೆ ಹೋಗಿ ಸೇರಿಕೊಂಡು ಇದೇ ವಿಚಾರದ ಕೊರತೆಯಲ್ಲಿ ನನ್ನ ಸ್ವಂತ ಕೈ ಕೆಲಸವನ್ನು ನಡ ಮಾಡಿಕೊಂಡಿದ್ದೆ. ದೇವಾಯ ಅಲ್ಲಿ ನನಗೆ ಎಲ್ಲಾ ಗಂಡು ಹೆಣ್ಣು ಮಕ್ಕಳು ಹುಟ್ಟಿದರು. ಒಂದು ಸತ್ತುಹೋಯಿತು.

[ಸಶೇಷ.]

## ಚಿಕ್ಕಮಗಳೂರು ವಿಹಾರ.

ಈ ಪ್ರಪಂಚದಲ್ಲಿ ಮನುಷ್ಯನಿಗೆ ಪಾರಾವರವಾದ ಅನೇಕ ಸಂಗತಿಗಳಿರುವವು. ಕೆಲವು ಸಂಗತಿಗಳು ವಿದ್ಯೆಯ ಸಹಾಯದಿಂದಲೂ ಕೆಲವು ತರತರ ಶೋಧನೆಯಿಂದಲೂ ತಿಳಿಯಬರುವವು. ವಿಷಯಜ್ಞಾನ ಉಂಟಾಗಬೇಕಾದರೆ ಇವೆಲ್ಲಕ್ಕೂ ಮೇಲಾದ ಒಂದು ಪೂರ್ವ ವಸ್ತುವಿರುವದು. ಅದೇ ಸ್ವಾನುಭವ. ಸ್ವಾನುಭವದಿಂದ ಮನುಷ್ಯನಿಗೆ ಸುಖ ದುಃಖಾನುಭವಗಳೂ ಪ್ರಪಂಚಕರ್ತನ ಸೃಷ್ಟಿಕರ್ತನ ಚಮತ್ಕೃತಿಯೂ ತಿಳಿಯಲ್ಪಡುತ್ತವೆ. ಈ ಸ್ವಾನುಭವತೆಯೂ, ಆತುರತೆಯೂ ಅನೇಕ ವಸ್ತುಗಳನ್ನು ನೋಡುವದರಿಂದಲಾಗಲಿ ಅವುಗಳನ್ನು ಪರೀಕ್ಷಿಸುವದರಿಂದಲಾಗಲಿ ಸಫಲತೆಯನ್ನು ಹೊಂದಬೇಕಲ್ಲದೆ ಕೂಪಕೂರ್ಮದಂತೆ ಒಂದೆಡೆಯಲ್ಲಿರುವದರಿಂದ ಉದರ ಭರಣೆಯ ಜ್ಞಾನ ಪ್ರಯೋಜನ ವಿನಹ ಮಿಕ್ಕ ಅವುದೊಂದು ಪ್ರಯೋಜನವು ದೊರೆಯಲಾರದು. ಈ ನೀತಿವಾಕ್ಯದ ಸಫಲತೆಗಾಗಿ ನಮ್ಮ ಚಿಕ್ಕಮಗಳೂರು ದಾಲಾ ಪ್ರಥಮೋಪಾಧ್ಯಾಯರು ಕೆಲವು ಬಾಲಕರನ್ನೂ ಮಿಕ್ಕ ಸಹಾಯೋಪಾಧ್ಯಾಯರನ್ನೂ ಕರೆದುಕೊಂಡು ಸುತ್ತಲಿರುವ ಪರ್ವತಗಳ ಆರೋಹಣದಿಂದಲೂ ಅಲ್ಲಿನ ಅಪೂರ್ವ ಸಂಗತಿಗಳ ಜ್ಞಾನ ಬೋಧನೆಯಿಂದಲೂ ಮೇಲೂ ಸುಖಾಲಾಪದ ಆನಂದದಿಂದಲೂ ಸರ್ವರನ್ನು ಸಂತೃಪ್ತರನ್ನಾಗಿ ಮಾಡಿದರು.

ಈ ಸ್ಥಳದಿಂದ ನಾವೆಲ್ಲರೂ ಮೇ ೧೯ನೇ ಮಧ್ಯಾಹ್ನದಲ್ಲಿ ಪ್ರಯಾಣವನ್ನು ಬೆಳಸಿದೆವು. ನಮ್ಮೊಂದಿಗೆ ಒಬ್ಬ ಭೂಗರ್ಭ ಶಾಸ್ತ್ರಜ್ಞರೂ, ಒಬ್ಬ ಭೌತಿಕ ಶಾಸ್ತ್ರಜ್ಞರೂ, ಒಬ್ಬ ಗಣಿತ ಶಾಸ್ತ್ರಜ್ಞರೂ, ಒಬ್ಬ ವನಸ್ಪತಿ ಶಾಸ್ತ್ರಜ್ಞರೂ, ಒಬ್ಬ ಇತಿಹಾಸಕರು ಮತ್ತು ಈ ಕಾಲಾ ಕರ್ಣಾಟಕ ಪಂಡಿತರೂ ಬಾಲಕರಿಗೆ ವಿಷಯಜ್ಞಾನವನ್ನು ಉಂಟುಮಾಡುವದಕ್ಕೆ ಬಂದಿದ್ದರು. ಬಾಲಕರ ಅಭಿವೃದ್ಧಿಯಲ್ಲಿ ವಿದ್ಯಾಸಕ್ತರಾದ ಈತರವಾದ ಜನಗಳನ್ನು ಎಷ್ಟು ಹೊಗಳಿದರೂ ತೀರದಲ್ಲವೆ! ಬಾಲಕರು ಅಲ್ಲಿಗೆ ಹೋಗುತ್ತಿರುವಾಗ ಬೇಡ ಸ್ವಸ್ಥನಿಂತೊಪ್ಪುವ ಆ ನಮ್ಮ ಪ್ರಥಮೋಪಾಧ್ಯಾಯರವರು ಬಾಲಕರನ್ನು ಮುಂದಿಟ್ಟುಕೊಂಡು ಹೋಗುತ್ತಲಿದ್ದುದನ್ನು ನೋಡಿದ ಮನುಷ್ಯನ ಜನ್ಮವು ಯಾತಕ್ಕೆ. ಹೆಚ್ಚು! ಏನು ಸಂಭ್ರಮ! ಒಬ್ಬೊಬ್ಬನ ಕೈಯಲ್ಲಿ ಒಂದೊಂದು ವಿಧವಾದ ಪುಷ್ಪ. ಇಷ್ಟು ಜನ ಶಾಸ್ತ್ರಜ್ಞರಿರುವಾಗ ಅವುದಕ್ಕೆ ಕೊರತೆ. ನನ್ನ ಅನುಭವಕ್ಕೆ ಬಂದಿರುವದೇನಂದರೆ, ಇದುವರೆವಿಗೂ ಎಂದೂ ತಿಳಿಯದಿದ್ದ ಅನೇಕ ಹೊಸ ಸಂಗತಿಗಳು ತಿಳಿದವು. ಇಂತಹ ಪ್ರಯೋಜನಕರವಾದ ವಿನವಿಹಾರವನ್ನು ಇದುವರೆಗೆ ಆರು ಮಾಡಿದರು? ಆದುದರಿಂದ ನೀವು ಈ ತಾವನೆಯನ್ನು ಅಂಗೀಕರಿಸಿ ಬಾಲಕ ವೃದ್ಧಿ ಸ್ಥಿತಿಗಾಗಿ ಕಂಕಣ ಬದ್ಧರಾಗಿ ನಿಂತರೆ ದೇಶವು ಉನ್ನತ ಸ್ಥಿತಿಗೆ ಬರುವದರಲ್ಲಿ ಆವ ಅಪೇಕ್ಷೆ ಉಂಟು? ಹೊರಟ ದಿವಸ ಸಂಧ್ಯಾಕಾಲ ತಿಪ್ಪಗಿರಿಯಲ್ಲಿ ಎನ್ನುವ ಗ್ರಾಮದಲ್ಲಿದ್ದು ಮಾರನೆಯ ದಿವಸ ಸುಪ್ರಭಾತದ ಸೊಬಗು ರಾಜಿಸುತ್ತಿರಲು ಸಕ್ಕಿಯ ಮುಫಟ್ಟದಲ್ಲೆಲ್ಲ ಅತ್ಯುನ್ನತವಾದ ಮುಳ್ಳಯ್ಯನಗಿರಿಯನ್ನು ಆರೋಹಣ ಮಾಡಿ, ಆ ಸ್ಥಳದಲ್ಲಿ ಉಷ್ಣಮಾಪಕ ಯಂತ್ರದ ಬದಲಾವಣೆಯನ್ನೂ ವಾಯುಮಾಪಕ ಯಂತ್ರದ ಬದಲಾವಣೆಯನ್ನೂ ತಿಳಿದುಕೊಂಡು, ಸಾಯಂಕಾಲ ಪರ್ಯಂತ ಅಲ್ಲಿಯೇ ಇದ್ದು, ಅಲ್ಲಿನ ದೇವರ ಸಂದರ್ಶನದಿಂದ ಸಂತೃಪ್ತರಾಗಿ ಪುನರಾಗಮನಾರ್ಥವಾಗಿ ತಿಪ್ಪಗಿರಿಗೆ ಬಂದೆವು. ಈ ನಮ್ಮ ಕಾರ್ಯಕ್ಕೆ ಲೋಕಕ್ಕೆ ಅಕ್ಷಿಸ್ವರೂಪನಾಗಿರುವ ಸಾಕ್ಷಾತ್ ಸೂರ್ಯನಾರಾಯಣನಾಗಿದ್ದನು. ಬಿಸಿಲು ಇರಲಿಲ್ಲ. ಮಾರನೆಯ ದಿನ ಭೋಜನಾನಂತರ ಪವಿತ್ರಸ್ಥಾನವಾದ ಸಾಕ್ಷಾತ್ ಚಂದ್ರದ್ರೋಣಪರ್ವತಾಭಿಮುಖವಾಗಿ ಹೊರಟು, ಮಾರ್ಗದಲ್ಲಿ ಸಕಲ ವಿಷಯಗಳನ್ನು ಗ್ರಹಿಸಿ, ಸಾಯಂಕಾಲದ ಹೊತ್ತಿಗೆ ಅತ್ತಿಗುಂಡಿ ಎನ್ನುವ ಗ್ರಾಮಕ್ಕೆ ಹೋಗಿ ಅಲ್ಲಿ ಆ ರಾತ್ರಿಯನ್ನು ಸುಖದಿಂದ ಕಳೆದು ಪಕ್ಷಿಗಳ ಕಲಕಲ ಶಬ್ದದ ವಾದ್ಯವು ಭಾಜಿಸುತ್ತಿರಲು ಪ್ರಾತಃಕಾಲದಲ್ಲಿ ಅಲ್ಲಿಂದ ಹೊರಟು, ಹತ್ತಿರದಲ್ಲಿರುವ ಕೈಲಾಸಮ್ಯವಾದ ಗಳಿಕೆರೆಯೆನ್ನುವ ಸರೋವರದ ಪ್ರಕೃತಿ ಗೋಚರದಿಂದ ನೇತ್ರಾನಂದವಂ ಪಡೆದು, ಮಧ್ಯಾಹ್ನಕ್ಕೆ ಪೀಠವನ್ನು ಸೇರಿ ತ್ರಿಮೂರ್ತಿಗಳ ಅವತಾರಿಯಾದ ಶ್ರೀ ಗುರುದತ್ತರವರ ಪಾದುಕೆಗಳ ದರ್ಶನವನ್ನು ನೋಡಿಕೊಂಡು ಆ ಸ್ಥಳದ ಪುರಾಣೇತಿಹಾಸನಾದಿಗಳಿಂ ಕರ್ಣಾನಂದವಂ ಪಡೆದು, ಭೋಜನಾನಂತರ ಪುನಃ ಅತ್ತಿಗೂಡಿಗೆ ಬಂದು, ಆ ಸಾಯಂಕಾಲದಲ್ಲಿದ್ದು ಪುನಃ ಮಾರನೆಯ ದಿನ ಅಲ್ಲಿಂದ ಹೊರಟು ಸ್ವಸ್ಥಾನವನ್ನು ಪುನಃ ಸೇರಿದೆವು. ಈ ಸ್ಥಳಗಳಿಗೆಲ್ಲಾ ಬಾಲಕರು ಪಾದಚಾರಿಗಳಾಗಿಯೇ ಬಂದಿದ್ದರೆಂಬುವದನ್ನು ತಿಳಿಸಲು ಬಹಳ ಸಂತೋಷಪಡುತ್ತೇನೆ. ಬಾಲಕರಿಗೆ ಈ ರೀತಿಯಾದ ಉತ್ಸಾಹವು ಉಪಾಧ್ಯಾಯರ ದಯೆಯಾಗಿರಲೆಂದು ಕೋರುತ್ತೇನೆ. ಈ ಸಂಚಾರದಿಂದ ಸ್ವೇದಮಾರ್ಗವು ಸುಖದುಃಖಗಳ ಅನುಭವವು ವಿಸ್ತಾರವಾಗಿ ಬಾಲಕರಿಗೆ ಸಂಪೂರ್ಣವಾಗಿ ತೋರುವ ಸ್ವಾನುಭವತೆಯು ನಡೆದದ್ದನೂ ಸಂಶಯವಿಲ್ಲ. ಪ್ರತಿ ಸಂವತ್ಸರದಲ್ಲಿಯೂ ಇದೇ ಪ್ರಕಾರವಾದ ಸುಖಾನುಭವವಿರಲೆಂದು ಪ್ರಾರ್ಥಿಸುತ್ತೇನೆ.

ನಾ. ದ. ರಾ.

## ಬಾತ್ಮೀದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ಉಪಯೋಗಕ್ಕೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಸತ್ಯ ಬಾತ್ಮಿಯನ್ನು ಕಳುಹುವವರು ಪಕ್ಷಗಳಲ್ಲೂ ಬರೆಯತಕ್ಕವರು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

## ಕರೆಸ್ಪಾಂಡೆನ್ಸ್.

### ಸ್ಕೂಲ್ ಕಟ್ಟಡ.

ಅಯ್ಯಾ,

ಹೊಸ ಗೆರೆ ತಾಲ್ಲೂಕು ರಾಂಪುರದಲ್ಲಿ ಈಗ್ಯೆ ೧೫—೨೦ ವರ್ಷಗಳಿಂದಲೂ ಗವರ್ನಮೆಂಟ್ ಕನ್ನಡ ಹೋಬಳಿ ಸ್ಕೂಲಿದೆ. ಇದನ್ನು ಪ್ರತಿಷ್ಠೆ ಮಾಡಿದ ಸ್ಕೂಲ್ ಮಾಸ್ಟರ್ ಕೆ. ಹನುಮಂತರಾಯರ ಕಾಲದಿಂದಲೂ ಬಾಲಕರು ಸೂರಕ್ಕೆ ಮೇಲ್ಪಟ್ಟು ಇರುತ್ತಾರೆ. ಬರಬರುತ್ತ ಈ ಸ್ಕೂಲಿನ ಅಭಿವೃದ್ಧಿಯು ಇಲ್ಲಿನ ಹೆಡ್ ಮಾಸ್ಟರ್ ಎಂ. ಕೃಷ್ಣಪ್ಪನವರ ಕೆಲಸದ ಮೇಲನತ್ತಿನಿಂದ ಚಿಟ್ಟಾಗುತ್ತ ಬಂತು. ಈ ಸ್ಕೂಲನ್ನು ಮೊದಲಿನಿಂದಲೂ ಒಂದು ಕಲ್ಲು ಮಂಟಪದಲ್ಲಿ ಸ್ಥಾಪಿಸಿತ್ತು. ಈಚೆಗೆ ದಯಾಳುಗಳಾದ ಸರ್ಕಾರದವರು ಹೊಸದಾಗಿ ಸ್ಕೂಲ್ ಕಟ್ಟಡವನ್ನು ಕಟ್ಟಿಸಿಕೊಟ್ಟರು. ಈ ಕಟ್ಟಡದಲ್ಲಿ ಬಾಲಕರೆಲ್ಲರಿಗೂ ಕೂತುಕೊಳ್ಳಲು ಸ್ಥಳಸಾಲದೆ ಹೋದದ್ದರಿಂದ ಕೆಲವು ಬಾಲಕರು ಮೊದಲಿಂದಲೂ ಇಟ್ಟುಕೊಂಡಿದ್ದ ಕಲ್ಲು ಮಂಟಪದಲ್ಲಿಯೇ ವಿದ್ಯಾಭ್ಯಾಸಮಾಡುತ್ತಾ ಇದಾರೆ. ಈ ಮಂಟಪವು ಶಿಥಿಲವಾಗಿದೆ. ಮಳೆಗಾಲದಲ್ಲಂತೂ ಸ್ವಲ್ಪವಾದರೂ ನಿಲ್ಲ ಕ್ಯವಾದಷ್ಟು ಸೋರಿಯಾಗುವದು. ಆದ್ದರಿಂದ ದಯಾಳುಗಳಾದ ಸರ್ಕಾರದವರು ಇನ್ನೊಂದು ರೂಮನ್ನು ತಯಾರ್ಮಾಡಿಸಿಕೊಟ್ಟರೆ ಬಹಳ ಪ್ರಯೋಜನವಾದೀತು.

ನ. ಮಿ.

### ಅರಸೀಕೆರೆ ಸ್ಟೇಷನ್ ನಡವಳಿಕೆ.

ಅಯ್ಯಾ,

ನಮ್ಮ ರೈಲ್ವೆ ಸ್ಟೇಷನ್ ನಡವಳಿಕೆಯು ಈಚೆಗೆ ಯಾವ ವಿಧದಲ್ಲಿಯೂ ಸರಿಯಾಗಿಲ್ಲವೆಂದು ಜನಗಳು ಮೊರೆ ಇಡುತ್ತಿರುವರು. ಇದಕ್ಕೆ ಅನುಗುಣವಾಗಿ ಇದೇ ತಾ॥ ೧೧ ನೆ ರಾತ್ರಿ ಬೆಂಗಳೂರಿಗೆ ಪ್ರಯಾಣ ಮಾಡತಕ್ಕ ೩೦—೪೦ ಜನ ಪ್ಯಾಸಿಂಜರುಗಳು ಗಾಡಿ ಬರುವ ೨ ಗಂಟೆ ಮುಂಚೆಯೇ ಸ್ಟೇಷನಿನಲ್ಲಿ ಟಿಕೆಟ್ಟಿಗೆ ಕಾದಿದ್ದರು. ಟಿ. ರಾಮರಾಯರು ಟಿಕೆಟ್ಟು ಕೊಡತಕ್ಕ ಬಾಗಿಲನ್ನು ತೆಗೆದು ೩—೪ ಜನಗಳಿಗೆ ಮಾತ್ರ ಟಿಕೆಟ್ಟು ಕೊಟ್ಟು ಬಾಗಿಲು ಹಾಕಿಬಿಟ್ಟರು. ಬಾಕಿಯವರು ಎಂಥ ಮೊರೆ ಇಟ್ಟರೂ ಟಿಕೆಟ್ಟು

ಕೊಡಲೇ ಇಲ್ಲ. ಅಷ್ಟರಲ್ಲೇ ಗಾಡಿ ಬಂತು. ಅದರಲ್ಲಿ ಕೆಲವರು ಸಂತೆಗೆ ಹೋಗತಕ್ಕವರು ಕೆಲವರು ಕೋರ್ಟು ಕಛೇರಿ ಕೆಲಸಕ್ಕೆ ಹೋಗತಕ್ಕವರು ಟಿಕೆಟ್ಟು ಕೊಡುವರೆಂಬ ಭರವಸೇ ಮೇಲೆ ಬೇರೆಯವರ ಕೈಲಿ ಟಿಕೆಟ್ಟಿಗೆ ದುಡ್ಡುಕೊಟ್ಟು ಗಾಡಿ ಹತ್ತಿದರು. ಆದರೂ ಅವರಿಗೆ ಟಿಕೆಟ್ಟು ದೊರೆಯದೆ ಹೊರಟುಹೋದರು. ಆಟಿಗೆ ಅವರಿಗೆ ಏನು ತೊಂದರೆ ಉಂಟಾಗಿದೆಯೊ ತಿಳಿಯದು. ಅಲ್ಲದೆ ಗುಡ್ಡಿನಲ್ಲಿ ಸಾಮಾನುಗಳು ಸಕಾಲಕ್ಕೆ ದೊರೆಯುವದಿಲ್ಲ. ಸಕಾಲಕ್ಕೆ ರವಾನೆ ಆಗುವದಿಲ್ಲ. ಈ ಭಾಗದಲ್ಲಿ ಉಂಟಾಗಿರುವ ತೊಂದರೆಯನ್ನು ಕುರಿತು ಇಲಾಖಾ ಟ್ರಾಫಿಕ್ ಮ್ಯಾನೇಜರಿಗೆ ಅರ್ಜಿ ಬರೆದುಕೊಳ್ಳುವರಾಗಿದ್ದಾರೆ. ಅಷ್ಟಕ್ಕೆ ಅವಕಾಶ ಕೊಡಿಸದಂತೆ ಹೊಸದಾಗಿ ದಯಮಾಡಿಸಿರುವ ನಮ್ಮ ಸ್ಟೇಷನ್ ಮಾಸ್ಟರವರು ಸರಿಯಾದ ಏರ್ಪಾಡು ಇಡಿಸಿ, ಪ್ರಜೆಗಳ ಪ್ರೀತಿ ಗೌರವಕ್ಕೆ ಪಾತ್ರರಾದಾರೆಂದು ನಂಬಿರುವ

ಪ್ರಜಾಭಿಮಾನಿ.

◆◆◆◆◆◆◆◆◆

### ಗಿಡಕ್ಕೆ ಇಲಿ ಹೆಗ್ಗಣಗಳ ಕಾಟ.

ಅಯ್ಯಾ,

ಮುಳುಬಾಗಲು ಪ್ರಾಂತ್ಯ ಎಂಬೊಂದು ಸ್ಥಳದಲ್ಲಿರುವ ವೀಳ್ಯದೆಲೆ ತೋಟಗಳಲ್ಲಿ ವಿಶೇಷವಾಗಿ ಇಲಿ ಹೆಗ್ಗಣಗಳು ಬಿಲಗಳಲ್ಲಿಯೂ, ತೋಟ ಸಂರಕ್ಷಣಾರ್ಥವಾಗಿ ಹಾಕಿರುವ ಬೇಲಿಗಳಲ್ಲಿಯೂ ವಾಸಸ್ಥಾನವು ಮಾಡಿಕೊಂಡು, ರಾತ್ರಿ ಕಾಲದಲ್ಲಿ ಪ್ರತಿದಿನವೂ ಸಂಚಾರ ಬಂದು, ಬಿಳೀ ಎಲೆ ಬಳ್ಳಿಗಳನ್ನು ಕಡಿದುಹಾಕಿ, ಬಹಳ ಲುಕ್ಸಾನು ಮಾಡುತ್ತಾ ಇವೆ. ಈ ಇಲಿಗಳನ್ನು ಏನಾದರೂ ವಿಷದಿಂದಾಗಲಿ, ಮತ್ತೇನಾದರೂ ಒಂದು ಸುಲಭೋಪಾಯದಿಂದಾಗಲಿ ನಾಶಮಾಡತಕ್ಕ ವಿಧಾನವು ತಮಗಾಗಲಿ, ಇತರರಿಗಾಗಲಿ ತಿಳಿದು ಇದ್ದ ಪಕ್ಷದಲ್ಲಿ ನಾವೆ ಪ್ರಕಟಿಸುವ ವೃತ್ತಾಂತ ಪತ್ರಿಕೆಯಲ್ಲಿ ದಯವಿಟ್ಟು ತಿಳಿಸಬೇಕು. ಮತ್ತು ಈ ಸಂಗತಿ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟರೆ ಅನೇಕರಿಗೆ ಸಂಗತಿ ತಿಳಿಯುತ್ತೆ. ಅವರಾದರೂ ತಿಳಿಸುತ್ತಾರೆಂದು ನಂಬಿದ್ದೇನೆ.

ವೆಂಕಟರಮಣಪ್ಪ.

[ಎಲೆ ತೋಟಗಳಲ್ಲಿ ರೈತರು ವಿಷದವಾರ್ಥ ಹಾಕಿದ ತಿಂಡಿಯನ್ನು ಅಲ್ಲಲ್ಲಿ ಹಾಕಿದರೆ ಇಲಿ ಹೆಗ್ಗಣಗಳು ಆ ತಿಂಡಿಯನ್ನು ತಿಂದು ನಾಶವಾಗುವವು. ಇದರಿಂದ ಪೈರು ಚನ್ನಾಗುತ್ತದೆ. ಅವುಗಳ ಕಾಟ ತಪ್ಪಿಹೋಗುತ್ತೆ. ಆದರೆ ಈ ವಿಷಯದಲ್ಲಿ ಹೆಚ್ಚು ಸಂಗತಿ ತಿಳಿಯಬೇಕಾಗಿದ್ದರೆ ಬುತ್ತಿದಾರರು ಮೈಸೂರು ಸಂಸ್ಥಾನದ ವ್ಯವಸಾಯದ ಇಲಾಖೆಯ ಮುಖ್ಯ ಅಧಿಕಾರಿಯಾದ ಡಾಕ್ಟರ್ ಲೇಮನ್‌ರವರಿಗೆ ಅರ್ಜಿ ಬರೆದುಕೊಂಡಲ್ಲಿ ಅವರು ಸರಿಯಾದ ಉತ್ತರವನ್ನೂ ಪರಿಹಾರವನ್ನೂ ಬರೆದು ತಿಳಿಸುತ್ತಾರೆಂದು ನಂಬಿದ್ದೇವೆ. —ಪತ್ರ.]

◆◆◆◆◆◆◆◆◆

### ರೈತರಿಂದ ಪಡೆದ ಸಾಮಾನಿಗೆ ಕ್ರಯ ಸಿಕ್ಕಲಿಲ್ಲ.

ಅಯ್ಯಾ,

ಈಗ್ಯೆ ಏಳು ಎಂಟು ತಿಂಗಳುಗಳ ಕೆಳಗೆ ಬಳ್ಳಾರಿ ಕಡೆಯಿಂದ ಬೆಂಗಳೂರಿಗೂ, ಬೆಂಗಳೂರಿಂದ ಬಳ್ಳಾರಿ ಕಡೆಗೂ ೫೦—೬೦ ಆವರ್ತಿ ದಂಡು ತಿರುಗಾಡಿತು. ಆಗ್ಯೆ ನಮ್ಮ ತಾಲ್ಲೂಕ್ ಅಮಲ್ದಾರರು ಆಜ್ಞೆಯ ಪ್ರಕಾರ ನಮ್ಮ ಹೋಬಳಿ ಶೇಕ್‌ದಾರರು ತಮ್ಮ ಹೋಬಳಿಗೆ ಸೇರಿದ ಪ್ರತಿಯೊಂದು ಗ್ರಾಮದಿಂದಲೂ ಕುರಿಗಳು, ಕೋಳಿಗಳು, ಮೊಟ್ಟೆಗಳು, ಬೆಣ್ಣೆ, ಹುಲ್ಲು, ಸೌದೆ, ಇವುಗಳನ್ನು ಪ್ರತಿ ರೈತರಿಂದಲೂ, ಯಾವ್ಯಾವ ರೈತನಲ್ಲಿ ಏನೇನು ಇರುತ್ತೋ ಅದನ್ನು ತೆಗೆಸಿಕೊಂಡು ಹೋದವರು ಇದುವರೆಗೂ ಮಾಲೀಕರಿಗೆ ತಾವು ತೆಗೆದುಕೊಂಡುಹೋದ ವಸ್ತುವಿನ ಖರೀದಿ ಆಥವ ಕಿಮ್ಮತ್ ಬರಲಿಲ್ಲವು ಇದರ ಪ್ರಕಾರ ಬಹಳವಾಗಿರುತ್ತೆ. ಈ ವಿಷಯದಲ್ಲಿ ಎಲ್ಲರೂ ಸೇರಿ ಡಿಪ್ಯುಟಿ ಕಮೀಷನರ್ ಸಾಹೇಬರವರಿಗೂ, ನಮ್ಮ ತಾಲ್ಲೂಕ್ ಅಮಲ್ದಾರರಿಗೂ ಅರ್ಜಿ ಬರೆದುಕೊಳ್ಳಬೇಕೆಂದು ಇರುತ್ತಾರೆ. ಈ ವಿಷಯದಲ್ಲಿ ಸರಬರಾಯಿ ತೆಗೆದುಕೊಂಡುಹೋದ ರೈತರಿಗೆ ಹಣ ಬರಲಿಲ್ಲವೆಂದು ಶೇಕ್‌ದಾರರನ್ನು ಕೇಳಿದರೆ ನಮಗೆ ತಿಳಿಯದೆಂದು ಹೇಳುತ್ತಾರೆ. ಅದ್ದರಿಂದ ರೈತರ ಕರಿಗೆ ಈ ಹೋಬಳಿಯಲ್ಲಿ ವಿಪರೀತವಾಗಿರುತ್ತೆ. ಈ ತೆರಿಗೆಯನ್ನು ಹೋಗಲಾಡಿಸುವ ಮಹನೀಯರು ಇದುವರೆಗೂ ಯಾರು ಹುಟ್ಟಲಿಲ್ಲ.

### ಡಪಕೇಲು.

ಮಾದೇನಹಳ್ಳಿ.—ಗೋವಿಂದಗವುಡ, ಚಿಕ್ಕೇಗೌಡ, ದ್ಯಾವೇಗೌಡ, ಮುದ್ದುರಂಗಗೌಡ, ದೊಡ್ಡಗೌಡ, ವಂಗೆಗೌಡ, ಇನ್ನು ಮುಂತಾದವರು. ಕೋಳಿಗಳು, ಹುಲ್ಲು ಹೊರೆಗಳು, ಬೆಣ್ಣೆ, ಸವುದೆ ಹೊರೆಗಳು, ಕುರಿ.

ಕುರೇಹಳ್ಳಿ.—ಎಚ್. ಬ್ರಹ್ಮನಮಿತ್ರಯ್ಯ, ಕಲ್ಲಪ್ಪಸೆಟ್ಟಿ, ಗೋವಿಂದ ಟಪಾರಿ, ಕುರಿ ಕಾರನಾಯಕ್, ಸಣ್ಣಬೊಮ್ಮಪ್ಪ, ದುರಗುಂಟೆ ಲಿಂಗೈಯ್ಯನ ಬಸಣ್ಣ, ಅಪ್ಪಿದಪ್ಪ, ಚಿಂಪಕಪ್ಪ, ಸಾಕಪ್ಪ, ಕಂಬದ ರಂಗೈಯ್ಯ. ಸಾಗಾನು ಮೊಲ್ಕಂಡಂತೆಯೇ.

ಸಾಕ್ಷಿಹಳ್ಳಿ.—ಸಾಬರತಿಮ್ಮಯ್ಯ, ಗೋವಿಂದಯ್ಯ, ಬಲಮ್ಮನ ಮಗ ಮುದ್ದೈಯ್ಯ. ಚಿಕ್ಕಬೊಮ್ಮೈಯ್ಯ. ಕುರಿ, ಹುಲ್ಲಿನ ಹೊರೆ, ಕೋಳಿಗಳು, ಬೆಣ್ಣೆ, ಸವುದೆ ಹೊರೆ.

ತಿಲಾರದಹಳ್ಳಿ.—ನರಸಪ್ಪ, ತಿಮ್ಮೈಯ್ಯ, ಹನುಮಯ್ಯ, ಭೂತಯ್ಯ, ನಿಂಗೈಯ್ಯ, ಮಾರಿಯಣ್ಣ, ಮುದ್ದೈಯ್ಯ, ರಂಗೈಯ, ಈರಮುದ್ದೈಯ್ಯ, ಕಾಮೈಯ್ಯ, ಬಲ್ಲಯ್ಯ, ದೊಡ್ಡಮಲ್ಲಯ್ಯ, ತಿಮ್ಮಯ್ಯ, ಮದ್ದಕ್ಕ, ರಂಗೈಯ್ಯ, ಕರಿಯಣ್ಣ, ರಾಮಪ್ಪ, ಸಣ್ಣನಾಗ, ಇನ್ನೂ ಮುಂತಾದವರು.—ಕೋಳಿಗಳು, ಹುಲ್ಲು ಹೊರಗಳು, ಸವುದೆ ಹೊರೆಗಳು, ಬೆಣ್ಣೆ, ಕುರಿ, ಮುಂತಾದವುಗಳು.

ಇದರಂತೆ ಇನ್ನು ೨೦ ಗ್ರಾಮಗಳ ರೈತರೂ ಪಟೇಲರೂ ದೂರು ಹಾಕಿ ಕಳುಹಿಸಿರುತ್ತಾರೆ. ಸ್ಥಳ ಸಂಕೋಚದ ದೆಸೆಯಿಂದ ಬಿಟ್ಟಿರುತ್ತೆ. ತಮಗೆ ಅವಶ್ಯ ಕಂಡುಬಂದರೆ ಕಳುಹಿಸುತ್ತೇನೆ.

ಎಚ್. ಬ್ರಹ್ಮನಮಿತ್ರಯ್ಯ, ಕುರೀಹಳ್ಳಿ.

---

## ತಾಲ್ಲೋಕು ವರ್ತಮಾನಗಳು.

ಮಂಡ್ಯ.—ಇಲ್ಲಿನ ಜನರು ಕೆರೆ ಕುಂಟೆಗಳೆಲ್ಲಾ ತುಂಬಿದ ಕಾರಣ ತುಂಬಾ ಹರ್ಷಿತರಾಗಿದ್ದಾರೆ. ಜೋಳದ ಬೆಳೆಯು ಸಹ ಏನು ಚನ್ನಾಗಿದೆ. ಬಡಬಗ್ಗರೆಲ್ಲಾ ಜೀವನ ಮಾಡಲು ಅನುಕೂಲವಾಯಿತು. ಆದರೆ ರಾತ್ರಿವೇಳೆಯಲ್ಲಿ ಮಳೆ ಸುರಿಯುವಾಗ್ಯೆ ಬೆಳದಿಂಗಳು ಇದ್ದರೂ ಕತ್ತಲೆಯೇ ಮುಚ್ಚಿದೆಯಷ್ಟೆ. ಜನಸಂಚಾರಕ್ಕೆ ಮುನಿಸಿಪಲ್ ಲಾಂದ್ರಗಳು ಯಾವ ಸಹಾಯವನ್ನೂ ಮಾಡದೆ ಒಂದು ವಿಶೇಷದ ಲಾಗಾಯಿತು ತಮ್ಮ ಪ್ರಕಾಶವನ್ನು ಮರೆಮಾಡಿವೆ. ಮಳೆಯಿಂದ ಜನರು ರೈಲ್‌ಸ್ಟೇಷನ್ನಿಗೆ ಹೋಗುವದು ಕಷ್ಟವಾಗಿದೆ. ಆದರೆ ಕತ್ತಲೆಯಿಂದ ಹೋಗಿ ಬರುವದು ಮೃತ್ಯು ಕಷ್ಟವಾಗಿದೆ. ಮೇಲಿನ ಅಧಿಕಾರಿಗಳು ಲಾಂದ್ರಗಳಿಗೆ ಯಾವಾಗ ಅಪ್ಪಣೆ ಕೊಡುವರೋ ಎಂದು ಎಲ್ಲರೂ ನಿರೀಕ್ಷಿಸುತ್ತಾರೆ.—ಇಲ್ಲಿನ ಅಮಲ್ದಾರರ ಮನೆಯಲ್ಲಿ ಒಂದು ಮಗುವಿಗೆ ಬಹಳ ಕಾಯಿಲೆಯಾಗಿತ್ತು. ಅವರ ಮನೆಯವರು ಬಹಳ ಚಿಂತಿಸುತ್ತಿದ್ದರು. ಆದರೆ ಇಲ್ಲಿನ ಹಾಸ್ಪಿಟಲ್ ಅಸಿಸ್ಟೆಂಟರು ಬಹು ಮುತುವರ್ಜಿಯಾಗಿ ಔಷಧ ಕೊಟ್ಟರು. ಈಗ ಆ ಮಗುವಿಗೆ ಕ್ಷೇಮವಾಗಿದೆ.—ಇಲ್ಲಿಗೆ ೫—೬ ಮೈಲಿ ದೂರ ಇರುವ ಗೊರವಾಲೆಯ ಆಚೆ ಕಾಡಿನಲ್ಲಿ ೨ ಚಿರತೆಗಳು ಸೇರಿಕೊಂಡು, ಜನರನ್ನು ತೊಂದರೆ ಪಡಿಸುತ್ತಾ ಇವೆ. ಹೋದವಾರ ಒಬ್ಬ ರೈತನು ತುಬಾಕಿಯಿಂದ ಅದನ್ನು ಸುಡಲು ಅದು ತಪ್ಪಿಸಿಕೊಂಡು ೩—೪ ಜನರನ್ನು ಕಚ್ಚಿತೆಂದು ವರ್ತಮಾನವಿದೆ. ಷಿಕಾರಿಗಳು ಅಲ್ಲಿಗೆ ಹೋಗಿ ಅವುಗಳನ್ನು ಕೊಂದು ಪ್ರಜೆಗಳಿಗೆ ಸುಖ ಉಂಟುಮಾಡಿದರೆ ಒಳ್ಳೇದು.

ಹೊಳೇನರಸೀಪುರ.—ಇಲ್ಲಿ ಮಳೆ ಚನ್ನಾಗಿ ಆಗಿರುತ್ತೆ. ಜ್ವರ, ಛಳಿ, ಕೆಲವು ಕಡೆ ಪ್ರಾರಂಭವಾಗಿರುತ್ತೆ. ನಮ್ಮ ಅಮಲ್ದಾರ್ ಮಿ॥ ಬಿ. ಆರ್. ಶ್ರೀನಿವಾಸರಾಯರು ರಜಾದಮೇಲೆ ಹಾಸನಕ್ಕೆ ದಯಮಾಡಿಸಿರುತ್ತಾರೆ. ಇವರ ಬದಲಿಗಾಗಿ ಬಂದಿರತಕ್ಕ ಮಿ॥ ಚಕ್ರವರ್ತಿಯಂಗಾರ್ಯರು ಮುನಿಸಿಪಾಲಿಟಿ ವಿಷಯದಲ್ಲಿಯೂ, ಪೋಲೀಸ್ ಗಸ್ತಿನ ವಿಷಯದಲ್ಲೂ ವಿಚಾರಮಾಡದೆ, ಯಾತಕ್ಕಾಗಿ ಬಿಟ್ಟುಕೊಂಡು ಬಂದಿರುತ್ತಾರೋ ಗೊತ್ತಿಲ್ಲ.—ಕೆಲವು ದಿವಸ ಮಾತ್ರ ಹೊಳೇ ದಡದಲ್ಲಿಯೂ, ಕಾಲುವೆ ದಡದಲ್ಲಿಯೂ ನೇಪಿಗೆ ಮಗ್ಗಿ ಮಾಡದಂತೆ ನಿಗಾ ಕೊಟ್ಟಿದ್ದರು. ಈಚಿಗೆ ನಿಗಾ ಕೊಡಲಿಲ್ಲವಾದ್ದರಿಂದ ಪುನಃ ಪ್ರಾರಂಭವಾಗಿರುತ್ತೆ. ಈ ಊರಿನ ಪೂರ್ವದಿಕ್ಕಿಗೂ ಪಶ್ಚಿಮದಿಕ್ಕಿಗೂ ಹೇಮಾವತೀ ಇರುವದರಿಂದ ಬಹಳ ಜನಗಳಿಗೆ ತೊಂದರೆಯಾಗಿರುವದಲ್ಲದೆ ಅನಾರೋಗ್ಯ ಸಹ ಉಂಟಾಗಿರುತ್ತೆ. ಜಾಗ್ರತೆ ಮುನಿಸಿಪಾಲಿಟಿಯವರು ನಿಗಾ ಕೊಟ್ಟಾರೆಂದು ನಂಬಿರುತ್ತೇನೆ.—ಈ ಊರಲ್ಲಿ ಪ್ಲೇಂಗು ಮತ್ತು ಛಾಪಖಾನೆಗದ ವಗೈರೆ ಬಿಕರಿಮಾಡಲು ಒಬ್ಬರೆ ಇರುವದರಿಂದ ಬಹಳ ಜನಗಳಿಗೆ ಅನಾನುಕೂಲವಾಗಿರುತ್ತೆ. ಈಗ ಬಿಕರಿಮಾಡುತ್ತಿರುವ ಸ್ಟಾಂಪುವೆಂಡರ್ ಮಿ॥ ಅನಂತರಾಮಯ್ಯನವರು ಯಾವಾಗಲು ಬೆಂಗಳೂರ್ ಮಾಸೆಗಳಿಗೆ ಹೋಗಿರುತ್ತಾರೆ. ಅಲ್ಲದೆ ಕೆಲವು ಕಾಲ ಇಲ್ಲಿನ ಖಜಾಂಚಿ ಮಿ॥ ರಾಘವೇಂದ್ರಾಚಾರ್ಯರ ಮನೆಯಲ್ಲಿ ಕೊಡುತ್ತ ಕೊಂಡು ಹಂಸ್ಥಳದಿಂದ ಬಂದ ಕಕ್ಷಿಗಾರರಿಗೆ ಮುಖನೇ ತೋರಿಸುವದಿಲ್ಲ ಮತ್ತು ಒಂದು ವೇಳೆ ಕಂಡು ಕೇಳಿದರೆ ಸ್ಟಾಂಪು ಇಲ್ಲ, ಕಾಗದವಿಲ್ಲ ಎಂದು ಜವಾಬು ಹೇಳುತ್ತಾರೆ. ಇವರಿಗೆ ಬಹಳ ದಿವಸ ಗೌರ್ನಮೆಂಟ್ ಸರ್ವೀಸ್ ಆಗಿರುವದರಿಂದ ಇವರ ಸ್ವಾತಿಗೆ ಎದರೆ ಇಲ್ಲವಾಗಿರುತ್ತೆ. ನಮ್ಮ ಅಮಲ್ದಾರರು ದಯವಿಟ್ಟು ಮೇಲ್ಕಂಡ ಕಾಗದ ಮತ್ತು ಸ್ಟಾಂಪು ಸಹ ಪೋಸ್ಟಾಫೀಸ್ ಮೂಲಕ ಬಿಕರಿ ಮಾಡುವಂತೆ ಹುಕುಂ ಮಾಡಿದರೆ ಬಹಳ ಜನಗಳ ತೊಂದರೆ ತಪ್ಪುವದರಲ್ಲಿ ಸಂದೇಹವಿಲ್ಲ.

ಚಳ್ಳಕೆರೆ.—ಈಗ ೬—೭ ದಿವಸದಿಂದ ದಿನವೂ ಮತ್ತು ದಿನ ಬಿಟ್ಟು ದಿನ ರಾತ್ರಿಯೊತ್ತು ವಿಪರೀತ ಮಳೆಯಾಗುತ್ತೆ. ಇದರಿಂದ ಜನಗಳಿಗೂ ತಮ್ಮ ತಮ್ಮ ಕೆಲಸ ಮಾಡಿಕೊಳ್ಳಲು ಅನುಕೂಲ. ಕೆರೆ ಕಟ್ಟೆಗಳೆಲ್ಲಾ ತುಂಬಿ ತುಳುಕಾಡುತ್ತಲಿವೆ. ಬೀಗಿಹೋಗಿದ್ದರಾಗಿ ಮತ್ತು ಭತ್ತದ ಪೈರುಗಳೆಲ್ಲಾ ಸೋಟಕರಿಗೂ ವ್ಯಾಪಾರಿಗಳಿಗೂ ಒಳ್ಳೇ ಆನಂದವನ್ನು ಉಂಟುಮಾಡುತ್ತೆ.—ಈ ಊರಿನ ಪ್ಯಾಟೆ ಕಟ್ಟೆರ್ ಭಾಗದಲ್ಲಿ ಪ್ಲೇಗಿನ ಸೂಚನೆಗಾಗಿ ಇಲಿಗಳು ಸತ್ತದ್ದರಿಂದ ಪುರನಿವಾಸಿಗಳಿಗೆಲ್ಲಾ ಅಮಲ್ದಾರ್ ಮಿ॥ ಮೊಹಿಯುದ್ದೀನ್ ಷರೀಫ್ ಸಾಹೇಬರು ಒಳ್ಳೆ ಬುದ್ಧಿಮಾತುಗಳನ್ನು ಹೇಳಿದರು. ಏಕದಂ ಒಂದು ಹಗಲು ಒಂದು ರಾತ್ರಿ ಒಳಗಾಗಿ ಜನಗಳೆಲ್ಲಾ ಊರು ಖಾಲಿ ಮಾಡಿದ್ದರಿಂದ ವಿಶೇಷ ಅನರ್ಥಗಳೇನೂ ಆಗದೇ ೨—೩ ತಿಂಗಳಿಂದ ಜನಗಳು ಷೆಡ್ಡುಗಳಲ್ಲಿ ಸುಖವಾಗಿದ್ದು, ಈಗ ಖಪ್ಪಣೆ ಪಡೆದು, ಡಿಸಿನ್ಫೆಕ್ಟ್ ಮಾಡಿಕೊಂಡು ಮನೆಗಳು ಸೇರುತ್ತಲಿದಾರೆ. ಇಲ್ಲೂರಲ್ಲಿ ಆದರೋ ಪ್ಲೇಗ್ ಸೋಂಕಿನ ಇಲಿಗಳು ಸತ್ತು ಸುರಿದಾಗ್ಯೂ ಕೆಲವು ದಿವಸ ಹಟದಿಂದ ಊರು ಬಿಡದೆ ಇದ್ದದ್ದರಿಂದ ೧೦—೧೫ ಪ್ಲೇಗಿನ ಕೇಸ್ ನಡದನಂತರ ಇದನ್ನು ಕೇಳಿ ಇನ್ನು ಮೇಲು ಪ್ರಜೆಗಳು ಕೆಟ್ಟುಹೋದಾರೆಂತಾ ಅಮಲ್ದಾರರು ಬಹಳ ಶಾಂತರಾಗಿ ಅವರು, ಡಾಕ್ಟರ್ ಕೃಷ್ಣಸ್ವಾಮಿಯವರೊಡನೆ ದಯಮಾಡಿಸಿ ಪುನಃ ಜನಗಳಿಗೆ ಬುದ್ಧಿ ಹೇಳಿದ್ದರಿಂದ ಷೆಡ್ಡುಗಳಿಗೆ ಜನಗಳೆಲ್ಲಾ ಹೋದರು. ಮುಕ್ಕಾಲು ಮೈಲಿ ದೂರದಲ್ಲಿರುವ ಈ ಪ್ಯಾಟೆ ಜನರು ಅಮಲ್ದಾರರನ್ನು ಕೊಂಡಾಡುತ್ತಿದ್ದಾರೆ.—ಇಲ್ಲಿನ ಸಬ್ ರಿಜಿಸ್ಟ್ರಾರ್ ಆಗಿಯು ಹಿಂದುಸ್ಥಾನಿ ಗರ್ಲ್ಸ್ ಸ್ಕೂಲಿನ ಪ್ರಿಸಿಡೆಂಟರಾಗಿಯು ಇದ್ದ ಮಿ॥ ಖಾಸಿಂ ಅಲಿಯವರು ಚರ್ ಹೋಲ್ ಫೈರ್ ಕೆಲಸದಲ್ಲೂ ತುಂಬಾ ಸಹಾಯಕರಾಗಿದ್ದರು. ಇಂಥವರನ್ನು ಬೇರೆ ಊರಿಗೆ ವರ್ಗಮಾಡಿದ್ದೆ ಎಂತ ಹೆನ್ನೆ ದಿನ ಹುಕುಂ ಬಂದಿದ್ದರಿಂದ ಈ ದಿವಸ ಅಮಲ್ದಾರ್‌ರಿಗೆ ಛಾರ್ಜ್ ಕೊಟ್ಟವರು ನಾಳೆ ಪ್ರಯಾಣ ಮಾಡುವವರಾಗಿದಾರೆ. ಇಂಥಾ ಸಭ್ಯವಂತರು ಈ ಊರು ಬಿಟ್ಟು ಹೋದರೆಂತಾ ಜನರು ಪಶ್ಚಾತ್ತಾಪಪಡುತ್ತಲಿದಾರೆ.

ಕಡೂರು.—ಇದೇ ತಾರೀಖು ೫ ನೆ ಶುಕ್ರವಾರ ದಿವಸ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರ ವರ್ಧಂತಿ ಮಹೋತ್ಸವವನ್ನು ನಡಸುವ ಬಗ್ಗೆ ನಮ್ಮ ತಾಲ್ಲೂಕು ಅಮಲ್ದಾರರವರು ಶಿರಸ್ತೇದಾರರವರು ಈ ಟವುನ್ ನಿವಾಸಿಗಳು ಮ್ಯುನಸಿಪಲ್ ಮೆಂಬರೇ ಆದಿಯಾಗಿ ಸರ್ವರಿಗೂ ಕರೆಸಿಕೊಂಡು ಪ್ರೋತ್ಸಾಹಪಡಿಸಿ ಒಂದು ಚಂದಾ ಪಟ್ಟಿ ತಯಾರುಮಾಡಿಸಲ್ಪಟ್ಟದ್ದರಲ್ಲಿ ೩೦—೩೫ ರೂಪಾಯಿವರೆಗೆ ಚಂದಾ ವಸೂಲಾಯಿತು. ಇದರಿಂದ ಈ ದಿವಸ ಬೆಳಗ್ಯೆ ದೇವಸ್ಥಾನಗಳಲ್ಲಿ ದೇವರ ಅರ್ಚನೆ ಅಭಿಷೇಕಾದಿಗಳು ನಡಸಲ್ಪಟ್ಟವು. ಮಧ್ಯಾಹ್ನಕ್ಕೆ ೩ ಗಂಟೆ ಲಾಗಾಯಿತು ಸ್ಕೂಲ್ ಕಟ್ಟಡದ ಮೈದಾನಿನಲ್ಲಿ ಮಿ॥ ಯ. ಆ. ಕ. ಟ. ಬಾಪಾರಾವ್ ರವರು ಆ ಇ. ಮ. ಐಯ್ಯಾಸಾಮಿ ಐಯ್ಯರವರು ಅಮಲ್ದಾರ್ ಮಿ॥ ಲಕ್ಷ್ಮೀಶಾಸ್ತ್ರಿಗಳವರು ಶಿರಸ್ತೇದಾರ್ ಮಿ॥ ಭೀಮರಾವ್ ರವರು ಆಸ್ಪಟಲ್ ಅ. ರವರು ಮ್ಯುನಿಸಿಪಲ್ ಮೆಂಬರು ಇನ್ನು ಮುಂತಾದ ದೊಡ್ಡ ಮನುಷ್ಯರು ಯೋಗ್ಯವಾದ ಸ್ಥಾನಗಳಲ್ಲಿ ಅಲಂಕೃತರಾಗಿದ್ದರೂ ಅಲ್ಲಿ ಸ್ಕೂಲ್ ಬಾಲಕರ ಆಟಪಾಟಗಳ ವಿನೋದಗಳು ನಡಸಲ್ಪಟ್ಟವು. ಅಷ್ಟರಲ್ಲಿ ಟೀ ಪಾರ್ಟಿ ಮುಂತಾದ್ದು ತಯಾರಾಗಿತ್ತು. ಸ್ಕೂಲ್ ಬಾಲಕರೇ ಮುಂತಾಗಿ ಸರ್ವರಿಗೂ ಕಾಫಿ ತಿಂಡಿ ಮುಂತಾದ್ದನ್ನು ಹಂಚಲ್ಪಟ್ಟಿತು. ನಂತರಾ ಸ್ಕೂಲ್ ಕಟ್ಟಡದಲ್ಲಿ ಸಭೆ ಸೇರಲ್ಪಟ್ಟಿತು. ಈ ಸಭೆಗೆ ಮಿ॥ ಟ. ಬಾಪಾರಾವ್ ರವರು ಅಗ್ರಾಸನಾಧಿಪತ್ಯವನ್ನು ವಹಿಸಿ ಈ ಶುಭಸಮಾರಂಭವನ್ನು ಸರ್ವರಿಗೂ ತಿಳಿಯಪಡಿಸಿದ್ದರ ಮೇಲೆ ಸರ್ವರೂ ಹರುಷಿತರಾದರೂ ಆ ಕಾಲದಲ್ಲಿ ಮಿ॥ ಕಂಟ್ರಾಕ್ಟರ್ ರಾಮಸ್ವಾಮಿ ಮುದ್ಲಿಯಾರ್‌ರವರು ಈ ಸ್ಕೂಲ್ ಮೈದಾನ ಪಕ್ಕದಲ್ಲಿ ಇದ್ದ ಖಾಲೀ ನಿವೇಶನವನ್ನು ಈ ಸ್ಕೂಲ್ ಕಟ್ಟಡಕ್ಕೋಸ್ಕರ ಧರ್ಮಾರ್ಥವಾಗಿ ಕೊಟ್ಟಂತೆ ವಾಗ್ದಾನ ಮಾಡಿದ್ದಕ್ಕೆ ಸರ್ವರೂ ಸಂತೋಷಿಸಿದರು. ನಂತರ ಶುಭಸೂಚಕವಾದ ಕರತಾಡನದಿಂದಲೂ ಇಂಗ್ಲೀಷ್ ಪದ್ಧತಿ ಮೇರೆ ಹಿಪ್ ಹಿಪ್ ಹುರ್ರೇ ಎಂಬ ಘೋಷದಿಂದಲೂ ಸರ್ವರೂ ನಮ್ಮ ಮಹಾರಾಜರವರ ಶ್ರೇಯಃ ಪ್ರಾರ್ಥನೆಯನ್ನು ಮಾಡಲ್ಪಟ್ಟರು. ತರುವಾಯ ಆಟಪಾಟಗಳಲ್ಲಿ ಗೆದ್ದ ಬಾಲಕರಿಗೆ ೧ ರೂಪಾಯಿ ಲಾಗಾಯಿತು ೨ ಆಣೆ ವರಿಗೆ ಇನಾಂ ಹಂಚಲ್ಪಟ್ಟರು. ಸರ್ವರು ಗಂಧ ತಾಂಬೂಲ ಪುಷ್ಪಗಳಿಂದ ಅಲಂಕೃತರಾಗಿ ಸಭೆ ಬರಖಾಸ್ತಾಯಿತು.—ಸಾಯಂಕಾಲ ೯ ಗಂಟೆ ಲಾಗಾಯಿತು ೩ ಗಂಟೆ ವರಿಗೆ ಮಿ॥ ಟಿ. ಬಾಪಾರಾವ್ ರವರ ಗೃಹದಲ್ಲಿ ತಂಜಾವೂರಿಂದ ದಯಮಾಡಿಸಿದ್ದ ಹರಿದಾಸರಲ್ಲಿ ಧಕ್ಷಯಜ್ಞ ಪರಿಣಯವೆಂಬ ಹರಿಕಥೆಯು ಬಹಳ ವಿಜೃಂಭಣೆಯಿಂದ ನಡಸಲ್ಪಟ್ಟಿತು. ಅಲ್ಲಿಗೂ ಮೇಲ್ಕಂಡ ದೊಡ್ಡಮನುಷ್ಯರು ಸೇರಿದ್ದರು. ಕಥೆ ಪೂರೈಸಿದನಂತರ ಅಲ್ಲಿಯು ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರ ಶ್ರೇಯಃ ಪ್ರಾರ್ಥನೆಯನ್ನು ಮಾಡಿ ಸರ್ವರೂ ಗಂಧ ತಾಂಬೂಲಗಳಿಂದ ಅಲಂಕೃತರಾಗಿ ಸ್ವಗೃಹಗಳನ್ನು ಕುರಿತು ತೆರಳಿದರು.

ಹರಿಹರ.—ಇದೇ ತಿಂಗಳು ೪ ನೇ—೫ ನೇ ತಾರೀಖಿನಲ್ಲಿ ಬಲವಾದ ೨—೩ ಮಳೆಗಳಾದವು. ನದಿಯಲ್ಲಿ ಸುಮಾರು ೩—೪ ಅಡಿ ನೀರು ವರಿಗು ಬಂತು. ಬಿತ್ತನೆ ಕೆಲಸದವರಿಗೆಲ್ಲಾ ಬಹಳ ಸಂತೋಷವಾಯಿತು. ಕಳೆದ ಸಾಲಿನಲ್ಲಿ ಪ್ಲೇಗು ಹೋದದಿಗನ್ನು ಹೊಲ ಗದ್ದೆ ಮುಂತಾದ ಕಡೆಗಳಲ್ಲಿ ಅನುಕೂಲತೆ ಪ್ರಕಾಶಪಟ್ಟಿದ್ದರು. ಈಗ ಆಯಾ ಜಾಗಗಳಲ್ಲಿ ಬೇಸಾಯವನ್ನು ಪ್ರಾರಂಭಿಸಿರುತ್ತಾರೆ. ಕಳೆದ ವಾರದಲ್ಲಿ ಪ್ಲೇಗಿನ ಮರಣಗಳು ಹೆಚ್ಚಾಗಿ ದಿನವು ೧೦—೧೨ ಆದವು. ಸಾಲಿ ಕಾಯಿಲೆಯಲ್ಲಿದ್ದವರು ಸುಮಾರು ೧೫ ಕ್ಕೆ ಮೇಲ್ಪಟ್ಟಿರಬಹುದು. ಈ ಟವುನಿನಲ್ಲಿ ಹೆಚ್ಚು ಕಮ್ಮಿ ೭೦೦—೩೦೦ ಮನೆಗಳಿಗೆ ಬೀಗಮುದ್ರೆಯಾಗಿದೆ. ಅಮಲ್ದಾರರು ಮೊದಲುಗೊಂಡು ತಾಲ್ಲೂಕಿನ ನೌಕರರು ಬ್ರಾಹ್ಮಣರೇ ಈ ಮನೆಗಳನ್ನು ಹುಡುಕುತ್ತಿರುವರು. ಇಷ್ಟು ಜನಗಳಿಗೆ ಮನೆಗಳು ಸಿಕ್ಕುವದು ಕಷ್ಟವಾಗಿದೆ. ೯ನೆ ೧೦ನೆ ೧೧ನೆ ತಾರೀಖಿನಲ್ಲಿ ಪ್ಲೇಗಿನ ಮರಣಗಳು ಹೊಸದಾಗಿ ಯಾವದಿಲ್ಲವಾಗಿ ತೋರುತ್ತೆ. ಬಡಜನಗಳ ವಿಚಾರದಲ್ಲಿ ಅಮಲ್ದಾರರು ಕೆಲವು ಬಂಬು, ಗಳ, ಚಾಪೆ ಮುಂತಾದವುಗಳನ್ನು ಸಹಾಯಮಾಡಿ, ಕೀರ್ತಿ ಪಡೆದಾರೆಂದು ನಂಬುತ್ತೇವೆ.—ಗ್ರಾಮದ ಸಂತೆಯನ್ನೂ ಈಗಿನಂದರೇ ಊರಿನ ಹೊರಗೆ ನಡಿಸಲು ಏರ್ಪಾಡು ಮಾಡುವದು ಯುಕ್ತವಾಗಿ ತೋರುತ್ತೆ. ಈಗ ಊರ ಸಮೀಪದಲ್ಲಿ ನಡಿಯುವ ಪದ್ಧತಿಯನ್ನು ತಪ್ಪಿಸುವದು ಒಳ್ಳೇದಾಗಿದೆ. ದಾವಣಗೆರೆಯಿಂದ ಬರುವ ಡಾಬಿ ದಿನಸುಗಳ ಸಹ ಮುಂದಕ್ಕೆ ಬಂದಿವೆ. ಜೋಪಡಿಯನ್ನು ಕಟ್ಟಿಕೊಂಡಿದ್ದ ವಲ್ಲಪ್ಪನಿಗೆ ಪ್ಲೇಗು ಆಗಿ ಮೃತಪಟ್ಟಿದ್ದರಿಂದ ಆತನ ಪರಿವಾರದವರು ಜೋಪಡಿಯನ್ನು ಬಿಟ್ಟು ಪಲಾಯನವಾಗಿರುತ್ತಾರೆ.—ತಾಲ್ಲೂಕ್ ವಿಚಾರದಲ್ಲಿ ಕೆಲವು ಪಟೇಲರು ವ್ಯವಹಾರಗಳು ಕಂದಾಯದ ಹಣವನ್ನು ಸರಿಮಾಡಿ ವಸೂಲ್ಮಾಡದ ಪ್ರಯುಕ್ತ ಅವರ ಉದಾಸೀನದ ಫಲಕ್ಕಾಗಿ ಸರ್ಕಾರಕ್ಕೆ ಕೊಂಚ ಖುಲಾಸೆಯನ್ನು ಕೊಟ್ಟರೆಂದು ವರ್ತಮಾನವಿದೆ. ಜನವರಿ ತಿಂಗಳಿಂದ ಯಾರ್ ಬರ್ತೆನು ಇವರುಗಳು ಏನುಮಾಡುತ್ತಿದ್ದರೆಂದು ತಿಳಿಯಲಿಲ್ಲವೊ. ಪ್ರಜೆಗಳು ವಾಯಿದೆ ಪ್ರಕಾರ ಕೊಡದಿದ್ದ ಪಕ್ಷದಲ್ಲಿ ಸರ್ಕಾರದವರ ಕಾನೂನಿನ ಪ್ರಕಾರ ಕೆಲಸವನ್ನು ಪಟೇಲ್ ವ್ಯವಹಾರಗಳು ಜಾರಿಯಲ್ಲಿ ತರಬಹುದಾಗಿತ್ತು. ಇದರಲ್ಲಿ ಪ್ರಜೆಗಳ ತಪ್ಪು ಯಾವದೂ ಕಂಡುಬರುವದಿಲ್ಲವೊ.—ತಾರೀಖು ೪ ರಲ್ಲಿ ಅಲ್ಲಿಂದ ೯ ಮೈಲು

ಭಾಸಲೆಯಲ್ಲಿರುವ ಶಿವಪಳ್ಳಿ ಕೆಂಗೆಸರ ಹಳ್ಳದಲ್ಲಿ ಒಂದು ಹೆಂಣು ಶ್ರವ ಶೇಖಿ ಬಂದದ್ದನ್ನು ಬೆಳಗ್ಗಾದಿ ಪಟೇಲ್ ಸಿದ್ಧಪ್ಪನು ಕಂಡು ರಿಪೋರ್ಟು ಮಾಡಿದ್ದರಿಂದ ಟವ್ನ್ ದಫೇದಾರ್ ಮುಜಿದ್ ಮಾಡಿ, ಸದರಿ ಹೆಣವನ್ನು ಆಸ್ಪತ್ರಿ ಅಪ್ಪಣಾಯಿಷಿ ಬಗ್ಗೆ ಬಂದಹಾಗೆ ಪರ್ವ ಮಾಡಿದ. ಈ ಹೆಣವು ಯಾವದರ ದೆಸೆಯಿಂದ ಮರಣಹೊಂದಿರಬಹುದೆಂದು ಇನ್ನೂ ಚನ್ನಾಗಿ ತಿಳಿಯಲಿಲ್ಲ. ಹೆಣವು ಬಹಳ ಕೊಳೆತು ಹೋಗಿತ್ತು. ಹೆಣಗಳನ್ನು ಹೊಳೆ ಕೆರೆ ಕಾಲುವೆ ಹಳ್ಳ ಈ ವಿಧವಾದ ಸ್ಥಳಗಳಲ್ಲಿ ಪರ್ವ ಮಾಡುವದು ಜನಗಳ ರೂಢಿಯಾಗಿದೆ. ಪುಳೆಯ ದೆಸೆಯಿಂದ ಗೋರಿ ಕೊರೆದು ಈ ಪ್ರಕಾರ ಶೇಖಿ ಬಂದಿರುವದೋ ? ಅಲ್ಲವೇ ಖೂನ್ ಮರಣವೋ ? ಒಂದು ವೇಳೆ ಪ್ಲೇಗಿನಿಂದ ಸತ್ತಿದ್ದರೆ ಯಾರಿಗೂ ತಿಳಿಯದಂತೆ ನೀರಿನಲ್ಲಿ ಬಿಸಾಡಿದ್ದರೋ ಹೇಳಲಾಗುವದಿಲ್ಲ. ದಫೇದಾರ್ ಬಾಳಪ್ಪನೆಂಬ ಬ್ರಾಹ್ಮಣನು ಕಳೆದ ವಾರ ಪ್ಲೇಗಿನಿಂದ ಮೃತಪಟ್ಟಕಾರಣ ವಿಶ್ವಾದ ಕೋಟೆ ಬ್ರಾಹ್ಮಣರಲ್ಲಿ ಅರ್ಧಪಾಲಿಗಿಂತ ಜಾಸ್ತಿಯಾಗಿ ಬ್ರಾಹ್ಮಣರು ಅಲ್ಲಿಂದ ಒಂದು ಕಾಲುಮೈಲು ಭಾಸಲೆಯಲ್ಲಿರುವ ಗುಡಿಸಲನ್ನು ಹೋಗಿ ಹೊಕ್ಕಿರುವರು. ರೋಗದ ಶಾಂತಿಗಾಗಿ ಕೋಟೆ ಕರಡಿಪಾದ್ಯ ಒಳಗೆ ಮುಂಚಾದ ಗೋಪದೊಡನೆ ದೇವತೆಯ ಉತ್ಸವ ನಡೆದವು. ಇನ್ನು ನಡಿಸುವದರಲ್ಲಿರುವರು ದೇವರ ಕೋಪಕ್ಕೆ ನೀವುಗಳು ಗುರಿಯಾಗಿರುವಾಗ ನನ್ನ ಶಾಂತಿಯಿಂದ ಉಪಯೋಗವೇನೆಂದು ದೇವತೆ ಪರ ಕೊಡದೋಗಿದೆ.—ಇಲ್ಲಿನ ಎ. ವಿ. ಸ್ಕೂಲಿನ ಬಾಲಕರು ಹಿಂದೂಸ್ಥಾನಿ ಸ್ಕೂಲಿನ ಹುಡುಗರು ಸಹ ಬಹಳ ಕಡಮೆಯಾಗಿ ಶಾಲೆಗೆ ಬರುವರು ಮೇಲಿನವರು ಯಾವ ಹುಕುಮನ್ನು ಕೊಟ್ಟಿರುವರೋ ತಿಳಿಯದು.

ಶಿಡ್ಲಘಟ್ಟ.—ಕೆಲವು ದಿನಗಳಿಂದ ಮಳೆ ಇಲ್ಲವೇ ಇಲ್ಲ. ಬಿಸಿಲಿನ ತಾಪವೂ ಧಗೆಯೂ ಹೆಚ್ಚಾಗಿ ಆಗಾಗ್ಯೆ ಮಳೆ ಬರುವ ಚಿಹ್ನೆಗಳು ಕಂಡರೂ ಮಳೆ ಬರಲೇ ಇಲ್ಲ. ೧೨ ನ ತಾ॥ ಸಾಯಂಕಾಲಕ್ಕೆ ಮಾತ್ರ ಒಂದೆರಡು ಘಂಟೆಯವರಿವಿಗೂ ಸ್ವಲ್ಪ ಮಳೆ ಆಯಿತು. ಇಲ್ಲಿಯ ಎ. ವಿ. ಸ್ಕೂಲಿನಲ್ಲಿ ಅಸಿಸ್ಟೆಂಟ್ ಮಾಸ್ಟರ ಕೆಲಸವನ್ನು ೭—೩ ವರ್ಷಗಳಿಂದ ಬದಲಿಯಾಗಿ ನಡಿಸುತ್ತಿದ್ದ ಮ॥ ವೆಂಕಟರಾಮಶಾಸ್ತ್ರಿಗಳನ್ನು ಚಿಕ್ಕಬಳ್ಳಾಪುರಕ್ಕೆ ವರ್ಗಮಾಡಿದ್ದಾರೆ. ಬೆಂಗಳೂರಿನಲ್ಲಿ ಸೆನ್ಸಸ್ ಆಫೀಸಿನಲ್ಲಿ ಸ್ವಲ್ಪ ಸಮಯಕ್ಕೆ ಕೆಲಸಕ್ಕೆ ಹೋಗಿದ್ದ ಮ॥ ವೆಂಕಟರಾಯರು ಇಲ್ಲಿನ ತಮ್ಮ ಮೊದಲಿನ ಕೆಲಸಕ್ಕೆ ಬರುತ್ತಾರೆ. ಇಲ್ಲಿ ಇವರ (ಮ॥ ವೆಂಕಟರಾಯರ) ಬದಲಿ ೨—೩ ವರ್ಷಗಳಿಂದ ಅಸಿಸ್ಟೆಂಟ್ ಮಾಸ್ಟರಾಗಿದ್ದ ಮ॥ ವೆಂಕಟರಾಮಶಾಸ್ತ್ರಿಯವರನ್ನು ವರ್ಗಮಾಡಿದ್ದು ಸ್ಕೂಲ್ ಹುಡುಗರಿಗೆಲ್ಲಾ ಬಹು ದುಃಖಾಸ್ಪದವಾಗಿದೆ. ಯಾಕೆಂದರೆ ಇವರು ತಾವು ಇಲ್ಲಿ ಇರುವಷ್ಟು ದಿನ ತಮಗೊಪ್ಪಿಸಿದ ಕೆಲಸವನ್ನು ಮುತುವರ್ಜಿಯಿಂದ ನಡಿಸುತ್ತಿದ್ದರು ತಮ್ಮ ಕ್ಲಾಸಿನೊಳಗಿನ ಹುಡುಗರಲ್ಲಿ ಅಲ್ಲದೆ ಕ್ಲಾಸಿಗೆ ಸೇರದ ಇತರ ಹುಡುಗರಲ್ಲಿಯೂ ಜಾತಿಭೇದ ವಂಚನೆಗಳಿಲ್ಲದೆ ಕೆಲಸ ನಡಿಸುತ್ತಿದ್ದರು. ಇವರು ಬಹು ದಯಾರ್ದ್ರಸ್ವಭಾವದವರು, ಇಂಥವರನ್ನು ಇಲ್ಲಿಂದ ವರ್ಗಮಾಡಿದರೇ ಅಂತ ಸ್ಕೂಲ್ ಹುಡುಗರೆಲ್ಲರೂ ಬಹು ವಿಷಾದಿಸುವವರಾಗಿದ್ದಾರೆ—ಇಲ್ಲಿ ಇದೇ ತಿಂಗಳು ೧೦ ನೆ ತಾರೀಖಿನ ರಾತ್ರಿಯಲ್ಲಿ ಯಾರೋ ದುಷ್ಕ್ರಮರು ಸಾಹುಕಾರ ಮಧುರೆ ಬಸಪ್ಪನವರ ಮನೆಗೆ ಬೆಂಕಿ ಇಟ್ಟರು. ಬಸಪ್ಪನವರು ಆ ಹೊತ್ತಿಗೆ ಮನೆಯಲ್ಲಿ ಇರಲಿಲ್ಲ. ಚಿಂತಾಮಣಿ ತಾಲ್ಲೋಕಿಗೆ ಸೇರಿದ ದೊಡ್ಡಬೊಮ್ಮನಹಳ್ಳಿಗೆ ತಮ್ಮ ಮಕ್ಕಳಿಗೆ ಚೌಲೋಪನಯನ ಮಾಡಿಸುವ ಉದ್ದಿಶ್ಯ ಹೋಗಿದ್ದರು. ಇಂಥ ಹೊತ್ತಿನಲ್ಲಿ ಯಾರೋ ದುಷ್ಟರು ಬೆಂಕಿ ಇಟ್ಟು ಮನೆ ಯಜ್ಞೇಶ್ವರನ ಪಾಲುಮಾಡಿದರು ಬೃಹಸ್ಪತಿವಾರ ಬೆಳಿಗ್ಯೆ ನಾಲ್ಕುವರೆ ಘಂಟೆಗೆ ಪೋಲೀಸ್ ಕಾನ್ಸ್ಟೇಬಲ್ ಸಾಬ್ಜಿಸಾಬಿಯವರು ಜನಗಳಿಗೆ ಇಂಥವರ ಮನೆಯಲ್ಲಿ ಹೊಗೆ ಹಾಯುತ್ತಲಿವೆ ಎಂತ ತಿಳಿಸಿದರು. ಕೂಡಲೇ ಮುನಿಸಿಪಾಲಿಟಿ ದಫೇದಾರ ಬ್ಯಾಟಪ್ಪ ತಮ್ಮ ಕೈಕೆಳಗಿನ ಚಾಡ್ಕಾಲಿ ಸಿಬ್ಬಂದಿಯನ್ನೂ ಸಾಹುಕಾರ ಮಾಹವೀಪೋದ್ದೀನ್ ಸಾಹೇಬರು ಸುಮಾರು ೨೦—೩೦ ಮಾದಿಗರನ್ನೂ ಪೋಲೀಸ್ ದಫೇದಾರರು ನಾಲ್ಕು ಮಂದಿ ಪೋಲೀಸಿನವರನ್ನೂ ಕರಕೊಂಡು ಬಂದು ಮನೆಗೆ ಹತ್ತಿದ ಬೆಂಕಿಯನ್ನು ನೀರು ಹಣಿಸುವದರಿಂದಲೂ ಪಿಕಾಸಿಗಳಿಂದ ಮಣ್ಣು ಅಗಿದು ಹಾಕುವದರಿಂದಲೂ ೩—೪ ಘಂಟೆಯೊಳಗಾಗಿ ಯಜ್ಞೇಶ್ವರನನ್ನು ತಣ್ಣಗೆ ಮಾಡಿದರು ಇಷ್ಟೇ ಜನಗಳಿಂದ ಮಾತ್ರವಲ್ಲ; ಸುಡುವ ಮನೆಯನ್ನು ನೋಡಲಿಕ್ಕೆ ಬಂದ ನೂರಾರು ಜನರು ಸಂಸಾರಿಗಳು ನಗರಕರಪೇಟೆಯವರೂ ಬಸಪ್ಪನವರ ವಾರಸುದಾರರೂ ಎಲ್ಲರೂ ಸೇರಿ ಬೆಂಕಿಯನ್ನು ಆರಿಸಿಬಿಟ್ಟರು ಇಷ್ಟು ಜನಗಳು ಸೇರಿ ಬೆಂಕಿಯನ್ನು ಆರಿಸದಿದ್ದರೆ ಹತ್ತಿರಿರುವ ಮೂರು ನಾಲ್ಕು ಮನೆಗಳು ಅಗ್ನಿಗೆ ಆಹುತಿಯಾಗುತ್ತಿದ್ದವು. ಸಾಹುಕಾರ ಬಸಪ್ಪನವರಿಗೆ ಸರಾಸರಿ ೩೦ ಅಂಕಣಗಳುಳ್ಳ ಮನೆ ಸುಟ್ಟದ್ದರಿಂದ ಸುಮಾರು ೧,೦೦೦ ರೂಪಾಯಿ ನಷ್ಟವಾಯಿತು ಎಂತ ಅಭಿಪ್ರಾಯಪಡುತ್ತಾರೆ.—ಇದೇ ಊರಮುಂದಿರುವ ಸಲ್ಲಾಪುರದ ದೇವಸ್ಥಾನದ ಎದುರಿಗೆ ನೆರೆಯುವ ಸಂತೆಯ ಸ್ಥಳದಲ್ಲಿ ಮಾರಾಟಕ್ಕೆ ಕೂತಿರುವ ಜನಗಳು ಎರಡೇ ಪಂಗ್ತಿಯಾಗಿ ಕೂತರೆ ಸಾಲುತ್ತದೆ. ಈ ಸ್ಥಳದಲ್ಲಿ ಮೂರು ಸಾಲಾಗಿ ಜನಗಳು ಕೂತ್ರುವದರಿಂದ ಜಾಗಾ [illegible] ಹೋಗಿಬರುವ ಜನರಿಗೆ ಕೊಳ್ಳುವವರಿಗೆ ಬಹು ಕಷ್ಟವಾಗಿದೆ. ಕಾಲಿಡಲಿಕ್ಕೆ ಸ್ಥಳವಿಲ್ಲದಂತಾಗಿ ಮಹೋತ್ಸಾಹದಿಂದ ಒಬ್ಬರನ್ನೊಬ್ಬರು ತಳ್ಳಿಸುತ್ತಾ ಹೋಗುವದೂ ಬರುವದೂ ಆಗುತ್ತದೆ. ಕೆಲವು ಸಲ ಜನರು ಒಬ್ಬರಮೇಲೊಬ್ಬರು ಬೀಳುತ್ತಾ ಏಳುತ್ತಾ ಕೂತಿರುವವರನ್ನು ಕಾಲಲ್ಲಿ ತುಳಿಯುತ್ತಾ ಹೋಗುವದುಂಟು. ಒಬ್ಬರನ್ನೊಬ್ಬರು ನುಗ್ಗಿ ಬಲಾತ್ಕಾರದಿಂದ ಸ್ಥಳ ಮಾಡಿಕೊಂಡು ಹೋಗಬೇಕಾಗುತ್ತದೆ. ಇದನ್ನು ಮುನ್ಸಿಪಲ್ ಅಮಲ್ದಾರ್ ಸಾಹೇಬರವರು ಪರಾಂಬರಿಸಿ ನೋಡಿ ಸರಿಮಾಡುವರೆಂತ ಕೋರುತ್ತೇನೆ. ಊರು ಪಾಹರೆಯ ಕೆಲಸ ಸರಿಯಾಗಿ ನಡಿಯುತ್ತದೆ. ರಾತ್ರಿಯಲ್ಲಿ ಪೋಲೀಸಿನವರು ಊರಲ್ಲೆಲ್ಲಾ ಗಸ್ತಿ (ಬೀಟ್) ತಿರಗುತ್ತಾ ಜನಗಳನ್ನು ಎಚ್ಚರಿಸುತ್ತಾ ಇದ್ದಾರೆ.

## ಸರ್ವಿಯ ರಾಜ್ಯದ ದಂಗೆ.

ಕಳೆದ ೧೧ನೇ ತಾರೀಖು ಬೃಹಸ್ಪತಿವಾರ ಮಧ್ಯರಾತ್ರಿ ಕಾಲದಲ್ಲಿ ಸರ್ವಿಯ ರಾಜ್ಯದ ಸಂಸ್ಥಾನವಾದ ಬೆಲ್‌ಗ್ರೇಡ್ ಎಂಬ ನಗರದಲ್ಲಿ ಅತ್ಯಂತ ಭಯಂಕರವಾದ ಒಂದು ಕೊಲೆಯು ನಡೆಯಿತು. ಇದರಷ್ಟು ಘೋರವಾದ ಕೊಲೆಯು ಇದುವರಿವಿಗೂ ಎಲ್ಲಿಯೂ ನಡೆಯಲಿಲ್ಲವೆಂದು ತಿಳಿದು ಬಂದಿದೆ. ಈ ಕೊಲೆಯ ವೃತ್ತಾಂತವು ಇನ್ನೂ ವಿಸ್ತಾರವಾಗಿ ಗೊತ್ತಾಗಿಲ್ಲ ಈಗ ತಿಳಿದ ಮಟ್ಟಿಗೆ ನಡೆದ ಸಂಗತಿಯು ಏನಂದರೆ—ಸೈನ್ಯಕ್ಕೆ ಸೇರಿದ ಕೆಲವು ಮಂದಿ ಉದ್ಯೋಗದಾರರು ಅರಮನೆಯೊಳಕ್ಕೆ ನುಗ್ಗಿ, ಪಹರೆಯವರನ್ನು ನಿರ್ಯುಧಪಾಣಿಗಳಾಗಮಾಡಿ ರಾಜನಾದ ಅಲೆಕ್ಸಾಂಡ್ರನನ್ನು ಕುರಿತು ಸಿಂಹಾಸನವನ್ನು ತಾನಾಗಿ ಬಿಟ್ಟು ಹೊರಟುಹೋಗಬೇಕೆಂದು ಕೇಳಿದರು. ಅದಕ್ಕಾತನು ಒಪ್ಪದೆಹೋಗಲು ಆ ಉದ್ಯೋಗದಾರರು ಆತನನ್ನು ಅಲ್ಲೇ ಗುಂಡಿನಿಂದ ಹೊಡೆದು ಕೊಂದುಹಾಕಿದರು ತರುವಾಯ ಆತನ ರಾಣಿಯಾದ ಡ್ರೇಗಾ ಎಂಬವಳನ್ನೂ ಆಕೆಯ ಇಬ್ಬರು ಸಹೋದರರನ್ನೂ, ರಾಜ್ಯದ ಪ್ರಧಾನಿ, ಯುದ್ಧ ವಿಚಾರದ ಮಂತ್ರಿ, ನಾಲ್ಕು ಮಂದಿ ಆಫೀಸರುಗಳು ಇವರನ್ನೂ ಕೊಂದುಹಾಕಿದರು. ಸೈನ್ಯಾಧಿಪತಿಗಳಲ್ಲೊಬ್ಬನನ್ನೂ ಒಬ್ಬ ಮಂತ್ರಿಯನ್ನೂ ಗಾಯಮಾಡಿದರು.

ಈ ಅಲೆಕ್ಸಾಂಡ್ರನೆಂಬ ದೊರೆಯು ೧೮೭೬ ರಲ್ಲಿ ಹುಟ್ಟಿದನು ಈತನ ತಂದೆ ತಾಯಿಗಳು ಮಿಲಾನ್ ದೊರೆಯೂ ನಟಲಿ ರಾಣಿಯೂ, ವೈಷಮ್ಯದಿಂದ ಪ್ರತ್ಯೇಕರಾಗಲು ರಾಣಿಯು ತನ್ನ ಮಗನಾದ ಈ ಅಲೆಕ್ಸಾಂಡ್ರನನ್ನು ಕರೆದುಕೊಂಡು ಹೊರಟುಹೋಗುತ್ತಿದ್ದಳು ಆದರೆ ರಾಜನು ಅವರನ್ನು ದಾರಿಯಲ್ಲಿ ಅಡ್ಡಗಟ್ಟಿ, ರಾಜಕುಮಾರನನ್ನು ಹಿಡಿತರಿಸಿದನು. ತರುವಾಯ ೧೮೮೯ ರಲ್ಲಿ ಮಿಲಾನ್ ದೊರೆಯು ಸಿಂಹಾಸನವನ್ನು ತಾನಾಗಿ ಬಿಟ್ಟು ತನ್ನ ಕುಮಾರನನ್ನೇ ಉತ್ತರಾಧಿಕಾರಿಯನ್ನಾಗಿ ನೇಮಿಸಿದನು ಆಗ ರಾಜಕುಮಾರನು ಚಿಕ್ಕವನಾಗಿದ್ದದರಿಂದ ಆತನಿಗೆ ೧೮ ವರ್ಷವು ತುಂಬುವ ತನಕ ಒಂದು ರೀಜೆನ್ಸಿಯನ್ನು ಸ್ಥಾಪಿಸಿದನು. ಹೀಗಿರಲಾಗಿ ಅಲೆಕ್ಸಾಂಡರ್ ರಾಜಕುಮಾರನಿಗೆ ೧೬ ವರ್ಷವಾಗಲು ಅವನು ಒಂದು ಸೈನ್ಯದ ಸಹಾಯವನ್ನು ಪಡೆದು ತನಗೆ ರೀಜಂಟುಗಳಾಗಿದ್ದವರನ್ನೆಲ್ಲಾ ಕೆಲಸದಿಂದ ನಿವೃತ್ತಿ ಮಾಡಿ ತಾನೇ ಸರ್ವಾಧಿಕಾರಿಯಾಗಿ ತನ್ನ ಕೈಕೆಳಗೆ ತನಗನುಕೂಲರಾದ ಮಂತ್ರಿಗಳನ್ನೇ ನೇಮಿಸಿಕೊಂಡನು. ಇದೆಲ್ಲಾ ೧೮೯೩ ರಲ್ಲಿ ಬಹು ಅಕಸ್ಮಾತ್ತಾಗಿ ನಡೆಯಿತು. ರಾಜಕುಮಾರನ ಈ ನಡವಳಿಕೆಯು ಪ್ರಜೆಗಳೆಲ್ಲರಿಗೆ ಬಹು ಸಮ್ಮತವಾಗಿದ್ದದರಿಂದ ಕೆಲವು ಕಾಲದವರೆಗೂ ರಾಜಕುಮಾರನು ಪ್ರಜಾನುರಾಗವನ್ನು ಸಂಪೂರ್ಣವಾಗಿ ಸಂಪಾದಿಸಿಕೊಂಡನು. ತರುವಾಯ ಅಲೆಕ್ಸಾಂಡರ್ ದೊರೆಯು ತಂದೆತಾಯಿಗಳಿಗೆ ಪೂರ್ವದ ರಾಜಮರ್ಯಾದೆಗಳನ್ನೆಲ್ಲಾ ಕೊಡಿಸಿ ಸರ್ವಿಯಾ ದೇಶಕ್ಕೆ ಕರೆಯಿಸಿಕೊಂಡು ೧೮೯೭ ರಲ್ಲಿ ತಂದೆಯನ್ನು ಸರ್ವಸೇನಾಪತಿಯಾಗಿ ಮಾಡಿಕೊಂಡನು. ಸೇನಾಪತಿಯಾಗಿದ್ದರೂ ಆತನೇ ದೇಶಕ್ಕೆಲ್ಲಾ ನಿಜವಾದ ದೊರೆಯೆಂದು ಜನರೆಲ್ಲಾ ತಿಳಿದಿದ್ದರು. ಹೀಗೆ ಎರಡು ಮೂರು ವರ್ಷಗಳು ನಡೆದ ತರುವಾಯ ಅಲೆಕ್ಸಾಂಡರ್ ದೊರೆಯು ತನ್ನ ತಂದೆ ತಾಯಿಗಳ ಮಾತನ್ನಾದರೂ ಮಂತ್ರಿಗಳ ಆಲೋಚನೆಯನ್ನಾದರೂ ಲಕ್ಷ್ಯಮಾಡದೆ, ತನಗಿಂತ ಎರಡರಷ್ಟು ವಯಸ್ಸಿನವಳಾದ ಒಬ್ಬ ಶ್ರೀಮಂತಳನ್ನು ವಿವಾಹ ಮಾಡಿಕೊಂಡನು. ಇವಳು ನಟಲಿ ರಾಣಿಯ ಸಮುಖದಲ್ಲಿ ಸೇವೆಮಾಡುತ್ತಿದ್ದವಳು. ವಿಧವೆಯಾಗಿಯೂ ಇದ್ದಳು. ಇಂಥ ಅವಿವೇಕವಾದ ಕಾರ್ಯವನ್ನು ಮಾಡಿದುದರಿಂದ ದೊರೆಯು ಪ್ರಜೆಗಳ ಪ್ರೀತಿಯನ್ನು ಕಳಕೊಂಡನು ಇದಲ್ಲದೆ ಕೆಲವು ಕಾಲದ ಹಿಂದೆ ರಾಣಿಯು ಗರ್ಭಿಣಿಯಾಗಿದ್ದಾಳೆಂದೂ ಸಿಂಹಾಸನಕ್ಕೆ ಅರ್ಹನಾದ ರಾಜಪುತ್ರನೊಬ್ಬನು ಹುಟ್ಟುವದಕ್ಕಿದ್ದಾನೆಂದೂ ಸುಳ್ಳು ಸುದ್ದಿಯನ್ನು ಹಬ್ಬಿಸಿದ ಕಾರಣ ರಾಜನೂ ರಾಣಿಯೂ ಮತ್ತಷ್ಟು ಪ್ರಜೆಗಳ ಅತೃಪ್ತಿಗೆ ಪಾತ್ರರಾದರು. ಮತ್ತು ಕೊಲ್ಲಲ್ಪಟ್ಟ ರಾಣಿಯಾದ ಡ್ರೇಗಾ ಎಂಬಾಕೆಯು ತಾನು ಅಪುತ್ರವತಿಯಾಗಿದ್ದ ಕಾರಣ ತನ್ನ ತಮ್ಮನನ್ನೇ ಯುವರಾಜನನ್ನಾಗಿ ಮಾಡಿಕೊಳ್ಳ ಬೇಕೆಂದು ಘಟಾರಿ ಮಾಡಿ, ಇದನ್ನು ಒಪ್ಪುವಂಥಾ ಮೆಂಬರುಗಳನ್ನೇ ಪಾರ್ಲಿಮೆಂಟಿಗೆ ನೇಮಿಸಿದಳಂತೆ. ಇದರಿಂದಲೂ ಪ್ರಜೆಗಳ ಮತ್ತು ಅಧಿಕಾರಿಗಳ ಅಪ್ರೀತಿಯು ಹೆಚ್ಚಿ ಈ ಘೋರಕೃತ್ಯ ನಡೆಯಲು ಕಾರಣವಾಯಿತೆಂದು ಹೇಳುತ್ತಾರೆ. ಇಷ್ಟೇ ಅಲ್ಲ. ದೇಶದಲ್ಲಿ ತಿದ್ದುಪಾಟಾಗ ಬೇಕೆಂಬ ಪಕ್ಷಕ್ಕೆ ಸೇರಿದ ಮಂತ್ರಿಗಳನ್ನು ನಿವೃತ್ತಿ ಮಾಡಿಕೊಳ್ಳ ಬೇಕೆಂಬ ಉದ್ದೇಶದಿಂದ ರಾಜನು ಕಳೆದ ಏಪ್ರಿಲ್ ತಿಂಗಳಲ್ಲಿ ಮಂತ್ರಾಲೋಚನಾ ಸಭೆಯನ್ನು ಕೆಲವು ನಿಮಿಷಗಳ ವರೆಗೂ ರದ್ದುಮಾಡಿ, ಹಳೇ ಮಂತ್ರಿಗಳನ್ನೆಲ್ಲಾ ಕೆಲಸದಿಂದ ತೆಗೆದುಹಾಕಿ ತನ್ನ ಇಷ್ಟಕ್ಕೆ ಅನುಕೂಲರಾದ ಹೊಸ ಮಂತ್ರಿಗಳನ್ನು ನೇಮಿಸಿದನು. ಈ ಪ್ರಕಾರ ದೊರೆಯು ನಡಸಿದ ನಿರಂಕುಶ ಕಾರ್ಯವನ್ನು ಪ್ರಜೆಗಳು ಒಪ್ಪದೆ ಕೇವಲ ಕೋಪೋದ್ರಿಕ್ತರಾದರು.

ಅವರ ಕೋಪಕ್ಕೆ ಎಷ್ಟು ಪ್ರಬಲವಾದ ಕಾರಣವಿದ್ದರೂ ಕಳೆದ ಬೃಹಸ್ಪತಿವಾರ ನಡೆದ ಈ ಘೋರವಾದ ಕೃತ್ಯಕ್ಕೆ ಯಾರೂ ಒಪ್ಪಲಾರರು. ಇಂಥ ಮಹಾ ಪಾತಕಕೃತ್ಯವನ್ನು ಮಾಡಿದವರು ಕೊಲೆಪಾತಕರೇ ಸರಿ; ಅವರಿಗೆ ದಂಡನೆಯನ್ನು ವಿಧಿಸುವದು ಸರ್ವಪ್ರಕಾರದಲ್ಲೂ ಯೋಗ್ಯವೆಂದೇ ತಿಳಿಯತಕ್ಕದ್ದು. ಆದರೆ. ಈಗ ಈ ಕೊಲೆಗಾರರನ್ನು ಹಿಡಿದು ವಿಚಾರಿಸತಕ್ಕ ಮಹಾ ಕಾರ್ಯವನ್ನು ಧೈರ್ಯದಿಂದ ನಡಸುವವರು ಯಾರು? ಇದೀಗ ಮಹಾ ಕಷ್ಟವಾದ ಕೆಲಸ. ಹೊಸದಾಗಿ ಅಧಿಕಾರವನ್ನು ವಹಿಸುವ ಮಂತ್ರಿಗಳು ತಾವೇ ಕೊಲೆಗಾರರೆಂದು ಹೇಳಿ ಅಪರಾಧವನ್ನು ಹೊತ್ತುಕೊಂಡು ಮರಣ ದಂಡನೆಯನ್ನು ವಿಧಿಸಿಕೊಳ್ಳುವರೇ? ಜನಗಳಾದರೋ ಇಂದಿಗೆ ನಿರಂಕುಶ ಪ್ರಭುಗಳ ಹಿಂಸೆ ತೊಲಗಿತು ಎಂದು ಆನಂದಪಡುವವರಾಗಿರುವಲ್ಲಿ ಅಪರಾಧಿಗಳನ್ನು ಹಿಡುಕೊಡಲಾರರು. ಈಗ ಯಾವ ಪರರಾಜ್ಯವು ತಾನೇ ಈ ಕಾರ್ಯದಲ್ಲಿ ಕೈಹಾಕಬೇಕು ? ಎಂಬ ವಿಚಾರವು ಪ್ರಬಲವಾಗಿದೆ. ಸರ್ವಿಯಕ್ಕೆ ಅತ್ಯಂತ ಸಮೀಪವಾಗಿಯೂ, ಆ ರಾಜ್ಯದ ವೃದ್ಧಿ ಕ್ಷಯಗಳಲ್ಲಿ ಹಿತಚಿಂತಕರಾಗಿಯೂ ಇರುವ ರಾಜ್ಯಗಳವರು ಇಬ್ಬರಿದ್ದಾರೆ. ಅವರು ಯಾರಂದರೆ—ಆಸ್ಟ್ರಿಯಾ, ರಷ್ಯಾ ರಾಜ್ಯಗಳವರೇ. ಇವರಲ್ಲಿ ಒಬ್ಬರು ಮತ್ತೊಬ್ಬರಿಗಿಂತ ತಾವೇ ಸರ್ವಿಯದಲ್ಲಿ ಮುಖಂಡರಾಗಿರಬೇಕೆಂದು ಕುತೂಹಲಭರಿತರಾಗಿರುತ್ತಾರೆ ಹೀಗಿರುವಲ್ಲಿ ಈ ಕಾರ್ಯಕ್ಕೆ ಉಭಯರೂ ಸೇರಬೇಕು, ಅಥವಾ ಉಭಯರೂ ಪ್ರತ್ಯೇಕವಾಗಿರಬೇಕು ಮುಂದೆ ರಾಜ್ಯಭಾರವನ್ನು ವಹಿಸುವದಕ್ಕೆ ಬರುವವರು ಈ ಕೊಲೆಗೆ ಯಾವ ವಿಧದಲ್ಲಾದರೂ ಸಂಬಂಧಪಟ್ಟವರಾಗಿರಬಾರದು ಎಂದು ಲಂಡನ್ ಪಟ್ಟಣದ ವರ್ತಮಾನ ಪತ್ರಿಕರ್ತರೆಲ್ಲಾ ಹೇಳುತ್ತಿರುವರು.

ಪ್ರಕೃತದಲ್ಲಿ ರಾಜ್ಯ ಕಾರ್ಯವನ್ನು ವಹಿಸಿರುವ ಮಂತ್ರಿಗಳು ಇದೆ ತಿಂಗಳು ೧೫ಕ್ಕೆ ಸರ್ವ ಪ್ರಜೆಗಳೂ ಕೂಡಿ ಸಭೆಮಾಡಬೇಕೆಂದು ಘಾಯಿಷ್ ಮಾಡಿದ್ದರು ಆ ಕೂಟದಲ್ಲಿ ಪೀಟರ್ ಕರಾಜಾರ್ಜೇವಿಚ್ ಎಂಬವನನ್ನೇ ಮುಂದಣ ರಾಜನಾಗಿ ಆರಿಸಿಕೊಳ್ಳುವರೆಂಬ ಪ್ರವಾದವಿದೆ ಈತನು ಈಗ ಜೇನಿವ ನಗರದಲ್ಲಿ ವಾಸಿಸುತ್ತಿದ್ದಾನೆ ಈತನ ಮಗನು ರಷ್ಯಾ ಚಕ್ರವರ್ತಿಗಳ ಆಸ್ಥಾನದಲ್ಲಿ ಬೆಳದವನು. ಈತನಿಗೂ ಸರ್ವಿಯ ರಾಜ್ಯದ ಬಿಡತನಕ್ಕೂ ಯಾವ ಸಂಬಂಧವಿದೆಯೆಂಬುದು ಮುಂದಣ ವೃತ್ತಾಂತದಿಂದ ಗೊತ್ತಾಗುವದು. ಈತನ ತಾತನಾದ ಕರಾಜಾರ್ಜೇವಿಚ್ಚನು ತುರ್ಕಿ ಸೀಮೆಗೆ ಅಧೀನರಾಗಿದ್ದ ಸರ್ವಿಯದವರನ್ನು ಕಟ್ಟಿಕೊಂಡು ದಂಗೆಯೆದ್ದು ಕೆಲವು ಯುದ್ಧಗಳಲ್ಲಿ ಜಯವನ್ನು ಪಡೆದನು. ಆದರೆ ೧೮೧೭ರಲ್ಲಿ ಮೈಲೋಷ್ ಒಬ್ರಿನೋವಿಚ್ಚನೆಂಬ ರೈತಮುಖಂಡನೊಬ್ಬನು ಪ್ರಬಲನಾಗಿ ಕರಾಜಾರ್ಜೇವಿಚ್ಚನನ್ನು ಕೊಂದು ಸರ್ವಿಯದವರಿಗೆ ಸ್ವಾತಂತ್ರ್ಯವನ್ನು ಸಂಪಾದಿಸಿಕೊಟ್ಟು ೧೮೩೦ ರಲ್ಲಿ ತಾನೇ ರಾಜನಾದನು. ಹೀಗಿರಲು ೧೮೪೨ ರಲ್ಲಿ ಕರಾಜಾರ್ಜೇವಿಚ್ಚನ ಮಗನಾದ ಅಲೆಕ್ಸಾಂಡರ್ ಕರಾಜಾರ್ಜೇವಿಚ್ಚನು ಮೈಲೋಷನನ್ನು ಓಡಿಸಿ ರಾಜನಾದನು. ೧೮೫೯ ರಲ್ಲಿ ಇವನು ಸ್ಥಾನಭ್ರಷ್ಟತೆಯನ್ನು ಹೊಂದಲು ಮುದುಕನಾದ ಮೈಲೋಷನೇ ಪುನಃ ಸಿಂಹಾಸನಕ್ಕೆ ಬಂದನು ಇವನ ಮಗನು ಮೈಕಲನು ಉತ್ತರೋತ್ತರ ಅಧಿಕಾರಿಯಾಗಿ ೧೮೬೮ನೇ ವರ್ಷದ ವರೆಗೂ ಆಳಿದನು ಆಗ್ಯೆ ಅಲೆಕ್ಸಾಂಡರ್ ಕರಾಜಾರ್ಜೇವಿಚ್ಚನ ಪ್ರೇರಣೆಯಿಂದ ಘಾತುಕರು ಮೈಕಲನನ್ನು ಕೊಂದರು. ತರುವಾಯ ಅವನ ಜ್ಞಾತಿಯಾದಂಥ ದುಷ್ಟನಾದ ಮಿಲಾನನು ದೊರೆಯಾಗಿ ಮೇಲೆ ಹೇಳಿರುವ ಪ್ರಕಾರ ೧೮೮೯ನೇ ವರ್ಷದ ಮಟ್ಟಿಗೂ ರಾಜ್ಯವಾಳಿ ಸಿಂಹಾಸನವನ್ನು ಮಗನಿಗೆ ಒಪ್ಪಿಸಿಕೊಟ್ಟನು. ಹೀಗೆ ತುರ್ಕಿ ರಾಜ್ಯದ ಅಧೀನದಿಂದ ತಪ್ಪಿಸಿಕೊಂಡ ಸರ್ವಿಯ ದೇಶದಲ್ಲಿ ಕಳೆದ ನೂರು ವರ್ಷಗಳಿಂದ ಪರಸ್ಪರ ವಿರೋಧಿಗಳಾದ ಎರಡು ಅರಸು ಮನೆತನದವರು ಕಾರ್ಯಭಾಗವನ್ನು ನಡಸುತ್ತಾ ಬಂದಿದ್ದಾರೆ ಯಾರಂದರೆ—ಒಬ್ರಿನೋವಿಚ್ ಮನೆತನದವರು—ಈಗ ಕೊಲ್ಲಲ್ಪಟ್ಟಿರುವ ಅಲೆಕ್ಸಾಂಡ್ರನೇ ಈ ಮನೆತನದವನು ಮತ್ತೊಂದು ಮನೆತನ ಕರಾಜಾರ್ಜೇವಿಚ್ ಎಂಬುದು. ಇದಕ್ಕೆ ಸೇರಿದ ಪೀಟರನೇ ಮುಂದೆ ಸಿಂಹಾಸನಾಧಿಪನಾಗುವನೆಂದು ಪ್ರವಾದವಿದೆ.

## ಇಂಡಿಯಾ ದೇಶದ ವೃತ್ತಾಂತಗಳು.

ಅಲಿಪಡದಲ್ಲಿ ಕಳೆದ ವಾರ ಬೆಂಕಿ ಬಿದ್ದು ಕೆಲವು ಮನೆಗಳು ಸಾಮಾನು ಸಹಿತ ಸುಟ್ಟು ಹೋದವು. ಆರು ಜನರು ಬೆಂಕಿಗೆ ಸಿಕ್ಕಿ ಮೃತಪಟ್ಟರು ಬಹಳ ಆಸ್ತಿ ನಷ್ಟವಾಗಿದೆ.

••••

ರಾವಲ್‌ಪಿಂಡಿ ನಗರದಲ್ಲಿ ಇಂಗ್ಲಿಷ್ ಸೈನಿಕರಿಗೋಸ್ಕರ ಲೈನ್ ಮನೆಗಳನ್ನು ಕಟ್ಟಿಸಬೇಕೆಂದು ಇಂಡಿಯಾ ಗವರ್ನಮೆಂಟಿನವರು ೧,೧೬,೩೯೮ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ

••••

ವಾಯವ್ಯ ಪ್ರಾಂತ್ಯಕ್ಕೆ ಸೇರಿದ ಬಂಜಾರ್ ಎಂಬ ಪಟ್ಟಣದಲ್ಲಿ ಗೋಕಾಯಿಗಳ ಸಂತೆ ನಡಿಯಿತು ಅಲ್ಲಿ ೧೨,೦೦೦ಗೋಕಾಯಿಗಳು ೫೦,೦೦೦ ರೂಪಾಯಿಗೆ ಬಿಕರಿ ಆಗಿರುತ್ತವೆ.

••••

ಕೊಲ್ಹಾಪುರದ ಛತ್ರಪತಿ ಮಹಾರಾಜರವರು ಸುಮಾರು ೪೦ ಮಂದಿ ಪರಿವಾರದವರ ಸಹಿತ ಕಳೆದ ವಾರ ಬೊಂಬಾಯಿಗೆ ಬಂದಿದ್ದರು. ಇವರು ಇನ್ನು ಒಂದು ವಾರ ಅಲ್ಲಿ ಇರಬಹುದೆಂದು ಹೇಳುತ್ತಾರೆ.

••••

ತಿರುವಾಂಕೂರು ಸಂಸ್ಥಾನದ ಸೆನ್ಸಸ್ (ಖಾನೇಷುಮಾರಿ) ಲೆಕ್ಕಗಳನ್ನು ಬಹಳ ಚನ್ನಾಗಿ ಬರೆದು ಇರುವ ಮ॥ ಸುಬ್ರಹ್ಮಣ್ಯ ಅಯ್ಯರಿಗೆ ಮಹಾರಾಜರವರು ೨,೦೦೦ ರೂ. ಇನಾಮು ದಯಪಾಲಿಸಿರುತ್ತಾರೆ.

••••

ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್ ರವರು ಪತ್ನಿ ಸಹಿತ ಈ ವರುಷದ ಅಂತ್ಯಭಾಗದಲ್ಲಿ ಹಿಂದುಸ್ಥಾನಕ್ಕೆ

ವಯಮಾಡುವದಿಲ್ಲವೆಂತಲೂ, ಮುಂದಿನ ವರುಷ ಬರುತ್ತಾರೆಂತಲೂ ತಿಳಿದುಬರುವದು.

◆◆◆◆

ಬೊಂಬಾಯಿ ಪಟ್ಟಣದಲ್ಲಿ ಹಿಂದಿನ ವಾರ ಹೊಸದಾಗಿ ಕಟ್ಟುತ್ತಿದ್ದ ದೊಡ್ಡ ಬಂಗಲೆಯು ಅನಾಮತ್ತಾಗಿ ಬಿದ್ದುಕೊಂಡಿತು. ಇಬ್ಬರು ಸೋಜರುಗಳೂ, ಇಬ್ಬರು ಹಿಂದುಗಳೂ ಕೊಲ್ಲಲ್ಪಟ್ಟರು. ಇನ್ನು ಮೂರು ಮಂದಿಗೆ ಗಾಯಗಳಾಗಿ ಆಸ್ಪತ್ರೆಯಲ್ಲಿ ಬಿದ್ದುಕೊಂಡಿದಾರೆ.

◆◆◆◆

ಅಯೋಧ್ಯೆಯ ತಾಲ್ಲೂಕುದಾರ್ರಲ್ಲಿ ಬಹಳ ಮುಖಂಡರೆನಿಸಿಕೊಂಡಿದ್ದ ರಾಜಾ ಸರ್ ಅಮೀರ್ ಹಸನ್‌ಖಾನ್ ಬಹದೂರ್, ಕೆ. ಸಿ. ಐ. ಇ. ಯವರು ಕಳೆದ ವಾರ ಸೀತಾಪುರದಲ್ಲಿ ಕಾಲವಾದರೆಂದು ವರ್ತಮಾನ ಬಂದಿದೆ. ಇವರು ಪ್ರಜೆಗಳ ಗೌರವವನ್ನೂ ಪ್ರೀತಿಯನ್ನೂ ಬಹಳವಾಗಿ ಸಂಪಾದಿಸಿಕೊಂಡಿದ್ದರು.

◆◆◆◆

ಸಿಲೋನ್ ದ್ವೀಪದ ಮುಖ್ಯ ಪಟ್ಟಣವಾದ ಕೊಲೊಂಬೊ ನಗರದಲ್ಲಿ ಗತಿಸಿದ ವಿಕ್ಟೋರಿಯಾ ಮಹಾರಾಜ್ಞೀಯವರ ಹೆಸರಿನ ಮೇಲೆ ಒಂದು ಭಾರೀ ಆಸ್ಪತ್ರೆಯನ್ನು ಕಟ್ಟುವರು. ಅದರಲ್ಲಿ ನೇತ್ರವೈದ್ಯ ಚಿಕಿತ್ಸೆಯನ್ನು ಮಾತ್ರ ಮಾಡುವರು. ಗವರ್ನರರವರ ಪತ್ನೀಯವರು ಈ ಕಟ್ಟಡಕ್ಕೆ ಅಸ್ತಿಭಾರ ಹಾಕುವವರಾಗಿದಾರೆ.

◆◆◆◆

ಬಳ್ಳಾರಿಯಲ್ಲಿದ್ದ ಬೋಅರ್ ಕ್ಯಾಂಪುಗಳನ್ನು ಯಾರೋ ಸುಟ್ಟುಹಾಕಿದರೆಂದು ಸಮಾಚಾರ ಬಂದಿತ್ತಷ್ಟೆ. ಈಚೆಗೆ ಈ ವಿಷಯವನ್ನು ಸರ್ಕಾರದವರು ತನಿಖೆಮಾಡಿಸಿದರು. ಆ ಬೋಅರ್ ಖೈದಿಗಳ ಮೇಲೆ ಉಸ್ತುವಾರಿಗಾಗಿ ನೇಮಿಸಲ್ಪಟ್ಟಿದ್ದ ಇಂಗ್ಲಿಷ್ ಸೈನಿಕರಲ್ಲಿ ಯಾರೋ ಆ ಜೋಪಡಿಗಳಿಗೆ ಬೆಂಕಿ ಹಾಕಿರುತ್ತಾರೆಂದು ತಿಳಿದುಬಂದಿದೆ.

◆◆◆◆

ಉತ್ತರದೇಶದಲ್ಲಿ ಕ್ಷಾಮ ಬಾಧೆಯು ಕಡಿಮೆಯಾಗುತ್ತಾ ಬಂದಿದೆ. ಮಧ್ಯ ಪ್ರಾಂತ್ಯಗಳಲ್ಲಿ ಹಿಂದಿನ ವಾರ ೫೮,೩೭೩ ಮಂದಿ ಸರ್ಕಾರದವರ ಪೋಷಣೆಯಲ್ಲಿದ್ದರು. ಈ ವಾರ ಈ ಸಂಖ್ಯೆಯು ೪೯,೯೫೩ ಕ್ಕೆ ಇಳಿದಿರುವದು. ಮಳೆ ಆದಕೂಡಲೇ ಜನರು ರಿಲೀಫ್ ಕಾಮಗಾರಿಯನ್ನು ಬಿಟ್ಟು ಸ್ವಂತ ಗ್ರಾಮಗಳಿಗೆ ಹೋಗಿ ವ್ಯವಸಾಯ ಮುಂತಾದ ಕಾರ್ಯಗಳಲ್ಲಿ ನಿಲ್ಲುತ್ತಿದಾರೆ

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಹಿಂದುಗಳು ಈಚೆಗೆ ಒಂದು ಹೊಸ ಪದ್ಧತಿಯನ್ನು ಅನುಸರಿಸುತ್ತಿದಾರೆ. ಭಾನುವಾರವು ಕ್ರೈಸ್ತರ ದಿನವೆಂದು ಎಣಿಸಿ, ತಮ್ಮ ದೇವಸ್ಥಾನಗಳಿಗೆ ಆ ದಿನ ಹೋಗಿ ದೇವರ ಪೂಜೆ ದರುಶನ ಮುಂತಾದ್ದನ್ನು ನಡಿಸುವರು. ದೇವಸ್ಥಾನದ ಮುಖ್ಯಾಧಿಕಾರಿಗಳು ಆ ದಿನ ಗಂಟೆಗಳನ್ನು ಬಾರಿಸಿ, ಭಕ್ತಾದಿಗಳನ್ನು ದೇವಸ್ಥಾನಗಳಿಗೆ ಬರಮಾಡಿಕೊಳ್ಳುವರು. ಇದು ಹೊಸ ಪದ್ಧತಿಯೇ ಸರಿ.

◆◆◆◆

ಪೂನಾ ಪಟ್ಟಣದಲ್ಲಿರುವ ಘನವನ್ನು ಹೊಂದಿದ ಆಗಾಖಾನರುವರು ಚಕ್ರವರ್ತಿಯವರ ಕಿರೀಟಧಾರಣೆಯ ಉತ್ಸವಕ್ಕೋಸ್ಕರ ವಿಲಾಯಿತಿಗೆ ಹೋಗಿ ಬಂದರಷ್ಟೆ. ಚಕ್ರವರ್ತಿಯವರು ಅವರಿಗೆ ತಮ್ಮ ಎರಡು ಭಾರೀ ತಸ್ವೀರುಗಳನ್ನು ಇನಾಮಾಗಿ ಕಳುಹಿಸಿಕೊಟ್ಟಿದಾರೆ. ಚಕ್ರವರ್ತಿಯವರು ಅವರಿಗೆ ಈ ಸನ್ಮಾನವನ್ನು ಮಾಡಿದ್ದು ಮಹಮದೀಯ ಪ್ರಜೆಗಳಲ್ಲೆಲ್ಲಾ ತುಂಬಾ ಸಂತೋಷವನ್ನುಂಟುಮಾಡಿರುವದು.

◆◆◆◆

ಸಿಲೋನ್ (ಲಂಕಾ) ದ್ವೀಪದಲ್ಲಿ ಯೂರೋಪಿಯರು ಬಹಳ ಹಣ ಹಾಕಿಕೊಂಡು ಟೀ (ತೇಯಿಲೆ) ಸೊಪ್ಪನ್ನು ಬೆಳೆಯುತ್ತಾರೆ. ಈ ಸೊಪ್ಪಿನ ವ್ಯವಸಾಯಕ್ಕೆ ಸರ್ಕಾರದವರು ದ್ರವ್ಯ ಸಹಾಯ ಮಾಡಬೇಕೆಂದು ಪ್ಲಾಂಟರುಗಳು ಕೇಳಿಕೊಂಡಿದ್ದರು. ಈಗ ಅವರ ಕೋರಿಕೆ ನೆರವೇರುವಂತೆ ಕಾಣುವದು. ಈ ಪ್ಲಾಂಟರುಗಳಿಗೆ ಒಂದುವರೆ ಲಕ್ಷ ರೂಪಾಯಿ ಸಾಲ ಕೊಡುವಂತೆ ಗವರ್ನರವರು ಸ್ಯಾಂಕ್ಷನ್ ಮಾಡಿದಾರೆ.

◆◆◆◆

ಗೋದಾವರಿ ಪ್ರಾಂತ್ಯದಲ್ಲಿ ಚಿನ್ನ ಮೊದಲಾದ ಲೋಹಗಳನ್ನು ಭೂಮಿಯಿಂದ ತೆಗೆಯುವದಕ್ಕೆ ಭೂ ಪರಿಶೋಧನೆ ಮಾಡಬೇಕೆಂದು ನೈಜಾಮರವರು ಒಂದು ಕಂಪೆನಿಯವರಿಗೆ ಲೈಸೆನ್ಸು ಕೊಟ್ಟಿದಾರೆ. ಈ ಭಾಗದಲ್ಲಿ ವೈಸರಾಯಿಯವರೂ ರೆಸಿಡೆಂಟರೂ ನೈಜಾಮರವರು ಒಂದು ಕಂಪೆನಿಯವರಿಗೆ ಲೈಸೆನ್ಸು ಕೊಟ್ಟದ್ದು? ರೆ. ಈ ಭಾಗದಲ್ಲಿ ವೈಸರಾಯಿಯವರೂ ರೆಸಿಡೆಂಟರೂ ನೈಜಾಮರವರಿಗೆ ತುಂಬಾ ವಿಶೇಷ ಹೇಳಿದರೆಂತಲೂ ಅದರಂತೆ ನೈಜಾಮ್ರವರು ಒಪ್ಪಿಕೊಂಡರೆಂತಲೂ ಪ್ರಕಟವಾಗಿದೆ.

◆◆◆◆

ಹಿಂದುಸ್ಥಾನದ ಪೋಲೀಸ್ ಸಿಬ್ಬಂದಿಯನ್ನು ಕ್ರಮಪಡಿಸುವ ವಿಚಾರದಲ್ಲಿ ಇಂಡಿಯಾ ಗವರ್ನಮೆಂಟಿನವರು ಕೆಲವು ಮಂದಿ ಕಮಿಷನ್ ಪದ್ದಿಗಳನ್ನು ನೇಮಕಮಾಡಿದರಷ್ಟೆ. ಈ ಕಮಿಷನ್‌ದಿಗಳು ತನಿಖೆಮಾಡಿ ರಿಪೋರ್ಟು ಬರೆದಿರುತ್ತಾರೆ. ಇವರ ಅಭಿಪ್ರಾಯದಂತೆ ಪೋಲೀಸ್ ಸಿಬ್ಬಂದಿಯನ್ನು ಕ್ರಮಪಡಿಸುವದಕ್ಕೆ ಈಗಿಂತಲೂ ಗೌವರ್ನಮೆಂಟಿನವರು ವರುಷಕ್ಕೆ ೩ ಕೋಟಿ ರೂಪಾಯಿ ಜಾಸ್ತಿ ಖರ್ಚು ಮಾಡಬೇಕಾದೀತು. ಆದ್ದರಿಂದ ಅದರಲ್ಲಿ ಸದ್ಯ ಕೆಲವು ಬದಲಾವಣೆಗಳನ್ನು ಮಾತ್ರ ಮಾಡುತ್ತಾರೆಂದು ನಿರೀಕ್ಷಿಸಬಹುದಾಗಿದೆ.

◆◆◆◆

ಅಫ್ಘಾನಿಸ್ಥಾನದ ಅಮೀರ್ ಹಬಿಬುಲ್ಲಾಖಾನರವರು ಬೇಸಿಗೆ ಕಳೆಯುವದಕ್ಕೋಸ್ಕರ ಕಾಬೂಲಿನಿಂದ ಬಾಗ್‌ಬಾಲಾ ಎಂಬ ಅರಮನೆಗೆ ದಯಮಾಡಿದರು. ರಾಜಕೀಯ ವಿಚಾರಗಳನ್ನೂ ಸಿವಿಲ್, ರೆವೆನ್ಯೂ, ಕ್ರಿಮಿನಲ್, ಮಿಲಿಟರಿ, ಮೊದಲಾದ ಇಲಾಖೆಗಳ ಕಾರುಬಾರುಗಳನ್ನೂ ಸರ್ದಾರ್ ನಸ್ರುಲ್ಲಾಖಾನರೂ, ಸರ್ದಾರ್ ಮಹಮದ್ ಉಮರ್‌ಖಾನರೂ, ಸರ್ದಾರ್ ಅಮೀನುಲ್ಲಾಖಾನರೂ ಕಾಬೂಲಿನಲ್ಲೇ ಇದ್ದುಕೊಂಡು ತೀರ್ಮಾನ ಮಾಡುವರು. ಇವರ ತೀರ್ಮಾನದ ಮೇಲೆ ಅಪೀಲ್ ಆಗತಕ್ಕವುಗಳನ್ನು ಮಾತ್ರ ಅಮೀರರು ವಿಚಾರಣೆ ಮಾಡಿ ಇತ್ಯರ್ಥ ಪಡಿಸುವರು.

◆◆◆◆

ಕಚ್ಛವಾಡಕ್ಕೆ ಸೇರಿದ ಒಂಭಾನೊಂದು ಸಂಸ್ಥಾನದ ಪಾಲುದಾರನಾದ ದರ್ಬಾರ್ ಖಾನಾಜಾ ವಾಲಾ ಕಾಲಾ ಎಂಬಾತನು ಲಖುಸೂರಾ ಎಂಬವನನ್ನು ಕೊಂದು ಹಾಕಿದನೆಂದು ರಾಜಕೋಟೆಯಲ್ಲಿ ಕಮಿಷನ್ ವಿಚಾರಣೆ ನಡೆದು, ಕೊಲೆಯ ಅಪರಾಧವು ಆತನ ಮೇಲೆ ರುಜುವಾತಾಯಿತು. ಬೊಂಬಾಯಿ ಗವರ್ನಮೆಂಟಿನವರು ಆ ರಾಜನನ್ನು ಅಹಮದ್‌ನಗರದ ದಂಡಿನಲ್ಲಿ ಯಾವಜ್ಜೀವವೂ ಇಟ್ಟಿರಬೇಕೆಂತಲೂ, ಅಲ್ಲಿಂದ ಅಪ್ಪಣೆ ಇಲ್ಲದೆ ೫ ಮೈಲಿ ದೂರದ ಮೇಲೆ ಆತನು ಹೋಗಕೂಡದೆಂತಲೂ ಹುಕುಂ ಮಾಡಿದಾರೆ. ಅಹಮದ್‌ನಗರದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆತನನ್ನು ಇಡುವದಕ್ಕೆ ಮನೆ ಗೊತ್ತುಮಾಡುವವರಾಗಿದಾರೆ.

◆◆◆◆

ಖೈರ್‌ಪುರ ಸಂಸ್ಥಾನದ ದಿವಾನರಾಗಿದ್ದ ಖಾನ್ ಬಹದೂರ್ ಕ ಪೀರ್‌ದಾದ್ ಖಾನ್, ಸಿ. ಐ. ಇ. ಯವರು ಕಳೆದ ಭಾನುವಾರ ಖೈರ್‌ಪುರದಲ್ಲಿ ಕಾಲವಾದರೆಂದು ವರ್ತಮಾನ ಬಂದಿದೆ. ಶವವನ್ನು ಅವರ ಜನ್ಮಸ್ಥಳವಾದ ಶಿಕಾರ್‌ಪುರಕ್ಕೆ ಸಾಗಿಸಿ, ಅಲ್ಲಿ ಮರ್ಯಾದೆಗಳೊಡನೆ ದಫನಮಾಡಿದರು. ಇವರು ರೆವಿನ್ಯೂ ಇಲಾಖೆಯ ಸಣ್ಣ ನೌಕರರಾಗಿದ್ದು ಅಲ್ಲಿಂದ ಮೇಲಕ್ಕೆ ಹತ್ತಿದವರು. ಖೈರ್‌ಪುರದ ದೊರೆಯು ಕಾಲವಾದಾಗ ಸರ್ಕಾರದವರು ಇವರನ್ನು ವಜೀರ್ ಕೆಲಸಕ್ಕೆ ನೇಮಕಮಾಡಿದರು. ಇವರ ಕಾಲದಲ್ಲಿ ಅನೇಕ ಹೊಸ ಸಿಸ್ತುಗಳನ್ನು ಮಾಡಿದರು. ವಿದ್ಯಾಭಿವೃದ್ಧಿಯಾಯಿತು. ಕಸಬುಗಳ ವಿದ್ಯೆ ತುಂಬಾ ಪ್ರೋತ್ಸಾಹಿಸಲ್ಪಟ್ಟಿತು. ಪ್ರಜೆಗಳಲ್ಲೆಲ್ಲಾ ಇವರು ವಿಶೇಷವಾದ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು.

◆◆◆◆

ಬೊಂಬಾಯಿ ಪಟ್ಟಣದಲ್ಲಿ ಪ್ಲೇಗನ್ನು ಸಂಪೂರ್ಣವಾಗಿ ಅಡಗಿಸುವದಕ್ಕೆ ಅಲ್ಲಿನ ಹೆಲ್ತ್ ಆಫೀಸರು ಒಂದು ಹೊಸ ವಿಧಾನವನ್ನು ತಿಳಿಸಿದಾರೆ ಬಹಳ ಕಾಲಕಾಗಿಯೂ ಪ್ಲೇಗ್ ರೋಗದ ಪ್ರದೇಶವಾಗಿಯೂ ಇರುವಂಥಾ ಭಾಗದ ಸುಮಾರು ೩ ಲಕ್ಷ ಪ್ರಜೆಗಳನ್ನು ವಿಳಕಾಲದಲ್ಲಿ ಮನೆ ಬಿಡಿಸಿ, ಅವರನ್ನೆಲ್ಲಾ ಆರು ತಿಂಗಳ ತನಕ ಸಮುದ್ರದ ಮೇಲೆ ದೋಣಿ ಹಡಗುಗಳಲ್ಲಿ ವಾಸಿಸುವಂತೆ ಮಾಡಿ, ಅವರ ಮನೆಗಳನ್ನು ಶುದ್ಧಮಾಡಿ ಒಡೆದುಹಾಕಿ ಗಾಳಿ ಬಿಟ್ಟದ್ದರೆ ಬೇಗನೆ ಈ ಉಪದ್ರವು ಅಡಗಿಹೋದೀತು ಎಂಬದಾಗಿ ಅವರು ಸಲಹೆ ಕೊಟ್ಟಿದಾರೆ ಆ ಜನಗಳು ಸಮುದ್ರದ ಮೇಲೆ ವಾಸಮಾಡುವಾಗ್ಯೆ ಅವರಲ್ಲಿ ಯಾರಿಗಾದರೂ ರೋಗ ತಗಲಿದರೆ ಕೂಡಲೇ ಗೊತ್ತುಮಾಡಿ ಅವರನ್ನು ಪ್ರತ್ಯೇಕಿಸಿಡುವದಕ್ಕೆ ಅನುಕೂಲವಾಗುವದು. ಇದಕ್ಕೆ ಮ್ಯುನಿಸಿಪಾಲಿಟಿಯವರು ಹಣ ಒದಗಿಸುವರೋ ಏನೋ ಮುಂದೆ ನೋಡಬೇಕಾಗಿದೆ.

◆◆◆◆

ಹಿಂದೂ ಸಾಗರದಲ್ಲಿ ಮಾಲದೈವ್ ಎಂಬ ಒಂದು ಗುಂಪಿನ ದ್ವೀಪಗಳಿರುತ್ತವೆ. ಈ ದ್ವೀಪ ಸಮೂಹವನ್ನು ಒಬ್ಬ ಸುಲ್ತಾನನು ಆಳುವನು. ಅವನು ಸಿಲೋನ್ ದ್ವೀಪಕ್ಕೆ ಅಧೀನನಾಗಿ ಪ್ರತಿ ವರುಷವೂ ಅಲ್ಲಿನ ಲೆಫ್ಟಿನೆಂಟ್ ಗವರ್ನರಿಗೆ ಕಪ್ಪ ಕಾಣಿಕೆಗಳನ್ನು ತಂದುಕೊಡುವನು. ಇಂಥಾ ಸುಲ್ತಾನನು ಕಳೆದ ೧೧ ವರುಷಗಳಿಂದಲೂ ಆ ದ್ವೀಪವನ್ನು ಆಳುತ್ತಾ ಬಂದು, ಸುಮಾರು ೬ ತಿಂಗಳ ಕೆಳಗೆ ಮದುವೆ ಮಾಡಿಕೊಳ್ಳಬೇಕೆಂದು ಈಜಿಪ್ಟಿಗೆ ಹೋದನು. ಅಲ್ಲಿ ಸುಮಾರು ಒಂದು ಲಕ್ಷ ರೂಪಾಯಿತನಕ ಖರ್ಚುಮಾಡಿ, ಒಂದು ಹೆಣ್ಣನ್ನು ನೋಡಿ ಮದುವೆಯಾದನು. ವಿವಾಹ ಮಾಡಿಕೊಂಡು ಪತ್ನಿಸಹಿತ ವಾಪಸು ಮಾಲದೈವ್ ದ್ವೀಪಕ್ಕೆ ಬಂದು ನೋಡುವಲ್ಲಿ ಅಲ್ಲಿ ಇವನ ಒಬ್ಬ ಸಂಬಂಧಿ (ಸಂಸುದ್ದೀನ್ ಎಂಬಾತನು) ಸಿಂಹಾಸನವನ್ನು ಆಕ್ರಮಿಸಿಕೊಂಡು ಸುಲ್ತಾನನಾಗಿ ಆಳುತ್ತಿದ್ದನು ಕೂಡಲೇ ಪ್ರಜೆಗಳೆಲ್ಲಾ ಹಳಬನಿಗೆ ಸುಲ್ತಾನಗಿರಿ ಕೊಡಕೂಡದೆಂದು ಹಟ ಹಿಡಿದರು. ಈ ವ್ಯಾಜ್ಯವನ್ನು ಇತ್ಯರ್ಥಮಾಡುವದಕ್ಕೆ ಸಿಲೋನ್ ದ್ವೀಪದ ಲೆಫ್ಟಿನೆಂಟ್ ಗವರ್ನರವರು ಅಲ್ಲಿಗೆ ಹೋಗಿ ವಿಚಾರಣೆ ಮಾಡಿದರು. ಹಳಬನಾದ ಸುಲ್ತಾನನಿಗೆ ಮತ್ತೆ ಅಧಿಕಾರ ಕೊಡಕೂಡದೆಂತಲೂ, ಹೊಸಬನೇ ಸುಲ್ತಾನನಾಗಿರಬೇಕೆಂತಲೂ, ಆದರೆ ಇದುವರೆಗೆ ಆಳುತ್ತಿದ್ದವನಿಗೆ ವರುಷಾಶನವನ್ನು ಕೊಡುತ್ತಾ ಬರಬೇಕೆಂತಲೂ ತೀರ್ಮಾನಮಾಡಿ ಬಂದರು. ಮದುವೆಗೆ ಹೋದವನು ರಾಜ್ಯಾಧಿಕಾರವನ್ನೇ ಕಳಕೊಳ್ಳಬೇಕಾಯಿತಲ್ಲಾ ಎಂದು ಎಲ್ಲರೂ ಆಶ್ಚರ್ಯಪಡುತಿದಾರೆ.

◆◆◆◆

ಸಂಘ ಪರಿಷ್ಕರಣ ಕಾರ್ಯವು ನೆರವೇರುವದಕ್ಕೆ ಹಿಂದುಸ್ಥಾನದಲ್ಲೆಲ್ಲಾ ಜನರು ತಮ್ಮತಮ್ಮಲ್ಲೇ ಕೆಲವು ಸಭೆಗಳನ್ನು ಮಾಡಿಕೊಂಡಿರುತ್ತಾರಷ್ಟೆ. ಇವುಗಳಲ್ಲೆಲ್ಲಾ ಉತ್ತರ ದೇಶದಲ್ಲಿ ರಜಪುತ್ರ ಹಿತಕಾರಿ ಸಭಾ ಎಂಬ ಸಂಘವೇ ತುಂಬಾ ಪ್ರಮುಖತೆಯನ್ನು ಹೊಂದಿರುವದು. ರಜಪುತ್ ಸಂತತಿಯ ಜನರೇ ಈ ಸಂಘವನ್ನು ಏರ್ಪಾಡು ಮಾಡಿಕೊಂಡಿದಾರೆ. ಅವರಲ್ಲಿ ಶುಭಶೋಭನಾದಿ ಕಾರ್ಯಗಳು ನಡೆಯುವಾಗಲೂ, ಅಪರ ಕ್ರಿಯೆಗಳು ನಡಿಯುವಾಗಲೂ ಬಹಳ ದುಡ್ಡು ಖರ್ಚಾಗುವದು ಪದ್ಧತಿಯಾಗಿತ್ತು. ಜನರು ಈ ದ್ರವ್ಯನಷ್ಟವನ್ನು ನಿಲ್ಲಿಸಬೇಕೆಂದು ಒಂದು ಸಂಘವನ್ನು ಮಾಡಿಕೊಂಡಿದಾರೆ. ಅನೇಕಾನೇಕ ಜನರು ಈ ಸಂಘಕ್ಕೆ ಸೇರಿಕೊಂಡಿರುವರು. ಹದಿನೈದು ಸಂಸ್ಥಾನಗಳಲ್ಲಿ ಈ ಸಭೆಯ ದೆಸೆಯಿಂದ ದುಂದು ಖರ್ಚು ಕಡಮೆಯಾಗಿರುತ್ತೆ. ಪೂರ್ವ ಪದ್ಧತಿಯಂತೆ ಹಣ ಖರ್ಚುಮಾಡದಿದ್ದರೆ ಮೊದಲು ಅಂಥವರನ್ನು ನಾಚಿಕೆ ಪಡಿಸುತ್ತಿದ್ದರು. ಈಗ ಅದೆಲ್ಲಾ ಸಾಧಾರಣವಾಯಿತು. ಜನರು ಸಂಘದಿಂದ ತುಂಬಾ ಸಹಾಯವಾಯಿತೆಂದು ಸಂತೋಷಪಡುತ್ತಿದಾರೆ. ಈ ಸಂಘದ ಒಂದು ವರುಷದ ರಿಪೋರ್ಟು ಪ್ರಕಟವಾಗಿದೆ ರಜಪುತ್ರರಲ್ಲಿ ೩,೯೪೩ ಮದುವೆಗಳೂ, ೧,೪೬೫ ಅಪರ ಕ್ರಿಯೆಗಳೂ ನಡೆದಿರುವದಾಗಿಯೂ, ಈ ಪೈಕಿ ೩,೫೪೮ ಮದುವೆಗಳೂ ೧,೪೦೬ ಅಪರ ಕ್ರಿಯೆಗಳೂ ಈ ಸಭೆಯವರು ಮಾಡಿಕೊಂಡಿರುವ ಕಾನೂನಿಗೆ ಅನುಸಾರವಾಗಿ ನಡಸಲ್ಪಟ್ಟವೆಂಬದಾಗಿ ತಿಳಿದುಬರುವದು. ಈ ಸಂಘಕ್ಕೆ ಸೇರಿದವರ್ಯಾರೂ ತಮ್ಮ ಗಂಡು ಮಕ್ಕಳಿಗೆ ೧೮ ವರುಷವಾಗುವ ವರಿಗೂ ಹೆಣ್ಣುಮಕ್ಕಳಿಗೆ ೧೪ ವರುಷವಾಗುವ ವರಿಗೂ ವಿವಾಹ ಮಾಡುವದಿಲ್ಲವೆಂಬದಾಗಿ ವಾಗ್ದಾನಮಾಡಿ ಅದೇ ಪ್ರಕಾರ ನಡೆದುಕೊಳ್ಳುತ್ತಾರೆ. ಉತ್ತರ ದೇಶದಲ್ಲಿ ಈ ಸಂಘವು ತುಂಬಾ ಹೆಸರುವಾಸಿಗೆ ಬಂದಿರುವದು.

## ವಿದೇಶ ವರ್ತಮಾನಗಳು.

ನೇಪಲ್ಸ್ ನಗರದಲ್ಲಿ ಪ್ರಸಿದ್ಧವಾದ ಒಂದು ದೊಡ್ಡ ಅರಮನೆಗೆ ಬೆಂಕಿಬಿದ್ದು ನಾಶವಾಯಿತೆಂದು ತಂತೀ ವರ್ತಮಾನ ಬಂದಿರುವದು.

◆◆◆◆

ಮಾರ್ಟಿನಿಕ್ ದ್ವೀಪಕ್ಕೆ ಸೇರಿದ ಮೌಂಟ ಪೀಲೆ ಎಂಬ ಪರ್ವತವು ಪುನಹ ಅಗ್ನಿಯನ್ನು ಕಾರಲಾರಂಭವಾಗಿದೆ. ಅಲ್ಲಿನ ಅಧಿಕಾರಿಯು ಪ್ರಜೆಗಳನ್ನೆಲ್ಲಾ ಅಲ್ಲಿಂದ ಹೊರಡಿಸಬೇಕೆಂದು ಪ್ರಯತ್ನಪಡುತ್ತಿದಾರೆ.

◆◆◆◆

ರಷ್ಯಾ ರಾಜ್ಯಕ್ಕೆ ಸೇರಿದ ಕಿಷ್‌ನೀಫ್ ಎಂಬ ಪ್ರಾಂತ್ಯದಲ್ಲಿ ಪ್ರಜೆಗಳು ತಮ್ಮ ಮಧ್ಯೆ ಇರುವ ಯಿಹೂದ್ಯ ಜನರಮೇಲೆ ಕೋಪೋದ್ರೇಕರಾಗಿ ಬಹಳ ಹಿಂಸೆಯನ್ನು ಮಾಡಿದರು. ಈ ಗಲಾಟೆಯಲ್ಲಿ ೭೦೦ ಮನೆಗಳೂ, ೬೦೦ ಅಂಗಡಿ ಮುಂಗಟ್ಟುಗಳೂ ಕೊಳ್ಳೆಯಾದವು.

◆◆◆◆

ಪ್ಯಾರಿಸ್ ನಗರದಲ್ಲಿ ಕೆಲವುಮಂದಿ ಹುಡುಗರು ಒಂದು ಕಡೆ ಸೇರಿ "ಗಲ್ಲಿಗೆಹಾಕುವ ಆಟ" ವನ್ನು ಆಡುತ್ತಿದ್ದರು. ಸುಮಾರು ೧೩ ವರುಷದ ಒಬ್ಬ ಹುಡುಗನು ಆಗ ಗಲ್ಲಿಗೆ ಹಾಕಿಕೊಂಡು ನಿಜವಾಗಿಯೂ ಆತ್ಮಹತ್ಯ ಮಾಡಿಕೊಂಡನು. ಹುಡುಗರೆಲ್ಲಾ ಗಾಬರಿಬಿದ್ದು ಓಡಿಹೋದರು.

◆◆◆◆

ಚಿಲ್ಲಿರಾಜ್ಯಕ್ಕೆ ಸೇರಿದ ವಾಲ್ಪರೈಜೋ ಪಟ್ಟಣದ ಸಮುದ್ರತೀರದಲ್ಲಿ ವಿಪರೀತ ಸುಂಟರಗಾಳಿ ಹುಟ್ಟಿ ನಾಲ್ಕಾರು ಹಡಗುಗಳು ಮುಳುಗಿಹೋದವು. ಒಂದು ಹಡಗಿನಲ್ಲಿದ್ದ ೯೦ ಮಂದಿ ಆಳುಗಳ ಪೈಕಿ ೧೩ ಮಂದಿ ಮಾತ್ರ ಬದುಕಿ ಬಂದಿರುತ್ತಾರೆ. ಉಳಿದವರೆಲ್ಲಾ ಸಮುದ್ರದ ಪಾಲಾಗಿರಬೇಕು.

◆◆◆◆

ದಕ್ಷಿಣ ಆಫ್ರಿಕದ ಯುದ್ಧಕಾಲದಲ್ಲಿ ಆ ಪ್ರಾಂತ್ಯ ನೆದರ್ಲೆಂಡ್ ರಾಜ್ಯದ ರೈಲ್ವೆಯನ್ನು ಇಂಗ್ಲಿಷರು ತಮ್ಮ ಪ್ರಯೋಜನಕ್ಕಾಗಿ ಇಟ್ಟುಕೊಂಡಿದ್ದರಷ್ಟೆ. ಇದಕ್ಕಾಗಿ ಈಗ ಈ ಕಂಪನಿಯವರಿಗೆ ಇಂಗ್ಲಿಷ್ ಸರ್ಕಾರದವರು ೧=॥ ಕೋಟಿ ದ್ರವ್ಯವನ್ನು ಕೊಡುವದಾಗಿ ಮಾತುಕೊಟ್ಟಿದಾರೆಂದು ತಿಳಿದುಬರುವದು.

◆◆◆◆

ಚೀನಾ ರಾಜ್ಯಕ್ಕೆ ಸೇರಿದ ನಾನ್ನಿಂಗ್ ಮತ್ತು ದ್ವೂಸ್‌ಫೂ ಡಿಸ್ಟ್ರಿಕ್ಟುಗಳೊಳಗೆ ಕ್ಷಾಮಬಾಧೆಯು ಅಪಾರವಾಗಿರುವದು. ಹಾಂಕಾಂಗ್ ಪಟ್ಟಣದಿಂದ ವಿಪರೀತವಾಗಿ ಆಹಾರ ಸಾಮಗ್ರಿಗಳನ್ನು ಅಲ್ಲಿಗೆ ಕಳುಹಿ, ಕ್ಷಾಮಪೀಡಿತರಿಗೆ ಹಂಚಿಸುತ್ತಿದಾರೆ. ೩೩,೦೦೦ ಪ್ರಜೆಗಳು ಹೊಟ್ಟೆಗಿಲ್ಲದೆ ನಾನಾ ಕಷ್ಟವನ್ನು ಅನುಭವಿಸುತ್ತಿರುವರು.

◆◆◆◆

ಅಮೇರಿಕಕ್ಕೆ ಸೇರಿದ ಅನೇಕ ಡಿಸ್ಟ್ರಿಕ್ಟುಗಳಲ್ಲಿ ವಿಪರೀತ ಪ್ರವಾಹಗಳು ಬಂದು, ಸುಮಾರು ೬೦,೦೦೦ ಪ್ರಜೆಗಳಿಗೆ ಮನೆ ಇಲ್ಲದಂತೆ ಮನೆಗಳನ್ನೆಲ್ಲಾ ಕೊಚ್ಚಿಬಿಟ್ಟವು. ಟೋಪೇಕಾ ಎಂಬ ಊರಿಗೆ ಬೆಂಕಿಬಿದ್ದು ಉರಿಯಲಾರಂಭಿಸಿತು. ಏಳು ಸಹಸ್ರ ಪ್ರಜೆಗಳು ಊರುಬಿಟ್ಟು ಓಡಿಹೋದರು. ೬೦೦ ಮಂದಿ ಸತ್ತುಹೋಗಿರಬೇಕೆಂದು ಹೇಳುತ್ತಾರೆ.

◆◆◆◆

ಪ್ಯಾರಿಸ್ ನಗರದಲ್ಲೂ ಜೂರಿಚ್ ಪಟ್ಟಣದಲ್ಲೂ ಜನರು ಪಾಠಶಾಲೆಗಳನ್ನಿಟ್ಟು ನಾಯಿಗಳಿಗೆ ಕಳ್ಳರನ್ನು ಹಿಡಿಯುವದು, ಗೋಡೆ ಹಾರುವದು, ನೀರಿನಲ್ಲಿ ಬಿದ್ದವರನ್ನು ಎಳೆದು ತರುವದು, ಕಾಗದಗಳನ್ನು ತಗೆದುಕೊಂಡುಹೋಗಿ ಕೊಟ್ಟು ಜವಾಬು ತರುವದು, ಇವೇ ಮೊದಲಾದ ಕೆಲಸಗಳನ್ನು ಕಲಿಸಿಕೊಡುತ್ತಿದಾರೆ. ನಾಯಿಗಳು ಇವುಗಳನ್ನು ಬೇಗನೆ ಕಲಿತುಕೊಳ್ಳುತ್ತವೆ ಎಂತಲೂ, ಆರು ತಿಂಗಳ ವರೆಗೆ ಮಾತ್ರ ಅವು ಸ್ಕೂಲಿನಲ್ಲಿ ಇರುತ್ತವೆಂತಲೂ ತಿಳಿದುಬಂದಿದೆ.

◆◆◆◆

ಬೇಸಿಗೆಯಲ್ಲಿ ನೀರು ಕುಡಿದಷ್ಟೂ ದಾಹ ಅಡಗುವದಿಲ್ಲ. ಹೆಚ್ಚಾಗಿ ನೀರು ಕುಡಿದರೆ ಒಂದು ತರಹಾ ಸಂಕಟ ಉಂಟಾಗುವದು; ಬೆವರು ವಿಪರೀತವಾಗಿ ಬರುತ್ತೆ. ಇದಕ್ಕೆ ಪ್ರತಿಯಾಗಿ ದಾಹ ಅಡಗುವಂತೆ ಏನುಮಾಡಬಹುದೆಂದು ಪ್ರಶ್ನೆ ಮಾಡಿದ್ದಕ್ಕೆ ವೈದ್ಯವಿಷಯವನ್ನು ಚರ್ಚಿಸುವ ಲ್ಯಾನ್ಸೆಟ್ ಎಂಬ ಪತ್ರಿಕೆಯು ಹೇಳುವದೇನಂದರೆ:—"ಚನ್ನಾಗಿ ಕಳಿತಿರುವಂಥಾ ರಸವತ್ತಾದ ಹಣ್ಣುಗಳನ್ನು ತಿಂದರೆ ದಾಹಶಾಂತಿಯಾಗುತ್ತೆ. ಬೇಸಿಗೆಯಲ್ಲೇ ಅಲ್ಲ; ದೇಹಕ್ಕೆ ಯಾವಾಗಲೂ ಇದು ಬಹಳ ಒಳ್ಳೇದಾಗಿರುವದು. ಕೆಲವರು ಊಟವಾದಮೇಲೆ ಹಣ್ಣು ತಿನ್ನುತ್ತಾರೆ; ಇದು ತಪ್ಪು. ಊಟಕ್ಕೆ ಮುಂಚಿಟಸು ತಿನ್ನುವದೇ ತುಂಬಾ ಆರೋಗ್ಯ. ಆಹಾರವೂ ಚನ್ನಾಗಿರುವದು.

## ಶ್ರೀ ಕೃಷ್ಣವಿಲಾಸ ಪ್ರೆಸ್.

33

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡ್ಸ್, ನೋಟೀಸ್ ಫಾರಂ, ಬ್ಯಾಲನ್ಸ್ ಷೀಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಛಾರ್ಜುಗಳಿಗೆ ಮಾಡಲ್ಪಡುತ್ತವೆ

ರೋಲು, ವರ್ಗ, ಮುಂತಾದ ಖಾಲೀ ಪುಸ್ತಕಗಳು, ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು ; ಇನ್ನು ಇತರವಾದ ಸಮೂಹೆಯ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿನಂತೆ ಬಹು ಅಂದವಾಗಿ ತಯಾರ್‍ಮಾಡಲ್ಪಡುತ್ತವೆ.

ಲಾಯರ್‌ಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್, ವಕಾಲತ್‌ನಾಮಾ, ಜಾರೀ, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಬಿಕರಿಗೆ ಸಿದ್ಧವಾಗಿರುತ್ತವೆ

ನಮ್ಮ ಕಂಪನಿಗೆ ವಿಲಾಯತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯತರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಜವಾಬನ್ನು ಅಪೇಕ್ಷಿಸುವವರು ಟಪ್ಪಾಲು ಹಕಲನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯುತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರಿಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡ ಪೇಟೆ ೨೫ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ

ವಿಳಾಸ—ಎಂ. ಆರ್ ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,

ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

---

### ಜ್ವರಹರಿ.

36

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಾಮಲತ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯಂಗಾರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೬೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೬೦ ಡೋಸಿನ ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ , ೧—೮ ರೂ , ೬ ರೂ , ೧೧ ರೂ ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫ ಬಿಡಲಾಗುವದು

*********

### ಓಮಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಉಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಬಂದಾವರ್ತಿ ಹೊರಗೆ ಆಗುವಾಗ್ಯ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರ್‍ರಲ್ಲಿ ವಿಶೇಷ :—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೌಂಡ್ ಲೈನ್, ಬ್ಲಾಕ್ ಟೌನ್, ಮದರಾಸ್.

## ೧೨ನೋ, ಸಿದ್ಧವಾಗಿದೆ. ಕ್ರಯ ೪ ಆಣೆ.

ಂ

೧೯೦೩ ನೇ ಇಸವಿ ಲೋವರ್ ಸೆಕೆಂಡರಿ ಕನಡ ಟೆಕ್‌ಸ್ಟಿನ ನೋಟ್ಸು. ೧೪೫ನೇ ಪದ್ಯದಿಂದ ೨೦೩ನೇ ಪದ್ಯದ ವರೆಗೂ ಇರುತೆ ಗದ್ಯಕಾವ್ಯದ ನೋಟ್ಸೂ ಸೇರಿದೆ. ಅರ್ಥ, ತಾತ್ಪರ್ಯ, ಸಂಧಿ, ಸಮಾಸ ಅವಯವಾರ್ಥ, ಭಾವಾರ್ಥ, ನಾನಾರ್ಥ, ಪೂರ್ವಕಥೆ, ವ್ಯಾಕರಣವಿಶೇಷ, ಪ್ರಶ್ನೋತ್ತರ, ಮುಂತಾಗಿ ಪರೀಕ್ಷೆಗೆ ಬೇಕಾಗತಕ್ಕ ಎಲ್ಲಾ ವಿಷಯಗಳೂ ವಿಶದವಾಗಿ ತಿಳಿಸಲ್ಪಟ್ಟವೆ ಮರಿಮಲ್ಲಪ್ಪನವರ ಸ್ಕೂಲು ಮಹಾದೇವ ಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು ೧೦ಕ್ಕೆ ೧ ಪ್ರತಿ ಜಾಸ್ತಿ ಪುಸ್ತಕ ದೊರಿಯುತಕ್ಕ ಸ್ಥಳ—ಕೆ ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು

---

### ಸರಸ್ವತೀಕರ ಕಸ್ತೂರಿ ಮಾತ್ರೆಯು.

ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥವರಿಗೆ ಅತ್ಯಂತ ಉಪಯುಕ್ತವಾದದ್ದು ಈ ಮಾತ್ರೆ ೧—೨ ತಾಂಬೂಲದ ಜೊತೆಯಲ್ಲಿ ಸೇವನದಿಂದ ಬಾಯಿಯು ಸುವಾಸನೆಯುಳ್ಳದ್ದಾಗಿ ಬಾಯಿಯ ದುರ್ಗಂಧ, ರೋಗಿ ಅಜೀರ್ಣ, ಉಷ್ಣರೋಗ, ಬಾಯಿಯು ಜೊಲ್ಲು ಉಗ್ಗಿಸುತ್ತಾ ಇರುವದು, ಬಾಯಿ ರಕ್ತ ಪಿತ್ತ, ಮಲಬದ್ಧ, ದಂತರೋಗ, ಬಾಯಿ ಹುಣ್ಣು, ಕೆಮ್ಮು, ಜ್ವರ ಇವೇ ಮೊದಲಾದ ಅನೇಕ ರೋಗಗಳೆಲ್ಲಾ ದೂರವಾಗುತ್ತಿರುವದು ಹೆಂಗಸರ ಗರ್ಭದ ಅನೇಕ ರೋಗಗಳಿಗೆ ಮಹೌಷಧವಾಗಿರುವದು ಚಿಕ್ಕ ಮಕ್ಕಳಿರುವ ಮನೆಯಲ್ಲಿ ಈ ಮಾತ್ರೆಯು ಸಂಜೀವನವು. ಈ ಮಾತ್ರೆಯು ನಿಮ್ಮಲ್ಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸ್ವಾಧೀನದಲ್ಲಿದ್ದಂತೆಯೇ. ೨೦೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೫ ಆಣೆ, ೫ ಆಣೆ ಔಷಧವು ೨ ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವು ನಮಗೆ ಬರೆಯುವದಾಗಿ ಬಲಾತ್ಕಾರಪಡಿಸುವದು

ಸಿ. ಪಿ. ಅಂಡ್ ಕಂಪೆನಿ, ಬೆಂಗಳೂರು ಸಿಟಿ

---

### ಹೋಮೋಸಿಯಾ.

ತಕ್ಷಣ ಪರಿಹಾರ. **Homocea** TOUCHES THE SPOT ತಗಲುತಲೇ ನೋವು ಮಾಯವಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪ್ರೋಫೀಸ್ ಖಾನಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇಟ್ಟೇ ಇರಬೇಕು ಇದಕ್ಕೆ ಸಮಾನವಾದ ಔಷಧವು ಕ್ವಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಲರ ತಲೆನೋವು, ಸೊಂಟನೋವು, ಸಾರ್ವೇವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬಿ ೧ಕ್ಕೆ ೧ ರೂ , ದೊಡ್ಡದಕ್ಕೆ ರೂ. ೨—೮ ಆ , ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್, ಖರ್ಚು ಮಾಫಿ ಬಿಡುತ್ತೆ.

*********

### ಹೋಮೋಸಿಯಾ ಯಂಬ್ರೊಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ಹುಂಬಿ ೮ ಆಣೆಗೂ, ೧ ರೂ. ಗೂ ಬಂದ್ದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫು. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ :—ಹೋಮೋಸಿಯಾ ಕಂಪೆನಿ, ೨೭ ಸೌಂಡು ಬೀಚ್ ಲೈನ್, ಮದರಾಸ್.

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೯—೫—1903 ರಿಂದ ೬—೬. 1903 ರ ವರೆಗೆ

| ಸ್ಥಳ. | | ಪ್ಲೇಗ್ ತಗಲಿ ಸತ್ತದ್ದು. | ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|---|
| ಬೆಂಗಳೂರು ಪಟ್ಟಣ | | | | 1 | 1 |
| ಮೈಸೂರು | ,, | | | | |
| ಬೆಂಗಳೂರು ಡಿಸ್ಟ್ರಿಕ್ಟು | | 18 | 15 | 7 | 5 |
| ಮೈಸೂರು | ,, | 3 | 2 | 11 | 8 |
| ಕೋಲಾರ್ | ,, | 2 | 1 | | 1 |
| ಕೋಲಾರ್ ಚಿನ್ನದ ಗಣಿಗಳು | | | | | |
| ತುಂಕೂರು ಡಿಸ್ಟ್ರಿಕ್ಟು | | 2 | | | |
| ಹಾಸನ | ,, | 6 | 5 | 8 | 6 |
| ಚಿತ್ರದುರ್ಗ | ,, | 16 | 8 | 4 | 3 |
| ಕಡೂರ್ | ,, | | | | |
| ಶಿವಮೊಗ್ಗ | ,, | 18 | 16 | 16 | 10 |
| | ಜುಮ್ಲಾ. | 65 | 47 | 47 | 34 |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಜ್ಯೇಷ್ಠ ಬಹ ೪ ಅಷ್ಟಮಿ ಗುರುವಾರದಿಂದ ಜ್ಯೇಷ್ಠ ಬಹ ೧೪ ಚತುರ್ದಶಿ ಬುಧವಾರದ ವರೆಗಿನ ವಾರದ ಪಂಚಾಂಗ

೧೯೦೩ ನೇ ಇಸವಿ ಜೂನ್

| ತಾ. | ವಾರ | ತಿಥಿ. | ಘಳಿಗೆ | ನಕ್ಷತ್ರ. | ಘಳಿಗೆ. | ಮಿಥುನ ಸಮಾಸ ತೇದಿ. |
|---|---|---|---|---|---|---|
| 18 | ಗುರು * | ಅಷ್ಟಮಿ | 33 [illegible] | ಪೂರ್ವಾಭಾ | 1 [illegible] | 4 |
| 19 | ಶುಕ್ರ | ನವಮಿ | 31 [illegible] | ಉತ್ತರಾಭಾ | [illegible] | 5 |
| 20 | ಶನಿವಾರ | ದಶಮಿ | 33 [illegible] | ರೇವ | [illegible] | 6 |
| 21 | ರವಿವಾರ | ಏಕಾದಶಿ | 31 | | [illegible] | 7 |
| 22 | ಚಂದ್ರ † | ದ್ವಾದಶಿ | 2[illegible] | ಭ | [illegible] | 8 |
| 23 | ಕುಜ ‡ | ತ್ರಯೋದಶಿ | 21 [illegible] | ಕೃ | [illegible] | 9 |
| 24 | ಬುಧ | ಚತುರ್ದಶಿ | 20 10 | ರೋಹಿ | 11 | 10 |

* ತ್ರಿಭುವನಗಂ ಪೂಜಾ † ಸೋಮಪ್ರದೋಷ ‡ ಮಾಸಶಿವರಾತ್ರಿ

---

### ಪೇಟೆ ಧಾರಣೆ.

| ದಿನಸಿ. | ಮೈಸೂರು. | ಬೆಂಗಳೂರು |
|---|---|---|
| ಕಡ್ಡೀ ಅಕ್ಕಿ ಪಲ್ಲ ೧ಕ್ಕೆ | ರೂ. ೧೦ ೪—೦ | ೧೦—೧೨—೦ |
| ಕೆಂಬೂತಿ ಅಕ್ಕಿ ಅವಲ್ .. | .. ೯ ೧೨ ೦ | ೧೧—೬—೦ |
| ,, ದುಯಂ | . ೯—೮—೦ | ೧೬—೦—೦ |
| ಜಾವಾಣಿ ಅಕ್ಕಿ .. | . ೮—೧೨—೦ | ೧೨—೬—೦ |
| ಸಣ್ಣಕ್ಕಿ ಅವಲ್ . | .. ೧೨—೮—೦ | ೧೨—೮—೦ |
| ,, ದುಯಂ | .. ೧೨ ೮—೦ | ೧೧ ೦—೦ |
| ತೊಗರೀ ಬೇಳೆ ಪಲ್ಲ ೧ಕ್ಕೆ | .. ೧೩ ೮ ೦ | ೧೪ ೦—೦ |
| ,, ದುಯಂ .. | .. ೧೨ ೮—೦ | ೧೩—೦—೦ |
| ಹೈನ ರಾಗಿ ಪಲ್ಲ ೧ಕ್ಕೆ .. | . ೩ ೧೪—೦ | ೩—೧೦—೦ |
| ಕಾರಾಗಿ .. .. | .. ೩—೮ ೦ | ೩—೪—೦ |
| ಜೋಳ .. .. | .. ೩—೧೦—೦ | ೯—೦—೦ |
| ಹಲಸಂದೆ ಪಲ್ಲ ೧ಕ್ಕೆ .. | .. ೯—೦ ೦ | ೮—೦—೦ |
| ಬಿಳೀ ಅವರೆ .. | .. ೭ ೮ ೦ | ೭—೦—೦ |
| ಹೆಸರು .. .. | .. ೧೦ ೦—೦ | ೧೦—೮—೦ |
| ಉದ್ದು .. .. | .. ೮ ೪—೦ | ೯—೦—೦ |
| ಕಡಲೆ .. .. | .. ೧೦ ೮—೦ | ೧೦—೦—೦ |
| ಎಳ್ಳು .. . | .. ೧೩ ೧೨ ೦ | ೧೦—೧೫—೯ |
| ಹುರುಳಿ .. .. | .. ೪—೦ ೦ | ೪—೧೨—೦ |
| ಹರಳು ೧೭೩ ಸೇರಿಗೆ .. | .. ೯—೧೨—೦ | ೫—೧೨—೦ |
| ಸೀಗೇಕಾಯಿ ಮಣ ೧ಕ್ಕೆ | .. ೦—೮—೦ | ೦—೮—೦ |
| ಮೆಣಸಿನಕಾಯಿ .. | .. ೭—೮—೦ | ೭—೦—೦ |
| ,, ದುಯಂ .. | .. ೭—೪ ೦ | ೧—೮—೦ |
| ಬೆಲ್ಲ ದೊಡ್ಡ ಅಚ್ಚು .. | .. ೩—೧೨—೦ ಮ | ೧—೬—೦ |
| ಒಳ್ಳೆಣ್ಣೆ ಮಣ ೧ಕ್ಕೆ .. | .. ೪—೧೦ ೦ | ೪—೮—೦ |
| ಹರಳೆಣ್ಣೆ ,, .. | .. ೩—೧೨—೦ | ೩—೦—೦ |
| ಕೊತ್ತುಂಬರಿ ಪಲ್ಲ ೧ಕ್ಕೆ .. | .. ೫—೮—೦ | ೩—೧೨—೦ |
| ಉಪ್ಪು ,, .. | .. ೯—೦—೦ | ೯—೦—೦ |
| ಹುಣಸೇ ಹಣ್ಣು .. | .. ೦—೧೪—೦ | ೦—೧೪—೦ |
| ,, ಹಳೇದು .. | .. ೦—೧೦—೦ | ೦—೧೨—೦ |
| ಹುರುಳಿ .. .. | .. ೧೦ ೧೨—೧ | ೧೧—೦—೦ |
| ಸೀಮೆಯೆಂಣೆ ಪೆಟ್ಟಿ ೧ಕ್ಕೆ | .. ೪ ೧೨—೦ | ೪—೩—೦ |
| ತೆಂಗಿನಕಾಯಿ ೧೦೦ಕ್ಕೆ | .. ೩—೪—೦ | ೪—೦—೦ |
| ಅಳಲೇಕಾಯಿ ಮಣ ೧ಕ್ಕೆ | .. ೬—೧೪ ೦ | ೦—೧೨—೦ |
| ಅಂಟ್ವಾಳದಕಾಯಿ ಮಣ ೧ಕ್ಕೆ | .. ೩—೧೪—೦ | ೦—೧೦—೦ |
| ಚಿನ್ನ (ಪೌನ್) ಕೆಂಪು | .. ೧೫—೪—೦ | ೧೫—೪—೬ |
| ,, ,, ಹಸಿಮೆ | .. ೧೫—೮—೦ | ೧೫—೮—೦ |
| ,, ,, ಗಟ್ಟಿ ತೊಲ ೧ಕ್ಕೆ .. | ೨೬—೦—೦ | ೨೩—೮—೦ |
| ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ .. | ೭೨—೦—೦ | ೭೬—೪—೦ |

Printed and Published by the Rev. E. W. Thompson, M.A., the Proprietor and Manager, Wesleyan Mission Press, Mysore. 18/6/1903.

# ವೃತ್ತಾಂತ ಪತ್ರಿಕೆ.


ಕ್ರಯ ೧ ದುಡ್ಡು —:೦— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೭ | ಮೈಸೂರು—ಸನ್ ೧೯೦೩ ನೇ ಇಸವಿ ಜೂನ್ ತಾರೀಖು ೨೫ ನೇ ಗುರುವಾರ. | ಸಂಚಿಕೆ ೪


## THE FOREIGN MISSIONS AND GENERAL AGENCY.

ಮೇಲೆ ಕಂಡ ಏಜನ್ಸಿಯವರು ದೇಶೀಯ ವರ್ತಕರಿಗೂ ಇತರರಿಗೂ ಇಂಗ್ಲಾಂಡಿನಲ್ಲಿ ತಯಾರಾಗುವ ಯಾವ ಸಾಮಾನನ್ನು ಬೇಕಾದರೂ ಸುಲಭವಾದ ಕಮಿಷನ್ ತಕ್ಕೊಂಡು ಕಳುಹಿಸುವರು. ಆರ್ಡರು ತಲಪಿದ ಕೂಡಲೆ ಮಾಲುಗಳು ಬಹು ಜಾಗ್ರತೆಯಾಗಿ ರವಾನೆ ಮಾಡಲ್ಪಡುವವು. ಈ ವಿಷಯದಲ್ಲಿ ತಿಳಿದುಕೊಳ್ಳಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕೆಂದು ಕೋರುತ್ತೇವೆ.

A. J. Budd,
*Manager,*
*2/3, City Road, London*

### ನೋಟೀಸ್

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್
ವೈಸ್‌ಪ್ರೆಸಿಡೆಂಟ್ ಸಾಹೇಬರವರ ಆಫೀಸಿನಿಂದ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ — ಸನ್ ೧೯೦೩ನೆ ಇಸವಿ ಜುಲೈ ಗುರ್ರ್ಯಾಗಾಯಿತು ೯. ೧೯೦೪ನೆ ಇಸವಿ ಜೂನ್ ಆಖ್ಯರು ವರಿಗೆ ಅಂದರೆ, ಒಂದು ವರುಷಕ್ಕೆ, ಮೈಸೂರು ಟೌನಿನಲ್ಲಿ ಇರತಕ್ಕ ಮ್ಯುನಿಸಿಪಲ್ ದೀಪಗಳಿಗೆ ಬೇಕಾಗುವ ಈ ಕೆಳಗೆ ನಮೂದು ಮಾಡುವ ಕೆರೋಸಿನ್ ಯೆಣ್ಣೆ ಟಿನ್ನುಗಳನ್ನು ಸರಬರಾಯಿ ಮಾಡಲು ಇಚ್ಛೆಯುಳ್ಳವರು ಡಿಪೋ ಯೆಣ್ಣೆ ಟಿನ್ ಒಂದಕ್ಕೆ ಯಾವ ದರದ ಮೇರೆಗೆ ಖರೀದಿಗೆ ಕೊಡುವರೆಂಬುವದಕ್ಕೆ ದರಖಾಸ್ತು ಕೊಡಬಹುದು.

ದರಖಾಸ್ತುಗಳನ್ನು ಲಕೋಟೆಗಳಲ್ಲಿ ಗರ್ಭಿತಗಳಿಸಿ, ಮೊಹರು ಮಾಡಬೇಕು. ಡಿಪಾಜಿಟ್ಟಿಗಾಗಿ ೫೦ ರೂಪಾಯಿ ಮೊಬಲಗು ಐವತ್ತು ರೂಪಾಯಿಗಳು ನಗದಿ ಆಗಲೀ, ಅಥವಾ ಸೇವಿಂಗ್ಸ್ ಬ್ಯಾಂಕ್ ಪಾಸು ಬುಕ್ಕೇ ಆಗಲೀ, ವೈಸ್ ಪ್ರೆಸಿಡೆಂಟ್ ಸಾಹೇಬರವರ ಆಫೀಸಿಗೆ ಜುಲೈ ಮಾಹೆ ೨೭ನೆ ತಾರೀಖಿನ ಒಳಗಾಗಿ ಡಿಪೋ ದರಖಾಸ್ತುಗಳ ಕೂಡ ಕಳುಹಿಸಬೇಕು.

ಡಿಪೋ ಮಾಹೆ ೨೭ನೆ ತಾರೀಖಿನ ವರಿಗೂ ಮೇಲ್ಕಂಡ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವವು.

ಸನ್ ೧೯೦೩ನೆ ಇಸವಿ ಜುಲೈ ೨೮ನೆ ತಾರೀಖಿನ ಮಧ್ಯಾಹ್ನ ೨ ಘಂಟೆಗೆ ಟೌನ್‌ಹಾಲಿನಲ್ಲಿ ಪ್ರೆಸಿಡೆಂಟ್ ಸಾಹೇಬರವರಿಂದ ಅಥವಾ, ವೈಸ್ ಪ್ರೆಸಿಡೆಂಟ್ ಸಾಹೇಬರವರಿಂದ ಹಾಜರು ಇರತಕ್ಕ ದರಖಾಸ್ತು ದಾರರುಗಳ ರೂಬರೂಬು ಸದರಿ ದರಖಾಸ್ತುಗಳು ತೆರೆಯಲ್ಪಡುವವು.

ಪ್ರೆಸಿಡೆಂಟ್ ಸಾಹೇಬರವರು ಅಥವಾ, ವೈಸ್ ಪ್ರೆಸಿಡೆಂಟ್ ಸಾಹೇಬರವರು ಯಾವದೊಂದು ಕಾರಣವನ್ನೂ ಹೇಳದೆ ಕಮ್ಮಿ ದರಕ್ಕೆ ಕೇಳುವ ದರಖಾಸ್ತುಗಳನ್ನೇ ಆಗಲೀ, ಅಥವಾ ಇತರ್ ಯಾವ ದರಖಾಸ್ತುಗಳನ್ನೇ ಆಗಲೀ ವಜಾಮಾಡಲು ಅಧಿಕಾರವುಳ್ಳವರಾಗಿ ಇರುತ್ತಾರೆ.

ಮಂಜೂರಾದ ದರಖಾಸ್ತುದಾರರು ಡಿಪೋ ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು ಐದು ದಿವಸಗಳ ಒಳಗಾಗಿ ಮೊದಲು ಹಾಜರುಮಾಡಿದ (ರೂ ೫೦—೦—೦) ಐವತ್ತು ರೂಪಾಯಿಗಳು ಡಿಪಾಜಿಟ್ ಅಲ್ಲದೆ, ಜಾಸ್ತಿ (ರೂ ೧೫೦—೦—೦) ಒಂದು ನೂರು ಐವತ್ತು ರೂಪಾಯಿಗಳು ಡಿಪಾಜಿಟ್ಟಿಗಾಗಿ ಪಾವತಿಮಾಡಿ, ರೂಲಸು ಪ್ರಕಾರ ಮುಚ್ಚಳಿಕೆಯನ್ನು ಬರೆದು ಕೊಡಬೇಕು. ಹಾಗೆ ಮಾಡಲು ತಪ್ಪಿದರೆ ಮೊದಲು ಹಾಜರು ಮಾಡಿದ ಡಿಪಾಜಿಟ್ ಮೊಬಲಗನ್ನು ಕಳೆದುಕೊಳ್ಳುವರು.

ಬರೆದು ಕೊಡತಕ್ಕ ಮುಚ್ಚಳಿಕೆಯ ಖರಾರುಗಳು ಮತ್ತು ಇತರ ತಪಶೀಲುಗಳು ಮ್ಯುನಿಸಿಪಲ್ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

(೧) ಫಸ್ಟ್ರ್ ಮಾರ್ಕ್ ಕ್ರೀಮೆಯೆಣ್ಣೆ ಟಿನ್ನುಗಳು

(೨) ರಷ್ಯನ್ ಯೆಣ್ಣೆ ಟಿನ್ ೧೨೫ನೇ ಡಿಗ್ರಿ ಬಾಬತು.

ತಿಂಗಳು ಒಂದಕ್ಕೆ ಸುಮಾರು ೨೦೦ ಟಿನ್ನುಗಳ ವರೆಗೆ ಫಸ್ಟ್ ಮಾರ್ಕ್ ಕ್ರೀಮೆಯೆಣ್ಣೆ ಟಿನ್ನುಗಳು ಖರೀದಿಗೆ ತೆಗೆದುಕೊಳ್ಳಲ್ಪಡುತ್ತವೆ. ತಾರೀಖು ೫. ೬. ೦೩

K. SREENIVASA RAO,
*Vice President.*

### ಒಳ್ಳೇ ಔಷಧಗಳು.

ನಯನವ್ಯಾಧಿಗೆ ಸುಖಾಂಜನವು —ಹೊಸತಾಗಿ ಅಥವಾ ಬಹು ಕಾಲದಿಂದ ಕಣ್ಣಿನಲ್ಲಿ ಇರುತ್ತಿದ್ದ ಎಲ್ಲ ಪ್ರಕಾರದ ಬಾಧೆಗಳು ಇದರಿಂದ ಬಹು ಬೇಗನೆ ಗುಣ ಹೊಂದುವವು. ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು, ಪಿಸರು ಬರುತ್ತಿರುವದೂ, ಉರಿ, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದೂ, ದೃಷ್ಟಿಮಾಂದ್ಯ ಮುಂತಾದ ವಿಶಿಷ್ಟ ವ್ಯಾಧಿಗಳು ಗುಣ ಹೊಂದುತ್ತವೆ. ಕ್ರಯ ೧ ಡಬ್ಬಿಗೆ ೧ ರೂ. ಪೋಸ್ಟ್ ಖರ್ಚು ಆಣೆ ೩.

ವಾಯುಹಾರಕ ತೈಲ (ಬಾಹ್ಯಲೇಪನಕ್ಕೆ ಮಾತ್ರ).—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವ ಇತರ ವಾಯುಗಳ ಬಾಧೆ, ತಲೆನೋವು, ಟಿಕ್ಕ ಹುಡುಗರ ಉಬ್ಬಸ, ಕೆಮ್ಮು, ಕೂಡ ಗುಣ ಹೊಂದುವವು. ಶೀಷೆಗೆ ೧ ರೂ. ಖರ್ಚು ಆಣೆ ೩.

ಗರ್ಭಕೋಶದ ಗುಳಿಗೆ ...— ೨ ಯಾ ೩ ಆವರ್ತಿ ಹಚ್ಚುವದರೊಳಗೆ ಎಂಥ ಕಠಿಣವಾದ ಗಡಕರ್ಣವಾದದ್ದು ಇದ್ದರೂ ಪೂರ್ಣ ಗುಣ ಹೊಂದುವದು. ಪೆಟ್ಟಿಗೆ ಆಣೆ ೪. ಖರ್ಚು ೧ ರಿಂದ ೩ ಡಬ್ಬಿ ವರೆಗೆ ಆಣೆ

ಕರ್ಣಸ್ರಾವಕ್ಕೆ ವನೌಷಧಿ ತೈಲ (ಬಾಹ್ಯೋಪಚಾರಕ್ಕೆ ಮಾತ್ರ) —ಚಿಕ್ಕ ಪ್ರಾಯದವರ ಮತ್ತು ಥರ್ಡ ಪ್ರಾಯದವರ ಕಿವಿಯಿಂದ ರಕ್ತವಾಗಲಿ ಕೀವು ಆಗಲಿ ನೀರಿನಂಥ ದ್ರವವಾಗಲಿ ಹೊಸಾಗಿ ಅಥವಾ ಬಹುಕಾಲದಿಂದ ಹರಿಯುತ್ತಿದ್ದರೆ ಮತ್ತು ಅದರ ಮೂಲಕ ನೋವು ಕಿವುಡುತನ ತುರುಸುವಿಕೆಯೂ ಇರುತ್ತಿದ್ದರೆ, ಇದರ ಉಪಯೋಗದಿಂದ ಬಹು ಬೇಗನೇ ಸಂಪೂರ್ಣ ಗುಣವು ಪ್ರಾಪ್ತವಾಗುವದು. ಕ್ರಯ ರೂ. ೧ ಖರ್ಚು ಆಣೆ ೩.

ವ್ಹಿ. ಪಿ. ಯಿಂದಲೂ ರವಾನಿಸುವೆವು. ಇನ್ನೂ ಅನೇಕ ಉತ್ತಮವಾದ ಔಷಧಗಳ ಬಗ್ಗೆ ನಮ್ಮ ಕ್ಯಾಟಲಾಗು ತರಿಸಿ ಓದಿ ನೋಡಿ. ನಮ್ಮ ವಿಳಾಸವೇನಂದರೆ.—

ರಾಜವೈದ್ಯ ಮತ್ತು ಕಂಪನಿ, ಬೀಳಗಿ ಉತ್ತರ ಕನ್ನಡಾ ಜಿಲ್ಲಾ.

## ROBINSON'S PATENT BARLEY.

## ರಾಬಿನ್‌ಸನ್‌ಯವರ ಬಾರ್ಲಿ ಹಿಟ್ಟು.

ಸರಕಾರದಲ್ಲಿ ರಿಜಿಸ್ಟರಾಗಿದೆ

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಎಪೆಗೋಧಿಯಿಂದ ಮಾಡಿದೆ. ಹಸ್ತ ಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾರಾದ್ದರಿಂದ ಖಾತಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

## MELLIN'S FOOD.

### ಮೆಲಿನ್ ಮುಖ್ಯ ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮೂಳೆಗಳೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯ ಕಷ್ಟಮುಖ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಪಾಕ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಸೇವಿಕೆಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ದಿನಸು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಸಿಡುಬು ಹಾಕಿದ ಕಾಲದಲ್ಲಿಯೂ ಶೈಶವದಲ್ಲಿಯೂ ಒದಗುವ ಮಿಶ್ರವಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುರುತುಪದಾರ್ಥವು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ತಕ್ಕದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ದೃಢಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ಕಡೆಯ ಮಟ್ಟಿಗೆ ಕಡಮೆಮಾಡುತ್ತದೆ.

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಷಾಪುಗಳಿಗೂ ಬರೆದು ತರಿಸಿಕೊಳ್ಳಬಹುದು.—

ಏಡನ್ :—ಮೆ॥ ಕಾವಸಿ ದಿನ್‌ಷಾ ಬ್ರದರ್ಸ್.

ಬೊಂಬಾಯಿ :—ಮೆ॥ ಲೇಕಂ ಅಬೆರ್‌ಕ್ರಾಂಬಿ ಕಂಪೆನಿ.

ಕಲ್ಕತ್ತಾ :—ಮೆ॥ ಮೆಕ್ಕೆಂಜೀ ಲಯಲ್ ಕಂಪೆನಿ.

ಕೊಲಂಬೋ :—ಮೆ॥ ಕಾರ್ಗಿಲ್ಸ್ ಕಂಪೆನಿ.

ಕರಾಚಿ :—ಮೆ॥ ಎಚ್. ಜೆ. ರುಸ್ತುಂಜಿ ಕಂಪೆನಿ.

ಮದ್ರಾಸು :—ಮೆ॥ ಓಕ್ ಕಂಪೆನಿ.

ರಂಗೂನ್ :—ಲೇಕಂ ಬ್ರಾಕ್ ಕಂಪೆನಿ.

## ಬೇಕಾಗಿದೆ.

ಕೋಳ್ಳೇಗಾಲದ ಗಂಡು ಹುಡುಗರ ಸ್ಕೂಲಿಗಾಗಿ ಅಕ್ಷರ ಶಾಸ್ತ್ರ ಹೇಳಿ ಕೊಡುವ ಒಬ್ಬ ಮುನಿಷಿಯು ಬೇಕು. ಕ್ರೈಸ್ತರಾಗಿರ ಉತ್ತಮ. ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

"ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು.

## ದೊಡ್ಡ ಸೈಜಿನ ಪೋಸ್ಟ್ ಕಾರ್ಡುಗಳು.

ನಮ್ಮಲ್ಲಿ ೩॥ ಅಂ. × ೫॥ ಅಂ. ಅಳತೆಯುಳ್ಳ ಬಗೆ ಬಗೆ ಬಣ್ಣದ ಖಾಲೀ ಕಾರ್ಡುಗಳು ಕ್ರಯಕ್ಕೆ ಸಿದ್ಧವಾಗಿವೆ. ಇದುವರೆಗೆ ಉಪಯೋಗದಲ್ಲಿದ್ದ ಕಾರ್ಡುಗಳಲ್ಲಿ ಬರೆಯುವದಕ್ಕಿಂತಲೂ ಹೆಚ್ಚು ಸಂಗತಿಗಳನ್ನು ಬರೆಯಬಹುದು. ಕ್ರಯ ೧೦೦ಕ್ಕೆ ೫ ಆಣೆ ಮಾತ್ರ.

H. N. RAO BROTHERS,
214 Chikpet,
BANGALORE CITY.


## ನಮ್ಮ ಚಂದಾದಾರರಿಗೆ.

ವೃತ್ತಾಂತ ಪತ್ರಿಕೆಯ ಹೊಸ ವರ್ಷವು ಪ್ರಾರಂಭವಾಗಿರುವದರಿಂದ ಇದು ನಮ್ಮ ಸ್ಥಳದ ಮತ್ತು ಪರಸ್ಥಳದ ಏಜಂಟರುಗಳು ಹಾಲಿ ವರ್ಷದ ಚಂದಾ ವಸೂಲ್ಮಾಡತಕ್ಕ ಕಾಲವಾಗಿದೆ. ವಸೂಲಾದ ಮೊಬಲಗಿಗೆ ರಶೀತಿ ಕೊಡಲು ಅನುಕೂಲಿಸುವಂತೆ ಏಜಂಟರೆಲ್ಲರಿಗೂ ಪ್ರಿಂಟಾದ ರಶೀತಿ ಪುಸ್ತಕಗಳನ್ನು ಕಳುಹಿಸಿರುತ್ತೇವೆ. ಚಂದಾ ಪಾವತಿ ಮಾಡುವವರೆಲ್ಲರೂ ರಶೀತಿಯನ್ನು ಪಡೆದ ಹೊರತು ಮೊಬಲಗನ್ನು ಕೊಡಕೂಡದೆಂದು ಈ ಮೂಲಕ ಸರ್ವರಿಗೂ ತಿಳಿಸಿರುತ್ತೇವೆ.

ಮ್ಯಾನೇಜರ್,
ಮೈಸೂರು. ವೃತ್ತಾಂತ ಪತ್ರಿಕೆ ಆಫೀಸ್.

## ಹೊಸ ಏರ್ಪಾಟು, ಓದಿ ನೋಡಿರಿ

"ವೃತ್ತಾಂತ ಶಾಲಿನಿ" ಎಂಬ ಒಂದು ನೂತನವಾದ ವರ್ತಮಾನ ಪತ್ರಿಕೆಯು (ನ್ಯೂಸ್ ಪೇಪರ್) ಹದಿನೈದು ದಿವಸಗಳಿಗೆ ಒಂದು ಸಲ ಪ್ರಚಾರ ಮಾಡಲ್ಪಡುವುದು. ಈ ಪತ್ರಿಕೆಯಲ್ಲಿ ಹತ್ತು ಜನಗಳಿಗೆ ಉಪಯುಕ್ತವಾದ ವಿಷಯಗಳು ನಿಷ್ಪಕ್ಷಪಾತವಾಗಿ ಬರೆಯಲ್ಪಡುವುವು. ಇದು ವ್ಯಾಕರಣಕ್ಕೆ ಸರಿಯಾದ ವಾಕ್ಯಸರಣಿಯಿಂದ ಕೂಡಿರುವುದು. ಮತ್ತು ಇದರಲ್ಲಿ ಅನೇಕ ಪಾಠಶಾಲೆಗಳ ಪರೀಕ್ಷೆಯ ಪ್ರಶ್ನಪತ್ರಿಕೆಗಳೂ ವಿದ್ಯಾಭಿಮಾನಿಗಳಿಗೆ ಸಹಾಯಕವಾದ ವಿಷಯಗಳೂ ಪ್ರಕಟಿಸಲ್ಪಡುವುವು. ಆದುದರಿಂದ ಈ ಪತ್ರಿಕೆಯು ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಇತರರಿಗೂ ಅನುಕೂಲವಾಗುದು. ಇದರಿಂದ ಸರ್ವ ಜನೋಪಕಾರವಾಗಬೇಕೆನ್ನುವದೇ ಮುಖ್ಯೋದ್ದೇಶವು. ಇದರ ಚಂದಾ ವರ್ಷವೊಂದಕ್ಕೆ ಒಂದು ರೂಪಾಯಿ; ಪೋಸ್ಟೇಜು ಆರು ಆಣೆಗಳು. ಈ ಬರುವ ಜುಲೈ ತಿಂಗಳಿಂದ ಪ್ರಾರಂಭಿಸಲ್ಪಡುವುದು. ಪತ್ರಿಕಾಪೇಕ್ಷೆಯುಳ್ಳವರು ನಮಗೆ ದರಖಾಸ್ತುಗಳನ್ನು ಕಳುಹಿಸಬಹುದು. ಜುಲೈ ತಿಂಗಳಲ್ಲಿ ಚಂದಾ ಹಣವನ್ನು ಕಳುಹಿಸಬೇಕು. ದರಖಾಸ್ತು ಕಳುಹಿಸಿ, ಚಂದಾ ಹಣವನ್ನು ಕಳುಹಿಸದೆ ಇದ್ದರೆ ಅವರಿಗೆ ಮೊದಲನೆ ಪತ್ರಿಕೆಯನ್ನು ಜುಲೈ ತಿಂಗಳಲ್ಲಿ ವಿ. ಪಿ. ಯಾಗಿ ಕಳುಹಿಸುತ್ತೇವೆ. ಗುಣಗ್ರಾಹಿಗಳಾದ ಸರ್ವರೂ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ.

ಯಂ. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು.

## ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.

25

ಈ ಔಷಧವು ಪ್ರತಿ ಮನೆಯವರಿಗೂ ಅಗಾಗ್ಯ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಏಟು ಬಿದ್ದರೂ ಚೂರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋಯಿತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವುಹರವೆಂಬೀ ಔಷಧದ ಒಂದು ಬಾಟ್ಲುಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲು ೧ಕ್ಕೆ ೧ ರೂ., ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು.—

ಟಿ. ಪಿ. ನರಸಿಂಹಲು ಚೆಟ್ಟಿ,
ನಂ ೨, ತಂಬೂನಾಯಕರ ಬೀದಿ,
ಮದರಾಸ್.

## ವೃತ್ತಾಂತ ಪತ್ರಿಕೆ.

ಸ್ ೧೯೦೮ ನೇ ಇಸವಿ ಜೂನ್ ತಾ॥ ೨೫ ನೇ ಗುರುವಾರ

## ಮೈಸೂರು ಸಂಸ್ಥಾನದ ವಿದ್ಯಾಭ್ಯಾಸ ಇಲಾಖೆ.

### ಐದು ಕೊರತೆಗಳು.

ಸನ್ ೧೯೦೭ನೇ ಜೂನ್ ಆಖೈರಿಗೆ ಮುಗಿದ ಈ ಇಲಾಖೆಯ ವರ್ಷದ ರಿಪೋರ್ಟನ್ನು ಕುರಿತು ಸರ್ಕಾರದವರು ಬರೆದಿರುವ ಹುಕುಮನ್ನು ಗೋಚರವಾಗಿ ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಈಚೆಗೆ ಇನಾಸ್ಪೆಕ್ಟರ್ ಜನರಲ್‌ರವರ ಆಫೀಸಿಂದ ಸಂಪೂರ್ಣವಾದ ರಿಪೋರ್ಟು ಸಹ ನಮಗೆ ತಲಪಿರುವದು. ಈ ಇಲಾಖೆಯಲ್ಲಿ ಕೆಲವು ಕೊರತೆಗಳುಂಟೆಂದು ಮೆ॥ ಭಾಭಾ ಯವರು ಅಭಿಪ್ರಾಯ ಪಡುತ್ತಾರೆ. ಅವುಗಳಲ್ಲಿ ಮುಖ್ಯವಾದ ಕೊರತೆಗಳ್ಯಾವವಂದರೆ.—

೧. ಸ್ಕೂಲುಗಳನ್ನು ಮೇಲ್ವಿಚಾರಣೆ ಮಾಡತಕ್ಕ ಸಿಬ್ಬಂದಿ ಸಾಲದು. ಈ ಸಾಲಿನಲ್ಲಿ ಕೆಲವು ಸ್ಕೂಲುಗಳನ್ನು ತನಿಖೆಮಾಡಲು ಆಗಲೇ ಇಲ್ಲ. ಸ್ಕೂಲುಗಳ ಸಂಖ್ಯೆ ಹೆಚ್ಚುತ್ತಾ ಬರುಗಲಾ ಅವುಗಳನ್ನು ತೃಪ್ತಿಕರವಾಗಿ ತನಿಖೆಮಾಡುತ್ತಾ ಬರುವದು ಕಷ್ಟವಾಗುವದು.

೨. ಮೈಸೂರು ನಾರ್ಮಲ್ ಸ್ಕೂಲಿಗೆ ಒಂದು ಹೊಸ ಕಟ್ಟಡ ಅಗತ್ಯವಾಗಿದೆ. ಉಪಾಧ್ಯಾಯರನ್ನು ತರಬೇತು ಮಾಡುವದು ಬಹಳ ಅವಶ್ಯವಾದದ್ದು. ಈ ವಿಷಯದಲ್ಲಿ ಮದರಾಸ್ ಸರ್ಕಾರದವರು ಸಾಹಸಪಡುತ್ತಿದ್ದಾರೆ. ಮೈಸೂರಿನಲ್ಲಿರುವ ನಾರ್ಮಲ್ ಸ್ಕೂಲ್ ಕಟ್ಟಡವನ್ನು ದೊಡ್ಡದಾಗಿ ಮಾಡಬೇಕಾಗಿದೆ.

೩. ಗ್ರಾಮಾಂತರಗಳ ಪಾಠಶಾಲೆಗಳಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರುಗಳ ಸಂಬಳವು ಕಾಲಕ್ರಮದಲ್ಲಿ ಹೆಚ್ಚುತ್ತಾ ಬರುವಂತೆ ಏರ್ಪಾಡು ಮಾಡಬೇಕು. ಇದು ತುಂಬಾ ಅವಶ್ಯವೆಂದು ನಮಗೆ ತೋರುತ್ತಿದೆ.

೪. ಗ್ರಾಮಾಂತರಗಳಲ್ಲಿ ಪಾಠಶಾಲೆಗಳನ್ನು ಕಟ್ಟುವಂತೆ ಹೆಚ್ಚು ಹಣ ಸ್ಯಾಂಕ್ಷನ್ ಆಗಬೇಕು. ಪ್ರೈಮರಿ ವಿದ್ಯಾಭ್ಯಾಸವನ್ನು ವಿಶೇಷವಾಗಿ ಹರಡಿಸುವದೇ ನಮ್ಮದು ತುಂಬಾ ಅವಶ್ಯವಾಗಿರುವದು. ಕಾಲಕ್ಕಾಗಲೇ ಪರಿಮಿತ ಹಣ ಖರ್ಚಾಗಿ ಹೋಗುತ್ತಿದೆ. ಈಗ ಪ್ರೈಮರಿ ಸ್ಕೂಲುಗಳೂ, ಅವುಗಳಿಗೆ ಯೋಗ್ಯವಾದ ಕಟ್ಟಡಗಳೂ ಬೇಕಾಗಿಲ್ಲ; ಇವೆರಡೂ ದೊಡ್ಡ ಕೊರತೆಗಳಾಗಿರುತ್ತವೆ. ಇನಸ್ಪೆಕ್ಟರ ಸ್ವಲ್ಪ ಫೀಜನ್ನು ಹಾಕಿ ಹುಡುಗರಿಂದ ವಸೂಲ್ಮಾಡಬೇಕು. ಗ್ರಾಮಾಂತರ ಪಾಠಶಾಲೆಗಳ ಕಮಿಟಿ ಮೆಂಬರುಗಳು ಸ್ಕೂಲುಗಳನ್ನು ವಿಶೇಷ ಶ್ರದ್ಧೆಯಿಂದ ಮೇಲ್ವಿಚಾರಣೆ ಮಾಡುತ್ತಿದ್ದಾರೆಂದು ಇನಾಸ್ಪೆಕ್ಟರ್ ಜನರಲ್‌ರವರು ತಿಳಿಸುತ್ತಾರೆ. ಇದಕ್ಕಾಗಿ ನಾವು ತುಂಬಾ ಸಂತೋಷಪಡುವೆವು.

೫. ಅವರೆ ಹೆಣ್ಣು ಮಕ್ಕಳ ಪಾಠಶಾಲೆಗಳ ಕಮಿಟಿ ಮೆಂಬರುಗಳು ಆ ಪಾಠಶಾಲೆಗಳ ಕಾರ್ಯಗಳನ್ನು ಅಷ್ಟು ಮುತುವರ್ಜಿಯಾಗಿ ನೋಡಿಕೊಳ್ಳುತ್ತಿಲ್ಲವೆಂದು ವಿಷಾದಪಡುತ್ತೇವೆ. ಈ ಸ್ಕೂಲುಗಳನ್ನು ಪ್ರೋತ್ಸಾಹಪಡಿಸಿ ಅಭಿವೃದ್ಧಿಗೆ ತರುವದಕ್ಕೆ ಒಳ್ಳೇ ಯೋಗ್ಯರಾಗಿಯೂ ದೊಡ್ಡ ಮನುಷ್ಯರಾಗಿಯೂ ಇರುವಂಥಾ ಜನರನ್ನೇ ಕಮಿಟಿ ಮೆಂಬರುಗಳಾಗಿ ಸೇರಿಸುತ್ತಾ ಬಂದರೆ ಈ ಉದ್ದೇಶವು ನೆರವೇರುವದು. ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಮೇಲಿರದ ಕ್ಲಾಸುಗಳಿಗೆ ಮಹಿಳೆಯರು ದೊರಕುವದು ತುಂಬಾ ಪ್ರಯಾಸವೆಂಬದಾಗಿ ಮೆ॥ ಭಾಭಾ ಯವರು ಹೇಳುತ್ತಾರೆ. ಹೀಗಾಗಲು ಬಾಲ್ಯವಿವಾಹಗಳೂ, ತಂದೆತಾಯಿಗಳ ಅಸಡ್ಡೆಯೂ ಮುಖ್ಯ ಕಾರಣಗಳೆಂದು ಅವರು ಹೇಳಿರುವ ಮಾತು ಯಥಾರ್ಥವೇ ಸರಿ ಎಂದು ನಾವು ಒಪ್ಪಿಕೊಳ್ಳುತ್ತೇವೆ. ಇದಲ್ಲದೆ ವಿದ್ಯಾಭ್ಯಾಸ ಮಾಡತಕ್ಕ ಹುಡುಗಿಯರಿಗೆ ಗೌವರ್ನಮೆಂಟಿನವರು ಹೆಚ್ಚು ಹೆಚ್ಚಾಗಿ ವೇತನಗಳನ್ನು ಕೊಡುವದು ಒಳ್ಳೇ ಕ್ರಮವಲ್ಲವೆಂಬದಾಗಿಯೂ, ಅದನ್ನು ತಪ್ಪಿಸಬೇಕೆಂತಲೂ ಅಭಿಪ್ರಾಯಪಡುವೆವು. ಈ ವೇತನಗಳಿಂದ ಸ್ತ್ರೀ ವಿದ್ಯಾಭಿವೃದ್ಧಿಗೆ ಪ್ರೋತ್ಸಾಹವಾಗುವದಕ್ಕೆ ಬದಲಾಗಿ ಅಡಚಣೆಯುಂಟಾಗಿದೆ. ತುಂಬಾ ಬಡವರಾಗಿಯೂ ಚನ್ನಾಗಿ ವಿದ್ಯಾಭ್ಯಾಸಮಾಡತಕ್ಕವರಾಗಿಯೂ ಇರುವಂಥಾ ಬಾಲಕಿಯರಿಗೆ ಜೀವನಕ್ಕೆ ಬೇಕಾಗುವಷ್ಟು ವೇತನವನ್ನು ಕೊಡಬೇಕು. ಮದರಾಸ್ ಸರ್ಕಾರದವರು ಈ ವಿಷಯದಲ್ಲಿ ಇಟ್ಟುಕೊಂಡಿರುವ ಆಚರಣೆಯನ್ನು ಮೈಸೂರಿನಲ್ಲೂ ಜಾರಿಗೆತರಬೇಕೆಂತಲೂ, ಈಗಿರುವ ಹೆಚ್ಚು ದರಗಳ ವೇತನಗಳನ್ನು ಕಡಿಮೆಮಾಡಬೇಕೆಂತಲೂ ಸೂಚಿಸುತ್ತೇವೆ.

## ದಿವಾನ್‌ರು ಗುಬ್ಬಿಗೆ ಹೋಗಿಬಂದದ್ದು.

ಹಿಂದಿನ ಭಾನುವಾರ ನಮ್ಮ ದಿವಾನ್ ಸರ್ ವಿ. ಪಿ. ಮಾಧವರಾಯರು ... ಸರ್ ಪಿ. ಎನ್. ಕೃಷ್ಣಮೂರ್ತಿಯವರು ಗುಬ್ಬಿಗೆ ದಯಮಾಡಿದ್ದಾಗ ಅಲ್ಲಿನ ಪ್ರಜೆಗಳು ಸೇರಿ ಅವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು. ಮಿಡ್ಲ್‌ಸ್ಕೂಲನ್ನು ಅಲಂಕಾರಮಾಡಿ, ಅಲ್ಲಿ ಒಂದು ಸಭೆ ನಡೆಸಲ್ಪಟ್ಟಿತು. ಮೆ॥ ಗಳಾದ ಪಿ. ವೆಂಕಟನಾರಣಪ್ಪರಾಯರು, ಪಿ. ಶ್ರೀನಿವಾಸರಾಯರು, ಎಲ್. ಕೃಷ್ಣರಾಯರು, ಟಿ. ಸೀತಾರಾಮರಾಯರು ಮೊದಲಾದ ದೊಡ್ಡಮನುಷ್ಯರೂ ಸಭಾ ಸದಸ್ಯರು.

ಪುರನಿವಾಸಿಗಳು ಸರ್ ಕೃಷ್ಣಮೂರ್ತಿಯವರಿಗೆ ಸುಖಾಗಮನವನ್ನು ಬಯಸಿ ಅವರನ್ನು ಕುರಿತು ತಿಳಿಸಿದ್ದೇನಂದರೆ - ನಿಮ್ಮ ಹಿರಿಯರು ದಿವಾನ್ ಪೂರ್ಣಯ್ಯನವರು ಈ ಸಂಸ್ಥಾನಕ್ಕೆ ಮಹದುಪಕಾರವನ್ನು ಮಾಡಿರುತ್ತಾರೆ. ಅಂಥಾವರ ವಂಶೀಕರಾದ ತಮ್ಮನ್ನು ಘನವುಳ್ಳ ವೈಸ್‌ರಾಯಿ ಲಾರ್ಡ್ ಕರ್ಜನ್ ಪ್ರಭುಗಳು ಇಂಥಾ ಶ್ರೇಷ್ಠಪದವಿಗೆ ತಂದಿಟ್ಟದ್ದಕ್ಕಾಗಿ ನಾವುಗಳೆಲ್ಲಾ ತುಂಬಾ ಕೃತಜ್ಞರಾಗಿರುವೆವು. ತಾವು ರಾಜ್ಯಭಾರ ಕಾರ್ಯಗಳನ್ನು ನಡಸುವದರಲ್ಲಿ ತಮ್ಮ ಅಪಾರವಾದ ಶಕ್ತಿ ಸಾಮರ್ಥ್ಯಗಳನ್ನೂ ವಿವೇಕವನ್ನೂ ಪ್ರಕಾಶಪಡಿಸುತ್ತಿರುವದನ್ನು ನೋಡಿ ನಾವು ಪರಮಾನಂದ ಪಡುತ್ತಿದ್ದೇವೆ.

ಸರ್ ಪಿ. ಎನ್. ಕೃಷ್ಣಮೂರ್ತಿಯವರು ಪ್ರಜೆಗಳು ಮಾಡಿದ ಸತ್ಕಾರವನ್ನು ಪರಿಗ್ರಹಿಸಿ ಸಂತೋಷ ಪೂರ್ವಕವಾಗಿ ಉತ್ತರ ದಯಪಾಲಿಸಿದ್ದೇನಂದರೆ —ಸುಮಾರು ನೂರುವರ್ಷಗಳ ಹಿಂದೆ ನಮ್ಮ ಮುತ್ತಾತಂದಿರು ನಡಸಿದ ಪ್ರಜೋಪಕಾರ ಕಾರ್ಯಗಳನ್ನು ನೀವೀಗ ನನ್ನ ನೆನಪಿಗೆ ತಂದದ್ದು ನನ್ನಲ್ಲಿ ತುಂಬಾ ಸಂತೋಷವನ್ನುಂಟುಮಾಡಿದೆ. ಆ ಕಾರ್ಯಗಳನ್ನೇ ನಾನು ಮೇಲ್ಪಂಕ್ತಿಯಾಗಿಟ್ಟುಕೊಂಡು ಅನುಕೂಲವಾದಷ್ಟಾಗಲ್ಲಾ ಈ ಸಂಸ್ಥಾನದ ಪ್ರಜೆಗಳಿಗೆ ಉಪಕಾರಮಾಡಲು ಸಾಹಸಪಡುವೆನು. ಸದ್ಯ ನಾನು ಇಲ್ಲಿಗೆ ಬಂದಿರುವದು ನಮ್ಮ ನೆಂಟರಮನೆಯಲ್ಲಿ ನಡೆಯುವ ವಿವಾಹಕ್ಕೋಸ್ಕರವೇ ಆದರೂ ಗುಬ್ಬಿಯ ಪ್ರಜೆಗಳ ಯೋಗಕ್ಷೇಮ ಮುಂತಾದ್ದನ್ನು ಈ ಸಂದರ್ಭದಲ್ಲೇ ವಿಚಾರಿಸಿ ತಿಳಿದುಕೊಳ್ಳಬೇಕೆಂದು ಕುತೂಹಲಪಡುವೆನು. ಈಗ ಶ್ರೀಮನ್ ಮಹಾರಾಜರವರು ಸ್ವತಂತ್ರವಾಗಿ ರಾಜ್ಯಭಾರವನ್ನು ನಡಸುತ್ತಾ ಬಂದಿದ್ದಾರೆ. ಅವರು ತುಂಬಾ ಶ್ರದ್ಧೆಯಿಂದಲೂ ಪ್ರೀತಿ ಪೂರ್ವಕವಾಗಿಯೂ, ಪ್ರಜೆಗಳಿಗೆ ಸೌಖ್ಯವನ್ನುಂಟುಮಾಡಬೇಕೆಂಬ ಕುತೂಹಲಭರಿತರಾಗಿಯೂ ಕಾರ್ಯಗಳನ್ನು ನಡಸುತ್ತಿರುವರು. ಇದರಿಂದ ಈ ರಾಜ್ಯಭಾರದ ಪ್ರತಿಯೊಂದು ಶಾಖೆಯೂ ಉತ್ತಮವಾದ ಸ್ಥಿತಿಯಲ್ಲಿರುವದು. ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡತಕ್ಕ ಕಾರ್ಖಾನೆಯನ್ನು ನೋಡಿ. ಇದು ಹೋದವರುಷ ಪೂರ್ತಿಯಾಗಿ ಕೆಲಸನಡೆಯುತ್ತಿದೆ; ಚಿನ್ನದ ಗಣಿಗಳಿಗೆ ೬೦೦೦ ಕುದುರೆ ಬಲದಷ್ಟು ವಿದ್ಯುಚ್ಛಕ್ತಿಯನ್ನು ಅದು ಕಳುಹಿಸುತ್ತಿರುವದು. ಇದರಿಂದ ಕಳೆದ ಆಗೀಸ್ಟು ಮೊದಲುಗೊಂಡು ತಿಂಗಳೊಂದಕ್ಕೆ ಒಂದೂವರೆ ಲಕ್ಷ ರೂಪಾಯಿಯಂತೆ ಹುಟ್ಟುವಳಿ ಆಗುತ್ತಿದೆ. ಸರ್ಕಾರದವರು ಇನ್ನೂ ೨೦ ಲಕ್ಷ ರೂಪಾಯಿ ಖರ್ಚುಮಾಡಿ, ಈ ಕಾರ್ಖಾನೆಯನ್ನು ಬೆಳಯಿಸಬೇಕೆಂತಲೂ, ಅದರಿಂದ ಇನ್ನೂ ೭,೦೦೦ ಕುದುರೆ ಬಲದಷ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಬೇಕೆಂತಲೂ ಆಲೋಚನೆ ಮಾಡುತ್ತಿದ್ದಾರೆ. ಈ ಕಾರ್ಯವು ಒಂದೆರಡು ವರುಷಗಳಲ್ಲೇ ಸಿದ್ಧಿಯಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಚಿನ್ನದ ಗಣಿಗಳಿಗೆ ನೀರು ಒದಗಲಿಲ್ಲವೆಂದು ಕೆಲವು ಗಣಿಗಳಲ್ಲಿ ಚಿನ್ನ ತೆಗೆಯುವ ಕೆಲಸವೇ ನಿಂತುಹೋಯಿತು. ಈ ಸಂಗತಿಯನ್ನು ಕೇಳಿ ಶ್ರೀಮನ್ ಮಹಾರಾಜರವರು ೧೨ ಲಕ್ಷ ರೂಪಾಯಿ ಸ್ಯಾಂಕ್ಷನ್ಮಾಡಿ, ಚಿನ್ನದ ಗಣಿಗಳಿಗೆ ನೀರು ಸರಬರಾಜು ಮಾಡಿಸಬೇಕೆಂದು ಅಪ್ಪಣೆಕೊಡಿಸಿರುತ್ತಾರೆ. ಇದಲ್ಲದೆ ರೈತಪ್ರಜೆಗಳ ಪ್ರಯೋಜನಕ್ಕಾಗಿ ಅನೇಕ ನಿರಾವರಿ ಕಾಮಗಾರಿಗಳನ್ನು ಮಾಡಿಸುವಂತೆ ಅಪ್ಪಣೆ ಕೊಡಿಸಿರುವರು. ನಿಮ್ಮ ಡಿಸ್ಟ್ರಿಕ್ಟಿಗೆ ಸೇರಿದ ಮಾರಕಣಿವೆ ಕೆರೆ ಕಾಮಗಾರಿಯೇ ದೃಷ್ಟಾಂತವಾಗಿದೆ. ಇನ್ನೂ ಅನೇಕತರದ ಬದಲಾವಣೆಗಳು ಆಗುವದರಲ್ಲಿವೆ. ಈ ವಿಷಯಗಳನ್ನೆಲ್ಲಾ ಮುಂದೆ ಬರುವ ನವರಾತ್ರಿಯಲ್ಲಿ ಶ್ರೀಮನ್ ಮಹಾರಾಜರವರ ಅಪ್ಪಣೆಯನ್ನು ಪಡೆದು ಪ್ರಜೆಗಳಿಗೆ ತಿಳಿಯಪಡಿಸಲು ಒಳ್ಳೆಸಮಯವೆಂದು ತೋರುತ್ತಿದೆ. ಈ ಸಂಸ್ಥಾನದ ಪ್ರಜಾ ಸತ್ಕಾರ್ಯಕ್ಕೆ ಅನುಕೂಲಿಸುವಂಥಾ ಕಾರ್ಯಗಳನ್ನೆಲ್ಲಾ ಸಂದರ್ಭಾನುಸಾರವಾಗಿ ನೆರವೇರಿಸುತ್ತಾ ಬರುವೆವು. ಮುಖ್ಯವಾಗಿ ಶ್ರೀಮನ್ ಮಹಾರಾಜರವರು ಬಹಳ ಕುತೂಹಲದಿಂದ ರಾಜ್ಯಭಾರ ನಡಸುತ್ತಿದ್ದಾರೆ. ಜಾತಿ ಮತರೂಪವರ್ಣ ಭೇದವನ್ನು ನೋಡದೆ ಸಮದೃಷ್ಟಿಯಿಂದ ಅವರು ಆಳ್ವಿಕೆಯನ್ನು ನಡೆಯಿಸುತ್ತಾ ಬಂದ

ಖುವರು. ಇಷ್ಟುಮಟ್ಟಿಗೆ ಪ್ರಜಾ ವಾತ್ಸಲ್ಯವನ್ನಿಟ್ಟುಕೊಂಡಿರುವ ಮಹಾರಾಜರವರ ಆಳ್ವಿಕೆಯು ನಮಗೆ ದೊರಕಿರುವದಕ್ಕಾಗಿ ನಾವುಗಳೆಲ್ಲಾ ತುಂಬಾ ಕೃತಜ್ಞರಾಗಿರಬೇಕು. ಇವರ ರಾಜ್ಯಭಾರದಲ್ಲಿ ಪ್ರಜೆಗಳು ಖಂಡಿತವಾಗಿಯೂ ಸಂಪನ್ನ[illegible]ರಾಗಿ ವೃದ್ಧಿಹೊಂದುತ್ತಾರೆನ್ನುವದಕ್ಕೆ ಸಂಶಯವಿಲ್ಲ. ಸಕಲರೂ ನಮ್ಮ ಶ್ರೀಮನ್ಮಹಾರಾಜರವರಿಗೆ ಆಯುರಾರೋಗ್ಯಾದಿ ಸಂಪತ್ತುಗಳು ಚಿರಕಾಲವಿರುವಂತೆ ದೇವರನ್ನು ಪ್ರಾರ್ಥಿಸೋಣ.

ಅನಂತರ ಬ್ಯಾಂಡ್ ವಾದ್ಯವು ಕರ್ಣಾನಂದವನ್ನುಂಟುಮಾಡಿತು. ಸಭಿಕರಿಗೆಲ್ಲಾ ಹೂವು ತಾಂಬೂಲಾದಿಗಳು ಹಂಚಲ್ಪಟ್ಟವು. ಸಕಲರೂ ಹಸನ್ಮುಖಿಗಳಾಗಿ ಸ್ವಗೃಹಗಳನ್ನು ಕುರಿತು ತೆರಳಿದರು.

## ಕುರುಡರ, ಕಿವುಡುಮೂಗರ ವಿದ್ಯಾಭ್ಯಾಸ.

ಮೈಸೂರು ರಾಜಧಾನಿಯಲ್ಲಿರುವ ಮೂಕಬಧಿರಾಂಧರ ಪಾಠಶಾಲಾ ಆನರರಿ ಸೆಕ್ರೆಟರಿ ಮ॥ ಎಂ. ಶ್ರೀನಿವಾಸರಾಯರು ಕೆಳಗೆ ಕಂಡ ಸಂಗತಿಯನ್ನು ಪ್ರಸಿದ್ಧಪಡಿಸುವಂತೆ ನಮಗೆ ಬರೆದಿರುತ್ತಾರೆ —

"ಈ ಪಾಠಶಾಲೆಯಲ್ಲಿ ಕುರುಡು ಹುಡುಗರಿಗೆ ಬ್ರೈಲ್ ಪದ್ಧತಿ ಪ್ರಕಾರ ಓದುವುದೂ ಬರಿಯುವುದೂ ಕಲಿಸುತ್ತಲ್ಲದೆ ಗಣಿತ, ಭೂಗೋಳ, ಚರಿತ್ರೆಯು ಪಾಠಗಳನ್ನೂ ತಕ್ಕಮಟ್ಟಿಗೆ ಬೋಧಿಸಲಾಗುತ್ತೆ. ಇದಲ್ಲದೆ ಸಂಗೀತವನ್ನೂ, ನೇಯುಗೆ ಮುಂತಾದ ಕೈಗಾರಿಕೆ ಕೆಲಸವನ್ನೂ ಅಭ್ಯಾಸಮಾಡಿಸಲಾಗುತ್ತೆ.

"ಮೂಕ ವಿದ್ಯಾರ್ಥಿಗಳಿಗೆ ಅಮೆರಿಕ್ ಯೂ ಜರ್ಮನ್ ಪದ್ಧತಿಯನ್ನನುಸರಿಸಿ, ಉಚ್ಚಾರಣೆಯನ್ನೂ, ಮರಗೆಲಸ, ಚಿತ್ರದ ಕೆಲಸ, ಚಿತ್ರಕೆಲಸ, ಇತ್ಯಾದಿ ಕೈಗಾರಿಕೆಗಳನ್ನೂ ಕ್ರಮವಾಗಿ ಅಭ್ಯಾಸಮಾಡಿಸಲಾಗುತ್ತೆ.

"ಮೈಸೂರು ಚೀಫ್ ಕೋರ್ಟು ಜಡ್ಜಿಗಳಾದ ಮ॥ ಎ. ರಂಗಸ್ವಾಮಿಯ್ಯಂಗಾರ್, ಬಿ. ಎ., ಬಿ. ಎಲ್. ರವರ ಔದಾರ್ಯದಿಂದ ಪುರಸ್ಕೃತರಾದ ಬಡತಕ್ಕ ಬಡವರಾದ ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೆ ಇನ್ನೂರು ಮಾಹೆಯಾನಾ ೪ ರೂಪಾಯಿಗಳಂತೆ ವಿದ್ಯಾದಾನ ಕೊಡಲಾಗುತ್ತದೆ.

"೧೦ ರಿಂದ ೨೦ ವರುಷ ವಯಸ್ಸುಳ್ಳ ಕುರುಡರನ್ನೂ, ೮ ರಿಂದ ೧೬ ವರುಷ ವಯಸ್ಸುಳ್ಳ ಮೂಕರನ್ನೂ ಈ ಸ್ಕೂಲಿಗೆ ದಾಖಲ್ಮಾಡಿಕೊಳ್ಳಲಾಗುತ್ತೆ. ಈ ಪಾಠಶಾಲೆಗೆ ವಿದ್ಯಾರ್ಥಿಗಳನ್ನು ಸೇರಿಸಲಪೇಕ್ಷೆಯುಳ್ಳವರು ಮೇಲ್ಕಂಡ ಸೆಕ್ರೆಟರಿ ಮ॥ ಎಂ. ಶ್ರೀನಿವಾಸರಾಯರವರಿಗೆ ಅರ್ಜಿ ಬರೆದುಕೊಳ್ಳತಕ್ಕದ್ದು."

## ಒಳದೇಶದ ವರ್ತಮಾನಗಳು.

ಕಳೆದ ವಾರ ನಮ್ಮ ಶ್ರೀಮನ್ಮಹಾರಾಜರವರಿಗೆ ಸ್ವಲ್ಪ ದೇಹಾಲಸ್ಯವುಂಟಾಗಿತ್ತು. ಈಗ ಆರೋಗ್ಯಹೊಂದುತ್ತಾ ಬಂದಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ.

◆◆◆◆

[illegible] ರವರ ಮನೆ [illegible] ಫಂಡಿನ ೧೦ನೇ [illegible] ಪ್ರಕಾರವಾಗಿ [illegible] ವರೆಗೆ ವಸೂಲಾಗಿರುವುದು ರೂ. [illegible] ಜನರು [illegible] ಸಮಾಧಾನ[illegible]

◆◆◆◆

ಮೈಸೂರು ಇಂಜನಿಯರ್ ಇಲಾಖೆಯಲ್ಲಿ ನೌಕರರಾಗಿರುವ ಮ॥ ಜೆ[illegible] ರವರು ಪರೀಕ್ಷೆಗೆ ಹೋಗಿ ಯೂನಿವರ್ಸಿಟಿ ಇಂಜನಿಯರ್ ವಿದ್ಯೆಯನ್ನು ಕಲಿತು [illegible] ಸರ್ಕಾರದವರು ಅವರಿಗೆ ಸಂಬಳ ಕೊಟ್ಟು [illegible]

◆◆◆◆

ಬೆಂಗಳೂರು ದೇವಾಂಗ ಹಾಸ್ಟೆಲ್, ಬಡ[illegible] ಮೈರ, ಸ್ಟೇಷನ್ ಲೋಕಲ್, ಬೆಸ್ಟ್ ಕಾಲೇಜ್, ಗುರುಭಕ್ತ ಯ್ಯನವರ ಸಂಬಂಧಿ. ಈ ಐದು ಮಂದಿ ದೇಶೀಯ ಕ್ರೈಸ್ತರು ಈ ಸಲ ನಡೆದ [illegible] ಉಪಾಧ್ಯಾಯ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುತ್ತಾರೆ.

◆◆◆◆

ತುಮಕೂರಿನಿಂದ ಶಿವಮೊಗ್ಗೆಗೆ ವರ್ಗಾವಣೆ ಮಾಡಿದ್ದ ರೆವ್. ಡಿ. ಎ. ರೀಸ್ ಯವರು ಹಿಂದಿನ ದಿನ ರಂಗಳೂರಿಗೆ ಬಂದು, ಮೈಸೂರು ಮಿಷನ್ ಇಲಾಖೆಯ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಮೊದಲು ೧೮೩೨ನೆ ಇಸವಿಯಲ್ಲಿ ಹಿಂದುಸ್ಥಾನಕ್ಕೆ ಬಂದವರು, ಆಗ ಇವರಿಗೆ ೨೨ ವರುಷ ವಯಸ್ಸಾಗಿತ್ತು.

◆◆◆◆

ಜವಿನಾ ಹಿಡುವಳಿದಾರರು ತಮ್ಮ ಜವಿನಾದಿನಲ್ಲಿರತಕ್ಕ ಗಂಧದ ಮರಗಳಿಗೆ ಯಾವ ವಿಧವಾದ ತೊಂದರೆಯಾದರೂ ಉಂಟಾದರೆ ಕೂಡಲೆ ಆ ಸಂಗತಿಯನ್ನು ಸರ್ಕಾರಕ್ಕೆ ತಿಳಿಸಬೇಕೆಂತಲೂ, ತಪ್ಪಿದರೆ ಶಿಕ್ಷೆಗೆ ಗುರಿಯಾಗುವರೆಂತಲೂ ಕಾನೂನು ಮಾಡಿ ಪ್ರಕಟಿಸಿದ್ದರು. ಈಗ ಈ ಕಾನೂನನ್ನು ರದ್ದುಮಾಡಿದೆ ಎಂಬದಾಗಿ ಸರ್ಕಾರಿ ಗೆಜೆಟ್ಟಿನಲ್ಲಿ ಛಾಯಿಷ್ ಆಗಿದೆ.

◆◆◆◆

ಕಡೂರು ರೈಲ್ವೆ ಅಪಾಯದ ಮೊಕದ್ದಮೆಯಲ್ಲಿ ಬೀರೂರು ಸ್ಟೇಷನ್ ಮಾಸ್ಟರಿಗೂ ಸಿಗ್ನಲರಿಗೂ ಶಿಕ್ಷೆ ಆಗಿತ್ತು. ಅವರು ಬೆಂಗಳೂರು ಸೆಷನ್ಸ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದರು. ಸೆಷನ್ಸ್ ಜಡ್ಜರು ಕೆಳಕೋರ್ಟಿನ ತೀರ್ಮಾನವನ್ನೇ ಖಾಯಂ ಮಾಡಿರುತ್ತಾರೆ. ಈಗ ಅವರಿಬ್ಬರೂ ರೆಸಿಡೆಂಟರವರ ಕೋರ್ಟಿನಲ್ಲಿ ಅಪೀಲ್ ಮಾಡಿಕೊಳ್ಳುವವರಾಗಿದ್ದಾರೆಂದು ಕೇಳುತ್ತೇವೆ.

◆◆◆◆

ಮೈಸೂರು ಗೌವರ್ನಮೆಂಟಿನ ವ್ಯವಸಾಯದ ಇಲಾಖಾ ಮುಖ್ಯ ಹುದ್ದೆದಾರರಾದ ಡಾ॥ ಲೇಮನ್ ಯವರನ್ನು ಇನ್ನೂ ಐದು ವರುಷಗಳ ತನಕ ಅದೇ ಕೆಲಸದಲ್ಲಿ ಇಟ್ಟುಕೊಂಡಿರಬಹುದೆಂದು ಇಂಡಿಯಾ ಗೌವರ್ನಮೆಂಟಿನವರು ಸ್ವೀಕರಿಸಿದಾರೆ. ಇದರಿಂದ ಈ ಸಂಸ್ಥಾನದ ವ್ಯವಸಾಯವಿಷಯಗಳು ಪ್ರಜೆಗಳಿಗೂ ಸರ್ಕಾರಕ್ಕೂ ತುಂಬಾ ಫಲಕಾರಿಯಾಗಲು ಅವಕಾಶವಾಯಿತು.

◆◆◆◆

ಬೆಟ್ ವಿಜಯ [illegible] ರಾಯರ ಕುಟುಂಬ ಕಲ್ಲಮ್ಮನವರು ಈ ತಿಂಗಳು ೧೩ನೇ ತಾ॥ ಶನಿವಾರ ಚಿ॥ ಧನಂಜಯನೆಂಬ ಬಾಲಕನನ್ನು ದತ್ತುಸ್ವೀಕಾರ ಮಾಡಿಕೊಂಡರಷ್ಟೆ. ಆಕೆ ಕಳೆದ ೨೦ನೇ ತಾ॥ ಭಾನುವಾರ ಕಾಲವಾದರು. ಈಗ ಆಕೆ ಬಿಟ್ಟುಹೋಗಿರುವ ಆಸ್ತಿ ಪೋಲಾಗದಂತೆಯೂ ಆ ಬಾಲಕನು ಒಳ್ಳೆ ವಿದ್ಯಾಬುದ್ಧಿ ಕಲಿಯುವಂತೆಯೂ ಸರಿಯಾದ ಏರ್ಪಾಡು ಆದೀತೆಂದು ನಿರೀಕ್ಷಿಸಲ್ಪಟ್ಟಿದೆ.

◆◆◆◆

ತಲಚೇರಿಯಿಂದ ಮೈಸೂರಿಗೂ, ಅರಸೀಕೆರೆಯಿಂದ ಮಂಗಳೂರಿಗೂ ಗೌವರ್ನಮೆಂಟಿನವರು ಲೋಹಮಾರ್ಗಗಳನ್ನು ಹಾಕಿಸಬೇಕೆಂದು ಚರ್ಚೆ ನಡಸುತ್ತಿರುವದಾಗಿ ಮದರಾಸ್ ಪತ್ರಿಕೆಯು ತಿಳಿಸುತ್ತಿದೆ. ಮದರಾಸ್ ಗೌವರ್ನಮೆಂಟು, ಇಂಡಿಯಾ ಗೌವರ್ನಮೆಂಟು, ಮದರಾಸ್ ರೈಲ್ವೆ ಕಂಪನಿ, ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿ, ಇವರು ಮೇಲ್ಕಂಡ ವಿಷಯವಾಗಿ ಕಾಗದಪತ್ರಗಳನ್ನು ನಡಸುತ್ತಿದ್ದಾರೆಂದು ತಿಳಿಯುವದು.

◆◆◆◆

ಕೋಲಾರಕ್ಕೆ ಸೇರಿದ ಉರಿಗಾಂ ಗಣಿಯ ನೌಕರನಾದ ಒಬ್ಬ ಯೂರೋಪ್ಯನು ಯಾವಾಗಲೂ ೧೦೦ ರೂಪಾಯಿನ ಗಂಟನ್ನು ತನ ಬಳಿಯಲ್ಲೇ ಇಟ್ಟುಕೊಂಡಿರುತ್ತಿದ್ದನು. ಇವನಿಗೆ ಅದನ್ನು ಎಲ್ಲಿಡುವದಕ್ಕೂ ಕಳ್ಳರ ಭಯ ಅವಕಾಶಕೊಡುತಿರಲಿಲ್ಲ. ಇಂತವನು ಕಳೆದ ವಾರ ಆ ಗಂಟುಸಹಿತ ಬೌರಿಂಗ್‌ಪೇಟೆಗೆ ಹೋಗಿ ಒಂದು ಸ್ಥಳದಲ್ಲಿ ಮಲಗಿ ನಿದ್ದೆಮಾಡುತ್ತಿದ್ದಾಗ ಯಾರೋ ಆ ಹಣವನ್ನು ಅಪಹರಿಸಿಬಿಟ್ಟರು. ಈಗ ಹೋಯಿತಲ್ಲಾ ಎಂದು ಅಂಗಲಾಚುತ್ತಿದಾನೆ.

◆◆◆◆

ವಿವಾಹಿತರಾದ ಆರು ಮಂದಿ ಬ್ರಾಹ್ಮಣರು ಬೆಂಗಳೂರಿಗೆ ಬಂದಿದ್ದಾರೆ. ಇವರು ಮದುವೆ ಮಾಡಿಕೊಳ್ಳುವದಕ್ಕೆ ಮೊದಲು ತಲಾ ೨೦೦—೩೦೦ ರೂ. ವಂತೆ ಹುಡುಗಿಯರ ಪೋಷಕರಿಗೆ ಕ್ರಯ ಕೊಟ್ಟು ಇದ್ದಾರೆ. ಆದರೆ ಈಗ ವಿಚಾರಿಸುವಲ್ಲಿ ಆ ಹುಡುಗಿಯರು ಬ್ರಾಹ್ಮಣ ಜಾತಿಯವರೇ ಅಲ್ಲವಂತೆ. ಬ್ರಾಹ್ಮಣರಂತೆ ಅವರಿಗೆ ಉಡಿಗೆ ತೊಡಿಗೆಗಳನು ಮಾಡಿ ಟಕಟಿಮಾಡಿದ ಜಾಗವು ಇವರ ಆ ಹುಡುಗಿಯರನ್ನು ಮದುವೆ ಮಾಡಿಕೊಂಡು ಮೋಸಹೋಗಿರುವ ಹಾಗೂ ಪ್ರಕಟವಾಗಿದೆ.

◆◆◆◆

ಬೆಂಗಳೂರಿನಲ್ಲಿ ಸರ್ಕಾರದವರು ಲಕ್ಷಾಂತರ ದ್ರವ್ಯ ವೆಚ್ಚಮಾಡಿ ವಿಕ್ಟೋರಿಯಾ ಆಸ್ಪತ್ರೆಯನ್ನು ಕಟ್ಟಿಸಿರುತ್ತಾರಷ್ಟೆ. ರಾಜಧಾನಿಯ ಜನರಿಗೆ ಆಸ್ಪತ್ರೆಯನ್ನು ಕಟ್ಟಿಸಿ ಅದರಂತೆಯೇ ಬಹು ಅಂದವಾದ ದೊಡ್ಡ ಆಸ್ಪತ್ರೆಯನು ಕಟ್ಟಿಸುವವರಾಗಿದ್ದಾರೆಂತಲೂ, ಇದಕ್ಕೆ ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿಯೇ ಖರ್ಚಾಗಬಹುದೆಂತಲೂ ಕೇಳುತ್ತೇವೆ. ಶ್ರೀಮನ್ಮಹಾರಾಜರವರು ಎಲ್ಲಾ ಭಾಗಗಳಲ್ಲಿ ರಾಜಧಾನಿಯನ್ನು ಅಲಂಕರಿಸುವ ಆಲೋಚನೆ ಮಾಡುತ್ತಿರುವರು. ತುಂಬಾ ಶ್ಲಾಘ್ಯವಾದದು.

◆◆◆◆

ಕಳೆದ ವಾರ ರಾಜಧಾನಿಯಲ್ಲಿ ಮೂರು ದಿನ ಕುದುರೆ ಪಂದ್ಯ ನಡೆಯಿತು. ಮೂರು ದಿನಕ್ಕೂ ಸೇರಿ ೧೮ ಸಲ ಕುದುರೆಗಳು ಓಡಿಸಲ್ಪಟ್ಟವು. ಲೆಫ್ಟಿನೆಂಟ್ ಕರ್ನಲ್ ದೇಶರಾಜೇ ಅರಸಿನವರ ಕುದುರೆಗಳು ಎರಡು ಸಾರೆಯಾದರೆ ಒಂದನೆಯದಾಗಿಯೂ ಮೂರು ಬಾರಿ ಜನರಲ್ಲಿ ಎರಡನೆಯದಾಗಿಯೂ ಓಡಿ ಗೆದ್ದವು. ಸುಮಾರು ೬,೦೦೦ ರೂಪಾಯಿತನಕ ಅವರಿಗೆ ಇನಾಮು ಬಂದಿರಬಹುದೆಂದು ತೋರುತ್ತದೆ. ಈ ಕುದುರೆ ಪಂದ್ಯಗಾಗಿ ಬಂದಿದ್ದ ಸುಮಾರು ೬೦ ಮಂದಿ ಯೂರೋಪಿಯನ್ ಮತ್ತು ದೇಶೀಯ ಸರ್ದಾರರೆಲ್ಲಾ ವಾಪಸು ಪ್ರಯಾಣ ಮಾಡಿದರು. ಇವರಿಗೆ ಶ್ರೀಮನ್ಮಹಾರಾಜರವರು ಶ್ರೇಷ್ಠವಾದ ಬಿಡಾರಗಳನ್ನು ಬಿಡಿಸಿ, ಸಕಲ ಸೌಕರ್ಯಗಳನ್ನೂ ಕಲ್ಪಿಸಿಕೊಟ್ಟು, ಬಾರೀ ಔತಣ ಮಾಡಿಸಿ ಸಂತೋಷಪಡಿಸಿ ಕಳುಹಿಸಿಕೊಟ್ಟರು.

## ಮೈಸೂರು ಗೆಜೆಟ್ ಸಂಗ್ರಹ.

ವರ್ಗಾವಣೆ ಮ॥ ಪಿ. ಭೀಮರಾಯರಿಗೆ ಬದಲಾಗಿ ಸಬ್ ರಿಜಿಸ್ಟ್ರಾರ್ ಮ॥ ಬಿ. ನರಸಿಂಹಯ್ಯಂಗಾರ್ರು ಮೂಡಿಗೆರೆ ಮ್ಯುನಿಸಿಪಾಲಿಟಿ ಮೆಂಬರಾಗಿ ನೇಮಿಸಲ್ಪಟ್ಟಿದಾರೆ.

ಬೆಂಗಳೂರು ಜ್ವರ ಮತ್ತು ಕುಷ್ಠರೋಗಿಗಳ ಆಸ್ಪತ್ರೆ ಭಾರವನ್ನು ವಹಿಸಿರುವ ಅ. ಸರ್ಜನ್ ಮ॥ ಜೆ. ಎಲ್. ಲಕ್ಷ್ಮಣಸ್ವಾಮಿಯವರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ. ಸರ್ಜನ್ ಮ॥ ಸಿ. ಜೆ. ಜನುಮಾನಸಿಂಗ್‌ಯವರಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಶಿವಮೊಗ್ಗ ಸಬ್ ಅ. ಸರ್ಜನ್ ಮ॥ ಎಸ್. ಕೆ. ಹನುಮಂತರಾಯರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚನ್ನಪಟ್ಟಣತಾಲ್ಲೂಕ್ ಅಮಲ್ದಾರ್ ಮ॥ ಎಸ್. ಸೀತಾರಾಮಯ್ಯನವರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡುವ ತನಕ ಕೌನ್ಸೆಲ್‌ಬೇಡ ದ. ಅಮಲ್ದಾರ್ರು ಚನ್ನಪಟ್ಟಣದ ತಾಲ್ಲೂಕ್ ಚಾರ್ಜನ್ನೂ ವಹಿಸಿರತಕ್ಕದ್ದು.

ಗೌವರ್ನಮೆಂಟ್ ಅ. ಸೆಕ್ರೆಟರಿ ಮ॥ ವಿ. ಆರ್. ತ್ಯಾಗರಾಜಯ್ಯರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ॥ ಟಿ. ಕೆ. ವೆಂಕಟವರದೈಯಂಗಾರ್ರಿಗೆ ಕಳೆದ ಫೆಬ್ರವರಿ ೨೩ ರಲ್ಲಿ ಕೊಟ್ಟಿದ್ದ ಮೂರು ತಿಂಗಳ ಪ್ರಿವಿಲೆಜ್ ರಜಾ ಅನುಸರಿಸಿ ಮೂರು ತಿಂಗಳ ಫರ್ಲೋರಜಾ ಕೊಟ್ಟಿದೆ.

ಸಾಗರದ ತಾಲ್ಲೂಕ್ ಅಮಲ್ದಾರ್ ಮ॥ ಜೆ. ಹನುಮಂತರಾಯರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿರಸ್ತೆದಾರ್ರು ತಾಲ್ಲೂಕಿನ ಚಾಲ್ತಿ ಕೆಲಸಗಳ ಭಾರವನ್ನು ವಹಿಸಿರತಕ್ಕದ್ದು.

ಮೈಸೂರು ಡಿಸ್ಟ್ರಿಕ್ಟ್ ಅ. ಕಮಿಷನರ್ ಮ॥ ಸಿ. ದೇವರಾಜೇ ಅರಸಿನವರಿಗೆ ಕೊಟ್ಟಿದ್ದ ಒಂಭತ್ತು ತಿಂಗಳ ರಜವನ್ನು ಇನ್ನು ಒಂದು ತಿಂಗಳು ಹದಿನೈದು ದಿನಗಳು ಜಾಸ್ತಿ ಮಾಡಿದೆ.

ಚಿತ್ರದುರ್ಗತಾಲ್ಲೂಕ್ ಅಮಲ್ದಾರ್ ಮ॥ ವಿ. ಪಾರ್ಥಸಾರಥ್ಯೈಯಂಗಾರ್ರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡುವ ತನಕ ಪೋಲೀಸ್ ಇನ್ಸ್‌ಪೆಕ್ಟರ್ ವಾಸುದೇವರಾವ್‌ಯವರು ತಾಲ್ಲೂಕಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಹೊಸಕೋಟೆ ತಾಲ್ಲೂಕು ಅಮಲ್ದಾರ್ ಮ॥ ಬಿ. ಸಿ. ಕೇಶವಯ್ಯನವರಿಗೆ ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೆದಾರ್ರು ತಾಲ್ಲೂಕ್ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಮಾರಿಕಣಿವೆ ಡಿವಿಜನ್ ಸಬ್ ಅ. ಇಂಜನಿಯರ್ ಮ॥ ಜೆ. ಆರ್. ಲಿವರ್ಟ್ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಒಂದು ತಿಂಗಳು ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ನರಸಿಂಹಸ್ವಾಮಿ ನಾಯಕರನ್ನು ಮೈಸೂರು ಇನ್‌ಫ್ಯಾಂಟ್ರಿ ಎರಡನೇ ರಿಜಿಮೆಂಟಿನಲ್ಲಿ ೨ ನೆ ಗ್ರೇಡ್ ಜಮಾದಾರರನ್ನಾಗಿ ನೇಮಿಸಿಕೊಂಡಿದೆ.

ಇಂಡಿಯಾ ಚಕ್ರವರ್ತಿ ಸಾರ್ವಭೌಮರವರ ವರ್ಷವರ್ಧಂತಿ ಪ್ರಯುಕ್ತ ಈ ತಿಂಗಳು ೨೬ ನೆ ತಾರೀಖು ಶುಕ್ರವಾರ ಎಲ್ಲಾ ಕೋರ್ಟು ಕಛೇರಿ ಪಾಠಶಾಲೆಗಳಿಗೂ ರಜಾ ಕೊಟ್ಟಿದೆ.

## ಕರೆಸ್‌ಪಾಂಡೆನ್ಸ್.

### ಸಮಾಧಾನ.

ಪ್ರಿಯರೇ !

ಈ ನವನಾಗರಿಕ ಕಾಲದಲ್ಲಿ ಮತವಿಷಯವಾಗಿ ನಮ್ಮ ದೇಶೀಯರೂ ತಾವ್ತಾವೇ ವಿವಾದಿಸುವದನ್ನು ನೋಡಿ ಬಹಳ ವ್ಯಸನ ಉಂಟಾಗಿದೆ. ಈ ವಿವಾದದ ವಿಷಯವಾಗಿ ನಾನು ತಮ್ಮೆಲ್ಲರ ಸನ್ನಿಧಿಯಲ್ಲಿ ಕೆಲವು ವಿಷಯಗಳನ್ನು ಎಜ್ಞಾಪಿಸುತ್ತೇನೆ. ಲೋಕದಲ್ಲಿ ಜಾತಿಮತ ಎಂಬ ಶಬ್ದಗಳು ಜನಿ, ಮನ, ಧಾತುಗಳಿಂದ ಹುಟ್ಟಿರುತ್ತವೆ. (ಜನಿ ಪ್ರಾದುರ್ಭಾವೇ ಮನ ಜ್ಞಾನೇ ಅವಬೋಧನೇ) ಹೀಗಿರುವಾಗ ಈ ಧಾತ್ವರ್ಥಗಳನ್ನು ಪರಿಶೀಲಿಸಿ ನೋಡಿದರೆ ಏನೂ ಅದರಲ್ಲಿ ಭೇದವಿಲ್ಲ. ಜಗದೀಶನು ಒಬ್ಬನೆಂದು ನಮ್ಮ ವೇದಗಳೇ ಹೊರೆಯುತ್ತವೆ. ಆ ಜಗದೀಶನ ಕರುಣಾಕಟಾಕ್ಷದಲ್ಲಿ ಎಲ್ಲಾ ಜೀವಿಗಳಿಗೂ ಸಮಾಧಾನವು. ಯಾವಾಗ ಜಗದೀಶನು ಸರ್ವಭೂತಾತ್ಮನಾದನೋ ಆ ತಾನಾವನು ? ಮತವಾವದು ? ಪರರಾರು ? ಹಿಂಸೆ, ಅಸತ್ಯ, ವಂಚನೆ, ಇವೇ ದುಷ್ಕೃತ್ಯಗಳಲ್ಲದೆ ಪರವಲ್ಲ. ಪೂರ್ವದಲ್ಲಿ ಶ್ರುತಿಸ್ಮೃತಿ ಕರ್ತರಾದ ಮಹರ್ಷಿಗಳು ಜ್ಞಾನವೇ ಮುಖ್ಯವೆಂದು ಪ್ರತಿಪಾದಿಸುವರು. ಅವರೆಲ್ಲರ ಮನೋಭಿಪ್ರಾಯವೆಲ್ಲಾ ಕರ್ಮದಿಂದ ಮೋಕ್ಷವೆಂಬುದೂ ಇಂಥಾ ದೇವರಿಂದಲೇ ಸದ್ಗತಿಯೆಂಬುದೂ ಅಲ್ಲ. ಯಾವನ ನಮಸ್ಕಾರವಾಗಲೀ ಸ್ತೋತ್ರವಾಗಲೀ ಸುಜ್ಞಾನಪೂರ್ವಕವಿದ್ದಲ್ಲಿ ಈಶ್ವರ ಪ್ರೀತಿಯೆಂಬುದೇ ಆ ಋಷಿಗಳ ಸಿದ್ಧಾಂತ : ಪ್ರಪಂಚದ ಎಲ್ಲಾ ಮತಸ್ಥಾಪಕರ ಚಿನ್ಹೆಯ ಪ್ರಕೃತಿಯನ್ನೆಲ್ಲಾ ರಾಗದ್ವೇಷಗಳನ್ನು ಬಿಟ್ಟು ಐಕ್ಯಲೋಚನೆಯಲ್ಲಿ ಜ್ಞಾನವೊಂದೇ ಮುಖ್ಯವೆಂದು ತಿಳಿಯಬಿರುವುದು ; ಅಜ್ಞಾನವು ಸರ್ವಸಾಮಾನ್ಯವಾದ್ದಲ್ಲ ; ಆದರೂ ಋಷಿಗಳು ಪೂರ್ವದ ಐಗುಪ್ತ ರಾಜ್ಯದ ಮುಖ್ಯ ಗುರುಗಳಂತೆ ನಮ್ಮ ಜ್ಞಾನೋದಯಕ್ಕಾಗಿಯೇ ಕರ್ಮವನ್ನು ತದಂಗವಾಗಿ ಸ್ಮೃತಿಗಳಲ್ಲಿ ಹೇಳಿದರು. ಆ ಕರ್ಮಾಂಗಗಳಿಂದ ಚತುರನಿಗೆ ಜ್ಞಾನೋದಯವಾಗಬಹುದು. ಹಾಗಲ್ಲದೆ ಜ್ಞಾನಾರ್ಜನೆಗೆ ಪ್ರಯತ್ನಿಸದ ಕೇವಲ ಕರ್ಮನಿಷ್ಠನಿಗೆ ಸದ್ಗತಿಯೆಂದು ಹೇಳಲಾಗುವುದಿಲ್ಲ. ಮೇಲು ಜಾತಿಯವರಿಗೆಲ್ಲಾ ಮೋಕ್ಷವೆಂದೂ ಕೀಳುಜಾತಿಯವರಿಗೆಲ್ಲಾ ನರಕವೆಂದೂ ಹೇಳುವುದು ಅತಿ ಸಾಹಸಕಾರ್ಯ. ಪ್ರಾಚೀನಕಾಲದಲ್ಲಿ ಆರ್ಯರಲ್ಲಿ ನಿಗ್ರಹಾರಾಧನೆಯಿರಲಿಲ್ಲವೆಂಬುದಕ್ಕೆ ಎಷ್ಟೋ ನಿದರ್ಶನಗಳುಂಟು ; ಆ ಕಾಲದ ವರೆಗೆ ಆರ್ಯರು ಮತವೈಷಮ್ಯಗಳಿಲ್ಲದೆ ಸಹೋದರರಾಗಿದ್ದರೋ, ಕೇವಲ ಕರ್ಮಾಂಗಿಗಳಾಗದೆ ಜ್ಞಾನನಿಷ್ಠರಾಗಿದ್ದರೋ, ತಮ್ಮ ದೇಹಸೌಖ್ಯಕ್ಕಿಂತಲೂ ದೇಶಸೌಖ್ಯವು ಹೆಚ್ಚೆಂದು ತಿಳಿದಿದ್ದರೋ, ಬಾಲೆಯರಿಗೆ ಋತುವಿವಾಹ ಬಾಲ್ಯವಿಧವಾವಿವಾಹ ಮೊದಲಾದವುಗಳನ್ನು ನಡೆಯಿಸಿಕೊಂಡು ನಾಗರೀಕರಾಗಿದ್ದರೋ, ದೇಶಾಭಿಮಾನಿಗಳಾಗಿ ಅನೇಕ ಉದ್ಗ್ರಂಥಗಳನ್ನು ಬರೆಯುತ್ತಿದ್ದರೋ, ಕೈಗಾರಿಕೆ ಕುಶಲ ವಿದ್ಯೆಗಳಲ್ಲಿ ಅಪ್ರತಿಮರಾಗಿದ್ದರೋ ಅಂದಿನವರೆಗೆ ಪರದೇಶದ ತುರಷ್ಕಾದಿಗಳಿಗೆ ತಲೆತಗ್ಗಿಸದೆ ಆರ್ಯಯಶಸ್ತಂಭಪ್ರಾಯರಾಗಿ ನಿಂತಿದ್ದರು. ಈಗಲೂ ಇಂಥಾ ಆಂಗ್ಲೇಯ ಪ್ರಭುತ್ವದಲ್ಲಿ ಸರ್ಕಾರದವರು ತಮ್ಮ ತಮ್ಮ ವ್ಯಕ್ತಿಗಳನ್ನನುಸರಿಸುವುದಕ್ಕೆ ಆರ್ಯರಿಗೆ ಅನುಕೂಲ್ಯಗಳನ್ನು ಕಲ್ಪಿಸಿದ್ದಾಗ್ಯೂ ತಮ್ಮ ದುರವಸ್ಥೆಯನ್ನು ಮರೆದು, ಪೂರ್ವ ಸದ್ವೃತ್ತಿಗೆ ಪ್ರಯತ್ನಿಸದೆ ಪ್ರಯೋಜನವಿಲ್ಲದ ಜಾತಿ ಮತಗಳ ಕಾದಾಟದಿಂದ ಕಾಲ ಕಳೆಯುವದನ್ನು ನೋಡಿ ಬಹಳ ವಿಷಾದಿಸಬೇಕಾಗಿದೆ.

ದೇಶಾಭಿಮಾನಿ.

## ಬ್ರಾಹ್ಮಣದಾಸಯ್ಯ ಗುರುದಾಸಯ್ಯನಾದದ್ದು.

(ತಾನೇ ಬರೆದ ವೃತ್ತಾಂತ)

(ಕಳೆದ ವಾರದ ಶೇಷ.)

ಆ ಕಾಲದಲ್ಲಿ ನಾನು ವಾಸಮಾಡುತ್ತಿದ್ದ ಪಕ್ಕದ ಮನೆಯಲ್ಲಿ ಒಂದು ಹೊಸ ಗ್ರಂಥವನ್ನು ಓದುತ್ತಾ ಇದ್ದರು. ಅದರ ಶಬ್ದವು ನನ್ನ ಕಿವಿಗಳಿಗೆ ಆಶ್ಚರ್ಯವಾಗಿ ತೋರಿದ್ದರಿಂದ ಅದರ ಹೆಸರೇನೆಂದು ಆ ಮನೆಯವರನ್ನು ಕೇಳಿದ್ದಕ್ಕೆ ಅನುಭವಾಮೃತವೆಂದು ಹೇಳಿದರು. ಆಗ ನಾನು ಒಂದು ಡಿಪೋವಿಗೆ ಹೋಗಿ ಆಕ್ಟೆ ೧॥ ರೂಪಾಯಿಯನ್ನು ಕೊಟ್ಟು ಒಂದು ಗ್ರಂಥವನ್ನು ತೆಗೆದುಕೊಂಡು ಬಂದೆ. ಅದನ್ನು ನಾನು ಎಂದಿಗೂ ನೋಡಿರಲಿಲ್ಲ ಕೇಳಿದಲೂ ಇಲ್ಲ. ಅದು ಪುರಾಣಗಳ ಹಾಗೆ ಬೀದಿಗಳಲ್ಲಿ ಓದುವಂಥಾದ್ದೂ ಅಲ್ಲ. ವೇದಾಂತಿಗಳು ಮನೆಗಳಲ್ಲಿ ಸೇರಿಕೊಂಡು ಓದುವಂಥಾ ಗ್ರಂಥವಾಗಿತ್ತು. ಅದರಲ್ಲಿ ೧೨ ಅಧ್ಯಾಯಗಳಿದ್ದವು. ಅದನ್ನು ಹದಿಮೂರು ಸಾರಿ ಓದಿದೆನು. ಆದರೆ ಅದರಲ್ಲಿ ಆ ಪರಬ್ರಹ್ಮನೇ ದೇವರಾಗಿಯೂ ಜಗತ್ತಿನ ರೂಪವಾಗಿಯೂ ಅಣುರೇಣು ತೃಣಕಾಷ್ಠಗಳಲ್ಲಿ ವ್ಯಾಪಕನಾಗಿರುವಂಥ ಪರಮಾತ್ಮನಾಗಿಯೂ ಇದ್ದಾನೆಂದು ಬರೆಯಲ್ಪಟ್ಟಿತ್ತು. ಮತ್ತು ಅದರಲ್ಲಿ ನನಗೆ ತಿಳಿಯದಂಥ ಕೆಲವು ಕಠಿನವಾದ ಪದ್ಯಗಳ ಮರ್ಮವನ್ನು ತಿಳಿಯುವದಕ್ಕಾಗಿ ವೇದಾಂತಿಗಳಾದ ಮಠಪತಿಗಳ ಬಳಿಗೆ ಹೋಗಿ ಅವುಗಳ ಅರ್ಥವೇನೆಂದು ಕೇಳಿದ್ದಕ್ಕೆ ಅವರು ಹೇಳಿದ್ದೇನಂದರೆ ನೀವು ಕೇಳುವಂಥ ಅನುಭವಾಮೃತದ ಅರ್ಥವನ್ನು ತಿಳಿಸುವಂಥ ಜ್ಞಾನಸಿಂಧು ಎಂಬ ಗ್ರಂಥವನ್ನು ನೀವು ಚನ್ನಾಗಿ ಓದಿ ಕೆಲವು ವರುಷಗಳ ಮಟ್ಟಿಗೂ ಒಳ್ಳೇ ಗುರುವಿನ ಶುಶ್ರೂಷೆಯನ್ನು ಮಾಡಿದರೆ ಆಗ ನಿಮಗೆ ಅದರ ಅನುಭವವಾಗುತ್ತದೆಂದು ಹೇಳಿದರೆ ಹೊರತು, ನಾನು ಕೇಳಿದ್ದನ್ನು ತಿಳಿಸಲಿಲ್ಲ. ತರುವಾಯ ನಾನು ಬುಕ್ ಡಿಪೋವಿಗೆ ಹೋಗಿ ೪ ರೂಪಾಯಿಗಳನ್ನು ಕೊಟ್ಟು ಆ ಜ್ಞಾನಸಿಂಧು ಎಂಬ ಹೊಸ ಗ್ರಂಥವನ್ನು ಸಹ ತಂದು ನೋಡುವಾಗ ಅದರಲ್ಲಿ ೪೮ ಅಧ್ಯಾಯಗಳಿದ್ದವು. ಅವುಗಳನ್ನು ನಾನು ಆರು ಸಾರಿ ಓದಿ ನೋಡುವಾಗ ಆ ಎರಡರ ತಾತ್ಪರ್ಯವು ಒಂದೇ ಆಗಿತ್ತು. ಅದರಲ್ಲಿ ಆ ಮೊದಲಿನ ಗ್ರಂಥಕ್ಕಿಂತ ಅಗಾಧವಾದ ಮರ್ಮಗಳು ಬಹಳವಾಗಿದ್ದವು. ಆದರೆ ಅವು ಮನುಷ್ಯರ ಬುದ್ಧಿಯನ್ನು ಕುರುಡುಮಾಡಿ ಹುಚ್ಚು ಹಿಡಿಸುವಂಥವುಗಳೇ ಹೊರತು ಜ್ಞಾನಿಗಳಾಗಿ ಮಾಡುವಂಥವುಗಳಲ್ಲವೆಂದು ಕಂಡುಬಂತು. ಯಾಕೆಂದರೆ ಅಂಥಾ ಮರ್ಮಗಳನ್ನು ಒಬ್ಬರಿಂದೊಬ್ಬರು ಬಾಯಿಪಾಠವಾಗಿ ಗಿಳಿಯ ಹಾಗೆ ಕಲಿತುಕೊಳ್ಳುವಂಥ ವೇದಾಂತದ ಗುರುಗಳಿಗೇ ಹೊರತು ಮತ್ಯಾರಿಗೂ ತಿಳಿಯುವದಿಲ್ಲವೆಂಬುವದು ಈಗಲೂ ದೃಷ್ಟಾಂತವಾಗಿದೆ. ಆದರೆ ಅವುಗಳಲ್ಲಿ ಸಾಧಾರಣವಾಗಿ ತಿಳಿಯತಕ್ಕಂಥ ಕೆಲವು ರೂಢಿ ಪದ್ಯಗಳು ಸಹ ಉಂಟು. ಅವುಗಳನ್ನು ಇಲ್ಲಿ ವಿವರಿಸುವದಕ್ಕಾಗದು. ಯಾಕೆಂದರೆ ಜಗತ್ ಸರ್ವಂ ಬ್ರಹ್ಮಮಯಂ ಎಂಬ ಅರ್ಥದಲ್ಲಿ ಅದರ ಸಾರಾಂಶವೆಲ್ಲಾ ಮುಗಿಯುತ್ತದೆ. ಆದರೆ ಅದರಲ್ಲಿ ವಿಧವಿಧವಾದ ಪ್ರಕರಣಗಳ ಅಧ್ಯಾಯಗಳುಂಟು. ಅವುಗಳ ಒಟ್ಟರ್ಥವನ್ನು ನೋಡುವಾಗ ಆ ಪರಬ್ರಹ್ಮನೇ ದೇವರೆಂದು ತಿಳಿಸಿದಾಗ್ಯೂ ಅವನ ಸ್ವಭಾವ ಗುಣಲಕ್ಷಣಗಳ ಚರಿತ್ರೆಯು ನನ್ನ ಮನಸ್ಸಿಗೆ ಬಹಳ ಅಸಹ್ಯವಾಗಿತ್ತು. ಹ್ಯಾಗೆಂದರೆ ಆ ಪರಬ್ರಹ್ಮನು ಜಗತ್ತಿನಲ್ಲಿರುವ ಪಿಣ್ಡ ಗಂಡು ರೂಪಗಳನ್ನು ಧರಿಸಿಕೊಂಡು ಅವುಗಳ ಮೂಲಕವಾಗಿ ಒಳ್ಳೇದನ್ನೂ ಕೆಟ್ಟದ್ದನ್ನೂ ತನ್ನ ಸಂತೋಷದ ಲೀಲೆಗಾಗಿ ಮಾಡುತ್ತಾನೆಂದು ಬರೆಯಲ್ಪಟ್ಟದೆ. ಅಯ್ಯೋ, ಇಂಥಾ ಅವಲಕ್ಷಣವಾದ ಮಾತುಗಳು ದೇವರ ಸ್ವಭಾವಕ್ಕೆ ತಕ್ಕವುಗಳೆಂದು ಯಾರು ತಾನೇ ಒಪ್ಪುವದಕ್ಕಾದೀತು? ಇದನ್ನು ಬಿಟ್ಟರೆ ಬೇರೊಂದು ಮಾರ್ಗವು ನನಗಿರಲಿಲ್ಲ. ಓದುವಂಥ ಅಭ್ಯಾಸವೋ ನನ್ನ ತಲೆ ಬುರುಡೆಯಲ್ಲಿ ನಾಟಿಕೊಂಡಿತ್ತು. ಅಂಥಾ ಅಭ್ಯಾಸವನ್ನು ನಾನು ಬಿಡಲಾರದೆ ತಿರಿಗಿ ಅದನ್ನೇ ಬಹು ತಾಳ್ಮೆಯಿಂದ ಓದುತ್ತಾ, ಚನ್ನಾಗಿ ಪರಿಶೋಧಿಸುತ್ತಾ ಬಂದದರಿಂದ ಅದರಲ್ಲಿ ನನ್ನ ಸದ್ಗತಿಯ ಆವಶ್ಯಕ್ಕೆ ಅನುಕೂಲವಾಗಿರುವಂಥ ಪರಮಗುರುವಿನ ವಿಷಯದಲ್ಲಿ ಎರಡು ವರ್ತಮಾನಗಳು ಸಿಕ್ಕಿದವು. ಅವೇನಂದರೆ—ಗುರುವಿಲ್ಲದೆ ಮೋಕ್ಷವಿಲ್ಲ, ಮೋಕ್ಷದ ಕೀಲು ಅವನ ಕೈಯಲ್ಲಿ ಉಂಟು, ಅವನ ಉಪದೇಶವಿಲ್ಲದವರು ಜೀವನ್ಮುಕ್ತರಾಗುವದಿಲ್ಲವೆಂಬುವದೇ ಆ ಮೊದಲನೇ ವರ್ತಮಾನವು. ಆದರೆ ಈ ಲೋಕದಲ್ಲಿ ಐದು ವಿಧವಾದ ಗುರುಗಳುಂಟೆಂದೂ ಅವರಲ್ಲಿ ಮೊದಲನೇಯವನೇ ದೈವಸ್ವಭಾವದ ಸದ್ಗುರುವು, ಅವನ ಗುಣಲಕ್ಷಣಗಳು ಇಂಥವುಗಳೆಂದೂ, ಎರಡನೆಯವನೇ ರಾಕ್ಷಸ ಸ್ವಭಾವದ ಗುರು, ಅವನ ಗುಣಲಕ್ಷಣಗಳು ಇಂಥವುಗಳೆಂದೂ, ಮೂರನೆಯವನೇ ಪಿಶಾಚ ಸ್ವಭಾವದ ಗುರುವು. ಅವನ ಗುಣಲಕ್ಷಣಗಳು ಇಂಥವುಗಳೆಂದೂ, ನಾಲ್ಕನೆಯವನೇ ನರಸ್ವಭಾವದ ಗುರು, ಅವನ ಗುಣಲಕ್ಷಣಗಳು ಇಂಥವುಗಳೆಂದೂ, ಐದನೆಯವನೇ ಪಶುಸ್ವಭಾವದ ಗುರು, ಅವನ ಗುಣಲಕ್ಷಣಗಳು ಇಂಥವುಗಳೆಂದೂ ೩೩ನೇ ಅಧ್ಯಾಯ ೮೦—೮೫ನೇ ಪದ್ಯಗಳಲ್ಲಿ ಪರಿಷ್ಕಾರವಾಗಿ ಬರೆಯಲ್ಪಟ್ಟಿತ್ತು.

ಎರಡನೇದು, ಆ ಸದ್ಗುರುವೇ ಸಮಸ್ತ ಮನುಷ್ಯರನ್ನು ರಕ್ಷಿಸುವದಕ್ಕಾಗಿ ಲೋಕಕ್ಕೆ ಬಂದು ನರರೂಪದಲ್ಲಿ ಕಾಣಿಸಿಕೊಳ್ಳುವಂಥ ಪರಮಾತ್ಮನಾಗಿದ್ದಾನೆಂದೂ ಆತನ ದಯಾಳುತನವನ್ನೂ ನಿತ್ಯತ್ವವನ್ನೂ, ಬಲವನ್ನೂ, ಮಹಿಮೆಯನ್ನೂ ಕುರಿತು ೪ನೇ ಅಧ್ಯಾಯ ೪೬—೪೭ನೇ ಪದ್ಯಗಳಲ್ಲಿ ಬಹು ಪರಿಷ್ಕಾರವಾಗಿ ವರ್ಣಿಸಲ್ಪಟ್ಟದೆ. ಆದರೆ ಇವುಗಳನ್ನು ಕುರಿತು ನಾನು ಯೋಚಿಸುವಾಗ ಆ ಪರಬ್ರಹ್ಮನ ವಿಷಯದಲ್ಲಿ ಹೇಳಿರುವಂಥ ಭಾಗಕ್ಕಿಂತ ಸದ್ಗುರುವಿನ ವಿಷಯದಲ್ಲಿ ಹೇಳಿರುವ ಭಾಗವು ನನ್ನ ಮನಸ್ಸಿಗೆ ಬಹಳ ಸಂತೋಷವನ್ನು ಉಂಟುಮಾಡಿತು. ಇದರಿಂದ ಅಂಥಾ ಗುರುವನ್ನು ನಾನು ಹ್ಯಾಗೆ ಸಂಪಾದಿಸಲಿ, ಅವನು ನನಗೆ ಸಿಕ್ಕುವದು ಹ್ಯಾಗೆ ಎಂಬ ಚಿಂತೆಯೂ ದಿನದಿನಕ್ಕೆ ನನ್ನಲ್ಲಿ ಹೆಚ್ಚುತ್ತಾ ಬಂತು. ಆದರೆ ಇದೇ ಚಿಂತೆಯಲ್ಲಿ ನಾನು ಪುನಃ ಅದನ್ನೇ ಓದುತ್ತಾ ಇರುವಾಗ, ನನ್ನ ಆದರಣೆಗೆ ತಕ್ಕಂಥ ಬೇರೊಂದು ವರ್ತಮಾನವು ಮತ್ತೊಂದು ಕಡೆಯಲ್ಲಿ ಸಿಕ್ಕಿತು. ಅದೇನಂದರೆ—ಜೀವನ್ಮುಕ್ತರಾಗಬೇಕೆಂದಿರುವವರು ಬಲದಲ್ಲಿರುವಾಗಲೆ ಲೋಕದ ಆಶೆಯನ್ನೂ ಪ್ರಾಣದ ಆಶೆಯನ್ನೂ ತ್ಯಜಿಸಿ ಸದ್ಗತಿಯನ್ನು ಕೊಡುವಂಥ ದೇವಗುರುವನ್ನೇ ಹುಡುಕಿ ಅವನ ಉಪದೇಶದಿಂದ ಮುಕ್ತರಾಗಬೇಕೇ ಹೊರತು ಸಾಯುವ ಕಡೆಯಲ್ಲಿ ಅಂಥವನು ಸಿಕ್ಕುವದಿಲ್ಲವೆಂದು ಬರೆಯಲ್ಪಟ್ಟಿತ್ತು. ಇದರಿಂದ ನನಗೆ ಮತ್ತೂ ಸಂತೋಷವಾಯಿತು. ಯಾಕೆಂದರೆ ಆಗ ನನಗೆ ಲೋಕದ ಆಶೆಯು ಮಾತ್ರವಲ್ಲ, ನನ್ನ ಹೆಂಡತಿ ಮಕ್ಕಳ ಆಶೆಯೇ ನನಗಿರಲಿಲ್ಲ.

ಇದಲ್ಲದೆ ನನ್ನ ದೊಡ್ಡ ಮಗಳು ಆ ಕಾಲದಲ್ಲಿ ವೆಸ್ಲಿಯನ್ ಮಿಷನ್ ಗರ್ಲ್ಸ್ ಸ್ಕೂಲಿನಲ್ಲಿ ಓದುತ್ತಾ ಇದ್ದಳು. ಎರಡನೆ ಮಗಳು ಕೆಳಗಿನ ಕ್ಲಾಸಿನಲ್ಲಿ ಓದುತ್ತಾ ಇದ್ದಳು. ಮೂರನೇ ಮಗಳು ಚಿಕ್ಕವಳು. ಆದರೆ ನನ್ನ ಹೆಂಡತಿಯೂ ನನ್ನ ದೊಡ್ಡ ಮಗಳೂ ಕ್ರಿಸ್ತರಾಗಬೇಕೆಂಬ ಯೋಚನೆಯುಳ್ಳವರಾಗಿದ್ದಾರೆಂದು ಒಂದೊಂದು ಸಮಯದಲ್ಲಿ ನನ್ನ ಸಂಗಡ ಅವರು ಮಾತಾಡುವಾಗ ಸ್ವಲ್ಪಮಟ್ಟಿಗೆ ತೋರುತ್ತಾ ಇತ್ತು. ಆದಾಗ್ಯೂ ಅದನ್ನು ನನಗೆ ನೆಟ್ಟಗೆ ತಿಳಿಸುವದಕ್ಕೆ ಭಯಪಟ್ಟು ಗುಪ್ತವಾಗಿದ್ದರು. ಯಾಕೆಂದರೆ ಆಗ ನನಗೆ ಕ್ರಿಸ್ತನ ಹೆಸರು ಬಹಳ ವಿರೋಧವಾಗಿತ್ತೆಂದು ಅವರಿಗೆ ಚನ್ನಾಗಿ ತಿಳಿದಿತ್ತು. ಇದರಿಂದ ಅವರ ಮನಸ್ಸು ಒಂದು ಕಡೆಗೂ ನನ್ನ ಮನಸ್ಸು ಒಂದು ಕಡೆಗೂ ಎಳೆಯುತ್ತಾ ಇತ್ತು. ಅವರಿಂದ ನನ್ನ ಮಾರ್ಗಕ್ಕೆ ಅಟಂಕವಾಗಿರುವವರನ್ನು ತಿರಿಗಿ ಗುರುವಿನ ನಿಮಿತ್ತವಾಗಿ ಹೊರಡಬೇಕೆಂಬ ಯೋಚನೆಯಿಂದ ನನ್ನ ಹೆಂಡತಿಯನ್ನೂ ಮೂರು ಮಂದಿ ಮಕ್ಕಳನ್ನೂ ಕರಕೊಂಡು ಹೋಗಿ ಆ ಕಾಲದಲ್ಲಿ ವೆಸ್ಲಿಯನ್ ಮಿಷನ್ ಘನ ಪಾದ್ರಿಯವರಾಗಿದ್ದ ಹಾಲ್‌ಪಲ್ ಫೋರ್‌ಯವರಿಗೆ ಒಪ್ಪಿಸಿ ಕೊಟ್ಟು, ಇವರು ನನಗೆ ತಕ್ಕವರಲ್ಲ, ನೀವೇ ಇವರನ್ನು ಸಾಕಿಕೊಳ್ಳಿರೆಂದು ಹೇಳಿ ಬರುವಾಗ, ನನ್ನ ಹೆಂಡತಿ ಮಕ್ಕಳು, ಯಾಕೆ ನಮ್ಮನ್ನು ಇವರ ಕೈಗೆ ಕೊಡುತ್ತಿ ಎಂದು ಕೇಳಲೂ ಇಲ್ಲ, ಅವರ ಬಳಿಯಲ್ಲಿ ಇರುವದಕ್ಕೆ ತೊಂದರೆಯು ಸಹ ಮಾಡಲಿಲ್ಲ. ಸುಮ್ಮನೆ ಇದ್ದರು. ಅವರು ಯಾವ ಕಾರಣದ ನಿಮಿತ್ತವಾಗಿ ಕ್ರಿಸ್ತರಾಗುವದಕ್ಕೆ ಮನಸ್ಸನ್ನು ಒಪ್ಪಿಸಿದರೋ ನನಗೆ ತಿಳಿಯದು.

---

### ಮೈಸೂರು ಸರ್ಕಾರಿ ಮುಖ್ಯಾಂಶಗಳು.

#### ಮ್ಯುನಿಸಿಪಾಲಿಟಿಗಳೂ, ಪ್ರೊಫೆಷ್ ಜವಾನರೂ.

ಪ್ರತಿ ವರುಷವೂ ಕಂದಾಯದ ವಸೂಲಾತಿ ಕಾಲದಲ್ಲಿ ಮ್ಯುನಿಸಿಪಾಲಿಟಿಗಳ ಪ್ರೆಸಿಡೆಂಟರುಗಳು ವಸೂಲಿ ಕೆಲಸಕ್ಕೆ ಪ್ರೊಫೆಷ್ ಜವಾನರನ್ನು ತಂಗಾಮಿಯಾಗಿ ನೇಮಿಸಿಕೊಳ್ಳಬಹುದೇ ಎಂಬದಾಗಿ ಕೋಲಾರದ ಡೆಪ್ಯುಟಿಕಮಿಷನರು ಗವರ್ನಮೆಂಟಿನವರನ್ನು ಕೇಳಿದರು. ಗವರ್ನಮೆಂಟಿನವರು ಅದನ್ನು ಒಪ್ಪಿಕೊಂಡು ಲಾಂಡ್ ರೆವಿನ್ಯೂ ರೂಲುಸು ಅನುಸರಿಸಿ ತಂಗಾಮಿಯಾಗಿ ಜವಾನರನ್ನು ವಸೂಲಾತಿ ಕೆಲಸಕ್ಕೆ ನೇಮಿಸಿಕೊಳ್ಳಬಹುದೆಂದು ಹುಕುಂ ಕೊಟ್ಟದಾರೆ.

❖❖❖❖

#### ಸರ್ಕಾರಿ ಕಟ್ಟಡಗಳೂ ಮ್ಯುನಿಸಿಪಲ್ ತೆರಿಗೆಯೂ.

ಬೆಂಗಳೂರು ಪಟ್ಟಣದಲ್ಲಿರುವ ಸರ್ಕಾರಿ ಕಟ್ಟಡಗಳಿಗೆ ಸೇರಿದಂತೆ ಕೆಲವು ಮನೆಗಳಿರುತ್ತವೆ ಕೆಲವು ಅಧಿಕಾರಿಗಳು ಈ ಮನೆಗಳಲ್ಲಿ ವಾಸಮಾಡುತ್ತಿದ್ದರು. ಇಂಥಾ ಮನೆಗಳಿಗೆ ಮ್ಯುನಿಸಿಪಲ್ ತೆರಿಗೆಯನ್ನೂ ನೀರಿನ ತೆರಿಗೆಯನ್ನೂ ಕೊಡಬೇಕೆಂದು ಸಿಟಿ ಮ್ಯುನಿಸಿಪಾಲಿಟಿಯವರು ೮೨೯ ರೂ. ಗೆ ಬಿಲ್ಲು ಕಳುಹಿಸಿದರು. ಇಂಥಾ ಕಟ್ಟಡಗಳಿಗೂ ತೆರಿಗೆ ಕೊಡಬೇಕೇ ಎಂಬದಾಗಿ ಛೀಫ್ ಇಂಜನಿಯರು ಗವರ್ನಮೆಂಟಿನವರನ್ನು ಕೇಳಿದರು. ಸರ್ಕಾರದವರು ಮ್ಯುನಿಸಿಪಲ್ ತೆರಿಗೆಯನ್ನು ಕೊಡುವದು ನ್ಯಾಯವಾಗಿದೆ ಎಂತಲೂ, ಆ ಪ್ರಕಿ ಮನೆಗೆಂದಾಯವಾದ ೪೫೦ ರೂ ಸರ್ಕಾರದ ಹಣದಿಂದಲೂ, ನೀರಿನ ತೆರಿಗೆಯಾದ ೨೭೩ ರೂ. ವಾಸಮಾಡುತ್ತಿರುವವರಿಂದಲೂ ಕೊಡಿಸಬೇಕೆಂತಲೂ ಹುಕುಂ ಕೊಟ್ಟದಾರೆ.

❖❖❖❖

#### ನೌಕರರನ್ನು ಪೆನ್ಷನ್ ಕೊಟ್ಟು ಕೆಲಸ ಬಿಡಿಸುವದು.

ಒಬ್ಬಾನೊಬ್ಬ ತಾಲ್ಲೂಕ್ ನೌಕರನು ವಯಸ್ಸು ಮೀರಿದವನೆಂತಲೂ, ಅವನಿಂದ ಕೆಲಸ ಜರುಗುವದಿಲ್ಲವೆಂತಲೂ ಹೇಳಿ ಅವನನ್ನು ಪೆನ್ಷನ್ ಕೊಟ್ಟು ಕೆಲಸ ಬಿಡಿಸಬೇಕೆಂದು ಹುಕುಂ ಕೊಟ್ಟ ಸಂಗತಿ ಕಂಟ್ರೋಲರ್ ಸಾಹೇಬರವರಿಗೆ ತಿಳಿದುಬಂತು. ಅದೇ ನೌಕರನನ್ನು ಇನ್ನು ೬ ತಿಂಗಳು ಮಾತ್ರ ಕೆಲಸದಲ್ಲಿಟ್ಟುಕೊಂಡಿದ್ದಿದ್ದರೆ ಅವನಿಗೆ ಈಗ ದೊರೆತ ಪೆನ್ಷನಿಗಿಂತಲೂ ಇನ್ನೂ ಹೆಚ್ಚಾಗಿ ದೊರಕುತ್ತಿತ್ತು. ಆ ನೌಕರನಿಂದ ಕೆಲಸತೆಗೆದುಕೊಳ್ಳುತ್ತಿದ್ದ ಅಧಿಕಾರಿಯು ಅವನು ಕೆಲಸಮಾಡುವದಕ್ಕೆ ಶಕ್ತನಾಗಿದ್ದಾನೆಂದು ಹೇಳಿದರೂ, ಈ ಮಾತನ್ನು ಅಸಿಸ್ಟೆಂಟ್ ಕಮಿಷನರೂ ಡೆಪ್ಯುಟಿಕಮಿಷನರೂ ಲಕ್ಷ್ಯಕ್ಕೆ ತರಲಿಲ್ಲ. ಹೀಗೆ ಮಾಡಿದ್ದು ಸರ್ಕಾರಿ ರೂಲ್ಸಿಗೆ ಅನುಸಾರವಲ್ಲ. ಎಲ್ಲಾ ಅಧಿಕಾರಿಗಳು ಆ ರೂಲ್ಸಿನ ಅಭಿಪ್ರಾಯವನ್ನು ಚನ್ನಾಗಿ ಮನವಟ್ಟುಮಾಡಿಕೊಳ್ಳಬೇಕಾಗಿದೆ ಎಂಬದಾಗಿ ಸರ್ಕಾರದವರು ಅಪೇಕ್ಷಿಸುತ್ತಾರೆ.

❖❖❖❖

#### ರೈತರಿಗೆ ಕೊಟ್ಟಿರುವ ಸರ್ಕಾರಿ ಹಣವು.

ಮೈಸೂರು ಸರ್ಕಾರದವರು ಜಮೀನನ್ನು ಆಬಾದಿಗೆ ತರುವ ಉದ್ದೇಶದಿಂದ ರೈತರಿಗೆ ಸರ್ಕಾರಿ ಹಣವನ್ನು ಸಾಲವಾಗಿ ಕೊಡುತ್ತಾರಷ್ಟೆ. ರೈತರು ಈ ಹಣವನ್ನು ಖರ್ಚುಮಾಡಿ ವ್ಯವಸಾಯದ ಭಾವಿಗಳನ್ನೂ, ನಾಗುವಳಿ ಕಟ್ಟೆಗಳನ್ನೂ, ಜಮೀನು ಹಸನು ಮಾಡುವದನ್ನೂ, ಕೆರೆಗಳ ಆಬಾದನ್ನೂ ಮಾಡಿಕೊಳ್ಳುತ್ತಾರೆ. ಈ ಬಾಬಿಗೆ ಸರ್ಕಾರದವರು ೧೮೯೮—೯೯ನೆ ಸಾಲಿನಿಂದ ೧೯೦೧—೦೨ನೇ ಸಾಲ್ ಆಖೈರು ವರೆಗೆ ಜಮೀನ್ದಾರರಿಗೆ ೧೪,೧೧೯ ಚಿಲ್ಲರೆ ರೂಪಾಯಿ ಅಡ್ವಾನ್ಸು ಕೊಡಿಸಿದಾರೆ. ಈ ಪ್ರಕಿ ೧೦,೦೦೦ ಚಿಲ್ಲರೆ ರೂಪಾಯಿ ೧೯೦೧—೦೨ನೆ ಸಾಲಿನದು. ಈ ಹಣವೆಲ್ಲಾ ವಸೂಲಾಗದೆ ಇನ್ನೂ ಬಾಕಿಯಲ್ಲಿ ನಿಂತಿದೆ ಎಂಬದಾಗಿ ಕಂಟ್ರೋಲರವರು ಸರ್ಕಾರಕ್ಕೆ ತಿಳಿಸಿದರು. ಗವರ್ನಮೆಂಟಿನವರು ೧೯೦೦ನೆ ಸಾಲಿನ ತನಕ ವಸೂಲಾಗದೆ ಉಳಿದಿರುವ ಹಣವನ್ನು ಡೆಪ್ಯುಟಿ ಕಮಿಷನರು ವಸೂಲ್ಮಾಡಬೇಕು; ಇಲ್ಲವೇ ನಾದಾರ್ ಬಾಬನ್ನು ಗವರ್ನಮೆಂಟಿಗೆ ರಿಮಿಷನ್ ಬಗ್ಗೆ ಶಿಫಾರಸು ಮಾಡಬೇಕು. ೧೯೦೨ನೆ ಸಾಲಿನ ಹಣವನ್ನು ಮಾತ್ರ ವಸೂಲ್ಮಾಡಲು ಸರಿಯಾದ ಏರ್ಪಾಡು ಮಾಡತಕ್ಕದ್ದು ಎಂತಲೂ, ಹಿಂದಿನ ಬಾಕಿಯ ವಿಷಯದಲ್ಲಿ ೧೯೦೪ನೆ ಇಸವಿ ಜುಲೈ ೧೫ ರೊಳಗಾಗಿ ಗವರ್ನಮೆಂಟಿಗೆ ರಿಪೋರ್ಟು ಕಳುಹಿಸಬೇಕೆಂತಲೂ ಹುಕುಂ ಕೊಟ್ಟದಾರೆ.

❖❖❖❖

#### ರೈತರಿಗೆ ಅಡ್ವಾನ್ಸು ಕೊಡುವ ವಿಚಾರವು.

ಮೈಸೂರು ಗವರ್ನಮೆಂಟಿನವರು ತಕಾವಿ ರೂಲನ್ನು ಅನುಸರಿಸಿ ೧೯೦೩—೦೪ನೆ ಸಾಲಿನಲ್ಲಿ ೯,೫೦೦ ರೂ. ರೈತರಿಗೆ ಅಡ್ವಾನ್ಸು ಕೊಡಬಹುದೆಂದು ಮಂಜೂರ್ ಮಾಡಿದರು. ಡಿಸ್ಟ್ರಿಕ್ಟುಗಳಿಂದ ಬಂದಿರತಕ್ಕ ಮಾಹೇವಾರಿ ಲೆಕ್ಕಗಳನ್ನು ನೋಡಲಾಗಿ ಈ ಬಾಬಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಜನವರಿ ಆಖೈರು ವರೆಗೆ ೫೦೦ ರೂಪಾಯಿ ಮಾತ್ರ ಅಡ್ವಾನ್ಸು ಕೊಟ್ಟಿರುವಂತೆ ಗೊತ್ತಾಗುವದು. ಚಾಲ್ತಿ ವರುಷದಲ್ಲಿ ಜಮೀನಿನ ಆಬಾದಿಗೂ, ನಾಗುವಳಿ ಬಾವಿಗಳಿಗೂ, ತಕಾವಿಗೂ ರೈತರಿಗೆ ಅಡ್ವಾನ್ಸು ಕೊಡಲು ೨೨,೩೦೦ ರೂ. ಉಳಿದಿವೆ ಎಂಬದಾಗಿ ಕಂಟ್ರೋಲರವರು ತಿಳಿಸುತ್ತಾರೆ. ಈ ಹಣವನ್ನು ಮುಂದೆ ಹೇಳುವಂತೆ ಎಲ್ಲಾ ಡಿಸ್ಟ್ರಿಕ್ಟುಗಳಿಗೂ ಹಂಚಿ ಹಾಕಿರುತ್ತೆ :—

| | | | |
|---|---|---|---|
| ಬೆಂಗಳೂರು | ೨,೫೦೦ | ಹಾಸನ | ೨೦೦ |
| ಕೋಲಾರ | ೭,೦೦೦ | ಶಿವಮೊಗ್ಗೆ | ೨೦೦ |
| ತುಮಕೂರು | ೩,೦೦೦ | ಕಡೂರು | ೨೦೦ |
| ಮೈಸೂರು | ೯,೫೦೦ | ಚಿತ್ರದುರ್ಗ | ೨,೦೦೦ |

ಈ ಬಾಬತು ಹಣವನ್ನು ಡೆಪ್ಯುಟಿಕಮಿಷನರುಗಳು ತುಂಬಾ ಅವಶ್ಯವೆಂದು ಕಂಡುಬರತಕ್ಕ ಸಂದರ್ಭಗಳಲ್ಲಿ ರೈತರಿಗೆ ಮೇಲ್ಕಂಡ ಜಮೀನ್ ಆಬಾದಿನ ವಿಷಯಕ್ಕೆ ಅಡ್ವಾನ್ಸು ಕೊಡತಕ್ಕದ್ದು.

❖❖❖❖

#### ಅಮೃತಮಹಲ್ ಇಲಾಖೆಯ ರಿಪೋರ್ಟು.

ಮೈಸೂರು ಸಂಸ್ಥಾನದ ಅಮೃತಮಹಲ್ ಇಲಾಖೆಯ ೧೯೦೧—೦೨ನೆ ಸಾಲಿನ ರಿಪೋರ್ಟು ಪ್ರಕಟವಾಗಿದೆ. ಮೆ॥ ಎಡ್. ನಂಜುಂಡರಾಜೇ ಅರಸಿನವರು ೧೯೦೨ನೆ ಜನವರಿ ೧೬ರಲ್ಲಿ ಈ ಇಲಾಖೆಯ ಸೂಪರಿಂಟೆಂಡರಾಗಿ ನೇಮಿಸಲ್ಪಟ್ಟರು. ಈ ಸಾಲ್ ಪ್ರಾರಂಭದಲ್ಲಿ ಈ ಇಲಾಖೆಯೊಳಗೆ ೮೩೩೮ ಗೋಕಾಯಿಗಳಿದ್ದವು. ಹೊಸ ಕರುಗಳು ಹುಟ್ಟಿದ್ದೂ, ತಪ್ಪಿಸಿಕೊಂಡು ಹೋದದ್ದು ಸಿಕ್ಕಿದ್ದೂ ಸೇರಿ ಆಖೈರಿನಲ್ಲಿ ಅವುಗಳ ಸಂಖ್ಯೆ ೯,೩೦೯ ಆದವು. ಈ ಪ್ರಕಿ ಕೆಲವು ೧,೧೯೦ ರೂಪಾಯಿಗೆ ಬಿಕರಿ ಮಾಡಲ್ಪಟ್ಟವು. ಸಾಲಾಖೈರಿನಲ್ಲಿ ೮,೬೨೦ ರಾಸುಗಳು ಉಳಿದಿದ್ದವು. ಸಂತೇಮರಹಳ್ಳಿಯಲ್ಲಿ ಜೇಸಿಗೆಯ ಪ್ರತಿ ತಿಂಗಳಲ್ಲೂ ಒಂದಾವರ್ತಿ ಎತ್ತುಗಳನ್ನೂ ಕರುಗಳನ್ನೂ ಹರಾಜಿಗೆ ಕೊಡುತ್ತಾ ಬಂದರು. ಇದರಲ್ಲಿ ಈ ಸಾರಿ ೨೩,೮೭೦ ರೂ. ಉತ್ಪತ್ತಿ ಆಯಿತು; ಅಂದರೆ ಹಿಂದಿನ ಸಾಲಿಗಿಂತ ೧೩,೭೯೪ ರೂ. ಹೆಚ್ಚು. ಇನ್ನು ಮುಂದೆ ಇಂಥಾ ಸಂತೆಗಳಲ್ಲಿ ಅಮೃತಮಹಲ್ ರಾಸುಗಳನ್ನು ವಿಶೇಷವಾಗಿ ಬಿಕರಿ ಮಾಡತಕ್ಕದ್ದೆಂದು ಸರ್ಕಾರದವರು ಅಪ್ಪಣೆ ಕೊಟ್ಟದಾರೆ. ಈ ಇಲಾಖೆಯಲ್ಲಿ ಒಟ್ಟು ೩೧,೨೭೩ ರೂ. ಹುಟ್ಟುವಳಿ ಆಯಿತು; ಅಂದರೆ ಹಿಂದಿನ ಸಾಲಿಗಿಂತ ೧೮,೫೩೭ ರೂ. ಜಾಸ್ತಿ. ಇನ್ನೂ ೩,೪೩೭ ಚಿಲ್ಲರೆ ರೂಪಾಯಿ ಬಾಕಿ ವಸೂಲಾಗದೆ ನಿಂತಿದೆ. ಈ ಸಾಲಿನಲ್ಲಿ ಈ ಇಲಾಖೆಗೆ ೩೭,೭೩೦ ರೂ. ಖರ್ಚಾಯಿತು; ಅಂದರೆ ಹಿಂದಿನ ಸಾಲಿಗಿಂತ ೪೪೨ ರೂ. ಕಡಿಮೆ. ಆರು ಮಂದಿ ದರೋಗರ ಸುಪರ್ದಿಗೂ ಕರುಗಳನ್ನು ಕೊಟ್ಟು, ಅವರ ಮಾಲಿಕ್ ಸಾಕುವದು ಅನುಕೂಲವಾಗಿಲ್ಲವಾದ್ದರಿಂದ ಅಷ್ಟ್ರೇಲಿಯದ ಮತ್ತು ಆ ಕ್ಷೀರದ ಬಾಬತ್ತು ೨೫೦ ಕರುಗಳನ್ನು ಮಾತ್ರ ಇಟ್ಟುಕೊಂಡು, ಉಳಿದವುಗಳನ್ನೆಲ್ಲಾ ಬಿಕರಿಮಾಡುವಂತೆ ಏರ್ಪಾಡು ಮಾಡಿದರು. ಕರ್ನಲ್ ಜೋನ್ಸ್‌ಯವರು ಎರಡು ವರುಷಕ್ಕಾದರೂ ಒಂದಾವರ್ತಿ ಅನುಕೂಲವಾದ ೨ ಇಲ್ಲವೇ ೩ ಸ್ಥಳಗಳಲ್ಲಿ ರಾಸುಗಳನ್ನೆಲ್ಲಾ ಜಮಾವಣೆ ಮಾಡಿ, ತನಿಖೆಮಾಡುವ ಏರ್ಪಾಡು ಮಾಡುತ್ತಾರೆಂದು ಸರ್ಕಾರದವರು ನಿರೀಕ್ಷಿಸುವರು. ರಾಸುಗಳ ಸಂಖ್ಯೆಯನ್ನು ಕಡಿಮೆಮಾಡಬೇಕಾಗಿರುವದರಿಂದ ಈ ಭಾಗದಲ್ಲಿ ಕರ್ನಲ್ ಜೋನ್ಸ್‌ಯವರು ಉಪಾಯಗಳನ್ನು ಸೂಚಿಸ್ಬೇಕೆಂದು ಕೋರಲ್ಪಟ್ಟದೆ

❖❖❖❖

#### ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟು.

ಮೈಸೂರು ಸಂಸ್ಥಾನದ ೧೯೦೧—೦೨ನೆ ಸಾಲಿನ ಈ ಇಲಾಖೆಯ ರಿಪೋರ್ಟು ಪ್ರಕಟವಾಗಿದೆ. ಆ ಸಾಲಿನಲ್ಲಿ ಪ್ಲೇಗ್ ಉಪದ್ರದ ದೆಸೆಯಿಂದ ೭೮ ಪಾಠಶಾಲೆಗಳೂ ೪೭೯೦ ಮಂದಿ ವಿದ್ಯಾರ್ಥಿಗಳೂ ಕಡಿಮೆಯಾದರು. ಗಂಡುಹುಡುಗರ ಒಟ್ಟುಸಂಖ್ಯೆಯಲ್ಲಿ ಶೇಕಡ ೨೩ ಮಂದಿಯೂ, ಹುಡುಗಿಯರ ಸಂಖ್ಯೆಯಲ್ಲಿ ಶೇಕಡ ೪ ಮಂದಿಯೂ ವಿದ್ಯಾಭ್ಯಾಸ ಮಾಡುತ್ತಿದಾರೆ. ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ಹಿಂದಿನ ಸಾಲಿನಲ್ಲಿ ೧೦,೯೮,೧೩೦ ರೂ. ಖರ್ಚು

ಮಾಡಿದ್ದರು. ಈ ಸಾಲಿನಲ್ಲಿ ೧೧,೪೮,೨೭೭ ರೂ. ಖರ್ಚುಮಾಡಿದಾರೆ. ಬಿ. ಎ. ಪರೀಕ್ಷೆಯ ಬೇರೆ ಬೇರೆ ಭಾಗಗಳಲ್ಲಿ ೮೭ ಮಂದಿ ವಿದ್ಯಾರ್ಥಿಗಳೂ, ಎಫ್. ಎ. ಪರೀಕ್ಷೆಯಲ್ಲಿ ೫೭ ಮಂದಿ ವಿದ್ಯಾರ್ಥಿಗಳೂ, ಮೆಟ್ರಿಕ್ಯುಲೇಷನ್‌ನಲ್ಲಿ ೧೫೦ ಮಂದಿಯೂ ತೇರ್ಗಡೆ ಹೊಂದಿದರು. ಇನ್ಸ್‌ಪೆಕ್ಟರ್ ಜನರಲ್‌ರವರು ಈ ಸಾಲಿನಲ್ಲಿ ೧೨೫ ವಿದ್ಯಾಶಾಲೆಗಳನ್ನು ತನಿಖೆ ಮಾಡಿಕೊಂಡು ಬಂದರು. ಮೈಸೂರು, ಶಿವಮೊಗ್ಗೆ, ಕೋಲಾರಗಳಲ್ಲಿರುವ ನಾರ್ಮಲ್ ಸ್ಕೂಲುಗಳಲ್ಲಿ ಕೆಲಸ ಸಮರ್ಪಕವಾಗಿ ನಡೆಯುವದಿಲ್ಲವೆಂತಲೂ, ಅವುಗಳನ್ನು ಚನ್ನಾಗಿ ಮೇಲ್ವಿಚಾರಣೆ ಮಾಡತಕ್ಕದ್ದೆಂತಲೂ ಗೌವರ್ನಮೆಂಟಿನವರು ತಿಳಿಸುತ್ತಾರೆ. ಮೈಸೂರಿನಲ್ಲಿರುವ ಕಸಬುದಾರಿ ಪಾಠಶಾಲೆಯು ಬಹಳ ಮುಖ್ಯವಾದದ್ದು. ಅದರಲ್ಲಿ ಕೆಲಸ ಸರಿಯಾಗಿ ನಡೆಯಬೇಕೆಂದು ಎಷ್ಟುವರ್ತಿ ಎಚ್ಚರಿಸಿದ್ದಾಗ್ಯೂ ಪ್ರಯೋಜನವಿಲ್ಲದೆ ಇದೆ. ಅದು ತೃಪ್ತಿಕರವಾದ ಸ್ಥಿತಿಯಲ್ಲಿಲ್ಲ. ಚನ್ನಪಟ್ಟಣ, ಸಾಗರ, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗೆ, ಈ ಸ್ಥಳಗಳಲ್ಲಿ ಕಸಬು ಕಲಿಸುವ ಪಾಠಶಾಲೆಗಳನ್ನೂ, ಹೊಳೆನರಸೀಪುರ, ದೊಡ್ಡಬಳ್ಳಾಪುರ, ಚಿಕ್ಕನಾಯಕನಹಳ್ಳಿ, ಮೊಳಕಾಲ್ಮೂರು, ಈ ಸ್ಥಳಗಳಲ್ಲಿ ನೆಯ್ಗೆ ಕಲಿಸುವ ಪಾಠಶಾಲೆಗಳನ್ನೂ ಇಟ್ಟು ನಡೆಸಬೇಕೆಂದು ಗೌವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ. ರಾಜಧಾನಿಯಲ್ಲಿರುವ ಕುರುಡರ ಮತ್ತು ಕಿವುಡ ಮೂಗರ ಪಾಠಶಾಲೆಗೂ, ವರ್ತಕತನವನ್ನು ಕಲಿಸುವದಕ್ಕೆ ಬೆಂಗಳೂರಲ್ಲಿರುವ ಪಾಠಶಾಲೆಗೂ ಸರ್ಕಾರದವರು ದ್ರವ್ಯಸಹಾಯ ಮಾಡುತ್ತಿದಾರೆ. ಈ ಸಾಲಿನಲ್ಲಿ, ಬೇರೆ ಬೇರೆ ವಿದ್ಯೆಗಳನ್ನು ಕಲಿಯತಕ್ಕ ವಿದ್ಯಾರ್ಥಿಗಳಿಗೆ ೨೧,೯೫೪ ರೂ. ವೇತನ ಕೊಡಲಾಯಿತು. ಈ ಸಂಸ್ಥಾನದಲ್ಲಿರುವ ೩೯ ಸಂಸ್ಕೃತ ಪಾಠಶಾಲೆಗಳಲ್ಲಿ ೧೦೫೭ ಮಂದಿ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಾರೆ. ಪಂಚಮರಿಗೋಸ್ಕರ ಸ್ಥಾಪಿಸಲ್ಪಟ್ಟಿರುವ ೨೭ ಸ್ಕೂಲುಗಳಲ್ಲಿ ೧,೬೪೮ ಹುಡುಗರೂ, ೨೦೩ ಹುಡುಗಿಯರೂ ಓದುತ್ತಿದಾರೆ. ಉಳಿದ ಪಾಠಶಾಲೆಗಳಲ್ಲಿ ೨೪೭ ಮಂದಿ ಕೀಳ್ಜಾತಿಯ ಹುಡುಗರೂ ೨೧ ಹುಡುಗಿಯರೂ ವಿದ್ಯೆ ಕಲಿಯುವರು. ಈ ಸಾಲಿನಲ್ಲಿ ಲಂಬಾಣಿಗರಿಗೋಸ್ಕರ ೧೧ ಸ್ಕೂಲುಗಳು ಏರ್ಪಾಡಾದವು. ೨೨೭ ಹುಡುಗರೂ ೧೦ ಹುಡುಗಿಯರೂ ಓದುತ್ತಾರೆ. ೧೪ ವರುಷಕ್ಕೆ ಮೇಲ್ಪಟ್ಟವರು ವಿದ್ಯೆ ಕಲಿಯುವಂತೆ ೭೩ ನೈಟ್ ಸ್ಕೂಲುಗಳು ಇರುತ್ತವೆ. ಅವುಗಳಲ್ಲಿ ೧,೪೩೯ ಮಂದಿ ವಿದ್ಯೆ ಕಲಿಯುತ್ತಿದಾರೆ. ಮಹಮದೀಯರ ಹುಡುಗರಲ್ಲಿ ೧೪,೨೩೭ ಜನರು ಪಾಠಶಾಲೆಗೆ ಹೋಗುವರು. ಅವರ ವಿದ್ಯಾಭಿವೃದ್ಧಿಯು ತೃಪ್ತಿಕರವಾಗಿದೆ. ವಿದ್ಯೆ ಕಲಿಯುತ್ತಿರುವ ಹುಡುಗಿಯರು ಈ ಸಂಸ್ಥಾನದಲ್ಲಿ ೧೭,೪೬೮ ಮಂದಿ ಇರುತ್ತಾರೆ. ಈ ಸಾಲಿನಲ್ಲಿ ೪೨ ಮಂದಿ ಲೋಯರ್ ಸೆಕಂಡರಿ ಪರೀಕ್ಷೆಯಲ್ಲೂ, ಇಬ್ಬರು ಉಪಾಧ್ಯಾಯ ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿದರು. ಸ್ತ್ರೀ ವಿದ್ಯಾಭಿವೃದ್ಧಿಗೆ ಸರ್ಕಾರದವರು ೧,೯೮,೬೮ ರೂ. ಖರ್ಚುಮಾಡಿದರು. ಈ ಪೈಕಿ ೪೧,೪೬೩ ರೂ. ಮಹಾರಾಣಿ ಕಾಲೇಜಿಗೆ ಖರ್ಚಾಗಿದೆ. ವಿದ್ಯಾಭಿವೃದ್ಧಿಗಾಗಿ ಸಾಹುಕಾರ್ ಪೊನ್ನಪ್ಪನವರೇ ಮುಂತಾದವರು ಧರ್ಮಕಾರ್ಯಗಳನ್ನು ಮಾಡುವ ವಿಷಯದಲ್ಲಿ ಸರ್ಕಾರದವರು ತುಂಬಾ ಸಂತೋಷಪಡುತ್ತ ಅವರನ್ನೆಲ್ಲಾ ವಂದಿಸುತ್ತಾರೆ. ಪ್ರಾಥಮಿಕ ವಿದ್ಯಾಭ್ಯಾಸದ ಏರ್ಪಾಟನ್ನು ತುಂಬಾ ಸಮರ್ಥಿಯಿಂದ ನಡೆಸುತ್ತ, ಚಟುವಟಿಕೆಯಿಂದ ನಡೆಸಿ ವಿದ್ಯಾ ಪ್ರಸಾರ ಮಾಡುತ್ತಾ ಕ್ರಮೇಣ ಉತ್ತಮಸ್ಥಿತಿಗೆ ತರುತ್ತಿರುವ ಭಾಗದಲ್ಲಿ ಗೌವರ್ನಮೆಂಟಿನವರು ಸಂತೋಷಪಡುತ್ತಾರೆ.

❖❖❖❖

## ಜಮಾಬಂದಿ

ಮೈಸೂರು ಸಂಸ್ಥಾನದ ೧೯೦೧—೨ ನೆ ಸಾಲಿನ ರಾಜ್ಯಾದಾಯದ ಜಮಾಬಂದಿ ಲೆಕ್ಕಗಳು ಪ್ರಕಟವಾಗಿವೆ. ಈ ಸಾಲಿನಲ್ಲಿ ಒಟ್ಟು ೧,೬೩,೯೪,೨೩೭ ರೂಪಾಯಿ ಹುಟ್ಟುವಳಿ ಆಗುವದೆಂದು ಜಮಾಬಂದಿ ಮಾಡಲ್ಪಟ್ಟಿದೆ. ಅಂದರೆ ಗತಸಾಲಿಗಿಂತ ೯೬೨ ರೂ. ಜಾಸ್ತಿ. ಈ ಜಮಾಬಂದಿಯ ಬಾಬುವಾರು ಹುಟ್ಟುವಳಿ ವಿವರ ಹ್ಯಾಗೆಂದರೆ —

| | | | |
|---|---|---|---|
| ದಿವಾನಿ | ೧,೨೦,೮೩,೯೮೯ | ಸಾಯರ್ | ೩,೫೦,೯೯೪ |
| ಫಾರೆಸ್ಟ್ | ೧೪,೦೧,೮೬೭ | ಉಪ್ಪು | ೨,೦೧ |
| ಅಬ್ಕಾರಿ | ೩೪,೯೭,೩೭೭ | ಇತರ ಬಾಬುಗಳು | |
| ಮೊಹತರ್ಫಾ | ೨,೧೧,೪ | | ೧೭,೦೮,೬೪೧ |

ಹಿಂದಿನ ಸಾಲಿನ ಹುಟ್ಟುವಳಿಯನ್ನು ನೋಡಿದರೆ ಈ ಸಾಲಿನ ಹುಟ್ಟುವಳಿಯು ಎರಡು ಬಾಬುಗಳಲ್ಲಿ ಮಾತ್ರ ಜಾಸ್ತಿಯಾಗಿದೆ. ಫಾರೆಸ್ಟಿನಲ್ಲಿ ೯,೧೩೭ ರೂ, ಅಬ್ಕಾರಿಯಲ್ಲಿ ೫೧,೬೩೧ ರೂ. ಜಾಸ್ತಿ; ಅದರೆ ಉಳಿದ ಐದು ಬಾಬುಗಳಲ್ಲೂ ಹಿಂದಿನ ಸಾಲಿನ ಹುಟ್ಟುವಳಿಗಿಂತ ಕಡಿಮೆಯಾಗಿರುವದು. ದಿವಾನ್ ಕಂದಾಯದ ಬಾಬಿನಲ್ಲೇ ಈ ಸಾಲಿನಲ್ಲಿ ೨೮,೯೪೯ ರೂ. ಕಡಿಮೆಯಾಗಿದೆ. ಯಾವ ಯಾವ ತಾಲ್ಲೂಕುಗಳಲ್ಲಿ ವಿಶೇಷ ಕಡಿಮೆಯಾಗಿದೆ ಎಂದರೆ —

| | | | |
|---|---|---|---|
| ಹೊಳಲ್ಕೆರೆ | ೩೨,೭೬೮ | ಕಡೂರು | ೧೧,೩೦೭ |
| ಚಿಕ್ಕನಾಯಕನಹಳ್ಳಿ | | ಶ್ರೀನಿವಾಸಪುರ | ೨,೦೦ |
| | ೧೩,೬೨೯ | ಶಿಡ್ಲಘಟ್ಟ | ೫,೨೩೩ |
| ಮೈಸೂರು | ೧೪,೩೦೨ | | |

ಹೀಗೆ ಕಂದಾಯ ಕಡಿಮೆ ಆಗಲು ಕಾರಣಗಳೇನೆಂದರೆ — ಹೊಸದುರ್ಗದಲ್ಲಿ ಹೊಸವಾಗಿ ಒಂದು ಸಬ್ ತಾಲ್ಲೂಕನ್ನು ಏರ್ಪಡಿಸಿದ್ದರಿಂದ ಹೊಳಲ್ಕೆರೆ, ಚಿಕ್ಕನಾಯಕನಹಳ್ಳಿ, ಕಡೂರು ತಾಲ್ಲೂಕುಗಳಲ್ಲಿ ಹುಟ್ಟುವಳಿ ಕಮ್ಮಿ ಕಂಡಿತು. ಕಷ್ಟಗಾಲದ ಇನಾಮತಿಯ ನೀರಾವರಿ ಮುಂತಾದ ಕಂದಾಯಗಳನ್ನು ಹಿಂದಿನ ಸಾಲಿಗೆ ಜಮಾಬಂದಿ ಮಾಡಿದ್ದರಿಂದ ಮೈಸೂರು ತಾಲ್ಲೂಕಿನ ಹುಟ್ಟುವಳಿ ಕಮ್ಮಿ ಕಂಡಿದೆ ಎಂದು ತಿಳಿದುಬರುತ್ತೆ. ಶ್ರೀನಿವಾಸಪುರ, ಶಿಡ್ಲಘಟ್ಟ ತಾಲ್ಲೂಕುಗಳಲ್ಲಿ ರೈತರು ರಾಜೀನಾಮೆ ಕೊಟ್ಟು ಜಮೀನು ಬಿಟ್ಟದ್ದರಿಂದ ಜಮಾಬಂದಿ ಕಮ್ಮಿ ಆಗಿದೆ ಎಂಬದಾಗಿ ಕೋಲಾರದ ಡೆಪ್ಯುಟಿ ಕಮಿಷನರು ತಿಳಿಸುತ್ತಾರೆ.

ಫಾರೆಸ್ಟ್ ಬಾಬಿನಲ್ಲಿ ಶಿವಮೊಗ್ಗೆಯಲ್ಲಿ ೫೯,೭೪೦ ರೂ., ಬೆಂಗಳೂರಿನಲ್ಲಿ ೩೧,೨೪೦ ರೂ. ಹಿಂದಿನ ಸಾಲಿಗಿಂತ ಕಮ್ಮಿ ಆದರೂ ಒಟ್ಟು ಜಮಾಬಂದಿಯಲ್ಲಿ ೯,೧೩೭ ರೂ. ಜಾಸ್ತಿ ಕಂಡುಬರುವದು. ಈ ಎರಡು ಡಿಸ್ಟ್ರಿಕ್ಟುಗಳಲ್ಲೂ ಸಂದಲ್ ಮತ್ತು ಸಾಗುವಾನಿ ಬಿಕರಿ ಕಡಿಮೆ ಆಯಿತೆಂದು ಆಯಾ ಡೆಪ್ಯುಟಿ ಕಮಿಷನರು ತಿಳಿಸುತ್ತಾರೆ.

ಅಬ್ಕಾರಿ ಬಾಬಿನಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ೧೭,೧೦೮ ರೂ., ತುಂಕೂರು ಡಿಸ್ಟ್ರಿಕ್ಟಿನಲ್ಲಿ ೧೩,೨೫೪ ರೂ. ಹಿಂದಿನ ಸಾಲಿಗಿಂತ ಕಮ್ಮಿ ಆಗಿದೆ. ಬಿಡುದಾರರು ಸರಿಯಾಗಿ ಬೀಟು ಮಾಡಲಿಲ್ಲವೆಂತಲೂ, ದುಕಾನ್ ಬಾಬು ಕಡಿಮೆ ಆಯಿತೆಂತಲೂ ತಿಳಿಯುವದು.

ಸಾಯರ್ ಬಾಬಿನಲ್ಲಿ ೪,೬೮೩ ರೂ. ಕಡಿಮೆ ಆಗಿದೆ. ಅಡಿಕೆ ಸಾಗಿ ಹೋದದ್ದು ಕಮ್ಮಿ ಎಂತಲೂ, ಬೆಳೆ ಕೆಟ್ಟುಹೋಯಿತೆಂತಲೂ ಹೇಳುತ್ತಾರೆ. ತುಮಕೂರು, ಕೋಲಾರ್ ಡಿಸ್ಟ್ರಿಕ್ಟುಗಳಲ್ಲೇ ವಿಶೇಷ ಕಮ್ಮಿ ಆಗಿದೆ.

ಉಪ್ಪಿನ ಮೋಳೆಗಳು ಕಡಿಮೆ ಆದದ್ದರಿಂದ ಈ ಬಾಬಿನ ಉತ್ಪತ್ತಿಯಲ್ಲಿ ೪,೭೦೧ ರೂ. ಕಮ್ಮಿ ಕಂಡುಬಂದಿದೆ.

ಇತರ ಬಾಬುಗಳ ಹುಟ್ಟುವಳಿಯಲ್ಲಿ ಹಿಂದಿನ ಸಾಲಿನ ಹುಟ್ಟುವಳಿಗಿಂತ ೮೩,೯೦೮ ರೂ. ಕಡಿಮೆಯಾಗಿರುವದು. ಮನೆ ನಿವೇಶನಗಳ ಕ್ರಯ, ಜನರಲ್ ಸ್ಟಾಂಪ್ ಬಾಬು, ಸ್ಕೂಲ್ ಫೀಜು, ಇವೇ ಮೊದಲಾದ ಚಿಲ್ಲರೆ ಬಾಬುಗಳಲ್ಲಿ ಕಮ್ಮಿ ಆಗಿರುವದೇ ಕಾರಣ.

---

## ಇಂಡಿಯಾ ದೇಶದ ವೃತ್ತಾಂತಗಳು.

ಧುಲೀಪ್‌ಸಿಂಗರ ಮೂವರು ಹೆಣ್ಣುಮಕ್ಕಳು ಕೆಲವು ತಿಂಗಳಿಂದ ಲಾಹೋರಿನಲ್ಲೇ ಇದಾರೆ. ಇವರು ವಾಪಸು ವಿಲಾಯತಿಗೆ ಹೋಗುವವರಾಗಿಲ್ಲ.

❖❖❖❖

ಗಾಯಕವಾಡ್ ಮಹಾರಾಜರವರು ಪುದುಚೇರಿಗೆ ಬರುತ್ತಾರೆಂದು ಅಲ್ಲಿ ಬಹಳ ಏರ್ಪಾಡು ಮಾಡಿದ್ದರು. ಈ ಚಿಗೆ ಅವರು ಅಲ್ಲಿಗೆ ಹೋಗುವದಿಲ್ಲವೆಂದು ಗೊತ್ತಾಯಿತು.

❖❖❖❖

ಮಧ್ಯಪ್ರಾಂತ್ಯಗಳಲ್ಲಿ ಕಳೆದ ವಾರ ೩,೧೦೮ ಜನರು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿದ್ದರು, ಅಂದರೆ, ಹಿಂದಿನ ವಾರದ ಸಂಖ್ಯೆಗಿಂತ ೨,೦೦೦ ಜನರು ಕಡಿಮೆ.

❖❖❖❖

ಹೈದರಾಬಾದಿನ ನೈಜಾಮರವರು ಹೊಸ ಟಂಕಸಾಲೆ ಇಡಿಸುವದಕ್ಕೋಸ್ಕರ ಸೀಮೆಯಿಂದ ನಾಲ್ಕು ಲಕ್ಷ ರೂಪಾಯಿನ ಯಂತ್ರ ಮುಂತಾದ ಸಾಮಾನುಗಳನ್ನು ತರಿಸುವಂತೆ ಸ್ಯಾಂಕ್ಷನ್ ಮಾಡಿದಾರೆ.

❖❖❖❖

ವೈಸ್‌ರಾಯರವರು ಸೆಪ್ಟೆಂಬರ್ ೨೦ ರಲ್ಲಿ ಸಿಮ್ಲಾ ನಗರದಿಂದ ಹೊರಟು ಕಾಶ್ಮೀರ ಸಂಸ್ಥಾನದಲ್ಲಿ ಸಂಚಾರ ಮಾಡಿಕೊಂಡು, ಮತ್ತೆ ಅಕ್ಟೋಬರ್ ೨೫ ಕ್ಕೆ ಸಿಮ್ಲಾವನ್ನು ತಲುಪುವರೆಂದು ಗೊತ್ತಾಗಿದೆ.

❖❖❖❖

ರಂಗೂನ್ ನಗರದಲ್ಲಿ ಬರ್ಮಾಯರ ಒಂದು ಬೌದ್ಧ ದೇವಸ್ಥಾನಕ್ಕೆ ಚಿನ್ನದ ಮುಲಾಮು ಮಾಡಿಸಿ ಪ್ರತಿಷ್ಠೆ ಮಾಡಿದರು. ಕೆಲವು ಕಡೆಗಳಲ್ಲಿ ಚಿನ್ನದ ತಗಡುಗಳನ್ನೇ ಬಡಾಯಿಸಿದಾರೆ. ಇದಕ್ಕೆಲ್ಲಾ ಒಟ್ಟು ಒಂಭತ್ತು ಲಕ್ಷ ರೂಪಾಯಿ ಖರ್ಚಾಯಿತು.

❖❖❖❖

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಭಾಗಲ್ಪುರ ಡಿಸ್ಟ್ರಿಕ್ಟಿನಲ್ಲಿ ಕಳೆದ ವಾರ ವಿಪರೀತವಾದ ಸುಂಟರಗಾಳಿ ಹುಟ್ಟಿ, ಅನೇಕ ದೋಣಿಗಳೂ ಸ್ಟಾಮರುಗಳೂ ಮುಳುಗಿಹೋದವು. ಅನೇಕ ಪ್ರಾಣನಷ್ಟವಾಯಿತು. ಆಸ್ತಿಪಾಸ್ತಿ ವಿಪರೀತವಾಗಿ ಹಾಳಾಗಿದೆ.

❖❖❖❖

ಮದರಾಸ್ ಆಧಿಪತ್ಯಕ್ಕೆ ಸೇರಿದ ಯಾವ ಊರಿನಲ್ಲೂ ಜನರು ಹಂಗಾಮಿಯಾಗಿ ಉತ್ಸವಾದಿಗಳನ್ನು ನಡಸುವದಕ್ಕೆ ಚಪ್ಪರ ಮುಂತಾದ್ದು ಹಾಕಬೇಕಾದರೆ ಅಂಥಾದ್ದಕ್ಕೆ ಸರ್ಕಾರದವರು ಲೇಸೆನ್ಸು ಫೀಜು ವಸೂಲ್ಮಾಡಕೂಡದೆಂಬದಾಗಿ ಹುಕುಂ ಆಗಿದೆ.

❖❖❖❖

ಸಿಲೋನ್ ದ್ವೀಪದಲ್ಲಿದ್ದ ಬೋಯರ್ ಖೈದಿಗಳ ಪೈಕಿ ಇಬ್ಬರು ತಪ್ಪಿಸಿಕೊಂಡು ಎರಡು ವರುಷಗಳಿಂದ ಪುದುಚೇರಿಯಲ್ಲಿ ವಾಸಮಾಡುತ್ತಿದಾರೆ. ಈಗ ಅವರು ಅಲ್ಲಿಂದ ಮಡಗಾಸ್ಕರ್ ದ್ವೀಪಕ್ಕೆ ಹ್ಯಾಗಾದರೂ ಪ್ರಯಾಣ ಮಾಡಬೇಕೆಂದು ಸಾಹಸ ಪಡುತ್ತಿರುವರು.

❖❖❖❖

ಹಿಂದುಸ್ಥಾನದಲ್ಲಿ ಆಚೇವಾರ ೩,೧೮೪ ಜನರು ಪ್ಲೇಗ್ ತಗಲಿ ಮೃತಪಟ್ಟರು. ಹೋದವಾರ ೩,೩೦೩ ಮಂದಿಮಾತ್ರ ಆ ಉಪದ್ರದಲ್ಲಿ ಸತ್ತಿದಾರೆ. ಈ ಪೈಕಿ ಪಂಜಾಬ್ ಆಧಿಪತ್ಯದಲ್ಲೇ ೨,೭೫೩ ಮಂದಿ ಸತ್ತುಹೋದರು. ಉಳಿದ ಕಡೆಗಳಲ್ಲಿ ಉಪದ್ರ ಕಡಿಮೆಯಾಗಿದೆ.

❖❖❖❖

ರಾಮೇಶ್ವರದ ಬಳಿ ಪಾಂಬನ್ ಪಟ್ಟಣದಲ್ಲಿ ಕಳೆದ ಶುಕ್ರವಾರ ಬೆಂಕಿಬಿದ್ದು ಒಂದುನೂರು ಮನೆಗಳು ಸುಟ್ಟುಹೋದವು. ೩೦೦—೪೦೦ ಜನರು ನಿಲ್ಲುವದಕ್ಕೆ ನೆರಳಿಲ್ಲದೆ ಅಲೆಯುತ್ತಿದಾರೆ. ವಿಪರೀತ ಆಸ್ತಿ ಸುಟ್ಟುಹೋಯಿತು. ದೇವರ ದಯದಿಂದ ಪ್ರಾಣನಷ್ಟವೇನೂ ಆಗಲಿಲ್ಲ.

ಬರ್ಮಾ ದೇಶದಲ್ಲಿ ಕಳೆದ ಮಾರ್ಚಿ ೩೧ಕ್ಕೆ ಆಖೈರಾದ ಒಂದು ವರುಷದಲ್ಲಿ ಖರ್ಚು ಜಾತಾ ೧೮ ಲಕ್ಷ ಪೌಂಡು ರಾಜ್ಯಾದಾಯ ಉತ್ಪತ್ತಿ ಆಗಿರುತ್ತದೆ ಎಂಬದಾಗಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಜಾರ್ಜ್ ಹಾಮಿಲ್ಟನ್‌ರವರು ವಿಲಾಯತಿಯ ಪಾರ್ಲಿಮೆಂಟಿನಲ್ಲಿ ಕಳೆದ ವಾರ ತಿಳಿಸಿದರು.

❖❖❖❖

ಬಂಗಾಳಾ ರೈಲ್ವೆಯಲ್ಲಿ ಸೋನೇಪುರಕ್ಕೂ ಬರ್ಪದ್ ಜಾಕ್ ಸ್ಟೇಷನ್‌ಗೂ ನಡುವೆ ಕಳೆದ ವಾರ ಎರಡು ಹೋಗೀಗಾಡಿಗಳು ಎದುರುಬದುರಾಗಿ ಬಂದು ಢಿಕ್ಕಿಹೊಡೆದು ಅನಾಹುತವಾಯಿತು. ಕೆಲವು ಮಂದಿ ಪ್ರಯಾಣಿಕರು ಕೊಲ್ಲಲ್ಪಟ್ಟರು; ಅನೇಕರಿಗೆ ಗಾಯಗಳಾದವು. ನಾಲ್ಕಾರು ಗಾಡಿಗಳು ಒಡೆದುಹೋದವು.

❖❖❖❖

ಸಿಂಧು ನದೀ ಪ್ರಾಂತ್ಯದಲ್ಲಿರುವ ಪುರೇಲಿ ಎಂಬ ಊರಿನಲ್ಲಿ ಕಳೆದ ಮಂಗಳವಾರ ೧೫೦ ಮಂದಿ ಸಾಹುಕಾರರು ನದಿಯನ್ನು ಪೂಜೆಮಾಡುವದಕ್ಕೆ ದೋಣಿಯೊಳಗೆ ಕೂತು ಹೋದರು. ಮಧ್ಯನದಿಯೊಳಗೆ ಆ ದೋಣಿ ಮಗುಚಿಕೊಂಡಿತು. ಎಲ್ಲರೂ ನದಿಯ ಪಾಲಾದರು. ಅವರಲ್ಲಿ ಅನೇಕರು ಸತ್ತುಹೋದರೆಂದು ಹೇಳುವರು.

❖❖❖❖

ಪಂಜಾಬಿನಲ್ಲಿ ಚಿಕ್ಕವಯಸ್ಸಿನ ಹುಡುಗರು ಅಪರಾಧಮಾಡಿ ಸಜಾ ಶಿಕ್ಷೆಯನ್ನು ಅನುಭವಿಸಬೇಕಾಗಿ ಬಂದಲ್ಲಿ ಅಂಥವರನ್ನು ಜೈಲ್ ಖಾನೆಗಳಲ್ಲೇ ದೊಡ್ಡ ದೊಡ್ಡ ಖೈದಿಗಳ ಸಹವಾಸದಲ್ಲೇ ಇರುವಂತೆ ಕಳುಹಿಸುತ್ತಿದ್ದರು. ಈಗ ಇದನ್ನು ತಪ್ಪಿಸಿ, ದೆಹಲಿಯಲ್ಲಿ ೧೫೦ ಮಂದಿ ಹುಡುಗರಿಗೆ ಸ್ಥಳಸಾಕಾಗುವಂಥಾ ಒಂದು ಪ್ರತ್ಯೇಕವಾದ ಜೈಲ್ ಖಾನೆಯನ್ನು ಕಟ್ಟಿಸುತ್ತಿದಾರೆ.

❖❖❖❖

ಕಳೆದ ಮೂರು ವರ್ಷಗಳಿಂದ ಬೊಂಬಾಯಿನಲ್ಲಿ ಪ್ಲೇಗ್ ಡಾಕ್ಟರಾಗಿ ಕೆಲಸಮಾಡುತ್ತಿರುವ ಹ್ಯಾರಿಸನ್ ಎಂಬೊಬ್ಬ ಇಂಗ್ಲಿಷ್ ವೈದ್ಯನು ಕಳೆದ ವಾರ ತನ್ನ ಕೊಠಡಿಯಲ್ಲಿ ಮಲಗಿ ನಿದ್ದೆ ಮಾಡುತ್ತಿದ್ದಾಗ ನಿದ್ದೆಯಲ್ಲೇ ಎದ್ದು ಹೊರಕ್ಕೆ ಬಂದು ಮೆಟ್ಟಿನಿಂದ ಬಿದ್ದು, ಗಾಯಪಟ್ಟನು. ನಿದ್ದೆಯಲ್ಲಿ ಸಂಚಾರ ಮಾಡುವ ರೋಗ ಈತನನ್ನು ಕೆಲವು ಕಾಲದಿಂದ ಕಾಡುತ್ತಿರುವದೆಂದು ಪ್ರಕಟವಾಗಿದೆ.

❖❖❖❖

ಬರ್ಮಾ ದೇಶಕ್ಕೆ ಸೇರಿದ ಅರಕಾನ್ ನಗರದಲ್ಲಿ ಒಬ್ಬ ಪುರೋಹಿತನು ಒಂದು ಗಿಣಿಯನ್ನು ಬಹಳ ಪ್ರೀತಿಯಿಂದ ಸಾಕುತ್ತಿದ್ದನು. ಅದು ಸತ್ತುಹೋಯಿತು. ಸಾವಿರಾರು ಜನರು ಸೇರಿ ಅದನ್ನು ಮೆರವಣಿಗೆ ಮಾಡಿಕೊಂಡು ಸ್ಮಶಾನಕ್ಕೆ ಹೊತ್ತುಕೊಂಡುಹೋಗಿ, ಬಹು ಆಟ್ಟಹಾಸಯುಕ್ತವಾಗಿ ಅದನ್ನು ದಹನಮಾಡಿದರು. ಸಾವಿರಾರು ಪ್ರಜೆಗಳು ಬೀದಿಯ ಉದ್ದಕ್ಕೂ ನಿಂತು ಈ ಉತ್ಸವವನ್ನು ನೋಡಿದರು.

❖❖❖❖

ಕಾಂಚ್ ಎಂಬ ಹಡಗಿನಲ್ಲಿ ಸೀಮೆಯೆಣ್ಣೆಯನ್ನು ಭರ್ತಿಮಾಡಿ, ಸಿಲೋನ್ ದ್ವೀಪದ ಮೂಲಾಂತರ ಮದರಾಸಿಗೆ ಕಳುಹಿಸಿದರು. ಈ ಹಡಗು ಸಮುದ್ರದಮೇಲೆ ಬಿರುಗಾಳಿಗೆ ಸಿಕ್ಕಿ ಸಂಪೂರ್ಣವಾಗಿ ನಾಶವಾಯಿತು. ಅದರಲ್ಲಿ ೨,೨೫,೦೦೦ ರೂಪಾಯಿ ಬಲೆಬಾಳುವಷ್ಟು ಸೀಮೆಯೆಣ್ಣೆ ತುಂಬಿತ್ತು. ಎಲ್ಲಾ ಸಮುದ್ರದ ಪಾಲಾಯಿತು. ಆದರೆ ಹಡಗಿನಲ್ಲಿದ್ದ ನೌಕರರೆಲ್ಲಾ ಜೀವದೊಡನೆ ಬದುಕಿಕೊಂಡರು.

❖❖❖❖

ಕಳೆದ ಡಿಸೆಂಬರ್ ೩೧ಕ್ಕೆ ಆಖೈರಾದ ೧೨ ತಿಂಗಳಲ್ಲಿ ಹಿಂದುಸ್ಥಾನದ ರೈಲ್ವೆ ಇಲಾಖೆಯಲ್ಲಿ ೨೦೪ ಲಕ್ಷ ರೂಪಾಯಿ ಆದಾಯ ಉತ್ಪತ್ತಿಯಾಗಿದೆ. ಕಳೆದ ೩ ವರುಷಗಳಲ್ಲೂ ಸ್ವಲ್ಪ ಕಡಿಮೆ ನಾಲ್ಕುಕೋಟಿ ರೂಪಾಯಿ ಆದಾಯಬಂದಿರುವದು. ಕಳೆದ ೩೭ ತಿಂಗಳಲ್ಲಿ ಹೊಸದಾಗಿ ೩,೮೨೩ ಮೈಲಿ ರೈಲ್‌ರಸ್ತೆ ತಯಾರಾಯಿತು. ಹಾಲಿ ವರುಷದಲ್ಲಿ ಹೊಸರಸ್ತೆಗಳ ತಯಾರಿಗಾಗಿ ಸರ್ಕಾರದವರು ೧೧ ಕೋಟಿ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

❖❖❖❖

ಕಳೆದ ೧೮೦೦ನೆ ಇಸವಿಯಲ್ಲಿ ವಿಲಾಯತಿಯ ೩ನೆ ಜಾರ್ಜ್ ಎಂಬ ದೊರೆಯು ಕ್ಯಾಪ್ಟನ್ ರೋಸ್ಟನ್ ಎಂಬ ಅಧಿಕಾರಿಗೆ ಸಮುದ್ರದ ಮೇಲೆ ಸಿಕ್ಕುವ ಹಡಗುಗಳನ್ನೆಲ್ಲಾ ಹಿಡಿದು ಕೊಳ್ಳೆಹೊಡೆಯಬಹುದೆಂಬದಾಗಿ ಹುಕುಂ ಕೊಟ್ಟಿದ್ದನು. ಈ ಹುಕುಮಿನ ಕಾಗದವು ಜೀರ್ಣವಾಗಿ ಹೋಗಿದ್ದರೂ ಸಿಕ್ಕಿದೆ. ಅದನ್ನು ಕಲ್ಕತ್ತೆಯ ಪ್ರದರ್ಶನ ಶಾಲೆಯಲ್ಲಿ ಸದ್ಯ ಇಟ್ಟಿದಾರೆ. ಇಷ್ಟರಲ್ಲೇ ಅದನ್ನು ವಿಲಾಯತಿಗೆ ಕಳುಹಿಸಿ ಹರಾಜು ಹಾಕುತ್ತಾರೆಂದು ತಿಳಿದುಬಂದಿದೆ.

❖❖❖❖

ವ್ಯವಸಾಯ ಕಾರ್ಯಕ್ಕೆ ಅನುಕೂಲಿಸುವಂಥಾ ಭಾವಿಗಳನ್ನು ಜರ್ಮನಿನಲ್ಲಿ ಹ್ಯಾಗೋ ಹಿಂದುಸ್ಥಾನದಲ್ಲೂ ಹಾಗೆಯೇ ತೋಡಬೇಕೆಂದು ಇಂಡಿಯಾ ಗೌವರ್ನಮೆಂಟಿನವರು ಮಿ॥ ನಾರ್ಮನ್ ಎಂಬ ಸರದಾರರಿಗೆ ಅದಕ್ಕೆ ಬೇಕಾಗುವ ಸಹಾಯವನ್ನೆಲ್ಲಾ ಕೊಡತಕ್ಕದ್ದೆಂದು ಹುಕುಂ ಮಾಡಿದ್ದರು. ಅದೇಪ್ರಕಾರ ಆ ಸರದಾರರು ಕಲ್ಕತ್ತೆಯಲ್ಲಿ ಕೆಲವು ಭಾವಿಗಳನ್ನು ಅಜಮಾಯಿಷಿ ತರೀಖು ತೆಗೆಯಬೇಕೆಂದು ಕೆಲವು ಕಾಲದಿಂದ ಪ್ರಯತ್ನಪಡುತ್ತಿದಾರಷ್ಟೆ. ಧರಂಬಿಯಾದಲ್ಲಿ ಅವರು ಕಳೆದ ಮಾರ್ಚಿ ೨೦ರಲ್ಲಿ ಒಂದು ಭಾವಿ ತೋಡುವದಕ್ಕೆ ಪ್ರಾರಂಭಿಸಿದರು. ಮೇ ೧೭ನೆ ತಾರೀಖು ವರೆಗೆ ೩೯ ಅಡಿಯಷ್ಟು ಮಾತ್ರ ಆಳವಾಗಿ ತೋಡುವದಕ್ಕಾಯಿತು. ಅಲ್ಲಿಂದೀಚೆಗೆ ಈ ಪ್ರಯತ್ನವನ್ನು ನಿಲ್ಲಿಸಿಬಿಟ್ಟರು. ಕಲ್ಕತ್ತೆಯಲ್ಲಿ ಅವರು ಮಾಡಿದ ಪ್ರಯತ್ನವೂ ಸಾರ್ಥಕವಾಗಲಿಲ್ಲ. ಆಕಾರಣ ಹೀಗೆ ಸ್ಥಾನದಲ್ಲಿ ಭೂಮಿಯ ಅಂತರ್ಜಲವನ್ನು ಯಂತ್ರಗಳಿಂದ ಮೇಲಕ್ಕೆ ತರುವದು ತುಂಬಾ ಕಷ್ಟವೆಂದು ಹೇಳಿ ಆ ಕೆಲಸವನ್ನು ನಿಲ್ಲಿಸಿರುತ್ತಾರೆ.

ದಿಹಲಿ ದರ್ಬಾರಿನ ಕಾಲದಲ್ಲಿ ಸುಮಾರು ೨೩೦ ಮಂದಿ ಜೇಬುಗಳ್ಳರು ಹೋಗಿ ಕದಿಯುವ ಪ್ರಯತ್ನದಲ್ಲಿದ್ದರು. ಪೋಲೀಸಿನವರು ಅವರನ್ನೆಲ್ಲಾ ಹಿಡಿದು ತನಿಖೆ ಮಾಡುವಲ್ಲಿ ಪ್ರತಿ ಒಬ್ಬನೂ ಸಜಾ ಅನುಭವಿಸಿದವನಾಗಿಯೇ ಇದ್ದನು.

****

ಮಹಮದೀಯರು ಬೀದಿಗಳಲ್ಲಿರುವಂಥಾ ಹಂದಿಗೊದ್ದ (ಗೋಸುಂಬೆ) ವನ್ನು ಹಿಡಿದು ಕೊಲ್ಲುವದು ಪದ್ಧತಿಯಷ್ಟೆ. ಕಳೆದ ವಾರ ಈ ಕೃತ್ಯವನ್ನು ಮಾಡಿದ ಒಬ್ಬ ಮಹಮದೀಯನಿಗೆ ಮದರಾಸ್ ಪಟ್ಟಣದಲ್ಲಿ ಮ್ಯಾಜಿಸ್ಟ್ರೇಟರು ಎಂಟಾಣೆ ಜುಲ್ಮಾನೆ ವಿಧಿಸಿದರು.

****

ಶ್ರೀರಂಗದಲ್ಲಿ ಜನೋಪಕಾರ ನಿಧಿ ಎಂಬ ಹೆಸರಿನ ಒಂದು ಬ್ಯಾಂಕು ಇರುತ್ತೆ. ಈ ಬ್ಯಾಂಕಿನಿಂದ ರೈತರಿಗೆ ಮುಖ್ಯ ಧನ ಸಾಲ ಕೊಡುತ್ತಾರೆ. ಈ ಬ್ಯಾಂಕಿನ ಷೇರುಗಳನ್ನು ೧—೨ರೂ. ನಂತೆ ಗೊತ್ತುಮಾಡಿ, ಮೂಲಧನ ಕೂಡಿಸಿ, ಕಳೆದ ೧೬ ವರುಷಗಳಿಂದಲೂ ಬ್ಯಾಂಕನ್ನು ನಡಿಸುತ್ತಾ ಬಂದಿದಾರೆ. ಅದು ಷೇರುದಾರರಿಗೂ ಬಡರೈತರಿಗೂ ತುಂಬಾ ಪ್ರಯೋಜನಕಾರಿಯಾಗಿರುವದು

****

ಬೊಂಬಾಯಿ ಗವರ್ನರ್ ಪತ್ನಿಯಾದ ಲೇಡಿ ನಾರ್ತ್‌ಕೋಟ್ ಯವರ ಹೆಸರಿನಲ್ಲಿ ಬೊಂಬಾಯಿನೊಳಗೆ ಒಂದೂ ಅನಾಥಾಲಯ ಒಂದಿರುವದು. ಈ ಆಲಯದಲ್ಲಿ ೨೫೦ ಮಂದಿ ಅನಾಥ ಬಾಲಕರು ಇರುತ್ತಾರೆ. ಅದರ ಅಧ್ಯಕ್ಷರು ಹುಡುಗರಿಗೆ ಅನ್ನವಸ್ತ್ರಗಳನ್ನು ಕೊಟ್ಟು, ವಿದ್ಯೆ ಕಲಿಸುವದಲ್ಲದೆ ನಾನಾತರವಾದ ಕಸಬುಗಳನ್ನೂ ಕಲಿಸುತ್ತಿದಾರೆ. ಕಚ್ ರಾಜ್ಯದ ದೊರೆಯು ಈ ಅನಾಥಾಲಯವನ್ನು ಹೋಗಿ ನೋಡಿಕೊಂಡು ಬೆಲೆ ಸಾವಿರಾರು ರೂಪಾಯಿಗಳ ಬಹುಮಾನ ಕಳುಹಿಸಿಕೊಟ್ಟರು.

****

ದಿಹಲಿ ದರ್ಬಾರಿನಲ್ಲಿ ನಡೆದ ಸಂಗತಿಗಳನ್ನೂ ಅದರಿಂದುಂಟಾಗಿರುವ ಫಲಗಳನ್ನೂ ಕುರಿತು ಇಂಡಿಯಾ ಗವರ್ನಮೆಂಟಿನವರು ಒಂದು ರಿಪೋರ್ಟು ಬರೆದು ವಿಲಾಯತಿಗೆ ರವಾನೆ ಮಾಡಿದರು. ಕಳೆದ ೧೮೭೭ನೆ ಇಸವಿಯಲ್ಲಿ ನಡೆದ ದಿಹಲಿ ದರ್ಬಾರಿಗೆ ಇತರ ಕಡೆಗಳಿಂದ ೬೮,೦೦೦ ಜನರು ಹೋಗಿ ಸೇರಿದ್ದರೆಂದು ಆಗಿನ ರಿಪೋರ್ಟಿನಿಂದ ತಿಳಿದು ಬರುವದು. ಆದರೆ ಈಗ ನಡೆದ ದರ್ಬಾರ್ ಕಾಲದಲ್ಲಿ ೧,೭೩,೦೦೦ ಜನರು ಸೇರಿದ್ದರು. ದರ್ಬಾರಿನ ಸಕಲ ಏರ್ಪಾಟುಗಳೂ ತುಂಬಾ ಸಮರ್ಪಕವಾಗಿದ್ದದರಿಂದ ಅಲ್ಲಿ ಯಾವ ವಿಧವಾದ ಅಪಾಯವೂ ಸಂಭವಿಸಲಿಲ್ಲ. ಈ ರಿಪೋರ್ಟಿಗೆ ಲಾರ್ಡ್ ಕರ್ಜನ್ ಪ್ರಭುಗಳೂ, ಲಾರ್ಡ್ ಕಿಚ್ನರ್‌ಯವರೂ, ಇನ್ನು ಐದು ಮಂದಿ ಮೆಂಬರುಗಳೂ ರುಜುಮಾಡಿರುತ್ತಾರೆ.

****

ಕಳೆದ ೭ನೆ ತಾರೀಖಿನದಿನ ದಂಬಂಧಿಯಲ್ಲಿ ರಾಜರಿಗೆ ಪಟ್ಟಾಭಿಷೇಕವಾಯಿತು. ಕರ್ನಲ್ ಫರ್ರೆಲ್ ಯವರು ರಾಜರಿಗೆ ಸನ್ನದನ್ನು ಒಪ್ಪಿಸಿ, ಇನ್ನುಮುಂದೆ ಅವರು ರಾಜ್ಯಭಾರವನ್ನು ವಹಿಸಬೇಕೆಂತಲೂ, ಪ್ರಜೆಗಳ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಳ್ಳಬೇಕೆಂತಲೂ ಸೂಕ್ತಿಯನ್ನು ಹೇಳಿದರು. ರಾಜರು ಅವರನ್ನು ವಂದಿಸಿ ದಿಹಲಿ ದರ್ಬಾರು ನೋಡಬಂದದ್ದರಿಂದ ತಮಗುಂಟಾದ ಆನಂದಾತಿಶಯವನ್ನು ವಿವರಿಸಿ, ಚಕ್ರವರ್ತಿಯವರ ವಿಷಯದಲ್ಲಿ ತಾನು ತುಂಬಾ ಭಕ್ತಿಯುಳ್ಳವನಾಗಿಯೂ, ಪ್ರಜಾ ಪಾಲನೆಯಲ್ಲಿ ನಿರತನಾಗಿಯೂ ಇರುವದಾಗಿ ವಾಗ್ದಾನ ಮಾಡಿದರು. ತನ್ನ ರಾಜ್ಯಾಭಿಷೇಕದ ಜ್ಞಾಪಕಾರ್ಥವಾಗಿ ತಮ್ಮ ಸಂಸ್ಥಾನದ ರೈತರಿಗೆ ೪೦,೦೦೦ ರೂಪಾಯಿ ಕಂದಾಯಗಳನ್ನು ರಿಮಿಷನ್ ಮಾಡಿದರು ೪೦,೦೦೦ ಬಡಬಗ್ಗರಿಗೆ ಅನ್ನದಾನ ಮಾಡಿಸಿದರು. ಯುರೋಪ್ಯನ್ ಸರ್ದಾರರಿಗೆ ಔತಣಮಾಡಿಸಿ ಉತ್ಸವಗಳನ್ನೆಲ್ಲಾ ಮುಕ್ತಾಯಕ್ಕೆ ತಂದರು.

****

ಕಲ್ಕತ್ತಾ ಪತ್ರಿಕೆಯಲ್ಲಿ ಒಬ್ಬ ನೊಂದ ಕಾಯಸ್ಥ ಬ್ರಾಹ್ಮಣನು ಬರೆದಿರುವದೇನಂದರೆ — ನನಗೆ ಏಳುಮಂದಿ ಹೆಣ್ಣುಮಕ್ಕಳಿದಾರೆ. ನಮ್ಮ ಜಾತಿಯ ಕಟ್ಟಳೆಯಾದರೋ ಹುಡುಗಿಯರಿಗೆ ೧೦ ತುಂಬುವದರೊಳಗೆ ಮದುವೆ ಮಾಡಬೇಕು. ಈ ಪ್ರಾಂತ್ಯ ಕುಲೀನ ಬ್ರಾಹ್ಮಣ ಹುಡುಗರನ್ನು ನೋಡಿದರೆ ಅವರು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ಪಕ್ಷಕ್ಕೆ ಪ್ರತಿಪರೀಕ್ಷೆಗೂ ೫,೦೦೦ ರೂ. ನಂತೆ ವರದಕ್ಷಿಣೆ ಕೊಟ್ಟಲ್ಲದೆ ಅವರು ಕನ್ಯಾಪ್ರತಿಗ್ರಹ ಮಾಡುವದಿಲ್ಲ. ನಾನು ದೊಡ್ಡ ಸಂಸಾರಿಯಾದ್ದರಿಂದ ನನ್ನ ಆಸ್ತಿ ಅಷ್ಟರಲ್ಲೇ ಇದೆ. ಈ ನನ್ನ ಏಳು ಹೆಣ್ಣು ಮಕ್ಕಳಿಗೂ ವರದಕ್ಷಿಣೆ ಕೊಟ್ಟು ವಿವಾಹ ಮಾಡುವದಕ್ಕೆ ಹಣವನ್ನು ಎಲ್ಲಿಂದ ತರಲಿ? ನನ್ನ ಹಿರೀ ಮಗಳಿಗೆ ಮದುವೆ ಮಾಡಬೇಕೆಂದು ಎರಡು ವರುಷಗಳಿಂದಲೂ ಸಾಹಸಪಡುತ್ತಿದೇನೆ. ಅಲ್ಪಸ್ವಲ್ಪ ವರದಕ್ಷಿಣೆ ಕೊಡುತ್ತೇನೆಂದರೆ ಅದನ್ನು ಯಾರೂ ಅಂಗೀಕರಿಸದೆ ಇದಾರೆ. ಬಹಳ ಹಣ ಕೇಳುತ್ತಾರೆ. ಆ ಕಾರಣ ಮದುವೆಯೇ ಇನ್ನೂ ಮಾಡುವದಕ್ಕಾಗಲಿಲ್ಲ. ಇನ್ನು ಮುಂದೆ ನನ್ನ ಗತಿಯೇನು? ಹಿರೀ ಮಗಳಿಗೆ ಮದುವೆ ಮಾಡುವದೇ ನನ್ನಿಂದಾಗಲಿಲ್ಲವಲ್ಲಾ! ಇಂಥಾದ್ದರಲ್ಲಿ ಈ ಏಳು ಮಂದಿ ಹೆಣ್ಣುಮಕ್ಕಳಿಗೂ ನಾನು ಹ್ಯಾಗೆ ಮದುವೆ ಮಾಡಿ ಪುನೀತನಾಗಲಿ?

---

## ತಾಲ್ಲೂಕು ವರ್ತಮಾನಗಳು.

*********

ಚನ್ನಪಟ್ಣ.—ಒಬ್ಬ ದೊರೆಯುವರು ೧೪ನೇ ತಾ॥ ನಲ್ಲಿ ೩—೪ ಜನ ಸಹಾಯಕರನ್ನು ಕರಕೊಂಡು ಬಂದು, ಮುಸಾಫರ್ ಬಂಗ್ಲೆಯಲ್ಲಿದ್ದು, ಪ್ರತಿ ಜಾತಿಯವರನ್ನು ಕರಿಸಿ, ಕೆಲವರ ಹೆಸರುಗಳನ್ನೂ ಅವರ ಉದ್ದ, ದಪ್ಪ, ಬಲ, ಮೊದಲಾದವುಗಳನ್ನೂ ಪರೀಕ್ಷಿಸಿ ಬರೆದುಕೊಳ್ಳುತ್ತಾರೆ. ಕೋಟೆ ಮಾರಮ್ಮನ ಸಿಡಿಯನ್ನು ಅರಿಸಿ, ಪಟ ಹಿಡಿದರು. ಮದುವೆ ಗಂಡು ಹೆಣ್ಣಿನ ಪಟ ಸಹ ಹಿಡಿದರು. ಇದನ್ನು ನೋಡಿ, ಊರಿನವರು ಕೆಲವರೂ, ಹಳ್ಳಿಯವರೂ ಬಹು ಗಾಬರಿಬಿದ್ದು, ಕೆಲವರು ಅನ್ನವೇ ಬಿಟ್ಟರು. ಕೆಲವರಿಗೆ ಬೇಧಿಯಾಯಿತು. ಹಳ್ಳಿಗಳಿಗೆ ಹೋದರೆ ಇದೇನು ಹೆಸರುಗಳನ್ನು ಬರಕೊಂಡು ಹೀಗೆ ಮಾಡುತ್ತಾರೆ? ಯಾವದೋ ದೇಶದಲ್ಲಿ ದಂಡೆಲ್ಲಾ ಮಡಿದುಹೋಯಿತಂತೆ! ಅದನ್ನು ಭರ್ತಿ ಮಾಡುವದಕ್ಕೆ ಹೆಸರುಗಳನ್ನು ಬರಕೊಂಡು, ಕರಕೊಂಡುಹೋಗುತ್ತಾರಂತೆ ಎಂದು ಹೇಳುತ್ತಾರೆ. ಇದು ಸುಳ್ಳು, ಭಯಪಡಬೇಡಿರೆಂದು ಹೇಳಿದರೂ ಬಹು ಜನ ನಂಬುವದಿಲ್ಲ. ನಮ್ಮ ಶೇಕದಾರರು ಹೆಸರುಗಳನ್ನು ಬರಿಸಿ, ಬನ್ನಿರೆಂದು ಕರೆದರೆ ತಪ್ಪಿಸಿಕೊಂಡು ಹೋಗುತ್ತಾರೆ. ಈಗ ಹಳ್ಳಿಯವರು ಊರಿಗೆ ಬರಲು ಭಯಪಡುತ್ತಾರೆ.—ತಾ॥ ೨೧ ರಲ್ಲಿ ಕೌನ್ಸಿಲರ್ ಮೆ॥ ಶ್ರೀನಿವಾಸಯಂಗಾರ್ಯರು, ಡೆಪ್ಟಿ ಕಮಿಷನರೂ ಇಲ್ಲಿನ ಭೂಮಿಯ ವಿಚಾರಕ್ಕಾಗಿ ಬಂದಿದ್ದು ಅದೇ ದಿನ ಬೆಂಗಳೂರಿಗೆ ಹೋದರು.

ಹಾಸನ.—ಊರಿಗೆ ಸುಮಾರು ಅರ್ಧ ಮೈಲು ದೂರದಲ್ಲಿರುವ ಚನ್ನಪಟ್ಣವೆಂಬ ಗ್ರಾಮದಲ್ಲಿ ಪ್ಲೇಗ್ ಪ್ರಾರಂಭವಾಗಿ ೪ ಜನರು ಸತ್ತಿದ್ದಾರೆಂದು ಹಿಂದೆ ತಿಳಿಸಿದ್ದಾಯಿತು. ಈವರೆಗೆ ಇನ್ನು ಮೂರು ಜನರು ಸತ್ತಿದ್ದಾರೆ. ಊರು ಬಿಟ್ಟು ಹೋಗುವದೇ ಇಲ್ಲವೆಂದು ಹಟ ಹಿಡಿದಿದ್ದ ಜನರು, ಈಗ ತಕ್ಕ ತಿಳುವಳಿಕೆಯನ್ನು ಸರಕಾರದವರಿಂದ ಹೊಂದಿ ತಾವಾಗಿ ಗ್ರಾಮವನ್ನು ಬಿಟ್ಟು ಜೋಪಡಿಗಳನ್ನು ಹಾಕಿಕೊಂಡು ಅದರಲ್ಲಿ ವಾಸಮಾಡುತ್ತಿದ್ದಾರೆ. ಈ ಸೋನೆ ಮಳೆಯಲ್ಲಿ ದೇವರೇ ಆ ಗ್ರಾಮಸ್ಥರನ್ನು ಕಾಪಾಡಬೇಕಾಗಿದೆ. ಕಳೆದ ಗುರುವಾರದ ಸಾಯಂಕಾಲ ಮಳೆ ಸುಮಾರಾಗಿ ಪ್ರಾರಂಭವಾಗಿ ಕಾಲು ಘಂಟೆಯೊಳಗಾಗಿ ಮೂರುಸಾರಿ ಸಿಡಿಲು ಹೊಡೆಯಿತು. ಈ ಪೈಕಿ ಒಂದು ಸಿಡಿಲು ಇಲ್ಲಿನ ಪ್ರಸಿದ್ಧ ವಕೀಲರಾದ ಮೆ॥ ಹಿರಣ್ಣಯ್ಯನವರ ಮನೆಯ ಒಂದು ಭಾಗಕ್ಕೆ ಬಿದ್ದು, ಒಳಗಿದ್ದ ಒಂದು ಎತ್ತು ತಕ್ಷಣವೇ ಸತ್ತುಹೋಯಿತು. ಇದರ ಪಕ್ಕದ ಒಂದು ಮನೆಯನ್ನು ಜನರು ತುಂಬಿದ್ದರು. ದೈವವಶಾತ್ ಯಾರಿಗೂ ಏನೂ ಅಪಾಯವಾಗಲಿಲ್ಲ. ಸಿಡಿಲು ಎರಗಿದ ಭಾಗವನ್ನು ನೋಡಿಕೊಂಡು ಬರುವದಕ್ಕಾಗಿ ಕೆಲವು ಜನ ಸರಕಾರದ ಆಫೀಸರರೂ ಇತರ ಜನರೂ ಹೋಗಿದ್ದರು.—ಈಬಾರಿ ನಮ್ಮ ಡಿಸ್ಟ್ರಿಕ್ಟಿನ ತಾಲ್ಲೂಕುಗಳ ಕಂದಾಯ ತಕ್ಕಮಟ್ಟಿಗೂ ಬೇಗನೇ ವಸೂಲಾಗಿದ್ದರೂ ಮುಂಜರಾಬಾದ್ ತಾಲ್ಲೂಕಿನ ಕಂದಾಯ ಇನ್ನೂ ತೀರ ಭಕ್ತಾಪುರದ ರೂಪಾಯಿ ವಸೂಲಾಗದೆ ನಿಂತಿದೆಯಂತೆ. ನಮ್ಮ ಡಿ॥ ಕಮಿಷನರವರು ಅರಕಲಗೂಡು ಪ್ರಾಂತ್ಯ ಜಮಾಬಂದಿ ಪ್ರಾರ್ಥಿಸುವ ಉದ್ದೇಶ್ಯ ಹೋಗಿದ್ದಾರೆ.—ಸೋನೆಮಳೆ ಪ್ರಾರಂಭವಾಗಿ ಸುರಿಯುತ್ತಲೇ ಇದೆ. ಈ ಅತಿ ಅಧಿಕ ವೃಷ್ಟಿಯಿಂದ ಜನರಿಗೆ ಹರತಿಗೆ ಮಾರ್ಗವಿಲ್ಲದೆ ಇರುವದು. ಹೊಲಗಳು ಅಷ್ಟು ತೃಪ್ತಿಕರವಾದ ಸ್ಥಿತಿಯಲ್ಲಿ ಇಲ್ಲ

ಚನ್ನಪಟ್ಣ ೧೬ನೇ ತಾ॥ ದಿನ ಬಸ್ಲೀನ ಮಿ॥ ಥಾಮ್ಸ ಸಾಹೇಬರು ಕ್ರೈಸ್ತರಿಗೆ ಸ್ಕೂಲ್ ಸ್ಥಾಪನೆ ಮಾಡುವದಕ್ಕೆ ಬರುತ್ತಾರೆಂದು ಕಾದುಕೊಂಡಿದ್ದರು; ಬರಲಿಲ್ಲ. ಆ ಸ್ಕೂಲ್ ಸಹ ಬಂದು ಮಾಡುತ್ತಾರೆಂದು ಕಾದಿದ್ದರು, ಬರಲಿಲ್ಲ.—೯ನೇ ತಾ॥ ನಲ್ಲಿ ಯಾವ ಊರಿನಿಂದಲೋ ಬಂದ ಒಬ್ಬ ಹೆಂಗಸು ಒಂದು ಚಿನ್ನದ ಚೇರ್ ತಾಸನ್ನು ಇಲ್ಲಿನ ಒಬ್ಬ ಪಟ್ ಕನಿಗೆ ೫೦ ರೂ ಗೆ ಮಾರಿದಳು. ರಾತ್ರಿಕಾಲವಾಗಿತ್ತು. ಬೆಳಿಗ್ಗೆ ಆ ತಾಸನ್ನು ನೋಡಲಾಗಿ ತಾಂಬ್ರದ ತಾಸಿಗೆ ಚಿನ್ನದ ಮುಲಾಮು ಮಾಡಿದ್ದಾಗಿತ್ತು. ತರುವಾಯ ಆ ಹೆಂಗಸನ್ನು ರೈಲ್ ಸ್ಟೇಷನ ಹತ್ರ ಕಂಡು, ರೈಲ್ ಪೋಲೀಸಿನವರ ವಶಕ್ಕೆ ಒಪ್ಪಿಸಿದರು. ಅವರು ಆಕೆಯನ್ನು ಎಷ್ಟು ವ್ಯಾದು ಮಧುರ ವಾಕ್ಕಿನಿಂದ ಕೇಳಿದರೂ ನಿಜ ಸಂಗತಿಯನ್ನು ತಿಳಿಸಲಿಲ್ಲವಂತೆ ಒಂದು ವೇಳೆ ಈಚೆಗೆ ಯಾರಾದರು ಮೋಸಮಾಡಿ ಕೊಟ್ಟರೋ ತಿಳಿಯದು. ಇನ್ನೂ ವಿಚಾರಣೆಯಲ್ಲಿದೆ.—ಬೆಂಗಳೂರಿನ ಎಲಹಂಕ ಗೇಟ್ ಬಳಿ ಶಿವ್ವಚೆಟ್ಟಿ ಎಂಬುವರು ಒಂದು ಧರ್ಮಸತ್ರವನ್ನು ಕಟ್ಟಿಸಿದಾರೆಂಬುವದು ಎಲ್ಲರಿಗೂ ತಿಳಿದಿರಬಹುದು ಈಗ ಆ ಸತ್ರದಲ್ಲಿರುವ ಮನೆಗಳಿಗೆ ತಿಂಗಳು ಕಟ್ಟಳೆ ಬಾಡಿಗೆಯನ್ನು ಬಲವಂತದಿಂದ ವಸೂಲ್ ಮಾಡಿಕೊಳ್ಳುತ್ತಾರಂತೆ. ಹೀಗಿದ್ದರೆ ಅದು ಧರ್ಮಸತ್ರವೆಂದು ಹ್ಯಾಗೆ ಕರೆಯಲ್ಪಡಬಹುದೆಂದು ವಿದ್ಯಾಭ್ಯಾಸಕ್ಕೆ ಹೋಗಿದ್ದ ಕೃಷ್ಣಮೂರ್ತಿ ರಾವ್ ಎಂಬುವರು ಹೇಳುತ್ತಾರೆ.—ದೊಡ್ಡ ಮಳೂರ್ ದೇವಸ್ಥಾನದಲ್ಲಿ ಒಬ್ಬೆಣ್ಣೆಯನ್ನು ಹಾಕಿ ನಂದಾ ದೀವಿಗೆಯನ್ನು ಯಾವಾಗಲೂ ಉರಿಸತಕ್ಕ ಪದ್ಧತಿ ಉಂಟಂತೆ. ಈಗ ಒಂದು ಮಣ್ಣಿನ ದೀಪದಲ್ಲಿ ಹರಳೆಣ್ಣೆಯನ್ನು ಹಾಕಿ ಉರಿಸುತ್ತಿದ್ದನ್ನು ಮೆ॥ ರಂಗಯ್ಯಂಗಾರರು ಕಂಡು ಮಹಿಬಿದು ವಿಚಾರಿಸುತ್ತಾರೆಂದು ಹೇಳುತ್ತಾರೆ ಹೀಗೆ ಮೇಲಿನವರ ಗಮನವು ದೇವರುಗಳ ಮೇಲೆ ಇದ್ದರೆ, ಗುಡಿಗಳಲ್ಲಿ ಬೆಳಕು ಉಂಟಾಗುತ್ತದೆಂದು ಹೇಳುತ್ತಾರೆ

ಚಿತ್ರದುರ್ಗ.—ಕಳೆದ ಮೇ ಆಖೈರಿಂದ ಈ ವರಿಗೂ ಮಳೆಯು ಸಮೃದ್ಧಿಯಾಗಿ ಆಗುತ್ತಿರುವದು. ರೈತರೆಲ್ಲರೂ ತಮ್ಮ ತಮ್ಮ ಹೊಲಗಳಲ್ಲಿ ಬೀಜವನ್ನು ಬಿತ್ತುವದರಲ್ಲಿ ಕೇವಲ ಆಸಕ್ತರಾಗಿದಾರೆ. ಭಗವಂತನು ಮುಂದೆ ಕಾಲಕಾಲಕ್ಕೆ ಇದೇ ರೀತಿ ಮಳೆಯನ್ನು ನಡಿಸಿದ ಪಕ್ಷದಲ್ಲಿ ಈ ಪ್ರಾಂತ್ಯ ಈ ವರ್ಷ ಅದ್ಭುತ ಬೆಳೆ ಆಗುವದರಲ್ಲಿ ಏನೂ ಸಂದೇಹವಿಲ್ಲ. ಅತ್ಯಂತ ಲಾಭವಾಗಿದ್ದ ದವಸ ಸದರಿ ಮಳೆಗಳಿಂದ ಕೇವಲ ಸೀತಕ್ಕೆ ಮಾರ್ಪಟ್ಟಿರುವದು.—ಇಲ್ಲಿನ ಲೇಡಿ ಅಪಾತಕೇರಿಯವರು ಕೆಲವು ಕಾಲದಿಂದ ಇಲ್ಲಿ ಬಹಳ ಕಾಯಿಲೆಯಲ್ಲಿದ್ದು, ಕಾಯಿಲೆಯಿಂದ ಹುಷಾರ್ ಆಗದೆ ಇದ್ದದ್ದರ ನಿಮಿತ್ತ ರಜಾ ಪಡೆದು ಕಳೆದ ೧೦ನೇ ತಾ॥ ಬೆಂಗಳೂರು ಮದ್ರಾಸ್ ಪ್ರಾಂತ್ಯ ದಯಮಾಡಿಸಿದರು. ಭಗವಂತನು ಜಾಗ್ರತೆ ಅವರಿಗೆ ಪೂರ್ಣ ಆರೋಗ್ಯವನ್ನು ದಯಪಾಲಿಸಿ ನಮ್ಮ ಮಧ್ಯಕ್ಕೆ ತಂದು ಸೇರಿಸುವವನಾಗಲಿ.—ಕಳೆದ ೩ನೇ ತಾ॥ ಭಾನುವಾರ ಇಲ್ಲಿನ ಡಿ॥ ಆ॥ ಸರ್ಜನರವರು ಕೆಲವು ಜನ ದೊಡ್ಡ ದೊಡ್ಡ ಉದ್ಯೋಗಸ್ತರಿಗೆ ಇಲ್ಲಿಗೆ ಆರು ಮೈಲ್ ದೂರದಲ್ಲಿ ಗುಡ್ಡದ ಮೇಲೆ ಕಟ್ಟಿರುವ ಜೋಗಿ ಮಟ್ಟದ ಬಂಗಲೆಯಲ್ಲಿ ಔತಣ ಮಾಡಿಸಿದರೆಂದೂ, ಡಿ॥ ಆ॥ ಸ॥ ರು ತಮ್ಮ ಮಿತ್ರರಾದ ಫೋರ್ಸ್ಟ್ ಮಾಸ್ಟರವರೊಡನೆ ಅತಿಥಿ ಸತ್ಕಾರಮಾಡಿ, ಸಕಲ ವಿಧವಾದ ಭಕ್ಷ್ಯ ಭೋಜ್ಯಗಳಿಂದ ಅತಿಥಿಗಳನ್ನು ತೃಪ್ತಿಪಡಿಸಿ, ಗಾನ ವಾದ್ಯ ಮೃದಂಗ ವೀಣಾ ಧ್ವನಿಗಳು ಮೊಳಗುತ್ತಿರಲು ಸರ್ವರೊಡನೆ ಅತ್ಯಾನಂದ ಪರವಶರಾಗಿ ಸರ್ವರಿಂದ ಸನ್ಮಾನಿತರಾಗಿ ಅದೇ ಭಾನುವಾರ ಸಾಯಂಕಾಲ ತಮ್ಮ ತಮ್ಮ ವಾಹನಗಳನ್ನೇರಿ ವಾಪಸ್ ದಯಮಾಡಿದರೆಂದೂ, ಈ ಕಾಲದಲ್ಲಿ ಸಕತ್ ಕಾಯಿಲೆಯ ನಿಮಿತ್ತ ಹವಾ ಬದಲಾವಣೆಗೋಸ್ಕರ ಜೋಗಿಮಟ್ ಬಂಗಲೆಗೆ ಒಂದೆರಡು ದಿನಗಳಿಗೆ ಮೊದಲೇ ಹೋಗಿ ಒಂದು ಕಡೆ ವಾಸವಾಗಿ ಕಾಯಿಲೆಯ ಹಾಸಿಗೆಯಲ್ಲಿ ನರಳುತ್ತಾ ಬಿದ್ದಿದ್ದ ಲೇಡಿ ಅಪಾ॥ ಮಿಸೆಸ್ ಧರ್ಮಸಿಂಗ್ ಯವರ ಅವಸ್ಥೆ ಏನಾಗಿದೆಯೋ ಎಂದು ವಿಚಾರ ಮಾಡಲಾಗಿ ಒಂದು ಕಡೆ ಡಿ॥ ಸ॥ ರವರ ಉದಾರ ಗುಣಕ್ಕೆ ಶ್ಲಾಘನೆಯೂ ಇನ್ನೊಂದು ಕಡೆ ಲೇಡಿ ಅಪಾತಕೆರಿಯವರ ಸ್ಥಿತಿಯ ವಿಷಯದಲ್ಲಿ ಅತಿ ಪಶ್ಚಾತ್ತಾಪವೂ ಹುಟ್ಟುವದಿಲ್ಲವೇ.

ಸಿರಿಯೂರ್. ೩—೪ ದಿನಗಳ ಹಿಂದೆ ಎಕ್ಸ್ಯೈಸ್ ಕಮಿಷನರ್ ಮತ್ತು ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್‌ರಾದ ಮೆ॥ ಪೂರ್ಣಯ್ಯನವರ ಸವಾರಿಯು ಸೀಯೂರ್‌ಕ್ಕೆ ದಯಮಾಡಿಸಿ, ಅಂಗಡಿ ಬಾಬ್ತುಗಳನ್ನು ನೋಡಿಕೊಂಡು ಹೋದರು.—ಕಳುವ ಮಾಡಿದ ಮೂವರು ಬ್ರಾಹ್ಮಣರು ಹಿಂದೂಪುರದ ೧೨ ವರ್ಷದ ಬಾಲೆಯೆಂಬ ಬ್ರಾಹ್ಮಣನು ಬಾಕಿಪಟ್ಟಣದ ಗರಿನಪ್ಪರ ಮನೆಗೆ ಮದುವೆಗೆ ಬಂದಿದ್ದನು. ಈತನ ಜೊತೆಗೆ ಸೀಯೂರ್‌ವಿಂದ ಹೊನ್ನ ರಂಗಪ್ಪ ಬ್ರಾಹ್ಮಣ ಬ ಸುಮಾರು ೨೦ ವರ್ಷದ ಮುದುಕ ಸಹ ಹೋಗಿದ್ದನು. ಇವರಿಬ್ಬರೂ ಮೇಲ್ಕಂಡ ಮದುವೆಯವರ ಮನೆಯಲ್ಲಿ ಊಟ ಉಪಚಾರಗಳನ್ನು ತೀರಿಸಿಕೊಂಡು, ಉಂಡಮನೆಗಂಡು ಬಗೆದು ಅವರ ಮನೆಯಲ್ಲಿ ೩—೪ ರೂ ಬಾಳುವ ಒಂದು ಬೆಳ್ಳಿ ಪಂಚಪಾತ್ರೆಯನ್ನೂ, ಒಂದು ಮಗುಟವನ್ನೂ, ಒಂದು ೩—೪ ಆಣೆ ಬಾಳುವ ತಾಂಬ್ರದ ಪಂಚಪಾತ್ರೆಯನ್ನೂ ಮೋಚೀಕೇರಿ ಮನೆಯಲ್ಲಿ ಒಂದು ಪಂಚೆಯನ್ನೂ ಅಪಹರಿಸಿಕೊಂಡು ಬಂದರು. ಇದು ಸೀಯೂರಿನಲ್ಲಿ ಪತ್ತೆ ಆಗಿ ಪ್ರತಿ ಒಬ್ಬರಿಗೂ ೧೫ ದಿನಗಳ ಕಠಿಣ ಸಜಾ ಆಯಿತು. ನಂತರ ಮಗುಟ, ಪಂಚೆ, ಇವೆರಡು ಕೇಸುಗಳು ಪ್ರತ್ಯೇಕವಾಗಿ ಸುಮಾರು ೨೫ ವರ್ಷ ಪ್ರಾಯದವನಾದ ಸುಬ್ಬಣ್ಣನೆಂಬುವನ ಮೇಲೆ ಚಾರ್ಜಾಗಿ ಅವನಿಗೆ ಪುನಃ ೧೫ ದಿನಗಳ ಕಠಿಣ ಸಜಾ ಆಯಿತು.—ಒಂದು ತಿಂಗಳ ಹಿಂದೆ ಸುದ್ದಗುರು ಬ್ರಾಹ್ಮಣ ರಾಮಣ್ಣನೆಂಬುವನು ಸಿರಾ ತಾಲ್ಲೂಕು ಹುಯಿಲ್ದೊರೆ ಡಿಯೊಂಬು ಗ್ರಾಮದ ಸುಕ್ಷೇತ್ರಗಳ ಬಳಿ ಪರಿಚಾರಕನಾಗಿದ್ದುಕೊಂಡು ಆ ಬ್ರಾಹ್ಮಣೋತ್ತಮರು ಮರೆಯಾಗಿದ್ದ ಕಾಲದ ಪೆಟ್ಟಿಗೆ ೨೫೦ ಬೆಲ್ಲದ ರೂ. ಅಪಹರಿಸಿಕೊಂಡು ಓಡಿಹೋಗಿದ್ದನು. ಇದು ರಿಪೋರ್ಟಾಗಿ ಪತ್ತೆ ಹಿಡಿದು ನಡೆದದ್ದರಲ್ಲಿ ಸೀಯೂರಿನ ಜಹಗೀರ್ದಾರ್ ಹಸನ್ ಬೇಗ್ ಹಿಂದೂಪುರದಲ್ಲಿ ಭಾಗೀರಥಮ್ಮನೆಂಬುವಳ ಮನೆಯಲ್ಲಿ ಇವನನ್ನು ೫೧ ಬೆಲ್ಲದ ರೂ. ಸಹಿತ ಹಿಡಿದನು. ಈಗ ಜನರಲ್ ಅಸಿಸ್ಟೆಂಟ್ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಾ ಇದೆ — ಇಲ್ಲಿ ಕಟ್ಟುವ ಗವರ್ನಮೆಂಟ್ ಸ್ಕೂಲ್ ಮನೆಯು ಈ ತಿಂಗಳ ಕಡೆಗೆ ಪೂರೈಸುತ್ತೆ. ಕಟ್ಟಡ ಚಂದಾಗಿದೆ.—ಇಲ್ಲಿ ಭೂಮಿಯಲ್ಲಿನ ತೇವ ಬಂಗಿದೆ. ಥಳ ಗಾಳಿ ಬೀಸುತ್ತಾ ಇದೆ. ಮಳೆ ಆಗುವ ಹಾಗೆ ತೋರುತ್ತಾ ಇದೆಯೇ ಹೊರತು ಕೆರೆಗಳಿಗೂ ಬಾವಿಗಳಿಗೂ ಒಂದು ತೊಟ್ಟು ನೀರೂ ಬರಲಿಲ್ಲ.—ಇಲ್ಲಿನ ಆಸ್ಪತ್ರೆ ಪಾಯ ಗಲೀಜಿಯಾಗಿದೆ. ಕಾಂಪೌಂಡರಿಗೂ, ಡ್ರೆಸ್ಸರಿಗೂ ಸಮಾಧಾನವಿಲ್ಲದ ಕಾರಣ ಆಸ್ಪತ್ರೆ ವರ್ಗಾವಣೆ ಆಗಲೆಂದು ಇದಕ್ಕಾಗಿ ಅನೇಕರು ವ್ಯಸನಪಡುತ್ತಾರೆ. ಈಗ ವ್ಯಾಸರಿಗೂ, ಕಾಂಪೌಂಡರಿಗೂ ಜಗಳ ನಡೆಯುತ್ತಾ ಇದೆ. ಏನಾಗುತ್ತೋ ನೋಡಬೇಕು

ಹಾಸನ. ೪—೫ ದಿವಸದವರಿಗೂ ಪ್ಲೇಗು ನಿಂತು ಮತ್ತೆ ೧೬ನೆ ತಾರೀಖಿನ ದಿವಸ ೩ ಜನರಿಗೆ ರೋಗ ಶುರುವಾಗಿ ೩ ಜನ ಸತ್ತುಹೋದರು. ೨೦ ದಿವಸದ ಕೆಳಗೆ ಚಿಕ್ಕಮಲ್ಲಪ್ಪನು ಪ್ಲೇಗಿನಿಂದ ಮೃತಪಟ್ಟನೆಂದು ತಿಳಿಸಿದ್ದೆನಷ್ಟೆ. ಈತನು ಸತ್ತ ಗುಡಿಸಲು ಸಾಲುಬಿಟ್ಟಿದೆ. ಪಬ್ಲಿಕ್ ರಸ್ತೆ ಬಾಜುದಲ್ಲಿ ಕಟ್ಟಿದ್ದಾರೆ. ಆತನು ಸತ್ತ ನಂತರ ಆತನ ಬಂಧುಬಟ್ಟೆಗಳನ್ನು ಹಿರಿಸಿ ತಲೆದಿಂಬು ಮುಂತಾದವುಗಳನ್ನು ಹೊರಗೆ ತಂದು ಬಿಸಾಡಿರುವದೇ ಹೊರತು ಅದನ್ನು ಬೆಂಕಿಯಿಂದ ಸುಟ್ಟುಬಿಡದೆ ಇದ್ದಾರೆ. ಇಷ್ಟು ಕಾಲವಾದರೂ ಸರಕಾರದವರ ಕಣ್ಣಿಗೆ ಬೀಳದೆ ಇರುವದು ಬಹಳ ಆಶ್ಚರ್ಯ. ಕೆಲವು ತಿಂಗಳಿಂದ ನಡಿಯ ಸಮೀಪದಲ್ಲಿ ತೋಟವನ್ನು ಮಾಡಿಕೊಂಡಿದ್ದ ಅಡವಿಯಪ್ಪನ ಹೆಂಡತಿಗೆ ರೋಗ ತಗಲಿದಾಗ ಅವರ ತಕ್ಕಿನ ಬಾಗದ ಕೇರಿ ಸಮೀಪದಲ್ಲಿ ಗುಡಿಸಲನ್ನು ಕಟ್ಟಿ ಅದರಲ್ಲಿ ಆಕೆಯನ್ನು ತಂದಿಟ್ಟಿದ್ದರು. ಆಕೆ ಮೃತಪಟ್ಟುಹೋದಮೇಲೆ ಆಕೆ ಹೊದ್ದಿದ್ದ ಚಿಂದಿಬಟ್ಟೆ ತಲೆದಿಂಬು ಕಂಬಳಿ ಮುಂತಾದ್ದನ್ನು ಗುಡಿಸಲುಸಮೇತವಾಗಿ ಬೆಂಕಿಯಿಂದ ಸುಟ್ಟು ಬೂದಿಮಾಡಿದ ಸಂಗತಿ ಸರಕಾರದವರು ಮೊದಲುಗೊಂಡು ಎಲ್ಲಾ ಜನಗಳಿಗೂ ಗೊತ್ತಿದೆ. ಹಾಗಾದರೆ ಚಿಕ್ಕಮಲ್ಲಪ್ಪನ ತಲೆದಿಂಬು ಚಿಂದಿಬಟ್ಟೆಗಳನ್ನು ಹಾಗೇ ಬಿಡದೆ ಅದನ್ನು ಸುಟ್ಟುಬಿಡುವದು ಉತ್ತಮವಾಗಿದೆ ತಾಲ್ಲೂಕಿನ ಕೆಲವು ನೌಕರರು ಒಂದೂವರೆ ಮೈಲಿ ದೂರದಲ್ಲಿರುವ ಗುತ್ತಿಗೆದಾರರು ಲಕ್ಕರನ್ನು ಸೇರಿಕೊಂಡಿರುವರು. ಅಲ್ಲಿಂದ ಪದೇ ಪದೇ ಕಚೇರಿ ಮತ್ತು ಸ್ಕೂಲ್ ಕೆಲಸಕ್ಕೆ ಓಡ್ಯಾಡುವದರಲ್ಲಿ ಬೇಸರಪಡುತ್ತಾರೆ. ಇಲ್ಲಿನ ಪೋಸ್ಟಾಫೀಸನ್ನು ಮುಸಾಫರ್ ಬಂಗಲೆಗೆ ಸಂಬಂಧಪಟ್ಟ ಕಿಚನ್ ಮನೆಯಲ್ಲಿ ೧೯ನೆ ತಾರೀಖಿನ ದಿನ ತಂಗಾಮಿಯಾಗಿ ನಡಿಸುವರು. ಟಪಾಲಾಫೀಸಿಗೆ ಬೇರೊಂದು ಗುಡಿಸಲನ್ನು ಕಟ್ಟುವದಕ್ಕೆ ಮೇಲಿನವರು ಸುಮಾರು ಮುವ್ವತ್ತು

...ಯೋಪಾಯಗಳನ್ನು ಅಂದಾಜು ಮಾಡುವರು.—ಇಲ್ಲಿನ ರೆಟ್ಟಿಹಳ್ಳಿ ಲಕ್ಷ್ಮಣಪ್ಪನ ಮನೆಗೆ ಕಳ್ಳರು ನುಗ್ಗಿ, ಕೆಲವು ಸಾಮಾನುಗಳನ್ನು ಕದ್ದರು ಎಂದು ಕೆಲವರು ಗುಲ್ಲುಮಾಡುವರು.—ಮಲೆನಾಡಿನಲ್ಲಿ ಮಳೆ ಹೆಚ್ಚಾಗಿರುವದರಿಂದ ತುಂಗಭದ್ರನದಿಗೆ ತಕ್ಕಮಟ್ಟಿಗೆ ಪ್ರವಾಹಬಂದಿರುವದು. ಪ್ರತಿದಿನ ಮರಣಗಳಾಗುತ್ತವೆ. ಪೇಟೆಯಲ್ಲಿ ಕೆಲವರಿಗೆ, ಕೋಟೆಯಲ್ಲಿ ಕೆಲವು ಬ್ರಾಹ್ಮಣರಿಗೆ ಬಾಡಿಗೆ ಮನೆಗಳು ದೊರೆಯದೆ ಯೋಚನೆಯಲ್ಲಿರುವರು. ಇನ್ನೂ ಕೆಲವರು ಹೊರಗೆ ಹೋಗಿ ಸಾಯುವದಕ್ಕಿಂತ ತಮ್ಮ ಬಿಡಾರದಲ್ಲಿದ್ದು ಸಾಯುವದೇ ಮೇಲೆಂದು ಹೇಳುವರು.—ಕೆಲವು ದಿನಗಳಿಂದ ಹುಚ್ಚುನಾಯಿಗಳ ಉಪಾಂತ್ರ ಶುರುವಾಗಿದೆ. ಈಗಲೇ ತಕ್ಕ ಬಂದೋಬಸ್ತು ಮಾಡುವದು ಒಳ್ಳೇದು. ರಾತ್ರಿಕಾಲದಲ್ಲಿ ಓಡ್ಯಾಡತಕ್ಕವರು ವಿಶೇಷ ಎಚ್ಚರಿಕೆಯಾಗಿರಬೇಕು. ಬರಬರುತ್ತ ಪ್ಲೇಗಿನ ಬೇನೆಯು ಭಯಂಕರವಾದ ಗ್ರಹದಂತೆ ಆಕಾರವನ್ನು ಹೊಂದುತ್ತಿದೆ.

ಹೊಳಲೂರು.—ಈ ಊರಿನಲ್ಲಿ ಈಗ ಒಂದು ವಾರದಿಂದಲೂ ವಿಶ್ರಾಂತಿಯಿಲ್ಲದೆ ಮಳೆ ಬರುತ್ತಿರುವದು. ಮಲೆನಾಡುಗಳಲ್ಲಿ ಈ ಮಳೆಗಾಲ ಯಾವಾಗಲೂ ಆರೋಗ್ಯವಾಗಿರುವದು. ಈ ಊರಿನ ಸ್ಥಳದಲ್ಲಿ ಮುನಿಸಿಪಾಲಿಟಿಯ ಕೆಲಸದಿಂದ ಪ್ರತಿಯೊಂದು ಮನೆಯಲ್ಲಿಯೂ ಜನರು ಛಳಿಜ್ವರ, ವಾಂತಿಭೇದಿ, ಮುಂತಾದ ರೋಗಗಳಿಂದ ನರಳುತ್ತಿರುವರು. ಮುನಿಸಿಪಾಲಿಟಿಯವರಾದರೂ, ಚರಂಡಿಯ ಗಲೀಜನ್ನೆಲ್ಲಾ ತೆಗೆದು ರಸ್ತೆಗೆ ಹಾಕಿಸಿರುವರಲ್ಲದೆ ಕೋಟೆಯ ಬೀದಿ ಮುನ್ಸಿಪ್ಸ್ ಲೇನ್ ರಸ್ತೆಗೆ ಹಾಕಿಸಿರುವದರಿಂದ ಅದು ಮೊಣಕಾಲುದ್ದ ಬರುವಿಗೆ ಕೆಸರು ಎದ್ದು ಬಹಳ ಅಸಹ್ಯವಾಗಿರುವದು. ನಮ್ಮ ಸಬ್ ಡಿವಿಜನ್ ಆಫೀಸರು ಬೇಗ ಇತ್ತ ಕಡೆಗೆ ಬಂದು ನೋಡಿ ಹೇಳಿಕೊಂಡರೆ ಅನುಕೂಲವಾಗಬಹುದು. ನೆನ್ನೆ ಕೆರೆಯಿಂದ ಮಡಿಯುಟ್ಟುಕೊಂಡು ತಲೆಯ ಮೇಲೆ ಬಹಳ ಭಾರವನ್ನು ಹೊತ್ತುಕೊಂಡು ಬರುತ್ತಿದ್ದ ಕೆಲವು ಮಂದಿ ಬ್ರಾಹ್ಮಣ ಸ್ತ್ರೀಯರು ಜಾರಿ ಬಿದ್ದು ತಮ್ಮ ಕಾಲುಗಳನ್ನು ಕೆಡಿಸಿಕೊಂಡರು ಬಿದ್ದು ಬಹಳ ಕಷ್ಟವನ್ನು ಅನುಭವಿಸಿದರು. ಈ ಊರಿನಲ್ಲಿದ್ದ ಸ್ಕೂಲಿನ ಬಂಗಲೆ ಮೇಲೆ ಹೋಗಿ ಐದಾರು ತಿಂಗಳುಗಳಾದಾಗ್ಯೂ ಆಚೆಗೆ ಬದಲಿ ಮಾಡದೆ ಇರುವದರಿಂದ ಈ ಊರಿನ ಮತ್ತು ಈ ತಾಲ್ಲೂಕಿನ ಪ್ರಜೆಗಳಿಗಾಗಿರುವ ತೊಂದರೆಯನ್ನು ವರ್ಣಿಸಲಸದಳ. ಈಗಲೂ ನಮ್ಮ ಜಿಲ್ಲಾ ಕಮಿಷನರು ಒಳ್ಳೇ ಸ್ಕೂಲಿನ ಗೃಹವನ್ನು ಕಟ್ಟಿಸದ ಮಕ್ಕಳ ದೌರ್ಭಾಗ್ಯವಾಗಿ ಕಳಚಿಸಿ ಕೊಡಬೇಕೆಂದು ಕೋರುವೆವು. ಈ ಊರಿನ ಬಾಲಕ ಬಾಲಕಿಯರಿಗೆ ಕ್ರಮವಾಗಿ ಸ್ಕೂಲು ನಡೆಯುವದರಲ್ಲಿ ಹೊಸ ಸ್ಕೂಲು ಬಂಗಲೆಯಾಗಿ ತೀವ್ರವಾಗಿ ಕಟ್ಟುವದಾದರೆ ದೊಡ್ಡಗುಣವನ್ನು ಮಾಡಿದಂತಾಗುವದು. ಅಲ್ಲದೆ ಕೆರೆಯ ಬಳಿ ಹೊಸ ದೊಡ್ಡ ಬಾವಿಯನ್ನು ಕಟ್ಟಿಸದಿದ್ದರೆ ಜನರಿಗೆ ಬಹಳ ತೊಂದರೆಯಾಗುವದು. ನಗರದಿಂದ ಎದ್ದು ಹೋಗುತ್ತಿರುವ ಜನರಿಗೆ ಇಂತಹ ಮಳೆಯಲ್ಲಿ ನೆನೆದು, ಸರಿಯಾದ ಆಶ್ರಯವಿಲ್ಲದೆ, ರೋಗಗಳು ಬರುವಂತಾಗುತ್ತವೆ. ಇನ್ನು ದಯಾಳುಗಳಾದ ಈ ಮಹಾಸ್ವಾಮಿಯವರಿಗೆ ಸರ್ಕಾರದ ಕಡೆಯಿಂದ ಸಹಾಯ ದೊರಕಬೇಕೆಂದು ಕೇಳಿಕೊಳ್ಳುತ್ತೇವೆ. ಈ ಊರು ಸತ್ಯದೇವತೆಗಳ ವಿಷಯದಲ್ಲಿ ನಡೆಯುವ ಜಾತ್ರೆ ಮಹೋತ್ಸವಗಳಲ್ಲಿ ಕೆಲವು ಭಾಗ ನಮ್ಮ ಸಬ್ ಡಿವಿಜನ್ ಆಫೀಸರ ಗಮನಕ್ಕೆ ಬಂದು, ಈಗ ಅವುಗಳನ್ನು ಉಪಯೋಗ ಮಾಡುತ್ತಿರುವರು. ಪ್ಲೇಗು ಕಾಲದಲ್ಲಿ ಛತ್ರದ ಜಾಗ ದುರುಪಯೋಗವಾಗಿರುವದೆಂದು ತಿಳಿದು, ನಡೆದ ಸಂಗತಿಯನ್ನೆಲ್ಲಾ ಅವರಿಗೆ ತಿಳಿಸುವದಕ್ಕೆ ಪ್ರತಿ ಮನುಷ್ಯರಿಗೂ ಕುತೂಹಲ ಬಂದಿರುವದಾಗಿ ಕೇಳುತ್ತೇವೆ. ಹಾಗೆಯೇ ನಮ್ಮ ದೇವಸ್ಥಾನದ ಪ್ರತಿಯೊಂದು ಭಿನ್ನವಾದ ಗೃಹ, ನಗಾರಿಖಾನೆಗಳು, ಬಸ್ತಿಬೀದಿಗಳು, ಮಂತ್ರ ಪಠಣಗಳು ಎಲ್ಲವೂ ಸರಿಯಾಗಿ ಜರುಗುವಂತೆ ಮಾಡಲ್ಪಟ್ಟರೆ ಒಳ್ಳೇದೆಂದು ಹೇಳುತ್ತಾರೆ.

ದಾವಣಗೆರೆ.—ಇಲ್ಲಿ ಈ ತಿಂಗಳ ೧೦—೧೧ ದಿನಗಳಿಂದ ಮಳೆ ಬಿಡದೆ ಸುರಿಯುತ್ತಲಿದೆ. ಇದರಿಂದ ಧಾನ್ಯವ್ಯಾಪಾರಿಗಳು ಬಹಳ ತಗ್ಗಿಹೋಗಿದೆ.—ಇಲ್ಲಿನ ಅಮಲ್ದಾರ್ ಮಿ॥ ಸುಬ್ಬರಾಯರನ್ನು ಟ್ರಿಪಲ್ ಕ್ವಾರ್ಟರ್ ಕಮಿಷನರ್ ಎನ್. ಗ್ರೇಡ್ ದಿವಾನರಿಗೆ ಬದಲಿ ಮಾಡಿ, ಅವರು ಪಿಂಚನಿಗೆ ಅರ್ಜಿ ಮಾಡಿರುತ್ತಾರೆ. ಇವರು ಇಲ್ಲಿ ೪ ವರ್ಷಗಳವರೆಗೂ ಕೆಲಸ ಮಾಡಿ ಎಲ್ಲಾ ಜನರ ಪ್ರೀತಿಗೆ ಪಾತ್ರರಾಗಿದ್ದರು. ಸದ್ಯಕ್ಕೆ ಇವರಿಗೆ ಬದಲಿಯಾಗಿ ಎಸಿಸ್ಟೆಂಟ್ ತಾಲ್ಲೂಕ್ ಸೆಕ್ರೆಟರಿ ಅಮಲ್ದಾರ್ ಬಂದಿರುತ್ತಾರೆ. ಮುಂದಕ್ಕೆ ಯಾರು ಬರುವರೋ ಗೊತ್ತಿಲ್ಲ. ಸಬ್ ಪೋಸ್ಟ್ ಮಾಸ್ಟರ್ ಮಿ॥ ಬಿ. ಪಿ. ಲಿಂಗೋಜಿಯವರನ್ನು ಬಡ್ತಿ ಸಂಬಳದ ಮೇಲೆ ಮಂಗಳೂರಿಗೆ ವರ್ಗ ಮಾಡಿರುತ್ತಾರೆ. ಇವರು ೯ ವರ್ಷ ಕೆಲಸ ಮಾಡಿ, ಜನರ ಗೌರವಕ್ಕೆ ಪಾತ್ರರಾಗಿದ್ದರು. ಇವರಿಗೆ ಬದಲಾಗಿ ಬೇರೂರು ಸಬ್ ಪೋಸ್ಟ್ ಮಾಸ್ಟರು ಬಂದು ಛಾರ್ಜು ವಹಿಸಿದರು.—ಇಲ್ಲಿ ಕಳ್ಳರ ಕಾಟ ಬಹಳವಾಗಿದೆ. ಹಗಲು ರಾತ್ರಿ ಎನ್ನುವದೇ ಇಲ್ಲ; ಎಲ್ಲಾ ಸಮಯದಲ್ಲಿಯೂ ಕಳ್ಳತನ ನಡೆಯುತ್ತಲಿದೆ. ಗುರುವಾರ ಮಧ್ಯಾಹ್ನಕಾಲ ೩ ಘಂಟೆ ಸಮಯದಲ್ಲಿ ಪೋಸ್ಟಾಫೀಸಿಗೆ ಸೇರಿದ ಷೇಕ್ ಹುಸೇನ್ ಎಂಬವನು ಮನೆಯಲ್ಲಿ ಇಲ್ಲದ ವೇಳೆ ಕಳ್ಳರು ಬೀಗ ಮುರಿದು, ಒಳಗೆ ನುಗ್ಗಿ ಹಿತ್ತಲಬಾಗಿಲಿನಿಂದ ಆತನ ಪೆಟ್ಟಿಗೆ ಸಾಮಾನು ಮತ್ತು ಯೂನಿಫಾರಂ ಡ್ರೆಸ್ ಮುಂತಾದವುಗಳನ್ನೆಲ್ಲಾ ದೋಚಿಕೊಂಡು ಹೋದರು. ಇದಲ್ಲದೆ ತರೀಕೆರೆಗೆ ಸೇರಿದ ಬ್ರಾಹ್ಮಣ ಹಳ್ಳಿಯಲ್ಲಿ ೩ ವಾರಗಳ ಕೆಳಗೆ ಶ್ರೀಮಂತನಾದ ಈಶಪ್ಪನವರ ಮನೆಗೆ ಕಳ್ಳರು ರಾತ್ರಿ ೧ ಘಂಟೆಗೆ ಪ್ರವೇಶಿಸಿ, ಜವಳಿ ಪೆಟ್ಟಿಗೆಯನ್ನು ಹೊರ ತೆಗೆದುಕೊಂಡು ಹೋಗಿ ಒಡೆದು, ಚಿನ್ನ ಕಾಸು ಮುಂತಾದವುಗಳನ್ನು ಕದ್ದುಕೊಂಡು, ಬಟ್ಟೆ ಕಡತಗಳನ್ನೆಲ್ಲಾ ಪೆಟ್ಟಿಗೆಯಲ್ಲಿಯೇ ಬಿಟ್ಟು ಹೋದರು. ಪೋಲೀಸಿನವರು ಕಳ್ಳರನ್ನು ಹಿಡಿಯುವ ಪ್ರಯತ್ನದಲ್ಲಿದ್ದಾರೆ.—ಒಬ್ಬ ಬ್ರಾಹ್ಮಣ ಹೆಂಗಸು ಜೋಕೆಯಿಂದ ಇಬ್ಬರು ಮಕ್ಕಳನ್ನು ಕರೆದುಕೊಂಡು, ಲಾಲ್‌ಬಾಗ್ ಭಾವಿಗೆ ಬಟ್ಟೆ ಒಗೆಯುವದಕ್ಕಾಗಿ ಹೋದಳು. ತೋಟದಲ್ಲಿ ಮಾವಿನ ಕಾಯಿ ಬಹಳವಾಗಿ ಬಿಟ್ಟಿರುವದನ್ನು ಈ ಹೆಂಗಸು ನೋಡಿ, ತನ್ನ ಜೊತೆಯಲ್ಲಿ ಬಂದಿದ್ದ ಮಕ್ಕಳ ಸೆರಗಿನಲ್ಲಿ ೨೦—೩೦ ಕಾಯಿಗಳನ್ನು ಗಂಟುಹಾಕಿ, ತಾನೂ ಕೈಯಲ್ಲಿ ಒಂದನ್ನು ಹಿಡಿದುಕೊಂಡು ಹೊರಗೆ ಬಂದಳು. ಮನೆಗೆ ಹೋಗುವಾಗ ಮಕ್ಕಳ ಸೆರಗಿನಲ್ಲಿರುವ ಹಣ್ಣುಗಳನ್ನೆಲ್ಲಾ ತಾನು ತೆಗೆದುಕೊಂಡು ಮಕ್ಕಳ ಕೈಲಿ ಒಂದೊಂದು ಹಣ್ಣನ್ನು ಕೊಟ್ಟು, ಅವರುಗಳ ಮನೆಗೆ ಕಳುಹಿಸಿದಳು. ಈ ಹೆಂಗಸಿನ ನಿಜಸ್ಥಿತಿಯಿಂದ ಮಕ್ಕಳ ತಂದೆತಾಯಿಗಳು ತಮ್ಮ ಮಕ್ಕಳನ್ನು ಬಹಳವಾಗಿ ಹೊಡೆದರು. ಈ ಹೆಂಗಸು ದೊಡ್ಡವಳಾಗಿದ್ದಾಗ್ಯೂ ಚಿಕ್ಕ ಮಕ್ಕಳಿಗೆ ಇಂಥಾ ಕೆಟ್ಟಬುದ್ಧಿ ಕಲಿಸಿಕೊಟ್ಟದ್ದು ಇಲ್ಲಿನ ಬ್ರಾಹ್ಮಣರಿಗೆಲ್ಲಾ ಬಹಳ ಅವಮಾನ ಉಂಟಾಗಿರುತ್ತದೆ.

ತಿಪಟೂರು.—ಈ ಊರಲ್ಲಿ ಇದ್ದಿರುವ ದೊಡ್ಡ ಮನುಷ್ಯರಿಗೆ ಅಕಸ್ಮಾತ್ ಕೆಲಸ ಉಂಟಾಗಿ ಬ್ಯಾರಿಸ್ಟರ್ ಮಿ॥ ಸಭಾಪತಿ ಅಯ್ಯರವರು ದಯಮಾಡಿಸಿ, ಉಭಯತ್ರರಿಗೂ ರಾಜಿಮಾಡಿಸಿದ್ದರಿಂದ ಸರ್ವರೂ ಸಂತೋಷಪಡುತ್ತಾರೆ. ಯಾಕೆಂದರೆ "ಮಣ್ಣು ಬಿಟ್ಟರೆ ಮಾಟ ಇಲ್ಲ, ಹಣ್ಣುಬಿಟ್ಟರೆ ವಿಗ್ರಹವಿಲ್ಲ" ಎಂಬಂತಾಗಿದೆ.—ಈ ಊರಲ್ಲಿ ಗಂಡಸರೂ ಹೆಂಗಸರೂ ಕೆರೆಯ ಸುತ್ತುಮುತ್ತಲೂ ರೈಲ್ ರಸ್ತೆಯ ಪಕ್ಕದಲ್ಲೂ ಹೇಸಿಗೆ ಮಾಡುತ್ತಾರೆ. ಮುನಿಸಿಪಾಲಿಟಿಯ ವಿಚಾರದಿಂದ ಇದರಿಂದ ಪರಿಷ್ಕಾರವಾಗುತ್ತಿಲ್ಲ. ರಸ್ತೆಗಳಲ್ಲಿ ಹಾಕಿದ್ದ ಗ್ರಾವಲ್ ಎಲ್ಲಿಯೋ ಒಡೆದುಹೋಗಿದ್ದರಿಂದ ಹೊರಗೆ ಮೇಲಿನ ಮಂಗಳೂರು ಬಾವುಟ(?) ಹಾಕಿಸುವಂತೆ ರಸ್ತೆಗಳು ಕಲ್ಲುಗಳಿಂದ ಹಲ್ಲುಗಳನ್ನು ತೋರಿಸುವದರಿಂದ ಪ್ರಯಾಣಿಕರು ಕಿರುಚಿಕೊಂಡು ಹೋಗುವದೇ ಹೊರತು ಹರುಷಗೊಂಡು ಬರುವವರಿಲ್ಲ. ಇಂಗ್ಲೀಷು ಚರಂಡಿಗಳು ಕಡಪ ಕಲ್ಲುಗಳಿಂದ ತಯಾರಾಗುತ್ತವೆ. ಪೂರೈಸಿದ ಮೇಲೆ ಜನರ ಸೊಬಗು ಕಾಂತಿ(?) ಚರಂಡಿ ಒಳಗಿನ ಮಣ್ಣನ್ನು ದಡಕ್ಕೆ ಹಾಕಿ ಚನ್ನಾಗಿ ಒಣಗಿಸುವದಕ್ಕೆ ಜಾಹಿರಾತುಗಳಿಗೆ ತಿಳಿಯುತ್ತಿದೆ. ಹೇಸಿಗೆ ಯಲ್ಲಿ ದವಡವೆ ಒಣಗ ತುಪ್ಪ ಆಮೆಯು ಕೆರೆಯ ನೀರನ್ನು ಕಂಡು ಆತುರದಿಂದ ಬರುವಂತೆ ಈ ದಡದಮೇಲಿರುವ ಮಣ್ಣು ಮಳೆ ಬಂದಾಗ ಬಹು ತ್ವರಿತದಿಂದ ಚರಂಡಿಯನ್ನು ಅಪ್ಪಿಕೊಳ್ಳುವ ನೋಟವು ಆಶ್ಚರ್ಯವಾಗಿದೆ. ಒಂದುಸಾರಿ ನಮ್ಮ ಅಮಲ್ದಾರರು ಎರಡಿಯಿಂದ ಪರುಷ ಮಹಾಶಯನನ್ನು ಕಂಡುಹಿಡಿದು ಕೊಟ್ಟಿ ಬಹುಮಾನಿಸಿದರು. ದೊಡ್ಡ ಮನುಷ್ಯರ್ಯಾರೇ ಆದರೂ ಊರೊಳಗೆ ಬರುತ್ತಾರೆಂಬ ಸುದ್ದಿಯಾದಾಗ ಬಸಳಿನ ತಂಡಕ್ಕೆ ಸೇವಕರು ಹೊರಡುವವನ ಕೆಲಸ ಮಾಡುತ್ತಾರೆ. ಆದ್ದರಿಂದ ಅಮಲ್ದಾರರು ಈ ಸೌಕರ್ಯದ ಮೇಲೆ ಪ್ರಾಂ ನಿಗಾ ಕೊಡ್ಬೇಕೆಂದು ಎಲ್ಲರೂ ಎದುರುನೋಡುತ್ತಾರೆ. ಕೆಲವು ದಿನಗಳು ವಿದ್ಯುಚ್ಛಕ್ತಿಯ ಬಲದಿಂದಲೋ ಏನೋ ರಾತ್ರಿಗಳ ೩ ಗಂಟೆಗೆ ಆರಿಹೋಗುತ್ತವೆ —ಎಂದು ಇವರು ಹೇಳುತ್ತಾರೆ. ಬೀದಿಯಲ್ಲಿಯೂ ಇತರ ಅಂಗಡಿಗಳಲ್ಲಿಯೂ ಪಿಕ್ಪಾಕೆಟುಗಳು ಹೆಚ್ಚಾಗುತ್ತಿವೆಂದು ಅವರು ಹೇಳುತ್ತಾರೆ. ಈಗ ಸಿಕ್ಕಿದ ಒಬ್ಬ ಹುಡುಗನಿಗೆ ನಮ್ಮ ಅಮಲ್ದಾರರು ೧೫ ರೂ. ಜುಲ್ಮಾನೆ ಹಾಕಿದರೆಂದು ಪತ್ರ ಮೂಲಕ —ರ ಮಾಹಾ ಆಗ್ರದಲ್ಲಿ ಒಬ್ಬನು ಕೆಲವು ಎಳನೀರನ್ನು ಕದ್ದನೆಂಬ ಅಪವಾದಕ್ಕೆ ಗುರಿಯಾಗಿ ೭ ರೂ. ಜುಲ್ಮಾನೆ ತೆತ್ತನಂತೆ. ಒಬ್ಬ ಬಡ ಹಣ್ಣಿನವನು ತನ್ನ ತಯಾರಿ ಮಾಲುಗಳನ್ನು ಮಾರುವುದಕ್ಕೆ ಬೀದಿಗೆ ತಂದ ಗಾಡಿಯಲ್ಲಿ ಹಾಕಿ ರಾತ್ರಿ ಕಳ್ಳರು ನುಗ್ಗಿ ಆ ಗಂಟುಮೂಟೆಗಳನ್ನು ಬಿಚ್ಚಿಗಳನ್ನು ಅಪಹರಿಸಿದರೆಂದು ಸದರಿ ಗಾಡಿಯವನೂ, ತನ್ನ ಮಾಲುಗಳನ್ನು ಕೊಡಿಸಿ ಎಂದು ಮಾಲೀಕನೂ ಈ ರೀತಿ ಇಬ್ಬರೂ ಪೋಲೀಸಿನಲ್ಲಿ ಹೋರಾಡುತ್ತಾರಂತೆ. ಇದರಿಂದ ವಿಚಾರ ಮುಂದೆ ನೋಡಬೇಕು.

ನಮ್ಮ ಪೋಲೀಸ್ ಇನ್ಸ್‌ಪೆಕ್ಟರು ತಮ್ಮ ಪುತ್ರನ ವಿವಾಹ ಮಹೋತ್ಸವವನ್ನು ನೆರವೇರಿಸುವಾಗ ಉದ್ಯೋಗಸ್ಥರೂ, ಭೂಮಿ ಹಕ್ಕುದಾರರೇ ಮುಂತಾದ ಮಹಾಜನಗಳನ್ನೂ ಪ್ರಸ್ತು ತಾಂಬೂಲಾದಿಗಳಿಂದ ಸತ್ಕರಿಸಿದರು. ಇವರ ಕಾರ್ಯಕೌಶಲತೆಯು ವಿಶೇಷಪ್ರಕಾರವಿರಲೆಂದು ಹಾರೈಸುತ್ತಾರೆ.

---

## ವಿದೇಶ ವರ್ತಮಾನಗಳು.

ಪ್ಯಾರಿಸ್ ನಗರದ ಪತ್ರಿಕೆ ಯೊಂದಕ್ಕೆ ೭ ಲಕ್ಷ ಪೌಂಡು ಹೊಕಿವಸ್ತು ಕೊಡಲನ್ನು ಬಿಕರಿ ಮಾಡುತ್ತಾರೆ. ಈ ಕೊಡಲು ವ್ಯಾಸ್ಯಸ ತಳಿಯಲ್ಲಿ ನಿರ್ಮೆಯದ್ದು. ಇದರ ಕ್ರಯಕ್ಕೆ ೧,೭೦ ೦೦೦ ರೂ. ಆಗುವದು.

◆◆◆◆

ಫಿಲಿಪ್ಪೀ ದ್ವೀಪಗಳಲ್ಲಿ ಕಳೆದ ವಾರ ಭಯಂಕರವಾದ ಸುಂಟರಗಾಳಿ ಬೀಸಿತು. ರೇವಿನಲ್ಲಿದ್ದ ಹಡಗುಗಳು ಭಾರೀ ಜಹಜುಗಳು ಘಟ್ಟಕ್ಕೆ ಬಡಿದು ಹೊಡೆದು ಹೋದವು. ಎಷ್ಟು ಜನರು ಪ್ರಾಣಕಳಕೊಂಡರೋ ಇನ್ನೂ ಪ್ರಕಟವಾಗಲಿಲ್ಲ.

◆◆◆◆

ಬರ್ಲಿನ್ ಪಟ್ಟಣದಲ್ಲಿ ಕ್ರಿಮಿಶಾಸ್ತ್ರ ಪಂಡಿತನೆಂದು ಪ್ರಖ್ಯಾತಿ ಹೊಂದಿದ್ದ ಡಾಕ್ಟರ್ ಯಂಗ್ ಎಂಬಾತನಿಗೆ ಪ್ಲೇಗ್ ತಗಲಿ ಕಳೆದ ವಾರ ಕಾಲವಾದನು. ಅವನ ಬಳಿ ಇದ್ದುಕೊಂಡು ಅವನಿಗೆ ಸೇವೆ ಮಾಡುತ್ತಿದ್ದ ಆಳಿಗೆ ಈಗ ಪ್ಲೇಗ್ ತಗಲಿದೆ.

◆◆◆◆

ಪೀಟರ್ ಕರಾಜಾರ್ಜ್ ವಿಚ್ ಎಂಬಾತನನ್ನು ಸರ್ವಿಯಾ ರಾಜ್ಯದ ಪಾರ್ಲಿಮೆಂಟಿನವರು ತಮ್ಮ ದೊರೆಯಾಗಿ ನೇಮಿಸಿಕೊಂಡಿದ್ದಾರೆ. ಆತನು ಜಿನೀವದಲ್ಲಿದ್ದು ಈ ವರ್ತಮಾನವನ್ನು ಕೇಳಿ, ದೊರೆತನವನ್ನು ತಾನು ಒಪ್ಪಿಕೊಂಡಿರುವದಾಗಿ ತಂತೀವರ್ತಮಾನ ಕಳುಹಿಸಿದನು.

ಹೋದ ತಿಂಗಳು ಅಮೇರಿಕಾದಲ್ಲಿ ಉತ್ಪನ್ನವಾದ ಪ್ರವಾಹಗಳ ದೆಸೆಯಿಂದ ೨೫,೦೦೦ ಜನರಿಗೆ ವಿಲ್ಲುವದಕ್ಕೆ ನೆರಳಿಲ್ಲದಂತಾಯಿತು. ಫಲಭರಿತವಾದ ೨ ಲಕ್ಷ ಎಕರೆ ಜಮೀನುಗಳೆಲ್ಲಾ ನೀರಿನಲ್ಲಿ ಮುಳುಗಿಕೊಂಡಿದೆ. ಜನರು ನುಗ್ಗಿ ಬೆಲೆಯುಳ್ಳ ಮನೆಮಠಗಳಲ್ಲಿರುವ ಆಸ್ತಿಯನ್ನು ದೋಚಿಕೊಳ್ಳದಂತೆ ಸರ್ಕಾರದವರು ಬಹು ಕಠಿಣವಾದ ಕಾನೂನು ಜಾರಿಗೆ ತಂದಿದ್ದಾರೆ.

◆◆◆◆

ಸ್ಯಾಕ್ಸೊನಿ ರಾಜ್ಯದ ದೊರೆಯ ಕಿರೀಮಗನಾದ ರಾಜಕುಮಾರ ಮ್ಯಾಕ್ಸ್ ಎಂಬಾತನು ಕಳೆದ ೧೮೯೬ನೆ ಇಸವಿಯಲ್ಲಿ ವೈದಿಕ ವೃತ್ತಿಯನ್ನು ಅವಲಂಬಿಸಿ, ಮಠವಿಗ್ರಹಯುವನ್ನೆಲ್ಲಾ ತ್ಯಾಗಿ ಕಳೆದುಕೊಂಡಿರುವನು. ಈಗ ಈತನು ಸ್ವಿಟ್ಸರ್ಲೆಂಡಿನಲ್ಲಿರುವ ಆಲ್ಯುಟ್ಸ್ ಮಠದಲ್ಲಿ ಆರ್ಚ್‌ಬಿಷಪ್ ಎಂಬ ಮಠಾಧಿಪತಿಯ ಕೆಲಸವಾಗುವದೆಂದು ವರ್ತಮಾನ ಹುಟ್ಟಿದೆ.

◆◆◆◆

ಬೋಯರ್ ದಳಪತಿಯಾದ ಬೋಥಾ ಮತ್ತು ಆತನ ಸಹಪಾಟಿಗಳು ಸೇರಿಕೊಂಡು, ದಕ್ಷಿಣ ಆಫ್ರಿಕದಲ್ಲಿ ಕೂಲಿ ಮುಂತಾದ ಕೆಲಸ ಮಾಡುವದಕ್ಕೆ ಚೀನಾ ಜನರನ್ನು ಎಷ್ಟುಮಾತ್ರಕ್ಕೂ ಕರಸಕೂಡದೆಂತಲೂ, ಅವಶ್ಯಬಿದ್ದರೆ ದಕ್ಷಿಣ ಹಿಂದುಸ್ಥಾನದಲ್ಲಿರುವ ಜನರನ್ನು ಕರಸಬೇಕೆಂತಲೂ, ಆಫ್ರಿಕದಲ್ಲೇ ಇರತಕ್ಕ ಜನರನ್ನು ಸಹಾಯಿಸತಕ್ಕದ್ದೆಂತಲೂ ಹೇಳುತ್ತಾರೆ.

◆◆◆◆

ಆಫ್ರಿಕದಲ್ಲಿ ಇಂಗ್ಲೀಷರಿಗೆ ಸೇರಿರುವ ಗಯಾನಾ ದೇಶಕ್ಕೆ ಹಿಂದುಸ್ಥಾನದಿಂದ ಕೂಲಿಕಾರರನ್ನು ದುಡ್ಡು ಕೊಟ್ಟು ಕರಸಬೇಕು ಎಂಬದಾಗಿಯೂ, ಈ ದುಡ್ಡನ್ನು ಆ ದೇಶದ ಜನರಿಂದ ಕಂದಾಯದಂತೆ ಹಂಚಿಹಾಕಿ ವಸೂಲ್ಮಾಡಬಹುದೆಂತಲೂ ಅಲ್ಲಿನ ದೊಡ್ಡಮನುಷ್ಯರು ವಿಲಾಯತಿಯ ಪ್ರಾಂತ್ಯಗಳ ಸೆಕ್ರೆಟರಿಯಾದ ಮಿ॥ ಛೇಂಬರ್ಲೇನವರಿಗೆ ಒಂದು ಅರ್ಜಿ ಬರೆದುಕೊಂಡಿದ್ದಾರೆ.

◆◆◆◆

ಮೆಡಿಟರೇನಿಯನ್ ಸಮುದ್ರತೀರದಲ್ಲಿರುವ ಮಾರ್ಸೇಲ್ಸ್ ಪಟ್ಟಣದ ಬಳಿ ಮೂರು ಜಹಜುಗಳು ಕಳೆದ ವಾರ ಢಿಕ್ಕಾ ಬಡಿದು, ಒಂದು ಜಹಜು ಮುಳುಗಿಹೋಯಿತು. ಇದುವರೆಗೆ ೪೦ ಶವಗಳು ಮಾತ್ರ ಸಿಕ್ಕಿರುತ್ತವೆ. ಅದರಲ್ಲಿ ೨೦೦—೨೫೦ ಮಂದಿ ಕೂತಿದ್ದರು. ಇವರಲ್ಲಿ ಆರವಾಸಿಜನರು ಲಯವಾದಂತೆ ತಿಳಿದುಬಂದಿದೆ, ಹಡಗು ಬಡಿತಗಳಿಂದ ೨೦ ನಿಮಿಷಗಳೊಳಗಾಗಿ ಮುಳುಗಿಕೊಂಡಿತು.

◆◆◆◆

ಲಾರ್ಡ್ ಮಿಂಟೋಯವರು ಕೆನಡಾ ರಾಜ್ಯದ ಗವರ್ನರ್ ಜನರಲ್ಲಾಗಿರುವರು. ಇವರ ಅಧಿಕಾರದ ಅವಧಿಯು ಬರುವ ಅಕ್ಟೋಬರಿಗೆ ಪೂರೈಸುವದು. ಅವರು ಬಹಳ ಚಟುವಟಿಕೆಯಿಂದಲೂ, ಪ್ರಜಾ ರಂಜಕವಾಗಿಯೂ ರಾಜ್ಯಭಾರ ಕಾರ್ಯಗಳನ್ನು ನಡಸುತ್ತಾ ಬಂದಿರುವದರಿಂದ ಅವರು ಇನ್ನು ಒಂದು ವರುಷದ ತನಕ ಅದೇ ಅಧಿಕಾರದಲ್ಲಿರತಕ್ಕದ್ದೆಂದು ಚಕ್ರವರ್ತಿಯವರು ಹುಕುಂ ಕೊಟ್ಟಿದ್ದಾರೆ.

◆◆◆◆

ವಿಲಾಯತಿಯಲ್ಲಿ ಕಳೆದ ವಾರ ಒಂದೇ ಸಮನಾಗಿ ೩೬ ಗಂಟೆ ಹೊತ್ತು ವಿಪರೀತ ಮಳೆ ಸುರಿಯಿತು. ನೀರು ಜಮೀನನ್ನೆಲ್ಲಾ ಮುಳುಗಿಸಿದೆ. ಅನೇಕ ಮನೆಗಳು, ಬೀದಿಗಳು, ಮುಂತಾದ ಸ್ಥಳಗಳಲ್ಲಿ ಬಹಳ ನೀರು ನಿಂತಿರುವದು ರೈಲ್ವೆ ಗಾಡಿಗಳ ಸಂಚಾರಕ್ಕೆ ತಡೆಯಾಗಿದೆ; ಜಮೀನುಗಳಲ್ಲಿ ಮಾಡಿದ್ದ ಬೆಳೆಯೆಲ್ಲಾ ನೀರಿನಲ್ಲಿ ಮುಳುಗಿರುವದು. ಇಂಥಾ ಮಳೆಯೂ ಶೀತವೂ ಅಲ್ಲಿನೋಡಿ ೮೦ ವರುಷಗಳಾದವೆಂದು ಹೇಳುತ್ತಾರೆ.

◆◆◆◆

ಆಫ್ರಿಕದಲ್ಲಿ ಯೂಗಾಂಡಾ ರೈಲ್ವೆಯೊಳಗೆ ಇಂಗ್ಲೀಷರು ಕೆಲಸಗಾರರನ್ನು ಬಿಡುವದಕ್ಕೆ ಸಿಂಹಗಳ ಕಾಟ ಅಪಾರವಾಗಿರುವದು. ಕಾಲಿ ನಾಕತಕ್ಕ ಕೂಲಿಯವರನ್ನು ಸಿಂಹಗಳು ಹಿಡಿದು ತಿನ್ನುತ್ತಾ ಬಂದಿವೆ. ಜನಕಲಹಾರತೆ ಆ ಪ್ರಾಂತ್ಯ ಬಿಟ್ಟು ಈ ಸಿಂಹಗಳ ಕಾಟ ತಪ್ಪಿದಲ್ಲದೆ ಈ ರೈಲು ಭಾಗವು ನಿರುಪಯುಕ್ತವಾಗಲಾರದು. ಆದ್ದರಿಂದ ಸರ್ಕಾರದವರು ಸಿಂಹಗಳನ್ನು ಕೊಲ್ಲುವದಕ್ಕೆ ಜನರಿಗೆ ಬಹುಮಾನ ವಿಶೇಷವಾಗಿ ಕೊಡುತ್ತಾ ಬಂದಿದ್ದಾರೆ.

◆◆◆◆

ವಿಲಾಯತಿ, ಸ್ಕಾಟ್ಲೆಂಡ್, ಐರ್ಲೆಂಡುಗಳಲ್ಲಿರುವ ಸ್ತ್ರೀಯರು ರಾಣಿ ವಿಕ್ಟೋರಿಯಾ ಮೆಮೋರಿಯಲ್ ಫಂಡನ್ನು ಎತ್ತಿ ಇದ್ದಾರೆ. ಈ ಫಂಡಿಗೆ ವಿಲಾಯತಿಯಲ್ಲಿ ೮೪ ಸಾವಿರ, ಸ್ಕಾಟ್ಲೆಂಡಿನಲ್ಲಿ ೧೫ ಸಾವಿರ, ಐರ್ಲೆಂಡಿನಲ್ಲಿ ೩ ಸಾವಿರ ಪೌಂಡು, ಅಂತು ೧೦೨ ಸಾವಿರ ಪೌಂಡುಗಳು ವಸೂಲಾಗಿದ್ದಾರೆ. ಚಕ್ರವರ್ತಿಯವರೂ, ಮಹಾರಾಣಿಯವರೂ ಕಳೆದ ವಾರ ಈ ವಿಷಯವನ್ನು ಕೇಳಿ, ಅದಕ್ಕೆ ಮುಖಂಡರಾಗಿರತಕ್ಕ ಸ್ತ್ರೀಯರನ್ನೆಲ್ಲಾ ಸಂತೋಷದಿಂದ ವಂದಿಸಿದರು.

◆◆◆◆

ಅಮೇರಿಕ ರಾಜ್ಯಕ್ಕೆ ಸೇರಿದ ಕೆನಡ, ನ್ಯೂಇಂಗ್ಲೆಂಡ್, ನ್ಯೂಯಾರ್ಕ್, ನ್ಯೂಜರ್ಸಿ, ಎಂಬ ಪ್ರಾಂತ್ಯಗಳಲ್ಲಿ ಎರಡು ತಿಂಗಳಿಂದ ವಿಪರೀತ ಬಿಸಿಲು ಕಾಯುತ್ತಿತ್ತು. ಮಳೆಯು ಹೆಸರೇ ಇರಲಿಲ್ಲ. ಅದ್ದರಿಂದ ಈಗ ಆ ಪ್ರಾಂತ್ಯಗಳ ಕಾಡು ಪ್ರದೇಶಗಳಲ್ಲಿ ಬೆಂಕಿಬಿದ್ದು ವಿಪರೀತವಾಗಿ ಉರಿಯುತ್ತಾ ಬಂದಿದೆ. ಈ ಉರಿಯ ಹೊಗೆಯು ಊರುಗಳಿಗೆಲ್ಲಾ ಹೊಕ್ಕು ಗಾಡಿಗಳ ಸಂಚಾರಕ್ಕೂ ಅವಕಾಶಕೊಡದ ಇದೆ. ಮಸ್ಕೃಟ್ ಎಂಬೊಂದು ಪಟ್ಟಣವೇ ಸುಟ್ಟುಹೋಯಿತು. ಸುಮಾರು ೨,೦೦೦ ಜನರಿಗೆ ಮನೆ ಇಲ್ಲವೆ ಅಲೆಯುತ್ತಿದ್ದಾರೆ. ಸಮುದ್ರ ತೀರದಲ್ಲಿದ್ದ ೧—೩ ಹಡಗುಗಳು ಹೊಗೆಯ ಕೆಸರಿಂದ ಸಮುದ್ರದ ಪಾಲುವಾಯಿತು.

## ಶ್ರೀ ಕೃಷ್ಣವಿಲಾಸ ಪ್ರೆಸ್.

34

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡ್, ನೋಟೀಸ್ ಫಾರಂ, ಟ್ರ್ಯಾಕ್ಟ್ ಷೀಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಛಾರ್ಜುಗಳಿಗೆ ಮಾಡಲ್ಪಡುತ್ತವೆ.

ರೋಡು, ವರ್ಗ, ಮುಂತಾದ ಖಾಲೀ ಪುಸ್ತಕಗಳು; ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು ; ಇನ್ನು ಇತರವಾದ ನಮೂನೆಯ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿನಂತೆ ಬಹು ಅಂದವಾಗಿ ತಯಾರ್ಮಾಡಲ್ಪಡುತ್ತವೆ.

ಲಾಯರ್‌ಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್, ವಕಾಲತ್‌ನಾಮಾ, ಜಾರೀ, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಖರೀದಿಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯತರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಜವಾಬನ್ನು ಅಪೇಕ್ಷಿಸುವವರು ಟಪ್ಪಾಲು ಹಾಸಲನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡಪೇಟೆ ೨೫ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

ಜ್ವರಹರಿ. 37




ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಜಳ್ಳಕೆರೆಯಲ್ಲಿರುವ ಮಾಧಾಮತ ಲಾಮಾ ಸಬ್ ಡಿವೀಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ :—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ೨ ರೂ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

❖❖❖❖❖❖❖❖❖

ಓಮಂ ಕರ್ಪೂರ.




ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಚೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರ್ರಲ್ಲಿ ವಿಶೇಷ :—
ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಕಾಲೇಜ್ ರೋಡ್, ಟೀಚ್ ಮದರಾಸ್.

## ನಾಗೋಜಿಭಟ್ಟೀಯ, ಸಿದ್ಧವಾಗಿದೆ. ಕ್ರಯ ೧ ರೂ.

3

೧೯೦೩ನೇ ಇಸವಿ ಲೋವರ್ ಸೆಕೆಂಡರಿ ಕನಡ ಟೆಕ್ಸ್ಟಿನ ನೋಟ್ಸು. ೧೪೭ನೇ ಪದ್ಯದಿಂದ ೩೦೩ನೇ ಪದ್ಯದ ವರೆಗೂ ಇರುತ್ತೆ. ಗದ್ಯಕಾವ್ಯದ ನೋಟ್ಸೂ ಸೇರಿದೆ. ಅರ್ಥ, ತಾತ್ಪರ್ಯ, ಸಂಧಿ, ಸಮಾಸ, ಅವಯವಾರ್ಥ, ಭಾವಾರ್ಥ, ನಾನಾರ್ಥ, ಪೂರ್ವಕಥೆ, ವ್ಯಾಕರಣವಿಶೇಷ, ಪ್ರಶ್ನೋತ್ತರ, ಮುಂತಾಗಿ ಪರೀಕ್ಷೆಗೆ ಬೇಕಾಗತಕ್ಕ ಎಲ್ಲಾ ವಿಷಯಗಳೂ ವಿಶದವಾಗಿ ತಿಳಿಸಲ್ಪಟ್ಟವೆ. ಮರಿಮಲ್ಲಪ್ಪನವರ ಸ್ಕೂಲು ಮಹಾದೇವ ಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು. ೧೦ಕ್ಕೆ ೧ ಪ್ರತಿ ಜಾಸ್ತಿ. ಪುಸ್ತಕ ದೊರೆಯತಕ್ಕ ಸ್ಥಳ:— ಕೆ. ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.

## ದೇವಾಂಗ ವಂಶಸ್ಥರಿಗೆ ಬೇಕಾದ್ದು

10

ಸ್ವಲ್ಪ ಪ್ರತಿಗಳಿವೆ. ಜಾಗ್ರತೆಪಟ್ಟರೆ ಸಿಕ್ಕುತ್ತೆ. ನಂತರ ಖಂಡಿತ ಸಿಕ್ಕಾನವಿಲ್ಲ. ಸ್ವಕುಲಗುರುಗಳು ಮುಮ್ಮಸಂಗ ಮುನಿಸ್ವಾಮಿಗಳು ರಚಿಸಿದ್ದು ಅರ್ಥಸಹಿತ ದೇವಾಂಗಮತಪ್ರಕಾಶಿಕೆ. ಸಮ್ಮಾನಕಾರಕ್ಕೆ ಸುಂದರವಾದ ೧೪ ಚಿತ್ರಗಳಿವೆ. ಸ್ವಮತತತ್ವವಿಚಾರದ ಪ್ರಕಾಶದರ್ಪಣವು. ಪ್ರತ್ಯಕ್ಷ ನೋಡಿ ಸಂತೋಷಪಡಿ.
೧೪ ಚಿತ್ರವಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೩—೮.
ಚಿತ್ರವಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೨—೮.
ವೇದ ಉಪನಿಷತ್ತು ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ. ೨—೮.
ತಕ್ಷಣವೇ ಮಣಿಆರ್ಡರಿಗೂ ವಿ. ಪಿ. ಯೂ ಕಳುಹಿಸುತ್ತೇವೆ. ಮೈಸೂರು ಜವಳಿ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ, ಬ್ರಹ್ಮಶ್ರೀ ಯಜಮಾನ ಶಂಕರೈಯನವರಲ್ಲಿ ಈ ಗ್ರಂಥ ಸಿಕ್ಕುತ್ತೆ.

ಹೇಮೋಸಿಯಾ.

ರಕ್ತಪಿತ್ತ ಪರಿಹಾರ.




ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣ್ಯ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಕ್ಯಾಪವೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಮಾರ್ಶಾವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಚ್ಚಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಾ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಾ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬದಲ್ಲಿ ೧ ರೂ. ಡಬ್ಬದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ೬ ರೂ. ೨—೮ ಆ. ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್, ಖರ್ಚು ಮಾಫಿ ಬಿಡುತ್ತೆ.

❖❖❖❖❖❖❖❖❖❖

ಹೇಮೋಸಿಯಾ ಯಂಬ್ರೊಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೇಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫು. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ :—ಹೇಮೋಸಿಯಾ ಕಂಪನಿ, ೨೩ ನೆಂಬರು ಬ್ರಾಡ್‌ವೇ, ಮದರಾಸ್.



## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೪—೫—1903 ರಿಂದ ೭—೬—1903 ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | | | 7 | 3 |
| ಮೈಸೂರು ,, | | | | |
| ಬೆಂಗಳೂರು ಡಿಸ್ಟ್ರಿಕ್ಟ | 18 | 15 | 7 | 5 |
| ಮೈಸೂರು ,, | 3 | 2 | 11 | 9 |
| ಕೋಲಾರ ,, | 2 | 1 | | 1 |
| ಕೋಲಾರ ಚಿನ್ನದ ಗಣಿಗಳು | | | | |
| ತುಂಕೂರು ಡಿಸ್ಟ್ರಿಕ್ಟ | 2 | | | |
| ಹಾಸನ ,, | 8 | 5 | 8 | 6 |
| ಚಿತ್ರದುರ್ಗ ,, | 16 | 8 | 4 | 4 |
| ಕಡೂರ ,, | | | | |
| ಶಿವಮೊಗ್ಗ ,, | 18 | 16 | 1[illegible] | 10 |
| ಜುಮ್ಲ. | 65 | 47 | [illegible] | [illegible] |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರದ ಜೇಷ್ಠ ಬಹುಳ ಅಮಾವಾಸ್ಯೆ ಗುರುವಾರದಿಂದ ಆಷಾಢ ಶುದ್ಧ ಸಪ್ತಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ನೇ ಇಸವಿ ಜೂನ್, ಜುಲೈ.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ಮಿಥುನಮಾಸ ತೇದಿ. |
|---|---|---|---|---|---|---|
| 25 | ಗುರು * | ಅಮಾವಾಸ್ಯೆ | 14 49 | ಮೃ | 1.. | 11 |
| 26 | ಶುಕ್ರ † | ಪಾಡ್ಯಮಿ | 8 5[illegible] | ಪು | 51-3 | 12 |
| 27 | ಶನಿವಾ ‡ | ಬಿದಿಗೆ | 2 48 | ಉಪರಿ | 4 2 | 13 |
| 28 | ರವಿವಾರ | ಚೌತಿ | 50 48 | [illegible] | 11 5[illegible] | 14 |
| 29 | ಚಂದ್ರ | ಪಂಚಮಿ | 44-36 | ಮ | 41 10 | 15 |
| 30 | ಕುಜ ¶ | ಷಷ್ಠಿ | 39 18 | ಪು | 37-58 | 16 |
| 1 | ಬುಧ | ಸಪ್ತಮಿ | 35 15 | ಉ | 35 25 | 17 |

* ಪದ್ಮಕಯೋಗ. † ಚಂದ್ರೋದಯ. ‡ ಪುಂಬನಗೂಡಿನಲ್ಲಿ ಮಾರ್ಕಂಡೇಯೋತ್ಸವ. ¶ ಕೂರ್ಮಷಷ್ಠಿ.

## ಪೇಟೆ ಧಾರಣೆ.

| ದಿನಸಿ. | ಮೈಸೂರು. | ಬೆಂಗಳೂರು |
|---|---|---|
| ಕಡ್ಡೀ ಅಕ್ಕಿ ಪಲ್ಲ ೧ಕ್ಕೆ | ರೂ. ೧೦—೪—೦ | ೧೬—[illegible] |
| ಕೆಂಬೂತಿ ಅಕ್ಕಿ ಅವಲ್ .. | .. ೯—೧—೦ | ೧೯—೬— |
| ,, ದಾಯಂ | .. ೯—೮—೦ | ೯—೬— |
| ಜಾಮಾತ್ರಿ ಅಕ್ಕಿ .. | .. ೮—೧೨—೦ | ೧೨—೬— |
| ಸಣ್ಣಕ್ಕಿ ಅವಲ್ .. | .. ೧೨—೮—೦ | ೧೨—೮— |
| ,, ದಾಯಂ .. | .. ೧೨—೮—೦ | ೧೧ ೬— |
| ತೊಗರೀ ಬೇಳೆ ಪಲ್ಲ ೧ಕ್ಕೆ | .. ೧೩—೮ ೦ | ೧೪ ೦— |
| ,, ದಾಯಂ .. | .. ೧೨—೮—೦ | ೧೨—೮— |
| ಕೈರ್ ರಾಗಿ ಪಲ್ಲ ೧ಕ್ಕೆ .. | .. ೩ ೧೪—೦ | ೩—೪— |
| ಕಾರ್ರಾಗಿ .. | .. ೩—೮—೦ | ೩—೨— |
| ಜೋಳ .. | .. ೩—೧೦—೦ | ೫—೦— |
| ಹಲಸಂದೆ ಪಲ್ಲ ೧ಕ್ಕೆ .. | .. ೮—೦ ೦ | ೮—೦— |
| ಬಿಳೀ ಅವರೆ .. | .. ೭ ೦ ೦ | ೭—೦— |
| ಹೆಸರು .. .. | .. ೯ ೦—೦ | ೧೦—೮— |
| ಉದ್ದು .. .. | .. ೮ ೪ ೦ | ೯—೦— |
| ಕಡಲೆ .. .. | .. ೯ ೮—೦ | ೧೦—೦— |
| ಎಳ್ಳು .. .. | .. ೧೭ ೧೨ ೦ | ೧೦—೧೫— |
| ಹುರುಳಿ .. .. | .. ೪—೦ ೦ | ೪—೧೨— |
| ಹರಳು ೧೨೭ ಸೇರಿಗೆ .. | .. ೯—೧೨—೦ | ೫—೧೨— |
| ಸೀಗೇಕಾಯಿ ಮಣ ೧ಕ್ಕೆ | .. ೧—೮—೦ | ೧—೮— |
| ಮೆಣಸಿನಕಾಯಿ .. | .. ೨—೮—೦ | ೨—೦— |
| ,, ದಾಯಂ .. | .. ೨—೪ ೦ | ೧—೮— |
| ಬೆಲ್ಲ ದೊಡ್ಡ ಅಚ್ಚು .. | .. ೪—೮—೦ | ಮ ೧—೭— |
| ಒಳ್ಳೆಣ್ಣೆ ಮಣ ೧ಕ್ಕೆ .. | .. ೫—೦ ೦ | ೪—೮— |
| ಹರಳೆಣ್ಣೆ ,, .. | .. ೩—೧೨—೦ | ೩—೦— |
| ಕೊತ್ತಂಬರಿ ಪಲ್ಲ ೧ಕ್ಕೆ .. | .. ೫—೮—೦ | ೫—೦— |
| ಉಪ್ಪು ,, .. | .. ೯—೦—೦ | ೯—೦— |
| ಹುಣಸೇ ಹಣ್ಣು .. | .. ೦—೧೪—೦ | ೦—೧೪— |
| ,, ಹಳೇದು .. | .. ೦—೧೦—೦ | ೦—೧೨— |
| ಹುಪ್ಪು .. .. | .. ೧೦ ೧೨—೦ | ೧೦—೮— |
| ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ | .. ೪ ೯—೦ | ೪—೩— |
| ತೆಂಗಿನಕಾಯಿ ೧೦೦ ಕ್ಕೆ | .. ೪—೪—೦ | ೩—೮— |
| ಅಳಲೇಕಾಯಿ ಮಣ ೧ಕ್ಕೆ | .. ೦—೧೪ ೦ | ೦—೧೨— |
| ಅಂಟ್ವಾಳದಕಾಯಿ ಮಣ ೧ಕ್ಕೆ | .. ೬—೧೪—೦ | ೦—೧೦— |
| ಚಿನ್ನ (ಪೌನ್) ಕೆಂಪು | .. ೧೫—೪—೦ | ೧೫—೪— |
| ,, ,, ಪಸಿಮೆ | .. ೧೫—೮—೦ | ೧೫—೮— |
| ,, ,, ಗಟ್ಟಿ ತೊಲ ೧ಕ್ಕೆ .. | ೨೭—೦—೦ | ೨೪—೮— |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ .. | ೭೨—೦—೦ | ೬೭—೦— |

Printed and Published by the Rev. E. W. Thompson, M.A. the Proprietor and Manager, Wesleyan Mission Press Mysore. 25/6/1903.

# ವೃತ್ತಾಂತ ಪತ್ರಿಕೆ.

REGISTERED. M. 20

ಕ್ರಯ ೧ ದುಡ್ಡು —:o:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩ ಮೈಸೂರು—ಸನ್ ೧೯೦೩ ನೇ ಇಸವಿ ಜೂಲೈ ತಾರೀಖು ೨ನೇ ಗುರುವಾರ. ಸಂಚಿಕೆ ೫



## THE FOREIGN MISSIONS AND GENERAL AGENCY.

17

ಮೇಲೆ ಕಂಡ ಏಜನ್ಸಿಯವರು ದೇಶೀಯ ವರ್ತಕರಿಗೂ ಇತರರಿಗೂ ಇಂಗ್ಲಾಂಡಿನಲ್ಲಿ ತಯಾರಾಗುವ ಯಾವ ಸಾಮಾನನ್ನು ಬೇಕಾದರೂ ಸುಲಭವಾದ ಕಮಿಷನ್ ತೆಗೆದುಕೊಂಡು ಕಳುಹಿಸುವರು. ಆರ್ಡರು ತಲುಪಿದ ಕೂಡಲೆ ಮಾಲುಗಳು ಬಹು ಜಾಗ್ರತೆಯಾಗಿ ರವಾನೆ ಮಾಡಲ್ಪಡುವವು. ಈ ವಿಷಯದಲ್ಲಿ ತಿಳಿದುಕೊಳ್ಳಬೇಕೆಂದಿರುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕೆಂದು ಕೋರುತ್ತೇವೆ.

A. J. Baker,

*Manager,*

*29-35, City Road, London.*

---

ಜನರಿಗೆ ತವಾದ ಪುಸ್ತಕಗಳು ಬೇಗನೋಡಬಾರದೇ

ಮೈಸೂರು ಸರ್ಕಾರದ ವಿದ್ಯಾ ಇಲಾಖೆಯವರು ಈ ಪುಸ್ತಕಗಳ ಅನೇಕ ... ತಿಳಿದು ... ಬಳಸ ... ದರೆ ...

ಪುರಾತನ ... ಬಹು ರಸಿಕವಾಗಿದೆ ಚಿತ್ರಗಳುಳ್ಳ ಕಥೆ ಕ್ರಯ ೦—೨—೦

ಪ್ರಾಚೀನ ಸ್ತ್ರೀಯರ ವರ್ಣನೆ. ಚ ೦—೧—೦

ಬಗೆಬಗೆಯ ... ಎಲ್ಲರೂ ಓದತಕ್ಕ ಅನೇಕ ಕಥೆಗಳು ೦—೨—೦

ಪಕ್ಷಿಗಳ ವರ್ಣನೆ. ಸ್ಕೂಲ್ ಹುಡುಗರಿಗೆ ಬಹುಮಾನ ಕೊಡುವದಕ್ಕೆ ಯೋಗ್ಯವಾಗಿದೆ. ... ಪಕ್ಷಿಗಳ ... ಇದರಲ್ಲಿ ... ೦—೧—೬

ಇಂಡಿಯಾ ಚಕ್ರವರ್ತಿಯಾಗಿದ್ದ ... ಮತ್ತು ಚಕ್ರವರ್ತಿನಿಯಾದ ಅಲೆಕ್ಸಾಂಡರು ಅವರ್ಗಳವರ ಜೀವಮಾನಗಳ ಚರಿತ್ರೆ. ಇದರಲ್ಲಿ ಗ್ಲೇಜ್ ಕಾಗದದಮೇಲೆ ಅಚ್ಚಿನ ಚಿತ್ರಗಳು ಅನೇಕವಾಗಿವೆ. ಪ್ರತಿಯೊಬ್ಬರ ಮನೆಯಲ್ಲೂ ಇರತಕ್ಕ ಪುಸ್ತಕ. ಇಂಥಾ ಉತ್ಕೃಷ್ಟವಾದ ಪುಸ್ತಕಕ್ಕೆ ಬೆಲೆಯು ಬಹು ಕಡಿಮೆಯಾಗಿದೆ. ಕ್ರಯ ೦—೪—೦

| | |
|---|---|
| ಚಕ್ರವರ್ತಿಗಳ ... ಪುಸ್ತಕ ಕ್ರಯ | ೦—೨—೦ |
| ಕ್ರಿಮಿಗಳ ವರ್ಣನೆ (ಸಚಿತ್ರ) | ೦—೧—೦ |
| ಬೇಹತಂಬ ನಸ್ಯಮನೆ (ಸಚಿತ್ರ) | ೦—೧—೦ |
| ಪ್ರಬೋಧಚಂದ್ರಿಕೆ | ೦—೨—೦ |
| ಚಿಕ್ಕವರಿಗೆ ... ಕಥೆಗಳು | ೦—೧—೦ |
| ಕಾಂಬಾ ... ಚರಿತ್ರೆ | ೦—೦—೦ |
| ಗ್ರೀನ್‌ಲಾಂಡಿನ ಚರಿತೆ | ೦—೨—೬ |
| ನೆಪೋಲಿಯನ್ ಬೋನಪಾರ್ಟನ ಚರಿತ್ರೆ | ೦—೧—೨ |
| ಆಫ್ರಿಕ ಪ್ರಾಂತ್ಯಗಳ ಚರಿತ್ರೆ | ೦—೭—೬ |
| ಘನತೆಯುಳ್ಳ ... ರ ಚರಿತ್ರೆ | ೦—೨—೨ |

(೧) ವೇದಗಳನ್ನು ಬರೆದವರು ಯಾರು? (೨) ಶುದ್ಧವಾದ ನೀರಿನ ವಿಧಿ, (೩) ಹಾಲು ಮತ್ತು ಹಾಲುತೀರಿಸುವ ಮಾರ್ಗ, (೪) ಇಂಡಿಯಾದೇಶದ ಬಡತನದ ಕಾರಣಗಳು, (೫) ಬಾಲ್ಯವಿವಾಹ, (೬) ಸ್ವಾತಂತ್ರ್ಯ, (೭) ಬಿಯ್ಯದ ..., (೮) ಮಾನವಧರ್ಮಶಾಸ್ತ್ರ, (೯) ಗ್ರಹಣಗಳು, (೧೦) ಮಕ್ಕಳನ್ನು ಬೆಳಸತಕ್ಕವಿಧ. (೧೧) ಸ್ವಪ್ನಗಳು, (೧೨) ಎಲ್ಲರೂ ಸಹೋದರರು, (೧೩) ಮಂತ್ರ, ತಂತ್ರ, ಯಂತ್ರಗಳು, (೧೪) ಜ್ಯೋತಿಷಶಾಸ್ತ್ರ (೧೫) ಆರೋಗ್ಯಪ್ರಕಾಶಿಕೆ. ಈ ಪುಸ್ತಕಗಳ ಪ್ರತಿಯೊಂದಕ್ಕೆ ಮೂರು ಕಾಸು ಕ್ರಯವಿದೆ. ಮೇಲ್ಕಂಡ ಹದಿನೈದು ಪುಸ್ತಕಗಳನ್ನು ಒಟ್ಟಾಗಿ ಕರಿಸತಕ್ಕವರಿಗೆ ... ಯಾಗಿ ಮಾರಲಾರೆವು. ಈ ಪುಸ್ತಕಗಳನ್ನು ಓದಿದಮೇಲೆ ಬರುವ ಸಂತೋಷವನ್ನು ವಿವರಿಸಲಾಗದು. ಜಾಗ್ರತೆ ನೋಡಿ. ವಿ. ಪಿ. ಪಿ. ಮೂಲಕವಾಗಿಯಾಗಲಿ ಅಥವಾ ಹಣವನ್ನು ಮುಂಗಡವಾಗಿ ಕಳುಹಿಸೋಣದ್ದರಿಂದಲಾಗಲಿ ಪುಸ್ತಕಗಳನ್ನು ಪಡೆಯಬಹುದು.

ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಮೈಸೂರು.



## ಬಳ್ಳೀ ಔಷಧಗಳು.

9

ನಯನವ್ಯಾಧಿಗೆ ಸುಖಾಂಜನವು.—ಹೊಸತಾಗಿ ಅಥವಾ ಬಹು ಕಾಲದಿಂದ ಕಣ್ಣಿನಲ್ಲಿ ಇರುತ್ತಿದ್ದ ಎಲ್ಲ ಪ್ರಕಾರದ ಬಾಧೆಗಳು ಇದರಿಂದ ಬಹು ಬೇಗನೆ ಗುಣ ಹೊಂದುವವು. ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು, ಪಿಸರೂ ಬರುತ್ತಿರುವದೂ, ಉರಿ, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದೂ, ದೃಷ್ಟಿಮಾಂದ್ಯ ಮುಂತಾದ ವಿಶಿಷ್ಟ ವ್ಯಾಧಿಗಳು ಗುಣ ಹೊಂದುತ್ತವೆ. ಕ್ರಯ ೧ ಡಬ್ಬಿಗೆ ೧ ರೂ. ಪೋಸ್ಟು ಖರ್ಚು ಆಣೆ ೩.

ವಾಯುಹಾರಕ ತೈಲ (ಬಾಹ್ಯಲೇಪನಕ್ಕೆ ಮಾತ್ರ)—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವ ಇತರ ವಾಯುಗಳ ಬಾಧೆ ಅಲೆಸೋವ, ಚಿಕ್ಕ ಹುಡುಗರ ಉಬ್ಬಸ, ಕೆಮ್ಮು, ಕೂಡ ಗುಣ ಹೊಂದುವವು. ಕುಪ್ಪಿಗೆ ೧ ರೂ. ಖರ್ಚು ಆಣೆ ೩.

ಗಜಕರ್ಣದ ಮುಲಾಮು.—೨ ಯಾ ೩ ಅವತಿನ ಹಚ್ಚುವದರೊಳಗೆ ಎಂಥ ಕಠಿಣವಾದ ಗಜಕರ್ಣವಾದದ್ದು ಇದ್ದರೂ ಪೂರ್ಣ ಗುಣ ಹೊಂದುವದು. ಡಬ್ಬಿಗೆ ಆಣೆ ೮. ಖರ್ಚು ೧ ರಿಂದ ೬ ಡಬ್ಬಿವರೆಗೆ ಆಣೆ ೩.

ಕರ್ಣರೋಗಕ್ಕೆ ವನೌಷಧಿ ತೈಲ (ಬಾಹ್ಯೋಪಚಾರಕ್ಕೆ ಮಾತ್ರ).—ಚಿಕ್ಕ ಪ್ರಾಯದವರ ಮತ್ತು ಬಲಿತ ಪ್ರಾಯದವರ ಕಿವಿಯಿಂದ ರಕ್ತವಾಗಲಿ ... ಅಥವಾ ನೀರಿನಂಥ ದ್ರವವಾಗಲಿ ಹೊಸತಾಗಿ ಅಥವಾ ಬಹುಕಾಲದಿಂದ ಹರಿಯುತ್ತಿದ್ದರೆ ಮತ್ತು ಅದರ ಮೂಲಕ ನೋವೂ ಕಳತವೂ ಹುಣ್ಣೂ ಇರುತ್ತಿದ್ದರೆ, ಇದರ ಉಪಯೋಗದಿಂದ ಬಹು ಬೇಗನೇ ಸಂಪೂರ್ಣ ಗುಣವು ಪ್ರಾಪ್ತವಾಗುವದು. ಕ್ರಯ ರೂ. ೧. ಖರ್ಚು ಆಣೆ ೩.

ವಿ. ಪಿ. ೨ ... ಅನೇಕ ಉತ್ತಮವಾದ ಔಷಧಗಳ ಬಗ್ಗೆ ನಮ್ಮ ಕ್ಯಾಟಲಾಗು ತರಿಸಿ ಓದಿ ನೋಡಿ. ನಮ್ಮ ವಿಳಾಸವೇನಂದರೆ.—

ರಾಜವೈದ್ಯ ... ಶೀಪತಿ. ಬೆಳಗಿ ಉತ್ತರಕನ್ನಡಾ ಜಿಲ್ಲಾ



## ROBINSON'S

## PATENT BARLEY.

## ರಾಬಿನ್‌ಸನ್‌ಯವರ

## ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಜವೆಗೋಧಿಯಿಂದ ಮಾಡಿದೆ. ಹಸ್ತಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹಣ್ಣಿನ ರಸವನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾ ರಾದ್ದರಿಂದ ಖಾತಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.



## MELLIN'S FOOD.

ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮೆದುಳೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಕವಾದುತಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಹಾಕಿ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ರಂಬಿಕೆಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ಪಿಷ್ಟವು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಬಿಸಿಲು ಹೊತ್ತಿನ ಕಾಲದಲ್ಲಿಯೂ ಶೈತ್ಯದಲ್ಲಿಯೂ ಒದಗುವ ವಿಶ್ವಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುರುತುಪದಾರ್ಥವು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ದಕ್ಕತಕ್ಕದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ದೃಢಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ತಕ್ಕಷ್ಟು ಮಟ್ಟಿಗೆ ಕಡಿಮೆಮಾಡುತ್ತದೆ.

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಶಾಪುಗಳಿಗೂ ಬರೆದು ತರಿಸಿಕೊಳ್ಳಬಹುದು:—

ಏಡನ್:—ಮೆ॥ ಕಾವಸಿ ದಿನ್‌ಷಾ ಬ್ರದರ್ಸ್.

ಬೊಂಬಾಯಿ:—ಮೆ॥ ಲೇಡಂ ಆಬೆರ್‌ಕ್ರಾಂಬಿ ಕಂಪೆನಿ.

ಕಲ್ಕತ್ತಾ.—ಮೆ॥ ಮುಕ್ಕೆನ್‌ಜಿ ಲಯಲ್ ಕಂಪೆನಿ.

ಕೋಚನಾಡ:—ಮೆ॥ ಹಾಲ್ ವಿಲ್ಸನ್ ಕಂಪೆನಿ.

ಕರಾಚಿ:—ಮೆ॥ ಎಚ್. ಜೆ. ರುಸ್ತುಂಜಿ ಕಂಪೆನಿ.

ಮದ್ರಾಸು:—ಮೆ॥ ಓಕ್ ಕಂಪೆನಿ.

ರಂಗೂನ್—ಲೇಡಂ ಬ್ಲಾಕ್ ಕಂಪೆನಿ.

## ಇಸ್ತಿಹಾರ್.

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದ. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.—

೧. ಸಿಟಿ ಮುನಿಸಿಪಲ್ ಲಿಮಿಟಿನೊಳಗಿರುವ ಪೇಟೆಗಳಲ್ಲಿಯೂ ೪ ಚಕ್ರದ ಸ್ಪ್ರಿಂಗು ಗಾಡಿಗಳು, ೨ ಚಕ್ರದ ಸ್ಪ್ರಿಂಗು ಗಾಡಿಗಳು, ಪೆಟ್ಟಿಗೆ ಗಾಡಿಗಳು, ಡಾಗ್‌ಕಾರ್ಟ್‌ಗಳು, ಹಳ್ಳಿ ಜಟಕಾ ಗಾಡಿಗಳು, ಕುದುರೆಗಳು, ಮತ್ತು ಪೋನಿಗಳು ವಗೈರೆ ಸಹಾ ಇಟ್ಟಿರತಕ್ಕವರು ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ ೩೯ ನೆ ಸೆಕ್ಷನ್‌ನಲ್ಲಿ ವಿಧಾಯಕವಾಗಿರುವಂತೆ ಆಯಾಯ ಜನಗಳು ಹಿಂದಣ ಬಾಕಿ ಏನಾದರೂ ಕೊಡಬೇಕಾಗಿದ್ದರೆ ಅಂಥಾ ಬಾಕಿ ಮತ್ತು ಮುಂದಣ ೧೯೦೩—೦೪ ನೆ ಸಾಲಿಗೆ ಅಡ್ವಾನ್ಸ್ ತರೀಖು ತೆರಿಗೆ ಇವುಗಳನ್ನು ಯಾ ಆಫೀಸಿನಲ್ಲಿ ಪಾವತಿ ಮಾಡಿ ಗಾಡಿಗಳಿಗೆ ನಂಬರು ಹಾಕಿಸಿಕೊಳ್ಳಬೇಕು. ಅಥವಾ ಪ್ಯಾಸು ತೆಗದುಕೊಳ್ಳಬೇಕು. ನಂಬರು ಹಾಕಿಸುವದಕ್ಕಾಗಿ ೧೯೦೩ ನೆ ಇಸವಿ ಜುಲೈ ತಾರೀಖು ೧ ರ ಲಾಗಾಯಿತು ೩೦ ರ ವರಿಗೆ ೧ ತಿಂಗಳು ವಾಯಿದೆ ಕೊಟ್ಟಿರುತ್ತೆ. ಆ ಬಳಿಕ ಬರತಕ್ಕ ಗಾಡಿಗಳಿಗೆ ಸಾಕಾದಷ್ಟು ಕಾರಣ ತೋರಿಸದೆ ಇದ್ದಲ್ಲಿ ನಂಬರು ಹಾಕಿಸುವದಿಲ್ಲ.

೨. ಮೇಲ್ಕಂಡಂತೆ ನಂಬರು ಹಾಕಿಸಿಕೊಳ್ಳದೆ ಅಥವಾ ಪ್ಯಾಸ್ ತೆಗದುಕೊಳ್ಳದೆ ಹೋದರೆ ಅಂಥಾ ಗಾಡಿಗಳ, ಅಥವಾ ಜಾನವರುಗಳ ಮಾಲೀಕರಾಗಲಿ, ಅವರ ಕಡೆ ಏಜಂಟರಾಗಲಿ, ಸಿಟಿ ಮುಜಕೂರು ಟೋಲ್‌ಗೇಟುಗಳ ಮುಖಾಂತರವಾಗಿ ಸಿಟಿ ಒಳಕ್ಕೆ ಪ್ರವೇಶ ಮಾಡಿದರೆ ರೂಲ್ಸಿನಂತೆ ಟೋಲ್ ಎಂಬ ಸುಂಕವನ್ನು ಕೊಡಲು ಬದ್ಧರಾಗಿರುತ್ತಾರೆ.

೩. ಗಾಡಿಗಳು ಅಥವಾ ಕ್ಯಾರೇಜುಗಳು ಟರ್ಮನಲ್ಲಿ ಇದ್ದು ಕೊಂಡು ಮ್ಯುನಿಸಿಪಾಲಿಟಿಗೆ ಕಂದಾಯ ಕೊಡುತ್ತಿದ್ದರೂ ಟೋಲ್‌ಗೇಟುಗಳಲ್ಲಿ ಟೋಲ್ ಎಂಬ ಸುಂಕವನ್ನು ವಸೂಲ್ಮಾಡಿದರು ಎಂಬದಾಗಿ ವಗೈರೆ ಇತರರ ಪ್ಯಾಸ್ ಪಡೆಯದೆ ಅಥವಾ ನಂಬರು ಹಾಕಿಸಿಕೊಳ್ಳದೆ ಬರತಕ್ಕ ಫಿರ್ಯಾದುಗಳಿಗೆ ಏನೂ ಕೊಡುವದಿಲ್ಲ. ತಿಳಿಯುವದು.

ಮೈಸೂರು ಸಿಟಿ ಮ್ಯುನಿಸಿಪಲ್ ಆಫೀಸು,
ತಾರೀಖು ೨೭ ನೆ ಜೂನ್ ೧೯೦೩ ನೆ ಇಸವಿ.

K. SREENIVASA RAO,
*Vice President.*

## ವೃತ್ತಾಂತ ಪತ್ರಿಕೆ.

ಸ ೧೯೦೩ ನೇ ಇಸವಿ ಜೂಲೈ ತಾ॥ ೨ ನೇ ಗುರುವಾರ.

### ಮೈಸೂರು ಮ್ಯುನಿಸಿಪಾಲಿಟಿಯ ವ್ಯವಸ್ಥೆ.

ಮೈಸೂರು ಪಟ್ಟಣದ ಮ್ಯುನಿಸಿಪಾಲಿಟಿಯ ಕಾರ್ಯಗಳು ಏತಕ್ಕೋ ಬಹಳ ಕಾಲದಿಂದಲೂ ತುಂಬಾ ಅತೃಪ್ತಿಕರವಾದ ಸ್ಥಿತಿಯಲ್ಲಿರುತ್ತವೆ. ಇದಕ್ಕೆ ತಕ್ಕ ಪರಿಹಾರವನ್ನು ಕಂಡುಹಿಡಿಯುವದಕ್ಕೋಸ್ಕರ ಮ್ಯುನಿಸಿಪಲ್ ಬೋರ್ಡಿನವರು ಆಗಿಂದಾಗ್ಗೆ ಕಮಿಟಿಗಳನ್ನು ನೇಮಿಸುತ್ತಿರುವರು. ಅವರೂ ವಿಚಾರವೇನೋ ಎಂದು ನಡೆಸುತ್ತಲೇ ಇರುವರು. ಕಳೆದ ಮೇ ತಿಂಗಳಲ್ಲಿ ಅಕಾಲ ಮರಣದ ಉತ್ಪತ್ತಿಯು ಬಹಳ ಕಡಿಮೆಯಾಯಿತೆಂದು ತಿಳಿಯುತ್ತದೆ. ಪಟ್ಟಣದಲ್ಲಿ ಪ್ಲೇಗಿನ ಭೀತಿ ಸ್ವಲ್ಪವೂ ಇರಲಿಲ್ಲ; ಮುಂದೆ ಮದುವೆ ಮೊದಲಾದ ಸಂತೋಷ ಸಮಾರಂಭಗಳು ಈ ಸಲ ನಡೆದಷ್ಟು ಹಿಂದೆ ನಾಲ್ಕಾರು ವರುಷಗಳಿಂದಲೂ ನಡೆಯಲಿಲ್ಲ. ಆದಾಗ್ಯೂ ಅಕಾಲ ಮರಣದ ಉತ್ಪತ್ತಿಯು ೩೦ ದಿನ ಸರಾಸರಿಯಿಂದ ೩೦೦ ರೂ. ವರೆಗೆ ಕಡಿಮೆ. ಇದಕ್ಕೆ ಆ ಮರಣವು ಕಡಿಮೆ ಎಂಬದಾಗಿ ವರ್ತಕರು ಹೇಳುವ ಕಾರಣ ತೃಪ್ತಿಕರವಾಗಿರುವಂತೆ ಕಂಡುಬರುವದಿಲ್ಲ. ಮ್ಯುನಿಸಿಪಲ್ ಬೋರ್ಡಿನವರು ಕೂಡ ಇದು ಸಹಜವಾದ ಕಾರಣವೆಂದು ಒಪ್ಪಿಕೊಳ್ಳಲಿಲ್ಲ. ಅನೇಕರು ಸುಂಕ ಕೊಡದೆ ಮೋಸದಿಂದ ಬಹಳ ಸರಕುಗಳನ್ನು ಗುಟ್ಟಾಗಿ ಸಾಗಿಸಿಕೊಂಡು ಹೋಗುತ್ತಿರಬೇಕೆನ್ನುವದೂ, ಅದನ್ನು ಕೈಗಿಸ್ತಿಯವರು ಸರಿಯಾಗಿ ಉಸ್ತುವಾರಿ ಇಟ್ಟು ಕಂಡು ಹಿಡಿಯುತ್ತಾ ಇಲ್ಲವೆನ್ನುವದೂ ಸಹಜವಾದ ಕಾರಣಗಳಾಗಿರಬೇಕೆಂದು ನಮಗೆ ತೋರುತ್ತಿದೆ. ಈ ಭಾಗದಲ್ಲಿ ಸರಿಯಾದ ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳಬೇಕೆಂತಲೂ, ತಪ್ಪಿತಸ್ಥರನ್ನು ಚೆನ್ನಾಗಿ ಶಿಕ್ಷಿಸಬೇಕೆಂತಲೂ ತೋರುತ್ತದೆ.

ಮ್ಯುನಿಸಿಪಾಲಿಟಿಯಲ್ಲಿ ವಸೂಲಾಗುವ ಹಣವನ್ನು ಹ್ಯಾಗೆ ಖರ್ಚುಮಾಡುತ್ತಾರೆಂಬುದನ್ನು ಸ್ವಲ್ಪ ನೋಡುವದು ಒಳ್ಳೇದು. ಪಟ್ಟಣದ ಕಸರಾ ಚೊಕ್ಕಟವಾಗಿ ಸಾಗುವದಕ್ಕೆ ನೇಮಿಸಿರುವ ಸಿಬ್ಬಂದಿ ಎಷ್ಟುಮಾತ್ರಕ್ಕೂ ಸಾಲದು. ಗೌವರ್ನಮೆಂಟಿನವರು ಲಕ್ಷಾಂತರ ರೂಪಾಯಿ ಖರ್ಚುಮಾಡಿ ಪಟ್ಟಣವನ್ನು ಎಷ್ಟು ಅಭಿವೃದ್ಧಿ ಮಾಡಿದಾಗ್ಯೂ, ಮ್ಯುನಿಸಿಪಾಲಿಟಿಯವರು ಅದನ್ನು ನಿರ್ಮಲವಾದ ಸ್ಥಿತಿಯಲ್ಲಿಟ್ಟುಕೊಳ್ಳದಿದ್ದರೆ ಅದರಿಂದ ಆಗತಕ್ಕ ಪ್ರಯೋಜನವೇನು? ಈ ವಿಷಯವನ್ನು ಕುರಿತು ಸರಕಾರದವರು ಆಲೋಚಿಸಿ ಬಹುಶಃ ಮ್ಯುನಿಸಿಪಾಲಿಟಿಯವರು ಇಟ್ಟುಕೊಂಡಿರುವ ಸರ್ವೀಸ್‌ಗಳನ್ನು ಕಡಿತಾ ಮಾಡಬೇಕು; ಇಲ್ಲವೇ ಉತ್ಪತ್ತಿಯ ಬಾಬನ್ನು ಹೆಚ್ಚಿಸಿಕೊಳ್ಳಬೇಕು; ಇದೆರಡೂ ಸಾಧ್ಯವಾಗದಿದ್ದರೆ ಗೌವರ್ನಮೆಂಟಿನವರು ಮೊದಲಿನಂತೆ ಮ್ಯುನಿಸಿಪಲ್ ಫಂಡ್ ಬಾಬಿಗೆ ಇಷ್ಟು ಹಣ ಸರಕಾರದಿಂದ ಕೊಡುತ್ತಾ ಬರುವನೆಂದು ವಾಗ್ದಾನ ಮಾಡಬೇಕು. ಈ ವಿಷಯಕ್ಕೆ ಬೇಗನೆ ಗಮನಕೊಡದಿದ್ದರೆ ನಂದದೆ ಕೆಲಸ ಕೆಡುವದು. ಮ್ಯುನಿಸಿಪಾಲಿಟಿಯವರು ಬಹಳ ವಿಸ್ತಾರವಾದ ಅನೇಕ ರಸ್ತೆಗಳನ್ನು ಒಳ್ಳೇ ಸ್ಥಿತಿಯಲ್ಲಿಟ್ಟುಕೊಳ್ಳಬೇಕಾಗಿದೆ; ರಾಜಧಾನಿ ಎಂಬ ಪ್ರತಿಷ್ಠೆಯ ದವಿಗೆ ತಕ್ಕಂತೆ ಪಟ್ಟಣವನ್ನು ನಿರ್ಮಲವಾದ ಸ್ಥಿತಿಯಲ್ಲಿಟ್ಟುಕೊಳ್ಳಬೇಕಾಗಿದೆ. ಇಷ್ಟೆಲ್ಲಾ ಕಾರ್ಯಗಳು ನಡೆಯಲು ಮ್ಯುನಿಸಿಪಾಲಿಟಿಯಲ್ಲಿ ವ್ಯವಸ್ಥೆಯಿಲ್ಲ. ವ್ಯಾಪಾರ ಅಭಿವೃದ್ಧಿ ಹೊಂದತಕ್ಕದಾಗಿರುವಂಥಾ ಭಾರೀ ಪಟ್ಟಣವಷ್ಟು ಉತ್ಪತ್ತಿಯು ಮೈಸೂರಿಗೆ ಇರುವದಿಲ್ಲ.

ಇನ್ನೊಂದು ಮುಖ್ಯವಾದ ಸಂಗತಿಯುಂಟು. ಪಟ್ಟಣದ ಆರೋಗ್ಯ ವಿಚಾರವನ್ನು ನೋಡಿಕೊಳ್ಳುವದಕ್ಕೆ ಸರಕಾರದವರು ಒಬ್ಬ ಹೆಲ್ತ್ ಆಫೀಸರನ್ನು ನೇಮಿಸಿದ್ದಾರೆ ಇರುತ್ತಾರೆ. ಈ ಅಧಿಕಾರಿಯು ಯಾವ ರೀತಿಯಾಗಿ ಕೆಲಸ ಮಾಡತಕ್ಕದ್ದೋ ಇನ್ನೂ ನಿಂಚಿತವಾಗಿ ವಿಧಿಸಲ್ಪಟ್ಟಿಲ್ಲ. ಈ ವಿಷಯವನ್ನು ಸರಕಾರದವರು ಬೇಗನೆ ಗೊತ್ತು ಮಾಡಬೇಕು. ಪಟ್ಟಣದ ಕಸರಾ ಚೊಕ್ಕಟವಾಗಿ ಸಾಗಿಸುವಂಥಾ ಮುಖ್ಯವಾದ ಕನ್ಸರ್ವೆನ್ಸಿ ಬಾಬು ಹೆಲ್ತ್ ಆಫೀಸರಿಗೆ ಸೇರಿಸಲ್ಪಟ್ಟಿರುವದು. ಇಂಥಾದ್ದರಲ್ಲಿ ಅವರು ಮ್ಯುನಿಸಿಪಲ್ ಬೋರ್ಡಿನ ಅಧಿಕಾರಕ್ಕೊಳಪಟ್ಟಿಲ್ಲವೆಂದೂ ತಾವು ಸ್ವತಂತ್ರರೆಂದೂ ಹೇಳಿಕೊಳ್ಳುವದು ನ್ಯಾಯವಾಗಿರುವಂತೆ ಕಾಣುವದಿಲ್ಲ. ಈ ಭಾಗದಲ್ಲಿ ನಮ್ಮ ಅಭಿಪ್ರಾಯವೇನೆಂದರೆ, ಹೆಲ್ತ್ ಆಫೀಸರು ನಡಸುವ ಕಾರ್ಯಗಳನ್ನು ಕುರಿತು ಅವರು ಆಗಿಂದಾಗ್ಗೆ ಮ್ಯುನಿಸಿಪಲ್ ಬೋರ್ಡಿಗೆ ಕ್ರಮವಾಗಿ ರಿಪೋರ್ಟುಗಳನ್ನು ಕಳುಹಿಸುತ್ತಾ ಬರಬೇಕು; ಮತ್ತು ಬೋರ್ಡಿನವರು ಹೆಲ್ತ್ ಆಫೀಸರ ಸಲಹೆಗಳನ್ನೆಲ್ಲಾ ಚೆನ್ನಾಗಿ ಪರಿಶೀಲಿಸಿ ನೋಡಿ, ಸಾಧ್ಯವಾಗಿರತಕ್ಕ ಭಾಗದಲ್ಲಿ ಆ ಸಲಹೆಗಳಂತೆ ಕೆಲಸ ನಡಸುತ್ತಾ ಬರಬೇಕು.

### ದೇಶಾಂತರ ವಿಶೇಷ ಸಮಾಚಾರಗಳು.

ಭೂಮಂಡಲದಲ್ಲೆಲ್ಲಾ ಆಶ್ಚರ್ಯಕರವಾದ ಒಂದು ದವಾಖಾನು ಅಮೆರಿಕದ ಕ್ಯಾನಡಾ ಸೀಮೆಯಲ್ಲಿದೆ. ಅದರಲ್ಲಿ ನಡೆಯುವ ಸಕಲ ಕಾರ್ಯಗಳೂ ವಿದ್ಯುಚ್ಛಕ್ತಿಯಿಂದಲೆ ನಡೆಯುತ್ತವೆ. ದವಾಖಾನಿನ ಒಳಭಾಗದಲ್ಲಿ ಎರಡು ಸ್ಥಳಗಳಲ್ಲಿ ನೀರು ಎತ್ತರದಿಂದ ಧುಮುಕುತ್ತದೆ. ಒಂದು ೬೦ ಅಡಿ ಎತ್ತರದಿಂದಲೂ ಮತ್ತೊಂದು ೧೪೦ ಅಡಿ ಎತ್ತರದಿಂದಲೂ ಧುಮುಕುತ್ತದೆ. ಈ ನೀರನ್ನು ಆ ದವಾಖಾನುದಾರರು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವದಕ್ಕೆ ಉಪಯೋಗಿಸಿಕೊಂಡಿದ್ದಾರೆ. ಬೆಣ್ಣೆ ಕಡೆಯುವ ಕಡಗೋಲನ್ನು ವಿದ್ಯುಚ್ಛಕ್ತಿಯೇ ತಿರುಗಿಸುತ್ತದೆ; ಹತ್ತು ಕುದುರೆಗಳ ಶಕ್ತಿಯುಳ್ಳ ಒಂದು ಯಂತ್ರದಿಂದ ಪೈರು ಕೊಯ್ಯುತ್ತದೆ, ಇನ್ನೊಂದು ಯಂತ್ರ ಹುಲಿಗೆಗಳನ್ನು ಕೊಯ್ಯುತ್ತದೆ; ಮನೆ, ಗದ್ದೆ, ತೋಟಗಳಿಂದ ಸ್ಥಳಗಳಲ್ಲೆಲ್ಲಾ ಉರಿಯುವ ದೀಪಗಳೂ ವಿದ್ಯುದ್ದೀಪಗಳೇ. ಈ ಪ್ರಕಾರ ನೀರಿನ ಸಹಾಯದಿಂದ ಉತ್ಪತ್ತಿಯಾದ ವಿದ್ಯುತ್ತಿನಿಂದ ದವಾಖಾನುದಾರರಿಗೆ ವರ್ಷವರ್ಷವೂ ೧೦ ಸಾವಿರ ರೂಪಾಯಿಗಳು ಖರ್ಚು ಉಳಿಯುತ್ತದಂತೆ.

ಆಸ್ಟ್ರಿಯಾ ದೇಶದ ಡಾಕ್ಟರ್ ಲಾರೆನ್ಸ್ ಎಂಬವನ ವೈದ್ಯನೈಪುಣ್ಯ... ನಗರದಲ್ಲಿರುವ ಪ್ರೊಫೆಸರ್ ಕೋಚ್ ಎಂಬವರ ವೈದ್ಯಶಾಲೆಯಲ್ಲಿ ... ರೋಗಗಳ ವಿಷಯ ... ಉಪನ್ಯಾಸವನ್ನು ಮಾಡುತಿದ್ದನು. ಈತನು ... ತಿರುಗಿದನು ... "ಸ್ಲೀಪಿಂಗ್ ಸಿಕ್‌ನೆಸ್" ... ಎಂಬ ವ್ಯಾಧಿಯೆಂದು ಗೊತ್ತಾಯಿತು.

### ಪೀಕಿಂಗ್ ರಾಜಧಾನಿಯ ಅಗ್ನಿಯ ಅಪಾಯ.

ಚೀನಾ ದೇಶದ ರಾಜಧಾನಿಯಾದ ಪೀಕಿಂಗ್ ನಗರದಲ್ಲಿ ಸ್ವಲ್ಪ ದಿವಸಗಳ ಹಿಂದೆ ಅಗ್ನಿ ಬಿದ್ದು ರತ್ನ ... ದ ಕಟ್ಟಡಗಳೆಲ್ಲಾ ಬೂದಿಯಾದವು. ಆಗಲೂ ಅದು ಪ್ರಬಲವಾಗಿ ಬೆಂಕಿ ಬಿದ್ದು ಸುಟ್ಟುಹೋಯಿತು. ಬೆಂಕಿಯನ್ನು ಆರಿಸುವದಕ್ಕೆ ಪೀಕಿಂಗ್ ಪಟ್ಟಣದ ... ರವರು ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ... ನೂರಾರು ಜನರು ದೊಡ್ಡ ದೊಡ್ಡ ಪಾತ್ರೆಗಳನ್ನು ... ಆರಿಸಿದರು. ಇದರಿಂದ ... ವಾಸಿಯಾ ... ನೂರಾರು ... ಅಗ್ನಿ ದೇವತೆಯು ... ತನ್ನ ಕೆಲಸವನ್ನು ನಿರಾತಂಕವಾಗಿ ... ಸೈನಿಕರು ... ನಾಲ್ಕು ದಿವಸ ... ಹಾಳಾದ ... ಸ್ಥಳವಿಲ್ಲದೆ ಹೋಯಿತು. ... ಕಡಿದು ಹಾಕಿದರು ... ಸೈನಿಕರು ... ಪಟ್ಟದ್ದು ... ತಪ್ಪಿತು.

### ಮುಗಿಲು ಮುಟ್ಟುವ ಮಹತ್ತ ಮನೆಗಳು

ಅಮೆರಿಕ ಖಂಡದ ಯುನೈಟೆಡ್ ಸ್ಟೇಟ್ಸ್ ಎಂಬ ಸಂಯುಕ್ತ ಸಂಸ್ಥಾನಗಳಲ್ಲಿ ನ್ಯೂಯೋರ್ಕ್ ಎಂಬ ಮಹಾನಗರವಿದೆ. ಇದರಲ್ಲಿ ಮನುಷ್ಯನಿಗೆ ಆಶ್ಚರ್ಯಕರವಾದ ಅನೇಕ ಗಳಲ್ಲಿ ಅಪರಿಮಿತವಾದ ಕಟ್ಟಡಗಳುಂಟು. ನಿಜವಾಗಿ ಮುಗಿಲನ್ನು ಮುಟ್ಟುವ ಮಹತ್ತ ಮನೆಗಳು ಆ ನಗರದಲ್ಲಿ ಸಾಧಾರಣವಾಗಿವೆ. ಹತ್ತು ಅಂತಸ್ತಿನ ಮನೆಗಳಾದರೂ ಆ ಊರಿನ ಜನಗಳು ಒಡೆದು ಹಾಕಿ ಅವುಗಳಿಗೆ ಬದಲಾಗಿ ಹೊಸದಾಗಿ ಅಂದರೆ ೨೦—೩೦ ಅಂತಸ್ತಿನ ಮನೆಗಳನ್ನು ಕಟ್ಟುವರು. ಪ್ಲಾಜ ಹೋಟೆಲ್ ಎಂಬದೊಂದು ಕಟ್ಟಡಕ್ಕೆ ವೆಚ್ಚವು ೬೦ ಲಕ್ಷ ರೂಪಾಯಿಗಳು ಹಿಡಿಯಿತು. ಈಗ ಅದನ್ನು ಕಿತ್ತು ಹಾಕಿ ಅದರ ಸ್ಥಳದಲ್ಲಿ ೭ ಕೋಟಿ ರೂಪಾಯಿಗಳನ್ನು ಮುಚ್ಚಿಸಿ ಬೇರೊಂದು ಅತಿ ರಮ್ಯವಾದ ಕಟ್ಟಡವನ್ನು ಕಟ್ಟುವದಕ್ಕೆ ಹೊರಟಿರುವರು. ಇಷ್ಟು ಎತ್ತರವಾದ ಕಟ್ಟಡಗಳನ್ನು ಕಟ್ಟುವದು ಸಾಧ್ಯವೇ? ಎಂದು ಯಾರಾದರೂ ಕೇಳಬಹುದು. ಆ ದೇಶದಲ್ಲಿ ಇಂಥ ಕಟ್ಟಡಗಳಿಗೆ ಉಕ್ಕಿನ ಪಂಜರಗಳನ್ನೇ ಉಪಯೋಗಿಸುತ್ತಾರೆ. ಆದಕಾರಣವೇ ಇದು ಸಾಧ್ಯವಾಗಿದೆ. ಬ್ರಾಡ್ವೆ ಎಂಬ ಬೀದಿಯಲ್ಲಿರುವ ಒಂದು ಭಾರೀ ಕಟ್ಟಡದ ಅಸ್ತಿವಾರವೇ ೩೯ ಅಡಿ ಆಳವಾಗಿದೆ. ಇನ್ನೊಂದು ಕಟ್ಟಡವು ಬೀದಿಯ ಮಟ್ಟದಿಂದ ತುದಿಯ ವರೆಗೆ ೩೯೦ ಅಡಿ ಇದೆ. ೨೯ ಅಂತಸ್ತಿದೆ. ಕಟ್ಟಡಕ್ಕೂ ಭೂಮಿಯ ಕ್ರಯಕ್ಕೂ ೧ ಕೋಟಿ ೨೦ ಲಕ್ಷ ರೂಪಾಯಿಯಾಯಿತು. ಅದಕ್ಕೆ ಕಿಟಕಿಗಳು ೨,೦೦೦ ಕ್ಕಿಂತ ಹೆಚ್ಚು, ೧,೦೦೦ ಆಫೀಸು ಕೊಠಡಿಗಳವೆ, ೩,... ಜನ ಅದರಲ್ಲಿ ವಾಸವಾಗಿದ್ದಾರೆ. ಕೆಳಗಿನಿಂದ ಮೇಲಕ್ಕೆ ಹೋಗತಕ್ಕವರು ಎಲಿವೇಟರ್ ಎಂಬ ಯಂತ್ರ ಸಹಾಯದಿಂದ ಹೋಗಬೇಕ

### ಚೇಂಬರ್ಲೆನ್ ಯವರು ಕಂಡುಹಿಡಿದ ಕೆಮ್ಮಿನ ಔಷಧವು.

96




ಕೆಮ್ಮು, ಗಂಟಲು ಗೊರೆನ್ನುವದು, ಇನ್ನೇ ಮೊದಲಾದ ಎದೆಯ ಮತ್ತು ಗಂಟಲಿನ ಜಾಡ್ಯಕ್ಕೆ ಈ ಔಷಧವು ಬಹುಶ್ರಾಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತವಾ ಬಡಿದ ಪಕ್ಷದಲ್ಲಿ ಅದನ್ನು ಬೇಗನೆ ನಿವಾರಣೆ ಮಾಡಿಕೊಳ್ಳದೆ ಅಲಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಬಿಗಿದುಹೋಗುವದು. ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನೌಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ನಿಂಚಿತವಾಗಿಯೂ ನಿವಾರಣೆಯಾಗುತ್ತೆ. ಈ ಜೊತೆಯೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ; ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚೆನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇವಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ:—

ಬಿ. ವಿ. ನರಸಿಂಹಲು ಚೆಟ್ಟಿ,
ನಂ. ೨, ತಂಬುಚೆಟ್ಟಿನಾಯಕರ ಬೀದಿ,
ಮದರಾಸ್.

ಕೇ ಹೊರತು, ಪತೆದು ಹೋಗುವ ತೊಂದರೆಯೇ ಇಲ್ಲ. ಇಂಥ ಎಲಿವೇಟರುಗಳು ೧೦ ಇವೆ. ಇವುಗಳಲ್ಲಿ ಗಂಟೆಗೆ ಸರಾಸರಿ ೪೧೪ ಜನ ಮೇಲಕ್ಕೆ ಹೋಗುತ್ತಾರೆ. ಫ್ಲಾಟ್ ಐರನ್ ಬಿಲ್ಡಿಂಗ್ ಎಂಬದೊಂದು ಕಟ್ಟಡವು ಒಂದು ಬೀದಿಯ ಕೊನೆಯಲ್ಲಿ ಚಿಡ್ಗ ರೂಪವಾಗಿ ಉದ್ದಕ್ಕೆ ನಿಂತಿದೆ.

## ಸ್ವದೇಶದ ವೃತ್ತಾಂತಗಳು.

ಕೋಲಾರ್ ಗಣಿಗಳಲ್ಲಿ ಮೇ ತಿಂಗಳಲ್ಲಿ ಉತ್ಪತ್ತಿಯಾದ ಚಿನ್ನದ ಪೈಕಿ ೧೯ ಲಕ್ಷದ ರೂಪಾಯಿನಷ್ಟು ಚಿನ್ನವನ್ನು ಬೊಂಬಾಯಿನ ಮೂಲಕ ವಿಲಾಯಿತಿಗೆ ಕಂಪನಿಯವರು ರವಾನೆ ಮಾಡಿದಾರೆ.

❖❖❖❖

ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದನಕೆರೆ ಹೋಬಳಿ ರಾಮನಸಮುದ್ರದ ಕೆರೆ ನೀರಿನಿಂದ ತರೀ ಫಸಲಾಗುವ ಜಮೀನುಗಳು ತಾಲ್ಲೂಕ್ ಅಮಲ್ದಾರ್ರವರಿಂದ ಈ ತಿಂಗಳ ೨೫ನೇ ತಾರೀಖು ಲಾಗಾಯ್ತು ಹರಾಜು ಮೂಲಕ ವಿಲೆಯಾಗುವವು.

❖❖❖❖

ಪ್ರಾಂಟ್‌ರಾಕ್ಸ್ ಸಬ್‌ಡಿವಿಜನ್ ಆಫೀಸರ್ ಮೆ॥ ಎನ್. ವೆಂಕಟರಾಯರು ಹಿಂದಿನ ವಾರ ಮಂಡ್ಯದ ತಾಲ್ಲೂಕು ಬಸರಾಳು ಗ್ರಾಮಕ್ಕೆ ಹೋಗಿದ್ದಾಗ ಅಲ್ಲಿನ ಸ್ಕೂಲ್ ಬಾಲಕರಿಗೆ ಬಹುಮಾನಗಳನ್ನು ಕೊಟ್ಟು ಬಂದರೆಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

❖❖❖❖

ಕೋಲಾರದ ಶೆಟ್ಟಿ ಕವಿಶ್ವರರಾಜ ಮೆ॥ ಕಾರ್ ಎಂಬವರು ಹಿಂದಿನ ವಾರ ಅಲ್ಲಿನ ದೊಡ್ಡ ಮನುಷ್ಯರನ್ನೆಲ್ಲಾ ಒಂದು ಕಡೆ ಕರೆಸಿಕೊಂಡು, ಅವರಿಗೆ ನಾನಾ ವಿನೋದಗಳನ್ನು ಕಲ್ಪಿಸಿಕೊಟ್ಟು ಅವರ ಸಂಗಡ ಸ್ವಲ್ಪ ಹೊತ್ತು ಸಂತೋಷವಾಗಿ ಕಾಲ ಕಳೆದರೆಂದು ತಿಳಿದುಬಂದಿದೆ.

❖❖❖❖

ಒಬ್ಬ ಬಾತ್ಮೀದಾರರು ಬರೆಯುವದೇನಂದರೆ —"ಬೆಂಗಳೂರು ಕಂಟೋನ್ಮೆಂಟಿನ ಪೇಟೆ ವರ್ತಕರು ಕಳೆದ ಸೋಮವಾರ (ತಾ. ೧೧) ೩—೪ ಸಾವಿರ ಬಡವರುಗಳಿಗೆ ಅನ್ನ ಹಾಕಿಸಿದರು. ಅಷ್ಟೆಯು ಜನರು ಮುಸಲ್ಮಾನರುಗಳೂ ಹಿಂದೂಗಳೂ ಬೇರೆ ಮತಸ್ಥರಿಗೂ ಸಂತರ್ಪಣೆ ಮಾಡಿ ಸಂತೋಷಪಡಿಸಿದರು."

❖❖❖❖

ಮುಜರಾಯಿ ಖಾತೆಗೆ ಸೇರಿದ ಸತ್ರ ದೇವಸ್ಥಾನಗಳಿಗೆ ಸಂಬಂಧಪಟ್ಟ ಲೆಕ್ಕಗಳನ್ನು ತಪಾಸಣೆ ಮಾಡುವುದಕ್ಕೆ ಮೊದಲು ನೆಟಿವ್ ಆಡಿಟರುಗಳು ಗೌವರ್ನಮೆಂಟಿನವರ ಸ್ಯಾಂಕ್ಷನ್ ಪಡೆಯಬೇಕೆಂತಲೂ, ಡಿಪಾರ್ಟ್ಮೆಂಟಿಗೆ ಹೆಚ್ಚು ಖರ್ಚು ಬೀಳದಂತೆ ನೋಡಿಕೊಳ್ಳಬೇಕೆಂತಲೂ ಸರ್ಕಾರದವರು ಹುಕುಂ ಮಾಡಿದಾರೆ.

❖❖❖❖

ಬಾಗೇಪಲ್ಲಿ ತಾಲ್ಲೂಕು ಯಲ್ಲಂಪಲ್ಲಿಯಲ್ಲಿರುವ ವೆಂಕಟರಮಣಸ್ವಾಮಿ ದೇವಸ್ಥಾನ, ಸೋಸಲೆಯಲ್ಲಿರುವ ವ್ಯಾಸರಾಯಸ್ವಾಮಿಗಳ ಮಠ, ಚೆನ್ನಪಟ್ಟಣದ ತಾಲ್ಲೂಕು ಕೂಡ್ಲೂರಿನಲ್ಲಿರುವ ಶ್ರೀರಾಮದೇವರ ದೇವಸ್ಥಾನ—ಇವುಗಳನ್ನು ಇವುಗಳಿಗೆ ಸೇರಿರುವ ಇನಾಮತಿ ಜಮೀನು ಮತ್ತು ಗ್ರಾಮಗಳನ್ನು ಸರ್ಕಾರದವರೇ ವಹಿಸಿಕೊಂಡು, ಮುಜರಾಯಿ ಇಲಾಖೆಯವರು ಮೇಲ್ವಿಚಾರಣೆ ಮಾಡತಕ್ಕದ್ದೆಂದು ಗೌವರ್ನಮೆಂಟಿನವರು ಹುಕುಂ ಕೊಟ್ಟಿದಾರೆ.

❖❖❖❖

ಅಮಲ್ದಾರ್ರು, ಡೆಪ್ಯುಟಿ ಅಮಲ್ದಾರ್ರು ಗೌವರ್ನಮೆಂಟ್ ರೂಲುಗಳಿಗೆ ಅನುಸಾರವಾಗಿ ಪರೀಕ್ಷೆಯ ಒಂದು ಹುದ್ದೆಯನ್ನು ಇಟ್ಟುಕೊಂಡಿರುವ ಭಾಗದಲ್ಲಿ ಅವರು ಪ್ರತಿ ತಿಂಗಳಲ್ಲೂ ಒಂದು ಸರ್ಟಿಫಿಕೇಟನ್ನು ತಮ್ಮ ಸಂಬಂಧಪಟ್ಟ ಸಂಬಳದ ಬಿಲ್ಲಿನ ಸಂಗಡ ಸೇರಿಸಿ ಕಳುಹಿಸಬೇಕು. ಜುಲೈ ಲಾಗಾಯ್ತು ಅಂಥಾ ಸರ್ಟಿಫಿಕೇಟು ಇಲ್ಲದಿದ್ದರೆ ಯಾವ ಅಮಲ್ದಾರರಿಗೂ ಸಂಬಳ ಬಟವಾಡೆ ಮಾಡ ಕೂಡದೆಂತಲೂ ಗೌವರ್ನಮೆಂಟ್ ಕಂಟ್ರೋಲರವರು ಡಿಸ್ಟ್ರಿಕ್ಟುಗಳ ಖಜಾನಾ ಆಫೀಸರುಗಳಿಗೆ ತಿಳಿಸಿರುತ್ತಾರೆ.

❖❖❖❖

ಮೈಸೂರಿಂದ ಬೆಂಗಳೂರಿಗೆ ಹೋಗಿ ಬರುವ ರೈಲ್ ಗಾಡಿಗಳ ಕಾಲವನ್ನು ಈ ತಿಂಗಳ ೫ನೇ ತಾರೀಖಿನಿಂದ ಬದಲಾಯಿಸಿರುತ್ತಾರೆ. ರಾತ್ರಿ ೯ ಗಂಟೆಗೆ ಗಾಡಿಯು ಬೆಂಗಳೂರಿಂದ ಹೊರಟು ಪ್ರಾತಃಕಾಲ ೨ ಗಂಟೆಗೆ ಮೈಸೂರನ್ನು ತಲುಪುವದು. ಮೈಸೂರಿಂದ ನಂಜನಗೂಡಿಗೆ ಬೆಳಿಗ್ಗೆ ೭ ಗಂಟೆಗೂ, ಸಾಯಂಕಾಲ ೪ ಗಂಟೆಗೂ ಎರಡು ಸಲ ರೈಲು ಗಾಡಿಯನ್ನು ಬಿಡುತ್ತಾರೆ. ನಂಜನಗೂಡಿನಿಂದ ಬೆಳಿಗ್ಗೆ ೯-೨೦ ಕ್ಕೂ ಸಾಯಂಕಾಲ ೬-೨೦ ಕ್ಕೂ ಎರಡಾವರ್ತಿ ಗಾಡಿಗಳು ಮೈಸೂರಿಗೆ ಬರುತ್ತವೆ. ಮೈಸೂರಿಂದ ಪೂರ್ವದಂತೆ ಬೆಳಿಗ್ಗೆ ೧೦.೧೦ ಕ್ಕೆ ಮೆಯಿಲ್ ಗಾಡಿಯು ಬೆಂಗಳೂರಿಗೆ ಹೊರಡುವದು.

❖❖❖❖

ಬಹುಕಾಲದಿಂದ ರಾಜಧಾನಿಯಲ್ಲಿದ್ದು ಈಚೆಗೆ ಪ್ರಯಾಣ ಮಾಡಿದ ರೆವ್. ಹೋಲ್ಸ್‌ವರ್ತ್‌ಯವರ ಪತ್ನಿಯವರು ಕಳೆದ ಗುರುವಾರ ಕಾಲವಾದರೆಂದು ತಿಳಿಯಲು ವಿಷಾದಿಸುತ್ತೇವೆ. ಆಕೆಯಲ್ಲಿದ್ದ ಸದ್ಗುಣಗಳೂ, ಪ್ರೀತಿವಾತ್ಸಲ್ಯಗಳೂ, ಉದಾರವಾದ ನಡತೆಯೂ ಮೈಸೂರಿನಲ್ಲಿ ಜನಜನಿತವಾಗಿರುತ್ತವೆ. ನ್ಯಾಷನಲ್ ಇಂಡಿಯನ್ ಸಂಘದಲ್ಲಿ ಆಕೆ ನಡಸಿರುವ ಕಾರ್ಯಗಳೂ, ದೇಶೀಯ ಸ್ತ್ರೀಯರಿಗೆ ಮಾಡಿರುವ ಉಪಕಾರಗಳೂ, ಸ್ಕೂಲ್ ಬಾಲಕಬಾಲಕಿಯರಮೇಲೆ ಅವರಿಗಿದ್ದ ಪ್ರೀತಿವಿಶ್ವಾಸಗಳೂ ಅಪಾರವಾಗಿರುವವು. ಅಂಥಾ ಸದ್ಗುಣಶೀಲೆಯು ಗತಿಸಿಹೋದುದಕ್ಕಾಗಿ ಇಲ್ಲಿನ ಕ್ರೈಸ್ತ ಮಂಡಲಿಯವರು ಮೊನ್ನೆ ಸೋಮವಾರ ಸಭೆ ಸೇರಿ ದುಃಖಪ್ರದರ್ಶನೆಯನ್ನು ಮಾಡಿದರು. ಆಕೆಯ ಹೆಸರನ್ನು ಶಾಶ್ವತಪಡಿಸಬೇಕೆಂಬ ಉದ್ದೇಶದಿಂದ ರಾಜಧಾನಿಯಲ್ಲಿ ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟಿಸುವವರಾಗಿದ್ದಾರೆ. ಇದರಿಂದ ಆಕೆಯ ಹೆಸರು ಚಿರಸ್ಮರಣೀಯವಾದೀತೆನ್ನುವದಕ್ಕೆ ಸಂಶಯವಿಲ್ಲ.

❖❖❖❖

ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದ ಹಿಮವದ್ಗೋಪಾಲಸ್ವಾಮಿ ದೇವಸ್ಥಾನಕ್ಕೆ ಸೇರಿದ ಒಂದು ಕಂಬಿ(ಸರ)ವೆ ಅಮಲ್ದಾರ್ರಿಗೆ ಪ್ರವರ್ತನೆಗಿರುವಾಗಲೋ ಏನೋ ಕಳುವಾಗಿಹೋಯಿತು. ಇದಕ್ಕಾಗಿ ಆ ತಾಲ್ಲೂಕಿನ ಶಿರಸ್ತೆದಾರ್ ಮೆ॥ ನಂಜುಂಡಯ್ಯನವರಿಂದ ೫೬೦ ರೂ. ವಸೂಲ್ಮಾಡಿ, ಅವರನ್ನು ಪೆನ್ಷನ್‌ಕೊಟ್ಟು ಕೆಲಸ ಬಿಡಿಸಬೇಕೆಂಬದಾಗಿ ಮೈಸೂರು ಸರ್ಕಾರದವರು ಹುಕುಂ ಕೊಟ್ಟಿದ್ದರು. ಈಚೆಗೆ ಮೆ॥ ನಂಜುಂಡಯ್ಯನವರು ಮಹಾರಾಜರವರಲ್ಲಿ ಅರ್ಜಿಕೊಟ್ಟು ಬೇಡಿಕೊಂಡರು, ಶ್ರೀಮನ್ ಮಹಾರಾಜರವರು ರಿಕಾರ್ಡನೆಲ್ಲಾ ನೋಡಿ, ಅವರಿಂದ ೨೮೦ ರೂ. ಮಾತ್ರ ವಸೂಲ್ಮಾಡತಕ್ಕದ್ದೆಂತ ಅಪ್ಪಣೆ ಕೊಡಿಸಿದಾರೆಂದು ಕೇಳುತ್ತೇವೆ.

❖❖❖❖

ಬ್ಯಾರಿಂಗ್ ಪೇಟೆ ತಾಲ್ಲೂಕಿನಲ್ಲಿ ಜೀವನ ಕಷ್ಟವೆಂದು ಹೇಳಿ ಸರ್ಕಾರದವರು ಅಲ್ಲಿ ಕೆಲಸ ಮಾಡುವ ವಿದ್ಯಾಭ್ಯಾಸದ ಇಲಾಖೆಯ ನೌಕರರಿಗೂ, ರೆವೆನ್ಯೂ ಇಲಾಖೆಯ ನೌಕರರಿಗೂ ಲೋಕಲ್ ಅಲೋವೆನ್ಸು ಸ್ವಲ್ಪ ಕೊಡುತ್ತಿದಾರಷ್ಟೆ. ಈಗ ಅದೇ ತಾಲ್ಲೂಕಿನಲ್ಲಿ ಕೆಲಸ ಮಾಡತಕ್ಕ ಎಲ್ಲಾ ಇಲಾಖೆಗಳ ನೌಕರರಿಗೂ ಇದೇ ಜುಲೈ ಲಾಗಾಯ್ತು ಅಲೋವೆನ್ಸು ಕೊಡಬೇಕೆಂದು ಸ್ಯಾಂಕ್ಷನ್ ಆಗಿದೆ. ೧೦ ರೂಪಾಯಿಗೆ ಕಡಿಮೆ ಸಂಬಳಗಾರರಿಗೆ ೧ ರೂ., ೨೫ ರೂ. ಗೆ ಕಡಿಮೆಯವರಿಗೆ ೨ ರೂ., ೩೦ ರೂ. ಗೆ ಕಡಿಮೆಯವರಿಗೆ ೩ ರೂ., ೫೦ ರೂ. ಗೆ ಕಡಿಮೆಯವರಿಗೆ ೪ ರೂ ; ೫೦ ರೂ. ಗಿಂತ ಮೇಲ್ಪಟ್ಟ ಸಂಬಳಗಾರರಿಗೆ ೫ ರೂ . ಈ ಪ್ರಕಾರ ಲೋಕಲ್ ಅಲೋವೆನ್ಸು ಕೊಡುವಂತೆ ಗೊತ್ತುಮಾಡಿದಾರೆ.

❖❖❖❖

ಉತ್ತರದೇಶದ ಪತ್ರಿಕೆಯು ತಿಳಿಸುವದೇನಂದರೆ.—ದೇವಾಂಗದವರು ಹಿಂದುಸ್ಥಾನದಲ್ಲಿ ಹೊಸತರಹ ಮಗ್ಗಗಳನ್ನಿಟ್ಟು ಬಟ್ಟೆ ಬರೆಗಳನ್ನು ನೆಯ್ಯುವರು ತುಂಬಾ ಲಾಭಕರವಾಗಿದೆ ಎಂಬದನ್ನೂ, ಆ ಹೊಸ ಮಗ್ಗಗಳ ಯೋಗ್ಯತೆಯನ್ನೂ ವಿವರಿಸಿ ಮೆ॥ ಹಾವೆಲ್ ಎಂಬವರು ಒಂದು ರಿಪ್ರೋರ್ಟ್ ಬರೆದಿರುತ್ತಾರೆ. ಬೆಂಗಾಳ ಗವರ್ನಮೆಂಟಿನವರು ಅದನ್ನು ಅಲ್ಲಿನ ನಾನಾ ಭಾಷೆಗಳಲ್ಲಿ ಅಚ್ಚುಹಾಕಿಸಿ, ಪ್ರಜೆಗಳಿಗೆಲ್ಲಾ ಹಂಚಿ, ಅದರಲ್ಲಿ ಹೇಳಿರುವಂತೆ ದೇವಾಂಗದವರು ಕಾರ್ಯಗಳನ್ನು ನಡಸಿ ಲಾಭ ಹೊಂದಬಹುದೆಂದು ಹುಕುಂ ಮಾಡಿರುತ್ತಾರೆ. ಮೈಸೂರು ಸರ್ಕಾರದವರು ಅದೇ ರಿಪೋರ್ಟನ್ನು ಕನ್ನಡ ಭಾಷೆಯಲ್ಲಿ ಅಚ್ಚು ಹಾಕಿಸಿ, ಈ ಸಂಸ್ಥಾನದ ದೇವಾಂಗದವರಿಗೆಲ್ಲಾ ಹಂಚಿಕೊಡಬೇಕೆಂದು ಪ್ರಯತ್ನಪಟ್ಟಿದಾರೆ. ಈ ಹೊಸ ತರಹ ಮಗ್ಗಗಳ ವಿಷಯವನ್ನು ಜನರು ಕಲಿತುಕೊಳ್ಳುವಂತೆ ಸರ್ಕಾರದವರು ನೆಯ್ಗೆಯ ಪಾಠಶಾಲೆಗಳನ್ನು ಸ್ಥಾಪಿಸುವದಕ್ಕೆ ಹೆಚ್ಚು ಪ್ರಯತ್ನ ಮಾಡಿದಾರೆ.

## ಮೈಸೂರು ಗೆಜೆಟ್ ಸಂಗ್ರಹ.

ಅಡ್ವೊಕೇಟ್ ಮೆ॥ ಡಿ. ವೆಂಕಟರಾಮಯ್ಯ, ಬಿ. ಎ. ಯವರನ್ನು ಪ್ರಾಸಿಕ್ಯೂಟರ್ ಕೆಲಸಕ್ಕೆ ನೇಮಕ ಮಾಡಿದೆ.

ಅಸಿಸ್ಟೆಂಟ್ ಸರ್ಜನ್ ಮೆ॥ ಎ. ಅಪ್ಪಾದೊರೆ ಮೊದಲಿಯಾರ್ರಿಗೆ ಮೊದಲು ಕೊಟ್ಟಿದ್ದ ಕಾಯಿಲೆ ರಜವನ್ನು ಇನ್ನೂ ಎರಡು ತಿಂಗಳು ಹದಿನೈದು ದಿನಗಳಿಗೆ ಜಾಸ್ತಿ ಮಾಡಿದೆ.

ದಿವಾನರವರ ಪ್ರೈವೇಟ್ ಸೆಕ್ರೆಟರಿ ಮೆ॥ ಎಂ. ಶ್ರೀನಿವಾಸಮೂರ್ತಿಯವರಿಗೆ ೧೦ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚಿತ್ರದುರ್ಗದ ಸಬ್ ಜಡ್ಜ್ ಮೆ॥ ವಿಜಯರಂಗಸ್ವಾಮಯ್ಯಂಗಾರ್ಯರಿಗೆ ಜೂನ್ ೧ ರ ಲಾಗಾಯ್ತು ಪೂರಾ ತಲಬಿನ ಮೇಲೆ ೨೮ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ಗೌವರ್ನಮೆಂಟ್ ಪ್ರೆಸ್ ಮತ್ತು ಸೆಂಟ್ರಲ್ ಜೈಲ್ ಸೂಪರಿಂಟೆಂಡರೂ ಮತ್ತು ಮೈಸೂರು ಗೆಜೆಟ್ ಕಂಪೈಲರೂ ಆದ ಮೆ॥ ಜೆ. ಹ್ಯೂಂ ಸ್ಮಿತ್‌ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೆಜ್ ರಜಾಕೊಟ್ಟಿದೆ.

ಮೈಸೂರು ಗೌವರ್ನಮೆಂಟ್ ಹುಜೂರು ಹೆಡ್ ಶಿರಸ್ತೆದಾರ್ ಮೆ॥ ಕೆ. ರಾಮರಾಯರು ಗೌವರ್ನಮೆಂಟ್ ಪ್ರೆಸ್ ಮತ್ತು ಮೈಸೂರು ಗೆಜೆಟ್ ಆಫೀಸಿನ ಚಾರ್ಜನ್ನೂ, ಬೆಂಗಳೂರು ಕಣ್ಣಾಸ್ಪತ್ರೆ ಛಾರ್ಜನ್ನು ವಹಿಸಿರುವ ಆ ಸರ್ಜನ್ ಮೆ॥ ಟಿ. ಎಚ್. ನಂಜಪ್ಪನವರು ಸೆಂಟ್ರಲ್ ಜೈಲ್ ಛಾರ್ಜನ್ನೂ ವಹಿಸತಕ್ಕದ್ದು.

ಡೆಪ್ಯುಟಿ ಎಕ್ಸೈಜ್ ಕಮಿಷನರ್ ಮೆ॥ ಡಬ್ಲ್ಯು. ವಿ. ದೇವಿಯವರಿಗೆ ೧೫ ದಿನಗಳ ಪ್ರಿವಿಲೆಜ್ ರಜಾಕೊಟ್ಟಿದೆ.

ಕೋಲಾರ್ ಡಿಸ್ಟ್ರಿಕ್ಟ್ ಪೋಲೀಸ್ ಅ॥ ಸೂಪರಿಂಟೆಂಟ್ ಮೆ॥ ವೈ. ವಿ. ಕೃಷ್ಣಮೂರ್ತಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೆಜ್ ರಜಾಕೊಟ್ಟಿದೆ.

ಎಕ್ಸ್ಟ್ರಾ ಅ॥ ಕಮಿಷನರ್ ಮೆ॥ ಎಸ್. ಗೋಪಾಲಯ್ಯಂಗಾರ್ಯರು ತಮ್ಮ ಕೆಲಸದೊಂದಿಗೆ ಕೋಲಾರ್ ಡಿಸ್ಟ್ರಿಕ್ಟ್ ಪೋಲೀಸ್ ಛಾರ್ಜನ್ನೂ ವಹಿಸಿರತಕ್ಕದ್ದು.

ಮೈಸೂರು ಅಗ್ರಿಕಲ್ಚರಲ್ (ವ್ಯವಸಾಯದ) ಬ್ಯಾಂಕುಗಳ ಇನ್ಸ್ಪೆಕ್ಟರ್ ಕೆಲಸವನ್ನು ಜುಲೈ ೧ ರ ಲಾಗಾಯ್ತು ವಜಾಮಾಡಿದೆ.

ಮೆ॥ ಟಿ. ರಾಮಸ್ವಾಮಯ್ಯಂಗಾರ್ರನ್ನು ಜುಲೈ ೧ ರಿಂದ ಸೀನಿಯರ್ ಅ॥ ಕಮಿಷನರಾಗಿ ನೇಮಕಮಾಡಿರುತ್ತೆ.

ಹಾಸನ ಡಿವಿಜನ್ ಸಬ್ ಅ॥ ಇಂಜನಿಯರ್ ಮೆ॥ ಎಂ. ಎ. ಆನಂದಾಳ್ವಾರ್ ಯವರಿಗೆ ಜೂನ್ ೧೬ ರ ಲಾಗಾಯ್ತು ೧೫ ದಿವಸಗಳ ಪ್ರಿವಿಲೆಜ್ ರಜಾಕೊಟ್ಟಿದೆ.

## ಬಾತ್ಮೀದಾರರಿಗೆ ನೋಟಿಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಬೆಲೆ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

## ಕರೆಸ್ಪಾಂಡೆನ್ಸ್.

### ದೊಡ್ಡ ಪೋಸ್ಟ್ ಕಾರ್ಡುಗಳು.

ಅಯ್ಯಾ,

ನೀವು ವೃತ್ತಾಂತ ಪತ್ರಿಕೆಯ ೩ನೇ ಸಂಚಿಕೆಯಲ್ಲಿ ೩॥×೫॥ ಅಂಗುಲದ ಕಾರ್ಡಿನಲ್ಲಿ ೩ ಕಾಸಿನ ಸ್ಟಾಂಪು ಇಟ್ಟು ಬರೆಯಬಹುದೆಂದು ಪ್ರಕಟಿಸಿದಿರಿ. ದೊಡ್ಡ ಕಾರ್ಡಿನಲ್ಲಿ ಬರೆದರೆ ಪಟ್ವಾಡೆಮಾಡೇನು, ನಮಗೆ ಹುಕುಂ ಬಂದಿಲ್ಲ ಎಂದು ಇಲ್ಲಿನ ಪೋಸ್ಟ್ ಮಾಸ್ಟರು ಹೇಳುತ್ತಾರೆ. ಇದನ್ನು ಸರಿಯಾಗಿ ತಿಳಿಯಬೇಕಾಗಿ ಕೋರುತ್ತೇನೆ.

ದಾವಣಗೆರೆ. ವೀರಭದ್ರಪ್ಪ.

[ಮೈಸೂರು ಪೋಸ್ಟ್ ಮಾಸ್ಟರು ಅಂಥಾ ದೊಡ್ಡ ಕಾರ್ಡುಗಳನ್ನು ಅಂಗೀಕರಿಸುವದಾಗಿ ಒಪ್ಪಿಕೊಂಡಿದಾರೆ. ಇತರ ಕಡೆಗಳಲ್ಲೂ ಅವುಗಳನ್ನು ಅಂಗೀಕರಿಸುವಂತೆ ಪೋಸ್ಟ್ ಇಲಾಖೆಯವರು ಇನ್ನೂ ಯಾಕೆ ಹುಕುಂ ಕಳುಹಿಸಲಿಲ್ಲವೋ ನಮಗೆ ತಿಳಿಯದು.—ಎಡಿ.]

❖❖❖❖❖❖❖❖❖

### ಉಪ್ಪಿನ ಧಾರಣೆ.

ಅಯ್ಯಾ,

ಇಂಡಿಯಾದಲ್ಲಿರತಕ್ಕ ಪ್ರಜೆಗಳಿಗೆ ಉಪಯೋಗಾರ್ಥವಾಗಿ ಚಕ್ರವರ್ತಿಯವರು ನಿರಮ ರಿಯಾಯತಿಗಳನ್ನು ತೋರಿಸುತ್ತಾರೆ. ಇವೆರಡರಲ್ಲಿ ಉಪ್ಪಿನ ಮೇಲಣ ಸುಂಕವನ್ನು ಮುಕ್ಕಾಲಂಟು ಆಣೆ ಕಡಿಮೆಮಾಡಿದ್ದು ಮುಖ್ಯ ಉಪಕಾರವಾಗಿರುತ್ತದೆ. ಈ ಸುಂಕ ವಜಾ ಆದ ಬಳಿಕ ಉಪ್ಪು ರೂಪಾಯಿ ಒಂದಕ್ಕೆ ೧೦ ಸೇರು ಇದ್ದದ್ದು ೧೪ ಸೇರು ಆಗಿತ್ತು. ಈಚೆಗೆ ೨—೩ ತಿಂಗಳಲ್ಲಿ ಬೊಂಬಾಯಿಯಲ್ಲಿರುವ ಕೋಟ್ಯಾಧೀಶ್ವರರಾದ ಅನೇಕ ಜನ ವರ್ತಕರು ಉಪ್ಪಿನ ಆಗುರುಗಳನ್ನು ಗುತ್ತಿಗೆ ಮಾಡಿಕೊಂಡು ಮಾಲಿನ ಕ್ರಯ ಜಾಸ್ತಿಮಾಡಿರುತ್ತಾರೆ. ಆ ಕಾರಣ ಚಿಲ್ಲರೆ ವ್ಯಾಪಾರಿಯು ರೂ. ಒಂದಕ್ಕೆ ೧೦ ಸೇರಿಗೆ ಇಳಿಯಿತು. ಈ ರೀತಿ ಆಗಿರುವದರಿಂದ ಸರ್ಕಾರದವರು ಮಾಡಿದ ಉಪಕಾರವನ್ನು ಅನುಭವಿಸತಕ್ಕವರು ವ್ಯಾಪಾರಿಗಳೇ, ಬಡ ಪ್ರಜೆಗಳೋ ತಾವೇ ಆಲೋಚಿಸಿ. ಈ ಸಂಗತಿಯನ್ನು ತಾವು ಪ್ರಕಟಿಸುವದರ ಮೂಲಕ ಮೇಲ್ಪಟ್ಟವರಿಗೆ ತಿಳಿಯುವಹಾಗೆ ಮಾಡಿರೆಂದು ನಂಬಿದೇನೆ.

ಚನ್ನೈಯ ಶೆಟ್ಟಿ.

❖❖❖❖❖❖❖❖❖

### ಸ್ಕೂಲ್ ಕಟ್ಟಡವು.

ಅಯ್ಯಾ,

ಅರಸೀಕೆರೆ ತಾಲ್ಲೂಕ್ ದೊಡ್ಡ ಮೇಟಿಕುರ್ಕೆ ಎಂಬ ಗ್ರಾಮದಲ್ಲಿ ಒಂದು ಹೋಬಳಿ ಸ್ಕೂಲ್ ಇರುತ್ತೆ. ಆ ಸ್ಕೂಲಿನ ಸ್ಥಿತಿಯು ಬಹಳವಾಗಿ ಕೆಟ್ಟುಹೋಗಿ ದಿನಕ್ಕೆ ೬—೭ ಹುಡುಗರು ಬರುವಹಾಗಾಯಿತು. ಈಗ ಹೊಸದಾಗಿ ಶಂಕರಪ್ಪನೆಂಬುವ ಬಂದ ಮೇಲೆ ಹುಡುಗರು ಜಾಸ್ತಿಯಾಗಿ ಸೇರಿ ಬಹಳ ಅಭಿವೃದ್ಧಿಗೆ ಬಂದಿರುತ್ತೆ. ಕಟ್ಟಡವು ದ್ಯಾವಪ್ಪಗಳು ಕಟ್ಟಿಸಿರುವ ಛತ್ರಕ್ಕೆ ಸಂಬಂಧಪಟ್ಟದ್ದು. ಸ್ಥಳ ಸಾಲದು. ಇದನ್ನು ನೋಡಿ ಮೆಂಬರುಗಳು ಡೆಪ್ಯುಟಿ ಇನ್ಸ್ಪೆಕ್ಟರಿಗೆ ಬರೆದುಕೊಂಡರು, ನಂತರ ಅವರಿಂದ ಒಂದು ಹುಕುಂ ಬಂದಿರುತ್ತೆ. ಏನೆಂದರೆ—ಗ್ರಾಮಸ್ಥರು ಸೇರಿ ಕಟ್ಟಡ ತಯಾರುಮಾಡಿದರೆ ಅದರ ಅಂದಾಜು ಪ್ರಕಾರ ತಗಲುವ ಅರ್ಧ ಛಾರ್ಜನ್ನು ಸರ್ಕಾರದಿಂದಾಗಿ ಕೊಡಿಸಿಕೊಡುತ್ತೇವೆಂತ ಬಂದಿರುತ್ತೆ. ಗ್ರಾಮಸ್ಥರು ಜಾಗ್ರತೆಯಾಗಿ ಕೆಲಸದಲ್ಲಿ ಗಮನ ಕೊಟ್ಟು ಊರ ಹೊರ ಭಾಗದಲ್ಲಿ ಒಂದು ಜಾಗಾ ತೆಗೆದುಕೊಂಡು ಸ್ಕೂಲನ್ನು ಅಭಿವೃದ್ಧಿ ತರಬೇಕೆಂದು ಕೋರುತ್ತೇನೆ. ಎಂ. ಶೆಟ್. ಹರಿಯಣ್ಣ.

❖❖❖❖❖❖❖❖❖

### ಧರ್ಮದ ಪಾಠಶಾಲೆ.

ಅಯ್ಯಾ,

ಮೈಸೂರಲ್ಲಿ ಶ್ರೀಮನ್ ಮಹಾರಾಜರವರ ಒಂದು ಧರ್ಮ ಪಾಠಶಾಲೆ ಇರುವುದಾಗಿ ಕೇಳುತ್ತೇನೆ. ಅದು ನಿಜವೋ ? ನಿಜವಾದರೆ ಸಂಬಳ ಮಾಫಿಯಿಂದ ಕಲಿಸುವದು ಮಾತ್ರವೋ ? ಅನಾಥರಿಗೆ ಅನ್ನವನ್ನು ಕೊಡುತ್ತಾರೋ ? ಅದರಲ್ಲಿ ಕಲಿಸುವುದು ಸಂಸ್ಕೃತವೋ, ಯಾ ಇಂಗ್ಲಿಷೋ ? ಇವುಗಳನ್ನೆಲ್ಲಾ ತಮ್ಮ ಪತ್ರಿಕೆಯಲ್ಲಿ ಉತ್ತರ ಕೊಡುವದಾಗಿ ನಂಬುತ್ತೇನೆ. ಇಂಥಾ ಪಾಠಶಾಲೆ ಮೈಸೂರಲ್ಲಿ ಇಲ್ಲದಿದ್ದರೆ ಬೇರೆ ಯಾವ ಕಡೆ ಇರುವದು, ಗೊತ್ತುಂಟೋ ? ಅದು ಸೂಚಿಸುವದಾಗಿ ಕೋರುತ್ತೇನೆ. ಚಂದ್ರಾದಾಸ.

[ಮೈಸೂರಲ್ಲಿ ಮಹಾರಾಜರವರ ಪಾಠಶಾಲೆ ಇರುತ್ತದೆ. ಅಲ್ಲಿ ಸಂಬಳವಿಲ್ಲದೆ ಸಂಸ್ಕೃತವನ್ನು ಕಲಿಸುತ್ತಾರೆ. ಬಡವರಾಗಿಯೂ ಯೋಗ್ಯರಾಗಿಯೂ ಇರುವ ಬ್ರಾಹ್ಮಣ ಬಾಲಕರಿಗೆ ಆ ವಿದ್ಯೆ ಕಲಿಸುವದಲ್ಲದೆ ಸ್ವಲ್ಪ ವೇತನವನ್ನೂ ಕೊಡುವರು ; ಮತ್ತು ಅವರನ್ನು ಧರ್ಮಸತ್ರದಲ್ಲಿ ಅನ್ನ ಹಾಕುವರು.—ಕೆಲವು ದೊಡ್ಡ ಮನುಷ್ಯರು ಸೇರಿ ಒಂದು ಅನಾಥಾಲಯವನ್ನು ರಾಜಧಾನಿಯಲ್ಲಿ ಇಟ್ಟು ನಡಿಸುತ್ತಾ ಬಂದಿದಾರೆ. ಇದರಲ್ಲೂ ಬ್ರಾಹ್ಮಣ ಅನಾಥ ಹುಡುಗರಿಗೆ ಧರ್ಮಕ್ಕೆ ಅನ್ನ ಹಾಕಿ, ಬಟ್ಟೆಬರೆ ಪುಸ್ತಕ ಮುಂತಾದ್ದನ್ನು ಕೊಟ್ಟು ವಿದ್ಯೆ ಕಲಿಸುತ್ತಿದಾರೆ.—ಎಡಿ.]

## ಚಾಮುದಾಸಯ್ಯ ಗುರುದಾಸಯ್ಯನಾದದ್ದು.

(ತಾನೇ ಬರೆದ ವೃತ್ತಾಂತ)

(ಕಳೆದ ವಾರದ ಶೇಷ.)

೨. ನಾನು ಗುರುವನ್ನು ಹುಡುಕಿಕೊಂಡು ಹೋದದ್ದು.

ನನ್ನ ಹೆಂಡತಿಯು ಮಕ್ಕಳು ನನ್ನನ್ನು ಬಿಟ್ಟು ಹೋದಮೇಲೆ ಕೆಲವು ದಿವಸಗಳು ಮಾತ್ರ ನಾನು ಬೆಂಗಳೂರಿನಲ್ಲಿಯೇ ಇದ್ದು, ತರುವಾಯ ಗಡ್ಡ ಮೀಸೆ ಜುಟ್ಟು ಜನಿವಾರಗಳನ್ನು ತೆಗೆದು ಹಾಕಿ ನಾನು ಓದುತ್ತಿದ್ದ ಎರಡು ಗ್ರಂಥಗಳನ್ನು ಬೆನ್ನಿಗೆ ಕಟ್ಟಿಕೊಂಡು ಕಂಕಳಿಗೆ ಜೋಳಿಗೆಯನ್ನು ಹಾಕಿಕೊಂಡು, ಭಿಕ್ಷುಗಾರನಾಗಿ ದೇಶಸಂಚಾರವನ್ನು ಮಾಡುವಂತೆ ಬಳ್ಳಾರಿ ಮಾರ್ಗವಾಗಿ ಹೊರಟೆನು. ಆದರೆ ನಾನು ವೇದಾಂತಿಗಳ ಮತಗಳನ್ನು ವಿಚಾರಿಸಿಕೊಂಡು ಹೋಗುವಾಗ ಅನಂತಪುರದಿಂದ ಆಚೆ ಅಲ್ಲಲ್ಲಿ ಒಂದೊಂದು ಮಠವಾಗಿ ಸಿಕ್ಕುತ್ತಾ ಬಂದವು. ಆಗ ಆ ಮಠಪತಿಗಳನ್ನು ಆಶ್ರಯಿಸಿಕೊಳ್ಳುವವನಂತೆ ಕಾಣಿಸಿಕೊಂಡು ಒಂದು ರಾತ್ರಿಯೋ ಅಥವಾ ಒಂದು ಮಧ್ಯಾಹ್ನವೋ ಅಲ್ಲಿ ಇದ್ದು, ಸ್ವಲ್ಪಮಟ್ಟಿಗೆ ಆ ಗುರುಗಳ ಸಂಗಡ ಸಂಭಾಷಿಸುತ್ತಾ, ಅವರ ಸ್ವಭಾವದ ನಡವಳಿಗಳನ್ನೂ ಅವರ ಕ್ರಿಯೆಗಳನ್ನೂ ಅವರ ಶಿಷ್ಯರ ಅನುಭವದ ಯೋಗ್ಯತೆಯನ್ನೂ ಗ್ರಹಿಸಿಕೊಂಡು ಹೋಗುತ್ತಾ ಇದ್ದೆ. ತರುವಾಯ ಮುಂದಿನ ಗ್ರಾಮಾಂತರಗಳಲ್ಲಿಯೂ ಸಹ ವಿಚಾರಿಸಿಕೊಂಡು ಹೋಗುವಾಗ, ಅಲ್ಲಲ್ಲಿ ಮಠಪತಿಗಳ ಶಿಷ್ಯರು ಸಿಕ್ಕುತ್ತಾ ಬಂದರು. ಅಂಥವರನ್ನು ಕಂಡು ಏನಪ್ಪಾ, ನಾನು ನಿಮ್ಮ ಸ್ವಾಮಿಯವರಿಂದ ಸದ್ಗತಿಯನ್ನು ಹೊಂದುವದಕ್ಕಾಗಿ ಬಹು ದೂರದಿಂದ ಕಷ್ಟಪಟ್ಟು ಬಂದಿದ್ದೇನೆ. ಹಾಗಾದರೆ ನಿಮ್ಮ ಸ್ವಾಮಿಯವರಿಂದ ಪ್ರಕಟವಾಗುವಂಥ ಗುಣಾತಿಶಯಗಳ ಪ್ರಭಾವವೇನು ? ಅವರ ಮಹಿಮೆಯು ಎಂಥಾದ್ದು ? ಅವರು ಎಷ್ಟು ಕಾಲದಿಂದ ಮಠಪತಿಗಳಾಗಿದ್ದಾರೆ ? ಅವರ ಉಪದೇಶಗಳಿಂದ ಎಷ್ಟು ಜನರು ಮುಮುಕ್ಷುಗಳಾಗಿದ್ದಾರೆ. ನೀವು ಎಷ್ಟು ವರುಷಗಳಿಂದ ಸ್ವಾಮಿಯವರ ಕಟಾಕ್ಷಕ್ಕೆ ಪಾತ್ರರಾಗಿದ್ದೀರಿ ? ನಿಮ್ಮ ಭಕ್ತಿ ವಿಶ್ವಾಸವು ಎಷ್ಟರಮಟ್ಟಿಗೆ ಲೋಕವನ್ನು ತ್ಯಜಿಸಿ ಪರೋಕ್ಷವನ್ನು ಹೊಂದುತ್ತಾ ಬಂದಿದೆ ! ಅವರು ನಿಮಗೆ ಬೋಧಿಸುವಂಥ ಗ್ರಂಥಗಳೂ ಯಾವವು ? ಅವರ ಅನುಭವದ ವಿಶೇಷವೇನು ? ಎಂದು ಸ್ವಲ್ಪ ಮಟ್ಟಿಗೆ ಬಹು ಮೃದುವಾದ ಮಾತುಗಳಿಂದಲೂ ತಾಳ್ಮೆಯಿಂದಲೂ ಕೇಳುತ್ತಾ ಬಂದದ್ದಕ್ಕೆ ಅವರು ಹೇಳಿದ್ದೇನಂದರೆ—ನೀವು ನಮ್ಮನ್ನು ಕೇಳುವಂಥ ಮಾತುಗಳೇ ಆಶ್ಚರ್ಯವಾಗಿ ತೋರುತ್ತದೇ ಹೊರತು ನಮ್ಮ ಸ್ವಾಮಿಯವರಲ್ಲಿ ಅಂಥಾ ಆಶ್ಚರ್ಯವೇನು ತೋರಿದ್ದು ಇಲ್ಲ, ನಾವು ನೋಡಿದ್ದೂ ಇಲ್ಲ. ಅವರು ಮಠಪತಿಗಳಾಗಿರುವದರಿಂದ ಅವರೇ ನಮ್ಮ ಸ್ವಾಮಿಗಳೆಂದು ಭಕ್ತಿ ವಿಶ್ವಾಸದಿಂದ ಸೇವೆಮಾಡುತ್ತೇವೆ. ಮಠದ ಖರ್ಚಿಗೆ ನಮ್ಮ ಕೈಲಾದಮಟ್ಟಿಗೂ ಕೊಡುತ್ತೇವೆ, ಇನ್ನೇನು ನಮಗೆ ತಿಳಿಯದೆಂದು ಹೇಳುತ್ತಾ ಬಂದರು. ಆಗ ನಾನು ಗುರುವಂತೆ ಶಿಷ್ಯನೆಂಬ ಗಾದೆಗೆ ಇವರು ಸರಿಯಾಗಿದ್ದಾರೆಂದು ತಿಳಿದುಕೊಂಡು ಈ ಜ್ಞಾನಸಿಂಧು ಎಂಬ ಗ್ರಂಥವನ್ನು ರಚಿಸಿದಂಥ ದೊಡ್ಡ ಗುರುಗಳು ವಾಸವಾಗಿದ್ದ ಹಂಪೆ ಮಠಕ್ಕೆ ಹೋದೆನು. ಅಲ್ಲಿ ಆ ಜನರು ಕಾಲವಾಗಿ ೩೦೦ ವರುಷಗಳಾಗಿತ್ತಂತೆ. ಮತ್ತು ಆ ಮಠದಲ್ಲಿ ಯಾರೂ ಇರಲಿಲ್ಲ. ಆಗ ನಾನು ಅಲ್ಲಿನ ತುಂಗಭದ್ರಾ ನದಿಯಲ್ಲಿ ಸ್ನಾನಮಾಡಿ ಬಟ್ಟೆಗಳನ್ನು ಒಗೆದುಕೊಂಡು ಎರಡು ರಾತ್ರಿ ಅಲ್ಲೇ ವಿಶ್ರಾಂತಿಯಾಗಿದ್ದೆ. ಆಗ ನನ್ನಲ್ಲಿ ಒಂದು ಯೋಚನೆಯು ಉಂಟಾಯಿತು. ಅದೇನಂದರೆ–ನಾನು ಓದಿ ತಿಳಿದುಕೊಂಡಿದ್ದಂಥ ಆ ಸದ್ಗುರುವಿನ ಸ್ವಭಾವ ಲಕ್ಷಣಗಳಿಗೂ ಬಹಳ ವ್ಯತ್ಯಾಸವಾಗಿ ತೋರುವದರಿಂದ, ಇವರೇ ಶಾಸನ ಗುರುಗಳೆಂದೂ ಪಿಶಾಚ ಗುರುಗಳೆಂದೂ ನರಗುರುಗಳೆಂದೂ ಪಶುಗುರುಗಳೆಂದೂ ಹೇಳುವದಕ್ಕೆ ಸಾಕ್ಷಿಗಳಾಗಿದ್ದಾರೆ. ಇನ್ನು ಮುಂದೆ ನಾನು ಪರೀಕ್ಷೆ ಮಾಡುವಂಥ ಅವಶ್ಯವೇ ಇಲ್ಲ. ಇಂಥವರ ಪಾದಗಳನ್ನು ಹಿಡಿಯುವದಕ್ಕಿಂತ ನನ್ನ ಪಾದಗಳೇ ಎಷ್ಟೋ ಉತ್ತಮವಾದವುಗಳೆಂದು ಹೇಳಬಹುದು. ಯಾಕಂದರೆ ನಾನು ಲೋಕದ ಆಸೆಯನ್ನು ಪ್ರಾಣದ ಆಸೆಯನ್ನು ಹೆಂಡತಿ ಮಕ್ಕಳ ಆಸೆಯನ್ನು ಬಿಟ್ಟು ಆ ಸದ್ಗುರುವಿನಲ್ಲಿ ನಾನು ವಿಶ್ವಾಸವಿಟ್ಟಿರುವ ಪ್ರಕಾರ ಈ ಕಳ್ಳ ಗುರುಗಳಲ್ಲಿ ತೋರುವದಿಲ್ಲ. ಇವರು ಲೋಕದ ಆಸೆ ಎಂಬ ಕೆಸರಿನಲ್ಲಿ ಹಂದಿಗಳ ಹಾಗೆ ಹೊರಳಾಡುತ್ತಾರೆ ಇವರಿಗೆ ಎಷ್ಟು ಇದ್ದರೂ ಇನ್ನು ಸಾಲದು ಸಾಲದು ಎಂಬ ಕೊರತೆಯು ಕುಳಿದ ಹಾಗೆ ತಿನ್ನುತ್ತದೆ. ಇವರ ಅಜ್ಞಾನವಶಾತ್ ಮೋಕ್ಷದ ಮಾರ್ಗವು ಇವರಿಗೆ ತಿಳಿಯದೆಹೋದರೆ, ಮುಂದೆ ನನಗೆ ಇವರು ತಿಳಿಸುವದೇನು ! ಇಂಥವರಿಂದ ನಾನು ಸದ್ಗತಿಯನ್ನು ಹೊಂದಿ ಮುಕ್ತನಾಗುವದು ಹ್ಯಾಗೆಂದು ತೀರ್ಮಾನಿಸಿಕೊಂಡು ಮುಂದಿನ ವಿಷಯದಲ್ಲಿ ಆಲೋಚಿಸಿದ್ದೇನಂದರೆ—ನನ್ನ ಸ್ವದೇಶವನ್ನು ಬಿಟ್ಟು ಇಷ್ಟು ದೂರ ಬಂದಿದ್ದೇನೆ. ಪುನಃ ನಾನು ಹಿಂದಕ್ಕೆ ಹೋಗುವ ಪಕ್ಷದಲ್ಲಿ, ಸದ್ಗುರುವಿನಲ್ಲಿದ್ದ ನನ್ನ ನಂಬಿಕೆಯನ್ನು ಬಿಟ್ಟು ನಾಸ್ತಿಕನಾಗಬೇಕಾಗುತ್ತದೆ ; ಅದಕ್ಕಾಗಿ ನಾನು ಪಟ್ಟಂಥ ಪ್ರಯಾಸವೆಲ್ಲಾ ವ್ಯರ್ಥವಾಗುತ್ತದೆ. ಇಂಥಾ ಕೊರತೆಯಲ್ಲಿ ನಾನು ಸಾಯುವದಕ್ಕಿಂತ ಇನ್ನು ಸ್ವಲ್ಪ ಕೈಲಾದಮಟ್ಟಿಗೂ ಸಾಧಿಸಿ ನೋಡೋಣ. ಅಲ್ಲಿಗೂ ನನ್ನ ನಂಬಿಕೆಯ ಪ್ರಕಾರ ಆ ಸದ್ಗುರುವು ಸಿಕ್ಕಿದರೆ ಸರಿ, ಇಲ್ಲದಿದ್ದರೆ ಆತನ ಹೆಸರಿನಲ್ಲಿಯೇ ಎಲ್ಲರೂ ಬಿದ್ದು ಸಾಯೋಣ ಎಂದು ನಿಶ್ಚಯಿಸಿಕೊಂಡು ಕಾಶೀ ಕಡೆಗೆ ಹೊರಟುಹೋದೆನು. ಯಾಕಂದರೆ ಆ ಪ್ರಾಂತ್ಯಗಳಲ್ಲಿ ದೊಡ್ಡ ದೊಡ್ಡ ಪಟ್ಟಣಗಳು ಇರಬಹುದೆಂದೂ ಅವುಗಳಲ್ಲಿ ಯಾವ ವರಲ್ಲಾದರೂ ನನ್ನ ಪ್ರಾಣಮಿತ್ರನಾದ ಸದ್ಗುರುವು ಸಿಕ್ಕಬಹುದೆಂದೂ ಸಣ್ಣ ೮ ದಿನಗಳ ವರಿಗೂ ಬಹು ಘಾಸಿಯಿಂದ ಪ್ರಯಾಣ ಮಾಡುತ್ತಾ ಹೋದೆ. ೯ನೇ ದಿನದ ಪ್ರಯಾಣದಲ್ಲಿ ಸ್ವಲ್ಪಮಟ್ಟಿಗೆ ಛಳಿ ಜ್ವರವು ಕಾಣಿಸಿಕೊಂಡಿತು. ೧೦ನೇ ದಿನದ ಪ್ರಯಾಣದಲ್ಲಿ ಅದರ ತಾಪವು ಮತ್ತೂ ಬಲವಾದ್ದರಿಂದ ಮುಂದೆ ಹೋಗುವದಕ್ಕೆ ತ್ರಾಣವಿಲ್ಲದೆ ಅಲ್ಲಿನ ಒಂದು ಛತ್ರದಲ್ಲಿ ಮಲಗಿಕೊಂಡೆನು. ಮಧ್ಯರಾತ್ರಿಯಲ್ಲಿ ಹಸಿವೂ ದಾಹವೂ ಸಹ ಉಂಟಾಗಿ ಬಹು ಕಷ್ಟಕ್ಕೆ ಕಾರಣವಾಯಿತು. ಯಾಕಂದರೆ ಆ ದಿನವೆಲ್ಲಾ ಊಟಕ್ಕೆ ಏನೂ ಸಿದ್ಧಮಾಡಿಕೊಳ್ಳುವದಕ್ಕೆ ಆಗಲಿಲ್ಲ. ಮತ್ತು ನಾಲಿಗೆಯ ರುಚಿಯು ಸಹ ಕೆಟ್ಟುಹೋಗಿತ್ತು.

## ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಟೌನುಹಾಲಿನಲ್ಲಿ ರಾಜಧಾನಿಯ ಮ್ಯುನಿಸಿಪಲ್ ಕಮಿಷನರುಗಳು ಸಭೆ ಸೇರಿ ತಿಂಗಳುಕಟ್ಲೆ ಮೀಟಿಂಗನ್ನು ನಡಿಸಿದರು. ಮೊದಲು ಮೇ ತಿಂಗಳ ಜಮಾಖರ್ಚು ಓದಲಾಯಿತು. ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ರೂ. ೧೩,೦೪೯—೭—೫ ಪ್ಯ ಜಮಾ ಆಯಿತು ; ರೂ. ೯,೫೩೦—೬—೫ ಪ್ಯ ಖರ್ಚಾಯಿತು. ಜನನ ೧೩೪ ; ಮರಣ ೧೪೫. ಈ ಪೈಕಿ ಪ್ಲೇಗ್ ೧, ಸಿಡುಬು ೧೩.

ಅಕ್ಟ್ರಾಯಿ ಬಾಬಿನಲ್ಲಿ ಆ ತಿಂಗಳ ಉತ್ಪತ್ತಿ ತುಂಬಾ ಕಡಿಮೆಯಾಯಿತು. ಆ ತಿಂಗಳಲ್ಲಿ ಮದುವೆಗಳು ವಿಶೇಷವಾಗಿ ಆದದ್ದರಿಂದ ಜವಳಿ, ವೀಳ್ಯದೆಲೆ, ಬೆಲ್ಲ, ಯಳನೀರು, ತೆಂಗಿನಕಾಯಿ, ತುಪ್ಪ, ಸಕ್ಕರೆ ಮೊದಲಾದ ಪದಾರ್ಥಗಳು ಹೆಚ್ಚಾಗಿ ಖರ್ಚಾಗಿರುತ್ತವೆ, ಆದರೂ ಸುಂಕ ವಸೂಲಾಗಿರುವದು ಹಿಂದಿನ ತಿಂಗಳಿಗಿಂತ ೨೦೦ ರೂ. ಕಡಿಮೆ. ಮೋಸಗಾರರನ್ನು ಹಿಡಿಯುವರು ' ಹಿಡಿಯುವದು ಕಡಿಮೆ ; ಪೋಲೀಸಿನವರೇ ಹೆಚ್ಚಾಗಿ ಕಂಡು ಹಿಡಿಯುತ್ತಾರೆ ಎಂಬದಾಗಿ ಮೆಂಬರುಗಳೆಲ್ಲಾ ಆಕ್ಷೇಪಣೆ ಮಾಡಿದರು. ಇದಕೋಸ್ಕರ ಈ ಬಾಬನ್ನು ಚನ್ನಾಗಿ ತನಿಖೆಮಾಡಿ, ಅದರಲ್ಲಿರತಕ್ಕ ಲೋಪಗಳನ್ನು ಕಂಡು ' ಹಿಡಿಯುವದಕ್ಕೆ ಒಂದು ಸಬ್ ಕಮಿಟಿ ನೇಮಿಸಲಾಯಿತು.

ಈ ತಿಂಗಳಲ್ಲಿ ನ.ಸೆ ತೆರಿಗೆ ೨೧ ರೂ. ಮಾತ್ರ ವಸೂಲಾಗಿದೆ ಎಂದು ಹೇಳಿದ್ದಕ್ಕೆ ಗುದಸ್ತ ೨—೩ ಸಾಲುಗಳ ಕಂದಾಯ ಬಾಕಿಯಲ್ಲಿ ಉಳಿದಿರುವಲ್ಲಿ ಮಾಹೆ ಇಷ್ಟು ಸ್ವಲ್ಪ ವಸೂಲಾಯಿತೆಂದು ಮೆಂಬರುಗಳು ಆಕ್ಷೇಪಣೆ ಮಾಡಿದರು. ಮೊದಲು ರಿವಿಜನ್ ಮಾಡಿದ್ದು ಕಾನೂನಿಗೆ ಅನುಸಾರವಾಗಿಲ್ಲವೆಂದು ಕೋರ್ಟಿನಲ್ಲೇ ತೀರ್ಮಾನವಾಗಿರುತ್ತೆಂತಲೂ, ಕಂದಾಯ ವಸೂಲ್ಮಾಡುವ ವಿಷಯದಲ್ಲಿ ಏನು ಮಾಡೋಣವೆಂದು ಗವರ್ನಮೆಂಟಿನವರನ್ನು ಕೇಳಿರುವದಾಗಿಯೂ, ಅಲ್ಲಿಂದ ಜವಾಬು ನಿರೀಕ್ಷಿಸಿಕೊಂಡಿರುತ್ತೇವೆಂತಲೂ ವೈಸ್ ಪ್ರೆಸಿಡೆಂಟರು ತಿಳಿಸಿದರು.

ಹೆಲ್ತ್ ಆಫೀಸರು ನಡಿಸುವ ಕೆಲಸಗಳ ರಿಪೋರ್ಟು ಮೂರು ತಿಂಗಳಿಂದಲೂ ಬೋರ್ಡಿಗೆ ಬರುವದೇ ಇಲ್ಲವೆಂದು ಮೆಂಬರುಗಳು ತಿಳಿಸಿದರು. ಹೆಲ್ತ್ ಆಫೀಸರು ತಮ್ಮ ರಿಪೋರ್ಟುಗಳನ್ನು ಸೀನಿಯರ್ ಸರ್ಜನರಿಗೆ ಕಳುಹಿಸುವದಾಗಿ ಹೇಳಿದರು. ಇದನ್ನು ಕೇಳಿ ಮೆಂಬರುಗಳು—ಇನ್ನು ಮುಂದೆ ಆ ರಿಪೋರ್ಟು ಬೋರ್ಡಿಗೆ ಬಾರದೆ ಹೋದರೆ ಮ್ಯುನಿಸಿಪಾಲಿಟಿಯಿಂದ ಹೆಲ್ತ್ ಆಫೀಸರಿಗೆ ಸಲ್ಲುವ ಅಲೋವೆನ್ಸನ್ನು ನಿಲ್ಲಿಸಿಬಿಡುತ್ತೇವೆಂದು ತೀರ್ಮಾನಿಸಿರುತ್ತಾರೆ.

ಪಟ್ಟಣದ ಕಚಡಾ ಸಾಗುವ ಕನ್ಸರ್ವೆನ್ಸಿ ಬಾಬಿನಲ್ಲಿ ಮ್ಯುನಿಸಿಪಾಲಿಟಿಯವರು ಕೆಲವು ಕಾಲದಿಂದ ಜಾಸ್ತಿ ಸಿಬ್ಬಂದಿಯನ್ನು ಇಟ್ಟುಕೊಂಡಿದ್ದಾರೆ. ಇದನ್ನು ಹಂಗಾಮಿಯಾಗಿ ಇಟ್ಟುಕೊಂಡದ್ದೆಂತಲೂ ಖಾಯಂ ಸಿಬ್ಬಂದಿಗೆ ದಾಖಲ್ ಮಾಡಬೇಕೆಂತಲೂ ಸರ್ಕಾರದವರು ಹುಕುಂ ಮಾಡಿದ್ದಾರೆ. ಈ ಹುಕುಮನ್ನು ಛೇರ್ಮನರು ಹೆಲ್ತ್ ಆಫೀಸರಿಗೆ ತಿಳಿಸಬೇಕೆಂತಲೂ, ತಿಂಗಳಿಗೆ ೧೫ ರೂ. ಬಾಡಿಗೆಗೆ ಕನ್ಸರ್ವೆನ್ಸಿ ಗಾಡಿಗಳನ್ನು ಇಟ್ಟುಕೊಳ್ಳುವದಕ್ಕೆ ಅನುಕೂಲ ಇಲ್ಲವೋ ಕೇಳಿ ತಿಳಿಯಬೇಕೆಂತಲೂ ಗೊತ್ತು ಮಾಡಿದರು.

ಇಂಗ್ಲಿಷ್ ವಿದ್ಯೆಯನ್ನು ಕಲಿಸುವದಕ್ಕಿಂತ ಮುಂಚೆ ಮಕ್ಕಳಿಗೆ ಕನ್ನಡದಲ್ಲಿ ಪರಿಶ್ರಮವಿರಬೇಕಾದದ್ದು ಅತ್ಯವಶ್ಯವೆಂಬದಾಗಿ ಸರ್ಕಾರದವರು ಠರಾಯಿಸಿಮಾಡಿದ್ದಾರೆ. ಇದನ್ನು ಜಾರಿಗೆ ತರುವದರಿಂದ ಬಾಲಕರೆಲ್ಲಾ ಕೆಟ್ಟುಹೋಗುತ್ತಾರೆಂಬದಾಗಿಯೂ, ಮೊದಲಿನಂತೆ ಅವರು ಬೇಗನೇ ಇಂಗ್ಲಿಷಿನಲ್ಲಿ ಪರೀಕ್ಷೆಗಳನ್ನು ಕೊಡುವದಕ್ಕೆ ಅಡಚಣೆಯಾಗಿದೆ ಎಂತಲೂ ಮ್ಯುನಿಸಿಪಲ್ ಸ್ಕೂಲ್ ಕಮಿಟಿಯವರು ರಿಪೋರ್ಟು ಮಾಡಿದ್ದರು. ಈ ವಿಷಯವು ಬಹಳ ಹೊತ್ತು ಮೀಟಿಂಗಿನಲ್ಲಿ ಚರ್ಚೆಯಾಯಿತು. ಕಡೆಗೆ ಮದರಾಸ್ ಆಧಿಪತ್ಯದ ಸ್ಕೂಲುಗಳಲ್ಲಿ ಮಾತೃಭಾಷೆಯನ್ನೂ ಇಂಗ್ಲಿಷನ್ನೂ ಹ್ಯಾಗೆ ಪ್ರಾರಂಭಿಸಿ ಕಲಿಸುತ್ತಾರೋ ಅದೇ ರೀತಿಯಲ್ಲಿ ಮೈಸೂರಿನಲ್ಲೂ ಜಾರಿಗೆ ಬರಬೇಕೆಂದು ಗವರ್ನಮೆಂಟಿನವರನ್ನು ಕೇಳಿಕೊಳ್ಳುವಂತೆಯೂ, ಈ ಭಾಷೆಯವರು ಕೊಟ್ಟಿರುವ ಹುಕುಮನ್ನು ಅದಕ್ಕನುಸಾರವಾಗಿ ಬದಲಾಯಿಸುವಂತೆ ತಿಳಿಸಬೇಕೆಂತಲೂ ತೀರ್ಮಾನಿಸಿದರು.

## ಮೈಸೂರು ಸರ್ಕಾರಿ ಹುಕುಮುಗಳು.

### ಮ್ಯುನಿಸಿಪಾಲಿಟಿಗಳು.

ಮೈಸೂರು ಸಂಸ್ಥಾನದಲ್ಲಿರುವ ಮ್ಯುನಿಸಿಪಾಲಿಟಿಗಳ ೧೯೦೧—೦೨ನೆ ಸಾಲಿನ ರಿಪೋರ್ಟುಗಳೂ, ಅವುಗಳ ಮೇಲೆ ಗವರ್ನಮೆಂಟಿನವರು ಮಾಡಿರುವ ಹುಕುಮೂ ಪ್ರಕಟವಾಗಿದೆ. ಆ ಸಾಲಿನ ಅಂತ್ಯದಲ್ಲಿ ಒಟ್ಟು ೧೨೪ ಮ್ಯುನಿಸಿಪಾಲಿಟಿಗಳಿದ್ದವು; ಅಂದರೆ ಹಿಂದಿನ ಸಾಲಿನಲ್ಲಿದ್ದವುಗಳಿಗಿಂತಲೂ ಮೂರು ಹೆಚ್ಚು. ರಾಂಪುರ, ದೇವಸಂದ್ರ, ಹೊನ್ನವಳ್ಳಿ—ಈ ಮೂರು ಸ್ಥಳಗಳಲ್ಲಿ ಹೊಸದಾಗಿ ಮ್ಯುನಿಸಿಪಾಲಿಟಿಯನ್ನು ಏರ್ಪಾಡು ಮಾಡಿದಾರೆ.

೧೮ ಮ್ಯುನಿಸಿಪಾಲಿಟಿಗಳು ವಿನಾ ಉಳಿದವುಗಳಲ್ಲೆಲ್ಲಾ ಮೆಂಬರುಗಳು ಕ್ರಮವಾಗಿ ಮೀಟಿಂಗಿಗೆ ಹಾಜರಾಗಿ ಕಾರ್ಯಗಳನ್ನು ಜರುಗಿಸಿದರು. ಮ್ಯುನಿಸಿಪಾಲಿಟಿಗಳಲ್ಲಿ ಒಟ್ಟು ೩,೨೫,೨೧ ರೂಪಾಯಿ ಉತ್ಪತ್ತಿಯೂ, ೩,೬೬,೩೯೭ ರೂಪಾಯಿ ಖರ್ಚೂ ಆಗಿರುತ್ತೆ. ಮೈಸೂರು ಮತ್ತು ಬೆಂಗಳೂರು ಮ್ಯುನಿಸಿಪಾಲಿಟಿಗಳಲ್ಲೇ ಹೆಚ್ಚಾದ ಹುಟ್ಟುವಳಿ ಆಯಿತು. ಉಳಿದವುಗಳ ಪೈಕಿ [illegible]ಯಲ್ಲಿ ೩,೦೬ ರೂ. (ಕಡೇದರ್ಜೆ), ಕೋಲಾರದಲ್ಲಿ ೨೬,೩೨೩ ರೂ. (ಮೊದಲನೆಯದು) ಉತ್ಪತ್ತಿ ಆಗಿದೆ. ಅಕ್ಟ್ರಾಯಿ ಬಾಬಿನಲ್ಲಿ ೧೬,೩೦೨ ರೂ. ಜಾಸ್ತಿ ಹುಟ್ಟುವಳಿ ಕಂಡುಬಂತು. ಮಿರ್ಲೆ, ಬೆಂಕಿಪುರ, ಹೊಳೆಹೊನ್ನೂರು, ಈ ಸ್ಥಳಗಳಲ್ಲಿ ಅಕ್ಟ್ರಾಯಿ ಸುಂಕವನ್ನು ಜಾರಿಗೆ ತಂದದ್ದರಿಂದಲೇ ಹುಟ್ಟುವಳಿ ಹೆಚ್ಚುವದಕ್ಕೆ ಕಾರಣವಾಯಿತು. ಬ್ರಾಂದಿ ಮುಂತಾದ ಮದ್ಯಗಳನ್ನು ಇಟ್ಟು ಮಾರತಕ್ಕ ಅಂಗಡಿಗಳ ಲೈಸೆನ್ಸ್ ಬಾಬಿನಲ್ಲಿ ೧೩,೧೦೩ ರೂ ಬೆಂಗಳೂರಿನಲ್ಲೂ, ೫೯,೫೩೫ ರೂ. ಮೈಸೂರಿನಲ್ಲೂ ಉತ್ಪತ್ತಿ ಆಯಿತು.

ಎಲ್ಲಾ ಮ್ಯುನಿಸಿಪಾಲಿಟಿಗಳಲ್ಲೂ ಒಟ್ಟು ೨,೫೬,೩೨೫ ರೂ. ವಸೂಲಾಗಬೇಕಾಗಿತ್ತು. ಈ ಪೈಕಿ ೩,೫೦.೩೮೩ ರೂಪಾಯಿ ವಸೂಲಾಗಿ ೨,೦೨,೮೭೮ ರೂ. ಬಾಕಿ ಉಳಿದಿದೆ. ಈ ಪೈಕಿ ಹೆಚ್ಚು ಹಣ ಬಾಕಿ ನಿಂತಿರುವ ಸ್ಥಳಗಳ್ಯಾವವೆಂದರೆ:—

| | |
|---|---|
| ಬೆಂಗಳೂರ ಸಿಟಿ ೯೮,೬೩೯ | ಕಡೂರು ಡಿ. . . . ೪,೭೦೫ |
| ಮೈಸೂರು ಸಿಟಿ ೬೯,೭೭೮ | ಕೋಲಾರ್ ಡಿ . . . ೭,೩೬೬ |
| ಪ್ರಂಚ್‌ರಾಕ್ಸ್ ಸ. ಡಿ. . . . ೧೫,೨೭ | ಮೈಸೂರ್ ಡಿ . . . ೩,೬೦೦ |
| ಶಿವಮೊಗ್ಗ ಡಿಸ್ಟ್ರಿಕ್ಟ್ . ೮,೨೬ | ಹಾಸನ ಡಿ . . . . ೬,೯೫೪ |

ಪಟ್ಟಣಗಳ ಆರೋಗ್ಯವಿಚಾರಕ್ಕೆ ಹಿಂದಿನ ಸಾಲಿಗಿಂತಲೂ ೬,೮೬,೪ ರೂ. ಜಾಸ್ತಿ ಖರ್ಚು ಮಾಡಲಾಯಿತು ಗ್ರಾಮಾಂತರಗಳ ಆರೋಗ್ಯವಿಚಾರವನ್ನು ವೃದ್ಧಿಪಡಿಸುವದಕ್ಕೆ [illegible] ಕಾನೂನನ್ನು ಎಲ್ಲಾ ಮ್ಯುನಿಸಿಪಾಲಿಟಿಗಳಿಗೂ ಜಾರಿಗೆ ತಂದದ್ದಾಯಿತು. ಈ ಕಾನೂನಿಗೆ ಅನುಸಾರವಾಗಿ ಮ್ಯುನಿಸಿಪಲ್ ಬೋರ್ಡಿನವರು ಆರೋಗ್ಯವೃದ್ಧಿಯ ಕಾರ್ಯಗಳನ್ನು ನಡಸುವದರಲ್ಲಿ ತುಂಬಾ ಉತ್ಸಾಹವನ್ನು ಪ್ರಕಾಶಪಡಿಸಿರುತ್ತಾರೆಂದು ಹೇಳಲು ಗವರ್ನಮೆಂಟಿನವರು ಸಂತೋಷಪಡುವರು.

ಹಿಂದಿನ ಸಾಲಿನಲ್ಲಿ ೧೩,೩೦೦ ಜನರು ಲಯವಾದರು; ಈ ಸಾಲಿನಲ್ಲಿ ೨೩,೯೩೩ ಮರಣಗಳಾಗಿರುತ್ತವೆ. ಜನನವಾದದ್ದೋ ೧೧,೩೧೦ರಿಂದ ೧೧,೨೨೨ಕ್ಕೆ ಇಳಿಯಿತು.

ಈ ಸಾಲಿನಲ್ಲಿ ೬೪,೬೦೨ ರೂಪಾಯಿ ಖರ್ಚುಮಾಡಿ ೧೦೯ [illegible]ಗಳೊಳಗೆ ರಾತ್ರಿ [illegible]. [illegible] ೧೬ [illegible]ಗಳಲ್ಲಿ [illegible] ೩೯ ೨೮೭ ರೂ. [illegible].

ಕುಡಿಯುವ ನೀರನ್ನು ಒದಗಿಸಿಕೊಡುವದಕೋಸ್ಕರ ಈ ಸಾಲಿನಲ್ಲಿ ೨೬,೯೪೮ ರೂಪಾಯಿಯೂ, ಶಿಥಿಲವಾಗಿದ್ದ ಕೆರೆ ಕಟ್ಟೆ ಬಾವಿಗಳ ರಿಪೇರಿಗಾಗಿ ೫೬,೩೩೦ ರೂಪಾಯಿಯೂ ಖರ್ಚು ಮಾಡಲಾಯಿತು. ಆಸ್ಪತ್ರೆ, ವೈದ್ಯ, ಮೊದಲಾದ ಧರ್ಮ ಖರ್ಚಿಗೆ ಮ್ಯುನಿಸಿಪಲ್ ಫಂಡಿನಿಂದ ೨೯,೨೨೮ ರೂಪಾಯಿ ಖರ್ಚುಮಾಡಿದೆ, ಶಿವಮೊಗ್ಗೆಯ ಪೇಟೆ ಆಸ್ಪತ್ರೆಯ [illegible] ಮಾಡಲಾಯಿತು.

ಕಳೆದ ಸಾಲಿನಲ್ಲಿ ೧,೨೩೩ ಜನರಿಗೆ ಮಾತ್ರ ಸಿಡುಬು ಹಾಕಿತ್ತು. ಈ ಸಾಲಿನಲ್ಲಿ ೨೧,೫೫೧ ಜನರು ಸಿಡುಬು ಹಾಕಿಸಿಕೊಂಡಿರುತ್ತಾರೆ. ಮ್ಯುನಿಸಿಪಲ್ ಉತ್ಪತ್ತಿಯಿಂದ ವಿದ್ಯಾಭಿವೃದ್ಧಿಗಾಗಿ ೬,೯೦೧ ರೂ. ಗ್ರಾಂಟು ಕೊಟ್ಟಿರುತ್ತೆ.

ಉದ್ಯಾನವನಗಳು. ಚಿಕ್ಕಮಗಳೂರಿನಲ್ಲಿ ಒಂದು ಪಾರ್ಕು ಇರುತ್ತೆ ಹೊಸಮನೆಯಲ್ಲಿ ಒಂದು ವನ ನಿರ್ಮಾಣವಾಯಿತು. ಮೈಸೂರು ಡಿಸ್ಟ್ರಿಕ್ಟ್ ಮ್ಯುನಿಸಿಪಾಲಿಟಿಗಳಲ್ಲೂ ಹಾಸನ ಟೌನಿನಲ್ಲೂ ಇರುವ ಪಾರ್ಕುಗಳೂ ತೋಟಗಳೂ ಒಳ್ಳೇ ಸ್ಥಿತಿಯಲ್ಲಿರುವಂತೆ ತಿಳಿದುಬಂದಿದೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಈ ಬಾಬಿಗೆ ಜವಾಬುದಾರಿಯೆಂದು ಹೇಳಿದಾರೆ, ಆದರೆ ತೋಟಗಳು ಯಾವ ಸ್ಥಿತಿಯಲ್ಲಿವೆಯೋ ರಿಪೋರ್ಟಾಗಿಲ್ಲ. ಕೋಲಾರದಲ್ಲಿರುವ ಪಾರ್ಕಿನ ವಿಚಾರವಾಗಿ ಏನೂ ರಿಪೋರ್ಟುಮಾಡಿಲ್ಲ. ಬೆಂಗಳೂರಿನಲ್ಲಿರುವ ಮ್ಯುನಿಸಿಪಲ್ ಪಾರ್ಕ ಸ್ಥಿತಿಯೇ ರಿಪೋರ್ಟಿನಲ್ಲಿ ಕಾಣಿಸಿಲ್ಲ.

## ಪ್ರಶ್ನೋತ್ತರಗಳು.

ಪ್ರಶ್ನೆ.—ನೀವು ಆಗಾಗ್ಯೆ ಯೇಸುಕ್ರಿಸ್ತನೆಂತಲೂ, ಆತನು ಭಗವಂತನೆಂತಲೂ ಪ್ರಕಟಿಸುತ್ತೀರಷ್ಟೆ. ಆತನು ಭಗವಂತನಾದರೆ ಈ ಭೂಮಿಯಲ್ಲಿ ಯಾತಕ್ಕೋಸ್ಕರ ಜನ್ಮಿಸಿದನು ? ಮತ್ತು ಆತನು ಭಗವಂತನೆಂದು ಬೈಬಲಿನಲ್ಲಿ ನಿರ್ಧರಿಸಿತಕ್ಕದ್ದು ಯಥಾರ್ಥವಾಗಿಯೂ ಸತ್ಯವಾಗಿಯೂ ಇದೆಯೋ ! ಹಾಗಾದರೆ ಅದಕ್ಕೆ ಆಧಾರವೇನು ! ಸತ್ತು ಅಂಥರಿಗೆ ಕಣ್ಣು ಕಾಣುವಂತೆಯೂ, ಕುಂಟರಿಗೆ ಕಾಲುಗಳು ಬರುವಂತೆಯೂ, ಇನ್ನು ನಾನಾ ವಿಧವಾದ ರೋಗಪೀಡಿತರುಗಳು ಏಸು ಬಾಯಿಯಿಂದ ಹೇಳಿದ ಮಾತ್ರಕ್ಕೆ ಸ್ವಸ್ಥರಾದರೆಂತ ಬೈಬಲಿನಲ್ಲಿ ನಿರ್ಧರಿಸುತ್ತಿದೆಯಷ್ಟೆ. ಹಾಗಾದರೆ ಯೇಸು ಪ್ರತ್ಯಕ್ಷ ದೈವವೆಂತ ವಿದಿತವಾಯಿತು. ಇಂಥಾ ದೈವಸ್ವರೂಪತ್ವವು ಆತನಲ್ಲಿದ್ದ ಪಕ್ಷದಲ್ಲಿ ಶಿಲುಬೆಗೆ ಯಾತಕ್ಕೆ ಏತ್ತಲ್ಪಡಬೇಕು ? ಈ ಪ್ರಶ್ನೆಗಳಿಗೆಲ್ಲಾ ಮನಸ್ಸಿಗೆ ಚನ್ನಾಗಿ ಗೋಚರವಾಗುವಂತೆ ಉತ್ತರಗಳನ್ನು ದಯಪಾಲಿಸಿ.

ಎಂ. ಗಂಗಾಧರಯ್ಯ.

ಉತ್ತರ.—ನೀವು ಕೇಳಿರುವ ಪ್ರಶ್ನೆಗಳು ಅಗಾಧವಾಗಿಯೂ, ಅನೇಕವಾಗಿಯೂ ಇರುವದರಿಂದ ಎಲ್ಲವುಗಳಿಗೆ ಒಂದೇಸಲ ಸಂಕ್ಷೇಪವಾಗಿ ಉತ್ತರಗಳನ್ನು ಬರೆಯುವದು ಅಸಾಧ್ಯ. ಒಂದೊಂದು ಸಲ ಒಂದೊಂದೇ ಪ್ರಶ್ನೆಯನ್ನು ಕೇಳಿ.

ವೇದಗಳು ನಿಜವೆಂಬುದನ್ನು ಸಿದ್ಧಾಂತಪಡಿಸಿ ಎಂದು ವೇದಾಂತಿಯನ್ನು ಕೇಳಿದರೆ ತನ್ನ ಯುಕ್ತಿಯನ್ನೆಲ್ಲಾ ತಿಳಿಸುವದಕ್ಕೆ ಕೆಲವು ಕಾಲವಾದರೂ ಬೇಕಾಗಿರುವದಲ್ಲವೇ ? ಅದೇ ಪ್ರಕಾರ ಕ್ರಿಸ್ತ

ಸ್ವಾಮಿಯ ಚರಿತ್ರೆಯನ್ನು ಕುರಿತ ಸಿದ್ಧಾಂತಕ್ಕೆ ಆವಶ್ಯವಾದ ಸಾಕ್ಷಿಗಳಲ್ಲಿ ಕೆಲವು ಹೀಬ್ರು ಗ್ರೀಕ್ ಭಾಷೆಗಳನ್ನು ತಿಳಿದಿರುವ ಪಂಡಿತರಿಂದ ಪರೀಕ್ಷಿಸಲ್ಪಡತಕ್ಕವುಗಳಾಗಿವೆ. ಮತ್ತು ಪುರಾತನ ಜನಾಂಗಗಳ ಚರಿತ್ರ ವ್ಯವಹಾರಕ್ಕೆ ಸಂಬಂಧಪಟ್ಟ ಪುರಾತನ ಶಾಸನಗಳನ್ನೂ ಬರವಣಿಗೆಗಳನ್ನೂ ನೋಡಿ ತಿಳಿಯತಕ್ಕವುಗಳಾಗಿವೆ. ಆದರೆ ಇವೆಲ್ಲಕ್ಕಿಂತ ದೊಡ್ಡದ ಒಂದು ದೃಷ್ಟಾಂತವು ಪಂಡಿತರಿಗೆ ಮಾತ್ರವಲ್ಲದೆ ಪಾಮರರಿಗೂ ಬಹು ಸುಲಭವಾಗಿ ತಿಳಿಯತಕ್ಕದ್ದಾಗಿದೆ. ಅದು ಯಾವದಂದರೆ, ಸತ್ಯವೇದವು ತಿಳಿಸುವ ಪ್ರಕಾರ ಯೇಸುಸ್ವಾಮಿಯ ಬಳಿಯಲ್ಲಿ ಪಾಪ ಪರಿಹಾರವು ದೊರಕುತ್ತದೆ. ಪಾಪ ಪರಿಹಾರದಿಂದ ಯಾವ ಮನಸ್ಸಮಾಧಾನವೂ, ಆನಂದವೂ, ಪಾಪವನ್ನು ಜಗಿಸುವ ಯಾವ ಶಕ್ತಿಯೂ ಬರುವವೆಂದು ಹೇಳಿದೆಯೋ ಅವುಗಳೆಲ್ಲಾ ಕ್ರೀಸ್ತ ಭಕ್ತನ ಅನುಭವಕ್ಕೆ ಬಂದಿರುವದು ನಿಜ. ಸತ್ಯವೇದದಲ್ಲಿ ಹೇಳಿರುವ ಕ್ರೀಸ್ತಸ್ವಾಮಿಯ ಈ ಚರಿತ್ರೆಯು ನಿಜವೆಂಬುವದಕ್ಕೆ ಇದಕ್ಕಿಂತ ದೊಡ್ಡ ಸಾಕ್ಷಿ ಬೇರೇನುಬೇಕು ?

ಯೇಸುಸ್ವಾಮಿಯು ದಿವ್ಯಪುರುಷನಾದರೂ ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ಒಪ್ಪಿಸಿಕೊಟ್ಟ ವಿಷಯದಲ್ಲಿ ತಾನೇ ಹೇಳಿರುವದನ್ನು ಇಲ್ಲಿ ಉದಾಹರಿಸಿದ್ದೇವೆ —

"ಮನುಷ್ಯ ಕುಮಾರನು (ಅಂದರೆ ತಾನೇ) ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವದಕ್ಕೆ ಬಂದನು.

"ಒಳ್ಳೇ ಕುರುಬನು ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ. . . . . . . . ನನ್ನ ಪ್ರಾಣವನ್ನು ಯಾರೂ ನನ್ನಿಂದ ತೆಗೆಯುವದಿಲ್ಲ, ನನ್ನಷ್ಟಕ್ಕೆ ನಾನೇ ಅದನ್ನು ಕೊಡುತ್ತೇನೆ." -ಎಡಿ.

✦✦✦✦✦✦✦✦✦

ಪ್ರ.—ಬಂಗಾಳಾ ಸಂಸ್ಥಾನದಲ್ಲಿ ಸೆಟ್ಲಮೆಂಟ್ ಆಗಿ ಇದೆಯೋ, ಇಲ್ಲವೋ? ಆಗಿಯವೆ ಆದರೆ ಯಾವಾಗ, ಮತ್ತು ಮದರಾಸು ಗವರ್ನಮೆಂಟಿನವರು ತಮ್ಮ ಸಂಸ್ಥಾನದಲ್ಲಿ ೩೦ ವರ್ಷಕ್ಕೊಮ್ಮೆ ಬದಲಾಯಿಸುವ ಅಧಿಕಾರವು ಇಟ್ಟುಕೊಂಡಿದ್ದಾರಲ್ಲ. ಅದೇ ರೀತಿಯಲ್ಲಿ ಬಂಗಾಳದಲ್ಲಿ ನಡೆಯುವದೋ, ಯಾ ಅಲ್ಲಿಯ ರೀತಿ ಬೇರೆಯೋ? ಸರ್ಕಾರದವರ ಸಂಗಡ ಆ ಸಂಸ್ಥಾನದ ಜನರು ಇನ್ನು ತೀರ್ವೆ ಹೆಚ್ಚಿಸಬಾರದಾಗಿ ಮುಂಚೆ ಮುಚ್ಚಳಿಕೆ ತೆಗೆದುಕೊಂಡಿರಾರಾಗಿ ಕರಾರುಪತ್ರ ಉಂಟು. ಇದಕ್ಕೆ ಆಧಾರವೇನೆಂಬುದು ಗೊತ್ತಿಲ್ಲ. ಅದ್ದರಿಂದ ಇದಕ್ಕೆ ಸರಿಯಾದ ಉತ್ತರವನ್ನು ದಯಪಾಲಿಸಿರಿ.

ಉ.—ಬಂಗಾಳ ಸೀಮೆಯಲ್ಲಿ ಈ ಸೆಟ್ಲಮೆಂಟು ೧೭೮೯ ರಿಂದ ೧೭೯೩ ವರೆಗೆ ಗವರ್ನರ್ ಜೆನರಲಾಗಿದ್ದ ಲಾರ್ಡ್ ಕಾರ್ನವಾಲಿಸನ ಕಾಲದಲ್ಲಿ ತೀರ್ಮಾನವಾಯಿತು. ಅದು ಅನಂತ್ಯ ತೀರ್ಮಾನವಾಗುವಂಥ ಪರ್ಮಾನಲ್ಲ. ಇಂಥ ಪರ್ಮಾನವೆಂಬುದಕ್ಕೆ ಯಾವ ಆಧಾರವೂ ಇಲ್ಲ.—ಎಡಿ.

✦✦✦✦✦✦✦✦✦

ಪ್ರ.—ಇಂಡಿಯಾ ದೇಶದ ಸಾಹುಕಾರರು ಬೆಳ್ಳಿನ ರೂಪಾಯಿಗಳು ತಮಗೆ ಅಗತ್ಯ ಬಿದ್ದ ಕಾಲದಲ್ಲಿ ಬೆಳ್ಳಿಯನ್ನು ಟಂಕಶಾಲೆಗಳಲ್ಲಿ ಕೊಂಡುಹೋಗಿ ಕೊಟ್ಟು ಅವಕ್ಕೆ ಬಾಕರೂರು ಇರುವ ಸೀಸು ಕೊಟ್ಟು ರೂಪಾಯಿಗಳು ಅಚ್ಚು ಹಾಕಿಸಿ ತರುತಿದ್ದರಂತೆ. ಈಗ ಆಗ ಅದನ್ನು ವಜಾ ಮಾಡಿ ಸರಕಾರದವರೇ ಅಚ್ಚು ಹಾಕಿಸಿಕೊಡುತ್ತಾರಂತೆ. ಇದು ನಿಜವೋ ?

ಉ.—ವ್ಯಾಪಾರಿಗಳು ಇಷ್ಟಬಂದ ಕಾಲದಲ್ಲಿ ರೂಪಾಯಿಗಳನ್ನು ಟಂಕಶಾಲೆಗಳಲ್ಲಿ ಅಚ್ಚು ಹಾಕಿಸಿಕೊಳ್ಳುವ ಪದ್ಧತಿಯು ತಪ್ಪಿಹೋಯಿತು. ಹೊಸ ರೂಪಾಯಿಗಳನ್ನು ಅಚ್ಚು ಹಾಕಿಸುವದು ಸರಕಾರದವರಿಗೆ ಅವಶ್ಯವೆಂದು ತೋರಿದರೆ ಅವರೇ ಮಾಡಿಕೊಳ್ಳುತ್ತಾರೆ. ಹೀಗೆ ಮಾಡದೆ ವ್ಯಾಪಾರಸ್ಥರ ಇಷ್ಟದ ಪ್ರಕಾರ ಮಾಡುತ್ತಾ ಬಂದರೆ ವ್ಯಾಪಾರಸ್ಥರ ಪ್ರೋತ್ಸಾಹದ ದೆಸೆಯಿಂದ ರೂಪಾಯಿಯ ಬೆಲೆಯು ತಗ್ಗುವದು.—ಎಡಿ.

✦✦✦✦✦✦✦✦✦

ಪ್ರ.—ವಿಲಾಯತಿ ರಾಜ್ಯದಲ್ಲಿ ನೋಟುಗಳ ಚಲಾವಣೆ ಉಂಟೋ ಇಲ್ಲವೋ?

ಉ.—ನಮ್ಮ ದೇಶದಲ್ಲಿರುವಂತೆ ವಿಲಾಯತಿಯಲ್ಲಿ ಗವರ್ನಮೆಂಟಿನವರ ನೋಟುಗಳ ಚಲಾವಣೆಯಿಲ್ಲ. ಆದರೆ ಬ್ಯಾಂಕ್ ಆಫ್ ಇಂಗ್ಲಾಂಡ್ ನೋಟ್ಸ್ ಎಂಬವುಗಳುಂಟು. ಇವು ವ್ಯಾಪಾರಸ್ಥರ ಹುಂಡೀ ಚೀಟುಗಳಂತಿರುವವು. ಅವು ಎಲ್ಲಾ ಕಡೆಯೂ ಸಲ್ಲುವವು. ಎಡಿ.

✦✦✦✦✦✦✦✦✦

ಪ್ರ.—ಗವರ್ನಮೆಂಟಿನವರಿಗೆ ಸಾಲ ಕೊಡುವವರು ಯಾ ಸರ್ಕಾರಿ ಬ್ಯಾಂಕಿನಲ್ಲಿ ಹಣ ಇಡುವವರು ಒಂದು ಲಕ್ಷ ರೂಪಾಯಿಗೆ ವಿಚಾರಿಸಿದರೆ ಅಂಥಾ ಹಣದ ಬಡ್ಡಿ ಮಾತ್ರ ವರ್ಷಂಪ್ರತಿ ತೆಗೆದುಕೊಳ್ಳಬೇಕಲ್ಲದೆ ಅಸಲು ಕೇಳಬೇಕೆಂದು ಆಗದಾಗಿ ಇರುತ್ತದಂತೆ. ಇದು ನಿಜವೋ ?

ಉ.—ಗವರ್ನಮೆಂಟಿನವರು ಸಾಲ ತಕ್ಕೊಳ್ಳುವಾಗ ಒಂದೊಂದು ವೇಳೆ ವಾಯಿದೆ ಕಟ್ಟಿ ತೆಗೆದುಕೊಳ್ಳುವದುಂಟು. ವಾಯಿದೆ ಇರಲಿ ಇಲ್ಲದೆ ಹೋಗಲಿ, ಸರ್ಕಾರದಲ್ಲಿ ಸಾಲ ಕೊಟ್ಟಿರುವ ಸಾವಕಾರನು ತನ್ನ ಷೇರುಗಳನ್ನು ಯಾರಿಗಾದರೂ ಮಾರಿ ತನ್ನ ಅಸಲನ್ನು ಪಡಕೊಳ್ಳಬಹುದು. ತನ್ನ ಹಣಕ್ಕೇನೂ ಮೋಸವಿಲ್ಲ. ಸರಕಾರದಿಂದ ಬರುವ ಬಡ್ಡಿ ಖಾತ್ರಿಯಿರುವದರಿಂದ ಯಾರಾದರೂ ತಮ್ಮ ಹಣವನ್ನು ಠೇವಣಿ ಇಡುವದಕ್ಕೆ ಸಂಕೋಚಪಡುವದಿಲ್ಲ.—ಎಡಿ.

✦✦✦✦✦✦✦✦✦

ಪ್ರ.—ದೇವರ ಅವತಾರಗಳಿಗೆ ಕರಚರಣಾದಿ ಅವಯವಗಳುಂಟೆಂದು ಶ್ರೀ ಶಂಕರಾಚಾರ್ಯರೂ ಶ್ರೀಮಧ್ವಾಚಾರ್ಯರೂ ಶ್ರೀ ರಾಮಾನುಜಾಚಾರ್ಯರೂ ಹೇಳುತ್ತಾರೆ. ದೇವರಿಗೆ ಸ್ವಭಾವತಃ ನಮ್ಮಂತೆ ಪಂಚಭೂತಾತ್ಮಕವಾದ ಹೇಯವಾದ ಶರೀರವಿರುತ್ತದೆಂದು ಈ ಮೂವರು ಆಚಾರ್ಯರೂ ಹೇಳುವದಿಲ್ಲ—ಯೇಸುಕ್ರೀಸ್ತರು ದೇವರ ಅವತಾರವೆಂತಲೂ ಅವರಿಗೆ ಎರಡು ಕೈಗಳಿದ್ದವೆಂತಲೂ ಒಬ್ಬ ತಾಯಿ ಇದ್ದಳೆಂತಲೂ ಕ್ರೀಸ್ತರು ಹೇಳುವದಿಲ್ಲವೆ ? ಸಾಕಾರರಾದ ಯೇಸು ಕ್ರೀಸ್ತರು ಎಲ್ಲಾ ಪ್ರಾಣಿಗಳ ಅಂತರ್ಯಾಮಿಯಾಗಿರುವದು ಹ್ಯಾಗೆ ? ಈ ಆಕ್ಷೇಪವಂತೆಯೇ ತಮ್ಮ ಆಕ್ಷೇಪವೂ ಇದೆಯಲ್ಲವೆ ? ಯಾವ ಉಪನಿಷತ್ತಿನ ಯಾವ ಭಾಗಕ್ಕೆ ಅರ್ಥ ಮಾಡಲು ಶ್ರೀಮಧ್ವಾಚಾರ್ಯರಿಗೆ ಸಾಧ್ಯವಾಗಿರುವದಿಲ್ಲ ? ಅಂಥ ಸಂದರ್ಭಗಳಲ್ಲಿ ಯಾವ ವಾಕ್ಯಗಳನ್ನು ಅವರು ಕಲ್ಪಿಸಿರುತ್ತಾರೆ ? ಶ್ರೀ ಶಂಕರಾಚಾರ್ಯರು ೧೦ ಕ್ಕಿಂತ ಹೆಚ್ಚು ಉಪನಿಷತ್ತುಗಳಿಗೆ ಭಾಷ್ಯ ಮಾಡಿರುತ್ತಾರೆ—ಅವರ ಕಾಲದಲ್ಲಿ ಹತ್ತೇ ಉಪನಿಷತ್ತುಗಳು ಇದ್ದವೆಂದು ಹೇಳುವ ಮಾತು ನಿಜವಾದದ್ದೇ ? ಈ ಉಪನಿಷತ್ತುಗಳು ಅಲ್ಲದೆ ಶ್ರೀಮಧ್ವಾಚಾರ್ಯರ ಕಾಲದಲ್ಲಿ ಉಂಟಾದ ೫೦ ಹೊಸ ಉಪನಿಷತ್ತುಗಳು ಯಾವವು ? ಅವು ಶ್ರೀಶಂಕರಾಚಾರ್ಯರ ಕಾಲದಲ್ಲಿರಲಿಲ್ಲವೆಂದು ಸ್ಥಾಪಿಸಿರಿ. ಈಗಿನ ಸ್ಥಿತಿಯಲ್ಲಿರತಕ್ಕ ಪುರಾಣಗಳ ವಿಷಯವಾಗಿ ಶ್ರೀಮಧ್ವಾಚಾರ್ಯರು ಪಡುವ ಅಭಿಪ್ರಾಯವು ತಾತ್ಪರ್ಯ ನಿರ್ಣಯಾದಿ ಅವರ ಗ್ರಂಥಗಳಲ್ಲಿ ಬರೆದಿರುತ್ತಾರೆ. ಅದನ್ನು ಓದಿ ತಿಳಿದುಕೊಳ್ಳದೆ ಆ ಮಹಾತ್ಮರನ್ನು ದೂಷಿಸುವದು ಅತ್ಯಂತ ಪಾಪಕೃತ್ಯವಾಗಿರುವದು.

ಜೆ. ವಿಜಯೀಂದ್ರರಾವ್.

ಉ.—ಸ್ಥಳ ಸಂಕೋಚದ ದೆಸೆಯಿಂದ ನಾವು ನಿಮ್ಮ ಪ್ರಶ್ನೆಗಳಿಗೆಲ್ಲಾ ಉತ್ತರವನ್ನು ಬರೆಯುವದಸಾಧ್ಯವಾಯಿತು. ನೀವು ಬರೆಯುವದಾದರೆ ಸಂಕ್ಷೇಪವಾಗಿಯೂ ಒಂದೊಂದುಸಲಕ್ಕೆ ಒಂದೊಂದು ವಿಷಯವನ್ನು ಮಾತ್ರ ಕೇಳಬೇಕೆಂದು ಕೋರುತ್ತೇವೆ.

ನಮ್ಮ ಪತ್ರಿಕೆಯಲ್ಲಿ ಕಂಡುಬಂದ ಆ ಖಾತ್ರಿಯ ಮೇಲೆ ನೀವು ಬರೆದು ಹೇಳಿರುವ ಆಕ್ಷೇಪಣೆಗಳಲ್ಲಿ ಕೆಲವು ನ್ಯಾಯವಾದವುಗಳೆಂಬುದರಲ್ಲಿ ಸಂಶಯವಿಲ್ಲ. ಶ್ರೀ ಶಂಕರಾಚಾರ್ಯರ ಕಾಲದಲ್ಲಾಗಲಿ ಶ್ರೀ ಮಧ್ವಾಚಾರ್ಯರ ಕಾಲದಲ್ಲಾಗಲಿ ಎಷ್ಟು ಉಪನಿಷತ್ತುಗಳಿದ್ದವೋ ಖಂಡಿತವಾಗಿ ಹೇಳುವದಕ್ಕೆ ಪಂಡಿತರಿಗೆ ಪ್ರಕೃತದಲ್ಲಿ ತಕ್ಕ ಆಧಾರಗಳು ಸಿಕ್ಕಿರುವದಿಲ್ಲ. ಈಗ ಇರುವ ಉಪನಿಷತ್ತುಗಳನ್ನು ಯಾರ್ಯಾರು ಯಾವ ಯಾವ ಕಾಲಗಳಲ್ಲಿ ಬರೆದರೆಂಬುದೂ ಈಗ ಖಂಡಿತವಾಗಿ ಹೇಳಲಾಗುವದಿಲ್ಲ. ಇವುಗಳಲ್ಲಿ ಕೆಲವು ಬಹು ಪುರಾತನವಾದವುಗಳೆಂಬುದಕ್ಕೆ ಸಂಶಯವಿಲ್ಲ. ಶ್ರೀ ಶಂಕರಾಚಾರ್ಯರು ೧೨ ಉಪನಿಷತ್ತುಗಳಿಗೆ ಭಾಷ್ಯಗಳನ್ನು ಬರೆದಿದ್ದರೂ ಬರೆದಿರಬಹುದು. ಉಪನಿಷತ್ತುಗಳಲ್ಲಿ ಅನೇಕ ಈಚೆಗೆ ಬರೆಯಲ್ಪಟ್ಟವುಗಳೆಂಬುದರಲ್ಲಿಯೂ ಸಂಶಯವಿಲ್ಲ. ನಮ್ಮ ಕಾಲದಲ್ಲಿ ತಿಳಿದುಬಂದಿರುವ ಮಟ್ಟಿಗೆ ಹೆಚ್ಚು ಕಡಮೆ ೨೦೦ ಉಪನಿಷತ್ತುಗಳು ಉಂಟು. ಶೈವ ವೈಷ್ಣವ ಮತವಾದಿಗಳು ಹುಟ್ಟಿಬಂದ ಕಾಲದಲ್ಲಿ ಆಯಾ ವಾದಿಗಳವರು ತಮ್ಮ ತಮ್ಮ ಮತತತ್ವಗಳಿಗೆ ಆಧಾರವಾಗಿ ಹೊಸ ಉಪನಿಷತ್ತುಗಳನ್ನು ಬರೆದರೆಂದು ತೋರುವದು. ಯಾರೋ ಒಬ್ಬ ಬ್ರಾಹ್ಮಣನು ಮಹಮ್ಮದೀಯ ಮತಸ್ಥನಾಗಿ ಅಲ್ಲಾ ಉಪನಿಷತ್ ಎಂಬದಾಗಿ ಒಂದು ಉಪನಿಷತ್ತನ್ನು ಬರೆದಿರುವನೆಂದೂ ಹೇಳುವರು.—ಎಡಿ.

## ಇಂಡಿಯಾ ದೇಶದ ವೃತ್ತಾಂತಗಳು.

ಮಧುರೆಜಿಲ್ಲೆಗೆ ಸೇರಿದ ಮಾನಾಮಧುರೆಯಲ್ಲಿ ವೈಗೇ ನದಿಗೆ ಅಡ್ಡಲಾಗಿ ಏತ್ತರವಿದ ಒಂದು ರಸ್ತೆ ಹಾಕಬೇಕೆಂದು ಮದರಾಸ್ ಸರ್ಕಾರದವರು ೧೪೦೦೦ ರೂ. ಗ್ರ್ಯಾಂಟ್ ಮಾಡಿದಾರೆ.

✦✦✦✦

ಹಿಂದುಸ್ಥಾನದಲ್ಲಿ ಇಂಗ್ಲಿಷ್ ಸೈನ್ಯವನ್ನಿಟ್ಟಿರುವ ಪ್ರತಿಒಂದು ರಾಜ್ಯಕ್ಕೂ ಚಕ್ರವರ್ತಿಯವರ ಒಂದೊಂದು ತಸ್ವೀರನ್ನು ವಿಲಾಯತಿಯಿಂದ ಕಳುಹಿಸಿಕೊಡುವದಾಗಿ ಹುಕುಂ ಬಂದಿದೆ.

✦✦✦✦

ಷಹಜಹಾನ್ಪುರದಲ್ಲಿ ಕಳೆದವಾರ ವಿಧವಾ ಪುನರ್ವಿವಾಹವೊಂದು ನಡೆಯಿತು. ಆರ್ಯ ಸಮಾಜದ ಮುಖಂಡರು ಸುಮಾರು ೩೦೦ ಮಂದಿಯು ತನಕ ಸೇರಿ ಈ ವಿವಾಹವನ್ನು ಬಹು ಉತ್ಸಾಹವಾಗಿ ನೆರವೇರಿಸಿದರು.

✦✦✦✦

ಸಿಂಧು ದೇಶದಲ್ಲಿರುವ ಹೈದರಾಬಾದಿನಿಂದ ಬಾಡ್ಮೇರ್ ಎಂಬ ಊರಿನ ವರೆಗೆ ಆರುಮೈಲಿ ದೂರ ರೈಲುರಸ್ತೆ ಹಾಕುವದಕ್ಕೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ೩೩ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

✦✦✦✦

ಡೆಹಲಿಯಿಂದ ಆಗ್ರಾಕ್ಕೆ ೯೦ ಮೈಲಿ ದೂರ ರೈಲ್ ರಸ್ತೆ ತಯಾರಾಗುತ್ತಿದೆ. ಇದು ಇನ್ನು ೨—೩ ತಿಂಗಳಲ್ಲಿ ಸಿದ್ಧವಾಗಬಹುದು. ಇನ್ನು ಮೇಲೆ ಈ ರೈಲಿನಿಂದ ೪ ಗಂಟೆ ಹೊತ್ತಿನಲ್ಲಿ ಡೆಹಲಿಯಿಂದ ಆಗ್ರಾಕ್ಕೆ ಹೋಗಿ ತಲುಪುವಂತಾಗುವದು.

✦✦✦✦

ಕಾಶೀಪಟ್ಟಣದಲ್ಲಿ ನರೇಂದ್ರನಾಥನೆಂಬುವನು ತೆರಿಗೆ ವಸೂಲ್ಮಾಡತಕ್ಕ ನೌಕರನೆಂದು ನಟಿಸಿ, ನಾಲ್ಕು ಪೈಸಿನ ವರ್ತಕರಿಂದ ಹಣವಾಯ ಎತ್ತಿದನು. ಸರ್ಕಾರದವರು ಅವನ ಮೋಸವನ್ನು ಕಂಡುಹಿಡಿದು, ಅವನಿಗೆ ೧೪ ತಿಂಗಳ ಕಠಿಣಸಜಾ ವಿಧಿಸಿರುತ್ತಾರೆ.

✦✦✦✦

ಮುಂಬಾಯಿ ಪಟ್ಟಣದ ಎಸ್ಪ್ಲನೇಡೆಂಬ ಮೈದಾನಿನಲ್ಲಿ ಪಾರ್ಸಿಯವರ ನಾಟಕಶಾಲೆಗೆ ಹಿಂದಿನವಾರ ಬೆಂಕಿಬಿದ್ದು, ಒಂದು ಗಂಟೆಯೊಳಗೆ ಚಪ್ಪರವೆಲ್ಲಾ ಅನಾಮತ್ತು ಉರಿದು ಬೂದಿಯಾಯಿತು. ಕಂಪನಿಯವರಿಗೆ ೫,೦೦೦ ರೂ. ನಷ್ಟವಾಗಿದೆ. ಬಹಳ ಸಾಹಸಪಟ್ಟು ಬೆಂಕಿಯನ್ನು ಆರಿಸದೆ ಹೋಗಿದ್ದರೆ ಸಮೀಪದಲ್ಲಿದ್ದ ಇನ್ನೆರಡು ಭಾರೀ ನಾಟಕಮಂದಿರಗಳು ನಿರ್ನಾಮವಾಗುತ್ತಿದ್ದವು.

ರೀವಾ ಸಂಸ್ಥಾನದ ಸೇನಾಪತಿಯಾದ ಲಾಲಾ ಬಾಲದೇವಸಿಂಹ ಯವರು ಹಿಂದಿನ ವಾರ ವಾಂತಿಭೇದಿ ಉಪದ್ರ ತಗಲಿ ಕಾಲವಾದರು. ಇವರು ತುಂಬಾ ವಿವೇಕಶಾಲಿಗಳಾಗಿಯೂ, ಚಿಕ್ಕವಯಸ್ಸಿನವರಾಗಿಯೂ ಇದ್ದಕಾರಣ ಸಕಲರೂ ಅವರ ಅಕಾಲ ಮರಣವನ್ನು ಕುರಿತು ಶೋಕಿಸುತ್ತಾರೆ.

✦✦✦✦

ಸಿಂಧು ದೇಶದ ದಕ್ಷಿಣಭಾಗದಲ್ಲಿ ಸಿಂಧುನದಿಯ ಮುಖದಬಳಿಯಣ ಗದ್ದೆಗಳಲ್ಲಿ ಭತ್ತದ ಬೆಳೆಯು ಒಂದು ಅಡಿ ಎದ್ದಿತ್ತು. ನದಿಯ ಅಲೆಗಳು ದಡದಮೇಲೆ ಹೊರಳಿ ಜಮೀನನ್ನೆಲ್ಲಾ ಮುಳಗಿಸಿದೆ. ಈ ಸಲ ಬೆಳೆಯು ತುಂಬಾ ಹುಲುಸಾದೀತೆಂದು ರೈತರು ಹರ್ಷಿಸುತ್ತಿದ್ದರು. ಅವರ ನಿರೀಕ್ಷೆಯು ಭಂಗವಾಯಿತು.

✦✦✦✦

ಕಲ್ಕತ್ತಾ ಪಟ್ಟಣದಲ್ಲಿ ಅಮರನಾಥಘೋಸ್ ಎಂಬೊಬ್ಬ ವಕೀಲನು ಗಾಡಿಯಲ್ಲಿ ತಿರುಗುವಾಗ್ಯೆ ರಸ್ತೆ ಸರಿಯಾಗಿಲ್ಲವಾದ್ದರಿಂದ ಕುದುರೆ ಎಡವಿ ಗಾಡಿ ಮುರಿದುಹೋಯಿತು ; ಕುದುರೆಗೆ ಪೆಟ್ಟುಬಿದ್ದು ಕುಂಟಾಯಿತು. ಅದ್ದರಿಂದ ತನಗೆ ೧,೨೦೦ ರೂ. ಲುಕ್ಸಾನ್ ಆಗಿದೆ ಎಂಬದಾಗಿ ಮ್ಯುನಿಸಿಪಾಲಿಟಿಯವರಮೇಲೆ ದಾವಾ ಮಾಡಿರುತ್ತಾನೆ.

✦✦✦✦

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಎಟ್ವಾ ನಗರದಲ್ಲಿ ಚಿನ್ನ ಕೆಲಸಮಾಡುವವರಿಗೂ ಬ್ರಾಹ್ಮಣರಿಗೂ ವೈಷಮ್ಯಗಳುಂಟಾಗಿ ಅವರು ಬ್ರಾಹ್ಮಣರನ್ನು ಹಿಂಸೆಮಾಡಿ ಒಬ್ಬಿಬ್ಬರನ್ನು ಕೊಂದುಹಾಕಿದರು. ೧೪ ಮಂದಿ ಅಪರಾಧಿಗಳ ಪೈಕಿ ೯ ಜನರನ್ನು ಮಾತ್ರ ಹಿಡಿದು ತನಿಖೆ ಮಾಡುತ್ತಿದಾರೆ ಈ ಮೊಕದ್ದಮೆಯು ಪ್ರಜೆಗಳಲ್ಲಿ ತುಂಬಾ ಗಲಭೆಯನ್ನುಂಟುಮಾಡಿದೆ.

✦✦✦✦

ಪಂಜಾಬ್ ಸರ್ಕಾರದವರು ಸ್ಕೂಲುಗಳನ್ನು ಮೇಲ್ವಿಚಾರಣೆ ಮಾಡುವದಕ್ಕೆ ಇನ್ನೂ ೨೦ ಮಂದಿ ಇನ್ಸ್ಪೆಕ್ಟರುಗಳನ್ನು ನೇಮಿಸುತ್ತಾರೆ. ಇವರ ಸಂಬಳ ೬೦ ರಿಂದ ೯೦ ರೂ. ವರೆಗೂ ಮತ್ತು ಕೆಲವು ಸಂದರ್ಭಗಳಲ್ಲಿ ೪೦೦ ರೂ. ವರೆಗೂ ಹೆಚ್ಚುವದು. ಲಾಹೋರ್ ವಿದ್ಯಾಸಂಘದಲ್ಲಿ ತೇರ್ಗಡೆ ಹೊಂದಿರುವ ದೇಶೀಯ ವಿದ್ಯಾವಂತರಿಗೇ ಈ ನೌಕರಿ ಕೊಡುತ್ತಾರೆಂದು ತಿಳಿದು ಬಂದಿದೆ.

✦✦✦✦

ಜ್ವರದ ಪುಡಿಯನ್ನು (ಕ್ವಿನೈನ್) ೩ ಕಾಸಿಗೆ ಒಂದು ಪೊಟ್ಲಣದಂತೆ ಸರ್ಕಾರದವರು ಎಲ್ಲೆಲ್ಲೂ ಬಿಕರಿ ಮಾಡಿಸುತ್ತಿದಾರಷ್ಟೆ. ಬೊಂಬಾಯಿ ಅಧಿಪತ್ಯದಲ್ಲಿ ಗ್ರಾಮಾಂತರಗಳ ಜನರು ಇದನ್ನು ವಿಶೇಷವಾಗಿ ಉಪಯೋಗಿಸಿ ಅದರಿಂದ ಪ್ರಯೋಜನ ಹೊಂದಲೆಂಬ ಅಭಿಪ್ರಾಯದಿಂದ ಆ ಗೌವರ್ನಮೆಂಟಿನವರು ೨ ಕಾಸಿಗೆ ಒಂದು ಪೊಟ್ಲಣದಂತೆ ಜನರಿಗೆ ಬಿಕರಿ ಮಾಡತಕ್ಕದ್ದೆಂದು ಇಸ್ತಿಹಾರು ಕೊಟ್ಟಿದಾರೆ.

✦✦✦✦

ಹಿಂದುಸ್ಥಾನದಿಂದ ಸೋಮಾಲಿಲಾಂಡಿನ ಯುದ್ಧ ಭೂಮಿಗೆ ಜನರಲ್ ಎಗರ್ಟನ್ ಯವರು ಸೈನ್ಯಾಧಿಪತಿಗಳಾಗಿ ಹೋಗುವರು. ಮತ್ತು ಇಲ್ಲಿಂದ ಸಾವಿರಾರುಮಂದಿ ದಾವತರು, ಕಾಲ್ದಳ, ಸಾವಿರಾರು ಒಂಟೆಗಳು, ಎರಡು ತಿಂಗಳ ಸಾಮಗ್ರಿ, ಇವೇ ಮೊದಲಾದವೆಲ್ಲಾ ಅಲ್ಲಿಗೆ ಹೋಗುವವು. ಸೋಮಾಲಿಲಾಂಡಿನಲ್ಲಿ ಶತ್ರುವಾದ ಮುಲ್ಲಾ ಎಂಬ ಮುಖಂಡನು ಸ್ವಲ್ಪ ದೂರಹೋಗಿರುವಂತೆ ಸಮಾಚಾರ ಬಂದಿರುವದು.

✦✦✦✦

ರಂಗೂನ್ ನಗರದಲ್ಲಿ ೧೩ ಮಂದಿ ಬ್ಯಾರಿಸ್ಟರುಗಳು, ಅಡ್ವೊಕೇಟರು, ಪ್ಲೀಡರುಗಳು ಸೇರಿ ಅಲ್ಲಿನ ಸ್ಮಾಲ್ಕಾಸ್ ಕೋರ್ಟಿನ ಅಡಿಷನಲ್ ಜಡ್ಜರಮೇಲೆ ಕೆಲವು ಆಕ್ಷೇಪಣೆಗಳನ್ನು ಮಾಡಿದರು. ಇಂಥಾ ತಪ್ಪಿತವನ್ನು ಮಾಡಿರುತ್ತಾರೆಂದು ನಿರ್ಧರಿಸಿ ಹೇಳಲಿಲ್ಲ. ಆ ಕಾರಣ ಅವರನ್ನೆಲ್ಲಾ ವಕೀಲರ ಕೆಲಸದಿಂದ ತೆಗೆದು ಹಾಕಬೇಕೆಂದು ಒಂದು ಮೊಕದ್ದಮೆ ಆಗಿದೆ. ಈ ಮೊಕದ್ದಮೆಯನ್ನು ಅಲ್ಲಿನ ಚೀಫ್ಕೋರ್ಟ್ ಜಡ್ಜಿಗಳು ಈ ತಿಂಗಳಲ್ಲಿ ತನಿಖೆ ಮಾಡುವವರಾಗಿದಾರೆ.

✦✦✦✦

ಗೋಂಡಾಲ್ ಎಂಬ ಸಣ್ಣ ಸಂಸ್ಥಾನದಲ್ಲಿ ಕ್ಷಾಮ ಪ್ರಾಪ್ತವಾಗುವದಕ್ಕೆ ಮೊದಲು ಎರಡು ಲಕ್ಷ ಗೋವುಗಳಿದ್ದವು. ಕಳೆದ ಮಾರ್ಚಿ ಆಖೈರಿನಲ್ಲಿ ಅವುಗಳ ಸಂಖ್ಯೆ ೪೩,೩೦೦ ಕ್ಕೆ ಇಳಿಯಿತು. ಕ್ಷಾಮಕಾಲದಲ್ಲಿ ಮೇವೂ ನೀರೂ ಇಲ್ಲದೆ ಲಯವಾಗಿಹೋದವು. ಇದಲ್ಲದೆ ರೈತಾಪಿಜನರು ಕ್ಷಾಮಕಾಲದಲ್ಲಿ ತುಂಬಾ ನೊಂದು ನಾನಾ ಕಷ್ಟಗಳಿಗೆ ಗುರಿಯಾದರು. ಈಗ ೨೭,೫೭,೯೪೭ ರೂಪಾಯಿ ಹಣದ ಕಂದಾಯ ಕೌಲಗಳು ವಸೂಲಾಗದೆ ಬಾಕಿನಿಂತಿವೆ. ಇದನ್ನೆಲ್ಲಾ ನೋಡಲಾಗಿ ಆ ಸಂಸ್ಥಾನದ ಸ್ಥಿತಿಯು ತುಂಬಾ ಶೋಚನೀಯವಾಗಿದೆ ಎಂದು ತಿಳಿಯುವದು.

✦✦✦✦

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಅಮೃತಸರದಲ್ಲಿ ಮಹಾರಾಜಾ ಸರ್ ಪ್ರತಾಪ್ ಸಿಂಗ್ (?) ಸಾಹೆಬ್ ಬಹದೂರ್ ಕೆ. ಸಿ. ಎಸ್. ಇ. ಯವರು ಪ್ಲೇಗ್ ಉಪದ್ರಕ್ಕೆ ಬಹಳ ಒಳ್ಳೇ ಔಷಧವನ್ನು ಕಂಡುಹಿಡಿದಿದಾರೆಂತಲೂ, ಅದರಿಂದ ನೂರಾರು ಮಂದಿ ರೋಗಿಗಳಿಗೆ ಗುಣವಾಗಿದೆ ಎಂತಲೂ, ಬೇಕಾದವರಿಗೆಲ್ಲಾ ಆ ಔಷಧವನ್ನು ಅವರು ಧರ್ಮಾರ್ಥಕ್ಕೆ ಕಳುಹಿಸಿಕೊಡುತ್ತಾರೆಂತಲೂ ಅಲ್ಲಿನ ಪತ್ರಿಕೆಯು ಹೇಳುವದು. ಅದಲ್ಲದೆ ಪ್ಲೇಗ್ ಉಪದ್ರವಿರುವಾಗ ಜನರು ಶುಂಠಿ ಕಾಯಿ ವಿಶೇಷವಾಗಿ ತಿನ್ನುತ್ತಾ ಬಾರೋಬಾಮುಕ ಹವಳದ ಮಣಿಗಳನ್ನು ಕತ್ತಿಗೆ ಕಟ್ಟಿಕೊಂಡು, ರುದ್ರಾಕ್ಷಿಯನ್ನು ನೀರಿನಲ್ಲಿ ತೇಯ್ದು ದಿನಾ ಕುಡಿಯುತ್ತಾ ಇದ್ದರೆ ಪ್ಲೇಗ್ ತಗಲುವದಿಲ್ಲವೆಂದು ಅವರು ಹೇಳುತ್ತಾರೆ.

ಅಹಮುದಾಬಾದ್ ಜಿಲ್ಲೆಗೆ ಸೇರಿದ ಧಾಂಧೂಕಾ ಎಂಬ ಊರಿನ ಲ್ಲಿ ನಾಲ್ಕು ಸಿಂಗಾಗಾಡಿಗಳಿಗೆ ಕಳ್ಳರು ಬಿದ್ದು ಲೂಟಿಮಾಡಿ, ಸು ಮಾರು ೫,೦೦೦ ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿದರು. ಅಹಮದಾಬಾದಿನಿಂದ ೩೦ ಮಂದಿ ಪೋಲೀಸಿನವರು ಅಲ್ಲಿಗೆ ಹೋಗಿ ಕಳ್ಳರನ್ನು ಹುಡುಕುವಾಗ್ಯೆ ಆಯುಧಪಾಣಿಗಳಾದ ಏಳು ಮಂದಿ ಸಂಜೆಹೊತ್ತಿನಲ್ಲಿ ಕಾಣಿಸಿಕೊಂಡರು. ಕಳ್ಳರಿಗೂ ಅವರಿಗೂ ಘೋ ರ ಹೊಡೆದಾಟವಾಯಿತು. ಪೋಲೀಸಿನವರಲ್ಲಿ ಮೂವರು ಕೊಲ್ಲಲ್ಪ ಟ್ಟರು; ೪ ಮಂದಿಗೆ ಗಾಯಗಳಾದವು. ಕಳ್ಳರ ಪೈಕಿ ೬ ಮಂದಿ ಏ ಟುತಿಂದು ಬಿದ್ದುಕೊಂಡರು. ಒಬ್ಬನು ಸಿಕ್ಕಿಬಿದ್ದನು.

****

ಬೆಲ್ಗಾಮಜಿಲ್ಹಕ್ಕೆ ಸೇರಿದ ಸಂಪಗಾಂವನ ಪಟ್ಟಣದ ಮಾಮ್ಲ ತ್‍ದಾರ ಹನುಮಂತವಾಸುದೇವಮುಲಗುಂದ ಎಂಬಾತನು ಒಂದು ಮೊಕದ್ದಮೆಯಲ್ಲಿ ೫೦೦ ರೂಪಾಯಿಯೂ, ಅವನ ಗುಮಾಸ್ತೆ ಗು ರುನಾಥದೇಸಾಯಿ ಮನೋಲಿ ಎಂಬವನು ೧೫೦ ರೂಪಾಯಿಯೂ ಲಂಚತಿಂದರೆಂದು ಫಿರ್ಯಾದಾಯಿತು. ಅವರಿಬ್ಬರಮೇಲೂ ಅಪ ರಾಧ ರುಜುವಾತಾದ್ದರಿಂದ ಮಾಮ್ಲತ್‍ದಾರನಿಗೆ ೬ ತಿಂಗಳ ಶಿಕ್ಷೆ ಸಹ ೩೦೦ ರೂ. ದುಲ್ಮಾನೆಯೂ, ಆ ಗುಮಾಸ್ತನಿಗೆ ೪ ತಿಂಗಳ ಶಿ ಕ್ಷೆಸಹ ೨೦೦ ರೂ. ದುಲ್ಮಾನೆಯೂ ಆಯಿತು. ಈಚೆಗೆ ಇವರು ಅಪೀಲ್‍ಮಾಡಿಕೊಂಡದ್ದರಿಂದ ಸೆಷನ್ಸ್ ಜಡ್ಜರು ಶಿಕ್ಷೆಯನ್ನು ಮಜಾಮಾಡಿದರು.

****

ಮೊದಲು ನೇಪಾಳ ಸಂಸ್ಥಾನದಲ್ಲಿ ಮಂತ್ರಿಯೂ ಸೈನ್ಯಾಧಿ ಪತಿಯೂ ಆಗಿದ್ದ ದೇವಶಂಶೇರ್ ಜಂಗ್ ಎಂಬಾತನನ್ನು ಆ ಸಂ ಸ್ಥಾನದ ದೊರೆಯು ಗಡೀಪಾರು ಮಾಡಿರುವದೂ, ಆತ ಈಗ ಕಾಶೀ ನಗರದಲ್ಲಿ ವಾಸ ಮಾಡಿಕೊಂಡಿರುವದೂ ಗೊತ್ತಾಗಿದೆಯಷ್ಟೆ. ಈ ತನು ಈಗಿನ ಮಂತ್ರಿಯಾದ ಚಂದ್ರಶಂಶೇರ್ ಜಂಗನನ್ನು ಕೊಂ ದು ಹಾಕಬೇಕೆಂದು ಪ್ರಯತ್ನ ಪಟ್ಟನಂತೆ, ಇದಕ್ಕಾಗಿ ಒಂದು ಕಿತಾಬಿ ನಡೆದಿರುವಹಾಗೂ, ಜಸ್ಟಿಸ್‍ರೇನೋಲ್ಡ್ಸ ಗೂಢಾಚಾರನು ಕಳೆದ ಜನವರಿಯಲ್ಲಿ ಕಾಶೀ(ಪಟ್ಟಣದ ಪೋಲೀಸಿನವರಿಗೆ ತಿಳಿಸಿ, ಒಂದು ದೊಡ್ಡ ಮೊಕದ್ದಮೆಮಾಡಿ, ವಿಚಾರಣೆ ನಡೆಯುತ್ತಿತ್ತು. ಈ ಮೊಕದ್ದಮೆ ಕಳೆದ ವಾರ ಪೂರೈಸಿತು. ಮಿ ಪಟ್ಟರ್ಸನ್ ಎಂ ಬ ಮ್ಯಾಜಿಸ್ಟ್ರೇಟರು ಮೊಕದ್ದಮೆಯಲ್ಲಿ ರುಜುವಾತಿಲ್ಲವೆಂದು ಕೇಸು ವಜಾಮಾಡಿರುತ್ತಾರೆ

****

ಇಂಗ್ಲೆಂಡದಲ್ಲಿ ಕ್ರಿಕೆಟ್ ಎಂಬ ಚಂಡಾಟವಾಡುವವರಲ್ಲಿ ಪಾರ್ಸಿ, ಹಿಂದು, ಮಹಮದೀಯರಲ್ಲಿ ಚತುರರಾಗಿರುವ ೧೫-೨೦ ಮಂದಿಯನ್ನು ವಿಲಾಯತಿ ಮುಂತಾದ ಕಡೆಗಳಿಗೆ ಕಳುಹಿಸಿ, ಅಲ್ಲಿ ನವರ ಸಂಗಡ ಪಂದ್ಯ (ಮ್ಯಾಚ್) ಆಡುವದಕ್ಕೋಸ್ಕರ ಏರ್ಪಾಡು ಮಾಡುತ್ತಿದ್ದಾರಷ್ಟೆ. ಇವರಿಗೆ ಪ್ರಯಾಣ ಮುಂತಾದ್ದರ ಖರ್ಚಿಗೆ ಬೇ ಕಾಗುವ ಹಣವನ್ನು ಚಂದಾ ಎತ್ತುತ್ತಿದ್ದಾರೆ. ಈ ಫಂಡಿಗೆ ಕಛ್ ಭೂಜದ ಮಹಾರಾಜರು ೫೦೦ ರೂ., ಅಗಾಖಾನರು ೪,೫೦೦ ರೂ., ಬಿಕ್ಯಾನಿಯರ್ ಮಹಾರಾಜರು ೧,೦೦೦ ರೂ, ನ್ಯಾಸ್ರಾ ದ ಮಹಾರಾಜರು ೫೦೦ ರೂ., ಬೊಂಬಾಯಿ ಗವರ್ನರ್ ಲಾರ್ಡ್ ನಾರ್ತ್‍ಕೋಟ್ ಯವರು ೧೫೦ ರೂ. ಈ ಪ್ರಕಾರ ಚಂದಾ ಕೊ ಟ್ಟಿದ್ದಾರೆ. ಇದಲ್ಲದೆ ಮಿ ಪಟಿಟ್, ಮಿ ಟಾಟಾ, ಮಿ ಜಹಂಗೀರು ಪಟೀಲ್ ಎಂಬೀ ಪಾರ್ಸಿ ದೊಡ್ಡಮನುಷ್ಯರಿಂದ ೩-೪ ಸಾವಿರ ರೂಪಾಯಿ ಸಿಕ್ಕಬಹುದೆಂದು ತಿಳಿಯಬಂದಿದೆ.

****

ಬೊಂಬಾಯಿನಲ್ಲಿರುವ ಮಿ ಲಲ್ಲುಭಾಯಿ ಸಮಲದಾಸ್ ಎಂ ಬ ಒಬ್ಬ ದೊಡ್ಡಮನುಷ್ಯನು ಒಂದುಸ್ಥಾನದಲ್ಲಿ ಪ್ರಾಚೀನ ಗ್ರಾಮಾ ಧಿಕಾರಿಗಳ ಏರ್ಪಾಡನ್ನು ಈಗಲೂ ಸರ್ಕಾರದವರು ಸ್ಥಾಪಿಸುವದ ರಿಂದ ತುಂಬಾ ಅನುಕೂಲವಾಗಿರುವದೆಂದು ಬರೆದಿದ್ದಾನೆ. ಪ್ರತಿ ಗ್ರಾಮದಲ್ಲೂ ಕೆಲವು ಮುಖಂಡರನ್ನು ಆರಿಸಿ, ಅವರಿಗೆ ಮುಂದೆ ಹೇಳುವ ಅಧಿಕಾರಗಳನ್ನು ಕೊಟ್ಟರೆ ಪ್ರಜೆಗಳಿಗೆ ಬ ಹಳ ಉಪಕಾರವಾದೀತು. ಅವು ಯಾವುವೆಂದರೆ—ಸಣ್ಣಸಣ್ಣ ಸಿವಿಲ್ ವ್ಯಾಜ್ಯಗಳನ್ನು ಫೈಸಲ್ ಮಾಡುವದು, ಕೆಲವು ಕಲಹಗಳನ್ನು ರಿ ಜಿಸ್ಟರ್ ಮಾಡುವದು, ತಕ್ರಾರುಗಳ ವಿಚಾರಣೆ ಮತ್ತು ಪೋಲೀಸಿನ ವರ ಮೇಲೆ ತನಿಖೆಮಾಡುವದು, ಗ್ರಾಮಗಳ ಆರೋಗ್ಯವಿಚಾರವ ನ್ನು ನೋಡಿಕೊಳ್ಳುವದು ಗ್ರಾಮದಲ್ಲಿರುವ ಆಸ್ತಿಗಳನ್ನು ಸಂರ ಕ್ಷಣೆಮಾಡುವದು, ನೀರಾವರಿ ವಿಚಾರ, ಸ್ಥಾನಿಕವಾದಯೋಗ್ಯ ರೀತಿ ಯ ಕೆಲಸಗಳನ್ನು ಮಾಡಿಸುವದು, ಜನಿಸಿದವರ ಮತ್ತು ಗ್ರಾಮಗಳ ಆದಾಯ, ಕಟ್ಟಡಗಳನ್ನು ನೋಡಿಕೊಳ್ಳುವದು, ವ್ಯಾಪಾ ರಗಳು ಕೆಡದಹಾಗೆ ಉಸ್ತುವಾರಿ ಮಾಡುವದು, ಗ್ರಾಮದ ಲ್ಲಿ ಅಡುಗಳ ಅಂಗಡಿ ಇಡಬಹುದೇ ಕೂಡದೇ ಎಂಬುದನ್ನು ಗೊ ತ್ತುಮಾಡುವದು, ಗ್ರಾಮದಲ್ಲಿ ನಡೆಯುವ ವಿದ್ಯಮಾನಗಳನ್ನು ಡಿ ಸ್ಟ್ರಿಕ್ಟ್ ಅಧಿಕಾರಿಗಳಿಗೆ ಆಗಾಗ್ಗೆ ತಿಳಿಸುತ್ತಾ ಇರುವದು. ಇತ್ತಲಾ ಗಿ ಮದರಾಸ್ ಅಧಿಪತ್ಯದಲ್ಲಿ ಗ್ರಾಮ ಮುನಸೀಫರೂ, ಪಂಚಾಯ ತರೂ ಇರುತ್ತಾರೆ. ಇವರು ಹೋದವರುಷ ೯೯,೫೫೬ ಸಿವಿಲ್ ವ್ಯಾಜ್ಯಗಳನ್ನು ಫೈಸಲ್ ಮಾಡಿರುವರು. ಮತ್ತು ೧೦,೩೩೫ ಚಿಲ್ಲ ರೆ ಕ್ರಿಮಿನಲ್ ಮೊಕದ್ದಮೆಗಳನ್ನು ತನಿಖೆಮಾಡಿ, ೩,೬೦೦ ಮಂದಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಿದ್ದಾರೆ. ಈ ಪೈಕಿ ೪,೬೬೩ ಮಂದಿ ಅಪ ರಾಧಿಗಳಿಗೆ ಸಜಾ ವಿಧಿಸಿರುವರು.

## ತಾಲೋಕು ವರ್ತಮಾನಗಳು.

ಚನ್ನಪಟ್ಟಣ:—ಒಬ್ಬ ದೊರೆಯು ಬಂದು ಜನರ ಹೆಸರುಗಳನ್ನು ಬರೆಯುವದನ್ನು ಜನರು ತಿಳಿದು ಗಾಬರಿಪಟ್ಟದ್ದನ್ನು ಎಷ್ಟು ಹೇಳ ಲೂ ತೀರದು. ಗ್ರಾಮಗಳಲ್ಲಿದ್ದ ಗಂಡಸರು ಹಗಲಲ್ಲಿ ಕಾಡಿನ ಕಣಿಗಳಲ್ಲಿ ಅಡಗಿಕೊಂಡಿದ್ದು, ರಾತ್ರಿ ಮನೆಗೆ ಬರುತ್ತಿದ್ದರು. ಯಾರಾಗ್ಯರು ಬಟ್ಟೆಗಳನ್ನು ಜೋರಾಗಿ ಹಾಕಿಕೊಂಡು ಹಳ್ಳಿಗೆ ಹೋದರೆ, ಹೊಲ ಉಳುತ್ತಾ ಇದ್ದವರು ಹಾಗೆಯೇ ಬಿಟ್ಟು ಓಡುತ್ತಿ ದ್ದರು. ತಿಮ್ಮಸಂದ್ರದ ಒಬ್ಬ ಪ್ರಾಯದ ಕೋರನು ಕಾಡಿಗೆ ಹೋಗಿ ಹಳ್ಳದಲ್ಲಿ ಇದ್ದನು. ದನಕಾಯುವವನು ಹಿಡಿಯುವವರು ಬಂದರು ಎಂದು ಕೂಗಿದ್ದನ್ನು ಕೋರನು ಕೇಳಿ ಗಾಬರಿಬಿದ್ದು ಮನೆಗೆ ಓಡಿದನು. ಭಯದಿಂದ ಎದೆಗುಂದಿಗೆ ಬಿದ್ದು, ಕೂಗಿಕೊ ಳ್ಳುತ್ತಾ ಇದ್ದು ಸತ್ತುಹೋದನಂತೆ! ಆ ದೊರೆಯು ಮಂಡ್ಯಕ್ಕೆ ಬಂದರು.—ತಾ ೧೫ ರಲ್ಲಿ ೨!! ಮೈಲಿ ದೂರದ ಬ್ರಹ್ಮಪಟ್ಟಣ ದಲ್ಲಿ ಒಕ್ಕಲಿಗರ ೨೩ ಪ್ರಾಯದ ಚನ್ನಿ ಎಂಬವಳು ತನ್ನ ೧೧ ವ ರ್ಷದ ಗಂಡುಮಗುವನ್ನು ಗಲ್ಲಿಗೆ ಗೊಟಾಕಿ ತಾನುಸಹ ನೇಣುಹಾಕಿ ಕೊಂಡು ಸತ್ತಳು. ಇಲ್ಲಿ ನಮ್ಮ ಡಾಕ್ಟರವರು ಪರೀಕ್ಷೆ ಮಾಡಿದ ರು. ಈ ಜನರು ಇಬ್ಬರು ಮೂವರು ಹೆಂಗಸರನ್ನು ಮದುವೆಯಾ ಗುವದರ ಫಲವು ಇದರಿಂದ ಕಾಣುತ್ತದೆ. ಗಿಲಿಟ್ ಪರ್ವತಾಸನ್ನು ಕೂರಿಸಿದ ಮರಾಟಿ ಕಮ್ಮಾರನು ಎಂಬವನಿಗೆ ೯ ವರ್ಷ ಸಜಾ, ೧೦ ರೂ. ದುಲ್ಮಾನೆಯಾಯಿತು.

ಆನೇಕಲ್ಲು.—ಈ ಟವ್ನ ಸುಮಾರು ೩,೫೦೦ ಪ್ರಜೆಗಳು ಇರು ವ ಸ್ಥಳವಾಗಿದೆ. ಇಂಥಾ ಟವ್ನನಲ್ಲಿ ಆಗ್ಗೆ ೫ ವರುಷಗಳಿಂದ ಪ್ಲೇಗು ತಿಸಲುಪ್ಲೇಗ್ ಸಂಭವಿಸುತ್ತಲೇ ಇರುತ್ತದೆ. ಇದಕ್ಕೆ ಕಾರಣಗ ಳು ಅನೇಕವಾಗಿದ್ದಾಗ್ಯೂ ಕೊಂಚ ಆಸುಪಾಸಕ್ಕೆ ಬಂದಿರುವದೇ ನೆಂದರೆ ಸರ್ಕಾರಿ ಉದ್ಯೋಗಸ್ಥರೂ ಬ್ರಾಹ್ಮಣರೂ ಇರುವ ಸಂದು ಗೊಂದುಗಳಲ್ಲಿ ರಸ್ತೆಗಳು ಕೊಂಚ ಸಾಫಾಗಿ ಗಲ್ಲಿಗಳಲ್ಲಿ ನೀ ರು ಕಲ್ಮಷಗಳು ಕಮ್ಮಿಯಾಗಿವೆ. ಮಿಕ್ಕ ಸಂದುಗೊಂದುಗಳಲ್ಲಿ ನೋಡಲು ಅಸಹ್ಯವಾಗಿರುವದಲ್ಲದೆ ದುರ್ವಾಸನೆಯಿಂದ ತುಂಬಿದೆ. ಮ್ಯುನಿಸಿಪಲ್ ಪ್ರತಿನಿಧಿಗಳೂ ಅವರ ತನಿಖೆದಾರರೂ ದೊಡ್ಡ ದೊಡ್ಡ ರಸ್ತೆಗಳಲ್ಲಿ ಕೆಲಸ ಮಾಡುವದೇ ಹೊರ್ತು ಮಿಕ್ಕ ಸಂದು ಗೊಂದುಗಳಲ್ಲಿ ಅವರ ಗುರುತು ತಿಳಿದವರೇ ಇಲ್ಲ.—ಒಂದು ವಿ ಷ ಸಕ್ಕರೆಗೆ ಪಕ್ಕದಮನೆ ಇರುವ ಗಣಿಗರ ಬೀದಿಯಲ್ಲಿಯೂ ಗಾಣಗಳು ಹಾಕಿರುವ ಸಂದು ಓಣಿ ಕೆಲವು ದೇವಾಂಗದ ಬೀದಿ ಯ ಮೇಲೆ ಹೊರಟು ಆಚೆ ಗಾಣಗಳ ಪಡಿಗೂ ನೋಡಿದರೆ ಮನು ಕ್ಕೆ ಬರಲಾರದಾಗಿಯೂ ಚರಂಡಿಗಳು ದುರ್ವಾಸನೆಯಿಂದ ಕೂ ಡಿದ ಮಾಯಾಜಾಲ ಗುಂಡಿಯೂ ಇರುವದರಿಂದ ಪ್ರತಿ ಸಂವತ್ಸರವು ಆ ಸ್ಥಳ ಪ್ಲೇಗಿಗೆ ಜನ್ಮಭೂಮಿಯಾಗಿ, ಪ್ರತಿ ವರುಷವು ಪ್ಲೇಗ್ ಅಲ್ಲೇ ಪ್ರಾರಂಭವಾಗುತ್ತೆ. ಇಂಥಾ ಅನಿವಾರ್ಯಗಳು ಮ್ಯುನಿಸಿ ಪಲಿಟಿಯವರು ಗಮನಕ್ಕೆ ತಂದುಕೊಳ್ಳಬೇಕಲ್ಲದೆ ಆಮಲ್‍ದಾರು ಸಾಹೇಬರು ಅಂಥಾ ಸ್ಥಳಗಳನ್ನೆಲ್ಲಾ ಆಗಾಗ್ಗೆ ದಯಮಾಡುತ್ತಾ ಬಂ ದರೆ ಅಂಥಾ ಅನಿವಾರ್ಯಗಳು ತಪ್ಪಿ ಪ್ರಜೆಗಳಿಗೆ ಅನುಕೂಲವಾದೀ ತೆಂದು ಪ್ರಾರ್ಥನೆ.—ಈ ತಿಂಗಳಲ್ಲಿ ಸ್ಟಾಂಪ್ ವೆಂಡರ್ ವೆಂಕಟಗಿರಿಯವನು ಪೈಪೋಟಿ ಬೇಡ. ತು ಛಾಪಾ ಕಾಗ ದಗಳೂ ಪತ್ರವ್ಯವಹಾರ ಪುಸ್ತಕಗಳೂ ಚೆನ್ನಾಗಿ ಮಾಡುತ್ತಾನೆ. ಜರೂರಾಗಿ ಛಾಪಾ ಕಾಗದ ಸ್ಟಾಂಪು ಬೇಕಿದ್ದ ಕಾ ರ್ಯ ಕಳುಹಿಸಿ ಹೋದರೆ ಬೀಗ ಬರುವಾಗ ಪರ್ಚನ ದೊರೆಯುವದೇ ಹೊರ್ತು ಸಮಯಕ್ಕೆ ದೊರೆಯುವದು ದುರ್ಲಭ. ವರ್ತಕರೂ ವಕೀಲರೂ ಇನ್ನೂ ಕೆಲವರು ರಿಜಿಸ್ಟರ್ ಮಾಡಿ ಯಾದ್ರೂ ಜರೂರಾಗಿ ಮಾಡಿಕೊಂಡು ಹೋಗಬೇಕಾದರೆ ಮಹಾ ಭಾಗ್ಯ. ಕೋರ್ಟು ಇಲಾಖೆಯವರು ಇಂಥಾ ಅನಿವಾರ್ಯಗಳನ್ನು ತಪ್ಪಿಸಿ ಪ್ರಜೆಗಳಿಗೆ ಅನುಕೂಲ ಮಾಡುವರೆಂದು ನಿರೀಕ್ಷಿಸುತ್ತೇವೆ.

ಮೈಸೂರು.—ಮೊದಲು ಪ್ಲೇಗಿನ ಸ್ಥಿತಿ ಶಾಂತವಾಗಿದ್ದಿತ್ತು. ಬರಬರುತ್ತಾ ಜೋರಾಗುತ್ತಲಿದೆ. ಪ್ರಥಮದಲ್ಲಿ ೧-೨ ಪ್ರಕಾರ ಮರಣಗಳಾಗುತ್ತಲಿದ್ದವು. ಜುಲೈ ೧ ರ ಲಾಗಾಯತು ಮರಣಗ ಳು ಜಾಸ್ತಿಯಾಗುತ್ತಲಿವೆ. ೭ ರಲ್ಲಿ ೩, ೧೨ ರಲ್ಲಿ ೪, ೧೩ ರಲ್ಲಿ ೩, ೧೪ ರಲ್ಲಿ ೫, ೧೫ ರಲ್ಲಿ ೪, ೧೬ ರಲ್ಲಿ ೩, ೧೭ ರಲ್ಲಿ — ಈ ಪ್ರಕಾರ ಜನಗಳು ಸಾಯುತ್ತಾರೆ. ಪಾಲಿ ಕಾಯಲೆಯವರು ಕಳೆದ ವಾರದ ಸಂಖ್ಯೆ ೯-೧೦ ಮಂದಿ ನಗರದ ಪರಭಾರೆ ರುವರು. ಮಳೆ ಬಾಧೆಯಲ್ಲಿ ಹೊರಗೆ ಹೋಗಿ ಸಾಯುವದಕ್ಕಿಂತ ಮನೆಯ ಲ್ಲಿದ್ದು ಸಾಯುವದೇ ಲೇಸೆಂದು ಕೇಳಿದವರೆಲ್ಲರೂ ಈಗ ಹೊರಗೆ ಹೋಗಿ ಬೈಲನ್ನು ಹುಡುಕುವ ಕಾಲ ಬಂದಿದೆ. ರೋಗದ ಬಾಧೆ ಗಾಗಿ ೨೩ನೇ ತಾರೀಖಿನ ರಾತ್ರಿ ೧೦ ರಿಂದ ಸುಮಾರು ೩ ಘಂಟೆವ ರೆಗೂ ಪಟ್ಟಣದವರು ತಮ್ಮ ಸಾಮಾನ್ನನ್ನು ಬೀದಿ ಮತ್ತು ಗಲ್ಲಿ ಗಲ್ಲಿಗಳಲ್ಲಿ ಓಡುತ್ತಾ ಬಂದರು. ಕಳೆದ ವಾರದಲ್ಲಿ ಮಳೆ ಸಾಧಾ ರಣವಾಗಿತ್ತು. ೧೩-೨೩ ಸಾರಿ ಹಿಡಿದ ಹಾಗೆ ಮಳೆ ಸುರಿಯಿತು. ಬಿಸಲು ಚನ್ನಾಗಿ ಛಾಯಿತ್ತಲಿತ್ತು. ಕೆಲವು ಅಷ್ಟಾಗಿಲ್ಲವಿದ್ದರೂ ರೋಗ ಕಡಿಮೆಯಾಗಿಲ್ಲ.—ಇಲ್ಲಿನ ತಿಪ್ಪಹಳ್ಳಿ ಲಕ್ಷ್ಮಣಪ್ಪನ ಮನೆಗೆ ಕಳ್ಳರು ನುಗ್ಗಿ ಕೆಲವು ಸಾಮಾನುಗಳನ್ನು ದೋಚಿಕೊಂಡು ಹೋ ದರೆಂದು ತಿಳಿಸಿದ್ದೇವಷ್ಟೆ. ಈಗ ಕೆಲವು ಸಾಮಾನು ಕಳವು ಭಂಗಾ ರ ವಸ್ತು ಸಮೇತವಾಗಿ ಕಳ್ಳರು ಸಿಕ್ಕಿ ಸರ್ಕಾರದವರ ವಶಕ್ಕೆ ದಾಖ ಲಾಗಿದ್ದಾರೆ. ಈ ಕಳವಿನಲ್ಲಿ ಸಿಕ್ಕಿರುವವರು ವಿಪ್ರಜಾತಿಯವರು ರೋಗ ಬಂದದ್ದು ಕಳ್ಳರಿಗೆ ಅನುವೆ ಕೊಟ್ಟಿತು.—ಚಿತ್ರಹಳ್ಳಿ ಮ ಲ್ಲನ ನ ಗಲೀಜು ಬಟ್ಟೆಯ ಬಂದಿಗಳು ಗುಡಿಸಲು ಸಹ ಇನ್ನೂ ಜೀವದಿಂದ ಉಳಿದವೆ. ಜನಕ್ಕು ಮುಂದೆ, ಆ ಹೊಲದಿಯ ಅಂಬ ದಾಬುದಲ್ಲಿ ಯಾರೂ ಗುಡಿಸಲನ್ನು ಕಟ್ಟುವ ಹಾಗೆ ತೋರುವದಿಲ್ಲ. ಇಲ್ಲಿನ ಮೂಡಿಗರ ಚಿಬಾರಗಳು ಊರಿಗೆ ಲಗತ್ತಾಗಿ ಸೇರಿರುವದರಿಂ ದ ಅವರು ಆಗಾಗ್ಯೆ ಮಾಡುವ ಗಲೀಜು ರೋಗಗಳನ್ನು ನೋಡಿ ತಿ ದ್ದುವ ಸರಕಾರದವರು ಯಾರಿಕೆ ಇಲ್ಲವಾಗಿ ತೋರುತ್ತೆ. ಕಳೆದ ೨೦ ರಲ್ಲಿ ಯಾವ ರೋಗನಿಂದಲೋ ಸತ್ತ ಒಂದು ಭಾರಿ ಯೆತ್ತ ನ್ನು ತಂದು ಜನಗಳು ಓಡ್ಯಾಡುವಾಗ ಅವರ ಕಣ್ಣಿಗೆ ಬೀಳುವಂತೆ ಬಹಿರಂಗವಾದ ಸ್ಥಳದಲ್ಲಿ ತಂದು ಹಾಕಿ ಕೊಯ್ಯುತ್ತಾರೆ. ಅದರ ಚರ್ಮವನ್ನು ಹದ ಮಾಡುತ್ತಾರೆ. ಹೀಗಿದ್ದರೆ ದುರ್ವಾಸನೆ ಮತ್ತು ವ್ಯಸನ ಮೂಗು ಬಾಯಿಗೆ ಹೋಗದೆ ಇರುವದುಂಟೇ. ಈ ದುರ್ವಾಸ ನೆಯನ್ನು ಮನುಷ್ಯರು ಕುಡಿದರೆ ಅನಾರೋಗ್ಯ ಉಂಟಾಗಲಾರ ದೆಂದು ಯಾರಾದರು ಹೇಳುವರೇ. ರೋಗಾದಿ ಕಾಲಗಳಲ್ಲಿ ಊರ ನ್ನು ಬಹಳ ಚೊಕ್ಕಟದಲ್ಲಿಡುವದೆಂದರೇನು? ರೋಡು ಗಲ್ಲಿಗಳ ನ್ನು ಮಾತ್ರ ಸ್ವಲ್ಪ ಗುಡಿಸಿಬಿಟ್ಟರೆ ಸಾಕೇಂಬುವದೋ? ಈ ನ ಗರ ಹಟ್ಟ ಮ್ಯುನಿಸಿಪಲ್ ಸರಹದ್ದಿಗೆ ಒಳಪಟ್ಟಿರುವದರಿಂದ ಸಾನಿ ಟೇಷನ್ ಕ್ರಮವನ್ನು ಜಾರಿಯಲ್ಲಿ ತರುವದು ಇಲ್ಲಿನ ಅಧಿಕಾರಿಗಳ ಮುಖ್ಯ ಕೆಲಸವಲ್ಲವೇ. ಮೂಡಿಗರ ಪಟ್ಟಿ ಸುತ್ತ ಮುತ್ತ ಅನೇಕ ಹೊಲಗೇರಿಗಳನ್ನು ಹಾಕಿಕೊಂಡಿದಾರೆ. ಇನ್ನೂ ಹಾಕುವದರಲ್ಲಿ ದಾರೆ. ಇವರ ಮಧ್ಯದಲ್ಲಿ ಇವರು ಗಲೀಜು ಕೆಲಸಗಳನ್ನು ನಡೆಸ ವದು ಯುಕ್ತವಾಗಿ ತೋರುವದಿಲ್ಲ. ಈ ಮೂಡಿಗರನ್ನು ಊರ ಬಿಟ್ಟು ದೂರ ಓಡಿಸಬೇಕೆಂಬುವದು ನಮ್ಮ ಉದ್ದೇಶವಲ್ಲ. ಸಾಧ್ಯ ವಾದ ಮಟ್ಟಿಗೆ ಅವರಲ್ಲಿ ಶುಚಿ ಇರುವಂತೆ ಮಾಡುವದೂ. ನಾಗರೀ ಕರೆಯನ್ನು ಅನುಸರಿಸಿ ನಡೆಯಬೇಕೆಂಬುವದೇ ನಮ್ಮ ಕೋರಿಕೆ ಯಾಗಿದೆ. ಆಗಾಗ್ಯೆ ಅವರನ್ನು ಎಚ್ಚರಿಸುತ್ತಿದ್ದರೆ ಕೆಟ್ಟ ಕೆಲಸ ಗಳನ್ನು ಎಂದಿಗೂ ಬಿಡಲಾರರು. ಒಬ್ಬ ಕಸ್ಸೇಬಿಲಕರನ್ನು ಆ ಕಡೆ ಗಳಲ್ಲಿ ಇಟ್ಟು ಅವರು ಸತ್ತ ದನ, ಸತ್ತ ಎಮ್ಮೆ, ಕೊಳೆತ ಚರ್ಮ ಮುಂತಾದವುಗಳನ್ನು ಮಾಡದಂತೆ ನಿಗಾ ಇಟ್ಟಿರುವದು ಎಲ್ಲರಿಗೂ ಬಹಳ ಅನುಕೂಲವಾಗಿದೆ. ಇದನ್ನು ಇಲ್ಲಿನ ಗ್ರಾಮಾಧಿಕಾರಿಗಳ ಯೋಚಿಸಿ. ಜನರ ಕ್ಷೇಮಕ್ಕಾಗಿ ಅನುಕೂಲವಾದ ನಿರ್ಣಯ ಮಾಡಿಯಾರೆಂದು ನಂಬುತ್ತೇವೆ.—ಈ ನಗರದಲ್ಲಿ ಆಗಾಗ್ಗೆ ಮಳೆ ನೀರಾಗ ಕವಿಯುತ್ತಲಿದೆ. ೧೬ನೇ ತಾರೀಖಿನ ೨-೩ ಸಲ ಮಳೆ ಜೋರಾಗಿ ಬಿದ್ದದರಿಂದ ಬೇರಾದ ಮನೆಗಳು ಎಲ್ಲಾ ಭಾಗಗಳು ಮೊ ಳಕೆ ಬಾರದೆ ಹೋದದ್ದರಿಂದ ಮತ್ತು ಭೂಮಿಯನ್ನು ಅಗೆಗೆ ಹೋಕ ದಾಗಿ ಎಲ್ಲನ್ನು ಕೆಲವರು ಬಿತ್ತಿ ಬಿಟ್ಟು ಪ್ರಾರಂಭವಾದಲ್ಲೂ ೩೫೦೦ ಲ್ಲಿ ಜನಗಳ ಓಡ್ಯಾಟದ ಗಲಾಟೆ. ಪರ್ವತದ ವ್ಯಾಪಾರ ಮಂದಕ್ಕೆ ಬಂದವು. ಅನೇಕರು ಈ ಊರನ್ನು ಬಿಟ್ಟು ದೂರ ದೂರ ಹಳ್ಳಿಗ ಳನ್ನು ಸೇರುವದೂ, ಊರಲ್ಲಿ ಇಲಿಗಳು ಸಾಯುವದೂ ಜಾಸ್ತಿಯಾ ಗುತ್ತಲಿದೆ.

ಬೆಂಗಳೂರು.—ಇಲ್ಲಿ ಪವಿತ್ರ ಯಾತ್ರಾಕ್ಷೇತ್ರಕ್ಕಾಗಿ ಒಬ್ಬ ಸನ್ಯಾಸಿಯನ್ನು ಆಶ್ರಯಿಸುತ್ತಾ ಸತ್ತುಹೋದನು. ಆತನ ಮನೆಯ ಕೆಲವು ಪೋಲೀಸಿನವರಿಗೆ ಅಂದು ತೋರಿಬಂದ್ದರಿಂದ ಹೆಣವನ್ನು ದಹನ ಮಾಡದೆ ಮೂರನೇ ದಿನವನರೆಗೂ ಇಟ್ಟರು. ಹಿಂದಿನ ಡೆಂಟಿ ಕಮಿ ಷನರಿಗೆ ತಿಳಿಸಿ, ಡಾಕ್ಟರ್ ಒಬ್ಬರು ೧೦೦ ರೂ ಕೊಟ್ಟು ಕಳಿಸಿದರು. ಅ ವರು ಯಾಕೋ ಬಾರಲಿಲ್ಲ. ಮೂರನೇ ದಿನ ಗೊತ್ತಾಯಿತು. ಅವರ ಪರೀಕ್ಷೆ ಮಾಡಲೂ ಆಗದ ಸ್ಥಿತಿ. ಆತನೂ ಆತನ ಮನೆಯವರು ಹುಂ ಡು ಸ್ಥಾನವನ್ನು ಕಟ್ಟಿಬಿಟ್ಟರು. ಒಂದೆರಡು ತಿಂಗಳಿನ ಒಳಗೆ ಆಸ್ಪತ್ರೆಯ ಕಂಪೌಂಡರನ್ನು ಖರ್ಚು ಬರುತ್ತದೆಂದು ಒಂದು ಸಂದ ಕಿ ಮನೆಯಿಂದ ಹಾಗೆ ಅದರಲ್ಲಿ ಅನೇಕರಿಗ ಪಟ್ಟೇ ಪ್ರವಾಸಕ್ಕೆ ಹೋಗುವ ಕಷ್ಟವೇ ತಪ್ಪಲಿಲ್ಲ.—ಚಿನ್ನೂರ ಜನ್ನಪಟ್ಟಣದ ಮೊ ದಲ್‍ಕ್ಲಾಸ್ ಮೆಜಿಸ್ಟ್ರೇಟರು ಇಲ್ಲಿಗೆ ದಯಮಾಡಿಸಿ ಮುಸಾಫರ ಬಂಗ್ಲೆ ಯಲ್ಲಿ ಇಳಿದುಕೊಂಡು ಮೊದಲು ಇಲ್ಲಿನ ಗ್ರಾಮಸ್ಥರನ್ನು ಕರೆಸಿ ಆಲೋಚಿಸಿ, ಬರೆದುಕೊಂಡರು. ಈ ಗ್ರಾಮಸ್ಥರು ಇಲ್ಲಿಯೂ ಸುತ್ತು ಮುತ್ತಲಿನ ಗ್ರಾಮಗಳಲ್ಲಿಯೂ ಮಹಾಜನರುಗಳನ್ನು ಉಂ ಟುಮಾಡಿದೆ. ಜನರು ತಮ್ಮ ಬುದ್ಧಿಯನ್ನು ಉಪಯೋಗಿಸಿ ಕತ್ತ ಲಾದ ಕಾರ್ಯಗಳನ್ನು ತಿಳಿದುಕೊಳ್ಳುವ. ಆ ಸಾಹೇಬರು ಒಂದೊಂ ದು ಮನೆಯಲ್ಲಿರುವ ಪ್ರಾಯಸ್ಥರನ್ನು ಹಿಡಿದುಕೊಂಡು ಹೆಸರು ಬ ರೆದುಹಾಕಿ, ಮೈಯನ್ನು ಅಳತೆಮಾಡಿ, ಕೈಗೆ ೪ ಆಣೆಗಳನ್ನು ಸಹ ಬಲವಂತದಿಂದ ಕೊಡುತ್ತಾರಂತೆ. ಅವರನ್ನು ದಂಡಿಗೆ ಸೇರಿಸುತ್ತಾ ರಂತೆ. ಮತ್ತು ಯುದ್ಧಮಾಡಲು ಕರೆದುಕೊಂಡು ಹೋಗುತ್ತಾ ರಂತೆ ಎಂದು ಎಲ್ಲಾ ಗ್ರಾಮಗಳಲ್ಲಿಯೂ ಸುಳ್ಳುಸುದ್ದಿಯನ್ನು ಹ ಬ್ಬಿಸಿದ್ದಾರೆ. ಆದ್ದರಿಂದ ಅನೇಕ ಪ್ರಾಯಸ್ಥರು ಸಂಗೆ ಬಾರದೆ ಮನೆಯಲ್ಲಿದ್ದುಕೊಂಡು, ಮದುವೆಗಳನ್ನು ಮಾಡುತ್ತಾ ಕಳುಹಿ ಸುತ್ತಾರೆ. ಇನ್ನು ಕೆಲವು ಮದುಕರು ಅನ್ನ ನೀರನ್ನು ಬಿಟ್ಟು ನಮಗೆ ಇರುವವರು ಒಬ್ಬಿಬ್ಬರು ಮಕ್ಕಳನ್ನು ಕಳಕೊಳ್ಳಬೇಕಲ್ಲಾ ಎಂದು ಗೋಳಾಡುತ್ತಾರೆ. ಹೆಂಗಸರ ಗೋಳಂತೂ ಹೇಳುವದಕ್ಕೆ ಆಗದು. ತಮ್ಮ ನೆಂಟರಿಷ್ಟರ ಮನೆಗಳಿಗೆ ಅನೇಕ ಮಕ್ಕಳನ್ನು ಕ ಳುಹಿಸಿದ್ದಾರೆ. ಕೆಲವರನ್ನು ಬೀಗ ಹಾಕಿ ಬೀಗಹಾಕಿದ್ದಾರೆ. ಚ ನ್ನಪಟ್ಟಣದ ಕಡೆಯಿಂದ ಕೆಲವರು ಬಂದು ಜನ್ನಗಳನ್ನು ಸೇರಿ ಕೊಂಡಿದ್ದಾರೆ. ಆದರಿಂದ ಕೆಲವು ವರ್ತಕರಿಗೆ ವ್ಯಾಪಾರ ಬಿಟ್ಟು ನಿಂ ತುಹೋಗಿದೆ. ಮಂಡ್ಯದ ಕೊಳಗೇರಿಯ ಆಸಾಮಿ ಎನ್ನಲಾದ ಆ ಸಾ ಹೇಬರ ಮುಂದೆ ಕರೆದೊಯ್ದರೆ ತಮ್ಮ ಮನೆ ಮಠಗಳನ್ನು ಬಿಟ್ಟು ಗೋಡೆಗಳನ್ನು ನೆಗೆದು, ಸಿಕ್ಕಿದಕಡೆಗೆ ಓಡಿಹೋಗಿದ್ದಾರೆ. ಈ ಜನರು ನಿಜಾಂಶ ತಿಳಿದುಕೊಳ್ಳಲಿ ಎಂದು ನಾವು ಈ ದಿನ ಮುಸಾಫ ರ್ ಬಂಗ್ಲೆಗೆ ಹೋಗಿ ನಡೆದ ಕಾರ್ಯಗಳನ್ನೆಲ್ಲಾ ನೋಡಿದೆವು. ಆ ಸಾಹೇಬರು ಮಧ್ಯಾಹ್ನದ ಡಮಾಕ ಬಂಗ್ಲೆಯ ಹೊರಾಂಗಣದಲ್ಲಿ ದ್ದಾರೆ. ಅವರೊಂದಿಗೆ ಕೆಲವು ಸಹಾಯಕರು ಬಂದಿದ್ದಾರೆ. ಇಲ್ಲಿನ ಬ್ರಾಹ್ಮಣರಲ್ಲಿ ಅನೇಕರನ್ನು ಕರೆಸಿಕೊಂಡು ಅವರ ತಲೆ ಮೈಗಳ ಕಾಲು ಮೊದಲಾದವುಗಳನ್ನು ಅಳತೆಮಾಡಿ, ಅವರ ಕೈಗೆ ಒಂದು ಅಮುಕುವ ಯಂತ್ರಕೊಟ್ಟು, ಅದುಮಿಸಿ ಅವರ ಬಲವನ್ನು ಅಳ ತೆಯ ಮುಳ್ಳಿನಿಂದ ತಿಳಿದುಕೊಳ್ಳುತ್ತಾರೆ. ಅನಂತರ ಮೇಜಿನಮೇ ಲೆ ಅನೇಕ ಬಣ್ಣದ ಉಲ್ಲನ್‍ದಾರವನ್ನು ಹಾಕಿ ಒಬ್ಬರನ್ನು ಕರೆದು ಈ ಬಣ್ಣದ ನೂಲನ್ನು ತೆಗಿ, ಆ ಬಣ್ಣದ ನೂಲನ್ನು ತೆಗಿ ಎಂದ ದಾಗಿ ಹೇಳುತ್ತಾರೆ. ಅದರಂತೆ ಆರಿಸಿಕೊಟ್ಟರೆ ಅವರ ದೃಷ್ಟಿ ಚ ನ್ನಾಗಿದೆ ಎಂತಲೂ ಕಾಣ ತೆಗೆಯದಿದ್ದರೆ ದೃಷ್ಟಿ ಕಮ್ಮಿಯೆಂತಲೂ ಹೇಳುತ್ತಾರೆ. ಮತ್ತು ಕೆಲವು ಪ್ರಶ್ನೆಗಳನ್ನು ಕೇಳುತ್ತಾ ಬಂದಿದ್ದಾರೆ. ಅಷ್ಟೇ ಒಕ್ಕಲು, ಕುರುಬರು, ತೊರೆಯರು, ಸಿರಿಯ

ಕ್ರೈಸ್ತರು, ಮಾನಂದವಾದಿ ಮೊದಲಾದ ಜನರವೃಗಳಾಗಿವೆ. ಇವು ಗಳನ್ನು ತೋರಿಸಿ ಆಯಾ ದೇಶದ ಮತದ ಜನರ ತಾರತಮ್ಯವನ್ನು ತೋರಿಸುತ್ತಾರೆ. ಈ ಪ್ರಾಂತ್ಯದ ಜನರನ್ನು ಸಹ ಫೋಟೋ ತೆಗೆದು ಮೇಲ್ಕಂಡ ಕಾರ್ಯಗಳನ್ನು ಕುರಿತು ಒಂದು ಪುಸ್ತಕ ರಚಿಸಿ ಆಯಾಸ್ಥಳದ ಜನರ ಪದ್ಧತಿ, ಆಚಾರ, ನಡವಳಿಕೆಗಳನ್ನು ತೋರಿಸುತ್ತಾರೆಂದು ಪರಿಷ್ಕಾರವಾಗಿ ಗೊತ್ತಾಗುತ್ತೆ. ಇಷ್ಟೇ ಹೊರ್ತು ಯಾರನ್ನಾದರೂ ಹಿಡಿದುಕೊಂಡು ಹೋಗುವದಿಲ್ಲವೆಂದು ಎಲ್ಲರು ತಿಳಿದು ಅನ್ಯೋನ್ಯವಿಟ್ಟು ತಮ್ಮ ಕೆಲಸಕಾರ್ಯಗಳನ್ನು ಮಾಡುವರೆಂದು ನಂಬುತ್ತೇನೆ. ಹೋದವಾರ ಬೊಂಬಾಯಿ ಕಡೆಯ ನರ್ಕಸ್ ಕಂಪನಿಯವರು ಬಂದು ಇಲ್ಲಿ ೯ ದಿವಸಗಳ ಪರಿಗೂ ಇದ್ದು, ತಮ್ಮ ಚಮತ್ಕಾರದ ವಿದ್ಯೆಯನ್ನು ಇಲ್ಲಿನವರಿಗೆ ತೋರಿಸಿದರು. ಒಂದು ದಿನ ಶ್ರೀ. ರೆ ಉದ್ಯೋಗಸ್ಥರೆಲ್ಲರನ್ನು ಮರ್ಯಾದೆಯಿಂದ ಕರೆಸಿಕೊಂಡರು. ಆಗ್ಯೆ ಅವರವರು ತಮ್ಮತಮ್ಮ ಮನೆ ಹೆಂಗಸರನ್ನು ಹುಡುಗರನ್ನು ಸಹ ಸಂತೋಷದಿಂದ ಕರೆದುಕೊಂಡು ಬಂದು ಶೇರೆಯನ್ನ ಟಿಕೆಟ್ ಇಲ್ಲದೆ ತುಂಬಿಸಿದರು. ಪ್ಯಾನೇಜರು ಬಹು ಸಂತೋಷದಿಂದ ಆಟಪಾಟ ಸಭಿಕರನ್ನು ಮೆಚ್ಚಿಸಿದರು. ಆದರೆ ಕಂಪನಿಯವರ ಬರೀ ಸಾಮರ್ಥ್ಯವನ್ನು ಉದ್ಯೋಗಸ್ಥರು ಹಾಸಿನಲ್ಲಿ ಹೋಗಿದರೇ ಹೊರ್ತು ತಮ್ಮ ಜೇಬಿನಲ್ಲಿ ಬೇರೆ ಕೈ ಹಾಕಿ ಕಂಪನಿಯವರನ್ನು ಸಂತೋಷಪಡಿಸಲಿಲ್ಲ.

ಚಿಕ್ಕಮಗಳೂರು.—ಹೋದ ತಿಂಗಳು ೧೯ ಮತ್ತು ೨೩ ನೇ ತಾರೀಖುಗಳಲ್ಲಿ ನಮ್ಮ ಶ್ರೀಮನ್ಮಹಾರಾಜರವರ ಮತ್ತು ಶ್ರೀಮನ್ಮಹಾರಾಣಿ ಜನ್ಮೋತ್ಸವಗಳಾದ ಎಸ್ ಬಿ ಶ್ರೀಮಂತರವರ ವರ್ಧಂತಿಯ ಮಹೋತ್ಸವಗಳು ಈ ಪಟ್ಟಣದಲ್ಲಿ ಅತ್ಯಂತ ಸಂಭ್ರಮ ವಿಜೃಂಭಣೆಗಳಿಂದಲೆ ನಡೆದವು. ಈ ಎರಡು ಮಹೋತ್ಸವಗಳಿಗೂ ಇಲ್ಲಿನ ಮ್ಯುನಿಸಿಪಾಲಿಟಿಯವರೂ, ದೊಡ್ಡ ಮನುಷ್ಯರು ಪರ್ತಕರುಗಳಿಂದಲೂ ಸಾಕಾದಷ್ಟು ಹಣವು ಕೊಡಿಸಲಟ್ಟು, ಸ್ಕೂಲ್ ಬಾಲಕ, ಬಾಲಿಕೆಯರುಗಳಿಗೂ, ಪುರ ನಿವಾಸಿಗಳಿಗೂ ಸಿಹಿತಿಂಡಿ ಹಣ್ಣುಗಳಿಗೂ ಫಲತಾಂಬೂಲಗಳು ವಿನಿಯೋಗಿಸಲ್ಪಟ್ಟವಲ್ಲದೆ ಸ್ಕೂಲ್ ಬಾಲಕರುಗಳಿಂದಲೂ, ಪೋಲೀಸಿನವರು, ಬ್ಯಾಂಡ್ ಮೇಳಗಳು ಇವರುಗಳಿಂದಲೂ ನಾನಾ ವಿಧವಾದ ಪಾಟಗಳು ಆಡಲ್ಪಟ್ಟು ಗಿಲ್ಲವರಿಗೆ ಬಹುಮಾನಗಳೂ ಕೊಡಲ್ಪಟ್ಟವು. ಈ ಆಟಗಳಲ್ಲಿ ನಮ್ಮ ಎಸ್ ಆರ್ ಸುಂದರಯ್ಯನವರ ವರ್ಧಂತಿಯಲ್ಲಿ ನಡೆದ ಓಟವು ವಿಶೇಷವಾಗಿ ಬಹು ಆಹ್ಲಾದಕರವಾಗಿದ್ದಿತು. ಏನೆಂದರೆ — ಒಂದ ಜವರುಗಳಿಗೆ ದಪ್ಪ ಕಡ್ಡಿಗೆ ಎಣ್ಣೆ ಸವರಿ ಎಂಬ ಎತ್ತಿಯನ್ನು ಬಿನಿಂದ ತುದಿಯವರೆಗೆ ನುಣ್ಣಗೆ ಸವರಿ ನಟ್ಟು, ಅದನ್ನು ಹತ್ತಿ ತುದಿಯನ್ನು ಮುಟ್ಟಿದವರಿಗೆ ೧ ರೂ ಬಹುಮಾನವೆಂದು ನಿಷ್ಕರ್ಷಿಸಿದ್ದರು. ಅದೇ ಪ್ರಕಾರ ಅನೇಕರು ಅದನ್ನು ಹತ್ತಲು ಪ್ರಯತ್ನ ಮಾಡಿ, ಕಡೆಯಲ್ಲಿ ಮುಟ್ಟಿದರು. ಈ ನೋಟದಲ್ಲಿ ನಗದೇ ಇದ್ದ ದರ್ಶಕರೊಬ್ಬರಾದರೂ ಇರಲಿಲ್ಲ. ಬಾಣ ಬಿರುಸು ನಂತರ ಮೇಲೆ ಶ್ರೀಮಂತರ ಮತ್ತು ಸಂಪದ ಶ್ರೇಯೋಭಿವೃದ್ಧಿಗಳನ್ನು, ಸರ್ವದಾ ಪರಮೇಶ್ವರನನ್ನು ಪ್ರಾರ್ಥಿಸುವುದಲ್ಲದೆ ಬಾಗಿಲುಗಳಲ್ಲಿ ಶ್ರೀ ವಚನಾನಂದ ಮತ್ತು ಶ್ರೀಮಂತರ ಮನದ ಪ್ರಜೆಗಳನ್ನು ಪರಿಪಾಲಿಸಲೆಂದು ಸ್ವಸ್ತಿ ವಾಚನಪೂರ್ವಕ ಪ್ರಾರ್ಥಿಸಿದರೆಂದು ಎಲ್ಲರೂ ಹೇಳುತ್ತಾರೆ. ಇಲ್ಲಿನ ಡಿಸ್ಟ್ರಿಕ್ಟ್ ಇಂಜಿನಿಯರ್ ಆಫೀಸಿನಲ್ಲಿ ದಿವಾನರ ಮನಸ್ಸಿನ ಪ್ರಕಾರ ಕೆಲಸವು ಅತ್ಯಂತವಾಗಿ ಆಪೀಸು ಸಮಾಪ್ತಿ ಹೊಂದಿದ್ದರೆಂದು ತಿಳಿದಷ್ಟು ಇನ್ನು ಮುಂದೆ ಇಂತಹ ಆಪೀಸ್ ಇಲ್ಲಿಯೇ ಬರಬೇಕೆಂಬುದೇ ಸರ್ಕಾರದವರು ಅದನ್ನು ಮಾಡದೇ ಇದ್ದ ಸ್ಥಳದಲ್ಲಿ ಮೈಸೂರ್ ಗೆಜೆಟ್ ನಲ್ಲಿ ಪ್ರಕಟವಾದ ಅಧಿಕಾರಿಗಳ ವಿಷಯದಲ್ಲಿ ಉತ್ಸವ ಆಚರಣೆಯನ್ನು ಶೀಘ್ರದಲ್ಲಿ ಕಳುಹಿಸ ಬೇಕು ರಿಪೋರ್ಟು ಮಾಡಿದ್ದವಾಗಿಯೂ ಇದರ ಕೆಲಸವೇ ಅಥವಾ ಬೇರೆ ಯಾವ ಕಾರಣದಿಂದಲೋ ನಮ್ಮ ಶ್ರೀಮನ್ಮಹಾರಾಜರವರಿಂದ ಯಾರು ಯಾವ ಅಪೀಲನ್ನು ಕೊಟ್ಟರೂ ಕೂಡಲೇ ಮೇಲಕ್ಕೆ ಕಳುಹಿಸಬೇಕು ಎಂಬ ಉತ್ತರ ಬಂದದ್ದಾಗಿಯೂ ತಿಳಿದು ಬಂತು. —ಇಲ್ಲಿನ ಪ್ರಸಿದ್ಧ ವರ್ತಕರಾಗಿಯೂ, ಕಾಫಿ ಪ್ಲಾಂಟರಾಗಿಯೂ ಇದ್ದ ವಿರತ್ತೀಗೌಡರು ಕಳೆದ ವರ್ಷ ದೈವಾಧೀನರಾದರಷ್ಟೆ. ಈ ದೊಡ್ಡ ಮನುಷ್ಯರ ಅಣ್ಣ ತಮ್ಮಂದಿರು ಸೇರಿ ಅವರ ಮನೆಯಲ್ಲಿ ಅರು ಮದುವೆಗಳನ್ನು ಬಹು ಸಂಭ್ರಮದಿಂದ ನಡೆಸಿದರು. ಇವರ ಕಟ್ಟಳೆ ಪ್ರಕಾರ ಉತ್ಸವಗಳೆಲ್ಲ ನಡೆದ ತರುವಾಯ, ಇಲ್ಲಿನ ಅಧಿಕಾರಿಗಳು, ಉದ್ಯೋಗಸ್ಥರು, ಸಾಹುಕಾರರುಗಳನ್ನೆಲ್ಲ ಒಂದು ದಿನ ತಮ್ಮ ಮನೆಗೆ ಬರಮಾಡಿಕೊಂಡು, ತಾಂಬೂಲಗಳನ್ನು ಕೊಟ್ಟು ಪುರಸ್ಕರಿಸಿದರು. ಅದೇ ರಾತ್ರಿ ಇವರ ಮನೆಯ ಹಿಂಬಾಗದ ಕೊಟ್ಟಿಗೆಯಲ್ಲಿ ಕೆಲಸಗಾರರಿಗೆಲ್ಲ ಊಟ ಮಾಡಿಸುತ್ತಿದ್ದರು. ಆ ಸಮಯದಲ್ಲಿ ಅಕಸ್ಮಾತ್ತಾಗಿ ಆ ಕೊಟ್ಟಿಗೆ ಗೋಡೆಯು ಕುಸಿದು ಬಿದ್ದಿತು. ೨ ಹಸುಗಳೂ, ೩ ಕರುಗಳೂ ಆ ಕ್ಷಣ ಸತ್ತೇ ಹೋದವು. ಮೂರು ಮಂದಿಗೆ ಮಾತ್ರ ಗಾಯಗಳಾಗಿ ವಾಸಿಯಾಗುತ್ತಾ ಬಂದಿದೆ. ಆ ಸಂಭ್ರಮ ಕಾಲದಲ್ಲಿ ಅವರುಗಳಿಗೆ ಇದೊಂದು ಕೊರತೆಯು ಪ್ರಸ್ತಾಪವಾದದ್ದಕ್ಕಾಗಿ ಎಲ್ಲರೂ ಪರಿತಾಪಪಟ್ಟರು. ಈ ತಿಂಗಳು ತಾ. ೧೭ ರ ಲಾಗಾಯ್ತು ಮೊನ್ನೆಯವರೆಗೂ ಇಲ್ಲಿ ಶಿವಮೊಗ್ಗ ಸೆಷನ್ಸ್ ಜಡ್ಜಿಯವರು ಇದ್ದು, ವಿಚಾರಣೆ ನಡೆಸಿದರು. ಇದರಲ್ಲಿ ತರೀಕೆರೆ, ಕೊಪ್ಪ ತಾಲೂಕು ಸಂಬಂಧದ ವ್ಯಾಜ್ಯಗಳಾದ ಒಂಬತ್ತು ಮಂದಿಗೆ, ಪ್ರತಿಯೊಬ್ಬರಿಗೂ ೩ ವರ್ಷದಂತೆ, ಸಜಾ ಶಿಕ್ಷೆಯು ವಿಧಿಸಲ್ಪಟ್ಟಿತು —ಮಳೆ ಕಾಲ ಪ್ರಾರಂಭವಾಗಿ ಒಂದು ತಿಂಗಳಾಯಿತು. ಜಡಿ ಮಳೆ ಪ್ರತಿ ದಿನವೂ ಸುರಿಯುತ್ತಿರುವದರಿಂದಲೂ ಸೂರ್ಯ ರಶ್ಮಿ ಇಲ್ಲದೆ ಬಹು ಶೀತಳವಾಗಿ ಛಳಿ ಹೊಡೆತ ಪ್ರಬಲವಾಗಿರುವದರಿಂದಲೂ ಬಹುಮಂದಿಗೆ ಖಾಯಿಲೆ ಆಗಿದೆ. ಆದ ಸುಕಪಾಂಚನ್ನಾಗಿಲ್ಲ. ಈ ವರ್ಷ ಮಳೆ ಅಧಿಕವಾಗಿ ತೋರುತ್ತೆ. ಮುಂದೆ ಇನ್ನು ಎರಡು ತಿಂಗಳು ಸಹಿಸುವದು ಮಹಾ ದುಸ್ತರ.—ಈ ತಿಂಗಳು ಸುಮಾರು ಮಧ್ಯ ಭಾಗದಲ್ಲಿ ಮೈಸೂರಿಂದ ಘನ ಪಾದ್ರಿಯವರಾದ ಸಾಹೇಬ ಧೊರೆಯವರೂ ಹಾಸನದಿಂದ ಘನ ನ್ಯೂಹ್ಯಾಂ ಧೊರೆಯವರೂ ಪಯಣಮಾಡಿ, ಇಲ್ಲಿನ ಮಿಷನ್ ಕೆಲಸಗಳನ್ನೆಲ್ಲಾ ಪರಾಂಬರಿಸಿ, ದೇವಾರಾಧನೆಗಳನ್ನು ಆಚರಿಸಿ, ಸ್ಕೂಲ್‌ಗಳನ್ನು ಪರೀಕ್ಷಿಸಿ ವಾಪಸ್ ತಮ್ಮ ಸ್ಥಳಗಳಿಗೆ ತೆರಳಿದರು.—ಇಲ್ಲಿನ ಹೈಸ್ಕೂಲ್ ಉಪಾಧ್ಯಾಯರಲ್ಲಿ ಸೈನ್ಸ್ ಕಲಿಸುತ್ತಿದ್ದ ನಾರಾಯಣರಾವ್ ಎಂಬುವರನ್ನು ತುಮಕೂರಿಗೆ ವರ್ಗಮಾಡಿ, ಇಲ್ಲಿಗೆ ಹೊಸದಾಗಿ ರಾಘವಾಚಾರ್ ಎಂಬುವರನ್ನು ನೇಮಿಸಿದ್ದಾರೆ.—ಈ ಊರು ಸ್ತ್ರೀ ಪಾಠಶಾಲೆಯ ಹೆಡ್ಮಾಸ್ಟರ್ ವರಳಂಗರಂಪ್ ಎಂಬಾತನನ್ನು ಸಸ್ಪೆಂಡ್ ಮಾಡಿದರಷ್ಟೆ. ಈಗ ಆದು ತಡೆಯಾಗಿ ಸ್ವಪಲಾಗಿ ಆ ದಾಖಲಾಗಾಯ್ತು ಈತನು ಕನ್ನಡ ಗಂಡು ಹುಡುಗರ ಶಾಲೆಯಲ್ಲಿ ಸಹಾಯಕ ಉಪಾಧ್ಯಾಯರಾಗಿರುವಂತೆಯೂ ಈ ವರಿಗೂ ಸಸ್ಪೆಂಡ್ ಮಾಡಿದ್ದ ಕಾಲದಲ್ಲಿ ಸಂಬಳವಿಲ್ಲವೆಂತಲೂ ಮುಂದೆ ಸ್ವತಂತ್ರವಾಗಿ ಕೆಲಸ ನಡಿಸಲು ಅನರ್ಹನೆಂತಲೂ ವಗೈರೆ ಮೊ॥ ಭಾಷಾ ನಾಜೇರರವರಿಂದ ಹುಕ್ಕುಂ ಬಂದಿದೆಯಂತೆ.—ಸಂತೆ ಯಾವಾಗಲೂ ಕೂಡುತ್ತಿದ್ದ ಸ್ಥಳದಲ್ಲಿ ಎರಡು ವಾರಗಳಿಂದಲೂ ಸೇರುತ್ತಿದೆ. ಕಳ್ಳ ಸೇರುಗಳಲ್ಲಿ ಬಹುಕಾಲ ಕಳೆದು ಕೆಲವು ಸಾರಿ ಶಿಕ್ಷೆ ಅನುಭವಿಸಿದ ಮಾಯಿನ್ನಾ ನೆಂಬುವವನಿಗೆ ತಿರಿಗಿ ಇದೇ ಕೃತ್ಯಕ್ಕಾಗಿ ಭಾರಿ ಜುಲ್ಮಾನೆ ಆಗಿದೆ. ಇಷ್ಟಾದರೂ ವರ್ತಕರ ಲೋಭಕ್ಕೆ ಕಮ್ಮಿ ಆಗುವದಿಲ್ಲ. ಎಚ್ಚರಿಕೆ ಕೊಟ್ಟ ಹಾಗಾಯಿತು.

## ವಿದೇಶ ವರ್ತಮಾನಗಳು.

ವಿಲಾಯಿತಿಯಲ್ಲಿ ೪೩.೦೦೦ ಜನರು ಗಾಜಿನ ಕಣ್ಣುಗಳನ್ನು ಮಾಡಿಸಿಟ್ಟುಕೊಂಡಿದಾರೆ.

❖❖❖❖

ಜಲಾರ್ಣವದಿಂದ ದಕ್ಷಿಣ ಆಫ್ರಿಕಕ್ಕೆ ಸಾವಿರಾರು ಕತ್ತೆಗಳನ್ನು ಕಳುಹಿಸಿಕೊಡುತ್ತಾ ಬಂದಿದಾರೆ.

❖❖❖❖❖

ಟ್ರಾನ್ಸ್‌ವಾಲಿನಲ್ಲಿ ಬಹಳ ವಿಸ್ತಾರವಾದ ಮತ್ತು ತುಂಬಾ ಪರಿಶುದ್ಧವಾದ ಒಂದು ವಜ್ರದ ಗಣಿ ಸಿಕ್ಕಿರುತ್ತೆಂಬದಾಗಿ ಅಲ್ಲಿನ ಅಟಾರ್ನಿ ಜನರಲ್ ಸರ್ ರಿಚರ್ಡ್ ಸಾಲೊಮನ್ನವರು ತಿಳಿಸಿದಾರೆ

❖❖❖❖❖

ರಷ್ಯಾರಾಜ್ಯದ ಚಕ್ರವರ್ತಿಯವರಾದ ಜಾರ್‌ಚರು ತಮಗೆ ಪುತ್ರಸಂತಾನವಾಗದಿದ್ದರೆ ತಮ್ಮ ವಂಶದ ಹೆಣ್ಣುಮಕ್ಕಳೂ ಸಿಂಹಾಸನಕ್ಕೆ ಬರಬಹುದು ಎಂಬುದಾಗಿ ಒಂದು ಕಾನೂನು ಮಾಡಿದರುತ್ತಾರೆ.

❖❖❖❖

ಈವರೆಗೂ ಅಂತ್ಯಭಾಗದಲ್ಲಿ ದಕ್ಷಿಣ ಆಫ್ರಿಕದೊಳಗೆ ಸೇನಾ ಲಕ್ಷಗಳನ್ನು ಬಿಡದು ಪ್ರಜಾ ಸಂಖ್ಯೆ ಮುಂತಾದದ್ದನ್ನು ಗೊತ್ತುಮಾಡುವಂತೆ ಇಂಗ್ಲೀಷ್ ಗವರ್ನಮೆಂಟಿನವರು ಏರ್ಪಾಡು ಮಾಡುತ್ತಿದಾರೆ.

❖❖❖❖

ವಿಲಾಯಿತಿ ದೃಷ್ಟದ ರಾಜಧಾನಿಯಾದ ಲಂಡನ್ ನಗರದ ಕಾರ್ಖಾನೆಯಲ್ಲಿ ಹಿಂದಿನಾಗ ಗೋಡೆಯಲ್ಲಿ ಬಿದ್ದು ದಾರಿ ಆಪತ್ತಾಯಿತು. ಕಾರಣವೇನೋ ಗೊತ್ತಾಗಿಲ್ಲ, ೧೯ ಜನರಿಗೆ ಪ್ರಾಣವೇ ಹೋಯಿತು; ೧೧ ಮಂದಿ ಗಾಯಪಟ್ಟರು.

❖❖❖❖

ದಕ್ಷಿಣ ಆಫ್ರಿಕದಲ್ಲಿ ಯಾವಾಗಲೂ ೩೦.೦೦೦ ಇಂಗ್ಲಿಷ್ ಸೈನಿಕರನ್ನು ಇಟ್ಟಿರ ಬೇಕೆಂಬದಾಗಿ ಮಿ ಛೇಂಬರ್ಲೈನ್ನವರು ಅಭಿಪ್ರಾಯಪಟ್ಟರು. ಈ ಅಭಿಪ್ರಾಯವನ್ನು ಮಂತ್ರಿಯಾದ ಮಿ॥ ಬಾಲ್‌ಫೋರವರು ಒಪ್ಪಿಕೊಂಡಿರುವಂತೆ ತಿಳಿಯುವದು.

❖❖❖❖

ರಷ್ಯಾ ಚಕ್ರಾಧಿಪತ್ಯದಲ್ಲಿ ಯಹೂದ್ಯ ಜನರ್ಯಾರೂ ಇನ್ನು ಕೆಲ ಪ್ರದೇಶದ ತನಕ ಜಮೀನನ್ನು ಕೊಂಡುಕೊಳ್ಳಕೂಡದೆಂತಲೂ, ಆಹಾರ ಭೋಗ್ಯಾದಿಗಳನ್ನು ಮಾಡಿಕೊಳ್ಳಕೂಡದೆಂತಲೂ ಚಕ್ರವರ್ತಿಯವರು ಒಂದು ಕಾನೂನು ಮಾಡಿದಾರೆ. ಆದರೆ ೧೦೦ ಪಟ್ಟಣಗಳಿಗೆ ಮಾತ್ರ ಈ ಕಾನೂನು ಸಂಬಂಧಿಸುವದಿಲ್ಲ.

❖❖❖❖

ರಷ್ಯಾರಾಜ್ಯಕ್ಕೆ ಸೇರಿದ ಸರಾಟ್‌ಕಾಯಾ ಎಂಬ ನಗರದಲ್ಲಿ ಫಾದರ್ ಸರಾಫಿನ್ ಎಂಬೊಬ್ಬ ಗುರುವು ಅನೇಕ ಅದ್ಭುತ ಕಾರ್ಯಗಳನ್ನು ಮಾಡುವ ಶಕ್ತಿ ಪಡೆದಿರುವವನಾಗಿ ಪ್ರವಾದವಿದೆ. ಜನರು ಆತನ ಮೇಲೆ ತುಂಬಾ ಭಕ್ತಿ ವಿಶ್ವಾಸಗಳನ್ನಿಟ್ಟುಕೊಂಡಿದಾರೆ. ಆ ಗುರುವಿನ ದರ್ಶನ ಮಾಡಿಕೊಂಡು ಬರುವದಕ್ಕಾಗಿ ಅಲ್ಲಿನ ಚಕ್ರವರ್ತಿಯವರು ಮಂತ್ರಿಪರಿವಾರದವರನ್ನೆಲ್ಲಾ ಯಾತ್ರೆ ಹೊರಡುತ್ತಾರೆಂದು ವರ್ತಮಾನ ದುಬ್ಬಿದೆ.

❖❖❖❖

ಫಿಲಿಪ್ಪೈನ್ ದ್ವೀಪಗಳಲ್ಲಿ ಒಂದಾದ ಮಿಂಡೋರೋ ಎಂಬಲ್ಲಿ ಒಂದು ಪರ್ವತಪ್ರದೇಶವಿರುವದು. ಈ ಪರ್ವತದಲ್ಲಿ ಒಂದು ತರಹ ಬಿಳೀ ಜನರು ವಾಸಮಾಡಿಕೊಂಡಿದಾರೆ. ಅವರು ಆಜಾನುಬಾಹುಗಳು. ತಲೆಯ ಕೂದಲು ನೆಟ್ಟಗೆ ಬೆಳೆದಿವೆ, ನೀಲಿ ಬಣ್ಣದ ನೇತ್ರಗಳಿವೆ. ಯಾರೂ ಅವರನ್ನು ನೋಡುವದಕ್ಕೆ ಅವಕಾಶ ಕೊಡುವದಿಲ್ಲ. ಅವರು ಅಮೇರಿಕದವರನ್ನು ಕಂಡರೆ ಓಡಿಹೋಗುವರು. ಇಂಥಾ ನವೀನ ಜನರ ಸ್ಥಿತಿಗಳನ್ನು ವಿಚಾರಿಸಿ ತಿಳಿಯುವುದಕ್ಕಾಗಿ ಆ ಪ್ರಾಂತ್ಯಕ್ಕೆ ಕೆಲವು ಮಂದಿ ಹೋಗಿ ಬರುವವರಾಗಿದಾರೆ.

❖❖❖❖

ಅಮೇರಿಕಕ್ಕೆ ಸೇರಿದ ಮಿಚಿಗಾನ್ ಡಿಸ್ಟ್ರಿಕ್ಟಿನಲ್ಲಿ ಹುಚ್ಚರನ್ನು ಒಂದು ಕಡೆ ಇಟ್ಟು ಸಾಕುತ್ತಿದಾರೆ. ಇವರ ಪೋಷಣೆಗೆ ಹಣ ಸ್ಯಾಂಕ್ಷನ್ ಮಾಡಬೇಕೆಂದು ಪಾರ್ಲಿಮೆಂಟಿನಲ್ಲಿ ಚರ್ಚೆಮಾಡುವಾಗ್ಯೆ ಒಬ್ಬ ಮೆಂಬರು ಎದ್ದು—ಈ ಹುಚ್ಚರು ತಾವು ಜೀವದಿಂದಿರುತ್ತೇವೆಂಬ ಸಂಗತಿಯೇ ಅವರಿಗೆ ಪ್ರಜ್ಞೆ ಇಲ್ಲ. ಇಂಥಾದ್ದರಲ್ಲಿ ಇವರನ್ನು ಸರ್ಕಾರದವರು ಹಣ ಖರ್ಚುಮಾಡಿ ಸಾಕುವದು ಅನ್ಯಾಯ; ಮತ್ತು ದುರ್ಬಲರಾದ ಮಕ್ಕಳು ಅನೇಕವಾಗಿ ಹುಟ್ಟಿ, ಜೀವಾಂತ್ಯದವರೆಗೂ ನಾನಾ ಕಷ್ಟಗಳನ್ನು ಅನುಭವಿಸುವರು. ಆದ್ದರಿಂದ ಪ್ರಜ್ಞೆಯಿಲ್ಲದಂಥಾ ಹುಚ್ಚರನ್ನೂ, ದುರ್ಬಲರಾಗಿ ಹುಟ್ಟಿದ ಮಕ್ಕಳನ್ನೂ ಕೊಂದುಹಾಕುವದರಲ್ಲಿ ದೋಷವೇನೂ ಇರಲಾರದು; ಈ ಕಾರ್ಯವನ್ನು ಸರ್ಕಾರದವರು ಮಾಡಿಸಬೇಕು ಎಂಬದಾಗಿ ಹೇಳಿದನು. ಇಂಥಾ ಅಪೂರ್ವವಾದ ಸಲಹೆ ಇದುವರೆಗೆ ಪ್ರಪಂಚದಲ್ಲಿ ಯಾರಾದರೂ ಯಾವ ಸರ್ಕಾರದವರಾದರೂ ಕೇಳಿದ್ದುಂಟೇ ಎಂಬದಾಗಿ ಪಾರ್ಲಿಮೆಂಟಿನ ಮೆಂಬರುಗಳೆಲ್ಲಾ ಆಶ್ಚರ್ಯ ಭರಿತರಾದರು. ಈ ಸಲಹೆಯನ್ನು ಮನುಷ್ಯಮಾತ್ರದವರ್ಯಾರೂ ಅನುಮೋದಿಸಲಾರರು.

❖❖❖❖

ಸಯಾಂ ರಾಜ್ಯದಲ್ಲಿ ಸತ್ತವರನ್ನು ಸಂಸ್ಕಾರಮಾಡುವ ವಿಧಾನವು ಬಹು ಆಶ್ಚರ್ಯಕರವಾಗಿರುತ್ತದೆ. ಶವಕ್ಕೆ ಬಿಗಿಯಾದ ಕಾಚ, ಷರಾಯಿಗಳನ್ನು ತೊಡಿಸಿ, ಬಟ್ಟೆ ಸುತ್ತಿ ಒಂದು ಮೂಲೆಯಲ್ಲಿ ಕೂಡಿಸಿ, ಬಾಯಿಗೆ ಒಂದು ಕೊಳವೆ ಸಿಕ್ಕಿಸಿ, ಈ ಕೊಳವೆಯ ಮೂಲಕ ಪಾದರಸವನ್ನೂ ಜೇನುತುಪ್ಪವನ್ನೂ ಬೆರಸಿ ಹೊಯ್ಯುವರು. ಆ ಶವವನ್ನು ಬಹು ದಿನಗಳ ತನಕ, ಕೆಲವು ಸಂದರ್ಭಗಳಲ್ಲಿ ಅನೇಕ ವರ್ಷಗಳ ತನಕ ಹಾಗೇ ಇಟ್ಟಿದ್ದು, ಅನಂತರ ಅದನ್ನು ದಹನಮಾಡಿ, ಬೂದಿಯನ್ನು ಬಹಳ ಜಾಗರೂಕತೆಯಿಂದ ಒಂದು ಗಾಜಿನ ಬುಡ್ಡಿಯಲ್ಲಿ ಹಾಕಿ ಇಟ್ಟುಕೊಳ್ಳುತ್ತಾರೆ. ಶವಗಳನ್ನೆಲ್ಲಾ ದಹನಮಾಡುವದಿಲ್ಲ. ಆತ್ಮಹತ್ಯ, ಅಕಸ್ಮಾತ್ ಮರಣ, ಸಿಡಿಲು, ಸಾಂಕ್ರಾಮಿಕ ರೋಗಗಳಿಂದ ಸಾಯುವರು, ಇವೇ ಮುಂತಾದ ಕಾರಣಗಳಿಂದ ಸತ್ತವರ ಶವವನ್ನು ದಹನಮಾಡದೆ ಹೂಳುತ್ತಾರೆ. ಪಾಪರುಗಳೂ ಅಪರಾಧಿಗಳೂ ಸತ್ತರೆ ಅವರ ಶವಗಳನ್ನು ತೆಗೆದುಕೊಂಡುಹೋಗಿ ದೇವಸ್ಥಾನದಲ್ಲಿಟ್ಟು, ಹೊಟ್ಟೆಯೊಳಗಿನ ಮಾಂಸವನ್ನು ತೆಗೆದು ಸ್ವಲ್ಪ ನಾಯಿಗಳಿಗೆ ಹಾಕುವರು. ತರುವಾಯ ರಣಹದ್ದುಗಳು ಹೋಗಿ ಮೂಳೆ ವಿನಹಾ ಉಳಿದದ್ದನ್ನೆಲ್ಲಾ ತಿಂದುಹಾಕುವವು. ಅನಂತರ ಆ ಮೂಳೆಗಳನ್ನು ಪೆಟ್ಟಿಗೆಯಲ್ಲಿಟ್ಟು, ಬೆಂಕಿ ಹತ್ತಿಸಿ ಸುಟ್ಟುಬಿಡುತ್ತಾರೆ. ಹೀಗೆ ಮಾಡುವ ಪರ್ಯಂತರ ಅವರ ಆತ್ಮಗಳಿಗೆ ನರಕಯಾತನೆ ತಪ್ಪುವದಿಲ್ಲವಂತೆ!

❖❖❖❖

ವಿಲಾಯಿತಿರಾಜ್ಯದ ಸ್ವಾಸ್ಥ್ಯಗಳ ಸೆಕ್ರೆಟರಿಯಾದ ಮಿ. ಛೇಂಬರ್ಲೈನ್ನವರು ವಿಲಾಯಿತಿಗೆ ಹೊರಗಿನಿಂದ ರಫ್ತಾಗುವಂಥಾ ಪದಾರ್ಥಗಳ ಮೇಲೆ ಇದುವರೆಗೆ ಇಲ್ಲದಂಥಾ ಹೊಸ ರೇಟುಗಳನ್ನು ಹಾಕಿ, ವಸೂಲ್ಮಾಡಬೇಕೆಂತಲೂ, ಇದರಲ್ಲಿ ಉತ್ಪತ್ತಿಯಾಗುವ ದ್ರವ್ಯವನ್ನು ಬಡವರಾಗಿಯೂ, ಮುದುಕರಾಗಿಯೂ, ರೋಗಿಗಳಾಗಿಯೂ ಇರುವ ಪ್ರಜೆಗಳಿಗೆ ಮುಪ್ಪಿನ ಪೆನ್ಷನ್ ಕೊಡುವದಕ್ಕೆ ವಿನಿಯೋಗಿಸಬೇಕೆಂತಲೂ ಈಗ ಹೊರಡುತ್ತಿದಾರೆ. ಈ ಸಲಹೆಯು ವಿಲಾಯಿತಿರಾಜ್ಯದಲ್ಲೆಲ್ಲಾ ತುಂಬಾ ಗಲಭೆಯನ್ನುಂಟುಮಾಡಿ ಎಲ್ಲರ ಚರ್ಚೆಮಾಡುವಂತೆ ಮಾಡಿದೆ. ಆಹಾರಪದಾರ್ಥಗಳ ಕ್ರಯ ಹೆಚ್ಚುವದು, ಬಡಜನ್ನರ ಜೀವನ ಕಷ್ಟವಾಗುವದು ಎಂಬದಾಗಿ ಒಂದು ಪಕ್ಷದವರೂ; ಇದರಿಂದ ಇಂಗ್ಲೀಷ್ ರಾಜ್ಯದ ಒಗ್ಗಟ್ಟು ಬಿಗಿಯಾಗುವದು, ಮುದುಕರಿಗೆ ಜೀವನ ನಡೆಯುವದು ಎಂಬದಾಗಿ ಇನ್ನೊಂದು ಪಕ್ಷದವರೂ ಚರ್ಚೆಮಾಡುತ್ತಿದಾರೆ. ಈ ಚರ್ಚೆಯು ದೆಸೆಯಿಂದ ಈಗಿರುವ ಪಾರ್ಲಿಮೆಂಟು ಬರಖಾಸ್ತಾಗಿ ಹೊಸ ಮೆಂಬರುಗಳನ್ನು ಚುನಾಯಿಸಬೇಕಾಗಿ ಬಂದೀತೆಂದೂ, ಗವರ್ನಮೆಂಟಿನ ಮುಖ್ಯ ಉದ್ಯೋಗಸ್ಥರುಗಳೆಲ್ಲಾ ಬದಲಾಗಿ ಹೋಗುವರೆಂದೂ ಊಹಿಸಲ್ಪಟ್ಟಿದೆ. ೬೫ ವರುಷ ಮೀರಿದಂಥಾ ಮುದುಕರಿಗೆಲ್ಲಾ ತಲಾ ವಾರಕ್ಕೆ ೩!! ರೂ. ನಂತೆ ಪೆನ್ಷನ್ ಕೊಡಬೇಕಾದರೆ ವರುಷಕ್ಕೆ ಸ್ವಲ್ಪ ಹೆಚ್ಚುಕಡಿಮೆ ೯ ಕೋಟಿ ೩೦ ಲಕ್ಷ ರೂಪಾಯಿ ಖರ್ಚಾಗುವದೆಂದು ಅಂದಾಜು ಹಿಡಿದಿದಾರೆ.

❖❖❖❖

ಒಂದು ದಿನಗಳ ಕೆಳಗೆ ವಿದ್ಯುಚ್ಛಕ್ತಿಯ ಸಹಾಯದಿಂದ ಓಡುವ ಮೋಟಾರ್‌ಕಾರ್ ಎಂಬ ಸಣ್ಣ ರಥಗಳ ಜೂಜು ಫ್ರಾನ್ಸ್ ರಾಜ್ಯದಲ್ಲಿ ನಡೆಯಿತು. ೨೨೩ ಮಂದಿ ಸವಾರರು ರಥಗಳನ್ನು ಬಿಡಿಸಿದರು. ಫ್ರಾನ್ಸಿನ ರಾಜಧಾನಿಯಾದ ಪ್ಯಾರಿಸ್‌ನಗರದಿಂದ ಹೊರಟು ಸ್ಪೇಯಿನ್ ರಾಜಧಾನಿಯಾದ ಮೆಡ್ರಿಡ್ ನಗರವನ್ನು ಆ ರಥಗಳು ತಲುಪಬೇಕಾಗಿದ್ದವು. ಈ ಜೂಜಿನ ಓಟವನ್ನು ನೋಡಲು ಲಕ್ಷಾಂತರ ಪ್ರಜೆಗಳು ಕುತೂಹಲಪಟ್ಟು ಆ ದಸ್ತೆಯ ಉದ್ದಕ್ಕೂ ಇಕ್ಕೆಲಯುವಂತೆ ನಿಂತಿದ್ದರು. ಎಂ. ಗೇಬ್ರಿಯಲ್ ಎಂಬವನು ೫ ಗಂಟೆ ೧೩ ನಿಮಿಷಗಳಲ್ಲಿ, ಅಂದರೆ ಗಂಟೆಗೆ ೬೫ ಮೈಲಿಗಳಂತೆ ತನ್ನ ರಥವನ್ನು ಓಡಿಸಿಕೊಂಡುಹೋಗಿ ಮೊದಲನೇ ಬಹುಮಾನವನ್ನು ಪಡೆದನು. ಕೆಲವು ಕಡೆ ಅವನು ಗಂಟೆಗೆ ೧೬೦ ಮೈಲಿಗಳಂತೆ ಓಡಿಸಿದ್ದೂ ಉಂಟು. ಎಂ. ಲೂಯಿ ರೇನಾಲ್ಟ್ ಎಂಬವನು ಗಂಟೆಗೆ ೬೨ ಮೈಲಿಯ ಪ್ರಕಾರ ಗಾಡಿ ಹೊಡಿಸಿ, ಎರಡನೇ ಬಹುಮಾನವನ್ನು ಹೊಂದಿದನು. ಪ್ರಾರಂಭದಲ್ಲಿ ಹೊರಟಿದ್ದ ೨೨೩ ಮಂದಿಯ ಪೈಕಿ ೬೯ ಮಂದಿ ಮಾತ್ರ ಮೆಡ್ರಿಡ್ ನಗರವನ್ನು ತಲುಪಿದರು. ಉಳಿದವರೆಲ್ಲಾ ದಾರಿಯಲ್ಲೇ ನಾನಾ ಅಪಘಾತಗಳಿಂದ ನಿಂತುಬಿಡಬೇಕಾಯಿತು. ಈ ಜೂಜಿನ ದೆಸೆಯಿಂದ ನಾಲ್ಕಾರು ಜನರು ಪ್ರಾಣಕಳಕೊಂಡರು; ಅನೇಕರಿಗೆ ಗಾಯಗಳಾದವು. ಇದನ್ನು ನೋಡಿ ಫ್ರಾನ್ಸ್ ಮತ್ತು ಸ್ಪೇಯಿನ್ ಸರ್ಕಾರಗಳವರು ಇನ್ನು ಮುಂದೆ ಯಾರೂ ಇಂಥಾ ಜೂಜನ್ನು ಓಡಿಸಕೂಡದೆಂದು ಹುಕುಂ ಮಾಡಿರುತ್ತಾರೆ.

## ಶ್ರೀ ಕೃಷ್ಣವಿಲಾಸ ಪ್ರೆಸ್.

35

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡು, ನೋಟೀಸ್ ಫಾರಂ, ಬ್ಯಾಲನ್ಸ್ ಷೀಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಛಾರ್ಜುಗಳಿಗೆ ಮಾಡಲ್ಪಡುತ್ತವೆ.

ರೋಜು, ವರ್ಗ, ಮುಂತಾದ ಖಾಲೀ ಪುಸ್ತಕಗಳು; ನಾನಾವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು; ಇನ್ನು ಇತರವಾದ ನಮೂನೆಯ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿನಂತೆ ಬಹು ಅಂದವಾಗಿ ತಯಾರ್ಮಾಡಲ್ಪಡುತ್ತವೆ.

ಲಾಯರ್‌ಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್, ವಕಾಲತ್‌ನಾಮಾ, ಜಾರೀ, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಮಾರಿಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯಿತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯತರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಅವಾಬನ್ನು ಅಪೇಕ್ಷಿಸುವವರು ಟಪ್ಪಾಲು ಹಾಸಲನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯುತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರಿಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡಪೇಟೆ ೨೩ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,

ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

---

ಜ್ವರಹರಿ. 38

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜಾಮತ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ಬರಿದಾಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ದಿನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ೨ ರೂ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

❖❖❖❖❖❖❖❖❖

ಧು ಮ ಂ ಕ ರ್ಪೂ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ನುಲಿಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಧುಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಪಾತ್ರಗಳಲ್ಲಿ, ಔಷಧ ವ್ಯಾಪಾರಿಗಳಲ್ಲಿ, ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರ್ರಲ್ಲಿ ವಿಶೇಷ.—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ನೆಕಂಡ್ ಲೈನ್, ಬೀಚ್ ಮದರಾಸ್.

---

### ಬೇಕಾಗಿದೆ.

2

ಕೊಳ್ಳೇಗಾಲದ ಗಂಡು ಹುಡುಗರ ಸ್ಕೂಲಿಗಾಗಿ ಕನ್ನಡಪಾಠ ಹೇಳಿ ಕೊಡುವ ಒಬ್ಬ ಮುಪ್ಪೀರು ಬೇಕು. ಕ್ರೈಸ್ತರಾದರೆ ಉತ್ತಮ. ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

"ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು.

---

## ಈಗಲೇ ಸಿದ್ಧವಾಗಿದೆ. ಕ್ರಯಕ್ಕುಂಟು.

4

೧೯೦೩ ನೇ ಇಸವಿ ಲೋವರ್ ಸೆಕೆಂಡರಿ ಕನಡ ಟೆಕ್ಸ್ಟಿನ ನೋಟ್ಸು. ೧೪೫ ನೇ ಪದ್ಯದಿಂದ ೩೦೭ ನೇ ಪದ್ಯದ ವರೆಗೂ ಇರುತ್ತೆ. ಗದ್ಯಕಾವ್ಯದ ನೋಟ್ಸೂ ಸೇರಿದೆ. ಅರ್ಥ, ತಾತ್ಪರ್ಯ, ಸಂಧಿ, ಸಮಾಸ, ಅವಯವಾರ್ಥ, ಭಾವಾರ್ಥ, ನಾನಾರ್ಥ, ಪೂರ್ವಕಥೆ, ವ್ಯಾಕರಣವಿಶೇಷ, ಪ್ರಶ್ನೋತ್ತರ, ಮುಂತಾಗಿ ಪರೀಕ್ಷೆಗೆ ಬೇಕಾಗತಕ್ಕ ಎಲ್ಲಾ ವಿಷಯಗಳೂ ವಿಶದವಾಗಿ ತಿಳಿಸಲ್ಪಟ್ಟವೆ. ಮರಿಮಲ್ಲಪ್ಪನವರ ಸ್ಕೂಲು ಮಹಾದೇವ ಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು. ೧೦ ಕ್ಕೆ ೧ ಪ್ರತಿ ಜಾಸ್ತಿ. ಪುಸ್ತಕ ದೊರೆಯುತಕ್ಕ ಸ್ಥಳ—

ಕೆ. ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.

---

### ನಮ್ಮ ಚಂದಾದಾರರಿಗೆ.

ವೃತ್ತಾಂತ ಪತ್ರಿಕೆಯ ಹೊಸ ವರ್ಷವು ಪ್ರಾರಂಭವಾಗಿರುವುದರಿಂದ ಇದು ನಮ್ಮ ಸ್ಥಳದ ಮತ್ತು ಪರಸ್ಥಳದ ಏಜಂಟ್ಗಳು ಬಾಕಿ ವರ್ಷದ ಚಂದಾ ವಸೂಲ್ಮಾಡತಕ್ಕ ಕಾಲವಾಗಿದೆ. ವಸೂಲಾದ ಮೊಬಲಗಿಗೆ ರಶೀತಿ ಕೊಡಲು ಅನುಕೂಲಿಸುವಂತೆ ಏಜಂಟರೆಲ್ಲರಿಗೂ ಪ್ರಿಂಟಾದ ರಶೀತಿ ಪುಸ್ತಕಗಳನ್ನು ಕಳುಹಿಸಿರುತ್ತೇವೆ. ಚಂದಾ ಪಾವತಿ ಮಾಡುವವರೆಲ್ಲರೂ ರಶೀತಿಯನ್ನು ಪಡೆದ ಹೊರತು ಮೊಬಲಗನ್ನು ಕೊಡಕೂಡದೆಂದು ಈ ಮೂಲಕ ಸರ್ವರಿಗೂ ತಿಳಿಸಿರುತ್ತೇವೆ. ಮ್ಯಾನೇಜರ್,

ಮೈಸೂರು. ವೃತ್ತಾಂತ ಪತ್ರಿಕೆ ಆಫೀಸ್.

---

### ಹೀನೊಸಿಯಾ.

ಕಷ್ಟ ಪರಿಹಾರ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿರುವರು. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಆದೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ—ಸಣ್ಣ ಡಬ್ಬಾ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಾ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬದಲ್ಲಿ ೧ ರೂ. ಡಬ್ಬದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್, ಖರ್ಚು ಮಾಫಿ ಬಿಡುತ್ತೆ.

❖❖❖❖❖❖❖❖❖

### ಹೋಮೋಸಿಯಾ ಡಂಜೆರ್ ಕೇಪಸ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತಲಾ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫು. ಎಲ್ಲಾ ಪಾತ್ರಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟಿಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ—ಹೋಮೋಸಿಯಾ ಕಂಪೆನಿ, ೨೩ ಸೆಕೆಂಡು ಬೀಚ್ ಲೈನ್, ಮದರಾಸ್.

---

### ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

12—6—1903 ರಿಂದ 18—6—1903 ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಸತ್ತದ್ದು. | ಹಿಂದಿನವಾರ ಸಂಖ್ಯೆಗಳು | |
|---|---|---|---|---|
| ಬೆಂಗಳೂರು ಪಟ್ಟಣ | | | | |
| ಮೈಸೂರು ,, | 4 | 5 | 1 | |
| ಬೆಂಗಳೂರು ಡಿಸ್ಟ್ರಿಕ್ಟ್ | 6 | 6 | 11 | 11 |
| ಮೈಸೂರು ,, | 31 | 31 | 27 | 22 |
| ಕೋಲಾರ್ ,, | | | 1 | 1 |
| ಕೋಲಾರ್ ಚಿನ್ನದ ಗಣಿಗಳು | | | | |
| ತುಂಕೂರು ಡಿಸ್ಟ್ರಿಕ್ಟ್ | 6 | 5 | 2 | 2 |
| ಹಾಸನ ,, | 3 | 1 | 2 | 3 |
| ಚಿತ್ರದುರ್ಗ ,, | 16 | 14 | 20 | 14 |
| ಕಡೂರ್ ,, | | | | |
| ಶಿವಮೊಗ್ಗ ,, | 3 | 1 | 3 | 1 |
| ಜುಮ್ಲಾ. | 69 | 63 | 77 | 64 |

---

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರದ ಆಷಾಢ ಶುದ್ಧ ಅಷ್ಟಮಿ ಗುರುವಾರದಿಂದ ಆಷಾಢ ಶುದ್ಧ ಚತುರ್ದಶಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ, ಜುಲೈ.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ಮಿಥುನ ಮಾಸ ತೇದಿ. |
|---|---|---|---|---|---|---|
| 2 | ಗುರು | ಅಷ್ಟಮಿ | 31 51 | ಹ | 31-1 | 18 |
| 3 | ಶುಕ್ರ | ನವಮಿ | 29 70 | ಚಿ | 33-36 | 19 |
| 4 | ಶನಿವಾರ | ದಶಮಿ | 27 50 | ಸ್ವಾ | 34-10 | 20 |
| 5 | ರವಿವಾ * | ಏಕಾದಶಿ | 27-18 | ವಿ | 36-1 | 21 |
| 6 | ಚಂದ್ರ † | ದ್ವಾದಶಿ | 29 18 | ಅ | 39 15 | 22 |
| 7 | ಕುಜ | ತ್ರಯೋದಶಿ | 31 25 | ಜ್ಯೇ | 43 20 | 23 |
| 8 | ಬುಧ | ಚತುರ್ದಶಿ | 31 49 | ಮೂ | 48 25 | 24 |

* ಸರ್ವತ್ರ ಏಕಾದಶೀ, ಗೋಪದ್ಮವ್ರತಾರಂಭ, ಚಾತುರ್ಮಾಸ್ಯವ್ರತಾರಂಭ, † ಶಾಕವ್ರತಾರಂಭ, ಸೋಮಪ್ರದೋಷ, ಶಯನೋತ್ಸವ.

---

### ಪೇಟೆ ಧಾರಣೆ.

| ದಿನಸಿ. | ಮೈಸೂರು. | ಬೆಂಗಳೂರು. |
|---|---|---|
| ಕಪ್ಪೇ ಅಕ್ಕಿ ಪಲ್ಲ ೧ಕ್ಕೆ | ರೂ. ೧೦ ೮—೦ | ೧೦—೮—೦ |
| ಕೆಂಬೂತಿ ಅಕ್ಕಿ ಅವಲ್ | ೧೦ ೪ ೦ | ೧೧—೮—೦ |
| ,, ದಾಯಂ | ೯—೮—೦ | ೧೦—೮—೦ |
| ಬ್ರಾಹ್ಮಣಿ ಅಕ್ಕಿ | ೯—೪—೦ | ೧೨—೦—೦ |
| ಸಣ್ಣಕ್ಕಿ ಅವಲ್ | ೧೨ ೮—೦ | ೧೧—೮—೦ |
| ,, ದಾಯಂ | ೧೨ ೦—೦ | ೧೧—೦—೦ |
| ತೊಗರೀ ಬೇಳೆ ಪಲ್ಲ ೧ಕ್ಕೆ | ೧೩ ೦ ೦ | ೧೨—೦—೦ |
| ,, ದಾಯಂ | ೧೨ ೮—೦ | ೧೨—೮—೦ |
| ಕೈರ್ ರಾಗಿ ಪಲ್ಲ ೧ಕ್ಕೆ | ೩ ೧೪—೦ | ೩—೩—೦ |
| ಕಾರ್ರಾಗಿ | ೩—೮ ೦ | ೩—೪—೦ |
| ಜೋಳ | ೩—೧೦—೦ | ೪—೮—೦ |
| ಹಲಸಂದೆ ಪಲ್ಲ ೧ಕ್ಕೆ | ೮—೮—೦ | ೭—೦—೦ |
| ಬಿಳೇ ಅವರೆ | ೩ ೦.೦ | ೩—೦—೦ |
| ಹೆಸರು | ೯—೦—೦ | ೯—೮—೦ |
| ಉದ್ದು | ೮ ೪ ೦ | ೧೦—೦—೦ |
| ಕಡಲೆ | ೯—೮—೦ | ೯—೧೨—೦ |
| ಎಳ್ಳು | ೧೩ ೧೨ ೦ | ೧೦—೧೫—೯ |
| ಹುರುಳಿ | ೪—೦ ೦ | ೪—೧೨—೦ |
| ಹರಳು ೧೨೩ ಸೇರಿಗೆ | ೯—೧೨—೦ | ೫—೧೨—೦ |
| ಸೀಗೇಕಾಯಿ ಮಣ ೧ಕ್ಕೆ | ೦—೮—೦ | ೧—೧೨—೦ |
| ಮೆಣಸಿನಕಾಯಿ | ೨—೮—೦ | ೨—೦—೦ |
| ,, ದಾಯಂ | ೨—೪ ೦ | ೧—೮—೦ |
| ಬೆಲ್ಲ ದೊಡ್ಡ ಅಚ್ಚು | ೪—೮—೦ | ಮ ೧—[illegible] |
| ಒಳ್ಳೆಣ್ಣೆ ಮಣ ೧ಕ್ಕೆ | ೫—೦ ೦ | ೪—೮— |
| ಹರಳೆಣ್ಣೆ ,, | ೩—೧೨—೦ | ೩—೦— |
| ಕೊತ್ತುಂಬರಿ ಬೀಜ ೧ಕ್ಕೆ | ೫ ೮—೦ | ೫—೭— |
| ಉಪ್ಪು ,, | ೯—೦—೦ | ೮—೪— |
| ಹುಣಸೇ ಹಣ್ಣು | ೦ ೧೪—೦ | ೦—೦— |
| ,, ಹಳೇದು | ೦—೧೦—೦ | ೦—೧೪— |
| ತುಪ್ಪ | ೧೦ ೧೨—೦ | ೧೦—೮— |
| ಸೀಮೆಯೆಂಪೆ ಪೆಟ್ಟಿ ೧ಕ್ಕೆ | ೪ ೯—೦ | ೪—೩— |
| ತೆಂಗಿನಕಾಯಿ ೧೦೦ ಕ್ಕೆ | ೪—೪—೦ | ೩—೪— |
| ಅಡಿಕೇಕಾಯಿ ಮಣ ೧ಕ್ಕೆ | ೧—೧೪—೦ | ೦—೧೦— |
| ಅಂಟುವಾಳದಕಾಯಿ ಮಣ ೧ಕ್ಕೆ | ೬—೧೪—೦ | ೦—೧೦— |
| ಚಿನ್ನ (ಪವನ್) ಕೆಂಪು | ೧೫—೪—೦ | ೧೫—೪— |
| ,, ,, ಪಸಿಮೆ | ೧೫—೮—೦ | ೧೫—೮— |
| ,, ,, ಗಟ್ಟಿ ತೊಲ ೧ಕ್ಕೆ | ೨೬—೦—೦ | ೨೪—೮— |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ | ೨೭—೦—೦ | ೬೬—೮— |

Printed and Published by the Rev. E. W. Thompson, M. the Proprietor and Manager, Wesleyan Mission Pre Mysore. 2/7/1903.

# ವೃತ್ತಾಂತ ಪತ್ರಿಕೆ.

REGISTERED. No. 20

ರೂ ೧ ರ ಮುಂಗಡ —:o:— ಕ್ರಯ ೧ ರ ಮುಂಗಡ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೨ — ಮೈಸೂರು—ಸನ್ ೧೯೦೩ ನೇ ಇಸವಿ ಜೂಲೈ ತಾರೀಖು ೯ ನೇ ಗುರುವಾರ. — ಸಂಚಿಕೆ ೬

## THE FOREIGN MISSIONS AND GENERAL AGENCY.

18

ಮೇಲೆ ಕಂಡ ಏಜನ್ಸಿಯವರು ದೇಶೀಯ ವರ್ತಕರಿಗೂ ಇತರರಿಗೂ ಇಂಗ್ಲಾಂಡಿನಲ್ಲಿ ತಯಾರಾಗುವ ಯಾವ ಸಾಮಾನನ್ನು ಬೇಕಾದರೂ ಸುಲಭವಾದ ಕಮಿಷನ್ ತಕ್ಕೊಂಡು ಕಳುಹಿಸುವರು. ಆರ್ಡರು ಕಳುಹಿದ ಕೂಡಲೆ ಸಾಮಾನುಗಳು ಬಹು ಜಾಗ್ರತೆಯಾಗಿ ರವಾನೆ ಮಾಡಲ್ಪಡುವುವು. ಈ ವಿಷಯದಲ್ಲಿ ತಿಳಿದುಕೊಳ್ಳಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕೆಂದು ಕೋರುತ್ತೇವೆ.

A. J. Bride,
*Manager,*
*29-35, City Road, London*

## ೧೯೦೩, ನೆಯ್ದಾಗಿದೆ. ಕ್ರಯ ೧೨ ಆಣೆ.

5

೧೯೦೩ ನೇ ಇಸವಿ ಲೋವರ್ ಸೆಕೆಂಡರಿ ಕನಡ ಟೆಕ್ಸ್ಟಿನ ನೋಟ್ಸು. ೧೨೬ ನೇ ಪದ್ಯದಿಂದ ೩೦೩ ನೇ ಪದ್ಯದ ವರಿಗೂ ಇರುತ್ತೆ. ಗದ್ಯಕಾವ್ಯದ ನೋಟ್ಸೂ ಸೇರಿದೆ. ಅರ್ಥ, ತಾತ್ಪರ್ಯ, ಸಂಧಿ, ಸಮಾಸ, ಅನ್ವಯಾರ್ಥ, ಭಾವಾರ್ಥ, ನಾನಾರ್ಥ, ಪ್ರಾಸ್ತಾವಿಕ, ವ್ಯಾಕರಣವಿಶೇಷ, ಪ್ರಶ್ನೋತ್ತರ ಮುಂತಾಗಿ ಪರೀಕ್ಷೆಗೆ ಬೇಕಾಗತಕ್ಕ ಎಲ್ಲಾ ವಿಷಯಗಳೂ ವಿಶದವಾಗಿ ತಿಳಿಸಲ್ಪಟ್ಟಿವೆ. ಮಹಿಮಾಳ್ವಸ್ವನವರ ನಕ್ಕಲು ಮಹಾದೇವ ಶಾಸ್ತ್ರಿಗಳಿಂದ ರಚಿಸಲ್ಪಟ್ಟಿದ್ದು. ೧೦ ಕ್ಕೆ ೧ ಪ್ರತಿ ಜಾಸ್ತಿ. ಪುಸ್ತಕ ದೊರೆಯುತಕ್ಕ ಸ್ಥಳ.—

ಜಿ ನರಸಿಂಹಯ್ಯ ಮತ್ತು ಕಂಪನಿ, ಮೈಸೂರು.

## ಇಸ್ತಿಹಾರ್.

2

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ —

ಸಿಟಿ ಮಹಲ್ಲೂರು ದರೋಬಸ್ತು ಮೊಹಲ್ಲಾಗಳಲ್ಲಿಯೂ ೪ ಚಕ್ರದ ಸ್ಪ್ರಿಂಗು ಗಾಡಿಗಳು, ೨ ಚಕ್ರದ ಸ್ಪ್ರಿಂಗು ಗಾಡಿಗಳು, ಪೆಟ್ಟಿಗೆ ಗಾಡಿಗಳು, ಡಾಗ್‌ಕಾರ್ಟುಗಳು, ಹಳ್ಳಿ ಬಂಡಿ ಗಾಡಿಗಳು, ಕುದುರೆಗಳು, ಮತ್ತು ಪೋನಿಗಳು ವಗೈರೆ ಸಹಾ ಇಟ್ಟಿರತಕ್ಕವರು ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ ೩೮ ನೆ ಸೆಕ್ಷನನಲ್ಲಿ ವಿಧಾಯಕವಾಗಿರುವಂತೆ ಆಯಾ ಜನಗಳು ಹಿಂದಣ ಬಾಕಿ ಏನಾದರೂ ಕೊಡಬೇಕಾಗಿದ್ದರೆ ಅಂಥಾ ಬಾಕಿ ಮತ್ತು ಮುಂದಣ ೧೯೦೩—೦೪ ನೆ ಸಾಲಿಗೆ ಅಡ್ವಾನ್ಸ್ ತೆರಿಗೆ ಇವುಗಳನ್ನು ಯಾ ಆಫೀಸಿನಲ್ಲಿ ದಾಖಲೆ ಮಾಡಿ ಗಾಡಿಗಳಿಗೆ ನಂಬರು ಹಾಕಿಸಿಕೊಳ್ಳಬೇಕು. ಅಥವಾ ಪ್ಯಾಸು ತೆಗದುಕೊಳ್ಳಬೇಕು. ನಂಬರು ಹಾಕಿಸುವದಕ್ಕಾಗಿ ೧೯೦೩ ನೆ ಇಸವಿ ಜುಲೈ ತಾರೀಖು ೧ ರ ಬಾಗಾಯತು ೩೦ ರ ವರಿಗೆ ೧ ತಿಂಗಳು ಮಾಯಿದೆ ಕೊಟ್ಟಿರುತ್ತೆ. ಆ ಬಳಿಕ ಬರತಕ್ಕ ಗಾಡಿಗಳಿಗೆ ಸಾಕಾದಷ್ಟು ಕಾರಣ ತೋರಿಸದೆ ಇದ್ದಲ್ಲಿ ನಂಬರು ಹಾಕಿಸುವದಿಲ್ಲ.

೨. ಮೇಲ್ಕಂಡಂತೆ ನಂಬರು ಹಾಕಿಸಿಕೊಳ್ಳದೆ ಅಥವಾ ಪ್ಯಾಸ್ ತೆಗದುಕೊಳ್ಳದೆ ಹೋದರೆ ಅಂಥಾ ಗಾಡಿಗಳ, ಅಥವಾ ಜಾನವರುಗಳ ಮಾಲೀಕರಾಗಲಿ, ಅವರ ಕಡೆ ಏಜಂಟರಾಗಲಿ, ಸಿಟಿ ಮಹಲ್ಲೂರು ಟೋಲ್‌ಗೇಟುಗಳ ಮುಖಾಂತರವಾಗಿ ಸಿಟಿ ಒಳಕ್ಕೆ ಪ್ರವೇಶ ಮಾಡಿದರೆ ರೂಲ್ಸಿನಂತೆ ಟೋಲ್ ಎಂಬ ಸುಂಕವನ್ನು ಕೊಡಲು ಬದ್ಧರಾಗಿರುತ್ತಾರೆ.

೩. ಗಾಡಿಗಳು ಅಥವಾ ಕ್ಯಾರೇಜುಗಳು ಟವರ್ನನಲ್ಲಿ ಇದ್ದು ಕೊಂಡು ಮ್ಯುನಿಸಿಪಾಲಿಟಿಗೆ ಕಂದಾಯ ಕೊಡುತ್ತಿದ್ದರೂ ಟೋಲ್‌ಗೇಟುಗಳಲ್ಲಿ ಟೋಲ್ ಎಂಬ ಸುಂಕವನ್ನು ವಸೂಲ್ಮಾಡದರು ಎಂಬದಾಗಿ ವಗೈರೆ ಇತರರ ಪ್ಯಾಸ್ ಪಡಿಯದೆ ಅಥವಾ ನಂಬರು ಹಾಕಿಸಿಕೊಳ್ಳದೆ ಬರತಕ್ಕ ಫಿರ್ಯಾದುಗಳಿಗೆ ನಿಗಾಕೊಡುವದಿಲ್ಲ ತಿಳಿಯುವದು.

ಮೈಸೂರು ಸಿಟಿ ಮ್ಯುನಿಸಿಪಲ್ ಆಫೀಸು.
ತಾರೀಖು ೨೩ ನೆ ಮಾಹೆ ಜೂನ್ ೧೯೦೩ ನೆ ಇಸವಿ.

K. Sreenivasa Rao,
*Vice President.*

## ಒಳ್ಳೇ ಔಷಧಗಳು.

3

ನಯನವ್ಯಾಧಿಗೆ ಸುಖಾಂಜನವು.—ಹೊಸದಾಗಿ ಅಥವಾ ಬಹು ಕಾಲದಿಂದ ಕಣ್ಣಿನಲ್ಲಿ ಇರುತ್ತಿದ್ದ ಎಲ್ಲ ಪ್ರಕಾರದ ಬಾಧೆಗಳು ಇದರಿಂದ ಬಹು ಬೇಗನೆ ಗುಣ ಹೊಂದುವವು. ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು, ಪಿಸರೂ ಬರುತ್ತಿರುವದೂ, ಉರಿ, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದೂ, ದೃಷ್ಟಿಮಾಂದ್ಯ ಮುಂತಾದ ವಿಶಿಷ್ಟ ವ್ಯಾಧಿಗಳು ಗುಣ ಹೊಂದುತ್ತವೆ. ಕ್ರಯ ೧ ಡಬ್ಬಿಗೆ ೧ ರೂ. ಪೋಸ್ಟ ಖರ್ಚು ಆಣೆ ೬.

ವಾಯುಹಾರಕ ತೈಲ (ಬಾಹ್ಯಲೇಪನಕ್ಕೆ ಮಾತ್ರ).—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವ ಇತರ ವಾಯುಗಳ ಬಾಧೆ, ತಲೆನೋವು, ಚಿಕ್ಕ ಹುಡುಗರ ಉಬ್ಬಸ, ಕೆಮ್ಮು, ಕೂಡ ಗುಣ ಹೊಂದುವವು. ಕುಪ್ಪಿಗೆ ೧ ರೂ. ಖರ್ಚು ಆಣೆ ೬.

ಗಜಕರ್ಣದ ಮುಲಾಮು.—೨ ಯಾ ೩ ಆವರ್ತಿ ಹಚ್ಚುವದರೊಳಗೆ ಎಂಥ ಕಠಿಣವಾದ ಗಜಕರ್ಣವಾದಷ್ಟು ಇದ್ದರೂ ಪೂರ್ಣ ಗುಣ ಹೊಂದುವದು. ಡಬ್ಬಿಗೆ ಆಣೆ ೮. ಖರ್ಚು ೧ ರಿಂದ ೬ ಡಬ್ಬಿ ವರಿಗೆ ಆಣೆ ೬.

ಕರ್ಣಸ್ರಾವಕ್ಕೆ ವನೌಷಧಿ ತೈಲ (ಬಾಹ್ಯೋಪಚಾರಕ್ಕೆ ಮಾತ್ರ).—ಚಿಕ್ಕ ಪ್ರಾಯದವರ ಮತ್ತು ಜರ್ಠ ಪ್ರಾಯದವರ ಕಿವಿಯಿಂದ ರಕ್ತವಾಗಲಿ ಕೀವಾಗಲಿ ನೀರಾಗಲಿ ದುರ್ಗಂಧ ಸ್ರಾವವಾಗಲಿ ಹೊಸ್ತಾಗಿ ಅಥವಾ ಬಹುಕಾಲದಿಂದ ಹರಿಯುತ್ತಿದ್ದರೆ ಮತ್ತು ಅದರ ಮೂಲಕ ನೋವು ಕಳತವು ತುರುಸುವಿಕೆಯೂ ಇರುತ್ತಿದ್ದರೆ, ಇದರ ಉಪಯೋಗದಿಂದ ಬಹು ಬೇಗನೆ ಸಂಪೂರ್ಣ ಗುಣವು ಪ್ರಾಪ್ತವಾಗುವದು. ಕ್ರಯ ರೂ. ೧. ಖರ್ಚು ಆಣೆ ೬.

ವ್ಹಿ. ಪಿ ಯಿಂದಲೂ ರವಾನಿಸುವೆವು. ಇನ್ನು ಅನೇಕ ಉತ್ತಮವಾದ ಔಷಧಗಳ ಬಗ್ಗೆ ಸವಿಸ್ತರ ಕ್ಯಾಟ್ಲಾಲಗು ತರಿಸಿ ಓದಿ ನೋಡಿ. ನಮ್ಮ ವಿಳಾಸವೇನಂದರೆ.—

ರಾಜವೈದ್ಯ ಮತ್ತು ಕಂಪನಿ, ಬೀಗಿ. ಉತ್ತರ ಕನ್ನಡಾ ಜಿಲ್ಲಾ.

## ROBINSON'S PATENT BARLEY.

## ರಾಬಿನ್‌ಸನ್‌ಯವರ ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಸವೆಗೋಧಿಯಿಂದ ಮಾಡಿದೆ. ಹಸ್ತಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ಕೆಲವು ವಸ್ತುವನ್ನು ಕೆಲವರು ಮಾಡುತ್ತಿರುವದರಿಂದ ಖಾತ್ರಿಯಾದ ನಮ್ಮ ಹಿಟ್ಟು ದೊರಿನಲ್ಲಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

## MELLIN'S FOOD.

### ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

67

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಪುಷ್ಟಿಯನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮೂಳೆಗಳೂ ಚೆನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಕಷ್ಟನೀಡುವತಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಪಾಕ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಕೂಸುಗಳಿಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ದಿನಸು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಿಡುಬಾಕಿದ ಕಾಲದಲ್ಲಿಯೂ ಜ್ವರದಲ್ಲಿಯೂ ಒದಗುವ ವಿಕಾರದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುಪ್ತವಾದ ಪದಾರ್ಥವು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿವೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ತಕ್ಕದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ಕಾಪಾಡುವದರಿಂದ ಕೂಸುಗಳಿಗೆ ರೋಗಕಾಲದ ವಿಪತ್ತುಗಳನ್ನು ಕಡಿಮೆ ಮಾಡುತ್ತದೆ

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಂದಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಡಾಕ್ಟರುಗಳಿಂದ ಖರೀದಿ ಮಾಡಿಕೊಳ್ಳಬಹುದು —

ಮದರಾಸ್ —ಮೆ॥ ಕಂಪನಿ ಏಜೆಂಟ್ ಬ್ರದರ್ಸ್

ಬೊಂಬಾಯಿ —ಮೆ॥ ರಿಡ್ಜ್ ಕೆಮಿಕಲ್ ಕಂಪನಿ.

ಕಲ್ಕತ್ತಾ —ಮೆ॥ ಮೆಲ್ಲಿನ್‌ಸ್ ಫುಡ್ ಕಂಪನಿ.

ಕೊಳಂಬೊ —ಮೆ॥ ಮಿಲ್ಲರ್ ಕಂಪನಿ

ಕರಾಚಿ —ಮೆ॥ ಎಚ್. ಜೆ. ರಾಸ್ ಕಂಪನಿ.

ಮದ್ರಾಸು —ಮೆ॥ ಓಕ್ ಕಂಪನಿ.

ರಂಗೂನ್—ಲೀಡಂ ಬ್ರಾಸ್ ಕಂಪನಿ.

ಬೇಕಾಗಿದೆ.

3

ಕೆಳ್ಳೇಗಾಲದ ಗಂಡು ಹುಡುಗರ ಸ್ಕೂಲಿಗಾಗಿ ಕನ್ನಡವಾಠ ಹೇಳಿ ಕೊಡುವ ಒಬ್ಬ ಮುಂಷಿ(ರು) ಬೇಕು. ಕ್ರೈಸ್ತರಾದರೆ ಉತ್ತಮ. ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

"ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು.



## ಶಿವಮೊಗ್ಗ ಡಿಸ್ಟ್ರಿಕ್ಟ್

ಸ್ಕೂಲ್ಬುಕ್ಕುಗಳೂ,

ಹಾಸನ ಬೋರ್ಡುಗಳೂ,

ಲೇಖನ ಸಾಮಗ್ರಿಗಳೂ

ಕ್ರಯಕ್ಕೆ ದೊರೆಯುತ್ತವೆ.

ವೋಲ್ಸೇಲ್:—

ಮ್ಯಾನೇಜರ್, ಮಿಷನ್ ಬುಕ್ ಡಿಪೋ,

ಶಿವಮೊಗ್ಗ.



ಕಲ್ಕತ್ತಾ ಪ್ರಾವಿಡೆಂಟ್ ಇನ್‌ಸ್ಟಿಟ್ಯೂಷನ್.

ನೋಟಿಸ್.

ಈ ಇನ್‌ಸ್ಟಿಟ್ಯೂಷನಿಗೆ ಸಂಬಂಧಪಟ್ಟ ಸರ್ವರ ಸಂಜಾಯಿಷಿಗಾಗಿ ಈ ಮೂಲಕ ತಿಳಿಯಪಡಿಸುವದೇನಂದರೆ—

ಈ ಸಂಘದ ಲೆಕ್ಕಾಚಾರಗಳನ್ನು ಮೆಸರ್ಸ್ ಪ್ಯಾಟನ್ ಅಂಡ್ ಕಂಪನಿ ಎಂಬುವರು ಪರೀಕ್ಷೆ ಮಾಡುತಲಿರುವರಾದ್ದರಿಂದ ಪರೀಕ್ಷೆ ಪೂರೈಸಿದ ಕೂಡಲೆ ಮರಣ ಪಟ್ಟವರ ಕಡೆಯವರಿಗೆ ಸಲ್ಲತಕ್ಕ ಆಪ್ಪೆಲ್ ಬಾಬತಿಗಳೆಲ್ಲಾ ವ್ಯವಸ್ಥೆ ಮಾಡಲ್ಪಡುವುವು. ಎಷ್ಟು ದಿವಸಗಳ ಲೆಕ್ಕ ಈಗ ಪರೀಕ್ಷೆಯಲ್ಲಿ ನಡೆಯೋ ಆ ಕಾಲಾವಧಿಯಲ್ಲಿ ಮರಣ ಪಟ್ಟರುವ ಡಿಪ್ಲೋಮಾ ಹೋಲ್ಡರುಗಳಿಂದ ಒಟ್ಟು ೬೨೩ ರೂ. ಬಂದಾ ವಸೂಲಾಗಿರುತ್ತದೆ. ಸದರಿಯವರ ವಾರಸುದಾರರಿಗೆ ಮೊದಲೇ ಪಾವತಿಯಾಗಿರುವುದು, ಒಟ್ಟು ೩,೪೭೦ ರೂ. ಇನ್ನೂ ಎಷ್ಟು ಬಾಕಿ ಇವರಿಗೆ ಸಲ್ಲಬೇಕಾಗಿದೆ ಎಂಬುದು ಲೆಕ್ಕದ ಪರೀಕ್ಷೆಯಲ್ಲಿ ತಿಳಿದಕೂಡಲೆ ಅದೂ ಕೊಡಲ್ಪಡುವುದು. ಬಾಕಿ ವರ್ಷದಲ್ಲಿ ಕಳೆದ ಕೆಲವು ತಿಂಗಳುಗಳಲ್ಲಿಯೇ ೩,೯೦೦ ರೂಪಾಯಿಗಳು ಅಡ್ವಾನ್ಸ್ ಆಗಿ ಕೊಡಲ್ಪಟ್ಟಿರುವುವು. ಬಂದಾ ರೂಪವಾಗಿ ೬೨೯ ರೂಪಾಯಿಗಳು ಮಾತ್ರ ವಸೂಲಾಗಿರುವುವು.

ಕೆ. ಕೆ. ಬೋಸ್,

ಮ್ಯಾನೇಜರ್.



## ದೇವಾಂಗ ವಂಶಸ್ಥರಿಗಿದು ಬೇಕಾದ್ದು

11

ಸ್ವಲ್ಪ ಪ್ರತಿಗಳಿವೆ. ಜಾಗ್ರತೆಪಟ್ಟರೆ ಸಿಕ್ಕುತ್ತೆ. ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು. ಅರ್ಥಸಹಿತ ದೇವಾಂಗಮತಪ್ರಕಾಶಿಕೆ ಸಹ್ಯಾವ ಕಾರಕ್ಕೆ ಸುಂದರವಾದ ೧೪ ತಸ್ವೀರು. ಸ್ವಮತತತ್ವವಿಚಾರದ ಪ್ರಕಾಶದರ್ಪಣವು. ಪ್ರತ್ಯಕ್ಷ ನೋಡಿ ಸಂತೋಷಪಡಿ.

೧೪ ತಸ್ವೀರಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೩—೪.

ತಸ್ವೀರಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೨—೪.

ವೇದ ಉಪನಿಷತ್ತು ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ. ೨—೪,

ತಕ್ಷಣವೇ ಮಣಿಆರ್ಡರಿಗೂ ವಿ. ಪಿ. ಲೂ ಕಳುಹಿಸುತ್ತೇವೆ. ಮೈಸೂರು ಜವಳಿ ಅಂಗಡಿ ಬ್ರಿಕ್ಕೆಟ್ರೀ ಯಜಮಾನ ಪುಟ್ಟಮಲ್ಲಯ್ಯ. ಬ್ರಿಕ್ಕೆಟ್ರೀ ಯಜಮಾನ ಕಂಕಣ್ಯಯನವರಲ್ಲಿ ಈ ಗ್ರಂಥ ಸಿಕ್ಕುತ್ತೆ.



## ಚೇಂಬರ್ಲಿನ್ ಯವರು ಹೊಟ್ಟೆಕರೂಳೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

27




ಕೆಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಕೀಲುಗಳ ನೋವು, ಹೊಟ್ಟೆಕರೂಳೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ:—"ಕೆಳಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ರೋಳಿಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತೇ ಒಂದು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ.—

ಜಿ. ವಿ. ನರಸಿಂಹಲು ಚೆಟ್ಟಿ,

ನಂ. ೨, ತಂಬೂನಾಯಕರ ಬೀದಿ,

ಮದರಾಸ್.


ವೃತ್ತಾಂತ ಪತ್ರಿಕೆ.

—:o:—

ಸನ್ ೧೯೦೩ ನೇ ಇಸವಿ ಜೂಲೈ ತಾ॥ ೯ ನೇ ಗುರುವಾರ

## ಮೈಸೂರು ಸಂಸ್ಥಾನದ ಪೋಲೀಸ್ ರಿಪೋರ್ಟು.

೧೯೦೨ನೇ ಜೂನ್ ಆಖೈರಿಗೆ ಪೂರ್ತಿಯಾದ ಒಂದು ವರುಷದ ಪೋಲೀಸ್ ರಿಪೋರ್ಟನ್ನು ರಾವ್ ಬಹದೂರ್ ಮಾಧ್ಯಯನವರು ಪ್ರಕಟಿಸಿರುತ್ತಾರೆ. ಈ ರಿಪೋರ್ಟು ತುಂಬಾ ಸಾವಕಾಶವಾಗಿ ಪ್ರಕಟನೆಯಾಗಿದೆ; ಹೀಗೆ ಸಾವಕಾಶವಾಗಲು ಇಂಡಿಯಾ ಗೌವರ್ನಮೆಂಟಿನವರು ಇಟ್ಟುಕೊಂಡಿರುವಂಥಾ ಕ್ರಮದಲ್ಲಿ ಹೊಸತರಹಾ ತಃಖ್ತೆಗಳನ್ನು ತಯಾರ್ಮಾಡಿದ್ದು ಛೀಫ್ ಕೋರ್ಟಿನವರು ಮ್ಯಾಜಿಸ್ಟ್ರೇಟರುಗಳಿಗೆ ಹೊಸ ಕ್ರಮದಂತೆ ತಃಖ್ತೆಗಳನ್ನು ತಯಾರ್ಮಾಡಿ ಕಳುಹಿಸುವಂತೆ ತಿಳಿಸುವದರಲ್ಲಿ ಸಾವಕಾಶವಾದದ್ದೂ ಕಾರಣಗಳೆಂದು ಹೇಳಿ ಇದೆ. ಈ ವಿಷಯದಲ್ಲಿ ಗೌವರ್ನಮೆಂಟಿನವರು ಹುಕುಮನ್ನು ಛೀಫ್ ಕೋರ್ಟಿಗೆ ಜಾಗ್ರತೆಯಾಗಿ ಕಳುಹಿಸಲಿಲ್ಲವಂತೆ. ಕಾರಣ ಏನಾದರೂ ಆಗಲಿ; ಹೀಗೆ ರಿಪೋರ್ಟು ಸಾವಕಾಶವಾಯಿತಲ್ಲಾ ಎಂದು ವಿಷಾದಿಸಬೇಕಾಗಿದೆ. ಈಚೆಗೆ ಗೌವರ್ನಮೆಂಟಿನವರು ವಾರ್ಷಿಕ ರಿಪೋರ್ಟುಗಳನ್ನು ಸಾವಕಾಶವಾಗಿ ಪ್ರಕಟಿಸುವದರಲ್ಲಿ ಅನ್ಯಾಪೇಕ್ಷಿತವಲ್ಲದಂಥಾ ಕೀರ್ತಿಯನ್ನು ಸಂಪಾದಿಸಿಕೊಳ್ಳುತ್ತಾ ಬಂದಿದ್ದಾರೆ.

ಈ ರಿಪೋರ್ಟನ್ನೆಲ್ಲಾ ಆದ್ಯಂತವಾಗಿ ನೋಡಿದರೆ ಪೋಲೀಸಿನವರು ನಡಿಸತಕ್ಕ ಕಾರ್ಯಗಳ ವಿಷಯದಲ್ಲಿ ಮೆ॥ ಮಾಧ್ಯಯನವರು ತೃಪ್ತಿಪಟ್ಟಿರುವಂತೆ ಕಾಣುವದು. ಗತಸಾಲಿಗಿಂತಲೂ ಈ ವರುಷದಲ್ಲಿ ನಡೆದಿರತಕ್ಕ ಪೋಲೀಸ್ ವಿಷಯಗಳು ಚನ್ನಾಗಿರುವಂತೆ ಲೆಕ್ಕಗಳನ್ನು ಕೊಟ್ಟಿದ್ದಾರೆ.

| | ೧೯೦೨ | ೧೯೦೧—೨ |
|---|---|---|
| ೧. ಪೋಲೀಸಿನವರು ಹಿಡಿದ ಮೊಕದ್ದಮೆಗಳ ಪೈಕಿ ಅಪರಾಧಿಗಳಿಗೆ ಶಿಕ್ಷೆಯಾಗಿರುವದು; ಶೇಕಡಾ............ | ೩೬೬ | ೩೪ ೦೨ |
| ೨. ಪೋಲೀಸಿನವರು ಪರ್ಯಾಪ್ತಿಗೆ ಒಪ್ಪಿಸಿದ ಅಪರಾಧಿಗಳಲ್ಲಿ ಶಿಕ್ಷೆಯಾಗಿರತಕ್ಕವರು; ಶೇಕಡಾ.............. | ೬೯.೦೭ | ೬೨.೭ |
| ೩. ಜಿಂದಗಿ ಕಳುವಾದದ್ದಕ್ಕೂ ಪತ್ತೆಯಾದದ್ದಕ್ಕೂ; ಶೇಕಡಾ........ | ೩೦.೨ | ೩೬.೩ |

ಈ ಬಾಬುಗಳಿಗೆ ಕುಂಭಕೋಣಿಯು ಪೋಲೀಸ್ ಇಲಾಖೆಯವರು ಕೊಟ್ಟಿರುವ ಸಂಖ್ಯೆಗಳಿಗಿಂತಲೂ ಈ ಮೈಸೂರಿನ ಸಂಖ್ಯೆಗಳೇ ಉತ್ತಮವಾಗಿರುತ್ತವೆಂದು ಹೇಳಿದ್ದಾರೆ. ಈ ಲೆಕ್ಕಗಳು ಇಷ್ಟು ಸಂಪೂರ್ಣವಾಗಿಯೂ, ತಪ್ಪಿಲ್ಲದೆಯೂ ಇವೆಯೋ ಎಂಬದಾಗಿ ಅನುಮಾನ ಉಂಟಾಗುವಷ್ಟು ಚಮತ್ಕಾರವಾಗಿ ಇರುತ್ತವೆ.

ಮೈಸೂರು ಸಂಸ್ಥಾನದ ಪ್ರಜೆಗಳೆಲ್ಲಾ ತುಂಬಾ ಅಕ್ರಮಕಾರರಾದವರು ಕೋಲಾರದ ಚಿನ್ನದ ಗಣಿಗಳಲ್ಲಿ ಕೂಲಿ ಮಾಡತಕ್ಕವರೇ ಎಂಬುವದು ಎಲ್ಲರಿಗೂ ಸುಲಭವಾಗಿ ಗೊತ್ತಾಗುವದು. ಆ ಪ್ರಾಂತ್ಯದಲ್ಲಿ ಪ್ರತಿ ೨೩೭ ಮಂದಿಗೂ ಒಂದೊಂದು ತಕ್ಸೀರಿನಂತೆ ನಡೆದಿರುವದು. ಮಲನಾಡು ಡಿಸ್ಟ್ರಿಕ್ಟುಗಳಲ್ಲಿರತಕ್ಕ ಜನರು ಎರಡನೇ ದರ್ಜೆಯವರಾಗಿರುತ್ತಾರೆ.

ಅನೇಕ ಜನರು ಸುಳ್ಳು ಸುಳ್ಳಾದ ಮೊಕದ್ದಮೆಗಳನ್ನು ಸೃಷ್ಟಿಸಿ ಮಾಡಿ, ಅವುಗಳಿಗೆ ಕೈಕಾಲುಗಳನ್ನು ಹುಟ್ಟಿಸಿ, ಪೋಲೀಸಿನವರಿಗೆ ಪತ್ತೆ ಮಾಡಲಿ ಎಂದು ತಂದುಕೊಡುತ್ತಾರೆ. ಹೀಗೆ ಮಾಡತಕ್ಕವರನ್ನು ಮ್ಯಾಜಿಸ್ಟ್ರೇಟರುಗಳು ತುಂಬಾ ಕಠಿಣವಾಗಿ ಶಿಕ್ಷೆಮಾಡಬೇಕಾಗಿದೆ ಎಂಬದಾಗಿ ಇನ್‌ಸ್ಪೆಕ್ಟರ್ ಜನರಲ್‌ರವರು ಅಭಿಪ್ರಾಯಪಡುವವರಾಗಿದ್ದಾರೆ.

ತಕ್ಸೀರು ಮಾಡಿ ಅಪರಾಧಿಗಳೆಂದು ನಿರ್ಧರಿಸಲ್ಪಟ್ಟವರು ಇಂಥಿಂಥವರೇ ಎಂಬದನ್ನು ಗೊತ್ತುಮಾಡುವದಕ್ಕೆ ಅವರ ಬೆಟ್ಟರಳಿನ ಗುರುತುಗಳನ್ನು ಒತ್ತಿಸಿ ಇಟ್ಟುಕೊಳ್ಳುವ ಪದ್ಧತಿ ಮೈಸೂರಿನಲ್ಲಿ ಜಾರಿಯಲ್ಲಿದೆಯಷ್ಟೆ. ಈ ರಿಕಾರಡು ಇನ್ನೂ ಅವಶ್ಯವಾದಷ್ಟು ಮಟ್ಟಿಗೆ ವೃದ್ಧಿಹೊಂದಿರುವದಿಲ್ಲ. ಈ ಹೊಸ ಕ್ರಮವನ್ನು ಸಂದರ್ಭ ಬಿದ್ದಾಗೆಲ್ಲಾ ಪೋಲೀಸಿನವರೂ, ಜೈಲ್ ಇಲಾಖೆಯವರೂ ಆಚರಣೆಯಲ್ಲಿ ತರಬೇಕಾಗಿದೆ. ಪ್ರಜೆಗಳು ನೆಮ್ಮದಿಯಾಗಿರಬೇಕಾದರೆ ಅಪರಾಧಿಗಳೆಂದು ನಿರ್ಧರಿಸಲ್ಪಟ್ಟವರೆಲ್ಲಾ ಇಂಥಾವರೇ ಎಂದು ಸುಲಭವಾಗಿ ಕಂಡು ಹಿಡಿಯುವ ಹಾಗಬೇಕು; ಮತ್ತು ಅಂಥವರೇ ಮತ್ತೆ ತಕ್ಸೀರುಗಳನ್ನು ಮಾಡಿದರೆ ಅವರಿಗೆ ಮೊದಲಿಗಿಂತ ಹೆಚ್ಚಾದ ಶಿಕ್ಷೆ ವಿಧಿಸಬೇಕು.

ಕಳುವು ಮುಂತಾದ ಕೃತ್ಯಗಳು ನಡೆಯದಂತೆ ಉಪಾಯ ಮಾಡುವದೇ ತುಂಬಾ ಮುಖ್ಯವಾದದ್ದೆಂದು ಮೆ॥ ಮಾಧ್ಯಯನವರು ನಿರ್ಧರಿಸಿ ಹೇಳುತ್ತಾರೆ. ಈ ಉದ್ದೇಶವು ಸಫಲವಾಗಬೇಕಾದರೆ ಅಪರಾಧ ನಡಸತಕ್ಕ ಕಳ್ಳ ಜನ ಗುಂಪುಗಳನ್ನೆಲ್ಲಾ ಗೊತ್ತು ಮಾಡಿಕೊಂಡು, ಅವರು ಸಂಚಾರಮಾಡುವದನ್ನೂ ಅವರ ಕಾರ್ಯಗಳನ್ನೂ ಬಹು ಎಚ್ಚರಿಕೆಯಿಂದ ಗಮನಿಸಲಿಕ್ಕೆ ಬೇಕು. ಈಗ ಅಂಥವರೆಂದು ಗೊತ್ತುಮಾಡಿ ಬರೆದಿಟ್ಟಿರುವ ಪಟ್ಟಿಗಳನ್ನು ಬಲಾಯಿಸಬೇಕಾಗಿದೆ. ಮೊದಲು ಮಹಾಯಾನಕ್ಕೆ ದಾದ್ದ ಕೆಲವು ಲಂಬಾಣಿಗರೂ ಕೊರಮರೂ ಈಚೆಗೆ ನಿವಾಸಗಳನ್ನು ಹಿಡಿದು ಆರಂಭಗಾರರಾಗಿರುತ್ತಾ ಇಂಥವರ ಹೆಸರುಗಳನ್ನು ಪೋಲೀಸಿನವರ ಪಟ್ಟಿಗಳಿಂದ ತೆಗೆದುಹಾಕಬೇಕು. ಲಂಬಾಣಿಗರ ಜೋಸ್ಟರ ಒಂದು ಕರಾಳವು ಸುಧಾರಣವಾಗಿದೆ ಎಂಬುದನ್ನು ಮೆ॥ ಮಾಧ್ಯಯನವರು ಸೂಚಿಸಿ, ವಿದ್ಯಾಭಿವೃದ್ಧಿಯ ದೆಸೆಯಿಂದ ಅನೇಕ ಮಹತ್ಕೃತ್ಯಗಾರರನ್ನು ಸನ್ಮಾರ್ಗಿಗಳನ್ನಾಗಿ ತಿದ್ದಬಹುದೆಂತಲೂ, ಇದು ಸರ್ವೋತ್ಕೃಷ್ಟವಾದ ಮಾರ್ಗವೆಂತಲೂ ಹೇಳುತ್ತಾರೆ. ಕೋಲಾರ ಚಿನ್ನದ ಗಣಿಗಳಿಗೆ ಅಕೃತ್ಯಗಳನ್ನು ಮಾಡಿದ ಕೂಲಿಕಾರರ ಹೆಸರುಗಳನ್ನೆಲ್ಲಾ ಪಟ್ಟಿಗಳಿಗೆ ದಾಖಲು ಮಾಡಿಕೊಂಡು, ಅಂಥವರನ್ನು ಮತ್ತೆ ಗಣಿಗಳ ಯಜಮಾನರು ಕೆಲಸಕ್ಕೆ ಸೇರಿಸಿಕೊಳ್ಳಕೂಡದು ಎಂಬ ಪದ್ಧತಿಯು ಈಗ ಆಚರಣೆಯಲ್ಲಿ ಬಂದಿದೆ. ಗ್ರಾಮಾಂತರಗಳಿಗೆ ಬಂದು ಹೋಗತಕ್ಕ ಗುಮಾನೀ ಜನರನ್ನು ಪಟೇಲರು ರಿಜಿಸ್ಟರಿಗೆ ದಾಖಲು ಮಾಡಿಕೊಳ್ಳುತ್ತಾ ಬರುವ ಪದ್ಧತಿಯಿಂದ ಯಾವ ಪ್ರಯೋಜನವೂ ಆಗಲಿಲ್ಲವೆಂದು ಕಂಡುಬರುತ್ತದೆ. ಪೋಲೀಸ್ ಜಾಪ್ತೆ ಮಾಡತಕ್ಕ ಅಧಿಕಾರಿಗಳು ಈ ಪಟೇಲರ ರಿಜಿಸ್ಟರುಗಳನ್ನು ನೋಡಿ ತನಿಖೆ ಮಾಡಿದ್ದರಲ್ಲಿ ಅವುಗಳಲ್ಲಿ ಅವರ ಹೆಸರನ್ನೂ ಬರೆಯದೆ ಖಾಲೀ ಬಿಟ್ಟಿದ್ದರಂತೆ. ಆ ಪ್ರಾಂತ್ಯ ಗುಮಾನಿ ಜನರ್ಯಾರೂ ಸಂಚರಿಸಲೇ ಇಲ್ಲವೆಂದು ಪಟೇಲರು ಹೇಳಿದರೆಂತಲೂ ಗೊತ್ತಾಗುವದು. ಪಟೇಲರ ಬಳಿ ಬಹಳ ಸಾಧಾರಣವಾದ ಒಂದು ರಿಜಿಸ್ಟರ್ ಇದ್ದು, ಅವರು ತಮ್ಮ ಗ್ರಾಮಗಳಿಗೆ ಬಂದು ಹೋಗತಕ್ಕ ಜನರ ಮೇಲೆ ಸ್ವಲ್ಪ ದೃಷ್ಟಿ ಇಟ್ಟು ನೋಡುತ್ತ ಕೂಡಲೇ ಪೋಲೀಸಿನವರಿಗೆ ವರ್ತಮಾನ ಕೊಡುತ್ತಾ ಇರುವ ಪಕ್ಷಕ್ಕೆ ತಕ್ಸೀರುಗಳನ್ನು ಪತ್ತೆ ಮಾಡುವದಕ್ಕೂ ಅಪರಾಧಿಗಳನ್ನು ಹಿಡಿಯುವದಕ್ಕೂ ಪಟೇಲರಿಂದ ತುಂಬಾ ಸಹಾಯವಾಗಬಹುದೆನ್ನುವದರಲ್ಲಿ ಸಂಶಯವೇ ಇಲ್ಲ.

ಬಾಲ್ಯವಿವಾಹದ ಕಾನೂನನ್ನು ಮೀರಿ ಮದುವೆ ಮಾಡಿರತಕ್ಕವರ ವಿಷಯದಲ್ಲಿ ಮೆ॥ ಮಾಧ್ಯಯನವರು ಬರೆದಿರುವದೇನಂದರೆ:—

ಗತಸಾಲ್‌ನಲ್ಲಿ ಮೂರು ಜನರನ್ನು ಸೇರಿಸಿ ಒಂದೇ ಮೊಕದ್ದಮೆ ನಡೆದಿತ್ತು. ಈ ಸಾಲ್‌ನಲ್ಲಿ ೫೪ ಜನರ ಮೇಲೆ ೧೯ ಮೊ

ಯಗಳು ದಾಖಲ್ಮಾಡಲ್ಪಟ್ಟವು. ಈ ವರ್ಷ ೧೩ ಮೊಕದ್ದಮೆಗಳಲ್ಲಿ ೩೫ ಜನರ ಮೇಲೆ ಬಾಲ್ಯ ವಿವಾಹ ನಡೆಸಿದರೆಂಬ ಅಪರಾಧ ರುಜುವಾಗಿ ಅವರಿಗೆಲ್ಲಾ ಶಿಕ್ಷೆಯಾಯಿತು. ನಾಲ್ಕು ಜನರನ್ನು ಖುಲಾಸೆ ಮಾಡಿದರು; ಇನ್ನೂ ೮ ಜನರ ಮೇಲೆ ಮೂರು ಮೊಕದ್ದಮೆಗ ನಡೆಯುತ್ತಾ ಇವೆ. ಸಾಲಾಚ್ಯೆರಿನಲ್ಲಿ ಜಡ್ಜ್‌ಮೆಂಟು ಆಗಿರಲಿ. ಈ ಅಪರಾಧಕ್ಕೆ ಸಿಕ್ಕಿಬಿದ್ದವರು ಯಾವ ಯಾವ ಜಾತಿಯವರೆಂದರೆ—ಬ್ರಾಹ್ಮಣರು (೧೩), ವಾಟಾರದವರು (೧೬), ಕೋಮಟಿಗಳು (೫), ಒಕ್ಕಲಿಗರು (೬), ಉಪ್ಪಲಿಗರು (೨). ಹಾಸನ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡರು ಬರೆದಿರುವ ರಿಪೋರ್ಟಿನಲ್ಲಿ—ಈ ಬಾಲ್ಯ ವಿವಾಹದ ಕಾನೂನಿನಲ್ಲಿ ಹೇಳಿರುವ ಸಂಗತಿಗಳು ಪ್ರಜೆಗಳಿಗೆಲ್ಲಾ ಚೆನ್ನಾಗಿ ಮಂದಟ್ಟಾಗಿವೆ; ಆದ್ದರಿಂದಲೇ ಆ ಕಾನೂನಿಗೆ ವಿರೋಧವಾದ ವಿವಾಹಗಳು ಈ ಪ್ರಾಂತ್ಯ ನಡೆಯುವಿಲ್ಲವಾಗಿ ಹೇಳುತ್ತಾರೆ. ಬ್ರಾಹ್ಮಣರಲ್ಲೂ ಕೋಮಟಿಗಳಲ್ಲೂ ಪುನರ್ವಿವಾಹಗಳಾಗಕೂಡದು; ಆದರೆ ಮೇಲೆ ಹೇಳಿದ ಇತರ ಜಾತಿಯವರಲ್ಲಿ ಪುನರ್ವಿವಾಹಗಳಾಗಬಹುದೋ ಕೂಡದೋ ಡಿಸ್ಟ್ರಿಕ್ಟ್ ರಿಪೋರ್ಟುಗಳಿಂದ ತಿಳಿದುಬರುವದಿಲ್ಲ.

ಪೋಲೀಸ್ ಇಲಾಖೆಯವರು ಈ ಭಾಗದಲ್ಲಿ ತುಂಬಾ ಚಟುವಟಿಕೆಯಿಂದ ಕಾರ್ಯಗಳನ್ನು ನಡೆಸುತ್ತಾ ಬಂದಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ.

ಪೋಲೀಸ್ ಬಿಸ್ತನ್ನು ಕುರಿತು ಮಿ॥ ಮಾಧ್ಯಯನವರು ತಿಳಿಸುವ ಮುಖ್ಯ ವಿಷಯಗಳ್ಯಾವವೆಂದರೆ:—(೧) ದಫೇದಾರರೇ ಅನೇಕ ಮೊಕದ್ದಮೆಗಳನ್ನು ತನಿಖೆಮಾಡಬೇಕಾದ್ದರಿಂದ ಇನ್ನೂ ವಿದ್ಯಾವಂತರಾದವರನ್ನು ಹೆಚ್ಚು ಸಂಬಳ ಕೊಟ್ಟು ಆ ದರ್ಜೆಗೆ ನೇಮಿಸುವದು ಅಗತ್ಯವೆಂದು ಕಾಣುವದು. ತಪ್ಪಿತರುಗಳನ್ನು ಸಂಪೂರ್ಣವಾಗಿ ತನಿಖೆಮಾಡುವದಕ್ಕೆ ಅವಕಾಶಕೊಡಲಿಲ್ಲವೆಂದು ಮಿ॥ ಮಾಧ್ಯಯನವರು ಅಮಲ್ದಾರ್ರ ಮೇಲೂ ಸೂಪರಿಂಟೆಂಡರ ಮೇಲೂ ಆಕ್ಷೇಪಣೆ ಮಾಡುತ್ತಾರೆ.

(೨) ಮೇಲ್ದರದ ಅಧಿಕಾರಿಗಳು ನಿಂತು ಪ್ರಾಸಿಕ್ಯೂಷನ್ ನಡೆಸುವದಕ್ಕೆ ಅವರಿಗೆ ಅವಕಾಶ ಸಾಲದು; ಆದ್ದರಿಂದ ಅವರು ಆ ಕೆಲಸವನ್ನು ಅಜ್ಞರಾದ ಕೀಳು ನೌಕರರಿಗೆ ವಹಿಸಬೇಕಾಗಿದೆ; ಹೀಗೆ ಮಾಡುವದರಿಂದ ತಪ್ಪಿತರು ರುಜುವಾಗಿ ಅಪರಾಧಿಗಳಿಗೆ ಶಿಕ್ಷೆಯಾಗುವಂಥಾ ಮೊಕದ್ದಮೆಗಳೂ ಕೆಟ್ಟುಹೋಗುತ್ತವೆ. ಈ ಕಾರಣ ಈ ದೋಷವನ್ನು ಹೋಗಲಾಡಿಸುವದಕ್ಕೆ ಸರ್ಕಾರದವರು ಪ್ರತ್ಯೇಕವಾಗಿ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರುಗಳನ್ನು ನೇಮಿಸಬೇಕಾಗಿದೆ.

(೩) ದಟ್ ಫೋರೆಸ್ಟುಗಳ ಪೋಲೀಸಿನವರು ಇರಬೇಕಾದ ಸ್ಥಳಗಳಲ್ಲಿ ಅವರಿಗೆ ತುಂಬಾ ಅನಾನುಕೂಲಗಳು ಉಂಟು. ಅವರಿಗೆ ಯೋಗ್ಯವಾದ ಸ್ಥಳಗಳನ್ನು ಜೋಪಡಿಗಳನ್ನೂ ಇನ್ನೂ ಚೆನ್ನಾಗಿ ಕಟ್ಟಿಸಿಕೊಡುವದಕ್ಕೆ ಸರ್ಕಾರದವರು ದಯಮಾಡಿ ಸ್ಯಾಂಕ್ಷನ್ ಮಾಡಬೇಕು.

(೪) ತಪ್ಪು ಮಾಡುವ ನೌಕರರಿಗೆ ಹಾಗೆ ಜುಲ್ಮಾನೆ ಹಾಕುವ ಪದ್ಧತಿ ಅವರಿಯಲ್ಲಿ ಬಂದಿದೆ. ಎಲ್ಲಕ್ಕಿಂತ ಅಂಥವರಿಗೆ ಬ್ಲಾಕ್ ಮಾರ್ಕ್ ಕೊಡುವ ಪಾಗಾದರೆ ಅವರ ಬುದ್ಧಿಗೂ ಆಚಾರಗೂ ಕಾಯಕ ಉಂಟಾಗಿ ಕೆಲಸಗಳು ಕ್ರಮರ್ಪಕವಾಗಿ ನಡೆಯಲು ಕಾರಣವಾಗುತ್ತದೆಂದು ಮಿ॥ ಮಾಧ್ಯಯನವರು ಅಭಿಪ್ರಾಯಪಟ್ಟಿದ್ದಾರೆ.

---

## ಸ್ವದೇಶದ ವರ್ತಮಾನಗಳು.

ಬೆಂಗಳೂರಿನಲ್ಲಿ ಪ್ಲೇಗಿನ ಹಾವಳಿಯನ್ನು ಕಡಿಮೆ ಮಾಡುವದಕ್ಕಾಗಿ ಪ್ರಜೆಗಳು ಯಾವ ಕ್ರಮದಂತಾದರೂ ತಮ್ಮ ಮನೆಗಳನ್ನು ಶುದ್ಧಿ ಮಾಡಿಸಬೇಕೆಂಬುದಾಗಿ ಮ್ಯುನಿಸಿಪಲ್ ಬೋರ್ಡಿನವರು ನೋಟೀಸ್ ಮಾಡಿರುತ್ತಾರೆ.

****

ಮೇ ತಿಂಗಳಲ್ಲಿ ಉತ್ಪತ್ತಿಯಾದ ೧೧,೩೩,೬೭೯ ರೂ. ಚಿನ್ನವನ್ನು ಕೋಲಾರ್ ಚಿನ್ನದಗಣಿ ಕಂಪನಿಯವರು ಬೊಂಬಾಯಿ ಮುಖಾಂತ ವಿಲಾಯತಿಗೆ ರವಾನೆಮಾಡಿರುತ್ತಾರೆ. ಮೇ ತಿಂಗಳಲ್ಲಿ ಒಟ್ಟು ೩೦,೪೩೯,೭೨೦ ರೂಪಾಯಿನಷ್ಟು ಚಿನ್ನ ಉತ್ಪತ್ತಿಯಾಗಿರುವದು.

****

ಸಾಗರದ ತಾಲ್ಲೂಕು ಬಿದರೂರಿನಲ್ಲಿರುವ ಪದ್ಮಶೆಟ್ಟರು ಪ್ರಸಿದ್ಧ ದೇವಸ್ಥಾನದ ಹತ್ತಿರ ಗೋಡೆಯನ್ನು ಕೆಡವುತ್ತಿದ್ದಾಗ ೩೩ ಚಕ್ಕೇರಿ ವರಹಾಗಳು ಸಿಕ್ಕಿದವು. ಅವನ್ನು ಅವರು ನೆಟ್ಟು ಕವಿಸಾರ್ಕಾರ ವಶಕ್ಕೆ ಕೊಟ್ಟಿರುತ್ತಾರೆ. ಆ ವರಹಾಗಳು ಸುಮಾರು ೪೫೦ ರೂ. ಬಾಳುವವು.

****

ಬೆಂಗಳೂರಿನಲ್ಲಿ ಬರುವ ಮಂಗಳವಾರದಿಂದ ಕುದುರೆ ಜೂಜು ಮೊದಲಾದ ವಿನೋದಗಳು ನಡೆಯುವ ಕಾರಣ ನಮ್ಮ ಮಹಾರಾಜರೇ ಮೊದಲಾದವರೆಲ್ಲಾ ಶನಿವಾರ ಸಾಯಂಕಾಲ ೬—೩ ನಿಮಿಷಕ್ಕೆ ಸ್ಪೆಷಲ್ ರೈಲಿನಲ್ಲಿ ಮೈಸೂರಿನಿಂದ ಪ್ರಯಾಣ ಮಾಡುವವರಾಗಿದ್ದಾರೆಂದು ಕೇಳುತ್ತೇವೆ.

ನಮ್ಮ ರೆಸಿಡೆಂಟರೂ, ಚೀಫ್ ಇಂಜನಿಯರೂ ಕಳೆದ ಭಾನುವಾರ ಬೆಂಗಳೂರಿಂದ ಮಾರಿಕಣಿವೆಗೆ ಪ್ರಯಾಣಮಾಡಿದರಾಗೂ, ಆ ಭಾರೀ ಕಲ್ಲಾವಿನ ಕಾಮಗಾರಿ ವಿಚಾರವನ್ನು ತನಿಖೆಮಾಡಿಕೊಂಡು, ನಾಳೇ ದಿನ ಹಿಂತಿರಿಗಿ ಬೆಂಗಳೂರಿಗೆ ಬರುವವರಾಗಿದ್ದಾರೆಂತಲೂ ಪ್ರಕಟವಾಗಿದೆ.

****

ಕೋಲಾರ್ ಚಿನ್ನದ ಗಣಿಗಳಲ್ಲಿ ಕೆಲಸ ಮಾಡತಕ್ಕ ಯೂರೋಪ್ಯಿಯನ್ನರು ಇದುವರೆಗೆ ಚಿನ್ನ ಕಳುವು ಮಾಡಿರಲಿಲ್ಲ. ಕಳೆದವಾರ ಮೂವರು ಇಟಾಲಿಯನ್ನರು ಸಿಕ್ಕಿಬಿದ್ದರು. ಅವರಬಳಿ ಗಣೇ ಚಿನ್ನ ಸಿಕ್ಕಿತು. ಮ್ಯಾಜಿಸ್ಟ್ರೇಟರು ಮೊದಲನೆಯವನಿಗೆ ೬ ತಿಂಗಳು, ೨ನೆಯವನಿಗೆ ೪ ತಿಂಗಳೂ ಕಠಿಣ ಸಜಾ ವಿಧಿಸಿ, ೩ನೆಯವನಿಗೆ ೩೫ ರೂ. ಜುಲ್ಮಾನೆ ಹಾಕಿದರು.

****

ಕೆ. ಗಣಪತಿ ಅಯ್ಯರೆಂಬೊಬ್ಬ ವಿದ್ಯಾರ್ಥಿಯು ಸುಳ್ಳು ಸರ್ಟಿಫಿಕೇಟನ್ನು ತೋರಿಸಿ, ಮೈಸೂರು ಮಹಾರಾಜಾ ಕಾಲೇಜ್ ೬ನೆ ಫಾರಂ ಎಂಬ ಕ್ಲಾಸಿಗೆ ಸೇರಿಕೊಂಡನು. ಅವನನ್ನು ಮಿ॥ ಭಾಭಾಯವರು ವಜಾ ಮಾಡಬೇಕೆಂತಲೂ, ೧೯೦೪ ನೆ ಜುನ್ ೧೮ ವರೆಗೆ ಮೈಸೂರು ಸಂಸ್ಥಾನದ ಯಾವ ಸರ್ಕಾರಿ ಪಾಠಶಾಲೆಗೂ ಅವನನ್ನು ಸೇರಿಸಿಕೊಳ್ಳಕೂಡದೆಂತಲೂ ಹುಕುಂ ಕೊಟ್ಟಿದ್ದಾರೆ.

****

ಹೊಸದಾಗಿ ಸರ್ಕಾರದವರು ರಾಜಧಾನಿಯಲ್ಲಿ ಒಂದು ಇಂಜನಿಯರ್ ಸ್ಕೂಲನ್ನು ಸ್ಥಾಪಿಸುತ್ತಾರೆಂಬ ವರ್ತಮಾನವನ್ನು ಕೇಳಿ ಹೊರಗಿನ ಮಂದಿ ವಿದ್ಯಾರ್ಥಿಗಳು ಅದಕ್ಕೆ ಅರ್ಜಿ ಕೊಟ್ಟು, ರಾಜಧಾನಿಗೆ ಬಂದು ಸುತ್ತಿಹೋಗುತ್ತಿದ್ದಾರೆ. ಆ ಸ್ಕೂಲು ಇನ್ನೂ ಪ್ರಾರಂಭವಾಗಲಿಲ್ಲ. ಮಿ॥ ಭಾಭಾ ಯವರು ಇದಕ್ಕಾಗಿ ಈ ವಾರ ರಾಜಧಾನಿಗೆ ಬರುವವರಾಗಿದ್ದಾರೆಂದು ತಿಳಿದು ಬಂದಿದೆ.

****

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯಲ್ಲಿರುವ ಚಾಮುಂಡೀ ಬೆಟ್ಟದ ಜೂಜಿನ ಬೋರೆಯಲ್ಲಿ ನಮ್ಮ ಮಹಾರಾಜರವರು, ಯುವರಾಜರು, ಮೊದಲಾದವರೆಲ್ಲಾ ಕುದುರೆಗಳನ್ನು ಜೂಜುಬಿಟ್ಟರು. ಯುವರಾಜರ ಉಪಾಧ್ಯಾಯರಾದ ಮಿ॥ ನಾರಸ್ತೆಯಂಗಾರ್ರು ಕುದುರೆಯಿಂದ ಬಿದ್ದು ಸ್ವಲ್ಪ ಗಾಯವಾಗಿದೆ. ಸಾವಿರಾರು ಪ್ರಜೆಗಳು ಹೋಗಿ ಈ ಜೂಜನ್ನು ನೋಡಿಕೊಂಡು ಬಂದರು. ನಾಳೆ ಶನಿವಾರವೂ ಜೂಜು ನಡೆಯುವದೆಂದು ಹೇಳುತ್ತಾರೆ.

****

ಕೋಲಾರಕ್ಕೆ ಸೇರಿದ ನಂದೀದುರ್ಗವೆಂಬ ಚಿನ್ನದ ಗಣಿಯ ಉದ್ಯೋಗಸ್ಥನಾದ ಮಿಸ್ಟರ್ ಹೂಪರ್ ಎಂಬವನು ತನ್ನ ಕೈಕೆಳಗೆ ಕೆಲಸ ಮಾಡುವ ಕೂಲೀ ಜನರಿಂದ ಲಂಚ ತಿಂದನೆಂದು ಮೊಕದ್ದಮೆ ಆಯಿತು. ಅವನಿಗೆ ಮ್ಯಾಜಿಸ್ಟ್ರೇಟರು ೫೫ ರೂ. ಜುಲ್ಮಾನೆಯನ್ನು ವಿಧಿಸಿದರು. ಸಿವಿಲ್ ಕೋರ್ಟಿನ ನಕ್ಷತ್ರಗಳನ್ನು ಆ ಪ್ರಾಂತ್ಯದ ಕಾನೂನಿಗೂ ಸೇರಿಸಬೇಕೆಂಬುದಾಗಿ ಗಣಿಗಳ ಅಧಿಕಾರಿಗಳು ಗವರ್ನಮೆಂಟಿಗೆ ತಿಳಿಸಿರುತ್ತಾರೆ.

****

ಕೋರ್ಟು ಛಿಚರ ಅಥವಾ ಇತರ ಡಾಲ ಗವರ್ನಮೆಂಟಿಗೆದ ಪಾವತಿ ಆಗತಕ್ಕದ್ದೆಂದು ಸಿವಿಲ್ ಕೋರ್ಟುಗಳಲ್ಲಿ ತೀರ್ಮಾನವಾದ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರು ಆಯಾ ಜನರಿಂದ ಬರತಕ್ಕ ಹಣವನ್ನು ವಸೂಲ್ಮಾಡಿಕೊಳ್ಳಬೇಕು; ಮತ್ತು ಗವರ್ನಮೆಂಟು ತರಫಿನಲ್ಲಿ ಮೊಕದ್ದಮೆ ನಡಸಿದ ಅಧಿಕಾರಿಗಳು ಡಿಕ್ರಿ ಕಾಪಿಗಳನ್ನು ಡೆಪ್ಯುಟಿ ಕಮಿಷನರಿಗೆ ಕಳುಹಿಸಿಕೊಡಬೇಕು ಎಂಬುದಾಗಿ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ

****

ರಾಜಧಾನಿಯಲ್ಲಿರುವ ಕಸಬುದಾರಿಗಳ ಸರ್ಕಾರಿ ಪಾಠಶಾಲೆಯು (ಇಂಡಸ್ಟ್ರಿಯಲ್ ಸ್ಕೂಲ್) ಸೂಪರಿಂಟೆಂಡಾದ ಮಿ॥ ಶ್ರೀನಿವಾಸೈಯಂಗಾರ್ರಿಂದ ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಮಿ॥ ಶ್ರೀನಿವಾಸರಾಯರು ಲೆಕ್ಕಪತ್ರಗಳನ್ನು ಮುದತಿ ತೆಗೆದುಕೊಳ್ಳುತ್ತಾರೆಂತಲೂ, ಶಿವಸಮುದ್ರದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಮಿ॥ ರಾಮಚಂದ್ರರಾಯರನ್ನು ಕರೆಸಿ, ಈ ಪಾಠಶಾಲೆಯ ಕೆಲಸಗಳನ್ನು ನೋಡಿಕೊಳ್ಳುತ್ತಿರುವಂತೆ ನೇಮಕ ಮಾಡಿರುತ್ತಾರೆಂತಲೂ ಕೇಳುತ್ತೇವೆ.

****

ಈ ಸಂಸ್ಥಾನದಲ್ಲಿರುವ ಉದ್ಯೋಗಗಳ ಮತ್ತು ಪಿಂಚಿನದಾರರ ಪೋಸ್ಟ್‌ರೂಲನ್ನು ಮೈಸೂರು ಸರ್ಕಾರದವರು ವಿದ್ವತ್ಸಭೆಯಿಂದ ಕಳೆದ ಜುನ್ ೩ ನೆ ತಾರೀಖಿನ ಇಂಗ್ಲಿಷ್ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ. ಆ ಹುಕುಮಿನ ನಂಬರು ತಾರೀಖು —ಆರ್. ೪೬—೯, ತಾ॥ ೨ ನೆ ಜುನ್, ೧೯೦೩ ನೆ ಇಸವಿ. ಈ ಹುಕುಮನ್ನೆಲ್ಲಾ ಪ್ರಕಟಿಸುವದಕ್ಕೆ ಈ ಪತ್ರಿಕೆಯಲ್ಲಿ ಸ್ಥಳ ಸಾಕಾಗಲಾರದು. ಅಪೇಕ್ಷೆಯುಳ್ಳವರು ಆ ವಾರದ ಇಂಗ್ಲಿಷ್ ಗೆಜೆಟ್ಟನ್ನು ತರಿಸಿ ನೋಡಿಕೊಳ್ಳಬಹುದು.

****

ಮಡಿಕೇರಿಯ ವಾರ್ತಾದಾರರು ಬರೆಯುವದೇನೆಂದರೆ:—ಇತ್ತೀಚೆ ಸಾಹುಕಾರ ಕೋಜಾವು ಹಾನೆ ಸ್ಪೆಷಲ್ ಸಾಹೇಬರ ಮೇಲೆ ಒಂದು ಕ್ರಿಮಿನಲ್ ಪ್ರಾಸಿಕ್ಯೂಷನ್ ನಡೆಸುವದಕ್ಕೆ ಕೊಡಗು ಡಿಸ್ಟ್ರಿಕ್ಟ್ ಜಡ್ಜರು ಸ್ಯಾಂಕ್ಷನ್ ಕೊಟ್ಟರು. ಇದು ಇದೀ ಕೊಡಗಿನ ದೇಶದಲ್ಲಿ ವಿಸ್ಮಯವೂ ಪಶ್ಚಾತ್ತಾಪವೂ ಉಂಟುಮಾಡಿಯದೆ. ಒಂದು ದಸ್ತಾವೇಜಿಗೆ ದಸ್ಕತು ಹಾಕಿದ-ಕಾಲ ಮತ್ತು ಸ್ಥಳವನ್ನು ಇವರು ತಪ್ಪಿಲ್ ಮಾಡಿ ಹೇಳಿದ್ದೇ ಇದಕ್ಕೆ ಕಾರಣವಾಗಿರುವದು. ವಿಚಾರಣೆಯಲ್ಲಿ ಹ್ಯಾಗಾಗುವದೋ ನೋಡಬೇಕು.

ಕೋಲಾರ್ ಚಿನ್ನದ ಗಣಿಗಳ್ಲಿ ಉತ್ಪತ್ತಿಯಾದ ಚಿನ್ನವ ಬೆಂಗಳೂರು ದಂಡಿನ ಭಾರೀ ವರ್ತಕರಾದ ಕೆ. ನಾರಾಯಣಶೆಟ್ಟಿ, ಟಿ. ಪಾಪಯ್ಯಶೆಟ್ಟಿ ಎಂಬೀ ಸಾಹುಕಾರರ ಬಳಿ ಸಿಕ್ಕಿತೆಂತಲೂ ಅವರ ಮೇಲೆ ಫಿರ್ಯಾದಾಗಿದೆ ಎಂತಲೂ, ಅಸ್ಸಿಸ್ಟೆಂಟ್ ಕೋರ್ಟಿನಲ್ಲಿ ವಿಚಾರಣೆ ಆಗುತ್ತಿರುವದಾಗಿಯೂ ಹಿಂದೆಯೇ ತಿಳಿಸಿದ್ದೆವಷ್ಟೆ. ಮೊನ್ನೆ ಮಂಗಳವಾರ ಜಡ್ಜ್‌ಮೆಂಟು ಓದಲಾಯಿತು. ಅವರ ಬಳಿ ಇದ್ದ ಚಿನ್ನವು ಕಳುವಿನ ಮಾಲೆಂದು ರುಜುವಾತಾದ್ದರಿಂದ ಅವರಿಬ್ಬರಿಗೂ ತಲಾ ೨ ವರುಷ ಕಠಿಣ ಸಜವೂ ೫,೦೦೦ ರೂ. ಜುಲ್ಮಾನೆಯೂ ವಿಧಿಸಲ್ಪಟ್ಟಿತು.

****

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಓಕ್ಸೇಕ್ ಬ್ಲಾಕ್ ಎಂಬ ಭಾಗದಲ್ಲಿ ಇಬ್ಬರು ಹಿಂದುಗಳ ಹತ್ತಿರ ಕದ್ದ ನಾಣ್ಯಗಳೂ, ಅವುಗಳನ್ನು ತಯಾರ್ಮಾಡುವ ಅಚ್ಚುಗಳೂ ಸಿಕ್ಕಿದ್ದರಿಂದ ಮ್ಯಾಜಿಸ್ಟ್ರೇಟರು ಅವರಿಗೆ ತಲಾ ೨ ವರುಷದಂತೆ ಕಠಿಣ ಸಜಾ ವಿಧಿಸಿದರು. ಕೋಲಾರ್ ಟವರಿನಲ್ಲಿ ಅದೇ ಅಪರಾಧಕ್ಕಾಗಿ ಪುಸ್ತಗಿರಿ ಆದವನಿಗೆ ೩ ವರುಷ ಕಠಿಣ ಸಜಾ ವಿಧಿಸಿದರು. ಕೋಲಾರ ಟವರಿನಲ್ಲಿ ಅದೇ ಅಪರಾಧಕ್ಕಾಗಿ ದಸ್ತಗಿರಿ ಆದವನಿಗೆ ೩ ವರುಷ ಕಠಿಣ ಸಜಾ ಆಯಿತು. ಮತ್ತು ಬೌರಿಂಗ್ ಪೇಟೆಯಲ್ಲಿ ಮೂರು ಮಂದಿ ಖೋಟಾ ನಾಣ್ಯಗಳನ್ನು ಮಾಡುತ್ತಿದ್ದರು. ಇವರನ್ನು ಹಿಡಿದು ಕಳೆದ ವಾರ ಸಜಾ ಹಾಕಿದರು. ಒಬ್ಬನಿಗೆ ೫ ವರುಷ, ಎರಡನೆಯವನಿಗೆ ೩ ವರುಷ, ಮೂರನೆಯವನಿಗೆ ೪ ವರುಷದ ಕಠಿಣ ಸಜವೂ ೫೦೨ ರೂ. ಜುಲ್ಮಾನೆಯೂ ಆಗಿರುತ್ತೆ.

---

## ಲೇಟ್ ಅಮಲ್ದಾರ್ ಬಿ. ಶಂಕರಯ್ಯನವರು.

ಪುಂಗನೂರಿನ ತಾಲ್ಲೂಕು ಅಮಲ್ದಾರ್ ಮಿ॥ ಬಿ. ಶಂಕರೈಯ್ಯ, ಬಿ. ಎ. ಯವರು ಕಸಬಾ ಹೋಬಳಿಗೆ ಕಂದಾಯ ವಸೂಲಿಗೆ ಸರ್ಕ್ಯೂಟ್ ದಯಮಾಡಿದ್ದಾಗ್ಯೆ ಸ್ವಲ್ಪ ಅಮಶಂಕೆ ಉಂಟಾವು ತಲೆದೋರಿತು. ಸಂತ್ರ ಕೂಡಲೆ ತಾಲ್ಲೂಕಿಗೆ ದಯಮಾಡಿಸಿದರು. ೩—೪ ದಿವಸದಲ್ಲಿಯೇ ಅಮಶಂಕೆಯೂ ಜ್ವರವೂ ಜೆಚ್ಚಾಗುತ್ತಾ ಬಂತು. ಅ॥ ಸರ್ಜನ್ ಮಿ॥ ಅಣ್ಣಾಜಿರಾವ್ ಯವರು ತುಂಬಾ ಮೆಹನತ್ತು ಮಾಡಿದಾಗ್ಯೂ ಖಾಯಿಲೆಯು ಗುಣಮುಖಕ್ಕೆ ಬರಲಿಲ್ಲ. ತರುವಾಯ ತಮ್ಮ ತಂದೆಯವರನ್ನೂ ಬಂಧುಮಿತ್ರರನ್ನೂ ಜಾಗ್ರತೆಯಿಂದ ಕರೆಸಿಕೊಂಡರು. ಪ್ರಜಾ ದಯಾಳುವಾದ ಸಕಲೇಶಪುರ ಸ॥ ಟ॥ ಆಫೀಸರಾದ ಮಿ॥ ಬಿ. ಆರ್. ಡಬ್ಲ್ಯು. ವೆದರಾಲ್ ಸಾಹೇಬರು ಅಮಲ್ದಾರ್ರ ಮನೆಗೆ ದಯಮಾಡಿಸಿ ಖಾಯಿಲೆಯ ಪರಾಂಬರಿಸಿ ಬಹು ವ್ಯಸನದಿಂದ ಅಮಲ್ದಾರ್ರಿಗೆ ಒಂದು ತಿಂಗಳ ರಜಾಕ್ಕೆ ರುಕ್ಕಂ ಮಾಡಿ ಡಾಕ್ಟರಿಗೆ ಇವರ ಖಾಯಿಲೆ ವಿಷಯದಲ್ಲಿ ತುಂಬಾ ಮೆಹನತ್ತು ಮಾಡಬೇಕೆಂದು ಅಪ್ಪಣೆಮಾಡಿ ಹೊರಡಿಸಿದರು. ಈ ತಾಲ್ಲೂಕಿನ ಯೂರೋಪ್ಯಿಯನ್ ಮತ್ತು ನೇಟಿವ್ ಪ್ಲಾಂಟರುಗಳು ತಾಲ್ಲೂಕು ನೌಕರರು, ಪಟೇಲ್ ಶ್ಯಾನುಭೋಗರುಗಳು ಬಹು ವ್ಯಸನದಿಂದ ಆಗಾಗ್ಗೆ ಅವರ ಮನೆಗೆ ಹೋಗಿ ಅವರ ಖಾಯಿಲೆಯನ್ನು ನೋಡಿ ಶ್ರೀ ದೇವರು ಬೇಗ ಖಾಯಿಲೆಯನ್ನು ಗುಣಮಾಡಲೆಂದು ಪ್ರಾರ್ಥಿಸುತ್ತಿದ್ದರು. ಅದೈವವಶಾತ್ ನಮ್ಮಗಳ ದುರದೃಷ್ಟಕ್ಕೆ ಸರಿಯಾಗಿ ಈ ಮಾರ್ಚಿ ತಾರೀಖು ೨೩ನೇ ಸಾಯಂಕಾಲ ೯ ಘಂಟೆ ಸಮಯದಲ್ಲಿ ಸ್ವರ್ಗಸ್ಥರಾದರು. ಇವರಿಗೆ ಪ್ರಜೆಗಳ ಮೇಲೆ ಇದ್ದ ಪ್ರೀತಿಯೂ ಗೌರವವೂ ಎಷ್ಟೆಂದೇಳಿದರೂ ಸಾಲದ್ದಾಗಿರುತ್ತೆ. ಇವರು ಈ ಲ್ಲೂಕಿಗೆ ಅಕ್ಟೋಬರ್ ಗೋಡು ತಾಲ್ಲೂಕಿನಿಂದ ಬಂದಾಗಲು ಗ್ರಾಮದಿಂದ ಗ್ರಾಮಕ್ಕೆ ರಸ್ತೆಯೂ, ಪ್ರತಿ ಗ್ರಾಮಗಳ ದೇವಸ್ಥಾನವು ಕಟ್ಟಿಸುತಲೂ, ರಸ್ತೆಯನ್ನು ಮಾಡಿಸುತಲೂ ಪ್ರಜೆಗಳ ಪ್ರೀತಿ ಗೌರವಕ್ಕೆ ಪಾತ್ರರಾಗಿದ್ದರು. ಅಲ್ಲದೆ ಈ ತಾಲ್ಲೂಕಿಗೆ ಘನವನ್ನು ಪಡೆದ ಮೈಸೂರು ಸಂಸ್ಥಾನದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಯವರ ಸವಾರಿ ದಯಮಾಡಿಸಿದ ಜ್ಞಾಪಕಾರ್ಥವಾಗಿ ಸಕಲೇಶಪುರದ ಟವನ್ ಮಧ್ಯದಲ್ಲಿ ಛತ್ರವನ್ನು ಕಟ್ಟಬೇಕೆಂದು ಡಿಸ್ಟ್ರಿಕ್ಟ ೧—೧—೧೯೦೩ನೇ ದಿವಸ ಶ್ರೀಮದ್ವಿಂದ ಚಕ್ರವರ್ತಿ ಸಾರ್ವಭೌಮರವರ ದೇಹಲಿ ದರ್ಬಾರ್ ಶಿರೋಬಂಧ ಯ ಮಹೋತ್ಸವನ್ನು ಅನೇಕ ಯೂರೋಪ್ಯಿಯನ್ ಮತ್ತು ಟವನ್ ದೊಡ್ಡ ಮನುಷ್ಯರುಗಳಿಂದ ಸಭೆ ನಡಸಿ ನಂತ್ರ ಛತ್ರವನ್ನು ಪ್ರತಿಷ್ಠೆ ಮಾಡುವ ವಿಷಯದಲ್ಲಿ ಬಾಗ ಎಸ್ಟೇಟ ಮಿ॥ ಗ್ರಾಹಂ ಆಂಡ್ರಸನ್, ಸಿ. ಐ. ಇ. ಯವರಿಂದ ಶಂಕುಸ್ಥಾಪನೆ ಮಾಡಿಸಿದರು ಮತ್ತು ಕಾರೊನೇಷನ್ ಮಾರ್ಕೆಟು ಕಟ್ಟಿಸುವನವನ್ನು ಓ ಮಾಡಲಾಯಿತು. ಈ ಛತ್ರವನ್ನು ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಯವರ ಹೆಸರು ಇಟ್ಟು ಕಟ್ಟುವದಕ್ಕೆ ತಾಲ್ಲೂಕು ಪ್ರಜೆಗಳಿಂದ ಚಂದಾ ವಸೂಲ್ ಮಾಡಿಸಿ, ಛತ್ರಕ್ಕೆ ಬೇಕಾದ ಮರ ಹಂಚು ಮತ್ತು ಮುಂದಿನ ಸಾಮಾನು ಭಾರಿಯಾಗಿದ್ದ ಯೂರೋಪಿಯನ್ ಬಂಗ್ಲೆಗಳನ್ನು ಗಾಡಿ ಕಟ್ಟುವದಕ್ಕೆ ಬರೆದು ಸಾಮಾನುಗಳನ್ನು ಸಕಲೇಶಪುರದಲ್ಲಿ ಜಮಾಯಿಸಿರುತ್ತಾರೆ. ಇವರ ಮಾಡಿದ ಈ ಮಹತ್ಕಾರ್ಯವನ್ನು ಪೂರೈಸುವಷ್ಟರಲ್ಲೇ ಇವರು ಕಾಲವಾದರಲ್ಲಾ ಎಂದು ಈ ಪ್ರಾಂತ್ಯದ ಜನರೆಲ್ಲಾ ಮರುಗುತ್ತಾರೆ. ಇಂಥಾ ಸದ್ಗುಣಶಾಲಿಗಳು ಮೃತಪಟ್ಟದ್ದಕ್ಕಾಗಿ ಮಿ॥ ಗ್ರಾಹಂ ಆಂಡ್ರಸನ್ ಸಾಹೇಬರು ತಮ್ಮ ಬಹಳವಾದ ದುಃಖವನ್ನು ಅಮಲ್ದಾರ್ರ ತಂದೆ ಮಿ॥ ರಂಗಣ್ಣನವರಿಗೆ ತಿಳಿಸುವ ಸಾಲ ಬರೆದರು. ಆ ರೀತಿ ಸಾಹೇಬರು ತಾವು ಕೃಪೆ ದಯಮಾಡಿಸಿ ತಮ್ಮ ದುಃಖವನ್ನು ಮತ್ತು ಮೇಲೆ ಅಂದ್ರಸನ್ ಸಾಹೇಬರವರ ಲೆಟರನ್ನು ಓದಿ ಹೇಳಿ ಅಮಲ್ದಾರ್ರ ಕುಟುಂಬದವರಿಗೆ ಬೇಕಾದ ಸಮಾಧಾನವನ್ನು ಹೇಳಿ, ತಾಲ್ಲೂಕು ಟ್ರೆಜರಿ ಕ ದ ಇನ್ಸ್‌ಪೆಕ್ಷನ್ ಮಾಡಿಕೊಂಡು ದಯಮಾಡಿಸಿದರು.

ಡಿ. ನಂಜೇಗೌಡ.

ಚಿದಾನಂದದಾಸಯ್ಯ ಗುರುದಾಸಯ್ಯನಾದದ್ದು.
(ತಾನೇ ಬರೆದ ವೃತ್ತಾಂತ)

(ಕಳೆದ ವಾರದ ಶೇಷ.)

ಆದರಿಂದ ಜ್ವರದ ತಾಪವನ್ನೂ ದುಃಖಸಂಕಟವನ್ನೂ ತಾಳಲಾರದೆ ಕೂತುಕೊಂಡು, ಅಯ್ಯೋ, ನಾನು ಸಂಪಾದಿಸಿ ಉಂಡು ಉಟ್ಟು ಸಂತೋಷಪಟ್ಟು ಮತ್ತೊಬ್ಬರನ್ನು ಸಾಕುವಂಥ ಕಾಲವನ್ನೂ ಧನವನ್ನೂ ಕಳಕೊಂಡು ಈ ಕಷ್ಟಕ್ಕೆ ಗುರಿಯಾದೆನಲ್ಲ! ಈ ಅರಣ್ಯದಲ್ಲಿ ನನ್ನನ್ನು ವಿಚಾರಿಸುವವರಿಲ್ಲದೆ ಕಾಡಿನ ಹೆಣವಾದೆನಲ್ಲ! ಇದನ್ನು ತಪ್ಪಿಸಿಕೊಳ್ಳಲಾಗದಂಥ ಜಡತ್ವಾಲಸ್ಯವು ನನಗೆ ಹ್ಯಾಗೆ ಉಂಟಾಯಿತು!

ಅಜ್ಞಾನವು ಒದಿ ಕೈಲಿದ್ದದ್ದನ್ನು ಕಳಕೊಂಡು!
ಉದ್ಧಾನ ಮರನ ಹಾನೇರಿ ಕೈ!
ಬಿಟ್ಟಂತಾಯ್ತೆಲೊ ಸರ್ವಜ್ಞ ॥

ಎಂದು ಹೇಳಿರುವ ಪ್ರಕಾರ ನಾನು ಸಹ ಅದಕ್ಕೆ ಸನ್ಮಾರ್ಗವಾದ ಶಾಸ್ತ್ರ ವೇದಾಂತವನ್ನು ಓದಿದ್ದರಿಂದಲ್ಲವೋ? ಹೌದು, ಇದರಿಂದಲೇ ನನ್ನ ಶರೀರವನ್ನು ಕಾಡು ಮೃಗಗಳಿಗೂ ಆಕಾಶದ ಪಕ್ಷಿಗಳಿಗೂ ಬಲಿಕೊಡುವದಕ್ಕಾಗಿ ಬಂದೆನೇ ಹೊರತು ಮೋಕ್ಷವನು ಪ್ರಾಪ್ತಿಸುವದಕ್ಕಾಗಿ ಬರಲಿಲ್ಲವಲ್ಲ ಎಂದು ರಾತ್ರಿಯೆಲ್ಲಾ ಬಹಳವಾಗಿ ದುಃಖಪಡುತ್ತಾ ಇದ್ದೆ. ತರುವಾಯ ನನ್ನನ್ನು ಕಷ್ಟಕ್ಕೂ ದುಃಖಕ್ಕೂ ಗುರಿಯಾಗಿ ಹುಚ್ಚು ಹಿಡಿಸಿದಂಥ ವೇದಾಂತ ಪುಸ್ತಕಗಳನ್ನು ತೆಗೆದುಕೊಂಡು ಬೆಂಕಿಯಲ್ಲಿ ಹಾಕಿ ಸುಟ್ಟು ಬೂದಿಮಾಡಿ ತಿರಿಗಿ ಬಲ್ಲೇ ಇದರೆ ನನ್ನ ಸ್ವದೇಶದ ಕಡೆಗೆ ಹಿಂದಿರುಗಿ ಹೋಗಬೇಕೆಂದಿರುವಾಗ ಜ್ವರವು ಸ್ವಲ್ಪ ಸ್ವಲ್ಪ ಕಡಿಮೆಯಾಗಿ ನಾಲ್ಕು ದಿವಸಗಳಲ್ಲಿ ಸಂಪೂರ್ಣವಾಗಿ ನಿಂತುಹೋಯಿತು. ಆದರೆ ನಾನು ಇಷ್ಟೆಲ್ಲಾ ಕಷ್ಟಪಟ್ಟು ಪುಸ್ತಕಗಳನ್ನು ಸಹ ಕಳಕೊಂಡು ಮುಕ್ತನಾದಾಗ್ಯೂ ಆ ಸ್ವಗುರುವಿನ ಚಿಂತೆಯು ಇನ್ನೂ ನನ್ನನ್ನು ಬಿಟ್ಟು ಹೋಗದೆ ಮತ್ತೂ ನನ್ನ ಹೃದಯವನ್ನು ಕ್ರಿಮಿಯ ಹಾಗೆ ಕೊರೆಯುತ್ತಾ ಬಂತು. ಆಗ ನಾನು ಅಯ್ಯೋ, ಈ ಸಂಕಟವನ್ನು ನಾನು—ಎಲ್ಲಿ ಹೋಗಿ ಪರಿಹರಿಸಿಕೊಳ್ಳಲಿ! ಗುರುವೆಂಬ ದುಃಖದ ಕಾಟವು ಯಮನ ಕಾಟದಂಥ ಬಲವಾಯಿತಲ್ಲ! ಇದಕ್ಕೆ ಏನು ಮಾಡಬೇಕೆಂದು ಯೋಚಿಸುತ್ತಾ ಪ್ರಯಾಸದಿಂದ ಬರುವಾಗ ಮತ್ತೊಂದು ಯೋಚನೆಯು ನನ್ನಲ್ಲಿ ಉಂಟಾಯಿತು ಅದೇನಂದರೆ—

ಮೊದಲು ನಾನು ನೋಡಿಕೊಂಡಿದ್ದ ಹಿಂದೂಮತದ ಪರೀಕ್ಷೆಯು ಇಲ್ಲಿಗೆ ಸಾಕಾಗಿ ಹೋಯಿತು. ಮುಸಲ್ಮಾನರ ಮತವನ್ನು ಪರೀಕ್ಷೆಮಾಡೋಣ ಅಂದರೆ ಅವರ ಭಾಷೆಯೇ ನನಗೆ ಗೊತ್ತಿಲ್ಲ. ಅವರ ಮಾತನ್ನು ಅವರು ಸಂಸ್ಕೃತ ಅಂದರೆ, ಅರಬಿ ಅಂದರೆ ನನಗೆ ಆಗುವದೇ ಇಲ್ಲ. ಅವರ ಬಳಿಯಲ್ಲಿ ನಾನು ಹೋಗುವದಕ್ಕೇ ಆಗದು. ಆದರೆ ನನ್ನ ತಿಳುವಳಿಕೆಗೆ ಅನುಕೂಲವಾದಂಥ ಇನ್ನೊಂದು ಮತ ಉಂಟು; ಅದು ಕ್ರಿಸ್ತಮತವೇ—ನಾನು ನಾಸಿಕದ ಬೆಂಗಳೂರಿನಲ್ಲಿ ಕ್ರಿಸ್ತಿಯನರು ಕೂಡಿಕೊಂಡು ಬೀದಿಗಳಲ್ಲಿಯೂ ಸ್ಕೂಲುಗಳಲ್ಲಿಯೂ ಆಗಾಗ್ಗೆ ಯೇಸುಕ್ರಿಸ್ತನೇ ಲೋಕರಕ್ಷಕನೆಂದೂ ಅವನೇ ನಮ್ಮ ಪಾಪ ಪರಿಹಾರಕನೆಂದೂ ಅಂಥ ಶ್ರೇಷ್ಠ ಗುರುವಿನಿಂದಲೂ ಅವನೇ ಸನ್ಮಾರ್ಗವನ್ನು ತೋರಿಸತಕ್ಕ ಗುರುವೆಂದೂ ಇನ್ನೂ ಹೀಗೆಯೇ ಹೇಳುತ್ತಿದ್ದರು. ಆ ಕಾಲದಲ್ಲಿ ನಾನು ಅವರ ಮಾತನ್ನು ಕೇಳದ ಹಾಗೆ ಹೀಗೆ ತಿರುಗಿಕೊಳ್ಳುತ್ತಾ ಇದ್ದೆ. ಆದರೆ ಈ ಕಾಲದಲ್ಲಿ ನಾನು ಅವರ ಬಳಿಗೆ ಹೋಗಿ ಅವರಲ್ಲಿಯೇ ಸೇರಿಕೊಂಡು ಕೆಲವು ದಿವಸ ವರಿಗೂ ಅವರ ಬೋಧನೆ ಪಡೆಂದೂ ಅವರ ವೇದದಲ್ಲಿ ಬರೆದಿರುವ ನೇಮೂ ಅವರ ಯೇಸುಕ್ರಿಸ್ತನ ಗುಣಾತಿಶಯಗಳನ್ನೂ ಪರೀಕ್ಷಿಸಿ ನೋಡೋಣ. ಅಲ್ಲಿಗೂ ನಾನು ತಿಳಿದಂಥ ಸದ್ಗುರುವಿನ ಗುಣಲಕ್ಷಣಗಳು ಅವರ ಯೇಸುಕ್ರಿಸ್ತನಲ್ಲಿ ಕಾಣಬರುವಂತೆ ತೋರಿದರೆ ಅದನ್ನು ಸಹ ಬಿಟ್ಟು ನಿಜವಾದ ದೇವರು, ನಿಜವಾದ ಗುರು, ಜೀವನ್ಮುಕ್ತಿಯು ಸರ್ವಥಾ ಸುಳ್ಳೆಂದೂ ಅದಕ್ಕಾಗಿ ಕಷ್ಟಪಡುವದು ವ್ಯರ್ಥವೆಂದೂ ಇವುಗಳ ವಿಷಯದಲ್ಲಿ ಮನುಷ್ಯರನ್ನು ಮೋಸಗೊಳಿಸುವವರೆಲ್ಲರೂ ದೊಡ್ಡ ಮೋಸಗಾರರೆಂದೂ ಪ್ರಕಟಮಾಡಿ ಒಂದು ದಿನ ಸಾಯೋಣ ಎಂದು ತೀರ್ಮಾನಿಸಿಕೊಂಡು, ಮೊದಲು ಬಂದ ಮಾರ್ಗವನ್ನು ಬಿಟ್ಟು ಎರಡನೇ ಮಾರ್ಗವಾಗಿ ತಿರಿಗಿ ಮೈಸೂರಿಗೆ ಹೋಗಿ ಸೇರಿಕೊಂಡು ಮೊದಲಿನಂತೆ ನನ್ನ ಸ್ವಂತ ಕೆಲಸವನ್ನು ಮಾಡಿಕೊಂಡಿದ್ದೆ. ಯಾಕಂದರೆ ಯೇಸುಕ್ರಿಸ್ತನ ಹೆಸರು ಮೊದಲು ನನಗೆ ಬಹಳ ವಿರೋಧವಾಗಿದ್ದದರಿಂದ ತಿರಿಗಿ ಅದಕ್ಕೆ ನನ್ನ ಮನಸ್ಸನ್ನು ಒಡಂಬಡಿಸುವಂತೆ ಕೆಲವು ದಿವಸಗಳ ಮಟ್ಟಿಗೂ ಅಲ್ಲಿ ನಾನು ಸಾಧಿಸಬೇಕಾಯಿತು. ಅನಂತರ ೬ ತಿಂಗಳ ತರುವಾಯ ನಾನು ಮೈಸೂರನ್ನು ಬಿಟ್ಟು ಬೆಂಗಳೂರಿಗೆ ಬಂದು ಮೊದಲು ನನ್ನ ಹೆಂಡತಿ ಮಕ್ಕಳನ್ನು ಒಪ್ಪಿಸಿಕೊಟ್ಟಿದ್ದಂಥ ಘನ ಪಾದ್ರಿಯವರಾದ ವಾಲ್‌ಟನ್ ದೊರೆಯವರ ಬಳಿಗೆ ಹೋಗಿ ಅಯ್ಯಾ, ನಾನು ಸಹ ನಿಮ್ಮ ಮತದಲ್ಲಿ ಸೇರಬೇಕೆಂದು ಹೇಳಿಕೊಂಡೆನು. ಅದಕ್ಕೆ ಅವರು ಹೇಳಿದ್ದೇನಂದರೆ—ನಿಮಗೋಸ್ಕರ ನಾವು ಮಾಡಿದಂಥ ಪ್ರಾರ್ಥನೆಯನ್ನು ದೇವರು ಕೇಳಿ ಪುನಃ ನಮ್ಮ ಬಳಿಗೆ ನಿಮ್ಮನ್ನು ಬರಮಾಡಿದ್ದರಿಂದ ಆತನ ನಾಮಕ್ಕೆ ಸ್ತೋತ್ರವಾಗಲೆಂದು ಹೇಳಿದರೇ ಹೊರತು ಇನ್ನೇನು ನನ್ನ ಸಂಗಡ ಮಾತಾಡುವದಕ್ಕೆ ಅವರಿಗೆ ಸಮಯವಿರಲಿಲ್ಲ; ಯಾಕಂದರೆ ಅವರು ಇಂಗ್ಲಾಂಡಿಗೆ ಹೋಗುವಂಥ ತೊಂದರೆಯಲ್ಲಿ ಇದ್ದವರಿಂದ ಇನ್ನು ಮೇಲೆ ನೀವು ಗಾಸ್ಕಿನ್ ದೊರೆಯವರ ಬಳಿಗೆ ಹೋಗುತ್ತಾ ಇರಬೇಕೆಂದು ಹೇಳಿ ಎರಡು ದಿವಸಗಳಲ್ಲಿ ಇಂಗ್ಲಾಂಡಿಗೆ ಹೊರಟುಹೋದರು. ಅನಂತರ ನಾನು ಘನ ಪಾದ್ರಿಯವರಾದ ಗಾಸ್ಕಿನ್ ದೊರೆಯವರ ಬಳಿಗೆ ಹೋಗುತ್ತಾ ಇರುವಾಗ ಅವರು ಎರಡು ದಿನಗಳ ಮಟ್ಟಿಗೂ ನನ್ನ ಪ್ರಯಾಣದ ವರ್ತಮಾನವನ್ನು ಕೇಳಿ ಮೂರನೇ ದಿವಸದಲ್ಲಿ ಇನ್ನು ಮೇಲೆ ನೀವು ಹರ್ಸ್ಟ ದೊರೆಯವರ ಬಳಿಗೆ ಹೋಗುತ್ತಾ ಇರಿ; ಯಾಕಂದರೆ ನಮಗೆ ತುಮಕೂರಿಗೆ ವರ್ಗವಾಯಿತೆಂದು ಹೇಳಿದರೇ ಹೊರತು ಇನ್ನೇನು ನನಗೆ ತಿಳಿಸಲಿಲ್ಲ. ಅವರು ತುಮಕೂರಿಗೆ ಹೋದ ಬೆಳಿಗ್ಗೆ ನಾನು ಘನಪಾದ್ರಿಯವರಾದ ಜೆ. ಹರ್ಸ್ಟ ದೊರೆಯವರ ಬಳಿಗೆ ಹೋದಾಗ ಅವರು ಯಾವ ನಿಮಿತ್ತವಾಗಿ ನೀವು ಜ್ಞಾನಸ್ನಾನವನ್ನು ಹೊಂದುತ್ತೀರೆಂದು ಕೇಳಿದರು. ಅದಕ್ಕೆ ನಾನು ಸದ್ಗುರುವಿನ ನಿಮಿತ್ತವಾಗಿ ಪಟ್ಟಂಥ ಕಷ್ಟವನ್ನೂ ಆತನು ನನಗೆ ಸಿಕ್ಕದೆ ಹೋದದ್ದನ್ನೂ ಯೇಸುಕ್ರಿಸ್ತನೇ ಅಂಥವನಾಗಿರಬಹುದೆಂದು ಬಂದದ್ದನ್ನೂ ಕುರಿತು ಸಂಕ್ಷೇಪವಾಗಿ ಹೇಳಿದ್ದಕ್ಕೆ ಅವರು ಏನು ಹೇಳದೆ ಇನ್ನುಮೇಲೆ ನೀವು ಅಬ್ಬೈದಯ್ಯನವರ ಬಳಿಗೆ ಹೋಗುತ್ತಾ ಇರಬೇಕೆಂದು ಹೇಳಿದರು. ಅದೇ ಪ್ರಕಾರ ನಾನು ಒಂದು ತಿಂಗಳ ಮಟ್ಟಿಗೂ ಘನ ಪಾದ್ರಿಯವರಾದ ಅಬ್ಬೈದಯ್ಯನವರ ಬಳಿಗೆ ಹೋಗುತ್ತಾ ಬರುತ್ತಾ ಇರುವಾಗ ನಾನು ಚಿಕ್ಕಂದಿನಿಂದ ನಿಜ ದೇವರ ವಿಷಯದಲ್ಲಿಯೂ ತರುವಾಯ ಸದ್ಗುರುವಿನ ವಿಷಯದಲ್ಲಿಯೂ ಪಟ್ಟಂಥ ನನ್ನ ಪ್ರಯಾಸಗಳ ಚರಿತ್ರೆಯನ್ನು ಕುರಿತು ಹೇಳುತ್ತಾ ಬಂದರೇ ಹೊರತು ಕ್ರಿಸ್ತನ ವಿಷಯದಲ್ಲಿ ಅವರು ನನಗೆ ಏನು ಬೋಧಿಸುವದಕ್ಕೂ ತಕ್ಕ ಸಮಯವು ಇರಲಿಲ್ಲ. ಒಂದು ವೇಳೆ ಅವರು ಹಾಗೆ ಬೋಧಿಸುವದಕ್ಕೆ ತೊಡಗಿದ್ದರೂ ಅವರ ಮಾತನ್ನು ನಾನು ನಂಬುತ್ತಲೂ ಇರಲಿಲ್ಲ. ಯಾಕಂದರೆ ಆ ಕಾಲದಲ್ಲಿ ನನ್ನ ಸ್ವಂತ ಅನುಭವದಿಂದ ಪರೀಕ್ಷಿಸಿ ನಂಬಬೇಕೆಂಬುವದೇ ನನ್ನ ನಿರೀಕ್ಷೆಯಾಗಿತ್ತು, ಆದದರಿಂದ ಅವರ ಮಾತು ಮಾತ್ರವಲ್ಲ, ಯಾರ ಮಾತನ್ನಾದರೂ ನಂಬುತ್ತಿರಲಿಲ್ಲ. ತರುವಾಯ ಎರಡನೇ ತಿಂಗಳಲ್ಲಿ ಹೀಗೆಯೇ ನನ್ನನ್ನು ಬಿಟ್ಟರೆ ಒಂದುವೇಳೆ ತಿರಿಗಿ ಹಿಂದಕ್ಕೆ ಓಡಿಹೋದಾನೆಂದು ಅವರು ತಿಳುಕೊಂಡು ಶನಿವಾರದ ರಾತ್ರಿಯಲ್ಲಿ ನನಗೆ ಸ್ನಾನದ ಕ್ರಮವನ್ನು ಕಲಿಸುವದಾಗಿ ಘನ ಲೂಕಯ್ಯನವರನ್ನು ನನ್ನ ಬಳಿಗೆ ಕಳುಹಿಸಿದರು. ತರುವಾಯ ಬೆಳಿಗ್ಗೆ ಭಾನುವಾರ ಅಬ್ಬೈದಯ್ಯನವರು ಗುಡಿಯಲ್ಲಿ ನನ್ನನ್ನು ಸಭೆಯವರ ಮುಂದೆ ನಿಲ್ಲಿಸಿ ೧೮೭೩ನೇ ಇಸವಿಯಲ್ಲಿ ಜ್ಞಾನಸ್ನಾನವನ್ನು ಕೊಟ್ಟು ಗುರುದಾಸಯ್ಯನೆಂದು ಹೆಸರಿಟ್ಟರು. ಆಗ ನನಗೆ ನಾಲ್ವತ್ತನೇ ವಯಸ್ಸಾಗಿತ್ತು.

## ಮೈಸೂರು ಸರಕಾರ ಹುಕುಮುಗಳು.

ಅನ್ನಸತ್ರಗಳೂ ನಿಬಂಧನೆಗಳೂ.

ಮೈಸೂರು ಡೆಪ್ಯೂಟಿ ಕಮಿಷನರ್‌ರವರು ಮೈಸೂರಿನ ಲಕ್ಷ್ಮೀನರಸಿಂಹಾಚಾರ್ಯರೆಂಬುವರಿಗೆ ಮೇಲ್ಕೋಟೆಯ ಮುಜರಾಯಿ ಅನ್ನಸತ್ರದಿಂದ ದಿನ ೧ ಕ್ಕೆ ಒಂದು ಸೇರು ಅಕ್ಕಿಬಾಬತನ್ನು ಅಥವಾ ಅದರ ಕ್ರಯ ತಿಂಗಳಿಗೆ ೭ ರೂಪಾಯಿಯನ್ನು ಕೊಡುವಂತೆ ಸ್ವಾಂತ ಮಾಡಿ ಹುಕುಂ ಕೊಟ್ಟರೆಂದು ರಿಕಾರ್ಡಿನಿಂದ ಗೊತ್ತಾಗುತ್ತೆ.

ಮೇಲ್ಕೋಟೆ ಅನ್ನಸತ್ರಕ್ಕೆ ತಿಂಗಳಿಗೆ ೬೦ ರೂ. ಖರ್ಚಾಗುತ್ತಿದೆ. ಕಳೆದ ೧೯೦೨ ನೆ ಇಸವಿ ಫೆಬ್ರವರಿಯಿಂದ ಅನ್ನಸತ್ರ ನಡೆಯುವಂತೆ ಹುಕುಂ ಮಾಡಲ್ಪಟ್ಟಿತು. ಆ ಹಣವೇ ಬಹಳ ಸ್ವಲ್ಪವಾಗಿರುತ್ತೆ. ಅದನ್ನೆಲ್ಲಾ ಯಥಾರ್ಥವಾದ ಪ್ರಯಾಣಿಕರಿಗೆ ಅನ್ನ ದಾನ ಮಾಡುವದಕ್ಕಾಗಿಯೇ ವಿನಿಯೋಗಿಸ ತಕ್ಕದ್ದೆಂದು ಹುಕುಂ ಕೊಟ್ಟಿದೆ. ಈ ಸ್ವಲ್ಪ ಹಣದಲ್ಲಿ ತಿಂಗಳಿಗೆ ೭ ರೂಪಾಯಿಯನ್ನು ಮೇಲ್ಕಂಡಂತೆ ವಿನಿಯೋಗಿಸಿ ಬಿಟ್ಟರೆ ಖಂಡಿತವಾಗಿಯೂ ಅನ್ನಸತ್ರದ ಉದ್ದೇಶಕ್ಕೇನೇ ಲೋಪ ಉಂಟಾಗುವದು.

ಡೆಪ್ಯುಟಿ ಕಮಿಷನರ್‌ರವರು ಮೊದಲೇ ಗೌವರ್ನಮೆಂಟಿನವರ ಸ್ಯಾಂಕ್ಷನ್ ಪಡೆಯದೆ ಇಂಥ ಈ ಲವಾಜಮೆಯನ್ನು ಅವರಿಗೆ ಕೊಡುವಂತೆ ಹುಕುಂ ಮಾಡಿದರೆಂದು ತನಿಖೆ ಮಾಡಿದ್ದರಲ್ಲಿ ಗೊತ್ತಾಯಿತು. ಮುಜರಾಯಿ ಸೂಪರಿಂಟೆಂಡೆಂಟ್ ಕೆಲಸವನ್ನೇ ಮಾಡುವವರು, ಮಹಾಮಹಾಗ್ಯ ಗೌವರ್ನಮೆಂಟಿನವರು ಡೆಪ್ಯುಟಿ ಕಮಿಷನರುಗಳಿಗೆ ಜಾಸ್ತಿ ಅಧಿಕಾರಗಳನ್ನು ವಹಿಸಿಕೊಟ್ಟ ಹಾಗೂ, ಆ ಅಧಿಕಾರದ ಮೇಲೆ ಅವರು ಲವಾಜಮೆಯನ್ನು ಸ್ಯಾಂಕ್ಷನ್ ಮಾಡಿದ ಹಾಗೂ ತಿಳಿದು ಬರುವದು.

ಸರ್ಕಾರದ ಹಣವನ್ನು ಈ ರೀತಿಯಲ್ಲಿ ಖರ್ಚು ಮಾಡುವಂಥ ಅಧಿಕಾರವು ಗೌವರ್ನಮೆಂಟಿನಿಂದ ಕೊಡಲ್ಪಟ್ಟಿರುವದಿಲ್ಲ. ಮೇಲ್ಕೋಟೆಯ ಅನ್ನಸತ್ರವು ಬಹಳ ಸಣ್ಣದು; ಅದರ ಸಾಧಾರಣ ಖರ್ಚಿನಲ್ಲಿ ಈ ಲವಾಜಮೆಯನ್ನು ಒಬ್ಬರಿಗೆ ಕೊಡುತ್ತಿರುವದು ಸರಿಯಲ್ಲ. ಅದನ್ನು ನಿಲ್ಲಿಸಿಬಿಡ ತಕ್ಕದ್ದು. ಈ ಭಾಗದಲ್ಲಿ ಡೆಪ್ಯುಟಿ ಕಮಿಷನರರು ತಮ್ಮ ನಡವಳಿಕೆಯನ್ನು ಗೌವರ್ನಮೆಂಟಿಗೆ ರಿಪೋರ್ಟು ಕಳುಹಿಸ ತಕ್ಕದ್ದು.

ಮೇಲ್ಕಂಡ ಹುಕುಮಿನ ನಕಲುಗಳನ್ನು ಎಲ್ಲಾ ಡೆಪ್ಯುಟಿ ಕಮಿಷನರುಗಳಿಗೂ, ಅಮಲ್ದಾರರು ಮತ್ತು ಡೆಪ್ಯುಟಿ ಅಮಲ್ದಾರರುಗಳಿಗೂ, ಅರಮನೆ ಕಂಟ್ರೋಲರಿಗೂ ರವಾನೆ ಮಾಡಿದೆ.

◆◆◆◆◆◆◆◆◆

ಯಲ್ಲಂಪಳ್ಳಿಯ ವೆಂಕಟ್ರಮಣಸ್ವಾಮಿ ದೇವಸ್ಥಾನವು.

ಬಾಗೇಪಲ್ಲಿ ತಾಲ್ಲೂಕಿಗೆ ಸೇರಿದ ಯಲ್ಲಂಪಳ್ಳಿಯಲ್ಲಿ ವೈಶ್ಯರ ಸಂಜಕ್ಕನೆಂಬಾಕೆಯು ವೆಂಕಟ್ರಮಣಸ್ವಾಮಿ ದೇವಸ್ಥಾನವನ್ನು ಕಟ್ಟಿಸಿ, ಪ್ರತಿಷ್ಠೆ ಮುಂತಾದ್ದು ಮಾಡಿ, ತಾನೇ ಕೆಲವು ವರುಷಗಳ ತನಕ ಅದರ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದು ೧೮೯೩ ರಲ್ಲಿ ಕಾಯಿಲೆ ಬಿದ್ದುಕೊಂಡಳು. ಆಗ ತಾನು ಸಾಯುವೆನೆಂದು ಊಹಿಸಿ ಉಯಿಲು ಬರೆದು ತನ್ನ ೧,೧೧೯ ರೂ. ಆಸ್ತಿಯನ್ನು ಆ ದೇವಸ್ಥಾನಕ್ಕೆ ಬರೆದು, ಅದರ ಮೇಲ್ವಿಚಾರಣೆ ನೋಡಿಕೊಳ್ಳುವಂತೆ ಅಲ್ಲಿನ ಐದು ಮಂದಿ ಮಾತುಬರದಾದ ಧನಿಗಳನ್ನು ಗೊತ್ತು ಮಾಡಿದಳು. ಆದರೆ ಅವಳು ಆಗ ಸಾಯಲಿಲ್ಲ. ಬದುಕಿಕೊಂಡು ಮತ್ತೆ ತಾನೇ ದೇವಸ್ಥಾನದ ಮೇಲ್ವಿಚಾರಣೆ ನೋಡಿಕೊಳ್ಳುತ್ತಾ ಬಂದಳು. ಆವಳಿಗೆ ೧೯೦೦ ನೇ ಜುಲೈ ತಿಂಗಳಿಗೆ ೯೦ ವರುಷ ತುಂಬಿದ್ದನ್ನು ತಿಳಿದು, ತಾನು ಇನ್ನು ಬದುಕುವದಾಗಿಲ್ಲವೆಂದು ಊಹಿಸಿ, ಮತ್ತೊಂದು ಉಯಿಲನ್ನು ಬರೆದು, ಮೇಲ್ಕಂಡ ಆಸ್ತಿಯನ್ನು ಸರ್ಕಾರದವರು ವಹಿಸಿಕೊಂಡು ದೇವಸ್ಥಾನವನ್ನು ನಡಿಸಬೇಕೆಂದು ಬರಕೊಟ್ಟು, ಅದನ್ನು ರಿಜಿಸ್ಟರು ಮಾಡಿಸಿದಳು. ತರುವಾಯ ಅವಳು ಅದೇ ನವಂಬರಿನಲ್ಲಿ ಕಾಲವಾದಳು. ಆಕೆಯ ಧರ್ಮಕ್ಕೆ ಲೋಪ ಬಾರದಂತೆ ನೋಡಿಕೊಳ್ಳುವದಕ್ಕಾಗಿ ಅಮಲ್ದಾರರು ಅದನ್ನೆಲ್ಲಾ ತನಿಖೆಮಾಡಿದರು. ಆಕೆ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಟ್ಟಿರುವ ಹಣದ ಬಡ್ಡಿಯನ್ನು ಅರ್ಚಕನಿಗೆ ಪ್ರತಿ ವರುಷವೂ ಕೊಡುತ್ತಾ ಬರಬೇಕು; ಆಕೆ ಭೋಗ್ಯಮಾಡಿಕೊಂಡಿರುವ ಜಮೀನುಗಳನ್ನು ಅರ್ಚಕನು ಅನುಭೋಗಿಸುತ್ತಾ ಬರಬೇಕು; ಭೋಗ್ಯದ ಹಣ ವಾಪಸು ಬಂದರೆ ಅದನ್ನೂ ಸೇವಿಂಗ್ಸ್ ಬ್ಯಾಂಕಿಗೇ ಹಾಕಿ ಅದರ ಬಡ್ಡಿಯನ್ನೂ ಅರ್ಚಕನಿಗೇ ಕೊಡಬೇಕು; ಸದರಿ ಅರ್ಚಕನ ಸಾಧೀನದಲ್ಲಿರುವ ಆಕೆ ಕೊಟ್ಟಿದ್ದ ಪಾತ್ರೆಗಳೆಲ್ಲಾ ಆತನೇ ಜವಾಬ್ದಾರನೆಂಬರ್ಥಕ್ಕೆ ಆತನಿಂದ ಒಂದು ಮುಚ್ಚಳಿಕೆ ಪಡೆಯತಕ್ಕದ್ದು ಎಂಬದಾಗಿ ಸರ್ಕಾರದವರು ಹುಕುಂ ಮಾಡಿರುತ್ತಾರೆ. ಬ್ಯಾಂಕಿನಲ್ಲಿರುವ ಹಣವನ್ನು ಬಾಗೇಪಲ್ಲಿ ಅಮಲ್ದಾರ್ರ ಹೆಸರಿಗೆ ಇಡತಕ್ಕದ್ದೆಂದು ತೀರ್ಮಾನವಾಗಿದೆ.

◆◆◆◆◆◆◆◆◆

ಸೋಸಲೆಯ ಶ್ರೀ ವ್ಯಾಸರಾಯ ಸ್ವಾಮಿಗಳವರ ಮಠವು.

ತಿರಮಕೂಡ್ಲುನರಸೀಪುರದ ತಾಲ್ಲೂಕಿಗೆ ಸೇರಿದ ಸೋಸಲೆಯ ಶ್ರೀ ವ್ಯಾಸರಾಯ ಸ್ವಾಮಿಗಳ ಮಠಕ್ಕೆ ನಗದಿಯಾಗಿನಲ್ಲಿ ತಿಂಗಳಿಗೆ ರೂ. ೩೩೧—೩—೮ ಪೈ ನೇಮಾದಾಯದ ಗ್ರಾಂಟು ಸಲ್ಲುತ್ತಿತ್ತು. ಈಚೆಗೆ ಈ ಗ್ರಾಂಟಿನ ಉದ್ದೇಶವನ್ನೇ ಬಾಳುಮಾಡಿರಿಂದ ಸರ್ಕಾರದವರು ಹಣ ನಿಲ್ಲಿಸಬೇಕೆಂತಲೂ, ಬೃಂದಾವನಗಳ ಪೂಜೆ ಮುಂತಾದ್ದನ್ನೂ ಸಂತರ್ಪಣೆಯನ್ನೂ ಮುಜರಾಯಿ ಇಲಾಖೆಯಿಂದಲೇ ನಡಸಬೇಕೆಂತಲೂ ಹುಕುಂ ಮಾಡಿದರು. ಕೆಲವು ಕಾಲದ ಮೇಲೆ ಸ್ವಾಮಿಗಳವರೂ, ಏಜಂಟರೂ ಈ ವಿಷಯವಾಗಿ ಗವರ್ನಮೆಂಟಿಗೆ ಅನೇಕ ಅರ್ಜಿಗಳನ್ನು ಬರೆದುಕೊಂಡದ್ದರಿಂದ ತಿಂಗಳಿಗೆ ೨೦೦ ರೂಪಾಯಿನಂತೆ ಹಂಗಾಮಿಯಾಗಿ ಮಠಕ್ಕೆ ಮಾತಿ ಮಾಡತಕ್ಕದ್ದೆಂತಲೂ, ಸ್ವಾಮಿಗಳವರು ಮಠದಲ್ಲಿರತಕ್ಕ ಜಸ್ವತ್ತು ಆಭರಣ ಮುಂತಾದವುಗಳ ತಪಶೀಲನ್ನೆಲ್ಲಾ ಬರೆದುಕೊಡಬೇಕೆಂತಲೂ, ಅವುಗಳಿಗೆಲ್ಲಾ ಅವರು ಜವಾಬ್ದಾರರಾಗಿರಬೇಕೆಂತಲೂ ಹುಕುಂ ಮಾಡಿದರು. ತರುವಾಯ ಇದೇ ಶೋಭಕೃನ್ನಾಮ ಸಂವತ್ಸರದ ಚೈತ್ರ ಬಹುಳ ೩ (೧೪—೪—೧೯೦೩) ರಲ್ಲಿ ಸ್ವಾಮಿಗಳವರು ದಿವಾನರವರಿಗೆ ಒಂದು ರಿಜಿಸ್ಟರ್ ಕಾಗದ ಬರೆದು—ಮಠಕ್ಕೆ ತುಂಬಾ ಸಾಲವಾಗಿದೆ ಎಂತಲೂ, ಮಠದ ಇನಾಮತಿ ಗ್ರಾಮ ಭೂಮಿಗಳು ಮೈಸೂರು ಸಂಸ್ಥಾನದಲ್ಲೆಲ್ಲಾ ಇರುತ್ತವೆಂತಲೂ, ಇವುಗಳನ್ನು ಸರ್ಕಾರದವರೇ ವಹಿಸಿಕೊಂಡು ರಕ್ಷಿಸುತ್ತಾ ಬರಬೇಕೆಂತಲೂ ತಿಳಿಸಿದರು.

ಗೌವರ್ನಮೆಂಟಿನವರು ೧೯೦೩ ನೇ ಇಸವಿ ಜುಲೈ ೧ ರಲ್ಲಿ ಆಗಾಯಿತು ಆ ಮಠದ ಸಾಲಗಳನ್ನೆಲ್ಲಾ ಆಯಾ ಡೆಪ್ಯುಟಿ ಕಮಿಷನರುಗಳು ವಹಿಸಿಕೊಂಡು, ತಾಲ್ಲೂಕು ಅಮಲ್ದಾರರುಗಳ ಮೂಲಕ ವಸೂಲು ಮಾಡಿಸತಕ್ಕದ್ದೆಂತಾ ಹುಕುಂ ಕೊಟ್ಟಿದಾರೆ. ಅನ್ಯಾಕ್ರಾಂತವಾದ ಇನಾಮತಿ ಜಮೀನುಗಳನ್ನು ತನಿಖೆ ಮಾಡಿ, ಆಯಾ ಹಣವನ್ನು ಕಡಿತ, ಡೆಪ್ಯುಟಿ ಕಮಿಷನರರು ಅದರ ಪಕ್ಕಾ ಬಾಧ್ಯತೆಗಳನ್ನು ಚನ್ನಾಗಿ ವಿಚಾರಣೆಮಾಡಿ, ತಮ್ಮ ಅಭಿಪ್ರಾಯ ಸಹಿತವಾಗಿ ಗೌವರ್ನಮೆಂಟಿಗೆ ರಿಪೋರ್ಟು ಮಾಡಬೇಕಾಗಿದೆ.

ಸ್ವಾಮಿಗಳವರಿಗೆ ಹಣ ಸಾಲ ಕೊಟ್ಟಿದ್ದೆಂಬದಾಗಿ ಹುಂಡಿ ಶ್ರೀನಿವಾಸಾಚಾರ್ಯ ಮಕ್ಕಳು ರಂಗ ಶ್ರೀನಿವಾಸಾಚಾರ್ಯ ಮಠಕ್ಕೆ ಸೇರಿದ ಎರಡು ನೇಮಾದಾಯದ ಇನಾಮತಿ ಗ್ರಾಮಗಳನ್ನು (ತುಂಕೂರು ತಾ ದೊಡ್ಡಸಜ್ಜನ, ಬೇಲೂರು ತಾ ಸೀತಾಪುರ) ಅನುಭೋಗಿಸುತ್ತಾ ಇದಾರೆಂದು ತಿಳಿದುಬರುತ್ತೆ. ಹೀಗೆ ದೇವದಾಯದ ಗ್ರಾಮಗಳನ್ನು ಅನ್ಯಾಕ್ರಾಂತ ಮಾಡುವದು ನ್ಯಾಯವಲ್ಲವಾದ್ದರಿಂದ ಅದನ್ನು ರದ್ದುಮಾಡಿದೆ. ತುಂಕೂರು ಮತ್ತು ಹಾಸನ ಡೆಪ್ಯುಟಿ ಕಮಿಷನರುಗಳು ಆ ಗ್ರಾಮಗಳನ್ನು ಕೂಡಲೇ ಅವರ ಸ್ವಾಧೀನದಿಂದ ತೆಗೆದುಕೊಳ್ಳಬೇಕು; ಮತ್ತು ಆಯಾ ತಾಲ್ಲೂಕು ಅಮಲ್ದಾರ್ರ ಮೇಲ್ವಿಚಾರಣೆಗೆ ಒಪ್ಪಿಸಬೇಕು.

ಗೌವರ್ನಮೆಂಟಿನವರು ೧೯೦೨ನೇ ಅಕ್ಟೋಬರ್ ೯ರಲ್ಲಿ ಕೊಟ್ಟ ಹುಕುಂ ಪ್ರಕಾರ ಮೈಸೂರು ಡಿಸ್ಟ್ರಿಕ್ಟ್ ಮುಜರಾಯಿ ಕಮಿಷನರರು ಸೋಸಲೆಗೆ ಹೋಗಿ ಮಠದಲ್ಲಿರತಕ್ಕ ಜವಾಜದಗಿಯನ್ನು ಲೆಕ್ಕಮಾಡಿ ಒಂದು ಪಟ್ಟಿ ತಯಾರ್ಮಾಡಿ ಕಳುಹಿಸಬೇಕಾಗಿತ್ತು. ಆ ಕಮಿಷನರ್ ಮೆ॥ ಸಿ. ಬಿ. ಶೇಷಗಿರಿರಾಯರು (ಹಾಲಿ ಹಾಸನದ ಸಬ್ ಜಡ್ಜ ಆಗಿದಾರೆ) ಈ ವಿಷಯದಲ್ಲಿ ಬರೆದಿರುವದೇನಂದರೆ:—ಮಠದಲ್ಲಿರುವ ಒಡವೆ ಮುಂತಾದ್ದನ್ನು ನೋಡಿ ಖರೀದಿ ಕಟ್ಟುವದಕ್ಕೆ ನನಗೆ ಚೈತನ್ಯ ಸಾಲದು; ಆ ಒಡವೆಗಳನ್ನು ಕೈಯಲ್ಲಿ ಹಿಡಿದು ಮುಟ್ಟುವದೇ ಮುಂತಾದ್ದು ಯೋಗ್ಯವಲ್ಲ ಮತ್ತು ಅದು ಪಾಪಕೃತ್ಯವಾಗುತ್ತದೆ; ಆದಕಾರಣ ನಾನು ಆ ಮಠಕ್ಕೆ ಹೋಗಿ ತನಿಖೆಮಾಡಿ ಜೇರಿಸ್ತು ಪಟ್ಟಿ ತಯಾರ್ಮಾಡಲು ಆಗಲಿಲ್ಲ. ಮೆ॥ ಶೇಷಗಿರಿರಾಯರು ತಮ್ಮ ಪ್ರತ್ಯೇಕ (ಕರ್ತವ್ಯ)ವನ್ನು ನೆರವೇರಿಸುವದರಲ್ಲಿ ಗೌವರ್ನಮೆಂಟಿನವರ ಹುಕುಮನ್ನು ಅಪಾರ್ಥಮಾಡಿಕೊಂಡದರಿಂದ ಎಂದು ಗೌವರ್ನಮೆಂಟಿನವರು ಅಪ್ಪಣೆಯುಳ್ಳವರಾಗಿದಾರೆ. ಈಗಲಾದರೂ ಡೆಪ್ಯುಟಿ ಕಮಿಷನರರು ಯೋಗ್ಯರಾದ ಒಬ್ಬ ಅಸಿಸ್ಟೆಂಟ್ ಕಮಿಷನರರನ್ನು ಸೋಸಲೆಗೆ ಕಳುಹಿಸಿ, ಅವರಿಂದ ಮಠದ ನಗನಾಣ್ಯಗಳ ಅಂದಾಜಾ ಪಟ್ಟಿಯನ್ನು ಕ್ರಮವಾಗಿ ತಯಾರ್ಮಾಡಿಸಿ ಕಳುಹಿಸಿಕೊಡತಕ್ಕದ್ದು. ಅವಶ್ಯವಿದ್ದರೆ ಅವರ ಜೊತೆಯಲ್ಲಿ ಒಬ್ಬಿಬ್ಬರನ್ನು ಕಳುಹಿಸಬಹುದು ಮತ್ತು ಇವರಿಗೆ ಸ್ವಲ್ಪ ಅಲೋವೆನ್ಸನ್ನು ಮಠದ ಫಂಡಿನಿಂದ ಕೊಡಬಹುದು

೧೯೦೪ ನೆ ಏಪ್ರಿಲ್ ೧೪ ರಲ್ಲಿ ಗೌವರ್ನಮೆಂಟ್ ಗೆಜೆಟ್ಟಿನಲ್ಲಿ ಸೇರಿಯುವರು ಸೋಸಲೆಗೆ ಹೋಗಿ ಮಠವನ್ನು ನೋಡಿಕೊಂಡು ಬಂದರು. ಮಠದ ಮುಂದಿನ ತೊಟ್ಟಿಯು ಬಿದ್ದುಹೋಗುವಹಾಗಿದೆ ಎಂತಲೂ ಅದನ್ನು ಕೂಡಲೇ ದುರಸ್ತುಮಾಡಿಸಬೇಕೆಂತಲೂ ರಿಪೋರ್ಟುಮಾಡುತ್ತಾರೆ. ಅದನ್ನು ದುರಸ್ತು ಮಾಡಿಸುವದಕ್ಕೆ ಅಂದಾಜು ಪಟ್ಟಿಯನ್ನು ಗೌವರ್ನಮೆಂಟಿಗೆ ಸ್ಯಾಂಕ್ಷನ್ ಬಗ್ಗೆ ಕಳುಹಿಸತಕ್ಕದ್ದು.

## ಇಂಡಿಯಾ ದೇಶದ ವೃತ್ತಾಂತಗಳು.

ಅಹಮದಾಬಾದಿನಲ್ಲಿ ಕಳೆದ ವಾರ ಒಂದು ಭಾರೀ ಜೈನರ ಸಮಾಜ ನಡೆಯಿತು. ಸೆಪ್ಟಂಬರ್ ೨೩ಕ್ಕೆ ಇನ್ನೊಂದು ಸಮಾಜವು ಸೇರುವದು.

❖❖❖❖

ಮಧ್ಯಪ್ರಾಂತ್ಯಗಳಲ್ಲಿ ಕ್ಷಾಮಪೀಡಿತರು ೩,೦೦೦ ಮಂದಿ ಕಡಿಮೆಯಾಗಿರುತ್ತಾರೆ. ಈಗ ಸರ್ಕಾರಿ ಪೋಷಣೆಯಲ್ಲಿರುವವರು ೩೩,೪೧೬ ಮಂದಿ.

❖❖❖❖

ವಾಯುವ್ಯ ಪ್ರಾಂತ್ಯದಲ್ಲಿ ೭೯ ಲಕ್ಷ ಎಕರೆ ಜಮೀನಿನಲ್ಲಿ ಹೋದವರುಷ ಹರೀ ಫಸಲು ಆಯಿತೆಂತಲೂ, ಈ ಸಂಖ್ಯೆಯು ಈ ವರುಷ ಇನ್ನೂ ಹೆಚ್ಚಬಹುದೆಂತಲೂ ಪ್ರಕಟವಾಗಿದೆ.

❖❖❖❖

ಕರ್ನಾಟಕ ರಾಜ್ಯದ ಬೇಗಂ ರಾಣಿಯವರು ಮದರಾಸಿನಲ್ಲಿ ಈಗ ಕಾಯಿಲೆಯಾಗಿರುತ್ತಾರೆ. ಈಕೆಗೆ ಈಗ ೭೮ ವರುಷ ತುಂಬಿರುವದು. ಮಹಮದಿಯರೆಲ್ಲರೂ ಈಕೆಯನ್ನು ತುಂಬಾ ಘನಪಡಿಸಿದರು.

❖❖❖❖

ಪಾಲಿಟಾನಾ ಸಂಸ್ಥಾನದ ಸರ್ಕಾರಿ ಉದ್ಯೋಗಸ್ಥರು ಜೋಡು ಹಾಕಿಕೊಂಡು, ಚುಟ್ಟಾ ಸೇದುತ್ತಾ, ಆಯುಧಪಾಣಿಗಳಾಗಿ ಜೈನರ ದೇವಸ್ಥಾನವನ್ನು ಪ್ರವೇಶಮಾಡಕೂಡದೆಂಬದಾಗಿ ಅಹಮದಾಬಾದಿನ ಮ್ಯಾಜಿಸ್ಟ್ರೇಟರು ತೀರ್ಮಾನ ಮಾಡಿರುತ್ತಾರೆ.

❖❖❖❖

ಚಕ್ರವರ್ತಿಯವರ ಜನ್ಮೋತ್ಸವದಿನದ (ಜೂನ್ ೨೬) ವೈಸ್ರಾಯಿಯವರು ಸಿಮ್ಲಾನಗರದಲ್ಲಿ ಒಂದು ಭಾರೀ ದರ್ಬಾರನ್ನು ಮಾಡಿದರು. ಸುಮಾರು ೭೦೦ ಮಂದಿ ಸರದಾರರೂ ಹೊರೆತಾವಿಯೂ ಬಹುಮಾನಿತರು. ಭೋಜನಾನಂತರ ಬಾಲ್ ಎಂಬ ವಿನೋದವೂ ನಡೆಯಿತು.

❖❖❖❖

ಕಾನ್‌ಪುರದಲ್ಲಿ ಒಬ್ಬ ಮನುಷ್ಯನು ತಾನು ಪೋಲೀಸ್ ಅಧಿಕಾರಿಯೆಂದು ಹೇಳಿಕೊಂಡು ಸೇಷನದ ಪಟ್ಟಣಕ್ಕೆ ಹೋಗಿ ದೊಡ್ಡ ಸಾಹುಕಾರರ ಮನೆಗಳನ್ನು ತಪ್ಪಿಸಿ ನೂರಾರು ರೂಪಾಯಿಗಳನ್ನು ದೋಚಿಕೊಂಡು ಹೋದನು. ಪೋಲೀಸಿನವರು ಈ ಮೋಸಗಾರನನ್ನು ತಲಾಷ್ ಮಾಡುತ್ತಾ ಇದ್ದಾರೆ.

❖❖❖❖

ಬೊಂಬಾಯಿ ಆಧಿಪತ್ಯದಲ್ಲಿ ಇಪ್ಪತ್ತೈದು ದೊಡ್ಡ ಜೈಲ್ ಖಾನೆಗಳಿರುತ್ತವೆ. ಕಳೆದ ೧೯೦೩ ನೆ ವರ್ಷದಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚಾಗಿಯೇ ಬಂದೀಖಾನರು ಇದ್ದರೆಂದು ತಿಳಿಯುವದು. ಆ ವೈಕಿ ೧೯ ಜನ ಖಾನೆಗಳಲ್ಲಿ ಶಿಕ್ಷೆಯಾದ ಸ್ತ್ರೀಯರಂತಲೂ ಹೆಚ್ಚಾಗಿಯೇ ಖೈದಿಗಳು ಬಂದು ಸೇರಿದರು.

❖❖❖❖

ಡೆಹಲಿ, ಆಗ್ರಾ ನಗರಗಳಲ್ಲಿರುವ ಪುರಾತನಕಾಲದ ಅರಮನೆಗಳಲ್ಲಿ ಸರ್ಕಾರಿ ಆಫೀಸುಗಳನ್ನೂ ಸೈನಿಕರ ಮನೆಗಳನ್ನೂ ಮಾಡಿಕೊಂಡಿದ್ದಾರೆ. ಈಗ ಅದನ್ನು ಬಿಡಿಸಿ ಹಾಗೇ ಖಾಲೀ ಬಿಡಿಸಿರಬೇಕೆಂತಲೂ, ೧೫,೦೦೦ ರೂಪಾಯಿ ಖರ್ಚುಮಾಡಿ ಬೇರೆ ಬಂಗಲೆಗಳನ್ನು ಕಟ್ಟಿಸಬೇಕೆಂತಲೂ ಹುಕುಂ ಆಗಿದೆ.

❖❖❖❖

ಕೆರೋಸಿನ್ ಎಂಬ ಸೀಮೆ ಎಣ್ಣೆಯನ್ನು ಮದರಾಸಿನಲ್ಲಿ ರಸ್ತೆಗಳಿಗೆ ಎರೆಯುತ್ತಿದ್ದಾರೆ. ಇದರಿಂದ ಧೂಳು ಏಳುವದಿಲ್ಲ; ಬಿಸಿಲು ಎಷ್ಟು ಬಿದ್ದರೂ ರಸ್ತೆ ಕೆಡುವದಿಲ್ಲ. ಎರಡುಸಲ ಎಣ್ಣೆ ಎರೆದುಬಿಟ್ಟರೆ ರಸ್ತೆಗಳು ೯—೧೦ ತಿಂಗಳವರೆಗೆ ಬಹಳ ಗಟ್ಟಿಯಾಗಿರುವವು. ಇದರಿಂದ ಮ್ಯುನಿಸಿಪಾಲಿಟಿಗೆ ಖರ್ಚು ಕಡಿಮೆ. ಜನರಿಗೂ ಗಾಡಿಗಳಿಗೂ ತುಂಬಾ ಅನುಕೂಲ.

❖❖❖❖

ಬಾಲ್ಯ ವಿವಾಹ, ಬಡತನ, ವಿವೇಕ ಶೂನ್ಯತೆ,—ಇವುಗಳನ್ನು ಹೋಗಲಾಡಿಸಿದ ಹೊರತು ಹಿಂದುಗಳಲ್ಲಿ ಹೆಚ್ಚಾಗಿ ಸಾಯುವ ಎಳೇ ಮಕ್ಕಳ ಸಂಖ್ಯೆಯು ಕಡಿಮೆಯಾಗುವದಿಲ್ಲವೆಂದು ಬೊಂಬಾಯಿ ಮ್ಯುನಿಸಿಪಾಲಿಟಿಯವರು ಗೊತ್ತುಮಾಡಿದ್ದಾರೆ. ಇವುಗಳನ್ನು ತಪ್ಪಿಸುವದಕ್ಕೆ ಮ್ಯುನಿಸಿಪಾಲಿಟಿಯವರಾಗಲಿ ಸರ್ಕಾರದವರಾಗಲಿ ಏನು ತಾನೇ ಮಾಡಬಹುದು. ಇದಕ್ಕೆ ಜನರೇ ಕಾರಣರಾಗಿರುತ್ತಾರೆ.

❖❖❖❖

ಪ್ಲೇಗ್ ಉಪದ್ರವ ಹಾವಳಿ ಹಿಂದುಸ್ಥಾನದಲ್ಲಿ ಸದ್ಯ ಬಹಳ ಕಡಿಮೆಯಾಗಿರುವದು. ಹಿಂದಿನವಾರ ೩,೭೦೩ ಮಂದಿ ಆ ಉಪದ್ರವದಲ್ಲಿ ಸಾಯುವರು. ಹೋದ ವಾರವಾದರೋ ೨,೦೧೪ ಮಂದಿ ಮಾತ್ರ ಮೃತರಾದರು. ಈ ಪೈಕಿ ಪಂಜಾಬಿನಲ್ಲೇ ೧,೯೯೦ ಮಂದಿ ತೀರಿಹೋದರು. ಮದರಾಸ್ ಆಧಿಪತ್ಯ, ಮೈಸೂರು ಸಂಸ್ಥಾನ, ಕಲ್ಕತ್ತಾ ನಗರಗಳಲ್ಲಿ ಮಾತ್ರ ಇನ್ನೂ ಉಪದ್ರವ ಹೆಚ್ಚುತ್ತಾ ಇರುವಂತೆ ಕಾಣುವದು.

❖❖❖❖

ನಾಗಪೂರ್ ನಗರಪಟ್ಟಣದಲ್ಲಿ ಸುಮಾರು ೩೦ ಮಂದಿ ಕಳ್ಳರು ಒಂದು ಕಟ್ಟಿಕೊಂಡು ಒಬ್ಬ ಸಾಹುಕಾರನ ಮನೆಗೆ ನುಗ್ಗಿ ಬೀಗ ಬಾಗಿಲನ್ನು ಒಡೆದು ಹೆಂಗಸರು ಮಕ್ಕಳ ಮೈಮೇಲೂ, ಪೆಟ್ಟಿಗೆಗಳೊಳಗೂ ಇದ್ದ ನಗನಾಣ್ಯಗಳನ್ನೆಲ್ಲಾ ಅಪಹರಿಸಿದ್ದಲ್ಲದೆ, ಹೆಂಗಸರನ್ನು ಹೊಡೆದು ಗಾಯಮಾಡಿ ಓಡಿಹೋದರು. ಮರುದಿನ ಕಳೆಕ್ಟರು ಅಲ್ಲಿಗೆಹೋಗಿ ತನಿಖೆ ಮಾಡಿಕೊಂಡು ಬಂದರು. ಕಳ್ಳರು ಇನ್ನೂ ಪತ್ತೆಯಾಗಲಿಲ್ಲ.

❖❖❖❖

ರಾಜಮಂಧರಿಯಲ್ಲಿ ಕಳೆದ ವಾರ ವಿಧವಾ ಪುನರ್ವಿವಾಹವೊಂದು ನಡೆಯಿತು. ಷಣ್ಮುಖರಾಮ ಪಂತುಲು ಎಂಬಾತನ ಮಗಳು ಶ್ರೀಮತಿ ಶೇಷಮ್ಮನೆಂಬ ೨೦ ವರುಷದ ಹುಡುಗಿಯನ್ನು ೩೪ ವಯಸ್ಸಿನ ವೆಂಕಟಸುಬ್ಬರಾವ್ ಎಂಬಾತನಿಗೆ ಕೊಟ್ಟು ಮದುವೆಮಾಡಿದರು. ಅವರು ನಿಯೋಗಿ ಬ್ರಾಹ್ಮಣರೆಂದು ತಿಳಿದು ಬಂದಿದೆ. ಸುಮಾರು ೬೦೦ ಮಂದಿ ದೊಡ್ಡಮನುಷ್ಯರು ಆ ದಿನ ಸೇರಿ ವಿವಾಹವನ್ನು ಆಗಮಾಡಿಸಿದರು.

❖❖❖❖

ಉತ್ತರದೇಶದ ಕೆಲವು ಶಹರುಗಳಲ್ಲಿ ಆಗುವ ಎಕ್ಸೈಸ್ ಉತ್ಪತ್ತಿಯನ್ನು ಆಯಾ ಪಟ್ಟಣದ ಮ್ಯುನಿಸಿಪಾಲಿಟಿಗೆ ಕೊಡಬೇಕೆಂತಲೂ, ಪ್ರಜಾ ಆರೋಗ್ಯ ವಿಚಾರವನ್ನು ಅಭಿವೃದ್ಧಿಮಾಡಲು ಇದರಿಂದ ತುಂಬಾ ಸಹಾಯವಾಗುವದೆಂತಲೂ ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ. ವಿಲಾಯತಿಯಲ್ಲಿ ಇದೇ ಪದ್ಧತಿ ಇರುತ್ತೆ. ಅದರಂತೆಯೇ ಹಿಂದುಸ್ಥಾನದಲ್ಲೂ ಜಾರಿಗೆ ಬಂದೀತೆಂದು ಅನೇಕರು ನಿರೀಕ್ಷಿಸುತ್ತಾರೆ.

❖❖❖❖

ಹಿಂದುಸ್ಥಾನಕ್ಕೂ ಟಿಬೆಟ್ಟಿಗೂ ವ್ಯಾಪಾರ ಸಾಮಗ್ರಿಗಳು ಹೋಗಿಬರತಕ್ಕ ವಿಚಾರದಲ್ಲಿ ಇಂಡಿಯಾ ಗೌವರ್ನಮೆಂಟಿನವರು, ಚೀನೆಯವರು, ಮತ್ತು ಟಿಬೆಟ್ಟಿನವರು ಸಿಕಿಂ ಬಳಿ ಇರುವ ಖಾಂಬಾಜಾಂಗ್ ಎಂಬ ಸ್ಥಳದಲ್ಲಿ ಸೇರಿ ಚರ್ಚೆ ಮಾಡುವವರಾಗಿದ್ದಾರೆ. ಇಂದೋರಿನ ರೆಸಿಡೆಂಟರೂ ಸಿಕಿಂನಲ್ಲಿರುವ ಸರ್ದಾರರೂ ೬೦೦ ಮಂದಿ ಸೋಲ್ಜರುಗಳ ಬೆಂಬಲವನ್ನು ಪಡೆದು ಅಲ್ಲಿಗೆ ಹೋಗಿ ಬರುವರೆಂದು ಗೌವರ್ನಮೆಂಟಿನವರ ಹುಕುಂ ಆಗಿದೆ.

❖❖❖❖

ಆಗ್ರಾಪಟ್ಟಣದಲ್ಲಿ ಒಬ್ಬ ಹಿಂದೂ ವೈದ್ಯನ ಹೆಂಡತಿಯನ್ನು ರೈಲ್ವೆ ನೌಕರನಾದ ಒಬ್ಬ ಹಿಂದುವು ಕಳೆದ ವಾರ ಕತ್ತರಿಸಿಹಾಕಿ ಓಡಿಹೋದನು. ಪೋಲೀಸ್ ಸೂಪರಿಂಟೆಂಟರು ಅದರ ವರ್ತಮಾನ ಕೇಳಿ, ತಂತಿಯಿಂದ ಆ ನೌಕರನನ್ನು ಕೈಸೆರೆ ಹಿಡಿದು ತರಿಸಿದರು. ಈ ಕೊಲೆಯ ಕಾರಣವೇನೆಂಬುದು ಬಹಳ ಗುಟ್ಟನಲ್ಲಿದೆ; ಜನರು ನಾನಾ ವಿಧವಾಗಿ ಹೇಳಿಕೊಳ್ಳುತ್ತಾರೆ. ಹ್ಯಾಗೂ ವಿಚಾರಣೆಯಲ್ಲಿ ಎಲ್ಲಾ ಬಯಲಾಗುವದು.

❖❖❖❖

ಟೀನಾ ಚಕ್ರಾಧಿಪತ್ಯದಲ್ಲಿ ಇಂಗ್ಲಿಷ್ ಗೌವರ್ನಮೆಂಟಿನ ರಾಯಭಾರಿಯಾದ ಸರ್ ಅರ್ನೆಸ್ಟ್ ಸಾಟೌ ಎಂಬ ಹುದ್ದೇದಾರನು ಈಗ ಹಿಂದುಸ್ಥಾನಕ್ಕೆ ಬಂದು, ನಮ್ಮ ವೈಸಿರಾಯಿಯವರ ಅತಿಥಿಯಾಗಿರುತ್ತಾನೆ. ಹಿಂದುಸ್ಥಾನದಿಂದ ಟಿಬೆಟ್ ರಾಜ್ಯಕ್ಕೆ ಸರಕುಗಳು ಆಮದು ರಫ್ತಾಗುವದು ಈಚೆಗೆ ಕಡಿಮೆಯಾಗಿರುವಂತೆಯೂ ಈ ವಿಷಯವನ್ನು ಕುರಿತು ಚರ್ಚಿಸುವದಕ್ಕಾಗಿ ಆತನು ವೈಸಿರಾಯಿಯವರ ಬಳಿಗೆ ಬಂದಿರುವಂತೆಯೂ ತಿಳಿಯುವದು.

❖❖❖❖

ಡೆಹಲಿ ಪಟ್ಟಣದಲ್ಲಿ ಈಚೆಗೆ ಅನೇಕ ಕಳ್ಳತನಗಳು ನಡೆಯುತ್ತಾ ಬಂದಿವೆ. ಡೆಹಲಿ ದರ್ಬಾರ್ ಕಾಲದಲ್ಲಿ ನಾನಾ ಕಡೆಗಳಿಂದ ಅಲ್ಲಿಗೆ ಬಂದ ಕೆಟ್ಟಜನರು ಸೇರಿಕೊಂಡು ಈಗ ದರೋಡೆ ಕಳವು ಮುಂತಾದ ಅಕೃತ್ಯಗಳನ್ನು ನಡೆಸುತ್ತಾ ಬಂದಿದ್ದಾರೆಂದು ಊಹಿಸಲ್ಪಟ್ಟಿದೆ. ಚಿಲ್ಲರೆ ಅಂಗಡಿಗಳಿಗೆ ಅನೇಕರು ಖೋಟಾ ನಾಣ್ಯಗಳನ್ನು ಕೊಟ್ಟು ಚಲಾವಣೆಯಲ್ಲಿ ತಂದು ಇರುವರು. ಇತ್ತೀಚೆಗೆ ಪೋಲೀಸಿನವರು ಅನೇಕಮಂದಿ ಕಳ್ಳರನ್ನು ದಸ್ತಗಿರಿ ಮಾಡುವವರಾಗಿದ್ದಾರೆ.

❖❖❖❖

ಉತ್ತರದೇಶದಲ್ಲಿ ಮಹಮದಿಯರ ವಿದ್ಯಾಭಿವೃದ್ಧಿಗಾಗಿ ಅಲಿಘರದಲ್ಲಿ ಒಂದು ದೊಡ್ಡ ವಿದ್ಯಾಶಾಲೆಯನ್ನು ಸ್ಥಾಪಿಸಿ ನಡಸುತ್ತಾ ಬಂದಿದ್ದಾರಷ್ಟೆ. ಈ ಶಾಲೆಯ ಮೂಲಧನಕ್ಕೆ ಒಂದೊಂದು ರೂಪಾಯಿನಂತೆ ಮ್ಯಾನೇಜರುಗಳು ಚಂದಾ ಎತ್ತಿದರು. ವರುಷಕ್ಕೆ ಈ ಪ್ರಕಾರ ೧೧,೦೦೦ ರೂಪಾಯಿ ವಸೂಲಾದೀತೆಂದು ನಿರೀಕ್ಷಿಸಿದ್ದರು. ಆದರೆ ಚಂದಾ ಪ್ರಾರಂಭವಾದ ೬ ತಿಂಗಳೊಳಗಾಗಿ ೧೪,೦೦೦ ರೂ. ವಸೂಲಾಗಿರುತ್ತದೆ. ಈ ಹಣವನ್ನು ಆ ಸ್ಕೂಲಿನ ಮೂಲಧನಕ್ಕೆ ಕೊಟ್ಟಿದ್ದಾರೆ.

❖❖❖❖

ಕಳೆದ ಶನಿವಾರ ಕಲಕತ್ತಾ ಡಿಸ್ಟ್ರಿಕ್ಟಿಗೆ ಸೇರಿದ ಮಹೇಶ ಪಲ್ಲಿಯಿಂದ ಚಿನ್ನ ಬೆಳ್ಳಿ ಸಮುದ್ರದ ರೈಲ್ವೇಸ್ಟೇಷನಿಗೆ ಅಂಚೆಯನ್ನು ಸಾಗಿಸಿಕೊಂಡು ಹೋಗುತ್ತಿದ್ದ ಟಾಂಗಾ ಗಾಡಿಗೆ ಕಳ್ಳರು ಬಿದ್ದು ಗಾಡಿಯವನನ್ನೂ ಕುದುರೆಗಳನ್ನೂ ಒಳಗೆ ಕುಳಿತಿದ್ದ ನಾಲ್ವರು ಪ್ರಯಾಣಸ್ಥರನ್ನೂ ಬಹಳವಾಗಿ ಹೊಡೆದು ಹಿಂಸೆಮಾಡಿ, ನೂರಾರು ರೂಪಾಯಿಗಳನ್ನು ಹೊತ್ತುಕೊಂಡು ಹೋದರು. ಅಂಚೆ ವಸ್ತುಗಳನ್ನೆಲ್ಲಾ ಒಡೆದು ಕಾಗದ ಭಾಂಗಿ ಮುಂತಾದವುಗಳನ್ನೂ ಹರಿದು ಒಳಗಿದ್ದ ಬೆಲೆಯುಳ್ಳ ಬಟನೆ ಹಣಕಾಸುಗಳನ್ನೂ ಅಪಹರಿಸಿದರು. ಈಗ ಈ ಕಳ್ಳರನ್ನು ಪತ್ತೇ ಮಾಡುವವರಿಗೆ ೬೦೦ ರೂ. ಬಹುಮಾನ ಕೊಡುವಂತೆ ಸರ್ಕಾರದವರು ಇಸ್ತಿಹಾರು ಹಾಕಿಸಿರುತ್ತಾರೆ.

❖❖❖❖

ಹಿಂದಿನ ಶನಿವಾರ ಅಯೋಧ್ಯಾನಗರದಲ್ಲಿ ಒಂದು ದೊಡ್ಡ ರಥೋತ್ಸವವಾಯಿತು. ಅದನ್ನು ನೋಡುವದಕ್ಕೋಸ್ಕರ ಅಯೋಧ್ಯೆಯ ಮಹಾರಾಜರವರು ಆಶ್ವಾರೂಢರಾಗಿ ಹೋದರು. ಪರಿಷೆಯ ಜನಗಳು ದಿನಸುವಾರಿ ಬಿರುಸುಗಳನ್ನು ಹಾಕಿಕೊಂಡು, ಗಿಜಗರಿಯುತ್ತಿದ್ದದನ್ನು ನೋಡಿ, ಮಹಾರಾಜರು ಹತ್ತಿಕೊಂಡಿದ್ದ ಅರಬ್ಬೀ ಕುದುರೆ ಬೆದರಿ ಸ್ವೇಚ್ಛೆಯಾಗಿ ಓಡಿಹೋಗಿ ಒಂದು ದೊಡ್ಡ ಹಳ್ಳದಲ್ಲಿ ಬಿದ್ದುಕೊಂಡಿತು. ಮಹಾರಾಜರವರು ಮುಖಾಡೆಯಾಗಿ ಬಿದ್ದುದರಿಂದ ಅವರ ಕಾಲು ಕೈ ಮೈಗೆಲ್ಲಾ ಏಟು ತಗಲಿದೆ. ಕೂಡಲೇ ಡಾಕ್ಟರುಗಳು ಹೋಗಿ ಅವರನ್ನು ಅರಮನೆಗೆ ಸಾಗಿಸಿ, ಔಷಧಾದಿಗಳಿಂದ ಉಪಚರಿಸಿದರು. ಈಗ ಅವರಿಗೆ ದಿನೇ ದಿನೇ ವಾಸಿಯಾಗುತ್ತಿದೆ ಎಂದು ತಂತೀವರ್ತಮಾನ ಬಂದಿದೆ.

❖❖❖❖

ನಮ್ಮ ವೈಸಿರಾಯಿ ಲಾರ್ಡ್ ಕರ್ಜನ್‌ಯವರು ಇನ್ನೂ ಒಂದೆರಡು ವರುಷಗಳವರೆಗೆ ಹಿಂದುಸ್ಥಾನದಲ್ಲೇ ಇರುವವರಾದರೆ ಈ ವರುಷದ ಅಂತ್ಯಭಾಗದಲ್ಲಿ ಆರು ತಿಂಗಳ ರಜಾ ಪಡೆದು ಸೀಮೆಗೆ ಹೋಗಿ ವಿಶ್ರಾಂತಿಪಡೆದು ಬರಬೇಕೆಂದು ಅಪೇಕ್ಷಿಸುತ್ತಾರೆ. ಅವರ ಗೈರ್ ಹಾಜರಿಯಲ್ಲಿ ಬೊಂಬಾಯಿ ಆಧಿಪತ್ಯದ ಗೌವರ್ನರಾದ ಲಾರ್ಡ್ ನಾರ್ತ್‌ಕೋಟ್‌ಯವರು ವೈಸಿರಾಯಿ ಅಧಿಕಾರವನ್ನು ಬದಲಿ ನೋಡುವಂತೆ ಏರ್ಪಾಡಾಗಬಹುದು. ಆದರೆ ವಿಲಾಯತಿ ರಾಜ್ಯದಲ್ಲಿ ಸದ್ಯ ಹೊಸತೆರಿಗೆಗಳನ್ನು ಹಾಕುವ ವಿಚಾರವಾಗಿ ತುಂಬಾ ಚರ್ಚೆ ನಡೆಯುತ್ತಿರುವದರಿಂದ ಈ ಸಂದರ್ಭದಲ್ಲಿ ಅಲ್ಲಿನ ಹುದ್ದೇದಾರರೇನಾದರೂ ಬದಲಾಗಿ ಹೋಗುವದಕ್ಕೆ ರಜಾ ಪಡೆದು ಹೋಗತಕ್ಕ ಲಾರ್ಡ್ ಕರ್ಜನ್‌ಯವರು ಪುನಃ ವೈಸಿರಾಯಿ ಪದವಿಯನ್ನು ಪಡೆದು ಹಿಂದುಸ್ಥಾನಕ್ಕೆ ಬರುತ್ತಾರೆಯೇ ಎಂಬದಾಗಿ ಅನೇಕರಲ್ಲಿ ಸಂಶಯವುಂಟಾಗಿದೆ.

❖❖❖❖

ಹಿಂದುಸ್ಥಾನದಲ್ಲಿರುವ ಇಂಗ್ಲಿಷ್ ಸೇನಾಪತಿಯಾದ ಲಾರ್ಡ್ ಕಿಚ್ನರ್‌ಯವರು ಸೈನಿಕರಿಗೆಲ್ಲಾ ಒಂದು ಇಸ್ತಿಹಾರ್‌ನಾಮೆಯನ್ನು ಕೊಟ್ಟಿದ್ದಾರೆ. ಅದರ ಮುಖ್ಯ ತಾತ್ಪರ್ಯವೇನೆಂದರೆ.—ಇಂಗ್ಲಿಷ್ ಸೈನಿಕರು ನಾನಾ ಸಂದರ್ಭಗಳಲ್ಲಿ ಹಿಂದು ಮೊದಲಾದ ಸ್ವದೇಶೀಯರನ್ನು ಹಿಂಸಿಸಿ ಅವಮಾನಪಡಿಸುತ್ತಲೂ, ಪ್ರಾಣ ಹೋಗುವಂತೆ ಮಾಡುತ್ತಲೂ ಬಂದಿದ್ದಾರೆ. ಇದು ಸೇನಾಪತಿಗೆ ತುಂಬಾ ವಿಷಾದವನ್ನುಂಟುಮಾಡಿದೆ. ಇದರಿಂದ ತುಂಬಾ ಕೇಡು ಉಂಟಾದೀತೆಂತಲೂ, ಸೈನ್ಯದಲ್ಲಿ ಮೇಲ್ಪಂಕ್ತಿ ಸಮರ್ಪಕವಾಗಿಲ್ಲವೆಂತಲೂ ಗೊತ್ತಾಗುವದು. ಯಾವ ರೆಜಿಮೆಂಟಿನಲ್ಲಿ ಇಂಥಾ ಅಲ್ಪವಾದ ಕಾರ್ಯ ನಡೆಯುವದೋ ಒಬ್ಬಾಗ ಅದಕ್ಕೆ ಕೆಟ್ಟಹೆಸರು ಬಂದೀತು. ಸೋಲ್ಜರುಗಳು ಇಂಥಾ ಅವಮಾನಕ್ಕೆ ಗುರಿಯಾಗುವದು ಯೋಗ್ಯವಲ್ಲ. ಇಂಥಾ ಹಿಂಸೆಯ ಕಾರ್ಯಗಳನ್ನು ಸಂಪೂರ್ಣವಾಗಿ ಹುದ್ದೇದಾರರು ಅಣಗಿಸತಕ್ಕದ್ದು. ಮತ್ತು ಈ ಹುಕುಮನ್ನು ಹುದ್ದೇದಾರರು ಪ್ರತಿ ತಿಂಗಳಲ್ಲೂ ಪರೇಡ್ ಆಗುವ ಕಾಲದಲ್ಲಿ ಸೈನಿಕರಿಗೆಲ್ಲಾ ಓದಿ ಹೇಳಿ ಎಚ್ಚರಿಸುತ್ತಾ ಬರಬೇಕಾಗಿದೆ.

## ಬಾತ್ಮೀದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮೀಗಳಿಗೆ ನಾವು ಬೆಲೆ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮೀಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಅಂಥವುಗಳಿಗೆ ನಾವು ಬೆಲೆ ಕೊಡಲಾರೆವು.

ಬಾತ್ಮೀದಾರರು ತಮ್ಮ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

---

ರಾಮ್ಯಕಿಶೋರ, ಜಾನಗಾವ. ಚನ್ನಪ್ಪಯ್ಯ, ಹಳಗೂರು; ಸಿ. ರಾಮರಾವ್, ಬೆಂಗಳೂರು.—ಇವರು ನಮಗೆ ಕಳುಹಿಸಿರತಕ್ಕ ವರ್ತಮಾನಗಳೂ, ಬಾತ್ಮೀಗಳೂ ಬಹಳ ಸಂಕ್ಷಿಪ್ತವಾಗಿರುತ್ತವೆ. ಒಂದೊಂದರಿಂದಲೇ ಈ ಪತ್ರಿಕೆಯನ್ನು ತುಂಬಿಸಬಹುದಾಗಿದೆ. ವಿಷಯಗಳನ್ನು ಸಂಕ್ಷೇಪವಾಗಿ ಬರೆಯುವಿರಾದರೆ ಈ ಪತ್ರಿಕೆಯಲ್ಲಿ ಪ್ರಕಟಿಸಲಾರೆವು.—ಎಡಿ.

---

ಫ್ರೇಜರ್‌ಪೇಟೆ ಜಾತಿ ಕುಶಾಲ್‌ನಗರದಲ್ಲಿ ಮೈಸೂರು ರಾಮಣ್ಣನವರ ಧರ್ಮಸತ್ರ ಒಂದು ಇರುವದಾಗಿಯೂ, ಅದರ ಕಾರುಬಾರುಗಳು ಸಮರ್ಪಕವಾಗಿಲ್ಲವೆಂತಲೂ, ತನಿಖೆ ದಾರರನ್ನು ಸರ್ಕಾರದವರು ಇಟ್ಟು ಕ್ರಮಪಡಿಸುವದು ಅವಶ್ಯವೆಂತಲೂ, ಮ್ಯುನಿಸಿಪಾಲಿಟಿ ದೊಡ್ಡ ಗಾಡಿಗಳಿಗೆ ಇಳಿಯುವ ಅಸಮರ್ಪಕವಾದ ಸ್ಥಿತಿಯಲ್ಲಿದೆ ಎಂತಲೂ, ಪಿಲ್ಕರಿ ನೌಕರರ ಹಾವಳಿ ಹೆಚ್ಚಾಗಿದೆ ಎಂತಲೂ ಅಲ್ಲಿನ ಒಬ್ಬ ಬಾತ್ಮೀದಾರರು ಬರೆಯುತ್ತಾರೆ, ಅವನ್ನೆಲ್ಲಾ ವಿಶದವಾಗಿ ಪ್ರಕಟಿಸಲು ನಮಗೆ ತಾತ್ಪರ್ಯವಿಲ್ಲ. ಬಾತ್ಮೀದಾರರು ಆಯಾ ಸಂಗತಿಗಳನ್ನು ಕುರಿತು ಮೇಲ್ಪಟ್ಟ ಹುದ್ದೇದಾರರಿಗೆ ಬರೆದುಕೊಂಡರೆ ತಮ್ಮ ಉದ್ದೇಶವು ನೆರವೇರುವದೆಂದು ತೋರುತ್ತೆ.—ಎಡಿ.

---

ಯಡತೊರೆ ತಾಲ್ಲೂಕು ಲಾಳನಹಳ್ಳಿ ಗ್ರಾಮದ ಪಟೇಲ್ ಸಿದ್ದಲಿಂಗೇಗೌಡನು ಮಾರ್ಚಿ ೩ನೆ ತಾರೀಖಿನ ದಿವಸ ಯಡತೊರೆ ಸಬ್ ರಿಜಿಸ್ಟ್ರಾರ್ ಆಫೀಸಿಗೆ ಹೋಗಿ ಒಂದು ಪತ್ರವನ್ನು ರಿಜಿಸ್ಟರ್ ಮಾಡಬೇಕೆಂದು ಪ್ರಯತ್ನ ಪಟ್ಟನಾಗಲೂ, ತಪ್ಪಿ ಗುಮಾಸ್ತೆಯು ಫೀಜನ್ನೂ ಪ್ರಮಾಣಸ್ಥ ಕೊಡಬೇಕೆಂದು ಕೇಳಿದನಾಗಲೂ, ಕೊಡುವದಿಲ್ಲವೆಂದು ಪಟೇಲ ಹೇಳಿದ್ದರ ಮೇಲೆ ಪತ್ರವನ್ನು ಬಿಸಾಡಿದನಾಗಲೂ, ಪಟೇಲನು ಸಬ್ ರಿಜಿಸ್ಟ್ರಾರ ಬಳಿಗೆ ಹೋಗಿ ತಿಳಿಸಿದ್ದಕ್ಕೆ ಅವರೂ ಮನ್ನಿಸದೆ ಹಾಗೇನಾದರೂ, ಕೊಡದೆ ಬಂಗಿಲು ಹಾಕಿಸಿಕೊಂಡು ತಾವೂ ಅಗುಮಸ್ತೆಯೂ ಪಟೇಲನನ್ನು ಬೆತ್ತದಿಂದ ಹೊಡೆದು ಕಳುಹಿಸಿದರಾಗಲೂ, ಈಗ ಪಟೇಲನು ಅವರುಗಳ ಮೇಲೆ ಫಿರ್ಯಾದು ಮಾಡಿರುವದಾಗಲೂ ಒಬ್ಬ ಬಾತ್ಮೀದಾರರು ಬರೆದಿದ್ದಾರೆ.—ಎಡಿ.

## ಕರೆಸ್ಪಾಂಡೆನ್ಸ್.

### ದೊಡ್ಡ ಪೋಸ್ಟ್ ಕಾರ್ಡುಗಳು.

ಅಯ್ಯಾ,

ನಾವುಗಳು ಹೋದವಾರ ದೊಡ್ಡ ಸೈಜಿನ ಕಾರ್ಡುಗಳನ್ನು ಹಾಕಿದರೆ ಪಟ್ಟುಬೈದು ಮಾಡುತ್ತೇವೆಂತ ಪೋಸ್ಟು ಮಾಸ್ತರು ಹೇಳಿದ ಕೆಂಬದಾಗಿ ಪ್ರಕಟಿಸಿದ್ದು ಸರಿಯಷ್ಟೆ. ಪೋಸ್ಟು ಮಾಸ್ಟರು ಹೇಳತಕ್ಕವರು ಸುಳ್ಳೆಂತಲೂ, ಪೋಸ್ಟು ಮ್ಯಾನನು ಅವರುಗಳನ್ನು ಕೇಳದೆ ಈ ರೀತಿ ಹೇಳಿದನ್ನಾಗಿ ಬಹಳ ವಿಷಾದಿಸುವೆವು. ಇಂಡಿಯಾ ಗೌವರ್ನಮೆಂಟಿನವರು ಮೇಲೆ ಕಂಡ ೩॥ × ೫॥ ಅಂಗುಲ ಕಾರ್ಡುಗಳಲ್ಲಿ ಜನರು ಬರೆಯಬಹುದೆಂತ ಹುಕುಂ ಕೊಟ್ಟಿರುವದರಿಂದ ಸರ್ವರಿಗೂ ತುಂಬಾ ಪ್ರಯೋಜನ ವಾಯಿತೆನ್ನುವದಕ್ಕೆ ಸಂಶಯವಿಲ್ಲ. ಈ ಸಂಗತಿಯನ್ನು ಸಕಲರೂ ತಿಳಿಯತಕ್ಕದ್ದು.

ದಾವಣಗೆರೆ. ನೀಲಕಂಠಪ್ಪ.

◆◆◆◆◆◆◆◆◆

### ಗೌ॥ ಹೋ॥ ಸ್ಕೂಲುಗಳ ಹೀನಸ್ಥಿತಿಯೂ, ಮಾಸ್ತರುಗಳ ಸಂಬಳ ಬಟವಾಡೆಯೂ.

ಅಯ್ಯಾ,

ಅತ್ಯುತ್ತಮವಾದ ಈ ಪ್ರಪಂಚದಲ್ಲಿ ಮನುಷ್ಯರ ಶ್ರೇಯೋವೃದ್ಧಿಗೂ ಐಶ್ವರ್ಯಾಭಿವೃದ್ಧಿಗೂ ಇಹಪರ ಸುಖಗಳಿಗೂ ಸಾಧಕವಾದ ವಿದ್ಯವೇ ಮುಖ್ಯಪ್ರಾಯವಾಗಿರುವದು. ಇದರಿಂದ ನಮ್ಮ ಮೈಸೂರ್ ಸರ್ಕಾರದವರು ತಮ್ಮ ಸೀಮೆಯಲ್ಲೆಲ್ಲಾ ವಿದ್ಯಾಭಿವೃದ್ಧಿಯನ್ನುಂಟುಮಾಡುವದಕ್ಕಾಗಿ ಎಲ್ಲಾ ಕಡೆಗಳಲ್ಲಿಯೂ ಅನೇಕ ಪಾಠಶಾಲೆಗಳನ್ನೇರ್ಪಡಿಸಿರುತ್ತಾರೆ. ದೊಡ್ಡದೊಡ್ಡ ಕಾಲೇಜುಗಳಲ್ಲಿಯೂ ಸ್ಕೂಲುಗಳಲ್ಲಿಯೂ ಸರ್ಕಾರದ ವಿಧಿಗನುಸಾರವಾಗಿ ವಿದ್ಯಾಭ್ಯಾಸವು ನಡಿಯುತ್ತಿರುವದರಿಂದ ಅನೇಕ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಉತ್ತೀರ್ಣರಾಗುತ್ತಾ ಇದ್ದಾರೆ. ಆದರೆ ಗ್ರಾಮಾಂತರದಲ್ಲಿ ಪಾಠಶಾಲೆಗಳಲ್ಲಿ ಉಪಾಧ್ಯಾಯರು ತಮಗೆ ಸರ್ಕಾರದಿಂದ ಸಲ್ಲುವ ಅಲ್ಪವೇತನದಿಂದ ತಮ್ಮ ಜೀವನವನ್ನು ನಡಿಸಿಕೊಳ್ಳುವದಕ್ಕೆ ಸಾಲದೆ, ಜೀವನೋಪಾಯಕ್ಕಾಗಿ ಇತರವಿಧವಾದ ವೃತ್ತಿಗಳಲ್ಲಿ ಪ್ರವರ್ತಿಸಿ ತಮಗೆ ನೇಮಕವಾಗಿರುವ ವೃತ್ತಿಯಲ್ಲಿ ಉಪೇಕ್ಷೆಯನ್ನು ತೋರಿಸುತ್ತಾ, ಪ್ರಜೆಗಳ ಮತ್ತು ಸರ್ಕಾರದವರ ಪ್ರೀತಿಗೆ ದೂರವಾಗುತ್ತಾರೆ. ಮತ್ತು ಇವರಿಗೆ ಸಲ್ಲುವ ಪಗಾವಿ ತಲಬುಕೂಡ ೧ನೆ ತಾರೀಖಿಗೆ ಪಾವತಿಯಾಗಬೇಕೆಂದು ರೂಲಿಸು ಇರುತ್ತೆ. ಹಾಗಿಲ್ಲದೆ ಅನೇಕಸಾರೆ ಪೋಬಳಿ ಶೇಕದಾರರು ತಮ್ಮ ಕೆಲಸದ ಗಲಾಟೆಯಿಂದ ೧೫ನೇ ತಾರೀಖು ವರೆಗೂ ಕಾಲವಿಳಂಬನಮಾಡಿ, ಅನಂತರ ಖಜಾನೆಯಿಂದ ತಲಬನ್ನು ತೆಗೆದುಕೊಂಡು ಪಾವತಿ ಮಾಡಬೇಕಾದರೆ ೧೦—೧೨ ದಿನಗಳು ಬೇಕಾಗುತ್ತೆ. ಅದುವರೆಗೂ ಉಪಾಧ್ಯಾಯರು ಪಡುವ ಶ್ರಮೆಯು ಹೇಳತೀರದು. ಈ ವಿಷಯವನ್ನು ಮೇಲ್ಪಟ್ಟ ಅಧಿಕಾರಿಗಳಲ್ಲಿ ತಿಳಿಸಿದರೆ ಅವರ ಕಿವಿಗೆ ಬೀಳುವದಿಲ್ಲ. ಇದರಿಂದ ಉಪಾಧ್ಯಾಯರು ತಮ್ಮ ಕೆಲಸದಲ್ಲಿ ಅಶ್ರದ್ಧೆಯನ್ನು ತೋರಿಸುವದರಿಂದ ಪಾಠಶಾಲೆಗಳು ಹೀನಸ್ಥಿತಿಗೆ ಬಂದು ಸರ್ಕಾರದ ಉದ್ದೇಶವು ನೆರವೇರಲು ಅವಕಾಶವಿಲ್ಲವು. ಆದ್ದರಿಂದ ಘನವನ್ನೈದ ನಮ್ಮ ಸರ್ಕಾರದವರು ಮೇಲ್ಕಂಡ ನೌಕರರ ಶ್ರಮೆಯನ್ನು ತಪ್ಪಿಸುವರೆಂದು ನಿರೀಕ್ಷಿಸುತ್ತೇನೆ.

ಹಿತವಾದಿ.

◆◆◆◆◆◆◆◆◆

### ರೈಲ್ ಗಾಡಿಗಳಲ್ಲಿ ಪ್ರಯಾಣಿಕರಿಗೆ ಇರುವ ಕೊರತೆಗಳು.

ಅಯ್ಯಾ,

ನಮ್ಮ ಸದರ್ನ ಮರಾಟ ರೈಲ್ವೆಯಲ್ಲಿ ಪ್ರಯಾಣಿಕರಿಗೆ ಎಷ್ಟು ತೊಂದರೆಗಳುಂಟೆಂದು ಪ್ರಯಾಣಮಾಡಿ ಕಷ್ಟ ಅನುಭವಿಸಿದವರಿಗೆಲ್ಲಾ ಗೊತ್ತಾಗಿಯೇ ಇದೆ. ಆದರ ಅಧಿಕಾರಿಗಳಿಗೆ ಮಾತ್ರ ಗೊತ್ತಾಗಲಿಲ್ಲ. ಕೆಲವು ವೇಳೆ ೨ನೇ ತರಗತಿಯವರ ಕಷ್ಟ ನಿಜ ಅನುಭವಿಸಿದವರಿಗೆ ಗೊತ್ತು. ದೃಷ್ಟಾಂತವಾಗಿ ೨ ವಾರಗಳ ಹಿಂದೆ ಒಬ್ಬ ಪ್ರಯಾಣಿಕನು ಬೆಂಗಳೂರಿನಿಂದ ರಾತ್ರಿ ಗಾಡಿಗೆ ತನಗೂ ತನ್ನ ಮಗಳಿಗೂ ಟಿಕೇಟನ್ನು ತೆಗೆದುಕೊಂಡು, ಗಾಡಿಯಲ್ಲಿ ಕೂತುಕೊಳ್ಳ ಹೋಗಲು ಒಂದು ಗಾಡಿಯಲ್ಲೂ ಅವನಿಗೆ ಸ್ಥಳಸಿಕ್ಕಲಿಲ್ಲ. ನಂತ್ರ ಅವರು ೨ನೇ ತರಗತಿಯ ಟಿಕೇಟನ್ನು ತೆಗೆದುಕೊಂಡ . ಗಾಡಿಯ ಬಳಿ ಹೋಗಿ ನೋಡಲು ಅಲ್ಲಿದ್ದವರು ಸ್ಥಳವಿಲ್ಲವೆಂದು ಹೇಳಿಬಿಟ್ಟರು. ಸ್ಟೇಷನ್ ಮಾಸ್ಟರಿಗೆ ಹೇಳಲು ನಾನು ಏನು ಮಾಡಲಿ ಅಂದರು. ಗಾಡಿ ಹೊರಟಿತು ಅವರು ಬೆಳಗಿನ ವರೆಗೂ ಚಳಿ ಗಾಳಿಯಲ್ಲಿ ಒಂದು ಸಣ್ಣ ಕೋಣನ್ನು ಹಾಕಿಕೊಂಡು ಸ್ಟೇಷನ್‌ಬಳಿ ಬಿದ್ದುಕೊಂಡಿದ್ದು, ಮೇಯಿಲ್ ಗಾಡಿಯಲ್ಲಿ ಮದ್ರಾಸಿಗೆ ಬಂದು ಸೇರಿದರು. ಒಬ್ಬ ಯೂರೋಪಿಯನ್ ಇಂಥಾ ಕಷ್ಟಕ್ಕೆ ಸಿಕ್ಕಿದ್ದೇ ಆದರೆ ಕೂಡಲೆ ಇನ್ನೊಂದು ಗಾಡಿಯನ್ನು ತಗಲಿಸಿ ಅವರಿಗೆ ಅನುಕೂಲಮಾಡಿಕೊಡುತ್ತಿದ್ದರು. ಹಾಗೆ ಕೊಡದೆ ಇದ್ದರೆ ಸ್ಟೇಷನ್ ಮಾಸ್ಟರಿಗೆ ತಕ್ಕ ಪ್ರಾಯಶ್ಚಿತ್ತವಾಗುತ್ತಿತ್ತು. ನಮ್ಮ ಜನಗಳು ಈ ಪ್ರಕಾರ ಅನಾಗ್ಯೆ ವೇದನೆಗಳನ್ನು ಹೊಂದಬೇಕಾಗಿದೆ.

ಒಂದು ಸೀಟಿಗೆ ೪ ಜನರು ಇರಬೇಕೆಂದು ಕಂಪನಿಯವರು ಅಕ್ಷರ ಕೆತ್ತಿಸಿದ್ದಾರೆ. ಆದರೆ ಸಮಯ ಬಂದಾಗ್ಯೆ ೧೦—೧೨ ಜನರನ್ನು ಒಂದು ಕಂಪಾರ್ಟ್‌ಮೆಂಟ್ ಸೇರಿಸಿ ಗಾಡಿಯಲ್ಲಿ ಕೂತಿರುವ ಜನರೊಂದಿಗೆ ಕುಸ್ತೀನೆ ಮಾಡುತ್ತಾರೆ. ಕೆಲವುಸಾರಿ ಜನರು ಒಳಗಿನಿಂದ ಹೊರಗೆ ಹತ್ತುವ ಜನರನ್ನು ಕತ್ತು ಹಿಡಿದು ನೂಕುತ್ತಾರೆ. ಜನಗಳಿಗೆ ಅದರಿಂದ ಅಪಾಯ ಸಂಭವಿಸುವದರಲ್ಲಿ ಸಂದೇಹವಿಲ್ಲ. ಹಾಗೆ ಅಪಾಯ ಸಂಭವಿಸಿದರೆ ಸ್ಟೇಷನ್ ಮಾಸ್ಟರುಗಳನ್ನು ದಂಡಿಸಿ ಅವರಿಗೆ ಶಿಕ್ಷೆ ವಿಧಿಸುತ್ತಾರೆ. ಮತ್ತು ಬೆಂಗಳೂರು ಮೈಸೂರು ೧ ವಿಭಾಗಗಳ ಕಷ್ಟಾದ ಕಾರಣ ಗಾಡಿಯಲ್ಲಿ ಇಟ್ಟಿಲ್ಲ. ಇದರಿಂದ ಪ್ರಯಾಣಿಕರಿಗೆ ತೊಂದರೆ ಕೊಟ್ಟಾಗಿದೆ. ಅಲ್ಲದೆ ಯಾರಾದರೂ ಮುಖ್ಯ ಸ್ಟೇಷನ್‌ಗಳಲ್ಲಿಗೆ ರಿಜರ್ವಡ್ ಕಂಪಾರ್ಟ್‌ಮೆಂಟ್ ಬೇಕೆಂದು ಮುಂಚಿತವಾಗಿ ನೋಟೀಸ್ ಕೊಟ್ಟು ಸ್ಟೇಷನ್ ಮಾಸ್ಟರ್ ಮೂಲಕ ಅಂತಿವರ್ತನಾಸ ಕೇಳುಹಿಸಿದಾಗ್ಯೂ ಅಂಥಾ ಕಂಪಾರ್ಟ್‌ಮೆಂಟಿಗೆ ಚೀಟಿ ಹಚ್ಚಿಸಿ ಕಳುಹಿಸುವದಿಲ್ಲ. ಯುರೋಪ್ಯರು ೧ನೇ ೨ನೇ ತರಗತಿಯವರು ಕೇಳಿದರೆ ಬಹು ಎಚ್ಚರಿಕೆಯಿಂದ ಕಳುಹಿಸುತ್ತಾರೆ. ಕಾರಣವೇನೆಂದರೆ ಅವರು ಮೇಲಕ್ಕೆ ತಿಳಿಸಿ ಜುಲ್ಮಾನೆ ಹಾಕಿಸುತ್ತಾರೆ. ಆದರೆ ೩ನೇ ತರಗತಿಯ ಪ್ರಯಾಣಿಕರು ಕಷ್ಟಜನರು. ಏನೂ ತಿಳಿದವರಲ್ಲ. ಮೇಲಕ್ಕೆ ತಿಳಿಸುವ ಶಕ್ತಿ ಇಲ್ಲ. ಹಾಗೇನಾದರೂ ಮಾಡಿದರೆ ಅವರನ್ನು ದ್ವೇಷಮಾಡುವವರೂ ಇದ್ದಾರೆ. ಮತ್ತೆ ಕೆಲವರು—ನಮಗೆ ಒಂದೆರಡು ಗಂಟೆಯ ಪ್ರಯಾಣ; ಇನ್ನಿಂದೆ ನಮಗ್ಯಾಕೆ? ಎಂದು ಹೇಳಿ ಕಂಪನಿಯ ಅಧಿಕಾರಿಗಳಿಗೆ ತಮ್ಮ ಕಷ್ಟ ತಿಳಿಸುವದಿಲ್ಲ. ಆದಕಾರಣ ೩ನೇ ತರಗತಿಯವರನ್ನು ಕುರಿಗಳನ್ನೂ ದನಗಳನ್ನೂ ಕೂಡುವ ಪ್ರಕಾರ ಸಾಧ್ಯವಾದರೆ ಗೂಡ್ಸ್ ಗಾಡಿಯಲ್ಲಿ ತುಂಬಿ ಕಳುಹಿಸುತ್ತಾರೆ. ಮದರಾಸ್ ರೈಲ್ ಗಾಡಿಯಲ್ಲಿ ಜನರಿಗೆ ಇಂಥಾ ತೊಂದರೆ ಇಲ್ಲ. ೩ನೇ ತರಗತಿಯವರಿಂದಲೇ ಕಂಪನಿಯವರಿಗೆ ಲಕ್ಷಾಂತರ ರೂಪಾಯಿ ಹುಟ್ಟುವಳಿ ಆಗುತ್ತೆ. ಆದಕಾರಣ ಇವರಿಗೆ ಇರುವ ತೊಂದರೆಗಳನ್ನು ತಪ್ಪಿಸಿ ಪ್ರಯಾಣಿಕರಿಗೆ ಅನುಕೂಲಗಳನ್ನೂ ಸಂತೋಷವನ್ನೂ ಉಂಟುಮಾಡಿದರೆ, ರೈಲ್ವೆ ಕಂಪನಿಯವರಿಗೆ ತುಂಬಾ ಕೀರ್ತಿ ಉಂಟಾಗುವದರಲ್ಲಿ ಸಂದೇಹವಿಲ್ಲ.

ಪ್ರಯಾಣಿಕನು.

◆◆◆◆◆◆◆◆◆

### ಸಾಂಸರ್ಗಿಕ ವಿಚಾರಗಳು.

ಅಯ್ಯಾ,

೨೫—೬—೧೯೦೩ ನೇ ಗುರುವಾರದ "ವೃತ್ತಾಂತ ಪತ್ರಿಕೆ" ಯ ೩ ನೆ ಪೇಜಿನಲ್ಲಿ ಕರೆಸ್ಪಾಂಡೆನ್ಸ್ "ಸಮಾಧಾನ" ವೆಂಬ ಕಾಲಂನಲ್ಲಿ ದೇಶಾಭಿಮಾನಿಗಳಾದ ನಮ್ಮ ಸಹೋದರರು ಬರದಿರುವದೆಲ್ಲಾ ಸರಿಯಾಗಿದ್ದರೂ, ಅದರ ಜೊತೆಗೆ ಈ ಕೆಳಗೆ ನಾನು ಬರದಿರುವದನ್ನು ಒಂದು ಆರ್ಟಿಕಲ್ಲಾಗಿ ಓದಿದರೆ ಅವರ ತಾತ್ಪರ್ಯಕ್ಕೆ ವಿರೋಧವಿಲ್ಲವೇ? ಅವರ ಉತ್ತರವನ್ನು ಪತ್ರಿಕಾ ಮುಖೇನ ಪ್ರಕಟಿಸಿ ಕೊಡಿ.

ಇಂಡಿಯದ ಆರ್ಯರು ಎಲ್ಲರಿಗಿಂತಲೂ ಉಚ್ಚಸ್ಥಿತಿಯಲ್ಲಿ ಇದ್ದದ್ದಕ್ಕೆ ಮುಖ್ಯವಾಗಿದ್ದ ಕಾರಣಗಳು—ಸಹೋದರರ ಭಾವ, ದೇಶಸೌಖ್ಯವೇ.

ಸಹೋದರ ಭಾವದಿಂದ ಇರಬೇಕಾದರೆ ಸಾಂಸರ್ಗವಿರಬೇಕು ಅಂದರೆ, ದ್ರಾವಿಡರಲ್ಲಿ ಪ್ರತಿ ಭೋಜನವಿಲ್ಲದಿದ್ದರೂ, ಆರ್ಯರಾದ ಬ್ರಾಹ್ಮಣ, ಕ್ಷತ್ರಿ, ವೈಶ್ಯ ಈ ಮೂರು ಜಾತಿ ಜನಗಳು ಐರೋಪ್ಯರ ಹಾಗೆ ಹೆಣ್ಣು ಕೊಟ್ಟು ತರದೇ ಇದ್ದಾಗ್ಯೂ ಭೋಜನ, ಪತ್ರಿಭೋಜನ ಮಾಡುತ್ತಿರಬೇಕು. ಇಂಗ್ಲೀಷರೂ, ಈಸ್ಟ್ ಇಂಡಿಯನ್ನರೂ, ಹೆಣ್ಣು ಕೊಟ್ಟು ತರದೇ ಇದ್ದಾಗ್ಯೂ ಭೋಜನ, ಪ್ರತಿಭೋಜನ ಮಾಡುತ್ತಿದ್ದಾರೆ. [ಅವರವರಲ್ಲಿ ಹೆಣ್ಣು ಕೊಟ್ಟು ತರುವುದೂ ಉಂಟು; ಅಂಥಾ ಭೇದವೇನೂ ಇರುವುದಿಲ್ಲ.—ಎಡಿ.] ಮತ್ತು ಐರೋಪ್ಯ, ಅಮೆರಿಕ ಮುಂತಾದವರಲ್ಲಿ ರೋಮನ್ ಕೆಥೋಲಿಕ್, ಪ್ರಾಟೆಸ್ಟೆಂಟ್ ಚರ್ಚ್ ಎಂಬ ಭೇದಗಳು ಇದ್ದಾಗ್ಯೂ ಅವರೆಲ್ಲಾ ಮತಭೇದ ತಿಳಿಯದ ಹಾಗೆ ಇದ್ದಾರೆ. ಹಾಗೆ ಇರಬೇಕಾದರೆ ರಾಮಾನುಜ, ಮಾಧ್ವಮತಸ್ಥ, ಶಂಕರ ಶಿಷ್ಯರಾದ ಮತ್ತು ಸ್ಮಾರ್ತರಾದ ನಮ್ಮ ನಮ್ಮಲ್ಲಿ ಸಾಧಾರಣವಾದ ಭೋಜನ ಪ್ರತಿಭೋಜನವಿದ್ದರೂ, ಮೇಲಾಗಿ ಆಂಧ್ರ, ದ್ರಾವಿಡ, ಕರ್ನಾಟಕ, ಮಹಾರಾಷ್ಟ್ರ ದೇಶಗಳಲ್ಲಿ ವಾಸಿಸುತ್ತಿದ್ದ ನಾವುಗಳು ಭೋಜನ ಪ್ರತಿಭೋಜನ ಮಾಡುತ್ತಿದ್ದರೂ, ಹೆಣ್ಣು ಕೊಟ್ಟು ತರದೇ ಇದೇವೆ. ಈಗ ನಾವುಗಳು ಇಟ್ಟುಕೊಂಡಿರುವ ಭೇದಗಳು ಬಹು ಅಸಂಗತವಾಗಿದೆ. ಈ ರೀತಿ ಅಸಂಗತವಾಗಿರಬೇಕೆಂದು ಶ್ರುತಿ, ಸ್ಮೃತಿಗಳಲ್ಲಿ ಎಲ್ಲಿಯೂ ಹೇಳಿಲ್ಲ. ಆದ್ದರಿಂದ ಈ ದುರಾಚಾರಗಳನ್ನು ಪ್ರಥಮದಲ್ಲಿ ಬಿಡಬೇಕು. ಮತ್ತು ಗುಜರಾತ್, ಗೌಡ ದೇಶಗಳಲ್ಲಿ ವಾಸಿಸುತ್ತಿರುವ ನಮ್ಮ ಆರ್ಯರಲ್ಲಿ ಭೋಜನ ಪ್ರತಿಭೋಜನವನ್ನು ಬಿಟ್ಟಿದ್ದೇವೆ. ಈ ದುರಾಚಾರವನ್ನಂತು ಹೇಳಕೇಳಬೇಕೇ ಇಲ್ಲ. ಶ್ರುತಿ ಸ್ಮೃತಿಗಳಲ್ಲಿ ಹೇಳದೇ ಇರುವ ಸಹೋದರರಂತೆ ಇರುವದಕ್ಕೆ ಪ್ರತಿಬಂಧಕವಾಗಿ ಕಂ ತಿಳುವಳಿಕೆಯಿಂದ ನವೀನವಾಗಿಟ್ಟುಕೊಂಡಿರುವ ಈ ದುರಾಚಾರಗಳನ್ನೆಲ್ಲಾ ಬಿಟ್ಟುಬಿಡಬೇಕು.

ದೇಶಸೌಖ್ಯ ವಿರಬೇಕಾದರೆ ರಾಜ್ಯತಂತ್ರದಲ್ಲಿ ಪ್ರವರ್ತಿಸಬೇಕು. ರಾಜ್ಯತಂತ್ರದಲ್ಲಿ ಪ್ರವರ್ತಿಸಬೇಕಾದರೆ ವಿದ್ಯ, ಪ್ರವರ್ತನೆ, ಬುದ್ಧಿ, ಇವು ಮೂರೂ ಇರಬೇಕು. ಬುದ್ಧಿ, ವಿದ್ಯ, ಈ ಎರಡರಲ್ಲಿ ನಮ್ಮವರೇನೂ ಕಮ್ಮಿಯಾಗಿಲ್ಲವು. ಕಾಲೇಜ್ ಮತ್ತು ಯೂನಿವರ್ಸಿಟಿಗಳಲ್ಲಿ ಇಟ್ಟಿರುವ ಪರೀಕ್ಷೆಗಳಲ್ಲಿ ನಮ್ಮ ಜನಗಳು ಬೇಕಾದಷ್ಟು ಕ್ರಮದಲ್ಲಿ ಹೆಚ್ಚು ಸಂಖ್ಯೆಯವರು ತೇರ್ಗಡೆಯಾಗುವದೇ ದೃಷ್ಟಾಂತವಾಗಿದೆ. ಹೊಸದಾಗಿ ಸಂಪಾದನೆ ಮಾಡಬೇಕಾದ್ದಿಲ್ಲವೆಂದು ತೋರುತ್ತೆ. ಪ್ರವರ್ತನೆಯಲ್ಲಿ ನಮ್ಮವರು ಬಹಳ ಹಿಂದಾಳುಗಳಾಗಿದ್ದಾರೆ. ಇದಕ್ಕೆ ಧೈರ್ಯವೂ, ಐಕ್ಯಮತ್ಯವೂ ಇಲ್ಲದೇ ಇರುವದೇ ಕಾರಣವಾಗಿದೆ. ಐಶ್ವರ್ಯಕ್ಕೆ ಉದ್ಯೋಗವೇ ಕಾರಣವು. ಉದ್ಯೋಗಕ್ಕೆ ಧೈರ್ಯ ಯಾನೆ ಶಕ್ತಿಯೇ ಪ್ರಧಾನವು. ಶಕ್ತಿಗೆ ದೇಹ ಪುಷ್ಟಿ; ದೇಹ ಪುಷ್ಟಿಗೆ ಮಾಂಸಾಹಾರ ಹೊರ್ತು ಇನ್ಯಾವದೂ ಮುಖ್ಯವಾದ್ದಲ್ಲವು. ಪ್ರಾಣಿ ಹಿಂಸೆ ಮಾಡದೆ ಮಾಂಸಾಹಾರ ಮಾಡಿದರೆ ಪ್ರತ್ಯವಾಯುವಿಲ್ಲವೆಂದು ಕಲಿಯುಗಕ್ಕೆ ಹೇಳಿರುವ "ಪರಾಶರಮಾಧವೀಯ" ವೆಂಬ ಸ್ಮೃತಿಯಲ್ಲಿ ಸ್ಫುಟವಾಗಿ ಹೇಳಿದ್ದಾಗ್ಯೂ ಅದನ್ನು ಬಿಟ್ಟಿದ್ದೇವೆ. ಪ್ರಾಯಶಃ ಪ್ರಾಣಿ ಹಿಂಸೆ ಮಾಡಕೂಡದೆಂದು ಹೇಳಿದ್ದರಿಂದ ಬಿಟ್ಟಿರುವದಾಗಿ ತೋರುತ್ತೆ. ಹೀಗೆ ಸರಿಯಾಗಿಲ್ಲದೇ ಇರುವ ಅರ್ಥ ಮಾಡಿಕೊಂಡಿದ್ದು ದೇವರೇ ಇಲ್ಲವೆಂದು ಹೇಳುವ ಬೌದ್ಧರ ಕಾಲದ ನಮ್ಮವರ ತಿಳುವಳಿಕೆಯೆಂದು ತೋರುತ್ತೆ. ಹ್ಯಾಗೆಂದರೆ, ಆರ್ಯರು ತಾವೇ ಪ್ರಾಣಿ ಹಿಂಸೆ ಮಾಡಕೂಡದೆಂತಲೂ, ದ್ರಾವಿಡರೇ ಮುಂತಾದವರು ಪ್ರಾಣಿ ಹಿಂಸೆ ಮಾಡಿ ಕೊಡದ್ದನ್ನು ದ್ರಾವಿಡರ ಸಂಗಡ ಪಾಕ ಮಾಡಿಸಿ ಭೋಜನ ಮಾಡಬೇಕೆಂತಲೂ, ನಮ್ಮ ಪೂರ್ವಿಕರಾದ ಸ್ಮೃತಿಕರ್ತರಾದ ಮಹರ್ಷಿಗಳ ಅಭಿಪ್ರಾಯವಾಗಿರುತ್ತೆ. ಇದಕ್ಕೆ ದೃಷ್ಟಾಂತವಾಗಿ ಭಾರತ, ಭಾಗವತ, ಮಹಾ ಕಾವ್ಯಗಳಲ್ಲಿ ರಾಜರುಗಳ ಅರಮನೆಯಲ್ಲಿ ದ್ರಾವಿಡರೇ ಮಾಂಸವನ್ನು ಪಾಕಮಾಡುತ್ತಿದ್ದರೆಂದು ಸ್ಪಷ್ಟವಾಗಿ ಹೇಳಿದೆ. ಹೀಗೆ ದ್ರಾವಿಡರು ನಮ್ಮಗಳಿಗೆ ಮಾಂಸ ಪಾಕಮಾಡುತ್ತಿದ್ದಾಗ ನಮಗೂ ಅವರಿಗೂ ವಿಶೇಷವಾದ ಸಹೋದರ ಭಾವವಿರುತ್ತೆಯೇ ಹೊರ್ತು ಈಗಿನ ಹಾಗೆ ಭೇದ ಕಾಣುವದಿಲ್ಲ. ಈ ರೀತಿಯಾದ ಸಹೋದರಭಾವವೂ ದೇಶಸೌಖ್ಯವೂ ಉಂಟಾಗತಕ್ಕ ಮಾಂಸಾಹಾರವನ್ನು ಸರಿಯಾದ ಅರ್ಥ ಮಾಡಿಕೊಳ್ಳದೆ ನಮ್ಮ ಹಿಂದಿನವರು ಬೌದ್ಧರ ಸಹವಾಸದಿಂದ ಬಿಟ್ಟಿರುವದು ಶುದ್ಧ ತಪ್ಪಾಗಿರುತ್ತೆ. ಅದನ್ನು ಸರಿಪಡಿಸಬೇಕು.

ಈ ರೀತಿ ಹಿಂದುಗಳೆಲ್ಲಾ ಆಚರಣೆಯಲ್ಲಿ ತಂದ ಹೊರ್ತು ಪೂರ್ವದ ನಮ್ಮ ಇಂಡಿಯಾ ದೇಶದ ಆರ್ಯ ಜನಗಳ ಉಚ್ಚಸ್ಥಿತಿಯನ್ನು ಹೊಂದಲಾರೆವು.

ಕೃಷ್ಣಪ್ಪ.

◆◆◆◆◆◆◆◆◆

### ಸರ್ಕಾರದವರ ಸಹಾಯ.

ಅಯ್ಯಾ,

ಆರ್ಯರಾದ ಇಂಡ್ಯರಾದ ನಾವೂ ಐರೋಪ್ಯರಾದ ಇಂಗ್ಲೀಷರೂ ಒಂದೇ ಮನೆತನದವರೆಂದು ಸ್ಪಷ್ಟವಾಗಿ ತಿಳಿದಿದೆಯಷ್ಟೆ. ನಮ್ಮ ಸಹೋದರರಾದ ಇಂಗ್ಲೀಷರು ನಮ್ಮನ್ನು ತಮ್ಮಂತೆ ಉಚ್ಚಸ್ಥಿತಿಯಲ್ಲಿ ತಂದು ಸ್ವಲ್ಪವೂ ಭೇದವಿಲ್ಲದೆ ಆದಿಯಲ್ಲಿದ್ದಂತೆ ಒಂದಾಗಿರಬೇಕೆಂದು ಸತ್ಯವಾದ ನಡತೆಯನ್ನು ತೋರಿಸುವ ಭಾಗದಲ್ಲಿ ವಿದ್ಯಾ, ಬುದ್ಧಿ, ಈ ಎರಡೂ ಕಮ್ಮಿಯಲ್ಲಿರುವ ಬೇರೆ ಪಂಗಡದ ಮುಸಲ್ಮಾನ್ ಮುಂತಾದ ಜಾತೀ ಜನಗಳಲ್ಲಿ ದಯವಿಟ್ಟು ಕಾಲೇಜ್ ಮುಂತಾದವುಗಳ ಪರೀಕ್ಷೆಗಳಲ್ಲಿ ಬ್ರಾಹ್ಮಣರಿಗಿಂತಲೂ ಕಮ್ಮಿ ನಂಬರು ಪಡದರೂ ತೇರ್ಗಡೆ ಹೊಂದಿದವರೆಂದು ಸಮಾನಾಧಿಕಾರವನ್ನು ಕೊಡುತ್ತಿದ್ದೆಯಷ್ಟೆ. ಮತ್ತು ಮತಾಭಿಮಾನವಿಟ್ಟು ೧೮೫೦ ನೇ ಇಸ್ವಿಯಲ್ಲಿ ಉಂಟುಮಾಡಿದ ಶಾಸನವು ಮಹಾರಾಣಿಯವರ ೧೮೫೮ ನೇ ನಂಬರ್ ೧ ನೇ ತಾರೀಖಿನ ಇಸ್ತಿಹಾರ್‌ನಾಮೇಗೆ ವಿರೋಧವಾಗಿದ್ದರೂ ಜಾರಿಯಲ್ಲಿರುವಂತೆಯೂ ನಮ್ಮ ಶ್ರುತಿ ಸ್ಮೃತಿಗೆ ವಿರೋಧವಿಲ್ಲದಂತೆ ಪ್ರಕೃತದಲ್ಲಿ ಸಾಂಸರ್ಗಿಕ ವಿಷಯದಲ್ಲಿ ಆಚರಣೆಯಲ್ಲಿ ತರುವವರಿಗೆ ಮೆಟ್ರಿಕ್ಯುಲೇಷನ್ ಪರೀಕ್ಷೆ ಕೊಟ್ಟ ನಮ್ಮವನಿಗೂ, ನಮ್ಮವನಾಗಿ ಸಾಂಸರ್ಗಿಕ ವಿಷಯದಲ್ಲಿ ಗಮನ ಕೊಡದೇ ಇರುವ ಬಿ. ಎಲ್. ಪರೀಕ್ಷೆ ಕೊಟ್ಟ ಮತ್ತೊಬ್ಬನಿಗೂ ಸಹ ಸಮಾನಾಧಿಕಾರ ಕೊಡುತ್ತಾ ಬರಬೇಕು. ಜನಗಳನ್ನು ಜ್ಞಾನಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡಲು ಹಳೇ ಒಡಂಬಡಿಕೆ ಎಂದೂ ಹೊಸ ಒಡಂಬಡಿಕೆ ಎಂದೂ ಕ್ರೈಸ್ತರು ಮಾಡಿರುವಂತೆಯೇ ನಮ್ಮ ಶ್ರುತಿ ಸ್ಮೃತಿಗಳಲ್ಲಿ ಕರ್ಮಮಾರ್ಗವೆಂದೂ, ಜ್ಞಾನಮಾರ್ಗವೆಂದು ಸಹ ಹೇಳಿದೆ. ಈ ಎರಡೂ ಜ್ಞಾನ ಉಂಟಾಗುವದಕ್ಕೆ ಮಾಡಿದ್ದೇ ಹೊರ್ತು ಬೇರೆಯಾಗಿ ಯಾವ ಜನಗಳೂ ತಿಳಿಯತಕ್ಕದ್ದಲ್ಲ. ಅನ್ಯಥಾ ತಿಳಿದರೆ ಲೋಕದಲ್ಲಿ ಅವರನ್ನು ಒರಟರೆಂದು ಜ್ಞಾನವಂತರು ತಿಳಿಯುವರು. ಮಹಮ್ಮದನು ಒರಟ ಜನರನ್ನು ಜ್ಞಾನಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡಲು ಕೆಲವು ಸಲ್ಲದ ವಾಕ್ಯಗಳನ್ನು ಖುರಾನಿನಲ್ಲಿ ಹೇಳಿರುತ್ತಾನಂತೆ. ಅದರಂತೆ ನಮ್ಮ ಶ್ರುತಿ ಸ್ಮೃತಿಗಳಲ್ಲೂ ಹೇಳಿದೆ. ಇದಕ್ಕೆ ದೃಷ್ಟಾಂತವಾಗಿ ಮಹಮ್ಮದನು ತನ್ನ ಶಿಷ್ಯರನ್ನು ಒಂದು ಸ್ಥಳದಲ್ಲಿ ಕರದುಕೊಂಡು ಹೋಗುತ್ತಿದ್ದಾಗ ದೂರದಲ್ಲಿದ್ದ ಒಂದು ಗುಡ್ಡವನ್ನು "ಓ! ಗುಡ್ಡವೇ, ನನ್ನ ಹತ್ತರಕ್ಕೆ ಬಾ!" ಎಂದು ಕರದನಂತೆ. ಅದು ಬರದೇ ಇರಲು, "ನಾನೇ ಅಲ್ಲಿಗೆ ಹೋಗುತ್ತೇನೆ" ಎಂದು ಹೇಳಿ, ಶಿಷ್ಯರ ಸಮೇತ ಹೋದನಂತೆ. ಇದನ್ನು ಹಾಸ್ಯ ಮಾಡಿದರೆ ಅವನು ಮುಸಲ್ಮಾನನಲ್ಲವೆಂತ ಹೇಳಿದನಂತೆ. ಇದೇ ರೀತಿಯಾಗಿ ನಮ್ಮ ಮೂಲವನ್ನೂ, ಋಷಿ ಮೂಲವನ್ನೂ, ವೇದದ ಮೂಲವನ್ನೂ ವಿಚಾರಿಸಕೂಡದೆಂದು ಹೇಳಿದೆ. ಈಗ್ಯೆ ಸರ್ಕಾರದವರು ಮೇಲೆ ಹೇಳಿದಂತೆ ಸ್ವಲ್ಪ ಸಹಾಯ ಮಾಡಿದರೆ ಉತ್ತರೋತ್ತರ ಜಾತಿ, ಮತವೆಂಬುವದೇ ನಿರ್ಮೂಲವಾಗುತ್ತೆ. ಹ್ಯಾಗೆಂದರೆ, ನಮ್ಮ ಶಾಸ್ತ್ರಗಳಲ್ಲಿ ಕರ್ಮಮಾರ್ಗದಲ್ಲಿ ಪ್ರವರ್ತಿಸುವವನಿಗೆ ಹೇಳಿದಷ್ಟು ಮತಾಭಿಮಾನವನ್ನು ಜ್ಞಾನಮಾರ್ಗ ಪ್ರವರ್ತಕನಿಗೆ ಹೇಳಿಲ್ಲ. ನಮ್ಮಲ್ಲಿ ಜ್ಞಾನನಿಷ್ಠನಿಗೆ "ಅವಧೂತ" ನೆಂದು ಹೆಸರು. ಇವನು ಹೊಲೆಯರ ಮನೆಯಲ್ಲಿಯೂ, ಒಕ್ಕಲಿಗರ ಮನೆಯಲ್ಲಿಯೂ, ಮುಸಲ್ಮಾನರ ಮನೆಯಲ್ಲಿಯೂ ಸಹ ಊಟ ಮಾಡಿದಾಗ್ಯೂ ಅವನನ್ನು ನಮ್ಮ ಮತಕ್ಕೆ ಹೊರಗಾದವನೆಂತಲೂ, ಪಾಪಕೃತ್ಯ ಮಾಡಿದವನೆಂತಲೂ, ನೀಚನೆಂತಲೂ ನಮ್ಮ ಬ್ರಾಹ್ಮಣರಲ್ಲಿ ಒಬ್ಬನಾದರೂ ತಿಳಿಯುವದಿಲ್ಲ. ಆದ್ದರಿಂದ ಜ್ಞಾನ ಸಂಪಾದನೆಗೆ ಹೇಳಿದ ಶ್ರುತಿ ಸ್ಮೃತಿಗಳೇ ಹೊರ್ತು ಜಾತಿಮತಗಳನ್ನು ಕಟ್ಟಿಕೊಂಡು ಅಳಬೇಕೆಂದು ಹೇಳಿದ್ದಲ್ಲವೆಂದು ಉತ್ತರೋತ್ತರ ತಿಳಿಯುತ್ತಾರೆಂದು ನಮ್ಮ ಸಹೋದರರಾದ ಇಂಗ್ಲೀಷರು ತಿಳಿಯಬೇಕು. ಮೊದಲು ತಮ್ಮ ಮನೇ ಜನರು ಒಂದಾಗಿದ್ದರಲ್ಲದೇ ಊರಿನ ಜನರೆಲ್ಲಾ ಒಂದಾಗುವದನ್ನು ಯೋಚಿಸಬೇಕು? ಹಾಗೆಯೇ ಇಂಡ್ಯದ ಆರ್ಯರು ತಮ್ಮ ತಮ್ಮಲ್ಲಿರುವ ಭೇದವನ್ನು ಮೊದಲು ತಿದ್ದಿಕೊಂಡು, ನಂತರ ಯೂರೋಪ್ ಖಂಡ ಮತ್ತು ಪಾರಸೀಸ್ತಾನ ಮುಂತಾದ್ದರಲ್ಲಿರುವ ಆರ್ಯರ ಸಹೋದರ ಭಾವದಲ್ಲಿ ಮೊದಲಿನಂತೆ ಇರಲು ಯೋಚಿಸಬೇಕಲ್ಲವೇ?

ಕೃಷ್ಣಪ್ಪ.

---

## ಮೈಸೂರು ಗೆಜೆಟ್ ಸಂಗ್ರಹ.

ಮುಳುಬಾಗಲ್ ಟವುನ್ನಲ್ಲಿ ಕಳೆದ ಮಾರ್ಚಿ ಲಾಗಾಯತು ಪ್ರಜಾ ಆರೋಗ್ಯವು ಚನ್ನಾಗಿರುವದರಿಂದ ಅಲ್ಲಿ ಪ್ಲೇಗ್ ಉಪದ್ರವ ಸೋಂಕು ಇಲ್ಲವೆಂದು ಪ್ರಕಟಿಸಿದೆ.

ಶ್ರೀರಂಗದಲ್ಲಿ ಜುಲೈ ೧ ರಿಂದ ೧೭ ರ ವರೆಗೆ ನಡೆಯುವ ಕುಂಭಾಭಿಷೇಕೋತ್ಸವಕ್ಕೆ ಮೈಸೂರು ಸಂಸ್ಥಾನದಿಂದ ಹೋಗತಕ್ಕವರಿಗೆ ಟಿಕೆಟ್ ಕೊಡಕೂಡದೆಂದು ಮದರಾಸ್ ಸರ್ಕಾರದವರು ಹುಕುಂ ಕೊಟ್ಟಿದಾರೆ.

ನಗರ್ ತಾಲ್ಲೂಕು ಅಮಲ್ದಾರ್ ಮೆ॥ ಬಿ. ಎಸ್. ರಾಣೋಜಿರಾಯರಿಗೆ ಕೊಟ್ಟಿದ್ದ ರಜವನ್ನು ಇನ್ನು ಒಂದು ವಾರ ಜಾಸ್ತಿ ಮಾಡಿದೆ.

ದೇವನಹಳ್ಳಿ ತಾಲ್ಲೂಕು ಅಮಲ್ದಾರ್ ಮೆ॥ ಇ. ಸಿ. ಸದಾಶಿವಂ ಪಿಳ್ಳೆಯಾಂ ರಿಗೆ ಮಾರ್ಚ್ ೧೭ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಶಿರಸ್ತೆದಾರರು ತಾಲ್ಲೂಕ್ ಛಾರ್ಜನ್ನು ವಹಿಸಿದ್ದರು.

ಎಕ್ಸೈಸ್ ಇಲಾಖಾ ಅ॥ ಕಮಿಷನರ್ ಮೆ॥ ಜೆ. ಪನ್ನಿಂಗ್ ಟನವರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಅರಮನೆ ಡಿವಿಜನ್ ಅ॥ ಇಂಜನಿಯರ್ ಮೆ॥ ಸಿ. ಆರ್. ಶ್ರೀನಿವಾಸೈಯಂಗಾರ್ರಿಗೆ ಜೂನ್ ೭ ರ ಲಾಗಾಯಿತು ೧೪ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಕ್ಯಾಪ್ಟನ್ ಎ ಟಿ. ಡಿಲಾಪ್ರಿಮಿಡಾಜ್ ಯವರಿಗೆ ಮೂರುತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದ್ದ ಹುಕುಮನ್ನು ರದ್ದು ಮಾಡಿದೆ.

ಪಶ್ಚಿಮ ಸರ್ಕಲ್ ಅ. ಎ. ಇಂಜನಿಯರ್ ಕ್ಯಾಪ್ಟನ್ ಎ. ಸಿ. ಜಾಲಿ ಡಿಲ-ಬಿನಿಯರ್ ಯವರಿಗೆ ೩ ತಿಂಗಳ ಪ್ರಿವಿಲೆಜ್ ರಜಾ, ಅನಂತರ ೩ ತಿಂಗಳೂ ೧೭ ದಿನಗಳ ಫರ್ಲೋ ರಜಾ ಏಪ್ರಿಲ್ ೨೪ ರ ಲಾಗಾಯಿತು ಕೊಟ್ಟಿದೆ.

ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅ॥ ಕನ್ಸರ್ವೆಟರ್ ಮೆ॥ ಎಂ. ಜಿ. ರಾಮರಾಯರಿಗೆ ಹತ್ತುದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಚಿಕ್ಕಮಗಳೂರು ಡಿ॥ ಟ್ರೆಜರಿ ಆಫಿಸರೇ ಫಾರೆಸ್ಟ್ ಆಫೀಸಿನ ಜಾಸ್ತಿ ಕೆಲಸಗಳನ್ನೂ ನೋಡಿಕೊಳ್ಳತಕ್ಕದ್ದು.

ಮೈಸೂರು ಸ್ಟೇಟ್ ಟ್ರೂಪ್ಸ್ ಛೀಫ್ ಕಾಮಂಡಾಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ. ದೇಶರಾಜೇ ಅರಸಿನವರಿಗೆ ಜೂನ್ ೧೦,೧೨ ನೆ ತಾರೀಖುಗಳಲ್ಲಿ ರಜಾ ಕೊಟ್ಟಿತ್ತು.

## ತಾಲ್ಲೋಕು ವರ್ತಮಾನಗಳು.

ಮಧುಗಿರಿ:—ಕೊರ್ಟಗೆರೆಯಲ್ಲಿರುವ ಯಜಮಾನ ಶಂಕರಪ್ಪನೆಂಬುವನು ಬಗರ್ ಹುಕುಂ ಸರ್ಕಾರಿ ಜಂಗಲ್‌ನಲ್ಲಿ ಭಾರೀ ಜಾಲಾರೀ ಮರಗಳನ್ನು ಕಳವು ಮೂಲಕ ಅಪಹರಿಸಿ, ಛಪಾವಣಿಮಾಡಿದ್ದರೆಂಬು ಕೇಸ್ ನಡದು, ಅಪರಾಧಿಗಳಿಗೆ ಶಿಕ್ಷೆ ಮಾಡಿರುವದು ಮೊದಲೆ ಪ್ರಚುರಪಡಿಸೋಣವಾಗಿದೆ. ಈ ಚಿಗೆ ಈ ಕೇಸ್‌ನಲ್ಲಿ ಸರ್ಕಾರಕ್ಕೆ ತುಂಬಾ ಫಾಯಿದೆ ಉಂಟಾದಕಾರಣದಿಂದ ಈ ಕೇಸ್ ನಡಿಸಿದ ನೌಕರರ ಮೆಹನತ್ತಿಗೋಸ್ಕರ ಮಧುಗಿರಿ ಫಾರೆಸ್ಟರ್ ಕೆ. ರಾಮರಾಯರಿಗೆ ೩೦ ರೂ., ಇವರ ತಾಬೇದಾರ್ ಗಾರ್ಡ್ ಚಿಕ್ಕೀರಿ ಎಂಬುವನಿಗೆ ೧೫ ರೂ., ನಾಟ್ಕಾ ನಾಯೀಗೆ ೧೦ ರೂ. ಈ ಪ್ರಕಾರ ಬಹುಮಾನ ಕೊಟ್ಟಿದಾರೆ.

ದೇವನಹಳ್ಳಿ.—ಈ ಮಧ್ಯೆ ೧—೨ ಮಳೆ ಸುರದದ್ದರಿಂದ ರೈತರ ಮನಸ್ಸುಗಳನ್ನು ಆಕರ್ಷಿಸಿ ಬಿತ್ತನೇ ಮುಂತಾದದ್ದಕ್ಕೆ ಸಿದ್ಧ ಮಾಡಿಕೊಂಡು, ಮಳೆಯನ್ನು ಎದುರು ನೋಡಿಕೊಂಡು ಕಾದಿದ್ದಾರೆ. ಮೋಡ ಆಡುವದೇ ಹೊರ್ತು ಮಳೆ ಬೀಳಲಿಲ್ಲ. ಹಗಲಿನಲ್ಲಿ ಬಿಸಲಿನ ತಾಪವೂ ರಾತ್ರಿವೇಳೆ ಚಳಿಯೂ ಪ್ರಾರಂಭವಾಗಿರುತ್ತೆ. ಜನಗಳ ಆರೋಗ್ಯತೆ ತಪ್ಪಿ ಬೇದಿ, ಛರ್ದಿ, ಜ್ವರ ಮುಂತಾದ ರೋಗಗಳು ಪ್ರಾಪ್ತವಾದಂತೆ ಕಾಣುತ್ತೆ.—ಈ ಮಧ್ಯೆ ಈ ಊರಿನಲ್ಲಿ ತುಂಟರು ಜಾಸ್ತಿಯಾಗಿ ಕಂಡುಬಂದಿದೆ. ಚೋರ ಭಯವೇ ಇಲ್ಲದಾಗ ಸಜ್ಜನರನ್ನು ನಾನಾವಿಧವಾದ ದುರ್ಭಾಷೆಗಳನ್ನು ಬೈಯುವದು, ಗಲಭೋತ್ಪಾತಪಡಿಸುವದು, ರಾತ್ರಿವೇಳೆ ಹೊಂಚುಕಾದು ಪ್ರಾಣಘಾತ ಮಾಡುತ್ತೇನೆ ಎಂಬದಾಗಿ ತನಗೆ ಆಸ್ತರಾದವರ ಸಂಗಡ ಹೇಳುತ್ತಾ ಪಟಿಂಗರನ್ನು ಜಮಾಯಿಸಿಕೊಂಡು ಊರಿನಲ್ಲಿ ನಾನಾವಿಧವಾದ ತಂಟೆಗಳನ್ನು ಮಾಡುತ್ತಾನೆ. ಮೇಲ್ಪಟ್ಟ ಅಧಿಕಾರಿಗಳು ಈ ವಿಧವಾದ ತುಂಟರುಗಳ ಮೇಲೆ ನಿಗಾಯಿಟ್ಟು ಊರಿನಲ್ಲಿರುವ ಪ್ರಜೆಗಳಿಗೆ ಯಾವ ತೊಂದರೆಗಳೂ, ಅಪಾಯಗಳೂ ಸಂಭವಿಸದಹಾಗೆ ಆ ತುಂಟರನ್ನೂ ಅವರ ಮುಖಂಡನನ್ನೂ ತಕ್ಕ ಬಂದೋಬಸ್ತು ಮಾಡಿದರೆ ಊರಿಗೆ ತುಂಬಾ ಕ್ಷೇಮವಾಗುತ್ತೆ.

ಸಿರ್ಯಾ.—ಸಂತೆ ಸ್ಥಳ. ಪ್ರಥಮದಲ್ಲಿ ಜುಮ್ಮಾ ಮಸೀತಿ ರೋಡಿನಲ್ಲಿ ಊರಿನ ಮಧ್ಯೆ ಸಂತೆ ನಡೆಯುತ್ತಿತ್ತು. ಆದರೆ ಆಗ್ಯರಸ್ತೆ ಬಹು ಇಕ್ಕಟ್ಟಾಗಿದ್ದ ಕಾರಣ ಪ್ರಜೆಗಳಿಗೆ ಅಪಾಯ ಸಂಭವಿಸೀತೆಂಬ ಶಂಕೆಯಿಂದ ಅವನ್ನು ತೆಗೆದು ದೊಡ್ಡ ಮೈದಾನವಾಗಿಯೂ, ಎಲ್ಲಾ ಪ್ರಜೆಗಳಿಗೆ ಅನುಕೂಲವಾಗಿಯೂ, ಮತ್ತು ಎಲ್ಲಕ್ಕೂ ಮಧ್ಯವಾಗಿಯೂ ಹಾಲಿ ಆಸಪತ್ರೆ ಇರುವ ಸ್ಥಳಕ್ಕೆ ಹಾಕಿದರು. ಅದು ಕೆಲವುಕಾಲ ನಡದ ನಂತರ ಇಲ್ಲಿ ಆಸಪತ್ರೆ ಇಲ್ಲ. ಆಸಪತ್ರೆ ಮುಸಾಫರಿ ಬಂಗ್ಲೆಯ ಕಡೆ ಇದೆ. ಅದಕಾರಣ ಆಸಪತ್ರೆಯ ಬಳಿ ಸಂತೆ ಇರಬೇಕೆಂದು ಹೇಳಿ ಈ ಊರಿಗೆ ಕಡೆಯಾಗಿರುವ ಪಶ್ಚಿಮದಿಕ್ಕಿನ ದುರ್ಗಿಗುಡಿ ಬಳಿ ಹಾಕಿದರು. ಇದುವರಿಗೂ ಕಷ್ಟವಾದರೂ ದುಃಖವಾದರೂ ಆಗಲೆಂದು ಅನುಭವಿಸಿಕೊಂಡು ಬಂದದ್ದಾಯಿತು. ಆದರೆ ಮೊದಲು ಯಾವ ಮೈದಾನದಲ್ಲಿ ವಸತಿಯಾಗಿತ್ತೋ ಅಲ್ಲಿ ಆಸಪತ್ರೆ ಆಯಿತು. ಆಗಿನಿಂದ ಸಂತೆ ಇಲ್ಲಿ ಆಗಬೇಕೆಂದು ಕೇಳಿಕೊಳ್ಳುತ್ತಾ ಬಂದರು. ಮೊನ್ನೆ ಡೆಪ್ಟಿ ಕಮಿಷನರು ದಯಮಾಡಿದ್ದಾಗ್ಯೆ ಪ್ರಭುಗಳು ಸಂತೆ ನಡೆಯಬೇಕಾಗಿರುವ ಪ್ರದೇಶವನ್ನು ತೋರಿಸಲಾಗಿ ಅವರು—ಆಗಬಹುದು, ಚನ್ನಾಗಿದೆ ಅಮುಲ್‌ದಾರರ ಮೂಲಕ ಅರ್ಜಿ ಬರಕೊಳ್ಳಿ ಎಂದು ಅಪ್ಪಣೆಕೊಟ್ಟರು. ಹಾಗೆಯೇ ಅರ್ಜಿ ಬರಕೊಂಡದ್ದಕ್ಕೆ ಅದು ತಾಲ್ಲೂಕಿಗೆ ಬಂದಿದೆ. ಇಲ್ಲಿನ ಪ್ರಜೆಗಳು ಮ್ಯುನಿಸಿಪಲ್ ಮೀಟಿಂಗಿಗೆ ಅರ್ಜಿಕೊಟ್ಟರು. ಮ್ಯುನಿಸಿಪಲ್ ಮೆಂಬರುಗಳಾದ ಸಾಹುಕಾರ್ ವೆಂಕಟೇಶಯ್ಯನವರೂ, ಆಸಪತ್ರೆಯ ಅಸಿಸ್ಟೆಂಟರಾದ ನಂಜುಂಡೈಯನವರೂ, ಬಳೆ ಅಂಗಡಿ ಬೀರಪ್ಪನವರೂ, ಷಾಪ್ ಅಂಗಡಿ ರಾಜಾ ಅಹಮದ್ ಸಾಹೇಬರೂ, ಕಂಟ್ರಾಕ್ಟರ್ ಯರ್ರಗುಂಟಪ್ಪನವರೂ ಈ ಅರ್ಜಿಗೆ ರುಜು ಹಾಕಿದಾರೆ. ಇದು ಮೊನ್ನೆ ಮೀಟಿಂಗಿನಲ್ಲಿ ಚರ್ಚೆ ಆಗಿ ವೈಸ್ ಪ್ರೆಸಿಡೆಂಟರವರು ಸಬ್ ಕಮಿಟಿಗೆ ಹಾಕಿದ್ದಾರೆ. ಬೇರೆ ೩—೪ ಮಂದಿ ಮೆಂಬರುಗಳು ನ್ಯಾಯವಾಗಿರುವ ಮತ್ತು ಪ್ರಜಾನುಕೂಲವಾಗಿರುವ ಇಂಥಾ ಕಾರ್ಯಕ್ಕೆ ಒಂದುವೇಳೆ ಒಪ್ಪದೆ ಹೋದರೆ ಅನೇಕ ವಿಷಯಗಳಲ್ಲಿ ಪ್ರಜಾಪ್ರತಿನಿಧಿಗಳಾಗಿರುವದು ಹ್ಯಾಗೆಂಬ ಯೋಚನೆ ಅಧಿಕಾರಿಗಳಲ್ಲೂ ಪ್ರಜೆಗಳಲ್ಲೂ ಉಂಟಾಗಬಹುದು. ಈ ಊರಲ್ಲಿ ಸುಮಾರು ೬,೦೦೦ ಪ್ರಜೆ ಇದೆ. ಇದರಲ್ಲಿ ೪,೦೦೦ಕ್ಕಿಂತ ಜಾಸ್ತಿ ಪ್ರಜೆ ಆಸಪತ್ರೆ ಮೈದಾನದಲ್ಲಿ ಸಂತೆ ಆಗಬೇಕೆಂತಲೂ, ಅಲ್ಲೇ ವಸತಿಯಾಗಿದೆಯೆಂತಲೂ ಒಪ್ಪುತ್ತದೆ. ಅಲ್ಲದೆ ಈಗ ನಡೆಯುತ್ತಾ ಇರುವ ಸಂತೆ ಜಾಗಾ ಊರಿಗೆ ಪಶ್ಚಿಮವಾಗಿ ಮಾದಿಗರ ಹಟ್ಟಿ ಬಳಿ ಕಡೇದಾಗಿದೆ. ಉತ್ತರಕ್ಕೆ ಇರುವ ಅಂಗಡಿಗಳೂ ವ್ಯಾಪಾರಾದಿಗಳೂ ಹಾಳುಸುರಿಯುತ್ತಾ ಇರುವದಲ್ಲದೆ ಕೋಟೆ, ಗೌರೀಹಟ್ಟಿ, ಗೌಳಿಗರ ಹಟ್ಟಿ, ದಿವಾನ್ ಹಟ್ಟಿ, ಸಂಕೀಪೇಟೆ, ಕಸಾಬರ ಹಟ್ಟಿ, ಮೇಲಣ ಪೇಟೆ ಈ ಪ್ರಜೆಗಳಿಗೆಲ್ಲಾ ರಮ್ಮ ತಮ್ಮ ಗಂಟುಗಳನ್ನು ಹೊತ್ತುಕೊಂಡು ಬಹು ದೂರ ಬರಬೇಕಾಗಿದೆ. ಕೆಲವರಿಗೆ ೧ ಮೈಲಿ, ಕೆಲವರಿಗೆ ೧½ ಮೈಲಿ ಹೀಗೆ ಫಾಸಲೆಯಾಗುತ್ತೆ. ಈಗ ಹಾಲಿ ನಡೆಯುತ್ತಾ ಇರುವ ಸಂತೆಯ ಜಾಗದಲ್ಲಿ ಸರ್ಕಾರದವರು ರೈತರಿಗೆ ಮನೆ ಕಟ್ಟಿಕೊಳ್ಳಲು ಸ್ಥಳ ಕೊಟ್ಟು ೧೦—೧೨ ವರ್ಷಗಳಿಂದ ಕಂದಾಯ ತೆಗೆದುಕೊಳ್ಳುತ್ತಾ ಇದ್ದಾರೆ. ಹಾಗಾದರೆ ಅಗಲದಲ್ಲಿ ಉಳಿಯುವದು ೫೫ ಗಜ ಭೂಮಿಯೇ. ಇಷ್ಟು ಸಣ್ಣ ಸ್ಥಳದಲ್ಲಿ ಸಾವಿರಾರು ಜನರೂ, ೫೦—೬೦ ಗಾಡಿಗಳೂ, ಅನೇಕ ದಿನಸುಗಳೂ, ಕುಂಬಾರರೂ, ತಿಗಳರೂ, ಸುಮಾರು ೨೦ ಗುಡಾರಗಳವರೂ, ಇನ್ನೂ ಅನೇಕರೂ ವ್ಯಾಪಾರ ನಡಿಸುವದು ಹ್ಯಾಗೋ! ಸಂತೆಯು ದಿನೇ ದಿನೇ ವೃದ್ಧಿಯಾಗುತ್ತಾ ಬರುತ್ತಾ ಇದ್ದಾಗ್ಯೂ ಖಂಡಿತವಾಗಿ ಈ ಸ್ಥಳ ಸಾಲದು. ಪ್ರಜೋಪಕಾರಿಗಳೂ ನ್ಯಾಯವನ್ನು ಅನುಸರಿಸುವವರೂ ಆದ ನಮ್ಮ ವೈಸ್ ಪ್ರೆಸಿಡೆಂಟರವರು ಚಿತ್ತಕ್ಕೆ ತಂದುಕೊಂಡು, ಆರೋಗ್ಯಪ್ರದೇಶವಾಗಿಯೂ, ಆಸ್ಪತ್ರೆಗೆ ಸಮೀಪವಾಗಿಯೂ, ವಿಸ್ತಾರವಾಗಿಯೂ, ೩—೪ ಸಾವಿರ ಜನಗಳು ಅಪೇಕ್ಷಿಸುವಂಥಾದ್ದಾಗಿಯೂ, ಪ್ರಜೆಗಳು ಪಡದು ಬರುವ ಸಂಕಟವನ್ನು ಸುಲಭಪಡಿಸುವದಾಗಿಯೂ, ಊರನ್ನು ಆಬಾದಿಗೆ ತರುವಂಥಾದ್ದಾಗಿಯೂ, ಮೂರು ಪೈರೋಡುಗಳು ಕೂಡಿದ ಸ್ಥಳವಾಗಿಯೂ ಇರುವ ಆಸಪತ್ರೆ ಸ್ಥಳವೇ ಉತ್ತಮವೆಂದು ತಮ್ಮ ಇರಾದೆಯನ್ನು ಕೊಟ್ಟು, ಶಿಫಾರಸ್ಸು ಮಾಡಿ, ಯಶಸ್ಸು ಪಡಕೊಳ್ಳುವದೇ ಧರ್ಮವಾಗಿದೆ.

## ವಿದೇಶ ವರ್ತಮಾನಗಳು.

ಜಮೇಕಾ ದ್ವೀಪದಲ್ಲಿ ಕಬ್ಬಿನ ಬೆಳೆಯು ಶೇಕಡ ೪೦ ರಷ್ಟು ಕಮ್ಮಿ ಆಯಿತು. ಪ್ಲಾಂಟರುಗಳಿಗೆ ಇದರಿಂದ ೬೦,೦೦೦ ಪೌಂಡು ನಷ್ಟವಾಗಿರುವದು.

****

ಜರ್ಮನವರು ಟ್ರಾನ್ಸ್ವಾಲ್ ಗಣಿಗಳಲ್ಲಿ ಕೂಲಿಮಾಡುವದಕ್ಕೆ ೧೦ ಸಾವಿರ ಜನರನ್ನಾದರೂ ಕಳುಹಿಸುತ್ತೇವೆಂದು ಟ್ರಾನ್ಸ್ವಾಸ್ ಸರ್ಕಾರಕ್ಕೆ ತಿಳಿಸಿದಾರೆ.

****

ಲಂಡನ್ ನಗರದಲ್ಲಿ ಕಸಬುದಾರಿ ವಿದ್ಯೆಗಳನ್ನು ಕಲಿಸುವಂಥಾ ಒಂದು ಭಾರಿ ಕಾಲೇಜನ್ನು ಕಟ್ಟಿಸುವದಕ್ಕೆ ಲಾರ್ಡ್ ರೋಸ್ಬರಿ ಯವರು ೩ ಲಕ್ಷ ಪೌಂಡುಗಳನ್ನು ಕೊಟ್ಟಿದಾರೆ.

****

ಟ್ರಾನ್ಸ್ವಾಲ್ ಯುದ್ಧಭೂಮಿಯಿಂದ ವಾಪಸು ಬಂದ ಇಂಗ್ಲಿಷ್ ಸೈನಿಕರು ತಮ್ಮ ೪೦,೦೦೦ ಕಂಬಳಿಗಳನ್ನು ೧,೪೯೪ ಪೌಂಡಿಗೆ ಬಿಕರಿಮಾಡಿರುತ್ತಾರೆಂಬದಾಗಿ ಮೆ॥ ಬ್ರಾಡ್ರಿಕ್‌ಯವರು ಪಾರ್ಲಿಮೆಂಟನಲ್ಲಿ ತಿಳಿಸಿದಾರೆ.

****

ಬೆಹರಿಂಗ್ ಸಮುದ್ರಕ್ಕೆ ಅಡ್ಡಲಾಗಿ ೧೦೭ ಮೈಲಿ ಉದ್ದಕ್ಕೂ ದೊಡ್ಡ ಸೇತುವೆ ಕಟ್ಟಿಕೊಡುತ್ತೇವೆಂತಲೂ, ಈ ಕಂಟ್ರಾಕ್ಟು ತಮಗೇ ಕೊಡಬೇಕೆಂತಲೂ ಅಮೇರಿಕದ ಒಂದು ಕಂಪನಿಯವರು ರಷ್ಯಾರಾಜ್ಯಕ್ಕೆ ತಿಳಿಸಿದಾರೆ.

****

ರಷ್ಯಾ ರಾಜ್ಯದ ನೂರಾರು ಮಂದಿ ಮಿಲಿಟರಿ ಇಂಜನಿಯರುಗಳು ತಿಬೆತ್ತಿನ ಪ್ರಾಂತ್ಯಕ್ಕೆ ಬಂದು ತುಂಬಾ ಗಲಭೆ ಮಾಡುತ್ತಿದಾರೆಂಬದಾಗಿ ತಿಬೆತ್ತಿನಲ್ಲಿರುವ ಚೀನಾ ರಾಯಭಾರಿಯು ಚಕ್ರವರ್ತಿಯವರಿಗೆ ತಂತೀ ವರ್ತಮಾನ ಕೊಟ್ಟಿರುವನು.

****

– ಫ್ರಾನ್ಸ್ ಸರ್ಕಾರದ ೭೭ ಮಂದಿ ಇಂಜನಿಯರುಗಳು ಹಿಂದಿನ ವಾರ ವಿಲಾಯತಿಗೆ ಹೋಗಿ ಊರೂರನ್ನೆಲ್ಲಾ ಸುತ್ತಿ ಅಲ್ಲಲ್ಲಿರುವ ಮಿಲಿಟರಿ, ಸಿವಿಲ್, ಮೊದಲಾದ ಸರ್ಕಾರೀ ಕಟ್ಟಡಗಳೇ ಮುಂತಾದವುಗಳನ್ನು ಅವಲೋಕಿಸಿ ನೋಡಿಕೊಂಡು ಹೋದರು.

****

ಸ್ಪೆಯಿನ್ ರಾಜ್ಯದಲ್ಲಿ ಹಿಂದಿನ ವಾರ ಒಂದು ರೈಲ್ ಗಾಡಿಯು ಅತಿ ವೇಗವಾಗಿ ಹೋಗುತ್ತಾ ನಜರಿಲ್ಲಾ ಎಂಬ ನದಿಯೊಳಕ್ಕೆ ಮಗುಚಿಕೊಂಡಿತು. ಮೊದಲು ೩೦ ಜನ ಸತ್ತರು, ೬೦ ಮಂದಿಗೆ ಗಾಯಗಳಾಗಿವೆ ಎಂಬದಾಗಿ ಸಮಾಚಾರ ಬಂತು. ಈಚೆಗೆ ಈ ಅಪಾಯದಲ್ಲಿ ೧೭೧ ಜನರು ಬಲಿಯಾದರೆಂತಲೂ, ಅಲ್ಲಿನ ಸಂಗತಿಗಳು ತುಂಬಾ ಪರಿತಾಪಕರವಾಗಿರುತ್ತವೆಂತಲೂ ತಿಳಿದು ಬಂದಿದೆ.

ಕನಡಾ ರಾಜ್ಯದಲ್ಲಿ ಕಾಡ್ಗಿಚ್ಚಿನ ಗೆಸೆಯಿಂದ ೨೫೦ ಲಕ್ಷ ದ್ರವ್ಯ ನಷ್ಟವಾಯಿತು. ಏಳು ದೊಡ್ಡ ನಗರಗಳು ಸುಟ್ಟುಹೋದವು. ಬೆಂಕಿಯನ್ನು ಆರಿಸುವದಕ್ಕೆ ೬,೦೦೦ ಜನರು ಸಾಹಸಪಡುತ್ತಿದಾರೆ. ಮಳೆಗರಿಯುವಂತೆ ಸಕಲರೂ ಸೇರಿ ದೇವರಿಗೆ ಪ್ರಾರ್ಥನೆಮಾಡುತ್ತಿರುವರು.

****

ಪೋರ್ಟ್ ಆರ್ಥರ್ ಎಂಬ ತೀರಪಟ್ಟಣದಲ್ಲಿ ರಷ್ಯಾ ರಾಜ್ಯದ ೫೭ ಹಡಗುಗಳು ಬಂದು ನಿಂತಿವೆ. ಇಂಗ್ಲಿಷರು ಅಮೇರಿಕದವರು, ಜರ್ಮನವರು ಸೇರಿ ತಮ್ಮ ಸೈನ್ಯಗಳನ್ನು ಪಿಚಿಲಿ ಕೊಲ್ಲಿಗೆ ಕಳುಹಿಸಿರುತ್ತಾರೆ. ಇದರ ಅರ್ಥವೇನೋ ತಿಳಿಯಲಿಲ್ಲವೆಂದು ತಂತೀ ವರ್ತಮಾನ ಬಂದಿದೆ.

****

ಈಜಿಪ್ಟ್ ದೇಶದ ಖಿಡೈವ್ ಸುಲ್ತಾನರು ಪರಿವಾರ ಸಹಿತ ಗುಟ್ಟಾಗಿ ವಿಲಾಯತಿಗೆ ಹೋಗಿದಾರೆ. ಇವರು ಬರುತ್ತಾರೆಂಬ ಸುದ್ದಿ ಇರಲೇ ಇಲ್ಲ. ಅವರಿಗೆ ಗೌವರ್ನಮೆಂಟಿನವರು ಮರ್ಯಾದೆಗಳನ್ನು ಕಳುಹಿಸಿ ಸತ್ಕರಿಸಿದರು. ಚಕ್ರವರ್ತಿಯವರು ಅವರನ್ನು ಕರೆಸಿಕೊಂಡು ಅವರ ಸಂಗಡ ಸ್ವಲ್ಪ ಹೊತ್ತು ಮಾತನಾಡಿದರು.

****

ಸೋಮಾಲಿಲಾಂಡಿನಲ್ಲಿ ಇಂಗ್ಲಿಷರಮೇಲೆ ದಂಡುಕಟ್ಟಿ ಯುದ್ಧಕ್ಕೆ ನಿಂತಿರುವ ಮುಲ್ಲಾವಿನ ಕಡೆಯವರು ಕೆಲವು ಮಂದಿ ಇಂಗ್ಲಿಷ್ ಹುದ್ದೇದಾರರನ್ನು ಕೈಸೆರೆಹಿಡಿದು ಇದ್ದರು. ಒಬ್ಬ ಬೋಯರ್ ಹುದ್ದೇದಾರನನ್ನು ಕ್ರೂರವಾಗಿ ಹಿಂಸಿಸಿ ಕೊಂದುಬಿಟ್ಟು, ಉಳಿದ ಇಂಗ್ಲಿಷ್ ಹುದ್ದೇದಾರರನ್ನು ಶಿರಚ್ಛೇದನಮಾಡಿಸಿ, ಅವರ ತಲೆಗಳನ್ನು ಗ್ರಾಮಾಂತರಗಳಿಗೆ ಕಳುಹಿಸಿ, ಮೆರವಣಿಗೆ ಮಾಡಿಸಿದನೆಂದು ಸಮಾಚಾರ ಬಂದಿರುವದು.

****

ತುರ್ಕಿಸ್ಥಾನದ ಕೆಲವು ದೊಡ್ಡಮನುಷ್ಯರು ಅಲ್ಲಿನ ರಾಜ್ಯಭಾರವನ್ನು ತಲೆಕೆಳಗುಮಾಡುವದಕ್ಕೆ ಒಂದು ವಿಚಿತ್ರವಾದ ಉಪಾಯವನ್ನು ಮಾಡಿರುವಂತೆ ತಿಳಿದುಬಂದಿದೆ. ಅವರು ಹಿಂದುಸ್ಥಾನದಲ್ಲಿ ರತಕ್ಕ ಪ್ಲೇಗ್ ಕ್ರಿಮಿಗಳನ್ನು ಸಂಗ್ರಹಮಾಡಿ ಶೇಖರಿಸಿಕೊಂಡು ಹೋಗಿ, ಕಾನ್ಸ್ಟಾಂಟಿನೋಪಲ್, ಸಾಲೊನಿಕಾ, ಬರ್ಲಿನ್ ಎಂಬೀ ನಗರಗಳಲ್ಲಿ ಹರಡಿ, ಆ ಮೂಲಕ ಜನರನ್ನು ಕೊಂದುಹಾಕಿ, ತಮ್ಮ ಉದ್ದೇಶವನ್ನು ನೆರವೇರಿಸಿಕೊಳ್ಳಬೇಕೆಂದು ಪ್ರಯತ್ನಪಡುತ್ತಿರುವರು.

****

ಚೀನಾರಾಜ್ಯದ ಮಂತ್ರಿಯಾದ ಪ್ರಿನ್ಸ್ ಚಿಂಗ್ ಯವರು ಉತ್ತರ ಚೀಣಯಲ್ಲಿ ನಾವೆಯ ಮತ್ತು ಯುದ್ಧದ ಇಲಾಖೆಗಳಿಗೆ ಪರರಾಜ್ಯಗಳ ಜನರನ್ನು ಕೆಲಸಕ್ಕೆ ನೇಮಿಸಿಕೊಳ್ಳುವದಿಲ್ಲವೆಂದು ರಷ್ಯಾದವರಿಗೆ ಮಾತುಕೊಟ್ಟಿದ್ದರು. ಆದರೆ ಈಚಿಗೆ ಅವರು ಇಂಗ್ಲೆಂಡಿನಿಂದ ಬಹುಮಂದಿಯನ್ನು ಕರೆಸಿ, ಆ ಇಲಾಖೆಗಳಲ್ಲಿ ನೇಮಿಸಿಕೊಂಡಿದಾರೆ. ಇದನ್ನು ನೋಡಿ ರಷ್ಯಾದವರು ಪ್ರತಿಭಟಿಸಿ, ಕೂಡಲೇ ಅವರನ್ನೆಲ್ಲಾ ಕೆಲಸಗಳಿಂದ ವಜಾಮಾಡಬೇಕೆಂಬದಾಗಿ ಚೀಣಯವರಿಗೆ ಬಹು ಖಂಡಿತವಾಗಿ ಬರೆದಿರುತ್ತಾರೆ.

****

ರಷ್ಯಾ ಸರ್ಕಾರದವರು ತಮ್ಮ ಪ್ರಜೆಗಳಾದ ಯಹೂದ್ಯ ಜನರನ್ನು ತುಂಬಾ ಹಿಂಸೆ ಪಡಿಸುತ್ತಿದಾರೆಂದು ಪ್ರಕಟವಾಗಿದೆಯಷ್ಟೆ. ಈ ವಿಷಯದಲ್ಲಿ ಅಮೇರಿಕದ ಪ್ರಸಿಡೆಂಟರು ಒಂದು ಅರ್ಜಿ ಬರೆಯುವದಾಗಿ ಹೇಳಿ ಕಳುಹಿಸಿದರು. ಇದನ್ನು ಕೇಳಿ ರಷ್ಯಾದವರು—ಈ ಭಾಗದಲ್ಲಿ ನಮಗೆ ತುಂಬಾ ವ್ಯಸನವುಂಟಾಗಿದೆ; ನಮ್ಮ ಆಳಿಕೆಗೆ ಒಳಪಟ್ಟ ಪ್ರಜೆಗಳನ್ನು ನಮ್ಮ ಇಷ್ಟಬಂದಂತೆ ನಡಿಸುತ್ತೇವೆ; ಅಮೇರಿಕದವರು ಇದಕ್ಕೆ ತಲೆ ಹಾಕಕೂಡದು. ಅಂಥಾ ಅರ್ಜಿ ಬಂದರೆ ಅದನ್ನು ವಾಪಸು ಮಾಡುತ್ತೇವೆ ಎಂಬದಾಗಿ ಜವಾಬು ಕೊಟ್ಟಿದಾರೆ.

****

ಮೊರಾಕೊ ಸಂಸ್ಥಾನದಲ್ಲಿ ಸುಲ್ತಾನರಿಗೂ ಪ್ರಜೆಗಳಿಗೂ ವೈಷಮ್ಯಗಳು ಹುಟ್ಟಿರುತ್ತವೆ. ಪ್ರಜೆಗಳು ಸುಲ್ತಾನರ ಅಧಿಕಾರವನ್ನೇ ಹೋಗಲಾಡಿಸಬೇಕೆಂದು ದಂಡುಕಟ್ಟಿದರು. ಇವರ ದಂಗೆಯನ್ನು ಅಣಗಿಸಬೇಕೆಂದು ಸುಲ್ತಾನರು ದೊಡ್ಡ ಸೈನ್ಯವನ್ನು ಕೂಡಿಸಿ ಕಳುಹಿಸಿದರು. ಅವೆರಡು ಸೈನ್ಯಗಳಿಗೂ ಅನ್ನಿಡಿನ್ನಾ ಎಂಬ ಸ್ಥಳದಲ್ಲಿ ದೊಡ್ಡ ಯುದ್ಧ ನಡೆದಿರುವಹಾಗೂ, ಸುಲ್ತಾನರ ಕಡೆ ಸೈನ್ಯದಲ್ಲಿ ೬,೦೦೦ ಮಂದಿಯ ತನಕ ಲಯವಾದಹಾಗೂ, ಪ್ರಜಾಪಕ್ಷದವರೇ ಜಯಪ್ರದವನ್ನು ಹೊಂದಿದಹಾಗೂ ತಂತೀ ವರ್ತಮಾನ ಬಂದಿರುವದು.

****

ದಕ್ಷಿಣ ಕೆರೋಲಿನಾಕ್ಕೆ ಸೇರಿದ ಸ್ಪಾರ್ಟನ್‌ಬರ್ಗ್ ಎಂಬಲ್ಲಿ ಆಕಾಶವು ತೂತುಬಿದ್ದಿತೋ ಎಂಬಂತೆ ಮಳೆ ಸುರಿದು, ಭಾರೀ ಅಣೆಕಟ್ಟು ಕಿತ್ತುಹೋಯಿತು. ಸುತ್ತಮುತ್ತಲೂ ಇರುವ ಪ್ರದೇಶಗಳಿಗೆಲ್ಲಾ ನೀರಿನ ಪ್ರವಾಹಗಳು ನುಗ್ಗಿದವು. ಹತ್ತಿಯ ಕಾರ್ಖಾನೆಗಳು ಒಡೆದು ನಾಶಹೊಂದಿದವು. ಸುಮಾರು ೨೦ ಲಕ್ಷ ದ್ರವ್ಯ ನಷ್ಟವಾಗಿರುತ್ತೆ. ಪರ್ಸೇಲಾಟ್ ಎಂಬ ಸ್ಥಳದಲ್ಲಿ ಪ್ರತಿಯೊಂದು ಕಟ್ಟಡವೂ ಬಿದ್ದು ನೆಲಸಮವಾಯಿತು. ಅನೇಕ ಜನರು ನೀರಿನ ಪಾಲಾದರು. ಸೆಂಟ್‌ಲೂಯಿಸ್ ಎಂಬ ಪಟ್ಟಣದಿಂದ ೨೫ ಮೈಲಿ ಸುತ್ತಿನ ತನಕ ವ್ಯವಸಾಯ ಮಾಡಿದ್ದ ಜಮೀನಿನ ಮೇಲೆ ನೀರು ನಿಂತಿದೆ. ಸುಮಾರು ೨೫,೦೦೦ ಪ್ರಜೆಗಳು ಮನೆಮಠಗಳನ್ನು ಕಳಕೊಂಡು ಅಲೆಯುತ್ತಿದಾರೆ. ಆಸ್ತಿಪಾಸ್ತಿಗಳನ್ನು ದೋಚಿಕೊಂಡು ಹೋಗದಂತೆ ಸರ್ಕಾರದವರು ಬಹು ಕಠಿಣವಾದ ಕಾನೂನನ್ನು ಜಾರಿಗೆ ತರಬೇಕಾಯಿತು. ಕಳ್ಳರು ಸಿಕ್ಕಿದರೆ ಗುಂಡುಹೊಡೆದು ಕೊಲ್ಲುವಂತೆ ವಿಧಿಸಿರುವರು.

## ಕರೆಸ್ಪಾಂಡೆನ್ಸ್.

### ದೊಡ್ಡ ಪೋಸ್ಟ್ ಕಾರ್ಡುಗಳು.

ಅಯ್ಯಾ,

ನಾವುಗಳು ಹೋದವಾರ ದೊಡ್ಡ ಸೈಜಿನ ಕಾರ್ಡುಗಳನ್ನು ಹಾಕಿದರೆ ನಷ್ಟಪೈದು ಮಾಡುತ್ತೇವೆಂತ ಪೋಸ್ಟು ಮಾಸ್ತರು ಹೇಳಿದ ರೆಂಬದಾಗಿ ಪ್ರಕಟಿಸಿದ್ದು ಸರಿಯಷ್ಟೆ. ಪೋಸ್ಟು ಮಾಸ್ಟರು ಹೇಳತಕ್ಕದ್ದು ಸುಳ್ಳೆಂತಲೂ, ಪೋಸ್ಟು ಮ್ಯಾನೆಜರು ಅವರುಗಳನ್ನು ಕೇಳದೆ ಈ ರೀತಿ ಹೇಳಿದಕ್ಕಾಗಿ ಬಹಳ ವಿಷಾದಿಸುವೆವು. ಇಂಡಿಯಾ ಗೌರ್ನಮೆಂಟಿನವರು ಮೇಲೆ ಕಂಡ ೩॥×೫॥ ಅಂಗುಲ ಕಾರ್ಡುಗಳಲ್ಲಿ ಜನರು ಬರೆಯಬಹುದೆಂತ ಹುಕುಂ ಕೊಟ್ಟಿರುವದರಿಂದ ಸರ್ವರಿಗೂ ತುಂಬಾ ಪ್ರಯೋಜನ ವಾಯಿತೆನ್ನುವದಕ್ಕೆ ಸಂಶಯವಿಲ್ಲ. ಈ ಸಂಗತಿಯನ್ನು ಸಕಲರೂ ತಿಳಿಯತಕ್ಕದ್ದು.

ದಾವಣಗೆರೆ. ವೀರಭದ್ರಪ್ಪ.

*********

### ಗೌ॥ ಹೋ॥ ಸ್ಕೂಲುಗಳ ಹೀನಸ್ಥಿತಿಯೂ, ಮಾಸ್ಟರುಗಳ ಸಂಬಳ ಬಟವಾಡೆಯೂ.

ಅಯ್ಯಾ,

ಅತ್ಯುತ್ತಮವಾದ ಈ ಪ್ರಪಂಚದಲ್ಲಿ ಮನುಷ್ಯರ ಶ್ರೇಯೋವೃದ್ಧಿಗೂ ಐಶ್ವರ್ಯಾಭಿವೃದ್ಧಿಗೂ ಇಹಪರ ಸುಖಗಳಿಗೂ ಸಾಧಕವಾದ ವಿದ್ಯವೇ ಮುಖ್ಯವಾದ್ಯವಾಗಿರುವದು. ಇದರಿಂದ ನಮ್ಮ ಮೈಸೂರ್ ಸರ್ಕಾರದವರು ತಮ್ಮ ಸೀಮೆಯಲ್ಲೆಲ್ಲಾ ವಿದ್ಯಾಭಿವೃದ್ಧಿಯನ್ನುಂಟುಮಾಡುವದಕ್ಕಾಗಿ ಎಲ್ಲಾ ಕಡೆಗಳಲ್ಲಿಯೂ ಅನೇಕ ಪಾಠಶಾಲೆಗಳನ್ನೇರ್ಪಡಿಸಿರುತ್ತಾರೆ. ದೊಡ್ಡದೊಡ್ಡ ಕಾಲೇಜುಗಳಲ್ಲಿಯೂ ಸ್ಕೂಲುಗಳಲ್ಲಿಯೂ ಸರ್ಕಾರದ ವಿಧಿಗನುಸಾರವಾಗಿ ವಿದ್ಯಾಭ್ಯಾಸವು ನಡೆಯುತ್ತಿರುವದರಿಂದ ಅನೇಕ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಉತ್ತೀರ್ಣರಾಗುತ್ತಾ ಇದ್ದಾರೆ. ಆದರೆ ಗ್ರಾಮಾಂತರದಲ್ಲಿ ಪಾಠಶಾಲೆಗಳಲ್ಲಿ ಉಪಾಧ್ಯಾಯರು ತಮಗೆ ಸರ್ಕಾರದಿಂದ ಸಲ್ಲುವ ಅಲ್ಪವೇತನದಿಂದ ತಮ್ಮ ಜೀವನವನ್ನು ನಡಿಸಿಕೊಳ್ಳುವದಕ್ಕೆ ಸಾಲದೆ, ಜೀವನೋಪಾಯಕ್ಕಾಗಿ ಇತರವಿಧವಾದ ವೃತ್ತಿಗಳಲ್ಲಿ ಪ್ರವರ್ತಿಸಿ ತಮಗೆ ನೇಮಕವಾಗಿರುವ ವೃತ್ತಿಯಲ್ಲಿ ಉಪೇಕ್ಷೆಯನ್ನು ತೋರಿಸುತ್ತಾ, ಪ್ರಜೆಗಳ ಮತ್ತು ಸರ್ಕಾರದವರ ಪ್ರೀತಿಗೆ ದೂರವಾಗುತ್ತಾರೆ. ಮತ್ತು ಇವರಿಗೆ ಸಲ್ಲುವ ಜುಜುವಿ ತಲಬು ಕೊಡ ೧ ನೆ ತಾರೀಖಿಗೆ ಪಾವತಿಯಾಗಬೇಕೆಂದು ರೂಲಸು ಇರುತ್ತೆ. ಹಾಗಲ್ಲದೆ ಅನೇಕ ಕಡೆ ಹೋಬಳಿ ಶೇಕದಾರರು ತಮ್ಮ ಕೆಲಸದ ಗಲಾಟೆಯಿಂದ ೧೫ ನೆ ತಾರೀಖು ವರೆಗೂ ಕಾಲವಿಳಂಬಮಾಡಿ, ಅನಂತರ ಟ್ರೆಜರಿಯಿಂದ ತಲಬನ್ನು ತೆಗೆದುಕೊಂಡು ಪಾವತಿ ಮಾಡಬೇಕಾದರೆ ೧೦—೧೫ ದಿನಗಳು ಬೇಕಾಗುತ್ತೆ. ಅದುವರೆಗೂ ಉಪಾಧ್ಯಾಯರು ಪಡುವ ಶ್ರಮೆಯು ಹೇಳತೀರದು. ಈ ವಿಷಯವನ್ನು ಮೇಲ್ಪಟ್ಟ ಅಧಿಕಾರಿಗಳಲ್ಲಿ ತಿಳಿಸಿದರೆ ಅವರ ಕಿವಿಗೆ ಬೀಳುವದಿಲ್ಲ. ಇದರಿಂದ ಉಪಾಧ್ಯಾಯರು ತಮ್ಮ ಕೆಲಸದಲ್ಲಿ ಅಶ್ರದ್ಧೆಯನ್ನು ತೋರಿಸುವದರಿಂದ ಪಾಠಶಾಲೆಗಳು ಹೀನಸ್ಥಿತಿಗೆ ಬಂದು ಸರ್ಕಾರದ ಉದ್ದೇಶವು ನೆರವೇರಲು ಅವಕಾಶತಪ್ಪುವದು. ಆದ್ದರಿಂದ ಘನವನ್ನೈದಿದ ನಮ್ಮ ಸರ್ಕಾರದವರು ಮೇಲ್ಕಂಡ ನೌಕರರ ಶ್ರಮೆಯನ್ನು ತಪ್ಪಿಸುವರೆಂದು ನಿರೀಕ್ಷಿಸುತ್ತೇನೆ.

ಹಿತವಾದಿ.

*********

### ರೈಲ್ ಗಾಡಿಗಳಲ್ಲಿ ಪ್ರಯಾಣಿಕರಿಗೆ ಇರುವ ಕೊರತೆಗಳು.

ಅಯ್ಯಾ,

ನಮ್ಮ ಸದರ್ನ್ ಮರಾಟ ರೈಲ್ವೆಯಲ್ಲಿ ಪ್ರಯಾಣಿಕರಿಗೆ ಎಷ್ಟು ತೊಂದರೆಗಳುಂಟೆಂದು ಪ್ರಯಾಣಮಾಡಿ ಕಷ್ಟ ಅನುಭವಿಸಿದವರಿಗೆಲ್ಲಾ ಗೊತ್ತಾಗಿಯೇ ಇದೆ. ಆದರೆ ಅಧಿಕಾರಿಗಳಿಗೆ ಮಾತ್ರ ಗೊತ್ತಾಗಲಿಲ್ಲ. ಕೆಲವು ವೇಳೆ ೩ನೇ ತರಗತಿಯವರ ಕಷ್ಟ ನಾನು ಅನುಭವಿಸಿದವನಿಗೆ ಗೊತ್ತು. ದೃಷ್ಟಾಂತವಾಗಿ ೨ ವಾರಗಳ ಹಿಂದೆ ಒಬ್ಬ ಪ್ರಯಾಣಿಕನು ಬೆಂಗಳೂರಿನಿಂದ ರಾತ್ರಿ ಗಾಡಿಗೆ ತನಗೂ ತನ್ನವರುಗಳಿಗೂ ಟಿಕೇಟನ್ನು ತೆಗೆದುಕೊಂಡು, ಗಾಡಿಯಲ್ಲಿ ಕೂತುಕೊಳ್ಳ ಹೋಗಲು ಒಂದು ಗಾಡಿಯಲ್ಲೂ ಅವನಿಗೆ ಸ್ಥಳಸಿಕ್ಕಲಿಲ್ಲ. ಅನಂತರ ಅವರು ೩ನೇ ತರಗತಿಯ ಟಿಕೇಟನ್ನು ತೆಗೆದುಕೊಂಡರು. ಗಾಡಿಯ ಬಳಿ ಹೋಗಿ ನೋಡಲು ಅಲ್ಲಿದ್ದವರು ಸ್ಥಳವಿಲ್ಲವೆಂದು ನೂಕಿಬಿಟ್ಟರು. ಸ್ಟೇಷನ್ ಮಾಸ್ಟರಿಗೆ ಹೇಳಲು ನಾನು ಏನು ಮಾಡಲಿ ಅಂದರು. ಗಾಡಿ ಹೊರಡಲು ಅವರು ಬೆಳಗಿನ ವರೆಗೂ ಚಳಿ ಗಾಳಿಯಲ್ಲಿ ಒಂದು ಸಣ್ಣ ಕೋಣೆ ನ್ನು ಹಾಕಿಕೊಂಡು ಸ್ಟೇಷನ್ ಬಳಿ ಬಿದ್ದುಕೊಂಡಿದ್ದು, ಮೇಯಿಲ್ ಗಾಡಿಯಲ್ಲಿ ಮದ್ದೂರಿಗೆ ಬಂದು ಸೇರಿದರು. ಒಬ್ಬ ಯೂರೋಪಿಯನ್ ಇಂಥಾ ಕಷ್ಟಕ್ಕೆ ಸಿಕ್ಕಿದ್ದರೆ ಆದರೆ ಕೂಡಲೆ ಇನ್ನೊಂದು ಗಾಡಿಯನ್ನು ತಗಲಿಸಿ ಅವರಿಗೆ ಅನುಕೂಲಮಾಡಿಕೊಡುತ್ತಿದ್ದರು. ಹಾಗೆ ಕೊಡದೆ ಇದ್ದರೆ ಸ್ಟೇಷನ್ ಮಾಸ್ಟರಿಗೆ ತಕ್ಕ ಪ್ರಾಯಶ್ಚಿತ್ತವಾಗುತ್ತಿತ್ತು. ನಮ್ಮ ಜನಗಳು ಈ ಪ್ರಕಾರ ಅಗಾಗ್ಗೆ ಅವಮಾನಗಳನ್ನು ಹೊಂದಬೇಕಾಗಿದೆ.

ಒಂದು ಸೀಟಿಗೆ ೪ ಜನರು ಇರಬೇಕೆಂದು ಕಂಪನಿಯವರು ಅಕ್ಷರ ಕೆತ್ತಿಸಿದ್ದಾರೆ. ಆದರೆ ಸಮಯ ಬಂದಾಗ್ಯೆ ೧೦—೧೨ ಜನರನ್ನು ಒಂದು ಕಂಪಾರ್ಟ್‌ಮೆಂಟಿಗೆ ಸೇರಿಸಿ ಗಾಡಿಯಲ್ಲಿ ಕೂತಿರುವ ಜನರೊಂದಿಗೆ ಕುಸ್ತಿಗೆ ಬಿಡುತ್ತಾರೆ. ಕೆಲವುಸಾರಿ ಜನರು ಒಳಗಿನಿಂದ ಹೊರಗೆ ಹತ್ತುವ ಜನರನ್ನು ಕತ್ತು ಹಿಡಿದು ನೂಕುತ್ತಾರೆ. ಜನಗಳಿಗೆ ಅದರಿಂದ ಅಪಾಯ ಸಂಭವಿಸುವದರಲ್ಲಿ ಸಂದೇಹವಿಲ್ಲ. ಹಾಗೆ ಆಪಾಯ ಸಂಭವಿಸಿದರೆ ಸ್ಟೇಷನ್ ಮಾಸ್ಟರುಗಳನ್ನು ಹಿಂಸಿಸಿ ಅವರಿಗೆ ಶಿಕ್ಷೆ ವಿಧಿಸುತ್ತಾರೆ. ಮತ್ತು ಹೆಂಗಸರು ಮೈಲುಗಳ ವರೆಗೆ ಕಕ್ಕಸ ಇಲ್ಲದ ಗಾಡಿಯಲ್ಲಿ ಇಟ್ಟಿಲ್ಲ ಇದರಿಂದ ಪ್ರಯಾಣಿಕರಿಗೆ ತೊಂದರೆಯುಂಟಾಗಿದೆ. ಅಲ್ಲದೆ ಯಾರಾದರೂ ಮಧ್ಯದ ಸ್ಟೇಷನ್‌ಗಳಿಗೆ ರಿಜರ್ವ್ಡ್ ಕಂಪಾರ್ಟ್‌ಮೆಂಟ್ ಬೇಕೆಂದು ಮುಂಚಿತವಾಗಿ ನೋಟೀಸ್ ಕೊಟ್ಟು ಸ್ಟೇಷನ್ ಮಾಸ್ಟರ್ ಮೂಲಕ ಅಂತಿವರ್ತನಮಾಡಿ ಕಳುಹಿಸಿದಾಗ್ಯೂ ಅಂಥಾ ಕಂಪಾರ್ಟ್‌ಮೆಂಟಿಗೆ ಚೀಟಿ ಹತ್ತಿಸಿ ಕಳುಹಿಸುವದಿಲ್ಲ. ಯೂರೋಪ್ಯರು ೧ನೇ ೨ನೇ ತರಗತಿಯವರು ಕೇಳಿದರೆ ಬಹು ಎಚ್ಚರಿಕೆಯಿಂದ ಕಳುಹಿಸುತ್ತಾರೆ. ಕಾರಣವೇನೆಂದರೆ ಅವರು ಮೇಲಕ್ಕೆ ತಿಳಿಸಿ ಜುಲ್ಮಾನೆ ಹಾಕಿಸುತ್ತಾರೆ. ಆದರೆ ೩ನೇ ತರಗತಿಯ ಪ್ರಯಾಣಿಕರು ಅಲ್ಪಜನರು. ಏನೂ ತಿಳಿದವರಲ್ಲ. ಮೇಲಕ್ಕೆ ತಿಳಿಸುವ ಶಕ್ತಿ ಇಲ್ಲ. ಹಾಗೇನಾದರೂ ಮಾಡಿದರೆ ಅವರನ್ನು ದ್ವೇಷಮಾಡುವವರೂ ಇದ್ದಾರೆ. ಮತ್ತೆ ಕೆಲವರು—ನಮಗೆ ಒಂದೆರಡು ಗಂಟೆಯ ಪ್ರಯಾಣ; ಅನಿಂದೆ ನಮಗ್ಯಾಕೆ? ಎಂದು ಹೇಳಿ ಕಂಪನಿಯ ಅಧಿಕಾರಿಗಳಿಗೆ ತಮ್ಮ ಕಷ್ಟ ತಿಳಿಸುವದಿಲ್ಲ. ಆದಕಾರಣ ೩ನೇ ತರಗತಿಯವರನ್ನು ಕುರಿಗಳನ್ನೂ ದನಗಳನ್ನೂ ಕೂಡುವ ಪ್ರಕಾರ ಸಾಧ್ಯವಾದರೆ ಗೂಡ್ಸ್ ಗಾಡಿಯಲ್ಲಿ ತುಂಬಿ ಕಳುಹಿಸುತ್ತಾರೆ. ಮದರಾಸ್ ರೈಲ್ ಗಾಡಿಯಲ್ಲಿ ಜನರಿಗೆ ಇಂಥಾ ತೊಂದರೆ ಇಲ್ಲ. ೩ನೇ ತರಗತಿಯವರಿಂದಲೇ ಕಂಪನಿಯವರಿಗೆ ಲಕ್ಷಾಂತ್ರ ರೂಪಾಯಿ ಹುಟ್ಟುವಲ್ಲಿ ಆಗುತ್ತೆ. ಆದಕಾರಣ ಇವರಿಗೆ ಇರುವ ತೊಂದರೆಗಳನ್ನು ತಪ್ಪಿಸಿ ಪ್ರಯಾಣಿಕರಿಗೆ ಅನುಕೂಲಗಳನ್ನೂ ಸಂತೋಷವನ್ನೂ ಉಂಟುಮಾಡಿದರೆ, ರೈಲ್ವೆ ಕಂಪೆನಿಯವರಿಗೆ ತುಂಬಾ ಕೀರ್ತಿ ಉಂಟಾಗುವದರಲ್ಲಿ ಸಂದೇಹವಿಲ್ಲ.

ಪ್ರಯಾಣಿಕನು.

*********

### ಸಾಂಸರ್ಗಿಕ ವಿಚಾರಗಳು.

ಅಯ್ಯಾ,

೨೫—೬—೧೯೦೩ ನೇ ಗುರುವಾರದ "ವೃತ್ತಾಂತ ಪತ್ರಿಕೆ"ಯ ೩ ನೆ ಪೇಜಿನಲ್ಲಿ ಕರೆಸ್ಪಾಂಡೆನ್ಸ್ "ಸಮಾಧಾನ" ವೆಂಬ ಕಾಲಂನಲ್ಲಿ ದೇಶಾಭಿಮಾನಿಗಳಾದ ನಮ್ಮ ಸಹೋದರರು ಬರದಿರುವದೆಲ್ಲಾ ಸರಿಯಾಗಿದ್ದರೂ, ಅದರ ಜೊತೆಗೆ ಈ ಕೆಳಗೆ ನಾನು ಬರದಿರುವದನ್ನು ಒಂದು ಆರ್ಟಿಕಲ್ಲಾಗಿ ಓದಿದರೆ ಅವರ ತಾತ್ಪರ್ಯಕ್ಕೆ ವಿರೋಧವಿಲ್ಲವೇ? ಅವರ ಉತ್ತರವನ್ನು ಪತ್ರಿಕಾ ಮುಖೇನ ಪ್ರಕಟಿಸಿ ಕೊಡಿ.

ಇಂಡಿಯಾದ ಆರ್ಯರು ಎಲ್ಲರಿಗಿಂತಲೂ ಉಚ್ಚಸ್ಥಿತಿಯಲ್ಲಿ ಇದ್ದದ್ದಕ್ಕೆ ಮುಖ್ಯವಾಗಿದ್ದ ಕಾರಣಗಳು—ಸಹೋದರರ ಭಾವ, ದೇಶಸೌಖ್ಯವೇ.

ಸಹೋದರ ಭಾವದಿಂದ ಇರಬೇಕಾದರೆ ಸಾಂಸರ್ಗವಿರಬೇಕು ಅಂದರೆ, ದ್ರಾವಿಡರಲ್ಲಿ ಪಂಕ್ತಿ ಭೋಜನವಿಲ್ಲದಿದ್ದರೂ, ಆರ್ಯರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ಜಾತಿ ಜನಗಳು ಯೂರೋಪ್ಯರ ಹಾಗೆ ಹೆಣ್ಣು ಕೊಟ್ಟು ತರದೇ ಇದ್ದಾಗ್ಯೂ ಭೋಜನ, ಪಂಕ್ತಿ ಭೋಜನ ಮಾಡುತ್ತಿರಬೇಕು. ಇಂಗ್ಲೀಷರೂ, ಈಸ್ಟ್ ಇಂಡಿಯನ್ನರೂ, ಹೆಣ್ಣು ಕೊಟ್ಟು ತರದೇ ಇದ್ದಾಗ್ಯೂ ಭೋಜನ, ಪಂಕ್ತಿ ಭೋಜನ ಮಾಡುತ್ತಿದ್ದಾರೆ. [ಅವರವರಲ್ಲಿ ಹೆಣ್ಣು ಕೊಟ್ಟು ತರುವದೂ ಉಂಟು; ಅಂಥಾ ಭೇದವೇನೂ ಇರುವುದಿಲ್ಲ.—ಎಡಿ.] ಮತ್ತು ಯೂರೋಪ್ಯ, ಅಮೆರಿಕಾ ಮುಂತಾದವರಲ್ಲಿ ರೋಮನ್ ಕೆಥೋಲಿಕ್, ಪ್ರಾಟೆಸ್ಟೆಂಟ್ ಚರ್ಚ್ ಎಂಬ ಭೇದಗಳು ಇದ್ದಾಗ್ಯೂ ಅವರೆಲ್ಲಾ ಮತಭೇದ ತಿಳಿಯದ ಹಾಗೆ ಇದ್ದಾರೆ. ಹಾಗೆ ಇರಬೇಕಾದರೆ ರಾಮಾನುಜ, ಮಾಧ್ವಮತಸ್ಥಾಪಕರ ಶಿಷ್ಯರಾದ ಮತ್ತು ಸ್ಮಾರ್ತರಾದ ನಮ್ಮ ನಮ್ಮಲ್ಲಿ ಸಾಧಾರಣವಾದ ಭೋಜನ ಪಂಕ್ತಿಭೋಜನವಿದ್ದರೂ, ಮೇಲಾಗಿ ಆಂಧ್ರ, ದ್ರಾವಿಡ, ಕರ್ನಾಟಕ, ಮಹಾರಾಷ್ಟ್ರ ದೇಶಗಳಲ್ಲಿ ವಾಸಿಸುತ್ತಿದ್ದ ನಾವುಗಳು ಭೋಜನ ಪಂಕ್ತಿಭೋಜನ ಮಾಡುತ್ತಿದ್ದರೂ, ಹೆಣ್ಣು ಕೊಟ್ಟು ತಂದೇ ಇದ್ದೇವೆ. ಈಗ ನಾವುಗಳು ಇಟ್ಟುಕೊಂಡಿರುವ ಭೇದಗಳು ಬಹು ಅಸಂಗತವಾಗಿದೆ. ಈ ರೀತಿ ಅಸಂಗತವಾಗಿರಬೇಕೆಂದು ಶ್ರುತಿ, ಸ್ಮೃತಿಗಳಲ್ಲಿ ಎಲ್ಲಿಯೂ ಹೇಳಿಲ್ಲ. ಆದ್ದರಿಂದ ಈ ದುರಾಚಾರಗಳನ್ನು ಪ್ರಥಮದಲ್ಲಿ ಬಿಡಬೇಕು. ಮತ್ತು ಗುಜರಾತ್, ಗೌಡ ದೇಶಗಳಲ್ಲಿ ವಾಸಿಸುತ್ತಿರುವ ನಮ್ಮ ಆರ್ಯರಲ್ಲಿ ಭೋಜನ ಪ್ರತಿಭೋಜನವನ್ನು ಬಿಟ್ಟಿದ್ದೇವೆ. ಈ ದುರಾಚಾರವನ್ನಂತು ಹೇಳಕೇಳಸವೇ ಇಲ್ಲ. ಶ್ರುತಿ ಸ್ಮೃತಿಗಳಲ್ಲಿ ಹೇಳದೇ ಇರುವ ಸಹೋದರರಂತೆ ಇರುವದಕ್ಕೆ ಪ್ರತಿಬಂಧಕವಾಗಿ ಕಂ ತಿಳುವಳಿಕೆಯಿಂದ ನವೀನವಾಗಿಟ್ಟುಕೊಂಡಿರುವ ಈ ದುರಾಚಾರಗಳನ್ನೆಲ್ಲಾ ಬಿಟ್ಟುಬಿಡಬೇಕು.

ದೇಶಸೌಖ್ಯ ವಿರಬೇಕಾದರೆ ರಾಜ್ಯತಂತ್ರದಲ್ಲಿ ಪ್ರವರ್ತಿಸಬೇಕು. ರಾಜ್ಯತಂತ್ರದಲ್ಲಿ ಪ್ರವರ್ತಿಸಬೇಕಾದರೆ ವಿದ್ಯ, ಪ್ರವರ್ತನೆ, ಬುದ್ಧಿ, ಇವು ಮೂರೂ ಇರಬೇಕು. ಬುದ್ಧಿ, ವಿದ್ಯ, ಈ ಎರಡರಲ್ಲಿ, ನಮ್ಮವರೇನೂ ಕಮ್ಮಿಯಾಗಿಲ್ಲವು. ಕಾಲೇಜ್ ಮತ್ತು ಯೂನಿವರ್ಸಿಟಿಗಳಲ್ಲಿ ಇಟ್ಟಿರುವ ಪರೀಕ್ಷೆಗಳಲ್ಲಿ ನಮ್ಮ ಜನಗಳು ಪ್ರತಿವರ್ಷ ಕ್ರಮದಲ್ಲಿ ಹೆಚ್ಚು ಸಂಖ್ಯೆಯವರು ತೇರ್ಗಡೆಯಾಗುವದೇ ದೃಷ್ಟಾಂತವಾಗಿದೆ. ಹೊಸದಾಗಿ ಸಂಪಾದನೆ ಮಾಡಬೇಕಾದ್ದಿಲ್ಲವೆಂದು ತೋರುತ್ತೆ. ಪ್ರವರ್ತನೆಯಲ್ಲಿ ನಮ್ಮವರು ಬಹಳ ಹಿಂದಾಳುಗಳಾಗಿದ್ದಾರೆ. ಇದಕ್ಕೆ ಧೈರ್ಯವೂ, ಐಶ್ವರ್ಯವೂ ಇಲ್ಲದೇ ಇರುವದೇ ಕಾರಣವಾಗಿದೆ. ಐಶ್ವರ್ಯಕ್ಕೆ ಉದ್ಯೋಗವೇ ಕಾರಣವು. ಉದ್ಯೋಗಕ್ಕೆ ಧೈರ್ಯ ಯಾನೆ ಶಕ್ತಿಯೇ ಪ್ರಧಾನವು. ಶಕ್ತಿಗೆ ದೇಹ ಪುಷ್ಟಿ, ದೇಹ ಪುಷ್ಟಿಗೆ ಮಾಂಸಾಹಾರ ಹೊರತು ಇನ್ನ್ಯಾವದೂ ಮುಖ್ಯವಾದ್ದಲ್ಲವು. ಪ್ರಾಣಿ ಹಿಂಸೆ ಮಾಡದೆ ಮಾಂಸಾಹಾರ ಮಾಡಿದರೆ ಪ್ರತ್ಯವಾಯುವಿಲ್ಲವೆಂದು ಕಲಿಯುಗಕ್ಕೆ ಹೇಳಿರುವ "ಪರಾಶರಮಾಧವೀಯ" ವೆಂಬ ಸ್ಮೃತಿಯಲ್ಲಿ ಸಂಪೂರ್ಣವಾಗಿ ಹೇಳಿದ್ದಾಗ್ಯೂ ಅದನ್ನು ಬಿಟ್ಟಿದ್ದೇವೆ. ಪ್ರಾಣಿ ಹಿಂಸೆ ಮಹಾಪಾಪವೆಂದು ಹೇಳಿದ್ದರಿಂದ ಬಿಟ್ಟಿರುವದಾಗಿ ತೋರುತ್ತೆ. ಹೀಗೆ ಸರಿಯಾಗಿಲ್ಲದೇ ಇರುವ ಅರ್ಥ ಮಾಡಿಕೊಂಡಿದ್ದು ದೇವರೇ ಇಲ್ಲವೆಂದು ಹೇಳುವ ಬೌದ್ಧರ ಕಾಲದ ಸಮ್ಮಿಶ್ರ ತಿಳುವಳಿಕೆ ಎಂದು ತೋರುತ್ತೆ. ಹ್ಯಾಗೆಂದರೆ, ಆರ್ಯರು ತಾವೇ ಪ್ರಾಣಿ ಹಿಂಸೆ ಮಾಡಕೂಡದೆಂತಲೂ, ದ್ರಾವಿಡರೇ ಮುಂತಾದವರು ಪ್ರಾಣಿ ಹಿಂಸೆ ಮಾಡಿ ತಂದದ್ದನ್ನು ದ್ರಾವಿಡರ ಸಂಗಡ ಪಾಕ ಮಾಡಿಸಿ ಭೋಜನ ಮಾಡಬೇಕೆಂತಲೂ, ನಮ್ಮ ಪೂರ್ವಿಕರಾದ ಸ್ಮೃತಿಕರ್ತರಾದ ಮಹರ್ಷಿಗಳ ಅಭಿಪ್ರಾಯವಾಗಿರುತ್ತೆ. ಇದಕ್ಕೆ ದೃಷ್ಟಾಂತವಾಗಿ ಭಾರತ, ಭಾಗವತ, ಮಹಾ ಕಾವ್ಯಗಳಲ್ಲಿ ರಾಜರುಗಳ ಅರಮನೆಯಲ್ಲಿ ದ್ರಾವಿಡರೇ ಮಾಂಸವನ್ನು ಪಾಕಮಾಡುತ್ತಿದ್ದರೆಂದು ಸ್ಪಷ್ಟವಾಗಿ ಹೇಳಿದೆ. ಹೀಗೆ ದ್ರಾವಿಡರು ನಮ್ಮಗಳಿಗೆ ಮಾಂಸ ಪಾಕಮಾಡುತ್ತಿದ್ದರೆ ನಮಗೂ ಅವರಿಗೂ ವಿಶೇಷವಾದ ಸಹೋದರ ಭಾವವಿರುತ್ತೆಯೇ ಹೊರತು ಈಗಿನ ಹಾಗೆ ಭೇದ ಕಾಣುವದಿಲ್ಲ. ಈ ರೀತಿಯಾದ ಸಹೋದರಭಾವವೂ ದೇಶಸೌಖ್ಯವೂ ಉಂಟಾಗತಕ್ಕ ಮಾಂಸಾಹಾರವನ್ನು ಸರಿಯಾದ ಅರ್ಥ ಮಾಡಿಕೊಳ್ಳದೆ ನಮ್ಮ ಹಿಂದಿನವರು ಬೌದ್ಧರ ಸಹವಾಸದಿಂದ ಬಿಟ್ಟಿರುವದು ಶುದ್ಧ ತಪ್ಪಾಗಿರುತ್ತೆ. ಅದನ್ನು ಸರಿಪಡಿಸಬೇಕು.

ಈ ರೀತಿ ಹಿಂದುಗಳೆಲ್ಲಾ ಆಚರಣೆಯಲ್ಲಿ ತಂದ ಹೊರತು ಪೂರ್ವದ ನಮ್ಮ ಇಂಡಿಯಾ ದೇಶದ ಆರ್ಯ ಜನಗಳ ಉಚ್ಚಸ್ಥಿತಿಯನ್ನು ಹೊಂದಲಾರೆವು.

ಕೃಷ್ಣಪ್ಪ.

*********

### ಸರ್ಕಾರದವರ ಸಹಾಯ.

ಅಯ್ಯಾ,

ಆರ್ಯರಾದ ಇಂಡ್ಯನರಾದ ನಾವೂ ಯೂರೋಪ್ಯರಾದ ಇಂಗ್ಲೀಷರೂ ಒಂದೇ ಮನೆತನದವರೆಂದು ಸ್ಪಷ್ಟವಾಗಿ ತಿಳಿದಿದೆಯಷ್ಟೆ. ನಮ್ಮ ಸಹೋದರರಾದ ಇಂಗ್ಲೀಷರು ನಮ್ಮನ್ನು ತಮ್ಮಂತೆ ಉಚ್ಚಸ್ಥಿತಿಯಲ್ಲಿ ತಂದು ಸ್ವಲ್ಪವೂ ಭೇದವಿಲ್ಲದೆ ಆದಿಯಲ್ಲಿದ್ದಂತೆ ಒಂದಾಗಿರಬೇಕೆಂದು ಸತ್ಯವಾದ ನಡತೆಯನ್ನು ತೋರಿಸುವ ಭಾಗದಲ್ಲಿ ವಿದ್ಯಾ, ಬುದ್ಧಿ, ಈ ಎರಡೂ ಕಮ್ಮಿಯಲ್ಲಿರುವ ಬೇರೆ ಬೇರೆ ಪಂಗಡದ ಮುಸಲ್ಮಾನ್ ಮುಂತಾದ ಜಾತೀ ಜನಗಳಲ್ಲಿ ದಯವಿಟ್ಟು, ಕಾಲೇಜ್ ಮುಂತಾದವುಗಳ ಪರೀಕ್ಷೆಗಳಲ್ಲಿ ಬ್ರಾಹ್ಮಣರಿಗಿಂತಲೂ ಕಮ್ಮಿ ನಂಬರು ಪಡದರೂ ತೇರ್ಗಡೆ ಹೊಂದಿದವರೆಂದು ಸಮಾನಾಧಿಕಾರವನ್ನು ಕೊಡುತ್ತಿದೆಯಷ್ಟೆ. ಮತ್ತು ಮತಾಭಿಮಾನವಿಟ್ಟು ೧೮೫೦ ನೇ ಇಸ್ವಿಯಲ್ಲಿ ಉಂಟುಮಾಡಿದ ಶಾಸನವು ಮಹಾರಾಣಿಯವರ ೧೮೫೮ ನೇ ನವೆಂಬರ್ ೧ ನೇ ತಾರೀಖಿನ ಇಷ್ತಿಹಾರ್‌ನಾಮೆಗೆ ವಿರೋಧವಾಗಿದ್ದರೂ ಜಾರಿಯಲ್ಲಿರುವಂತೆಯೂ ನಮ್ಮ ಶ್ರುತಿ ಸ್ಮೃತಿಗೆ ವಿರೋಧವಿಲ್ಲದಂತೆ ಪ್ರಕೃತದಲ್ಲಿ ಸಾಂಸರ್ಗಿಕ ವಿಷಯದಲ್ಲಿ ಆಚರಣೆಯಲ್ಲಿ ತರುವವರಿಗೆ ಮೆಟ್ರಿಕ್ಯುಲೇಷನ್ ಪರೀಕ್ಷೆ ಕೊಟ್ಟ ನನ್ನವನಿಗೂ, ನನ್ನವನಾಗಿ ಸಾಂಸರ್ಗಿಕ ವಿಷಯದಲ್ಲಿ ಗಮನ ಕೊಡದೇ ಇರುವ ಬಿ. ಎ. ಪರೀಕ್ಷೆ ಕೊಟ್ಟ ಮತ್ತೊಬ್ಬನಿಗೂ ಸಮಸಮಾನಾಧಿಕಾರ ಕೊಡುತ್ತಾ ಬರಬೇಕು. ಜನಗಳನ್ನು ಜ್ಞಾನಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡಲು ಹಳೇ ಒಡಂಬಡಿಕೆ ಎಂದೂ ಹೊಸ ಒಡಂಬಡಿಕೆ ಎಂದೂ ಕ್ರೈಸ್ತರು ಮಾಡಿರುವಂತೆಯೇ ನಮ್ಮ ಶ್ರುತಿ ಸ್ಮೃತಿಗಳಲ್ಲಿ ಕರ್ಮಮಾರ್ಗವೆಂದೂ, ಜ್ಞಾನಮಾರ್ಗವೆಂದು ಸಹ ಹೇಳಿದೆ. ಈ ಎರಡೂ ಜ್ಞಾನ ಉಂಟಾಗುವದಕ್ಕೆ ಮಾಡಿದ್ದೇ ಹೊರತು ಬೇರೆಯಾಗಿ ಯಾವ ಜನಗಳೂ ತಿಳಿಯತಕ್ಕದ್ದಲ್ಲ. ಅನ್ಯಥಾ ತಿಳಿದರೆ ಲೋಕದಲ್ಲಿ ಅವರನ್ನು ಒರಟರೆಂದು ಜ್ಞಾನವಂತರು ತಿಳಿಯುವರು. ಮಹಮ್ಮದನು ಒರಟ ಜನರನ್ನು ಜ್ಞಾನಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡಲು ಕೆಲವು ಸಿಲ್ಲದ ವಾಕ್ಯಗಳನ್ನು ಖುರಾನಿನಲ್ಲಿ ಹೇಳಿರುತ್ತಾನಂತೆ. ಅದರಂತೆ ನಮ್ಮ ಶ್ರುತಿ ಸ್ಮೃತಿಗಳಲ್ಲೂ ಹೇಳಿದೆ. ಇದಕ್ಕೆ ದೃಷ್ಟಾಂತವಾಗಿ ಮಹಮ್ಮದನು ತನ್ನ ಶಿಷ್ಯರನ್ನು ಒಂದು ಸ್ಥಳದಲ್ಲಿ ಕರಕೊಂಡು ಹೋಗುತ್ತಿದ್ದಾಗ ದೂರದಲ್ಲಿದ್ದ ಒಂದು ಗುಡ್ಡವನ್ನು "ಓ ಗುಡ್ಡವೇ, ನನ್ನ ಹತ್ತರಕ್ಕೆ ಬಾ!" ಎಂದು ಕರದನಂತೆ. ಅದು ಬರದೇ ಇರಲು, "ನಾನೇ ಅಲ್ಲಿಗೆ ಹೋಗುತ್ತೇನೆ" ಎಂದು ಹೇಳಿ, ಶಿಷ್ಯರ ಸಮೇತ ಹೋದನಂತೆ. ಇದನ್ನು ಹಾಸ್ಯ ಮಾಡಿದರೆ ಅವನು ಮುಸಲ್ಮಾನನಲ್ಲವೆಂತ ಹೇಳಿದನಂತೆ. ಇದೇ ರೀತಿಯಾಗಿ ಸರ್ವ ಮೂಲವನ್ನೂ, ಪಶು ಮೂಲವನ್ನೂ, ವೇದದ ಮೂಲವನ್ನೂ ವಿಚಾರಿಸಕೂಡದೆಂದು ಹೇಳಿದೆ. ಈಗ್ಯೆ ಸರ್ಕಾರದವರು ಮೇಲೆ ಹೇಳಿದಂತೆ ಸ್ವಲ್ಪ ಸಹಾಯ ಮಾಡಿದರೆ ಉತ್ತರೋತ್ತರ ಜಾತಿ, ಮತವೆಂಬುವದೇ ನಿರ್ಮೂಲವಾಗುತ್ತೆ. ಹ್ಯಾಗೆಂದರೆ, ನಮ್ಮ ದೇಶಗಳಲ್ಲಿ ಕರ್ಮಮಾರ್ಗದಲ್ಲಿ ಪ್ರವರ್ತಿಸುವವನಿಗೆ ಹೇಳಿದಷ್ಟು ಮತಾಭಿಮಾನವನ್ನು ಜ್ಞಾನಮಾರ್ಗ ಪ್ರವರ್ತಕನಿಗೆ ಹೇಳಿಲ್ಲ. ನಮ್ಮಲ್ಲಿ ಜ್ಞಾನನಿಷ್ಠನಿಗೆ "ಅವಧೂತ" ನೆಂದು ಹೆಸರು. ಇವನು ಹೊಲೆಯರ ಮನೆಯಲ್ಲಿಯೂ ಒಕ್ಕಲಿಗರ ಮನೆಯಲ್ಲಿಯೂ, ಮುಸಲ್ಮಾನರ ಮನೆಯಲ್ಲಿಯೂ ಸಹ ಊಟ ಮಾಡಿದಾಗ್ಯೂ ಅವನನ್ನು ನಮ್ಮ ಮತಕ್ಕೆ ಹೊರಗಾದವನೆಂತಲೂ, ಪಾಪಕೃತ್ಯ ಮಾಡಿದವನೆಂತಲೂ, ನೀಚನೆಂತಲೂ ಸಹ ಬ್ರಾಹ್ಮಣರಲ್ಲಿ ಒಬ್ಬನಾದರೂ ತಿಳಿಯುವದಿಲ್ಲ. ಆದ್ದರಿಂದ ಜ್ಞಾನ ಸಂಪಾದನೆಗೆ ಹೇಳಿದ ಶ್ರುತಿ ಸ್ಮೃತಿಗಳೇ ಹೊರತು ಜಾತಿಮತಗಳನ್ನು ಕಟ್ಟಿಕೊಂಡು ಅಳಬೇಕೆಂದು ಹೇಳಿದ್ದಲ್ಲವೆಂದು ಉತ್ತರೋತ್ತರ ತಿಳಿಯುತ್ತಾರೆಂದು ನಮ್ಮ ಸಹೋದರರಾದ ಇಂಗ್ಲೀಷರು ತಿಳಿಯಬೇಕು. ಮೊದಲು ತಮ್ಮ ಮನೇ ಜನರು ಒಂದಾಗಿದ್ದರಲ್ಲದೇ ಊರಿನ ಜನರೆಲ್ಲಾ ಒಂದಾಗುವದನ್ನು ಯೋಚಿಸಬೇಕು; ಹಾಗೆಯೇ ಇಂಡ್ಯದ ಆರ್ಯರು ತಮ್ಮ ತಮ್ಮಲ್ಲಿರುವ ಭೇದವನ್ನು ಮೊದಲು ತಿದ್ದಿಕೊಂಡು, ನಂತರ ಯೂರೋಪ್ ಖಂಡ ಮತ್ತು ಪಾರಸೀಸ್ತಾನ ಮುಂತಾದ್ದರಲ್ಲಿರುವ ಆರ್ಯರ ಸಹೋದರ ಭಾವದಲ್ಲಿ ಮೊದಲಿನಂತೆ ಇರಲು ಯೋಚಿಸಬೇಕಲ್ಲವೇ!

ಕೃಷ್ಣಪ್ಪ.

---

### ಮೈಸೂರು ಗೆಜೆಟ್ ಸಂಗ್ರಹ.

ಮುಳುಬಾಗಲ್ ಟೌನಿನಲ್ಲಿ ಕಳೆದ ಮಾರ್ಚ್ ಲಾಗಾಯತು ಪ್ರಜಾ ಆರೋಗ್ಯವು ಚನ್ನಾಗಿರುವದರಿಂದ ಅಲ್ಲಿ ಪ್ಲೇಗ್ ಉಪದ್ರದ ಸುಂಕ ಇಲ್ಲವೆಂದು ಪ್ರಕಟಿಸಿದೆ.

ಶ್ರೀರಂಗದಲ್ಲಿ ಜುಲೈ ೧ ರಿಂದ ೧೭ ರ ವರೆಗೆ ನಡೆಯುವ ಕುಂಭಾಭಿಷೇಕೋತ್ಸವಕ್ಕೆ ಮೈಸೂರು ಸಂಸ್ಥಾನದಿಂದ ಹೋಗತಕ್ಕವರಿಗೆ ಟಿಕೆಟ್ ಕೊಡಕೂಡದೆಂದು ಮದರಾಸ್ ಸರ್ಕಾರದವರು ಹುಕುಂ ಕೊಟ್ಟಿದಾರೆ.

ನಗರ್ ತಾಲ್ಲೂಕು ಅಮಲ್ದಾರ್ ಮೆ॥ ಬಿ. ಎಸ್. ರಾಜೋಜಿರಾಯರಿಗೆ ಕೊಟ್ಟಿದ್ದ ರಜವನ್ನು ಇನ್ನು ಒಂದು ವಾರ ಜಾಸ್ತಿ ಮಾಡಿದೆ.

ದೇವನಹಳ್ಳಿ ತಾಲ್ಲೂಕು ಅಮಲ್ದಾರ್ ಮೆ॥ ಇ. ಸಿ. ಸದಾಶಿವಂ ಪಿಳ್ಳೆಯವರಿಗೆ ಮಾರ್ಚಿ ೧೭ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಶಿರಸ್ತೆದಾರರು ತಾಲ್ಲೂಕ್ ಛಾರ್ಜನ್ನು ವಹಿಸಿದ್ದರು.

ಎಕ್ಸೈಸ್ ಇಲಾಖಾ ಅ॥ ಕಮಿಷನರ್ ಮೆ॥ ಜಿ. ಪಪ್ಪಿಂಗ್ ಯವರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಅರಮನೆ ಡಿವಿಜನ್ ಅ॥ ಇಂಜನಿಯರ್ ಮೆ॥ ಸಿ. ಆರ್. ಶ್ರೀನಿವಾಸೈಯಂಗಾರ್ರಿಗೆ ಜೂನ್ ೭ ರ ಬಾಗಾಯಿತು ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಕ್ಯಾಪ್ಟನ್ ಎ. ಜೆ. ಡಿಲಾಬಿನಿಯರ್ ಯವರಿಗೆ ಮೂರುತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದ್ದ ಹುಕುಮನ್ನು ರದ್ದು ಮಾಡಿದೆ.

ಪಶ್ಚಿಮ ಸರ್ಕಲ್ ಜ. ಎ. ಇಂಜನಿಯರ್ ಕ್ಯಾಪ್ಟನ್ ಎ. ಸಿ. ಜಾಲಿ ಡಿಲ-ಬಿನಿಯರ್ ಯವರಿಗೆ ೩ ತಿಂಗಳ ಪ್ರಿವಿಲೆಜ್ ರಜಾ, ಅನಂತರ ೩ ತಿಂಗಳೂ ೧೭ ದಿನಗಳ ಫರ್ಲೋ ರಜಾ ಏಪ್ರಿಲ್ ೨೫ ರ ಬಾಗಾಯಿತು ಕೊಟ್ಟಿದೆ.

ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ಎಂ. ಜಿ. ರಾಮರಾಯರಿಗೆ ಹತ್ತುದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಚಿಕ್ಕಮಗಳೂರು ಡಿ॥ ಟ್ರೆಜರಿ ಆಫೀಸರೇ ಫಾರೆಸ್ಟ್ ಆಫೀಸಿನ ಚಾಲ್ತಿ ಕೆಲಸಗಳನ್ನೂ ನೋಡಿಕೊಳ್ಳತಕ್ಕದ್ದು.

ಮೈಸೂರು ಸ್ಟೇಟ್ ಟ್ರೂಪ್ಸ್ ಛೀಫ್ ಕಾಮಂಡಾಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ. ದೇಶರಾಜೇ ಅರಸಿನವರಿಗೆ ಜೂನ್ ೧೦,೧೧ ನೆ ತಾರೀಖುಗಳಲ್ಲಿ ರಜಾ ಕೊಟ್ಟಿತ್ತು.

## ತಾಲ್ಲೋಕು ವರ್ತಮಾನಗಳು.

ಮದ್ದಗಿರಿ.—ಕೊರ್ಟಗೆರೆಯಲ್ಲಿರುವ ಯಜಮಾನ ಶಂಕರಪ್ಪನೆಂಬುವನು ಬಗರ್ ಹುಕುಂ ಸರ್ಕಾರಿ ಜಂಗಲ್‌ನಲ್ಲಿ ಭಾರೀ ಜಾತಿಯ ಮರಗಳನ್ನು ಕಳವು ಮೂಲಕ ಆಪಹರಿಸಿ, ಛಪ-ಪಣಿವೂ ಡಿದ್ದರೆಂದು ಕೇಸ್ ನಡದು, ಅವರಾಧಿಗಳಿಗೆ ಶಿಕ್ಷೆ ಮಾಡಿರುವದು ಮೊದಲೆ ಪ್ರಚುರಪಡಿಸೋಣವಾಗಿದೆ. ಈ ಜಿಗೆ ಈ ಕೇಸ್‌ನಲ್ಲಿ ಸರ್ಕಾರಕ್ಕೆ ತುಂಬಾ ಫಾಯಿದೆ ಉಂಟಾದಕಾರಣದಿಂದ ಈ ಕೇಸ್ ನಡಿಸಿದ ನೌಕರರ ಮೆಹನತ್ತಿಗೋಸ್ಕರ ಮದ್ದಗಿರಿ ಫಾರಿಸ್ಟರ್ ಕೆ. ರಾಮರಾಯರಿಗೆ ೩೦ ರೂ., ಇವರ ತಾಬೇದಾರ್ ಗಾರ್ಡ್ ಕಿಕ್ಕೇರಿ ಎಂಬುವನಿಗೆ ೧೫ ರೂ., ಸಾಟ್ಯ ಸಾಬಿಗೆ ೧೦ ರೂ. ಈ ಪ್ರಕಾರ ಬಹುಮಾನ ಕೊಟ್ಟಿದಾರೆ.

ಹೇಗೂನಹಳ್ಳಿ.—ಈ ಮಧ್ಯೆ ೧—೨ಮಳೆ ಸುರಿದದ್ದರಿಂದ ರೈತರ ಮನಸ್ಸುಗಳನ್ನು ಆಕರ್ಷಿಸಿ ಬಿತ್ತನೇ ಮುಂತಾದದ್ದಕ್ಕೆ ಸಿದ್ಧಮಾಡಿಕೊಂಡು, ಮಳೆಯನ್ನು ಎದುರು ನೋಡಿಕೊಂಡು ಕಾದಿದ್ದಾರೆ. ಮೋಡ ಆಡುವದೇ ಹೊರ್ತು ಮಳೆ ಬೀಳಲಿಲ್ಲ. ಹಗಲಿನಲ್ಲಿ ಬಿಸಲಿನ ತಾಪವೂ ರಾತ್ರಿವೇಳೆ ಚಳಿಯೂ ಪ್ರಾರಂಭವಾಗಿರುತ್ತೆ. ಜನಗಳ ಆರೋಗ್ಯವು ತಪ್ಪಿ ಬೇಧಿ, ಛಳಿ, ಜ್ವರ ಮುಂತಾದ ರೋಗಗಳು ಪ್ರಾಪ್ತವಾದಂತೆ ಕಾಣುತ್ತೆ.—ಈ ಮಧ್ಯೆ ಈ ಊರಿನಲ್ಲಿ ಪುಂಡರು ಹೆಚ್ಚದಾಗಿ ಕಂಡುಬಂದಿದೆ. ಚೋರ ಭಯವು ಇಲ್ಲದಕಾಗಿ ಸಜ್ಜನರನ್ನು ನಾನಾವಿಧವಾದ ದುರ್ಭಾಷೆಗಳನ್ನು ಬೈಯುವದು, ಭಯೋತ್ಪಾತಪಡಿಸುವದು, ರಾತ್ರಿವೇಳೆ ಕೊಂಡುಕಾದು ಪ್ರಾಣಘಾತ ಮಾಡುತ್ತೇನೆ ಎಂಬದಾಗಿ ತನಗೆ ಆಪ್ತರಾದವರ ಸಂಗಡ ಹೇಳುತ್ತಾ ಪುಟಂಗರನ್ನು ಜಮಾಯಿಸಿಕೊಂಡು ಊರಿನಲ್ಲಿ ನಾನಾವಿಧವಾದ ತಂಟೆಗಳನ್ನು ಮಾಡುತ್ತಾರೆ. ಮೇಲ್ಪಟ್ಟ ಅಧಿಕಾರಿಗಳು ಈ ವಿಧವಾದ ತುಂಟರುಗಳ ಮೇಲೆ ನಿಗಾಯಿಟ್ಟು ಊರಿನಲ್ಲಿರುವ ಪ್ರಜೆಗಳಿಗೆ ಯಾವ ತೊಂದರೆಗಳೂ, ಅಪಾಯಗಳೂ ಸಂಭವಿಸದಹಾಗೆ ಆ ತುಂಟರನ್ನೂ ಅವರ ಮುಖಂಡನನ್ನೂ ತಕ್ಕ ಬಂದೋಬಸ್ತು ಮಾಡಿದರೆ ಊರಿಗೆ ತುಂಬಾ ಕ್ಷೇಮವಾಗುತ್ತೆ.

ಸೀರ್ಯ. ಸಂತೆ ಸ್ಥಳ. ಪ್ರಥಮದಲ್ಲಿ ಜುಮ್ಮಾ ಮಸೀತಿ ರೋಡಿನಲ್ಲಿ ಊರಿನ ಮಧ್ಯೆ ಸಂತೆ ನಡೆಯುತ್ತಿತ್ತು. ಆದರೆ ಆಗ್ಯೆ ರಸ್ತೆ ಬಹು ಇಕ್ಕಟ್ಟಾಗಿದ್ದ ಕಾರಣ ಪ್ರಜೆಗಳಿಗೆ ಅಪಾಯ ಸಂಭವಿಸೀತೆಂಬ ಶಂಕೆಯಿಂದ ಅದನ್ನು ತೆಗೆದು ದೊಡ್ಡ ಮೈದಾನವಾಗಿಯೂ, ಎಲ್ಲಾ ಪ್ರಜೆಗಳಿಗೆ ಅನುಕೂಲವಾಗಿಯೂ, ಮತ್ತು ಎಲ್ಲ ಕಡೆ ಮಧ್ಯವಾಗಿಯೂ ಹಾಲಿ ಆಸಪತ್ರೆ ಇರುವ ಸ್ಥಳಕ್ಕೆ ಹಾಕಿದರು. ಅದು ಕೆಲವುಕಾಲ ನಡೆದ ನಂತರ ಇಲ್ಲಿ ಆಸಪತ್ರೆ ಇಲ್ಲ. ಆಸಪತ್ರೆ ಮುಸಾಫರಿ ಬಂಗ್ಲೆಯ ಕಡೆ ಇದೆ. ಆದಕಾರಣ ಆಸಪತ್ರೆಯ ಬಳಿ ಸಂತೆ ಇರಬೇಕೆಂದು ಹೇಳಿ ಈ ಊರಿಗೆ ಕಡೆಯಾಗಿರುವ ಪಶ್ಚಿಮದಿಕ್ಕಿನ ದುರ್ಗಿಗುಡಿ ಬಳಿ ಹಾಕಿದರು. ಇದುವರಿಗೂ ಕಷ್ಟವಾದರೂ ದುಃಖವಾದರೂ ಆಗಲೆಂದು ಅನುಭವಿಸಿಕೊಂಡು ಬಂದದ್ದಾಯಿತು. ಆದರೆ ನೋಡಲು ಯಾವ ಮೈದಾನದಲ್ಲಿ ವಸತಿಯಾಗಿತ್ತೋ ಅಲ್ಲಿ ಆಸಪತ್ರೆ ಆಯಿತು. ಆಗಿನಿಂದ ಸಂತೆ ಇಲ್ಲಿ ಆಗಬೇಕೆಂದು ಕೇಳಿಕೊಳ್ಳುತ್ತಾ ಬಂದರು. ಮೊನ್ನೆ ಡೆಪ್ಯುಟಿ ಕಮಿಷನರ್ರು ಧಯಮಾಡಿದ್ದಾಗ್ಯೆ ಪ್ರಭುಗಳು ಸಂತೆ ನಡೆಯಬೇಕಾಗಿರುವ ಪ್ರದೇಶವನ್ನು ತೋರಿಸಲಾಗಿ ಅವರು—ಆಗಲಿ ಇದು, ಚನ್ನಾಗಿದೆ ಅಮಲ್ದಾರರ ಮೂಲಕ ಅರ್ಜಿ ಬರಕೊಳ್ಳಿ ಎಂದು ಅಪ್ಪಣೆಕೊಟ್ಟರು. ಹಾಗೆಯೇ ಅರ್ಜಿ ಬರಕೊಂಡದ್ದಕ್ಕೆ ಅದು ತಾಲ್ಲೂಕಿಗೆ ಬಂದಿದೆ. ಇಲ್ಲಿನ ಪ್ರಜೆಗಳು ಮ್ಯುನಿಸಿಪಲ್ ಮೀಟಿಂಗಿಗೆ ಅರ್ಜಿಕೊಟ್ಟರು. ಮ್ಯುನಿಸಿಪಲ್ ಮೆಂಬರುಗಳಾದ ಸಾಹುಕಾರ್ ವೆಂಕಟೇಶಯ್ಯನವರೂ, ಆಸಪತ್ರೆಯ ಅಸಿಸ್ಟೆಂಟರಾದ ನಂಜುಂಡೈಯನವರೂ, ಬಳೆ ಅಂಗಡಿ ಬೀರಪ್ಪನವರೂ, ಷಾಪ್ ಅಂಗಡಿ ರಾಜಾ ಅಹಮದ್ ಸಾಹೇಬರೂ, ಕಂಟ್ರಾಕ್ಟರ್ ಯರ್ರಗುಂಟಪ್ಪನವರೂ ಈ ಅರ್ಜಿಗೆ ರುಜು ಹಾಕಿದಾರೆ. ಇದು ಮೊನ್ನೆ ಮೀಟಿಂಗಿನಲ್ಲಿ ಚರ್ಚೆ ಆಗಿ ವೈಸ್ ಪ್ರೆಸಿಡೆಂಟರವರು ಸಬ್‌ಕಮಿಟಿಗೆ ಹಾಕಿದ್ದಾರೆ. ಬೇರೆ ೩—೪ ಮಂದಿ ಮೆಂಬರುಗಳು ನ್ಯಾಯವಾಗಿರುವ ಮತ್ತು ಪ್ರಜಾನುಕೂಲವಾಗಿರುವ ಇಂಥಾ ಕಾರ್ಯಕ್ಕೆ ಒಂದುವೇಳೆ ಒಪ್ಪದೆ ಹೋದರೆ ಅನೇಕ ವಿಷಯಗಳಲ್ಲಿ ಪ್ರಜಾಪ್ರತಿನಿಧಿಗಳಾಗಿರುವದು ಹ್ಯಾಗೆಂಬ ಯೋಚನೆ ಅಧಿಕಾರಿಗಳಲ್ಲೂ ಪ್ರಜೆಗಳಲ್ಲೂ ಉಂಟಾಗಬಹುದು. ಈ ಊರಲ್ಲಿ ಸುಮಾರು ೬,೦೦೦ ಪ್ರಜೆ ಇದೆ. ಇದರಲ್ಲಿ ೩,೦೦೦ಕ್ಕಿಂತ ಜಾಸ್ತಿ ಪ್ರಜೆ ಆಸಪತ್ರೆ ಮೈದಾನದಲ್ಲಿ ಸಂತೆ ಆಗಬೇಕೆಂತಲೂ, ಅಲ್ಲೇ ವಸತಿಯಾಗಿದೆಯೆಂತಲೂ ಒಪ್ಪುತ್ತದೆ. ಅಲ್ಲದೆ ಈಗ ನಡೆಯುತ್ತಾ ಇರುವ ಸಂತೆ ಜಾಗಾ ಊರಿಗೆ ದಕ್ಷಿಣವಾಗಿ ಮಾದಿಗರ ಹಟ್ಟಿ ಬಳಿ ಕಡೇದಾಗಿದೆ. ಉತ್ತರಕ್ಕೆ ಇರುವ ಅಂಗಡಿಗಳೂ ವ್ಯಾಪಾರಾದಿಗಳೂ ಹಾಳುಸುರಿಯುತ್ತಾ ಇರುವದಲ್ಲದೆ ಕೋಟೆ, ಗೌರೀಹಟ್ಟಿ, ಗೌಳಿಗರ ಹಟ್ಟಿ, ದಿವಾನ್ ಹಟ್ಟಿ, ಸಂಕೇಪೇಟೆ, ಕಸಾಬರ ಹಟ್ಟಿ, ಮೇಲೂ ಪೇಟೆ ಈ ಪ್ರಜೆಗಳಿಗೆಲ್ಲಾ ರಮ್ಯ ತಮ್ಮ ಗಂಟುಗಳನ್ನು ಹೊತ್ತುಕೊಂಡು ಬಹು ದೂರ ಬರಬೇಕಾಗಿದೆ. ಕೆಲವರಿಗೆ ೧ ಮೈಲಿ, ಕೆಲವರಿಗೆ ೧॥ ಮೈಲಿ ಹೀಗೆ ಘಾಸಲೆಯಾಗುತ್ತೆ. ಈಗ ಹಾಲಿ ನಡೆಯುತ್ತಾ ಇರುವ ಸಂತೆಯು ಜಾಗದಲ್ಲಿ ಸರ್ಕಾರದವರು ರೈತರಿಗೆ ಮನೆ ಕಟ್ಟಿಕೊಳ್ಳಲು ಸ್ಥಳ ಕೊಟ್ಟು ೧೦—೧೨ ವರ್ಷಗಳಿಂದ ಕಂದಾಯ ತೆಗೆದುಕೊಳ್ಳುತ್ತಾ ಇದ್ದಾರೆ. ಹಾಗಾದರೆ ಅಗಲದಲ್ಲಿ ಉಳಿಯುವದು ೫೫ ಗಜ ಭೂಮಿಯೇ. ಇಷ್ಟು ಸಣ್ಣ ಸ್ಥಳದಲ್ಲಿ ಸಾವಿರಾರು ಜನರೂ, ೫೦—೬೦ ಗಾಡಿಗಳೂ, ಅನೇಕ ದಿನಸುಗಳೂ, ಕುಂಬಾರರೂ, ತಿಗಳರೂ, ಸುಮಾರು ೨೦ ಗುಡಾರಗಳವರೂ, ಇನ್ನೂ ಅನೇಕರೂ ವ್ಯಾಪಾರ ನಡಿಸುವದು ಹ್ಯಾಗೋ! ಸಂತೆಯು ದಿನೇ ದಿನೇ ವೃದ್ಧಿಯಾಗುತ್ತಾ ಬರುತ್ತಾದದ್ದರಿಂದ ಖಂಡಿತವಾಗಿ ಈ ಸ್ಥಳ ಸಾಲದು. ಪ್ರಜೋಪಕಾರಿಗಳೂ ನ್ಯಾಯವನ್ನು ಅನುಸರಿಸುವವರೂ ಆದ ನಮ್ಮ ವೈಸ್ ಪ್ರೆಸಿಡೆಂಟರವರು ಚಿತ್ತಕ್ಕೆ ತಂದುಕೊಂಡು, ಆರೋಗ್ಯಪ್ರದೇಶವಾಗಿಯೂ, ಆಸ್ಪತ್ರೆಗೆ ಸಮೀಪವಾಗಿಯೂ, ವಿಸ್ತಾರವಾಗಿಯೂ, ೩—೪ ಸಾವಿರ ಜನಗಳು ಅಪೇಕ್ಷಿಸುವಂಥಾದ್ದಾಗಿಯೂ, ಪ್ರಜೆಗಳು ಸಹದು ಬರುವ ಸಂಕಟವನ್ನು ಸುಲಭಪಡಿಸುವದಾಗಿಯೂ, ಊರನ್ನು ಆಬಾದಿಗೆ ತರುವಂಥಾದ್ದಾಗಿಯೂ, ಮೂರು ಪೈರೋಡುಗಳು ಕೂಡಿದ ಸ್ಥಳವಾಗಿಯೂ ಇರುವ ಆಸಪತ್ರೆ ಸ್ಥಳವೇ ಉತ್ತಮವೆಂದು ತಮ್ಮ ಇರಾದೆಯನ್ನು ಕೊಟ್ಟು, ಶಿಫಾರಸ್ಸು ಮಾಡಿ, ಯಶಸ್ಸು ಪಡಕೊಳ್ಳುವದೇ ಧರ್ಮವಾಗಿದೆ.

## ವಿದೇಶ ವರ್ತಮಾನಗಳು.

ಜಮೇಕಾ ದ್ವೀಪದಲ್ಲಿ ಕಬ್ಬಿನ ಬೆಳೆಯು ಶೇಕಡ ೨೦ ರಷ್ಟು ಕಮ್ಮಿ ಆಯಿತು. ಪ್ಲಾಂಟರುಗಳಿಗೆ ಇದರಿಂದ ೬೦,೦೦೦ ಪೌಂಡು ನಷ್ಟವಾಗಿರುವದು.

❖❖❖❖

ಜರ್ಮನವರು ಟ್ರಾನ್ಸ್‌ವಾಲ್ ಗಣಿಗಳಲ್ಲಿ ಕೂಲಿಮಾಡುವದಕ್ಕೆ ೧೦ ಸಾವಿರ ಜನರನ್ನಾದರೂ ಕಳುಹಿಸುತ್ತೇವೆಂದು ಟ್ರಾನ್ಸ್‌ವಾಲ್ ಸರ್ಕಾರಕ್ಕೆ ತಿಳಿಸಿದಾರೆ.

❖❖❖❖

ಲಂಡನ್ ನಗರದಲ್ಲಿ ಕಸಬುದಾರಿ ವಿದ್ಯೆಗಳನ್ನು ಕಲಿಸುವಂಥಾ ಒಂದು ಭಾರಿ ಕಾಲೇಜನ್ನು ಕಟ್ಟಿಸುವದಕ್ಕೆ ಲಾರ್ಡ್ ರೋಸ್ಬರಿಯವರು ೩ ಲಕ್ಷ ಪೌಂಡುಗಳನ್ನು ಕೊಟ್ಟಿದಾರೆ.

❖❖❖❖

ಟ್ರಾನ್ಸ್‌ವಾಲ್ ಯುದ್ಧಭೂಮಿಯಿಂದ ವಾಪಸು ಬಂದ ಇಂಗ್ಲಿಷ್ ಸೈನಿಕರು ತಮ್ಮ ೪೯,೦೦೦ ಕಂಬಳಿಗಳನ್ನು ೧,೪೯೯ ಪೌಂಡಿಗೆ ಬಿಕರಿಮಾಡಿರುತ್ತಾರೆಂಬದಾಗಿ ಮೆ॥ ಬ್ರಾಡ್ರಿಕ್‌ಯವರು ಪಾರ್ಲಿಮೆಂಟಿನಲ್ಲಿ ತಿಳಿಸಿದಾರೆ.

❖❖❖❖

ಬೆಹರಿಂಗ್ ಸಮುದ್ರಕ್ಕೆ ಅಡ್ಡಲಾಗಿ ೧೦೭ ಮೈಲಿ ಉದ್ದಕ್ಕೂ ದೊಡ್ಡ ಸೇತುವೆ ಕಟ್ಟಿಕೊಡುತ್ತೇವೆಂತಲೂ, ಈ ಕಂಟ್ರಾಕ್ಟು ತಮಗೇ ಕೊಡಬೇಕೆಂತಲೂ ಅಮೇರಿಕದ ಒಂದು ಕಂಪನಿಯವರು ರಷ್ಯಾರಾಜ್ಯಕ್ಕೆ ತಿಳಿಸಿದಾರೆ.

❖❖❖❖

ರಷ್ಯಾ ರಾಜ್ಯದ ನೂರಾರು ಮಂದಿ ಮಿಲಿಟರಿ ಇಂಜನಿಯರುಗಳು ತಿಬೆತ್ತಿನ ಪ್ರಾಂತ್ಯಕ್ಕೆ ಬಂದು ತುಂಬಾ ಗಲಭೆ ಮಾಡುತ್ತಿದಾರೆಂಬದಾಗಿ ತಿಬೆತ್ತಿನಲ್ಲಿರುವ ಚೀಣಾ ರಾಯಭಾರಿಯು ಚಕ್ರವರ್ತಿಯವರಿಗೆ ತಂತೀ ವರ್ತಮಾನ ಕೊಟ್ಟಿರುವನು.

❖❖❖❖

ಫ್ರಾನ್ಸ್ ಸರ್ಕಾರದ ೬೩ ಮಂದಿ ಇಂಜನಿಯರುಗಳು ಹಿಂದಿನ ವಾರ ವಿಲಾಯತಿಗೆ ಹೋಗಿ ಊರೂರನ್ನೆಲ್ಲಾ ಸುತ್ತಿ ಅಲ್ಲಲ್ಲಿರುವ ಮಿಲಿಟರಿ, ಸಿವಿಲ್, ಮೊದಲಾದ ಸರ್ಕಾರೀ ಕಟ್ಟಡಗಳೇ ಮುಂತಾದವುಗಳನ್ನು ಆದಮಾಯಿಷಿ ಮಾಡಿಕೊಂಡು ಹೋದರು.

❖❖❖❖

ಸ್ಪೇಯಿನ್ ರಾಜ್ಯದಲ್ಲಿ ಹಿಂದಿನ ವಾರ ಒಂದು ರೈಲ್ ಗಾಡಿಯು ಅತಿ ವೇಗವಾಗಿ ಹೋಗುತ್ತಾ ನವೆರಿಲ್ಲಾ ಎಂಬ ನದಿಯೊಳಕ್ಕೆ ಮುಗುಚಿಕೊಂಡಿತು. ಮೊದಲು ೩೦ ಜನ ಸತ್ತರು, ೬೦ ಮಂದಿಗೆ ಗಾಯಗಳಾಗಿವೆ ಎಂಬದಾಗಿ ಸಮಾಚಾರ ಬಂತು. ಈಚೆಗೆ ಈ ಅಪಾಯದಲ್ಲಿ ೧೬೦ ಜನರು ಬಲಿಯಾದರೆಂತಲೂ, ಅಲ್ಲಿನ ಸಂಗತಿಗಳು ತುಂಬಾ ಪರಿತಾಪಕರವಾಗಿರುತ್ತವೆಂತಲೂ ತಿಳಿದು ಬಂದಿದೆ.

ಕನಡಾ ರಾಜ್ಯದಲ್ಲಿ ಕಾಡ್ಗಿಚ್ಚಿನ ಗೆಸೆಯಿಂದ ೨೫೦ ಲಕ್ಷ ದ್ರವ್ಯ ನಷ್ಟವಾಯಿತು. ಏಳು ದೊಡ್ಡ ನಗರಗಳು ಸುಟ್ಟುಹೋದವು. ಬೆಂಕಿಯನ್ನು ಆರಿಸುವದಕ್ಕೆ ೬,೦೦೦ ಜನರು ಸಾಹಸಪಡುತ್ತಿದಾರೆ. ಮಳೆಗರಿಯುವಂತೆ ಸಕಲರೂ ಸೇರಿ ದೇವರಿಗೆ ಪ್ರಾರ್ಥನೆಮಾಡುತ್ತಿರುವರು.

❖❖❖❖

ಪೋರ್ಟ್ ಆರ್ಥರ್ ಎಂಬ ತೀರಪಟ್ಟಣದಲ್ಲಿ ರಷ್ಯಾ ರಾಜ್ಯದ ೫೭ ಹಡಗುಗಳು ಬಂದು ನಿಂತಿವೆ. ಇಂಗ್ಲಿಷರು ಅಮೇರಿಕದವರು, ಜರ್ಮನವರು ಸೇರಿ ತಮ್ಮ ಸೈನ್ಯಗಳನ್ನು ಪಿಚಿಲಿ ಕೊಲ್ಲಿಗೆ ಕಳುಹಿಸಿರುತ್ತಾರೆ. ಇದರ ಅರ್ಥವೇನೋ ತಿಳಿಯಲಿಲ್ಲವೆಂದು ತಂತೀ ವರ್ತಮಾನ ಬಂದಿದೆ.

❖❖❖❖

ಈಜಿಪ್ಟ್ ದೇಶದ ಖೆಡೀವ್ ಸುಲ್ತಾನರು ಪರಿವಾರ ಸಹಿತ ಗುಟ್ಟಾಗಿ ವಿಲಾಯತಿಗೆ ಹೋಗಿದಾರೆ. ಇವರು ಬರುತ್ತಾರೆಂಬ ಸುದ್ದಿ ಇರಲೇ ಇಲ್ಲ. ಅವರಿಗೆ ಗೌವರ್ನಮೆಂಟಿನವರು ಮರ್ಯಾದೆಗಳನ್ನು ಕಳುಹಿಸಿ ಸತ್ಕರಿಸಿದರು. ಚಕ್ರವರ್ತಿಯವರು ಅವರನ್ನು ಕರೆಸಿಕೊಂಡು ಅವರ ಸಂಗಡ ಸ್ವಲ್ಪ ಹೊತ್ತು ಮಾತನಾಡಿದರು.

❖❖❖❖

ಸೋಮಾಲಿಲಾಂಡಿನಲ್ಲಿ ಇಂಗ್ಲಿಷರಮೇಲೆ ದಂಡುಕಟ್ಟಿ ಯುದ್ಧಕ್ಕೆ ನಿಂತಿರುವ ಮುಲ್ಲಾವಿನ ಕಡೆಯವರು ಕೆಲವು ಮಂದಿ ಇಂಗ್ಲಿಷ್ ಹುದ್ದೇದಾರರನ್ನು ಕೈಸೆರೆಹಿಡಿದು ಇದ್ದರು. ಒಬ್ಬ ಬಿಳಿಯ ಹುದ್ದೇದಾರನನ್ನು ಘೋರವಾಗಿ ಹಿಂಸಿಸಿ ಕೊಂದುಬಿಟ್ಟು, ಉಳಿದ ಇಂಗ್ಲಿಷ್ ಹುದ್ದೇದಾರರನ್ನು ಶಿರಚ್ಛೇದನಮಾಡಿಸಿ, ಅವರ ತಲೆಗಳನ್ನು ಗ್ರಾಮಾಂತರಗಳಿಗೆ ಕಳುಹಿಸಿ, ಮೆರವಣಿಗೆ ಮಾಡಿಸಿದನೆಂದು ಸಮಾಚಾರ ಬಂದಿರುವದು.

❖❖❖❖

ತುರ್ಕಿಸ್ಥಾನದ ಕೆಲವು ದೊಡ್ಡಮನುಷ್ಯರು ಅಲ್ಲಿನ ರಾಜ್ಯಭಾರವನ್ನು ತಲೆಕೆಳಗುಮಾಡುವದಕ್ಕೆ ಒಂದು ವಿಚಿತ್ರವಾದ ಉಪಾಯವನ್ನು ಮಾಡಿರುವಂತೆ ತಿಳಿದುಬಂದಿದೆ. ಅವರು ಹಿಂದುಸ್ಥಾನದಲ್ಲಿ ರತಕ್ಕೆ ಪ್ಲೇಗ್ ಕ್ರಿಮಿಗಳನ್ನು ಸಂಗ್ರಹಮಾಡಿ ಸಾಗಿಸಿಕೊಂಡು ಹೋಗಿ, ಕಾನ್ಸ್ಟಾಂಟಿನೋಪಲ್, ಸಾಲೊನಿಕಾ, ಬರ್ಲಿನ್ ಎಂಬೀ ನಗರಗಳಲ್ಲಿ ಹರಡಿ, ಆ ಮೂಲಕ ಜನರನ್ನು ಕೊಂದುಹಾಕಿ, ತಮ್ಮ ಉದ್ದೇಶವನ್ನು ನೆರವೇರಿಸಿಕೊಳ್ಳಬೇಕೆಂದು ಪ್ರಯತ್ನಪಡುತ್ತಿರುವರು.

❖❖❖❖

ಚೀಣಾರಾಜ್ಯದ ಮಂತ್ರಿಯಾದ ಪ್ರಿನ್ಸ್ ಚಿಂಗ್ ಯವರು ಉತ್ತರ ಚೀಣದಲ್ಲಿ ನಾವೆಯ ಮತ್ತು ಯುದ್ಧದ ಇಲಾಖೆಗಳಿಗೆ ಪರರಾಜ್ಯಗಳ ಜನರನ್ನು ಕೆಲಸಕ್ಕೆ ನೇಮಿಸಿಕೊಳ್ಳುವದಿಲ್ಲವೆಂದು ರಷ್ಯಾದವರಿಗೆ ಮಾತುಕೊಟ್ಟಿದ್ದರು. ಆದರೆ ಈಚೆಗೆ ಅವರು ಜರ್ಮನಿಯಿಂದ ಬಹುಮಂದಿಯನ್ನು ಕರೆಸಿ, ಆ ಇಲಾಖೆಗಳಲ್ಲಿ ನೇಮಿಸಿಕೊಂಡಿದಾರೆ. ಇದನ್ನು ನೋಡಿ ರಷ್ಯಾದವರು ಪ್ರತಿಭಟಿಸಿ, ಕೂಡಲೇ ಅವರನ್ನೆಲ್ಲಾ ಕೆಲಸಗಳಿಂದ ವಜಾಮಾಡಬೇಕೆಂಬದಾಗಿ ಚೀಣೆಯವರಿಗೆ ಬಹು ಖಂಡಿತವಾಗಿ ಬರೆದಿರುತ್ತಾರೆ.

❖❖❖❖

ರಷ್ಯಾ ಸರ್ಕಾರದವರು ತಮ್ಮ ಪ್ರಜೆಗಳಾದ ಯಹೂದ್ಯ ಜನರನ್ನು ತುಂಬಾ ಹಿಂಸೆಪಡಿಸುತ್ತಿದಾರೆಂದು ಪ್ರಕಟವಾಗಿದೆಯಷ್ಟೆ. ಈ ವಿಷಯದಲ್ಲಿ ಅಮೇರಿಕದ ಪ್ರೆಸಿಡೆಂಟರು ಒಂದು ಅರ್ಜಿ ಬರೆಯುವದಾಗಿ ಹೇಳಿ ಕಳುಹಿಸಿದರು. ಇದನ್ನು ಕೇಳಿ ರಷ್ಯಾದವರು—ಈ ಭಾಗದಲ್ಲಿ ನಮಗೆ ತುಂಬಾ ವ್ಯಸನವುಂಟಾಗಿದೆ; ನಮ್ಮ ಆಳಿಕೆಗೆ ಒಳಪಟ್ಟ ಪ್ರಜೆಗಳನ್ನು ನಮ್ಮ ಇಷ್ಟಬಂದಂತೆ ನಡಿಸುತ್ತೇವೆ; ಅಮೇರಿಕದವರು ಇದಕ್ಕೆ ತಲೆ ಹಾಕಕೂಡದು: ಅಂಥಾ ಅರ್ಜಿ ಬಂದರೆ ಅದನ್ನು ವಾಪಸು ಮಾಡುತ್ತೇವೆ ಎಂಬದಾಗಿ ಜವಾಬು ಕೊಟ್ಟಿದಾರೆ.

❖❖❖❖

ಮೊರಾಕೊ ಸಂಸ್ಥಾನದಲ್ಲಿ ಸುಲ್ತಾನರಿಗೂ ಪ್ರಜೆಗಳಿಗೂ ವೈಷಮ್ಯಗಳು ಹುಟ್ಟಿರುತ್ತವೆ. ಪ್ರಜೆಗಳು ಸುಲ್ತಾನರ ಅಧಿಕಾರವನ್ನೇ ಹೋಗಲಾಡಿಸಬೇಕೆಂದು ದಂಡುಕಟ್ಟಿದರು. ಇವರ ದಂಗೆಯನ್ನು ಅಡಗಿಸಬೇಕೆಂದು ಸುಲ್ತಾನರು ದೊಡ್ಡ ಸೈನ್ಯವನ್ನು ಕಳುಹಿಸಿ ಕಳುಹಿಸಿದರು. ಎರಡು ಸೈನ್ಯಗಳಿಗೂ ಅನ್ನಿರಿನ್ನಾ ಎಂಬ ಸ್ಥಳದಲ್ಲಿ ದೊಡ್ಡ ಯುದ್ಧ ನಡೆದಿರುವದಾಗಿಯೂ, ಸುಲ್ತಾನರ ಕಡೆ ಸೈನ್ಯದಲ್ಲಿ ೬,೦೦೦ ಮಂದಿಯು ಅವರ ಲಯವಾದದ್ದಾಗಿಯೂ; ಪ್ರಜಾಪಕ್ಷದವರೇ ಜಯಪ್ರದವನ್ನು ಹೊಂದಿದಹಾಗೂ ತಂತೀ ವರ್ತಮಾನ ಬಂದಿರುವದು.

❖❖❖❖

ದಕ್ಷಿಣ ಕೆರೋಲಿನಾಕ್ಕೆ ಸೇರಿದ ಸ್ಪಾರ್ಟನ್‌ಬರ್ಗ್ ಎಂಬಲ್ಲಿ ಆಕಾಶವು ತೂತುಬಿದ್ದಿತ್ತೋ ಎಂಬಂತೆ ಮಳೆ ಸುರಿದು, ಭಾರೀ ಅಣೆಕಟ್ಟು ಕಿತ್ತುಹೋಯಿತು. ಸುತ್ತಮುತ್ತಲೂ ಇರುವ ಪ್ರದೇಶಗಳಿಗೆಲ್ಲಾ ನೀರಿನ ಪ್ರವಾಹಗಳು ನುಗ್ಗಿದವು. ಹತ್ತಿಯ ಕಾರ್ಖಾನೆಗಳು ಒಡೆದು ನಾಶಹೊಂದಿದವು. ಸುಮಾರು ೨೦ ಲಕ್ಷ ದ್ರವ್ಯ ನಷ್ಟವಾಗಿರುತ್ತೆ. ಪಸೇಲಾಟ್ ಎಂಬ ಸ್ಥಳದಲ್ಲಿ ಪ್ರತಿಒಂದು ಕಟ್ಟಡವೂ ಬಿದ್ದು ನೆಲಸಮವಾಯಿತು. ಅನೇಕ ಜನರು ನೀರಿನ ಪಾಲಾದರು. ಸೆಂಟ್‌ಲೂಯಿಸ್ ಎಂಬ ಪಟ್ಟಣದಿಂದ ೨೫ ಮೈಲಿ ಸುತ್ತಿನ ತನಕ ವ್ಯವಸಾಯ ಮಾಡಿದ್ದ ಜಮೀನಿನ ಮೇಲೆ ನೀರು ನಿಂತಿದೆ. ಸುಮಾರು ೨೫,೦೦೦ ಪ್ರಜೆಗಳು ಮನೆಮಠಗಳನ್ನು ಕಳಕೊಂಡು ಅಲೆಯುತ್ತಿದಾರೆ. ಆಸ್ತಿಪಾಸ್ತಿಗಳನ್ನು ದೋಚಿಕೊಂಡು ಹೋಗದಂತೆ ಸರ್ಕಾರದವರು ಬಹು ಕಠಿಣವಾದ ಕಾನೂನನ್ನು ಜಾರಿಗೆ ತರಬೇಕಾಯಿತು. ಕಳ್ಳರು ಸಿಕ್ಕಿದರೆ ಗುಂಡುಹೊಡೆದು ಕೊಲ್ಲುವಂತೆ ವಿಧಿಸಿರುವರು.

# ಶ್ರೀ ಕೃಷ್ಣವಿಲಾಸ ಪ್ರೆಸ್.

36

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡು, ನೋಟೀಸ್ ಫಾರಂ, ಪ್ಯಾಂಪ್ಲೆಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಧಾರಣೆಗಳಿಗೆ ಮಾಡಲ್ಪಡುತ್ತವೆ

ಕೋರ್ಟು, ಪರ್ಗ, ಮುಂತಾದ ಖಾಲೀ ಪುಸ್ತಕಗಳು; ನಾನಾ ಬಗೆಯ ಗೋಲ್ಡ್ ಗಿಲ್ಟ್ ಕೆಲಸಗಳು; ಇನ್ನು ಇತರವಾದ ಸಮಸ್ತ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿನಂತೆ ಬಹು ಅಂದವಾಗಿ ನಿರ್ಮಾಣ ಮಾಡಲ್ಪಡುತ್ತವೆ.

ಲಾಯರ್‌ಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್ ಒಕಾಲತ್‌ನಾಮಾ, ಜಾರೀ, ರಸೀದಿ, ನೋಟೀಸ್ ಫಾರಂಗಳು ಸ್ಟೇಷನರಿಯಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಮಾರಿಕೆಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯತರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಜವಾಬನ್ನು ಅಪೇಕ್ಷಿಸುವವರು ಟಪ್ಪಾಲು ಹಾಸಲನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡಪೇಟೆ ೨೫ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ.

ವಿಳಾಸ —ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,

ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.



ಜ್ವರಹರಿ. 39

ಇದು ಸಾಧಾರಣ ಜ್ವರ, ಹಳೇಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜಾಮತ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ.—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ೨ ರೂ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

*********

ಓಮಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳಕುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣ ಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಬ್ರಿಯ ಬರು ಆರ್ದ್ರಾರವನ್ನು, ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರಿಯಲ್ಲಿ ಅನೇಕ ಪರಾಂಗಣದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇನೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದಾರೆ.

ಈ ಎಲ್ಲಾ ಔಷಧಗಳೂ ಮದರಾಸಿನಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಗ್ರಾಮಗಳಲ್ಲೂ ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ — ಜನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಲೈನ್, ಬೀಚ್ ಮದರಾಸ್.


## ನಮ್ಮ ಚಂದಾದಾರರಿಗೆ.

ವೃತ್ತಾಂತ ಪತ್ರಿಕೆಯ ಹೊಸ ವರ್ಷವು ಪ್ರಾರಂಭವಾಗಿರುವುದರಿಂದ ಇದು ನಮ್ಮ ಸ್ಥಳದ ಮತ್ತು ಪರಸ್ಥಳದ ಏಜೆಂಟರುಗಳು ಚಾಲ್ತಿ ವರ್ಷದ ಚಂದಾ ವಸೂಲುಮಾಡತಕ್ಕ ಕಾಲವಾಗಿದೆ ವಸೂಲು ದ ಮೊಬಲಗಿಗೆ ರಶೀತಿ ಕೊಡಲು ಅನುಕೂಲಿಸುವಂತೆ ಏಜೆಂಟರಲ್ಲರಿಗೂ ಪ್ರಿಂಟಾದ ರಶೀತಿ ಪುಸ್ತಕಗಳನ್ನು ಕಳುಹಿಸಿರುತ್ತೇವೆ. ಚಂದಾ ಬಾಬತಿ ಪಾವತಿ ಮಾಡುವವರೆಲ್ಲರೂ ರಶೀತಿಯನ್ನು ಪಡೆದ ಹೊರತು ಮೊಬಲಗನ್ನು ಕೊಡಕೂಡದೆಂದು ಈ ಮೂಲಕ ಸರ್ವರಿಗೂ ತಿಳಿಸಿರುತ್ತೇವೆ.

ಮೈಸೂರು

ಮ್ಯಾನೇಜರ್,
ವೃತ್ತಾಂತ ಪತ್ರಿಕೆ ಆಫೀಸ್.


## ಸರಸ್ವತೀಕರ ಕಸ್ತೂರಿ ಮಾತ್ರೆಯು.

5

ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥಾವರಿಗೆ ಅತ್ಯಂತ ಉಪಯುಕ್ತವಾದದ್ದು ಈ ಮಾತ್ರೆ ೧—೨ ತಾಂಬೂಲದ ಸಂಗಡ ಸೇವಿಸುವದರಿಂದ ಬಾಯಿಯು ಸುವಾಸನೆಯುಂಟಾಗಿ ಬಾಯಿಯ ದುರ್ಗಂಧ, ಹೋಗಿ ಅಜೀರ್ಣ, ಉಷ್ಣರೋಗ, ಬಾಯಿಯ ಜೊಲ್ಲು, ಉಗ್ಗಿಸುತ್ತಾ ಮಾತಾಡುವದು, ವಾಯು, ಶೀತ, ಪಿತ್ಥ, ಮಲಬದ್ಧ, ದಂತದೋಷ, ಬಾಯಿಹುಣ್ಣು, ಹಸಿವು, ಜ್ವರ, ಛಳಿ, ನೆಗಡಿ, ತಲೆಬೇನೆ ಇತ್ಯಾದಿ ಅನೇಕ ರೋಗಗಳಿಗೆಲ್ಲಾ ರಾಮಬಾಣದಂತಿರುವದು ಹೆಂಗಸರ ಗುಪ್ತವಾದ ಅನೇಕ ಜಾಡ್ಯಗಳಿಗೆ ಸಜ್ಜಾಯುಧವಂತಿರುವದು. ಚಿಕ್ಕ ಮಕ್ಕಳಿರುವ ಮನೆಯಲ್ಲಿ ಈ ಮಾತ್ರೆಯುಸಂಜೀವನವು. ಈ ಮಾತ್ರೆಯು ನಿಮ್ಮಲ್ಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸ್ವಾಧೀನದಲ್ಲಿದ್ದಂತೆಯೇ. ೨೦೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೫ ಆಣೆ, ೫ ಆಣೆ ಔಷಧವು ೨ ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವು ನಮಗೆ ಬರೆಯುವದಾಗೆ ಬಿಲಾಕ್ಷು ರಪಡಿಸುವದು.

ಸಿ. ಪಿ. ಅಂಡ್ ಕಂಪನಿ, ಬೆಂಗಳೂರು ಸಿಟಿ

## ಪೋನೋಸಿಯಾ.




ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಶೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಬಿದ್ದಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್, ಖರ್ಚು ಮಾಫಿ ಬಿಡುತ್ತೆ.

*********

## ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಲ್ಲದೆ ಇದರಲ್ಲಿ ಇನ್ನರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳುವಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟಿಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು

ವಿಳಾಸ:—ಹೋಮೋಸಿಯಾ ಕಂಪನಿ, ೨೩ ಸೆಕೆಂಡು ಬೀಚ್ ಲೈನ್, ಮದರಾಸ್.


## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೧೯—೬—೧೯೦೩ ರಿಂದ ೨೫—೬—೧೯೦೩ ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು | ಪ್ಲೇಗ್ ಸತ್ತದ್ದು | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | | | | |
| ಮೈಸೂರು ,, | 4 | 2 | 4 | 5 |
| ಬೆಂಗಳೂರು ಡಿಸ್ಟ್ರಿಕ್ಟು | 15 | 14 | 6 | 6 |
| ಮೈಸೂರು ,, | 29 | 29 | 31 | 31 |
| ಕೋಲಾರ್ ,, | 2 | 1 | | |
| ಕೋಲಾರ್ ಚಿನ್ನದ ಗಣಿಗಳು | | | | |
| ತುಂಕೂರು ಡಿಸ್ಟ್ರಿಕ್ಟು | 12 | 9 | 6 | 5 |
| ಹಾಸನ ,, | 4 | 5 | 2 | 1 |
| ಚಿತ್ರದುರ್ಗ ,, | 51 | 26 | 16 | 14 |
| ಕಡೂರ್ ,, | | | | |
| ಶಿವಮೊಗ್ಗ ,, | 24 | 19 | 3 | 1 |
| ಜುಮ್ಲಾ. | 147 | 98 | 69 | 62 |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಆಷಾಢ ಶುದ್ಧ ಪೌರ್ಣಮಿ ಗುರುವಾರದಿಂದ ಆಷಾಢ ಬಹುಳ ಪಂಚಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ, ಜುಲೈ.

| ತಾ. | ವಾರ | ತಿಥಿ. | ಘಳಿಗೆ. | ನಕ್ಷತ್ರ | ಘಳಿಗೆ. | ಮಿಥುನ ಮಾಸದ ತೇದಿ. |
|---|---|---|---|---|---|---|
| 9 | ಗುರು * | ಪೌರ್ಣಮಿ | 39-10 | ಪೂಷಾ | 51-27 | 25 |
| 10 | ಶುಕ್ರ | ಪ್ರಾಥ್ಯಮಿ | 43 56 | ಉತ್ತಾಷಾ | 60-0 | |
| 11 | ಶನಿವಾರ | ಬಿದಿಗೆ | 19 3 | ಉತ್ತಾಷಾ | 0-50 | 27 |
| 12 | ರವಿವಾ | ತದಿಗೆ | 53 21 | ಶ್ರ | 7-22 | 28 |
| 13 | ಚಂದ್ರ † | ಚೌತಿ | 57 38 | ಧ | 13 33 | 29 |
| 14 | ಭೂಮ ‡ | ಪಂಚಮಿ | 60-0 | ಶ | 15 46 | 30 |
| 15 | ಬುಧ | ಪಂಚಮಿ | 1-8 | ಪೂಭಾ | 23 2 | 31 |

* ವ್ಯಾಸಪೂರ್ಣಿಮಾ. ಚಾತುರ್ಮಾಸಸಂಕಲ್ಪಾರಂಭ. † ಸಂಕಷ್ಟ ಚತುರ್ಥಿ. ‡ ಟೀಕಾಚಾರ್ಯರ ಪುಣ್ಯದಿನ, ದಗ್ಧಯೋಗ.

## ಪೇಟೆ ಧಾರಣೆ.

| ದಿನಸಿ. | ಮೈಸೂರು. | ಬೆಂಗಳೂರು. |
|---|---|---|
| ಕಡ್ಡೀ ಅಕ್ಕಿ ಪಲ್ಲ ೧ಕ್ಕೆ | ರೂ ೧೦-೮-೦ | ೧೦-೧೨-೦ |
| ಕೆಂಬೂತಿ ಅಕ್ಕಿ ಅವಲ್ .. | ೧೦-೪-೦ | ೧೧-೮-೦ |
| ,, ದುಯ್ಯಂ .. | ೯-೮-೦ | ೧೦-೧೨-೦ |
| ಜಾವಾಳಿ ಅಕ್ಕಿ .. | ೯-೪-೦ | ೧೨-೦-೦ |
| ಸಣ್ಣಕ್ಕಿ ಅವಲ್ .. | ೧೨-೮-೦ | ೧೧-೪-೦ |
| ,, ದುಯ್ಯಂ .. | ೧೨-೦-೦ | ೧೦-೧೨-೦ |
| ತೊಗರೀ ಬೇಳೆ ಪಲ್ಲ ೧ಕ್ಕೆ .. | ೧೩-೦-೦ | ೧೪-೪-೦ |
| ,, ದುಯ್ಯಂ .. | ೧೨-೮-೦ | ೧೩-೪-೦ |
| ಹೈಗ ರಾಗಿ ಪಲ್ಲ ೧ಕ್ಕೆ .. | ೩-೧೪-೦ | ೩-೮-೦ |
| ಕೆಂರಾಗಿ .. | ೩-೮-೦ | ೩-೪-೦ |
| ಜೋಳ .. | ೩-೧೦-೦ | ೫-೦-೦ |
| ಹಲಸಂದೆ ಪಲ್ಲ ೧ಕ್ಕೆ .. | ೭-೧೨-೦ | ೭-೦-೦ |
| ಬಿಳೀ ಅವರೆ .. | ೭-೦-೦ | ೭-೦-೦ |
| ಹೆಸರು .. | ೮-೦-೦ | ೯-೪-೦ |
| ಉದ್ದು .. | ೮-೪-೦ | ೯-೮-೦ |
| ಕಡಲೆ .. | ೯-೮-೦ | ೯-೮-೦ |
| ಎಳ್ಳು .. | ೧೩-೧೨-೦ | ೧೦-೦-೦ |
| ಹುರುಳಿ .. | ೪-೦-೦ | ೪-೧೨-೦ |
| ಹರಳು ೧೨೩ ಸೇರಿಗೆ .. | ೯-೧೨-೦ | ೬-೦-೦ |
| ಸೀಗೇಕಾಯಿ ಮಣ ೧ಕ್ಕೆ .. | ೧-೮-೦ | ೧-೮-೦ |
| ಮೆಣಸಿನಕಾಯಿ .. | ೨-೮-೦ | ೨-೦-೦ |
| ,, ದುಯ್ಯಂ .. | ೨-೪-೦ | ೧-೮-೦ |
| ಬೆಲ್ಲ ದೊಡ್ಡ ಅಚ್ಚು .. | ೪-೮-೦ | ಮ ೧-೭-೦ |
| ಒಳ್ಳೆಣ್ಣೆ ಮಣ ೧ಕ್ಕೆ .. | ೫-೦-೦ | ೪-೮-೦ |
| ಹರಳೆಣ್ಣೆ ,, .. | ೩-೧೨-೦ | ೩-೦-೦ |
| ಕೊಬ್ಬರಿ ಪಲ್ಲ ೧ಕ್ಕೆ .. | ೫-೮-೦ | ೫-೦-೦ |
| ಉಪ್ಪು ,, .. | ೯-೦-೦ | ೮-೮-೦ |
| ಹುಣಿಸೇ ಹಣ್ಣು .. | ೦-೧೪-೦ | ೧-೦-೦ |
| ,, ಹಳೇದು .. | ೦-೧೦-೦ | ೦-೧೪-೦ |
| ತುಪ್ಪ .. | ೧೦-೧೨-೦ | ೧೦-೮-೦ |
| ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ .. | ೪-೯-೦ | ೪-೨-೦ |
| ತೆಂಗಿನಕಾಯಿ ೧೦೦ ಕ್ಕೆ .. | ೪-೪-೦ | ೩-೪-೦ |
| ಅಡಿಕೆಕಾಯಿ ಮಣ ೧ಕ್ಕೆ .. | ೦-೧೪-೦ | ೦-೧೦-೦ |
| ಉಪ್ಪೇರಿದಕಾಯಿ ಮಣ ೧ಕ್ಕೆ .. | ೬-೧೪-೦ | ೦-೧೧-೦ |
| ಚಿನ್ನ (ಪವನ್) ಕೆ-ಪ್ರ .. | ೧೫-೪-೦ | ೧೫-೩-೦ |
| ,, , ಪಸಿಮೆ .. | ೧೫-೮-೦ | ೧೫-೩-೦ |
| ,, ,, ಗಟ್ಟಿ ತೊಲ ೧ಕ್ಕೆ .. | ೨೩-೦-೦ | ೨೪-೮-೦ |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ .. | ೩೨-೧-೦ | ೩೩-೮-೦ |

Printed and Published by the Rev U. W. Thompson, M.A., the Proprietor and Manager, Wesleyan Mission Press, Mysore 9/7 1903.

# ವೃತ್ತಾಂತ ಪತ್ರಿಕೆ.

REGISTERED. M. 30

ಯ ೧ ದ ಮ ಹ್ಣು —:o:— ಕ್ರ ಯ ೧ ದ ಮ ಹ್ಣು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩ | ಮೈಸೂರು—ಸನ್ ೧೯೦೩ನೇ ಇಸವಿ ಜೂಲೈ ತಾರೀಖು ೧೬ನೇ ಗುರುವಾರ. | ಸಂಚಿಕೆ ೭


## ಗೋ, ಸಿದ್ಧವಾಗಿದೆ. ಕ್ರಯ ೪ ಆಣೆ.

೧೯೦೩ನೇ ಇಸವಿ ಲೋವರ್ ಸೆಕೆಂಡರಿ ಕನ್ನಡ ಟೆಕ್ಸ್ಟಿನ ನೋಟ್ಸು. ೧೪೪ನೇ ಪದ್ಯದಿಂದ ೨೦೩ನೇ ಪದ್ಯದ ವರೆಗೂ ಇ ರುತ್ತೆ. ಗದ್ಯಕಾವ್ಯದ ನೋಟ್ಸು ಸೇರಿದೆ. ಅರ್ಥ, ತಾತ್ಪರ್ಯ, ಸಂಧಿ, ಸಮಾಸ, ಅವಯವಾರ್ಥ, ಭಾವಾರ್ಥ, ನಾನಾರ್ಥ, ಪೂರ್ವ ಕಥೆ, ವ್ಯಾಕರಣನಿರ್ದೇಶ, ಪ್ರಶ್ನೋತ್ತರ, ಮುಂತಾಗಿ ಪರೀಕ್ಷೆಗೆ ಬೇಕಾಗಿರತಕ್ಕ ಎಲ್ಲಾ ವಿಷಯಗಳೂ ವಿಶದವಾಗಿ ತಿಳಿಸಲ್ಪಟ್ಟಿವೆ. ಬಿರಿಮಲ್ಲಪ್ಪನವರ ಸ್ಕೂಲು ಮಹಾದೇವ ಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು. ೧೦ ಕ್ಕೆ ೧ ಪ್ರತಿ ಜಾಸ್ತಿ. ಪುಸ್ತಕ ದೊರೆಯತಕ್ಕ ಸ್ಥಳ:—

ಕೆ. ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.

---

### ಜನರಂಜಕವಾದ ಪುಸ್ತಕಗಳು! ಜಾಗ್ರನೋಡಬಾರದೇ

ಮೈಸೂರು ಸರ್ಕಾರದ ವಿದ್ಯಾ ಇಲಾಖೆಯವರು ಈ ಪುಸ್ತಕಗಳ ಅಮೂಲ್ಯತ್ವವನ್ನು ತಿಳಿದು ನೂರೈವತ್ತು ರೂಪಾಯಿಗಳಿಗಿಂತ ಹೆಚ್ಚಾಗಿಯೇ ತರಿಸಿಕೊಂಡಿದ್ದಾರೆ.

ಪುರಾತನ ಗ್ರೀಕರ ಚರಿತ್ರೆ. ಬಹು ರಸಿಕವಾಗಿದೆ. ಚಿತ್ರಗಳಿಂದ ಕೂಡಿದ್ದು — ಕ್ರಯ ೦—೮—೦

ಪ್ರಾಚೀನ ಮೃಗಗಳ ವರ್ಣನೆ ಚಿತ್ರಗಳಿಂದ ತುಂಬಿದೆ. — ೦—೧—೦

ಬಗೋಳ ಶಾಸ್ತ್ರ ಸಿದ್ಧಾಂತ. ಎಲ್ಲರೂ ಓದತಕ್ಕದ್ದು. ಅನೇಕ ಚಿತ್ರಗಳುಳ್ಳವು — ೦—೧—೦

ಪಕ್ಷಿಗಳ ವರ್ಣನೆ. ಸ್ಕೂಲ್ ಹುಡುಗರಿಗೆ ಇನಾಮಾಗಿ ಕೊಡುವ ದಕ್ಕೆ ಯೋಗ್ಯವಾಗಿದೆ. ಅನೇಕ ಪಕ್ಷಿಗಳ ಪಟಗಳೂ, ಅವುಗಳ ಚರಿತ್ರೆಗಳೂ ಇದರಲ್ಲಿ ಅಡಕವಾಗಿವೆ — ೦—೧—೦

ಇಂಡಿಯಾ ಚಕ್ರವರ್ತಿಯವರಾದ ವಿಕ್ಟೋರಿಯಾ ಸಾರ್ವಭೌಮರ ಮತ್ತು ಚಕ್ರವರ್ತಿನಿಯರಾದ ಅಲೆಕ್ಸಾಂಡ್ರಾ ಅಮ್ಮನವರ ಜೀವ ಮಾನಗಳ ಚರಿತ್ರೆ. ಇದರಲ್ಲಿ ಸ್ವೀಟ್ ಹಾರ್ಡ್‌ವೇರ್ ಹಾಕಿರುವ ಪಟಗಳು ಅನೇಕವಾಗಿವೆ. ಪ್ರತಿಯೊಬ್ಬರ ಮನೆಯಲ್ಲೂ ಇರತಕ್ಕ ಪುಸ್ತಕ. ಇಂಥಾ ಉತ್ಕೃಷ್ಟವಾದ ಪುಸ್ತಕಕ್ಕೆ ಬೆಲೆಯು ಬಹು ಕಡಿಮೆಯಾಗಿದೆ. — ಕ್ರಯ ೦—೪—೦

| | |
|---|---|
| ಚಕ್ರವರ್ತಿಗಳ ಕಿರೀಟಧಾರಣೆಯ ಪುಸ್ತಕ ಕ್ರಯ | ೦—[illegible]—೩ |
| ಕ್ರಿಮಿಗಳ ವರ್ಣನೆ (ಸಚಿತ್ರ). | ೦—[illegible]—೦ |
| ದೇಹವೆಂಬ ನನ್ನ ಮನೆ (ಸಚಿತ್ರ). | ೦—೧—೦ |
| ಪ್ರಬೋಧಚಂದ್ರಿಕೆ) | ೦—[illegible]—೦ |
| ಚಿಕ್ಕವರಿಗೆ ಹೇಳುವ ಕಥೆಗಳು | ೦—೧—೦ |
| ಕಾಂಚೀಪುರಾಣದ ಪಾಠಿಶಾಲ ಚರಿತ್ರೆ. | ೦—೧—೦ |
| ಗ್ರೀನ್‌ಲ್ಯಾಂಡಿನ ಚರಿತ್ರೆ | ೦—[illegible]—೩ |
| ನಾಪೋಲಿಯನ್ ಬೋನಪಾರ್ಟನ ಚರಿತ್ರೆ | ೦—೧—೩ |
| ಆರ್ಯರ ಪ್ರಾಪೋರ್ತ್ಸ್ರ ಚರಿತ್ರೆ | ೦—೧—೩ |
| ಘನತೆಯುಳ್ಳ ಸ್ತ್ರೀಯರ ಚರಿತ್ರೆ | ೦—[illegible]—೬ |

(೧) ವೇದಗಳನ್ನು ಬರೆದವರು ಯಾರು? (೨) ಶುದ್ಧವಾದ ವೀರಶೈವ, (೩) ನವಿಲ ಮತ್ತು ಸ್ವಾಭಾವಿಕವಾದ ಮಾರ್ಗ, (೪) ಇಂಡಿಯಾದೇಶದ ಬಡತನದ ಕಾರಣಗಳು, (೫) ಬಾಲ್ಯವಿವಾಹ, (೬) ಮಾನುಷ್ಯತ್ವ, (೭) ಬಿಯ್ಯುಪದು, (೮) ನಾನಾಪದ್ಧತಿ ಶಾಸ್ತ್ರ, (೯) ಗ್ರಹಣಗಳು, (೧೦) ಮಕ್ಕಳನ್ನು ಬೆಳೆಸತಕ್ಕವಿಧ, (೧೧) ವ್ರತಗಳು, (೧೨) ಎಲ್ಲರೂ ಸಹೋದರರು, (೧೩) ಮಂತ್ರ, ತಂತ್ರ, ಯಂತ್ರಗಳು, (೧೪) ಜ್ಯೋತಿಷಶಾಸ್ತ್ರ, (೧೫) ಆರೋಗ್ಯ ಪ್ರಾಶಸ್ತ್ಯ. ಈ ಪುಸ್ತಕಗಳ ಪ್ರತಿಯೊಂದಕ್ಕೆ ಮೂರು ಕಾಸು ಕ್ರಯವಿದೆ. ಮೇಲ್ಕಂಡ ಪವಿತ್ರದ ಪುಸ್ತಕಗಳನ್ನು ಬೇಗನೆ ತರಿಸತಕ್ಕದ್ದು. ಜಿಡಿಯಾಗಿ ಮಾರಲಾಗದು. ಈ ಪುಸ್ತಕಗಳನ್ನು ಓದಿದವರು ಬರುವ ಸಂತೋಷವನ್ನು ವಿವರಿಸಲಾಗದು. [illegible] ತೆ ನಂ. ವಿ. ವಿ. ಪಿ. ಮಾರ್ಗವಾಗಿ ಅಥವಾ ಹಣವನ್ನು ಮುಂಗಡವಾಗಿ ಕಳುಹಿಸಿದ್ದವರಿಗೆ ಪುಸ್ತಕಗಳನ್ನು ಕಳಿಸುತ್ತೇವೆ.

ಮ್ಯಾನೇಜರ್, ನಿರ್ಮಲ ಬುಕ್ ಡಿಪೋ, ಮೈಸೂರು.

---

### ಬೇಕಾಗಿದೆ.

ಕೊಳ್ಳೇಗಾಲದ ಗಂಡು ಹುಡುಗರ ಸ್ಕೂಲಿಗಾಗಿ ಕನ್ನಡ ಪಾಠ ಹೇಳಿ ಕೊಡುವ ಒಬ್ಬ ಮುಪ್ಪುಗಾರರು ಬೇಕು. ಕ್ರೈಸ್ತರಾದರೆ ಉತ್ತಮ. ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

"ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು.

---

### ಕಲ್ಕತ್ತಾ ಪ್ರಾವಿಡೆಂಟ್ ಇನ್‌ಸ್ಟಿಟ್ಯೂಷನ್.
### ನೋಟೀಸ್.

ಈ ಇನ್‌ಸ್ಟಿಟ್ಯೂಷನಿಗೆ ಸಂಬಂಧಪಟ್ಟ ಸರ್ವರ ಸಂಜ್ಞಾಪನೆಗಾಗಿ ಈ ಮೂಲಕ ತಿಳಿಯಪಡಿಸುವದೇನಂದರೆ—

ಈ ಸಂಘದ ಲೆಕ್ಕಾಚಾರಗಳನ್ನು ಮೆಸರ್ಸ್ ಪ್ಯಾಟನ್ ಅಂಡ್ ಕಂಪನಿ ಎಂಬವರು ಪರೀಕ್ಷೆ ಮಾಡುತಲಿರುವರಾದ್ದರಿಂದ ಬುದ್ಧಿ ಪ್ರೊರೈಸಿದ ಕೂಡಲೆ ಹವತಿ ಕಟ್ಟುವರ ಕಳೆಯುವರಿಗೆ ಸಲ್ಲತಕ್ಕ ಅವ್ಯರ್ ಬಾಪತಿಗಳೆಲ್ಲಾ ವ್ಯವಸ್ಥೆ ಮಾಡಲ್ಪಡುವವು. ಎಷ್ಟು ದಿವಸಗಳ ಲೆಕ್ಕ ಈಗ ಬುದ್ಧಿಯಲ್ಲಿದೆಯೋ ಆ ಕಾಲಾವಧಿಯಲ್ಲಿ ಹವತಿ ಪಟ್ಟರುವ ಡಿಪ್ಲೊಮಾ ಹಿಡುವಳಿದಾರರುಗಳಿಂದ ಒಟ್ಟು ೪೬೩ ರೂ. ಬಂದು ವಸೂಲಾಗಿರುತ್ತದೆ. ಸದರಿಯವರ ವಾರಸುದಾರರಿಗೆ ಮೊದಲೇ ಬಾಪತಿ ಮಾಡಿರುವದು, ಒಟ್ಟು ೯೩, ೨೦ ರೂ. ಇನ್ನೂ ಎಷ್ಟು ಬಾಕಿ ಇವರಿಗೆ ಸಲ್ಲಬೇಕಾಗಿದೆ ಎಂಬುದು ಲೆಕ್ಕದ ಬುದ್ಧಿಯಲ್ಲಿ ತಿಳಿದಕೂಡಲೆ ಅದೂ ಕೊಡಲ್ಪಡುವದು. ಬ್ಯಾಲೆನ್ಸ್ ವರ್ಷದಲ್ಲಿ ಕಳೆದ ಕೆಲವು ತಿಂಗಳುಗಳಲ್ಲಿಯೇ ೩,೪೦೬ ರೂಪಾಯಿಗಳು ಅಡ್ವಾನ್ಸ್ ಆಗಿ ಕೊಡಲ್ಪಟ್ಟಿರುವವು. ಬಂಡಾ ರೂಪವಾಗಿ ೬೨೯ ರೂಪಾಯಿಗಳು ಮಾತ್ರ ವಸೂಲಾಗಿರುವವು.

ಕೆ. ಕೆ. ಬೋಸ್,
ಮ್ಯಾನೇಜರ್.

---

## ROBINSON'S
## PATENT BARLEY.

## ರಾಬಿನ್‌ಸನ್‌ಯವರ
## ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಜವೆಗೋಧಿಯಿಂದ ಮಾಡಿದೆ. ಮಸ್ತು ಸ್ವರ್ಣದಿಂದ ಅದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಕರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾರಾದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬಿಯ ಮೇಲ್ಭಾಗದಲ್ಲಿ ಮೊಹರಿನ ಹೆಸರನ್ನು ಕೆಳಗೆ ನಿಸ್ತರುವವನ್ನು ನೋಡಿ ಕೊಳ್ಳಬೇಕು.

---

## MELLIN'S FOOD.

### ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮೂಳೆಗಳೂ ಚೆನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಕಮಾನುಸಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆ ಉಂಟಾಗುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ನಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಹಾಲ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಶಿಶುಗಳಿಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ಹಾಲು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಿಡುಬು ಹಾಕಿದ ಕಾಲದಲ್ಲಿಯೂ ಶೈಶವದಲ್ಲಿಯೂ ಒದಗುವ ಮಿಕ್ಕಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುಡುಪದಾರ್ಥಗಳು ಯಾವವೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ತಕ್ಕದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ದೃಢಪಡಿಸುವದರಿಂದ ಕೂಸುಗಳಿಗೆ ರೋಗಕಾಲದ ವಿಪತ್ತುಗಳನ್ನು ಕಳೆ ಮಟ್ಟಿಗೆ ಕಡಮೆಮಾಡುತ್ತದೆ.

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಔಷಧಗಳಿಗೂ ಬರೆದು ತರಿಸಿಕೊಳ್ಳಬಹುದು:—

ಮದ್ರಾಸ್:—ಮೆ॥ ಕಾವಸಿ ದಿನ್‌ಷಾ ಬ್ರದರ್ಸ್.

ಬೊಂಬಾಯಿ:—ಮೆ॥ ಕೆಂಪ್ ಅಂಡ್ ಕಂಪೆನಿ.

ಕಲ್ಕತ್ತಾ:—ಮೆ॥ ಸ್ಮಿತ್ ಸ್ಟ್ಯಾನಿಸ್ಟ್ರೀಟ್ ಅಂಡ್ ಕಂಪೆನಿ.

ಕೊಚ್ಚಿನಾಡ:—ಮೆ॥ ಹಾರ್ಟ್ ವಿಲ್ಸನ್ ಕಂಪೆನಿ

ಕರಾಚಿ:—ಮೆ॥ ಎಚ್. ಜೆ. ರುಸ್ತುಂಜಿ ಕಂಪೆನಿ.

ಮದ್ರಾಸು:—[illegible] ಕಂಪೆನಿ.

ರಂಗೂನ್:—ಕೇಶಂ [illegible] ಕಂಪೆನಿ.

# ಶಿವಮೊಗ್ಗ ಡಿಸ್ಟ್ರಿಕ್ಟ್

2

ಪುಸ್ತಕಗಳೂ,

ಹಾಸನ ಟೋಪಿಗಳೂ,

ಲೇಖನ ಸಾಮಗ್ರಿಗಳೂ

ಕ್ರಯಕ್ಕೆ ದೊರೆಯುತ್ತವೆ.

ವಿಳಾಸ:—

ಮ್ಯಾನೇಜರ್, ಮಿಷನ್ ಬುಕ್ ಡಿಪೋ,

ಶಿವಮೊಗ್ಗ.


## ಪ್ರಸಿದ್ಧ ಪತ್ರಿಕೆ.

ಓ ರಸಿಕಶಿಖಾಮಣಿಗಳೇ,—ರಸಯುಕ್ತವಾದ ನವೀನಕಾವ್ಯವೊಂದನ್ನು ಈಗಿನ ನವನಾಗರೀಕತೆಯುಳ್ಳ ತರುಣ ತರುಣಿಯರಿಗೆ ಉಪಯುಕ್ತವಾಗುವಂತೆ ಇಂಗ್ಲೀಷ್ ನಾವಲ್ ಪದ್ಧತಿಯನ್ನೇ ಅನುಸರಿಸಿ ನಮ್ಮ ಕರ್ನಾಟಕ ಮರ್ಯಾದೆಯನ್ನು ಕೂಡಾ ಬಿಡದೆ ಅತಿ ಸುಲಭಶೈಲಿಯಿಂದಲೂ ಮತ್ತು ಮೃದು ಮಧುರವಾದ ನೀತಿನಿಂದಲೂ ಸಕಲರಿಗೂ ತಿಳಿಯುವಂತೆ ರಚಿಸಬೇಕಾಗಿ ನನ್ನ ಮಿತ್ರರೊಬ್ಬರು ಅತಿಯಾಗಿ ಪ್ರೋತ್ಸಾಹಿಸಿದ್ದರಿಂದ ಅವರ ಕೋರಿಕೆಯ ತೆಂದರೆ

ರಸಿಕ ಜನ ಮನಾಕರ್ಷಣಿ

ಅಥವಾ,

ರತ್ನಪ್ರಭೆ ಪರಿಣಯ.

ಎಂಬ ಹೆಸರಿನಿಂದ ಒಂದು ಹೊಸ ಕಾವ್ಯವನ್ನು ಅತಿ ಶ್ರಮದಿಂದ ರಚಿಸಿ ಮಿತ್ರಭಾವವನ್ನು ಆಚರಿಸಿ ಇರುತ್ತೇನೆ. ಸುಮಾರು ೧೫೦ ಪೇಜುಗಳಾಗಬಹುದಾದ ಈ ಕಾವ್ಯವನ್ನು ಶೀಘ್ರದಲ್ಲಿಯೇ ಪ್ರಿಂಟ್ ಮಾಡಿಸಲು ಆತುರವುಳ್ಳವನಾಗಿ ಇರುವುದರಿಂದ ಸ್ನೇಹಿತ ಮಾನಿಗಳಾದ ಸರ್ವರೂ ಈ ಪ್ರಿಂಟಿಂಗ್ ಕೆಲಸಕ್ಕೆ ಈ ಕೆಳಗೆ ವಿವರಿಸಿ ಇರುವ ಮೇರೆಗೆ ಸಹಾಯ ಮಾಡಿದಲ್ಲಿ ಸದರೀ ಪುಸ್ತಕ ತಯಾರಾದ ಒಡನೆಯೇ ಪ್ರತಿ ಚಂದಾದಾರರಿಗೂ ಒಂದೊಂದು ಪ್ರತಿಯನ್ನು ರವಾನಿಸಲ್ಪಡುವುದು.

ಮುಂಗಡವಾಗಿ ಸಹಾಯ ಮಾಡುವ ಚಂದಾದಾರರಿಗೆ ಪ್ರತಿಯೊಂದಕ್ಕೆ ಪೋಸ್ಟೇಜ್ ಸಹಿತ ೦—೧೪—೦ ಯೆಂತಲೂ, ನಂತರ ೧—೦—೦ ನಂತೆಯೂ ಕ್ರಯವನ್ನು ನಿಷ್ಕರ್ಷೆ ಮಾಡಿ ಇರುತ್ತೆ. ಮುಖ್ಯ ಸರ್ವರೂ ಮುಂಗಡವಾಗಿಯೇ ಸಹಾಯ ಮಾಡಿ ಈ ಕೆಲಸವನ್ನು ಆತುರದಿಂದ ಪೂರೈಸುವಂತೆ ಗ್ರಂಥಕರ್ತನನ್ನು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಕೊತಗನೂರ್, ಕೆ. ಎಸ್. ಕೃಷ್ಣರಾವ್,
ಮಾರ್ಗ—ಬೀರೂರು. S. M. RY. ಸಂಕ್ಲೀಪುರ ಪೋಸ್ಟ್.

## ಇಸ್ತಹಾರ್.

3

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದ.
ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.—

ಸಿಟಿ ಮುನಿಸಿಪಲ್ ಡಿವಿಜನ್ ಮೊಹಲ್ಲಾಗಳಲ್ಲಿಯೂ ೪ ಚಕ್ರದ ಸ್ಪ್ರಿಂಗು ಗಾಡಿಗಳು, ೨ ಚಕ್ರದ ಸ್ಪ್ರಿಂಗು ಗಾಡಿಗಳು, ಪೆಟ್ಟಿಗೆ ಗಾಡಿಗಳು, ಜಟಕಾಗಳು, ಹಳ್ಳಿ ಚಕಡಾ ಗಾಡಿಗಳು, ಕುದುರೆಗಳು, ಮತ್ತು ದೋಣಿಗಳು ವಗೈರೆ ಸಹಾ ಇಟ್ಟಿರತಕ್ಕವರು ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ ೩೯ ನೆ ಸೆಕ್ಷನಲ್ಲಿ ವಿಧಾಯಕವಾಗಿರುವಂತೆ ಆಯಾಯ ಜನಗಳು ಹಿಂದಿನ ಬಾಕಿ ಏನಾದರೂ ಕೊಡಬೇಕಾಗಿದ್ದರೆ ಅಂಥಾ ಬಾಕಿ ಮತ್ತು ಮುಂದಿನ ೧೯೦೩—೦೪ ನೆ ಸಾಲಿಗೆ ಅಡ್ವಾನ್ಸ್ ತೆರಿಗೆ ಇವುಗಳನ್ನು ಈ ಆಫೀಸಿನಲ್ಲಿ ಪಾವತಿ ಮಾಡಿ ಗಾಡಿಗಳಿಗೆ ನಂಬರು ಹಾಕಿಸಿಕೊಳ್ಳಬೇಕು. ಅಥವಾ ಪ್ಯಾಸು ತೆಗೆದುಕೊಳ್ಳಬೇಕು. ನಂಬರು ಹಾಕಿಸುವದಕ್ಕಾಗಿ ೧೯೦೩ ನೆ ಇಸವಿ ಜುಲೈ ತಾರೀಖು ೧೮ ಲಾಗಾಯತು ೩೦ ರ ವರಿಗೆ ೧ ತಿಂಗಳು ವಾಯಿದೆ ಕೊಟ್ಟಿರುತ್ತೆ. ಆ ಬಳಿಕ ಬರತಕ್ಕ ಗಾಡಿಗಳಿಗೆ ಸಾಕಾದಷ್ಟು ಕಾರಣ ತೋರಿಸದೆ ಇದ್ದಲ್ಲಿ ನಂಬರು ಹಾಕಿಸುವದಿಲ್ಲ.

೨. ಮೇಲ್ಕಂಡಂತೆ ನಂಬರು ಹಾಕಿಸಿಕೊಳ್ಳದೆ ಅಥವಾ ಪ್ಯಾಸ್ ತೆಗೆದುಕೊಳ್ಳದೆ ಹೋದರೆ ಅಂಥಾ ಗಾಡಿಗಳ, ಅಥವಾ ಜಾನವರುಗಳ ಮಾಲೀಕರಾಗಲಿ, ಅವರ ಕಡೆ ಏಜಂಟರಾಗಲಿ, ಸಿಟಿ ಮುನಿಸಿಪಲ್ ರು ಟೋಲ್‌ಗೇಟುಗಳ ಮುಖಾಂತರವಾಗಿ ಸಿಟಿ ಒಳಕ್ಕೆ ಪ್ರವೇಶ ಮಾಡಿದರೆ ರೂಲ್ಸಿನಂತೆ ಟೋಲ್ ಎಂಬ ಸುಂಕವನ್ನು ಕೊಡಲು ಬದ್ಧರಾಗಿರುತ್ತಾರೆ.

೩. ಗಾಡಿಗಳು ಅಥವಾ ಕ್ಯಾರೇಜುಗಳು ಟವರ್ನಲ್ಲಿ ಇದ್ದುಕೊಂಡು ಮ್ಯುನಿಸಿಪಾಲಿಟಿಗೆ ಕಂದಾಯ ಕೊಡುತ್ತಿದ್ದರೂ ಟೋಲ್‌ಗೇಟುಗಳಲ್ಲಿ ಟೋಲ್ ಎಂಬ ಸುಂಕವನ್ನು ವಸೂಲ್ಮಾಡಿದರು ಎಂಬದಾಗಿ ವಗೈರೆ ಇತರರ ಪ್ಯಾಸ್ ಪಡೆಯದೆ ಅಥವಾ ನಂಬರು ಹಾಕಿಸಿಕೊಳ್ಳದೆ ಬರತಕ್ಕ ಫಿರ್ಯಾದುಗಳಿಗೆ ನಿಗಾ ಕೊಡುವದಿಲ್ಲ. ತಿಳಿಯುವದು.

ಮೈಸೂರು ಸಿಟಿ ಮ್ಯುನಿಸಿಪಲ್ ಆಫೀಸು,
ತಾರೀಖು ೨೭ ನೆ ನವೆಂಬರ್ ಜೂನ್ ೧೯೦೩ ನೆ ಇಸವಿ.

K. Sreenivasa Rao,
*Vice President.*


## ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.

28

ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಸುಂಗು ಪಟ್ಟು ಬಿದ್ದರೂ ಚೂರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ಒಕ್ಕೆ ೧ ರೂ.; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು:—

ಬಿ. ವಿ. ನರಸಿಂಹಲು ಚೆಟ್ಟಿ,
ನಂ. ೨, ತಂಬೂನಾಯಕರ ಬೀದಿ,
ಮದರಾಸ್.


## ವೃತ್ತಾಂತ ಪತ್ರಿಕೆ.

ಸರ್ ೧೯೦೩ ನೇ ಇಸವಿ ಜುಲೈ ತಾ॥ ೧೬ ನೇ ಗುರುವಾರ

### ಮೈಸೂರು ಸಂಸ್ಥಾನವೂ, ವೈದ್ಯ ಇಲಾಖೆಯೂ.

೧೯೦೨ನೇ ಇಸವಿ ಡಿಸೆಂಬರ್ ಆಖೈರಿಗೆ ಮುಗಿದ ೧೨ ತಿಂಗಳ ವೈದ್ಯ ಇಲಾಖೆಯ ರಿಪೋರ್ಟನ್ನು ಮೈಸೂರು ಸರ್ಕಾರದವರು ಈಗ ಪ್ರಕಟಿಸಿರುತ್ತಾರೆ. ಸುಮಾರು ಒಂದೂವರೆ ವರುಷ ಕಳೆದುಹೋದಮೇಲೆ ಪ್ರಕಟವಾದ ಈ ರಿಪೋರ್ಟನ್ನು ಓದುವವರಿಗೆ ಅದರಿಂದ ಎಷ್ಟು ಸಂತೋಷವಾಗುವದೋ ನಾವು ಕಾಣೆವು. ಇಷ್ಟು ಸಾವಕಾಶವಾದರೂ ಆಗಲಿ; ರಿಪೋರ್ಟು ಪ್ರಕಟವಾಯಿತಲ್ಲಾ ಎಂದು ಸಂತೋಷಪಡುತ್ತೇವೆ. ಈ ರಿಪೋರ್ಟಿನ ಮೇಲೆ ಗೌವರ್ನಮೆಂಟಿನವರು ಬರೆದಿರುವ ಹುಕುಂ ಏನಂದರೆ:—

೧೯೦೧ನೇ ವರುಷದಲ್ಲಿ ಮೈಸೂರು ಸಂಸ್ಥಾನದಲ್ಲಿ ೫೩,೬೯,೭೦೩ ಜನನವಾಯಿತು; ೧೯೦೨ನೇ ವರುಷದಲ್ಲಿ ೫೩,೨೬೩ ಜನನವಾಯಿತು. ಅಂದರೆ, ಹಿಂದಿನ ವರುಷಕ್ಕಿಂತ ೩,೦೧೩ ಕಡಿಮೆ. ಮರಣಗಳಾದರೋ ೧೯೦೨ನೇ ವರುಷದಲ್ಲಿ ೧,೦೯,೯೦೧. ಅಂದರೆ, ೧೯೦೧ರಲ್ಲಿ ಸತ್ತವರಿಗಿಂತಲೂ ೧೬,೫೩೩ ಮಂದಿ ಹೆಚ್ಚು. ಹೀಗೆ ಮರಣಗಳು ಹೆಚ್ಚಾಗಲು ೧೯೦೨ನೇ ವರುಷದಲ್ಲಿ ವಿಷಮಶೀತಜ್ವರ, ಪ್ಲೇಗ್, ವಾಂತಿಭೇದಿ, ಸಿಡುಬು, ಈ ಉಪದ್ರವಗಳೇ ಕಾರಣಗಳೆಂದು ತಿಳಿದುಬಂದಿದೆ.

ಜ್ವರದಲ್ಲಿ ಸತ್ತುಹೋದವರ ಸಂಖ್ಯೆಯೇ ಹೆಚ್ಚಾಗಿದೆ. ೫೩,೨೩೩ ಮಂದಿ ಈ ಒಂದೇ ಜ್ವರ ರೋಗದಿಂದ ಮೃತಪಟ್ಟಿದ್ದಾರೆ. ಪ್ಲೇಗ್ ಉಪದ್ರವವು ಮೈಸೂರು ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲೇ ಬಹಳ ಜೋರಾಗಿತ್ತು. ಮೈಸೂರು ಸಂಸ್ಥಾನದಲ್ಲೆಲ್ಲಾ ೧೯೦೧ ರಲ್ಲಿ ೧೬,೨೩೯ ಮಂದಿಗೆ ಪ್ಲೇಗ್ ತಗಲಿ, ಆ ಪೈಕಿ ೧೧,೯೩೬ ಜನರು ಬಲಿಯಾಗಿಹೋದರು. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಈ ಉಪದ್ರವ ಬೇನೆಯಿಂದ ೩,೭೯೩ ಮಂದಿಯೂ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ೩,೦೬೭ ಮಂದಿಯೂ ಕಾಲವಾದರು. ಡಿಸೆಂಬರ್ ತಿಂಗಳೊಂದರಲ್ಲೇ ೨,೦೧೯ ಜನರು ಸತ್ತುಹೋದರು. ಮೇ ತಿಂಗಳಲ್ಲಾದರೋ ೧೦೯ ಮಂದಿ ಮಾತ್ರ ತೀರಿಹೋದರು.

ವಾಂತಿಭೇದಿ ಉಪದ್ರವವು ೧೯೦೧ ರಲ್ಲಿ ೧೧,೩೪೧ ಜನರನ್ನು ಕೊಂದುಹಾಕಿತು. ೧೯೦೦ ರಲ್ಲಿ ಈ ಉಪದ್ರವವು ಅಷ್ಟು ಹೆಚ್ಚಾಗಿರಲಿಲ್ಲ; ೩೩೯ ಮಂದಿ ಮಾತ್ರ ಸತ್ತರು. ಸಿಡುಬಿನ ಉಪದ್ರವೂ ೧೯೦೦ ರಕ್ಕಿಂತಲೂ ೧೯೦೧ ರಲ್ಲಿ ಜೋರಾಗಿತ್ತು. ೧೯೦೦ ರಲ್ಲಿ ೩,೭೯೬ ಜನರೂ, ೧೯೦೧ ರಲ್ಲಿ ೬,೪೩೩ ಜನರೂ ಮೃತಪಟ್ಟರು.

ಜನರು ಕೆಮ್ಮು ನೆಗಡಿ ಮೊದಲಾದ ಜ್ವರಲಕ್ಷಣಗಳು ಕಾಣಿಸಿಕೊಂಡಕೂಡಲೇ ಕ್ವಿನೈನ್ ಪುಡಿಯೇ ಮೊದಲಾದ ಪರಿಹಾರಗಳನ್ನು ಮಾಡದೆ ಅಲಕ್ಷ್ಯ ಮಾಡುವರು. ವಾಂತಿಭೇದಿ ಉಪದ್ರವು ಊರಿನಲ್ಲಿ ಪ್ರಬಲವಾದಾಗ ಅನ್ನಪಾನಗಳ ವಿಷಯದಲ್ಲಿ ತುಂಬಾ ಜಾಗರೂಕರಾಗಿರುವದಿಲ್ಲ. ಮತ್ತು ಮಕ್ಕಳಿಗೆ ಸಕಾಲದಲ್ಲಿ ಸಿಡುಬು ಹಾಕಿಸದೆ ಜನರು ಉಪೇಕ್ಷೆಯಿಂದಿರುತ್ತಾರೆ. ಈ ಕಾರಣಗಳಿಂದ ಪ್ರಜೆಗಳು ಬಹಳವಾಗಿ ಕಾಲವಾಗಲು ಅವಕಾಶವಾಗುವದು.

೧೯೦೧ನೇ ಇಸವಿಯಲ್ಲಿ ಮೈಸೂರು ಸಂಸ್ಥಾನದ ಪ್ರಜಾ ಆರೋಗ್ಯವನ್ನು ವೃದ್ಧಿಪಡಿಸುವದಕ್ಕಾಗಿ ಹೊಸಬಾವಿಗಳನ್ನು ತೋಡಿಸಿದೆವು; ಶಿಥಿಲವಾಗಿದ್ದವುಗಳನ್ನು ರಿಪೇರಿಮಾಡಿಸಿದೆವು. ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ಕಲ್ಪಿಸಿಕೊಟ್ಟೆವು. ಹೊಸದಾಗಿ ರಸ್ತೆಗಳನ್ನು ಹಾಕಿಸಿ ಬೀದಿಗಳನ್ನು ದುರಸ್ತುಮಾಡಿಸಿರುತ್ತೇವೆ. ಅನೇಕ ಕಡೆಗಳಲ್ಲಿ ಚರಂಡಿ, ಕಕ್ಕಸು, ಸೇತುವೆಗಳನ್ನು ಕಟ್ಟಿಸಿಕೊಡಲಾಯಿತು ಎಂಬದಾಗಿ ಸರ್ಕಾರದವರು ರಿಪೋರ್ಟಿನಲ್ಲಿ ಹೇಳುತ್ತಾರೆ.

### ಕಲ್ಕತ್ತೆಯಲ್ಲಿ ನಡೆದ ಸಮಾರಾಧನೆಯ ಸಂಗತಿಯು.

ಕಳೆದ ಜೂನ್ ತಿಂಗಳ ಕಡೇವಾರ ಕಲ್ಕತ್ತಾ ನಗರದಲ್ಲಿ ಪೊಲೀಸ್ ಮ್ಯಾಜಿಸ್ಟ್ರೇಟ್ ಬಾಬೂ ವಿದ್ಯಾಸ್ ಎಂಬುವನು ತನ್ನ ಮಗನಿಗೆ ಅನ್ನಪ್ರಾಶನವೆಂಬ ಕರ್ಮವನ್ನು ನಡಸಿ, ಸಾವಿರಾರು ಮಂದಿ ಬಂಧು ಮಿತ್ರರನ್ನು ಕರೆಸಿಕೊಂಡು, ಅವರಿಗೆ ಸುಭೋಜನ ಮಾಡಿಸಿ ಕಳುಹಿಸಿದನು. ಊಟ ಮಾಡಿ ಹೋದರ ಸ್ವಲ್ಪ ಹೊತ್ತಿನಲ್ಲೇ ನೂರಾರು ಮಂದಿಗೆ ವಾಂತಿಭ್ರಾಂತಿಗಳು ಕಾಣಿಸಿಕೊಂಡವು, ಆರೇಳು ಜನ ಸತ್ತುಹೋದರು; ಉಳಿದವರೆಲ್ಲಾ ಔಷಧವನ್ನು ಸೇವಿಸಿ ಆರೋಗ್ಯ ಹೊಂದುತ್ತಿದ್ದಾರೆ. ಈ ಉತ್ಸವವಾದ ಸಮಾರಾಧನೆಯು ಹೀಗೆ ಪರಿಣಮಿಸಲು ಕಾರಣವೇನೆಂದು ಅನೇಕರು ಚಿಂತಿಸಿದ್ದರು. ಇದರಿಂದ ಯಜಮಾನನಿಗೆ ಎಷ್ಟು ವ್ಯಸನವುಂಟಾಯಿತೋ ವಿವರಿಸಿ ತೀರದು. ಕಲ್ಕತ್ತೆಯ ಹೆಲ್ತ್ ಆಫೀಸರ್ ಡಾ॥ ಜೆ. ಎಫ್. ಕುಕ್ ಯವರು, ಡಾ॥ ಜೋಗೇಂದ್ರನಾಥಘೋಷ್, ಡಾ॥ ಅಘೋರನಾಥಘೋಷ್, ಡಾ॥ ಬರ್ನ್, ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಡಾ॥ ಮಲ್ಲಿಕ್ ಎಂಬೀ ಗಣ್ಯರಾದ ವೈದ್ಯರು ಮಂದಿಯೂ ವಿದ್ಯಾಸ್ ಬಾಬುವಿನ ಮನೆಗೆ ಹೋಗಿ ಅಂದು ವಾಸ್ತವವಾಗಿ ತನಿಖಾ ಮನೆಯ ಸಕಲ ಭಾಗಗಳನ್ನೂ ಪಾತ್ರೆಗಳನ್ನು ಪರೀಕ್ಷೆ ಮಾಡಿ, ಅಡಿಗೆ ಮಾಡಿದವರು, ಬಡಿಸಿದವರು, ಊಟ ಮಾಡಿದವರು, ಸಾಮಾನು ತಂದವರು ಮೊದಲಾದವರಿಂದೆಲ್ಲಾ ವಾಜ್ಮೂಲಗಳನ್ನು ಬರೆದುಕೊಂಡು, ಈ ಅಚಾತುರ್ಯದ ವಿಷಯ ಒಂದು ರಿಪೋರ್ಟು ಬರೆದು ಪ್ರಕಟಿಸಿರುತ್ತಾರೆ. ಅದರಲ್ಲಿ ಅವರು ತಿಳಿಸುವ ಕಾರಣಗಳೇನಂದರೆ:—

ಭಕ್ಷ್ಯಭೋಜ್ಯಗಳನ್ನು ಮಾಡುವದಕ್ಕಾಗಿ ವಿದ್ಯಾಸ ಬಾಬುವವರು ತರಿಸಿದ ಪದಾರ್ಥಗಳೆಲ್ಲಾ ಒಳ್ಳೆಯವೇ. ಪಾತ್ರೆಗಳಲ್ಲಿ ತಾಂಬ್ರ ಹಿತ್ತಾಳೆಗಳ ಕಿಲುಬು ಭಕ್ಷ್ಯಗಳಿಗೆ ಹತ್ತಿದ್ದರಿಂದ ಈ ಅಚಾತುರ್ಯ ನಡೆಯಿತೆಂದು ಹೇಳುವ ಮಾತನ್ನು ನಂಬುವದಕ್ಕಾಗುವದಿಲ್ಲ. ಅಡಿಗೆ ಮಾಡಿದ ಮೇಲೆ ಭಕ್ಷ್ಯಗಳನ್ನು ತಟ್ಟೆಗಳಲ್ಲಿ ಕುಕ್ಕೆಗಳಲ್ಲೂ ತುಂಬಿಸಿ, ಹಸುಗಳನ್ನು ಕಟ್ಟುತ್ತಿದ್ದ ಕೊಟ್ಟಿಗೆ ನೆಲದಮೇಲೆ ಇರಿಸಿದ್ದರು. ಸಮಾರಾಧನೆಯು ಹಿಂದಿನ ರಾತ್ರಿ ರಾ ಮಳೆ ಸುರಿಯಿತು; ಬಹಳಹೊತ್ತು ತುಂಬಾ ಶೀತವಾದ ಗಾಳಿಯು ಬೀಸುತ್ತಿತ್ತು. ಕೊಟ್ಟಿಗೆಯಿಂದ ಹೊರಗೆ ಕೊಳಕಿನಿಂದ ತುಂಬಿದ ಒಂದು ಗುಂಡಿ ಕೆರೆ ಇದೆ. ಮಳೆ ಸುರಿದದ್ದರಿಂದ ಆ ಗುಂಡಿಯ ನೀರಿನ ಮೇಲೆ ಕೂಡಿದ್ದ ಕ್ರಿಮಿಗಳೆಲ್ಲಾ ಮೇಲಕ್ಕೆ ಎದ್ದು ಗಾಳಿಯ ವೇಗದಿಂದ ಬಂದು ಕೊಂಡು ತಟ್ಟೆಗಳ ಮೇಲೆ ಬಿದ್ದಿ

ಭಕ್ಷ್ಯಗಳ ಮೇಲೆ ಕೂತುಕೊಂಡವು. ಮತ್ತು ಮಳೆಯು ಬಿರಸಿ ನೆಲದ ಮೇಲಣ ಗಾಳಿಯು ಮೇಲಕ್ಕೆ ಎತ್ತಲ್ಪಟ್ಟಿತು. ಕೊಟ್ಟಯು ನೆಲದಮೇಲಿದ್ದ ವಿಷಕ್ರಿಮಿಗಳೂ ಭಕ್ಷ್ಯಗಳ ಮೇಲೆ ಬಂದು ಕ್ಕಲು ಅವಕಾಶವಾಯಿತು. ಇಂಥ ಕ್ರಿಮಿಗಳು ಕೂತಿದ್ದ ಭಕ್ಷ್ಯಗಳನ್ನು ಊಟಮಾಡಿದವರಿಗೆಲ್ಲಾ ಕಿಲುಬಿನ ವಿಷ ಹತ್ತಿದಂತಾಗಿ ವಾಂತಿಭೇದಿಗಳಾದವೇ ಹೊರತು ಮತ್ತೇನೂ ಅಲ್ಲ.

ಸಮಾರಾಧನೆಗಳನ್ನು ಮಾಡತಕ್ಕ ಪುಣ್ಯಾತ್ಮರು ಮೇಲ್ಕಂಡ ವಿಷಯವನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಸಾವಿರಾರು ರೂಪಾಯಿ ಖರ್ಚುಮಾಡಿ ಭಕ್ಷ್ಯಭೋಜ್ಯಗಳನ್ನು ಮಾಡಿಸುವದು ಅತಿಶಯವಾದ ಕಾರ್ಯವಲ್ಲ; ಅವುಗಳನ್ನು ಭುಂಜಿಸುವವರಿಗೆ ಅವುಗಳಿಂದ ಯಾವ ವಿಧವಾದ ಅನಾರೋಗ್ಯವೂ ಅಪಾಯವೂ ಉಂಟಾಗದಂತೆ ನೋಡಿಕೊಳ್ಳುವದೇ ಮುಖ್ಯವಾದದ್ದು. ಇದಲ್ಲದೆ ಮಾಡತಕ್ಕ ಮನೆಗಳೊಳಗೇ ದನಗಳ ಕೊಟ್ಟಿಗೆಯನ್ನು ಮಾಡಿಕೊಳ್ಳುವದರಿಂದಲೂ, ಹತ್ತಲಿನಲ್ಲೂ ಅಜೂಬಾಜೂವಿನಲ್ಲೂ ಬಚ್ಚಲ ರೊಚ್ಚೂ, ಕೊಚ್ಚೆ ಗುಂಡಿಗಳೂ, ಕೊಳಕು ನಾರುವ ಕೆರೆ ಕಟ್ಟೆ ಹಳ್ಳಕೊಳ್ಳಗಳೂ ಇರುವದರಿಂದಲೂ ಜನರಿಗೆ ಎಷ್ಟು ಮಟ್ಟಿಗೆ ಅವುಗಳಿಂದ ಅಪಾಯ ಉಂಟಾಗುವದೋ ಮೇಲ್ಕಂಡ ವಿಷಯವು ಪ್ರಕಾಶಪಡಿಸುತ್ತದೆ.

ಹಿಂದೆ ಕೆಲವು ಸಂವತ್ಸರಗಳ ಕೆಳಗೆ ನಮ್ಮ ರಾಜಧಾನಿಯಲ್ಲಿ ಕೆಲವು ಮಂದಿ ಲಾಯರುಗಳೂ ದೊಡ್ಡಮನುಷ್ಯರೂ ಸೇರಿ ಶ್ರೀರಂಗಪಟ್ಟಣದ ದರಿಯಾದೌಲತ್ ಬಾಗಿಲಿನಲ್ಲಿ ವನಭೋಜನ ಮಾಡಿಕೊಂಡು ಬಂದದ್ದೂ, ಅಡಿಗೆ ಮಾಡಿದ ಪಾತ್ರೆಗಳ ಕಿಲುಬಿನ ವಿಷ ಊಟ ಮಾಡಿದವರ ದೇಹಕ್ಕೆ ವ್ಯಾಪಿಸಿಯಾಗಿ ಅನೇಕರಿಗೆ ವಾಂತಿ ಭೇದಿಗಳು ಹಿಡಿದು ಅದರಲ್ಲೇ ಒಬ್ಬಿಬ್ಬರು ಅಕಾಲಮರಣ ಹೊಂದಿದ್ದೂ ಅನೇಕರಿಗೆ ಜ್ಞಾಪಕವಿರಬಹುದು. ಇದನ್ನೆಲ್ಲಾ ನೋಡಲಾಗಿ ಪ್ರಜೆಗಳು ಆರೋಗ್ಯವಿಚಾರದಲ್ಲಿ ಬಹಳ ಕರಿಣಚಿತ್ತರಾದ ಹೊರತು ಇಂಥಾ ಅಪಾಯಗಳು ಕೊನೆಗಾಣಲಾರವು.

## ಒಳದೇಶದ ವೃತ್ತಾಂತಗಳು.

ಅಮಲ್ದಾರ್ರಿಗೆ ಪೊಲೀಸ್ ಅಧಿಕಾರವನ್ನು ತಪ್ಪಿಸಿದರೆ ಕೆಲಸ ಹ್ಯಾಗೆ ನಡೆಯುವದೋ ನೋಡಬೇಕೆಂದು ಸರ್ಕಾರದವರು ಆದ ಪರೀಕ್ಷೆಗಾಗಿ ಬೌರಿಂಗ್‌ಪೇಟೆ ಅಮಲ್ದಾರ್ರಿಗೆ ಪೊಲೀಸ್ ಅಧಿಕಾರವನ್ನು ತಪ್ಪಿಸಿದಾರೆ.—ನ.

❖❖❖❖

ಕಳೆದ ಭಾನುವಾರ ಬೆಳಿಗ್ಗೆ ನಮ್ಮ ಮಹಾರಾಜರವರು ಪರಿವಾರ ಸಮೇತ ಬೆಂಗಳೂರಿಗೆ ದಯಮಾಡಿದರು. ಪ್ರಧಾನಾಧಿಕಾರಿಗಳೂ, ರಾಜಬಂಧುಗಳೂ, ದೊಡ್ಡಮನುಷ್ಯರೂ, ಉದ್ಯೋಗಸ್ಥರೂ ಸ್ಟೇಷನ್ನಲ್ಲಿ ಕಾದಿದ್ದು, ಮಹಾರಾಜರವರನ್ನು ಸಾಗಕಳುಹಿ ಬಂದರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟುವು.

❖❖❖❖

ರೆವಿನ್ಯೂ ಕಮಿಷನರಾದ ಮೆ|| ಪಿ. ಎ. ಕೃಷ್ಣರಾಯರು ಮದರಾಸ್ ಹೈಕೋರ್ಟಿನ ಜಡ್ಜರಾದ ಸರ್ ವಿ. ಭಾಷ್ಯಂ ಐಯಂಗಾರ್ರನ್ನು ಕಳೆದವಾರ ಶಿವಸಮುದ್ರಕ್ಕೆ ಕರೆದುಕೊಂಡು ಹೋಗಿ ಅಲ್ಲಿರುವ ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನು ಅವರಿಗೆ ತೋರಿಸಿಕೊಂಡು ಬಂದರೆಂದು ಕೇಳುತ್ತೇವೆ.

❖❖❖❖

ಈ ರಾಜಧಾನಿಯಲ್ಲಿ ಅಹಮದ್ ಬಷೀರ್ ಎಂಬವನು ಸುಮಾರು ೪|| ಮಣವಷ್ಟು ಹೊಗೇಸೊಪ್ಪನ್ನು ಸುಂಕ ತೀರಿಸದೆ ಗುಟ್ಟಾಗಿ ಸಾಗಿಸುತ್ತಿದ್ದನು. ಇವನನ್ನು ಆಕ್ಟ್ರಾಯ್ ಜವಾನನು ಹಿಡಿದನು. ಕಳೆದವಾರ ಆ ಮೋಸಗಾರನಿಗೆ ಮ್ಯಾಜಿಸ್ಟ್ರೇಟರು ೧೦ ರೂ. ಜುಲ್ಮಾನೆ ಹಾಕಿ, ಹೊಗೇಸೊಪ್ಪನ್ನು ಮ್ಯುನಿಸಿಪಾಲಿಟಿಗೆ ಕೊಡಿಸಿರುತ್ತಾರೆ.

❖❖❖❖

ವರ್ಕ್ ಇನ್ಸ್ಪೆಕ್ಟರುಗಳನ್ನು ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಫಂಡ್ ಬೋರ್ಡುಗಳವರು ಹಾಲಿ ಹಂಗಾಮಿಯಾಗಿ ನೇಮಿಸಿಕೊಂಡಿರುತ್ತಾರಷ್ಟೆ. ಇವರನ್ನು ಜಾಬ್ತೆ ಗುತ್ತಿಯಿಂದ ಇನ್ನೊಂದು ಹುಕುಂ ಕೊಡುವತನಕ ಕೆಲಸದ ಮೇಲೆ ಇಟ್ಟುಕೊಂಡಿರಬಹುದೆಂತಲೂ, ಅವರಿಗೆ ಸಂಬಳ ಕೊಟ್ಟು ಕೆಲಸ ಮಾಡಿಸಬಹುದೆಂತಲೂ ಸರ್ಕಾರದವರು ಹುಕುಂ ಕೊಟ್ಟಿದಾರೆ.

❖❖❖❖

ರಾಜಧಾನಿಯಲ್ಲಿ ಹವಾ ಬಹಳ ಶೀತವಾಗಿದೆ. ಕಳೆದ ವಾರವೆಲ್ಲಾ ಸೂರ್ಯರಶ್ಮಿ ಕಂಡದ್ದೇ ಅಪರೂಪ. ಸೋನೆಮಳೆ ಬಹಳವಾಗಿ ಸುರಿದು ಬಿರುಸಾದ ಶೀತಗಾಳಿ ಬೀಸುವದರಿಂದ ಹವಾ ಚಳಿಯಾಗಿರುವದು. ಆದರೂ ಪ್ರಜಾ ಆರೋಗ್ಯವು ಕೆಡಲಿಲ್ಲ. ಬೆಂಗಳೂರ್ಜ್ವರ ಜನರನ್ನು ಕಾಡುತ್ತಿದೆ. ಪ್ಲೇಗ್ ಉಪದ್ರವ ಮಾತ್ರ ಇದುವರೆಗೆ ಕಂಡುಬರಲಿಲ್ಲವೆಂದು ಪ್ರಜೆಗಳೆಲ್ಲಾ ಹರ್ಷಪಡುತ್ತಿದಾರೆ.

❖❖❖❖

ಈ ತಿಂಗಳಲ್ಲಿ ವೆಸ್ಲಿಯನ್ ಮಿಷನ್ ಸಂಘದವರು ತುಂಕೂರಿನಲ್ಲಿ ಉಪದೇಶಿಗಳ ಕೂಟವನ್ನು ನಡಸಬೇಕೆಂದು ಗೊತ್ತು ಮಾಡಿದ್ದರಷ್ಟೆ. ತುಂಕೂರಿನಲ್ಲಿ ಪ್ಲೇಗ್ ಉಪದ್ರವಿರುವದೆಂದು ಖಬರಿ ತಿಳಿದು ಬಂದಕಾರಣ ಆ ಕೂಟವನ್ನು ತುಂಕೂರು ಬಿಟ್ಟು ಬೆಂಗಳೂರಿನಲ್ಲಿ ಆಗಸ್ಟ್ ೧೪ ರಿಂದ ನಡಸಬೇಕೆಂದು ಬದಲಾವಣೆ ಮಾಡಿದಾರೆ. ಈ ಸಂಘಕ್ಕೆ ಬರೋಗತಕ್ಕವರೆಲ್ಲಾ ೧೩ನೇ ತಾರೀಖು ಸಾಯಂಕಾಲವೇ ಬೆಂಗಳೂರಿನಲ್ಲಿ ಹಾಜರಾಗತಕ್ಕದ್ದು.

❖❖❖❖

ದಿವಾನರವರು ಶಿಫಾರಸು ಮಾಡಿದ್ದರ ಮೇಲೆ ನಮ್ಮ ಮಹಾರಾಜರವರು ಲೋಕಲ್ ಫಂಡ್ ಉತ್ಪತ್ತಿಯ ಹಣದಿಂದ ಗ್ರಾಮಾಂತರಗಳ ಪಾಠಶಾಲೆಗಳ ಪ್ರಯೋಜನಾರ್ಥವಾಗಿ ಕೇಳಿದ ೨೩ ರೂ. ಹಂತೆ ಕೊಡುತ್ತಿದ್ದದನ್ನು ತಪ್ಪಿಸಿ, ಇನ್ನು ಮುಂದೆ ಕೇಳಿದ ೩೬ ರೂ. ಹಂತೆ ಕೊಡಬೇಕೆಂದು ಸ್ಯಾಂಕ್ಷನ್ ಮಾಡಿರುತ್ತಾರೆ. ಹೀಗೆ ಜಾಸ್ತಿ ಹಣವನ್ನು ಕೊಟ್ಟಿರೋಣದರಿಂದ ಗ್ರಾಮಾಂತರಗಳ ಪಾಠಶಾಲೆಗಳು ಇನ್ನೂ ವೃದ್ಧಿಹೊಂದುವವೆನ್ನುವದಕ್ಕೆ ಸಂಶಯವಿಲ್ಲ.

❖❖❖❖

ದಾವಣಗೆರೆಯ ಶಾರದೇವಿ ವಿಲಾಸಾ ಪ್ರೆಸ್ಸಿನಲ್ಲಿ "ವೀರಶೈವ ಸುಧಾ ಸಾರ" ಎಂಬ ಮಾಸಪತ್ರಿಕೆಯು ಕಳೆದ ಜೂನ್ ತಿಂಗಳಿಂದ ಪ್ರಕಟವಾಗುತ್ತಿದೆ. ಪತ್ರಕರ್ತರು ಮೊದಲನೇ ಸಂಚಿಕೆಯೊಂದನ್ನು ನಮ್ಮಲ್ಲಿಗೆ ಕಳುಹಿಸಿದಾರೆ. ಇದರಲ್ಲಿ ವೇ|| ಚಂದ್ರಶೇಖರ ಶಾಸ್ತ್ರಿಗಳು ವೀರಶೈವ ಮತವನ್ನೂ, ಮೆ|| ಟಿ. ವಿಶ್ವೇಶ್ವರೈಯವರು ಕೈಗಾರಿಕೆ ಮತ್ತು ವ್ಯವಸಾಯ ಶಾಸ್ತ್ರಗಳನ್ನೂ ಕುರಿತು ವ್ಯಾಖ್ಯಾನ ಮಾಡಿರುತ್ತಾರೆ. ಈ ಮಾಸಪತ್ರಿಕೆಯ ಕಾಗದವೂ ಅಚ್ಚೂ ಅಷ್ಟು ತೃಪ್ತಿಕರಗಳಾಗಿಲ್ಲ.

❖❖❖❖

ಬೆಂಗಳೂರು ಪಟ್ಟಣಕ್ಕೂ ದಂಡಿಗೂ ಹೆಸರಗಟ್ಟದ ಕೆರೆಯ ನೀರೇ ಕುಡಿಯುವದಕ್ಕೆ ಆಧಾರವಾಗಿದೆಯಷ್ಟೆ. ಈ ಕೆರೆಯ ಆ ಜೂಬಾಜೂದಲ್ಲಿರುವ ಬ್ಯಾಟ, ಕಾಕೋಳು ಗ್ರಾಮಗಳ ಜನರು ಈ ನೀರನ್ನು ಕೊಳಕುಮಾಡಿ ಕೆಡಿಸುತ್ತಾರೆಂಬದಾಗಿ ದಂಡಿನವರು ಮೈಸೂರು ಸರ್ಕಾರದವರಿಗೆ ತಿಳಿಸಿದರು. ಸರ್ಕಾರದವರು ಈಗ ಆ ಗ್ರಾಮಗಳನ್ನೇ ಅಲ್ಲಿಂದ ತೆಗೆದು ದೂರ ಪ್ರದೇಶದಲ್ಲಿ ಕಟ್ಟುವಂತೆ ಏರ್ಪಾಡು ಮಾಡಿದಾರೆ. ಗ್ರಾಮಸ್ಥರೆಲ್ಲಾ ಹೊಸ ಸ್ಥಳದಲ್ಲಿ ಮನೆಗಳನ್ನು ಕಟ್ಟಿಕೊಳ್ಳುವದಕ್ಕೆ ಪ್ರಾರಂಭಮಾಡಿರುವಂತೆ ಕೇಳುತ್ತೇವೆ.

❖❖❖❖

ಕಳೆದ ಜೂನ್ ತಿಂಗಳ ೭ ನೆ ತಾರೀಖಿನ ದಿನ ಮೆ|| ಪುರುಷೋತ್ತಮಾಚಾರ್ಯರು ರಾಜಧಾನಿಯಲ್ಲಿ ಹರಾಜು ಹಾಕಿದ ಕಂಠೀಸರವನ್ನು ಸಾಹುಕಾರ್ ನೋಸಾಯಯವರು ೨೪,೦೦೦ ರೂ. ಗೆ ಕೊಂಡುಕೊಂಡದ್ದರ ಮೇಲೆ ಪ್ರಿನ್ಸ್ ಗೋಪಾಲರಾಜೇ ಅರಸಿನವರು ಆ ನಗ ತಮ್ಮದೆಂಬದಾಗಿ ಇಲ್ಲಿನ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ದಾವಾ ಮಾಡಿದ್ದರಷ್ಟೆ. ಈಚೆಗೆ ಪಾರ್ಟೀಕರು, ಬಿಕರಿ ಮಾಡಿದವರು, ಕೊಂಡುಕೊಂಡವರು ಎಲ್ಲಾ ಸೇರಿ ಇತ್ಯರ್ಥ ಮಾಡಿಕೊಂಡು ರಾಜೀ ಆಗಿರುತ್ತೇವೆಂದು ಮೊಕದ್ದಮೆಯನ್ನು ವಾಪಸು ತೆಗೆದುಕೊಂಡಿರುತ್ತಾರೆ. ಕಂಠೀಸರವನ್ನು ಸಾಹುಕಾರ್ ನೋಸಾಯಯವರೇ ಉಳಿಸಿಕೊಂಡರು.

❖❖❖❖

೧೯೦೨ ನೆ ಜೂನ್ ಆಖೈರಿಗೆ ಪೂರ್ತಿಯಾದ ಒಂದು ಸಾಲಿನಲ್ಲಿ ಮೈಸೂರು ಸಂಸ್ಥಾನದ ಎಕ್ಸೈಜ್ ಇಲಾಖೆ ಹುಟ್ಟುವಳಿಯು ರೂ. ೩೫,೬೬,೪೮೪—೬—೩ ಪೈ ಆಯಿತು. ಅಂದರೆ, ಹಿಂದಿನ ಸಾಲಿನ ಹುಟ್ಟುವಳಿಗಿಂತಲೂ ರೂ. ೧,೩೦,೭೩೪—೨—೩ ಪೈ ಕಡಿಮೆಯಾಗಿದೆ. ಇದಕ್ಕೆ ಆ ಸಾಲಿನಲ್ಲಿ ಪ್ಲೇಗ್ ಉಪದ್ರವ ಜೋರಾಗಿತ್ತು, ಕಾಫಿ ವ್ಯಾಪಾರ ಮಂದವಾದ್ದು ಕಡಿಮೆಯಾಯಿತು, ಲೈಸೆನ್ಸದಾರರು ಹಿಂದಿನ ಸಾಲಿನಲ್ಲಿ ನಷ್ಟಪಟ್ಟರು—ಎಂಬೀ ಕಾರಣಗಳನ್ನು ಕೇಳುತ್ತಾರೆ. ಈಚೆಗೆ ಜಿಲ್ಲೆಯಿಂದ ಬಿಟ್ಟು ಇಳಿಸಿ ತೆಗೆದ ದ್ರಾವಕವನ್ನೂ ಸಾರಾಯಿಯಂತೆ ಬಿಕರಿ ಮಾಡುವರು. ರಮ್, ಬ್ರಾಂದಿ ಮೊದಲಾದ ಮದ್ಯದ್ರಾವಕಗಳು ಹಿಂದಿನ ಸಾಲಿಗಿಂತ ಈ ಸಾಲಿನಲ್ಲಿ ಹೆಚ್ಚಾಗಿ ಹೆಚ್ಚಾಗಿ ಖರ್ಚಾಗಿರುತ್ತವೆ.

❖❖❖❖

ಇದೇ ಜುಲೈ ಪ್ರಾರಂಭದಿಂದ ಕೊಪ್ಪದಲ್ಲಿ ಸರ್ಕಾರದವರು ಮ್ಯುನಿಸಿಪಾಲಿಟಿಯನ್ನು ಇಟ್ಟಿದಾರೆ. ಈ ಮ್ಯುನಿಸಿಪಾಲಿಟಿಗೆ ಸರ್ಕಾರಿ ಉದ್ಯೋಗಸ್ಥರು ೩ ಮಂದಿ ಅಲ್ಲದೆ ಮೆ|| ಗಳಾದ ಹಾಲಗೂರು ವೆಂಕಟಸುಬ್ಬಯ್ಯ, ಕಾಳಗೂರು ಸುಬ್ಬರಾವ್, ಎನ್ನಾರ್ ಮುಗ್ಗಪ್ಪಯ್ಯ, ಅಹಮದ್ ರಾಹುಲ್, ಇಬ್ರಾಹಿಂ ಸಾಬ್—ಎಂಬೀ ೫ ಮಂದಿಯೂ ಮೆಂಬರುಗಳಾಗಿರತಕ್ಕದ್ದೆಂದು ಹುಕುಂ ಆಗಿದೆ. ಕೊಪ್ಪದ ಮ್ಯುನಿಸಿಪಾಲಿಟಿಯಲ್ಲಿ ೧೯೦೩—೦೪ ನೇ ಸಾಲಿನಲ್ಲಿ ೧,೫೦೦ ರೂ. ಉತ್ಪತ್ತಿಯೂ ೧,೩೪೬ ರೂ. ಖರ್ಚೂ ಆಗುವದೆಂದು ಅಂದಾಜು ಹಾಕಿದಾರೆ. ಈ ಖರ್ಚಿನಲ್ಲಿ ಕಚೇರಿ ಸಾಗಿಸುವದಕ್ಕೆ ೫೨೯ ರೂ., ದೀಪಕ್ಕೆ ೬೦೪ ರೂ., ರಸ್ತೆಗಳನ್ನು ಮಾಡಿಸುವದಕ್ಕೆ ೧೦೦ ರೂ. ವಿನಿಯೋಗಿಸಬೇಕೆಂದು ಸ್ಯಾಂಕ್ಷನ್ ಆಗಿದೆ.

❖❖❖❖

ಕಳೆದ ೧೯೦೩ನೇ ಜೂನ್ ಆಖೈರಿಗೆ ಮುಗಿದ ೧೨ ತಿಂಗಳಲ್ಲಿ ಬೆಂಗಳೂರು ಪಟ್ಟಣದಲ್ಲಿರುವ ಸರ್ಕಾರಿ ತರಪಾಲು ಬಂಗಲೆಗೆ ೧,೬೩,೬೫೦ ಜನರು ಹೋಗಿ ಒಳಗೆ ಇಟ್ಟಿರುವ ವಸ್ತುಗಳನ್ನು ನೋಡಿಕೊಂಡು ಬಂದರು. ಅದರಲ್ಲಿ ಇಟ್ಟಿರುವ ಸರಕುಗಳ ಪ್ರತಿ ನೋಡಬ. ಸಾಗರಗಳಿಂದ ತರಿಸಿದಾಗಿ ಬಂದವುಗಳೆಲ್ಲಾ ಬಹಳ ಉತ್ಕೃಷ್ಟವಾಗಿದ್ದವು. ಅವುಗಳ ಪ್ರತಿ ಕೆಲವು ಸಾಮಾನು ಬಿಕರಿ ಮಾಡಿದ್ದರಲ್ಲಿ ೧,೦೯೬ ರೂ. ಹುಟ್ಟುವಳಿ ಆಗಿದೆ. ಆ ಪ್ರಾಂತ್ಯದ ಚಿತ್ರ ಕೆಲಸಗಾರರು ಪ್ರಾಚೀನದಿಂದ ಮಾಡುತ್ತಿದ್ದಂಥಾ ಚಿತ್ರ ಕೆಲಸಗಳನ್ನು ಮಾಡದೆ ಶೀಘ್ರತರ ಚಿತ್ರಗಳನ್ನು ಗಂಧದಲ್ಲಿ ಕೆತ್ತುತ್ತಾರೆ. ಇದು ಅಷ್ಟು ತೃಪ್ತಿಕರವಾಗಿಲ್ಲವೆಂದು ಮ್ಯೂಸಿಯಂ ಯವರು ಗವರ್ನಮೆಂಟ್ ಸೆಕ್ರೆಟರಿಗೆ ತಿಳಿಸಿರುವರು. ಈ ತರಪಾಲು ಬಂಗಲೆಗೆ ಆ ಸಾಲಿನಲ್ಲಿ ರೂ. ೩,೦೩೯—೧೦—೨ ಪೈ ಖರ್ಚಾಯಿತು.

❖❖❖❖

ಕಳೆದ ೩ ನೆ ತಾರೀಖಿನ ದಿನ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಸರ್ ಶೇಷಾದ್ರಿ ಐಯರವರ ಮೆಮೋರಿಯಲ್ ಫಂಡ್ ಕಮಿಟಿ ಮೆಂಬರುಗಳು ಸಭೆ ಸೇರಿದ್ದರು. ಅದುವರೆಗೆ ರೂ. ೫೩,೬೪೮—೧೦—೭ ಪೈ ಚಂದಾ ವಸೂಲಾಗಿದೆ ಎಂತಲೂ, ಇನ್ನೂ ವಸೂಲಾಗಬೇಕಾಗಿರುವದು ರೂ. ೯೩,೯೫೬—೬—೫ ಪೈ (ವಾಗ್ದಾನವಾಗಿದೆ) ಎಂತಲೂ ತಿಳಿದುಬಂತು. ರೀವಾ ಸಂಸ್ಥಾನದ ಮಹಾರಾಜರಿಂದ ೨೦೦ ರೂ., ಕಪೂರ್ಥಲದ ಮಹಾರಾಜರಿಂದ ೧೦೦ ರೂ., ಜನರಲ್ ಕೋಲ್ ಯವರಿಂದ ೫೦ ರೂ., ಚಂದಾ ಪಾವತಿ ಆಗಿದ್ದದನ್ನು ಮೆಂಬರುಗಳು ಕೇಳಿ, ಅವರನ್ನು ವಂದಿಸಿ ಸ್ವೀಕರಿಸಿದರು. ಪ್ರೆಸಿಡೆಂಟರು ಈ ಫಂಡಿಗೆ ಮುಂದಿನ ಆಗೀಷ್ಟು ಕಡೇವರೆಗೂ ಡೆಪ್ಟಿ ಕಮಿಷನರುಗಳು ಚಂದಾ ಎತ್ತುತ್ತಿರಬೇಕೆಂಬದಾಗಿ ಸೂಚಿಸಿದ್ದನ್ನು ಮೆಂಬರುಗಳೆಲ್ಲಾ ಒಪ್ಪಿರುತ್ತಾರೆ. ತರುವಾಯ ಸರ್ ಶೇಷಾದ್ರಿ ಐಯರವರ ಹೆಸರಿನಲ್ಲಿ ಯಾವ ಸ್ಥಳದಲ್ಲಿ ಎಂಥಾ ಕಾರ್ಯವನ್ನು ಮಾಡಬೇಕೆಂಬ ವಿಚಾರವನ್ನು ಕುರಿತು ಮೆಂಬರುಗಳು ಸ್ವಲ್ಪ ಹೊತ್ತು ಚರ್ಚೆಮಾಡಿ, ಕಡೆಗೆ ಚಂದಾ ಕೊಟ್ಟವರನ್ನೆಲ್ಲಾ ಆಗೀಷ್ಟಿನಲ್ಲಿ ಒಂದು ಕಡೆ ಸೇರಿಸಿ, ಅವರ ಅಭಿಪ್ರಾಯವೇನೆಂಬದನ್ನು ತಿಳಿಯಬೇಕು ಎಂಬದಾಗಿ ಗೊತ್ತುಮಾಡಿದರು.

❖❖❖❖

ಕಳೆದ ಫೆಬ್ರವರಿ ೧೩ ನೆ ತಾರೀಖಿನ ದಿನ ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಸೇರಿದ ನೀಸ ಬೆಳತೂರೆಂಬ ಗ್ರಾಮದಲ್ಲಿ ಕೆಲವು ಜನರು ಜಂಗಲಿನಿಂದ ಸಾಮಾನು ಕಳವು ಮಾಡಿದರೆಂದು ಬಸವಲಿಂಗಪ್ಪನವರು ಸರ್ಕಾರಕ್ಕೆ ರಿಪೋರ್ಟು ಮಾಡಿದರೆಂಬ ಕಾರಣಕ್ಕಾಗಿ ಮಾಸಪ್ಪನೆಂಬವನು ಬಸವಲಿಂಗಪ್ಪನವರನ್ನೂ ಖಾಸಿಂಸಾಬಿ, ಕಾರಮ್ಮ, ಪಾರ್ವತಮ್ಮ, ಸಿದ್ದರಾಮಯ್ಯ ಎಂಬವರನ್ನೂ ಬಂದೂಕಿನಿಂದ ಹೊಡೆದು ಗಾಯಮಾಡಿದನಷ್ಟೆ. ಈ ಪೈಕಿ ಸಿದ್ದರಾಮಯ್ಯನು ಸತ್ತುಹೋದನು. ಉಳಿದವರ ಗಾಯಗಳೆಲ್ಲಾ ವಾಸಿಯಾಗಿ ಈಗ ಆರೋಗ್ಯವಾಗಿದಾರೆ. ಪೊಲೀಸಿನವರು ಮಾಸಪ್ಪ, ಮಲಿಯಪ್ಪನ ನಿಂಗಪ್ಪ, ಪಟೇಲ್ ನಾಗೇಗೌಡ ಎಂಬೀ ಮೂರು ಮಂದಿಯನ್ನೂ ಹಿಡಿದು ತನಿಖೆ ಮಾಡಿ, ಸೆಷನ್ ವಿಚಾರಣೆಗೆ ಗುರಿಪಡಿಸಿದರು. ಕಳೆದ ಜೂನ್ ೧ ರಿಂದ ೧೧ ನೆ ತಾರೀಖುವರೆಗೆ ಈ ಮೊಕದ್ದಮೆಯನ್ನು ಮೈಸೂರು ಸೆಷನ್ಸ್ ಜಡ್ಜರು ತನಿಖೆ ಮಾಡಿ ಪೂರೈಸಿದರು. ಖೈದಿಗಳ ಕಡೆ ಮೆ|| ಆವಸ್ರ್ ಯವರು ವಕೀಲರಾಗಿ ವಾದಿಸಿದರು. ಮೊನ್ನೆ ೧೩ ನೆ ತಾ|| ಸೋಮವಾರ ಮಧ್ಯಾಹ್ನ ಸೆಷನ್ಸ್ ಜಡ್ಜರು ತೀರ್ಮಾನವನ್ನು ಹೇಳಿದರು. ಮೊದಲನೆ ಅಪರಾಧಿ ಮಾಸಪ್ಪನಿಗೆ ಫಾಸಿ ಸಜವೂ, ೨—೩ ನೆ ಅಪರಾಧಿಗಳಿಗೆ ಆಮರಣಾಂತ ಸಜವೂ ಆಯಿತೆಂದು ಕೇಳುತ್ತೇವೆ.

## ಮೈಸೂರು ಗೆಜೆಟ್ ಸಂಗ್ರಹ.

ರೆವರೆಂಡ್ ಎಂ. ಡಿಹಾಜರ್ ಯವರು ಮ್ಯುನಿಸಿಪಲ್ ಮೆಂಬರು ಕೆಲಸಕ್ಕೆ ರಾಜೀನಾಮೆ ಕೊಟ್ಟದ್ದರಿಂದ ಅವರಿಗೆ ಬದಲಾಗಿ ರೆವರೆಂಡ್ ಫಾದರ್ ವೆಸ್ಸೇಯರವರು ಚಿಕ್ಕಮಗಳೂರು ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ನೇಮಕಮಾಡಲ್ಪಟ್ಟಿರುವರು.

ಚಿತ್ರದುರ್ಗದ ಸಬಾರ್ಡಿನೇಟ್ ಜಡ್ಜಿಯವರಾದ ಮೆ|| ವಿಜಲ್ ಹಂಜಾ ಹುಸೇನ್ ಯವರಿಗೆ ಜೂನ್ ಮಾಹೆಯಲ್ಲಿ ಕೊಟ್ಟಿದ್ದ ೨೪ ದಿನಗಳ ಪ್ರಿವಿಲೇಜ್ ರಜದಲ್ಲಿ ೧೪ ದಿನಗಳನ್ನು ಉಪಯೋಗಿಸಿಕೊಂಡು, ಕೆಲಸಕ್ಕೆ ಹಾಜರಾಗಿರುತ್ತಾರಾಗಿ ಬಾಕಿ ರಜಾಕಾಲವನ್ನು ರದ್ದುಮಾಡಿದೆ.

ಮೈಸೂರ್ ಸೀಮೆಯ ದಿವಾನರ ಪ್ರೈವೇಟ್ ಸೆಕ್ರೆಟರಿಯವರಾದ ಮೆ|| ಎಂ. ಶ್ರೀನಿವಾಸಮೂರ್ತಿ ಯವರಿಗೆ ಜೂನ್ ಮಾಹೆಯಲ್ಲಿ ಕೊಟ್ಟಿದ್ದ ೧೦ ದಿನಗಳ ಪ್ರಿವಿಲೇಜ್ ರಜದಲ್ಲಿ ಅವರು ೭ ದಿನಗಳು ಉಪಯೋಗಿಸಿಕೊಂಡು ಕೆಲಸಕ್ಕೆ ಹಾಜರಾಗಿರುತ್ತಾರೆ. ಬಾಕಿ ೩ ದಿನಗಳ ರಜವನ್ನು ರದ್ದುಮಾಡಿದೆ.

ಮೆ|| ಆರ್. ಅಬ್ದುಲ್ಲಾ ಯವರು ಮತ್ತು ಮೆ|| ಜೆ. ಕ್ಯಾಮರನ್ ಯವರು ಬೆಂಗಳೂರ್ ಶಹರಿನ ಮ್ಯುನಿಸಿಪಲ್ ಕಮಿಷನರುಗಳಾಗಿ ಇನ್ನೂ ೩ ವರ್ಷಗಳ ವರೆವಿಗೆ ಪುನಃ ನೇಮಿಸಲ್ಪಟ್ಟಿರುತ್ತಾರೆ.

ಬೌರಿಂಗ್‌ಪೇಟೆ ಟವ್ನಿನಲ್ಲಿ ಸಂತೆ ಕಟ್ಟುವದಕ್ಕೆ ಸ್ಥಳ ಬೇಕಾಗಿರುವದರಿಂದ ಅದರ ಮುಂದಿಗೆ ಸೇರಿರುವ ಖುಷ್ಕಿ ಜಮೀನು ಸರ್ಕಾರದವರಿಗೆ ಬೇಕಾಗಿದೆ.

ಕೋಲಾರ್ ಚಿನ್ನದ ಗಣಿಗಳ ಸಿವಿಲ್ ಸರ್ಜನ್ ಮೆ|| ಆ. ಎಸ್. ಕೃಷ್ಣಸ್ವಾಮಿ ಐಯರಿಗೆ ಕೊಟ್ಟಿದ್ದ ಪ್ರಿವಿಲೇಜ್ ರಜವನ್ನು ಇನ್ನು ೭ ದಿನ ಜಾಸ್ತಿ ಮಾಡಿದೆ.

ಸಬ್ ಅ|| ಸರ್ಜನ್ ಮೆ|| ಕೆ. ಅನಂತರಾಮಯ್ಯಂಗಾರ್ರಿಗೆ ೧೦ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಇನ್ಸ್ಪೆಕ್ಟರ್ ಜನರಲ್ ಮೆ|| ಎಚ್. ಜೆ. ಭಾಭಾ ಯವರಿಗೆ ಜುಲೈ ೧೮ ಲಾಗಾಯತು, ಅಥವಾ ಅವರು ಉಪಯೋಗಿಸಿಕೊಳ್ಳುವ ದಿನದಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರ ಅಸಿಸ್ಟೆಂಟರಾಗಿರುವ ಮೆ|| ಟಿ. ಆರ್. ವೆಂಕಟಸ್ವಾಮಿ ನಾಯ್ಡು ಯವರು ಇನ್ಸ್ಪೆಕ್ಟರ್ ಜನರಲ್‌ರವರ ಆಫೀಸ್ ಛಾರ್ಜನ್ನೂ ವಹಿಸತಕ್ಕದ್ದು.

ಮೂಡಿಗೆರೆ ತಾಲ್ಲೂಕು ಅಮಲ್ದಾರ್ ಮೆ|| ಅಬ್ದುಲ್ ಕರೀಂ ಯವರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸಿರಸ್ತೆದಾರ್ ವ್ಯಾಸರಾಯರು ತಾಲ್ಲೂಕ್ ಛಾರ್ಜನ್ನು ವಹಿಸಿ ಬಾಕಿ ಕೆಲಸಗಳನ್ನು ನೋಡತಕ್ಕದ್ದು.

ಗೌವರ್ನಮೆಂಟ್ ಅ|| ಸೆಕ್ರೆಟರಿ ಮೆ|| ವಿ. ಆರ್. ತ್ಯಾಗರಾಜಯರಿಗೆ ಎಂಟು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಚಿಕ್ಕಬಳ್ಳಾಪುರದ ತಾಲ್ಲೂಕ್ ಅಮಲ್ದಾರ್ ಮೆ|| ವಿ. ಸುಬ್ಬರಾಯರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸಿರಸ್ತೆದಾರ್ರು ತಾಲ್ಲೂಕಿನ ಛಾರ್ಜನ್ನು ವಹಿಸಿ, ಬಾಕಿ ಕೆಲಸಗಳನ್ನು ನಡಸತಕ್ಕದ್ದು.

## ತಾಮುದಾಸಯ್ಯ ಗುರುದಾಸಯ್ಯನಾದದ್ದು.
### (ತಾನೇ ಬರೆದ ವೃತ್ತಾಂತ)

(ಕಳೆದ ವಾರದ ಶೇಷ.)

೩. ನನಗೆ ಗುರುವು ದೊರಕಿದ್ದು.

ನಾನು ಕ್ರೈಸ್ತನಾದ ಮೇಲೆಯೂ ಅದಕ್ಕಿಂತ ಮುಂಚೆಯೂ ಯಾರ ಬೋಧನೆಯಿಂದಲಾದರೂ ಗುಣಪಟ್ಟವನಲ್ಲವೆಂದು ಮೇಲೆ ತಿಳಿಸಿದ್ದೇನೆ. ಯಾಕಂದರೆ ನನ್ನ ಸ್ವಂತ ಅನುಭವದಿಂದ ಯೇಸುವಿನ ಅತಿಶಯವನ್ನು ತಿಳಿಯಬೇಕೆಂಬ ನಿರೀಕ್ಷೆಯು ನನ್ನಲ್ಲಿತ್ತು. ಆದದರಿಂದ ನಾನು ಯಾರಿಗೂ ಕಿವಿಕೊಡದೆ ಒಂದು ಹೊಸ ಒಡಂಬಡಿಕೆಯನ್ನು ಸಂಪಾದಿಸಿಕೊಂಡು, ವಿಶ್ವಾಸದಿಂದಲ್ಲ, ಪರೀಕ್ಷಿಸಬೇಕೆಂಬ ಯೋಚನೆಯಿಂದ ಓದುತ್ತಾ ಬಂದೆ. ಆದಾಗ್ಯೂ ಅದರ ಅಂತರ್ಯವನ್ನು ಗ್ರಹಿಸುವದಕ್ಕೆ ಆಗಲಿಲ್ಲ. ಮತ್ತು ಅದರಲ್ಲಿ ಸಾಧಾರಣವಾಗಿ ತಿಳಿಯುವಂಥ ಅದ್ಭುತ ಕ್ರಿಯೆಗಳು ಬಹಳವಾಗಿದ್ದವು. ಆದರೆ ಅವುಗಳನ್ನು ಕುರಿತು ಆಶ್ಚರ್ಯವಾದವುಗಳೆಂದು ಯೋಚಿಸುವದಕ್ಕೆ ಹೋದರೆ ಹಿಂದು ಜನರಲ್ಲಿಯೂ ಮಹಾತ್ಮರೆನ್ನಿಸಿಕೊಂಡವರಲ್ಲಿ ಕೆಲವರು ಅದೇಪ್ರಕಾರ ಮಾಡಿದ್ದಾರೆಂದು ಹಿಂದೆ ನಾನು ಕೇಳಿದ್ದರಿಂದ ಯೇಸುಸ್ವಾಮಿ ಮಾಡಿದ್ದರಲ್ಲಿ ನನಗೆ ಸಾಧಾರಣವಾಗಿ ತೋರಿತೇಹೊರತು ಅಷ್ಟು ಆಶ್ಚರ್ಯವಾಗಿ ಏನೂ ತೋರಲಿಲ್ಲ. ಮತ್ತು ಪ್ರತಿ ಭಾನುವಾರಗಳಲ್ಲಿ ನಡಿಯುವಂಥ ಪ್ರಸಂಗಗಳನ್ನು ಸಹ ಎಷ್ಟು ಕೇಳುತ್ತಾ ಬಂದಾಗ್ಯೂ ಕಡೆಯಲ್ಲಿ ಅದು ಸಹ ಅಷ್ಟೇ ಆಯಿತು. ಯಾಕಂದರೆ ಹೊಸ ಒಡಂಬಡಿಕೆಯಲ್ಲಿರುವ ಅನುಭವದ ರೂಢಿ ಪದ್ಧತಿಗೂ ಪ್ರಸಂಗಗಳಲ್ಲಿರುವ ಬೋಧನೆಯ ರೂಢಿ ಪದ್ಧತಿಗೂ ಮತ್ತು ನನ್ನ ಹಿಂದಿನ ಅನುಭವದ ರೂಢಿ ಪದ್ಧತಿಗೂ ಬಹಳ ವ್ಯತ್ಯಾಸವಾಗಿರುವದರಿಂದ ಅದು ನನ್ನ ಬುದ್ಧಿಗೆ ಗಲಿಬಿಲಿಯಾಗಿ ತೋರಿತೇಹೊರತು ನನ್ನ ತಿಳುವಿಕೆಗೆ ಸರಿಯಾಗಿ ತೋರಲಿಲ್ಲ. ಯಾಕಂದರೆ ಅದಕ್ಕೆ ನಾನು ಹೊಸಬನಾಗಿಯೂ ನನಗೆ ಅದು ಹೊಸದಾಗಿಯೂ ಇರುವದರಿಂದ ಮತ್ತೇನೂ ಪ್ರಯೋಜನವಾಗಲಿಲ್ಲ. ಇದರಿಂದ ನನ್ನ ಮನಸ್ಸಿಗೆ ಮತ್ತೂ ದುಃಖಕ್ಕೆ ಕಾರಣವಾಯಿತು. ಯಾಕಂದರೆ ಎಲ್ಲಾ ಬಿಟ್ಟು ಇಲ್ಲಿಗೆ ಬಂದಿದ್ದೇನೆ, ಇಲ್ಲಿಯೂ ಸಹ ನನ್ನ ಅನುಭವಕ್ಕೆ ತಕ್ಕಂಥ ತಿಳುವಳಿಕೆಯು ಇಲ್ಲದೆ ಹೋದರೆ ಇದನ್ನು ನಂಬಿದ್ದಕ್ಕೆ ಫಲವೇನು? ಇದನ್ನು ಬಿಟ್ಟು ಇನ್ನಾವದನ್ನು ನಂಬಲಿ? ಇನ್ನೆಲ್ಲಿಗೆ ಹೋಗಲಿ? ಇದಕ್ಕಾಗಿ ನಾನು ಹಿಂದೆ ಪಟ್ಟಂಥ ಕಷ್ಟವನ್ನು ಇನ್ನೂ ಮರಿಯಲಿಲ್ಲ, ಮತ್ತೊಂದು ಕಷ್ಟವು ಮುಂದೆ ಕಾದುಕೊಂಡಿದೆ, ಇದಕ್ಕೆ ತಪ್ಪಿಸಿಕೊಳ್ಳುವಂಥ ಮಾರ್ಗವು ಯಾವದೆಂಬ ಚಿಂತೆಯು ನನ್ನಲ್ಲಿ ಬಲವಾಗುತ್ತಾ ಬಂತು. ಈ ಕೊರತೆಯನ್ನು ಯಾರಿಗೂ ತಿಳಿಸದೆ ಮೌನವಾಗಿದ್ದು ಇನ್ನು 'ಕೆಲವು ಕಾಲ ತಾಳ್ಮೆಯಿಂದ ನೋಡೋಣ' ಅಲ್ಲಿಗೂ ಯೇಸುವಿನ ನಿಜಸ್ಥಿತಿಯು ನನ್ನ ಅನುಭವಕ್ಕೆ ಗೋಚರವಾಗದೆ ಹೋದರೆ ಈ ಮಾರ್ಗವೇ ಸುಳ್ಳೆಂದು ನಿಶ್ಚಯಿಸಿಕೊಂಡು ಆನಂತರ ಬೇರೆ ಆಲೋಚನೆ ಮಾಡಿಕೊಳ್ಳೋಣ ಎಂದು ತೀರ್ಮಾನಿಸಿಕೊಂಡು ಮೊದಲಿನಂತೆ ಆ ಹೊಸಒಡಂಬಡಿಕೆಯನ್ನು ಓದುತ್ತಾ ಪ್ರಸಂಗಗಳನ್ನು ಕೇಳುತ್ತಾ ಇದ್ದೆ. ಈ ಪ್ರಕಾರ ನಾನು ಕೆಲವು ವರುಷಗಳ ಮಟ್ಟಿಗೂ ದುಃಖದಿಂದಲೂ ವ್ಯಸನದಿಂದಲೂ ಸಂತಾಪದಿಂದಲೂ ಕಾಲವನ್ನು ಕಳೆಯುತ್ತಾ ಇರುವಾಗ, ಅಕಸ್ಮಾತ್ತಾಗಿ ಯೇಸುಕ್ರಿಸ್ತನ ಆಕರ್ಷಣ ಶಕ್ತಿಯು ನನ್ನ ಅನುಭವದಲ್ಲಿ ಒಂದು ಬೆಳಕಿನ ಚಿನ್ಹೆಯ ಹಾಗೆ ಕಾಣಿಸಿಕೊಂಡು, ಆತನ ದೈವ ಬಲವನ್ನು ಗ್ರಹಿಸುವಂಥ ಭಕ್ತಿ ವಿಶ್ವಾಸವನ್ನು ಎಬ್ಬಿಸುತ್ತಾ ಬಂತು. ಆ ಭಕ್ತಿ ವಿಶ್ವಾಸವು ನನ್ನ ಬುದ್ಧಿಯ ಕಣ್ಣುಗಳನ್ನು ತೆರೆದು ಆ ತ್ರಿಯೇಕನಾದ ನಿಜ ದೇವರ ಸ್ವಭಾವ ಗುಣಲಕ್ಷಣಗಳನ್ನೂ ಆತನ ಅಪರಿಮಿತವಾದ ಪ್ರೀತಿಯನ್ನೂ ಆತನ ನೀತಿ ನ್ಯಾಯ ಸತ್ಯಗಳನ್ನೂ ಪ್ರಕಟಮಾಡುತ್ತಾ ಬಂತು. ಇದರಿಂದ ನನ್ನ ಮನಸ್ಸಿನಲ್ಲಿ ಪಾಪದ ಭಯವು ಪರಿಶುದ್ಧ ತಿಳುವಳಿಕೆಯು ಸತ್ಯದ ನಿರೀಕ್ಷೆಯು ದಿನದಿನಕ್ಕೆ ಹೆಚ್ಚುತ್ತಾ ಬಂದದರಿಂದ ಕ್ರಮೇಣ ನನ್ನ ಹಳೇ ಸ್ವಭಾವವು ಮಾರ್ಪಡುತ್ತಾ ಹೊಸ ಸ್ವಭಾವವು ನನ್ನ ನೆನಪಿನಲ್ಲಿ ಕಾಣುತ್ತಾ ಬಂತು. ಆದರೆ ಅಂಥಾ ಹೊಸ ಸ್ವಭಾವವು ಕಾಣಿಸಿಕೊಂಡು ತಿರಿಗಿ ಮಾರ್ಪಟ್ಟುಹೋಗದೆ ಇಂದಿನ ವರಿಗೂ ಮಾತ್ರ ಬಲಗೊಳ್ಳುತ್ತಾ ಪ್ರಸರಿಸುತ್ತಾ ಬರುವದರಿಂದ ಇದನ್ನು ಅನುಗ್ರಹಿಸಿದಂಥ ಕರ್ತನೇ ಅದಕ್ಕೆ ಕಾರಣನಾಗಿದ್ದಾನೆಂದು ವಿಶ್ವಾಸಬಂದ ಅರಿಕೆಮಾಡುತ್ತೇನೆ. ಯಾಕಂದರೆ ತಪ್ಪಿಹೋದ ಕುರಿಯಾಗಿದ್ದ ನಾನು ನನ್ನ ಕುರುಬನ್ಯಾರೆಂದು ತಿಳಿಯದೆ ಕಣ್ಣೀರು ಬಿಡುತ್ತಾ, ಹೊತ್ತಿಗೆ ಮೇವು ನೀರು ಇಲ್ಲದೆ ಬಳಲುತ್ತಾ, ನನ್ನ ಕುರುಬನೇ, ನನ್ನ ಕುರುಬನೇ, ಎಲ್ಲಿ ಇದ್ದೀ? ಯಾವ ಕಡೆಯಲ್ಲಿದ್ದೀ? ಯಾಕೆ ನನ್ನನ್ನು ಈ ಅರಣ್ಯದ ಅವಸ್ಥೆಯಲ್ಲಿ ಕೈಬಿಟ್ಟಿದ್ದೀ? ಯಾವಾಗ ನನ್ನ ಬಳಿಗೆ ಬಂದು ನನ್ನನ್ನು ಆದರಿಸುತ್ತೀ? ಎಂದು ದಿಕ್ಕು ತೋಚದೆ ಸಿಕ್ಕಿದ ಕಡೆಗಳಲ್ಲಿ ಅಲೆಯುತ್ತಾ ಇರುವಾಗ ನನ್ನ ಕುರುಬನಾದ ಯೇಸು ರಕ್ಷಕನು ನನ್ನನ್ನು ಕರುಣಿಸಿ ನನ್ನ ನಿಮಿತ್ತವಾಗಿ ತಾನು ಸಹ ಕಣ್ಣೀರನ್ನು ಸುರಿಸುತ್ತಾ ನನ್ನ ಹಿಂದೆಯೇ ಅದೃಶ್ಯನಾಗಿ ತಿರುಗುತ್ತಾ ಇದ್ದನೆಂದು ಈಗ ಆತನ ಕೃಪೆಯನ್ನು ನೆನಸಿ ನಂಬುತ್ತೇನೆ. ಯಾಕಂದರೆ ಆಗಾಗ್ಯೆ ನಾನು ಪ್ರಯಾಣಗಳಲ್ಲಿ ಹಸಿದು ಕಂಗೆಟ್ಟು ಬಳಲಿ ಬಿದ್ದುಹೋಗುವ ಸಮಯಗಳಲ್ಲಿ ಆತನು ತಾಯಿಯ ಹಾಗೆ ನನ್ನನ್ನು ಕೈಹಿಡಿದು ಆದರಿಸುತ್ತಾ ಸಲಹುತ್ತಾ ಬಂದನು. ಮತ್ತು ನಾನು ಆರು ತಿಂಗಳ ಪರಿಯಂತರ ಸಿಕ್ಕಿದ ನೀರನ್ನು ಕುಡಿಯುತ್ತಾ ಸಿಕ್ಕಿದ್ದನ್ನು ಉಣ್ಣುತ್ತಾ ಪರದೇಶಿಯ ಹಾಗೆ ತಿರುಗುತ್ತಾ ಇರುವಾಗ ಆತನು ನನಗೆ ಒಬ್ಬ ವೈದ್ಯನ ಹಾಗಿದ್ದು ಯಾವ ರೋಗವೂ ಬಾರದಂತೆ ನನ್ನನ್ನು ಕ್ಷೇಮದಲ್ಲಿ ಕಾಪಾಡುತ್ತಾ ಬಂದನು. ಮತ್ತು ಹಿಂದೊಂದು ಸ್ಥಳಗಳಲ್ಲಿ ಭಂಗಿಕೋರರು ನನ್ನ ಸಂಗಡ ಮಾಡುವಂಥ ಅವಿವೇಕದ ತರ್ಕಗಳಿಗೆ ನಾನು ಒಪ್ಪದೆ ಇರುವದನ್ನು ಕಂಡು ಹೊಡೆಯುವದಕ್ಕಿರುವ ಸಮಯಗಳಲ್ಲಿ ಆತನು ನನಗೆ ಸಹಾಯಕನಾಗಿದ್ದು ಅವರ ದುಷ್ಕೃತ್ಯದ ಕೋಲುಗಳಿಂದ ನನ್ನನ್ನು ತಪ್ಪಿಸುತ್ತಾ ಬಂದನು. ಮತ್ತು ನಾನು ದೇಶಾಂತರವಾಗಿ ಹೋಗುವಾಗಲೂ ಬರುವಾಗಲೂ ಮಾರ್ಗದಲ್ಲಿ ಹೆಡೆಗಳನ್ನು ಎತ್ತಿಕೊಂಡು ನನ್ನನ್ನು ಕಡಿಯುವದಕ್ಕಿದ್ದಂಥ ಎರಡು ದೊಡ್ಡ ಸರ್ಪಗಳ ಬಾಯಿಯಿಂದ ನನ್ನನ್ನು ತಪ್ಪಿಸುತ್ತಾ ಬಂದನು. ಮತ್ತು ನಾನು ವನವಾಸವನ್ನು ತೀರಿಸಿಕೊಂಡು ಹಿಂದಕ್ಕೆ ಬರುವ ಮಾರ್ಗದಲ್ಲಿ ಎರಡಾವರ್ತಿ ನನ್ನ ಬಟ್ಟೆಗಳನ್ನು ಸುಲುಕೊಂಡು ಬೆತ್ತಲೆಯಾಗಿ ಮಾಡುವದಕ್ಕಿದ್ದಂಥ ಕಳ್ಳರ ಕೈಯಿಂದ ನನ್ನನ್ನು ಅಕಸ್ಮಾತ್ತಾಗಿ ತಪ್ಪಿಸಿ ಮಾನದೊಂದಿಗೆ ಕಾಪಾಡುತ್ತಾ ಬಂದನು. ಈ ಪ್ರಕಾರ ಕರ್ತನು ನನ್ನ ಪ್ರಯಾಣದ ಅಂತ್ಯದ ವರಿಗೂ ನನ್ನ ಹಿಂದೆಯೇ ಇದ್ದುಕೊಂಡು ನನ್ನ ಹಿಂದಿನ ನಂಬಿಕೆಯ ಅಪೇಕ್ಷೆಯು ತೀರುವ ಮಟ್ಟಿಗೂ ನಾನು ಹೋದಹಾಗೆಲ್ಲಾ ಕೈಬಿಟ್ಟು ತರುವಾಯ ಆ ಕಾಲನ ಹಾಗೆ ನನ್ನ ಕಠಿಣವಾದ ಹೃದಯವನ್ನು ಆಶ್ಚರ್ಯವಿಧವಾಗಿ ಮಾರ್ಪಡಿಸಿ, ತನ್ನ ಅಪರಿಮಿತವಾದ ಪ್ರೀತಿಯಲ್ಲಿಯೂ ಅನ್ಯೋನ್ಯದಲ್ಲಿಯೂ ಸ್ಥಿರಪಡಿಸಿ ಇಂದಿನವರಿಗೂ ತನ್ನ ನಾಮಕ್ಕಾಗಿ ನನ್ನನ್ನು ಆಶೀರ್ವದಿಸುತ್ತಾ ಬಂದದರಿಂದ ಆತನ ಕೃಪೆಗೆ ಅನಂತ ಸ್ತೋತ್ರವಾಗಲಿ! ಆಮೆನ್. ಇದೇ ನನ್ನ ಗುಣಪಡುವಿಕೆಯ ಆರಂಭವು.

## ಇಂಗ್ಲಿಷ್ ಜನರೂ ಹಿಂದುಗಳೂ ಮನಃಪೂರ್ವಕವಾದ ಸ್ನೇಹಿತರಾಗುವದು ಹ್ಯಾಗೆ

ಈ ವಿಷಯವನ್ನು ವಿವರಿಸುವಲ್ಲಿ ಇಂಗ್ಲಿಷ್ ಜನರ ಗುಣ ಪದ್ಧತಿ ಯೋಗ್ಯತೆಗಳನ್ನೂ ಅದರಂತೆ ಹಿಂದುಗಳವನ್ನೂ ಪೂರ್ಣವಾಗಿ ತಿಳಿದು ಯಾವ ವಿಷಯಗಳಲ್ಲಿ ಉಭಯರೂ ಒಂದಾಗಿಲ್ಲವೆಂತ ಕಂಡುಹಿಡಿಯಬೇಕಾದ್ದು ಮೊದಲನೇ ಕೆಲಸವಾಗಿರಬೇಕು. ನಂತರ ಹೀಗೆ ಒಬ್ಬೊಬ್ಬರು ವ್ಯತಿರಿಕ್ತವಾದ ಅಭಿಪ್ರಾಯ ಆಚರಣೆ ಮತಗಳನ್ನು ಅನುಸರಿಸುತ್ತಿರುವಲ್ಲಿ ಸದ್ಯಕ್ಕೆ ಮತವಿಷಯ ವಿನಹಾ ದೇಶೀಯ ಕಾರ್ಯಗಳಲ್ಲೂ ಸಮೋದರ ಭಾವದಲ್ಲೂ ಏಕಮತವನ್ನು ಹೊಂದುವಂತೆ ಪರಸ್ಪರ ವಿರುದ್ಧವಾದ ಕಾರ್ಯಗಳನ್ನೂ ಕಾರಣಗಳನ್ನೂ ಬುದ್ಧಿವಂತರೂ ವಿದ್ಯಾವಂತರೂ ಒಳ್ಳೇ ಜನರೂ ಚನ್ನಾಗಿ ವಿಮರ್ಶಿಸಿ ನಿಶ್ಚಯಿಸಿ ತಾವು ಆಚರಣೆಯಲ್ಲಿ ತಂದು ಇತರರಿಗೆ ತಿಳಿಸಿ ಸ್ಥಿರಪಡಿಸಬೇಕು. ಸದ್ಯಕ್ಕೆ ಕೆಲವು ಮಾತ್ರ ವಿವರಿಸುವೆನು. ಯೂರೋಪಿಯನ್ ಜನರಲ್ಲಿ ಬುದ್ಧಿವಂತರೂ ಮೂಢರೂ ಯೋಗ್ಯರೂ ಅಯೋಗ್ಯರೂ ಲಕ್ಷಾಧಿಪತಿಗಳೂ ಭಿಕ್ಷಾಧಿಪತಿಗಳೂ ಇರುವ ಮೇರಿಗೆ ಹಿಂದುಗಳಲ್ಲೂ ಇರುತ್ತಾರೆ. ಆದ್ದರಿಂದ ನಾಗರೀಕತನದಲ್ಲಾಗಲಿ ವಿದ್ಯದಲ್ಲಾಗಲಿ ಕೈಕೆಲಸ ಅಧಿಕಾರ ಈ ಸ್ಥಿತಿಯಲ್ಲಾಗಲಿ ಮೇಲ್ತರದಲ್ಲಿರುವವರು ತಮಗಿಂತ ಕೀಳ್ತರದಲ್ಲಿರುವವರನ್ನು ಹೀಯಾಳಿಸದೆ ಅವರನ್ನು ಮುಂದಕ್ಕೆ ತರುವಂತೆ ಮನಃಪೂರ್ವಕವಾಗಿ ಪ್ರಯತ್ನಿಸಬೇಕು. ಯಾವ ದೇಶದವರಾಗಲೀ ಮೊದಲು ಯಾವ ವಿಧವಾದ ಅಭಿವೃದ್ಧಿಯನ್ನಾಗಲಿ ಇತರರಿಂದ ಹೊಂದುತ್ತಾರೆಂಬುವದು ನಿಶ್ಚಯವಾಗಿದೆ. ಹೀಗಿರುವಲ್ಲಿ ಯಾರಾಗಲಿ ಜನ್ಮಮದಗಳನ್ನೂ ಅರಿಷಡ್ವರ್ಗಗಳನ್ನೂ ಜೈಸದೆ ಹೋದರೆ ಮನಃಪೂರ್ವಕ ಇತರರಿಗೆ ಎಂದಿಗೂ ಸಹಾಯ ಮಾಡಲಾರರು. ಪ್ರಕೃತ ಹಿಂದುಗಳು ತಮಗೆ ಇಂಗ್ಲಿಷಿನವರಿಂದ ಉಂಟಾಗಿರುವ ಎಲ್ಲಾ ವಿಧ ಬಾಧೆ, ನಷ್ಟಗಳನ್ನೂ ಹಾಗೆ ಇಂಗ್ಲಿಷರು ಮಾಡಿರುವ ಮೇಲು ಕೇಡುಗಳನ್ನು ನಿರ್ದಾಕ್ಷಿಣ್ಯದಿಂದಲೂ ಪಕ್ಷಪಾತವಿಲ್ಲದೆಯೂ ನಿರ್ಧರಿಸಬೇಕು. ಹಿಂದುಗಳಿಗೆ ಇಂಗ್ಲಿಷಿನವರಿಂದ ಮಹೋಪಕಾರಗಳುಂಟಾದವೆಂತ ಅವರು ಹೆಚ್ಚಳಪಡಬಹುದಾದರೂ ಅದು ತಮ್ಮ ಕೃತ್ಯವೇ ಎಂದು ತಿಳಿದು ತಮ್ಮ ಕರ್ತವ್ಯದಲ್ಲಿ ಕಾಣುವ ಕೊರತೆಯನ್ನು ತಿಳಿಯಬೇಕು. ಮತ್ತು ಇಂಡಿಯಾ ದೇಶದಿಂದ ತಮಗುಂಟಾಗಿರುವ ಗೌರವವನ್ನೂ ಲಾಭವನ್ನೂ ಮುಖ್ಯ ಒಂದು ಗಣನೆಯಾಗಿ ಭಾವಿಸಬೇಕು. ಹಿಂದು ದೇಶದ ಮೇಲೆಯೂ ಹಿಂದುಗಳ ಮೇಲೆಯೂ ನಿಜವಾದ ಮತ್ತು ಸಂಪೂರ್ತಿಯಾದ ಪ್ರೀತಿ ವಾತ್ಸಲ್ಯ ಮಮತೆಗಳಿರಬೇಕು 'ನಿನ್ನ ನೆರೆಯವನನ್ನು ನಿನ್ನ ಹಾಗೇ ಪ್ರೀತಿಸು' ಎಂಬ ದೈವಾಜ್ಞೆಯನ್ನು ಆಚರಣೆಯಲ್ಲಿಡಬೇಕು. ಮತ್ತು ದೇವರು ಒಬ್ಬನೆ ಎಂತಲೂ ಸರ್ವರೂ ಆತನ ಮಕ್ಕಳೆಂತಲೂ ನಾವೆಲ್ಲರೂ ಸಂಪೂರ್ಣವಾದ ಪ್ರೀತಿಯಿಂದ ನಡೆದುಕೊಂಡು ಇತರರನ್ನು ಯಾವ ವಿಷಯದಲ್ಲಾಗಲಿ ತಿರಸ್ಕರಿಸದೆ ಹೀಯಾಳಿಸದೆ ಅಸಂಹಿಸದೆ ಕ್ರೂರವಾಗಿಯೂ ಅನ್ಯಾಯವಾಗಿಯೂ ನಡಿಸದೆ ತಮ್ಮ ದೇಶದಂತೆಯೇ ತಮ್ಮ ಜನರಂತಲೇ ನಿಷ್ಕಪಟವಾಗಿ ಭಾವಿಸಿದರೆ ಬಹಳಮಟ್ಟಿಗೂ ಹಿಂದುಗಳನ್ನು ಪ್ರೀತಿಸಿದ ಹಾಗಾಯಿತು. ಹಿಂದುಗಳಾದರೋ ಈವರಿಗೂ ತಮಗೆ ಇಂಗ್ಲಿಷಿನವರಿಂದ ಉಂಟಾಗಿರುವ ಅನೇಕ ಮೇಲುಗಳನ್ನು ಚನ್ನಾಗಿ ವಿಮರ್ಶಿಸಿ ಇದಕ್ಕೆ ಪೂರ್ವದ ಮೊಗಲಾಯರ ಇತರ ಅನ್ಯರಾಜ್ಯಭಾರ ಕಾಲಗಳಲ್ಲೂ ಬೌದ್ಧರ ಆಳ್ವಿಕೆಯಲ್ಲೂ ಅದಕ್ಕೆ ಪೂರ್ವದ ಸ್ಥಿತಿಯನ್ನು ಚನ್ನಾಗಿ ಮನಸ್ಸಿಗೆ ತಂದು ಪಂಜರಪಕ್ಷಿಗಳಂತೆ ಸದ್ಗುಣಗಳನ್ನು ಮಾತ್ರ ತೋರಿಸುವದು ಭಾರತೀಯರ ಕರ್ತವ್ಯವಾಗಿರಬೇಕು. ಹಿಂದುಗಳು ವಿದ್ಯೆಯಲ್ಲೂ, ಬುದ್ಧಿಯಲ್ಲೂ, ನಾಗರೀಕ ವ್ಯವಹಾರ ಪಾರಮಾರ್ಥಿಕ ವಿಷಯಗಳಲ್ಲೂ, ಪರಿವಾದ, ಪ್ರಸಂಗಗಳ ಗೌರವ ತೋರಿಸುವಿಕೆ, ಆತಿಥ್ಯ ಸನ್ಮಾರ್ಗ, ಸ್ನೇಹ ನಿಷ್ಕಪಟ, ನಿರ್ವಂಚನೆಗಳಲ್ಲೂ ಅಸಾಧಾರಣರು. ಹೀಗಿದ್ದರ ಸತ್ ಕ್ರೈಸ್ತರಿಗಿಂತಲೂ ಎಷ್ಟುಮಾತ್ರವೂ ಮುಂದ ಯುಗಗಳಲ್ಲವೆಂತಲೂ ಹಿಂದಾಳುಗಳೇ ಎಂತಲೂ ನಿಶ್ಚಯವಾಗಿ ಹೇಳಬಲ್ಲೆನು. ಇಂಗ್ಲಿಷ್ ಮತ್ತು ಅಮೆರಿಕ ಕ್ರೈಸ್ತಸಂಘಗಳಿಂದ ಈ ದೇಶಕ್ಕೆ ವಿದ್ಯಾವಿಷಯದಲ್ಲೂ ಸನ್ಮಾರ್ಗ ನಡತೆ ವಿಷಯದಲ್ಲೂ ಬಹು ದೊಡ್ಡ ಸಹಾಯಗಳಾಯಿತೆಂತ ಎಲ್ಲರೂ ಹೇಳಬಲ್ಲರು. ಆದ್ದರಿಂದ ದೇವರು ಇಂಗ್ಲಿಷ್ ಆಳ್ವಿಕೆಯಿಂದ ಕೆಲವು ಭಾರಿ ಉಪಕಾರಗಳನ್ನು ಮಾಡಲಿಕ್ಕೆ ಅವರನ್ನು ನೇಮಿಸಿದ್ದಾನೆಂತ ಅವರ ಹಿಂದುಗಳೂ ತಿಳಿದು ಹಿಂದುಗಳನ್ನು ಇಂಗ್ಲಿಷರು ತಮ್ಮಂತೆಯೂ ತಮ್ಮವರಂತೆಯೂ ಮತ್ತು ಇಂಡಿಯಾ ದೇಶವನ್ನು ಇಂಗ್ಲಂಡ್ ದೇಶವೆಂತಲೇ ಮನಃಪೂರ್ವಕವಾಗಿ ಭಾವಿಸಿದರೆ ಆಗ ಹಿಂದುಗಳು ಸಹ ಇಂಗ್ಲಿಷರನ್ನು ತಮ್ಮಂತೆಯೇ ಅವರಲ್ಲಿರುವ ಮತವಿಷಯವಾದ ಮತ್ತು ಲೌಕಿಕ ವಿಷಯವಾದ ಉತ್ತಮಪದ್ಧತಿಗಳನ್ನು ಸಂತೋಷವಾಗಿಯೂ ಭಾವಿಸಿ ಒಂದೇ ದೇಶದವರಂತೆಯೂ ಒಂದೇ ಜನಾಂಗದವರಂತೆಯೂ ಯಥಾರ್ಥವಾದ ಪ್ರೀತಿ, ಸ್ನೇಹ, ಐಕಮತ್ಯತೆಗಳಿಂದ ದೇಶಾಭಿವೃದ್ಧಿಗಾಗಿ ಸುಖದಿಂದಲೂ ಸಂತೋಷದಿಂದಲೂ ಬಾಳಬಹುದು.

ಹಿಂದೂ ದೇಶವು ಪೂರ್ವಕಾಲದಿಂದ ಅನೇಕ ಉತ್ತಮರಾಜರನ್ನು ಹೊಂದಿತ್ತು. ದೃಷ್ಟಾಂತವಾಗಿ ಜನಕ, ರಾಮ, ನಳ, ಮಾಂಧಾತ, ಹರಿಶ್ಚಂದ್ರ, ಧರ್ಮರಾಯ, ಮನು, ಈ ರಾಜ್ಯಭಾರದಲ್ಲಿ ಪ್ರಜೆಗಳು ಬಹು ಸುಖವಾಗಿಯೂ, ಧರ್ಮವಾಗಿಯೂ, ಸತ್ಯವಾಗಿಯೂ ನಡಕೊಂಡರೆಂತ ಪುರಾಣಗಳಿಂದ ತಿಳಿಯಬರುತ್ತೆ. ಇಂಗ್ಲಿಷ್ ರಾಜ್ಯಭಾರವು ಇವರಿಗಿಂತ ಮೇಲಾಗಿಲ್ಲವೆಂತಲೂ, ಈ ಕಾಲದಲ್ಲಿ ಜನರು ಅನ್ಯಾಯ ಮಾಡುವಂತೆಯೂ, ಕೆಟ್ಟಕೆಲಸಗಳನ್ನು ಮಾಡುವಂತೆಯೂ ಹಿಂದೆ ಯಾವಾಗಲು ಇಲ್ಲವಂತೆ. ಆದರೆ ಈ ತಪ್ಪನ್ನು 'ರಾಜಾ ರಾಷ್ಟ್ರಕೃತಂ ಪಾಪಂ' ಎಂಬಂತೆ ಅರಸಿನ ಮೇಲೆ ಹಾಕುತ್ತಾರೆ. ಇದು ಸದ್ಧರ್ಮವೋ? ಯಾಕಂದರೆ ರಾಜನೇ ಪ್ರಜೆಗಳ ಸುಖಕ್ಕೂ ಕಷ್ಟಕ್ಕೂ ಕಾರಣನಂತೆ. ಆದ್ದರಿಂದ 'ಯಥಾ ರಾಜಾ ತಥಾ ಪ್ರಜಾ' ಎಂಬಂತೆ ಪ್ರಜೆಗಳ ನಡತೆ ಗುಣ ಸುಖಾದಿಗಳು ಇರುವವಂತೆ. ಆದ್ದರಿಂದ ಮೇಲ್ಕಂಡ ಚಕ್ರವರ್ತಿಗಳ ಹಾಗೆ ಇಂಗ್ಲಿಷರು ಸಾರ್ವಭೌಮರಾಗಿದ್ದಾಗ್ಯೂ ಇಂಡಿಯಾದಿಂದ ಮಿಲ್ಲಿಯಗಟ್ಲೆ ಸಂಬಳ ತೆಗೆದುಕೊಂಡಾಗ್ಯೂ ವ್ಯಾಪಾರದ ಮೂಲಕ ಕೋಟ್ಯಾಂತರ ತೆಗೆದುಕೊಳ್ಳುತ್ತಿದ್ದರು. ಇಂಡಿಯಾ ದೇಶದ ಸುಖವು ಮಾತ್ರ ನಿಲ್ಲದೆ ಬರ ಬರ ಕೇವಲ ಅವಸ್ಥಿತಿಗೆ ಬರುತ್ತದಂತೆ. ಮತ್ತೇನಂದರೆ ಪೂರ್ವ ಚಕ್ರವರ್ತಿಗಳು ಈ ದೇಶದವರಾಗಿ ಸ್ವಜನರಾಗಿ ಧರ್ಮದಿಂದ ರಾಜ್ಯಭಾರ ಮಾಡುತ್ತಾ ಸುನೀತಿಯಲ್ಲಿ ಪ್ರಜೆಗಳನ್ನು ಬೆಳೆಸುತ್ತಿದ್ದರಂತೆ. ಆದರೆ ಇಂಗ್ಲಿಷಿನವರು ಅನ್ಯದೇಶೀಯರಾಗಿಯೂ ಅನ್ಯಜನಾಂಗದವರಾಗಿಯೂ ಇರುವದರಿಂದ ಅಂತರಂಗದಲ್ಲಿ ತಮಗೂ ಈ ದೇಶೀಯರಿಗೂ ತುಂಬಾ ವ್ಯತ್ಯಾಸ ಮಾಡಿಕೊಂಡು ಈ ಕೆಳಗೆ ತಿಳಿಸುವ ಅನ್ಯಾಯಗಳನ್ನು ಮಾಡುತ್ತಾರೆಂತ ಬಹುಮಂದಿ ಹೇಳುತ್ತಾರೆ; ಯಾವವೆಂದರೆ—ತಾವು ಯೂರೋಪಿಯನ್ನರು, ಇವರು ಇಂಡಿಯನ್ನರು, ಅಂದರೆ ತಾವು ಧೊರೆತನ ಮಾಡುವವರು, ಇವರು ಆಳಲ್ಪಡುವವರು, ತಾವು ವಿದ್ಯ, ವ್ಯಾಪಾರ ಕೈಗಾರಿಕೆ, ರಾಜ್ಯಭಾರ ವಿಸ್ತಾರದಲ್ಲಿ ಲೋಕಪ್ರಸಿದ್ಧರೆಂಬ ಅಹಂಭಾವವನ್ನು ವಹಿಸಿದಾರೆಂತಲೂ ಅವರಿಂದ ಈ ಹಿಂದುಗಳನ್ನು ಅನಾಗರೀಕರು, ಅಥವ ಅರ್ಧನಾಗರೀಕರು, ಇಲ್ಲವೆ ನಾನೆ ಬಾಗಲು ಮುಂತಾದವುಗಳನ್ನೂ ಉದ್ಯಾನವನ್ನೂ ಅಲಂಕಾರವನ್ನೂ ಅರಿಯದವರೆಂತಲೂ ಮೃಗರೂಪರಾದ ಬಾರ್ಬರಿಗಳೆಂತಲೂ, ಸರ್ಕಾರದ ಭಾರಿ ಕೆಲಸಗಳೂ ಉತ್ತಮ ಪಕ್ಕಗಳೂ ತಮಗೆ ಮಾತ್ರ ಇರಬೇಕೆಂತಲೂ, ಆಳಲ್ಪಡುವವರು ಕೀಳಾದ ಸೇವಕವೃತ್ತಿಯಲ್ಲಿ ಆಳುಗಳಂತೆ ಜೀವಿಸಬೇಕೆಂತಲೂ ಮುಖ್ಯವಾದ ವಿದ್ಯ, ಉದ್ಯೋಗ, ಸುಖ, ಭೂಷಣ, ಮರ್ಯಾದೆ ಸ್ವತಂತ್ರಗಳು ತಮಗಿರಬೇಕೆಂತಲೂ, ಈ ಜನರು ಕೇವಲ ಆಳುಗಳಂತೆ ಇರಬೇಕೆಂತಲೂ ಕೆಲವರು ಭಾವಿಸುತ್ತಾರಂತೆ. ಇವೆಲ್ಲ ವಾಸ್ತವ್ಯವಲ್ಲವಾದರೂ ಕೆಲವು ಭಾಗವಾದರೂ ನಿಜವಿರಬಹುದು. ಅಂತು ಹಿಂದುಗಳೂ ಇಂಗ್ಲಿಷಿನವರೂ ಮನಃಪೂರ್ವಕ ಸ್ನೇಹಿತರಾಗಬೇಕಾದರೆ ಉತ್ತಮ ಸುಲಕ್ಷಣಗಳು ಈ ವರ್ಗರಿಗೂ ಸಂಪೂರ್ಣವಾಗಿರಬೇಕು. ಇವರಿಗೂ ಅವರಿಗೂ ಮತ, ಆಚಾರ, ಪದ್ಧತಿ, ವ್ಯವಹಾರ, ದೇಶಾಚಾರ ಮುಂತಾದ ಅನೇಕಾನೇಕ ಭಿನ್ನ ಪದ್ಧತಿಗಳು ಏಕಕಾಲದಲ್ಲಿ ಸರಿಹೋಗುವದು ಸುಲಭವಲ್ಲ.

ಯಥಾರ್ಥವಾದಿ ಮತ್ತು ದೇಶಾಭಿಮಾನಿ.

## ಇಂಡಿಯಾ ದೇಶದ ವೃತ್ತಾಂತಗಳು.

ಹಿಂದಿನವಾರ ಮುಂಬಾಯಿಪಟ್ಟಣದಲ್ಲಿ ೧೩೩ ಜನರು ಪ್ಲೇಗಿನಲ್ಲಿ ಮೃತಪಟ್ಟರು; ಈ ವ್ಯಾಧಿ ಪಂಜಾಬಿನಲ್ಲಿ ೩೯೦ ಜನರು ಕಾಲವಾಗಿರುತ್ತಾರೆ.

◆◆◆◆

ರಾಜಪುತಾನಾ ಮಾಲ್ವಾ ಸ್ಟೇಟ್ ರೈಲ್ವೆಯನ್ನು ರೇವಾರಿಯಿಂದ ಫುಲೇರಾವರೆಗೆ ವಿಸ್ತರಿಸುವದಕ್ಕೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ೩೩ ಲಕ್ಷ ರೂಪಾಯಿ ಮಂಜೂರ ಮಾಡಿದಾರೆ.

◆◆◆◆

ಉತ್ತರದೇಶದಲ್ಲಿ ಸದ್ಯ ೪೮೯೦೯ ಜನರು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿ ಇರುತ್ತಾರೆ. ಈಚೆಗೆ ಈ ಸಂಖ್ಯೆಯು [illegible] ಕಡಿಮೆಯಾಗುತ್ತಾ ಬಂದಿರುವದು.

◆◆◆◆

ಪಂಜಾಬ್ ಅಧಿಕಾರ್ಯದಲ್ಲಿ [illegible], ರೋಗಾದಿಗಳ ದೆಸೆಯಿಂದ ನಷ್ಟಪಟ್ಟ ವ್ಯವಸಾಯಗಾರರಿಗೆ ಗವರ್ನಮೆಂಟಿನವರು ಕಳೆದ ವರುಷ ೩೭ [illegible] ತಕಾವಿಯನ್ನು ವಿನಿಯೋಗ ಮಾಡಿದರು.

◆◆◆◆

[illegible] ದಲ್ಲಿ [illegible] ರೋಮನ್ ಕೆಥೊಲಿಕ್ ಪಾದ್ರಿಗಳು ಇರುತ್ತಾರೆ. ಇವರು ಇಂಗ್ಲಿಷರ [illegible] ಬರೆದುಕೊಟ್ಟಿದ್ದರು [illegible] ಅವರನ್ನು ಅಲ್ಲಿಂದ [illegible] ಗವರ್ನಮೆಂಟಿನಲ್ಲಿ ತಿಳಿಸಿದರು.

ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್ ರವರು ೧೯೦೫ನೆ ಇಸವಿ ನವಂಬರು ತಿಂಗಳಲ್ಲಿ ಹಿಂದುಸ್ಥಾನಕ್ಕೆ ದಯಮಾಡುವವರಾಗಿದಾರೆಂದು ಸಿಂಲಾ ಪಟ್ಟಣಕ್ಕೆ ಸಮಾಚಾರ ಬಂದಿದೆ.

❖❖❖❖

ಕಲ್ಕತ್ತೆಯಲ್ಲಿ ಮಿ॥ ಸಾಲಮನ್ ಎಂಬವನ ಹೆಂಡತಿಯನ್ನು ಒಬ್ಬ ಹಿಂದೂ ಸೋಲಗಿತ್ತಿಯು ಪ್ರಯತ್ನಪಟ್ಟಳೆಂದು ಅವಳ ಮೇಲೆ ಫಿರ್ಯಾದು ದಾಖಲಾಗಿದೆ. (ಕೆಲವು ಪದಗಳು: ಮಗುವಿನ ಬಾಯಿಗೆ ಬಟ್ಟೆ ತುರುಕಿ ಕೊಲ್ಲಬೇಕೆಂದು)

❖❖❖❖

ಬರ್ಮಾ ದೇಶಕ್ಕೆ ಸೇರಿದ ಬಸಮೋ ಪಟ್ಟಣದಲ್ಲಿ ನದಿಯ ಪ್ರವಾಹ ವಿಪರೀತವಾಗಿ ಬಂದು ಅರ್ಧಪಟ್ಟಣವನ್ನೇ ಮುಳುಗಿಸಿಬಿಟ್ಟಿದೆ. ದಿನಸಿಗಳ ಧಾರಣೆ ಹೆಚ್ಚಿ ಜನರಿಗೆ ತುಂಬಾ ಕಷ್ಟ ಉಂಟಾಗಿದೆ.

❖❖❖❖

ಕಾಬೂಲ್ ನಗರದಲ್ಲಿ ಒಂದು ವಿದ್ಯಾಶಾಲೆ ಏರ್ಪಾಡಾಯಿತು. ಹಿಂದುಸ್ಥಾನದಿಂದ ನಾಲ್ಕಾರು ಮಂದಿ ವಿದ್ಯಾವಂತರನ್ನು ಸಂಬಳ ಗೊತ್ತುಮಾಡಿ ಅಮೀರರು ಉಪಾಧ್ಯಾಯ ಕೆಲಸಕ್ಕೆ ಕರೆಸಿಕೊಂಡಿದಾರೆ.

❖❖❖❖

ಬೊಂಬಾಯಿ ಆಧಿಪತ್ಯದ ಗವರ್ನರವರು ಪತ್ನಿ ಪರಿವಾರಸಹಿತ ಮುಂದಿನ ತಿಂಗಳ ಅಧಿಭಾಗದಲ್ಲಿ ಸಿಂಲಾ ಪಟ್ಟಣಕ್ಕೆ ದಯಮಾಡಿ, ಒಂದು ವಾರ ವೈಸ್‌ರಾಯರವರ ಅತಿಥಿಗಳಾಗಿದ್ದು ವಾಪಸು ಬರುತ್ತಾರೆಂದು ತಿಳಿಯುವದು.

❖❖❖❖

ಮದರಾಸ್ ಗವರ್ನರಾದ ಲಾರ್ಡ್ ಅಂಪ್ಟಿಲ್‌ರವರು ಪರಿವಾರಸಹಿತ ಆಗೇಷ್ಟು ೪ನೇ ತಾರೀಖಿನದಿನ ಸಿಂಲಾ ಪಟ್ಟಣಕ್ಕೆ ಹೋಗಿ ವೈಸ್‌ರಾಯರವರ ಅತಿಥಿಗಳಾಗಿ ಒಂದು ವಾರ ಇದ್ದು ಬರುವವರಾಗಿದಾರೆ.

❖❖❖❖

ದಕ್ಷಿಣ ಆಫ್ರಿಕದಲ್ಲಿರುವ ಪೋಲೀಸ್ ಇಲಾಖೆಗೆ ಹಿಂದುಸ್ಥಾನದ ಕಾರ್ಖಾನೆಗಳಿಂದ ಬಿರುಸುಗಳನ್ನು ತಯಾರುಮಾಡಿಸಿ ಕಳುಹಿಸಬೇಕೆಂದು ಗವರ್ನಮೆಂಟಿನವರು ಅಪ್ಪಣೆ ಕೊಟ್ಟರು. ಕಳೆದ ವಾರ ೮ ಸಾವಿರ ಬಿರುಸುಗಳು ಹಡಗಿನಲ್ಲಿ ಕಳುಹಿಸಲ್ಪಟ್ಟುವು.

❖❖❖❖

ಮದರಾಸ್ ಆಧಿಪತ್ಯದಲ್ಲಿ ಕಳೆದ ೧೯೦೦ನೆ ಇಸವಿಯಲ್ಲಿ ೬೬೫ ಜನರು, ೧೯೦೧ ರಲ್ಲಿ ೩,೦೩೫ ಜನರು, ೧೯೦೨ ರಲ್ಲಿ ೧೦,೯೯೫ ಜನರು ಪ್ಲೇಗ್ ಉಪದ್ರವದಿಂದ ಕಾಲವಾದರು. ಈ ವ್ಯಾಧಿ ಬಳ್ಳಾರಿ, ಸೇಲಂ, ದಕ್ಷಿಣಕನಡಾ ಜಿಲ್ಲೆಗಳಲ್ಲೇ ಶೇಕಡ ೮೯ ಪಾಲು ಜನರಿಗೆ ತಗಲಿತು.

❖❖❖❖

ಆನೆಗಳು ಕಳುವಾಗುವದು ಎಲ್ಲೂ ಯಾರೂ ಕೇಳಿ ಇಲ್ಲ, ಕದ್ದರೂ ಅದನ್ನು ಬಚ್ಚಿಡುವದು ಸಾಧ್ಯವಲ್ಲ. ಆದಾಗ್ಯೂ ಕಲ್ಲಿಕೋಟೆ ಪ್ರಾಂತ್ಯದಲ್ಲಿ ಮಂಡೋರು ನಾಯರ್ ನಾಡುಕಾರನ ಎರಡು ಆನೆಗಳು ಕಳುವಾಗಿರುತ್ತವೆ. ಇದುವರೆಗೂ ಯಾರು ಕದ್ದರೋ ಎಲ್ಲಿ ಬಚ್ಚಿಟ್ಟಿದ್ದಾರೋ ಪತ್ತೆ ಆಗಿಲ್ಲ.

❖❖❖❖

ಕೇಂಬ್ರಿಡ್ಜ್ ವಿದ್ಯಾಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಹಿಂದೂ ತತ್ವಶಾಸ್ತ್ರವನ್ನು ಕುರಿತು ಮೂರು ವರುಷ ಬೋಧನೆಮಾಡುವ ಕೆಲಸಕ್ಕೆ ಹಿಂದುಸ್ಥಾನದಿಂದ ಒಬ್ಬ ಪಂಡಿತನನ್ನು ಗೊತ್ತುಮಾಡಿ ಕರೆದುಕೊಂಡು ಹೋಗುವದಕ್ಕೋಸ್ಕರ ಅಲ್ಲಿಂದ ಪ್ರೊಫೆಸರ್ ಉಪಾಧ್ಯಾಯ ಎಂಬೊಬ್ಬ ಪಂಡಿತನು ಹೊರಟಿದಾನೆ.

❖❖❖❖

ರಂಗೂನ್ ಪಟ್ಟಣವನ್ನು ಅಭಿವೃದ್ಧಿಮಾಡುವದಕ್ಕೆ ಅಲ್ಲಿನ ಮ್ಯುನಿಸಿಪಾಲಿಟಿಯವರು ೧೫ ಲ ರೂಪಾಯಿ ಸಾಲಮಾಡಬಹುದೆಂದು ಬರ್ಮಾ ಗವರ್ನಮೆಂಟಿನವರು ಸ್ವಾಂಕ್ಷನ್ ಮಾಡಿದಾರೆ. ರಂಗೂನಿನಲ್ಲೂ ಕಲ್ಕತ್ತೆಯಲ್ಲೂ ನಾಡುಕಾರರಿಂದ ಸಾಲ ತೆಗೆದುಕೊಳ್ಳುವರು. ೧೦೦ಕ್ಕೆ ಬಡ್ಡಿ ೧೨ ತಿಂಗಳಿಗೆ ... ಯಂತೆ ವಾವತಿ ಮಾಡುತ್ತಾರೆ.

❖❖❖❖

ಹಿಂದುಸ್ಥಾನದಲ್ಲಿ ಕ್ರಿಕೆಟ್ ಎಂಬ ಚೆಂಡಾಟ ಆಡತಕ್ಕ ಕೆಲವು ಗಟ್ಟಿಗರನ್ನು ವಿಲಾಯತಿಗೆ ಕಳುಹಿಸಿ ಅಲ್ಲಿನ ಆಟಗಾರರ ಸಂಗಡ ಪಂದ್ಯಗಳನ್ನು ನಡಸುವದಕ್ಕೆ ಏರ್ಪಾಡು ಆಗುತ್ತಿದೆ. ಹಿಂದುಸ್ಥಾನದಿಂದ ಹೋಗತಕ್ಕವರ ಪ್ರಯಾಣ ಮುಂತಾದ್ದರ ಖರ್ಚಿಗೆ ವೈಸ್‌ರಾಯ ಪ್ರಭುಗಳು ೫೦೦ ರೂ., ಭೋಪಾಲದ ಮಹಾರಾಜರವರು ೫೦೦ ರೂ. ಚಂದಾ ಕೊಟ್ಟಿರುತ್ತಾರೆ.

❖❖❖❖

ಇಂಡಿಯಾ ಗವರ್ನಮೆಂಟಿನವರು ಹಿಂದುಸ್ಥಾನದಲ್ಲಿ ಟೀ (ತೇಯಲೆ) ತೋಟಗಳನ್ನು ಮಾಡುವ ಪ್ಲಾಂಟರುಗಳ ಸಹಾಯಾರ್ಥವಾಗಿ ಒಬ್ಬ ಅಧಿಕಾರಿಯನ್ನು ನೇಮಿಸಿಕೊಳ್ಳುವಂತೆ ವಾಗ್ದಾನಮಾಡಿ, ಪ್ರತಿ ವರುಷವೂ ೬,೦೦೦ ರೂ. ಗ್ರ್ಯಾಂಟು ಕೊಡುವದಕ್ಕೆ ಒಪ್ಪಿದಾರೆ. ಈ ಅಧಿಕಾರಿಯು ಟೀ ತೋಟಗಳನ್ನು ಅಭಿವೃದ್ಧಿಗೆ ತರುವ ವಿಚಾರದಲ್ಲಿ ಪ್ಲಾಂಟರುಗಳಿಗೆ ವಿವೇಕ ಹೇಳಿಕೊಡುವನು.

❖❖❖❖

ಬೀಜಾಪುರದಲ್ಲಿ ಹೊಸಜಾತಿಯ ಹತ್ತಿಯನ್ನು ಬೆಳೆಯಬೇಕೆಂದು ಸರ್ಕಾರದವರು ಪ್ರಯತ್ನಪಟ್ಟು, ಸರಕಾರದಿಂದ ಬೀಜವನ್ನು ಕೊಟ್ಟು ಜಮೀನ್ದಾರರಿಗೂ, ರೈತರಿಗೂ ಕೊಡಿಸಿದಾರೆ. ಇವರು ಆ ಬೀಜವನ್ನು ಬಿತ್ತಿ ಬೆಳೆಮಾಡಿದರೆ ... ಒಬ್ಬೊಬ್ಬ ರೈತನಿಗೆ ಬಹುಮಾನ ೫೦ ರೂ. ವರೆಗೂ ಕೊಡುವದಾಗಿ ಗೊತ್ತುಮಾಡಿರುವರು.

ರಾಜಪುಟಾನಾ ಸೆನಸಸ್ ರಿಪೋರ್ಟಿನಲ್ಲಿ ಒಂದು ಆಶ್ಚರ್ಯವಾದ ಸಂಗತಿ ಬರೆಯಲ್ಪಟ್ಟಿದೆ. ಕಳೆದ ೧೮೯೧ನೆ ಇಸವಿಯಲ್ಲಿ ೩೦೨೮ ಮಂದಿ ಕುಷ್ಠರೋಗಿಗಳಿದ್ದರು. ಈಗಲೋ ೪೯೧ ಮಂದಿ ಕುಷ್ಠರೋಗಿಗಳು ಇದಾರೆ. ಇದನ್ನು ನೋಡಿದರೆ ಈ ರೋಗವು ಕ್ರಮೇಣ ಕಡಿಮೆಯಾಗುತ್ತಿದೆ ಎಂದು ಕಾಣುವದು. ಈ ಸಂಗತಿ ನಿಜವೇ ಎಂಬುದಾಗಿ ಗವರ್ನಮೆಂಟಿನವರು ಮತ್ತೆ ತನಿಖೆ ಮಾಡಬೇಕೆಂದು ಹುಕುಂ ಕೊಟ್ಟಿದಾರೆ.

❖❖❖❖

ಬರುವ ತಿಂಗಳು ಪೂನಾಪಟ್ಟಣದಲ್ಲಿ ಒಂದು ದೊಡ್ಡ ಮಹಮ್ಮದಿಯ ಸಮಾಜವು ಕೂಡುವದು. ಕಳೆದ ೫ನೆ ತಾರೀಖಿನದಿನ ಬೊಂಬಾಯಿನಿಂದ ನವಾಬ್ ಜಾದಾ ನಸರುಲ್ಲಾಖಾನರವರು ಪೂನೆಗೆ ಬಂದು ಮಕ್ಕಾಮಸಜಿದ್ ಎಂಬ ದೊಡ್ಡ ಮಸೀತಿಯಲ್ಲಿ ನೂರಾರು ಜನ ಮಹಮ್ಮದಿಯ ದೊಡ್ಡಮನುಷ್ಯರನ್ನು ಕರೆಸಿಕೊಂಡು ತಮ್ಮ ಜನರಲ್ಲಿ ವಿದ್ಯಾಭಿವೃದ್ಧಿಯೇ ಮೊದಲಾದ ಅನೇಕ ಬದಲಾವಣೆಗಳು ನಡೆಯುವದಕ್ಕೋಸ್ಕರ ಮುಂದಿನ ತಿಂಗಳಲ್ಲಿ ದೊಡ್ಡ ಸಮಾಜ ಸೇರಬೇಕೆಂಬದಾಗಿ ತಿಳಿಸಿದರು.

❖❖❖❖

೧೯೦೩—೦೪ನೆ ಸಾಲಿನಲ್ಲಿ ಕಲ್ಕತ್ತೆಗೆ ೨,೩೦,೫೬೩ ರೂ. ಬೆಲೆಬಾಳುವಷ್ಟು ಚುಟ್ಟಾಗಳು ಬಂದವು. ಬರ್ಮಾದಿಂದ ಬಂದದ್ದು ೬೫,೧೮೭ ರೂಪಾಯಿನದು. ಆದರೆ ಆ ಸಾಲಿನಲ್ಲಿ ಬರ್ಮಾಕ್ಕೆ ೨ ಕೋಟಿ ಪೌಂಡಿನಷ್ಟು ಹೊಗೆಸೊಪ್ಪು ರಫ್ತಾಯಿತು. ಪರರಾಜ್ಯಗಳಿಂದ ಕಲ್ಕತ್ತೆಗೆ ೧೫ ಲಕ್ಷ ರೂಪಾಯಿನ ಸಿಗರೆಟ್ಟುಗಳು ಬಂದವು. ಈಚೆಗೆ ಹಿಂದುಸ್ಥಾನದ ಅನೇಕ ಕಡೆಗಳಲ್ಲಿ ಚುಟ್ಟಾಗಳನ್ನೂ ಸಿಗರೆಟ್ಟುಗಳನ್ನೂ ವಿಶೇಷವಾಗಿ ತಯಾರುಮಾಡುವಂಥಾ ಕಾರ್ಖಾನೆಗಳು ಇಡಲ್ಪಟ್ಟಿರುತ್ತವೆ.

❖❖❖❖

ಭಾರತ ಮಹಾ ಮಂಡಲಿಯೆಂಬ ಸಂಘದ ಸೆಕ್ರೆಟರಿಯಾದ ಪಂಡಿತ ದೀನದಯಾಳು ಶರ್ಮ ಎಂಬ ದೊಡ್ಡಮನುಷ್ಯರು ಕಳೆದ ವಾರ ವೆಲ್ಲೂರಿನಿಂದ ರಾಮೇಶ್ವರ ಯಾತ್ರೆಗೋಸ್ಕರ ಮದರಾಸಿಗೆ ಬಂದಿದ್ದರು, ಅಲ್ಲಿನ ಹಿಂದುಗಳಿಂದ ಗೌರವವಾಗಿ ಸತ್ಕಾರವನ್ನು ಹೊಂದಿ, ದಕ್ಷಿಣದೇಶಕ್ಕೆ ಪ್ರಯಾಣ ಮಾಡಿದರು. ಇವರು ಯಾತ್ರೆಯನ್ನು ಪೂರೈಸಿಕೊಂಡು ಹಿಂತಿರುಗಿ ಮದರಾಸಿಗೆ ಬಂದು, ಕೆಲವು ಉಪನ್ಯಾಸಗಳನ್ನು ಮಾಡುವವರಾಗಿದಾರೆ. ಉತ್ತರ ಪಶ್ಚಿಮ ದೇಶಗಳಲ್ಲಿ ಈ ಪಂಡಿತರು ದೊಡ್ಡ ವಾಗ್ಮಿಗಳೆಂಬ ಹೆಸರು ಪಡೆದಿರುತ್ತಾರೆ.

❖❖❖❖

ಕಳೆದ ೧೮೯೭ನೆ ಇಸವಿಯಲ್ಲಿ ವಿಕ್ಟೋರಿಯಾ ಮಹಾರಾಜ್ಞೀಯವರ ಜೂಬಿಲಿ ಉತ್ಸವದ ಜ್ಞಾಪಕಾರ್ಥವಾಗಿ ಕುಂಭಕೋಣದಲ್ಲಿ ಕಸಬಿನ ಪಾಠಶಾಲೆ ಏರ್ಪಾಡು ಮಾಡಬೇಕೆಂದು ಪ್ರಜೆಗಳು ಗೊತ್ತುಮಾಡಿ ಅದಕ್ಕಾಗಿ ೨೫,೦೦೦ ರೂಪಾಯಿ ಚಂದಾ ಕೂಡಿಸಿದರು. ಈ ಹಣ ಆ ಕೆಲಸಕ್ಕೆ ಸಾಕಾಗುವದಿಲ್ಲವೆಂದು ಆಗ್ಯೆ ನಿಂತುಹೋಯಿತು. ಈಗ ಆ ಹಣದಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸತಕ್ಕದ್ದೆಂತಲೂ, ಅದಕ್ಕೆ ಗವರ್ನಮೆಂಟಿನವರು ೨,೦೦೦ ರೂ. ಗ್ರ್ಯಾಂಟು ಕೊಡುವರೆಂತಲೂ ನಿಷ್ಕರ್ಷೆ ಆಗಿದೆ.

❖❖❖❖

ಇಂಗ್ಲಿಷ್ ಸ್ವೈನ್ಯಗಳ ಸಂಗಡ ವರ್ತಮಾನ ಪತ್ರಿಕೆಗಳ ಬಾತ್ಮೀದಾರರಾಗಲಿ ಇತರ ಜನರಾಗಲಿ ಯುದ್ಧಭೂಮಿಗೆ ಹೋಗಬೇಕೆಂದು ಅಪೇಕ್ಷಿಸಿದರೆ ಅವರು ಗವರ್ನಮೆಂಟಿನಲ್ಲಿ ಮೊದಲು ೧,೦೦೦ ರೂ. ಡಿಪಾಜಿಟ್ಟು ಇಡಬೇಕೆಂತಲೂ, ಈ ಹಣದಲ್ಲಿ ಸರ್ಕಾರದವರು ಅಂಥಾ ಬಾತ್ಮೀದಾರರ ಅಥವಾ ಇತರರ ಊಟ ಬಟ್ಟೆ ಮುಂತಾದ್ದರ ಖರ್ಚನ್ನು ವಜಾಮಾಡಿಕೊಳ್ಳುತ್ತಾರೆಂತಲೂ, ಪ್ರತಿ ಆರು ತಿಂಗಳಿಗೆ ಒಂದಾವರ್ತಿ ೧,೦೦೦ ರೂ. ಸಂತೆ ಠೇವಣಿ ಕಟ್ಟುತ್ತಾ ಇರಬೇಕೆಂತಲೂ ಇಂಡಿಯಾ ಗವರ್ನಮೆಂಟಿನವರು ಹುಕುಂ ಮಾಡಿದಾರೆ.

❖❖❖❖

ಶ್ರೀರಂಗದ ದೇವಸ್ಥಾನದಲ್ಲಿ ಕೆಲವು ಕಾಲಕ್ಕೆ ಮುಂಚೆ ಲಕ್ಷಾಂತರ ರೂಪಾಯಿಗಳ ನಗನಾಣ್ಯಗಳು ಕಳುವಾದವೆಂದೂ, ಪೋಲೀಸಿನವರು ಪತ್ತೆ ಮಾಡುತ್ತಿದಾರೆಂದೂ ತಿಳಿಸಿದ್ದೆವಷ್ಟೆ. ಹೋದ ತಿಂಗಳಲ್ಲಿ ಅವರು ಅಯೋಧ್ಯ ಪ್ರಸಾದ್ ಎಂಬುವನನ್ನೂ ಅವನ ಸಂಗಡಿದ್ದ ಇನ್ನಾರುಮಂದಿ ಗೋಸಾಯಿಗಳನ್ನೂ ದಸ್ತಗಿರಿಮಾಡಿ ವಿಚಾರಣೆಗೆ ಒಪ್ಪಿಸಿದರು. ತಿರುಚನಾಪಲ್ಲಿಯ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ, ಅವರಿಗೆಲ್ಲಾ ಎರಡೆರಡು ವರ್ಷದಂತೆ ಸಜಾ ಕೈದನ್ನೂ ೪೦೦ರೂ. ನಿಂದ ೧,೦೦೦ರೂ. ವರೆಗೆ ಜುಲ್ಮಾನೆಯನ್ನೂ ವಿಧಿಸಿದರು. ಈಗ ಈ ಎಳುಮಂದಿಯೂ ಮದರಾಸ್ ಹೈಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದಾರೆ.

❖❖❖❖

ಕಲ್ಕತ್ತಾ ಪಟ್ಟಣದಲ್ಲಿ ಕಳೆದ ವಾರ ಬಹಳ ಆಶ್ಚರ್ಯವಾದ ಒಂದು ಗಲಭೆ ನಡೆದಿರುವದು. ಅಲ್ಲಿನ ಪಬ್ಲಿಕ್ ಪ್ರಾಸಿಕ್ಯೂಟರಾದ ಬಾಬೂ ವಿಶ್ವಾಸ್ ಎಂಬೊಬ್ಬ ದೊಡ್ಡ ಮನುಷ್ಯನು ತನ್ನ ಮೊಮ್ಮಗನಿಗೆ ಕಳೆದ ಜೂನ್ ೨೭, ೨೮, ೨೯ನೆ ತಾರೀಖುಗಳಲ್ಲಿ ಅನ್ನಪ್ರಾಶನಮಾಡಿಸಿ, ಅನೇಕರಾದ ದೊಡ್ಡಮನುಷ್ಯರನ್ನು ತನ್ನ ಮನೆಗೆ ಊಟಕ್ಕೆ ಕರೆಸಿದನು. ಏರಡನೇ ದಿನ ಸಮಾರಾಧನೆಯಲ್ಲಿ ಊಟಮಾಡಿದವರ ಪೈಕಿ ಆರುಮಂದಿ ವಾಂತಿ ಮಾಡಿಕೊಂಡು ಸತ್ತರು. ಇನ್ನೂ ನೂರಾರುಮಂದಿ ಕಾಯಿಲೆ ... ವಿಶೇಷವಾಗಿ ನರಳುತ್ತಿದಾರೆ. ಇವರಲ್ಲಿ ಅನೇಕರು ಸರ್ಕಾರಿ ಉದ್ಯೋಗಸ್ಥರು. ಮುನಸೀಫರೂ, ಸಬ್ ಜಡ್ಜಿಗಳೂ, ಮ್ಯಾಜಿಸ್ಟ್ರೇಟರೂ, ಭಾರೀ ಜಮೀನ್ದಾರರೂ, ಪ್ಲೀಡರುಗಳೂ ಇರುತ್ತಾರೆ.

## ಬಾತ್ಮೀದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮೀಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮೀಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

---

ನರಹರ್‍ಯ, ನೆಲಮಂಗಲ.—ನೀವು ಕೇಳುವ ಪ್ರಶ್ನೆಗೆ ಈ ತಿಂಗಳ ೨ನೇ ತಾರೀಖಿನ "ವೃತ್ತಾಂತ ಪತ್ರಿಕೆ"ಯ ಕಾಲಮ್ಮು ವರ್ತಮಾನಗಳಲ್ಲಿ ಸಮಾಧಾನ ಹೇಳಿದೆ.—ಎಡಿ.

ಹುಬ್ಬಳ್ಳಿ ರಾಮಚಂದ್ರಪ್ಪ; ಗಂಗಾಧರಯ್ಯ, ಶೀತ; ಬಿ. ಸುಮಿತ್ರಪ್ಪ, ಮಡಿಗೇಸಪ್ಪ; ನಂಜುಂಡಯ್ಯ, ದೊಡ್ಡಬಳ್ಳಾಪುರ ಇವರು ಬರೆದಿರತಕ್ಕ ಬಾತ್ಮೀಗಳಲ್ಲಿ ಪ್ರಕಟನೆಗೆ ಅರ್ಹವಾದ ಸಂಗತಿಗಳೇನೂ ಕಾಣುವದಿಲ್ಲ.—ಎಡಿ.

---

## ಕರೆಸ್‌ಪಾಂಡೆನ್ಸ್.

### ಹೊಳೇ ನರಸೀಪುರದ ನೇಯಿಗೆ ಸ್ಕೂಲ್.

ಅಯ್ಯಾ,

ಇಲ್ಲಿನ ಎ. ವಿ. ಸ್ಕೂಲ್ ಹೆಡ್ಮಾಸ್ಟರು ಮಿ॥ ಎಂ. ಎ. ಸಂಪತ್ತಯ್ಯಂಗಾರ್‍ರು ನೇಯಿಗೆ ಸ್ಕೂಲನ್ನು ಸ್ವಂತ ಖರ್ಚಿನಿಂದ ಏರ್ಪಡಿಸಿ ಮೂರು ವರ್ಷಗಳ ಲಾಗಾಯಿತು ನಡೆಸಿಕೊಂಡು ಹೋಗುತ್ತಿದಾರೆ.

ಈ ಸ್ಕೂಲಿನಲ್ಲಿ ಹಾರುವ ಲಾಳಿಯಿಂದ ನೇಯಲ್ಪಡುವ ೪ ಮಗ್ಗಗಳಿವೆ. ಇವುಗಳಲ್ಲಿ ಚಕ್ಮಗಳೂ, ಟವಲ್‌ಗಳೂ ನಾಲ್ಕು ಮೊಳಗಳವರೆಗಿನ ಪನ್ನೆಯುಳ್ಳ ಜಮಖಾನಗಳೂ ನೇಯಲ್ಪಡುತ್ತಿವೆ. ಸಾಧಾರಣ ಮಗ್ಗಗಳಲ್ಲಿ ಯುವನೂರು ಕೊಸಾಯಿ ತರಹ ಸೀರೆಗಳೂ, ದೊಡ್ಡ ದೊಡ್ಡ ಪಂಚೆಗಳೂ ನೇಯಲ್ಪಡುತ್ತಿವೆ. ಈ ಮಗ್ಗಗಳಿಗೆ ಬೇಕಾಗುವಷ್ಟು ರೇಷ್ಮೆ ಮತ್ತು ನೂಲುಗಳಿಗೆ ಬಣ್ಣವು ಈ ಸ್ಕೂಲಿನಲ್ಲೇ ಹಾಕಲ್ಪಡುವದು.

ಇವರಿಗೆ ಗವರ್ನ್ಮೆಂಟಿನವರು ಸಹಾಯಮಾಡಿ ಮದರಾಸ್ ಬೊಂಬಾಯಿನಲ್ಲಿರುವ ಮುಖ್ಯ ಮುಖ್ಯ ನೇಯಿಗೆ ಸ್ಥಳಗಳಿಗೆಲ್ಲಾ ಹೋಗಿ ನೋಡಿಕೊಂಡು ಬರುವಂತೆ ಕಳುಹಿಸಿದ್ದರು. ಇವರು ತಮ್ಮ ಸಂಚಾರದಲ್ಲಿ ಕಂಡುಬಂದ ವಿಷಯಗಳನ್ನು ಕುರಿತು ಗವರ್ನ್ಮೆಂಟಿಗೆ ರಿಪೋರ್ಟು ಬರೆದು ಕಳುಹಿಸಿದ್ದರು.

ಗವರ್ನ್ಮೆಂಟಿನವರು ಈ ರಿಪೋರ್ಟನ್ನು ಪರಾಂಬರಿಸಿ ಹಿಂದಕ್ಕೆ ಬಿದ್ದುಹೋಗುತ್ತಿರುವ ಸ್ವದೇಶೀಯ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಬೇಕೆಂತಲೂ ಸ್ವದೇಶೀಯರಿಗೆ ಪ್ರಯೋಜನವಾಗಬೇಕೆಂತಲೂ ಉದ್ದೇಶಿಸಿ ಹೊಳೇ ನರಸೀಪುರ, ದೊಡ್ಡಬಳ್ಳಾಪುರ, ಚಿಕ್ಕನಾಯಕನಹಳ್ಳಿ, ಮೊಳಕಾಲ್ಮೂರು ಸ್ಥಳಗಳಲ್ಲಿ ನೇಯಿಗೆ ಸ್ಕೂಲುಗಳನ್ನು ಸ್ಥಾಪಿಸುವಂತೆ ಸ್ಯಾಂಕ್ಷನ್ ಮಾಡಿರುತ್ತಾರೆ. ಅಲ್ಲದೆ ವಿದ್ಯಾವಂತರಾದ ಸ್ವದೇಶೀಯರು ಯಾರಾದರೂ ನೇಯಿಗೆ ಸ್ಕೂಲುಗಳನ್ನು ಏರ್ಪಡಿಸಿ ನಡೆಸಿಕೊಂಡು ಬಂದರೆ ಸ್ಕಾಲರುಷಿಪ್ಪುಗಳಿಂದ ಸಹಾಯಮಾಡುವೆವೆಂದು ತಿಳಿಸಿದ್ದಾರೆ.

ಅಷ್ಟರಿಂದ ಚಿಕ್ಕನಾಯಕನಹಳ್ಳಿ ಎ. ವಿ. ಸ್ಕೂಲ್ ಹೆಡ್ಮಾಸ್ಟರಾದ ಮ॥ ನಾರಣಯ್ಯರ್ ಎಂಬುವರು ತುಂಬಾ ಉತ್ಸಾಹಗಳಾಗಿ ಈ ಕೈಗಾರಿಕೆಯನ್ನು ತಿಳಿದುಕೊಂಡು ಅದನ್ನು ಸ್ಥಾಪಿಸಬೇಕೆಂದು ಕುತೂಹಲಪಟ್ಟವರಾಗಿ ನರಸೀಪುರಕ್ಕೆ ಬಂದು ಇಲ್ಲಿ ೮—೧೦ ದಿನಗಳಿದ್ದು ವಿಷಯಗಳನ್ನು ಗ್ರಹಿಸಿಕೊಂಡು ಹೋದರು. ವಿಶೇಷಯುತವಾದ ಈ ಕಾರ್ಯ ಇಷ್ಟುಮಟ್ಟಿಗೆ ದೃಷ್ಟಿ ಹರಿಸಿಕೊಳ್ಳುತ್ತಿರುವಲ್ಲಿ ಸ್ವದೇಶೀಯರಿಗೆ ಇಷ್ಟುಮಟ್ಟಿಗೆ ಆಸಕ್ತಿ ಹುಟ್ಟದಿರುವದಕ್ಕಾಗಿ ವಿಷಾದಿಸಬೇಕಾಗಿದೆ.

ಸ್ವದೇಶೀಯರು ಇಂಥಾ ಕೆಲಸಗಳಿಗೆ ಮುಂದಾಳುಗಳಾಗಿ ನಿಂತು ಕೀರ್ತಿ ಪಡೆದು ಗವರ್ನಮೆಂಟಿನವರ ಉದ್ದೇಶವನ್ನು ಸಫಲಗೊಳಿಸುವರೆಂದು ನಿರೀಕ್ಷಿಸುತ್ತೇನೆ.

ಹೊಳೇನರಸೀಪುರ. ಎಂಸಾರ.

❖❖❖❖❖❖❖❖❖

### ಮಲೆನಾಡು ಗೇಣೀ ರೈತರ ಸ್ಥಿತಿ.

ಅಯ್ಯಾ,

ಕೊಪ್ಪ, ನಗರ, ಸಾಗರ ಮುಂತಾದ ಮಲೆನಾಡು ಪ್ರಾಂತ್ಯಗಳಲ್ಲಿ ಅತಿಕಷ್ಟದಿಂದ ಕಂದಾಯವನ್ನು ಶೇಕಡ ೨೫ ರೂಪಾಯಿ ನಂತೆ ರೆಮಿಷನ್ ಮಾಡಿದರಲ್ಲಾ. ಇದು ಬಡ ಪ್ರಜೆಗಳ ಹಿತಕ್ಕಾಗಿ ಮಾಡಿರಬಹುದೆಂದು ನೆನಸಿದರೂ ಕೆಲವು ಅನಿವಾರ್ಯಗಳು ಈ ಕಂದಾಯಕ್ಕೆ ಆಸ್ತಿ ಇರುತ್ತವೆ ... ಮುಖ್ಯ ... [illegible] ... ಮೂಲದ ರೈತರು ... [illegible] ... ಯಾವ ... [illegible] ... ಸವಲತ್ತು ಹಾಕಿ ಕೊಡುವವರಾರು? ಮುಂದೆ ನಮ್ಮ ಪರಿಣಾಮವೇನು? ಧನಿಯು ಏನೆ ಏನೆ ಎಂದು ಹಟ್ಟಿ ಗೇಣಿ

ರೈತನನ್ನು ಹೀನಸ್ಥಿತಿಗೆ ತರುತ್ತಾನೆ. ಕೊಳೆ ರೋಗವು ಫಸಲನ್ನು ಹಾಳುಮಾಡುತ್ತದೆ. ರೈತನ ಮತ್ತೊಂದು ನಂಟನಾದ ಧಣಿಯು ಕಾಟ ಇವುಗಳು ಜಮೀನನ್ನು ಹೀನಸ್ಥಿತಿಗೆ ಎಳೆಯುತ್ತವೆ. ಆಗ ಸಾಹುಕಾರನ ಆಸ್ತಿಯು ಅರೂಬಾಗಿ ಸರ್ಕಾರಕ್ಕೆ ಬರುವ ತೀರ್ವೆ ಕೊಡಲಾರದೆ ಹಾನೀನಾಮೆ ಆಗುತ್ತೆ. ರೈತನು ಅನ್ಯೋನ್ಯರಿಗೆ ಹೋಗುತ್ತಾನೆ. ಇದರಿಂದ ಸರಕಾರಕ್ಕೆ ಸಲ್ಲೀಸು ಕಂದಾಯ ಬರುವದಕ್ಕೆ ಅಡ್ಡಿ ಆಯಿತು. ರೈತನು ಊರುಬಿಟ್ಟು ಅಲೆಯುತ್ತಾನೆ. ಮುಂದೇನಾಗುವದೋ ವಾಚಕರೇ ಗ್ರಹಿಸಿರಿ. ಓಹೋ! ರೆಪ್ರೆಜೆಂಟೆಟಿವ್ ಸಭೆಯವರು ಇದರ ವಿಷಯ ಏನಾದರೂ ಮಾಡ್ಯಾರು! ಅಲ್ಲಿ ಮೆಂಬರುಗಳೆಲ್ಲಾ ಸಾವಕಾರ್ರುಮುಂತಾದ ದೊಡ್ಡಮನುಷ್ಯರಲ್ಲವೇ. ಗೇಣಿ ರೈತರ ಪಕ್ಷ ಯಾರಪ್ಪಾ ಮೆಂಬರು ಇದ್ದಾರೆ? ಆದರ್ಶ ಮಾಂಟೆಕ್ರಿಸ್ಟನಂಥಾ ಜಮೀನುದಾರರು ಅನೇಕರು ಇರಬಹುದು. ಹಾಗಾದರೆ ಈ ಸಾರಿ ಈ ವಿಷಯದಲ್ಲಿ ಯಾವ್ಯಾವ ಮೆಂಬರುಗಳು ಚರ್ಚಿಸುವರೋ ನೋಡೋಣ. ಅದಿರಲಿ, ಮುಂದಿನ ವಿಷಯ ಕುರಿತು ದೇವರೇ ಸಹಾಯಮಾಡುವನು.

ಮುಖ್ಯವಾಗಿ ಈ ಕೋರಿಕೆಯು ನಮ್ಮನ್ನಾಳುವ ನಮ್ಮ ಒಡೆಯರವರ ಪಾದಕ್ಕೆ ವೇದ್ಯವಾಗಿ ರೈತನು ಜಮೀನುದಾರನಿಗೆ ಕೊಡಬೇಕಾದ ಗೇಣಿವಿಷಯ ಇಷ್ಟೆಯೆಂಬುದು ಕರಾರುವಾಕ್ ಒಂದು ಕಾನೂನು ಆಗಬೇಕೆಂತಲೂ, ಮಲೆನಾಡಿನಲ್ಲಿ ವ್ಯವಸಾಯಕ್ಕೆ ಮಾತ್ರ ಸರ್ಕಾರದವರಿಂದ ರೈತ ಜನರಿಗೆ ಚೆನ್ನಾಗಿ ತಿಳಿಯಲ್ಪಟ್ಟು ರೈತ ಜನರನ್ನು ರಕ್ಷಿಸುವಂತೆ ಮಾಡಬೇಕೆಂತಲೂ, ಇದರಲ್ಲಡಗಿರುವ ವಿಷಯಗಳು ವಿವರವಾಗಿ ಮಹಾ ಸನ್ನಿಧಾನ ಶ್ರೀಮನ್ ಮಹಿಸೂರ ಮಹಾರಾಜಾ ಸಾಹೇಬ್ ಬಹದ್ದೂರವರ ಸನ್ನಿಧಿಗೆ ವೇದ್ಯಪಡಿಸಬೇಕೆಂತಲೂ ಬೇಡುತ್ತೇನೆ.

ಮಲೆನಾಡಿನ ಬಡ ಗೇಣೀ ರೈತರ ಹಿತೈಷಿ.

◆◆◆◆◆◆◆◆◆

ಪ್ರಜಾಪ್ರತಿನಿಧಿಗಳನ್ನು ಚುನಾಯಿಸುವದು.

ಅಯ್ಯಾ,

ಪ್ರಜಾಪ್ರತಿನಿಧಿ ಸಭೆಗೆ ಶ್ಯಾನುಭೋಗರು, ಪಟೇಲರೇ ವಿಶೇಷವಾಗಿ ಬರುತ್ತಿದ್ದರಷ್ಟೆ. ಈ ವರುಷ ಅದೇ ಪದ್ಧತಿ ಊರ್ಜಿತವಾಗುತ್ತೇ, ಇಲ್ಲವೆ ಶ್ರೀಮನ್ ಮಹಾರಾಜರವರು ತಮ್ಮ ಸಂಸ್ಥಾನಕ್ಕೆ ಸೇರಿದ ಗ್ರಾಮಾಂತ್ರ ನಡವಳಿಕೆಗಳೆಲ್ಲಾ ವಿಶದವಾಗಿ ಚಿತ್ತೈಸಿ ಪ್ರಜೆಗಳಲ್ಲಿ ದಯಾಪೂರ್ವಕರಾಗಿದ್ದಾರೆಂಬುವದು ಪ್ರಖ್ಯಾತವಾಗಿರುವದರಿಂದ ಈ ವರುಷ ಹಳೇ ಪದ್ಧತಿಯನ್ನು ಬಿಟ್ಟು, ಸರ್ಕಾರಿ ಉದ್ಯೋಗಸ್ಥರಲ್ಲದೆ ಶುದ್ಧ ಹಿಡುವಳಿದಾರರಾಗಿಯೂ ಎಲ್ಲಾ ಸಂಗತಿ ತಿಳುವಳಿಕೆ ಉಳ್ಳವರಾಗಿಯೂ ಇರುವಂಥಾವರನ್ನೇ ಬರಮಾಡಿಕೊಳ್ಳುವರೋ, ತಾಲ್ಲೂಕು ಅಧಿಕಾರಿಗಳು ಕಳುಹಿಸುವವರನ್ನೇ ಮೆಂಬರುಗಳಾಗಿ ಎಣಿಸಿಕೊಳ್ಳುವರೋ, ಎಂಬೀ ಸಂಗತಿಯನ್ನು ಕುರಿತು ದೊಡ್ಡ ದೊಡ್ಡ ಹಿಡುವಳಿದಾರರೆಲ್ಲಾ ಎದುರುನೋಡುತ್ತಿದ್ದಾರೆ. ಈ ವಿಷಯದಲ್ಲಿ ನೀವು ನಿಮ್ಮ ಅಭಿಪ್ರಾಯಗಳನ್ನು ಪ್ರಕಟಿಸಬೇಕೆಂದು ಕೋರುವ

ಮರಳವಾಡಿ. ಚಂದಾದಾರ.

[ಸರ್ಕಾರಿ ಅಧಿಕಾರಿಗಳು ಪ್ರತಿನಿಧಿ ಸಭೆಗೆ ಮೆಂಬರುಗಳನ್ನು ಚುನಾಯಿಸುವದಕ್ಕೆ ತಾಲ್ಲೂಕು ಮುಂತಾದ ಸ್ಥಳಗಳಲ್ಲಿ ಜಮೀನುದಾರರೇ ಮೊದಲಾದ ದೊಡ್ಡ ಮನುಷ್ಯರನ್ನೆಲ್ಲಾ ಕರೆಸಿಕೊಂಡು, ಅವರಿಂದ ಮೆಂಬರುಗಳನ್ನು ಚುನಾವಣೆ ಮಾಡಿಸುವರು. ಅಗ್ಯೆ ಆಯಾ ಸ್ಥಳದವರು ಶ್ಯಾನುಭೋಗರನ್ನೋ ಪಟೇಲರನ್ನೋ ಇತರ ಹಿಡುವಳಿದಾರರನ್ನೋ ಯಾರನ್ನಾದರೂ ಸಮ್ಮತಿಹಾಕಿ ಮೆಂಬರಾಗಿ ಚುನಾಯಿಸಿಕೊಳ್ಳಬಹುದು ಎಂಬದಾಗಿ ನಮಗೆ ತೋರುತ್ತದೆ. ಚುನಾಯಿಸುವದಕ್ಕೆ ಸೇರುವ ಜನರು ಶ್ಯಾನುಭೋಗರಿಗೂ ಪಟೇಲರಿಗೂ ಸಮ್ಮತಿ ಕೊಡದೆಹೋದರೆ ಅವರು ಮೆಂಬರಾಗಿ ಬರುವದಿಲ್ಲ. ಆ ಮೇಲೆ ಅವರು ಮೆಂಬರಾಗಿ ಹ್ಯಾಗೆ ಬರುವದಕ್ಕಾದೀತು? ಇತರ ಹಿಡುವಳಿದಾರರಿಗೇನೇ ಸಮ್ಮತಿ ಕೊಟ್ಟಲ್ಲಿ ಅವರು ಮೆಂಬರಾಗಲು ಅವಕಾಶವಾಗುವದು. ಸಭಿಕರೆಲ್ಲಾ ಇಂಥಿಂಥವರನ್ನೇ ಚುನಾಯಿಸಬೇಕೆಂದು ಅಧಿಕಾರಿಗಳು ಹೇಳಬಹುದು. ಆದರೆ ಅವರು ಹೇಳುವವರನ್ನೇ ಚುನಾಯಿಸಬೇಕೆಂಬ ನಿರ್ಬಂಧವೇನೂ ಇರುವದಿಲ್ಲ.—ಎಡಿ.]

◆◆◆◆◆◆◆◆◆

ಅನ್ನ ಛತ್ರಗಳೂ, ಕೋರ್ಟಾಲೆ ಛತ್ರವೂ.

ಅಯ್ಯಾ,

ಈ ಹಿಂದೆ ಕೆಲವು ತಿಂಗಳ ಸುಮಾರಿನಲ್ಲಿ ಮೈಸೂರು ದೇಶದಲ್ಲಿರುವ ಅನ್ನಛತ್ರಗಳ ವಿಷಯ ಕುರಿತು ಅರಿಕೆ ಮಾಡಿಕೊಂಡಿದ್ದಕ್ಕೆ ನೀವು ಉತ್ತರ ಕೊಡಿಸಲಿಲ್ಲ. ಈಗಲಾದರೂ ಸರ್ವರ ತಿಳುವಳಿಕೆಗೋಸ್ಕರ ಉತ್ತರವನ್ನು ದಯಪಾಲಿಸಬೇಕು.

ಮೈಸೂರು ದೇಶದಲ್ಲಿ ಸರ್ಕಾರಿ ಅನ್ನಛತ್ರಗಳು ಇರುವವು. ಯಾವ ಇಲಾಖೆ ಹಣದಿಂದ ಸಾಗುತ್ತಿವೆ? ಯಾರಾದರು ಧಂಡು ಇಟ್ಟು ಅದರ ಬಡ್ಡಿಯಿಂದಾ ಸಾಗುವವೇ? ಅಥವ ಸರ್ಕಾರದ ಪಬ್ಲಿಕ್ ಹಣದಿಂದಲಾದರೆ ಎಲ್ಲಾ ಪ್ರಜೆಗಳಿಗು ಅನ್ನ ಸಿಕ್ಕತಕ್ಕದ್ದೋ? ಅಥವಾ ಒಂದು ಪಂಗಡದವರಿಗೆ ಮಾತ್ರವೋ? ಹಾಗೂ ಸರ್ಕಾರದವರು ಪ್ರಜೆಗಳಿಂದ ತೆಗೆದುಕೊಳ್ಳುವ ಕಂದಾಯ ಮುಂತಾದ್ದಕ್ಕೆಲ್ಲಾ ಬೇರೆ ಬೇರೆ ವಿಂಗಡದಂತೆ ಪ್ರಜರ ಮಾಡಿದಾರೆಯೋ? ಸರ್ವ ಪ್ರಜೆಗಳಿಗೂ ಒಂದೇನೇ? ಈ ಮುಂತಾದ ವಿಷಯ ದಯಮಾಡಿ ಬಡ ರೈತನಾದ ನನಗೆ ತಿಳಿಸಬೇಕು, ಸ್ವಾಮಿ. ಇಲ್ಲವೆ ಬ್ರಾಹ್ಮಣೇತರರು ಪುರಾಣ ಮುಂತಾದ ಹಿಂದೂಶಾಸ್ತ್ರವನ್ನು ಓದಕೂಡದೆಂಬ ವಿಧಿ ಇರುವಂತೆ ಮೇಲಿನ ಪ್ರಶ್ನೆಗಳು ನಾನು ಅಥವ ಸರ್ವ ವಾಚಕರು ತಿಳಿಯಲು ಅರ್ಹತೆ ಇಲ್ಲವೆಂತ ಇದ್ದರೆ ಹಾಗಾದರೂ ಪ್ರಕಟಿಸಿ, ಸ್ವಾಮಿ.

ಶಿವಮೊಗ್ಗ ಕೋರ್ಟಾಲಿಸ್ ಛತ್ರದಲ್ಲಿ ಮೊದಲು ಸರ್ವರೂ ಇಳುಕೊಳ್ಳುತ್ತಾ ಇದ್ದರು. ಈಚೆಗೆ ಬ್ರಾಹ್ಮಣರಿಗೆ ಮಾತ್ರ ಎಂತ ಅಲ್ಲಿನ ರಖಾವಾರರು ಅಡ್ಡಿಮಾಡುವ ವಿಷಯ ಮೊದಲು ತಿಳಿಸಿದೆನಷ್ಟೆ. ಕೋರ್ಟಾಲಿಸ್ ದೊರೆಯವರು ಸರ್ವರ ಹಿತಕ್ಕಾಗಿ ಮೊದಲು ಛತ್ರ ಕಟ್ಟಿಸಿ ಕಡೆಗೇನಾದರೂ ವಿಲ್ ಮಾಡಿ ಬ್ರಾಹ್ಮಣೇತರರಿಗೆ ಅಡ್ಡಿಮಾಡಿದರೋ? ಅನೇಕ ಜನ ಬ್ರಾಹ್ಮಣೇತರರು ನಾನು ಮೊದಲು ಕಷ್ಟಪಟ್ಟಂತೆಯೇ ಕಷ್ಟಪಡುವರೆಂಬದಕ್ಕೆ ದಯಮಾಡಿ ಬ್ರಾಹ್ಮಣೇತರರ ವಿಷಯ ಆ ಛತ್ರಕ್ಕೆ ಪ್ರವೇಶಿಸುವಂತೆ ಏನಾದರೂ ಆ ಧರ್ಮಾತ್ಮರು ವಿಧಿಸಿದ್ದಾರೋ? ಬಹು ಜನರ ತೊಂದರೆ ನಿವಾರಣೆಯಾಗುವ ವಿಷಯ ದಯಮಾಡಿ ಸರ್ವರೂ ತಿಳಿಯುವಂತೆ ಪ್ರಕಟಪಡಿಸಬೇಕಾಗಿ ಬೇಡುತ್ತೇನೆ. ಒಂದುವೇಳೆ ಬ್ರಾಹ್ಮಣೇತರರು ಮೊದಲು ಇಳುಕೊಳ್ಳುವಂತೆ ಇಳುಕೊಳ್ಳುವದಕ್ಕೆ ಯಾವ ಅಡ್ಡಿಯೂ ಇಲ್ಲವೆಂತ ಇದ್ದರೆ ಆ ವಿಷಯಕ್ಕೂ ಸಹಾ ದಯಮಾಡಿ ಪ್ರಚುರಪಡಿಸಬೇಕಾಗಿ ಬೇಡುತ್ತೇನೆ.

ಚಂದಾದಾರ.

[ಈ ಸಂಸ್ಥಾನದಲ್ಲಿರುವ ಸತ್ರ ಮಠ ದೇವಸ್ಥಾನಗಳಿಗೆ ಪೂರ್ವಿಕರು ಪ್ರಭುವಟ್ಟುಹಾಕಿ ಗ್ರಾಮ ಭೂಮಿಗಳನ್ನು ಮಾನ್ಯವಾಗಿ ಬಿಟ್ಟು, ಇವುಗಳಲ್ಲಿ ಉತ್ಪತ್ತಿಯಾಗತಕ್ಕ ಹಣ ಕಾಸನ್ನೂ ಭಕ್ತಾದಿಗಳು ಅಗಿಂದಾಗ್ಯೆ ಕೊಡುವ ಕಪ್ಪಕಾಣಿಕೆಗಳನ್ನೂ ಗವರ್ನಮೆಂಟಿನವರು ಕೂಡಿಸಿ, ಮುಜರಾಯಿ ಖಾತೆಯಿಂದ ಖರ್ಚು ಮಾಡುತ್ತಾರೆಂತಲೂ, ಅಂಥಾ ಪೂರ್ವಿಕರು ಬರೆದಿಟ್ಟಿರುವ ಶಾಸನಗಳ ಅಭಿಪ್ರಾಯಾನುಸಾರವಾಗಿ ಆಯಾ ಸತ್ರಗಳನ್ನು ನಡೆಸುತ್ತಾರೆಂತಲೂ ತಿಳಿಯುವೆವು. ಸತ್ರಗಳಲ್ಲಿ ಬ್ರಾಹ್ಮಣರಿಗೇ ಅನ್ನ ಹಾಕಬೇಕೆಂದು ದಾನಕರ್ತರು ಉದ್ದೇಶಪಟ್ಟಿರುವವಾದರೆ ಇತರ ವರ್ಣಸ್ಥರುಗಳಿಗೆ ಅವಕಾಶವಿರುವದಿಲ್ಲ.

[ಶಿವಮೊಗ್ಗ ಕೋರ್ಟಾಲೇ ಮೊರೆಯವರು ಕಟ್ಟಿಸಿರತಕ್ಕ ಸತ್ರವನ್ನು ಸಕಲ ವರ್ಣಾಶ್ರಮದವರೂ ಉಪಯೋಗಿಸಬಹುದಾಗಿದೆ. ಇದನ್ನು ಒಂದೇ ವರ್ಣದವರಿಗೆಂದು ಹೇಳಿ, ಉಳಿದವರನ್ನು ಅಲ್ಲಿ ಇಳುಕೊಳ್ಳದಂತೆ ಅಡ್ಡಿ ಮಾಡುವದು ಅನುಚಿತ. ಅದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಕಮಿಟಿಯವರು ಸತ್ರದ ಕಾವಲುಗಾರರಿಗೆ ಸರಿಯಾದ ಹುಕುಂ ಕೊಟ್ಟು, ಪ್ರಯಾಣಿಕರಿಗೆ ಅವರಿಂದ ಯಾವ ಅಡಚಣೆಯೂ ಉಂಟಾಗದಂತೆ ನೋಡಿಕೊಂಡಾರೆಂದು ನಿರೀಕ್ಷಿಸುತ್ತೇವೆ.—ಎಡಿ.]

## ಪ್ರಶ್ನೋತ್ತರಗಳು.

ಪ್ರ.—ಈ ಪ್ರಪಂಚದಲ್ಲಿನ ಪ್ರಾಣಿಗಳೆಲ್ಲಾ ಆಯುಸ್ಸು ಪೂರ್ಣವಾದಮೇಲೆ ಸಾಯುವವೇ? ಅಥವಾ, ಮಧ್ಯದಲ್ಲಿಯೇ ಬಂದೊದಗುವ ಸಂಕಟಗಳ ದೆಸೆಯಿಂದ ಸಾಯುವವೇ?

ಉ.—ಈ ಪ್ರಶ್ನೆಯಲ್ಲಿ ದೇವರಿಂದ ನೇಮಕವಾದ ಕಾಲಕ್ಕಿಂತಲೂ ಮುಂಚೆ ಜನರು ಸಾಯುತ್ತಾರೆಯೋ ಎಂಬುವದು ನಿಮ್ಮ ಅಭಿಪ್ರಾಯವೋ? ಹಾಗಾದರೆ ಒಂದು ರೀತಿಯಲ್ಲಿ ನೋಡಿದರೆ ಆಯುರ್ದಾಯ ಮುಗಿಯದೆ ಯಾವ ಪ್ರಾಣಿಯೂ ಸಾಯುವದಿಲ್ಲ. "ತಂದೆಯಾದ ದೇವರ ಅಪ್ಪಣೆಯಾದಲ್ಲದೆ ಯಾವ ಗುಬ್ಬಿಯಾದರೂ ನೆಲಕ್ಕೆ ಬೀಳುವದಿಲ್ಲ" ಎಂಬದಾಗಿ ಯೇಸುಕ್ರಿಸ್ತನು ಹೇಳಿರುತ್ತಾನೆ. ಆದರೆ ಇನ್ನೊಂದು ರೀತಿಯಲ್ಲಿ ನೋಡಿದರೆ ಅನೇಕಾನೇಕ ಪ್ರಾಣಿಗಳು ತಮ್ಮ ಆಯುಸ್ಸು ಪೂರ್ಣವಾಗುವದಕ್ಕೆ ಮೊದಲೇ ಸಾಯುವವು. ಮನುಷ, ಒಂದು ದೇಶದಲ್ಲಿ ಒಬ್ಬನು ಕೊಲೆಪಾತಕನನ್ನು ಹಿಡಿದು ಗಲ್ಲಿಗೆ ದಾಖಲುಮಾಡುವನು. ಇದರಲ್ಲಿ ದೊರೆಯು ಅಪ್ಪಣೆಯಾಗದೆ ಅವನಿಗೆ ಮರಣ ಉಂಟಾಯಿತೆಂದು ಹೇಳುವದಕ್ಕಾಗುವದಿಲ್ಲವಷ್ಟೆ. ಆದರೆ ಅವನು ಕೊಲೆಗಾರನಲ್ಲಿ ಅವನನ್ನು ಗಲ್ಲಿಗೆ ಹಾಕೋಣವೆಂದು ದೊರೆಯು ಕೋರುವದಿಲ್ಲ. ಮನುಷ್ಯನಿಗೆ ಸ್ವತಂತ್ರಿಸಿ ಕಾರ್ಯಗಳನ್ನು ನಡಸುವದಕ್ಕೆ ಸಾಮರ್ಥ್ಯವಿರುವದರಿಂದ ಅಂಥಾ ಕಾರ್ಯಗಳ ದೆಸೆಯಿಂದ ತನ್ನ ಆಯುರ್ದಾಯ ಮುಗಿಯುವದಕ್ಕಿಂತ ಮೊದಲೇ ಮರಣವನ್ನು ತಂದುಕೊಳ್ಳುವನು.—ಎಡಿ.

---

ಪ್ರ.—ಮೃತಿಯನ್ನು ಹೊಂದಿದ ಹಿತರೇ ಆಗಲಿ, ಅಥವಾ ಅಹಿತರೇ ಆಗಲಿ ಯಾವಾಗಲೂ ಸ್ಮರಿಸದೇ ಇದ್ದಾಗ್ಯೂ ಸ್ವಭಾವಿಕವಾಗಿ ಸ್ವಪ್ನದಲ್ಲಿ ಕಾಣಬರುತ್ತಿರುವರಷ್ಟೆ. ಹೀಗಿದ್ದಾಗ್ಯೂ ಅತಿ ಪ್ರೀತಿಯುತರಾದ ಇನ್ನೂ ಜೀವರನ್ನು ಹಗಲಿರುಳೂ ಹಂಬಲಿಸುತ್ತಲಿದ್ದಾಗ್ಯೂ ಒಮ್ಮೆಯಾದರೂ ಕಾಣಿಸಿಕೊಳ್ಳುವದಿಲ್ಲವಲ್ಲಾ! ಇದನ್ನು ಏನೆಂದು ಹೇಳುವಿರಿ?

ಉ.—ಮೃತಿಯನ್ನು ಹೊಂದಿದ ಹಿತರಾಗಲಿ, ಅಹಿತರಾಗಲಿ, ಜೀವದಲ್ಲಿರುವವರೇ ಆಗಲಿ, ನಮ್ಮ ಸ್ವಪ್ನಗಳಲ್ಲಿ ಬಂದು ನಮಗೆ ಕಾಣಿಸಿಕೊಳ್ಳುತ್ತಾರೆಂದು ಹೇಳುವ ಮಾತು ನಿಜವಾದದ್ದಲ್ಲ. ಸ್ವಪ್ನದಲ್ಲಿ ನಮಗೆ ಕಾಣಿಸಿಕೊಳ್ಳುವವರು ಬಿಡುಕಿರಲಿ, ಸತ್ತುಹೋಗಿರಲಿ, ಅವರೇ ನಮ್ಮ ಕಣ್ಣಿಗೆ ಬೀಳುತ್ತಾರೆಂದು ನಾವು ತಿಳುಕೊಳ್ಳಬಾರದು. ನಾವು ಎಚ್ಚರವಾಗಿದ್ದಾಗ ನಡೆಯತಕ್ಕ ವಿದ್ಯಮಾನಗಳೇ ಸ್ವಪ್ನಗಳಲ್ಲೂ ಪ್ರತ್ಯಕ್ಷವಾಗುತ್ತವೆ. ಮನುಷ್ಯನ ಮೇಧಸ್ಸಿನಲ್ಲಿ (ಮೆದುಳಿನಲ್ಲಿ) ಉಂಟಾಗುವ ಚಂಚಲ ಸ್ವಭಾವದ ದೆಸೆಯಿಂದಲೇ ಸ್ವಪ್ನಗಳು ಬೀಳುವವಲ್ಲದೆ ಮತ್ತೆ ಬೇರೆ ಅಲ್ಲ.—ಎಡಿ.

---

ಪ್ರ.—ಸತ್ತವರನ್ನು ಮತ್ತೆ ಕಾಣುವೆವೆಂದು ಹೇಳುವದು ನಿಜವೇ, ಹೇಗೆ? ನಿಜವಿದ್ದಲ್ಲಿ ಯಾವಾಗ? ಮತ್ತು ಎಲ್ಲಿ?

ಉ.—ಈ ಸಂಗತಿಯು ಹೀಗೇ ಸರಿ ಎಂದು ನಿರ್ಧರಿಸಿ ಹೇಳುವದು ಸಾಧ್ಯವಲ್ಲ; ಜನರು ನಾನಾತರವಾದ ಅಭಿಪ್ರಾಯಗಳನ್ನು ಹೇಳುವರು. ಈ ಅಭಿಪ್ರಾಯಗಳು ಸಮಂಜಸವಾದವುಗಳಲ್ಲ ದ್ಯಾಗ್ಯೂ ಕೆಲವು ಸಂದರ್ಭಗಳಲ್ಲಿ ಸತ್ತವರು ಕೆಲವರಿಗೆ ಕಾಣಿಸಿಕೊಂಡಿರುವದುಂಟು; ಆದರೆ ಸ್ವಪ್ನದಲ್ಲಿ ಅಲ್ಲ, ಎಚ್ಚರವಾಗಿದ್ದಾಗಲೇ ಬಂದು ಕಾಣಿಸಿಕೊಂಡಿದ್ದಾರೆ.—ಎಡಿ.

## ತಾಲ್ಲೂಕು ವರ್ತಮಾನಗಳು.

ಚಿಕ್ಕಮಗಳೂರು.—ಕೆಲವು ದಿನಗಳ ಹಿಂದೆ ಶಿವಮೊಗ್ಗೆಯಿಂದ ಬಂದ ಒಬ್ಬ ಬ್ರಾಹ್ಮಣನಿಗೆ ಪ್ಲೇಗ್ ಗಡ್ಡೆ ಆಗಲಾಗಿ ಆಸ್ಪತ್ರೆಯವರು ಈತನನ್ನು ಷೆಡ್ಡಿಗೆ ರವಾನಿಸಿ ಇಲಾಜು ಮಾಡಿದಾಗ್ಯೂ ಆತನು ಮೃತನಾದನು. ಈತನು ಶಿವಮೊಗ್ಗೆಯಲ್ಲಿ ಪ್ಲೇಗ್ ಹಬ್ಬಿದ ಮನೆಯಲ್ಲಿ ವಾಸಮಾಡಿ ಅಲ್ಲಿಂದ ಬಂದು ಇದ್ದನು. ಒಡನೆ ಆಸ್ಪತ್ರೆಯವರೂ ಪೊಲೀಸ್‌ನವರೂ ತುಂಬಾ ಹುಷಾರಾಗಿ ಕಳೆದ ವರ್ಷದಂತೆ ರೋಗ ಪೂರಾ ವ್ಯಾಪಿಸದ ಹಾಗೆ ಅಲ್ಲಲ್ಲಿ ಜನರಿಗೆ ಬೇಕಾದ ಎಚ್ಚರಿಕೆಗಳನ್ನು ಕೊಟ್ಟರು. ಈ ಮಧ್ಯೆ ಇಲಿಗಳು ಸತ್ತವೆಂಬ ವರ್ತಮಾನವೂ, ಇನ್ನು ಕೆಲವರಿಗೆ ತಗಲಿತೆಂಬ ವಾರ್ತೆಯೂ ಪ್ರಕಟವಾಗಲಾಗಿ, ಪೊಲೀಸ್ ಜನರು ಕೋಟೆಯಲ್ಲೂ ಪೇಟೆಯಲ್ಲೂ ಮನೆ ಮನೆಗೆ ಹೋಗಿ ಈಗಲೇ ಷೆಡ್‌ಗಳನ್ನು ಕಟ್ಟಿಕೊಂಡು, ಡಿ. ಕಮಿಷನರು ಅಪ್ಪಣೆ ಕೊಡುವಾಗ ತಕ್ಷಣವೆ ಮನೆಗಳನ್ನು ಖಾಲಿ ಮಾಡಬೇಕೆಂತಲೂ, ಇಲ್ಲವಾದರೆ ಬೇಗ ಹಾಕುವರೆಂತಲೂ ಜನರಿಗೆ ತಿಳಿಸಲು, ಊರೆಲ್ಲಾ ಗಾಬರಿಯಾಗಿ ಕಳೆದ ವರ್ಷ ಜುಲೈ ತಿಂಗಳಲ್ಲೇ ಈ ರೋಗ ಕಾಣಿಸಿದ್ದರಿಂದ ಈಗಲೂ ಒಂದುವೇಳೆ ಆ ರೀತಿ ಆಗುವದೆಂತ ಅನೇಕರು ಭಯಪಟ್ಟು, ಕಂಡಾಬಟ್ಟೆ ಬದಲಿಕೆಯ ವಾಸಮಾಡತಕ್ಕ ಸ್ಥಳಗಳನ್ನು ಜಾತಿವಾರ್ ವಿಂಗಡಿಸಿಕೊಳ್ಳಲಿಕ್ಕೂ ತಯಾರುಮಾಡುತ್ತಿರಲು, ಪುನಃ ಬಹಿರಂಗವಾಗಿ ದಂಡೋರ ಹಾಕಿಸಿದ್ದೇನಂದರೆ,—ಜನರು ಸದ್ಯಕ್ಕೆ ಬಿಡುವದು ಅವಶ್ಯವಿಲ್ಲ, ಮನೆಗಳನ್ನು ಶುಚಿಮಾಡಿಕೊಂಡು ವಾಸಮಾಡಬಹುದು, ನಿಶ್ಚಯ ಸಂಗತಿ ಇನ್ನೂ ಹೊರಪಟ್ಟಿಲ್ಲ.—ಈ ಊರ ಭಾರಿ ಅಂಗಡಿಗಳಲ್ಲಿ ಅಕ್ಕಿಯ ಕಲ್ಲುಗಳು ಬಹು ಕಮ್ಮಿಯಾಗಿ ಈ ವರೆಗೂ ಜನರಿಗೆ ಬುದ್ಧಿ ಬಂದಿಲ್ಲ. ಅವರು ಒಡನೆ ಸರಿಯಾದ ತೂಕ ಸೇರುಗಳನ್ನು ಮಾಡಗವಿದ್ದರೆ ಅವಮಾನಕ್ಕೆ ಒಳಪಡುವದರಲ್ಲಿ ಸಂಶಯವಿಲ್ಲ. ದೊಡ್ಡ ಹೆಸರುಗಳು ಕೆಟ್ಟತನವನ್ನು ಮುಚ್ಚಲಾರವು.—ಮಳೆ ನಿಂತು ಬಿಸಲು ಪ್ರಕಾಶವಾಗಿ ಪೈರುಗಳು ಚೆನ್ನಾಗಿ ಪ್ರಜಾಕ್ಷೇಮ ಸಾಧಾರಣವಾಗಿದೆ. ಧಾರಣೆ ಯಥಾಪ್ರಕಾರವಾಗಿದೆ.

ಚಿಕ್ಕನಾಯಕನಹಳ್ಳಿ.—ಈ ಊರಲ್ಲಿ ಮಳೆ ಬಾರದೇ ರೈತರಿಗೆಲ್ಲಾ ವ್ಯವಸಾಯಕ್ಕೆ ಬಹಳ ತೊಂದರೆಯಾಗಿರುತ್ತೆ. ಮಳೆಯಾಗಿ ಬಹಳ ದಿನವಾಗಿರುತ್ತೆ. ಈ ಗ್ರಾಮದ ಸುತ್ತಲೂ ಕ್ರಮ ಪ್ರಕಾಶವೇ ಬಿಟ್ಟು ಈಚೆಗೆ ಬಹಳ ಮಳೆ ಆಗಿ ಇಲ್ಲಿಗೆ ಮಾತ್ರ ಇಲ್ಲದಿರುವುದು ಜನಗಳ ಅದೃಷ್ಟವೆಂದು ಹೇಳಬೇಕು.—ಹಜಾರ ಪಲ್ಲಿದ್ದ ನಮ್ಮ ಅಮಲ್ದಾರರು ಬಂದು ತಾಲ್ಲೂಕ್ ಛಾರ್ಜನ್ನು ವಹಿಸಿದರು. ಈ ತಿಂಗಳಲ್ಲಿ ನಡೆದ ಮುನಿಸಿಪಲ್ ಮೀಟಿಂಗಿನಲ್ಲಿ ಹಿಂದೆ ಮುನಿಸಿಪಲ್‌ನ ಕೌನ್ಸಿಲ್ ಅಮಲ್ದಾರ್ ಮೆ॥ ಶ್ರೀಕಂಠೈಯನವರು ಛತ್ರ ಮತ್ತು ಬಂಡಿಸ್ಟ್ಯಾಂಡ್ ಸಹ ಮುನಿಸಿಪಲ್ ತಪ್ಪಿಸಿ ರೈತರಿಗೆ ಕೊಡಬೇಕೆಂದು ತೀರ್ಮಾನವಾಗಿ, ಒಬ್ಬ ರೈತನು ಅದನ್ನು ತನ್ನ ವಶದಲ್ಲಿರಬೇಕೆಂದು ಅರ್ಜಿ ಕೊಟ್ಟಿರುತ್ತಾನೆ.—ಗ್ರಾಮ ಕಚೇರಿ ಮಧ್ಯಾಹ್ನ ೧೧ ಘಂಟೆ ಅವರ ಜೊತೆಗೆ ಸಾಗುವುದು ಯಾಕೆ ಈ ರೀತಿ ಮಾಡುತ್ತಾರೋ ತಿಳಿಯದು. ಮುಂದೆಯಾದರೂ ನಿಗಾ ಕೊಡುತ್ತಾರೆಂತ ನಂಬಿದ್ದೇವೆ.—ಈ ಊರಲ್ಲಿ ಹೊಸದಾಗಿ ಆಗುವ ನೆಯ್ಗೆ ಸ್ಕೂಲ್ ಸೂಪರಿಂಟೆಂಡೆಂಟ್ ಕೆಲಸಕ್ಕೆ ನಮ್ಮನ್ನು ನೇಮಕ ಮಾಡಬೇಕೆಂದು ಕೇಳಿಕೊಂಡಿದ್ದ ಇಲ್ಲಿನ ಸ್ಕೂಲ್ ಹೆಡ್ ಮಾಸ್ಟರು ಆ ಕೆಲಸ, ಅಂದರೆ "ಫ್ಲೈಷಟಲ್ ಲೂಮ್" ಎಂಬ ಯಂತ್ರದ ಉಪಯೋಗದ ರೀತಿಯನ್ನು ಕಲಿತುಕೊಳ್ಳುವದಕ್ಕೆ ಹೊಳೇ ನರಸೀಪುರಕ್ಕೆ ಹೋಗಿರುತ್ತಾರೆ. ಹಾಲಿ ಸ್ಕೂಲ್ ಇವರನ್ನು ಇಂಗ್ಲಿಷ್ ಅ ಮಾಸ್ಟರ್ ರಾಮರಾಯರು ನೋಡುತ್ತಾರೆ.—ಈ ಊರಲ್ಲಿ ಪ್ರತಿ ಸಂವತ್ಸರದ ಆಷಾಢ ಶುದ್ಧ ದ್ವಾದಶಿ ದಿನ ಶ್ರೀ ಹಳೆಯೂರ್ ಆಂಜನೇಯ ಸ್ವಾಮಿಯ ರಥೋತ್ಸವವು ದೊಡ್ಡ ರಥದ ಮೇಲೆ ನಡೆಯುತ್ತಾ ಇತ್ತು. ಆ ರಥವು ಕೊಂಚ ಶಿಥಿಲವಾಗಿದ್ದದ್ದರಿಂದ ನಮ್ಮ ಅಮಲ್ದಾರರು ಅದರ ಮೇಲೆ ದೇವರನ್ನು ಕೂಡಿಸಿ ನಡಿಸಬಾರದೆಂದು ಅಪ್ಪಣೆ ಕೊಟ್ಟರು. ದೇವಸ್ಥಾನದ ಪ್ರೆಸಿಡೆಂಟರು ಮತ್ತು ಗ್ರಾಮಸ್ಥರ ಪೈಕಿ ೧೦ ಜನ ಸಹ ಅಮಲ್ದಾರ್ರ ಅಪ್ಪಣೆ ಪಡೆದು ತುಮಕೂರಿಗೆ ಹೋಗಿ ಡೆಪ್ಯುಟಿ ಸಾಹೇಬರನ್ನು ಕಂಡು ಸಂಗತಿ ಹೇಳಿಕೊಂಡದ್ದಕ್ಕೆ ಅವರು ಆ ಸಾಹೇಬರನ್ನು ಇಲ್ಲಿನ ಸ್ಥಿತಿ ನೋಡಲು ರಾತ್ರಿಯೇ ಕಳುಹಿಸಿದರು. ಅವರು ದಯಮಾಡಿ ದ್ವಾದಶಿ ಸಾಯಂಕಾಲದೊಳಗೆಯೇ ರಥವನ್ನು ನೆಲಗೆ ಸಲ್ಲಿಸಬೇಕೆಂದು ಅಪ್ಪಣೆ ಮಾಡಿದರು. ಅದೇ ರೀತಿ ಪ್ರಾತಃಕಾಲ ೬ ಘಂಟೆಗೆ ದೇವಸ್ಥಾನಕ್ಕೆ ದಯಮಾಡಿ ರಥಾರೋಹಣ ಮುಂತಾಗಿ ಮಾಡಿಸಿ, ಮಧ್ಯಾಹ್ನ ೧೨ ಘಂಟೆಗಾಗಿಯೇ ನೆಲೆಯನ್ನು ಮುಟ್ಟುವಂತೆ ತಯಾರು ಮಾಡಿದರು. ಹೀಗೆ ನಡಿಸಿದ್ದು ಎಲ್ಲಾ ಜನಗಳಿಗೂ ತುಂಬಾ ಸಂತೋಷವಾಗಿರುತ್ತೆ.

ಹಾಸನ.—ರೋಗ ಹಿಡಿದಿದೆ. ಅವರೂ ಕಳೆದ ವರುಷಗಳ ಜೋರಾಗಿಲ್ಲ. ಗಿಡ್ಡಬಾಗಿ ಪೈರು ಕೂಡಿದ ಪುಟ್ಟಗೂ ಚನ್ನಾಗಿ ಚನ್ನಪಟ್ಟಣದಲ್ಲಿ ಕಾಣಿಸಿಕೊಂಡು ಕೆಲವರನ್ನು ಬಲಿ ತೆಗೆದುಕೊಂಡ ಪ್ಲೇಗ್ ರೋಗವು ಬಿಸ್ಲಹಳ್ಳಿಗೂ ಹೋಗಿ ಅಲ್ಲಿ ಕೆಲವರನ್ನು ಆಹುತಿಯಾಗುವಂತೆ ಮಾಡಿತು. ಊರಿಗೆ ೫ ಮೈಲು ದೂರದಲ್ಲಿ ಅರಕಲಗೂಡು ರಸ್ತೆಯಲ್ಲಿರುವ ಈ ಗ್ರಾ

ಎಷ್ಟು ರೋಗದಿಂದ ತುಂಬಿದೆ ಎಂದೂ, ಊರಿನ ಮಧ್ಯೆ ಒಂದು ಚಿಕ್ಕ ಹಳ್ಳವು ಹೇಸಿಗೆಯಿಂದಲೂ ಕೊಚ್ಚೆಯಿಂದಲೂ ತುಂಬಿ ವಿಷ್ಕಾಗಿ ನಾತ ಬಡಿಯುತ್ತದೆಂದೂ ಹಿಂದೆ ತಿಳಿಸಿದೆ. ಈ ವರಿಗೂ ಈ ಗ್ರಾಮದ ಶಾಕೀಜಿನ ವಿಷಯದಲ್ಲಿ ಆ ಊರಿನವರಾದರೂ ಸರಕಾರದವರಾದರೂ ಗಮನಕೊಡಲಿಲ್ಲ. ಅಕಟಕಿಗೆ ಕೌರಾವನೆಯಂತಿದ್ದ ಈ ಊರಿಗೆ ಪ್ಲೇಗ್ ತಗಲಿರುವದು ಏನೂ ಆಶ್ಚರ್ಯವಾಗಿಲ್ಲ. ಈ ಗಲಾದರೋ ಈ ಗ್ರಾಮದ ವಿಷಯ ಚಿಂತಿಸಬೇಕಾಗಿದೆ. ಈ ಗ್ರಾಮಕ್ಕೆ ಪ್ಲೇಗ್ ಹಿಂದೆ ತಗಲಿ ಕೆಲವು ತಿಂಗಳುಗಳೇ ಮಾತ್ರ ಆಗಿತ್ತು. ತಿರಿಗಿ ಇಷ್ಟು ಬೇಗನೆ ತಗಲಬೇಕಾದರೆ ಊರಿನ ಸ್ಥಿತಿ ಇನ್ನೆಷ್ಟರಮಟ್ಟಿಗೆ ಇದ್ದೀತು ? ಇಂಥ ಕೊಳೆಯಿಂದ ತುಂಬಿದ ಗ್ರಾಮಗಳು ಹಾಸನದ ಸುತ್ತುಮುತ್ತಲು ಎಷ್ಟೋ ಇವೆ. ಯಾವ ಯಾವುಗಳ್ಳ ಇವು ಪುನರ್ಜನ್ಮವನ್ನು ಹೊಂದುತ್ತವೋ ಹೇಳುವದಕ್ಕಾಗದು.—ಈ ಊರಿಗೆ ರಿಲೀವಿಂಗ್ ಸ್ಕಾಲಗಿತ್ತಿ ಎಂಬದಾಗಿ ಇನ್ನೊಬ್ಬರು ಬಂದಿದ್ದಾರೆ. ಸರಕಾರದವರು ಕರುಣೆಯಿಟ್ಟು ಬಡ ಪ್ರಜೆಗಳ ವಿಷಯ ಇಂಥ ಸಹಾಯ ತೋರಿಸಿದ್ದಕ್ಕಾಗಿ ಸರ್ವರು ಅವರನ್ನು ಕೊಂಡಾಡುತ್ತಾರೆ.—ಬಸರ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳನ್ನು ಚುನಾಯಿಸಿ ೩ ವರ್ಷವಾಯಿತು. ಈಗ ಹೊಸ ಮೆಂಬರುಗಳನ್ನು ಈ ವರ್ಷ ಚುನಾಯಿಸುವದಕ್ಕಾಗಿ ನಮ್ಮ ಅಮಲ್ದಾರರು ಎಲ್ಲರಿಗೂ ನೋಟಿಸ್ ಕೊಟ್ಟು ಷಷ್ಠದಲ್ಲಿಯೇ ಒಂದು ಸಭೆಯನ್ನು ಕಚೇರಿಯಲ್ಲಿ ಸೇರಿಸುವದಕ್ಕಿದ್ದಾರೆ. ತಕ್ಕವರನ್ನು ಆರಿಸುವದರ ವಿಷಯದಲ್ಲಿ ಎಲ್ಲಾ ದೊಡ್ಡಮನುಷ್ಯರೂ ಚಿಂತಿಸಬೇಕೆಂದು ನಂಬುತ್ತೇನೆ.

ತರೀಕೆರೆ.—ಇಲ್ಲಿನ ಸಂತೆಯು ವಿಸ್ತಾರವಾದದ್ದೆಂದು ಮುಂಚೆ ತಿಳಿಸಿದ್ದೆನಷ್ಟೆ. ಆದರೆ ಸಂತೆಯಲ್ಲಿ ವರ್ತಕರು ಕಸ್ಮಿ ಅಳತೆ ಸೇರುಗಳನ್ನು ಇಟ್ಟು ಅಳೆಯುತ್ತಿದ್ದರೂ ಪೋಲೀಸ್‌ನವರು ಕಂಡಾಗ್ಯೂ ಕಡೇವರಿಗೂ ವಿಚಾರಿಸದೆ ಹಾಗೇ ಬಿಟ್ಟುಬಿಟ್ಟರು. ಮತ್ತು ಅವರು ಜೂಜಾಡುವವರನ್ನು ನೋಡಿದಾಗ್ಯೂ ಇನ್ನೂ ಅದು ಪಕಾಗೆ ಪರೀಕ್ಷಿಸಿಮಾಡುತ್ತಾ ಇದ್ದರೇ ಹೊರ್ತು ತಡೆಯಲಿಲ್ಲ. ಈ ವಿಷಯದಲ್ಲಿ ಚರ್ಚೆಮಾಡಿದರೆ ತಾಲ್ಲೂಕುಗಳಲ್ಲಿ ಗ್ಯಾಂಬ್ಲಿಂಗ್ ಆಕ್ಟು ಇನ್ನೂ ಜಾರಿಗೆ ಬಂದಿಲ್ಲವೆಂತ ಹೇಳುತ್ತಾರೆ. ಜನರ ಮುಂತಾದ ದೊಡ್ಡ ಸ್ಥಳಗಳಲ್ಲಿ ಈ ಆಕ್ಟು ಜಾರಿಗೆ ಬಂದಿರುವಾಗ ತಾಲ್ಲೂಕು ಮುಂತಾದ ಸ್ಥಳಗಳಲ್ಲಿ ಯಾಕೆ ಈ ಆಕ್ಟು ಜಾರಿಯಲ್ಲಿಲ್ಲವೋ ತಿಳಿಯದು.—ಸಂತೆಯಲ್ಲಿ ಗಾಡಿ ನೊಗಲಾದವುಗಳು ಓಡ್ಯಾಡುತ್ತಿರುವಾಗ ಪೋಲೀಸ್ ಜನಗಳ ಮೇಲಿನ ದೃಷ್ಟಿಇಲ್ಲದೆ ಸ್ವೇಚ್ಛೆಯಾಗಿ ಬಿಡುವದರಿಂದ ಅನೇಕ ವಿಧವಾದ ಅಪಾಯಗಳು ಸಂಭವಿಸುತ್ತಿರುವವು. ಇವುಗಳಿಗೆಲ್ಲಾ ಪೋಲೀಸಿನವರು ತುಂಬಾ ನಿಗಾ ಕೊಡತಕ್ಕದ್ದಾಗಿದೆ.—ಕೆಲವು ವಾರಗಳ ಹಿಂದೆ ಈ ಊರಿನ ಬ್ರಾಹ್ಮಣರಲ್ಲಿ ಒಂದು ಅತಿಶಯವಾದ ವಿವಾಹ ನಡೆಯಿತು. ವರನು ವಧುವಿಗೆ ಮಂಗಳಸೂತ್ರ ಕಟ್ಟುವತನಕ ಆಗಬೇಕಾಗಿದ್ದ ವಿವಾಹ ಸಂಬಂಧವಾದ ಕಾರ್ಯವೆಲ್ಲಾ ನಡೆಸಿದನು. ಮಂಗಳಸೂತ್ರವನ್ನು ಕಟ್ಟುವಹಾಗೆ ಪುರೋಹಿತರು ವರನ ಕೈಗೆ ಮಂಗಳಸೂತ್ರವನ್ನು ಕೊಡಲು ಅವನು ಕನ್ಯೆಗವನು ಕಟ್ಟುವದಿಲ್ಲವೆಂಬದಾಗಿ ಹೇಳಿ, ಬಿಸಾಟದ್ದರಿಂದ ಕನ್ಯೆಯ ತಾಯಿ ತಂದೆಗಳು ವರನಲ್ಲಿ ಅನುಮಾನ ತೋರಿಬಂದದ್ದರಿಂದ ವಿವಾಹ ಕಾರ್ಯವನ್ನು ಅಷ್ಟಕ್ಕೆ ನಿಲ್ಲಿಸಿದರು.—ತಾ ೧೮ರಲ್ಲಿ ಇಲ್ಲಿನ ದೈಲ್ಲಿ ಸ್ಟೋರ್ ನಾಸ್ತ್ರೀ ನೋ" ಗೋಡೌನಿನ ಮನೆಯಲ್ಲಿ ಆನೆಕಲ್ಲಿನಿಂದ ಬಂದಿದ್ದ ಒಬ್ಬ ಸಂಗೀತ ವಿದ್ವಾಂಸರು ತಮ್ಮ ಕೌಶಲ್ಯವನ್ನು ತೋರಿಸಿ, ಸಭೆಯವರಿಗೆ ಮಹದಾನಂದವನ್ನುಂಟುಮಾಡಿದರು.—ಇಲ್ಲಿನ ಬಾಲಕ ಮತ್ತು ಬಾಲಿಕಾ ಪಾಠಶಾಲೆಗಳು ದಿನೇ ದಿನೇ ಅಭಿವೃದ್ಧಿ ಹೊಂದುತ್ತಲಿರುವದನ್ನು ನೋಡಿ ಇಲ್ಲಿನ ಜನಗಳ ಸಂತೋಷವು ವೃದ್ಧಿ ಹೊಂದುತ್ತಿರುವದು.

---

## ವಿದೇಶ ವರ್ತಮಾನಗಳು.

ಈಜಿಪ್ಟಿನ ಖಿಡೈವ್ ರಾಜರು ಲಂಡನ್ ಪಟ್ಟಣದಿಂದ ಹೊರಟು, ಯೂರೋಪಿಯನ್ ರಾಜ್ಯಗಳ ಮೇಲೆ ಸಂಚಾರ ಮಾಡುತ್ತಿದ್ದಾರೆ.

* * * *

ಯೆಹೂದ್ಯ ಪ್ರಜೆಗಳನ್ನು ರಷ್ಯಾದವರು ಕೊಂದು, ನಾನಾ ಕ್ರೂರಕೃತ್ಯಗಳನ್ನು ನಡಿಸಿದ ವರ್ತಮಾನವು ಚಕ್ರವರ್ತಿಯವರಿಗೆ ತಿಳಿದಾಗ ಅವರು ತುಂಬಾ ಮರುಗಿ ದುಃಖಪಟ್ಟರೆಂತಲೂ ಇನ್ನುರಲ್ಲೇ ಯೆಹೂದ್ಯ ಪ್ರಜೆಗಳಿಗೆ ಕೊಟ್ಟದ ಸ್ವಾತಂತ್ರ್ಯವನ್ನು ಕೊಡುವದಾಗಿ ವಾಗ್ದಾನ ಮಾಡಿದಾರೆಂತಲೂ ತಿಳಿದುಬಂದಿದೆ.

* * * *

ಜರ್ಮನಿಗೆ ಸೇರಿದ ಗ್ರೀನಾಕ್ ಪಟ್ಟಣದಲ್ಲಿ ವಿಸ್ಕಿ ಎಂಬ ಮದ್ಯವನ್ನು ಭಟ್ಟಿ ಇಳಿಸುವ ಭಾರೀ ಕಾರ್ಖಾನೆಗೆ ಬೆಂಕಿ ಬಿದ್ದು, ೧೬ ಲಕ್ಷ ಪೀಪಾಯಿಗಳಲ್ಲಿ ಶೇಖರಿಸಿದ್ದ ಮದ್ಯವು ಬೀದಿಬೀದಿಗಳಲ್ಲಿ ಹರಿದು ಉರಿದುಹೋಯಿತು. ಕಾರ್ಖಾನೆಯೂ ಸಮೂಲವಾಗಿ ನಾಶಹೊಂದಿತು. ಏಳು ಜನರು ಪ್ರಾಣ ಕಳಕೊಂಡರು.

* * * *

ನಾಯಿ ನರಿ ಮುಂತಾದ ಪ್ರಾಣಿಗಳು ಕಡಿದ ರೋಗಿಗಳಿಗೆ ಚಿಕಿತ್ಸೆ ಮಾಡುವಂಥಾ ಆಸ್ಪತ್ರೆಯನ್ನು ಮೊ॥ ಪಾಸ್ಚರ್ ಯವರು ಪ್ಯಾರಿಸ್ ಪಟ್ಟಣದಲ್ಲಿ ಸ್ಥಾಪಿಸಿ ೧೭ ವರುಷಗಳಾದವು. ಇದುವರೆಗೆ ಆ ಆಸ್ಪತ್ರೆಯಲ್ಲಿ ೨೫,೯೯೧ ಮಂದಿ ರೋಗಿಗಳು ಚಿಕಿತ್ಸೆ ಮಾಡಿಸಿಕೊಂಡರೆಂತಲೂ, ಅವ್ರಲ್ಲಿ ೧೦೫ ಜನರು ಮಾತ್ರ ಗುಣವಾಗದೆ ಸತ್ತುಹೋದರೆಂತಲೂ ರಿಪೋರ್ಟು ಬಂದಿದೆ.

* * * *

ಈಗ ೬೦೦ ವರ್ಷಗಳಿಂದೀಚೆಗೆ ಏಷ್ಯ ಮತ್ತು ಯೂರೋಪ್ ಖಂಡಗಳಲ್ಲಿ ೧೭ ಮಂದಿ ರಾಜರೂ ೩ ಮಂದಿ ರಾಣಿಯರೂ ಖೂನಿ ಮಾಡಲ್ಪಟ್ಟು ಸತ್ತಿರುವರು. ಹೀಗೆ ಖೂನಿ ಮಾಡಲ್ಪಟ್ಟು ಸತ್ತವರಲ್ಲಿ ಸರ್ವಿಯಾದ ರಾಜರು ಮತ್ತು ರಾಣಿಯೇ ಕೊನೆಯವರು. ಮತ್ತು ರಷ್ಯಾ ರಾಜ್ಯದ ಚಕ್ರವರ್ತಿಯವರಾದ ಪಾಲ್ ಎಂಬುವರೇ ಮೊದಲನೆಯವರು. ಇವರು ೧೯೦೧ ರಲ್ಲಿ ಖೂನಾದರು.

* * * *

ರಷ್ಯಾ ರಾಜ್ಯದ ರಾಯಭಾರಿಯಾದ ಎಂ. ಕುರೋಪಾಟ್ಕಿನ್ ಎಂಬಾತನು ಜರ್ಮನ್ ರಾಜ್ಯದವರಲ್ಲಿ ಸೇರಿಕೊಂಡು, ಇಂಗ್ಲಿಷರಿಗೂ ಜರ್ಮನರಿಗೂ ಇರುವ ಸ್ನೇಹವನ್ನು ಮುರಿಯಬೇಕೆಂಬದಾಗಿ ಗುಟ್ಟಾಗಿ ಕಾರ್ಯಗಳನ್ನು ನಡಸುತ್ತಿದ್ದಾನೆಂತಲೂ, ರಷ್ಯಾದಿಂದ ಹಣ ಕಾಸು ಮುಂತಾಗಿ ಬೇಕಾದ ಸಹಾಯಗಳನ್ನೆಲ್ಲಾ ಒದಗಿಸಿಕೊಡುತ್ತೇನೆಂದು ಜರ್ಮನರನ್ನು ಮರುಳುಮಾಡುತ್ತಿದ್ದಾನೆಂತಲೂ ಪ್ರಕಟವಾಗಿದೆ.

* * * *

ನ್ಯೂಜೀಲೆಂಡ್ ದ್ವೀಪದಲ್ಲಿ ಮಕ್ಕಳು ಹುಟ್ಟುವದು ಬಹಳ ಸ್ವಲ್ಪ; ಫ್ರಾನ್ಸಿನಿಂತಲೂ ಕಡಿಮೆ. ಈ ವಿಷಯದಲ್ಲಿ ಸರ್ಕಾರದವರು ಪ್ರಜೆಗಳಿಗೆ ವಿಶೇಷ ಹೇಳಿ ಒಂದು ಇಸ್ತಿಹಾರನ್ನು ಹಾಕಿಸಿದರು. ಅಲ್ಲಿರುವ ಮುದುಕರಿಗೆ ಸರ್ಕಾರದವರು ಪೆನ್ಷನ್ ಕೊಡುವದಕ್ಕೆ ವರುಷಕ್ಕೆ ೬ ಲಕ್ಷ ಪೌಂಡು ಖರ್ಚು ಮಾಡುತ್ತಾರೆ. ಇನ್ನು ಮೇಲೆ ಹುಟ್ಟುವ ಮಕ್ಕಳಿಗೆಲ್ಲಾ ತಲಾ ಇಷ್ಟಿಷ್ಟೆಂದು ಹಣ ಕೊಡುವಂತೆ ಏರ್ಪಾಡಾದರೆ ಪ್ರಜಾ ಸಂಖ್ಯೆ ಬೇಗ ಹೆಚ್ಚೀತೆಂದು ಒಬ್ಬ ದೊಡ್ಡ ಮನುಷ್ಯನು ಸೂಚಿಸಿರುವನು.

* * * *

ಕಾಕಸಸ್ ಪರ್ವತ ಪ್ರಾಂತ್ಯಕ್ಕೆ ಸೇರಿದ ವಾರ್ ಎಂಬ ಡಿಸ್ಟ್ರಿಕ್ಟಿನಲ್ಲಿ ಕೆಲವು ತಿಂಗಳ ಕೆಳಗೆ ಭಯಂಕರವಾದ ಭೂಕಂಪವಾಯಿತೆಂದು ಪ್ರಕಟವಾಯಿತಷ್ಟೆ. ಈ ಅನಾಹುತದಲ್ಲಿ ೬೪೯ ಮಂದಿ ಗಂಡಸರು, ೬೩೭ ಮಂದಿ ಹೆಂಗಸರು, ೬೯೯ ಮಂದಿ ಮಕ್ಕಳು, ಸಾವಿರಾರು ಗೋವುಗಳು ಮೃತಪಟ್ಟಿರುತ್ತಾರೆ. ೬೩ ಗ್ರಾಮಗಳು ಅಂಗಡಿ ಮನೆ ದೇವತಾ ಕಾರ್ಖಾನೆಗಳ ಸಹಿತ ಹಾಳಾದವು ಎಂಬದಾಗಿ ಸರ್ಕಾರದವರು ರಿಪೋರ್ಟು ಮಾಡಿದಾರೆ. ಇದರಿಂದ ಪ್ರಜೆಗಳಿಗೂ ಸರ್ಕಾರದವರಿಗೂ ಎಷ್ಟು ನಷ್ಟವಾಯಿತೆಂದು ವಿವರಿಸುವದಕ್ಕಾಗದು.

* * * *

ಕಳೆದ ವಾರ ಜರ್ಮನಿಯಲ್ಲಿ ಮೋಟಾರ್ ಕಾರ್ ಎಂಬ ಸ್ವತಂತ್ರವಾಗಿ ಓಡುವ ರಥಗಳ ಜೂಜು ನಡೆಯಿತು. ವಿಲಾಯಿತಿ, ಫ್ರಾನ್ಸ್, ಜರ್ಮನಿ, ಅಮೇರಿಕ ರಾಜ್ಯಗಳಲ್ಲಿ ಈ ವಿದ್ಯೆಯಲ್ಲಿ ಪ್ರವೀಣರಾದವರು ಪಂದ್ಯ ಕಟ್ಟಿ ಗಾಡಿಗಳನ್ನು ಓಡಿಸಿದರು. ಅವು ಸುಮಾರು ೪೦೦ ಮೈಲಿಗಳ ದೂರ ಓಡಿದವು. ಈ ರಸ್ತೆಯ ಉದ್ದಕ್ಕೂ ಎರಡು ಕಡೆಗಳಲ್ಲೂ ಲಕ್ಷಾಂತರ ಪ್ರಜೆಗಳು ಕಿಕ್ಕಿರಿಯುವಂತೆ ನಿಂತು ವಿನೋದವನ್ನು ನೋಡಿ ಸಂತೋಷಪಟ್ಟರು. ಜೆನಾಟ್ಸಿ ಎಂಬ ಜರ್ಮನಿಯವನೇ ಈ ಜೂಜಿನಲ್ಲಿ ಮೊದಲನೆಯವನಾಗಿ ಜಯಪ್ರದ ಹೊಂದಿದನು.

* * * *

ಐಗ್ಲ್ಯಾಂಡ್ ಸುತ್ತಲ ಮಹಾಸಮುದ್ರಗಳಿಗೂ ಪ್ಯಾರಿಸಿಗೂ ರೈಲ್ ರಸ್ತೆ ಹಾಕುವ ವಿಚಾರಕ್ಕೆ ಇಂಗ್ಲಿಷರು ಪ್ರತ್ಯನಾಯಮಾಡುವದಿಲ್ಲವೆಂಬದಾಗಿ ಹೇಳಿಬಿಟ್ಟರಷ್ಟೆ. ಆದರೆ ಫ್ರೆಂಚರೂ, ಜರ್ಮನಿಯವರೂ ಈ ರೈಲ್ವೆ ಹಾಕಿಸಬೇಕೆಂದು ಕಾತರಪಡುತ್ತಿದ್ದಾರೆ. ಒಟ್ಟು ಜರ್ಮನಿಯಲ್ಲಿ ಐವರು ರಾಜ್ಯಗಳವರೂ ಸೇರಿ ಶೇಕಡ ೪೦ ರಷ್ಟು ಹಣವನ್ನು ಕೊಟ್ಟರು. ಉಳಿದ ಹಣವನ್ನು ಆಸ್ಟ್ರಿಯ, ಸ್ವಿಟ್ಸರ್ಲಂಡ್, ಬೆಲ್ಜಿಯಂ, ಹಾಲೆಂಡ್ ಈ ರಾಜ್ಯಗಳವರು ಕೊಡುವದಾಗಿ ಒಪ್ಪಿಕೊಂಡಿದಾರೆ. ಅಂತು ಈ ರೈಲ್ವೆಯು ಬಹಳ ಬೇಗನೆ ಕಾಮಗಾರಿ ಆಗುವದೆಂದು ತಿಳಿಯುವದು.

* * * *

ಕಳೆದ ೧೯೦೫ ರಲ್ಲಿ ಜರ್ಮನಿಯಲ್ಲಿ ೬೯೦ ಲಕ್ಷ ಪ್ರಜೆಗಳಿದ್ದರು. ಅವರಲ್ಲಿ ಶೇಕಡ ೬೦ ರಷ್ಟು ಪ್ರಜೆಗಳು ವ್ಯವಸಾಯ ಮಾಡುತ್ತಿದ್ದರು. ೧೯೦೦ ನೇ ಇಸವಿಯಲ್ಲಿ ಪ್ರಜಾಸಂಖ್ಯೆಯು ೬೧೦ ಲಕ್ಷಕ್ಕೆ ಹೆಚ್ಚಿತು. ಅವರಲ್ಲಿ ಶೇಕಡ ೩೭ ಜನರಿಗೆ ವ್ಯವಸಾಯವೇ ಮುಖ್ಯ ಜೀವನವಾಗಿತ್ತು. ಉಳಿದ ಪ್ರಜೆಗಳು ವ್ಯಾಪಾರ, ಕಸಬುಗಳನ್ನು ಅವಲಂಬಿಸಿ ಕೊಂಡರು. ಇದರಿಂದ ದೇಶದ ಐಶ್ವರ್ಯವು ವೃದ್ಧಿಯಾಗಲು ತುಂಬಾ ಸಹಾಯವಾಯಿತು. ವ್ಯಾಪಾರವನ್ನೂ ಕಸಬುಗಳನ್ನೂ ಅವಲಂಬಿಸುವದೇ ವ್ಯವಸಾಯಕ್ಕಿಂತಲೂ ಎಷ್ಟೋ ಉತ್ತಮವೆಂಬುದು ಇದರಿಂದ ಗೊತ್ತಾಗುವದು.

* * * *

ಕಳೆದ ೬ ನೆ ತಾರೀಖು ಸೋಮವಾರ ಫ್ರಾನ್ಸ್ ರಾಜ್ಯದ ಪ್ರೆಸಿಡೆಂಟರಾದ ಎಂ. ಲೋಬೋ ಯವರು ಸೆಕ್ರೆಟರಿ ಎಂ. ಡೆಲ್‌ಕಾಸ್ಸಿಯವರ ಸಂಗಡ ವಿಲಾಯಿತಿಗೆ ದಯಮಾಡಿದರು. ಲಂಡನ್ ಪಟ್ಟಣದ ರೈಲ್ವೆ ಸ್ಟೇಷನಿನಲ್ಲಿ ವಿಲಾಯಿತಿಯ ಚಕ್ರವರ್ತಿಯವರು, ಪ್ರಿನ್ಸ್ ಆಫ್ ವೇಲ್ಸರವರು, ಇತರ ರಾಜ ವರ್ಗದವರು, ಎಲ್ಲಾ ಕಾದಿದ್ದು ಪ್ರೆಸಿಡೆಂಟರನ್ನು ಎದುರುಗೊಂಡು, ಅವರಿಗೆ ಸುಖಾಗಮನವನ್ನು ಬಯಸಿದರು. ಕೋಟ್ಯಂತರ ಪ್ರಜೆಗಳು ಬೀದಿಗಳಲ್ಲಿ ಕಾದಿದ್ದು ಈ ಉತ್ಸವವನ್ನು ನೋಡಿ ಸಂತೋಷಪಟ್ಟರು. ಚಕ್ರವರ್ತಿಯವರು ಪ್ರೆಸಿಡೆಂಟರನ್ನು ದಿವ್ಯವಾದ ತಮ್ಮ ರಥದಲ್ಲಿ ಕೂರಿಸಿಕೊಂಡು, ಅಲಂಕಾರ ಮಾಡಿದ್ದ ರಾಜಬೀದಿಗಳ ಮೇಲೆ ಹೊರಟು, ಯಾರ್ಕ್ ಹೌಸ್ ಎಂಬ ಅರಮನೆಗೆ ಕರೆದುಕೊಂಡು ಹೋಗಿ ಇಳಿಸಿದರು. ತರುವಾಯ ಪ್ರೆಸಿಡೆಂಟರು ಸಕಲ ಮರ್ಯಾದೆಗಳೊಡನೆ ಹೊರಟು ಬಕಿಂಗ್‌ಹಂ ಎಂಬ ರಾಜಭವನಕ್ಕೆ ದಯಮಾಡಿ, ಚಕ್ರವರ್ತಿಯವರಿಗೆ ಮರುಭೇಟಿ ಕೊಟ್ಟು, ತಮ್ಮನ್ನು ಸತ್ಕರಿಸುವದಕ್ಕೆ ಚಕ್ರವರ್ತಿಯವರು ಮಾಡಿಸಿದ ಏರ್ಪಾಡುಗಳು ತುಂಬಾ ಉತ್ಸಾಹಕರವಾಗಿವೆ ಎಂದು ತಿಳಿಸಿದರು. ಲಕ್ಷಾಂತರ ಪ್ರಜೆಗಳು ಅರಮನೆಯ ಬಳಿ ನಿಂತು ಜಯಘೋಷ ಮಾಡಿದರು.

* * * *

ಯೂರೋಪ್‌ಖಂಡದಲ್ಲಿ ವಿದ್ಯುಚ್ಛಕ್ತಿಯನ್ನು ರೈಲುಗಾಡಿ ಓಡಿಸುವದಕ್ಕೆ ಪ್ರಯೋಗ ಮಾಡಿದ್ದಾರೆ. ಮಿಲಾನ್—ಪೊರ್ಟೋ—ಸೆರಿಟೋ ಎಂಬೀ ನಗರಗಳ ಮೇಲೆ ಈ ರೈಲು ಓಡುವದು. ಈ ಕಂಪನಿಯು ಮೊದಲನೇ ವರುಷದ ರಿಪೋರ್ಟು ಈಗ ಪ್ರಕಟಮಾಡಿದ್ದಾರೆ. ಪ್ರಾರಂಭದಲ್ಲಿ ಗಂಟೆಗೆ ೩೦ ಮೈಲಿಯಂತೆ ಆ ಗಾಡಿಗಳು ಓಡುತ್ತಿದ್ದವು; ಈಗ ೪೦ ಮೈಲಿಯಂತೆ ಓಡುವವು. ಪ್ರಯಾಣಿಕರಿಗೆ ರೈಲ್ ಛಾರ್ಜನ್ನು ತುಂಬಾ ಕಡಿಮೆ ಮಾಡಿರುತ್ತಾರೆ. ಎಕ್ಸ್‌ಪ್ರೆಸ್ ಗಾಡಿಗಳನ್ನು ೫೬ ಮೈಲಿಯಂತೆ ಓಡಿಸುತ್ತಾರೆ. ಖರ್ಚು ಜಾತಾ ೧ ನೆ ರುಷಕ್ಕೆ ೫೬,೦೦೦ ಪೌಂಡು ಲಾಭ ಬಂದಿದೆ. ಈ ಕಂಪನಿಯ ಮೂಲಧನವು ೬ ಲಕ್ಷ ಪೌಂಡುಗಳು.

* * * *

ಸರ್ವಿಯಾ ರಾಜ್ಯದ ದೊರೆಯನ್ನೂ ರಾಣಿಯನ್ನೂ ಕೊಲ್ಲುವದಕ್ಕೆ ಮುಸಲತ್ತು ಮಾಡಿದವರು ಸೈನಿಕರು, ಮತ್ತು ಕೆಲವು ದೊಡ್ಡ ಮನುಷ್ಯರು. ಆ ಕೊಲೆಯ ದಿನ ಅವರು ೪೪ ಜನರನ್ನು ಕತ್ತರಿಸಿ ಹಾಕಿದರು. ದೊರೆಯು ಕೊಲೆಗಾರರನ್ನು ಸಮುದ್ರಾತ್ರಿಯಲ್ಲಿ ತನ್ನ ಕೊಠಡಿಯೊಳಗೆ ನೋಡಿದ ಕೂಡಲೇ ಅವರ ಕಾಲಿಗೆ ಬಿದ್ದು—ನನ್ನ ಹೆಂಡತಿಯನ್ನು ತ್ಯಜಿಸಿಬಿಡುತ್ತೇನೆ; ನನ್ನನ್ನು ಕೊಲ್ಲಬೇಡಿ; ನೀವು ಹೇಳುವ ಪ್ರಕಾರ ರಾಜ್ಯಕಾರ್ಯಗಳನ್ನು ನಡಸುತ್ತಾ ಬರುವೆನು ಎಂಬದಾಗಿ ಬಹಳ ದೈನ್ಯವೃತ್ತಿಯಿಂದ ಬೇಡಿಕೊಂಡರೂ ಅವರು ಕರುಣಿಸಲಿಲ್ಲ. ತೋರಿಸನೆ ಸುಮಾರು ೫೦ ಗುಂಡು ಹೊಡೆದು ದೊರೆಯನ್ನು ಕೊಂದು, ದೇಹವನ್ನೆಲ್ಲಾ ತುಂಡುತುಂಡು ಮಾಡಿದರು. ತರುವಾಯ ರಾಣಿಯನ್ನು ಛಿದ್ರಛಿದ್ರವಾಗಿ ಕತ್ತರಿಸಿ ಹಾಕಿ, ಉಪ್ಪರಿಗೆಯ ಕಿಟಕಿಯ ಮೂಲಕ ಕೆಳಕ್ಕೆ ಬಿಸಾಡಿ, ಕೆಳಗೆ ನಿಂತಿದ್ದ ಸೈನಿಕರನ್ನು ತೃಪ್ತಿಪಡಿಸಿದರು.

* * * *

ಸೋಮಾಲೀಲಾಂಡಿನ ಮುಲ್ಲಾ ಎಂಬ ದೊರೆಯ ಮೇಲೆ ಇಂಗ್ಲಿಷರು ಯುದ್ಧಮಾಡಲು ಸನ್ನಾಹ ಮಾಡಿರುತ್ತಾರಷ್ಟೆ. ಆ ದೊರೆಯು ಇತ್ತೀಚೆಗೆ ಮುದಿ ಹೆಂಗಸರ ಮೂಲಕ ಇಂಗ್ಲಿಷ್ ಸೈನ್ಯಾಧಿಪತಿಗೆ ಒಂದು ಕಾಗದವನ್ನು ಬರೆದು ಕಳುಹಿಸಿಕೊಟ್ಟನು. ಅದರಲ್ಲಿ ಅವನು ಇಂಗ್ಲಿಷರಿಗೆ ಬರೆದಿರುವದೇನೆಂದರೆ —ಇಂಗ್ಲಿಷರಾದ ನೀವು ನನ್ನ ದೇಶವನ್ನು ಕಟ್ಟಿಕೊಂಡು ಏನುಮಾಡುತ್ತೀರಿ? ನನ್ನ ದೇಶವು ಮರಳು, ಕಲ್ಲು, ಬಿದ್ದ ಮರ, ಗಿಡ್ಡಲ ಮುತ್ತಗಳಿಂದ ತುಂಬಿದ್ದಾಗಿರುತ್ತೆ. ಇಲ್ಲಿ ಚಿನ್ನವಿಲ್ಲ, ವಜ್ರ ಮುಂತಾದ ರತ್ನಗಳಿಲ್ಲ. ಯುದ್ಧವೊಂದೇ ಲಾಭವಲ್ಲದೆ ನನ್ನ ದೇಶದಲ್ಲಿ ನಿಮಗೆ ಇನ್ನೇನೂ ಸಿಕ್ಕುವದಿಲ್ಲ. ನೀವಾದರೋ ಯುದ್ಧ ಪ್ರೇಮಿಗಳಲ್ಲ; ನಾನು ಯುದ್ಧಪ್ರಿಯನೇ ಹೌದು. ಈಚೆಗೆ ನಾನು ನನ್ನ ಬಹುಮಂದಿ ದನಗಳನ್ನು ಕಳಕೊಂಡಿರುತ್ತೇನೆ; ಮತ್ತು ನಿಮ್ಮ ಕಡೆಯಲೂ ಬಹುಮಂದಿ ಪ್ರಾಣ ಕೊಟ್ಟರು. ಸ್ಯಾಕ್ಸನ್ ಎಂಬ ನಿಮ್ಮ ಬಂದೂಕಗಳನ್ನು ನಾನೂ ಪಡೆದಿರುತ್ತೇನೆ. ನನಗೆ ನೀವು ಸ್ವಲ್ಪ ಮರದ ತೋಟಗಳನ್ನು ಕೊಡುವದಾದರೆ ಪ್ರತಿಯಾಗಿ ನಿಮಗೆ ಬಂದೂಕುಗಳನ್ನು ಕೊಡಬಲ್ಲೆನು. ಹೀಗೆ ಬದಲಾಯಿಸಿಕೊಳ್ಳಲು ನಿಮಗೆ ಇಷ್ಟವಿಲ್ಲದಿದ್ದರೆ ಇತರರಿಂದಲಾದರೂ ತರಿಸಿಕೊಳ್ಳುವೆನು. ನಾನು ಬಹುಮಾ ಇಷ್ಟಪಡ್ಡೇ ಬುರಾವೋ, ಬರ್ಬೆರಾ ಎಂಬೀ ಪಟ್ಟಣಗಳ ಮೇಲೆ ನುಗ್ಗಿ ಬಂದು ಮುತ್ತಿಗೆ ಹಾಕುವೆನು.

* * * *

ಸರ್ವಿಯಾ ರಾಜ್ಯದಲ್ಲಿ ಪಾರ್ಲಿಮೆಂಟಿನವರು ಪೀಟರ್ ಕರಾಜಾರ್ಜವಿಚ್ ಎಂಬಾತನನ್ನು ತಮ್ಮ ದೊರೆಯನ್ನಾಗಿ ಮಾಡಿಕೊಂಡರು. ಆತನಿಗೆ ಪಟ್ಟಕಟ್ಟಿದ್ದರಿಂದ ತುಂಬಾ ಸಂತೋಷವಾಯಿತೆಂಬದಾಗಿ ರಷ್ಯ ಮತ್ತು ಆಸ್ಟ್ರಿಯಾ ರಾಜ್ಯಗಳ ಚಕ್ರವರ್ತಿಗಳು ತಂತಿಮೂಲಕ ಕಳುಹಿಸಿದಾರೆ. ದೊರೆಯನ್ನೂ ರಾಣಿಯನ್ನೂ ಕೊಂದು ಮುಗಿಸಿದ ದುಷ್ಟರನ್ನು ಏನೂ ಮಾಡಲಾರರೆಂದು ಅಲ್ಲಿನ ಪಾರ್ಲಿಮೆಂಟಿನವರು ಅವರಿಗೆಲ್ಲಾ ಕ್ಷಮಾಪಣೆ ಮಾಡಿದಾರೆ. ಆ ಕೊಲೆಯನ್ನು ನಡಸಿದ ಜನಗಳೇ ಈಗ ಅಲ್ಲಿ ಮುಖಂಡರಾಗಿರುವರು. ವಿಲಾಯಿತಿ, ಫ್ರಾನ್ಸ್, ಜರ್ಮನಿ, ಹಾಲೆಂಡ್, ಅಮೇರಿಕ, ತುರ್ಕಿ, ಇಟಲಿ, ಈ ಮೊದಲಾದ ರಾಜ್ಯಗಳವರು ತಮ್ಮ ತಮ್ಮ ರಾಯಭಾರಿಯನ್ನು ಸರ್ವಿಯಾದಿಂದ ವಾಪಸು ಕರೆಸಿಕೊಂಡಿದಾರೆ. ಇದನ್ನು ನೋಡಿ ಸರ್ವಿಯಾ ಗೌವರ್ನಮೆಂಟಿನವರು ಕಳವಳಪಟ್ಟು, ಕೊಲೆಗಳಿಗೂ ಗೌವರ್ನಮೆಂಟಿಗೂ ಯಾವ ಸಂಬಂಧವೂ ಇರುವದಿಲ್ಲವೆಂತಲೂ, ಸೈನಿಕರು ತುಂಬಾ ರಕ್ತರಾಗಿರುವದರಿಂದ ಕೊಲೆಗಾರರನ್ನು ಶಿಕ್ಷಿಸುವದು ಸಾಧ್ಯವಲ್ಲವೆಂತಲೂ, ಸೈನಿಕರು ಮರಳುವದರ ಈಗ ಪಟ್ಟಕ್ಕೆ ಬಂದಿರುವ ಕರಾಜಾರ್ಜವಿಚ್ಚನನ್ನು ಗೌವರ್ನಮೆಂಟನ್ನೂ ತಳ್ಳಿಕೊಳುವಾದಬಲ್ಲರೆಂತಲೂ ಪ್ರಕಟಿಸಿದಾರೆ. ಆ ಕೊಲೆಗಾರರಲ್ಲಿ ಅನೇಕ ಮಂದಿಗೆ ಗೌವರ್ನಮೆಂಟಿನವರು ಉತ್ತಮ ಗಳನ್ನು ಕೊಟ್ಟರು. ಪ್ರೇಮದ ಕರಾಜಾರ್ಜ ವಿಚ್ಚನು—ಹಿಂದೆ ನಡೆದದ್ದು ನಡೆದುಹೋಯಿತು; ಇನ್ನು ಅದರ ವಿಷಯವನ್ನು ಚರ್ಚೆಮಾಡಬೇಕಾದದ್ದಿಲ್ಲ. ರಾಜ್ಯದ ಏಳಿಗಾಗಿ ನನ್ನ ಸೈನಿಕರನ್ನೇ ನಾನು ನಂಬಿರುವೆನೆಂದು ವಿಶ್ವಾಸಿಕೊಂಡಿದ್ದೇನೆ. ಪ್ರಾಕ್ರಮಿಗಳಾದ ಸೈನಿಕರಿಗೆಲ್ಲಾ ವಂದನೆಗಳನ್ನು ಸಮರ್ಪಿಸುತ್ತೇನೆ ಎಂಬದಾಗಿ ಇಸ್ತಿಹಾರುಗಳನ್ನು ಪ್ರಕಟಿಸಿರುವನು.

# ಶ್ರೀ ಕೃಷ್ಣವಿಲಾಸ ಪ್ರೆಸ್.

37

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡ್, ನೋಟೀಸ್ ಫಾರಂ, ಟ್ರ್ಯಾಕ್ಟ್ ಷೀಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಛಾರ್ಜುಗಳಿಗೆ ಮಾಡಲ್ಪಡುತ್ತವೆ.

ಕೋರ್ಟು, ಪರ್ಗ, ಮುಂತಾದ ಖಾಲೀ ಪುಸ್ತಕಗಳು; ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು; ಇನ್ನು ಇತರವಾದ ನಮೂನೆಯ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿಂಗಿನಂತೆ ಬಹು ಅಂದವಾಗಿ ತಯಾರ್ಮಾಡಲ್ಪಡುತ್ತವೆ.

ತಾಯರ್‌ಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್ನಮೆಂಟ್‌ನಾಮಾ, ಜಾರೀ, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಅವರಿಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯತರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಅವಕಾಶವನ್ನು ಅಪೇಕ್ಷಿಸುವವರು ಟಪ್ಪಾಲು ಹಾಸಲನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಅಸ್ತರ್ ಮೊಹಲ್ಲಾ ದೊಡ್ಡಪೇಟೆ ೨೫ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

---

## ಜ್ವ ರ ಹ ರಿ.

40



ಇದು ಸಾಧಾರಣ ಜ್ವರ, ಹಳೇಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಛಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜಾಮತ್ ಅಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಬಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ೨ ರೂ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

❖❖❖❖❖❖❖❖❖

## ಪಿ ಪ ೦ ಕ ರ್ಪೂ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವುದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಸಾರ್ವತ್ರಿಕವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಬೆಂಗಳೂರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಂತ್ಯ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕೂಡಲ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪೆಪ್ಪರ್‌ಮಿಂಟ್ ಕರ್ಪೂರವನ್ನು ನಾನೂ ನನ್ನ ತಾಲೂಕಿನ ಮೈಸೂರಿನ ಆಸ್ಪತ್ರೆಯಲ್ಲಿ ಅನೇಕ ಮದುಮಗಳಿಗೆ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇನೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹಳ ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲಿ, ಔಷಧ ಮಾರುವರಿಗಳಲ್ಲಿ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ:—

ಮದ್ರಾಸಿನ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕಂಡ್ ಲೈನ್, ಬೀಚ್ ಮದರಾಸ್.

---

## THE FOREIGN MISSIONS AND GENERAL AGENCY.

19

ಮೇಲೆ ಕಂಡ ಏಜನ್ಸಿಯವರು ದೇಶೀಯ ವರ್ತಕರಿಗೂ ಇತರರಿಗೂ ಇಂಗ್ಲಾಂಡಿನಲ್ಲಿ ತಯಾರಾಗುವ ಯಾವ ಸಾಮಾನನ್ನು ಬೇಕಾದರೂ ಸುಲಭವಾದ ಕಮಿಷನ್ ತೆಗೆದುಕೊಂಡು ಕಳುಹಿಸುವರು. ಆರ್ಡರು ಕಳುಹಿದ ಕೂಡಲೆ ಮಾಲುಗಳು ಬಹು ಜಾಗ್ರತೆಯಾಗಿ ರವಾನೆ ಮಾಡಲ್ಪಡುವವು. ಈ ವಿಷಯದಲ್ಲಿ ತಿಳಿದುಕೊಳ್ಳಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕೆಂದು ಕೋರುತ್ತೇವೆ.

A. J. Bride,
*Manager,*
*29-35, City Road, London*

---

## ಸರಸ್ವತೀಶ್ವರ ಕಸ್ತೂರಿ ಮಾತ್ರೆಯು.

6

ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥಾವರಿಗೆ ಅತ್ಯಂತ ಉಪಯುಕ್ತವಾದದ್ದು. ಈ ಮಾತ್ರೆ ೧—೨ ತಾಂಬೂಲದ ಸಂಗಡ ಸೇವಿಸುವವರಿಂದ ಬಾಯಿಯು ಸುವಾಸನೆಯುಳ್ಳದ್ದಾಗಿ ಬಾಯಿಯ ದುರ್ಗಂಧ, ಹೋಗಿ ಅಜೀರ್ಣ, ಉಷ್ಣರೋಗ, ಬಾಯಿಯ ಹೊಲ್ಲು, ಉಗ್ಗಿಸುತ್ತಾ ಮಾತಾಡುವದು, ವಾಯು, ಶೀತ, ಪಿತ್ತ, ಮಲಬದ್ಧ, ದಂತದೋಷ, ಬಾಯಿಹುಣ್ಣು, ಹಸಿವು, ಜ್ವರ. ಛಳಿ, ನೆಗಡಿ, ತಲೆನೋವು ಇತ್ಯಾದಿ ಅನೇಕ ರೋಗಗಳಿಗೆಲ್ಲಾ ರಾಮಬಾಣದಂತಿರುವದು. ಹೆಂಗಸರ ಗುಪ್ತವಾದ ಅನೇಕ ಜಾಡ್ಯಗಳಿಗೆ ಪರಮೌಷಧದಂತಿರುವದು. ಚಿಕ್ಕ ಮಕ್ಕಳಿರುವ ಮನೆಯಲ್ಲಿ ಈ ಮಾತ್ರೆಯು ಸಂಜೀವನವು. ಈ ಮಾತ್ರೆಯು ನಿಮ್ಮಲ್ಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸ್ವಾಧೀನದಲ್ಲಿದ್ದಂತೆಯೇ. ೩೦೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೪ ಆಣೆ, ೪ ಆಣೆ ಔಷಧವು ೨ ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವು ನಮಗೆ ಬರೆಯುವಹಾಗೆ ಬಲಾತ್ಕಾರಪಡಿಸುವದು.

ಸಿ. ಪಿ. ಅಂಡ್ ಕಂಪನಿ, ಬೆಂಗಳೂರು ಸಿಟಿ.

---

## ಹೋಮೋಸಿಯಾ.

ಅಷ್ಟು ಪರಿಹಾರ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ವಾರ್ಧಾವಾಯು, ಮೂಲವ್ಯಾಧಿ, ಉಬ್ಬಸ. ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ.—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬದಲ್ಲಿ ೧ ರೂ. ಡಬ್ಬಾದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್, ಖರ್ಚು ಮಾಫಿ ಬಿಡುತ್ತೆ.

❖❖❖❖❖❖❖❖❖

## ಹೋಮೋಸಿಯಾ ಯಂಬ್ರೊಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವವು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರವನ್ನೂ, ಸರ್ಟಿಫಿಕೇಟುಗಳೂ ಉಳ್ಳ ನೋಟಿಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪನಿ, ೨೩ ಸೆಕಂಡು ಬೀಚ್ ಲೈನ್, ಮದರಾಸ್.

---

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೬—೬—೧೯೦೩ ರಿಂದ ೩—೭—೧೯೦೩ ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | | | | |
| ಮೈಸೂರು ,, | 5 | 6 | 6 | 8 |
| ಬೆಂಗಳೂರು ಡಿಸ್ಟ್ರಿಕ್ಟ್ | 19 | 17 | 15 | 14 |
| ಮೈಸೂರು ,, | 59 | 39 | 29 | 39 |
| ಕೋಲಾರ್ ,, | 19 | 10 | 8 | 5 |
| ಕೋಲಾರ್ ಚಿನ್ನದ ಗಣಿಗಳು | | | | |
| ತುಂಕೂರು ಡಿಸ್ಟ್ರಿಕ್ಟ್ | 13 | 10 | 13 | 9 |
| ಹಾಸನ ,, | 4 | 3 | 4 | 5 |
| ಚಿತ್ರದುರ್ಗ ,, | 76 | 45 | 51 | 24 |
| ಕಡೂರ್ ,, | 1 | | | |
| ಶಿವಮೊಗ್ಗ ,, | 43 | 30 | 20 | 19 |
| ಒಟ್ಟು. | 239 | 146 | 147 | 96 |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಆಷಾಢ ಬಹುಳ ಷಷ್ಠಿ ಗುರುವಾರದಿಂದ ಆಷಾಢ ಬಹುಳ ತ್ರಯೋದಶಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ, ಜುಲೈ.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ಕಟಕ ಮಾಸ ತೇದಿ. |
|---|---|---|---|---|---|---|
| 16 | ಗುರು * | ಷಷ್ಟಿ | 2 50 | ಪುಷ್ಯ | 26--10 | 1 |
| 17 | ಶುಕ್ರ † | ಸಪ್ತಮಿ | 3 30 | ರೇ | 28--5 | 2 |
| 18 | ಶನಿವಾರ | ಅಷ್ಟಮಿ | 2 55 | ಮ | 28 36 | 3 |
| 19 | ರವಿವಾ | ನವಮಿ | 1-2 | ಉಪಬ | 56 0 | 4 |
| 20 | ಚಂದ್ರ ‡ | ಏಕಾದಶಿ | 51 9 | ಕ್ರ | 26 10 | 5 |
| 21 | ಕುಜ. | ದ್ವಾದಶಿ | 49-9 | ರೋ | 21 22 | 6 |
| 22 | ಬುಧ ¶ | ತ್ರಯೋದಶಿ | 43 48 | ಪ್ರ | 21 10 | 7 |

* ದಕ್ಷಿಣಾಯನಪುಣ್ಯಕಾಲ † ಆಡಿಶುಕ್ರವಾರ. ‡ ಸ್ಮಾರ್ತೈಕಾದಶಿ. ವೈಷ್ಣವ ಏಕಾದಶಿ, ಹರಿವಾಸರ ¶ ಪ್ರದೋಷ.

---

## ಪೇಟೆ ಧಾರಣೆ.

| ದಿನಸಿ. | ಮೈಸೂರು. | ಬೆಂಗಳೂರು. |
|---|---|---|
| ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ | ರೂ. ೧೦-೮-೦ | ೧೦-೮-೦ |
| ಕೆಂಬೂತಿ ಅಕ್ಕಿ ಅವಲ್ .. | .. ೧೦-೪-೦ | ೧೦-೮-೦ |
| ,, ದುಯಂ | .. ೯-೮-೦ | ೯-೮-೦ |
| ಜಾಪಾನ್ಸ್ ಅಕ್ಕಿ .. | .. ೯-೪-೦ | ೧೨-೦-೦ |
| ಸಣ್ಣಕ್ಕಿ ಅವಲ್ .. | .. ೧೨-೮-೦ | ೧೨-೦-೦ |
| ,, ದುಯಂ .. | .. ೧೨-೦-೦ | ೧೧-೮-೦ |
| ತೊಗರೀ ಬೇಳೆ ಪಲ್ಲಾ ೧ಕ್ಕೆ .. | .. ೧೩-೦-೦ | ೧೪-೦-೦ |
| ,, ದುಯಂ .. | .. ೧೨-೮-೦ | ೧೨-೦-೦ |
| ಕೈರ್ ರಾಗಿ ಪಲ್ಲಾ ೧ಕ್ಕೆ .. | .. ೩-೧೪-೦ | ೪-೨-೦ |
| ಕಾರ್ರಾಗಿ .. | .. ೩-೮-೦ | ೩-೮-೬ |
| ಜೋಳ .. | .. ೩-೧೦-೦ | ೩-೦-೦ |
| ಹಲಸಂದೆ ಪಲ್ಲಾ ೧ಕ್ಕೆ .. | .. ೩-೧೨-೦ | ೮-೦-೦ |
| ಬಿಳೀ ಅವರೆ .. | .. ೩-೦-೦ | ೬-೮-೦ |
| ಹೆಸರು .. | .. ೮-೦-೦ | ೯-೮-೦ |
| ಉದ್ದು .. | .. ೮-೪-೦ | ೮-೮-೦ |
| ಕಡಲೆ .. | .. ೯-೮-೦ | ೧೦-೦-೦ |
| ಎಳ್ಳು .. | .. ೧೬-೧೨-೦ | ೧೧-೦-೦ |
| ಹುರುಳಿ .. | .. ೪-೦-೦ | ೪-೧೨-೦ |
| ಹರಳು ೧೨೩ ಸೇರಿಗೆ .. | .. ೯-೧೨-೦ | ೬-೦-೦ |
| ಸೀಗೇಕಾಯಿ ಮಣ ೧ಕ್ಕೆ .. | .. ೦-೮-೦ | ೦-೮-೦ |
| ಮೆಣಸಿನಕಾಯಿ .. | .. ೨-೮-೦ | ೨-೦-೦ |
| ,, ದುಯಂ .. | .. ೨-೪-೦ | ೦-೮-೦ |
| ಬೆಲ್ಲ ದೊಡ್ಡ ಅಚ್ಚು .. | .. ೪-೮-೦ | ಮು ೧-೬-೦ |
| ಬೆಳ್ಳುಳ್ಳಿ ಮಣ ೧ಕ್ಕೆ .. | .. ೫-೦-೦ | ೪-೮-೦ |
| ಜೀರಿಗೆ ,, .. | .. ೩-೧೨-೦ | ೩-೦-೦ |
| ಕೊತ್ತುಂಬರಿ ಬೀಜ ೧ಕ್ಕೆ .. | .. ೫-೮-೦ | ೫-೪-೦ |
| ಉಪ್ಪು ,, .. | .. ೯-೦-೦ | ೯-೦-೦ |
| ಹುಣಸೇ ಹಣ್ಣು .. | .. ೦-೧೪-೦ | ೦-೧೨-೦ |
| ,, ಹಳೇದು .. | .. ೦-೧೧-೦ | ೦-೧೨-೦ |
| ತುಪ್ಪ .. | .. ೧೦-೧೨-೦ | ೧೦-೪-೦ |
| ಕೊಬ್ಬರಿಯೆಣ್ಣೆ ಪೆಟ್ಟಿ ೧ಕ್ಕೆ .. | .. ೪-೯-೦ | ೪-೪-೦ |
| ತೆಂಗಿನಕಾಯಿ ೧೦೦ ಕ್ಕೆ .. | .. ೨-೪-೦ | ೩-೧೦-೦ |
| ಅಡಕೇಕಾಯಿ ಮಣ ೧ಕ್ಕೆ .. | .. ೦-೧೪-೦ | ೦-೧೦-೦ |
| ಅಂಟುವಾಳದಕಾಯಿ ಮಣ ೧ಕ್ಕೆ .. | .. ೩-೧೪-೦ | ೦-೮-೦ |
| ಚಿನ್ನ (ಪವನ್) ಕೆಂಪು .. | .. ೧೫-೪-೦ | ೧೫-೪-೦ |
| ,, ,, ಹಸು .. | .. ೧೫-೮-೦ | ೧೫-೧೦-೦ |
| ,, ,, ಗಟ್ಟಿ ತೊಲ ೧ಕ್ಕೆ .. | .. ೨೬-೦-೦ | ೨೪-೮-೦ |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ .. | .. ೭೨-೦-೦ | ೬೬-೪-೦ |

Printed and Published by the Rev. E. W. Thomson, M.A., the Proprietor and Manager, Wesleyan Mission Press, Mysore. 16/7/1903

# ವೃತ್ತಾಂತ ಪತ್ರಿಕೆ.


ಕ್ರಯ ೧ ದುಡ್ಡು —:೦:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೭ ಮೈಸೂರು—ಸನ್ ೧೯೦೩ ನೇ ಇಸವಿ ಜುಲೈ ತಾರೀಖು ೨೩ ನೇ ಗುರುವಾರ. ಸಂಚಿಕೆ ೮



## ಸಾಗೋ, ಸಿದ್ಧವಾಗಿದೆ. ಕ್ರಯುಳಿಡಿ.

೧೯೦೩ ನೇ ಇಸವಿ ಲೋವರ್ ಸೆಕೆಂಡರಿ ಕ್ಲಾಸಿನ ಟೆಕ್ಸ್ಟಿನ ಶೋಟ್ಸು. ೧೪೫ ನೇ ಪದ್ಯದಿಂದ ೩೦೩ ನೇ ಪದ್ಯದ ವರೆಗೂ ಇ ಮತ್ತು. ಗದ್ಯಕಾವ್ಯದ ನೋಟ್ಸು ಸೇರಿದೆ. ಅರ್ಥ, ತಾತ್ಪರ್ಯ, ಸಂಧಿ, ಸಮಾಸ, ಅನ್ವಯಾರ್ಥ, ಭಾವಾರ್ಥ, ನಾನಾರ್ಥ, ಪೂರ್ವಕಥೆ, ವ್ಯಾಕರಣವಿಶೇಷ, ಪ್ರಶ್ನೋತ್ತರ, ಮುಂತಾಗಿ ಪರೀಕ್ಷೆಗೆ ಬೇಕಾಗತಕ್ಕ ಎಲ್ಲಾ ವಿಷಯಗಳೂ ವಿಶದವಾಗಿ ತಿಳಿಸಲ್ಪಟ್ಟಿವೆ. ಮಹಿಮೆಯುಳ್ಳ ನವರ ಸ್ಕೂಲು ಮುಖ್ಯೋಪಾಧ್ಯಾಯರಿಂದ ರಚಿಸಲ್ಪಟ್ಟಿದ್ದು. ೧೦ ಕ್ಕೆ ೧ ಪ್ರತಿ ಜಾಸ್ತಿ. ಪುಸ್ತಕ ದೊರೆಯತಕ್ಕ ಸ್ಥಳ:—

ಶ್ರೀ. ನರಸಿಂಹಯ್ಯ ಎಂ. ತಮ್ಮ ಕಂಪೆನಿ, ಮೈಸೂರು.

---

ಜನರಂಜಕವಾದ ಪುಸ್ತಕಗಳು! ಬೇಗನೋಡಬಾರದೇ

ಮೈಸೂರು ಸರ್ಕಾರದ ವಿದ್ಯಾ ಇಲಾಖೆಯವರು ಈ ಪುಸ್ತಕಗಳ ಉಪಯುಕ್ತತ್ವವನ್ನು ತಿಳಿದು ನೂರೈವತ್ತು ರೂಪಾಯಿಗಳಿಗಿಂತ ಹೆಚ್ಚಾಗಿಯೇ ತರಿಸಿಕೊಂಡಿದ್ದಾರೆ.

ಭರಾವನ ಗ್ರಂಥದ ಚರಿತ್ರೆ. ಬಹು ರಸಿಕವಾಗಿದೆ. ಚಿತ್ರಗಳಿಂದ ಕೂಡಿದ್ದು ಕ್ರಯ ೦—೭—೦

ಪ್ರಾಚೀನ ಪ್ಯಗಗಳ ವರ್ಣನೆ. ಚಿತ್ರಗಳಿಂದ ಕೂಡಿದೆ. ೦—೧—೦

ಭಗೋಳ ಶಾಸ್ತ್ರ ಸಿದ್ಧಾಂತ. ಎಲ್ಲರೂ ಓದತಕ್ಕದ್ದು. ಅನೇಕ ಚಿತ್ರಗಳಿವೆ ೦—೧—೦

ಪಕ್ಷಿಗಳ ವರ್ಣನೆ. ಸ್ಕೂಲು ಹುಡುಗರಿಗೆ ಬಹುಮಾನವಾಗಿ ಕೊಡುವದಕ್ಕೆ ಯೋಗ್ಯವಾಗಿದೆ. ಅನೇಕ ಪಕ್ಷಿಗಳ ಪಟಗಳೂ, ಅವುಗಳ ಚರಿತ್ರೆಗಳೂ ಇದರಲ್ಲಿ ಅಡಕವಾಗಿವೆ ೦—೧—೦

ಇಂಡಿಯಾ ಚಕ್ರವರ್ತಿಯವರಾದ ಎಡ್ವರ್ಡ್ ಸಾರ್ವಭೌಮರ ಮತ್ತು ಚಕ್ರವರ್ತಿನಿಯಾದ ಅಲೆಕ್ಸಾಂಡರಾ ಅಮ್ಮಣ್ಣಿಯವರ ಜೀವನಗಳ ಚರಿತ್ರೆ. ಇದರಲ್ಲಿ ಗ್ಲೇಜ್ ಕಾಗದದಮೇಲೆ ಹಾಕಿರುವ ಪಟಗಳು ಅನೇಕವಾಗಿವೆ. ಪ್ರತಿಯೊಬ್ಬರ ಮನೆಯಲ್ಲೂ ಇರತಕ್ಕ ಪುಸ್ತಕ. ಇಂಥಾ ಉತ್ಕೃಷ್ಟವಾದ ಪುಸ್ತಕಕ್ಕೆ ಬೆಲೆಯು ಬಹು ಕಡಿಮೆಯಾಗಿದೆ. ಕ್ರಯ ೦—೪—೦

ಚಕ್ರವರ್ತಿಗಳ ಕಿರೀಟಧಾರಣೆಯ ಪುಸ್ತಕ ಕ್ರಯ ೦—೨—೬

ಕ್ರಿಮಿಗಳ ವರ್ಣನೆ (ಸಚಿತ್ರ) ೦—೧—೦

ದೇವರೆಂಬ ಸನ್ಮಾನ (ಸಚಿತ್ರ) ೦—೧—೦

ಪ್ರಬೋಧಚಂದ್ರಿಕೆ ೦—೨—೦

ಚಿಕ್ಕವರಿಗೆ ಹೇಳುವ ಕಥೆಗಳು ೦—೧—೦

ಶಾಂತಾರಸನಾದ ಪಾಲಿಸಿಯ ಚರಿತ್ರೆ ೦—೧—೦

ಗ್ಲಾಡ್‌ಸ್ಟನನ ಚರಿತ್ರೆ ೦—೨—೬

ವಾಶಿಂಗ್‌ಟನ್ ಲಿಂಕನನ ಚರಿತ್ರೆ ೦—೧—೬

ಆರ್ಯರ ಪೂರ್ವೋತ್ತರ ಚರಿತ್ರೆ ೦—೧—೬

ಘನತೆಯುಳ್ಳ ಸ್ತ್ರೀಯರ ಚರಿತ್ರೆ ೦—೨—೬

(೧) ವೇದಗಳನ್ನು ಬರೆದವರು ಯಾರು? (೨) ಶುದ್ಧವಾದ ವಿದ್ಯಾಭ್ಯಾಸ, (೩) ನಾಲ ಮತ್ತು ಸಾಲತೀರಿಸುವ ಮಾರ್ಗ, (೪) ಇಂಡಿಯಾದೇಶದ ಬಡತನದ ಕಾರಣಗಳು, (೫) ಬಾಲ್ಯವಿವಾಹ, (೬) ಪ್ರಾಯಶ್ಚಿತ್ತವು, (೭) ಬಯ್ಯುವದು, (೮) ಮಾಟಪಟ್ಟಸರ್ಪಶಾಸ್ತ್ರ, (೯) ಗ್ರಹಣಗಳು, (೧೦) ಮಕ್ಕಳನ್ನು ಬೆಳಸತಕ್ಕವಿಧ. (೧೧) ವ್ಯಾಧಿಗಳು, (೧೨) ಎಲ್ಲರೂ ಸಹೋದರರು, (೧೩) ಮಂತ್ರ, ತಂತ್ರ, ಯಂತ್ರಗಳು, (೧೪) ಜ್ಯೋತಿಷಶಾಸ್ತ್ರ (೧೫) ಆರೋಗ್ಯಪ್ರಕಾಶಿಕೆ. ಈ ಪುಸ್ತಕಗಳ ಪ್ರತಿಯೊಂದಕ್ಕೆ ಮೂರು ಕಾಸು ಕ್ರಯವಿದೆ. ಮೇಲ್ಕಂಡ ಹದಿನೈದು ಪುಸ್ತಕಗಳನ್ನು ಒಟ್ಟಾಗಿ ಕಳಿಸತಕ್ಕದ್ದು. ಬಿಡಿಯಾಗಿ ಮಾರಲಾರೆವು. ಈ ಪುಸ್ತಕಗಳನ್ನು ಒಡಿಸಮೇಲೆ ಬರುವ ಸಂತೋಷವನ್ನು ವಿವರಿಸಲಾಗದು. ಬಾಗಿಲ ಹೊರಗಿನ ವಿ. ಪಿ. ಪಿ. ಮೂಲಕವಾಗಿಯಾಗಲಿ ಅಥವಾ ಹಣವನ್ನು ಮುಂಗಡವಾಗಿ ಕಳುಹಿಸೋಣದ್ದರಿಂದಲಾಗಲಿ ಪುಸ್ತಕಗಳನ್ನು ಪಡೆಯಬಹುದು.

ವ್ಯಾನೇಜರ್, ವಿದ್ಯಾ ಬುಕ್ ಡಿಪೋ, ಮೈಸೂರು.

---

ಬೇಕಾಗಿದೆ.

ಕೊಳ್ಳೇಗಾಲದ ಗಂಡು ಹುಡುಗರ ಸ್ಕೂಲಿಗಾಗಿ ಕನ್ನಡವನ್ನು ಹೇಳಿ ಕೊಡುವ ಒಬ್ಬ ಮುನಷಿಯು ಬೇಕು. ಬ್ರಾಹ್ಮಣರಾದರೆ ಉತ್ತಮ. ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

"ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು.

---

ಸರಸ್ವತೀಕರ ಕಸ್ತೂರಿ ಮಾತ್ರೆಯು.

ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥಾವರಿಗೆ ಅತ್ಯಂತ ಉಪಯುಕ್ತವಾದದ್ದು. ಈ ಮಾತ್ರೆ ೧—೨ ತಾಂಬೂಲದ ಸಂಗಡ ಸೇವಿಸುವದರಿಂದ ಬಾಯಿಯು ಸುವಾಸನೆಯುಳ್ಳದಾಗಿ ಬಾಯಿಯ ದುರ್ಗಂಧ, ಹೋಗಿ ಅಜೀರ್ಣ, ಉಷ್ಣರೋಗ, ಬಾಯಿಯ ಜೊಲ್ಲು, ಉಗ್ಗಿಸುತ್ತಾ ಮಾತಾಡುವದು, ವಾಯು, ಶೀತ, ಪಿತ್ಥ, ಮಲಬದ್ಧ, ದಂತದೋಷ, ಬಾಯಿಹುಣ್ಣು, ಹಸಿವು, ಜ್ವರ, ಛರ್ದಿ, ನೆಗಡಿ, ತಲೆಬೇನೆ ಇತ್ಯಾದಿ ಅನೇಕ ರೋಗಗಳಿಗೆಲ್ಲಾ ರಾಮಬಾಣದಂತಿರುವದು. ಹೆಂಗಸರ ಗುಪ್ತವಾದ ಅನೇಕ ಜಾಡ್ಯಗಳಿಗೆ ಸಂಜೀವಿಯಂತಿರುವದು. ಚಿಕ್ಕ ಮಕ್ಕಳಿರುವ ಮನೆಯಲ್ಲಿ ಈ ಮಾತ್ರೆಯು ಸಂಜೀವನವು. ಈ ಮಾತ್ರೆಯು ನಿಮ್ಮಲ್ಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸ್ವಾಧೀನದಲ್ಲಿದ್ದಂತೆಯೇ. ೨೦೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೫ ಆಣೆ, ೫ ಆಣೆ ಔಷಧವು ೨ ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವು ನಮಗೆ ಬರೆಯುವದಾಗಿ ಬಲಾತ್ಕಾರಪಡಿಸುವದು.

ಸಿ. ಪಿ. ಅಂಡ್ ಕಂಪೆನಿ, ಬೆಂಗಳೂರು ಸಿಟಿ.

---

ROBINSON'S

PATENT BARLEY.

ರಾಬಿನ್‌ಸನ್‌ಯವರ

ಬಾರ್ಲಿ ರಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಏವೆಗೋಧಿಯಿಂದ ಮಾಡಿದೆ. ಹಸ್ತ ಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮುಂದಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾ ಇದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

---

MELLIN'S FOOD.

ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮೂಳೆಗಳೂ ಚೆನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಕವಾದುತಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಉಪಯೋಗವಾಗಿ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಸಂರಕ್ಷಣೆಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರವು ಉಪಯೋಗಿಸಿದ ದಿನವು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಬಿಸಿಲು ಹಾಕಿದ ಕಾಲದಲ್ಲಿಯೂ ಜ್ವರದಲ್ಲಿಯೂ ಒದಗುವ ಮಿಕ್ಕಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುಡಾಪದಾರ್ಥಗಳು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ತಕ್ಕದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ವೃದ್ಧಿಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ತಡೆದು ಮಟ್ಟಿಗೆ ಕಡಮೆಮಾಡುತ್ತದೆ.

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು, ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ವಾರ್ಫುಗಳಿಗೂ ಬರೆದು ತರಿಸಿಕೊಳ್ಳಬಹುದು:—

ಮದರಾಸ್:—ಮೆ॥ ಕಾವಸ್ ದಿನ್‌ಷಾ ಬ್ರದರ್ಸ್.

ಬೊಂಬಾಯಿ:—ಮೆ॥ ಲೇಹಂ ಆಬೆರ್‌ಕ್ರಾಂಬಿ ಕಂಪೆನಿ.

ಕಲ್ಕತ್ತಾ:—ಮೆ॥ ಮೆಕ್ಕಿನ್‌ಜಿ ಲಯಲ್ ಕಂಪೆನಿ.

ಕೋಕನಾಡ:—ಮೆ॥ ಹಾಲ್ ವಿಲ್ಸನ್ ಕಂಪೆನಿ.

ಕರಾಚಿ:—ಮೆ॥ ಎಚ್. ಜೆ. ಲುಕ್ಸಂಜಿ ಕಂಪೆನಿ.

ಮದ್ರಾಸು:—ಮೆ॥ ಓಕ್ ಕಂಪೆನಿ.

ರಂಗೂನ್:—ಲೇಹಂ ಬ್ಲಾಕ್ ಕಂಪೆನಿ.

## ಕ್ಷೇತ್ರಗಣಿತ ಸಂಗ್ರಹ.

ಈ ಹೊಸ ಪುಸ್ತಕವನ್ನು ಮೈಸೂರು ಶಿವರಾಮಪೇಟೆ ಸ್ಕೂಲು ಹೆಡ್ಮಾಸ್ಟರು ಟಿ. ಯಂ. ರಾಮಸ್ವಾಮ್ಯಯನವರು ಬರೆದಿರುತ್ತಾರೆ. ಇದರಲ್ಲಿ ಸಾವಿರಾರು ಸಾವಿರ ಲೆಕ್ಕಗಳು ಮೈಸೂರು ದೇಶೀಯ ಪರೀಕ್ಷೆಯ ಪ್ರಶ್ನಪತ್ರಿಕೆಗಳು ಉತ್ತರಗಳೊಡನೆ ಅಡಕವಾಗಿವೆ. ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆಯುವಂತೆ ಇರಬೇಕೆಂದು ಅಲ್ಪಕ್ರಯಕ್ಕೆ ಮಾರಲ್ಪಡುವುದು. ಕ್ರಯ ೪ ಆಣೆ, ಹಾಸಲು ೨ ಪೈ. ವಿಳಾಸ —ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಮೈಸೂರು.

# ಶಿವಮೊಗ್ಗ ಡಿಸ್ಟ್ರಿಕ್ಟ್

3

ಪುಸ್ತಕಗಳೂ,

ಹಾಸನ ಟೋಪಿಗಳೂ,

ಲೇಖನ ಸಾಮಗ್ರಿಗಳೂ

ಕ್ರಯಕ್ಕೆ ದೊರೆಯುತ್ತವೆ.

ಮೇಲ್ವಿಳಾಸ:—

ಮ್ಯಾನೇಜರ್, ಮಿಷನ್ ಬುಕ್ ಡಿಪೋ,

ಶಿವಮೊಗ್ಗ.

# ಸ್ಟಾಂಡರ್ಡ್ ಲೈಫ್ ಅಷ್ಯೂರೆನ್ಸ್ ಕಂಪೆನಿ.

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಇಂಡಿಯಾ ದೇಶದಲ್ಲಿ ಲೈಫ್ ಇನ್ಷ್ಯೂರೆನ್ಸ್ ಯಾನೆ ಜೀವನವನ್ನು ಭೀಮಾ ಮಾಡಿಕೊಳ್ಳುವ ಕಂಪನಿಗಳಲ್ಲಿ ಇದು ಬಹು ಕಾಲದ್ದಾಗಿಯೂ ಬಹಳ ಬಂಡವಾಳವುಳ್ಳದ್ದಾಗಿಯೂ ಇದೆ.

ಭೀಮಾದಾರರಾಗತಕ್ಕವರು (ಲೈಫ್ ಎಷ್ಯೂರ್ ಮಾಡತಕ್ಕವರು) ಈ ಕಂಪನಿಯ ಚಂದಾ ದರ, ಷರತ್ತುಗಳು ಮೊದಲಾದವುಗಳನ್ನು ಇತರ ಕಂಪನಿಯವುಗಳೊಡನೆ ಹೋಲಿಸಿನೋಡಿದರೆ ಇಲ್ಲಿ ಜೀವಮಾನವನ್ನು ಭೀಮಾ ಮಾಡುವವರಿಗೆ ಎಷ್ಟು ಸೌಕರ್ಯಗಳುಂಟೆಂಬುದು ಗೊತ್ತಾಗುವುದು.

ಈ ಕಂಪನಿಯ ಭೀಮಾ ನಿಬಂಧನೆಗಳು ಬಹು ಅನುಕೂಲವಾದುವು. ಭೀಮಾದಾರರುಗಳಿಗೆ ತೊಂದರೆಯನ್ನುಂಟುಮಾಡುವ ನಿರ್ಬಂಧಗಳೇನೂ ಇಲ್ಲ.

ಕ್ಲಿಪ್ತವಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲೇ ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂಪಾಯಿಗಳನ್ನು ಪಡೆಯಬೇಕಾದರೆ ಭೀಮಾದಾರನು ಕಂಪೆನಿಗೆ ಕೊಡಬೇಕಾದ ಚಂದಾವಿನ ದರಗಳ ಪೈಕಿ ಕೆಲವನ್ನು ಇಲ್ಲಿ ನೋಡಿ.

| ಹಾಲಿ ನಡೆಯುತ್ತಿರುವ ವಯಸ್ಸು. | ೫೦ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಪಡೆಯಬೇಕಾದರೆ ಮಾಹೆಯಾನ ಕಂಪನಿಗೆ ಕೊಡುವದು. | ೫೫ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಯನ್ನು ಪಡೆಯಬೇಕಾದರೆ ಮಾಹೆಯಾನ ಕಂಪೆನಿಗೆ ಕೊಡುವದು. |
|---|---|---|
| ೨೦ | ರೂ. ೬—೭—೮ | ರೂ. ೬—೧—೦ |
| ೨೫ | ,, ೭—೧೫—೪ | ,, ೬—೧೪—೦ |
| ೩೦ | ,, ೯—೧೨—೮ | ,, ೮—೨—೦ |
| ೩೫ | ,, ೧೨—೧೪—೮ | ,, ೧೦—೧—೪ |
| ೪೦ | | ,, ೧೩—೪—೮ |

೨,೦೦೦ ರೂ. ಗಿಂತಲೂ ಹೆಚ್ಚಾದ್ದಕ್ಕಾಗಲಿ ಕಡಮೆಯಾದ್ದಕ್ಕಾಗಲಿ ವಯಸ್ಸಿನಲ್ಲಿ ಹೆಚ್ಚು ಕಡಮೆ ಇದ್ದರಾಗಲಿ ಚಂದಾ ದರವೇನೆಂಬುದನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಇದುವರೆಗೆ ಜಾರಿಯಲ್ಲಿದ್ದ ಚಂದಾ ದರಗಳನ್ನು ಕಡಮೆ ಮಾಡಿರುತ್ತೇವೆ. ಬಾಲ್ಡಿ ವರ್ಷಕ್ಕೆ ತಯಾರಾಗಿರುವ ಹೊಸ ಚಂದಾ ಪಟ್ಟಿಯನ್ನೂ ಭೀಮಾ ದರಖಾಸ್ತು ಫಾರಂಗಳನ್ನೂ ಇದೇ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಎಂ. ಸೂರ್ಯನಾರಾಯಣಪ್ಪ,

ಕಮಿಷನ್ ಮತ್ತು ಜನರಲ್ ಏಜನ್ಸಿ,

ಶಿವಮೊಗ್ಗ.

## ಚೇಂಬರ್ಲಿನ್ ಯವರು ಕಂಡುಹಿಡಿದ ಕೆಮ್ಮು ಔಷಧವು.

29




ಶೀತ, ಕೆಮ್ಮು, ಗಂಟಲು ಗಾರೆನ್ನುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿತಕ್ಕೆ ಈ ಔಷಧವು ಬಹುಪ್ರಾಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತಹವಾ ಬಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಅಲಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಒಣಗಿಹೋಗುವದು. ಇದರಿಂದಲೇ ಅನೇಕನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮೌಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಈ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ.; ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ:—

ಬಿ. ವಿ. ನರಸಿಂಹಲು ಚೆಟ್ಟಿ,

ನಂ. ೨, ತಂಬೂನಾಯಕರ ಬೀದಿ,

ಮದರಾಸ್.


## ವೃತ್ತಾಂತ ಪತ್ರಿಕೆ.

ಸನ್ ೧೯೦೩ ನೇ ಇಸವಿ ಜುಲೈ ತಾ|| ೨೩ ನೇ ಗುರುವಾರ

### ಮೈಸೂರು ಸೆನ್‌ಸಸ್ ರಿಪೋರ್ಟು—I.

ಮೈಸೂರು ಗೌವರ್ನಮೆಂಟ್ ಸೆನ್‌ಸಸ್ ಇಲಾಖಾ ಕಮಿಷನರ್‌ರಾದ ಮೆ|| ಟಿ. ಆನಂದರಾಯರು ಖಾನೇಷುಮಾರಿ ರಿಪೋರ್ಟಿನ ಗೋಪ್ಯ ಪ್ರತಿಯನ್ನು ನಮ್ಮಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಈ ಪುಸ್ತಕವು ಬಹಳ ಗಾತ್ರವಾದುದು; ಇದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ೧,೦೦೦ ಪುಟಗಳಿರುವವು; ಬಿಡಿಸಿ ನೋಡಿದರೆ ತಃಖ್ತೆಗಳೂ ಲೆಕ್ಕಗಳೇ ತುಂಬಿವೆ; ಈ ಲೆಕ್ಕಗಳಲ್ಲಿ ಬಹು ಭಾಗವು ಓದುವವರಿಗೆ ಉತ್ಸಾಹವನ್ನುಂಟುಮಾಡುವುದಾಗಿ ತೋರುವುದಿಲ್ಲ. ಬ್ರಿಟಿಷ್ ಗೌವರ್ನಮೆಂಟಿನವರು ಗೊತ್ತುಮಾಡಿ ಬಿಟ್ಟಿರುವ ಅನೇಕ ಸಂಗತಿಗಳನ್ನು ಮೆ|| ಆನಂದರಾಯರು ತನಿಖೆ ಮಾಡಿಸಿ, ಈ ರಿಪೋರ್ಟಿನಲ್ಲಿ ಬರೆದಿರುತ್ತಾರೆ. ಇವನ್ನೆಲ್ಲಾ ನೋಡಲಾಗಿ ಮೆ|| ಆನಂದರಾಯರು ತುಂಬಾ ಶ್ರಮಪಟ್ಟು ವಿಶೇಷ ಶ್ರದ್ಧೆಯಿಂದ ಈ ಕಾರ್ಯವನ್ನು ಮಾಡಿರುತ್ತಾರೆಂಬುವದಕ್ಕೆ ಅನುಮಾನವೇ ಇಲ್ಲ. ನಮ್ಮ ಮುಂದಿರುವ ಈ ರಿಪೋರ್ಟಿನಲ್ಲಿ ಲಕ್ಷ್ಯ ರಸ್ಯ ಚಿತ್ರಗಳು ಅನೇಕವಾಗಿರುತ್ತವೆ; ಇನ್ನು ಮುಂದೆ ಪ್ರಕಟವಾಗುವ ಭಾಗದಲ್ಲಿ ಅವೆಲ್ಲಾ ಇದ್ದಿದ್ದಾವು. ಹ್ಯಾಗೂ ಈ ರಿಪೋರ್ಟು ಪ್ರಕಟವಾಗಲು ಇಷ್ಟು ಸಾವಕಾಶವಾದ ಭಾಗದಲ್ಲಿ ವಿಷಾದಿಸಬೇಕಾಗಿದೆ. ರಿಪೋರ್ಟು ಬರೆವುದಕ್ಕೇ ಇಷ್ಟು ಸಮಯ ಹಿಡಿಯಿತೋ, ಇಲ್ಲವೇ ಗೌವರ್ನಮೆಂಟ್ ಮುದ್ರಾಶಾಲೆಯವರಿಂದಲೇ ಸಾವಕಾಶವಾಯಿತೋ ತಿಳಿದು ಬಂದಿಲ್ಲ.

ಈ ರಿಪೋರ್ಟಿನಲ್ಲಿ ಕಂಡು ಬರುವ ಕೆಲವು ವಿಶೇಷ ಸಂಗತಿಗಳನ್ನು ಮಾತ್ರ ಕುರಿತು ಪ್ರಸ್ತಾಪ ಮಾಡುವೆವು. ಮೈಸೂರು ಸಂಸ್ಥಾನದ ಪ್ರಜಾ ಸಂಖ್ಯೆಯು ಹಿಂದಿನ ಖಾನೇಷುಮಾರಿ ಲೆಕ್ಕಕ್ಕಿಂತಲೂ ಶೇಕಡ ೧೨ ರಷ್ಟು ವೃದ್ಧಿಯಾಗಿರುವುದು, ಅಂದರೆ, ೧೯೦೧ನೇ ಇಸವಿಯಲ್ಲಿ ಈ ಸಂಸ್ಥಾನವು ೫೫,೩೯,೩೯೯ ಪ್ರಜೆಗಳನ್ನುಳ್ಳದಾಗಿದ್ದಿತು. ಒಟ್ಟಾಗಿ ಸಾಮಾನ್ಯವಾಗಿ ಕುಂಫಣೀ ಸೀಮೆಯ ಪ್ರಜಾ ವೃದ್ಧಿಯ ದರವನ್ನು ಈ ಸಂಸ್ಥಾನದ ಪ್ರಜಾ ವೃದ್ಧಿಯ ದರಕ್ಕೆ ಹೋಲಿಸಿ ನೋಡಿದರೆ ಮೈಸೂರಿನ ದರವೇ ಹೆಚ್ಚಾಗಿದೆ ಎಂದು ಕಂಡುಬರುವುದು. ಪ್ಲೇಗ್ ಉಪದ್ರವ ಹಾವಳಿ ಅಷ್ಟು ಹೆಚ್ಚಾಗಿದ್ದಾಗ್ಯೂ ಕಳೆದ ಹತ್ತು ಸಂವತ್ಸರಗಳೂ ಎಲ್ಲ ಭಾಗಗಳಲ್ಲೂ ಮೈಸೂರು ಸೀಮೆಗೆ ಅನುಕೂಲವಾಗಿದ್ದುವೆಂದು ಹೇಳಬಹುದು. ಕುಂಫಣೀ ಸೀಮೆಯ ಕೆಲವೆಡೆಗಳಲ್ಲಿ ಕ್ಷಾಮವುತ್ಪತ್ತಿಯಾದುದರಿಂದ ಪ್ರಜಾ ವೃದ್ಧಿಗೆ ಅಡಚಣೆಯುಂಟಾಯಿತು. ಈ ಸಂಸ್ಥಾನದಲ್ಲಿ ಕ್ಷಾಮಬಾಧೆಯೇನೂ ಪ್ರಾಪ್ತವಾಗಲಿಲ್ಲ; ಸುಮಾರು ೨೦ ಸಂವತ್ಸರಗಳ ಹಿಂದೆ ಸಂಭವಿಸಿದ್ದ ಕ್ಷಾಮದ ದುಃಸ್ಥಿತಿಯನ್ನೆಲ್ಲ ನಿವಾರಣೆಮಾಡಿಕೊಂಡಿರುವುದು. ಪಟ್ಟಣಗಳೆಂದು ನಿಗದಿಪಡಿಸಲ್ಪಟ್ಟಿರುವ ಮೈಸೂರು ಸಿಟಿ, ಬೆಂಗಳೂರು ಸಿಟಿ, ಬೆಂಗಳೂರು ಕಂಟೋನ್ಮೆಂಟು, ಕೋಲಾರ್ ಚಿನ್ನದಗಣಿಗಳು ಎಂಬೀ ನಾಲ್ಕರ ಪೈಕಿ ಚಿನ್ನದ ಗಣಿಗಳ ಹೊರತು ಉಳಿದ ಮೂರು ಕಡೆಗಳಲ್ಲೂ ಪ್ರಜಾ ಸಂಖ್ಯೆಯು ಕಡಿಮೆಯಾಗಿರುವುದು. ಚಿನ್ನದ ಗಣಿಗಳಲ್ಲಾದರೋ ಹಿಂದೆ ಇದ್ದುದಕ್ಕಿಂತಲೂ ೩೧,೧೧೯ ಜನರು ಹೆಚ್ಚಿರುತ್ತಾರೆ. ಗಣಿಗಳಲ್ಲಿ ಚಿನ್ನ ತೆಗೆಯುವ ಕೆಲಸಕ್ಕಾಗಿ ಪರಸ್ಥಳಗಳಿಂದ ಜನರು ವಿಶೇಷವಾಗಿ ಬಂದು ಸೇರಿರುವುದರಿಂದಲೇ ಅಲ್ಲಿನ ಪ್ರಜಾ ಸಂಖ್ಯೆ ಇಷ್ಟುಮಟ್ಟಿಗೆ ಹೆಚ್ಚಲು ಕಾರಣವಾಯಿತು.

ಈ ಸಂಸ್ಥಾನವನ್ನು ಪೂರ್ವ ಪಶ್ಚಿಮಭಾಗಗಳೆಂದು ವಿಂಗಡಿಸಿ, ಅವೆರಡರಲ್ಲೂ ಇರತಕ್ಕ ಪ್ರಜೆಗಳ ಸ್ಥಿತಿಗಳ ತಾರತಮ್ಯಗಳನ್ನು ಹೋಲಿಸಿ ನೋಡುವುದು ಸ್ವಾರಸ್ಯವಾಗಿದೆ. ಪಶ್ಚಿಮಭಾಗದಲ್ಲಿ ಮಲ್ನಾಡು ಡಿಸ್ಟ್ರಿಕ್ಟುಗಳಿರುತ್ತವೆ; ಅಲ್ಲಿ ಪ್ರಜಾ ಸಂಖ್ಯೆಯು ವಿರಳವಾಗಿರುವುದು. ಚದರ ಮೈಲಿ ೧ಕ್ಕೆ ೧೫೩ ಜನರು ಇರುತ್ತಾರೆ; ಪೂರ್ವಭಾಗದಲ್ಲಾದರೋ ೨೦೦ ಜನದ ವರೆಗೆ ಇರುವುದು. ಪಶ್ಚಿಮ ಭಾಗದ ಜನರ ಜೀವಿತ ಕಾಲವೂ ಕಡಿಮೆ; ಮತ್ತು ಸ್ತ್ರೀಯರ ಸಂಖ್ಯೆಯು ಪುರುಷರ ಸಂಖ್ಯೆಗಿಂತ ... ಮೈದಾನ್ ಪ್ರದೇಶಗಳಲ್ಲೇ ಬಿಟ್ಟು ಪಕ್ಕಾಂಗಿಗಳಾಗಿ ಹೋಗುವುದೇ ಕಾರಣವಾಗಿರಬಹುದೆಂದು ಕಾಣುತ್ತಿದೆ.

ಈ ಸಲದ ಖಾನೇಷುಮಾರಿ ಲೆಕ್ಕಗಳನ್ನು ನೋಡಿದರೆ ಈ ಹತ್ತು ವರುಷಗಳಲ್ಲಿ ಪ್ರಜಾ ಸಂಖ್ಯೆಗಿಂತಲೂ ಮನೆಗಳ ಸಂಖ್ಯೆಯೇ ವಿಶೇಷವಾಗಿ ಹೆಚ್ಚಿದೆ ಎಂದು ಗೊತ್ತಾಗುವುದು. ಇದು ಪ್ರಜಾ ನೆಮ್ಮದಿಯೂ ಸೌಖ್ಯವೂ ವೃದ್ಧಿ ಹೊಂದುತ್ತಾ ಬಂದಿರುವುದಕ್ಕೆ ದೃಷ್ಟಾಂತವಾಗಿದೆ. ೧೯೯೧ ರಲ್ಲಿ ಪ್ರತಿ ಮನೆಯೊಳಗೂ ಸರಾಸರಿ ೫. ೬ ರಷ್ಟು ಜನ ಇದ್ದಿತು ... ಗಂಡಸರು ೧೦ ಮಂದಿ ಇದ್ದರೆ ಹೆಂಗಸರು ... ಮಂದಿಗಿಂತಲೂ ಕಡಿಮೆಯಾಗಿರುತ್ತಾರೆ. ಮತ್ತು ಪೂರ್ವಭಾಗದಲ್ಲಿರತಕ್ಕ ಗಂಡಸರ ಸಂಖ್ಯೆಯೇ ಪಶ್ಚಿಮಭಾಗದ ಪುರುಷರ ಸಂಖ್ಯೆಗಿಂತ ಹೆಚ್ಚು. ಇದಲ್ಲದೆ, ಅವಿವಾಹಿತರಾದ ಪುರುಷರೂ ವಿಧವೆಯರೂ ಪೂರ್ವಭಾಗದಲ್ಲಿರುವುದಕ್ಕಿಂತಲೂ ಪಶ್ಚಿಮಭಾಗದಲ್ಲೇ ಹೆಚ್ಚಾಗಿರುತ್ತಾರೆ. ಈ ಪ್ರಕಾರವಾದ ಯಥಾರ್ಥ ಸಂಗತಿಗಳನ್ನು ನೋಡಲಾಗಿ ಮಲ್ನಾಡಿಗಿಂತ ಮೈದಾನ್ ಸೀಮೆಯೇ ವಿಶೇಷ ಆರೋಗ್ಯಕರವಾದುದೆಂದು ಸಾಮಾನ್ಯವಾಗಿ ಗೊತ್ತಾಗುವುದು. ಮಲ್ನಾಡು ಡಿಸ್ಟ್ರಿಕ್ಟುಗಳಲ್ಲಿ ಸ್ತ್ರೀ ಪ್ರಜಾಸಂಖ್ಯೆಯು ಕಡಿಮೆಯಾಗಿರುವುದಕ್ಕೆ ಸರ್ಕಾರಿ ಉದ್ಯೋಗಸ್ಥರೂ ಕಾಫೀ ತೋಟಗಳೇ ಮುಂತಾದ ಕಡೆಗಳಿಗೆ ಹೋಗತಕ್ಕವರೂ ತಮ್ಮ ತಮ್ಮ ಹೆಂಗಸರು ಮಕ್ಕಳನ್ನು ... ಜನರು ವಾಸವಾಗಿರುತ್ತಿದ್ದರು; ಈಗಲಾದರೋ ಮನೆ ... ಜನಕ್ಕಿಂತ ಹೆಚ್ಚಾಗಿಲ್ಲ. ಈ ಸಂಸ್ಥಾನದಲ್ಲಿ ಬಹಳ ... ತ್ತಾಗಿ ಜನರು ವಾಸವಾಗತಕ್ಕ ಪಟ್ಟಣವಾವುದೆಂದು ನೋಡಿದರೆ ಮೈಸೂರನ್ನು ಬಿಟ್ಟರೆ ಬೇರೊಂದಿಲ್ಲ. ಮೈಸೂರಿನಲ್ಲೇ ಪ್ರತಿ ಮನೆಯೊಳಗೂ ಇರತಕ್ಕ ಜನರ ಸಂಖ್ಯೆ ಹೆಚ್ಚಾಗಿದೆ. ಆದುದರಿಂದ ಮೈಸೂರು ಪಟ್ಟಣವನ್ನು ... ಸ್ತಾರವಾಗಿ ಮಾಡಿ ಬಡಾಯಿಸಿ ಕಟ್ಟಬೇಕೆನ್ನುವ ಪ್ರವ... ಇದೊಂದು ಮುಖ್ಯ ಕಾರಣವಾಗಿದೆ. ಮನೆಗಳ ಸಂಖ್ಯೆ ಹೆಚ್ಚಬೇಕು; ಮತ್ತು ಮನೆಗಳನ್ನು ದೂರದೂರಕ್ಕೆ ಕಟ್ಟಬೇಕು.

ಮೈಸೂರು ಸಂಸ್ಥಾನದಿಂದ ಹೊರಕ್ಕೆ ಹೋಗಿರತಕ್ಕವರೂ, ಮೈಸೂರು ಸೀಮೆಗೆ ಬಂದಿರತಕ್ಕವರೂ

ಷ್ಟನ್ನೇ ಜನರೆಂದು ಖರಾರುವಾಕ್ಕಾ ಗೊತ್ತು ಮಾಡಿ ಹೇಳುವುದಕ್ಕೆ ಮಿ॥ ಆನಂದರಾಯರಿಗೆ ಸಾಧ್ಯವಾಗಲಿಲ್ಲ. ಬಹುಶಾ ಇಷ್ಟುಮಂದಿ ಇರಬಹುದೆಂದು ಅರಿಸುಮಾರು ನೋಡಿ ಪ್ರಕಟಿಸಿರುತ್ತಾರೆ. ಮೈಸೂರು ಸೀಮೆಯಿಂದ ಹೊರಗಡೆಗೆ ಹೋಗಿರತಕ್ಕವರು ೧,೩೨,೩೪೨ ಜನರೆಂತಲೂ, ಮೈಸೂರು ಸೀಮೆಗೆ ಬಂದಿರತಕ್ಕವರು ಒಟ್ಟು ೩,೦೬,೩೯೧ ಜನರೆಂತಲೂ ತಿಳಿಸಿದ್ದಾರೆ. ಇದರಿಂದ ಮೈಸೂರು ಪ್ರಜಾ ಸಂಖ್ಯೆಗೆ ೧,೭೪,೦೪೯ ಮಂದಿ ಕೂಡಿಬಂದರು. ಆದರೆ ಇವರಲ್ಲಿ ಬಹು ಭಾಗದವರು ಕೂಲೀ ಜನರು; ಚಿನ್ನದ ಗಣಿಗಳಲ್ಲೋ ಕಾಫಿ ಮೊದಲಾದ ತೋಟಗಳಲ್ಲೋ ಕೆಲಸ ಮಾಡುವುದಕ್ಕಾಗಿ ಬಂದು ನಿಂತವರು. ಇವರಲ್ಲಿ ಐಶ್ವರ್ಯವಂತರು ಆರೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಇನ್ನು ಕೆಲವು ವಿಷಯಗಳನ್ನು ಈ ರಿಪೋರ್ಟಿನಿಂದ ಸಂಗ್ರಹಮಾಡಿ ಮುಂದೆ ಪ್ರಕಟಿಸಬೇಕೆಂದಿದ್ದೇವೆ.

## ಒಳದೇಶದ ವೃತ್ತಾಂತಗಳು.

ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಕುದುರೇ ಜೂಜಿನಲ್ಲಿ ಕರ್ನಲ್ ದೇಶರಾಜೇ ಅರಸಿನವರ ಎರಡು ಕುದುರೆಗಳು ಎರಡಾವರ್ತಿ ಜಯವನ್ನು ಹೊಂದಿದವು. ಇವುಗಳಲ್ಲಿ ಕರ್ನಲ್ ರವರಿಗೆ ಸುಮಾರು ೫,೫೦೦ ರೂ. ಬಹುಮಾನ ದೊರಕಿರುವುದು.

****

ಮೈಸೂರು ಗೌವರ್ನಮೆಂಟಿನವರು ಸಬ್ ಡಿವಿಜನ್‌ಗಳನ್ನು ಕ್ರಮೇಣ ಒಂದೊಂದಾಗಿ ತೆಗೆದುಹಾಕಿ, ಅಸಿಸ್ಟೆಂಟ್ ಕಮಿಷನರುಗಳೇ ಮೇಲ್ವಿಚಾರಣೆ ನಡೆಸುವಂತೆ ಏರ್ಪಾಡು ಮಾಡುವವರಾಗಿದ್ದಾರೆಂದು ಕೇಳುತ್ತೇವೆ. ಸಾಗರ ಸಬ್ ಡಿವಿಜನ್ ವಜಾ ಆಗಿರುವಂತೆ ಈ ವಾರದ ಗೆಜೆಟ್ಟಿನಿಂದ ಗೊತ್ತಾಗುವುದು.

****

ಮಂಡ್ಯದಿಂದ ಆಚೆ ಹಣಕೆರೆ ಗ್ರಾಮದಲ್ಲಿ ರೈಲ್ವೆ ಕಂಪನಿಯವರು ಕಳೆದ ವಾರದಿಂದ ಹೊಸದಾಗಿ ಒಂದು ಸ್ಟೇಷನ್ ಮಾಡಿ, ಅಲ್ಲಿಂದ ಬರತಕ್ಕ ಜನರನ್ನು ರೈಲ್ ಗಾಡಿಗಳಲ್ಲಿ ಕೂರಿಸಿಕೊಳ್ಳುತ್ತಾರೆ. ರೈಲ್ವೆ ಕಂಪನಿಯವರು ಜನಗಳ ಸೌಕರ್ಯವನ್ನು ಹೆಚ್ಚಿಸಿಕೊಟ್ಟಹಾಗೆಲ್ಲಾ ಉತ್ಪತ್ತಿಯೂ ಹೆಚ್ಚುವುದಕ್ಕೆ ಅಡ್ಡಿಯಿಲ್ಲ.

****

ಪತ್ರಗಳು, ಕರಾರುಗಳು, ಮುಂತಾದವುಗಳನ್ನು ರಿಜಿಸ್ಟರ್ ಮಾಡಿಸುವುದಕ್ಕೆ ಸರ್ಕಾರದವರು ಒಂದು ಕಾನೂನು ಜಾರಿಯಲ್ಲಿ ತಂದಿರುತ್ತಾರಷ್ಟೆ. ಈ ಕಾನೂನನ್ನು ಈಗಿನ ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಿ, ಕಳೆದ ಜೂನ್ ೨೩ನೇ ತಾರೀಖಿನಿಂದ ಜಾರಿಗೆ ತಂದಿರುತ್ತಾರೆ. ಈ ಕಾನೂನನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಈ ವಾರ ಪ್ರಕಟಿಸಿರುವರು.

****

ಈ ತಿಂಗಳ ೧೦ನೆ ತಾರೀಖು ಶುಕ್ರವಾರ ಆನೆಕಲ್ ಮಿಷನ್ ಶಾಲೆಗಳ ಬಾಲಕ ಬಾಲಕಿಯರಿಗೆ ಅಮಲ್ದಾರ್ ಮಿ॥ ರಾಮಚಂದ್ರರಾಯರು ಅಗ್ರಾಸನವನ್ನು ವಹಿಸಿ ಬಹುಮಾನಗಳನ್ನು ಕೊಟ್ಟರು. ಮಿ॥ ಇ. ಪಿ. ರೈಸ್‌ಸಾಹೇಬ, ಮಿ॥ ಜೆ. ಮಾಥಸ್‌ಯವರು ಮೊದಲಾದವರೆಲ್ಲಾ ಸಭಾಸದರಾಗಿದ್ದು ಉಪನ್ಯಾಸಗಳನ್ನು ಮಾಡಿ, ಸಭಿಕರನ್ನು ಸಂತೋಷಪಡಿಸಿದರು.

****

ಚಿಕ್ಕಮಗಳೂರು ಬಾತ್ಮಿದಾರರು ಬರೆಯುವದೇನಂದರೆ.— "ಈ ತಾಲ್ಲೂಕು ಮಿರ್ಲೆ ಹೋಬಳಿ ಚಿಕ್ಕರುಬಿನಹಳ್ಳಿಯಲ್ಲಿದ್ದ ಕಾಡೇಗೌಡರ ಪುಟ್ಟಣ್ಣ ಎಂಬುವವರು ಕಳೆದ ಜೂನ್ ೧೯ನೆ ಗುರುವಾರ ಸನ್ನಿಪಾತದಲ್ಲಿ ಕಾಲವಾದರೆಂದು ಕೇಳಿ ಸರ್ವರೂ ವಿಷಾದಪಡುತ್ತಾರೆ. ಇವರಿಗೆ ೬೫ ವರುಷ ವಯಸ್ಸಾಗಿತ್ತು. ಇವರು ಗುಣವಂತರು, ಐಶ್ವರ್ಯವಂತರು. ಬಹಳ ಒಳ್ಳೇ ಹೆಸರನ್ನು ಸಂಪಾದಿಸಿಕೊಂಡಿದ್ದರು."

****

ಮೈಸೂರು ಸಿವಿಲ್ ಸರ್ಜನ್‌ರಾಗಿರುವ ಡಾಕ್ಟರ್ ಪಿ. ಎಸ್. ಅಚ್ಯುತರಾಯರಿಗೆ ಬಹುಮಾನ ಮಾಡಬೇಕೆಂಬ ಉದ್ದೇಶದಿಂದ ಕೆಲವು ಮಂದಿ ಮೈಸೂರು ಮಹನೀಯರು ಮುಖಂಡರಾಗಿ ನಿಂತು ಸಭೆಯನ್ನು ನಡಸಿ ಪುರಜನರಿಂದಲೂ ನಾಟಕಗಳ ಕಂಪನಿಯವರಿಂದಲೂ ಚಂದಾ ಕೂಡಿಸಿರುತ್ತಾರಷ್ಟೆ. ಮುಂದಿನ ವಾರ ಒಂದು ಸಭೆ ಏರ್ಪಡುವುದೆಂತಲೂ, ಆಗ್ಯೆ ಈ ಚಂದದ ವಿಲೇವಾರಿಯು ಇತ್ಯರ್ಥವಾಗುವುದೆಂತಲೂ ಕೇಳುತ್ತೇವೆ.

****

ನಮ್ಮ ಶ್ರೀಮನ್ ಮಹಾರಾಜರವರಿಗೆ ಬೆಂಗಳೂರಿಗೆ ಹೋಗುವದಕ್ಕೆ ಮೊದಲೇ ಎರಡಾವರ್ತಿ ಸ್ವಲ್ಪ ಅಲಸ್ಯವಾಗಿತ್ತು. ಬೆಂಗಳೂರಿಗೆ ದಯಮಾಡಿದ ಮೇಲೆ ಅಲ್ಲಿನ ಹವಾ ದೇಹಕ್ಕೆ ಒಗ್ಗದೆ ೩—೪ ದಿನಗಳ ತನಕ ಅಲ್ಪಸ್ವಲ್ಪ ಜ್ವರ ಬಂದುದರಿಂದ ಅರಮನೆಯನ್ನು ಬಿಟ್ಟು ಹೊರಡುವುದಕ್ಕೆ ಅವಕಾಶವಾಗಲಿಲ್ಲ. ಆದರು ಕುದುರೆ ಜೂಜಿಗಾಗಲಿ, ಟೆನಿಸ್‌ಕೋರ್ಟಿನಲ್ಲಿ ನಡೆದ ವಿನೋದಕ್ಕಾಗಲಿ ದಯಮಾಡುವುದಕ್ಕಾಗಲಿಲ್ಲವೆಂದು ಕೇಳುತ್ತೇವೆ.

****

ಇಂಡಿಯಾ ಗೌವರ್ನಮೆಂಟಿನ ಸ್ವಂತ ರೀಮೌಂಟ್ ಇಲಾಖೆಯ ಡೈರೆಕ್ಟರ್ ಜನರಲ್‌ರಾದ ಕರ್ನಲ್ ಎಚ್. ಗೋಷ್‌ಯವರು ಕಳೆದ ೧೬ನೆ ತಾರೀಖು ಸರ್ಕೀಟು ಹೊರಟು ಇರುತ್ತಾರೆ. ಇವರು ೨೩ನೆ ತಾ॥ ವರೆಗೆ ಬೆಂಗಳೂರು, ೨೫ರ ವರೆಗೆ ಹೊಸೂರು, ಮಾರುದಿನ ಮಾಲೂರು ಪ್ರಾಂತ್ಯಗಳಲ್ಲಿ ನಿಂತು ಅಲ್ಲಲ್ಲಿರುವ ಕುದುರೆಗಳ ಬೆಳವಳಿಗೆ ಮುಂತಾದುದನ್ನು ಪರಾಂಬರಿಸಿಕೊಂಡು, ಈ ತಿಂಗಳ ಕೊನೆಗೆ ಸಿಂಲಾ ನಗರವನ್ನು ಸೇರುವವರಾಗಿದ್ದಾರೆ.

****

ಬೆಂಗಳೂರಿನಲ್ಲಿರುವ ಲಾಲ್‌ಬಾಗ್ ಎಂಬ ಸರ್ಕಾರಿ ಉದ್ಯಾನವನದಲ್ಲಿ ಮೃಗಾದಿ ಪ್ರಾಣಿಗಳನ್ನು ಬೋನುಗಳಲ್ಲಿ ಕೂಡಿ ಸಾಕುವರಷ್ಟೆ. ಈ ಬೋನು ಮುಂತಾದ ಕಟ್ಟಡಗಳನ್ನೆಲ್ಲಾ ಹೊಸದಾಗಿಯೂ ಅಂದವಾಗಿಯೂ ತಯಾರುಮಾಡಿಸಬೇಕೆಂದು ಗೌವರ್ನಮೆಂಟಿನವರು ೧೪,೦೦೦ ರೂ. ಸ್ಯಾಂಕ್ಷನ್ ಮಾಡಿದ್ದಾರೆ. ಅಲ್ಲಿರುವ ಒಂದೇ ಒಂದು ಸಿಂಹವು ಈಚೆಗೆ ಕಾಯಿಲೆಬಿದ್ದುಕೊಂಡು ಜನರಿಗೆ ಮುಖವೇ ತೋರಿಸುವುದಿಲ್ಲ. ವೈದ್ಯನು ಇಲಾಜು ಮಾಡುತ್ತಿರುವಂತೆ ಕೇಳುತ್ತೇವೆ.

****

ತಲಕಾಡು ಬಾತ್ಮಿದಾರರು ಬರೆಯುವದೇನಂದರೆ:— "ತಮ್ಮ ಪತ್ರಿಕೆಯು ನಮಗೆ ಪ್ರತಿ ಶುಕ್ರವಾರವೂ ತಲಪುತ್ತಿತ್ತು. ಈಗ ನಾಲ್ಕು ವಾರಗಳಿಂದ ಬ್ರಾಂಚ್ ಆಫೀಸಿನ ಉದಾಸೀನದಿಂದ ಶನಿವಾರ ಅಥವಾ ಭಾನುವಾರ ತಲಪುತ್ತೆ. ಕಾಗದಗಳು ಕೂಡ ಸರಿಯಾಗಿ ಬಟವಾಡೆ ಆಗುವದಿಲ್ಲ. ಇದಲ್ಲದೆ ಆ ಊರಿನಲ್ಲಿ ಲಾಂದ್ರ ಹಚ್ಚತಕ್ಕ ಮ್ಯುನಿಸಿಪಲ್ ಕಂಟ್ರಾಕ್ಟರು ರಾತ್ರಿ ೮ ಗಂಟೆಗೆ ಹಚ್ಚುತ್ತಾನೆ. ಇದರಿಂದ ಪ್ರಯಾಣಿಕರೇ ಮುಂತಾದವರಿಗೆ ಬಹಳ ತೊಂದರೆಯಾಗಿರುತ್ತೆ. ಈ ವಿಷಯಗಳನ್ನು ತಾವು ಮೇಲ್ಪಟ್ಟವರ ಗಮನಕ್ಕೆ ತಂದು ಅನುಕೂಲಮಾಡಿಕೊಡಬೇಕೆಂದು ಕೋರುತ್ತೇನೆ."

****

ಚಿಕ್ಕಮಗಳೂರು ತಾಲ್ಲೂಕು ಆಲ್ದೂರಿನ ಪ್ರಜೆಗಳು ತಮ್ಮ ಊರಿನಲ್ಲಿ ಆಸ್ಪತ್ರೆ ಇಡಿಸಿಕೊಳ್ಳಬೇಕೆಂದು ಅದಕ್ಕಾಗಿ ಒಂದು ಕಟ್ಟಡವನ್ನೂ, ಆಸ್ಪತ್ರೆ ವೈದ್ಯರು ಇರುವುದಕ್ಕೆ ಒಂದು ಮನೆಯನ್ನೂ ಕಟ್ಟಿಸಿಕೊಡುವುದಾಗಿ ವಾಗ್ದಾನ ಮಾಡಿ, ಕಟ್ಟುವುದಕ್ಕೆ ಪ್ಲಾನನ್ನೂ ಮರವನ್ನೂ ಸರ್ಕಾರದವರು ಮುಫತ್ತಾಗಿ ಕೊಡಿಸಬೇಕೆಂಬದಾಗಿ ಕೇಳಿಕೊಂಡಿದ್ದಾರೆ. ಅತ್ತಲಾಗಿ ಶೃಂಗೇರಿಯಲ್ಲಿ ೬,೦೦೦ ರೂ. ಮುಟ್ಟಿಸಿ ಆಸ್ಪತ್ರೆಯನ್ನು ಕಟ್ಟಿಸುವ ವಿಚಾರವನ್ನು ಸದ್ಯ ನಿಲ್ಲಿಸಬೇಕೆಂತಾ ಗೌವರ್ನಮೆಂಟಿನವರು ಅಪ್ಪಣೆ ಕೊಟ್ಟಿದ್ದಾರೆ. ಈಗ ಅಲ್ಲಿರುವ ಆಸ್ಪತ್ರೆಯನ್ನು ಅಷ್ಟಿಷ್ಟು ಬೇರೊಂದು ಆರೋಗ್ಯಕರವಾದ ಕಟ್ಟಡದಲ್ಲಿ ಮಾಡುವಂತೆ ಏರ್ಪಾಡಾಗಿದೆ. ಪ್ರಜೆಗಳು ಒಗ್ಗಟ್ಟಾಗಿ ಹಣ ಕೂಡಿಸಿದರೆ ಅಲ್ಲಿ ಅನುಕೂಲವಾದ ಒಳ್ಳೇ ಕಟ್ಟಡವನ್ನೇ ಕಟ್ಟಿಕೊಳ್ಳಬಹುದಾಗಿದೆ.

## ಮೈಸೂರು ಗೆಜೆಟ್ ಸಂಗ್ರಹ.

ಚಿತ್ರದುರ್ಗ ಡಿಸ್ಟ್ರಿಕ್ಟ್ ಅ. ಕ. ಮಿ॥ ಬಿ. ವೆಂಕೋಬರಾಯರಿಗೆ ೨ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

ಮಂಜರಾಬಾದ್ ತಾಲ್ಲೂಕ್ ಅಮಲ್ದಾರ್ ಮಿ॥ ಟಿ. ವೆಂಕಟೈಯನವರಿಗೆ ಜೂನ್ ೭ರ ಲಾಗಾಯತು ಅವರು ಪ್ರತಿಷ್ಠಿತ ದಿನದವರೆಗೆ ಅಂದರೆ ೨೩ನೆ ತಾರೀಖು ತನಕ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಹಾಸನದ ಡಿಸ್ಟ್ರಿಕ್ಟ್ ಆಫೀಸ್ ಇಂಗ್ಲಿಷ್ ಹೆಡ್ ಕ್ಲಾರ್ಕ್ ಎಸ್. ರಾಮಸ್ವಾಮಿ ಅಯ್ಯಂಗಾರರು ಮಂಜರಾಬಾದ್ ತಾಲ್ಲೂಕಿನ ಅಮಲ್ದಾರ್ ವ ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ. ಅವರು ಬ್ರೀಚ್ ಆಫ್ ಕಂಟ್ರಾಕ್ಟ್ ಮೊಕದ್ದಮೆಗಳನ್ನು ವಿಚಾರಣೆ ಮಾಡಲು ಅಧಿಕಾರ ವಹಿಸಲ್ಪಟ್ಟಿದ್ದಾರೆ.

ಕುಣಿಗಲ್ ತಾಲ್ಲೂಕ್ ಅಮಲ್ದಾರ್ ಮಿ॥ ವಿ. ಎನ್. ಗುರುರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿರಸ್ತೇದಾರರು ಅವರ ಗೈರ್‌ಹಾಜರಿನಲ್ಲಿ ತಾಲ್ಲೂಕಿನ ಛಾರ್ಜನ್ನು ವಹಿಸಿರತಕ್ಕದ್ದು.

ಹಾಸನ ಡಿಸ್ಟ್ರಿಕ್ಟ್ ಟ್ರೆಜರಿ ಛಾರ್ಜಿನಲ್ಲಿರುವ ಅ. ಕ. ಮಿ॥ ಬಿ. ರಾಮಸ್ವಾಮಯ್ಯನವರಿಗೆ ಒಂದು ತಿಂಗಳು ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹಾಸನ ಸಬ್ 'ಹೆಡ್' ಮಿ॥ ಸಿ. ಬಿ. ಶೇಷಗಿರಿರಾಯರು ತಮ್ಮ ಕೆಲಸಕ್ಕೆ ಕುಂದಕವಾಗದಂತೆ ಡಿಸ್ಟ್ರಿಕ್ಟ್ ಟ್ರೆಜರಿ ಛಾರ್ಜನ್ನು ವಹಿಸಿರತಕ್ಕದ್ದು.

ಮಿ॥ ನಾಡಿಗ ಸುಬ್ಬರಾಯರು ತರೀಕೆರೆ ಅಮಲ್ದಾರರಾಗಿದ್ದಾಗ್ಯೆ ಅವರಿಗೆ ಮೂರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತಷ್ಟೆ. ಇವರು ಜೂನ್ ೯ ರಲ್ಲಿ ಕೆಲಸಕ್ಕೆ ದಾಖಲಾದ ಸಬಬು ಬಾಕಿ ರಜವನ್ನು ರದ್ದುಮಾಡಿದೆ.

ಸಾಗರ, ನಗರ, ಸೊರಬ ಈ ಮೂರು ತಾಲ್ಲೂಕುಗಳನ್ನೂ ಸೇರಿಸಿ ರೆವೆನ್ಯೂ ಸಬ್ ಡಿವಿಜನ್ ಮಾಡಿದೆ ಎಂದು ಹಿಂದೆ ೧೯೦೧ನೆ ಇಸವಿ ನೊವೆಂಬರ್ ೧೫ರಲ್ಲಿ ಇಸ್ತಿಹಾರನಾಮೆ ಹೊರಡಲ್ಪಟ್ಟಿತ್ತಷ್ಟೆ. ಈ ಹುಕುಮನ್ನು ಶ್ರೀಮನ್ ಮಹಾರಾಜಾ ಗೌವರ್ನಮೆಂಟಿನವರು ರದ್ದುಮಾಡಿ, ಆ ಸಬ್ ಡಿವಿಜನ್ ವಜಾಮಾಡಿರುತ್ತಾರೆ.

## ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳನ್ನು ನಾವು ಪ್ರಕಟಿಸಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

## ಕರೆಸ್ಪಾಂಡೆನ್ಸ್.

### ಅರಸೀಕೆರೆ ಪೋಸ್ಟ್ ಆಫೀಸ್ ಮತ್ತು ಸಂತೆ.

ಅಯ್ಯಾ,

ಸರ್ಕಾರದವರು ಪೋಸ್ಟಾಫೀಸನ್ನು ಸ್ಥಾಪಿಸಿರುವದು ಪ್ರಜೆಗಳ ಉಪಯೋಗಕ್ಕೋ ಅಥವಾ ಪ್ರಜೆಗಳ ಕಷ್ಟಕ್ಕೋ ಈಗ ನಮ್ಮ ಮನಸ್ಸಿಗೆ ನಾವು ತಿಳಿಯುತ್ತೇವೆ. ಪ್ರಜೆಗಳ ಕಷ್ಟಕ್ಕೆ ಎಂದು ತಿಳಿಯುವದರಲ್ಲಿ ಯಾವ ಅಭ್ಯಂತರವೂ ಕಾಣುವದಿಲ್ಲ. ಬಡಪ್ರಜೆಗಳು ಕಾಗದಗಳನ್ನು ರಿಜಿಸ್ಟ್ರಿ ಮೂಲಕ ರವಾನಿಸಬೇಕೆಂದರೆ ತುಂಬಾ ತೊಂದರೆಯಲ್ಲವೇ? ಅರ್ಧ ಅರ್ಧ ಆಣೆ ಕವರಿನಲ್ಲಿ ಬರೆದು ಹಾಕಿದರೆ ಪೋಸ್ಟಾಫೀಸು ಒಂದು ದೊಡ್ಡ ನಾರಿಯಾಗಿ ಕುಂತು, ಬರದ ಕವರುಗಳೆಲ್ಲಾ ಉದರ ಪೋಷಣೆಗೆ ನುಂಗೇಬಿಡುತ್ತೆ. ತಮ್ಮ ಆಫೀಸಿಗೆ ಸುಮಾರು ೧೦—೧೨ ಕಾಗದಗಳನ್ನು ಬರೆದೆನು. ಆದಾಗ್ಯೂ ಒಂದು ಬಾತ್ಮಿಯೂ ತಮ್ಮ ಪತ್ರಿಕೆಯಲ್ಲಿ ಪ್ರಚುರವಾಗಲಿಲ್ಲ. ಇದನ್ನು ತಿಳಿದು, ತಮ್ಮ ಆಫೀಸಿನಲ್ಲೇ ಗೈರ್‌ಲೆಂಡಾಗುತ್ತೆಂದು ಊಹಿಸಿ, ಗುಂಬಾ ರೋಷಪಡುತ್ತಾ ಇದ್ದೆ. ಈಗ ತಿಳಿದದ್ದರಲ್ಲಿ ಪೋಸ್ಟಾಫೀಸೇ ಹದಂ ಮಾಡುತ್ತೆ. ಇದನ್ನು ತಿಳಿದು ಈ ದಿವಸ ರಾತ್ರಿಯೆಲ್ಲಾ ರೈಲ್ವೆ ಸ್ಟೇಷನ್ ಬಳಿ ಕಾದು, ರಾತ್ರಿ ೨ ಗಂಟೆ ಟ್ರೇನಿನಲ್ಲಿ ಈ ಬಾತ್ಮಿಯನ್ನು ಹಾಕಿದ್ದೇನೆ. ಹೀಗಾದರೆ ಎಷ್ಟು ತೊಂದರೆಯಾಗುತ್ತೆಯೂ ವಾಚಕರೇ ಊಹಿಸಬೇಕು. ಮತ್ತು ಈಗ ಪೋಸ್ಟು ಸೂಪರಿಂಟ್ ಸಾಹೇಬರ ಸನ್ನಿಧಾನಕ್ಕೆ ಅರ್ಜಿಗಳನ್ನು ಗುಜರಾಯಿಸಿಕೊಳ್ಳಬೇಕಾಗಿ ಪ್ರಯತ್ನಮಾಡುತ್ತಿದ್ದೇವೆ.

ಈ ಊರಿನಲ್ಲಿ ವಾರಕ್ಕೊಂದಾವರ್ತಿ ಸಂತೆ ನಡೆಯುವದು. ಮೊದಲು ಸ್ಟೇಷನಿನಲ್ಲಿ ಹಾಲಿ ಸಂತೆಯು ಈ ಊರಿಗೆ ೧॥ ಮೈಲಿ ಫಾಸ್ಲೆಯಲ್ಲಿ ನಡೆಯುತ್ತಾ ಇತ್ತು. ಆಗಲು ಬಡಜನಗಳ ಯಾವದೊಂದು ಪ್ರಕಾರವೂ ಇರಲಿಲ್ಲ. ಈಗ ೩ ಸಂತೆಯಿಂದ ಇಲ್ಲಿ ನಡೆಯುವ ಸಾಲೆಕಲ್ಲು ತಿರುಪತಿ ರಥೋತ್ಸವದ ಗಲಾಟೆಗೋಸ್ಕರ ಎರಡು ಸಂತೆಗಳು ನಡೆಯುತ್ತವೆಯಾದಪ್ರಯುಕ್ತ ಜನಗಳಿಗೆ ಯಾವದೊಂದು ಸಾಮಾನೂ ಸಿಕ್ಕದೆ ತುಂಬಾ ತೊಂದರೆಪಡುತ್ತಾರೆ. ಅಕ್ಕಿರಾಗಿ ಸುತರಾಂ ಸಿಕ್ಕುವದಿಲ್ಲ. ಅಂಗಡಿ ವರ್ತಕರು ಒಟ್ಟುಗಟ್ಟೆ ಅಳೆಸಿಕೊಂಡು ಹೋಗುತ್ತಾರೆ. ಸಂತೆಯಾದನಂತರ ಹೋಗಿ ಕೇಳಿದರೆ ಸಂತೆಯಲ್ಲಿ ೧೨ ಸೇರು ಮಾರಿದರೆ ಅಂಗಡಿಯಲ್ಲಿ ೮ ಸೇರು ಕೊಡುತ್ತಾರೆ. ಮನೆಗೆ ತೆಗೆದುಕೊಂಡು ಹೋಗಿ ಅಳೆದರೆ ೬ ಸೇರು ಇರುಯುತ್ತೆ. ಇಂಥಾ ದುಷ್ಟಕಾರ್ಯಗಳು ನಡೆಸತಕ್ಕ ದುಷ್ಟರಿಗೆ ತಾಲ್ಲೂಕು ಧರ್ಮಪ್ರಭುಗಳು ಯಾತಕ್ಕೆ ಬಂದೋಬಸ್ತು ಮಾಡಿಸುವದಿಲ್ಲವೋ ತಿಳಿಯದು.

ಪ್ರಜಾ ಹಿತಚಿಂತಕ.

*********

### ಯೇಸುಕ್ರಿಸ್ತನು ಭಗವದವತಾರಿಯು.

ಅಯ್ಯಾ,

ತಮ್ಮ ಈ ಜುಲೈ ತಾರೀಖು ೨ರ ಪತ್ರಿಕೆಯಲ್ಲಿ ಮಿ॥ ಎನ್. ಗಂಗಾಧರಯ್ಯನವರು, ಮಿ॥ ಟಿ. ವಿಜಯರಾಘವ ರಾಯರು ಸಹಾ ಕೇಳಿರುವ ಪ್ರಶ್ನೆಗಳನ್ನು ನೋಡಿದರೆ ಬಹಳ ಆಶ್ಚರ್ಯವನ್ನುಂಟುಮಾಡುತ್ತೆ. ಇವರು ಭಗವದ್ವಿಷಯವಾದ ಗ್ರಂಥಗಳನ್ನು ಧ್ಯಾನಗಳು ಓದಿದವರೇ ಅಲ್ಲವಾಗಿ ಕಾಣುತ್ತೆ. ಭಗವಂತನು ಈ ಪ್ರಪಂಚದಲ್ಲಿ ಲೋಕಕ್ಕೋಸ್ಕರ ಅವತರಿಸುತ್ತಾನೆಂಬದನ್ನು ಶ್ರೀಮಹಾಭಾರತ ಭೀಷ್ಮಪರ್ವಾಂತರ್ಗತವಾದ ಭಗವದ್ಗೀತಾ ೪ನೇ ಅಧ್ಯಾಯದ ೮ನೇ ಶ್ಲೋಕ "ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ। ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ" ಎಂಬುವ ರೀತಿಯಾಗಿ ಯೇಸುಸ್ವಾಮಿಯು ದುಷ್ಟನಿಗ್ರಹ ಶಿಷ್ಟಪರಿಪಾಲನೆಗೆ ಈ ಭೂಮಿಯಲ್ಲಿ ಜನ್ಮಿಸಿದ್ದಾಗಿದೆ. ಆತನು ಶ್ರೀ ಭಗವದವತಾರವೆಂಬುವದಕ್ಕೆ ಬೈಬಲ ಎಂಬುವಕೆಯಲ್ಲಿರುವ ಕೆಲವು ದೃಷ್ಟಾಂತಗಳನ್ನು ನೋಡಿಕೊಳ್ಳಬೇಕು. ಆದರೆ ಪ್ರಶ್ನಕರ್ತರ ತಿಳುವಳಿಕೆ ಮಟ್ಟಿಗೆ ಒಂದೆರಡು ಉದಾಹರಣೆ ಮಾತ್ರ ಕೊಟ್ಟಿರುತ್ತೇನೆ. "ನಾನೂ ತಂದೆಯೂ ಸರಿ ಒಬ್ಬನೇ" (ಜಾನ್. ಅಧ್ಯಾಯ ೧೦. ವಾಕ್ಯ ೩೦), "ಯಾವನು ನನ್ನ ಮೇಲೆ ವಿಶ್ವಾಸವನ್ನು ಇರಿಸಿರುವನೋ ಅವನು ನನ್ನ ಮೇಲೆ ವಿಶ್ವಾಸ ಇರಿಸಿದಂತಾಗುವುದಿಲ್ಲ; ನನ್ನನ್ನು ಕಳುಹಿಸಿದವನ ಮೇಲೆ ಇರಿಸಿದಂತಾಗುತ್ತೆ" (ಲೂಕ್ ಅ. ೧೦. ವಾ. ೨೨.) ಈ ರೀತಿಯಾಗಿ ಯೇಸುಸ್ವಾಮಿಯು ತಾನೇ ಹೇಳಿರುವುದರಿಂದ ಆತನು ಸಾಕ್ಷಾತ್ ಭಗವಂತನೆಂದು ಯಥಾರ್ಥವಾಗಿಯೂ ಸತ್ಯವಾಗಿಯೂ ಊಹಿಸಬಹುದು. ಮತ್ತು ಸತ್ಯವೇದದ ಹೊಸ ಮತ್ತು ಹಳೆ ಒಡಂಬಡಿಕೆ ಗ್ರಂಥಗಳನ್ನು ಓದಿದರೆ ಸಂಪೂರ್ಣವಾಗಿ ತಿಳಿಯುತ್ತೆ. ಈ ಪ್ರಶ್ನಕರ್ತರು ಕೇಳುವ ಬಾಲಭಾಷಾ ಪ್ರಶ್ನೆಗಳಿಗೆ ಉತ್ತರ ಕೊಡಲು ಇವರು ಭಾಗವತ ದಶಮಸ್ಕಂಧದಲ್ಲಿ ಶ್ರೀ ಕೃಷ್ಣಾವತಾರದ ಬಾಲಲೀಲೆಯನ್ನೂ, ಶಂಕರಾಚಾರ್ಯರು ಬಾಲ್ಯದಲ್ಲಿ ನಡಸಿರುವ ಮಹಿಮೆಗಳನ್ನು ಶಂಕರ ವಿಜಯದಲ್ಲಿಯೂ ನೋಡಿದರೆ ಈ ಭಗವತ್ ಸ್ವರೂಪನಾದ ಯೇಸುಸ್ವಾಮಿಯು ಕುರುಡರಿಗೆ ಕಣ್ಣುಕಾಣುವಂತೆಯೂ, ಕುಂಟರಿಗೆ ಕಾಲುಬರುವಂತೆಯೂ, ರೋಗಪೀಡಿತರನ್ನು ನಿರೋಗಿಗಳನ್ನಾಗಿಯೂ ಮಾಡಿದ್ದಾನೆಂಬುವುದು ಅಸಾಧ್ಯವಾಗಿಲ್ಲ. ಇಂಥ ಭಗವತ್ ಸ್ವರೂಪನಾದ ಯೇಸುಸ್ವಾಮಿಯು "ಅನನ್ಯಾಶ್ಚಿಂತಯಂತೋಮಾಂ ಯೇಜನಾಃ ಪರ್ಯುಪಾಸತೇ। ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ" (ಭಗವದ್ಗೀತೆ ೯ನೇ ಅ. ೨೨ನೇ ಶ್ಲೋಕ.) ಹೇಳಿರುವನು. ಈ ಪ್ರಪಂಚದಲ್ಲಿರುವ ಮಾಹಾತ್ಮ್ಯರನ್ನು ತನ್ನ ಅಂತಃಕರಣ ರೂಪವಾದ ಅಮೃತಸೇಚನೆಯಿಂದ ಪರಿಶುದ್ಧರನ್ನಾಗಿ ಮಾಡಿ ಜ್ಞಾನಸ್ನಾನವೆಂಬ ಪರಿಶುದ್ಧಜ್ಞಾನದಿಂದ ಪವಿತ್ರರನ್ನಾಗಿ ಮಾಡುವುದಕ್ಕೆ ಈ ಪ್ರಪಂಚದಲ್ಲಿ ಅವತರಿಸಿದನೆಂಬುದು ಸ್ವಾಭಾವಿಕವಾಗಿರುವಲ್ಲಿ ಆತನು ಜಗತ್ತ್ರಾಣನ ವಿಗ್ರಹನೆಂಬುದಕ್ಕೆ ಸಂದೇಹವೆಂತು ತೋರುವುದು?

ಬಿ. ಸು.

## ಬಾಸುದಾಸಯ್ಯ ಗುರುದಾಸಯ್ಯನಾದದ್ದು.
### (ತಾನೇ ಬರೆದ ವೃತ್ತಾಂತ)

(ಕಳೆದ ವಾರದ ಶೇಷ.)

ಇದಲ್ಲದೆ ನಾನು ಹಿಂದು ಮತದಲ್ಲಿ ಪಟ್ಟಂಥ ನನ್ನ ಪ್ರಯಾಸದ ಫಲವು ವ್ಯರ್ಥವಾಗಿ ಹೋದಾಗ್ಯೂ ಅದಕ್ಕಿಂತ ಉತ್ಕೃಷ್ಟವಾದ ಫಲವನ್ನು ಈಗ ಕ್ರಿಸ್ತಯೇಸುವಿನಲ್ಲಿ ಅನುಭವಿಸುತ್ತಾ ಇರುವದರಿಂದ ಭಾಗ್ಯವಂತನೆಂದೇ ನೆನಸುತ್ತೇನೆ. ಹ್ಯಾಗಂದರೆ ಹಿಂದೆ ನಾನು ಆ ಜ್ಞಾನಸಿಂಧು ಎಂಬ ಗ್ರಂಥದಲ್ಲಿ ಚನ್ನಾಗಿ ಓದಿ ಆ ಸದ್ಗುರುವಿನ ವಿಷಯದಲ್ಲಿ ತಿಳುಕೊಂಡಿದ್ದ ಆತನ ಸಮಸ್ತ ಸುಗುಣಗಳ ಸಂಪೂರ್ಣತೆಯೂ ಅನ್ಯರನ್ನು ಕರುಣಿಸುವಂಥ ದಯಾಳುತ್ವವೂ ಪರೋಪಕಾರದ ಸುಶೀಲತೆಯೂ ಸನ್ಮಾರ್ಗ ಪ್ರವರ್ತನೆಯು ಆ ಪರೋಕ್ಷ ಬೋಧನೆಯೂ ಆ ಯೇಸು ಸ್ವಾಮಿಯಲ್ಲಿ ಮಾತ್ರ ಉಂಟೆಂದೂ ಆತನೇ ಸಮಸ್ತ ಮನುಷ್ಯರನ್ನು ರಕ್ಷಿಸುವದಕ್ಕಾಗಿ ನರಾವತಾರವನ್ನು ಎತ್ತಿದಂಥ ದೈವ ಗುರುವೆಂದೂ ನನ್ನ ಪೂರ್ಣ ಹೃದಯದಿಂದ ತಿಳಿದು ಆತನಲ್ಲಿ ವಿಶ್ವಾಸವಿಟ್ಟಿದ್ದೇನೆ. ಹ್ಯಾಗಂದರೆ ನನ್ನ ಕೈಲಾದ ಮಟ್ಟಿಗೂ ಹುಡುಕಿ ಕಂಡು ಕೇಳಿ ಪರೀಕ್ಷಿಸಿದಂಥ ನರಗುರುಗಳಲ್ಲಿಯೂ ನಾನು ಕಾಣದಂಥ ಗುರುಗಳೆನ್ನಿಸಿಕೊಂಡಿರುವ ನರರಲ್ಲಿಯೂ ಆ ಯೇಸುರಕ್ಷಕನೊಬ್ಬನೇ ದೈವ ಸಮ್ಮಂಥವಾದ ಸದ್ಗುರುವಲ್ಲದೆ ಅನ್ಯನು ಮತ್ತೊಬ್ಬರಿಲ್ಲವೆಂದು ಪಕ್ಷಪಾತದಿಂದಲ್ಲ, ಆತನ ಸ್ವಭಾವಕ್ಕೂ ನರರ ಸ್ವಭಾವಕ್ಕೂ ಇರುವ ವ್ಯತ್ಯಾಸವನ್ನು ಅನುಭವದಿಂದ ತಿಳಿದು ಸಾಕ್ಷಿಕೊಡುತ್ತೇನೆ. ಗುರು ಎಂಬ ನಿಜಸ್ವರೂಪವು ಕಪಟವೇಷದಿಂದ ಆಗುವಂಥಾದ್ದಲ್ಲ. ಮತ್ತು ನರರು ತಮ್ಮ ದುರ್ಗುಣಗಳನ್ನು ಮುಚ್ಚಿಕೊಂಡು ತೋರಿಸುವಂಥ ನಯವಿನಯಗಳಿಂದಲೂ ಕುಶಲತ್ವದ ಕಲ್ಪನೆಯ ವಾಕ್ಯಗಳಿಂದಲೂ ಆಗುವಂಥಾದ್ದೂ ಅಲ್ಲ, ಯಾಕಂದರೆ ಕಪಟವೇಷದ ಚಮತ್ಕಾರವು ಒಂದೊಂದು ಸಮಯಗಳಲ್ಲಿ ಬಹಿರಂಗವಾಗುವದರಿಂದ ಅಂಥಾ ಕಾಲಗಳಲ್ಲಿ ಅನೇಕರು ತಮ್ಮ ಗುರುತ್ವಕ್ಕೆ ನಾಚಿಕೆಪಟ್ಟು ಇದ್ದ ಸ್ಥಳದಲ್ಲಿ ಇರದೆ ದೇಶಭ್ರಷ್ಟರಾಗಿ ತಿರುಗುತ್ತಾ ಇರುವದು ಲೋಕಪ್ರಸಿದ್ಧಿಯಾಗಿದೆ. ಆದರೆ ನಿಜವಾದ ಗುರುತ್ವವೋ ಹಾಗಲ್ಲ. ಅದು ಆ ಸಾಕ್ಷಾತ್ ಭಗವಂತನ ಸ್ವರೂಪವೇ ಆಗಿರುವದರಿಂದ ಅಂಥಾ ಶ್ರೇಷ್ಠವಾದ ಗುರುನಾಮವನ್ನು ಸರ್ವರು ಎಷ್ಟೋ ಭಯಭಕ್ತಿಯಿಂದ ವಂದಿಸಿ ಸನ್ಮಾನಿಸುವವರಾಗಿದ್ದಾರೆ. ಹಾಗಾದರೆ ನರರು ಸನ್ಮಾನಿಸುವಂಥ ಆ ಭಗವಂತನ ಸ್ವರೂಪದಲ್ಲಿರುವ ಮಹಿಮೆಯುಳ್ಳ ಗುರುನಾಮವನ್ನು ನರರೇ ಧರಿಸಿಕೊಳ್ಳುವದಕ್ಕೆ ಯೋಗ್ಯರಾಗಿದ್ದಾರೆಂಬು ಯಾರಾದರೂ ಒಪ್ಪುಬಹುದೋ? ಇಲ್ಲವಲ್ಲ. ಯಾಕಂದರೆ ಸೃಷ್ಟಿ ಕರ್ತನು ಬೇರೆ, ಸೃಷ್ಟಿಗಳು ಬೇರೆ ಎಂಬ ನ್ಯಾಯವನ್ನು ನಾವು ಸ್ವಾಭಾವಿಕವಾಗಿ ಒಪ್ಪಿದರೆ ಸೃಷ್ಟಿ ಕರ್ತನು ರಕ್ಷಿಸುವವನಾಗಿಯೂ ಸೃಷ್ಟಿಗಳು ರಕ್ಷಿಸಲ್ಪಡುವವರಾಗಿಯೂ ಇದ್ದಾರೆಂಬುವದನ್ನು ಸಹ ನಾವು ಒಪ್ಪಬೇಕಲ್ಲ. ಹೌದು. ಹಾಗಾದರೆ ಸೃಷ್ಟಿ ಕರ್ತನಾದ ಆ ಭಗವಂತನ ನಿಜಸ್ವರೂಪದಲ್ಲಿರುವಂಥ ಗುರುನಾಮವು ಸೃಷ್ಟಿಗಳಿಗೆ ಸೇರಿದ್ದಾಗಿರದೆ ನಿತ್ಯನು ನಿರ್ಗುಣನು ನಿರ್ದೋಷಿಯು ಆಗಿರುವಂಥ ಆ ಯೇಸುಸ್ವಾಮಿಗೆ ಸೇರಿದ್ದಾಗಿದೆ ಎಂದು ಆತನ ಸ್ವಭಾವ ಚರಿತ್ರೆಗಳಿಂದ ನಾವು ತಿಳಿಯಬಹುದು. ಅವರೆ ಇದನ್ನು ಕುರಿತು ಆಲೋಚಿಸದಂಥ ಅನೇಕರು ನಾಶನಕ್ಕೆ ಗುರಿಯಾಗಿರುವವರು ಮೊದಲು ತಮ್ಮನ್ನು ತಾವು ರಕ್ಷಿಸಿಕೊಳ್ಳುವದಕ್ಕೆ ಶಕ್ತಿ ಇಲ್ಲದವರು ಆಗಿರುವಂಥ ನರರು ಗುರುಗಳೆನ್ನಿಸಿಕೊಂಡು ಮತ್ತೊಬ್ಬರನ್ನು ರಕ್ಷಿಸುವದಕ್ಕೆ ಎಷ್ಟರವರೆಂದು ಸಂದೇಹವಿಲ್ಲದೆ ಸ್ಥಾಪಿಸುತ್ತೇನೆ. ಯಾಕಂದರೆ ಸ್ತ್ರೀಯರಲ್ಲಿ ಹುಟ್ಟಿದಂಥ ನರರಲ್ಲಿ ನಾನು ಪರೀಕ್ಷಿಸಿ ನೋಡಿದ ಮಟ್ಟಿಗೂ ಆ ಯೇಸು ಕರ್ತನೊಬ್ಬನೇ ಜಗದ್ಗುರುವಾಗಿಯೂ ಸದ್ಗುರುವಾಗಿಯೂ ಲೋಕರಕ್ಷಕನಾಗಿಯೂ ಇದ್ದಾನೆಂದು ನಾನು ನಿಶ್ಚಯಿಸಿಕೊಂಡಿರುವದರಿಂದ ಆತನ ಪ್ರಶಂಸೆಯನ್ನು ಕುರಿತು ಅನ್ಯರ ಮುಂದೆ ಸಾಕ್ಷಿ ಕೊಡುವದಕ್ಕೆ ಭಯವೂ ನಾಚಿಕೆಯೂ ಇಲ್ಲದೆ ದೃಢವಾಗಿ ನಿಂತಿದ್ದೇನೆ. ಆದರೆ ನಾನು ಕ್ರಿಸ್ತನ ವಿಷಯದಲ್ಲಿ ಕೊಡುವಂಥಾ ಸಾಕ್ಷಿಯು ಕೇಳುವಂಥವರ ಕಲ್ಪನೆಯ ಬಾಯಿಗಳಿಗಲ್ಲ, ಅವರ ಮನಸ್ಸಾಕ್ಷಿಯನ್ನು ಹಿರಿದು ಒಪ್ಪಿಸುವಂಥ ಶಕ್ತಿಯನ್ನು ಆತನೇ ಕೊಟ್ಟಿದ್ದಾನೆಂದು ವಿಶ್ವಾಸಿಸಿದ್ದೇನೆ.

ಇದಲ್ಲದೆ ನನ್ನ ವಿಶ್ವಾಸವು ಕರ್ತನಲ್ಲಿ ಬಲಗೊಳ್ಳುತ್ತಾ ಬಂದ ಹಾಗೆಲ್ಲ ಒಂದು ಕೊರತೆಯು ಸಹ ನನ್ನಲ್ಲಿ ಬಲಗೊಳ್ಳುತ್ತಾ ಬರುವದನ್ನು ನೋಡುತ್ತೇನೆ. ಅದೇನಂದರೆ ನನ್ನ ಪಾಪದ ನಿಮಿತ್ತವಾಗಿ ಕ್ರಿಸ್ತನು ಪಟ್ಟಂಥ ಶ್ರಮೆಗಳಲ್ಲಿ ನಾನು ಸಹ ಪಾಲುಗಾರನಾಗಿರಬೇಕೆಂಬ ಅಪೇಕ್ಷೆಯಿಂದ ನನ್ನ ಕೈಲಾದ ಮಟ್ಟಿಗೂ ಕಷ್ಟಪಡುವವನಾಗಿದ್ದೇನೆ. ಆದಾಗ್ಯೂ ಅಂಥಾ ಕಷ್ಟದ ಫಲವು ನನಗೆ ಲಭ್ಯವಾಗದಂತೆ ಲೋಕವು ಪಾಪವು ಶರೀರದ ಇಚ್ಛೆಯೂ ನನ್ನ ಅಪೇಕ್ಷೆಗೆ ವಿರೋಧವಾಗಿ ಹೋರಾಡುವದರಿಂದ ಅವುಗಳ ನಿರ್ಬಂಧವಾದ ಸಂಕಟದಲ್ಲಿ ಬಿದ್ದು ರಾತ್ರಿ ಹಗಲು ದುಃಖಪಡುವವನಾಗಿದ್ದೇನೆ. ಆದರೆ ಈ ಪರಿತಾಪದಿಂದ ನನ್ನನ್ನು ಸದ್ಯಕ್ಕೆ ಬಿಡಿಸುವಂಥ ನನ್ನ ಅತ್ಯ ಸ್ನೇಹಿತನಾದ ಮರಣವೆಂಬ ಪ್ರಭುವು ಯಾವಾಗ ಬಂದು ನನ್ನ ಎದುರಿನಲ್ಲಿ ನಿಲ್ಲುವನೋ ಎಂತೂ ನಾನು ಉತ್ಸಾಹದಿಂದ ಯಾವಾಗ ಕರ್ತನ ಕಡೆಗೆ ಕೈಚಾಚಿ ಆತನ ಬಾಹುಗಳಿಂದ ಆತನ ಪಾದಗಳನ್ನು ತೊಳೆದು ಮುದ್ದಿಟ್ಟು ಸಂತೋಷಪಡುವೆನೋ ಎಂದೂ ಅಂಥಾ ಕಾಲವು ಯಾವಾಗ ಬರುವದೋ ಎಂದೂ ಅನಾಥ ಪಕ್ಷಿಯ ಹಾಗೆ ಹಂಬಲಿಸುತ್ತಾ, ನನ್ನ ಅಂತ್ಯವನ್ನು ಎದುರುನೋಡುತ್ತಾ ಇದ್ದೇನೆ. ಆದರೆ ಈ ನನ್ನ ಕೋರಿಕೆಯನ್ನು ದೇವರು ಆಶೀರ್ವದಿಸಿ ಸಹಾಯಮಾಡುತ್ತಾ ಬಂದರೆ, ನನ್ನ ನರಜನ್ಮಕ್ಕೆ ಹುಟ್ಟಿದ್ದಕ್ಕೆ ಸಾರ್ಥಕವಾಗುವದೆಂದು ನನ್ನ ಕೈಸ್ತತ್ವವು ಕಡೆಯ ಮಟ್ಟಿಗೆ ಸಂಪೂರ್ಣವಾಗುವದೆಂದು ನಿರೀಕ್ಷಿಸುತ್ತಾ ಇದ್ದೇನೆ. ಯಾಕಂದರೆ ಕ್ರಿಸ್ತ ಯೇಸುವಿನಲ್ಲಿ ಭಕ್ತಿಯಾಗಿ ಬದುಕ ಮನಸ್ಸುಳ್ಳವರೆಲ್ಲರೂ ಹಿಂಸೆಪಡುವರೆಂದು ಪೌಲನು ಹೇಳಿರುವ ಪ್ರಕಾರ ನಾನು ಭಕ್ತನೆಂದಾದರೂ ಅಥವ ಭಕ್ತರ ಸಮೀಪದಲ್ಲಿ ನಿಲ್ಲುವದಕ್ಕೆ ನಾನು ಯೋಗ್ಯನೆಂದಾದರೂ ನನ್ನನ್ನು ನಾನು ಹೊಗಳಿಕೊಳ್ಳುವದಿಲ್ಲ. ಆದರೆ ನಾನು ಕ್ರಿಸ್ತನ ಹೆಸರನ್ನು ಹೊಂದಿದ ಮಾತ್ರಕ್ಕೆ ಬಹಿರಂಗದಲ್ಲಿ ನನಗೆ ಅಂಥಾ ಹಿಂಸೆಗಳು ಇಲ್ಲದಿದ್ದಾಗ್ಯೂ ಅಂತರಂಗದಲ್ಲಿ ಮಾತ್ರ ಹ್ಯಾಗೋ ಲೋಕವು ನನ್ನನ್ನು ಬಹಳವಾಗಿ ಇರಿಸಿ ದುಃಖಪಡಿಸುವದರಿಂದ ಅದನ್ನು ತಾಳಲಾರದೆ, ಕರ್ತನೇ, ಯಾವಾಗ ನನ್ನನ್ನು ಕರುಣಿಸಿ ಈ ನಿರ್ಬಂಧವಾದ ಲೋಕದಿಂದ ನನ್ನನ್ನು ಬಿಡಿಸುತ್ತೀ! ಅಪ್ಪಾ, ಸ್ವಾಮಿ, ಎಂದು ಕಣ್ಣೀರಿನಿಂದ ಪ್ರಾರ್ಥಿಸುತ್ತಾ ಇದ್ದೇನೆ. ಇದೇ ನನ್ನ ಮನೋವ್ಯಾಕುಲ. ಇದಕ್ಕಿಂತ ಮೇಲಾದ ಸ್ಥಿತಿಯನ್ನು ನಾನು ಹೊಂದಲಿಲ್ಲ. ಯಾಕಂದರೆ ಅದು ಉಂಟೋ ಇಲ್ಲವೋ ನನ್ನ ಅನುಭವಕ್ಕೆ ಇನ್ನೂ ಗೊತ್ತೇ ಇಲ್ಲ. ಹಾಗಿದ್ದರೆ ದೇವರು ಅದನ್ನು ಸಹ ತನ್ನ ಆತ್ಮನಿಂದ ನನಗೆ ಪ್ರಕಟಮಾಡಲಿ! ಆಮೆನ್!!

---

## ಗತಿಸಿದ ಮೆ॥ ಟಿ. ನರಹರಿರಾವ್, ಎಂ. ಎಲ್. ಯವರು.

ಮೆ॥ ಟಿ. ನರಹರಿರಾಯರು ಕಳೆದ ಗುರುವಾರ ಬೆಳಿಗ್ಗೆ ೧೧ ಗಂಟೆ ಹೊತ್ತಿನಲ್ಲಿ ಬೆಂಗಳೂರು ಕೋಟೆಯಲ್ಲಿರುವ ಸ್ವಗೃಹದಲ್ಲಿ ಅನಿರೀಕ್ಷ್ಯವಾಗಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಆ ದಿನ ಬೆಳಿಗ್ಗೆ ಅವರು ಗಾಳಿಸವಾರಿ ಹೋಗಿಬಂದು ಕೂತು ಇದ್ದ ಹಾಗೇ ಯಾವ ರೋಗವೂ ಕಾಣಿಸಿಕೊಳ್ಳದೆ ಆಕಸ್ಮಿಕವಾಗಿ ಕಾಲವಾದರು.

ಮೆ॥ ಟಿ. ನರಹರಿರಾಯರು ೧೮೬೩ನೆ ಇಸವಿ ನೊವೆಂಬರ್ ೧೦ ರಲ್ಲಿ ಜನಿಸಿದರು. ಚಿಕ್ಕಂದಿನಲ್ಲೇ ಅವರು ವಿದ್ಯಾ ಸಂಪಾದನೆ ಮಾಡಿ ಬಿ. ಎಲ್., ಎಂ. ಎಲ್. ಎಂಬ ಪರೀಕ್ಷೆಗಳಲ್ಲೂ, ಮೈಸೂರು ಸರ್ಕಾರಿ ಪರೀಕ್ಷೆಗಳಲ್ಲೂ ಉತ್ತೀರ್ಣರಾಗಿ, ೧೮೭೩ನೆ ಇಸವಿ ಅಕ್ಟೋಬರ್ ೭ ರಲ್ಲಿ ಬೆಂಗಳೂರು ಮುನ್ಸಿಫ್ ಕೆಲಸಕ್ಕೆ ಬಂದರು. ತರುವಾಯ ೧೮೭೬ ನೆ ದಿಸೆಂಬರಿನಲ್ಲಿ ಚಿತ್ರದುರ್ಗದ ಅ. ಕಮಿಷನರೂ ಜುಡಿಷಲ್ ಅ. ಕಮಿಷನರೂ ಆದರು. ೧೮೭೯ ರಲ್ಲಿ ಚಿತ್ರದುರ್ಗದಿಂದ ಮೈಸೂರಿಗೆ ಸಬ್ ಜಡ್ಜಿ ಕೆಲಸಕ್ಕೆ ಬದಲಿ ಮಾಡಲ್ಪಟ್ಟು, ೧೮೮೩ನೆ ಮಾರ್ಚ ೨೮ರಲ್ಲಿ ಶಿವಮೊಗ್ಗ ಸೆಷನ್ಸ್ ಜಡ್ಜರಾಗಿ ನೇಮಿಸಲ್ಪಟ್ಟರು. ಅದೇ ಕೆಲಸದಮೇಲೆ ಅವರಿಗೆ ಮೈಸೂರಿಗೂ ಬೆಂಗಳೂರಿಗೂ ವರ್ಗವಾಯಿತು. ಕಳೆದ ೧೮೯೦ನೆ ಸೆಪ್ಟೆಂಬರ್‌ನಿಂದ ಬೆಂಗಳೂರಿನಲ್ಲೇ ಸೆಷನ್ಸ್ ಜಡ್ಜರಾಗಿದ್ದುಕೊಂಡು, ೧೮೯೮ನೆ ಇಸವಿ ಜುಲೈ ೫ ನೇ ತಾರೀಖಿನಲ್ಲಿ ಮೈಸೂರು ಛೀಫ್ ಕೋರ್ಟಿನಲ್ಲಿ ಜಡ್ಜಿಯ ಕೆಲಸಕ್ಕೆ ಬಡ್ತಿ ಹೊಂದಿದರು. ಅಲ್ಲಾಗಾಯಿತು ಕಳೆದ ೧೯೦೭ನೆ ಇಸವಿ ಮೇ ತಿಂಗಳ ತನಕ ಛೀಫ್ ಕೋರ್ಟ ಜಡ್ಜಿಗಳಾಗಿಯೇ ಇದ್ದುಕೊಂಡು, ಪೆನ್ಷನ ಮೇಲೆ ಕೆಲಸಬಿಟ್ಟರು. ಅವರಿಗೆ ಮರಣಕಾಲದಲ್ಲಿ ೫೭ ನೆ ವರುಷ ನಡೆಯುತ್ತಿತ್ತು.

ಅವರು ಸರ್ಕಾರಿ ಕೆಲಸಗಳನ್ನು ನಡಸುವದರಲ್ಲಿ ಯಾರ ಬಾಯಿಗೂ ಬಂದವರಲ್ಲ. ಅವರು ಕೊಟ್ಟ ಜಡ್ಜಮೆಂಟುಗಳು ಸರ್ವಸಮ್ಮತಗಳಾಗಿದ್ದುವು. ಸಾಹಸ, ವಿದ್ಯಾಸಾಮರ್ಥ್ಯ, ನ್ಯಾಯಪಕ್ಷಪಾತತೆ, ನಿಸ್ಪೃಹತೆ ಇವೇ ಮೊದಲಾದ ಸುಗುಣಗಳೇ ಅವರನ್ನು ದಿನೇ ದಿನೇ ಬಡ್ತಿಗೆ ತಂದವಲ್ಲದೆ ಲೇಟ್ ಮಹಾರಾಜರು, ಮಹಾರಾಣಿ ರೀಜಂಟರವರು, ಲೇಟ್ ದಿವಾನರವರು ಮೊದಲಾದವರಲ್ಲಿ ತುಂಬಾ ಗೌರವವನ್ನು ಸಂಪಾದಿಸಿಕೊಟ್ಟವು. ಇಂತಹ ದೊಡ್ಡ ಮನುಷ್ಯರು ಇನ್ನು ಕೆಲವು ಕಾಲ ವಿಶ್ರಾಂತಿ ಸುಖವನ್ನು ಅನುಭೋಗಿಸುವುದಕ್ಕೆ ಅವಕಾಶವಾಗಲಿಲ್ಲವಲ್ಲಾ ಎಂಬುದೊಂದೇ ಕೊರತೆಯಾಗಿದೆ.

ಅವರು ಕಾಲವಾದರೆಂಬ ವರ್ತಮಾನವು ಪ್ರಕಟವಾದಕೂಡಲೆ ನೂರಾರು ಪ್ರಜೆಗಳು ಅವರ ಮನೆಯ ಬಳಿ ಸೇರಿ ವ್ಯಸನಪಡಲಾರಂಭಿಸಿದರು. ಶವವನ್ನು ದಹನಮಾಡುವುದಕ್ಕೆ ಸಾಗಿಸಿದಾಗ ಮೆ॥ ಎ. ರಂಗಸ್ವಾಮಯ್ಯಂಗಾರ್ರು, ಮೆ॥ ಸಿ. ಶ್ರೀನಿವಾಸೈಯಂಗಾರ್ರು, ಮೆ॥ ಎಚ್. ವಿ. ನಂಜುಂಡಯ್ಯನವರೇ ಮೊದಲಾದ ಹತ್ತಾರು ಮಂದಿ ಉದ್ಯೋಗಸ್ಥರು ಹೋಗಿದ್ದರು. ಶ್ರೀಮನ್ ಮಹಾರಾಜರವರೂ, ಮಹಾರಾಣಿ ರೀಜಂಟರವರೂ, ದಿವಾನರವರೂ ತುಂಬಾ ವ್ಯಸನಪಟ್ಟು ಅವರ ಪುತ್ರರಿಗೆ ತಿಳಿಯಪಡಿಸಿದರು. ಆ ದಿನ ಮಧ್ಯಾಹ್ನ ಸಬ್ ಜಡ್ಜ ಕೋರ್ಟು, ಪ್ರಿನ್ಸಿಪಲ್ ಮತ್ತು ಅಡಿಷನಲ್ ಮುನ್ಸಿಫ್ ಕೋರ್ಟುಗಳು ಮುಚ್ಚಲ್ಪಟ್ಟವು. ಛೀಫ್ ಕೋರ್ಟಿನಲ್ಲಿ ಮೆ॥ ಎ. ರಂಗಸ್ವಾಮಯ್ಯಂಗಾರ್ರು, ಗತಿಸಿದ ನರಹರಿರಾಯರ ಜೀವಮಾನ ಚರಿತ್ರೆಯನ್ನು ಸಂಕ್ಷೇಪವಾಗಿ ತಿಳಿಸಿ ವ್ಯಸನಪಟ್ಟರು. ಗೌವರ್ನಮೆಂಟ್ ಅಡ್ವೊಕೇಟ್ ಮೆ॥ ರಾಮಸ್ವಾಮಿ ಐಯರವರು ವಕೀಲರ ಪಕ್ಷವಾಗಿ ಮಾತನಾಡಿ, ಸಕಲರೂ ವಿಷಾದಿಸುತ್ತಾರೆಂಬದಾಗಿ ಹೇಳಿದರು.

---

## ಮೈಸೂರು ಸರ್ಕಾರಿ ಹುಕುಮುಗಳು.

### ವಿಷಮಶೀತಜ್ವರಕ್ಕೆ ಪರಿಹಾರ.

ಮೈಸೂರು ಸಂಸ್ಥಾನಕ್ಕೆ ಸೇರಿದ ಮಲೆನಾಡು ಮುಂತಾದ ಪ್ರದೇಶಗಳಲ್ಲಿ ಜನರಿಗೆ ವಿಷಮಶೀತಜ್ವರ ಹಿಡಿಯುವದು ವಾಡಿಕೆಯಷ್ಟೆ. ಇದು ಸೊಳ್ಳೆ ಕಡಿಯೋಣದರಿಂದಲೇ ಉಂಟಾಗುವದೆಂತಲೂ, ಜನರು ಸೊಳ್ಳೆ ಪರದೆಗಳನ್ನು ಕಟ್ಟಿಕೊಂಡು ಮಲಗಬೇಕೆಂತಲೂ ತಿಳಿದುಬಂತು. ಮನೆಗಳ ಸುತ್ತುಮುತ್ತಿನಲ್ಲಿ ಕೊಳಕು ನೀರು ನಿಲ್ಲದಂತೆ ಚೊಕ್ಕಟವಾಗಿಟ್ಟುಕೊಳ್ಳಬೇಕು. ವಿಂತನೀರಿನ ಮೇಲೆ ಇರುವ ಹುಳುಗಳು ಸಾಯುವಂತೆ ಶೀಮೆಯೆಣ್ಣೆ ಹೊಯ್ಯುತ್ತಿರಬೇಕು. ಅಂಥಾ ಪ್ರದೇಶದಲ್ಲಿರತಕ್ಕವರು ಕಡೇ ಪಕ್ಷ ವಾರಕ್ಕೆ ೧೫ ಗ್ರೈನ್‌ನಷ್ಟು ಕ್ವಿನೈನ್ ಎಂಬ ವ್ಯಾಧಿ ಔಷಧವನ್ನು ಸೇವಿಸಬೇಕು ಎಂಬದೇ ರೀತಿಯಾಗಿ ರೆಸಿಡೆಂಟರಿಂದ ಮೈಸೂರು ಸರ್ಕಾರಕ್ಕೆ ಒಂದು ಕಾಗದ ಬಂದಿತು. ಸರ್ಕಾರದವರು ಅದನ್ನು ಸ್ಯಾನಿಟರಿ ಕಮಿಷನರವರಿಗೆ ಕಳುಹಿಸಿ, ಈ ಭಾಗದಲ್ಲಿ ಸೊಳ್ಳೆ ತೋರಿದರೂ ಕಾರ್ಯ ನಡಸಬೇಕೆಂತಲೂ, ಪ್ರಜೆಗಳಿಗೆಲ್ಲಾ ತಿಳಿಯಪಡಿಸಬೇಕೆಂತಲೂ ಹುಕುಂ ಮಾಡಿದ್ದಾರೆ.

********

### ಜಮಾಬಂದಿ ಲೆಕ್ಕಗಳು.

ಕಳೆದ ೧೯೦೩ನೆ ಏಪ್ರಿಲ್ ಆಖೈರಿನಲ್ಲಿ ಮೈಸೂರು ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ೧,೫೬,೫೨,೫೧೧ ರೂ. ರಾಜಸ್ವಾಯ ವಸೂಲಾಗಬೇಕಾಗಿತ್ತು. ಅದುವರೆಗೆ ಡಿಸ್ಟ್ರಿಕ್ಟುಗಳಲ್ಲೆಲ್ಲಾ ೧,೩೩,೪೫,೦೫೮ ರೂ. ವಸೂಲಾಗಿದೆ ಮತ್ತು ವಸೂಲಾಗದೆ ಬಾಕಿ ಉಳಿದಿರುವುದು ೨೨,೦೭,೪೫೩ ರೂ. ಬೆಂಗಳೂರು, ತುಂಕೂರು, ಮೈಸೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ನಿಂತಿರುವ ಬಾಕಿಗಳು ಹೆಚ್ಚಾಗಿರೋಣದರಿಂದ, ಸಾಲಾಖೈರಿನೊಳಗಾಗಿ ಆ ಡಿಸ್ಟ್ರಿಕ್ಟುಗಳ ಡೆಪ್ಟಿ ಕಮಿಷನರುಗಳು ಕೂಡಿದಮಟ್ಟಿಗೂ ಬಾಕಿಯನ್ನು ಕಡಿಮೆಮಾಡತಕ್ಕದ್ದಾಗಿದೆ.

| ಡಿಸ್ಟ್ರಿಕ್ಟು. | ವಸೂಲಿ ಹಣ. | ಜಮಾಬಂದಿ ರುವ ಹಣ. | ಬಾಕಿ. |
|---|---|---|---|
| ಬೆಂಗಳೂರು | 17,93,646 | 16,79,148 | 1,14,498 |
| ಕೋಲಾರ | 22,61,916 | 20,19,063 | 2,42,953 |
| ತುಂಕೂರು | 17,23,181 | 15,34,116 | 1,89,065 |
| ಮೈಸೂರು | 33,08,932 | 29,59,493 | 3,49,439 |
| ಹಾಸನ | 17,70,028 | 14,14,333 | 3,55,396 |
| ಶಿವಮೊಗ್ಗ | 23,51,399 | 19,65,453 | 4,23,946 |
| ಕಡೂರು | 12,32,521 | 8,28,899 | 4,03,622 |
| ಚಿತ್ರದುರ್ಗ | 10,92,588 | 9,44,255 | 1,48,333 |

********

### ರಾಮನಾಥಪುರದ ಶ್ರೀ ಅಗಸ್ತ್ಯೇಶ್ವರಸ್ವಾಮಿ ದೇವಸ್ಥಾನ.

ಅರಕಲಗೂಡು ತಾಲ್ಲೂಕು ರಾಮನಾಥಪುರದಲ್ಲಿರುವ ಶ್ರೀ ಅಗಸ್ತ್ಯೇಶ್ವರ ಸ್ವಾಮಿ ದೇವಸ್ಥಾನಕ್ಕೆ ಮಂಜರಾಬಾದು ತಾಲ್ಲೂಕು ಕೆಂಚಮ್ಮನ ಹೊಸಕೋಟೆ ಹೋಬಳಿಗೆ ಸೇರಿದ ಕಕ್ಕೆಹಳ್ಳಿ ಗ್ರಾಮವು ಪೂರ್ವದಲ್ಲಿ ಕಾಯಂಗುತ್ತಾ ಇನಾಂತಿಯಾಗಿತ್ತು. ಸರ್ಕಾರಕ್ಕೆ ಈ ಗ್ರಾಮದಿಂದ ಸಲ್ಲಬೇಕಾಗಿದ್ದ ಕಾಯಂಗುತ್ತಾ ಹಣವು ಹಲವು ವರುಷಗಳ ಕಾಲ ನಿಂತುಹೋಯಿತು. ರೂ. ೨೪೭೭—೯—೮ ಪೈ ಬಾಕಿ ಉಳಕೊಂಡಿತು. ಆಗ ೧೮೮೭ನೇ ಜುಲೈ ೧೧ ರಲ್ಲಿ ಸರ್ಕಾರದವರು ಆ ಗ್ರಾಮವನ್ನು ಸರ್ಕಾರಕ್ಕೆ ವಹಿಸಿಕೊಂಡು, ಬಾಕಿಯನ್ನು ಮಾಫ್‌ಮಾಡಿದರು. ಅದಕ್ಕೆ ಇದಕ್ಕೆ ಪ್ರತಿಯಾಗಿ ೧೮೮೭ನೇ ಇಸವಿಯಲ್ಲಿ ಗೌವರ್ನಮೆಂಟಿನವರು ವರುಷಕ್ಕೆ ೧೩ ರೂ. ನಂತೆ ದೇವಸ್ಥಾನಕ್ಕೆ ಕೊಡಬೇಕೆಂದು ಹುಕುಂ ಮಾಡಿದರು. ಅದರಿಂದ ದೇವಸ್ಥಾನದ ವರಮಾನವು ವರುಷಕ್ಕೆ ೧೪೭ ರೂ. ನಿಂದ ೧೫೫ ರೂ. ಆಯಿತು. ಈಚೆಗೆ ಆ ಗ್ರಾಮಕ್ಕೆ ಸರ್ವೆಸೆಟ್ಲು ಮಾಡಿದರು.

೧೮೯೮ ರಲ್ಲಿ ಹಾಸನದ ಡೆಪ್ಟಿ ಕಮಿಷನರು ಈ ಗ್ರಾಮದಲ್ಲಿ ಉತ್ಪತ್ತಿ ಆಗಿರುವ ಹಣದಲ್ಲಿ ಸರ್ಕಾರಕ್ಕೆ ಬರಬೇಕಾಗಿದ್ದುದನ್ನು ವಜಾಮಾಡಿಯೂ ಇನ್ನೂ ೧,೬೦೦ ರೂ. ಉಳಿದಿದೆ ಎಂತಲೂ, ದೇವಸ್ಥಾನವು ವಿಶೇಷವಾದುದು ಮತ್ತು ಪುರಾತನವಾದುದು ಎಂತಲೂ, ಆ ಗ್ರಾಮವನ್ನು ಮತ್ತೆ ದೇವಸ್ಥಾನಕ್ಕೆ ವಹಿಸಿಕೊಡುವುದು ಅನುಕೂಲವೆಂತಲೂ ಗೌವರ್ನಮೆಂಟಿಗೆ ಬರೆದರು. ೧೯೦೦ ನೇ ಇಸವಿಯಲ್ಲಿ ಗೌವರ್ನಮೆಂಟಿನವರು ಗ್ರಾಮವನ್ನು ಆ ದೇವಸ್ಥಾನಕ್ಕೆ ಬಿಟ್ಟುಕೊಡುವುದಕ್ಕಾಗುವುದಿಲ್ಲವೆಂತಾ ಹುಕುಂ ಮಾಡಿದರು. ಈಚೆಗೆ ಮತ್ತೆ ಡೆಪ್ಟಿ ಕಮಿಷನರು ೧೯೦೨ನೇ ಮಾರ್ಚಿಯಲ್ಲಿ ಗೌವರ್ನಮೆಂಟಿಗೆ ಮೇಲ್ಕಂಡಂತೆ ಶಿಫಾರಸು ಮಾಡಿದ್ದಲ್ಲದೆ ದೇವಸ್ಥಾನವು ಶಿಥಿಲವಾಗುತ್ತಾ ಬಂದಿದೆ, ಅದನ್ನು ರಿಪೇರಿ ಮಾಡಿಸುವುದಕ್ಕೆ ಹಣವಿಲ್ಲ ಎಂಬದಾಗಿ ಬರೆದರು.

ಮೊದಲು ಖಾತೆದಾರನು ಸರಿಯಾಗಿ ಗ್ರಾಮವನ್ನು ನೋಡಿಕೊಳ್ಳಲಿಲ್ಲವಾದುದರಿಂದ ಈ ಗ್ರಾಮವನ್ನು ಗೌವರ್ನಮೆಂಟಿನವರು ತಾವೇ ವಹಿಸಿಕೊಳ್ಳಬೇಕಾಯಿತು. ಇದರಿಂದ ದೇವಸ್ಥಾನಕ್ಕೆ ಉಂಟಾದ ನಷ್ಟದ ವಿಷಯದಲ್ಲಿ ಗೌವರ್ನಮೆಂಟಿನವರು ವಿಷಾದಿಸುತ್ತಾರೆ. ಸರ್ವೆಸೆಟ್ಲು ಆದಮೇಲೆ ಗ್ರಾಮದ ಹುಟ್ಟುವಳಿ ಜಾಸ್ತಿ ಆಯಿತು. ಆದರೂ ವರುಷಕ್ಕೆ ೧೩ ರೂಪಾಯಿನಂತೆಯೇ ಕೊಡುವುದು ಸರಿಯಾಗಿಲ್ಲ. ಈಗ ಕಾಯಂ ಗುತ್ತಿಗೆಯೂ, ೫೦ ರೂಪಾಯಿಯೂ ಹೋಗಲಾಗಿ ವರುಷ ೧ಕ್ಕೆ ೧೨೯ ರೂಪಾಯಿನಂತೆ ಗ್ರಾಮದ ಹುಟ್ಟುವಳಿ ಮಿಗುವುದು. ಈ ಕಾರಣಕ್ಕಾಗಿಯೂ, ದೇವಸ್ಥಾನವು ಪುರಾತನವಾದುದರಿಂದಲೂ ಅದಕ್ಕೆ ತಕ್ಕ ಪ್ರತಿಷ್ಠೆಯನ್ನು ಕೊಡಬೇಕೆಂಬದಾಗಿ ಗೌವರ್ನಮೆಂಟಿನವರು ತೀರ್ಮಾನಿಸಿರುತ್ತಾರೆ. ಗ್ರಾಮವನ್ನೇ ಮತ್ತೆ ದೇವಸ್ಥಾನಕ್ಕೆ ಬಿಟ್ಟುಕೊಡುವುದಕ್ಕಿಂತಲೂ ಅದರ ಹುಟ್ಟುವಳಿಯಲ್ಲಿ ಉಳಿಯುವಷ್ಟು ಹಣವನ್ನು ಅಂದರೆ ಸಾಲೀಯಾನಾ ೧೨೦ ರೂಪಾಯಿಯನ್ನು ಕೊಡುತ್ತಾ ಬರಬೇಕೆಂದು ಹುಕುಂ ಮಾಡುವೆವು. ಇದರಿಂದ ದೇವಸ್ಥಾನದ ತಸದೀಕು ೧೪೨+೧೩+೧೨೦ ಅಂತೂ ೨೭೫ ರೂ. ಆಗುವದು. ಈ ಜುಲೈ ಲಾಗಾಯಿತು ವರುಷಕ್ಕೆ ೨೭೫ ರೂ. ಗಳು ಈ ದೇವಸ್ಥಾನಕ್ಕೆ ಪಾವತಿ ಆಗುತ್ತಾ ಬರತಕ್ಕದ್ದು.

ದೇವಸ್ಥಾನವು ಶಿಥಿಲವಾಗಿದೆ ಎಂದು ತಿಳಿದುಬಂದಿರುವ ಹಾಗೆ ಕಳೆದ ೧೮೮೭ನೇ ಇಸವಿ ಲಾಗಾಯಿತು ಈ ಗ್ರಾಮದ ಹಣ ಎಷ್ಟು ಉಳಿದಿದೆ; ಮತ್ತು ಯಾವತರಹ ಕಾಮಗಾರಿ ಆಗಬೇಕಾಗಿದೆ ಎಂಬೀ ಸಂಗತಿಗಳನ್ನು ಡೆಪ್ಟಿ ಕಮಿಷನರು ಗೌವರ್ನಮೆಂಟಿನವರ ಸ್ಯಾಂಕ್ಷನ್ ಬಗ್ಗೆ ಜಾಗ್ರತೆಯಾಗಿ ತಿಳಿಸಬೇಕು.

ಈ ದೇವಸ್ಥಾನದ ಪಡಿತರದಿಪಾರಾಧನೆಯನ್ನು ಕ್ರಮವಾಗಿ ಗೌವರ್ನಮೆಂಟಿಗೆ ತಿಳಿಸಿದಲ್ಲಿ ಅವರು ಅದನ್ನು ಸ್ಯಾಂಕ್ಷನ್ ಮಾಡುವವರಾಗಿದ್ದಾರೆ.

## ಪ್ರಶ್ನೋತ್ತರಗಳು.

ಪ್ರ.—೨೫. ೬ ೧೯೦೩ನೇ ಪತ್ರಿಕೆಯಲ್ಲಿ ದರ್ಖಾಸ್ತ ಒಡುವಳಿದಾರರು ತಮ್ಮ ಜಮೀನಿನಲ್ಲಿರತಕ್ಕ ಗಂಧದ ಮರಗಳಿಗೆ ಯಾವ ವಿಧವಾದ ಅಪಾಯ ಉಂಟಾದರೂ ಸರ್ಕಾರಕ್ಕೆ ತಿಳಿಸಬೇಕೆಂಬ ರೂಲ್‌ಸನ್ನು ವಜಾಮಾಡಿದ್ದಾರೆಂದು ಪ್ರಕಟಿಸಿರುತ್ತೀರಿ. ಆದರೆ ಈಗ ಇಂಥಾ ಮರಗಳಿಗೆ ಅಪಾಯ ಉಂಟಾದರೆ ಯಾರು ಜವಾಬ್ದಾರರು? ಮತ್ತು ಈ ವಿಧಾಯಕದಿಂದ ಸರ್ಕಾರಕ್ಕೆ ನಷ್ಟವಲ್ಲವೇ? ಇಂಥಾದ್ದನ್ನು ಯಾತಕ್ಕೆ ತಪ್ಪಿಸಿದರು? ಈ ಸಂಗತಿಯನ್ನು ವಿಶದವಾಗಿ ತಿಳಿಸುವಿರೆಂದು ಅಪೇಕ್ಷಿಸುತ್ತೇನೆ.

ಉ.—ಜಮೀನುಗಳಲ್ಲಿರತಕ್ಕ ಗಂಧದ ಮರಗಳಿಗೆ ಅಪಾಯ ಉಂಟಾದ ಸಂಗತಿಯನ್ನು ಒಡುವಳಿದಾರರು ಸರ್ಕಾರಕ್ಕೆ ರಿಪೋರ್ಟು ಮಾಡಬೇಕೆಂಬ ನಿರ್ಬಂಧವನ್ನು ಮಾತ್ರ ಗೌವರ್ನಮೆಂಟಿನವರು ತಪ್ಪಿಸಿದರೇ ಹೊರತು ಅವುಗಳನ್ನು ಕಾಪಾಡತಕ್ಕ ಜವಾಬ್ದಾರಿಯು ಒಡುವಳಿದಾರರಿಗೇ ಸೇರಿದ್ದಾಗಿದೆ ಎಂತಲೂ, ಆ ಮರಗಳನ್ನು ಒಡುವಳಿದಾರರೇ ಕಾಪಾಡಬೇಕಾಗಿದೆ ಎಂತಲೂ ನಮಗೆ ತೋರುತ್ತಿದೆ.—ಎಡಿ.

*********

ಪ್ರ.—ಕೋಲಾರಕ್ಕೆ ಸೇರಿದ ಉರಿಗದ ಚಿನ್ನದ ಗಣಿಯಲ್ಲಿ ಉತ್ಪತ್ತಿಯಾಗುವ ಚಿನ್ನದಲ್ಲಿ ನಮ್ಮ ಸರ್ಕಾರದವರಿಗೆ ಸಲ್ಲತಕ್ಕ ಭಾಗವೆಷ್ಟು? ಇದರಲ್ಲಿ ಇಂಡಿಯಾ ಗೌವರ್ನಮೆಂಟಿಗೆ ಏನಾದರೂ ಒಂದು ಭಾಗ ಸೇರುತ್ತದೇ? ಇದರ ಕಾರ್ಯನಿರ್ವಾಹಕರಾರು?

ಉ.—ಗಣಿಗಳಲ್ಲಿ ಉತ್ಪತ್ತಿಯಾಗುವ ಚಿನ್ನದ ಒಟ್ಟು ಬೆಲೆಯಲ್ಲಿ ಶೇಕಡ ೫ ರಷ್ಟು ಹಣ ಮೈಸೂರು ಸರ್ಕಾರಕ್ಕೆ ಸಲ್ಲುವದು. ಇದರ ಮೇಲೆ ಹೊಸ ಕರಾರು ನಡೆದಿರುವ ಪ್ರಕಾರ ಗಣಿ ಕಂಪನಿಯವರಿಗೆ ಖರ್ಚು ಜಾತಾ ಉಳಿಯುವ ಹಣದಲ್ಲಿ (ಅಂದರೆ, ಷೇರುದಾರರಿಗೆ ವರುಷಕ್ಕೆ ಶೇಕಡ ೭ರಷ್ಟು ಬಿಟ್ಟು ಪಾವತಿ ಆಗಿ ಬಾಕಿ ಉಳಿಯುವ ಹಣವೇನಾದರೂ ಇದ್ದರೆ ಆ ಹಣದಲ್ಲಿ) ಶೇಕಡ ೫ ಯಷ್ಟು ಹಣವೂ ಮೈಸೂರು ಖಜಾನೆಗೆ ಸಲ್ಲುವದು. ಈ ಗಣಿಗಳ ಉತ್ಪತ್ತಿಯಲ್ಲಿ ಇಂಡಿಯಾ ಗೌವರ್ನಮೆಂಟಿಗೆ ಒಂದು ಕಾಸೂ ಸಲ್ಲುವದಿಲ್ಲ. ಚಿನ್ನ ಉತ್ಪತ್ತಿ ಮಾಡುವದಕ್ಕಾಗಿ ವಿಲಾಯಿತಿಯೊಳಗೆ ಸ್ಥಾಪಿಸಲ್ಪಟ್ಟಿರುವ ಕಂಪನಿಗಳವರೇ ತಮ್ಮ ಏಜಂಟರು ಮುಂತಾದ ಸಂಬಳಗಾರರ ಮೂಲಕ ಈ ಗಣಿಗಳಲ್ಲಿ ಕಾರ್ಯಗಳನ್ನು ನಡಿಸುತ್ತಾರೆ. ಗಣಿಗಳ ಆದಾಯವ್ಯಯಕ್ಕೂ ಕೆಲಸ ಕಾರ್ಯಗಳಿಗೂ ಕಂಪನಿಯವರೇ ಜವಾಬ್ದಾರರಲ್ಲದೆ ಮೈಸೂರು ಗೌವರ್ನಮೆಂಟಿನವರಿಗೆ ಯಾವ ಜವಾಬ್ದಾರಿಯೂ ಇರುವದಿಲ್ಲ.—ಎಡಿ.

*********

ಪ್ರ.—ಪ್ಯಾರಿಸ್ ನಗರದಲ್ಲಿ ಮನುಷ್ಯನ ತಲೇ ಕೂದಲನ್ನು ವಿಕ್ರಯಿಸುತ್ತಾರಷ್ಟೆ. ಇದರಿಂದ ಉಪಯೋಗವೇನು?

ಉ.—ಪ್ರೇತಗಳ ತಲೇ ಬುರುಡೆಯಿಂದ ಕೂದಲು ಕತ್ತರಿಸುತ್ತಾರೆನ್ನುವದನ್ನು ನಾವು ಕೇಳಿದ್ದಿಲ್ಲ. ಗಂಡಸರೂ ಹೆಂಗಸರೂ ಮಕ್ಕಳೂ ತಮ್ಮ ತಲೇ ಕೂದಲು ಅಪಾರವಾಗಿ ಬೆಳೆದಿದ್ದರೆ ಕೆಲವರು ಅದನ್ನು ಕತ್ತರಿಸಿಬಿಡುವದುಂಟು. ಈ ಕೂದಲನ್ನು ಹಿಂದುಸ್ಥಾನದಲ್ಲಿ ಹ್ಯಾಗೋ ಹಾಗೆಯೇ ಯೂರೋಪಿನ ರಾಜ್ಯಗಳಲ್ಲೂ ಹೆಂಗಸರೇ ಮುಂತಾದವರು ಜಡೆ ಮುಂತಾದ್ದನ್ನು ಹಾಕಿಕೊಂಡು ಅಲಂಕಾರ ಮಾಡಿಕೊಳ್ಳುವದಕ್ಕೆ ಉಪಯೋಗಿಸುವರು. ನಾಟಕಗಳಲ್ಲಿ ಬಣ್ಣವೇಷವೇ ಮೊದಲಾದ ವೇಷಗಳನ್ನು ಹಾಕಿಕೊಳ್ಳತಕ್ಕವರಿಗೂ ಈ ಕೂದಲು ನಾನಾ ರೂಪದಲ್ಲಿ ಉಪಯೋಗವಾಗಿದೆ.—ಎಡಿ.

## ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿನಲ್ಲಿ ಪ್ಲೇಗ್ ಉಪದ್ರ ಬಂದ ಲಾಗಾಯತು ಕೆಂಪು ಇರುವೆಗಳ ಹೆಸರೇ ತೋರದೇ ಹೋಯಿತು. ಅನೇಕ ಕೋಟಿ ಇರುವೆಗಳು ಲಯವಾದುವು.

****

ಕಳೆದ ವಾರ ಕ್ಷಾಮಪೀಡಿತರ ಸಂಖ್ಯೆಯು ಮಧ್ಯಪ್ರಾಂತ್ಯಗಳಲ್ಲಿ ೨೫,೮೩೬ಕ್ಕೆ ಇಳಿಯಿತು. ಈ ಸಂಖ್ಯೆಯು ಹೀಗೇ ದಿನೇ ದಿನೇ ಕಡಿಮೆಯಾಗುತ್ತಾ ಬಂದೀತೆಂದು ನಿರೀಕ್ಷಿಸಲ್ಪಟ್ಟಿದೆ.

****

ಹಿಂದುಸ್ಥಾನದಲ್ಲಿ ಈಗ ತಂತೀವರ್ತಮಾನ ಕೊಡುವ ಆಫೀಸುಗಳು ೫,೩೦೦ ಇರುತ್ತವೆ. ವರ್ತಮಾನ ಕೊಟ್ಟು ಕಳಿಸಿಕೊಳ್ಳುವದಕ್ಕೋಸ್ಕರ ಈಗ ೧,೬೦,೭೭೬ ಮೈಲುಗಳ ದೂರದಷ್ಟು ತಂತಿಗಳನ್ನು ಹಾಕಿರುವರು.

****

೧೯೦೨—೦೩ನೆ ಸಾಲಿನಲ್ಲಿ ಹಿಂದುಸ್ಥಾನಕ್ಕೆ ಪರರಾಜ್ಯಗಳಿಂದ ೧೦೪,೦೪,೩೬,೩೫೮ ರೂಪಾಯಿಗಳ ಸರಕು ಬಂತು; ಹಿಂದುಸ್ಥಾನದಿಂದ ಇತರ ಕಡೆಗಳಿಗೆ ೧೩೭,೬೨,೯೩,೭೫೬ ರೂಪಾಯಿಗಳ ಸರಕು ರವಾನೆಯಾಯಿತು.

****

ಬಂಗಾಳಾ ಕೊಲ್ಲಿಯ ಮಧ್ಯಭಾಗದಲ್ಲಿಂದ ಸೈಕ್ಲೋನ್ ಎಂಬ ಸುಳಿಗಾಳಿಯು ಪ್ರಾಪ್ತವಾಗುವಂತಿದೆ ಎಂತಲೂ, ಗೋಪಾಲಪುರದಿಂದ ಕಾಕಿನಾಡಾ ವರೆಗೂ ತೀರಪಟ್ಟಣಗಳಲ್ಲಿರತಕ್ಕವರು ಎಚ್ಚರಿಕೆಯಿಂದಿರಬೇಕೆಂತಲೂ ಸರ್ಕಾರದವರು ಪ್ರಕಟಿಸಿದ್ದಾರೆ.

****

ಹಿಂದುಸ್ಥಾನದ ಜನರು ಈಗ ನಟಾಲಿನಲ್ಲಿ ೬೨,೯೬೫ ಮಂದಿ ಇರುತ್ತಾರೆಂತಲೂ, ಇವರು ಕಳೆದ ೧೯೦೨ನೆ ಇಸ್ವಿಯಲ್ಲಿ ಹಿಂದುಸ್ಥಾನಕ್ಕೆ ತಮ್ಮ ನೆಂಟರಿಷ್ಟರಿಗೆ ೨೬ ಲಕ್ಷ ರೂಪಾಯಿಗಳನ್ನು ಮಣಿ ಆರ್ಡರು ಮೂಲಕ ಕಳುಹಿಸಿಕೊಟ್ಟರೆಂತಲೂ ಪ್ರಕಟವಾಗಿದೆ.

ಮದರಾಸ್ ಪಟ್ಟಣದ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಹತ್ತಿಕೊಂಡು ಹೋಗುತ್ತಿದ್ದ ಬೈಸಿಕಲ್ ಎಂಬ ರಬ್ಬರಿನ ಎರಡು ಚಕ್ರದ ಗಾಡಿಯನ್ನು ಒಬ್ಬ ಕಳ್ಳನು ಅಪಹರಿಸಿದನು. ಕಳೆದ ವಾರ ಪೋಲೀಸಿನವರು ಅವನನ್ನು ಪತ್ತೆಮಾಡಿ ತಂದರು. ಅವನಿಗೆ ೬ ತಿಂಗಳ ಸಜಾ ವಿಧಿಸಲ್ಪಟ್ಟಿತು.

****

ಗೋಕಾಯಿಗಳಿಗೆ ಬರುವ ಕಾಲುಬಾಯಿ ಜ್ವರಕ್ಕೆ ಸಿಲೋನ್ ದ್ವೀಪದಲ್ಲಿ ಕ್ವಿನೈನ್ ಎಂಬ ಜ್ವರದ ಪುಡಿಯನ್ನು ಸ್ವಲ್ಪ ಸಾರಾಯಿ ಮತ್ತು ಅಕ್ಕಿಗಂಜಿಯಲ್ಲಿ ಮಿಶ್ರಮಾಡಿ ಕೊಟ್ಟರೆ ಬೇಗನೆ ಗುಣವಾಗುವದೆಂದು ಒಬ್ಬ ವೈದ್ಯನು ಹೇಳುತ್ತಾನೆ. ಮತ್ತು ಹೀಗೆ ಅವನು ಅನೇಕ ಗೋಕಾಯಿಗಳನ್ನು ಬದುಕಿಸಿರುತ್ತಾನೆ.

****

ಕಳೆದ ವಾರ ಉತ್ತರ ಸರ್ಕಾರಗಳಲ್ಲಿ ಮಳೆಗಾಳಿ ವಿಪರೀತವಾಗಿ ಬೀಸಿ ಭೀಮುನಪಟ್ಟಣಕ್ಕೆ ೪ ಅಂಗುಲ ಮಳೆ ಬಂದಿತು. ಕಳೆದ ೧೧ನೆ ತಾರೀಖಿನಿಂದೀಚೆಗೆ ಅಲ್ಲಿ ೧೭ ಅಂಗುಲ ಪ್ರಮಾಣದಷ್ಟು ಮಳೆ ಸುರಿಯಿತೆಂತಲೂ, ಕಳೆದ ೧೮೯೫ನೆ ಇಸವಿಯಿಂದೀಚೆಗೆ ಇಷ್ಟು ಮಳೆ ಸುರಿದಿಲ್ಲವೆಂತಲೂ ಪ್ರಕಟವಾಗಿದೆ.

****

ಬೊಂಬಾಯಿನಲ್ಲಿ ಪ್ರಸಿದ್ಧ ಡಾಕ್ಟರಾಗಿದ್ದು ಕಾಲವಾದ ಇಸ್ಮಾಯಿಲ್ ಜಾನ್ ಮಹಮದ್ ಎಂಬವರ ಹೆಸರನ್ನು ಶಾಶ್ವತಪಡಿಸುವದಕ್ಕೋಸ್ಕರ ಅವರ ಕುಮಾರರು ೬,೦೦೦ ರೂಪಾಯಿಗಳನ್ನು ಬಡ್ಡಿಗೆ ಹಾಕಿ, ಅದರ ಉತ್ಪತ್ತಿಯ ಹಣವನ್ನು ವಿದ್ಯಾರ್ಥಿಗಳಿಗೆ ವೇತನ ಕೊಡುವದಕ್ಕೆ ವಿನಿಯೋಗಿಸಬೇಕೆಂದು ತೀರ್ಮಾನಿಸಿರುತ್ತಾರೆ.

****

ಪೀನಾಂಗ್ ನಗರದ ಮ್ಯುನಿಸಿಪಾಲಿಟಿಯಲ್ಲಿ ಮೊದಲನೇ ಗುಮಾಸ್ತೆಯಾಗಿರುವ ಪೀಟರ್ಸನ್ ಎಂಬವನ ಹೆಂಡತಿಯು ಈಗತಾನೇ ಕಾಲವಾದಳು. ಈಗ ಆತನು, ಅವಳು ಬಿಟ್ಟುಹೋಗಿರುವ ೨೭ ಮಕ್ಕಳನ್ನೂ ಸಾಕಬೇಕಾಗಿದೆ ಎಂತಲೂ, ಅವರಲ್ಲಿ ಕಡೇ ಮಗುವು ೫ ತಿಂಗಳಿನದೆಂತಲೂ ಅಲ್ಲಿನ ಪತ್ರಿಕೆಯು ತಿಳಿಸುತ್ತಿದೆ.

****

ಬಂಗಾಳಾ ನಿಮ್ನಪ್ರಾಂತ್ಯಗಳಿಗೆ ಸೇರಿದ ತಿರುಹೂತಿನಲ್ಲಿ ನೀಲಿ ಗಿಡಗಳನ್ನು ಪ್ಲಾಂಟರುಗಳು ವಿಪರೀತವಾಗಿ ಬೆಳೆಯುತ್ತಾರೆ. ಈ ತಿಂಗಳ ಮೊದಲನೇವಾರ ಚಿಟ್ಟೆಗಳು ಆ ಜಮೀನುಗಳ ಮೇಲೆ ಹಾರಾಡುತ್ತಾ ಸುಮಾರು ಒಂದು ಸಹಸ್ರ ಖಂಡೀ ಫಸಲನ್ನೆಲ್ಲಾ ತಿಂದು ನಾಶಮಾಡಿದವು. ಪ್ಲಾಂಟರುಗಳಿಗೆ ತುಂಬಾ ನಷ್ಟ ಸಂಭವಿಸಿದೆ.

****

ಬೊಂಬಾಯಿ ಪಟ್ಟಣದಲ್ಲಿ ಇಬ್ಬರು ಪೋಲೀಸಿನವರು ಪೊಲೀಸ್ ಠಾಣದಲ್ಲಿ ಮಲಗಿ ನಿದ್ದೆಹೋಗುತ್ತಿದ್ದದನ್ನು ಕೊಠಡಿಯಲ್ಲಿದ್ದ ಜವಾಬೀ ಎಂಬೊಬ್ಬ ಹುಡುಗಿ (ಕೈದಿ) ಯು ತಪ್ಪಿಸಿಕೊಂಡು ಹೋದಳು. ಆದುದರಿಂದ ಅವರಿಬ್ಬರಿಗೂ ಮ್ಯಾಜಿಸ್ಟ್ರೇಟರು ತಲಾ ೧೦೦ ರೂ. ಜುಲ್ಮಾನೆ ಅಥವಾ ಎರಡೆರಡು ತಿಂಗಳ ಸಾದಾ ಸಜಾ ಎಂಬೀ ಶಿಕ್ಷೆಯನ್ನು ವಿಧಿಸಿದರು.

****

ಧಾರವಾಡದಿಂದ ಸುಮಾರು ೨೦ ಮೈಲಿ ದೂರದಲ್ಲಿರುವ ಕ್ಯೇಮಗಲ್ಲೆಂಬ ಗ್ರಾಮದಲ್ಲಿ ಕಳೆದ ವಾರ ಒಂದು ದೊಡ್ಡ ಜಾತ್ರೆ ನಡೆಯಿತು. ಸ್ವಲ್ಪ ಹೆಚ್ಚುಕಡಿಮೆ ಎರಡು ಲಕ್ಷ ಪ್ರಜೆಗಳು ಕೂಡಿದ್ದರು. ಧಾರವಾಡ, ಗದಗು, ಹರಿಹರ, ಈ ಸ್ಥಳಗಳಿಂದ ಅಲ್ಲಿಗೆ ದಿನವೂ ನಾಲ್ಕಾರು ಸಲ ರೈಲ್‌ಗಾಡಿಗಳನ್ನು ಬಿಡುತ್ತಿದ್ದರು. ಹಂಗಾಮಿಯಾಗಿ ಒಂದು ಸ್ಟೇಷನ್ ಅಲ್ಲಿ ಏರ್ಪಾಡಾಗಿತ್ತು.

****

ಕಲ್ಕತ್ತಾ ಪಟ್ಟಣದಲ್ಲಿ ಹಿಂದೂ ವರ್ತಕರು ಕೂಡ ಭಾನುವಾರದದಿನ ಅಂಗಡಿಗಳನ್ನು ಮುಚ್ಚಿ ವ್ಯಾಪಾರ ನಿಲ್ಲಿಸಬೇಕೆಂದು ಪ್ರಯತ್ನಪಡುತ್ತಿದ್ದಾರೆ. ಕೆಲವು ಚಿಲ್ಲರೆ ಅಂಗಡಿಯವರು ಇದಕ್ಕೆ ಒಪ್ಪದೆ ಆ ದಿನ ವಿಶೇಷವಾಗಿ ವ್ಯಾಪಾರ ನಡೆಯುವದರಿಂದ ತಮ್ಮ ಅಂಗಡಿಗಳನ್ನು ಮುಚ್ಚುವದಿಲ್ಲವೆಂದು ಪ್ರತಿಭಟಿಸುತ್ತಿರುವರು. ಕಳೆದ ವಾರ ಈ ಎರಡು ಪಂಗಡದವರಿಗೂ ಜಗಳ ಹೊಡೆದಾಟಗಳು ನಡೆದಿರುತ್ತವೆ.

****

ಅಫ್ಘಾನಿಸ್ಥಾನದ ಅಮೀರ್ ಹಬೀಬುಲ್ಲಾಖಾನ್ ಯವರು ಬೇಸಿಗೆ ಕಳೆಯುವ ಉಬ್ಬಿಕ್ಯಾಬಾಗ್‌ಮರ್ಗ ಎಂಬ ಸ್ಥಳಕ್ಕೆ ದಯಮಾಡಿದ್ದವರು ಕಳೆದವಾರ ಅಲ್ಲಿಂದ ಕಾಬೂಲ್ ನಗರಕ್ಕೆ ಬಂದುಬಿಟ್ಟರು. ಕಾಬೂಲಿನಲ್ಲಿ ವಾಂತಿಭೇದಿ ಉಪದ್ರವಿರುವಂತೆ ಅನುಮಾನ ಕಂಡು ಬಂದಿರುವ ಕಾರಣ ಪಟ್ಟಣದ ಆರೋಗ್ಯವಿಚಾರವನ್ನು ಕ್ರಮಪಡಿಸುವ ಭಾಗದಲ್ಲಿ ಅಮೀರರು ಈಗ ತುಂಬಾ ಮುತುವರ್ಜಿಯನ್ನು ವಹಿಸಿದ್ದಾರೆ.

****

ಬೊಂಬಾಯಿ ಮ್ಯುನಿಸಿಪಲ್ ಅಧಿಕಾರಿಗಳು ಇನಾಮು ಕೊಟ್ಟು ಏಳುಲಕ್ಷ ಹೆಗ್ಗಣ ಇಲಿಗಳನ್ನು ಕೊಂದುಹಾಕಿಸಿದರು. ಹಡಗುಗಳಲ್ಲಿಯೂ ಸಮುದ್ರತೀರದ ಸರಕುಗಳ ಕೋಠಾರಗಳಲ್ಲಿಯೂ ಸಾವಿರಾರು ಹೆಣಗಳನ್ನು ಕೊಲ್ಲಿಸಿದ್ದಾರೆ. ಇತ್ತಲಾಗಿ ಸಿಲೋನ್ ದ್ವೀಪದ ಕೊಲಂಬೋ ನಗರದಲ್ಲಿ ಸರ್ಕಾರದವರು ೯,೦೦೦ ರೂಪಾಯಿ ಖರ್ಚುಮಾಡಿ ೧,೮೨,೦೦೦ ಹೆಗ್ಗಣ ಇಲಿಗಳನ್ನು ನಾಶಗೊಳಿಸಿದರು.

****

ಹಿಮಾಚಲ ಪರ್ವತದ ತಪ್ಪಲಲ್ಲಿರುವ ಚಿರಾಪುಂಜಿ ಎಂಬ ಊರಿನಲ್ಲಿ ಸುರಿವಷ್ಟು ಮಳೆಯು ಪ್ರಪಂಚದ ಇನ್ನಾವ ಭಾಗದಲ್ಲೂ ಸುರಿಯುವದಿಲ್ಲ. ಕಳೆದ ಜೂನ್ ಆಖೈರುವರೆಗೆ ಅಲ್ಲಿ ೧೭೩ ಅಂಗುಲ ಪ್ರಮಾಣದಷ್ಟು ಮಳೆಯೂ, ಜೂನ್ ೨೦ಕ್ಕೆ ಆಖೈರಾದ ಒಂದು ವಾರದಲ್ಲಿ ೪೯ ಅಂಗುಲ ಪ್ರಮಾಣದಷ್ಟು ಮಳೆಯೂ, ಅಲ್ಲಿಂದೀಚೆಗೆ ಒಂದೇ ದಿನದಲ್ಲಿ ೨೪ ಅಂಗುಲದಷ್ಟು ಮಳೆಯೂ ಸುರಿದಿರುವದೆಂದು ಸಮಾಚಾರ ಬಂದಿದೆ.

****

ಕೊಲ್ಹಾಪುರದ ಮಹಾರಾಜರವರಿಗೆ ಇದುವರೆಗೆ ಮಹಾರಾಜರ ಪದವಿಯು ನಾಮಮಾತ್ರಕ್ಕೆ ಇತ್ತು. ಈಚೆಗೆ ಬೊಂಬಾಯಿ ಗೌವರ್ನಮೆಂಟಿನವರು ಅವರಿಗೆ ರಾಜ್ಯಾಧಿಕಾರವನ್ನು ವಹಿಸಿಕೊಟ್ಟದ್ದಲ್ಲದೆ ಅವರ ಸಂಸ್ಥಾನಕ್ಕೊಳಪಟ್ಟ ಸಾಮಂತ ಪಾಳೆಯಗಾರರ ಮೇಲೆ ಸಂಪೂರ್ಣಾಧಿಕಾರ ನಡಸುವಂತೆ ಸನ್ನದನ್ನು ಪಾಲಿಸಿದರು. ಕಳೆದ ೧೮೬೨ನೆ ಇಸವಿ ಲಾಗಾಯತು ಈ ಅಧಿಕಾರವನ್ನು ಅಲ್ಲಿನ ರೆಸಿಡೆಂಟರೇ ನಡಸುತ್ತಾ ಬಂದಿದ್ದರು.

****

ಉತ್ತರದೇಶದಲ್ಲಿ ಕಳೆದ ವಾರ ಒಂದು ತರಹ ಉಷ್ಣವಾದ ಗಾಳಿಯು ಬೀಸಿತು. ಇದರ ದೆಸೆಯಿಂದ ಅದು ಬೀಸಿದ ಕಡೆಗಳಲ್ಲೆಲ್ಲಾ ತಂತೀವರ್ತಮಾನಗಳೇ ನಿಂತುಹೋಗಿದ್ದುವು. ಇತ್ತಲಾಗಿ ಪ್ಲೇಗ್ ಉಪದ್ರವು ತುಂಬಾ ಕಡಿಮೆಯಾಯಿತು. ಪಂಜಾಬಿನಲ್ಲಿ ೧೬೩ ಮಂದಿ ಮಾತ್ರ ಕಾಲವಾದರು. ಬೊಂಬಾಯಿನಲ್ಲಾದರೋ ೧,೦೩೭ ಜನರು ಆ ರೋಗದಲ್ಲಿ ಸತ್ತರು. ಅಂತು ಹಿಂದುಸ್ಥಾನದಲ್ಲೆಲ್ಲಾ ಒಟ್ಟು ೧,೫೬೩ ಜನರು ತೀರಿಹೋಗಿದ್ದಾರೆ.

****

ಹೈದರಾಬಾದಿನ ನೈಜಾಮರವರ ವರ್ಷದ ವರ್ಧಂತಿ ಉತ್ಸವವು ಕಳೆದ ತಿಂಗಳಲ್ಲಿ ನಡೆಯಿತು. ಆಗ್ಯೆ ಮಂತ್ರಿ ಪದವಿಯ ಮಹಾರಾಜಾ ಕೃಷ್ಣಪ್ರಸಾದರವರು ಅಶ್ವಾರೂಢರಾಗಿ ನೈಜಾಮರ ಸಂಗಡ ಉತ್ಸವದಲ್ಲಿ ಹೋಗುತ್ತಿದ್ದಾಗ್ಯೆ ಅವರ ಕುದುರೆ ಬೆದರಿ ಮಹಾರಾಜರನ್ನು ಕೆಡವಿಬಿಟ್ಟಿತು. ಅವರಿಗೆ ಸ್ವಲ್ಪ ಗಾಯವಾಗಿ ೧೦—೧೫ ದಿವಸಗಳವರೆಗೆ ಅವರು ಹೊರಕ್ಕೆ ಹೊರಡುವದು ಅಸಾಧ್ಯವಾಗಿದ್ದು ಈಗ ಸುಖವಾಗಿದ್ದಾರೆಂದು ಸಮಾಚಾರಬಂದಿದೆ.

****

ಕರಾಚಿ ಪಟ್ಟಣದ ಡೆಪ್ಯುಟಿ ಕಮಿಷನರಾದ ಮಿ॥ ಮೆಕೆಂಜಿಯವರಿಂದ ಮೊಖ್ತಿಯಾರ್ಕಾರ್ ಎಂಬ ನೌಕರಿಯನ್ನು ಮಾಡಿಕೊಳ್ಳಬೇಕೆಂದು ಅವರ ಹೆಡ್ ಮುನ್ಷಿ ಷಾ ಮಹಮದ್ ಎಂಬವನು ಒಂದು ಅರ್ಜಿಬರೆದು ಅದರಲ್ಲಿ ೨೦೦ ರೂಪಾಯಿನ ಕರೆನ್ಸಿ ನೋಟುಗಳನ್ನು ಇಟ್ಟು ಕೊಟ್ಟನು. ಹೀಗೆ ಅವನು ಲಂಚಕೊಡುವದಕ್ಕೆ ಬಂದನೆಂದು ಆ ಸಾಹೇಬರು ಮೇಲಕ್ಕೆ ತಿಳಿಸಿ, ಅವನ ಮೇಲೆ ಮೊಕದ್ದಮೆ ಮಾಡುವಂತೆ ಅಪ್ಪಣೆ ಪಡೆದುಕೊಂಡಿದ್ದಾರೆ.

****

ಹಿಂದುಸ್ಥಾನದ ಹುದ್ದೇದಾರರು ಬ್ರಿಟಿಷ್ ರಾಜ್ಯದ ಪ್ರತಿನಿಧಿಗಳ ಸಂಗಡ ಕಲೆತು, ವ್ಯಾಪಾರ ಸರಕುಗಳು ಹಿಂದುಸ್ಥಾನಕ್ಕೂ ಟಿಬೆಟ್ಟಿಗೂ ಹೋಗಿಬರತಕ್ಕ ವಿಚಾರದಲ್ಲಿ ಸಾತಾವಾರಿ ಗೊತ್ತುಮಾಡುವಂತೆ ಏರ್ಪಾಡಾಗಿದೆ. ಇಂಡಿಯಾ ಗೌವರ್ನಮೆಂಟಿನ ಪ್ರತಿನಿಧಿಗಳು ಅಂಗರಕ್ಷಕರಸಹಿತ ಈಗ ಹೋಗಿ ಗಯಾ ಗಂಗೆ ಎಂಬ ಸ್ಥಳವನ್ನು ತಲಪಿದರು. ಟಿಬೆಟ್ಟಿನ ಪ್ರತಿನಿಧಿಗಳನ್ನು ಅಲ್ಲಿ ಎದುರುನೋಡುತ್ತಿದ್ದಾರೆ. ಆ ಸ್ಥಳವು ಸಮುದ್ರಮಟ್ಟಕ್ಕಿಂತ ೧೫—೧೬ ಸಾವಿರ ಅಡಿ ಎತ್ತರದಲ್ಲಿದೆ.

****

ಬರ್ಮಾ ದೇಶಕ್ಕೆ ಸೇರಿದ ಯೊಂಡೂರ್ ಎಂಬ ಊರಿನ ಸುಂದಾಸನೆಂಬೊಬ್ಬನು ಸುಮಾರು ಹತ್ತು ವರ್ಷಗಳೊಳಗೆ ಮ್ಯುನಿಸಿಪಲ್ ಸೆಕ್ರೆಟರಿಯಾಗಿದ್ದನು. ಆಗ್ಯೆ ಅವನು ಸರ್ಕಾರದ ಹಣದಲ್ಲಿ ಸುಮಾರು ೮,೦೦೦ ರೂಪಾಯಿಗಳನ್ನು ತಿಂದುಹಾಕಿ, ತಲೆತಪ್ಪಿಸಿಕೊಂಡನು. ಇದುವರೆಗೆ ಅವನು ಸಿಕ್ಕದೆ ಸಯಾಂ ರಾಜ್ಯದಲ್ಲಿದ್ದನು. ಕಳೆದ ವಾರ ಅವನು ಅದೇನೋ ಒಂದು ಕೆಲಸದ ನಿಮಿತ್ತವಾಗಿ ರಂಗೂನ್ ನಗರಕ್ಕೆ ಬಂದಿರುವಲ್ಲಿ ಪೋಲೀಸಿನವರು ಅವನ ಚಹರೆಯನ್ನು ನೋಡಿ, ಮೋಸಗಾರನು ಅವನೇ ಸರಿ ಎಂದು ನಿರ್ಧರಿಸಿ ದಸ್ತಗಿರಿ ಮಾಡಿರುತ್ತಾರೆ.

****

ವೈಸರಾಯಿ ಪ್ರಭುಗಳು ಇಷ್ಟರಲ್ಲೇ ಕಾಶ್ಮೀರ ಸಂಸ್ಥಾನಕ್ಕೆ ದಯಮಾಡುವವರಾಗಿದ್ದಾರಷ್ಟೆ. ಅವರು ದಯಮಾಡುವದು ಆ ಸಂಸ್ಥಾನವನ್ನು ಕಾಂಪನೀ ಸೀಮೆಗೆ ಸೇರಿಸಿಕೊಳ್ಳುವದಕ್ಕಾಗಿಯೆ ಎಂತಲೂ, ಅವರು ಹೈದರಾಬಾದಿನಲ್ಲಿ ಮಾಡಿದಂತೆ ಮಹಾರಾಜರ ಅಧಿಕಾರವನ್ನು ಕಾಶ್ಮೀರಕ್ಕೆ ತಪ್ಪಿಸುತ್ತಾರೆಂತಲೂ ಹಿಂದುಸ್ಥಾನದ ದೇಶೀಯ ವರ್ತಮಾನ ಪತ್ರಿಕೆಗಳು ಕೂಗುತ್ತಿವೆ. ಈ ಸಂಗತಿಯನ್ನು ಗೌವರ್ನಮೆಂಟಿನವರು ಕೇಳಿ ಅದೆಲ್ಲಾ ಸುಳ್ಳೆಂತಲೂ, ಅಂಥಾ ಮಾತನ್ನು ಯಾರೂ ನಂಬಕೂಡದೆಂತಲೂ, ಕಾಶ್ಮೀರ ಸಂಸ್ಥಾನವನ್ನು ಇಂಗ್ಲಿಷರು ಸೇರಿಸಿಕೊಳ್ಳಬೇಕೆನ್ನುವದರಲ್ಲಿ ಸ್ವಲ್ಪವೂ ಇಷ್ಟವಿಲ್ಲವೆಂತಲೂ ತಿಳಿಸಿರುತ್ತಾರೆ.

****

ವಿಲಾಯಿತಿ ಗೌವರ್ನಮೆಂಟಿನವರು ಹಿಂದುಸ್ಥಾನದಲ್ಲಿರುವ ಇಂಗ್ಲಿಷ್ ಸೈನಿಕರ ಸಂಬಳವನ್ನು ೧೯೦೨ನೆ ಏಪ್ರಿಲ್ ೧ ರಿಂದ ದಿನಂಕ್ಕೆ ೨ ಆಣೆಯಂತೆಯೂ, ೧೯೦೪ನೆ ಏಪ್ರಿಲ್ ೧ ಲಾಗಾಯತು ದಿನಂಕ್ಕೆ ೬ ಆಣೆಯಂತೆಯೂ ಜಾಸ್ತಿ ಮಾಡಿರುತ್ತಾರೆ. ಇದರಿಂದ ಇಂಡಿಯಾ ಸರ್ಕಾರದವರು ಇದಕ್ಕಾಗಿ ೧೯೦೨—೦೩ ರಲ್ಲಿ ೨,೨೬,೦೦೦ ಪೌಂಡನ್ನೂ, ೧೯೦೩—೦೪ ರಲ್ಲಿ ೨,೦೪,೮೦೦ ಪೌಂಡನ್ನೂ, ಅಲ್ಲಿಂದಾಚೆಗೆ ಪ್ರತಿವರುಷವೂ ೫,೬೦,೦೦೦ ಪೌಂಡನ್ನೂ ಈಗ ಖರ್ಚುಮಾಡುವದಕ್ಕೋಸ್ಕರ ಹೆಚ್ಚಾಗಿ ಒದಗಿಸಬೇಕಾಗಿದೆ. ಈ ಹಣವೆಲ್ಲಾ ಹಿಂದುಸ್ಥಾನದ ಖಜಾನೆಯಿಂದಲೇ ಕೊಡಬೇಕೇ ಹೊರತು, ಒಂದಂಶವನ್ನಾದರೂ ವಿಲಾಯಿತಿ ಖಜಾನೆಯವರು ಕೊಡುವ [illegible]

ಪಂಜಾಬ್ ಸೀಮೆಯಲ್ಲಿ ರೆವೆನ್ಯೂ ಇಲಾಖೆಗೆ ಅಸಿಸ್ಟೆಂಟ್ ಕಮಿಷನರುಗಳನ್ನು ನೇಮಿಸಿಕೊಳ್ಳುವರು. ಇವರನ್ನು ಮೊದಲು ಕೋರ್ಟುಗಳಿಗೆ ನೇಮಿಸಿ, ಆರು ತಿಂಗಳ ತನಕ ಅವರು ಸಿವಿಲ್ ಮೊಕದ್ದಮೆಗಳನ್ನು ಪರ್ಯಾಲೋಚನೆ ಮಾಡಿ ತೀರ್ಮಾನ ಹೇಳುತ್ತಿರುವಂತೆ ಮಾಡುತ್ತಾರೆ. ಆರು ತಿಂಗಳಲ್ಲಿ ಅವರು ಫೈಸಲ್ ಮಾಡಿದ ಮೊಕದ್ದಮೆಗಳ ಕಟ್ಟುಗಳನ್ನೆಲ್ಲಾ ಹೈಕೋರ್ಟ್ ಜಡ್ಜಿಗಳು ತನಿಖೆ ಮಾಡಿ, ಅವರು ತೀರ್ಮಾನ ಮಾಡಿರುವದು ನ್ಯಾಯಬದ್ಧವಾಗಿರುವದೇ ಇಲ್ಲವೇ ಎಂಬ ವಿಷಯದಲ್ಲಿ ಗೌವರ್ನಮೆಂಟಿಗೆ ರಿಪೋರ್ಟ್ ಮಾಡುತ್ತಾರೆ. ಈ ಅಸಿಸ್ಟೆಂಟ್ ಕಮಿಷನರುಗಳು ಸಿವಿಲ್ ಮೊಕದ್ದಮೆಗಳನ್ನು ತೀರ್ಮಾನ ಮಾಡುವದರಲ್ಲಿ ಸಮರ್ಥರೆಂಬ ಸರ್ಟಿಫಿಕೇಟನ್ನು ಪಡೆಕೊಂಡರೆ ಅಂಥವರನ್ನು ಆ ತರುವಾಯ ರೆವೆನ್ಯೂ ಇಲಾಖೆಗೆ ವರ್ಗಮಾಡುವರು. ಈ ಪದ್ಧತಿಯು ಮುಂದಿನ ಸಾಲಿನಿಂದ ಆ ಪ್ರಾಂತ್ಯ ಜಾರಿಯಲ್ಲಿ ಬರತಕ್ಕದೆಂದು ಗೌವರ್ನಮೆಂಟಿನವರು ಹುಕುಂ ಮಾಡಿದ್ದಾರೆ. ಇದು ತುಂಬಾ ಅನುಕೂಲವಾದ ಏರ್ಪಾಡೆನ್ನುವದಕ್ಕೆ ಸಂಶಯವಿಲ್ಲ.

## ಮತವಿಷಯವಾದ ಪ್ರಶ್ನೋತ್ತರಗಳು.

ಮಹಮ್ಮದೀಯಮತವೂ, ವಿಗ್ರಹಾರಾಧನೆಯೂ.

ಮಹಮ್ಮದೀ ಶಾಸ್ತ್ರದಲ್ಲಿ ವಿಗ್ರಹಾರಾಧನೆಯು ದೈವದ್ರೋಹವಾಗಿಯೂ ನರಕಾಗ್ನಿಯಲ್ಲಿ ಮುಳುಗಿಸತಕ್ಕದ್ದಾಗಿಯೂ ಇದೆ. ಮೊಹರಂ ಹಬ್ಬದಲ್ಲಿ ಪಂಜಾಗಳನ್ನು ಇಟ್ಟುಕೊಂಡು ಪೂಜಿಸುವದು ವಿಗ್ರಹಾರಾಧನೆಯೇ ಸರಿ. ಇದು ವಿದ್ಯಾವಿಹೀನರಲ್ಲಿಯೂ ಗ್ರಾಮ್ಯಜನರಲ್ಲಿಯೂ ಹಿಂದೂಜನರ ಸಹವಾಸದ ದೆಸೆಯಿಂದ ಈ ಹಿಂದುಸ್ಥಾನದಲ್ಲಿ ಮಾತ್ರ ಇದೆಯೇ ಹೊರ್ತು ಮತ್ಯಾವ ಪ್ರದೇಶದಲ್ಲಿಯೂ ಇಲ್ಲ. ವಿಗ್ರಹಾರಾಧನೆಯು ರೌರವ ನರಕಾಗ್ನಿಯಲ್ಲಿ ಮುಳುಗಿಸತಕ್ಕದ್ದೆಂದು ಮಹಮ್ಮದೀ ಶಾಸ್ತ್ರದಲ್ಲಿ ಖಂಡಿತವಾಗಿ ಹೇಳುತ್ತದೆ.

ಬಡೇಸಾಬಿ.

❖❖❖❖❖❖❖❖❖

ಪ್ರಶ್ನೆ.—ಮೈಸೂರು ಸೀಮೆಯಲ್ಲಿ ವಾಸವಾಗಿರತಕ್ಕ ಯುರೋಪಿಯನ್ ಜನಗಳಿಗೂ ಮತ್ತು ನೇಟಿವ್ ಕ್ರೈಸ್ತರಿಗೂ ಈ ಸೀಮೆಯ ಹಿಂದು ಕ್ಷೌರಿಕರು ಕ್ಷೌರವನ್ನು ಮಾಡುವದೂ, ಅಗಸರು ಮೇಲ್ಕಂಡ ಜನಗಳ ಉಡುಪುಗಳನ್ನು ಒಗೆಯುವದೂ ಪದ್ಧತಿ ಉಂಟೇ? ಅಥವಾ ಇಲ್ಲವೇ? ಯಥಾರ್ಥ ಅಂಶವನ್ನು ತಿಳಿಸಬೇಕೆಂಬದಾಗಿ ಅಪೇಕ್ಷಿಸುತ್ತೇನೆ.

ಉತ್ತರ.—ಎಲ್ಲಾ ಊರುಗಳಲ್ಲಿ ಈ ಕಸಬಿನವರು ಇಟ್ಟುಕೊಂಡಿರುವ ಆಚರಣೆಯನ್ನು ನೋಡುವದರಿಂದಲೇ ಈ ಪ್ರಶ್ನೆಗಳಿಗೆ ಸಮಾಧಾನ ತೋರುವದು. ಇದರಲ್ಲಿ ನಮಗೆ ವ್ಯಂಗ್ಯವೇನೂ ಕಾಣಬರುವದಿಲ್ಲ.—ಎಡಿ.

❖❖❖❖❖❖❖❖❖

ಪ್ರ.—ಮೈಸೂರು ಸಂಸ್ಥಾನದಲ್ಲಿ ಯಾವನಾದರೂ ಕ್ರೈಸ್ತನಾದರೆ ಅವನು ತನ್ನ ಸ್ವತ್ತನ್ನು ಕಳೆದುಕೊಳ್ಳುತ್ತಾನೆಂತಾ (Famous Christians of Early Times) ಎಂಬ ಪುಸ್ತಕದ ೧೦೪ನೆ ಪೇಜು ೬ನೆ ಕಾಲಂನ ಅಂತ್ಯಭಾಗದಲ್ಲಿದೆ. ಇದು ನಿಜ್ಜವೇ? ಹಾಗಾದರೆ ಗೌವರ್ನಮೆಂಟಿನವರು ಈ ವಿಷಯದಲ್ಲಿ ಇಂಥಾ ಅನ್ಯಾಯಮಾಡುವದು ಅಧರ್ಮವಲ್ಲವೇ? ಮನುಷ್ಯನು ತನ್ನ ಇಹಪರ ಪ್ರಾಪ್ತಿಗಾಗಿ ಕ್ರೈಸ್ತನಾಗ್ಯೂ ಸಹ, ಗತಿ ಸಂಪಾದಿಸಿಕೊಳ್ಳಬೇಕಾದದ್ದನ್ನು ಸರ್ಕಾರದವರು ತಪ್ಪಿಸುವದು ಅಧರ್ಮವಲ್ಲವೇ? ಇದನ್ನು ತಿಳಿಸಬೇಕು.

ವಿಶ್ವಾಸ.

ಉ.—ಮೈಸೂರು ಛೀಫ್ ಕೋರ್ಟಿನಲ್ಲಿ ಜಡ್ಜಿಗಳು ಮಾಡಿರುವ ಆಖೈರ್ ತೀರ್ಮಾನದ ಪ್ರಕಾರ ಮೈಸೂರು ಸಂಸ್ಥಾನದಲ್ಲಿ ಯಾವನಾದರೂ ಅನ್ಯಮತವನ್ನು ಕೈಕೊಂಡ ಪಕ್ಷದಲ್ಲಿ ಅವನಿಗೆ ಪಿತ್ರಾರ್ಜಿತವಾದ ಆಸ್ತಿಯು ದೊರಕುವದಿಲ್ಲ. ಮತ್ತು ಅಂಥವನಿಗೆ ಮಕ್ಕಳೇನಾದರೂ ಆಗಿದ್ದರೆ ಆ ಮಕ್ಕಳ ಪೋಷಣೆ ಮುಂತಾದ್ದು ಅವನಿಗೆ ದೊರಕಬಾರದು. ಹೀಗೆ ಅವನಿಗೆ ಕಷ್ಟಗಳುಂಟಾಗುವವು.—ಎಡಿ.

❖❖❖❖❖❖❖❖❖

ಪ್ರ.—ಕ್ರೈಸ್ತಮತದವರೇ, ಪ್ರಮಾಣ ಶಿರೋಮಣಿಗಳಾಗಿಯೂ ಮುತ್ತಾಯ ಪ್ರಮುಖರಾಗಿಯೂ ಇರುವ ಮಹಮ್ಮದ್ ರಸೂಲುಲ್ಲಾ ಸಾಹೇಬರು ಸಲ್ಲದ ಎಷ್ಟು ವಾಕ್ಯಗಳನ್ನು ಖುರಾನಿನಲ್ಲಿ ಯಾವಕಡೆ ಯಾವಭಾಗದಲ್ಲಿ ಬರದದ್ದನ್ನು ನೋಡಿದ್ದೀರಿ? ಮತ್ತು ಗುಡ್ಡವನ್ನು ಹತ್ತಿರಕ್ಕೆ ಕರೆದದ್ದೂ, ಗುಡ್ಡವು ಹತ್ತಿರಕ್ಕೆ ಬಾರದೆ ಇದ್ದದ್ದು, ಇದನ್ನು ಹಾಸ್ಯಮಾಡಿದರೆ ಅವನು ಮುಸಲ್ಮಾನನಲ್ಲವೆಂದೂ ಯಾವಪುಸ್ತಕದಲ್ಲಿ ಬರದಿದೆ ನಿಮಗೆ ಯಾವರೀತಿ ತಿಳಿಯಿತು? ಎಂಬುವ ಈ ವಿಷಯಗಳನ್ನು ಈ ವೃತ್ತಾಂತಪತ್ರಿಕೆ ಮುಖಾಂತರ ತಿಳಿಸಬೇಕಾದ್ದನ್ನು ಸೂಚಿಸಿದ್ದೇನೆ.

ಬಡೇಸಾಬಿ, ಜಗಳೂರು.

❖❖❖❖❖❖❖❖❖

ಪ್ರ.—"ಮೂರ್ತಿಪೂಜಾ" ವಿಷಯಕವಾದ ಪ್ರಶ್ನೆಗೆ ದಯತಾವು "ಮರ ಕಲ್ಲು ಮೊದಲಾದ ಜಡಪದಾರ್ಥಗಳನ್ನು ದೇವರೇ ಎಂದು ಪೂಜಿಸುವ ಜನರು ಈ ದೇಶದಲ್ಲಿ ಸಾವಿರಗಟ್ಲೆ ಇದ್ದಾರೆ" ಎಂದು ತಾವು ಉತ್ತರ ಬರೆದಿರುತ್ತೀರಿ. ತಮ್ಮ ಅಭಿಪ್ರಾಯವು ಹಿಂದುಗಳ ಆಚಾರಕ್ಕೂ, ಅನುಭವಕ್ಕೂ ಅಭಿಪ್ರಾಯಕ್ಕೂ ವಿರೋಧವಾಗಿರುತ್ತದೆ. ಮಾರಿ, ದೆವ್ವ, ಪಿಶಾಚಗಳನ್ನು ಪೂಜಿಸತಕ್ಕ ಹಿಂದುಗಳಿಗೂ ಕೂಡ ಇಂಥ ಭಾವನೆ ಇರುವದಿಲ್ಲ. ಈ ಮಾರಿ, ಭೂತ, ದೆವ್ವ, ಪಿಶಾಚಗಳ ಗುಡಿಗಳು ಬಹಳ ದೊಡ್ಡದೊಡ್ಡ ಮರಗಳಕೆಳಗೆ ಇರುತ್ತವೆ. ಹೀಗಿರುವದಕ್ಕೆ ಕಾರಣವನ್ನು ಕೇಳಿದರೆ ಈ ಭೂತಾದಿಗಳು ಆ ಮರಗಳಮೇಲೆ ವಾಸಮಾಡುತ್ತವೆ ಎಂತಲೂ, ತಾವು ಮಾಡುವ ಪೂಜೆಯನ್ನು ಸ್ವೀಕರಿಸುವಾಗ ತಾವು ಇಟ್ಟಿರುವ ಮರಕಲ್ಲುಗಳಲ್ಲಿ ಪ್ರವೇಶಿಸುತ್ತವೆ ಎಂತಲೂ ಹೇಳುತ್ತಾರೆ. ಇದೂ ಅಲ್ಲದೆ ಕೆಲವು ಸಂದರ್ಭಗಳಲ್ಲಿ ಆ ಗುಡಿಗಳಲ್ಲಿ ಕೆಲವರು ತಲೆಯನ್ನು ತಿರಿಗಿಸುತ್ತ ಕೂಡುಕೊಂಡಿರುವರು. ಇದೇನೆಂದು ಕೇಳಿದರೆ ತಮ್ಮ ದೇವರು ಅವರ ಮೈಮೇಲೆ ಬಂದಿದೆ ಎಂದು ಹೇಳುವರು. ಹೀಗೆ ಹೇಳುವವರು ಆ ಮರಕಲ್ಲುಗಳನ್ನೇ ದೇವರೆಂದು ಭಾವಿಸುತ್ತಾರೆಂದು ಹೇಳುವದಕ್ಕೆ ಆಗುವದಿಲ್ಲ. ಕಣ್ಣಿಗೆ ಕಾಣಿಸದ ಶಕ್ತಿಯೆಂಬದಾಗಿ ನಂಬಿರುತ್ತಾರೆಂತಲೇ ನಾವು ತಿಳಿದುಕೊಳ್ಳಬೇಕಲ್ಲವೇ? ಈ ವಿಷಯವನ್ನು ದಯವಿಟ್ಟು ತಿರಿಗಿ ಪರ್ಯಾಲೋಚಿಸಿ, ತಮ್ಮ ನಿಜವಾದ ಅಭಿಪ್ರಾಯವನ್ನು ತಿಳಿಸಬೇಕೆಂದು ಬೇಡುತ್ತೇನೆ.

ವಿಜಯಾಂದ್ರರಾವ್.

ಉ.—ಇಂಡಿಯ ದೇಶದಲ್ಲಿ ಸಾವಿರಾರು ಜನರು ಮರ ಕಲ್ಲುಗಳನ್ನು ಪೂಜಿಸುತ್ತಾರೆನ್ನುವಲ್ಲಿ ನಮ್ಮ ಅಭಿಪ್ರಾಯವೇನಂದರೆ— ನನ್ನ ಶರೀರದೊಳಗೆ ಆತ್ಮವು ವಾಸಮಾಡುವದು ಹ್ಯಾಗೋ ಹಾಗೆಯೇ ಕೆಲವು ಮರಗಳಲ್ಲಿಯೂ ಕಲ್ಲುಗಳಲ್ಲಿಯೂ ಯಾವದೋ ಒಂದು ಆತ್ಮವು ವಾಸಿಸುತ್ತಿದೆಯೆಂದು ಅನೇಕರು ನಂಬುತ್ತಿದ್ದಾರೆ ಎಂಬುವದೇ. ಯಾವ ಮನುಷ್ಯನು ಎಷ್ಟು ಮೂಢನಾಗಲಿ ತಾನು ಪೂಜಿಸುವ ಮರವು ಬರೀಮರವೇ ಹೊರತು ಬೇರೇನೂ ಅಲ್ಲವೆಂದು ಭಾವಿಸಿ ಪೂಜಿಸುವದುಂಟೇ? ತನಗೆ ಸಹಾಯಮಾಡಬಲ್ಲ, ಅಥವಾ ತನಗೆ ಕೇಡುಮಾಡಬಲ್ಲ ಯಾವದೋ ಒಂದು ಆತ್ಮವು ಆ ವಸ್ತುವಿನಲ್ಲಿ ವಾಸಿಸುತ್ತಿದೆಯೆಂದು ಊಹಿಸುವದರಿಂದಲೇ ಅದನ್ನು ಪೂಜಿಸುತ್ತಾನೆ. ಮೂರ್ತಿಪೂಜೆಯೆಂಬುದು ಅದೇ. ಸರ್ವೇಶ್ವರನಾದ ಆ ಭಗವಂತನ ಹೊರತು ಬಿಕ್ಕಾದ ಯಾವ ಪುರುಷನನ್ನಾಗಲಿ, ವಸ್ತುವನ್ನಾಗಲಿ ನಿಜವಾಗಿರಲಿ ಬರೀ ಊಹೆಯಾಗಿರಲಿ, ಶರೀರವುಳ್ಳದ್ದಾಗಿರಲಿ ಶರೀರವಿಲ್ಲದ್ದಾಗಿರಲಿ ಯಾವದನ್ನೇ ಆಗಲಿ ಯಾರನ್ನೇ ಆಗಲಿ ಪೂಜಿಸಿದರೆ ಮೂರ್ತಿ ಪೂಜೆಯಾಯಿತು.—ಎಡಿ.

❖❖❖❖❖❖❖❖❖

ಪ್ರ.—ನನ್ನ ೬ನೇ ಪ್ರಶ್ನೆಗೆ ತಾವು ಬರೆದಿರುವ ಉತ್ತರದಲ್ಲಿ "ಸೃಷ್ಟಿಗೆ ಪ್ರಭುಗಳು," "ಮಹಾ ದೇವತೆಗಳು" ಮೊದಲಾದ ವಿಶೇಷಣಗಳನ್ನು ಬ್ರಾಹ್ಮಣರಿಗೆ ಮನುಧರ್ಮ ಶಾಸ್ತ್ರದಲ್ಲಿ ಕೊಟ್ಟಿರುವದರಿಂದ ಅವರು ತಮ್ಮನ್ನು ಬಹು ಹೆಚ್ಚಿಸಿಕೊಳ್ಳುತ್ತ ಬಂದರೆಂದು ಅಭಿಪ್ರಾಯಪಡುತ್ತೀರಿ. ಹೀಗೆ ತಾವು ಅಭಿಪ್ರಾಯಪಡುವದಕ್ಕೆ ಮೊದಲು ಬ್ರಾಹ್ಮಣನು ಹ್ಯಾಗೆ ಇರಬೇಕು? ಆತನ ಧರ್ಮಗಳೇನು? ಇವೇ ಮೊದಲಾದ ಸಂಗತಿಗಳನ್ನು ಆ ಮನುಧರ್ಮ ಶಾಸ್ತ್ರದಿಂದಲೇ ತಿಳಿದುಕೊಂಡಿದ್ದರೆ ತಾವು ಇಂಥ ಅಭಿಪ್ರಾಯ ಎಂದಿಗೂ ಪಡುತ್ತಿರಲಿಲ್ಲ. ಮೇಲಿನ ವಿಶೇಷಗಳಂಥ ವಿಶೇಷಣಗಳು ತಮ್ಮ ಪವಿತ್ರ ಶಾಸ್ತ್ರದಲ್ಲಿಯೂ ಹೇರಳವಾಗಿರುತ್ತವೆ.—"ಲೋಕದ ಬೆಳಕು," "ಭೂಲೋಕದ ಉಪ್ಪು" ಎಂಬವುಗಳೂ ೮೨ನೇ ಗೀತದಲ್ಲಿ "ದೇವತೆಗಳು" ಎಂಬ ವಿಶೇಷಣವು ಭಗವದ್ಭಕ್ತರೇ ಮೊದಲಾದವರಿಗೆ ಇರುತ್ತವೆ. ಇವುಗಳನ್ನು ಯಾವ ಅರ್ಥದಲ್ಲಿ ಪ್ರಯೋಗಿಸುತ್ತಾರೆಯೋ ಅದೇ ಅರ್ಥದಲ್ಲಿ ಮನುಧರ್ಮಶಾಸ್ತ್ರದಲ್ಲಿರುವ ವಿಶೇಷಣಗಳನ್ನು ಬ್ರಾಹ್ಮಣರಿಗೆ ಕೊಟ್ಟಿರುತ್ತಾರೆ. ಇದನ್ನು ಚನ್ನಾಗಿ ಪರ್ಯಾಲೋಚಿಸಿ ತಮ್ಮ ಅಭಿಪ್ರಾಯವನ್ನು ದಯವಿಟ್ಟು ತಿಳಿಸಬೇಕು.

ವಿಜಯಾಂದ್ರರಾವ್.

ಉ.—ಮನು ಸ್ಮೃತಿಯ ಕೆಲವು ಭಾಗಗಳಲ್ಲಿ—ಯಾವನು ವೇದಗಳನ್ನು ಬಲ್ಲನೋ, ಯಾವನು ನೇಮಿಸಲ್ಪಟ್ಟಿರುವ ಆಚಾರಗಳನ್ನೆಲ್ಲಾ ನೆರವೇರಿಸುತ್ತಾನೋ, ಯಾವನು ಸದ್ಗುಣಿಯಾಗಿಯೂ ಸಕಲ ಸೃಷ್ಟಿಗಳಿಗೂ ದಯಾಳುವಾಗಿರುತ್ತಾನೆಯೋ ಆ ಬ್ರಾಹ್ಮಣನೇ ನಿಜವಾದ ಬ್ರಾಹ್ಮಣನೆಂದೂ ಇತರರೆಲ್ಲರೂ ಮರದಿಂದ ಮಾಡಿದ ಆನೆಯೂ ಚರ್ಮದಿಂದ ಮಾಡಿದ ಜಿಂಕೆಯೂ ಹೆಸರಿನಲ್ಲಿ ಮಾತ್ರ ಆನೆ ಜಿಂಕೆಗಳಾಗಿರುವದು ಹ್ಯಾಗೋ ಹೆಸರಿಗೆ ಮಾತ್ರ ಬ್ರಾಹ್ಮಣರಾಗಿರುತ್ತಾರೆಂದು ಹೇಳಿರುವದು ಸರಿಯಷ್ಟೆ. ಇಷ್ಟೇ ಅಲ್ಲ; ಬ್ರಾಹ್ಮಣನಾದವನು ಸ್ತೋತ್ರವನ್ನು ವಿಷವನ್ನು ಕಂಡಂತೆ ನಿರಾಕರಿಸಬೇಕೆಂದೂ ನಿಂದೆಯನ್ನು ಅಮೃತಪಾನದಂತೆ ಸವಿಯಬೇಕೆಂದೂ ಹೇಳಿದೆ. ಆದರೆ ಇಷ್ಟು ಮಾತ್ರಕ್ಕೇ ಮನುಧರ್ಮ ಶಾಸ್ತ್ರದ ಅಭಿಪ್ರಾಯವೆಲ್ಲಾ ಹೀಗೇ ಸರಿಯೆಂದು ನಿರ್ಣಯಿಸುವದು ಅಸಾಧ್ಯವಾಗಿದೆ. ಯಾಕೆಂದರೆ ಬ್ರಾಹ್ಮಣನಾದವನು ಬ್ರಾಹ್ಮಣ ಜಾತಿಯಲ್ಲಿ ಹುಟ್ಟುವದರಿಂದಲೇ ಇತರ ಜಾತಿಯವರೆಲ್ಲರೂ ಅವನಿಗೆ ಸನ್ಮಾನ ಮಾಡಬೇಕೆಂಬುವದೇ ಮನುಧರ್ಮ ಶಾಸ್ತ್ರದ ಮುಖ್ಯಾಭಿಪ್ರಾಯ. ಈ ಅಭಿಪ್ರಾಯಕ್ಕೆ ತಕ್ಕಹಾಗೇ ನಡವಳಿಕೆಯೂ ಇದೆ. ಬ್ರಾಹ್ಮಣನಿಗೆ ಮನ್ನಣೆಮಾಡತಕ್ಕದ್ದೆಂದು ಕೇಳಿದರೆ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ್ದರಿಂದಲೇ ಎಂದು ಸಕಲರೂ ಹೇಳುತ್ತಿದ್ದಾರಷ್ಟೆ. ಅವನು ಗುಣವಂತನೋ ಗುಣಹೀನನೋ, ವಿದ್ಯಾವಂತನೋ ವಿದ್ಯಾಹೀನನೋ, ಅದೆಲ್ಲಾ ಮುಖ್ಯವಲ್ಲ; ಅವನು ಬ್ರಾಹ್ಮಣನಾಗಿ ಹುಟ್ಟಿದ ಮಾತ್ರದಿಂದ ಸನ್ಮಾನಕ್ಕೆ ಪಾತ್ರನೆಂದು ಹೇಳುವರು. ಆದರೆ ಕ್ರಿಸ್ತ ಸ್ವಾಮಿಯ ಬೋಧನೆ ಹೀಗಿರುವದಿಲ್ಲ. ಆತನು—ಎಲ್ಲರಿಗಿಂತ ದೊಡ್ಡವನಾಗಿರಬೇಕಾದವನು ದೀನನಾಗಿ ಎಲ್ಲರ ಸೇವಕನಾಗಿರಬೇಕೆಂದು ಹೇಳಿದ್ದಾನೆ. ಕ್ರಿಸ್ತನ ಶಿಷ್ಯರು ಲೋಕಕ್ಕೆ ಬೆಳಕಾಗಿಯೂ, ಲೋಕಕ್ಕೆ ಉಪ್ಪಾಗಿಯೂ ಇರಬೇಕೆಂದು ಆತನು ಹೇಳಿರುವ ಭಾಗವನ್ನು ದಯವಿಟ್ಟು ತಿರಿಗಿ ಓದಿರಿ ಅದೇನಂದರೆ—

"ನೀವು ಭೂಮಿಗೆ ಉಪ್ಪಾಗಿದ್ದೀರಿ. ಉಪ್ಪು ಸಪ್ಪೆಯಾದರೆ ಅದಕ್ಕೆ ಇನ್ಯಾತರಿಂದ ರುಚಿ ಬಂದೀತು? ಜನರು ಅದನ್ನು ಹೊರಗೆ ಹಾಕಿ ತುಳಿಯುವದಕ್ಕೆ ಅದು ಯೋಗ್ಯವೇ ಹೊರ್ತು ಮತ್ಯಾವ ಕೆಲಸಕ್ಕೂ ಬಾರದು. ನೀವು ಲೋಕಕ್ಕೆ ಬೆಳಕಾಗಿದ್ದೀರಿ. . . . . . ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ, ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು."

ಇದರಲ್ಲಿ ಯೇಸುಸ್ವಾಮಿಯು ತನ್ನ ಶಿಷ್ಯರಿಗೆ ಇತರ ಜನಗಳ ವಿಷಯದಲ್ಲಿರಬೇಕಾದ ಕರ್ತವ್ಯವೇನಾದ್ದೆಂದು ಪರಿಷ್ಕಾರವಾಗಿ ಬೋಧಿಸುತ್ತಾನೆ. ಅವರು ಸತ್ಯಸದ್ಗುಣಗಳ ವಿಷಯದಲ್ಲಿ ತಮಗೆ ತಿಳಿದಿರುವದನ್ನು ಸಕಲ ಜನರಲ್ಲಿಯೂ ಪ್ರಸರಿಸಬೇಕೆಂದೂ ಇದರಿಂದ ಬರುವ ಹೊಗಳಿಕೆಯೆಲ್ಲಾ 'ದೇವರಿಗೇ ಸಲ್ಲತಕ್ಕದ್ದೆಂದೂ ಅಪ್ಪಣೆ ಕೊಟ್ಟಿದ್ದಾನೆ. ಹೀಗೆ ಮನುಧರ್ಮಶಾಸ್ತ್ರದಲ್ಲಿ ಎಲ್ಲಾದರೂ ಹೇಳಿಲ್ಲ. ನಾವು ಉದಾಹರಿಸಿರುವ ವಾಕ್ಯದಲ್ಲಿ ಇನ್ನೂ ಒಂದು ವಿಶೇಷ ಸಂಗತಿಯಿದೆ. ಅದೇನಂದರೆ—ಸತ್ಯವನ್ನು ಬೋಧಿಸಬೇಕೆಂಬ ಅಪ್ಪಣೆಯನ್ನು ಪಡೆದವರಾಗಿರುವ ಧರ್ಮಾಧಿಕಾರಿಗಳು ಹಾಗೆ ನಡೆಯದೆ ಹೋದರೆ ಅವರಿಗೆ ಮಹಾ ಭಯಂಕರವಾದ ಶಿಕ್ಷೆಯು ಬರುತ್ತದೆಂಬುವದೇ. ಸಪ್ಪೆಯಾದ ಉಪ್ಪನ್ನು ಬಿಸಾಡುವಂತೆಯೇ ಸತ್ಯವನ್ನು ಬೋಧಿಸದೆ ಇರುವ ಧರ್ಮಾಧಿಕಾರಿಗಳೂ ತಿರಸ್ಕರಿಸಲ್ಪಡುವರು. ೮೨ನೇ ಕೀರ್ತನೆಯಲ್ಲಿ "ಪ್ರಭುಗಳು ದೇವರುಗಳು" ಎಂದು ಹೇಳಿದೆಯಷ್ಟೆ. ಅನೀತಿವಂತರಾದ ನ್ಯಾಯಾಧಿಪತಿಗಳಿಗೂ ಅರಸರಿಗೂ ದೇವರು ಕೊಡುವ ಶಿಕ್ಷೆಯನ್ನು ವಿವರಿಸುವಲ್ಲಿ ಈ ಹೆಸರು ಬರುತ್ತದೆ. ಇವರು ದೇವರಿಂದ ನಿಯಮಿತರಾಗಿ ಲೋಕದಲ್ಲಿ ಅಧಿಕಾರವನ್ನು ನಡಸುತ್ತಾರಾದಕಾರಣ ಇವರಿಗೆ ಇಂಥ ಶ್ರೇಷ್ಠವಾದ ಹೆಸರನ್ನು ಕೊಟ್ಟಿದೆ. ಆದರೂ ಇವರು ಬಡವರನ್ನು ಹಿಂಸಿಸುವದರಿಂದ ಇತರ ಸಾಧಾರಣ ಜನರಂತೆಯೇ ಸತ್ತುಹೋಗುವರೆಂದು ಕೀರ್ತನೆಯನ್ನು ರಚಿಸಿದ ಭಕ್ತನು ಹೇಳುತ್ತಾನೆ. ಭೂಲೋಕದಲ್ಲಿ ದೊಡ್ಡವರೆನಿಸಿಕೊಳ್ಳುವವರು ಅಹಂಕಾರಪಡುವದಕ್ಕೆ ಕಾರಣವುಂಟೆಂದು ಹೇಳುವದಕ್ಕೆ ಈ ಕೀರ್ತನೆಯಲ್ಲಿ ಸ್ವಲ್ಪವಾದರೂ ಅವಕಾಶವಿಲ್ಲ. ಆದರೆ ಬಡವರಾದವರ ಹಕ್ಕನ್ನು ಯಾರೂ ಕಿತ್ತುಕೊಳ್ಳಕೂಡದೆಂದೂ, ದೊಡ್ಡವರಾದವರಲ್ಲಿ ಅಹಂಕಾರವು ಕೇವಲ ನಿಕೃಷ್ಟವಾದದ್ದೆಂದೂ ನಿಸ್ಸಂದೇಹವಾಗಿ ಹೇಳಿದೆ.—ಎಡಿ.

## ತಾಲ್ಲೂಕು ವರ್ತಮಾನಗಳು.

ಚನ್ನಪಟ್ಟಣ.—ಇಲ್ಲಿ ಕೆಲವು ದಿನಗಳಿಂದ ಸೋನೆ ಮಳೆ ಹಿಡಿದು ಹವ ಬಹಳ ಶೀತವಾಗಿತ್ತು. ಇದರಿಂದ ಮಕ್ಕಳಿಗೆ ಕೆಮ್ಮಲು ನೆಗಡಿ ಉಂಟಾಗಿ, ಆಸ್ಪತ್ರೆಗೆ ಬರುತ್ತಾ ಇದ್ದರು. ಡಾಕ್ಟರು ಮಕ್ಕಳಿಗೆ ಒಳ್ಳೇ ಮದ್ದನ್ನು ಕೊಡುತ್ತಾರೆ. ಈಗ ಜನರು ಹೊಲಗಳನ್ನು ಬಿತ್ತಿದ್ದಾರೆ.—ಚನ್ನಪಟ್ಟಣಕ್ಕೆ ಸೇರಿದ ದೊಡ್ಡಮಳೂರಲ್ಲಿ ಜಾಡಮಾಲಿಗಳು ೨ ದಿನಕ್ಕೆ ಒಂದು ಸಾರಿ ಗುಡಿಸುತ್ತಾರೆಂತಲೂ, ಜನರು ಸರ್ಕಾರಿ ರಸ್ತೆ ಪಕ್ಕದಲ್ಲಿ ಮನೆಕಲುಗಳನ್ನು ಕಟ್ಟಿ, ಬಚ್ಚಲು ಗಲೀಜು ಮಾಡುತ್ತಾರೆಂತಲೂ. ಇದನ್ನು ಮೇಲಿನವರು ಗಮನಕ್ಕೆ ತಂದುಕೊಳ್ಳಬೇಕೆಂತಲೂ ಅಲ್ಲಿನವರು ಕೇಳುತ್ತಾರೆ.—ಮಂಗಳವಾರ ಪೇಟೆಯಲ್ಲಿ ಸ್ಟಾಂಪ್ ಪತ್ರ ಬರೆದರೆಂದು ದೊಡ್ಡಯ್ಯ, ಗರುಸಿದ್ದಯ್ಯ ಎಂಬುವರಿಬ್ಬರಿಗೂ ೩ ವರ್ಷ ಸಜಾ, ನೂರು ನೂರು ರೂಪಾಯಿ ಜುಲ್ಮಾನೆ, ಸಾಕ್ಷಿಗಳಿಗೆ ನಾಗಲಿಂಗಯ್ಯ, ಪಂಚಾಪರಿ ಎಂಬವರಿಗೆ ಒಂದೊಂದುವರೆ ವರ್ಷ ಸಜಾ, ೫೦ ರೂ. ಜುಲ್ಮಾನೆಯನ್ನು ಸರ್ಕಾರದವರು ವಿಧಿಸಿದ್ದಾರೆ. ಇವರುಗಳು ಅಪೀಲ್ ಮಾಡಿಕೊಂಡಿರುವರು.

ಮಂಡ್ಯ.—ಈ ಊರಿಗೆ ಮೊನ್ನೆ ಚೀಫ್ ಕಮಿಷನರ್ ಸಾಹೇಬರ ಸವಾರಿಯು ಗುರುವಾರ ಬಂದಿತ್ತು. ಆ ದಿವಸ ಸ್ಟೇಷನ್ನಿಗೆ ಈ ಊರಿನ ಉದ್ಯೋಗಸ್ಥರೂ, ಶೆಟ್ಟಿ ವರ್ತಕರೂ, ವೈದಿಕ ಬ್ರಾಹ್ಮಣರೂ ಮುಂತಾದವರು ಅವರನ್ನು ಸಂಧಿಸಲು ಬಂದಿದ್ದರು. ಪ್ರಯಾಣಗಾಡಿಯು ಮದ್ದೂರಿನಿಂದ ಬಂದ ಕೂಡಲೇ ಮ. ಕಾಂತರಾಜ ಅರಸರು ಗಾಡಿಯಿಂದ ಇಳಿದರು. ಆ ಕಾಲದಲ್ಲಿ ಇಲ್ಲಿನ ಶಿರಸ್ತೆದಾರರು ಅವರಿಗೆ ಹೂವಿನಹಾರವನ್ನು ಹಾಕಿ ವಂದಿಸಿದರು. ಅನಂತರ ಅಲ್ಲಿ ನೆರೆದಿದ್ದ ಉದ್ಯೋಗಸ್ಥರನ್ನು ತೋರಿಸಲು ಅವರು ನಿಂಬೇಹಣ್ಣು ಕೊಟ್ಟು ವಂದಿಸಿದರು. ಆಗ ಬ್ರಾಹ್ಮಣರು ಮಂತ್ರಾಕ್ಷತೆಯನ್ನು ಕೊಟ್ಟು ಅವರನ್ನು ಆಶೀರ್ವದಿಸಿದರು. ಮತ್ತೊಂದು ಕಡೆ ಬ್ಯಾಂಡ್ ಎಂಬ ವಾದ್ಯ ಘೋಷಗೈಯಿತು. ಮ॥ ಕಾಂತರಾಜ ಅರಸರು ಪುರಪ್ರವೇಶಮಾಡಿ, ಚೌಕದಲ್ಲಿ ವರ್ತಕರ ವಂದನೆ ಫಲಪುಷ್ಪಗಳನ್ನು ಅಂಗೀಕರಿಸಿ, ಮುಸಾಫರಿ ಬಂಗ್ಲೆಗೆ ತೆರಳಿದರು. ಮಾರನೇದಿನ ಬೆಳಿಗ್ಗೆ ಕಚೇರಿಗಳಿಗೂ ಅನಂತರ ಇಲ್ಲಿನ ದೇವಸ್ಥಾನಕ್ಕೂ ಹೋಗಿ ಇಲ್ಲಿನ ವಿಚಾರಗಳನ್ನು ತಿಳಿದುಕೊಂಡು ಶನಿವಾರ ನಾಗಮಂಗಲದ ಕಡೆ ದಯಮಾಡಿಸಿದರು.—ಎಲ್ಲರಿಗೂ ಹರ್ಷವನ್ನು ಉಂಟುಮಾಡಿತು. ಆದರೆ ಇಲ್ಲಿನ ಮುನಸಿಪಲ್ ಬೀದಿಗಳಿಗೆ ಮಾತ್ರ ಬೆಳಕು ಹಚ್ಚುವ ಯತ್ನವನ್ನು ಯಾರೂ ಮಾಡಿಸಲಿಲ್ಲ. ಇನ್ನೂ ಒಂದು ವರ್ಷ ಇದೇ ಸ್ಥಿತಿಯು ಇರಬಹುದು ಎಂದು ತೋರುತ್ತೆ.

ತುಮಕೂರು.—ಈಗ ಕೆಲವು ದಿನಗಳಿಂದ ಮೋಡವಾಗುತ್ತಲಿದೆಯಾದರೂ ಬೀಜ ಬಿತ್ತುವದಕ್ಕೆ ತಕ್ಕಷ್ಟು ಮಳೆ ಇಲ್ಲ. ಹವ ಶೀತವಾಗಿದೆ. ಪ್ಲೇಗ್ ರೋಗವು ಈಗ್ಗೆ ೩ ತಿಂಗಳಿಂದಲೂ ಹೊರಪೇಟೆಯಲ್ಲಿಯೇ ವ್ಯಾಪಿಸಿಕೊಂಡಿತ್ತು. ಈಗ ಊರಿನಲ್ಲೆಲ್ಲಾ ವ್ಯಾಪಿಸಿ, ದಿನಕ್ಕೆ ೩-೬ ಮರಣಗಳಾಗುತ್ತವೆ. ವ್ಯಾಪಾರ ಬಂದಾಂಗವಾಗಿ ನಿಂತುಹೋಯಿತು. ಮಂಡಿಪೇಟೆಯು ಊರಿಗೆ ಸಮೀಪವಾಗಿದೆ. ಮೊದಲು ಮಂಡಿಪೇಟೆಯಲ್ಲಿ ಇಲಿಗಳು ಸಾಯುವದೂ ಅನಂತರ ಪ್ಲೇಗ್ ಮರಣಗಳಾಗುವದೂ ರೂಢವಾಗಿರುವದಲ್ಲದೆ ಈ ಸಲವೂ ಅದರಂತೆ ವರ್ತಕರು ಇಲಿಗಳ ಸಾವನ್ನು ಕಂಡು ಬಾಗಿಲುಗಳನ್ನು ಹಾಕಿಕೊಂಡು ಗ್ರಾಮಾಂತರಗಳಿಗೆ ಹೊರಟುಹೋಗಿದ್ದಾರೆ. ಮಂಡಿ ಆ ಪ್ರದೇಶದಲ್ಲಿ ವಾಸಮಾಡುತ್ತಿದ್ದವರಲ್ಲನೇಕರು ಮರಣಕ್ಕೆ ಗುರಿಯಾದರು. ಮಂಡಿಯಿಂದಲೇ ಜೀವನಮಾಡುತ್ತಿದ್ದ

ಅನೇಕ ಜನರಿಗೆ ತುಂಬಾ ಕಷ್ಟ ಉಂಟಾಗಿದೆ. ಪುರನಿವಾಸಿಗಳು ಆಸ್ತಿಪಾಸ್ತಿಗಳನ್ನೆಲ್ಲಾ ಬಿಟ್ಟು ಮಕ್ಕಳುಮರಿಗಳೊಡನೆ ಈ ಗಾಳಿ ಈ ಶೀತದಲ್ಲಿ ಹೊರಗಡೆ ಗುಡಿಸಲಿನಲ್ಲಿ ಪಡುವ ಶ್ರಮವು ಭಗವಂತನಿಗೇ ಗೊತ್ತಾಗಬೇಕು. ದಯಾಳುಗಳಾದ ಸರ್ಕಾರದವರು ಮೇಲ್ಕಂಡ ಮಂಡಿಪೇಟೆಯ ವಿಷಯವನ್ನು ಗಮನಕ್ಕೆ ತಂದುಕೊಂಡು, ಬೆಂಗಳೂರಿನಲ್ಲಿ ಮಾಡಿರುವ ಪದ್ಧತಿಯಂತೆ ಊರಹೊರಗೆ ಮಂಡಿ ವ್ಯಾಪಾರಕ್ಕೆ ಅನುಕೂಲಮಾಡಿಸಿಕೊಟ್ಟರೆ ಪ್ರಜೆಗಳಿಗೆ ತುಂಬಾ ಉಪಕಾರವಾಗುತ್ತೆ. ಸರ್ಕಾರಿ ಉದ್ಯೋಗಸ್ಥರು ಊರಹೊರಗೆ ಬಂಗಲೆಗಳಲ್ಲಿ ವಾಸಮಾಡುತ್ತಾರೆ. ಕ್ರೈಸ್ತರ ಬೀದಿಯಲ್ಲಿ ಒಂದೆರಡು ಮರಣಗಳಾದ್ದರಿಂದ ರೆ॥ ಎಡ್ ಸ್ಲೇಟರ್ ದೊರೆಗಳು ತುಂಬಾ ಶ್ರಮದಿಂದ ಕ್ರೈಸ್ತರೆಲ್ಲರೂ ಊರಹೊರಗೆ ಜೋಪಡಿಗಳಲ್ಲಿರುವಂತೆ ಏರ್ಪಾಡು ಮಾಡಿರುತ್ತಾರೆ. ಈ ಕಾಲದಲ್ಲಿ ಮುನಿಸಿಪಲ್ ಅಧಿಕಾರಿಗಳು ತುಂಬಾ ಮುತುವರ್ಜಿವಹಿಸಿ ಪ್ರಜಾ ಸೌಕರ್ಯಕ್ಕೆ ತಕ್ಕ ಏರ್ಪಾಡು ಮಾಡಬೇಕಾಗಿದೆ. ಇನ್ನು ಒಂದು ವಾರದ ಒಳಗಾಗಿ ಊರೆಲ್ಲಾ ಖಾಲಿಯಾಗಬಹುದು. ಅಂತು ಸದ್ಯದಲ್ಲಿ ತುಮಕೂರಿನ ಸ್ಥಿತಿಯು ತುಂಬಾ ಶೋಚನೀಯವಾಗಿದೆ.

ಬೇಲೂರು.—ನಮ್ಮ ಚಕ್ರವರ್ತಿಗಳ ಕಿರೀಟಧಾರಣೆಯ ಜ್ಞಾಪಕಾರ್ಥವಾಗಿ ಈ ಬೇಲೂರಿನಲ್ಲಿಯೂ ಒಂದು ಮುನಿಸಿಪಲ್ ಪಾರ್ಕನ್ನು ಏರ್ಪಡಿಸಬೇಕೆಂದು ನಮ್ಮ ಸಬ್ ಡಿವಿಜನಲ್ ಆಫೀಸರವರು ನಮ್ಮ ಅಮಲ್ದಾರ್ರಿಗೆ ತಿಳಿಸಿದರು. ನಮ್ಮ ಅಮಲ್ದಾರ್ರು ಸದರಿ ಪಾರ್ಕಿಗಾಗಿ ಚುನಾಯಿಸಿರುವ ಸ್ಥಳವು ಅಷ್ಟು ಚನ್ನಾಗಿಲ್ಲವೆಂತಲೂ, ಅದಕ್ಕಿಂತಲೂ ತಾಲ್ಲೂಕು ಕಚೇರಿಯ ಮುಂದಿರುವ ದೊಡ್ಡ ಮೈದಾನವನ್ನು ಮಾಡಿದರೆ ಸರ್ವಶ್ಲಾಘ್ಯವಾಗಿರುವದೆಂತಲೂ ಸಕಲರೂ ಕೋರುತ್ತಾರೆ. ಈ ಸ್ಥಳವನ್ನು ಚುನಾಯಿಸಿ ಕೂಡಿದ ಪುಟ್ಟನಿಗೆ ಜಾಗ್ರತೆ ಮಾಡಿಸಿದರೆ ಉಪಕಾರವಾದೀತು.—ಈ ಊರು ಮುನಿಸಿಪಾಲಿಟಿಯು ನಮ್ಮ ವೈಸ್ ಪ್ರೆಸಿಡೆಂಟರ ಗಮನಕ್ಕೆ ಬರಲಿಲ್ಲ. ಪ್ರತಿಯೊಂದು ಗಲ್ಲಿ ಮಾತ್ರವಲ್ಲದೆ, ಬಜಾರು ಮಾರ್ಗ ಸಹ ಕೊಳೆತು ನಾರುತ್ತಿರುವದು. ಈಗಲಾದರೂ ನಮ್ಮ ಮುನಿಸಿಪಾಲಿಟಿಯವರು ಗಮನ ಕೊಡದಿದ್ದರೆ, ಈ ಊರು ಸಾಂಕ್ರಾಮಿಕರೋಗಗಳಿಗೆ ತೌರುಮನೆಯಾಗುವದರಲ್ಲಿ ಸಂಶಯವಿಲ್ಲ.—ಮಳೆ ಜೋರಾಗಿ ಹಿಡಿದಿರುವದು. ದೊಡ್ಡಿಯಲ್ಲಿರುವ ದನಗಳು, ಕೊಳೆತಿರುವ ಕೊಚ್ಚೆಯುಳ್ಳ ಕೊಳಿನಲ್ಲಿ ನಿಂತು, ಆಹಾರವಿಲ್ಲದೆ, ಗಟ್ಟಿ ದನಗಳು ಸಹ ನಿರ್ಬಲವಾಗಿ ಸತ್ತುಹೋಗುತ್ತಿರುವವು. ಈ ಊರು ಮುನಿಸಿಪಲ್ ಕಮಿಷನರುಗಳೂ, ವೈಸ್ ಪ್ರೆಸಿಡೆಂಟರೂ, ಪಟೇಲರು ಸಹ ಈ ಮೂಗುಪ್ರಾಣಿಗಳ ಮೇಲೆ ಪ್ರೀತಿ ಇಟ್ಟು, ದೊಡ್ಡಿಯ ತೂಬು ತೆಗೆಸಿ, ಗ್ರಾವಲ್ ಮತ್ತು ಜಲ್ಲಿ ಹಾಕಿಸಿ, ಆ ಪಾಳೇ ದೊಡ್ಡಿಗೆ ಛಾವಣಿಯನ್ನು ಕಟ್ಟಿಸಿದರೆ ಬಹಳ ಪುಣ್ಯ ಬರುವದು.—ನಮ್ಮ ಊರಿಗೆ ಈಗ ಬಂದಿರುವ ಡಾಕ್ಟರ್ ಲಕ್ಷ್ಮೀನಾರಾಯಣರು ಬಾಯಿಲೆಯವರನ್ನು ಬಹು ದಯೆಯಿಂದಲೂ, ಆದರದಿಂದಲೂ ನೋಡುವದಲ್ಲದೆ, ಅಪೇಕ್ಷಿಸಿದರೆ ಮನೆಗಳಿಗೂ ಬಂದು ನೋಡಿಕೊಂಡು ಹೋಗುತ್ತಾರೆ.—ಹಳೇ ಬೀಡು ಕಾನ್ಸ್ಟೆಬಲ್ ವಿಷಕಂಠನೆಂಬವನು ಗರ್ಭಿಣಿಯಾಗಿದ್ದ ತನ್ನ ಹೆಂಡತಿಯನ್ನು ಕಾರಣಾಂತರದಿಂದ ಹೊಡೆದನೆಂದೂ, ಅದೇ ಯಾತನೆಯಿಂದ ಆಕೆಯು ೨—೩ ದಿನಗಳಲ್ಲಿ ಸತ್ತಳೆಂದೂ, ತಾಲ್ಲೂಕಿಗೆ ವರ್ತಮಾನ ಬಂದು ಸದರಿ ಹೆಣವನ್ನು [illegible] ಮಾಡಿದ್ದರ ಮೇಲೆ ಅನುಮಾನ ಬಂದು, ಸದರಿ ಕಾನ್ಸ್ಟೆಬಲ್ ವಿಷಕಂಠನನ್ನು ದಸ್ತಗಿರಿ ಮಾಡಿ ಲಾಕಪ್‌ನಲ್ಲಿಟ್ಟಿರುವದಾಗಿ ಕೇಳಿದೆನು.

ಸೊರಬ.—ಈ ಊರಿಗೆ ೧೦ ಮೈಲ್ ದೂರವಿರುವ ಶಿರಾಳಕೊಪ್ಪವೆಂಬ ಗ್ರಾಮದಲ್ಲಿ ಪ್ಲೇಗ್ ಶುರುವಾಗಿ ಸದ್ರಿ ಗ್ರಾಮದ ಜನಗಳು ಈ ಮಳೆಗಾಲದಲ್ಲಿ ವಿಶೇಷ ಗಾಳಿಯಿಂದಲೂ ಭೂಮಿ ತಂಪಿಯಿಂದಲೂ ಇರತಕ್ಕ ಹಕ್ಕಲು ಜಾಗಗಳಲ್ಲಿ ಜೋಪಡಿಗಳನ್ನು ಇಟ್ಟುಕೊಂಡು ಕಷ್ಟಪಡುವದು ಶ್ರೀ ಭಗವಂತನಿಗೇ ಗೋಚರ! ಹೊರಟ ನಿವಾಸಿಗಳು ಈ ಮುಂಚೆ ೩ ತಿಂಗಳು ಸದ್ರಿ ಕಷ್ಟವನ್ನು ಅನುಭವಿಸಿ, ಊರಿಗೆ ಬಂದು ಸುಮಾರು ೨—೩ ತಿಂಗಳು ಆಯಿತು. ೧೦ ಮೈಲ್ ಫಾಸಲೆ ಇರುವ ಶಿರಾಳಕೊಪ್ಪದಿಂದ ವರ್ತಕರು ಈ ಊರಲ್ಲಿ ನಿರಂತರವೂ ಇರುವದರಿಂದಲೂ ಸದ್ರಿ ಸ್ಥಳದ ಸಾಮಾನು ಇಲ್ಲಿ ವಿಕ್ರಯವಾಗುವದರಿಂದಲೂ ಮುಂಚಿನಂತೆ ಪ್ರಜೆಗಳು ಇಲ್ಲಿಯೂ ಗಲಾಟೆಯಾದೀತೆಂತ ಬಹು ಭಯಗ್ರಸ್ಥರಾಗಿರುವದಲ್ಲದೆ ಹಗಲಿರುಳೂ ಭಗವಂತನನ್ನು ಸ್ತುತಿಸುತ್ತಾರೆ. ಇಂಥಾ ಗಲಾಟೆ ಇರುವ ಕಾಲದಲ್ಲಿ ಈ ಟೌನ್ ಸ್ಯಾನಿಟೇಷನ್ ಎಂದರೆ ಚರಂಡಿಯಲ್ಲಿ ಪಾಳ್ಯಗಿಡಗಳೂ, ರಸ್ತೆ ಪಕ್ಕದಲ್ಲಿ ಹುಲ್ಲೂ, ವಾಯುಮಾಲಿನ್ಯವೂ ತುಂಬಿ, ನೋಡತಕ್ಕ ಮನಸ್ಸನ್ನು ಆಕರ್ಷಿಸುತ್ತವೆ. ಇಲ್ಲಿ ತಾಲ್ಲೂಕ್ ಇದ್ದು ಆಗಾಗ್ಯೆ ಆಫೀಸರುಗಳ ಸವಾರಿ ಚಿತ್ತೈಸುತ್ತಿದ್ದು ಈ ರೀತಿ ಟೌನ್ ಇರುವದು ಆಶ್ಚರ್ಯವಾಗಿದೆ. ಮುನಿಸಿಪಲ್ ಝಾಡಮಾಲಿಗಳು ಈ ಊರಲ್ಲಿ ಇರತಕ್ಕ ಗಲ್ಲಿಗಳ ಪೈಕಿ ಎರಡು ಗಲ್ಲಿಗಳನ್ನು ಆಗಾಗ್ಯೆ ಗುಡಿಸುತ್ತಾರೇ ವಿನಹ ಬಡವರುಗಳು ಇರುವ ಗಲ್ಲಿಗಳಲ್ಲಿ ಇವರ ಮುಖ ದರ್ಶನವೇ ಇಲ್ಲವಾಗಿ ಕಸದ ಗುಪ್ಪೆಗಳು ರಮಣೀಯವಾಗಿ ಕಂಗೊಳಿಸುತ್ತವೆ. ಮುನಿಸಿಪಾಲಿಟಿ ಆಫೀಸರುಗಳು ಟೌನ್ ಪಾಕೀಜ ವಿಷಯದಲ್ಲಿ ತುಂಬಾ ನಿಗಾ ಇಟ್ಟಿರುವವರಾಗಿ ವಂದಿಸಬೇಕಾಗಿದೆ.—ಈ ಊರಲ್ಲಿದ್ದ ಸರ್ಕಾರಿ ಮಿಡ್ ವೈಫ್ ಎಂಬುವರು ವರ್ಗವಾಗಿ ಸುಮಾರು ೭—೮ ತಿಂಗಳು ಆದಾಗ್ಯೂ ಈ ವರಿಗೂ ಈ ತಾಲ್ಲೂಕಿನ ಬಡಪ್ರಜೆಗಳ ದುರಾದೃಷ್ಟಕ್ಕೆ ಯಾರೂ ಬಾರದೆ ಇದ್ದದ್ದಕ್ಕೆ ತುಂಬಾ ವಿಷಾದಿಸಬೇಕಾಗಿದೆ.—ಇಲ್ಲಿ ಹಾಸ್ಪಿಟಲ್ ಅಸಿಸ್ಟೆಂಟರಾದ ಮ॥ ವಿದ್ವತ್ ಶಿರೋಮಣಿ ಪಿಳ್ಳೆಯವರು ಈ ಗ್ರಾಮದ ಪ್ರಜೆಗಳಿಗೆ ತುಂಬಾ ಉಪಕಾರಿಗಳಾಗಿದ್ದಾರೆ. ನಮ್ಮ ಪೋಲೀಸ್ ಇನ್ಸ್‌ಪೆಕ್ಟರಾದ ಮ॥ ಕಾಳೋಜಿರಾಯರು ಈ ಮುಂಚೆ ಜೈಲಿನಿಂದ ತಪ್ಪಿಸಿಕೊಂಡುಹೋದ ಖೈದಿಗಳನ್ನು ತಲಾಸ್ ಬಗ್ಯೆ ಧಾರವಾಡ ಕಡೆಗೆ ಹೋಗಿ ಸುಮಾರು ಒಂದುವರೆ ತಿಂಗಳಿಂದ ಬಹು ಮೆಹನತ್ತಿನಿಂದ ತಲಾಶ್ ಮಾಡಿದಾಗ್ಯೂ ಸಿಕ್ಕದೆ ಮೊನ್ನೆ ವಾಪಸು ಬರೋಣವಾಯಿತು. ಸದ್ರಿಯವರು ಪಟ್ಟ ಶ್ರಮಕ್ಕೆ ತಕ್ಕ ಫಲ ದೊರೆಯದೆ ಹೋದದ್ದಕ್ಕಾಗಿ ಚಿಂತಿಸಬೇಕಾಗಿದೆ.

ತಿಪ್ಪೂರು:—ತಾ॥ ೧೬. ೭, ೦೩ರಲ್ಲಿ ಪ್ರೈವೇಟ್ ಗರ್ಲ್ ಸ್ಕೂಲಿನಲ್ಲಿ ಮಕ್ಕಳಿಗೆ ಬಹುಮಾನ ಕೊಡಲಾಯಿತು. ಸರ್ಕಾರಿ ಅಧಿಕಾರಿಗಳೂ ಕೆಲವು ವರ್ತಕರೂ ದೊಡ್ಡ ಮನುಷ್ಯರೂ ಸಭೆ ಸೇರಿದ್ದರು, ಓದಿದ ರಿಪೋರ್ಟಿನ ಸಾರಾಂಶವೇನೆಂದರೆ—ಬಹಳ ವರ್ಷಗಳಿಂದಲೂ ಮಿಷನ್ ಗರ್ಲ್ಸ್‌ಸ್ಕೂಲ್ ಸ್ಥಾಪಿಸಲ್ಪಟ್ಟು ತಮ್ಮ ಮತಗ್ರಂಥವನ್ನು ಹೇಳುವದರಿಂದ ಈಗ ಸುಮಾರು ೭ ವರ್ಷಗಳಿಂದಲೂ ನಾವು ಬೇರೆ ಸ್ಕೂಲನ್ನು ಏರ್ಪಡಿಸಿಕೊಂಡಿದ್ದೇವೆ. ಆದರೂ ಸರ್ಕಾರದವರು ಗ್ರಾಂಟ್ ಕೊಡದ್ದಕ್ಕಾಗಿ ವಿಷಾದಿಸುತ್ತೇವೆ ಮುಂತಾಗಿ ಪಾರಾಯಣವಾಗಲು ಅಗ್ರಾಸನಾಧಿಪರಾಗಿದ್ದ ಅಮಲ್ದಾರರು ಕೊಡಿಸಿದ ಉತ್ತರವೇನೆಂದರೆ—ನಿಮ್ಮ ಉಪನ್ಯಾಸದ ರೀತಿ ಮಿಷನರಿಗಳನ್ನು ಆಕ್ಷೇಪಿಸುವದು ಶುದ್ಧ ತಪ್ಪು; ಮಿಷನರಿಗಳು ನಮ್ಮ ದೇಶಕ್ಕೆ ಮಾಡಿರುವ ಉಪಕಾರಗಳಿಗಾಗಿ ನಾವೆಲ್ಲರೂ ಅವರನ್ನು ವಂದಿಸಬೇಕು. ತಮ್ಮ ನಂಬಿಕೆಯ ಸ್ವಭಾವಕ್ಕೆ ಸರಿಯಾಗಿ ನಡಿಸುತ್ತಾರಲ್ಲದೆ ದುರಭಿಪ್ರಾಯವೇನೂ ಅವರಲ್ಲಿ ಇಲ್ಲ. ನಿಮ್ಮ ರಿಪೋರ್ಟಿನ ರೀತಿ ೫೩ ಮಕ್ಕಳು ಹಾಜರು ಇದ್ದರೆ ಹಾಲಿ ಸ್ಕೂಲ್ ನಡಿಯುವ ಕಟ್ಟಡವು ಮಕ್ಕಳಿಗೂ, ಉಪಾಧ್ಯಾಯರಿಗೂ ಸ್ಕೂಲ್ ಸಾಮಾನುಗಳಿಗೂ ಅನುಚಿತ (ಆರೋಗ್ಯ ಶಾಸ್ತ್ರಕ್ಕೆ ವಿರೋಧ) ಅನ್ನಲು, ಇಲ್ಲಿನ ಡಾಕ್ಟರು ಅನುಮೋದಿಸಿದರು. ಮತ್ತು ನೀವು ಕೊಟ್ಟ ಬಹುಮಾನಗಳು ಮಕ್ಕಳ ವಿದ್ಯಾ ಯೋಗ್ಯತೆಗಳನ್ನು ಅನುಸರಿಸಲಿಲ್ಲ. ಆದರೆ ಮಕ್ಕಳ ಜಮಾವಣೆಯಾಪೇಕ್ಷೆಯೇ. ಇನ್ನೊಂದುಸಾರಿ ಕ್ರಮವನ್ನನುಸರಿಸಿದರೆ ನಾನೂ ಕೊಂಚ ದ್ರವ್ಯಸಹಾಯ ಮಾಡುತ್ತೇನೆಂದು ಅಪ್ಪಣೆ ಕೊಟ್ಟರು. ಇಂಗಿತಜ್ಞರಾದ ನಮ್ಮ ಅಮಲ್ದಾರರು ಕೊಟ್ಟ ಉತ್ತರದಿಂದ ಸರ್ವರೂ ಸಂತೋಷಿಸಿ ಪಾನ್ ಸುಪಾರಿ ಮುಂತಾದ್ದರಿಂದ ಸಂತುಷ್ಟರಾಗಿ ಸಭೆಯನ್ನು ಬರಖಾಸ್ತು ಮಾಡಿದರು.—ಕಂದಾಯ ಪ್ರವಸ್ತಾಸಾಲಿನ ಬಾಕಿ ರೂ. ೨,೦೦೦, ಗುದಸ್ತಾ ಸಾಲಿನ ಬಾಕಿ ರೂ. ೬೦೦, ಮಟಕೂರ್ ಸಾಲಿನಲ್ಲಿ ಮುಜರೂದ್ ಜಮಾಬಂದಿ ಗೊತ್ತಾದ ಪ್ಲೇಗಿನ ಗಲಾಟೆಯಿಂದ ತೊಂದರೆಯಾಗಿದ್ದರೂ ಪಟೇಲರೇ ಮುಂತಾದ ಗ್ರಾಮಾಧಿಕಾರಿಗಳು ಬಹು ಮುತುವರ್ಜಿಯಿಂದ ಕೆಲಸ ನಡಿಸಿದ್ದಾರೆಂದು ತೋರುತ್ತೆ.—ಹಳತೆ ಸೇರುಗಳ ವಿಷಯ ಗ್ರಾಮಾಧಿಕಾರಿಗಳು ಎಚ್ಚರಿಕೆಯಿಂದ ತಿರುಗುತ್ತಿದ್ದಾರೆ.—ಕೆಲವು ದಿನಗಳ ಕೆಳಗೆ ಕಂಬಾಗಟ್ಟೆ ಎಂಬ ಗ್ರಾಮದಲ್ಲಿ ಇಬ್ಬರು ಪ್ಲೇಗಿನಿಂದ ತೀರಿಹೋದರು. ಈತಿಗೆ ಏನೂ ಅಪಾಯವಿಲ್ಲದ್ದರಿಂದ ತಿಪ್ಪೂರಿನ ತಲೆನೋವು ಸ್ವಲ್ಪ ಇಳಿದಿದೆ.—ಈಗ ಮ್ಯುನಿಸಿಪಲ್ ದೀಪಗಳು ಚನ್ನಾಗಿ ಉರಿಯುತ್ತವೆ. ಕೆಲವು ರಸ್ತೆಗಳು ಹೊಸ ಉಡುಪನ್ನು ಧರಿಸಿಕೊಳ್ಳುವದಕ್ಕೆ ಜೆಲ್ಲಿಕಲ್ಲು, ಗ್ರಾವಲ್ ಮುಂತಾದ್ದರ ಜಮಾವಣೆಯಿಂದ ಕಂಗೊಳಿಸುತ್ತವೆ. ಮಳೆಮಾತ್ರ ಕೆಲವು ದಿನಗಳಿಂದಲೂ ಬರಲೇ ಇಲ್ಲ.—ದಯಾಳು ಸರ್ಕಾರದವರು ಊರಾಚೆ ಕೆಲವು ಛಪ್ಪರ್ಸ್ ಮನೆಗಳನ್ನು ಕಟ್ಟಿಸಿಕೊಟ್ಟರೆ, ಪ್ರಜೆಗಳ ತೊಂದರೆಯು ನಿವಾರಣೆಯಾದೀತೆಂದು ಹಾರೈಸುತ್ತಾರೆ.

## ವಿದೇಶ ವರ್ತಮಾನಗಳು.

ಚೀನಾ ಚಕ್ರಾಧಿಪತ್ಯದಲ್ಲಿ ಷೇಸಿ ಎಂಬ ಅಧಿಪತ್ಯಕ್ಕೆ ಸೇರಿದ ಪಿಂಗ್‌ಲೋಸಿನ್ ಎಂಬ ಊರಿನಲ್ಲಿ ಚೀಣೆಯವರು ಮೂರು ಮಂದಿ ಪೇಟೆಯ ಕ್ರೈಸ್ತರನ್ನು ಕೊಂದುಹಾಕಿರುತ್ತಾರೆ.

◆◆◆◆

ಲಂಡನ್ ನಗರಕ್ಕೆ ಪ್ಲೇಗ್ ಉಪದ್ರವೆಲ್ಲಿ ಪ್ರವೇಶಮಾಡುವದೋ ಎಂಬ ಭಯದಿಂದ ಮ್ಯುನಿಸಿಪಾಲಿಟಿಯವರು ಕಳೆದ ವರುಷ ೧,೮೬,೦೦೦ ಹೆಗ್ಗಣ ಇಲಿಗಳನ್ನು ಹಿಡಿಸಿ ಕೊಲ್ಲಿಸಿದರು.

◆◆◆◆

ಅಮೇರಿಕದಲ್ಲಿ ಹರಿಯುವ ಕೊಲಂಬಿಯಾ ನದಿಯಲ್ಲಿ ಪ್ರವಾಹಗಳು ವಿಪರೀತವಾಗಿ ಬಂದು ಹೆಪ್ನರ್ ಎಂಬೊಂದು ದೊಡ್ಡ ಊರೆಲ್ಲಾ ಸಮೂಲವಾಗಿ ಕೊಚ್ಚಿಕೊಂಡು ಹೋಯಿತು. ಸುಮಾರು ೩೫೦ ಮಂದಿ ಪ್ರಜೆಗಳು ಲಯವಾಗಿರುತ್ತಾರೆ.

◆◆◆◆

ಮೆಕ್ಸಿಕೋ ಸೀಮೆಯಲ್ಲಿರುವ ಪ್ಯುಯೆಬ್ಲೋ ಎಂಬ ಸಂಸ್ಥಾನದ ಒಂದು ದೊಡ್ಡ ಕಾಡಿನಲ್ಲಿ ಪ್ರಾಚೀನ ಕಾಲದ ಕೋಟೆ ಗೋಡೆಗಳೂ, ಅರಮನೆಗಳೂ, ದೊಡ್ಡ ದೊಡ್ಡ ಬಂಗಲೆಗಳೂ ಸಿಕ್ಕಿರುತ್ತವೆ. ಇವುಗಳನ್ನು ಅಗೆದು ಬಿಡಿಸಿ ಶೋಧನೆ ಮಾಡುತ್ತಿದ್ದಾರೆ.

◆◆◆◆

ದಕ್ಷಿಣ ಅಫ್ರಿಕಕ್ಕೆ ಸೇರಿದ ಕೇಪ್ ಕಾಲನಿ ಸೀಮೆಯಲ್ಲಿ ಪಶುಗಳಿಗೆ ರೋಗ ತಗಲಿ ಸಾಯುವುದು ಹೆಚ್ಚಾಯಿತು. ಇದನ್ನು ನೋಡಿ ಆ ರೋಗ ನಿವಾರಣೆ ಮಾಡತಕ್ಕವರಿಗೆ ೨೫,೦೦೦ ಪೌಂಡು ಇನಾಮು ಕೊಡುತ್ತೇವೆಂಬದಾಗಿ ಸರ್ಕಾರದವರು [illegible] ಮಾಡಿರುತ್ತಾರೆ.

◆◆◆◆

ಫಿಲಿಪೈನ್ ದ್ವೀಪಗಳಿಗೆ ದಕ್ಷಿಣ ದಿಕ್ಕಿನಲ್ಲಿ ಬಹು ಉತ್ಕೃಷ್ಟವಾದ ಕೆಲವು ಹೊಸ ದ್ವೀಪಗಳಿರುವುದಾಗಿ ಅಮೇರಿಕದ ನಾವಿಕರು ಕಂಡುಹಿಡಿದರು. ಈಗ ಈ ದ್ವೀಪಗಳು ಇನ್ಯಾವ ರಾಜ್ಯಗಳಿಗೂ ಸೇರಿದವುಗಳಾಗಿಲ್ಲದಿದ್ದರೆ ಅಮೇರಿಕಕ್ಕೆ ಸೇರಿಸಿಕೊಳ್ಳುವಂತೆ ಹುಕುಂ ಆಗಿರುವದು.

◆◆◆◆

ಫಾರ್ಮೋಸಾ ದ್ವೀಪದಲ್ಲಿ ಜಪಾನಿನವರು ಒಂದು ದೊಡ್ಡ ಕಾರ್ಖಾನೆಯನ್ನಿಟ್ಟು ಕರ್ಪೂರವನ್ನು ತಯಾರ್ಮಾಡುತ್ತಾರೆ. ಅಲ್ಲಿನ ಜನರಿಗೆ ದರ್ಬಾರಿನವರನ್ನು ಕಂಡರಾಗದು. ಅವರು ಕಳೆದ ವಾರ ಆ ಕಾರ್ಖಾನೆಗೆ ನುಗ್ಗಿ ಸುಮಾರು ೧೦—೧೫ ಮಂದಿಯನ್ನು ಕೊಂದು, ಲೂಟಿಮಾಡಿ ಬಂದರು.

◆◆◆◆

ಮಿಸ್ ಸ್ಕಾರ್ಡ್ಸ್ ಎಂಬೊಬ್ಬ ಅಮೇರಿಕದ ಸ್ತ್ರೀಯು ಲಂಡನ್ ಪಟ್ಟಣದಿಂದ ಬ್ರೈಟನ್ ನಗರಕ್ಕೆ ೫೭ ಮೈಲಿ ದೂರ ಒಂದು ದೊಡ್ಡ ಚಂಡಿನ ಮೇಲೆ ಅದನ್ನೇ ಉರುಳಿಸಿಕೊಳ್ಳುತ್ತಾ ಹೋಗಿ ಸೇರಿ ಜೂಜು ಕಟ್ಟಿದ್ದ ೫೦೦ ಪೌಂಡುಗಳನ್ನು ಗೆದ್ದುಕೊಂಡಳೆಂದು ತಂತೀ ವರ್ತಮಾನ ಬಂದಿದೆ.

◆◆◆◆

ಲಂಡನ್ ಪಟ್ಟಣದಿಂದ ಸ್ಕಾಟ್ಲಾಂಡಿನಲ್ಲಿರುವ ಕಾರ್ಲೈಲ್ ಪಟ್ಟಣಕ್ಕೆ ೩೦೦ ಮೈಲಿ ಆಗುವದು. ಕಳೆದ ವಾರ ಅಲ್ಲಿಂತಲ್ಲಿಗೆ ಸ್ಪೆಷಲ್ ರೈಲನ್ನು ಓಡಿಸಿದರು. ಅದು ಮಧ್ಯೆ ಒಂದು ಕಡೆಯಲ್ಲೂ ನಿಲ್ಲದೆ ೬ ಗಂಟೆ ಹೊತ್ತಿನಲ್ಲಿ ಹೋಗಿ ತಲಪಿತು. ಇಷ್ಟು ವೇಗವಾಗಿ ಯಾವ ರೈಲ್ ಗಾಡಿಯೂ ಓಡಿದ್ದಿಲ್ಲವೆಂದು ಹೇಳುತ್ತಾರೆ.

◆◆◆◆

ವಿಲಾಯತಿಯ ದೊರೆಯವರು ತಮ್ಮ ರಾಜ್ಯಾಂಗವಾದ ಐರ್ಲಾಂಡಿಗೆ ಹೋಗಿ ಬರುವವರಾಗಿದ್ದಾರಷ್ಟೆ. ಆ ದ್ವೀಪಕ್ಕೆ ಮುಖ್ಯ ನಗರವಾದ ಡಬ್ಲಿನ್ ಪಟ್ಟಣದಲ್ಲಿ ಮಹಾ ಜನರು ಒಂದು ಸಭೆ ಕೂಡಿಸಿ, ದೊರೆಯವರು ತಮ್ಮ ಊರಿಗೆ ಬಂದರೆ ಅವರಿಗೆ ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಲೇ ಕೂಡದೆಂಬದಾಗಿ ತೀರ್ಮಾನಿಸಿರುತ್ತಾರೆ.

◆◆◆◆

ತುರ್ಕಿ ರಾಜ್ಯದ ರಾಜಧಾನಿಯಾದ ಕಾನ್ಸ್ಟಂಟಿನೋಪಲ್‌ನಲ್ಲಿ ಅಲ್ಬೇನಿಯಾ ಸಿಪಾಯಿಗಳು ಗ್ರಾಂಡ್ ವಜೀರ್ ಎಂಬ ಮಂತ್ರಿಗಳ ಮನೆ ನುಗ್ಗಿ ಅದನ್ನು ಮದ್ದಿನಿಂದ ಉಡಾಯಿಸಿ ಕೆಡವಿಬಿಟ್ಟರೆಂತಲೂ, ಈ ಸಮಾಚಾರವನ್ನು ಸುಲ್ತಾನರು ಗಾಬರಿ ಬಿದ್ದು, ರಾಜ್ಯಭಾರವನ್ನು ಬಿಟ್ಟುಬಿಡಬೇಕೆಂದು ಯೋಚಿಸುತ್ತಿದ್ದಾರೆಂತಲೂ ತಂತೀ ವರ್ತಮಾನ ಬಂದಿದೆ.

◆◆◆◆

ದಕ್ಷಿಣ ಆಫ್ರಿಕಾ ಯುದ್ಧಕಾರ್ಯದಲ್ಲಿ ಸೇರಿ ಹೋರಾಡಿ ಬಂದಿರುವ ಇಂಗ್ಲಿಷ್ ಸೋಜರುಗಳಿಗೆಲ್ಲಾ ಗೌವರ್ನಮೆಂಟಿನವರು ಬಿರುದುಗಳ ಬಿಲ್ಲೆಯನ್ನು ಅವರವರ ಯೋಗ್ಯತಾನುಸಾರ ಕೊಡಬೇಕೆಂದು ತೀರ್ಮಾನಿಸಿರುತ್ತಾರಷ್ಟೆ. ಇದುವರೆಗೆ ಸರ್ಕಾರದವರು ೧೩,೬೨,೩೩೦ ಬಿಲ್ಲೆಗಳನ್ನು ಮಾಡಿಸಿ ಹಂಚಿದ್ದಾಯಿತೆಂತಲೂ ಉಳಿದ ಸೋಜರುಗಳಿಗೂ ಬೇಗ ಬೇಗನೆ ಮಾಡಿಸಿ ಕೊಡುವವರಾಗಿದ್ದೇವೆಂತಲೂ ಯುದ್ಧದ ಇಲಾಖೆಯವರು ತಿಳಿಸಿರುತ್ತಾರೆ.

◆◆◆◆

ಪೋರ್ಟ್ ಆರ್ಥರ್ ಎಂಬ ತೀರಪಟ್ಟಣದಲ್ಲಿ ರಷ್ಯಾ ರಾಜ್ಯದ ಮುಖ್ಯ ಹುದ್ದೇದಾರರೆಲ್ಲಾ ಕಳೆದ ವಾರ ಸಭೆ ಸೇರಿ ಅಂತರಂಗದಲ್ಲೇ ಏನೋ ಸಲಹೆಗಳನ್ನು ಮಾಡಿಕೊಂಡರು. ಈ ಸಭೆಗೆ ಚೀನಾ ಮಂಚೂರಿಯ, ಕೊರಿಯಾ ಪ್ರಾಂತ್ಯಗಳಿಂದ ಹುದ್ದೇದಾರರನ್ನು ಕರೆಸಿಕೊಂಡಿದ್ದರು. ಜಪಾನ್ ರಾಜ್ಯದವರು ತುಂಬಾ ಕೋಪೋದ್ರೇಕರಾಗಿ ಯುದ್ಧಸನ್ನದ್ಧರಾಗುತ್ತಿದ್ದಾರೆಂತಲೂ, ಅಮೇರಿಕದವರು ಹೊಸದಾಗಿ ಕೆಲವು ಸೈನ್ಯಗಳನ್ನು ಆ ಪ್ರಾಂತ್ಯ ಕಳುಹಿಸಿರುವದಾಗಿಯೂ ತಂತೀ ವರ್ತಮಾನ ಬಂದಿದೆ.

◆◆◆◆

ಸೋಮಾಲಿಲ್ಯಾಂಡಿನ ರಾಜನ ಮೇಲೆ ಇಂಗ್ಲಿಷರು ಯುದ್ಧಕಾರ್ಯವನ್ನು ನಡಸುತ್ತಿದ್ದಾರಷ್ಟೆ. ಇದೇ ಜುಲೈ ಪ್ರಾರಂಭದಿಂದ ಇದುವರೆಗೆ ಇಂಗ್ಲಿಷ್ ಸೈನಿಕರಲ್ಲಿ ೨೩ ಮಂದಿ ಹುದ್ದೇದಾರರೂ, ೩೩೯ ಮಂದಿ ಸೈನಿಕರೂ ಕೊಲ್ಲಲ್ಪಟ್ಟರು, ಇಲ್ಲವೇ ಗಾಯಪಟ್ಟರು. ಈ ಯುದ್ಧಸನ್ನಾಹವು ಪ್ರಾರಂಭವಾದಂದಿನಿಂದ ಇದುವರೆಗೆ ಇಂಗ್ಲಿಷ್ ಗೌವರ್ನಮೆಂಟಿಗೆ ೩,೫೦,೦೦೦ ಪೌಂಡು ವ್ಯಯವಾಗಿದೆ. ಮತ್ತು ಈಗ ತಿಂಗಳೊಂದಕ್ಕೆ ಸುಮಾರು ೫೦,೦೦೦ ಪೌಂಡಿನಂತೆ ಖರ್ಚಾಗುತ್ತಿದೆ ಎಂಬದಾಗಿ ವಿಲಾಯತಿ ರಾಜ್ಯದ ಇಂಡಿಯಾ ಸೆಕ್ರೆಟರಿ ಮಿ॥ ಬ್ರಾಡ್ರಿಕ್‌ಯವರು ಕಳೆದ ವಾರ ಪಾರ್ಲಿಮೆಂಟ್ ಸಭಾಮನೆಯಲ್ಲಿ ತಿಳಿಸಿದರು.

◆◆◆◆

ಸ್ಪೇನ್ ರಾಜ್ಯದವರಿಗೂ ಅಮೇರಿಕದವರಿಗೂ ಯುದ್ಧ ನಡೆಯಿತಷ್ಟೆ. ಈ ಯುದ್ಧಕ್ಕೋಸ್ಕರ ಸ್ಪೇನ್ ರಾಜ್ಯದವರು ವಿಲಾಯತಿಯ ಒಂದು ಕಂಪನಿಯವರಿಗೆ ೩ ಯುದ್ಧದ ಹಡಗುಗಳನ್ನು ಬೇಗನೆ ತಯಾರ್ಮಾಡಿಸಿ ಕೊಡುವಂತೆ ಕಂಟ್ರಾಕ್ಟು ಕೊಟ್ಟರು. ಆದರೆ ಆ ಕಂಪನಿಯವರು ಅವುಗಳನ್ನು ತಯಾರ್ಮಾಡಿ ಕಳುಹಿಸುವದರಲ್ಲಿ ತಾಮಸವಾಯಿತು. ಇದಕ್ಕಾಗಿ ಸ್ಪೇನ್ ಗೌವರ್ನಮೆಂಟಿನವರ ಮೇಲೆ ದಾವಾ ಮಾಡಿದರು. ಈ ಮೊಕದ್ದಮೆ ಎರಡು ಕೋರ್ಟುಗಳಿಗೆ ಹತ್ತಿ ವಿಚಾರಣೆ ಆಯಿತು. ಜಡ್ಜಿಗಳು ಈಗ ತೀರ್ಮಾನ ಹೇಳಿದಾರೆ. ಈ ತೀರ್ಮಾನದಿಂದ ಕಂಪನಿಯವರು ಸ್ಪೇನ್ ಸರ್ಕಾರಕ್ಕೆ ೬೭,೫೦೦ ಪೌಂಡು ಪಾವತಿಮಾಡಿ ಬಿಡಬೇಕಾಗಿದೆ.

◆◆◆◆

ಫ್ರಾನ್ಸ್ ರಾಜ್ಯದ ಪ್ರೆಸಿಡೆಂಟರಾದ ಎಂ. ಲೋಬೋಯವರು ಹಿಂದಿನ ವಾರ ವಿಲಾಯತಿ ರಾಜ್ಯಕ್ಕೆ ದಯಮಾಡಿದ್ದರಷ್ಟೆ. ಇವರಿಗೆ ಇಂಗ್ಲೆಂಡ್ ದೊರೆಯವರು ಬಕಿಂಗ್ಹಾಂ ಅರಮನೆಯಲ್ಲಿ ಭಾರೀ ಔತಣವನ್ನು ಮಾಡಿಸಿದರು. ಸುಮಾರು ೨,೦೦೦ ಮಂದಿ ದೊಡ್ಡ ಮನುಷ್ಯರೂ ರಾಜವರ್ಗದವರೂ ಭೋಜನಮಾಡಿದರು. ಮರುದಿನ ಪ್ರೆಸಿಡೆಂಟರವರು ಫ್ರಾನ್ಸಿಗೆ ಪಯಣಮಾಡಿದರು. ದೊರೆಯವರೂ, ಪ್ರಿನ್ಸ್ ಆಫ್ ವೇಲ್ಸ್‌ಯವರು, ದೊಡ್ಡಮನುಷ್ಯರು ಮೊದಲಾದವರೆಲ್ಲಾ ಸ್ಟೇಷನಿಗೆ ಹೋಗಿ ಪ್ರೆಸಿಡೆಂಟರನ್ನು ಸಾಗಕಳುಹಿಸಿ ಬಂದರು. ಪ್ರೆಸಿಡೆಂಟರವರು ತಮ್ಮನ್ನು ಬಹಳ ಶ್ರೇಷ್ಠತರವಾಗಿಯೂ, ಅತ್ಯಂತ ಆದರ ಪೂರ್ವಕವಾಗಿಯೂ ವಿಲಾಯತಿಯವರು ಸತ್ಕರಿಸಿರುತ್ತಾರೆಂಬದಾಗಿ ದೊರೆಯವರಿಗೆ ತಂತೀ ವರ್ತಮಾನ ಕಳುಹಿಸಿದರು.

ಈಜಿಪ್ಟಿನ ಖಿಡೈವ್ ರಾಜರಾದ ೨ ನೇ ಅಬ್ಬಾಸ್‌ಯವರಿಗೆ ಅರಬ್ಬಿ, ಇಂಗ್ಲಿಷ್, ಫ್ರೆಂಚ್ ಜರ್ಮನ್, ಇಟಾಲಿಯನ್, ತುರ್ಕಿ ಭಾಷೆಗಳು ಬಹಳ ಚನ್ನಾಗಿ ಬರುವವು. ಇವರಿಗೆ ಈಜಿಪ್ಟ್ ಗವರ್ನಮೆಂಟಿನವರು ಸರ್ಕಾರಿ ಹಣದಿಂದ ಪ್ರತಿ ವರ್ಷವೂ ೩೦ ಲಕ್ಷ ರೂಪಾಯಿ ಕೊಡುತ್ತಿದಾರೆ ಇದಲ್ಲದೆ ಅವರ ಸ್ವಂತವಿ ತ್ತಾರ್ಜಿತವಾದ ಆಸ್ತಿಯು ವಿಪರೀತವಾಗಿರುವುದು. ಇವರ ಸಂಸಾರಕ್ಕೆ ಸೇರಿದವರು ಸುಮಾರು ೧೦೦ ಮಂದಿ ರಾಣೀವಾಸದವರೆಂತಲೂ, ಸಾವಿರಾರು ಮಂದಿ ಚಾಕರಿಯವನರೆಂತಲೂ ತಿಳಿಯುವದು. ಅಬ್ಬಾಸ್‌ಯವರು ತಮ್ಮ ಆಸ್ತಿಯನ್ನು ಜಮೀನುಗಳ ಮೇಲೆ ಹಾಕಿ, ಸ್ವಂತವಾಗಿ ಜಮೀನುಗಳನ್ನು ಮಾಡಿಸಿ, ವ್ಯವಸಾಯೋಪಕರಣಗಳನ್ನು ಅಮೇರಿಕದಿಂದ ಕೊಂಡು ತರಿಸುತ್ತಾರೆ. ಅವರು ಹತ್ತಿ ಬೆಳೆಯನ್ನು ಆಧಾರವಾಗಿ ಮಾಡಿ ಬೆಳೆಯಿಸುತ್ತಲೂ, ಅದರಿಂದ ತುಂಬಾ ಲಾಭ ಸಂಪಾದಿಸುತ್ತಲೂ ಬಂದಿರುವರು.

# ದೇವಾಂಗ ವಂಶಸ್ತರಿಗೆ ಬೇಕಾದ್ದು

12

ಸ್ವಲ್ಪ ಪ್ರತಿಗಳಿವೆ. ಜಾಗ್ರತೆಪಟ್ಟರೆ ಸಿಕ್ಕುತ್ತೆ. ನಂತರ ಬಂದಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು. ಅರ್ಥಸಹಿತ ದೇವಾಂಗಮತಪ್ರಕಾಶಿಕೆ. ಸರ್ವಾವ ಕಾಲಕ್ಕೆ ಸುಂದರವಾದ ೧೪ ಚಿತ್ರಗಳಿವೆ. ಸ್ವಮತತತ್ವವಿಚಾರದ ಪ್ರಕಾಶದರ್ಪಣವು. ಪ್ರತ್ಯಕ್ಷ ನೋಡಿ ಸಂತೋಷಪಡಿ.

೧೪ ಚಿತ್ರಗಳಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ ೩—೮.
ಚಿತ್ರಗಳಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೨—೮.
ವೇದ ಉಪನಿಷತ್ತು ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ. ೨—೮.

ತಕ್ಷಣವೇ ಮನಿಆರ್ಡರಿಗೂ ವಿ. ಪಿ. ಲೂ ಕಳುಹಿಸುತ್ತೇವೆ. ಮೈಸೂರು ಜವಳಿ ಅಂಗಡಿ ಶ್ರೀಬ್ರಹ್ಮ ಯಜಮಾನ ಪುಟ್ಟಮಲ್ಲಯ್ಯ, ಬ್ರಹ್ಮಶ್ರೀ ಯಜಮಾನ ವೆಂಕಟಪ್ಪಯನವರಲ್ಲಿ ಈ ಗ್ರಂಥ ಸಿಕ್ಕುತ್ತೆ.

ಹೋಮಿಯೋಪತಿ.

ತಕ್ಷಣ ಪರಿಹಾರ.

ಹಚ್ಚಿದ ಕೂಡಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ದೇಹರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಮುಳುಕತ್ತಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪುರುಪದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ, ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್, ಖರ್ಚು ಮಾಫಿ ಬಿಡುತ್ತೆ.

*********

ಹೋಮಿಯೋಸಿಯಾ ಎಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಪೆಟ್ಟಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಸಿಯಾ ಕಂಪೆನಿ, ೨೭ ಸೆಕಂಡು ಬೀಚ್ ಲೈನ್, ಮದರಾಸ್.

# ಶ್ರೀ ಕೃಷ್ಣವಿಲಾಸ್ ಪ್ರೆಸ್.

38

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡ್, ನೋಟೀಸ್ ಫಾರಂ, ಬ್ಯಾಲನ್ಸ್ ಷೀಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಛಾರ್ಜುಗಳಿಗೆ ಮಾಡಲ್ಪಡುತ್ತವೆ.

ರೋಡು, ವರ್ಗ, ಮುಂತಾದ ಖಾಲೀ ಪುಸ್ತಕಗಳು; ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು; ಇನ್ನು ಇತರವಾದ ಸಮಸ್ತಿಯ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿನಂತೆ ಬಹು ಅಂದವಾಗಿ ತಯಾರ್ಮಾಡಲ್ಪಡುತ್ತವೆ.

ಲಾಯರ್‌ಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್, ವಕಾಲತ್‌ನಾಮಾ, ಜಾರೀ, ರಸೀದಿ, ನೋಟೀಸ್ ಫಾರಂಗಳೇ ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಖರೀದಿಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯತರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಜವಾಬನ್ನು ಅಪೇಕ್ಷಿಸುವವರು ಟಪ್ಪಾಲು ಹಾಸಲನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡಪೇಟೆ ೨೫ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ.

ವಿಳಾಸ —ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

ಜ್ವರಹರಿ. 41

ಇದು ಸಾಧಾರಣ ಜ್ವರ, ಚಳೀಜ್ವರ, ಮೋಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ, ೧—೮ ರೂ, ೨ ರೂ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

*********

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ವರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಕೆನ್ನಿಯು ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರ್ಲ್ಲಿ ವಿಶೇಷ.—

ಕನ್ನಿಯುವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

## ಮೈಸೂರು ಶೀಮೆಯಲ್ಲಿ ಪ್ಲೇಗಿನ ಸ್ಥಿತಿ.

೧೨—೭—೧೯೦೩ ರಿಂದ ೧೮—೭—೧೯೦೩ ರ ವರೆಗೆ.

| ಸ್ಥಳ. | ಪ್ಲೇಗ್ ಆಗಲಿ ಬಿದ್ದ. | ಪ್ಲೇಗ್ ಸತ್ತ ದ್ದು. | ಹಿಂದಿನವಾರದ ಸಂಖ್ಯೆಗಳು | |
|---|---|---|---|---|
| ಬೆಂಗಳೂರು ಪಟ್ಟಣ | | | | |
| ಮೈಸೂರು ,, | 5 | 4 | 5 | 4 |
| ಬೆಂಗಳೂರು ಡಿಸ್ಟ್ರಿಕ್ಟ್ | 59 | 22 | 18 | 17 |
| ಮೈಸೂರು ,, | 53 | 36 | 50 | 30 |
| ಕೋಲಾರ್ ,, | 25 | 24 | 18 | 16 |
| ಕೋಲಾರ್ ಚಿನ್ನದ ಗಣಿಗಳು | | | | |
| ತುಮಕೂರು ಡಿಸ್ಟ್ರಿಕ್ಟ್ | 35 | 40 | 13 | 16 |
| ಹಾಸನ ,, | 7 | 2 | 4 | 3 |
| ಚಿತ್ರದುರ್ಗ ,, | 109 | 70 | 76 | 45 |
| ಕಡೂರ್ ,, | 2 | 3 | 1 | |
| ಶಿವಮೊಗ್ಗ ,, | 44 | 11 | 43 | 10 |
| ಜುಮ್ಲಾ | 332 | 245 | 236 | 148 |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಆಷಾಢ ಬಹುಳ ಚತುರ್ದಶಿ ಗುರುವಾರದಿಂದ ಶ್ರಾವಣ ಶುದ್ಧ ಪಂಚಮಿ ಬುಧವಾರದ ವರೆಗಿನ ವಾರದ ಪಂಚಾಂಗ

೧೯೦೩ ನೇ ಇಸವಿ, ಜುಲೈ.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ | ಘಳಿಗೆ. | ಕಟಕ ಮಾಸ ತೇದಿ. |
|---|---|---|---|---|---|---|
| 23 | ಗುರು | ಚತುರ್ದಶಿ | 37 52 | ಆರ್ದ್ರಾ | 17 28 | 8 |
| 24 | ಶುಕ್ರ * | ಅಮಾವಾಸ್ಯೆ | 31 50 | ಪುನರ್ವಸು | 13 21 | 9 |
| 25 | ಶನಿವಾರ † | ಪಾಡ್ಯಮಿ | 25 3[illegible] | ಪುಷ್ಯ | 9 12 | 10 |
| 26 | ರವಿವಾರ ‡ | ಬಿದಿಗೆ | 19 21 | ಆಶ್ಲೇಷ | [illegible] | 11 |
| 27 | ಚಂದ್ರ | ತದಿಗೆ | [illegible] | ಮಘ | 1 20 | 12 |
| 28 | ಕುಜ | ಚೌತಿ | [illegible] | ಪುಬ್ಬ | 57 30 | 13 |
| 29 | ಬುಧ ¶ | ಪಂಚಮಿ | 4 10 | ಉತ್ತರ | 54 12 | 14 |

* ಸರ್ವತ್ರ ಅಮಾವಾಸ್ಯ, ಭೀಮೇಶ ರವ್ರತ † ಶ್ರಾವಣ ಶನಿವಾರ ‡ ತಿಥಿದ್ವಯಂ. ಮಂಗಳಗೌರೀವ್ರತ, ನಾಗರ ೪. ¶ ಗರುಡ ೫

## ಪೇಟೆ ಧಾರಣೆ.

| ದಿನಸಿ. | ಮೈಸೂರು. | ಬೆಂಗಳೂರು. |
|---|---|---|
| ಕಬ್ಬೇ ಅಕ್ಕಿ ಪಲ್ಲ ೧ಕ್ಕೆ | ರೂ ೧೦ ೮—೦ | ೧೦—೮— |
| ಕೆಂಬೂತಿ ಅಕ್ಕಿ ಅವಲ್ | ೧೦ ೪ ೦ | ೧೦—೮— |
| ,, ದುಯಂ | ೯—೮—೦ | ೧೦—೦— |
| ಜಾವಾಲಿ ಅಕ್ಕಿ | ೯—೬—೦ | ೧೨—೦— |
| ಸಣ್ಣಕ್ಕಿ ಅವಲ್ | ೧೨—೮—೦ | ೧೨—೦— |
| ,, ದುಯಂ | ೧೨ ೦—೦ | ೧೧—೦— |
| ತೊಗರೀ ಬೇಳೆ ಪಲ್ಲ ೧ಕ್ಕೆ | ೧೭ ೦ ೦ | ೧೪—೦— |
| ,, ದುಯಂ | ೧೨ ೮—೦ | ೧೩—೦— |
| ಬೈರ ರಾಗಿ ಪಲ್ಲ ೧ಕ್ಕೆ | ೩ ೧೪—೦ | ೩—೧೪— |
| ಕಾರಾಗಿ | ೩—೮ ೦ | ೩—೪— |
| ಜೋಳ | ೩—೧೦—೦ | ೭—೦— |
| ಹಲಸಂದೆ ಪಲ್ಲ ೧ಕ್ಕೆ | ೭—೧೨—೦ | ೮—೮— |
| ಬಿಳೀ ಅವರೆ | ೭ ೦—೦ | ೭—೦— |
| ಹೆಸರು | ೮ ೦—೦ | ೯—೮— |
| ಉದ್ದು | ೮ ೩ ೦ | ೮—೦— |
| ಕಡಲೆ | ೯ ೮—೦ | ೧೦—೦— |
| ಎಳ್ಳು | ೧೩ ೧೨ ೦ | ೧೦—೧೫—೧ |
| ಹುರುಳಿ | ೪—೦ ೧ | ೪—೧೨— |
| ಹರಳು ೧೨೩ ಸೇರಿಗೆ | ೯—೧೨—೦ | ೫—೧೪— |
| ಸೀಗೇಕಾಯಿ ಮಣ ೧ಕ್ಕೆ | ೧—೮—೦ | ೧—೮— |
| ಮೆಣಸಿನಕಾಯಿ | ೨—೮—೦ | ೨—೦— |
| ,, ದುಯಂ | ೨—೪ ೦ | ೧—೮— |
| ಬೆಲ್ಲ ದೊಡ್ಡ ಅಚ್ಚು | ೪—೮—೦ | ಸಾ ೧—೩— |
| ಒಳ್ಳೆಣ್ಣೆ ಮಣ ೧ಕ್ಕೆ | ೫—೦ ೦ | ೪—೬— |
| ಹರಳೆಣ್ಣೆ ,, | ೩—೧೨—೦ | ೩—೦— |
| ಕೊಬ್ಬರಿ ಪಲ್ಲ ೧ಕ್ಕೆ | ೫—೮—೦ | ೪—೯— |
| ಉಪ್ಪು ,, | ೯—೦—೦ | ೯—೦— |
| ಹುಣಸೇ ಹಣ್ಣು | ೦—೧೪—೦ | ೦—೧೩— |
| ,, ಹಳೇದು | ೦—೧೦—೦ | ೦—೧೨— |
| ಹುಣ್ಣು | ೧೦—೧೨—೦ | ೧೦—೬— |
| ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ | ೪—೯—೦ | ೪—೨— |
| ತೆಂಗಿನಕಾಯಿ ೧೦೦ಕ್ಕೆ | ೪—೪—೧ | ೩—೧೨— |
| ಅಳಲೇಕಾಯಿ ಮಣ ೧ಕ್ಕೆ | ೦—೧೩ ೦ | ೦—೧೦— |
| ಅಂಟುವಾಳದಕಾಯಿ ಮಣ ೧ಕ್ಕೆ | ೦—೧೩—೦ | ೦—೧೦— |
| ಚಿನ್ನ (ಪವನ್) ಕೆಂಪು | ೧೫—೪—೦ | ೧೫—೪— |
| ,, ,, ಪಸಿಮೆ | ೧೫—೮—೦ | ೧೫—೯— |
| ,, ,, ಗಟ್ಟಿ ತೊಲ ೧ಕ್ಕೆ | ೨೬—೦—೦ | ೨೪—೮— |
| ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ | ೩೨—೦—೦ | ೩೩—೦— |

Printed and Published by the Rev. E. W. Thompson, M.A., the Proprietor and Manager, Wesleyan Mission Press, Mysore. 23/7/1903.

# ವೃತ್ತಾಂತ ಪತ್ರಿಕೆ.

REGISTERED. M. 20

ಕ್ರಯ ೧ ದುಡ್ಡು —:೦:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೬ | ಮೈಸೂರು—ಸನ್ ೧೯೦೩ ನೇ ಇಸವಿ ಜೂಲೈ ತಾರೀಖು ೩೦ ನೇ ಗುರುವಾರ. | ಸಂಚಿಕೆ ೯



## ಶಿವಮೊಗ್ಗ ಡಿಸ್ಟ್ರಿಕ್ಟ್

4

ಪುಸ್ತಕಗಳೂ,

ಹಾಸನ ಟೋಪಿಗಳೂ,

ಲೇಖನ ಸಾಮಗ್ರಿಗಳೂ

ಕ್ರಯಕ್ಕೆ ದೊರೆಯುತ್ತವೆ.

ಮೇಲ್ವಿಳಾಸ:—

ಮ್ಯಾನೇಜರ್, ಮಿಷನ್ ಬುಕ್ ಡಿಪೋ,

ಶಿವಮೊಗ್ಗ.

## ಸ್ಟಾಂಡರ್ಡ್ ಲೈಫ್ ಅಷ್ಯೂರೆನ್ಸ್ ಕಂಪೆನಿ.

2

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟಿದ್ದು.

ಇಂಡಿಯಾ ದೇಶದಲ್ಲಿ ಲೈಫ್ ಇನ್ಷ್ಯೂರೆನ್ಸ್ ಯಾನೆ ಜೀವ ಮಾನವನ್ನು ಭೀಮಾ ಮಾಡಿಕೊಳ್ಳುವ ಕಂಪೆನಿಗಳಲ್ಲಿ ಇದು ಬಹು ಕಾಲದ್ದಾಗಿಯೂ ಶ್ರೇಷ್ಠವಾದ ಬಂಡವಾಳವುಳ್ಳದ್ದಾಗಿಯೂ ಇದೆ.

ಭೀಮಾದಾರರಾಗತಕ್ಕವರು (ಲೈಫ್ ಎಷ್ಯೂರ್ಡ್ ಮಾಡಿತಕ್ಕವರು) ಈ ಕಂಪೆನಿಯ ಚಂದಾ ದರ, ಷರತ್ತುಗಳು ಮೊದಲಾದವುಗಳನ್ನು ಇತರ ಕಂಪೆನಿಯವುಗಳೊಡನೆ ಹೋಲಿಸಿ ನೋಡಿದರೆ ಇಲ್ಲಿ ಜೀವಮಾನವನ್ನು ಭೀಮಾ ಮಾಡುವದರಿಂದ ಎಷ್ಟು ಪ್ರಯೋಜನ ಉಂಟೆಂಬುದು ಗೊತ್ತಾಗುವುದು.

ಈ ಕಂಪೆನಿಯು ಭೀಮಾ ನಿಬಂಧನೆಗಳು ಬಹು ಅನುಕೂಲವಾದುವು. ಭೀಮಾದಾರರುಗಳಿಗೆ ಬೇಸರವನ್ನು ಉಂಟುಮಾಡುವ ನಿರ್ಬಂಧಗಳೇನೂ ಇಲ್ಲ.

ಕ್ಲಿಪ್ತವಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲೇ ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂಪಾಯಿಗಳನ್ನು ಪಡೆಯಬೇಕಾದರೆ ಭೀಮಾದಾರನು ಕಂಪೆನಿಗೆ ಕೊಡಬೇಕಾದ ಚಂದಾವಿನ ದರಗಳ ಪೈಕಿ ಕೆಲವನ್ನು ಇಲ್ಲಿ ನೋಡಿ.

| ಪಾಲಿಸಿ ಪಡೆಯುತ್ತಿರುವ ವಯಸ್ಸು. | ೫೦ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಪಡೆಯಬೇಕಾದರೆ ಮಾಹೆಯಾನ ಕಂಪೆನಿಗೆ ಕೊಡತಕ್ಕದ್ದು. | ೫೫ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಯನ್ನು ಪಡೆಯಬೇಕಾದರೆ ಮಾಹೆಯಾನ ಕಂಪೆನಿಗೆ ಕೊಡತಕ್ಕದ್ದು. |
|---|---|---|
| ೨೦ | ರೂ. ೬—೧೨—೮ | ರೂ. ೭—೦—೦ |
| ೨೫ | ,, ೩—೧೫—೪ | ,, ೯—೧೪—೦ |
| ೩೦ | ,, ೯—೧೨—೮ | ,, ೮—೨—೦ |
| ೩೫ | ,, ೧೨—೯—೮ | ,, ೧೯—೧—೪ |
| ೪೦ | | ,, ೧೩—೪—೮ |

೨,೦೦೦ ರೂ. ಗಿಂತಲೂ ಹೆಚ್ಚಾದ ಹಣಕ್ಕಾಗಲಿ ಕಡಿಮೆಯಾದ್ದಕ್ಕಾಗಲಿ ವಯಸ್ಸಿನಲ್ಲಿ ಹೆಚ್ಚು ಕಡಮೆ ಇದ್ದರಾಗಲಿ ಚಂದಾ ದರವೇನೆಂಬುದನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಇದುವರೆಗೆ ಜಾರಿಯಲ್ಲಿದ್ದ ಚಂದಾ ದರಗಳನ್ನು ಕಡಮೆ ಮಾಡಿರುತ್ತೇವೆ. ಬಾಲ್ಯ ವರ್ಷಕ್ಕೆ ತಯಾರಾಗಿರುವ ಹೊಸ ಚಂದಾ ಪಟ್ಟಿಯನ್ನೂ ಭೀಮಾ ದರಖಾಸ್ತು ಫಾರಂಗಳನ್ನೂ ಇದೇ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಎಂ. ಸೋಮಸುಂದರಮೊದಲಿಯಾರ್,

ಕಮಿಷನ್ ಮತ್ತು ಜನರಲ್ ಏಜನ್ಸಿ,

ಶಿವಮೊಗ್ಗ.


## ಬೇಕಾಗಿದೆ.

6

ಕೊಳ್ಳೇಗಾಲದ ಗಂಡು ಹುಡುಗರ ಸ್ಕೂಲಿಗಾಗಿ ಕನ್ನಡಪಾಠ ಹೇಳಿ ಕೊಡುವ ಒಬ್ಬ ಮೇಸ್ಟರು ಬೇಕು. ಕ್ರೈಸ್ತರಾದರೆ ಉತ್ತಮ. ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

"ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು.


## ಸರಸ್ವತೀಕರ ಕಸ್ತೂರಿ ಮಾತ್ರೆಯು.

8

ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥಾವರಿಗೆ ಅತ್ಯಂತ ಉಪಯುಕ್ತವಾದದ್ದು. ಈ ಮಾತ್ರೆ ೧—೨ ತಾಂಬೂಲದ ಸಂಗಡ ಸೇವಿಸುವದರಿಂದ ಬಾಯಿಯು ಸುವಾಸನೆಯುಂಟಾಗಿ ಬಾಯಿಯ ದುರ್ಗಂಧ, ಹೋಗಿ ಅಜೀರ್ಣ, ಉಷ್ಣರೋಗ, ಬಾಯಿಯ ಜೊಲ್ಲು, ಉಗ್ಗಿಸುತ್ತಾ ಮಾತಾಡುವದು, ವಾಯು, ಶೀತ, ಪಿತ್ಥ, ಮಲಬದ್ಧ, ದಂತದೋಷ, ಬಾಯಿಹುಣ್ಣು, ಹಸಿವೆ, ಜ್ವರ, ಛಳಿ, ನೆಗಡಿ, ತಲೆಬೇನೆ ಇತ್ಯಾದಿ ಅನೇಕ ರೋಗಗಳಿಗೆಲ್ಲಾ ರಾಮಬಾಣದಂತಿರುವದು. ಹೆಂಗಸರ ಗುಪ್ತವಾದ ಅನೇಕ ಬಾಧ್ಯಗಳಿಗೆ ವಜ್ರಾಯುಧದಂತಿರುವದು. ಚಿಕ್ಕ ಮಕ್ಕಳಿರುವ ಮನೆಯಲ್ಲಿ ಈ ಮಾತ್ರೆಯು ಸಹ ಬೇಕಾಗುವದು. ಈ ಮಾತ್ರೆಯು ನಿಮ್ಮಲ್ಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸ್ವಾಧೀನದಲ್ಲಿದ್ದಂತೆಯೇ. ೨೦೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೧೪ ಆಣೆ, ೫ ಆಣೆ ಔಷಧವು ೨ ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವು ನಮಗೆ ಬರೆಯುವದಾಗಿ ಬಲಾತ್ಕಾರಪಡಿಸುವದು.

ಸಿ. ಪಿ. ಅಂಡ್ ಕಂಪೆನಿ, ಬೆಂಗಳೂರು ಸಿಟಿ.

## ROBINSON'S PATENT BARLEY.

## ರಾಬಿನ್‌ಸನ್‌ಯವರ ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಎಪೆಗೋಧಿಯಿಂದ ಮಾಡಿದೆ. ಹಸ್ತಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದ ಪಾಕ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಉಪಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸಕ್ಕರೆ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ಬೇರೆ ಪದಾರ್ಥವನ್ನು ಕೆಲವರು ಮಾಡುತ್ತಾ ರಾದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು

## MELLIN'S FOOD.

ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

73

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮಾಂಸಖಂಡಗಳೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಕವಾದ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವ ವೇಳೆಯಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಪಾಕ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಹಂಬಲಿಕೆಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ಧಿನಸು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಸಿಡುಬು ಹಾಕಿದ ಕಾಲದಲ್ಲಿಯೂ ಶೈಶವದಲ್ಲಿಯೂ ಒದಗುವ ಮಿಕ್ಕಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುಣಕುಪದಾರ್ಥವು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ಪಕ್ಕತಕ್ಕದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ದೃಢಪಡಿಸುವದರಿಂದ ಶಿಶುಗಳಿಗೆ ರೋಗಗಳಿಂದ ವಿಪತ್ತುಗಳನ್ನು ತಡೆದು ಮಟ್ಟಗೊಳಿಸುವ ಮಾಡುತ್ತದೆ.

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಷಾಪುಗಳಿಗೂ ಬರೆದು ತರಿಸಿಕೊಳ್ಳಬಹುದು :—

ಪಟನ್ :—ಮೆ॥ ಕಾವಸ್ ದಿನ್‌ಷಾ ಬ್ರದರ್ಸ್.

ಬೊಂಬಾಯಿ :—ಮೆ॥ ಲೇಡಂ ಅಬೆರ್‌ಕ್ರಾಂಬಿ ಕಂಪೆನಿ.

ಕಲ್ಕತ್ತ :—ಮೆ॥ ಸ್ಮಿತ್‌ಸ್ಟ್ಯಾನಿಸ್ಟ್ರೀಟ್ ಕಂಪೆನಿ.

ಕೊಲಂಬೊ :—ಮೆ॥ ಸಾಲ್ವೆಲ್ಸನ್ ಕಂಪೆನಿ.

ಕರಾಚಿ :—ಮೆ॥ ಎಚ್. ಜೆ. ರುಸ್ತುಂಜೀ ಕಂಪೆನಿ.

ಮದ್ರಾಸು :—ಮೆ॥ ಓಕ್ ಕಂಪೆನಿ.

ರಂಗೂನ್ :—ಲೇಡಂ ಬ್ಲೇಕ್ ಕಂಪೆನಿ.

# ಈಗೋ, ಸಿದ್ಧವಾಗಿದೆ. ಕ್ರಯುಳ್ಳ ...

8

೧೯೦೩ ನೇ ಇಸವಿ ಲೋವರ್ ಸೆಕೆಂಡರಿ ಕನ್ನಡ ಟೆಕ್ಸ್ಟಿನ ಕೋಟ್ಸ್. ೧೪೫ ನೇ ಪದ್ಯದಿಂದ ೩೦೭ ನೇ ಪದ್ಯದ ವರಿಗೂ ಇ ರುತ್ತೆ. ಗದ್ಯಕಾವ್ಯದ ನೋಟ್ಸೂ ಸೇರಿದೆ. ಅರ್ಥ, ತಾತ್ಪರ್ಯ, ಸಂಧಿ, ಸಮಾಸ, ಅನ್ವಯಪದಾರ್ಥ, ಭಾವಾರ್ಥ, ನಾನಾರ್ಥ, ಪೂರ್ವ ಕಥೆ, ವ್ಯಾಕರಣವಿಶೇಷ, ಪ್ರಶ್ನೋತ್ತರ, ಮುಂತಾಗಿ ಪರೀಕ್ಷೆಗೆ ಬೇಕಾಗತಕ್ಕ ಎಲ್ಲಾ ವಿಷಯಗಳೂ ವಿಶದವಾಗಿ ತಿಳಿಸಲ್ಪಟ್ಟಿವೆ. ಮರಿಮಲ್ಲಪ್ಪನವರ ಸ್ಕೂಲು ಮಹಾದೇವ ಶಾಸ್ತ್ರಿಗಳಿಂದ ರಚಿಸಲ್ಪಟ್ಟಿದ್ದು. ೧೦ ಕ್ಕೆ ೧ ಪ್ರತಿ ಜಾಸ್ತಿ. ಪುಸ್ತಕ ದೊರೆಯತಕ್ಕ ಸ್ಥಳ.—

ಕೆ. ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.

ಹೊಸ ಪುಸ್ತಕಗಳು! ಹೊಸ ಪುಸ್ತಕಗಳು!!

ಪ್ರಶ್ನೋತ್ತರ ಲೇಖ್ಯಬೋಧಿನಿ.

ಎರಡನೇ ಭಾಗ.

ಈ ಮುದ್ರಣದಲ್ಲಿ ಹಿರಿದು ಕಾಗದ ಹಾಕುವುದಿಲ್ಲ ಅನೇಕ ತಿದ್ದುಪಾಟುಗಳೊಂದಿಗೆ ಪುಸ್ತಕವನ್ನು ದೊಡ್ಡದಾಗಿಸುತ್ತೆ. ವಿಷಯಗಳು:—ಮೊದಲನೇ ಮುದ್ರಣದಲ್ಲಿ ಅಡಗಿರುವವುಗಳನ್ನು ಹಾಗೆಯೇ ಉಳಿಸಿ, ಈಗ—ಹಿಂದೂಲಾ, ಮಹಮ್ಮದಿಲಾ, ಕಂಟ್ರಾಕ್ಟ್, ಡಾಮೇಜು, ವಾರಸು, ವೈಸಸು, ಸಿವಿಲ್ ಪ್ರೊ' ಕೋಡು, ಲಿಮಿಟೇಷನ್, ಜನರಲ್ ಸ್ಟಾಂಪು, ಕೋರ್ಟು ಫೀ ಸ್ಟಾಂಪು, ಏವಿಡೆನ್ಸ್, ಪೀನಲ್ ಕೋಡು, ಕ್ರಿಮಿನಲ್ ಪ್ರೊ' ಕೋಡು, ಗ್ರಾಮ ಪೋಲೀಸ್, ಟರ್ನ ಪೋಲೀಸ್, ಸಾಕ್ಷ್ಯ, ಮ್ಯುನಿಸಿಪಲ್, ಫಾರೆಸ್ಟ್, ರೆವಿನ್ಯೂ ಕೋಡು, ರೆವಿನ್ಯೂ ರೂಲ್ಸು, ಲ್ಯಾಂಡ್ ಇಂಪ್ರೂವ್‌ಮೆಂಟು, ಲಾಂಡ್ ಅಕ್ವಿಜಿಷನ್, ಡೊಡ್ಡಿ, ಆರಂಸ್, ಇವೇ ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳನ್ನು ಸಂಗ್ರಹಿಸಿ, ಪ್ರಶ್ನೋತ್ತರ ರೂಪವಾಗಿಯೇ ಬೇರೆ ಬೇರೆಯಾಗಿ ಹೆಚ್ಚಿಗೆ ಸೇರಿಸಿ ಮುದ್ರಿಸಲ್ಪಡುವದು. ಪುಸ್ತಕವು ಮೊದಲಿಗಿಂತಲೂ ಬಹಳ ದೊಡ್ಡದಾಗುತ್ತೆ. ವಿಷಯಗಳೂ ಬಹಳ ಹೆಚ್ಚಾಗಿರುವದರಿಂದ ಇದರ ಉಪಯೋಗವನ್ನು ಗ್ರಾಹಕರೇ ತಿಳಿಯಬಹುದು. ಇದರ ಯೋಗ್ಯತಾನುಸಾರ ಬೆಲೆ ಹೆಚ್ಚುಮಾಡಬೇಕಾದಾಗ್ಯೂ ಗ್ರಾಹಕರ ಸೌಕರ್ಯಕ್ಕಾಗಿ ಮೊದಲಿನಂತೆ ಒಂದೇ ರೂಪಾಯಿ ಕ್ರಯವಿಟ್ಟು ಅಂಚೆ ಮುಂತಾದ ಖರ್ಚುಗಳಿಗಾಗಿ ಆರಾಣೆಯನ್ನು ಹೆಚ್ಚಿಸಿರುತ್ತೆ. ಇದು ಮೊದಲು ಅಚ್ಚು ಪೂರೈಸುವ ಎರಡು ತಿಂಗಳೊಳಗಾಗಿ ಮುಂಗಡ ರೂ. ೧—೬—೦ ಯ ಮನಿಯಾರ್ಡರಿನೊಂದಿಗೆ ಪುಸ್ತಕ ಅಪೇಕ್ಷಿಸುವವರಿಗೆ ಮಾತ್ರ "ಭೂಮಿಯ ಆಳತೆ" ಎಂಬೊಂದು ಪುಸ್ತಕವನ್ನು ಬಹುಮಾನವಾಗಿ ಕೊಡಲ್ಪಡುವುದು.

ಮೊದಲನೇ ಮುದ್ರಣದ ಸಾಧಾರಣ ಪ್ರತಿಗಳು ಕೆಲವು ಮಾತ್ರ ಉಳಿದಿವೆ. ಕ್ರಯ ವಿ. ಪಿ. ಯಲ್ಲಿ ೧೫ ಆಣೆ ಮಾತ್ರ.

ಭೂಮಿಯ ಅಳತೆ—ಬಂದು ತುಂಡು ಪಲಿಗೆ, ಅಳತೆಯ ಸರಪಣಿ, ಇವುಗಳೊಂದಿಗೆ ಈ ಪುಸ್ತಕ ಒಂದಿದ್ದು ಇದರಲ್ಲಿ ಹೇಳಿದಂತೆ ಭೂಮಿಯಲ್ಲಿ ಪುಗ್ಗಿ ಕೆಲಸ ಮಾಡುವವರು ರೆವಿನ್ಯೂ ಸರ್ವೆ ರೂಲ್ಸು ಪ್ರಕಾರ ಜಮೀನ್ ಪೋಡಿಣೀ ಮಾಡುವುದನ್ನು ಬೇರೆ ಯಾರ ಸಹಾಯವೂ ಇಲ್ಲದೆ ತಾವಾಗಿಯೇ ಕಲಿಯಬಹುದು. ವಿ. ಪಿ. ಯಲ್ಲಿ ಒಂದೇ ರೂಪಾಯಿ

ಮೊದಲನೇ ಭಾಗಯ "ಪ್ರಶ್ನೋತ್ತರ ಲೇಖ್ಯ ಬೋಧಿನಿ," "ಭೂಮಿಯ ಅಳತೆ"—ಇವೆರಡನ್ನೂ ಅಪೇಕ್ಷಿಸುವವರಿಗೆ ವಿ. ಪಿ. ಯಲ್ಲಿ ರೂ ೧—೨—೦ ಮಾತ್ರವೇ.

ಶ್ರೀಮಜ್ಜಗದ್ಗುರು ಶಂಕರಾಚಾರ್ಯರಚಿತವೇದಾಂತ ಗ್ರಂಥರತ್ನಗಳು.

ಕನ್ನಡ ಟೀಕಾ ತಾತ್ಪರ್ಯ ವಿಶೇಷಾರ್ಥ ವಿವರಣೆಸಹಿತವಾಗಿರುವವು.

| | | | |
|---|---|---|---|
| ಮನೀಷಾ ಪಂಚರತ್ನಂ | ೬ ಆ. | ದ್ವಾದಶಚತುರ್ದಶಮಂಜರಿ | ೧ ಆ. |
| ಉಪದೇಶ ಪಂಚರತ್ನಂ | ೩ ,, | ಆತ್ಮಬೋಧೆ | ೨ ,, |
| ಅನುಭವ ಪಂಚರತ್ನಂ | ೧ ,, | ಶಿವಾನಂದಲಹರಿ | ೬ ,, |
| ಶ್ಲೋಕೈಕಪಂಚರತ್ನಂ | ೨ ,, | ಶಿವಗೀತೆ | ೪ ,, |

ಅಂಚೆ ಖರ್ಚು ಬೇರೆ ಕೊಡಬೇಕು.

ಈ ಎಂಟು ಪುಸ್ತಕಗಳನ್ನೂ ಒಂದೇ ಸಲ ಅಪೇಕ್ಷಿಸಿದರೆ ವಿ. ಪಿ. ಯಲ್ಲಿ ರೂ. ೧—೧೧—೦ ಮಾತ್ರವೇ.

ವಿವೇಕಚೂಡಾಮಣಿ. ಅಚ್ಚಾಗುತ್ತಿದೆ.—ಶ್ರೀಮದಾಚಾರ್ಯ ಕೃತಿಯಂತೆ ವೇದಾಂತ ಗ್ರಂಥಸಮುದಾಯಕ್ಕೆ ಚೂಡಾಮಣಿಯಾಗಿರುವ ಈ ಗ್ರಂಥ ಒಂದು ಇದ್ದರೆ ಇತರಾಪೇಕ್ಷೆ ಇಲ್ಲದೆ ವಿಚಾರಶೀಲರಿಗೆ ಗ್ರಂಥಸ್ಥ ವಿಷಯವು ಮನನವಾದಂತೆಲ್ಲ ಚಿತ್ತ ಪರಿಪಕ್ವವಾಗುವುದಕ್ಕೆ ಸಂಶಯವಿಲ್ಲವು. ಬರುವ ತಿಂಗಳಲ್ಲಿ ಪುಸ್ತಕ ಸಿದ್ಧವಾಗುವುದು. ಮುಂಗಡ ಒಂದು ರೂಪಾಯಿ ಮೊಬಲಗು ಮನಿಯಾರ್ಡರು ಕಳುಹಿಸುವವರಿಗೆ ಮೇಲೆ ಕಂಡ ೧ ರಿಂದ ನಾಲ್ಕನೆ ಸಂಖ್ಯೆವರೆಗಿನ ನಾಲ್ಕು ಗ್ರಂಥಗಳು ಬಹುಮಾನ ಸಿಕ್ಕುವುದು.

ಗ್ರಾಹಕರು ತ್ವರೆಮಾಡಿ ತಮ್ಮತಮ್ಮ ಉಪಾದಾಶ್ರಯದೊಡನೆ ನಮ್ಮ ಲೋಕೋಪಯೋಗಕ್ಕೆ ಸಹಾಯಕರಾಗಿ ಪ್ರೋತ್ಸಾಹ ಕೊಡುವರೆಂದು ಪ್ರಾರ್ಥಿಸುವ

ಸಜ್ಜನವಿಧೇಯ,

ಭಾರತಿ ಸಂಪಂಗಿರಾಮ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಚೇಂಬರ್ಲೆನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

30




ಕೆಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಹಿಡಿಯುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ—"ಕೆಳಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಅತ್ಯೋತ್ಕೃಷ್ಟವಾದ ಔಷಧ, ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವದೂ ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಗಲೇ ಕೊಂಡು ತರಿಸಿ, ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ.—

ಬಿ. ವಿ. ನರಸಿಂಹಲು ಚೆಟ್ಟಿ,

ಸಂ. ೨, ಅಂಬೂನಾಯಕರ ಬೀದಿ,

ಮದರಾಸ್.


ನಮ್ಮ ಚಂದಾದಾರರಿಗೆ ನೋಟೀಸು.

"ವೃತ್ತಾಂತ ಪತ್ರಿಕೆ" ಯ ಏಜಂಟರು ಚಂದಾ ವಸೂಲ್ಮಾಡಿ ಕೊಂಡದ್ದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲ.

ಮ್ಯಾನೇಜರ್,

ಮೈಸೂರು. "ವೃತ್ತಾಂತ ಪತ್ರಿಕೆ" ಆಫೀಸ್.

## ವೃತ್ತಾಂತ ಪತ್ರಿಕೆ.

ಸನ್ ೧೯೦೩ ನೇ ಇಸವಿ ಜೂಲೈ ತಾ॥ ೨೩ ನೇ ಗುರುವಾರ.

### ಪೋಪು ಸ್ವಾಮಿ ೧೩ ನೆ ಲಿಯೋ ಅವರ ಮರಣವು.

ಈ ತಿಂಗಳ ೨೦ ನೇ ತಾರೀಖು ಸೋಮವಾರ ಮಧ್ಯಾಹ್ನ ೪ ಘಂಟೆ ವೇಳೆಯಲ್ಲಿ ರೋಮನ್ ಕೆಥೋಲಿಕ್ ಕ್ರೈಸ್ತಗುರುಗಳಾದ ಪೋಪುಸ್ವಾಮಿಯವರು ರೋಮ್ ನಗರದಲ್ಲಿ ಕೆಲವು ದಿನ ಅಸ್ವಸ್ಥರಾಗಿದ್ದು ಪರಂಧಾಮವನ್ನು ಹೊಂದಿದರು. ಇವರು ಸನ್ ೧೮೧೦ ರಲ್ಲಿ ಹುಟ್ಟಿದ ರಾಜವಂಶದ ಸಾಮಾನ್ಯ ಒಬ್ಬರಿಗೆ ೬ ನೆ ಮಗನಾಗಿ ಜನಿಸಿದ್ದರು. ಇವರು ಬಾಲ್ಯದಲ್ಲಿ ಪಾಠಶಾಲೆಯಲ್ಲಿಯೂ ಸರ್ವಕಲಾಶಾಲೆಯಲ್ಲಿಯೂ ಬಹು ಬುದ್ಧಿವಂತರೆಂದು ಕೀರ್ತಿಯನ್ನು ಹೊಂದಿದವರಾಗಿದ್ದರು. ಇಷ್ಟೇ ಅಲ್ಲ; ಇವರು ವಿದ್ಯಾಭ್ಯಾಸದಲ್ಲಿ ತಮ್ಮ ಮನಸ್ಸನ್ನೆಲ್ಲಾ ಸಂಪೂರ್ಣವಾಗಿ ನಿಲ್ಲಿಸಿಕೊಂಡಿದ್ದರೇ ವಿನಾ ಬಾಲಕರಿಗೆ ಸ್ವಾಭಾವಿಕವಾದ ಆಟಪಾಟಗಳಲ್ಲಿ ಅವರಿಗೆ ಸ್ವಲ್ಪವೂ ಶ್ರದ್ಧೆ ಇರಲಿಲ್ಲ.

ಇವರು ರೋಮನ್ ಕೆಥೋಲಿಕ ಮಂದಿರಿಯಲ್ಲಿ ಗುರುವಿನ ಉದ್ಯೋಗವನ್ನು ಹೊಂದಿ ಮೇಲೆ ಬೇಗ ಬೇಗ ದೊಡ್ಡ ದೊಡ್ಡ ಪದವಿಗಳನ್ನು ಹೊಂದುತ್ತ ಬಂದು, ಕಡೆಗೆ ೧೮೭೮ ರಲ್ಲಿ ಪೋಪುಸ್ವಾಮಿಗಳಾಗಿ ಆರಿಸಿಕೊಳ್ಳಲ್ಪಟ್ಟರು. ಇವರನ್ನು ನೇಮಿಸಿದ ಕಾಲದಲ್ಲಿ ಬಂದಿದ್ದ ಬಬ್ಬ ಕಾರ್ಡಿನಲ್ ಎಂಬ ಅಧ್ಯಕ್ಷನು ತಮ್ಮ ಊರಿಗೆ ಹೋಗಿ—ವೃದ್ಧರಾದವರನ್ನು ಪೋಪುಸ್ವಾಮಿಯಾಗಿ ಆರಿಸಿಕೊಂಡಿದ್ದಾರೆ. ಇವರು ಬಹು ಬಲಹೀನರು, ಬಹುಕಾಲ ಬದುಕುವಂತಿಲ್ಲ; ಇನ್ನೊಬ್ಬ ಪೋಪುಸ್ವಾಮಿಯನ್ನು ಆರಿಸಿಕೊಳ್ಳುವ ಕಾಲವು ಇಷ್ಟರಲ್ಲೇ ಬಂದೀತು ಎಂದು ಹೇಳಿದರಂತೆ. ಈ ಮಾತು ನಿಜವಾದೀತೋ ಏನೋ ಎಂಬ ಹಾಗೆ ಆ ಕಾಲದಲ್ಲಿ ತೋರುತ್ತಿತ್ತು. ಯಾಕಂದರೆ ಈ ೧೩ ನೇ ಲಿಯೋ ಯವರು ವೃದ್ಧಕಾಯರಲ್ಲ; ಯಾವಾಗಲೂ ಬಹು ಸೂಕ್ಷ್ಮವಾದ ಆರೋಗ್ಯವುಳ್ಳವರಾಗಿದ್ದರು. ಇವರು ಇಷ್ಟು ಕಾಲ ಆ ಘನವಾದ ಪದವಿಯನ್ನು ಧರಿಸಿರುವರೆಂದು ಒಬ್ಬರೂ ನಂಬಿರಲಿಲ್ಲ. ಇವರಿಗೆ ಪೂರ್ವಾಧಿಕಾರಿಗಳಾಗಿದ್ದ ೯ ನೇ ಪಯಸ್ ಎಂಬವರೊಬ್ಬರ ವಿನಾ ಇವರಷ್ಟು ದೀರ್ಘಕಾಲ ಇನ್ನಾರೂ ಆ ಮಹಾ ಪದವಿಯನ್ನು ಆಕ್ರಮಿಸಿರಲಿಲ್ಲ. ೯ ನೇ ಪಯಸ್ ಸ್ವಾಮಿಯವರು ೩೨ ವರ್ಷಗಳು ಆಳಿದರು.

ಪೋಪುಸ್ವಾಮಿಯನ್ನು ಪ್ರಧಾನಗುರುಗಳಾಗಿ ನೇಮಿಸುವ ಕಾಲದಲ್ಲಿ—"ನೀವು ಶ್ರೀ ಪೇತ್ರನಷ್ಟು ದೀರ್ಘವಾಗಿ ಆಳುವವರಾಗುವದಿಲ್ಲ" ಎಂದು ಹೇಳುವದುಂಟು. ರೋಮನ್ ಕೆಥೋಲಿಕ ಕ್ರೈಸ್ತರು ತಮ್ಮ ಸಭೆಗಳಿಗೆಲ್ಲಾ ಮಾತೃಸ್ಥಾನವಾಗಿರುವ ರೋಮ್ ನಗರದ ಮೊದಲನೇ ಅಧ್ಯಕ್ಷನು ಶ್ರೀ ಪೇತ್ರನೇ ಎಂದೂ ಆತನು ೨೫ ವರ್ಷಗಳು ಆಳಿದನೆಂದೂ ನಂಬಿರುವರು. ಈ ಉದ್ಯೋಗಕ್ಕೆ ಬರತಕ್ಕವರೆಲ್ಲರು ಹೆಚ್ಚಾಗಿ ವೃದ್ಧರೇ ಆಗಿರುವದರಿಂದ ಇಷ್ಟು ದೀರ್ಘಕಾಲ ಒಬ್ಬರೇ ಆಳುತ್ತಿರುವದು ಬಹಳ ಸಂಶಯವೇ. ಆದರೆ ಈ ಊಹೆಗೆ ವ್ಯತಿರಿಕ್ತವಾಗಿ ಈಗ ಮೃತರಾದ ೧೩ ನೇ ಲಿಯೋ ಸ್ವಾಮಿಯವರೂ ಇವರ ಹಿಂದಣ ೯ ನೇ ಪಯಸ್ ಸ್ವಾಮಿಯವರೂ ನೇಮಿಸಲ್ಪಟ್ಟ ಕಾಲಕ್ಕಿಂತ ಹೆಚ್ಚುಗಾಲ ಆಳಿದರು!

ಲಿಯೋ ಪೋಪುಸ್ವಾಮಿಯವರು ವೃದ್ಧಕಾಯರಾಗಿದ್ದರೂ ಅವರ ಮಾನಸಿಕ ಶಕ್ತಿಯು ಕಡೆಯವರೆಗೂ ಕುಂದದೆ ಇದ್ದಿತು. ಅವರು ತಮ್ಮ ವಾಕ್ಚಾತುರ್ಯದಿಂದ ವಿಸ್ತಾರವಾದ ಕೆಥೋಲಿಕ ಸಮಾಜವನ್ನು ಇಷ್ಟು ಕಾಲವೂ ಪರಿಪಾಲಿಸುತ್ತಾ ಬಂದಿರುವುದನ್ನು ನೋಡುವಲ್ಲಿ ಅವರು ಬಹು ಶಕ್ತರಾದವರೆಂದು ಗೊತ್ತಾಗುತ್ತೆ. ಅವರ ಜೀವನಕಾಲದಲ್ಲಿ ತೋರುತ್ತಿದ್ದ ಸಾಧುತ್ವವೂ, ಪರಿಶುದ್ಧತೆಯೂ, ಪ್ರೇಮಶಕ್ತಿಯೂ ಬಹು ವಿಶೇಷವಾದವುಗಳಾಗಿದ್ದುದರಿಂದ ಕ್ರೈಸ್ತರಾದವರೆಲ್ಲರೂ ಯಾವ ಪಂಗಡ ಭೇದವೂ ಇಲ್ಲದೆ ಅವರಲ್ಲಿ ಮಮತೆಯನ್ನೂ ಮರ್ಯಾದೆಯನ್ನೂ ಇಟ್ಟುಕೊಂಡಿದ್ದರು.

### ರುಷುವತ್ತು.

ಕಳೆದ ೧೯೦೦ ನೆ ಇಸವಿಯಲ್ಲಿ ಧಾರವಾಡ ಜಿಲ್ಲಾ ಹಂಪಿಸ್ಸಿ ಪಟ್ಟಣದಲ್ಲಿ ಮಾಮಲೇದಾರ್ರಾಗಿಯೂ ೨ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಇದ್ದ ಮಿ॥ ಮುಲ್ಲಂಡ ಎಂಬವರು ನಾರಪ್ಪ ಬಸಪ್ಪ ಎಂಬೊಬ್ಬ ಕಕ್ಷಿಗಾರನನ್ನು ಜೈಲಿಗೆ ಕಳುಹಿಸುತ್ತೇನೆಂದು ಹೆದರಿಸಿ, ಅವನಿಂದ ೫೦೦ ರೂ ಲಂಚ ತರಿಸಿಕೊಂಡರೆಂಬದಾಗಿ ಒಂದು ಮೊಕದ್ದಮೆ ಆಯಿತು. ಜಿಲ್ಲಾದ ೧ ನೆ ಕ್ಲಾಸ್ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ತನಿಖೆ ಮಾಡಿ, ಆ ಮಾಮಲೇದಾರರಿಗೆ ೬ ತಿಂಗಳ ಕಠಿಣ ಸಜವನ್ನೂ ೬೦೦ ರೂ ಜುಲ್ಮಾನೆಯನ್ನೂ ವಿಧಿಸಿದರು ತರುವಾಯ ಮಾಮಲೇದಾರರು ಅಪೀಲ್ ಮಾಡಿಕೊಂಡರು. ಜಿಲ್ಲಾದ ಸೆಷನ್ಸ್ ಜಡ್ಜರಾದ ಮಿ॥ ಗ್ಲಾಸ್ಟರ್ ಯವರು ಈ ಮೊಕದ್ದಮೆಯ ಕಟ್ಟನ್ನು ಸಾಂಗೋಪಾಂಗವಾಗಿ ಓದಿನೋಡಿ, ಕೆಳಕೋರ್ಟಿನ ತೀರ್ಮಾನವನ್ನು ರದ್ದುಮಾಡಿ, ಮಾಮಲೇದಾರರನ್ನು ಖುಲಾಸ್ ಮಾಡಿರುತ್ತಾರೆ.

ಅಧಿಕಾರಿಗಳು ಎಷ್ಟು ರುಜುಭೀತರಾಗಿದ್ದರೂ ಇಂಥಾ ಮೊಕದ್ದಮೆಗಳು ಹುಟ್ಟುವದು ಆಶ್ಚರ್ಯವೇ ಸರಿ. ಜಿಲ್ಲೆ ನೌಕರಿ ಮಾನೆಯರು ತಾಲ್ಲೂಕುಗಳಲ್ಲೂ ಕೋರ್ಟುಗಳಲ್ಲೂ ನಡೆಸುವ ದಾಂಧಲೆಯನ್ನು ಯಾರು ತಾನೇ ತಿಳಿದಿಲ್ಲ? ರೈತರೂ ಕಕ್ಷಿಗಾರರೂ ವಿವೇಕಿಗಳಾಗದೆ ನೌಕರರು ನ್ಯಾಯವಾಗಿ ಮಾಡುವ ಕೆಲಸಕ್ಕೂ ಅವರಿಗೆ ದುಡ್ಡು ಕಾಸು ಕೊಟ್ಟು ಸಂತೋಷ ಪಡಿಸಿ, ಲಂಚಕೋರರನ್ನಾಗಿ ಮಾಡುತ್ತಾರೆ ಇದರಿಂದ ಬಾಳೆ, ಬಾಳೆ ನಾಯಿ ಮುಂತಾದ ತರಕಾರಿಯಾದರೂ ತಂದುಕೊಡಬಾರದೇ ಎಂಬದಾಗಿ ಕೇಳತಕ್ಕ ನೌಕರರು ಹುಟ್ಟಿ ಅಪಾಯವಾಗುವದು. ಮೇಲ್ಪಟ್ಟ ಹುದ್ದೇದಾರರು ತಮ್ಮ ನಡವಳಿಕೆಯನ್ನು ಮಾತ್ರ ಎಚ್ಚರಿಕೆಯಿಂದ ನೋಡಿಕೊಳ್ಳುವುದೇ ಸಾಲದು, ತಮ್ಮ ಕೈಕೆಳಗಿನ ನೌಕರರ ನಡವಳಿಕೆಯನ್ನು ತುಂಬಾ ಜಾಗರೂಕತೆಯಿಂದ ನೋಡಿಕೊಳ್ಳುತ್ತಾ ಬಂದ ಪಕ್ಷದಲ್ಲಿ ವಿಶೇಷ ಪ್ರಯೋಜನವಾದೀತು. ಮುಖ್ಯವಾಗಿ ಲಂಚ ಕೊಡತಕ್ಕವರು ಇಲ್ಲದೋದರೆ ತಸಕ ಲಂಚಕೋರರ ಹಾವಳಿ ತಪ್ಪುತ್ತಿಲ್ಲ. ಈ ಭಾಗವನ್ನು ರೈತರೂ, ಕಕ್ಷಿಗಾರರೂ ಚನ್ನಾಗಿ ಮುಂದಿಟ್ಟು ಮಾಡಿಕೊಳ್ಳಬೇಕೆಂದು ಎಚ್ಚರಿಸುತ್ತೇವೆ.

## ಒಳದೇಶದ ವೃತ್ತಾಂತಗಳು.

ಚಾಮುಂಡಿ ಬೆಟ್ಟದಮೇಲಿರುವ ದೇವೀಕೆರೆಯನ್ನು ದುರಸ್ತು ಮಾಡುವದಕ್ಕೆ ೫೬೦ ರೂ. ಸ್ಯಾಂಕ್ಷನ್ ಆಗಿದೆ.

*****

ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಸರ್ಕಾರಿ ಮುಸಾಫರ ಖಾನೆಗಳಲ್ಲಿ ಯಾರೂ ಒಂದು ವಾರಕ್ಕಿಂತ ಹೆಚ್ಚಾಗಿ ಇರಕೂಡದೆಂದು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುಗಳು ತೀರ್ಮಾನಿಸಿದ್ದಾರೆ.

*****

ಬೆಂಗಳೂರು ಪಟ್ಟಣದಲ್ಲಿ ಈವಿನಿಂಗ್ ಮೆಯಿಲ್ ಎಂಬ ವರ್ತಮಾನ ಪತ್ರಿಕೆಯ ಎಡಿಟರಾಗಿದ್ದ ಮಿ॥ ಎಫ್. ಗುಡಾಲ್ ಯವರು ಕಾಯಿಲೆ ಇದ್ದು ಕಳೆದ ವಾರ ಆಸ್ಪತ್ರೆಯಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

*****

ಬೆಂಗಳೂರು ಬಸವನ ಗುಡಿ, ಮಲ್ಲೇಶ್ವರಗಳ ಕಡೆ ಪಟ್ಟಣವನ್ನು ಬಡಾವಣೆ ಮಾಡುವುದಕ್ಕೆ ಸರ್ಕಾರದವರಿಗೆ ೨,೮೫,೦೦೦ ರೂ. ಖರ್ಚಾಗಿದೆ. ಸರ್ಕಾರದವರು ಈ ಭಾಗಗಳನ್ನು ಮ್ಯುನಿಸಿಪಾಲಿಟಿಗೆ ವಹಿಸಿ, ಈ ಸಾಲವನ್ನು ಜ್ಯಾಗ ತೀರಿಸುತ್ತೀರೆಂದು ಕೇಳಿದಾರೆ.

*****

ನಮ್ಮ ಮಹಾರಾಜರವರು ಕಳೆದ ಶನಿವಾರ ಬೆಳಿಗ್ಗೆ ಪ್ರೈವೆಟ್ ಸೆಕ್ರೆಟರಿ ಯವರನ್ನು ಕರೆದುಕೊಂಡು ಸ್ಪೆಷಲ್ ರೈಲಿನಲ್ಲಿ ಬೆಂಗಳೂರಿನಿಂದ ಕುಣಿಗಲಿಗೆ ದಯಮಾಡಿ, ಅಲ್ಲಿನ ಕುದುರೆಗಳ ಬೆಳವಳಿಗೆ ಮುಂತಾದ್ದನ್ನು ಪರಾಂಬರಿಸಿ, ಆ ದಿನವೇ ವಾಪಸು ಹೊರಟು ರಾತ್ರಿ ಬೆಂಗಳೂರಿಗೆ ಬಂದು ತಲಪಿದರು.

*****

ಪರಮಹಂಸ ರಾಮಕೃಷ್ಣ ಸ್ವಾಮಿಗಳ ಶಿಷ್ಯರೊಬ್ಬರು ಬೆಂಗಳೂರಿಗೆ ಬಂದಿರುತ್ತಾರೆ. ಇವರು ಕಳೆದ ಶನಿವಾರವೂ ಭಾನುವಾರವೂ ಉಪನ್ಯಾಸಗಳನ್ನು ಮಾಡಿದರು. ನಮ್ಮ ದಿವಾನರವರೂ, ದಿವಾನ್ ಬಹದೂರ್ ರಾಮಚಂದ್ರಯ್ಯರವರೂ ಸಭಾನಾಯಕರಾಗಿದ್ದುಕೊಂಡು ಉಪನ್ಯಾಸಗಳನ್ನು ಸಂಪೂರ್ಣಮಾಡಿದರು.

*****

ಮದರಾಸ್ ಗೌರ್ನರ್ ಲಾರ್ಡ್ ಅಂಪ್ಟಿಲ್ ಯವರು ದಕ್ಷಿಣದೇಶದ ಕಡೆ ಸಂಚಾರ ಹೊರಟು ಕಳೆದ ಶುಕ್ರವಾರ ಬೆಂಗಳೂರಿನಲ್ಲಿ ಬಂದು ಒಪ್ಪತ್ತು ತಂಗಿದ್ದರು. ನಮ್ಮ ದಿವಾನರು, ರೆಸಿಡೆಂಟರೇ ಮುಂತಾದವರು ಅವರನ್ನು ಎದುರ್ಗೊಂಡು ಗೌರವವಾಗಿ ಸತ್ಕರಿಸಿ, ಆ ದಿನವೇ ಮುಂದಕ್ಕೆ ಸಾಗಕಳುಹಿಸಿದರು.

*****

ರಾಜಧಾನಿಯಲ್ಲಿ ಮ್ಯುನಿಸಿಪಲ್ ಬೋರ್ಡಿನವರು ರಸ್ತೆ ಸರಿಮಾಡುವದಕ್ಕೆ ೫,೦೦೦ ರೂಪಾಯಿಗೆ ಒಂದು ಹಬೆಯ ಯಂತ್ರವನ್ನು ತರಿಸಿಕೊಳ್ಳಬೇಕೆಂದು ಕಾತರಪಡುತ್ತಾ ಸರ್ಕಾರದವರಿಗೆ ಅರಿಕೆಮಾಡಿದರು. ಸರ್ಕಾರದವರು ಆಗಬಹುದೆಂದು ಸ್ಯಾಂಕ್ಷನ್ ಮಾಡಿದರು. ಈಗ ಬೋರ್ಡಿನವರು—ನಮ್ಮಲ್ಲಿ ಹಣವಿಲ್ಲ, ಹಣ ಬಂದಾಗ ಕೊಂಡುಕೊಳ್ಳುತ್ತೇವೆಂದು ತಿಳಿಸಿದ್ದಾರೆ.

*****

ನಮ್ಮ ರೆಸಿಡೆಂಟರಾದ ಕರ್ನಲ್ ಡೋನಾಲ್ಡ್ ರಾಬರ್ಟ್‌ಸನ್ ರವರು ಮುಂದಿನ ಅಕ್ಟೋಬರ್ ತಿಂಗಳ ೨೪ಕ್ಕೆ ರೆಸಿಡೆಂಟ್ ಪದವಿಯ ಛಾರ್ಜನ್ನು ಹೊಸಬರಿಗೆ ವಹಿಸಿಕೊಟ್ಟು, ಮದರಾಸಿಗೆ ಹೋಗಿ ಅಲ್ಲಿ ಹಡಗುಹತ್ತಿ ಲಂಕಾದ್ವೀಪದ ಮೇಲೆ ಹೊರಟು, ಚೀನಾ, ಜಪಾನ್, ಅಮೇರಿಕ ಮುಂತಾದ ದೇಶಗಳನ್ನು ಸುತ್ತಿಕೊಂಡು ವಿಲಾಯಿತಿಯನ್ನು ತಲಪುವವರಾಗಿದ್ದಾರೆ.

*****

ನೆಲಮಂಗಲದಲ್ಲಿ ಮುನ್ಸಿಫ್ ಕೋರ್ಟು ಇದ್ದಾಗ್ಯೂ ಕಕ್ಷಿಗಾರರು ಕೋರ್ಟಿಗೆ ಪಾವತಿಮಾಡಿದ್ದ ಕೆಲವು ಹಣಗಳು ಅವರಿಗೆ ವಾಪಸು ಪಾವತಿ ಆಗದೆ ಕೋರ್ಟಿನಲ್ಲೇ ಉಳಿದಿವೆ ಎಂತಲೂ, ಪಾಲಸುದಾರರು ಆರು ತಿಂಗಳೊಳಗೆ ಅರ್ಜಿ ಕೊಟ್ಟು, ತಮ್ಮ ಹಣವನ್ನು ವಾಪಸು ಪಡೆಯಬೇಕೆಂತಲೂ ದೊಡ್ಡಬಳ್ಳಾಪುರದ ಮುನ್ಸಿಫ್ ಮಿ॥ ಟಿ. ವೆಂಕೋಬರಾಯರು ಜಾಹಿರ್ ಮಾಡಿಸಿರುತ್ತಾರೆ.

*****

ಮೈಸೂರಿನಲ್ಲಿರುವ ಕಂಪೆನಿಯವರೆಂಬವರು ಯೋಗಾನಂದವೆಂಬೊಂದು ನಾಟಕವನ್ನು ಕಟ್ಟಿ, ಹುಡುಗರಿಂದ ನಾನಾತರದ ಕಸರತ್ತಿನ ಆಟಗಳನ್ನು ಆಡಿಸುತ್ತಾರೆ. ಇವರು ಮುಂದಿನ ಭಾನುವಾರ ಮಂಗಳವಾರಗಳಲ್ಲಿ ಶಿವರಾಂಪೇಟೆ ಮಿಷನ್ ಸ್ಕೂಲಿನಲ್ಲಿ ಈ ನಾಟಕವನ್ನು ಆಡುವವರಾಗಿದ್ದಾರೆ. ಸಕಲರೂ ಹೋಗಿ ನೋಡುವದರ ಮೂಲಕ ಈ ಕಂಪನಿಯವರನ್ನು ಪ್ರೋತ್ಸಾಹಪಡಿಸುವರೆಂದು ನಿರೀಕ್ಷಿಸಲ್ಪಟ್ಟಿದೆ.

*****

ಈಗ ನಾಲ್ಕಾರು ದಿನಗಳಿಂದ ರಾಜಧಾನಿಯ ಟೌನ್‌ಹಾಲ್ ಚೌಕದಲ್ಲಿ (ಅಂದರೆ, ಕರ್ಜನ್ ಪಾರ್ಕಿನ) ರಾತ್ರಿಹೊತ್ತು ಒಂದು ಕಿರುಬನು ಬರುತ್ತಿದೆ. ಒಂದು ದಿನ ಒಂದು ಕತ್ತೆಯನ್ನು ಈ ಚೌಕದಲ್ಲಿ ಹೊಡೆದುಹಾಕಿತ್ತೆಂದು ಕೇಳುತ್ತೇವೆ. ರಾತ್ರಿ ಹತ್ತು ಗಂಟೆಯಾದಮೇಲೆ ಜನರು ಆ ಪ್ರಾಂತ ಸಂಚಾರ ಮಾಡಲು ಹೆದರುತ್ತಾರೆ. ಶಿಕಾರಿಗಳ್ಯಾರಾದರೂ ಅದನ್ನು ಹೊಡೆದು, ಜನರ ಭೀತಿಯನ್ನು ನಿವಾರಣೆಮಾಡಿಯಾರೆಂದು ನಿರೀಕ್ಷಿಸಲ್ಪಟ್ಟಿದೆ.

*****

ಬೆಂಗಳೂರು ಸಿಟಿ ಯಲಹಂಕದ ಬಾಗಲ ಬಳಿ ಜಮೀನು ಕೊಟ್ಟರೆ ಅದರಲ್ಲಿ ದನರ ಉಪಯೋಗಕ್ಕಾಗಿ ಒಂದು ಸ್ನಾನಗಟ್ಟವನ್ನೂ, ಒಂದು ಮಂಟಪವನ್ನೂ ಕಟ್ಟಿಸುತ್ತೇನೆಂಬದಾಗಿ ಮಿ॥ ಪಟ್ಟಣ ಗೋವಿಂದಪ್ಪನವರು ಮ್ಯುನಿಸಿಪಲ್ ಬೋರ್ಡಿಗೆ ಅರ್ಜಿ ಬರೆದುಕೊಂಡಿದ್ದರು. ಪ್ರೆಸಿಡೆಂಟರು ಒಪ್ಪಿದ ಪ್ಲಾನ್ ಪ್ರಕಾರ ಅವೆರಡನ್ನೂ ಕಟ್ಟುವುದಾದರೆ ಮಿ॥ ಗೋವಿಂದಪ್ಪನವರಿಗೆ ಸ್ಥಳ ಕೊಡಬಹುದೆಂದು ಬೋರ್ಡಿನವರು ಸಮ್ಮತಿಪಟ್ಟಿರುತ್ತಾರೆ.

*****

ಮೈಸೂರು ನಾರ್ಮಲ್ ಸ್ಕೂಲಿಗೆ ತಿಂಗಳಿಗೆ ೩೦ ರೂ ತಲಬಿನ ಒಬ್ಬ ಮಹಮದಿಯ ಉಪಾಧ್ಯಾಯನನ್ನು ನೇಮಿಸಬೇಕೆಂತಲೂ, ಹಾಲಿ ಉಪಾಧ್ಯಾಯರಾಗಿರುವ ಮೌಲ್ವಿ ಮಹಮದ್ ಹುಸೇನ್ ಖಾನ್ ಯವರಿಗೆ ೩೬ ರಿಂದ ೫೦ ರೂ. ಗೂ, ಮೌಲ್ವಿ ವಿಜಾರ್ ಮಹಮದ್ ಖಾದರ್ ಯವರಿಗೆ ೩೦ ರಿಂದ ೩೩ ರೂ ಗೂ, ಮೌಲ್ವಿ ಸಿಕಂದರುದ್ದೀನ್ ಯವರಿಗೆ ೨೦ ರಿಂದ ೨೨ ರೂ. ಗೂ ಸಂಬಳ ಬಡ್ತಿಮಾಡಿದೆ ಎಂತಲೂ ಗೌರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ.

*****

ಕೋಲಾರದ ಇಬ್ಬರು ವಕೀಲರು ಹಿಂದಿನ ವಾರ ಮೊಕದ್ದಮೆ ನಡೆಸುವದಕ್ಕೋಸ್ಕರ ಬೌರಿಂಗ್ ಪೇಟೆಗೆ ಹೋಗಿ ಕೋರ್ಟಿನ ಕೆಲಸ ತೀರಿದ ಮೇಲೆ ಜಟ್ಕಾ ಗಾಡಿಯಲ್ಲಿ ಕುಳಿತು ಹಿಂತಿರಿಗಿ ಬರುತ್ತಿರುವಲ್ಲಿ ನಾಲ್ವರು ಕೊರಚರು ಅವರ ಮೇಲೆ ಬಿದ್ದು ಅವರ ಬಟ್ಟೆಬರೆಗಳನ್ನೆಲ್ಲಾ ಕಿತ್ತುಕೊಂಡು, ಹೊಡೆದು ನಿರ್ವಾಣವಾಗಿ ವಾಪಸು ಕಳುಹಿಸಿದರು. ಈ ಕಳ್ಳರು ಇನ್ನೂ ಪತ್ತೇ ಆಗಿ ಇಲ್ಲ. ಊರಿನ ಹತ್ತಿರಲೇ ಇಂಥಾ ದರೋಡೆ ನಡೆವುದು ಪೋಲೀಸಿನವರಿಗೆ ಒಳ್ಳೇ ಹೆಸರು ತರಲಾರದು.

*****

ಸರ್ ಶೇಷಾದ್ರಿ ಐಯರವರ ಮೆಮೋರಿಯಲ್ ಫಂಡಿಗೆ ಒಟ್ಟು ೬೩,೦೦೦ ಚಂದಾ ವಸೂಲಾಗುವುದು. ಈ ಹಣದಲ್ಲಿ ಅವರ ಹೆಸರಿನ ಮೇಲೆ ಒಂದು ಟೌನ್‌ಹಾಲ್ ಬಂಗಲೆಯನ್ನು ಕಟ್ಟಿಸಿ, ಅವರ ಲೋಹ ಪ್ರತಿಮೆಯನ್ನು ಮಾಡಿಸಿಡುವಂತೆ ಒಂದು ಸಲಹೆ ಹುಟ್ಟಿದೆ. ಹಿಂದೆ ಲೇಟ್ ರಂಗಾಚಾರ್ಲು ಯವರ ಮೆಮೋರಿಯಲ್ ಹಾಲ್ ಕಟ್ಟುವಾಗ್ಯೂ ಗೌರ್ನಮೆಂಟಿನವರು ಆ ಫಂಡಿಗೆ ೧೭,೦೦೦ ರೂ. ಕೊಡುವಂತೆ ಸ್ಯಾಂಕ್ಷನ್ ಮಾಡಿದರು. ಈಗಲೂ ಮೈಸೂರು ಸರ್ಕಾರದವರು ಸರ್ ಶೇಷಾದ್ರಿ ಐಯರವರ ಮೆಮೋರಿಯಲ್ ಫಂಡಿಗೆ ಕಡೇ ಪಕ್ಷ ೨೦,೦೦೦ ರೂ. ಸ್ಯಾಂಕ್ಷನ್ ಮಾಡಿಯಾರೆಂದು ನಿರೀಕ್ಷಿಸಲ್ಪಟ್ಟಿದೆ.

## ಮೈಸೂರು ಗೆಜೆಟ್ ಸಂಗ್ರಹ.

ಶಿವಮೊಗ್ಗ ಡಿಸ್ಟ್ರಿಕ್ಟ್ ಎ. ಅ. ಕ. ಮಿ॥ ಸಿ. ನಾರಾಯಣರಾಯರಿಗೆ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿದೆ.

ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಲ್ಲಿರುವ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟರು ಮೊಕದ್ದಮೆಗಳನ್ನು ಸಮ್ಮರಿ ದರ್ಯಾಪ್ತಿ ಮಾಡುವಂತೆ ಅಧಿಕಾರ ವಹಿಸಲ್ಪಟ್ಟಿದ್ದಾರೆ.

ಮುಂದೆ ಹೇಳುವಂತೆ ಸಿವಿಲ್ ಸರ್ಜನ್‌ರುಗಳಿಗೆ ಬಡ್ತಿ ಕೊಡಲಾಗಿದೆ—

ಮೈಸೂರು ಸಿವಿಲ್ ಸರ್ಜನ್ ಮಿ॥ ಪಿ. ಎಸ್. ಅಚ್ಯುತರಾಯರು ೧ನೆ ಕ್ಲಾಸಿಗೆ;

ಕೋಲಾರ್ ಚಿನ್ನದಗಣಿಗಳ ಸಿವಿಲ್ ಸರ್ಜನ್ ಮಿ॥ ಆ. ಎಸ್. ಕೃಷ್ಣಸ್ವಾಮಿ ಐಯರು ೨ನೆ ಕ್ಲಾಸಿಗೆ; ಅ. ಸರ್ಜನ್‌ರಾದ ಮಿಸ್ ಅಯ್ಯಾಚಮ್ಮಾಳ್ ಯವರು ಮತ್ತು ಮಿ॥ ಟಿ. ಎಸ್. ನಂಜಪ್ಪನವರು ೩ನೆ ಕ್ಲಾಸ್ ಸಿವಿಲ್ ಸರ್ಜನ್‌ರಾಗಿ ಬಡ್ತಿ ಮಾಡಲ್ಪಟ್ಟಿದ್ದಾರೆ.

ಅ. ಸರ್ಜನ್ ಮಿ॥ ಪಿ. ಅಬ್ಬಯ್ಯ ನಾಯುಡು ಯವರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕಡೂರು ಡಿಸ್ಟ್ರಿಕ್ಟ್ ಎ. ಅ. ಕಮಿಷನರ್ ಮಿ॥ ಸಿ. ಡಿ. ರಾಮಸ್ವಾಮಯ್ಯನವರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಿ॥ ಪಿ. ಜೆ. ಡಿಸೌಜಾಯವರು ಡಿಸ್ಟ್ರಿಕ್ಟ್ ಪೋಲೀಸ್ ಛಾರ್ಜನ್ನೂ ವಹಿಸಿರತಕ್ಕದ್ದು.

ಬೆಂಗಳೂರು ಡಿಸ್ಟ್ರಿಕ್ಟ್ ಸೀ. ಅ. ಕಮಿಷನರ್ ಮಿ॥ ಎಸ್ ವೈದ್ಯನಾಥ ಐಯರಿಗೆ ೧೨ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ರೆವೆನ್ಯೂ ಸರ್ವೆ ಇಲಾಖಾ ಅ॥ ಕಮಿಷನರ್ ಮಿ॥ ಡಿ. ಕೆ. ದಾದಾಪಾಯವರಿಗೆ ಐದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಸಬ್ ಡಿವಿಜನ್ ಆಫೀಸರ್ ಮಿ॥ ಕೆ. ಪೊರಸ್ವಾಮಿ ಐಯರಿಗೆ ಮೊದಲು ಕೊಟ್ಟಿದ್ದ ೬ ತಿಂಗಳ ರಜವನ್ನು ಇನ್ನೂ ಮೂರು ತಿಂಗಳು ಜಾಸ್ತಿ ಮಾಡಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಿ॥ ಎಚ್. ರಾಮಾನುಜೈಯಂಗಾರ್ರಿಗೆ ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಮಿ॥ ಎಂ. ಚಂಗೈಯಶೆಟ್ಟಿಯವರು ಡಿಸ್ಟ್ರಿಕ್ಟಿನ ಛಾರ್ಜು ವಹಿಸಿದ್ದರು.

ಕೋಲಾರ್ ಡಿವಿಜನ್ ಅ. ಎ. ಇಂಜನಿಯರ್ ಮಿ॥ ಬಿ. ಸುಬ್ಬರಾಯರಿಗೆ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ. ಇಂಜನಿಯರ್ ಮಿ॥ ಸಿ. ಕೃಷ್ಣಯ್ಯಂಗಾರ್ರು ಕೋಲಾರ್ ಡಿವಿಜನ್ ಅ. ಎ. ಇಂಜನಿಯರಾಗಿ ಕೆಲಸನೋಡತಕ್ಕದ್ದು.

## ದೇವರು ಪಕ್ಷಪಾತಿಯಲ್ಲವಷ್ಟೇ?

*********

ನಾನು.—ಏನು ಸ್ವಾಮಿ ಪುರೋಹಿತರೇ, [illegible]?

ಪುರೋಹಿತರು.— [illegible].

ನಾನು.—ತಾವು ಈ ಸ್ಥಳದ ಪುರೋಹಿತರಲ್ಲವೇ [illegible] ಕಾಣಿಸಿದಿರಿ?

ಪುರೋ.—[illegible] ಕೊಡಿ ಎಂದು ಸವಾಲ್ ಹಾಕುತ್ತಾರೆ. ಪೂರ್ವಕಾಲದಲ್ಲಿದ್ದ ಮಹಾ ಋಷಿಗಳು ಪ್ರತಿಯೊಂದನ್ನೂ ನಿದರ್ಶನಮಾಡಿ ಶಾಸ್ತ್ರ ಬರೆದು ಈ ಕಾಲದಲ್ಲಿ ಎಲ್ಲಾ [illegible], ಇದಲ್ಲದೆ ನಮ್ಮ ಶಾಸ್ತ್ರದಲ್ಲೇನೆ ಕಲಿಯುಗದಲ್ಲಿ ಪಾಪ ಹೆಚ್ಚಿ ಪುಣ್ಯ ಕಡಮೆಯಾಗುವುದೆಂತ ಬರೆದದೆ. ಆದ್ದರಿಂದ ಅಂಥಾ ಪೌರೋಹಿತ್ಯವನ್ನು ಹಿಂದಿನ ಕಾಲಕ್ಕೇ ಬಿಟ್ಟು ಜಪಾನುಷ್ಠಾನ ಮಾಡಿಸಿ ಹೊಟ್ಟೆ ಹೊರೆದುಕೊಳ್ಳುವುದೇ ದೊಡ್ಡ ಪುರೋಹಿತವಾಗಿದೆ.

ನಾನು.—ಏನು ಸ್ವಾಮಿ, ಎಲ್ಲಾ ಜಗತ್ತೂ ಒಂದೇ ಸವಾಲ್ ಹಾಕಿಬಿಟ್ಟರೆ ಯಾವ ಯುಗವಾದರೇನು? ಪಾಪಮಾಡಬೇಕೆಂಬುದು ಒಂದು ನಿರ್ಬಂಧನೆಯೇ? ಕಲಿಯುಗದಲ್ಲಿ ಪಾಪಮಾಡದೆ, ಸಜ್ಜನರಾಗಿರುವುದಕ್ಕೆ ಆಗದೇ? ತಿಳುವಳಿಕೆಯನ್ನು ದುರುಪಯೋಗಮಾಡಿದಹಾಗೆಲ್ಲಾ ಪಾಪ ಹೆಚ್ಚುವುದೇನೋ ಸಹಜ. ತಮ್ಮಂಥಾ ಪುರೋಹಿತರು ಇಂಥಾ ಕಾಲದಲ್ಲಿ, ಅಂದರೆ ಪಾಪ ಹೆಚ್ಚಿ ಪ್ರಪಂಚವೆಲ್ಲಾ ಭಗವಂತನ ಕೋಪಕ್ಕೆ ಪಾತ್ರರಾಗಿರುವ ಕಾಲದಲ್ಲಿ, ಜನಗಳು ತಮಗಿರುವ ಜ್ಞಾನವನ್ನು ಸರಿಯಾಗಿ ಉಪಯೋಗಿಸುವ ಹಾಗೆಯೂ, ಪಾಪಕೃತ್ಯಗಳನ್ನು ವಿಸರ್ಜಿಸಿ ಸನ್ಮಾರ್ಗಪ್ರವರ್ತಕರಾಗಿ ಜೀವಿಸುವ ಹಾಗೆಯೂ ಸದ್ಬೋಧನೆ ಮಾಡುವದು ಯುಕ್ತವಲ್ಲವೇ?

ಪುರೋ.—ಅದೆಲ್ಲಾ ಎಲ್ಲಿ ಆಗುತ್ತೆ? ಹೊಟ್ಟೆ ಚಿಂತನೆಯೇ ದೊಡ್ಡದಾಗಿರುವಲ್ಲಿ ಜ್ಞಾನಮಾರ್ಗ ಎಲ್ಲಿ ಹುಡುಕೋಣ? ಈಗ ನಮಗೆ ಹೊಟ್ಟೆಯೇ ದೊಡ್ಡ ದೇವರಾಗಿದೆ. ಪೂರ್ವಕಾಲದಲ್ಲಿದ್ದ ರಾಜರುಗಳು ಬ್ರಾಹ್ಮಣರಾದಂಥವರಿಗೆ ಸಕಲ ಸೌಕರ್ಯಗಳನ್ನೂ ಕಲ್ಪಿಸಿಕೊಟ್ಟು, ಅವರು ತ್ರಿಕಾಲದಲ್ಲಿಯೂ ಶಾಸ್ತ್ರಪಾರಾಯಣಗಳನ್ನು ಮಾಡಿಕೊಂಡು ತದೇಕಧ್ಯಾನದಲ್ಲಿರುವಂತೆ ಮಾಡುತ್ತಿದ್ದರು. ಆಗ ಸಂಸಾರತಾಪತ್ರಯ ಒಂದೂ ಇಲ್ಲದೆ ಇದ್ದುದರಿಂದ ಜ್ಞಾನಮಾರ್ಗವನ್ನು ಬೋಧಿಸುವುದು ಸಾಧ್ಯವಾಗಿತ್ತು. ಆದರೆ ಈಗ ಅಂಥಾ ಸೌಲಭ್ಯಗಳೆಲ್ಲಾ ಹೋಗಿ ಸಂಸಾರತಾಪತ್ರಯದಲ್ಲಿ ಬಿದ್ದಿರುವಾಗ್ಯೆ ಜ್ಞಾನಬೋಧೆ ಎಲ್ಲಿ ಮಾಡೋಣ?

ನಾನು.—ಚನ್ನಾಗಿ ಹೇಳಿದಿರಿ. ಪುರೋಹಿತರೇ, ಮನುಷ್ಯನು ಹೊಟ್ಟೆಗೋಸ್ಕರವಾಗಿಯೋ ಹುಟ್ಟಿರುವುದು? ಅದು ಒಪ್ಪತಕ್ಕ ಮಾತಲ್ಲವಲ್ಲ. ಹಾಗೆ ಹೇಳುವದು ಮನುಷ್ಯಜಾತಿಯನ್ನು ಮೃಗಜಾತಿಗಿಂತಲೂ ಕಡೆ ಮಾಡಿದ ಹಾಗೆ ಆಗುತ್ತದಲ್ಲ? ನಾಲ್ಕು ಮನೆ ಕವಳ ತಿನ್ನುವ ನಾಯಿ ತನ್ನನ್ನು ಸಾಕತಕ್ಕ ಯಜಮಾನನು ಇಂಥವನೇ ಎಂಬುವ ನೇಮಕವಿದ್ದರೂ ರಾತ್ರಿ ವೇಳೆಯಲ್ಲಿ ತಾನು ವಾಸಮಾಡುವ ಕಡೆ ಕಳ್ಳರು ಬಂದರೆ ಸುಮ್ಮನಿರದೆ ತನ್ನ ಕೆಲಸವನ್ನು ಮಾಡುತ್ತದಲ್ಲಾ? ಮೃಗ ಜಂತುಗಳಲ್ಲಿ ಈ ರೀತಿ ಇದ್ದರೆ ಜ್ಞಾನಸ್ವರೂಪನಾದ ದೇವರ ಹೋಲಿಕೆಯಲ್ಲಿ ನಿರ್ಮಿತರಾದ ಮನುಷ್ಯರು ಆಹಾರಕ್ಕೋಸ್ಕರವಾಗಿ ಸೃಷ್ಟಿಸಲ್ಪಟ್ಟಿದ್ದಾರೆಂಬುವುದು ಕೇವಲ ಅಸಮ್ಮತವಲ್ಲವೇ? ತಾವು ಈ ರೀತಿ ಅಪ್ಪಣೆ ಕೊಡಿಸುವುದು ತುಂಬಾ ಶೋಚನೀಯವಾಗಿದೆ.

ಪುರೋ.—ಹೊಟ್ಟೆಗಿಲ್ಲದೆ ಮತ್ತು ಯಾವದಕ್ಕೆ ನಮ್ಮನ್ನು ಹುಟ್ಟು ಮಾಡಿದ್ದಾನೆ? ಈ ಹೊಟ್ಟೆ ಇಲ್ಲದ್ದರಿಂದಲ್ಲವೇ ನಮಗೆ ಅವನಲ್ಲಿ ಜ್ಞಾನತಪ್ಪಿತು? ಎಲ್ಲಾ ಅವನು ಮಾಡುವುದೇ! ಅವನಲ್ಲಿ ತುಂಬಾ ಪ್ರಪಂಚ ಉಂಟು. ಕೆಲವರನ್ನು ಧನಿಕರನ್ನಾಗಿಯೂ, ಕೆಲವರನ್ನು ಬಡವರನ್ನಾಗಿಯೂ, ಮತ್ತೆ ಕೆಲವರನ್ನು ದೊಡ್ಡ ಉದ್ಯೋಗದಾರರನ್ನಾಗಿಯೂ, ಇನ್ನು ಕೆಲವರನ್ನು ಜವಾನಿ ನೌಕರರನ್ನಾಗಿಯೂ ಉಂಟುಮಾಡಿದ್ದಾನೆ. ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ.

ನಾನು.—ದೇವರಲ್ಲಿ ಎಷ್ಟುಮಾತ್ರಕ್ಕೂ ಪಕ್ಷಪಾತವಿಲ್ಲ. ಎಲ್ಲಾ ಮನುಷ್ಯರೂ ಒಂದೇ ಸ್ಥಿತಿಗತಿ ವಿದ್ಯಮಾನಗಳುಳ್ಳವರಾಗಿ ಸೃಷ್ಟಿಸಲ್ಪಟ್ಟಿದ್ದರೆ ಈ ಜಗತ್ತಿನ ವ್ಯಾಪಾರವು ಸರಿಯಾಗಿ ನಡೆಯುತ್ತಿರಲಿಲ್ಲ. ಆದರೆ ದೇವರ ದೃಷ್ಟಿಯಲ್ಲಿ ಸಕಲ ಮನುಷ್ಯರೂ ಒಂದೇ. ದೇವರಿಗೆ ಮಹಾರಾಜನೂ ಒಂದೇ, ಒಬ್ಬ ಸೇವಕನೂ ಒಂದೇ. ಆದರೆ ಈ ಪ್ರಪಂಚವೆಂಬ ರಥ ನಡಿಯಬೇಕಾದರೆ ಆತನು ಕೊಡುವ ಪದಗಳಲ್ಲಿ ಭೇದ ಕಾಣಿಸುವುದು ತುಂಬಾ ಆವಶ್ಯಕವಾಗಿರುತ್ತದೆ. ರಥ ನಡಿಸುವವನಿಗೆ ರಥದ ಮೇಲಿರುವ ಕಳಶ ಎಷ್ಟು ಪ್ರಾಮುಖ್ಯವೋ ರಥದ ಗಾಲಿಗಳೂ ಅಷ್ಟು ಪ್ರಾಮುಖ್ಯವಾಗಿವೆ. ಆದರೂ ರಥಕ್ಕೆ ಭೂಷಣವಾಗಿರುವ ಹಾಗೆ ಕಳಶವನ್ನು ರಥದ ಮೇಲಿಡುತ್ತಾನೆ. ರಥ ತೊಡಕಿಲ್ಲದೆ ನಡೆಯುವ ಹಾಗೆ ರಥದ ಅಟ್ಟಿಗೆ ಗಾಲಿಗಳನ್ನು ತೊಡಿಸುತ್ತಾನೆ. ಆ ರಥಿಕನಲ್ಲಿ ಪಕ್ಷಪಾತವೇ ಎಂದು ಹೇಳಬಹುದೇ? ಎಷ್ಟುಮಾತ್ರಕ್ಕೂ ಹೇಳಲಾಗದು. ಮನಸ್ಸಿನಲ್ಲಿ ಒಂದು ಅಸೂಯೆಯನ್ನಿಟ್ಟು ಒಬ್ಬನಿಗೆ ಕೇಡುಮಾಡುವುದೂ ಮತ್ತೊಬ್ಬನಿಗೆ ಮೇಲುಮಾಡುವುದೂ ಪಕ್ಷಪಾತವೆನಿಸಿಕೊಳ್ಳುತ್ತದೆ. ಅಂಥಾ ಅಸೂಯೆಯು ದೇವರಲ್ಲಿ ಎಷ್ಟುಮಾತ್ರಕ್ಕೂ ಇಲ್ಲ. ಕುಂತೀದೇವಿಗೆ ಐದು ಮಂದಿ ಮಕ್ಕಳು ಇದ್ದರೆಂಬುವವನ್ನು ನೀವು ಓದಿಲ್ಲವೇ? ಅವರಲ್ಲಿ ವೃಕೋದರನೆನಿಸಿಕೊಂಡಿದ್ದ ಭೀಮಸೇನನು ದೊಡ್ಡ ಹೊಟ್ಟೆಯುಳ್ಳವನಾಗಿದ್ದುದರಿಂದ ಕುಂತೀದೇವಿಯು ಊಟಕ್ಕೆ ಬಡಿಸುವಾಗ ಭೀಮಸೇನನಿಗೆ ಎಲ್ಲರಿಗಿಂತಲೂ ಹೆಚ್ಚಾಗಿ ಬಡಿಸಿದ್ದಕ್ಕೆ ಕುಂತೀದೇವಿಯನ್ನು ಪಕ್ಷಪಾತಿಯೆಂದು ಕರೆಯಬಹುದೋ? ಆದುದರಿಂದ ಒಬ್ಬರಿಗೆ ಒಳ್ಳೆಯ ವರವನ್ನೂ ಮತ್ತೊಬ್ಬನಿಗೆ ಬೋಧನೆ ಮಾಡುವ ಶಕ್ತಿಯನ್ನೂ ಕೊಟ್ಟು, ಈ ರೀತಿಯಲ್ಲಿ ತನ್ನ ಕೆಲಸಗಳನ್ನು [illegible] ಮಾಡಿಸಬೇಕಾಗಿದೆ. ಈ ಸ್ಥಾನದೇವನ [illegible] ಅಥವಾ [illegible] ನಡೆದದ್ದು ಕಾಣುವುದಿಲ್ಲ. [illegible] ಲೌಕಿಕ ಸ್ಥಾನಗಳನ್ನು ಕಟ್ಟಿಕೊಂಡು ನಾ[illegible] ಏನು ಹೇಳೋಣ? ನಿರಂತರವಾಗಿರತಕ್ಕ ಆತ್ಮಭಾಗ್ಯದ ವಿಷ[illegible] ಅದನ್ನು [illegible] ವಿಷಯವನ್ನು [illegible].

## ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಮೆಂಬರುಗಳು ಟೌನ್‌ಹಾಲಿನಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮೀಟಿಂಗನ್ನು ನಡಿಸಿದರು. ಕಳೆದ ಜೂನ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ರೂ. ೧೭,೫೯—೩—೧೭—೧೦ ಪೈ ಜಮಾ ಆಯಿತು; ರೂ. ೨೯,೯೪—೨— ೯—೨ ಪೈ ಖರ್ಚಾಯಿತು. ಜನನ ೧೭೩; ಮರಣ ೧೬೭. ಈ ಪೈಕಿ ಪ್ಲೇಗ್ ೬, ಕಾಲರಾ, ೧, ಕಿಡು ಬು ೧೧, ಅಕ್ಟ್ರಾಯಿ ಬಾಬಿನಲ್ಲಿ ಹುಟ್ಟುವಳಿ ಸಮರ್ಪಕವಾಗಿಲ್ಲವೆಂಬ ಅಂಶಕ್ಕೆ ಸಬ್ ಕಮಿಟಿಯವರು ಸೂಚಿಸಿದ ತಿದ್ದುಪಾಟನ್ನು ಜಾರಿಗೆ ತರಬೇಕೆಂದು ಮೆಂಬರುಗಳು ಒಪ್ಪಿಕೊಂಡರು. ಮುಖ್ಯವಾದ ತಿದ್ದುಪಾಟುಗಳಾವುವೆಂದರೆ—ಪ್ರತಿ ಬಾಬಿನಲ್ಲೂ ಮೇಲ್ವಿಚಾರಣೆ ಸರಿಯಾಗಿ ಇರಬೇಕು. ದರೋಗರು ರೈಲ್ವೆ ಸ್ಟೇಷನ್‌ಗೂ ಆಗಾಗ್ಯೆ ಹೋಗಿ ತನಿಖೆ ಮಾಡುತ್ತಿರಬೇಕು. ಚೌಟೀನೆ ಬಂದ ಕಡೆ ಮ್ಯುನಿಸಿಪಲ್ ಛಾಪಾ ಹಾಕಬೇಕು. ತಂಬಾಕು ಊರಿಗೆ ೧೦ ಮೈಲಿ ಆಚೆ ದಾಸ್ತಾನ್ ಇಡುವ ಭಾಗದಲ್ಲಿ ಆಯಾ ಗ್ರಾಮದ ಪಟೇಲರಿಗೆ ರುಸುಂ ಕೊಟ್ಟು ಸರಿಯಾದ ಲೆಕ್ಕ ಇರಿಸಿಕೊಳ್ಳಬೇಕು. ಅಕ್ಟ್ರಾಯಿ ಆಫೀಸನ್ನು ದೇವರಾಜ ಮಾರ್ಕೆಟ್ಟಿನಲ್ಲಿ ಮಾಡಬೇಕು. ರೈಲ್ವೆ ಸ್ಟೇಷನ್ ಬಳಿ ಸುಂಕದ ಕಟ್ಟೆ ಕಟ್ಟಬೇಕಾದ ಅಗತ್ಯವಿಲ್ಲ. ಅದಕ್ಕೆ ಸ್ಯಾಂಕ್ಷನ್ ಆಗಿರುವ ಹಣವನ್ನು ವಿನಿಯೋಗಿಸಿ ಮಾರ್ಕೆಟ್ಟಿನಲ್ಲಿ ಆಫೀಸ್ ಮಾಡುವದಕ್ಕೆ ಅನುಕೂಲಿಸುವಂತೆ ಕಟ್ಟಬೇಕು. ಈ ಊರಿಗೆ ರೈಲ್ ಮೇಲೆ ಬರತಕ್ಕ ಸಾಮಾನಿಗೆಲ್ಲಾ ಜನರು ಪ್ರಾಮಾಣಿಕವಾಗಿ ಸುಂಕ ತೀರ್ವೆ ಮಾಡುತ್ತಾರೆಯೇ ಇಲ್ಲವೇ ಎಂಬಂಶವನ್ನು ರೈಲ್ವೆ ಗುಡ್ಸ್ ಕ್ಲಾರ್ಕ್ ಇಡುವ ಲೆಕ್ಕಕ್ಕೂ ನಾಯರ್ ಆಫೀಸಿನ ಲೆಕ್ಕಕ್ಕೂ ಆಗಾಗ್ಯೆ ಮೊಕಾಬಿಲೆ ನೋಡುತ್ತಾ ಇರಬೇಕು.

ಮ್ಯುನಿಸಿಪಾಲಿಟಿಯಿಂದ ಸಹಾಯದ್ರವ್ಯ ಪಡೆಯುವ ಕೆಲವು ಪಾಠಶಾಲೆಗಳಲ್ಲಿ ಹುಡುಗರ ಹಾಜರಾತಿಯೂ, ಪಾಠ ಮುಂತಾದ್ದೂ ಸಮರ್ಪಕವಾಗಿಲ್ಲವೆಂತಲೂ ಆಯಾ ಪಾಠಶಾಲೆಯ ಉಪಾಧ್ಯಾಯರುಗಳಿಗೆ ಈ ವಿಷಯವಾಗಿ ಎಚ್ಚರಿಸಿರುತ್ತೇನೆಂತಲೂ ಸ್ಕೂಲ್ ಇನ್ಸ್‌ಪೆಕ್ಟರು ರಿಪೋರ್ಟು ಮಾಡಿದ್ದಾರೆ.

ಸ್ಕೂಲ್ ಇನ್ಸ್‌ಪೆಕ್ಟರನ್ನು ಇದೇ ಆಗೀಸ್ಟು ಬಾಗಾಯಿತು ಆರು ತಿಂಗಳ ತನಕ ಆಫೀಸ್ ಮ್ಯಾನೇಜರಾಗಿ ಇಟ್ಟುಕೊಂಡು, ಈಗಿರುವ ಮ್ಯಾನೇಜರನ್ನು ಕಂದಾಯದ ವಸೂಲಿ ಕೆಲಸಕ್ಕೆ ನೇಮಕ ಮಾಡಿ ಅಜಮಾಯಿಷಿ ಮಾಡಬೇಕೆಂಬದಾಗಿ ತೀರ್ಮಾನವಾಗಿದೆ.

ರಾಜಧಾನಿಯಲ್ಲಿಟ್ಟಿರುವ ವಾಷಿಂಗ್‌ಟನ್ ಲಾಂದ್ರಗಳನ್ನು ಮ್ಯುನಿಸಿಪಾಲಿಟಿಯವರು ೨,೭೦೦ ರೂಪಾಯಿಗೆ ಕೊಂಡುಕೊಳ್ಳಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ.

ದಿವಾನರವರ ಅಪ್ಪಣೆ ಪಡೆದು ಮೆ॥ ಲೀ ಸಾಹೇಬರು ಜೀವನ್ನರಾಯನ ಕಟ್ಟೆಯನ್ನು ಚಿಕ್ಕದು ಮಾಡಿದರಷ್ಟೆ. ಈಚೆಗೆ ಮಳೆ ನೀರು ವಿಪರೀತವಾಗಿ ಬಂದು ಕೋಟ್ವಾಲ್ ರಾಮಯ್ಯನವರ ಬೀದಿಗೆ ತುಂಬಾ ಅಪಾಯವಾಯಿತು. ವೈಸ್ ಪ್ರೆಸಿಡೆಂಟರು ಆ ನೀರು ಪೂರ್ಣಯ್ಯನವರ ನಾಲೆಗೆ ಬೀಳುವಂತೆ ಮಾಡಿಸಿದರು. ಮೊದಲು ಮಾಡಿದ ಕಾಮಗಾರಿ ಸಮರ್ಪಕವಾಗಿಲ್ಲವೆಂಬಂಶವನ್ನು ಮೆ॥ ಅಂಬಳೆ ಪಂಡಿತರು ಸೂಚಿಸಿದರು. ಪ್ರೆಸಿಡೆಂಟರೇ ಮುಂತಾದವರು ಅದನ್ನು ಕಣ್ಣಾರ ನೋಡಿ, ಆವಶ್ಯವಾದ ಕಾಮಗಾರಿ ಮಾಡಿ ಪೂರೈಸಬೇಕೆಂದು ಗೊತ್ತಾಯಿತು.

ಇಟ್ಟಿಗೇಗೂಡಿನಲ್ಲಿ ಪಾಸ್ ಬಂಗ್ಲೆಯ ದೊಡ್ಡ ರಸ್ತೆಯ ಉದ್ದಕ್ಕೂ ಉಭಯಪಾರ್ಶ್ವಗಳಲ್ಲೂ ಮನೆಗಳ ಮುಂಭಾಗವನ್ನು ಇಟ್ಟಿಗೆ ಗಾರೆಯಿಂದ ಕಟ್ಟಿಸಿ ಅಲಂಕಾರ ಮಾಡಿದರಷ್ಟೆ. ಇದಕ್ಕೆ ಆದ ಖರ್ಚನ್ನೆಲ್ಲಾ ಮ್ಯುನಿಸಿಪಾಲಿಟಿಯ ಹಣಕ್ಕೆ ಪಜಾ ಹಾಕಿದೆ ಎಂಬದಾಗಿ ಗೌವರ್ನಮೆಂಟ್ ಕಂಟ್ರೋಲರವರು ಬರೆದಿದ್ದರು. ಕೆಲವು ಮೆಂಬರುಗಳು ಈ ವಿಷಯಕ್ಕೆ ಬೋರ್ಡಿನವರು ಒಪ್ಪಕೂಡದೆಂದು ಮೊದಲೇ ತೀರ್ಮಾನ ಮಾಡಿರುವಂತೆ ಹೇಳಿದರು. ಆ ತೀರ್ಮಾನವನ್ನು ಮತ್ತೆ ಗೌವರ್ನಮೆಂಟಿಗೆ ಅರಿಕೆ ಮಾಡಬೇಕೆಂದು ಸೂಚಿಸಿದರು.

ಚಟ್ಟವಳ್ಳಿ ರಸ್ತೆಯಲ್ಲಿರುವ ಮಶಾಣ ಭೂಮಿಯನ್ನು ವಿಸ್ತಾರಮಾಡಬೇಕೆಂತಲೂ, ಈಗಿರುವ ಜಮೀನು ದಫನ್ ಮಾಡುವದಕ್ಕೆ ಸಾಲದೆಂತಲೂ ಚರ್ಚೆಯಾಗಿ ಮೆಂಬರುಗಳು ಆ ಸ್ಥಳವನ್ನು ಖುದ್ದು ನೋಡಿ ಬಂದು ಗೊತ್ತುಮಾಡಬೇಕೆಂದು ತೀರ್ಮಾನಿಸಿರುತ್ತಾರೆ.

ಮಂಡಿ ಮೊಹಲ್ಲೆಯ ಜನರಿಗೆ ಔಷಧ ಕೊಡುವ ಮೆ॥ ಅಲ್ಲಿಹೀರ್ ಸಾಬರಿಗೆ ತಿಂಗಳಿಗೆ ೧೫ ರೂ. ನಂತೆ ಗ್ರಾಂಟು ಕೊಡಬೇಕೆಂದು ಮೆಂಬರುಗಳು ಗೌವರ್ನಮೆಂಟಿಗೆ ಶಿಫಾರಸು ಮಾಡಿರುತ್ತಾರೆ.

ರಂಗಾಚಾರ್ಲು ಮೆಮೋರಿಯಲ್ ಹಾಲ್‌ಗೆ ಇನ್ನು ಕೆಲವು ಕುರ್ಚಿ ಬೆಂಚುಗಳನ್ನು ಕೊಂಡು ಇಡಿಸಬೇಕೆಂದು ಮೆ॥ ಶ್ರೀಕಂಠೈಯನವರು ಸೂಚಿಸಿದರು. ಈ ವಿಷಯವನ್ನು ಟೌನ್‌ಹಾಲ್ ಕಮಿಟಿಯವರಿಗೆ ತಿಳಿಸಿ ಅವರ ಅಭಿಪ್ರಾಯ ತಿಳಿಯಬೇಕೆಂದು ಗೊತ್ತಾಯಿತು.

ಚಾಮರಾಜರೋಡೆಂಬ ನೂರಡಿ ರಸ್ತೆಯ ಉಭಯಪಾರ್ಶ್ವಗಳಲ್ಲೂ ಸುಬ್ರಾಯನ ಕೆರೆ ಬಳಿ ಇರುವ ಖಾಲೀ ನಿವೇಶನವನ್ನು ಮ್ಯುನಿಸಿಪಾಲಿಟಿಯವರನ್ನು ಕೊಂಡುಕೊಳ್ಳುತ್ತೀರಾ ಎಂಬದಾಗಿ ಮೆ॥ ಸುಬ್ಬಕೃಷ್ಣಯ್ಯನವರು ಕೇಳಿದರು. ಆವಶ್ಯವಿಲ್ಲವೆಂದು ಬೋರ್ಡಿನವರು ತೀರ್ಮಾನಿಸಿದರು.

ಗಳುವಿನ ಅಂಗಡಿ ಮಾದಪ್ಪನವರು ಸಂತೇಪೇಟೆಯಲ್ಲಿ ಮಳಿಗೆ ಮನೆ ಕಟ್ಟದಂತೆ ಅಡ್ಡಿ ಮಾಡಿಸಬೇಕೆಂದು ಮೆ॥ ಕೃಷ್ಣರಾಯರು ಗೌವರ್ನಮೆಂಟಿಗೆ ಬರೆದುಕೊಂಡಿದ್ದರು ಮ್ಯುನಿಸಿಪಾಲಿಟಿಯವರು ಈ ಸಂಗತಿಯನ್ನು ತೀರ್ಮಾನಮಾಡಿರುತ್ತಾರಾದಕಾರಣ ಇನ್ನೇನೂ ಮಾಡಲಾಗುವುದಿಲ್ಲವೆಂದೂ, ಅವಶ್ಯವಿದ್ದರೆ ಮೆ॥ ಕೃಷ್ಣರಾಯರು ಸಿವಿಲ್ ಕೋರ್ಟಿನಲ್ಲಿ ವ್ಯವಹರಿಸಬಹುದೆಂದೂ ಗೌವರ್ನಮೆಂಟಿನವರು ಹುಕುಂ ಮಾಡಿರುತ್ತಾರೆ.

ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರು ರಾಜಧಾನಿಯ ಸ್ಕೂಲ್‌ಗಳಲ್ಲಿ ನಡೆಯುವ ಪಾಠಗಳ ವಿಷಯದಲ್ಲಿ ಮ್ಯುನಿಸಿಪಲ್ ಪ್ರೆಸಿಡೆಂಟರಿಗೆ ಒಂದು ದೊಡ್ಡ ಕಾಗದವನ್ನು ಬರೆದಿದ್ದಾರೆ. ಅದನ್ನು ಓದಿದಮೇಲೆ ಮೆಂಬರುಗಳೆಲ್ಲಾ ತುಂಬಾ ಅಸಮಾಧಾನಪಟ್ಟವರಾಗಿ ಮೆ॥ ಭಾಭಾಪುಹೇಬರು ನಿಷ್ಕಾರಣವಾಗಿ ಈ ಕಾಗದವನ್ನು ಸೀದಾ ಪ್ರೆಸಿಡೆಂಟರಿಗೆ ಬರೆಯಲು ಏನುಕಾರಣವೋ, ಬೋರ್ಡಿನವರ ಮೇಲೆ ಆಕ್ಷೇಪಣೆ ಮಾಡಲು ಅವರ ಅಧಿಕಾರವೆಂಥಾದ್ದೋ ಎಂಬದಾಗಿ ನಾನಾ ಪ್ರಕಾರ ಮಾತನಾಡಿದರು. ಕಡೆಗೆ ಈ ಸಂಗತಿಯನ್ನು ಕುರಿತು ಕೆಲವು ಮಂದಿ ಮೆಂಬರುಗಳು ಚರ್ಚಿಸಿ ತೀರ್ಮಾನವನ್ನು ಬೋರ್ಡಿಗೆ ರಿಪೋರ್ಟುಮಾಡತಕ್ಕದೆಂದು ಗೊತ್ತುಮಾಡಿದರು.

ಸುಮಾರು ಎರಡು ವರುಷಗಳ ಕೆಳಗೆ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರೂ ಮೆಂಬರುಗಳೂ ಸೇರಿ ಕಂದಾಯಗಳನ್ನು ಪುನರ್ವಿಮರ್ಶ ಮಾಡಿ ಗೊತ್ತುಮಾಡಿದರಷ್ಟೆ. ಅವರಂತೆ ಕಂದಾಯ ಹಾಕಿದ ಕ್ರಮವೇ ನ್ಯಾಯಬದ್ಧವಾಗಿಲ್ಲವೆಂದು ಕೆಲವು ಜನರು ಆಕ್ಷೇಪಣೆಮಾಡಿ, ಕಂದಾಯ ಕೊಡದೆಹೋದರು. ಡಿಸ್ಟ್ರಿಕ್ಟ್ ಜಡ್ಜರು ಈ ಮೊಕದ್ದಮೆಯನ್ನು ತನಿಖೆಮಾಡಿ, ಮ್ಯುನಿಸಿಪಲ್ ಬೋರ್ಡಿನವರು ಕಂದಾಯ ಕರಾರ್ ಮಾಡಿರುವದು ಸರಿಯಾಗಿಲ್ಲವೆಂದು ಅವರಿಗೆ ವಿರೋಧವಾಗಿ ಫೈಸಲ್ ಕೊಟ್ಟರು. ಗೌವರ್ನಮೆಂಟಿನವರು ಈ ವಿಷಯವನ್ನು ಪರ್ಯಾಲೋಚನೆಮಾಡಿ, ಮ್ಯುನಿಸಿಪಾಲಿಟಿಯವರು ಕೋರ್ಟಿಗೆ ಸರಿಯಾದ ಜವಾಬು ಒದಗಿಸಿಕೊಡಲಿಲ್ಲವೆಂತಲೂ, ವೈಸ್ ಪ್ರೆಸಿಡೆಂಟರ ಕೈಫಿಯತ್ತೇ ಆಗಿಲ್ಲವೆಂತಲೂ, ಈಗ ನಡೆದುಹೋಗಿರುವ ಕಾರ್ಯಕ್ಕೆ ಯಾರು ಹೊಣೆಗಾರರೋ ತಿಳಿಸಬೇಕೆಂತಲೂ ಪ್ರೆಸಿಡೆಂಟರನ್ನು ಬರೆದು ಕೇಳಿದರು. ಮೆಂಬರುಗಳು ಈ ವಿಷಯವಾಗಿ ಚರ್ಚೆಮಾಡಿದರು. ಅಂಗಡಿ ಮನೆಗಳ ಕಂದಾಯವನ್ನು ಮೊದಲು ಗೊತ್ತುಮಾಡಿದ್ದು ನ್ಯಾಯಬದ್ಧವಾಗಿಲ್ಲವಾದಕಾರಣ ಮತ್ತೆ ಸರಿಯಾಗಿ ಕರಾವ್ ಮಾಡಬೇಕೆಂಬದಾಗಿ ತೀರ್ಮಾನಮಾಡಿರುತ್ತಾರೆ.

## ಬಾತ್ಮಿದಾರರಿಗೆ ನೋಟಿಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

## ಕರಸ್‌ಪಾಂಡೆನ್ಸ್.

### ಅರಸೀಕೆರೆ ಪೋಸ್ಟ್ ಆಫೀಸ್.

ಅಯ್ಯಾ,

ತಾ॥ ೨೩—೬—೦೩ ರಲ್ಲಿ "ಪ್ರಜಾ ಹಿತಚಿಂತಕ" ಎಂಬವರು ಈ ಪತ್ರಿಕೆಯಲ್ಲಿ "ಅರಸೀಕೆರೆ ಪೋಸ್ಟ್ ಆಫೀಸ್‌ನಲ್ಲಿ ಒಂದು ಮಾರಿ ಇರುತ್ತೆ. ಅದು ಎಷ್ಟು ಕಾಗದವನ್ನು ಹಾಕಿದಾಗ್ಯೂ ನುಂಗುತ್ತೆ" ಎಂಬದಾಗಿ ಬರೆದಿರುವದನ್ನು ನೋಡಿ ಇಲ್ಲಿನ ಜನಗಳು ತುಂಬಾ ವಿಷಾದಪಡುತ್ತಿದ್ದೇವೆ. ನಮ್ಮ ಪೋಸ್ಟ್ ಮಾಸ್ಟರು ಇಲ್ಲಿಗೆ ಬಂದಲಾಗಾಯಿತು ಸ್ವಲ್ಪವೂ ಪುಕಾರು ಇಲ್ಲದೆ ಪ್ರಜೆಗಳಿಗೆ ತುಂಬಾ ಸಹಾಯಕರಾಗಿ ಕೆಲಸ ಮಾಡುತ್ತಾ ಇರುವರು. ಮತ್ತು ಇವರು ಪ್ರಜೆಗಳಿಗೆ ಉಪಕಾರಿಗಳಾಗಿ ಒಳ್ಳೇ ಹೆಸರು ಪಡೆದು ಇದ್ದಾರೆನ್ನುವದಕ್ಕೆ ಅವರ ತಲಬು ಈಚೆಗೆ ಬಡ್ತಿ ಆಗಿರುವದೇ ದೃಷ್ಟಾಂತವಾಗಿದೆ. ಇಂಥ ಪೋಸ್ಟ್ ಮಾಸ್ಟರ ಗುಣಗಳನ್ನು ನೋಡಿ ನಾವು ಸಂತೋಷಪಡುತ್ತಿರುವಾಗ ಈ ಅಪನಂಬಿಕೆ ನಿವೃತ್ತಿಮಾಡಿಕೊಳ್ಳುವದಕ್ಕೆ ಈ ನನ್ನ ವಿಜ್ಞಾಪನೆಯನ್ನು ಪ್ರಕಟಿಸಬೇಕಾಗಿ ಕೋರುತ್ತೇನೆ.

ಪ್ರಜೆಗಳಲ್ಲೊಬ್ಬನು.

*********

### ಬರೋಡೆಯ ವಿದ್ವತ್ ಸಭೆ

ಅಯ್ಯಾ,

ಈಗ ಬರೋಡೆ ಮಹಾ ಸಂಸ್ಥಾನದಲ್ಲಿ ಒಂದು "ವಿದ್ವತ್ಸಭಾ" ನಡಿಯುತ್ತೆಂತಲೂ ಅದಕ್ಕಾಗಿ ಮೈಸೂರು ಸಂಸ್ಥಾನದಲ್ಲಿರುವ ಮೈಸೂರು ಬೆಂಗಳೂರು ಮುಂತಾದ ಮಹಾ ಪಟ್ಟಣಗಳಿಂದ ಅನೇಕ ವಿದ್ವಾಂಸರುಗಳು ಪರೀಕ್ಷೆಗಾಗಿ ಹೋಗಿರುವರೆಂತಲೂ ವರ್ತಮಾನ ಕೇಳುತ್ತೇನೆ. ಈ ಪರೀಕ್ಷೆಗೆ ಹೋಗತಕ್ಕವರು ಇಷ್ಟೇ ವರುಷ ವಯಸ್ಸುಳ್ಳವರಾಗಿರಬೇಕು ಎಂಬ ನಿಬಂಧನೆ ಏನಾದರೂ ಉಂಟೇ? ಆ ವಿದ್ವತ್ಸಭೆಗೆ ಹೋಗತಕ್ಕವರಿಗೆ ಬರೋಡೆಯಲ್ಲಿ ಅನ್ನೋದಕಗಳಿಗೆ ಹ್ಯಾಗೆ ಏರ್ಪಾಡು ಮಾಡಿಧಾರೆ? ಪರೀಕ್ಷೆಗೆ ಹೋಗತಕ್ಕವರು ಈಗ ಹೋಗಬಹುದೇ? ಅಥವಾ ಕಾಲಾತೀತವಾಗಿದೆಯೇ? ವಿದ್ವಾಂಸರಿಗೆ ಬಹುಮ ೧ ಏನೇನು ಕೊಡುತ್ತಾರೆ? ಹೀಗೆ ವರ್ಷಂಪ್ರತಿಯಲ್ಲಿಯೂ ನಡೆಯುತ್ತಿದೆಯೇ? ಇತ್ಯಾದಿ ಸಂಗತಿಗಳು ತಮಗಾಗಲಿ, ತಮ್ಮ ಪತ್ರಿಕಾ ವಾಚಕರಲ್ಲ್ಯಾರಿಗಾಗಲಿ ತಿಳಿದಿದ್ದರೆ ದಯವಿಟ್ಟು ತಿಳಿಸಬೇಕೆಂದು ಕೋರುವ

ಡಿ. ಸುಬ್ರಹ್ಮಣ್ಯಶಾಸ್ತ್ರಿ.

*********

### ಪ್ರಜಾಪ್ರತಿನಿಧಿ ಸಭೆ.

ಅಯ್ಯಾ,

ಸನ್ ೧೯೦೨ನೇ ಇಸವಿ ಸೆಪ್ಟೆಂಬರು ೧೮ ನೇ ತಾರೀಖಿನ 'ವೃತ್ತಾಂತ ಪತ್ರಿಕೆ'ಯನ್ನು ಓದಿದ ಪ್ರಜಾಪ್ರತಿನಿಧಿ ಸಭೆಯವರು ಯಾರೂನೂ ಕೊಂಚವಾದರೂ ಪ್ರಜೆಗಳ ಕ್ಷೇಮಚಿಂತನೆಯನ್ನು ಕೋರಲಿಲ್ಲವೆಂದು ತುಂಬಾ ವಿಷಾದಿಸುತ್ತೇನೆ. ಈ ಪತ್ರಿಕೆಯಲ್ಲಿ ಹಿಂದೆ ಪ್ರಕಟವಾದ "ಗೋರೀಬಿದನೂರು ಸಕ್ಕರೆ ವಿಷನ್ನಲ್ಲಿ ನಡದ ಅಕಸ್ಮಾತ್ ಮರಣ" ಎಂಬ ಬಾತ್ಮಿಯನ್ನು ಪುನಹಾ ಓದಿ ನೋಡಿ ಫ್ಯಾಕ್ಟರಿ ರೂಲ್ಸು ಜಾರಿಗೆ ಬಾರದಿರುವದೇ ಸಭೆಯವರು ಪ್ರಜೆಗಳ ಕ್ಷೇಮಚಿಂತಕರಲ್ಲವಾದರು.

ಫ್ಯಾಕ್ಟರಿ ಇನ್ಸ್‌ಪೆಕ್ಟರನ್ನು ನೇಮಿಸಲು ವರ್ಷಕ್ಕೆ ೧,೫೦೦ ರೂ. ಸಾಕು. ಈಗಲಾದರೂ ಸಭೆಯವರು ಈ ವಿಷಯ ಸರ್ಕಾರಕ್ಕೆ ತಿಳಿಸಿ ೮ ಘಂಟೆ ಕೆಲಸವೂ ವಾರಕ್ಕೊಂದು ದಿನ ರಜಾವೂ ಫ್ಯಾಕ್ಟರಿ ಆಕ್ಟು ಜಾರಿ ನೋಡಲುದ್ಯುಕ್ತ ಫ್ಯಾಕ್ಟರಿ ಇನ್ಸ್‌ಪೆಕ್ಟರನ್ನು ನೇಮಿಸುವದನ್ನೂ ಮಾಯಂಪಡಿಸುವರೆಂದು ಬೇಡುವ

ಕರುಣಾಪಾಲಿ.

[ಮೈಸೂರು ಪ್ರಜಾಪ್ರತಿನಿಧಿ ಸಮಾಜದ ಮೆಂಬರುಗಳು ಸಂಸ್ಥಾನಮೊಳೆ ಜಾರಿಯಲ್ಲಿ ಬರುವಂಥಾ ಕಾನೂನುಗಳನ್ನು ರಚಿಸಲು ಅವರಿಗೆ ಅಧಿಕಾರ ವಹಿಸಲ್ಪಟ್ಟಿರುವುದಿಲ್ಲ. ಪ್ರಜೆಗಳಿಗೆ ಈ ಭಾಗದಲ್ಲಿ ಕೊರತೆಯುಂಟಾಗಿದೆ ಎಂತಲೂ, ಅದನ್ನು ನಿವಾರಣೆ ಮಾಡಿಕೊಡಬೇಕೆಂತಲೂ ಸರ್ಕಾರದವರಲ್ಲಿ ವಿಜ್ಞಾಪನೆ ಮಾಡಿಕೊಳ್ಳಬಹುದಾಗಿದೆ. ಇಂಥಾ ಕಾನೂನು ಅವಶ್ಯವೆಂಬುವುದು ಗೌವರ್ನಮೆಂಟಿಗೆ ತೋರಿಬರುವಂತಾದರೆ ಅವರು ಇಂಡಿಯಾ ಗೌವರ್ನಮೆಂಟಿನವರ ಅನುಜ್ಞೆ ಪಡೆದು ಕಾನೂನು ಮಾಡಿ ಜಾರಿಯಲ್ಲಿ ತಂದಾರು —ಎಡಿ.]

*********

### ಚಿತ್ರದುರ್ಗದ ಕೆಲವಿಷಯಗಳು.

ಅಯ್ಯಾ,

ಈ ಊರಲ್ಲಿ ಈ ವರಿಗೂ ಒಂದಾದರೂ ಭಾರೀ ಮಳೆ ಬರಲಿಲ್ಲ. ಧಾರಣೆವಾಸಿಯೂ ತಗ್ಗಲಿಲ್ಲ. ಪ್ಲೇಗಿಗೋಸ್ಕರ ಕದರು ಊರು ಬಿಟ್ಟು ಹೋಗಿದ್ದ ಜನರೆಲ್ಲ ಊರನ್ನು ಸೇರಿ ೧—೧॥ ತಿಂಗಳಾಯ್ತು. ಪುನಃ ಈಗಾಗಲೇ ಪ್ಲೇಗು ಷುರು ಆಗಿರುತ್ತೆ. ಅಂದರೆ, ೭—೫ ದಿವಸಗಳ ಕೆಳಗೆ ಇಲ್ಲಿಗೆ ಸಮೀಪದಲ್ಲಿರುವ ಗುಡ್ಡದ ರಂಗಪ್ಪನಹಳ್ಳಿಯಿಂದ ಯಾರೋ ಒಬ್ಬರು ಬುರುಜನ ಹಟ್ಟಿಗೆ ಬಂದಿದ್ದರು. ಇಲ್ಲೇ ಜ್ವರ ಕಾಣಿಸಿಕೊಳ್ಳಲು ಕೂಡಲೆ ಅವರನ್ನು ಸೆಗ್ರಿಗೇಷನ್ ಕ್ಯಾಂಪಿಗೆ ಸಾಗಿಸಿದರು. ಇದಕ್ಕೆ ಸರಿಯಾಗಿ ತಂಗಾಳಿಯೂ ತುಂತುರುಮಳೆಯೂ ಪ್ರಾರಂಭವಾಗಿರುವದರಿಂದ ಜನರೆಲ್ಲರೂ ಗಾಬರಿಯಾಗಿರುತ್ತಾರೆ. ದೇವರು ಇಲ್ಲಿಗೆ ಪರಾಗವ ಮಾಡಿದರೆ ಸಾಕಾಗಿದೆ. ನಮ್ಮ ಡೆಪ್ಯುಟಿ ಕಮಿಷನರೂ ವೈಸ್ ಪ್ರೆಸಿಡೆಂಟರೂ ಪ್ರತಿನಿತ್ಯ ಬುರುಜನ ಹಟ್ಟಿಗೆ ಹೋಗಿ ಅಜಮಾಯಿಷಿ ಮಾಡಿಕೊಂಡು ಬರುತ್ತಾರೆ.

ತರ್ಕಾರಿ ಮಾರ್ಕೆಟ್ ಬಳಿ ಇರುವ ಮ್ಯುನಿಸಿಪಲ್ ಲಾಂದ್ರಕ್ಕೆ ಇದುವರಿಗೂ ದೀಪಾ ಹಚ್ಚುತ್ತಾ ಇಲ್ಲ; ಕಾರಣವೇನೋ ತಿಳಿಯದು. ಕತ್ತಲೂ ಮೋಡವೂ ಬಹಳವಾಗಿರುವದರಿಂದ ತಿರುಗಾಡುವ ಜನಗಳಿಗೆ ಬಹಳ ತೊಂದರೆಯಾಗಿರುತ್ತೆ. ನಡುಪೇಟೆಯಲ್ಲಿರುವ ಲಾಂದ್ರಗಳೇ ಈ ರೀತಿಯಾದಲ್ಲಿ ಸಂದುಗಳಲ್ಲಿರುವವು ಯಾವ ರೀತಿ ಇರಬಹುದು?

ಈ ಊರಲ್ಲಿ ಮೊದಲಿನಿಂದಲೂ ಕ್ಯಾಸ್ಟ್ ಗರ್ಲ್ಸ್ ಸ್ಕೂಲ್ ಇದೆಯಷ್ಟೆ. ಈ ಧಪ ಪರೀಕ್ಷೆಗೆ ಹೋಗತಕ್ಕ ಹುಡುಗಿಯರು ೫ ಜನರಿರುತ್ತಾರೆ. ಮೊದಲಿಗಿಂತಲೂ ಈಗ ಅಭಿವೃದ್ಧಿಸ್ಥಿತಿಯಲ್ಲಿದೆ. ೭ ನೇ ಕ್ಲಾಸಿಗೆ ಮಾಸ್ಟರ್ ಆಗಿದ್ದ ಶ್ರೀಕಂಠಯ್ಯನೆಂಬವರನ್ನು ವರ್ಗಾಯಿಸಿ, ಅವರ ಬದಲು ಗೊಡಬನ ಹಾಳು ವೀರಪ್ಪನೆಂಬವರನ್ನು ತಂದಿಟ್ಟಿರುತ್ತಾರೆ. ಇವರು ಹುಡುಗಿಯರಿಗೆ ಕಿರುಕುಳವನ್ನುಂಟುಮಾಡುತ್ತಲೂ, ಪ್ರತಿದಿನವೂ ಕ್ಲಾಸ್ಸಿಗೆ ಕಾಲಕ್ಕಿಂತಲೂ ಅರ್ಧಘಂಟೆ ಹೊತ್ತು ಜಾಸ್ತಿಯಾಗಿ ಕ್ಲಾಸುಮಾಡಿ, ತೊಂದರೆಯುಂಟುಮಾಡುತ್ತಲೂ ಇರುವದರಿಂದ ಒಬ್ಬೊಬ್ಬ ಹುಡುಗಿಯೇ ಸ್ಕೂಲ್ ಬಿಡುವದರಲ್ಲಿರುತ್ತಾರೆ. ಈ ವಿಷಯದಲ್ಲಿ ಮೇಲಿನವರ ನಿಗಾ ಬೀಳದೇ ಹೋದರೆ ಸ್ಕೂಲ್ ಅಭಿವೃದ್ಧಿಗೆ ಬರಲು ಕಾರಣವಾಗುವದೇ?

ಸಜ್ಜನವಿಧೇಯ.

*********

### ಪ್ರತಿ ಸಮಾಧಾನ.

ಅಯ್ಯಾ,

ಮತ ವಿವಾದ ವಿಷಯವಾಗಿ ನಾನು ಬರೆದ ಸಮಾಧಾನದಮೇಲೆ ೯—೬—೦೩ರ ಪತ್ರಿಕೆಯಲ್ಲಿ ಅಂಥ ಆರ್ಯರು ಈಗ ನೋಡದರಾಗಲು ಸಾಂಸರ್ಗಿಗಳಾಗಬೇಕೆಂತಲೂ ದೇಶ ಸೌಖ್ಯಕಾರಿಗಳಾಗಲು ಮಾಂಸಾಹಾರಿಗಳಾಗಬೇಕೆಂತಲೂ ನಮೂದಿಸಿದ ನಮ್ಮ ಪ್ರಿಯ ಸಹೋದರರ ಆರ್ಟಿಕಲ್ಲನ್ನು ನೋಡಿದೆನು. ಆದರೆ ಪ್ರಾಚೀನಾರ್ಯರ ವೃತ್ತಿಸ್ಥಿತಿಯನ್ನು ಗ್ರಹಿಸಲು ಹೋದರೆ ಆ ಪುರಾತನ ಕಾಲವೆಂಬ ಮಂಜಿನಲ್ಲಿ ನಮ್ಮ ನಮ್ಮ ಮನಸ್ಸು ಲೀನವಾಗುವುದು. ಪುರಾತನಾರ್ಯರು ಆವರೀತಿಯಲ್ಲಿದ್ದರೆಂಬುವದನ್ನು ಶ್ರುತಿಸ್ಮೃತಿ ಪುರಾಣೇತಿಹಾಸಂಗಳಿಂದ ತಿಳಿಯಬೇಕಲ್ಲದೆ ಕೇವಲ ಚರಿತ್ರೆಯಿಂದಲ್ಲ; ಅವುಗಳನ್ನು ಪರಿಶೀಲಿಸಿದರೆ ಆರ್ಯರಲ್ಲಿ ಉತ್ತಮಜಾತಿಯವರು ಕೀಳುಜಾತಿಯವರಲ್ಲಿ ಹೆಣ್ಣು ತರುತ್ತಿದ್ದರೆಂಬುದು ಸ್ಪಷ್ಟವಾಗುವುದು. ಭೋಜನ ಪ್ರತಿಭೋಜನದ ವಿಷಯದಲ್ಲಿ ಏನೂ ಅಡ್ಡಿ ಇರಲಿಲ್ಲ. ಈ ಮಧ್ಯೆ ಕಾಲಕರ್ಮ ಪರಿಪಾಕದಿಂದ ಬೌದ್ಧ ಜೈನರ ಹಾವಳಿ ಹೆಚ್ಚಿ ಆರ್ಯರ ಮಹತ್ತ್ವವು ತಪ್ಪಿತು. ತದನಂತರ ಕ್ರೂರ ದಾಳಿಗಳಾಗಿ ರೋಮೋನ್ನು ಖದಾದ ತುರುಷ್ಕವೀರರ ಆಗಮನವು ಈ ಆರ್ಯರ ಸಾಧುಚಿತ್ತವನ್ನು ಮತ್ತೆ ಗುಡುಗಾಡಿಸಿತು. ಈ ಎರಡು ದಳದಾಳಿಗಳಿಂದ ೨ ಸಾವಿರ ವರ್ಷಪರ್ಯಂತರವೂ ಕಂಗೆಟ್ಟು ಆರ್ಯರು ಬಹುವಿಧ ಚಿತ್ತಚಾಂಚಲ್ಯದಿಂದ ಮತಸ್ಥಾಪಕರೆಲ್ಲ ಬರೆದು ತಂತಮ್ಮ ಮತವನ್ನು ಪ್ರಚುರಪಡಿಸಿದರು. ಬಹು ಲೀನವಾದವರಾಗಿದ್ದ ಈ ಆರ್ಯರು ಅಂದಿನಿಂದ ಅಸಾಂಸರ್ಗಿಗಳಾಗಿ ಮತಾಭಿಮಾನಿಗಳಾದರು. ಆಚಾರ್ಯ ಮಹಾಶಯರು ಸಾಂಸರ್ಗಿಕ ವಿಷಯವನ್ನು

ಪ್ರತ್ಯಕ್ಷವಲ್ಲವಾದರೂ ಮೇಲೆ ಹೇಳಿದ ಯಾವ ವಿಧವಾದ ವಿಪತ್ತೀಯೂ ಮಧ್ಯೆ ಇಲ್ಲದಿದ್ದು ಆರ್ಯರು ತಮ್ಮ ತಮ್ಮ ಕರ್ತವ್ಯದಲ್ಲಿಯೇ ಮೊದಲಿನಿಂದ ನಡೆದುಬಂದಿದ್ದರೆ ಈಗಿನಾರ್ಯಮಂಡಲಿಯು ಹೇಗಿರುತ್ತಿತ್ತೆಂಬುದನ್ನು ತಿಳಿಯಲು ಶಕ್ತರಾಗಿರುವರು. ಮುಖ್ಯ ಕಾಲಚಕ್ರ ಭ್ರಮಣದಲ್ಲಿ ಔನ್ನತ್ಯ ಅಧೋಗತಿಗಳೆಂಬುವು ಸಹಜವೇ ಸರಿ.

ದೇಶ ಸೌಖ್ಯಕಾರಿಗಳಾಗಲು ಮಾಂಸಾಹಾರಿಗಳಾಗಬೇಕೆಂಬುದೇನೂ ಅಷ್ಟು ಒಪ್ಪತಕ್ಕ ಮಾತಲ್ಲ. ಪ್ರಾಚೀನಾರ್ಯರು ಮಾಂಸಾಹಾರಿಗಳಾಗಿದ್ದು ಬೌದ್ಧರ ಸಹವಾಸದಿಂದ ಬಿಟ್ಟರೆಂಬುದಾಗಿಯೇ ಇರಲಿ! ಅಹಿಂಸಾ ಧರ್ಮಾನುಯಾಯಿಗಳಾಗಿ ಮಾಂಸಾಹಾರವನ್ನು ಸಂಪೂರ್ಣವಾಗಿ ನಿಷೇಧಿಸಿದ ಉತ್ತಮಾರ್ಯಕುಲ, ಬೌದ್ಧ, ಜೈನ, ವೈಶ್ಯ ಮುಂತಾದವರ ಪೂರ್ವಕಾಲದ ರಾಜ್ಯತಂತ್ರ ಪ್ರವರ್ತನೆಯೂ ಉದ್ಗ್ರಂಥರಚನೆಯೂ ಶಿಲ್ಪಾದಿ ಚಾತುರ್ಯವೂ ಎಷ್ಟು ಶ್ಲಾಘನೀಯವಾಗಿತ್ತೆಂಬುದನ್ನು ಸಕಲರೂ ತಿಳಿದಿರುವರು. ಬಾಲಿಕೆಯರಿಗೆ ಅಂಗಗಳು ಬೆಳೆಯುವ ಪೂರ್ವವೇ ನಮ್ಮಲ್ಲಿ ಗರ್ಭಾದಾನವಾಗುವುದರಿಂದ ಉಂಟಾದ ಈ ಅಶಕ್ತತೆಯನ್ನು, ಮಾಂಸಾಹಾರವನ್ನು ಮಾಡದ್ದರ ದೋಷವೆಂದು ಹೇಳಲಾಗುವುದಿಲ್ಲ. ಹಿಂಸೆಯೇ ಪರಮಪಾತಕವಾದುದರಿಂದ ಮಾಂಸಾಹಾರವನ್ನು ನಾವು ನಿಶ್ಚಯವಾಗಿಯೂ ನಿಷೇಧಿಸಲೇಬೇಕು. ಇದನ್ನು ನಿಷೇಧಿಸುವುದರಿಂದ ಉಂಟಾಗುವ ನಿರ್ಬಲವು ಅಷ್ಟು ಗಣನೆಗೆ ಬರುವುದಲ್ಲ. ಈಗಿನಾರ್ಯರು ಅಭ್ಯುದಯಸ್ಥಿತಿಗೆ ಬರಲು ಮಾಂಸಾಹಾರಿಗಳಾಗಬೇಕಾದ ಕರ್ತವ್ಯವೂ ಇಲ್ಲ. ಈ ಹಿಂಸೆಯನ್ನು ತಾವು ಮಾಡದೆ ತಮಗೋಸ್ಕರ ದ್ರಾವಿಡರು ಮಾಡಿದರೆ ತಮಗೆ ಪಾಪವಿಲ್ಲವೆಂಬ ನಂಬುಗೆಯೂ ಶುದ್ಧ ಅಸಂಗತವಾದುದು. ಮುಖ್ಯ, ಮನುಷ್ಯರೆಲ್ಲರೂ ಹಿಂದಿನವರಿಗಿಂತ ನಾಗರಿಕರಾಗುವುದು ಕೇವಲ ಸ್ವಾಭಾವಿಕವಾದುದರಿಂದ ತಮ್ಮ ತಮ್ಮ ಅಭ್ಯುದಯಸ್ಥಿತಿಗೆ ಮುಂದೆ ಮುಂದೆ ಪ್ರಯತ್ನಪಡುವರೆಂದು ನಿಸ್ಸಂಶಯವಾಗಿ ಹೇಳಬಹುದು. ಆದರೂ ಈ ಪದ್ಯಾರ್ಥವನ್ನು ಸರ್ವರೂ ಚಿತ್ತದಲ್ಲಿಡಬೇಕು —

ಕಂ॥ ಧರೆಯುರಿಯೆ ಜೀವರಾಶಿಗೆ
ಪರಿಯಂ ನರನಾದನಾದನಾತ್ಮಂ ತನ್ನೊಳ್॥
ಪೊರೆಕೊಂಡಿರ್ಪನಮಿತಮು!
ಪರಿನಿರ್ಮಲನಾಗೆ ಪೆರ್ಚಿ ಬರ್ಪ್ಪುದು ವೇಗಂ

ಹೆಚ್. ವಿ. ದೇಶಾಭಿಮಾನಿ.

ಕೊರಟಗೆರೆಯನ್ನು ತಾಲ್ಲೋಕು ಮಾಡಬೇಕು.

ಅಯ್ಯಾ,

ತುಮಕೂರು ಡಿಸ್ಟ್ರಿಕ್ಟು ಕೊರಟಗೆರೆ ಪ್ರಜೆಗಳ ವಿಜ್ಞಾಪನೆ ವಿಶೇಷ: —

ಶ್ರೀಮನ್ ಮೈಸೂರು ಮಹಾರಾಜ ರಾಜಾಸಾಹೇಬ್ ಬಹದೂರವರ ಘನವನ್ನು ಹೊಂದಿದ ದಿವಾನ್ ಸಾಹೇಬರವರ ಮಹಾ ಸನ್ನಿಧಾನಕ್ಕೆ —

ಈ ಕೊರಟಗೆರೆ ಪಾಳ್ಯಗಾರರ ಆಳ್ವಿಕೆಯಲ್ಲಿ ಇದ್ದದ್ದು ಅವರ ಆಳ್ವಿಕೆ ತಪ್ಪಿದ ಲಾಗಾಯಿತು. ತಾಲ್ಲೋಕಾಗಿತ್ತು, ಇದು ಎಲ್ಲಾ ವಿಷಯದಲ್ಲೂ ಅನುಕೂಲವಾದ ಸ್ಥಳವೆಂದು ತಿಳಿದು ಮೊದಲು ತಾಲ್ಲೋಕಾಗಿದ್ದ ಚನ್ನರಾಯ ದುರ್ಗ, ಮಾಕಳಿದುರ್ಗ, ಈ ಎರಡು ತಾಲ್ಲೋಕುಗಳನ್ನು ಕೊರಟಗೆರೆಗೆ ಸೇರಿಸಿ ದೊಡ್ಡ ತಾಲ್ಲೋಕಾಗಿ ಮಾಡಲ್ಪಟ್ಟಿತು. ಲೇಟ್ ದಿವಾನ್ ರಂಗಾಚಾರ್ಯರವರು ಕೆಲವು ತಾಲ್ಲೋಕುಗಳೂ ಎರಡು ಡಿಸ್ಟ್ರಿಕ್ಟುಗಳೂ ತೆಗೆದುಹಾಕಿದ ಕಾಲದಲ್ಲಿ ಈ ತಾಲ್ಲೋಕು ಪೂರ್ವ ಪಶ್ಚಿಮ ಮೂವತ್ತೆರಡು ಮೈಲಿ, ಉತ್ತರ ದಕ್ಷಿಣ ಇಪ್ಪತ್ತೈದು ಮೈಲಿ ಫಾಸಲೆ ಇದ್ದಾಗ್ಯೂ ಇದಕ್ಕೆ ಮೂಲೆಗೆ ಮಾತ್ರ ಮಧುಗಿರಿ ಹತ್ತು ಮೈಲ್, ತುಮಕೂರು ಹದಿನಾರು ಮೈಲಿ ಇದೆ ಎಂದು ತಿಳಿದು ಈ ತಾಲ್ಲೋಕು ತೆಗೆದುಹಾಕಿ, ಸಬ್ ತಾಲ್ಲೋಕಾಗಿ ಮಾಡಲ್ಪಟ್ಟಿತು. ಆ ಲಾಗಾಯಿತು ಈ ಗ್ರಾಮ ತುಂಬಾ ಹೀನಸ್ಥಿತಿಗೆ ಬಂತು. ಈಚೆಗೆ ದಿವಾನ್ ಬಹದೂರವರಾದ ಸರ್ ಶೇಷಾದ್ರಿ ಅಯ್ಯರವರು ಕೆಲವು ತಾಲ್ಲೋಕುಗಳೂ ಎರಡು ಡಿಸ್ಟ್ರಿಕ್ಟುಗಳೂ ಪುನಃ ಸ್ಥಾಪಿಸಿದರು. ನಮ್ಮಗಳ ದುರಾದೃಷ್ಟದಿಂದ ಈ ಕೊರಟಗೆರೆ ಮಾತ್ರ ಸಬ್ ತಾಲ್ಲೋಕಾಗಿಯೇ ನಿಂತುಹೋಯಿತು. ಇದು ಒಳ್ಳೇ ಆರೋಗ್ಯವಾದ ಸ್ಥಳವಾಗಿಯೂ, ಕೃಷಿ ಬಲಕಾರ್ಯ ಸಮೃದ್ಧಿಯುಳ್ಳದ್ದಾಗಿಯೂ ಏಕಕಾಲದಲ್ಲೀ ಐದು ಆರು ಸಹಸ್ರ ಪ್ರಜೆಗಳು ಬಂದಾಗ್ಯೂ ಇಳಿದುಕೊಳ್ಳುವ ಶಕ್ತಿ ಒಳ್ಳೇ ಸತ್ರ ದೇವಾಲಯ ಉಳ್ಳದ್ದಾಗಿಯೂ, ಮೂರು ಸಹಸ್ರ ಪ್ರಜೆಗಳುಳ್ಳ ಟವರ್ ಆಗಿಯೂ ಇರುತ್ತೆ. ಇದು ಜಂಗ್ಲಿ ಪ್ರದೇಶವಾಗಿ ಬೆಟ್ಟಗಳ ನಾಲ್ಕಳದ್ದಾಗಿರುವದರಿಂದ ಇಲ್ಲಿ ಆಗಾಗ್ಯೆ ದೊಡ್ಡ ಡಕಾಯಿತಿಗಳು ನಡಿಯುತ್ತಲೇ ಇರುತ್ತವೆ. ಈ ತಾಲ್ಲೋಕಿನ ಗ್ರಾಮಗಳ ಪಟೇಲ್ ಶ್ಯಾನುಭೋಗರು ಇಲ್ಲಿಂದ ಮಧುಗಿರಿಗೆ ಇರಸಾಲ್ ವಗೈರೆ ತೆಗೆದುಕೊಂಡು ಹೋಗಬೇಕಾದರೆ ಮಧ್ಯೆ ಜಂಗ್ಲಿ ಪ್ರದೇಶವಾದ ದಾರಿಯಲ್ಲಿ ಅನೇಕರು ಹಣ ಕಾಸುಗಳನ್ನು ಕಳೆದುಕೊಂಡು, ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿರುತ್ತಾರೆ. ಈ ಅವಸ್ಥೆಗಳನ್ನು ಕುರಿತು ಅನೇಕ ವೇಳೆ ಅರ್ಜಿ ಮೂಲಕ ಅರಿಕೆ ಮಾಡಿಕೊಂಡದ್ದಲ್ಲದೆ ರೂಬರೂಬು ಸಹಾ ಹೇಳಿಕೊಂಡಿರುತ್ತೇವೆ. ಘನವನ್ನು ಹೊಂದಿದ ಮಹಾಸ್ವಾಮಿಯವರು ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರಾಗಿದ್ದ ಕಾಲದಲ್ಲಿ ನಮ್ಮಗಳ ಅಹವಾಲುಗಳನ್ನು ಹೇಳಿಕೊಂಡಾಗ್ಯೆ ತಾಲ್ಲೋಕು ಮಾಡುವದಾಗಿ ವಾಗ್ದಾನ ಮಾಡಿ ಒಂದು ಪ್ಲಾನ್ ಸಹಾ ತಯಾರಾಗಿರುತ್ತೆ. ಆ ಲಾಗಾಯಿತು ಚಂದ್ರೋದಯವನ್ನು ನಿರೀಕ್ಷಿಸುತ್ತಿರುವ ಚಕೋರಪಕ್ಷಿಗಳಂತೆ ಮಹಾಸ್ವಾಮಿಯವರ ಉತ್ಕೃಷ್ಟ ಪದವಿಯನ್ನು ನಿರೀಕ್ಷಿಸುತ್ತಿದ್ದೆವು. ನಮ್ಮಗಳ ಪುಣ್ಯೋದಯದಿಂದ ಮಹಾಸ್ವಾಮಿಯವರಿಗೆ ಉತ್ಕೃಷ್ಟ ಪದವಿಯು ಉಂಟಾದದ್ದಕ್ಕಾಗಿ ಚಂದ್ರನನ್ನು ಕಂಡ ಚಕೋರದಂತೆ ನಾವುಗಳೆಲ್ಲರು ಮಹದಾನಂದಪಟ್ಟು ಪುನಃ ನಮ್ಮ ತಾಲ್ಲೋಕು ಸ್ಥಾಪಿಸಲ್ಪಡುತ್ತೆಂದು ನಂಬಿದ್ದೇವೆ. ಈಚೆಗೆಯೂ ತಾಲ್ಲೋಕಿನಲ್ಲಿ ಸರ್ಕಾರದಿಂದ ಐದು ಆರು ಲಕ್ಷ ರೂಪಾಯಿಗಳು ಮುಟ್ಟಿಸಿ ಕೊರಟಗೆರೆಗೆ ಆರು ಏಳು ಮೈಲ್ ಫಾಸಲೆಯಲ್ಲಿ ಹೊಸದಾಗಿ ಮಾವತ್ತೂರು ಕೆರೆ ಭಾರಿಯಾಗಿ ತಯಾರಾಗಿರುವದ್ದರಿಂದ ಸಾಲಿಯಾನಾ ಸರ್ಕಾರಕ್ಕೆ ಹದಿನೈದು ಇಪ್ಪತ್ತು ಸಾವಿರ ರೂಪಾಯಿಗಳು ಹುಟ್ಟುವಳಿ ಆಗುತ್ತೆ. ಕೊರಟಗೆರೆಗೆ ಮೂರು ಮೈಲ್ ಫಾಸಲೆಯಲ್ಲಿ ಅಗ್ರಹಾರದ ಕೆರೆ ಭಾರಿಯಾಗಿ ತಯಾರಾಗುತ್ತಾ ಇದೆ. ತುಂಬಾಡಿ ಹೊಸಕೆರೆಯು ಸ್ಯಾಂಕ್ಷನ್ ಆಗಿರುವದಾಗಿ ವರ್ತಮಾನ ಕೇಳುತ್ತೇವೆ. ಈಗ ಇಲ್ಲಿರುವ ಸಬ್ ತಾಲ್ಲೋಕು ಒಂದು ಲಕ್ಷ ರೂಪಾಯಿ ಹುಟ್ಟುವಳಿ ಇರುತ್ತೆ. ಈ ಕೆರೆಗಳ ಅಚ್ಚುಕಟ್ಟು ಹುಟ್ಟುವಳಿ ಸೇರಿ ಸರ್ಕಾರಕ್ಕೆ ಒಂದೂಕಾಲು ಒಂದೂವರೆ ಲಕ್ಷ ರೂಪಾಯಿನ ವರಿವಿಗೂ ಹುಟ್ಟುವಳಿ ಆಗಬಹುದು. ಇದಕ್ಕೆ ಮೊದಲು ಈ ತಾಲ್ಲೋಕಿನಿಂದ ತೆಗೆದುಹಾಕಿದ ಗ್ರಾಮಗಳನ್ನು ಪುನಃ ಇದಕ್ಕೆ ಸೇರಿಸಿ ತಾಲ್ಲೋಕು ಮಾಡಿದರೆ ಎರಡು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಹುಟ್ಟುವಳಿ ಆಗುವದಲ್ಲದೆ ಎಲ್ಲಾ ತಾಲ್ಲೋಕುಗಳಿಗಿಂತಲೂ ದೊಡ್ಡ ತಾಲ್ಲೋಕಾಗಿ ಇರುವದಲ್ಲದೆ ಪ್ರಜೆಗಳಿಗೆ ತುಂಬಾ ಅನುಕೂಲವಾಗಿ ಇರುತ್ತೆ. ಈ ಮೇಲಿನ ಸಂಗತಿಗಳೆಲ್ಲಾ ಮಹಾಸ್ವಾಮಿಯವರ ಘನವಾದ ಚಿತ್ತದಲ್ಲಿ ತಂದು ಈ ಕೊರಟಗೆರೆಯನ್ನು ತಾಲ್ಲೋಕಾಗಿ ಮಾಡಿಸಿಕೊಡಬೇಕೆಂದು ಪ್ರಜೆಗಳಾದ ನಾವುಗಳೆಲ್ಲರು ಮಹಾಸ್ವಾಮಿಯನ್ನು ಪ್ರಾರ್ಥಿಸುತ್ತೇವೆ.

ಕೊರಟಗೆರೆ ಪ್ರಜೆಗಳು.

ಪ್ರಜಾಪ್ರತಿನಿಧಿಸಭೆಗೆ ಮೆಂಬರ ಚುನಾವಣೆ.

ಅಯ್ಯಾ,

ತಾ. ೧೫—೭—೦೩ ನೇ ದಿವಿ ೩ ಘಂಟೆಗೆ ಕೃಷ್ಣರಾಜಪೇಟೆ ತಾಲ್ಲೂಕು ಕಛೇರಿ ಕಟ್ಟಡದಲ್ಲಿ ದಸರಾ ಕಾಲದಲ್ಲಿ ಮೈಸೂರಿನಲ್ಲಿ ನಡೆಯುವ ಪ್ರಜಾಪ್ರತಿನಿಧಿಸಭೆಗೆ ಮೆಂಬರುಗಳನ್ನು ಚುನಾಯಿಸಲು ಸಭೆ ಸೇರಿಸಿ ಅಮಲ್ದಾರರವರು ಸಭಾಧ್ಯಕ್ಷರಾಗಿ ಸಭೆಯನ್ನಲಂಕರಿಸಿದ್ದರು. ಆ ಕಾಲದಲ್ಲಿ ೧೯—೭—೦೩ ನೇ ಮಾರ್ಚಿನಲ್ಲಿ ಡಿಸ್ಟ್ರಿಕ್ಟ್ ಆಫೀಸಿಗೆ ರವಾನೆಯಾಗಿದ್ದ ಮೆಂಬರುಗಳ ಲಿಸ್ಟಿಗೆ ಕೆಲವರ ಹೆಸರು ಸೇರದೇ ಇದ್ದದ್ದನ್ನು ಸೇರಿಸಿದ್ದರಲ್ಲಿ ಒಟ್ಟು ೬೩ ಕ್ಕೆ ೨೭ ಮಂದಿ ಹಾಜರಾಗಿದ್ದರು. ಇವರ ಕೈಯಲ್ಲೆಲ್ಲಾ ಒಂದೊಂದು ಚೀಟಿ ಕೊಟ್ಟು, ಇಲ್ಲಿಂದ ೩ ಮಂದಿ ಮೆಂಬರುಗಳನ್ನು ಚುನಾಯಿಸಬೇಕಾದ್ದರಿಂದ ನೀವು ಯಾರನ್ನು ಚುನಾಯಿಸಬೇಕೋ ಅವರ ಹೆಸರು ಬರೆದು ತಾರೀಖು ಹಾಕಿ ನಿಮ್ಮ ರುಜು ಮಾಡಿಕೊಡಿ ಎಂತ ಅಪ್ಪಣೆ ಮಾಡಿದರು. ಅಕ್ಷರ ಬರತಕ್ಕವರು ತಮ್ಮ ಕೈಯಿಂದಲೂ, ಬರದೇ ಇರತಕ್ಕವರು ಇತರರ ಕೈಯಿಂದಲೂ ಬರೆಯುವವರ ಚಮತ್ಕಾರವಿದ್ದಹಾಗೆ ಬರೆಸಿಕೊಟ್ಟರು. ಈ ರೀತಿ ಬರೆಸಿಕೊಟ್ಟದ್ದರಲ್ಲಿ ಚಿನಕುರುಳಿ ಶಾನಭಾಗರಿಗೂ, ಮುನಸಿಪಲ್ ತೆರಿಗೆ ಕೊಡತಕ್ಕ ದೊಡ್ಡೇಗೌಡರಿಗೂ, ಶೀಳನೆರೆ ಲಿಂಗೇಗೌಡರಿಗೂ ಹೆಚ್ಚಾದ ಓಟುಗಳು ಬಂದದ್ದರಿಂದ ಇವರುಗಳನ್ನೇ ಚುನಾಯಿಸತಕ್ಕದ್ದೆಂದು ಸಭಾಧ್ಯಕ್ಷರು ತೀರ್ಮಾನಿಸಿದರು. ಈ ಒಂದು ವಿಷಯದಲ್ಲಿ ಈ ತರವಾಗಿ ನಮ್ಮ ತಾಲ್ಲೂಕಿನಲ್ಲಿ ಯಾವ ಅಮಲ್ದಾರರೂ ಮಾಡಿದ್ದಾಗಿ ತೋರಲಿಲ್ಲ. ಆದ್ದರಿಂದ ಈ ತಾಲ್ಲೂಕಿನ ಪ್ರಜೆಗಳಿಗೆ ಬಹಳ ಸಂತೋಷಕರವಾಗಿಯೂ, ಪ್ರೋತ್ಸಾಹಕರವಾಗಿಯೂ ಇರುತ್ತೆಯಲ್ಲದೆ ತುಂಬಾ ಕೃತಜ್ಞರಾಗಿರುತ್ತಾರೆಂತ ನಂಬುತ್ತೇವೆ. ಮೇಲ್ಕಂಡ ಮೂರು ಮಂದಿ ಪೈಕಿ ಲಿಂಗೇಗೌಡರು ಇನ್ನೂರು ರೂಪಾಯಿ ಕಂದಾಯ ಕೊಡುವುದಿಲ್ಲವೆಂದು ಚರ್ಚೆ ಬಂತು. ರಸೀದಿ ಪುಸ್ತಕಗಳನ್ನು ತಂದು ಹಾಜರ್ಪಡಿಸುತ್ತೇನೆಂತ ಹೇಳಿಕೊಂಡರು. ಮೆ॥ ರಂಗಯ್ಯಂಗಾರ್ರು ಮುನಸಿಪಾಲಿಟಿಯಿಂದ ಇಬ್ಬರನ್ನು ಚುನಾಯಿಸಬೇಕೆಂದು ಹೇಳಿದರು. ಸಭಾಧ್ಯಕ್ಷರು ಈ ಮುನಿಸಿಪಾಲಿಟಿಗಳಿಗೆ ಅವಶ್ಯವಿಲ್ಲವೆಂದು ಅಪ್ಪಣೆಮಾಡಿದರು. ಅಲ್ಲದೆ ಲೋಕಲ್‌ಫಂಡು ಬೋರ್ಡಿಗೆ ನಾಡಿಗ ಕೃಷ್ಣಪ್ಪನವರನ್ನು ಮೊದಲೇ ನೇಮಕಮಾಡಿರುತ್ತೇವೆಂದು ಅಪ್ಪಣೆಮಾಡಿದರು. ತಾಂಬೂಲವನ್ನು ಕೊಟ್ಟನಂತರ ಸಭೆಯು ಬರಖಾಸ್ತಾಯಿತು.

೧೯೦೦ ನೇ ಇಸವಿ ನೊವೆಂಬರ್ ೪ ನೇ ತಾರೀಖಿನ ಮೈಸೂರ್ ಗೆಜೆಟ್ ೪ ನೇ ಭಾಗದ ೨೦ ನೆ ಪುಟದಲ್ಲಿ ದಿವಾನ್‌ಸಾಹೇಬರವರು ಅಭಿಪ್ರಾಯಪಟ್ಟಿರುವುದಕ್ಕೆ ಅನುಗುಣವಾಗಿ ಮೆಂಬರುಗಳು ಸೇರಿತ್ತಿಲ್ಲವಾಗಿ ವಿಷಾದಿಸುತ್ತೇನೆ. ಹೆಚ್ಚಾದ ಐಶ್ವರ್ಯ, ಯಾನೆ ವ್ಯಾಪಾರ, ಲೋಕವ್ಯವಹಾರಜ್ಞಾನ, ವಿದ್ಯೆ, ಅಧಿಕವಾಗಿರುವ ತರಗತಿ ಜನಗಳು ಮತ್ತು ಭಾರಿ ಜಮೀನ್ದಾರ್ರು ಈ ಸಭೆಗೆ ಬರತಕ್ಕ ಮೆಂಬರುಗಳನ್ನು ತಾವೇ ಚುನಾಯಿಸಿಕೊಳ್ಳಬೇಕೆಂದು ಅಪ್ಪಣೆ ದಯಪಾಲಿಸಿರುತ್ತಾರೆ. ಈಗ ಸೇರಿದ್ದ ಸಭೆಯಲ್ಲಿ ಅಂಥವರು ೧೦—೧೨ ಮಂದಿ ಮಾತ್ರ ಸೇರಿದ್ದರೇ ಹೊರ್ತು ಉಳಿದವರೆಲ್ಲಾ ರುಜುಮಾಡುವುದಕ್ಕೆ ಮಾತ್ರ ಬರತಕ್ಕವರು; "ಶ್ರೀ" ಕಾರ ಬರೆಯುವುದಕ್ಕೂ ತಿಳಿಯದಿರುವವರು; ತನ್ನ ಆಸ್ತಿಗಿಂತಲೂ ಅಧಿಕ ಸಾಲವಿರತಕ್ಕವರು ಸಹ ಸೇರಿದ್ದರು. ಮುನಸಿಪಲ್ ತೆರಿಗೆ ಕೊಡತಕ್ಕವರನ್ನೂ ಸಭೆಗೆ ಸೇರಿಸಿದ್ದರು. ಮುನಸಿಪಲ್ ತೆರಿಗೆಯು ಮೊಹತರ್ಫಾ ತೆರಿಗೆಯಲ್ಲವೆ? ಲೇಟ್ ಮಹಾರಾಜರವರೂ ಸರ್ ಕೆ. ಶೇಷಾದ್ರಿ ಅಯ್ಯರ್ ದಿವಾನ್ ಸಾಹೇಬರವರೂ ಈ ರಾಜ್ಯದಲ್ಲಿ ಪ್ರಜೆಗಳು ವ್ಯಾಪಾರಿಗಳಾಗಿಯೂ, ವಿದ್ಯಾ ನಿಪುಣರಾಗಿಯೂ, ಲೋಕವ್ಯವಹಾರಜ್ಞಾನವನ್ನು ಚೆನ್ನಾಗಿ ಬಲ್ಲವರಾಗಿಯೂ, ಭಾರಿ ಜಮೀನ್ದಾರರಾಗಲು ಉತ್ಸಾಹವುಳ್ಳವರಾಗಿಯೂ ಇದ್ದರೆ ದೇಶವು ಉನ್ನತ ಸ್ಥಿತಿಗೆ ಬರುವುದೆಂತಲೂ ಜಾತಿಭೇದವಿಲ್ಲದೆ ಎಲ್ಲಾ ಜಾತಿಯವರೂ ಸ್ನೇಹದಿಂದ ಪ್ರಜಾಪ್ರತಿನಿಧಿಸಭೆಗೆ ಬರುವದಾದ್ದರಿಂದ ಉತ್ತರೋತ್ತರ ಸಾಂಸರ್ಗಿಕವಾಗಿ ಬಾಳುತ್ತಾ ಸೌಖ್ಯದಿಂದಿರಲು ಅನುಕೂಲಿಸುವುದೆಂದೂ ಸಂಬದ್ಧರೆಂದು ತಿಳಿಯುತ್ತೇನೆ. ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿರುವ ಪ್ರಜೆಗಳ ಪೈಕಿ ಅಂಥಾ ಯೋಗ್ಯರನ್ನೇ ಮೆಂಬರುಗಳಾಗಿ ಚುನಾಯಿಸುವುದಕ್ಕೂ, ಚುನಾಯಿಸಲ್ಪಡುವುದಕ್ಕೂ ಸಭೆಗೆ ಕರೆಸುತ್ತಾ ಬರಬೇಕು. ಹೀಗೆ ಮಾಡುತ್ತಾ ಬಂದರೆ, ಪ್ರಜೆಗಳು ತಾವು ತಾವು ಮೆಂಬರಾಗಬೇಕೆಂಬ ಕುತೂಹಲದಿಂದ ಇಂಗ್ಲೀಷರು ಹ್ಯಾಗೋ ಹಾಗೆ ಪ್ರಯತ್ನಪಡುವರೆಂದು ನಂಬುತ್ತೇನೆ.

ವಿದ್ಯೆಯೂ, ಲೋಕವ್ಯವಹಾರಜ್ಞಾನವೂ ಇಲ್ಲದವರು ಸಭೆಗೆ ಹೋದರೆ ಮೌನವಾಗಿದ್ದು ಬರುವರಲ್ಲದೆ, ಸರ್ಕಾರದ ಕಾನೂನುಗಳಿಗೆ ವಿರೋಧವಿಲ್ಲದಂತೆ ತಮ್ಮ ತಾಲ್ಲೋಕಿನ ಪ್ರಜೆಗಳಿಗೆ ಅನುಕೂಲವಾಗುವ ವಿಷಯಗಳನ್ನು ಚರ್ಚಿಸಲಾರರು. ವಿದ್ಯೆ ಇದ್ದರಲ್ಲವೇ ಕಾನೂನುಗಳನ್ನೂ, ಲೋಕವ್ಯವಹಾರ ಜ್ಞಾನವನ್ನೂ ತಿಳಿಯುವರು? ವಿದ್ಯೆ ಇಲ್ಲದವರು ಏನು ತಿಳಿದಾರು? ಪ್ರಜೆಗಳಿಗೆ ಏನು ಉಪಕೃತಿ ಮಾಡಿಯಾರು? ಸಾಧಾರಣ ವಿದ್ಯಾವಂತರಾದರೂ ಸಭೆಗೆ ಹೋಗಲು ಅರ್ಹರಾಗಿರುತ್ತಾರೆ. ಅದೂ ಇಲ್ಲದವರು ಏನು ಪ್ರಯೋಜನ? ಈಗ ಗೊತ್ತುಮಾಡಿರುವ ೩ ಮಂದಿ ಪೈಕಿ ಚಿನಕುರಳಿ ಶಾನಭೋಗರು ವಿನಹ ಉಳಿದ ೨ ಮಂದಿಯೂ ಸಾಧಾರಣ ವಿದ್ಯಾವಂತರೂ ಅಲ್ಲವೆಂತಲೂ, ಲೋಕವ್ಯವಹಾರವನ್ನು ಚೆನ್ನಾಗಿ ಬಲ್ಲವರಲ್ಲವೆಂತಲೂ ತಿಳಿಯುವೆನು. ಇನ್ನುಮುಂದಾದರೂ ಈ ಲೋಪಗಳು ಪರಿಹರವಾಗುವವೆಂದು ಹಾರೈಸುವ

ಪ್ರಜಾ ಅಭಿಮಾನಿ.

## ತಾಲ್ಲೋಕು ವರ್ತಮಾನಗಳು.

ಸೊರಬ.— ಈ ಊರು ದೊಡ್ಡಪೇಟೆ ಪಕ್ಕದಲ್ಲಿರುವ ಆನೆ ಮುಡಕಿ ಎಂಬ ರೋಡಿನಲ್ಲಿ ಜನಗಳ ಕಾಲು ಹೂಳುವಷ್ಟು ಪಾಯಖಾನೆ ರಾಸಿಯಾಗಿರುವದು. ಅಂಥಾಸ್ಥಳದಲ್ಲಿಯೇ ಜನಗಳು ಸಂಚಾರ ಮಾಡುವದು ತುಂಬಾ ದುಃಖಾಸ್ಪದವಾಗಿದೆ. ಇಲ್ಲಿ ಮುನಸಿಪಲ್ ಕೆಲಸ ನಡಿಸುವ ಬಗ್ಗೆ ಈ ಮುಂಚೆ ಒಬ್ಬ ಜವಾನನ್ನು ನೇಮಕ ಮಾಡಿದ್ದಾಗ್ಯೆ ಟವರ್ ಒಳ್ಳೇ ಸ್ಥಿತಿಯಲ್ಲಿತ್ತು. ಈಗ ಸದರಿ ಕೆಲಸಕ್ಕೆ ಮುತ್ಸದ್ದಿಯನ್ನು ನೇಮಕ ಮಾಡಿದ ಲಾಗಾಯಿತು ಟವರ್ ಇಷ್ಟು ಹೀನಸ್ಥಿತಿ ಇದೆ. ಸದ್ರಿಯವರು ಬ್ರಾಹ್ಮಣರಾದ್ದರಿಂದ ಜಾಡಮಾಲಿಗಳು ಅವರನ್ನು ಲಕ್ಷ್ಯ ಮಾಡುವದಿಲ್ಲದೆ, ಸದರಿ ಮುತ್ಸದ್ದಿಯವರು ಯಾವ ಸ್ಥಳದಲ್ಲಿರುತ್ತಾರೋ ಟವರ್‌ನಲ್ಲಿ ಅವರ ಭೇಟಿ ಸಿಕ್ಕುವದು ಕಷ್ಟವಾಗಿದೆ.—ಇಲ್ಲಿ ಮುನಸಿಪಲ್ ಮಾವಿನ ತೋಟದಲ್ಲಿ ಪ್ರತಿ ವರ್ಷವೂ ಜಾನವಾರಗಳಿಗೆ ಹುಲ್ಲಿಗೋಸ್ಕರ ೫೦—೬೦ ರೂಪಾಯಿಗೆ ಸರ್ಕಾರದಿಂದ ಹರಾಜಾಗಿ ಈ ಊರು ಜನಗಳಿಗೆ ತಕ್ಕ ಅನುಕೂಲವಾಗಿತ್ತು. ಈ ವರ್ಷ ಬಡಜನಗಳ ದುರಾದೃಷ್ಟಕ್ಕೆ ಈ ವರಿಗೂ ಆ ರೀತಿ ಆಗದೆಯೂ, ಪ್ರತಿನಿತ್ಯ ೧೫—೨೦ ದನಗಳು ಸದರಿ ತೋಪಲ್ಲಿ ಮೇಯುವದರಿಂದಲೂ ತುಂಬಾ ವ್ಯಸನವುಳ್ಳವರಾಗಿದ್ದಾರೆ. ವರ್ಷ ವರ್ಷವೂ ಸಿಕ್ಕುತ್ತೆ ಎಂಬ ಧೈರ್ಯದಿಂದ ಈ ವರಿಗೂ ಜಾನವಾರಗಳ ಪೋಷಣೆಗೆ ತಕ್ಕ ಅನುಕೂಲ ಮಾಡಿಕೊಳ್ಳದೆ ಪೇಚಾಡುತ್ತಾರೆ. ಸದರಿ ತೋಟದ ಪೋಷಣೆಗೆ ಒಬ್ಬ ಜವಾನನು ಇದ್ದೂ ನಿತ್ಯದಲ್ಲೂ ೧೫—೨೦ ದನಗಳು ಮೇಯುತ್ತಿದ್ದರೂ ತಕ್ಕ ಬಂದೋಬಸ್ತು ಮಾಡಿಸದೆ ಹಾಗೇ ಬಿಟ್ಟಿರುವದು ಏನು ಕಾರಣವೋ ತಿಳಿಯದು. ಮುನಸಿಪಲ್ ಮೆಂಬರುಗಳು ಈ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ನಿದ್ರೆ ಮಾಡುತ್ತಿರುವದು ಈ ಊರು ಜನಗಳ ದುರಾದೃಷ್ಟವಾಗಿದೆ.—ಈ ತಾಲ್ಲೂಕು ಎಕ್ಸೈಜ್ ಇಲಾಖೆಯ ಬಡನೌಕರರುಗಳು ೩—೪ ತಿಂಗಳು ತಲಬು ಇಲ್ಲದೆ ತೊಂದರೆಪಡುವದನ್ನು ಲೇಖನ ಮುಖೇನ ಎಷ್ಟು ವರ್ಣಿಸಿದರೂ ಸಾಲದಾಗಿದೆ ೮ ರೂ. ತಲಬು ಬರುವ ಒಬ್ಬನ ಮನೆಯಲ್ಲಿ ೮—೧೦ ಜನರು ಇದರಿಂದಲೇ ಜೀವಿಸಬೇಕಾದ್ದು. ಪರಸ್ಥಳದಿಂದ ಬಂದ ಬಡನೌಕರನಿಗೆ ಈ ರೀತಿ ಆದಲ್ಲಿ ಅಂಥವರಿಗೆ ಯಾರು ತಾನೇ ಸಾಲ ವಗೈರೆ ಕೊಟ್ಟಾರು ಎಂಬುವದನ್ನು ಮೇಲ್ಪಟ್ಟ ಆಫೀಸರರು ಯೋಚಿಸತಕ್ಕದ್ದಾಗಿದೆ.—ಈ ಊರಲ್ಲಿ ಗೌವರ್ನಮೆಂಟ್ ಸ್ಕೂಲ್ ಊರು ಹೊರಗೆ ಇರುವದರಿಂದ ಇನ್‌ಫೆಂಟ್ ಎ. ಬಿ. ತರಗತಿಯ ಸಣ್ಣ ಬಾಲಕರು ಸದರಿ ಸ್ಕೂಲಿಗೆ ಹೋಗಿ ವಿದ್ಯಾಭ್ಯಾಸ ಮಾಡುವ ಸಾಮರ್ಥ್ಯವಿಲ್ಲವೆಂದು, ಈ ಮುಂಚೆ ಊರೊಳಗೆ ಇರುವ ಬಸವಣ್ಣನ ದೇವಸ್ಥಾನದಲ್ಲಿ ಕ್ಲಾಸ್ ನಡೆಸುತ್ತಾ ಇದ್ದರು. ಈಗ ೪ ತಿಂಗಳಿಂದ ಸದರಿ ಸ್ಥಳದಲ್ಲಿ ಕ್ಲಾಸ್ ಮಾಡದೆ ಊರು ಹೊರಗೆ ಸದರಿ ಕಟ್ಟಡದಲ್ಲಿಯೇ ಕೆಲಸ ಮಾಡುವದರಿಂದ ೫—೬ ವರ್ಷದ ಬಾಲಕರು ಈಗ ಸುರಿಯುವ ಮಳೆಯಿಂದಲೂ ಸ್ಕೂಲ್ ಕಟ್ಟಡ ಬಹು ದೂರವಾದ್ದರಿಂದಲೂ ಸ್ಕೂಲಿಗೆ ಹೋಗದೆ ಮನೆಯಲ್ಲಿಯೇ ಇದ್ದು ಪೋಕ್ರಿಯಾಗುವದನ್ನು ನೋಡಿ ತುಂಬಾ ವ್ಯಸನವಾಗುತ್ತೆ. ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಮೆ॥ ಎಚ್. ಜೆ. ಭಾಭಾ ಯವರು ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡು, ಸೊರಬ ಟವರ್‌ನಲ್ಲಿ ವಿದ್ಯಾಭ್ಯಾಸಕ್ಕೆ ಕುಂದಕವಾಗಿರುವದನ್ನು ಹೋಗಲಾಡಿಸುವರೆಂದು ನಂಬಿದ್ದೇವೆ.

ಚಿಕ್ಕಮಗಳೂರು:— ಈಗ ಮೂರು ವಾರಗಳ ಲಾಗಾಯಿತು ಪ್ರತಿ ದಿನವೂ ಅಹೋರಾತ್ರಿ ಜಡಿ ಮಳೆ ಸುರಿಯುತ್ತ ಈಗ ಸ್ವಲ್ಪ ವಿಶ್ರಾಂತಿ ತೋರುವದರಿಂದ ಜನರಿಗೆ ಆನಂದವು ಆಗುತ್ತಿದೆ.— ಪೈರುಗಳೆಲ್ಲಾ ತುಂಬಾ ಅನುಕೂಲವಾಗಿ ಪ್ರಜಾ ಕ್ಷೇಮ ಸಾಧಕವಾಗಿದೆ —ಹಿರಿಮಗಳೂರಲ್ಲಿರುವ ಪ್ರಸಿದ್ಧ ವೈಷ್ಣವ ದೇವಸ್ಥಾನದ ಅರ್ಚಕನು [illegible] ಆತನನ್ನು ಒಂದು ಸರ್ಪವು ಎದುರುನೋಡುತ್ತಾ [illegible] ಒಳಗೆ ಬಿಡುವದಿಲ್ಲವೆಂತಲೂ ಪ್ರವಾದ ಹುಟ್ಟಿದೆ. ಆಶ್ಚರ್ಯ!—[illegible] ಗ್ರಾಮದಲ್ಲಿ ಶೇಂದಿ ಕಂಟ್ರಾಕ್ಟದಾರನಾಗಿದ್ದ [illegible] ಗೌಡನ [illegible] ಮಾಲುಗಳನ್ನು ಹರಾಜು ಮಾಡುವದರಲ್ಲಿ [illegible] ಕೊಟ್ಟಿರುವಂತೆ ಕಂಡುಬಂದಿದೆ.—ಅದರಂತೆ [illegible] ಗ್ರಾಮದ ಶ್ಯಾನುಭೋಗನು [illegible] ಸುಮಾರು ೬೦೦ ರೂ. ವರಿಗೂ ಕಂದಾಯ

## ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಮೆಂಬರುಗಳು ಟೌನ್‌ಹಾಲಿನಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮೀಟಿಂಗನ್ನು ನಡಸಿದರು. ಕಳೆದ ಜೂನ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ರೂ. ೧೪,೫೯೯—೧೪—೧೦ ಪೈ ಜಮಾ ಆಯಿತು; ರೂ. ೨೯,೯೭೨—೯—೨ ಪೈ ಖರ್ಚಾಯಿತು. ಜನನ ೧೪೩; ಮರಣ ೧೬೩. ಈ ಪೈಕಿ ಪ್ಲೇಗ್ ೬, ಕಾಲರಾ, ೧, ಸಿಡುಬು ೧೧, ಆಕ್ಟ್ರಾಯ್ ಬಾಬಿನಲ್ಲಿ ಹುಟ್ಟುವಳಿ ಸಮರ್ಪಕವಾಗಿಲ್ಲವೆಂಬ ಅಂಶಕ್ಕೆ ಸಬ್ ಕಮಿಟಿಯವರು ಸೂಚಿಸಿದ ತಿದ್ದುಪಾಟನ್ನು ಜಾರಿಗೆ ತರಬೇಕೆಂದು ಮೆಂಬರುಗಳು ಒಪ್ಪಿಕೊಂಡರು. ಮುಖ್ಯವಾದ ತಿದ್ದುಪಾಟುಗಳಾವುವೆಂದರೆ—ಪ್ರತಿ ಬಾಬಿನಲ್ಲೂ ಮೇಲ್ವಿಚಾರಣೆ ಸರಿಯಾಗಬೇಕು. ದರೋಗರು ರೈಲ್ವೆ ಸ್ಟೇಷನ್ನಿಗೂ ಆಗಾಗ್ಯೆ ಹೋಗಿ ತನಿಖೆ ಮಾಡುತ್ತಿರಬೇಕು. ಚೌಬೀನೆ ಬಂದ ಕೂಡಲೆ ಮ್ಯುನಿಸಿಪಲ್ ಛಾಪಾ ಹಾಕಬೇಕು. ತಂಬಾಕು ಊರಿಗೆ ೧೦ ಮೈಲಿ ಆಚೆ ದಾಸ್ತಾನ್ ಇಡುವ ಭಾಗದಲ್ಲಿ ಆಯಾ ಗ್ರಾಮದ ಪಟೇಲರಿಗೆ ರುಸುಂ ಕೊಟ್ಟು ಸರಿಯಾದ ಲೆಕ್ಕ ತರಿಸಿಕೊಳ್ಳಬೇಕು. ಆಕ್ಟ್ರಾಯ್ ಆಫೀಸನ್ನು ದೇವರಾಜ ಮಾರ್ಕೆಟ್ಟಿನಲ್ಲಿ ಸ್ಥಾಪಿಸಬೇಕು. ರೈಲ್ವೆ ಸ್ಟೇಷನ್ ಬಳಿ ಸುಂಕದ ಕಟ್ಟೆ ಕಟ್ಟಬೇಕಾದ ಅಗತ್ಯವಿಲ್ಲ. ಅದಕ್ಕೆ ಸ್ಯಾಂಕ್ಷನ್ ಆಗಿರುವ ಹಣವನ್ನು ವಿನಿಯೋಗಿಸಿ ಮಾರ್ಕೆಟ್ಟಿನಲ್ಲಿ ಆಫೀಸ್ ಮಾಡುವದಕ್ಕೆ ಅನುಕೂಲಿಸುವಂತೆ ಕಟ್ಟಬೇಕು. ಈ ಊರಿಗೆ ರೈಲ್ ಮೇಲೆ ಬರತಕ್ಕ ಸಾಮಾನುಗಳಿಗೆಲ್ಲಾ ಜನರು ಪ್ರಾದಾ ಸುಂಕ ತೀರ್ವೆ ಮಾಡುತ್ತಾರೆಯೋ ಇಲ್ಲವೇ ಎಂಬಂಶವನ್ನು ರೈಲ್ವೆ ಗುಡ್ಸ್ ಕ್ಲರ್ಕ್ ಇಡುವ ಲೆಕ್ಕಕ್ಕೂ ಸಾಯರ್ ಆಫೀಸಿನ ಲೆಕ್ಕಕ್ಕೂ ಆಗಾಗ್ಯೆ ಮೊಕಾಬಲೇ ನೋಡುತ್ತಾ ಇರಬೇಕು.

ಮ್ಯುನಿಸಿಪಾಲಿಟಿಯಿಂದ ಸಹಾಯದ್ರವ್ಯ ಪಡೆಯುವ ಕೆಲವು ಪಾಠಶಾಲೆಗಳಲ್ಲಿ ಹುಡುಗರ ಹಾಜರಾತಿಯೂ, ಪಾಠದ ಮುಂತಾದ್ದೂ ಸಮರ್ಪಕವಾಗಿಲ್ಲವೆಂತಲೂ ಆಯಾ ಪಾಠಶಾಲೆಯ ಉಪಾಧ್ಯಾಯರುಗಳಿಗೆ ಈ ವಿಷಯವಾಗಿ ಎಚ್ಚರಿಸಿರುತ್ತೇನೆಂತಲೂ ಸ್ಕೂಲ್ ಇನ್ಸ್‌ಪೆಕ್ಟರು ರಿಪೋರ್ಟ್ ಮಾಡಿದ್ದಾರೆ.

ಸ್ಕೂಲ್ ಇನ್ಸ್‌ಪೆಕ್ಟರನ್ನು ಇದೇ ಆಗೋಸ್ಟು ಲಾಗಾಯತು ಆರು ತಿಂಗಳ ತನಕ ಆಫೀಸ್ ಮ್ಯಾನೇಜರಾಗಿ ಇಟ್ಟುಕೊಂಡು, ಈಗಿರುವ ಮ್ಯಾನೇಜರನ್ನು ಕಂದಾಯದ ವಸೂಲಿ ಕೆಲಸಕ್ಕೆ ನೇಮಕ ಮಾಡಿ ಅಜಮಾಯಿಷಿ ಮಾಡಬೇಕೆಂಬದಾಗಿ ತೀರ್ಮಾನವಾಗಿದೆ.

ರಾಜಧಾನಿಯಲ್ಲಿಟ್ಟಿರುವ ವಾಷಿಂಗ್‌ಟನ್ ಲಾಂದ್ರಗಳನ್ನು ಮ್ಯುನಿಸಿಪಾಲಿಟಿಯವರು ೨,೭೫೦ ರೂಪಾಯಿಗೆ ಕೊಂಡುಕೊಳ್ಳಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ.

ದಿವಾನರವರ ಅಪ್ಪಣೆ ಪಡೆದು ಮೆ॥ ಲೀ ಸಾಹೇಬರು ಜೇವಣ್ಣರಾಯನ ಕಟ್ಟೆಯನ್ನು ಚಿಕ್ಕದು ಮಾಡಿದರಷ್ಟೆ. ಈಚಿಗೆ ಮಳೆ ನೀರು ವಿಪರೀತವಾಗಿ ಬಂದು ಕೋಟ್ವಾಲ್ ರಾಮಯ್ಯನವರ ಬೀದಿಗೆ ತುಂಬಾ ಅಪಾಯವಾಯಿತು. ವೈಸ್ ಪ್ರೆಸಿಡೆಂಟರು ಆ ನೀರು ಪೂರ್ಣಯ್ಯನವರ ನಾಲೆಗೆ ಬೀಳುವಂತೆ ಮಾಡಿಸಿದರು. ಮೊದಲು ಮಾಡಿದ ಕಾಮಗಾರಿ ಸಮರ್ಪಕವಾಗಿಲ್ಲವೆಂಬಂಶವನ್ನು ಮೆ॥ ಅಂಬಳೆ ಪಂಡಿತರು ಸೂಚಿಸಿದರು. ಪ್ರೆಸಿಡೆಂಟರೇ ಮುಂತಾದವರು ಅದನ್ನು ಕಣ್ಣಾರ ನೋಡಿ, ಅವಶ್ಯವಾದ ಕಾಮಗಾರಿ ಮಾಡಿ ಪೂರೈಸಬೇಕೆಂದು ಗೊತ್ತಾಯಿತು.

ಇಟ್ಟಿಗೆಗೂಡಿನಲ್ಲಿ ಖಾಸ್ ಬಂಗ್ಲೆಯ ದೊಡ್ಡ ರಸ್ತೆಯ ಉದ್ದಕ್ಕೂ ಉಭಯಪಾರ್ಶ್ವಗಳಲ್ಲೂ ಮನೆಗಳ ಮುಂಭಾಗವನ್ನು ಇಟ್ಟಿಗೆ ಗಾರೆಯಿಂದ ಕಟ್ಟಿಸಿ ಅಲಂಕಾರ ಮಾಡಿದರಷ್ಟೆ. ಇದಕ್ಕೆ ಆದ ಖರ್ಚನ್ನೆಲ್ಲಾ ಮ್ಯುನಿಸಿಪಾಲಿಟಿಯ ಹಣಕ್ಕೆ ವಜಾ ಹಾಕಿದೆ ಎಂಬದಾಗಿ ಗೌವರ್ನಮೆಂಟ್ ಕಂಟ್ರೋಲರವರು ಬರೆದಿದ್ದರು. ಕೆಲವು ಮೆಂಬರುಗಳು ಈ ವಿಷಯಕ್ಕೆ ಬೋರ್ಡಿನವರು ಒಪ್ಪಕೂಡದೆಂದು ಮೊದಲೇ ತೀರ್ಮಾನ ಮಾಡಿರುವಂತೆ ಹೇಳಿದರು. ಆ ತೀರ್ಮಾನವನ್ನು ಮತ್ತೆ ಗೌವರ್ನಮೆಂಟಿಗೆ ಅರಿಕೆ ಮಾಡಬೇಕೆಂದು ಸೂಚಿಸಿದರು.

ಚಟ್ಟಿಹಳ್ಳಿ ರಸ್ತೆಯಲ್ಲಿರುವ ಮಸಣ ಭೂಮಿಯನ್ನು ವಿಸ್ತಾರವಾಡಬೇಕೆಂತಲೂ, ಈಗಿರುವ ಜಮೀನು ದಫನ್ ಮಾಡುವದಕ್ಕೆ ಸಾಲದೆಂತಲೂ ಚರ್ಚೆಯಾಗಿ ಮೆಂಬರುಗಳು ಆ ಸ್ಥಳವನ್ನು ಖುದ್ದು ನೋಡಿ ಬಂದು ಗೊತ್ತುಮಾಡಬೇಕೆಂದು ತೀರ್ಮಾನಿಸಿರುತ್ತಾರೆ.

ಮಂಡಿ ಮೊಹಲ್ಲೆಯ ಜನರಿಗೆ ಔಷಧ ಕೊಡುವ ಮೆ॥ ಅಲ್ಲಿಖೀರ್ ಸಾಬರಿಗೆ ತಿಂಗಳಿಗೆ ೧೫ ರೂ ನಂತೆ ಗ್ರ್ಯಾಂಟು ಕೊಡಬೇಕೆಂದು ಮೆಂಬರುಗಳು ಗೌವರ್ನಮೆಂಟಿಗೆ ಶಿಫಾರಸು ಮಾಡಿರುತ್ತಾರೆ.

ರಂಗಾಚಾರ್ಲು ಮೆಮೋರಿಯಲ್ ಹಾಲ್‌ಗೆ ಇನ್ನು ಕೆಲವು ಕುರ್ಚಿ ಬೆಂಚುಗಳನ್ನು ಕೊಂಡು ಇಡಿಸಬೇಕೆಂದು ಮೆ॥ ಶ್ರೀಕಂಠೈಯನವರು ಸೂಚಿಸಿದರು. ಈ ವಿಷಯವನ್ನು ಟೌನ್‌ಹಾಲ್ ಕಮಿಟಿಯವರಿಗೆ ತಿಳಿಸಿ ಅವರ ಅಭಿಪ್ರಾಯ ತಿಳಿಯಬೇಕೆಂದು ಗೊತ್ತಾಯಿತು.

ಚಾಮರಾಜರೋಡೆಂಬ ನೂರಡಿ ರಸ್ತೆಯ ಉಭಯಪಾರ್ಶ್ವಗಳಲ್ಲೂ ಸುಬ್ರಾಯನ ಕೆರೆ ಬಳಿ ಇರುವ ಖಾಲೀ ನಿವೇಶನವನ್ನು ಮ್ಯುನಿಸಿಪಾಲಿಟಿಯವರನ್ನು ಕೊಂಡುಕೊಳ್ಳುತ್ತೀರಾ ಎಂಬದಾಗಿ ಮೆ॥ ಸುಬ್ಬಕೃಷ್ಣರಾಯರು ಕೇಳಿದರು. ಅವಶ್ಯವಿಲ್ಲವೆಂದು ಬೋರ್ಡಿನವರು ತೀರ್ಮಾನಮಾಡಿದರು.

ಗಳುವಿನ ಅಂಗಡಿ ಮಾದಪ್ಪನವರು ಸಂತೇಪೇಟೆಯಲ್ಲಿ ಮಳಿಗೆ ಮನೆ ಕಟ್ಟುವಂತೆ ಅಪ್ಪಣೆ ಮಾಡಿಸಬೇಕೆಂದು ಮೆ॥ ಕೃಷ್ಣರಾಯರು ಗೌವರ್ನಮೆಂಟಿಗೆ ಬರೆದುಕೊಂಡಿದ್ದರು. ಮ್ಯುನಿಸಿಪಾಲಿಟಿಯವರು ಈ ಸಂಗತಿಯನ್ನು ತೀರ್ಮಾನಮಾಡಿರುತ್ತಾರಾದಕಾರಣ ಇನ್ನೇನೂ ಮಾಡಲಾಗುವುದಿಲ್ಲವೆಂದೂ, ಅವಶ್ಯವಿದ್ದರೆ ಮೆ॥ ಕೃಷ್ಣರಾಯರು ಸಿವಿಲ್ ಕೋರ್ಟಿನಲ್ಲಿ ವ್ಯವಹರಿಸಬಹುದೆಂದೂ ಗೌವರ್ನಮೆಂಟಿನವರು ಹುಕುಂ ಮಾಡಿರುತ್ತಾರೆ.

ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರು ರಾಜಧಾನಿಯ ಸ್ಕೂಲ್‌ಗಳಲ್ಲಿ ನಡೆಯುವ ಪಾಠಗಳ ವಿಷಯದಲ್ಲಿ ಮ್ಯುನಿಸಿಪಲ್ ಪ್ರೆಸಿಡೆಂಟರಿಗೆ ಒಂದು ದೊಡ್ಡ ಕಾಗದವನ್ನು ಬರೆದಿದ್ದಾರೆ. ಅದನ್ನು ಓದಿದಮೇಲೆ ಮೆಂಬರುಗಳೆಲ್ಲಾ ತುಂಬಾ ಅಸಮಾಧಾನಪಟ್ಟವರಾಗಿ ಮೆ॥ ಭಾಭಾ ಸಾಹೇಬರು ನಿಷ್ಕಾರಣವಾಗಿ ಈ ಕಾಗದವನ್ನು ಸೀದಾ ಪ್ರೆಸಿಡೆಂಟರಿಗೆ ಬರೆಯಲು ಏನುಕಾರಣವೋ, ಬೋರ್ಡಿನವರ ಮೇಲೆ ಆಕ್ಷೇಪಣೆ ಮಾಡಲು ಅವರ ಅಧಿಕಾರವೆಂಥಾದ್ದೋ ಎಂಬದಾಗಿ ನಾನಾ ಪ್ರಕಾರ ಮಾತನಾಡಿದರು. ಕಡೆಗೆ ಈ ಸಂಗತಿಯನ್ನು ಕುರಿತು ಕೆಲವು ಮಂದಿ ಮೆಂಬರುಗಳು ಚರ್ಚಿಸಿ ತೀರ್ಮಾನವನ್ನು ಬೋರ್ಡಿಗೆ ರಿಪೋರ್ಟುಮಾಡತಕ್ಕದೆಂದು ಗೊತ್ತುಮಾಡಿದರು.

ಸುಮಾರು ಎರಡು ವರುಷಗಳ ಕೆಳಗೆ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರೂ ಮೆಂಬರುಗಳೂ ಸೇರಿ ಕಂದಾಯಗಳನ್ನು ಪುನರ್ವಿಮರ್ಶೆ ಮಾಡಿ ಗೊತ್ತುಮಾಡಿದರಷ್ಟೆ. ಅದರಂತೆ ಕಂದಾಯ ಹಾಕಿದ ಕ್ರಮವೇ ನ್ಯಾಯಬದ್ಧವಾಗಿಲ್ಲವೆಂದು ಕೆಲವು ಜನರು ಆಕ್ಷೇಪಣೆಮಾಡಿ, ಕಂದಾಯ ಕೊಡದೆಹೋದರು. ಡಿಸ್ಟ್ರಿಕ್ಟ್ ಜಡ್ಜರು ಈ ಮೊಕದ್ದಮೆಯನ್ನು ತನಿಖೆಮಾಡಿ, ಮ್ಯುನಿಸಿಪಲ್ ಬೋರ್ಡಿನವರು ಕಂದಾಯ ಕರಾವ್ ಮಾಡಿರುವದು ಸರಿಯಾಗಿಲ್ಲವೆಂದು ಅವರಿಗೆ ವಿರೋಧವಾಗಿ ಫೈಸಲ್ ಕೊಟ್ಟರು. ಗೌವರ್ನಮೆಂಟಿನವರು ಈ ವಿಷಯವನ್ನು ಪರ್ಯಾಲೋಚನೆಮಾಡಿ, ಮ್ಯುನಿಸಿಪಾಲಿಟಿಯವರು ಕೋರ್ಟಿಗೆ ಸರಿಯಾದ ರುಜುವಾತು ಒದಗಿಸಿಕೊಡಲಿಲ್ಲವೆಂತಲೂ, ವೈಸ್ ಪ್ರೆಸಿಡೆಂಟರ ಕೈಫಿಯತ್ತೇ ಆಗಿಲ್ಲವೆಂತಲೂ, ಈಗ ನಡೆದುಹೋಗಿರುವ ಕಾರ್ಯಕ್ಕೆ ಯಾರು ಹೊಣೆಗಾರರೋ ತಿಳಿಸಬೇಕೆಂತಲೂ ಪ್ರೆಸಿಡೆಂಟರನ್ನು ಬರೆದು ಕೇಳಿದರು. ಮೆಂಬರುಗಳು ಈ ವಿಷಯವಾಗಿ ಚರ್ಚೆಮಾಡಿದರು. ಅಂಗಡಿ ಮನೆಗಳ ಕಂದಾಯವನ್ನು ಮೊದಲು ಗೊತ್ತುಮಾಡಿದ್ದು ನ್ಯಾಯಬದ್ಧವಾಗಿಲ್ಲವಾದಕಾರಣ ಮತ್ತೆ ಸರಿಯಾಗಿ ಕರಾವ್ ಮಾಡಬೇಕೆಂಬದಾಗಿ ತೀರ್ಮಾನಮಾಡಿರುತ್ತಾರೆ.

## ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

## ಕರೆಸ್‌ಪಾಂಡೆನ್ಸ್.

### ಅರಸೀಕೆರೆ ಪೋಸ್ಟ್ ಆಫೀಸ್.

ಅಯ್ಯಾ,

ತಾ॥ ೨೩—೩—೧೦ ರಲ್ಲಿ "ಪ್ರಜಾಹಿತಚಿಂತಕ" ಎಂಬವರು ಈ ಪತ್ರಿಕೆಯಲ್ಲಿ "ಅರಸೀಕೆರೆ ಪೋಸ್ಟ್ ಆಫೀಸಿನಲ್ಲಿ ಒಂದು ಮೋಸ ಇರುತ್ತೆ. ಅದು ಎಷ್ಟು ಕಾಗದವನ್ನು ಹಾಕಿದಾಗ್ಯೂ ನುಂಗುತ್ತೆ" ಎಂಬದಾಗಿ ಬರೆದಿರುವದನ್ನು ನೋಡಿ ಇಲ್ಲಿನ ಜನಗಳು ತುಂಬಾ ವಿಷಾದಪಡುತ್ತಿದ್ದೇವೆ. ನಮ್ಮ ಪೋಸ್ಟ್ ಮಾಸ್ಟರು ಇಲ್ಲಿಗೆ ಬಂದಲಾಗಾಯತು ಸ್ವಲ್ಪವೂ ಫಿರ್ಯಾದು ಇಲ್ಲದೆ ಪ್ರಜೆಗಳಿಗೆ ತುಂಬಾ ಸಹಾಯಕರಾಗಿ ಕೆಲಸ ಮಾಡುತ್ತಾ ಇರುವರು. ಮತ್ತು ಇವರು ಪ್ರಜೆಗಳಿಗೆ ಉಪಕಾರಿಗಳಾಗಿ ಒಳ್ಳೇ ಹೆಸರು ಪಡೆದು ಇದ್ದಾರೆನ್ನುವದಕ್ಕೆ ಅವರ ತಲಬು ಈಚೆಗೆ ಬಡ್ತಿ ಆಗಿರುವದೇ ದೃಷ್ಟಾಂತವಾಗಿದೆ. ಇಂಥ ಪೋಸ್ಟ್ ಮಾಸ್ಟರ ಗುಣಗಳನ್ನು ನೋಡಿ ನಾವು ಸಂತೋಷಪಡುತ್ತಿರುವಾಗ ಈ ಅಪನಂಬಿಕೆ ನಿವೃತ್ತಿಮಾಡಿಕೊಳ್ಳುವದಕ್ಕೆ ಈ ನನ್ನ ವಿಜ್ಞಾಪನೆಯನ್ನು ಪ್ರಕಟಿಸಬೇಕಾಗಿ ಕೋರುತ್ತೇನೆ.

ಪ್ರಜೆಗಳಲ್ಲೊಬ್ಬನು.

◆◆◆◆◆◆◆◆◆

### ಬರೋಡೆಯ ವಿದ್ವತ್ ಸಭೆ

ಅಯ್ಯಾ,

ಈಗ ಬರೋಡೆ ಮಹಾ ಸಂಸ್ಥಾನದಲ್ಲಿ ಒಂದು "ವಿದ್ವತ್ಸಭಾ" ನಡಿಯುತ್ತೆಂತಲೂ ಅದಕ್ಕಾಗಿ ಮೈಸೂರು ಸಂಸ್ಥಾನದಲ್ಲಿರುವ ಮೈಸೂರು ಬೆಂಗಳೂರು ಮುಂತಾದ ಮಹಾ ಪಟ್ಟಣಗಳಿಂದ ಅನೇಕ ವಿದ್ವಾಂಸರುಗಳು ಪರೀಕ್ಷೆಗಾಗಿ ಹೋಗಿರುವರೆಂತಲೂ ವರ್ತಮಾನ ಕೇಳುತ್ತೇನೆ. ಈ ಪರೀಕ್ಷೆಗೆ ಹೋಗತಕ್ಕವರು ಇಷ್ಟೇ ವರುಷ ವಯಸ್ಸುಳ್ಳವರಾಗಿರಬೇಕು ಎಂಬ ನಿಬಂಧನೆ ಏನಾದರೂ ಉಂಟೇ? ಆ ವಿದ್ವತ್ಸಭೆಗೆ ಹೋಗತಕ್ಕವರಿಗೆ ಬರೋಡೆಯಲ್ಲಿ ಅನ್ನೋದಕಗಳಿಗೆ ಹ್ಯಾಗೆ ಏರ್ಪಾಡು ಮಾಡಿದ್ದಾರೆ? ಪರೀಕ್ಷೆಗೆ ಹೋಗತಕ್ಕವರು ಈಗ ಹೋಗಬಹುದೇ? ಅಥವಾ ಕಾಲಾತೀತವಾಗಿದೆಯೋ? ವಿದ್ವಾಂಸರಿಗೆ ಬಹುಮತಿ ಏನೇನು ಕೊಡುತ್ತಾರೆ? ಹೀಗೆ ವರ್ಷಂಪ್ರತಿಯಲ್ಲಿಯೂ ನಡೆಯುತ್ತಿದೆಯೋ? ಇತ್ಯಾದಿ ಸಂಗತಿಗಳು ತಮಗಾಗಲಿ, ತಮ್ಮ ಪತ್ರಿಕಾ ವಾಚಕರಲ್ಲ್ಯಾರಿಗಾಗಲಿ ತಿಳಿದಿದ್ದರೆ ದಯವಿಟ್ಟು ತಿಳಿಸಬೇಕೆಂದು ಕೋರುವ

ಬಿ. ಸುಬ್ರಹ್ಮಣ್ಯಶಾಸ್ತ್ರಿ.

◆◆◆◆◆◆◆◆◆

### ಪ್ರಜಾಪ್ರತಿನಿಧಿ ಸಭೆ.

ಅಯ್ಯಾ,

ಸನ್ ೧೯೦೭ನೇ ಇಸವಿ ಸೆಪ್ಟಂಬರು ೧೮ ನೇ ತಾರೀಖಿನ "ವೃತ್ತಾಂತ ಪತ್ರಿಕೆ"ಯನ್ನು ಓದಿದ ಪ್ರಜಾಪ್ರತಿನಿಧಿ ಸಭೆಯವರು ಯಾರೂ ಕೊಂಚವಾದರೂ ಪ್ರಜೆಗಳ ಕ್ಷೇಮಚಿಂತನೆಯನ್ನು ಕೋರಲಿಲ್ಲವೆಂದು ತುಂಬಾ ವಿಷಾದಿಸುತ್ತೇನೆ. ಈ ಪತ್ರಿಕೆಯಲ್ಲಿ ಹಿಂದೆ ಪ್ರಕಟವಾದ "ಗೌರೀಬಿದನೂರು ಸಕ್ಕರೆ ಮಿಷನಲ್ಲಿ ನಡದ ಅಕಸ್ಮಾತ್ ಮರಣ" ಎಂಬ ಬಾತ್ಮಿಯನ್ನು ಪುನಹಾ ಓದಿ ನೋಡಿ. ಫ್ಯಾಕ್ಟರಿ ರೂಲ್ಸು ಜಾರಿಗೆ ಬಾರದಿರುವದೇ ಸಭೆಯವರು ಪ್ರಜೆಗಳ ಕ್ಷೇಮಚಿಂತಕರಲ್ಲವಾದರು.

ಫ್ಯಾಕ್ಟರಿ ಇನ್ಸ್‌ಪೆಕ್ಟರನ್ನು ನೇಮಿಸಲು ವರ್ಷಕ್ಕೆ ೧,೫೦೦ ರೂ. ಸಾಕು. ಈಗಲಾದರೂ ಸಭೆಯವರು ಈ ವಿಷಯ ಸರ್ಕಾರಕ್ಕೆ ತಿಳಿಸಿ ೮ ಘಂಟೆ ಕೆಲಸವೂ ವಾರಕ್ಕೊಂದು ದಿನ ರಜಾವೂ ಫ್ಯಾಕ್ಟರಿ ಆಕ್ಟು ಜಾರಿ ನೋಡಲುದ್ಯುಕ್ತ ಫ್ಯಾಕ್ಟರಿ ಇನ್ಸ್‌ಪೆಕ್ಟರನ್ನು ನೇಮಿಸುವದನ್ನೂ ಬಾಯಂಪಡಿಸುವರೆಂದು ಬೇಡುವ

ಕರುಣಾಪಾಲಿ.

[ಮೈಸೂರು ಪ್ರಜಾಪ್ರತಿನಿಧಿ ಸಮಾಜದ ಮೆಂಬರುಗಳು ಸಂಸ್ಥಾನದಲ್ಲಿ ಜಾರಿಯಲ್ಲಿ ಬರುವಂಥಾ ಕಾನೂನುಗಳನ್ನು ರಚಿಸಲು ಅವರಿಗೆ ಅಧಿಕಾರ ವಹಿಸಲ್ಪಟ್ಟಿರುವದಿಲ್ಲ. ಪ್ರಜೆಗಳಿಗೆ ಈ ಭಾಗದಲ್ಲಿ ಕೊರತೆಯುಂಟಾಗಿದೆ ಎಂತಲೂ, ಅದನ್ನು ನಿವಾರಣೆ ಮಾಡಿಕೊಡಬೇಕೆಂತಲೂ ಸರ್ಕಾರದವರಲ್ಲಿ ವಿಜ್ಞಾಪನೆ ಮಾಡಿಕೊಳ್ಳಬಹುದಾಗಿದೆ. ಇಂಥಾ ಕಾನೂನು ಅವಶ್ಯವೆಂಬುವದು ಗೌವರ್ನಮೆಂಟಿಗೆ ತೋರಿಬರುವಂತಾದರೆ ಅವರು ಇಂಡಿಯಾ ಗೌವರ್ನಮೆಂಟಿನವರ ಅನುಜ್ಞೆ ಪಡೆದು ಕಾನೂನು ಮಾಡಿ ಜಾರಿಯಲ್ಲಿ ತಂದಾರು —ಎಡಿ ]

◆◆◆◆◆◆◆◆◆

### ಚಿತ್ರದುರ್ಗದ ಕೆಲವಿಷಯಗಳು.

ಅಯ್ಯಾ,

ಈ ಊರಲ್ಲಿ ಈ ವರಿಗೂ ಒಂದಾದರೂ ಭಾರೀ ಮಳೆ ಬರಲಿಲ್ಲ. ಧಾರಣೆವಾಸಿಯೂ ತಗ್ಗಲಿಲ್ಲ. ಪ್ಲೇಗಿಗೋಸ್ಕರ ಹೆದರಿ ಊರು ಬಿಟ್ಟು ಹೋಗಿದ್ದ ಜನರೆಲ್ಲ ಊರನ್ನು ಸೇರಿ ೧—೧॥ ತಿಂಗಳಾಯ್ತು. ಪುನಃ ಈಗಾಗಲೇ ಪ್ಲೇಗು ಶುರು ಆಗಿರುತ್ತೆ. ಅಂದರೆ, ೪—೫ ದಿವಸಗಳ ಕೆಳಗೆ ಇಲ್ಲಿಗೆ ಸಮೀಪದಲ್ಲಿರುವ ಗುಡ್ಡದ ರಂಗಪ್ಪನಹಳ್ಳಿಯಿಂದ ಯಾರೋ ಒಬ್ಬರು ಬುರುಜನ ಹಟ್ಟಿಗೆ ಬಂದಿದ್ದರು. ಇಲ್ಲೇ ಜ್ವರ ಕಾಣಿಸಿಕೊಳ್ಳಲು ಕೂಡಲೆ ಅವರನ್ನು ಸೆಗ್ರಿಗೇಷನ್ ಕ್ಯಾಂಪಿಗೆ ಸಾಗಿಸಿದರು. ಇದಕ್ಕೆ ಸರಿಯಾಗಿ ತಂಗಾಳಿಯೂ ತುಂತುರುಮಳೆಯೂ ಪ್ರಾರಂಭವಾಗಿರುವದರಿಂದ ಜನರೆಲ್ಲರೂ ಗಾಬರಿಯಾಗಿರುತ್ತಾರೆ. ದೇವರು ಇಲ್ಲಿಗೆ ಪರಾಭವ ಮಾಡಿದರೆ ಸಾಕಾಗಿದೆ. ನಮ್ಮ ಡೆಪ್ಯುಟಿ ಕಮಿಷನರೂ ವೈಸ್ ಪ್ರೆಸಿಡೆಂಟರೂ ಪ್ರತಿನಿತ್ಯ ಬುರುಜನ ಹಟ್ಟಿಗೆ ಹೋಗಿ ಅಜಮಾಯಿಷಿ ಮಾಡಿಕೊಂಡು ಬರುತ್ತಾರೆ.

ತಕಾರಿ ಮಾರ್ಕೆಟ್ ಬಳಿ ಇರುವ ಮ್ಯುನಿಸಿಪಲ್ ಲಾಂದ್ರಕ್ಕೆ ಇದುವರೆಗೂ ದೀಪಾ ಹಚ್ಚುತ್ತಾ ಇಲ್ಲ; ಕಾರಣವೇನೋ ತಿಳಿಯದು. ಕತ್ತಲೂ ನೊಣವೂ ಬಹಳವಾಗಿರುವದರಿಂದ ತಿರುಗಾಡುವ ಜನಗಳಿಗೆ ಬಹಳ ತೊಂದರೆಯಾಗಿರುತ್ತೆ. ನಡುಪೇಟೆಯಲ್ಲಿರುವ ಲಾಂದ್ರಗಳೇ ಈ ರೀತಿಯಾದಲ್ಲಿ ಸಂದುಗಳಲ್ಲಿರುವವು ಯಾವ ರೀತಿ ಇರಬಹುದು?

ಈ ಊರಲ್ಲಿ ಮೊದಲಿನಿಂದಲೂ ಕ್ಯಾಸ್ಟ್ ಗರ್ಲ್ಸ್ ಸ್ಕೂಲ್ ಇದೆಯಷ್ಟೆ. ಈ ದಿವಸ ಪರೀಕ್ಷೆಗೆ ಹೋಗತಕ್ಕ ಹುಡುಗಿಯರು ೫ ಜನರಿರುತ್ತಾರೆ. ಮೊದಲಿಗಿಂತಲೂ ಈಗ ಅಭಿವೃದ್ಧಿಸ್ಥಿತಿಯಲ್ಲಿದೆ. ೪ನೇ ಕ್ಲಾಸಿಗೆ ಮಾಸ್ಟರ್ ಆಗಿದ್ದ ಶ್ರೀಕಂಠಯ್ಯನೆಂಬವರನ್ನು ವರ್ಗಾಯಿಸಿ, ಅವರ ಬದಲು ಗೊಡಬನ ಹಾಳು ವೀರಪ್ಪನೆಂಬವರನ್ನು ತಂದಿಟ್ಟಿರುತ್ತಾರೆ. ಇವರು ಹುಡುಗಿಯರಿಗೆ ಕಿರುಕುಳವನ್ನುಂಟುಮಾಡುತ್ತಲೂ, ಪ್ರತಿದಿನವೂ ಕ್ಲಪ್ತಕಾಲಕ್ಕಿಂತಲೂ ಅರ್ಧಗಂಟೆ ಹೊತ್ತು ಜಾಸ್ತಿಯಾಗಿ ಕ್ಲಾಸು ಮಾಡಿ, ತೊಂದರೆಯುಂಟುಮಾಡುತ್ತಲೂ ಇರುವದರಿಂದ ಒಬ್ಬೊಬ್ಬ ಹುಡುಗಿಯೇ ಸ್ಕೂಲ್ ಬಿಡುವದರಲ್ಲಿರುತ್ತಾರೆ. ಈ ವಿಷಯದಲ್ಲಿ ಮೇಲಿನವರ ನಿಗಾ ಬೀಳದೇ ಹೋದರೆ ಸ್ಕೂಲ್ ಅಭಿವೃದ್ಧಿಗೆ ಬರಲು ಕಾರಣವಾಗುವದೇ?

ಸಜ್ಜನವಿಧೇಯ.

◆◆◆◆◆◆◆◆◆

### ಪ್ರತಿ ಸಮಾಧಾನ.

ಅಯ್ಯಾ,

ಮತ ವಿವಾದ ವಿಷಯವಾಗಿ ನಾನು ಬರೆದ ಸಮಾಧಾನದಮೇಲೆ ೯—೨—೦೩ರ ಪತ್ರಿಕೆಯಲ್ಲಿ ಅಂಥ ಆರ್ಯರು ಈಗ ಸೋದರರಾಗಲು ಸಾಂಸರ್ಗಿಕರಾಗಬೇಕೆಂತಲೂ ದೇಶ ಸೌಖ್ಯಕಾರಿಗಳಾಗಲು ಮಾಂಸಾಹಾರಿಗಳಾಗಬೇಕೆಂತಲೂ ನಮೂದಿಸಿದ ನಮ್ಮ ಪ್ರಿಯ ಸಹೋದರರ ಆರ್ಟಿಕಲ್ಲನ್ನು ನೋಡಿದೆನು. ಅವರ ಪ್ರಾಚೀನಾರ್ಯರ ಪ್ರವೃತ್ತಿಸ್ಥಿತಿಯನ್ನು ಗ್ರಹಿಸಲು ಹೋದರೆ ಆ ಪುರಾತನ ಕಾಲವೆಂಬ ಮಂಜಿನಲ್ಲಿ ನಮ್ಮ ನಮ್ಮ ಮನಸ್ಸು ಲೀನವಾಗುವದು. ಪ್ರಾಚೀನಾರ್ಯರು ಆವರೀತಿಯಲ್ಲಿದ್ದರೆಂಬುವದನ್ನು ಶ್ರುತಿಸ್ಮೃತಿ ಪುರಾಣೇತಿಹಾಸಂಗಳಿಂದ ತಿಳಿಯಬೇಕಲ್ಲದೆ ಕೇವಲ ಚರಿತ್ರೆಯಿಂದಲ್ಲ; ಅವುಗಳನ್ನು ಪರಿಶೀಲಿಸಿದರೆ ಆರ್ಯರಲ್ಲಿ ಉತ್ತಮಜಾತಿಯವರು ಕೀಳುಜಾತಿಯವರಲ್ಲಿ ಹೆಣ್ಣು ತರುತ್ತಿದ್ದರೆಂಬುದು ಸ್ಪಷ್ಟವಾಗುವದು. ಭೋಜನ ಪ್ರತಿಭೋಜನದ ವಿಷಯದಲ್ಲಿ ಏನೂ ಅಡ್ಡಿ ಇರಲಿಲ್ಲ. ಈ ಮಧ್ಯೆ ಕಾಲಕರ್ಮ ಪರಿಪಾಕದಿಂದ ಬೌದ್ಧ ಜೈನರ ಹಾವಳಿ ಹೆಚ್ಚಿ ಆರ್ಯರ ಕರ್ಮತ್ಯಾಗ ತಪ್ಪಿತು. ತದನಂತರ ಕೃಪಾಣ ಪಾಣಿಗಳಾಗಿ ರೋಮನ್ನರ ಖರಾದ ತುರುಷ್ಕವೀರರ ಆಗಮನವೂ ಈ ಆರ್ಯರ ಸಾಧುಚರ್ಯವನ್ನು ಮತ್ತೆ ಗುಡುಗಾಡಿಸಿತು. ಈ ಎರಡು ದಾಳಿಗಳಿಂದ ೭೦೦ ವರ್ಷಪರ್ಯಂತರವೂ ಕಂಗೆಟ್ಟು ಆರ್ಯರು ಬಹುವಿಧ ಚಿತ್ತದಾಪಹಸನೆಯ ಮತಸ್ಥಾಪಕರೊಳ್ಗೆ ಬಿದ್ದು ತಂತಮ್ಮ ಮತಂ ಪ್ರಚುರಪಡಿಸಿದರು. ಬಹು ಲೀನಮಾನಸರಾಗಿದ್ದ ಈ ಆರ್ಯರು ಅಂದಿನಿಂದ ಅಸಾಂಸರ್ಗಿಕರಾಗಿ ಮತಾಭಿಮಾನಿಗಳಾದರು. ಈ ಆರ್ಯ ಮಹಾಶಯರು ಸಾಂಸರ್ಗಿಕ ವಿಷಯವನ್ನು

ಅವಶ್ಯಕವರಲ್ಲವಾದರೂ ಮೇಲೆ ಹೇಳಿದ ಯಾವ ವಿಧವಾದ ವಿರುದ್ಧತೆಯೂ ಮಧ್ಯೆ ಇಲ್ಲದಿದ್ದು ಆರ್ಯರು ತಮ್ಮ ತಮ್ಮ ಕರ್ತವ್ಯದಲ್ಲಿ ಮೊದಲಿನಿಂದ ನಡೆದುಬಂದಿದ್ದರೆ ಈಗಿನಾರ್ಯಮಂಡಲಿಯು ಹೇಗಿರುತ್ತಿತ್ತೆಂಬುದನ್ನು ತಿಳಿಯಲು ಕಷ್ಟರಾಗಿರುವರು. ಮುಖ್ಯ ಕಾಲಕ್ರಮದಲ್ಲಿ ಔನ್ನತ್ಯ ಅಧೋಗತಿಗಳೆಂಬುವು ನಶ್ವರವೇ ಸರಿ.

ದೇಶ ಸೌಖ್ಯಕಾರಿಗಳಾಗಲು ಮಾಂಸಾಹಾರಿಗಳಾಗಬೇಕೆಂಬುದೇನೂ ಅಷ್ಟು ಒಪ್ಪತಕ್ಕ ಮಾತಲ್ಲ. ಪ್ರಾಚೀನಾರ್ಯರು ಮಾಂಸಾಹಾರಿಗಳಾಗಿದ್ದು ಬೌದ್ಧರ ಸಹವಾಸದಿಂದ ಬಿಟ್ಟರೆಂಬುದಾಗಿಯೇ ಇರಲಿ ಅಹಿಂಸಾ ಧರ್ಮಾನುಯಾಯಿಗಳಾಗಿ ಮಾಂಸಾಹಾರವನ್ನು ಸಂಪೂರ್ಣವಾಗಿ ನಿಷೇಧಿಸಿದ ಉತ್ಸವಾರ್ಯಕುಲ, ಬೌದ್ಧ, ಕ್ಷತ್ರಿಯ, ಜೈನ ಮುಂತಾದವರ ಪೂರ್ವಕಾಲದ ರಾಜ್ಯತಂತ್ರ ಪ್ರವರ್ತನೆಯೂ ಉದ್ಗ್ರಂಥರಚನೆಯೂ ಶಿಲ್ಪಾದಿ ಚಾತುರ್ಯವೂ ಎಷ್ಟು ಶ್ಲಾಘನೀಯವಾಗಿತ್ತೆಂಬುದನ್ನು ಸಕಲರೂ ತಿಳಿದಿರುವರು. ಬಾಲಿಕೆಯರಿಗೆ ಅಂಗಗಳು ಬೆಳೆಯುವ ಪೂರ್ವವೇ ನಮ್ಮಲ್ಲಿ ಗರ್ಭಾಧಾನವಾಗುವುದರಿಂದ ಉಂಟಾದ ಈ ಅಶಕ್ತತೆಯನ್ನು, ಮಾಂಸಾಹಾರವನ್ನು ಮಾಡದುದರ ದೋಷವೆಂದು ಹೇಳಲಾಗುವುದಿಲ್ಲ. ಹಿಂಸೆಯೇ ಪರಮಪಾತಕವಾದುದರಿಂದ ಮಾಂಸಾಹಾರವನ್ನು ನಾವು ನಿಶ್ಚಯವಾಗಿಯೂ ನಿಷೇಧಿಸಲೇಬೇಕು. ಇದನ್ನು ನಿಷೇಧಿಸಿದುದರಿಂದ ಉಂಟಾಗುವ ನಿರ್ಬಲವು ಅಷ್ಟು ಗಣನೆಗೆ ಬರುವುದಲ್ಲ. ಈಗಿನಾರ್ಯರು ಉಚ್ಚ ಸ್ಥಿತಿಗೆ ಬರಲು ಮಾಂಸಾಹಾರಿಗಳಾಗಬೇಕಾದ ಕರ್ತವ್ಯವು ಇಲ್ಲ. ಈ ಹಿಂಸೆಯನ್ನು ತಾವು ಮಾಡದೆ ತಮಗೋಸ್ಕರ ದ್ರಾವಿಡರು ಮಾಡಿದರೆ ತನಗೆ ಪಾಪವಿಲ್ಲವೆಂಬ ನಂಬುಗೆಯೂ ಸಹ ಅಸಂಗತವಾದುದು. ಮುಖ್ಯ, ಮನುಷ್ಯರೆಲ್ಲರೂ ಹಿಂಸಕರಿಗಿಂತ ನಾಗರಿಕರಾಗುವುದು ಕೇವಲ ಸ್ವಾಭಾವಿಕವಾದುದರಿಂದ ತಮ್ಮ ತಮ್ಮ ಉಚ್ಚ ಸ್ಥಿತಿಗೆ ಮುಂದೆ ಮುಂದೆ ಪ್ರಯತ್ನಪಡುವರೆಂದು ನಿಸ್ಸಂಶಯವಾಗಿ ಹೇಳಬಹುದು. ಆದರೂ ಈ ವಾಕ್ಯವನ್ನು ಸಮಸ್ತರೂ ಚಿತ್ತದಲ್ಲಿಡಬೇಕು —

ಶ್ರೀ ಪತಿಯುರಿಯೆ ದೇವರ್ಗಾಗಿ
ಹಿರಿಯಂ ಸಲನಾದಮಾದನಂತ್ಯಂ ತನ್ನೊಳ್॥
ದೊರೆಕೊಂಡಿರ್ಪನಮೇತವು।
ಪರಿನಿರ್ಮಲನಾಗೆ ಪೆರ್ಗೆ ಸಾರ್ವೋತ್ಸವಗಂ

ರ. ಎ. ವಿ. ದೇವಾಭಿಮಾನಿ.

◆◆◆◆◆◆◆◆

ಕೊರಟಗೆರೆಯನ್ನು ತಾಲ್ಲೂಕು ಮಾಡಬೇಕು.

ಆಯ್ಯಾ,

ತುಮಕೂರು ಡಿಸ್ಟ್ರಿಕ್ಟ್ ಕೊರಟಗೆರೆ ಪ್ರಜೆಗಳ ವಿಜ್ಞಾಪನೆ ಏನೆಂದರೆ. -

ಶ್ರೀಮಾನ್ ನ್ಯಾಯವಾದ ಮಹಾರಾಜಾ ಸಾಹೇಬ್ ಬಹದೂರವರ ಘನವನ್ನು ಹೊಂದಿದ ದಿವಾನ್ ಸಾಹೇಬರವರ ಮಹಾ ಸನ್ನಿಧಾನಕ್ಕೆ —

ಈ ಕೊರಟಗೆರೆ ಶಾಸ್ತ್ರೀಗಾರರ ಆಸ್ತಿಕೆಗಳಲ್ಲಿ ಇದ್ದಷ್ಟು ಆಷಾಢ ಆಸ್ತಿಕೆ ತಪ್ಪಿದ ಲಾಗಾಯತು ತಾಲ್ಲೂಕಾಗಿತ್ತು. ಇದು ಎಲ್ಲಾ ವಿಷಯದಲ್ಲೂ ಅನುಕೂಲವಾದ ಸ್ಥಳವೆಂದು ತಿಳಿದು ಮೊದಲು ತಾಲ್ಲೂಕಾಗಿದ್ದ ಚನ್ನರಾಯ ದುರ್ಗ, ಮಾಕಳಿದುರ್ಗ, ಈ ಎರಡು ತಾಲ್ಲೂಕುಗಳನ್ನು ಕೊರಟಗೆರೆಗೆ ಸೇರಿಸಿ ದೊಡ್ಡ ತಾಲ್ಲೂಕಾಗಿ ಮಾಡಲ್ಪಟ್ಟಿತು. ಲೇಟ್ ದಿವಾನ್ ರಂಗಾಚಾರ್ಯರವರು ಕೆಲವು ತಾಲ್ಲೂಕುಗಳೂ ಎರಡು ಡಿಸ್ಟ್ರಿಕ್ಟುಗಳೂ ತೆಗೆದುಹಾಕಿದ ಕಾಲದಲ್ಲಿ ಈ ತಾಲ್ಲೂಕು ಪೂರ್ವ ಪಶ್ಚಿಮ ಮೂವತ್ತೆರಡು ಮೈಲಿ, ಉತ್ತರ ದಕ್ಷಿಣ ಇಪ್ಪತ್ತೆಂಟು ಮೈಲಿ ವಿಸ್ತೀರ್ಣ ಇದ್ದಾಗ್ಯೂ ಇದರ ಮಧ್ಯಕ್ಕೆ ಮಾತ್ರ ಮಧುಗಿರಿ ಪತ್ತು ಮೈಲ್, ತುಮಕೂರು ಹದಿನಾರು ಮೈಲಿ ಇದೆ ಎಂದು ತಿಳಿದು ಈ ತಾಲ್ಲೂಕು ತೆಗೆದು ಹಾಕಿ ಸಬ್ ತಾಲ್ಲೂಕಾಗಿ ಮಾಡಲ್ಪಟ್ಟಿತು. ಆ ಲಾಗಾಯತು ಈ ಗ್ರಾಮ ತುಂಬಾ ಹೀನಸ್ಥಿತಿಗೆ ಬಂತು. ಈಚೆಗೆ ದಿವಾನ್ ಬಹದೂರವರಾದ ಸರ್ ಶೇಷಾದ್ರಿ ಅಯ್ಯರವರು ಕೆಲವು ತಾಲ್ಲೂಕುಗಳೂ ಎರಡು ಡಿಸ್ಟ್ರಿಕ್ಟುಗಳೂ ಪುನಃ ಸ್ಥಾಪಿಸಿದರು. ನಮ್ಮಗಳ ದೌರ್ಭಾಗ್ಯದಿಂದ ಈ ಕೊರಟಗೆರೆ ಮಾತ್ರ ಸಬ್ ತಾಲ್ಲೂಕಾಗಿಯೇ ನಿಂತುಹೋಯಿತು. ಇದು ಒಳ್ಳೇ ಆರೋಗ್ಯವಾದ ಸ್ಥಳವಾಗಿಯೂ, ವೃಷಭಾವತಿ ನದಿತೀರದ ಸಮೃದ್ಧಿಯುಳ್ಳದ್ದಾಗಿಯೂ ಪಕ್ಕಕಾಲದಲ್ಲೇ ಐದು ಆರು ಸಾವಿರ ಪ್ರಜೆಗಳು ಬಂದಾಗ್ಯೂ ಇಳಿದುಕೊಳ್ಳುವಷ್ಟು ಒಳ್ಳೇ ಸತ್ರ ದೇವಾಲಯ ಉಳ್ಳದ್ದಾಗಿಯೂ, ಮೂರು ಸಹಸ್ರ ಪ್ರಜೆಗಳುಳ್ಳ ಪಟ್ಟಣವಾಗಿಯೂ ಇದೆ. ಇದು ಜಂಗ್ಲಿ ಪ್ರದೇಶವಾಗಿ ಬೆಟ್ಟಗಳ ಸಾಲುಳ್ಳದ್ದಾಗಿರುವುದರಿಂದ ಇಲ್ಲಿ ಆಗಾಗ್ಯೆ ದೊಡ್ಡ ದರೋಡೆಗಳು ನಡೆಯುತ್ತಲೇ ಇರುತ್ತವೆ. ಈ ತಾಲ್ಲೂಕಿನ ಗ್ರಾಮಗಳ ಪಟೇಲ್ ಶ್ಯಾನುಭೋಗರು ಇಲ್ಲಿಂದ ಮಧುಗಿರಿಗೆ ಖರ್ಚು ವಗೈರೆ ತೆಗೆದುಕೊಂಡು ಹೋಗಬೇಕಾದರೆ ಮಧ್ಯೆ ಜಂಗ್ಲಿ ಪ್ರದೇಶವಾದ ದಾರಿಯಲ್ಲಿ ಅನೇಕರು ಹಣ ಕಾಸುಗಳನ್ನು ಕಳೆದುಕೊಂಡು, ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿರುತ್ತಾರೆ. ಈ ಅನಾನುಕೂಲ್ಯಗಳನ್ನು ಕುರಿತು ಅನೇಕ ವೇಳೆ ಅರ್ಜಿ ಮೂಲಕ ಅರಿಕೆ ಮಾಡಿಕೊಂಡದ್ದಲ್ಲದೆ ರೂಬರೂಬು ಸಹಾ ಹೇಳಿಕೊಂಡಿರುತ್ತೇವೆ. ಘನವನ್ನು ಹೊಂದಿದ ಮಹಾಸ್ವಾಮಿಯವರು ತುಮಕೂರು ಡಿಸ್ಟ್ರಿಕ್ಟ್ ಡಿಪ್ಯುಟಿ ಕಮಿಷನರಾಗಿದ್ದ ಕಾಲದಲ್ಲಿ ನಮ್ಮಗಳ ಅಹವಾಲನ್ನು ಕೇಳಿಕೊಂಡಾಗ್ಯೆ ತಾಲ್ಲೂಕು ಮಾಡುವದಾಗಿ ವಾಗ್ದಾನ ಮಾಡಿ ಒಂದು ಪ್ಲ್ಯಾನ್ ಸಹಾ ತಯಾರಾಗಿರುತ್ತೆ. ಆ ಲಾಗಾಯತು ಚಂದ್ರೋದಯವನ್ನು ನಿರೀಕ್ಷಿಸುತ್ತಿರುವ ಚಕೋರಪಕ್ಷಿಗಳಂತೆ ಮಹಾಸ್ವಾಮಿಯವರ ಉತ್ಕೃಷ್ಟ ಪದವಿಯನ್ನೆ ನಿರೀಕ್ಷಿಸುತ್ತಿದ್ದೆವು. ನಮ್ಮಗಳ ಭಾಗ್ಯೋದಯದಿಂದ ಮಹಾಸ್ವಾಮಿಯವರಿಗೆ ಉತ್ಕೃಷ್ಟ ಪದವಿಯು ಉಂಟಾದದ್ದಕ್ಕಾಗಿ ಚಂದ್ರನನ್ನು ಕಂಡ ಅಂಬುಧಿಯಂತೆ ನಾವುಗಳೆಲ್ಲರು ಮಹದಾನಂದಪಟ್ಟು ಪುನಃ ನಮ್ಮ ತಾಲ್ಲೂಕು ಸ್ಥಾಪಿಸಲ್ಪಡುತ್ತೆಂದು ನಂಬಿದ್ದೇವೆ. ಈಚೆಗೆಯೂ ತಾಲ್ಲೂಕಿನಲ್ಲಿ ಸರ್ಕಾರದಿಂದ ಐದು ಆರು ಲಕ್ಷ ರೂಪಾಯಿಗಳು ಮುಟ್ಟಿಸಿ ಕೊರಟಗೆರೆಗೆ ಆರು ಏಳು ಮೈಲ್ ಫಾಸಲೆಯಲ್ಲಿ ಹೊಸದಾಗಿ ಮಾವತ್ತೂರು ಕೆರೆ ಭಾರಿಯಾಗಿ ತಯಾರಾಗಿರುವದ್ದರಿಂದ ಸಾಲಿಯಾನಾ ಸರ್ಕಾರಕ್ಕೆ ಹದಿನೈದು ಇಪ್ಪತ್ತು ಸಾವಿರ ರೂಪಾಯಿಗಳು ಹುಟ್ಟುವಳಿ ಆಗುತ್ತೆ. ಕೊರಟಗೆರೆಗೆ ಮೂರು ಮೈಲ್ ಫಾಸಲೆಯಲ್ಲಿ ಅಗ್ರಹಾರದ ಕೆರೆ ಭಾರಿಯಾಗಿ ತಯಾರಾಗುತ್ತಾ ಇದೆ. ತುಂಬಾಡಿ ಹೊಸಕೆರೆಯು ಸ್ಯಾಂಕ್ಷನ್ ಆಗಿರುವದಾಗಿ ವರ್ತಮಾನ ಕೇಳುತ್ತೇವೆ. ಈಗ ಇಲ್ಲಿರುವ ಸಬ್ ತಾಲ್ಲೂಕು ಒಂದು ಲಕ್ಷ ರೂಪಾಯಿ ಹುಟ್ಟುವಳಿ ಇರುತ್ತೆ. ಈ ಕೆರೆಗಳ ಅಚ್ಚುಕಟ್ಟು ಹುಟ್ಟುವಳಿ ಸೇರಿ ಸರ್ಕಾರಕ್ಕೆ ಒಂದೂ ಕಾಲು ಒಂದೂವರೆ ಲಕ್ಷ ರೂಪಾಯಿನ ವರಿವಿಗೂ ಹುಟ್ಟುವಳಿ ಆಗಬಹುದು. ಇದಕ್ಕೆ ಮೊದಲು ಈ ತಾಲ್ಲೂಕಿನಿಂದ ತೆಗೆದುಹಾಕಿದ ಗ್ರಾಮಗಳನ್ನು ಪುನಃ ಇದಕ್ಕೆ ಸೇರಿಸಿ ತಾಲ್ಲೂಕು ಮಾಡಿದರೆ ಎರಡು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಹುಟ್ಟುವಳಿ ಆಗುವದಲ್ಲದೆ ಎಲ್ಲಾ ತಾಲ್ಲೂಕುಗಳಿಗಿಂತಲೂ ದೊಡ್ಡ ತಾಲ್ಲೂಕಾಗಿ ಇರುವದಲ್ಲದೆ ಪ್ರಜೆಗಳಿಗೆ ತುಂಬಾ ಅನುಕೂಲವಾಗಿ ಇರುತ್ತೆ. ಈ ಮೇಲಿನ ಸಂಗತಿಗಳೆಲ್ಲಾ ಮಹಾಸ್ವಾಮಿಯವರ ಘನವಾದ ಚಿತ್ತದಲ್ಲಿ ತಂದು ಈ ಕೊರಟಗೆರೆಯನ್ನು ತಾಲ್ಲೂಕಾಗಿ ಮಾಡಿಸಿಕೊಡಬೇಕೆಂದು ಪ್ರಜೆಗಳಾದ ನಾವುಗಳೆಲ್ಲರು ಮಹಾಸ್ವಾಮಿಯವನ್ನು ಪ್ರಾರ್ಥಿಸುತ್ತೇವೆ.

ಕೊರಟಗೆರೆ ಪ್ರಜೆಗಳು.

◆◆◆◆◆◆◆◆◆

ಪ್ರಜಾಪ್ರತಿನಿಧಿಸಭೆಗೆ ಮೆಂಬರ ಚುನಾವಣೆ.

ಆಯ್ಯಾ,

ತಾ. ೧೫—೭—೦೩ ನೇ ದಿನ ೩ ಘಂಟೆಗೆ ಕೃಷ್ಣರಾಜಪೇಟೆ ತಾಲ್ಲೂಕು ಕಛೇರಿ ಕಟ್ಟಡದಲ್ಲಿ ದಸರಾ ಕಾಲದಲ್ಲಿ ಮೈಸೂರಿನಲ್ಲಿ ನಡೆಯುವ ಪ್ರಜಾಪ್ರತಿನಿಧಿಸಭೆಗೆ ಮೆಂಬರುಗಳನ್ನು ಚುನಾಯಿಸಲು ಸಭೆ ಸೇರಿಸಿ ಅಮಲ್ದಾರರವರು ಸಭಾಧ್ಯಕ್ಷರಾಗಿ ಸಭೆಯನ್ನು ಅಲಂಕರಿಸಿದ್ದರು. ಆ ಕಾಲದಲ್ಲಿ ೧೫—೭—೦೩ ನೇ ಪುರಸ್ಕಾರದಲ್ಲಿ ಡಿಸ್ಟ್ರಿಕ್ಟ್ ಆಫೀಸಿಗೆ ರವಾನೆಯಾಗಿದ್ದ ಮೆಂಬರುಗಳ ಲಿಸ್ಟಿಗೆ ಕೆಲವರ ಹೆಸರು ಸೇರದೇ ಇದ್ದದ್ದನ್ನು ಸೇರಿಸಿದ್ದರಲ್ಲಿ ಒಟ್ಟು ೬೩ ಜನ ೬೩ ಮಂದಿ ಹಾಜರಾಗಿದ್ದರು. ಇವರ ಕೈಯಲ್ಲೆಲ್ಲಾ ಒಂದೊಂದು ಚೀಟಿ ಕೊಟ್ಟು, ಇಲ್ಲಿಂದ ೩ ಮಂದಿ ಮೆಂಬರುಗಳನ್ನು ಚುನಾಯಿಸಬೇಕಾದ್ದರಿಂದ ನೀವು ಯಾರನ್ನು ಚುನಾಯಿಸಬೇಕೋ ಅವರ ಹೆಸರು ಬರೆದು ತಾರೀಖು ಹಾಕಿ ನಿಮ್ಮ ರುಜು ಮಾಡಿಕೊಡಬೇಕೆಂತ ಅಪ್ಪಣೆ ಮಾಡಿದರು. ಅಕ್ಷರ ಬರೆಯಕ್ಕವರು ತಮ್ಮ ಕೈನಿಂದಲೂ, ಬರೆಯದೇ ಇರತಕ್ಕವರು ಇತರರ ಕೈನಿಂದಲೂ ಬರೆಯುವವರ ಚಮತ್ಕಾರವಿದ್ದ ಹಾಗೆ ಬರೆಸಿಕೊಟ್ಟರು. ಈ ರೀತಿ ಬರೆಸಿಕೊಟ್ಟದ್ದರಲ್ಲಿ ಚಿನಕುರುಳಿ ಶಾನುಭೋಗರಿಗೂ, ಮುನಸಿಪಲ್ ತೆರಿಗೆ ಕೊಡತಕ್ಕ ದೊಡ್ಡೇಗೌಡರಿಗೂ, ಶೀಳನೆರೆ ಲಿಂಗೇಗೌಡರಿಗೂ ಕೊಟ್ಟಿದ ಓಟುಗಳು ಬಂದದ್ದರಿಂದ ಇವರುಗಳನ್ನೇ ಚುನಾಯಿಸತಕ್ಕದ್ದೆಂದು ಸಭಾಧ್ಯಕ್ಷರು ತೀರ್ಮಾನಿಸಿದರು. ಈ ಒಂದು ವಿಷಯದಲ್ಲಿ ಈ ತರಹವಾಗಿ ನಮ್ಮ ತಾಲ್ಲೂಕಿನಲ್ಲಿ ಯಾವ ಅಮಲ್ದಾರರೂ ಮಾಡಿದ್ದಾಗಿ ತೋರಲಿಲ್ಲ. ಆದ್ದರಿಂದ ಈ ತಾಲ್ಲೂಕಿನ ಪ್ರಜೆಗಳಿಗೆ ಬಹಳ ಸಂತೋಷಕರವಾಗಿಯೂ, ನ್ಯಾಯಕರವಾಗಿಯೂ ಇರುತ್ತಿಯಲ್ಲದೆ ತುಂಬಾ ಕೃತಜ್ಞರಾಗಿರುತ್ತಾರೆಂತ ನಂಬುತ್ತೇವೆ. ಮೇಲ್ಕಂಡ ಮೂರು ಮಂದಿ ಪೈಕಿ ಲಿಂಗೇಗೌಡರು ಇನಾಮ್ದಾರರೂ ಕಂದಾಯ ಕೊಡುವುದಿಲ್ಲವೆಂದು ತಕರಾರು ಬಂತು. ಲೆಕ್ಕದ ಬುಕ್ಕುಗಳನ್ನು ತಂದು ಪರಿಶೀಲಿಸಬೇಕೆಂದು ಹೇಳಿಕೊಂಡರು. ಮೆ॥ ರಂಗಸ್ವಾಮಿಗೌಡರು ಮುನಸಿಪಾಲಿಟಿಯಿಂದ ಇವರನ್ನು ಚುನಾಯಿಸಬೇಕೆಂದು ಹೇಳಿದರು ಸಭಾಧ್ಯಕ್ಷರು ಈ ಮುನಿಸಿಪಾಲಿಟಿಗಳಿಗೆ ಅವಶ್ಯವಿಲ್ಲವೆಂದು ಅಪ್ಪಣೆಮಾಡಿದರು. ಅಲ್ಲದೆ ಲೋಕಲ್‌ಫಂಡು ಬೋರ್ಡಿಗೆ ನಾಡಿಗ ಕೃಷ್ಣಪ್ಪನವರನ್ನು ಮೊದಲೇ ನೇಮಕಮಾಡಿರುತ್ತೇವೆಂದು ಅಪ್ಪಣೆಮಾಡಿದರು. ತಾಂಬೂಲವನ್ನು ಕೊಟ್ಟನಂತರ ಸಭೆಯು ಬರಖಾಸ್ತಾಯಿತು.

೧೮೯೦ ನೇ ಇಸವಿ ನೊವೆಂಬರ್ ೪ ನೇ ತಾರೀಖಿನ ಮೈಸೂರ್ ಗಜೆಟ್ ೭ ನೇ ಭಾಗದ ೨೦ ನೆ ಪುಟದಲ್ಲಿ ದಿವಾನ್‌ಸಾಹೇಬರವರು ಅಭಿಪ್ರಾಯಪಟ್ಟಿರುವುದಕ್ಕೆ ಅನುಗುಣವಾಗಿ ಮೆಂಬರುಗಳು ಸೇರಿತ್ತಿಲ್ಲವಾಗಿ ವಿಷಾದಿಸುತ್ತೇನೆ. ಪಟ್ಟಾದ ಆದಾಯ, ಯಾನೆ ವ್ಯಾಪಾರ, ಲೋಕವ್ಯವಹಾರಜ್ಞಾನ, ವಿದ್ಯೆ, ಅಧಿಕವಾಗಿರುವ ಅರಗತಿ ಜನಗಳು ಮತ್ತು ಭಾರಿ ದಿವಾನ್‌ದಾರರು ಈ ಸಭೆಗೆ ಬರತಕ್ಕ ಮೆಂಬರುಗಳನ್ನು ತಾವೇ ಚುನಾಯಿಸಿಕೊಳ್ಳಬೇಕೆಂದು ಅಪೇಕ್ಷೆಯನ್ನು ಪಾಲಿಸಿರುತ್ತಾರೆ. ಈಗ ಸೇರಿದ್ದ ಸಭೆಯಲ್ಲಿ ಅಂಥವರು ೧೦—೧೫ ಮಂದಿ ಮಾತ್ರ ಸೇರಿದ್ದರೇ ಹೊರತು ಉಳಿಕೆಯವರೆಲ್ಲಾ ರುಜುಮಾಡುವುದಕ್ಕೆ ಮಾತ್ರ ಬರತಕ್ಕವರು; "ಶ್ರೀ" ಕಾರ ಬರೆವುದಕ್ಕೂ ತಿಳಿಯದಿರುವವರು; ತಮ್ಮ ಆಸ್ತಿಗಿಂತಲೂ ಅಧಿಕ ಸಾಲವಿರತಕ್ಕವರು ಸಹ ಸೇರಿದ್ದರು. ಮುನಸಿಪಲ್ ತೆರಿಗೆ ಕೊಡತಕ್ಕವರನ್ನೂ ಸಭೆಗೆ ಸೇರಿಸಿದ್ದರು. ಮುನಸಿಪಲ್ ತೆರಿಗೆಯು ಮೊಹತರ್ಫಾ ತೆರಿಗೆಯಲ್ಲವು. ಲೇಟ್ ಮಹಾರಾಜರವರೂ ಸರ್ ಕೆ. ಶೇಷಾದ್ರಿ ಅಯ್ಯರ್ ದಿವಾನ್ ಸಾಹೇಬರವರೂ ಈ ರಾಜ್ಯದಲ್ಲಿ ಪ್ರಜೆಗಳು ವ್ಯಾಪಾರಿಗಳಾಗಿಯೂ, ವಿದ್ಯಾ ನಿಪುಣರಾಗಿಯೂ, ಲೋಕವ್ಯವಹಾರಜ್ಞಾನವನ್ನು ಚನ್ನಾಗಿ ಬಲ್ಲವರಾಗಿಯೂ, ಭಾರಿ ದಿವಾನ್‌ದಾರರಾಗಲು ಉತ್ಸಾಹವುಳ್ಳವರಾಗಿಯೂ ಇದ್ದರೆ ದೇಶವು ಉನ್ನತ ಸ್ಥಿತಿಗೆ ಬರುವುದೆಂತಲೂ ಜಾತಿಭೇದವಿಲ್ಲದೆ ಎಲ್ಲಾ ಜಾತಿಯವರೂ ಸ್ನೇಹದಿಂದ ಪ್ರಜಾಪ್ರತಿನಿಧಿಸಭೆಗೆ ಬರುವುದರಿಂದ ಉತ್ತರೋತ್ತರ ಸಾಂಸರ್ಗಿಕವಾಗಿ ಬಾಳುತ್ತಾ ಸೌಖ್ಯದಿಂದಿರಲು ಅನುಕೂಲಿಸುವುದೆಂದೂ ನಂಬಿದ್ದರೆಂದು ತಿಳಿಸುತ್ತೇನೆ. ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿರುವ ಪ್ರಜೆಗಳ ಪೈಕಿ ಅಂಥಾ ಯೋಗ್ಯರನ್ನೇ ಮೆಂಬರುಗಳಾಗಿ ಚುನಾಯಿಸುವುದಕ್ಕೂ, ಚುನಾಯಿಸಲ್ಪಡುವುದಕ್ಕೂ ಸಭೆಗೆ ಕರೆಸುತ್ತಾ ಬರಬೇಕು. ಹೀಗೆ ಮಾಡುತ್ತಾ ಬಂದರೆ ಪ್ರಜೆಗಳು ತಾವು ತಾವು ಮೆಂಬರಾಗಬೇಕೆಂಬ ಕುತೂಹಲದಿಂದ ಇಂಗ್ಲೀಷರು ಹ್ಯಾಗೋ ಹಾಗೆ ಪ್ರಯತ್ನಪಡುವರೆಂದು ನಂಬುತ್ತೇನೆ.

ವಿದ್ಯೆಯೂ, ಲೋಕವ್ಯವಹಾರಜ್ಞಾನವೂ ಇಲ್ಲದವರು ಸಭೆಗೆ ಹೋದರೆ ಮೌನದಿಂದಿದ್ದು ಬರುವರಲ್ಲದೆ, ಸರ್ಕಾರದ ಕಾನೂನುಗಳಿಗೆ ವಿರೋಧವಿಲ್ಲದಂತೆ ತಮ್ಮ ತಾಲ್ಲೂಕಿನ ಪ್ರಜೆಗಳಿಗೆ ಅನುಕೂಲವಾಗುವ ವಿಷಯಗಳನ್ನು ಚರ್ಚಿಸಲಾರರು. ವಿದ್ಯೆ ಇದ್ದರಲ್ಲವೇ ಕಾನೂನುಗಳನ್ನೂ, ಲೋಕವ್ಯವಹಾರ ಜ್ಞಾನವನ್ನೂ ತಿಳಿಯುವರು? ವಿದ್ಯೆ ಇಲ್ಲದವರು ಏನು ತಿಳಿದಾರು? ಪ್ರಜೆಗಳಿಗೆ ಏನು ಉಪಕೃತಿ ಮಾಡಿಯಾರು? ಸಾಧಾರಣ ವಿದ್ಯಾವಂತರಾದರೂ ಸಭೆಗೆ ಹೋಗಲು ಅರ್ಹರಾಗಿರುತ್ತಾರೆ. ಅದೂ ಇಲ್ಲದವರು ಏನು ಪ್ರಯೋಜನ? ಈಗ ಗೊತ್ತುಮಾಡಿರುವ ೩ ಮಂದಿ ಪೈಕಿ ಚಿನಕುರಳಿ ಶಾನುಭೋಗರು ವಿನಹ ಉಳಿಕೆ ೨ ಮಂದಿಯೂ ಸಾಧಾರಣ ವಿದ್ಯಾವಂತರೂ ಅಲ್ಲವೆಂತಲೂ, ಲೋಕವ್ಯವಹಾರವನ್ನು ಚನ್ನಾಗಿ ಬಲ್ಲವರಲ್ಲವೆಂತಲೂ ತಿಳಿಯುವೆನು. ಇನ್ನುಮುಂದಾದರೂ ಈ ಲೋಪಗಳು ಪರಿಹರವಾಗುವವೆಂದು ಹಾರೈಸುವ

ಪ್ರಜಾ ಅಭಿಮಾನಿ.

---

## ತಾಲ್ಲೂಕು ವರ್ತಮಾನಗಳು.

ಸೊರಬ. ಈ ಊರು ದೊಡ್ಡಪೇಟೆ ಪಕ್ಕದಲ್ಲಿರುವ ಆನೆಮಡಕೆ ಎಂಬ ರೋಡಿನಲ್ಲಿ ಜನಗಳ ಕಾಲು ಹೂತುಹೋಗುವಷ್ಟು ಪಾಯಖಾನೆ ರಾಶಿಯಾಗಿರುವುದು. ಅಂಥಾದ್ದರಲ್ಲಿಯೇ ಜನಗಳು ಸಂಚಾರ ಮಾಡುವದು ತುಂಬಾ ದುಃಖಾಸ್ಪದವಾಗಿದೆ. ಇಲ್ಲಿ ಮುನಿಸಿಪಲ್ ಕೆಲಸ ನಡಿಸುವ ಬಗ್ಯೆ ಈ ಮುಂಚೆ ಒಬ್ಬ ಜವಾನನ್ನು ನೇಮಕ ಮಾಡಿದ್ದಾಗ್ಯೆ ಟವರ್ ಒಳ್ಳೇ ಸ್ಥಿತಿಯಲ್ಲಿತ್ತು. ಈಗ ಸದರಿ ಕೆಲಸಕ್ಕೆ ಮುತ್ಸದ್ದಿಯನ್ನು ನೇಮಕ ಮಾಡಿದ ಲಾಗಾಯತು ಟವರ್ ಇಷ್ಟು ಹೀನಸ್ಥಿತಿ ಇದೆ. ಸಪ್ರಯವರು ಬ್ರಾಹ್ಮಣರಾದ್ದರಿಂದ ರೂಢಮಾಲಿಗಳು ಅವರನ್ನು ಲಕ್ಷ್ಯ ಮಾಡುವದಲ್ಲದೆ, ಸದರಿ ಮುತ್ಸದ್ದಿಯವರು ಯಾವ ಸ್ಥಳದಲ್ಲಿರುತ್ತಾರೋ ಟವರ್‌ನಲ್ಲಿ ಅವರ ಭೇಟಿ ಸಿಕ್ಕುವದು ಕಷ್ಟವಾಗಿದೆ.—ಇಲ್ಲಿ ಮುನಸಿಪಲ್ ಮಾವಿನ ತೋಟದಲ್ಲಿ ಪ್ರತಿ ವರ್ಷವೂ ಬಿಡುವಾಗುತ್ತಿರುವ ಹಣ್ಣಿನ ೫೦—೬೦ ರೂಪಾಯಿಗೆ ಸರ್ಕಾರದಿಂದ ಹರಾಜಾಗಿ ಈ ಊರು ಜನಗಳಿಗೆ ತಕ್ಕ ಅನುಕೂಲವಾಗಿತ್ತು. ಈ ವರ್ಷ ಬಡಜನಗಳ ದುರಾದೃಷ್ಟಕ್ಕೆ ಈ ವರಿಗೂ ಆ ರೀತಿ ಆಗದೆಯೂ, ಪ್ರತಿನಿತ್ಯ ೧೫—೨೦ ದನಗಳು ಸದರಿ ತೋಪಿನಲ್ಲಿ ಮೇಯುವದರಿಂದಲೂ ತುಂಬಾ ವ್ಯಸನವುಳ್ಳವರಾಗಿದ್ದಾರೆ. ವರ್ಷ ವರ್ಷವೂ ಸಿಕ್ಕುತ್ತಿದ್ದ ಎಂಬ ಧೈರ್ಯದಿಂದ ಈ ವರಿಗೂ ಜಾನವಾರಗಳ ಭೋಜನಕ್ಕೆ ತಕ್ಕ ಅನುಕೂಲ ಮಾಡಿಕೊಳ್ಳದೆ ಪರಿತಪಿಸುತ್ತಾರೆ. ಸದರಿ ತೋಟದ ಪೋಷಣೆಗೆ ಒಬ್ಬ ಜವಾನನು ಇದ್ದೂ ನಿತ್ಯವಲ್ಲೂ ೧೫—೨೦ ದನಗಳು ಮೇಯುತ್ತಿದ್ದರೂ ತಕ್ಕ ಬಂದೋಬಸ್ತು ಮಾಡದೆ ಹಾಗೇ ಬಿಟ್ಟಿರುವದು ಏನು ಕಾರಣವೋ ತಿಳಿಯದು. ಮುನಿಸಿಪಲ್ ಮೆಂಬರುಗಳು ಈ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ನಿದ್ರೆ ಮಾಡುತ್ತಿರುವದು ಈ ಊರು ಜನಗಳ ದುರದೃಷ್ಟವಾಗಿದೆ.—ಈ ತಾಲ್ಲೂಕು ಎಕ್ಸೈಜ್ ಇಲಾಖೆಯ ಬಡವರಾದ ಗಾರ್ಡುಗಳು ೩—೪ ತಿಂಗಳು ತಲಬು ಇಲ್ಲದೆ ತೊಂದರೆಪಡುವವರು ಬೇಹುತ ಮುಂದೇನ ಎಷ್ಟು ವರ್ಣಿಸಿದರೂ ಸಾಲದಾಗಿದೆ. ೪ ರೂ. ತಲಬು ಬರುವ ಒಬ್ಬನ ಮನೆಯಲ್ಲಿ ೪—೧೦ ಜನರು ಇದರಿಂದಲೇ ಜೀವನ ಮಾಡಬೇಕಾದ್ದು. ಪರಸ್ಥಳದಿಂದ ಬಂದ ಬಡವ ಕಾರ್ಡಿಗೆ ಈ ರೀತಿ ಆದಲ್ಲಿ ಅಂಥಾವರಿಗೆ ಯಾರಾದರೇ ಸಾಲ ಕೊಟ್ಟಾರು ಎಂಬುವದನ್ನು ಮೇಲ್ಪಟ್ಟ ಆಫೀಸರರು ಯೋಚಿಸತಕ್ಕದ್ದಾಗಿದೆ.—ಈ ಊರಲ್ಲಿ ಗೌವರ್ನಮೆಂಟ್ ಸ್ಕೂಲ್ ಊರ ಹೊರಗೆ ಇರುವದರಿಂದ ಇನ್‌ಫೆಂಟ್ ಎ. ಬಿ. ತರಗತಿಯ ಸಣ್ಣ ಬಾಲಕರು ಸದರಿ ಸ್ಕೂಲಿಗೆ ಹೋಗಿ ವಿದ್ಯಾಭ್ಯಾಸ ಮಾಡುವ ಭಾಗ್ಯವಿಲ್ಲವೆಂದು, ಈ ಮುಂಚೆ ಊರೊಳಗೆ ಇರುವ ಬಸವಣ್ಣನ ದೇವಸ್ಥಾನದಲ್ಲಿ ಕ್ಲಾಸ್ ನಡೆಸುತ್ತಾ ಇದ್ದರು. ಈಗ ೪ ತಿಂಗಳಿಂದ ಸದರಿ ಸ್ಥಳದಲ್ಲಿ ಕ್ಲಾಸ್ ಮಾಡದೆ ಊರ ಹೊರಗೆ ಸದರಿ ಕಟ್ಟಡದಲ್ಲಿಯೇ ಕೆಲಸ ಮಾಡುವದರಿಂದ ೫—೬ ವರ್ಷದ ಬಾಲಕರು ಈಗ ಸುರಿಯುವ ಮಳೆಯಿಂದಲೂ ಸ್ಕೂಲ್ ಕಟ್ಟಡ ಬಹು ದೂರವಾದ್ದರಿಂದಲೂ ಸ್ಕೂಲಿಗೆ ಹೋಗದೆ ಮನೆಯಲ್ಲಿಯೇ ಇದ್ದು ಹಾಳಾಗುವದನ್ನು ನೋಡಿ ತುಂಬಾ ವ್ಯಸನವಾಗುತ್ತೆ. ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಮೆ॥ ಎಚ್. ಜೆ. ಭಾಭಾ ಯವರು ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡು, ಸೊರಬ ಟವರ್‌ನಲ್ಲಿ ವಿದ್ಯಾಭ್ಯಾಸಕ್ಕೆ ಕುಂದಕವಾಗಿರುವದನ್ನು ಹೋಗಲಾಡಿಸುವರೆಂದು ನಂಬಿದ್ದೇವೆ.

ಚಿಕ್ಕಮಗಳೂರು:— ಈಗ ನಾಲ್ಕು ವಾರಗಳ ಲಾಗಾಯತು ಪ್ರತಿ ದಿನವೂ ಅಹೋರಾತ್ರಿ ಜಡಿ ಮಳೆ ಸುರಿಯುತ್ತ ಈಗ ಸ್ವಲ್ಪ ವಿಶ್ರಾಂತಿ ತೋರುವದರಿಂದ ಜನರಿಗೆ ಅತಂತ್ಯ ಕಳವಳ ಆಗುತ್ತಿದೆ.—ಪೈರುಗಳೆಲ್ಲಾ ತುಂಬಾ ಅನುಕೂಲವಾಗಿ ಪ್ರಜಾಕ್ಷೇಮ ಸಾಧಕವಾಗಿದೆ.—ಹಿರೇಮಗಳೂರಲ್ಲಿರುವ ಪ್ರಸಿದ್ಧ ವೈಷ್ಣವ ದೇವಸ್ಥಾನದ ಅರ್ಚಕರು ಪರಸ್ಪರ ಕಲಹದಿಂದ ಈ ತನಕ ಒಂದು ಪರ್ವತ ಎದುರುನೋಡುತ್ತಾ ಮಾತ್ಸರ್ಯವನ್ನು ಬಿಡದೆ ಬೆಳೆಸುತ್ತಲೂ ಪ್ರಮಾದ ಹುಟ್ಟಿದೆ ಆಶ್ಚರ್ಯ!—ಮಾಗಡಿ ಗ್ರಾಮದಲ್ಲಿ ಹೇರದಿ ಕಂಟ್ರಾಕ್ಟರರಾಗಿದ್ದ ಮಲ್ಲೇಗೌಡ ಎಂಬುವರ ಪಾಲುಗಳನ್ನು ಪರಾಭವಮಾಡುವದರಲ್ಲಿ ಹೇಕಡಾ ಸಿಕ್ಕಿದ ಕೊಟ್ಟನಂತ ಕಳವಳವಾಗಿದೆ.—ಇದರಂತೆ ಮಲ್ಲೇಗೌಡನ ದ್ಯಾವೇಗೌಡನೂ ಬಾಕಿ ಲಕ್ಷ ಕೊಡಿಸುವಷ್ಟು ೬೦೦ ರೂ. ವರಿಗೂ ಕಂದಾಯ

ದಂಡ ತಿಂದಹಾಗೆ ಛಾರ್ಜ್ ಆಗಿದೆ. ಈ ಕೃತ್ಯಕ್ಕೆ ಒಳಗಾದ ಸಣ್ಣ ಯ ಕೊಟ್ಟಂತೆ ಪೋಗಳ ಪೇಷದಾರಿಗೆ ಕಂಪ್ಲೇಂಟು ಆಗಿದೆ. ಈತನ ಮನೆ ಪಟೇಲನು ೫೦ ರೂಪಾಯಿ ಕಂದಾಯದ ಹಣ ತಿಂದು ಓಡಿ ಹೋಗಿರುವಂತೆಯೂ, ಲಕ್ಷ್ಮಿ ತರದೂದು ನಡಿಸಿ ಹಿಡಿದು ಆ ಹಣವ ನ್ನು ... ಕೊಡಲಾಗಿರುವಂತೆಯೂ ವರ್ತಮಾನವಿದೆ. ಈಸಬ ಕೇಷದಾರ್ರು ಮೊದಲನೆಯಿಂದ ಈ ಮೊಕದ್ದಮೆಗಳೆಲ್ಲಾ ಬಯಲಿಗೆ ಬಂದು ಸರ್ಕಾರಕ್ಕೆ ದಾಖಲಾದಂತೆ ತಿಳಿಯಬಂದಿದೆ.—ಪ್ಲೇಗ್ ಸ ಮಾಚಾರವು ಗಲಾಟೆಯೂ ಕೇಸುಗಳೂ ಏನೂ ಇಲ್ಲ. ಬರೀ ಪ್ರಕಾ ರು ಬಹು ಜೋರಾಗಿ ಹಾಗೇ ಏನೂ ಇಲ್ಲದೆ ತಣ್ಣಗಾಯಿತು. ಕಡೂ ರು ತಾಲ್ಲೂಕು ಶಿರಸ್ತೆದಾರ್ ಕೆಲಸಕ್ಕೆ ಬಡ್ತಿಹೊಂದಿದ ರಿಕಾರ್ಡ್ ಕೀಪರು ಕ್ರಿಮಿನಲ್ ಮತ್ತು ರವಿನ್ಯು ಪರೀಕ್ಷೆಗಳನ್ನು ಕೊಟ್ಟಿಲ್ಲ ವೆಂತಲೂ ಅದರಿಂದ ಅವರಿಗೆ ಶಿರಸ್ತೆ ಕೆಲಸ ತಪ್ಪಿಸುವಂತೆ ಬಂದ ರವಿನ್ಯು ಕಮಿಷನರ ಹುಕುಂ ಜಾರಿಗೆ ಬರುವದಕ್ಕೆ ಬದಲಾಗಿ ರವಿನ್ಯು ಕಮಿಷನರು ತಿಳಿಸಿದ ಹೆಡ್ ಮುನಷಿಯವರಿಗೆ ಕೊಡ್ಪದ ಶಿರಸ್ತೆದಾರಿ ಸರಫರಾಜ್ ಆಗುವಂತೆ ಡೆಪ್ಟಿ ಕಮಿಷನರು ಶಿಫಾರಸ್ ಮಾಡಿದ್ದಾರಂತೆ.—ಈ ಊರು ಕನ್ನಡ ಸ್ಕೂಲನ್ನು ಮುಂದಕ್ಕೆ ತಂ ದು ಇದೂ ಸಂಸ್ಥಾನದಲ್ಲಿ ಒಂದು ಯೋಗ್ಯವಾದ ಸ್ಕೂಲೆಂತ ಹೇಳು ವಂತೆ ಬಹಳ ಮೊದಲನೆಯಿಂದ ಅಭಿವೃದ್ಧಿ ಮಾಡಿದ ಅನುಭವವೂ ಸರ್ವಿಸೂ ಯೋಗ್ಯತೆಯೂ ಉಳ್ಳ ಹೆ. ಮಾ. ವೆಂಕಟಕೃಷ್ಣಯ್ಯನವರಿಗೆ ಶ್ರೀ ಛಾಬಾ ಯವರು ಬಹು ಸಂತೋಷನಾಗಿ ಬಡ್ತಿ ಕೊಟ್ಟಿದ್ದು ಇವರ ಬಹುಮಂದಿ ಸ್ನೇಹಿತರು ಉಲ್ಲಾಸ ಪಡುವಂತಾಯಿತು.

ಹಬ್ ಡಿವಿಜನವರ ಕೋರ್ಟಿನಲ್ಲಿ ಮೊಕದ್ದಮೆಗಳು ಬಹಳವಾಗು ವದರಿಂದ ಹೀರಿಂಗಿಗೆ ಅವಕಾಶ ಕೊಡದೆ ಡಿವಿಜನವರು ಕೆಲವು ನಾರಿ ಪ್ರಾತಃಕಾಲವೂ ಕೋರ್ಟು ನಡಸಿ, ಬೇಗ ಬೇಗ ವ್ಯಾಜ್ಯಗಳನ್ನು ವಿಮರ್ಶೆ ಮಾಡುವದರಿಂದ ಲಾಯರುಗಳಿಗೂ ಕಕ್ಷಿಗಾರರಿಗೂ ಬಹಳ ಸಂತೋಷವಾಗಿದೆ.—ಕೆಲವು ದಿನಗಳ ಹಿಂದೆ ಪೋಲೀಸಿನವ ರು ಅನೇಕ ಮನೆಗಳಿಗೆ ನುಗ್ಗಿ ಜನರನ್ನು ಹೊಡೆದು ಕೊಂಡು ಹೋದಂತೆ ಬಲಾತ್ಕರಿಸಿದ ಕಾರ್ಯಗಳ ಬಗ್ಗೆ ಕಮೀಷನರವರ ಆಪ್ಪಣೆಯಲ್ಲಿ ನಡೆಯಿ ತೆಂದ ವಿಚಾರಣೆ ವಿಷ್ಯದಲ್ಲಿ ಡಾಕ್ಟರ್ ಸಾಕ್ಷಿ "ಜನರು ಊರು ಮನೆ ಬಿಡಲಿಲ್ಲ. ಆ ಮನೆಗಳನ್ನು ಮೊದಲು ತೆರವು ಮಾಡಿ ಅವರು ಹೋದರು " ಎಂದು ತಿಳಿಸಿದ್ದರಿಂದ ಗೊತ್ತಾಯಿತು. ಅಕಸ್ಮಾತ್ ಜನ ರಲ್ಲಿ ಹುಟ್ಟಿಸಿದ ಈ ಗಲಭೆಗೆ ಭಯಕ್ಕೂ ಪೋಲೀಸ್ ಜಮಾದಾ ರ್ರು ಕಾರಣರೆಂತ ಡೆಪ್ಟಿ ಕಮಿಷನರು ವಿಚಾರಿಸುವಾಗ ಅವರು ಆಂ ತರ ಜಮಾದಾರ್ ನೆ .. ಯವರು ಅವರ ಅಮಲ್ದಾರರವರು ಮುದ್ದು ಬಾಯಿಂದ ಹೇಳಿಕೊಟ್ಟ ಹುಕುಂನ್ನು ಜಾರಿಗೆ ತಂದು ಆದ ರಂತೆ ಧೈರ್ಯದಿಂದ ಹೇಳುವ ... ಶಿಕ್ಷೆ ಭಯದಿಂದಲೂ ಅಮಲ್ದಾ ರ್ರು ಮೇಜಿನ ಮೇಲ್ ಯವರಿಗೆ ಅಂಥ ಹುಕುಂ ಕೊಡಲೇ ಇಲ್ಲವೆಂತ ಲೂ ಹೇಳಿದರಂತೆ. ಅಮಲ್ದಾರ್ರು ಈ ವಿಚಾರದಲ್ಲಿ ತಮ್ಮ ವಿರೋಧ ವೇನೂ ತೋರಿಸಲಿಲ್ಲ. ಪ್ಲೇಗ್ ಲಾಯರುಗಳಿಗೂ ಕಾರಣವಿಲ್ಲ. ಅದರೆ ಇಬ್ಬರಲ್ಲಿ ಒಬ್ಬರು ಸ್ವಪಕ್ಷದ ಈ ಮುಕಾಮನ್ನು ಯೋಗ್ಯತೆ ಲು ಅವರಿಗೆ ಅವಕಾಶವಾಗಿ ... ಸಪ್ಲೈ ನೆ. ... ಯವರನ್ನು ಮುಂದೆಗೆದೆದೆ ಎಲ್ಲಕ್ಕೂ ... ವರ್ತಮಾನವಿದೆ.

ತಿಪ್ಪೂರು.—ಇಲ್ಲಿ ಸ್ಕೂಲ್ ... ಲ್ಲಿ ಪಂಚಮಿ ಜಾಲ ದ ಗಲಾಟೆಯಿಂದ ಗಾಡಿ ಮೊದಲಾದ ವ್ಯಾಪಾರ ಲಾಭವಾಗು ತ್ತಿರುವಾಗ ಆ... ಖಾಸು ಜನಗಳ ಮನಃಸ್ಥಿತಿ ಇಲ್ಲವೆ ಸ್ವಚ್ಛಯಾಗಿರುವವರಿಂ ದ ಅನೇಕ ವಿಧವಾದ ಲಾಭಗಳು ಸಂಭವಿಸುತ್ತೆ. ಇವರಲ್ಲೆ ಪೋಲೀಸಿನವರು ನಿನ್ನೆ ಹೋಪ್ತೇ ... —ಇಲ್ಲಿ ೧. ವರುಷದಿಂದ ಇದ್ದ ಪ್ರುಸ್ಥು ಪಾಸ್ಟರು ರಾಜಗೋಪಾಲ್ಲಯ್ಯಂಗಾರ್ರನ್ನು ಬಡ್ತಿ ಮೇಲೆ ಮೂಡ್ಲಬಿಳ್ಳಾ ಪುರಕ್ಕೆ ವರ್ಗಮಾಡಿದ್ದಾರೆ. ಇವರು ಪಡ ಗಳ ಪ್ರೀತಿ ಗೌರವಕ್ಕೆ ಪಾತ್ರರಾಗಿದ್ದರು. ಇವರಿಗೆ ಬದಲಾಗಿ ಮು ತ್ತಿಗೆಯಿಂದ ಪೋಸ್ಟ್ ಮಾಸ್ಟರು ಬಂದು ಛಾರ್ಜು ವಹಿಸಿದರು. ಹಾ॥ ೫೦ರಲ್ಲಿ ಇಲ್ಲಿನ ಮೆ. ನರಸಿಂಹಯ್ಯಂಗಾರ್ರ ಛತ್ರದಲ್ಲಿ ಅಮ ಲ್ದಾರರು ಇನ್ನೂ ಹೆಚ್ಚು ಮನುಷ್ಯರೂ ಸೇರಿ ಬೇಲೂರಿನ ಹರಿ ಕಥೆ ವಿದ್ವಾಂಸರು ಎಂಬ ... ತೋರಿಸಿ ಸಭೆಯವರಿಗೆ ಮಹದಾನಂದವನ್ನುಂಟುಮಾಡಿದರು.—ಈ ತಾಲ್ಲೂಕಿಗೆ ಸೇರಿದ ಸಾರಥಿಪುರ ಸರ್ಪನಾಯ್ಕ ಗ್ರಾಮದಲ್ಲಿ ಆ ಗ್ರಾಮದೇವತೆಗೆ ಪೂಜೆ ಹಿಂದ ನಡೆಯುತ್ತಿದ್ದ ಉತ್ಸವವು ನಿಂತಿದೆ. ಈಗ ೧೨ ವರುಷದಿಂದ ಜನರು ಎರಡು ಪಂಗಡಗಳಾಗಿ ಕೋರ್ಟಿನಲ್ಲಿ ವಿವಾ ದ ನಡಿಸಿಕೊಂಡು ದೇವರ ಕಾರ್ಯಕ್ಕೆ ಕುಂದಕ ತಂದಿದ್ದಾರೆ. ಸದರಿ ದೇವರಿಗೆ ರಣೋದ್ಧರಕ್ಕಾಗಿ ಚಿಟ್ಟಿದ್ದ ರಥವು ಬಿಸಲು ಮಳೆ ಯಿಂದಲೂ, ಗೆದ್ದಲಿಂದಲೂ ಸಿಕ್ಕಿ ಹಾಳಾಗಿ ಸೌದೆಗೆ ಅನುಕೂಲವಾ ಗಿದ್ದಾನೆ.

ಚಿಕ್ಕಮಗಳೂರು.—ಈ ಸೋಮವಾರ ೨೦ ದಿನಗಳಿಂದ ಸೋನೆ ಮಳೆ ಯ ಬೆಸೆಯಿಂದ ಆಕಾಶವೆ ನೋಡಲು ಕವಿದು ಬಿಸಿಲನ್ನೇ ನೋಡುವದು ಅಪರೂಪವಾಗಿರುವದು. ಅಧಿಕ ಜನಗಳ ಗಾಳಿಯು ಬಿಡಿಸುತ್ತ ನೆಲಬಾಯ್ಗಳು ... ಬಹು ಕಷ್ಟ. ಸಮೀಪ ದಲ್ಲಿರುವ ಗುಡ್ಡ ಗಾಡಿ ... ಗಲ್ಲು ಮಂಜಿನಿಂದ ಕವಿಯಲ್ಪ ಟ್ಟು ನೀಲಿಗಿರಿಯನ್ನು ನೋಡಿದಂತೆ ಅತ್ಯಂತ ಮನೋಹರವಾಗಿ ತೋರುತ್ತಿರುವದು. ಇಲ್ಲಿನ ಪ್ಲೇಗ್ ಆದಿನಾಯಿನ ಅನುಕಂಪ ಉ ಪದ್ರವಗಳು ಹೆಚ್ಚಿವೆ ಆದ ಕೆರೆನ್ನು ನಡಸುತ್ತಿದ್ದಾರ್ಗೂ ಭಗವ ತ್ಕೃಪೆಯಿಂದ ಪ್ಲೇಗ್ ಪ್ರಾಬಲ್ಯವೇ ಇಲ್ಲದಿರುವವಾಗಿ ಸರ್ವರೂ ಸಂತೋಷವಿತ್ತಾಗಿರುವರು. ೮—೧೦ ದಿನಗಳ ಕೆಳಗೆ ರಂಗಪ್ಪನ ಹಳ್ಳಿಯಿಂದ ಬಂದ ಗಂಡಸಿಂದ ದಿನ್ನೆ ಮಾತ್ರ ಪ್ಲೇಗ್ ತಗಲಿರ ಲಾಗಿ ಅವರನ್ನು ಪ್ಲೇಗ್ ಕ್ಯಾಂಪಿಗೆ ಸಾಗಿಸಿ ಚಿಕಿತ್ಸೆಮಾಡುತ್ತಿರು ವದರಿಂದ ಅಲ್ಲಿರುವ ಎಲ್ಲರೂ ಇದ್ದಾರೆ.—ಇದೇ ತಿಂಗಳ ಪ್ರಾರಂಭದ ಲ್ಲಿ ಡಿ॥ ಪಡ್ಡಿಯ ನಸಿ. ಫ್. ಸಿಜಾರಾನ ನಡಿಸಿದರು. ಪಾಳ್ಯ ಕೇಸು ಗಳು ವಿಚಾರಣೆಗೆ ತೆಗೆದು ಕೊಂಡ ತರುವ. ಇವೆಗಳಲ್ಲಿ ಕೆಲವರಿಂದ

ಊರಿಗೆ ಸಾಕಾದಷ್ಟು ಸಾಕ್ಷಿ ಇಲ್ಲದ್ದರಿಂದಲೂ ಅಪರಾಧಿಯ ಹೆಂ ಡತಿಯು ಪೋಲೀಸಿನವರ ಕಡೆಯಿಂದ ಕೆಳಕೋರ್ಟಿನಲ್ಲಿ ತಾನು ಕೊಟ್ಟ ಹೇಳಿಕೆಯನ್ನು ಸುಳ್ಳು ಎಂತಲೂ ಸೆಷನ್ಸ್ ಜಡ್ಜರ ಮುಂದೆ ವಾದಿಸಲೂ ಸದರಿ ಕೇಸ್ ಆಕ್ವಿಟ್ ಆಯಿತೆಂದೂ ಇದರ ಮೇಲೆ ಪೋಲೀಸ್ ಇಲಾಖೆಯವರು ಮುಂದೆ ಅಪೀಲ್ ಮಾಡುವದಾಗಿಯೂ ವರ್ತಮಾನವಿದೆ. ನಿರ್ದೋಷ ಇಲ್ಲದ್ದರಿಂದ ಸಜಾ ಆಯಿತೆಂದು ತಿಳಿದು ಬರುತ್ತೆ. ಅವರ ಗುಂಟ್ಲೂರು ಸಮೀಪ ಒಂದು ಹಳ್ಳಿಯ ಲ್ಲಿ ನಡೆದ ಮನುವಿ ಗಲಾಟೆಯಲ್ಲಿ ಒಬ್ಬನು ಮದವಣಿಗಿತ್ತಿಯ ಕ ತ್ತಿನಲ್ಲಿದ್ದ ಆಭ್ಯಕೆಯನ್ನು ಕಿತ್ತು ಅಪಹರಿಸಿ ಗುಂಟ್ಲೂರ್ ಡಫೇ ದಾರ್ ಸೀತಾರಾಮ್ಯನವರ ಕೈಗೆ ಸಿಕ್ಕಿಬಿದ್ದವನ ಮೊಬದಮೆ ಯು ರುಜುವಾತಾಯಿತು. ಆತನಿಗೆ ಮೂರುವರೇ ವರುಷ ಕಠಿಣ ಸಜಾ ವಿಧಿಸಲ್ಪಟ್ಟಿತೆಂದೂ, ಹರಿಹರದ ಜೋಲಿಯಾತಕದ ಕೇಸಿನಲ್ಲಿ ಸಿಕ್ಕಿದ ಇಬ್ಬರಿಗೆ ಒಬ್ಬರು ವರುಷ ಕಠಿಣ ಸಜಾ ವಿಧಿಸ ಲ್ಪಟ್ಟಿ ಈ ಮೂರ್ಸರೂ ಸಜಾ ಅನುಭವಿಸುತ್ತಿರುವರೆಂದೂ ತಿಳಿದು ಬರುತ್ತೆ.—ಕಳೆದ ತಿಂಗಳು ಈ ಊರಿನ ಸುಂಕದ ಕಟ್ಟೆಯಲ್ಲಿ ಗುಮಾಸ್ತರ ಗೈರ್ಹಾಜರಿನಲ್ಲಿ ಅಲ್ಲಿದ್ದ ಜವಾನನು ಪೆಟ್ಟಿಗೆಯಲ್ಲಿ ಟ್ಟದ್ದ ಸರಕಾರಿ ಹಣದ ಪೈಕಿ ೬—೭ ರೂಪಾಯಿ ಅಪಹರಿಸಿದನೆಂ ದೂ, ಇವನ ವಿಷಯದಲ್ಲಿ ವಿಚಾರಣೆ ನಡೆಯುತ್ತಿತ್ತೆಂದೂ, ಅದೇಗೆ ಈ ಕೇಸಿನ ಪರಿಣಾಮವೇನಾಯಿತೋ ಗೊತ್ತೇ ಇಲ್ಲವೆಂದೂ ಆ ನೇಕರು ಪರಸ್ಪರ ಮಾತಾಡಿಕೊಳ್ಳುತ್ತಿದ್ದರು.

ಚಿಕ್ಕನಾಯಕನಹಳ್ಳಿ.—ಈಗ ೮ ದಿನಗಳಿಂದ ಈ ಊರಲ್ಲಿ ಸುತ್ತಲ ಬೇಸಿಗೆ ಮಳೆಯಿರುವಂತೆ ನೋಡ ಮುಚ್ಚಿರುತ್ತೆಯೇ ಹೊರತು ರೈತರ ಅನುಕೂಲಕ್ಕೆ ಮಳೆ ಬೀಳಲಿ ಇಲ್ಲ. ಅದರ ಮೋ ಡದ ಮರಕ್ ಬಿದ್ದ ಜನಿಯಿಂದ ಕೆಲವರು ಬೇಜಾ ಹಾಕಿರುತ್ತಾರೆ ಅದ ಹುಟ್ಟಿವೆ. ಆರಿ ಪೈರುಮಾತ್ರ ಕಟಾವಿಗೆ ಬಂದಿದೆ. ಕೆಲವರು ಕುಯ್ಲು ಮಾಡ್ತಾರೆ. ಕೆಲವರು ಕುಯ್ಯುತ್ತಿದ್ದಾರೆ.—ಅಸ್ಪತ್ರೆಯ ಹಿಂ ದುಗಡೆ ಇದ್ದ ಹೊಲೆಯರನ್ನು ಆ ಸ್ಥಳ ತಪ್ಪಿಸಿ ಊರಮುಂದೆ ನಂಜಿ ಯಾಗುವ ತೋಪಿನ ಹತ್ತರ ಒಂದು ಜೋಪಡಿಯಲ್ಲಿ ಮನೆಗಳು ಕಟ್ಟಲು ಅಮಲ್ದಾರ್ರು ಅಪ್ಪಣೆ ಮಾಡಿರುತ್ತಾರೆ. ಅದರಂತೆ ಹೊಲೆಯರು ಕಟ್ಟುತ್ತಿದ್ದಾರೆ. ಆ ಸ್ಥಳದಲ್ಲಿ ಅವರು ಇರಕೂಡದೆಂದು ಗ್ರಾಮಸ್ಥ ರ ಪೈಕಿ ಕೆಲವರು ಅರ್ಜಿ ಕೊಟ್ಟಿರುವರು.—ಹೋಳೆನರಸೀಪುರಕ್ಕೆ ಜೋಗ್ಗಿ ಸೆಟ್ ಮಾಸ್ಟರ್ ವೆಂಕಟನರಸ್ಯಯ್ಯರು ೪ ದಿವಸದಲ್ಲಿ ಯೇ ವಾಪಸು ಬಂದರು. ನಡ್ಡು ವಿಷಯವೇ ತಿಳಿಯದಿದ್ದವರು ಈ ೪ ದಿವಸಗಳಲ್ಲಿ ಎಷ್ಟರಮಟ್ಟಿಗೆ ಕಲಿತುಕೊಂಡು ಬಂದರೋ ಈ ಊರಲ್ಲಿ ಆ ಸ್ಕೂಲ್ ಪ್ರಾರಂಭವಾದಾಗ ತಿಳಿಯುತ್ತೆ. ಅಂತು ಅವರು ಬಹಳ ಮುತುವರ್ಜಿಯಿಂದ ಪಾಠಿಸಿಕಲಾಗುತ್ತಾರೆ —ಇ ಲ್ಲಿನ ಆ. ವ. ಸ್ಕೂಲಿನಲ್ಲಿ ಕ್ರಿಕೆಟ್ ಫೀ ಎಂತ ಪ್ರತಿ ವಿದ್ಯಾರ್ಥಿ ಯಿಂದಲೂ ವಸೂಲ್ಮಾಡಿದ ಮೊಬಲಗು ಸುಮಾರು ೪—೦೦ ರೂ. ಆಗಬಹುದು. ಆದರೆ ವಿದ್ಯಾರ್ಥಿಗಳು ಆ ಆಟವನ್ನು ಆಡಿದ ದಿನ ವೇ ಇಲ್ಲಿ ಯವರು ನೋಡಿಲ್ಲ. ಅದರ ಸಂಗತಿ ತಿಳಿಯುತ್ತಿಲ್ಲ.— ತಾಲ್ಲೂಕು ಕಛೇರಿಯಲ್ಲಿ ಇರುವ ಕೆಲವು ನೌಕರರು ೪—೧೦ ವ ರ್ಷಗಳಿಂದ ವರ್ಗವಿಲ್ಲದೆ ಇಲ್ಲೇ ಇರುತ್ತಾರೆ. ಕೆಲವರು ವರ್ಗ ಗೆ ಸಹ ಅರ್ಹರಾಗಿರುವರು. ಇಂಥವರ ದಾಕ್ಷಿಣ್ಯ ತಾಲ್ಲೂಕಿನಲ್ಲಿ ಬಹ ಳವಾಗಿ ಜನಗಳಿಗೆ ಅನಾನುಕೂಲವಾಗಿರುವದಲ್ಲದೆ ಆಫೀಸಿಯ ನೌಕರರಲ್ಲಿ ೫ ಸಂಗಡಿಗರಾಗಿರುವದರಿಂದ ಒಬ್ಬರಿಗೊಬ್ಬರಿಗೆ ಮ ನಸ್ತಾಪವೇ ಹುಟ್ಟುವೆಯೆಂತ ತಿಳಿಯಬರುತ್ತೆ.—ಇಲ್ಲಿನ ಸ್ಥಾಪಿಸ ಬೇಕಾದ ಬ್ಯಾಂಕಿನ ವಿಷ್ಯ ಮಾತ್ರ ಬಿಡ್ಡಿ ಹಣ ಸರಿಯಾಗಿ ಬಾರದೆ ಇಂತೆ ವಸೂಲಾಗದೆ ಹೋದದ್ದರಿಂದ ಅಮಲ್ದಾರ್ರು ವರ್ಗಾವಿ ಸಮಯದಲ್ಲಿ ಹೆಂಡತಿ ಸಹಾಯ ಕೊಡದೆ ಹೋದೆಂದು ಬ್ಯಾಂಕಿನ ಅಧಿ ಕಾರಿಯು ತಿಳಿಸಿದರು. ಅವರಮೇಲೆ ಅಮಲ್ದಾರ್ರು ಕ್ರಿಮಿನಾಲ್ ರೂ ಕರೆಯಾಗಿ ಹಣ ಪಾವತಿ ಮಾಡುತ್ತಾರೆಂತ ನಂಬಿದ್ದಾರೆ. ಆದ ರೆ ಅವಕ್ಕೂ ಬ್ಯಾಂಕು ಮೆಂಬರುಗಳು ಗಮನಕೊಟ್ಟಂತೆ ಕಾಣು ವದಿಲ್ಲ. - ಜನತೆ ಅಂಗಡಿ ಗುರುಲಿಂಗಪ್ಪನವರು ತಮಗೆ ಬರಬೇಕಾ ದ ಅಂಗಡಿ ಬಾಕಿಗಾಗಿ ಛಾಪಿಸಿದ್ದರನ್ನು ಮನ್ನಾನೆ ಬಯ್ದು ಗಲಾ ಟೆ ಮಾಡಿದ್ದರಿಂದ ಅವರು ಅಮಲ್ದಾರ್ರಲ್ಲಿ ಫಿರ್ಯಾದು ಮಾಡಿದರು. ಈ ಮೊಕದ್ದಮೆಯಲ್ಲಿ ಗುರುಲಿಂಗಪ್ಪನವರಿಗೂ, ಇವರ ತಮ್ಮನಿಗೂ, ಆಗಾಗ ಒಂದು ದಿವಸ ಸಾದಾ ಸಜಾವೂ, ಇನಾಂ ಒಂದಕ್ಕೆ ೫ ರೂ ಜುಲ್ಮಾನೆಯೂ ಆಯಿತು —ರಾತ್ರಿವೇಳೆ ಪೋಲೀಸಿನವರು ಗಸ್ತು ಗ ಸ್ತು ಮಾಡುವದಿಲ್ಲ. ಕಳ್ಳತನವೇನೂ ಇಲ್ಲವಾಗಿದೆ. ಜನಗಳು ಅದ್ದ ಸ್ಸಾಮೇಯ ಜೀಲಲ್ಲಿ ... —ಇಲ್ಲಿಗೆ ಒಬ್ಬ ಜ್ಯೋತಿಷ್ಕರು ಬಂದು ೬ ತಿಂಗಳಾಯಿತು. ಕೆಲವು ಜಾತಕಗಳನ್ನು ನೋಡಿ ಹಣ ಸುಲಿಯುತ್ತ ಮೊದಲಾಗಿ ಬರೆಯಿರುತ್ತಾರೆ.

## ಇಂಡಿಯಾ ದೇಶದ ವರ್ತಮಾನಗಳು.

ಮದರಾಸ್ ಪಟ್ಟಣದಲ್ಲಿ ಗೌವರ್ನರವರು ಇರುವ ಬಂಗಲೆ ಜೂದ ಗೌವರ್ನಮೆಂಟ್ ಹೌಸಿಗೆ ವಿದ್ಯುಚ್ಛಕ್ತಿಯ ಬೆಳಕನ್ನು ಇ ಡಲ್ಲಿಕೆಂದು ೩೬,೦೦೦ ರೂ. ಶ್ಯಾಂಕ್ಷನ್ ಮಾಡಿದಾರೆ.

*****

ಈಗ ಇಂಗ್ಲೆಂಡ್ ಸೈನ್ಯದಲ್ಲಿ ೪೦,೦೦೦ ಸಿಕ್ ಜನರು ಸೇರಿ ಕೊಂಡಿರುವರೆಂತಲೂ, ಇವರು ಬಹು ಪರಾಕ್ರಮಿಗಳೆಂತಲೂ ಹಿಂ ದ ಸ್ಥಾನದ ಸರ್ವ ಸೇನಾಧಿಪತಿಯಾದ ಲಾರ್ಡ್ ಕಿಚ್ನರ್‌ಯವರು ತಿ ಳಿಸಿದ್ದಾರೆ.

*****

ಲಖ್ನೋ ಪಟ್ಟಣದಲ್ಲಿ ಅಂಚೆ ಪಿಯೋನನು ಒಬ್ಬ ಗೌಡನಿಗೆ ಬಂದ ಮನಿ ಆರ್ಡರನ್ನು ರಾಜೀ ರಸೀದಿನ್ನು ... ಗೌಡನು ಪ್ಲೀಗಿನಲ್ಲಿ ಸತ್ತುಹೋಗಿದ್ದನು. ಇದರಿಂದ ಆ ಪಿಯಾನನಿಗೆ ೬ ವ ರುಷ ಕಠಿಣಸಜಾ ವಿಧಿಸಲ್ಪಟ್ಟಿತು.

ಅಹಮದ್‌ನಗರದ ಜೈಲ್‌ಖಾನೆಯಲ್ಲಿದ್ದ ೬೯ ಮಂದಿ ಬೋ ರ್ ಖೈದಿಗಳು ಕಳೆದ ವಾರ ಇಂಗ್ಲಿಷರಿಗೆ ಶರಣಾಗತರಾಗುತ್ತೇವೆ ದು ಒಪ್ಪಿದ ಕಾರಣ ಅವರನ್ನು ಇಂಡಿಯಾ ಗೌವರ್ನಮೆಂಟನವರು ಪಾಲಿಟಾನಾ ಎಂಬ ಹಡಗಿನಲ್ಲಿ ದಕ್ಷಿಣ ಆಫ್ರಿಕಕ್ಕೆ ಕಳೆದ ವಾರ ಕಳುಹಿಸಿದರು.

*****

ಕಲ್ಕತ್ತಾ ಪಟ್ಟಣದಲ್ಲಿ ಅನೇಕ ವರ್ಷಗಳಿಂದ ಲೇವಾದೇವಿ ಮಾ ಡುತ್ತಿದ್ದ ಫ್ಲೂರಿಂಗ್ ಎಂಬ ದೊಡ್ಡ ಬ್ಯಾಂಕು ದಿವಾಳಿಯಾಯಿ ತು. ಆ ಬ್ಯಾಂಕು ೩೬ ಲಕ್ಷ ರೂಪಾಯಿ ಸಾಲನಾಗಿದೆ. ಆ ಪೈಕಿ ೭ ಲಕ್ಷ ರೂಪಾಯಿ ಬ್ಯಾಂಕಿಗೆ ಸಾಲ ಬರಬೇಕಾಗಿರುತ್ತೆ. ಅನೇ ಕ ಮಂದಿ ಮುಳುಗಿಹೋದರು.

*****

ಹಿಂದುಸ್ಥಾನದ ಪೋಸ್ಟ್ ಇಲಾಖೆಯ ರಿಪೋರ್ಟು ಪ್ರಕಟವಾ ಗಿದೆ. ಕಳೆದ ೩೧ ನೆ ಮಾರ್ಚಿ ಆಖೈರಿಗೆ ಪ್ರಾಂತ್ಯದ ೧೨ ತಿಂಗಳ ಲ್ಲಿ ಪೋಸ್ಟ್ ಆಫೀಸಿನವರು ೫೩ ಕೋಟಿ ೨೦ ಲಕ್ಷ ಕಾಗದಗಳ ನ್ನೂ ೬೫ ಕೋಟಿ ೩೦ ಲಕ್ಷ ಕಾರ್ಡುಗಳನ್ನೂ ಊರಿಂದೂರಿಗೆ ಸಾಗಿಸಿ ವಿಳಾಸದಾರರಿಗೆ ಬಟವಡೆಮಾಡಿರುತ್ತಾರೆ.

*****

ಗುಂಟೂರಿನಲ್ಲಿ ಕಳೆದ ವಾರ ಒಂದು ವಿಧವಾ ವಿವಾಹ ನಡೆಯಿ ತು. ೨೦ ವರ್ಷದ ಕಸ್ತೂರಿ ಸುಬ್ಬರಾಯನೆಂಬುವನು ೧೭ ವರ್ಷ ವಯಸ್ಸಿನ ಸೀತಮ್ಮನೆಂಬ ವಿಧವೆಯನ್ನು ವಿವಾಹ ಮಾಡಿಕೊಂಡ ನು. ವಿವಾಹಕ್ಕಾಗಿ ಬಂದು ದಿನಗಳಾದ ಮೇಲೆ ನಡೆಯಿತು ಕಳೆದ ಭಾನು ವಾರ ನೂತನ ಗಂಡಹೆಂಡರನ್ನು ಕರೆಸಿ ಬೀದಿ ಬೀದಿಗಳಲ್ಲಿ ವಿ ಜೃಂಭಣೆಯಾಗಿ ಮೆರವಣಿಗೆ ಮಾಡಿದರು.

*****

ಬೊಂಬಾಯಿ ಅಧಿಪತ್ಯದಲ್ಲಿ ಪ್ಲೇಗ್ ಉಪದ್ರವ ಹೆಚ್ಚುತ್ತಾ ಇದೆ. ಹಿಂದಿನ ವಾರ ಅದರಲ್ಲಿ ೧೧,೯೮೬ ಮಂದಿ ತೀರಿಹೋದರು; ಕಳೆದ ವಾರ ಸತ್ತವರ ಸಂಖ್ಯೆ ೧೧,೬೬೫. ಹಿಂದುಸ್ಥಾನದ ಇತರ ಭಾಗಗಳಲ್ಲಿ ಉಪದ್ರವ ಕಡಿಮೆಯಾಗುತ್ತಿರುತ್ತೆ. ಹಿಂದುಸ್ಥಾನ ದಲ್ಲೆಲ್ಲಾ ಒಟ್ಟು ೬೦೯೮ ಮಂದಿ ಕಳೆದ ವಾರ ಈ ಉಪದ್ರವದಲ್ಲಿ ಸ್ವರ್ಗಸ್ತರಾದರು. ಪಂಜಾಬಿನಲ್ಲಿ ಪ್ಲೇಗ್ ಮರಣಗಳು ೧೩೩ ರಿಂದ ೧೯೮ ಕ್ಕೆ ಇಳಿಯಿತು.

*****

ಲಾಹೋರ್ ಪಟ್ಟಣದಲ್ಲಿರುವ ಪುರಾತನ ಕಾಲದ ಮೋತಿ ಮ ಶೀತಿ ಎಂಬ ಸುಂದರವಾದ ಕಟ್ಟಡದಲ್ಲಿ ಇದುವರೆಗೆ ಗೌವರ್ನಮೆಂ ಟನವರು ಸರ್ಕಾರಿ ಖಜಾನೆಯನ್ನು ಇಟ್ಟುಕೊಂಡು, ಕಛೇರಿ ಮಾಡುತ್ತಿದ್ದರು. ಈಚೆಗೆ ಇಂಡಿಯಾ ಗೌವರ್ನಮೆಂಟನವರ ಆ ಜ್ಞಾನುಸಾರ ಬೇರೆ ಕಟ್ಟಡಕ್ಕೆ ಖಜಾನೆಗೆ ತೆಗೆದಾಯಿತು. ಈ ಪುರಾತನ ಕಟ್ಟಡಕ್ಕೆ ಸಕಲ ರಿಪೇರಿ ಮಾಡಿಸಿ ಹಾಗೇ ಬಿಟ್ಟಿರಬೇ ಕೆಂದು ತೀರ್ಮಾನವಾಗಿದೆ.

*****

ಧರ್ಮಶಾಲೆ ಎಂಬೊಬ್ಬ ದೊಡ್ಡಮನುಷ್ಯರು ಅಮೇರಿಕಕ್ಕೆ ಹೋಗಿ ಅಲ್ಲಿರುವ ಕಸಬುಗಳ ಪಾಠಶಾಲೆಯ ಮುಖಂಡರನ್ನು ಕಂಡು ಮಾತನಾಡಿ, ಹಿಂದುಸ್ಥಾನದ ಯುವಕರು ಇಷ್ಟಪಟ್ಟು ಬಂದರೆ ಅವರಿಗೆ ಅರ್ಧ ಫೀಜಿಗೆ ಕಸಬುಗಳನ್ನು ಕಲಿಸಿಕೊಡುತ್ತೇ ವೆಂಬದಾಗಿ ಅವರಿಂದ ವಾಗ್ದಾನ ಪಡೆದುಕೊಂಡಿರುವದಾಗಿ ಕಾಗದ ಬರೆದಿರುವರು. ಕಸಬುಗಳನ್ನು ಕಲಿತುಕೊಳ್ಳಬೇಕೆಂದಪೇಕ್ಷಿಸ ಕ್ಕ ಹಿಂದುಗಳು ಅಮೇರಿಕಕ್ಕೆ ಬರಬಹುದೆಂದು ತಿಳಿಸಿದ್ದಾರೆ.

*****

ಮದರಾಸ್ ಅಧಿಪತ್ಯದೊಳಗೆ ಯಾರಾದರೂ ಪ್ರಜೋಪಕಾರ ಕ ಕಾರ್ಯಗಳನ್ನು ಸ್ವಂತ ಹಣ ಮುಟ್ಟಿಸಿ ಮಾಡಿಸಿದ್ದರೆ ಅದರ ಅಂ ಥವರ ಹೆಸರುಗಳನ್ನೂ ಅವರು ಮಾಡಿರುವ ಧರ್ಮಕೆಲಸಗಳನ್ನೂ ಮದರಾಸ್ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಬೇಕೆಂದು ಗೌವರ್ನ ಮೆಂಟನವರು ಹುಕುಂ ಕೊಟ್ಟಿದ್ದಾರೆ. ಸುಂಕ, ತೆರಿಗೆ ವಗೈರಾ ರುಸುಮುಗಳನ್ನು ವಸೂಲ್ಮಾಡತಕ್ಕ ನಾಕರ್ಕಟ್ಟು ಮುಂತಾದ ಕ ಟ್ಟಡಗಳನ್ನು ಆ ರಿಪೋರ್ಟಿನಲ್ಲಿ ಕಾಣಿಸಕೂಡದೆಂದು ಅಪ್ಪಣೆಯಾ ಗಿದೆ.

*****

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ವಾರಂಗಲ್ಲಿನಲ್ಲಿ ಅಪಾ ರವಾದ ಮಳೆ ಸುರಿಯಿತು. ಒಂದೇ ರಾತ್ರಿ ಒಂಭತ್ತು ಅಂಗುಲ ಮಳೆ ಬಂದಿತು. ಖಾಜಿಪೇಟ್ ಎಂಬ ಕೆರೆಯು ಒಡೆದುಹೋಯಿ ತು. ಕೆರೆಯ ನೀರು ರಸ್ತೆಯ ಮೇಲೆ ಹರಿದು ರೈಲ್ ಕಂಬಿಗಳ ನ್ನು ಕಿತ್ತುಹಾಕಿತು. ಸಂಗಾರೆಡ್ಡಿ ಎಂಬ ಹಳ್ಳಿಯ ಗುಡಿಸಲುಗಳಲ್ಲಿ ಬ ಹಳ ಕೆಲವೆಡೆಗಳಲ್ಲಿ ದನ ಕುರಿಗಳು ಅನಾಹುತವಾಗಿವೆ ನೈಜಾಂ ಸರ್ಕಾರದ ಅಧಿಕಾರಿಗಳು ತನಿಖೆಮಾಡುವ ಉದ್ದೇಶ್ಯ ಆ ಪ್ರಾಂತ್ಯ ಹೋಗಿರುತ್ತಾರೆ.

*****

ಹಿಂದುಸ್ಥಾನದ ರೈಲ್ವೆ ಇಲಾಖೆಯ ೧೯೦೦—೦೧ ನೆ ಸಾಲಿನ ರಿಪೋರ್ಟು ಪ್ರಕಟವಾಗಿದೆ. ಈಗ ರೈಲ್ವೆ ಇಲಾಖೆಯಲ್ಲಿ ೫,೪೮೫ ಜನರೂ, ಯೂರೇಷಿಯನ್ನರು ೮,೬೬೫ ಜನರೂ, ಹಿಂದುಸ್ಥಾನ ದ ನೇಟಿವರು (ದೇಶೀಯರು) ೩,೯೯,೫೧೭ ಜನರೂ ನೌಕ ರಿ ಮಾಡುತ್ತಿರುವರೆಂತ ಈ ರಿಪೋರ್ಟಿನಿಂದ ಗೊತ್ತಾಗುವುದು. ದೇಶೀ ಯ ಜನರ ಸಂಖ್ಯೆಯೇ ಅಧಿಕವಾಗಿರುವಲ್ಲಿ ಯೂರೋಪಿಯ ರೂ, ಯೂರೇಷಿಯರೂ ಹೆಚ್ಚಾಗಿದ್ದಾರೆಂದು ಆಕ್ಷೇಪಣೆ ಮಾಡು ತ್ತಿರುವರು. ಈ ಆಕ್ಷೇಪಣೆಯು ನ್ಯಾಯವಾದುದಲ್ಲವೆಂದು ನಾವೆ ಹೇಳುವದೇ ?

*****

ಗೋದಾವರಿ ಪ್ರಾಂತ್ಯಕ್ಕೆ ಸೇರಿದ ಮಾಜಾರಿ ಮಹಮದಿಯರಿ ಲ್ಲಾ ಮಾಂಬಂದರೆನಿಸಿಕೊಂಡಿದ್ದ ನವಾಬ್ ಸರ್ ಇಮಾಂ ಭಕ್ಷ್

ರ್, ಕೆ. ಸಿ. ಐ. ಇ.ಯವರು ಕಳೆದ ವಾರ ಕಾಲವಾದರು. ಇವರು ಪಂಜಾಬ್ ಸೀಮೆಯ ಮಂತ್ರಾಲೋಚನಾ ಸಭೆಯಲ್ಲಿ ದೊಡ್ಡ ದೊಡ್ಡ ಸರ್ಕಾರದವರಲ್ಲೂ ಪ್ರಜೆಗಳಲ್ಲೂ ವಿಶೇಷವಾದ ಪ್ರೀತಿಗೌರವಗಳನ್ನು ಸಂಪಾದಿಸಿಕೊಂಡಿದ್ದರು. ಹಿಂದೆ ಸಿಪಾಯಿಗಳ ದೊಡ್ಡ ದಂಗೆಯಾದಾಗ್ಯೆ ಇವರು ಇಂಗ್ಲೀಷರಿಗೆ ತುಂಬಾ ಸಹಾಯ ಮಾಡಿದರು. ಇಂಡಿಯಾ ಗೌವರ್ನಮೆಂಟಿನವರು ಅವರಿಗೆ ೧೮೭೭ ರಲ್ಲಿ ಕೆ. ಸಿ. ಐ. ಇ. ಎಂಬ ಬಿರುದನ್ನು ದಯಮಾಲಿಸಿದ್ದರು.

❖❖❖❖

. ಕಲ್ಕತ್ತೆಯ ಹತ್ತಿರ ಒಂದು ಗ್ರಾಮದಲ್ಲಿ ಒಬ್ಬ ಬ್ರಾಹ್ಮಣನು ಒಂದು ದೇವಸ್ಥಾನವನ್ನು ಕಟ್ಟಿಸಿ, ಅದರಲ್ಲಿ ಕಾಳಿಕಾ ವಿಗ್ರಹವನ್ನು ಪ್ರತಿಷ್ಠೆ ಮಾಡಿದನು. ಇಬ್ಬರು ಅಣ್ಣತಮ್ಮಂದಿರು ಆ ಗ್ರಾಮಕ್ಕೆ ಹೋಗಿ ದೇವಸ್ಥಾನ ಕಟ್ಟಿಸಿದ ಸ್ಥಳವು ತಮಗೆ ಸೇರಿದ್ದೆಂದು ಆ ಬ್ರಾಹ್ಮಣನ ಸಂಗಡ ಜಗಳವಾಡಿ, ಕೆಲವು ಜನರನ್ನು ಕರೆದುಕೊಂಡುಹೋಗಿ ಆ ದೇವಸ್ಥಾನವನ್ನು ಕೆಡವಿ, ವಿಗ್ರಹವನ್ನು ಒಡೆದು ಚೂರುಚೂರು ಮಾಡಿಬಿಟ್ಟರು. ಇದು ಸೋಳಿಸ್ಟನು ಆಗಿ ದರ್ಬಾಸ್ತು ಆಯಿತು. ಆಲಿಪುರದ ಮ್ಯಾಜಿಸ್ಟ್ರೇಟರು ಅಣ್ಣತಮ್ಮಂದಿರಿಬ್ಬರಿಗೂ ಕಲಾ ಆರುತಿಂಗಳ ಕಠಿಣಸಜಾ ವಿಧಿಸಿದರು.

❖❖❖❖

ಬೊಂಬಾಯಿನಲ್ಲಿ ಜವಾಹಿರಿ ವ್ಯಾಪಾರ ಮಾಡುವ ಆಲ್ಮರ್ ಎಂಬ ಕಂಪನಿಯ ವಿಪಟು ಕಾಣದಾಸ ರಾಮಚಂದ್ರನೆಂಬವನು ೬ ಲಕ್ಷ ರೂಪಾಯಿನ ಜವಾಹಿರಿ ನಗಗಳನ್ನಿಟ್ಟ ಪಟ್ಟಿ ರೈಲ್ವೆ ಅವಘಡಕ್ಕೆ ಸಿಕ್ಕಿ ನಷ್ಟವಾಗಿಬಿಟ್ಟಿತು. ಈಗ ಆತನ ದೆಂಪನಿಯು ರೈಲ್ವೆ ಕಂಪನಿಯವರನ್ನು ಮದರಾಸ್ ಹೈಕೋರ್ಟಿನಲ್ಲಿ ಒಂದು ಲಕ್ಷ ರೂಪಾಯಿ ನಷ್ಟದ್ರವ್ಯ ಕೊಡಬೇಕೆಂದು ದಾವಾ ಮಾಡಿರುತ್ತಾರೆ. ಮತ್ತು ಜವಾಹಿರಿ ಕಂಪನಿಯವರು ತಮ್ಮ ನಗಗಳನ್ನು ಕಳೆದುಕೊಂಡುದಕ್ಕಾಗಿ ೬ ಲಕ್ಷ ರೂಪಾಯಿ ನಷ್ಟದ್ರವ್ಯ ಕೊಡಿಸಬೇಕೆಂದು ರೈಲ್ವೆ ಕಂಪನಿಯವರಮೇಲೆ ನೋಟಿಸ್ಸನ್ನು ಮಾಡುವರಾಗಿದ್ದಾರೆ.

❖❖❖❖

ಹೈದರಾಬಾದ್ ಸಿಂಧಾಬಾದ್ ಎಂಬ ಪ್ರಾಂತ್ಯದ ಬೀಲತ್ತಿನ ಜಾಗೀರದಾರರಿಗೆ ಸೇರಿದ. ಅದು ೧೨೦ ಜನರ ವ್ಯಾಲಿಗಳ ವಿಸ್ತಾರವುಳ್ಳದ್ದು. ಅಪ್ಜಲ್ ಸಿಂದು ಸೀಮೆಯ ಎಲ್ಲೆಕಟ್ಟಿನ ಬಳಿ ಇರುವದು. ಇಂಥಾ ಹೈದರಾಬಾದ್ ನವಾಬರು ಈ ಸ್ಥಳವನ್ನು ಇಂಗ್ಲೀಷ ಇಂಡಿಯಾ ಗೌವರ್ನಮೆಂಟಿನವರೇ ವಶಪಡಿಸಿಕೊಂಡು ಆಳುವದಕ್ಕಾಗಿಯೂ, ಅದಕ್ಕಾಗಿ ಬೀಲತ್ತಿನ ಜಾಗೀರದಾರರಿಗೆ ವರುಷಕ್ಕೆ ಒಟ್ಟು ೧೦,೦೦೦ ರೂ. ಕೊಡತಕ್ಕದ್ದಾಗಿಯೂ ಕರಾರು ನಡೆದಿದೆ. ಇದಲ್ಲದೆ ಅದರ ಸಮೀಪದಲ್ಲಿರುವ ಮಂಡಾಸಿಲಾಂಕ ಬಿಸ್ತವನ್ನು ಇಂಗ್ಲೀಷರು ವಶಪಡಿಸಿಕೊಂಡು, ಜಾಗೀರದಾರರಿಗೆ ವರುಷಕ್ಕೆ ೬,೦೦೦ ರೂ. ಕೊಡುವಂತೆ ಗೊತ್ತು ಮಾಡಿದ್ದಾರೆ.

❖❖❖❖

ಪೊಲ್ಲಾಪುರದಲ್ಲಿ ನಾರಾಯಣ ರಾವ್ ಎಂಬೊಬ್ಬ ಬ್ರಾಹ್ಮಣನು ತನ್ನ ... ಕೆಲಸದಾರನ ಮೇಲೆ ... ಎಂಬ ... ಹೆಸರಿಗೆ ಬರೆ ... ತೆಗೆಯಲೆಂದು ಅವನ ಸ್ನೇಹಿತನಾದ ಹನುಮಂತ ನೀಲಕಂಠ ಇವನ ಮನೆ ಹತ್ತಿರ ಪ್ರಾರಂಭಿಸಿದನು. ಆದರೆ ಅವನು ಒಪ್ಪಿಲ್ಲ. ಮರುದಿವಸ ಹನುಮಂತ ಎಂಬ ಗ್ರಾಮದಲ್ಲಿ ನಾಟಕ ನಡೆಯುತ್ತಿದ್ದ ಸ್ಥಳಕ್ಕೆ ಅಲ್ಲಿಗೆ ಕರೆದುಕೊಂಡು ಹೋದರು. ಗ್ರಾಮದ ದಿನ ತಂದೆ ಮಕ್ಕಳಿಬ್ಬರೂ ಸೇರಿ ಅವಳನ್ನು ಹಿಡಿದು ಕಟ್ಟಿಸಿಕೊಂಡು, ತಲೆಕೂದಲು ಕತ್ತರಿಸಿ, ಅವಳ ಮೈಮೇಲಿದ್ದ ೬,೦೦೦ ರೂಪಾಯಿನ ನಗಗಳನ್ನು ಕಿತ್ತುಕೊಂಡರಂತೆ. ಈಗ ಅವಳು ಫಿರ್ಯಾದು ಮಾಡಿದ್ದಾಳೆ. ಪೊಲ್ಲಾಪುರದ ಮ್ಯಾಜಿಸ್ಟ್ರೇಟರು ತನಿಖೆ ನಡೆಸುತ್ತಿದ್ದಾರೆ.

❖❖❖❖

ಚಕ್ರವರ್ತಿಯವರ ಜನ್ಮ ದಿನವನ್ನು ಉತ್ಸವದ ಮೂಲಕ ಪ್ರಖ್ಯಾತಪಡಿಸುವದಕ್ಕೆ ಉತ್ತರದೇಶಕ್ಕೆ ಸೇರಿದ ಒಬ್ಬನೊಬ್ಬ ಸ್ವಾಮಿಯವರು ಮಠದವರಿಗೆಲ್ಲ ಸೇರಿ ಚಂದಾ ಕೂಡಿಸಿ ಪ್ರಜೆಗಳಿಗೆ ತಿಳಿಸಿರುವದೇನೆಂದರೆ:—"ನಮ್ಮ ಊರಿನೊಳಗೆ ಒಂದು ವಾರದ ತನಕ ಬಡವರಾದ ಪ್ರಜೆಗಳಾದರೂ ಮ. ತರತ್ತರ ಅನರನ್ನು ಚರ್ಚೆಮಾಡುವದಕ್ಕೆ ಅತ್ಯವಶ್ಯವಿಲ್ಲದಿರುವದಕ್ಕೆ ಪಾಪ ಕೊಡಿಸುವ ಕಾರ್ಯವನ್ನು ಕೆಲವು ದೇಶ ಮಾಡಿರುವೆನು. ಹಿಂದು, ಮುಸಲ್ಮಾನ, ಕ್ರಿಸ್ತ ಎಂಬೀ ಯಾವ ಪಂಗಡದವರಾದರೂ ಆಗಬಹುದು." ಜತೆಗೆ ಕೀರ್ತನೆಯನ್ನು ಮಾಡುವದಕ್ಕೆ ಮಾತ್ರವೇ ಸರಿ. ಆದರೆ ಎಷ್ಟು ಮಂದಿ ಇಂಥಾ ವಿಚಾರದಿಂದ ಉಪಕಾರ ಹೊಂದಿದರೋ ಅದು ನಮಗೆ ಗೊತ್ತಾಗಲಿಲ್ಲ.

❖❖❖❖

ಬರೋಡೆಯ ಗೌವರ್ನಮೆಂಟಿನವರು ಆ ಸಂಸ್ಥಾನದ "ದರ್ಬಾರಿಗಳಿಗೆ ಪಶ್ಚಿಮ ಬಾಧ್ಯತೆಗಳನ್ನು ಉಲ್ಲಂಘಿಸಿದರು" ಎಂಬುದಾಗಿ ಮಿ. ಯಶವಂತರಾವ್ ವಿನೋದ ಎಂಬೊಬ್ಬ ದೊಡ್ಡಮನುಷ್ಯನು ಒಂದು ಪತ್ರಿಕೆಯಲ್ಲಿ ಪ್ರಕಟಪಡಿಸಿದನು. ಗೌವರ್ನಮೆಂಟಿನವರು ಅವನನ್ನು ಹಿಡಿದು ರಾಜದ್ರೋಹ ಮಾಡಿದನೆಂದು ತನ್ನಸೋಲಿನ ದರ್ಬಾಸ್ತು ಮಾಡಿಸಿದರು. ಸೆಷನ್ ಜಡ್ಜರು ವಿನೋದನಿಗೆ ಆರುತಿಂಗಳ ಕಠಿಣಸಜಾ ವಿಧಿಸಿದರು. ಅಪೀಲ್ ಮಾಡಿದಾಗ ಪರಿಷತ್ ಕೋರ್ಟಿನ ಜಡ್ಜಿಗಳು ವಿನೋದನನ್ನು ಖುಲಾಸ್ ಮಾಡಿದರು. ತರುವಾಯ ಬರೋಡೆಯ ಕೌನ್ಸಿಲರು ಆ ಮೊಕದ್ದಮೆಯನ್ನು ತಾವೇ ಪುನರ್ವಿಚಾರಣೆಮಾಡಿ, ವಿನೋದನಿಗೆ ೫೦೦ ರೂ. ಜುಲ್ಮಾನೆ ಇಲ್ಲವೇ ಮೂರುತಿಂಗಳ ಕಠಿಣಸಜಾ ಎಂಬ ಶಿಕ್ಷೆಯನ್ನು ವಿಧಿಸಿದರು. ಈಗ ವಿನೋದನು ಇಂಡಿಯಾ ಗೌವರ್ನಮೆಂಟಿನ ಮೇಲ್ಮಂತ ಸಂಗತಿಗಳನ್ನೆಲ್ಲಾ ಕುರಿತು ಅರ್ಜಿ ಬರೆದುಕೊಂಡು, ತನ್ನನ್ನು ಬರೋಡಾ ಗೌವರ್ನಮೆಂಟಿನವರು ಅನ್ಯಾಯವಾಗಿ ದಸ್ತಗಿರಿಮಾಡಿ ಕಠಿನ ಶಿಕ್ಷೆ ವಿಧಿಸಿರುತ್ತಾರಾದಕಾರಣ ತನಗುಂಟಾಗಿ

ರುವ ನಷ್ಟವನ್ನಕ್ಕೆ ಆ ಗೌವರ್ನಮೆಂಟಿನಿಂದ ಎರಡು ಲಕ್ಷ ರೂಪಾಯಿ ಕೊಡಿಸಬೇಕೆಂಬದಾಗಿ ಅರಿಕೆ ಮಾಡಿಕೊಂಡಿದ್ದಾನೆ.

❖❖❖❖

ಬನಾರ್ಸ್ ದೇಶಕ್ಕೆ ಸೇರಿದ ವರ್ಮಾಂತಲೆ ನಗರದಲ್ಲಿ ಮಿಂಡರ್ ಮಿನ್ ಎಂಬ ದೊರೆಯು ಒಂದು ಟಂಕಸಾಲೆಯನ್ನು ಸ್ಥಾಪಿಸಿದನು. ಅದರಲ್ಲಿ ಕೆಲಸಮಾಡುತ್ತಿದ್ದ ಫ್ಲೋಟರ್ ಎಂಬೊಬ್ಬ ಐರೋಪ್ಯನು ನಾಣ್ಯ ತಯಾರಿಸುವ ವಿಧಾನವನ್ನು ಕಲಿತುಕೊಂಡು, ಈಗ ಗುಟ್ಟಾಗಿ ಖೋಟಾ ನಾಣ್ಯಗಳನ್ನು ಮಾಡಿ ಚಲಾಯಿಸಿದನು. ಪೊಲೀಸಿನವರು ಅವನನ್ನು ಹಿಡಿದು ದರ್ಬಾಸ್ತಿಗೆ ಗುರಿಮಾಡಿದ್ದರಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅವನಿಗೆ ನಾಲ್ಕು ವರುಷಗಳ ಕಠಿಣಸಜಾ ವಿಧಿಸಿರುತ್ತಾರೆ. ಮತ್ತು ಮೌಲ್ಮೀನಲ್ಲಿಯೂ ಕೆಲವು ಸ್ಥಳಗಳಲ್ಲಿಯೂ ಇನ್ನೂ ಗುಟ್ಟಿನಲ್ಲಿ ನಾಣ್ಯಗಳನ್ನು ತಯಾರು ಮಾಡುವುದಕ್ಕೆ ಕೆಲವು ಜನರು ಸೇರಿಕೊಂಡಿರುವುದಾಗಿಯೂ, ಅವರನ್ನು ಹಿಡಿಯಬೇಕೆಂದು ಸರ್ಕಾರದವರು ತಲಾಷ್ ಮಾಡುತ್ತಿರುವದಾಗಿಯೂ ಸಮಾಚಾರ ಬಂದಿದೆ.

❖❖❖❖

ಆಸಾಂಗೆ ಸೇರಿದ ಸಿಲ್ಹೆಟ್ ಡಿಸ್ಟ್ರಿಕ್ಟಿನಲ್ಲಿ ಮಿರ್ಜಾಪೂರ್ ಟೀ (ತೇಯಲೆ) ತೋಟವಿದೆ. ಇದು ೩,೦೦೦ ಎಕರೆ ವಿಸ್ತೀರ್ಣವುಳ್ಳದ್ದು; ಆ ಪೈಕಿ ೩೧೧ ಎಕರೆಗಳಲ್ಲಿ ಟೀ ಸೊಪ್ಪನ್ನು ಬೆಳೆಯುವ ಕೆಲಸವಾಗಿದೆ. ಅಲ್ಲಿ ಅನೇಕ ಬಂಗಲೆಗಳು, ಯಂತ್ರಗಳು, ಉಗ್ರಾಣಗಳು, ಕೂಲಿಗಳಿಗೆ ಬಿಡಾರ ಮನೆಗಳು ಮುಂತಾದವುಗಳು ಇರುತ್ತವೆ. ೧೯೦೨ನೇ ಇಸವಿಯಲ್ಲಿ ಈ ತೋಟದೊಳಗೆ ೧,೨೨,೬೦೩ ಪೌಂಡು ತೂಕದ ಟೀ ಸೊಪ್ಪು ತಯಾರಾಗಿ ಬಿಕರಿಯಾಯಿತು. ಈ ಸಾಲು ೧,೪೯,೦೦೦ ಪೌಂಡಿನಷ್ಟು ಟೀ ಸೊಪ್ಪು ಬರುವುದೆಂದು ಅಂದಾಜು ಮಾಡಿದ್ದಾರೆ. ೧೯೦೩ನೇ ಇಸ್ವಿಯಲ್ಲಿ ಈ ತೋಟವನ್ನು ೧,೯೨,೦೦೦ ರೂಪಾಯಿಗೆ ವರ್ತಕರು ಕೊಡುತ್ತೇವೆ ಎಂದು ಮಾಲೀಕರನ್ನು ಕೇಳಿದ್ದರು. ಇಂಥಾ ಭಾರೀ ತೋಟವು ನೀಲಾಮಿನಲ್ಲಿ ಕಳೆದ ೧೩ನೇ ತಾರೀಖಿನ ದಿವಸ ಕಲ್ಕತ್ತೆಯಲ್ಲಿ ೬೦,೦೦೦ ರೂಪಾಯಿಗೆ ಹರಾಜಿನಲ್ಲಿ ಆಂಡ್ರ್ಯೂಯೂಲ್ ಕಂಪನಿಯವರು ಕೊಂಡುಕೊಂಡಿರುತ್ತಾರೆ.

❖❖❖❖

ಬೊಂಬಾಯಿ ಪಟ್ಟಣದ ಹಾರ್ನಬಿ ರೋಡ್ಡಿನಲ್ಲಿ ಸೀತಾರಾಮ್ ಲಕ್ಷ್ಮಣ್ ಎಂಬೊಬ್ಬ ಕ್ಷೌರಿಕನು ಸಾವಿರಾರು ರೂಪಾಯಿ ಖರ್ಚುಮಾಡಿ, ಆರೋಗ್ಯಕರವಾದ ಉಷ್ಣದಿಗೆ ಮನೆಗಳನ್ನು ಕಟ್ಟಿಸಿ ಬಾಡಿಗೆಗೆ ಕೊಟ್ಟಿದ್ದನು. ಹೋದ ತಿಂಗಳು ಆ ಮನೆಯ ಅಕಸ್ಮಾತ್ತಾಗಿ ಬಿದ್ದು ಹೋಯಿತು. ಜನರು ಹತರಾದರು. ಪಂಚಾಯತಿಯವರು, ಇದು ದೇವರ ... ಬೀಳಲು ಕಾರಣವೇನೆಂದು ನಾನಾ ಜನರನ್ನು ಕರೆಸಿ ವಾಙ್ಮೂಲ ತೆಗೆದುಕೊಂಡರು. ಅವರು ತೀರ್ಮಾನಿಸಿದ ಅಭಿಪ್ರಾಯವೇನೆಂದರೆ:—"ಮನೆಯ ಮಾಲೀಕನ ಮತಿ ಪ್ರೇರಿಸಿಯು ಅಜಾಗರೂಕತೆಯಿಂದಲೇ ಮನೆ ಬಿದ್ದುಹೋಗಲು ಕಾರಣವಾಯಿತು. ಗಟ್ಟಿಯಾದ ಕಿಟಕಿಗಳನ್ನು ಕಾಳೆಗಿಲ್ಲದಾದ ಕಾರಣ ಒಂದೆರಡು ತೊಲೆಗಳು ಭಾರವನ್ನು ತಾಳಲಾರದೆ ಮುರಿದುಹೋಯಿತು. ಮನೆಯ ಮಾಲೀಕನು ಪರೀಕ್ಷೆಮಾಡದೆ ಬಿಟ್ಟಿದ್ದು ಅವನ ಅಜಾಗರೂಕತೆಯಿಂದಾಗಿದೆ." ಈ ಮಾತುಗಳಂತೆ ಕಲ್ಕತ್ತೆ ಸೀಫ್ ಮ್ಯಾಜಿಸ್ಟ್ರೇಟರು ಸೀತಾರಾಮ ಲಕ್ಷ್ಮಣನನ್ನು, ಸಬ್ಜೆಡ್ಜ್ ಸೀಮೆಯಲ್ಲಿ ಎಂಬವನನ್ನೂ ವಿಚಾರಣೆಗೆ ಗುರಿಪಡಿಸಿದರೆಂಬುದಾಗಿ ವರ್ತಮಾನವಿದೆ.

❖❖❖❖

ಕಲ್ಕತ್ತೆಯಲ್ಲಿ ಪಬ್ಲಿಕ್ ಇಲಾಖಾ ಸಬ್ ಇನ್ಸ್ಪೆಕ್ಟರಾದ ಬಾಬು ಶರತ ಚಂದ್ರಪ್ರಕಾಶ ಎಂಬವನು ಮತ್ತು ಮಂಡಲಿಯ ತೋಟದ ಗೋಟ್ಲಾಗಿ ಹೋಗಿ ಒಬ್ಬ ಮುದುಕನ ಮನೆ ಹತ್ತಲ್ಲಿ ಒಂದು ರಾತ್ರಿ ಗಿಡವಿರುವದನ್ನು ಕಂಡು ಆ ಮುದುಕನನ್ನು ಹಿಡಿದುಕೊಂಡು—ನೀನು ಇದರಲ್ಲಿ ಸೇಂದಿ ಇಳಿಸಿ ಮಾರುತ್ತೀಯಾ? ನಿನ್ನ ಮೇಲೆ ಫಿರ್ಯಾದು ಮಾಡುತ್ತೇನೆ ಎಂಬುದಾಗಿ ಬೆದರಿಸಿದನು. ಆ ಮುದುಕನು—ಅಯ್ಯಾ, ನಾನು ಮುದುಕ, ನನ್ನ ಹಿತ್ತಿಲ ಮರ ಹತ್ತಲುಗುವುದೇ? ಎಂದು ಉತ್ತರಕೊಟ್ಟನು. ಆಗ ನೀನು ಅನ್ಯನ ಮೂಲಕ ಸೇಂದಿ ಇಳಿಸುತ್ತೀ ಎಂದು ದುಂಡಾವರ್ತಿಮಾಡಿ, ಜುಲ್ಮಾನೆ ಹಾಕಿಸುತ್ತೇನೆ. ಕಳರಿಗೆ ನಡಿ ಎಂದು ಸೆಳೆಯುತ್ತಾ ಇದ್ದನು. ಅಷ್ಟರಲ್ಲೇ [illegible] ದವರು ಬಂದು ಸೇರಿ ಪಂಚಾಯತಿ ಮಾಡಿ, ೧೦ ರೂ. ಲಂಚ ಕೊಡಿಸಿ ಕಳುಹಿಸಿದರು. ಮುದುಕನು ಜಾಮೀನಿಲ್ಲದೆ ತನ್ನ ಎಲ್ಲಾ ದನವನ್ನು ೧೦ ರೂಪಾಯಿಗೆ ಮಾರಿ ದಣ ಕೊಟ್ಟನು. ಕೆಲವು ಕಾಲದ ಮೇಲೆ ಈ ಲಂಚ ತಿಂದುದು ಬಯಲಾಯಿತು. ಕೋರ್ಟಿನಲ್ಲಿ ಇನ್ಸ್ಪೆಕ್ಟರ ಮೇಲೆ ಫಿರ್ಯಾದಾಗಿ ರುಜುವಾತಾಯಿತು. ಮ್ಯಾಜಿಸ್ಟ್ರೇಟರು ಆಪಾದಿತನು ಕೈಸೆಯತಕ್ಕಾಗಿ ಸೀಲಂಗು ಇಟ್ಟಿದ್ದಾರೆ.

❖❖❖❖

ವಿಲಾಯಿತಿ ರಾಜ್ಯದ ಯುದ್ಧದ ಇಲಾಖಾ ಸೆಕ್ರೆಟರಿ ಮಿ. ಬ್ರಾಡ್ರಿಕ್ ಯವರು ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟು ಸಭೆಯಲ್ಲಿ ಹಿಂದುಸ್ಥಾನದ ಸೈನ್ಯವನ್ನು ಜಟ್ಟು ಮಾಡುವ ವಿಷಯವನ್ನು ಕುರಿತು ತಿಳಿಸಿದ್ದೇನೆಂದರೆ:—ದಕ್ಷಿಣ ಆಫ್ರಿಕದಲ್ಲಿ ಹಿಂದುಸ್ಥಾನದ ಉಪಯೋಗಕ್ಕೆ ೬೫,೦೦೦ ಸೈನ್ಯವನ್ನು ಇಟ್ಟಿರಬೇಕೆಂದು ಗೌವರ್ನಮೆಂಟಿನವರು ತೀರ್ಮಾನಮಾಡಿದ್ದಾರೆ. ಹಿಂದುಸ್ಥಾನದಲ್ಲೇನಾದರೂ ಅವಶ್ಯ ಬಿದ್ದರೆ ಆ ಸೈನ್ಯವನ್ನು ಕರೆಸಿಕೊಳ್ಳಬಹುದಾಗಿದೆ. ಇದು ತಪ್ಪಿದರೆ ಹಿಂದುಸ್ಥಾನದಲ್ಲೇ ಸೈನ್ಯವನ್ನು ಇನ್ನೂ ಹೆಚ್ಚಾಗಿ ಇಡಬೇಕಾದೀತು. ಹಿಂದುಸ್ಥಾನದ ಬೆಟ್ಟಗಳಲ್ಲಿ ಎಲ್ಲಾ ಕ್ಷೇಮವಾಗಿಲ್ಲ. ಆದಾಗ್ಯೆ ಸೈನ್ಯಗಳನ್ನು ಅಲ್ಲಿಗೆ ಕಳುಹಿಸಿಕೊಡುತ್ತಲೇ ಇರಬೇಕಾಗಿದೆ. ಅವಶ್ಯಕ್ಕಿದ್ದರೆ ದಕ್ಷಿಣ ಆಫ್ರಿಕದಿಂದ ಬೇಕಾದಾಗ ಮೇಲ್ಕಂಡ ಸೈನ್ಯವನ್ನು ಕರೆ

ಸಿಕೊಳ್ಳುವದಕ್ಕೆ ಅನುಕೂಲಿಸುವಂತೆ ಅಲ್ಲಿ ಸೈನ್ಯವನ್ನು ಇಡುತ್ತೇವೆ. ಈ ಸೈನ್ಯದ ಖರ್ಚನ್ನೆಲ್ಲಾ ಕೊಡಬೇಕೆಂದು ಹಾಕಿ ಕೇಳುವುದಿಲ್ಲ. ಆ ಖರ್ಚಿನಲ್ಲಿ ಸುಮಾರು ವರುಷಕ್ಕೆ ೨,೫೫,೦೦,೦೦೦ ರೂಪಾಯಿಗಳನ್ನು ಇಂಡಿಯಾ ಗೌವರ್ನಮೆಂಟಿನವರು ಕೊಟ್ಟರೆ ಸಾಕಾಗಿದೆ. ಈ ದೊಬಲಗನ್ನು ಅವರು ಕೊಡುತ್ತಾರೆಂದು ನಿರೀಕ್ಷಿಸುತ್ತೇವೆ." ಈಚೆಗೆ ಈ ಸುದ್ದಿಯು ವಿಲಾಯತಿ ರಾಜ್ಯದಲ್ಲೂ ಹಿಂದುಸ್ಥಾನದಲ್ಲೂ ಹರಡಿಕೊಂಡು ಚರ್ಚೆ ನಡೆಯುತ್ತಿದೆ. ಹಿಂದುಸ್ಥಾನದ ಸೈನ್ಯದ ಖರ್ಚು ಈಗಲೇ ದುಬಾರಿ ಎಂತಲೂ, ಇನ್ನೂ ಅದನ್ನು ಹೆಚ್ಚಿಸುವುದು ಧರ್ಮವಲ್ಲವೆಂತಲೂ, ಸೈನ್ಯವನ್ನು ಹೆಚ್ಚಿಸಬೇಕಾದ ಆವಶ್ಯಕತೆ ಸಹ ಇರುವುದಿಲ್ಲವೆಂತಲೂ ಅನೇಕರು ಆಕ್ಷೇಪಣೆ ಮಾಡುತ್ತಿದ್ದಾರೆ. ಪಾರ್ಲಿಮೆಂಟಿನಲ್ಲೂ ಚರ್ಚೆ ನಡೆಯುತ್ತಿರುವುದು.

## ವಿದೇಶ ವರ್ತಮಾನಗಳು.

ಇಂಗ್ಲಾಂಡಿನಲ್ಲಿರುವ ಲಿವರ್‌ಪೂಲ್ ... ಪ್ರಯಾಣಿಕರು ಹೋಗುತ್ತಿದ್ದ ರೈಲುಗಾಡಿಗೆ ಅಪಾಯ ಸಂಭವಿಸಿತು. ಇಪ್ಪತ್ತೆಂಟು ಜನರು ಸತ್ತರು; ೩೦ ಜನರಿಗೆ ಗಾಯಗಳಾಗಿವೆ.

❖❖❖❖

ಕೆನಡಾ ರಾಜ್ಯದ ಗೌರ್ನರ್ ಜನರಲರಾದ ಲಾರ್ಡ್ ಸ್ಟ್ರಾತ್ಕೋನಾ ಯವರು ವಿಲಾಯತಿಗೆ ಬೇಕಾಗುವಷ್ಟು ಧಾನ್ಯವನ್ನೆಲ್ಲಾ ಕೆನಡಾ ರಾಜ್ಯದಿಂದಲೇ ಕಳುಹಿಸಿಕೊಡಲು ಸಿದ್ಧರಾಗಿದ್ದೇವೆಂದು ಹೇಳಿದರು.

❖❖❖❖

ಆರೆಂಜ್ ನದೀ ಸ್ವಾಸ್ಥ್ಯದಲ್ಲಿ ೨೫,೦೦೦ ಮಂದಿ ರೈತರು ಇಂಗ್ಲೀಷರಿಗೆ ಶರಣಾಗತರಾದರೆಂದು ಒಪ್ಪಿ ರುಜುಹಾಕಿಕೊಟ್ಟು, ಮನೆ ಮಠಗಳನ್ನು ಕಟ್ಟಿಕೊಂಡು, ವ್ಯವಸಾಯ ಮುಂತಾದ ಕಾರ್ಯಗಗಳನ್ನು ಮಾಡ ತೊಡಗಿದ್ದಾರೆ.

❖❖❖❖

ಸರ್ವಿಯಾ ರಾಜ್ಯಕ್ಕೆ ಸೇರಿದ ಜೇಸೆಕ್ಕೊ ಎಂಬ ಊರಿನಲ್ಲಿ ಕಳೆದ ವಾರ ಒಂದೇ ದಿವಸದಲ್ಲಿ ವಿಪರೀತ ಮಳೆ ಸುರಿಯಿತು. ೧೬೩ ಮನೆಗಳು ಕೊಚ್ಚಿಹೋದವು; ೩೧ ಜನರು ಪ್ರಾಣಕಳಕೊಂಡರು. ಸುಮಾರು ೬೦ ಸಾವಿರ ದ್ರವ್ಯ ನಷ್ಟವಾಯಿತು.

❖❖❖❖

ಟ್ರಾನ್ಸ್‌ವಾಲ್ ಯುದ್ಧಕಾಲದಲ್ಲಿ ಬೋಯರರು ಮನೆ ಮಠಗಳನ್ನು ಆಸ್ತಿಪಾಸ್ತಿಗಳನ್ನು ಕಳಕೊಂಡ ಸಂದರ್ಭದಲ್ಲಿ ಇಂಗ್ಲೀಷ್ ಸೈನಿಕರು ಅವರ ಟೈಬಲ್ ಎಂಬ ಸತ್ಯವೇದ ಪುಸ್ತಕಗಳನ್ನು ತೆಗೆದುಕೊಂಡಿರುತ್ತಾರೆಂಬುದಾಗಿ ಸೈನ್ಯಾಧಿಪತಿಯಾದ ಲಾರ್ಡ್ ರಾಬರ್ಟ್ಸ್ ಯವರಿಗೆ ತಿಳಿದುಬಂದಿದ್ದರಿಂದ ಈಗ ಅವರು ಇಂಗ್ಲೀಷ್ ಸೈನಿಕರಿಂದಲ್ಲಾ ಬೋಯರ ಪ್ರತಿಯ ಸತ್ಯವೇದವನ್ನು ಬೋಯರರಿಗೆ ಮರಳಿ ಕೊಡಿಸಬೇಕೆಂದು ಪ್ರಕಟಿಸಿದ್ದಾರೆ.

❖❖❖❖

ವಿಲಾಯತಿಯಲ್ಲಿ ಜಾರ್ಜ್ ಫ್ಲೇವರ್ ಎಂಬೊಬ್ಬ ಹುಡುಗನು ೧೮೨೦ರಲ್ಲಿ ಹುಟ್ಟಿದಂದಿನಿಂದಲೂ ತುಂಬಾ ಕಷ್ಟಪಟ್ಟು ಸ್ವಸಾಮರ್ಥ್ಯದಿಂದ ವ್ಯಾಪಾರದಲ್ಲಿ ವಿಶೇಷ ಐಶ್ವರ್ಯವಂತನಾದನು. ಕಾನೂನು ಕಾರ್ಯನಿಯಮದಲ್ಲೂ ಪ್ರಖ್ಯಾತಿಪಡೆದನು. ಈಗ ಈ ಮನುಷ್ಯನು ಕಾಲವಾದಾಗ ಇವನ ಆಸ್ತಿ ಒಂದುಕೋಟಿ ರೂಪಾಯಿ ಆಗಿದೆ. ಅವನು ಒಬ್ಬೊಬ್ಬ ೯ ವರುಷ ವಯಸ್ಸಿನ ಒಬ್ಬ ಬಡ ಹುಡುಗಿಗೆ ಕೊಡಬೇಕೆಂದು ಉಯಿಲು ಬರೆದಿರುವನು. ಅವಳಿಗೆ ೨೦ ವರುಷ ವಯಸ್ಸಾದ ಮೇಲೆ ಈ ಪ್ರತ್ಯೇಕ ದೊರಕುವುದು.

❖❖❖❖

ಬರುವ ವರುಷ ಅಮೇರಿಕಕ್ಕೆ ಸೇರಿದ ಸೇಂಟ್ ಲೂಯಿ ಪಟ್ಟಣದಲ್ಲಿ ಮಹಾ ಅಗಾಧವಾದ ಪ್ರದರ್ಶನೋತ್ಸವವು ನಡೆಸುವದಕ್ಕೆ ಆಸ್ಟ್ರೇಲಿಯದಿಂದ ಸ್ಥಳಕ್ಕೆ ನೀರ ಏಕರು ಹೋಗಿ ನಾನಾ ಚಿತ್ರವಿಚಿತ್ರಗಳನ್ನು ನೋಡಿ ಸಂತೋಷಪಡುವ ಉದ್ದೇಶ್ಯ ಅವರಿಗೆ ಸಹಿಗೆ ಆ ಯಾಕಾಪಗಾಡಿಗಳೆಂದು ಅಲ್ಲಿನ ಅಧಿಕಾರಿಗಳು ೩,೦೦೦ ಕುರ್ಚಿಗಳನ್ನು ತಯಾರುಮಾಡಿಸುತಾರೆ. ಪ್ರತಿ ಕುರ್ಚಿಯಲ್ಲೂ ಇಬ್ಬರು ಕೂತುಕೊಳ್ಳುವಷ್ಟು ಸ್ಥಳವಿರುತ್ತೆ. ಈ ಕುರ್ಚಿಯು ವಿದ್ಯುಚ್ಛಕ್ತಿಯ ಸಹಾಯದಿಂದ ಸ್ವತಂತ್ರವಾಗಿ ಸ್ಥಳದಿಂದ ಸ್ಥಳಕ್ಕೆ ಗಂಟೆಗೆ ಸುಮಾರು ಮೈಲಿಯಂತೆ ಚಲಿಸುತ್ತಾ ನಡೆಯುವುದು. ಅದರಲ್ಲಿ ವಿಶೇಷ ಯಂತ್ರಗಳೇನೂ ಇರುವುದಿಲ್ಲ. ಸಾಮಾನ್ಯವಾದವರು ಕೂಡ ಅವುಗಳನ್ನು ನಡೆಸಬಹುದಾಗಿದೆ. ಆದರಲ್ಲಿ ಕೂತುಕೊಳ್ಳತಕ್ಕವರು ಮನಸ್ಸು ಬಂದಕಡೆಯಲ್ಲೆಲ್ಲಾ ಅದನ್ನು ನಿಲ್ಲಿಸಿಕೊಳ್ಳುವದಕ್ಕೆ ಉಪಾಯವನ್ನು ಇಡುತ್ತಾರೆ.

❖❖❖❖

ವಿಲಾಯತಿ ರಾಜ್ಯಕ್ಕೆ ಸೇರಿದ ಲಿಡ್ಸ್ ಡಿಸ್ಟ್ರಿಕ್ಟಿನಲ್ಲಿ ಸಾವಿರಾರು ಮಂದಿ ಪ್ರಯಾಣಿಕರು ಒಂದೇ ರೈಲುಗಾಡಿಯೊಳಗೆ ಕೂತುಕೊಂಡಿದ್ದರು. ಈ ಗಾಡಿಯು ಬಹು ವೇಗವಾಗಿ ಹೋಗುವದರಲ್ಲಿ ಒಂದುಕಡೆ ಭ್ರಮಿಸಿ ಕೂಡಿದ ಕಂಬಿಗಳು ಬಿದ್ದು ಹೋಗಿದ್ದವು. ಮಿಸ್ ಮಾಗ್ ... ಎಂಬೊಬ್ಬ ಹುಡುಗಿಯು ಈ ಅಪಾಯವನ್ನು ಕಂಡು, ರೈಲುಗಾಡಿ ಅಲ್ಲಿಗೆ ಬರುವ ಮುಂಚೆ ಬಿದ್ದು ಅಪಾಯವಾಗಬಾರದೆಂದು ತನ್ನ ಕೈಯಲ್ಲಿ ಇರುವ ಕೆಂಪು ಸ್ಥಳದಲ್ಲಿ ನಿಂತುಕೊಂಡು, ಟಪಾಲಿನ ಗಾಡಿಯನ್ನು ನಿಲ್ಲಿಸಬೇಕೆಂದು, ಅಲ್ಲಿ ಅಪಾಯವಾಗುವದಕ್ಕಾಗಿ ಎಚ್ಚರವಾಗಿ ಬಾವುಟ ಹಿಡಿದು ಎಚ್ಚರಿಕೆ ಕೊಟ್ಟಳು. ಆ ಗಾಡಿಯನ್ನು ದೂರದಲ್ಲೇ ನಿಲ್ಲಿಸಿಕೊಂಡರು. ಆಗ ಎಲ್ಲರಿಗೆ ಕೊಡಬಹುದೆ ಸಾವಿರಾರುಮಂದಿ ಪಕ್ಷಾಗುತ್ತಿದ್ದರು. ಇಂಥಾ ಅಪಾಯವನ್ನು ಮುಂಚಿತವಾಗಿ ಎಚ್ಚರಿಸಿದ್ದಕ್ಕಾಗಿ ಕಂಪನಿಯವರು ಆ ಹುಡುಗಿಗೆ ಬಹು ವಿಶೇಷವಾದ ಬಹುಮಾನವನ್ನು ಮಾಡಿದರು.

## ಒಳ್ಳೇ ಔಷಧಗಳು.

3

ನಯನವ್ಯಾಧಿಗೆ ಸುಜಾಂಜನವು.—ಹೊಸತಾಗಿ ಅಥವಾ ಬಹು ಕಾಲದಿಂದ ಕಣ್ಣಿನಲ್ಲಿ ಉತ್ಪತ್ತಿಯಾದ ಎಲ್ಲ ಪ್ರಕಾರದ ಬಾಧೆಗಳು ಇದರಿಂದ ಬಹು ಬೇಗನೆ ಗುಣ ಹೊಂದುವವು. ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು, ಪಿಸರೂ ಬರುತ್ತಿರುವದೂ, ಉರಿ, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದೂ, ದೃಷ್ಟಿಮಾಂದ್ಯ ಮುಂತಾದ ನೇತ್ರ ವ್ಯಾಧಿಗಳು ಗುಣ ಹೊಂದುತ್ತವೆ. ಕ್ರಯ ೧ ಡಬ್ಬಿಗೆ ೧ ರೂ. ಪೋಸ್ಟ ಖರ್ಚು ಆಣೆ ೩.

ವಾಯುಹಾರಕ ತೈಲ (ಬಾಹ್ಯೋಪಚಾರಕ್ಕೆ ಮಾತ್ರ).—ಇದನ್ನು ಹಚ್ಚಿಸಿದ ೭ ನಿಮಿಷದೊಳಗೆ ಸಂಧಿವಾತ, ಕಟವಾತ, ಮ ಇತರ ವಾಯುಗಳ ಬಾಧೆ, ತಲೆನೋವು, ಚಿಕ್ಕ ಹುಡುಗರ ಉಬ್ಬಸ, ಕೆಮ್ಮು, ಕೂಡ ಗುಣ ಹೊಂದುವವು. ಕುಪ್ಪಿಗೆ ೧ ರೂ. ಖರ್ಚು ಆಣೆ ೩.

ಗಜಕರ್ಣದ ಮುಲಾಮು.—೨ ಯಾ ೩ ಆವರ್ತಿ ಹಚ್ಚುವದರೊಳಗೆ ಎಂಥ ಕಠಿಣವಾದ ಗಜಕರ್ಣವಾದದ್ದು ಇದ್ದರೂ ಪೂರ್ಣ ಗುಣ ಹೊಂದುವದು. ಡಬ್ಬಿಗೆ ಆಣೆ ೮. ಖರ್ಚು ೧ ರಿಂದ ೩ ಡಬ್ಬಿ ವರೆಗೆ ಆಣೆ ೩.

ಕರ್ಣಸ್ರಾವಕ್ಕೆ ವನೌಷಧಿ ತೈಲ (ಬಾಹ್ಯೋಪಚಾರಕ್ಕೆ ಮಾತ್ರ).—ಚಿಕ್ಕ ಪ್ರಾಯದವರ ಮತ್ತು ಪ್ರೌಢ ಪ್ರಾಯದವರ ಕಿವಿಯಿಂದ ರಕ್ತವಾಗಲಿ ಕೀವು ಆಗಲಿ ನೀರಿನಂಥ ದ್ರವವಾಗಲಿ ಹೊಸ್ತಾಗಿ ಅಥವಾ ಬಹುಕಾಲದಿಂದ ಹರಿಯುತ್ತಿದ್ದರೆ ಮತ್ತು ಅದರ ಮೂಲಕ ನೋವು ಕಳತವು ತುರುಸುವಿಕೆಯೂ ಇರುತ್ತಿದ್ದರೆ, ಇದರ ಉಪಯೋಗದಿಂದ ಬಹು ಬೇಗನೇ ಸಂಪೂರ್ಣ ಗುಣವು ಪ್ರಾಪ್ತವಾಗುವದು. ಕ್ರಯ ರೂ. ೧. ಖರ್ಚು ಆಣೆ ೩.

ವ್ಹಿ. ಪಿ. ಯಿಂದಲೂ ರವಾನಿಸುವೆವು. ಇನ್ನೂ ಅನೇಕ ಉತ್ತಮವಾದ ಔಷಧಗಳ ಬಗ್ಗೆ ನಮ್ಮ ಕ್ಯಾಟಲಾಗು ತರಿಸಿ ಓದಿ ನೋಡಿ. ನಮ್ಮ ವಿಳಾಸವೇನಂದರೆ —

ರಾಜವೈದ್ಯ ಮತ್ತು ಕಂಪನಿ, ಬೆಳಗಿ, ಉತ್ತರ ಕನ್ನಡಾ ಜಿಲ್ಲಾ.

---

### ಝೋಮೋಸಿಯಾ.

ಶಿಷ್ಟಾ ಪರಿಹಾರ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ಹಲ್ಯಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಪ್ಪರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್, ಖರ್ಚು ಮಾಫಿ ಬಿಡುತ್ತೆ.

*********

### ಝೋಮೋಸಿಯಾ ಯಂಬ್ರೊಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಝೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ಕುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಝೋಮೋಸಿಯಾ ಕಂಪನಿ, ೨೩ ಸೆಕೆಂಡು ಬೀಚ್ ಲೈನ್, ಮದರಾಸ್.

---

## ಶ್ರೀ ಕೃಷ್ಣವಿಲಾಸ ಪ್ರೆಸ್.

39

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡು, ನೋಟೀಸ್ ಫಾರಂ, ಬ್ಯಾಲನ್ಸ್ ಷೀಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಛಾರ್ಜುಗಳಿಗೆ ಮಾಡಲ್ಪಡುತ್ತವೆ.

ರೋಲು, ವರ್ಗ, ಮುಂತಾದ ಖಾಲಿ ಪುಸ್ತಕಗಳು; ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು; ಇನ್ನು ಇತರವಾದ ಸಮಸ್ತ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿಸಂತೆ ಬಹು ಅಂದವಾಗಿ ತಯಾರ್ಮಾಡಲ್ಪಡುತ್ತವೆ.

ಲಾಯರ್‌ಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್, ವಕಾಲತ್‌ನಾಮಾ, ಜಾರಿ, ರಶೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ವಿಕರಿಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯಕರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಜವಾಬನ್ನು ಅಪೇಕ್ಷಿಸುವವರು ಟಪ್ಪಾಲು ಹಾಸಲನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯತಕ್ಕವರು ನಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರಿಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡಪೇಟೆ ೩೫ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

---

### ಜ್ವರಹರಿ.

42




ಇದು ಸಾಧಾರಣ ಜ್ವರ, ಚಳೀಜ್ವರ, ನೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಜೈಲಿನಲ್ಲಿರುವ ಮುಜಾವಿರ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿನಗಳ ಹಿಂದೆ ಕಳುಹಿಸಿಕೊಟ್ಟ ೫೦ ಟೀಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೫೦ ಟೀಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ೩ ರೂ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

*********

### ಅಮೃತಾಂಜನ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಚಿಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆ—೬. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹನ್ನೆರಡು ಅಮೃತ ಕರ್ಪೂರವನ್ನು ನಾನೂ ನನ್ನ ಕಾಂಪೌಂಡರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲಿ, ಔಷಧ ವ್ಯಾಪಾರಿಗಳಲ್ಲಿ ಕ್ರಯಕ್ಕೆ ಸಿಕ್ಕುತ್ತವೆ. ಇಷ್ಟಲ್ಲದೆ ಕೆಳಗಿನ ವಿಳಾಸದಾರ್ರಲ್ಲಿ ವಿಶೇಷ:—
ಪಿತ್ರಿಯಾವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

---

## ಕ್ಷೇತ್ರಗಣಿತ ಸಂಗ್ರಹ.

2

ಈ ಹೊಸ ಪುಸ್ತಕವನ್ನು ಮೈಸೂರು ಶಿವರಾಮಪೇಟೆ ಸ್ಕೂಲು ಹೆಡ್ಮಾಸ್ಟರು ಟಿ. ಯಂ. ರಾಮಸ್ವಾಮಯ್ಯನವರು ಬರೆದಿರುತ್ತಾರೆ. ಇದರಲ್ಲಿ ಸುಮಾರು ಸಾವಿರ ಲೆಕ್ಕಗಳೂ ಮೈಸೂರು ದೇಶೀಯ ಪರೀಕ್ಷೆಯ ಪ್ರಶ್ನಪತ್ರಿಕೆಗಳೂ ಉತ್ತರಗಳೊಡನೆ ಅಡಕವಾಗಿವೆ. ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆಯುವಂತೆ ಅಲ್ಪಕ್ರಯಕ್ಕೆ ಮಾರಲ್ಪಡುವುದು. ಕ್ರಯ ೪ ಆಣೆ, ಹಾಸಲು ೩ ಪೈ. ವಿಳಾಸ:—

ಮ್ಯಾನೇಜರ್, ಮಿಷನ್ ಬುಕ್ ಡಿಪ್ರೋ, ಮೈಸೂರು.

---

### ಸ್ಕೂಲ್ ವಿದ್ಯಾರ್ಥಿಗಳಿಗೆ.

೧೯೦೩ ನೆ ಲೋವರ್ ಸೆಕೆಂಡರಿ ಕನ್ನಡ ಟೆಕಸ್ಟ್ ಮೊದಲಾದವರ ಹಿಂದೂ ದೇಶದ ನಾಗರಿಕ ೧೦—೧೧—೧೨ ನೇ ಅಧ್ಯಾಯಗಳಿಗೆ ನೋಟ್ಸ್, ಮು॥ ಎಸ್. ಜಿ. ನರಸಿಂಹಾಚಾರ್ಯರು, ಮತ್ತು ಮು॥ ಬಾಪು ಸುಬ್ಬರಾವ್ ಬಿ. ಎ. ಇವರಿಂದ ಮೆ॥ ಭಾಭಾ ಸಾಹೇಬರವರ ಅಪ್ಪಣೆ ಮೇರೆ ರಚಿಸಲ್ಪಟ್ಟಿರುವದು. ಕ್ರಯ ೩ ಆಣೆ ಮತ್ತು ೧೦ ಪ್ರತಿಗೆ ರೂ. ೧-೮-೦, ೩ ಪ್ರತಿಗೆ ೦—೬—೦. ವಿಳಾಸ:—

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್, ಮೈಸೂರು.

---

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಶ್ರಾವಣ ಶುದ್ಧ ಷಷ್ಠಿ ಗುರುವಾರದಿಂದ ಶ್ರಾವಣ ಶುದ್ಧ ದ್ವಾದಶಿ ಬುಧವಾರದ ವರಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಜುಲೈ ಮತ್ತು ಆಗಸ್ಟ್.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | [illegible] |
|---|---|---|---|---|---|---|
| 30 | ಗುರು | ಷಷ್ಠಿ | 0 22 | ಉತ್ತರ | 57-18 | 1[illegible] |
| 31 | ಶುಕ್ರ | ಅಷ್ಟಮಿ | 56 18 | ಸ್ವಾ | 53-6 | 1[illegible] |
| 1 | ಶನಿವಾರ | ನೌಮಿ | 56 28 | ವಿ | 51 11 | [illegible] |
| 2 | ರವಿವಾ * | ದಶಮಿ | 57 38 | ಅ | 57 30 | 1[illegible] |
| 3 | ಚಂದ್ರ‡ | ಏಕಾದಶಿ | 60-0 | ಜ್ಯೇ | 10 0 | 1[illegible] |
| 4 | ಕುಜ † | ಏಕಾದಶಿ | 0 12 | ಜ್ಯೇ | 1 40 | 2[illegible] |
| 5 | ಬುಧ ❦ | ದ್ವಾದಶಿ | 3 30 | ಮೂ | 6 30 | 3[illegible] |

* ಮಹಾವ್ಯತಿಪಾತ, ಮೃತ್ಯುಯೋಗ. ‡ ದಗ್ಧಯೋಗ.
† ಸರ್ವೇಷಾಮೇಕಾದಶಿ. ❦ ಪ್ರದೋಷ.

---

### ಪೇಟೆ ಧಾರಣೆ.

| ದಿನಸಿ. | ಮೈಸೂರು | ಬೆಂಗಳೂರು |
|---|---|---|
| ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ | ರೂ ೧೦-೮—೦ | ೧೧—೮ |
| ಕೆಂಬೂತಿ ಅಕ್ಕಿ ಅವಲ್ .. .. | ೧೦-೪ ೦ | ೧೦—೮ |
| ,, ದುಯಂ .. | ೯—೮—೦ | ೧೦—೦ |
| ಜಾಪತ್ರಿ ಅಕ್ಕಿ .. .. | ೯—೪—೦ | ೧೨—೦ |
| ಸಣ್ಣಕ್ಕಿ ಅವಲ್ .. .. | ೧೨-೮—೦ | ೧೨—೦ |
| ,, ದುಯಂ .. .. | ೧೨-೦—೦ | ೧೧—೦ |
| ತೊಗರೀ ಬೇಳೆ ಪಲ್ಲಾ ೧ಕ್ಕೆ .. | ೧೩ ೦ ೦ | ೧೪—೦ |
| ,, ದುಯಂ .. .. | ೧೨-೮—೦ | ೧೩—೦ |
| ಕೈರ್ ರಾಗಿ ಪಲ್ಲಾ ೧ಕ್ಕೆ .. .. | ೩ ೧೪—೦ | ೩—೧೪ |
| ಕಾರ್ರಾಗಿ .. .. .. | ೩—೮—೦ | ೩—[illegible] |
| ಜೋಳ .. .. .. | ೩—೧೦—೦ | [illegible] |
| ಹಲಸಂದೆ ಪಲ್ಲಾ ೧ಕ್ಕೆ .. .. | [illegible]—೧೨—೦ | ೮—೮ |
| ಬಿಳೀ ಅವರೆ .. .. | ೭ ೦—೦ | ೭—[illegible] |
| ಹೆಸರು .. .. .. | ೮—೦—೦ | ೯—೮ |
| ಉದ್ದು .. .. .. | ೮—೪ ೦ | ೮—[illegible] |
| ಕಡಲೆ .. .. .. | ೯—೮—೦ | ೧೦—[illegible] |
| ಎಳ್ಳು .. .. .. | ೧೬—೧೨—೦ | ೧೦—೧೫ |
| ಹುರಳಿ .. .. .. | ೪—೦ ೦ | ೪—೧೨ |
| ಹರಳು ೧೨೦ ಸೇರಿಗೆ .. .. | ೯—೧೨—೦ | ೫—೧೪ |
| ಸೀಗೇಕಾಯಿ ಮಣ ೧ಕ್ಕೆ .. .. | ೧—೮—೦ | ೧—೮ |
| ಮೆಣಸಿನಕಾಯಿ .. .. .. | ೨—೮—೦ | ೨—[illegible] |
| ,, ದುಯಂ .. .. | ೨—೪ ೦ | ೧—೮ |
| ಬೆಲ್ಲ ದೊಡ್ಡ ಅಚ್ಚು .. .. | ೪—೮—೦ ಮ | ೧—[illegible] |
| ಒಳ್ಳೆಣ್ಣೆ ಮಣ ೧ಕ್ಕೆ .. .. | ೫—೦ ೦ | ೪—[illegible] |
| ಹರಳೆಣ್ಣೆ ,, .. .. | ೩—೧೨—೦ | ೩—[illegible] |
| ಕೊತ್ತುಂಬರಿ ಪಲ್ಲ ೧ಕ್ಕೆ .. .. | ೫—೮—೦ | ೪—೯ |
| ಉಪ್ಪು ,, .. .. | ೯—೦—೦ | ೯—[illegible] |
| ಹುಣಸೇ ಹಣ್ಣು .. .. | ೦-೧೪—೦ | ೦—೧೪ |
| ,, ಹಳೇದು .. .. | ೧—೧೦—೦ | ೦—೧೨ |
| ತುಪ್ಪ .. .. .. | ೧೦-೧೨—೦ | ೧೦—[illegible] |
| ಸೀಮೆಯೆಂಣೆ ಪೆಟ್ಟಿ ೧ಕ್ಕೆ .. .. | ೪-೯—೦ | ೪—[illegible] |
| ತೆಂಗಿನಕಾಯಿ ೧೦೦ ಕ್ಕೆ .. .. | ೪—೪-೦ | ೩—೧೨ |
| ಅಳಲೇಕಾಯಿ ಮಣ ೧ಕ್ಕೆ .. .. | ೦—೧೪ ೦ | ೦—೧[illegible] |
| ಅಂಟುವಾಳದಕಾಯಿ ಮಣ ೧ಕ್ಕೆ .. | ೬—೧೪—೦ | ೦—೧[illegible] |
| ಚಿನ್ನ (ಪೌನ್) ಕೆಂಪು .. .. | ೧೫—೪—೦ | ೧೫—[illegible] |
| ,, ,, ಪಸುಮೆ .. .. | ೧೫—೮—೦ | ೧೫—೯ |
| ,, ,, ಗಟ್ಟಿ ತೊಲ ೧ಕ್ಕೆ .. | ೨೩—೦—೦ | ೨೪—೮ |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ .. | ೭೨—೦—೦ | ೭೭—[illegible] |

Printed and Published by the Rev. E. W. Thompson, the Proprietor and Manager, Wesleyan Mission Press, Mysore. 30/7/1903.

# ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು —:o:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩. ಮೈಸೂರು—ಸನ್ ೧೯೦೩ ನೇ ಇಸವಿ ಆಗಸ್ಟ್ ತಾರೀಖು ೬ ನೇ ಗುರುವಾರ. ಸಂಚಿಕೆ ೧೦



## ಶಿವಮೊಗ್ಗ ಡಿಸ್ಟ್ರಿಕ್ಟ್

5

ಪುಸ್ತಕಗಳೂ,

ಹಾಸನ ಟೋಪಿಗಳೂ,

ಲೇಖನ ಸಾಮಗ್ರಿಗಳೂ

ಕ್ರಯಕ್ಕೆ ದೊರೆಯುತ್ತವೆ.

ಮೇಲ್ವಿಳಾಸ :—

ಮ್ಯಾನೇಜರ್, ಮಿಷನ್ ಬುಕ್ ಡಿಪ್ಪೋ,

ಶಿವಮೊಗ್ಗ.

## ಸ್ಟಾಂಡರ್ಡ್ ಲೈಫ್ ಅಷ್ಯೂರನ್ಸ್ ಕಂಪನಿ.

3

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಇಂಡಿಯಾ ದೇಶದಲ್ಲಿ ಲೈಫ್ ಇನ್ಷ್ಯೂರೆನ್ಸ್ ಯಾನೆ ಜೀವ ವಿಮೆಯನ್ನು ಭೀಮಾ ಮಾಡಿಕೊಳ್ಳುವ ಕಂಪನಿಗಳಲ್ಲಿ ಇದು ಬಹು ಕಾಲದ್ದಾಗಿಯೂ ಶ್ರೇಷ್ಠವಾದ ಬಂಡವಾಳವುಳ್ಳದ್ದಾಗಿಯೂ ಇದೆ.

ಭೀಮಾದಾರರಾಗತಕ್ಕವರು "ಲೈಫ್ ಎಕ್ಸ್ಟ್ರೇಟ್ ಹಾವತಕ್ಕವರು) ಈ ಕಂಪನಿಯ ಚಂದಾ ದರ, ಷರತ್ತುಗಳು ಮೊದಲಾದವುಗಳನ್ನು ಇತರ ಕಂಪನಿಯವರುಗಳಿಗೆ ಹೋಲಿಸಿನೋಡಿದರೆ ಇಲ್ಲಿ ಜೀವನಾಂಶವನ್ನು ಭೀಮಾ ಮಾಡುವವರಿಗೆ ಎಷ್ಟು ಸೌಕರ್ಯಗಳುಂಟೆಂಬುದು ಗೊತ್ತಾಗುತ್ತದೆ.

ಈ ಕಂಪನಿಯ ಭೀಮಾ ನಿಬಂಧನೆಗಳು ಬಹು ಅನುಕೂಲವಾದುವು. ಭೀಮಾದಾರರುಗಳಿಗೆ ಜೋಖಮೆಯನ್ನುಂಟುಮಾಡುವ ನಿರ್ಬಂಧಗಳೇನೂ ಇಲ್ಲ.

ಕ್ಲುಪ್ತವಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲೇ ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂಪಾಯಿಗಳನ್ನು ಕಂಪನಿಯವರು ಕೊಡುವ ಲಾಭಸಹಿತವಾಗಿ ಪಡೆಯಬೇಕಾದರೆ ಭೀಮಾದಾರನು ಕಂಪನಿಗೆ ಕೊಡಬೇಕಾದ ಚಂದಾವಿನ ದರಗಳ ಪೈಕಿ ಕೆಲವನ್ನು ಇಲ್ಲಿ ನೋಡಿ

| ಪಾಲಿ ಸಿಯುಎಡುವ ವಯಸ್ಸು | ೫೦ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಪಡೆಯಬೇಕಾದರೆ ವಾರ್ಷಿಕವಾಗಿ ಕಂಪನಿಗೆ ಕೊಡುವದು. | ೫೫ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ ಯನ್ನು ಪಡೆಯಬೇಕಾದರೆ ವಾರ್ಷಿಕವಾಗಿ ಕಂಪನಿಗೆ ಕೊಡುವದು. |
|---|---|---|
| ೨೦ | ರೂ. ೬—೧೨—೮ | ರೂ. ೬—೦—೦ |
| ೨೫ | ,, ೩—೧೬—೩ | ,, ೬—೧೪—೦ |
| ೩೦ | ,, ೯—೧೨—೮ | ,, ೮—೨—೦ |
| ೩೫ | ,, ೧೨—೧೪—೮ | ,, ೧೦—೧—೪ |
| ೪೦ | | ,, ೧೩—೪—೮ |

೨,೦೦೦ ರೂ. ಗಿಂತಲೂ ಹೆಚ್ಚಾದ್ದಕ್ಕಾಗಲಿ ಕಡಮೆಯಾದ್ದಕ್ಕಾಗಲಿ ವಯಸ್ಸಿನಲ್ಲಿ ಹೆಚ್ಚು ಕಡಮೆ ಇದ್ದರೂ ಆಗಲಿ ಚಂದಾ ದರವೇನೆಂಬುದನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಇದುವರೆಗೆ ಜಾರಿಯಲ್ಲಿದ್ದ ಚಂದಾ ದರಗಳನ್ನು ಕಡಮೆ ಮಾಡಿರುತ್ತೇವೆ. ಜಾಲ್ತಿ ವರ್ಷಕ್ಕೆ ತಯಾರಾಗಿರುವ ಹೊಸ ಚಂದಾ ಪಟ್ಟಿಯನ್ನೂ ಭೀಮಾ ದರಖಾಸ್ತು ಫಾರಂಗಳನ್ನೂ ಇದೇ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಎಂ. ಸೂರ್ಯನಾರಾಯಣಪ್ಪ,

ಅಡ್ವೊಕೇಟ್ ಮತ್ತು ಜನರಲ್ ಏಜೆಂಟ್,

ಶಿವಮೊಗ್ಗ.

## ಬೇಕಾಗಿದೆ.

7

ಕೊಳ್ಳೇಗಾಲದ ಗಂಡು ಹುಡುಗರ ಸ್ಕೂಲಿಗಾಗಿ ಕನ್ನಡವಾಕ ಹೇಳಿ ಕೊಡುವ ಒಬ್ಬ ಮುನಷಿ(ರು ಬೇಕು. ಕ್ರೈಸ್ತರಾದರೆ ಉತ್ತಮ. ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

"ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು.

## ಸರಸ್ವತೀಕರ ಕಸ್ತೂರಿ ಮಾತ್ರೆಯು.

9

ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥಾವರಿಗೆ ಅತ್ಯಂತ ಉಪಯುಕ್ತವಾದದ್ದು. ಈ ಮಾತ್ರೆ ೧—೨ ತಾಂಬೂಲದ ಸಂಗಡ ಸೇವಿಸುವದರಿಂದ ಬಾಯಿಯು ಸುವಾಸನೆಯುಂಟಾಗಿ ಬಾಯಿಯ ದುರ್ಗಂಧ, ಹೋಗಿ ಅಜೀರ್ಣ, ಉಷ್ಣರೋಗ, ಬಾಯಿಯ ಹುಣ್ಣು, ಉಗ್ಗಿಸುತ್ತಾ ಮಾತಾಡುವದು, ವಾಯು, ಶೀತ, ಪಿತ್ತ, ಮಲಬದ್ಧ, ದಂತದೋಷ, ಬಾಯಿಹುಣ್ಣು, ಹಸಿವು, ಜ್ವರ, ಛಳಿ, ನೆಗಡಿ, ತಲೆಬೇನೆ ಇತ್ಯಾದಿ ಅನೇಕ ರೋಗಗಳಿಗೆಲ್ಲಾ ರಾಮಬಾಣದಂತಿರುವದು. ಹೆಂಗಸರಗುಪ್ತವಾದ ಅನೇಕ ಜಾಡ್ಯಗಳಿಗೆ ವಜ್ರಾಯುಧದಂತಿರುವದು. ಚಿಕ್ಕ ಮಕ್ಕಳಿರುವ ಮನೆಯಲ್ಲಿ ಈ ಮಾತ್ರೆಯು ಸಂಜೀವನವು. ಈ ಮಾತ್ರೆಯು ನಿಮ್ಮಲ್ಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸ್ವಾಧೀನದಲ್ಲಿದ್ದಂತೆಯೇ. ೨೦೦ ಮಾತ್ರೆಗಳುಳ್ಳ ಸೀಸೆ ಒಂದ್ಕೆ ೫ ಆಣೆ, ೫ ಆಣೆ ಔಷಧವು ೨ ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವು ನಮಗೆ ಬರೆಯುವಹಾಗೆ ಬಲಾತ್ಕಾರಪಡಿಸುವದು.

ಸಿ. ಪಿ. ಅಂಡ್ ಕಂಪನಿ, ಬೆಂಗಳೂರು ಸಿಟಿ.

## ROBINSON'S PATENT BARLEY.

## ರಾಬಿನ್‌ಸನ್‌ಯವರ ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಎಣಿಗೋಧಿಯಿಂದ ಮಾಡಿದೆ. ಹಸ್ತಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾಗ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕೆ ಸ್ವಲ್ಪ ನಿಂಬೇ ಹಣ್ಣಿನ ರಸವನ್ನೂ ಸಕ್ಕರೆಯನ್ನೂ ಸೇರಿಸಿದರೆ ಎಲ್ಲರಿಗೂ ಹಿತಕರವಾದ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ಬೇರೆಗದ ವಸ್ತುವನ್ನು ಕೆಲವರು ಮಾರುತ್ತಾರಾದ್ದರಿಂದ ಖರೀದಿಯವರು ನಮ್ಮ ಹಿಟ್ಟು ತುಂಬಿದ ಡಬ್ಬಿಗಳ ಮೇಲ್ಭಾಗದಲ್ಲಿ ಹೋಲ್ಡಿಂಗ್ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

## MELLIN'S FOOD.

### ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

71

೧. ಮೆಲ್ಲಿನ್'ರು ಮಾಡಿರುವ ಆಹಾರವು ದೇಹಕ್ಕೆ ಬೇಕಾದ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್'ರು ಮಾಡಿರುವ ಆಹಾರವು ದೇಹದ ನರಗಳೂ ಮೂಳೆಗಳೂ ಚೆನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್'ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ವೃದ್ಧಿಯಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್'ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಕಷ್ಟಮಾಡುವ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್'ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಕ ವುಂಟಾಗುತ್ತದೆ.

೬. ಮೆಲ್ಲಿನ್'ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್'ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್'ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಹಾಲ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಕೂಸುಗಳಿಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್'ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ಹಿಟ್ಟು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್'ರು ಮಾಡಿರುವ ಆಹಾರವು ಕೂಸುಗಳಿಗೆ ಸಿಡುಬು ಹಾಕುವ ಕಾಲದಲ್ಲಿಯೂ ಶೈಶವದಲ್ಲಿಯೂ ಒದಗುವ ಮಿಕ್ಕಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್'ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್'ರು ಮಾಡಿರುವ ಆಹಾರದಲ್ಲಿ ಗುರುತುಪದಾರ್ಥಗಳು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್'ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ತಕ್ಕದ್ದಾಗಿದೆ.

೧೪. ಮೆಲ್ಲಿನ್'ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ವೃದ್ಧಿಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ತಾಳ ಮಟ್ಟಿಗೆ ಕಡಮೆಮಾಡುತ್ತದೆ.

೧೫. ಮೆಲ್ಲಿನ್'ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹುಟ್ಟಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜೆಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಔಷಧಿಗಳಿಗೂ ಬರೆದು ತರಿಸಿಕೊಳ್ಳಬಹುದು :—

ಏಡನ್ :—ಮೆ॥ ಕಾವಸ್ ದಿನ್‌ಷಾ ಬ್ರದರ್ಸ್.

ಬೊಂಬಾಯಿ :—ಮೆ॥ ಥೇಂಪ್‌ ಅಪೋತಿಕ್ಯಾರಿ ಕಂಪನಿ

ಕಲ್ಕತ್ತಾ :—ಮೆ॥ ಸ್ಮಿತ್‌ಸ್ಟೇನ್‌ಸ್ಟ್ರೀಟ್ ಲಿಯಾಲ್ ಕಂಪನಿ.

ಕೊಲಂಬೋ :—ಮೆ॥ ಕಾಲ್ ವಿಲ್ಸನ್ ಕಂಪನಿ.

ಕರಾಚಿ :—ಮೆ॥ ಎಚ್.ಜೆ. ರುಸ್ತುಂಜಿ ಕಂಪನಿ.

ಮದ್ರಾಸು :—ಪಿ ಡಿ ಓರ್ ಕಂಪನಿ.

ರಂಗೂನ್ :—ರೇಡಂ ಬ್ಲಾಕ್ ಕಂಪನಿ.

ಹೊಸ ಡ್ರಿಲ್‌ಪುಸ್ತಕ.

ನೂತನ ಪ್ರತಿ, ಚಿತ್ರಗಳಿಂದ ಕೂಡಿದೆ, ದಪ್ಪಕಾಗದ, ದೊಡ್ಡ ಅಕ್ಷರ, ಸುಂದರವಾದ ಬೈಂಡು, ಸುಲಭವಾದ ಕನ್ನಡ. ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಪೊಲೀಸ್‌ನವರಿಗೂ ಇತರರಿಗೂ ಅತ್ಯವಶ್ಯವಾದುದು. ಕ್ರಯ ೪ ಆಣೆ, ಹಾಸಲ್ ೬ ಪೈ. ವಿಳಾಸ:— ಆರ್. ರಾಮಸುಬ್ಬಯ್ಯ, ಗ|| ನಾರ್ಮಲ್ ಸ್ಕೂಲ್, ಮೈಸೂರು.

ನಮ್ಮ ಚಂದಾದಾರರಿಗೆ ನೋಟೀಸ್.

"ವೃತ್ತಾಂತ ಪತ್ರಿಕೆ" ಯ ಏಜಂಟರು ಚಂದಾ ವಸೂಲ್ಮಾಡಿಕೊಂಡದ್ದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲ.

ಮ್ಯಾನೇಜರ್,

ಮೈಸೂರು. "ವೃತ್ತಾಂತ ಪತ್ರಿಕೆ" ಆಫೀಸ್.

ದೊಡ್ಡ ಸೈಜಿನ ಪೋಸ್ಟ್ ಕಾರ್ಡುಗಳು.

BIG SIZE POST-CARDS.

ಖಾಲೀ ಕಾರ್ಡುಗಳು ೧೦೦ ಕ್ಕೆ ೫ ಆಣೆ. ಚಿತ್ರಗಳು ಅಚ್ಚು ಹಾಕಿರುವುದು ೧೦೦ ಕ್ಕೆ ೬ ಆಣೆ. Plain Cards As. 5 per 100. Printed Fancy As. 6 per 100.

H. N. Rao & Brothers, 244 Chikka Petta, Bangalore City. | ಮೆ|| ಚಿಕ್ಕ ಗೋವಿಂದಪ್ಪನವರ ಅಂಗಡಿ, ಬೆಂಗಳೂರು ಸಿಟಿ.

ಸ್ಕೂಲ್ ವಿದ್ಯಾರ್ಥಿಗಳಿಗೆ.

೧೯೦೩ ನೆ ಲೋವರ್ ಸೆಕೆಂಡರಿ ಕನ್ನಡ ಟೆಕಸ್ಟ್ ಮೆ|| ರೀ ಶಾಸ್ತ್ರಿಯವರ ಹಿಂದೂ ದೇಶದ ನಾಗರಿಕ ೧೮—೧೦—೧೩ ನೇ ಅಧ್ಯಾಯಗಳಿಗೆ ನೋಟ್ಸ್, ಮೆ|| ಎಸ್. ಜಿ. ನರಸಿಂಹಾಚಾರ್ಯರು, ಮತ್ತು ಮೆ|| ಬಾಪು ಸುಬ್ಬರಾವ್ ಬಿ. ಎ. ಇವರಿಂದ ಮೆ|| ಭಾಭಾ ಸಾಹೇಬರವರ ಅಪ್ಪಣೆ ಮೇರೆ ರಚಿಸಲ್ಪಟ್ಟಿರುವದು. ಕ್ರಯ ೩ ಆಣೆ ಮಾತ್ರ. ೧೨ ಪ್ರತಿಗೆ ರೂ. ೧ ೪—೦, ೬ ಪ್ರತಿಗೆ ೧—೦—೦. ವಿಳಾಸ — ಗ್ರಾಜುಯೇಟ್ಸ್ ಟ್ರೇನಿಂಗ್ ಅಸೋಸಿಯೇಷನ್, ಮೈಸೂರು. 2

ಕ್ಷೇತ್ರಗಣಿತ ಸಂಗ್ರಹ.

ಈ ಹೊಸ ಪುಸ್ತಕವನ್ನು ಮೈಸೂರು ಓರಿಯಂಟಲ್ ಸ್ಕೂಲು ಹೆಡ್ಮಾಸ್ಟರು ಟಿ. ಯಂ. ರಾಮಸ್ವಾಮ್ಯಯ್ಯನವರು ಬರೆದಿರುತ್ತಾರೆ. ಇದರಲ್ಲಿ ಸುಮಾರು ಸಾವಿರ ಲೆಕ್ಕಗಳೂ ಮೈಸೂರು ದೇಶೀಯ ಪರೀಕ್ಷೆಯ ಪ್ರಶ್ನಪತ್ರಿಕೆಗಳೂ ಉತ್ತರಗಳೊಡನೆ ಅಡಕವಾಗಿವೆ. ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆಯುವಂತೆ ಅಲ್ಪಕ್ರಯಕ್ಕೆ ಮಾರಲ್ಪಡುವುದು. ಕ್ರಯ ೪ ಆಣೆ, ಹಾಸಲು ೬ ಪೈ. ವಿಳಾಸ — ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಮೈಸೂರು. 3

ಈಗಲೇ, ಸಿದ್ಧವಾಗಿದೆ. ಕ್ರಯಕ್ಕುಂಟು.

೧೯೦೩ ನೇ ಇಸವಿ ಲೋವರ್ ಸೆಕೆಂಡರಿ ಕನಡ ಟೆಕ್ಸ್ಟಿನ ನೋಟ್ಸು. ೧೪೬ ನೇ ಪದ್ಯದಿಂದ ೩೦೩ ನೇ ಪದ್ಯದ ವರಿಗೂ, ಇರುತ್ತೆ. ಗದ್ಯಕಾವ್ಯದ ನೋಟ್ಸೂ ಸೇರಿದೆ. ಅರ್ಥ, ತಾತ್ಪರ್ಯ ಸಂಧಿ, ಸಮಾಸ, ಅವಯವಾರ್ಥ, ಭಾವಾರ್ಥ, ನಾನಾರ್ಥ, ಪೂರ್ವಪಕ್ಷ, ವ್ಯಾಕರಣವಿಶೇಷ, ಪ್ರಶ್ನೋತ್ತರ, ಮುಂತಾಗಿ ಪರೀಕ್ಷೆಗೆ ಬೇಕಾಗತಕ್ಕ ಎಲ್ಲಾ ವಿಷಯಗಳೂ ವಿಶದವಾಗಿ ತಿಳಿಸಲ್ಪಟ್ಟಿವೆ. ಗರಿಮಲ್ಲಪ್ಪನವರ ಸ್ಕೂಲು ಮಹಾದೇವ ಶಾಸ್ತ್ರಿಗಳಿಂದ ರಚಿಸಲ್ಪಟ್ಟಿದ್ದು. ೧೦ ಕ್ಕೆ ೧ ಪ್ರತಿ ಜಾಸ್ತಿ. ಪುಸ್ತಕ ದೊರೆಯತಕ್ಕ ಸ್ಥಳ:— ಕೆ. ನರಸಿಂಹಯ್ಯ ಮತ್ತು ಕಂಪನಿ, ಮೈಸೂರು. 11

ಕ್ರಯವಗ್ಗೈರೆ ಮಾಡಕೂಡದು—ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ— ಸೀತಾವಿಲಾಸ ಸನ್ನಿಧಾನದಿಂದ ನಮ್ಮ ತಂದೆ ನಾರಣಪಂಡಿತರಿಗೆ ಒಂದು ವೃತ್ತಿ ಬಂದಿದೆ. ಈ ವೃತ್ತಿಗೆ ಸೇರಿದ ಸೀತಾವಿಲಾಸ ಅಗ್ರಹಾರದಲ್ಲಿರತಕ್ಕ ಮನೆಯನ್ನೂ, ಇದಕ್ಕೆ ಸೇರಿದ ಯಡತೊರೆ ತಾ|| ಗಂಧನಹಳ್ಳಿ ಸೈಲಿನಲ್ಲಿ ೫ ಎಕರೆ ಜಮೀನನ್ನೂ ಸದರಿ ನಾರಣಪಂಡಿತರು ಕ್ರಯ ವಗ್ಗೈರೆ ಮಾಡುವದಕ್ಕೆ ಉದ್ಯುಕ್ತಪಟ್ಟಿರುವಂತೆ ಕೇಳುತ್ತೇನೆ. ಇದಲ್ಲದೆ ಶ್ರೀಮಂತ ಮಹಾರಾಜಶ್ರೀ ಯಳಂದೂರು ಜಹಗೀರ್ದಾರ್ ಕೃಷ್ಣಮೂರ್ತಿಯವರಿಗೆ ಹಿಂದೆ ಕಣ್ಣುಬಾಧೆ ಆಗಿದ್ದಾಗ ನಾನೂ ನನ್ನ ತಂದೆ ಸಹ ಔಷಧ ಕೊಟ್ಟು ಗುಣಮಾಡಿದ್ದಕ್ಕೆ ಅವರು ಯಳಂದೂರು ತಾ|| ಅಗರದ ಕೆರೇ ಕೆಳಗೆ ಒಂದು ಖಂಡೀ ಜಮೀನ್ ಇನಾಮು ಕೊಟ್ಟರು. ನನಗೆ ಮೋಸಮಾಡಬೇಕೆಂತಾ ಅವರು ಈ ಜಮೀನನ್ನು ಶ್ರೀಮಂತರವರಿಗೇ ವಾಪಸು ಕೊಟ್ಟು, ಕಿಮ್ಮತ್ತು ತೆಗೆದುಕೊಳ್ಳಬೇಕೆಂದು ಜಮೀನ್ ವಾಪಸು ಮಾಡಿದ್ದರ ಮೇಲೆ ನಾನು ಶ್ರೀಮಂತರವರಿಗೆ ಅರಿಕೆ ಮಾಡಿಕೊಂಡೆನು. ನನ್ನ ಅರಿಕೆಯ ಮೇಲೆ ಆ ಜಮೀನು ವ್ಯವಸ್ಥೆಯಾಗದೆ ಈಗ ಅಮಾನತ್ತಿನಲ್ಲಿದೆ. ಇವುಗಳಲ್ಲೆಲ್ಲಾ ನನಗೂ ಅರ್ಧ ಹಿಸ್ಸೆ ಇರುವದರಿಂದ ಯಾರೂ ಕ್ರಯ ವಗ್ಗೈರೆ ತೆಗೆದುಕೊಳ್ಳಕೂಡದು.

೧—೮—೧೯೦೩. ನೇತ್ರವೈದ್ಯ ನಂಜುಂಡಪಂಡಿತ, ಮೈಸೂರು.

ಚೇಂಬರ್ಲೀನ್ ಯವರು ಮಾಡಿದ ನೋವುಹರ ಔಷಧವು. 31




ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಪಟು ಬಿದ್ದರೂ ಚೂರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚೆನ್ನಾಗಿ ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೀನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ೧ಕ್ಕೆ ೧ ರೂ.; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚೆನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು:—

ಬಿ. ಪಿ. ನರಸಿಂಹಲು ಚೆಟ್ಟಿ,
ನಂ. ೨, ತಂಬೂನಾಯಕರ ಬೀದಿ,
ಮದರಾಸ್.

# ವೃತ್ತಾಂತ ಪತ್ರಿಕೆ.

ಸನ್ ೧೯೦೩ ನೇ ಇಸವಿ ಆಗಸ್ಟ್ ತಾ|| ೬ ನೇ ಗುರುವಾರ

## ಮೈಸೂರ್ ಸೆನ್‌ಸಸ್ ರಿಪೋರ್ಟ್.—II.

ಮೈಸೂರು ಸಂಸ್ಥಾನದ ಸೆನ್‌ಸಸ್ ಇಲಾಖೆಯ ರಿಪೋರ್ಟನ್ನು ಈ ಸಲ ಓದಿ ಮುಗಿಸೋಣ. ಈ ಸಂಸ್ಥಾನದ ಪ್ರಜಾ ಸಂಖ್ಯೆಯನ್ನು ಮತರೀತ್ಯಾ ವಿಂಗಡಿಸಿದರೆ ಪ್ರತಿ ೧೦೦ ಮಂದಿಯಲ್ಲೂ ೯೨ ಜನರು ಹಿಂದುಗಳು, ೫.೨ ಮಂದಿ ಮಹಮದೀಯರು, ೧.೫ ಮಂದಿ ಭೂತಪಿಶಾಚಿಗಳನ್ನು ಪೂಜಿಸತಕ್ಕವರು, ೦.೯ ಮಂದಿ ಕ್ರೈಸ್ತರು, ೦.೨ ಮಂದಿ ಜೈನರು ಇರುವಂತೆ ಗೊತ್ತಾಗುತ್ತದೆ. ಕಳೆದ ೧೮೯೧ನೇ ಇಸವಿಯಲ್ಲಿ ಕ್ರೈಸ್ತರ ಸಂಖ್ಯೆ ೩೮,೧೩೫ ಇದ್ದುದು ೧೯೦೧ ರಲ್ಲಿ ೫೦,೫೯೯ಕ್ಕೆ ಹೆಚ್ಚಿರುವುದು.

ಬಾಲ್ಯವಿವಾಹಗಳನ್ನು ಕುರಿತು ಮೆ|| ಆನಂದರಾಯರು ಈ ರಿಪೋರ್ಟಿನಲ್ಲಿ ಹೇಳುವುದೇನೆಂದರೆ—ಈಗೀಗ ಪ್ರಜೆಗಳು ತಮ್ಮ ಗಂಡು ಹೆಣ್ಣು ಮಕ್ಕಳಿಗೆ ಸ್ವಲ್ಪ ವಯಸ್ಸು ಕಳೆಯುವ ತನಕ ವಿವಾಹ ಮಾಡುವುದಿಲ್ಲ. ಇಷ್ಟು ಬೇಗ ಮದುವೆಮಾಡಬೇಕಾದ ಅಗತ್ಯವೇನಿದೆ ಎಂಬ ಅಭಿಪ್ರಾಯವುಳ್ಳವರಾಗಿದ್ದಾರೆ. ಅತ್ತಲಾಗಿ ಬಾಲ ವಿಧವೆಗಳ ಸಂಖ್ಯೆಯು ಈಚೆಗೆ ಕಡಿಮೆಯಾಗುತ್ತಿರುವುದು; ವಯಸ್ಸಾದ ವಿತಂತುಗಳೇನೋ ಮೊದಲಿಗಿಂತ ಹೆಚ್ಚುತ್ತಿದ್ದಾರೆ. ಬಾಲ್ಯವಿವಾಹಗಳನ್ನು ಕಾನೂನಿನ ಮೂಲಕ ತಡೆಯಬೇಕೆಂದು ಸರ್ಕಾರದವರು ಉದ್ದೇಶಪಟ್ಟಿರುವುದೇ ಬಾಲವಿತಂತುಗಳ ಸಂಖ್ಯೆ ಕಡಿಮೆಯಾಗಲು ಮುಖ್ಯ ಕಾರಣ. ಈ ಕಾನೂನಿನ ಉದ್ದೇಶವೇನೋ ತುಂಬಾ ಸ್ತೋತ್ರಾರ್ಹವಾದುದು. ಆದರೆ ಅದನ್ನು ಚಲಾವಣೆಗೆ ತರುವುದರಲ್ಲಿ ಅಧಿಕಾರಿಗಳು ಅಷ್ಟು ಶ್ರದ್ಧೆಯನ್ನು ತೋರಿಸುವುದಿಲ್ಲ. ಈ ವಿಷಯದಲ್ಲಿ ಗೌವರ್ನಮೆಂಟಿನವರು ಕೊಟ್ಟಿರುವ ಹುಕುಮನ್ನು ಈ ಪತ್ರಿಕೆಯ ಇನ್ನೊಂದು ಭಾಗದಲ್ಲಿ ಪ್ರಕಟಿಸಿರುವೆವು. ಅದನ್ನು ವಾಚಕರು ಓದುವುದರಿಂದ ಅಧಿಕಾರಿಗಳ ತಾಮಸ ವೃತ್ತಿಯು ಪ್ರಕಾಶಕ್ಕೆ ಬರುವುದು. ಎಂಟು ವರುಷ ತುಂಬುವುದಕ್ಕಿಂತ ಮುಂಚೆಯೇ ಹೆಣ್ಣು ಮಕ್ಕಳಿಗೆ ವಿವಾಹವಾಗಬೇಕೆಂಬ ಶಾಸ್ತ್ರವಿಧಿಯೇನೂ ಇರುವುದಿಲ್ಲವೆಂಬದಾಗಿ ಮೆ|| ಆನಂದರಾಯರೇ ಹೇಳುತ್ತಾರೆ. ಸಂಖ್ಯಾಪರಿಷ್ಕಾರಕನು ೨,೦೦೦ ವಿವಾಹಗಳಾಗಿರುವುದನ್ನು ಹಿಡಿದು, ಅವುಗಳಲ್ಲಿ ೫ರಿಂದ ೧೦ ವರುಷದೊಳಗೆ ಇರತಕ್ಕ ೧೬೩ ಮಂದಿ ಹೆಣ್ಣು ಮಕ್ಕಳಿಗೆ ಮದುವೆಯಾಗಿದೆ ಎಂದು ಲೆಕ್ಕ ಹಾಕುವನು. ಈ ಸಂಸ್ಥಾನದಲ್ಲಿರುವ ಸ್ತ್ರೀ ಪ್ರಜಾಸಂಖ್ಯೆಯಲ್ಲಿ ಪ್ರತಿ ೧೦,೦೦೦ ಮಂದಿಯಲ್ಲೂ ೬ ಮಂದಿ ಮದುಗಿಯರಿಗೆ ೫ ವರುಷ ತುಂಬುವುದಕ್ಕೆ ಮೊದಲೇ ಮದುವೆಯಾಗಿದೆ; ಮತ್ತು ೧೨ ವರುಷದೊಳಗೇ ವಿಧವೆಗಳಾಗಿರತಕ್ಕವರು ೬ ಮಂದಿ. ಈ ಸಂಗತಿಯನ್ನು ನೋಡಲಾಗಿ ಸರ್ಕಾರದವರ ದೃಷ್ಟಿಗೆ ಬೀಳದೇನೇ ಕಾನೂನಿಗೆ ವಿರೋಧವಾಗಿ ಅನೇಕ ಮದುವೆಗಳಾಗಿರುವುದಕ್ಕೆ ಸಂಶಯವಿಲ್ಲ. ವೈಶ್ಯರು, ಲಿಂಗಾಯತರು, ದೇವಸ್ಥಾನಗಳ ಬ್ರಾಹ್ಮಣ ನೌಕರರು, ಕುರುಬರು, ಶಕ್ತಿಪೂಜಕರೇ ಮೊದಲಾದವರಲ್ಲೇ ಇಂಥಾ ಕಾನೂನಿಗೆ ವಿರೋಧವಾದ ಬಾಲ್ಯವಿವಾಹ ನಡೆವುದು ಹೆಚ್ಚು.

ಮೈಸೂರು ದೇಶೀಯ ಪ್ರಜೆಗಳಲ್ಲಿ ಶೇಕಡ ೮.೮ ಮಂದಿ ಅಕ್ಷರಸ್ಥರು, ಶೇಕಡ ೦.೬ ಮಂದಿ ಸ್ತ್ರೀಯರಿಗೆ ಓದುಬರಹ ಬರುವುದು; ಬೊಂಬಾಯಿ, ಮದರಾಸು ಪ್ರಾಂತ್ಯಗಳಿಗಿಂತ ತುಂಬಾ ಕಡಿಮೆ. ಇಂಗ್ಲಿಷ್ ಬಲ್ಲವರು ೧೯,೩೮೯ ಮಂದಿ ಗಂಡಸರು; ೧,೯೦೩ ಮಂದಿ ಹೆಂಗಸರು. ವಿದ್ಯಾಭ್ಯಾಸವಿಚಾರದಲ್ಲಿ ತೃಪ್ತಿಕರವಾಗಿಲ್ಲ. ಸರ್ಕಾರದವರು ಗ್ರಾಮಾಂತರಪಾಠಶಾಲೆಗಳನ್ನು ಹೆಚ್ಚಿಸಬೇಕು. ಈ ಭಾಗದಲ್ಲಿ ಪ್ರಜೆಗಳೂ ಸರ್ಕಾರದವರಿಗೆ ಸಹಾಯಕರಾಗಿಯೂ ಮುಂದಾಳುಗಳಾಗಿಯೂ ನಿಲ್ಲಬೇಕು.

## ಬಳದೇಶದ ವೃತ್ತಾಂತಗಳು.

ಚೀಫ್ ಸೆಕ್ರೆಟರಿಯವರ ನಮ್ಮ ಮಹಾರಾಜರವರು ಇಷ್ಟರಲ್ಲೇ ಕೆಲವು ಕಾಲ ಮದರಾಸಿಗೆ ಹೋಗಿ ಬರುವರಾಗಿದ್ದಾರೆಂದು ವರ್ತಮಾನವಿದೆ.

❖❖❖❖

ಕೋಲಾರ ಚಿನ್ನದ ಗಣಿಗಳಲ್ಲಿ ಕಳೆದ ಜೂನ್ ತಿಂಗಳೊಳಗೆ ಕಂಪನಿಯವರು ಒಟ್ಟು ೨,೩೫,೯೩,೩೭೯ ರೂ. ನಷ್ಟು ಚಿನ್ನವನ್ನು ತೆಗೆದು ಬಿಳಾಯಿತಿಗೆ ಇಂಗ್ಲೆಂಡಿಗೆ ರವಾನೆ ಮಾಡಿದರು.

❖❖❖❖

ಕೋಲಾರ್ ಚಿನ್ನದಗಣಿ ಕಂಪನಿಗಳ ಮುಖ್ಯ ಪಾಲುದಾರರಾಗಿದ್ದು ಈಗತಾನೇ ನಿವೃತ್ತಿಸುಖವನ್ನು ಪಡೆದ ಮೆ|| ಜಾನ್ ಟೈಲರ್ ಯವರಿಗೆ ಕಂಪನಿಗಳವರೆಲ್ಲಾ ಧಾರಾಳವಾಗಿ ಚಂದಾ ಕೊಡಿಸಿ, ಸುಮಾರು ೨೦,೦೦೦ ರೂಪಾಯಿಗಳನ್ನು ಬಹುಮಾನ ಮಾಡಿದರೆಂದು ಕೇಳುತ್ತೇವೆ.

❖❖❖❖

ಬೆಂಗಳೂರು ಲಾಲ್ ಬಾಗ್ ಉದ್ಯಾನವನದಲ್ಲಿ ಕಳೆದ ಶನಿವಾರ ಫಲಪುಷ್ಪ ಪ್ರದರ್ಶನವು ಬಹಳ ವಿಜೃಂಭಣೆಯಿಂದ ನಡೆಯಿತು. ಶ್ರೀಮನ್ ಮಹಾರಾಜರವರೇ ಮುಂತಾದವರು ದಯಮಾಡಿದ್ದರು. ಶ್ರೇಷ್ಠವಾದ ಫಲಪುಷ್ಪಪ್ರದರ್ಶಕರಿಗೆ ಈ ಸಲ ಚಿನ್ನ ಬೆಳ್ಳಿಯಲ್ಲಿ ಮಾಡಿದ ಬಿಲ್ಲೆ (ಮೆಡಲ್) ಗಳನ್ನು ಬಹುಮಾನ ಕೊಟ್ಟರು.

❖❖❖❖

ಡಾಕ್ಟರ್ ಥರ್ಸ್ಟನ್ ಯವರು ದಕ್ಷಿಣ ದೇಶದಲ್ಲಿರುವ ಬೇರೆ ಬೇರೆ ಜಾತಿಯ ಜನರ ಮುಖ, ಎತ್ತರ, ಲಕ್ಷಣ ಮೊದಲಾದವುಗಳನ್ನು ಪರೀಕ್ಷೆ ಮಾಡಿ ಒಂದು ರಿಪೋರ್ಟ್ ಬರೆಯುವವರಾಗಿದ್ದಾರೆ. ಇವರು ಕಳೆದವಾರ ಮೈಸೂರಿಗೂ ಬಂದು ನಾನಾ ಜನರನ್ನು ಕರೆಸಿಕೊಂಡು ಪರೀಕ್ಷೆಮಾಡಿದರು. ಇವರು ಹಾಸನದ ಪ್ರಾಂತ್ಯ ಹೋಗಿದ್ದಾಗ ಅಲ್ಲಿ ಜನರು ತುಂಬಾ ಭಯಪಟ್ಟು ಗ್ರಾಮಗಳನ್ನೇ ಬಿಟ್ಟು ಓಡಿಹೋಗಿದ್ದರೆಂದು ತಿಳಿದಿದೆ.

❖❖❖❖

ಮೈಸೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರ ಕೋರ್ಟಿನಲ್ಲಿ ವಕೀಲರಾಗಿರುವ ಮೆ|| ಎಂ. ಎಸ್. ಜಂಬಪ್ಪನವರು ಪ್ಲೀಡರ್ ಮೆ|| ವೆಂಕೋಬರಾಯರ ಸಂಗಡ ಜಟಕಾಗಾಡಿಯಲ್ಲಿ ಮೊನ್ನೆ ಸೋಮವಾರ ಸಾಯಂಕಾಲ ಕೂತು ಕೋರ್ಟಿನಿಂದ ಬಳ್ಳ ಹೋಗುತ್ತಿದ್ದಾಗ ಕುದುರೆ ಹಠಮಾಡಿ ಬೆದರಿದ್ದರಿಂದ ಅವರು ಕೆಳಕ್ಕೆ ಬಿದ್ದು ಮುಖಕ್ಕೆ ಸ್ವಲ್ಪ ಪೆಟ್ಟಾಗಿ ಗಾಯವಾಯಿತು. ಮೆ|| ವೆಂಕೋಬರಾಯರಿಗೆ ಅಪಾಯವೇನೂ ಆಗಲಿಲ್ಲ.

❖❖❖❖

ಯಡತೊರೆ ತಾಲ್ಲೂಕು ದಿಪ್ಪನಹಳ್ಳಿ ಗ್ರಾಮದಲ್ಲಿ ಸಿದ್ಧಪ್ಪನೆಂಬವನು ತನ್ನ ಹೆಂಡತಿಯಾದ ಸಂಪಮ್ಮನನ್ನು ಕೊಲೆ ಮಾಡಿ, ತಾನೂ ಆತ್ಮಹತ್ಯ ಮಾಡಿಕೊಳ್ಳಬೇಕೆಂದು ತನ್ನ ಕತ್ತನ್ನು ಸ್ವಲ್ಪ ಕತ್ತರಿಸಿ ಗಾಯಮಾಡಿಕೊಂಡಿದ್ದನಷ್ಟೆ. ಇಲ್ಲಿನ ಆಸ್ಪತ್ರೆಯಲ್ಲಿ ಇವನಿಗೆ ಗಾಯವನ್ನು ವಾಸಿಮಾಡಿದರು. ಇವನ ಮೇಲೆ ತರಲ್ಪಟ್ಟ ಕೊಲೆಯ ಆಪಾದನೆ ರುಜುವಾತು ಆಗಿ ಸೆಷನ್ಸ್ ನ್ಯಾಯಾಧೀಶರು ಇವನಿಗೆ ಏಳು ವರುಷ ಕಠಿಣ ಸಜಾ ವಿಧಿಸಿದರೆಂದು ಕೇಳುತ್ತೇವೆ.

❖❖❖❖

ಸರ್ ಶೇಷಾದ್ರಿ ಅಯ್ಯರವರ ಮರಣಾನಂತರ ಜ್ಞಾಪಕಾರ್ಥವಾಗಿ ಕೂಡಿಟ್ಟಿರುವ ಹಣವನ್ನು ಯಾವ ರೀತಿಯಲ್ಲಿ ವಿನಿಯೋಗಿಸತಕ್ಕದೆಂಬ ಅಂಶವನ್ನು ಗೊತ್ತುಮಾಡುವುದಕ್ಕೆ ಈ ತಿಂಗಳ ೧೫ ನೇ ತಾರೀಖು ಶನಿವಾರ ಸಾಯಂಕಾಲ ೫ ಗಂಟೆಗೆ ಬೆಂಗಳೂರು ಸೆಂಟ್ರಲ್ ಕಾ

...ಉಂಗಳಲ್ಲಿ ಪುರವಾಸಿಗಳು ವಿಶೇಷವಾಗಿ ನಡೆದುಕೊಂಡರು. ಅಲ್ಲದೆ ದೇವಸ್ಥಾನಗಳಲ್ಲಿ ಆ ದಿನ ಹಾಜರಾಗಿ ತಮ್ಮ ತಮ್ಮ ಅಭಿಪ್ರಾಯವನ್ನು ತಿಳಿಸುವುದೆಂತಲೂ ಸೆಕ್ರೆಟರಿ ಮೋಭ್ಯಾಸವರು ಪ್ರಕಟಿಸಿದ್ದಾರೆ.

****

ಕೋಲಾರದಲ್ಲಿ ಈಚೆಗೆ ಚಿನ್ನದ ಕಳುವು ಹೆಚ್ಚುತ್ತಾ ಬಂದಿರುವುದು ಇಂಡಿಯಾ ಗವರ್ನಮೆಂಟಿನವರ ದೃಷ್ಟಿಯನ್ನು ಆಕರ್ಷಿಸಿರುತ್ತದೆ. ಪೋಲೀಸ್ ಸಿಬ್ಬಂದಿ ಅಷ್ಟು ಚನ್ನಾಗಿದ್ದರೂ ಕಳುವು ಹೆಚ್ಚುತ್ತಿರುವುದಕ್ಕೆ ಕಾರಣವೇನೆಂಬುದನ್ನು ತನಿಖೆ ಮಾಡಲೋಸುಗ ನಮ್ಮ ರೆಸಿಡೆಂಟರು ಮೊನ್ನೆ ಶುಕ್ರವಾರ ಆ ಪ್ರಾಂತ್ಯ ದಿಖುವಾಗಿದ್ದರು. ಮೈಸೂರು ಸರ್ಕಾರದವರು ಜನರಲ್ ರಾಬರ್ಟ್‌ಸನ್‌ರವರ ಹೆಸರಿನ ಮೇಲೆ ಒಂದು ಹೊಸ ಊರನ್ನು ಕಟ್ಟುವವರಾಗಿದ್ದಾರೆ. ರೆಸಿಡೆಂಟರು ಈ ಊರಿನ ನಿವೇಶನವನ್ನೂ ನೋಡಿಕೊಂಡು ಬಂದರು.

****

ಮೈಸೂರು ಮಹಾರಾಜರವರ ಇಂಗ್ಲೀಷ್ ಬ್ಯಾಂಡ್ ಎಂಬ ವಾದ್ಯಗಾರರಲ್ಲಿ ಕೆಲವರು ಹಿಂದುಗಳ ದೇವರನ್ನು ತರುವಾಗ್ಯೆ ವಾದ್ಯವಾಡುವುದು ತಮ್ಮ ಮತಕ್ಕೆ ವಿರೋಧವೆಂದು ವಾದ್ಯ ಬಾರಿಸದೆ ಹೋದರು. ಇದಕ್ಕಾಗಿ ಮಹಾರಾಜರವರು ಅಂಥವರನ್ನು ಬ್ಯಾಂಡಿನಿಂದ ತೆಗೆದುಬಿಟ್ಟು, ಅವರಿಗೆ ಸಂಬಳ, ಗ್ರಾಂಟು, ವರ್ಷ ಮುಂತಾದ್ದು ಕೊಡಬೇಕೆಂತಲೂ ಕಳೆದವಾರ ಅಪ್ಪಣೆ ಮಾಡಿರುವರು. ಇಂಥವರು ಕಾರ್ಯ ನಡಿಸಿರುತ್ತಾರೆ. ಸುಮಾರು ೨೦ ಜನರು ಈ ಬ್ಯಾಂಡಿನಿಂದ ನಿವೃತ್ತರಾದರು.

****

ಕಳೆದ ಗುರುವಾರ ಮಧ್ಯಾಹ್ನ ಗಣೇಶನಹಳ್ಳಿಯಿಂದ ತಿರುಮಕೂಡಲು ನರಸೀಪುರಕ್ಕೆ ಕಾವೇರಿ ನದಿಯನ್ನು ದಾಟಬೇಕೆಂದು ಕೆಲವರು ಒಂದು ದೋಣಿಯಲ್ಲಿ ಹೋಗುವಾಗ್ಯೆ ನದಿ ಮಧ್ಯದಲ್ಲಿ ಆ ದೋಣಿಯು ಮುಳುಗಿಬಿಟ್ಟಿತು. ೧೫೦ ಜನರು ನೀರಿನಲ್ಲಿ ಬಿದ್ದರೆಂದು ಹೇಳುತ್ತಾರೆ. ಕೆಲವರು ಮರದ ಕೊಂಬೆಗಳನ್ನು ಹಿಡಿದೂ, ಕೆಲವರು ಈಜಿಕೊಂಡೂ ಬದುಕಿದರು. ಪ್ರವಾಹವು ಬಹಳವಾಗಿ ಬಂದರೆ ನದಿಯಲ್ಲಿ ಹೀಗೆ ಅನಾಹುತವಾಗುವುದು ಸುಲಭ. ಸರ್ಕಾರದವರು ದೋಣಿಗಳನ್ನು ಇಂಥ ಕಡೆಗಳಲ್ಲಿ ತಿರುಗಾಡದಂತೆ ತಡೆದುಬಿಟ್ಟರೆ ಎಷ್ಟೋ ಕ್ಷೇಮವಾಗುತ್ತದೆಂದು ಅನೇಕರು ಹೇಳುವರು.

****

ಕೋಲಾರ್ ಚಿನ್ನದ ಗಣಿಗಳಲ್ಲಿ ಕಾರ್ಖಾನೆಗಳ ಯಂತ್ರ ನಡೆಯುವುದಕ್ಕೆ ಬೇಕಾದ ನೀರನ್ನು ನಡಿಸಿ, ಕಲ್ಲು ಪುಡಿಮಾಡುವುದಕ್ಕೆ ಅಲ್ಲದೆ ವಿದ್ಯುಚ್ಛಕ್ತಿಯನ್ನು ಪ್ರತ್ಯೇಕವಾಗಿ ಉತ್ಪತ್ತಿ ಮಾಡಿಕೊಳ್ಳಬೇಕೆಂದು ಕಂಪೆನಿಯವರು ಶಿವಸಮುದ್ರದಿಂದ ಯಂತ್ರಗಳನ್ನು ತರಿಸಿ ಕಟ್ಟುತ್ತಿದ್ದಾರೆ. ಇದಲ್ಲದೆ ಮೈಸೂರು ಗವರ್ನಮೆಂಟಿನವರು ಗಮನಿಸುತ್ತಿರುವರು. ಶಿವಸಮುದ್ರದ ಕಾರ್ಖಾನೆಯಿಂದ ಬರತಕ್ಕ ವಿದ್ಯುಚ್ಛಕ್ತಿಯನ್ನು ಮುಂದಿನ ಕೆಲಸಕ್ಕೆ ವಿನಿಯೋಗಿಸಿಕೊಳ್ಳುವುದಕ್ಕಾಗಿ ಹೊಸ ಕಾರಣ ಕಂಪೆನಿಯವರು ಈ ಹೊಸ ಏರ್ಪಾಡು ಮಾಡಿಕೊಳ್ಳಬೇಕಾಯಿತು. ಇದರಿಂದ ಮೈಸೂರು ಸರ್ಕಾರದವರಿಗೆ ಹಣವೇನೂ ಕಡಿಮೆಯಾಗದು.

****

ಕೋಲಾರ್ ಚಿನ್ನದ ಗಣಿ ಕಂಪೆನಿಯವರಲ್ಲಿ ಹೆಚ್ಚಿ ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ಚಿತ್ರಗಳನ್ನು ನಮ್ಮ ಶ್ರೀಮನ್ ಮಹಾರಾಜರವರಿಗೆ ಒಪ್ಪಿಸಬೇಕೆಂದು ಗೊತ್ತುಮಾಡಿ, ಮಿಸ್ಟರ್ ಚಾರ್ಲ್ಸ್ ಸ್ಮಿತ್ ಎಂಬ ಪ್ರಸಿದ್ಧ ಚಿತ್ರಗಾರನಿಂದ ಬರಿಸಿದ್ದಾರೆ. ಅವರು ಚಿತ್ರಗಳನ್ನು ಚಕ್ರವರ್ತಿಯವರು ಕಳೆದವಾರ ಬಕಿಂಗ್‌ಹಾಂ ರಾಜಭವನದಲ್ಲಿ ಪರೀಕ್ಷಿಸಿ, ಚಿತ್ರ ಚನ್ನಾಗಿ ಬರೆದಿದೆ ಎಂದು ಹೇಳಿ ಚಿತ್ರಗಾರನನ್ನು ಹೊಗಳಿದರು. ಈಗ ಲಂಡನ್ ಪಟ್ಟಣದ ಪ್ರದರ್ಶನದಲ್ಲಿ ಜನರು ನೋಡುವುದಕ್ಕೋಸ್ಕರ ಇಡಲಾಗಿದೆ. ಎರಡು ವಾರಗಳನಂತರ ಕಂಪೆನಿಯವರು ಇದನ್ನು ಮಹಾರಾಜರವರಿಗೆ ಒಪ್ಪಿಸುವರು.

****

ಹರಿಹರದಲ್ಲಿ ಪ್ಲೇಗಿನ ಸ್ಥಿತಿಯು ಬಹಳ ಭಯಂಕರವಾಗಿದೆ ಎಂದು ಅಲ್ಲಿನ ವಾರ್ತೆಯಿಂದ ಗೊತ್ತಾಗುತ್ತದೆ. ಅಷ್ಟು ಸಣ್ಣ ಊರಿನಲ್ಲಿ ದಿನಕ್ಕೆ ೧೦—೧೫—೨೦ ಜನ ಮರಣಗಳಾಗುತ್ತವೆ. ಇದನ್ನು ಆಗುಮಾಡುವುದಕ್ಕೆ ಅಲ್ಲಿನ ಅಧಿಕಾರಿಗಳು ಪ್ರಯತ್ನಮಾಡಬೇಕಾದುದು ಬಹಳ ಅವಶ್ಯಕ. ಅಧಿಕಾರಿಗಳು ಊರ ಸುತ್ತ ಮುತ್ತ ಸ್ಥಳದಲ್ಲಿ ವಸತಿಯೂ ಆರೋಗ್ಯಕರವೂ ಆದ ಸ್ಥಳಗಳನ್ನು ಗೊತ್ತುಮಾಡಿ, ಜನರನ್ನು ಅಲ್ಲಿ ಗುಡಿಸಲು ಹಾಕಿಕೊಂಡು ವಾಸಮಾಡುವಂತೆಯೂ, ಅವರ ಧನ ಮಾನ ಪ್ರಾಣಗಳಿಗೆ ಭಯ ಉಂಟಾಗದಂತೆಯೂ ಏರ್ಪಾಡುಮಾಡುವುದು ಅವಶ್ಯಕ. ಇದು ಅಲ್ಲಿನ ಅಧಿಕಾರಿಗಳ ಚಿತ್ತವಿರಿದ್ದಾಗಿ ಇಂದಿನಿಂದಲೂ ಅವರು ಪ್ಲೇಗ್ ಕಮಿಷನರಿಗೂ, ಸೀನಿಯರ್ ಸರ್ಜನರಿಗೂ ರಿಪೋರ್ಟು ಮಾಡಬೇಕು.

****

ಮೊನ್ನೆ ಶುಕ್ರವಾರ ರಾತ್ರಿ ನಮ್ಮ ಪಟ್ಟಣ ಕಳ್ಳರು ಮೈಸೂರು ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮಿ॥ ಕಾಂತರಾಜೇ ಅರಸಿನವರು ಜೋಯಿಸಗೆರೆ ಸಾಹುಕಾರನಲ್ಲಿ ಕಳುವು ಮಾಡಿ ಬಾಗಿಲ ಬಳಿ ಕೀಲು ಮುರಿದು ಬಿದ್ದಿತ್ತು. ಆ ಬಾಗಿಲ ಬಳಿ ಮ್ಯುನಿಸಿಪಾಲಿಟಿಯವರು ದೊಡ್ಡ ಚರಂಡಿ ತೆಗೆದು ಕಾಲುವೆ ಮಾಡಿದ್ದರು. ಬೆಳಗಾದ ಮೇಲೆ ನೋಡಲಾಗಿ ಆ ಗಾಡಿಯ ಕುದುರೆಗಳು ಎರಡು ಬಿದ್ದು ಸತ್ತಿದ್ದವು. ಸವಾರರು ಒಂದು ಚಿಕ್ಕ ಬರಿಯ ಗಾಯದಿಂದ ಆ ಚರಂಡಿಯೊಳಕ್ಕೆ ಬಿದ್ದುದರಿಂದ ಪೂರಾ ಅಪಾಯ ತಪ್ಪಿಸಿಕೊಂಡರು. ದೈವವಶಾತ್ ಮಿ॥ ಕಾಂತರಾಜೇ ಅರಸಿನವರು ಗಾಡಿಯಿಂದಿಳಿದು ಜಾಗರೂಕರಾಗಿ ಸ್ವಗೃಹವನ್ನು ಸೇರಿದರು. ಆ ಮೇಲೆ ಗಾಡಿ ತೆಗೆದುಕೊಂಡು ಹೋಗಲು ಅಲ್ಲಿಂದ ಬಂದ ಎರಡು ಹೊಸ ಕುದುರೆಗಳಲ್ಲಿ ಒಂದು ಅಪಾಯಕ್ಕಾಗಿ ಆ ಚರಂಡಿಯೊಳಗೇ ಬಿದ್ದುಕೊಂಡು, ಎತ್ತುವುದೇ ಕಷ್ಟ ಪ್ರಯಾಸವಾಯಿತು. ತರುವಾಯ ಕೆಲವರು ಬೇರೆ ಒಂದು ಜೊತೆ ಕುದುರೆಗಳನ್ನು ತರಿಸಿ ಗಾಡಿಯನ್ನು ಸಾಗಿಸುವುದಕ್ಕೆ ಸಮರಾತ್ರಿಯಾಗಿರಬಹುದು. ಮ್ಯುನಿಸಿಪಾಲಿಟಿ ಏರ್ಪಾಟಿನ ವಿಶದತೆಯು ಇದರಿಂದಲೇ ವ್ಯಕ್ತಪಡುತ್ತದೆ.

## ಮೈಸೂರು ಗೆಜೆಟ್ ಸಂಗ್ರಹ.

ಮಿ॥ ವಿ. ಆರ್. ತ್ಯಾಗರಾಜ ಐಯರನ್ನು ಸ್ಪೆಷಲ್ ಡ್ಯೂಟಿಗೆ ನೇಮಿಸಲಾಗಿರುವುದರಿಂದ ಬೆಂಗಳೂರು ಡಿಸ್ಟ್ರಿಕ್ಟ್ ಎ. ಎ. ಕಮಿಷನರ್ ಮಿ॥ ಬಿ. ಎಂ. ನರಸಿಂಗರಾಯರನ್ನು ಗವರ್ನಮೆಂಟ್ ಅಸಿಸ್ಟೆಂಟ್ ಸೆಕ್ರೆಟರಿ ಕೆಲಸಕ್ಕೆ ನೇಮಿಸಲಾಗಿದೆ.

ಆಸ್ಪತ್ರೆ ಅಸಿಸ್ಟೆಂಟರುಗಳಾದ ಟಿ. ವಿ. ರಾಧಾಕೃಷ್ಣಪಿಳ್ಳೆಯವರನ್ನು ೧ನೇ ಕ್ಲಾಸಿಗೂ, ಡಿ. ಪೆರಲ್, ಎ. ಕೃಷ್ಣಸ್ವಾಮಿ ಮೊದಲಿಯಾರ್, ಸಿ. ವೇದನಾಯಗಂ ಪಿಳ್ಳೆಯವರುಗಳನ್ನು ೨ನೇ ಕ್ಲಾಸಿಗೂ ಬಡ್ತಿಮಾಡಿದೆ.

ಶ್ರೀಮನ್ ಮಹಾರಾಜರವರ ಭಾವಂದಿರುಗಳಾದ ಮಿ॥ ಎಂ. ಕಾಂತರಾಜೇ ಅರಸಿನವರು, ಲೆಫ್ಟಿನೆಂಟ್ ಕರ್ನಲ್ ದೇಸರಾಜೇ ಅರಸಿನವರು, ಮಿ॥ ಲಕ್ಷ್ಮೀಕಾಂತರಾಜೇ ಅರಸಿನವರು—ಈ ಮೂವರೂ ಸಾಧ್ಯವಾಗುವಷ್ಟು ಮೈಸೂರು ಸಂಸ್ಥಾನದ ಸಿವಿಲ್ ಕೋರ್ಟುಗಳಲ್ಲಿ ಹಾಜರಾಗತಕ್ಕ ಅವಶ್ಯವಿರುವುದಿಲ್ಲ.

ಕಡೂರು ಡಿಸ್ಟ್ರಿಕ್ಟ್ ಪೊಲೀಸ್ ಇ. ಸೂಪರೆಂಟ್ ಮಿ॥ ವ್ಯಿ. ಕೃಷ್ಣಮೂರ್ತಿಯವರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಒಂದೂವರೆ ತಿಂಗಳಿಗೆ ಜಾಸ್ತಿಮಾಡಿದೆ.

ಮೈಸೂರು ಮಹಾರಾಣಿಯವರ ಕಾಲೇಜ್ ಲೇಡಿ ಸೂಪರಿಂಟೆಂಡೆಂಟ್ ಮಿಸ್ ಜೆ. ಎಲ್. ಪರೆಂಜಪೆಯವರಿಗೆ ಜೂನ್ ೩೦ ರಿಂದ ಎರಡು ತಿಂಗಳು ಇಪ್ಪತ್ತು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅದೇ ಕಾಲೇಜಿನ ಸಹಾಯೋಪಾಧ್ಯಾಯಿನಿಯಾದ ಶ್ರೀ. ಬಿ. ರುಕ್ಮಿಣಿಯಮ್ಮನವರು ಲೇಡಿ ಸೂಪರಿಂಟೆಂಡೆಂಟಾಗಿ ಕೆಲಸ ನೋಡತಕ್ಕದ್ದು.

ರಜದಮೇಲೆ ಹೋಗಿದ್ದ ಮಿ॥ ಜೆ. ಹ್ಯಾಂಡ್ರಿಯವರು ಜುಲೈ ೨೬ ರಲ್ಲಿ ಹಾಜರಾಗಿ ಸೆಂಟ್ರಲ್ ಜೈಲ್ ಮತ್ತು ಗವರ್ನಮೆಂಟ್ ಸೆಂಟ್ರಲ್ ಪ್ರೆಸ್ ಆಫೀಸುಗಳ ಛಾರ್ಜನ್ನು ವಹಿಸಿರುತ್ತಾರೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮಿ॥ ಸಿ. ಶ್ರೀಕಂಠೇಶ್ವರ ಐಯರಿಗೆ ಕೊಡಲು ಮೂರು ತಿಂಗಳ ರಜವನ್ನು ಕೊಟ್ಟಿತ್ತು. ಅದನ್ನು ಮತ್ತೆ ೧ನೇ ಜುಲೈ ೩ರ ವರೆಗೆ ಜಾಸ್ತಿ ಮಾಡಲಾಯಿತು. ಈಗ ಜುಲೈ ೬ ರಿಂದ ಅವರಿಗೆ ಮೂರು ತಿಂಗಳ ಕಾಯಿಲೆ ರಜಾ ಕೊಟ್ಟಿದೆ.

ಹೊಸ್ಕೋಟೆ ತಾಲ್ಲೂಕು ಅಮಲ್ದಾರ್ ಮಿ॥ ಜೆ. ಬಿ. ಚನ್ನಪ್ಪನವರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿವಮೊಗ್ಗ ಡಿಸ್ಟ್ರಿಕ್ಟ್ ಶಿರಸ್ತೇದಾರ್ ಎಂ. ಕೃಷ್ಣರಾಯರು ಹೊನ್ನಾಳಿ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕದ್ದು.

ಹೊಳೆನರಸೀಪುರದ ತಾಲ್ಲೂಕ್ ಅಮಲ್ದಾರ್ ಮಿ॥ ಸಿ. ಆರ್. ಶ್ರೀನಿವಾಸರಾಯರಿಗೆ ೧ ತಿಂಗಳು ೧೩ ದಿವಸಗಳ ಪ್ರಿವಿಲೆಜ್ ರಜವನ್ನೂ, ಆರು ತಿಂಗಳ ಫರ್ಲೋ ರಜವನ್ನೂ ಕೊಟ್ಟಿದೆ.

ಆಲೂರ್ ಡೆಪ್ಯುಟಿ ಅಮಲ್ದಾರ್ ಮಿ॥ ವೆಂಕಟವರ್ದಯ್ಯನವರು ಹೊಳೆನರಸೀಪುರದ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕದ್ದು.

ಹೊಳೆನರಸೀಪುರದ ಅಮಲ್ದಾರಾಗಿ ಕೆಲಸ ನೋಡುತ್ತಿದ್ದ ಹಾಸನದ ಡಿಸ್ಟ್ರಿಕ್ಟ್ ಆಫೀಸ್ ಡೆಪ್ಯುಟಿ ಶ್ರೀನಿವಾಸ ಐಯ್ಯಂಗಾರರು ಆಲೂರಿನ ಡೆಪ್ಯುಟಿ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ. (ಮಿ॥ ವೆಂಕಟವರ್ದಯ್ಯನವರು ಛಾರ್ಜು ವಹಿಸಿದನಂತರ ಆಲೂರಿಗೆ ಹೋಗತಕ್ಕದ್ದು.)

ಚಿತ್ರದುರ್ಗ ಡಿವಿಷನ್ ಅ॥ ಇಂಜನಿಯರ್ ಮಿ॥ ಕೆ. ವೆಂಕಟಾಚಾರ್ಯ ಮಂಗಳೂರಿಯವರಿಗೆ ಕೊಟ್ಟಿದ್ದ ಮೂರು ತಿಂಗಳ ಕಾಯಿಲೆ ರಜವನ್ನು ಇನ್ನು ಮೂರು ತಿಂಗಳು ಜಾಸ್ತಿಮಾಡಿದೆ.

## ವಾರ್ತಾದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ವಾರ್ತೆಗಳಿಗೆ ನಾವು ಪ್ರಸಿದ್ಧಿಯನ್ನು ಕೊಡಲಾರೆವು. ಆದಕಾರಣ ವಾರ್ತಾದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸಬೇಕು. ಮತ್ತು ವಾರ್ತೆಯನ್ನು ಕಾಗದದ ಎಡದ ಪಕ್ಕಗಳಲ್ಲಿ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

● ವಾರ್ತಾದಾರರ ಮತದ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

## ಕರೆಸ್‌ಪಾಂಡೆನ್ಸ್.

### ಸಂತೋಷಪಡಬೇಕಾಗಿದೆ.

ಅಯ್ಯಾ,

ಬಿ ಸು. ಎಂಬವರು ಗಂಗಾಧರಯ್ಯನವರೆನ್ನಲು ವಿದ್ವಾಂಸ ಪ್ರಾಯರನ್ನು ವರೆದು, ಭಗವದ್ಗೀತೆ ಎಂಬ ಅಧ್ಯಾಯ ಅನೇಕ ಸ್ಥಳಗಳ ಮತ್ತು ೯ನೇ ಜ. ೨೫ನೇ ಶ್ಲೋಕ. ಇವುಗಳ ಸೂತ್ರದ ನ್ನುಇನಿವು, ಭಾಗವತ ದಶಾವತಾರಗಳಂತೆಯೇ ಪಸಾಕೃಷ್ಣರನ್ನು ಭಗವದವತಾರಿಯಂದೂ ಜಗದ್ಗುರುವಿನ ವಿಗ್ರಹನೆಂದೂ ವಿಸ್ತಾರವಾಗಿ ತಿಳುಕೊಂಡು, ತಮ್ಮವರಿಗೂ ಕೂಡಾ ತಿಳಿಸಿರುತ್ತಾರೆ. ಇದಕ್ಕೆ ಎಲ್ಲರೂ ಸಂತೋಷಪಡಬೇಕಾಗಿದೆ.

ಈ ಪ್ರಕಾರವಾಗಿಯೇ ಜೋಯಿಸರೇ ಮೊದಲಾದ ಪಕ್ಷಪಾತ್ರರಲ್ಲಿ ತಮ್ಮ ಮುಖ್ಯ ಗ್ರಂಥಗಳ ಮೂಲವನ್ನು ತಿಳಿದುಕೊಂಡು, ಈಗಾಯ ಮಹಮದೀ ಮತವನ್ನು ಅನುಸರಿಸಿದರು. ಅದ್ದರಿಂದ ಬಿ. ಸು. ಜುವರು ತಮ್ಮ ಮತ ಗ್ರಂಥಗಳಲ್ಲಿ ಭಗವದವತಾರಗಳೆಂದು ಹೇಳಲಾದ ಯೇಸು ಕೃಷ್ಣ, ಮೊದಲಾದವರ ಚರಿತ್ರೆಗಳನ್ನೂ, ಇವರು ಬೋಧಿಸಿರುವ ಇಹಪರ ಲೋಕಗಳ ಸ್ಥಿತಿಗತಿಗಳನ್ನೂ, ಸಾಧುಗಳನ್ನೂ ಮತ್ತು ಪಶ್ಚಿಮದೇಶದ ಮತಗ್ರಂಥಗಳಲ್ಲಿ ಹೇಳಲಾದ ಏಸುಕ್ರಿಸ್ತನೇ ಮೊದಲಾದವರ ಚರಿತ್ರೆಗಳನ್ನೂ, ಅವರು ಬೋಧಿಸಿದ ಇಹಪರ ಲೋಕಗಳ ಸ್ಥಿತಿಗತಿಗಳನ್ನೂ, ಸಾಧುಗಳನ್ನೂ, ಪರೀಕ್ಷಿಸಿ, ತಂಬಿಬಳಿಯಲ್ಲಿ ವಿಷ್ಣುಭಕ್ತರಾಗಿ ಸುಗುಣವನ್ನು ಗ್ರಹಿಸಿ, ಸದ್ಭಕ್ತಿ ಹೊಂದತಕ್ಕ ಮತವಾವುದೆಂಬುದನ್ನೂ ತಮ್ಮ ವರಿಗೂ ತಮ್ಮ ಸ್ವರೀತರಿಗೂ ಸ್ಪಷ್ಟವಾಗಿ ತಿಳಿಸಿಯಾರೆಂದು ನಿರೀಕ್ಷಿಸಬೇಕಾಗಿದೆ.

ಜಗಳೂರು ಬಸೇಶಾಟಿ.

********

### ಅಪರೂಪ ವಿಷಯ.

ಅಯ್ಯಾ,

ದಕ್ಷಿಣ ಕನ್ನಡ ಜಿಲ್ಲೆ ಕುಂದಾಪುರ ತಾಲ್ಲೂಕು ಹೊಸಂಗಡಿ ಊರಿನ ಸಮೀಪ ಇರುವ ಕಡೆ ಪೇಟೆಯಲ್ಲಿ ೧ ವೆಂಕಟ್ರಮಣನ ದೇವಸ್ಥಾನ ಇದ್ದು, ಅದಕ್ಕೆ ೩೮ ರೂಪಾಯಿ ಸರ್ಕಾರ ತಸ್ತಿಕ್ ಉಂಟು. ಅದರ ಪೂಜೆಗೆ ದೊಡ್ಡ ಭಟ್ಟನೆಂಬ ಒಬ್ಬ ಪೂಜಾರಿ ಇದ್ದಾನೆ. ಈ ಬಸದಿವಸ್ಥಾನದ ದೊಡ್ಡ ಪೂಜಾರಿಯು ಈಗ ೧ ತಿಂಗಳಾದ್ಯ ಒಬ್ಬ ಮುಸಲ್ಮಾನ ಬಾಲಿ ಫಕೀರ ನಿಂಬ ಮಂತ್ರವಾದಿಯ ಮೇಲೆ ಆವೇಶ ಮಾಡಿಸಿ, ಸದರಿ ದೇವಸ್ಥಾನದಲ್ಲಿ ಹಿಂದಿನಿಂದ ಇಟ್ಟ ದ್ರವ್ಯ ಕಿತ್ತು ಬೇಯಿಸಿಕೊಂಡ ಸಾಧಿಸುತ್ತಾನೆ. ಪ್ರತಿ ದಿವಸ ರಾತ್ರಿ ೨ ಗಂಟೆ ಸಮಯ ದರ್ಶನ ಮಾಡಿ ಕೇಳುವಾಗ್ಯೆ ಅದಕ್ಕೆ ೧ ದೊಡ್ಡ ಬಲಿ ಕೊಟ್ಟ ನಾಯಿ ಕಿಬ್ಬಲಿಕ್ಕೆ ದೇವರೂ ಭೂತಗಳೂ ಬಿಡುವುದಿಲ್ಲ ಎಂದ ಜೀವನ ಕಲ್ಲ, ಆ ಮುಸಲ್ಮಾನ ಮಂತ್ರವಾದಿಗೆ ಸದರಿ ದೇವಸ್ಥಾನದ ಒಳಸುತ್ತಿನಲ್ಲಿ ನಿಲ್ಲಲಿಕ್ಕೆ ಬಿಡಾರ ಕೊಟ್ಟು ಕಾರಣ ಅವನು ೧ ವರ್ಷ ವಾಸ್ತವ್ಯವ ಮಾಡುತ್ತಾನೆ. ಅದಕ್ಕೆ ಬಲಿ ಕೊಡಲಿಕ್ಕೆ ಪಾತ್ರ ಪೂರಾ ಒದಗದೇ ಆ ಮಂತ್ರವಾದಿ ಭೂತಗಳಿಗೆ ಮಾತ್ರ ಶಿಕ್ಷಿಸುವಲ್ಲಿ ಉಪಾಯವಾಯಿತು. ಈಗ ಪ್ರಕೃತ ಇಲ್ಲಿನ ಜನರು ಮುಸಲ್ಮಾನ ಮಂತ್ರವಾದಿ ದೇವರಿಗೂ ಈ ಊರಿನ ಭೂತಂಗಳಿಗೂ ಕಷ್ಟ ಕಟ್ಟುತ್ತಾನೆಂತಾ ಬೆದರಿರುತ್ತಾರೆ. ಸಾಯಂಕಾಲವಾದನಂತರ ತಿರುಗಾಡಲಿಕ್ಕೆ ಹೆದರುತ್ತಾರೆ. ಮೊನ್ನೆ ತಾ॥ ೨೦ನೇ ಜುಲೈ ಮಧ್ಯಾಹ್ನ ೧೦ ಘಂಟೆ ಸಮಯ ಅಲ್ಲಿನ ಸ್ಥಳದ ಶೋ. ನಂದಾನಾಧ್ಯಯ್ಯನೆಂಬವನು ಗಸ್ತಿಗೆ ಹೋದಾಗ್ಯ ಇಲ್ಲಿನ ಪೆಟ್ಟಿಕಲ್ಲು ಗುಡ್ಡೆಯಿಂದ ಬಂದೆಯು ಸಮೀಪ ಹೋಗುವಾಗ್ಯೆ ಆ ಗುಡ್ಡದ ಬುಡದಿಂದ ಒಂದು ದೊಡ್ಡ ಕಲ್ಲು ಕೇಳಿತು. ಅದು ನಿರೀಕ್ಷಿಸುವಷ್ಟರಲ್ಲಿ ಸಣ್ಣ ಏಟು ಕಾಲಿಗೂ ಕೇಳಿಸಿತು. ಮತ್ತು ಅರುಣಗೋಸ್ಕರ ದೇವಸ್ಥಾನದ ಬಟ್ಟೆ; ದೊಡ್ಡ ಪೂಜಾರಿಗೆ ಪ್ರತಿಫಲ ಕೊಡುತ್ತೇನೆ. ಈಗ ಗುಟಕಲು ಗುಡ್ಡೆಗೆ ಹೋಗುತ್ತೇನೆ ಎಂತ ಸ್ಪಷ್ಟವಾಗಿ ಕೇಳಿಸಿತು. ಅವನು ಕೇಳದ ಕೂಡಲೇ ಆ ಕಾನಿಷ್ಟೇಬಲನು ದೇವರ ದ್ವಾರದ ಕಾಯಿಲೆಯಲ್ಲಿ ಇದ್ದಾನೆ. ಕಾಯಿಲೆ ಕಷ್ಟ ಆಗಿದೆ. ಈಗಲೂ ಅವನು ಹಾಗೆಯೇ ಹೆದರಿಸಿದಂತೆ ಆಗಿದೆಯೆಂತಾ ಹೇಳುತ್ತಾನೆ. ಅದೇ ದಿವಸ ಮಧ್ಯಾಹ್ನ ೩॥ ಗಂಟೆ ಸಮಯ ಮುಕಿಟಿಮ್ಮಾ ಸಾಯಬ ಎಂಬವನೂ ಕಾಸಿಂಸಾಬಿ ಎಂಬವನೂ ಹೆದರಿಕೊಳ್ಳುವಲ್ಲಿ ಹೋದಾಗ್ಯೆ ಅದೇ ಗುಡ್ಡದಲ್ಲಿ ಸ್ವಲ್ಪದೂರ ೧ ಚೆಳ್ಳಗೆ ನಿಂತಿರು ಹೇಳಿ, ತಾನು ದೊಡ್ಡ ಪೂಜಾರಿಯ ದೇವರು, ಮುಸಲ್ಮಾನ ಮಂತ್ರವಾದಿಯು ಮತ್ತು ಒಬ್ಬ ಸಾಂಗ್ಯತರವನ ಕೂಡ ನಿಜಾಕ್ಷತ್ಪಕ್ಕೆ ಬೆದರಿ ಇಲ್ಲಿಗೆ ಬಂದಿದ್ದೇನೆ ಎಂತ ಹೇಳಿ ಅಡಗೇನೂ ಕಾಣದೆ ಹೋಯಿತು. ಅವರಿಬ್ಬರು ಹೆದರಿ ಕಾಯಿಲೆಯಲ್ಲಿದ್ದಾರೆ. ಅದೇ ರೀತಿ ಜನರು ಹೇಳಿ ಕೇಳುವುದು ಹಾಗು ಕೇಳಿ ಅಲ್ಲಿಗೆ ಹೋಗಿ ನೋಡಿದರೆ ಏನೂ ಕಾಣಲಿಲ್ಲ. ಮಾನವ ಬಂದ ಇಲ್ಲದಿರುವಾಗ್ಯೆ ಬಿಸಿಲಿನಿಂದ ನನಗೆ ಸ್ವಾನುಭವವಾಗಿದೆ; ನನಗೆ ಸುಸ್ತು ಇಲ್ಲ ಎಂತಾ ಹೇಳದಂತೆ ಒಬ್ಬ ಮಾತ್ರ ಕೇಳಿತು. ಇದು ಏನೆಂಬುದು ಗೊತ್ತಾಗಲಿಲ್ಲ.

ಜಿ. ಅನಂತಯ್ಯ.

[ಈ ಕಾಗದದಲ್ಲಿ ಒಂದು ಸಂಗತಿಯಾದರೂ ನಿಜವಾದದ್ದೆಂದು ನಾವು ಒಪ್ಪಲಾರೆವು. ಇದೆಲ್ಲಾ ಬುದ್ಧಿ ಸಂಗೀತರೂ ಸುಲಭವಾಗಿ ಹೋಕಹೋಗತಕ್ಕವರೂ ಹುಟ್ಟಿಸಿಕೊಂಡಿರುವುದೇ ಹೊರತು ಮತ್ತೇನೂ ಇಲ್ಲ. ಒಬ್ಬ ಫಕೀರನಿಗೆ ಬೆದರಿಕೊಂಡು ದೇವಸ್ಥಾನದ ಬಿಟ್ಟು ಓಡಿಹೋಗುವಂಥಾ ದೇವರ ಯೋಗ್ಯತೆಯನ್ನು ಏನೆಂದು ಹೇಳೋಣ! ಕಲ್ಲಿನನ್ನು ಕೇಳಿದ ಮಾತ್ರಕ್ಕೇ ಹೆದರಿ ಕಾಯಿಲೆ ಬೀಳುವಂಥಾ ಪೋಲೀಸಿನವನಿಂದ ಯಾವ ಕೆಲಸವಾದೀತು ಹುಡುಗೀತು! ಈ ವಿಷಯದ ಚಿತ್ತಭ್ರಮೆಗಳು ನಿವಾರಣೆಯಾಗುವುದಕ್ಕೆ ವಿದ್ಯೆಯೂ ಸರ್ಕಾರಕ್ಕೂ ಆದ ಪರಿಹಾರವಾಗಿಬೇಕಾದಲ್ಲಿ ಅವರೂ ಸವಿಸಬೇಕೇ ಪರಮಾವಶ್ಯಕವೆಂದು ತಿಳಿಯತಕ್ಕದ್ದು.—ಎಡಿ.]

********

### ಮತಾಂತರದ ಫಲಗಳು.

ಅಯ್ಯಾ,

ಈ ತಿಂಗಳಲ್ಲಿ ಈಗ್ಯೆ ೨ ವಾರದ ಸುಮಾರಿನಲ್ಲಿ ನಿಮ್ಮ ಪತ್ರಿಕೆಯಲ್ಲಿ "ಒಬ್ಬ ಹಿಂದುವು ಕ್ರಿಸ್ತಮತವನ್ನು ಸೇರಿದ ಅವನ ಗತಿ" ಎಂತವಾದ ಸುದ್ದಿ ಆತನಿಗೆ ಹಿಂದೂಗಳಿಂತಲೂ ಅವನ ಪಾಲಕ್ಕೆ ಪೋಲೀಸಿನ ಹೆಸ್ರಾಕ ತರ್ಕಿತ್ತಿದೆಂತಲೂ ಬಹುಹಿಗೆ ಕಾಣ್ಸಿಕೋ

ಹಕ್ಕಿನಲ್ಲಿ ಭ್ರಷ್ಟನಾಗಿರುತ್ತಾನೆ" ಬರೆಸಿದ್ದೀರಿ. ೧೮೫೦ನೆ ಇಸವಿಯ ಲ್ಲಿ ಬ್ರಿಟಿಷ್ ಸರ್ಕಾರದವರು ಒಂದು ಕಾನೂನು ಈ ವಿಷಯಗ ಳಿಗೆ ಮಾಡಿಲ್ಲವೇ? ಅದರಲ್ಲಿ ತನ್ನ ಜಾತಿಬಿಟ್ಟು ಅನ್ಯಜಾತಿಗೆ ಹೋ ದವನಿಗೆ ಅವನಿಗೆ ಆಸ್ತಿ ವಗೈರೆ ಕುಂದವೇನು ವಿಧಿಸಿದೆ. ಬಹುಶಾ ನೀವು ಹೇಳುವ ಭ್ರಷ್ಟನಲು ಹುಟ್ಟಿದಾಗ ಮನುಧರ್ಮಶಾಸ್ತ್ರ ಜಾರಿ ಯಾಯಿತೋ ಏನೋ ತಿಳಿಯದು ಎಂಬ ಅರ್ಥವಾಗುತ್ತೆ. ಹೀಗೆ ಭ್ರಷ್ಟನಾದಲ್ಲಿ ಮಿಷನ್ ಸಂಘದವರು ಸುಮ್ಮನಿದ್ದರೋ,? ಒಬ್ಬ ಮ ನುಷ್ಯನು ಈ ದಿನ ವಿಷ್ಣುಮತ, ನಾಳೆ ಶಿವಮತ, ನಾಡದ್ದು ಮುಸ ಲ್ಮಾನ್, ಇನ್ನೊಂದು ದಿನ ಕ್ರಿಸ್ತಮತ, ಹೀಗೆ ಅವನವನಿಗಿರುವ ಸಂ ಬಳಿಯಂತೆಯೂ ತಿಳುವಳಿಕೆಯಂತೆಯೂ ಮತಾವಲಂಬನೆ ಉಂ ಟಾಗುತ್ತದೆ. ಪ್ರಾರಂಭದಲ್ಲಿ ಯಾವ ಮತದಲ್ಲಿ ನನ್ನ ಪೂರ್ವಜರಿ ದ್ದರೆಂತ ಯಾರಾದರೂ ಹೇಳಬಲ್ಲರೋ? ನೀವು ಉದಾಹರಿಸಿರುವ ದು ಸುನೀತಿಗೆ ದೂರವಾಗಿ ಕಾಣುತ್ತಿದೆ. ಮೈಸೂರು ಸರ್ಕಾರದಲ್ಲಿ ಮೇಲೆ ಹೇಳಿದ ೧೮೫೦ನೆ ಇಸವಿ ಆಕ್ಟ್ ಜಾರಿಯಲ್ಲುಂಟೇ ಇಲ್ಲವೇ? ಹಾಗೆ ಇಲ್ಲವಾದರೆ ಇನ್ನೆಷ್ಟು ಕಾಲಕ್ಕೆ ಜಾರಿಗೆ ಬರುವದು. ಇದರ ಸಂಪೂರ್ಣ ಸಾರಾಂಶವನ್ನು ದಯಮಾಡಿ ತಿಳಿಸಿರಿ. ಮತ್ತು ಇದು ನ್ಯಾಯದಂತೆ ಜಾರಿ ಆಗಲು ಅನ್ಯಮತಾವಲಂಬಿಗೆ ಸರ್ಕಾರದಿಂದ ಕಟ್ಟಳೆಯಂತೆಯೂ ಅತನ ಬಾಧ್ಯತೆಗಳಿಗೆ ಕುಂದಕ ಉಂಟಾಗದಂ ತೆಯೂ ಕಾನೂನು ಮಾಡಿಸಲು ಮಿಷನ್ ಸಂಘದವರು ಮರೆಯಬಾರ ರೆಂದು ಕೋರುವ ನಿಮ್ಮ ವಿಧೇಯ, ಚಂದಾದಾರ.

[ಮತಾಂತರವನ್ನು ಹೊಂದಿದವನಿಗೆ ಮೈಸೂರು ಸಂಸ್ಥಾನದ ಲ್ಲಿ ತನ್ನ ಪಿತ್ರಾರ್ಜಿತ ಆಸ್ತಿಯಲ್ಲೂ, ಮಕ್ಕಳ ಮೇಲೂ ಹಕ್ಕು ಬಾಧ್ಯತೆ ಇರುವುದೋ ಇಲ್ಲವೋ ಎಂಬದಾಗಿ ನಮ್ಮನ್ನು ಕೇಳಿದ್ದ ಕ್ಕೆ ಅಂಥಾ ಯಾವ ಹಕ್ಕೂ ಇರುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿ ದೆವು. ಈಗ ಜಾರಿಯಲ್ಲಿರುವ ಕಾನೂನಿನ ಪ್ರಕಾರ ಹಿಂದುವಾದವ ನು ಆ ಮತವನ್ನು ಬಿಟ್ಟು ಕ್ರೈಸ್ತ, ಮಹಮದಿಯ ಮೊದಲಾದ ಅನ್ಯಾನ್ಯ ಮತಗಳ್ಯಾವುದಾಗಲಿ ಸೇರಿಕೊಂಡರೆ ಅವನಿಗೆ ಪಿತ್ರಾರ್ಜಿತವೂ, ಮಕ್ಕಳ ಪೋಷಣೆ ಬೆಳುವಳಿಗೆಯೂ ತಪ್ಪಿಹೋಗುವುವು. ಇಂಥಾ ನ್ಯಾಯನಿಬಂಧನೆಯ ವಿಷಯದಲ್ಲಿ ನಾವು ಯಾವ ಅಭಿಪ್ರಾಯವ ನ್ನೂ ಹೇಳಿ ಇಲ್ಲ. ಆದರೆ ನೀವು ನಮ್ಮ ಅಭಿಪ್ರಾಯವೇನೆಂದು ಪ್ರಶ್ನೆ ಮಾಡುವ ಪಕ್ಷದಲ್ಲಿ ಇದು ತುಂಬಾ ಅನ್ಯಾಯವೇ ಸರಿ ಎಂದು ಧಾರಾಳವಾಗಿ ಹೇಳುತ್ತೇವೆ. ಈ ತೀರ್ಮಾನವು ಸತ್ಪ್ರಜಾ ಪಾಲಕರ ಉದ್ದೇಶಗಳನ್ನು ಭಂಗಪಡಿಸುವುದಾಗಿದೆ. ನವನಾಗರಿಕ ರಾದಂಥಾ ಪ್ರಭುಗಳಾಳುವ ರಾಜ್ಯಗಳಲ್ಲಿ ಪ್ರಜೆಯಾದವನು ತನ್ನ ಇಷ್ಟಬಂದಪ್ರಕಾರ ಮತಾಂತರವನ್ನೈದಬಹುದಾಗಿದೆ; ಮತಾಂ ತರ ಹೊಂದಿದ ಮಾತ್ರಕ್ಕೇ ಅಂಥವನನ್ನು ಗೌರ್ನರ್ಮೆಂಟಿನವರು ಯಾವ ವಿಧವಾದ ಕಷ್ಟನಷ್ಟಗಳಿಗೂ ಗುರಿಪಡಿಸುವುದಿಲ್ಲ. ಈಗ ಮೈಸೂರು ಛೀಫ್ ಕೋರ್ಟಿನವರು ಕೊಟ್ಟಿರುವ ತೀರ್ಮಾನವ ನ್ನು ಪ್ರಸಿದ್ಧರಾದ ಮೆಯಿನ್ ಎಂಬ ದೊಡ್ಡಮನುಷ್ಯರು ಸರ್ವಥಾ ನ್ಯಾಯವಾದುದಲ್ಲವೆಂದು ನಾನಾ ಪ್ರಕಾರವಾಗಿ ಚರ್ಚಿಸಿ ಬರೆದಿರು ವರು. ಇದಲ್ಲದೆ ಈಚೆಗೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭಾಸದರಲ್ಲಿ ಮೇ ಲ್ಕಂಡ ತೀರ್ಮಾನವು ನ್ಯಾಯಬದ್ಧವಾದುದಲ್ಲವೆಂದು ಹೇಳಿ ಒಪ್ಪಿ ಕೊಂಡಿರುತ್ತಾರೆ. ಆದುದರಿಂದ ಮಿಷನ್ ಸಂಘದವರಿಂದಲಾಗಲಿ, ಸ್ವದೇಶೀಯ ಕ್ರೈಸ್ತರಿಂದಲಾಗಲಿ ಚರ್ಚೆಯಾಗುವುದಕ್ಕಿಂತ ಮೊ ದಲೇ ನಮ್ಮ ಶ್ರೀಮನ್ ಮಹಾರಾಜರವರು ಈ ತೀರ್ಮಾನದ ಅ ನ್ಯಾಯವನ್ನು ನಿವಾರಣೆಮಾಡಿಕೊಟ್ಟಾರೆಂದು ನಂಬಿ ಹಾರೈಸು ತ್ತೇವೆ. ಇದೇ ಉದ್ದೇಶದಿಂದ ಲೇಟ್ ದಿವಾನರವರು ಒಂದು ಮ ಸೂದೆ ಕಾನೂನನ್ನು ಮಾಡಿ ಜಾರಿಯಲ್ಲಿ ತರುವಂತೆ ಯೋಚಿಸು ತ್ತಿದ್ದರು. ಈಗ ಮೈಸೂರು ಗೌರ್ನಮೆಂಟಿನವರು ಈ ವಿಷಯ ದಲ್ಲಿ ಆಲೋಚನೆ ಮಾಡುವುದರಲ್ಲೇ ಇರುತ್ತಾರೆ.—ಎಡಿ.]

◆◆◆◆◆◆◆◆◆

## ಮಲೆನಾಡು ಗೇಣೀ ರೈತರ ಸ್ಥಿತಿ.

ಅಯ್ಯಾ,

ಜುಲೈ ತಾರೀಖು ೧೬ನೆಯ ತಮ್ಮ ಘನವಾದ ವೃತ್ತಾಂತ ಪ ತ್ರಿಕೆಯ ೪—೬ನೆ ಪುಟಗಳಲ್ಲಿ—"ಮಲೆನಾಡಿನ ಬಡಗೇಣೀ ರೈತ ರ ಹಿತೈಷಿ" ಎಂಬ ಬಾತ್ಮೀದಾರರು ಬರೆದಿರುವ ವಿಷಯವು ಬಹು ಶ್ಲಾಘನೀಯವಾದದ್ದು. ಈ ವಿಷಯದಲ್ಲಿ ನಾನು ಕೆಲವು ಮಾತುಗ ಳನ್ನು ಬರೆಯಲು ಕುತೂಹಲವುಳ್ಳವನಾಗಿದ್ದೇನೆ. ಈ ಬಾತ್ಮೀದಾರ ರ ಅಭಿಪ್ರಾಯವು ತಾವು ಯಾವ ವಿಷಯದಲ್ಲೂ ಮುಂದಾಳುಗಳಾ ಗಿ ಕಾರ್ಯನಿರ್ವಹಮಾಡಿ ಏಳಿಗೆಯನ್ನು ಪಡೆಯಲು ಅಸಮರ್ಥ ರಾಗಿ, ಎಲ್ಲಾ ವಿಷಯದಲ್ಲೂ ಸಮರ್ಥರೂ ಕಾರ್ಯನಿರ್ವಹಣ ದಕ್ಷರೂ ಶ್ರೀಮಂತರೂ ಆದ ಆಂಗ್ಲೇಯರನ್ನು ಕಂಡು ಕರುಬುವ ಕೆಲವು ಆಧುನಿಕಭಾರತೀಯರ ಅಭಿಪ್ರಾಯದಂತಿದೆ. ಮಲೆನಾಡು ಪ್ರಾಂತ್ಯದ ಮುಖ್ಯ ನಿವಾಸಿಗಳ ಜಮೀನೆಲ್ಲಾ, ಹೆಚ್ಚಾಗಿ ಸಾಹು ಕಾರರ ಪಾಲಾಗಿರುತ್ತೆಂಬುದೂ, ಮೂಲದ ಜಮೀನುಹಿಡುವಳಿದಾ ರರು ಈಗ ಅವರೊಳಗೆ ಷಿಕ್ಮಿ ಹಿಡುವಳಿದಾರರಾಗಿ ಗೇಣಿ ತೆರುತ್ತಾ ರೆಂಬುದೂ, ಈ ಗೇಣಿದಾರರೇ ಈ ಪ್ರಾಂತ್ಯದ ಪ್ರಜೆಗಳಲ್ಲಿ ಬಹು ಮಂದಿ ಇದ್ದಾರೆಂಬುದೂ, ನಿಜವೇ. ಇವರು ಹೀಗಾಗುವುದಕ್ಕೆ ಕಾರಣವೇನೆಂಬುದನ್ನು ಸ್ವಲ್ಪ ವಿಚಾರ ಮಾಡುವುದು ಅವಶ್ಯಕವಾ ಗಿದೆ. ಇದಕ್ಕೆ ಮುಖ್ಯವಾದ ಕಾರಣಗಳೆರಡು ಇವೆ. ೧ನೇದು, ಕೋಟಕ್ಕೆ ಮೊದಲಿನಿಂದಲೂ ಮಾಡುತ್ತ ಬಂದಂತೆ ಸಕಾಲಕ್ಕೆ ಸ ರಿಯಾದ ಬೇಸಾಯ ಮಾಡದೆ ಇದ್ದುದರಿಂದ ಫಸಲು ಕಡಮೆಯಾ ಗಿ, ಆ ಮೂಲಕ ಆದಾಯವು ಕಮ್ಮಿಯಾಗುತ್ತ ಬಂದಿತು. ೨ನೇ ದು, ಇವರು ಮೊದಲಿನಿಂದ ಮಾಡಿಕೊಂಡು ಬರುತ್ತಿದ್ದ ಗೃಹಕೃತ್ಯ ದ ವೆಚ್ಚವನ್ನು ಬಹಳವಾಗಿ ಹೆಚ್ಚಿಸಿ ಹೆಮ್ಮೆಯಿಂದ ದುಂದುಖರ್ಚು ಮಾಡುತ್ತಾ ಬಂದುದರಿಂದ ಆದಾಯಕ್ಕಿಂತ ವೆಚ್ಚವು ಹೆಚ್ಚಾಗುತ್ತಾ ಬಂದಿತು. ಈ ರೀತಿಯಿಂದ ಆದಾಯವು ಕಮ್ಮಿಯಾಗಿ ವ್ಯಯವು ಹೆಚ್ಚಾಗುತ್ತ ಬಂದಹಾಗೆಲ್ಲಾ, ಕೈಯಲ್ಲಿದ್ದ ಹಣವೂ ಖರ್ಚಾಗಿ ಸಾಹುಕಾರನಲ್ಲಿ ಸಾಲಕ್ಕೆ ಮೊದಲು ಮಾಡಿದರು. ಆಗಲೂ ತಮ್ಮ ಸ್ಥಿತಿಯ ಕಡೆಗೆ ಗಮನ ಕೊಡದೆ ತಮ್ಮ ನವೀನವಾದ ಮಾರ್ಗವ ನ್ನೇ ಬಲಪಡಿಸಿದರು. ಇದರಿಂದ ಜಮೀನು ಹೀನಸ್ಥಿತಿಗೆ ಬಂದು ಸಾಹುಕಾರನ ಋಣವೂ ಹುಟ್ಟದಂತೆಯಾಗಿ ಕೊನೆಗೆ ಸಾಹುಕಾರನು ತನ್ನ ಹಣ ಮುಳುಗುತ್ತೆಂಬ ಸಂಕಟದಿಂದ ಸೊತ್ತನ್ನೇ ವಹಿಸಿಕೊ ಳ್ಳಬೇಕಾಗಿ ಬಂದಿತು. ಆಗಲೂ ಸಾಹುಕಾರನು ದಯೆಯಿಂದ ಮಾಲೀಕರನ್ನು ಸ್ಥಳ ತಪ್ಪಿಸಿ ಓಡಿಸಬಾರದೆಂದು, ಯೋಗ್ಯವಾದ ಗೇಣಿ ನಿಗದಿಮಾಡಿ ಅವರಿಗೇ ಜಮೀನು ವಹಿಸಿದನು. ಆಗಲಾದ ರೂ ಮಾಲೀಕರಿಗೆ ತಾವು ಹೀಗಾಗುವುದಕ್ಕೆ ಕಾರಣವೇನೆಂಬುದು ಯೋಚನೆಯಲ್ಲಿ ಬರಲಿಲ್ಲ. ಮತ್ತೂ ಬೇಸಾಯವನ್ನು ಮಾಡದೆ ಸಿಕ್ಕಿಷ್ಟು ಫಸಲನ್ನು ಕಿತ್ತುಕೊಂಡು ತಿನ್ನುತ್ತಾ, ಸಾಹುಕಾರನಿಗೆ ಗೇಣಿಯೂ ಕೊಡದೆ, ಸೊತ್ತನ್ನೂ ವಹಿಸದೆ, ಕಂದಾಯವನ್ನೂ ಅ ವನೇ ದಂಡ ತೆರುವಂತೆ ಮಾಡುತ್ತಾ ಬಂದರು. ಆಗ ಸಾಹುಕಾರ ನು ಸೊತ್ತನ್ನಾದರೂ ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಸಿವಿಲ್ ಕೋರ್ಟಿಗೆ ಹೋಗಲೇಬೇಕು. ಕೋರ್ಟಿನಲ್ಲಿ ಇತ್ಯರ್ಥವಾಗ ಬೇಕಾದರೆ ಕೆಲವು ವರ್ಷಗಳೇ ಹಿಡಿಯುವವು. ಹಾಗೆ ಫೈಸಲು ಪ ಡೆದುಕೊಂಡು ಬರುವಷ್ಟರಲ್ಲೇ ರೈತರು ತೋಟವನ್ನು ನಿರ್ಮೂ ಲವಮಾಡಿ ತಮ್ಮ ಅಲ್ಪಸ್ವಲ್ಪ ಆಸ್ತಿಯನ್ನು ಮರೆಮಾಚಿರುವರು. ಅ ಲ್ಲದೆ ಮಲೆನಾಡು ತಾಲ್ಲೂಕುಗಳಲ್ಲಿ ಮೂಲಗೇಣಿಯೆಂಬ ಗ್ರಹವು ಪ್ರತಿಯೊಬ್ಬ ರೈತನ ಜಾತಕದಲ್ಲಿ ಪ್ರಬಲವಾಗಿದೆ. ಒಬ್ಬ ರೈತನು ಒಂದು ಜಮೀನನ್ನು ೩ ವರ್ಷಗಳ ಕಾಲ ಗೇಣಿಸಾಗು ಮಾಡುವ ಷ್ಟರಲ್ಲೇ, ಮೂಲಗೇಣೀ ರೈತನೂ, ಸೊತ್ತನ್ನು ಪರಾಧೀನ ಮಾ ಡುವಷ್ಟು ಹಕ್ಕುಳ್ಳವನೂ, ಆಗಿಬಿಡುತ್ತಾನೆ. ಪುನಃ ಸೊತ್ತನ್ನು ಅವನಿಂದ ಹಿಂದಕ್ಕೆ ಪಡೆಯಬೇಕಾದರೆ, ಮೇಲ್ಕಂಡ ಕ್ರಮವು ಸಿ ದ್ಧವಾಗಿರುವುದು. ಹೀಗಿರುವಲ್ಲಿ ಧಣಿಯು ಏನೇ ದಿಕ್ಕೇ ಗೇಣಿ ಹೆ ಚ್ಚು ಮಾಡುವುದಕ್ಕೆ ಹ್ಯಾಗೆತಾನೇ ಆದೀತು. ಹೀನಸ್ಥಿತಿಗೆ ಬರುವ ವರು ರೈತರೋ, ಸಾಹುಕಾರರೋ, ಈಗ ವಾಚಕರೇ ಊಹಿಸಲಿ.

ಕೊಳೆಯ ರೋಗವು ಫಸಲನ್ನು ನಾಶಮಾಡುವುದೇನೋ ನಿಜ. ಆದರೆ ಅದು ಈಗ ಹೊಸದಾಗಿ ಬಂದಿರುವ ರೋಗವಲ್ಲ. ಮೊದಲು ಅದಕ್ಕೆ ಪ್ರತಿಬಂಧಕವನ್ನು ಮಾಡುತ್ತಿದ್ದುದರಲ್ಲಿ ಪಡುತ್ತಿದ್ದ ಶ್ರ ಮವನ್ನೂ, ನಿರಾಲಸ್ಯವನ್ನೂ ಈಗ ಬಡಲ ಮಟ್ಟಿಗೆ ಕಡಮೆಮಾಡಿ ಕೊಂಡಿರುವದು ರೈತರ ತಪ್ಪಾಗಿದೆ. ಈಗಿರುವ ಸೃಷ್ಟಿಯ ಮನು ಷ್ಯರು ಸಾಯುವುದರಿಂದ ಪ್ರಪಂಚವು ಬರಿದಾಗುತ್ತೆಂದಾಗಲೀ, ದೇ ವರಿಗೆ ನಷ್ಟ ಸಂಭವಿಸುವುದೆಂದಾಗಲೀ ತಿಳಿಯುವುದು ತಪ್ಪು. ಅದ ರಂತೆಯೇ ರೈತನು ಊರು ಬಿಟ್ಟು ಹೋಗುವುದರಿಂದ ಸಾಹುಕಾರ ನ ಜಮೀನು ಹಾಳುಬಿದ್ದು ರಾಜನಾಮೆಯಾಗುತ್ತೆಂಬುದೂ, ಸರ ಕಾರಕ್ಕೆ ನಷ್ಟ ಸಂಭವಿಸುವುದೆಂಬುದೂ ತಪ್ಪು. ಮಲೆನಾಡಿನಲ್ಲಿ ಜಮೀನುದಾರರಿಗೆ ಗೇಣೀ ವಸೂಲಿಯ ವಿಷಯದಲ್ಲಿ, ರೈತರಿಂದ ಉಂಟಾಗುತ್ತಿರುವ ಕಷ್ಟವನ್ನು ಇಷ್ಟಿಷ್ಟೆಂದು ಹೇಳಲು ಸಾಧ್ಯವ ಲ್ಲ. ಗೇಣಿಯನ್ನು ಸಿವಿಲ್ ಕೋರ್ಟ್ ಮುಖಾಂತರ ವಸೂಲಿ ಮಾ ಡಿಕೊಳ್ಳುವುದು ಎಂದಿಗೂ ಸುಲಭವೂ ಲಾಭವೂ ಆಗಿರುವುದಿಲ್ಲ. ಈ ಭಾಗವಲ್ಲಿ ನಮ್ಮ ಮೈಸೂರು ದೇಶದಲ್ಲಿ ಲ್ಯಾಂಡು ರೆವಿನ್ಯೂ ಕೋಡ್ ಜಾರಿಯಲ್ಲಿದ್ದರೂ, ಅದರ ೯೩—೯೮—೧೩೭ನೆಯ ಸೆಕ್ಷ ನ್‌ಗಳನ್ನು ದಯಾಳುಗಳಾದ ಸರ್ಕಾರದವರು ಕೂಡಲೇ ಆಚರಣೆ ಗೆ ತಂದು, ಕಂದಾಯವನ್ನು ತಾಲ್ಲೂಕು ಉದ್ಯೋಗಸ್ಥರ ಮು ಖಾಂತರ ಜಮೀನು ಫಸಲಿನಿಂದಲೇ ವಸೂಲಾಗುವಂತೆ ಮಾಡದೆ; ಕಂದಾಯವನ್ನು ಹಿಡುವಳಿದಾರನ ಜರಬಿನಿಂದಿಗೆ ಹರಾಜಿನಿಂದ ವ ಸೂಲಿಮಾಡಿಕೊಳ್ಳುವುದು, ಹಿಡುವಳಿದಾರನು ಗೇಣಿಗೆ ರೈತರ ಮೇ ಲೆ ದಾವಾಕ್ಕೆ ಸಿವಿಲ್ ಕೋರ್ಟಿಗೆ ಹೋಗುವುದು, ಹೀಗಾಗುತ್ತಾ ಬಂದರೆ ಮಲೆನಾಡಿನ ಸಾಹುಕಾರರೂ ಮತ್ತು ಹಿಡುವಳಿದಾರರೂ ಮೋಸದಿಂದ ಕೆಟ್ಟು ತಿರುಗುವ ರೈತರ ಜತೆಯಲ್ಲಿ ಇನ್ನು ಕೆಲವು ಕಾಲದಲ್ಲಿ ಭಿಕ್ಷಾಟನೆಗೆ ಪ್ರಾರಂಭ ಮಾಡಬೇಕಾಗುತ್ತೆಂದರೆ ಅತ್ಯು ಕ್ತಿಯಾಗಲಾರದು.

ಇದರಿಂದ ರೈತರೆಲ್ಲಾ ಮೋಸಗಾರರೆಂದೂ, ಸಾಹುಕಾರರೆಲ್ಲಾ ನ್ಯಾಯಪರರೆಂದೂ ತಿಳಿಯಬಾರದು. ಮೊದಲಿನಂತೆ ಕಷ್ಟಪಟ್ಟು ಕೆಲಸ ಮಾಡತಕ್ಕವರೂ, ಅನ್ಯಾಯಕ್ಕೆ ಹೋಗದವರೂ, ಕಪಟ ವನ್ನು ಅರಿಯದವರೂ, ಆಗಿರುವ ರೈತರೂ ಇಂಥವರನ್ನು ತಮ್ಮ ಕುಟಿಲನೀತಿಯಿಂದಲೂ, ಚಾಣಕ್ಯ ತಂತ್ರದಿಂದಲೂ ಮೋಸಗೊ ಳಿಸಿ, ಅವರ ಆಸ್ತಿಗಳನ್ನು ಎತ್ತಿಹಾಕಿ ಅವರನ್ನು ನಿರ್ಗತಿಕರನ್ನಾಗಿ ಮಾಡುವ ಸಾಹುಕಾರರೂ ಹೇರಳವಾಗಿರಬಹುದು. ಅಂತಹ ಸಾ ಹುಕಾರರು ಹಾಗೆ ಮಾಡುವುದು ಅವರ ಹೆಸರಿಗೆ ಅನ್ವರ್ಥವಾದುದೆಂ ದು ಭಾವಿಸಬೇಕಾಗಿದೆ. ಇವರಿಗೆಲ್ಲಾ ಸನ್ಮಾರ್ಗದಲ್ಲಿ ಪ್ರವರ್ತಿಸು ವಂತೆ ಮಾಡುವದು ಸರ್ವಶಕ್ತನಾದ ಭಗವಂತನಿಗಲ್ಲದೆ ಅನ್ಯರಿಂದ ಸಾಧ್ಯವಲ್ಲವು. ಮಲೆನಾಡಿನ ರೈತರು ವ್ಯವಸಾಯ ವಿಷಯದಲ್ಲಿ ಹೆಚ್ಚು ತಿಳುವಳಿಕೆಯುಳ್ಳವರಲ್ಲವೆಂಬುದು ನಿಜವೇ. ಈ ಭಾಗದ ಲ್ಲಿ ಪ್ರತಿಯೊಬ್ಬ ರೈತನೂ ತನ್ನ ಮಕ್ಕಳಿಗೆ ತಪ್ಪದೆ ವಿದ್ಯಾಭಿವೃದ್ಧಿ ಯನ್ನು ಹೆಚ್ಚಿಸಿ, ತನ್ಮೂಲಕ ವ್ಯವಸಾಯವನ್ನು ಉಚ್ಚಸ್ಥಿತಿಗೆ ತರ ಬೇಕಾದುದು ಅತ್ಯವಶ್ಯಕವಾಗಿದೆ. ಮಲೆನಾಡಿನ ಜಮೀನುದಾರರ ಮತ್ತು ರೈತರ ವಿಷಯವಾಗಿ ತಿಳಿದವರು ಪುಸ್ತಕವನ್ನು ಬರೆಯು ವದಾದರೆ ಕೆಲವು ಸಂಚಿಕೆಗಳೇ ಆಗುವವು. ಹ್ಯಾಗೂ ಇವರಿಬ್ಬರಿ ಗೂ ಪರಸ್ಪರ ತೊಂದರೆಯುಂಟಾಗದೆ ಅಭ್ಯುದಯವಾಗುವುದಕ್ಕೆ ಜಮೀನುದಾರರೂ, ರೈತರೂ, ಒಬ್ಬರಿಗೊಬ್ಬರು ಮೋಸಮಾಡುವು ದನ್ನು ಬಿಟ್ಟು, ಜಮೀನನ್ನು ಒಳ್ಳೆಯ ಸ್ಥಿತಿಗೆ ತಂದು, ಏಕಮತ್ಯ ದಿಂದ ನ್ಯಾಯವಾಗಿ ನಡೆಯುತ್ತಾ, ದೇಶಾಭಿವೃದ್ಧಿಯನ್ನು ಮಾಡುವ ವರಾಗಲಿ ಎಂದು ದೇವರನ್ನು ಪ್ರಾರ್ಥಿಸುವೆನು.

ಮುಳಬಾಗಿಲು. ವೈ. ಸುಬ್ಬರಾವ್.

## ಮೈಸೂರು ಸರ್ಕಾರಿ ಹುಕುಮುಗಳು.

### ಬಾಲ್ಯವಿವಾಹ ವಿಚಾರವು.

ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ನಡೆದ ಕೆಲವು ಬಾಲ್ಯವಿವಾಹಗಳ ನ್ನು ಕುರಿತು ಅಲ್ಲಿನ ಪೊಲೀಸ್ ಅಧಿಕಾರಿಗಳು ಕೂಡ್ಲೆ ತನಿಖೆ ಮುಂತಾದ್ದು ಮಾಡದೆ ಸುಸ್ತಿ ಮಾಡಿರುತ್ತಾರೆಂದು ಗೌವರ್ನಮೆಂ ಟಿನವರು ವ್ಯಸನಪಡುವರು. ಅಷ್ಟು ಸಾವಕಾಶ ಮಾಡುವುದರಿಂದ ಆ ಕಾನೂನಿನ ಉದ್ದೇಶವೇ ಕೆಟ್ಟುಹೋದೀತು. ಆದಕಾರಣ ಈ ವಿ ಷಯದಲ್ಲಿ ಕೂಡ್ಲೆ ಪೊಲೀಸಿನವರು ತನಿಖೆ ಮುಂತಾದ್ದು ಮಾಡುವಂ ತೆಯೂ, ಸಾವಕಾಶ ಮಾಡಿದ ಸಂದರ್ಭದಲ್ಲಿ ಅಂಥಾ ಅಧಿಕಾರಿಗಳ ವಿಷಯ ರಿಪೋರ್ಟ್ ಮಾಡುವಂತೆಯೂ ಇನ್ಸ್‌ಪೆಕ್ಟರ್ ಜನರಲ್ ರ ವರು ನೋಡಿಕೊಳ್ಳತಕ್ಕದ್ದು.

◆◆◆◆◆◆◆◆◆

### ಬಂದೂಕಿನ ಲೈಸೆನ್ಸು.

ಬಂದೂಕಿನ ಲೈಸೆನ್ಸಿಗಾಗಿ ಪ್ರತಿ ವರ್ಷವೂ ಅರ್ಜಿ ಕೊಡಬೇ ಕೆಂದು ಸರ್ಕಾರದವರು ವಿಧಿಸಿರುತ್ತಾರೆ. ವರುಷ ಮುಗಿಯುವದ ರೊಳಗೇ ಅರ್ಜಿ ಕೊಟ್ಟರೂ ಲೈಸೆನ್ಸು ಬರುವುದಕ್ಕೆ ಸಾವಕಾಶ ವಾಗುತ್ತೆ. ಅದುವರೆಗೆ ಷಿಕಾರಿ ಮುಂತಾದ್ದು ಮಾಡುವುದಕ್ಕೆ ಅವ ಕಾಶವಿಲ್ಲ. ಇಂಥಾ ಅನಾನುಕೂಲವನ್ನು ಸರ್ಕಾರದವರು ನೋ ಡಿ, ಕಾನೂನನ್ನು ಬದಲಾವಣೆ ಮಾಡಿರುತ್ತಾರೆ. ಅರ್ಜಿ ಕೊಟ್ಟ ತಾರೀಖಿನಿಂದ ಲೈಸೆನ್ಸು ಖಾವತಿ ಆಗುವ ತಾರೀಖಿನ ತನಕ ಸರಿ ಯುವಷ್ಟು ದಿನಗಳವರೆಗೆ ಹಿಂದಿನ ವರುಷ ಕೊಡಲ್ಪಟ್ಟಿದ್ದ ಲೈಸೆ ನ್ಸೇ ಜಾರಿಯಲ್ಲಿರುವಂತೆ ಅಧಿಕಾರಿಗಳು ಎಣಿಸತಕ್ಕದು ಎಂಬುದೇ ಈಗ ಸರ್ಕಾರದವರು ಮಾಡಿರುವ ಬದಲಾವಣೆ.

◆◆◆◆◆◆◆◆◆

### ಕಾನೂನಿಗೆ ವಿರೋಧವಾಗಿ ಷಿಕಾರಿಮಾಡುವುದು.

ಆಯುಧಗಳನ್ನು ಇಟ್ಟುಕೊಂಡು ಷಿಕಾರಿಮಾಡುವ ವಿಷಯ ವಾಗಿ ಸರ್ಕಾರದವರು ಒಂದು ಕಾನೂನು ಮಾಡಿರುತ್ತಾರಷ್ಟೆ. ಲೈ ಸೆನ್ಸು ಎಷ್ಟು ಕೊಟ್ಟದೆ; ಕಾನೂನಿಗೆ ವಿರೋಧವಾಗಿ ಷಿಕಾರಿ ಮಾಡಿದ್ದಕ್ಕೆ ಎಷ್ಟು ಮೊಕದ್ದಮೆಗಳಾದವು, ಎಷ್ಟು ಜನರಿಗೆ ಶಿಕ್ಷೆ ಯಾಯಿತು ಎಂಬೀ ವಿಷಯಗಳನ್ನು ತಿಳಿಸಬೇಕೆಂದು ಮಿ॥ ಥಾಮ ಸ್ ಡಂಟ್ ಎಂಬೊಬ್ಬ ಸಾಹೇಬರು ಹಾಸನ, ತುಂಕೂರು, ಶಿವ ಮೊಗ್ಗ ಡಿಸ್ಟ್ರಿಕ್ಟುಗಳ ಡೆಪ್ಟಿ ಕಮಿಷನರನ್ನು ಕೇಳಿದರು. ಡೆಪ್ಟಿ ಕಮಿಷನರು ಈ ವಿಷಯನ್ನು ಅವರಿಗೆ ತಿಳಿಸಬಹುದೇ ಎಂಬದಾಗಿ ಗೌವರ್ನಮೆಂಟಿನವರನ್ನು ಕೇಳಿದರು. ಗೌವರ್ನಮೆಂಟಿನವರು ಈ ವಿಷಯಗಳನ್ನೆಲ್ಲಾ ಕುರಿತು ಈ ಸಾಲ್ ಲಾಗಾಯತು ಪ್ರತಿ ವರುಷವೂ ಒಂದು ರಿಪೋರ್ಟ್ ಗೌವರ್ನಮೆಂಟಿಗೆ ಕಳುಹಿಸಬೇ ಕೆಂತಲೂ, ಗೌವರ್ನಮೆಂಟಿನವರೇ ಆ ಸಂಗತಿಯನ್ನು ಪ್ರಕಟಿಸು ತ್ತೇವೆಂತಲೂ ಡೆಪ್ಟಿ ಕಮಿಷನರಿಗೆ ಹುಕುಂ ಕಳುಹಿಸಿದ್ದಾರೆ.

◆◆◆◆◆◆◆◆◆

### ಹೆಡ್ ಗುಮಾಸ್ತರಿಗೆ ಹೆಚ್ಚು ಅಧಿಕಾರ.

ತಾಲ್ಲೂಕು ಶಿರಸ್ತೇದಾರ್ರನ್ನು ಜಮಾಬಂದಿ ಯಾ ಇತರ ಕೆಲ ಸಗಳ ಮೇಲೆ ಕಳುಹಿಸುವಾಗ್ಯೆ ಅಮಲ್ದಾರ್ರು ಅವರಿಗೆ ಟ್ರೆಷರಿಯ ಮತ್ತು ರೆಜಿಸ್ಟ್ರೇಷನ್ನಿನ ಭಾರವನ್ನು ತಪ್ಪಿಸಬೇಕೆಂದು ಸರ್ಕಾ ರದವರು ಕಳೆದ ೧೮೯೬ನೆ ಫೆಬ್ರವರಿಯಲ್ಲೇ ಹುಕುಂ ಕೊಟ್ಟಿದ್ದಾ ರೆ. ಇದಲ್ಲದೆ ಈಚೆಗೆ ಅಂದರೆ, ೧೮೯೯ನೆ ಏಪ್ರಿಲ್‌ನಲ್ಲಿ ಅಮಲ್ದಾ ರ್ರು ಮತ್ತು ಶಿರಸ್ತೆದಾರ್ರು ತಾಲ್ಲೂಕ್ ಹೆಡ್ ಕ್ವಾರ್ಟರನ್ನು ಬಿಟ್ಟು ಸರ್ಕಾರಿ ಕೆಲಸದ ಮೇಲೆ ಗ್ರಾಮಾಂತರಗಳಿಗೆ ಹೋಗುವ ಸಂದರ್ಭ ದಲ್ಲಿ ತಾಲ್ಲೂಕ್ ಟ್ರೆಷರಿಯನ್ನು ಗುಮಾಸ್ತೆಯ ಜವಾಬ್ದಾರಿಮೇಲೆ ವಹಿಸತಕ್ಕದ್ದೆಂತಾ ಹುಕುಂ ಕೊಡಲಾಗಿದೆ. ಇದರ ಮೇಲೆ ರೆಜಿ ಸ್ಟ್ರೇಷನ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರು ಮೇಲ್ಕಂಡ ಸಂ ದರ್ಭಗಳಲ್ಲಿ ರೆಜಿಸ್ಟ್ರೇಷನ್ ಕೆಲಸದ ಭಾರವನ್ನೂ ತಾಲೂಕ್ ಗು ಮಾಸ್ತೇರಿಗೆ ವಹಿಸತಕ್ಕದ್ದೆಂತಾ ಹುಕುಂ ಆಗಬೇಕೆಂದು ಸರ್ಕಾ ರದವರನ್ನು ಕೇಳಿಕೊಂಡರು. ಅದಕ್ಕೆ ಸರ್ಕಾರದವರು ಕಳೆದ ಜೂನ್ ೩ರಲ್ಲಿ ಕೊಟ್ಟಿರುವ ಹುಕುಂ ಏನಂದರೆ:—ಇತರ ಕೆಲಸಗ ಳ ಮೇಲೆ ಅಮಲ್ದಾರ್ರು ಶಿರಸ್ತೇದಾರರು, ತಾಲ್ಲೂಕ್ ಹೆಡ್ ಕ್ವಾರ್ಟ ರ್ ಬಿಟ್ಟುಹೋಗಬೇಕಾದ ಸಂದರ್ಭಗಳಲ್ಲಿ ತಾಲ್ಲೂಕ್ ಹೆಡ್ ಗು ಮಾಸ್ತರು ತಮ್ಮ ಕೆಲಸಗಳೊಂದಿಗೆ ಟ್ರೆಷರಿ ಕೆಲಸವನ್ನೂ ರೆಜಿ ಸ್ಟ್ರೇಷನ್ ಕೆಲಸವನ್ನೂ ನೋಡುವಂತೆ ಜವಾಬ್ದಾರಿ ವಹಿಸಲ್ಪಟ್ಟಿ ದೆ. ಈ ಹುಕುಮು ಸಂಸ್ಥಾನಮುಳೆ ಅನ್ವಯಿಸತಕ್ಕದ್ದು.

◆◆◆◆◆◆◆◆◆

### ಬೌರಿಂಗ್‌ಪೇಟೆಯ ಪೊಲೀಸ್ ಸಿಬ್ಬಂದಿ.

ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ರವರು ಬೌರಿಂಗ್ ಪೇಟೆ ಟವರ್ ಚಿನ್ನದ ಗಣಿಗಳಿಗೆ ಸಮೀಪವಾಗಿಯೂ, ಬಹುಜಾಬಿನ ಜನ ರು ಬೌರಿಂಗ್‌ಪೇಟೆಗೆ ಬಂದು ಇರುವುದಕ್ಕೆ ಅವಕಾಶವಿರುವುದಾಗಿ ಯೂ, ಬೌರಿಂಗ್‌ಪೇಟೆಯ ಟವರ್ ಪೊಲೀಸ್ ಶಿಬ್ಬಂದಿಯನ್ನು ಇ ನ್ನೂ ಕ್ರಮಕ್ಕೆ ತಂದಿಡುವುದು ಅವಶ್ಯವೆಂತಲೂ ಗೌವರ್ನಮೆಂಟಿ ಗೆ ಬರೆದರು. ಗೌವರ್ನಮೆಂಟಿನವರು ಮಾಡಿರುವ ಏರ್ಪಾಡೇನೆಂ ದರೆ:—ಬೌರಿಂಗ್ ಪೇಟೆಯಲ್ಲಿ ಪೊಲೀಸ್ ಸಿಬ್ಬಂದಿಯು ಮುಂದೆ ಹೇಳುವಂತೆ ಇರತಕ್ಕದ್ದು. ಒಬ್ಬ ಛೀಫ್ ಕಾನ್ಸ್‌ಟೇಬಲ್ ಸಂಬಳ ೫೦+೨೦, ಒಬ್ಬ ಹೆಡ್ ಕಾನ್ಸ್‌ಟೇಬಲ್ ೨೦+೧೦, ಒಬ್ಬ ಹೆಡ್ ಕಾನ್ಸ್‌ಟೇಬಲ್ ೧೬+೧೦, ೪ ಮಂದಿ ಕಾನ್ಸ್‌ಟೇಬಲ್‌ರು ತಲಾ ೮+೬ ೧೫ ಮಂದಿ ಕಾನ್ಸ್‌ಟೇಬಲ್‌ರು ತಲಾ ೭+೪. ಈ ಪ್ರಕಾರ ೧೯೦೩ ನೆ ಜುಲೈ ಗುರ್ರಿಯಿಂದ ಒಂದು ವರುಷದವರೆಗೆ ಇಟ್ಟು ನೋಡ ತಕ್ಕದ್ದು. ಬೌರಿಂಗ್ ಪೇಟೆ ಅಮಲ್ದಾರ್ರಿಗೆ ಈ ಟವರ್ ಪೊಲೀಸ್ ಮೇಲಣ ಅಧಿಕಾರವನ್ನೂ ಆ ತಾಲ್ಲೂಕಿನ ಪೊಲೀಸ್ ಜವಾಬ್ದಾರಿ ಯನ್ನೂ ತಪ್ಪಿಸಿದೆ. ಇನ್ಸ್‌ಪೆಕ್ಟರೇ ಇವೆರಡರ ದಿವಾಬ್ದಾರಿಯ ನ್ನೂ ವಹಿಸಿರತಕ್ಕದ್ದು. ಇವರು ಕೋಲಾರ್ ಚಿನ್ನದ ಗಣಿಗಳ

...ಪೋಲೀಸ್ ಸೂಪರಿಂಟೆಂಡೆಂಟರ ಕೈಕೆಳಗೆ ಕೆಲಸ ಮಾಡಬೇಕು. ಡೆಪ್ಯುಟಿ ಕಮೀಷನರು ಇದರ ಮೇಲ್ವಿಚಾರಣೆ ನೋಡಿಕೊಳ್ಳತಕ್ಕದ್ದು. ಈ ಹೊಸ ಏರ್ಪಾಡು ಎಷ್ಟು ಸಮರ್ಪಕವಾಗಿ ನಡೆವುದೋ ಒಂದು ವರುಷ ನೋಡಿ ಗವರ್ನಮೆಂಟಿಗೆ ರಿಪೋರ್ಟು ಮಾಡಬೇಕೆಂದು ಹುಕುಂ ಮಾಡಿದ್ದಾರೆ.

◆◆◆◆◆◆◆◆◆

## ಕಾಫಿ ಕಳುವೂ ಶಿಕ್ಷೆಯೂ.

ಕಾಫಿ ತೋಟಗಳಲ್ಲಿ ಕಾಫಿ ಕಳುವಾಗುವುದನ್ನು ನಿಲ್ಲಿಸುವುದಕ್ಕೋಸ್ಕರ ಸರ್ಕಾರದವರು ಒಂದು ಕಾನೂನು ಜಾರಿಯಲ್ಲಿ ತಂದಿರುತ್ತಾರಷ್ಟೆ. ೧೯೦೩ನೆ ಇಸವಿ ಮಾರ್ಚಿ ೩೧ಕ್ಕೆ ಆಖೈರಾದ ಒಂದು ವರುಷದಲ್ಲಿ ಪೋಲೀಸ್ ಉಸ್ತುವಾರಿ ತೋಟಗಳಲ್ಲಿ ಜಾಸ್ತಿ ಕಳ್ಳತನದ ಕಾಫಿ ಕಳವು ಹೆಚ್ಚಾಗಿ ಆಗಲಿಲ್ಲವೆಂದು ತಿಳಿವುದು. ೨೫ ಮೊಕದ್ದಮೆಗಳು ಆದವು. ಈ ಪೈಕಿ ೧೧ರಲ್ಲಿ ೧೩ ಮಂದಿಗೆ ಒಟ್ಟಾಗಿ ೬೬ ರೂ. ಜುಲ್ಮಾನೆ ವಸೂಲಾಯಿತು. ಹಾಸನದ ಡಿಸ್ಟ್ರಿಕ್ಟಿನಲ್ಲಿ ತರಲ್ಪಟ್ಟ ಎರಡು ಮೊಕದ್ದಮೆಗಳೂ ಇನ್ನೂ ತೀರ್ಮಾನವಾಗಲಿಲ್ಲ. ಪೆನಲ್ ಕೋಡಿನ ರೀತ್ಯಾ ಶಿಕ್ಷೆಯಾಗುವ ೧೩ ಕಾಫಿ ಕಳುವಿನ ಮೊಕದ್ದಮೆಗಳು ತರಲ್ಪಟ್ಟವು. ಕಡೂರು ಡಿಸ್ಟ್ರಿಕ್ಟಿನಲ್ಲಿ ಆದ ಆರು ಮೊಕದ್ದಮೆಗಳಲ್ಲಿ ಒಂದಾದರೂ ರುಜುವಾತಾಗಲಿಲ್ಲ. ಹಾಸನ ಡಿಸ್ಟ್ರಿಕ್ಟಿನಲ್ಲಿ ಆದ ಹತ್ತು ಮೊಕದ್ದಮೆಗಳ ಪೈಕಿ ಎರಡು ಮಾತ್ರ ರುಜುವಾತಾಗಿ ಆಕ್ಷೇಪದಾರರಿಗೆ ಶಿಕ್ಷೆಯಾಯಿತು. ಇದು ತೃಪ್ತಿಕರವಾಗಿದೆ ಎಂದು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಹೇಳುತ್ತಾರೆ. ಕಡೂರು ಡಿಸ್ಟ್ರಿಕ್ಟಿನಲ್ಲಿ ಕಾಫಿ ಬಿತ್ತುವ ಕಾಲದಲ್ಲಿ ಕಳುವಾಗದಂತೆ ನೋಡಿಕೊಳ್ಳುವುದಕ್ಕೋಸ್ಕರ ಸ್ಪೆಷಲ್ ಪೋಲೀಸ್ ಸಿಬ್ಬಂದಿ ಏರ್ಪಾಡು ಮಾಡಿತ್ತು; ಬೇದಿರಸಿನಲ್ಲಿ ಪೋಲೀಸಿನವರನ್ನು ತೋಟಗಳ ಮೇಲೆ ಕಳುಹಿಸಿ ಕಾವಲು ಇರಿಸಿತ್ತು; ಅವರೆಲ್ಲಾ ಗಸ್ತುಮಾಡುತ್ತಿದ್ದರು; ಕಾಫಿ ತಾಲ್ಲೂಕುಗಳ ಇನ್ಸ್‌ಪೆಕ್ಟರುಗಳು—ಅದರಲ್ಲೂ ಮೂಡಿಗೆರೆ, ಚಿಕ್ಕಮಗಳೂರು ಇನ್ಸ್‌ಪೆಕ್ಟರುಗಳು ಬಹಳ ಮುತುವರ್ಜಿಯಿಂದ ಕೆಲಸ ಮಾಡಿರುತ್ತಾರೆ; ಹಲವು ಮೊಕದ್ದಮೆಗಳಲ್ಲಿ ಮ್ಯಾಜಿಸ್ಟ್ರೇಟರು ಒಬ್ಬ ಇನ್ಸ್‌ಪೆಕ್ಟರಿಗೂ ನಾಲ್ಕು ಕಾನ್‌ಸ್ಟೆಬಲ್‌ರಿಗೂ ೧೩ ರೂ. ಬಹುಮಾನ ಕೊಡಿಸಿರುತ್ತಾರೆ ಎಂಬದಾಗಿ ಕಡೂರು ಡೆಪ್ಯುಟಿ ಕಮಿಷನರು ಬರೆದಿದ್ದಾರೆ. ಕೊಪ್ಪದ ಪೋರ್ಕ್ತರ್ ಕೊಡಗಿ ಎಸ್ಟೇಟಿನ ಡಿ. ಬ್ರೈಸ್ ಕಂಪನಿಯವರು ತಾವೇ ಸಂಬಳಕೊಟ್ಟು ಇಬ್ಬರು ಕಾನ್‌ಸ್ಟೆಬಲ್‌ರನ್ನು ನೇಮಿಸಿಕೊಂಡಿದ್ದರು.

## ಹೆಣ್ಣುಮಕ್ಕಳನ್ನು ಹಡೆದ ಬಡ ತಂದೆತಾಯಿಗಳು ಏನುಮಾಡಬೇಕು?

ಈಗ ನಮ್ಮ ದೇಶದಲ್ಲಿ ಹೆಣ್ಣು ಹುಡುಗಿಯರ ಸಂಖ್ಯೆಯು ದಿನೇ ದಿನೇ ಹೆಚ್ಚುತಲಿರುವ ಹಾಗೆಲ್ಲಾ ಮದುವೆಯನ್ನು ಮಾಡಿಕೊಳ್ಳಬೇಕೆಂಬ ಅಪೇಕ್ಷೆಯುಳ್ಳ ಯುವಕರ ಸಂಖ್ಯೆಯು ಕಡಮೆಯಾಗುತ್ತ ಬರುತ್ತಿದೆ. ಗಂಡು ಹುಡುಗರೇನು ಯಾವಾಗಲಾದರೂ ಮದುವೆ ಮಾಡಿಕೊಳ್ಳಬಹುದು. ಹೆಣ್ಣು ಹುಡುಗಿಯರಿಗೆ ಹಾಗಿಲ್ಲ; ಅವರಿಗೆ ನಿರ್ಬಂಧ ೧೨ ವರುಷಗಳೊಳಗೇ ಮದುವೆಯಾಗಬೇಕು. ೧೩—೧೪ ವರುಷಗಳ ವರೆಗೆ ಬಿಟ್ಟುಕೊಂಡಿರುವುದು ಬಹಳ ಕಷ್ಟ.

ಈಗಿನ ಕಾಲಸ್ಥಿತಿ ಹೇಗಾಗಿದೆಯೆಂದರೆ —ಸರ್ಕಾರೀ ಕೆಲಸವನ್ನು ಸಂಪಾದಿಸಬೇಕೆಂಬ ದೊಡ್ಡ ಕುತೂಹಲದಿಂದ ಯುವಕರಲ್ಲಿ ಕೆಲವರು ಕಾಲೇಜುಗಳಲ್ಲಿ ಎಂಏ ಮೊದಲಾದವುಗಳನ್ನು ಪ್ಯಾಸ್ ಮಾಡುವುದಕ್ಕೋಸ್ಕರ ಓದಿ ಓದಿ ಕಷ್ಟಪಡುತ್ತಿರುವರು. ಮದುವೆಯೆಂಬ ಮಾತೇ ಇವರಿಗಾಗದು. ಒಂದು ವೇಳೆ ಯಾರಾದರೂ ಮದುವೆಯಾಗುವಿರಾ? ಎಂದು ಇವರನ್ನು ಕೇಳಿದರೆ, "ನನಗೆ ಈಗ ಹೆಂಡತಿ ಅವಶ್ಯಕತೆ ಅಷ್ಟೊಂದು ಇರುವ ಹಾಗೆ ಕಾಣಿಸುವುದಿಲ್ಲ. ಯಾವುದೊಂದೂ ಪ್ರಯೋಜನವಿಲ್ಲದೆ ಈಗ ನಾನೇಕೆ ಆ ತೊಂದರೆಯನ್ನು ತೆಗೆದುಕೊಳ್ಳಬೇಕು? ಹಾಗೆ ನಮಗೇನಾದರೂ ವಿಶೇಷ ಪ್ರಯೋಜನವುಂಟಾಗುವ ಸಂದರ್ಭದಲ್ಲಿ ಅವಶ್ಯಕತೆ ಬಿದ್ದರೆ ಆಲೋಚಿಸಿ ನೋಡೋಣ. ಸದ್ಯ ನಮಗೆ ಅವಸರವೇನೂ ಇಲ್ಲ" ಎಂದು ಮುಂತಾಗಿ ಉತ್ತರ ಕೊಡುವರು. ಇಂಗ್ಲಿಷ್ ವಿದ್ಯೆಯ ಪ್ರಭಾವವು ಅತ್ಯಧಿಕವಾಗಿದೆ. ಆ ಭಾಷೆಯ ನಾಲ್ಕೈದು ಅಕ್ಷರಗಳನ್ನು ಕಲಿತವರನ್ನು ಕೇಳಿದರೆ, "ನನ್ನನ್ನೇ ನಾನೇ ಪೋಷಣೆ ಮಾಡಿಕೊಳ್ಳಲಾರೆ; ಇನ್ನು ಹೆಂಡತಿಯನ್ನು ಕಟ್ಟಿಕೊಂಡು ನಾನೇನು ಮಾಡಲಿ? ಮದುವೆಯ ಮಾತು ನನ್ನೊಡನೆ ಎತ್ತಬೇಡಿರಿ" ಎನ್ನುವರು. ಇಂಗ್ಲಿಷ್ ಬಾರದಿದ್ದರೂ ಅದರ ವಾಸನೆ ಮಾತ್ರದರೂ ಆಘ್ರಾಣಿಸಿರುವ ಯುವಕರು ಕೆಲವರುಂಟು. ಅವರನ್ನು ಕೇಳಿದರೆ, "ನಿಮ್ಮ ಮಗಳನ್ನು ಮದುವೆ ಮಾಡಿಕೊಂಡರೆ ನಮಗೇನು ಕೊಡುತ್ತೀರಿ?" ಎಂದು ಕೇಳುವರು. ಪ್ರಪಂಚವನ್ನು ತಿಳಿದವರೂ ದುರಾಸೆಯುಳ್ಳವರೂ ಆದ ಕೆಲವರು ಯುವಕರು ಮಾತ್ರ, "ಹುಡುಗಿಗೆ ಒಡವೆ ಎಷ್ಟರ ಮಟ್ಟಿಗೆ ಬರುತ್ತಿದೆ? ಇಂಗ್ಲೀಷೇನಾದರೂ ಹೇಳಿಸಿದ್ದೀರೋ?" ಎಂದು ಮೊದಲಾಗಿ ಪ್ರಶ್ನೆ ಮಾಡುವರು. ಆದರೆ ಅಂಥವರು ಬಹಳ ಅಪರೂಪ. ಸಾವಿರಕ್ಕೊಬ್ಬರು ದೊರೆಯುವರು.

ಅಯ್ಯೋ! ಪೂರ್ವಕಾಲದ ಹೆಣ್ಣುಮಕ್ಕಳ ಪಾಡು. ಆಗಿನವರು ಈಗಿನಂತೆ ಇಂಗ್ಲೀಷು ಬಿನ್ನಣೆಯನ್ನು ಕಾಣರು. ಯುವಕರು ಮದುವೆಯೆಂದರೆ ಹಿಗ್ಗಿಹೋಗುತಲಿದ್ದರು. ಅವರ ತಾಯಿತಂದೆಗಳು ತಮ್ಮ ಗಂಡುಮಕ್ಕಳಿಗೆ ಮದುವೆ ಮಾಡಲು ದೊಡ್ಡ ಪ್ರಯತ್ನಪಟ್ಟೇ ಹಾದಿ ಕನ್ಯಾರ್ಥಿಗಳಾಗಿ ಹೊರಡಬೇಕಾಗಿತ್ತು. ಕನ್ಯಾರ್ಥಿಗಳಾಗಿ ಬರುವವರು ಅಕ್ಕಿ, ಮೂಟೆಗಳು, ಸೀರೆ, ಕುಪ್ಪಸ, [illegible] ವಸ್ತ್ರಾಭರಣಗಳನ್ನೂ, ಸೇರುಗಟ್ಟಲೆ ಚಿನ್ನವನ್ನೂ ಬೇಕಾದಷ್ಟು ಬಟ್ಟೆಬರೆಗಳನ್ನೂ ಕನ್ಯೆಗೆ ಹಾಕಲು ಸಿದ್ಧರಾಗಿದ್ದರು. ಆಗ ಹೆಣ್ಣು ಮಕ್ಕಳನ್ನು ಹಡೆದವನು "ಪುಣ್ಯವಂತ, ಮಹಾರಾಯ." ಆಗ ಹೆಣ್ಣು ಮಕ್ಕಳು ಸುಖಜೀವಿನಿಗಳು. ಎಂಟು ವರುಷ ವಯಸ್ಸಿನೊಳಗಾಗಿ ಅವರಿಗೆ ವಿವಾಹ.

ಈಗ ಕಾಲವು ಸಂಪೂರ್ಣವಾಗಿ ಬದಲಾಯಿಸಿಹೋಯಿತು. ಕನ್ಯೆಯರ ಕಡೆಗೆ ಕಣ್ಣೆತ್ತಿ ನೋಡುವವರೇ ಇಲ್ಲ. ವರಾನ್ವೇಷಣ ಮಾಡುವವರೇ ಹೆಚ್ಚಾದರು. ವರರಿಂದ ಒಡವೆ ಬೇಡ, ವಸ್ತ್ರ ಬೇಡ ಮೂರಕ್ಷರ ಕಲಿತು ಚಿಕ್ಕವನಾಗಿದ್ದರೆ ಸಾಕು ಎಂದು ಕನ್ಯೆಯರ ತಾಯಿತಂದೆಗಳೇ ಹೇಡಬೇಕಾಗಿದೆ. ಕಡೆಗೆ ಅಂಥ ವರು ಸಿಕ್ಕಿದರೆ ಸಾಲಂಕೃತ ಕನ್ಯಾದಾನ ಮಾಡಿದರೂ ಮಾಡಿಯಾರು.

ಇಂಗ್ಲೀಷು ವಿದ್ಯೆಯ ಪ್ರಭಾವವು ಹೆಣ್ಣು ಮಕ್ಕಳ ವರೆವಿಗೂ ವ್ಯಾಪಿಸಿರುವಂತೆ ಕಾಣುತ್ತಿದೆ. ಅವರು 'ಹ—"ಅಯ್ಯೋ! ಆ ಹುಡುಗ ಯಾವ ಪ್ಯಾಸೂ ಮಾಡಿಯೇ ಇಲ್ಲ. ಅಬ್ಬಬ್ಬ! ಇವನು ಬಹಳ ದೊಡ್ಡವನು! ಎರಡನೆ ಮದುವೆ ನನಗೆ ಬೇಡ. ಅವನಿಗೆ ಆಗಲೇ ಕೂದಲು ನರೆತುಹೋಗಿದೆ. ನನಗೇನೂ ಒಡವೆ ವಸ್ತ್ರ ಬೇಡ. ಹುಡುಗ ಚಿಕ್ಕವನಾಗಿ ಇಂಗ್ಲೀಷು ಪ್ಯಾಸ್ ಮಾಡಿದ್ದರೆ ಸಾಕು. ಇಷ್ಟಕ್ಕೂ ಈಗೇಕೆ ಇಷ್ಟು ಅವಸರ. ಸರಿಯಾದ ವರ ಸಿಕ್ಕುವ ವರೆಗೂ ಮದುವೆ ಇಲ್ಲದಿದ್ದರೆ ಆಯಿತು." ಎಂಬದಾಗಿ ಹೇಳುವರು. [ಇದು ನಿಜವೇ!—ಎಡಿ.]

ಧನಿಕ ತಂದೆತಾಯಿಗಳು ತಮ್ಮ ಇಷ್ಟದಂತೆ ನಡೆಯಿಸಲು ಹೆಚ್ಚು ಕಷ್ಟಪಡಬೇಕಾದುದಿಲ್ಲ. ಅವರ ಅಳಿಯಂದಿರಾಗಲು ಎಷ್ಟೋ ಮಂದಿ ಅಪೇಕ್ಷಿಸುವರು. ಅವಿವಾಹಿತನಾದ ಪ್ರತಿಯೊಬ್ಬ ನಾಗರಿಕ ಯುವಕನೂ ತಾನು ಎಂದಾದರೂ ಒಮ್ಮೆ ಐಶ್ವರ್ಯವಂತನೊಬ್ಬನ ಮಗಳನ್ನು ಮದುವೆಯಾಗಿ ಸುಸ್ಥಿತಿಗೆ ಬರುವನೆಂಬ ಭರವಸದಿಂದ ಭವಿಷ್ಯತ್ತಿನ ಮನೋರಾಜ್ಯದಲ್ಲಿ ಮುಳುಗಿ ತೇಲಾಡುತ್ತಿರುವನು.

ಬಡ ತಂದೆ ತಾಯಿಗಳ ಮಕ್ಕಳಿಗೂ ಸಹ ಒಳ್ಳೆಯ ಗಂಡಂದಿರನ್ನು ಮದುವೆಯಾಗುವ ಅಪೇಕ್ಷೆ ಇಲ್ಲವೆ ಇಲ್ಲ; ಬಡವರಾದ ಮಾತ್ರಕ್ಕೆ ಒಳ್ಳೆಯ ಗಂಡಂದಿರನ್ನು ಬಯಸುವುದು ತಪ್ಪೇನೂ ಅಲ್ಲ; ಆದರೆ ಅವರ ಕೋರಿಕೆಯು ನೆರವೇರುವುದು ಮಾತ್ರ ಭಗವಂತನ ಅಧೀನ. ಬಡವನು ತನ್ನ ಅಳಿಯನಿಗೆ ಚನ್ನೆಯಾದ ಕನ್ಯೆಯೊಬ್ಬಳನ್ನು ಹೊರತು ಮತ್ತೇನನ್ನೂ ಕೊಡಲಾರನು. ಆದರೆ ಚಿಕ್ಕ ಅಳಿಯನು, ಯಾರು ತನಗೆ ವರದಕ್ಷಿಣೆಯನ್ನು ಹೆಚ್ಚಾಗಿ ಕೊಡುವರೋ, ಯಾರು ತನಗೆ ಸರಿಯಾದ ಉಡುಗೆ ತೊಡಿಗೆಗಳನ್ನು ಉಡುಗೆರೆ ಕೊಡುವರೋ, ಯಾರು ತನಗೆ ಮುಂದಿನ ಕಾಲಕ್ಕೆ ಸಹಾಯಮಾಡಬಲ್ಲವರಾಗಿದ್ದಾರೆಯೋ ಅವರ ಮಗಳು ಶರೀರದಲ್ಲಿಯೂ, ಮನಸ್ಸಿನಲ್ಲಿಯೂ, ವ್ಯವಹಾರದಲ್ಲಿಯೂ ತನ್ನಿಂದ ಎಷ್ಟೇ ವ್ಯತ್ಯಸ್ತವಾಗಿರಲಿ ಅವಳನ್ನು ಮದುವೆಯಾಗುವುದಕ್ಕೆ ಹಾತೊರೆಯುವನೇ ಹೊರತಾಗಿ ಬಡವನ ಮಗಳು ಶಾರೀರಕ, ಮಾನಸಿಕ, ವ್ಯಾವಹಾರಿಕಗಳೆಂಬ ಪಾಂಡಿತ್ಯಾನುಕೂಲಗಳನ್ನು ಎಷ್ಟೇ ಬಳಕೊಂಡಿದ್ದರೂ ಅವಳನ್ನು ಮದುವೆಯಾಗಲು ಒಪ್ಪನು; ಮುಂದೆ ತನ್ನ ಜೀವಮಾನದಲ್ಲಿ ತಂದೆಯ ಐಶ್ವರ್ಯದಿಂದ ಗರ್ವಿತೆಯಾದ ಹೆಂಡತಿಯಿಂದಲೂ ಅವಳ ಕಡೆಯಿಂದಲೂ, "ಓಹೋ! ನಿಮಗೇನಿತ್ತು? ಎಲ್ಲವೂ ನಮ್ಮವರು ಮಾಡಿದುದರಿಂದ ನೀವು ಒಂದಿಷ್ಟು ಅನ್ನವನ್ನು ಕಾಣುವಿರಿ. ಇಲ್ಲದಿದ್ದರೆ ನಿಮಗೇನಿತ್ತು?" ಇವೇ ಮೊದಲಾದ ಮಾತುಗಳನ್ನು ಕೇಳುವುದೇ ಉತ್ತಮವೆಂದು ಭಾವಿಸುವನೇ ಹೊರತು, ಪಾಂಡಿತ್ಯಾನುಕೂಲಗಳನ್ನು ನೋಡಿ ಅವನು ಮದುವೆಯಾಗಲಾರನು; ಈ ಅನುಕೂಲಗಳಿಂದಲೇ ಮುಂದೆ ತನಗೆ ಸುಖಪ್ರಾಪ್ತಿಯುಂಟಾಗದೆಂಬ ದೂರಾಲೋಚನೆಯನ್ನು ಅವನು ಮಾಡಲಾರನು. ತಾನು ಮುಂದೆ ಯಾವಜ್ಜೀವವೂ ಅಸುಖಿಯಾಗಬೇಕಾದರೂ ಸರಿ, ಕನ್ಯೆಯೊಬ್ಬಳನ್ನೇ ಕೊಡುವ ಬಡವನ ಮಗಳನ್ನು ಕಣ್ಣೆತ್ತಿಯೂ ನೋಡಲಾರನು. ಬಡ ಹುಡುಗರಂತೂ ಹೋಗಲಿ, ಅವರಿಗೆ ಆಸೆಯುಂಟೆಂದು ಹೇಳಬಹುದು. ಭಾಗ್ಯವಂತರು ತಮ್ಮ ಗಂಡು ಮಕ್ಕಳಿಗೆ ಬಡವರ ಹೆಣ್ಣನ್ನು ತಂದುಕೊಳ್ಳಾರೇ? ಛೀ! ಛೀ!! ಈ ಮಾತು ಇಲ್ಲಿಗೆ ಕಟ್ಟಿಟ್ಟುಬಿಡಬೇಕು. ಅದನ್ನು ಬಾಯಿಂದ ಉಚ್ಚರಿಸಿದುದೇ ಎಷ್ಟೋ ದೊಡ್ಡ ಅಗೌರವ!

ಪಟ್ಟಣಗಳಲ್ಲಿ ವಾಸಮಾಡುವ ಹಲವರು ತಮ್ಮ ಹೆಣ್ಣು ಮಕ್ಕಳಿಗೆ ತಕ್ಕಮಟ್ಟಿಗೆ ವಿದ್ಯಾಭ್ಯಾಸ ಮಾಡಿಸಿರುತ್ತಾರೆ. ಹಳ್ಳಿಗಳಿರುವ ಗ್ರಾಮಗಳಲ್ಲಿರುವವರೂ ಸಹ ಅವರಿಗೆ ವಿದ್ಯಾಭ್ಯಾಸ ಮಾಡಿಸದೆ ಬಿಟ್ಟಿಲ್ಲ. ಅವಕಾಶವಿಲ್ಲದೆ ಅನೇಕರು ಹೆಣ್ಣು ಮಕ್ಕಳಿಗೆ ವಿದ್ಯೆ ಕಲಿಸಿಲ್ಲ. ಮತ್ತೆ ಕೆಲವು ವಿಪರೀತ ಬುದ್ಧಿವಂತರು—"ನಮ್ಮ ಹೆಣ್ಣು ಮಕ್ಕಳು ವಿದ್ಯೆ ಕಲಿತು ನಮಗಾಗಲೀ, ತಮ್ಮ ಗಂಡಂದಿರಿಗಾಗಲೀ, ಹಣ ಸಂಪಾದಿಸಿ ಹಾಕಬೇಕಾಗಿಲ್ಲ" ಎಂದು ಹೇಳಿಕೊಳ್ಳುತ್ತ ಸ್ತ್ರೀ ವಿದ್ಯಾಭ್ಯಾಸವನ್ನು ನಿಂದಿಸತೊಡಗುವರು. ಈಗ ಬಡ ತಾಯಿತಂದೆಗಳು ಏನುಮಾಡಬೇಕು? ದಿನೇ ದಿನೇ ಬೆಳೆದು ಹೋಗುತ್ತಲಿರುವ ಮಗಳನ್ನು ನೋಡಿ ಕೊರಗಬೇಕೇ? ಪೂರ್ವಕಾಲದಿಂದ ಈಗಿನ ಕಾಲವು ಎಷ್ಟರಮಟ್ಟಿಗೆ ವ್ಯತ್ಯಸ್ತವಾಗಿದೆಯೆಂಬುದನ್ನು ನೋಡಿ ವ್ಯಸನಪಡಬೇಕೇ? ಹೆಣ್ಣು ಪ್ರಪಂಚದಲ್ಲಿ ಗಂಡಿನಷ್ಟು ಉಪಯೋಗಕರವಾಗಿದ್ದರೂ ಹೆಣ್ಣು ಮಕ್ಕಳನ್ನು ತಾವು ಪಡೆದುದಕ್ಕೆ ತಮ್ಮ ಜನ್ಮವನ್ನೂ, ಅದೃಷ್ಟವನ್ನೂ ನಿಂದಿಸಿಕೊಳ್ಳಬೇಕೇ? ಇಲ್ಲವೇ, "ದೇವರೇ ಗತಿ. ಅವಳ ಅದೃಷ್ಟದಲ್ಲಿದ್ದ ಹಾಗಾಗುವುದು. ನಾವು ಚಿಕ್ಕವನಿಗೆ ಕೊಟ್ಟರೆ ತಾನೇ ಅವಳ ಅದೃಷ್ಟವು ಬದಲಾಗುವುದೇ?" ಎಂದು ಅದೃಷ್ಟದಲ್ಲಿ ನಂಬಿಕೆಯಿಟ್ಟು ಪೂರ್ವಕಾಲದ ಕೆಲವರು ಕನ್ನೆ ಮುಕ್ತಿಕೊಂಡು ಮಾಡುವಂತೆ, ಆತುರದಿಂದ ಮುದುಕನಿಗೋ, ರೋಗಿಷ್ಠನಿಗೋ, ಕಿವುಡನಿಗೋ, ಕುರುಡನಿಗೋ ಬಹು ತ್ವರೆಯಿಂದ ಕನ್ಯೆಯನ್ನು ದಾನಮಾಡಿ, ಅಲ್ಪ ಕಾಲದಲ್ಲಿ ಅದರ ಪರಿಣಾಮವನ್ನು ನೋಡುವುದರ ಭಾಗ್ಯ ಸಂಪಾದಿಸಿಕೊಳ್ಳಬೇಕೇ? ಇಲ್ಲವಾದರೆ, ಹೆಣ್ಣುಗಳ್ಳರ ಜೊತೆಸೇರಿ, "ಯಾವಾಗ ಕಾಲ ಬರುವುದೋ ಬರಲಿ" ಎಂದು ಅವರಿಗೆ ಮದುವೆಮಾಡದೆ ಬಿಟ್ಟು ಬಿಟ್ಟು ಬೇಗನೆ ಸಮಾಜಚ್ಯುತಿ ಶಿಕ್ಷೆಯನ್ನು ನಿರೀಕ್ಷಿಸಬೇಕೋ? ಅಥವಾ, ಒಂದಕಷ್ಟು ಬರಲೆಂದು ಬಾಲ್ಯವಿವಾಹದ ಅನೇಕ ತೊಂದರೆಗಳನ್ನು ತಿಳಿದುಕೊಂಡು, ಅದನ್ನು ನಿಲ್ಲಿಸುವುದಕ್ಕೆ ತಕ್ಕಷ್ಟು ಪ್ರಯತ್ನಮಾಡಿ, ಹೆಣ್ಣು ಮಕ್ಕಳಿಗೆ ಇನ್ನೂ ಹೆಚ್ಚು ವಿದ್ಯೆ ಕಲಿಸುವುದಕ್ಕೆ ಧೈರ್ಯಮಾಡಬೇಕೋ?

ಆಹಾ! ಈ ಧೈರ್ಯವು ನಮ್ಮ ಜನಗಳಲ್ಲಿದ್ದರೆ ನಮ್ಮ ದೇಶದಲ್ಲಿ ಇಷ್ಟೊಂದುಮಂದಿ ಬಾಲವಿಧವೆಗಳು ಏಕೆ ಇರುತ್ತಿದ್ದರು? ನಾವೇಕೆ ಈ ದುರ್ದಸೆಯಲ್ಲಿರುತ್ತಿದ್ದೆವು? ನಮ್ಮ ದೇಶವು ಏಕೆ ಇಷ್ಟೊಂದು ಹೀನಸ್ಥಿತಿಯಲ್ಲಿ ಇರುತ್ತಿತ್ತು?

ಗೋ. ನಾ. ಸವಣೂರ್,
ಯಸ್. ವೆಂ. ಸು. ರಾವ್.

## ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿ ಪಟ್ಟಣದ ಹಾರ್ನ್‌ಬೀ ರೋಡಿನಲ್ಲಿ ಕಳೆದ ವಾರ ಬೆಂಕಿ ಬಿದ್ದು ಎರಡು ಬಂಗಲೆಗಳೂ ಒಂದು ದೊಡ್ಡ ಅಂಗಡಿಯೂ ಉರಿದುಹೋದುವು. ಮಾಲೀಕರಿಗೆ ಸುಮಾರು ೧೮,೦೦೦ ರೂ. ನಷ್ಟವಾಯಿತು.

◆◆◆◆◆

ನಮ್ಮ ವೈಸರಾಯಿ ಲಾರ್ಡ್ ಕರ್ಜನ್ ಪ್ರಭುಗಳು ಇನ್ನೆರಡು ವರುಷಗಳ ತನಕ ಹಿಂದುಸ್ಥಾನದ ವೈಸರಾಯಿ ಪದವಿಯಲ್ಲೇ ಇರಬಹುದೆಂದು ಕಾಣುವುದು. ಜನರು ಈ ತಿಂಗಳಲ್ಲಿ ನಡೆವ ಮಂತ್ರಾಲೋಚನ ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ಮೆಂಬರುಗಳಿಗೆ ತಿಳಿಸಬಹುದೆಂದು ಹೇಳುತ್ತಾರೆ.

◆◆◆◆◆

ಮದರಾಸ್ ಪಟ್ಟಣಕ್ಕೆ ಸೇರಿದ ಉಮ್ಡಾಬಾಗ್ ಎಂಬಲ್ಲಿ ಮಹಮದೀಯ ವಿದ್ಯಾರ್ಥಿಗಳ ಉಪಯೋಗಕ್ಕೋಸ್ಕರ ಒಂದು ಬಂಗಲೆಯನ್ನೂ ಪ್ರಾರ್ಥನಾ ಮಂದಿರವನ್ನೂ ಕಟ್ಟಿಸಬೇಕೆಂದು ಗವರ್ನಮೆಂಟಿನವರು ೧,೫೦,೦೦೦ ರೂ. ಸ್ಯಾಂಕ್ಷನ್ ಮಾಡಿದ್ದಾರೆ. ಈಗ ಕಾಮಗಾರಿ ನಡೆಯುತ್ತಾ ಇದೆ.

◆◆◆◆

ಬೊಂಬಾಯಿ ಅಧಿರಾಜ್ಯದ ಗವರ್ನರ್ ಲಾರ್ಡ್ ನಾರ್ತ್‌ಕೋಟ್‌ಯವರು ಕಳೆದವಾರ ಪೂನಾ ಬಂದಿದ್ದಾಗ್ಯೆ ಚರ್ಚಿಗೆ ಹೋಗಿ ಅಲ್ಲಿರುವ ಸ್ವಾಮಿಗಳನ್ನು ಕಂಡು ಅವರ ಯೋಗಕ್ಷೇಮ ವಿಚಾರಿಸಿದರು. ಛತ್ರಪತಿ ಶಿವಾಜಿ ಮಹಾರಾಜನಿಗೆ ಕುಲ ಗುರುವಾದ ಶ್ರೀ ರಾಮದಾಸರು ಈ ಮಠವನ್ನು ಸ್ಥಾಪಿಸಿರುತ್ತಾರೆ.

◆◆◆◆◆

ಸಲ್ಫ್ಯೂರಿಕ್ ಆಸಿಡ್ಡೆಂಬ ದ್ರಾವಕವನ್ನೂ ಟಾರ್ ಎಣ್ಣೆಯನ್ನೂ ಮಿಶ್ರಮಾಡಿ ಹೆಗ್ಗಣ ಇಲಿಗಳ ಬಿಲಗಳಿಗೆ ಹಾಕಿದರೆ ಅವು ನಾಶಹೊಂದುವವೆಂತಲೂ, ಪ್ಲೇಗ ಉಪದ್ರದ ಸೋಂಕು ನಿವಾರಣೆಯಾಗುವುದಕ್ಕೆ ಇದು ತುಂಬಾ ಸಹಕಾರಿಯಾಗಿರುವುದೆಂತಲೂ ಡಾಕ್ಟರುಗಳು ಹೇಳುತ್ತಾರೆ. ಒಂದು ಪಾಲು ಸಲ್ಫ್ಯೂರಿಕ್ ಆಸಿಡ್ಡನ್ನು ಒಂಭತ್ತು ಪಾಲು ಟಾರ್ ಎಣ್ಣೆಗೆ ಮಿಶ್ರಮಾಡಬೇಕಂತೆ.

◆◆◆◆◆

ಭಾಗಲ್‌ಪುರದಲ್ಲಿ ಇಬ್ಬರು ಹಿಂದುಗಳು ಒಂದು ಹೆಣ್ಣು ಮಗುವನ್ನು ರಾಜಾ ಪದ್ಮಸಿಂಗ್ ಎಂಬವನಿಗೆ ಕೊಟ್ಟು ವಿಮುಕ್ತಮಾಡುವುದಾಗಿ ಅವನಿಂದ ೭,೦೦೦ ರೂ. ತೆಗೆದುಕೊಂಡರೆಂತಲೂ, ಆ ರಾಜಾಯ ರಾಜರು ಕೇಳು ಜಾತಿಯವರೆಂದು ಹೇಳಿ ಮದುವೆಮಾಡಿಕೊಡದೆ ತಪ್ಪಿದರೆಂತಲೂ ಒಂದು ಮೊಕದ್ದಮೆ ಆಗಿದೆ. ಈ ರಾಷ್ಟ್ರದಲ್ಲಿ ಜಾತಿಮತ್ಸರಗಳೆಲ್ಲೆಂದಿಗೆ ನಿವಾರಣೆಯಾಗುವುದೋ?

◆◆◆◆◆

ಕಲ್ಕತ್ತೆಯಲ್ಲಿ ದೇವೇಂದ್ರ ಸುಂದ್ರ ಬಾನರ್ಜಿ ಎಂಬೊಬ್ಬ ಕಂಟ್ರಾಕ್ಟುದಾರನು ಸ್ವಸ್ವಕ್ಕೆ ಕೆಲವು ಸಾಮಾನು ಸರಬರಾಜು ಮಾಡುವ ಕಂಟ್ರಾಕ್ಟು ತನಗೆ ಕೊಡಿಸಬೇಕೆಂದು ಹೇಳಿ ನ್ಯಾಯಾಧಿಪತಿಗೆ ಕಾಗದ ಬರೆದುಕೊಂಡು, ಅದರಲ್ಲಿ ಒಂದು ನೂರರ ನೋಟನ್ನಿಟ್ಟು ಒಪ್ಪಿಸಿದನು. ನ್ಯಾಯಾಧಿಪತಿಯು ಅವನಮೇಲೆ ಲಂಚ ಕೊಟ್ಟನೆಂಬದಾಗಿ ಫಿರ್ಯಾದು ತಂದನು. ಮ್ಯಾಜಿಸ್ಟ್ರೇಟರು ಆ ಕಂಟ್ರಾಕ್ಟುದಾರನಿಗೆ ೭೦೦ ರೂ. ಜುಲ್ಮಾನೆ ಇಲ್ಲದೇ, ಮೂರು ತಿಂಗಳ ಸಜಾವೆಂಬ ಶಿಕ್ಷೆಯನ್ನು ವಿಧಿಸಿರುತ್ತಾರೆ.

◆◆◆◆

ಬಂಗಾಳಾ ಲೆಫ್ಟಿನೆಂಟ್ ಗವರ್ನರ್ ಮಿ॥ ಬೋರ್ಡಲೆಯವರು ಹತ್ವಾ ಎಂಬ ಸಣ್ಣ ಸಂಸ್ಥಾನಕ್ಕೆ ಕಳೆದ ವಾರ ದಯಮಾಡಿ, ಅಲ್ಲಿ ಹೊಸದಾಗಿ ಕಟ್ಟಿದ್ದ ವಿಕ್ಟೋರಿಯಾ ಮೆಮೋರಿಯಲ್ ಆಸ್ಪತ್ರೆಯನ್ನು ಪ್ರತಿಷ್ಠೆಮಾಡಿದರು. ಹತ್ವಾ ಮಹಾರಾಣಿಯವರು ಒಂದೂಕಾಲು ಲಕ್ಷ ರೂಪಾಯಿ ಈ ಆಸ್ಪತ್ರೆಗೆ ವಿನಿಯೋಗಿಸಿ ಕಟ್ಟಿಸಿದ್ದಾರೆ. ಅದರಲ್ಲಿ ೩೦ ಮಂದಿ ರೋಗಿಗಳನ್ನಿಟ್ಟು ಇಲಾಜು ಮಾಡಲು ಕೊಠಡಿಗಳನ್ನು ಮಾಡಿಸಿದ್ದಾರೆ. ಗವರ್ನರವರು ಮಹಾರಾಣಿಯವರ ಉದಾರ ಬುದ್ಧಿಯನ್ನು ಕೊಂಡಾಡಿದರು.

◆◆◆◆

ಹಿಂದುಸ್ಥಾನದಲ್ಲಿ ಕೊಟ್ಟಿಗೆ [illegible] ಯಾತ್ರಾರ್ಥಿಗಳಾಗಿ ಅನೇಕ ಊರುಗಳಿಗೆ [illegible] ಗಾಡಿಗಳಲ್ಲಿ ಇದ್ದ ಮೇಲೆ [illegible] ಬನಿಯವರು [illegible] ಮಾಡಿಕೊಡುವಂತೆ ಅಪ್ಪಣೆ [illegible] ಒಂದು ವಿಜ್ಞಾಪನಾ ಪತ್ರಿಕೆಯನ್ನು [illegible] ಗಾಡಿಗಳಲ್ಲಿ [illegible] ವಿಂಗಡವಾದ [illegible]. ಈ ವಿಜ್ಞಾಪನೆಯ ಫಲಿತಾಂಶ [illegible].

ಸೋಮಾಲಿಲ್ಯಾಂಡಿನ ಯುದ್ಧಕ್ಕೆ ಹಿಂದುಸ್ಥಾನದಿಂದ ಹೋದ ಕೇ ಹೋಗಿರುವ ಸೈನಿಕರಿಗೆ ಕಾಯಿಲೆ ಜಾಸ್ತಿಯಾಗಿರುವದರಿಂದ ಅವರನ್ನು ವಾಪಸು ಕಳುಹಿಸಿ, ಹೊಸ ಸೈನ್ಯವನ್ನು ಕಳುಹಿಸಿಕೊಳ್ಳ ಬೇಕೆಂದು ಏರ್ಪಾಡಾಗುತ್ತಿದೆ. ಜನರಲ್ ಎಗರ್ಟನ್, ಜನರಲ್ ಮ್ಯಾನಿಂಗ್ ಮೊದಲಾದ ಸೇನಾಪತಿಗಳೆಲ್ಲಾ ಒಂದು ಕಡೆ ಸೇರಿ ಯುದ್ಧಮಾಡುವ ವಿಷಯದಲ್ಲಿ ಆಲೋಚನೆಮಾಡುತ್ತಿರುವರು. ಬಳ್ಳಾರಿಯಿಂದ ಮೀರ್ ಜಗರದ ತನಕ ಮೊದಲು ರೈಲುಹಾಕಿಕೊಂಡು, ಹಿಂಚಿನ ಯುದ್ಧ ಕಾರ್ಯಗಳನ್ನು ಪ್ರಾರಂಭಿಸುವವರಾಗಿದ್ದಾರೆ.

****

ಜಯಪುರ ಸಂಸ್ಥಾನದ ಮಹಾರಾಜರಾದ ಸರ್ ಪ್ರತಾಪ ಸಿಂಹರವರು ಆರೋಗ್ಯ ಭಂಗವಾಗಿದ್ದಾಗ್ಯೂ ಅವರಿಗೇನೋ ಕಾಯಿಲೆ ಜಾಸ್ತಿಯಾಗಿದೆಯೆಂತೆ ಸುಳ್ಳು ಸುದ್ದಿ ಹುಟ್ಟಿ ಹಬ್ಬಿತು. ಅವರ ಹಿತಚಿಂತಕರನೇಕರು ಆ ಸುಳ್ಳು ಸುದ್ದಿಯನ್ನು ನಿಜವೆಂದು ತಿಳಿದು ಬಹಳ ವ್ಯಸನಪಟ್ಟು ಮಹಾರಾಜರವರಿಗೆ ಕಾಗದಗಳನ್ನು ಬರೆದರು. ಅಂಥಾ ಕಾಗದಗಳು ನೂರಾರು ಅವರಿಗೆ ತಲುಪಿದ್ದನ್ನು ಮಹಾರಾಜರವರು ನೋಡಿ ಆಶ್ಚರ್ಯಪಟ್ಟು, ತಾವು ಆರೋಗ್ಯವಾಗಿರುತ್ತೇವೆಂಬದಾಗಿ ವರ್ತಮಾನ ಪತ್ರಿಕೆಗಳ ಮೂಲಕ ಪ್ರಕಟಿಸಿರುತ್ತಾರೆ.

****

ತಿರುಚನಾಪಳ್ಳಿಯಿಂದ ೧೦ ಮೈಲಿ ದೂರದಲ್ಲಿ ಕೋಲತ್ತೂರೆಂಬೊಂದು ರೈಲ್ವೆ ಸ್ಟೇಷನ್ ಇರುವದು. ಆ ಊರಿನಲ್ಲಿ ಒಬ್ಬ ಮಹಮ್ಮದೀಯನು ಇದ್ದು ಕಾಲವಾದನು. ಅವನ ಶವವನ್ನು ಅಲ್ಲೇ ಗೋರಿಮಾಡಿದ್ದಾರೆ. ಆ ಗೋರಿಗೆ ಹೋಗಿ ಬರುವವರಿಗೆ ನಾನಾ ರೋಗಗಳು ನಿವಾರಣೆಯಾಗುವವೆಂತಲೂ, ಇಷ್ಟಾರ್ಥಗಳೆಲ್ಲಾ ಸಿದ್ಧಿಸುವವೆಂತಲೂ ಹ್ಯಾಗೋ ವರ್ತಮಾನ ಹುಟ್ಟಿತು. ಅದರಮೇಲೆ ಈಚೆಗೆ ಅನೇಕ ಸಹಸ್ರ ಜನರು ಭಕ್ತಿಪೂರ್ವಕನಿಸಿಕೊಂಡು ಅಲ್ಲಿಗೆ ಹೋಗಿ ಬರುತ್ತಿದ್ದಾರೆ. ಮಹಮ್ಮದೀಯರೇ ಅಲ್ಲ; ಹಿಂದುಗಳೂ ತಂಡತಂಡವಾಗಿ ಹೋಗುತ್ತಿರುವರು. ಈ ಯಾತ್ರಾರ್ಥಿಗಳ ದೆಸೆಯಿಂದ ಹಗಲು ರಾತ್ರಿ ನಾನಾತರದ ಗಾಡಿಗಳು ಅಲ್ಲಿಗೆ ಹೋಗಿ ಬರುತ್ತಿವೆ. ರೈಲ್ ಕಂಪನಿಯವರೂ ನಾಲ್ಕೈದು ದಿನ ತಿರುಚನಾಪಳ್ಳಿಯಿಂದ ಆ ಸ್ಟೇಷನ್‌ಗೆ ಸ್ಪೆಷಲ್ ಗಾಡಿಗಳನ್ನು ಬಿಡುತ್ತಿದ್ದಾರೆ. ಇದರಿಂದ ಕಂಪನಿಯ ವರಮಾನ ವಿಶೇಷವಾಗಿ ಹೆಚ್ಚುವಂತಾಯಿತು.

****

ಬಾಳೇ ಪಟ್ಟೆಗಳಿಂದ ನಾರಿನ ಎಳೆಗಳನ್ನು ಬಿಡಿಸಿ, ಆ ಎಳೆಗಳಿಂದ ಬಟ್ಟೆಗಳನ್ನು ನೇಯಬಹುದೆಂದು ತಿಳಿಸಿರುತ್ತೇವಷ್ಟೆ. ತಿರುವಾಂಕೂರಿನ ಸ್ಕೂಲ್ ಆಫ್ ಆರ್ಟ್ಸ್ ಎಂಬ ಕಸಬಿನ ಶಾಲೆಯ ಮ್ಯಾನೇಜರರವರು ಒಂದು ಯಂತ್ರವನ್ನು ತಯಾರುಮಾಡಿರುತ್ತಾರೆ. ಈ ಯಂತ್ರವು ಬಾಳೇ ಪಟ್ಟೆಗಳನ್ನು ಕೊಟ್ಟರೆ ಅದು ಎಳೆಗಳನ್ನು ಉದ್ದವಾಗಿ ಬಿಡಿಸುವದು. ಯಂತ್ರವು ಅಷ್ಟೇನೂ ಭಾರವಾಗಿಲ್ಲ. ಬಾಳೇ ತೋಟಗಳಲ್ಲೇ ಇಟ್ಟುಕೊಳ್ಳುವದಕ್ಕೆ ಅನುಕೂಲವಾಗಿದೆ. ಇಂಥಾ ಯಂತ್ರಗಳನ್ನು ಆ ಶಾಲೆಯವರು ೯೦ ರೂಪಾಯಿಗೆ ಒಂದರಂತೆ ವಿಕರಿ ಮಾಡುವರು. ಬೆಲೆ ಸುಲಭವಾಗಿರುವದರಿಂದ ನಮ್ಮ ದೇಶದ ತೋಟಗಾರರು ಅದನ್ನು ತರಿಸಿಕೊಂಡು, ಅದರಿಂದ ಬಾಳೇ ನಾರಿನ ಎಳೆಗಳನ್ನು ತೆಗೆದು, ನೇಯ್ಗೆಯವರಿಗೆ ವಿಕರಿಮಾಡಿ, ಬಟ್ಟೆಗಳನ್ನು ಮಾಡಿಸಬಹುದಾಗಿದೆ. ಈ ನಾರಿನಲ್ಲಿ ತಯಾರಾದ ವೇಷ್ಟಿ, ಪಲ್ಲಿ, ಸುಗಟಗಳು, ಬಹಳ ಶುಭ್ರವಾಗಿಯೂ, ಜಗುರವಾಗಿಯೂ, ಸುಲಭ ಕ್ರಯವಾಗಿಯೂ ಆಗುತ್ತವೆ.

****

ಹಿಂದುಸ್ಥಾನದ ಪ್ರತಿ ಒಂದು ಆಧಿಪತ್ಯದಲ್ಲೂ ವ್ಯವಸಾಯಗಾರರು ವರುಷವರುಷ ಹೆಚ್ಚುತ್ತಾ ಬಂದಿರುತ್ತಾರೆ. ಜನರು ನದಿಗಳಿಂದ ನಾಲೆಗಳನ್ನು ಅನೇಕ ಕಡೆ ಹೊಸದಾಗಿ ತೆಗೆಸಿರುತ್ತಾರೆ; ಮತ್ತು ಹಳೆಯವುಗಳನ್ನು ರಿಪೇರಿ ಮಾಡಿಸಿ ಜಯಪ್ರದ ಮಾಡಿರುವರು. ಈ ನಾಲೆಗಳ ಕೆಳಗೆ ಜಮೀನು ಹೆಚ್ಚು ಹೆಚ್ಚಾಗಿ ತರೀ ಸಾಗುವಳಿಗೆ ಬಂದಿರುತ್ತದೆ. ಕಳೆದ ೧೯ ವರುಷಗಳಲ್ಲಿ ಆದ ನಾಲೆಗಳ ಬಳಸುವಿಕೆಯಿಂದ ತರೀ ಸಾಗುವಳಿಗೆ ಬಂದ ಜಮೀನುಗಳ ಎಕರೆ ಲೆಕ್ಕವು ಈ ಕೆಳಗೆ ಪ್ರಕಟವಾಗಿರುವದು.—

| ಆಧಿಪತ್ಯಗಳು. | ೧೮೯೦—೯೧. ಎಕರೆಗಳು. | ೧೯೦೧—೦೨. ಎಕರೆಗಳು. |
|---|---|---|
| ಬ್ರಿಮಾ | ,, | ೩,೨೨,೦೭೬ |
| ಬಂಗಾಳ | ೬,೪೭,೬೪೩ | ೮,೪೧,೧೭೬ |
| ಆಯೋಧ್ಯೆ ಆಗ್ರಾ ಪ್ರಾಂತ್ಯ | ೨೦,೪೬,೪೦೦ | [illegible] |
| ಪಂಜಾಬ್ | [illegible] | [illegible] |
| ಮದರಾಸ್ | [illegible] | [illegible] |
| ಬೊಂಬಾಯಿ | [illegible] | [illegible] |
| ವಾಯುವ್ಯ ಸೀಮೆ (ಪಂಜಾಬಿನಲ್ಲಿ ಸೇರಿದೆ) | | [illegible] |
| ಬಿಲೂಚಿಸ್ತಾನ್ | [illegible] | [illegible] |
| ರಾಜಪುಟಾನಾ | [illegible] | [illegible] |
| ಜುಮ್ಲಾ ಎಕರೆಗಳು | [illegible] | [illegible] |

## ತಾಲ್ಲೂಕು ವರ್ತಮಾನಗಳು.

ನೆಲಮಂಗಲ.—ಕಳೆದ ವಾರ ೧ ಇಂಚು ಮಳೆಯಾಯಿತು. ರಾಗಿಯ ಪೈರಿಗೆ ಬಹಳ ಅನುಕೂಲವಾಗಿರುತ್ತದೆ. ರೈತರ ಸಂತೋಷವನ್ನು ವಿವರಿಸಲಸಾಧ್ಯ. ಕೆರೆಯಲ್ಲಿ ನೀರು ಕೂಡಾ ಬಂದಿರುತ್ತದೆ.—ಕಳೆದ ೧೮ನೇ ತಾರೀಖಿನ ದಿನ ಗೊಲ್ಲಹಳ್ಳಿ ರಸ್ತೆಯ ೩ನೇ ಮೈಲಿಯಲ್ಲಿ ದೊಡ್ಡಬಳ್ಳಾಪುರದಿಂದ ನೆಲಮಂಗಲಕ್ಕೆ ಬರುತ್ತಿದ್ದ ೨ ಗಾಡಿಗಳನ್ನು ದಗಾಯಿತಿ ಕಳ್ಳರು ಹೊಡೆದರು. ಅವರಲ್ಲಿ ಒಬ್ಬನಿಗೆ ೮ ಹಲ್ಲುಗಳು ಮುರಿದುಹೋದವು. ಮತ್ತೊಬ್ಬನ ಹತ್ತಿರ ೪ ರೂಪಾಯಿಗಳನ್ನು ಕಸುಕೊಂಡರು. ಅದೇ ತಿಂಗಳು ೨೨ನೆ ತಾರೀಖಿನ ದಿನ ಕುಣಿಗಲ ರಸ್ತೆಯಲ್ಲಿ ೩ ಗಾಡಿಗಳನ್ನು ಕಳ್ಳರು ಹೊಡೆದರು. ೪ ಜನರಿಗೆ ಘೋರ ಜಖಂ ಆಗಿರುತ್ತದೆ. ಆ ರಸ್ತೆಯ ಬೀಟ್ ಕಾನಿಸ್ಟೇಬಲ್ ಗೈರ್ಹಾಜರಾಗಿದ್ದನು. ಅನಂತರ ಜಮಾದಾರರಿಗೆ ಆ ರಸ್ತೆಯ ಬೀಟ್ ತೋಟ ಬಂದು ಹೇಳಿದನಂತೆ. ಅವರೂ, ಅಮಲ್ದಾರರೂ, ಡಾಕ್ಟರೂ ದಗಾಯಿತಿ ನಡೆದ ಸ್ಥಳಕ್ಕೆ ದಯಮಾಡಿ, ಅಲ್ಲಿ ನಡೆದ ಸಂಗತಿಗಳನ್ನು ನೋಡಿ, ಜಖಂ ಆದ ಜನಗಳಿಗೆ ಧೈರ್ಯ ಹೇಳಿದರು. ಈಗ ಅವರು ಕುಷಾಲಾಗಿರುತ್ತಾರೆ.—ಈ ಊರಿನಲ್ಲಿ ಅನೇಕ ಪುಂಡುಜನರು ಒಂದು ಸಂಧಿ ಮನೆಯಲ್ಲಿ ಸೇರಿ ರಾತ್ರಿಕಾಲದಲ್ಲಿ ಆ ಸಂಧಿಯಲ್ಲಿ ನಡೆಯುವ ಗಲಭೆಯನ್ನು ವಿವರಿಸಕೂಡದು. ಅದರ ಪೋಲೀಸಿನವರನ್ನು ಮರುಳು ಮಾಡಿರಬೇಕೆಂದು ತೋರುವದು. ಮೇಲಿನ ಅಧಿಕಾರಿಗಳು ಕಣ್ಣು ಬಿಟ್ಟು ನೋಡಿ ಸರಿಮಾಡುತ್ತಾರೆಂದು ನಂಬುತ್ತೇನೆ.

ಮೆಂಡ್ಯ.—ಇಲ್ಲಿ ಒಂದು ವರ್ಷದ ಬಾಗಾಯಿತು ಇದ್ದ ಅಮಲ್ದಾರರು ವೃದ್ಧಾಪ್ಯ ದೆಸೆಯಿಂದ ಪೆನ್ಷನ್ ಮೇಲೆ ನಿವೃತ್ತರಾದರು. ಅವರು ಇಷ್ಟು ಬೇಗನೆ ತಮ್ಮ ಕೆಲಸವನ್ನು ಬಿಟ್ಟದ್ದು ಅನೇಕರಲ್ಲಿ ವ್ಯಸನ ಉಂಟು. ಈಗ ಈ ತಾಲ್ಲೂಕಿಗೆ ಯಾರು ಬರುತ್ತಾರೋ ಇನ್ನೂ ಗೊತ್ತಿಲ್ಲ. ತಾಲ್ಲೂಕಿನ ಚಾರ್ಜನ್ನು ನಮ್ಮ ಶಿರಸ್ತೇದಾರರೇ ನೋಡುತ್ತಾ ಇದ್ದಾರೆ. ಬಯಲಾಗಿರುವ ಅಮಲ್ದಾರರೇ ಇಲ್ಲಿಗೆ ಬರುವರೆಂದು ಜನರು ನಿರೀಕ್ಷಿಸುತ್ತಾ.— ಈ ಪ್ರಾಂತ್ಯ ೭—೮ ದಿನಗಳಿಂದ ಸೋನೆ ಮಳೆಯು ಸುರಿಯುತ್ತಾ ಇದೆ. ಜನಗಳು ಕೆಲವರು ತಮ್ಮ ಹೊಲಕ್ಕೆ ಬೀಜ ಬಿತ್ತಿದ್ದಾರೆ. ಇನ್ನು ಅನೇಕರು ಮಳೆ ಸಾಲದೆ ಇನ್ನೂ ಬಿತ್ತನೆ ಮಾಡಿಲ್ಲ. ಜೋಳದ ಪೈರಿಗೂ ಮಳೆ ಬೇಕಾಗಿದೆ. ಬಂದ ಮಳೆ ಗಾಳಿಯ ನೆಸೆಯಿಂದ ಚದರಿಹೋಗುತ್ತಿದೆ. ಮತ್ತು ಊರಿನ ಹವ ಕೆಟ್ಟು ಅನೇಕರಿಗೆ ರಕ್ತಭೇದಿ, ಗಡ್ಡೆ ಊತ, ಜ್ವರ ಸಹ ಕಾಣಿಸಿಕೊಂಡು, ಕಷ್ಟಪಡುತ್ತಾರೆ. ದೇವರು ಬೇಗನೆ ಕ್ಷೇಮ ಕೊಡಲಿ ಎಂದು ಪ್ರಾರ್ಥಿಸುತ್ತೇವೆ.

ದೇವನಹಳ್ಳಿ.—ಈ ಊರಿನಲ್ಲಿ ೨—೩ ತಿಂಗಳಿಂದ ಸಣ್ಣ ಬಾವುಂಬ ರೋಗ ದನಕರುಗಳಿಗೆ ತಗಲಿ ಸುಮಾರು ಈ ವರಿಗೆ ೧೦೦—೧೫೦ರ ತನಕ ಮೃತಪಟ್ಟವು. ಆ ಸತ್ತ ಪಶುಗಳನ್ನು ಮಾಲೀಕರು ಹೊಲೆಯರಿಗೂ ಮಾದಿಗರಿಗೂ ೨—೩ ಆಣೆ ಗೊತ್ತುಮಾಡಿ ಕೊಡುತ್ತಾರೆ. ಅವರು ಅವುಗಳನ್ನು ತೆಗೆದುಕೊಂಡುಹೋಗಿ ಊರಾಚೆ ಹಾಕುತ್ತಾರೆ. ಅವು ಮಳೆಗೆ ಕೊಳೆತು ದುರ್ವಾಸನೆಯಾಗಿ ಗಾಳಿಯಲ್ಲಿ ಸೇರಿ ಊರಿನಲ್ಲಿರುವ ಪ್ರಜೆಗಳಿಗೆ ಜ್ವರರೋಗಗಳಿಗೆ ಕಾರಣವಾಗಿದೆ. ಮುನಿಸಿಪಾಲಿಟಿಯವರ ಮೇಲ್ವಿಚಾರಣೆಯೇ ಊರಿನಲ್ಲಿ ಇಲ್ಲ. ಬುಧವಾರ ಈ ಊರಿನಲ್ಲಿ ಸಂತೆ ಆಗುತ್ತೆ. ಸುಂಕ ವಸೂಲ್ ಮಾಡುವದಕ್ಕೆ ಮಾತ್ರ ಬರುತ್ತಾರೆ. ಗೃಹಕೃತ್ಯಕ್ಕೆ ತರಕಾರಿ ವಗೈರೆ ಖರ್ಚಿಗೆ ಸಂಪಾದನೆ ಮಾಡಿಕೊಳ್ಳುವದಕ್ಕೆ ಮುತುವರ್ಜಿಯಿಂದ ಬರುತ್ತಾರೆ. ಅಮಲ್ದಾರರಾದರೂ ಊರಿನಲ್ಲಿ ಸಂಚಾರಮಾಡಿ ಪ್ರಜೆಗಳ ಯೋಗಕ್ಷೇಮವನ್ನು ವಿಚಾರಿಸಿ ಎಷ್ಟು ದಿನವಾಯಿತೋ ಗೊತ್ತಿಲ್ಲ. ಪೋಲೀಸಿನವರಿಗಾದರೋ ಉಗಾದಿ ಸಂಕ್ರಾಂತಿ ಎರಡೂ ಕೂಡಿದರೆ ಯಾವ ಪ್ರಕಾರವಿದೆಯೋ ಅಷ್ಟು ಚನ್ನಾಗಿ ನಡೆಯುತ್ತದೆ. ಯಾವ ಕೇಸುಗಳು ನಡದರೂ ಮೇಲ್ಪಟ್ಟ ಆಫೀಸರುಗಳಿಗೆ ತಿಳಿಸುವದೇ ಕಷ್ಟ. ಅಮಲ್ದಾರರಾದರೋ ಇದಕ್ಕೆ ಗಮನಕೊಡುವದು ಅಪರೂಪ. ಈ ಊರಿನಲ್ಲಿ ೪—೫ ಕೇಸುಗಳು ನಡದವು. ಅಂಥಾ ಕೇಸುಗಳನ್ನು ಮೇಲ್ಪಟ್ಟ ಆಫೀಸರುಗಳಿಗೆ ತಿಳಿಯಪಡಿಸದೆ ಪೋಲೀಸ್ ಆಫೀಸಿನವರೇ ಬಸವಪಡಿಸಿದ್ದರಿಂದ ತುಂಟರಿಗೂ ಪೋಕರಿ ಜನಗಳಿಗೂ ಈ ಊರಿನಲ್ಲಿ ಬಹಳ ನಿಸ್ಸಾರವಾಗಿರುತ್ತೆ. ಇದರಿಂದ ಸಂಸಾರಿಗಳಿಗೆ ಬಹಳ ಭೀತಿ ಉಂಟುಮಾಡುತ್ತಿದೆ. ಮುನಸ್ಪಲ್ ಮೆಂಬರುಗಳೂ ಅಮಲ್ದಾರರೂ ಊರಿನಲ್ಲಿ ಪ್ರಜೆಗಳ ಯೋಗಕ್ಷೇಮವನ್ನು ಪ್ರತಿದಿವಸವೂ ವಿಚಾರಿಸಿದರೆ ಬಹಳ ಸುಖವಾದೀತು.

ಹೊಸ್ಕೋಟೆ.—ಹೊಸ್ಕೋಟೆ ಟೌನಿನಲ್ಲಿ ಪ್ಲೇಗ್ ಉಪದ್ರವು ತಗಲಿ ಎಲ್ಲರೂ ಊರಹೊರಗೆ ಷೆಡ್ಡುಗಳಲ್ಲಿ ವಾಸಮಾಡುತ್ತಾ ಇದ್ದರು. ಈಚೆಗೆ ಊರು ಸೇರಿ ಮೂರು ತಿಂಗಳು ಆಗುತ್ತಾ ಬರುತ್ತದೆ. ಈ ವರಿಗೂ ದೈವಾನುಗ್ರಹದಿಂದ ಯಾವ ಗಲಾಟೆಯೂ ಇಲ್ಲದೆ ಸುರಕ್ಷಿತರಾಗಿರುತ್ತೇವೆ.—ನಮ್ಮ ಅಮಲ್ದಾರ್ ಮ॥ ಚನ್ನಪ್ಪ ಬಿ.ಎ. ರವರು ಟೌನ್ ಮಾರ್ಕೆಟ್ ವಿಚಾರದಲ್ಲಿ ತುಂಬಾ ಮುತುವರ್ಜಿ ವಹಿಸಿಕೊಂಡು, ಆಗಾಗ್ಯೆ ಊರೊಳಗೆ ದಯಮಾಡುತ್ತಾ, ಅನುಪಯೋಗ ಭಾಗಗಳನ್ನು ಶುಚಿಪಡಿಸುತ್ತಾರೆ. ಅಲ್ಲದೆ, ಪ್ರಜೆಗಳ ವಿಷಯದಲ್ಲಿ ತುಂಬಾ ಹಿತಚಿಂತಕರಾಗಿರುತ್ತಾರೆ.—ಈ ಊರಿನಲ್ಲಿ ಪ್ರತಿವರುಷ ಶಕ್ಯೋತ್ಸವದ ವರ್ಷದ ಹಬ್ಬದ ಉತ್ಸವವಾಗುವ ಪದ್ಧತಿ ಇದೆ. ಈ ಹಬ್ಬದಲ್ಲಿ ಪೂಜೆ ಮಾಡುವ ಉಪ್ಪಾರಜಾತಿಯವನಿಗೂ ಆಗಸರವನಿಗೂ ಕಲಹ ಉಂಟಾಗಿತ್ತು. ಆಗ ಇದ್ದ ಅಮಲ್ದಾರರು ಇಬ್ಬರೂ ಸಮಭಾಗವಾಗಿ ಪೂಜೆ ನಡೆಸಲಿಕ್ಕೆ ಅಪ್ಪಣೆ ಕೊಡಿಸಿದರು. ಅದರಂತೆ ಆ ವರುಷ ಹಬ್ಬ ನೆರವೇರಿತು. ಆದರೆ ಈ ಸಾಲ ಹಬ್ಬದಲ್ಲಿ ಉಪ್ಪಾರನೊಬ್ಬನೇ ಪೂಜೆ ಮಾಡಬೇಕಾಗಿ [illegible]. ಅಗಸನೊಬ್ಬನೇ ಪೂಜೆ ಮಾಡಬೇಕಾಗಿ ಕೆಲವರೂ ವಾಕ್ಕಲಹ ನಡೆದು ಗಲಾಟೆಯಾಯಿತು. ಆಗ ಅಮಲ್ದಾರರೂ ಪೋಲೀಸ್ ಇನ್ಸ್‌ಪೆಕ್ಟರೂ ಯಾವ ಗಲಾಟೆಯೂ ಆಗದಂತೆ ಸಮಜಾಯಿಷಿಮಾಡಿ ಮಾರನೇ ದಿನ ಮಹೋತ್ಸವ ಉತ್ಸವ ನಡೆಸಿದರು.—ಈ ಪ್ರಾಂತ್ಯ ಸಕಾಲಕ್ಕೆ ಮಳೆ ಬಾರದೆ ಜನಗಳಿಗೆ ತುಂಬಾ ಭಯಂಕರವಾಗಿತ್ತು. ಈಚೆಗೆ ದೈವಾನುಗ್ರಹದಿಂದ ಒಳ್ಳೇ ಮಳೆಯಾಯಿತು. ಜನಗಳೆಲ್ಲಾ ಬೀಜ ಬಿತ್ತಿರುತ್ತಾರೆ.—ಈ ಊರಿನ ಸಮೀಪದಲ್ಲಿ ಹರಿಯುವ ದಕ್ಷಿಣಪಿನಾಕಿ ನದಿಯಲ್ಲಿ ವಿಪರೀತ ಪ್ರವಾಹ ಬಂದಿರುತ್ತೆ. ಗಾಡಿ, ಜನಗಳು ಓಡಾಡುವ ರಸ್ತೆ ಮೇಲೆ ನೀರು ಹರಿಯುವದು. ಈ ಹೊಳೆಯನ್ನು ಸುತ್ತುಮುತ್ತಲಿನ ಗ್ರಾಮದ ಜನಗಳು ಬಂದು ನೋಡಿ, ಅಲ್ಲಿ ಕರ್ಪೂರದ ಮಂಗಳಾರತಿ ನೈವೇದ್ಯವನ್ನು ಮಾಡಿ ಹೋಗುವರು.

ಕೃಷ್ಣರಾಜಪೇಟೆ (ಅತ್ತಿಕುಪ್ಪೆ):—ಜುಲೈ ೩೦ ರಲ್ಲಿ ಈ ಊರಿಗೆ ಡೆ॥ ಕಮಿಷನರು ಮ॥ ಕಾಂತರಾಜೇ ಅರಸಿನವರು ಸವಾರಿಯು ಚಿತ್ತೈಸಿತು. ಇವರನ್ನು ಅಮಲ್ದಾರರೂ, ಪ್ರೊ. ಅಸಿಸ್ಟೆಂಟ್ ಮತ್ತು ಜಮಾದಾರರೂ ಕೊಟಗಹಳ್ಳಿ ಬಳಿಯಲ್ಲಿ ಸಂಧಿಸಿ ಈ ಊರು ದೊಡ್ಡಕೆರೆಯ ಸಮೀಪ ಹಾಕಿದ್ದ ಪೆಂಡಾಲಿಗೆ ಕರೆದುಕೊಂಡು ಬಂದರು. ಅಲ್ಲಿ ಸೇರಿದ್ದ ಸರ್ಕಾರಿ ಉದ್ಯೋಗಸ್ಥರೂ, ಮೆಂಬರುಗಳೂ, ಶೆಟ್ಟಿ ವರ್ತಕರೂ, ವೈದಿಕ ಬ್ರಾಹ್ಮಣರು ಮುಂತಾದವರು ಬ್ಯಾಂಡ್ ವಾದ್ಯದೊಡನೆ ಇದಿರ್ಗೊಂಡು, ವೈದಿಕರು ಫಲ ಮಂತ್ರಾಕ್ಷತೆ ಕೊಟ್ಟು ಆಶೀರ್ವದಿಸಿದನಂತರ ಹಾರಗಳು ಹಾಕಲ್ಪಟ್ಟು, ಮೆಂಬರುಗಳೂ, ಶೆಟ್ಟಿ ವರ್ತಕರೂ ಮರ್ಯಾದೆಗಳನ್ನು ಕಾಣಿಸಿ ವಂದಿಸಿದರು. ಉದ್ಯೋಗಸ್ಥರು ಹಣ್ಣು ಕೊಟ್ಟು ವಂದಿಸಿದರು. ಅವರು ಇವುಗಳನ್ನೆಲ್ಲಾ ಸ್ವೀಕರಿಸಿ ಚಾಮರಗಳಿಂದಲೂ, ಮಕರತೋರಣಗಳಿಂದಲೂ ಅಲಂಕೃತವಾದ ಬೀದಿಯನ್ನು ಹೊಕ್ಕು ಮುಸಾಫರಿ ಬಂಗಲೆಗೆ ದಯಮಾಡಿದರು. ಮಾರನೆದಿನ ಬೆಳಗ್ಗೆ ಹೊಸ ಹೋಬಳಿಕೆರೆ ದೇವಸ್ಥಾನಗಳನ್ನು ನೋಡುವ ಉದ್ದೇಶ್ಯ ದಯಮಾಡಿಸಿದ್ದರು. ಮಧ್ಯಾಹ್ನ ಊರೊಳಕ್ಕೆ ದಯಮಾಡಿ ಟ್ರೆಜರಿ ಸಬ್ ರಿಜಿಸ್ಟ್ರಾರ್ ಆಫೀಸ್ ಆಸ್ಪತ್ರೆಗಳನ್ನು ತನಿಖೆ ಮಾಡಿಕೊಂಡು, ಎ. ವಿ. ಸ್ಕೂಲಿಗೆ ದಯಮಾಡಿದರು. ಅಮಲ್ದಾರರು ಮುಂತಾದ ಉದ್ಯೋಗಸ್ಥರೂ, ಮೆಂಬರುಗಳೂ, ಊರಿನ ದೊಡ್ಡಮನುಷ್ಯರೂ, ಶೆಟ್ಟಿ ವರ್ತಕರೂ, ವೈದಿಕ ಬ್ರಾಹ್ಮಣರೂ ಅಲ್ಲಿ ಸೇರಿದ್ದರು. ಮ॥ ಕಾಂತರಾಜೇ ಅರಸಿನವರು ಕುಳಿತುಕೊಂಡಕೂಡಲೆ ಬಾಲಕಿಯರು ಗಾನಗಳಿಂದ ಮಂಗಳಗೈದರು. ಹೆಡ್‌ಮಾಸ್ಟರ್ ಮ॥ ಟಿ. ವರದರಾಜಯ್ಯನವರು ಸ್ಕೂಲ್ ರಿಪೋರ್ಟನ್ನು ಓದಿದರು. ಬಾಲಕರು ಕನ್ನಡ ಮತ್ತು ಇಂಗ್ಲೀಷ್ ಪದ್ಯಗಳನ್ನೂ ತಮಾಷೆಗಳನ್ನೂ ಮಾಡಿದರು. ಆಮೇಲೆ ಇನಾಂ ಕೊಡಲಾಯಿತು. ಬಾಲಕಿಯರಿಗೆ ಬೊಂಬೆ ಮೊದಲಾದ ಆಟದ ಸಾಮಾನುಗಳು ಕೊಡಲ್ಪಟ್ಟವು. ಮ॥ ಕಾಂತರಾಜೇ ಅರಸಿನವರು ಸಂತೋಷದಿಂದ ವಿದ್ಯಾ ವಿಷಯದಲ್ಲಿ ಸ್ವಲ್ಪ ಹೊತ್ತು ಉಪನ್ಯಾಸಮಾಡಿ ಕೆಲವು ಬುದ್ಧಿವಾದಗಳನ್ನು ತಿಳಿಸಿದರು. ಎಲ್ಲರೂ ಜೆಪ್ಪಿ ಕಮಿಷನರವರ ಶ್ರೇಯಃಪ್ರಾರ್ಥನೆ ಮಾಡಿದರು. ಆಮೇಲೆ ಸರ್ವರೂ ಗಂಧ ತಾಂಬೂಲಗಳಿಂದ ತೃಪ್ತರಾಗಿ ತೆರಳಿದರು. ೨೩ನೇ ತಾ. ಬುಧವಾರ ಈ ಊರಿನ ಎ. ವಿ. ಸ್ಕೂಲಿಗೋಸ್ಕರ ೫೦ ರೂ. ಬಹುಮಾನ ಕೊಟ್ಟು ಶ್ರೀರಂಗಪಟ್ಟಣದ ಕಡೆ ದಯಮಾಡಿದರು.

ಸೀಗೆಹಳ್ಳ.—ಈ ಊರು ಸಂತೆ ವಿಷಯ ಬಾಳದಿವಸದಿಂದ ಒಂದು ನಿಶ್ಚಯ ಮಾಡಬೇಕೆಂದು ಪ್ರೆಸಿಡೆಂಟರು ಸಬ್ ಕಮಿಟಿ ಏರ್ಪಾಡುಮಾಡಿ, ಅದಕ್ಕೆ ಮ॥ ಸಬ್ ರಿಜಿಸ್ಟ್ರಾರ್ ನಾರಾಯಣರಾಯರನ್ನು ಮುಖ್ಯಸ್ಥರನ್ನಾಗಮಾಡಿದರು. ಆದರೆ ಈ ಸಬ್ ಕಮಿಟಿಯು ಜನಗಳ ಕಲಕಲ ದೃಷ್ಟಿಗಳಿಂದ ಸಂದೇಹವಾದ ಪ್ರಯುಕ್ತ ಯಾವ ತೀರ್ಮಾನವೂ ಆಗದೆ ಜನಗಳ ಅಭಿಪ್ರಾಯ ಹೋರಡದೆ ನಿಂತುಹೋಯಿತು. ಆದಕಾರಣ ಮೇಲ್ಕಂಡ ಪ್ರಜೆಗಳು ತಿರಿಗಿ ಕಮಿಟಿ ಏರ್ಪಾಡಾಗಬೇಕೆಂದು ಪ್ರೆಸಿಡೆಂಟರಿಗೆ ಅರ್ಜಿ ಬರೆದುಕೊಂಡಕಾರಣ ಉಭಯಪಕ್ಷಗಳವರ ಸಹಾಯದಿಂದ ಮೆಂಬರುಗಳು ಸೇರಿದ್ದರೋ ಆದರವರು ತಮ್ಮ ತಮ್ಮ ಅಭಿಪ್ರಾಯಗಳನ್ನು ಬರೆಯಿಟ್ಟು ಮೂಲಕ ಬರೆದುಕೊಂಡು ಬಂದರೆ ನಂತರ ಆಸ್ಪತ್ರೆ ಅಸಿಸ್ಟೆಂಟರನ್ನು ಆರೋಗ್ಯಪ್ರದೇಶ ಯಾವದೆಂಬುವದನ್ನು ವಿಚಾರಿಸಿ ನನ್ನ ಅಭಿಪ್ರಾಯವನ್ನು ಹೇಳುತ್ತೇನೆ ಅಂದರು. ಈ ತೀರ್ಮಾನವು ಬಹು ಒಳ್ಳೇದು. ಯಾವ ಗದ್ದಲವೂ ಇಲ್ಲವೆಂದು ಪ್ರಜೆಗಳು ಹರ್ಷಯುಕ್ತರಾಗಿ ಹೋದರು. ಮುಖ್ಯವಾಗಿ ಈಗಿನ ಅಮಲ್ದಾರರು ಈ ತಾಲ್ಲೂಕಿಗೆ ಬಂದಿರುವದು ಜನರ ಸೌಭಾಗ್ಯವೆಂದು ಹೇಳಬೇಕು. ಇವರು ಅಂಥ ಹಿನ್ನಡೆಯವರಲ್ಲ. ಆ ಸಂಗತಿ ಇವರಿಗೆ ಕರ್ಣಕಠೋರವಾಗಿದೆ. ನ್ಯಾಯವು ಪ್ರಜೋಪಕಾರವು ಯಾವ ಕಡೆ ಇದೆಯೋ ಆ ಕಡೆ ಹೋಗುತ್ತಾರೆಯೇ ಹೊರತು [redacted] ಸ್ನೇಹಿತರು ಹೇಳಿದರೂ ಅನ್ಯಾಯಕ್ಕೆ ಹೋಗುವವರಲ್ಲ. ಆದಕಾರಣ ಪ್ರಜೆಗಳು ಈ ವಿಷಯದಲ್ಲಿ ತುಂಬಾ ಕಾಂಕ್ಷೆಗೊಂಡವರಾಗಿ ನಮಗೆ ಯಾರೂ ಸಹಾಯಕರು ಬೇಕಿಲ್ಲ; ಸತ್ಯವಂತ ಅಮಲ್ದಾರರು ಇದ್ದಾರೆ; ಜಾಸ್ತಿ ಪ್ರಜೆ ಯಾವ ಕಡೆ ಇದೆ ನೋಡಲಿ; ಮೇಲಿನ ಪೇಟೆಯೆಲ್ಲಾ ಕೂಳಾಗುತ್ತಾ ಬರುವದನ್ನು ನೋಡಲಿ. ಇದರ ಅಭಿವೃದ್ಧಿಗೆ ಖಂಡಿತವಾಗಿ ಒಂದು ದಿನ ಸಂತೆ ಆಸ್ಪತ್ರೆ ಕಡೆ ನಡೆಯುವ ಹಾಗೆ ಅಪ್ಪಣೆ ಕೊಟ್ಟು, ಜನರನ್ನು ಉದ್ಧಾರಮಾಡುತ್ತಾರೆಂದು ಸಂತೋಷಿಸಿದ್ದಾರೆ.—ಸಿರಾ ತಾಲ್ಲೋಕು ಉಯಿಲ್ ಹೊಸೆ ಗ್ರಾಮದಲ್ಲಿ ಒಬ್ಬ ಬ್ರಾಹ್ಮಣನು ಸರ್ಕಾರದ ಕಂದಾಯದ ಹಣ ೭೫೦ ಚಿಲ್ಲರೆ ರೂಪಾಯಿ ಕದ್ದನೆಂದೂ ಅವನು ಹಿಂದೂಪುರದಲ್ಲಿ ಸಿಕ್ಕಿದನೆಂದೂ ತಿಳಿಸಿದ್ದೆವಷ್ಟೆ. ಅವನಿಗೆ ಒಂದು ವರ್ಷ ಸಜಾ ಆಯಿತು.—ದೇವಿನಹಳ್ಳಿಯಲ್ಲಿ ಒಬ್ಬ ಕೋಮಟಿಗರವನು ಒಬ್ಬ ಒಗೆಯುವಿಕ್ಕೆ ಹೋಗಿ ಕುಂಟಾದಿ ಬಾವಿಯಲ್ಲಿ ಬಿದ್ದು ಸತ್ತಕಾರಣ ಅಲ್ಲಿಯ ಗಂಡಸೂ ಯಾರೂ ಕಾಣದಹಾಗೆ ರಾತ್ರಿಯಲ್ಲಿ ಅದೇ ಬಾವಿಯಲ್ಲೇ ಬಿದ್ದು ಸತ್ತುಹೋದನು. ಇದಲ್ಲವೇ ಸಹವಾಸ!

ಹರಿಹರ.—ಹರಿಹರದಲ್ಲಿ ಪ್ಲೇಗ್ ಮರುವಾದ ಬಾಗಾಯಿತು ಇದುವರಿಗು ಮೃತಪಟ್ಟ ಜನಗಳ ಸಂಖ್ಯೆ ೫೦೦ ಕ್ಕಿಂತಲೂ ಜಾಸ್ತಿಯೇ ಹೊರತು ಕಡಮೆ ಇಲ್ಲವು. ಪ್ರತಿ ದಿನಸವೂ ೧೨ ರಿಂದ ೧೫ರ ವರಿಗೂ ಸಾಯುತ್ತಲಿರುವರು. ಈ ಸ್ಥಿತಿಯಲ್ಲಿ ಅದನ್ನು

...ಗಳು ೬ ಎಂಟು ಪ್ಲೇಗ್ ಕಾಲದಲ್ಲಿ ಆಗಿರಲಾರದೆಂದು ಹೇಳುತಾರೆ. ಪ್ಲೇಗ್ ಮರಣವಾದ ಕೂಡಲೇ ಜನಗಳು ಮೊದಲು ಬೇರೆ ಬಡಿಗಳನ್ನು ಸೇರಿಕೊಳ್ಳುತ್ತಿದ್ದರು. ರೋಗವು ಕಡಿಮೆಯಾಗುತ್ತಿತ್ತು. ಈಗ ಜೋಪಡಿಗಳನ್ನು ಸೇರಿದರೂ ರೋಗವು ಅ... ತನ್ನ ಬಲವನ್ನು ತೋರಿಸಿ ಇಷ್ಟುಡಿಯಾಗಿ ಜನಗಳನ್ನು ... ಕೊಳ್ಳುತ್ತಲಿದೆ. ಯಾವ ಗಲ್ಲಿಗಳಲ್ಲಿ ನೋಡಿದರೂ ಗುಡಿಸಲುಗಳು ಮೊದಲುಗೊಂಡು ಕಲ್ಲೀನ ಗೋಳಾಟವಾಗಿದೆ. ಪ್ರತಿ ... ಮರಣಗಳಾಗಬಹುದು. ಸಂಪೂರ್ಣವಾಗಿ ಖಾಲಿ ... ಮನೆಗಳು ಸಹಾ ಇವೆ. ಮಳೆ ಜೋರಿಂಗಿ ಬಾರದೆ ಸೋನೆ ಮಳೆಯಾಗಿ ಸುರಿಯುತ್ತಾ ಇದೆ. ಗಾಳಿ ಛಳಿ ಜಾಸ್ತಿಯಾಗಿದೆ. ಈ ಛಳಿಯಲ್ಲಿ ಜನಗಳು ಬಿಚ್ಚುಡಿದೆ ಗುಡಿಸಲುಗಳಲ್ಲಿಯೇ ಬಿದ್ದಿರುತ್ತಾರೆ. ಗುಡಿಸಲಿನಲ್ಲಿ ಮರಣಗಳು ಜಾಸ್ತಿಯಾಗುತ್ತಲಿದೆ ಎಂಬ ನೆನಪು ಜೂಲಾಯಿ ೩೦ ತಾರೀಖು ಅನುಭವದಿಂದ ಊರೊಳಗೆ ಹೋಗುವ ಮನಸ್ಸುಳ್ಳವರೆಲ್ಲ ಹೋಗಬಹುದೆಂದು ಧಾರಿಸಿರುವರು. ... ಹೇಳುವುದಕ್ಕಾಗುವದಿಲ್ಲ. ಊರಲ್ಲಿ ರೋಗವು ಜಾಸ್ತಿಯಾದದ್ದರಿಂದಲೇ ಜೋಪಡಿಗಳನ್ನು ಕಟ್ಟಿಕೊಳ್ಳಬೇಕಾಗಿ ಬಂತು. ... ಗುತ್ತಿನಲ್ಲಿ ಪ್ಲೇಗ್ ಪ್ರಾರಂಭವಾಗಿ ಇದುವರಿಗು ೧೦—೧೫ ಮರಣಗಳಾದವು. ಇಲ್ಲಿಂದ ಹೋದವರ ಪೈಕಿ ಅನೇಕರು ಸದರಿ ಸ್ಥಳವನ್ನು ಬಿಟ್ಟು ಜೋಪಡಿಗಳನ್ನು ಕಟ್ಟಿದ್ದಾರೆ. ... ಯಾವುದೋ ಇಲ್ಲವೇ ಇವರ ಸ್ವಂತ ಇರಾದೆಯೋ ತಿಳಿಯದು. ಸಾಲಿ ಜೋಪಡಿಗಳಲ್ಲಿರತಕ್ಕವರು ಯುಗಾದಿ ತರುವ ಮೇಲೆ ಊರಿಗೆ ಹೋಗಬೇಕೆಂದು ಅನೇಕರು ಅಭಿಪ್ರಾಯಪಡುತ್ತಾರೆ. ಈ ಸಾಲಿ ನಾಯಿಗಳನ್ನು ಪ್ರತಿ ದಿನ ... ಕಾರ ಸಲುವಾಗಿ ಬೇಗಳನ್ನು ಹೊರಡಿಸಬೇಕಾದ ... ಇವರೂ ... ಊರೊಳಗೆ ... ಜೋಪಾನ ಮಾಡುವದಕ್ಕೆ ಬದಲಾಗಿ ಹೊರಗೆ ತಂದು ಬೇಕಾಬಿಟ್ಟಿಯಾಗಿ ಹಾಕಿರುತ್ತಾರೆ. ಆಸ್ಪತ್ರೆಯಿಂದ ನೋಡಿದರೆ ಒಂದುಮನೆ ರೋಗಿಯು ... ರೋಗಿಯು ಮೇಲೆ ಕನಿಕರವಿಲ್ಲವೆಂದು ಹೇಳಬೇಕು ... ಇಲ್ಲಿ ಬಲವಾದ ಮಳೆ ಇಲ್ಲದಿದ್ದರೂ ... ತಿಂಗಳಲ್ಲಿ ... ಬಹು ಪ್ರಾಗಿ ... ಇದನ್ನು ನೋಡಲು ಅನೇಕ ಗಂಡಸರು ಹೆಂಗಸರು ಬಂದಿದ್ದರು ... ಜೂಲಾಯಿಯಲ್ಲಿ ಬಂದ ಪ್ರವಾಹದಿಂದಲೂ ಈ ಸಾಲಿ ಬಂದದ್ದು ... ಆದ ಕಲ್ಪಿ ... ಗ್ರಾಮ ಜಲಿಯಾದಕ್ಕೆ ... ಆಗಬಹುದು. ಇದು ಧಾರವಾಡ ರಾಣೆಬೆನ್ನೂರಿಗೆ ಹೋಗುತ್ತದೆ. ಹರಿಹರದವರಲ್ಲಿ ಕೆಲವರು ಅಲ್ಲಿ ಹೋಗಿ ಸೇರಿಕೊಂಡಿದ್ದರಿಂದ ಅಲ್ಲಿ ಸಹ ೩—೪ ಪ್ಲೇಗ್ ಮರಣಗಳಾದವು. ಕೆಲವರು ಆನಂದ ನದಿಯ ಸಮೀಪದಲ್ಲಿ ಜೋಪಡಿಗಳನ್ನು ಕಟ್ಟಿಕೊಂಡರು. ... ಮರಣ ಹೊಂದುವರು ... ಪ್ರವಾಹದಲ್ಲಿ ... ಇಲ್ಲವೇ ... ಈ ಸಮಯದಲ್ಲಿ ... ಜನಗಳು ಉಪಯೋಗಿಸುವದು ಒಳ್ಳೇದೇ?

ಕೊನೆಗೆ.—ಇಲ್ಲಿನ ಕುದುರೆಗಳ ಶ್ಯಾರಣದಲ್ಲಿ ... ಬಿನ್ನಾ ... ಆಗುವದರಿಂದ ಇದನ್ನು ... ಎಂಬುವ ವಿಚಾರದಲ್ಲಿ ಪರೀಕ್ಷಿಸ... ಈ ತಿಂಗಳಲ್ಲಿ ವಿವಾಹ ಮಾಡಿದವರು ತಮ್ಮ ... ಇಲ್ಲಿ ಒಂದುವರೆ ... ನೋಡತಕ್ಕ ... ಹೋದನಂತರ ಈ ತಿಂಗಳು ... ಶ್ರೀಮನ್ಮಹಾರಾಜರವರೂ ಅವರ ... ಮೊದಲಾದವರೆಲ್ಲರೂ ಸುಮಾರು ಐದು ಘಂಟೆಗಳ ಕಾಲವನ್ನು ಕುದುರೆ ಮರಿಗಳನ್ನೂ ಮತ್ತು ... ನೋಡುವದರಲ್ಲಿ ಕಳೆದರು. ... ಸುಮಾರು ೦೦ ... ಕುರಿಗಳನ್ನು ... ಅಧಿಕಾರಿಗಳಿಂದ ... ಒಪ್ಪಿಸಲ್ಪಟ್ಟ ... ಅಂಗೀಕರಿಸಿ, ವೆಸ್ಲಿಯನ್ ಮಿಷನ್ ಬಾಲಕಿಯರು ಶ್ರೀಮನ್ಮಹಾರಾಜರವರ ಮೇಲೆ ಕಟ್ಟಿದ್ದ ... ಒಂದು ಕಡೆಯೂ, ಇಂಗ್ಲಿಷ್ ಬ್ಯಾಂಡ್ ವಾದ್ಯವು ಒಂದು ಕಡೆಯೂ, ... ಕೋಲಾಹಲ ಧ್ವನಿಗಳು ಒಂದು ಕಡೆಯೂ ... ವೇಳೆಯಲ್ಲಿ ತಮ್ಮ ಪ್ರೈವೇಟ್ ಸೆಕ್ರೆಟರಿ ಮತ್ತು ಡಾಕ್ಟರ್ ಮೆ... ಸಾಹೇಬರೊಡನೆ ಅಂದಿಗೆ ಒಂದುವರೆ ... ಆಮಲ್ದಾರರವರು ಬಹು ಪ್ರಯಾಸಪಟ್ಟು ... ಶಾಸ್ತ್ರಗಳನ್ನು ಸಲ್ಲಿಯುವಂತೆ ... ಭೋಜನವನ್ನು ತೀರಿಸಿಕೊಂಡು, ಲೆಫ್ಟಿನೆಂಟ್ ... ಜೊನ್ಸ್ ... ಸಂಗಡ ಕಾಲುನಡೆಯಾಗಿ ತಮ್ಮ ... ಮತ್ತು ಜನಾನಾ ಗಾಡಿಯೊಂದಿಗೆ ಕುದುರೆಗಳ ... ನೋಡಲು ಹೋಗಿ, ಅಲ್ಲಿದ್ದ ಮರಿಗಳನ್ನೂ ಕುದುರೆಗಳ ... ನೋಡಿ, ಸಂತೋಷಪಟ್ಟುಕೊಂಡು, ... ಮರಿಗಳ ... ಸಾವಿರದ ಇನ್ನೂರು ರೂಪಾಯಿಗೆ ಕೊಂಡುಕೊಂಡು, ... ಮುಂದೆ ... ವಿಷಯದಲ್ಲಿ ... ಹೇಳಿ, ಅದೇ ಸಾಯಂಕಾಲ ಸುಮಾರು ... ಘಂಟೆಗೆ ಈ ಸ್ಥಳವನ್ನು ಬಿಟ್ಟು, ಸ್ಕೂಲ್‌ಗಳ ಬಾಲಕ ಬಾಲಕಿಯರಿಗೆಲ್ಲಾ ಮಿಠಾಯಿಗಾಗಿ ... ರೂಪಾಯಿಗಳನ್ನು ಕೊಟ್ಟು ಪರಿವಾರ ಸಹಿತ ... ತೆರಳಿದರು. ... ಶ್ರೀಮನ್ಮಹಾರಾಜರವರು ದಯಮಾಡಿ ... ವಿಚಾರ ... ಒಳ್ಳೇ ... ಸಾಧಾರಣ ...

ಇನ್ಸ್‌ಪೆಕ್ಟರ್ ಜಿ. ಪಿ. ... ಮಹಾರಾಜರವರ ... ಸವಾರಿ ... ನೋಡಿ ... ರೆಂದು ತಿಳಿಸಲು ಉತ್ಸಾಹಪಡುತ್ತೇನೆ. ಈ ಮಹನೀಯರು ಪರರಾಗಿಯೂ ಜನಗಳ ಮೇಲೆ ಪ್ರೀತಿ ತುಂಬಿದವರಾಗಿಯೂ ತಮ್ಮ ಕೆಲಸಗಳಲ್ಲಿ ಜಾಗ್ರತೆಯುಳ್ಳವರಾಗಿಯೂ ಇದ್ದಾರೆ.—ಇಲ್ಲಿನ ರೈತರ ಗೋಳಾಟವನ್ನು ಕುರಿತು ಎಷ್ಟು ಹೇಳಿದರೂ ಕಮ್ಮಿ. ಕಾರಣವೇನೆಂದರೆ, "ಕುದುರೆಗಳ ಫಾರಮನ್ನು ... ಭಾಗದಲ್ಲಿ ಸುಮಾರು ... ಎಕರೆ ಜಮೀನನ್ನು ... ರೈತರಿಂದ ಸರ್ಕಾರದವರು ಬಿಡಿಸಬೇಕಾಗಿದೆ. ಹೀಗೆ ಬಿಡಿಸಿದರೆ ಜೊಳ್ಳೆಯೋ ಸರ್ಕಾರದವರು ಅಲ್ಪಸ್ವಲ್ಪ ... ಕೊಡುತ್ತಾರೆ. ಅವರು ಕೊಡುವದಕ್ಕೆ ... ಹೀಗೆ ... ಜಮೀನು ಸಿಕ್ಕುವದಿಲ್ಲವಲ್ಲಾ! ... ಜಮೀನು ಕೊಡುತ್ತೇನೆಂದು ಹೇಳಿದರೆ ... ಪ್ರಾಣ ... ಕಟ್ಟಿಕೊಂಡು ಯಾವ ದೇಶಕ್ಕೆ ಹೋಗಿ ಅಗಟುಬದಿರೋಣ?" ಎಂದು ... ಚಿಂತೆಯಿಂದ ... ಶ್ರೀಮನ್ಮಹಾರಾಜರವರ ... ಇಲ್ಲಿಗೆ ದಯಮಾಡಿದ್ದಾಗ ಅವರ ... ಅನೇಕರು ತಮ್ಮ ಮಕ್ಕಳು ಸಂಸಾರಗಳನ್ನು ಕಟ್ಟಿಕೊಂಡು ಕಾದಿರಲು, ಪೊಲೀಸಿನವರಿಂದ ... ಯಾವ ಪ್ರಯೋಜನವನ್ನೂ ಹೊಂದಲಿಲ್ಲ. ಈಗ ಅಂಬುವವರ ಮೇಲೆ ... ದಿನನಿತ್ಯವಾಗಿ ಕೆಲವರು ... ಅನೇಕ ... ರೈತರ ... ನೋಡಲು ... ದಯಾಳುಗಳಾದರೆಂಬು ... ಜನಗಳ ಕಷ್ಟ ... ಈ ಬಡ ರೈತರ ದುಃಖವನ್ನು ಶಮನಪಡಿಸುವರೆಂದು ... ಸಿಕೊಂಡಿದ್ದೇನೆ.—ಕೊತ್ತಗೆರೆ ಸಮ್ಮತಿಯ ... ಸಂಸಾರ ... ಎಂಬವರು ... ಮಾರ ... ಹೋಗಿ ಕಾಲು ಜಾರಿ ಮೃತ್ಯುವಿನ ಪಾಲಾದರು. ಇವರ ವಿಯೋಗ ದುಃಖವನ್ನು ಅನುಭವಿಸಲು ... ಮೂವರು ಮಕ್ಕಳಿದ್ದಾರೆ. ಇವರಿಗೆ ಸುಮಾರು ೩೦ ವರುಷ ವಯಸ್ಸು. ಇವರ ಮರಣವಾರ್ತೆಯನ್ನು ಕೇಳಿ ... ನಾಡಿನ ... ಹೋದವರು ... ಬಂದಿರುವ ... ಆತ್ಮಹತ್ಯ ... ಪ್ರಯತ್ನಪಟ್ಟರೂ ಸ್ವಾಮಿಯ ದಯ ... ನೋಡಿ ಮೇಲಕ್ಕೆ ಎತ್ತಿದರಂತೆ. ಬಹಳ ... ಗಿದೆ.—ಕುಣಿಗಲ್ ... ಗೆ ಸೇರಿದ ... ಗೌಡನ ... ಬರುವ ... ರೋಗದ ಕಷ್ಟಪಡುತ್ತಿದ್ದ ... ಹೋಗಿದ್ದಾಗ ... ರೋಗ ಬಂದು ... ಪ್ರಾಣಬಿಡಲು ... ಜನರು ... ಮಳೆ ತಪ್ಪಾಗಿ ... ಬೆಳೆಗಳೆಲ್ಲಾ ... ದನಕರುಗಳಿಗೆ ... ತಕ್ಕಷ್ಟು ... ಅನುಕೂಲವಾಗಿ ಜನರ ... ನಿವಾರಣೆ ಮಾಡಿದೆ.

## ವಿದೇಶ ವರ್ತಮಾನಗಳು.

ವಿಲಾಯತಿಗೆ ಸೇರಿದ ಗೆರ್ಬಾಸ್‌ಬರೋ ಪಟ್ಟಣದಲ್ಲಿ ... ಭಾರೀ ಕಾರ್ಖಾನೆಗೆ ಬೆಂಕಿಬಿದ್ದು, ಯಂತ್ರಗಳು ... ಸುಮಾರು ... ಲಕ್ಷ ರೂಪಾಯಿ ನಷ್ಟವಾಗಿದೆ.

❖❖❖❖

ರಷ್ಯಾ ರಾಜ್ಯದ ... ಎಂಬ ನಗರದಲ್ಲಿ ... ಒಂದು ದೇವಾಲಯವು ... ನಗರವಾಸ್ಯಗಳೂ ಭೂಮಿಯೊಳಗೆ ಸಿಕ್ಕಿರುತ್ತವೆ. ... ಜನರು ಹೋಗಿ ಅವುಗಳನ್ನು ನೋಡಿ ಆಶ್ಚರ್ಯಪಡುತ್ತಿದ್ದಾರೆ.

❖❖❖❖

ಅಮೇರಿಕಕ್ಕೆ ಸೇರಿದ ಪೊರ್ಟ್‌ಲಿಂಗ್ ಪಟ್ಟಣದಲ್ಲಿ ಎರಡು ಗಂಟೆಯವರು ಹತ್ತು ಸಾವಿರ ರೂಪಾಯಿ ... ಪತ್ರಗಳನ್ನು ... ರಿಸಿದರು. ಒಂದು ಪತ್ರವು ಭೂಮಿಯಿಂದ ೩,೦೦೦ ಅಡಿ ಎತ್ತರಕ್ಕೆ ಹಾರಿ ಬಿಡುಮಾಡನವನ್ನು ... ಬಿದ್ದಿತು.

❖❖❖❖

ವಿಲಾಯತಿಯ ಮಹಾರಾಜಾ ಚಕ್ರವರ್ತಿಯವರಿಗೆ ಕಿರೀಟಧಾರಣೆಯ ಉತ್ಸವ ನೆರವೇರುವದಕ್ಕೆ ಮುಂಚೆ ಅವರಿಗೆ ... ಗಿದ್ದ ಕಾಯಿಲೆಯನ್ನು ವಾಸಿಮಾಡಿದ ದೊಡ್ಡ ವೈದ್ಯನಾದ ಸರ್ ಪ್ರೆಡ್ರಿಕ್ ಟ್ರೀವ್ಸ್ ಎಂಬಾತನು ಕಳೆದ ತಿಂಗಳು ಕಾಲವಾದನೆಂದು ತಿಳಿಯುತ್ತದೆ.

❖❖❖❖

ಜರ್ಮನ್ ರಾಜ್ಯದವರಿಗೂ ರಷ್ಯಾದವರಿಗೂ ಯುದ್ಧ ಪ್ರಾರಂಭವಾಗುವದಾಗಿದೆ ಎಂಬ ಸಂಗತಿಯನ್ನು ಕೇಳಿ ... ರಾಜ್ಯದವರು ... ಯೋಚನೆಗಳನ್ನು ... ಒಳ್ಳೇದೆಂದು ... ತಮ್ಮ ಪ್ರಜೆಗಳನ್ನು ಕೇಳುತ್ತಾರೆ. ಪ್ರಜೆಗಳು ಈ ಭಾಗದಲ್ಲಿ ತಮ್ಮ ಅಭಿಪ್ರಾಯವನ್ನು ಅಲ್ಲಿನ ವರ್ತಮಾನ ಪತ್ರಿಕೆಗಳ ಮೂಲಕ ಬರೆದು ಪ್ರಕಟಿಸುತ್ತಿರುವರು.

❖❖❖❖

ರಷ್ಯಾದೇಶದ ಚಕ್ರವರ್ತಿಯವರು ... ಎಂಬ ಪಟ್ಟಣದಲ್ಲಿ ಸರ್ಕಾರದವರ ... ಯಿಲ್ಲದೆ ಯಹೂದಿ ಬಂದೂಕು ... ಅವುಗಳನ್ನು ... ಮಾಡಿದರು.

ಇವನ್ನು ಅಲ್ಲಿನ ಪ್ರಜೆಗಳು ಒಪ್ಪದೆ ಸಾರ್ವಜನಿಕವಾಗಿ ಗಲಾಟೆ ಮಾಡುತ್ತಲೂ, ಸರ್ಕಾರಿ ಅಧಿಕಾರಿಗಳ ಮೇಲೆ ಬೀಳುತ್ತಲೂ ಇದ್ದಾರೆ.

❖❖❖❖

ಆಪ್ಘಾನಿಸ್ಥಾನದ ... ಪ್ರಾಂತ್ಯದಲ್ಲಿ ... ರಷ್ಯಾದವರಿಗೂ ... ವರಿಗೂ ಯುದ್ಧ ಪ್ರಾಪ್ತವಾಗುವಂತಿದೆ. ಪರರಾಜ್ಯಗಳವರೂ ... ಜರ್ಮನಿಯವರ ಸಹಾಯವನ್ನು ... ರಷ್ಯಾದವರು ... ಮೇಲೆ ಯುದ್ಧ ಮಾಡಬೇಕೆಂದು ಸನ್ನಾಹ ಮಾಡುತ್ತಿದ್ದಾರೆ. ರಷ್ಯಾ ಸೈನ್ಯಗಳೂ ಯುದ್ಧದ ಹಡಗುಗಳೂ ... ಕ್ಕೆ ರವಾನೆಯಾಗಿವೆ. ... ಯುದ್ಧ ನಡೆಯುವದರಲ್ಲಿದೆ ಎಂಬದಾಗಿ ಹೇಳುತ್ತಿರುವರು.

❖❖❖❖

ವಿಲಾಯತಿ ರಾಜ್ಯದ ದೊರೆಗಳಾದ ಎಡ್ವರ್ಡ್ ಚಕ್ರವರ್ತಿಯವರು ... ಐರ್ಲಾಂಡ್ ದ್ವೀಪಕ್ಕೆ ದಯಮಾಡಿದರು. ಅಲ್ಲಿ ಅನೇಕ ಪಟ್ಟಣಗಳಲ್ಲಿ ಸಂಚಾರಮಾಡಿ ಪ್ರಜೆಗಳು ಒಪ್ಪಿಸಿದ ... ಮಾನ ಪತ್ರಿಕೆಗಳನ್ನು ಅಂಗೀಕರಿಸಿ, ... ಸಂತೋಷವನ್ನುಂಟುಮಾಡಿ, ಬಡವರಿಗೆ ಸುಖಭೋಗ... ಬಹಳ ಹಣವನ್ನು ಕೊಟ್ಟು, ಸಕಲ ಪ್ರಜೆಗಳಿಗೂ ... ಹೊಗಳಿಸಿಕೊಳ್ಳುತ್ತಿದ್ದಾರೆ. ಪ್ರಜೆಗಳು ದೊರೆಯನ್ನು ... ಪ್ರೀತಿ ವಾತ್ಸಲ್ಯಗಳಿಂದ ... ಮಾಡಿ ಸಂತೋಷಪಡಿಸಿದರು.

❖❖❖❖

ಅಮೇರಿಕಕ್ಕೆ ರಾಜಧಾನಿಯಾದ ನ್ಯೂಯಾರ್ಕ್ ನಗರದಲ್ಲಿ ಕೆಲವೊಂದು ... ರು ಒಂದು ಸಂಘವನ್ನು ... ದ್ದಾರೆ. ಈ ಸಂಘದ ಸಂಬಂಧಿಗಳು ಪಟ್ಟಣದಲ್ಲಿರುವ ಪ್ರತಿ ಮನೆಗೂ ಆಗಾಗ್ಯೆ ಹೋಗಿ ಯಾರಮನೆಯಲ್ಲಿ ಜನರಿರುವರೋ ಎಂಬದನ್ನು ... ಮಕ್ಕಳ ಪೋಷಣೆಯನ್ನು ಕುರಿತು ... ಬುದ್ಧಿ ವಿವೇಕಗಳನ್ನು ಹೇಳಿಕೊಟ್ಟು, ಅವರು ... ಕಷ್ಟದಲ್ಲಿ ಆಹಾರ ದಿನಸುಗಳನ್ನು ಧರ್ಮಾರ್ಥವಾಗಿ ಕೊಟ್ಟು, ನೋಡಿಕೊಳ್ಳುವರು. ಆ ಪಟ್ಟಣದಲ್ಲಿ ಶಿಶುಗಳ ಸಾವು ಹೆಚ್ಚಾಗಿರುವದನ್ನು ನೋಡಿ, ಜನರು ಈ ಸಂಘವನ್ನು ಏರ್ಪಡಿಸಿದ್ದಾರೆಂದು ತಿಳಿದುಬರುತ್ತದೆ.

❖❖❖❖

ಯೂರೋಪ್ ಖಂಡದ ಅನೇಕ ಕ್ರೈಸ್ತಸಂಘಗಳಿಗೆ ಗುರುಗಳೆನಿಸಿಕೊಂಡಿದ್ದ ಪೋಪ್ ಲಿಯೋ ಎಂಬವರು ಕಳೆದ ... ರೋಮ್ ನಗರದಲ್ಲಿ ಕಾಲವಾದರು. ಇವರಿಗೆ ೯೩ ವರುಷ ವಯಸ್ಸಾಗಿದ್ದಿತು. ಸುಮಾರು ೦೫ ದಿನಗಳವರೆಗೂ ಕಾಯಿಲೆ ಅನುಭವಿಸಿದರು. ... ಪ್ರಜ್ಞೆಯಾಗಿ ... ಹೋಷಣ ... ಹತ್ತಿರ ... "ನಾನು ನನ್ನ ಕರ್ತವ್ಯಂಗಳನ್ನು ... ನೆರವೇರಿಸುತ್ತೇನೆಂಬದಾಗಿ ನನ್ನ ಅಂತರಂಗದಲ್ಲಿ ನನಗೆ ತೃಪ್ತಿಯೂ ಆನಂದವೂ ಉಂಟಾಗಿದೆ" ಎಂಬ ಮಾತನ್ನು ... ಅವರ ಶವವನ್ನು ದರ್ಶನಮಾಡುವದಕ್ಕಾಗಿ ... ದಿಗಳು ರೋಮ್ ನಗರಕ್ಕೆ ಹೋಗಿಬಂದರು.

❖❖❖❖

ಟರ್ಕಿ ಸುಲ್ತಾನರ ಅರಮನೆಯಲ್ಲಿ ... ಬಹು ಭಯಂಕರವಾದ ಆಕೃತ್ಯಗಳು ನಡೆಯಲಾರಂಭವಾಗಿದೆ. ... ದಿನ ರಾತ್ರಿ ... ಮಂದಿಯನ್ನು ರಾಜದ್ರೋಹಿಗಳ ... ರಕ್ಕೆ ಸಾಗಿಸಿದರು. ಇಷ್ಟು ಮಂದಿ ... ರೋ, ಅರಮನೆಯೊಳಗೆ ನಡೆಯತಕ್ಕ ಕಾರ್ಯಗಳೇನೋ ... ಗೊತ್ತಾಗಲಿಲ್ಲ. ಎಲ್ಲರೂ ವಿಸ್ಮಯಪಟ್ಟು ... ಗಿ ಮಾತನಾಡಿಕೊಳ್ಳುತ್ತಿದ್ದಾರೆ. ಇದಲ್ಲದೆ ಅದೇ ರಾಜಧಾನಿಯಾದ ಕಾನ್ಸ್‌ಟಾಂಟಿನೋಪಲ್ ಪಟ್ಟಣದಲ್ಲಿ ಒಂದಾನೊಂದು ಭಾರೀ ... ಕಾಲೇಜೊಳಗೆ ವಿದ್ಯಾರ್ಥಿಗಳೇನೋ ... ಲಭೆಯನ್ನು ... ಸುಲ್ತಾನರು ಸ್ವಸ್ಥಕ್ಕೆ ... ಹುಡುಗರಿಗೂ ಸೈನಿಕರಿಗೂ ವಿದ್ಯಾಶಾಲೆಯಲ್ಲಿ ... ಕದನ ನಡೆದಹಾಗೂ, ಬಹುಮಂದಿ ಹುಡುಗರು ಕೊಲ್ಲಲ್ಪಟ್ಟರಲ್ಲದೆ ಅನೇಕರಿಗೆ ಗಾಯಗಳಾದವಾಗಿಯೂ, ಈಗ ಆ ರಾಜಧಾನಿಯಲ್ಲಿ ಸರ್ಕಾರಿ ಗೂಢಚಾರರ ಸಂಖ್ಯೆಯನ್ನು ... ಪ್ರಕಟವಾಗಿದೆ.

❖❖❖❖

ಗತಿಸಿದ ಪೋಪ್‌ಲಿಯೋ ಎಂಬ ಮತಾಧಿಪತಿಗಳು ... ಅನೇಕರು ಅವರಿಗೆ ನಾನಾ ಸಂದರ್ಭಗಳಲ್ಲಿ ಕಾಣಿಕೆ ಕೊಟ್ಟ ಬಹುಮಾನಗಳೂ ... ರೂಪಾಯಿ ಆಗಬಹುದು. ... ಪಾದ ಪದ್ಮ ... ಗಳು ... ಉಂಗುರಗಳೂ, ... ನಗಗಳೂ ... ಲ್ಲವೆ. ... ಈ ಗುರುಗಳಿಗೆ ಸುಮಾರು ... ಲಕ್ಷ ರೂಪಾಯಿ ... ಒಂದು ಉಂಗುರವನ್ನು ಒಪ್ಪಿಸಿದರು. ... ಪೆಟ್ಟಿಗೆಯಲ್ಲಿ ... ಬಹುಮಾನಗಳಲ್ಲಿ ಸರ್ವೋತ್ಕೃಷ್ಟವಾದ ಒಂದು ... ಆದರಲ್ಲಿ ... ಗುರುಗಳಿಗೆ ... ಇಟ್ಟುಕೊಂಡು ...

## ಒಳ್ಳೇ ಔಷಧಗಳು.

ಬಡವರ್ಯಾರಿಗೆ ಸುಖಾಂಜನವು.—ಕಣ್ಣಿಗಾಗಿ ಆಥವಾ ಬಹು ಕಾಲದಿಂದ ಕಣ್ಣಿನಲ್ಲಿ ಇರುತ್ತಿದ್ದ ಎಲ್ಲಾ ಪ್ರಕಾರದ ಬಾಧೆಗಳು ಈ ಔಷಧದ ಬಹು ಬೇಗನೆ ಗುಣ ಹೊಂದುವವು. ಕಣ್ಣಿನಲ್ಲಿ ಕೆಂಪೇರಿ ಹುಣ್ಣು, ಕಣ್ಣಿನಿಂದ ನೀರು, ಪಿಸರು ಬರುತ್ತಿರುವದೂ, ಉರಿ, ಪೊರೆಗೆ ಜೋತುಬಿದ್ದು ಆಗದೆ ಇರುವದೂ, ದೃಷ್ಟಿಮಾಂದ್ಯ ಮುಂತಾದ ವಿಶಿಷ್ಟ ವ್ಯಾಧಿಗಳು ಗುಣ ಹೊಂದುತ್ತವೆ. ಕ್ರಯ ೧ ಶೀಶೆಗೆ ೬ ಆ. ಪೋಸ್ಟು ಖರ್ಚು ಅಣೆ ೩.

ಬಾಲಸಂಜೀವಿನಿ ತೈಲ (ಮಕ್ಕಳಿಗೋಸ್ಕರ ತಲೆ).—ಇದನ್ನು ಹಚ್ಚುವದರಿಂದ ಮಕ್ಕಳಿಗೆ ಸಂಧಿವಾತ, ಜ್ವರ, ಕೆಮ್ಮು, ಶೀತ, ಗಂಟಲು ಬೇನೆ ಮುಂತಾದ ರೋಗಗಳು ಗುಣ ಹೊಂದುವವು. [illegible] ಶೀಶೆಗೆ ೧ ರೂ. ಖರ್ಚು ಅಣೆ ೩.

ಗರ್ಭಿಣೀ ರಕ್ಷಾಮೃತವು.—[illegible] ಗರ್ಭಿಣಿಯರಿಗೆ ಎಂಥ ಕಾಲದಲ್ಲಿ ಗರ್ಭಪಾತವಾಗದಂತೆ ತಡೆದು ಗುಣ ಹೊಂದುವದು. ಶೀಶೆಗೆ ಅಣೆ ೮, ಖರ್ಚು ೦ ರಿಂದ ೩ ವರೆಗೆ ಅಣೆ ೩.

ಧನ್ವಂತರಿ ವನಸ್ಪತಿ ತೈಲ (ಬಾಹ್ಯೋಪಯೋಗಕ್ಕೆ ಮಾತ್ರ).—ಅರ್ಧ ಶಿರಸ್ಸಿನ ಶೂಲೆ ಮತ್ತು ಭಗಂದರ ವ್ಯಾಧಿಯವರ ಶರೀರದ ಒಳಗೆ [illegible] ಬಹು ಶೀಘ್ರವಾಗಿ ಹರಿದುಹೋಗಿ ರೋಗವು ಗುಣವಾಗುವದು. ಕ್ರಯ ರೂ. ೧. ಖರ್ಚು ಅಣೆ ೩.

[illegible] ವಿಷಯಗಳ ಬಗ್ಗೆ ನಮ್ಮ ಕ್ಯಾಟ್‌ಲಾಗು ತರಿಸಿ ಓದಿ ನೋಡಿರಿ. ನಮ್ಮ ವಿಳಾಸವೇನಂದರೆ.—

ಆಯುರ್ವೇದ ಮತ್ತು ಕಂಪನಿ, ಬಳ್ಳಾರಿ, ಉತ್ತರ ಕನ್ನಡ ಜಿಲ್ಲಾ.

## ಹೋಮೋಸಿಯಾ.

ಬಳ್ಳದ [illegible]

ತಗಲುತ್ತಲೇ ನೋವು ಮಾಯವಾಗುತ್ತೆ.

ಈ ಔಷಧಿಯು ಮನೆ, ಆರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಪ್ರಪಂಚದಲ್ಲಿ ಇಲ್ಲವೆಂಬುವದು ರುಜುವಾತಾಗಿದೆ.

ಈ ತೈಲವು ಪಕ್ಕಾಲದಲ್ಲಿ ಜೀವರಾಶಿಗಳಿಗೆ ಸುಲಭವಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಮೂಲವ್ಯಾಧಿ, ಹುಣ್ಣು, ಬೊಬ್ಬೆ, ಕಜ್ಜಿ, ವಾಯುಗಳು, ಸರ ಹೊರಳುವದು, ಬಾವುಗಳು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಸುಟ್ಟಗಾಯ, ಕಜ್ಜಿಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಜೇಳು ಕಡಿದದ್ದು, ಚಿಬ್ಬುಗಳು, ಬೆಂಕಿಯಲ್ಲಿ ಸುಟ್ಟದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ—ಸಣ್ಣ ಡಬ್ಬಿ ಒಂದಕ್ಕೆ ೧ ರೂ. ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬರುತ್ತದೆ. ರೂ. ೨—೮ ಅಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬರುತ್ತೆ.

*********

### ಹೋಮೋಸಿಯಾ ಯಂಬ್ರೊಕೇಷನ್.

ಈ ತೈಲವು ಕಲೆ ನೋವುಗಳಿಗೆ ಉಪಯೋಗಿಸತಕ್ಕದ್ದು. ಹತ್ತು ಬಿಸಿ ಕಾವು ಇದನ್ನು ಹಚ್ಚತಕ್ಕದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳು ಹೆಚ್ಚು ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇರಿಕೊಳ್ಳಬಲ್ಲದು. ಡಬ್ಬಿಗಳ ಬೆಲೆ ಒಂದಕ್ಕೆ ೮ ಅಣೆಯೂ, ೧ ರೂ. ೭೩ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿದರೆ ಟಪ್ಪಾಲ್ ಖರ್ಚು ಮಾಫಿ, ಎಲ್ಲಾ ಶಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರವೂ, ಸರ್ಟಿಫಿಕೇಟುಗಳೂ ಬೇಕಾದವರು ಕೋಟಿಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೬೩ ಸೆಕೆಂಡು ಬೀಚ್ ಲೈನ್, ಮದರಾಸ್.

## ಶ್ರೀ ಕೃಷ್ಣವಿಲಾಸ ಪ್ರೆಸ್.

40

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್ ಫಾರಂ, ವಿಸಿಟಿಂಗ್ ಕಾರ್ಡು, ನೋಟೀಸ್ ಫಾರಂ, ಬುಕ್ ಬೈಂಡಿಂಗ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ನೊಗಸಾಗಿಯೂ, ಶೀಘ್ರವಾಗಿಯೂ ಸುಲಭ ಕ್ರಯಗಳಿಗೆ ಮಾಡಲ್ಪಡುತ್ತವೆ.

ಕನ್ನಡ, ತೆಲುಗು, ಮುಂತಾದ ಭಾಷೆ ಪುಸ್ತಕಗಳು; ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು; ಇನ್ನು ಅನೇಕವಾದ ಹಲವು ಬಣ್ಣಗಳ ಪ್ರಿಂಟು ಕೆಲಸಗಳು ಇಂಗ್ಲೀಷು ಪ್ರೆಂಚಿನಂತೆ ಬಹು ಅಂದವಾಗಿ ಮಾಡಲ್ಪಡುತ್ತವೆ.

ಇಂಡಿಯಾದ ಬಡತನನಿವಾರಣಾರ್ಥವಾಗಿ ಬೇಕಾಗಿರುವ ಕರ್ಪೊರೇಷನ್, ಬ್ಯಾಂಕ್, ಚಿತ್ರ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೂ ಅವರಿಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯತಿಯಿಂದ ಹೊಸದಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸುತ್ತೇವೆ. ಈ ಯಂತ್ರಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ಕಮ್ಮಿಕ್ರಯವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಇಚ್ಛಿಸುವವರು ಅಪೇಕ್ಷಿಸುವವರು ಟಪ್ಪಾಲು ಹಾಸಲನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯುವವರು ನಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಅಗ್ರಹಾರ ರೋಡಿನಲ್ಲಿ ದೊಡ್ಡ ಬೀದಿ ೩೩ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಮತ್ತು ಕಂಪನಿ,

ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

### ಜ್ವ ರ ಹ ರಿ.

43

ಇದು ಸಾಧಾರಣ ಜ್ವರ, ಚಳಿಜ್ವರ, ಮರುಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿಕ್ಕಮಗಳೂರು ಆಸ್ಪತ್ರೆ ಅಸಿಸ್ಟೆಂಟ್ ಸರ್ಜನರಾದ ಮಿಸ್ಟರ್ [illegible] ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕಳುಹಿಸಿದ ದಿವಸಗಳ ಹಿಂದೆ ಕಳುಹಿಸಿಕೊಟ್ಟ ೬೦ ಶೀಸೆಗಳ ಸೀಸೆಯು ತೀರಿಹೋಯಿತು. ಇದನ್ನು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಶೀಘ್ರವಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಚಿದೆ ಬೇಕಾಗಿರುವದರಿಂದ ದಯವಿಟ್ಟು ಇನ್ನೊಂದು ೬೦ ಶೀಸಿನ ಸೀಸೆ ಜ್ವರಹರಿ ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ಒಂದಕ್ಕೆ ೮ ಅಣೆ, ೧ ರೂ., ೧—೮ ರೂ., ೩ ರೂ., ೧೦ ರೂ.; ಪತ್ತೆಯನ್ನು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

*********

### ಓ ಮಂ ಕ ಪೂ ರ ದ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆನೋವು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮುಖ್ಯವಾಗಿ ಪರಿಣಮಿಸಿ, ಕ್ಷಣದಲ್ಲೇ ಗುಣಪಡಿಸುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪರವಾಗಿ ಜ್ವರಹರಿ ಎಂಬ ಔಷಧದಂತೆ ಶೀ. ಸೀಸೆಗಳಲ್ಲಿ ದೊರಕುವದು.

ಕಡೂರು ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ನಿಯವರ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಪಾತ್ರಗಳಲ್ಲಿ, ಔಷಧ ವ್ಯಾಪಾರಿಗಳಲ್ಲಿ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರನಲ್ಲಿ ವಿಶೇಷ:—

ಜೆನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

### ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೫—೭—೧೯೦೩ ರಿಂದ ೩೧—೭—೧೯೦೩ ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನ ಸಂಖ್ಯೆ [illegible] |
|---|---|---|---|
| ಬೆಂಗಳೂರು ಪಟ್ಟಣ | | | |
| ಮೈಸೂರು ,, | 31 | 18 | 3 |
| ಬೆಂಗಳೂರು ಡಿಸ್ಟ್ರಿಕ್ಟು | 88 | 88 | 30 |
| ಮೈಸೂರು ,, | 10 | 14 | 56 |
| ಕೋಲಾರ್ ,, | 33 | 33 | 39 |
| ಕೋಲಾರ್ ಚಿನ್ನದ ಗಣಿಗಳು | 4 | 3 | 7 |
| ತುಮಕೂರು ಡಿಸ್ಟ್ರಿಕ್ಟು | 36 | 24 | 41 |
| ಹಾಸನ ,, | 36 | 15 | 40 |
| ಚಿತ್ರದುರ್ಗ ,, | 67 | 51 | 103 |
| ಕಡೂರ್ ,, | 1 | 1 | |
| ಶಿವಮೊಗ್ಗ ,, | 30 | 30 | 65 |
| ಒಟ್ಟು. | 266 | 180 | 387 |

ಶಾಲಿವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರದ ಶ್ರಾವಣ ಶುದ್ಧ ತ್ರಯೋದಶಿ ಗುರುವಾರದಿಂದ ಶ್ರಾವಣ [illegible] ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ನೇ ಇಸವಿ ಆಗಸ್ಟು.

| ತಾ. | ವಾರ | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. |
|---|---|---|---|---|---|
| 6 | ಗುರು | ತ್ರಯೋ | 7-48 | ಪೂಷಾ | 11-50 |
| 7 | ಶುಕ್ರ * | ಚತುರ್ದ | 12 40 | ಉ.ಷಾ | 18-48 |
| 8 | ಶನಿವಾರ | ಪೌರ್ಣಮಿ | 17 10 | ಶ್ರ | 25 2. |
| 9 | ರವಿ ‡ | ಪಾಡ್ಯಮಿ | 21 24 | ಧ | 31 32 |
| 10 | ಸೋಮ | ಬಿದಿಗೆ | 26 26 | ಶ | 36 56 |
| 11 | ಮಂಗಳ | ತದಿಗೆ | 29 50 | ಪೂಭಾ | 41 20 |
| 12 | ಬುಧ ¶ | ಚೌತಿ | 31 28 | ಉ.ಭಾ | 44 48 |

* ಪೂರ್ಣಿಮಾ, ವರಮಹಾಲಕ್ಷ್ಮೀ ವ್ರತ ಪ್ರತಿಪತ್ತಿ ಯಗ್ನ [illegible] ಪಾಕರ್ಮ. ‡ ಗಾಯತ್ರೀ ಜಪ. ¶ ಸಂಕಷ್ಟಹರ ಚತುರ್ಥಿ ಕೃಷ್ಣ [illegible]

### ಪೇಟೆ ಧಾರಣೆ.

| ದಿನಸಿ. | | ಮೈಸೂರು | ಬೆಂಗಳೂರು |
|---|---|---|---|
| ಒಳ್ಳೇ ಅಕ್ಕಿ ಪಲ್ಲಾ ಒಂದಕ್ಕೆ | ರೂ. | ೧೦-೮-೦ | ೧೯ |
| ಕೆಂಪು ಅಕ್ಕಿ ಅವಲ್ | .. | ೧೯ ೪-೦ | ೯೦ |
| ,, ಮಧ್ಯಮ | .. | ೯-೮-೦ | ೧[illegible] |
| ಬಾಸ್ಮತಿ ಅಕ್ಕಿ | .. | ೯-೪-೦ | ೯[illegible] |
| ಸಣ್ಣಕ್ಕಿ ಅವಲ್ | .. | ೧೨-೮-೦ | ೯[illegible] |
| ,, ಮಧ್ಯಮ | .. | ೧೨-೦-೦ | ೧೧ |
| ಹೊಗರಿ ಬೇಳೆ ಪಲ್ಲಾ ಒಂದಕ್ಕೆ | .. | ೧೩ ೦ ೦ | ೧[illegible] |
| ,, ಮಧ್ಯಮ | .. | ೧೨-೮-೦ | ೯[illegible] |
| ಕೈರ ರಾಗಿ ಪಲ್ಲಾ ಒಂದಕ್ಕೆ | .. | ೩-೧೪-೦ | [illegible] |
| ಕಾರ್ರಾಗಿ | .. | ೩-೮-೦ | [illegible] |
| ಜೋಳ | .. | ೩-೧೦-೦ | [illegible] |
| ಹುಲಸಂದಿ ಪಲ್ಲಾ ಒಂದಕ್ಕೆ | .. | ೭-೧೨-೦ | ೮ |
| ಬಿಳೀ ಅವರೆ | .. | ೭ ೦-೦ | [illegible] |
| ಹೆಸರು | .. | ೮-೦-೦ | [illegible] |
| ಉದ್ದು | .. | ೮ ೪ ೦ | [illegible] |
| ಕಡಲೆ | .. | ೯-೮-೦ | ೧[illegible] |
| ಎಳ್ಳು | .. | ೧೩-೧೨ ೦ | ೧೦[illegible] |
| ಹುರುಳಿ | .. | [illegible]-೦ ೦ | [illegible] |
| ಹರಳು ೧೨ ಸೇರಿಗೆ | .. | ೯-೧೨-೦ | [illegible] |
| ಸೀಗೇಕಾಯಿ ಮಣ ಒಂದಕ್ಕೆ | .. | ೧-೮-೦ | ೧ |
| ಕೊಬ್ಬರಿಕಾಯಿ | .. | ೨-೮-೦ | [illegible] |
| ,, ಮಧ್ಯಮ | .. | ೨-೪ ೦ | ೧ |
| ಬೆಲ್ಲ ದೊಡ್ಡ ಅಚ್ಚು | .. | ೪-೮-೦ | ಮ ೧ |
| ಒಳ್ಳೆಣ್ಣೆ ಮಣ ಒಂದಕ್ಕೆ | .. | [illegible]-೦ ೦ | [illegible] |
| ಹರಳೆಣ್ಣೆ ,, | .. | [illegible]-೧೨-೦ | [illegible] |
| ಕೊತ್ತುಂಬರಿ ಪಲ್ಲ ಒಂದಕ್ಕೆ | .. | [illegible]-೮-೦ | [illegible] |
| ಉಪ್ಪು ,, | .. | ೯-೦-೦ | ೮[illegible] |
| ಹುಣಸೇ ಹಣ್ಣು | .. | [illegible]-೧೪-೦ | [illegible] |
| ,, ಹಳೇದು | .. | [illegible]-೧೦-೦ | [illegible] |
| ತುಪ್ಪ | .. | ೧[illegible]-೧೨-೦ | [illegible] |
| ಸೀಮೆಯೆಣ್ಣೆ ಪೆಟ್ಟಿ ಒಂದಕ್ಕೆ | .. | [illegible]-೯-೦ | [illegible] |
| ತೆಂಗಿನಕಾಯಿ ೧೦೦ ಕ್ಕೆ | .. | [illegible]-೪-೦ | [illegible] |
| ಅಡಕೆಕಾಯಿ ಮಣ ಒಂದಕ್ಕೆ | .. | [illegible]-೪ ೦ | [illegible] |
| ಎಲೆಯಡಕೆ ಮಣ ಒಂದಕ್ಕೆ | .. | [illegible]-೧೪-೦ | [illegible] |
| ಚಿನ್ನ (ಪವನ್) ಒಂದಕ್ಕೆ | .. | ೧[illegible]-[illegible] | [illegible] |
| ,, ,, ಪಸಿಮೆ | .. | ೧[illegible]-೮-೦ | [illegible] |
| ,, ,, ಗಟ್ಟಿ ತೊಲ ಒಂದಕ್ಕೆ | .. | [illegible]-೦-೧ | [illegible] |
| ಬೆಳ್ಳಿ ಗಟ್ಟಿ ತೊಲ ೧೦೦ | .. | [illegible]-೭-೦ | [illegible] |

Printed and Published by the Rev. E. W. T[illegible] the Proprietor and Manager, Wesleyan Mission, Mysore. C. 5/1903

# ವೃತ್ತಾಂತ ಪತ್ರಿಕೆ.

REGISTERED. M. 20.

ಕ್ರಯ ೧ ದುಡ್ಡು —:೦:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೭ — ಮೈಸೂರು—ಸನ್ ೧೯೦೩ ನೇ ಇಸವಿ ಆಗಸ್ಟ್ ತಾರೀಖು ೧೩ ನೇ ಗುರುವಾರ. — ಸಂಚಿಕೆ ೧೧



## ಶಿವಮೊಗ್ಗ ಡಿಸ್ಟ್ರಿಕ್ಟ್

6

ಪುಸ್ತಕಗಳೂ,

ಶಾಸನದ ಟೋಪಿಗಳೂ,

ಲೇಖನ ಸಾಮಗ್ರಿಗಳೂ

ಕ್ರಯಕ್ಕೆ ದೊರೆಯುತ್ತವೆ.

ಪ್ರೊಪ್ರೈಟರ್:—

ಮ್ಯಾನೇಜರ್, ಮಿಷನ್ ಬುಕ್ ಡಿಪೋ,

ಶಿವಮೊಗ್ಗ.

## ಸ್ಟಾಂಡರ್ಡ್ ಲೈಫ್ ಅಸ್ಯೂರೆನ್ಸ್ ಕಂಪೆನಿ.

4

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಇಂಡಿಯಾ ದೇಶದಲ್ಲಿ ಲೈಫ್ ಇನ್ಸ್ಯೂರೆನ್ಸ್ ಯಾನೆ ಜೀವ ಮಾನವನ್ನು ಭೀಮಾ ಪಡಿಸಿಕೊಳ್ಳುವ ಕಂಪೆನಿಗಳಲ್ಲಿ ಇದು ಬಹು ಹಳೇದ್ದಾಗಿಯೂ ಹೆಚ್ಚಾದ ಬಂಡವಾಳವುಳ್ಳದ್ದಾಗಿಯೂ ಇದೆ.

ಭೀಮಾದಾರರಾಗತಕ್ಕವರು (ಲೈಫ್ ಇನ್ಸ್ಯೂರ್ ಮಾಡತಕ್ಕವರು) ಈ ಕಂಪೆನಿಯ ಚಂದಾ ದರ, ಷರತ್ತುಗಳು ಮೊದಲಾದವುಗಳನ್ನು ಇತರ ಕಂಪೆನಿಯವುಗಳೊಡನೆ ಹೋಲಿಸಿನೋಡಿದರೆ ಇಲ್ಲಿ ಜೀವಮಾನವನ್ನು ಭೀಮಾ ಮಾಡುವವರಿಗೆ ಎಷ್ಟು ಸೌಕರ್ಯಗಳುಂಟೆಂಬುದು ಗೊತ್ತಾಗುವುದು.

ಈ ಕಂಪೆನಿಯ ಭೀಮಾ ನಿಬಂಧನೆಗಳು ಬಹು ಅನುಕೂಲವಾದವು. ಭೀಮಾದಾರರುಗಳಿಗೆ ಜೆಹಾಸಯನ್ನುಂಟುಮಾಡುವ ನಿರ್ಬಂಧಗಳೇನೂ ಇಲ್ಲ.

ಕ್ಲುಪ್ತವಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲೇ ಪಾಲಿಸಿದಾರನ ಮರಣಾನಂತರವಾಗಲಿ ೨,೦೦೦ ರೂಪಾಯಿಗಳನ್ನು ಕಂಪೆನಿಯವರು ಕೊಡುವ ಲಾಭಸಹಿತವಾಗಿ ಪಡೆಯಬೇಕಾದರೆ ಭೀಮಾದಾರನು ಕಂಪೆನಿಗೆ ಕೊಡಬೇಕಾದ ಚಂದಾ ವಿನ ದರಗಳ ಪೈಕಿ ಕೆಲವನ್ನು ಇಲ್ಲಿ ನೋಡಿ.

| ಪಾಲಿಸಿ ತೆಗೆಯುತ್ತಿರುವ ವಯಸ್ಸು. | ೫೦ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತವಾದರೆ ಆಗ್ಗಾಗಲಿ ೨,೦೦೦ ರೂ. ಪಡೆಯಬೇಕಾದರೆ ಮಾಹೆಯಾನ ಕಂಪೆನಿಗೆ ಕೊಡುವದು. | ೫೫ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಯನ್ನು ಪಡೆಯಬೇಕಾದರೆ ಮಾಹೆಯಾನ ಕಂಪೆನಿಗೆ ಕೊಡುವದು. |
|---|---|---|
| ೨೦ | ರೂ. ೩—೧೨—೮ | ರೂ. ೩—೦—೦ |
| ೨೫ | ,, ೩—೧೫—೪ | ,, ೩—೧೪—೦ |
| ೩೦ | ,, ೯—೦೨—೮ | ,, ೮—೨—೦ |
| ೩೫ | ,, ೧೨—೧೪—೮ | ,, ೧೦—೧—೪ |
| ೪೦ | | ,, ೧೩—೪—೮ |

೨,೦೦೦ ರೂ. ಗಿಂತಲೂ ಹೆಚ್ಚಾದದ್ದಕ್ಕಾಗಲಿ ಕಡಮೆಯಾದ್ದಕ್ಕಾಗಲಿ ವಯಸ್ಸಿನಲ್ಲಿ ಹೆಚ್ಚು ಕಡಮೆ ಇದ್ದರಾಗಲಿ ಚಂದಾ ದರವೇನೆಂಬುದನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಇದುವರೆಗೆ ಜಾರಿಯಲ್ಲಿದ್ದ ಚಂದಾ ದರಗಳನ್ನು ಕಡಮೆ ಮಾಡುತ್ತೇವೆ. ಬಾಲ್ತಿ ವರ್ಷಕ್ಕೆ ತಯಾರುಮಾಡಿರುವ ಹೊಸ ಚಂದಾ ಪಟ್ಟಿಯನ್ನೂ ಭೀಮಾ ದರಖಾಸ್ತು ಫಾರಂಗಳನ್ನೂ ಇದೇ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಎಂ. ಸೂರ್ಯನಾರಾಯಣಪ್ಪ,

ಕಮಿಷನ್ ಮತ್ತು ಜನರಲ್ ಏಜೆನ್ಸಿ,

ಶಿವಮೊಗ್ಗ.

### ಬೇಕಾಗಿದೆ.

8

ಕೋಲ್ಲೆಗಾಲದ ಗಂಡು ಹುಡುಗರ ಸ್ಕೂಲಿಗಾಗಿ ಕನ್ನಡ ಕಲಿಸಿಕೊಡುವ ಒಬ್ಬ ಮಾಸ್ಟರು ಬೇಕು. ಕ್ರೈಸ್ತರಾದರೆ ಉತ್ತಮ. ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

"ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು.

### ಸರಸ್ವತೀಶರ ಕಸ್ತೂರಿ ಮಾತ್ರೆಯು.

10

ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥಾವರಿಗೆ ಅತ್ಯಂತ ಉಪಯುಕ್ತವಾದದ್ದು. ಈ ಮಾತ್ರೆ ೧—೨ ತಾಂಬೂಲದ ಸಂಗಡ ಸೇವಿಸುವದರಿಂದ ಬಾಯಿಯ ಸುವಾಸನೆಯುಂಟಾಗಿ ಬಾಯಿಯ ದುರ್ಗಂಧ, ಹೋಗಿ ಅಜೀರ್ಣ, ಉಷ್ಣರೋಗ, ಬಾಯಿಯ ಹೊಲ್ಲು, ಉಗ್ಗಿಸುತ್ತಾ ಮಾತಾಡುವದು, ವಾಯು, ಶೀತ, ಪಿತ್ಥ, ಮಲಬದ್ಧ, ದಂತದೋಷ, ಬಾಯಿಹುಣ್ಣು, ಹಸಿವು, ಜ್ವರ, ಧಳ, ಹೆಗಡು, ತಲೆಬೇನೆ ಇತ್ಯಾದಿ ಅನೇಕ ರೋಗಗಳಿಗೆಲ್ಲಾ ಉಪಯುಕ್ತವಾದಂತಿರುವದು. ಹೆಂಗಸರ ಗುಪ್ತವಾದ ಅನೇಕ ಜಾಡ್ಯಗಳಿಗೆ ವಜ್ರಾಯುಧದಂತಿರುವದು. ಚಿಕ್ಕ ಮಕ್ಕಳಿರುವ ಮನೆಯಲ್ಲಿ ಈ ಮಾತ್ರೆಯು ಸಂಜೀವನವು. ಈ ಮಾತ್ರೆಯು ನಿಮ್ಮಲ್ಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸ್ವಾಧೀನದಲ್ಲಿದ್ದಂತೆಯೇ. ೨೦೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೫ ಆಣೆ, ೫ ಆಣೆ ಬಿಷಧವು ೨ ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವು ನಮಗೆ ಬರೆಯುವದಾಗಿ ಬಲಾತ್ಕಾರಪಡಿಸುವದು.

ಸಿ. ಪಿ. ಅಂಡ್ ಕಂಪೆನಿ, ಬೆಂಗಳೂರು ಸಿಟಿ.

## ROBINSON'S PATENT BARLEY.

## ರಾಬಿನ್‌ಸನ್‌ಯವರ ಬಾರ್ಲಿ ರೊಟ್ಟಿ.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಎವೆಗೋಧಿಯಿಂದ ಮಾಡಿದೆ. ಹಸ್ತಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾರಾದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

## MELLIN'S FOOD.

ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

72

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮಾಂಸಖಂಡಗಳೂ ಚೆನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಕವಾದುಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಪಾಕ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಕೂಸುಗಳಿಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ಹಿಟ್ಟು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಿಡುಬಿಡದ ಕಾಲದಲ್ಲಿಯೂ ಶೈಶವದಲ್ಲಿಯೂ ಒದಗುವ ಮಿಕ್ಕಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುರುತುಪದಾರ್ಥಗಳು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ಪಥ್ಯಕರವಾದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ವೃದ್ಧಿಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ತಕ್ಕಷ್ಟು ಮಟ್ಟಿಗೆ ಕಡಮೆಮಾಡುತ್ತದೆ.

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಶಾಪುಗಳಿಗೂ ಬರೆದು ತರಿಸಿಕೊಳ್ಳಬಹುದು:—

ಮದ್ರಾಸ್:—ಮೆ। ಕಾಪಸಿ ಬಿನ್‌ಬಾ ಬ್ರದರ್ಸ್.

ಬೊಂಬಾಯಿ:—ಮೆ। ಲೇಡಂ ಆಬೆರ್‌ಕ್ರಾಂಬಿ ಕಂಪೆನಿ.

ಕಲ್ಕತ್ತಾ:—ಮೆ। ಮೆಕ್ಕಿನ್‌ಜಿ ಲಯಲ್ ಕಂಪೆನಿ.

ಕೋಲಂಬೊ:—ಮೆ। ಹಾರ್ ವಿಲ್ಸನ್ ಕಂಪೆನಿ.

ಕರಾಚಿ:—ಮೆ। ಎಚ್. ಜೆ. ರುಸ್ತುಂಜಿ ಕಂಪೆನಿ.

ಬರ್ಮಾ:—ಮೆ। ಓಕ್ ಕಂಪೆನಿ.

ರಂಗೂನ್—ಲೇಡಂ ಬ್ಲಾಕ್ ಕಂಪೆನಿ.

## ಸ್ಕೂಲ್ ವಿದ್ಯಾರ್ಥಿಗಳಿಗೆ.

3

೧೯೦೩ ನೆ ಲೋವರ್ ಸೆಕೆಂಡರಿ ಕನ್ನಡ ಟೆಕಸ್ಟ್ ಮ॥ ಶ್ರೀ ವಾತ್ಸ್ಯಜನರ ಹಿಂದೂದೇಶದ ನಾಗರಿಕ ೧೦–೧೧–೧೩ ನೇ ಅಧ್ಯಾಯಗಳಿಗೆ ನೋಟ್ಸ್, ಮ॥ ಎಸ್. ಜಿ. ನರಸಿಂಹಾಚಾರ್ಯರು, ಮತ್ತು ಮ॥ ಟಾಪು ಸುಬ್ಬರಾವ್ ಬಿ. ಎ. ಇವರಿಂದ ಮ॥ ಭಾಭಾ ಸಾಹೇಬರವರ ಅಪ್ಪಣೆ ಮೇರೆ ರಚಿಸಲ್ಪಟ್ಟಿರುವದು. ಕ್ರಯ ೭ ಆಣೆ ಮತ್ತು ೧೨ ಪ್ರತಿಗೆ ರೂ ೧ ೮–೦, ೬ ಪ್ರತಿಗೆ ೧–೦–೦. ವಿಳಾಸ.— ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್, ಮೈಸೂರು.

## ೧೯೦೩, ಸಿದ್ಧವಾಗಿದೆ. ಕ್ರಯ ೪ ಆಣೆ.

10

೧೯೦೩ನೇ ಇಸವಿ ಲೋವರ್ ಸೆಕೆಂಡರಿ ಕನ್ನಡ ಟೆಕ್ಸ್ಟಿನ ನೋಟ್ಸು. ೧೪೫ ನೇ ಪದ್ಯದಿಂದ ೩೦೭ ನೇ ಪದ್ಯದ ವರೆಗೂ ಇರುತ್ತೆ. ಗದ್ಯಕಾವ್ಯದ ನೋಟ್ಸೂ ಸೇರಿದೆ. ಅರ್ಥ, ತಾತ್ಪರ್ಯ ಸಂಧಿ, ಸಮಾಸ, ಅವಯವಾರ್ಥ, ಭಾವಾರ್ಥ, ನಾನಾರ್ಥ, ಪೂರ್ವಕಥೆ, ವ್ಯಾಕರಣವಿಶೇಷ, ಪ್ರಶ್ನೋತ್ತರ, ಮುಂತಾಗಿ ಪರೀಕ್ಷೆಗೆ ಬೇಕಾಗತಕ್ಕ ಎಲ್ಲಾ ವಿಷಯಗಳೂ ವಿಶದವಾಗಿ ತಿಳಿಸಲ್ಪಟ್ಟಿವೆ. ಪುರಿಮಲ್ಲಪ್ಪನವರ ಸ್ಕೂಲು ಮಹಾದೇವ ಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು. ೧೦ ಕ್ಕೆ ೧ ಪ್ರತಿ ಜಾಸ್ತಿ. ಪುಸ್ತಕ ದೊರಿಯತಕ್ಕ ಸ್ಥಳ.— ಕೆ. ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.

## ಇಸ್ತಿಹಾರ್.

ಮೈಸೂರು ಸಿಟಿ ಮುನಿಸಿಪಲ್ ಬೋರ್ಡ್ ಆಫೀಸಿನಿಂದಾ. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮಾಹೆ ಮಜಕೂರು ತಾರೀಖು ೧೦ ರ ಲಾಗಾಯಿತು ೨೪ ರ ವರಿಗೆ ಬೆಳಗುಳದ ವಾಟರ್‌ವರ್ಕ್ಸ್‌ನಲ್ಲಿ ರಿಪೇರಿಗೋಸ್ಕರ ಎರಡು ಟರಬೈನುಗಳು ಕೆಲಸ ಮಾಡುವದನ್ನು ನಿಲ್ಲಿಸಲ್ಪಟ್ಟು ಒಂದು ಟರಬೈನ್ ಮಾತ್ರ ಕೆಲಸ ಮಾಡುವದರಿಂದ ಮೇಲ್ಕಂಡ ಕಾಲದಲ್ಲಿ ಶಹರಿನ ತಗ್ಗು ಪ್ರದೇಶಕ್ಕೆಲ್ಲಾ ಕುಕ್ಕರಹಳ್ಳಿ ಕೆರೆಯಿಂದ ನಲ್ಲಿಗಳಿಗೆ ನೀರು ಸರಬರೈ ಮಾಡಲ್ಪಡುವದಲ್ಲದೆ ಎತ್ತರ ಪ್ರದೇಶದ ನಲ್ಲಿಗಳಿಗೆ ಕಾವೇರಿ ನೀರನ್ನು ಪ್ರಾತಃಕಾಲ ೬ ಗಂಟೆ ಲಾಗಾಯಿತು ೧೦ ಗಂಟೆವರಿಗೂ, ಸಂಧ್ಯಾಕಾಲ ೪ ಗಂಟೆ ಲಾಗಾಯಿತು ೬ ಗಂಟೆ ವರಿಗೂ ಬಿಡುವಂತೆ ಕ್ಲುಪ್ತಮಾಡಿರುತ್ತೆ. ಅಲ್ಲದೆ ಒಂದೇ ಟರಬೈನ್ ಕೆಲಸ ಮಾಡುವದರಿಂದ ಎತ್ತರ ಪ್ರದೇಶದಲ್ಲಿರತಕ್ಕ ಪಬ್ಲಿಕ್ ಫೌಂಟೇನುಗಳಲ್ಲಿ ನೀರಿನ ವೇಗವು ಕಮ್ಮಿ ಆಗಬಹುದು. ಆದಕಾರಣ ಫೌಂಟೇನುಗಳಿಗೆ ನೀರು ಬಿಟ್ಟಿರತಕ್ಕ ಕಾಲದಲ್ಲಿಯೇ ಆ ಪ್ರದೇಶದವರೆಲ್ಲರು ತಮಗೆ ಬೇಕಾಗುವಷ್ಟು ನೀರನ್ನು ತುಂಬಿಕೊಳ್ಳಬೇಕು.

K. SREENIVASA RAO,
ತಾ॥ ೭ ನೆ ಆಗಿಸ್ಟು, ೦೩. *Vice President.*

## ವೃತ್ತಾಂತ ಪತ್ರಿಕೆ.

ಸನ್ ೧೯೦೩ ನೇ ಇಸವಿ ಆಗಸ್ಟ್ ತಾ॥ ೧೩ ನೇ ಗುರುವಾರ.

### ಹಿಂದುಸ್ಥಾನದ ಸೈನ್ಯದ ಖರ್ಚು.

ವಿಲಾಯತಿ ರಾಜ್ಯದ ಯುದ್ಧದ ಇಲಾಖೆಯ ಸೆಕ್ರೆಟರಿ ಮ॥ ಬ್ರಾಡ್ರಿಕ್ ಯವರು—"ಇಂಗ್ಲಿಷ್ ಗೌವರ್ನಮೆಂಟಿನವರು ದಕ್ಷಿಣ ಆಫ್ರಿಕದಲ್ಲಿ ೨೫,೦೦೦ ಸೈನ್ಯವನ್ನು ನೇಮಿಸಿಡುವಂತೆ ಗೊತ್ತುಮಾಡಿದ್ದಾರೆ. ಈ ಸೈನ್ಯಕ್ಕೆ ಖರ್ಚಾಗುವ ಒಟ್ಟು ಹಣದಲ್ಲಿ ಅರೆವಾಸಿಯನ್ನು ಇಂಡಿಯಾ ಸರ್ಕಾರದವರು ಕೊಡಬೇಕು. ಯಾಕೆಂದರೆ ಹಿಂದುಸ್ಥಾನದ ಎಲ್ಲೆಕಟ್ಟುಗಳಲ್ಲಿ ಯುದ್ಧವೇನಾದರೂ ಪ್ರಾಪ್ತವಾದರೆ ಬಳದೇಶದಲ್ಲಿರತಕ್ಕ ಸೈನ್ಯವನ್ನೆಲ್ಲಾ ಎಲ್ಲೆಕಟ್ಟಿಗೆ ಸಾಗಿಸಿಬಿಡುವದು ಸರಿಯಲ್ಲ. ಇದಕ್ಕಾಗಿ ಅಂಥಾ ಸಂದರ್ಭದಲ್ಲಿ ದಕ್ಷಿಣ ಆಫ್ರಿಕದಿಂದ ೧೨,೫೦೦ ಸೈನ್ಯವನ್ನು ಹಿಂದುಸ್ಥಾನದ ಎಲ್ಲೆಕಟ್ಟುಗಳಿಗೆ ಕಳುಹಿಸುತ್ತೇವೆ. ಹೀಗೆ ದಕ್ಷಿಣ ಆಫ್ರಿಕದಲ್ಲಿ ಸೈನ್ಯವನ್ನು ನೇಮಿಸಿ ಇಡದೆ ಹೋದರೆ ಹಿಂದುಸ್ಥಾನದ ಸೈನ್ಯವನ್ನೇ ಇನ್ನೂ ಹೆಚ್ಚಿಸಬೇಕಾಗುವದು. ಆದಕಾರಣ ಮೇಲ್ಕಂಡ ಖರ್ಚಿನಲ್ಲಿ ಅರೆವಾಸಿಯನ್ನು ಇಂಡಿಯಾ ಸರ್ಕಾರದವರು ಕೊಡುವದಕ್ಕೆ ಒಪ್ಪಿಕೊಳ್ಳುವದೇ ಸಹಜವಾಗಿದೆ. ಅವರು ವರ್ಷಕ್ಕೆ ಸುಮಾರು ೪ ಲಕ್ಷ ಪೌಂಡು (೬೦ ಲಕ್ಷ ರೂ.) ಇದಕ್ಕಾಗಿ ಕೊಡಬೇಕು" ಎಂಬದಾಗಿ ಹೇಳಿದರು. ಇಂಗ್ಲಿಷ್ ಗೌವರ್ನಮೆಂಟಿನವರು ಹಿಂದುಸ್ಥಾನದ ಮೇಲೆ ಹೀಗೆ ಹೆಚ್ಚು ಹೊರೆಯನ್ನು ಹೊರಿಸಬೇಕೆಂದು ಪ್ರಯತ್ನಪಟ್ಟಿರುವ ವಿಷಯದಲ್ಲಿ ಎರಡು ಮೂರು ವಾರಗಳಿಂದಲೂ ತುಂಬಾ ಚರ್ಚೆ ನಡೆಯುತ್ತಿದೆ.

ಈ ಹೊರೆಯನ್ನು ಹಿಂದುಸ್ಥಾನದ ಮೇಲೆ ಹೊರಿಸುವದು ನ್ಯಾಯವಾದುದೆಂದು ನಾವು ಎಷ್ಟುಮಾತ್ರಕ್ಕೂ ಒಪ್ಪಿಕೊಳ್ಳಲಾರೆವು. ಹಿಂದೆ ಅನೇಕ ಸಂದರ್ಭಗಳಲ್ಲಿ ಇಂಗ್ಲಿಷ್ ಗೌವರ್ನಮೆಂಟಿನವರು ಹಿಂದುಸ್ಥಾನದ ಇಂಗ್ಲಿಷ್ ಮತ್ತು ದೇಶೀಯ ಸೈನ್ಯವನ್ನು ತಮ್ಮ ಸಮಯಕ್ಕೆ ಕರೆಸಿಕೊಂಡು, ಆಫ್ರಿಕಾ, ಚೀನಾ, ಸೋಮಾಲಿಲ್ಯಾಂಡ್‌ಗಳಿಗೆ ಕಳುಹಿಸಿಕೊಡಲಿಲ್ಲವೇ? ಇದಕ್ಕೋಸ್ಕರ ನಾವು ಇಂಗ್ಲಿಷ್ ಗೌವರ್ನಮೆಂಟಿನವರನ್ನು ವರ್ಷಕ್ಕೆ ಇನ್ನೇನಾದರೂ ದ್ರವ್ಯಸಹಾಯ ಮಾಡಬೇಕೆಂದು ಯಾಕೆ ಕೇಳಬಾರದು? ಇಂಗ್ಲಿಷ್ ಗೌವರ್ನಮೆಂಟಿನವರ ಸಹಾಯಕ್ಕಾಗಿ ನಾವೂ ಸೈನ್ಯವನ್ನು ಕಳುಹಿಸಿಕೊಟ್ಟೆವಲ್ಲಾ. ಇಂಥಾ ದುಬಾರಿ ಖರ್ಚು ನ್ಯಾಯವಾದುದಲ್ಲವೆಂದು ಹೇಳಿ ವೈಸರಾಯಿಯವರೂ, ಕೌನ್ಸಿಲ್ ಮೆಂಬರುಗಳೂ ಆಕ್ಷೇಪಣೆಮಾಡಿ ಜವಾಬುಕೊಟ್ಟು ಇರುತ್ತಾರೆ. ಇದಲ್ಲದೆ, ವಿಲಾಯತಿಯಲ್ಲೇ ವರ್ತಮಾನ ಪತ್ರಿಕೆಗಳೂ ಬಹುಮಂದಿ ಮುಖಂಡರಾದ ದೊಡ್ಡ ಮನುಷ್ಯರೂ ಆಕ್ಷೇಪಣೆ ಮಾಡಿರುತ್ತಾರೆ. ಹಿಂದುಸ್ಥಾನದಲ್ಲೂ ಜನರು ಸುಮ್ಮನೆ ಇಲ್ಲ. ಇಲ್ಲಿನ ಮುಖ್ಯ ಮುಖ್ಯವಾದ ವರ್ತಮಾನ ಪತ್ರಿಕೆಗಳೂ, ಮಹಾಜನ ಸಭೆಗಳೂ ಮೇಲ್ಕಂಡ ದುಬಾರಿ ಖರ್ಚು ಹಿಂದುಸ್ಥಾನಕ್ಕೆ ಹೊರಿಸಕೂಡದೆಂದು ತಿಳಿಸಿರುವವು. ಈಗಲಾದರೋ ಇಂಗ್ಲಿಷ್ ಗೌವರ್ನಮೆಂಟಿನವರು ಇಂಗ್ಲಿಷ್ ಸೈನಿಕರ ಸಂಬಳವನ್ನು ಬಡ್ತಿಮಾಡಿರುವದರಿಂದ ಹಿಂದುಸ್ಥಾನವು ಸೈನ್ಯದ ಬಾಬಿನಲ್ಲಿ ವರ್ಷಕ್ಕೆ ೭,೮೬,೦೦೦ ಪೌಂಡು ಹೆಚ್ಚು ಖರ್ಚುಮಾಡಬೇಕಾಗಿದೆ. ಈ ಹೆಚ್ಚು ಖರ್ಚಿನ ಜೊತೆಗೆ ಈಗ ಇನ್ನೂ ೪ ಲಕ್ಷ ಪೌಂಡು ಮೇಲ್ಕಂಡಂತೆ ಕೂಡಿಸುವದಾದರೆ ಈ ರಾಷ್ಟ್ರವನ್ನು ಅಭಿವೃದ್ಧಿಗೆ ತರಲು ಇತರ ಬಾಬುಗಳಿಗೆ ಹಣ ಹ್ಯಾಗೆ ಉಳಿವುದೋ ನಾವು ಕಾಣೆವು. ಈಗಲೇ ಕಳೆದ ನಾಲ್ಕು ಸಂವತ್ಸರಗಳಿಂದಲೂ ಹಿಂದುಸ್ಥಾನದ ಉತ್ಪತ್ತಿಯಲ್ಲಿ ಶೇಕಡ ೨೧ ರೂ. ನಷ್ಟು ಹಣ ಸೈನ್ಯದ ಇಲಾಖೆಗೇ ಖರ್ಚಾಗುತ್ತಿರುವದು.

## ಚೇಂಬರ್ಲೀನ್ ಯವರು ಕಂಡುಹಿಡಿದ ಕೆಮ್ಮು ಔಷಧವು.




32

ಶೀತ, ಕೆಮ್ಮು, ಗಂಟಲು ಗಾರೆನ್ನುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ರೋಗಕ್ಕೆ ಈ ಔಷಧವು ಬಹುಪ್ರಿಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತಸಾ ಬಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಉಪೇಕ್ಷೆಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಬಾಗಿಹೋಗುವದು. ಇದರಿಂದಲೇ ಅನೇಕನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮೌಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಈ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ.; ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚೆನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ:—

ಡಬ್ಲ್ಯೂ. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

## ವಿಶೇಷ ತಂತೀ ವರ್ತಮಾನಗಳು.

◆◆◆◆◆◆◆◆◆

ಹಿಂದುಸ್ಥಾನದ ವೈಸರಾಯಿ ಲಾರ್ಡ್ ಕರ್ಜನ್ ಪ್ರಭುಗಳು ಇನ್ನೆರಡು ವರುಷಗಳ ತನಕ ಹಿಂದುಸ್ಥಾನದಲ್ಲೇ ವೈಸರಾಯಿ ಕೆಲಸ ನೋಡುವದಕ್ಕೆ ಸಮ್ಮತಿಪಟ್ಟಿರುತ್ತಾರೆ. ಇದು ಈ ರಾಷ್ಟ್ರದ ಸಕಲ ಪ್ರಜೆಗಳಿಗೂ ವಿಶೇಷ ಸಂತೋಷವನ್ನುಂಟುಮಾಡಿದೆ ಎನ್ನುವದಕ್ಕೆ ಸಂಶಯವಿಲ್ಲ.

ಬೊಂಬಾಯಿ ಅಧಿಪತ್ಯದ ಗೌವರ್ನರ್ ಲಾರ್ಡ್ ನಾರ್ತ್‌ಕೋಟ್‌ಯವರಿಗೆ ಆಸ್ಟ್ರೇಲಿಯದ ಗೌವರ್ನರ್ ಜನರಲ್ ಪದವಿ ದೊರೆಕಿತು. ಇವರು ಸೆಪ್ಟೆಂಬರ್ ಗುರ್ರಿಯಿಂದ ಬೊಂಬಾಯಿ ಬಿಟ್ಟು ಮೂರು ತಿಂಗಳು ವಿಲಾಯತಿಯಲ್ಲಿದ್ದು, ತರುವಾಯ ಆಸ್ಟ್ರೇಲಿಯಕ್ಕೆ ದಯಮಾಡಿ ಕೆಲಸದ ಭಾರವನ್ನು ವಹಿಸುವವರಾಗಿದ್ದಾರೆ.

ಪೂನಾ ಪಟ್ಟಣದಲ್ಲಿ ಮ॥ ಬಾಲಗಂಗಾಧರ ತಿಲಕರವರ ಮೇಲೆ ಒಂದು ಕ್ರಿಮಿನಲ್ ಮೊಕದ್ದಮೆ ಬಂದು, ಕಳೆದ ವರುಷದ ಸೆಪ್ಟೆಂಬರ್ ಲಾಗಾಯಿತು ದರ್ಯಾಫ್ತಿಯಾಗುತ್ತಿತ್ತು. ಇದುವರೆಗೆ ಸುಮಾರು ೧೦೦ ಮಂದಿ ಸಾಕ್ಷಿಗಳನ್ನು ತನಿಖೆಮಾಡಿದ್ದಾರೆ. ಈ ತಿಂಗಳ ೨೪ನೇ ಸೋಮವಾರ ತೀರ್ಮಾನ ಹೇಳುವದಾಗಿ ಮ್ಯಾಜಿಸ್ಟ್ರೇಟರು ತಿಳಿಸಿರುವರು.

ರೋಮ್ ನಗರದಲ್ಲಿ ಗುರುಗಳೆಲ್ಲಾ ಸೇರಿ ಕಾರ್ಡಿನಲ್ ಸಾರ್ಟೋಯವರನ್ನು ಚುನಾಯಿಸಿ, ಪೋಪ್ ಎಂಬ ಗುರು ಪೀಠಕ್ಕೆ ನೇಮಕಮಾಡಿದರು. ಅವರು ೧೦ ನೇ ಪಯಸ್ ಪೋಪ್ ಎಂಬ ಹೆಸರನ್ನಿಟ್ಟುಕೊಂಡಿದ್ದಾರೆ. ಇವರು ಚಿಕ್ಕಂದಿನಲ್ಲಿ ತುಂಬಾ ಬಡವರು. ದೊಡ್ಡ ವಿದ್ಯಾಶಾಲೆಗಳಲ್ಲಿ ಓದಿದವರಲ್ಲ. ಇವರ ಸಹೋದರರೇ ಮುಂತಾದ ಕೆಲವು ರಕ್ತಸಂಬಂಧಿಗಳು ಈಗಲೂ ಸಣ್ಣ ಸಣ್ಣ ಅಂಗಡಿಗಳನ್ನಿಟ್ಟುಕೊಂಡು, ಜೀವನಮಾಡುತ್ತಿದ್ದಾರೆ. ಒಬ್ಬ ಸಹೋದರಿಯು ಅವರ ಸ್ವಸ್ಥಳದಲ್ಲಿ ಸತ್ರವನ್ನಿಟ್ಟುಕೊಂಡಿರುವವನನ್ನು ಮದುವೆಮಾಡಿಕೊಂಡಿರುವಳು. ಕಳೆದ ಭಾನುವಾರ ಈ ಹೊಸ ಗುರುಗಳಿಗೆ ಬಹಳ ಆಡಂಬರದೊಡನೆ ಕಿರೀಟಧಾರಣೆಯ ಉತ್ಸವ ಮಾಡಲಾಯಿತು. ಸುಮಾರು ೭೦ ಸಹಸ್ರ ಪ್ರಜೆಗಳು ಆ ದಿನ ರೋಮ್ ನಗರದಲ್ಲಿ ಸೇರಿ ಸಂತೋಷಪಟ್ಟರು.

ಕಳೆದ ಗುರುವಾರ ತುರ್ಕಿ ಸೈನಿಕರಿಗೂ ಬಲ್ಗೇರಿಯದ ಯುದ್ಧಭಟರಿಗೂ ಸೋರೋವಿಚ್ ಎಂಬಲ್ಲಿ ಕದನವಾಯಿತು. ತುರ್ಕಿಯವರು ಅವರನ್ನು ಸೋಲಿಸಿ ಓಡಿಸಿದರು. ನಾಯಕಪಟ್ಟ ೬೦ ಮಂದಿ ಸೈನಿಕರು ಸಲೋನಿಕಾ ಪಟ್ಟಣಕ್ಕೆ ಬಂದರು. ಬಲ್ಗೇರಿಯದವರು ದಂಗೆ ಎದ್ದಿರುವದನ್ನು ಅಲ್ಬೇನಿಯದವರು ನೋಡಿ ಅವರೂ ಸೈನ್ಯ ಕೂಡಿಸುತ್ತಿದ್ದಾರೆ. ಸುಲ್ತಾನ ಯವರು ೩೦,೦೦೦ ತುರ್ಕಿ ಸೈನ್ಯದೊಡನೆ ಅಡ್ರಿಯಾನೋಪಲ್‌ನಿಂದ ಮೊನಾಸ್ಟಿರ್‌ಗೆ ಹೊರಟುಬಂದರು. ಬಲ್ಗೇರಿಯದವರಾದರೋ ಮೊನಾಸ್ಟಿರಿನಲ್ಲಿ ೧೦,೦೦೦ ಮಂದಿಯನ್ನೂ, ಕಾಸ್ಟೋರಿಯಾದಲ್ಲಿ ೧೦,೦೦೦ ಮಂದಿಯನ್ನೂ ನಿಲ್ಲಿಸಿ, ತುರ್ಕಿಯವರ ಮೇಲೆ ಯುದ್ಧ ಮಾಡುವವರಾಗಿದ್ದಾರೆ. ತುರ್ಕಿ ಸೈನಿಕನೊಬ್ಬನು ಮೊನಾಸ್ಟಿರನಲ್ಲಿದ್ದ ರಷ್ಯಾ ರಾಯಭಾರಿಯನ್ನು ಗುಂಡಿನಿಂದ ಹೊಡೆದು ಕೊಂದುಹಾಕಿರುತ್ತಾನೆ. ಆ ರಾಯಭಾರಿಯು ಬಲ್ಗೇರಿಯಾದವರನ್ನು ದಂಗೆ ಏಳುವಂತೆ ಚಿತಾವಣೆಮಾಡಿದನಂತೆ. ಅಂತೂ ಈಗ ಮ್ಯಾಸಿಡೋನಿಯದಲ್ಲಿ ಗಲಭೆಯುಂಟಾಗಿರುವದು. ಇದರ ಪರಿಣಾಮವೇನೋ ಮುಂದೆ ನೋಡತಕ್ಕದ್ದಾಗಿದೆ.

### "ಸಾವಿರ ಅಶ್ವಮೇಧ ಯಾಗಗಳ ತೂಕಕ್ಕಿಂತ ಸತ್ಯದ ತೂಕವು ಭಾರವಾಗಿದೆ."

◆◆◆◆◆◆◆◆◆

ಬೇರೆ ಬೇರೆ ಚರಿತ್ರ ಗ್ರಂಥಗಳನ್ನು ಓದುವವರು, ಮೈಸೂರು ದೇಶವು ನೂರಾರು ವರ್ಷಗಳ ಹಿಂದೆ ಬೇರೆ ಬೇರೆ ರಾಜರ ಧೊರೆತನಕ್ಕೊಳಪಟ್ಟಿತ್ತೆಂದು ಸುಲಭವಾಗಿ ತಿಳಿದುಕೊಳ್ಳಬಹುದು. ಆಯಾ ಕಾಲದಲ್ಲಿ ಈ ದೇಶವನ್ನು ಆಳಿದ ಅರಸುಗಳು ತಮ್ಮ ಕಾಲದಲ್ಲಿ ನಡೆದ ಅತಿ ವಿಶೇಷವಾದ ಸಂಗತಿಗಳನ್ನು ಶಿಲಾಶಾಸನಾದಿಗಳ ಮೂಲಕ ಬರೆಸಿದ್ದಾರೆ. ಅಂಥವುಗಳು ಈ ದೇಶದ ನಾನಾ ಕಡೆ ಇವೆ. ನಮ್ಮ ಸರ್ಕಾರದವರು ಅವುಗಳನ್ನು ಕಂಡು ಹಿಡಿದು, ಭಾಷಾಂತರ ಮಾಡಿ, ಪ್ರಜೆಗಳಿಗೆ ತಿಳಿಯಪಡಿಸುವದಕ್ಕೋಸ್ಕರ ಪ್ರತ್ಯೇಕ ಸಿಬ್ಬಂದಿಯನ್ನಿಟ್ಟಿದ್ದಾರೆ. ದ್ವಾರಸಮುದ್ರವೆಂಬ ಹಳೇ ಬೀಡು ಬೇಲೂರು ಇವುಗಳು ಬಹು ಪುರಾತನ ಕಾಲದಲ್ಲಿ ಬಲ್ಲಾಳ ಅರಸುಗಳಿಗೆ ಸೇರಿತ್ತು. ಲೋಕದ ಅತಿಶಯವಾದ ಶಿಲ್ಪ ಕೆಲಸವು ಆ ಸ್ಥಳಗಳಲ್ಲಿ ಈಗಲೂ ಉಂಟಾದುದರಿಂದ ಸಾವಿರಾರು ಜನರು ನಾನಾ ಕಡೆಯಿಂದ ಇದನ್ನು ನೋಡಲಿಕ್ಕೆ ಬರುತ್ತಾರೆಂದೂ ಎಲ್ಲರಿಗೂ ತಿಳಿದಿದೆ. ಬೇಲೂರು ದೇವಸ್ಥಾನದಲ್ಲಿ ಕೆಲವು ಶಾಸನಗಳಿವೆ. ಇವುಗಳಲ್ಲಿ ಒಂದು ಶಾಸನದ ವಿಷಯ ವಾಚಕರಿಗೆ ತಿಳಿಸಬೇಕಾಗಿದೆ.

ಪ್ರಾಚೀನ ಕಾಲಗಳಲ್ಲಿ ಸಮಸ್ತ ದೇಶಗಳಲ್ಲಿಯೂ, ಜನಾಂಗಗಳಲ್ಲಿಯೂ ಯಜ್ಞಗಳನ್ನು ಮಾಡುವದು ಪದ್ಧತಿಯಾಗಿತ್ತು. ಈಗಲೂ ಕೆಲವರು ಮಾಡುವದುಂಟು. ಈ ಭರತಖಂಡದಲ್ಲಿ ಆರ್ಯರೆಂಬವರು ನೆಲೆಯಾಗಿದ್ದ ಕಾಲದಲ್ಲಿ ಯಾಗಗಳು ಬಹು ಸಾಧಾರಣವಾಗಿದ್ದವೆಂದೂ, ನರಬಲಿಗಳನ್ನು ಸಹ ಅರ್ಪಿಸುತ್ತಿದ್ದರೆಂದೂ ಋಗ್ವೇದದಲ್ಲಿ ಸೂಚನೆಗಳುಂಟು. ಕ್ರೈಸ್ತ ವೇದದ ಪೂರ್ವಾರ್ಧ ಭಾಗದಲ್ಲಿ ಯೆಹೂದ್ಯರೆಂಬ ಜನಾಂಗದವರು ಸಹ, ಭಗವಂತನಾದ ದೇವರ ಅಪ್ಪಣೆಯಂತೆ ನಾನಾ ಬಲಿ, ಧೂಪ, ಅರ್ಪಣೆಗಳನ್ನು ನಡೆಸುತ್ತಿದ್ದರೆಂದು ಹೇಳುತ್ತದೆ. ಇವೆಲ್ಲವುಗಳಿಂದ, ಮನುಷ್ಯರು ತಾವು ಪಾಪಿಗಳೆಂದೂ, ಪಾಪಕ್ಕೆ ತಕ್ಕ ಶಿಕ್ಷೆ ಮರಣವೇ ಎಂದೂ, ಈ ಪಾಪ ನಿವಾರಣೆಗಾಗಿ ಮೃಗಗಳನ್ನು ಕೊಂದು ಅವುಗಳ ರಕ್ತವನ್ನು ಚೆಲ್ಲುವದರಿಂದ (ತಕ್ಕಮಟ್ಟಿಗೂ) ಶಾಂತಿಯಾಗುವದೆಂದೂ ಎಲ್ಲರೂ ನೆನಸಿದರು. ದೇವರು ಇಂಥ ಬಲಿಗಳನ್ನು ಅರ್ಪಿಸಬೇಕೆಂದು ನೇಮಿಸಿದರೂ, ಇವುಗಳೇ ಎಂದೆಂದಿಗೂ ಶಾಶ್ವತವಾಗಿ ನಿಲ್ಲಬೇಕೆಂದೂ, ಇವುಗಳಿಂದಲೇ ಪಾಪವಿಮೋಚನೆಯಾಗುವದೆಂದೂ ಆತನು ನೇಮಿಸಲಿಲ್ಲ. ಸ್ವಾಮಿಯಾದ ಯೇಸುಕ್ರಿಸ್ತನು ೧೯೦೩ ವರ್ಷಗಳ ಕೆಳಗೆ ಈ ಲೋಕದಲ್ಲಿ ಅವತರಿಸಿ ಸಮಸ್ತರಿಗೋಸ್ಕರ ಯಜ್ಞವಾದನಷ್ಟೆ. ಈ ಮಹಾ ಬಲಿಯನ್ನು ತೋರಿಸುವದಕ್ಕಾಗಿ ಹಿಂದಿನವುಗಳೆಲ್ಲಾ ಬರೀ ಸೂಚನೆ ಕೊಡುವವುಗಳಾಗಿದ್ದವು. ಮುಂದೆ ನಡೆಯುವದಕ್ಕಿರುವ ಮಹಾ ಯಜ್ಞವನ್ನು ಜ್ಞಾ

ಮಾಡುವವರಾಗಿದ್ದು, ತತ್ಕಾಲದ ಬಲಿಗಳನ್ನು ಅರ್ಪಿಸುತ್ತಾ ಬಂದರು. ಯೇಸು ಕ್ರಿಸ್ತನು ತಾನು ಯಜ್ಞವಾದಮೇಲೆ ಅದು ದೈವ ನೀತಿಯನ್ನು ತೃಪ್ತಿಪಡಿಸಿ ಪಾಪಾತ್ಮರಿಗೆ ವಿಮೋಚನೆಯು ಉಂಟಾದದ್ದರಿಂದ ಕ್ರಿಸ್ತರಲ್ಲಿ ಬಲಿಯರ್ಪಿಸುವದು ನಿಂತುಹೋಯಿತು.

ಪುರಾತನ ಕಾಲದಲ್ಲಿ ಅನೇಕರು ಯಜ್ಞಗಳ ಮೇಲೆಯೂ, ಈಗಿನ ಕಾಲದಲ್ಲಿ ಅನೇಕರು ಆಚಾರಗಳ ಮೇಲೆಯೂ ನಂಬಿಕೆ ಇಟ್ಟವರಾಗಿ, ತಾವು ತಮ್ಮ ನಡತೆಯಲ್ಲಿ ಹ್ಯಾಗೆ ನಡೆಯುತ್ತಾ ಬಂದರೂ, ತಮ್ಮ ಆಚಾರ ಪ್ರಮಾಣವು ತಮ್ಮನ್ನು ರಕ್ಷಿಸುವದೆಂತ ನೆನಸುತ್ತಾ ಬಂದಿದ್ದಾರೆ. ಆದರೆ ವಿಶೇಷವಾದ ಧಾರ್ಮಿಕವಾದ(?) ಕಾರ್ಯಗಳನ್ನು ಕುರಿತು ಚಿಂತಿಸಿದಂಥ ಇತರ ಮತದವರಿಗೂ ಸಹ ಸತ್ಯದಲ್ಲಿ ಬದುಕುವದೊಂದೇ ನಿಜವಾದ ಮಾರ್ಗವೆಂದೂ, ತಮ್ಮ ಮತದ ನೇಮ ನಿಷ್ಠಾಚಾರಗಳು, ದೇವರಲ್ಲಿ ತಕ್ಕ ನಿಜವಾದ ಭಕ್ತಿಗಿಂತ ಶ್ರೇಷ್ಠವಾದವುಗಳಲ್ಲವೆಂದೂ ತಿಳುಕೊಂಡರೆಂತ ಬೇಲೂರ್ ಶಾಸನದಿಂದಲೂ ಅನೇಕ ಉದಾಹರಣೆಗಳಿಂದಲೂ ಗೊತ್ತಾಗುತ್ತದೆ. ಕ್ರಿಸ್ತರ ಹಳೇ ಒಡಂಬಡಿಕೆ ಎಂಬ ಗ್ರಂಥದಲ್ಲಿ, ದೇವರು ಬಲಿಗಳನ್ನ ಅರ್ಪಿಸಬೇಕೆಂದು ಅಪ್ಪಣೆ ಕೊಟ್ಟದ್ದರೂ ಇದಕ್ಕಿಂತ ಹೆಚ್ಚಿನ ಕಾರ್ಯ ಜನರ ಅಂತರ್ಯದಲ್ಲಿರಬೇಕೆಂದು ಆತನು ತನ್ನ ವಾಕ್ಯದಿಂದ ಸೂಚಿಸಿದ್ದಾನೆ. ಹ್ಯಾಗಂದರೆ.—

“ನಿನ್ನ ಬಲಿಗಳಿಗೋಸ್ಕರ ನಿನ್ನನ್ನು ಗದರಿಸೆನು; ನಿನ್ನ ಹೋಮಗಳು ಯಾವಾಗಲೂ ನನ್ನ ಮುಂದೆ ಅವೆ. ನಿನ್ನ ಮನೆಯಿಂದ ಹೋರಿಯನ್ನು, ನಿನ್ನ ದೊಡ್ಡಿಗಳಿಂದ ಹೋತಗಳನ್ನು ತೆಗೆದುಕೊಳ್ಳೆನು; ಯಾಕಂದರೆ ಅಡವಿಯ ಮೃಗಗಳೆಲ್ಲವೂ ಸಾವಿರ ಬೆಟ್ಟಗಳಲ್ಲಿರುವ ಪಶುಗಳು ನನ್ನವೇ.” . . . . . . . . “ಯಾಕಂದರೆ ನೀನು (ದೇವರೇ) ಬಲಿಯಲ್ಲಿ ಸಂತೋಷಪಡುವದಿಲ್ಲ, ಪಟ್ಟರೆ ಕೊಡುವೆನು; ಹೋಮದಲ್ಲಿ ನೀನು ಇಷ್ಟಪಡುವದಿಲ್ಲ, ದೇವರ ಬಲಿಗಳು ಮುರಿದ ಆತ್ಮವೇ.” “ಮುರಿದಂಥ ಜಜ್ಜಿದಂಥ ಹೃದಯವನ್ನು ದೇವರೇ ನೀನು ತಿರಸ್ಕರಿಸುವದಿಲ್ಲ.” “ಧೂಪವು ನನಗೆ ಅಸಹ್ಯವಾಗಿದೆ . . . . . ನಿಮ್ಮ ಅಮಾವಾಸೆಗಳನ್ನು ಹಬ್ಬಗಳನ್ನು ನನ್ನ (ಅಂದರೆ ದೇವರ) ಪ್ರಾಣವು ಹಗೆಮಾಡುತ್ತದೆ.”

ಈ ಉದಾಹರಣೆಗಳಿಂದ ನಿಜವಾದ ಭಕ್ತಿಯು ಯಾವ ವಿಧವಾದ ಬರೀ ಆಚಾರದಿಂದ ಸಿಕ್ಕುವದಿಲ್ಲವೆಂತ ಸ್ಪಷ್ಟವಾಗಿದೆ. ಸಾವಿರ ವಿಧವಾದ ಕರ್ಮಾಚರಣೆಗಳಿಗಿಂತ ಒಂದು ಸಾಧಾರಣ ಯಜ್ಞ ಶ್ರೇಷ್ಠವಾದದ್ದಷ್ಟೆ. ಇದಕ್ಕಿಂತ ಒಂದು ಅಶ್ವಮೇಧವು ಎಷ್ಟೋ ಹೆಚ್ಚಿನದು. ಹಾಗಾದರೆ ಸಾವಿರ ಕುದುರೆ ಯಜ್ಞಗಳಿಗಿಂತ ಸತ್ಯವಂತವಾಗಿ ನಡೆಯುವದು ಹೆಚ್ಚಾಗಿದ್ದ ಮೇಲೆ ಮನುಷ್ಯರ ಬರೀ ಆಚಾರಗಳಿಂದ ಪ್ರಯೋಜನವೇನು ?

## ಸ್ವದೇಶದ ವೃತ್ತಾಂತಗಳು.

ಕಳೆದ ವಾರ ಉರಿಗದ ಚಿನ್ನದಗಣಿಯೊಳಗೆ ಅಕಸ್ಮಾತವಾಗಿ ಒಬ್ಬ ಕೂಲಿಯವನು ಸತ್ತುಹೋದನು ಇಬ್ಬರಿಗೆ ಗಾಯಗಳಾಗಿವೆ.

*****

ರೆವೆನ್ಯೂ ಕಮೀಷನರಾದ ಮಿ॥ ಮಾಧವರಾಯರು ತುಂಕೂರು, ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ ಸಂಚಾರ ಹೋಗುವವರಾಗಿದ್ದಾರೆ.

*****

ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೆ ನ್ಯಾರೋ ಗೇಜ್ ರಸ್ತೆ ಮಾಡುವದಕ್ಕೆ ಸರ್ವೆ ಕೆಲಸಗಳು ನಡೆಯುತ್ತಿರುವದಾಗಿಯೂ, ಈ ಕೆಲಸವು ಫೆಬ್ರವರಿಗೆ ಭರ್ತಿಯಾಗುತ್ತಿರುವದಾಗಿಯೂ ತಿಳಿದು ಬಂದಿದೆ.

*****

ಅರಮನೆ ಇಂಜನಿಯರ ಆಫೀಸಿನಲ್ಲಿ ನೌಕರನಾಗಿದ್ದು ಈಚೆಗೆ ಕೆಲಸದಿಂದ ವಜಾ ಮಾಡಲ್ಪಟ್ಟ ಒಬ್ಬ ನಾಯುಡುವು ೧೦,೦೦೦ ರೂ. ಹುಂಡಿಯೊಂದನ್ನು ಅಪಹರಿಸಿ ಒಂದು ಅಂಗಡಿಯೊಳಗೆ ಬಿಟ್ಟುಹೋಗಿದ್ದು ಸಿಕ್ಕಿತು. ಈಚೆಗೆ ಪೋಲೀಸಿನವರು ಅವನನ್ನು ಹಿಡಿದು ತನಿಖೆಮಾಡುತ್ತಿದ್ದಾರೆ.

*****

ರಾಜಧಾನಿಯಲ್ಲಿ ಈ ತಿಂಗಳ ಪ್ರಾರಂಭದಿಂದ ಪ್ಲೇಗ್ ಉಪದ್ರವ ಹೆಚ್ಚಾಗಲಾರಂಭಿಸಿದೆ. ದಿನಕ್ಕೆ ೭—೮ ಮರಣಗಳಾಗುವ ಈ ಪಟ್ಟಣದಲ್ಲಿ ಈಗ ೨೦—೨೫ ಕ್ಕೆ ಹತ್ತಿರುವದು. ಹವಾ ರೋಗ ಹೆಚ್ಚಲು ಅನುಕೂಲವಾಗಿರುವಂತೆ ಕಾಣುತ್ತದೆ. ಮೂರು ದಿನದಿಂದ ಮೋಡವು, ಸೋನೆ ಮಳೆಯೂ ಪ್ರಾರಂಭವಾಗಿದೆ.

*****

ಕಳೆದ ಭಾನುವಾರ ಬೆಂಗಳೂರಿಂದ ಮೈಸೂರಿಗೆ ಬಂದ ರೈಲ್ ಗಾಡಿಯನ್ನು ಕೆಡಹಬೇಕೆಂದು ಮದ್ದೂರ ಸ್ಟೇಷನಿನ(?) ಹತ್ತಿರ ಕಂಬಿಗಳ ಮೇಲೆ ಮರದ ತುಂಡುಗಳನ್ನು ಅಡ್ಡಲಾಗಿ ಹಾಕಿದ್ದರು. ಆದರೆ ಗಾಡಿ ನಡೆಸುವವರು ಮೊದಲೇ ಈ ಅಪಾಯವನ್ನು ಕಂಡದ್ದರಿಂದ ಯಾವ ಅಪಾಯವೂ ಆಗದಂತೆ ತಪ್ಪಿಸಿದರು. ಆ ದುಷ್ಟರು ಪತ್ತೆ ಆಗಲಿಲ್ಲ.

*****

ಕಳೆದ ಶನಿವಾರ(?) ಶ್ರೀಮನ್ಮಹಾರಾಜರವರು(?) ರಾಜ್ಯಭಾರವನ್ನು ವಹಿಸಿ ಒಂದು ಸಂವತ್ಸರವಾಯಿತು. ಆದಕಾರಣ ಆ ದಿನ ಮಹೋತ್ಸವವು(?) ಜಯಪ್ರದವಾಗಿ(?) ರಾಜಧಾನಿಯಲ್ಲಿ [illegible] ನಡೆಸಲ್ಪಟ್ಟಿತು. ಅರಮನೆ ಆಸ್ಥಾನ ಮಂಟಪ(?) ಮೊದಲಾದ ಕಡೆಗಳಲ್ಲಿ(?) ಆ ದಿನ ರಾತ್ರಿ ದೀಪೋತ್ಸವವನ್ನು ಮಾಡಿದರು.

*****

ತಿರುಮಕೂಡ್ಲಿನಲ್ಲಿ ಹರಿಗೋಲಿನ ಅಪಘಾತ(?) ದೆಸೆಯಿಂದ ಹರಿಗೋಲಿನಲ್ಲಿ ಪ್ರಯಾಣಿಕರು ೨೨ ಮಂದಿಯೂ, ನಡೆಸುವವರು ೫ ಮಂದಿಯೂ ಕೂತು, ಹರಿಗೋಲನ್ನು ಬಿಟ್ಟರು. ಅದು ಕರೆಯಿಂದ ಸ್ವಲ್ಪದೂರ ಹೋಗುವಷ್ಟರಲ್ಲೇ ಜನರೆಲ್ಲಾ ಒಂದೇ ಕಡೆಗೆ ಸೇರಿದ್ದರಿಂದ ಮುಗುಚಿಕೊಂಡಿತು. ದೈವವಶಾತ್ತು ಎಲ್ಲರೂ ಬದುಕಿಕೊಂಡರು. ಸುಮಾರು ೬೦ ವಯಸ್ಸಿನ ಒಬ್ಬ ಬ್ರಾಹ್ಮಣನೂ, ಒಬ್ಬ ಅಂಬಿಗನೂ ಸತ್ತುಹೋದರು.

*****

ಪಾಡಿನಾಲ್ಕುನಾಡು ತಾಲೂಕಿಗೆ ಸೇರಿದ ಕಾವ್ರೆನಾಡಿನಲ್ಲಿ ಮಿ॥ ಬಿಲ್ಲಚಂಡ್ರ ಬೆಳ್ಯಪ್ಪನವರು ಮೊದಲು ಪಾರುಪತ್ಯ ಮಾಡಿ, ತರುವಾಯ ಆ ತಾಲ್ಲೂಕಿನ ಸುಬೆಯಕ್ಕೆ ಬಂದು, ಅಲ್ಲಿನ ರೈತರೇ ಮೊದಲಾದ ಸಕಲ ಪ್ರಜೆಗಳನ್ನು ಬಹಳ ಪ್ರೀತಿಯಿಂದ ಕಾಪಾಡಿದ್ದಕ್ಕಾಗಿ ಕಾವ್ರೆನಾಡು ಪ್ರಜೆಗಳು ತಮ್ಮ ಕೃತಜ್ಞತೆಯಿಂದ ಅವರಿಗೆ ಕಳೆದ ತಿಂಗಳಿನ ಅಂತ್ಯದಲ್ಲಿ ಒಂದು ವಿಜ್ಞಾಪನ ಪತ್ರಿಕೆಯನ್ನು ಓದಿ ಒಪ್ಪಿಸಿದರೆಂದು ಒಬ್ಬ ವಾರ್ತಾದಾರರು ತಿಳಿಸುತ್ತಾರೆ.

*****

ಮೈಸೂರಿನ ಎಲ್ಲಾಕಟ್ಟುಗಳಲ್ಲಿ ಪ್ಲೇಗ್ ಉಪದ್ರವಿರುವದರಿಂದ ಮದರಾಸ್ ಆಧಿಪತ್ಯಕ್ಕೆ ಅದು ವ್ಯಾಪಿಸೆಯಾಗಲು ಅವಕಾಶ ಉಂಟಾಗುತ್ತದೆಂತಲೂ ಉಪದ್ರವನ್ನು ಅಣಗಿಸುವಕ್ಕೆ ಪ್ರಯತ್ನಪಡಬೇಕೆಂತಲೂ ಮದರಾಸ್ ಸರ್ಕಾರದವರೂ ಮೈಸೂರು ಗೌರ್ನಮೆಂಟಿನವರೂ ಕಳೆದ ಸೋಮವಾರದಿಂದ ಬೆಂಗಳೂರಿನಲ್ಲಿ ಸೇರಿ ಚರ್ಚೆಮಾಡುತ್ತಿದ್ದಾರೆ. ಈ ಸಭೆಯವರು ಏನುಮಾಡಬೇಕೆಂದು ತೀರ್ಮಾನಿಸುವರೋ ಇನ್ನು ಮುಂದೆ ಪ್ರಕಟವಾದೀತು.

*****

ಸರ್ ಶೇಷಾದ್ರಿ ಐಯರವರ ಹೆಸರಿನಲ್ಲಿ ಮಾಡಬೇಕಾಗಿರುವ ಶಾಶ್ವತ ಕಾರ್ಯವೇನೆಂಬದನ್ನು ಗೊತ್ತುಮಾಡುವದಕ್ಕೋಸ್ಕರ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ನಾಳೆ ಶನಿವಾರ ಪುರಜನರ ಸಭೆಯೊಂದು ಸೇರುವದೆಂದು ಕಳೆದವಾರ ತಿಳಿಸಿದ್ದೆವಷ್ಟೆ. ಮಿ॥ ಭಾಭಾ ಯವರು ರಜಾ ಪಡೆದು ಬೊಂಬಾಯಿ ಕಡೆ ಪ್ರಯಾಣ ಮಾಡಿರುವದರಿಂದ ಸದ್ಯ ಅವರು ವಾಪಸು ಬರುವತನಕ ಈ ಸಭೆ ಕೂಡುವದಕ್ಕಾಗಲಾರದೆಂದು ಮಿ॥ ಟಿ. ಆರ್. ವೆಂಕಟಸ್ವಾಮಿ ನಾಯುಡು ಯವರು ಬರೆದಿರುತ್ತಾರೆ.

## ಮೈಸೂರು ಗೆಜೆಟ್ ಸಂಗ್ರಹ.

ತುಮಕೂರು ಡಿಸ್ಟ್ರಿಕ್ಟ್ ಗುಬ್ಬಿ ತಾಲ್ಲೂಕಿನ ಅಮಲ್ದಾರರಾದ ಪಿ. ಎಂ. ರಂಗರಾಯರಿಗೆ ಸ್ವಂತ ಕೆಲಸದ ಮೇಲೆ ೩ ತಿಂಗಳ ರಜಾದೊಂದಿಗೆ ೨೯ ದಿನಗಳ ಪ್ರಿವಿಲೇಜ್ ರಜ ಕೊಡಲ್ಪಟ್ಟಿರುತ್ತದೆ.

ತುಮಕೂರು ಡಿ॥ ಡೆಪ್ಯುಟಿ ಕಮಿಷನ್ನರ ಆಫೀಸು ಹೆಡ್ ಕ್ಲಾರ್ಕಾದ ಸಿ. ಗೋಪಾಲಚಾರಿ, ಬಿ. ಎ. ಯವರು ಮೇಲ್ಕಂಡ ಅಮಲ್ದಾರರು ಗೈರ್‌ಹಾಜರಿಯಲ್ಲಿಯೂ ಮತ್ತೊಂದು ಹುಕುಂ ಕೊಡುವ ತನಕ ಗುಬ್ಬಿ ತಾಲ್ಲೂಕಿನ ಅಮಲ್ದಾರ್ ವ ೩ ನೇ ಕ್ಲಾಸು ಮ್ಯಾಜಿಸ್ಟ್ರೇಟರಾಗಿ ಅಕ್ಟಿಂಗ್ ತರೀಕು ನೇಮಿಸಲ್ಪಟ್ಟಿರುವರು.

ಮಾಗಡಿ ತಾಲ್ಲೂಕಿನ ಅಮಲ್ದಾರಾದ ಮಿ॥ ಅಬ್ದುಲ್ ಜಲೀಲ್ ಯವರಿಗೆ ಮೆಡಿಕಲ್ ಸರ್ಟಿಫಿಕೇಟ್ ಮೇಲೆ ಕೊಟ್ಟಿದ್ದ ೨೨ ತಿಂಗಳುಗಳ ಕಾಯಿಲೆ ರಜಾದೊಂದಿಗೆ ತಲಬಿಲ್ಲದೆ ಎಕ್ಸ್‌ಟ್ರಾರ್ಡಿನೇರಿ ರಜ ಕೊಡಲ್ಪಟ್ಟಿರುತ್ತೆ.

ಕುಣಿಗಲ ತಾಲ್ಲೂಕು ಅಮಲ್ದಾರಾದ ಮಿ॥ ವಿ. ಎಸ್. ಗುಂಡುರಾಯರಿಗೆ ಕೊಟ್ಟಿದ್ದ ಒಂದು ತಿಂಗಳು ಪ್ರಿವಿಲೇಜ್ ರಜಾದೊಂದಿಗೆ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ೧½ ತಿಂಗಳು ಕಾಯಿಲೆ ರಜಾ ಕೊಡಲ್ಪಟ್ಟಿರುತ್ತದೆ. ವಿಸ್ತ ರಜಾ ಕಾಲವು ಮೆಡಿಕಲ್ ಸರ್ಟಿಫಿಕೇಟಿನ ಮೇಲಣ ರಜವಾಗಿ ಎಣಿಸಲ್ಪಡತಕ್ಕದ್ದು.

ಸದರಿ ಜಾಸ್ತಿ ರಜಾವಿನ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ವರಿವಿಗೆ ತುರುವೆಕೆರೆಯ ಡೆಪ್ಯುಟಿ ಅಮಲ್ದಾರರು ಮಿ॥ ಬಿ. ಚನ್ನಿಂಗಪ್ಪನವರು ಕುಣಿಗಲ ತಾಲ್ಲೂಕು ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಅಕ್ಟಿಂಗ್ ಕೆಲಸನೋಡತಕ್ಕದ್ದು.

ತಿಪಟೂರು ಅಮಲ್ದಾರರು ತಮ್ಮ ಕೆಲಸದೊಂದಿಗೆ ಸದರಿ ಡೆಪ್ಯುಟಿ ಅಮಲ್ದಾರರು ಬೇರೆ ಕೆಲಸದ ಮೇಲಿರುವ ಕಾಲದಲ್ಲಿ ತುರುವೇಕೆರೆ ಸಬ್ ತಾಲ್ಲೂಕಿನ ಛಾರ್ಜನಲ್ಲಿರತಕ್ಕದ್ದು.

ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮಿ॥ ಕೆ. ಪಿ. ಪುಟ್ಟಣ್ಣಶೆಟ್ಟಿಯವರಿಗೆ ಆಗಸ್ಟ್ ೩ ನೇ ತಾರೀಖಿನಾರಭ್ಯ ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ೭ ತಿಂಗಳ ಫರ್ಲೋ ರಜಾದೊಂದಿಗೆ ೨ ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾದ ಮಿ॥ ಎಚ್. ನಾಸಪ್ಪನವರು ಜನರಲ್ ವ ರೆವಿನ್ಯೂ ಸೆಕ್ರೆಟರಿಯಟ್ಟಿಗೆ ಹಂಗಾಮಿಯಾಗಿ ದಾಖಲ್ಮಾಡಲ್ಪಟ್ಟಿರುತ್ತಾರೆ.

ಜನರಲ್ ವ ರೆವಿನ್ಯೂ ಸೆಕ್ರೆಟರಿಯಟ್ಟಿನಲ್ಲಿ ಸ್ಪೆಷಲ್ ಕೆಲಸದಲ್ಲಿರುವ ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮಿಷನರಾದ ಮಿ॥ ಬಿ. ರಾಮಕೃಷ್ಣರಾಯರು ಕೋಲಾರ ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತಾರೆ.

ಬೇರೆ ಕೆಲಸದಲ್ಲಿರುವ ಅಮಲ್ದಾರ್ ಮಿ॥ ಟಿ. ಧರ್ಮರಾಜಶೆಟ್ಟಿಯವರು ಅಮಲ್ದಾರ್ ವ ೩ ನೇ ಕ್ಲಾಸು ಮ್ಯಾಜಿಸ್ಟ್ರೇಟರಾಗಿ ಮಂಡ್ಯ ತಾಲ್ಲೂಕಿಗೆ ನೇಮಿಸಲ್ಪಟ್ಟಿರುತ್ತಾರೆ. ಕೂಡಲೆ ಕೆಲಸಕ್ಕೆ ದಾಖಲಾಗತಕ್ಕದ್ದು.

ಹಾಸನದ ಡಿವಿಷನಿಗೆ ಸೇರಿದ ಸಬ್ ಅ. ಇಂಜನಿಯರಾದ ಮಿ॥ ಕೆ. ವೆಂಕಟರಾಯರಿಗೆ ಮಾರ್ಚ ಮಾಹೆ ೨೭ ನೇ ತಾರೀಖಿನಾರಭ್ಯ ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಒಂದು ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

## ಚಂದಾದಾರರ ಪ್ರಶ್ನೋತ್ತರಗಳು.

ಅಯ್ಯಾ,

“ಮೂರ್ತಿಪೂಜೆ” ಎಂಬ ಪದಕ್ಕೆ ತಾವು ಬರೆದಿರುವ ಅರ್ಥವನ್ನು ಓದಿಕೊಂಡೆನು. ಜಾಷುವಾ ಎಂಬವರು ದೇವರ ಸೈನ್ಯಾಧಿಪತಿಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದಂತೆಯೂ ಅವರನ್ನು ಪೂಜಿಸಿದಂತೆಯೂ ೫—೧೪ ರಲ್ಲಿ ಹೇಳಿದೆ. ಈ ಸೈನ್ಯಾಧಿಪತಿಗಳು ದೇವರಲ್ಲ. ಇವರಿಗೆ ನಮಸ್ಕರಿಸಿದ್ದೂ ಇವರನ್ನು ಪೂಜಿಸಿದ್ದೂ ಮೂರ್ತಿಪೂಜೆಯಲ್ಲವೇ ? ಮಹಾತ್ಮರಾದ ಯೇಸುಕ್ರಿಸ್ತರಿಗೆ ಮನುಷ್ಯಸ್ವಭಾವವೂ ದೈವಸ್ವಭಾವವೂ ಇರುವವು. ಪಂಚಭೂತಾತ್ಮಕವಾದ ಶರೀರವೂ ಒಂದು ಜೀವಾತ್ಮವೂ ಅವರ ಮನುಷ್ಯಸ್ವಭಾವದಲ್ಲಿರುವವು. ಅವರ ದೈವಸ್ವಭಾವವು ಸ್ವರ್ಗದಲ್ಲಿರುವದಾಗಿ ಜಾನ್ ೩—೧೩ನೇ ಶ್ಲೋಕದ ವ್ಯಾಖ್ಯಾನದಲ್ಲಿ ಹೇಳಿರುತ್ತದೆ. ಕೆಲವರು ಯೇಸುಕ್ರಿಸ್ತರನ್ನು ಪೂಜಿಸಿದ ಸಂಗತಿಯು ನಮಗೆ ತಿಳಿದೇ ಇರುತ್ತದೆ. ಇದು ಮೂರ್ತಿಪೂಜೆಯಲ್ಲವೇ ? ದೈವಸ್ವಭಾವವು ಆ ಶರೀರದಲ್ಲಿಯೇ ಇತ್ತೆಂದು ತಾವು ಹೇಳಿದರೆ ಜೀವಾತ್ಮನೊಡನೆ ಕೂಡಿರುವ ಪರಮಾತ್ಮನನ್ನು ಮನುಷ್ಯಶರೀರದಲ್ಲಿ ಪೂಜಿಸಬಹುದೋ ? ನಮ್ಮ ಹೃದಯಸ್ಥನಾದ ದೇವರನ್ನು ನಾನು ಪೂಜಿಸಬೇಕಾದರೆ ನಮ್ಮ ಶರೀರಕ್ಕೆ ಪರಿಮಳ ದ್ರವ್ಯಗಳನ್ನು ಹಚ್ಚಿ, ಪುಷ್ಪಾದಿಗಳಿಂದ ಅಲಂಕರಿಸಿ, ನಮಗೆ ಕಾಣಿಕೆಯನ್ನೂ ಕೊಟ್ಟು, ನಮ್ಮ ಶರೀರದ ಮುಂದೆ ನಾನು ಸಾಷ್ಟಾಂಗ ನಮಸ್ಕಾರವನ್ನು ಮಾಡಬಹುದೇ ? ಮಹಾತ್ಮರಾದ ಯೇಸು ಕ್ರೀಸ್ತರ ಪ್ರತಿಮೆಯನ್ನೂ ಕನ್ಯಕೆಯಾದ ಮೇರಿಯ ಪ್ರತಿಮೆಯನ್ನೂ ಜಾನ್ ಮೊದಲಾದವರ ಪ್ರತಿಮೆಯನ್ನೂ ಮಾಡಿ, ಅವುಗಳಿಗೆ ನಮಸ್ಕರಿಸುವದೂ, ಪೂಜಿಸುವದೂ, ಮೆರವಣಿಗೆ ಮಾಡುವದೂ, ಉತ್ಸವಾದಿಗಳನ್ನು ಮಾಡುವದೂ ಮೂರ್ತಿಪೂಜೆಯೆಂಬದಾಗಿ ಸುವಾರ್ತೆಗಳಿಗೆ ಪ್ರೊಟೆಸ್ಟಂಟರು ಮಾಡಿರುವ ವ್ಯಾಖ್ಯಾನದಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ. ಹೀಗೆ ಇರುವಾಗ ಆಫ್ರಿಕಾಖಂಡದಲ್ಲಿಯೂ ಇಂಡಿಯಾದೇಶದಲ್ಲಿಯೂ ಮಾತ್ರ ಮೂರ್ತಿಪೂಜಕರು ಇರುವದಾಗಿ ತಾವು ಹೇಳುವದು ನ್ಯಾಯವೋ ? ಮೂರ್ತಿಪೂಜೆಯನ್ನು ಮಾಡತಕ್ಕ ಕ್ರೈಸ್ತರ ಸಂಖ್ಯೆಯೇ ಯೂರೋಪಿನಲ್ಲಿ ಬಹು ಹೆಚ್ಚಾಗಿರುವದಾಗಿ ಪ್ರೊಟೆಸ್ಟಂಟರ ಗ್ರಂಥಗಳಿಂದಲೇ ಗೊತ್ತಾಗುತ್ತದೆ. ಯೂರೋಪಿನಲ್ಲಿಯೂ ಮೂರ್ತಿಪೂಜಕರು ಹೇರಳವಾಗಿರುತ್ತಾರೆಂದು ತಾವು ಯಾಕೆ ಹೇಳುವದಿಲ್ಲ ? ಪಕ್ಷಪಾತವೇತಕ್ಕೆ ? ಈ ಸಂಗತಿಯನ್ನು ತಾವು ಪ್ರಕಟಿಸದೆ ಇರುವದು ಕ್ರೈಸ್ತಧರ್ಮವೋ ?

ಜೆ. ವಿಜಯೇಂದ್ರರಾವ್.

[೧. ನಿಮ್ಮ ಲೇಖನವನ್ನೆಲ್ಲಾ ಪೂರ್ತಿಯಾಗಿ ಪ್ರಕಟಿಸಲು ಸ್ಥಳವಿಲ್ಲ. ಅದರಲ್ಲಿ ಅಧಿಕ ವಿಶೇಷವಾಗಿ ತೋರುವ ಭಾಗವನ್ನು ಮಾತ್ರ ಪ್ರಕಟಿಸಿದ್ದೇವೆ. ಅವತಾರಿಯಾದ ಭಗವಂತನನ್ನು ಆರಾಧಿಸುವದು ಪಾಪವೆಂದು ಕ್ರೈಸ್ತರು ಎಷ್ಟುಮಾತ್ರವೂ ಹೇಳುವದಿಲ್ಲ. ಕೊಲೊಸ್ಸೆಯವರಿಗೆ ಪೌಲನು ಬರೆದಿರುವ ಪ್ರಕಾರ “ದೇವರ ಸರ್ವಪರಿಪೂರ್ಣತೆಯು ಅವತರಿಸಿ ವಾಸಮಾಡುತ್ತದೆ” (ಕೊಲೊ. ೨. ೯) ಎಂಬ ಮಾತು ಯಾರಿಗೆ ಸಲ್ಲುವದೋ ಅಂಥ ದಿವ್ಯಪುರುಷನನ್ನು ಆರಾಧಿಸುವದು ಎಷ್ಟುಮಾತ್ರಕ್ಕೂ ಪಾಪವಲ್ಲ. ಆದರೆ ಹಿಂದು ಜನರು ಆರಾಧಿಸುವ ದೇವತೆಗಳಲ್ಲಿ ಈ ಲಕ್ಷಣವು ಕಾಣುತ್ತದೋ ? ಇವು (೧) ಮಿಥ್ಯವಾದವುಗಳೇ ಹೊರತು ನಿಜವಾಗಿರುವವುಗಳಲ್ಲ. ಇವುಗಳ ಮಹಿಮೆಯನ್ನು ಕುರಿತು ಹೇಳುವ ಕಥೆಗಳು ವಿಷ್ಣು ವಿರೋಧವಾದಗಳಾಗಿವೆ(?). (೨) ಇವು ಹೀನ ಮಾದರಿಯವುಗಳೆಂದೂ(?) ಪೂಜೆಗೆ ಅನರ್ಹಗಳೆಂದೂ ತಿಳಿಯಬೇಕು. ನಿರಾಕಾರಿಯಾದ ಭಗವಂತನು ಅವತಾರವೆತ್ತಿದರೆ ಆತನು ಮಾರಿ ಎಂಬ ದೇವತೆಯ ರೂಪವನ್ನಾಗಲಿ, ಈ ದೇಶದವರು ಸಾಮಾನ್ಯವಾಗಿ ಪೂಜಿಸುವ ಪಿಶಾಚಗಳ ರೂಪವನ್ನಾಗಲಿ ತಕ್ಕೊಂಡು ಅವತರಿಸುವದುಂಟೇ ? ಪ್ರಾಜ್ಞರು ಹೇಳಬೇಕು. ಮೂರ್ತಿಪೂಜೆಯು ಇಂಡಿಯಾದಲ್ಲಿ ಹೆಚ್ಚೆಂಬ ವಿಷಯದಲ್ಲಿ ನಾವು ಪುನಃ ಹೇಳುವದೇನಂದರೆ—ಯಾವಾತನು ಯೂರೋಪ್ ಅಮೇರಿಕ ಖಂಡಗಳಲ್ಲಿಯೂ ಈ ಇಂಡಿಯಾ ದೇಶದಲ್ಲಿಯೂ ಸಂಚರಿಸಿ ಬಂದಿದ್ದಾನೋ ಆತನು “ಮೂರ್ತಿಪೂಜೆ” ಯು ಇಂಡಿಯಾ ದೇಶದಲ್ಲಿ ಪ್ರಬಲವಾಗಿರುವಷ್ಟು ಆ ದೇಶಗಳಲ್ಲಿ ಇಲ್ಲವೆಂದು ಸ್ವಲ್ಪವೂ ಅನುಮಾನವಿಲ್ಲದೆ ಹೇಳುವನು. ಮಾರಿ ಮಸಣಿ ಮೊದಲಾದ ದೇವತಾ ಪೂಜೆಯಂಥ ಪೂಜೆಗಳು ಮೇಲ್ಕಂಡ ದೇಶಗಳಲ್ಲಿ ಇಲ್ಲವೇ ಇಲ್ಲವೆಂದು ದೃಢವಾಗಿ ಹೇಳಬಲ್ಲೆವು.

[೨. ನಿಮ್ಮ ಲೇಖನದಲ್ಲಿ ಉಳಿದ ಭಾಗಕ್ಕೆ ನಾವು ಹೇಳುವದೇನಂದರೆ—ದೇವರನ್ನು ಸೇವಿಸುವದೂ ಅಥವಾ ದೇವಾಲಯದ ದಾಸ್ಯವನ್ನು ಮಾಡುವದು ಒಂದು ಕರ್ತವ್ಯವಾಗಿದೆಯೆಂದು ಹಿಂದೂ ಮತಗ್ರಂಥಗಳಲ್ಲಿ ಬರೆದಿಲ್ಲವೆಂದು ನಾವು ಹೇಳಲಿಲ್ಲ. ನಾವು ಹೇಳಿದ್ದು ಇಷ್ಟು. ಅದನ್ನೇ ಈಗಲೂ ದೃಢವಾಗಿ ಹೇಳುವೆವು. ಅದೇನಂದರೆ—ಭಗವಂತನಿಗೆ ಸಕಲ ಮಹಿಮೆಯನ್ನೂ ಪ್ರಾರ್ಥನೆಯನ್ನು(?) ಸಲ್ಲಿಸತಕ್ಕವನಾಗಿದ್ದಾನೆಂಬ ಅಭಿಪ್ರಾಯವೇ ಮನುಷ್ಯರಲ್ಲಿ ಹೊರಡಲಿಲ್ಲ(?). ಸಂಸ್ಕೃತ, ಕನ್ನಡ, ತಮಿಳು, ತೆಲುಗು ಭಾಷೆಗಳಲ್ಲಿ ಬರೆದಿರುವ ಸಂಕೀರ್ತನೆಗಳಲ್ಲಿ ಭಕ್ತನು ದೇವರಿಗೆ ಸಲ್ಲಿಸತಕ್ಕ ಭಕ್ತಿಯ ವಿಚಾರವನ್ನು ಬಹು ರಮಣೀಯವಾಗಿ ಹೇಳಿದೆಯೆಂದು ಸಂತೋಷವಾಗಿ ಒಪ್ಪಿಕೊಳ್ಳುತ್ತೇವೆ.

[ಮೂರ್ತಿಪೂಜೆಯನ್ನು ಕುರಿತು ಹೇಳುವಲ್ಲಿ—ಈ ದೇಶದಲ್ಲಿ ಹೆಚ್ಚೆಂದಾಗಲಿ ಆ ದೇಶದಲ್ಲಿ ಕಡಮೆಯೆಂದಾಗಲಿ ಹೇಳಿ ಜೋಡಿಕೆ ಮಾಡುವದು ನಮಗೆ ಸಂತೋಷವೆಂದು ನೀವು ತಿಳಿಯಬಾರದು. ಯಾವ ದೇಶದಲ್ಲಿ ಹೆಚ್ಚೋ ಕಡಿಮೆಯೋ ಅದೇನೂ ಮುಖ್ಯವಲ್ಲ. “ಯಾವ ದೇಶದವರಾದರೇನು ? ಮೂರ್ತಿಪೂಜೆ ಮಾಡುವವರೆಲ್ಲರೂ ದೇವರ ಮುಂದೆ ಪಾಪಿ” ರೆಂದು ನಿರ್ಣಯಿಸಬೇಕು.—ಎಡಿ.]

## ಬಾತ್ಮಿದಾರರಿಗೆ ನೋಟಿಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಹಿಂದುಸ್ಥಾನಿ, ಚಿಕ್ಕನಾಯಕನಹಳ್ಳಿ.—ನೀವು ಹೇಳುವ ವಿಷಯವನ್ನು ವಿದ್ಯಾಭ್ಯಾಸದ ಇಲಾಖೆಯ ಮುಖ್ಯಸ್ಥರಿಗೆ ತಿಳಿಸತಕ್ಕದ್ದು;

ಹರಿಯಣ್ಣ, ಹೊಳಲಕೆರೆ—ನೀವು ಗ್ರಾಮಸ್ಥರ ಮಹಜರು ಸಮೇತ ವಿದ್ಯಾಭ್ಯಾಸದ ಇಲಾಖೆಗೆ ಅರ್ಜಿ ಬರೆದುಕೊಳ್ಳಬೇಕು.

ಕೆ. ಎಲ್. ಹ. ಗೌಡರು, ಚಿಕ್ಕನಾಯಕನಹಳ್ಳಿ; ಬೇಲೂರು ತಾಲ್ಲೂಕು ಪರ್ಣವಾಸ—ಇವೆರಡು ಬಾತ್ಮಿಗಳಲ್ಲೂ ನಾವು ಹಿಂದೆ ಪ್ರಕಟಿಸಿರುವ ವಿಷಯಗಳಲ್ಲದೆ ಹೊಸ ಸಂಗತಿ ಏನೂ ಕಂಡುಬರುವುದಿಲ್ಲ.

ಯಥಾರ್ಥವಾದಿ, ಐಮಂಗಲ, ಹಿರಿಯೂರು—ಅಧಿಕಾರಿಗಳ ದುರ್ನಡತೆ, ಕೆಟ್ಟಚಾಲು, ಪಕ್ಷಪಾತತೆ, ಇವುಗಳ ವಿಷಯವಾಗಿ ನೀವು ಬರೆದಿರುತ್ತೀರಿ. ಇಂಥವುಗಳನ್ನು ನಾವು ಚನ್ನಾಗಿ ಪರಿಶೀಲಿಸದೆ ಪ್ರಕಟಿಸಲಾರೆವು. ಈ ಸಂಗತಿಯನ್ನು ನೀವು ಪೊಲೀಸ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಅರ್ಜಿಯ ಮೂಲಕ ಬರೆದುಕೊಂಡಲ್ಲಿ ಅವರು ತನಿಖೆಮಾಡಿಯಾರೆಂದು ನಂಬಿದ್ದೇವೆ.

—ಎಡಿ.

## ಕರೆಸ್‌ಪಾಂಡೆನ್ಸ್.

### ರೈಲ್ವೆಯಲ್ಲಿ ಮೋಸ ಹೋಗುವ ವಿಧ.

ಅಯ್ಯಾ,

ಕಳೆದ ೧೯೦೨ನೇ ಡಿಸೆಂಬರ್ ೬ ರಲ್ಲಿ ನಾನು ನನ್ನ ಸ್ವಂತ ಯಾಲದ ಕಾಯನ್ನು (ಅಂದರೆ, ಬಂಗಾಳದ ೨೬ ಮಣ) ಅರಸಿಕೆರೆಯಿಂದ ಹಾವೇರಿಗೆ ರೈಲ್‌ಮೇಲೆ ಕಳುಹಿಸಿದ್ದೆನೆಂತಲೂ, ಅದು ಹಾವೇರಿಯಲ್ಲಿ ಇಳಿದು ತೂಕಮಾಡಿದಾಗ ೨೬ ಸೇರು ಕಡಿಮೆಯಾಗಿತ್ತೆಂತಲೂ, ಈ ನಷ್ಟವನ್ನು ಹಾವೇರಿ ಧಾರಣೆಯಂತೆ ಕ್ರಯ ಕಟ್ಟಿ ನನಗೆ ಕೊಡಿಸಬೇಕೆಂದು ಟ್ರಾಫಿಕ್ ಮ್ಯಾನೇಜರಿಗೆ ಬರೆದುಕೊಂಡೆನೆಂತಲೂ ಆಗಲೇ ತಿಳಿಸಿರುತ್ತೇನಷ್ಟೆ. ಈ ಭಾಗವು ಇನ್ನೂ ಇತ್ಯರ್ಥವಾಗಲಿಲ್ಲ. ರೈಲ್ವೆ ಕಂಪನಿಯವರಿಗೂ ನನಗೂ ಕಾಗದ ಪತ್ರಗಳು ನಡೆಯುತ್ತಲೇ ಇರುವವು. ಕಡೆಗೆ ೧೯೦೩—೫—೨೯ ರಲ್ಲಿ ಟ್ರಾಫಿಕ್ ಮ್ಯಾನೇಜರು—ನಿಮ್ಮ ಮೂಲ ಖರೀದಿ ಎಷ್ಟು? ಅದರಂತೆ ಕೊಡುತ್ತೇವೆ ಎಂಬದಾಗಿ ನನ್ನನ್ನು ಕೇಳಿದರು. ಅದು ನನ್ನ ಸ್ವಂತ ತೋಟದಲ್ಲಿ ಬೆಳೆದದ್ದು; ಖರೀದಿ ಇಷ್ಟೆಂದು ಎಣಿಸುವದಕ್ಕೆ ಅನುಕೂಲವಿಲ್ಲ; ಮಾಲ್ ಹಾವೇರಿಗೆ ತಲ್ಪಿದ ದಿನ ಅಲ್ಲಿದ್ದ ಧಾರಣೆಯನ್ನು ಮ್ಯಾನೇಜರವರೇ ಅರಿತುಕೊಂಡು, ಅದರಂತೆ ಹಣ ಕೊಡಿಸಿದಲ್ಲಿ ಕಬೂಲು ಇದ್ದೇನೆ ಎಂಬದಾಗಿ ನಾನು ೧೯೦೩—೬—೧೯ ರಲ್ಲಿ ಜವಾಬು ಕೊಟ್ಟೆನು. ಈ ವರೆಗೆ ಯಾವ ತೀರ್ಮಾನವೂ ಆಗಿಲ್ಲ. ಇನ್ನಾದರೂ ನನ್ನಂಥಾ ವ್ಯಾಪಾರಿಗೆ ಅರಸಿಕೆರೆಯಲ್ಲಿ ಮೋಸವಾಗದಂತೆ ತಕ್ಕ ಏರ್ಪಾಟು ಮಾಡಬೇಕೆಂದು ಅರಿಕೆಮಾಡಿದ್ದೇನೆ.

ನಾರಾಯಣ ಭಟ್ಟ.

*********

### ಪ್ರತಿನಿಧಿಗಳ ಚುನಾವಣೆ—ನೆಲಮಂಗಲ.

ಅಯ್ಯಾ,

ಆಷಾಢ ಬಹುಳ ಅಮಾವಾಸ್ಯೆ ಶುಕ್ರವಾರ ನಮ್ಮ ಅಮಲ್ದಾರರು ಪ್ರಜಾಪ್ರತಿನಿಧಿ ಮೆಂಬರುಗಳ ಚುನಾವಣೆಗೋಸ್ಕರ ಒಂದು ಸಭೆಯನ್ನು ಕೂಡಿಸಿದರು. ಅಮಾವಾಸ್ಯೆಯಾದ ಪ್ರಯುಕ್ತ ಬಹು ಮಂದಿ ಹಾಜರಾಗಲು ಅವಕಾಶವಾಗಲಿಲ್ಲ. ಅಮಲ್ದಾರರು ಬಂದಿದ್ದವರ ಕೈಲಿ ಚೀಟಿಗಳನ್ನು ಕೊಟ್ಟು, ಇಲ್ಲಿಂದ ಮೂರು ಮಂದಿ ಮೆಂಬರುಗಳನ್ನು ಚುನಾಯಿಸಬೇಕೆಂತಲೂ, ನಿಮ್ಮ ಇಷ್ಟ ಬಂದ ಮೂರು ಜನರ ಹೆಸರುಗಳನ್ನು ಚೀಟಿಯಲ್ಲಿ ಬರೆದು ಕೊಡಬೇಕೆಂತಲೂ ತಿಳಿಸಿದರು. ಸೇರಿದ್ದ ಮೆಂಬರುಗಳು ಮೂರು ಜನರ ಹೆಸರನ್ನು ಬರೆದು ಕೊಟ್ಟರು. ದಾಸಪ್ಪನವರನ್ನು ಗಣತಿ ಮಾಡುವದಕ್ಕೆ ಅಮಲ್ದಾರರು ನೇಮಿಸಿದರು. ಅವರು ಸಮ್ಮತಿಗಳ ಗಣತಿ ಮಾಡಿದ್ದರಲ್ಲಿ ದಾಸಪ್ಪನವರಿಗೂ, ಸಭಾಧ್ಯಕ್ಷರಾಗಿದ್ದ ಗಂಗಯ್ಯನವರಿಗೂ, ಬಿದ್ಲೂರು ಚನ್ನಿಂಗಪ್ಪನವರಿಗೂ ಹೆಚ್ಚು ಸಮ್ಮತಿ ಬಂತೆಂದು ಹೇಳಿ, ಅವರೇ ಮೆಂಬರಾಗಿ ಹೋಗತಕ್ಕದ್ದೆಂದು ಗೊತ್ತಾಯಿತು. ಈ ದಾಸಪ್ಪನವರು ಹಿಂದೆ ಸಜಾ ಅನುಭವಿಸಿರತಕ್ಕವರು. ಗಂಗಯ್ಯನವರು ನೆಲಮಂಗಲದ ಅಮಲ್ದಾರರಾಗಿದ್ದು ಕಂಪರಾ ಮಾಡಲ್ಪಟ್ಟು, ಸಬ್ ರಜಿಸ್ಟ್ರಾರ್ ಆಗಿದ್ದರು. ಇವರು ಬೆಂಗಳೂರಿನಲ್ಲೇ ವಾಸಮಾಡತಕ್ಕವರು. ನೆಲಮಂಗಲದ ತಾಲ್ಲೂಕಿನ ಕಷ್ಟಸುಖಗಳನ್ನು ಕಂಡವರಲ್ಲ. ಮತ್ತು ಇವರು ಭಾರೀ ಕಂದಾಯ ಕೊಡತಕ್ಕವರೂ ಅಲ್ಲ. ಬಿದ್ಲೂರು ಚನ್ನಿಂಗಪ್ಪನವರಾದರೋ ಶ್ರೀಕಾಂಡ ಗುರ್ತು ಅರಿಯದವರು. ವಿದ್ಯೆ, ಲೋಕವ್ಯವಹಾರ ಜ್ಞಾನ ಇಲ್ಲದವರು. ಆ ಮಹಾ ಸಭೆಗೆ ಹೋದರೆ ಮನಸಿನಿಂದಿದ್ದು ಅಲ್ಲಿ ಏನೊಂದಕ್ಕೂ ಅನಾವರು ತಗೆದುಕೊಳ್ಳತಕ್ಕವರು. ಈ ಭಾಗದಲ್ಲಿ ಇಂಥಾ ಪ್ರತಿನಿಧಿಗಳಿಂದ ಪ್ರಜೆಗಳಿಗೆ ಎಷ್ಟು ಅನುಕೂಲವಾಗೋ ನಿವೇದಿಸಬೇಕು. ಇಂಥಾ ಮೆಂಬರುಗಳು ಚುನಾಯಿಸಲ್ಪಟ್ಟದ್ದಕ್ಕಾಗಿ ಪ್ರಜೆಗಳು ಎಷ್ಟು ಸಂತೋಷಪಡುತ್ತಿದ್ದೇವೆಯೋ. ಈ ತರಹಾ ಚುನಾವಣೆಯಲ್ಲಿ ಲೋಕಲ್‌ಫಂಡೋ ಇಲ್ಲವೋ ಸರ್ಕಾರದವರೇ ಪರಿಶೀಲನೆ ಮಾಡಿ, ಪ್ರಜೆಗಳನ್ನು ಕಾಪಾಡಬೇಕೆಂದು ಬೇಡುತ್ತೇವೆ. ಈ ಚುನಾವಣೆಯು ಕಾನೂನಿಗೆ ಸರಿಯಾಗಿ ನಡೆದಿಲ್ಲವೆಂದು ಹೇಳುವರು.

ಪ್ರಜಾಹಿತಚಿಂತಕ.

*********

### ಪ್ರತಿನಿಧಿಗಳ ಚುನಾವಣೆ—ಕಾಡುಗೋಡಿ (?).

ಅಯ್ಯಾ,

ನಮ್ಮ ಅಮಲ್ದಾರರು ಜುಲೈ ೧೯ನೇ ತಾ॥ ರವಿವಾರ ಈ ತಾಲ್ಲೂಕಿನ ಪ್ರಜಾಪ್ರತಿನಿಧಿಗಳನ್ನು ಚುನಾಯಿಸುವ ಉದ್ದಿಶ್ಯ ಕೋಟೆ ರಂಗನಾಥ ದೇವಾಲಯದಲ್ಲಿ ಪ್ರಜೆಗಳು ಸೇರತಕ್ಕದ್ದೆಂದು ಕೆಲವರಿಗೆ ಪತ್ರಿಕೆ ಕಳುಹಿಸಿದ್ದರು. ಆ ಪೈಕಿ ಕೆಲವರು ತಮ್ಮ ಅಭಿಪ್ರಾಯ ನೆರವೇರುವದಿಲ್ಲವಾದ್ದರಿಂದ ಹೋಗಿ ತಿರಸ್ಕೃತರಾಗುವದಕ್ಕಿಂತಲೂ ಮನೆಯಲ್ಲಿರುವದೇ ಗೌರವವೆಂದು ತಾಟಸ್ಥ್ಯ ಹೊಂದಿದರು. ಕೆಲವರು ಅಮಲ್ದಾರರ ಬಳಿಗೆ ಹೋದರು. ಕೆಲವರು ಸಾಯಂಕಾಲದ ತನಕ ರಂಗನಾಥ ದೇವಾಲಯದಲ್ಲೇ ಕಾದಿದ್ದು, ನಂತರ ವಿಚಾರ ಮಾಡಿ, ತಾಲ್ಲೂಕ್ ಕಛೇರಿಯಲ್ಲೇ ಇದ್ದಷ್ಟು ಜನರು ಸರಿಮಾಡಿಕೊಂಡರೆಂದು ಕೇಳಿ, ತಮ್ಮ ಸ್ಥಳವನ್ನು ಸೇರಿದರೆಂತಲೂ, ಪ್ರಜಾ ಪ್ರತಿನಿಧಿಗಳಾಗಿ ಸೇರಿಸಲು ಚೀಟಿ ಹಾಕಿ ಅದರಲ್ಲಿ ಹೋಗುವದಕ್ಕೆ ಕುತೂಹಲವುಳ್ಳವರಾಗಿದ್ದ ನಾರೇಹಳ್ಳಿ, ಸ್ವಾಮಿ ಭಾಗ ಗುಮಾಸ್ತೆ ರಾಮಯ್ಯನವರನ್ನೇ ಚೀಟಿ ತೆಗೆಯುವಂತೆ ಅಮಲ್ದಾರರು ಅಪ್ಪಣೆ ಕೊಡಿಸಿದರೆಂತಲೂ, ಅದರಲ್ಲಿ ಈ ರಾಮಯ್ಯನವರೇ ಮೊದಲಾಗಿ ೩ ಜನರು ಬಂದರೆ ಅವರನ್ನೇ ಮೆಂಬರಾಗಿ ಕಳುಹಿಸುವದಾಗಿ ಪರ್ಯಾಯತೆಂತಲೂ ಕೇಳಿ ಪ್ರಜೆಗಳು ಪಡುವ ಅಭಿಪ್ರಾಯಗಳು ತಮ್ಮ ಅವಧಾನಕ್ಕೆ ತರುತ್ತೇನೆ. ನೂರು ರೂಪಾಯಿನ ಒಳ್ಳೇ ಹಿಡುವಳಿದಾರರು ಹೆಚ್ಚಿನ ಹಿಡುವಳಿದಾರರನ್ನು ತಮ್ಮ ಪ್ರತಿನಿಧಿಗಳಾಗಿ ಕಳುಹಿಸುವರೆಂಬುದು ನಡವಳಿಕೆಯಲ್ಲಿ ಇಲ್ಲ. ಪಟೇಲ್ ಶಾನುಭೋಗರು ಸರ್ಕಾರಿ ನೌಕರರಾಗಿರುವಲ್ಲಿ ಪ್ರಜೆಗಳಿಗೆ ಹ್ಯಾಗೆ ಪ್ರತಿನಿಧಿಗಳಾಗುತ್ತಾರೋ ತಿಳಿಯದು. ಅಮಲ್ದಾರರು ಇಷ್ಟಬಂದವರನ್ನೇ ಕಳುಹಿಸುವದು ನಿರ್ಧಾರವಾದಂತೆ ಕಾಣುತ್ತೆ. ಈ ರಾಮಯ್ಯನವರು ಶ್ಯಾನುಭೋಗರ ಗುಮಾಸ್ತರಾಗಿ ಇರುತ್ತಾರೆ. ಹಕ್ಕುದಾರರು ತಲಬುಮಾಡಿದ್ದರೂ ಅವರ ಕೆಲಸ ಬಿಡದೆ ಚರ್ಚೆಯಲ್ಲಿದೆ. ಕಳೆದ ಮೂರು ವರುಷಗಳಿಂದಲೂ ಇವರೇ ಮೆಂಬರಾಗಿ ಹೋಗುತ್ತಿದ್ದಾರೆ. ಭಾರೀ ಹಿಡುವಳಿದಾರರಾದ ಬೇರೊಡುಗಾರರಿಗೆ ಈ ಪದವಿ ದೊರಕಲಿಲ್ಲವೆಂದೂ, ಸ್ಥಳದ ಕಟ್ಟಾ ಅಮಲು ಸರ್ಕಾರದವರ ಗಮನಕ್ಕೆ ಬರಲು ಅವಕಾಶವೇ ಇಲ್ಲವೆಂದೂ, ಇಂಥಾ ಚುನಾವಣೆಯನ್ನು ಗೌವರ್ನಮೆಂಟಿನವರು ಹ್ಯಾಗೆ ಒಪ್ಪಿಕೊಳ್ಳುವರೋ ತಿಳಿಯದು ಎಂದೂ, ಶ್ಯಾನುಭೋಗರಿಗೂ ಪಟೇಲರಿಗೂ ಪ್ರಜೆಗಳಲ್ಲಿರುವ ಚಿಂತನೆಯನ್ನು ಎನ್ನೆಂದು ಹೇಳುವರೂ ತೀರದೆಂತಲೂ ಸಜ್ಜನರು ಚಿಂತಿಸುತ್ತಿದ್ದಾರೆ. ಇನ್ನು ಮುಂದಾದರೂ ಇಂಥಾ ಕಾರ್ಯಗಳು ನಡೆಯದಂತೆ ಗೌವರ್ನಮೆಂಟಿನವರು ಮೇಲ್ವಿಚಾರಣೆ ಮಾಡಬೇಕೆಂದು ಬೇಡುತ್ತೇನೆ.

ಪಂಥಾದಾರ.

*********

### ಮೊಖ್ತ್ಯಾರುಗಳು.

ಅಯ್ಯಾ,

ಸನದಿ ಮೊಖ್ತ್ಯಾರು ಎಂದು ಹೆಸರು ಇಟ್ಟುಕೊಂಡಿರುವ ಲಾಯರುಗಳ ವಿಷಯದಲ್ಲಿ ಈ ಕೆಳಗೆ ವಿವರಿಸಿ ಹೇಳುವ ಸಂಗತಿಗಳನ್ನು ತಮ್ಮ ಘನವಾದ ಪತ್ರಿಕೆ ಒಂದು ಕಿನಾರೆಯಲ್ಲಿ ಪ್ರಾಯಿಷ್ ಮಾಡುವಿರೆಂದು ಬೇಡುತ್ತೇನೆ.

ಯಾವದೊಂದು ಪರೀಕ್ಷೆ ಕೊಡದೇ ಸರ್ಕಾರಕ್ಕೆ ವರುಷಂಪ್ರತಿ ವರುಷ ಎನರೋಲ್ ಆದ ಪ್ಲೀಡರುಗಳು ಫೀಜು ಕಟ್ಟಿ ತಮ್ಮಗಳ ಸರ್ಟಿಫಿಕೇಟ್‌ಗಳನ್ನು ಪಡೆದುಕೊಳ್ಳುವ ಹಾಗೆ ಇವರುಗಳು ಮಾಡದೆ ಕ್ರಿಮಿನಲ್ ಮೊಕದ್ದಮೆಗಳನ್ನು ನಡಿಸುವದಕ್ಕಾಗಿ ಮೇಜಿಸ್ಟ್ರೇಟರ ಕೋರ್ಟುಗಳಲ್ಲಿ ಇದ್ದುಕೊಂಡು ಆಯಾಯ ಮೇಜಿಸ್ಟ್ರೇಟರುಗಳನ್ನು ಅನುಸರಣೆ ಮಾಡಿಕೊಂಡು ಫಿರ್ಯಾದಿಯ ಅಪರಾಧಿಗಳ ತರಫ್ ಮೊಕದ್ದಮೆಗಳನ್ನು ಸಾಧಾರಣವಾಗಿ ನಡಿಸಿಕೊಂಡು ಬರುತ್ತಾರೆ.

ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್‌ನಲ್ಲಿ ಅಪರಾಧಿಗಳ ತರಫ್ ಮಾತ್ರಗೆ ಇದ್ದು ಕೌನ್ಸಲರ್ ತರೀಕು ಮೊಕದ್ದಮೆಗಳನ್ನು ನಡಿಸಬಹುದೆಂದು ನಮೂದು ಇರುತ್ತದೆಯೇ ಶಿವಾಯ ಫಿರ್ಯಾದಿ ತರಫ್ ಇದ್ದು ನಡಿಸಬೇಕೆಂದು ವಿಧಾಯಕವಿಲ್ಲ. ಇಂಥಾದ್ದರಲ್ಲಿಯೂ ಆಯಾಯ ಕೋರ್ಟಿನವರು ಎನರೋಲಾದ ಅಡ್ವೊಕೇಟ್ ಯಾ ಪ್ಲೀಡರುಗಳಲ್ಲದೆ ಇರುವ ಮೊಖ್ತ್ಯಾರುಗಳನ್ನು ಇಟ್ಟುಕೊಂಡು ಮೊಕದ್ದಮೆಗಳನ್ನು ನಡಿಸುವದಕ್ಕೆ ಇವರುಗಳ ಯೋಗ್ಯತೆಗಳನ್ನು ನೋಡಿ ಅಂಗೀಕಾರ ಮಾಡಬೇಕೆಂದೂನು ಅಂಥಾ ಮೇಜಿಸ್ಟ್ರೇಟರು ಮೇಲ್‌ಕೋರ್ಟಿಗೆ ಕಳುಹಿಸಿಕೊಡುವ ತಮ್ಮ ಕ್ಯಾಲಂಡರುಗಳಲ್ಲಿ ಅಂಥಾವರನ್ನು ಇಟ್ಟುಕೊಂಡು ಮೊಕದ್ದಮೆಗಳನ್ನು ನಡಿಸಿದ್ದಕ್ಕಾಗಿ ಕಾರಣವನ್ನು ತೋರಿಸಬೇಕೆಂದೂನೂ ನಮ್ಮ ಘನವಾದ ಚೀಫ್ ಕೋರ್ಟಿನವರು ಸ್ಪಷ್ಟವಾಗಿ ಈಚೆಗೆ ಸರ್‌ಕ್ಯುಲರ್ ಹುಕುಂ ಮೂಲಕ ವಿಧಾಯಿಸಿರುತ್ತಾರೆ. ಆದರೆ ಈ ಮೇರಿಗೆ ಆಯಾಯ ಮೇಜಿಸ್ಟ್ರೇಟರು ಜಾರಿಯಲ್ಲಿ ತಂದು ನಡಸಿಕೊಂಡು ಬರುವ ಹಾಗೆ ಕಾಣಬರುವದಿಲ್ಲ.

ನನಗೆ ತಿಳಿದಿರುವ ಹಾಗೆ ಮೈಸೂರು ಮತ್ತು ಇತರ ಡಿಸ್ಟ್ರಿಕ್ಟುಗಳಲ್ಲಿ ಈ ತರಹಾ ಜನಗಳು ಹೇರಳವಾಗಿ ಇದ್ದುಕೊಂಡು ಕೆಳಗಿನ ಮೇಜಿಸ್ಟ್ರೇಟರು ಮತ್ತು ತಾಲ್ಲೂಕು ಕೋರ್ಟುಗಳಲ್ಲಿಯೂ ಹಾಜರಾಗಿ ಫಿರ್ಯಾದಿ ಯಾ ಅಪರಾಧಿ ತರಫ್ ಮೊಕದ್ದಮೆಗಳನ್ನು ಯಾವದೊಂದು ನಿರ್ಬಂಧವಿಲ್ಲದೆ ಸಾಧಾರಣವಾಗಿ ನಡಿಸಿಕೊಂಡು ಬರುತ್ತಾರೆ. ಇಂಥಾ ಸಮೂಹಕ್ಕೆ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿಗೂ ನಮ್ಮ ಘನವಾದ ಚೀಫ್ ಕೋರ್ಟಿನವರು ಹೊರಡಿಸಿ ಕೊಟ್ಟಿರುವ ಸರ್‌ಕ್ಯುಲರ್ ಹುಕುಂಮಿಗೆ ಬಹಳ ವಿರೋಧವಾಗಿರುತ್ತೆ. ಆದ್ದರಿಂದ ಈ ವಿಷಯದಲ್ಲಿ ಹೊಸದಾಗಿ ಮತ್ತೊಂದು ಸರ್‌ಕ್ಯುಲರ್ ಹುಕುಂ ಚೀಫ್ ಕೋರ್ಟಿನಿಂದಲೇ ಕೊಡುವದಕ್ಕೆ ಅತ್ಯಂತ ಆವಶ್ಯಕವಾಗಿದೆ. ಯಾತಕ್ಕೆಂದರೆ ಅಡ್ವೊಕೇಟ್ ಮತ್ತು ಪ್ಲೀಡರ್ ಕೆಲಸ ಆಗುವದಕ್ಕಾಗಿ ವಿದ್ಯಾರ್ಥಿಗಳು ಬಹಳ ಕಷ್ಟಪಟ್ಟು ದ್ರವ್ಯ ವೆಚ್ಚಮಾಡಿ ವಿಶೇಷ ಬೆಲೆಯುಳ್ಳ ಪುಸ್ತಕಗಳನ್ನು ತರಿಸಿಕೊಂಡು ಓದಿ ಪರೀಕ್ಷೆ ಕೊಟ್ಟು ತೇರ್ಗಡೆಯಾದನಂತರ ತಾವುಗಳು ಹೊಂದತಕ್ಕ ಫಲಿತಾರ್ಥವನ್ನು ಇಂಥಾ ಮೊಖ್ತ್ಯಾರುಗಳಿಂದ ನಷ್ಟಪಡುತ್ತಾ ಬರುತ್ತಿದ್ದಾರೆ. ಇವರುಗಳು ಯಾವದೊಂದು ಪರೀಕ್ಷೆ ಕೊಡದೇನೂ ಸರ್ಕಾರಕ್ಕೆ ಕೊಡತಕ್ಕ ರುಸುಂ ಅಂದರೆ ವರಮಾನವನ್ನು ವರುಷಂಪ್ರತಿ ವರುಷದಲ್ಲಿ ಕಟ್ಟದೇ ಮೊಖ್ತ್ಯಾರು ಎಂದು ಹೆಸರಿಟ್ಟುಕೊಂಡು ಆಯಾಯ ಮೇಜಿಸ್ಟ್ರೇಟರುಗಳ ದಯಾ ಸಂಪಾದಿಸಿ ಪ್ರತಿಪಕ್ಷದಲ್ಲಿಯೇ ಕಕ್ಷಿಗಾರರುಗಳಿಂದ ರುಸುಂ ಹೇರಳವಾಗಿ ಸಂಪಾದಿಸಿಕೊಳ್ಳುತ್ತಾ ಇದ್ದಾರೆ. ಇಂಥಾ ಅನ್ಯಾಯ ಮತ್ತು ಅಕ್ರಮವನ್ನು ನಮ್ಮ ಘನವಾದ ಚೀಫ್ ಕೋರ್ಟಿನವರು ದಯವಿಟ್ಟು ತಮ್ಮ ವಿಚಾರಾಲೋಚನೆಗೆ ತಂದು ಇತರ ರಾಜಧಾನಿಗಳಲ್ಲಿ ಲೀಗಲ್ ಪ್ರಾಕ್ಟಿಷನರ್ಸ್ ಆಕ್ಟ್ ಜಾರಿಯಲ್ಲಿರುವ ಹಾಗೆ ಈ ಸೀಮೆಯಲ್ಲಿಯೂ ಈ ಕೆಳಗೆ ನಮೂದಿಸಿರುವ ಮೇರಿಗೆ ಜಾರಿಯಲ್ಲಿ ತರುವದಕ್ಕೆ ಒಂದು ನಿಬಂಧನೆ ಯಾ ಸರ್‌ಕ್ಯುಲರ್ ಹುಕುಂ ಶೀಘ್ರದಲ್ಲಿ ಕೊಡುವರೆಂದು ನಂಬುತ್ತೇನೆ. ಅಂಥಾ ನಿಬಂಧನೆ ಯಾ ಸರ್‌ಕ್ಯುಲರ್ ಹುಕುಂ ಯಾವ ಮೇರಿಗೆ ಇರಬೇಕೆಂದರೆ ಯಾರೊಬ್ಬ ಮನುಷ್ಯನು ಮೇಜಿಸ್ಟ್ರೇಟರ ಕೋರ್ಟುಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ಫಿರ್ಯಾದಿ ಯಾ ಅಪರಾಧಿಗಳ ತರಫ್ ಮೊಖ್ತ್ಯಾರ್ ತರೀಖು ನಿಂತುಕೊಂಡು ನಡಿಸುವದಕ್ಕೆ ಅಪೇಕ್ಷವುಳ್ಳ ಪ್ರತಿ ಒಬ್ಬ ಮನುಷ್ಯನು ಪ್ರಥಮತಃ ಇಂಗ್ಲೀಷು ಕನ್ನಡ ಭಾಷೆಯಲ್ಲಿ ಮೈಸೂರು ಲೋವರ್‌ಸೆಕಂಡರಿ ಪರೀಕ್ಷೆ ಕೊಟ್ಟು ತೇರ್ಗಡೆ ಆಗಿರಬೇಕೆಂತಲೂ ನಂತರ ಮೊಖ್ತ್ಯಾರ್ ಪರೀಕ್ಷೆ ಕೊಡುವದಕ್ಕೆ ಅಪೇಕ್ಷವುಳ್ಳವನು ಸರ್ಕಾರದು ಮಾಡುವ ತಕ್ಕ ರುಸುಂ ಕೊಟ್ಟು ಈ ಕೆಳಗೆ ನಮೂದಾಗುವ ಲಾ ಪುಸ್ತಕಗಳಲ್ಲಿ ಪರೀಕ್ಷೆ ಕೊಟ್ಟು ತೇರ್ಗಡೆ ಆದನಂತರ ಮೊಖ್ತ್ಯಾರ್ ತರೀಖು ಎನರೋಲ್ ಮಾಡಬಹುದು ಎಂದೂನು ವಿಧಾಯಕ ಮಾಡುವದಕ್ಕೆ ಅತ್ಯಂತ ಅವಶ್ಯಕವಾಗಿದೆ ಮತ್ತು ಇಂಥಾ ಮೊಖ್ತ್ಯಾರುಗಳು ಎನರೋಲ್ ಆಗುವದಕ್ಕಾಗಿ ೫ರು ರೂಪಾಯಿ ಸರ್ಕಾರಕ್ಕೆ ರುಸುಂ ಕಟ್ಟಿ ನಂತರ ಆಯಾಯ ಸಾಲ್‌ಗಳಲ್ಲಿ ರಿನ್ಯೂ ಆಗುವದಕ್ಕಾಗಿ ಸದರಿ ಮೊಬಲಗನ್ನು ಆಯಾಯ ಸಾಲ್‌ನಲ್ಲಿ ಕಟ್ಟಿಕೊಂಡು ಬರಬೇಕೆಂದೂನೂ ನಿಬಂಧನೆ ನಮ್ಮ ಘನವಾದ ಚೀಫ್ ಕೋರ್ಟಿನವರು ಮಾಡಿಸುವರೆಂದು ನಂಬುತ್ತೇನೆ.

ಪರೀಕ್ಷೆ ಕೊಡತಕ್ಕ ಪುಸ್ತಕಗಳು ಯಾವವೆಂದರೆ—೧ ಎವಿಡೆನ್ಸ್ ಆಕ್ಟ್, ೨ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡು, ೩ ಪಿನಲ್ ಕೋಡು, ೪ ಪೊಲೀಸ್ ರೂಲ್ಸ್ ಮತ್ತು ಚೀಫ್‌ಕೋರ್ಟಿನವರು ತೋರುವ ಇತರ ಲಾ ಪುಸ್ತಕಗಳು.

ಯಥಾರ್ಥವಾದಿ ಮತ್ತು ದೇಶಾಭಿಮಾನಿ.

## ಇಂಡಿಯಾ ದೇಶದ ವೃತ್ತಾಂತಗಳು.

ಮಧ್ಯಪ್ರಾಂತ್ಯಗಳಲ್ಲಿ ಕ್ಷಾಮಪೀಡಿತರ ಸಂಖ್ಯೆಯು ಹೋದವಾರ ೨೮,೩೭೦ ಕ್ಕೆ ಇಳಿಯಿತು.

*****

೧೯೦೨ನೆ ಇಸವಿಯಲ್ಲಿ ಬೊಂಬಾಯಿ ಅಧಿಕಾರ್ಯದೊಳಗೆ ೨,೮೩,೭೪೨ ಜನರು ಪ್ಲೇಗ್ ಉಪದ್ರವದಿಂದ ಸಾವಾಗಿರುತ್ತಾರೆ.

*****

ಬೊಂಬಾಯಿ ಪಟ್ಟಣವನ್ನು ಅಭಿವೃದ್ಧಿಗೆ ತರುವದಕ್ಕಾಗಿ ಮ್ಯುನಿಸಿಪಾಲಿಟಿಯವರು ೬೦ ಲಕ್ಷ ರೂಪಾಯಿ ಸಾಲಮಾಡುವವರಾಗಿದ್ದಾರೆ.

*****

ಗುಂಟೂರು ಪಟ್ಟಣಕ್ಕೆ ಒಳ್ಳೇ ಕುಡಿಯುವ ನೀರನ್ನು ತಂದೊದಗಿಸಬೇಕೆಂದು ಮದರಾಸ್ ಸರ್ಕಾರದವರು ೧,೩೩,೦೦೦ ರೂ. ಸ್ಯಾಂಕ್ಷನ್ ಮಾಡಿದ್ದಾರೆ.

*****

ಕಳೆದ ವಾರ ಕಲ್ಕತ್ತೆಯಲ್ಲಿ ಎರಡು ಗುಂಪಿನ ಸೋಜರುಗಳು ಸೇರಿ ಫುಟ್ ಬಾಲ್ ಪಂದ್ಯವನ್ನು ಆಡಿದರು. ಈ ವಿನೋದವನ್ನು ನೋಡಲು ಸುಮಾರು ೨೦,೦೦೦ ಜನರು ಸೇರಿದ್ದರು.

*****

ಮೈಸೂರಿಗೂ ತಲಚೇರಿಗೂ ರೈಲ್ ರಸ್ತೆ ಹಾಕುವ ವಿಚಾರವನ್ನು ಇಂಡಿಯಾ ಗೌವರ್ನಮೆಂಟಿನವರು ಸದ್ಯಕ್ಕೆ ನಿಲ್ಲಿಸಿದ್ದಾರೆ. ಇನ್ನು ಮುಂದೆ ಹಣ ಒದಗುವಾಗ್ಯೆ ಈ ಲೈನ್ ಸ್ಯಾಂಕ್ಷನ್ ಆದೀತು.

*****

ನಭಾ ಸಂಸ್ಥಾನದ ರಾಜರು ಸಿಂಲಾ ಪಟ್ಟಣಕ್ಕೆ ಹೋಗಿಬರುವ ಸ್ವದೇಶೀಯ ಪ್ರಜೆಗಳ ಪ್ರಯೋಜನಕ್ಕೋಸ್ಕರ ಅಲ್ಲಿ ಒಂದು ಧರ್ಮಸತ್ರವನ್ನು ಇಡಿಸಿ ನಡಸುವಂತೆ ಏರ್ಪಾಡು ಮಾಡುತ್ತಿದ್ದಾರೆ.

*****

ಸಿಂಲಾ ಜಿಲ್ಲಾ ಡಿವಿಜನ್ ಪೋಸ್ಟಾಫೀಸುಗಳ ಸೂಪರಿಂಟೆಂಡೆಂಟಾಗಿದ್ದ ರಾಯಬಹದೂರ್ ಮಿಲತ್ತುರಾಂ, ಸಿ. ಐ. ಇ.ಯವರಿಗೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ವರ್ಷಕ್ಕೆ ೫,೦೦೦ ರೂ. ಪೆನ್‌ಷನ್ ಸ್ಯಾಂಕ್ಷನ್ ಮಾಡಿದ್ದಾರೆ. ಈ ಇವರು ಗ್ವಾಲಿಯರ್ ಸಂಸ್ಥಾನದ ಪೋಸ್ಟ್ ಮಾಸ್ಟರ್ ಜನರಲ್ ಆಗುವರು.

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ವಾರಂಗಾಲ್ ಡಿಸ್ಟ್ರಿಕ್ಟಿನಲ್ಲಿ ಮಳೆಯು ಹೆಚ್ಚಾದ ಕಾರಣ ಕಳೆದ ವಾರ ಪಾಕ್ಷಿಕ ಭಾರೀ ಕೆರೆಗಳು ಒಡೆದುಹೋದವು. ಆದುದರಿಂದ ರೈಲ್ ರಸ್ತೆ ಕಿತ್ತುಹೋಯಿತು.

◆◆◆◆

ಲಂಡನ್ ಪ್ರೀಪದಲ್ಲಿ ನ್ಯಾಷನಲ್ ಬ್ಯಾಂಕಿನ ಗುಮಾಸ್ತೆಯಾಗಿದ್ದ ಲಾಂಗಿಮಾರ್ ಎಂಬುವನು ಆ ಬ್ಯಾಂಕಿನ ಹಣದಲ್ಲಿ ೨೦ ಸಾವಿರ ರೂಪಾಯಿ ತಿಂದುಹಾಕಿದನು. ಸದರಿ ವಿಚಾರಣೆ ನಡೆಯುತ್ತಾ ಇದೆ.

◆◆◆◆

ಮದರಾಸ್ ಅಧಿಕಾರ್ಯದಲ್ಲಿ ವಿದ್ಯಾಭ್ಯಾಸದ ಇಲಾಖಾ ಟೆಕ್ಸ್ಟ್ ಬುಕ್ ಕಮಿಟಿಗೆ ಪ್ರತಿ ಮೂರು ವರುಷಕ್ಕೊಮ್ಮೆ ಬೇರೆ ಮೆಂಬರುಗಳನ್ನು ನಾಮಕರಿಸಿ ನೇಮಿಸಬೇಕೆಂದು ಗೌವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ.

◆◆◆◆

ಸಿಂಗಪೂರದಲ್ಲಿ ಒಬ್ಬ ಬಂಗಾಳಿಯು (ಅವನ ಹೆಸರು ಹಬಿಬುಲ್ಲಾ) ಜನರಿಗೆ ಕಳವಿನ ಮಾಲು ಕಾಗದಗಳನ್ನು ಹೇಳಿಕೊಂಡು ತೋರಿಸಿ ಮೋಸಮಾಡುತ್ತಿದ್ದನು. ಇವನು ಜನರನ್ನು ಮೋಸಪಡಿಸಿದ ತಪ್ಪಿನಿಂದ ಪೋಲೀಸಿನವರು ಹಿಡಿದು, ಅವನ ಮೇಲೆ ಛಾರ್ಜು ತಂದು, ಅವನಿಗೆ ೨೫ ರೂ. ದುಲ್ಮಾನೆ ಹಾಕಿಸಿದರು.

◆◆◆◆

ಹೈದರಾಬಾದಿನ ನಿಲ್ಪೇರಿ ಇಲಾಖಾ ಸೆಕ್ರೆಟರಿಯಾದ ನವಾಬ್ ಜಾಫರ್ ಜಂಗ್ ಯವರು ೧೪,೦೦೦ ರೂ. ಕೊಟ್ಟು ಒಂದು ಭಾರಿ ಟೆಲಿಸ್ಕೋಪ್ (ದೂರದರ್ಶಕ ಯಂತ್ರವನ್ನು) ಕೊಂಡುಕೊಂಡಿದ್ದಾರೆ. ಇದರಷ್ಟು ದೊಡ್ಡ ಯಂತ್ರವನ್ನು ಹಿಂದುಸ್ಥಾನದಲ್ಲಿ ಮತ್ತಾರೂ ಪಡೆದಿಲ್ಲವೆಂತಲೂ, ಇದು ಸಾರ್ವ ದೊರೆಯವರಿಗೋಸ್ಕರ ತರಿಸಲ್ಪಟ್ಟಿತೆಂತಲೂ ತಿಳಿದುಬರುವುದು.

◆◆◆◆

ಈ ತಿಂಗಳ ಪ್ರಾರಂಭದಲ್ಲೇ ಬೊಂಬಾಯಿ ಮತ್ತು ಮದರಾಸಿನ ಗೌವರ್ನರುಗಳು ಸಿಂಲಾ ಪಟ್ಟಣಕ್ಕೆ ಹೋಗಿ, ಒಂದು ವಾರ ವೈಸರಾಯಿಯವರ ಅತಿಥಿಗಳಾಗಿದ್ದು ಬರುತ್ತಾರೆಂದು ಹಿಂದೆಯೇ ತಿಳಿಸಿದ್ದೇವಷ್ಟೆ. ಈಚೆಗೆ ಇದು ನಿಂತುಹೋಯಿತು. ಬೊಂಬಾಯಿ ಗೌವರ್ನರು ಇಷ್ಟರಲ್ಲೇ ಕೆಲಸಬಿಟ್ಟು ಬೇರೆ ಕೆಲಸದಮೇಲೆ ಸೀಮೆಗೆ ಹೋಗುತ್ತಾರೆಂಬದಾಗಿ ವರ್ತಮಾನ ಬಂದಿದೆ.

◆◆◆◆

ಸೇಲಂ ಪ್ರಾಂತ್ಯದಲ್ಲಿ ಒಬ್ಬ ಸ್ಟೇಷನ್ ಮಾಸ್ಟರು ಸರ್ಕಾರಿ ಹಣವನ್ನು ಕೆಲವು ವರ್ತಕರಿಗೆ ಸಾಲ ಕೊಟ್ಟು ಇದ್ದನು. ಅದರು ಆ ಹಣದಲ್ಲಿ ಗೋಧಿಯ ವ್ಯಾಪಾರ ನಡಸುತ್ತಿದ್ದರು. ಆ ಸ್ಟೇಷನ್ ಮಾಸ್ಟರು ಹಣವನ್ನು ಬಡ್ಡಿಗೆ ಕೊಟ್ಟಿಸಲ್ಲದೆ ವ್ಯಾಪಾರ ನಡಸಿದಂತಾಗಲಿಲ್ಲವೆಂತಲೂ, ಅವನು ಸರ್ಕಾರದವರ ಶಿಕ್ಷೆಗೆ ಗುರಿಯಾಗುವುದಿಲ್ಲವೆಂತಲೂ ಹೈಕೋರ್ಟ್ ಜಡ್ಜಿಗಳು ತೀರ್ಮಾನ ಹೇಳಿದ್ದಾರೆ.

◆◆◆◆

ಬರ್ಮಾ ದೇಶಕ್ಕೆ ಸೇರಿದ ಪಾರೋಕ್ಸಾರ್ ಎಂಬಲ್ಲಿ ಒಂದು ಕಂಪನಿಯವರು ೧೦ ಎಕರೆ ಜಮೀನನ್ನು ಗೌವರ್ನಮೆಂಟಿನಿಂದ ಪಡೆದುಕೊಂಡು, ಅದರಲ್ಲಿ ಕೆಂಪುಗಳನ್ನು ತೆಗೆಯುತ್ತಿದ್ದಾರೆ. ಕಂಪನಿಯವರು ಈ ಜಮೀನನ್ನು ೩೪ ವರುಷಗಳವರೆಗೆ ಅನುಭವಿಸಬಹುದು. ವರುಷಕ್ಕೆ ೨ ಲಕ್ಷ ರೂಪಾಯಿನಂತೆ ಕಂದಾಯವನ್ನೂ, ತೆಗೆದ ಕೆಂಪುಗಳಲ್ಲಿ ಬೀಳುವ ೩೦ ರಂಕೆ ಲಾಭವನ್ನೂ ಸರ್ಕಾರಕ್ಕೆ ಕೊಡುವುದಾಗಿ ಕರಾರು ಮಾಡಿಕೊಂಡಿದ್ದಾರೆ.

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಬಂಡೇಲ್ ಕ್ಲಾಕ್ ಎಂಬ ದಲ್ಲಾಳಿ ವರ್ತಕರ ಅಂಗಡಿಯಲ್ಲಿ ಜವಾನರಾಗಿದ್ದ ಮೂರು ಮಂದಿ ಗುಡ್ವಿನ್ ಎಂಬೊಬ್ಬ ಸಾಹೇಬನ ರುಜುವಿನಂತೆ ರುಜುಮಾಡಿ, ಛೆಕ್ಕು ಬರೆದು ಬ್ಯಾಂಕಿಗೆ ಕೊಟ್ಟು, ೭೫,೦೦೦ ರೂ ತೆಗೆದುಕೊಂಡುಹೋಗಿ, ಕಳೆದ ಮೂರು ವರುಷಗಳಿಂದ ಆಗ್ರಾ ಪಟ್ಟಣದಲ್ಲಿ ಮನೆಮಠಗಳನ್ನು ಮಾಡಿಕೊಂಡು ದೊಡ್ಡಮನುಷ್ಯರಾಗಿದ್ದರು. ಕಳೆದ ವಾರದ ಈ ಮೂವರೂ ಸಿಕ್ಕಿಬಿದ್ದರು. ಇವರನ್ನು ಕಲ್ಕತ್ತೆಗೆ ಹಿಡಿದುಕೊಂಡುಹೋಗಿ ದರ್ಯಾಫ್ತು ಮಾಡುತ್ತಿದ್ದಾರೆ.

◆◆◆◆

ಬರ್ಮಾ ದೇಶದಲ್ಲಿ ಸುಮಾರು ಹವಿನಾರು ಮಂದಿ ಬ್ಯಾರಿಸ್ಟರುಗಳು ಸೇರಿ ಒಂದು ಅರ್ಜಿ ಬರೆದು, ರಂಗೂನ್ ನಗರದ ಜಡ್ಜಿಯಾಗಿದ್ದು ಈಚೆಗೆ ಪೆನ್ಷನ್ ಮೇಲೆ ಕೆಲಸ ಬಿಟ್ಟ ಮಾಂಗ್‌ಸ್ಪೆನ್ಸರ್ ಎಂಬಾತನ ಮೇಲೆ ಅವನು ಲಂಚ ತಿಂದನೆಂಬದಾಗಿ ದೂಷಣೆ ಮಾಡಿ, ಗೌವರ್ನಮೆಂಟಿಗೆ ಒಪ್ಪಿಸಿದರು. ಗೌವರ್ನಮೆಂಟಿನವರು ಪ್ರತಿ ಒಬ್ಬ ಬ್ಯಾರಿಸ್ಟರನ್ನೂ ಪ್ರತ್ಯೇಕವಾಗಿ ಕರೆಸಿಕೊಂಡು ಹೈಕೋರ್ಟ್ ಜಡ್ಜಿಗಳು ತನಿಖೆ ಮಾಡಿ ಗೌವರ್ನಮೆಂಟಿಗೆ ರಿಪೋರ್ಟು ಕಳುಹಿಸಬೇಕೆಂಬದಾಗಿ ಹುಕುಂ ಮಾಡಿದ್ದಾರೆ.

◆◆◆◆

ಕಾಶ್ಮೀರ ಸಂಸ್ಥಾನಕ್ಕೆ ಸೇರಿದ ಶ್ರೀನಗರ ಮುಂತಾದ ಕೆಲವು ಪಟ್ಟಣಗಳಲ್ಲಿ ಮಳೆಯ ದೆಸೆಯಿಂದ ಪ್ರವಾಹಗಳು ಬಂದು ಜನರು ವಾಸಮಾಡುತ್ತಿದ್ದ ಮನೆಗಳೂ, ಜಮೀನೂ, ಬಂಗಲೆಗಳೂ ಎಲ್ಲಾ ನೀರಿನಲ್ಲಿ ಮುಳುಗಿಹೋದವು. ಸುಮಾರು ೩—೪ ಸಹಸ್ರ ಮನೆಗಳು ಬಿದ್ದುಹೋದವು. ಜನರ ಕಷ್ಟ ವಿವರಿಸುವದಕ್ಕಾಗದು. ಅಕ್ಕಿ ಮುಂತಾದ ಧಾನ್ಯ ಮುಂತಾದುದು ಸೇರು ಸಿಕ್ಕುವದೇ ದುರ್ಲಭ. ಸರ್ಕಾರದವರು ಬಿದ್ದವರನ್ನು ಪ್ರೀತಿಯಿಂದ ಕಾಪಾಡಿದರೂ ಅನೇಕರು ದೊಡ್ಡ ದುಃಖದಲ್ಲಿ ಇದ್ದಾರೆ. ಇಲ್ಲದೆ ನಷ್ಟ [illegible] ಸಂಬಂಧಪಟ್ಟ ಅಧಿಕಾರಿಗಳು ಬರೆದಿರುವರು.

◆◆◆◆

ಹಿಂದೂಸ್ಥಾನದಲ್ಲಿ ಸಿಲೋನ್ (ಲಂಕಾ) ದ್ವೀಪಕ್ಕೆ ಅಧೀನವಾದ ಮಾಲ್ಡೀವ್ ದ್ವೀಪಗಳ ಸುಲ್ತಾನನು ಮುಖ್ಯವಾಗಿ ಕೊಂಡು ಬರುವಷ್ಟರಲ್ಲೇ ಇನ್ನೊಬ್ಬ ಬಂದು ಸುಲ್ತಾನನಾಗಿ ನಿಂತು ಆ ಕಾರುಬಾರನ್ನು ನಡೆಸಲಾರಂಭಿಸಿದ್ದು, ಹೊಸದಾದ ಸುಲ್ತಾನನು ತನ್ನ ನಡವಳಿಕೆಯನ್ನು ಕೇಳಿಕೊಂಡು ಸಿಲೋನ್ ದ್ವೀಪಕ್ಕೆ ಬಂದು ದೂರುಕೊಡುತ್ತಾ, ವ್ಯಾಜ್ಯ ನಡಸುತ್ತಿರುವುದಾಗಿ ತನ್ನ ಜಾಹಿರಾತಿನ ಮೂಲಕ ತಿಳಿಸಿದ್ದನು. ಆಗ ಸುಲ್ತಾನನ ವಿಷಯ ಇನ್ನೂ ಸ್ಪಷ್ಟವಾಗಲಿಲ್ಲವೆಂತಲೂ, ಅದುವರೆಗೆ ಸಿಲೋನ್ ಖಜಾನೆಯಿಂದ ಅವನಿಗೆ ದಿನಕ್ಕೆ ೩೦ ರೂ. ಜಂತೆ ಅಲೋವೆನ್ಸು ಕೊಡುತ್ತಾ ಬಂದಿದ್ದಾರೆಂದೂ ಪ್ರಕಟವಾಗಿದೆ.

◆◆◆◆

ಹಿಂದಿನ ಭಾನುವಾರ ಜದಿನೆಟ್ಟಾಂಬರುವು ಎಂಬ ಹಬ್ಬವಾಯಿತು. ಆ ದಿನ ತಿರುಚನಾಪಳ್ಳಿಯಲ್ಲಿ ರೇಟ್ ಡಿಸ್ಟ್ರಿಕ್ಟ್ ಮುನ್ಸಿಫರ ಹೆಂಡತಿಯು ೧೦ ವರುಷದ ತನ್ನ ಕುಮಾರನನ್ನು ಕಾವೇರಿ ಹೊಳೆಗೆ ಕರೆದುಕೊಂಡು ಹೋಗಿ ಸ್ನಾನ ಮಾಡಿ ಆದಮೇಲೆ ಆ ಹುಡುಗನು ಪಾತ್ರೆಯಲ್ಲಿ ನೀರು ತರುತ್ತೇನೆಂದು ಹೊಳೆಗೆ ಹೋಗಿ ಸುಳಿವಿನಲ್ಲಿ ಸಿಕ್ಕಿ ಕೊಚ್ಚಿಕೊಂಡುಹೋದನು. ಅವನನ್ನು ಎಳೆದುಕೊಂಡು ಬರುವುದಕ್ಕಾಗಿ ಆ ತಾಯಿಯಾದವಳು ಹೋಗಿ ನೀರಿನಲ್ಲಿ ಬಿದ್ದಳು. ಅವಳೂ ಸ್ವಲ್ಪ ಹೊತ್ತಿನಲ್ಲೇ ಅದೃಶ್ಯಳಾದಳು. ಹೀಗೆ ವಿಕಾಲದಲ್ಲಿ ತಾಯಿ ಮಕ್ಕಳಿಬ್ಬರೂ ನದಿಯ ಪಾಲಾದರಲ್ಲಾ ಎಂದು ಅಲ್ಲಿನ ಜನರು ಪಶ್ಚಾತ್ತಾಪಪಡುತ್ತಿದ್ದಾರೆ.

◆◆◆◆

ತಿರುಚನಾಪಳ್ಳಿಯಲ್ಲಿದ್ದಾಗ ಎಡ್ವರ್ಡ್ ಎಂಬೊಬ್ಬ ಸೋದರನು ಪ್ರಚಾರಮಾಡುವ ಸಂದರ್ಭದಲ್ಲಿ ಸ್ವದೇಶೀಯನೊಬ್ಬನನ್ನು ಕೊಂದುಹಾಕಿ, ರಿಡಮೆಂಟಿನ ಸಂಗಡ ವಿಲಾಯಿತಿಗೆ ಹೋಗಿದ್ದನು. ಲಂಡನ್ ಪಟ್ಟಣದಲ್ಲಿ ಇವನನ್ನು ಹಿಡಿದು ಹಿಂದುಸ್ಥಾನಕ್ಕೆ ಕಳುಹಿಸಬೇಕೆಂದು ಮಾಜಿಸ್ಟ್ರೇಟರು ಅವನ ಕೈಫಿಯತ್ತು ಬರೆದುಕೊಂಡರು. ಆಗ ಅವನು— ಇದೆಲ್ಲಾ ಲಾರ್ಡ್ ಕರ್ಜನರವರು ಮಾಡುವ ಕೆಲಸವೇ ಸರಿ. ಸ್ವದೇಶೀಯರನ್ನು ಸಂಶೋಧಿಸುವುದರಲ್ಲಿ ಅವರು ಎಂಥಾ ಕೆಲಸವನ್ನಾದರೂ ಮಾಡುವರು ಎಂಬುದಾಗಿ ಹೇಳಿದನು. ಆದರೂ ಮ್ಯಾಜಿಸ್ಟ್ರೇಟರು ಅವನನ್ನು ಹಿಂದುಸ್ಥಾನಕ್ಕೆ ಕಳುಹಿಸಬೇಕೆಂದು ಹುಕುಂ ಮಾಡಿಬಿಟ್ಟರು.

◆◆◆◆

ಕಂಚೀ ತಾಲ್ಲೂಕಿಗೆ ಸೇರಿದ ಚಿನ್ನಿವಕ್ಕಂ ಎಂಬ ಸಣ್ಣ ಗ್ರಾಮದಲ್ಲಿ ಸುಮಾರು ೧೯ ಮನೆಗಳು ಮಾತ್ರ ಇರುತ್ತವೆ. ಬ್ರಾಹ್ಮಣರಲ್ಲದೆ ಅಲ್ಲಿ ಇತರಜಾತಿಯವರ್ಯಾರೂ ಇಲ್ಲ. ಈ ಗ್ರಾಮಕ್ಕೆ ಹೋದವಾರ ೩೦ ಮಂದಿ ಕಳ್ಳರು ೧೧ ಗಂಟೆ ರಾತ್ರಿಯಲ್ಲಿ ನುಗ್ಗಿ ಗ್ರಾಮವನ್ನೆಲ್ಲಾ ಲೂಟಿಮಾಡಿ ಬಿಟ್ಟರು. ಕವಿಯುವದಕ್ಕೆ ಏನೂ ಸಿಕ್ಕದೆ ಇದ್ದ ಮನೆಗಳಲ್ಲಿ ಹೆಂಗಸರನ್ನು ಹಿಡಿದು ಹಿಂಸೆಮಾಡಿ ಅವರ ತಾಳಿಗಳನ್ನು ಕೂಡ ಕಿತ್ತುಕೊಂಡು ಹೋದರು. ಅಲ್ಲಿನ ಗ್ರಾಮ ಮುನ್ಸಿಫನು ಪೂರಾ ಏಟುತಿಂದು ಆಸ್ಪತ್ರೆಯಲ್ಲಿ ಬಿದ್ದು ಇರುತ್ತಾನೆ. ಮರುದಿನ ಪೋಲೀಸಿನವರು ಆ ಗ್ರಾಮಕ್ಕೆ ಹೋಗಿ ತನಿಖೆ ಮಾಡಿಕೊಂಡು ಬಂದು, ಕಳ್ಳರ ಪತ್ತೆ ತರದೂದು ಮಾಡುತ್ತಿದ್ದಾರೆ.

◆◆◆◆

ಕಾಶ್ಮೀರ ಸಂಸ್ಥಾನದಲ್ಲಿ ಈಸಲ ವಿಪರೀತ ಮಳೆ ಸುರಿಯಿತು. ರಾಜಧಾನಿಯಾದ ಶ್ರೀನಗರದಲ್ಲೂ ಇತರ ಸುತ್ತಮುತ್ತಿನ ಪ್ರದೇಶಗಳಲ್ಲೂ ಪ್ರವಾಹಗಳು ವಿಪರೀತವಾಗಿ ಹರಿದು ೧೦—೧೩ ಅಡಿಯ ಪ್ರಮಾಣ ನೀರು ನಿಂತಿತ್ತು. ಮನೆಗಳೂ, ಉದ್ಯಾನವನಗಳೂ, ಹುಲುಸಾಗಿ ಬೆಳೆ ಬೆಳೆದಿದ್ದ ಜಮೀನುಗಳೂ ನೀರಿನಲ್ಲಿ ಮುಳುಗಿಹೋದವು. ಜನರು ದೋಣಿಗಳಲ್ಲಿ ಸಂಚರಿಸಿದರು. ಬಡಬಗ್ಗರ ಪಾಡು ತುಂಬಾ ಪರಿತಾಪಕರವಾಗಿದೆ. ದಿನಸಿಗಳ ಧಾರಣೆ ಬಹಳವಾಗಿ ಹೆಚ್ಚಿತು. ನಾಲ್ಕಾರು ದಿನ ಅಂಚೆಯಾಗಲಿ ತಂತೀ ವರ್ತಮಾನವಾಗಲಿ ಆ ಪ್ರಾಂತ್ಯ ಹೋಗಿಬರುತ್ತಿರಲಿಲ್ಲ. ತಂತೀ ಕಂಭಗಳೂ, ರೈಲ್ ರಸ್ತೆ ಕಂಬಿಗಳೂ ಸೇತುವೆಗಳೂ ಕೊಚ್ಚಿಹೋದವು. ಈಗೀಗ ನೀರು ಇಳಿಯುತ್ತಿರುವಂತೆ ತಂತೀ ವರ್ತಮಾನ ಬಂದಿದೆ.

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಹಿಂದೂ ದೊಡ್ಡಮನುಷ್ಯನು ಸಮಾರಾಧನೆ ಮಾಡಿಸಿದನೆಂದೂ, ಅನೇಕ ದೊಡ್ಡಮನುಷ್ಯರು ಹೋಗಿ ಭೋಜನಮಾಡಿ ಬಂದು ವಾಂತಿಭೇದಿ ಹಿಡಿದು ಕೆಲವರು ಮೃತಪಟ್ಟರೆಂದೂ ತಿಳಿಸಿದ್ದೆವಷ್ಟೆ. ಕಳೆದ ವಾರ ಹೈದರಾಬಾದಿನಲ್ಲೂ ಇಂಥಾ ಅಚಾತುರ್ಯ ನಡೆಯಿತೆಂದು ವರ್ತಮಾನಬಂದಿದೆ. ಮಂತ್ರಿಯಾದ ಮಹಾರಾಜಾ ಕೃಷ್ಣಪ್ರಸಾದರವರಿಗೋಸ್ಕರ ನವಾಬ್ ಫಕರುಲ್ ಮುಲ್ಕರವರು ಒಂದು ದಿನ ಔತಣವನ್ನು ಮಾಡಿ ಯೂರೋಪಿಯನ್ ಮತ್ತು ಸ್ವದೇಶೀಯ ಜನರನ್ನು ಕರೆಸಿದ್ದರು. ಸುಮಾರು ೬೦ ಮಂದಿ ಕಾಲ್ಚು ಭೋಜನಮಾಡಿಕೊಂಡು ಮನೆಗೆ ಹೋದಮೇಲೆ ಮರುದಿನ ಅವರಿಗೆಲ್ಲಾ ಕಿಬ್ಬೊಟ್ಟೆ ಹತ್ತಿ ವಾಂತಿಭೇದಿ ಆಯಿತು. ದೇವರ ದಯದಿಂದ ಪ್ರಾಣನಷ್ಟವೇನೂ ಆಗಲಿಲ್ಲ; ಎಲ್ಲರೂ ಬೇಗ ಚೇತರಿಸಿದರು. ಇದಕ್ಕೆ ಕೆಲವರು ಅಡಿಗೆ ಮಾಡಿದ ಪಾತ್ರೆಯ ಕಿಲುಬು ಪದಾರ್ಥಗಳಿಗೆ ಹತ್ತಿತೆಂತಲೂ, ಕೆಲವರು ವಿಷಾನ್ನ ಬನ್ನಾ ಗಿರಲಿಲ್ಲವೆಂತಲೂ ಕಾರಣ ಹೇಳುತ್ತಾರೆ.

◆◆◆◆

ಮೌ ಕೋಪ್ಲೆ ಎಂಬೊಬ್ಬ ಪಡಂಬು ವಿಲಾಯತಿಯಿಂದ ಹಿಂದುಸ್ಥಾನಕ್ಕೆ ಬಂದಿರುತ್ತಾನೆ. ಭೂತಾಳೆಯನ್ನು ವಿಶೇಷವಾಗಿ ಬೆಳೆಸುವ, ಅದನ್ನು ಕೊಚ್ಚುವ ಯಂತ್ರಗಳಿಗೆ ಕೊಟ್ಟು, ಅದರಿಂದ ಬಿಳುಪಾದ ನಾರು ತೆಗೆದು ಹಗ್ಗ ಮೊದಲಾದುದನ್ನು ತಯಾರಿಸುವುದೇ ಈತನ ಉದ್ದೇಶ. ಈತನು ದಕ್ಷಿಣ ದೇಶದಲ್ಲಿ ಸುಮಾರು ೫,೦೦೦ ಎಕರೆ ಜಮೀನನ್ನು ಸರ್ಕಾರದಿಂದ ಕಂದಾಯಕ್ಕೆ ಪಡೆದು ಅದರ ತುಂಬಾ ಭೂತಾಳೆ ಗಿಡಗಳನ್ನು ಹಾಕಿ ಬೆಳೆಯುತ್ತಿದ್ದಾನೆ. ಇದಲ್ಲದೆ ರೈಲ್ ರಸ್ತೆಯ ಎರಡುಕಡೆಯಲ್ಲೂ ಬೇಲಿಯಾದ ಬೆಳೆದಿರುವ ಕಾರ್ಖಾನೆಗಳಲ್ಲೂ ಹಾಕಿ ಬೆಳೆಯುತ್ತಿರುವ ಭೂತಾಳೆ ಗಿಡಗಳನ್ನು ಕಂಟ್ರಾಕ್ಟು ತೆಗೆದುಕೊಂಡಿರುವನು. ಮತ್ತು ಈ ಗುತ್ತಿಗೆಯಲ್ಲೂ ಜಮೀನನ್ನು ಪಡೆದು ಆ ಗಿಡಗಳನ್ನು ಹಾಕಿ ಬೆಳೆಸಲು ಪ್ರಯತ್ನಪಡುತ್ತಿದ್ದಾನೆ. ಪಡೆದು ಕೊಂಡುಗಳಲ್ಲಿ ಕಟ್ಟುತ್ತಿರುವ ಈ ನಾರಿನ ಹಗ್ಗಗಳು [illegible], ಈ ವ್ಯಾಪಾರದಲ್ಲಿ ಪೂರಾ ಲಾಭ ಬರುವುದೆಂತಲೂ ಗೊತ್ತಾಗುತ್ತದೆ.

◆◆◆◆

ಅರಿಬಾಯಿ ಎಂಬೊಬ್ಬ ಬಂಗಾಳಿಯು ಬಹು ಕಾಲದಿಂದಲೂ ಕಳ್ಳತನ ಕೆಲಸಗಳನ್ನು ನಡಸುತ್ತಾ ಪ್ರಜೆಗಳಿಗೆ ಕಂಟಕನಾಗಿ ಸರ್ಕಾರದವರು ತನ್ನನ್ನು ಎಂದಿಗೂ ಹಿಡಿಯಲಾರರೆಂದು ಬಹು ಜಂಭದಿಂದ ಅಲೆಯುತ್ತಿದ್ದನು. ಕಳೆದ ವಾರ ಅವನು ಒಂದು ಮನೆಯಲ್ಲಿರುತ್ತಾನೆಂದು ಪೋಲೀಸಿಗೆ ಸಮಾಚಾರ ಬಂದಿತು. ೬೦ ಮಂದಿ ಪೋಲೀಸಿನವರು ಆಯುಧಪಾಣಿಗಳಾಗಿ ಹೋಗಿ ಆ ಮನೆಯ ಸುತ್ತ ಗೇರಾಯಿಸಿಕೊಂಡರು. ಕೂಡಲೇ ಅರಿಬಾಯಿ ಮನೆಯ ಮೇಲ್ಭಾವನಿ ಹತ್ತಿ ಅಲ್ಲಿಂದ ಪೋಲೀಸಿನವರ ಮೇಲೆ ಗುಂಡು ಹೊಡೆಯಲಾರಂಭಿಸಿದನು. ಸ್ವಲ್ಪ ಹೊತ್ತಿನಲ್ಲೇ ಮದ್ದು ಗುಂಡೆಲ್ಲಾ ಮುಗಿದುಹೋಯಿತು. ಪೋಲೀಸಿನವರು ಬಿಡಹೋಗಲಿಲ್ಲ. ಆ ಅರಿಬಾಯಿ ಬಿಲ್ಲಿಗೆ ಅಂಬುಗಳನ್ನು ಹೂಡಿ ಹೊಡೆದನು. ಅದೂ ಮುಗಿಯಿತು. ತರುವಾಯ ಕಲ್ಲುಗಳನ್ನು ಎಸೆಯುತ್ತಾ ಬಂದನು. ಕಡೆಗೆ ಪೋಲೀಸಿನವರು ನುಗ್ಗಿ ಅವನಮೇಲೆ ಗುಂಡು ಹೊಡೆದರು. ಒಂದು ಗುಂಡು ಅವನಿಗೆ ತಗಲಿ ಬಿದ್ದುಬಿಟ್ಟನು. ಕೂಡಲೇ ಅವನನ್ನು ಹಿಡಿದು ತಂದು ಠಾಣೆಯಲ್ಲಿ ಹಾಕಿಕೊಂಡಿದ್ದಾರೆ.

## ತಾಲ್ಲೂಕು ವರ್ತಮಾನಗಳು.

ದೇವನಹಳ್ಳಿ.—ಎರಡು ವಾರಗಳಿಂದ ಮಳೆ ಬಹಳ. ಧಾನ್ಯದ ಪೈರು ಚೆನ್ನಾಗಿರುತ್ತವೆ. ಭೂಮಿಯು ಬಹಳ ತ್ಯಾಪವಾಗಿರುವದರಿಂದ ಇನ್ನೂ ರಾಗಿಯನ್ನು ಯಾರೂ ಬಿತ್ತಲಿಲ್ಲ. ೨—೩ ದಿನಗಳಿಂದ ಮಾತ್ರ ಸ್ವಲ್ಪ ಬಿಸಲು ಕಾಯುತ್ತಾ ಇದೆ.—ಈಗ್ಗೆ ೬—೭ ದಿನಗಳ ಹಿಂದೆ ಇಲ್ಲಿನ ಬ್ರಾಹ್ಮಣರಲ್ಲಿ ಒಂದು ಅತಿಶಯವಾದ ವಿವಾಹವು ನಡೆಯಿತೆಂತಲೂ, ಕನ್ಯೆಗೆ ವರನು ಮಾಂಗಲ್ಯವನ್ನು ಕಟ್ಟಿ, ಅದನ್ನು ಬಿಚ್ಚಿ ಬಿಟ್ಟದ್ದರಿಂದ ಕನ್ಯೆಯ ಮನೆಯವರಿಗೆ ಅನುಮಾನ ಉಂಟಾದ್ದರಿಂದ ಅಲ್ಲಿಗೇನೇ ವಿವಾಹಕಾರ್ಯವು ನಿಲ್ಲಿಸಲ್ಪಟ್ಟಿತೆಂದೂ ತಿಳಿಸಿದೆನಷ್ಟೆ. ಇನ್ನು ಇದರ ವಿಷಯವಾಗಿ ಪೂರ್ಣ ವರ್ತಮಾನವು ತಿಳಿಯಿತು. ಏನೆಂದರೆ ಕನ್ಯೆಗೆ ವರನನ್ನು ಹುಡುಕುವದಕ್ಕಾಗಿ ಇಲ್ಲಿಂದ ಕನ್ಯೆಯ ತಂದೆಯೂ ಒಬ್ಬ ವಿಧವೆಯೂ ಹಾಸನಕ್ಕೆ ಹೋಗಿದ್ದರು. ಆಗ ವರನ ತಂದೆಯೂ ವರನೂ ಇವರು ಮಾತ್ರ ಮನೆಯಲ್ಲಿದ್ದರು. ಬೇಗ ಬೇಗನೆ ಪರಸ್ಪರ ಸಂಭಾಷಣೆಯಾದಮೇಲೆ, ವರನು ನಿಶ್ಚಯ ಕಟ್ಟಿಕೊಂಡು, ಬಂದಿದ್ದವರಿಗೆ ತಾನೇ ಊಟ ಉಪಚಾರಗಳನ್ನು ಮಾಡಿ, ಅವರನ್ನು ಬಹಳವಾಗಿ ಸತ್ಕರಿಸಿದನು. ಈ ಸಮಯದಲ್ಲಿ ಅವರಿಗೆ ವರನಮೇಲೆ ಏನೂ ಅನುಮಾನ ಕಾಣಬರಲಿಲ್ಲವಾದ್ದರಿಂದ ಎಲ್ಲಾ ಕಾರ್ಯಗಳನ್ನೂ ಸಿದ್ಧಪಡಿಸಿಕೊಂಡು ೩ ದಿನಗಳಲ್ಲಿ ಬರಬೇಕೆಂದು ಕನ್ಯೆಯ ಮನೆಯವರು ತಿಳಿಸಿದರು. ಹಾಗೆಯೇ ಆಗಲೆಂದು ಅವರೂ ಒಪ್ಪಿದರು. ಈ ಮಧ್ಯೆ ಕನ್ಯೆಯ ಮನೆಯವರು ಇಲ್ಲಿಗೆ ವಾಪಸು ಬಂದು, ಎಲ್ಲಾ ಕಾರ್ಯಗಳನ್ನೂ ಸಿದ್ಧಪಡಿಸಿಕೊಂಡರು. ವರನ ಮನೆಯವರು ಸಮಯಕ್ಕೆ ಬಾರದೆ ಇದ್ದುದರಿಂದ ಅಂತಿ ಸಮಾಚಾರ ಕಳುಹಿಸಿದ್ದಲ್ಲದೆ, ಅವರನ್ನು ಕರೆದುಕೊಂಡು ಬರುವದಕ್ಕಾಗಿ ಇಲ್ಲಿಂದ ಒಬ್ಬರು ಹೋದರು. ಅವರೂ ಇವರೂ ಒಂದು ಸ್ಥಳ ಸೇರಿ, ವರನಿಗೆ ಆಗಬೇಕಾದ ಕಾರ್ಯಗಳನ್ನೆಲ್ಲಾ ನಡಸುವಾಗ ಬಂದಿದ್ದ ಮುತ್ತೈದೆಯರಾದ ಹೆಂಗಸರು ಮಾಂಗಲ್ಯವನ್ನು ಕಟ್ಟುವಂಥಾ ಸಮಯದಲ್ಲಿ ವರನನ್ನು ಚಿಕ್ಕವನಾಗಿ ಕಾಣಿಸಿದರಂತೆ. ಅದರಿಂದ ಅವನು ಅದನ್ನು ಕಟ್ಟದೆ ಬಿಸಾಟನಂತೆ. ತಿರುಗಿ ವರನು ಮಾಂಗಲ್ಯ ಕಟ್ಟುತ್ತೇನೆಂದು ಹೇಳಿದಾಗ್ಯೂ ಕನ್ಯೆಯ ಮನೆಯವರು ವರನಿಗೆ ಹುಚ್ಚು ಹಿಡಿದಿದೆ ಎಂದು ಹೇಳಿ ತಮ್ಮ ಹೆಣ್ಣನ್ನು ಕೊಡುವದಿಲ್ಲವೆಂದು ಅಲ್ಲಿಗೇ ನಿಲ್ಲಿಸಿಬಿಟ್ಟರು. ಈಗ ಕನ್ಯೆಗೆ ತಿರುಗಿ ವಿವಾಹ ಮಾಡಬೇಕೆಂತಲೂ, ಗುರುಗಳಿಂದ ಅಪ್ಪಣೆ ತೆಗೆದುಕೊಳ್ಳಬೇಕೆಂತಲೂ ಇರುತ್ತಾರಂತೆ.

ಕಾಂ[illegible]— ಈ ಪ್ರಾಂತ್ಯ ವ್ಯವಸಾಯಗಾರರು ಬೀಜಗಳನ್ನು [illegible] ಮಳೆ ಇಲ್ಲದ್ದರಿಂದ ಆಕಾಶವನ್ನೇ ಎದುರು ನೋಡುತ್ತಾರೆ. ಇಲ್ಲಿ ಜ್ವರ, ಆಮಶಂಕೆ ಮುಂತಾದ ಕಾಯಿಲೆಗಳು ಹೆಚ್ಚಾಗಿವೆ. ನಮ್ಮ [illegible] ಮುನಿಸಿಪಲ್ಟಿಯಿಂದ ನೀರಿನ ಸೌಕರ್ಯದ ಕೆಲಸ ಬಹು ವಿಶೇಷವಾಗಿದೆ. ಈ ಕಾಲದಲ್ಲಿ [illegible] ೧೭೦—೨೦ ಡಿಗ್ರಿ ವರೆಗೆ ಏರುತ್ತಾರೆ.—ಇಲ್ಲಿಗೆ [illegible] ದಲ್ಲಿರುವ [illegible] ಗ್ರಾಮದಲ್ಲಿ [illegible] ಹೊಸ [illegible] ಬಿಟ್ಟು [illegible] ಮಾಡುತ್ತಾರೆ.— ಈ ಕಾಲದಲ್ಲಿ [illegible] ವಿಷಯ ಮ್ಯುನಿಸಿಪಲ್ ಮೆಂಬರುಗಳು [illegible] ಬರೆಕ್ಕೆ ಸಾಂಕ್ರಾಮಿಕದ [illegible], ಹೆರ್ವಿಕಾರ್ಯವನ್ನು, ಬಾ[illegible] ಕೇಳುವ [illegible] ಹೋಗುವದಿಲ್ಲ. [illegible] ಮ್ಯುನಿಸಿಪಲ್ [illegible] ಕೆಲವು [illegible]

[illegible]

ಯಾಗಿರುವವರು ಇಲ್ಲವಿಲ್ಲ. ಸಾಯಂಕಾಲದಿಂದ ಹೊತಾರೆ ೮ ಗಂಟೆ ವರೆಗೆ ಹಳ್ಳಿಗಳಲ್ಲಿ ನೀರು ಸಿಕ್ಕುವದಿಲ್ಲ. ಗುತ್ತಿಗೆದಾರರು ಎರಡು ವೇಳೆ ನೀರನ್ನು ಕಾಲುವೆಗಳ ತುಂಬಾ ತುಂಬಿಸಿದರೆ ಜನರಿಗೆ ಬಹಳ ಪ್ರಯೋಜನವಾದೀತು.—ಜುಲೈ ೩೧ನೇ ತಾ. ಮಧ್ಯರಾತ್ರಿ ಇಲ್ಲಿನ ಕೋಟೆಪ್ರಾಕಾರ ಬಾಯಿಬಳಿ ಒಂದು ಕೊಲೆ ನಡೆಯಿತು. ಸಕರೆ ಗ್ರಾಮನಿವಾಸಿಯಾದ ಸಿದ್ದನ ಹೆಂಡತಿ ಚನ್ನಿ ಎಂಬವಳ ಸಂಗಡ ಸೈಯದ್ ಎಂಬ ಮುಸಲ್ಮಾನನು ಮಲಗಿರುವಾಗ್ಯೆ ಅವಳ ಗಂಡನಾದ ಸಿದ್ದನೆಂಬವನು ಮೊಟ್ಟನಿಂದ ಸೈದನ್ನಿಯ ಕತ್ತನ್ನು ಕತ್ತರಿಸಬೇಕೆಂದು ಹೊಡೆಯುವಾಗ್ಯೆ ಏಟುತಪ್ಪಿ ಅವನ ಕೆನ್ನೆಗೆ ತಗಲಿ ತುಂಬಾ ಗಾಯವಾಗಿದೆ. ಮತ್ತು ಅವನ ಬಲಗಾಲಿನ ಒಂದು ಮೂಳೆ ಮುರಿದುಹೋಗಿದೆ. ಅವನು ಆಸ್ಪತ್ರೆಯಲ್ಲಿ ಇಲಾಜು ಹೊಂದುತ್ತಿದ್ದಾನೆ.—ಈ ಊರು ಕಾಲೇಜಿನ ಕಛೇರಿಯ ಕೆಲವು ನೌಕರರೂ ಸ್ಕೂಲ್ ಮಾಸ್ಟರುಗಳೂ ಸೇರಿ, ವಾಚಕ ಮಂದಿರವೆಂಬ ಸ್ಥಳವನ್ನು ಏರ್ಪಡಿಸಿಕೊಂಡು, ಅನೇಕ ಪತ್ರಿಕೆಗಳನ್ನು ತರಿಸಿ ಓದುತ್ತಾರೆ. ಮತ್ತು ಇದಕ್ಕೆ ಸೇರಿದ ಮೆಂಬರುಗಳು ಒಂದು ಪುಸ್ತಕ ಭಂಡಾರವನ್ನು ಸಹ ಏರ್ಪಡಿಸಬೇಕೆಂದು ಇದ್ದಾರೆ. ಇದಕ್ಕೆ ಎಲ್ಲಾ ಕಚೇರಿಗಳ ಅಧಿಕಾರಿಗಳೂ ಪ್ರೋತ್ಸಾಹ ಕೊಟ್ಟು ಅಭಿವೃದ್ಧಿಗೆ ತಂದಾರೆಂದು ನಿರೀಕ್ಷಿಸಲ್ಪಟ್ಟಿದೆ.

ಚಿಕ್ಕಮಗಳೂರು:—ಹವಾ ಅನುಕೂಲವಾಗಿದೆ. ಮೈದಾನದ ಕಡೆಗಿಂತಲೂ ಈ ಕಡೆ ಅಧಿಕ ಮಳೆಯಾಗಿದೆ. ಕೆಮ್ಮು ಜ್ವರ ಇದೆ.—ಹಿರಿಮಗಳೂರಿನ ದೇವಾಲಯದಲ್ಲಿ ಈಚೆಗೆ ನೈವೇದ್ಯಗಳು ಏನು ಚನ್ನಾಗಿ ನಡೆಯುತ್ತಿವೆಂತಲೂ, ಪಟೇಲರಿಗೆ ಏನು ಸಂತೋಷ ಸನ್ನಿಂದಾಗಿದೆ ಎಂತಲೂ, ಸರಿಯಾದ ಪ್ರಕಾರ ನಡೆಸುತ್ತ ಸುಳ್ಳೆಂದು, ಓಡಿಹೋಗಿದ್ದ ಅರ್ಚಕನ ವಿರೋಧಿಗಳ ಕಲ್ಪನೆ ಎಂತಲೂ ತಿಳಿಯಲಾಯಿತು.—ಮುನ್ಸಿಫ್ರ ಸರ್ಕಾರ ಸಹಾಯಕರಾಯರಿಗೆ ಮೂರು ತಿಂಗಳ ರಜವೂ, ಪೋ. ಇನ್ಸ್‌ಪೆಕ್ಟರಿಗೆ ಆರು ತಿಂಗಳ ರಜವೂ ದೊರೆತಿರುವುದರಿಂದ ಅವರ ಸ್ಥಳಕ್ಕೆ ಶ್ರೀನಿವಾಸಯ್ಯಂಗಾರ್ಯರಿಗೆ ವರ್ಗವಾಯಿತು.—ಈ ವರ್ಷದಲ್ಲಿ ದಸರಾ ವಿಜಾಟನೆಗೆ ಹೋಗುವ ಮೆಂಬರುಗಳ ಚುನಾವಣೆ ಆಯಿತು. ಮುಖ್ಯವಾಗಿ ಗೌರವಸ್ಥರೂ ಅಲ್ಲಿನ ಕಷ್ಟನಷ್ಟಗಳನ್ನು ತಿಳಿದವರೂ ಹೋಗುವಂತೆ ತಿಳಿಯಬಂದಿದೆ. ಅಂಥ ಮೆಂಬರುಗಳು ತಕ್ಕವರಲ್ಲವೆಂತ ಅವರಿಗೆ ಮುಖವಾಸ್ತವ್ಯ ಸ್ವಾರ್ಥವಾಗಿ ಸಮ್ಮತಿಹಾಕಿದ ಗೌಡರು ತಿಳುವಳಿಕೆ ಹೊಂದಿ ಇನ್ನು ಮುಂದೆಯಾದರೂ ಪ್ರಜಾಹಿತಚಿಂತಕರನ್ನೂ, ಯೋಗ್ಯರನ್ನೂ, ಕಷ್ಟರನ್ನೂ ಆರಿಸಿಕೊಳ್ಳುವುದು ವಾಸಿ. ಆಗಲ್ಲದೆ ಮರ್ಯಾದೆ, ಆಟಪಾಟ, ದಿವಾನ, ದಾರಿ ಖರ್ಚು ಇವುಗಳಿಗೆ ಪ್ರಜಾಸಭೆಯೇ ದೊರೆಯದು. ಇದಕ್ಕೋಸ್ಕರವೇ ಈ ವಿಜಾಟನೆ ಏರ್ಪಾಡಾಗಿದೆ. ಕಂದಾಯ ಕೊಡತಕ್ಕ ಭಾರೀ ಗೌಡರೇ ತಮ್ಮ ಕೊರತೆಗಳನ್ನು ತಿಳಿಯಹೇಳದಿದ್ದರೆ ಅಲ್ಪರ ಕಷ್ಟವನ್ನು ಅರಿತು ಮಾಡುವದು ಹ್ಯಾಗೆ ?—ಈ ಸ್ಥಳದಲ್ಲಿ ವಿದ್ಯಾಭ್ಯಾಸವು ಈ ವರ್ಷ ಬಹು ಕ್ರಮವಾಗಿ ನಡೆಯುತ್ತಿದೆ. ಕಳೆದ ವರ್ಷ ಉಂಟಾದ ನಷ್ಟವನ್ನು ಸರಿಪಡಿಸುವಂತೆ ಎಲ್ಲಾ ಸ್ಕೂಲುಗಳೂ ಅಭ್ಯಾಸ ತೋರಿಸುತ್ತಿವೆ.—ಕೆಲವು ಆಸ್ಪತ್ರೆ ಅಸಿಸ್ಟೆಂಟರು ಬಹು ಕ್ರೂರಿಗಳಾಗಿಯೂ ಲೋಭಿಗಳಾಗಿಯೂ ಇರುವಂತೆ ಬಹು ಮಂದಿ ಮಾಡುತ್ತಾರೆ. ಲೌಕಿಕ ಲಾಭಕ್ಕೋಸ್ಕರ ಮಾತ್ರ ಕೆಲಸಮಾಡುವ ವೈದ್ಯ ಚಿಕಿತ್ಸಕರಿಗಿಂತ ಕೆಲಸಗಳಿಂದ ಎಷ್ಟೋ ದೂರ, ವೈದ್ಯದ ತಿಳುವಳಿಕೆ ಮಾತ್ರವಲ್ಲ, ವೈದ್ಯರ ಗುಣ ಹೊಂದಿದವರನ್ನು ಆರಿಸಿಕೊಳ್ಳುವದು ವಾಸಿ. ಸರ್ಕಾರದಿಂದ ಲಕ್ಷಾಂತರ ರೂಪಾಯಿ ವೆಚ್ಚವಾಗುವದು ವಾಸ್ತವ್ಯವಾದರೂ ಪ್ರಜೆಗಳಿಗೆ ಸರಿಯಾದ ಚಿಕಿತ್ಸೆಯೂ ವೈದ್ಯರೂ ಇಲ್ಲವೆಂತ ವ್ಯಸನಪಡಬೇಕಾಗಿದೆ. ಮೈಸೂರಿನ ಉತ್ತಮ ವೈದ್ಯರಲ್ಲಿ ಡಾಕ್ಟರ್ ಸ್ಮಿತ್‌ರವರು ಅಗ್ರಗಣ್ಯರಲ್ಲವೇ? ಅಂಥವರ ಮಾದರಿ ಅನುಸರಿಸದ ವೈದ್ಯರು ಆರೋಗ್ಯಕರಂತಲೂ ಅವರಿಗೆ ಕೊಡಲ್ಪಡುವ ಹಣ ವ್ಯರ್ಥವೆಂತಲೂ, ಅವರಿಂದ ಜನರಿಗೆ ಬಹು ಕಷ್ಟವುಂಟೆಂತಲೂ, ಕೆಲವರ ಅಂತರಂಗ ನಡತೆ ಬಹು ಅಸಹ್ಯಕರವಾಗಿದೆ ಎಂತಲೂ ತಿಳಿಯಬರುತ್ತದೆ. ಯಾವ ವೈದ್ಯನಾಗಲೀ ಧೂರ್ತನಾಗಿಯೂ ಡಾಂಭಿಕನಾಗಿಯೂ ತನ್ನ ಕೆಲಸಕ್ಕೆ ತಕ್ಕ ಗುಣವಿಲ್ಲದವನಾಗಿಯೂ ಇರುವದು ಕೇಳಿಕ ತಕ್ಕಿಗೆ ಸಮಾನವಾಗಿದೆ.—ವೆಸ್ಲಿಯನ್ ಮಿಷನ್ ಸ್ಕೂಲಿನಿಂದ ಕೆಲವು ತಿಂಗಳಿಂದ ಯಾವ ಕಾರಣವಿಲ್ಲದೆ ಈ ನಡುವೆ ಸರ್ಕಾರದಲ್ಲಿ ಸೇರಿರುವ ಉಪಾಧ್ಯಾಯರು ಅವರ ಪದ್ಧತಿಯು ತಪ್ಪಿಹೋಗಿ ಇನ್ನುಮುಂದೆ ಯಾವ ಉಪಾಧ್ಯಾಯರಾಗಲೀ ಮಿಷನ್ ಸ್ಕೂಲಲ್ಲಿ ಓದುವ ಹುಡುಗಿಯರನ್ನು ಬಿಡಿಸುವ ನೋಡಬೇಕಾಗಿದೆ ಪರ್ಯಾವಾಗಿದೆ.

ಶಿವಮೊಗ್ಗೆ:—ಈ ಊರಿನಲ್ಲಿ ಒಂದು ತಿಂಗಳಿಂದ ಹಿಡಿದಿದ್ದ ಮಳೆಯು ಒಂದೆರಡು ದಿನಗಳಿಂದ ಸ್ವಲ್ಪ ನಿಂತು ಮೋಡವಾಗಿ ತೋರುತ್ತಲಿದೆ. ಈ ಬಟ್ಟೆಗಳಲ್ಲಾ ತುಂಬಿದ್ದರೂ ಮಾತ್ರವಲ್ಲದೆ ಹೊಳೆಯಲ್ಲಿ ವಿಪರೀತ ಪ್ರವಾಹ ಬಂದಿತ್ತು. ಈ ಊರಿನ ರಸ್ತೆಗಳ ದುಃಸ್ಥಿತಿಯನ್ನು ಈ ಮಳೆಗಾಲದಲ್ಲಿ ವಿವರಿಸುವದಕ್ಕಂತೂ ಆಗುವುದಿಲ್ಲ. ಬೀದಿಗಳಲ್ಲಿ ತಿರುಗಾಡುವುದು ತುಂಬಾ ಪ್ರಯಾಸ. ನಮ್ಮ ಮ್ಯುನಿಸಿಪಾಲಿಟಿಯವರು ನಮ್ಮ ಊರಿನ ಜನರ ಮೇಲೆ ಕರುಣೆಯಿಟ್ಟು ಯಾವಾಗ ರಸ್ತೆಗಳನ್ನು ದುರಸ್ತು ಮಾಡುತ್ತಾರೋ ಭಗವಂತನೇ ಬಲ್ಲ. ಆಗಾಗ್ಯೆ ಪ್ಲೇಗ್ ಕೇಸುಗಳು ನಡೆಯುತ್ತಲೇ ಇರುತ್ತವೆ. ಜನರು, ಪ್ಲೇಗ್ ಆದರೆ ಸರ್ಕಾರದವರಿಗೆ ತಿಳಿಸಲು ಭಯಪಡುವರು, ತಮ್ಮಲ್ಲಿಯೇ ಮರೆಮಾಡುತ್ತಾರೆ. ಇದರಿಂದ ಇತರ ಜನರುಗಳಿಗೆ ತುಂಬಾ ತೊಂದರೆಯಾಗುತ್ತದೆಯಲ್ಲದೆ ಯಾವ ಸಂದೇಹವೂ ಇಲ್ಲ.—ಈ ಊರಿನಲ್ಲಿ ನೂರಾರು ನಾಯಿಗಳನ್ನು ಹಿಂಸಿಸುವವರಿಗೆ ಶಿಕ್ಷೆ ವಿಧಿಸುವ ಕಾನೂನು ಜಾರಿಯಲ್ಲಿಲ್ಲವೆಂದು ತೋರುತ್ತದೆ, ಮಾಂಸ ವರ್ತಕರು ರೈಲಿಗೆ ಮೂಟೆಗಳನ್ನು ಸಾಗಿಸುವಾಗ ಎತ್ತುಗಳು ಎತ್ತಲಾರದಷ್ಟು ಮೂಟೆಗಳನ್ನು ಬಂಡಿಗಳಲ್ಲಿ

ಹೇರಿ ಅವುಗಳನ್ನು ಹೊಡೆದು ಎಳೆಸುತ್ತಾರೆ. ಈ ರೀತಿ ಮಾಡುವುದರಿಂದ ಅವುಗಳಿಗೆ ತುಂಬಾ ಹಿಂಸೆಯಾಗುತ್ತದೆ. ಪ್ರಜಾಪ್ರತಿನಿಧಿಗಳಾದ ಮ್ಯುನಿಸಿಪಾಲಿಟಿ ಅಧಿಕಾರಿಗಳು ಈ ವಿಷಯಕ್ಕೆ ಗಮನವನ್ನು ಕೊಟ್ಟು, ಆ ಮೂಕಪ್ರಾಣಿಗಳಿಗುಂಟಾಗುವ ಹಿಂಸೆಯನ್ನು ತಪ್ಪಿಸುವರೆಂದು ನಿರೀಕ್ಷಿಸಲ್ಪಟ್ಟಿದೆ.—ಇಲ್ಲಿ ಹೊಸತಾಗಿ ಸ್ಥಾಪಿಸಲ್ಪಟ್ಟ ಮಿಷನ್ ಪುಸ್ತಕಶಾಲೆಯು ಬಹಳ ಒಳ್ಳೇ ಸ್ಥಿತಿಯಲ್ಲಿದೆ. ಈಚೆಗೆ ವಿಲಾಯತಿಯಿಂದ ಅನೇಕ ಪುಸ್ತಕಗಳನ್ನು ತರಿಸಿ ಇಟ್ಟಿರುವನ್ನು ಬಹಳ ಉಪಯುಕ್ತವಾಗಿದೆ. ಅಂಥಾ ಪುಸ್ತಕಶಾಲೆಯು ಇಲ್ಲಿ ಸ್ಥಾಪಿಸಲ್ಪಟ್ಟಿರುವದು ಪ್ರಜೆಗಳಿಗೆ ತುಂಬಾ ಪ್ರಯೋಜನಕಾರಿಯಾಗಿರುವದರಲ್ಲಿ ಯಾವ ಸಂದೇಹವೂ ಇಲ್ಲ. ನಮ್ಮ ದೇಶವನ್ನು ಅಭಿವೃದ್ಧಿಯಾದ ಸ್ಥಿತಿಗೆ ತರತಕ್ಕ ನಾನಾ ತರವಾದ ಪುಸ್ತಕಗಳೂ ಇನ್ನೂ ಇತರ ಸಾಧನಗಳೂ ಇಲ್ಲಿ ವಿಶ್ರಮವಾಗುತ್ತವೆ.—ಕೆಲವು ದಿನಗಳ ಹಿಂದೆ ಇಲ್ಲಿನ ರಿಲೀವಿಂಗ್ ಮಿಡ್‌ವೈಫ್ ಮಿಸ್ ಎಸ್. ಡಿಸೋಜಾ ಯವರ ಮೇಲೂ, ಇವರ ತಾಯಿಯ ಮೇಲೂ, ಇವರ ಇಬ್ಬರು ತಮ್ಮಂದಿರ ಮೇಲೂ, ಇವರ ಭಾವಮೈದುನನಾದ ಹಾಲ್ ಎಂಬುವನ ಮೇಲೂ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ತಕ್ಕಕ್ಕೆ ಕಳುವು ಮಾಡಿದರೆಂದು ಕ್ರಿಮಿನಲ್ ದಾವಾ ಹಾಕಿದ್ದರಂತಲೂ, ಆ ಕೋರ್ಟಿನಲ್ಲಿ ಕೇಸ್ ವಿಚಾರಣೆಯಾಗಿ, ಸದರಿ ಅಪರಾಧಿಗಳ ಪೈಕಿ ಮೂವರಿಗೆ ದುಲ್ಮಾನೆಯೂ, ೪ನೇ ಅಪರಾಧಿಯಾದ ಥಾಮಸ್ ಡಿಸೋಜಾ ಎಂಬವರಿಗೆ ೪ ತಿಂಗಳು ಸಜಾ, ೧೦ ರೂಪಾಯಿ ದುಲ್ಮಾನೆಯೂ ವಿಧಿಸಲ್ಪಟ್ಟಿತ್ತಂತಲೂ, ಅಪರಾಧಿಗಳ ತರಫ್ ವಕೀಲರಾದ ಸೀತಾರಾಮಯ್ಯನವರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಅಪೀಲ್ ದಾಖಲ್ಮಾಡಿಸಿ, ಕೆಳಕೋರ್ಟಿನಲ್ಲಿ ವಿಧಿಸಲ್ಪಟ್ಟ ಶಿಕ್ಷೆಯನ್ನು ಖೂಲತೇ ಸಸ್ಪೆಂಡ್ ಮಾಡಿಸಿದರೆಂತಲೂ ತಿಳಿಸಿದ್ದೆನಷ್ಟೆ. ಕಳೆದ ತಿಂಗಳು ೩೦ನೆ ತಾರೀಖು ಜಡ್ಜ್‌ಮೆಂಟ್ ಕೊಟ್ಟು, ಅಪರಾಧಿಗಳಿಗೆ ಖುಲಾಸ್ ಮಾಡಿ, ಕೇಸ್ ವಜಾ ಮಾಡಿಬಿಟ್ಟರು. ನಮ್ಮ ದಯಾಳುವಾದ ಡೆಪ್ಯುಟಿ ಕಮಿಷನರ್ ಸಾಹೇಬರು, ಕೆಳಗಿನ ಕೋರ್ಟಿನಲ್ಲಿ ನಡೆದ ವಿಚಾರಣೆಯ ಅಟ್ಟವನ್ನು ತರಿಸಿಕೊಂಡು, ಸಾಂಗೋಪಾಂಗವಾಗಿ ಅದನ್ನು ಪರೀಕ್ಷಿಸಿ, ಫಿರ್ಯಾದಿಯು ಅಪರಾಧಿಗಳ ಮೇಲೆ ಸುಳ್ಳು ದಾವಾ ತಂದಿದ್ದಾಳೆಂದು ತೀರ್ಮಾನಿಸಿದರು. ಫಿರ್ಯಾದಿಯು ತನ್ನ ಸ್ವಂತ ಜನರ ಮೇಲೆ ಇಷ್ಟು ದ್ವೇಷವನ್ನು ಬೆಳಸಿದ್ದು ತುಂಬಾ ಅನುಚಿತ. ಹ್ಯಾಗೂ ಈ ವ್ಯಾಜ್ಯವು ತೀರ್ಮಾನವಾದುದೆಂದು ಸಂತೋಷಪಡಬೇಕಾಗಿದೆ

ದೊಳ್ಳೇನರಸೀಪುರ:—ಕಳೆದ ತಿಂಗಳಲ್ಲಿ ಎರಡು ವಾರಗಳು ಹಗಲು ರಾತ್ರಿಯೂ ಮಳೆ ಹಿಡಿದು ಜನರು ಕೆಲಸಗಳಿಗೆ ಹೊರಗೆ ಹೊರಡಲು ಅವಕಾಶಕೊಡದೆ ಜೆಗುಪ್ಸೆಯುಂಟಾಗಿತ್ತು. ಈಚೆಗೆ ಎರಡು ವಾರಗಳಿಂದ ಮೋಡವಾಗುವದು ನಿಂತು ಉತ್ಸಾಹಕ್ಕೆ ಬಂದಿದೆ. ಈ ಮಳೆಯಿಂದ ಹೇಮಾವತಿ ನದಿಯಲ್ಲಿ ಪೂರ್ಣಪ್ರವಾಹ ಬಂದಿತ್ತು. ಆಗ ಇಲ್ಲಿನ ನಿವಾಸಿಗಳಲ್ಲನೇಕರು ಶ್ರೀರಾಮದೇವರ ಕಟ್ಟೆಗೆ ವಾಣೀವಿಲಾಸ ಸೇತುವೆಯ ಮೇಲೆ ಹೋಗಿ, ಅಲ್ಲಿ ಬೀಳುವ ನೀರಿನ ಸೊಗಸನ್ನು ನೋಡಿ ಸಂತೋಷಪಟ್ಟು ಬಂದರು. ಚನ್ನರಾಯಪಟ್ಟಣಕ್ಕೆ ಹೋಗಬೇಕಾದವರು ಅಲ್ಲಿಗೆ ಹೋಗುವ ರಸ್ತೆಯಲ್ಲಿ ನದಿಯ ವರೆಗೂ ಹೋಗಿ ದೋಣಿಬಿಡದೆ ಹೆದರಿಕೆಯಿಂದ ಕಟ್ಟೆಹಾಕಿರಲು ವಾಪಸು ಬಂದು ಸೇತುವೆಯ ಮೇಲೆ ಹಾಯ್ದು ಕಾಲುದಾರಿಯಲ್ಲಿ ಹಳ್ಳಕೊಳ್ಳಗಳಲ್ಲಿ ಬಿದ್ದು ಚನ್ನರಾಯಪಟ್ಟಣಕ್ಕೆ ಹಲವು ಬೀಳಾಯ್ತು. ಪ್ರವಾಹಕಾಲಗಳಲ್ಲಿ ಕೋರ್ಟು ಮುಂತಾದ ಹತ್ತಿರ ಕೆಲಸವಿರುವವರಿಗೂ ಇತರರಿಗೂ ಕೆಲಸ ನಷ್ಟವೂ ಧನವ್ಯಯವೂ ಪ್ರಾಣಭಯವೂ ವಿಶೇಷ. ಇಲ್ಲಿ ಸೇತುವೆ ಕಟ್ಟಲ್ಪಡದಕ್ಕೆ ವಿಪರೀತ ಬಹುಗಾರುವುದೆಂದೂ ವಾಣೀವಿಲಾಸ ಸೇತುವೆಯ ಮೇಲೆ ಹೊಸ ರಸ್ತೆ ಹಾಕಿಸುವುದು ಅವಶ್ಯಕವೆಂದೂ ಹಾಸನದ ಲೋಕಲ್ ಫಂಡು ಬೋರ್ಡಿನವರು ನಾಲ್ಕು ವರ್ಷಗಳ ಹಿಂದೆಯೇ ತೀರ್ಮಾನಿಸಿದ್ದರು. ಆ ವಿಷಯದಲ್ಲಿ ಈ ವರೆಗೂ ಯಾವ ವಿಧವಾದ ಏರ್ಪಾಡನ್ನೂ ಸರ್ಕಾರದವರು ನಡೆಸದೆ ಇರುವದಕ್ಕೆ ಕಾರಣವೇನೋ ಜಾಗ್ರತ ಈ ರಸ್ತೆಯನ್ನು ಬೇಗ ಮಾಡಿಸಿದರೆ ಪ್ರಜೆಗಳಿಗೆ ತುಂಬಾ ಅನುಕೂಲ.—ಜನರ ಆಳತೆ, ಆಕಾರ, ಸ್ವಭಾವಗಳನ್ನು ಬರೆದು ಗೌರ್ನಮೆಂಟಿಗೆ ರಿಪೋರ್ಟುಮಾಡುವ ಉದ್ದೇಶ್ಯ ಡಾ. ವರ್ಸ್‌ಟನ್ ಸಾಹೇಬರವರು ಹಾಸನದ ಪ್ರಾಂತ್ಯ ಪಯಣಮಾಡಿ ಅರಸೀಕೆರೆ, ತುಂಕೂರು, ಬೆಂಗಳೂರು ಮಾರ್ಗವಾಗಿ ಮೈಸೂರಿಗೆ ಬಂದಿರುವುದು ಸರಿಯಷ್ಟೆ. ಇಲ್ಲಿ ಕೆಲವರು ಇವರ ವಿಷಯದಲ್ಲಿ ಇನ್ನೂ ತಪ್ಪು ಅಭಿಪ್ರಾಯವನ್ನು ಇಟ್ಟುಕೊಂಡು ಹಿಡಿಯುವರು "ಈ ದಿನ ಬರುತ್ತಾರಂತೆ, ನಾಳೆ ಬರುತ್ತಾರಂತೆ" ಎಂದು ಹೇಳಿಕೊಂಡು ಗೋಳಾಡುತ್ತಿರುವರು. ಇವರ ಮತ್ತು ಇವರ ಹಿಂದೆ ಇದ್ದವರ ಸೌಜನ್ಯವನ್ನು ಎಷ್ಟು ವರ್ಣಿಸಿದರೂ ತೀರದು. ಪ್ರೊಫೆಸರವರು ಹಳ್ಳಿಗಳಲ್ಲಿ ದ್ವಾರಿಯ ಮೇಲೆ ಹೋದರೆ ಹಳ್ಳಿಯವರು ಓಡಿಹೋಗುವರು ಬಂದರೆಂದು ಮನೆಮಾರ ಬಿಟ್ಟು ಓಡಿಹೋದದ್ದಾಗಿ ತಿಳಿಯಬರುತ್ತೆ. ಇದಕ್ಕೆ ಅವಿದ್ಯೆಯೇ ಮುಖ್ಯ ಕಾರಣವಾದುದರಿಂದ ವರ್ತಕರೂ, ಜೈಗಾರಿಕೆಯವರೂ, ರೈತರೇ ಮೊದಲಾದವರೂ ತಮ್ಮ ಮಕ್ಕಳಿಗೆ ಅಗತ್ಯ ವಿದ್ಯಾಭ್ಯಾಸ ಮಾಡಿಸಬೇಕು.—ಇತ್ತೀಚಿನ ವರ್ಗಪಟ್ಟ ಅಲ್ಲರಿಗೆ ಪ್ರಯಾಣಮಾಡುವ ಅಮಲ್ದಾರ್ ಮಿ. ಹಕ್ಕಾಂ ಅಯ್ಯಂಗಾರ್ಯರನ್ನು ಇವರ ಸ್ನೇಹಿತರು ಭಗವದ್ಗೀತೆ, ಭಜನ, ಗೀತ, ವಾದ್ಯ ವಿಶೇಷಣಗಳಿಂದ ಆದರಿಸುತ್ತಿದ್ದರು.—ಇಲ್ಲಿನ ಮ್ಯುನಿಸಿಪಾಲಿಟಿಯಿಂದ ಪ್ರಜಾಪ್ರತಿನಿಧಿ ಸಭೆಗೆ ಮ್ಯುನಿಸಿಪಲ್ ಮೆಂಬರು ನರಸಣ್ಣಯ್ಯನವರನ್ನು ಚುನಾಯಿಸಿದ್ದಾರೆ.—ವಸಂತೋತ್ಸವದ ಪೂರ್ವಭಾವಿಯಲ್ಲೂ, ಮ್ಯು. ಮೆಂ. ನರಸಣ್ಣಯ್ಯನವರ ಆ.ಹ.ಗಿರಿ ಇದೆ ಮ. ಮೆಂಬರುಮಾಡುಯಿಂದಹಣ ಅಂಚಿನೆ ಮೇಲ್ವಿಚಾರಕ್ಕೆ ಆಗತ್ಯ ಒಂದು ಸ್ವಾಸ್ಥ್ಯ ಕಟ್ಟವನ್ನು ಸ್ವಂತ ಮತ್ತು ಪುರಜನರಿಂದಲೂ ದೇಹಶ್ರಮದಿಂದಲೂ ಕಟ್ಟುತ್ತಾರೆ. ಇದು ಜನರಿಗೆ ತುಂಬಾ ಉಪಯೋಗವಾಗಿದೆ. ಈಗ ಇದನ್ನು

ಇನ್ನೂ ದೊಡ್ಡದು ಮಾಡಬೇಕೆಂಬ ಉದ್ದೇಶದಿಂದ ಇವರು ಚಂದಾ ಪ್ರಯತ್ನಿಸಿ ಹಣವು ಪ್ರಯೋಜನಪಡಲಿಲ್ಲವೆಂದು ಹೇಳುತ್ತಿದ್ದಾರೆ. ಇವರ ಧರ್ಮಕಾರ್ಯೋದ್ಯೋಗದಲ್ಲಿ ಪ್ರಜೆಗಳೂ ಮ್ಯುನಿಸಿಪಾಲಿಟಿಯವರೂ ತಕ್ಕಮಟ್ಟಿಗೆ ಸಹಾಯ ಮಾಡಿ ಪುಣ್ಯಭಾಗಿಗಳಾಗಬೇಕೆಂದು ನಿರೀಕ್ಷಿಸುತ್ತಾರೆ.—ಮು। ನರಸಣ್ಣನವರು ಇಲ್ಲಿನ ಮಾರ್ಗದವರು ಬಹಳ ಕಾಲದಿಂದಲೂ ಧರ್ಮಪದ್ಧತಿಯನ್ನು ಹೆಚ್ಚಾಗಿ ನಡೆಯಿಸಲು ಪ್ರಯತ್ನಿಸದೆ ಇರುವುದನ್ನು ಯೋಚನೆ ಮಾಡಿ, ದೈರ್ಯವಾಗಿ ಬದಲಾಯಿಸಬೇಕೆಂದುದ್ದೇಶಿಸಿ, ನೂರಾರು ಹಸು ಕರುಗಳನ್ನು ಸಾಕಿಕೊಂಡು, ಕಾಲು ಮುರಿದವುಗಳು, ಕುರಿಗಳು, ಮೇಕೆಗಳು ಮೊದಲಾದವನ್ನು ತೆಗೆದು ಇತರ ಕೆಲಸಗಳಿಗೆ ಕಳುಹಿಸಿ ಪೋಷಣೆ ನಡೆಯುತ್ತಿರುವುದು ಶ್ಲಾಘ್ಯವಾದದ್ದು.—ಶಿವಮೊಗ್ಗ ಎ. ವಿ. ಸ್ಕೂಲಿಗೆ ಪ್ರಧಾನಾಧ್ಯಾಪಕರಾದ ಮು। ಸಾಹಿತ್ಯ ಭೀಮಸೇನಾಚಾರ್ಯರನ್ನು ಸರ್ಕಾರದವರು ಹಾಸನ ಇಲ್ಲಿಗೆ ವರ್ಗಾಯಿಸಿ ಕೊಟ್ಟಿರುವದರಿಂದಾಗಿ ಎಲ್ಲರೂ ಸಂತೋಷಪಡುತ್ತಾರೆ.—ಇಲ್ಲಿನ ಎ. ವಿ. ಸ್ಕೂಲಿನಿಂದ ಈ ವರ್ಷದ ಲೋವರ್ ಸೆಕೆಂಡರಿ ಪರೀಕ್ಷೆಗೆ ಇಂಗ್ಲಿಷಿನಲ್ಲಿ ೮ ವಿದ್ಯಾರ್ಥಿಗಳೂ ಕನ್ನಡದಲ್ಲಿ ೧೦ ವಿದ್ಯಾರ್ಥಿಗಳೂ ಕಳುಹಿಸಲ್ಪಡುವರು. ಇಲ್ಲಿನ ಅಸಿಸ್ಟೆಂಟ್ ಅಸಿಸ್ಟೆಂಟರು ಬೋ. ಸ. ವಿದ್ಯಾರ್ಥಿಗಳನ್ನು ಪರೀಕ್ಷಿಸಿಕೊಂಡು, ಒಂದು ಆಡನ್ನು ಕೊಯ್ದು ಅದರ ಶರೀರದಲ್ಲಿರುವ ಅವಯವಗಳನ್ನು ತೋರಿಸಿ, ದೇಹಶಾಸ್ತ್ರವನ್ನು ಬೋಧಿಸಿದ್ದಕ್ಕಾಗಿ ವಿದ್ಯಾರ್ಥಿಗಳೆಲ್ಲರೂ ತುಂಬಾ ಕೃತಜ್ಞರಾಗಿರುತ್ತಾರೆ.—ಬಸ್ಸು ಆಲೂರ್ ಶಾಹುಕಾರರು ಟಾಂಗಾ ಗಾಡಿಯಿಟ್ಟು ಇಲ್ಲಿಂದ ಅರಕಲಗೂಡಿಗೂ, ಹಾಸನಕ್ಕೂ ಪ್ರತಿದಿನವೂ ಪ್ರಯಾಣಿಕರನ್ನು ಬಿಟ್ಟು ಕರೆದುಕೊಂಡು ಹೋಗುತ್ತಾರೆ. ಆಗಸ್ಟ್ ೧೫ ರಿಂದ ಅರಕಲಗೂಡು ಟಪಾಲು ಈ ಊರು ಮಾರ್ಗವಾಗಿ ಹಾಸನಕ್ಕೆ ಹೋಗುವುದು.

---

ಪ್ರಯಾಣೋಪಾಸಿಗೂ ಕ್ಯಾನುಭೋಗನಿಗೂ ನಡೆದ ಸಂಭಾಷಣೆ.

ಪ್ರಯಾಣಿಕ.—ತಮ್ಮ ಕೆಲಸ ತಮಗೆ ಎಷ್ಟರಮಟ್ಟಿಗೆ ಅನುಕೂಲವಾಗಿದೆ, ಶ್ಯಾನುಭೋಗರೇ?

ಶ್ಯಾನುಭೋಗ.—ಸರ್ಕಾರದವರು ಪೂರ್ವದ ನಮ್ಮ ಅಧಿಕಾರವನ್ನು ಬಹಳಮಟ್ಟಿಗೆ ಕಡಮೆ ಮಾಡಿ, ನಮ್ಮ ಸಂಬಳದನಿಗೆ ವಿಭಾಗದವನ್ನೂ ಭಯವನ್ನೂ ಉಂಟು ಮಾಡಿಬಿಟ್ಟರು. ಆದುದರಿಂದ ಈಗ ನಮ್ಮವರ ಅಧಿಕಾರ ನಮ್ಮ ನಮ್ಮ ಬುದ್ಧಿ ಸಾಮರ್ಥ್ಯಕ್ಕೆ ತಕ್ಕಂತೆ ರೈತರಲ್ಲಿ ನಡೆಯುತ್ತದೆ.

ಪ್ರ.—ಪೂರ್ವದಂತೆ ನಿಮ್ಮ ಇಷ್ಟಬಂದ ಕಾರುಬಾರುಗಳಿಕ್ಕೆಲ್ಲಾ ಏವೂ ನಡೆಸುವುದಕ್ಕೆ ಅವಕಾಶವಿಲ್ಲದಂತೆ ನಿಬಂಧನೆಗಳನ್ನು ಮಾಡಿದ್ದರಿಂದ ರೈತರು ನಿಮ್ಮ ಬಾಯಿಗೆ ಒಂದೇಸಲ ಹುತ್ತಾಗಿಹೋಗುತ್ತೆ ತಪ್ಪಿಸಿಕೊಳ್ಳುವುದಕ್ಕೆ ಸ್ವಲ್ಪ ದಾರಿಯಾಗಿರಬಹುದಲ್ಲವೇ?

ಶ್ಯಾ.—ಹಾಗೆ ತಿಳಿಯಬೇಡಿ ಸ್ವಾಮಿ, ಸರ್ಕಾರದವರು ನಮ್ಮ ಸ್ವೇಚ್ಛಾ ಪ್ರವೃತ್ತಿಗೆ ಅಡ್ಡಿಯಾಗಿ ನಿಬಂಧನೆಗಳನ್ನು ಮಾಡಿ, ಕಾಗದಗಳ ಮೂಲಕ ಪ್ರಚಾರಮಾಡುತ್ತಾರೆ. ಈ ಸಮಾಚಾರಕ್ಕೆ ಓದು ಬರಹ ತಿಳಿಯದ, ತಮ್ಮ ಮನೆ, ಹಳ್ಳಿ ಇವುಗಳಲ್ಲಿ ನಡೆಯುವ ವಿಷಯಗಳನ್ನು ಹೊರತು ಮತ್ತೆ ಯಾವ ವಿಷಯವನ್ನೂ ತಿಳಿಯುವುದಕ್ಕೆ ಆಸೆಯೂ ಅನುಕೂಲವೂ ಇಲ್ಲದ ರೈತರಿಗೆ ಗೊತ್ತೇ ಆಗುವುದಿಲ್ಲ. ಅಲ್ಲದೆ ನಾವು ನಡೆಸಿದ್ದೇ ನಮ್ಮ ಅಧಿಕಾರ.

ಪ್ರ.—ಅದು ಹೇಗೆ, ಶ್ಯಾನುಭೋಗರೇ? ಬೋರ್ಡು ಮತ್ತು ತಾಲ್ಲೂಕು ಸ್ಕೂಲುಗಳಿಗೆ ಹೋಗಿ ಅನೇಕರು ಓದು ಬರಹವನ್ನು ಕಲಿಯುತ್ತಿರುವರು. ಅಲ್ಲದೆ ಕನ್ನಡ ವರ್ತಮಾನ ಪತ್ರಿಕೆಗಳನ್ನು ತರಿಸಿಕೊಂಡು, ಸರ್ಕಾರದ ಮತ್ತು ಹೊರಗಿನ ಆಗುಹೋಗುಗಳನ್ನು ತಿಳಿದುಕೊಳ್ಳುತ್ತಿದ್ದಾರೆ. ಹೀಗೆ ಹಳ್ಳಿಪಳ್ಳಿ ಜನರೆಲ್ಲಾ ತಿಳುವಳಿಕೆ ಹೆಚ್ಚುತ್ತಿದೆ. ಇದರಿಂದ ನಿಮ್ಮ ಸ್ವೇಚ್ಛಾಪ್ರವೃತ್ತಿಗೆ ಅಡ್ಡಿಯೇ ಆಯಿತಲ್ಲಾ!

ಶ್ಯಾ.—ಸಮುದ್ರದಲ್ಲಿ ಇಂಗು ಕದಡಿದಂತೆ! ವಿದ್ಯಾಭ್ಯಾಸದಿಂದ ರೈತರಿಗೆ ತಿಳುವಳಿಕೆಯುಂಟಾಗುವ ಕಾಲ ನೋಡಿಕೊಳ್ಳೋಣ! ಇನ್ನೂ ಬಹುಕಾಲ ನಮ್ಮ ಕೈಯಕೆಳಗೆ ಯಾರೂ ಅಲ್ಲಾಡರು.

ಪ್ರ.—ಈಗ ರೈತರಿಂದಿಲ್ಲದಿದ್ದರೂ ನಿಮ್ಮ ಮೇಲ್ಪಟ್ಟ ಅಧಿಕಾರಿಗಳಿಂದ ನಿಮ್ಮ ಸ್ವೇಚ್ಛಾಪ್ರವೃತ್ತನೆಗೆ ಅಡ್ಡಿಯಿಲ್ಲವೇ?

ಶ್ಯಾ:—ಇಲ್ಲ, ಸನ್ಯೋದಯಾ! ಶ್ಯಾನುಭೋಗರು ರೈತರಿಗೆ ಕಂಬಳಿ ಹುಳುವಾಗಿದ್ದಾರೆ. ಮುಟ್ಟಿದ ಕಡೆ ಚುಚ್ಚುತ್ತಾರೆ.

ಪ್ರ.—ಒಂದು ದೃಷ್ಟಾಂತವನ್ನು ಹೇಳಿರಪ್ಪ!

ಶ್ಯಾ.—ನಿಮಗೆ ಪ್ರತ್ಯಕ್ಷ ಬೇಕೋ? ಕೇಳಿ, ವರ್ಗ ರಾಜೀನಾಮೆಯು ತಾಲ್ಲೂಕಿನಲ್ಲಿಯೇ ನಡೆಯಬೇಕೆಂದೂ ಶ್ಯಾನುಭೋಗರಿಗೆ ಸಂಬಂಧವಿರಕೂಡದೆಂದೂ ಮಾಡಿರುತ್ತಾರೆ. ನಮ್ಮ ಕೈಯಲ್ಲಿ ಈ ಅಧಿಕಾರವಿದ್ದಾಗ ಒಂದು ವರ್ಗ ರಾಜೀನಾಮೆಗೆ ೧೦-೧೫ ರೂಪಾಯಿ ಸಂಪಾದಿಸುತ್ತಿದ್ದೆವು. ಈಗಲೂ ಈ ಸಂಪಾದನೆಗೆ ದಾರಿ ಇಟ್ಟುಕೊಂಡಿದ್ದೇವೆ. ವರ್ಗ ರಾಜೀನಾಮೆಯಲ್ಲಿ ಜಮೀನು, ಸರ್ವೆ ನಂಬರು ಮತ್ತು ಆಕಾರವನ್ನು ತಿಳಿಸಬೇಕು. ಇದಕ್ಕೆ ರೈತನು ನಮ್ಮ ಹತ್ತರ ಬರಬೇಕು. ಆಗ ನಮಗೆ ಬೇಕಾದಂತೆ ಸಿಕ್ಕುತ್ತಾನೆ.

ಪ್ರ.—ಇದಕ್ಕಾಗಿ ನಿಮ್ಮಲ್ಲಿ ಯಾಕೆ ಬರಬೇಕು? ಅವರವರ ಪಟ್ಟೆಯಲ್ಲೇ ಅದು ಇರುತ್ತೆ. ಅದನ್ನು ನೋಡಿಕೊಂಡು ಬರೆಸಿಕೊಳ್ಳುತ್ತಾರೆ.

ಶ್ಯಾ.—ಅನೇಕ ರೈತರಿಗೆ ಪಟ್ಟೆಯೇ ಇರುವದಿಲ್ಲ. ಅವರವರ ರುಜುಗಳು ಕಿರಿದು ಎಷ್ಟು? ವಜಾಕ್ಕೆ ಅಂಥವರಿಗೆ ಸರ್ವೆ ನಂಬರು ಆಕಾರ ಎಲ್ಲಿ ತಿಳಿಯುತ್ತೆ? ನಮ್ಮ ಹತ್ತರವೇ ಬರಬೇಕು.

ಪ್ರ.—ಹಾಗೇ ಆಗಲಿ; ಈ ಸ್ವಲ್ಪ ಕೆಲಸಕ್ಕಾಗಿ ನಿಮ್ಮಲ್ಲಿ ಬಂದವರ ಅವನಲ್ಲಿ ಏನು ದುರುಂ ಪಡೆದುಕೊಳ್ಳುತ್ತೀರಿ?

ಶ್ಯಾ—ಎರಡು ರೂಪಾಯಿ ಮೊದಲು ತೆಗೆದುಕೊಳ್ಳುತ್ತೇನೆ. ಪ್ರಕಾಶವಾದಕ್ಕೆ ಯಾರನ್ನಾದರೂ ಕರೆಸಿ, ತಪ್ಪು ಆಕಾರ, ತಪ್ಪು ಸಂಖ್ಯೆಗಳನ್ನು ಬರೆಸಿಕೊಟ್ಟು ಕಳುಹಿಸುತ್ತೇನೆ. ಇಷ್ಟೇ ಬರೆದು ಅರ್ಜಿಯನ್ನು ತಾಲ್ಲೂಕಿಗೆ ಕೊಡುತ್ತಾನೆ. ಇದು ಶೇಕದಾರ್ರ ಮೂಲಕ ಪುನಃ ನಮ್ಮ ಕೈಗೆ ಬರುತ್ತದೆ. ಆಗ ಮರವಿನಿಂದ ತಪ್ಪು ಸಂಖ್ಯೆ ಹಾಕಿದಂತೆ ನಟಿಸಿ, ಅದನ್ನು ತಿದ್ದಿಕೊಡುವುದಕ್ಕೆ ಪುನಃ ಎರಡು ರೂಪಾಯಿ ತಪ್ಪು ಆಕಾರವನ್ನು ಹಾಗೇ ಬಿಟ್ಟು, ಕಳುಹಿಸುತ್ತೇನೆ ಪುನಃ ಇದು ನಮ್ಮಲ್ಲಿ ಬಂದಾಗ ಇನ್ನೊಂದು ರೂಪಾಯಿ ಸಂಪಾದಿಸಿಕೊಳ್ಳುತ್ತೇನೆ. ನಮ್ಮ ಕೈಗೆ ಸಿಕ್ಕಿದವನ ಯೋಗ್ಯತಾನುಸಾರ ನಮ್ಮ ಬುದ್ಧಿಯಿದ್ದಂತೆ ನಮ್ಮ ಪೂರ್ವದ ಆದಾಯವನ್ನು ನಾವು ಸಂಪಾದಿಸಿಕೊಳ್ಳುತ್ತೇವೆ.

ಪ್ರ—ಇಷ್ಟೇತಾನೇ. ಜನರು ಒಂದಾವರ್ತಿ ನಂಬರು ಆಕಾರಗಳನ್ನು ಬರೆಸಿಬಿಟ್ಟುಕೊಂಡರೆ ನಿಮ್ಮಲ್ಲಿಗೆ ಬರಬೇಕಾದ್ದೇ ಇರುವುದಿಲ್ಲ. ಪುನಃ ನಿಮಗೆ ಸಂಪಾದನೆಗೆ ದಾರಿಯಿಲ್ಲ.

ಶ್ಯಾ—ಇಷ್ಟೇನೋ ನೀವು ತಿಳಿದಿರುವುದು ? ನಮಗೊಂದು ತೋಷ್ಟ ಶಕ್ತಿಯುಂಟು. ಅದರಿಂದ ನಮ್ಮ ಆಡಳಿತ್ವಕ್ಕಾಗಿ ಶಕ್ತಿಯು ಅಗಾಧವಾಗಿದೆ.

ಪ್ರ—ಅದೇನು. ಸ್ವಲ್ಪ ತಿಳಿಸುವಿರಾ ?

ಶ್ಯಾ—ನಮಗಿರುವುದು ತಾಲ್ಲೂಕು ಅಧಿದೇವತೆ, ಪರಿವಾರ ದೇವತೆಗಳು. ನಾನು ಏನು ಮಾಡಿದಾಗ್ಯೂ ತಪ್ಪು ಕಾಣಿಕೆಯನ್ನು ಒಪ್ಪಿಸಿ ಶುದ್ಧಿಮಾಡಿಕೊಳ್ಳುತ್ತೇವೆ ಹರಕೆ ಕಟ್ಟಿ ಯಾವ ವರವನ್ನಾದರೂ ಪಡೆಯುತ್ತೇವೆ. ಈ ದೇವತೆಗಳು ಸುಮುಖವಾಗಿರುವ ವರೆಗೂ ನಮಗೆ ಜಯವುಂಟು.

ಪ್ರ—ಈ ದೇವತೆಗಳು ಎಂದು ಬಹುವಚನವನ್ನು ಹೇಳುತ್ತೀರಲ್ಲ; ಅದು ಹೇಗೆ ?

ಶ್ಯಾ—ಅದನ್ನು ಕೇಳುತ್ತೀರಾ ? ಅಮಲ್ದಾರ್ ಅಧಿದೇವತೆ. ಶಿರಸ್ತೇದಾರ್, ಹೆಡ್ ಗುಮಾಸ್ತ, ಅವರೇ ಮುಖ್ಯ ದೇವತೆಗಳು, ಇನ್ನೂ ಪರಿವಾರ ದೇವತೆಗಳುಂಟು.

ಪ್ರ—ನಿಯತವಾಗಿ ಕಾಣಿಕೆಗಳನ್ನು ಪ್ರತಿ ವರ್ಷವೂ ಒಪ್ಪಿಸುತ್ತೀರೋ ?

ಶ್ಯಾ—ನಮ್ಮ ವರ್ಷಾಶನದ ಪೂಟಕೆಯಲ್ಲಿ ಇವರಿಗೆ ಕಾಣಿಕೆ ಒಪ್ಪಿಸುತ್ತೇವೆ.

ಪ್ರ—ಯಾರ್ಯಾರಿಗೆ ಎಷ್ಟೆಷ್ಟು ?

ಶ್ಯಾ—ಶಿರಸ್ತೇದಾರ್ರಿಗೆ ೧ ರೂ., ಹೆಡ್ ಗುಮಾಸ್ತ ೨ ರೂ., ಶಿರಸ್ತೆಗುಮಾಸ್ತ ೨ ರೂ., ಸರೀಸ್ತ ೪ ಆಣೆ, ಸುಟ್ಟನ ಚೀಟಿ ಕೊಡುವ ಗುಮಾಸ್ತ ೩ ಆಣೆ. ತಾಲ್ಲೂಕು ಮೂಲ ದೇವತೆಗೆ ಕಪ್ಪವನ್ನು, ಅದರ ಅಪ್ಪಣೆಗೆ ಸರಿಯಾಗಿ ಒಪ್ಪಿಸಬೇಕು.

ಪ್ರ—ಈ ತಾಲ್ಲೂಕು ದೇವತೆಗಳಿಂದ ನೀವು ಇಷ್ಟಾರ್ಥವನ್ನು ಪಡೆಯುತ್ತೀರಾ, ಸ್ವಲ್ಪ ವಿವರಿಸುವಿರಾ ?

ಶ್ಯಾ—ಅದು ಬೇಕೋ ? ಇಗೋ ! ನೋಡಿ. ನಮ್ಮ ಗ್ರಾಮದಲ್ಲಿ ರೈತನೊಬ್ಬನಿದ್ದಾನೆ. ಅವನ ಅಣ್ಣನು ಒಂದು ಜಮೀನನ್ನು ಕೆಲವು ವರ್ಷಗಳ ಹಿಂದೆ ಮಾರಿದ್ದನು. ಈಗ ಆ ಜಮೀನನ್ನು ಹಿಂತಿರುಗಿಸಿ ಕೊಟ್ಟರೆ ೫೦ ರೂ ಕೊಡುತ್ತೇನೆಂದು ಅವನು ಹೇಳಿ ೫೦ ರೂ ಕೊಟ್ಟಿದ್ದಾನೆ. ಇದಕ್ಕೆ ಉಪಾಯವನ್ನು ಯೋಚಿಸಿದೆನು. ಇದಕ್ಕೆ ನಮ್ಮ ದೇವತೆಗಳ ವರವಾಗಬೇಕು.

ಪ್ರ—ಕ್ರಯವಾದ ಜಮೀನನ್ನು ಹಿಂತಿರುಗಿಸುವುದು ಹೇಗೆ ? ಹಿಂತಿರುಗಿಸಬೇಕಾದರೆ ಕೋರ್ಟ್ ಮೂಲಕವಲ್ಲದೆ ನಿಮ್ಮಿಂದೇ ಆಗುತ್ತದೆ?

ಶ್ಯಾ—ನೀವು ಹೇಳುವುದು ನಿಜ. ಕೋರ್ಟಿನ ಮೂಲಕವೇ ಹಿಂತಿರುಗಬೇಕು. ಕೋರ್ಟಿನವರು ಹಿಂತಿರುಗಿಸಿ ಕೊಡಬೇಕಾದರೆ ಅವರಿಗೆ ಸಾಕ್ಷಿ ದಾಖಲೆ ಬೇಕಲ್ಲವೇ? ಇವುಗಳನ್ನೆಲ್ಲಾ ನಾವು ಸೃಷ್ಟಿಸಬೇಕು.

ಪ್ರ—ಕ್ರಯಕ್ಕೆ ತೆಗೆದುಕೊಂಡವನಿಗೆ ಅನುಭವದ ರುಜುವಾತು, ಕ್ರಯದ ದಸ್ತಾವೇಜಿನ ದಾಖಲೆ, ಕಂದಾಯ ಕೊಟ್ಟ ರಶೀತಿ, ಇವುಗಳೆಲ್ಲಾ ದಾಖಲೆಯಾಗಿವೆಯಲ್ಲಾ ! ಇವುಗಳನ್ನೆಲ್ಲಾ [illegible] ಬಿಡುತ್ತೀರಾ ?

ಶ್ಯಾ—ಸ್ವಾಮಿ, ಇವುಗಳೆಲ್ಲಾ ಪ್ರತಿಸ್ಪರ್ಧಿ [illegible]. ಹೇಳುತ್ತೇನೆ, ಕೇಳಿ. ೧. ಕ್ರಯ ಕೊಟ್ಟವನು ಅಪ್ಪರ [illegible]ದವನು. ಅದ್ದರಿಂದ ದಸ್ತಾವೇಜು ಸುಳ್ಳೆಂದು ಪರ್ಯವಸಿಸುತ್ತೇವೆ. ೨. ಒಂದುವೇಳೆ ಆ ದತ್ತ, ರಿಜಿಸ್ಟರಾಗಿದ್ದರೆ ಅಣ್ಣನಿಗೊಬ್ಬನಿಗೇ ಆ ಸ್ವತ್ತನ್ನು ಮಾರುವುದಕ್ಕೆ ಹಕ್ಕಿಲ್ಲವೆಂತಲೂ ಆ ಜಮೀನಿಗೆ ಬಾಧ್ಯರು ಇನ್ನೂ ಮೂವರು ಇರುತ್ತಾರೆಂತಲೂ ಮಾಡುತ್ತೇನೆ. ೩. ಜಮೀನಿನ ಅನುಭವ ಎಂದು ಕೇಳುತ್ತೀರಾ? ಇದಕ್ಕೆ ಸಾಕ್ಷಿ ಊರಿನವರಾಗಬೇಕಷ್ಟೆ. ಊರಿನವರಲ್ಲಿ ಒಬ್ಬರೂ ಅವನ ಕಡೆಗೆ ಸಾಕ್ಷಿ ಹೇಳದಂತೆ ಏರ್ಪಡಿಸುತ್ತೇನೆ ೪. ಕಂದಾಯದ ರಶೀತಿ, ಜಮೀನು ಕ್ರಯವಾಗಿ ಒಂದು ವರ್ಷವಾಗಿದೆ. ಈ ಒಂದು ವರ್ಷದ ಕಂದಾಯ ಮಾತ್ರ ಜಮೀನನ್ನು ಕ್ರಯಕ್ಕೆ ತೆಗೆದುಕೊಂಡವನಿಂದ ಬಂದಿದೆ. ಶಿರದಿಯನ್ನು ತಿದ್ದಿ ನಮ್ಮವನಿಂದಲೇ ಕಂದಾಯ ಬಂದಂತೆ ಮಾಡಿ ನಮ್ಮವನಿಗೆ ರಶೀತಿ ಕೊಡುತ್ತೇನೆ. ಇಷ್ಟೇ ನಾಗಬೇಕು, ಸ್ವಾಮಿ!

ಪ್ರ—ಶಿರದಿಯನ್ನು ತಿದ್ದುವುದು ಹೇಗೆ ? ಬಹಳ ಪ್ರಮಾದ ಕೆಲಸವಲ್ಲವೇ ?

ಶ್ಯಾ—ನಮಗೆ ಪ್ರಮಾದ ಎಂಬ ಮಾತಿಲ್ಲ ಕೇಳಬೇಡಿ. ಯಾವ ಕೆಲಸವನ್ನಾದರೂ ಕಾಣದಂತೆ ಸಾಧಿಸಬಹುದು ಅದೋ ನೋಡಿ. ನಾವು ಕಾನೂನಿಗೆ ವಿರೋಧವಾಗಿ ಕೆಲಸವನ್ನು ನಮ್ಮ ಗುಮಾಸ್ತೆಯಿಂದ ಮಾಡಿಸಿಕೊಂಡು ೪—೦೦ ತಿಂಗಳಾಯಿತು. ಕಳೆದ ವರ್ಷದ ಲೆಕ್ಕವೆಲ್ಲಾ ಅವನ ಅಕ್ಷರದಲ್ಲಿದೆ. ಈ ಒಂದು ಹೊಸದು ಶಿರಸ್ತೆಕೆಲಸಕ್ಕಾಗಿ ಒಂದು ಹಾಳೆಯನ್ನು ಹರಿಯಬೇಕು. ಈ ಹಾಳೆಯ ಜಾಗದಲ್ಲಿ ಇನ್ನೊಂದು ಹಾಳೆ ಹೋಗುತ್ತದೆ. ಹರಿಯಬೇಕಾದ ಕಾಗದಗಳಲ್ಲಿ ರುವುದನ್ನೆಲ್ಲಾ ಹಿಂದಿನ ಗುಮಾಸ್ತೆಯ ಕೈಯಲ್ಲಿ ನಮಗೆ ಬೇಕಾದಂತೆ ಸರಿಮಾಡಿ ಮೊದಲು ಬರೆಸುತ್ತೇನೆ. ಇದಕ್ಕಾಗಿ ಅವನಿಗೆ ಒಂದು ರೂಪಾಯಿ ಕೊಡುತ್ತೇನೆ. ಈ ಕಾಗದವನ್ನು ತೆಗೆದುಕೊಂಡುಹೋಗಿ ಶಿರಸ್ತೇದಾರ್ರ ಮುಂದೆ ಒಂದು ರೂಪಾಯಿಯನ್ನು ಇಟ್ಟು ಕಾಗದಕ್ಕೆ ಈ ಮೂರು ಕಡೆ ರುಜು ಹಾಕಿಸಿಕೊಳ್ಳುತ್ತೇನೆ. ಅಲ್ಲಿಂದ ಹೊರಟು ಸರ್ಕಾರ್ದ ಬಳಿಗೆ ಹೋಗಿ ಅವನಿಗೊಂದು ರೂಪಾಯಿಯನ್ನು ಕೊಟ್ಟು ಅವನ ರುಜುವನ್ನು ಮೂರು ಕಡೆ ತೆಗೆಯುತ್ತೇನೆ. ಈ ಕಾಗದವನ್ನು ತಂದು ಹರಿಯಬೇಕಾದ ಕಾಗದದ ಜಾಗದಲ್ಲಿ ಜೋಡಿಸುತ್ತೇನೆ ಅಲ್ಲಿಗೆ ಎಲ್ಲಾ ಸರಿಹೋಗಿತು.

ಪ್ರ—ನಿಮ್ಮಲ್ಲಿರುವ ಲೆಕ್ಕವನ್ನು ತಿದ್ದಿದರೆ ತಾಲ್ಲೂಕಿನಲ್ಲಿ ಅದರ ಕಾಪಿ ಇರುವುದಿಲ್ಲವೇ ?

ಶ್ಯಾ—ತಾಲ್ಲೂಕಿಗೆ ಶಿರದಿ ಕಾಪಿಯನ್ನು ಕೊಡುವುದಿಲ್ಲ. ನಮ್ಮಲ್ಲಿ ಇರುವುದೊಂದೇ ಲೆಕ್ಕ.

ಪ್ರ—ವರ್ಷವು ಕಳೆದುಹೋದಮೇಲೆ ಆ ವರ್ಷದ ಲೆಕ್ಕವು ನಿಮ್ಮಲ್ಲಿ ಇರುವುದು ಯಾಕೆ ? ತಾಲ್ಲೂಕಿನ ರಿಕಾರ್ಡಿಗೆ ಕೊಡುವುದಿಲ್ಲವೇ ?

ಶ್ಯಾ—ನಮ್ಮ ನಮ್ಮ ಲೆಕ್ಕಕ್ಕೆ ನಾವೇ ರಿಕಾರ್ಡ್ ಕೀಪರಾಗಳು. ನೂರಾರು ವರ್ಷಗಳ ಲೆಕ್ಕಗಳು ವಂಶಪಾರಂಪರ್ಯವಾಗಿ ನಮ್ಮಲ್ಲಿಯೇ ಇವೆ. ಈಚೆಗೆ ೩—೪ ವರ್ಷಗಳಲ್ಲಿ ಸರ್ಕಾರದವರು ನಮ್ಮಲ್ಲಿರುವ ಲೆಖ್ಖಗಳನ್ನೆಲ್ಲಾ ತಾಲ್ಲೂಕಿನವರ ವಶಕ್ಕೆ ಕೊಡುವಂತೆ ಸರ್ಕ್ಯುಲರ್ ಹುಕುಂ ಕೊಟ್ಟಿರುತ್ತಾರೆ. ಪ್ರತಿ ವರ್ಷವೂ ಕಾಗದವೂ ಬರುತ್ತದೆ. ಒಬ್ಬ ಶ್ಯಾನುಭೋಗನಾದರೂ ತನ್ನ ಹಳೇ ದಫ್ತರವನ್ನು ಸರ್ಕಾರಕ್ಕೆ ಒಪ್ಪಿಸಲಿಲ್ಲ.

ಪ್ರ—ಇಷ್ಟು ಜನರು ಇಷ್ಟು ಕಾಲ ಸರ್ಕಾರದ ಹುಕುಂಗೆ ವಿರೋಧವಾಗಿ ನಡೆದು ಶಿಕ್ಷೆಗೆ ಗುರಿಯಾಗದಿರುವುದು ಹೇಗೆ ?

ಶ್ಯಾ—೪, ೫ ವರ್ಷಗಳ ಲೆಕ್ಕಗಳನ್ನು ಮಾತ್ರ ಕಟ್ಟಿ ಬರೆಯುವುದಕ್ಕೆ ಅನುಕೂಲವಾಗಿದೆ. ಹಿಂದಿನ ಲೆಕ್ಕಗಳು ನಾವಿರಾರು ಚಿಲ್ಲರೆ ಕಾಗದಗಳಲ್ಲಿವೆ. ಇವುಗಳನ್ನೆಲ್ಲಾ ಕಟ್ಟಿ ಬರೆಯುವುದು ಅಸಾಧ್ಯ. ಲೆಕ್ಕಗಳೆಲ್ಲಾ ಸರಿಯಾದ ಕಟ್ಟು ತಯಾರಾದಹೊರತು ತಾಲ್ಲೂಕು ರಿಕಾರ್ಡಿನವರು ಲೆಕ್ಕಗಳನ್ನು ತೆಗೆದುಕೊಳ್ಳುವುದಿಲ್ಲ. ಅವರಿಗೆ ಇವುಗಳನ್ನೆಲ್ಲಾ ಇಡುವುದಕ್ಕೆ ಸಾಕಾದಷ್ಟು ಜಾಗವಿಲ್ಲ. ಆದ್ದರಿಂದ ಗವರ್ನಮೆಂಟಿನವರು ನಮ್ಮ ಲೆಕ್ಕಗಳನ್ನು ಅಂತಹ ವರ್ಷ ಕಿತ್ತುಕೊಂಡು ನಮ್ಮ ಶಕ್ತಿಯನ್ನು ಕಡಿಮೆಮಾಡುವುದಕ್ಕೆ ದಾರಿಯಿಲ್ಲ. ಹಾಗೂ ಸರ್ಕಾರದವರು ಅಂಥಾ ಪ್ರಬಲವಾದ ನಿರ್ಬಂಧದಿಂದ ತಾಲ್ಲೂಕಿಗೆ ತರಿಸಿಕೊಂಡರೆ, ಲೆಕ್ಕಗಳನ್ನೆಲ್ಲಾ ಕಟ್ಟಾಗಿ ಬರೆಯುವುದಕ್ಕೆ ಪ್ರಾರಂಭಿಸಿ, ಹಿಂದಿನ ದಾಖಲೆ ಇಲ್ಲದ್ದರಿಂದ ಹೋಗುತ್ತದೆಂದು ಹೊಸಮಾಡಿ ಪುನಃ ನಮ್ಮ ಸ್ವಾಧೀನವನ್ನು ಬಿಡಿಸಿಕೊಳ್ಳಬೇಕೆಂದಿದ್ದೇವೆ. ಹಳೇ ದಫ್ತರ ಬಿಟ್ಟಮೇಲೆ ನಮ್ಮ ಶಕ್ತಿ ಹೋಯಿತು.

[ಇದು ಇಷ್ಟೇ ಸಾಕು.—ಎಡಿ.]

## ವಿದೇಶ ವರ್ತಮಾನಗಳು.

ಜಗುಷ್ತ ರಾಜ್ಯದಲ್ಲಿದ್ದ ಅಮೇರಿಕದ ರಾಯಭಾರಿ ಮೆ ಲಾಂಗ್ ಎಂಬಾತನು ಇಂಗ್ಲಿಷ್ ಉದ್ಯೋಗಿನಾದ ಸರ್ ಎಫ್. ವಿಗ್ರೇಟನನ್ನು ಕಂಡು ಮಾತನಾಡಿಕೊಂಡು, ಅವನ ಬಂಗಲೆಯಿಂದ ಕೆಳಕ್ಕೆ ಇಳಿದು ಬರುವ ಸಂದರ್ಭದಲ್ಲಿ ಮೆಟ್ಟಿಲಿಂದ ಮುಗ್ಗರಿಸಿ ಬಿದ್ದು ಸತ್ತುಹೋದನೆಂದು ತಂತೀ ವರ್ತಮಾನ ಬಂದಿದೆ.

ಸ್ಕಾಟ್ಲಾಂಡಿಗೆ ಸೇರಿದ ಗ್ಲಾಸ್ಗೋ ಪಟ್ಟಣದಲ್ಲಿ ಹಿಂದಿನ ವಾರ ರೈಲ್ವೆ ಅಪಾಯ ನಡೆಯಿತು. ಮುಂಭಾಗದಲ್ಲಿ ಕಟ್ಟಿದ್ದ ಎರಡು ಗಾಡಿಗಳು ಮುರಿದುಹೋದುವು. ೧೭ ಮಂದಿ ಸತ್ತರು. ೨೦ ಮಂದಿಗೆ ಪೂರಾ ಜಖಂ ಆಗಿದೆ. ಒಂದು ಸಂಸಾರಕ್ಕೆ ಸೇರಿದ ಗಂಡಸು, ಹೆಂಗಸರು, ಮಕ್ಕಳು ಒಬ್ಬರೂ ಉಳಿಯದಂತೆ ಸತ್ತುಹೋದರು.

ಡಾಕ್ಟರ್ ಮೆಕ್ಕಾರ್ಥಿ ಎಂಬವನು ಆಸ್ಟ್ರೇಲಿಯದಲ್ಲಿ ಒಂದು ತರಹಾ ಹೊಗೆಯನ್ನು ಕಾಯಿಸಿ ಕೊಳವೆಗಳ ಮೂಲಕ ಆಕಾಶಕ್ಕೆ [illegible]ವಾಗಿ ನುಗ್ಗಿಸಿ ಒಂದೆರಡುಸಲ ಮಳೆ ಬರಮಾಡಿದರು. ಅದರ ಮೇಲೆ ಅವನ ಹೆಸರು ತುಂಬಾ ಪ್ರಸಿದ್ಧಿಗೆ ಬಂತು. ಆದರೆ ಈಚೆಗೆ ಇನ್ನು ಕೆಲವು ಕಡೆ ಅವನು ಮಳೆ ಬರಮಾಡುವುದಕ್ಕೆ ನಡಿಸಿದ ಪ್ರಯತ್ನಗಳೆಲ್ಲಾ ನಿಷ್ಫಲವಾದುವು. ಅವನು ನಾನಾ ಕಾರಣಗಳನ್ನು ಹೇಳುತ್ತಾನೆ. ಜನರಿಗೆ ಅವನಲ್ಲಿ ನಂಬಿಕೆ ತಪ್ಪಿಹೋಯಿತು.

ದಕ್ಷಿಣ ಆಫ್ರಿಕದ ಹೈ ಕಮಿಷನರಾದ ಲಾರ್ಡ್ ಮಿಲ್ನರ್ ಯವರು ಅಲ್ಲಿನ ರೈಲ್ವೆ ಕೆಲಸಕ್ಕೆ ೧೦,೦೦೦ ಕೂಲಿ ಆಳುಗಳನ್ನು ಇತರ ಕಡೆಗಳಿಂದ ಕಳುಹಿಸಿಕೊಡಬೇಕೆಂತಲೂ, ರೈಲ್ವೆ ಕೆಲಸ ಪೂರೈಸಿದ ಮೇಲೆ ಅವರೆಲ್ಲಾ ವಾಪಸು ಹೋಗಬೇಕೆಂತಲೂ ಮಿ॥ ಛೇಂಬರ್ಲೇನ್ ಯವರಿಗೆ ಬರೆದರು. ಹಿಂದೂ ಜನರಿಗೆ ಹೆಚ್ಚಾಗಿ ಸೌಲಭ್ಯಗಳನ್ನು ಕಲ್ಪಿಸಿ ಕೊಡುವುದಾದರೆ ಅವರನ್ನು ಕಳುಹಿಸುವದಕ್ಕೆ ಏರ್ಪಾಡು ಮಾಡುತ್ತೇನೆ ಎಂಬುದಾಗಿ ಮಿ॥ ಛೇಂಬರ್ಲೇನ್ ಯವರು ಜವಾಬು ಕೊಟ್ಟರು.

ಪನಾಮಾದಲ್ಲಿ ಜನರು ಒಂದು ತರಹಾ ಟೋಪಿಗಳನ್ನು ಕಾಲಿಗೆ ತಯಾರುಮಾಡಿ ಬಳಸುತ್ತಾ ಬಂದರು. ಇದು ಬಹಳ ಚನ್ನಾಗಿದೆ ಎಂದು ಹೇಳಿ ಅಮೇರಿಕದವರು ಒಂದೊಂದು ಟೋಪಿಗೆ ೫೫ ರೂ. ನಿಂದ ೩೫೦ ರೂ. ವರೆಗೆ ಬರೀದಿ ಕೊಟ್ಟು ಕೊಂಡುಕೊಳ್ಳುತ್ತಿದ್ದರು. ಪನಾಮಾದ ಕೆಲಸಗಾರರಿಗೆ ಇದರಿಂದ ಬಹಳ ಲಾಭ ಉತ್ಪತ್ತಿ ಆಗುತ್ತಿತ್ತು. ಈಚೆಗೆ ಜನರಲ್ಲಿ ಈ ಟೋಪಿಗಳ ಮೇಲಿದ್ದ ಪ್ರೀತಿ ತಪ್ಪಿಹೋಯಿತು. ಆ ಕೆಲಸಮಾಡುತ್ತಿದ್ದವರಿಗೆ ಗೊಟ್ಟುಬಂದಿದೆ. ಮೊದಲು ಈ ಕಸಬಿನಿಂದ ಐಶ್ವರ್ಯವಂತರಾಗಿದ್ದ ಜನರೆಲ್ಲಾ ದಿವಾಳಿಯಾಗುತ್ತಾ ಬಂದಿದ್ದಾರೆ.

ಸರ್ವಿಯಾ ರಾಜ್ಯದಲ್ಲಿ ದೊರೆಯಾಗಿದ್ದ ಅಲೆಕ್ಸಾಂಡರನನ್ನೂ, ಆತನ ಪತ್ನಿ ಡ್ರಾಗಾ ರಾಣಿಯನ್ನೂ ಕೆಲವು ಅಧಿಕಾರಿಗಳು ಸೇರಿ ೪—೧೦ ವಾರಗಳ ಕೆಳಗೆ ಕೊಂದುಹಾಕಿ, ಹೊಸ ದೊರೆಯನ್ನು ನೇಮಿಸಿಕೊಂಡಿದ್ದಾರಷ್ಟೆ. ಆ ದೊರೆಯೂ ರಾಣಿಯೂ ಪಟ್ಟಣದಲ್ಲಿ ಕೆಲವು ವರ್ತಕರಿಗೆ ೧೩,೦೦೦ ಪೌಂಡು ಸಾಲ ಕೊಡಬೇಕಾಗಿದ್ದಿತು ಅದನ್ನು ಅವರು ತೀರಿಸಿರಲಿಲ್ಲ. ಈಗ ಹೊಸದಾಗಿ ಏರ್ಪಟ್ಟ ಗವರ್ನಮೆಂಟಿನವರು ಈ ಸಾಲವನ್ನು ತೀರಿಸಬೇಕೆಂದು ಯೋಚಿಸಿ, ಆ ಸಾಲಗಾರರನ್ನು ಕರೆಯಿಸಿಕೊಂಡು, ಪೌಂಡಿಗೆ ನಾಲ್ಕು ಷಿಲ್ಲಿಂಗುಗಳ ಪ್ರಕಾರ ಲೆಕ್ಕಹಾಕಿ ಕೊಡುತ್ತೇವೆ ಎಂಬುದಾಗಿ ಹೇಳಿದರು. ಅವರು ಬಾಕಿ ಹಣವನ್ನು ಧರ್ಮವಾಗಿ ಬಿಡುವುದಿಲ್ಲವೆಂತಲೂ, ಪೂರಾ ಹಣವನ್ನು ತಮಗೆ ಪಾವತಿ ಮಾಡಬೇಕೆಂತಲೂ ಹೇಳಿ ಹೊರಟುಹೋದರು. ಈಗ ಅವರು ಆ ಗವರ್ನಮೆಂಟಿನ ಮೇಲೆ ದಾವಾ ಮಾಡುವವರಾಗಿದ್ದಾರೆ.

ವಿಲಾಯತಿ ರಾಜ್ಯದಲ್ಲಿ ಪ್ರಸಿದ್ಧಿ ಹೊಂದಿರುವ ಕೇಂಬ್ರಿಡ್ಜ್ ಯೂನಿವರ್ಸಿಟಿ ಎಂಬ ವಿದ್ಯಾಶಾಲೆಗೆ ಹಿಂದೂಮತ ತತ್ವಬೋಧಕನೊಬ್ಬನನ್ನು ನೇಮಿಸಬೇಕೆಂದು ಅಧಿಕಾರಿಗಳು ತೀರ್ಮಾನಿಸಿ, ಯೋಗ್ಯನಾದವನನ್ನು ಕರೆದುಕೊಂಡು ಬರುವಂತೆ ಸ್ವಾಮಿ ಉಪಾಧ್ಯಾಯ ಎಂಬವರನ್ನು ಹಿಂದುಸ್ಥಾನಕ್ಕೆ ಕಳುಹಿಸಿರುತ್ತಾರಷ್ಟೆ. ಸದ್ಯ ಹಿಂದುಸ್ಥಾನದಲ್ಲಿ ಈ ಘನತರವಾದ ಕೆಲಸವನ್ನು ಒಪ್ಪಿಕೊಳ್ಳತಕ್ಕವರು ಕಲ್ಕತ್ತಾದ ವಿಕ್ಟೋರಿಯಾ ಕಾಲೇಜಿನ ಮುಖ್ಯೋಪಾಧ್ಯಾಯರನ್ನು ಬಿಟ್ಟರೆ ಮತ್ತ್ಯಾರೂ ಇಲ್ಲವೆಂದು ತಿಳಿದು ಬರುವುದು. ಬಾಬೂ ಬ್ರಜೇಂದ್ರನಾಥ ಸೀಲ್ ಯವರು ಸಂಸ್ಕೃತದಲ್ಲಿ ಪೂರ್ಣ ಪಾಂಡಿತ್ಯವನ್ನು ಪಡೆದಿದ್ದಾರೆ. ಹಿಂದೂಮತ ತತ್ವಗಳನ್ನು ಬಹಳ ಚನ್ನಾಗಿ ತಿಳಿದಿರುವರು. ಇದಲ್ಲದೆ ಇವರಿಗೆ ಆಸ್ಯಾ ಯೂರೋಪ್ ಖಂಡಗಳಲ್ಲಿ ರೂಢಿಯಲ್ಲಿರುವ ಅನೇಕ ಭಾಷೆಗಳು ಚನ್ನಾಗಿ ಬರುವವು ಇವರನ್ನು ಮೇಲ್ಕಂಡ ಕೆಲಸ ಒಪ್ಪಿಕೊಳ್ಳುತ್ತೀರಾ ಎಂದು ಪ್ರಶ್ನೆ ಮಾಡಿರುವರು. ಅವರು ಹಿಂದು ಸ್ಥಾನವನ್ನು ಬಿಟ್ಟು ಹೋಗಲು ಇಷ್ಟಪಡುವರೋ ಇಲ್ಲವೋ ಇನ್ನುಮುಂದೆ ಗೊತ್ತಾಗಬೇಕು.

ಬೋಅರ್ ಯುದ್ಧದಲ್ಲಿ ದಳಪತಿಯಾಗಿದ್ದ ಜನರಲ್ ಬೋಥಾ ಯವರು ವಿಲಾಯತಿಯಲ್ಲಿರುವ ತಮ್ಮ ಸ್ನೇಹಿತರೊಬ್ಬರಿಗೆ ದಕ್ಷಿಣ ಆಫ್ರಿಕದ ಈಗಿನ ಸ್ಥಿತಿಯನ್ನು ಕುರಿತು ಒಂದು ಕಾಗದ ಬರೆದರು. ಅವರು ಆ ಕಾಗದವನ್ನು ಲಂಡನ್ ಪಟ್ಟಣದ "ಡಿ ಟೈಮ್ಸ್" ಎಂಬ ವರ್ತಮಾನ ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ. ಅವರು ಬರೆದಿರುವ ಅಭಿಪ್ರಾಯವೇನೆಂದರೆ —"ಮಿ॥ ಛೇಂಬರ್ಲೇನ್ ಯವರು ದಕ್ಷಿಣ ಆಫ್ರಿಕಕ್ಕೆ ಬಂದು ನಡಿಸಿದ ಕಾರ್ಯಗಳಾವುವೂ ಸಫಲವಾಗಲಿಲ್ಲ. ಬೋಅರರು ಮನೆ ಮಠ ಕಟ್ಟಿಕೊಂಡು ನಿಲ್ಲುವಂತೆ ಮಾತ್ರವೇ ಲಾರ್ಡ್ ಮಿಲ್ನರ್ ಯವರು ನಡಸುತ್ತಿರುವ ಕಾರ್ಯಗಳೆಲ್ಲಾ ಬರೀ ಸ್ವೇಚ್ಛೆಯಾಗಿ ನಡಿಸಿರುವದಲ್ಲದೆ ಯಾವದೂ ನಡೆಯಲಿಲ್ಲ. ಆಳುವವರಲ್ಲೂ ಪ್ರಜೆಗಳಲ್ಲೂ ಪರಸ್ಪರ ಪ್ರೀತಿವಾತ್ಸಲ್ಯಗಳು ಹುಟ್ಟಿ ಬೆಳೆಯುವುದಕ್ಕೆ ಬದಲಾಗಿ ಅಪ್ರೀತಿಯೂ, ಭಯೋತ್ಪಾತವೂ, ಅಪನಂಬಿಕೆಯೂ ಉಂಟಾಗುತ್ತವೆ. ಆದಕಾರಣ ಟ್ರಾನ್ಸ್ವಾಲಿನಲ್ಲಿ ಪ್ರಜೆಗಳು ಅಸಂತುಷ್ಟರಾಗಿಯೂ, ಗಂಡಾಂತರದಲ್ಲಿಯೂ ಇರುವರು. ಇಂಗ್ಲಿಷರ ಆಳ್ವಿಕೆಯು ತೃಪ್ತಿಕರವಾಗಿಲ್ಲ."

ಅಮೇರಿಕದ ಗವರ್ನಮೆಂಟಿನವರು ಸರ್ಕಾರಿ ವೈದ್ಯನಾದ ಪ್ರೊಫೆಸರ್ ವಿಲೇ ಎಂಬಾತನಿಂದ ಒಂದು ವಿಷಯವನ್ನು ಪರೀಕ್ಷೆ ಮಾಡಬೇಕೆಂದು ಪ್ರಯತ್ನಪಟ್ಟಿರುವರು. ಬೋರಾಕ್ಸ್ ಮನುಷ್ಯನ ದೇಹಕ್ಕೆ ಯಾವ ರೀತಿಯಾಗಿ ಸೇರುವುದು ಆಹಾರ ಸೇವಿಸುವುದು, ತಿನ್ನುವುದು, ನಸ್ಯ ಹಾಕಿಕೊಳ್ಳುವುದು ; ಈ ಪ್ರತಿ ಪ್ರತಿ ಒಂದು ವಿಧದಲ್ಲೂ ಮನುಷ್ಯನ ಹೃದಯ, ದೇಹಮಾಂಸಗಳು, ಜೀರ್ಣಶಕ್ತಿಗಳಿಗೆ ಯಾವ ಪರಿಣಾಮ ಏನನ್ನುಂಟುಮಾಡುತ್ತವೆ ಎನ್ನುವ ಕಂಡುಹಿಡಿಯ ಬೇಕಾಗುವುದೋ ಅದನ್ನು ಮೇಲ್ಕಂಡ ವೈದ್ಯನು ೧೪ ಜನರನ್ನು ಇಟ್ಟುಕೊಂಡು ಪರೀಕ್ಷೆಮಾಡುವವನಾಗಿದ್ದಾನೆ. ಪರೀಕ್ಷೆಯ ವಿಧಾನ ಹೇಗೆಂದರೆ—ಈ ೧೪ ಜನರೂ ಮೊದಲನೇ ತಿಂಗಳಲ್ಲಿ ಬೋರಾಕ್ಸನ್ನು ಯಾವ ರೀತಿಯಲ್ಲೂ ಉಪಯೋಗಿಸುವುದಿಲ್ಲ. ಅನಂತರ ಅವರನ್ನು ಮೂರು ಗುಂಪಾಗಿ ಮಾಡುವರು. ಒಂದೊಂದು ಗುಂಪಿನವರು ಒಂದೊಂದು ರೀತಿಯಲ್ಲಿ ಬೋರಾಕ್ಸನ್ನು ಸ್ವಲ್ಪ ಕಾಲ ಉಪಯೋಗಿಸಿ ಹಾಗೇ ಪರಸ್ಪರವಾಗಿ ಹೆಚ್ಚಿಸಿಕೊಂಡು ಬರುವರು. ೬ ಮಂದಿ ಊಟದ ಸಂಗಡ, ೪ ಮಂದಿ ಬೋರಾಕ್ಸನ್ನು ತಿನ್ನುವರು, ೪ ಮಂದಿ ನಸ್ಯ ಹಾಕಿಕೊಳ್ಳುವರು. ಪರಮಾವಧಿ ೦ ಅಳತೆಯನ್ನು ಮುಟ್ಟಿಸುತ್ತಾ ಹೋಗಿ ಕಡೆಗೆ ಮನುಷ್ಯನು ಎಷ್ಟು ಹೆಚ್ಚಾಗಿ ಉಪಯೋಗಿಸಬಹುದೋ ಅಷ್ಟು ಹೆಚ್ಚಾಗಿ ಬೋರಾಕ್ಸನ್ನು ಈ ಮೂರು ಗುಂಪಿನವರೂ ಉಪಯೋಗಿಸುತ್ತಾರೆ. ಇವೇ ಹಿಂಗೆ ಬೋರಾಕ್ಸನ್ನು ಒಂದು ಗುಂಪಿನವರೂ ಸ್ವಲ್ಪವೂ ಉಪಯೋಗಿಸದಂತೆ ಮಾಡುವರು. ಹೀಗೆ ಒಂದು ತಿಂಗಳಿನ ಪರ್ಯಂತರ ಈ ಮೂರು ಗುಂಪಿನವರ ಶರೀರ ಸ್ಥಿತಿಯನ್ನೂ ಡಾಕ್ಟರು ಪರೀಕ್ಷಿಸಿ, ಬೋರಾಕ್ಸಿನ ಫಲಾಫಲಗಳನ್ನು ಗೊತ್ತು ಮಾಡುವವನಾಗಿದ್ದಾನೆ. ಈ ಪರೀಕ್ಷೆಯು ಮುಂದಿನ ವರ್ಷ ನಡೆಯುವಂತೆ ಏರ್ಪಾಡಾಗಿದೆ.

## ಒಳ್ಳೇ ಔಷಧಗಳು.

5

ನಯನವ್ಯಾಧಿಗೆ ಸುಖಾಂಜನವು.—ಹೊಸತಾಗಿ ಅಥವಾ ಬಹು ಕಾಲದಿಂದ ಕಣ್ಣಿನಲ್ಲಿ ಇರುತ್ತಿದ್ದ ಎಲ್ಲ ಪ್ರಕಾರದ ಬಾಧೆಗಳು ಇದರಿಂದ ಬಹು ಬೇಗನೆ ಗುಣ ಹೊಂದುವವು. ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು, ಪಿಸರೂ ಬರುತ್ತಿರುವದೂ, ಉರಿ ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದೂ, ದೃಷ್ಟಿಮಾಂದ್ಯ ಮುಂತಾದ ವಿಶಿಷ್ಟ ವ್ಯಾಧಿಗಳು ಗುಣ ಹೊಂದುತ್ತವೆ ಕ್ರಯ ೧ಡಬ್ಬಿಗೆ ೧ ರೂ. ಪೋಸ್ಟ ಖರ್ಚು ಆಣೆ ೩.

ವಾಯುಹಾರಕ ತೈಲ (ಬಾಹ್ಯಲೇಪನಕ್ಕೆ ಮಾತ್ರ) —ಇದನ್ನು ಲೇಪಿಸಿದ ೧೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವ ಇತರ ವಾಯುಗಳ ಬಾಧೆ, ತಲೆನೋವು, ಚಿಕ್ಕ ಹುಡುಗರ ಉಬ್ಬಸ, ಕೆಮ್ಮು, ಕೂಡ ಗುಣ ಹೊಂದುವವು. ಕುಪ್ಪಿಗೆ ೧ ರೂ. ಖರ್ಚು ಆಣೆ ೬.

ಗಜಕರ್ಣದ ಮುಲಾಮು.—೨ ಯಾ ೩ ಆವರ್ತಿ ಹಚ್ಚುವದರೊಳಗೆ ಎಂಥ ಕಠಿಣವಾದ ಗಜಕರ್ಣವಾದದ್ದು ಇದ್ದರೂ ಪೂರ್ಣ ಗುಣ ಹೊಂದುವದು ಡಬ್ಬಿಗೆ ಆಣೆ ೮ ಖರ್ಚು ೧ ರಿಂದ ೩ ಡಬ್ಬಿ ವರೆಗೆ ಆಣೆ ೩

ಕರ್ಣಸ್ರಾವಕ್ಕೆ ವನೌಷಧಿ ತೈಲ (ಬಾಹ್ಯೋಪಚಾರಕ್ಕೆ ಮಾತ್ರ).—ಚಿಕ್ಕ ಪ್ರಾಯದವರ ಮತ್ತು ಥರ್ತಿ ಪ್ರಾಯದವರ ಕಿವಿಯಿಂದ ರಕ್ತವಾಗಲಿ ಕೀವು ಆಗಲಿ ನೀರಿನಂಥ ದ್ರವವಾಗಲಿ ಹೊಸತಾಗಿ ಅಥವಾ ಬಹುಕಾಲದಿಂದ ಹರಿಯುತ್ತಿದ್ದರೆ ಮತ್ತು ಅದರ ಮೂಲಕ ನೋವು ಕಳತವು ಥುಬುಕುವಿಕೆಯೂ ಇರುತ್ತಿದ್ದರೆ, ಇದರ ಉಪಯೋಗದಿಂದ ಬಹು ಬೇಗನೇ ಸಂಪೂರ್ಣ ಗುಣವು ಪ್ರಾಪ್ತವಾಗುವದು ಕ್ರಯ ರೂ ೧ ಖರ್ಚು ಆಣೆ ೩.

ಪ್ಲೆ ಟಿ ಯಿಂದಲೂ ರವಾನಿಸುವೆವು ಇನ್ನೂ ಅನೇಕ ಉತ್ತಮವಾದ ಔಷಧಗಳ ಬಗ್ಗೆ ನಮ್ಮ ಕ್ಯಾಟ್ಲಾಲಗ್ ತರಿಸಿ ಓದಿ ನೋಡಿ. ನಮ್ಮ ವಿಳಾಸವೇನಂದರೆ. –

ರಾಜವೈದ್ಯ ಮತ್ತು ಕಂಪನಿ, ಬೆಳಗಿ, ಉತ್ತರ ಕನ್ನಡಾ ಜಿಲ್ಲಾ

## ಹೋಮೋಸಿಯಾ.

ತತ್ಕ್ಷಣ ಪರಿಹಾರ.

ತಗಲುತ್ತಲೇ ನೋವು ನಾಸಿಯಾಗುತ್ತೆ

ಈ ಔಷಧಿಯು ಮನೆ ಅರಮನೆ ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಹಾಯಕರವಾದ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಆರೆ ತಲೆನೋವು, ಸೊಂಟನೋವು, ಹಾಕರ್ಣವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬೆಲೆಯ ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

✦✦✦✦✦✦✦✦✦

## ಹೋಮೋಸಿಯಾ ಯಂಬ್ರೊಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಿಗಳಲ್ಲಿ ಕುಪ್ಪಿ ೮ ಆಣೆಗೆ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಜ್ಜಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಬೇಕಾದರೆ ಕೋಟಿಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು

ವಿಳಾಸ —ಹೋಮೋಸಿಯಾ ಕಂಪೆನಿ, ೨೫ ಕೆಂಪ ಬೀಚ್ ಲೈನ್, ಮದರಾಸ್

## ಶ್ರೀ ಕೃಷ್ಣವಿಲಾಸ ಪ್ರೆಸ್.

11

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡ್, ನೋಟೀಸ್ ಫಾರಂ, ಬ್ಯಾಲನ್ಸ್ ಷೀಟ್ ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಧಾರಣೆಗಳಿಗೆ ಮಾಡಲ್ಪಡುತ್ತವೆ.

ರೋಜು, ವಗೈರೆ, ಮುಂತಾದ ಖಾಲೀ ಪುಸ್ತಕಗಳು; ನಾನಾವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು; ಇನ್ನು ಇತರವಾದ ಸಮಸ್ತರೀತಿಯ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿನಂತೆ ಬಹು ಅಂದವಾಗಿ ತಯಾರುಮಾಡಲ್ಪಡುತ್ತವೆ.

ಲಾಯರ್‌ಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್ ವಕಾಲತ್‌ನಾಮೆ, ಜಾರೀ, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ವಿಕರಿಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯತರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಜವಾಬನ್ನು ಅಪೇಕ್ಷಿಸುವವರು ಟಪ್ಪಾಲು ಹಾಸಲನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರಿಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡ ಪೇಟೆ ೨೫ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

## ಜ್ವರಹರಿ.

11

ಇದು ಸಾಧಾರಣ ಜ್ವರ, ಹಳೇಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ನಾಶಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ೨ ರೂ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

✦✦✦✦✦✦✦✦✦

## ಓಮಂ ಕರ್ಪೂರ.

Omum Carpoor
TRADE MARK

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತನ್ನಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧರೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಕನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಕೆಂಪ್ ಬೀಚ್ ಲೈನ್, ಮದರಾಸ್.

## ನಮ್ಮ ಚಂದಾದಾರರಿಗೆ ನೋಟಿಸ್.

"ವೃತ್ತಾಂತ ಪತ್ರಿಕೆ" ಯ ಏಜಂಟರು ಚಂದಾ ವಸೂಲ್ಮಾಡಿ, ಕೊಂಡದ್ದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲ.

ಮ್ಯಾನೇಜರ್.

ಮೈಸೂರು. "ವೃತ್ತಾಂತ ಪತ್ರಿಕೆ" ಆಫೀಸ್.

## ಕ್ಷೇತ್ರಗಣಿತ ಸಂಗ್ರಹ.

4

ಈ ಹೊಸ ಪುಸ್ತಕವನ್ನು ಮೈಸೂರು ಶಿವರಾಮಪೇಟೆ ಸ್ಕೂಲು ಹೆಡ್ಮಾಸ್ಟರು ಟಿ ಯಂ ರಾಮಸ್ವಾಮಯ್ಯನವರು ಬರೆದಿರುತ್ತಾರೆ ಇದರಲ್ಲಿ ಸುಮಾರು ಸಾವಿರ ಲೆಕ್ಕಗಳೂ ಮೈಸೂರು ದೇಶೀಯ ಪರೀಕ್ಷೆಯ ಪ್ರಶ್ನಪತ್ರಿಕೆಗಳೂ ಉತ್ತರಗಳೊಡನೆ ಅಡಕವಾಗಿವೆ ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆಯುವಂತೆ ಅಲ್ಪಕ್ರಯಕ್ಕೆ ಮಾರಲ್ಪಡುವುದು ಕ್ರಯ ೪ ಆಣೆ, ಹಾಸಲು ೩ ಪೈ ವಿಳಾಸ –
ಮ್ಯಾನೇಜರ್, ಮಿಷನ್ ಬುಕ್ ಡಿಪ್ಪೋ, ಮೈಸೂರು

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಶ್ರಾವಣ ಬಹುಳ ಪಂಚಮಿ ಗುರುವಾರದಿಂದ ಶ್ರಾವಣ ಬಹುಳ ಏಕಾದಶಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಆಗಸ್ಟ್

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ | ಘಳಿಗೆ. | [illegible] ತೇದಿ. |
|---|---|---|---|---|---|---|
| 1[illegible] | ಗುರು | ಪಂಚಮಿ | [illegible] 10 | ರೇ | [illegible] | 29 |
| 1[illegible] | ಶುಕ್ರ | ಷಷ್ಠಿ | 31 2[illegible] | ಅ | 1[illegible] | 3[illegible] |
| 1[illegible] | ಶನಿವಾರ* | ಸಪ್ತಮಿ | [illegible] | ಭ | [illegible] | [illegible] |
| 16 | ರವಿವಾ † | ಅಷ್ಟಮಿ | [illegible] | ಕೃ | [illegible] | 32 |
| 17 | ಚಂದ್ರ | ನವಮಿ | [illegible] | ರೋ | [illegible] | 1 |
| 1[illegible] | ಕುಜ ‡ | ದಶಮಿ | [illegible] | ಮೃ | 11 [illegible] | 2 |
| 1[illegible] | ಬುಧ ¶ | ಏಕಾದಶಿ | 1[illegible] 2[illegible] | ಆ | [illegible] | 3 |

* ಶ್ರೀಕೃಷ್ಣಜನ್ಮಾಷ್ಟಮಿ ಶ್ರಾವಣ ಶನಿವಾರ † ಮಹಾವೈಷ್ಣವ ‡ ಏಕಾದಶೀ ತಿಥಿ, ಮಂಗಳಗೌರೀ ವ್ರತ ¶ ಸರ್ವೈಕಾದಶಿ

## ಪೇಟೆ ಧಾರಣೆ.

| ದಿನಸಿ. | ಮೈಸೂರು | ಬೆಂಗಳೂರು. |
|---|---|---|
| ಕಡ್ಡೀ ಅಕ್ಕಿ ಪಲ್ಲ ೧ಕ್ಕೆ | ರೂ ೧೦-೮-೦ | ೧೦—೮—೦ |
| ಕೆಂಬೂತಿ ಅಕ್ಕಿ ಅವಲ್ .. | .. ೧೦ ೪ ೦ | ೧೦—೮—೦ |
| ,, ದುಯಂ | .. ೯—೮—೦ | ೧೦—೦—೦ |
| ಜಾಪಾಳಿ ಅಕ್ಕಿ .. | .. ೯—೪—೦ | ೧೩—೦—೦ |
| ಸಣ್ಣಕ್ಕಿ ಅವಲ್ | .. ೧೨-೮—೦ | ೧೩—೦—೦ |
| ,, ದುಯಂ .. | .. ೧೨-೦—೦ | ೧೧—೦—೦ |
| ತೊಗರೀ ಬೇಳೆ ಪಲ್ಲ ೧ಕ್ಕೆ | .. ೧೩ ೦ ೦ | ೧೪—೦—೦ |
| ,, ದುಯಂ .. | .. ೧೨ ೮—೦ | ೧೩—೦—೦ |
| ಕೈರ ರಾಗಿ ಪಲ್ಲ ೧ಕ್ಕೆ .. | .. ೩-೧೪—೦ | ೩—೩—೦ |
| ಕಾರಾಗಿ .. | .. ೩—೮—೦ | ೩—೨—೦ |
| ಜೋಳ .. | .. ೩—೧೦—೦ | ೩—೦—೦ |
| ಹಲಸಂದೆ ಪಲ್ಲ ೧ಕ್ಕೆ .. | .. ೭—೧೨—೦ | ೮—೮—೦ |
| ಬಿಳೇ ಅವರೆ .. | .. ೩ ೧೨-೦ | ೨—೦—೦ |
| ಹೆಸರು .. | .. ೮-೦—೦ | ೯—೮—೦ |
| ಉದ್ದು .. | .. ೮ ೪ ೦ | ೯—೦—೦ |
| ಕಡಲೆ .. | .. ೯ ೮—೦ | ೧೦—೦—೦ |
| ಎಳ್ಳು .. | .. ೧೬ ೧೨ ೦ | ೧೦—೧೨—೦ |
| ಹುರುಳಿ .. | .. ೪—೦ ೦ | ೪—೧೨—೦ |
| ಹರಳು ೧೨೬ ಸೇರಿಗೆ .. | .. ೯—೧೨—೦ | ೬—೦—೩ |
| ಸೀಗೇಕಾಯಿ ಮಣ ೧ಕ್ಕೆ | .. ೧—೮—೦ | ೧—೮—೦ |
| ಮೆಣಸಿನಕಾಯಿ .. | .. ೨—೮—೦ | ೨—೦—೦ |
| ,, ದುಯಂ .. | .. ೨—೪ ೦ | ೧—೮—೦ |
| ಬೆಲ್ಲ ದೊಡ್ಡ ಅಚ್ಚು .. | .. ೪—೮—೦ ಮು | ೧—೬—೦ |
| ಒಳ್ಳೆಣ್ಣೆ ಮಣ ೧ಕ್ಕೆ .. | .. ೫—೦ ೦ | ೪—೬—೦ |
| ಹರಳೆಣ್ಣೆ ,, .. | .. ೩—೧೨—೦ | ೩—೦—೦ |
| ಕೊತ್ತುಂಬರಿ ಪಲ್ಲ ೧ಕ್ಕೆ .. | .. ೫-೮—೦ | ೪—೯—೦ |
| ಉಪ್ಪು ,, .. | .. ೯—೦—೦ | ೮—೧೪—೦ |
| ಹುಣಸೇ ಹಣ್ಣು .. | .. ೦-೧೪—೦ | ೦—೧೪—೦ |
| ,, ಹಳೇದು .. | .. ೦—೧೦—೦ | ೦—೧೨—೦ |
| ತುಪ್ಪ .. | .. ೧೦-೧೨—೦ | ೧೦—೮—೦ |
| ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ | .. ೪-೯—೦ | ೪—೨—೦ |
| ತೆಂಗಿನಕಾಯಿ ೧೦೦ ಕ್ಕೆ | .. ೪—೪-೦ | ೩—೮—೦ |
| ಅಳಲೇಕಾಯಿ ಮಣ ೧ಕ್ಕೆ | .. ೦—೧೪-೦ | ೦—೧೦—೦ |
| ಅಂಟ್ವಾಳದಕಾಯಿ ಮಣ ೧ಕ್ಕೆ | . ೬—೧೪—೦ | ೦—೧೦—೦ |
| ಚಿನ್ನ (ಪೌನ್) ಕೆಂಪು | .. ೧೫—೪—೦ | ೧೫—೪—೦ |
| ,, ,, ಪಸಿಮೆ | .. ೧೫—೮—೦ | ೧೫—೯—೦ |
| ,, ,, ಗಟ್ಟಿ ತೊಲ ೧ಕ್ಕೆ .. | .. ೨೬—೦—೦ | ೨೪—೮—೦ |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ .. | .. ೭೨-೦—೦ | ೬೮—೧೨—೦ |

Printed and Published by the Rev E W Thompson M A the Proprietor and Manager, Wesleyan Mission Press Mysore 13 8 1903

# ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು —:o:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩ ಮೈಸೂರು—ಸನ್ ೧೯೦೩ ನೇ ಇಸವಿ ಆಗಸ್ಟ್ ತಾರೀಖು ೨೦ ನೇ ಗುರುವಾರ. ಸಂಚಿಕೆ ೧೨

## ಶಿವಮೊಗ್ಗ ಡಿಸ್ಟ್ರಿಕ್ಟ್

7

ಪುಸ್ತಕಗಳೂ,

ಶಾಸನ ಟೋಪಿಗಳೂ,

ಲೇಖನ ಸಾಮಗ್ರಿಗಳೂ

ಕ್ರಯಕ್ಕೆ ದೊರೆಯುತ್ತವೆ.

ಮೇಲ್ವಿಳಾಸ.—

ಮ್ಯಾನೇಜರ್, ಮಿಷನ್ ಬುಕ್ ಡಿಪೋ,

ಶಿವಮೊಗ್ಗ.

## ಸ್ಟಾಂಡರ್ಡ್ ಲೈಫ್ ಇನ್ಸೂರೆನ್ಸ್ ಕಂಪೆನಿ.

5

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಇಂಡಿಯಾ ದೇಶದಲ್ಲಿ ಲೈಫ್ ಇನ್ಷ್ಯೂರೆನ್ಸ್ ಯಾನೆ ಜೀವ ಮಾನವನ್ನು ಭೀಮಾ ಮಾಡಿಕೊಳ್ಳುವ ಕಂಪೆನಿಗಳಲ್ಲಿ ಇದು ಬಹು ಕಾಲದ್ದಾಗಿಯೂ ಹೆಚ್ಚಿನ ಬಂಡವಾಳವುಳ್ಳದ್ದಾಗಿಯೂ ಇದೆ.

ಭೀಮಾದಾರರಾಗತಕ್ಕವರು (ಲೈಫ್ ಎಷ್ಯೂರ್ಡ್ ಮಾಡತಕ್ಕವರು) ಈ ಕಂಪೆನಿಯ ಚಂದಾ ದರ, ಷರತ್ತುಗಳು ಮೊದಲಾದವುಗಳನ್ನು ಇತರ ಕಂಪೆನಿಯವರುಗಳೊಡನೆ ಹೋಲಿಸಿನೋಡಿದರೆ ಇಲ್ಲಿ ಜೀವಮಾನವನ್ನು ಭೀಮಾ ಮಾಡುವವರಿಗೆ ಎಷ್ಟು ಪ್ರಯೋಜನಗಳುಂಟೆಂಬುದು ಗೊತ್ತಾಗುವದು.

ಈ ಕಂಪೆನಿಯ ಭೀಮಾ ನಿಬಂಧನೆಯು ಬಹು ಅನುಕೂಲವಾದುವು. ಭೀಮಾದಾರರುಗಳಿಗೆ ಜಿಕ್ಕಟ್ಟು ಉಂಟುಮಾಡುವ ನಿರ್ಬಂಧಗಳೇನೂ ಇಲ್ಲ.

ಕ್ಲುಪ್ತವಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲೇ ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂಪಾಯಿಗಳನ್ನು ಕಂಪೆನಿಯವರು ಕೊಡುವ ಲಾಭಸಹಿತವಾಗಿ ಪಡೆಯಬೇಕಾದರೆ ಭೀಮಾದಾರನು ಕಂಪೆನಿಗೆ ಕೊಡಬೇಕಾದ ಚಂದಾ ವಿಷ ದರಗಳ ಪೈಕಿ ಕೆಲವನ್ನು ಇಲ್ಲಿ ನಮೂದಿಸಿದೆ.

| ಹಾಲಿ ನಡೆಯುತ್ತಿರುವ ವಯಸ್ಸು | ೫೦ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗಲ್ಲಾಗಲಿ ೨,೦೦೦ ರೂ. ಹಣವು ಬೇಕಾದರೆ ಸಾಮಾನ್ಯಾನ ಕಂಪೆನಿಗೆ ಕೊಡುವದು | ೫೫ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗಲ್ಲಾಗಲಿ ೨,೦೦೦ ರೂ ಯನ್ನು ಪಡೆಯಬೇಕಾದರೆ ಸಾಮಾನ್ಯಾನ ಕಂಪೆನಿಗೆ ಕೊಡುವದು. |
|---|---|---|
| ೨೦ | ರೂ ೬—೧೨—೮ | ರೂ. ೩—೦—೦ |
| ೨೫ | ,, ೭—೧೫—೪ | ,, ೩—೧೪—೦ |
| ೩೦ | ,, ೯—೧೨—೭ | ,, ೮—೨—೦ |
| ೩೫ | ,, ೧೨—೧೪—೮ | ,, ೧೦—೧—೪ |
| ೪೦ | | ,, ೧೩—೪—೮ |

೨,೦೦೦ ರೂ. ಗಿಂತಲೂ ಹೆಚ್ಚಾದ್ದಕ್ಕಾಗಲಿ ಕಡಮೆಯಾದ್ದಕ್ಕಾಗಲಿ ವಯಸ್ಸಿನಲ್ಲಿ ಹೆಚ್ಚು ಕಡಮೆ ಇದ್ದರಾಗಲಿ ಚಂದಾ ದರವೇನೆಂಬುದನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಇದುವರೆಗೆ ಜಾರಿಯಲ್ಲಿದ್ದ ಚಂದಾ ದರಗಳನ್ನು ಕಡಮೆ ಮಾಡಿರುತ್ತೇವೆ. ಚಾಲ್ತಿ ವರ್ಷಕ್ಕೆ ತಯಾರುಮಾಡಿರುವ ಹೊಸ ಚಂದಾ ಪಟ್ಟಿಯನ್ನೂ ಭೀಮಾ ದರಖಾಸ್ತು ಫಾರಂಗಳನ್ನೂ ಇದೇ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಎಂ. ಸೂರ್ಯನಾರಾಯಣಪ್ಪ,

ಕಮಿಷನ್ ಮತ್ತು ಜನರಲ್ ಏಜನ್ಸಿ,

ಶಿವಮೊಗ್ಗೆ.

### ನಮ್ಮ ಚಂದಾದಾರರಿಗೆ ನೋಟಿಸ್.

"ವೃತ್ತಾಂತ ಪತ್ರಿಕೆ" ಯ ಏಜಂಟರು ಚಂದಾ ವಸೂಲ್ಮಾಡಿಕೊಂಡದ್ದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲ.

ಮ್ಯಾನೇಜರ್,

ಮೈಸೂರು "ವೃತ್ತಾಂತ ಪತ್ರಿಕೆ" ಆಫೀಸ್.

### ಸರಸ್ವತೀಕರ ಕಸ್ತೂರಿ ಮಾತ್ರೆಯು.

11

ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥಾವರಿಗೆ ಅತ್ಯಂತ ಉಪಯುಕ್ತವಾದದ್ದು. ಈ ಮಾತ್ರೆ ೧—೨ ತಾಂಬೂಲದ ಸಂಗಡ ಸೇವಿಸುವದರಿಂದ ಬಾಯಿಯ ಸುವಾಸನೆಯುಂಟಾಗಿ ಬಾಯಿಯ ದುರ್ಗಂಧ, ಹೊಗೆ ಅಜೀರ್ಣ, ಉಷ್ಣ ರೋಗ, ಬಾಯಿಯ ಜೊಲ್ಲು, ಉಗ್ಗಿಸುತ್ತಾ ಮಾತಾಡುವದು, ವಾಯು, ಶೀತ, ಪಿತ್ಥ, ಮಲಬದ್ಧ, ದಂತದೋಷ, ಬಾಯಿಹುಣ್ಣು, ಜ್ವರ, ಕೆಮ್ಮು, ನೆಗಡಿ. ತಲೆಬೇನೆ ಇತ್ಯಾದಿ ಅನೇಕ ರೋಗಗಳಿಗೆ ರಾಮಬಾಣದಂತಿರುವದು. ಹೆಂಗಸರ ಗುಪ್ತವಾದ ಅನೇಕ ಬಾಧ್ಯಗಳಿಗೆ ವಜ್ರಾಯುಧದಂತಿರುವದು. ಚಿಕ್ಕ ಮಕ್ಕಳಿರುವ ಮನೆಯಲ್ಲಿ ಈ ಮಾತ್ರೆಯು ಸಂಜೀವನವು. ಈ ಮಾತ್ರೆಯು ನಿಮ್ಮಲ್ಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸ್ವಾಧೀನದಲ್ಲಿದ್ದಂತೆಯೇ. ೨೦೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೫ ಆಣೆ, ೫ ಆಣೆ ಟಪಾಲು ಖರ್ಚು. ಇದನ್ನು ೨ ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವು ನಮಗೆ ಬರೆಯುವದಾಗಿ ಬಲಾತ್ಕಾರಪಡಿಸುವದು.

ಸಿ. ಪಿ. ಅಂಡ್ ಕಂಪೆನಿ, ಬೆಂಗಳೂರು ಸಿಟಿ.

## ROBINSON'S

## PATENT BARLEY.

## ರಾಬಿನ್‌ಸನ್‌ಯವರ ಬಾರ್ಲಿ ಹಿಟ್ಟು.

ಸರಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಎಷೆಗೋಧಿಯಿಂದ ಮಾಡಿದೆ. ಇದು ಸ್ವರ್ಣದಂತೆ ಅದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾರುತ್ತಾ ರಾದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

## MELLIN'S FOOD.

### ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

73

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮೆದುಳೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಕಮಾನುತಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಪಾಕ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಹೆಂಬಿಕೆಗೆ ಅರ್ಹವಾದದ್ದಾಗುತ್ತದೆ

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ದಿನಸು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಉಷ್ಣವಾಗುತ್ತದೆ

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಸಿಡುಬು ಹಾಕಿದ ಕಾಲದಲ್ಲಿಯೂ ಜ್ವರದಲ್ಲಿಯೂ ಒದಗುವ ವಿಕಾರದ ರೋಗಗಳಲ್ಲಿಯೂ ವಿಶೇಷ ಪಥ್ಯವಾಗುತ್ತದೆ.

೧೧ ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುಂಡುಪದಾರ್ಥವು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ಪಥ್ಯಕರವಾದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ದೃಢಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ಬಹಳ ಮಟ್ಟಿಗೆ ಕಡಮೆಮಾಡುತ್ತದೆ

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಖರೀದಿ ಮಾಡತಕ್ಕವರು ಕೆಳಗೆ ಸೂಚಿಸುವ ನಮ್ಮ ಏಜಂಟರುಗಳಲ್ಲಿ ಮದರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಶಾಖೆಗಳಿಗೂ ಬರೆದು ತರಿಸಿಕೊಳ್ಳಬಹುದು :—

ಮದನ್ :—ಮೆ॥ ಕಾವಷ ದಿನ್‌ಷಾ ಬ್ರದರ್ಸ್

ಬೊಂಬಾಯಿ.—ಮೆ॥ ಲೇಮಂ ಆಬೆರ್‌ಕ್ರಾಂಬಿ ಕಂಪೆನಿ.

ಕಲ್ಕತ್ತಾ.—ಮೆ॥ ಮೆಕ್ಕೆನ್‌ಜಿ ಲಯಲ್ ಕಂಪೆನಿ.

ಕೋಳಿಕ್ಕೋಡು :—ಮೆ॥ ಜಾಲ್ ವಿಲ್ಸನ್ ಕಂಪೆನಿ.

ಕರಾಚಿ :—ಮೆ॥ ಎಚ್. ಜೆ. ರುಸ್ತುಂಜಿ ಕಂಪೆನಿ.

ಮದ್ರಾಸು :—ಮೆ॥ ಓಕ್ ಕಂಪೆನಿ.

ರಂಗೂನ್—ಲೇಮಂ ಬ್ಲಾಕ್ ಕಂಪೆನಿ.

### ಅನಂತವ್ರತಕ್ಕೆ ಯೋಗ್ಯವಾದ ಅನಂತದಾರಗಳು.

ರೂಪಾಯಿ ೧ಕ್ಕೆ ೪, ೬, ೮, ೧೦, ೧೨, ೧೬ ಜತೆಗಳು. ಜಾಗ್ರತೆಯಾಗಿ ಬರೆಯುವವರಿಗೆ ದೊರಕುತದೆ. ಸೆಪ್ಟಂಬರು ತಿಂಗಳು ೧ನೇ ತಾರೀಖಿನ ಒಳಗಾಗಿ ಬರುವ ಆರ್ಡರುಗಳಿಗೆ ಕಳುಹಿಸಲ್ಪಡುತ್ತೆ. ಪರಸ್ಥಳದವರಿಗೆ ಮಾತ್ರ ಕಳುಹಿಸಲ್ಪಡುವದು.

H. N. Rao & Brothers, Bangalore City.

### ಸ್ಕೂಲ್ ವಿದ್ಯಾರ್ಥಿಗಳಿಗೆ

೧೯೦೩ ನೆ ಲೋವರ್ ಸೆಕೆಂಡರಿ ಕನ್ನಡ ಟೆಕಸ್ಟ್ ಮ॥ ಲೀಲಾಕ್ಷರವರ ಕಿಂಚಿತ್ ಬೆಳಗಿದ ನಾಗರಿಕ ೧೧—೧೭—೧೨ ನೇ ಅಧ್ಯಾಯಗಳಿಗೆ ನೋಟ್ಸ್, ಮ॥ ಎಸ್. ಜಿ. ನರಸಿಂಹಾಚಾರ್ಯರು, ಮತ್ತು ಮ॥ ಬಾಳು ಸುಬ್ಬರಾವ್ ಬಿ. ಎ. ಇವರಿಂದ ಮ॥ ಭಾಭಾ ಸಾಹೇಬು ಇವರ ಅಪ್ಪಣೆ ಮೇರೆ ರಚಿಸಲ್ಪಟ್ಟಿರುವದು. ಕ್ರಯ ೩ ಆಣೆ ಮಾತ್ರ. ೧೨ ಪ್ರತಿಗೆ ರೂ. ೧—೮—೦, ೬ ಪ್ರತಿಗೆ ೧—೦—೦. ವಿಳಾಸ —

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್, ಮೈಸೂರು.

### ಹೆಸರು ಬದಲಾವಣೆ ನೋಟೀಸ್.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ಮೈಸೂರಲ್ಲಿ ಪ್ರಸಿದ್ಧವಾದ ಮಿಷನ್ ಬುಕ್ ಡಿಪೋ ಎಂಬ ಪುಸ್ತಕದ ಷಾಪಿಗೆ ಸಿ. ಎಲ್. ಎಸ್. ಬುಕ್ ಡಿಪೋ (Christian Literature Society Book Depot) ಎಂಬ ಹೆಸರನ್ನು ಇಟ್ಟಿರುವದರಿಂದ ಪುಸ್ತಕಗಳನ್ನು ತರಿಸಿಕೊಳ್ಳುವವರು ಇನ್ನು ಮೇಲೆ

ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು,

ಎಂದು ಬರೆಯಬೇಕೆಂದು ಕೋರುತ್ತೇವೆ.

## ಸ್ತೋತ್ರಗಾಥಾ ಸಂಗ್ರಹ.

5

ಈ ಹೊಸ ಪುಸ್ತಕವನ್ನು ಮೈಸೂರು ಶಿವರಾಮಪೇಟೆ ಸ್ಕೂಲು ಹೆಡ್ಮಾಸ್ಟರು ಟಿ. ಯಂ. ರಾಮಸ್ವಾಮಿಯ್ಯನವರು ಬರೆದಿರುತ್ತಾರೆ. ಇದರಲ್ಲಿ ನುಮಾರು ಸಾವಿರ ಲೆಕ್ಕಗಳೂ ಮೈಸೂರು ದೇಶೀಯ ಪರಿಕ್ಷೆಯ ಪ್ರಶ್ನಪತ್ರಿಕೆಗಳೂ ಉತ್ತರಗಳೊಡನೆ ಅಡಕವಾಗಿವೆ. ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆಯುವಂತೆ ಅಲ್ಪಕ್ರಯಕ್ಕೆ ಕೊಡಲ್ಪಡುವುದು. ಕ್ರಯ ೪ ಆಣೆ, ಡಾಕಲು ೬ ಪೈ. ವಿಳಾಸ —

ಮ್ಯಾನೇಜರ್, ವೆಸ್ಲಿಯನ್ ಬುಕ್ ಡಿಪೋ, ಮೈಸೂರು.

## ಪ್ರಕಟಿಕೆ

ಅಥವಾ

ಆರ್ಯಾವರ್ತದ ಮೊದಲನೆಯ ಚಕ್ರವರ್ತಿ

ಧಾರವಾಡ ಕೆ. ವಿ. ನ. ಸಂಘದಿಂದ ಬಹುಮಾನ ಹೊಂದಿದ, ವಿದ್ವಾಂಸರುಗಳಿಂದಲೂ, ಪತ್ರಿಕೆಗಳಿಂದಲೂ ಉತ್ತಮವೆಂದು ಅಭಿಪ್ರಾಯ ಪಡೆದ ಐತಿಹಾಸಿಕ ಜೀವನ ಚರಿತ್ರೆಯು, ಅಶೋಕನ ಚಿತ್ರದ ಕೂಡೆ ತಯಾರಾಗುತ್ತದೆ. ಮುಂಗಡವಾಗಿ ಹಣ ಕಳುಹಿಸುವರಿಗೆ ೪ ನಾಲ್ಕು ಆಣೆ. ಹಿಂದಿನಿಂದ ಆರು ಆಣೆ. ಮೊದಲು ಬರೇ ಸಹಿ ಕಳುಹಿಸಿದರೆ ವಿ. ಪಿ. ಯಿಂದ ಕಳುಹಲಾಗುವುದು.

ರಾ. ಕೃ. ಇನಾಮತಿ,
ಪೋಂ ಅಣ್ಣಿಗೇರಿ, ಜಿ. ಧಾರವಾಡ.

## ಈಗಲೇ ಸಿದ್ಧವಾಗಿದೆ. ಕ್ರಯಕ್ಕೆ ಸಿಕ್ಕುತ್ತೆ.

11

೧೯೦೩ ನೇ ಇಸವಿ ಲೋವರ್ ಸೆಕೆಂಡರಿ ಕನ್ನಡ ಟೆಕ್ಸ್ಟಿನ ನೋಟ್ಸು. ೧೪೧ ನೇ ಪದ್ಯದಿಂದ ೩೦೭ ನೇ ಪದ್ಯದ ವರಿಗೂ, ಇರುತ್ತೆ. ಗದ್ಯಕಾವ್ಯದ ನೋಟ್ಸೂ ಸೇರಿದೆ. ಅರ್ಥ, ತಾತ್ಪರ್ಯ, ಸಂಧಿ, ಸಮಾಸ, ಅನ್ವಯಾರ್ಥ, ಭಾವಾರ್ಥ, ನಾನಾರ್ಥ, ಛಂದಸ್ಸು, ವ್ಯಾಕರಣವಿಶೇಷ, ಪ್ರಶ್ನೋತ್ತರ, ಮುಂತಾಗಿ ಪರೀಕ್ಷೆಗೆ ಬೇಕಾಗತಕ್ಕ ಎಲ್ಲಾ ವಿಷಯಗಳೂ ವಿಶದವಾಗಿ ತಿಳಿಸಲ್ಪಟ್ಟಿವೆ. ಚುರಿಮಲ್ಲಪ್ಪನವರ ಸ್ಕೂಲು ಮಹಾದೇವ ಶಾಸ್ತ್ರಿಗಳಿಂದ ರಚಿಸಲ್ಪಟ್ಟಿದ್ದು. ೧೦ ಕ್ಕೆ ೧ ಪ್ರತಿ ಜಾಸ್ತಿ. ಪುಸ್ತಕ ದೊರೆಯತಕ್ಕ ಸ್ಥಳ —

ಕೆ. ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.

### ಇಸ್ತಿಹಾರ್.

2

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದಾ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮಾಹೆ ಮಜಕೂರು ತಾರೀಖು ೧೦ ರ ಲಾಗಾಯಿತು ೨೪ ರ ವರಿಗೆ ಬೆಳಗುಳದ ವಾಟರ್‌ವರ್ಕ್ಸ್‌ನಲ್ಲಿ ರಿಪೇರಿಗೋಸ್ಕರ ಎರಡು ಟರಬೈನ್‌ಗಳು ಕೆಲಸ ಮಾಡುವದನ್ನು ನಿಲ್ಲಿಸಲ್ಪಟ್ಟು ಒಂದು ಟರಬೈನ್ ಮಾತ್ರ ಕೆಲಸ ಮಾಡುವದರಿಂದ ಮೇಲ್ಕಂಡ ಕಾಲದಲ್ಲಿ ಷಹರಿನ ತಗ್ಗು ಪ್ರದೇಶಕ್ಕೆಲ್ಲಾ ಕಾಲ್ಕಣಿಲ್ಲ ಕೆರೆಯಿಂದ ನಲ್ಲಿಗಳಿಗೆ ನೀರು ಸರಬರೈ ಮಾಡಲ್ಪಡುವದಲ್ಲದೆ ಎತ್ತರ ಪ್ರದೇಶದ ನಲ್ಲಿಗಳಿಗೆ ಕಾವೇರಿ ನೀರನ್ನು ಪ್ರಾತಃಕಾಲ ೬ ಗಂಟೆ ಲಾಗಾಯಿತು ೧೦ ಗಂಟೆವರಿಗೂ, ಸಂಧ್ಯಾಕಾಲ ೪ ಗಂಟೆ ಲಾಗಾಯಿತು ೬ ಗಂಟೆ ವರಿಗೂ ಬಿಡುವಂತೆ ಬಂದೋಬಸ್ತು ಮಾಡಿರುತ್ತೆ. ಅಲ್ಲದೆ ಒಂದೇ ಟರಬೈನ್ ಕೆಲಸ ಮಾಡುವದರಿಂದ ಎತ್ತರ ಪ್ರದೇಶದಲ್ಲಿರತಕ್ಕ ಪಬ್ಲಿಕ್ ಫೌಂಟನ್‌ಗಳಲ್ಲಿ ನೀರಿನ ವೇಗವು ಕಮ್ಮಿ ಆಗಬಹುದು. ಆದಕಾರಣ ಫೌಂಟನ್‌ಗಳಿಗೆ ನೀರು ಬಿಟ್ಟಿರತಕ್ಕ ಕಾಲದಲ್ಲಿಯೇ ಆ ಪ್ರದೇಶದ ಜನರು ತಮಗೆ ಬೇಕಾಗುವಷ್ಟು ನೀರನ್ನು ತುಂಬಿಕೊಳ್ಳಬೇಕು.

K. SREENIVASA RAO,

ತಾ॥ ೬ ನೆ ಆಗಸ್ಟು, ೦೩. *Vice President.*

### ಚೇಂಬರ್ಲಿನ್ ಯವರು ಹೊಟ್ಟೆಕೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

33




ಕೆಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳು ಹಿಡಿಯುವದು, ಕರುಳುಗಳ ನೋವು, ಹೊಟ್ಟೆಕೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ —"ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪ್ರಕಾರ ಇದೇ ಸರ್ವೋತ್ಕೃಷ್ಟವಾದ ಔಷಧ, ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತೆ ಕೊಂಡು ತರಿಸಿ, ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ., ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು. ಖಂಡಿತ —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

## ವೃತ್ತಾಂತ ಪತ್ರಿಕೆ.

೧

ಸನ್ ೧೯೦೩ ನೇ ಇಸವಿ ಆಗಸ್ಟ್ ತಾ॥ ೨೦ ನೇ ಗುರುವಾರ

### ಶ್ರೀಮನ್ ಮಹಾರಾಜರವರು ಕೋಲಾರಕ್ಕೆ ದಯಮಾಡಿದ್ದುದು

ಕಳೆದ ಶನಿವಾರ ಬೆಳಿಗ್ಗೆ ಸ್ಪೆಷಲ್ ರೈಲಿನಲ್ಲಿ ಶ್ರೀಮನ್ ಮಹಾರಾಜರವರು ಕೋಲಾರ ಚಿನ್ನದ ಗಣಿಗಳಿಗೆ ದಯಮಾಡಿದರು. ಅವರ ಸಂಗಡ ಬ್ರಿಟಿಷ್ ರೆಸಿಡೆಂಟರು, ಅವರ ಪತ್ನೀರವರು, ದಿವಾನ್‌ರವರು, ಕೌನ್ಸಲರುಗಳಾದ ಮ॥ ಮಾಧವರಾಯರು, ಮ॥ ಶ್ರೀನಿವಾಸಯ್ಯಂಗಾರ್ಯರು, ಸೆಕ್ರೆಟರಿ ಮ॥ ನಂಜುಂಡಯ್ಯನವರು, ಪ್ರೈವೇಟ್ ಸೆಕ್ರೆಟರಿ ಮ॥ ಮೆಕಾನಕಿ ಯವರು, ಮ॥ ಗಳಾದ ಮೆಕ್‌ಫಿನ್, ಸ್ಮಿತ್, ಜೆಬ್ಬ್ ಎಂಬೀ ಸರ್ದಾರರು ಮುಂತಾದವರೆಲ್ಲಾ ದಯಮಾಡಿದರು. ಚೀಫ್ ಇಂಜನಿಯರಾದ ಮ॥ ಕಾರ್ ಯವರು ಬೌರಿಂಗ್‌ಪೇಟೆ ತನಕ ಹೋಗಿ ಮಹಾರಾಜರನ್ನು ಎದುರುಗೊಂಡು ಕರೆದುಕೊಂಡು ಹೋದರು. ಸ್ಪೆಷಲ್ ರೈಲು ಗಾಡಿಯು ಬೆಳಿಗ್ಗೆ ೯ ಗೆ ಉರಿಗಾಂ ಸ್ಟೇಷನ್ ತಲಪಿತು. ಅಲ್ಲಿ ಶ್ರೀಮನ್ ಮಹಾರಾಜರವರೇ ಮುಂತಾದವರೆಲ್ಲಾ ಗಾಡಿ ಇಳಿದರು. ಪೋಲೀಸ್ ಸೂಪರಿಂಟೆಂಡೆಂಟು ಮ॥ ಪಿ. ಪಿ. ದಾಮನ್ ಯವರು ತಂದಿದ್ದ ಪೋಲೀಸ್ ಸಿಬ್ಬಂದಿಯನ್ನು ಸ್ಟೇಷನ್ನಿನಲ್ಲಿ ಸಾಲಾಗಿ ನಿಲ್ಲಿಸಿ, ಸಲಾಮು ಮಾಡಿಸಿದರು. ಇದನ್ನು ನೋಡಿ ಶ್ರೀಮನ್ ಮಹಾರಾಜರು ಬಹಳ ಸಂತೋಷಪಟ್ಟರು. ಅಲ್ಲಿ ಚಿನ್ನದ ಗಣಿಗಳ ಯೂರೋಪಿಯನ್ ಸರ್ದಾರರೂ ಊರಿನ ಜನಗಳೂ ಕಾದಿದ್ದು ಮಹಾರಾಜರಿಗೆ ಸುಸ್ವಾಗತವನ್ನು ಬಯಸಿದರು. ಸ್ಟೇಷನ್ ಹೊರಭಾಗದಲ್ಲಿ ಶೃಂಗರಿಸಿದ್ದ ಸುಂದರವೂ ನೇತ್ರಾನಂದಕರವೂ ಆದ ಚಪ್ಪರದ ಕೆಳಗೆ ಸಕಲರೂ ದಯಮಾಡಿ, ಮಹಾರಾಜರವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿ, ಸುಸ್ವಾಗತವನ್ನು ಬಯಸಿದರು. ಅಲ್ಲಿ ಅದಕ್ಕೆ ಪ್ರತ್ಯುತ್ತರವಾಗಿ ಶ್ರೀಮನ್ ಮಹಾರಾಜರವರು ಅಪ್ಪಣೆ ಕೊಡಿಸಿದ್ದೇನೆಂದರೆ —

ನೀವುಗಳು ಇಷ್ಟು ವೈಭವದೊಡನೆ ನನಗೆ ಸುಸ್ವಾಗತವನ್ನು ಬಯಸಿದ್ದಕ್ಕಾಗಿ ನಿಮ್ಮಗಳನ್ನು ವಿಶೇಷವಾಗಿ ವಂದಿಸುವೆನು. ಎಲೆಕ್ಟ್ರಿಸಿಟಿಯ ಕಾರ್ಖಾನೆಯ ಕಾರ್ಯಗಳು ಈಗ ಸ್ಥಿರಪಟ್ಟವೆಂದು ಸಂತೋಷದಿಂದ ಸೂಚಿಸುತ್ತೇನೆ. ಇದರಿಂದ ಚಿನ್ನ ತೆಗೆಯುವ ನಿಮ್ಮ ಉದ್ಯೋಗಕ್ಕೆ ವಿಶೇಷ ಸಹಾಯವಾಯಿತೆನ್ನುವದಕ್ಕೆ ಸಂಶಯವಿಲ್ಲ. ಅಲ್ಲಿ ಉತ್ಪತ್ತಿ ಆಗುವ ಶಕ್ತಿಯನ್ನು ಇನ್ನೂ ಜಾಸ್ತಿ ಮಾಡಬೇಕೆಂದು ನನ್ನ ಗವರ್ನಮೆಂಟಿನವರು ಸಾಹಸಪಡುತ್ತಾರೆ. ಅದು ಕೈಗೂಡಿದ ಮೇಲೆ ನಿಮಗೆ ಇನ್ನೂ ವಿಶೇಷ ಸಹಾಯವಾದೀತು. ನಿಮಗೋಸ್ಕರ ವಿಶೇಷ ಹಣ ಖರ್ಚುಮಾಡಿ, ಗಣಿಗಳಿಗೂ ಇಲ್ಲಿನ ಪ್ರಜೆಗಳಿಗೂ ಅನುಕೂಲವಾದ ಮತ್ತು ಆರೋಗ್ಯಕರವಾದ ಕುಡಿಯುವ ನೀರನ್ನು ತಂದೊದಗಿಸಬೇಕೆಂದು ನನ್ನ ಗವರ್ನಮೆಂಟಿನವರು ಕೆಲಸ ಮಾಡಿಸುತ್ತಿದ್ದಾರೆ. ಇದು ಸಿದ್ಧವಾದ ಮೇಲೆ ನಿಮಗೆ ಬೇಕಾದಷ್ಟು ನೀರು ಒದಗುವುದು, ಮತ್ತು ಈ ಪ್ರಾಂತ್ಯದ ಪ್ರಜೆಗಳ ಆರೋಗ್ಯವೂ ಅದರ ದೆಸೆಯಿಂದ ವೃದ್ಧಿಹೊಂದುವುದು. ಈಗ ನಾನು ಎರಡು ವಿಷಯಗಳನ್ನು ನಿಮಗೆ ತಿಳಿಸಲು ಸಂತೋಷವುಳ್ಳವನಾಗಿದ್ದೇನೆ. ಈ ಚಿನ್ನದ ಗಣಿಗಳ ಪ್ರಜೆಗಳ ಪ್ರಯೋಜನಾರ್ಥವಾಗಿ ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟಿಸಬೇಕೆಂದು ತೀರ್ಮಾನಿಸಿರುವೆನು. ಈ ಕಾರ್ಯವನ್ನು ಪ್ರಾರಂಭಿಸುವುದಕ್ಕೆ ಈ ಸಾಲಿನಲ್ಲಿ ನನ್ನ ಸರ್ಕಾರದಿಂದ ೧೫,೦೦೦ ರೂ. ಈಗ ಕೊಟ್ಟಿರುವರು ಎರಡನೆಯದಾಗಿ, ಈ ಚಿನ್ನದ ಗಣಿಗಳಿಗೇ ಪ್ರತ್ಯೇಕವಾಗಿ ಒಬ್ಬ ಮ್ಯಾಜಿಸ್ಟ್ರೇಟರನ್ನು ಕೊಡಬೇಕೆಂದು ಮೊನ್ನೆ ತಾನೇ ಹುಕುಂ ಮಾಡಿರುತ್ತೇನೆ. ಈ ಹೊಸ ಕೋರ್ಟಿನಿಂದ ನಿಮ್ಮ ಕೆಲಸ ಕಾರ್ಯಗಳು ಸರಾಗವಾಗಿಯೂ ಶೀಘ್ರವಾಗಿಯೂ ನಡೆಯಲು ಸಹಾಯವಾದೀತೆಂದು ನಿರೀಕ್ಷಿಸುವೆನು. ಈಗ ನಾನು ನಿಮ್ಮ ಮಧ್ಯೆ ಇರುವದು ಬಹಳ ಸ್ವಲ್ಪ ಕಾಲವಾದ್ದರಿಂದ ಇಲ್ಲಿನ ವಿಷಯಗಳನ್ನೆಲ್ಲಾ ಬೇಗನೆ ನೋಡಿಕೊಂಡು ಹೋಗಬೇಕಾಗಿದೆ.

ಅನಂತರ ಶ್ರೀಮನ್ ಮಹಾರಾಜರವರು ಗಾಡಿಯಲ್ಲಿ ಕುಳಿತು ಹೊರಟು ಸಂಪಿಗೆಯ ನಗರ, ಉರಿಗಾಂ ಗ್ರಾಮ, ಹೊಸ ಮಾರ್ಕೆಟ್ಟು, ಹೊಸ ಪಟ್ಟಣ ಇವುಗಳ ಮಾರ್ಗವಾಗಿ ಬಂದು, ಅಲ್ಲಿ ಗಾಡಿ ಇಳಿದು ಬಂಗಲೆ, ಮನೆ, ಸಂತೆ ಮೊದಲಾದುವು ತಯಾರಾಗುತ್ತಿರುವದನ್ನು ಪರಾಂಬರಿಸಿ, ಮುಂದೆ ಗ್ರಾಮಸ್ಥರು ಹಾಕಿಸಿದ್ದ ಬಹು ಸುಂದರವಾದ ಚಪ್ಪರದ ಕೆಳಕ್ಕೆ ದಯಮಾಡಿ, ಸ್ಥಾನಿಕರು ಬೋರ್ಡಿನವರು ಒಪ್ಪಿಸಿದ ಅಡ್ರೆಸ್ಸನ್ನು ಸಂತೋಷದೊಡನೆ ಅಂಗೀಕರಿಸಿ, ಮುಂದೆ ಹೊರಟು ಅನೇಕ ಚಿತ್ರದ ಕಮಾನುಗಳೊಳಗೆ ನುಗ್ಗಿ ಬಂದು, ಮೈದಾನಿನಲ್ಲಿ ಹಾಕಿದ್ದ ಒಂದು ದೊಡ್ಡ ಡೇರೆಗೆ ದಯಮಾಡಿದರು. ಅಲ್ಲಿ ಮ॥ ಕಾರ್ ಯವರು ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಿದರು. ನನ್ನ ರೆಸಿಡೆಂಟರ ಬಳಿ ನ ಮೇಲೆ ಒಂದು ಶಿಲೆ ಹುಗಿಯಲ್ಪಟ್ಟಿದೆ. ಈ ಇನ್ಸ್ಟಿಟ್ಯೂಷನ್ ಕಟ್ಟಡವನ್ನು ಪ್ರತಿಷ್ಠೆ ಮಾಡಬೇಕೆಂದು ಮಹಾರಾಜರನ್ನು ಕೇಳಿಕೊಂಡರು. ಶ್ರೀಮನ್ ಮಹಾರಾಜರವರು ಸಮಯೋಚಿತವಾದ ಮಾತುಗಳಿಂದ ಪ್ರತಿಷ್ಠೆ ಮಾಡಿ, ದಾಖಲು ಪುಸ್ತಕದಲ್ಲಿ ಸಹಿಯನ್ನು ಹಾಕಿಕೊಂಡರು. ಬಳಿಕ ಅಲ್ಲಿ ಬಿನ್ನಹವನ್ನು ಮಾಡಿದರು. ಸ್ಯಾನಿಟರಿ ಬೋರ್ಡಿನವರು ಒಂದು ಬೆಳ್ಳಿ ಪಾತ್ರೆಯನ್ನೂ ಒಂದು ಶ್ರೇಷ್ಠವಾದ ಶಾಲನ್ನೂ ಮಹಾರಾಜರಿಗೆ ಒಪ್ಪಿಸಿದರು. ಅನಂತರ ರೆಸಿಡೆಂಟರವರು ಎದ್ದು ಹೇಳಿದ್ದೇನಂದರೆ —

ಮೈಸೂರು ಗವರ್ನಮೆಂಟಿನವರು ನನ್ನ ಹೆಸರನ್ನು ಶಾಶ್ವತಪಡಿಸುವುದಕ್ಕೆ ಈ ಪೇಟೆಯನ್ನು ಕಟ್ಟಿಸಿದ ಪ್ರಯುಕ್ತ ನಾನು ತುಂಬಾ ಕೃತಜ್ಞನಾಗಿರುತ್ತೇನೆ. ಪೂರ್ವಕಾಲದಲ್ಲಿ ಚೀಫ್ ಕಮಿಷನರಾಗಿದ್ದ ಮಿ॥ ಬೌರಿಂಗ್ ಯವರ ಹೆಸರು ಬೌರಿಂಗ್ ಪೇಟೆ ಎಂಬುದನ್ನು ಕಟ್ಟಿದ್ದರಿಂದ ಶಾಶ್ವತವಾಗಿ ನಿಂತಿತು. ಈಗ ಈ ಚಿನ್ನದ ಗಣಿಗಳ ಒಂದು ಪಾರ್ಶ್ವದಲ್ಲಿ ಬೌರಿಂಗ್ ಪೇಟೆಯೂ, ಇನ್ನೊಂದು ಕಡೆಯಲ್ಲಿ ನನ್ನ ಹೆಸರಿನ ಪೇಟೆಯೂ ಆಗಿರುವುದು ತುಂಬಾ ಸಂತೋಷಪ್ರದವಾಗಿದೆ. ಲೇಟ್ ಸರ್ ಶೇಷಾದ್ರಿ ಅಯ್ಯರವರೇ ಇದನ್ನು ಸೂಚಿಸಿದ್ದರು. ಇದನ್ನು ಮಹಾರಾಜರವರು ಪ್ರತಿಷ್ಠೆ ಮಾಡುವುದಕ್ಕಾಗಿ ಇಲ್ಲಿತನಕ ದಯಮಾಡಿದ್ದು ಅವರು ನನ್ನ ಮೇಲಿಟ್ಟಿರುವ ಭಕ್ತಿ ವಿಶ್ವಾಸಗಳನ್ನು ವಿಶೇಷವಾಗಿ ಪ್ರಕಾಶಪಡಿಸಿದೆ. ಶ್ರೀಮನ್ ಮಹಾರಾಜರವರು ಪಟ್ಟಕ್ಕೆ ಬಂದ ಒಂದು ಸಂವತ್ಸರದಿಂದಲೂ ಬಹಳ ಶ್ರಮಪಟ್ಟು ರಾಜಕಾರ್ಯಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಅವರಿಗಿರುವ ಕಾರ್ಯಾಸಕ್ತಿಯೂ, ಉತ್ಸಾಹವೂ ಸ್ತೋತ್ರಾರ್ಹಗಳಾಗಿರುವವು. ಈ ಭಾಗದಲ್ಲಿ ನಾನು ತುಂಬಾ ಸಂತೋಷಪಡುತ್ತಿದ್ದೇನೆ. ಮತ್ತು ಅವರು ಇನ್ನು ಮುಂದೆಯೂ ಹೀಗೆಯೇ ಸಕಲ ಕಾರ್ಯಗಳನ್ನೂ ಸ್ವತಃ ನಿರ್ವಹಿಸುತ್ತಾ ಬಂದು, ತುಂಬಾ ಕೀರ್ತಿವಂತರಾಗುವರು.

ಅಲ್ಲಿಂದ ಶ್ರೀಮನ್ ಮಹಾರಾಜರವರು ಸರ್ಕ್ಯೂಟ್ ಹೌಸ್ ಎಂಬ ಬಂಗಲೆಗೆ ದಯಮಾಡಿ, ಸ್ನಾನ ಭೋಜನಾದಿಗಳನ್ನು ನೆರವೇರಿಸಿದರು. ದಿವಾನ್‌ರೂ ಕೌನ್ಸಿಲ್ ಮೆಂಬರುಗಳೇ ಮುಂತಾದವರು ಇನ್‌ಸ್ಟಿಟ್ಯೂಷನ್ ಬಿಲ್ಡಿಂಗ

...ಷ್ಟಿದ್ದ ಊಟ ಉಪಚಾರಗಳನ್ನು ಹೊಂದಿದರು. ರೆಸಿಡೆಂಟರು, ಅವರ ಪತ್ನೀರವರು, ಮಿ॥ ಮೆಕಾನಕಿಯವರು ಈ ಮೊದಲಾದವರೆಲ್ಲಾ ಸುಮಾರು ೨೦ ಮಂದಿ ಚಿನ್ನದ ಗಣಿಯ [illegible] ಇಳಿದುಕೊಂಡು, ಮಿ॥ ಕಾರ್ ಯವರ ಅತಿ[illegible] ಸ್ವೀಕರಿಸಿದರು. ಭೋಜನಾನಂತರ ಶ್ರೀಮನ್ ಮಹಾರಾಜರವರು ಮಿ॥ ಹಾವ್ ಇನ್ಸಲ್ ರವರ ಇಂಗ್ಲಿಷ್ ಪವರ್ ಹೌಸ್ ಎಂಬ ದೊಡ್ಡ ಅಂಗಡಿಯನ್ನು [illegible], ಗಾಂಬಿಯನ್ ರೀಫ್ ಗಣಿಗೆ ದಯಮಾಡಿ, [illegible] ತೆಗೆಯುವವರನ್ನು ವಿದ್ಯುಚ್ಛಕ್ತಿಯಿಂದ ಕೆಲಸ ನಡೆಯುವುದನ್ನೂ, ಬಿಡಿಸುವುದರಿಂದ ಬರುವ ಶಕ್ತಿಯು [illegible] ಗಣಿಗಳಿಗೆ ಹಂಚಿಕೆಯಾಗುವ ಕೊಟಡಿಯನ್ನೂ [illegible] ಬಂದು, ಸಾಯಂಕಾಲ [illegible] ಪತ್ರಿ ಪರಿವಾರ [illegible] ಬೆಂಗಳೂರಿಗೆ ದಯಮಾಡಿದರು.

---

## ಒಳದೇಶದ ವೃತ್ತಾಂತಗಳು.

ಮುಂದೆ ನಡೆಯುವ ಪ್ರಜಾಪ್ರತಿನಿಧಿ ಸಭಾದಲ್ಲಿ ಕೋಲಾರ್ ಚಿನ್ನದ ಗಣಿಗಳ ಪರವಾಗಿ ಮಿ॥ ಥಾಮಸ್ ರಿಚರ್ಡ್ಸ್ ಯವರು ಮೆಂಬರಾಗಿ ಕಂಪನಿಯವರಿಂದ ಆರಿಸಲ್ಪಟ್ಟಿದಾರೆ.

****

ಶ್ರೀಮನ್ ಮಹಾರಾಜರವರು, ಯುವರಾಜರು, ಮಹಾರಾಣಿಯವರು ಮುಂತಾದವರೆಲ್ಲಾ ಪರಿವಾರ ಸಹಿತ ಈ ದಿನ ಬೆಳಿಗ್ಗೆ ಬೆಂಗಳೂರಿನಿಂದ ಸ್ಪೆಷಲ್ ರೈಲಿನಲ್ಲಿ ಹೊರಟು, ಸಾಯಂಕಾಲ ೪ ಗಂಟೆಯ ಮೇಲೆ ರಾಜಧಾನಿಗೆ ದಯಮಾಡುವವರಾಗಿದಾರೆ.

****

ಕಳೆದ ಜುಲೈ ೨೦ನೇ ತಾರೀಖು ರಾತ್ರಿ ಮೈಸೂರು ಗೌರ್ನಮೆಂಟ್ ಹೌಸಿನಲ್ಲಿ ಮಲಗಿದ್ದ ಬೆಂಗಳೂರಿನ ಹುಲ್ಲು ಡೊರೆಸಾನಿಯವರ ಬಾಬತು ಸುಮಾರು ೨೩೦ ರೂ ನಗನಾಣ್ಯಗಳು ಕಳುವಾದುವು. ಇದನ್ನು ಪತ್ತೆಮಾಡಿ ಕೊಡುವವರಿಗೆ ಆಕೆ ೫೦ ರೂ ಬಹುಮಾನ ಕೊಡುವುದಾಗಿ ವಾಗ್ದಾನ ಮಾಡಿದ್ದಾರೆ

****

ರಾಜಧಾನಿಯ ಜನರಲ್ ಆಸ್ಪತ್ರೆ ಎದುರಿಗೆ ವೆಸ್ಲಿಯನ್ ಮಿಷನ್ ಸಂಘದವರು ಹೊಸದಾಗಿ ಕಟ್ಟಿಸಿರುವ 'ವಿಕ್ಟೋರಿಯಾ ಗರ್ಲ್ ಸ್ಕೂಲ್' ಕಟ್ಟಡವು ನಾಳೆ ೨೩ನೇ ತಾರೀಖು ಸೋಮವಾರ ಪ್ರತಿಷ್ಠಿಸಲ್ಪಡುವುದು. ನಮ್ಮ ರೆಸಿಡೆಂಟರವರ ಪತ್ನೀರವರು ದಯಮಾಡಿ, ಆ ದಿನ ವಿದ್ಯಾರ್ಥಿನಿಯರಿಗೆ ಬಹುಮಾನಗಳನ್ನೂ ದಯಮಾಡಿಸುವರು.

****

ಕಳೆದವಾರ ಬೆಂಗಳೂರಿನಲ್ಲಿ ದೊಡ್ಡಮನುಷ್ಯರೆಲ್ಲಾ ಒಂದು ಕಡೆ ಸೇರಿ ತಮ್ಮ ಕುದುರೆಗಳನ್ನು ಪ್ರದರ್ಶನ ಮಾಡಿದರು. ಅವುಗಳಲ್ಲೆಲ್ಲಾ ಮಿ॥ ಅಬ್ಬಾಸ್ ಯವರ ಕುದುರೆಯೂ, ಕರ್ನಲ್ ದೇಶಪಾಂಡೆ ಅರಸಿನವರ ಟಾಂಗಾವೂ ಬಹಳ ಚೆನ್ನಾಗಿವೆ ಎಂದು ತಿಳಿದುಬಂದ ಕಾರಣ ಅವರಿಬ್ಬರಿಗೂ ಬೆಳ್ಳಿ ಬಟ್ಟಲ ಇನಾಮು ಕೊಡಲಾಯಿತು.

****

ನಮ್ಮ ಮೈಸೂರು ಸೀಮೆಯೊಳಗೆ ಗಂಧದ ಮರಗಳಿಗೂ, ಕಾಫಿ ಗಿಡಗಳಿಗೂ ಹಿಡಿಯುವ ಒಂದು ತರಹ ಕೀಟ (ಹುಳು) ವನ್ನು ಪರೀಕ್ಷಿಸಿ, ಅದಕ್ಕೆ ತಕ್ಕ ಪರಿಹಾರವನ್ನು ಕಂಡುಹಿಡಿಯುವ ಉದ್ದೇಶದಿಂದ ಡಾ॥ ಬಟ್ಲರ್, ಮಿ॥ ಲೆಫ್ರಾಯ್ ಎಂಬೀ ಇಬ್ಬರು ಇಂಡಿಯಾ ಗೌರ್ನಮೆಂಟಿನ ಪ್ರೊಫೆಸರು ಇಷ್ಟರಲ್ಲೇ ಮೈಸೂರು ಸೀಮೆಗೆ ಬರುವವರಾಗಿದಾರೆ

****

ಕಳೆದ ಬುಧವಾರ ರಾತ್ರಿ ನಮ್ಮ ಮಹಾರಾಜರವರು ಬೆಂಗಳೂರಿನಲ್ಲಿರುವ ಸಮಸ್ತ ಯೂರೋಪಿಯನ್ ಸರ್ದಾರರುಗಳನ್ನೂ ಕರೆಸಿಕೊಂಡು, ಅವರಿಗೆಲ್ಲಾ ಶ್ರೇಷ್ಠವಾದ ಔತಣ ಮಾಡಿಸಿದರು. ರೆಸಿಡೆಂಟರು, ಅವರ ಪತ್ನೀರವರು, ಸೈನ್ಯಾಧಿಪತಿಗಳು ಮುಂತಾದವರೆಲ್ಲಾ ದಯಮಾಡಿದ್ದರು. ಸುಮಾರು ೨೦೦ ಮಂದಿ ಸರ್ದಾರರು ಆ ರಾತ್ರಿ ಸೇರಿ ಭೋಜನ ಮಾಡಿ, ಬಾಲ್ ಎಂಬ ವಿನೋದವಾಡಿ ಸಂತೋಷಪಟ್ಟರು.

****

ಹಿಂದಿನವಾರ ಸ್ವಾಮಿ ರಾಮಕೃಷ್ಣಾನಂದರವರು ಉತ್ತರ ದೇಶದಿಂದ ಬೆಂಗಳೂರಿಗೆ ಬಂದು ವೇದಾಂತ ವಿಚಾರವಾಗಿ ನಾಲ್ಕಾರು ಕಡೆ ಉಪನ್ಯಾಸಗಳನ್ನು ಮಾಡಿದರು. [illegible] ದಿವಾನರು, ಮಿ॥ ಮಾಧವರಾಯರೇ ಮುಂತಾದವರು ಆಗ್ರಾಸನವನ್ನು ವಹಿಸಿ ಸ್ವಾಮಿಯವರನ್ನು ವಂದಿಸಿದರು. ಬೆಂಗಳೂರಿನ ಪ್ರಜೆಗಳು ಬಹು ಸಂಭ್ರಮದಿಂದ ಅವರಿಗೆ ವಿಶೇಷವಾದ ಆತಿಥ್ಯವನ್ನು ಮಾಡಿ ಸಂತೋಷದಿಂದ ಕಳುಹಿಸಿಕೊಟ್ಟರು.

****

ಈ ವರುಷ ಫೆಬ್ರವರಿ ೨೫ನೇ ತಾರೀಖು ರಾತ್ರಿ ಶಿಕಾರಿಪುರ ತಾಲ್ಲೂಕು ಕಾಳಗುಂಡದ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿರುವ ಷ್ಟೇಷನ್ ಕ್ಯಾಂಪಿನಲ್ಲಿ ಚಿಕ್ಕಹಳ್ಳಿ ಸಿದ್ದಪ್ಪನವರ ಪೆಟ್ಟಿಗೆ ಕಳ್ಳತನ ನುಗ್ಗಿ ಅವರ ಬಾಬತು ಸುಮಾರು ೩,೨೦೦ ರೂ. ನಗ ನಾಣ್ಯಗಳನ್ನು ಕಳುವುಮಾಡಿಬಿಟ್ಟರು. ಇದುವರೆಗೆ ಕಳ್ಳರು ಪತ್ತೆ ಆಗಲಿಲ್ಲ. ಆದಕಾರಣ ಕಳ್ಳರನ್ನು ಪತ್ತೆಮಾಡಿ ಕೊಡುವವರಿಗೆ ೩೦೦ ರೂ. ಇನಾಮು ಕೊಡುತ್ತೇನೆಂಬದಾಗಿ ಪ್ರಕಟಿಸಿದಾರೆ.

****

ಗೋರಿಬಿದನೂರು ಸಬ್ ರಿಜಿಸ್ಟ್ರಾರ್ ಮಿ॥ ಎನ್. ನಾರಾಯಣ ರಾವ್, ಬಿ. ಎ. ಯವರು ದೆಹಲಿ ದರ್ಬಾರನ್ನು ಕುರಿತು ೪೦ ಪುಟಗಳುಳ್ಳ ಒಂದು ಕವನವನ್ನು ಮಾಡಿರುತ್ತಾರಷ್ಟೆ. ಅದರ ಒಂದು ಪ್ರತಿಯನ್ನು ಶ್ರೀಮನ್ ಪ್ರಭುಗಳಿಗೆ ಕಳುಹಿಸಿಕೊಟ್ಟಿದ್ದರು. ಅವರ ಪ್ರೈವೇಟ್ ಸೆಕ್ರೆಟರಿ ಸರ್ ವಾಲ್ಟರ್ ಲಾರೆನ್ಸ್ ರವರು—"ಪ್ರಭುಗಳು ಆ ಕವನವನ್ನು ಓದಿಕೊಂಡು ಸಂತೋಷಪಟ್ಟು ನಿಮ್ಮನ್ನು ವಂದಿಸುತ್ತಾರೆ" ಎಂಬದಾಗಿ ಮಿ॥ ನಾರಾಯಣರಾಯರಿಗೆ [illegible] ಬರೆದಿರುವರು.

****

ಹೋದವಾರದ ಆಗಸ್ಟ್ ೧೦ನೆಯ [illegible] ಬೆಂಗಳೂರು ಯಲಹಂಕದ ಬಳಿ ನಡೆದ ರೈಲ್ವೆ ಅಪಘಾತದಲ್ಲಿ ಸಿಕ್ಕಿ ಸತ್ತುಹೋದವರ [illegible] ಕಡೆಯಿಂದ ರೈಲ್ವೆ ಕಂಪನಿಯವರ ಮೇಲೆ ೨೦,೦೦೦ ರೂಪಾಯಿ ದಾವೆಯು ಹೂಡಲ್ಪಟ್ಟಿದ್ದು ಬೆಂಗಳೂರು [illegible] ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿದೆ. ವಾದಿಗಳ ಕಡೆ ವಕೀಲರು ಮಿ॥ ಹಾಜಿ ಅಹಮದ್ ಸೇಟ್, ಇವರ ಜೊತೆಗೆ, [illegible] ಸಾಹುಕಾರರು, [illegible], ದೊರೆಬಾಬು [illegible] ಸೇಟ್. ಈ ಮೊಕದ್ದಮೆ ಮುಂದಿನ ತಿಂಗಳ ಮೊದಲನೇ ವಾರ ವಿಚಾರಣೆಯಾಗುವುದು.

****

ಬೆಂಗಳೂರು ಬಸವನಗುಡಿ ಬಡಾವಣೆಯ ಆರ್ಚ್ ಪಾರ್ಕಿನಲ್ಲಿ ಮಿ॥ ಕಿಂಕಾ ಯವರು ಜಮೀನಿನಿಂದ ರೇಷ್ಮೆ ತಯಾರಿಗಾಗಿ ವನವನ್ನು ಬೆಳೆಸಿಟ್ಟು ಕೆಲಸ ಮಾಡಿಸುತ್ತಿದ್ದಾರಷ್ಟೆ. ಹಿಂದಿನವಾರ ಅದನ್ನು ನೋಡಬೇಕೆಂದು ಬರಲು ನಮ್ಮ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮಿ॥ ಮೆಕಾನಕಿ ಯವರೂ, ರೆವಿನ್ಯೂ ಕಮಿಷನರ್ ಮಿ॥ ಮಾಧವರಾಯರೂ ಅಲ್ಲಿಗೆ ದಯಮಾಡಿದ್ದರು. ಜಪಾನ್ ದೇಶದ ಮಿ॥ ಟಿ. ಓಜೂ ಎಂಬಾತನು ಇವರನ್ನು ಎದುರುಗೊಂಡು, ಕರೆದುಕೊಂಡು ಹೋಗಿ ರೇಷ್ಮೆ ತಯಾರಿ ವಿಷಯದಲ್ಲಿ ಅಲ್ಲಿ ಮಾಡುವ ಸಕಲ ಪರಾಕ್ರಮಗಳನ್ನೂ ತೋರಿಸಿ ವಿವರಿಸಿದನು. ಅದನ್ನೆಲ್ಲಾ ಅವರಿಬ್ಬರೂ ನೋಡಿ ಸಂತೋಷಪಟ್ಟು ಆತನನ್ನು ವಂದಿಸಿ ವಾಪಸು ಬಂದರು.

****

ಬೆಂಗಳೂರು ದಂಡಿನಲ್ಲಿ ಪ್ಲಾಂಟ್, ರಿಚರ್ಡ್ಸ್ ಎಂಬೀ ಇಬ್ಬರು ಸೈನ್ಯದ ಉದ್ಯೋಗದವರು ತಾವು ವಾಸಮಾಡುತ್ತಿದ್ದ ಮನೆಯ ಮಾಲೀಕನಿಗೆ ಬಾಡಿಗೆ ಕೊಡತಕ್ಕದ್ದಕ್ಕೆ ಬದಲಾಗಿ ಅವನ ಹೆಸರಿಗೆ ೨೦೦ ರೂ. ಚೆಕ್ಕನ್ನು ಬರೆದು ಕೊಟ್ಟರು. ತಮ್ಮ ಬಟ್ಟೆಗಳನ್ನು ಹೊಲಿದುಕೊಟ್ಟ ದರ್ಜಿಗೂ ೧೫೦ ರೂ. ಚೆಕ್ಕು ಕೊಟ್ಟರು. ಈ ಚೆಕ್ಕುಗಳಿಗೆ ಬ್ಯಾಂಕಿನವರು ಹಣ ಕೊಡಲಿಲ್ಲ. ಅಷ್ಟರಲ್ಲೇ ಅವರಿಬ್ಬರೂ ತಲೆತಪ್ಪಿಸಿಕೊಂಡು ಕಲ್ಕತ್ತೆಗೆ ಹೋಗಿಬಿಟ್ಟರು. ಪೋಲೀಸಿನವರು ಕಲ್ಕತ್ತೆಗೆ ಹೋಗಿ ಆ ಇಬ್ಬರು ಉದ್ಯೋಗದವರನ್ನೂ ವಾರಂಟಿನ ಮೇಲೆ ಹಿಡಿದುತಂದು, ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ನಡಿಸಿ, ಮದರಾಸ್ ಸೆಷನ್ ವಿಚಾರಣೆಗೆ ಗುರಿಮಾಡಿದಾರೆ.

****

ಹಾಸನದ ಒಬ್ಬ ಬಾತ್ಮೀದಾರರು ಬೆಂಗಳೂರು ಪತ್ರಿಕೆಗೆ ವ್ಯವಸಾಯದ ಬ್ಯಾಂಕಿನ ವಿಷಯವಾಗಿ ಬರೆದಿರುವುದೇನೆಂದರೆ—ಒಬ್ಬ ಹೊಸ್ಸ ಗೌಡನು ಕೆಲವು ದಿನಗಳ ಕೆಳಗೆ ತನ್ನ ಜಮೀನನ್ನು ಅಭಿವೃದ್ಧಿ ಮಾಡಿಕೊಳ್ಳಬೇಕೆಂದು ವ್ಯವಸಾಯದ ಬ್ಯಾಂಕಿಗೆ ಬಂದು ಸ್ವಲ್ಪ ಸಾಲ ಪಡೆದುಕೊಂಡನು. ಅನಂತರ ಇನ್ನೊಂದು ದಿನ ಬ್ಯಾಂಕಿಗೆ ಬಂದು—ನನಗೆ ೨೦೦ ರೂ. ಸಾಲ ಬೇಕೆಂದು ಕೇಳಿದನು. ಇಷ್ಟು ಬೇಗ ನಿನಗೆ ಮತ್ತೆ ಸಾಲ ಸಾಲದೇಕಾದ ಅಗತ್ಯವೇನು ಎಂದು ಪ್ರಶ್ನೆ ಮಾಡಿದ್ದಕ್ಕೆ ಆ ಗೌಡನು—ನಾನು ಮದರಾಸಿಗೆ ಹೋಗಬೇಕು, ಅಲ್ಲಿ ತನ್ನ ಹಲ್ಲುಗಳನ್ನು ಹೊಸದಾಗಿ ಕಟ್ಟಿಸಿಕೊಂಡು ಬರಬೇಕು; ನನ್ನ ಹಲ್ಲೆಲ್ಲಾ ಬಿದ್ದುಹೋಗುತ್ತಾ ಬಂದಿವೆ ಎಂದು ಹೇಳಿದನಂತೆ. ಇದು ನಿಜವಿದ್ದಿರಬಹುದೇ ಎಂದು ನಾವು ಅನುಮಾನಪಡುತ್ತೇವೆ.

****

ಈಗ ಮೈಸೂರು ಸಂಸ್ಥಾನದ ಸೀನಿಯರ್ ಸರ್ಜನರವರ ಪರ್ಸನಲ್ ಅಸಿಸ್ಟೆಂಟರಾಗಿರುವ ಡಾಕ್ಟರ್ ಫರ್ನಾಂಡಿಸ್ ಯವರು ಚಿಕ್ಕಮಗಳೂರಿನಲ್ಲಿದ್ದಾಗ್ಯೆ ಅಲ್ಲಿನ ಆಸ್ಪತ್ರೆಯಲ್ಲಿ ಕೆಲವು ಸರ್ಕಾರಿ ಹಣವು ದುರ್ವಿನಿಯೋಗವಾದ ವಿಷಯದಲ್ಲಿ ಮೊಕದ್ದಮೆ ಆಗಿ ಅಲ್ಲಿ ಕ್ರಿಮಿನಲ್ ಶಿಕ್ಷೆಯಾಯಿತಷ್ಟೆ. ಈ ಸಂದರ್ಭದಲ್ಲಿ ಗೌರ್ನಮೆಂಟಿನವರಿಗೆ ಡಾ॥ ಫರ್ನಾಂಡಿಸ್ ಯವರ ಮೇಲೆ ಏನೋ ಅನುಮಾನ ಹುಟ್ಟಿದಕಾರಣ ಅದನ್ನು ತನಿಖೆಮಾಡುವ ಉದ್ದೇಶ್ಯ ಥರ್ಡ್ ಕೋರ್ಟ್ ಜಡ್ಜಿಯಾದ ಮಿ॥ ಎ. ರಂಗಸ್ವಾಮಯ್ಯಂಗಾರ್ಯರನ್ನು ನೇಮಿಸಿರುತ್ತಾರೆ. ಇವರು ತನಿಖೆಮಾಡಿ ಅದರ ಅಂತರದ ಗೌರ್ನಮೆಂಟಿಗೆ ರಿಪೋರ್ಟ್ ಕಳುಹಿಸುವುದಾಗಿಯೂ, ಅದು ಪ್ರಕಟವಾಗುವುದಿಲ್ಲವೆಂತಲೂ, ಅದರ ಮೇಲೆ ಶ್ರೀಮನ್ ಮಹಾರಾಜರವರು ತೀರ್ಮಾನ ಕೊಡುವರೆಂತಲೂ ತಿಳಿದುಬರುತ್ತದೆ.

****

ಹಿಂದಿನ ಶುಕ್ರವಾರ ಬೆಂಗಳೂರು ಅರಮನೆಯಲ್ಲಿ ಒಂದು ದರ್ಬಾರ್ ನಡೆಯಿತು. ಈ ದರ್ಬಾರಿನಲ್ಲಿ ಬ್ರಿಟಿಷ್ ರೆಸಿಡೆಂಟರವರ ಸರ್ ಹ್ಯೂ ಡಾಲಿ ರಾಬರ್ಟ್‌ಸನ್‌ರವರು, ಮೈಸೂರು ಪ್ರಭುಗಳಿಗೆ ಚಕ್ರವರ್ತಿಯವರ ದೆಹಲಿ ದರ್ಬಾರ್ ಮೆಡಲ್ (ಬಿಲ್ಲೆ) ಗಳನ್ನು ಕೊಟ್ಟರು. ನಮ್ಮ ಶ್ರೀಮನ್ ಮಹಾರಾಜರವರು, ಯುವರಾಜರು, ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರು, ಮಿ॥ ಕಾಂತರಾಜೇ ಅರಸಿನವರು, ಕರ್ನಲ್ ದೇಶರಾಜೇ ಅರಸಿನವರು, ಇಂಪೀರಿಯಲ್ ಸರ್ವಿಸ್ ಸೈನ್ಯದ ಕಮ್ಯಾಂಡರ್ ಸಯ್ಯದ್ ತಾಜ್ ಮತ್ತು ಪಥೇದಾರ್—ಇವರೆಲ್ಲಾ ಮೆಡಲ್‌ಗಳನ್ನು ಪಡೆದರು. ಅದನ್ನು ಒಪ್ಪಿಸುವಾಗ್ಯೆ ರೆಸಿಡೆಂಟರು—ಚಕ್ರವರ್ತಿಯವರ ಆಜ್ಞಾನುಸಾರ ಈ ದಿನ ಈ ಮೆಡಲ್‌ಗಳನ್ನು ನಿಮಗೆ ಕೊಡುತ್ತೇನೆ. ಹಿಂದುಸ್ಥಾನದಲ್ಲಿ ನಡೆದ ಬಹು ವಿಶೇಷವಾದ ದೆಹಲೀ ದರ್ಬಾರಿನ ಜ್ಞಾಪಕಾರ್ಥವಾಗಿ ಇದನ್ನು ಕೊಟ್ಟಿದಾರೆ. ನೀವುಗಳು ಇದನ್ನು ಬಹು ವಿಶೇಷವಾದ ವಸ್ತುವೆಂದು ನಿಮ್ಮ ವಂಶಪಾರಂಪರ್ಯವಾಗಿ ಕಾಪಾಡಿಕೊಂಡು ಬರಬೇಕೆಂದು [illegible] ಸಂಶಯವಿಲ್ಲ ಎಂಬದಾಗಿ ಹೇಳಿ ಕೊಟ್ಟರು. ತರುವಾಯ ಶ್ರೀಮನ್ ಮಹಾರಾಜರವರು ಅವರಿಗೆ ವಂದನೆ [illegible] ನಿಮ್ಮ ಹಸ್ತಗತವಾಗಿ [illegible] ನಮ್ಮ ಕಡೆಯ ಸರ್ದಾರರೂ [illegible] ಹೇಳಿದಂತೆ ಈ ಮೆಡಲ್‌ಗಳು ವಿಶೇಷವಾಗಿ [illegible] ಗೌರವ [illegible] ಈ ಭಾಗದಲ್ಲಿ ನಮ್ಮ [illegible] ಪ್ರಭುಗಳಿಗೆ ನಮ್ಮ ಪರವಾಗಿ [illegible] ಎಂಬದಾಗಿ ಅಪ್ಪಣೆ ಕೊಡಿಸಿ, ಸಭೆಯನ್ನು ಬರಖಾಸ್ತು ಮಾಡಿದರು.

---

## ಮೈಸೂರು ಗೆಜೆಟ್ ಸಂಗ್ರಹ.

ಮುಂದೆ ಹೇಳುವ ಸಬ್ ರಿಜಿಸ್ಟ್ರಾರುಗಳ ನೇಮಕ ಬದಲಿ, ವರ್ಗಾವರ್ಗೀ ಮುಂತಾದ್ದು ಜಾರಿಗೆ ಮಾಡಲ್ಪಟ್ಟಿದೆ.—ಎಸ್. ರಾಮಸ್ವಾಮಿಶಾಸ್ತ್ರಿಗಳು ಯಡತೊರೆಯಿಂದ ನಂಜನಗೂಡಿಗೆ, ಆ. ಶೇಷಾಚಾರ್ಯರು ಹುಣಸೂರಿಂದ ಯಡತೊರೆಗೆ, ಎ. ಕೃಷ್ಣರಾಯರು ಗೋರಿಬಿದನೂರಿಂದ ಹುಣಸೂರಿಗೆ, ಎನ್. ನಾರಾಯಣರಾಯರು ದೇವನಹಳ್ಳಿಯಿಂದ ಗೋರಿಬಿದನೂರಿಗೆ, ಸಿ. ಕೃಷ್ಣಮೂರ್ತಿ ಶಾಸ್ತ್ರಿಗಳು ಸಾಗರದಿಂದ ದೇವನಹಳ್ಳಿಗೆ, ಎಂ. ವೆಂಕಟಾಚಲಯ್ಯಂಗಾರ್ಯರು ಕಾರ್ಕಾಟ ಹಳ್ಳಿಯಿಂದ ಸಾಗರಕ್ಕೆ, ಎನ್. ಲಕ್ಷ್ಮೀನಾರಣಪ್ಪನವರು ಹೊನ್ನಾಳಿಯಿಂದ ಕಾರ್ಕಾಟ ಹಳ್ಳಿಗೆ, ಎಚ್. ಶ್ರೀನಿವಾಸರಾಯರು ಹೊನ್ನಾಳಿಗೆ, ಎಂ. ಪಿ. ಭೀಮರಾಯರು ಮೂಡಿಗೆರೆಯಿಂದ ಚಿಕ್ಕಬಳ್ಳಾಪುರಕ್ಕೆ, ಬಿ. ನರಸಿಂಹಯ್ಯಂಗಾರ್ಯರು ಶಿಕಾರಿಪುರದಿಂದ ಮೂಡಿಗೆರೆಗೆ, ಎನ್. ಲಕ್ಷ್ಮೀಕಾಂತಯ್ಯಂಗಾರ್ಯರು ಸೀಯೂರಿನಿಂದ ಅರಸೀಕೆರೆಗೆ, ಎಂ. ಚಕ್ರಪಾಣಿರಾಯರು ಕಡೂರಿಂದ ಸೀಯೂರಿಗೆ, ಎಂ. ವಿಜಾರ್‌ಕಾಸಿಂ ಅಲ್ಲಿಯವರು ಅರೂರಿಂದ ಕಡೂರಿಗೆ.

ಚಿಕ್ಕನಾಯಕನಹಳ್ಳಿ ಅಮಲ್ದಾರ್ ಮಿ॥ ಎಂ. ಟಿ. ವಿಶ್ವನಾಥರಾಯರು ಮೈಸೂರು ಫಾರೆಸ್ಟ್ ಕಾನೂನಿನಲ್ಲಿ ಕಂಡ ಚಿಕ್ಕ ನ್ಯಾಯಗಳನ್ನು ವಿಚಾರಣೆ ಮಾಡಲು ಅಧಿಕಾರ ಕೊಡಲ್ಪಟ್ಟಿದಾರೆ.

ಸಬ್ ಅ॥ ಸರ್ಜನ್ ಮಿ॥ ಎನ್. ರಂಗಾಚಾರ್ಯರನ್ನು ೨ನೆ ತರಗತಿಗೆ ಬಡ್ತಿ ಮಾಡಿದೆ.

ಅ॥ ಕಮಿಷನರ್ ಮಿ॥ ಡಿ. ಕೆ. ನಾರಾಯಣರವರನ್ನು ೧೯೦೫ನೆ ನವೆಂಬರ್ ೨೩ರ ತಾರೀಖು ೨ನೆ ಕ್ಲಾಸಿಗೆ ಬಡ್ತಿ ಮಾಡಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಎಕ್ಸ್ಟ್ರಾ ಅ॥ ಕಮಿಷನರ್ ಮಿ॥ ಸಿ. ನಾರಾಯಣರಾಯರನ್ನು ೧೯೦೩ನೆ ಮೇ ೧೯ರ ತಾರೀಖು ೪ನೆ ಕ್ಲಾಸಿಗೆ ಬಡ್ತಿ ಮಾಡಿದೆ.

ಚಿತ್ರದುರ್ಗ ಡಿಸ್ಟ್ರಿಕ್ಟ್ ಹಿರಿಯೂರು ತಾಲ್ಲೂಕಿಗೆ ಸೇರಿದ ೧೪ ಗ್ರಾಮಗಳನ್ನೂ, ಹೊಸದಾಗಿ ಏರ್ಪಡಿಸಿದ ಹೊಸದುರ್ಗ ತಾಲ್ಲೂಕಿಗೆ ಸೇರಿಸಿ ೪೪ ಗ್ರಾಮಗಳನ್ನೂ, ದಾವಣಗೆರೆ ತಾಲ್ಲೂಕಿನ ಸಕಲ ಗ್ರಾಮಗಳನ್ನೂ ಕರಿಗೆಯನ್ನು ಹೊಸದಾಗಿ ರಿವೈಸ್ ಮಾಡಿರುತ್ತೆ. ಈ ಹೊಸ ಪದ್ಧತಿ ೧೯೦೬—೦೭ ನೆ ಸಾಲಿನಿಂದ ಮೂವತ್ತು ಸಂವತ್ಸರಗಳ ವರೆಗೆ ಜಾರಿಯಾಗುವುದಕ್ಕೆ ಅನುಮತಿ ಕೊಡಲ್ಪಟ್ಟಿದೆ.

ಕರ್ನಲ್ ಜೆ. ಡಿ. ಗ್ರಾಂಟ್‌ರವರು ನೋಡುವ ಸರ್ಕಾರಿ ಹುದ್ದೆಗೆ ಮೈಸೂರು ರೆವಿನ್ಯೂ ಸರ್ವೆ ಸೂಪರಿಂಟೆಂಟ್ ಎಂಬ ಹೆಸರು. ಇನ್ನು ಮುಂದೆ ಅವರು ಮೈಸೂರು ಸರ್ವೆ ಸೆಟ್ಲ್‌ಮೆಂಟ್ ಕಮಿಷನರೆಂದು ಗೊತ್ತುಮಾಡಲ್ಪಟ್ಟಿದೆ.

ಶಿವಮೊಗ್ಗ ಡಿವಿಜನ್ ಅ॥ ಎಕ್ಸಿಕ್ಯೂಟಿವ್ ಇಂಜನಿಯರ್ ಮಿ॥ ಕೆ. ಪ್ರಹ್ಲಾದರಾಯರಿಗೆ ಆಗಸ್ಟ್ ೧೦ ರಿಂದ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ೧೦ ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತಿಪಟೂರು ತಾಲ್ಲೂಕು ಕೆಬ್ಬಿಹಳ್ಳಿ ಅಮ್ಮನ ದೇವಸ್ಥಾನದ ಬೋರ್ಡಿನ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಮಾ॥ ರಾ॥ ಗಳಾದ ಬಿಳ್ಳೆ ಹೊನ್ನೇಗೌಡರೂ, ಬಿಳಿಗಾಂಹಳ್ಳಿ ಸಿದ್ದರಾಮೇಗೌಡರೂ ಧರ್ಮದರ್ಶಿಗಳಾಗಿ ನೇಮಿಸಲ್ಪಟ್ಟಿದಾರೆ.

ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳ ಸಬ್ ಅ॥ ಕನ್ಸರ್ವೇಟರ್ ಮಿ॥ ಡಿ. ಆ. ವೆಂಕಟರಾಯರಿಗೆ ೧೯೦೬ನೆ ಜುಲೈ ೧ ರಿಂದ ೩೦ ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

[illegible] ಪ್ರಿವಿಲೆಜ್ ರಜಾ [illegible] ಮಾಡಿ, ಮೈಸೂರು ಸಬ್ ಸ್ಟೇಷನ್ ಎಂದು ಕರೆದಿದಾರೆ.

## ಬಾತ್ಮಿದಾರರಿಗೆ ನೋಟಿಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ವಿದ್ಯಾಭಿಮಾನಿ, ಕೋಲಾರ ಪೇಟೆ—ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿಲ್ಲ. —ಎಡಿಟರ್.

## ಕರೆಸ್ಪಾಂಡೆನ್ಸ್.

### ಪ್ರತಿನಿಧಿಗಳ ಚುನಾವಣೆ ಊನಕಾನಹಳ್ಳಿ.

ಅಯ್ಯಾ,

ನಮ್ಮ ಅಮಲ್ದಾರರು ಜುಲೈ ೧೪ ತಾ॥ ಶನಿವಾರ ಪ್ರಜಾ ಪ್ರತಿನಿಧಿಗಳನ್ನು ಚುನಾಯಿಸುವ ಉದ್ದೇಶ್ಯ ರೂಲಿಸು ಮಾ ಮಾದ್ಯಪಾ ಸುಸಾರ ಪತ್ರಿಕೆಗಳನ್ನು ಕೊಟ್ಟು, ತಾಲ್ಲೂಕು ಕಚೇರಿಯಲ್ಲಿ ಪ್ರತಿನಿಧಿ ಸಭೆಯನ್ನು ಸೇರಿಸಿದ್ದರು. ಮತ್ತು ಪ್ರತಿನಿಧಿಗಳಲ್ಲಿ ದಸರಾ ದರ್ಬಾರಿಗೆ ಹೋಗುವದಕ್ಕೆ ಮೂರು ಮಂದಿಯನ್ನು ಚುನಾಯಿಸಬೇಕೆಂತಲೂ ಹೇಳಿಕೊಂಡರು. ಪ್ರತಿನಿಧಿಗಳೆಲ್ಲರ, ದರ್ಬಾರು ಗಮನೇಚ್ಛೆಯುಳ್ಳವರಾಗಿದ್ದದರಿಂದ ಕ್ಲಿಪ್ತ ಪಡಿಸಿದ ಮೂರು ಮಂದಿಗೋಸ್ಕರಗುವದು ದುರ್ಘಟವಾಗಲು ನೆರೆದಿದ್ದ ಪ್ರತಿನಿಧಿಗಳೆಲ್ಲರು ಐಕಮತ್ಯಗೊಂಡು ಅಗ್ರಾಸನಾಧಿಪತಿಗಳ ಸನ್ನಿಧಾನ ಚೀಟಿಗಳನ್ನು ಬರೆದಿಟ್ಟು ಎಲ್ಲರು ಸೇರಿ ಗುರ್ತು ಮಾಡಿದ್ದಲ್ಲಿ ನಮ್ಮ ಸ್ಥಳದಂತ್ರರಾಗಿಯೂ, ಅವರ್ಣನೀಯವಾಗಿ ಪ್ರಜೆಗಳ ತರ್ತಿಂತನೆಯಿಂದಲೂ ರಾಜಭಕ್ತಿಯಿಂದಲೂ ಗೌರವಶಾಲಿಗಳಾದ ಮತ್ತು ಐಶ್ವರ್ಯಶಾಲಿ ದ್ಯಾಸುಭೋಗರೂ ಆಗಿರುವ ಸಾಧುಗುಣಶೀಲ ಲಿಮ್ಮಯ್ಯನವರ ಹೆಸರಿಗೂ, ಇವರಿಗೆ ಸಮನಡತೆಯುಳ್ಳ ಗು ಶಿವಣ್ಣಗವಡರಿಗೂ, ಸ್ಯಾಯ್ಯದ್ ಸಾಹೆಬರು, ಈ ಮೂರು ಮಂದಿಗೆ ನಿಟ್ಟಿಗೆ ಅಧಿಕವಾದ ಪ್ರೈಜ್ ಚೀಟಿಗಳು ಬಂದದ್ದಕ್ಕೆ ಜಾತಿ ಪ್ರತಿನಿಧಿಗಳೆಲ್ಲ ಒಪ್ಪಿಕೊಂಡು ಸಂತೋಷಿಸಿ ಸ್ವೀಕರ ಮಾಡಿದರು. ಅಲ್ಲದೆ ನಮ್ಮ ಅಮಲ್ದಾರರು ಪ್ರತಿನಿಧಿಗಳ ಅಭಿಪ್ರಾಯ ಬಿಟ್ಟು ಸ್ವತಂತ್ರಿಸಿ ನೇಮಿಸಿದವರಲ್ಲವಾದ್ದರಿಂದ ಅಮಲ್ದಾರರ ಮೇಲೆ ಕುಂದೇಕೆರುವದು ದುಸ್ವಭಾವವಲ್ಲವೇ? ತ್ಯಾಸುಭೋಗ, ಪಟೇಲರು ಅನೇಕ ಪ್ರಜೆಗಳ ಕಷ್ಟಸುಖಗಳಲ್ಲಿ ಸೇರಿ, ಅವರ ಅಹವಾಲುಗಳನ್ನು ತಿಳಿದು, ಗವರ್ನಮೆಂಟಿಗೆ ಪ್ರಯೋಜನಕರವಾದ ಕಾರ್ಯಗಳನ್ನು ತಿಳಿದು, ಇವರು ದರ್ಬಾರು ಸಂಗತಿ ತಿಳಿದಮಟ್ಟಿಗೆ ಪ್ರಜೆಗಳಿಗೂ ಸರ್ಕಾರಕ್ಕೂ ಸಂಬಂಧಿಸದಿರುವವರಿಗೆ ತಿಳಿಯುವದು ಅಸಾಧ್ಯವಲ್ಲವೇ? ಆದ್ದರಿಂದಲೇ ಸರ್ಕಾರದವರು ಅನೇಕಮಂದಿ ಗೌರವಶಾಲಿಗಳಾದ ಶ್ಯಾನುಭೋಗರು, ಪಟೇಲರನ್ನು ಸಹ ಪ್ರಜಾಪ್ರತಿನಿಧಿಗಳಾಗಿ ಪುರ ಸಿಂದಲೂ ನೇಮಿಸಿರುತ್ತಾರೆಂದು ಸಂತೋಷಪಡಬೇಕಾಗಿದೆ. ಎಂಬಾದಾರ.

## ಪ್ರಕೃತಿ ಸೃಷ್ಟಿ.

### ಬಾಲವುಳ್ಳ ಕೂಸು.

ಪ್ರಸಿದ್ಧರಾದ ಡಾರ್ವಿನ್ ಎಂಬ ಪಂಡಿತರು ಜೀವರಾಶಿಗಳ ಸೃಷ್ಟಿಕ್ರಮವನ್ನು ಕುರಿತು ಪರಿಶೋಧನೆ ಮಾಡಿ ಪುಸ್ತಕಗಳನ್ನು ರಚಿಸಿರುತ್ತಾನೆ. ಬೇರೆ ಬೇರೆ ಜೀವರಾಶಿಗಳು ಸಸ್ಯಜೀವಗಳಿಂದಲೂ, ಮೃಗಾದಿಗಳು ಜೀವಜಂತುಗಳಿಂದಲೂ, ಮನುಷ್ಯನು ಮೃಗಗಳಿಂದಲೂ ಹುಟ್ಟಿರುತ್ತವೆ ಎಂಬುದೇ ಆತನು ಹೇಳುವ ಸಿದ್ಧಾಂತ. ಮನುಷ್ಯನಿಗೂ ಮೃಗಾದಿಗಳಿಗೂ ಕಪಿಯೇ ಮಧ್ಯಸ್ಥವಾಗಿದ್ದುಕೊಂಡು, ಮೃಗಗಳ ಲಕ್ಷಣವನ್ನೂ ಮನುಷ್ಯನ ಲಕ್ಷಣವನ್ನೂ ಪಡೆದಿರುವುದೆಂದು ಆತನು ಸಿದ್ಧಾಂತಪಡಿಸಿರುತ್ತಾನೆ. ಈ ಸಿದ್ಧಾಂತವು ನಿಜವಿರಬೇಕೆಂದು ನಂಬುವುದಕ್ಕೆ ಕಾರಣವಿರುವಂತೆ ಕಾಣುವುದು. ಈಚೆಗೆ ಬಂಗಾಳಾ ಆಧಿಪತ್ಯಕ್ಕೆ ಸೇರಿದ ಗಯಾ ಡಿಸ್ಟ್ರಿಕ್ಟಿನಲ್ಲಿ ಒಂದು ಮಗು ಜನಿಸಿರುವುದು. ತಂದೆ ತಾಯಿಗಳು ಅದನ್ನು ಬಹಳ ಪ್ರೀತಿಯಿಂದ ಸಾಕುತ್ತಿದ್ದಾರೆ. ಕ್ಯಾಪ್ಟನ್ ಛಾಟರ್ಜಿ ಎಂಬ ಅಲ್ಲಿನ ಡಾಕ್ಟರು ಹೋಗಿ ಈ ಮಗುವನ್ನು ಪರೀಕ್ಷಿಸಿ ಅದರ ವಿಷಯವಾಗಿ ಬರೆದಿರುವುದೇನೆಂದರೆ —

ಈ ವಿಚಿತ್ರವಾದ ಮಗುವಿಗೆ ಬೆನ್ನೆಲುಬಿನ ಕೊನೆಯು ಅಂಡಿನ ಹತ್ತಿರ ೩—೩॥ ಅಂಗುಲದಷ್ಟು ಉದ್ದವಾಗಿ ಬೆಳೆದು, ಬಾಲದಂತೆ ಹೊರಗಡೆ ಬಂದಿರುವುದು. ಅದು ಗಟ್ಟಿಯಾಗಿದೆ, ಮೂಳೆ ಇಲ್ಲ; ಅದು ಸಾಧಾರಣವಾಗಿರುವಂತೆ ಕಾಣುವುದು. ಅದು ಸ್ವತಂತ್ರವಾಗಿ ಅಲ್ಲಾಡುತ್ತದೆ. ತಾಯಿ ಈ ಮಗುವನ್ನು ಎತ್ತಿಕೊಂಡು ಮೊಲೆ ಕೊಡುವಾಗ ಮಗುವು ಹಾಲು ಕುಡಿಯುತ್ತಾ ಈ ಬಾಲವನ್ನು ಅಲ್ಲಾಡಿಸುವುದು. ಸಾಕಿದ ನಾಯಿ ಒಡೆಯನನ್ನು ಕಂಡಕೂಡಲೆ ಹ್ಯಾಗೆ ತನ್ನ ಬಾಲವನ್ನು ಅಲ್ಲಾಡಿಸುವುದೋ ಹಾಗೆಯೇ ಈ ಮಗುವೂ ಅಲ್ಲಾಡಿಸುತ್ತದೆ. ಈ ಬಾಲವು ಬಗ್ಗುವಷ್ಟು ಮೃದುವಾಗಿಯೂ, ಚರ್ಮದ ಬೆಳುವಳಿಗೆಯುಳ್ಳದ್ದಾಗಿಯೂ ಇದೆ. ಈ ಮಗುವಿನ ಶರೀರವೆಲ್ಲಾ ಇತರ ಮಕ್ಕಳ ಶರೀರದಂತೆಯೇ ಇರುವದು. ಇಂಥಾ ಬಾಲವನ್ನು ಕತ್ತರಿಸಿ ಹಾಕುವುದಕ್ಕೆ ಮಾತಾಪಿತೃಗಳು ಒಪ್ಪಲಿಲ್ಲ. ಈ ಮಗುವಿನ ಸುದ್ದಿ ಸುತ್ತಮುತ್ತ ಎಲ್ಲಾ ಊರುಗಳಿಗೂ ಹರಡಿಕೊಂಡಿದೆ. ಅದು ಬೆಳೆದ ಮೇಲೆ ಇಂಥಾ ವಿಚಿತ್ರ ಸೃಷ್ಟಿಯನ್ನು ಜನರಿಗೆ ಪ್ರದರ್ಶನ ಮಾಡಿ ಜೀವನಮಾಡಬೇಕೆಂದು ತಂದೆತಾಯಿಗಳು ಕುತೂಹಲಪಡುತ್ತಿರುವರು. ಹನುಮಂತದೇವರು ಅವತಾರವೆತ್ತಿ ಬಂದಿದ್ದಾನೆಂದು ಹೇಳುವರೇ ಏನೋ ಮುಂದೆ ನೋಡತಕ್ಕದ್ದಾಗಿದೆ. ಈ ಮಗುವಿನ ಬಾಲವನ್ನು ನೋಡಿ ಜನರೆಲ್ಲಾ ಆಶ್ಚರ್ಯಪಡುತ್ತಿರುವರು.

## ಮೈಸೂರು ಸರ್ಕಾರ ಹುಕುಮುಗಳು.

### ಸೋಸಲೆಯ ಶ್ರೀವ್ಯಾಸರಾಯ ಸ್ವಾಮಿಗಳ ಮಠ.

ತಿರಮುಕೂಡ್ಲು ನರಸೀಪುರದ ತಾಲ್ಲೂಕು ಸೋಸಲೆ ಶ್ರೀವ್ಯಾಸರಾಯ ಮಠಕ್ಕೆ ಸೇರಿದ ಕೆಲವು ಸರ್ವಮಾನ್ಯ ಗ್ರಾಮಗಳು ತುಂಕೂರು ಡಿಸ್ಟ್ರಿಕ್ಟಿನಲ್ಲಿವೆ. ಈ ಗ್ರಾಮಗಳಲ್ಲಿ ಉಭಯಕುಲು ಸಾಲಿಗೂ ಅದರ ಹಿಂದಣ ಸಾಲುಗಳಿಗೂ ಕಂದಾಯಗಳು ವಸೂಲಾಗಿಲ್ಲ. ಪ್ರೋಭಕ್ಕೃತು ಸಾಲಿನ ಕಂದಾಯವನ್ನು ಮಾತ್ರ ವಸೂಲ್ಮಾಡತಕ್ಕದ್ದೋ, ಇಲ್ಲವೇ ಹಿಂದಣ ಬಾಕಿಗಳನ್ನೂ ವಸೂಲ್ಮಾಡತಕ್ಕದ್ದೋ ಎಂಬುದಾಗಿ ಡೆಪ್ಯುಟಿ ಕಮಿಷನರು ಗವರ್ನಮೆಂಟಿನವರನ್ನು ಬರೆದು ಕೇಳಿದರು. ಅದಕ್ಕೆ ಗವರ್ನಮೆಂಟಿನವರು ಕೊಟ್ಟಿರುವ ಹುಕುಂ ಏನಂದರೆ—ಶ್ರೀ ವ್ಯಾಸರಾಯ ಸ್ವಾಮಿಗಳ ಮಠಕ್ಕೆ ಸೇರಿದತಕ್ಕ ಸಮಸ್ತ ಇನಾಂ ಗ್ರಾಮ ಭೂಮಿಗಳಲ್ಲೂ ಕಂದಾಯಗಳನ್ನೂ ವರಮಾನಗಳನ್ನೂ ಅಮಲ್ದಾರುಗಳು ವಸೂಲ್ಮಾಡಿ ಬೆಂಗಳೂರು ಡಿಸ್ಟ್ರಿಕ್ಟ್ ಸೇವಿಂಗ್ಸ್ ಬ್ಯಾಂಕಿಗೆ ಕಟ್ಟಬೇಕು. ಗುದಸ್ತಾ ಬಾಕಿಗಳನ್ನೂ ವಸೂಲ್ಮಾಡತಕ್ಕದ್ದು. ಅನಂತರ ಡೆಪ್ಯುಟಿ ಕಮಿಷನರುಗಳ ರಿಪೋರ್ಟು ಬಂದಮೇಲೆ ಮಠಕ್ಕೆ ಬರಬೇಕಾದ್ದನ್ನು ವಜಾ ಹಾಕಿಕೊಂಡು, ಉಳಿಯುವ ಹಣದಲ್ಲಿ ಗುತ್ತಾದಾರರಿಗೆ ಕೊಡಬೇಕಾದದ್ದೆಷ್ಟೆಂದು ಮುಂದೆ ಗೊತ್ತುಮಾಡಲಾಗುತ್ತೆ.

*********

### ಬಿರುದುದಾರರ ಬದಲೀ ನೌಕರರು.

ಮೈಸೂರು ಕೋಟೆಯಲ್ಲಿರುವ ಶ್ರೀ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನದ ಕಾರುಬಾರುಗಳನ್ನು ಮುದ್ರಾ ಸಾಹೇಬರು ೧೮೯೯ನೇ ನವಂಬರಿನಲ್ಲಿ ತನಿಖೆ ಮಾಡಿದಾಗ್ಯೆ ಆ ದೇವಸ್ಥಾನದ ನೌಕರರ ಪೈಕಿ ಬ್ರಾಹ್ಮಣರಸೇಕರು ಬಿರುದುದಾರರಾಗಿದ್ದಾಗ್ಯೂ ಅವರೇ ಹಾಜರಾಗಿ ಕೆಲಸಗಳನ್ನು ಮಾಡುತ್ತಾ ಇಲ್ಲವೆಂತಲೂ, ಅವರು ಬದಲಿ ಇಟ್ಟು ಕೆಲಸ ಮಾಡಿಸುತ್ತಾ, ಕೆಲವು ಪಡಿತರಗಳನ್ನು ತಾವೇ ತೆಗೆದುಕೊಂಡು, ಅಲ್ಪಸ್ವಲ್ಪವನ್ನು ಬದಲಿದಾರರಿಗೆ ಖಾಸತೀ ಮಾಡುತ್ತಾರೆಂತಲೂ ತಿಳಿದು ಬಂತು. ಆಗ ಗವರ್ನಮೆಂಟಿನವರು ೧೮೯೯ನೇ ನೊವೆಂಬರ್ ೧೦ ರಲ್ಲಿ ಹುಕುಂ ಕೊಟ್ಟದ್ದೇನೆಂದರೆ ಬಿರುದುದಾರರಿಗೂ ಅವರ ಗುಮಾಸ್ತರಿಗೂ ಸಲ್ಲತಕ್ಕದ್ದು ಇಷ್ಟಿಷ್ಟೇ ಎಂದು ವಿಧಾಯಕವಾಗಬೇಕು. ಹೀಗೆ ವಿಧಾಯಕವಾದದ್ದನ್ನು ಸರ್ಕಾರದವರೇ ಪ್ರತ್ಯೇಕ ಪ್ರತ್ಯೇಕವಾಗಿ, ಬಿರುದುದಾರರಿಗೂ ಅವರ ಗುಮಾಸ್ತರಿಗೂ ಖಾವತಿ ಮಾಡಬೇಕು. ಇದಲ್ಲದೆ ಬಿರುದುದಾರರು ಗುಮಾಸ್ತರನ್ನು ತಂದಿಟ್ಟಾಗ್ಯೆ ಇವರು ಯೋಗ್ಯರಾಗಿಯೂ ಕೆಲಸ ನಿರ್ವಹಿಸತಕ್ಕವರಾಗಿಯೂ ಇರತಕ್ಕ ಭಾಗದಲ್ಲಿ ಅರಮನೆಯ ಕಂಟ್ರೋಲರವರು ನೋಡಿ ಒಪ್ಪಬೇಕು. ಮತ್ತು ಗುಮಾಸ್ತರನ್ನು ತೆಗೆದು ಹಾಕುವ ವಿಷಯದಲ್ಲಿ ಅವರ ಬಿರುದುದಾರರಿಗೆ ಹಕ್ಕಿರುವುದಿಲ್ಲ. ಇದಕ್ಕೆ ಅರಮನೆ ಕಂಟ್ರೋಲರವರು ಒಪ್ಪಿದಿದ್ದರೆ ಗುಮಾಸ್ತರನ್ನು ಬಿರುದುದಾರರು ತೆಗೆದುಹಾಕಕೂಡದು. ಈ ಹುಕುಮು ಸ್ಥಾನೀಕರಿಗೂ ಅನ್ವಯಿಸುತ್ತದೆ ಇವರಲ್ಲೂ ಗುಮಾಸ್ತರಿಗೆ ಬಿರುದುದಾರರು ತಮಗೆ ಬರುವ ಒಟ್ಟು ವರಮಾನದಲ್ಲಿ ಮೂರರಲ್ಲಿ ಒಂದು ಹಿಸ್ಸೆ ವರಮಾನವನ್ನು ಸಲ್ಲಿಸಬೇಕು. ಈ ಹುಕುಮಿನ ಮೇಲೆ ದೇವಸ್ಥಾನೀಕರು ೧೯೦೦ನೇ ಜುಲೈನಲ್ಲಿ— ನಾವು ಬಿರುದುದಾರರಾದ್ದರಿಂದ ಪ್ರತಿ ಕೆಲವು ಪಡಿತರಗಳನ್ನು ನಮಗೇ ಕೊಡಿಸಬೇಕೆಂತಲೂ, ನಮ್ಮ ಗುಮಾಸ್ತರಿಗೆ ನಾವು ಬೇಕಾದಷ್ಟು ಕೊಟ್ಟುಕೊಳ್ಳುತ್ತೇವೆಂತಲೂ ಗವರ್ನಮೆಂಟಿಗೆ ಅರ್ಜಿ ಬರೆದುಕೊಂಡರು. ಈ ಅರ್ಜಿಗೆ ಗವರ್ನಮೆಂಟಿನವರು ೧೯೦೦ನೇ ನೊವೆಂಬರ್ ೧೪ ರಲ್ಲಿ— ನಿಮ್ಮ ಪ್ರಾರ್ಥನೆಯಂತೆ ಹುಕುಂ ಕೊಡಲು ಆಗುವುದಿಲ್ಲ ಎಂಬದಾಗಿ ಇಂಡಾರಸು ಕೊಟ್ಟರು. ತರುವಾಯ ೧೯೦೨ನೇ ಅಕ್ಟೋಬರ್ ೨೯ರಲ್ಲಿ ಸ್ಥಾನೀಕರೆಲ್ಲಾ ಸೇರಿ ಮೇಲ್ಕಂಡ ಹುಕುಮನ್ನು ರದ್ದುಮಾಡಬೇಕೆಂದು ಶ್ರೀಮನ್ ಮಹಾರಾಜರವರಿಗೆ ಅರ್ಜಿ ಬರೆದುಕೊಂಡರು. ಈ ಅರ್ಜಿಯ ಮೇಲೆ ಗವರ್ನಮೆಂಟಿನವರು ಕೊಟ್ಟಿರುವ ಹುಕುಂ ಏನೆಂದರೆ— ಕಳೆದ ೧೮೯೯ ನೆ ನವಂಬರಿನಲ್ಲಿ ಕೊಟ್ಟಿರುವ ಹುಕುಮನ್ನು ಬದಲಾವಣೆ ಮಾಡುವುದಕ್ಕೆ ಶ್ರೀಮನ್ಮಹಾರಾಜಾ ಗವರ್ನಮೆಂಟಿನವರಿಗೆ ಸಾಕಾದಷ್ಟು ಕಾರಣಗಳು ಕಂಡುಬರುವುದಿಲ್ಲ. ಆ ಹುಕುಮು ಗುಮಾಸ್ತರಿಂದ ದೇವಸ್ಥಾನದ ಕೆಲಸಗಳು ಸಮರ್ಪಕವಾಗಿ ನಡೆಯಬೇಕೆಂಬ ಉದ್ದೇಶದಿಂದ ಮಾಡಲಾಗಿದೆ. ಹಾಗೆ ಸಮರ್ಪಕವಾಗಿ ನಡೆಯಲು ಗುಮಾಸ್ತರಿಗೆ ಸಲ್ಲತಕ್ಕ ರುಸುಂ ಮುಂತಾದ್ದು ತಕ್ಕ ಹಾಗೆಯೂ ಕ್ರಮವಾಗಿಯೂ ಖಾವತಿ ಆಗದಿದ್ದರೆ ಅಡಚಣೆಯುಂಟಾಗುವುದು. ಅಳಿದ ಮುಮ್ಮಡಿ ಕೃಷ್ಣರಾಜ ಒಡೆಯರವರು ಅರ್ಜಿದಾರರ ಹಿರಿಯರಿಗೆ ೧೮೩೯ ನೆ ಮಾರ್ಚಿ ಏಪ್ರಿಲ್ ನಲ್ಲಿ ಬರೆಸಿಕೊಟ್ಟಿರುವ ಸನ್ನದುಗಳಿಗಾಗಲಿ, ದೇವಸ್ಥಾನದ ಆಯಕಟ್ಟು ಪಟ್ಟಿಯ ಅಭಿಪ್ರಾಯಕ್ಕಾಗಲಿ ಈಗ ಗವರ್ನಮೆಂಟಿನವರು ಕೊಟ್ಟಿರುವ ಹುಕುಮು ಸ್ವಲ್ಪವೂ ವಿರೋಧವಾಗಿಲ್ಲ. ಈ ಹುಕುಮಿನಂತೆಯೇ ಕೆಲಸಗಳು ನಡೆಯತಕ್ಕದ್ದು.

*********

### ಅರ್ಚಕರ ದುರ್ನಡತೆಯು.

೧೮೯೬ ರಲ್ಲಿ ಮಾಗಡಿ ಕೋಟೆಯಲ್ಲಿರುವ ಶ್ರೀರಾಮೇಶ್ವರಸ್ವಾಮಿ ದೇವಸ್ಥಾನದ ಅರ್ಚಕ ಕುಮಾರದೀಕ್ಷಿತನ ನಡೆಯು ಸಮರ್ಪಕವಾಗಿಲ್ಲವೆಂದು ಮಾಗಡಿ ನಿವಾಸಿಗಳಿಂದ ದೂರು ಬರುತಲಿದ್ದುದರ ಮೇಲೆ ವಿಚಾರಣೆ ಬಗ್ಗೆ ಸ್ಥಳದ ಅಧಿಕಾರಿಗಳಿಗೆ ಹಾಕಲ್ಪಟ್ಟಿತು. ಅವರ ವರದಿಯಿಂದ ಇವನು ಬಹಳ ದುರ್ನಡತೆಯುವನೆಂದು ತಿಳಿದು, ಒಂದು ವರ್ಷದವರೆಗೆ ಅರ್ಚಕವೃತ್ತಿಯಿಂದ ನಿವೃತ್ತಿ ಮಾಡಿ, ಅವನು ನೀತಿವಂತನಾಗಿದ್ದಾನೆಂದು ಹರ್ದಿಯಾದಲ್ಲಿ ಪುನಃ ಕೆಲಸ ಕೊಡಲ್ಪಡುತ್ತೆಂದು ಅಪ್ಪಣೆಯಾಗಿತ್ತು. ೧೮೯೭ನೇ ಡಿಸೆಂಬರಿನಲ್ಲಿ ಅಗ್ರ ಡೆ॥ ಕಮಿಷನರಾಗಿದ್ದ ಮ॥ ಬಿ. ಕೆ. ವೆಂಕಟವರದಯ್ಯಂಗಾರ್ಯರು ಇವನ ನಡತೆಯು ಚೆನ್ನಾಗಿದೆ ಎಂದು ಬರೆದದ್ದರ ಮೇಲೆ ಅರ್ಚಕ ಕಾರ್ಯವು ಕೊಡಲ್ಪಟ್ಟಿತು. ಆದರೆ ಕ್ಷಣದಲ್ಲೇ ಇವನು ಬಹಳ ದುರ್ನೀತಿವಂತನೆಂತಲೂ ದೇವಸ್ಥಾನದ ಸ್ವತ್ತನ್ನು ಅಪಹರಿಸಿದನೆಂತಲೂ ದೂರು ಬಂದಿತು. ಇದರ ಮೇಲೆ ಕ್ಲೋಸ್ ಪೇಟೆ ಸಬ್ ಡಿವಿಜನ್ನಿನಲ್ಲಿ ವಿಚಾರಣೆಯು ನಡೆದು, ಕುಮಾರದೀಕ್ಷಿತನು ಹೆಂಡತಿಯಿಲ್ಲದೆ ಬಹಳ ವಿಷಯಲಂಪಟನಾಗಿ ಪೂಜೆಯನ್ನು ತಿರಸ್ಕರಿಸಿರುತ್ತಾನಾಗಿ ಕೆಲಸದಿಂದ ತೆಗೆಯಲ್ಪಡಬೇಕೆಂದು ಬರೆದರು. ಇದರ ಮೇಲೆ ಡೆ॥ ಕ॥ ಮ॥ ಬಿ. ವೆಂಕಟವರದಯ್ಯಂಗಾರ್ಯರಿಗೆ ಅಪೀಲ್ ಮಾಡಿಕೊಳ್ಳಲು, ಇವನಿಗೆ ಅರ್ಚಕ ಕಾರ್ಯವನ್ನು ಕೊಡಬೇಕೆಂತಲೂ ನಂಬುಗೆಗೆ ದ್ರೋಹವನ್ನು ಮಾಡಿದ್ದಲ್ಲಿ ಪ್ರಾಸಿಕ್ಯೂಟ್ ಮಾಡಬೇಕೆಂತಲೂ ಅಪ್ಪಣೆ ಮಾಡಿದರು. ಸಬ್ ಡಿವಿಜನ್ ಆಫೀಸರಲ್ಲಿ ಪ್ರಾಸಿಕ್ಯೂಟಾಗಿ ದೇವಸ್ಥಾನದ ವೃತ್ತಿಯನ್ನೂ ಭೂಮಿಗಳನ್ನೂ ಆಧಾರ ಮಾಡಿದ್ದಕ್ಕಾಗಿಯೂ, ಒಡವೆಗಳನ್ನು ಅಪಹರಿಸಿದ್ದಕ್ಕಾಗಿಯೂ ಅವನಿಗೆ ಶಿಕ್ಷೆ ಆಯಿತು. ಅದರೆ ಇದರ ಮೇಲೆ ಚೀಫ್ ಕೋರ್ಟಿಗೆ ಅಪೀಲಾಗಿ ಈ ನಡವಳಿಕೆಗಳೆಲ್ಲಾ ಸಿವಿಲ್ ಕೋರ್ಟಿನಲ್ಲಿ ವ್ಯವಸ್ಥೆಯಾಗತಕ್ಕದ್ದೆಂತಲೂ, ಅಸತ್ಯವಾಗಿ ನಡೆದುದಕ್ಕೆ ತಕ್ಕ ಆಧಾರಗಳಿರಲಿಲ್ಲವೆಂತಲೂ ತಳ್ಳಿಹಾಕಿ ಮಾಡಿದರು. ಅನಂತರ ಅವನು ಕೆಲಸ ಕೊಡಿಸಿಕೊಡಬೇಕೆಂದು ಡೆ॥ ಕ॥ ರವರಿಗೆ ಬರೆದುಕೊಂಡನು. ಕಳುವಾದ ಒಡವೆಗಳನ್ನು ಗೊತ್ತುಮಾಡಲಿಲ್ಲವಾದ್ದರಿಂದಲೂ ಮೇಲೆ ಆಪಾದಿಸಲ್ಪಟ್ಟ ಆಕ್ಷೇಪಣೆಗಳನ್ನು ತಪ್ಪಿಸಿಕೊಳ್ಳಲು ಅದ ವೆಚ್ಚಕ್ಕಾಗಿ ದೇವಸ್ಥಾನದ ಇನಾಮ್ ಭೂಮಿಗಳನ್ನು ಪರಾಧೀನ ಮಾಡಿದನೆಂದು ಹೇಳಿದ್ದರಿಂದಲೂ ಇವನಿಗೆ ಪುನಃ ಕೆಲಸವನ್ನು ಕೊಡುವುದು ಅನುಚಿತವೆಂದು ಡೆ॥ ಕ॥ ಮ॥ ಎಮ್. ಎಸ್. ನಾರಾಯಣರಾಯರು ತೀರ್ದು ಕೆಲಸದಿಂದ ನಿವೃತ್ತಿ ಮಾಡಲು ಅಪ್ಪಣೆ ಮಾಡಿದರು. ಈ ಅಪ್ಪಣೆಗೆ ವ್ಯತಿರಿಕ್ತವಾಗಿ ಸರ್ಕಾರಕ್ಕೆ ಕುಮಾರದೀಕ್ಷಿತನು ಬಿನ್ನಹವನ್ನು ಬರೆದುಕೊಂಡಿರುತ್ತಾನೆ. ಈಗಿನ ಡೆ॥ ಕ॥ ಮ॥ ಸ್ಟಾಕ್ವೆನ್ ರವರು, ದೇವಸ್ಥಾನದ ವೃತ್ತಿ ಭೂಮಿಯಲ್ಲಿ ಅರ್ಧವನ್ನು ಆಧಾರಮಾಡಿ ೧ ಎಕರೆ ತರೀ ಭೂಮಿಯನ್ನು ಮಾರಿರುತ್ತಾನೆ. ನಗಗಳು ಕಳುವಿನ ವಿಚಾರದಲ್ಲಿ ಯಾವುದೋ ಕೆಲವು ಸಂದರ್ಭದ ಮೇಲೆ ಚೀಫ್ ಕೋರ್ಟಿನವರು ಆ ಕಮಿಷನರವರು ವಿಧಿಸಿದ್ದ ಶಿಕ್ಷೆಯನ್ನು ತಳ್ಳಿಹಾಕಿದಾಗ್ಯೂ ಇವನು ನಿರಪರಾಧಿಯಾಗಲಾರನು. ಇವನು ಹೆಂಡತಿಯಿಲ್ಲದೆ ಒಬ್ಬ ನೀಚಜಾತಿ ಹೆಂಗಸನ್ನು ತನ್ನ ಮನೆಯಲ್ಲೇ ದುರ್ವ್ಯಾಪಾರಕ್ಕಾಗಿ ಇಟ್ಟುಕೊಂಡಿರುತ್ತಾನೆ ಎಂದು ಅಭಿಪ್ರಾಯಪಡುತ್ತಾ ಆದ್ದರಿಂದ ಇವನನ್ನು ಕೆಲಸದಿಂದ ತೆಗೆಯಬೇಕೆಂಬ ಮ॥ ನಾರಾಯಣರಾಯರ ಅಪ್ಪಣೆಗೆ ವಿರುದ್ಧವಾಗಿ ನಡೆಯಲಾಗುವುದಿಲ್ಲವೆಂತಲೂ, ಅರ್ಚಕರು ವಂಶಪಾರಂಪರ್ಯವಾಗಿ ನೇಮಿಸಲ್ಪಡುತ್ತಾರಾದರಿಂದ, ಈ ಅರ್ಚಕತನಕ್ಕೆ ಯೋಗ್ಯನಾದವನೊಬ್ಬನು ಕುಮಾರದೀಕ್ಷಿತನ ವಂಶದಲ್ಲಿ ದೊರೆಯುತ್ತಾನೆಯೆ? ಎಂಬುದನ್ನು, ಹೊರಗಿನವರನ್ನು ನೇಮಿಸುವುದಕ್ಕೆ ಪೂರ್ವವೇ ವಿಚಾರಿಸಿ ಮುಜರಾಯಿ ಶಾಖೆಗೆ ತಿಳಿಸಬೇಕೆಂದೂ ಅಪ್ಪಣೆಯಾಗಿದೆ. ಪರಾಧೀನವಾಗಿರುವ ದೇವಸ್ಥಾನದ ಭೂಮಿಗಳನ್ನು ಹಿಂದಿರುಗ ತೆಗೆದುಕೊಳ್ಳಲೂ, ಕಳುವಾದ ನಗಗಳ ಬೆಲೆಯನ್ನು ಅರ್ಚಕನಿಂದ ಬರಮಾಡಿಕೊಳ್ಳಲೂ ಡೆ॥ ಕ॥ ರವರು ತಕ್ಕ ಏರ್ಪಾಡುಗಳನ್ನು ಮಾಡಬೇಕು.

## ಇಂಡಿಯಾ ದೇಶದ ವೃತ್ತಾಂತಗಳು.

ಸಿಂಲಾ ಪಟ್ಟಣದಲ್ಲಿ ಅನ್ನಂಡೇಲ್ ಎಂಬ ಆಟದ ಮೈದಾನವನ್ನು ವಿಸ್ತಾರ ಮಾಡುವುದಕ್ಕೆ ಗ್ವಾಲಿಯರ್ ಮಹಾರಾಜರವರು ೧೦,೦೦೦ ರೂ. ಧರ್ಮಮಾಡಿರುತ್ತಾರೆ.

****

ಮದರಾಸ್ ಪಟ್ಟಣದಲ್ಲಿ ಬಕ್ಕಿಂಗಹಾಂ ನಾಲೆಯನ್ನು ಹೊರಕ್ಕೆ ನೀಗಿಸುವದಕ್ಕಾಗಿ ಮ್ಯುನಿಸಿಪಾಲಿಟಿಯವರು ಅಗಾಧವಾದ ಕಾಮಗಾರಿ ಮಾಡಿಸುವವರಾಗಿದ್ದಾರೆ. ಇದಕ್ಕೆ ಈಶ್ವರ ಅವರು , ಲಕ್ಷ ರೂಪಾಯಿ ಸಾಲ ಮಾಡುವರು.

****

ಸರ್ದಾರ್ ಮಹಮದ್ ಯಾಕೂಬ್ ಖಾನ್ ಯವರಿಗೆ ಬ್ಲೋರ್‌ಪೂರದ ದಿವಾನಗಿರಿ ನೇಮಕವಾಯಿತು. ಇವರು ಕಳೆದ ೧೬ನೆ ತಾರೀಖಿನದಿನ ಹೋಗಿ ಕೆಲಸದಮೇಲೆ ಹಾಜರಾದರು. ಪ್ರಜೆಗಳೆಲ್ಲಾ ತುಂಬಾ ಉತ್ಸಾಹವುಳ್ಳವರಾಗಿದ್ದಾರೆ.

****

ಬೊಂಬಾಯಿ ಪಟ್ಟಣದಲ್ಲಿ ಒಂದು ಗವರ್ನಮೆಂಟ್ ಹೈಸ್ಕೂಲನ್ನು ಕಟ್ಟಿಸುವದಕ್ಕೆ ಚಂದಾ ಎತ್ತಿದರು. ಈ ಫಂಡಿಗೆ ಮ॥ ಚಿನ್ನೂಭಾಯಿ ಮಾಧವಲಾಲ್ ರಂಚೋಡ್ಲಾಲ್ ಎಂಬ ಸಾಹುಕಾರನು ೩೦ ಸಹಸ್ರ ರೂಪಾಯಿ ಧರ್ಮ ಮಾಡಿರುತ್ತಾನೆ.

****

ಅಯೋಧ್ಯೆಯ ಮಹಾರಾಜರವರಿಗೆ ಉಂಟಾಗಿದ್ದ ಗಾಯಗಳನ್ನು ವಾಸಿಮಾಡಿದ ಇಬ್ಬರು ದೇಶೀಯ ವೈದ್ಯರನ್ನು ಮಹಾರಾಜರು ಕರೆಸಿಕೊಂಡು, ಒಂದು ದರ್ಬಾರ್ ಮಾಡಿ, ಅವರಿಬ್ಬರಿಗೂ ಬೆಲೆಯುಳ್ಳ ಪಲ್ಲಕ್ಕಿಗಳನ್ನು ಕೊಡಿಸಿ ಸಂತೋಷಪಡಿಸಿದರು.

****

ದೆಹಲಿ ದರ್ಬಾರ್ ಕಾಲದಲ್ಲಿ ಆಲ್ಲೇ ಹಿಂದುಸ್ಥಾನದ ಸಕಲಕಲಾ ಪ್ರದರ್ಶನವೂ ನಡೆಯಿತಷ್ಟೆ. ಈ ಪ್ರದರ್ಶನಶಾಲೆಗೆ ೫ ಕೋಟಿ ರೂಪಾಯಿ ಬಾಳುವಷ್ಟು ಚಿತ್ರವಸ್ತುಗಳೂ, ಒಡವೆಗಳೂ, ಅಪೂರ್ವವಾದ ಕೆತ್ತನೆಯ ಕೆಲಸಗಳೂ ತಂದಿಡಲ್ಪಟ್ಟಿದ್ದವೆಂದು ಡಾಕ್ಟರ್ ವಾಟ್ಯವರು ಬರೆದಿದಾರೆ.

ಔರಂಗಾಬಾದಿನಲ್ಲಿ ಇಂಗ್ಲಿಷ್ ಸೈನ್ಯವಿದೆಯಷ್ಟೆ. ಅನ್ನೊಂದು [illegible] ಹೊಸ ಸೈನ್ಯವನ್ನು ಅಲ್ಲಿ ಇಡಬೇಕೆಂದು ಗೌವರ್ನಮೆಂಟಿನವರು ತೀರ್ಮಾನ ಮಾಡಿದ್ದಾರೆ. ಇದಕ್ಕಾಗಿ ನೈಜಾಮರಿಗೆ ಸೇರಿದ ೫,೦೦೦ ಎಕರೆಯಷ್ಟು ಜಮೀನನ್ನು ಗೌವರ್ನಮೆಂಟಿಗೆ ಬಿಟ್ಟುಕೊಡಬೇಕೆಂದು ಕಾಗದ ಪತ್ರಗಳು ನಡೆಯುತ್ತಿವೆ.

****

ವಿಜಯನಗರದ ಹತ್ತಿರ ತುಂಗಭದ್ರಾನದಿಗೆ ಅಣೆ ಕಟ್ಟಿ, ಸುಮಾರು ೭೫೦ ಮೈಲಿ ವಿಸ್ತಾರವುಳ್ಳ ಒಂದು ಭಾರೀ ಕೆರೆಯನ್ನು ಮಾಡಿ, ಅದರಿಂದ ನಾಲೆಗಳನ್ನು ತೆಗೆದು, ಸುಮಾರು ೩೬॥ ಲಕ್ಷ ಎಕರೆ ಜಮೀನನ್ನು ಕರೀ ಸಾಗುವಳಿಗೆ ತರಬೇಕೆಂದು ಮದರಾಸ್ ಸರ್ಕಾರದವರು ತುಂಬಾ ಸಾಹಸಪಡುತ್ತಿದ್ದಾರೆ. ಈ ಕಾಮಗಾರಿಗೆ ೪—೫ ಕೋಟಿ ದ್ರವ್ಯ ಖರ್ಚಾಗುವುದು.

****

ಬೊಂಬಾಯಿ ಗವರ್ನರರವರು ಪದ್ಧತಿಯ ಪ್ರಕಾರ ಪೂನೆಗೆ ಪ್ರಯಾಣಮಾಡಿದ್ದಾಗ್ಯೆ ಗಣೇಶಖಿಂಡ್ ಎಂಬ ಸರ್ಕಾರಿ ಬಂಗಲೆಯಲ್ಲಿ ವಾಸವಾಗಿರುವ ಎಲ್ಲಾ ಕೋಮಿನ ಜನರನ್ನೂ ಅವರ ಸಂಸಾರಕ್ಕೆ ಸೇರಿದವರನ್ನೂ ಕರೆಸಿ, ದಿವ್ಯವಾದ ಔತಣಮಾಡಿಸಿದ್ದಲ್ಲದೆ, ಅವರ ಗಂಡು ಹೆಣ್ಣುಮಕ್ಕಳಿಗೆಲ್ಲಾ ವಿನೋದಗಳನ್ನು ತಳ್ಪಿಸಿ, ಬಹುಮಾನಗಳನ್ನು ಕೊಡಿಸಿ, ಸಂತೋಷಪಡಿಸಿದರು. ಅವರೆಲ್ಲಾ ೫೦೦ ಮಂದಿಗಿಂತ ಹೆಚ್ಚಾಗಿದ್ದರು.

****

ಕಲ್ಕತ್ತೆಯಲ್ಲಿ ಒಬ್ಬ ವೈದ್ಯನು ತಂದೆ ಮಕ್ಕಳಿಬ್ಬರಿಗೆ ಔಷಧ ಕೊಟ್ಟು ಕಾಯಿಲೆ ವಾಸಿಮಾಡಿದ್ದಕ್ಕೆ ಅವರಿಂದ ತನಗೆ ಇಷ್ಟು ಹಣ ಬರಬೇಕೆಂದು ನೋಟೀಸು ಕಾಗದ ಬರೆದು ಕಳುಹಿಸಿದನು. ಆ ತಂದೆ ಮಕ್ಕಳಿಬ್ಬರೂ ಇದಕ್ಕಾಗಿ ಕೋಪಬಂದು ಆ ವೈದ್ಯನನ್ನು ಕರೆಸಿಕೊಂಡು, ಎಸ್ಸಾಗಿ ಹೊಡೆದು ಕಳುಹಿಸಿದರು. ನೊಕದ್ದಮೆ ಆಗಿ ವಿಚಾರಣೆ ಆಯಿತು. ತಂದೆ ಮಕ್ಕಳಿಬ್ಬರಿಗೂ ತಲಾ ಮೂರು ತಿಂಗಳ ಕಠಿಣ ಶಿಕ್ಷೆ ೫೦ ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿತು.

****

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಥಾರ್, ಪಾರ್ಕರ್ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಲೆಕ್ಟರಿಗೆ ಅವರ ಶಿರಸ್ತೇದಾರನಾದ [illegible] ಎಂಬವನು ತನಗೆ ಮೊಖ್ತಿಯಾರ್ಕಾರ್ ಎಂಬ ಅಧಿಕಾರವಾಗಬೇಕೆಂದು ಅರ್ಜಿ ಬರೆದುಕೊಂಡು, ಅದರಲ್ಲಿ ೫೦೦ ರೂ. ಕರೆನ್ಸಿ ನೋಟುಗಳನ್ನು ಇಟ್ಟು ಒಪ್ಪಿಸಿದನೆಂತಲೂ, ಡೆಪ್ಯುಟಿ ಕಲೆಕ್ಟರು ಅವನು ಲಂಚಕೊಟ್ಟನೆಂದು ಅವನ ಮೇಲೆ ನೊಕದ್ದಮೆ ಮಾಡಿದರೆಂದೂ ಮೊದಲೇ ತಿಳಿಸಿದ್ದೆವಷ್ಟೆ. ಮ್ಯಾಜಿಸ್ಟ್ರೇಟರು ಮೊಕದ್ದಮೆಯನ್ನು ದರ್ಯಾಫ್ತುಮಾಡಿ, ೬ ತಿಂಗಳ ಕಠಿಣಶಿಕ್ಷೆಯನ್ನೂ ೫೦ ರೂ. ಜುಲ್ಮಾನೆಯನ್ನೂ ವಿಧಿಸಿದರು. ಅವನು ಈಗ ಅಪೀಲ್ ಮಾಡಿಕೊಂಡಿದ್ದಾನೆ.

****

ಗೋಪಾಲಲಾಲ ಸೀಲನೆಂಬೊಬ್ಬ ಸಾಹುಕಾರನು ಚಂದ್ರನಗರದಲ್ಲಿ ವ್ಯಾಪಾರ ಮುಂತಾದ್ದು ಮಾಡಿಕೊಂಡಿದ್ದು ೩೦ ಲಕ್ಷ ರೂಪಾಯಿ ತನಕ ಆಸ್ತಿ ಸಂಪಾದಿಸಿ ಕಳೆದ ೧೮೬೦ನೆ ಇಸವಿಯಲ್ಲಿ ಮೃತಪಟ್ಟನು. ಈಗ ಅವನ ಇಬ್ಬರು ಹೆಂಡರೂ, ತಾಯಿ, ಅಣ್ಣನವರ ಇವರೆಲ್ಲಾ ಆ ಆಸ್ತಿಯ ವಿಷಯದಲ್ಲಿ ವ್ಯಾಜ್ಯಮಾಡುತ್ತಾ ಸಾವಿರಾರು ರೂಪಾಯಿಗಳನ್ನು ಕೋರ್ಟುಗಳೂ ಲಾಯರುಗಳೂ ಹಂಚುತ್ತಿದಾರೆ. ಹಿಂದುಸ್ಥಾನದಲ್ಲಿ ಜನರು ಮರಣಕಾಲ ಪ್ರಾಪ್ತವಾದಾಗ್ಯೆ ತಾವು ಉಯಿಲು ಬರೆಯದೆ ಆಸ್ತಿಯನ್ನು ಅವ್ಯವಸ್ಥೆಯಲ್ಲಿ ಬಿಟ್ಟು ಮೃತಪಡುವದು ವಾಡಿಕೆಯಾಗಿರುವದರಿಂದಲೇ ದುರ್ವ್ಯಾಜ್ಯಗಳು ಹುಟ್ಟಲು ಕಾರಣವಾಗುತ್ತೆ.

****

ಕಲ್ಕತ್ತಾ ಪಟ್ಟಣದ ಭವಭೂತಿ ಶೇಖರ ಮುಖರ್ಜಿ ಎಂಬವನು ಮುರ್ಶಿದಾಬಾದ್ ಡಿಸ್ಟ್ರಿಕ್ಟಿನಲ್ಲಿ ಸಂಚಾರಮಾಡಿ, ದೊಡ್ಡ ಮನುಷ್ಯನಂತೆ ನಟಿಸುತ್ತಾ, ಗೌರವಸ್ಥರನ್ನು ಕಂಡು ಅವರಿಗೆ ಸರ್ಕಾರದಿಂದ ಬಿರುದುಗಳನ್ನು ಕೊಡಿಸಿ ಕೊಡುವುದಾಗಿ ಮೋಸಪಡಿಸುತ್ತಾ, ಅವರಿಂದ ಹಣವನ್ನು ಕಿತ್ತು ತಿನ್ನುತ್ತಾ ಇದ್ದನು. ಈ ಸಂಗತಿ ಪೋಲೀಸರಿಗೆ ಪ್ರಕಟವಾಯಿತು. ಅವನಮೇಲೆ ಮೊಕದ್ದಮೆಯೂ ಬಂತು. ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನ ಇಬ್ಬರು ವಕೀಲರು ಇಂಥಾ ವಿಚಿತ್ರವು ಅಪೂರ್ವವೂ ಆದ ಮೊಕದ್ದಮೆಯನ್ನು ಚನ್ನಾಗಿ ತನಿಖೆ ಮಾಡಿ, ಬಿರುದುಗಳನ್ನೆಲ್ಲಾ ಅಂಡಮಾನಿಗೆ ಕಳುಹಿಸಿಕೊಡಬೇಕೆಂಬುದಾಗಿ ಹುಕುಂ ಕೊಟ್ಟಿದಾರೆ.

****

ಹೈದರಾಬಾದಿನಲ್ಲಿ ದೊಡ್ಡ ಮನುಷ್ಯರ್ಯಾರಾದರೂ ಕಾಯಿಲೆ ಮಲಗಿಕೊಂಡರೆ ಅವರಿಗೆ ದಾನಧರ್ಮ ಮಾಡುವುದಕ್ಕೆಂದು ಅವರ ಇಷ್ಟಮಿತ್ರರು ಹಣ ಕಳುಹಿಸುವುದು ಪದ್ಧತಿಯಾಗಿದೆ. ಈಚೆಗೆ ನೈಜಾಮರವರ ವರ್ಧಂತಿ ಹಬ್ಬದ ದಿನ ಉತ್ಸವದಲ್ಲಿ ಕಾಯಿಲೆಯಿಂದ ಬಿದ್ದ ಹಬ್ಬತಿಂದ ಮಂತ್ರಿವರ್ಯರಾದ ಮಹಾರಾಜಾ ಕೃಷ್ಣಪ್ರಸಾದ್ ಬಹದೂರ್, ಕೆ. ಸಿ. ಐ. ಇ. ಯವರಿಗೆ ನೈಜಾಮರವರು ೫೦ ಚಿನ್ನದ ಮೊಹರಾ ನಾಣ್ಯಗಳನ್ನು ಕಳುಹಿಸಿಕೊಟ್ಟರು. ನೈಜಾಮರು ಹೀಗೆ ಇಷ್ಟುಮಟ್ಟಿಗೆ ಸನ್ಮಾನ ಮಾಡಿದ್ದು ಅಪೂರ್ವವೆಂದು ಹೇಳುತ್ತಾರೆ. ಇದರಿಂದ ನೈಜಾಮರಿಗೆ ತಮ್ಮ ಮಂತ್ರಿಯಲ್ಲಿ ಎಷ್ಟು ಪ್ರೀತಿ ವಿಶ್ವಾಸಗಳಿರುತ್ತವೆಂದು ಗೊತ್ತಾಗುವುದು.

****

ಮಧ್ಯಪ್ರಾಂತ್ಯಗಳಿಗೆ ಸೇರಿದ ಜಬ್ಬಲ್‌ಪುರದಲ್ಲಿ ರಾಜಾ ಗೋಕುಲದಾಸ ರಾಯಬಹದೂರ್ ವಲ್ಲಭದಾಸ್ ಖಿಮಜಿ ಜೀವನದಾಸ್ ಎಂಬ ದೊಡ್ಡ ಸಾಹುಕಾರನೊಬ್ಬನು ಕೋಟ್ಯಂತರ ರೂಪಾಯಿ ವ್ಯಾಪಾರ ಮಾಡುತ್ತಿದ್ದಾನೆ. ಇವನಿಗೆ ಬಾಡಿಗೆ, ಕಂದಾಯ, ಮೊದಲಾದ ರೂಪದಲ್ಲೇ ತಿಂಗಳೊಂದಕ್ಕೆ ಸಾವಿರಾರು ರೂಪಾಯಿ ವಷ್ಟು ಉತ್ಪತ್ತಿಯಾಗುತ್ತಿದೆ. ಒಂದೆರಡು ವರುಷಗಳಿಂದ ಆ ಪ್ರಾಂತ್ಯ ಕ್ಷಾಮ ಪ್ರಾಪ್ತವಾಗಿದ್ದ ಕಾರಣ ಬಹುಮಂದಿ ಬಾಕಿ ಸಾಕಿಗಳನ್ನು ಕೊಡಲಾರದೆ ನಿಲ್ಲಿಸಿಕೊಂಡಿದ್ದರು. ಚಕ್ರವರ್ತಿಯವರಿಗೆ ಕಿರೀಟಧಾರಣೆಯಾದ ಸಂತೋಷಕ್ಕೆ ಆ ಸಾಹುಕಾರನು ಸುಮಾರು ಐದು ಲಕ್ಷ ರೂಪಾಯಿ ಬಾಕಿ ಸಾಕಿಯನ್ನು ಮಾಫಿ ಬಿಟ್ಟು ಇರುತ್ತಾನೆ. ಅವನ ಪೋಷಣೆಗೆ ಸೇರಿದವರೆಲ್ಲಾ ಆತನ ಉದಾರಬುದ್ಧಿಯನ್ನು ಬಹಳವಾಗಿ ಕೊಂಡಾಡುತ್ತಿದಾರೆ.

****

ಕಾಠ್ಯವಾಡದಲ್ಲಿ ಅನೇಕ ದೇಶೀಯ ಸಂಸ್ಥಾನಗಳಿರುತ್ತವೆ. ಆ ಸಂಸ್ಥಾನಗಳ ಅರಸರು ತಮ್ಮ ತಮ್ಮಲ್ಲೇ ಸಾಲ ಸೋಲಗಳನ್ನು ಪರಸ್ಪರವಾಗಿ ಮಾಡಿಕೊಳ್ಳುತ್ತಲೂ, ಅವುಗಳನ್ನು ವಸೂಲ್ಮಾಡಿಕೊಳ್ಳುವುದಕ್ಕೆ ಕಷ್ಟವೆಂದು ಕಂಡುಬಂದಾಗ ಪರಸ್ಪರ ವೈಷಮ್ಯಪಟ್ಟು ಮನಸ್ತಾಪವುಳ್ಳವರಾಗುತ್ತಲೂ ಇದ್ದರು. ಈ ಸಂಗತಿಯು ಇಂಡಿಯಾ ಗೌವರ್ನಮೆಂಟಿನವರಿಗೆ ತಿಳಿದುಬಂದಿತು. ಅವರು ಆ ಅರಸುಗಳಿಗೆಲ್ಲಾ ತಿಳಿಸಿರುವದೇನಂದರೆ—ಗೌವರ್ನಮೆಂಟಿಗೆ ತಿಳಿಸದೆ ಯಾವ ಅರಸನೂ ಸಾಲ ಕೊಡಕೂಡದು; ಸಾಲ ತೆಗೆದುಕೊಳ್ಳಲೂ ಕೂಡದು. ಹೀಗೆ ಪರಸ್ಪರ ಲೇವಾದೇವಿ ನಡಸುವದು ತರವಾಗಿ ಕಾಣುವುದಿಲ್ಲ. ಇಂಡಿಯಾ ಗೌವರ್ನಮೆಂಟಿನವರಿಗೆ ಅರಿಕೆ ಮಾಡಿ, ಅವರು ಅಂಥಾ ಸಾಲವನ್ನು ಕೊಡಬಹುದೆಂದಾಗಲಿ, ತೆಗೆದುಕೊಳ್ಳಬಹುದೆಂದಾಗಲಿ ಸ್ಯಾಂಕ್ಷನ್ ಮಾಡಿದ ಪಕ್ಷಕ್ಕೆ ಸಾಲ ಕೊಟ್ಟು ತೆಗೆದುಕೊಳ್ಳತಕ್ಕದ್ದು.

****

ಸಿಲೋನ್ (ಲಂಕಾ) ದ್ವೀಪದಿಂದ ಸ್ವೀಡ್ ದೇಶದವನೊಬ್ಬನೂ ಸ್ವಿಟ್ಜರ್‌ಲಾಂಡಿನವನೊಬ್ಬನೂ ಬೊಂಬಾಯಿಗೆ ಹೋಗಿ ಒಂದು ಮನೆ ಬಾಡಿಗೆ ಮಾಡಿಕೊಂಡು, ಗುಟ್ಟಾಗಿ ಖೋಟಾ ನಾಣ್ಯಗಳನ್ನು ತಯಾರುಮಾಡುತ್ತಾ ಇದ್ದರು. ಪೋಲೀಸಿನವರು ಈ ಕೊಡಬರ ನಡವಳಿಕೆಯನ್ನು ಗೊತ್ತುಮಾಡುವದಕ್ಕೋಸ್ಕರ ಮೊಸ್ಲೀನ್ ಎಂಬ ಮುಖಂಡನನ್ನು ಗುಟ್ಟಾಗಿ ಕಳುಹಿಸಿದರು. ಈತನು ಅವರ ಮನೆ ಬಾಗಿಲಲ್ಲೇ ಬಾಡಿಗೆಗೆ ಮನೆ ಮಾಡಿಕೊಂಡು ವಾಸಿಸುತ್ತಾ, ಮನೆಯೊಳಗೆ ಗುಟ್ಟಾಗಿ ಒಂದು ತೂತು ಕೊರೆದು, ಅವರಿಬ್ಬರೂ ಏನುಮಾಡುತ್ತಾರೋ ನೋಡುತ್ತಿದ್ದನು. ಒಂದು ದಿನ ಅವರಿಬ್ಬರೂ ಮನೆಯಲ್ಲಿ ಸೇರಿಕೊಂಡು, ಖೋಟಾ ನಾಣ್ಯಗಳನ್ನು ಅಚ್ಚುಹಾಕಿ ತೆಗೆಯುತ್ತಿದ್ದರು. ಆಗ ಆ ಪೋಲೀಸಿನವನು ಇತರರನ್ನು ಕರೆದು ತಂದು, ಏಕಕಾಲದಲ್ಲಿ ಆಕಸ್ಮಾತ್ತಾಗಿ ಮನೆ ನುಗ್ಗಿಸಿ, ಅಜಮಾಯಿಷಿ ಮಾಡಿಸಿದನು. ೬೯ ರೂಪಾಯಿಗಳು, ದ್ರಾವಕಗಳು ತುಂಬಿದ ಸೀಸೆಗಳು, ಸೀಸ, ಅಚ್ಚುಪಡಿಗಳು, ಮುಂತಾದುವೆಲ್ಲಾ ಸಿಕ್ಕಿದವು. ಈಗ ಅವರಿಬ್ಬರನ್ನೂ ಹಿಡಿದು ದರ್ಯಾಫ್ತು ಮಾಡಿಸುತ್ತಿದಾರೆ.

****

ಕಾಶ್ಮೀರದಲ್ಲಿ ಈಚೆಗೆ ಪ್ರವಾಹಗಳು ತುಂಬಾ ವಿಪರೀತವಾಗಿ ಬಂದು ಸಕಲ ವಿಭಾಗಗಳಿಗೂ ವ್ಯಾಪಿಸಿ ಮನೆಮಠಗಳು ಆಸ್ತಿಪಾಸ್ತಿ ಎಲ್ಲಾ ಕೊಚ್ಚಿಹೋದವು. ಲಕ್ಷಾಂತರ ಪ್ರಜೆಗಳು ನಿಲ್ಲುವುದಕ್ಕೆ ನೆರಳಾಗಲಿ ತಿನ್ನುವದಕ್ಕೆ ಅನ್ನವಾಗಲಿ ಇಲ್ಲದೆ ತುಂಬಾ ಕಷ್ಟಪಡುತ್ತಿದಾರೆ. ಅಂಥಾ ಬಡಬಗ್ಗರ ಸಹಾಯಕ್ಕಾಗಿ ಒಂದು ಫಂಡು ಏರ್ಪಾಡಾಗಿದೆ. ಕಾಶ್ಮೀರದ ಮಹಾರಾಜರವರು ೧ ಲಕ್ಷ ರೂಪಾಯಿಗಳನ್ನು ಕೊಟ್ಟರು; ಮತ್ತು ಅವರು ವಾಸವಾಗಿದ್ದ ಅರಮನೆಯನ್ನು ಬಡಬಗ್ಗರ ವಾಸಕ್ಕಾಗಿ ಬಿಟ್ಟುಕೊಟ್ಟು, ಸೂರ್ಯಾ [illegible]ಎಂಬೊಂದು ಬಂಗಲೆಗೆ ಹೋಗಿಬಿಟ್ಟರು. ಬರೋಡೆಯ ಗಾಯಕವಾಡ್ ಮಹಾರಾಜರವರೂ ತುಂಬಾ ದ್ರವ್ಯ ಸಹಾಯಮಾಡಿದರು. ಈಗ ಪ್ರವಾಹದ ನೀರು ಇಳಿದುಹೋಯಿತು. ಒಂದು ಸೇತುವೆಯಾದರೂ ಉಳಿಯಲಿಲ್ಲ. ಭಾರಿಭಾರೀ ನಾಲೆಗಳೆಲ್ಲಾ ಮುಚ್ಚಿಹೋಗಿವೆ. ಯಾವ ಬೀದಿಯೂ, ಮನೆಯೂ, ದೊಡ್ಡಬಂಗಲೆಯೂ, ಉದ್ಯಾನವನವೂ, ಜಮೀನು ತೋಟಗಳೂ ಉಳಿಯಲಿಲ್ಲ. ಇದರಿಂದ ಪ್ರಜೆಗಳಿಗುಂಟಾಗಿರುವ ನಷ್ಟವೆಷ್ಟೆಂದು ಹೇಳಿದರೂ ತೀರದ್ದಾಗಿದೆ

****

ನಮ್ಮ ವೈಸರಾಯರವರು ಕೆಲಸ ಮಾಡುವ ಕ್ರಮವನ್ನು ಆ ಮೇರಿಕದ ಒಂದು ಪತ್ರಿಕೆಯು ವಿವರಿಸಿದೆ. ಅವರ ವಿಷಯವಾಗಿ ಅದು ತಿಳಿಸುವದೇನಂದರೆ—ಲಾರ್ಡ್ ಕರ್ಜನ್ ಪ್ರಭುಗಳು ದಿನಕ್ಕೆ ೧೬ ಗಂಟೆಗಳ ಹೊತ್ತು ಸರ್ಕಾರಿ ಕೆಲಸ ಮಾಡುತ್ತಾರೆ. ಬೆಳಗ್ಗೆ ಎದ್ದು ಕೂತುಕೊಂಡು ಮಧ್ಯಾಹ್ನ ೧ ಗಂಟೆಯ ತನಕ ಕೆಲಸ ಮಾಡುವರು. ತರುವಾಯ ಒಂದುವರೆ ಗಂಟೇ ಹೊತ್ತನ್ನು ಇಷ್ಟಮಿತ್ರರ ಕೂಡ ಸರಸಸಲ್ಲಾಪಗಳಲ್ಲಿ ಕಳೆಯುತ್ತಾರೆ. ಆ ಮೇಲೆ ಮೇಜಿನ ಮುಂದೆ ಕುಳಿತುಕೊಂಡು ರಾತ್ರಿ ಭೋಜನಕಾಲದತನಕ ಕೆಲಸ ಮಾಡುವರು. ರಾತ್ರಿ ಹತ್ತುವರೆ ಗಂಟೆಗೆ ಭೋಜನಶಾಲೆಯಿಂದ ಹೊರಟು ಬೆಳಗಿನ ಝಾಮದ ೨ ಗಂಟೆ ತನಕ ಸರ್ಕಾರಿ ಕಾಗದ ಪತ್ರಗಳನ್ನು ಓದಿ ಹುಕುಂ ಬರೆಯುತ್ತಾರೆ. ಪ್ರತಿದಿನವೂ ಅವರು ಬೈಲು ಪ್ರದೇಶದಲ್ಲಿ ಒಂದುವರೆ ಗಂಟೆಗಿಂತ ಹೆಚ್ಚಾಗಿ ಇರುವುದಿಲ್ಲ. ಅವರು ಎಲ್ಲಿದ್ದರೂ ಬಂಗಲೆಯೊಳಗಾಗಲಿ, ರೈಲ್ ಗಾಡಿಯೊಳಗಾಗಲಿ, ಊರಿಂದೂರಿಗೆ ಹೋಗಿ ಬರುವಾಗ್ಯೆ ಇಳುಕೊಳ್ಳುವ ಸ್ಥಳಗಳಲ್ಲಾಗಲಿ, ಯಾವ ಕಡೆ ಇದ್ದರೂ ಮೇಲ್ಕಂಡ ಪ್ರಕಾರ ಆಲಸ್ಯಪಡದೆ ಕೆಲಸ ಮಾಡುವರು. ಆದಾಗ್ಯೂ ಅವರನ್ನು ಹೋಗಿ ನೋಡತಕ್ಕವರಿಗೆ ಅವರು ಇಷ್ಟುಹೊತ್ತು ಮುಖವರ್ಜಿ ವಹಿಸಿ ಕೆಲಸ ಮಾಡುತ್ತಾರೆಂಬುದು ಸ್ವಲ್ಪವೂ ಗೋಚರವಾಗುವುದಿಲ್ಲ.

****

ಬೊಂಬಾಯಿನಲ್ಲಿರುವ ಒಬ್ಬ ಹೆಂಗಸು ಉತ್ತರದೇಶದಿಂದ ೧೦—೧೨ ಮಂದಿ ಹೆಣ್ಣುಮಕ್ಕಳನ್ನು ಅವರ ತಂದೆ ತಾಯಿಗಳಿಂದ ಒಪ್ಪಿಸಿ ಕರೆದುಕೊಂಡು ಬಂದು ತನ್ನ ಮನೆಯಲ್ಲಿ ಸಾಕುತ್ತಿದ್ದಳು. ಇವಳು ಆ ಹುಡುಗಿಯರನ್ನು ಕೂಲೀ ಕೆಲಸಕ್ಕೆ ಕಳುಹಿಸಿ ತಿಂಗಳಿಗೆ ತಲಾ ೧೫—೨೦ರೂ. ಸಂಬಳ ತರುವಂತೆ ಮಾಡಿದಳು. ಆ ಹಣದಲ್ಲಿ ಹುಡುಗಿಯರ ತಂದೆ ತಾಯಿಗಳಿಗೆ ತಲಾ ೧೦ ರೂಪಾಯಿನಂತೆ ತಿಂಗಳು ತಿಂಗಳಿಗೆ ಕಳುಹಿಸಿಕೊಟ್ಟು, ಉಳಿದ ಹಣದಲ್ಲಿ ಆ ಹುಡುಗಿಯರನ್ನು ಸಾಕುತ್ತಾ, ತಾನೂ ಹಣ ಗಂಟು ಹಾಕಿಕೊಳ್ಳುತ್ತಾ ಬಂದಳು. ಕೆಲವು ದಿನಗಳ ಕೆಳಗೆ ಆ ಹುಡುಗಿಯರ ಪೈಕಿ ಒಬ್ಬಳು ಬೊಂಬಾಯಿನಲ್ಲೇ ಒಬ್ಬನನ್ನು ವರಿಸಿ ಮದುವೆ ಮಾಡಿಕೊಂಡಳು. ಈ ಮದುವೆಗೆ ವರನು ಆ ಯಜಮಾನತಿಗೆ ೫೦ ರೂ. ಬಹುಮಾನ ಕೊಟ್ಟನು. ಮದುವೆಯಾದನಂತರ ಆ ಹುಡುಗಿ ಅವಳ ಮನೆಯಲ್ಲಿ ಇರುವುದಿಲ್ಲವೆಂತಲೂ, ತನ್ನ ಗಂಡನ ಮನೆಯಲ್ಲಿ ರುತ್ತೇನೆಂತಲೂ ಹೇಳಿ, ಮದುವೆಯಲ್ಲಿ ತನಗೆ ಗಂಡ ಕೊಟ್ಟಿದ್ದ ಮೂರು ಸೀರೆಗಳನ್ನು ತೆಗೆದುಕೊಂಡು, ಗಂಡನ ಮನೆಗೆ ಹೋದಳು. ಕೂಡಲೇ ಆ ಹೆಂಗಸು ಈ ಹುಡುಗಿಯಮೇಲೆ ತನ್ನ ಸೀರೆ ಕದ್ದಳೆಂದು ಫಿರ್ಯಾದು ತಂದಳು. ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡುವಲ್ಲಿ ಮೇಲ್ಕಂಡ ವಿವರವೆಲ್ಲಾ ಹೊರಪಟ್ಟಿತು. ಆಗ ಮ್ಯಾಜಿಸ್ಟ್ರೇಟರು ಮೊಕದ್ದಮೆಯನ್ನು ವಜಾಮಾಡಿದ್ದಲ್ಲದೆ ಫಿರ್ಯಾದಿಯಾದ ಆ ಹೆಂಗಸಿಂದ ೨೫ ರೂ. ಜುಲ್ಮಾನೆ ವಸೂಲ್ಮಾಡಿಸಿ, ಆ ಹುಡುಗಿಗೆ ಕೊಡಿಸಿದರು.

****

ಮದರಾಸಿನಲ್ಲಿ ಆರ್ಯವಿದ್ಯಾ ಪ್ರೋತ್ಸಾಹಕ ಸಮಾಜದ ಮೆಂಬರುಗಳು ಪಚ್ಚಯಪ್ಪನವರ ಧರ್ಮದ ಪಾಠಶಾಲಾ ಮಂದಿರದಲ್ಲಿ ಸೇರಿ ಸಭೆ ನಡಿಸಿದರು. ಉತ್ತರ ದೇಶದಿಂದ ನಾಲ್ಕಾರು ಮಂದಿ ಹಿಂದೂ ವಿದ್ಯಾವಂತರು ಆ ದಿನ ಹಾಜರಾಗಿದ್ದರು. ಕಂಭಂ ಮಹಾರಾಜರಾದ ಶ್ರೀ ದೇವತಾನಂದ ಆಚಾರ್ಯಜೀಯವರು ಅಗ್ರಾಸನವನ್ನು ವಹಿಸಿದ್ದರು. ಪಂಡಿತ ದೀನದಯಾಳುಶರ್ಮ, ಪಂಡಿತ ಬಾಲಸರಸ್ವತಿ ನಾರಾಯಣಶಾಸ್ತ್ರಿ, ಪಂಡಿತ ರಂಗಾಚಾರ್ಯರು, ಟಿ. ವೆಂಕಟಸುಬ್ಬಯ್ಯನವರು ಮೊದಲಾದವರೆಲ್ಲಾ ಮದರಾಸಿನಲ್ಲೂ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸಬೇಕೆಂತಲೂ, ಅದರಲ್ಲಿ ಸಂಸ್ಕೃತವನ್ನೂ ಇಂಗ್ಲಿಷ್ ಮೊದಲಾದ ಅನ್ಯಭಾಷೆಗಳನ್ನೂ ಕಲಿಸಬೇಕೆಂತಲೂ, ಇಂಥಾ ವಿದ್ಯಾಶಾಲೆಯು ಕಾಶೀ ಪಟ್ಟಣದಲ್ಲಿ ಹ್ಯಾಗೋ ಮದರಾಸಿನಲ್ಲೂ ಏರ್ಪಟವಾಗಿ ನಡೆವುದಕ್ಕೆ ಅನುಕೂಲಿಸುವಂತೆ ಪ್ರಜೆಗಳಿಂದಲೂ, ಪ್ರಜಾಪಾಲಕರಿಂದಲೂ, ಶೆಟ್ಟಿ ವರ್ತಕರೇ ಮೊದಲಾದ ಮಹಾಜನರಿಂದಲೂ ದ್ರವ್ಯವನ್ನು ಕೂಡಿಸಬೇಕೆಂತಲೂ ಉಪನ್ಯಾಸಗಳನ್ನು ಮಾಡಿದರು. ಆಗ ಮದರಾಸಿನಲ್ಲಿರುವ ಭಾರೀ ವರ್ತಕರಾದ ಮುಳ್ದಾಸ್ ರಾಮದಾಸ್ ಎಂಬವರು ತಮ್ಮ ಸ್ವಂತ ಹಣದಿಂದ ಒಂದು ದೊಡ್ಡ ವಿದ್ಯಾಶಾಲೆಯನ್ನು ಕಟ್ಟಿಸಿಕೊಟ್ಟು, ವಿದ್ಯಾಶಾಲೆಯ ಮೂಲಧನಕ್ಕೆ ೨,೦೦೦ ರೂ. ಕೊಡುವುದಲ್ಲದೆ, ತಿಂಗಳು ತಿಂಗಳಿಗೆ ೧೦೦ ರೂಪಾಯಿಗೆ ಹೆಚ್ಚಿಲ್ಲದೆ ದ್ರವ್ಯ ಸಹಾಯ ಮಾಡುತ್ತಾ ಬರುವೆನಾಗಿಯೂ, ಸಭಾಧ್ಯಕ್ಷರು ಈ ಫಂಡಿಗೆ ೧,೦೦೦ ರೂ. ಕೊಡುವುದಾಗಿಯೂ ವಾಗ್ದಾನ ಮಾಡಿತ ಮಾಡಿದರು. ತರುವಾಯ ಚಂದಾ ಕೂಡಿಸುವುದಕ್ಕೆ ಒಂದು ಸಂಘವು ಏರ್ಪಾಡಾಯಿತು.

## ತಾಲ್ಲೋಕು ವರ್ತಮಾನಗಳು.

ತಿಪ್ಟೂರು. ಪೋಲೀಸ್ ಇನ್ಸ್‌ಪೆಕ್ಟರ್ ಮೊಹಿದಾನಮಿಯ್ಯಾಂಸಾಹೇಬ್‌ರವರು ದರೋಡೆ ಮಾಡುತ್ತಿದ್ದ ಕೆಲವರನ್ನು ಕಂಡುಹಿಡಿದು ತಕ್ಕ ಏರ್ಪಾಡುಗಳನ್ನು ಕೊಟ್ಟಂತೆ ತಿಳಿಯಬಂತು.—ಸಾಧ್ಯಾಳಿ ಗ್ರಾಮದೊಬ್ಬನು ಕೆಲವು ತೆಂಗಿನಕಾಯಿಗಳನ್ನು ಕಿತ್ತ ಆಪಾದನೆಗೆ ಗುರಿಯಾಗಿ ೧೫ ರೂ. ಜುಲ್ಮಾನೆ ತೆತ್ತನೆಂದು ತಿಳಿಯಿತು.—ಚಪ್ಪರೋಗದಿಂದ ಕೆಲವು ಜಾನುವಾರು ಸತ್ತವು.—ಸಿದ್ರಾಂಪುರದ ಹತ್ತಿರ ಹಟ್ಟಿಯಲ್ಲಿ ಇಬ್ಬರಿಗೆ ಪ್ಲೇಗಾದದ್ದರಲ್ಲಿ ಒಂದು ಕೇಸ್; ಮತ್ತೊಂದು ಸುಮಾರೆಂದು ಗೊತ್ತಾಯಿತು.—ಮಾದಿಹಳ್ಳಿ ಜೋಯಿಸನು ತನ್ನ ಮುಖದ ಮೇಲಿದ್ದ ಮೊಡವೆ ಎಂಬ ಗುಳ್ಳೆಯನ್ನು ತಾನೇ ಕಿತ್ತುಕೊಳ್ಳಲು ನಂಜೇರಿ ಸತ್ತುಹೋದನೆಂದು ತಿಳಿಯಿತು. ಚನ್ನರಾಯಪಟ್ಟಣದಲ್ಲಿರುವ ಹೆಂಡತಿ ಮಕ್ಕಳಿಗೆ ತೋರಿಸುವುದಾಗಿ ಖಾಲೀ ಶರೀರವನ್ನು ರವಾನಿಸಿದರು.—ಕಾಳಯಾರಿಗೆ ಹಾಕಿರುವ ರಸ್ತೆಯು ಉದ್ದಕ್ಕೂ ಮಲಗಿಕೊಂಡೇ ಇದೆ. ಆದುದು ರಸ್ತೆಯಿಂದ ತಿರುಗಾಡುವ ಗಾಡಿಗಳ ಬೊಂಬೆಯನ್ನಾದರೂ ಲಾಲಿಸುವವರಿಲ್ಲವೆಂದು ಹೇಳುತ್ತಾರೆ.—ಹವ ಬಡಲಾಪದಿಂದ ಅನೇಕ ಮಕ್ಕಳು ಕೆಮ್ಮು ಜಡಿಗಳಲ್ಲಿ ಕೊಂದರೆಪಡುತ್ತಾರೆ.—ಕೆರೆ ಕಲ್ಲುಗಳಿಂದ ತಯಾರಾಗಿರುವ ಒಂದು ತರಂಡಿಯು ಐನದ ನೋಟಕ್ಕೆ ಜಲದ ಓಟಕ್ಕೆ ಸಮಂಜಸವಾಗಿ ಕಂಟ್ರಾಕ್ಟರ್ ಮತ್ತು ವರ್ಕ್ ಇನ್ಸ್‌ಪೆಕ್ಟರ ಮುತುವರ್ಜಿಯನ್ನು ವ್ಯಕ್ತಗೊಳಿಸುತ್ತೆ.—ಅಸಿಸ್ಟೆಂಟ್ ಕಮೀಷನರೂ ಈ ಊರಿಗೆ ಬರುತ್ತೇವೆಂದು ಸ್ವಲ್ಪ ಸ್ವಲ್ಪವೇ ಮಾಡುತ್ತಾರೆ. ಆದರೆ ಕಟ್ಟಡಗಳು ಪೂರೈಸಿದ ಮೇಲಲ್ಲವೇ!—ಗೌವರ್ನಮೆಂಟ್ ನಂಬರ್ [illegible] ಗಳನ್ನೇ ಎಲ್ಲರೂ ಉಪಯೋಗಿಸುವಂತೆ ಸರ್ಕಾರದವರು [illegible] ಮಾಡಿದಾರೆ ಪ್ರಜೆಗಳು ಬದುಕಿಕೊಂಡಾರು.—[illegible] ಪತ್ರಿಕೆಯಲ್ಲಿ ಪ್ರಕಟವಾಗುವ ಜನೋಪಕಾರದ ಅವಶ್ಯಕ ಬಿನ್ನವತ್ತಳೆಗಳನ್ನು ಮೇಲಧಿಕಾರಿಗಳು [illegible] ಪ್ರಶ್ನೆ ಮಾಡುತ್ತಾರೆ. ಒಂದೆ ನಡೆದ [illegible] ಗಳಿಂದ ನಮ್ಮ ಜೋಯಿಸನವರನ್ನು [illegible] ದ್ದೇನೆ. ಮತ್ತು ಮೊದಾಗಿ [illegible] ಹಿದ ಪುಷ್ಪಕ್ಕೆ ದೂರದ [illegible] ವಂತೆ ವೃತ್ತಾಂತ ಪತ್ರಿಕೆಯನ್ನು [illegible]. ಇದರ [illegible] ಮುಖದ ಕಷ್ಟಗಳಂತಿರುವವರು ಎಂಬ [illegible].

ಚಿತ್ರದುರ್ಗ:—ಈಗ ಒಂದೆರಡು ದಿವಸಗಳಿಂದ ಮಳೆಯ ಮುಖವನ್ನಾದರೂ ನೋಡುವಹಾಗಾಯಿತು. ಪ್ಲೇಗ್ ಚಳ್ಳಿಗಳು ಇದುವರೆಗೆ ತೋರಲಿಲ್ಲ. ಕ್ಯಾಂಪಿನಲ್ಲಿದ್ದ ರೋಗಿಗಳೆಲ್ಲರೂ ಕ್ಯಾಂಪಿನಿಂದ ಡಿಸ್‌ಚಾರ್ಜ್ ಆಗಿ ಸುಖದಿಂದ ತಿರುಗಾಡುತ್ತಿರುವರು. ಕ್ಯಾಂಪಿನಲ್ಲಿ ಇವರಿಗೆ [illegible] ಇರುವ [illegible] ಅಧಿಕಾರಿಗಳ ದಯಾರಸವು [illegible] ತುಂಬಾ [illegible] ಸರಿ. ಆದರೆ ಪ್ಲೇಗ್ ಕ್ಯಾಂಪಿನಲ್ಲಿ ರೋಗಿಗಳನ್ನು [illegible] ಕ್ಯಾಂಪಿನ ವಿಷಯದಲ್ಲಿ [illegible] ರೋಗಿಗಳು ಚಿಕಿತ್ಸೆ ಹೊಂದಿ [illegible] ಅಧಿಕಾರಿಗಳ [illegible] ತುಂಬಾ [illegible] ಇಲ್ಲದಂತಾಗುವದು.—ಕಳೆದ ವಾರ ನಮ್ಮ ಪ್ರೊಲೀಸ್ [illegible] ರಾತ್ರಿ ನಿದ್ರೆಮಾಡುತ್ತಿರುವ ವೇಳೆಯಲ್ಲಿ ಯಾರೋ ಇವರ ಮನೆಗೆ ನುಗ್ಗಿ, ಇವರಿಗಾದರೂ ಇವರ ಜೊತೆಯಲ್ಲಿ ಮಲಗಿದ್ದ ಇತರರಿಗಾದರೂ ಎಚ್ಚರವಿಲ್ಲದಂತೆ ಇವರ [illegible] ಪೆಟ್ಟಿಗೆಯನ್ನು [illegible] ಹೋಗಿ ಸಮೀಪದಲ್ಲಿದ್ದ ಒಂದು [illegible] ಹಾಕಿದ್ದರೆಂದೂ, [illegible] ನೋಡಲಾಗಿ [illegible] ನೀರಿನಿಂದ [illegible] ಕೆಲವು [illegible] ಸಿಕ್ಕಲಿಲ್ಲವೆಂತಲೂ ಗೊತ್ತಾಗಲಾಗಿ, ಇವರ [illegible] ಎಷ್ಟು ಹೇಳಿದರೂ [illegible] ಸರಿ. ಸದರಿ ಪೆಟ್ಟಿಗೆಯಲ್ಲಿ [illegible] ಯಾವದೂ ಇರಲಿಲ್ಲವೆಂತಲೂ [illegible] ರಿಕಾರ್ಡ್ [illegible] ಕೆಲವು [illegible] ಯಾರೋ ಸದರಿ [illegible] ಮೇಲಿನ ಜಪ್ತಿನಿಂದ ಹೀಗೆ [illegible] ಮನಸ್ಸನ್ನು [illegible] ಶ್ರೀಮನ್ಮಹಾರಾಜಾ ಶ್ರೀ ಕೃಷ್ಣರಾಜಒಡೆಯರವರ ಪಟ್ಟಾಭಿಷೇಕ ಮಹೋತ್ಸವ [illegible] ದಿವಸವು ನಮ್ಮ ದೇಶದ [illegible] ಈ ಸ್ಥಳದಲ್ಲಿ ಬೇರೆ ಬೇರೆ [illegible] ವೈಭವ [illegible] ಭಕ್ತಿಪೂರ್ವಕವಾಗಿಯೂ [illegible] ಸಿದ್ಧರಿಂದ ಆ ದಿವಸವು ಅತ್ಯಂತ ಉತ್ಸಾಹ [illegible] ಯಾವ ಸಂಶಯವೂ ಇಲ್ಲವು [illegible] ೧೦ ರಿಂದ ೧೨ ರವರಿಗೆ [illegible] ಅಧಿಕಾರಿಗಳೆಲ್ಲರೂ ಸೇರಿ [illegible] ನಂತರ ಮಧ್ಯಾಹ್ನದಲ್ಲಿ [illegible] ಬಾಲಕರಿಗೆ [illegible] ಉಪಾಹಾರಗಳನ್ನು ಹಂಚಿ, [illegible] ಪಶುಶಾಲೆಯಿಂದಲೂ [illegible] ಈ ಸಮ್ರಾಟರ ಕಾಲದಲ್ಲಿ [illegible] ಸರ್ಕಾರ [illegible] ಸೇರಿ, ಬೇರೆ ಬೇರೆ [illegible] ವಾದ್ಯಘೋಷಗಳೂ ಸಂಗೀತ [illegible] ಧ್ವನಿಗಳೂ [illegible] ಬಾಣ [illegible] ಆಟಗಳಿಂದ [illegible] ಧ್ವನಿಗಳೂ [illegible] ಸ್ಥಾನದ [illegible] ನೆರವೇರಿಸಿದರು. [illegible] ಟೆನ್ನಿಸ್ ಕೋರ್ಟಿನಲ್ಲಿ ಟೆನ್ನಿಸ್ ಟೋರ್ನಮೆಂಟನ್ನು [illegible] ಬಾಲಕ [illegible] ಗಂಧ [illegible] ಹಂಚಲ್ಪಟ್ಟವು. ಸಂ [illegible] ಅಂಗಸಾಧನೆಯಲ್ಲಿ ಗೆದ್ದ ಬಾಲಕರಿಗೆಲ್ಲಾ ಮಿಸೆಸ್ [illegible] ಯವರ ಮೂಲಕ ಬಹುಮಾನಗಳು ಹಂಚಲ್ಪಟ್ಟವು. ಅದೇ [illegible] ರಿಂದ ೧ ಗಂಟೆಯ ವರಿಗೂ [illegible] ಶೇಕ್ಸ್‌ಪಿಯರ್ ನಾಟಕವನ್ನು [illegible] ಮನಸ್ಸನ್ನು ಸಂತೋಷಕ್ಕೆ ತಿರುಗಿಸಿದರು. ಈ ರೀತಿ [illegible] ಆ ದಿನವು ಅತ್ಯಂತ ಸಂಭ್ರಮ [illegible] ಆನಂದ [illegible] ಇದೇ ರೀತಿ ಪ್ರತಿವರ್ಷವೂ [illegible] ಹಾರೈಸುತ್ತಾ ತಮ್ಮ ತಮ್ಮ ಮನೆಗೆ [illegible]

ಕೊಪ್ಪ.—ಈ ಕೊಪ್ಪದಲ್ಲಿ ಈಗ ಎರಡು ತಿಂಗಳಿಂದಲೂ [illegible] ಮಳೆ ಬಿಟ್ಟಿಲ್ಲ. ಅನೇಕ ಮನೆಗಳು ಮಳೆ [illegible] ಜನಗಳ [illegible] ಹೇಳಲು ಅಸಾಧ್ಯವಾಗಿರು [illegible] ಪ್ಲೇಗಿನ ಕಾಲದಲ್ಲಿ ಮನೆ ಬಿಟ್ಟು [illegible] ಮನೆಗಳಿಗೆ ಬಂದು ಸೇರದೆ ಇರುವದರಿಂದ ಕೆಲವು ಮನೆಗಳು ಬೀಳುವದಕ್ಕೆ ಅವಕಾಶವಾಯಿತು. ಮಾಸಕ್ಕೆ [illegible] ಅಸಾಧ್ಯವಾಗಿದೆ. [illegible] ಶೋಭಾಯ [illegible] ಮಳೆಯಿಂದ [illegible] ಕಷ್ಟಗಳೆಷ್ಟೆಂದು ಹೇಳತೀರದು.—ಈ [illegible] ಮೈಲು ದೂರದಲ್ಲಿ [illegible] ಎಂಬ [illegible] ಇಲ್ಲಿ ಸರ್ಕಾರಿ ತಾಲ್ಲೂಕ್ ಕಚೇರಿ, ಮುನಸೀಫರ [illegible] ಇಂಜಿನೀಯರಿಂಗ್ ಆಫೀಸ್ [illegible] ಸಬ್ [illegible] ಆಫೀಸ್‌ಗಳಲ್ಲದೆ ಸರ್ಕಾರಿ ಉದ್ಯೋಗಸ್ಥರ ವಾಸಕ್ಕೆ [illegible] ಸರ್ಕಾರದಿಂದ ಕಟ್ಟಿಸಿ [illegible] ಬಾಡಿಗೆಯನ್ನು [illegible] ಈ ಬಾಡಿಗೆಯಲ್ಲಿ [illegible] ಇಲ್ಲ. [illegible] ಸಿಕ್ಕುವದೇ ದುರ್ಲಭ. ಒಂದು [illegible] ಸಿಕ್ಕಿದಾಗ್ಯೂ ಬಹಳ ಪ್ರಿಯ.—ಇಲ್ಲಿ ಕೆಲವು [illegible] ರಿಗೆ ಅಂ [illegible] ಅಮಲ್ದಾರರಿಗೆ ಪೋಲೀಸ್ ಇನ್‌ಸ್ಪೆಕ್ಟರರಿಗೆ ಮಾಳಿಗೆ [illegible] ಪೋಲೀಸ್ [illegible] ಇಲಾಖೆಯವರಿಗೆ [illegible] ಈ ಕಷ್ಟಕರವಾದ ಮಲನಾಡಿನಲ್ಲಿ [illegible] ತೋರಿಸುವದು ತುಂಬಾ ಕಷ್ಟವಾಗಿದೆ.

[illegible] ಇಲ್ಲಿನ [illegible] ಅಧಿಕಾರಿಗಳು ಪರ್ಯಾಲೋಚಿಸಿ, ಅವರನ್ನು ಕಾಪಾಡುವದು ನ್ಯಾಯವಾಗಿದೆ.—ಇಲ್ಲಿನ ಪೋಲೀಸ್ ಮತ್ತು [illegible] ಇನ್‌ಸ್ಪೆಕ್ಟರ್ [illegible] ಗಳನ್ನು ನೇಮಿಸುವದು ತುಂಬಾ ಅನುಕೂಲ [illegible] ಇದ್ದದ್ದು ಅಲ್ಲಲ್ಲಿ [illegible] ಕೆಟ್ಟ [illegible] ಇತರರನ್ನು [illegible] [illegible] ಎಷ್ಟು [illegible]

[illegible] ಕಾರ್ಯಾಲಯದ [illegible] ಬದಲಾಗುವದಿಲ್ಲ ಎಂಬುದನ್ನು [illegible] ಅಧಿಕಾರಿಗಳನ್ನು [illegible] ಲಿಮಿಲ್ [illegible] ಅಮಲ್ದಾರರು, ಪೋಲೀಸ್ ಇನ್‌ಸ್ಪೆಕ್ಟರರೂ ಅಲ್ಲಿಗೆ [illegible] ಆಸಾಮಿಗಳ ಪಕ್ಷ [illegible] ನಡೆಸುವಲ್ಲಿ, [illegible] ಸಿಕ್ಕಿರುವ ಹಾಗೆ, ಆತನಿಂದ [illegible] ವರ್ತಮಾನವಿದೆ. [illegible] ದೆ ಗೊತ್ತಾಗುತ್ತೆ.

## [illegible]

"[illegible] ಒಬ್ಬ ಮನುಷ್ಯನು [illegible] ನೇ? ಇದೆಂಥಾ ಮಾತು? ಭೂಲೋಕದಲ್ಲಿ ಜನರು ಒಂದು [illegible] ತಿಯವರಲ್ಲ, ಒಂದು ಭಾಷೆಯವರಲ್ಲ, ಒಂದು ಮತದವರಲ್ಲ, ಒಂದು ಗುಣಗವರಲ್ಲ! ಮತ್ತು ಈ ಹೊತ್ತಿರುವವರು [illegible] ವರಲ್ಲ, ಇಲ್ಲಿ ಇರುವವರು ವ [illegible] ಸ್ಥಳದಲ್ಲಿರುವವರಾಗ [illegible] ಭೂಲೋಕ ವ್ಯಾಪಾರವು ಹೀಗಿರುವಲ್ಲಿ ಯಾವದೋ ಒಂದು ಕಾಲದಲ್ಲಿ ಜೀವಿಸುತ್ತಿರುವವನಾದ ಒಬ್ಬ ಮನುಷ್ಯನು ದೇಶಕಾಲ [illegible] ಸಕಲ ಮನುಷ್ಯರನ್ನು ರಕ್ಷಿಸುವದು ಸಾಧ್ಯವೇ? ಎಂದಿಗೂ ಇಲ್ಲ ಎಂದು ಆಕ್ಷೇಪಿಸಬಹುದು. ನೋಡಿದ ಮಾತ್ರಕ್ಕೆ [illegible] ತೋರುವ ಈ [illegible] ಭೂಲೋಕದ [illegible] ಚರಿತ್ರೆಯನ್ನು ಪರೀಕ್ಷಿಸಿದರೆ ವಿಶದವಾಗಿ ಗೊತ್ತಾಗುವದು. "ಒಬ್ಬನಿಂದ [illegible]?" ಎಂಬ ಪ್ರಶ್ನೆಯನ್ನು [illegible] ವಿಚಾರದಲ್ಲಿ ಕೇಳುವದನ್ನು ಬಿಟ್ಟು, ಬೇರೆ ವಿಷಯಗಳಲ್ಲಿ ಕೇಳಲಾಗಿ ಯಾವ ಉತ್ತರವು ಸಿಕ್ಕುವದೋ ನೋಡೋಣ.

೧. ಯಾವನೋ ಒಬ್ಬನು ಸಾವಿರಾರು ವರ್ಷಗಳ ಹಿಂದೆ [illegible] ಮರಗಳಿಂದ ಮದ್ಯವನ್ನು [illegible] ಉಪಾಯವನ್ನು ಕಂಡು ಹಿಡಿದನು. ಅವನ ತರುವಾಯ ಇತರರು ಆ ಉಪಾಯವನ್ನು ಇನ್ನೂ ವೃದ್ಧಿಗೆ ತಂದರು. ಆದರೆ ಇದನ್ನು ಭೂಲೋಕದಲ್ಲಿ ಮೊದಲು ಮಾಡಿದವನು ಒಬ್ಬನೇ. ಒಬ್ಬನು [illegible] ಇಂಥ ಸಂಪಾದನೆಗಾಗಿಯೋ [illegible] ಉಪಾಯವನ್ನು ಯಾವನೋ ಒಬ್ಬನು ಕಲ್ಪಿಸಿದನು. ಒಬ್ಬನು ಕಲ್ಪಿಸಿದ [illegible] ಭೂಲೋಕದಲ್ಲಿ [illegible] ಭಯಂಕರವಾದ [illegible] ವಿವರಿಸುವದಕ್ಕೆ ಮನುಷ್ಯನಿಗೆ ಸಾಧ್ಯವಲ್ಲ. [illegible]

ಟ್ರೋಯ್ ನಗರದಲ್ಲಿ [illegible] ಎಂಬೊಬ್ಬ ಚಕ್ರವರ್ತಿಯು [illegible] ಇವನು ಸ್ವಂತ [illegible] ಆ ನಗರಕ್ಕೆ [illegible] ತಾನು ಮಾಡಿದ [illegible] ಕ್ರಿಸ್ತಶಕ [illegible] ಅಲ್ಲಿ [illegible] ಆ ನಗರದಲ್ಲಿ [illegible] ಸಿಂಹಾಸನಾಧಿಪತಿಯಾಗಿದ್ದುಕೊಂಡು [illegible] ಸರ್ವಾಕ್ಷಸ [illegible] ಎಷ್ಟು [illegible] ಗ್ರಂಥದಿಂದ ಪರಿಷ್ಕಾರವಾಗಿ ತಿಳಿಯುವದು.

ಇದೇ ರೋಮ್ [illegible] ನಗರದ [illegible] ಅಲೆಕ್ಸಾಂಡರ್ ಎಂಬ [illegible] ಕಾಲದಲ್ಲಿ (ಕ್ರಿ. ಪೂ. ೧ನೇ ಶತಮಾನದಲ್ಲಿ) [illegible] ಚರಿತ್ರೆಗಳಿಂದ ತಿಳಿಯಬಹುದು. ಆ ಕಾಲದಲ್ಲಿ ಬರೆಯಲ್ಪಟ್ಟ [illegible] ಕಾಗದವನ್ನು ಇಲ್ಲಿ [illegible] [illegible]

[illegible] ಈ ದೇಶದ [illegible] ಚರಿತ್ರೆಯನ್ನೇ ಸಂಪೂರ್ಣವಾಗಿ ಬದಲಾಯಿಸತಕ್ಕ [illegible] ಪರಿಣಮಿಸಿದೆ. ಈ [illegible] ಮೊದಲು ಒಬ್ಬ [illegible] ಒಬ್ಬ ಮನುಷ್ಯನಿಂದ ಆಗಿರುವ ಈ ಫಲವನ್ನು [illegible] ಉಪಾಯವನ್ನು ಕಲ್ಪಿಸಿದ [illegible] ಉಪಾಯ [illegible] ಅನುಕೂಲಗಳು ಆಗಿರು [illegible] ಇದನ್ನು ಪರ್ಯಾಲೋಚಿಸಿ ನೋಡಿದರೆ ಈ ಉಪಾಯವನ್ನು ಕಲ್ಪಿಸಿದ ಒಬ್ಬ ಮನುಷ್ಯನಿಂದ ಲೋಕಕ್ಕೆ ಎಷ್ಟು ಉಪಕಾರವಾಗಿದೆಯೆಂದು ವಿವರಿಸುವದಸಾಧ್ಯ. ನಮ್ಮ ಕಾಲದಲ್ಲಿ [illegible] ವರ್ತಮಾನಗಳನ್ನು ಕಳುಹಿಸುವ ಉಪಾಯವನ್ನು [illegible] ಯೋಚನೆಯನ್ನು ಭೂಲೋಕದವರು ಮರೆಯುವರೇ?

ಈ ನ್ಯಾಯವನ್ನು ಪರ್ಯಾಲೋಚಿಸಿ ನೋಡಿದರೆ—"ಒಬ್ಬನ ಅವಿಧೇಯತ್ವದಿಂದ ಎಲ್ಲರೂ [illegible] ಒಬ್ಬನ ವಿಧೇಯತ್ವದಿಂದ ಎಲ್ಲರೂ [illegible]" [illegible] ಸಿದ್ಧಾಂತವು ಹೇಳುವಲ್ಲಿ ಈ ಮಾತನ್ನು [illegible] ನ್ಯಾಯವಾಗಿ ತೋರಲಾರದು. ಯೇಸುಕ್ರಿಸ್ತನೆಂಬ ಒಬ್ಬ ಪುರುಷನಿಂದ ಉಂಟಾಗಿರುವ ಫಲವನ್ನು ಪೂರ್ವ ಚರಿತ್ರೆಯಲ್ಲಿ ಮಾತ್ರ ನೋಡಬಹುದೋ? ಈಗಲಾದರೂ ಗೊತ್ತಾಗುವದಿಲ್ಲವೋ? ಆತನ ಸತ್ಯವೆಂಬ ಬೆಳಕನ್ನು ಈ ಭೂಮಂಡಲದ ಒಂದೊಂದು ಭಾಗದಲ್ಲಿ ಒಂದೊಂದು ಕಾಲದಲ್ಲಿ [illegible] ತಮ್ಮ [illegible] ವಿಷಯಾಸಕ್ತಿಗಳೆಂಬ ಕೆಟ್ಟ ಗಾಳಿಯಿಂದ [illegible] ಎಂಬಹಾಗೆ ಮಾಡುತ್ತಾ ಬಂದದ್ದರೂ ಇಂಥ [illegible] ಹೋಗದೆ ಮನುಷ್ಯಜಾತಿಯನ್ನು ಲೋಕದ ಸಕಲ ಭಾಗಗಳಲ್ಲಿಯೂ [illegible] ರೋಗಿಷ್ಠರನ್ನು [illegible] ದುಃಖಪಡುವವರನ್ನು [illegible] ಪಾಪಿಷ್ಠರಿಗೆ [illegible] ಎಂಬ ವಿರೋಧಿಯನ್ನು [illegible] ಭೂಲೋಕಕ್ಕೆ [illegible] ಹೇಳುವದರಲ್ಲಿ ಸಂದೇಹವಿರುವದಕ್ಕೆ [illegible] "ನಾನು ಭೂಮಿಯಿಂದ ಮೇಲಕ್ಕೆ ಎತ್ತಲ್ಪಟ್ಟಾಗ [illegible] ನನ್ನ ಬಳಿಗೆ ಎಳೆದುಕೊಳ್ಳುವೆನು" ಎಂದು ಆ ಯೇಸು [illegible] ನಂಬಿ ಆತನ [illegible] ಒಬ್ಬನಿಂದ ಭೂಲೋಕವೆಲ್ಲಾ ರಕ್ಷಿಸಲ್ಪಡುವದರಲ್ಲಿ ಸಂದೇಹವಿಲ್ಲ" ಎಂದು ಪ್ರತಿಯೊಬ್ಬರೂ ಹೇಳುವಂಥ ಅನುಭವವನ್ನು [illegible]

## [illegible] ವಿದ್ಯಾಭ್ಯಾಸ.

[illegible] ಎಂದರೆ, [illegible] (ಪ್ರೈಮರಿ [illegible]

... ಹಾಸಿಂ ಇಸ್ಪಹಾನಿ ಎಂಬ ಮೂರು ಮಂದಿ ದೊಡ್ಡ ಮನುಷ್ಯರು ಕಳೆದ ವಾರ ಬೆಂಗಳೂರಿಗೆ ಬಂದು, ಶ್ರೀಮನ್ ಮಹಾರಾಜರನ್ನು ಅರಮನೆಯಲ್ಲಿ ಕಂಡು, ದಕ್ಷಿಣ ದೇಶದಲ್ಲಿರುವ ಮಹಮ್ಮದೀಯರ ವಿದ್ಯಾಭ್ಯಾಸಕ್ಕೆ ಅವರಿಂದ ಸಹಾಯವೇನಾದರೂ ದೊರೆಯಲೆಂದು ಪ್ರಯತ್ನಪಟ್ಟರು. ಈ ದೊಡ್ಡಮನುಷ್ಯರನ್ನು ಪ್ರೈವೇಟ್ ಸೆಕ್ರೆಟರಿ ಮಿ|| ಮೊಕಾನಕಿರಿಯವರು ಎದುರುಗೊಂಡು ಕರೆದುಕೊಂಡು ಹೋಗಿ, ಮಹಾರಾಜರವರ ಭೇಟಿ ಮಾಡಿಸಿದರು. ಶ್ರೀಮನ್ ಮಹಾರಾಜರವರು ಆ ಮೂರು ಮಂದಿಯನ್ನೂ ಬಹು ವಿಶ್ವಾಸದಿಂದ ಕೈ ಕೊಟ್ಟು ಉಪಚಾರಗಳಲ್ಲಿ ಕ್ಷೇಮವಿಚಾರಿಸಿ, ಅವರ ಉದ್ದೇಶವನ್ನು ವಿಚಾರಿಸಿದ ತರುವಾಯ ಮಹಮ್ಮದೀಯ ಸಂಘದವರಾಗಿ ಮೌಲ್ವಿ ರಫಿಯುದ್ದೀನ್ ಅಹಮದ್‌ರವರು ಮಹಾರಾಜರನ್ನು ಕುರಿತು ಹೇಳಿಕೊಂಡದ್ದೇನಂದರೆ —

ತಾವು ಇಷ್ಟು ಪ್ರೀತಿಪೂರ್ವಕವಾಗಿ ನಮ್ಮನ್ನು ಸತ್ಕರಿಸಿದ್ದಕ್ಕಾಗಿ ನಾವೆಲ್ಲ ತುಂಬಾ ಕೃತಜ್ಞರಾಗಿರುವುದಲ್ಲದೆ ತಮ್ಮ ಸಮ್ಮುಖವನ್ನು ಕೊಂಡಾಡಿ ಬಹಳವಾಗಿ ವಂದಿಸುತ್ತೇವೆ. ಹಿಂದೂಸ್ಥಾನದಲ್ಲಿ ಈಗಿನ ಕಾಲದ ಮಹಮ್ಮದೀಯ ಪ್ರಜೆಗಳ ಶ್ರೇಷ್ಠ ವಿದ್ಯಾಭ್ಯಾಸವು ವಿರಳವಾಗಿರುವುದೂ, ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ ಶ್ರೀಮನ್ ಸರ್ಕಾರ್ ಸೀಮೆಯ ಅಧಿಕಾರಿಗಳೂ, ತಮ್ಮಂಥಾ ದೇಶೀಯ ಸಂಸ್ಥಾನಗಳ ಪ್ರಜಾಪಾಲಕರೂ ಸಾಹಸಪಡುತ್ತಿರುವುದೂ ತಮಗೆ ವೇದ್ಯವಾಗಿಯೇ ಇದೆ. ನಮ್ಮ ಜನರಲ್ಲಿ ವಿದ್ಯಾಭಿವೃದ್ಧಿಯು ಕಡಿಮೆಯಾಗಿರುವುದರಿಂದ ಅವರು ಇತರ ಪ್ರಜೆಗಳಿಗಿಂತ ಹಿಂದೆ ಬಿದ್ದಿದ್ದಾರೆ; ಮತ್ತು ಇದರಿಂದ ಇತರರೂ ಅಭಿವೃದ್ಧಿಗೆ ಬರಲು ಅಡಚಣೆಯಾಗಿರುವುದು. ದಕ್ಷಿಣ ದೇಶದಲ್ಲಿರುವ ಮುಸಲ್ಮಾನರು ಇತರ ಭಾಗಗಳಲ್ಲಿರುವ ಮುಸಲ್ಮಾನ ಜನರಿಗಿಂತ ವಿದ್ಯಾ ವಿಷಯದಲ್ಲಿ ತುಂಬಾ ಹಿಂದೆಬಿದ್ದಿದ್ದರು. ಇಂಥಾ ಕೆಡಕು ದಿನೇ ದಿನೇ ಹೆಚ್ಚುತ್ತಾ ಬಂದಿತು. ಇತರರೂ ಇದರಂತೆಯೇ [illegible] ಅನರ್ಹವಾಯಿತು. ಈ ದೊಡ್ಡ ಕೇಡನ್ನು ಮುಸಲ್ಮಾನ ಮುಖಂಡರ ಕೆಲವು ಮಹಸ್ಸರು ನೋಡಿ, ಅದನ್ನು ಪರಿಹರಿಸುವುದಕ್ಕೆ ಉಪಾಯಗಳನ್ನು ಕಂಡು ಹಿಡಿಯಬೇಕೆಂದು ನಿಶ್ಚಯಿಸಿ ಇದಕ್ಕಾಗಿ ಒಂದು ಸಂಘವನ್ನು ಮದರಾಸಿನಲ್ಲಿ ಏರ್ಪಡಿಸಿದ್ದಾರೆ. ಈ ಸಂಘಕ್ಕೆ ಮಿ|| ಜಸ್ಟಿಸ್ ಟೈಯಬ್ಜಿ ಯವರು ಪ್ರೆಸಿಡೆಂಟಾಗಿರುವರು. ದಕ್ಷಿಣ ದೇಶದ ಮುಸಲ್ಮಾನರು ವಿದ್ಯಾ ವಿಷಯದಲ್ಲಿ [illegible] ಈ ಸಂಘವು [illegible]. ಸಂಘದವರು ಮುಸಲ್ಮಾನರಿಗೆ ಶ್ರೇಷ್ಠ ವಿದ್ಯೆಯನ್ನು ಕಲಿಸುವುದಕ್ಕಾಗಿ ನಾನಾ ಏರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. [illegible] ದಕ್ಷಿಣದ ಎಲ್ಲಾ ಭಾಗಗಳಿಂದಲೂ [illegible] ವಿದ್ಯಾರ್ಥಿಗಳು ಮದರಾಸಿಗೆ ಬರುತ್ತಾರೆ. ಇವರು ಅಲ್ಲಿ [illegible] ಅನುಕೂಲವಾದ ಸ್ಥಳವಿಲ್ಲ, [illegible] ಮುಂತಾದ್ದನ್ನು ನೋಡಿಕೊಳ್ಳಲು [illegible]. [illegible] ವಿದ್ಯಾರ್ಥಿಗಳಿಗಾಗಿ ಮದರಾಸಿನಲ್ಲಿ ಒಂದು ವಿದ್ಯಾರ್ಥಿ ನಿಲಯವನ್ನು [illegible]. [illegible] ದೇಶಕ್ಕೆ ಸೇರಿದ [illegible] ಈ ನಿಲಯಕ್ಕೆ [illegible] ವಿದ್ಯಾರ್ಥಿಗಳ [illegible] ಅಧಿಕಾರಿಗಳನ್ನಿಟ್ಟು [illegible]. ಈ ನಿಲಯವು [illegible] ೧೫೦ ರೂ. [illegible] ೪೦,೦೦೦ ರೂ. [illegible]. [illegible] ಲಾರ್ಡ್ ಪೆಂಟ್ಲೆಂಡ್ ರವರು [illegible] ೩೦,೦೦೦ ರೂ. [illegible] ಇದೇ ನಮ್ಮ [illegible].

[illegible] ವಿದ್ಯಾರ್ಥಿನಿಲಯವನ್ನು [illegible] ದೇಶದ ಮುಸಲ್ಮಾನರು [illegible] ಎಲ್ಲರಿಗೂ [illegible] ವಿದ್ಯಾರ್ಥಿ ನಿಲಯವನ್ನು ಕಟ್ಟಬೇಕೆಂತ [illegible] ಸಿದ್ಧೇಯು ನಮ್ಮ ಜನರಲ್ಲಿ ಬೇಗನ ಹರಡಲು ಅನುಕೂಲವಾಗುತ್ತದೆಂದಲೂ ಯೋಚಿಸಿರುತ್ತೇವೆ. ಇದಕ್ಕಾಗಿ [illegible] ೭,೦೦೦ ರೂ. [illegible] ೧೬,೦೦೦ ರೂ. [illegible] ತಾವು ಇದರ ವಿಷಯಗಳಲ್ಲಿ [illegible] ಮಾಡಬೇಕೆಂಬುದಾಗಿ [illegible] ಬೇಡಿಕೊಳ್ಳುತ್ತೇವೆ. ಮೈಸೂರು [illegible] ಅನೇಕ ವಿಷಯಗಳಲ್ಲಿ [illegible] ನಡಿಸಿ ತುಂಬಾ ಹೆಸರುವಾಸಿಗೆ ಬಂದಿರುವುದು, ಹಿಂದೂಸ್ಥಾನದ ದೇಶೀಯ ಸಂಸ್ಥಾನಗಳಲ್ಲೆಲ್ಲಾ ತುಂಬಾ ಅಭಿವೃದ್ಧಿಗೆ ಬಂದುದೆಂದು ಕೀರ್ತಿಯನ್ನು ಸಂಪಾದಿಸಿಕೊಂಡಿದೆ. [illegible] ಮದರಾಸಿಗೆ ಹೋಗಿ ವಿದ್ಯಾಭ್ಯಾಸಮಾಡುತ್ತಿರುವ ಮುಸ್ಲಿಂ ವಿದ್ಯಾರ್ಥಿಗಳು ಆಗಲೀ ಆ ವಿದ್ಯಾರ್ಥಿ ನಿಲಯಕ್ಕೆ ತಮ್ಮನ್ನು ಸೇರಿಸಿಕೊಳ್ಳಬೇಕೆಂದು ಅರ್ಜಿ ಬರೆದುಕೊಂಡಿದ್ದಾರೆ. ಆ [illegible] ವೇತನಗಳನ್ನು ಹೊಂದುವುದಕ್ಕೆ ಯೋಗ್ಯತೆಯನ್ನು ಪಡೆದವರಲ್ಲಿ ಬಹುಮಂದಿ ಮೈಸೂರು ಸಂಸ್ಥಾನಕ್ಕೆ ಸೇರಿದವರಾಗಿರೂ ಇರಬಹುದು. ಹೈದರಾಬಾದ್ ಸಂಸ್ಥಾನದ ನೈಜಾಮರವರು ಈ ಸಂಘದವರಿಗೆ ವಿಶೇಷವಾದ ಸಹಾಯವನ್ನು ಮಾಡುವವರಾಗಿ [illegible]. ಆದಕಾರಣ ತಾವು ಈ ನಮ್ಮ ಉದ್ದೇಶಕ್ಕಾಗಿ ಸಹಾಯಮಾಡಬೇಕೆಂದು ಪ್ರಾರ್ಥಿಸುತ್ತೇವೆ.

**ತರುವಾಯ ಶ್ರೀಮನ್ ಮಹಾರಾಜರವರು ಆ ದೊಡ್ಡಮನುಷ್ಯರನ್ನು ಸಂತೈಸಿ ಕಳುಹಿಸಿಕೊಟ್ಟು, ಅವರಿಗೆ ಪ್ರತ್ಯೇಕವಾಗಿ— [illegible] ಸಹಾಯಮಾಡುವುದಕ್ಕೆ [illegible] ನಾನು ತುಂಬಾ ಸಂತೋಷಪಡುತ್ತೇನೆ, ನಾವು ಆಲೋಚನೆ ಮಾಡಿ ನಮ್ಮ ಗೌರ್ನಮೆಂಟಿನಿಂದ ಎಷ್ಟು ಮಟ್ಟಿಗೆ ಈ ಕಾರ್ಯಕ್ಕೆ ಸಹಾಯ ಮಾಡಬಹುದೋ ಬೇಗನೇ ಗೊತ್ತುಮಾಡಿ ತಿಳಿಸುತ್ತೇವೆ ಎಂಬುದಾಗಿ ಅಪ್ಪಣೆ ಕೊಡಿಸಿ ಅವರನ್ನು ಕಳುಹಿಸಿಕೊಟ್ಟರು.**

ಅನಂತರ ಆ ದೊಡ್ಡಮನುಷ್ಯರು ರೆಸಿಡೆಂಟರನ್ನು ಭೇಟಿಮಾಡಿ ಅವರಿಂದಲೂ ಮಾಗ್ಗ್ಯವನ್ನು ಪಡೆದು ವಾಪಸು ಮದರಾಸಿಗೆ ಹೊರಟುಹೋದರು.

## ವಿದೇಶ ವರ್ತಮಾನಗಳು.

ರಷ್ಯಾ ರಾಜ್ಯದ ಚಕ್ರವರ್ತಿಯವರು ಇಷ್ಟರಲ್ಲೇ ವಿಲಾಯತಿಗೆ ಹೋಗಿಬರುವವರಾಗಿದ್ದಾರೆಂದು ವರ್ತಮಾನವಿದೆ.

****

ಯೂರೋಪ್ ಖಂಡದಲ್ಲೆಲ್ಲಾ ಕುರುಡರ ಸಂಖ್ಯೆಯು ಸ್ಪೇಯಿನ್, ನಾರ್ವೆ, ಐರ್ಲೆಂಡುಗಳಲ್ಲೇ ಬಹಳ ಹೆಚ್ಚು.

****

ದಕ್ಷಿಣ ಆಫ್ರಿಕದಲ್ಲಿ ಕೂಲೀ ಕೆಲಸ ಮುಂತಾದ್ದು ಮಾಡುವುದಕ್ಕೆ ಎರಡು ಲಕ್ಷ ಚೀನೀಯರನ್ನು ಕಳುಹಿಸಿಕೊಡುತ್ತೇವೆಂದು ಚೀನಾ ಅಧಿಕಾರಿಯು ಈಚೆ ವರ್ತಮಾನ ಕೊಟ್ಟಿದ್ದಾನೆ.

****

ವಿಲಾಯತಿ ರಾಜ್ಯದ ಯುದ್ಧದ ಇಲಾಖೆಯ ಸೆಕ್ರೆಟರಿಯವರು ಸೈನ್ಯಕ್ಕೆ ಇನ್ನುಮೇಲೆ ೧೪ ವರುಷ ತುಂಬಿದ ಇರುವಂಥಾ ಚಿಕ್ಕ ಹುಡುಗರನ್ನು ಸೇರಿಸಿಕೊಳ್ಳಕೂಡದೆಂದು ಹುಕುಂ ಕೊಟ್ಟಿದ್ದಾರೆ.

****

ಮ್ಯಾಸಿಡೋನಿಯದಲ್ಲಿ ತುರ್ಕಿ ರಾಜ್ಯದವರ ಮೇಲೆ ಯುದ್ಧ ಮಾಡುವುದಕ್ಕಾಗಿ ಒಬ್ಬ ಹೆಂಗಸು ಸೈನ್ಯಾಧಿಪತಿಯಾಗಿ ನಿಂತು, ಕೆಲವು ಮಂದಿ ಹೆಂಗಸರನ್ನೇ ಸೈನಿಕರನ್ನಾಗಿ ಆರಿಸಿ, ನೇಮಿಸಿಕೊಂಡಿದ್ದಾಳೆ. ಇದಲ್ಲವೇ ಸ್ತ್ರೀ ಶೌರ್ಯ !

****

ಸ್ವೀಡನ್ ರಾಜ್ಯದ ರಾಣಿಯು ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡ ಸಂಸಾರಿ ಎಂದು ತಿಳಿದುಬಂದಿದೆ. ಆತನಿಗೆ ಇಬ್ಬರು ಪಟ್ಟದ ರಾಣಿಯರೂ, ೧೪ ಮಂದಿ ರಾಣಿಯರೂ ಇರುತ್ತಾರೆ. ಮತ್ತು ಎಪ್ಪತ್ತೆರಡು ಮಂದಿ ಗಂಡು ಹೆಣ್ಣು ಮಕ್ಕಳನ್ನು ಪಡೆದಿರುವರು.

****

ವಿಲಾಯತಿಯ ಮಹಾರಾಜ ಚಕ್ರವರ್ತಿಯವರು ಐರ್ಲೆಂಡಿನಲ್ಲಿ ಸಂಚರಿಸುವಾಗ್ಗೆ ಅವರ ಜನ್ಮಸ್ವರ್ಣದಿಂದ ಡಬ್ಲಿನ್ ನಗರದ ಆಸ್ಪತ್ರೆಗಳ ಸಹಾಯಕ್ಕೆ ಲಾರ್ಡ್ ಐವಿ ಯವರು ತಮ್ಮ ಸ್ವಂತ ಆಸ್ತಿಯಿಂದ ೫೦,೦೦೦ ಪೌಂಡುಗಳನ್ನು ಧರ್ಮಾರ್ಥವಾಗಿ ಕೊಡಿಸಿದರು.

****

ಈ ತಿಂಗಳ ಅಂತ್ಯದಲ್ಲಿ ಗ್ರೀಸ್ ದೇಶದ ಯುವರಾಜರಿಗೆ ವಿವಾಹವಾಗುವುದು. ಇಂಗ್ಲೆಂಡ್, ಜರ್ಮನಿ, ಡೆನ್ಮಾರ್ಕ್, ಗ್ರೀಸ್, ಈ ಮುಂತಾದ ಯೂರೋಪ್ ರಾಜ್ಯಗಳ ನೃಪರುಗಳು ಪತ್ನಿ ಪರಿವಾರ ಸಮೇತರಾಗಿ ಅಲ್ಲಿಗೆ ದಯಮಾಡಿ, ವಧೂವರರನ್ನು ಆಶೀರ್ವದಿಸಿ ಬರುವವರಾಗಿದ್ದಾರೆ.

****

ದಕ್ಷಿಣ ಆಫ್ರಿಕದ ಮಹಾಧಿಕಾರಿಗಳಾದ ಲಾರ್ಡ್ ಮಿಲ್ನರ್ ರವರು ರಜಾ ಪಡೆದು ವಿಲಾಯತಿಗೆ ಹೋಗಿ ಬರುವವರಾಗಿದ್ದಾರೆ. ಜೋಹಾನ್ಸ್‌ಬರ್ಗ್‌ನಲ್ಲಿ ಸುಮಾರು ೧,೨೦೦ ಪ್ರಜೆಗಳೂ ದೊಡ್ಡ ಮನುಷ್ಯರೂ ಸಭೆಸೇರಿ ಲಾರ್ಡ್ ಮಿಲ್ನರ್ ಯವರಿಗೆ ಭಾರೀ ಔತಣವನ್ನು ಮಾಡಿದರು.

****

ಮೊರಾಕೊ ಸೀಮೆಯಿಂದ ದರ್ಬಾರ್ ರಾಜ್ಯಕ್ಕೆ ಗೋಧಿಯು ನಿಷೇಧವಾಗಿ ರವಾನೆಯಾಗುತ್ತಿತ್ತು. ಈ ವರ್ಷ ರಷ್ಯಾದವರು ಅದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟರು. ಆ ಗೋಧಿಯನ್ನೆಲ್ಲಾ ತಾವೇ ಕೊಂಡುಕೊಳ್ಳಲು ತಮಗೆ ಬೇಕಾಗುವುದೆಂದು ಕೂಡ ತಿಳಿಸುತ್ತಾ ಬಂದಿರುತ್ತಾರೆ.

****

ಫ್ರಾನ್ಸ್ ರಾಜ್ಯಕ್ಕೆ ಸೇರಿದ ವೇದಾರ್ ಎಂಬ ಊರಿನಲ್ಲಿ ಸರ್ಕಾರಗಳಿಗಾಗಿ ಒಂದು ಮಠಸ್ಥಾನವನ್ನು ಕಟ್ಟಿಸಿದ್ದಾರೆ. ಅದರಲ್ಲಿ ಸುಮಾರು ೧,೦೦೦ [illegible] ಇರುವರು. ಜನರು ಅವುಗಳನ್ನು ಪೂಜಿಸುತ್ತಾ, ಅವುಗಳಿಗೆ ಹಾಲು ರೊಟ್ಟಿ, ಹಣ್ಣು ಮೊದಲಾದ ಪದಾರ್ಥಗಳನ್ನು ಕೊಟ್ಟು ಸಾಕುತ್ತಿದ್ದಾರೆ.

****

ಜರ್ಮನಿ ಚಕ್ರವರ್ತಿಯವರಿಗೆ ೧೧ ವರ್ಷದ ಪುತ್ರಿಯೊಬ್ಬಳು ಇರುವಳು. ಈ ರಾಜಕನ್ಯೆಯು ತರಹಾವರಿ ಅಡಿಗೆ ಕಲಿತುಕೊಳ್ಳುವಂತೆ ಅಪ್ಪಣೆ ಕೊಟ್ಟು, ಅದನ್ನು ಕಲಿಸುವುದಕ್ಕೆ ಪ್ರತ್ಯೇಕವಾದ ಕಟ್ಟಡವನ್ನು ಅರಮನೆಯಲ್ಲಿ ಬಿಡಿಸಿಕೊಟ್ಟು ಶಿಕ್ಷಕರನ್ನು ಸಹ ಚಕ್ರವರ್ತಿಯವರು ನೇಮಿಸಿರುವರು.

****

ದಕ್ಷಿಣ ಆಫ್ರಿಕದಲ್ಲಿ ಕ್ಯಾಪ್ಟನ್ ಜೋರ್ಡನ್ ಎಂಬಾತನಿಗೆ ಸಿಕ್ಕಿರುವ ವಜ್ರವೇ ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದೆಂದು ಹೇಳುತ್ತಾರೆ. ಅದು ೯೭೦ ಕ್ಯಾರೆಟ್ ತೂಕ ಉಳ್ಳದ್ದು. ಒಂದು ವರೆ ಕೋಟಿ ರೂಪಾಯಿ ಕ್ರಯವಾಗುವುದು. ಇದನ್ನು ಈಗ ಆಂಸ್ಟರ್ಡಾಂ ನಗರದಲ್ಲಿ ಉಜ್ಜಿ ಪಟ್ಟೆ ಹಾಕುತ್ತಿದ್ದಾರೆ.

****

**ಕಳೆದ ೧೦ ನೇ ಆರೀಖಿನಲ್ಲಿ ಕೊರಿಯಾದೇಶ ಡಿಸ್ಟ್ರಿಕ್ಟಿನಲ್ಲಿ ರೈಲ್ ಗಾಡಿಗೆ ಅಪಾಯವಾಗಿ ಗಾಡಿಗಳೆಲ್ಲಾ ಅರ್ಕನ್ಸಾಸ್ ಎಂಬ** ಸುಮಾರು ೫,೦೦೦ ಅಡಿ ಕೆಳಗಿದ್ದ ನದಿಯೊಳಕ್ಕೆ ಮಗುಚಿಕೊಂಡವು. ಒಳಗಿದ್ದವರೂ ರೈಲ್ವೆ ನೌಕರರೂ ಸತ್ತುಹೋದರು. ನಾಮರೂಪಗಾಣದಿಯಾದ್ದರಿಂದ ಹೆಚ್ಚು ಜನರು ಸಾಯಲಿಲ್ಲ. ವಿಶೇಷವಾಗಿ ವ್ಯಾಪಾರಸಾಮಗ್ರಿಗಳು ನಷ್ಟವಾದವು.

****

ಅಮೇರಿಕಕ್ಕೆ ಸೇರಿದ ವಾಷಿಂಗ್ಟನ್ ನಗರದ ಜೆಲ್ತ್ ಆಫೀಸರಾದ ಡಾಕ್ಟರ್ ಸ್ಟೈಲ್ಸ್‌ಯವರು ಒಂದು ತರಹ ಹುಳುವನ್ನು ಕಂಡುಹಿಡಿದಿದ್ದಾರೆ. ಈ ಹುಳುಗಳು ಸೊಳ್ಳೆಗಳನ್ನು ಬಹು ಬೇಗನೆ ಹಿಡಿದು ತಿನ್ನುತ್ತವೆ. ಅವರು ಇಂಥಾ ಹುಳುಗಳನ್ನು ಸಾಕಿ ಕೊಳ್ಳುವುದರಿಂದ ಸೊಳ್ಳೆಗಳನ್ನು ಕೊಂದುಹಾಕುತ್ತಿದ್ದಾರೆ. ಇದರಿಂದ ಆ ಪಟ್ಟಣದಲ್ಲಿ ಸೊಳ್ಳೆಗಳ ಕಡಿತದಿಂದುಂಟಾಗುವ ಕಷ್ಟ ವ್ಯಾಧಿಗಳೇನೋ ತುಂಬಾ ಕಡಿಮೆಯಾಗಿರುವವು.

****

ಕೊರಿಯಾ ರಾಜ್ಯದ ಚಕ್ರವರ್ತಿ [illegible] ಅನೇಕ ಒಬ್ಬ ವಿಧವೆ ಹಾದ್ರಿಯ ಮಗಳನ್ನು—ಎಮಿಲಿಯಾ ಎಂಬಾಕೆಯನ್ನು ಮದುವೆಮಾಡಿಕೊಂಡಿದ್ದಾರೆ. ಈ ವಿವಾಹವಾಗಿ ಕೆಲವು ವರುಷಗಳಾದವು. ಆಕೆಯನ್ನು ಪಟ್ಟದ ರಾಣಿಯೆಂದು ಕರೆಯುವರು; ಮತ್ತು ಆಕೆಯ ಹೊಟ್ಟೆಯಲ್ಲಿ ಹುಟ್ಟುವ ಮಕ್ಕಳಿಗೇ ರಾಜ್ಯದ ಪಟ್ಟವು ದೊರಕುವಂತೆ ಚಕ್ರವರ್ತಿಯವರು ಮಾಡಿಕೊಟ್ಟು ಮದುವೆಮಾಡಿಕೊಂಡಿದ್ದಾರೆ ಎಂಬುದಾಗಿ ಅಲ್ಲಿನ ಒಂದು ಪತ್ರಿಕೆಯು ತಿಳಿಸುವುದು.

****

ಜನೀವಾ ಪಟ್ಟಣದಲ್ಲಿ ಸ್ಕೂಲ್ ಹುಡುಗರಿಗೆ ವಿನೋದವನ್ನು ಕಲ್ಪಿಸಿ ತಿಂಡಿಗಳನ್ನು ಕೊಟ್ಟರು. ಸುಮಾರು ೫,೦೦೦ ಹುಡುಗರು ಸೇರಿ ಆಟವಾಡಿ ತಿಂಡೀ ತಿಂದರು. ತರುವಾಯ ಅವರಿಗೆಲ್ಲಾ ಕಿಲುಬಿನ ವಿಷ ಕತ್ತಿದಂತಾಗಿ ನೂರಾರು ಮಂದಿ ವಾಂತಿ ಭ್ರಾಂತಿ ಹಿಡಿದು ಕಾಯಿಲೆ ಬಿದ್ದುಕೊಂಡಿದ್ದಾರೆ. ಆ ಪೈಕಿ ಬಹು ಮಂದಿ ಮಕ್ಕಳು ಬದುಕುವುದು ಕಷ್ಟವೆಂದು ಹೇಳುತ್ತಾರೆ. ಮಂಜಿನ ಗಡ್ಡೆಯಲ್ಲಿ ಮಾಡಿದ್ದ ಕ್ರೀಮ್ ಪದಾರ್ಥವು ಕೆಟ್ಟುಹೋಗಿದ್ದುದಾಗಲೂ ಅದರಿಂದಲೇ ಈ ಅನಾಹುತಕ್ಕೆ ಕಾರಣವಾದದ್ದಾಗಲೂ ವರ್ತಮಾನವಿದೆ.

****

ರಷ್ಯಾ ರಾಜ್ಯಕ್ಕೆ ಸೇರಿದ ಕಾಕಸಸ್, ಒಡೆಸ್ಸಾ, ಬಾಕು ಮೊದಲಾದ ಪ್ರಾಂತ್ಯಗಳಲ್ಲಿ ಕೂಲಿಕಾರರು ಜೀವನಕ್ಕೆ ಮಾರ್ಗವಿಲ್ಲದೆ ದಂಗೆಯೆದ್ದಿರುತ್ತಾರೆ. ಇವರು ರೈಲ್ ಗಾಡಿಗಳನ್ನು ತಡೆದು ನಿಲ್ಲಿಸಿ ಒಡೆದು ಲೂಟಿಮಾಡಿದರು. ಕಾರ್ಖಾನೆಗಳಿಗೆ ನುಗ್ಗಿ ಕೊಳ್ಳೆ ಹೊಡೆದರು. ಅನೇಕ ಕಟ್ಟಡಗಳನ್ನು ನೆಲಸಮ ಮಾಡಿದರು. ಇದನ್ನೆಲ್ಲಾ ಅಡಗಿಸುವುದಕ್ಕೆ ಸರ್ಕಾರಿ ಸೈನಿಕರು ಅವರ ಮೇಲೆ ಬಿದ್ದು ಗುಂಡು ಹೊಡೆದು, ಇದುವರೆಗೆ ನೂರಾರು ಮಂದಿಯನ್ನು ಕೊಂದುಹಾಕಿದರು. ಅನೇಕರು ಗಾಯಪಟ್ಟು ನರಳುತ್ತಿದ್ದಾರೆ. ಇನ್ನೂ ದಂಗೆಯೇನೋ ಮುಕ್ತಾಯವಾಗಲಿಲ್ಲ.

****

ವಿಲಾಯತಿ ರಾಜ್ಯಕ್ಕೆ ಸೇರಿದ ವರ್ಸೆಸ್ಟರ್ ನಗರದಲ್ಲಿ ಒಂದು ಹಸುವು ಒಂದು ಅಂಗಡಿಯ ಮುಂದೆ ಹೋಗುತ್ತಾ ಇದ್ದು ಒಂದು ರೊಟ್ಟಿಯನ್ನು ಕಂಡಿತು. ಅದರಲ್ಲಿದ್ದ [illegible] ಯನ್ನು ತಿಂದಿತು, ಮಾರುದಿನ ಸತ್ತುಹೋಯಿತು. ಆ ಅಂಗಡಿಯವನಿಗೂ, ಹಸುವಿನ ಯಜಮಾನನಿಗೂ ಆ ರೊಟ್ಟಿಯಲ್ಲಿದ್ದುದು ವಿಷ ಎಂಬ ಸಂಗತಿ ತಿಳಿಯದೆ ಇದ್ದರೂ ಹಸು ಕಾಯಿಯನ್ನು ತನಗೆ ನೋಡುತ್ತಾ ತಿಂದಿದ್ದರು. ಹಸುವಿನ ಯಜಮಾನನು ಅಂಗಡಿಯವರ ಮೇಲೆ ಫಿರ್ಯಾದು ಮಾಡಲು ನ್ಯಾಯಾಧಿಪತಿಯು ಅಂಗಡಿಯವನದೇ ತಪ್ಪೆಂದು ಗೊತ್ತುಮಾಡಿ, ಹಸುವಿನ ಯಜಮಾನನಿಗೆ ೬೦ ರೂಪಾಯಿ ಕೊಡಿಸಿದರು.

****

ಚೀನಾ ರಾಜ್ಯದಲ್ಲಿ ಸೂಚುಪ್ರೋ ಎಂಬ ಹೆಸರಿನ ವರ್ತಮಾನ ಪತ್ರಿಕೆಯೊಳಗೆ ನವನಾಗರಿಕರಾದ ಕೆಲವರು ಚಕ್ರವರ್ತಿಯ ಮೇಲೂ ಅವರ ಆಸ್ಥಾನದ ಅಧಿಕಾರಿಗಳ ಮೇಲೂ ಸ್ವಲ್ಪ ಕಟುವಾದ ಮಾತುಗಳನ್ನು ಪ್ರಯೋಗಿಸಿ, ಅವರ ದುರಾಡಳಿತಕ್ಕೆ ಕೆಲವು ಟೀಕೆಗಳನ್ನು ಬರೆದರು. ಚಕ್ರವರ್ತಿಯವರು ಕೋಪೋದ್ರೇಕರಾಗಿ ಆ ಪತ್ರಿಕೆಯನ್ನು ನಡೆಸುತ್ತಿರುವ ಆರು ಮಂದಿಯನ್ನು ಹಿಡಿದು ಕೊಲ್ಲಬೇಕೆಂದು ಆಜ್ಞೆ ಮಾಡಿದರು. ಪರ ರಾಜ್ಯದ ರಾಯಭಾರಿಗಳೂ ಇನ್ನು ಕೆಲವರು ಸೇರಿ ಹೀಗೆ ಶಿಕ್ಷಿಸುವುದು ನ್ಯಾಯವಲ್ಲವೆಂಬುದಾಗಿಯೂ, ದಯಾದೃಷ್ಟಿ ಮಾಡಬೇಕೆಂದೂ ಸರ್ಕಾರದವರ ಸಂಗಡ ಹೋರಾಡುತ್ತಿದ್ದಾರೆ.

****

ಇಂಗ್ಲೀಷರು ವಿಶೇಷ ಕಾಲಗಳಲ್ಲಿ ಭೋಜನ ಮುಂತಾದ್ದು ಮಾಡುವಾಗ್ಗೆ ಚಕ್ರವರ್ತಿಯವರ ಆರೋಗ್ಯವನ್ನು ಬಯಸಿ, ಎಲ್ಲರೂ ಸ್ವಲ್ಪ ಸ್ವಲ್ಪ ಮದ್ಯವನ್ನು ಕುಡಿಯುವ ವಾಡಿಕೆಯುಂಟು. ಒಬ್ಬನೊಬ್ಬ ಸೈನ್ಯಾಧಿಪತಿಯು ಚಕ್ರವರ್ತಿಯವರಿಗೆ ಒಂದು ಕಾಗದ ಬರೆದು—ಇನ್ನು ಮುಂದೆ ಯಾರೂ ಈ ಅರ್ಥದಲ್ಲಿ ಮದ್ಯಪಾನ ಮಾಡದಂತೆಯೂ, ಸ್ವಲ್ಪ ನೀರನ್ನು ಕುಡಿಯುವಂತೆಯೂ ಅಪ್ಪಣೆ ಮಾಡಬೇಕು ಎಂಬುದಾಗಿ ಬೇಡಿಕೊಂಡನು. ಚಕ್ರವರ್ತಿಯವರು ಉತ್ತರಕ್ಕೆ ಅವನಿಗೆ ತಿಳಿಸಿರುವುದೇನಂದರೆ—ಈ ಭಾಗದಲ್ಲಿ ನಾನು ಸಾರ್ವತ್ರಿಕವಾದ ಹುಕುಂ ಕೊಡುವುದು ಯೋಗ್ಯವಲ್ಲ. ಅನೇಕರ ಅಭಿಪ್ರಾಯಕ್ಕೆ ಇದು ವಿರೋಧವಾಗಿ ಪರಿಣಮಿಸಬಹುದು. **ಆದರೆ ಇಂಥಾ ಸಂದರ್ಭಗಳಲ್ಲೆಲ್ಲಾ ಮದ್ಯಕ್ಕೆ ಬದಲಾಗಿ ಶೀತ ನೀರನ್ನು ಜನರು ಉಪಯೋಗಿಸಿದ ಪಕ್ಷಕ್ಕೆ ನನಗೆ ತುಂಬಾ ಸಂತೋಷವುಂಟಾಗುವುದು. ಈ ಸಂಗತಿಯನ್ನು ಸಕಲ ಜನರಿಗೂ ತಿಳಿಯಪಡಿಸಬಹುದಾಗಿದೆ.**

## ಒಳ್ಳೇ ಔಷಧಗಳು.

6

ನಯನವ್ಯಾಧಿಗೆ ಸುಜಾಂಜನವು.—ಹೊಸತಾಗಿ ಅಥವಾ ಬಹು ಕಾಲದಿಂದ ಕಣ್ಣಿನಲ್ಲಿ ಇರುತ್ತಿದ್ದ ಎಲ್ಲ ಪ್ರಕಾರದ ಬಾಧೆಗಳು ಇದರಿಂದ ಬಹು ಬೇಗನೆ ಗುಣ ಹೊಂದುವವು. ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು, ಪಿಸರೂ ಬರುತ್ತಿರುವದೂ ಉರಿ, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದೂ, ದೃಷ್ಟಿಮಾಂದ್ಯ ಮುಂತಾದ ವಿಶಿಷ್ಟ ವ್ಯಾಧಿಗಳು ಗುಣ ಹೊಂದುತ್ತವೆ. ಕ್ರಯ ೧ಡಬ್ಬಿಗೆ ೬ ರೂ. ಪೋಸ್ಟು ಖರ್ಚು ಆಣೆ ೩.

ವಾಯುಹಾರಕ ತೈಲ (ಬಾಹ್ಯಲೇಪನಕ್ಕೆ ಮಾತ್ರ).—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ಮ ಇತರ ವಾಯುಗಳ ಬಾಧೆ, ತಲೆನೋವು, ಚಿಕ್ಕ ಹುಡುಗರ ಉಬ್ಬಸ, ಕೆಮ್ಮು, ಕೂತ ಗುಣ ಹೊಂದುವವು. ಕುಪ್ಪಿಗೆ ೧ ರೂ. ಖರ್ಚು ಆಣೆ ೩.

ಗಜಕರ್ಣದ ಮುಲಾಮು.—೨ ರೂ ೩ ಆವರ್ತಿ ಹಚ್ಚುವದರೊಳಗೆ ಎಂಥ ಕಠಿಣವಾದ ಗಜಕರ್ಣವಾದದ್ದು ಇದ್ದರೂ ಪೂರ್ಣ ಗುಣ ಹೊಂದುವದು. ಡಬ್ಬಿಗೆ ಆಣೆ ೪. ಖರ್ಚು ೧ ರಿಂದ ೩ ದಬ್ಬಿ ವರೆಗೆ ಆಣೆ ೩.

ಕರ್ಣಸ್ರಾವಕ್ಕೆ ವನೌಷಧಿ ತೈಲ (ಬಾಹ್ಯೋಪಚಾರಕ್ಕೆ ಮಾತ್ರ).—ಚಿಕ್ಕ ಪ್ರಾಯದವರ ಮತ್ತು ಥರ್ಡ ಪ್ರಾಯದವರ ಕಿವಿಯಿಂದ ರಕ್ತವಾಗಲಿ ಕೀವು ಆಗಲಿ ನೀರಿನಂಥ ದ್ರವವಾಗಲಿ ಹೊರಟ್ಟಾಗಿ ಅಥವಾ ಬಹುಕಾಲದಿಂದ ಹರಿಯುತ್ತಿದ್ದರೆ ಮತ್ತು ಅದರ ಮೂಲಕ ನೋವು ಕಳತವೂ ಉರುಸುವಿಕೆಯೂ ಇರುತ್ತಿದ್ದರೆ, ಇದರ ಉಪಯೋಗದಿಂದ ಬಹು ಬೇಗನೇ ಸಂಪೂರ್ಣ ಗುಣವು ಪ್ರಾಪ್ತವಾಗುವದು. ಕ್ರಯ ರೂ. ೧. ಖರ್ಚು ಆಣೆ ೩.

ವ್ಹಿ. ಪಿ. ಯಿಂದಲೂ ರವಾನಿಸುವೆವು. ಇನ್ನೂ ಅನೇಕ ಉತ್ತಮವಾದ ಔಷಧಗಳ ಬಗ್ಗೆ ನಮ್ಮ ಕ್ಯಾಟಲಾಗು ತರಿಸಿ ಓದಿ ನೋಡಿ. ನಮ್ಮ ವಿಳಾಸವೇನಂದರೆ.—

ಧಾಬವೈದ್ಯ ಮತ್ತು ಕಂಪನಿ, ಬೆಳಗಿ, ಉತ್ತರ ಕನ್ನಡಾ ಜಿಲ್ಲಾ.

## ಹೋಮೋಸಿಯಾ.

ಶೀಘ್ರ ಪರಿಹಾರ.

ತಗಲುತ್ತಲೇ ನೋವು ವಾಸಿ ಯಾಗುತ್ತೆ

ಈ ಔಷಧಿಯು ಮನೆ ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕಛೇರಿ, ಕಚೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ಚಿತ್ತಾವಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕುತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೀವು ಕೆಲಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಶರೀರವಾತ, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಶೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಬಿಸಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೪ ಆ.; ಒಂದೇ ಸಲ ೬ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೪ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೪ ಆ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬರುತ್ತೆ.

❖❖❖❖❖❖❖❖❖

### ಹೋಮೋಸಿಯಾ ಯಂಬ್ರೊಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಖರ್ಚು ಒಡೆದ ಕಣ್ಣ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಹೀರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ಕುಂಬಿ ೪ ಆಣೆಗೂ, ೧ ರೂ. ಗೂ ಬಂಬರಂತೆ ಬಿಕರಿ ಮಾಡಲ್ಪಡುವದು. ೧೦ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರವೂ, ಸರ್ಟಿಫಿಕೇಟುಗಳೂ ಬೇಕಾದ್ದವರು ಕಾಗದಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೨೩ ಸೆಕೆಂಡು ಬೀಚ್ ಲೈನ್, ಮದರಾಸ್.

# ಶ್ರೀ ಕೃಷ್ಣವಿಲಾಸ ಪ್ರೆಸ್.

42

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡ್, ನೋಟೀಸ್ ಫಾರಂ, ಬ್ಯಾಲನ್ಸ್ ಷೀಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಧಾರಣೆಗಳಿಗೆ ಮಾಡಲ್ಪಡುತ್ತವೆ.

ರೋಡು, ವರ್ಗ, ಮುಂತಾದ ಕಾರೀ ಪುಸ್ತಕಗಳು; ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು ; ಇನ್ನು ಇತರವಾದ ಸಮಸ್ತ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿಂಗಿನಂತೆ ಬಹು ಚಂದವಾಗಿ ತಯಾರಿಸಲ್ಪಡುತ್ತವೆ.

ಫಾಯರ್‌ಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್, ಕಾಲ್‌ವಾಮ, ಚಾರಿ, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಖರೀದಿಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯಕರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಜವಾಬನ್ನು ಅಪೇಕ್ಷಿಸುವವರು ಟಪ್ಪಾಲು ಹಾಸಲನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡ ಪೇಟೆ ೨೫ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

## ಜ್ವರಹರಿ. 45

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಶೀಘ್ರವಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಟಿದೆ ಬೇಕುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ಕ್ಕೆ ೪ ಆಣೆ, ೧ ರೂ. ೧—೪ ರೂ., ೨ ರೂ., ೧೦ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

❖❖❖❖❖❖❖❖❖

## ಪಿ ಮಂ ಕ ಪೂ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದವೆಲ್ಲಾ ಮಹೌಷಧವಾಗಿ ಪರಿಣಮಿಸಿ, 'ಆ ಕಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ವಿವರವು ಜ್ವರಹರಿ ಎಂಬ ಔಷಧದಂತೆ ಹೋ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪಿಮಿಯ ಬಮಂಕರ್ಪೂರವನ್ನು ನಾನೂ ನನ್ನ ಕಾಲೇಜಿನವರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಗಳ್ಳರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿವೆ. ಇದು ಬಹು ಒಳ್ಳೆ ಔಷಧ ರೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರುಊರುಗಳಲ್ಲಿರುವ ವೈದ್ಯಶಾಲೆಗಳಲ್ಲಿಯೂ, ದೊಡ್ಡ ಷಾಪುಗಳಲ್ಲಿಯೂ, ಔಷಧ ವ್ಯಾಪಾರಿಗಳಲ್ಲಿಯೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದಿದ್ದರೆ ಕೆಳಗಿನ ವಿಳಾಸದಲ್ಲಿ ವಿಚಾರಿಸಿ :—

ಹನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

1—8—1903 ರಿಂದ 7—8—1903 ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | 1 | 2 | 2 | 1 |
| ಮೈಸೂರು ,, | 82 | 63 | 47 | 31 |
| ಬೆಂಗಳೂರು ಡಿಸ್ಟ್ರಿಕ್ಟ್ | 74 | 68 | 74 | 36 |
| ಮೈಸೂರು ,, | 40 | 58 | 22 | 19 |
| ಕೋಲಾರ್ ,, | 35 | 28 | 32 | 33 |
| ಕೋಲಾರ್ ಚಿನ್ನದ ಗಣಿಗಳು | 2 | 1 | 2 | 2 |
| ತುಂಕೂರು ಡಿಸ್ಟ್ರಿಕ್ಟ್ | 73 | 47 | 79 | 52 |
| ಹಾಸನ ,, | 9 | 5 | 19 | 11 |
| ಚಿತ್ರದುರ್ಗ ,, | 64 | 61 | 64 | 29 |
| ಕಡೂರ್ ,, | | | 1 | 1 |
| ಶಿವಮೊಗ್ಗ ,, | 37 | 24 | 34 | 33 |
| ಮೊತ್ತ. | [illegible] | [illegible] | [illegible] | 266 |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಶ್ರಾವಣ ಬಹುಳ ದ್ವಾದಶಿ ಗುರುವಾರದಿಂದ ಭಾದ್ರಪದ ಶುದ್ಧ ಚೌತಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಆಗಸ್ಟ್.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ಸಿಂಹ ಮಾಸ ದಿನ. |
|---|---|---|---|---|---|---|
| 20 | ಗುರು | ದ್ವಾದಶಿ | 7 30 | ಪು | 33-32 | 4 |
| 21 | ಶುಕ್ರ | ತ್ರಯೋ | 1 36 | ಪುಷ್ಯ | 53-56 | 5 |
| 22 | ಶನಿವಾರ* | ಅಮಾವಾ | 19 32 | ಶ್ಲೇ | 5 15 | 6 |
| 23 | ರವಿವಾ † | ಪಾಡ್ಯಮಿ | 13 12 | ಮ | 21 28 | 7 |
| 24 | ಚಂದ್ರ | ಬಿದಿಗೆ | 35 29 | ಪು | 17 48 | 8 |
| 25 | ಕುಜ ‡ | ತದಿಗೆ | 33 58 | ಉ | 15 3 | 9 |
| 26 | ಬುಧ ¶ | ಚೌತಿ | 30 21 | ಹ | 12 3 | 10 |

*ಪ್ರದೋಷ †ಸರ್ವತ್ರ ಅಮಾವಾಸ್ಯ, ಪ್ರಾ ರವಿವಾರ. ‡ ಸ್ವರ್ಣಗೌರೀ ವ್ರತ. ¶ಸಿದ್ಧಿವಿನಾಯಕ ವ್ರತ, ಸಾಮವೇದಿನಾಮುಪಾಕರ್ಮ.

## ಪೇಟೆ ಧಾರಣೆ.

| ದಿನಸಿ. | ಮೈಸೂರು. | ಬೆಂಗಳೂರು. |
|---|---|---|
| ಕಸ್ತೂರೀ ಅಕ್ಕಿ ಪಲ್ಲಾ ೧ಕ್ಕೆ | ರೂ ೧೦-೪-೦ | ೧೦-೪- |
| ಕೆಂಬೂತಿ ಅಕ್ಕಿ ಮೊದಲ್ | ೧೦-೨-೦ | ೧೦-೪- |
| ,, ದುಯಂ | ೯-೪-೦ | ೯-೪- |
| ಜಾಬಾಳ್ ಅಕ್ಕಿ | ೯-೨-೦ | ೧೩-೦- |
| ಸಣ್ಣಕ್ಕಿ ಅವಲ್ | ೧೫-೪-೦ | ೧೫-೪- |
| ,, ದುಯಂ | ೧೫-೦-೦ | ೧೧-೦- |
| ತೊಗರೀ ಬೇಳೆ ಪಲ್ಲಾ ೧ಕ್ಕೆ | ೧೩-೦-೦ | ೧೨-೦- |
| ,, ದುಯಂ | ೧೫-೪-೦ | ೧೩-೦- |
| ಕ್ಯೂರ ರಾಗಿ ಪಲ್ಲಾ ೧ಕ್ಕೆ | ೩-೧೨-೦ | ೩-೫- |
| ಕಾಡ್ರಾಗಿ | ೩-೪-೦ | ೫-೧೦- |
| ಜೋಳ | ೩-೧೦-೦ | ೫-೪- |
| ಹಲಸಂದೆ ಪಲ್ಲಾ ೧ಕ್ಕೆ | ೬-೧೫-೦ | ೪-೪- |
| ಬಿಳೀ ಅವರೆ | ೬-೦-೦ | ೬-೦- |
| ಹೆಸರು | ೪-೦-೦ | ೧೦-೦- |
| ಉದ್ದು | ೪-೨-೦ | ೯-೦- |
| ಕಡಲೆ | ೯-೪-೦ | ೪-೪- |
| ಎಳ್ಳು | ೧೩-೧೫-೦ | ೧೦-೦- |
| ಹುರುಳಿ | ೨-೦-೦ | ೨-೨- |
| ಹರಳು ೧೫೩ ಸೇರಿಗೆ | ೯-೧೫-೦ | ೫-೧೦- |
| ಸೀಗೇಕಾಯಿ ಮಣ ೧ಕ್ಕೆ | ೧-೪-೦ | ೧-೪- |
| ಮೆಣಸಿನಕಾಯಿ | ೫-೪-೦ | ೫-೦- |
| ,, ದುಯಂ | ೫-೨- | ೧-೪- |
| ಬೆಲ್ಲ ದೇಶಾವರಿ ಅಚ್ಚು | ೨-೪-೦ | ಮ ೧-೬- |
| ಒಳ್ಳೆಣ್ಣೆ ಮಣ ೧ಕ್ಕೆ | ೫-೦-೦ | ೨-೬- |
| ಹರಳೆಣ್ಣೆ ,, | ೩-೧೫-೦ | ೩-[illegible] |
| ಕೊತ್ತುಂಬರಿ ಪಲ್ಲ ೧ಕ್ಕೆ | ೫-೪-೦ | ೨-೯- |
| ಉಪ್ಪು ,, | ೯-೦-೦ | ೪-೧೨- |
| ಹುಣಸೇ ಹಣ್ಣು | ೦-೧೨-೦ | ೬-೧೨- |
| ,, ಹಳೇದು | ೬-೧೦-೦ | ೬-೧- |
| ಹುಪ್ಪ | ೧೦-೧೫-೦ | ೧೦-೨- |
| ಸೀಮೆಯಿಂಡಿ ಪಟ್ಟಿ ೧ಕ್ಕೆ | ೨-೯-೦ | ೨-೫- |
| ತೆಂಗಿನಕಾಯಿ ೧೦೦ ಕ್ಕೆ | ೨-೨-೦ | ೩-೪- |
| ಅಡಿಕೆಕಾಯಿ ಮಣ ೧ಕ್ಕೆ | ೬-೧೨-೦ | ೬-೦- |
| ಜಂಬ್ಲಾಳದಕಾಯಿ ಮಣ ೧ಕ್ಕೆ | ೬-೧೨-೦ | ೬-೧- |
| ಚಿನ್ನ (ಪೌ) ಕೆಂಪು | ೧೫-೨-೦ | ೧೫-[illegible] |
| ,, ,, ಪಸಿಮೆ | ೧೫-೪-೦ | ೧೫-೧೦- |
| ,, ,, ಗಟ್ಟಿ ತೊಲ ೧ಕ್ಕೆ | ೫೩-೦-೦ | ೫೨-೪- |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ | ೯೫-೦-೦ | ೩೦- |

Printed and Published by the Rev. E. W. Thompson, for the Proprietor and Manager, Wesleyan Mission Press, Mysore 20/8/1903.

# ವೃತ್ತಾಂತ ಪತ್ರಿಕೆ.

REGISTERED. M. 20.

ಕ್ರಯ ೧ ದುಡ್ಡು —:o:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೭ | ಮೈಸೂರು—ಸನ್ ೧೯೦೩ ನೇ ಇಸವಿ ಆಗಸ್ಟ್ ತಾರೀಖು ೨೭ ನೇ ಗುರುವಾರ. | ಸಂಚಿಕೆ ೧೩


## ಇಸ್ತಿಹಾರ್.

3

ಮೈಸೂರು ಸಿಟಿ ಮುನಸಿಪಲ್ ಬೋರ್ಡು ಆಫೀಸಿನಿಂದಾ.
ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮಾಹೆ ಮಜಕೂರು ತಾರೀಖು ೧೦ ರ ಲಾಗಾಯತು ೨೪ ರ ವರಿಗೆ ಬೆಳಗೊಳದ ವಾಟರ್‌ವರ್ಕ್ಸ್‌ನಲ್ಲಿ ರಿಪೇರಿಗೋಸ್ಕರ ಎರಡು ಟರಬೈನ್‌ಗಳು ಕೆಲಸ ಮಾಡುವದನ್ನು ನಿಲ್ಲಿಸಲ್ಪಟ್ಟು ಒಂದು ಟರಬೈನ್ ಮಾತ್ರ ಕೆಲಸ ಮಾಡುವದರಿಂದ ಮೇಲ್ಕಂಡ ಕಾಲದಲ್ಲಿ ಷಹರಿನ ತಗ್ಗು ಪ್ರದೇಶಕ್ಕೆಲ್ಲಾ ಕುಕ್ಕರಹಳ್ಳಿ ಕೆರೆಯಿಂದ ನಲ್ಲಿಗಳಿಗೆ ನೀರು ಸರಬರ್ರೈ ಮಾಡಲ್ಪಡುವದಲ್ಲದೆ ಎತ್ತರ ಪ್ರದೇಶದ ನಲ್ಲಿಗಳಿಗೆ ಕಾವೇರಿ ನೀರನ್ನು ಪ್ರಾತಃಕಾಲ ೬ ಗಂಟೆ ಲಾಗಾಯತು ೧೦ ಗಂಟೆವರಿಗೂ, ಸಂಧ್ಯಾಕಾಲ ೪ ಗಂಟೆ ಲಾಗಾಯತು ೬ ಗಂಟೆ ವರಿಗೂ ಬಿಡುವಂತೆ ಬಂದೋಬಸ್ತುಮಾಡಿರುತ್ತೆ. ಅಲ್ಲದೆ ಒಂದೇ ಟರಬೈನ್ ಕೆಲಸ ಮಾಡುವದರಿಂದ ಎತ್ತರ ಪ್ರದೇಶದಲ್ಲಿರತಕ್ಕ ಪಬ್ಲಿಕ್ ಫೌಂಟನ್‌ಗಳಲ್ಲಿ ನೀರಿನ ವೇಗವು ಕಮ್ಮಿ ಆಗಬಹುದು. ಆದಕಾರಣ ಫೌಂಟನ್‌ಗಳಿಗೆ ನೀರು ಬಿಟ್ಟಿರತಕ್ಕ ಕಾಲದಲ್ಲಿಯೇ ಆ ಪ್ರದೇಶದವರೆಲ್ಲರು ತಮಗೆ ಬೇಕಾಗುವಷ್ಟು ನೀರನ್ನು ತುಂಬಿಕೊಳ್ಳಬೇಕು.

K. SREENIVASA RAO,

ತಾ॥ ೬ ನೆ ಆಗಿಷ್ಟು, ೦೩ *Vice President.*

## ಸ್ಟಾಂಡರ್ಡ್
## ಲೈಫ್ ಅಷ್ಯೂರೆನ್ಸ್ ಕಂಪೆನಿ.

6

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಇಂಡಿಯಾ ದೇಶದಲ್ಲಿ ಲೈಫ್ ಇನ್‌ಷ್ಯೂರೆನ್ಸ್ ಯಾನೆ ಜೀವಮಾನವನ್ನು ಭೀಮಾ ಮಾಡಿಕೊಳ್ಳುವ ಕಂಪೆನಿಗಳಲ್ಲಿ ಇದು ಬಹು ಕಾಲದ್ದಾಗಿಯೂ ಹೆಚ್ಚಾದ ಬಂಡವಾಳವುಳ್ಳದ್ದಾಗಿಯೂ ಇದೆ.

ಭೀಮಾದಾರರಾಗತಕ್ಕವರು (ಲೈಫ್ ಎಷ್ಯೂರ್ ಮಾಡತಕ್ಕವರು) ಈ ಕಂಪೆನಿಯ ಚಂದಾ ದರ, ಷರತ್ತುಗಳು ಮೊದಲಾದವುಗಳನ್ನು ಇತರ ಕಂಪೆನಿಯವುಗಳೊಡನೆ ಹೋಲಿಸಿನೋಡಿದರೆ ಇಲ್ಲಿ ಜೀವಮಾನವನ್ನು ಭೀಮಾ ಮಾಡುವವರಿಗೆ ಎಷ್ಟು ಸೌಕರ್ಯಗಳುಂಟೆಂಬುದು ಗೊತ್ತಾಗುವುದು.

ಈ ಕಂಪೆನಿಯ ಭೀಮಾ ನಿಬಂಧನೆಗಳು ಬಹು ಅನುಕೂಲವಾದುವು. ಭೀಮಾದಾರರುಗಳಿಗೆ ಜಿಹಾಸೆಯನ್ನುಂಟುಮಾಡುವ ನಿರ್ಬಂಧಗಳೇನೂ ಇಲ್ಲ.

ಕ್ಲಪ್ತವಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲೇ ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂಪಾಯಿಗಳನ್ನು ಕಂಪೆನಿಯವರು ಕೊಡುವ ಲಾಭಸಹಿತವಾಗಿ ಪಡೆಯಬೇಕಾದರೆ ಭೀಮಾದಾರನು ಕಂಪೆನಿಗೆ ಕೊಡಬೇಕಾದ ಚಂದಾ ವಿಕ ದರಗಳ ಪೈಕಿ ಕೆಲವನ್ನು ಇಲ್ಲಿ ನೋಡಿ.

| ಪಾಲಿ ನಡೆಯುತ್ತಿರುವ ವಯಸ್ಸು | ೫೦ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಲಾಗಲಿ ೨,೦೦೦ ರೂ. ಪಡೆಯಬೇಕಾದರೆ ಮಾಹೆಯಾನ ಕಂಪೆನಿಗೆ ಕೊಡುವದು. | ೫೫ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಲಾಗಲಿ ೨,೦೦೦ ರೂ. ಯನ್ನು ಪಡೆಯಬೇಕಾದರೆ ಮಾಹೆಯಾನ ಕಂಪೆನಿಗೆ ಕೊಡುವದು. |
|---|---|---|
| ೨೦ | ರೂ. ೬—೧೨—೯ | ರೂ. ೬—೦—೦ |
| ೨೫ | ,, ೭—೧೫—೪ | ,, ೬—೧೪—೦ |
| ೩೦ | ,, ೯—೧೨—೮ | ,, ೮—೨—೦ |
| ೩೫ | ,, ೧೨—೧೪—೮ | ,, ೧೦—೧—೪ |
| ೪೦ | | ,, ೧೩—೪—೮ |

೨,೦೦೦ ರೂ. ಗಿಂತಲೂ ಹೆಚ್ಚಾದ್ದಕ್ಕಾಗಲಿ ಕಡಮೆಯಾದ್ದಕ್ಕಾಗಲಿ ವಯಸ್ಸಿನಲ್ಲಿ ಹೆಚ್ಚು ಕಡಮೆ ಇದ್ದರಾಗಲಿ ಚಂದಾ ದರವೇನೆಂಬುದನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಇದುವರೆಗೆ ಜಾರಿಯಲ್ಲಿದ್ದ ಚಂದಾ ದರಗಳನ್ನು ಕಡಮೆ ಮಾಡಿರುತ್ತೇವೆ. ಚಾಲ್ತಿ ವರ್ಷಕ್ಕೆ ತಯಾರಾಗಿರುವ ಹೊಸ ಚಂದಾ ಪಟ್ಟಿಯನ್ನೂ ಭೀಮಾ ದರಖಾಸ್ತು ಫಾರಂಗಳನ್ನೂ ಇದೇ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಎಂ. ಸೂರ್ಯನಾರಾಯಣಪ್ಪ,
ಕಮಿಷನ್ ಮತ್ತು ಜನರಲ್ ಏಜನ್ಸಿ,
ಶಿವಮೊಗ್ಗೆ.

## ಅನಂತವ್ರತಕ್ಕೆ ಯೋಗ್ಯವಾದ ಅನಂತದಾರಗಳು.

2

ರೂಪಾಯಿ ೧ಕ್ಕೆ ೪, ೬, ೮, ೧೦, ೧೨, ೧೬ ಜತೆಗಳು. ಜಾಗ್ರತೆಯಾಗಿ ಬರೆಯುವವರಿಗೆ ದೊರಕುವದು. ಸೆಪ್ಟಂಬರು ತಿಂಗಳು ೧ನೆ ತಾರೀಖಿನ ಒಳಗಾಗಿ ಬರುವ ಆರ್ಡರುಗಳಿಗೆ ಕಳುಹಿಸಲ್ಪಡುತ್ತೆ. ಪರಸ್ಥಳದವರಿಗೆ ಮಾತ್ರ ಕಳುಹಿಸಲ್ಪಡುವದು.

H. N. Rao & Brothers, Bangalore City.

## ಸರಸ್ವತೀಕರ ಕಸ್ತೂರಿ ಮಾತ್ರೆಯು.

12



ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥಾವರಿಗೆ ಅತ್ಯಂತ ಉಪಯುಕ್ತವಾದದ್ದು. ಈ ಮಾತ್ರೆ ೧—೨ ತಾಂಬೂಲದ ಸಂಗಡ ಸೇವಿಸುವದರಿಂದ ಬಾಯಿಯು ಸುವಾಸನೆಯುಂಟಾಗಿ ಬಾಯಿಯ ದುರ್ಗಂಧ, ಹೋಗಿ ಅಜೀರ್ಣ, ಉಷ್ಣರೋಗ, ಬಾಯಿಯ ಹೊಲ್ಲು, ಉಗ್ಗುಸುತ್ತಾ ಮಾತಾಡುವದು, ವಾಯು, ಶೀತ, ಪಿತ್ಥ, ಮಲಬದ್ಧ, ದಂತರೋಗ, ಬಾಯಿಹುಣ್ಣು, ಹಸಿವು, ಜ್ವರ, ಛಳಿ, ನೆಗಡಿ, ತಲೆಬೇನೆ ಇತ್ಯಾದಿ ಅನೇಕ ರೋಗಗಳಿಗೆಲ್ಲಾ ರಾಮಬಾಣದಂತಿರುವದು. ಹೆಂಗಸರ ಗುಪ್ತವಾದ ಅನೇಕ ಜಾಡ್ಯಗಳಿಗೆ ವಜ್ರಾಯುಧದಂತಿರುವದು. ಚಿಕ್ಕ ಮಕ್ಕಳಿರುವ ಮನೆಯಲ್ಲಿ ಈ ಮಾತ್ರೆಯುಸಂಜೀವನಸಮ. ಈ ಮಾತ್ರೆಯು ನಿಮ್ಮಲ್ಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸ್ವಾಧೀನದಲ್ಲಿದ್ದಂತೆಯೇ. ೨೦೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೯ ಆಣೆ, ೫ ಆಣೆ ದಿವಸ ೨ ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವು ನಮಗೆ ಬರೆಯುವಹಾಗೆ ಬಲಾತ್ಕಾರಪಡಿಸುವದು.

ಸಿ. ಪಿ. ಅಂಡ್ ಕಂಪೆನಿ, ಬೆಂಗಳೂರು ಸಿಟಿ.

## ROBINSON'S
## PATENT BARLEY.

## ರಾಬಿನ್‌ಸನ್‌ಯವರ
## ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಪವೆಗೋಧಿಯಿಂದ ಮಾಡಿದೆ. ಹಸ್ತ ಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾರುತ್ತಾರಾದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

## MELLIN'S FOOD.

ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

74

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಸ್ನಾಯುಗಳೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಕಮಾನಸಿಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದವರಿಗಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಹಾಲು ಕೂಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಕೂಸುಗಳಿಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ಹಿಸುಕು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಸಿಹುಕು ಹಾಕಿದ ಕಾಲದಲ್ಲಿಯೂ ಶೈಶವದಲ್ಲಿಯೂ ಒದಗುವ ಮಿಕ್ಕಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುರುತುಪದಾರ್ಥಗಳು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ತಕ್ಕಹಳದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ದೃಢಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ಹಳೆ ಮಟ್ಟಿಗೆ ಕಡಮೆಮಾಡುತ್ತದೆ.

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಶಾಪುಗಳಿಗೂ ಬರೆದು ತರಿಸಿಕೊಳ್ಳಬಹುದು :—

ಏಡನ್ :—ಮೆ॥ ಕಾವಸಿ ದಿನ್‌ಷಾ ಬ್ರದರ್ಸ್.
ಬೊಂಬಾಯಿ :—ಮೆ॥ ಲೇಡಂ ಆಬೆರ್‌ಕ್ರಾಂಬಿ ಕಂಪೆನಿ.
ಕಲ್ಕತ್ತಾ :—ಮೆ॥ ಮೆಕ್ಕೆನ್‌ಜಿ ಲಯಲ್ ಕಂಪೆನಿ.
ಕೊಲಂಬೋ :—ಮೆ॥ ಜಾಲ್ ವಿಲ್ಸನ್ ಕಂಪೆನಿ.
ಕರಾಚಿ :—ಮೆ॥ ಎಚ್. ಜೆ. ರುಸ್ತುಂಜಿ ಕಂಪೆನಿ.
ಮದ್ರಾಸು :—ಮೆ॥ ಓಕ್ ಕಂಪೆನಿ.
ರಂಗೂನ್—ಲೇಡಂ ಬ್ಲಾಕ್ ಕಂಪೆನಿ.

## ಸಂಸ್ಕೃತ ವಿದ್ಯಾರ್ಥಿಗಳಿಗೆ.

೧೯೦೩ ನೆ ಲೋವರ್ ಸೆಕೆಂಡರಿ ಸಂಸ್ಕೃತ ಟೆಕ್ಸ್ಟ್ ಮೆ|| ಲೀ ಥಾಕ್ಕರವರ ಹಿಂದೂ ದೇಶದ ಚಾರಿತ್ರೆ ೧೦-೧೧-೧೨ ನೇ ಅಧ್ಯಾಯಗಳಿಗೆ ನೋಟ್ಸ್, ಮ|| ಎಸ್. ಜಿ. ನರಸಿಂಹಾಚಾರ್ಯರು, ಮತ್ತು ಮ|| ಬಾಪು ಸುಬ್ಬರಾವ್ ಬಿ. ಎ. ಇವರಿಂದ ಮೆ|| ಪ್ರಭಾ ಸಾಹೇಬರವರ ಅಪ್ಪಣೆ ಮೇರೆ ರಚಿಸಲ್ಪಟ್ಟಿರುವದು. ಕ್ರಯ ೩ ಆಣೆ ಮಾತ್ರ. ೧೨ ಪ್ರತಿಗೆ ರೂ. ೧ ೮-೦, ೬ ಪ್ರತಿಗೆ ೦-೦-೦. ವಿಳಾಸ:— ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್, ಮೈಸೂರು.

## ಹೆಸರು ಬದಲಾವಣೆ ನೋಟಿಸ್.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ಮೈಸೂರಲ್ಲಿ ಪ್ರಸಿದ್ಧವಾದ ಮಿಷನ್ ಬುಕ್ ಡಿಪೋ ಎಂಬ ಪುಸ್ತಕದ ಅಂಗಡಿಗೆ ಸಿ. ಎಲ್. ಎಸ್. ಬುಕ್ ಡಿಪೋ (Christian Literature Society Book Depot) ಎಂಬ ಹೆಸರನ್ನು ಇಟ್ಟಿರುವದರಿಂದ ಪುಸ್ತಕಗಳನ್ನು ತರಿಸಿಕೊಳ್ಳುವವರು ಇನ್ನು ಮೇಲೆ

ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು,

ಎಂದು ಬರೆಯಬೇಕೆಂದು ಕೋರುತ್ತೇನೆ.

## ಚಂದ್ರಾಶೋಕ.

ಅಥವಾ

ಆರ್ಯಾವರ್ತದ ಮೊದಲನೆಯ ಚಕ್ರವರ್ತಿ.

ಧಾರವಾಡ ಕೆ. ವಿ. ವ. ಸಂಘದಿಂದ ಬಹುಮಾನ ಹೊಂದಿದ; ವಿದ್ವಾಂಸರಿಂದಲೂ, ವರ್ತಮಾನಪತ್ರಗಳಿಂದಲೂ ಉತ್ತಮವೆಂದು ಅಭಿಪ್ರಾಯ ಪಡೆದ ಐತಿಹಾಸಿಕ ಜೀವನ ಚರಿತ್ರೆಯು, ಅಚ್ಚಿನ ಖರ್ಚಿನ ಕೊರತೆಗೆ ಅರ್ಧಕ್ರಯಕ್ಕೆ ಕೊಡಲಾಗುವದು. ಮುಂಗಡವಾಗಿ ಹಣ ಕಳುಹಿಸಿದರೆ ೪ ನಾಲ್ಕು ಆಣೆ. ಹಿಂದಿನಿಂದ ಆರು ಆಣೆ. ಮೊದಲು ಬರೆದು ಕಳುಹಿಸಿದರೆ ವಿ. ಪಿ. ಯಿಂದ ಕಳುಹುವೆವು.

ರಾ. ಕೃ. ಇನಾಮತಿ,
ಪೋಂ. ಅಣ್ಣಿಗೇರಿ, ಜಿ. ಧಾರವಾಡ.

## ಶಾಕುಂತಲ ನಾಟಕ, ಸಿದ್ಧವಾಗಿದೆ, ಕ್ರಯ ೧೨ ಆಣೆ.

೧೯೦೩ ನೇ ಇಸವಿ ಲೋವರ್ ಸೆಕೆಂಡರಿ ಕನ್ನಡ ಟೆಕ್ಸ್ಟಿನ ನೋಟ್ಸು. ೬೪ ನೇ ಪದ್ಯದಿಂದ ೩೦೨ ನೇ ಪದ್ಯದ ವರೆಗೂ, ಇರುತ್ತೆ. ಗದ್ಯಭಾಷ್ಯದ ನೋಟ್ಸು ಸೇರಿದೆ. ಅರ್ಥ, ಅನ್ವಯ ಸಂಧಿ, ಸಮಾಸ, ಅನ್ವಯಾರ್ಥ, ಭಾವಾರ್ಥ, ಸಾರಾರ್ಥ, ಪ್ರಾಸ್ತಾವಿಕ, ವ್ಯಾಕರಣವಿಶೇಷ, ಪ್ರಶ್ನೋತ್ತರ, ಮುಂತಾಗಿ ಪರೀಕ್ಷೆಗೆ ಬೇಕಾಗತಕ್ಕ ಎಲ್ಲಾ ವಿಷಯಗಳೂ ವಿಶದವಾಗಿ ತಿಳಿಸಲ್ಪಟ್ಟಿವೆ. ಮರಿಮಲ್ಲಪ್ಪನವರ ಸ್ಕೂಲು ಮಹಾದೇವ ಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು. ೧೦ ಕ್ಕೆ ೧ ಪ್ರತಿ ಜಾಸ್ತಿ. ಪುಸ್ತಕ ದೊರೆಯತಕ್ಕ ಸ್ಥಳ:— ಜಿ. ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.

## ನಮ್ಮ ಚಂದಾದಾರರಿಗೆ ನೋಟೀಸ್.

“ವೃತ್ತಾಂತ ಪತ್ರಿಕೆ” ಯ ಏಜಂಟರು ಚಂದಾ ವಸೂಲ್ಮಾಡಿ ಕೊಂಡದ್ದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವದಿಲ್ಲ.

ಮ್ಯಾನೇಜರ್,
ಮೈಸೂರು. “ವೃತ್ತಾಂತ ಪತ್ರಿಕೆ” ಆಫೀಸ್.

# ವೃತ್ತಾಂತ ಪತ್ರಿಕೆ.

—:o:—

ಸ್ಟ ೧೯೦೩ ನೇ ಇಸವಿ ಆಗಸ್ಟ್ ತಾ|| ೨೭ ನೇ ಗುರುವಾರ.

## ಲಾರ್ಡ್ ಸ್ಯಾಲಿಸ್‌ಬರಿಯವರ ಮರಣವು.

ಈಗಿನ ಶತಮಾನದಲ್ಲಿ ಬ್ರಿಟಿಷ್ ರಾಜ್ಯಭಾರದಲ್ಲೆಲ್ಲಾ ತುಂಬಾ ಪ್ರಖ್ಯಾತಿಗೆ ಬಂದಿದ್ದ ಲಾರ್ಡ್ ಸ್ಯಾಲಿಸ್‌ಬರಿಯವರು ಪರಲೋಕವನ್ನೈದಿದರೆಂಬದಾಗಿ ಕಳೆದ ೨೨ನೆ ತಾರೀಖಿನಲ್ಲಿ ಪ್ರಕಟವಾಯಿತು. ಇವರು ಮೂರು ಸಲ ವಿಲಾಯತಿ ರಾಜ್ಯದ ಮಂತ್ರಿಶ್ರೇಷ್ಠರಾಗಿದ್ದರು. ಸುಮಾರು ಒಂದು ವರುಷದ ಕೆಳಗೆ ಇವರು ಮಂತ್ರಿ ಪದವಿಯನ್ನು ಬಿಟ್ಟು, ಶರೀರ ಸೌಖ್ಯಕ್ಕಾಗಿ ಯೂರೋಪ್ ಖಂಡದಲ್ಲಿ ಸಂಚಾರಮಾಡಿಕೊಂಡು ಬಂದರು. ಅವಸಾನ ಕಾಲದಲ್ಲಿ ಅವರಿಗೆ ೭೩ ವರುಷ ವಯಸ್ಸಾಗಿದ್ದಿತು. ಇವರ ಕಾಲದಲ್ಲಿ ವಿಲಾಯತಿ ರಾಜ್ಯವು ಅಧಿಕ ಬಗೆ ಬಂದದ್ದು ಹಿಂದೆ ಇನ್ನಾವ ಮಂತ್ರಿಯ ಕಾಲದಲೂ ಇಲ್ಲವು. ಗ್ರೇಟ್ ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿನಿಯವರಲ್ಲೂ, ವಿಲಾಯತಿ ರಾಜ್ಯದ ಸಕಲ ಪ್ರಜೆಗಳಲ್ಲೂ, ಯೂರೋಪಿನ ಸಕಲ ರಾಜ್ಯಗಳಲ್ಲೂ ತುಂಬಾ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು. ಇಂಗ್ಲಿಷರಲ್ಲಿ ಮಹಾ ಪ್ರಖ್ಯಾತರೆನಿಸಿಕೊಂಡಿರುವ ಗ್ಲಾಡ್‌ಸ್ಟನ್ ಪ್ರಭುವು ಗತಿಸಿದ ಲಾರ್ಡ್ ಸ್ಯಾಲಿಸ್‌ಬರಿಯವರ ವಿಷಯದಲ್ಲಿ “ರಾಜಕೀಯ ವಿಷಯಗಳಲ್ಲಿ ಯೋಗ್ಯವನಿಸಿಕೊಳ್ಳಬೇಕೆಂಬ ಕುತೂಹಲವು ಈತನಿಗಿರುವದಿಲ್ಲ. ಈತನು ಪ್ರಾಜ್ಞ ಸತ್ಯವಂತನೆಂದು ಹೇಳಬಲ್ಲೆನು. ನನಗೆ ಈತನ ಪರಿಚಯ ಸಾಧಾರಣ್ಯ ಬಂದುವರ್ತಿಯಾದರೂ ಈತನ ವಿಷಯದಲ್ಲಿ ಅಪ್ರೀತಿ ಹುಟ್ಟಲಿಲ್ಲ” ಎಂಬದಾಗಿ ಹೇಳಿರುತ್ತಾನೆ. ಮತ್ತು ಲಾರ್ಡ್ ಸ್ಯಾಲಿಸ್‌ಬರಿಯವರ ವಿರೋಧಪಕ್ಷದವರು ಕೂಡ ಅವರನ್ನು ಹೊಗಳುವರು. ಇದಲ್ಲದೆ ಅವರು ಭಗವದ್ಭಕ್ತಿಯಲ್ಲಿ ಅದ್ವಿತೀಯರೆನಿಸಿಕೊಂಡಿದ್ದರು. ಈಚಿಗೆ ಪತ್ನಿವಿಯೋಗವಾದದ್ದು ಮುಖ್ಯವಾಗಿ ಅವರ ಜೀವಮಾನವನ್ನು ಇನ್ನೂ ಮುಸ್ಸಂಜೆಯಾಗಿ ಮಾಡಿಬಿಟ್ಟಿತು.

ಲಾರ್ಡ್ ಸ್ಯಾಲಿಸ್‌ಬರಿಯವರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾಗಿ ಕೆಲಸ ಮಾಡುತ್ತಿದ್ದಾಗ್ಗೆ ಮೈಸೂರು ಸಂಸ್ಥಾನವನ್ನು ದೇಶೀಯರಾಜರಿಗೆ ಕೊಡಬಹುದೇ, ಕುಂಪಣೀ ಶೀಮೆಗೆ ಸೇರಿಸಿಕೊಳ್ಳಬಹುದೇ ಎಂಬೀ ವಿಷಯವು ಬಹಳವಾಗಿ ಚರ್ಚೆ ನಡೆದು, ಲಾರ್ಡ್ ಸ್ಯಾಲಿಸ್‌ಬರಿಯವರ ವಿಶೇಷವಾದ ಸಹಾಯದಿಂದಲೇ ಮೈಸೂರು ಸಂಸ್ಥಾನವು ಪುನಃ ದೇಶೀಯ ರಾಜ್ಯವಾಯಿತು. ಇಂಥಾ ಮಹಾಪುರುಷರೂ, ಮಹೋಪಕಾರಿಗಳೂ ಆದವರಾದ್ದರಿಂದ ಇವರಿಗಾಗಿ ಇಂಗ್ಲಿಷ್ ರಾಜ್ಯವೆಲ್ಲಾ ಹಾಗೆ ದುಃಖಪಡುತ್ತಿರುವದೋ ಅದೇ ರೀತಿಯಲ್ಲಿ ನಮ್ಮ ಮೈಸೂರು ಸಂಸ್ಥಾನದ ಪ್ರಜೆಗಳೂ ದುಃಖಪಡುತ್ತಾರೆನ್ನುವದಕ್ಕೆ ಸಂಶಯವಿಲ್ಲ.

## ಯೇಸು ಸ್ವಾಮಿಯು ಐಶ್ವರ್ಯವಂತರನ್ನು ದ್ವೇಷಿಸಿದನೋ?

ಯೇಸು ಕ್ರಿಸ್ತನು ಐಶ್ವರ್ಯವಂತರನ್ನು ದ್ವೇಷಿಸಿ ತಿರಸ್ಕಾರ ಮಾಡಿದನು ಎಂದು ಕೆಲವರು ಊಹಿಸಬಹುದು. ಆದರೆ ಆತನ ಚರಿತ್ರೆಯು ಬರೆಯಲ್ಪಟ್ಟಿರುವ ಸುವಾರ್ತಾ ಪುಸ್ತಕಗಳನ್ನು ಲಕ್ಷ್ಯವಿಟ್ಟು ಓದುವವರಿಗೆ ಈ ಮಾತು ನಿಜವಲ್ಲವೆಂದು ಬಹು ಚನ್ನಾಗಿ ಗೊತ್ತಾಗುವದು.

ಐಶ್ವರ್ಯದಿಂದ ಬರುವ ಅಪಾಯವನ್ನು ಕುರಿತು ಸ್ವಾಮಿಯು ಪದೇ ಪದೇ ಜನರಿಗೆ ಬೋಧಿಸಿ ತಿಳಿಸುತ್ತಾ ಬಂದನು. ಆದಕಾರಣ ಆತನ ಬೋಧನೆಯನ್ನು ಕೇಳುವದಕ್ಕೆ ಬಂದವರೊಳಗೆ ಹಣವಂತರು ಬಹು ಮಂದಿ ಇದ್ದಿರಬೇಕು. ಹಣವುಳ್ಳವರು ತಮ್ಮ ಮೇಲೆ ದೊಡ್ಡ ಭಾರವನ್ನು ಹೊತ್ತುಕೊಂಡಿರುತ್ತಾರೆಂದೂ, ಅದರಿಂದ ಅವರಿಗಿರುವಷ್ಟು ಅಪಾಯವು ಬೇರೆ ಯಾರಿಗೂ ಇಲ್ಲವೆಂದೂ ಆತನು ಆಗಾಗ್ಗೆ ಸೂಚಿಸುತ್ತಿದ್ದನು. ಮತ್ತು ಹಣವುಳ್ಳವರು ಪರಲೋಕಕ್ಕೆ ಸೇರುವದು ಕಷ್ಟವಾಗಿ ಹೋಗುವದೂ ಉಂಟೆಂಬ ವಿಷಯವನ್ನು ತಿಳಿಸುವದಕ್ಕೆ “ಬುದ್ಧಿಹೀನನಾದ ಐಶ್ವರ್ಯವಂತನ” ಸಾಮ್ಯವನ್ನೂ “ಐಶ್ವರ್ಯವಂತನೂ ಲಾಜರನೂ” ಎಂಬ ಸಾಮ್ಯವನ್ನೂ ಹೇಳುವಲ್ಲಿ ಆತನು ಐಶ್ವರ್ಯವಂತರನ್ನು ಧಿಕ್ಕರಿಸುವದಕ್ಕೆ ಬದಲಾಗಿ ಅವರ ಸ್ಥಿತಿಯನ್ನು ಲಕ್ಷಿಸುತ್ತಾನೆಂದೇ ತೋರುವದು. ದೇವರನ್ನು ಸರ್ವಸಾಧಾರಣವಾಗಿ ಅರಸನಿಗೆ ಹೋಲಿಸಿ ಹೇಳುವಾಗಲೂ, ಯಜಮಾನನೂ ಆಳುಗಳೂ, ದ್ರಾಕ್ಷೆಯ ತೋಟದ ಯಜಮಾನನು, ದುಂದುಗಾರನಾದ ಮಗನೂ ಐಶ್ವರ್ಯವಂತನಾದ ತಂದೆಯೂ ಇವೇ ಮೊದಲಾದ ಸಾಮ್ಯಗಳಲ್ಲಿ ಆತನು ಐಶ್ವರ್ಯವಂತರನ್ನೇ ಸೂಚಿಸುವದರಿಂದಲೂ ಆತನು ಐಶ್ವರ್ಯವಂತರ ವಿಷಯದಲ್ಲಿ ಹೀನವಾದ ಅಭಿಪ್ರಾಯವುಳ್ಳವನಾಗಿದ್ದನೆಂದು ಸ್ಪಷ್ಟವಾಗುವದು.

ಹಣವಂತರ ಸ್ಥಿತಿ ಬಹಳ ಅಪಾಯಕರವಾದದ್ದೆಂದು ಒಂದಾನೊಂದು ಸಂದರ್ಭದಲ್ಲಿ ಸ್ವಾಮಿಯು ಸೂಚಿಸಿದನೆಂದು ತೋರುವದು. ಆದರೂ ಅವರ ವಿಷಯದಲ್ಲಿ ಆತನಿಗಿದ್ದ ಅಭಿಪ್ರಾಯವು ಬಹು ಸ್ಪಷ್ಟವಾಗಿ ಗೊತ್ತಾಗುವದು. ಯೇಸು ಸ್ವಾಮಿಯು ಐಶ್ವರ್ಯವಂತನಾದ ಒಬ್ಬ ಯೌವನಸ್ಥನನ್ನು ನೋಡಿ, ಎಲ್ಲವನ್ನು ಬಿಟ್ಟುಬಿಟ್ಟು ನನ್ನ ಶಿಷ್ಯನಾಗು ಎಂದು ಹೇಳಲು ಅವನು ಬಹು ದುಃಖದಿಂದ ಹೊರಟುಹೋಗುತ್ತಿರುವಾಗ ಆತನು ತನ್ನ ಶಿಷ್ಯರಿಗೆ ಹಣವುಳ್ಳವರು ದೇವರ ರಾಜ್ಯದಲ್ಲಿ ಸೇರುವದು ಎಷ್ಟೋ ಕಷ್ಟ! ಒಂಟೆಯು ಸೂಜಿಯ ಕಣ್ಣಿನಲ್ಲಿ ತೂರುವದು ಸುಲಭ ಆದರೆ ಐಶ್ವರ್ಯವಂತರು ದೇವರ ರಾಜ್ಯದಲ್ಲಿ ಸೇರುವದು ಕಷ್ಟ ಅಂದನು. ಅದಕ್ಕೆ ಶಿಷ್ಯರು ಹೀಗಿದ್ದರೆ ಯಾರಿಗಾದರೆ ಮುಕ್ತಿಯಾದೀತೇ ಎಂದು ಹೇಳಲು, ಆತನು—“ಮನುಷ್ಯರಿಗೆ ಅಸಾಧ್ಯವಾದವುಗಳು ದೇವರಿಗೆ ಸಾಧ್ಯವಾಗಿವೆ” ಅಂದನು. ಇದರ ಅಭಿಪ್ರಾಯವೇನಂದರೆ—ಮನುಷ್ಯರಿಗೆ ದೇವರ ಸಹಾಯವಿಲ್ಲದೆ ಅವರ ಇಷ್ಟದಂತೆ ನಡೆಯುವಂತೆ ಆತನು ಬಿಟ್ಟುಬಿಟ್ಟರೆ, ಐಶ್ವರ್ಯವಂತರು ಕೆಟ್ಟುಹೋಗುವರೇನೋ ಸರಿ. ಆದರೆ ಅವರು ದೇವರ ಕೃಪಾಸಹಾಯವನ್ನು ಪಡೆದರೆ ಅವರು ಐಶ್ವರ್ಯವಂತರಾದರೂ “ಆತ್ಮದಲ್ಲಿ ಬಡವರಾಗಿ” ಜೀವಿಸುವರು. ಈ ಐಶ್ವರ್ಯವಂತನಾದ ಯೌವನಸ್ಥನ ವಿಷಯವನ್ನು ತಿಳಿಸುವಲ್ಲಿ ಮಾರ್ಕನೆಂಬ ಸುವಾರ್ತಿಕನು—“ಯೇಸು ಅವನನ್ನು ನೋಡಿ ಪ್ರೀತಿಸಿದನು” ಎಂದು ಬರೆದಿದ್ದಾನೆ. ಈ ಮಾತನ್ನು ನೆನಪಿನಲ್ಲಿಟ್ಟುಕೊಂಡರೆ, ಸ್ವಾಮಿಯು ಐಶ್ವರ್ಯವನ್ನು ನಿಂದಿಸಿದರೂ ಆ ವಿಷಯದಲ್ಲಿ ಮನಸ್ಸನ್ನಿಟ್ಟವರನ್ನು ನಿಂದಿಸಲಿಲ್ಲವೆಂದು ಹೇಳುವದಕ್ಕೆ ಆಧಾರವಿರುವದು.

ಯೇಸು ಸ್ವಾಮಿಯು ಜೀವಿಸಿದ್ದ ಕಾಲದಲ್ಲಿ ಶ್ರೀಮಂತರಾದವರು ಬಹು ಜನರಿದ್ದರು. ಇವರನ್ನು ಯೇಸು ಸ್ವಾಮಿ ಬಹಳವಾಗಿ ಗಮನಿಸಿದನು. ಆತನು ಇವರ ಐಶ್ವರ್ಯವನ್ನು ನೋಡಿ ಅಸೂಯೆಯಿಂದ ನಡೆಯಲಿಲ್ಲ. ಆದರೆ ಅವರ ಆಂತರ್ಯವನ್ನು ನೋಡಿ ಅವರನ್ನು ಖಂಡಿಸಿದನು.

ಸ್ವಾಮಿಯು ಹಣವಂತರನ್ನು ಸಿಟ್ಟಿನಿಂದ ಬಿಡುವದನ್ನೇ ಮಾಡುತ್ತಿದ್ದನು ಹೇಗೆಂದರೆ ಅವರ ಸ್ಥಿತಿಯು ಬಹು ಪರಿತಾಪಕರವಾಗಿತ್ತು. ಇದಲ್ಲದೆ ಈ ಕಾಲದ ಐಶ್ವರ್ಯವಂತರು ಆತನನ್ನು ತಿರಸ್ಕರಿಸಿದ್ದರಿಂದ ಆತನು ಬಡವರನ್ನು ಆದರಿಸುತ್ತಾ ಬಂದನು. ಆದಾಗ್ಯೂ ಆತನು ಹಣವಂತರಿಗೂ ಬಡವರಿಗೂ ಪಕ್ಷಪಾತವಿಲ್ಲದೆ ಉಪಕಾರ ಮಾಡಿದನೆಂದು ಹೇಳಬೇಕಾದದ್ದು ಗೊತ್ತಾಗುವದು.

ಕ್ರಿಸ್ತಸ್ವಾಮಿಯು ಹಣವಂತರನ್ನು ಪ್ರೀತಿಯಿಂದ ಅಂಗೀಕರಿಸಿದನೆಂಬುವದಕ್ಕೆ ಇನ್ನು ಕೆಲವು ದೃಷ್ಟಾಂತಗಳನ್ನು ಇಲ್ಲಿ ಕೊಡುತ್ತೇವೆ—

ನಿಕೊದೇಮನೆಂಬವನು ರಾತ್ರಿಯಲ್ಲಿ ಆತನನ್ನು ಕಾಣುವದಕ್ಕೆ ಬರಲು ಸ್ವಾಮಿಯು ಆತನನ್ನು ಸಂತೋಷವಾಗಿ ಅಂಗೀಕರಿಸಿದನು. (ಯೋಹಾನ ೩ ಅಧ್ಯಾಯ.)

ಆತನು ಐಶ್ವರ್ಯವಂತರ ಮನೆಗೆ ಊಟಕ್ಕೆ ಹೋದನು. (ಲೂಕ ೭ ೩೬—೫೦.)

ಮರದ ಮೇಲೆ ಹತ್ತಿದ್ದ ಜಕ್ಕಾಯನೆಂಬ ಐಶ್ವರ್ಯವಂತನನ್ನು ಯೇಸು ನೋಡಿ ಪ್ರೀತಿಸಿದನು. (ಲೂಕ ೧೯ ...)

ಐಶ್ವರ್ಯವಂತನಾದ ಜಕ್ಕಾಯನ ಮನೆಗೆ ಹೋಗಿ ಅವನ ಆತಿಥ್ಯವನ್ನು ಸ್ವೀಕರಿಸಿದನು. (ಲೂಕ ೧೯ ೧—೧೦.)

ಈ ಮೊದಲಾದ ಸ್ವಾಮಿಯ ವೃತ್ತಾಂತದಲ್ಲಿ ಆತನು ಬಡವರನ್ನೂ ಭಾಗ್ಯವಂತರನ್ನೂ ಪಕ್ಷಪಾತವಿಲ್ಲದೆ ಕಾಣುತ್ತಾ, ಅವರ ಆತ್ಮಸಂಬಂಧವಾದ ಜೀವದ ವಿಷಯದಲ್ಲಿ ಸ್ವಲ್ಪವೂ ದಾಕ್ಷಿಣ್ಯವಿಲ್ಲದೆ ಬಂದಿಸುತ್ತ ಬೋಧಿಸಿದನು ತಿಳಿದು ಬರುವದು.

## ಬಳ್ಳಾರಿಯ ವರ್ತಮಾನಗಳು.

ಮೊನ್ನೆ ಶನಿವಾರ ಸಾಯಂಕಾಲ ಇನ್‌ಗ್ಲೀಷ್ ಟ್ರೈನಲ್ಲಿ ಮದರಾಸ್ ರೆಸಿಡೆಂಟರವರು ಪತ್ನೀಸಹಿತರಾಗಿ ಸಂಡೂರ ರಾಜಧಾನಿಗೆ ಹೋದರು. ಇವರು ಮುಂದಿನ ಶನಿವಾರದ ತನಕ ರಾಜಧಾನಿಯಲ್ಲಿದ್ದು, ಪೈಸಿರಾಯರವರನ್ನು ಕಂಡು ಬರುವ ಉದ್ದೇಶ್ಯ ಸಿದ್ಧಪಡಿಸಿ ಪ್ರಯಾಣ ಮಾಡುವವರಾಗಿದ್ದಾರೆ.

## ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.



31

ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಏಟು ಬಿದ್ದರೂ ಆಯುಧದಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಸಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋಗುತ್ತೆ. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಆಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ಒಕ್ಕೆ ೧ ರೂ.; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಹೊಸೂರಿನಲ್ಲಿರುವ ರಿಮೌಂಟ್ ಡಿಪೋ (ಕುದುರೆಗಳನ್ನು ಪೋಷಿಸುವ ಇಲಾಖೆ) ಯನ್ನು ಬದಲಾವಣೆ ಮಾಡುವುದಕ್ಕೆ ಮದರಾಸ್ ಸರ್ಕಾರದವರು ೨೦,೩೦೦ ರೂ. ಮಂಜೂರು ಮಾಡಿದ್ದಾರೆ.

••••

ಬೆಂಗಳೂರು ಸಿಟಿಯಲ್ಲಿ ಕರ್ನಾಟಕ ಮತ್ತು ಯುನಾನಿ ಆಸ್ಪತ್ರೆಯೊಂದನ್ನು ಸ್ಥಾಪಿಸಬೇಕೆಂದು ಪ್ರಜೆಗಳು ಮನವಿ ಮಾಡಿ ಅರ್ಜಿ ಬರೆದು ಸರ್ಕಾರಕ್ಕೆ ಕೊಟ್ಟಿದ್ದಾರೆ.

••••

ಶ್ರೀಮನ್ಮಹಾರಾಜರವರು, ಬ್ರಿಟಿಷ್ ರೆಸಿಡೆಂಟರು, ದಿವಾನರು ಬೆಂಗಳೂರಿನಲ್ಲಿ ಡ್ಯಾಗ್ಬೆ ಕಟ್ಟೆ ಹಾಕೀಗೆ ದಯಮಾಡಿ, ವಿಕ್ಟೋರಿಯಾ ಮೆಮೋರಿಯಲ್ ಪ್ರತಿಮೆಯನ್ನು ನಿಲ್ಲಿಸುವುದಕ್ಕೆ ಒಂದು ಸ್ಥಳವನ್ನು ನೋಡಿ ಗೊತ್ತು ಮಾಡಿ ಬಂದರು. ಈಗ ಆ ಕಾಮಗಾರಿ ಪ್ರಾರಂಭವಾಗಿರುವುದು.

••••

ಕಳೆದ ಗುರುವಾರ ಸಾಯಂಕಾಲ ಶ್ರೀಮನ್ಮಹಾರಾಜರವರು, ಮಹಾ ಕ್ಷತ್ರಿಯವರು, ಯುವರಾಜರು, ರಾಜಕುಮಾರಿಯರು, ಮೊದಲಾದವರೆಲ್ಲಾ ಬೆಂಗಳೂರಿಂದ ಸುರಕ್ಷಿತವಾಗಿ ರಾಜಧಾನಿಗೆ ದಯಮಾಡಿದರು. ರಸ್ತೆಯ ಮೇಲೆ ಎಲ್ಲಾ ಮರ್ಯಾದೆ ನಡೆದುವು. ತೋಪುಗಳೂ ಹಾರಿಸಲ್ಪಟ್ಟವು.

••••

ಈ ಸಂಸ್ಥಾನದ ಮ್ಯುನಿಸಿಪಲ್ ಬೋರ್ಡುಗಳಿಗೆ ಡೆಪ್ಯುಟಿ ಕಮಿಷನರು ಮೆಂಬರುಗಳನ್ನು ಆರಿಸಿ, ಗವರ್ನಮೆಂಟಿಗೆ ಮಂಜೂರಿಗೆ ಬಗ್ಗೆ ರಿಪೋರ್ಟು ಮಾಡುತ್ತಾರಷ್ಟೆ. ಇಂಥಾ ಸಂದರ್ಭಗಳಲ್ಲಿ ಆಯಾ ಮೆಂಬರುಗಳ ಜಸ್ತಿ ವಿಚಾರವನ್ನು ಇವರ ಯೋಗ್ಯತಾಪತ್ರವನ್ನು ಬರೆದು ತಿಳಿಸಬೇಕೆಂದು ಗವರ್ನಮೆಂಟಿನವರು ಹುಕುಂ ಮಾಡಿದಾರೆ.

••••

ಬೆಂಗಳೂರು ಪೇಟೆಯಲ್ಲಿ ಮಿ॥ ಪ್ರಿಯಾನ್ಕನವರು ಪ್ರಜೆಗಳ ಪ್ರಯೋಜನಾರ್ಥವಾಗಿ ಎರಡು ಸ್ನಾನಗೃಹಗಳನ್ನೂ, ಜನರು ಸೀನು ಮಾಡುವುದಕ್ಕೆ ನೂರು ತೊಟ್ಟಿಗಳನ್ನೂ ಸ್ವಂತ ಖರ್ಚಿನಿಂದ ಕಟ್ಟಿಸಿ ಮಹಾಜನರಿಗೆ ದಾನ ಮಾಡಿದಾರೆ. ಇದು ಸ್ತೋತ್ರಾರ್ಹವಾದುದಾಗಿದೆ.

••••

ನಮ್ಮ ಸರ್ಕಾರದವರು ಈ ಸಾರಿ ರಾಜಧಾನಿಗೆ ದಯಮಾಡುವುದಾಗಿದ್ದಾರೆಂದೂ, ಇವರು ಹೊಸ ರೆಸಿಡೆಂಟರ ಸಂಗಡ ಮೈಸೂರಿನ ಪ್ರಾಂತಗಳನ್ನು ಸಂಚರಿಸುವುದಕ್ಕೆ ಸಿಂಲಾ ಪಟ್ಟಣಕ್ಕೆ ದಯಮಾಡುವರೆಂದೂ ವರ್ತಮಾನವಿದೆ. ಇದರ ನಿಶ್ಚಯವನ್ನೂ, ಕಾರ್ಯಕ್ರಮವನ್ನೂ ಮುಂದೆ ತಿಳಿಸಬೇಕು.

••••

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ತುಂಕೂರು ರಸ್ತೆ ಉದ್ದವನ್ನು ಬದಲಾಯಿಸಿದ ಕಾರಣ ಟೋಲ್‍ಗೇಟ್ ಕಂಟ್ರಾಕ್ಟು ಪಡೆದುಕೊಂಡಿದ್ದ ಪೂಜಾರಪ್ಪನೆಂಬುವರಿಗೆ ೩,೦೦೦ ರೂ. ನಷ್ಟವಾಯಿತೆಂತಲೂ, ಈ ನಷ್ಟವನ್ನು ಕೊಡಬೇಕೆಂತಲೂ ಅವರು ಬಾಯರ ಮೂಲಕ ಮ್ಯುನಿಸಿಪಾಲಿಟಿಗೆ ನೋಟಿಸ್ ಕೊಡಿಸಿರುತ್ತಾರೆ.

••••

ಪೂನಾ ಪಟ್ಟಣದಲ್ಲಿ ಪ್ರಸಿದ್ಧರಾದ ಬಾಲಗಂಗಾಧರ ತಿಲಕರ ಮೇಲೆ ಬಿದ್ದ ಒಂದು ಸಿವಿಲ್ ಮೊಕದ್ದಮೆಯು ತೀರ್ಮಾನವಾಯಿತು. ಕಡೆಯ ಜಡ್ಜಿ ತಿಲಕರಿಗೆ ೧೮ ತಿಂಗಳ ಕಠಿಣ ಸಜೆಯನ್ನೂ ೧,೦೦೦ ರೂ. ಜುಲ್ಮಾನೆ. ಯಾ ಇನ್ನೆರಡು ತಿಂಗಳ ಸಜೆಯನ್ನೂ ವಿಧಿಸಿದರು. ತಿಲಕರು ಈ ಜಡ್ಜ್‌ಮೆಂಟನ್ನು ಕೇಳಿ [illegible] ಈ ತೀರ್ಮಾನವು ಪ್ರಾಂತ್ಯ ದೇಶದ ಎಲ್ಲಾ ಕಡೆಗಳಲ್ಲೂ ತುಂಬಾ ಗಲಿಬಿಲಿಯನ್ನುಂಟುಮಾಡಿದೆ.

••••

ರಾಜಧಾನಿಯಲ್ಲಿದ್ದ ಅಡ್ವೊಕೇಟ್ ಮಿ॥ ಸಿ. ರಾಜಾರಾಯರು ಕಳೆದ ವಾರ ಮದರಾಸಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ೭೦ ವರುಷ ವಯಸ್ಸಾಗಿತ್ತು. ಇವರು ಜನಗಳಲ್ಲೂ ಅಧಿಕಾರಿಗಳಲ್ಲೂ ವಿಶೇಷವಾದ ಗೌರವವನ್ನು ಸಂಪಾದಿಸಿಕೊಂಡಿದ್ದರು. ಸರ್ಕಾರದವರು ಅವರಿಗೆ ಪಬ್ಲಿಕ್ ಪ್ರಾಸಿಕ್ಯೂಟರೆಂಬ ಅಧಿಕಾರವನ್ನು ಕೊಟ್ಟಿದ್ದರು. ಇವರ ವಿಯೋಗದಿಂದ ಅವರ ಬಂಧುಮಿತ್ರರಿಗೆ ದುಃಖವುಂಟಾಯಿತು, ಬಹುಮಂದಿ ಬಂಧುವರ್ಗದ ವಿಶ್ವಾಸಕ್ಕೆ ಅರ್ಹರಾದರು.

••••

ಬೆಂಗಳೂರಿನಲ್ಲಿ ನೆಲಸಿ ಮಂದಿ ಹಿಂದು ದೊಡ್ಡಮನುಷ್ಯರು ಸೇರಿ "ಬೇಸ ನ್ನೇಹದಯ ಸಂಘ" ವೆಂಬುದನ್ನು ಏರ್ಪಾಡು ಮಾಡಿಕೊಂಡಿದ್ದಾರೆ. ಈ ಸಂಘದ ಉದ್ದೇಶಗಳೇನೆಂದರೆ—"ಸ್ತ್ರೀವಿದ್ಯಾಭ್ಯಾಸ, ವಿವಾಹಪದ್ಧತಿ, ವಿದ್ಯಾಭ್ಯಾಸ, ದೇಶೀಯರ ಪಳಗಿಗೆ ವಿರುದ್ಧವಾಗಿರುವ ಆಚಾರಗಳು ಮೊದಲಾದವು, ಜನರು ವಿಚಾರದರ್ಶನ [illegible] ಸಾಧ್ಯವಾದ ತಿದ್ದುವಿಕೆಯನ್ನು ಪ್ರಚಾರ ಮಾಡುವುದು [illegible]." ದೇಶೀಯರಿಗೆ ಅವಶ್ಯಕವಾಗಿರುವ ಈ ವಿಷಯಗಳಿಗೆ ಪ್ರಜೆಗಳು [illegible] ಧರ್ಮಸಾಧನೆಯು [illegible] ಸೂರ್ಯಸಾಗಿದೆ.

••••

ಬೆಂಗಳೂರು ವಿಕ್ಟೋರಿಯಾ ಗರ್ಲ್ಸ್‌ಸ್ಕೂಲಿನಲ್ಲಿ ಈ ಐಸ ನಿಕ್ಕೆ ಡಾ॥ ಅನಂತಾಚಾರ್ಯ ಪತ್ನಿಯವರು ಬಾಲಿಕೆಯರಿಗೆ ಬಹುಮಾನಗಳನ್ನು ಸ್ವಹಸ್ತದಿಂದ ಕೊಡುವವರಾಗಿದ್ದಾರೆ. ಇಂಥಾ ಸಭೆಗಳಿಗೆ ನಮ್ಮ ದೇಶದಲ್ಲಿ ಹಿಂದು ಸ್ತ್ರೀಯರು ನಾಯಕಿಯರಾಗಿ ಬಂದುದು ಇದೇ ಮೊದಲು. ಡಾ॥ ಅಚ್ಯುತರಾಯರ ಪತ್ನಿಯವರು ಹಾಕಿಕೊಟ್ಟಿರುವ ಶ್ರೇಷ್ಠವಾದ ಮೇಲ್ಪಂಕ್ತಿಯನ್ನು ಇತರ ವಿದ್ಯಾವತಿಯರೂ ಸಂಪನ್ನರೂ ಅನುಸರಿಸಿಯಾರೆಂದು ಹಾರೈಸುತ್ತೇವೆ. ಬಹುಮಾನಗಳು ಕೊಟ್ಟಾದನಂತರ ಡಾ॥ ಅಚ್ಯುತರಾಯರು ಬಾಲಿಕೆಯರಿಗೆಲ್ಲಾ ತಿಂಡಿಯನ್ನು ಕೊಡಿಸುವರು. ಅವರ ಈ ಕಾರ್ಯವು ಬಹು ಶ್ಲಾಘನೀಯವಾಗಿರುವುದು.

ಪ್ಲೇಗ್ ಉಪದ್ರವು ಮೈಸೂರು ಸಂಸ್ಥಾನದಿಂದ ಸುತ್ತಲೂ ಇರುವ ಕಾಂಫರೆನ್ಸುಗಳಿಗೆ ವ್ಯಾಪಿಸದೆ ಇರಲೆಂದೂ, ಈ ಸಂಸ್ಥಾನದಲ್ಲಿ ಅದನ್ನು ಅಡಗಿಸುವುದಕ್ಕೂ ಏರ್ಪಾಡು ಮಾಡಬೇಕೆಂದು ಹಿಂದಿನ ವಾರ ಬೆಂಗಳೂರಿನಲ್ಲಿ ಗುಟ್ಟಾಗಿ ಒಂದು ಸಭೆಯನ್ನು ನಡೆಸಿದರು. ಈ ಸಭೆಗೆ ನಮ್ಮ ಬ್ರಿಟಿಷ್ ರೆಸಿಡೆಂಟರು ಪ್ರೆಸಿಡೆಂಟರಾಗಿದ್ದರು. ಮದರಾಸಿನಿಂದ ಸರ್ಜನ್ ಜನರಲ್ ಸಿಂಕ್ಲೇರ್ ಯವರು ಸ್ಯಾನಿಟರಿ ಕಮಿಷನರ್ ಕರ್ನಲ್ ಕಿಂಗ್ ಯವರು, ಸೇಲಂ ಮತ್ತು ಉತ್ತರ ಆರ್ಕಾಟು ಡಿಸ್ಟ್ರಿಕ್ಟುಗಳ ಕಲೆಕ್ಟರುಗಳು, ಮೈಸೂರು ಸಂಸ್ಥಾನದ ಪರವಾಗಿ ಇನ್ಸ್ಪೆಕ್ಟರ್ ಜನರಲ್ ಕರ್ನಲ್ ಸ್ಮಿತ್ ಯವರು, ಕೌನ್ಸಿಲರ್ ಮಿ॥ ಶ್ರೀನಿವಾಸಯ್ಯಂಗಾರ್ಯರು, ಬೆಂಗಳೂರು ಮತ್ತು ಕೋಲಾರ್ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರಾದ ಮಿ॥ ಸ್ಟ್ರಾಟ್‌ನ್ ಯವರು ಮತ್ತು ಮಿ॥ ಕಾರ್ ಯವರು—ಇವರೆಲ್ಲಾ ಸೇರಿ ಚರ್ಚೆಮಾಡಿದರು. ಅವರು ಆಗ ತೀರ್ಮಾನ ಮಾಡಿಕೊಂಡುದೇನೋ ಇನ್ನೂ ಹೊರಪಡಲಿಲ್ಲವು.

## ಮೈಸೂರು ಗೆಜೆಟ್ ಸಂಗ್ರಹ.

ಹಾಸನ ತಾಲ್ಲೂಕಿಗೆ ಸೇರಿದ ೭೯ ಗ್ರಾಮಗಳಲ್ಲೂ, ಬೇಲೂರು ತಾಲ್ಲೂಕಿಗೆ ಸೇರಿದ ೨೪ ಗ್ರಾಮಗಳಲ್ಲೂ, ಹೊಳೆನರಸೀಪುರ ತಾಲ್ಲೂಕಿಗೆ ಸೇರಿದ ೯ ಗ್ರಾಮಗಳಲ್ಲೂ, ಚನ್ನರಾಯಪಟ್ಟಣ ತಾಲ್ಲೂಕಿಗೆ ಸೇರಿದ ೪ ಗ್ರಾಮಗಳಲ್ಲೂ, ಅರಸೀಕೆರೆ ತಾಲ್ಲೂಕಿಗೆ ಸೇರಿದ ೨೪ ಗ್ರಾಮಗಳಲ್ಲೂ, ಅರಕಲಗೂಡು ತಾಲ್ಲೂಕಿಗೆ ಸೇರಿದ ೨೦ ಗ್ರಾಮಗಳಲ್ಲೂ ಅಂತೂ ೧೬೪ ಗ್ರಾಮಗಳಲ್ಲಿ ಪ್ಲೇಗ್ ಉಪದ್ರವಿರುತ್ತೆ.

ಅ॥ ಸರ್ಜನ್ ಮಿ॥ ಟಿ. ವಿ. ಕುಪ್ಪುಸ್ವಾಮಿ ಮೊದಲಿಯಾರ್ಯನ್ನು ಮೈಸೂರು ಪಟ್ಟಣದ ಛೀಫ್ ಪ್ಲೇಗ್ ಆಫೀಸರಾಗಿ ನೇಮಿಸಿದೆ. ಕೂಡ್ಲೆ ಕೆಲಸಕ್ಕೆ ಹಾಜರಾಗತಕ್ಕದ್ದು.

ಶಿ॥ ಷೆ॥ ದಫೇದಾರ್ ಮಿ॥ ಸ್ವೀರುದ್ ಅಲಿ ಸಾಹೇಬರನ್ನು ಶ್ರೀನಿವಾಸಪುರಕ್ಕೂ, ಸಾಹುಕಾರ್ ಮತ್ತು ಜಮೀನ್‌ದಾರ್ ಮಿ॥ ಸುಬ್ರಹ್ಮಣ್ಯರಾಯಶೆಟ್ಟರನ್ನು ಅರಕಲಗೂಡಿಗೂ, ಪ್ಲೀಡರ್ ಮಿ॥ ಎಂ. ಎಸ್. ರಾಮಸ್ವಾಮಯ್ಯನವರನ್ನು ಕೋಲಾರ್ ಟವನಿಗೂ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಿದೆ.

ಮುಂದೆ ಕಾಣುವ ಪ್ರೊಬೇಷನರಿ ಸೂಪರಿಂಟೆಂಡರುಗಳನ್ನು ನಮೂದಿಸಿರುವ ಉದ್ಯೋಗಗಳಿಗೆ ವರ್ಗ ಮಾಡಿದೆ —(೧) ಮಿ॥ ವೈ. ವಿ. ಕೃಷ್ಣಮೂರ್ತಿಯವರ, ಕೋಲಾರದಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ, ಪ್ರಿವಿಲೆಜ್ ರಜಾ ಪೂರೈಸಿದ ಮೇಲೆ ಹಾಜರಾಗತಕ್ಕದ್ದು. (೨) ಮಿ॥ ಸ್ವಾಮಿನಾಥ್ಯರ್ ಯವರು ಬೆಂಗಳೂರಿನಿಂದ ಕೋಲಾರ್ ಡಿಸ್ಟ್ರಿಕ್ಟಿಗೆ, ಛಾರ್ಜ್ ಕೊಟ್ಟ ಕೂಡಲೇ ಹೋಗತಕ್ಕದ್ದು.

ಬೆಂಗಳೂರು ಸಬ್ ಜಡ್ಜಿ ಮಿ॥ ಪಿ. ಸಿಂಗ್ರಾಚಾರ್ಯರಿಗೆ ಆಗೇಸ್ಟ್ ೧೦ ರಿಂದ ೨೮ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಹೊರಡುವವರೆಗೆ ಚಿಕ್ಕಬಳ್ಳಾಪುರದ ಮುನ್ಸಿಫ್ ಮಿ॥ ಸಿ. ಸುಬ್ಬರಾಯರು ಬೆಂಗಳೂರು ಸಬ್ ಜಡ್ಜಿಯಾಗಿ ಕೆಲಸ ನೋಡತಕ್ಕದ್ದು.

ಮತ್ತೊಂದು ಹುಕುಂ ಹೊರಡುವವರೆಗೆ ಅಡ್ವೊಕೇಟ್ ಮಿ॥ ಎಚ್. ನರಸಿಂಹಯ್ಯಂಗಾರ್ಯರನ್ನು ಮಿ॥ ಸಿಪಾಯಿಗೆ ಕೆಲಸ ಮಾಡುವಂತೆ ನೇಮಿಸಿ, ಚಿಕ್ಕಬಳ್ಳಾಪುರಕ್ಕೆ ವರ್ಗ ಮಾಡಿದೆ.

ಅ॥ ಸರ್ಜನ್ ಮಿ॥ ಎ. ಅಣ್ಣಾದೊರೈ ಮೊದಲಿಯಾರ್ಯರಿಗೆ ಕೊಟ್ಟಿದ್ದ ಒಂದು ವರುಷ ಮೂರು ತಿಂಗಳ ಕಾಯಿಲೆ ರಜವನ್ನು ಇನ್ನೂ ಒಂಭತ್ತು ತಿಂಗಳು ಜಾಸ್ತಿ ಮಾಡಿದೆ.

ಮೂಡಿಗೆರೆ ಅ॥ ಸಬ್ ಅ॥ ಸರ್ಜನ್ ಮಿ॥ ವಿ. ಪಿ. ಸದಾಶಿವರಾಯರಿಗೆ ಅವರು ಉಪಯೋಗಿಸಿಕೊಳ್ಳುವ ಪಾರ್ಲಿಯಾರ್ಗ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹಾಸನ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆಗಿರುವ ಮಿ॥ ಬಿ. ದೇವರಾಜೇ ಅರಸಿನವರಿಗೆ ೫೦ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ತುಂಕೂರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆಗಿರುವ ಮಿ॥ ಎಂ. ಎಸ್. ನಾರಾಯಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ಪಾರ್ಲಿಯಾರ್ಗ ೧ ತಿಂಗಳು ೨೭ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಹೊರಡುವವರೆಗೆ, ರಜದ ಮೇಲಿರುವ ಸಬ್ ಡಿವಿಜನ್ ಆಫೀಸರ್ ಪಿ. ಚಿ. ಎಸ್. ನರಸಿಂಹಯ್ಯರು ತುಂಕೂರಿನ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆಗಿ ಕೆಲಸ ನೋಡತಕ್ಕದ್ದು.

ಅಸಿಸ್ಟಂಟ್ ಪ್ರೊಫೆಸರ್ ಮಿ॥ ಎಂ. ಟಿ. ಕೃಷ್ಣರಾಯರನ್ನು ಎರಡನೇ ಅಸಿಸ್ಟಂಟ್ ಪ್ರೊಫೆಸರಾಗಿ ನೇಮಕ ಮಾಡಿದೆ.

ಮೈಸೂರಿನಲ್ಲಿರುವ ಮಹಾರಾಜರವರ ಸಂಸ್ಕೃತ ಕಾಲೇಜಿನಲ್ಲಿ ಇದೇ ಸೆಪ್ಟೆಂಬರ್ ೧ ರ ಆಗ ವಾರ್ಷಿಕ ವಿದ್ವತ್ ಪರೀಕ್ಷೆಗಳು ನಡೆಯುವುವು.

ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಸಬ್ ಅ॥ ಕಮಿಷನರ್ ಮಿ॥ ಪಿ. ಬಿ. ಶ್ರೀನಿವಾಸ ಯವರಿಗೆ ಕೊಟ್ಟಿದ್ದ ೪೦ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ೧೦ ದಿನ ಜಾಸ್ತಿ ಮಾಡಿದೆ.

ಶ್ರೀಮನ್ಮಹಾರಾಜರ ಸರ್ಕಾರದವರು ಇದೇ ಆಗಸ್ಟ್ ೧೫ನೇ ತಾರೀಖಿನಿಂದ ಒಂದು ಹೊಸ ಕಾನೂನು ಕಾನೂನು ಜಾರಿಯಲ್ಲಿ ತಂದಿರುತ್ತಾರೆ. ಅದೇನೆಂದರೆ :—

ಈ ಕಾನೂನು ಜಾರಿಗೆ ಬರುವುದಕ್ಕಿಂತ ಮೊದಲಾಗಲಿ, ಜಾರಿಗೆ ಬಂದಮೇಲಾಗಲಿ ಗವರ್ನಮೆಂಟಿನವರು ವ್ಯವಸಾಯದ ಬ್ಯಾಂಕಿಗೆ ಸಾಲ ಕೊಟ್ಟಿದ್ದರೆ ಅಥವಾ ಅನ್ನು ಮುಂದೆ ಕೊಟ್ಟರೆ ಅಂಥಾ ಸಾಲವನ್ನು ಆ ಬ್ಯಾಂಕಿನ ಮೆಂಬರುಗಳಿಂದ ಎಂದರೆ ಒಬ್ಬರಿಂದಲೋ ಎಲ್ಲರಿಂದಲೋ ವಸೂಲ್ ಮಾಡುವಂತೆ ವಸೂಲ್ ಮಾಡಿಕೊಳ್ಳಲು ಈ ಕಾನೂನು ಅಧಿಕಾರಕೊಡುವುದು.

## ವೆಸ್ಲಿಯನ್ ಮಿಷನ್ ವಿಕ್ಟೋರಿಯಾ ಗರ್ಲ್ಸ್ ಸ್ಕೂಲು.

### ಗೃಹಪ್ರವೇಶವು.

ಕಳೆದ ೨೪ನೇ ತಾರೀಖು ಸೋಮವಾರ ಸಾಯಂಕಾಲ ರಾಜಧಾನಿಯ ಸಯ್ಯಾಜೀರಾವ್ ರಸ್ತೆಯಲ್ಲಿ ವೆಸ್ಲಿಯನ್ ಮಿಷನ್ ಸಂಘದವರು ಹೊಸದಾಗಿ ಕಟ್ಟಿಸಿರುವ ವಿಕ್ಟೋರಿಯಾ ಗರ್ಲ್ಸ್ ಸ್ಕೂಲು ಪ್ರತಿಷ್ಠೆಯಾಯಿತು. ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರವರ ಪತ್ನಿಯಾದ ಲೇಡಿ ರಾಬರ್ಟ್‌ಸನ್‌ರವರು ದಯಮಾಡಿ, ಸ್ಕೂಲ್ ಲೇಡಿ ಸೂಪರಿಂಟೆಂಡೆಂಟ್ ಮಿಸ್ ಹಾಸ್ಕಿನ್ಸ್‌ರವರು ಒಪ್ಪಿಸಿದ ಬಂಗಾರದ ಬೀಗದಕೈಯಿಂದ ಈ ಪಾಠಶಾಲೆಯ ಬೀಗವನ್ನು ತೆರೆದು, ಪ್ರವೇಶಿಸಿದರು. ಅವರ ಸಂಗಡ ರೆಸಿಡೆಂಟರವರು, ಅರಮನೆ ಕಂಟ್ರೋಲರಾದ ಮಿ॥ ವಿ. ಎಚ್. ನರಸಿಂಹಯ್ಯಂಗಾರ್ಯರು, ಡಾಕ್ಟರ್ ಅಚ್ಯುತರಾಯರು, ರಾಜಾಸಾಹೇಬರವರು, ಅಡ್ವೊಕೇಟ್ ಮಿ॥ ರಂಗಯ್ಯಂಗಾರ್ಯರು, ಮಹಾರಾಜಾ ಕಾಲೇಜ್ ಪ್ರಿನ್ಸಿಪಲ್ ಮಿ॥ ವೀರ್ ಯವರು, ಸ್ಕೂಲ್‌ಗಳ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಮಿ॥ ಎಂ. ಶ್ರೀನಿವಾಸರಾಯರು, ಡಾ॥ ಕುಪ್ಪುಸ್ವಾಮಿ ಮೊದಲಿಯಾರ್ಯರು, ಡಾ॥ ಗೋವಿಂದಸ್ವಾಮಿ ಮೊದಲಿಯಾರ್ಯರು, ಮೊದಲಾದವರೆಲ್ಲಾ ಒಳಕ್ಕೆ ದಯಮಾಡಿ ಕಟ್ಟಡವನ್ನೆಲ್ಲಾ ನೋಡಿಕೊಂಡು ಬಂದು ಕುಳಿತುಕೊಂಡರು. ಡಾ॥ ಅಚ್ಯುತರಾಯರ ಪತ್ನಿಯವರು, ಮಿ॥ ನರಸಿಂಹಯ್ಯಂಗಾರ್ಯರ ಪುತ್ರಿಯರುಗಳು, ಯೂರೋಪಿಯನ್ ದೊರೆಸಾನಿಯರು ಸಭೆಯನ್ನು ಅಲಂಕರಿಸಿದ್ದರು. ರೆವರೆಂಡ್ ಮಿ॥ ಗೋಲ್ಡ್‌ಯವರು ಎದ್ದು ಪ್ರಾರ್ಥನೆಮಾಡಿ, ಸ್ಕೂಲ್ ರಿಪೋರ್ಟನ್ನು ಸಂಕ್ಷೇಪವಾಗಿ ಓದಿ ಮುಗಿಸಿದರು. ಅವರು ಹೇಳಿದ ಮುಖ್ಯ ವಿಷಯಗಳೇನೆಂದರೆ —

ಸ್ಕೂಲಿನ ದೆಸೆಯಿಂದ ಒಬ್ಬ ಉಪಾಧ್ಯಾಯಿನಿಯೂ, ೨೫ ಮಂದಿ ಬಾಲಿಕೆಯರೂ ಕಾಲವಾದರು. ಮೈಸೂರಿನಲ್ಲಿ ೬೫೦ ಹುಡುಗಿಯರು ನಮ್ಮ ಮಿಷನ್ ಶಾಲೆಗಳಲ್ಲಿ ಓದುತ್ತಿದ್ದಾರೆ. ನಾವು ಇಲ್ಲಿ ಬಾಲಿಕೆಯರಿಗೆ ಸುಮಾರು ೩೦ ವರ್ಷಗಳಿಂದ ವಿದ್ಯೆ ಕಲಿಸುತ್ತಿರುವೆವು. ಈಗಿನ ಈ ಪಾಠಶಾಲೆಯಲ್ಲಿ ಇಂಗ್ಲಿಷನ್ನೂ ಕಲಿಸುತ್ತಿದ್ದೇವೆ. ಈ ಹೊಸ ಸ್ಕೂಲು ಕಟ್ಟುವುದಕ್ಕೆ ಸುಮಾರು ೨೭,೫೦೦ ರೂ. ಖರ್ಚಾಗಿದೆ. ಇದಕ್ಕೆ ಗವರ್ನಮೆಂಟಿನವರು ೬,೫೦೦ ರೂ. ಗ್ರಾಂಟು ಕೊಡಿಸಿದರು. ಈ ಸ್ಕೂಲಿನಲ್ಲಿ ಬಹಳ ಕೆಲಸ ಮಾಡುತ್ತಿದ್ದ ಮಿಸೆಸ್ ಗಿಲ್ಕ್ರಿಸ್ಟ್‌ರವರು ೧,೦೦೦ ರೂ. ದಾನ ಮಾಡಿದರು. ಉಳಿದ ಹಣವನ್ನು ನಾವೇ ವಿಲಾಯತಿಯಲ್ಲಿ ಚಂದಾ ಎತ್ತಿ ಕೊಡಿಸಿರುತ್ತೇವೆ. ಮೈಸೂರು ಚಿತ್ರಶಾಲೆಯ ಮಿ॥ ಸಿದ್ಧಲಿಂಗಸ್ವಾಮಿಯವರು ವಿಕ್ಟೋರಿಯಾ ಚಕ್ರವರ್ತಿನಿಯವರ ಒಂದು ಚಿತ್ರವನ್ನು ಈ ಪಾಠಶಾಲೆಯಲ್ಲಿ ಕಟ್ಟುವುದಕ್ಕೋಸ್ಕರ, ಮಿ॥ ಪಿ. ಎ. ನರಸಿಂಹಯ್ಯಂಗಾರ್ಯರು ಒಂದು ಬೆಳ್ಳಿ ಕಪ್ಪನ್ನು ಒಬ್ಬ ವಿದ್ಯಾರ್ಥಿನಿಗೆ ಬಹುಮಾನ ಕೊಡುವುದಕ್ಕೋಸ್ಕರ ದಯಪಾಲಿಸಿ ಕೊಟ್ಟಿದಾರೆ.

ಹುಡುಗಿಯರು ನಾನಾ ತರವಾದ ಕಸೂತಿ ಕೆಲಸಗಳನ್ನು ಬಹಳ ಅಂದವಾಗಿ ಅಲಂಕರಿಸಿ, ಸಭಿಕರನ್ನು ಬಹಳ ಸಂತೋಷಪಡಿಸಿದರು.

ಅನಂತರ ಲೇಡಿ ರಾಬರ್ಟ್‌ಸನ್‌ರವರು ಬಾಲಿಕೆಯರಿಗೆ ಬಹುಮಾನಗಳನ್ನು ಸ್ವಹಸ್ತದಿಂದ ದಯಪಾಲಿಸಿದರು. ರೆ॥ ಮಿ॥ ಥಾಮ್ಸನ್ ಯವರು ಲೇಡಿ ರಾಬರ್ಟ್‌ಸನ್‌ರವರನ್ನು ವಂದಿಸಿದರು, ಅವರು ಈ ಪಾಠಶಾಲೆಗೆ ಒಂದು ಒಳ್ಳೇ ಗಡಿಯಾರವನ್ನು ಕಾಣಿಕೆ ಕೊಡುವಂತೆ ವಾಗ್ದಾನ ಮಾಡಿದ್ದನ್ನು ತಿಳಿಸಿ, ಬಹಳ ಸಂತೋಷಪಡೋಣವೆ ತಿಳಿಯಪಡಿಸಿದರು. ಇದರಲ್ಲಿ ಲೇಡಿ ರಾಬರ್ಟ್‌ಸನ್‌ರವರ ಪರವಾಗಿ ಸರ್ ಡೊನಾಲ್ಡ್ ರಾಬರ್ಟ್‌ಸನ್‌ರವರು ಎದ್ದು ಹೇಳಿದ್ದೇನೆಂದರೆ —

ಈ ಕಟ್ಟಡವನ್ನು ಪ್ರತಿಷ್ಠೆ ಮಾಡುವೇಳೆಯಲ್ಲಿ ನನಗೆ ತುಂಬಾ ಸಂತೋಷವುಂಟಾಗಿದೆ. ಇದನ್ನು ರಾಜಧಾನಿಯ ಮುಖ್ಯ ರಸ್ತೆಯಲ್ಲಿ ಬಹಳ ನೇತ್ರಾನಂದಕರವಾಗಿ ಕಟ್ಟಿಸಿದ್ದಾರೆ. ಪೂರ್ವಕ್ಕೆ ವೃಷ್ಟಿಯ ಕಮಿಟಿಯವರು ಸುತ್ತಮುತ್ತ ಇರುವ ಕೊಳಕಾದ ಭಾಗಗಳನ್ನು ನಿರ್ಮೂಲಮಾಡಿ ಈ ಪಾಠಶಾಲೆಗೆ ಅನುಕೂಲಪಡಿಸಿಕೊಡುವರೆಂದು ನಿರೀಕ್ಷಿಸುತ್ತೇನೆ. ಸ್ತ್ರೀ ವಿದ್ಯಾಭ್ಯಾಸ ಪ್ರೋತ್ಸಾಹವಾಗತಕ್ಕ ಕಾರ್ಯಗಳಿಗೆಲ್ಲಾ ನಾನೆ ಬಹಳ ಸಂತೋಷದಿಂದ ಸಹಾಯ ಮಾಡುವೆನು; ಮತ್ತು ಈ ವಿಷಯ ಸಂಭ್ರಮವನ್ನು ಇಲ್ಲಿ ಇಂಥಾ ಸಂದರ್ಭಗಳಲ್ಲಿ ಕಂಡು, ಅದರ ಸುಖವನ್ನು ಹೊಂದುವುದು ನನಗೆ ಇನ್ನೂ ಸಂತೋಷವಾಗಿದೆ. ಈ ಪ್ರತಿಷ್ಠಾ ಕಾರ್ಯವನ್ನು ಕುರಿತು ನನ್ನ ಶ್ರೀಮತಿ ಮಾಡುವುದರಲ್ಲಿ ಪ್ರಸ್ತಾಪ ಮಾಡಿದೆನು. ಅವರು ಈ ಸಂಘದವರ [illegible] ಬಹಳ ಗೌರವ ಇಟ್ಟುಕೊಂಡು, ಇವರನ್ನು ವಂದಿಸಿದಾರೆ; ಈ ಸಂಘದವರು ಬಡಬಗ್ಗರಿಗೆ ನಾನಾ ವಿಧಗಳಲ್ಲಿ ಉಪಕಾರ ಮಾಡುತ್ತಿರುವುದನ್ನು ನೋಡಿ ತುಂಬಾ ಸಂತೋಷಪಡುತ್ತೇನೆಂದು ಅದನ್ನು ಕೊಂಡಾಡಿದರು. ಅವರ ಪ್ರೀತಿಯು ಅಧಿಕವಾಗಲಿ [illegible] ಸ್ಥಳದ ಮೇಲೆ ಕಳಿಸು ಬಂದು, [illegible] ಜಯವಾಗಲೆಂದು ಹಾರೈಸುತ್ತೇನೆ.

ತರುವಾಯ ಬಾಲಿಕೆಯರು ಕೆಲವು ಪದ್ಯಗಳನ್ನು ಹಾಡಿ ಸಭೆಯನ್ನು ಮುಕ್ತಾಯ ಮಾಡಿದರು.

## ಬಾತ್ಮೀದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ವಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ವಿಗಾ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ.

## ಕರೆಸ್ಪಾಂಡೆನ್ಸ್.

### ಚೇಳು ಕಡಿದುದಕ್ಕೆ ಔಷಧವು.

ಅಯ್ಯಾ,

ಚೇಳು ಕಚ್ಚಿದರೆ ಉಂಟಾಗುವ ತೊಂದರೆಯನ್ನು ಅನುಭವಿಸಿದು ಕಷ್ಟ. ಇದಕ್ಕೆ ಸರಿಯಾದ ಒಂದು ವಸ್ತುವಿನಿಂದ ಅನೇಕರು ಗುಣ ಹೊಂದುತ್ತಲಿರುವರು. ಅದ್ಯಾವದೆಂದರೆ, ಮೂರು ಕಾಸಿನ ಪಾದರಸವನ್ನು ತಂದು, ಚೇಳು ಕಚ್ಚಿದ ಸ್ಥಳದ ಸುತ್ತಲೂ ಸಗಣಿಯಿಂದ ಸುತ್ತಿ, ಆ ಪಾದರಸವನ್ನು ಕಚ್ಚಿದ ಸ್ಥಳಕ್ಕೆ ಹಾಕಿದಲ್ಲಿ ಮನುಷ್ಯನಿಗೆ ಉಂಟಾಗುವ ಉರಿಯೂ, ಛಳುಕೂ ೧೦ ನಿಮಿಷದೊಳಗಾಗಿ ಆರಿಹೋಗಿ ಸುಖವನ್ನುಂಟುಮಾಡುವುದು. ಈ ವಸ್ತುವನ್ನು ಕಚ್ಚಿದ ಕ್ಷಣ ಉಪಯೋಗಿಸಿದಲ್ಲಿ ವಿಶೇಷ ತೊಂದರೆಯೇ ಕೊಡುವದಿಲ್ಲ. ಪಾದರಸವನ್ನು ತಂದು ಮನೆಗಳಲ್ಲಿ ಇಟ್ಟುಕೊಂಡಿರುವದು ಅನುಕೂಲ. ಇದರಿಂದ ಅನೇಕರು ಗುಣ ಹೊಂದಿರುತ್ತಾರೆ.

ಎಂ. ರಂಗಾಚಾರ್.

*********

### ಶ್ರೀರಂಗ ಪಟ್ಟಣದ ವಿಷಯಗಳು.

ಅಯ್ಯಾ,

ಶ್ರೀರಂಗಪಟ್ಟಣದ ಅಂಚೇ ಬೀದಿಯಲ್ಲಿ ಪ್ರತಿ ವರ್ಷದಲ್ಲೂ ತೆರಿಗೆ ಕಂದಾಯ ಮಾತ್ರ ವಸೂಲು ಮಾಡಿಕೊಂಡು, ಈ ಬೀದಿ ರಸ್ತೆ ಮತ್ತು ಚರಂಡಿಗಳಿಗೆ ಕಲ್ಲುಗಳೂ ಲಾಂದ್ರದ ಕಂಬಗಳೂ ಇಡಬೇಕೆಂದು ಎಷ್ಟು ಅರ್ಜಿಗಳು ಬರೆದುಕೊಂಡು ಮತ್ತು ಮೊಖ್ತಾ ಹೇಳಿಕೊಂಡಾಗ್ಯೂ ಗಮನವೇ ಕೊಡುವದಿಲ್ಲ. ಮತ್ತು ಈ ಬೀದಿ ಮೇಲ್ಭಾಗದಲ್ಲಿ ಊರ ಗೊಬ್ಬರವನ್ನೆಲ್ಲಾ ಗ್ರಾಮಾಂತ್ರದವರು ಗಾಡೀಮೇಲೆ ಹೇರಿ ಗುಡ್ಡೆಹಾಕಿ ಅದರ ದುರ್ವಾಸನೆಯಿಂದ ಸೊಳ್ಳೆಗಳು ಹೆಚ್ಚಾಗಿವೆ. ಇದನ್ನೆಲ್ಲಾ ನೋಡತಕ್ಕವರೇ ಇಲ್ಲ. ಯಾರಾದರು ದೊಡ್ಡ ಅಧಿಕಾರಿಗಳು ಬಂದರೆ ಬ್ರಾಹ್ಮಣರ ಬೀದಿಗಳು ಮಾತ್ರ ಪಾಕುಮಾಡಿಸಿಕೊಂಡು ಆ ಬೀದಿಗಳನ್ನೇ ತೋರಿಸಿ ವಾಪಸು ಕಳುಹಿಸುತ್ತಾರೆ. ಇದನ್ನೆಲ್ಲಾ ತಮ್ಮ ಪತ್ರಿಕೆಯಲ್ಲಾದರೂ ಪ್ರಕಟಿಸಿದರೆ ಈ ಬೀದಿಯನ್ನು ಅಭಿವೃದ್ಧಿಗೆ ತಂದಾರೆಂದು ಪ್ರಾರ್ಥಿಸುತ್ತೇವೆ.

[ಇದಕ್ಕೆ ಕೆಲವರು ರುಜುಮಾಡಿದ್ದಾರೆ.—ಎಡಿ.]

*********

### ಆತಿಥ್ಯ

ಅಯ್ಯಾ,

ನನ್ನ ಬೆಳ್ಳೂಟ್ಟಿ ಗ್ರಾಮದಿಂದ ೧೦೦ ಜನ, ಮದುವೆ ಹುಡ್ಗನನ್ನು ಕರೆದುಕೊಂಡು ಚಿಕ್ಕಬಳ್ಳಾಪುರದ ತಾಲ್ಲೂಕು ದೊಡ್ಡಮರಳಿ ಗ್ರಾಮಕ್ಕೆ ಆಗಸ್ಟು ೧೪ ರಲ್ಲಿ ಪ್ರಯಾಣ ಮಾಡಿದೆವು. ಗೌರನಹಳ್ಳಿ ಗ್ರಾಮಕ್ಕೆ ಹೋಗುವ ಸಮಯಕ್ಕೆ ಕೇವಲ ಕತ್ತಲೆ ಮತ್ತು ವಿಪರೀತ ಮಳೆ ಪ್ರಾಪ್ತವಾಯಿತು. ಆ ಗ್ರಾಮದಲ್ಲಿ ರಾತ್ರಿ ಇರಬೇಕಾಯಿತು. ಅಲ್ಲಿರುವ ಗುಳ್ಳಹಳ್ಳಿ ಬಚ್ಚೆಗೌಡರ ಮಗ ತಮ್ಮಾಜಿಗೌಡರು ಮಾಡಿದ ಆತಿಥ್ಯವನ್ನು ಏನೆಂದು ಹೇಳಲಿ! ಆ ರಾತ್ರಿ ೧೨ ಗಂಟೆ ವರಿಗು ಸುಧಾರಿಸಿಕೊಂಡು, ಗ್ರಾಮದ ಗುಡಿಯಲ್ಲಿ ೧೦೦ ಜನರು ಅಡಗಿದ್ದೆವು. ಮನೇ ಯಜಮಾನನಾದ ತಮ್ಮಾಜಿ ಗೌಡರು ಸಹ ಊರಲ್ಲಿ ಇಲ್ಲದ ಸಮಯದಲ್ಲಿ ಈತನ ಮನೆ ಜನಗಳು ಎಂಥಾ ವಿವೇಕಶಾಲಿಗಳೆಂದು ಹೇಳಬಹುದು! ಕತ್ತಲೆ, ಮಳೆ, ಮತ್ತು ರಾತ್ರಿ ೧೨ ಗಂಟೆ. ಇಂಥಾ ಅವ್ಯಾಳೆಯಲ್ಲಿ ಇತರ ನೆರೆಹೊರೆಗಳ ಸಹಾಯವಿಲ್ಲದೆ ೧೦೦ ಜನಗಳಿಗೆ ಸೌಖ್ಯವಾಗಿ ಆತಿಥ್ಯ ಮಾಡಿದರು. ನಾವುಗಳು ಅತ್ಯಂತ ಸಂತೋಷವೂ ಆಶ್ಚರ್ಯವೂ ಪಟ್ಟೆವು. ಇಂಥಾ ಸದ್ಗುಣವೂ ಧರ್ಮವೂ ಉದಾರತ್ವವೂ ಯಜಮಾನ ಇಲ್ಲದ ಸಮಯದಲ್ಲಿ ಮನೆ ಜನಗಳಿಗೆಲ್ಲಾ ಇದ್ದ ವಿಷಯದಲ್ಲಿ ಎಷ್ಟು ಸ್ತೋತ್ರ ಮಾಡಿದಾಗ್ಯೂ ಸ್ವಲ್ಪವೇ ಇದೆ. ಇಂಥಾ ಸಮಯದಲ್ಲಿ ಕೊರತೆ ಇಲ್ಲದೆ ನಡಿಸುವುದು ಸಾಮಾನ್ಯವಲ್ಲ.

ಹನುಮೇಗೌಡ.

*********

### ಪ್ರಜಾಪ್ರತಿನಿಧಿಗಳ ಚುನಾವಣೆ—ನೆಲಮಂಗಲ.

ಅಯ್ಯಾ,

ತಮ್ಮ ೧೩—೮—೦೩ನೇ ಪತ್ರಿಕೆಯಲ್ಲಿ ಪ್ರಜಾಹಿತಚಿಂತಕರೆಂಬುವರು ಈ ನೆಲಮಂಗಲದ ತಾಲ್ಲೋಕಿನಲ್ಲಿ ನಮ್ಮ ಕರುಣಾಶಾಲಿಗಳಾದ ಅಮಲ್ದಾರರು ಬಹಳ ಮುತುವರ್ಜಿಯಿಂದ ಚುನಾಯಿಸಲ್ಪಟ್ಟ ಮೆಂಬರುಗಳನ್ನು ದೂಷಿಸಿರುವದು ಸರಿಯಾದದ್ದಲ್ಲವು. ದಾಸಪ್ಪನವರು ಶಾನುಭೋಗರು ಖಂಡಿಗ ರಾಗಿ ಬತ್ತ ಬೆಳೆಯತಕ್ಕ ದೊಡ್ಡ ದೊಡ್ಡ ಜಮೀನುಗಳನ್ನು ಸಂಪಾದಿಸಿರುತ್ತಾರೆ. ಈ ತಾಲ್ಲೋಕಿನಲ್ಲಿ ಅವರಂತಹ ಪ್ರಖ್ಯಾತಿಗಳನ್ನು ನಾನು ಕಾಣೆನು. ಮತ್ತು ಅವರು ೩೦೦ ರೂ. ಕಂದಾಯ ಕೊಡತಕ್ಕ ದೊಡ್ಡ ಜಮೀನುದಾರರಾಗಿರುತ್ತಾರೆ. ಅಂಥವರಿಗೆ ಸಜನಾಗಿರುತ್ತೆಂದು ಯಾರು ತಾನೇ ಹೇಳುತ್ತಾರೆ? ಅವರು ಶ್ರೀಮನ್ಮಹಾರಾಜರವರ ತನಕಲೂ ಪ್ರಸಿದ್ಧಿಯನ್ನು ಪಡೆದಿರುತ್ತಾರೆ. ಇಂತಹ ದೊಡ್ಡ ಮನುಷ್ಯರನ್ನು ದೂಷಿಸಿರುವದು ಸರ್ವಥಾ ನ್ಯಾಯವಲ್ಲವು. ಲೋಕದಲ್ಲಿ ಒಬ್ಬನು ಪುಣ್ಯವಂತನಾಗಿ ಬದುಕಿದರೆ ಅಲ್ಪಜ್ಞರಾದ ಇತರ ಕೆಲವರು ಹೊಟ್ಟೆಕಿಚ್ಚುಪಡುವದು ಲೋಕದಲ್ಲಿ ವಾಡಿಕೆ. ಅದರಂತೆ ನಮ್ಮ ಮೆ॥ ದಾಸಪ್ಪನವರನ್ನು ಅಮಲ್ದಾರರು ಮೆಂಬರಾಗಿ ಚುನಾಯಿಸಿದ್ದರಿಂದ ಅವರ ಸಮಾನಸ್ಕಂಧರಾದ ಇತರರು ಹೊಟ್ಟೆಕಿಚ್ಚುಪಡುವದು ಏನೂ ಆಶ್ಚರ್ಯವಲ್ಲವು. ಗಂಗೈಯನವರು ನೆಲಮಂಗ್ಲದ ತಾಲ್ಲೋಕು ಅಮಲ್ದಾರರಾಗಿ ಅನೇಕ ವರ್ಷ ಈ ತಾಲ್ಲೋಕಿನಲ್ಲಿ ವಾಸಮಾಡುತ್ತಿದ್ದೂ ಅವರಿಗೆ ಇಲ್ಲಿನ ಕಷ್ಟ ಸುಖಗಳು ಗೊತ್ತಿಲ್ಲವೆಂದು ಹೇಳುವದು ಆಶ್ಚರ್ಯವಲ್ಲವೇ? ಅವರಿಗೆ ಕಂಪರಾ ಆದದ್ದು ಸುಳ್ಳು. ಅವರೇ ರಾಯಿಷ್‌ಪಟ್ಟು ಬೆಂಗಳೂರಿನಲ್ಲಿ ಖಜಾನೆ ಭಕ್ಷಿ ಕೆಲಸಕ್ಕೆ ಹೋದರು. ಈ ರೀತಿ ದೊಡ್ಡ ಮನುಷ್ಯರನ್ನು ಅವಮಾನಪಡಿಸುವದು ಅಲ್ಪ ಜನರಿಗೆ ಸಹಜವಾದದ್ದು. ಚನ್ನಿಂಗಪ್ಪನವರು ೨,೦೦೦ ಪಲ್ಲ ರಾಗಿ ಬೆಳೆಯತಕ್ಕ ದೊಡ್ಡ ಗೌಡರಾಗಿರುತ್ತಾರೆ. ಅವರಿಗೆ ಶ್ರೀಕಾರದ ಗುರ್ತು ತಿಳಿಯದಿದ್ದಲ್ಲಿ ಅವರು ಯಾವ ರೀತಿ ಮನೆಯ ಸಂಸಾರವನ್ನು ನಡಿಸುತ್ತಾರೆ? ಆದಾಯ ವೆಚ್ಚಗಳನ್ನು ತಿಳಿಯುತ್ತಾರೆ? ಹೀಗೆಲ್ಲಾ ಸುಳ್ಳು ವರ್ತಮಾನವನ್ನು ಹುಟ್ಟಿಸಿ ದೊಡ್ಡ ಮನುಷ್ಯರ ಮಾನವನ್ನು ಕಳೆಯುವದಕ್ಕೋಸ್ಕರ ಮಾಡಿದ ಕುಚೇಷ್ಟೆಗಳೇ ಸರಿ. ಇದು ಒಂದೂ ನಿಜವಲ್ಲವು. ನಮ್ಮ ಅಮಲ್ದಾರರು ಸಜಾ ಆದವರನ್ನೂ, ಶ್ರೀಕಾರದ ಗುರ್ತು ತಿಳಿಯದವರನ್ನೂ, ಕಂಪರಾ ಆದವರನ್ನೂ ನೇಮಿಸಲು ಪ್ರಜಾ ಹಿತಚಿಂತಕರಷ್ಟು ತಿಳುವಳಿಕೆಯನ್ನು ಇದುವರೆಗೂ ಪಡೆದಿಲ್ಲವು.

ಯಥಾರ್ಥವಾದಿ.

## ಹಿಂದುಸ್ಥಾನದ ಶಿಶು ಸಂರಕ್ಷಣಾ ಸಭೆಯು.

ಹಿಂದುಸ್ಥಾನದಲ್ಲಿ ಅನೇಕ ಮಂದಿ ತಮ್ಮ ಪೋಷಣೆಯಲ್ಲಿರತಕ್ಕ ಗಂಡು ಹೆಣ್ಣು ಮಕ್ಕಳನ್ನು ನಾನಾ ತರವಾಗಿ ಹೊಡೆದು ಬಡಿದು ಹಿಂಸೆಪಡಿಸುವುದೂ ಇನ್ನು ಕೆಲವರು ಮಕ್ಕಳನ್ನು ದುರ್ವ್ಯಾಪಾರಗಳಲ್ಲಿ ನಡಿಸಿ ಕೆಡಿಸುವುದೂ ಅಪರೂಪವಲ್ಲ. ಇಂಥಾ ಮಕ್ಕಳನ್ನು ಕಷ್ಟದಿಂದ ಬಿಡುಗಡೆ ಮಾಡಿ, ಪ್ರತ್ಯೇಕ ಸ್ಥಳದಲ್ಲಿಟ್ಟು ಪೋಷಿಸಿ, ಸದ್ವೃತ್ತಿಯಲ್ಲಿ ಬೆಳಸಬೇಕೆಂಬ ಉದ್ದೇಶದಿಂದ ಕಲ್ಕತ್ತೆಯಲ್ಲಿ ಒಂದು ಸಂಘವು ಏರ್ಪಡಿಸಿದೆ. ಈ ಸಂಘದಲ್ಲಿ ನಾಲಿನ ಬಿಹಾರಿ ಸರ್ಕಾರ್ ಸಿ. ಐ. ಇ., ಆರ್. ಡಿ. ಮೆಹತಾ ಸಿ. ಐ. ಇ., ಎ. ಎಫ್. ಎಂ. ಅಬ್ದುರ್ ರೆಹಮಾನ್ ಖಾನ್ ಬಹದೂರ್, ಪಂಡಿತ ಶಿವನಾಥ ಶಾಸ್ತ್ರಿ ಎಂಬೀ ದೊಡ್ಡಮನುಷ್ಯರು ಮೆಂಬರುಗಳಾಗಿಯೂ, ಕಣ್ಣಾರ್ ಸರ್ ಹರ್‍ನಾಮ ಸಿಂಹರವರು ಪ್ರೆಸಿಡೆಂಟರಾಗಿಯೂ ಇರುತ್ತಾರೆ. ಈ ಸಂಘದವರು ಹೋದ ವರುಷ ನಡಿಸಿರುವ ಶಿಶು ಸಂರಕ್ಷಣಾ ಕಾರ್ಯಗಳನ್ನೆಲ್ಲಾ ಸಂಗ್ರಹವಾದ ರಿಪೋರ್ಟು ಪ್ರಕಟಿಸಿರುವರು. ೧೧೮ ಮಕ್ಕಳನ್ನು ಅವರು ನಾನಾ ವಿಧದಲ್ಲಿ ಹಿಂಸೆಯಿಂದ ತಪ್ಪಿಸಿ ಸಂರಕ್ಷಣೆ ಮಾಡಿರುತ್ತಾರೆ. ಈ ಪೈಕಿ ಒಂದು ಹುಡುಗಿಯ ವೃತ್ತಾಂತವನ್ನು ಮಾತ್ರ ಇಲ್ಲಿ ಸೂಚಿಸುವೆವು. ದಕ್ಷಿಣ ದೇಶದ ಒಂದಾನೊಂದು ಆಸ್ಪತ್ರೆಯಲ್ಲಿ ಕಾಯಿಲೆಬಿದ್ದಿದ್ದ ೧೩ ವರುಷದ ಒಬ್ಬ ಹುಡುಗಿಯನ್ನು ವಾಸಿಯಾದ ಮೇಲೆ ಆಸ್ಪತ್ರೆಯವರು ಕಳುಹಿಸಿದರು. ಇವಳಿಗೆ ದಿಕ್ಕಾರೂ ಇಲ್ಲದೆ ಬೀದಿಗಳಲ್ಲಿ ಅಲೆಯುತ್ತಿದ್ದಳು. ಅವಳನ್ನು ಮೇಲ್ಕಂಡ ಸಂಘದವರು ತಮ್ಮ ಪೋಷಣೆಗೆ ಕರೆದುಕೊಂಡು, ಅವಳ ಪೂರ್ವ ವೃತ್ತಾಂತವನ್ನು ವಿಚಾರಮಾಡಿದರು. ಒಬ್ಬ ದುಷ್ಟ ಸ್ತ್ರೀಯು ಈ ಹುಡುಗಿಯನ್ನು ಒರಿಸ್ಸಾದಿಂದ ಚಿತಾವಣೆ ಮಾಡಿ ದಕ್ಷಿಣ ದೇಶಕ್ಕೆ ಕರೆದು ತಂದು, ದುರ್ವ್ಯಾಪಾರಕ್ಕೆ ಇಟ್ಟುಕೊಂಡಳು. ಕೆಲವು ಕಾಲವಾದ ಮೇಲೆ ಹುಡುಗಿಯು ಕಾಯಿಲೆ ಬಿದ್ದುಕೊಂಡಳು. ಅವಳನ್ನು ವೃಥಾ ಸಾಕಬೇಕಲ್ಲಾ ಎಂದು ಆ ದುಷ್ಟ ಸ್ತ್ರೀಯು ಅವಳನ್ನು ಬಿಟ್ಟುಬಿಟ್ಟಳು. ತರುವಾಯ ಹುಡುಗಿಯು ಆಸ್ಪತ್ರೆಗೆ ಹೋಗಿ ಅಲ್ಲೇ ಇದ್ದುಕೊಂಡು, ಔಷಧವನ್ನು ಸೇವಿಸಿ ರೋಗವನ್ನು ವಾಸಿಮಾಡಿಕೊಂಡಳು. ಆ ಮೇಲೆ ಅವಳು ಜೀವನಕ್ಕೆ ಮಾರ್ಗವಿಲ್ಲದೆ ಅಲೆಯುತ್ತಿದ್ದಳು. ಪುಣ್ಯಾತ್ಮರಾದರೋ ಅವಳ ಮೇಲೆ ಕನಿಕರದಿಂದ ಮೇಲ್ಕಂಡ ಸಂಘಕ್ಕೆ ಅವಳ ವಿಷಯವಾಗಿ ಬರೆದು ತಿಳಿಸಿದರು. ಈಗ ಈ ಸಂಘದವರು ಅವಳನ್ನು ಪೋಷಣೆಮಾಡಿ, ಸತ್ಸಹವಾಸದಲ್ಲಿ ಬೆಳಸುತ್ತಾ ಬಂದಿದ್ದಾರೆ. ಈ ಸಂಗತಿಯು ತುಂಬಾ ಪರಿತಾಪಕರವಾಗಿರುವುದು. ಜನರು ಹಿಂಸೆಯನ್ನನುಭವಿಸುವ ಮಕ್ಕಳನ್ನು ಎಲ್ಲಾದರೂ ಕಂಡರೆ ಆ ವಿಷಯವನ್ನು ಮೇಲ್ಕಂಡ ಸಂಘದ ಸೆಕ್ರೆಟರಿಯವರಿಗೆ ತಿಳಿಸಿದಲ್ಲಿ ತುಂಬಾ ಉಪಕಾರವಾಗುವುದು. ಮೆ॥ ಎ. ಇ. ಸಮ್ಮರ್ಸ್, ೧೩೬, ಧರ್ಮತಲಾ, ಕಲ್ಕತ್ತೆ—ಇದೇ ಆ ಸೆಕ್ರೆಟರಿಯವರ ವಿಳಾಸ.

## ರಾಜಧಾನಿಯ ಪ್ಲೇಗ್ ವಿಚಾರವು.

ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದ ಪ್ರೊಸೀಡಿಂಗ್ಸು.

(೧) ಪ್ಲೇಗ್ ಉಪದ್ರವು ಮೈಸೂರು ಷಹರಿನಲ್ಲಿ ಗೃಹಚಾರವಶಾತ್ತು ಪುನಃ ಅಂಟುರೋಗದೋಪಾದಿಯಲ್ಲಿ ಕಾಣಿಸಿಕೊಂಡಿದೆ. ಇದನ್ನು ಅಡಗಿಸುವುದಕ್ಕಾಗಿ ಕೆಲವು ಏರ್ಪಾಡು ಮಾಡತಕ್ಕದ್ದು ಅವಶ್ಯವೆಂದು ತೋರುತ್ತದೆ. ಆದ್ದರಿಂದ ಗೌವರ್ನಮೆಂಟಿನವರು ಅಸಿಸ್ಟೆಂಟ್ ಸರ್ಜನ್ ಮೆ॥ ಟಿ. ವಿ. ಕುಪ್ಪುಸ್ವಾಮಿ ಮೊದಲಿಯಾರ್ರನ್ನು ಚೀಫ್ ಪ್ಲೇಗ್ ಆಫೀಸರಾಗಿ ಮೊಕರರು ಮಾಡಿದೆ. ಐಸೊಲೇಷನ್ ಆಸ್ಪತ್ರೆ ಡಿಸಿನ್‌ಫೆಕ್ಷನ್ ಕೆಲಸ ಸಹಿತವಾದ ದರೋಬಸ್ತು ಪ್ಲೇಗ್ ಏರ್ಪಾಡುಗಳ ಭಾರವನ್ನು ಮೆ॥ ಕುಪ್ಪುಸ್ವಾಮಿ ಮೊದಲಿಯಾರ್ರು ವಹಿಸತಕ್ಕದ್ದು. ಅವಶ್ಯವಾದ ಸ್ಯಾನಿಟರಿ ಅಭಿವೃದ್ಧಿಯ ಕಾರ್ಯಕ್ಕೆ ಹೆಲ್ತ್ ಆಫೀಸರ್ ಮೆ॥ ಕೋದಂಡರಾಮ ಮೊದ್ಲಿಯಾರ್ರು ಸರ್ವದಾ ಗಮನಕೊಡತಕ್ಕದ್ದಕ್ಕೆ ಸಂಪೂರ್ಣವಾದ ಅವಕಾಶವನ್ನು ಉಂಟುಮಾಡಿದೆ.

(೨) ಮನೆಗಳನ್ನು ಖಾಲೀ ಮಾಡತಕ್ಕದ್ದಕ್ಕೂ, ಐಸೊಲೇಷನ್ ಆಸ್ಪತ್ರೆಗೆ ಹೋಗುವುದಕ್ಕೆ ಜನಗಳಿಗೆ ಪ್ರೋತ್ಸಾಹಪಡಿಸುವದಕ್ಕೂ, ಅಂಟುರೋಗ ವ್ಯಾಪಿಸಿರತಕ್ಕ ಮನೆಗಳನ್ನೂ ಅವುಗಳ ನೆರೆಹೊರೆಯನ್ನೂ ಶುಚಿಮಾಡತಕ್ಕ ಬಗ್ಗೆ ಬೋಧನೆ ಮಾಡುವುದಕ್ಕೂ ವಾರ್ಡ್ ಕಮಿಟಿಗಳನ್ನು ಏರ್ಪಡಿಸಬೇಕು. ವೈಸ್ ಪ್ರೆಸಿಡೆಂಟರು, ಚೀಫ್ ಪ್ಲೇಗ್ ಆಫೀಸರು, ಆಯಾ ವಾರ್ಡ್ ಅಥವಾ ಮೊಹಲ್ಲಾಕ್ಕೆ ಸಂಬಂಧಪಟ್ಟ ಮ್ಯುನಿಸಿಪಲ್ ಕಮಿಷನರುಗಳು ಮತ್ತು ಒಬ್ಬ ಇಬ್ಬ ಘನತೆ ಗಣ್ಯತೆಯುಳ್ಳ ವಾಸಸ್ಥರು ಈ ಕಮಿಟಿಗಳಲ್ಲಿರಬೇಕು. ಇಂಥ ವಿಷಯಗಳಲ್ಲಿ ಬಲಾತ್ಕಾರಕ್ಕಿಂತಲೂ ಒಡಂಬಡಿಕೆಯಿಂದ ಹೆಚ್ಚಾದ ಕೆಲಸವನ್ನು ಮಾಡಬಹುದೆಂದು ಗೌವರ್ನಮೆಂಟಿನವರು ಯೋಚಿಸುತ್ತಾರೆ.

(೩) ಸೋಂಕಿನ ಮನೆಗಳನ್ನು ಖಾಲೀ ಮಾಡುವುದಕ್ಕೆ ಬಡಜನಗಳಿಗೆ, ಅನುಕೂಲಪಡಿಸುವುದಕ್ಕೂ ಮತ್ತು ವಾರ್ಡ್ ಕಮಿಟಿಯವರ ಪರ್ಯಾಲೋಚನೆಯಿಂದ ಅರ್ಹತೆಯುಳ್ಳವರಿಗೆ ಸಹಾಯ ಕೊಡುವದಕ್ಕೂ ಡೆಪ್ಯುಟಿ ಕಮಿಷನರವರ ವಶದಲ್ಲಿ ಕಂಟಿಂಜೆಂಟ್‌ಸಿಯ ೨,೦೦೦ ರೂ. ಇಡಬೇಕು.

(೪) ಮನೆಗಳನ್ನು ಖಾಲಿಮಾಡಿದವರ ವಾಸಸ್ಥಾನ ವಿಚಾರ: ಆಗಿಂದಾಗ್ಯೆ ಕಟ್ಟಿದ ಮೋಟ್ಟ ಗುಡಿಸಲುಗಳು ಈಗ ಸಂಪೂರ್ಣವಾಗಿ ವಾಸಕ್ಕೆ ಅಯೋಗ್ಯವಾಗಿವೆ. ಮತ್ತು ಅವುಗಳನ್ನು ರಿಪೇರಿ ಮಾಡತಕ್ಕ ಪ್ರಯತ್ನವು ಅನುಪಯೋಗವಾದದ್ದು. ಅರಮನೆಯವರಿಗೆ ಬೇಕಾಗುವಷ್ಟು ಮನೆಗಳು ಜಾತಾ ೩೫ ಮನೆಗಳು ವೀರನ್ನಾನಕಟ್ಟೆಯಲ್ಲೂ ೨೫ ಮನೆಗಳು ಚಟ್ಟಹಳ್ಳಿ ಕ್ಯಾಂಪಿನಲ್ಲೂ ಉಪಯೋಗವಾಗುತ್ತೆ. ಇವುಗಳ ಸಂಖ್ಯೆಗೆ ಹಾಲಿ ಚಟ್ಟಳ್ಳಿ ಕ್ಯಾಂಪಿನಲ್ಲಿರುವ ೧೨ ಕಬ್ಬಿಣ ತಗಡು ಹಾಕಿರುವ ಷೆಡ್‌ಗಳನ್ನು ಸೇರಿಸಬಹುದು. ಈ ಷೆಡ್‌ಗಳನ್ನು ವಾಸಕ್ಕೆ ಅನುಕೂಲಪಡಿಸುವುದಕ್ಕೆ ಮಾತ್ರವೇ ಕಾದ್ದೆಲ್ಲಾ ಸ್ವಲ್ಪ ಲಾಗೋಡಿನಿಂದ ಗೋಡೆಗಳನ್ನು ಮೇಲಿನವರಿಗೂ ಎತ್ತರಿಸತಕ್ಕದ್ದು. ಕೆಲವು ಷೆಡ್‌ಗಳಿಗೆ ಬೇಕಾಗುವ ಮೇಲ್ ಛಾವಣಿ ಸಾಮಾನುಗಳು ಮ್ಯುನಿಸಿಪಲ್ ಸ್ಟೋರ್‌ನಲ್ಲಿ ದೊರೆಯುತ್ತೆ. ಅವುಗಳನ್ನು ಹೊಸ ಷೆಡ್‌ಗಳನ್ನು ಕಟ್ಟುವದಕ್ಕೆ ಉಪಯೋಗಿಸಬಹುದು. ಮತ್ತು ಇವುಗಳಿಗೆ ಬೇಕಾಗುವ ಮರದ ಸಾಮಾನುಗಳು ಕಿಲ್ಲೆಯಲ್ಲಿ ಕೆಡವಿದ ಮನೆಗಳಿಗೆ ಸೇರಿದ ಮರದ ಸಾಮಾನುಗಳಲ್ಲಿ ಸಿಕ್ಕುತ್ತವೆ. ತಮ್ಮ ಮನೆಗಳನ್ನು ಖಾಲೀಮಾಡಿ ಬೇರೊಂದು ಕಡೆಗೆ ಹೋಗಲಾರದಂಥ ಜನಗಳಿಗೆ ಮೇಲ್ಕಂಡ ಮೊಬಲಗಿನಿಂದ ಸ್ಥಳವನ್ನು ವಿಲೆವಾರಿ ಮಾಡಲು ಡೆಪ್ಯುಟಿ ಕಮಿಷನರು ತಮಗೆ ತೋರಿದಂತೆ ಏರ್ಪಾಡು ಮಾಡಬಹುದು. ಇವುಗಳ ಲಾಗೋಡನ್ನು ಪ್ಲೇಗ್ ಬಡ್ಜೆಟ್ಟಿಗೆ ಖರ್ಚು ಹಾಕಬಹುದು.

(೫) ಈ ರೀತಿ ದೊರೆಯುವ ವಿಶಿಷ್ಟ ಸ್ಥಳವನ್ನು ಉಪಯೋಗಿಸಿದನಂತರ ಕೆಲವು ಗತಿಯುಳ್ಳ ಕುಟುಂಬದವರಿಗೆ ನಾಜಿರಾಬಾದ್ ಹದ್ದೂರ್ ಸತ್ರವನ್ನು ಕೊಡಬಹುದು. ಸ್ಥಳಕ್ಕೆ ಇನ್ನೂ ಪರಾಡವಿದ್ದಲ್ಲಿ ಕಟ್ಟ ಸಾಮಾನುಗಳಿಂದ ಷೆಡ್‌ಗಳನ್ನು ಕಟ್ಟಿಸುವದಕ್ಕೆ ಬದಲಾಗಿ ಯೋಗ್ಯವಾದ ಪ್ರದೇಶದಲ್ಲಿ ಮಜಬೂತಾದ ಷೆಡ್‌ಗಳನ್ನು ಹಾಕುವ ವಿಚಾರದಲ್ಲಿ ಬರತಕ್ಕ ಸಲಹೆಗಳನ್ನು ಗೌವರ್ನಮೆಂಟಿನವರು ಆಲೋಚಿಸಲು ಇಷ್ಟಯುಳ್ಳವರಾಗಿದ್ದಾರೆ.

(೬) ಸಂತೇಪೇಟೆಗೆ ಸೇರಿದ ತೊಗರೀ ಬೀದಿಯು ಪ್ರಾರಂಭದಿಂದಲೂ ಅಂಟುರೋಗಕ್ಕೆ ಸ್ಥಿರವಾದ ಮಧ್ಯಸ್ಥಾನವಾಗಿದೆ. ಪಾರುಪತ್ಯ ಪ್ರದೇಶಕ್ಕೂ ರಸ್ತೆ ಮತ್ತು ಕಂದಕದ ಅಚೆಯ ಮಾತ್ರ ಇರತಕ್ಕ ಅರಮನೆಗೂ ಅದರಿಂದ ಕೆಡಕಾಗಿದೆ. ಈ ವರುಷ ಈಗ ಆಗಲೇ ಅಲ್ಲಿ ಕೆಲವು ಪ್ಲೇಗ್ ಕಾಯಿಲೆಗಳು ಆಗಿವೆ. ಆದ್ದರಿಂದಲೇ ಅದನ್ನು ತೆಗೆದುಹಾಕುವ ಬಗ್ಗೆ ಏರ್ಪಾಡು ಮಾಡತಕ್ಕದ್ದು ಅತಿ ಅವಶ್ಯವಾಗಿದೆ. ಮತ್ತು ಈ ವಿಚಾರದಲ್ಲಿ ಬರುವ ಸಲಹೆಗಳನ್ನು ನಿರೀಕ್ಷಿಸುತ್ತೇವೆ. ಇದಕ್ಕಾಗಿ ಖರ್ಚು ಬಹಳವಾಗಿ ಆಗಲಾರದು.

(೭) ಹಳೇ ಅಗ್ರಹಾರದ ಆಚೆ ಇರುವ ಗಾಣಿಗರ ಗುಡಿಸಲುಗಳ ಖಂಡಿತವಾಗಿಯೂ ಅಸಹ್ಯಕರವಾಗಿವೆ. ಆರೋಗ್ಯವಿಷಯದಲ್ಲಿ ಆಕ್ಷೇಪಣೆ ಬಾರದಂಥಾ ಮತ್ತೊಂದು ಪ್ರದೇಶದಲ್ಲಿ ಅವುಗಳನ್ನು ಕಟ್ಟಿಸತಕ್ಕ ಏರ್ಪಾಡುಗಳನ್ನು ಮ್ಯುನಿಸಿಪಲ್ ಬೋರ್ಡಿನವರು ಕ್ಷಿಪ್ರದಲ್ಲೇ ಮಾಡುತ್ತಾರೆಂದು ಕೋರುತ್ತೇವೆ.

### ತೀರ್ಮಾನಗಳು.

ಈ ಮೇಲ್ಕಂಡ ಹುಕುಮನ್ನು ಕುರಿತು ಚರ್ಚಿಸಿ ಅಭಿಪ್ರಾಯ ತಿಳಿಸುವುದಕ್ಕೋಸ್ಕರ ಮೊನ್ನೆ ಸೋಮವಾರದ ದಿನ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರನ್ನು ವೈಸ್ ಪ್ರೆಸಿಡೆಂಟರು ಕರೆಸಿಕೊಂಡಿದ್ದರು. ಅವರು ಆಗ ತೀರ್ಮಾನಮಾಡಿದ್ದೇನೆಂದರೆ.—

(೧) ರಾಜಧಾನಿಯಲ್ಲಿ ಪ್ಲೇಗ್ ವಿಚಾರವನ್ನು ನೋಡಿಕೊಳ್ಳುವುದಕ್ಕೆ ಪ್ರಜಾ ಪ್ರೀತಿಪಾತ್ರದ ಡಾಕ್ಟರ್ ಕುಪ್ಪುಸ್ವಾಮಿ ಮೊದಲಿಯಾರ್ರನ್ನು ಗೌವರ್ನಮೆಂಟಿನವರು ನೇಮಕ ಮಾಡಿದ್ದು ಸ್ತೋತ್ರಾರ್ಹವಾದದ್ದು. ಇದಕ್ಕಾಗಿ ಬೋರ್ಡಿನವರು ಗೌವರ್ನಮೆಂಟಿನವರನ್ನು ಬಹಳವಾಗಿ ವಂದಿಸುತ್ತಾರೆ.

(೨) ಗೌವರ್ನಮೆಂಟಿನವರು ಅಪ್ಪಣೆ ಕೊಟ್ಟಿರುವ ಪ್ರಕಾರ ವಾರ್ಡ್ ಕಮಿಟಿಗಳನ್ನು ಏರ್ಪಾಡು ಮಾಡಿಕೊಂಡು, ಮೇಲ್ಕಂಡ ಮೆಂಬರುಗಳನ್ನೂ ಆಯಾ ಮೊಹಲ್ಲಗಳಲ್ಲಿರುವ ಇತರ ದೊಡ್ಡಮನುಷ್ಯರನ್ನೂ ಅವಶ್ಯ ಬಿದ್ದಹಾಗೆ ಸೇರಿಸಿಕೊಂಡು ಕಾರ್ಯಗಳನ್ನು ನಡಸತಕ್ಕದ್ದು.

(೯) ಸರ್ಕಾರದವರು ಸ್ಯಾಂಕ್ಷನ್ ಮಾಡಿರುವ ಹಣವನ್ನು ಅದಕ್ಕೆ ಗೊತ್ತುಮಾಡಲ್ಪಟ್ಟಿರುವ ಕಾರ್ಯಗಳಿಗೆ ವಿನಿಯೋಗಿಸತಕ್ಕದ್ದು.

(೧೦) ಸದ್ಯ ವೀರಣ್ಣನವರ ಲೈನಿನಲ್ಲಿ ಒಂದು ಮನೆಯೂ ಪ್ಲೇಗಿನಿಂದ ತೆರವಾಗಿಲ್ಲ. ಚನ್ನಪಟ್ಟಣ ಕ್ಯಾಂಪಿನಲ್ಲಿ ೩೭ ಮನೆಗಳು ದೊರೆಯುವವು. ಚಾಮರಾಜ, ಕೃಷ್ಣರಾಜ, ಕೋಟೆ ಮೊಹಲ್ಲೆಗಳವರು ಅಪೇಕ್ಷಿಸಿದರೆ ಈ ಮನೆಗಳನ್ನು ಅವರಿಗೆ ಕೊಡತಕ್ಕದ್ದು. ಆಯಾ ಮೊಹಲ್ಲೆಗಳ ಜನರು ಆಯಾ ಮೊಹಲ್ಲೆ ಪಕ್ಕಗಳಲ್ಲಿ ಛೀಫ್ ಪ್ಲೇಗ್ ಆಫೀಸರ ಇಷ್ಟಾನುಸಾರ ಮೈದಾನುಗಳಲ್ಲಿ ಜೋಪಡಿಗಳನ್ನು ಕಟ್ಟಿಕೊಳ್ಳಬಹುದು. ನಾಲ್ಕಾರು ಮನೆಗಳವರು ಏಕವಾಗಿ ಮನೆ ಬಿಟ್ಟು ಹೋಗಲು ಸಿದ್ಧರಾಗಿದೇವೆಂದು ಛೀಫ್ ಪ್ಲೇಗ್ ಆಫೀಸರಿಗೆ ಅರ್ಜಿ ಬರೆದುಕೊಂಡರೆ ಅಂಥಾವರಿಗೆ ಅವರು ಬಲವಾದ ಗೋಡೆ ಹಾಕಿದ ಷೆಡ್ಡುಗಳನ್ನು ಬಹಳ ಬೇಗನೆ (೧–೨ ದಿನಗಳಲ್ಲಿ) ಕಟ್ಟಿಸಿ ಕೊಡುವರು. ಜನರು ತಾವಾಗಿಯೇ ಕಟ್ಟಿಸಿಕೊಳ್ಳುವ ಪಕ್ಷದಲ್ಲಿ ಸಾಮಾನನ್ನು ಖುದ್ ಖರೀದಿಗೆ ಕೊಡಿಸುವರು.

(೧೧) ನಂಜರಾಜಬಹದ್ದೂರವರ ಛತ್ರವನ್ನು ಜನರಿಗೆ ಬಿಟ್ಟು ಕೊಡುವುದರಿಂದ ಪರಸ್ಥಳದವರಿಗೆ ಅನಾನುಕೂಲವಾಗಬಹುದು; ಅದನ್ನು ಊರಿನ ಜನರಿಗೆ ಕೊಡುವುದು ಅಷ್ಟು ಸಮರ್ಪಕವಾಗಿ ತೋರುವುದಿಲ್ಲ.

(೧೨) ತೊಗರೀ ಬೀದಿಯನ್ನು ಒಡೆದು ಹಾಕುವ ವಿಚಾರಕ್ಕೆ ಅಂದಾಜು ಪಟ್ಟಿ ಮುಂತಾದ್ದು ತಯಾರಾಗಿದೆ.

(೧೩) ಗಾಣಿಗರ ಗುಡಿಸಲುಗಳನ್ನು ತೆಗೆದು ಬೇರೇ ಕಡೆ ಹಾಕುವ ವಿಚಾರವನ್ನು ಈ ತಿಂಗಳ ಆಖೈರಿನಲ್ಲಿ ನಡೆಯುವ ಮ್ಯುನಿಸಿಪಲ್ ಬೋರ್ಡ್ ಮೀಟಿಂಗಿಗೆ ಇಟ್ಟಿದೆ.

---

## ಸರ್ ಕೆ. ಶೇಷಾದ್ರಿ ಐಯರವರ ಮೆಮೋರಿಯಲ್ ಫಂಡು.

### ದೊಡ್ಡ ಸಭೆ ನಡೆದ ವೃತ್ತಾಂತವು.

ಕಳೆದ ೧೭ನೆ ತಾರೀಖು ಸೋಮವಾರ ಬೆಂಗಳೂರು ಸೆಂಟ್ರಲ್ ಕಾಲೇಜ್ ಸಭಾ ಮಂದಿರದಲ್ಲಿ ಸರ್ ಶೇಷಾದ್ರಿ ಐಯರವರ ಜ್ಞಾಪಕಾರ್ಥವಾಗಿ ಯಾವ ತರಹಾ ಮೆಮೋರಿಯಲ್ ಕಟ್ಟತಕ್ಕದ್ದು ಎಂಬುದನ್ನು ಗೊತ್ತುಮಾಡುವದಕ್ಕೋಸ್ಕರ ಒಂದು ದೊಡ್ಡ ಸಮಾಜವು ಕೂಡಿ ಇತ್ತು. ಈ ಸಭೆಯಲ್ಲಿ ಸಕಲ ಪ್ರಜೆಗಳೂ ಹಾಜರಾಗಿದ್ದರು. ದಿವಾನರಾದ ಸರ್ ಪಿ. ಎನ್. ಕೃಷ್ಣಮೂರ್ತಿಯವರು ಅಗ್ರಾಸನವನ್ನು ವಹಿಸಿದರು. ಬ್ರಿಟಿಷ್ ರೆಸಿಡೆಂಟರಾದ ಸರ್ ಡೊನಾಲ್ಡ್ ರಾಬರ್ಟ್‌ಸನ್ ರವರು, ಕೌನ್ಸಿಲರುಗಳಾದ ಮೆ॥ ವಿ. ಪಿ. ಮಾಧವರಾಯರು, ಮೆ॥ ಸಿ. ಶ್ರೀನಿವಾಸೈಯಂಗಾರ್ಯರು, ಛೀಫ್ ಜಡ್ಜಿ ಮೆ॥ ರಾಮಚಂದ್ರ ಐಯರು, ಛೀಫ್ ಕೋರ್ಟ್ ಜಡ್ಜಿ ಮೆ॥ ಎ. ರಂಗಸ್ವಾಮೈಯಂಗಾರ್ಯರು, ರೆವಿನ್ಯೂ ಕಮಿಷನರ್ ಮೆ॥ ಟಿ. ಆನಂದರಾಯರು, ಮೆ॥ ಗ್ರಾಂಟ್ ಜೆ. ಕುಕ್, ಎ. ಶ್ರೀನಿವಾಸಚಾರ್ಲು, ಕೃಷ್ಣಸ್ವಾಮಿ(ರಾ), ಚಂದ್ರಶೇಖರ ಐಯರು, ತ್ಯಾಗರಾಜ ಐಯರು, ಸುಬ್ರಾಯ ಐಯರು, ಬಿ. ಎಲ್. ರೈಸ್, ಮೆಕ್‌ಹಚ್ಚನ್, ಸ್ಪಾರ್ಕ್‌ಸ್, ವೆಂಕಟಸ್ವಾಮಿ ನಾಯುಡು, ಡಾ॥ ಲೇನ್, ಡಾ॥ ಮೆಕ್ಕಾನ್—ಈ ಮೊದಲಾದವರೆಲ್ಲಾ ಸಭಾಸದರಾಗಿದ್ದರು.

### ಸೆಕ್ರೆಟರಿಯವರ ರಿಪೋರ್ಟು.

ಈ ಮೆಮೋರಿಯಲ್ ಫಂಡಿನ ಆ॥ ಸೆಕ್ರೆಟರಿಯಾದ ಮೆ॥ ವೆಂಕಟಸ್ವಾಮಿನಾಯುಡು ಯವರು ಸಭಾನಾಯಕರ ಅನುಜ್ಞೆಯನ್ನು ಪಡೆದು, ಫಂಡು ಪ್ರಾರಂಭವಾದಾರಭ್ಯ ನಡೆದಿರುವ ವಿಷಯಗಳನ್ನು ಕುರಿತು ರಿಪೋರ್ಟು ಓದಿದರು. ಹೋದವರುಷ ಸೆಪ್ಟೆಂಬರ್ ೧೮ನೆ ತಾರೀಖಿನಿಂದ ಈಚೆಗೆ ಈ ಕಮಿಟಿಯವರು ಎಂಟಾವರ್ತಿ ಸಭೆ ಸೇರಿದ್ದರೆಂದು ತಿಳಿಸಬಹುದು. ಈ ಮೆಮೋರಿಯಲ್ ವಿಷಯದಲ್ಲಿ ಸಕಲ ವರ್ಗದವರೂ ಅನುಕಾಲವಾಗಿ ಚಂದಾ ಹಣವನ್ನು ಕಳುಹಿಸುತ್ತಾರೆ. ದೇಶೀಯ ರಾಜರುಗಳು, ಇಂಗ್ಲಿಷ್ ದೊಡ್ಡಮನುಷ್ಯರು, ಹಿಂದುಸ್ಥಾನದೊಳಗೂ ಹೊರಗೂ ಇರತಕ್ಕ ಅನೇಕಾನೇಕ ದೇಶೀಯ ಮತ್ತು ವಿದೇಶೀಯ ದೊಡ್ಡಮನುಷ್ಯರು—ಹೀಗೆ ಬಹುಮಂದಿ ಚಂದಾ ಕೊಟ್ಟಿದ್ದಾರೆ. ಸಕಲರ ಅಭಿಪ್ರಾಯದಂತೆ ಒಂದು ಪಬ್ಲಿಕ್ ಹಾಲ್, ಒಂದು ಪುಸ್ತಕಭಂಡಾರ, ಒಂದು ಲೋಹಪ್ರತಿಮೆ ಇವುಗಳನ್ನು ಮಾಡಿಸಲಾದೀತೆಂಬ ನಿರೀಕ್ಷೆಯಿಂದ ಈ ಕಮಿಟಿಯವರು ಇವುಗಳ ಖರ್ಚು ಎಷ್ಟಾಗಬಹುದೆಂದು ಅಂದಾಜು ಹಾಕಿದಾರೆ. ಇದೆಲ್ಲಾ ನೋಡುವುದಾದರೆ ಒಂದು ಲಕ್ಷ ರೂಪಾಯಿಗಿಂತಲೂ ಜಾಸ್ತಿಯಾಗಿ ಬೇಕಾಗುವುದು. ಈ ಕಮಿಟಿಯವರು ಈ ಮೆಮೋರಿಯಲ್ ಫಂಡಿಗೆ ತುಂಬಾ ದ್ರವ್ಯ ಸಹಾಯವಾಗಬೇಕೆಂಬುದಾಗಿ ಗೌವರ್ನ್‌ಮೆಂಟಿಗೆ ಅರ್ಜಿ ಬರೆದುಕೊಂಡಿದಾರೆ. ಇದೇ ಆಗಸ್ಟು ೧೫ ರ ವರೆಗೆ ಈ ಫಂಡಿನ ಲೆಖ್ಖಾಚಾರವೇನೆಂದರೆ:—

ಗೌವರ್ನ್‌ಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟಿರುವ ಹಣ............... ರೂ. ೫೭,೨೯೭

ಮದರಾಸ್ ಬ್ಯಾಂಕಿನಲ್ಲಿಟ್ಟಿರುವುದು ,, ೧೭೫

ಬಿಂಡರ್ ಕೌಟ್ಸ್ ಕಂಪನಿಯವರಲ್ಲಿರುವುದು ,, ೪೦೦

ಅಚ್ಚು ಹಾಕಿಸಿದ್ದಕ್ಕೆ ಸಿಬ್ಬಂದಿ ಖರ್ಚು ,, ೩೯೭

ಸೆಕ್ರೆಟರಿ ಕೈಯಲ್ಲಿ ಹಾಜರಿರುವುದು ,, ೯೫೫

ಒಟ್ಟು...... ೫೯,೧೪೨

ಇದುವರೆಗೆ ವಾಗ್ದಾನವಾಗಿರುವುದು........ ೧೨,೭೫೬

ಒಟ್ಟು...... ೭೧,೮೯೮

ಸರ್ ಶೇಷಾದ್ರಿ ಐಯರವರ ಹೆಸರನ್ನು ಯಾವ ರೂಪದಲ್ಲಿ ಶಾಶ್ವತಪಡಿಸಬೇಕೆಂದು ಗೊತ್ತುಮಾಡುವುದಕ್ಕಾಗಿಯೇ ಆ ದಿವಸದ ಸಭೆ ಸೇರಿತ್ತು.

### ದಿವಾನರವರ ಉಪನ್ಯಾಸವು.

ಆಗ ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರು ಎದ್ದು ಸರ್ ಡೊನಾಲ್ಡ್ ರಾಬರ್ಟ್‌ಸನ್ ರವರನ್ನೂ ಇತರ ಸಭಾಸದರನ್ನೂ ಕುರಿತು ಹೇಳಿದ್ದೇನೆಂದರೆ:—

ಹೋದವರುಷ ಸೆಪ್ಟೆಂಬರ್ ೧೭ನೆ ತಾರೀಖಿನಲ್ಲಿ ನಡೆದ ಮಹಾ ಜನ ಸಭೆಯಲ್ಲಿ ಈಗ ಕಮಿಟಿಯ ಪ್ರೆಸಿಡೆಂಟರಾಗಿರುವ ಮೆ॥ ಮಾಧವರಾಯರು ಹೇಳಿರುವಂತೆ, ನಾನು ಪ್ರೆಸಿಡೆಂಟಾಗಿದ್ದೆನು. ಆ ಪ್ರಖ್ಯಾತಿಯನ್ನು ಪಡೆದ ಸರ್ ಕೆ. ಶೇಷಾದ್ರಿ ಐಯರವರ ಹೆಸರನ್ನು ಶಾಶ್ವತಪಡಿಸಬೇಕೆಂಬ ಅರ್ಥಕ್ಕೆ ಏರ್ಪಾಡು ಮಾಡಬೇಕೆಂದು ಆಗ ತೀರ್ಮಾನಿಸಿ, ಚಂದಾ ಎತ್ತುವುದನ್ನು ಪ್ರಾರಂಭ ಮಾಡಿದೆವು. ಪ್ರಾರಂಭದಲ್ಲಿ ಈ ಉದ್ದೇಶಕ್ಕೆ ಕಾಲಹರಣ ಆಯಿತೆಂತಲೂ, ಈ ವಿಷಯದಲ್ಲಿ ನಾವು ಕಾಮಸಪ್ರವೃತ್ತಿಯನ್ನು ಪ್ರಕಾಶಪಡಿಸಿದೆವೆಂತಲೂ ಕೆಲವರು ಅಂದುಕೊಳ್ಳುವುದಕ್ಕೆ ಅವಕಾಶವಾಯಿತೆಂದು ಕಂಡುಬರುವುದು. ಈ ಕಾಲಹರಣದಿಂದಲೂ, ತಾಮಸ ಪ್ರವೃತ್ತಿಯಿಂದಲೂ ತುಂಬಾ ಪ್ರಯೋಜನವೇ ಆಯಿತೆಂದು ಮಹನೀಯರುಗಳಾದ ನಿಮಗೆಲ್ಲಾ ತಿಳಿಸುವುದಕ್ಕೆ ಇದೇ ಒಳ್ಳೇ ಸಮಯವೆಂದು ಹೇಳುತ್ತೇನೆ. ಸರ್ ಶೇಷಾದ್ರಿ ಐಯರವರು ಪರಲೋಕವನ್ನೈದಿದ ಮೇಲೆ ಅವರ ವಿಷಯದಲ್ಲಿ ಶಾಂತವಾಗಿದ್ದ ನೀರನ್ನು ಕಲಕಿದರೆ ಹ್ಯಾಗೋ ಹಾಗೆ ಭಿನ್ನಾಭಿಪ್ರಾಯಗಳು ಹುಟ್ಟಿ ಹಬ್ಬುತ್ತಾ ಬಂದುವು. ಬಹುಕಾಲ ಅಧಿಕಾರ ನಡಸುತ್ತಾ ಬಂದು ವರಿಂದ ಆತನಲ್ಲಿ ಪ್ರಜೆಗಳಿಗುಂಟಾದ ವಿಶೇಷವಾದ ಸಲಿಗೆಯಿಂದಲೋ, ಇಲ್ಲವೇ ಆತನೇ ಕೆಲವು ವಿಷಯಗಳಿಗೆ ಮುಖ್ಯ ಕಾರಣನಲ್ಲದಿದ್ದಾಗ್ಯೂ ಆ ವಿಷಯಗಳು ಕೆಲವರ ಮನಸ್ಸನ್ನು ಹಿಡಿದು ಇನ್ನೂ ಕೊರೆಯುತ್ತಿರುವುದರಿಂದಲೋ, ಇಲ್ಲವೇ ಸದ್ಯದಲ್ಲಿ ವಿವರಿಸಿ ಹೇಳಬೇಕಾದ ಆವಶ್ಯಕತೆಯಿಲ್ಲದ ಬೇರೆ ಕಾರಣಗಳಿಂದಲೋ ಆ ಪುರುಷನ ಯೋಗ್ಯತಾಪಕ್ಷವನ್ನು ಪರಿಗಣಿಸುವುದರಲ್ಲಿ ಏಕವಾಕ್ಯತೆಯುಂಟಾಗಲಿಲ್ಲ; ಭಿನ್ನಾಭಿಪ್ರಾಯಗಳು ಹುಟ್ಟಿ ಹಬ್ಬುತ್ತಾ ಬಂದುವು. ಆದಾಗ್ಯೂ ಕಲಕಿದ ಮಡ್ಡಿ ನೀರನ್ನು ಸ್ವಲ್ಪಹೊತ್ತು ಇಟ್ಟಿದ್ದರೆ ಹ್ಯಾಗೆ ಮಡ್ಡಿಯೆಲ್ಲಾ ಕೂಡ ತಳಕ್ಕೆ ಇಳಿದು ಮೇಲ್ಗಡೆ ಶಾಂತವಾದ ತಿಳಿನೀರು ನಿಲ್ಲುವುದೋ ಅದೇ ರೀತಿಯಲ್ಲಿ ಕಾಲಕ್ರಮದಲ್ಲಿ ಮೊದಲು ಹುಟ್ಟಿದ ಅವರ ವಿಷಯವಾದ ಭಿನ್ನಾಭಿಪ್ರಾಯಗಳು ಬಹುಬೇಗ ಮತ್ತೆ ಕಳೆಯುತ್ತದಂತೆ ತಳವನ್ನೈದಿದುವು; ಆ ಪ್ರಖ್ಯಾತರಾದ ನಮ್ಮ ಸ್ನೇಹಿತರ ಯೋಗ್ಯತೆ ಸಾಮರ್ಥ್ಯಗಳು ಯಥಾರ್ಥವಾದ ಕಳೆಗಳಿಂದೊಡಗೂಡಿ ಪ್ರಕಾಶಿಸಲಾರಂಭಿಸಿದುವು. ಈ ಪ್ರಕಾರ ಪ್ರಜೆಗಳ ಅಂತರ್ಯದಲ್ಲೇ ಅಭಿಪ್ರಾಯ ಬದಲಾವಣೆಯಾಗಿ ಕಣ್ಣೆತ್ತಿ ನೋಡುತ್ತಿರುವಾಗ್ಯೆ—"ನೀವು ಹೋಗಬೇಕಾದ ದಾರಿ ಇಲ್ಲಿದೆ, ಇಗೋ! ನೋಡಿ" ಎಂಬುದಾಗಿ ತೋರಿಸುವಂತಹ ಪ್ರಕಾಶಮಾನವಾದ ನಕ್ಷತ್ರವು ಕಾಣಿಸಿಕೊಂಡಿತು. ಆ ಪ್ರಖ್ಯಾತ ರಾಜಂತಹ, ಘನನಸ್ನೈದಿದಂತಹ, ಈ ಭರತಖಂಡದ ಶ್ರೇಯೋಭಿವೃದ್ಧಿಯನ್ನೇ ಬದ್ಧಕಂಕಣವಾಗಿ ನಡೆದಿರುವಂತಹ ವೈಸರಾಯಿ ಪ್ರಭುಗಳು ಮುಂದೆ ಬಂದು ನಮ್ಮ ಲೇಟ್ ದಿವಾನರ ಯೋಗ್ಯತೆ ಸಾಮರ್ಥ್ಯಗಳನ್ನು ಕೊಂಡಾಡಿ, ತಮ್ಮ ತೀರ್ಮಾನವೇನೆಂಬದನ್ನು ಅಪ್ಪಣೆ ಕೊಡಿಸಿದರು. ಲಾರ್ಡ್ ಕರ್ಜನ್ ಪ್ರಭುಗಳು ಇನ್ನೆರಡು ಸಂವತ್ಸರಗಳ ತನಕ ಹಿಂದುಸ್ಥಾನವನ್ನೇ ತಮ್ಮ ಆವಾಸಸ್ಥಾನವಾಗಿ ಅಂಗೀಕರಿಸಿರುವುದರಿಂದ ಅವರು ಈ ರಾಷ್ಟ್ರದ ಪ್ರಜಾಕೋಟಿಗಳ ಪ್ರೀತಿವಾತ್ಸಲ್ಯಗಳನ್ನು ಇನ್ನೂ ವಿಶೇಷವಾಗಿ ಸಂಪಾದಿಸಿಕೊಂಡಿರುತ್ತಾರೆ; ಸಕಲ ಪ್ರಜೆಗಳೂ ಆನಂದಭರಿತರಾಗಿಯೂ ಪ್ರಾರ್ಥಕೃತಜ್ಞರಾಗಿಯೂ ಇರುವರು. ಹಿಂದುಸ್ಥಾನದ ಇತರ ಭಾಗಗಳಲ್ಲಿರತಕ್ಕ ಪ್ರಜೆಗಳು ಹ್ಯಾಗೋ ಹಾಗೆಯೇ ಈ ಮೈಸೂರಿನಲ್ಲಿರತಕ್ಕ ನಾವು ಕೂಡಾ ಆ ಪ್ರಭುಗಳ ಆಳ್ವಿಕೆಯಿಂದ ಸುಖೋಪಕಾರಗಳನ್ನು ಸಹಭಾಗಿಗಳಾಗಿ ಹೊಂದಬಹುದು.

ಸಭಾಸದರೇ, ಈ ಪ್ರಭುಗಳು ಅಪ್ಪಣೆ ಕೊಡಿಸಿದ ಮೇಲ್ಕಂಡಂತಹ ತೀರ್ಮಾನವು ನಮ್ಮ ಲೇಟ್ ದಿವಾನರವರ ಹೆಸರನ್ನು ಶಾಶ್ವತಪಡಿಸಬೇಕೆಂಬ ನಮ್ಮ ಉದ್ದೇಶದ ವಿಷಯದಲ್ಲಿ ಸಕಲ ದಿಗ್ಭಾಗಗಳಲ್ಲೂ ಅನುಕಾಲವನ್ನುಂಟುಮಾಡಿತು. ನಾವಾಗಿಯೇ ಈ ಕಾರ್ಯವನ್ನು ಪ್ರಾರಂಭಿಸಿದ್ದ ಪಕ್ಷದಲ್ಲಿ ಒಂದುವೇಳೆ ನಮ್ಮನ್ನು ನಮ್ಮ ಸ್ನೇಹಿತರ ಪಕ್ಷಪಾತಿಗಳೆಂದು ಹೇಳುತ್ತಿದ್ದರೇನೋ. ಆದರೆ ಕೀರ್ತಿವಂತರಾದ ಲಾರ್ಡ್ ಕರ್ಜನ್ ಪ್ರಭುಗಳ ಘೋಷಣೆಯು ನಮ್ಮ ಉದ್ದೇಶಕ್ಕೆ ದೊರಕಿದ್ದರಿಂದ ಈ ಕಾರ್ಯವು ಸರಾಗವಾಗಿಯೂ ಸುರಕ್ಷಿತವಾಗಿಯೂ ಸಾರ್ಥಕವಾಗಿಯೂ ನೆರವೇರುವುದಕ್ಕೆ ಸಹಾಯವಾಯಿತು. ಲೇಟ್ ಸರ್ ಶೇಷಾದ್ರಿ ಐಯರವರ ಹೆಸರನ್ನು ಶಾಶ್ವತಪಡಿಸುವ ಕಾಲವು ಸಮೀಪವಾಗುತ್ತಾ ಬಂದಿದೆ ಎಂದು ತಿಳಿಸಲು ತುಂಬಾ ಸಂತೋಷಪಡುವೆನು. ನಾನಾದರೋ ಮೂರು ವಿಧವಾದ ಅಭಿಪ್ರಾಯಗಳುಳ್ಳವನಾಗಿ ಈ ಕಾರ್ಯದಲ್ಲಿ ಮೊದಲಿನಿಂದಲೂ ಒಬ್ಬ ಮುಖ್ಯ ಕರ್ತನಾಗಿ ಪ್ರವರ್ತಿಸಿರುತ್ತೇನೆ. ಮೊದಲನೆಯದಾಗಿ, ಈ ವಿಷಯದಿಂದ ಮೈಸೂರು ಸಂಸ್ಥಾನವು ವಿಶೇಷ ಪ್ರಾಮುಖ್ಯತೆಯನ್ನು ಸಂಪಾದಿಸಿಕೊಂಡಿರುವುದು. ಸರ್ ಶೇಷಾದ್ರಿ ಐಯರವರ ಸಾವಿರನ್ನು ಸರ್ವರೂ ಮೆಚ್ಚಿ ಹೊಗಳಿ ಶಾಶ್ವತಪಡಿಸುವವಲ್ಲದೆ ಅನ್ಯಥಾ ಅಲ್ಲ. ಅವರು ಮೈಸೂರು ಸಂಸ್ಥಾನದ ದಿವಾನಗಿರಿಯನ್ನು ನಿರ್ವಹಿಸುತ್ತಾ ಇಂತಹ ಕೀರ್ತಿಯನ್ನು ಸಂಪಾದಿಸಿಕೊಂಡರು. ಆದಕಾರಣ ಮೈಸೂರಿನಲ್ಲೇ ಯಶಸ್ಸನ್ನು ಪಡೆದ ಮಹನೀಯರನ್ನು ನಾವು ಘನಪಡಿಸುವೆವು. ಎರಡನೆಯದಾಗಿ, ನನಗೆ ಪೂರ್ವಸ್ನೇಹಿತನಾಗಿಯೂ, ನನ್ನ ಮೇಲಧಿಕಾರಿಯಾಗಿಯೂ ಮುಖ್ಯಸ್ಥನಾಗಿಯೂ ಇದ್ದಂತಹ ಪುರುಷನ ಹೆಸರನ್ನು ಚಿರಸ್ಥಾಯಿಯಾಗಿ ಮಾಡುವ ಕಾರ್ಯಕ್ಕೆ ನಾನು ಮುಖ್ಯ ಕರ್ತವ್ಯವನ್ನು ವಹಿಸುವ ಭಾಗದಲ್ಲಿ ಪರಮಸಂತೋಷವುಳ್ಳವನಾಗಿರುತ್ತೇನೆಂದು ಸಭಾಸದರಾದ ನಿಮಗೆ ತಿಳಿಸುವೆನು. ಮೂರನೆಯದಾಗಿ, ಘನವನ್ನೈದಿದ ವೈಸರಾಯಿ ಪ್ರಭುಗಳು ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಸಂಗಡ ಈ ಸಂಗತಿಯನ್ನು ಕುರಿತು ಮಾತನಾಡಿ, ಹೇಳಿ ಹೋದಮೇಲೆ ಶ್ರೀಮನ್ಮಹಾರಾಜರವರು ಲೇಟ್ ದಿವಾನರವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಸಂಕಲ್ಪ ಮಾಡಿಕೊಂಡು, ಈ ತಮ್ಮ ಸಂಕಲ್ಪವನ್ನು ನೆರವೇರಿಸುವಂತೆ ನನಗೆ ಅನುಜ್ಞೆಯನ್ನು ದಯಪಾಲಿಸಿದರು. ಈ ಅನುಜ್ಞೆಯ ಫಲವನ್ನು ಕುರಿತು ಚರ್ಚಿಸುವುದಕ್ಕಾಗಿಯೇ ನಾವೆಲ್ಲಾ ಈ ದಿವಸ ಇಲ್ಲಿ ಸಭೆ ಸೇರಿರುತ್ತೇವೆ. ಆ ಸಂಕಲ್ಪವು ತೃಪ್ತಿಕರವಾಗಿ ನೆರವೇರಿರುವುದು. ಅದನ್ನು ಕಾರ್ಯರೂಪವಾಗಿ ಪ್ರತ್ಯಕ್ಷಪಡಿಸುವುದೇ ನಾವು ಈಗ ನಡಸಬೇಕಾಗಿರುವ ಕೆಲಸ.

ಈ ಉದ್ದೇಶಕ್ಕೆ ಚಂದಾ ಕೊಡಬೇಕೆಂದು ನಾವು ಕೇಳಿದ್ದು ಬಹಳ ದೂರದೇಶಗಳಿಗೂ ಕೂಡ ಕೇಳಿ ಬಂದಿತು. ಎಲ್ಲರೂ ಜಾಗ್ರತೆಯಿಂದಲೂ, ಧಾರಾಳವಾಗಿಯೂ ಚಂದಾ ಕೊಟ್ಟು ಕಳುಹಿಸಿದರು. ಎಕ್ಸಿಕ್ಯೂಟಿವ್ ಕಮಿಟಿಯ ಪ್ರೆಸಿಡೆಂಟರು ಈಗ ಓದಿಹೇಳಿದ ರಿಪೋರ್ಟು ಜಮಾಖರ್ಚಿನ ಪಟ್ಟಿಯಿಂದ ಈ ಫಂಡಿಗೆ ಎಷ್ಟು ಹಣ ವಸೂಲಾಗಿದೆ ಎಂಬ ವಿಷಯ ನಿಮಗೇ ತಿಳಿದಿರುತ್ತೆ. ಚಂದಾ ಪಟ್ಟಿಯನ್ನು ನೋಡಲಾಗಿ ಆಫ್ರಿಕಾ ಖಂಡ ಒಂದು ವಿನಹಾ ಈ ಭೂಪ್ರಪಂಚದ ಸಕಲದಿಗ್ದೇಶಗಳಿಂದಲೂ ಮಹನೀಯರುಗಳಾದ ಅನೇಕರು ಚಂದಾ ಹಾಕಿರುವದು ವೇದ್ಯವಾಗುವುದು. ಸಭಾಸದರೇ, ನಾವುಗಳೇನೋ ಈ ಏಷ್ಯಾಖಂಡದಲ್ಲಿರುತ್ತೇವೆ, ಹಿಂದುಸ್ಥಾನದಲ್ಲಿ ಮುಖಂಡರೆನಿಸಿಕೊಂಡಿರುವ ಪ್ರಜಾಪಾಲಕರೊಳಗೆ ಒಬ್ಬರಾದರೂ ಈ ಫಂಡಿಗೆ ಚಂದಾ ಕಳುಹಿಸದೆ ಇಲ್ಲವು. ಅನೇಕ ರಾಜರುಗಳು ಸರ್ ಶೇಷಾದ್ರಿ ಐಯರವರ ಶಕ್ತಿ ಸಾಮರ್ಥ್ಯಗಳನ್ನು ಮೆಚ್ಚಿ ತಮ್ಮ ಸಹತಾಪವನ್ನು ಪ್ರಕಾಶಪಡಿಸಿರುತ್ತಾರೆ. ಅವರು ಹೀಗೆ ಮಾಡಿದ್ದರಲ್ಲಿ ಎರಡು ವಿಷಯಗಳು ಹೊರಡುವವು; ಇವೆರಡನ್ನೂ ನಾವು ಮರೆಯಕೂಡದು. ಮೊದಲೆಯದಾಗಿ, ಆ ಸಾರ್ವಭೌಮರುಗಳಾಗಿರುವ ಇಂಗ್ಲಿಷ್ ಗೌವರ್ನ್‌ಮೆಂಟಿನವರು ದೇವರ ಅನುಗ್ರಹ ಹೊಂದಿದವರಾಗಿ ನಮ್ಮನ್ನು ಆಳುತ್ತಾ ಬಂದಿರುವ ಕಾರಣ ನಾವು ದಿನೇ ದಿನೇ ಅಭಿವೃದ್ಧಿಯನ್ನೈದುತ್ತಾ ಸವನಾಗರಿಕರಾಗುತ್ತಾ ಬರುತ್ತಿದ್ದೇವೆ. ಇದರ ಬೆಳೆಯಿಂದ ಈ ರಾಷ್ಟ್ರದ ಸಕಲ ಪ್ರಜೆಗಳಲ್ಲೂ ಪರಸ್ಪರವಾಗಿ ಒಂದು ತರಹಾ ಸಹೋದರ ಭಾವವೂ ಪ್ರೀತಿವಾತ್ಸಲ್ಯಗಳೂ ಹುಟ್ಟಿ ವೃದ್ಧಿಯನ್ನೈದಲು ಅವಕಾಶವುಂಟಾಗಿರುವುದು. ಆದಕಾರಣ ಯಾವ ಕಡೆಯಲ್ಲಿ ಒಂದು ಸತ್ಕಾರ್ಯವು ಉಪಕ್ರಮವಾದರೂ ಈ ರಾಷ್ಟ್ರದ ಇತರ ಭಾಗಗಳವರೂ ಕೂಡ ಅಂತಹ ಕಾರ್ಯದಲ್ಲಿ ಸಂತೋಷಯುಕ್ತರಾಗಿಯೂ ಪ್ರೋತ್ಸಾಹಕರಾಗಿಯೂ ನಿಲ್ಲುವರು. ಈ ಭಾಗದಲ್ಲಿ ನಾವು ಇಂಗ್ಲಿಷ್ ಗೌವರ್ನ್‌ಮೆಂಟಿನವರಿಗೆ ಎಷ್ಟುಮಟ್ಟಿಗೆ ನಮ್ಮ ಕೃತಜ್ಞತೆಯನ್ನೂ ಭಕ್ತಿ ವಿಶ್ವಾಸಗಳನ್ನೂ ಪ್ರಕಾಶಪಡಿಸಿದರೂ ಸಾಲದು. ಎರಡನೆಯದಾಗಿ, ಇಂತಹ ಸಂದರ್ಭಗಳಲ್ಲಿ ನಮ್ಮ ಹಿಂದುಸ್ಥಾನದ ರಾಜರುಗಳು ಬೇಗ ಬೇಗನೆ ಮುಂದೆ ಬಂದು ಪ್ರೋತ್ಸಾಹ ಕೊಡುವುದರಿಂದ ಆಯಾ ಸಂಸ್ಥಾನಗಳಲ್ಲಿ ಅವರವರ ಕೈಕೆಳಗೆ ಸೇವೆ ಮಾಡುತ್ತಿರುವ ಉದ್ಯೋಗಸ್ಥರಲ್ಲಿ—"ನಾವೂ ನಮ್ಮ ಕರ್ತವ್ಯಗಳನ್ನು ಪ್ರಜಾರಂಜನೆಯಾಗುವಂತೆ ನೆರವೇರಿಸುತ್ತಾ ಬಂದರೆ ನಮಗೂ ಶಾಶ್ವತವಾದ ಕೀರ್ತಿ ಲಭಿಸುವುದು" ಎಂಬಂತಹ ಪ್ರೋತ್ಸಾಹಕರವಾದ ಅಭಿಪ್ರಾಯ ಹುಟ್ಟಲು ತುಂಬಾ ಸಹಾಯವಾಗುತ್ತೆ. ಮುಖ್ಯವಾಗಿ ಈ ನಮ್ಮ ಉದ್ದೇಶಕ್ಕೆ ಬಹುಮಂದಿ ದೊಡ್ಡಮನುಷ್ಯರು ಸಹಾಯ ಮಾಡಿದ್ದಾರೆ. ವಿಲಾಯತಿ ರಾಜ್ಯದ ಕ್ಯಾಬಿನೆಟ್ ಮಂತ್ರಿಗಳಲ್ಲಿ ಒಬ್ಬರೂ, ಹಿಂದುಸ್ಥಾನದಲ್ಲಿ ವೈಸರಾಯಿ ಪದವಿಯನ್ನೂ ಗೌವರ್ನರ್ ಪದವಿಯನ್ನೂ ಇನ್ನೂ ಅನೇಕ ಭಾರಿ ಭಾರಿ ಉದ್ಯೋಗಗಳನ್ನೂ ಅನುಭೋಗಿಸಿ ಹೋಗಿ, ಈಗ ವಿಲಾಯಿತಿಯಲ್ಲಿರತಕ್ಕ ದೊಡ್ಡಮನುಷ್ಯರುಗಳೂ, ವ್ಯಾಪಾರ ಮುಂತಾದ ಸಂದರ್ಭಗಳಲ್ಲಿ ಈ ಸಂಸ್ಥಾನದ ಪರಿಚಯವನ್ನು ಪಡೆದಿರುವ ಅಮೇರಿಕದ ಕೆಲವು ದೊಡ್ಡಮನುಷ್ಯರೂ ಈ ಮೆಮೋರಿಯಲ್ ಫಂಡಿಗೆ ಚಂದಾ ಕಳುಹಿಸಿರುವರು. ಸಭಾಸದರೇ, ಹೀಗೆ ಬಂದ ನಾನಾ ಕಡೆಗಳವರೂ ಪ್ರೋತ್ಸಾಹಪಡಿಸುವುದು ಅತ್ಯಂತ ಸಂತೋಷ ನಾವು ಸಗಣಿಸಬೇಕು. ಈ ಭಾಗದಲ್ಲಿ ನಾವು ಒಂದು ವಿಧವಾಗಿ ಅಹಂಕಾರಪಟ್ಟುಕೊಳ್ಳಬಹುದಾಗಿದೆ.

ಈ ಫಂಡಿನ ಎಕ್ಸಿಕ್ಯೂಟಿವ್ ಕಮಿಟಿಯವರ ಪ್ರಾರ್ಥನೆಯನ್ನು ಲಾಲಿಸಿ, ಶ್ರೀಮನ್ಮಹಾರಾಜರವರು ಈ ಸಂಸ್ಥಾನದ ಖಜಾನೆಯಿಂದ ಈ ಫಂಡಿಗೆ ೨೫,೦೦೦ ರೂಪಾಯಿಗಳನ್ನು ಗ್ರಾಂಟು ಕೊಡತಕ್ಕದ್ದೆಂದು ಸ್ಯಾಂಕ್ಷನ್ ಮಾಡಿರುವ ಆಜ್ಞೆಯನ್ನು ಈ ಸಭಿಕರಾದ ತಮಗೆಲ್ಲಾ ತಿಳಿಸಲು ತುಂಬಾ ಸಂತೋಷಪಡುವೆನು. ಈ ಫಂಡಿಗೆ ಕೊಡಿಸಲ್ಪಟ್ಟಿರುವ ಹಣವನ್ನು ಒಂದಕ್ಕೊಂದು ವಿರೋಧವಾಗುವಂತಹ ನಾನಾ ಕಾರ್ಯಗಳಿಗೆ ವಿನಿಯೋಗಿಸದಂತೆ ನೋಡಿಕೊಳ್ಳಬೇಕೆಂತಲೂ, ಇದರಲ್ಲಿ ಎಲ್ಲಾದರೂ ಯಾವುದಾದರೊಂದು ಕಾರ್ಯವನ್ನು ಮಾಡಿ, ಪ್ರಖ್ಯಾತಿಹೊಂದಿದ ದಿವಾನರವರ ಹೆಸರನ್ನು ನಿಲ್ಲಿಸಬೇಕೆಂತಲೂ, ಆ ಕಾರ್ಯವು ಚಂದಾ ಕೊಟ್ಟಿರತಕ್ಕ ಸಕಲ ಜನರಿಗೂ ತೃಪ್ತಿ ಸಮಾಧಾನಗಳನ್ನುಂಟುಮಾಡುವುದಾಗಿರಬೇಕೆಂತಲೂ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರುತ್ತಾರೆ.

ಬೆಂಗಳೂರಿನಲ್ಲಿ ಒಂದು ಪಬ್ಲಿಕ್ ಹಾಲ್ ಇಲ್ಲದೆ ಕೊರತೆಯುಂಟಾಗಿದೆ. ಬಹುಮಂದಿ ಈ ಕಾರ್ಯವನ್ನು ಮಾಡಬೇಕೆಂಬುದಾಗಿ ಸೂಚಿಸಿಯೂ ಇರುತ್ತಾರೆ. ಆಗ ಸ್ಥಾಪಿಸಲ್ಪಟ್ಟ ವೇದಿಗಳ

ನ್ನು ಅಂತಹ ಒಂದು ಕಟ್ಟಡವು ಅವಶ್ಯ ಮಾಡಿಸತಕ್ಕದೆಂದು ಅಭಿಪ್ರಾಯಪಡುವುದಾದರೆ ಕಬ್ಬನ್ ಪಾರ್ಕಿನಲ್ಲಿ ಅದಕ್ಕಾಗಿ ಒಂದು ಸ್ಥಳವನ್ನು ಬಿಟ್ಟುಕೊಡುವರು. ಈ ಸ್ಥಳವನ್ನು ಶ್ರೀಮನ್ ಮಹಾರಾಜರವರೂ, ಬ್ರಿಟಿಷ್ ರೆಸಿಡೆಂಟರಾದ ಸರ್ ಡೊನಾಲ್ಡ್ ರಾಬರ್ಟ್‌ಸನ್‌ರವರೂ ನೋಡಿ ಬಂದಿರುತ್ತಾರೆ. ಈ ಸಮ್ಮ ಬ್ರಿಟಿಷ್ ರೆಸಿಡೆಂಟರವರೋ ಆದಿಯಿಂದಲೂ ಈ ಕಾರ್ಯದಲ್ಲಿ ಅಸಾಧಾರಣವಾದ ಪ್ರೀತಿಯಿಟ್ಟು ನಮಗೆ ಸಹಾಯಮಾಡುತ್ತಾ ಬಂದಿರುವರು. ಇದಲ್ಲದೆ ರೆಸಿಡೆಂಟರವರು ಅವಶ್ಯ ರೋಡಿನ ಪಕ್ಕದಲ್ಲಿರುವ ಸ್ಥಳವನ್ನು ಬೇಕಾದರೂ ಬಿಟ್ಟುಕೊಡುವುದಕ್ಕೆ ಸಿದ್ಧರಾಗಿರುತ್ತಾರೆ. ಆ ಎರಡು ಸ್ಥಳಗಳನ್ನು ಹೋಗಿ ನೋಡಿದ್ದರಲ್ಲಿ ಮಹಾರಾಜರವರಿಗೂ ರೆಸಿಡೆಂಟರವರಿಗೂ ಕಬ್ಬನ್ ಪಾರ್ಕಿನಲ್ಲಿರುವುದೇ ಅನುಕೂಲವಾದುದೆಂದು ಕಂಡುಬಂದಿರುವುದು

ನಾನು ಈ ದಿನ ನಿಮಗೆ ಉಪನ್ಯಾಸಮಾಡುವಂತೆ ನೀವು ಅಪೇಕ್ಷಿಸಿದ್ದಕ್ಕಾಗಿಯೂ, ನೀವುಗಳೆಲ್ಲಾ ಇಷ್ಟು ಸಾವಧಾನವಾಗಿ ನನ್ನ ಮಾತುಗಳನ್ನು ಕೇಳುತ್ತಾ ಬಂದುದಕ್ಕಾಗಿಯೂ ನಿಮ್ಮೆಲ್ಲರನ್ನೂ ವಂದಿಸುತ್ತೇನೆ ಮತ್ತು ಘನಸನ್ಮಾನಿತ ರೆಸಿಡೆಂಟರವರು ಪ್ರೀತಿಯಿಂದ ಬಂದು ಈ ದಿವಸದ ಕಾರ್ಯಗಳನ್ನು ಆಗಮಾಡಿಸಿದುದಕ್ಕಾಗಿ ಅವರನ್ನು ಕೂಡ ವಂದಿಸುತ್ತೇನೆ.

ರೆಸಿಡೆಂಟರವರ ಉಪನ್ಯಾಸವು.

ದಿವಾನರವರು ಮೇಲ್ಕಂಡ ಪ್ರಕಾರ ಉಪನ್ಯಾಸಮಾಡಿ ಕುಳಿತುಕೊಂಡ ತರುವಾಯ ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಸರ್ ಡೊನಾಲ್ಡ್ ರಾಬರ್ಟ್‌ಸನ್‌ರವರು ಎದ್ದು ಸಭಿಕರನ್ನು ಕುರಿತು ಹೇಳಿದ್ದೇನೆಂದರೆ —

ದಿವಾನರವರು ಬಹಳ ಚನ್ನಾಗಿ ಉಪನ್ಯಾಸಮಾಡಿರುತ್ತಾರೆ. ಇವರ ಮೇಲೆ ನಾನು ಬಹಳ ಹೊತ್ತು ಮಾತನಾಡಿ ನಿಮಗೆ ಜುಗುಪ್ಸೆಯನ್ನುಂಟುಮಾಡುವುದಿಲ್ಲ. ರಾಜ್ಯ ಧುರಂಧರರಾಗಿದ್ದ ಸರ್ ಶೇಷಾದ್ರಿ ಅಯ್ಯರವರ ಹೆಸರನ್ನು ಚಿರಸ್ಮರಣೀಯವಾಗಿ ಮಾಡಬೇಕೆಂಬ ಬಯಕೆಯನ್ನು ನೀವೆಲ್ಲರೂ ... ಬಹಳ ಬೇಗ ಚಂದಾ ಹಣ ಕೊಡಿರಿ ... ಈ ಭಾಗದಲ್ಲಿ ನಾನು ವಿಶೇಷ ಹೇಳುವುದೇನೂ ಇರುವುದಿಲ್ಲ. ಆದರೆ ನಾನು ನೈಸಿರಾಯಿಯವರನ್ನು ಕಂಡು, — "ನೀವು ಸೂಚಿಸಿದ ಕಾರ್ಯವು ಬೇಗನೆ ಸಫಲವಾಯಿತು" ಎಂಬ ಮಾತನ್ನು ಅವರಿಗೆ ಅರಿಕೆ ಮಾಡಲು ತುಂಬಾ ಕುತೂಹಲವುಳ್ಳವನಾಗಿರುತ್ತೇನೆ. ಈ ಸಂಗಿಗೆ ಕೃತಿಮಾಡುವನ್ನು ... ಕಾರ್ಯವು ... ಮಹಾರಾಜರವರೂ ... ರೆಸಿಡೆಂಟರು ... ಕಾರುಕರ್ಯಗಳಲ್ಲಿ ಅಲಿಕಾಕಿ ತಮ್ಮ ಮನಸ್ಸಿಗೆ ತೋರಿದಂತೆ ಕೆಲಸಗಳನ್ನು ಮಾಡಿಸುತ್ತಾರೆ ಎಂಬದಾಗಿ ಈಚೆಗೆ ಕೆಲವರು ... ಈಗ ನಾನು ಯಾವ ಸ್ಥಳವನ್ನಾದರೂ ... ಆದಕಾರಣ ನಾನು ... ಮೆಮೋರಿಯಲ್ಲನ್ನು ಕಟ್ಟುವುದಕ್ಕೆ ಪಬ್ಲಿಕ್ ಪಾರ್ಕಿ ಸ್ಥಳವನ್ನು ಗೊತ್ತುಮಾಡಿಕೊಳ್ಳಲು ... ಶ್ರೀಮನ್ ಮಹಾರಾಜರವರು ನೋಡಿ ಒಪ್ಪಿಕೊಂಡಿರುವ ಸ್ಥಳವು ಬಹಳ ಅನುಕೂಲವಾಗಿದೆ ಎಂದು ನನಗೆ ತೋರುತ್ತೆ. ಮತ್ತು ... ಮೆಮೋರಿಯಲ್ಲನ್ನು ಕಟ್ಟುವುದಕ್ಕೆ ಯಾವ ಅಡ್ಡಿಯೂ ಇರುವುದಿಲ್ಲ.

ಮೆಮೋರಿಯಲ್ಲಿನ ತೀರ್ಮಾನವು

ಅನಂತರ ಮೆಮೋರಿಯಲ್ಲನ್ನು ಯಾವ ರೀತಿಯಲ್ಲಿ ಕಟ್ಟಬೇಕೆಂದು ಸಭಾಪತಿಗಳು ಸ್ವಲ್ಪ ಹೊತ್ತು ಚರ್ಚೆಮಾಡಿದರು. ಕಡೆಗೆ ಸಭಾಧ್ಯಕ್ಷರು ಎದ್ದು —

"ಒಂದು ಪಬ್ಲಿಕ್ ಹಾಲ್ ಕಟ್ಟಿಸಿ, ಅದರ ಮುಂದೆ ಅಥವಾ ಒಳಗೆ ಸರ್ ಶೇಷಾದ್ರಿ ಅಯ್ಯರವರ ಲೋಹಪ್ರತಿಮೆಯನ್ನು ಮಾಡಿಸತಕ್ಕದ್ದು; ಮತ್ತು ಇನಾಮು ಆಗಿ ಹಣ ಉಳಿದರೆ ಧರ್ಮಾರ್ಥವಾದ ಒಂದು ಸರ್ವೋಪಯೋಗವಾದ ಫಂಡನ್ನು ಕಾಪಾಡತಕ್ಕದ್ದು" ಎಂಬುದೇ ಈ ಸಭಾಸದರ ಮುಖ್ಯ ಅಭಿಪ್ರಾಯವೆಂದು ಗೊತ್ತುಮಾಡಿ ತಿಳಿಸಿದರು.

ಕಾರ್ಯನಿರ್ವಾಹಕ ಸಮಿತಿಯು.

ಆಗ ... ಎದ್ದು — ಈ ಕಾರ್ಯಗಳನ್ನು ... ನಡೆಸುವುದು ಸಾಧ್ಯವಲ್ಲವಾದುದರಿಂದ ಒಂದು ಕಮಿಟಿ ನೇಮಿಸತಕ್ಕದ್ದೆಂದು ಹೇಳಿ, ಈ ಕಾರ್ಯನಿರ್ವಾಹಕ ಕಮಿಟಿಗೆ ಸರ್ ವಿ. ಪಿ. ಮಾಧವರಾಯರು ... ಪ್ರೆಸಿಡೆಂಟರಾಗಿಯೂ, ಮಿ. ವಿ. ಪಿ. ... ಸೆಕ್ರೆಟರಿಯಾಗಿಯೂ ... ಮೆಂಬರುಗಳಾಗಿಯೂ ನೇಮಿಸಬೇಕೆಂದು ... ಕಾರ್ಯಗಳನ್ನು ನಡೆಸುವ ... ಸಭಾಸದರೆಲ್ಲರೂ ಏಕವಾಕ್ಯತೆಯಿಂದ ಒಪ್ಪಿಕೊಂಡರು.

... ಎದ್ದು — ಈಗ ... ಮೆಮೋರಿಯಲ್ ಕಟ್ಟಡಕ್ಕೆ ... ಸಭಾಪತಿಗಳಿಗೆ ... ವಂದನೆಗಳನ್ನು ... ಸಭಿಕರೆಲ್ಲರೂ ಬಹು ಸಂತೋಷದಿಂದ ಒಪ್ಪಿದರು.

ಕಡೆಯಲ್ಲಿ ಸರ್ ಡೊನಾಲ್ಡ್ ರಾಬರ್ಟ್‌ಸನ್‌ರವರು ಎದ್ದು — ಸರ್ ವಿ. ಪಿ. ಮಾಧವರಾಯರವರು ಈ ದಿನ ಸಭಾಧ್ಯಕ್ಷರಾಗಿ ಸರ್ವರನ್ನು ಸಹಿಸಿ, ಸಭೆಯ ಕಾರ್ಯಗಳನ್ನು ನೆರವೇರಿಸಿದ್ದಕ್ಕಾಗಿ ಸರ್ವರೂ ಅವರನ್ನು ವಂದಿಸತಕ್ಕದ್ದು ಎಂದು ಹೇಳಿದ ಕೂಡಲೇ ಸಭಾಸದರೆಲ್ಲಾ ಹರ್ಷಧ್ವನಿಯೊಡನೆ ಸಭೆಯನ್ನು ಮುಕ್ತಾಯಮಾಡಿದರು.

## ಸ್ಥಳೀಕ ವರ್ತಮಾನಗಳು.

**ಶುಣಿಗಲು.** — ಈಗ ಸುಮಾರು ೮—೧೦ ದಿನಗಳಿಂದ ಹಚ್ಚಿ ಮತ್ತಿಗೆ ಮಳೆಯಾಗುತ್ತಾ ಇದೆ. ಇದುವರೆಗೂ ಕೆರೆ ಕಟ್ಟೆಗಳು ತುಂಬಲಿಲ್ಲ. ಮನೆಯ ಭಾವಿಗಳಲ್ಲಿ ನೀರಿಲ್ಲದೆ ಜನಗಳು ಬಹಳ ಸಂಕಟಪಡುತ್ತಿದ್ದಾರೆ. ಇಲ್ಲಿನ ಜನಾ ಚನ್ನಾಗಿಲ್ಲ. ಯಾವ ಗಲ್ಲಿ ಗಲ್ಲಿ ನೋಡಿದರೂ ಬಚ್ಚಲುಗಳು ಕೊಳಕು ನಾರುತ್ತವೆ. ಅನೇಕರು ಮನೆಗಳ ಹಿಂಭಾಗದಲ್ಲಿಯೇ ತಿಪ್ಪೆಗಳನ್ನು ಹಾಕಿರುವದಲ್ಲದೆ ಒಂದು ಅಥವಾ ಒಂದುವರೆ ಅಡಿ ಆಳದ ಹಳ್ಳವನ್ನು ತೋಡಿ ಬಯಲಾನೆಯನ್ನು ಮಾಡಿಕೊಂಡಿರುತ್ತಾರೆ. ಈ ಗುಂಡಿಗಳನ್ನು ಆಗಿಂದಾಗ್ಗೆ ಸಾಕು ಮಾಡಲು ಆಗುವುದಿಲ್ಲವಾದ್ದರಿಂದ ವರ್ಷಗಟ್ಟಲೆ ಬಿಟ್ಟುಬಿಡುತ್ತಾರೆ. ಇದರಿಂದ ಪ್ರತಿ ಮನೆಗಳಲ್ಲಿಯೂ ದುರ್ಗಂಧ ತುಂಬಿಕೊಂಡು ಊರಿನ ಹವೆ ಕೆಟ್ಟು ಯಾವ ಮನೆಯಲ್ಲಿ ನೋಡಿದಾಗ್ಯೂ ಒಂದೆರಡು ಬಾಯಿಲೆಗಳಿಲ್ಲದ್ದೇ ಇರುತ್ತವೆ ಅಲ್ಲದೆ ಈ ಊರಿನ ಪೂರ್ವ ಭಾಗದಲ್ಲಿರುವ ಮಾರಿ ಗುಡಿಯ ಬಳಿ ಸುಮಾರು ೫—೬ ದಿನಗಳಿಂದ ಒಂದು ಸತ್ತ ನಾಯಿ ಬಿದ್ದು ಕೊಳತು ನಾರುತ್ತಿದ್ದರೂ ಅದನ್ನು ಯಾರೂ ಗಮನಕ್ಕೆ ತಂದುಕೊಳ್ಳದಿರುವುದು ಬಹಳ ವ್ಯಸನಕರವಾಗಿದೆ. ಮುಂದೆಯೂ ಇದೇ ರೀತಿಯಲ್ಲಿ ಸರ್ಕಾರದವರು ಗ್ರಾಮದ ಶಾಚೀಶು ವಿಷಯದಲ್ಲಿ ಗಮನ ಕೊಡದ ಪಕ್ಷದಲ್ಲಿ ಪ್ಲೇಗು ಪ್ರಾಪ್ತವಾಗಲು ಸಂದೇಹವಿರುವುದಿಲ್ಲ.

**ಮಾವಿನಗೆರೆ.** — ಇಲ್ಲಿ ಮಳೆ ಇಲ್ಲ. ಛಳಿ ಕಟ್ಟಾಗಿ ಬೀಸುತ್ತಾ ಇದೆ. ಆದರೆ ಜನರಿಗೆ ಅನಾರೋಗ್ಯವೇನೂ ಇಲ್ಲ. ಈ ತಾಲ್ಲೂಕಿನಲ್ಲಿ ೫—೬ ವರ್ಷಗಳಿಂದಲೂ ಮಳೆ ಇಲ್ಲದೆ ಜನರಿಗೆ ಕ್ಷೋಭೆಯುಂಟಾಗಿರುವದೇ ಹೊರತು ಉಪದ್ರವಗಳ ಬಾಧೆಯೇನೂ ಇಲ್ಲ. ಕಾಲಾ ಇಲ್ಲಿ ಅವರೊಡನೆ, ಪ್ಲೇಗಿನ ಪ್ರವೇಶ ಎಂದಿಗೂ ಇಲ್ಲ. ... ಈ ದೇಶದ ಆರೋಗ್ಯಭಾಗ್ಯ ... ದೃಢವಾಗಿ ಹೇಳಬಹುದು. ಬಾಯಿಂ ಅಮಲ್ದಾರ್ ಮಿ॥ ವೆಂಕೋಬರಾಯರು ... ಜುಲೈ ೨೯ ರಲ್ಲಿ ಛಾರ್ಜು ವಹಿಸಿದರು. ಇವರು ... ಇಲ್ಲ. ... ಇವರು ಕಲಿತವರಲ್ಲ ... ಇವರು ಬಂದಮೇಲೆ ... ಅಂಚೆ ಮನೆ ... ಇಲ್ಲಿನ ಇಂಗ್ಲಿಷ್ ಗರ್ಲ್ಸ್ ಸ್ಕೂಲಿನಲ್ಲಿ ... ಇಲ್ಲಿನ ಆಸ್ಪತ್ರೆಯಲ್ಲಿ ... ಈ ಆಸ್ಪತ್ರೆ ಅಸಿಸ್ಟಂಟ್ ಸರ್ಜನ್ ... ಅಧಿಕಾರಿಗಳು ... ಬಿರಬಿರನೆ ... ಸರ್ಕಾರದವರು ... ನರಬೇಕು.

**ಚಿಕ್ಕನಾಯಕನಹಳ್ಳಿ.** — ಈಗ ೮—೧೦ ದಿನಗಳಿಂದ ಆಗಾಗ್ಗೆ ಸ್ವಲ್ಪ ಮಳೆಯಾಗುತ್ತಿದೆ. ... ಇಲ್ಲಿನ ಪ್ರಜೆಗಳು ... ತುರುವೇಕೆರೆ, ತಿಪಟೂರು, ಬೆಳ್ಳಾವಿ ಮೊದಲಾದ ಕಡೆ ಸುಮಾರು ೩—೪ ವರ್ಷಗಳಿಂದ ಪ್ರತಿ ಸಂವತ್ಸರವೂ ತಪ್ಪದೆ ಪ್ಲೇಗು ... ಮೇಲ್ಕಂಡ ಸ್ಥಳಗಳಲ್ಲಿ ಪ್ಲೇಗು ಇರುವಾಗ ಈ ಊರಿನ ... ಈ ತಾಲ್ಲೂಕಿನ ... ದೇವರು ಸುರಕ್ಷಿತವಾಗಿ ಕಾಪಾಡಿಕೊಂಡು ಬಂದಿದ್ದಾನೆ. ಈಗ ಈ ಊರಿನಲ್ಲಿ ... ಕಂಡುಬರುತ್ತದೆ. ಇದಕ್ಕಾಗಿ ಇಲ್ಲಿನ ಜನಗಳೆಲ್ಲಾ ಸೇರಿ — "ಪ್ಲೇಗ್ ಸ್ಥಳದಿಂದ ಯಾರು ಬಂದರೂ ಗ್ರಾಮದೊಳಕ್ಕೆ ಬಿಡಕೂಡದು. ... ಬೆಂಗಳೂರಿನಿಂದ ... ೧೦ ದಿವಸ ... ಇರಬೇಕು" ಎಂದು ಗೊತ್ತುಮಾಡಿಕೊಂಡಿದ್ದಾರೆ. ಅದ್ದರಿಂದ ಪ್ಲೇಗ್ ಸ್ಥಳದಿಂದ ಯಾರೂ ಇಲ್ಲಿಗೆ ಬರದೆ ... ತೊಂದರೆ ... ಈ ಮೊದಲು ... ಈ ಊರಿನಲ್ಲಿ ಆಗುವ ಇಂಪೀರಿಯಲ್ ಸ್ಕೂಲ್ ವಿವಾದವಾಗಿ ಕೋಆಪರೇಟಿವ್ ಸೊಸೈಟಿಗೆ ಮೆಂಬರುಗಳನ್ನು ಆರಿಸುವ ... ಸಭೆ ಸೇರಿತ್ತು. ಮಿ॥ ಅಮಲ್ದಾರ್ ವಿಶ್ವನಾಥರಾಯರು ಸಭಾಧ್ಯಕ್ಷರಾಗಿದ್ದರು. ಇಲ್ಲಿನ ಎ. ವಿ. ಸ್ಕೂಲ್ ಹೆಡ್ಮಾಸ್ಟರ್ ಮಿ॥ ವೆಂಕಟನಾರಣಯ್ಯರು ಈ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ... ಪ್ರಜೆಗಳನ್ನು ಪ್ರೋತ್ಸಾಹಿಸಿದ್ದರ ಮೇಲೆ ... ರೂಪಾಯಿನ ... ಷೇರುಗಳು ಕೊಡಿಸಲ್ಪಟ್ಟವು. ನಂತರ ಸಭಾ ಖರ್ಚು ... ಈ ಪರ್ತಮಾನವನ್ನು ... ಸ್ಯಾನಿಟರಿ ... ಇಲ್ಲದೆ ... ಆರೋಗ್ಯ ... ಜನಗಳು ... ಮನೆಗಳನ್ನು ... ಸ್ಯಾನಿಟರಿ ... ಮತ್ತು ತುಂಬಾ ... ಮುನ್ಸಿಪಾಲಿಟಿ ವಿಷಯ ... ಮೆಂಬರುಗಳ ಕೆಲಸವನ್ನು ... ಮೆಂಬರುಗಳಿಗೆ ... ಜನರ ... ಸರ್ಕಾರದವರ ದೃಷ್ಟಿಯಾದರೂ ಬೀಳಬಾರದೇ? — ಪೋಲಿಸ್ ... ನಡೆಯುವಂತೆ ಸರ್ಕಾರದವರು ... ಮಾಡಬೇಕಾಗಿದೆ.

## ಇಂಡಿಯಾ ದೇಶದ ವೃತ್ತಾಂತಗಳು.

ಆಸಾಮಿಗೆ ಸೇರಿದ ಚಿರಾಪುಂಜೆಯಲ್ಲಿ ಕಳೆದ ವಾರ-ಒಂದೇ ದಿನದಲ್ಲಿ ೧೯" ಅಂಗುಲ ಪ್ರಮಾಣದಷ್ಟು ಮಳೆ ಸುರಿಯಿತು

* * * *

ಬೊಂಬಾಯಿ ಗೌವರ್ನರಾದ ಲಾರ್ಡ್ ನಾರ್ತ್‌ಕೋಟ್‌ರವರು ಮುಂದಿನ ತಿಂಗಳು ೫ಕ್ಕೆ ಬೊಂಬಾಯಿನಿಂದ ಶ್ರೀಮೆಗೆ ಪ್ರಯಾಣಮಾಡುವವರಾಗಿದ್ದಾರೆ.

* * * *

ಬೊಂಬಾಯಿ ಪಟ್ಟಣದ ಪಾಟಬಂದರಿನಲ್ಲಿ ಬಿಟ್ಟ ಕೊಳ್ಳಿಯು ಒಂದು ಕಾರ್ಖಾನೆಗೆ ತಗಲಿ ... ಬೆಂಕಿ ಬಿದ್ದು ಸುಮಾರು ೭೦,೦೦೦ ರೂ ಸರಕು ಸುಟ್ಟು ಹಾಳಾಯಿತು.

* * * *

ಸರ್ ಡೇವಿಡ್ ಬಾರ್ ರವರೇ ಮುಂದಿನ ವರ್ಷ ಅಕ್ಟೋಬರ್ ವರೆಗೆ ಕೈದರಾಬಾದಿನಲ್ಲಿ ಬ್ರಿಟಿಷ್ ರೆಸಿಡೆಂಟರಾಗಿರತಕ್ಕದ್ದೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಂದ ಹುಕುಂ ಬಂದಿದೆ.

* * * *

ಲಾರ್ಡ್ ಕರ್ಜನ್ ಪ್ರಭುಗಳು ೧೯೦೫ ನೆ ಇಸವಿ ನೋವೆಂಬರ್ ವರೆಗೆ ಇಂಡಿಯಾದ ವೈಸರಾಯರಾಗಿರುತ್ತಾರೆಂದು ಲಂಡನ್ ಪಟ್ಟಣದ ಟೈಮ್ಸ್ ಎಂಬ ಪತ್ರಿಕೆ ಹೇಳುವುದು

* * * *

ಕಾಶೀ ಪಟ್ಟಣದಲ್ಲಿ ನೀರಿನಿಂದ ... ಕಳೆದ ವಾರ ... ಈ ... ಬದುಕಿದ್ದು ಕಷ್ಟ

* * * *

ಜಯಪುರದ ಮಹಾರಾಜರವರು ತಮ್ಮ ... ಹಿಂದುಸ್ಥಾನದ ... ಒಂದು ... ಪಂಡಿತರ ... ೧೨,೦೦೦ ರೂಪಾಯಿಗಳನ್ನು ದಾನ ಮಾಡಿರುತ್ತಾರೆ.

* * * *

ಇಂಡಿಯಾ ಗೌವರ್ನಮೆಂಟಿನ ... ಹುದ್ದೆ ... ಇವರು ... ವರ್ತಮಾನವಿರುವುದು ... ಇವರು ಬಂಗಾಳ ... ಭಾಗಗಳಲ್ಲಿ ಸಂಚಾರಮಾಡಿ, ... ಶಾಸನಗಳನ್ನು ಕಂಡುಹಿಡಿದು ಪ್ರಸಿದ್ಧಿಗೆ ಬಂದಿದ್ದರು.

* * * *

ಕಾಶ್ಮೀರ ಸಂಸ್ಥಾನದಲ್ಲಿ ಈಚೆಗೆ ... ಪ್ರಜೆಗಳಿಗೆ ತುಂಬಾ ಕಷ್ಟ ನಷ್ಟಗಳು ... ಸರ್ಕಾರದವರು ... ಸಂಸ್ಥಾನದ ... ಹೊಂದಿರುವರು ...

* * * *

ಇಂಡೋರಿನಲ್ಲಿ ಮೊದಲು ... ಈಗ ೧೫—೨೦ ದಿನಗಳಿಂದ ಪ್ಲೇಗ್ ಉಪದ್ರವು ತುಂಬಾ ಜಾಸ್ತಿಯಾಗಿದೆ. ಸುಮಾರು ೧೦,೦೦೦ ಪ್ರಜೆಗಳು ಗಿಂದಲೂ ಹೆಚ್ಚಾಗಿ ... ಊರುಗಳನ್ನು ಬಿಟ್ಟು ಓಡಿದರು. ... ದಿನವೊಂದಕ್ಕೆ ೩೦—೪೦ ಜನರಂತೆ ಸಾಯುತ್ತಿದ್ದಾರೆ. ... ಅನೇಕ ... ಮತ್ತು ನಾಲು ಸ್ಕೂಲುಗಳು, ... ಕಾಲೇಜುಗಳು, ಅಂಗಡಿ ಮುಂಗಟ್ಟುಗಳು ಎಲ್ಲಾ ಮುಚ್ಚಲ್ಪಟ್ಟಿವೆ. ಇಂಡೋರು ಪಾಳು ಬಿದ್ದ ಊರಿನಂತೆ ಆಗಿದೆ.

ಹಿಂದುಸ್ಥಾನದಲ್ಲಿ ಮತ್ತೆ ಪ್ಲೇಗ್ ಮರಣಗಳು ಹೆಚ್ಚುತ್ತಾ ಬಂದವೆ. ಹಿಂದಿನ ವಾರ ೩,೩೪೭ ಮಂದಿ ಆ ಉಪದ್ರವದಲ್ಲಿ ಸತ್ತರು; ಕಳೆದ ವಾರ ೩,೬೧೩ ಮಂದಿ ಸತ್ತರು. ಈ ಮರಣಗಳ ಸಂಖ್ಯೆಯು ಬೊಂಬಾಯಿ ಅಧಿಸತ್ಯದಲ್ಲಿ ೨,೭೭೭ ರಿಂದ ೨,೪೩೪ ಕ್ಕೆ, ಮೈಸೂರು ಸಂಸ್ಥಾನದಲ್ಲಿ ೭೭೯ ರಿಂದ ೩೩೧ ಕ್ಕೆ, ಮಧ್ಯಪ್ರಾಂತ್ಯಗಳಲ್ಲಿ ೬೪ ರಿಂದ ೧೩೧ ಕ್ಕೆ, ಹೈದರಾಬಾದಿನಲ್ಲಿ ೭೭ ರಿಂದ ೪೦ ಕ್ಕೆ ಹೆಚ್ಚುತ್ತದೆ. ಪಂಜಾಬಿನಲ್ಲಿ ಎಲ್ಲಾ ೪ ಮರಣಗಳು ಮಾತ್ರ ಆದವೆ.

❖❖❖❖

ಕೊಚ್ಚಿ ಸಂಸ್ಥಾನದಲ್ಲಿ ೧೮೭೫ನೆ ಇಸವಿಯಲ್ಲಿ ೬,೦೧,೧೧೪ ಪ್ರಜೆಗಳಿದ್ದರು; ೧೮೯೧ ರಲ್ಲಿ ಆ ಸಂಖ್ಯೆಯು ೭,೨೨,೯೦೬ ಕ್ಕೆ ಹೆಚ್ಚಿತು. ಈಗಲಾದರೋ ೧೯೦೧ ನೆ ಇಸವಿಯ ಸೇನಸ್ ಎಣಿಕೆಯ ಪ್ರಕಾರ ೮,೧೨,೦೨೫ ಪ್ರಜೆಗಳಿರುತ್ತಾರೆ. ಈ ಪೈಕಿ ಲಕ್ಷಕ್ಕೆ ೭೪ ಮಂದಿಯಂತೆ ಕ್ರೈಸ್ತ ಪ್ರಜೆ ಇರುವರು. ಆ ಸಂಸ್ಥಾನವು ೧,೩೬೧ ಚದರ ಮೈಲಿ ವಿಸ್ತಾರವುಳ್ಳದ್ದಾಗಿದೆ; ಅಂದರೆ. ಪ್ರತಿ ಒಂದು ಚದರ ಮೈಲಿಯಲ್ಲೂ ೫೯೬ ಮಂದಿಯಂತೆ ಜನಭರಿತವಾಗಿರುವದು. ಪ್ರಪಂಚದಲ್ಲಿ ಇಷ್ಟು ಹೆಚ್ಚಾಗಿ ಜನಭರಿತವಾದ ರಾಜ್ಯಗಳು ಅನೇಕವಿಲ್ಲವೆಂದು ಸೇನಸ್ ಕಮಿಷನರು ತಿಳಿಸಿದ್ದಾರೆ.

❖❖❖❖

ಕಳ್ಳರು ಒಂದು ದೊಡ್ಡ ಗುಂಪು ಮಾಡಿಕೊಂಡು, ಸುಮಾರು ಎರಡು ವರುಷಗಳಿಂದ ಕಲ್ಕತ್ತೆಯಲ್ಲೂ ಅದರ ಸುತ್ತಮುತ್ತಲಿನ ಗ್ರಾಮಾಂತರಗಳಲ್ಲೂ ಆಗಿಂದಾಗ್ಯೆ ಅನೇಕ ಕಳವು ದರೋಡೆಗಳನ್ನು ನಡಸುತ್ತಿದ್ದರು. ಇವರನ್ನು ಪತ್ತೆಮಾಡಿ ಹಿಡಿಯಬೇಕೆಂದು ಪೋಲೀಸ್ ಸುಪರಿಂಟೆಂಡೆಂಟರು ಬಹಳ ದಿವಸಗಳಿಂದ ತಲಾಷು ಮಾಡುತ್ತಿದ್ದರು. ಆ ಕಳ್ಳರು ಒಂದು ಮನೆ ಮಾಡಿಕೊಂಡಿದ್ದಾರೆಂಬುದು ಗೊತ್ತಾಯಿತು. ನೂರಾರು ಮಂದಿ ಪೋಲೀಸಿನವರನ್ನು ಆ ಮನೆಯ ಸುತ್ತಲೂ ನಿಲ್ಲಿಸಿಕೊಂಡು, ಕೆಲವರು ಒಳಕ್ಕೆ ನುಗ್ಗಿದರು. ಕಳ್ಳರೆಲ್ಲಾ ಗಾಢ ನಿದ್ರೆ ಮಾಡುತ್ತಿದ್ದುದನ್ನು ನೋಡಿ, ಎಲ್ಲರಿಗೂ ಕೈ ಕೋಳ ಹಾಕಿ ದಸ್ತಗಿರಿ ಮಾಡಿದರು. ಆ ದಿನ ಹತ್ತು ಮಂದಿ ಬಹಳ ಬಲಿಷ್ಠರಾದ ರೌಡಿಗಳು ಸಿಕ್ಕಿಬಿದ್ದರು. ಇನ್ನು ಮುಂದೆ ಅವರ ದರ್ಯಾಫ್ತಿ ಆಗುವದು.

❖❖❖❖

ರಂಗೂನ್ ಪಟ್ಟಣದ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರು ಒಂದು ಹೊಸ ಕಟ್ಟಳೆಯನ್ನು ಪ್ರಕಟಿಸಿದರು. ವಿದ್ಯಾರ್ಥಿಗಳು ಉಪಾಧ್ಯಾಯರುಗಳನ್ನೂ, ಗುಮಾಸ್ತೆಯರುಗಳನ್ನೂ ಎಲ್ಲಿ ಕಂಡರೂ ಆ ಕೂಡಲೆ ಅವರಿಗೆ ಕೈ ಜೋಡಿಸಿಕೊಂಡು ಸ್ವಲ್ಪ ಬಗ್ಗಿ ವಂದಿಸಬೇಕೆಂದು ಪೂರ್ವದಲ್ಲಿದ್ದ ಪದ್ಧತಿಯನ್ನು ಜಾರಿಗೆ ತಂದರು. ಈ ಕಟ್ಟಳೆಯು ಹುಡುಗರ ಮಾತಾಪಿತೃಗಳಿಗೆ ಯಾಕೋ ಇಷ್ಟಕರವಾಗಿರುವಂತೆ ತೋರಲಿಲ್ಲವಾದುದರಿಂದ ಅನೇಕರು ತಮ್ಮ ಮಕ್ಕಳನ್ನು ಸರ್ಕಾರಿ ಪಾಠಶಾಲೆಗೆ ಕಳುಹಿಸದೆ ನಿಲ್ಲಿಸಿಕೊಂಡರು. ೬೦೦—೭೦೦ ಹುಡುಗರು ಓದತಕ್ಕ ವಿದ್ಯಾಶಾಲೆಗಳಲ್ಲಿ ೨೦—೩೦ ಹುಡುಗರು ಹಾಜರಾಗುವದೇ ಕಷ್ಟವಾಯಿತು. ಬರ್ಮಾದಲ್ಲಿ ಮುಖಂಡರಾದ ಕೆಲವರು ಡೈರೆಕ್ಟರಿಗೆ ತಂತೀ ವರ್ತಮಾನ ಕೊಟ್ಟು ತಿಳಿಸಿದರು. ಡೈರೆಕ್ಟರವರು ಶೀಘ್ರದಲ್ಲಿ ಆ ಕಟ್ಟಳೆಯನ್ನು ವಜಾಮಾಡಿದೆ ಎಂಬದಾಗಿ ಜವಾಬು ಕೊಟ್ಟು, ಗಲಭೆಯನ್ನು ಸಮಾಧಾನ ಮಾಡಿದರು.

❖❖❖❖

ರಂಗೂನ್ ಪಟ್ಟಣದ ಸ್ಮಾಲ್ ಕಾಸ್ ಕೋರ್ಟಿನ ಅಡಿಷನಲ್ ಜಡ್ಜರಾಗಿದ್ದು ಈಗ ಕೆಲಸ ಬಿಟ್ಟಿರುವ ಮಾಂಗ್‌ಷೇಬಿನ್ ಎಂಬಾತನ ಮೇಲೆ ಅಲ್ಲಿನ ೧೭ ಮಂದಿ ಬ್ಯಾರಿಸ್ಟರುಗಳು ಹೊರಿಸಿರುವ ನಾನಾ ಅಪರಾಧಗಳನ್ನು ಅವರೆಲ್ಲಾ ರುಜುವಾತು ಮಾಡುತ್ತಾರೆಯೋ ಎಂಬದನ್ನು ತನಿಖೆ ಮಾಡಬೇಕೆಂದು ಲೆಫ್ಟಿನೆಂಟ್ ಗೌವರ್ನರವರು ಪೆಗ್ಗ್ಯೂವಿನ ಕಮಿಷನರಿಗೆ ಬರೆದು ಕಳುಹಿಸಿದರಷ್ಟೆ. ಆ ಕಮಿಷನರು ನೆನ್ನೆ ಆ ವಿಷಯವನ್ನು ತನಿಖೆ ಮಾಡಿದರು. ೧೭ ಮಂದಿ ಬ್ಯಾರಿಸ್ಟರುಗಳ ಪೈಕಿ ಇಬ್ಬರು ಮಾತ್ರ ಆ ದಿನ ಕೋರ್ಟಿನಲ್ಲಿ ಹಾಜರಾಗಿ—ಅಪರಾಧಗಳನ್ನು ರುಜುವಾತು ಮಾಡುವದಕ್ಕಾಗುವದಿಲ್ಲ, ಆ ಜಡ್ಜಿಯ ವಿಷಯದಲ್ಲಿ ಜನರು ನಾನಾ ರೀತಿಯಾಗಿ ಮಾತನಾಡಿಕೊಳ್ಳುತ್ತಿದ್ದರೆಂಬದನ್ನು ಮಾತ್ರ ರುಜುವಾತು ಮಾಡಬಲ್ಲೆವೆಂದು ಹೇಳಿದರು. ಉಳಿದ ಬ್ಯಾರಿಸ್ಟರುಗಳು ಕಮಿಷನರಿಗೆ ಕಾಗದ ಬರೆದಿದ್ದರು. ನಾಲ್ಕು ಮಂದಿ—ನೀವು ಸರ್ಕಾರಿಯಾಗಿ ಈ ಮೊಕದ್ದಮೆಯನ್ನು ತನಿಖೆ ಮಾಡುವದಕ್ಕೆ ಪ್ರತಿಯಾಗಿ ನ್ಯಾಯವಾದ ಕೋರ್ಟಿನಲ್ಲಿ ತನಿಖೆ ಮಾಡಿದರೆ ನಾವು ರುಜುವಾತು ಒದಗಿಸುತ್ತೇವೆಂತಲೂ, ಉಳಿದ ಏಳು ಮಂದಿಯೂ—ಮೊಕದ್ದಮೆ ಆದ ತರುವಾಯ ಸರ್ಕಾರದವರು ನಮ್ಮ ನಷ್ಟಕ್ಕೆ ನಮ್ಮಗಳ ಮೇಲೆ ಮೊಕದ್ದಮೆ ತರುವದಿಲ್ಲವೆಂದು ಭರವಸೆ ಕೊಟ್ಟರೆ ನಾವು ರುಜುವಾತು ಮಾಡುತ್ತೇವೆ ಎಂತಲೂ ಬರೆದು ತಿಳಿಸಿದರು. ಈ ಸಂಗತಿಗಳನ್ನೆಲ್ಲಾ ಕಮಿಷನರು ರಿಪೋರ್ಟು ಮಾಡಿ, ಲೆಫ್ಟಿನೆಂಟ್ ಗೌವರ್ನರವರ ಬಳಿಗೆ ಕಳುಹಿಸಿಕೊಟ್ಟರು

❖❖❖❖

ಪಂಢರಪುರದ ದೊಡ್ಡಮನುಷ್ಯರೂ ಶೆಟ್ಟಿ ವರ್ತಕರೂ ಅಲ್ಲಿನ ಟೌನ್‌ಹಾಲ್ ಬಂಗಲೆಯಲ್ಲಿ ಕಳೆದ ವಾರ ಸಭೆ ಸೇರಿ ತಮ್ಮ ಬಾಲಕರ ವಿದ್ಯಾವಿಷಯದಲ್ಲಿ ಸರ್ಕಾರದವರು ಮಾಡಿರುವ ಹೊಸ ಕಟ್ಟಳೆಯನ್ನು ಕುರಿತು ಚರ್ಚಿಸಿ ತೀರ್ಮಾನಮಾಡಿರುವದೇನೆಂದರೆ— (೧) ಈ ಹೊಸ ಕಟ್ಟಳೆಯಿಂದ ನಮ್ಮ ಬಾಲಕರು ೧೨ ವರುಷ ಕಾಲವನ್ನು ಬಾಲಪಾಠಗಳಲ್ಲೇ ಕಳೆಯಬೇಕಾಗಿದೆ, ಪ್ರೌಢ ವಿದ್ಯಾಭ್ಯಾಸಕ್ಕೆ ಅವಕಾಶವೇ ಇಲ್ಲ. (೨) ನಾಲ್ಕು ವರುಷಗಳ ಮೇಲೆ ಇಂಗ್ಲಿಷ್ ಪ್ರಾರಂಭಿಸಬೇಕೆಂದು ಕಟ್ಟಳೆ ಮಾಡಿರುವದು ಬಹಳ ಕಠಿಣವಾದದ್ದು. (೩) ಪ್ರೈಮರಿ ವಿದ್ಯೆ ಕಲಿಯುವವರಿಗೆ ಹೆಚ್ಚು ಪಾಠಗಳನ್ನು ಗೊತ್ತುಮಾಡಿದ್ದಾರೆ. (೪) ಅಪ್ಪರ್ ಪ್ರೈಮರಿ ಪರೀಕ್ಷೆಯನ್ನೇ ವಜಾಮಾಡಬೇಕು. (೫) ಸ್ಕೂಲುಗಳಲ್ಲಿ ಓದದೆ ಪ್ರೈವೇಟಾಗಿ ಯೂನಿವರ್ಸಿಟಿ ಪರೀಕ್ಷೆಗಳಿಗೆ ಯಾರೂ ಹಣ ಕಟ್ಟಕೂಡದೆಂಬ ವಿಧಿಯನ್ನು ತೆಗೆದುಹಾಕಬೇಕು. (೬) ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಹಣ ಕಟ್ಟತಕ್ಕ ಬಾಲಕರು ೧೬ ವಯಸ್ಸಿನವರಾಗಿರಬೇಕೆಂದು ವಿಧಿಸಿರುವದು ಸರಿಯಾದುದಲ್ಲ. (೭) ಉಪಾಧ್ಯಾಯರ ಸಂಬಳವನ್ನು ಹೆಚ್ಚುಮಾಡದೆ ಹೋದರೆ ಯೋಗ್ಯರಾದವರು ಆ ಕೆಲಸವನ್ನು ವಹಿಸಿ ಬರುವದಿಲ್ಲ. ಈ ತೀರ್ಮಾನವನ್ನು ಸಭಾನಾಯಕರು ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರವರಿಗೆ ಬರೆದು ತಿಳಿಸಿದರು. ಡೈರೆಕ್ಟರವರು—ಈ ಹೊಸ ಕಾಯಿದೆ ಜಾರಿಯಲ್ಲಿ ಬರುವದಕ್ಕೆ ಗೌವರ್ನಮೆಂಟಿನವರಲ್ಲದೆ ನಾನು ಕಾರಣನಲ್ಲ. ಆದಾಗ್ಯೂ ನಾನು ಈ ವಿಷಯಗಳನ್ನು ಮತ್ತೆ ತನಿಖೆ ಮಾಡಿ, ಬಾಲಕರ ವಿದ್ಯಾಭಿವೃದ್ಧಿಗೆ ಸ್ವಲ್ಪವೂ ಕುಂದಕವಾಗದಂತೆ ಏರ್ಪಾಡು ಮಾಡುತ್ತೇನೆ ಎಂಬದಾಗಿ ಉತ್ತರಕೊಟ್ಟಿದ್ದಾರೆ.

❖❖❖❖

ಹಿಂದಿನ ಬುಧವಾರ ಬರೋಡಾ ಸಂಸ್ಥಾನದ ಮಹಾರಾಜರವರ ಮಾತೃಶ್ರೀ ಮಹಾರಾಣಿ ಮಹಳ್ಸಾ ಬಾಯಿಯವರು ಕಾಲವಾದರು. ಅವರಿಗೆ ೫೮ ವರುಷ ವಯಸ್ಸಾಗಿದ್ದಿತು. ಕಳೆದ ೧೮೬೦ ನೆ ಇಸವಿಯಲ್ಲಿ ಲೇಟ್ ಮಹಾರಾಜಾ ಮಲ್ಹಾರಿರಾವ್‌ಯವರು ವಿವಾಹ ಮಾಡಿಕೊಂಡರು. ಮದುವೆಯಾದ ನಾಲ್ಕು ವರುಷಗಳಲ್ಲೇ, ಅಂದರೆ ೧೮೭೪ ರಲ್ಲಿ ಆ ಮಹಾರಾಜರವರು ಬ್ರಿಟಿಷ್ ರೆಸಿಡೆಂಟರವರಿಗೆ ವಿಷ ಹಾಕಬೇಕೆಂದು ಪ್ರಯತ್ನಪಟ್ಟಂತೆ ಒಂದು ಮೊಕದ್ದಮೆ ಆಗಿ ದರ್ಯಾಫ್ತಿ ಆದುದರಲ್ಲಿ ಇಂಗ್ಲಿಷ್ ಗೌವರ್ನಮೆಂಟಿನವರು ಆ ಮಹಾರಾಜರಿಗೆ ರಾಜ್ಯಾಧಿಕಾರವನ್ನು ತಪ್ಪಿಸಿ, ಮದರಾಸಿಗೆ ಕಳುಹಿಸಿ, ಬರೋಡಾ ಸಂಸ್ಥಾನಕ್ಕೆ ಈಗಿರುವ ಸಯಾಜಿರಾವ್‌ಯವರನ್ನು ಮಹಾರಾಜರನ್ನಾಗಿ ಪಟ್ಟಾಭಿಷೇಕ ಮಾಡಿದರು. ಈ ಮಹಾರಾಣಿಯವರು ತಮ್ಮ ಪತಿಯ ಸಂಗಡಲೇ ಅವರು ಕಾಲವಾಗುವ ಪರ್ಯಂತರವೂ, ಅಂದರೆ ೧೮೯೩ ನೆ ಇಸವಿ ವರೆಗೆ ಮದರಾಸಿನಲ್ಲೇ ಇದ್ದು, ಆ ತರುವಾಯ ಮದರಾಸಿನಿಂದ ನವಸಾರಿ ಎಂಬ ಸ್ಥಳದಲ್ಲಿ ವಾಸಮಾಡಿಕೊಂಡಿದ್ದರು. ಅವರಿಗೆ ಬರೋಡಾ ಸಂಸ್ಥಾನದ ಖಜಾನೆಯಿಂದ ತಿಂಗಳಿಗೆ ೨,೦೦೦ ರೂ. ಪೆನ್ಷನ್ ಬರುತ್ತಿತ್ತು. ಇದಲ್ಲದೆ ಆಕೆಯವರ ಸ್ವಕೀಯವಾದ ಆಸ್ತಿಯೂ ಬಹಳವಾಗಿಯೇ ಇತ್ತು. ಅವರು ಹಿಂದುಸ್ಥಾನದಲ್ಲಿರುವ ಸಕಲವಾದ ಯಾತ್ರಾ ಸ್ಥಳಗಳನ್ನೂ ಮಾಡಿಕೊಂಡು ಬಂದು ದಾನ ಧರ್ಮ ಪರೋಪಕಾರಗಳಲ್ಲಿ ನಿರತರಾಗಿದ್ದರು. ಈಗಿನ ಮಹಾರಾಜರವರು ಆಕೆಯವರನ್ನು ಬರೋಡೆಗೆ ಕರೆಸಿಕೊಳ್ಳಬೇಕೆಂದು ಎಷ್ಟು ಪ್ರಯತ್ನ ಮಾಡಿದಾಗ್ಯೂ ಒಂದಾವರ್ತಿಯಾದರೂ ಅಲ್ಲಿಗೆ ಹೋಗಲಿಲ್ಲ. ದಹನ ಸಂಸ್ಕಾರಾದಿಗಳು ನಡೆದಾಗ್ಯೆ ಸಾವಿರಾರು ರೂಪಾಯಿಗಳನ್ನು ಬ್ರಾಹ್ಮಣರಿಗೂ ಬಡಬಗ್ಗರಿಗೂ ಹಂಚಿ ಕೊಟ್ಟರೆಂಬು ಪ್ರಕಟವಾಗಿದೆ.

## ವಿದೇಶ ವರ್ತಮಾನಗಳು.

ವಿಲಾಯಿತಿ ರಾಜ್ಯದ ಎಡ್ವರ್ಡ್ ದೊರೆಯವರು ಡಬ್ಲಿನ್ ನಗರಕ್ಕೆ ದಯಮಾಡಿದ್ದಾಗ್ಯೆ ಅಲ್ಲಿನ ಬಡಬಗ್ಗರಿಗೆ ೧೫,೦೦೦ ರೂ. ಬಕ್ಷೀಸ ಕೊಟ್ಟು ಬಂದರು.

❖❖❖❖

ಪ್ಯಾರಿಸ್ ನಗರದಲ್ಲಿ ಜನರು ಜಟಕಾಗಾಡಿಗಳೊಳಗೆ ಕೂತುಕೊಂಡು ಹೋಗುವಾಗ್ಯೆ ಚುಟ್ಟಾ ಸೇದಕೂಡದೆಂದು ಒಂದು ಕಾನೂನು ಮಾಡಿ ಜಾರಿಯಲ್ಲಿ ತಂದಿರುವರು.

❖❖❖❖

ದಕ್ಷಿಣ ಅಮೇರಿಕಕ್ಕೆ ಸೇರಿದ ವೆನಿಜುವೇಲಾ ರಾಜ್ಯದಲ್ಲಿ ದಂಗೆಕೋರರಿಗೂ ಸರ್ಕಾರಿ ನೌಕರರಿಗೂ ಕಳೆದ ವಾರ ಒಂದು ಭಯಂಕರವಾದ ಯುದ್ಧ ನಡೆಯಿತು. ಎರಡು ಕಡೆಯಲ್ಲೂ ೩೦೦ ಮಂದಿ ಮಡಿದರು.

❖❖❖❖

ದಕ್ಷಿಣ ಭಾಗದ ರಷ್ಯಾದಲ್ಲಿ ಸುಮಾರು ೫೦ ಸಹಸ್ರ ಪ್ರಜೆಗಳು (ಕೂಲಿಮಾಡಿ ಜೀವಿಸುವವರು) ದಂಗೆಯೆದ್ದಿರುವರು. ಸರ್ಕಾರದವರು ಈ ದಂಗೆಯನ್ನು ಅಡಗಿಸುವದರಲ್ಲಿ ೬೦ ಮಂದಿಯನ್ನು ಕೊಂದುಹಾಕಿದರು; ಸುಮಾರು ೧೫೦ ಜನರಿಗೆ ಘೋರ ಗಾಯಗಳಾಗಿವೆ.

❖❖❖❖

ವಿಲಾಯಿತಿ ರಾಜ್ಯಕ್ಕೆ ಸೇರಿದ ಗೆಯಿನ್ಸ್‌ಬರೋ ಪಟ್ಟಣದಲ್ಲಿ ಕ್ಯಾಪ್ಟನ್ ವಾಡೆ ಎಂಬವನ ಕಸ್ಪೇರು ಚಿತ್ರಶಾಲಾ ಪ್ರದರ್ಶನದಲ್ಲಿ ಮೊದಲನೇ ಬಹುಮಾನವನ್ನು ಪಡೆದಿತ್ತು. ಇದನ್ನು ಕಳೆದ ವಾರ ಹರಾಜಿನಲ್ಲಿ ಒಬ್ಬ ದೊಡ್ಡಮನುಷ್ಯನು ೩,೦೫,೦೦೦ ರೂ. ಕೊಟ್ಟು ಕೊಂಡುಕೊಂಡನು.

❖❖❖❖

ಗತಿಸಿದ ಪೋಪ್ ಸ್ವಾಮಿಯವರು ಎರಡು ವರುಷಗಳ ಕೆಳಗೆ ಉಯಿಲ್ ಬರೆದಿಟ್ಟಿದಾರೆ. ಅವರ ಸ್ವಂತ ಆಸ್ತಿಯಲ್ಲಿ ಕೆಲವು ಭಾಗವನ್ನು ತಮ್ಮ ರಕ್ತ ಸಂಬಂಧಿಗಳಿಗೆ ಹಂಚಿಕೊಟ್ಟು, ರೋಮ್, ಪರೂಜಿಯಾ ಎಂಬೀ ನಗರಗಳಲ್ಲಿರುವ ಬಡಬಗ್ಗರಿಗೆ ೪೦,೦೦೦ ದ್ರವ್ಯವನ್ನು ದಕ್ಷಿಣೆ ಕೊಡಬೇಕೆಂದು ಆಜ್ಞೆಮಾಡಿರುವರು.

❖❖❖❖

ಮೊನಾಸ್ಟರ್ ಎಂಬ ತಾಲ್ಲೂಕಿನಲ್ಲಿದ್ದ ರಷ್ಯಾ ರಾಯಭಾರಿಯನ್ನು ತುರ್ಕಿ ಸಿಪಾಯಿಗಳು ಕೊಂದುಹಾಕಿದರೆಂದು ತಿಳಿಸಿದ್ದೇವಷ್ಟೆ. ಈ ಭಾಗದಲ್ಲಿ ರಷ್ಯಾ ಚಕ್ರವರ್ತಿಯವರಿಗೆ ಉಂಟಾಗಿರುವ ಕೋಪವನ್ನು ಸಮಾಧಾನಪಡಿಸುವದಕ್ಕೋಸ್ಕರ ತುರ್ಕಿ ಸುಲ್ತಾನರು ತಮ್ಮ ಜ್ಯೇಷ್ಠ ಪುತ್ರನನ್ನೇ ಚಕ್ರವರ್ತಿಯವರ ಬಳಿಗೆ ಕಳುಹಿಸಿದ್ದಾರೆ.

❖❖❖❖

ಹಂಗೇರಿ ರಾಜ್ಯದ ಕಾಲ್ಬಲ (ಸುಮಾರು ೮೦೦ ಮಂದಿ) ಹೆಚ್ಚು ೧೧೫ ಡಿಗ್ರಿಯಷ್ಟು ಬಿಸಲು ಕಾಯುವಾಗ್ಯೆ ಮೈದಾನಿನಲ್ಲಿ ನಿಲ್ಲಿಸಿಕೊಂಡು ಸೈನ್ಯಾಧಿಪತಿಯು ಕವಾತು ಮಾಡಿಸಿದನು. ಆ ಸೈನಿಕರು ಅಷ್ಟು ಬಿಸಲಿನಲ್ಲಿ ಕಸರತ್ತು ಮಾಡಿ ಆದಕೂಡಲೇ ಎಲ್ಲರೂ ಸ್ಮರಣೆ ತಪ್ಪಿ ಬಿದ್ದುಬಿಟ್ಟರು. ಆ ಪೈಕಿ ೧೫ ಮಂದಿ ಸತ್ತೇ ಹೋದರೆಂತಲೂ, ೧೦೦ ಮಂದಿ ಬದುಕುವಹಾಗಿಲ್ಲವೆಂತಲೂ ವರ್ತಮಾನ ಬಂದಿದೆ.

❖❖❖❖

ಆಸ್ಟ್ರೇಲಿಯಾ ದ್ವೀಪದಲ್ಲಿ ಪೂರ್ವನಿವಾಸಿಗಳ ಸಂಖ್ಯೆಯು ದಿನೇ ದಿನೇ ಕಡಿಮೆಯಾಗುತ್ತಾ ಬಂದಿರುವದು. ಕಳೆದ ೧೭೮೮ ನೆ ಇಸವಿಯಲ್ಲಿ ಗೌವರ್ನರಾಗಿದ್ದ ಫಿಲಿಪ್ಪರು ಎಣಿಕೆ ಮಾಡಿಸಿ, ಆ ಪೂರ್ವನಿವಾಸಿಗಳು ೧೦ ಲಕ್ಷ ಜನವಿದ್ದಾರೆಂಬು ಹೇಳಿದ್ದರು. ಈಗಲಾದರೋ ಅವರ ಸಂಖ್ಯೆ ೫೬ ಸಾವಿರಕ್ಕೆ ಇಳಿದಿದೆ ಎಂದು ತಿಳಿದುದು. ಇದರಿಂದ ಆ ಜನಾಂಗದವರೆಲ್ಲಾ ಇನ್ನು ಕೆಲವು ಕಾಲದೊಳಗಾಗಿ ಲಯವಾಗಿ ಹೋದಾರೆಂದು ತೋರುತ್ತಿದೆ.

❖❖❖❖

ಕಳೆದ ವಾರ ಪ್ಯಾರಿಸ್ ನಗರದಲ್ಲಿ ಒಂದು ಭಯಂಕರವಾದ ವಿದ್ಯುಚ್ಛಕ್ತಿಯ ರೈಲ್ವೇ ಅನಾಹುತ ನಡೆಯಿತು. ಭೂಮಿಯೊಳಗೆ ಕೊರೆದು ರೈಲ್ ರಸ್ತೆ ಹಾಕಿರುವ ಕಡೆಯಲ್ಲಿ ಗಾಡಿಯು ಒಳಗಡೆ ಹೋಗುತ್ತಿರುವಾಗ್ಯೆ ಆಕಸ್ಮಾತ್ತಾಗಿ ಬೆಂಕಿ ಹತ್ತಿಕೊಂಡಿತು. ಗಾಡಿಗಳ ತುಂಬಾ ಪ್ರಯಾಣಿಕರು ಕುಳಿತಿದ್ದರು. ಆ ಪೈಕಿ ೫೮ ಮಂದಿ ಮಾತ್ರ ಬಹಳ ಸಾಹಸಮಾಡಿ ಬದುಕಿ ಬಂದರು. ೮೪ ಜನರು ಪ್ರಾಣ ಕಳಕೊಂಡರೆಂದು ಸರ್ಕಾರದವರು ತಿಳಿಸಿದಾರೆ. ವಿಲಾಯಿತಿಯ ದೊರೆಯವರು ಫ್ರಾನ್ಸಿನ ಪ್ರೆಸಿಡೆಂಟರಿಗೆ ದುಃಖ ಸೂಚಕವಾದ ತಂತೀ ವರ್ತಮಾನ ಕೊಟ್ಟರು. ಐದು ಮಂದಿ ತಮ್ಮ ನೆಂಟರಿಷ್ಟರನ್ನು ಕಳಕೊಂಡು ಗೋಳಾಡುತ್ತಿದಾರೆ.

❖❖❖❖

ವಿಲಾಯಿತಿಯಲ್ಲಿರುವ ಮ್ಯಾಂಚೆಸ್ಟರ್ ನಗರದಿಂದ ಲಿವರ್‌ಪೂಲ್ ಪಟ್ಟಣಕ್ಕೆ ೩೪ ಮೈಲಿ ದೂರವನ್ನು ಈಗ ಎಕ್ಸ್‌ಪ್ರೆಸ್ ರೈಲ್ ಗಾಡಿಯು ೪೦—೪೫ ನಿಮಿಷಗಳಲ್ಲಿ ಹೋಗಿ ಮುಗಿಸುವದು. ಇನ್ನು ಮುಂದೆ ಒಂದೇ ಕಂಬಿಯ ಮೇಲೆ ಅವೆರಡು ಪಟ್ಟಣಗಳಿಗೂ ರೈಲ್ ಗಾಡಿ ಹೋಗಿ ಬರುವಂತೆ ಏರ್ಪಾಡುಮಾಡಿದಾರೆ. ಇದರಿಂದ ೨೦ ನಿಮಿಷಗಳಲ್ಲೇ ೩೪ ಮೈಲಿ ಪ್ರಯಾಣ ಮುಗಿಯುತ್ತೆ. ಈ ಹೊಸ ಏರ್ಪಾಡಿಗೆ ಒಂದು ಕಂಪನಿ ಆಗಿದೆ ೨೦ ಲಕ್ಷ ಪೌಂಡುಗಳನ್ನು ಷೇರುಗಳ ಮೂಲಕ ಕೂಡಿಸಿ, ಈ ಹೊಸ ರೈಲ್ ರಸ್ತೆಯನ್ನು ಹಾಕಿ ರೈಲ್ ಬಿಡುತ್ತಾರೆ. ಇದರಿಂದ ರೈಲ್ವೇ ಬಾಬಿನಲ್ಲಿ ಇನ್ನು ಮುಂದೆ ತುಂಬಾ ಬದಲಾವಣೆ ಆಗಲು ಅವಕಾಶ ಉಂಟಾಗುತ್ತದೆ.

❖❖❖❖

ಕಳೆದ ೨೦ ವರುಷಗಳಲ್ಲಿ ನ್ಯೂಜೀಲ್ಯಾಂಡಿಗೆ ಹೋಗಿ ಕೃಷಿ ಮುಂತಾದ್ದು ಮಾಡಿಕೊಂಡಿದ್ದು ಅಲ್ಲೇ ಮೃತಪಟ್ಟ ೫೦೦ ಚೀನಾ ಜನರ ಅಸ್ಥಿಯನ್ನು ವೆಂಟ್ನರ್ ಎಂಬ ಹಡಗಿನಲ್ಲಿ ತುಂಬಿ ಚೀನಾಕ್ಕೆ ಸಾಗಿಸಿಕೊಂಡು ಹೋಗುತ್ತಿದ್ದರು. ಆ ಹಡಗು ವೆಲ್ಲಿಂಗ್‌ಟನ್ ಎಂಬ ರೇವಿನ ಬಳಿಯಲ್ಲಿ ಒಂದು ಬಂಡೆಗೆ ಬಡಿದು ಒಡೆದುಹೋದುದರಿಂದ ಭರ್ತಿಯಾಗಿದ್ದ ಅಸ್ಥಿಗಳೆಲ್ಲಾ ಸಮುದ್ರಪಾಲಾದವು. ಚೀನೀಯರಿಗೆ ತಮ್ಮ ಜನರು ಸತ್ತದ್ದರಲ್ಲಿ ಅಷ್ಟು ವ್ಯಸನವಿಲ್ಲ, ಸತ್ತವರ ಅಸ್ಥಿಗಳು ಸಮುದ್ರದ ಪಾಲಾದ ವಿಷಯದಲ್ಲಿ ಅವರು ತುಂಬಾ ದುಃಖಪಡುತ್ತಾರೆ. ಅವರಲ್ಲಿ ವಂಶಪಾರಂಪರ್ಯವಾಗಿ ಹಿರಿಯರ ಅಸ್ಥಿಗಳನ್ನು ಬಹಳ ಜೋಪಾನವಾಗಿ ಇಟ್ಟು ಪೂಜೆ ಮಾಡುವರು.

❖❖❖❖

ಸರ್ವಿಯಾ ರಾಜ್ಯದ ದೊರೆಯನ್ನೂ ರಾಣಿಯನ್ನೂ ಬೆಲ್‌ಗ್ರೇಡ್ ನಗರದಲ್ಲಿ ಕೊಂದುಹಾಕಿದ ಒಂದು ರಿಜಿಮೆಂಟಿನ ಸೈನಿಕರು ಈಗ ದಂಗೇ ಎದ್ದಿದಾರೆ. ಅವರು ಪಾಪ ಮಾಡಿದ ಮಹೋಪಕಾರ ಕಾರ್ಯಕ್ಕೆ ತಮಗೆ ಸರಿಯಾದ ಪ್ರತಿಫಲ ದೊರಕಲಿಲ್ಲವೆಂದು ಅಸಮಾಧಾನಪಟ್ಟರು. ಹೊಸದಾಗಿ ನೇಮಿಸಲ್ಪಟ್ಟ ಪೀಟರ್ ದೊರೆಯು ಸರ್ವಿಯಾ ಸೈನಿಕರಲ್ಲಿ ಉಂಟಾಗಿರುವ ಅಸಮಾಧಾನವನ್ನೂ ಗಲಭೆಯನ್ನೂ ನೋಡಿ, ಅಡಗಿಸಬೇಕೆಂದು ಸಂಕಲ್ಪಮಾಡಿಕೊಂಡು, ಬಹು ಕಠಿಣವಾದ ಕಾನೂನುಗಳನ್ನು ಜಾರಿಗೆ ತಂದಿರುವನು. ಆ ದಿನ ರಾತ್ರಿ ಕೊಲ್ಲಲ್ಪಟ್ಟವರು ದೊರೆ ರಾಣಿಯವರ ಸಹಿತ ೧೯ ಮಂದಿ ಎಂತಲೂ, ಇವರಲ್ಲಿ ನಾಲ್ಕು ಮಂದಿ ಹೆಂಗಸರೆಂತಲೂ ರಸ್ಸೆಲ್ ಎಂಬೊಂದು ಪತ್ರಿಕೆಯು ತಿಳಿಸುತ್ತದೆ.

❖❖❖❖

ಪ್ಯಾರಿಸ್ ನಗರದಲ್ಲಿ ಎಂ. ಸಾಂಟೋ ಡ್ಯೂಮೋ ಎಂಬವನಾದ ಶಿಲ್ಪಿಯು ಅಂತರಿಕ್ಷ ಮಾರ್ಗದಲ್ಲಿ ಸಂಚರಿಸುವಂಥಾ ಒಂದು ದೋಣಿಯನ್ನು ಕಟ್ಟುತ್ತಿದಾನೆ. ಈ ದೋಣಿಯಲ್ಲಿ ತಾನೂ ಸಹ ೧೨ ಮಂದಿ ಕುಳಿತುಕೊಂಡು, ಶಾಂತವಾದ ಅಂತರಿಕ್ಷದಲ್ಲಿ ಗಂಟೆಗೆ ೩೦ ಮೈಲಿಯಷ್ಟು ವೇಗವಾಗಿ ಪ್ರಯಾಣಮಾಡಿ ತನ್ನ ಸಾಮರ್ಥ್ಯವನ್ನು ಪ್ರಕಾಶಪಡಿಸುವನು. ಮೊದಲು ೧೨ ಜನರು ಇದರಲ್ಲಿ ಕುಳಿತುಕೊಳ್ಳುವದಕ್ಕೆ ಬದಲಾಗಿ ೫ ಮರಳಿನ ಚೀಲಗಳನ್ನು ಕಟ್ಟಿ ಆ ದೋಣಿಯನ್ನು ನಡಸಿ, ಎಲ್ಲಾ ಸರಿಯಾಗಿದೆ ಎಂದು ತಿಳಿದ ಮೇಲೆ ಅದರಲ್ಲಿ ಜನಗಳು ಕೂತು ಪ್ರಯಾಣಮಾಡುವರು. ಈ ದೋಣಿಯೊಳಗೆ ಎರಡು ಸಿಲಿಂಡರ್ಸ್ ೬೦ ಕುದುರೆ ಬಲದಷ್ಟು ಶಕ್ತಿಯನ್ನು ಉತ್ಪತ್ತಿ ಮಾಡುವ ಒಂದು ಯಂತ್ರವನ್ನು ಮಾಡಿಟ್ಟಿರುವನು. ಈ ಪರೀಕ್ಷೆಯು ಇನ್ನು ಕೆಲವು ದಿನಗಳಲ್ಲೇ ನಡೆಯುವದಾಗಿದೆ.

## ಒಳ್ಳೇ ಔಷಧಗಳು.

7

ನಯನವ್ಯಾಧಿಗೆ ಸುಖಾಂಜನವು.—ಹೊಸದಾಗಿ ಅಥವಾ ಬಹು ಕಾಲದಿಂದ ಕಣ್ಣಿನಲ್ಲಿ ಇರುತ್ತಿದ್ದ ಎಲ್ಲ ಪ್ರಕಾರದ ಬಾಧೆಗಳು ಇದರಿಂದ ಬಹು ಬೇಗನೆ ಗುಣ ಹೊಂದುವವು. ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು, ಪಿಸರೂ ಬರುತ್ತಿರುವದೂ, ಉರಿ, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದೂ, ದೃಷ್ಟಿಮಾಂದ್ಯ ಮುಂತಾದ ವಿಶಿಷ್ಟ ವ್ಯಾಧಿಗಳು ಗುಣ ಹೊಂದುತ್ತವೆ. ಕ್ರಯ ೧ಡಬ್ಬಿಗೆ ೧ ರೂ. ಪೋಸ್ಟು ಖರ್ಚು ಆಣೆ ೪.

ವಾಯುಹಾರಕ ತೈಲ (ಬಾಹ್ಯಲೇಪನಕ್ಕೆ ಮಾತ್ರ).—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವ ಇತರ ವಾಯುಗಳ ಬಾಧೆ, ತಲೆನೋವು, ಚಿಕ್ಕ ಹುಡುಗರ ಉಬ್ಬಸ, ಕೆಮ್ಮು, ಕೂಡ ಗುಣ ಹೊಂದುವವು. ಕುಪ್ಪಿಗೆ ೧ ರೂ. ಖರ್ಚು ಆಣೆ ೪.

ಗಜಕರ್ಣದ ಮುಲಾಮು.—೨ ಯಾ ೩ ಆವರ್ತಿ ಹಚ್ಚುವದರೊಳಗೆ ಎಂಥ ಕಠಿಣವಾದ ಗಜಕರ್ಣವಾದದ್ದು ಇದ್ದರೂ ಪೂರ್ಣ ಗುಣ ಹೊಂದುವದು. ಡಬ್ಬಿಗೆ ಆಣೆ ೮. ಖರ್ಚು ೧ ರಿಂದ ೪ ಡಬ್ಬಿ ವರೆಗೆ ಆಣೆ ೪.

ಕರ್ಣಸ್ರಾವಕ್ಕೆ ವನೌಷಧಿ ತೈಲ (ಬಾಹ್ಯೋಪಚಾರಕ್ಕೆ ಮಾತ್ರ).—ಚಿಕ್ಕ ಪ್ರಾಯದವರ ಮತ್ತು ಭರ್ತಿ ಪ್ರಾಯದವರ ಕಿವಿಯಿಂದ ರಕ್ತವಾಗಲಿ ಕೀವು ಆಗಲಿ ನೀರಿನಂಥ ದ್ರವವಾಗಲಿ ಜೋರಾಗಿ ಅಥವಾ ಬಹುಕಾಲದಿಂದ ಹರಿಯುತ್ತಿದ್ದರೆ ಮತ್ತು ಅದರ ಮೂಲಕ ನೋವೂ ಕಳತವೂ ತುರುಸುವಿಕೆಯೂ ಇರುತ್ತಿದ್ದರೆ, ಇದರ ಉಪಯೋಗದಿಂದ ಬಹು ಬೇಗನೇ ಸಂಪೂರ್ಣ ಗುಣವು ಪ್ರಾಪ್ತವಾಗುವದು. ಕ್ರಯ ರೂ. ೧, ಖರ್ಚು ಆಣೆ ೪.

ವ್ಹಿ. ಪಿ. ಯಿಂದಲೂ ರವಾನಿಸುವೆವು. ಇನ್ನೂ ಅನೇಕ ಉತ್ತಮವಾದ ಔಷಧಗಳ ಬಗ್ಗೆ ನಮ್ಮ ಕ್ಯಾಟಲಾಗು ತರಿಸಿ ಓದಿ ನೋಡಿ ನಮ್ಮ ವಿಳಾಸವೇನಂದರೆ.—

ರಾಜವೈದ್ಯ ಮತ್ತು ಕಂಪನಿ, ಬಿಳಗಿ ಉತ್ತರ ಕನ್ನಡಾ ಜಿಲ್ಲಾ.

## ಹೋಪೋಸಿಯಾ.

ಕಷ್ಟ ಪರಿಹಾರ.

ಹಚ್ಚುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ಇಪ್ಪಾಂಡದಲ್ಲಿ ಜನರೋಗಿಗಳಿಗೆ ಮಹತ್ತಾಗಿ ಸಿಕ್ಕುತ್ತಿದ್ದ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಹೊಟ್ಟೆನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬರುತ್ತಾತೆ ರೂ. ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್, ಖರ್ಚು ಮಾಫಿ ಬಿಡುತ್ತೆ.

* * * * * * * * *

## ಹೋಪೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಪೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಪೋಸಿಯಾ ಕಂಪೆನಿ, ೨೩ ಸೆಕೆಂಡು ಬೀಚ್ ಲೈನ್, ಮದರಾಸ್.

## ಶ್ರೀ ಕೃಷ್ಣವಿಲಾಸ ಪ್ರೆಸ್.

43

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡ್, ನೋಟೀಸ್ ಫಾರಂ, ಟ್ಯಾಬಲ್ಸ್ ಷೀಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಛಾರ್ಜಗಳಿಗೆ ಮಾಡಲ್ಪಡುತ್ತವೆ.

ರೋಜು, ಮರ್ಗ, ಮುಂತಾದ ಖಾಲೀ ಪುಸ್ತಕಗಳು; ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು; ಇನ್ನು ಇತರವಾದ ಸಮೂನೆಯ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿನಂತೆ ಬಹು ಅಂದವಾಗಿ ತಯಾರ್ಮಾಡಲ್ಪಡುತ್ತವೆ.

ಲಾಯರ್‌ಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್, ವಕಾಲತ್‌ನಾಮೆ, ಜಾರೀ, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಬಿಕರಿಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯತರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಜವಾಬನ್ನು ಅಪೇಕ್ಷಿಸುವವರು ಟಪ್ಪಾಲು ಹಾಸಲನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡಪೇಟೆ ೨೫ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

## ಜ್ವರಹರಿ. 46

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮೇರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ೨ ರೂ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

* * * * * * * * *

## ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಓಮಂ ಕರ್ಪೂರವನ್ನು ನಾನು ನನ್ನ ಆಡೀಟಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇನೆ ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ನಾಲ್ಕು ಔಷಧಗಳು ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಕೆಳಗೆ ಕಳಗಿನ ವಿಳಾಸದಾರರಲ್ಲಿ ವಿಶೇಷ.—

ಹೆವ್ರಿಜುವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

7—8—1903 ರಿಂದ 14—8—1903 ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | 5 | 3 | 1 | 2 |
| ಮೈಸೂರು ,, | 24 | 70 | 62 | 62 |
| ಬೆಂಗಳೂರು ಡಿಸ್ಟ್ರಿಕ್ಟ್ | 187 | 97 | 76 | 68 |
| ಮೈಸೂರು ,, | 40 | 34 | 40 | 28 |
| ಕೋಲಾರ್ ,, | 58 | 46 | 35 | 22 |
| ಕೋಲಾರ್ ಚಿನ್ನದ ಗಣಿಗಳು | 2 | 1 | 2 | 1 |
| ತುಂಕೂರು ಡಿಸ್ಟ್ರಿಕ್ಟ್ | 105 | 87 | 73 | 47 |
| ಹಾಸನ ,, | 35 | 20 | 9 | 5 |
| ಚಿತ್ರದುರ್ಗ ,, | 151 | 99 | 84 | 61 |
| ಕಡೂರ್ ,, | 1 | 0 | | |
| ಶಿವಮೊಗ್ಗ ,, | 90 | 58 | 37 | 24 |
| ಜುಮ್ಲಾ | 698 | [illegible] | [illegible] | [illegible] |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಭಾದ್ರಪದ ಶುದ್ಧ ಪಂಚಮಿ ಗುರುವಾರದಿಂದ ಭಾದ್ರಪದ ಶುದ್ಧ ಏಕಾದಶಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಆಗಸ್ಟ್ ಮತ್ತು ಸೆಪ್ಟೆಂಬರ್.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ | ಘಳಿಗೆ. | ಸಿಂಹ ಮಾಸ ತೇದಿ. |
|---|---|---|---|---|---|---|
| 27 | ಗುರು * | ಪಂಚಮಿ | 27 50 | ಚಿ | 12-16 | 11 |
| 28 | ಶುಕ್ರ | ಷಷ್ಠಿ | 26 21 | ಸ್ವಾ | 12-2 | 12 |
| 29 | ಶನಿವಾರ | ಸಪ್ತಮಿ | 26 15 | ವಿ | 13 23 | 13 |
| 30 | ರವಿವಾ † | ಅಷ್ಟಮಿ | 27 18 | ಅ | 15 52 | 14 |
| 31 | ಚಂದ್ರ ‡ | ನವಮಿ | 29 40 | ಜೇ | 19 20 | 15 |
| 1 | ಕುಜ | ದಶಮಿ | 33-10 | ಮೂ | 21 20 | 16 |
| 2 | ಬುಧ ¶ | ಏಕಾದಶಿ | 37 22 | ಪೂಷಾ | 30-2 | 17 |

* ಮಹಾವೈಪ್ರ, ರುಷಿಪಂಚಮೀ ವ್ರತ. † ವ್ಯತೀಪಾತಯೋಗ.
‡ ನಂದನವಮಿ ¶ ಸರ್ವತ್ರ ಪರಿವರ್ತನೈಕಾದಶಿ.

## ಪೇಟೆ ಧಾರಣೆ.

| ವಿನಸು. | ಮೈಸೂರು. | ಬೆಂಗಳೂರು. |
|---|---|---|
| ಸಾದ್ದೀ ಅಕ್ಕಿ ಪಲ್ಲಾ ೧ಕ್ಕೆ | ರೂ. ೧೦-೮-೦ | ೧೦-೮-೦ |
| ಕೆಂಬೂತಿ ಅಕ್ಕಿ ಅವಲ್ | ೧೦-೪-೦ | ೧೦-೦-೦ |
| ,, ದಾಯಂ | ೯-೮-೦ | ೯-೦-೦ |
| ಜಾಪಾನ್ ಅಕ್ಕಿ | ೯-೪-೧ | ೧೨-೮-೦ |
| ಸಣ್ಣಕ್ಕಿ ಅವಲ್ | ೧೨-೮-೦ | ೧೩-೦-೦ |
| ,, ದಾಯಂ | ೧೨-೦-೦ | ೧೧-೦-೦ |
| ತೊಗರೀ ಬೇಳೆ ಪಲ್ಲಾ ೧ಕ್ಕೆ | ೧೩-೦-೦ | ೧೪-೦-೦ |
| ,, ದಾಯಂ | ೧೨-೮-೦ | ೧೨-೮-೦ |
| ಹೈ ರಾಗಿ ಪಲ್ಲಾ ೧ಕ್ಕೆ | ೩-೧೪-೦ | ೩-೩-೦ |
| ಕಾರಾಗಿ | ೩-೮-೦ | ೨-೧೨-೦ |
| ಜೋಳ | ೩-೧೦-೦ | ೫-೦-೦ |
| ಹಲಸಂದೆ ಪಲ್ಲಾ ೧ಕ್ಕೆ | ೨-೧೨-೦ | ೮-೦-೦ |
| ಬಿಳೀ ಅವರೆ | [illegible]-೦-೦ | ೩-೦-೦ |
| ಹೆಸರು | ೮-೦-೦ | ೧೦-೦-೦ |
| ಉದ್ದು | ೮-೪-೦ | ೯-೦-೦ |
| ಕಡಲೆ | ೯-೮-೦ | ೮-೮-೦ |
| ಎಳ್ಳು | ೧೪-೧೨-೦ | ೧೦-೧೫-೯ |
| ಹುರುಳಿ | ೪-೦-೦ | ೪-೪-೦ |
| ಹರಳು ೧೨೩ ಸೇರಿಗೆ | ೯-೧೨-೦ | ೫-೧೦-೯ |
| ಸೀಗೇಕಾಯಿ ಮಣ ೧ಕ್ಕೆ | ೧-೮-೦ | ೧-೮-೦ |
| ಮೆಣಸಿನಕಾಯಿ | ೨-೮-೦ | ೨-೦-೦ |
| ,, ದಾಯಂ | ೨-೩-೦ | ೧-೮-೦ |
| ಬೆಲ್ಲ ದೊಡ್ಡ ಅಚ್ಚು | ೪-೮-೦ | ಮ ೧-೮-೦ |
| ಒಳ್ಳೆಣ್ಣೆ ಮಣ ೧ಕ್ಕೆ | ೫-೦-೦ | ೪-೮-೦ |
| ಹರಳೆಣ್ಣೆ ,, | ೩-೧೨-೦ | ೩-೦-೦ |
| ಕೊತ್ತುಂಬರಿ ಪಲ್ಲ ೧ಕ್ಕೆ | ೫-೮-೦ | ೪-೯-೪ |
| ಉಪ್ಪು ,, | ೯-೦-೦ | ೮-೧-೨ |
| ಹುಣಿಸೇ ಹಣ್ಣು | ೦-೧೪-೦ | ೦-೧೪-೦ |
| ,, ಹಳೇದು | ೦-೧೦-೦ | ೦-೧೨-೦ |
| ತುಪ್ಪ | ೧೦-೧೨-೦ | ೧೦-೦-೦ |
| ಸೀಮೆಯಿಂದ ಪಟ್ಟೆ ೧ಕ್ಕೆ | ೪-೯-೦ | ೩-೧೫-೦ |
| ತೆಂಗಿನಕಾಯಿ ೧೦೦ಕ್ಕೆ | ೪-೪-೦ | ೩-೧೦-೦ |
| ಆಳಲೇಕಾಯಿ ಮಣ ೧ಕ್ಕೆ | ೦-೧೪-೦ | ೦-೧೦-೦ |
| ಅಂಟ್ವಾಳದಕಾಯಿ ಮಣ ೧ಕ್ಕೆ | ೦-೧೪-೦ | ೦-೯-೦ |
| ಚಿನ್ನ (ಪರ) ಕೆಂಪು | ೧೫-೪-೦ | ೧೫-೪-೬ |
| ,, ,, ಪಸಿಮೆ | ೧೫-೮-೦ | ೧೫-೧೨-೦ |
| ,, ,, ಗಟ್ಟಿ ತೊಲ ೧ಕ್ಕೆ | ೨೬-೦-೦ | ೨೪-೮-೦ |
| ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ | ೭೨-೦-೦ | ೬೯-೮-೦ |

Printed and Published by the Rev. E. W. Thompson, M.A., the Proprietor and Manager, Wesleyan Mission Press, Mysore. 27/8/1903.

# ವೃತ್ತಾಂತ ಪತ್ರಿಕೆ.

REGISTERED. M. 20

ಕ್ರಯ ೧ ದುಡ್ಡು —:o:— ಕ್ರಯ ೧ ದುಡ್ಡು

**ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.**

ಸಂಪುಟ ೧೩. ಮೈಸೂರು—ಸನ್ ೧೯೦೩ ನೇ ಇಸವಿ ಸೆಪ್ಟೆಂಬರ್ ತಾರೀಖು ೩ ನೇ ಗುರುವಾರ. ಸಂಖ್ಯೆ ೧೪

ಸ್ಕೂಲ್ ವಿದ್ಯಾರ್ಥಿಗಳಿಗೆ.

೧೯೦೩ ನೆ ಲೋವರ್ ಸೆಕೆಂಡರಿ ಕನ್ನಡ ಟೆಕ್ಸ್ಟ್ ಮಿ॥ ಲೀ ಥಾಬ್ರಿಡ್ಜರವರ ಹಿಂದೂ ದೇಶದ ನಾಗರೀಕ ೧೦—೧೧—೧೨ ನೇ ಅಧ್ಯಾಯಗಳಿಗೆ ನೋಟ್ಸ್, ಮಾ॥ ಎಸ್. ಜಿ. ನರಸಿಂಹಾಚಾರ್ಯರು, ಮತ್ತು ಮಾ॥ ಬಾಳ ಸುಬ್ಬರಾವ್ ಬಿ. ಎ. ಇವರಿಂದ ಮಿ॥ ಭಾಭಾ ಸಾಹೇಬರವರ ಅಪ್ಪಣೆ ಮೇರೆ ರಚಿಸಲ್ಪಟ್ಟಿರುವದು. ಕ್ರಯ ೩ ಆಣೆ ಮಾತ್ರ. ೧೨ ಪ್ರತಿಗೆ ರೂ. ೧ ೮—೦, ೬ ಪ್ರತಿಗೆ ೧—೦—೦. ವಿಳಾಸ:— ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್, ಮೈಸೂರು.

ಹೆಸರು ಬದಲಾವಣೆ ನೋಟೀಸ್.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ಮೈಸೂರಲ್ಲಿ ಪ್ರಸಿದ್ಧವಾದ ಮಿಷನ್ ಬುಕ್ ಡಿಪೊ ಎಂಬ ಪುಸ್ತಕದ ಷಾಪಿಗೆ ಸಿ. ಎಲ್. ಎಸ್. ಬುಕ್ ಡಿಪೋ (Christian Literature Society Book Depot) ಎಂಬ ಹೆಸರನ್ನು ಇಟ್ಟಿರುವುದರಿಂದ ಪುಸ್ತಕಗಳನ್ನು ತರಿಸಿಕೊಳ್ಳುವವರು ಇನ್ನು ಮೇಲೆ

ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೊ, ಮೈಸೂರು,

ಎಂದು ಬರೆಯಬೇಕೆಂದು ಕೋರುತ್ತೇನೆ.

## ಸ್ಟಾಂಡರ್ಡ್

## ಲೈಫ್ ಅಷ್ಯೂರೆನ್ಸ್ ಕಂಪೆನಿ.

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಇಂಡಿಯಾ ದೇಶದಲ್ಲಿ ಲೈಫ್ ಇನ್ಷೂರೆನ್ಸ್ ಯಾನೆ ಜೀವ ಮಾನವನ್ನು ಭೀಮಾ ಮಾಡಿಕೊಳ್ಳುವ ಕಂಪೆನಿಗಳಲ್ಲಿ ಇದು ಬಹು ಕಾಲದ್ದಾಗಿಯೂ ಹೆಚ್ಚಾದ ಬಂಡವಾಳವುಳ್ಳದ್ದಾಗಿಯೂ ಇದೆ.

ಭೀಮಾದಾರರಾಗತಕ್ಕವರು (ಲೈಫ್ ಇನ್ಷೂರ್ ಮಾಡತಕ್ಕವರು) ಈ ಕಂಪೆನಿಯ ಚಂದಾ ದರ, ಷರತ್ತುಗಳು ಮೊದಲಾದವುಗಳನ್ನು ಇತರ ಕಂಪೆನಿಯವುಗಳೊಡನೆ ಹೋಲಿಸಿನೋಡಿದರೆ ಇಲ್ಲಿ ಜೀವಮಾನವನ್ನು ಭೀಮಾ ಮಾಡುವವರಿಗೆ ಎಷ್ಟು ಸೌಕರ್ಯಗಳುಂಟೆಂಬುದು ಗೊತ್ತಾಗುವುದು.

ಈ ಕಂಪೆನಿಯ ಭೀಮಾ ನಿಬಂಧನೆಗಳು ಬಹು ಅನುಕೂಲವಾದುವು. ಭೀಮಾದಾರರುಗಳಿಗೆ ತೊಂದರೆಯನ್ನುಂಟುಮಾಡುವ ನಿಬಂಧಗಳೇನೂ ಇಲ್ಲ.

ಕ್ಲುಪ್ತವಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲೇ ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂಪಾಯಿಗಳನ್ನು ಕಂಪೆನಿಯವರು ಬೋನಸ ಲಾಭಸಹಿತವಾಗಿ ಪಡೆಯಬೇಕಾದರೆ ಭೀಮಾದಾರನು ಕಂಪೆನಿಗೆ ಕೊಡಬೇಕಾದ ಚಂದಾ ವಿಷ ದರಗಳ ಪೈಕಿ ಕೆಲವನ್ನು ಇಲ್ಲಿ ನೋಡಿ.

| ಪಾಲಿಸಿ ನಡೆಯುತ್ತಿರುವ ವಯಸ್ಸು. | ೫೦ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಪಡೆಯಬೇಕಾದರೆ ಮಾಹೆಯಾನ ಕಂಪೆನಿಗೆ ಕೊಡುವದು. | ೫೫ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಯನ್ನು ಪಡೆಯಬೇಕಾದರೆ ಮಾಹೆಯಾನ ಕಂಪೆನಿಗೆ ಕೊಡುವದು. |
|---|---|---|
| ೨೦ | ರೂ. ೬—೧೨—೯ | ರೂ. ೬—೦—೦ |
| ೨೫ | ,, ೭—೧೫—೩ | ,, ೬—೧೪—೦ |
| ೩೦ | ,, ೯—೧೨—೯ | ,, ೮—೨—೦ |
| ೩೫ | ,, ೧೨—೧೩—೯ | ,, ೧೦—೨—೪ |
| ೪೦ | | ,, ೧೩—೪—೮ |

೨,೦೦೦ ರೂ. ಗಿಂತಲೂ ಹೆಚ್ಚಿನದಕ್ಕಾಗಲಿ ಕಡಮೆಯಾದ್ದಕ್ಕಾಗಲಿ ವಯಸ್ಸಿನಲ್ಲಿ ಹೆಚ್ಚು ಕಡಮೆ ಇದ್ದರಾಗಲಿ ಚಂದಾ ದರವೇನೆಂಬುದನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಇದುವರೆಗೆ ಬಾಕಿಯುಳ್ಳ ಚಂದಾ ದರಗಳನ್ನು ಕಡಮೆ ಮಾಡಿರುತ್ತೇವೆ. ಪಾಲಿಸಿ ಮಾಡಿಸತಕ್ಕವರು ದರಖಾಸ್ತಿನ ಹೊಸ ಚಂದಾ ಪಟ್ಟಿಯನ್ನೂ ಭೀಮಾ ದರಖಾಸ್ತು ಫಾರಂಗಳನ್ನೂ ಇದೇ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಎಂ. ಸೂರ್ಯನಾರಾಯಣಯ್ಯ,

ಕಮೀಷನ್ ಮತ್ತು ಜನರಲ್ ಏಜೆಂಟ್,

ಶಿವಮೊಗ್ಗೆ.

## ಗಾತ್ರಸಂಜೀವಿನಿ.

೧ ರೂ. ೮ ಆ.; ವಿ. ಪಿ. ಚಾರ್ಜ್ ೩ ಆ.

ಕೆ. ನರಸಯ್ಯ ಮತ್ತು ಕಂಪೆನಿ, ಮೈಸೂರು.

## ಅಶೋಕ

ಅಥವಾ

ಆರ್ಯಾವರ್ತದ ಮೊದಲನೆಯ ಚಕ್ರವರ್ತಿ.

ಧಾರವಾಡ ಕ. ವಿ. ವ. ಸಂಘದಿಂದ ಬಹುಮಾನ ಹೊಂದಿದ; ವಿದ್ವಾಂಸರುಗಳಿಂದಲೂ, ವರ್ತಮಾನ ಪತ್ರಗಳಿಂದಲೂ ಉತ್ತಮವೆಂದು ಅಭಿಪ್ರಾಯ ಪಡೆದ ಐತಿಹಾಸಿಕ ಜೀವನ ಚರಿತ್ರೆಯು, ಅಕ್ಟೋಬರದ ಕೊನೆಗೆ ತಯಾರಾಗುವುದು. ಮುಂಗಡವಾಗಿ ಹಣ ಕಳುಹಿಸಿದರೆ ೪ ನಾಲ್ಕು ಆಣೆ. ಹಿಂದಿನಿಂದ ಆರು ಆಣೆ. ಮೊದಲು ಬರೇ ಸಹಿ ಕಳುಹಿಸಿದರೆ ವಿ. ಪಿ. ಯಿಂದ ಕಳುಹುವೆವು.

ರಾ. ಕೃ. ಇನಾಮತಿ,

ಪೋಂ. ಅಣ್ಣಿಗೇರಿ, ಜಿ. ಧಾರವಾಡ.

## ಕ್ಷೇತ್ರಗಣಿತ ಸಂಗ್ರಹ.

ಈ ಹೊಸ ಪುಸ್ತಕವನ್ನು ಮೈಸೂರು ಶಿವರಾಮಪೇಟೆ ಸ್ಕೂಲು ಹೆಡ್ಮಾಸ್ಟರು ಟಿ. ಯಂ. ರಾಮಸ್ವಾಮಯ್ಯನವರು ಬರೆದಿರುತ್ತಾರೆ. ಇದರಲ್ಲಿ ಸುಮಾರು ಸಾವಿರ ಲೆಕ್ಕಗಳೂ ಮೈಸೂರು ದೇಶೀಯ ಪರಿಕ್ಷೆಯ ಪ್ರಶ್ನಪತ್ರಿಕೆಗಳೂ ಉತ್ತರಗಳೊಡನೆ ಅಡಕವಾಗಿವೆ. ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆಯುವಂತೆ ಅಲ್ಪಕ್ರಯಕ್ಕೆ ಮಾರಲ್ಪಡುವುದು. ಕ್ರಯ ೪ ಆಣೆ, ಹಾಸಲು ೬ ಪೈ. ವಿಳಾಸ:—

ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪ್ಪೋ, ಮೈಸೂರು.

## ROBINSON'S

## PATENT BARLEY.

## ರಾಬಿನ್‌ಸನ್‌ಯವರ

## ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಧಾನ್ಯದಿಂದ ಹೊಸ ಯಂತ್ರದಿಂದ ಮಾಡಿದೆ. ಹಸ್ತ ಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾರುತ್ತಾರಾದ್ದರಿಂದ ಬಾರ್ಲಿ ಯಾನೆ ಸನ್ನ ಹಿಟ್ಟು ತುಂಬಿದ ಡಬ್ಬಿಯ ಮೇಲ್ಪುಗದಲ್ಲಿ ಮೇಲ್ಕಂಡ ಮೊಹರನ್ನೂ ಕಳಗೆ ಸಹಿ ಮತ್ತು ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

## MELLIN'S FOOD.

ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮೂಳೆಗಳೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಕಮಾನುಷಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಹಾಲ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಶಿಶುಗಳಿಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ಹಿಟ್ಟು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಿಡುಬಿಡುವ ಕಾಲದಲ್ಲಿಯೂ ಶೈಶವದಲ್ಲಿಯೂ ಒದಗುವ ಮುಖ್ಯವಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುಡ್ಡು ಪದಾರ್ಥವು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ಪಕ್ಕಾತಕ್ಕದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ವೃದ್ಧಿಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ಬಹಳ ಮಟ್ಟಿಗೆ ಕಡಮೆಮಾಡುತ್ತದೆ.

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಶಾಪುಗಳಿಗೂ ಬರೆದು ತರಿಸಿಕೊಳ್ಳಬಹುದು:—

ಮದರಾಸ್.—ಮೆ॥ ಕಾವಸಿ ದಿನ್‌ಷಾ ಬ್ರದರ್ಸ್.

ಬೊಂಬಾಯಿ:—ಮೆ॥ ಲೇಡಂ ಅಬೆರ್‌ಕ್ರಾಂಬಿ ಕಂಪೆನಿ.

ಕಲ್ಕತ್ತಾ.—ಮೆ॥ ಮೆಕ್ಕಿನ್‌ಜಿ ಲಯಲ್ ಕಂಪೆನಿ.

ಸಿಕಂದರಾಬಾದ:—ಮೆ॥ ಪಾಲ್ ವಿಲ್ಸನ್ ಕಂಪೆನಿ.

ಕರಾಚಿ.—ಮೆ॥ ಎಚ್. ಜೆ. ರುಸ್ತುಂಜಿ ಕಂಪೆನಿ.

ರಂಗೂನ.—ಮೆ॥ ಟೀಕ್ ಕಂಪೆನಿ.

ಕೊಲಂಬೋ.—ಲೇಡಂ ಬ್ರಾಕ್ ಕಂಪೆನಿ.

## ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ. ತಾ॥ ೨೦—೮—೧೯೦೩ನೆ ಶುಕ್ರವಾರದ ರಾತ್ರಿ ತಿಪ್ಟೂರು ಈ ಸಬಾದಲ್ಲಿ ಇರುವ ಸಾಹುಕಾರ್ರು ೬ಂಗರಿ ನಂಜಪ್ಪನವರ ಬವಳಿ ಅಂಗಡಿಯಲ್ಲಿ ಕಳುವಾದ ಬವಳಿ ಸುಮಾರು ೬೦೭ ರೂಪಾಯಿ ಒಟ್ಟು ಸನಗು [illegible] ಕ್ರಯ ಶೀರೆ ೧ಕ್ಕೆ ೭—೮ ರೂಪಾಯಿ ಬೆಗಾಯಿ ತು ೨೦—೨೭ ರೂಪಾಯಿಗಳ ವರಿಗೆ ಬಾಳತಕ್ಕ ಕೆಂಪು ಕಾಶ್ಮಾಲ ಸಕ್ಕಾಟಾರಿ ಕಂಚಿ ಶೀರೆ ಬಿಳ್ಳಿಯ ಕಲಾಪತ್ತು ಜಂಚ ಕಿಲ್ಮಶ್ತಾ ೧೭ ಮೊಳದ ಮೊಗುಟದ ಶೀರೆ ಮತ್ತು ೬—೭ ಮೊಳದ ಮಗುಟಗಳು ಕೊಡುಮತ್ತೂರು ಕಲಾಪತ್ತು ರುಮಾಲು ಮತ್ತು ಕೆಲವು [illegible] ವಸ್ತ್ರದ ಸನಗುಗಳ ಪೈಕಿ ಕೆಲವುಗಳಮೇಲೆ ತಿಪ್ಟೂರು [illegible] ಅಮಲ್ದಾರ್ರೆಂದು ಕೆಂಪು ರಂಗಿನಲ್ಲಿಯೂ [illegible] ತಿಪ್ಟೂರು ಟವುನ್ ಮ್ಯುನಿಸಿಪಲ್ ಆಕಟ್ರಾಯಿ ಎಂದು ಜಸ್ತ ರಂಗಿನಲ್ಲಿಯೂ ಚಾಪುಬಿತ್ತಿರುತ್ತೆ. ಸದರಿ ಸನಗುಗಳನ್ನು ಪತ್ತೆಮಾಡಿ ಕೊಟ್ಟವರಿಗೆ ಶೇಕಡಾ ೨೫ ರೂಪಾಯಿಗಳಮೇರೆ ಇನಾಮು ಕೊಡಲ್ಪಡುತ್ತೆ.

ಸಾಹುಕಾರು ೬ಂಗರಿ ನಂಜಪ್ಪನವರ ಬಾಪ್ತಿನ

ತಾ॥ ೩೦—೮—೧೯೦೩. ನೇಜಪ್ಪ ಬವಳಿಅಂಗಡಿ ತಿಪ್ಟೂರು.

## ನಮ್ಮ ಚಂದಾದಾರರಿಗೆ ನೋಟೀಸ್.

"ವೃತ್ತಾಂತ ಪತ್ರಿಕೆ" ಯ ಏಜಂಟರು ಚಂದಾ ವಸೂಲ್ಮಾಡಿ ಕೊಂಡಪ್ಪಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲ.

ಮ್ಯಾನೇಜರ್,

ಮೈಸೂರು. "ವೃತ್ತಾಂತ ಪತ್ರಿಕೆ" ಆಫಿಸ್.

# ವೃತ್ತಾಂತ ಪತ್ರಿಕೆ.

—:o:—

ಸನ್ ೧೯೦೩ ನೇ ಇಸವಿ ಸಪ್ಟೆಂಬರ್ ತಾ॥ ೩ ನೇ ಗುರುವಾರ.

## ಮ್ಯಾಸಿಡೋನಿಯಾ ದಂಗೆ.

ತುರ್ಕಿ ಸರ್ಕಾರಕ್ಕೆ ವಿರೋಧವಾಗಿ ಮ್ಯಾಸಿಡೋನಿಯಾ ಪ್ರಾಂತ್ಯದ ಜನರು ದಂಗೆ ಏಳುವುದಾಗಿ ಬಹುಕಾಲದಿಂದ ಹೇಳಿಕೊಳ್ಳುತ್ತಾ ಬಂದುದು ಕಡೆಗೆ ನಿಜವಾಗಿ ನಡೆದಿದೆ. ಈ ಮಹಾ ಅನಾಹುತವು ಈ ವರ್ಷದ ಬೇಸಿಗೆ ಕಾಲದಲ್ಲೇ ನಡೆಯಬಹುದೆಂಬದಾಗಿ ನಿರೀಕ್ಷಿಸಲ್ಪಟ್ಟಿತ್ತು. ಆದರೆ ಆ ಮ್ಯಾಸಿಡೋನಿಯಾ ಪ್ರಾಂತ್ಯದ ಪ್ರಜೆಗಳ ವಿಷಯದಲ್ಲಿ ತುರ್ಕಿ ಸರ್ಕಾರದವರು ಮಾಡಬೇಕಾದ ಕೆಲವು ಹೊಸ ಏರ್ಪಾಡುಗಳನ್ನು ಜಾರಿಯಲ್ಲಿ ತರುವಂತೆ ಇತರ ಸರ್ಕಾರಗಳವರು ಮಧ್ಯಸ್ಥಿಕೆ ಮಾಡಿ ಒಡಂಬಡಿಸಿದ ಕಾರಣ ಆ ಮ್ಯಾಸಿಡೋನಿಯಾದವರು ಇದುವರಿವಿಗೂ ದಂಗೆ ಏಳದೆ ತಡೆದುಕೊಂಡಿದ್ದರೆಂದು ತೋರುವುದು. ಈ ಹೊಸ ಏರ್ಪಾಡುಗಳು ಯಾವವೆಂಬುದನ್ನು ನಾವು ಈ ಪತ್ರಿಕೆಯ ಮುಖಾಂತರ ಕೆಲವು ಕಾಲದ ಹಿಂದೆ ತಿಳಿಸಿದ್ದೆವಷ್ಟೆ. ತುರ್ಕಿ ಸುಲ್ತಾನರು ಈ ಹೊಸ ಏರ್ಪಾಡುಗಳಂತೆ ಎಂದಿಗೂ ನಡೆಯಲಾರರು ಎಂದು ಅನೇಕರು ಆಗಲೇ ಹೇಳುತ್ತಿದ್ದರು. ಹ್ಯಾಗಂದರೆ ಆಲ್ಬನಿ ಪ್ರಾಂತ್ಯದ ಮುಸಲ್ಮಾನರಿಗೂ ಇತರರಾದ ಕ್ರೈಸ್ತರಿಗೂ ಸಹಾ ಈ ಏರ್ಪಾಡುಗಳು ಒಡಂಬಡುವಂತೆ ಇರಲಿಲ್ಲ. ದಂಗೆ ಎದ್ದಿದ್ದರುವವರಿಗೆ ಮುಖಂಡರಾಗಿ ನಿಂತು ಕಾರ್ಯಗಳನ್ನು ನಿರ್ವಹಿಸತಕ್ಕ ಕಮಿಟಿಯವರು ತಮಗೆ ತುರ್ಕಿ ಸಂಸ್ಥಾನದವರ ಕೈ ಕೆಳಗೆ ಇರುವುದು ಮನಸ್ಸಿಲ್ಲವೆಂದು ಹಲವು ವರ್ಷಗಳಿಂದಲೂ ಹೇಳುತ್ತಾ ಬಂದಿರುತ್ತಾರೆಂದು ಪ್ರವಾದವಿದೆ. ದಂಗೆಗಳು ಅಲ್ಲಲ್ಲಿ ಉಂಟಾಗುತ್ತಲಿವೆ ಎಂದು ಕಲವು ವಾರಗಳಿಂದೀಚೆಗೆ ಮ್ಯಾಸಿಡೋನಿಯ ಪ್ರಾಂತ್ಯದ ಸಕಲ ಭಾಗಗಳಿಂದಲೂ ವರ್ತಮಾನಗಳು ಬರುತ್ತಲಿವೆ. ದಂಗೆ ಎದ್ದಿರುವವರನ್ನು ಅಡಗಿಸುವುದಕ್ಕೆ ತುರ್ಕಿ ಸಂಸ್ಥಾನದವರು ಸೇನೆಗಳನ್ನು ಕಳುಹಿಸುತ್ತ ಬಂದಿದ್ದಾರೆ ಆದರೂ ದಂಗೆಗಾರರು ಸಕಲ ಭಾಗಗಳಲ್ಲಿಯೂ ತುಂಬಿರುವಂತೆ ತೋರುತ್ತಿದೆ. ಇವರು ಅಲ್ಲಲ್ಲಿ ರೇಲ್ವೆ ಕಂಬಿಗಳನ್ನು ಕಿತ್ತು ಗಾಡಿಗಳನ್ನು ಕೆಡವುತ್ತಲೂ ಸೇತುವೆಗಳನ್ನು ಒಡೆದುಹಾಕುತ್ತಲೂ ತಂತೀ ಕಂಬಗಳನ್ನು ಕಿತ್ತು ಹಾಕುತ್ತಲೂ ಇರುವುದರಿಂದ ಒಂದು ಸ್ಥಳದಿಂದ ಬೇರೊಂದು ಸ್ಥಳಕ್ಕೆ ವರ್ತಮಾನಗಳನ್ನು ಕಳುಹಿಸುವುದು ಕಷ್ಟವಾಗಿಯೂ, ದಂಗೆಗಾರರ ವಿಷಯವಾದ ವರ್ತಮಾನಗಳು ಬಹು ಅಪೂರ್ವವಾಗಿಯೂ ಪರಿಣಮಿಸುತ್ತವೆ. ಹೀಗಿದ್ದರೂ ಕೂಡ ದಂಗೆಗಾರರಿಗೂ ತುರ್ಕಿಯವರಿಗೂ ಕೆಲವು ಯುದ್ಧಗಳು ಸಂಭವಿಸಿವೆಯೆಂದೂ, ಆಹಾರ ಪದಾರ್ಥಗಳು ದೊರಕುವುದು ಪ್ರಯಾಸವಾಗಿರುವುದರಿಂದಲೂ ಸಂಬಳ ಬಟವಾಡೆಯಾಗದಿರುವದರಿಂದಲೂ ತುರ್ಕಿ ಸಿಪಾಯಿಗಳು ಅನೇಕರಾಗಿ ತಮ್ಮ ದಸ್ತವನ್ನು ಬಿಟ್ಟು ಓಡಿಹೋಗಿ ದಂಗೆಗಾರರನ್ನು ಸೇರಿಕೊಳ್ಳುತ್ತಿದ್ದಾರೆಂದು ವರ್ತಮಾನ ಬಂದಿರುತ್ತದೆ.

ತುರ್ಕಿಯವನಾದ ಸಿಪಾಯಿಯೊಬ್ಬನು ರಷ್ಯಾದವರ ಮಂತ್ರಿಯಾದವನೊಬ್ಬನನ್ನು ಕೊಂದುಹಾಕಿದ ಕಾರಣ ರಷ್ಯಾದವರು ಕೋಪಗೊಳ್ಳುವದಕ್ಕೂ ತಮ್ಮ ಕಡೆಯ ಯುದ್ಧ ನಾವೆಗಳನ್ನು ಕಳುಹಿಸುವದಕ್ಕೂ ಕಾರಣವಾಯಿತು. ಇದರ ದೆಸೆಯಿಂದ ತುರ್ಕಿ ಸುಲ್ತಾನರವರು ತಮ್ಮ ದುಃಖವನ್ನು ಸೂಚಿಸುವುದಕ್ಕಾಗಿ ಸ್ವಂತ ಕುಮಾರರನ್ನೇ ಕಾನ್‌ಸ್ಟಾಂಟಿನೋಪಲಿನಲ್ಲಿರುವ ರಷ್ಯಾ ರಾಯಭಾರಿಗಳ ಬಳಿಗೆ ಕಳುಹಿಸಿದರು. ತರುವಾಯ ರಷ್ಯಾದವರು ತಮ್ಮ ಯುದ್ಧ ನಾವೆಗಳನ್ನು ಹಿಂದಕ್ಕೆ ಕರೆಯಿಸಿಕೊಂಡರು.

ಇತ್ತ ಮ್ಯಾಸಿಡೋನಿಯಾ ಪ್ರಾಂತ್ಯದವರೂ ಬಲ್ಗೇರಿಯದ ಪ್ರಜೆಗಳೂ ಒಂದೇ ಬುಡಕಟ್ಟಿಗೆ ಸೇರಿದವರಾದ್ದರಿಂದ ಅವರ ಈ ಕಷ್ಟದಲ್ಲಿ ತಾವು ಅವರಿಗೆ ಸಹಾಯಕರಾಗಿ ಹೋಗದೆ ಇರಬಾರದೆಂದು ಬಲ್ಗೇರಿಯಾ ನಿವಾಸಿಗಳು ತವಕಪಡುತ್ತಿದ್ದಾರೆ. ಇವರನ್ನು ಆ ಸರ್ಕಾರದವರು ತಡೆಯುವುದು ಮಹಾ ಪ್ರಯಾಸವಾಗಿದೆ. ಈ ಪ್ರಕಾರ ಮ್ಯಾಸಿಡೋನಿಯದ ಕಾರುಬಾರುಗಳು ಬಹು ಪ್ರಸಾದವಾಗಿವೆ. ಮುಂದೆ ಕಾರ್ಯವು ಹ್ಯಾಗೆ ಪರ್ಯವಸಾನವಾಗುವುದೋ ನೋಡಬೇಕು.

## "ನರಕಕ್ಕೆ ಸಜಮಾರ್ಗ, ನಾಕಕ್ಕೆ ಒಂದೇ ದ್ವಾರ."

ಸುಮಾರು ೧,೩೦೦ ವರ್ಷಗಳ ಹಿಂದೆ ಇಂಗ್ಲಾಂಡಿನಲ್ಲಿದ್ದ ಅನೇಕ ಜನಗಳು ಭಯಂಕರವಾದ ಕಿರಾತರಾಗಿಯೂ ಬೆಟ್ಟಗಳಿಗೂ ಹೊಳೆಗಳಿಗೂ ಅಧಿದೇವತೆಗಳಿವೆ ಎಂದು ಭಾವಿಸಿ ಪೂಜಿಸುವವರಾಗಿಯೂ ಇದ್ದರು. ಇಂಥ ಅನಾಗರಿಕವಾದ ಕಾಲದಲ್ಲಿ ಕತ್ಬರ್ಟ್ ಎಂಬೊಬ್ಬ ಮನುಷ್ಯನು ಜೀವಿಸುತ್ತಿದ್ದನು. ಇವನ ತಂದೆತಾಯಿಗಳು ಕುರಿಕಾಯುವ ಉದ್ಯೋಗವನ್ನು ಮಾಡುತ್ತಿದ್ದರು. ಅವರಂತೆಯೇ ಇವನೂ ಬಾಲ್ಯದಲ್ಲಿ ಕುರೀ ಕಾಯುವ ಕೆಲಸವನ್ನೇ ಮಾಡುತ್ತಿದ್ದನು, ಮತ್ತು ಬಹು ಬಿವಿಷ್ಟನೆಂದೂ ಧೈರ್ಯಶಾಲಿಯೆಂದೂ ಪ್ರಸಿದ್ಧನಾಗಿದ್ದನು. ಆ ಕಾಲದಲ್ಲಿ ಯೇಸುಸ್ವಾಮಿಯ ಮತವು ಏನೆಂಬುದು ಸಾಧಾರಣ ಜನಗಳಿಗೆ ಪ್ರಾಯಶಃ ತಿಳಿದಿರಲಿಲ್ಲ. ಆದರೆ ಈ ಕತ್ಬರ್ಟನು ಸ್ವಭಾವವಾಗಿ ಭಕ್ತಿಯುಳ್ಳವನಾಗಿದ್ದುದರಿಂದ ಕ್ರೀಸ್ತಸ್ವಾಮಿಯು ಸ್ಥಾಪಿಸಿದ ಮತವನ್ನು ಕುರಿತು ವಿಶೇಷವಾಗಿ ಆಲೋಚಿಸುತ್ತಿದ್ದನು. ಒಂದಾನೊಂದು ದಿನ ಇವನಿಗೆ ದಿವ್ಯದರ್ಶನ ಉಂಟಾಗಿ, ತಾನು ಒಂದು ಸನ್ಯಾಸ ಮಠವನ್ನು ಸೇರಿ, ವಿದ್ಯಾಭ್ಯಾಸವನ್ನು ಮಾಡಬೇಕೆಂತಲೂ ಇತರರಿಗೂ ಈ ಹೊಸ ಮತದ ವಿಷಯದಲ್ಲಿ ಬೋಧಿಸಬೇಕೆಂತಲೂ ಅಪ್ಪಣೆಯಾಯಿತು.

ಈ ಪ್ರಕಾರ ಸನ್ಯಾಸವನ್ನು ಧರಿಸಿ ಗುರುವಾದ ಈ ಕತ್ಬರ್ಟನು ಆ ದೇಶದ ಬೆಟ್ಟಗುಡ್ಡಗಳಲ್ಲಿಯೂ ಅರಣ್ಯಗಳಲ್ಲಿಯೂ ಸಂಚರಿಸಿ, ಆಯಾ ಕಡೆಗಳ ಸಾಧಾರಣ ಜನಗಳನ್ನು ಕೂಡಿಸಿಕೊಂಡು ಮುಕ್ತಿ ಮಾರ್ಗವನ್ನು ಅವರಿಗೆ ವಿವರಿಸುತ್ತಾ ಇದ್ದನು. ಹೀಗೆ ಆತನು ತನ್ನ ಸುಖಕ್ಷೇಮಗಳ ಮೇಲೆ ದೃಷ್ಟಿಯಿಡದೆ ಇತರರ ಆತ್ಮಸಂರಕ್ಷಣೆಯಲ್ಲಿ ತನ್ನ ಜೀವಮಾನವನು ಕಳೆಯುತ್ತ ಸಕಲ ಜನಗಳ ಪ್ರೀತಿಯನ್ನು ಸಂಪಾದಿಸಿಕೊಂಡನು. ಕತ್ಬರ್ಟನು ಒಂದಾನೊಂದು ಸಂದರ್ಭದಲ್ಲಿ ಯಥಾಪ್ರಕಾರ ಪ್ರಯಾಣ ಮಾಡುತ್ತಿರುವಲ್ಲಿ ಸಮುದ್ರದಲ್ಲಿ ಬಲವಾದ ಬಿರುಗಾಳಿ ಎದ್ದಿತು. ಆತನೂ ಆತನ ಶಿಷ್ಯರೂ ಕುಳಿತಿದ್ದ ದೋಣಿಯು ಬಿರುಗಾಳಿಯು [illegible] ತಪ್ಪಿ ಸಮುದ್ರದಿಂದ ನೀರಿಯ ತೀರಕ್ಕೆ ಹೊಡಕೊಂಡು ಬೀಳುತು. ಇಂಥ ದುರವಸ್ಥೆಯು ಸಂಭವಿಸಿದ ಕಾಲಕ್ಕೆ [illegible] ದಂಡದ ಸಮುದ್ರ ತೀರದಲ್ಲಿ ಉದ್ದಕ್ಕೂ ಹಿಮವು ಕಲ್ಲಿನಂತೆ ಗಟ್ಟಿಯಾಗಿ ಕಟ್ಟಿಕೊಂಡಿತ್ತು. ಇದಕ್ಕೆ ದೋಣಿಯು [illegible] ದಾಗಿ ಒಡೆದು ನಿಲ್ಲುರ ಪ್ರಾಣಕ್ಕೆ ಹಾನಿಯಾಗುವದರಲ್ಲಿ ಸಂದೇಹವಿರಲಿಲ್ಲ. ಇದನ್ನು ಆ ಭಕ್ತನ ಶಿಷ್ಯರು ತಿಳಿದು ಭಯಭ್ರಾಂತರಾಗಿ ಗುರುವೇ, ಪ್ರಯಾಣ ಮಾಡೋಣವೆಂದರೆ ಸಮುದ್ರವು ದಾರಿಯನ್ನು ಬಿಡಲೊಲ್ಲದು, ತೀರದ ಪಕ್ಕದಲ್ಲೇ ಹೋಗೋಣವೆಂದರೆ ಹಿಮವು ದಾರಿ ಕೊಡಲೊಲ್ಲದು, ಎಂದು ಹಂಬಲಿಸಲು, ಕತ್ಬರ್ಟನು ಅವರಿಗೆ—ಭಯಪಡಬೇಡಿ, ಮೋಕ್ಷಕ್ಕೆ ಹೋಗುವ ದಾರಿಯಾದರೋ ಸರಾಗವಾಗಿ ಯಾವಾಗಲೂ ತೆರದೇ ಇದೆ ಎಂದು ಪ್ರತ್ಯುತ್ತರವಿತ್ತನು.

ಒಂದೊಂದು ವೇಳೆ ನಮಗೂ ಕೂಡ ಕತ್ಬರ್ಟನಿಗೂ ಆತನ ಶಿಷ್ಯರಿಗೂ ಸಂಭವಿಸಿದ ಅವಸ್ಥೆಯು ಬಂದೊದಗಬಹುದು. ಎರಡು ಆಪಾಯಗಳ ನಡುವೆ ಸಿಕ್ಕಿಕೊಂಡು ಮುಂದಕ್ಕಾದರೂ ಹಿಂದಕ್ಕಾದರೂ ಹೋಗಲಾರದ ಹಾಗೆ ಕಷ್ಟ ಬರಬಹುದು. ಅಂಥ ಸಂದರ್ಭದಲ್ಲಿ ಮನುಷ್ಯರ ವೈರಿಯಾದ ಸೈತಾನನು—ಅಪಾಯಗಳಿಗೆ ತಪ್ಪಿಸಿಕೊಳ್ಳುವದಕ್ಕೆ ದಾರಿಯಿಲ್ಲವೆಂದು [illegible] ಸುವದೇತಕೆ? ಒಂದು ಸುಳ್ಳು ಹೇಳಿಬಿಡು, ಈ ಮೋಸ ಮಾಡಿಬಿಡು, ತಪ್ಪಿಸಿಕೊಳ್ಳುವಿ. ಇಲ್ಲದಿದ್ದರೆ ಕೆಲಸ ಹೋಗುತ್ತೆ, ಹಣಕ್ಕೆ ನಷ್ಟ ಬರುತ್ತೆ, ಒಂದು ವೇಳೆ ನಿನ್ನ ಪ್ರಾಣಕ್ಕೇ ಅಪಾಯ ಬಂದೀತು ಎಂದು ದುರಾಲೋಚನೆಯನ್ನು ಹುಟ್ಟಿಸುತ್ತಾನೆ.

ಸನ್ಮಿತ್ರರೇ—ಇಂಥ ವೇಳೆ ಬಂದಾಗ—"ಮೋಕ್ಷಕ್ಕೆ ಹೋಗುವ ದಾರಿಯಾದರೋ ಯಾವಾಗಲೂ ತೆರದಿದೆ" ಎಂದು ಕತ್ಬರ್ಟನು ಹೇಳಿದ ಮಾತನ್ನು ನಾವು ಸ್ಮರಿಸಿಕೊಂಡರೆ ಒಳ್ಳೇದಲ್ಲವೇ? [illegible] ಕಡೆಯೂ ತಪ್ಪಿಸಿಕೊಂಡು ಹೋಗದ ಹಾಗೆ ಅಭ್ಯಂತರವಿದ್ದರೆ ಚಿಂತೆಯಿಲ್ಲ; ಏನು ಬಂದರೂ ಬರಲಿ, ಸತ್ಯವನ್ನು ಮಾತ್ರ ಬಿಡಲಾರೆನು ಎಂದು ನಾವು ಹೇಳಿದರೆ ಅನೇಕ ಸಮಯದಲ್ಲಿ ಯಾವದೂ ನಮ್ಮನ್ನು ತಡೆಯಲಾರದು. ನಮ್ಮ ಪ್ರಾಣವು ಹೋದರೆ ಚಿಂತೆಯಿಲ್ಲ, ನಮ್ಮ ಆತ್ಮವು ದೇವರ ಸನ್ನಿಧಾನಕ್ಕೆ ನಿರಾತಂಕವಾಗಿ ಹೋಗಿ ಸೇರುವದು. ಮೋಕ್ಷಕ್ಕೆ ದಾರಿಯನ್ನು ಕೊಡದೆ ನಮ್ಮನ್ನು ತಡೆಯುವಂಥಾದ್ದು ಒಂದೇ ಒಂದುಂಟು, ಅದು ಪಾಪವೆಂಬುದೇ. ಸ್ವಲ್ಪ ಕಾಲಕ್ಕೆ ಮಾತ್ರ ಇರತಕ್ಕ ಈ ಲೋಕದ ಸಂತೋಷಗಳನ್ನೂ ಐಶ್ವರ್ಯವನ್ನೂ ಕೀರ್ತಿಯನ್ನೂ ಅಪೇಕ್ಷಿಸಿ ನಿತ್ಯ ಜೀವದ ನಿಜ ಸುಖವನ್ನು ಕಳೆದು ಕೊಳ್ಳುವದು ವಿವೇಕವೆ?

"ಒಬ್ಬನು ಭೂಲೋಕವನ್ನೇ ಸಂಪಾದನೆ ಮಾಡಿಕೊಂಡು ತನ್ನ ಪ್ರಾಣವನ್ನು ಕಳಕೊಂಡರೆ ಲಾಭವೇನು? " ಎಂತಲೂ "ಲೋಕದಲ್ಲಿ ತನ್ನ ಪ್ರಾಣವನ್ನು ಹಗೆಮಾಡುವವನು ನಿತ್ಯಜೀವಕ್ಕಾಗಿ ಅದನ್ನು ಕಾಪಾಡಿಕೊಳ್ಳುವವನಾಗಿದ್ದಾನೆ" ಎಂತಲೂ ಯೇಸುಸ್ವಾಮಿಯು ಹೇಳಿರುವದನ್ನು ನಾವೆಲ್ಲರೂ ಲಕ್ಷ್ಯಕ್ಕೆ ತರತಕ್ಕದ್ದು.

## ಬಿಳಿದೇಶದ ವೃತ್ತಾಂತಗಳು.

ಈ ತಿಂಗಳು ಮಧ್ಯಭಾಗದಲ್ಲಿ ಭಾಷ ದಂಡಿನಲ್ಲಿ [illegible] ಕುದುರೆ ಸವಾರಿ ಕವಾಯತುಗಳಿಗೆ ಕರ್ನಲ್ ದೇವರಾಜೆ ಅರಸಿನವರೂ [illegible] ಲ್ ಗ್ರ್ಯಾಂಡ್ ನಾಯಿಬರೂ ತಮ್ಮ ತಮ್ಮ ಕುದುರೆಗಳನ್ನು [illegible] ಹಿಸುವದಕ್ಕೆ ಏರ್ಪಾಡು ಮಾಡಿಕೊಂಡಿರುವರು.

* * * *

ಫ್ರೆಂಚ್‌ರವರ್ಸ್ [illegible] ಆಫೀಸರಾದ ಮಿ॥ [illegible] ರವರು [illegible] ಗದ ಮಿ॥ ಆರ್ ಕೆ ಸೋ [illegible] ಡಿಪ್ಯುಟೀ ಇನ್‌ಸ್ಪೆಕ್ಟರ್ ಆಫೀಸರಾಗಿ [illegible]

* * * *

ಮೈಸೂರು ಶ್ರೀಮನ್ಮಹಾರಾಜರವರ ಪ್ರೈವೇಟ್ ಸಕ್ರೆಟರಿಯಾದ ಮಿ॥ [illegible] ಜಾಗ್ರತೆಯಲ್ಲಿ ಈ ತಮ್ಮ [illegible] ಕಾರದಲ್ಲೇ ರಜೆ [illegible] ತೆಗೆದುಕೊಳ್ಳುವರು [illegible]


## ಚೇಂಬರ್ಲೀನ್ ಯವರು ಕಂಡುಹಿಡಿದ ಕೆಮ್ಮು ಔಷಧವು.

35

ಶೀತ, ಕೆಮ್ಮು, ಗಂಟಲು ಗಾರೆನ್ನುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿತಕ್ಕೆ ಈ ಔಷಧವು ಬಹುಪ್ರಾಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತವಾ ಬಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಅಲಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು ; ಎದೆಯು ಜಾಗಿಹೋಗುವದು. ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ. ಅಪಕಾರಿಯಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನ ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ [illegible] ಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಈ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ.; ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುತ್ತೆ:—

ಡಬ್ಲ್ಯೂ. ಈ. ಸ್ಮಿತ್ ಅಂಡ್ ಕಂಪೆನಿ,

ಮೌಂಟ್ ರೋಡ್,

ಮದರಾಸ್.

ಪಲ್ಲಿ ತನ್ನ ಬಾನ್ ನೌಕರಿಗೆ ಹೋಗುವನೆಂದು ಒಂದು ಸಮಾಚಾರ ಹಬ್ಬಿಕೊಂಡಿರುವುದು.

****

ಲಕ್ಷ್ಮೇಶ್ವರದ ಹಲ್ಸನ ಬುನಸ್ಸು ಸೇಟರ ಪ್ರಾಜೆಕ್ಟ್‌ನಾದ ಎನ್ನೇ ಮಗನು ಕಳೆದ ಮಂಗಳವಾರ ರಾತ್ರಿ ಚನ್ನಾಲ್ ಮಠದ ಬೀದಿಯ ಒಂದು ಬಾವಿಯಲ್ಲಿ ಬಿದ್ದು ಸತ್ತಿದ್ದನು. ಬೆಳಗ್ಗೆ ಮ್ಯಾಜಿಸ್ಟ್ರೇಟರು ಬಂದು ನೋಡಿದಾಗ್ಗೆ ಏನೋ ರೋಗದ ಬಾಧೆಯಿಂದ ಅವನು ಬಿದ್ದು ಸತ್ತಿರುವನೆಂದು ಸನಾಖ್ಯವಾಯಿತು.

****

ಇಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಸರ್ ಡಾನಲ್ಡ್ ರಾಬರ್ಟ್‌ಸನ್ ಸಾಹೇಬರವರು ಈ ವಾರದಲ್ಲಿ ರಾಜಕಾರ್ಯ ನಿಮಿತ್ತವಾಗಿ ವೈಸರಾಯಿ ಸಾಹೇಬರ ಭೇಟಿ ತೆಗೆದುಕೊಳ್ಳುವ ಬಗ್ಗೆ ಸಿಮ್ಲಾ ಪಟ್ಟಣಕ್ಕೆ ಪ್ರಯಾಣ ಮಾಡುವರು. ಇವರ ಜೊತೆಯಲ್ಲಿ ದಿವಾನ್ ಸಾಹೇಬರೂ ದಯಮಾಡಿಸುವಂತೆ ಒಂದು ಸಮಾಚಾರವಿತ್ತು. ಇದು ನಿಜವಲ್ಲವೆಂದು ಈಚೆಗೆ ತಿಳಿದು ಬಂತು.

****

ನೆನ್ನೆ ೨೯ನೇ ತಾರೀಖಿನ ದಿನ ಬಿಡದಿ ಮತ್ತು ಕೆಂಗೇರಿ ಸ್ಟೇಷನ್‌ಗಳ ಮಧ್ಯೆ ಮೈಸೂರಿಂದ ಹೊರಟ ಮೇಲ್ ಟ್ರೇನಿನೊಡನೆ ಒಂದು ಲಾರಿ ಗಾಡಿಯು ಡಿಕ್ಕಿ ಹೊಡೆದು ಪ್ರಾಣಭಯವಾಯಿತು. ಲಾರಿಯಲ್ಲಿ ರೈಲ್ ರಸ್ತೆಯ ಇನ್ಸ್‌ಪೆಕ್ಟರು ಹೋಗುತ್ತಿದ್ದರು. ಆದರೆ ಏನು ಕಾರಣವೋ ಇವರು ಟ್ರೇನು ಬರುವ ವೇಳೆಯಲ್ಲಿ ಗಾಡಿಯಿಂದ ದುಮಿಕಿ ಓಡಿಹೋದರು. ಕೈಗಾಡಿಯನ್ನು ದಳ್ಳುತ್ತಿದ್ದ ಆಳುಗಳೂ ಪಲಾಯನ ಸೂಕ್ತವನ್ನು ಹೇಳಿದರು. ಪೈರವಾಹಿತ್ ಟ್ರೇನಿಗಾಗಲೀ ಕೈಗಾಡಿಯು ಇಸಂಗಾಗಲಿ ಯಾವ ಅಪಾಯವೂ ಆಗಲಿಲ್ಲ.

****

ಹಾಸನದ ಡಿಸ್ಟ್ರಿಕ್ಟು ಮಂಜರಾಬಾದ್ ಮತ್ತು ಬೇಲೂರು ತಾಲ್ಲೂಕುಗಳನ್ನು ಕಡೂರು ಡಿಸ್ಟ್ರಿಕ್ಟಿಗೆ ಸೇರಿಸಿ, ಕೃಷ್ಣರಾಜಪೇಟೆ ಮತ್ತು ನಾಗಮಂಗಲ ತಾಲ್ಲೂಕುಗಳನ್ನು ಹಾಸನಕ್ಕೆ ಸೇರಿಸಿಕೊಟ್ಟು, ಎರಡು ಬಗೆಯಾದ ಏರ್ಪಾಡನ್ನು ರೂಢಿಸಬೇಕೆಂದು ನಮ್ಮ ಸರ್ಕಾರದವರು ಉದ್ದೇಶಿಸಿರುವುದಾಗಿ ವರ್ತಮಾನವಿರುತ್ತದೆ. ಒಂದನೇ ಏರ್ಪಾಡೇನೆಂದರೆ—ಕಡೂರು ಡಿಸ್ಟ್ರಿಕ್ಟನ್ನು ಸಬ್ ಡಿಸ್ಟ್ರಿಕ್ಟೆಂದು ಕರೆದು ಅದಕ್ಕೆ ಒಬ್ಬ ಯೂರೋಪಿಯನ್ ಡೆಪ್ಯುಟಿ ಕಮಿಷನರನ್ನು ಕೊಡುವುದು. ಎರಡನೇದು—ಪ್ರಾಂತದಾಕ್ಸ್ ಸಬ್‌ಡಿವಿಜನನ್ನು ವಜಾ ಮಾಡಿ ಸರ್ಕಾರದ ಖರ್ಚುಬಾಬನ್ನು ಕಡಿಮೆ ಮಾಡುವುದು.

****

ಪ್ರಸಿದ್ಧರಾದ ಸಾಹುಕಾರ್ ಮ॥ ಮೋತಿಖಾನ ದಿವ್ಯಪ್ಪನವರು ನೆನ್ನೆ ಬುಧವಾರ ರಾತ್ರಿ ರಾಜಧಾನಿಯಲ್ಲಿರುವ ಸ್ವಗೃಹದಲ್ಲಿ ಕಾಲಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮ॥ ತಿಮ್ಮಪ್ಪನವರು ಅಸ್ಸಾಂದರಾದ ಗತಿಸಿದ ರಾ॥ ವೀರಪ್ಪನವರೊಡನೆ ಗತಿಸಿದ ಕೃಷ್ಣರಾಜ ಒಡೆಯರವರ ಪ್ರೋತ್ಸಾಹನೆಯನ್ನು ಹೊಂದಿ, ಮೋತಿಖಾನೆಯ ಕಂಟ್ರಾಕ್ಟನ್ನು ಪಡೆದು, ಅತ್ಯಂತ ಮಾಂಬಿರಿಸ್ಟರೂ ಸೇರಿ ಅಪಾರ ದ್ರವ್ಯವನ್ನು ಸಂಪಾದಿಸಿದರು. ಕೃಷ್ಣರಾಜ ಒಡೆಯರವರ ಕಾಲಾನಂತರ ಲೇವಾದೇವಿಯನ್ನು ಮಾಡುತ್ತಾ ಮೈಸೂರು ಪಟ್ಟಣದಲ್ಲಿ ವ್ಯಾಪಾರವನ್ನು ಬಹು ವಿಧದಲ್ಲಿ ವೃದ್ಧಿಗೊಳಿಸಿದರು. ಇವರು ೧೦ ವರ್ಷಗಳ ಕಾಲ ಮ್ಯುನಿಸಿಪಲ್ ಕಮಿಷನರಾಗಿದ್ದರು. ಇವರು ತಮ್ಮ ೮೦ನೆಯ ವಯಸ್ಸಿನಲ್ಲಿ ಮೃತಪಟ್ಟರು.

ಸ. ಗ.

## ಮೈಸೂರು ಗೆಜೆಟ್ ಸಂಗ್ರಹ.

ಬೆಂಗಳೂರು ಸೆಂಟ್ರಲ್ ಕಾಲೇಜ್ ಅಸಿಸ್ಟೆಂಟ್ ಮಾಸ್ಟರ್ ಮ॥ ಆರ್. ರಘುನಾಥರಾಯರಿಗೆ ಜೂನ್ ೧೦ ರಿಂದ ಗಾಯಿತು ೬ ತಿಂಗಳ ಕಾಲ ರಜಾ ಕೊಟ್ಟಿದೆ.

ತುಂಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ॥ ಎಂ. ಎಸ್. ನಾರಾಯಣರಾಯರಿಗೆ ಜುಲೈ ೧೬ ರಿಂದ ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಮ॥ ಬಿ. ಶ್ರೀನಿವಾಸರಾಯರು ಡಿಸ್ಟ್ರಿಕ್ಟ್ ಚಾರ್ಜನ್ನು ವಹಿಸಿದ್ದರು.

ಚಿತ್ರದುರ್ಗದ ತಾಲ್ಲೂಕು ಅಮಲ್ದಾರ್ ಮ॥ ವಿ. ಪಾರ್ಥಸಾರಥಿ ಐಯಂಗಾರ್ಯರಿಗೆ ಜುಲೈ ೨೫ ರಿಂದ ೧೨ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಶಿರಸ್ತೇದಾರರು ತಾಲ್ಲೂಕು ಚಾರ್ಜನ್ನು ವಹಿಸಿದ್ದರು.

ಮೈಸೂರು ರೆವಿನ್ಯೂ ಸರ್ವೆ ಸ್ಪೆಷಲ್ ಅ॥ ಸೂಪರಿಂಟ್ ಮ॥ ಕೆ. ರಾಮಸ್ವಾಮಿಐಯಂಗಾರ್ಯರಿಗೆ ಆಗಸ್ಟ್ ಪ್ರಾರಂಭದಿಂದ ಯಾವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾವನ್ನೂ ಅದರ ಜೊತೆಗೆ ಆರುತಿಂಗಳ ಫರ್ಲೋ ರಜಾವನ್ನೂ ಕೊಟ್ಟಿದೆ.

ಕಂಟ್ರೋಲರವರ ಛೀಫ್ ಅಸಿಸ್ಟೆಂಟ್ ಮ॥ ಟಿ. ವೈಯಾಪುರಿ ಚೆಟ್ಟಿಯವರಿಗೆ ಜುಲೈ ೩೧ ರಿಂದ ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಗುಂಡ್ಲುಪೇಟೆ ತಾಲ್ಲೂಕು ಅಮಲ್ದಾರ್ ಮ॥ ಎಸ್. ಗೋಪಾಲಕೃಷ್ಣಯ್ಯಂಗಾರ್ಯರಿಗೆ ೧೯ನೆ ಏಪ್ರಿಲ್‌ನಿಂದ ಆರುದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ದಾವಣಗೆರೆ ತಾಲ್ಲೂಕು ಅಮಲ್ದಾರ್ ಮ॥ ಸಿ. ಕೃಷ್ಣರಾಯರಿಗೆ ಜುಲೈ ೭ ರಿಂದ ಮೂರುತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹೊಳಲ್ಕೆರೆ ತಾಲ್ಲೂಕು ಅಕ್ಟಿಂಗ್ ಅಮಲ್ದಾರ್ ಮ॥ ನರಸಿಂಗರಾಯರವರು ದಾವಣಗೆರೆ ತಾಲ್ಲೂಕಿನ ಅಮಲ್ದಾರ್ ಮತ್ತು ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕದ್ದು.

ತಾಲ್ಲೂಕು ಶಿರಸ್ತೇದಾರ್ ರಾಮರಾಯರು ಹೊಳಲ್ಕೆರೆ ತಾಲ್ಲೂಕಿನ ಚಾರ್ಜನ್ನು ವಹಿಸತಕ್ಕದ್ದು.

ಡೆಪ್ಯುಟಿ ಕಮಿಷನರ್ ಮ॥ ಕೆ. ಪಿ. ಪುಟ್ಟಣ್ಣಚೆಟ್ಟಿಯವರು ಆಗಸ್ಟ್ ೧೧ ರಲ್ಲಿ ಶಿವಮೊಗ್ಗೆಯ ಡಿಸ್ಟ್ರಿಕ್ಟ್ ಮತ್ತು ಟ್ರೆಜರಿ ಚಾರ್ಜನ್ನು ಅ॥ ಕಮಿಷನರ್ ಮ॥ ಸಿ. ಎಸ್. ಬಾಲಸುಂದರಂ ಐಯರಿಗೆ ವಹಿಸಿರುತ್ತಾರೆ.

ಮೈಸೂರು ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ ಲಕ್ಷ್ಮಣರಾಯರನ್ನು ಜಮಾದಾರರಾಗಿ ನೇಮಿಸಿಕೊಂಡಿರುತ್ತೆ.

## ಫ್ರಾನ್ಸ್ ದೇಶದಲ್ಲಿ ನಡೆದ ಭಯಂಕರವಾದ ರೈಲ್ವೆ ಅನಾಹುತವು.

ಕಳೆದ ಆಗಸ್ಟ್ ತಿಂಗಳಲ್ಲಿ ಫ್ರಾನ್ಸ್ ಸೀಮೆಯ ರಾಜಧಾನಿಯಾದ ಪ್ಯಾರಿಸ್ ನಗರದಲ್ಲಿ ಭಯಂಕರವಾದ ರೈಲ್ವೆ ಅಪಾಯವು ಸಂಭವಿಸಿತು. ಅದರ ವಿವರವನ್ನು ಇಲ್ಲಿ ತಿಳಿಸುವೆವು. ಲಂಡನ್ ಪ್ಯಾರಿಸ್ ಮೊದಲಾದ ವಿಸ್ತಾರವಾದ ಪಟ್ಟಣಗಳಲ್ಲಿ ರೈಲ್ವೆಯನ್ನು ಭೂಮಿಯ ಒಳಗಡೆ ಹಾಕಿರುತ್ತಾರೆ. ಇಂಥಾದ್ದೊಂದು ರೈಲ್ವೆಯಲ್ಲಿ ಒಂದು ಟ್ರೇನಿನಲ್ಲಿ ಜನಗಳು ಕೂತುಕೊಂಡು ಹೋಗುತ್ತಿರುವಾಗ ನಡುವೆಯಲ್ಲಿ ಎಂಜಿನಿಗೆ ಬೆಂಕಿ ಹತ್ತಿಕೊಂಡಿತು. ಅದನ್ನು ಆರಿಸಬೇಕು ಮುಂದೆ ಹೋಗಲಾರದ ಆ ಎಂಜಿನನ್ನು ಗಾಡಿಗಳ ಸಮೇತ ತಳ್ಳಿಕೊಂಡು ಹೋಗುವುದಕ್ಕೆ ಬೇರೊಂದು ಎಂಜಿನನ್ನು ಹಿಂದೆ ಜೋಡಿಸಿದರು. ಈ ಪ್ರಕಾರ ಇನ್ನು ಕೆಲವು ದೂರ ಹೋಗಲು ಮೊದಲಿನ ಎಂಜಿನಿನಲ್ಲೇ ಪುನಃ ಬೆಂಕಿ ಬಿದ್ದಿತು. ಆರಿಸುವುದು ಅಸಾಧ್ಯವಾಯಿತು. ಇದನ್ನು ನೋಡುತ್ತಲೆ ಹಿಂದಣ ಸ್ಟೇಷನಿನ್ನಿಂದ ಬರುವ ಬೇರೊಂದು ರೈಲ್ವೆ ಗಾಡಿಗಳಿಗೆ ಅಪಾಯ ಸಂಭವಿಸಬಹುದು ಎಂಬ ಭೀತಿಯಿಂದ ರೈಲ್ವೆ ಅಧಿಕಾರಿಗಳು ಬಂದು ಆ ಗಾಡಿಗಳಲ್ಲಿದ್ದವರನ್ನು ಕೆಳಕ್ಕೆ ಇಳಿಯಿರಿ ಎಂದು ಬಲವಂತ ಮಾಡಲು, ಹಿಂದೆಯೂ ಒಂದು ಸಲ ಇದೇ ಪ್ರಕಾರ ಹೇಳಿದ್ದಾಗ ಏನೂ ವಿಶೇಷವಾಗಲಿಲ್ಲ ಎಂದು ಭಾವಿಸಿ ಅವರು ಇಳಿಯದೆ ... ಬೆಂಕಿ ಹತ್ತಿಕೊಂಡು ಉರಿಯುತ್ತಿದ್ದ ಗಾಡಿಯಿಂದ ಹೊಗೆಯು ಇವರ ಕಡೆಗೆ ಬರುವುದನ್ನು ನೋಡಿ ಆಗ ಪ್ರಯಾಣಿಕರು ಇಳಿಯುವುದಕ್ಕೆ ತ್ವರೆಪಡುತ್ತಿದ್ದರು. ಆದರೆ ನೂರಾರು ಮಂದಿ ಹೊಗೆಯಿಂದ ಉಸುರು ಕಟ್ಟಿಕೊಂಡು ಮೃತಪಟ್ಟರು. ಪ್ರಯಾಣಿಕರೊಳಗೆ ಒಬ್ಬನು ಈ ಅನಾಹುತವನ್ನು ಕುರಿತು ತಿಳಿಸಿರುವುದನ್ನು ಇಲ್ಲಿ ಉದಾಹರಿಸುವೆವು —

ಬೆಂಕಿ ಹತ್ತಿಕೊಂಡಿತೆಂದು ಮೊದಲು ಸುಮ್ಮ ಸುಮ್ಮನೆ ಹೇಳಿದರೆಂದು ತಿಳಿದು ಸ್ವಲ್ಪ ದೂರ ಹೋದನಂತರ ನಿಜವಾಗಿಯೂ ಎಂಜಿನ್ ಹತ್ತಿಕೊಂಡಿತೆಂದು ತಿಳಿದು ನಾವು ಮುಂದಣ ಸ್ಟೇಷನಿನಲ್ಲಿ ಇಳಿದು ಮೇಲಕ್ಕೆ ಬರಬೇಕೆಂದು ಪ್ರಯತ್ನಿಸಿದೆವು. ಆದರೆ ಎಲ್ಲಾ ವ್ಯರ್ಥವಾಯಿತು. ಹ್ಯಾಗೆಂದರೆ ರೈಲಿನಲ್ಲಿ ಕುಳಿತುಕೊಳ್ಳುವವರಿಗಾಗಿ ಮೇಲಿನಿಂದ ಅನೇಕರು ಕೆಳಗೆ ಇಳಿದುಬರುತಿದ್ದರು. ಇವರಿಗೆ ಅನಾಹುತದ ವಿಷಯವು ತಿಳಿಯದೆ ಹೋದಕಾರಣ ಮೇಲಕ್ಕೆ ಓಡಿಬರುತ್ತಿದ್ದವರಾದ ನಮ್ಮ ಮಾತನ್ನು ನಂಬದೆ ಅವರು ಇಳಿಯುವುದರಲ್ಲೇ ತವಕಪಡುತ್ತಿದ್ದರು. ಆದಕಾರಣ ಮೆಟ್ಟಲುಗಳ ಬಳಿಯಲ್ಲಿ ಜನರ ನೂಕಾಟವು ವಿಪರೀತವಾಗಿದ್ದು ಭಯಂಕರವಾಗಿದ್ದಿತು. ಆದ್ದರಿಂದ ಆ ಮಾರ್ಗವಾಗಿ ಮೇಲಕ್ಕೆ ಬರುವುದು ಅಸಾಧ್ಯವಾದದರಿಂದಲೂ ಅಲ್ಲೇ ನಿಲ್ಲುವುದು ಪ್ರಾಣಹಾನಿಗೆ ಕಾರಣವಾದದರಿಂದಲೂ ನಾನು ಹಿಂದಕ್ಕೆ ಹೊರಟುಹೋಗುವುದೇ ಉತ್ತಮವೆಂದು ಭಾವಿಸಿ ನನ್ನ ಜೊತೆಯಲ್ಲಿದ್ದ ಹೆಂಡತಿಯನ್ನು ಕರೆದುಕೊಂಡು ಹೋಗುತ್ತಿದ್ದೆನು. ಹೊಗೆಯು ಕವಿದುಕೊಂಡಿತು. ನಮ್ಮ ಜೊತೆಯಲ್ಲಿ ಹಿಂದೆ ಬರುತ್ತಿದ್ದ ಹತ್ತಿಪ್ಪತ್ತು ಮಂದಿಗೂ ನಮಗೂ ಉಸುರು ಕಟ್ಟಿದಹಾಗಾಯಿತು. ಆದರೂ ಹಿಂದಕ್ಕೆ ತಿರುಗಿ ನೋಡದೆ ಮುಂದೆ ಮುಂದೆ ಹೋಗಿ ಆ ಸ್ಟೇಷನಿನ ಮೆಟ್ಟಲುಗಳನ್ನು ಹತ್ತುವುದಕ್ಕೆ ನೋಡಲಾಗಿ ಅಲ್ಲಿಯೂ ಜನಗಳು ಗುಂಪು ಕಟ್ಟಿಕೊಂಡು ತಾವು ಕೊಟ್ಟಿದ್ದ ರೈಲ್ವೆ ಚಾರ್ಜನ್ನು ಹಿಂದಕ್ಕೆ ಕೊಡಿರೆಂದು ಕಿರಿಚುತ್ತಾ ಇದ್ದರು. ನಾವು ಎಷ್ಟು ಹಂಬಲಿಸಿದರೂ ಅವರು ದಾರಿ ಬಿಡಲೆ ಇಲ್ಲ. ಕಡೆಗೆ ನಾವು ಮಹಾ ಸಾಹಸ ಮಾಡಿ ಮುಂದೆ ನಿಂತಿರುವವರನ್ನು ತಳ್ಳಿ ದಾರಿ ಬಿಡಿಸಿಕೊಂಡು ಅಂತಗಳ ಮೇಲಕ್ಕೆ ಬಂದೆವು.

ಮೂರನೇ ಗಾಡಿಯಲ್ಲಿದ್ದ ಗಾರ್ಡ್ ಕೊಟ್ಟಿರುವ ವೃತ್ತಾಂತವು ಪರಿತಾಪಕರವಾದದ್ದು. ಅವನು ಹೇಳಿರುವುದೇನೆಂದರೆ —

ನನ್ನ ಗಾಡಿಯಲ್ಲಿ ೩೫೦ ಮಂದಿ ಪ್ರಯಾಣಿಕರಿಗಿಂತ ಹೆಚ್ಚಾಗಿದ್ದರು. ನಾವು ಮುಂದೆ ಸ್ವಲ್ಪದೂರ ಹೋಗಲಾಗಿ ಹೊಗೆ ತುಂಬಿಕೊಂಡಿತು. ಮುಂದೆ ರೈಲ್ವೆ ಅಪಾಯದ ಸಂಜ್ಞೆಗಳನ್ನು ನೋಡಿ ನಮ್ಮ ಗಾಡಿಯು ನಿಂತಿತು. ಆಗ ಗಾಡಿಗಳಲ್ಲಿದ್ದವರನ್ನು ಹೊರಕ್ಕೆ ಇಳಿದು ಬನ್ನಿ ಎಂದು ಹೇಳಿದರೂ ಅವರು ಒಪ್ಪಲಿಲ್ಲ. ತಮ್ಮ ಟಿಕೆಟುಗಳ ಹಣವನ್ನು ವಾಪಸು ಮಾಡಬೇಕೆಂದು ಹೇಳಿಕೊಂಡರು. ಹೇಳುವುದಕ್ಕೆ ಕೆಲವರು ನನ್ನನ್ನು ಹೊಡೆದರು. ಅನಂತರ ಅರ್ಧನಿಮಿಷದಲ್ಲಿ ದೀಪಗಳೆಲ್ಲಾ ಆರಿಹೋಗಿ ಕತ್ತಲಾಯಿತು. ಆಗ ಪ್ರಯಾಣಿಕರು ಇಳಿದು ಹೋಗುವುದಕ್ಕೆ ಪ್ರಯತ್ನಪಡಲಾಗಿ ಹಿಂಸಾತ್ಮಕ ಭಯಂಕರವಾಯಿತು. ನನಗೂ ಹೊಗೆಯಿಂದ ಉಸುರು ಕಟ್ಟಿಕೊಂಡಿತು. ನಾನು ಕೆಳಗೆ ಬಿದ್ದೆನು. ಆದರೆ ದೈವವಶಾತ್ ಸಹಾಯಕರು ಜಾಗ್ರತೆ ಬಂದು ನನ್ನನ್ನೂ ನನ್ನ ಹತ್ತಿರ ಬಿದ್ದಿದ್ದ ಒಬ್ಬ ಹೆಂಗಸನ್ನೂ ಎತ್ತಿಕೊಂಡು ಮೇಲಕ್ಕೆ ಹೋಗಿ ಒಂದು ಔಷಧದ ಅಂಗಡಿಯಲ್ಲಿರಿಸಿದರು.

ಭಯಂಕರವಾದ ಅನಾಹುತದಲ್ಲಿ ಸತ್ತುಹೋದವರ ಶವಗಳನ್ನು ತೆಗೆದುಹಾಕುವುದರಲ್ಲಿ ಸರ್ಕಾರದವರು ಬಹಳ ಮುತುವರ್ಜಿಯುಳ್ಳವರಾಗಿದ್ದರು. ಫ್ರಾನ್ಸ್ ಸೀಮೆಯ ಪ್ರೆಸಿಡೆಂಟರಾದ ಲೂಬೆಯವರು ಈ ಅನಾಹುತವು ನಡೆದ ವರ್ತಮಾನವನ್ನು ಕೇಳಿ ತಮ್ಮ ದುಃಖವನ್ನು ತಂತೀವರ್ತಮಾನದ ಮೂಲಕ ತಿಳಿಯಪಡಿಸಿದರು.

ಇಂಗ್ಲಾಂಡಿನ ಸಾರ್ವಭೌಮರಾದ ಎಡ್ವರ್ಡ್ ಮಹಾರಾಜರು ತಮ್ಮ ದುಃಖವನ್ನು ಫ್ರೆಂಚ್ ಪ್ರಜೆಗಳಿಗೆ ತಿಳಿಸುವಂತೆ ಪ್ಯಾರಿಸ್ ನಗರದಲ್ಲಿರುವ ಇಂಗ್ಲಾಂಡಿನ ರಾಯಭಾರಿಗಳಿಗೆ ತಂತೀ ವರ್ತಮಾನ ಕೊಟ್ಟದ್ದಲ್ಲದೆ ಪ್ರೆಸಿಡೆಂಟರವರಿಗೂ ತಿಳಿಸಿದರು.

****

ಇಂಗ್ಲಾಂಡಿನ ಪೋಸ್ಟ್‌ಮಾಸ್ಟರ್ ಜನರಲ್ಲವರು ೧೯೦೨—೩ಕ್ಕೆ ಸಲ್ಲುವ ಲೆಕ್ಕಗಳನ್ನು ಪ್ರಕಟಿಸಿದ್ದಾರೆ. ಇದರಿಂದ ತಿಳಿಯುವುದೇನೆಂದರೆ—ಆ ವರ್ಷದಲ್ಲಿ ಪೋಸ್ಟ್ ಆಫೀಸಿನ ಮೂಲಕ ವಿಲೇವಾರಿಯಾದ ಕಾಗದಗಳು ಕಾರ್ಡುಗಳು ಮೊದಲಾದವುಗಳು ೪೧೯೩,೦೦೦,೯೦೦,೦೦೦, ಇದು ಹಿಂದಣ ಸಾಲಿಗಿಂತಲೂ ೧೬ಕೋಟಿ—೩ರಷ್ಟು ಹೆಚ್ಚು. ಜಮಾ ಆದ ಮೊಬಲಗು ೧೬೦೦೭೯೩೮ ಪೌಂಡು, ಖರ್ಚು ೧೦೯೧೯೦೩೬ ಪೌಂಡು.

****

೧೯೦೨—೩ಕ್ಕೆ ಸಲ್ಲುವಂಥ ಇಂಡಿಯಾ ದೇಶದ ಆಮದು ರಫ್ತು ಲೆಕ್ಕವು ಪ್ರಕಟವಾಗಿದೆ. ಆ ಸಾಲಿನಲ್ಲಿ ಆಮದು ಮೊಬಲಗು ೧೮೪೦೪೩೬೩೫೮ ರೂಪಾಯಿಗಳು. ಹಿಂದಣ ವರ್ಷ ೧೦೦೯೨೩೫೯೦ ರೂಪಾಯಿಗಳು ರಫ್ತಾದದ್ದು ೧೩೬೬೨೬೩೬೬ ರೂಪಾಯಿ, ಹಿಂದಣ ವರ್ಷ ೧೩೬೨೯೬೪೪೫೮ ರೂಪಾಯಿ.

****

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಫಿಲಡೆಲ್ಫಿಯದಲ್ಲಿ ಕೆಲವರು ಚೆಂಡಾಡುತ್ತಿರುವಾಗ ನೋಟಕರಿಗಾಗಿ ಹಾಕಿದ್ದ ಅಟ್ಟಣೆಯು ಮುರಿದು ನಾಲ್ಕು ಮಂದಿ ಸತ್ತರು. ೧೫೦ ಮಂದಿಗೆ ಗಾಯವಾಯಿತು. ಇವರಲ್ಲಿ ೧೨ ಮಂದಿ ಸತ್ತರು.

****

ಆಸ್ಟ್ರೇಲಿಯದ ವಿಕ್ಟೋರಿಯಾ ಎಂಬ ಭಾಗದಲ್ಲಿ ಹೆಂಗಸರೂ ಪಾರ್ಲಿಮೆಂಟಿನ ಮೆಂಬರುಗಳಾಗಿ ಸಭೆಯಲ್ಲಿ ಕುಳಿತುಕೊಳ್ಳಬಹುದೇ ಬಾರದೇ ಎಂಬದಾಗಿ ಚರ್ಚೆ ಹುಟ್ಟಿತು. ಪಾರ್ಲಿಮೆಂಟಿಗೆ ಸಾಮಾಜಿಕರನ್ನು ಚುನಾಯಿಸುವ ಅಧಿಕಾರವು ಹೆಂಗಸರಿಗೂ ಮೊದಲೇ ಕೊಟ್ಟಿರುತ್ತಾರೆ. ಮತ್ತು ಪಾರ್ಲಿಮೆಂಟು ಮೆಂಬರುಗಳಾಗುವುದಕ್ಕೆ ಯೋಗ್ಯರಾಗತಕ್ಕವರ ವಿಷಯದಲ್ಲಿ ವಿಧಾಯಕ ನಿಯಮವಾಗ "ಆತನು" ಎಂಬ ಪದವನ್ನು ಉಪಯೋಗಿಸಿರಲಾಗಿ ಈ ಪದದಲ್ಲಿ ಹೆಂಗಸರನ್ನೂ ಕೂಡಿಸಬಹುದು ಎಂಬ ಅಭಿಪ್ರಾಯ ಪ್ರಕಟಗುತ್ತದೆಯೆಂದು ಈಗ ವಾದಿಸುತ್ತಾರೆ, ಈ ಅಭಿಪ್ರಾಯವು ಸರಿಯೆಂಬ ವಿಷಯಕ್ಕೆ ಪ್ರಸಿದ್ಧರಾದ ಲಾಯರುಗಳು ಒಪ್ಪುತ್ತಾರೆ. ಆದ್ದರಿಂದ ಹೆಂಗಸರೂ ಆ ದೇಶದ ಪಾರ್ಲಿಮೆಂಟಿನ ಮೆಂಬರುಗಳಾಗಬಹುದೆಂದು ಹೇಳಬಹುದು.

*********

### ಸಿಂಗಪೂರು ಪೋಸ್ಟ್ ಆಫೀಸು.

ಸಿಂಗಪೂರಿನ ಪೋಸ್ಟ್ ಮಾಸ್ಟರ್ ಜನರಲ್ಲವರು ಪ್ರಕಟಿಸಿರುವ ರಿಪೋರ್ಟಿನಿಂದ ಕೆಳಗೆ ಬರೆದಿರುವ ವಿಶೇಷವು ಗೊತ್ತಾಗುವುದು—

ಈ ಪೋಸ್ಟ್ ಆಫೀಸಿನಷ್ಟು ಸುಲಭಯುಕ್ತಿನಿಂದ ನಡೆಯುವ ಆಫೀಸು ಈ ಭೂಲೋಕದಲ್ಲಿ ಬೇರೆ ಯಾವದೂ ಇಲ್ಲ. ಈ ಊರಿನಲ್ಲಿ ವಾಸವಾಗಿರುವಷ್ಟು ವಿವಿಧ ಜನಾಂಗಗಳವರು ಬೇರೆ ಯಾವ ದೇಶದಲ್ಲಾದರೂ ಇಲ್ಲ. ಇವರಿಗೆ ಬರುವ ಕಾಗದ ಪತ್ರಗಳೆಲ್ಲಾ ಅವರವರ ಸ್ವಭಾಷೆಗಳಲ್ಲೇ ಬರೆದು ಬರುತ್ತವೆ. ಆದಕಾರಣ ಈ ಕಾಗದ ಪತ್ರಗಳನ್ನೆಲ್ಲಾ ತಪ್ಪು ಮಾಡದೆ ಆಯಾ ವಿಳಾಸದಾರರಿಗೆ ತಲುಪಿಸುವ ಕೆಲಸವು ಅತ್ಯಂತ ಪ್ರಯಾಸಕರವಾಗಿರುವದು. ಈ ಪಟ್ಟಣದ ಕೆಲವು ಭಾಗಗಳಲ್ಲಿ ಮೂರು ಬಗೆಯ ಜನಗಳು ಪೋಸ್ಟ್ ಪ್ಯೂನರಾಗಿ ನೇಮಿಸಲ್ಪಟ್ಟಿರುತ್ತಾರೆ. ಯೂರೋಪಿಯನ್ ಜನಗಳ ಕಾಗದಗಳನ್ನೆಲ್ಲಾ ತಲುಪಿಸುವವನು ಮಲಾಯಿ ಜಾತಿಯವನು. ಕಾಗದಗಳು ರಮ್ಯನ್ ರೋಮನ್, ಮೊದಲಾದ ಯಾವ ಯೂರೋಪಿಯನ್ ಭಾಷೆಯಲ್ಲಿ ಬರೆದಿದ್ದಾಗ್ಯೂ ಇವನೇ ತೆಗೆದುಕೊಂಡು ಹೋಗಿ ಕೊಡುತ್ತಾನೆ. ಯಹೂದ್ಯರು, ಆರ್ಮೇನಿಯರು, ಮಲಾಯರು, ಅರಬಿಯರು, ಪಾರ್ಸಿಯವರು, ಜಪಾನಿನವರು ಇವರಿಗೆಲ್ಲಾ ಕಾಗದ ಕೊಡುವವನು ಒಬ್ಬ ಚೀನರವನು ಜವಾನನಾಗಿದ್ದಾನೆ. ದಕ್ಷಿಣ ಹಿಂದುಸ್ಥಾನದ ತಮಿಳು ತೆಲುಗು ಮೊದಲಾದ ಭಾಷೆಗಳ ವಿಳಾಸಗಳು ಇರುವ ಕಾಗದಗಳನ್ನು ತಮಿಳು ಜಾತಿಯವನು ತಕ್ಕೊಂಡು ಹೋಗಿ ಕೊಡುತ್ತಾನೆ. ಇವನಲ್ಲದೆ, ಸಿಕ್ಖರನೊಬ್ಬನು ಹಿಂದುಸ್ತಾನಿ, ಪಾರ್ಸಿ ಮೊದಲಾದ ಉತ್ತರ ಹಿಂದುಸ್ಥಾನದ ಭಾಷೆಗಳ ಕಾಗದಗಳನ್ನು ತಲುಪಿಸುತ್ತಾನೆ. ಇಷ್ಟೇ ಅಲ್ಲ. ತಮಿಳು ಜನಗಳ ಕಾಗದಗಳನ್ನೆಲ್ಲಾ ರಾತ್ರಿ ವೇಳೆಯಲ್ಲೇ ಅವರು ಮನೆಗೆ ಬಂದಿರುವ ಸಂದರ್ಭದಲ್ಲಿ ಕೊಡಬೇಕು. ಮತ್ತು ದೆಬ್ಬ ಅಂಥೇ ಪೆಟ್ಟಿ ಬಾಕಿಯನ್ನು ವಸೂಲ್ಮಾಡಬೇಕಾಗುತ್ತೆ. ಇಷ್ಟು ವಿಧ ಜನಾನನ್ನು ಇಟ್ಟುಕೊಳ್ಳಬೇಕಾದರೂ ಖರ್ಚು ಅಧಿಕವಾಗಿರುವದಿಲ್ಲ. ಕಾಗದಗಳ ವಿಲಿವರಿಯಲ್ಲಿ ನಡೆಯುವ ಒಂದು ವಿಶೇಷವೇನಂದರೆ—ತಮ್ಮ ಭಾಷೆಯ ಕಾಗದಗಳನ್ನು ಚೀನರವನು ಓದಿಕೊಳ್ಳಲಾರದೆ ಒಂದೊಂದು ವೇಳೆ ತಮಿಳು ಜಾತಿಯವರ ಕೈಯಲ್ಲಿ ಓದಿಸಿಕೊಳ್ಳುತ್ತಾನಂತೆ ಇದಲ್ಲವೇ ಆಶ್ಚರ್ಯ!

## ಮೈಸೂರು ಸರ್ಕಾರೀ ಹುಕುಮುಗಳು.

### ಮೇಲುಕೋಟೆ ಬೈರಾಗಿ ಮಠ.

ಶ್ರೀರಂಗಪಟ್ಟಣದ ತಾಲ್ಲೂಕು ಮೇಲುಕೋಟೆಯಲ್ಲಿ ಶ್ರೀ ನರಸಿಂಹ ಸ್ವಾಮಿ ದೇವಸ್ಥಾನಕ್ಕೆ ಹತ್ತಿಹೋಗುವ ಗುಡ್ಡದ ತಪ್ಪಲಲ್ಲಿ ಬೈರಾಗಿ ಮಠವಿರುವದು. ಇದು ಮುಜರಾಯಿ ಇಲಾಖೆಗೆ ಸೇರಿದೆ. ಇದಕ್ಕೆ ರೂ. ೧೪–೧–೦ ವರುಷಾಶನವೂ ಕೆಲವು ಇನಾಮತಿಗಳೂ ಇರುತ್ತವೆ. ಈ ಮಠದಲ್ಲಿ ಪೂಜೆಯೂ ಬೈರಾಗಿಗಳಿಗೆ ಸದಾವರ್ತ ಕೊಡುವುದೂ ನಡೆಯುತ್ತಿವೆ. ಈ ಮಠದ ಮಹಂತರಾದ ರಾಘವದಾಸರು ೧೯೦೨ನೇ ಅಕ್ಟೋಬರ್ ನಲ್ಲಿ ಕಾಲವಾದರು. ಅವರು ತಮ್ಮ ಪೀಠಕ್ಕೆ ರಾಮಪ್ರಸನ್ನ ರಾಮಾನುಜ ದಾಸರನ್ನು ಗೊತ್ತುಮಾಡಿ ಹೋದರು. ಫ್ರಂಟ್ ರಾಕ್ಸ್ ಡೆಪ್ಯುಟಿ ಅಮಲ್ದಾರರು—ರಾಮಪ್ರಸನ್ನ ರಾಮಾನುಜ ದಾಸರನ್ನು ಆ ಮಠದ ಮಹಂತರೆಂದು ಅಂಗೀಕರಿಸಬೇಕೆಂದು ಶಿಫಾರಸು ಬರೆದರು. ಫ್ರಂಟ್ ರಾಕ್ಸ್ ಸಬ್ ಡಿವಿಜನ್ ಆಫೀಸರು (ಮೆ॥ ಎಂ. ವೆಂಕಟರಾಯರು) ಗೌವರ್ನಮೆಂಟ್ ಪ್ರೊಸೀಡಿಂಗ್ಸಿಗೆ ವಿರೋಧವಾಗಿ ತಾವೇ ಅದನ್ನು ಸ್ಯಾಂಕ್ಷನ್ ಮಾಡಿಬಿಟ್ಟರು. ಇದು ಅಕ್ರಮ ನಡವಳಿಕೆಯಾಗಿರುತ್ತದೆ. ಈಚೆಗೆ ಡೆಪ್ಯುಟಿ ಕಮಿಷನರಿಂದ ಬಂದಿರುವ ರೆಕಾರ್ಡುಗಳನ್ನು ನೋಡಲಾಗಿ ಈ ಮಠಕ್ಕೆ ಮಹಂತರಾಗತಕ್ಕವರು ಬ್ರಹ್ಮಚಾರಿಗಳಾಗಿರಬೇಕು. ರಾಮಪ್ರಸನ್ನ ರಾಮಾನುಜ ದಾಸರು ಬ್ರಹ್ಮಚಾರಿಗಳೂ ಅಲ್ಲ; ಮೊದಲಿದ್ದ ಮಹಂತರಿಂದ ಆ ಪೀಠಕ್ಕೆ ನೇಮಕವಾದವರೂ ಅಲ್ಲ; ಇದೂ ಅಲ್ಲದೆ ಆ ಮಠದ ಶಿಷ್ಯರೆಲ್ಲಾ ಇವರೇ ಮಹಂತರಾಗಬೇಕೆಂದು ಸಮ್ಮತಿಪಟ್ಟು ಹೇಳುತ್ತಾರೆ. ಡೆಪ್ಯುಟಿ ಕಮಿಷನರು ಕೂಡ ಇವರನ್ನೇ ಖಾಯಂ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ. ಆ ಪೀಠಕ್ಕೆ ಅವರೇ ಯೋಗ್ಯರಾಗಿರುವಂತೆಯೂ ತಿಳಿದು ಬಂದಿದೆ. ಆದಕಾರಣ ಶ್ರೀಮನ್ ಮಹಾರಾಜಾ ಗೌವರ್ನಮೆಂಟಿನವರು ಮೇಲ್ಕಂಡ ರಾಮಪ್ರಸನ್ನ ರಾಮಾನುಜ ದಾಸರೇ ಆ ಮಠದ ಮಹಂತರಾಗಿರತಕ್ಕದ್ದೆಂದು ಬಹಳ ಸಂತೋಷದಿಂದ ಸ್ಯಾಂಕ್ಷನ್ ಮಾಡಿದಾರೆ. ಮೊದಲಿದ್ದ ಮಹಂತರು ಕಾಲವಾದಾರಭ್ಯ ರಾಮಪ್ರಸನ್ನ ರಾಮಾನುಜ ದಾಸರೇ ಆ ಮಠದ ಕಾರುಬಾರುಗಳನ್ನೆಲ್ಲಾ ಸ್ವಲ್ಪವೂ ಲೋಪಉಂಟಾಗದಂತೆ ನೋಡಿಕೊಂಡು ಬಂದಿರುವುದರಿಂದ ಅವರಿಗೇನೇ ಬಾಕಿ ನಿಂತಿರುವ ಮೇಲ್ಕಂಡ ಗೌವರ್ನಮೆಂಟ್ ಗ್ರಾಂಟನ್ನೆಲ್ಲಾ ಪಾವತಿಮಾಡತಕ್ಕದ್ದು. ಆದರೆ ರಾಮದಾಸರೆಂಬುವರು ಈ ಮಹಂತ ಪೀಠಕ್ಕೆ ತಾವು ಹಕ್ಕುದಾರರೆಂದು ಅರ್ಜಿ ಬರೆದುಕೊಂಡಿದಾರೆ. ಇವರು ಗೃಹಸ್ಥಾಶ್ರಮವನ್ನು ಸ್ವೀಕರಿಸಿದವರು, ಇವರು ಆ ಪೀಠಕ್ಕೆ ಯೋಗ್ಯರಲ್ಲ. ಇದಲ್ಲದೆ ಹಿಂದೆ ಇದ್ದ ಮಹಂತರಿಂದ ಇವರು ಅಂಗೀಕರಿಸಲ್ಪಟ್ಟವರೂ ಅಲ್ಲ. ಆದಕಾರಣ ಇವರ ಅರ್ಜಿಯನ್ನು ವಜಾಮಾಡಿದೆ.

◆◆◆◆◆◆◆◆◆

### ತಾಫೆ ಕಟ್ಟುವುದಕ್ಕೆ ಇನಾಮತಿ.

ಶ್ರೀನಿವಾಸಪುರದ ತಾಲ್ಲೂಕು ರೋಣೂರು ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ತಾಫೆ ಚಾಕರಿ ಮಾಡುವವರಿಗೆ ದೇವಸಂಧ್ರದ ಗುತ್ತವೆಂಬ ಕಾಯಂಗುತ್ತಾ ಗ್ರಾಮವು ದೇವಾದಾಯವಾಗಿ ಕೊಡಲ್ಪಟ್ಟಿದೆ. ಇದಕ್ಕೆ ಆ ಗ್ರಾಮವನ್ನು ಅನುಭವಿಸತಕ್ಕವರು ಸರ್ಕಾರಕ್ಕೆ ಪ್ರತಿ ವರುಷವೂ ೫೮ ರೂ. ಗುತ್ತಿಗೆ ಪಾವತಿಮಾಡಬೇಕು. ಅವರಲ್ಲಿ ಆರೆಮಾಸಿ ಪುಟ್ಟುವಳಿಯನ್ನು ಅಣ್ಣಯ್ಯನೂ, ಉಳಿದ ಅರೆಮಾಸಿಯು ರಾಮಸುಬ್ಬಿ, ಸೀತಿ, ಸುಬ್ಬಿ, ವೆಂಕಟ್ರಮಣ, ವೆಂಕಟ್ರಾಮ ಎಂಬೀ ೬ ಮಂದಿಯೂ ಸರಿಪಾಲಾಗಿಯೂ ಅನುಭವಿಸುತ್ತಿದ್ದರು. ಅಣ್ಣಯ್ಯನು ತನ್ನ ಪಾಲನ್ನು ೩೦೦ ರೂ.ಗೆ ಭೋಗ್ಯವಾಗಿಟ್ಟು ಈಚೆಗೆ ಬಿಡಿಸಿಕೊಂಡಿದಾನೆ. ರಾಮಸುಬ್ಬಿ, ಸುಬ್ಬಿ ಇವರಿಬ್ಬರೂ ಸುಬ್ಬಣ್ಣನೆಂಬವನಿಗೆ ತಮ್ಮ ಪಾಲನ್ನು ವಹಿಸಿಬಿಟ್ಟರು. ಈಗ ಇವನೇ ತಾಫೆ ಚಾಕರಿಯನ್ನು ಮಾಡುತ್ತಿದಾನೆ. ಈ ಮಧ್ಯೆ ಏನೋ ಒಂದು ತಪ್ಪು ನಡವಳಿಕೆ ನಡೆದು ಈ ಗ್ರಾಮವನ್ನು ಅಮಲ್ದಾರರು ತಾಲ್ಲೂಕಿಗೆ ಸೇರಿಸಿಕೊಂಡುಬಿಟ್ಟರು. ಈಗ ಈ ಪಾಲುದಾರರೆಲ್ಲಾ ತಮ್ಮ ಜಮೀನನ್ನು ತಮಗೆ ಬಿಟ್ಟುಕೊಡಬೇಕೆಂದು ಗೌವರ್ನಮೆಂಟಿಗೆ ಅರ್ಜಿ ಬರೆದುಕೊಂಡಿದಾರೆ. ಈ ವಿಷಯದಲ್ಲಿ ನಡೆದಿರುವ ಕಾಗದ ಪತ್ರಗಳನ್ನೆಲ್ಲಾ ತನಿಖೆಮಾಡಿ ಗೌವರ್ನಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ:—ಅಣ್ಣಯ್ಯ, ಸೀತಿ, ವೆಂಕಟ್ರಮಣ, ವೆಂಕಟ್ರಾಮ—ಇವರ ಪಾಲಿನ ಜಮೀನುಗಳನ್ನು ಸರ್ಕಾರದವರು ವಹಿಸಿಕೊಂಡುದು ತಪ್ಪಾದ್ದರಿಂದ ಅವರಿಗೆ ವಾಪಸು ವಹಿಸತಕ್ಕದ್ದು. ರಾಮಸುಬ್ಬಿ, ಸುಬ್ಬಿ, ಇವರ ಪಾಲಿನದನ್ನು ಸುಬ್ಬಣ್ಣನು ವಹಿಸಿಕೊಂಡು, ಕಳೆದ ೧೦ ವರುಷಗಳಿಂದ ತೃಪ್ತಿಕರವಾಗಿ ತಾಫೆ ಚಾಕರಿಯನ್ನು ಮಾಡುತ್ತಾ ಬಂದಿದಾನೆಂತಲೂ, ಇನ್ನುಮುಂದೆಯೂ ಮಾಡಲು ಒಪ್ಪಿರುತ್ತಾನೆಂತಲೂ, ಅವನ ಹೆಸರಿಗೆ ಅವೆರಡು ಹಿಸ್ಸೆಗಳೂ ದಾಖಲಾಗಬೇಕೆಂತಲೂ ಕೋಲಾರದ ಡೆಪ್ಯುಟಿ ಕಮಿಷನರು ಶಿಫಾರಸು ಮಾಡಿದಾರೆ. ಅದೇ ಪ್ರಕಾರ ಸುಬ್ಬಣ್ಣನ ಹೆಸರು ದಾಖಲಾಗತಕ್ಕದ್ದು. ಈ ಮಾನ್ಯವು ದೇವಾದಾಯವಾಗಿರುವಕಾರಣ ಹಿಸ್ಸೇದಾರರಿಗೆ ಅದರಮೇಲೆ ಯಾವ ಹಕ್ಕೂ ಇರುವುದಿಲ್ಲವೆಂತಲೂ, ದೇವಸ್ಥಾನದ ಚಾಕರಿ ಅವರಿಂದ ಮಾಡಲ್ಪಡುವತನಕ ಅವರು ಗ್ರಾಮವನ್ನು ಮೇಲ್ಕಂಡಂತೆ ಅನುಭವಿಸಬೇಕೆಂತಲೂ, ಅವರು ಚಾಕರಿ ಮಾಡದೆ ಹೋದರೂ, ಇಲ್ಲವೇ ಅವರು ಜಮೀನನ್ನು ಪರಾಧೀನಮಾಡಿದರೂ ಗೌವರ್ನಮೆಂಟಿನವರು ಅದನ್ನು ವಾಪಸು ಸರ್ಕಾರಕ್ಕೆ ಸೇರಿಸಿಕೊಳ್ಳುತ್ತಾರೆಂತಲೂ ಅವರಿಗೆಲ್ಲಾ ತಿಳಿಸತಕ್ಕದ್ದು. ಈ ಹುಕುಮು ಇತರ ಕಡೆಗಳಿಗೆ ಅನ್ವಯಿಸಲಾಗದು.

## ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಮೈಸೂರು ಮ್ಯುನಿಸಿಪಲ್ ಕಮಿಷನರು ಟೌನ್‌ಹಾಲ್ ಬಂಗಲೆಯಲ್ಲಿ ಸಭೆಸೇರಿ ತಿಂಗಳುಕಳ್ಳ ಮೀಟಿಂಗನ್ನು ನಡಿಸಿದರು. ಕಳೆದ ಮಾರ್ಚಿ ತಿಂಗಳ ಜಮಾಖರ್ಚು ಮುಂತಾದ ಲೆಕ್ಕಗಳು ಓದಲಾಯಿತು. ಆ ತಿಂಗಳಲ್ಲಿ ಮ್ಯುನಿಸಿಪಲ್ ಹುಟ್ಟುವಳಿ ೧೧,೯೫೯ರೂ.; ಖರ್ಚು ೧೩,೭೯೯ರೂ. ಜನನ ೧೧೯; ಮರಣ ಪ್ಲೇಗ್ ೪೩, ಇತರ ೧೧, ಒಟ್ಟು ೨೪೬. ಮತ್ತು ಆಗೋಷ್ಟ್ ೧ ರಿಂದ ೨೮ ರವರೆಗೆ ಪ್ಲೇಗ್ ತಗಲಿದ್ದು ೩೪೮, ಮರಣ ೨೮೪, ಒಟ್ಟುಮರಣ ೪೯೦.

ಮಹಾರಾಣಿಯವರ ಆಸ್ಪತ್ರೆಯೊಳಗೆ ಸೋಜಿಗಗಳು ಬಂದಿರುವಂತೆಯೂ, ಅವರಿಂದ ರೋಗಿಗಳು ಆ ಆಸ್ಪತ್ರೆಗೆ ಹೋಗಲು ಭಯಪಡುತ್ತಾರೆಂತಲೂ ರಾಜಧಾನಿಯಲ್ಲಿ ಒಂದು ವರ್ತಮಾನ ಉಂಟಾಗಿತ್ತಷ್ಟೆ. ಈ ಸಂಗತಿಯನ್ನು ವಿಚಾರಿಸಿದಾಗ ಡಾಕ್ಟರ್ ಅಚ್ಯುತರಾಯರು—ಅದೆಲ್ಲಾ ಸುಳ್ಳುಸುದ್ದಿ ಎಂತಲೂ, ಸೋಜಿಗಗಳಿಂದ ಯಾರಿಗೂ ತೊಂದರೆಯುಂಟಾಗಿಲ್ಲವೆಂತಲೂ ಹೇಳಿದರು.

ಚಾಮಲ್ಲಿ ರಸ್ತೆಯಲ್ಲಿರುವ ಮಹಾಣ ಭೂಮಿ ಸಾಲದಾದ್ದರಿಂದ ಪಕ್ಕದಲ್ಲಿರುವ ಚಕ್ರಮಾನ್ಯವನ್ನೂ ಅದಕ್ಕೆ ಸೇರಿಸಬೇಕೆಂದು ಚರ್ಚೆ ನಡೆದು, ಅದನ್ನು ಅಲ್ಲೇ ಹೋಗಿನೋಡಿ ಬಂದಮೇಲೆ ಗೊತ್ತುಮಾಡೋಣವೆಂದು ತೀರ್ಮಾನ ಮಾಡಿದರು.

ರಾಜಧಾನಿಗೆ ಕಾವೇರಿ ನೀರು ಕುಡಿಯುವುದಕ್ಕೆ ಬರುತ್ತಿದೆಯಷ್ಟೆ. ಅದು ಬೆಳಗೊಳದಿಂದ ಸ್ವಲ್ಪ ದೂರ ನಲ್ಲಿಯಲ್ಲಿ ಬಂದು ಈಚೆಗೆ ಒಂದು ಮೈಲಿ ಫಾಸಲೆತನಕ ತೆರೆದ ಗಾರೇ ಬಚ್ಚಲಲ್ಲಿ ಬರುವುದು. ಈ ತೆರದ ಬಚ್ಚಲಲ್ಲಿ ಹರಿಯುವ ನೀರನ್ನು ಜನರು ಕೆಡಿಸುತ್ತಾರಾದಕಾರಣ ಅದರಮೇಲೆ ಕಲ್ಲು ಚಪ್ಪಡಿಗಳನ್ನು ಹಾಸಿ ಮುಚ್ಚುವದು ಒಳ್ಳೇದೆಂತಲೂ, ಇದಕ್ಕೆ ಮ್ಯುನಿಸಿಪಾಲಿಟಿಯವರು ಹಣ ಖರ್ಚುಮಾಡಲು ಒಪ್ಪುವರೇ ಎಂತಲೂ ಚೀಫ್ ಇಂಜನಿಯರು ಕೇಳಿದರು. ಮ್ಯುನಿಸಿಪಲ್ ಕಮಿಷನರು ಸದ್ಯ ಆ ಕೆಲಸವನ್ನು ಪೂರೈಸಲು ಹಣವಿಲ್ಲವೆಂತಲೂ, ಕಲ್ಲುಹಾಕಿ ಮುಚ್ಚುವುದಕ್ಕಿಂತಲೂ ಸುತ್ತಲೂ ತಂತಿಗಳ ಝಾಲ್ರಿಗಳನ್ನು ಬಿಗಿಸಿದೆ ಉತ್ತಮವೆಂತಲೂ ತೀರ್ಮಾನ ಮಾಡಿದರು.

ಬೆಳಗೊಳದಲ್ಲಿ ಕಾವೇರಿ ನಾಲೆಯಿಂದ ನೀರು ಎತ್ತಿಬಿಡುವ ಬಾವಿಗಳನ್ನು ರಿಪೇರಿ ಮಾಡಿಸುವುದಕ್ಕೆ ೨,೩೩೬ರೂ. ಆಗಬೇಕೆಂದು ಬೋರ್ಡಿನವರು ಸ್ಯಾಂಕ್ಷನ್ ಮಾಡಿದರು.

ಮ್ಯುನಿಸಿಪಲ್ ಇಂಜನಿಯರಿಗೂ, ಓವರ್ಸೀಯರಿಗೂ ಸಂಬಳ ಬಡ್ತಿ ಮಾಡಬೇಕೆಂದು ಬೋರ್ಡಿನಲ್ಲಿ ತೀರ್ಮಾನವಾಗಿತ್ತು. ಗೌವರ್ನಮೆಂಟಿನವರು—ಮ್ಯುನಿಸಿಪಾಲಿಟಿಯ ಸ್ಥಿತಿಯು ಅನುಕೂಲವಾಗಿಲ್ಲದ್ದರಿಂದ ಸಂಬಳ ಬಡ್ತಿ ಮಾಡಬೇಕೆಂಬ ಶಿಫಾರಸನ್ನು ಸ್ಯಾಂಕ್ಷನ್ ಮಾಡುವುದಿಲ್ಲವೆಂದು ಅಪ್ಪಣೆ ಕೊಡಿಸಿದಾರೆ.

ರಾಜಧಾನಿಯಲ್ಲಿ ಮನೆಗಳಿಗೆ ನಲ್ಲಿ ಇಡಿಸಿಕೊಂಡಿರುವವರಿಂದ ಮ್ಯುನಿಸಿಪಾಲಿಟಿಯವರು ನೀರಿನ ತೆರಿಗೆ ವಸೂಲ್ಮಾಡುತ್ತಾರಷ್ಟೆ. ಮನೆಯವರು ಕೆಲವು ದಿನ ನೀರು ಉಪಯೋಗಿಸಿಕೊಂಡು ನಂತರ ಬಿಟ್ಟುಬಿಟ್ಟರೆ ೩ ತಿಂಗಳ ಅಥವಾ ೬ ತಿಂಗಳ ತೆರಿಗೆಯನ್ನು ಮಾತ್ರ ಮಾಮೂಲು ಪ್ರಕಾರ ವಸೂಲ್ಮಾಡತಕ್ಕದ್ದೆಂದು ಹಿಂದೆ ಬೋರ್ಡಿನಲ್ಲಿ ತೀರ್ಮಾನವಾಗಿ ಗೌವರ್ನಮೆಂಟಿಗೆ ರಿಪೋರ್ಟ್ ಗಿದ್ದಿತು. ಗೌವರ್ನಮೆಂಟಿನವರು ಈ ತೀರ್ಮಾನವನ್ನು ಒಪ್ಪಲಿಲ್ಲ. ಮನೆ ತೆರಿಗೆ ಅಂಗಡಿ ತೆರಿಗೆಗಳಂತೆ ನೀರಿನ ತೆರಿಗೆಯನ್ನು ಏರ್ಪಡಿಸಬೇಕೆಂತಲೂ, ಕೆಲವು ದಿನ ನೀರನ್ನು ಉಪಯೋಗಿಸಿಕೊಳ್ಳುವವರಿಂದಲೂ ಪೂರಾ ವರುಷದ ತೆರಿಗೆಯನ್ನೇ ವಸೂಲ್ಮಾಡತಕ್ಕದ್ದೆಂತಲೂ ಅಪ್ಪಣೆ ಕೊಟ್ಟಿರುತ್ತಾರೆ.

ಸಂತೇಪೇಟೆ ರೋಡಿಗೂ ಸಯಾಜಿರಾವ್ ರಸ್ತೆಗೂ ನಡುವೆ ಇರುವ ಲ್ಯಾನ್ಸ್‌ಡೌನ್ ಬಜಾರಿನ ಹಿಂದುಗಡೆ ಇರುವ ಖಾಲೀ ನಿವೇಶನವನ್ನು ರಸ್ತೆ ಮಾಡುವುದಕ್ಕಾಗಿ ಷೇಕ್ ಇಬ್ರಾಹಿಂ ಸಾಬರಿಂದ ತೆಗೆದುಕೊಳ್ಳಬೇಕೆಂತಲೂ, ಅವರಿಗೆ ಸಲಗದ ೧ ಕ್ಕೆ ೨ ರೂ. ನಂತೆ ಜಮೀನ್ ಕ್ರಯ ಕೊಡಬೇಕೆಂತಲೂ ಕಮಿಷನರು ತೀರ್ಮಾನ ಮಾಡಿದರು.

ಪಟ್ಟಣದ ಅನೇಕ ಮನೆಗಳಲ್ಲಿ ಪಾಯಖಾನೆಯನ್ನು ದಿನವೂ ಗುಡಿಸದೆ ಇರುವುದರಿಂದ ಆರೋಗ್ಯವಿಚಾರವು ಚನ್ನಾಗಿಲ್ಲವೆಂತಲೂ, ಮ್ಯುನಿಸಿಪಾಲಿಟಿಯವರು ವರುಷಕ್ಕೆ ೩೩,೦೦೦ ರೂ. ಕನ್ಸರ್ವೆನ್ಸಿ ಬಾಬಿನ ಖರ್ಚುಮಾಡುತ್ತಿದ್ದರೂ ಕಚರಾ ಸಾಗುವುದಿಲ್ಲವೆಂತಲೂ, ಹೆಲ್ತ್ ಆಫೀಸರೂ, ಸ್ಯಾನಿಟರಿ ಇನ್‌ಸ್ಪೆಕ್ಟರೂ ಮ್ಯುನಿಸಿಪಲ್ ಕಮಿಷನರ ಸಂಗಡ ಆಲೋಚನೆ ಮಾಡದೆ ಕಚರಾ ಸಾಗಿಸುವುದಕ್ಕೆ ಅವರ ಅಭಿಪ್ರಾಯಗಳನ್ನು ಕೇಳದೇನೇ ತಮಗೆ ತೋರಿದಂತೆ ಕಾರ್ಯಗಳನ್ನು ನಡಸುತ್ತಾರೆಂತಲೂ, ಅವಶ್ಯವಿದ್ದರೆ ಇನ್ನೂ ಹೆಚ್ಚಾಗಿ ಗಾಡಿಗಳನ್ನಿಟ್ಟು ಗುಡಿಸುವವರನ್ನು ನೇಮಿಸಿ, ಪಾಯಖಾನೆಯನ್ನು ದಿನಾ ತೆಗೆಸಬೇಕೆಂತಲೂ, ಇದಕ್ಕಾಗಿ ಪ್ರಜೆಗಳಿಂದ ಅಲ್ಪಸ್ವಲ್ಪ ತೆರಿಗೆಯನ್ನು ವಸೂಲ್ಮಾಡಿಕೊಳ್ಳಬೇಕೆಂತಲೂ ಮೆ॥ ಅಂಬಳೆ ಪಂಡಿತರೇ ಮೊದಲಾದ ಕೆಲವು ಕಮಿಷನರುಗಳು ಸೂಚಿಸಿದರು. ಇದಕ್ಕೆ ಪ್ರತ್ಯುತ್ತರವಾಗಿ ಹೆಲ್ತ್ ಆಫೀಸರು—ಪಾಯಖಾನೆ ಸಾಗಿಸುವುದಕ್ಕೆ ಈಗಿರುವ ಗಾಡಿಗಳಾಗಲಿ, ಗುಡಿಸುವವರಾಗಲಿ ಸಾಲದೆಂತಲೂ, ಮನೆಗಳ ಹಿಂಭಾಗಗಳಲ್ಲಿ ಕನ್ಸರ್ವೆನ್ಸಿ ಗಲ್ಲಿಗಳಿಲ್ಲವೆಂತಲೂ ತಿಳಿಸಿದರು. ಒಟ್ಟು ಮನೆಗಳ ಸಂಖ್ಯೆಯನ್ನೂ, ಕಚರಾ ಸಾಗಿಸುವ ಸಿಬ್ಬಂದಿಯನ್ನೂ, ಇನ್ನೆಷ್ಟುಮಟ್ಟಿಗೆ ಜಾಸ್ತಿ ಮಾಡಬೇಕೆಂಬುದನ್ನೂ ಹೆಲ್ತ್ ಆಫೀಸರು ತನಿಖೆಯಿಂದ ಲೆಕ್ಕ ತಯಾರ್ಮಾಡಿ ಬೋರ್ಡಿಗೆ ಕಳುಹಿಸಬೇಕೆಂದು ತೀರ್ಮಾನ ಮಾಡಿದಾರೆ.

ದೇವೀರಮ್ಮಣ್ಣಿ ಅಗ್ರಹಾರಕ್ಕೆ ನೀರಿನ ನಲ್ಲಿ ಹಾಕಿದರೆ ಅನೇಕರು ಮನೆಗಳಿಗೆ ಇಡಿಸಿಕೊಳ್ಳುತ್ತಾರೆಂದು ಮೆ॥ ಶ್ರೀಕಂಠಯ್ಯನವರು ಸೂಚಿಸಿದರು. ಹಾಗೆ ಇಡಿಸಿಕೊಳ್ಳುವವರು ಬೋರ್ಡಿಗೆ ಅರ್ಜಿ ಬರೆದುಕೊಳ್ಳಬೇಕೆಂತಲೂ, ಎಷ್ಟು ಜನರು ಅಪೇಕ್ಷಿಸುತ್ತಾರೋ ಅದನ್ನು ಗೊತ್ತುಮಾಡಿ ಅನಂತರ ನಲ್ಲಿ ಇಡಿಸಬೇಕೆಂತಲೂ ತೀರ್ಮಾನವಾಯಿತು.

ಷಹರಿನಲ್ಲಿ ಅನೇಕರು ಗಾಡಿ, ಕುದುರೆ, ಎತ್ತುಗಳನ್ನು ಇಟ್ಟುಕೊಂಡಿದ್ದರೂ ಅಂಥಾವರೆಲ್ಲರೂ ತೆರಿಗೆ ಕೊಡದೆ ಕೆಲಸವು ಮೋಸಮಾಡುತ್ತಾರಾದಕಾರಣ ಅದಕ್ಕಾಗಿಯೇ ಪ್ರತ್ಯೇಕವಾದ ಸಿಬ್ಬಂದಿಯನ್ನು ನೇಮಿಸಬೇಕೆಂದು ವೈಸ್ ಪ್ರೆಸಿಡೆಂಟರು ಗೌವರ್ನಮೆಂಟಿಗೆ ಬರೆದುಕೊಂಡರು. ಹೀಗೆ ಪ್ರತ್ಯೇಕವಾದ ಸಿಬ್ಬಂದಿ ಇಡುವದರ ಆವಶ್ಯಕತೆಯ ವಿಷಯದಲ್ಲಿ ಬೋರ್ಡಿನವರ ಅಭಿಪ್ರಾಯವೇನೆಂದು ಗೌವರ್ನಮೆಂಟಿನವರು ಅಪ್ಪಣೆ ಕೊಟ್ಟು ಕೇಳಿದರು. ಮೆಂಬರುಗಳು ಈ ವಿಷಯವನ್ನು ಚರ್ಚಿಸಿ, ಈಗಿರುವ ಸಿಬ್ಬಂದಿಯೇ ಸಾಕಾಗಿದೆ ಎಂತಲೂ, ಮೊಹಲ್ಲಾ ಮುಖ್ಯಸ್ಥರುಗಳಿಂದ ಸರಿಯಾಗಿ ಕೆಲಸ ತೆಗೆದುಕೊಂಡರೆ ಕಂದಾಯ ಬಿಟ್ಟುಹೋಗದೆ ವಸೂಲಾಗಲು ಅನುಕೂಲವಾಗುತ್ತೆಂತಲೂ ತೀರ್ಮಾನ ಮಾಡಿದಾರೆ.

ರಾಜಧಾನಿಯಲ್ಲಿ ಪ್ಲೇಗನ್ನು ಅಡಗಿಸುವುದಕ್ಕಾಗಿ ಸರ್ಕಾರದವರು ಸೂಚಿಸಿರುವ ಸ್ಪೆಷಲ್ ಏರ್ಪಾಡುಗಳ ಪೈಕಿ "ಹಳೇ ಅಗ್ರಹಾರದ ಆಚೆ ಇರುವ ಗಾಣಿಗರ ಗುಡಿಸಲುಗಳು ಬಂಚಿತವಾಗಿಯೂ ಅನಾರೋಗ್ಯಕರವಾಗಿವೆ. ಆರೋಗ್ಯವಿಷಯದಲ್ಲಿ ಅಪೇಕ್ಷ ಬಾರದಂಥಾ ಮತ್ತೊಂದು ಪ್ರದೇಶದಲ್ಲಿ ಅವುಗಳನ್ನು ಕಟ್ಟಿಸತಕ್ಕ ಏರ್ಪಾಡನ್ನು ಮ್ಯುನಿಸಿಪಲ್ ಬೋರ್ಡಿನವರು ಕ್ಷಿಪ್ರದಲ್ಲೇ ಮಾಡುತ್ತಾರೆಂದು ಕೋರುತ್ತೇವೆ" ಎಂಬ ವಿಷಯವನ್ನು ಕುರಿತು ಮೆಂಬರುಗಳು ಚರ್ಚೆಮಾಡಿ, ಡೆಪ್ಯುಟಿ ಕಮಿಷನರೇ ಮುಂತಾದವರು ಖುದ್ದು ಹೋಗಿ ಬೇರೆ ಸ್ಥಳವನ್ನು ಗೊತ್ತುಮಾಡತಕ್ಕದ್ದೆಂದು ತೀರ್ಮಾನ ಮಾಡಿದರು.

## ಇಂಡಿಯಾ ದೇಶದ ವೃತ್ತಾಂತಗಳು.

ವೈಸರಾಯಿಯವರ ಪತ್ನಿಯವರಾದ ಲೇಡಿ ಕರ್ಜನರವರು ವಿಕ್ಟೋರಿಯಾ ಮೆಮೋರಿಯಲ್ ಫಂಡಿಗೆ ಇನ್ನೂ ಚಂದಾ ಕೂಡಿಸುತ್ತಿದಾರೆ. ಈಗ ಆ ಫಂಡಿನಲ್ಲಿ ೬,೩೧,೭೮೪ ರೂ. ವಸೂಲಾಗಿರುವುದು.

◆◆◆◆

ಬರ್ಮಾ ದೇಶಕ್ಕೆ ಸೇರಿದ ಕಾಧಾ ಡಿಸ್ಟ್ರಿಕ್ಟಿನಲ್ಲಿ ಕೆಡ್ಡಾ ಆನೆಗಳಿಗೆ ಕಾಡು ವ್ಯಾಧಿಗಳು ಪ್ರಾಪ್ತವಾಗಿವೆ. ಈ ರೋಗದ ದೆಸೆಯಿಂದ ಇದುವರೆಗೆ ೧೬೦ ಆನೆಗಳು ಮೃತಪಟ್ಟವು. ಗೌವರ್ನಮೆಂಟಿಗೆ ಹುಂಟಾ ನಷ್ಟವಾಗಿದೆ.

◆◆◆◆

ಸಿಲೋನ್ ದ್ವೀಪದ ಗೌವರ್ನರವರ ಪತ್ನೀಯವರು ಪ್ರಜೆಗಳು ಪ್ರೀತಿಪೂರ್ವಕವಾಗಿ ಕೊಡುವ ಬಹುಮಾನವನ್ನು ಅಂಗೀಕರಿಸದವಾಗಿ ಅಪ್ಪಣೆ ಕೊಟ್ಟಿದ್ದರಿಂದ ಅಲ್ಲಿನ ಸ್ತ್ರೀಯರೆಲ್ಲಾ ಸೇರಿ ಒಂದು ಫಂಡು ಮಾಡಿ ಹಣ ಕೂಡಿಸುತ್ತಿದಾರೆ.

◆◆◆◆

ಹಿಂದುಸ್ಥಾನದಲ್ಲಿ ದೇಶೀಯ ಸಂಸ್ಥಾನಗಳಿಂದ ಕುಷ್ಠರೋಗಿಗಳ್ಯಾರಾದರೂ ಕುಂಭಕೋಣ ಸೀಮೆಗೆ ಹೋದರೆ ಸರ್ಕಾರದವರು ಅವರನ್ನು ಹಿಡಿದು ಅಸೈಲಂ ಎಂಬ ಪ್ರತ್ಯೇಕವಾದ ಆಸ್ಪತ್ರೆಗಳಲ್ಲಿಡುವುದಕ್ಕಾಗಿ ಒಂದು ಕಾನೂ ಮಾಡುವವರಾಗಿದಾರೆ.

◆◆◆◆

ತಿನ್ನವೆಲ್ಲಿ ಸೆಷನ್ಸ್ ಕೋರ್ಟಿನಲ್ಲಿ ಒಂದು ಸರ್ಪ ಮೊಕದ್ದಮೆಯನ್ನು ಜಡ್ಜಿಯು ವಿಚಾರಣೆ ಮಾಡುತ್ತಿದ್ದಾಗ ಪಂಚಾಯಿತರ ಪೈಕಿ ಒಬ್ಬನು ಕುರ್ಚಿಯಲ್ಲಿ ಕೂತು ತೂಕಡಿಸುತ್ತಿದ್ದನು. ಜಡ್ಜಿಯು ನೋಡಿ ಅವನನ್ನು ಹದಿನೈದು ನಿಮಿಷ ಎದ್ದು ನಿಂತಿರುವಂತೆ ಆಜ್ಞೆ ಮಾಡಿದನು. ಅದರಂತೆ ಅವನು ನಿಂತುಕೊಂಡನು.

◆◆◆◆

ಗಂಗಾ ನದಿಯ ನೀರು ಬಹಳ ಕೆಟ್ಟ ರೋಗಗಳ ಕ್ರಿಮಿಗಳನ್ನು ಕೊಲ್ಲುತ್ತದೆಂದು ತಿಳಿದುಬಂದಿದೆ. ಸರ್ಕಾರಿ ವೈದ್ಯನೊಬ್ಬನು ಕೋಟ್ಯಂತರ ವಾಂತಿಭೇದಿ ಕ್ರಿಮಿಗಳುಳ್ಳ ಸ್ವಲ್ಪ ಕೊಳಚೆ ನೀರನ್ನು ತೆಗೆದುಕೊಂಡು ಹೋಗಿ ಗಂಗಾನದಿಯ ನೀರಿನಲ್ಲಿ ಹಾಕಿ ಪರೀಕ್ಷಿಸುವಲ್ಲಿ ಆರು ಗಂಟೆಗಳೊಳಗೆ ಆ ಕ್ರಿಮಿಗಳೆಲ್ಲಾ ಸತ್ತುಹೋದುವೆಂದು ತಿಳಿಸಿರುತ್ತಾನೆ.

◆◆◆◆

ಡೆಹಲಿ ದರ್ಬಾರಿಗೆ ಹೋಗಿದ್ದ ಅರಸುಗಳಲ್ಲಿ ಕೆಲವರಿಗೆ ಪರಸ್ಪರ ಪರಿಚಯವಾದುದರಿಂದ ಪಾಲನ್ ಪೂರ್ ಸಂಸ್ಥಾನದ ಯುವರಾಜರು ರಾಂಪುರದ ನವಾಬರ ಪುತ್ರಿಯನ್ನು ವರಿಸಿ ಮದುವೆ ಮಾಡಿಕೊಂಡರು. ಈ ವಿವಾಹವು ಡೆಹಲಿ ದರ್ಬಾರ್ ಕಾಲದಲ್ಲಿ ನಿಶ್ಚಯವಾದುದು. ರಾಜಪುಟಾನಾಕ್ಕೆ ಸೇರಿದ ಅಜ್ಮೀರದಲ್ಲಿ ಈ ವಿವಾಹವು ಕಳೆದವಾರ ಬಹಳ ಅಟ್ಟಹಾಸವಾಗಿ ನೆರವೇರಿತು.

◆◆◆◆

ಸಿಲೋನ್ ದ್ವೀಪಕ್ಕೆ ಹಿಂದುಸ್ಥಾನದಿಂದ ಮೆಣಸಿನ ಗಿಡಗಳನ್ನು ಕಳುಹಿಸಕೂಡದೆಂತಲೂ, ಕಳುಹಿಸಿದರೆ ಬಂದರದಲ್ಲೇ ಅವುಗಳನ್ನು ಸರ್ಕಾರದವರು ನಾಶಮಾಡುವರೆಂತಲೂ, ಕಳುಹಿಸಿದವರಿಗೆ ನಷ್ಟದ್ರವ್ಯವೇನೂ ದೊರಕಲಾರದೆಂತಲೂ ಇಂಡಿಯಾ ಗೌವರ್ನಮೆಂಟಿನವರು ತಿಳಿಸಿರುತ್ತಾರೆ. ವರ್ತಕರು ಮೆಣಸನ್ನು ಬೇಕಾದಷ್ಟು ಕಳುಹಿಸಬಹುದು. ಇದಕ್ಕೆ ಅಡ್ಡಿಯೇನೂ ಇಲ್ಲ.

◆◆◆◆

ಆಗ್ರಾ ಪಟ್ಟಣದ ಒಬ್ಬ ಹಿಂದು ಸ್ತ್ರೀ ಸೂಲಗಿತ್ತಿಯು ಸಾಲಮ್ ಎಂಬ ಶಿಶುವಿನ ಬಾಯಿಗೆ ಕಲ್ಲುಗಿಡಿದು ಕೊಲ್ಲಬೇಕೆಂದು ಪ್ರಯತ್ನ ಪಟ್ಟಂತೆ ಮೊಕದ್ದಮೆ ಆಗಿತ್ತಷ್ಟೆ. ದರ್ಯಾಫ್ತಿಯಲ್ಲಿ ಆಕೆಯ ಮೇಲೆ ಅಪರಾಧ ರುಜುವಾತಾಯಿತು. ಪಂಚಾಯಿತರು ಅವಳ

ಕಠಿಣ ಶಿಕ್ಷೆಯಾಗಬೇಕೆಂದು ಶಿಫಾರಸು ಮಾಡಿದ್ದರ ಮೇಲೆ ಸೆಷನ್ಸ್ ಜಡ್ಜರು ಅವನಿಗೆ ಮೂರು ತಿಂಗಳ ಕಠಿಣ ಸಜಾವನ್ನು ವಿಧಿಸಿದರು.

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಕೆಲವರು ಬೇರೆ ಬೇರೆ ಕಂಪನಿಗಳ ಹೆಸರಿಟ್ಟುಕೊಂಡು, ಪರಸ್ಥಳದವರಿಗೆ ಬೇಕಾದ ಸಾಮಾನುಗಳನ್ನು ಅಗ್ಗವಾಗಿ ಕಳುಹಿಸುತ್ತೇವೆಂದು ಪ್ರಕಟಿಸಿ ಜನರನ್ನು ಮೋಸಮಾಡುತ್ತಾರೆಂತಲೂ, ಇಂಥಾ ಕಂಪನಿಗಳು ೨೪ ಇರುತ್ತವೆಂತಲೂ ಅಲ್ಲಿನ ಪೋಲೀಸ್ ಕಮಿಷನರು ತಿಳಿಸಿರುತ್ತಾರೆ. ಅವರ ಹೆಸರುಗಳನ್ನು ಪತ್ರಿಕೆ ಪ್ರಕಟಿಸಿದ್ದರೆ ಆ ಕಮಿಷನರರ ಉದ್ದೇಶ ಸಫಲವಾಗುತ್ತಿತ್ತು.

◆◆◆◆

ಉಪ್ಪನ್ನು ಹಿಂದುಸ್ಥಾನದಲ್ಲಿ ಅನೇಕ ಕಡೆಗಳಲ್ಲಿ ಬೇರೆ ಬೇರೆ ರೀತಿಯಾಗಿ ತಯಾರುಮಾಡುತ್ತಾರಷ್ಟೆ. ಇದನ್ನು ಕಣ್ಣಾರ ನೋಡಿಕೊಂಡು ಬರುವ ಉದ್ದಿಶ್ಯ ವೈಸರಾಯಿಯವರು ಕೆಲವು ಮಂದಿ ಉದ್ಯೋಗಸ್ಥರನ್ನು ನೇಮಿಸಿದಾರೆ. ಇವರು ನೊವೆಂಬರಿನಲ್ಲಿ ಸಿಂಲಾದಿಂದ ಹೊರಟು ಸಿಂಧು, ಬೊಂಬಾಯಿ, ಮದರಾಸು, ಬಂಗಾಳ ಮೊದಲಾದ ಪ್ರಾಂತ್ಯಗಳಲ್ಲಿ ಸಂಚಾರಮಾಡಿ, ಒಂದು ರಿಪೋರ್ಟ್ ಬರೆಯುವವರಾಗಿದಾರೆ.

◆◆◆◆

ಅಹಮದಾಬಾದಿನ ಬಳಿ ಒಂದು ಗ್ರಾಮಕ್ಕೆ ೧೧ ಜನ ದರೋಡೆ ಕಳ್ಳರು ಹೋಗಿ, ಆ ಗ್ರಾಮದ ಮುಖಂಡನ ಮನೆಯನ್ನು ನುಗ್ಗಿ, ಸಾವಿರಾರು ರೂಪಾಯಿಗಳ ನಗನಾಣ್ಯಗಳನ್ನು ಅಪಹರಿಸಿದರು. ಒಬ್ಬನು ಸಿಕ್ಕಿಬಿದ್ದನು. ಇವನ ಮೂಲಕ ಇನ್ನು ಏಳು ಮಂದಿಯನ್ನು ಹಿಡಿದರು. ಇವರೆಲ್ಲಾ ಹಗಲು ಹೊತ್ತಿನಲ್ಲಿ ರೊಟ್ಟಿ ಮಾರುವವರಾಗಿಯೂ, ಭಿಕ್ಷುಕರಾಗಿಯೂ ಜನರ ಮನೆಗಳಿಗೆ ಹೋಗಿಬರುವ ಪದ್ಧತಿ ಇಟ್ಟುಕೊಂಡಿದ್ದರು.

◆◆◆◆

ನಾಸಿಕದಲ್ಲಿ ಒಬ್ಬ ಪೋಲೀಸ್ ಪಟೇಲನು ಜನರನ್ನು ಹಿಂಸಿಸಿ, ಅವರಿಂದ ದುಡ್ಡು ಕಿತ್ತುಕೊಳ್ಳುತ್ತಿದ್ದನು. ಇವನಿಗೆ ಸೆಷನ್ಸ್ ಜಡ್ಜರು ಆರು ವಾರಗಳ ಕಠಿಣ ಸಜಾ ವಿಧಿಸಿದರು. ಅಪೀಲಿನಲ್ಲಿ ಆ ಶಿಕ್ಷೆಯೇ ಖಾಯಂ ಆಯಿತು. ಎರಡನೇ ಅಪೀಲನ್ನು ಬೊಂಬಾಯಿ ಹೈಕೋರ್ಟ್ ಜಡ್ಜಿಗಳು ವಜಾ ಮಾಡಿ—ಇಂಥಾ ನೀಚಪದ್ಧತಿಗಳನ್ನು ಪತ್ತೇ ಮಾಡಿ ಶಿಕ್ಷಿಸುವುದು ಅವಶ್ಯ; ಈ ಶಿಕ್ಷೆ ಹೆಚ್ಚೆಂದು ನಮಗೆ ತೋರುವುದಿಲ್ಲ ಎಂಬದಾಗಿ ತಿಳಿಸಿದರು.

◆◆◆◆

ಸಿಲೋನ್ ದ್ವೀಪಕ್ಕೆ ಸೇರಿದ ಕೊಲಂಬೋ ನಗರದಲ್ಲಿ ಒಬ್ಬ ಶೆಟ್ಟಿಯ ಹತ್ತಿರ ಇಬ್ಬರು ೧೮೯೮ ನೆ ಇಸವಿಯಲ್ಲಿ ೨೫೦ ರೂ. ಸಾಲ ತೆಗೆದುಕೊಂಡರು. ಈ ಸಾಲಕ್ಕೆ ಪ್ರತಿ ತಿಂಗಳಿಗೆ ೩ ರೂ. ನಂತೆ ಬಡ್ಡಿ ಕೊಡುತ್ತಿದ್ದರು. ಇದುವರೆಗೆ ಅವರಿಂದ [illegible] ರೂಪಾಯಿಗಳನ್ನು [illegible] ಬಡ್ಡಿಗೆ ಸಲ್ಲಾಕಿಕೊಂಡು, ಅಸಲು ಹಣ ಬರಬೇಕೆಂದು ದಾವಾ ಮಾಡಿದನು. ಜಡ್ಜಿಯವನು ಆ ಶೆಟ್ಟಿಯ ದಾವೆಯನ್ನು ವಜಾ ಮಾಡಿರುತ್ತಾರೆ.

◆◆◆◆

ಲಾಹೋರ್ ನಗರದಲ್ಲಿ [illegible] ಎಂಬ [illegible] ದ ಪಕ್ಕದಲ್ಲೆಲ್ಲಾ ಆಕಸ್ಮಾತ್ತಾಗಿ ಬೆಂಕಿ ಹತ್ತಿ ದೊಡ್ಡದಾಗಿ ಉರಿಯಿತು. ಅದರ ಕೆಳಗಿನ ಅಂಗಡಿಗಳು, ಕಾರ್ಖಾನೆಗಳು, ಕಲ್ಲು ಬಟ್ಟೆಗಳು, ಎಲ್ಲ—ಇವೆಲ್ಲಾ ಉರಿದು ಬಿದ್ದುವು. [illegible] ಅದರಲ್ಲಿ ಸೇರಲಿಲ್ಲ. ಎಷ್ಟೋ ನೀರಿನ ನಲ್ಲಿಗಳು ಒಡೆದುಹೋಗಿರುವುದರಿಂದ ಈ ಪಟ್ಟಣಕ್ಕೆ ಅಪಾಯ ಉಂಟಾಗಿದೆ ಎಂದು [illegible] ಹೇಳುತ್ತಾರೆ.

◆◆◆◆

ಕಠ್ಯಾವಾಡಕ್ಕೆ ಸೇರಿದ ಜಾಂ ನಗರ ಸಂಸ್ಥಾನದವರಿಗೂ ಮೋರ್ವಿ ಸಂಸ್ಥಾನದವರಿಗೂ ಒಂದು ಜಮೀನಿನ ವಿಷಯವಾಗಿ ವ್ಯಾಜ್ಯ ಹುಟ್ಟಿದ್ದು ಮೋರ್ವಿ ಸಂಸ್ಥಾನದವರು ಒಂದು ಕಡೆ ಬಂದರನ್ನು ಕಟ್ಟಬೇಕೆಂದು ಹುಕುಂ ಕೊಟ್ಟರು. ಆ ಸ್ಥಳದಲ್ಲಿ ಬಂದರ್ ಕಟ್ಟಕೂಡದೆಂತಲೂ, ಅದು ತಮಗೆ ಸ್ವಾಧೀನವೆಂತಲೂ ಜಾಂ ನಗರದವರು ಅಡ್ಡಿ ಮಾಡಿದರು. ಈ ಸ್ಥಳದ ವಿಷಯದಲ್ಲಿ ಎರಡು ಸಂಸ್ಥಾನಗಳವರೂ ಪೊಲಿಟಿಕಲ್ ಏಜಂಟರಲ್ಲಿ ವ್ಯಾಜ್ಯ ನಡೆಸುತ್ತಿದ್ದಾರೆ.

◆◆◆◆

[illegible] ಎಂಬೊಬ್ಬ [illegible] ನು ಕಳೆದ ೧೮೯೮ ನೆ ಮಾರ್ಚಿ ತಿಂಗಳಲ್ಲಿ ಜರ್ಮನಿಯಿಂದ ಹೊರಟು ಬೈಸಿಕಲ್ [illegible] ಎರಡು ಚಕ್ರದ ಗಾಡಿಯ ಮೇಲೆಯೇ ಪ್ರಪಂಚವನ್ನೆಲ್ಲಾ ಸುತ್ತಿಕೊಂಡು, ಕಳೆದವಾರ ಪೂನಾಕ್ಕೆ ಬಂದಿರುತ್ತಾನೆ. ಇದುವರೆಗೆ ಆವನು [illegible] ಮೈಲಿ ದೂರ ಬೈಸಿಕಲ್ ಮೇಲೆ ಸಂಚಾರ ಮಾಡಿರುವನು. ಇವನು ನಿರ್ಗತಿಕನಾಗಿ ದಾರಿಯಲ್ಲಿ ಜನರು ಮಾಡುವ ಆತಿಥ್ಯದಿಂದಲೇ ಜೀವನ ಮುಂತಾದ್ದು ಮಾಡಿಕೊಂಡಿರುತ್ತಾನೆ.

◆◆◆◆

ಕಳೆದವಾರ ಗೋದಾವರಿ ಜಿಲ್ಲೆಗೆ ಸೇರಿದ [illegible] ಎಂಬ ತಾಲೂಕಿನಲ್ಲಿ ನೀರು ವಿಪರೀತವಾಗಿ ಬಂದು ಕಟ್ಟೆಗಳ ಮೇಲೆ ಹರಿಯಿತು. ಈ ಪ್ರವಾಹದ ದೆಸೆಯಿಂದ ೧೫,೦೦೦ ಎಕರೆ ಜಮೀನುಗಳಲ್ಲಿದ್ದ ಬೆಳೆಗಳೆಲ್ಲಾ ನಾಶಹೊಂದಿವೆ. ಮತ್ತು ೨೦,೦೦೦ ಎಕರೆ ಜಮೀನು ಉಳುಮೆಗೆ ಸಿಕ್ಕದಂತೆ ಕೆಟ್ಟುಹೋಯಿತು. ಗುಡಿವಾಡ ತಾಲ್ಲೂಕಿಗೆ ಸೇರಿದ ೫೦ ಗ್ರಾಮಗಳ ೬೦,೦೦೦ ಜನರು ಕಷ್ಟಕ್ಕೆ ಗುರಿಯಾದರು. ಕೆಲವು ತೊರೆಗಳಲ್ಲಿ ಪ್ರವಾಹ ಇನ್ನೂ ಇಳಿಯಲಿಲ್ಲ.

◆◆◆◆

ಹಿಂದಿನ ವಾರ ಪ್ಲೇಗ್ ಉಪದ್ರವು ತುಂಬಾ ಹೆಚ್ಚಿಗೆಯಾಗಿದೆ. ಹಿಂದುಸ್ಥಾನದಲ್ಲಿ ಈ ಉಪದ್ರವದಿಂದ ಉಂಟಾದ ಮರಣಗಳ ಸಂಖ್ಯೆಯು ೩,೬೦೩ ರಿಂದ ೬,೪೧೩ ಕ್ಕೆ ಹೆಚ್ಚಿತು. ಬೊಂಬಾಯಿ ಅಧಿಕಾರದೊಳಗೆ ಮರಣಗಳ ಸಂಖ್ಯೆಯು ಹಿಂದಿನ ವಾರದಿಂದ ಹೋದ ವಾರಕ್ಕೆ ೨,೩೩೩ ರಿಂದ ೫,೫೧೧ ಕ್ಕೆ, ಮಧ್ಯ ಇಂಡಿಯಾದಲ್ಲಿ ೦೩೧ ರಿಂದ ೩೩೧ ಕ್ಕೆ, ಮೈಸೂರು ಸಂಸ್ಥಾನದಲ್ಲಿ ೩೩೧ ರಿಂದ ೫೩೫ ಕ್ಕೆ, ಬೇರಾರಿನಲ್ಲಿ ೧೧ ರಿಂದ ೬೭ ಕ್ಕೆ ಹೆಚ್ಚಿತು. ಉಳಿದ ಕಡೆಗಳಲ್ಲಿ ಕ್ಷೀಣವಾಗಿದೆ.

◆◆◆◆

ದೆಹಲಿ ನಗರದಲ್ಲಿ ಕೆಲವು ಮಂದಿ ದೊಡ್ಡಮನುಷ್ಯರೇ ಸೇರಿ ಕಳ್ಳತನದಲ್ಲಿ ಸಾರಾಯಿನ ಭಟ್ಟಿ ಇಳಿಸಿ ಅನೇಕ ವರುಷಗಳಿಂದ ಬಿಕರಿಮಾಡಿ ಲಾಭಸಂಪಾದನೆ ಮಾಡುತ್ತಾ ಬಂದರು. ಕಳೆದ ವಾರ ಆ ಇಲಾಖೆಯ ದರೋಗನು ಅವರ ಮನೆಗೆ ನುಗ್ಗಿ, ಸಾರಾಯಿ ಭಟ್ಟಿ ಇಳಿಸುತ್ತಿದ್ದಾಗ ಯಂತ್ರ ಸಾಮಾನು ಸಹಿತ ಅವರನ್ನೆಲ್ಲಾ ದಸ್ತಗಿರಿ ಮಾಡಿಸಿದನು. ಆಗ ಅವರು ೫೦೦ ರೂ. ಕೊಡುತ್ತೇವೆ; ನಮ್ಮನ್ನು ಬಿಟ್ಟುಬಿಡಿ ಎಂದು ಕೇಳಿಕೊಂಡರೂ ದರೋಗನು ಒಪ್ಪಲಿಲ್ಲ. ಅವರೆಲ್ಲಾ ಪೋಲೀಸಿನವರ ಸ್ವಾಧೀನದಲ್ಲಿರುತ್ತಾರೆ.

◆◆◆◆

ಮದರಾಸ್ ಪಟ್ಟಣದ ಸಮುದ್ರ ತೀರದಲ್ಲಿ ಕೂಲಿಯವರು ವಾಗಿನ್ ಬಂಡಿಗೆ ಕೋಲ್ ಎಂಬ ಕಲ್ಲಿದ್ದಲನ್ನು ಭರ್ತಿ ಮಾಡುತ್ತಿದ್ದರು. ಒಬ್ಬ ಹೆಂಗಸು ತನ್ನ ೩ ವರುಷದ ಮಗನನ್ನು ಆ ವಾಗಿನ್ ಕೆಳಗಡೆ ರೈಲ್ ಕಂಬಿಗಳ ಮಧ್ಯೆ ಮಲಗಿಸಿದ್ದಳು. ಭರ್ತಿ ಆದ ಮೇಲೆ ಆ ವಾಗಿನನ್ನು ಮುಂದಕ್ಕೆ ನೂಕಿದರು. ಅದರ ಶಬ್ದಕ್ಕೆ ಮಲಗಿದ್ದ ಮಗುವು ಗಾಬರಿಬಿದ್ದು ಎದ್ದು ಕಂಬಿ ದಾಟುವುದಕ್ಕೆ ಹೋಯಿತು. ಅದರ ಒಂದು ಕಾಲು ಗಾಡಿ ಕೆಳಗೆ ಸಿಕ್ಕಿ ಕತ್ತರಿಸಿ ಹೋಯಿತು. ಆಸ್ಪತ್ರೆಗೆ ಹೊತ್ತುಕೊಂಡು ಹೋಗಿ ಚಿಕಿತ್ಸೆ ಮಾಡಿದರೂ ಆ ಮಗು ಬದುಕಲಿಲ್ಲ.

◆◆◆◆

ಇಂಗ್ಲಿಷ್ ಗೌವರ್ನಮೆಂಟಿನವರು ಹಿಂದುಸ್ಥಾನದಲ್ಲಿಟ್ಟಿರುವ ಇಂಗ್ಲಿಷ್ ಸೈನಿಕರ ಸಂಬಳವನ್ನು ಬಡ್ತಿ ಮಾಡಿ, ಇಂಡಿಯಾ ಸರ್ಕಾರದವರಿಗೆ ಈ ಜಾಸ್ತಿ ದರದಂತೆ ತಲಬು ಬಟವಾಡೆ ಮಾಡಬೇಕೆಂದು ಹುಕುಂ ಕೊಟ್ಟಿದ್ದಾರೆ. ಇದು ನ್ಯಾಯವಲ್ಲವೆಂತಲೂ, ಇದರಂತೆ ಜಾಸ್ತಿ ತಲಬನ್ನು ಬಟವಾಡೆ ಮಾಡಲು ಹಿಂದುಸ್ಥಾನಕ್ಕೆ ಚೈತನ್ಯ ಸಾಲದೆಂತಲೂ, ಈ ರಾಷ್ಟ್ರದ ಎಲ್ಲಾ ಸಂಘಗಳವರೂ ಸೇರಿ ತೀರ್ಮಾನಮಾಡಿ, ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ಅರಿಕೆಮಾಡಿಕೊಳ್ಳಬೇಕೆಂತಲೂ ಕಲ್ಕತ್ತಾ ಪಟ್ಟಣದ ದೊಡ್ಡ ಸಭಾಜನರು ತೀರ್ಮಾನಮಾಡಿರುತ್ತಾರೆ.

◆◆◆◆

ಬೊಂಬಾಯಿ ಪಟ್ಟಣದ ಆರೋಗ್ಯವಿಚಾರವನ್ನು ಕ್ರಮಪಡಿಸುವ ಕಾರ್ಯಕ್ಕೆ ಮ್ಯುನಿಸಿಪಾಲಿಟಿಯವರು ೬೦ ಲಕ್ಷ ರೂಪಾಯಿ ಸಾಲ ಬೇಕೆಂದು ಇಸ್ತಿಹಾರು ಕೊಟ್ಟರು. ಪರ್ಕರು ಕೊಟ್ಟ ಅರ್ಜಿಗಳನ್ನು ನೋಡಲಾಗಿ ೧೫ ಕೋಟಿ ರೂಪಾಯಿಗಿಂತ ಹೆಚ್ಚು ಹಣ ಸಾಲ ದೊರಕುವುದೆಂದು ತಿಳಿಯಿತು. ಮ್ಯುನಿಸಿಪಾಲಿಟಿಯವರು ೬೦ ಲಕ್ಷ ರೂಪಾಯಿನಷ್ಟು ಮಾತ್ರ ಅಂಗೀಕರಿಸಿ, ಬಾಕಿ ಅರ್ಜಿಗಳನ್ನು ವಾಪಸು ಮಾಡಿದರು. ಪರ್ಕರು ೧೦೦ ರೂ. ಗೆ ೭ ಆಣೆಯಂತೆ ಜಾಸ್ತಿ ಕೊಡಲು ಒಪ್ಪಿದ್ದರಿಂದ ಮ್ಯುನಿಸಿಪಾಲಿಟಿಗೆ ಒಟ್ಟು [illegible] ರೂ. ವಸೂಲಾಯಿತು.

◆◆◆◆

ಸಿಂಹಳದ [illegible] ಹುಲ್ಲಿಗೆ ಮಜ್ಜಿಗೆ ಹುಲ್ಲು ಕರ್ಪೂರದ ಹುಲ್ಲು ಎಂಬಿವೇ ಮೊದಲಾದ ಹೆಸರುಗಳುಂಟಷ್ಟೆ. ಈ ಹುಲ್ಲಿನಲ್ಲಿ ಒಂದು ತರಹ ತೈಲವನ್ನು ತಯಾರುಮಾಡುತ್ತಾರೆ. ಅನೇಕರು [illegible] ಕಾರ್ಖಾನೆ ಇಟ್ಟುಕೊಂಡಿದ್ದಾರೆ. ಈ ತೈಲವು ಬಹಳವಾಗಿ ಯೂರೋಪಿನಲ್ಲಿ ಬಿಕರಿ ಆಗುವುದು. ಅದರ ಸುವಾಸನೆಯೇ ಜನರು ಅದನ್ನು ಮೋಹಿಸುವುದಕ್ಕೆ ಮುಖ್ಯ ಕಾರಣ. ಪ್ರತಿ ವರುಷವೂ ೬,೦೦೦ ಪೆಟ್ಟಿಗೆಗಳಲ್ಲಿ ಈ ತೈಲ ಭರ್ತಿಯಾಗಿ ಯೂರೋಪಿಗೆ ರವಾನೆಯಾಗುವುದು. ಒಂದು ಪೆಟ್ಟಿಗೆಯಲ್ಲಿ ೧೨ ಶೀಸೆಗಳೂ ಒಂದು ಶೀಸೆಯಲ್ಲಿ ೧೭ ಪೌಂಡು ತೂಕದಷ್ಟು ತೈಲವೂ ಇರುವುವು. ಒಂದು ಶೀಸೆ ತೈಲಕ್ಕೆ ೪ ರೂ. ನಂತೆ ಬಿಕರಿ ಆಗುತ್ತಿದೆ.

◆◆◆◆

ಅಫ್ಘಾನಿಸ್ಥಾನದ ರಾಜಧಾನಿಯಾದ ಕಾಬೂಲ್ ನಗರದಲ್ಲಿ ವಾಂತಿಭೇದಿ ಉಪದ್ರವು ಬಹಳ ಜೋರಾಗಿದೆ. ಬ್ರಿಟಿಷ್ ಏಜಂಟರ ಮನೆ ವಾರ್ತೆಯ ನಾಲ್ವರು ಸೇವಕರೂ, ಅಮೀರರ ಒಬ್ಬ ಮುನ್ಷಿಯೂ ಈಚೆಗೆ ಕಾಲವಾದರು. ಇದಲ್ಲದೆ ಅಮೀರರು, ಉಪಾಧ್ಯಾಯರು, ಖಾನ್ಸಾಮಾನರು ಮೊದಲಾದವರೆಲ್ಲಾ ತೀರಿಹೋದರೆಂದು ಸುಳ್ಳು ಸುದ್ದಿ ಹುಟ್ಟಿಸಿರುತ್ತಾರೆ. ಇವೆಲ್ಲಾ ನಿಜವಲ್ಲ. ಕಾಯಿಲೆ ಹಿಡಿದು ಕಷ್ಟಪಡುವ ಪ್ರಜೆಗಳನ್ನು ಅಮೀರರು ಬಹಳ ಪ್ರೀತಿಯಿಂದ ಸಂರಕ್ಷಣೆ ಮಾಡುವಂತೆ ಹುಕುಂ ಕೊಟ್ಟಿದ್ದಾರೆ. ಪ್ರತಿ ಮನೆಯವರಿಗೂ ಐದೈದು ರೂಪಾಯಿ ಕೊಡುವಂತೆಯೂ, ಧರ್ಮ ಮಾಡುವುದಕ್ಕೆ ಮುಲ್ಲಾಗಳ ವಶಕ್ಕೆ ೪,೦೦೦ ಕೊಡಬೇಕೆಂತಲೂ ಅಪ್ಪಣೆ ಕೊಟ್ಟರು.

◆◆◆◆

ನಭಾ ಸಂಸ್ಥಾನದ ರಾಜರು ಸೋಮಾಲಿಲ್ಯಾಂಡಿನ ಯುದ್ಧಕ್ಕೆ ತಮ್ಮ ಸಂಸ್ಥಾನದಲ್ಲಿ ತಯಾರಾಗಿರುವ ಇಂಪೀರಿಯಲ್ ಸರ್ವಿಸ್ ಸೈನ್ಯವನ್ನು ಇಂಗ್ಲಿಷರಿಗೆ ಸಹಾಯವಾಗಿ ಕಳುಹಿಸಿಕೊಡುವುದಾಗಿಯೂ, ಸೈನ್ಯ ಅಗತ್ಯವಿಲ್ಲವೆನ್ನುವ ಪಕ್ಷಕ್ಕೆ ಯುದ್ಧದ ಖರ್ಚಿಗೆ ನಾಲ್ಕು ಲಕ್ಷ ರೂಪಾಯಿ ಕೊಡುವುದಾಗಿಯೂ, ಇವೆರಡರಲ್ಲಿ ಒಂದನ್ನು ಇಂಡಿಯಾ ಗೌವರ್ನಮೆಂಟಿನವರು ಸ್ವೀಕರಿಸಬೇಕೆಂತಲೂ ಅರಿಕೆಮಾಡಿಕೊಂಡರು. ಅದಕ್ಕೆ ಇಂಡಿಯಾ ಗೌವರ್ನಮೆಂಟಿನವರು ಆ ರಾಜರಿಗೆ ಜವಾಬುಕೊಟ್ಟಿರುವುದೇನೆಂದರೆ"—ಜನರಲ್ ಎಗರ್ಟನ್‍ರವರಿಗೆ ಸೋಮಾಲಿಲ್ಯಾಂಡಿನಲ್ಲಿ ಎಷ್ಟು ಸೈನ್ಯ ಬೇಕಾಗಿರುವುದೋ ಅಷ್ಟನ್ನೂ ಗೌವರ್ನಮೆಂಟಿನವರು ಆಗಲೇ ಕಳುಹಿಸಿದ್ದಾಯಿತು. ಹೆಚ್ಚು ಸೈನ್ಯವನ್ನು ಅಲ್ಲಿಗೆ ಕಳುಹಿಸಬೇಕಾದ ಅಗತ್ಯ ಸದ್ಯಕ್ಕೆ ಕಂಡುಬರುವುದಿಲ್ಲ. ಮತ್ತು ಯುದ್ಧದ ಖರ್ಚಿಗೆ ನಿಮ್ಮಿಂದ ಗೌವರ್ನಮೆಂಟಿನವರು ಹಣವನ್ನು ಧರ್ಮಕ್ಕೆ ತೆಗೆದುಕೊಳ್ಳುವುದು ಯೋಗ್ಯವಲ್ಲ. ನಿಮ್ಮ ರಾಜಭಕ್ತಿ ಪ್ರೀತಿಗಳು ಸ್ತೋತ್ರಾರ್ಹವಾಗಿರುತ್ತವೆ. ಗೌವರ್ನಮೆಂಟಿನವರು ನಿಮ್ಮನ್ನು ಬಹಳವಾಗಿ ವಂದಿಸುತ್ತಾರೆ." ಈ ರಾಜರು ಬಹಳ ವಿವೇಕದಿಂದ ರಾಜ್ಯಭಾರವನ್ನು ಮಾಡುತ್ತಾ ಖಜಾನೆಯಲ್ಲಿ ತುಂಬಾ ಹಣವನ್ನು ಕೂಡಿಸಿಟ್ಟುಕೊಂಡಿದ್ದಾರೆಂದು ತಿಳಿದುಬರುತ್ತದೆ.

◆◆◆◆

ಪ್ರಯಾಗದಲ್ಲಿ ಸುಖನಂದನನೆಂಬೊಬ್ಬ ಬ್ರಾಹ್ಮಣನ ಹೆಂಡತಿಗೆ ವಾಂತಿಭೇದಿ ಹಿಡಿಯಿತು. ವಾಂತಿಭೇದಿ ಆಗಿ ಸುಸ್ತು ಹುಟ್ಟಿ ಪ್ರಜ್ಞೆ ತಪ್ಪಿ ನಾಡಿ ನಿಂತುಹೋಯಿತು. ಅವಳನ್ನು ಗಂಗೆಯ ತಡಿಗೆ ಹೊತ್ತುಕೊಂಡು ಹೋಗಿ ಹಾಕಿದರು. ಅವಳಿಗೆ ಪ್ರಜ್ಞೆ ತಪ್ಪಿ ನಾಡಿ ನಿಂತುಹೋಗಿದ್ದುದನ್ನು ನೋಡಿ, ಚಟ್ಟಕ್ಕೆ ಬಿಗಿದು ಒಂದು ಆಸ್ಪತ್ರೆಯ ಎದುರಿಗೆ ಶವವನ್ನು ಹೊತ್ತುಕೊಂಡು ಹೋದರು. ಆ ಆಸ್ಪತ್ರೆಯ ವೈದ್ಯನಾದ ಬಾಬುತ್ರಿವೇಣೀಪ್ರಸಾದನು ಬಹಳ ಭೂತದಯಾಪರಿ ಶಿಕ್ಷಿತನಾದವನೆಂದು ಪ್ರಸಿದ್ಧಿಗೆ ಬಂದಿರುತ್ತಾನೆ. ಇವನು ಆ ಶವವನ್ನು ನೋಡಿ ಓಡಿಹೋಗಿ ಅಲ್ಲೇ ನಿಲ್ಲಿಸಿಕೊಂಡು, ಅವಳು ಸಾಯುವುದಕ್ಕೆ ಅವಳಿಗೇನಾಗಿತ್ತೆಂದು ವಿಚಾರಿಸಿದನು. ಮೇಲ್ಕಂಡ ಸಂಗತಿಯನ್ನು ಹೇಳಿದರು. ಚಟ್ಟವನ್ನು ಬಿಚ್ಚಿ ನೋಡಿದಾಗ ಅವಳಿಗೆ ಪ್ರಾಣ ಹೋಗಿರಲಿಲ್ಲವೆಂದು ಗೊತ್ತಾಯಿತು. ವೈದ್ಯನು ಅವಳನ್ನು ಆಸ್ಪತ್ರೆಗೆ ಹೊರಿಸಿಕೊಂಡು ಹೋಗಿ ಔಷಧ ಉಪಚಾರಗಳನ್ನು ಮಾಡಲಾಗಿ ಒಂದು ಗಂಟೆ ಹೊತ್ತಿನೊಳಗೆ ಅವಳಿಗೆ ಪ್ರಜ್ಞೆ ಬಂದಿತು. ಹಾಲು ಕುಡಿದಳು. ದಿನೇ ದಿನೇ ಚೇತರಿಸಿಕೊಳ್ಳುತ್ತಾ ಬಂದಳು. ಕಳೆದ ೧೭ ನೆ ತಾರೀಖು ವರೆಗೆ ಆಸ್ಪತ್ರೆಯಲ್ಲೇ ಇದ್ದು ಇಲಾಜು ಹೊಂದಿ, ಆರೋಗ್ಯಪಟ್ಟು ಮನೆಗೆ ಹೋದಳು. ಇದರಿಂದ ಬಾಬುತ್ರಿವೇಣೀಪ್ರಸಾದನ ಹೆಸರು ಆ ಪ್ರಾಂತ್ಯದಲ್ಲೆಲ್ಲಾ ಇನ್ನೂ ವಿಶೇಷವಾಗಿ ಹಬ್ಬಿಕೊಂಡಿತು.

◆◆◆◆

ನಮ್ಮ ವೈಸರಾಯಿ ಲಾರ್ಡ್ ಕರ್ಜನ್ ಪ್ರಭುಗಳು ಕಾಶೀ ಮಹಾರಾಜರಲ್ಲಿದ್ದ ಕೆಲವು ಸುಂದರವಾದ ದಂತದ ಸಾಮಾನುಗಳನ್ನು ತಮ್ಮ ಸ್ವಂತಕ್ಕೆ ತರಿಸಿಕೊಂಡರೆಂತಲೂ, ಆ ಸಾಮಾನುಗಳು ಬಹಳ ಬೆಲೆ ಬಾಳತಕ್ಕವುಗಳೆಂತಲೂ, ಹೀಗೆ ವೈಸರಾಯಿಯವರು ತರಿಸಿಟ್ಟುಕೊಂಡದ್ದು ನ್ಯಾಯವೇ ಎಂತಲೂ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಒಬ್ಬ ಮೆಂಬರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರನ್ನು ಪ್ರಶ್ನೆಮಾಡಿದನು. ಅದಕ್ಕೆ ಆ ಅಧಿಕಾರಿಯು ಉತ್ತರ ಕೊಟ್ಟದ್ದೇನೆಂದರೆ —ವೈಸರಾಯಿಯವರು ಆ ದಂತದ ಸಾಮಾನಿನ ಪ್ರಸ್ತಾಪವನ್ನು ನನಗೆ ಬರೆದು ತಿಳಿಸಿದ್ದಾರೆ. ಆ ಸಾಮಾನು ಪ್ರಾಚೀನಕಾಲದಲ್ಲಿದ್ದ ಬ್ರಿಟಿಷ್ ರೆಸಿಡೆಂಟರಿಗೆ ಸೇರಿದ್ದುವು. ಅದನ್ನು ಒಂದು [illegible] ಯಲ್ಲಿ ಹಾಕಿ ಮುಚ್ಚಿಡಿಸಿದ್ದರು. ಮಹಾರಾಜರಿಗೆ ಆ ಸಾಮಾನಿನಮೇಲೆ ಅಭಿಮಾನವಿಲ್ಲವೆಂದು ತಿಳಿದು ವೈಸರಾಯಿಯವರು ಅದನ್ನು ಖರೀದಿಗೆ ಕೊಡುತ್ತೀರಾ ಎಂದು ಕೇಳಿದ್ದಕ್ಕೆ ಮಹಾರಾಜರವರು ನನಗೆ ಕ್ರಯ ಬೇಡವೆಂತಲೂ, ಹಾಗೇ ತಮಗೆ ಅದನ್ನು ಒಪ್ಪಿಸುತ್ತೇನೆಂತಲೂ ಹೇಳಿದರು. ಹಾಗೇ ತೆಗೆದುಕೊಳ್ಳುವುದು ಶಾಸನಕ್ಕೆ ವಿರೋಧವೆಂದು ನೆನೆದು, ವೈಸರಾಯಿಯವರು ೪೦ ಪೌಂಡಿಗೆ ಒಂದು ಬೆಳ್ಳೀ ಬಂದೂಕವನ್ನು ವಿಲಾಯಿತಿಯಿಂದ ಮಾಡಿಸಿ ಮಹಾರಾಜರಿಗೆ ಕೊಟ್ಟು, ಅದಕ್ಕೆ ಪ್ರತಿಯಾಗಿ ಆ ದಂತದ ಸಾಮಾನನ್ನು ತಮ್ಮ ಸ್ವಂತಕ್ಕೆ ಇರಿಸಿಕೊಂಡಿದ್ದಾರೆ. ಆ ಸಾಮಾನುಗಳನ್ನೆಲ್ಲಾ ದುರಸ್ತುಮಾಡಿಸಿದರು. ಅದು ಈಗ ೧೦೦ ಪೌಂಡು ಬಾಳಬಹುದು.

◆◆◆◆

ಕಾಶ್ಮೀರದಲ್ಲಿ ಪ್ರವಾಹ ಬಂದು ಪ್ರಜೆಗಳೆಲ್ಲಾ ಕಷ್ಟನಷ್ಟಗಳಿಗೆ ಗುರಿಯಾಗಿದ್ದಾಗ ಅಲ್ಲಿನ ಮಹಾರಾಜರವರು ಮಾಡಿರುವ ಸಹಾಯಕಾರ್ಯಗಳು ಸ್ತೋತ್ರಾರ್ಹಗಳಾಗಿರುತ್ತವೆ. ಮನುಷ್ಯನಾಶವಾಗಲಿ [illegible] ಅವರನ್ನು [illegible] ಮಾಡಿರುವುದಿಲ್ಲ. ಜುಲಾಯಿ ೨೨ ರಲ್ಲಿ ಪ್ರವಾಹ ಬಂದಿತು. ಆ ದಿನ ಮಹಾರಾಜರವರೇ ನಿಂತು ಇಂಗ್ಲಿಷ್ ಸ್ತ್ರೀಯರನ್ನೂ ದೊಡ್ಡಮನುಷ್ಯರನ್ನೂ ಬಹಳವಾಗಿ ಆದರಿಸಿ ಅವರಿಗೆ ಬೇಕಾದ ಸೌಕರ್ಯಗಳನ್ನೆಲ್ಲಾ ಒದಗಿಸಿಕೊಟ್ಟರು. ಮಹಾರಾಜರವರೇ ನಿಂತು ತಮ್ಮ ಸ್ವಂತ ದೋಣಿಗಳಲ್ಲೂ ಬಾಡಿಗೆ ದೋಣಿಗಳಲ್ಲೂ ತಮ್ಮ ಸಿಪಾಯಿಗಳನ್ನೆಲ್ಲಾ ಕಳುಹಿಸಿ ಸುರಕ್ಷಿತವಾದ ಸ್ಥಳಕ್ಕೆ ಕರೆದುಕೊಂಡುಹೋಗಿ ಬಿಟ್ಟರು. ಅನಾಥರಾದ ಬಡಬಗ್ಗರು ಮನೆ ಮಠಗಳನ್ನು ಕಳೆದುಕೊಂಡು ಮಕ್ಕಳುಮರಿಗಳನ್ನು ಕಟ್ಟಿಕೊಂಡು ಹೊಟ್ಟೆಗೆ ತಿನ್ನುವುದಕ್ಕಾಗಲಿ ಮೈಗೆ ಬಟ್ಟೆಯಾಗಲಿ ಇಲ್ಲದೆ ಸಂಕಟಪಡುತ್ತಿದ್ದುದನ್ನು ನೋಡಿ, ಮಹಾರಾಜರವರೇ ಅವರಿಗೆಲ್ಲಾ ದೋಣಿಗಳನ್ನು ಒದಗಿಸಿಕೊಟ್ಟು, ಎತ್ತರವಾದ ಪ್ರದೇಶಗಳಿಗೂ ತಮ್ಮ ಅರಮನೆಗೂ ಕರೆದುಕೊಂಡುಬಂದು ಕಾಪಾಡಿದರು. ನದಿಯ ಪಕ್ಕದಲ್ಲಿದ್ದ ತಮ್ಮ ಅರಮನೆಗೂ ನೀರು ನುಗ್ಗಿ ಅಪಾಯವಾಗಬಹುದೆಂಬ ನಿರೀಕ್ಷೆ ಇದ್ದಾಗ್ಯೂ ಮಹಾರಾಜರವರು ಅಲ್ಲಿಂದ ಬೇರೊಂದು ಅರಮನೆಗೆ ದಯಮಾಡದೆ ಪ್ರಜೆಗಳನ್ನು ಕಾಪಾಡುವುದರಲ್ಲೇ ಆಸಕ್ತರಾಗಿ ನಿಂತುಬಿಟ್ಟರು. ಬಡಬಗ್ಗರಿಗೆಲ್ಲಾ ಅರಮನೆಯ ಪಾಕಶಾಲೆಯಿಂದ ಸಾಮಾನುಗಳನ್ನು ಕೊಡಿಸುತ್ತಲೂ, ಇನ್ನು ಕೆಲವರಿಗೆ ಅಡಿಗೆ ಮಾಡಿಸಿ ಅನ್ನದಾನ ಮಾಡುತ್ತಲೂ ಬಂದರು. ಒಂದು ತಿಂಗಳು ಕಳೆದುಹೋದರೂ ಮಹಾರಾಜರವರು ಇನ್ನೂ ಈ ಕಾರ್ಯ ಕೆಲಸದಲ್ಲೇ ಆಸಕ್ತರಾಗಿರುತ್ತಾರೆ. ಅವರ ಪರೋಪಕಾರವನ್ನು ಸಕಲರೂ ಹೊಗಳುತ್ತಿರುವರು.

### ಚಂದಾದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಚಂದಾಗಳಿಗೆ ಪಾವತಿ ವಿಗೈರೆ ಕೊಡಲಾರೆವು. ಆದಕಾರಣ ಚಂದಾದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಚಂದಾಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ಪಾವತಿ ವಿಗೈರೆ ಕೊಡಲಾರೆವು.

ಚಂದಾದಾರರು ಬರೆಯುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬೀ ಅಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

---

### ಕರೆಸ್ಪಾಂಡೆನ್ಸ್.

*********

#### ಕಾರೀಸುಪೇಟೆಯ ಸ್ಕೂಲ್ ವಿಚಾರ.

ಅಯ್ಯಾ,

ಇಲ್ಲಿನ ಕನ್ನಡಾ ಗರಲ್ ಸ್ಕೂಲ್ ಮಾಸ್ತರುಗಳು ಕಾಲಕ್ಕೆ ಸರಿಯಾಗಿ ಸ್ಕೂಲಿಗೆ ಹೋಗದೆಯೂ, ಸ್ಕೂಲಿನ ಬಿಡುಗಡೆ ಕಾಲ ಮುಗಿಯುವದಕ್ಕೆ ಮುಂಚೆ ಸ್ಕೂಲ್ ಬಿಡುವದರಿಂದಲೂ, ಮುಚ್ಚಟೆಯಿಂದ ಹುಡುಗಿಯರಿಗೆ ಪಾಠ ಹೇಳದೆಯೂ, ಈ ಮಾಸ್ತರುಗಳು ಸ್ಕೂಲಿನಲ್ಲಿ ಇಲ್ಲದವೇಳೆ ಹುಡುಗಿಯರು ಕೊಡೆದಾಟ ಬೈದಾಟವಿದರೆ ನೀನು ಮನೆಗೆ ಹೊರಟುಹೋಗು, ನಾಳೆಯಿಂದ ಬರಬೇಡ ; ಬಂದರೆ ಹೊಡೆಯುತ್ತೇನೆ ಎನ್ನುವದರಿಂದಲೂ, ಈ ಸ್ಕೂಲಿನ ವಿದ್ಯಾಭ್ಯಾಸ ಕ್ರಮವು ದಿನೇ ದಿನೇ ಬಹಳ ಮಟ್ಟಿಗೆ ಕ್ಷೀಣವಾಗುತ್ತಿರುವಂತೆ ಕಾಣುವದು. ಇದಕ್ಕೆ ನನಗೆ ತೋರುವ ಕಾರಣವೇನೆಂದರೆ, ಸರ್ಕಾರದವರು ಈ ಸ್ಕೂಲಿಗೆ ಚುನಾಯಿಸಿದ ಮೆಂಬರುಗಳು ವಿಸಿಟಿಂಗ್ ಮಾಡಿ ಬಹಳ ದಿನಗಳಾಗಿರುವದರಿಂದ ಮಾಸ್ತರುಗಳ ಅಕ್ರಮಗಳಿಗೆ ಅವಕಾಶವಾಗಿರುತ್ತೆ. ಇವರು ಸ್ಕೂಲ್ ವಿಸಿಟಿಂಗ್ ಮಾಡಿ ಜಾಗ್ರತೆಯಿಂದ ಎಲ್ಲಾ ತರಗತಿಗಳಲ್ಲಿರತಕ್ಕ ಲೋಪದೋಷಗಳನ್ನೂ ತನಿಖೆಯಿಂದ ಹೋಗಲಾಡಿಸಿ, ಹುಡುಗಿಯರಿಗೆ ವಿದ್ಯಾಭ್ಯಾಸ ಮಾಡಿಸುವದರ ಮೂಲಕ ಕೀರ್ತಿ ಸಂಪಾದಿಸಬೇಕೆಂದು ಪ್ರಾರ್ಥಿಸುವ

ವಿದ್ಯಾಭಿಮಾನಿ.

*********

#### ಸರಸ್ವತೀಶರ ಕಸ್ತೂರಿ ಮಾತ್ರೆಗಳು.

ಅಯ್ಯಾ,

ತಮ್ಮ ಪೇಪರಿನಲ್ಲಿ ಸಿ. ಪಿ. ಅಂಡ್ ಕಂಪನಿಯವರ ಸರಸ್ವತೀಶರ ಕಸ್ತೂರಿ ಮಾತ್ರೆಗಳ ವಿಚಾರವಾಗಿ ವಿಶೇಷ ಗುಣಗಳಿರುವವೆಂದು ಪ್ರಕಟಿಸುತ್ತಾ ಇರುತ್ತೀರಿ. ಇಷ್ಟು ಗುಣಗಳಿರತಕ್ಕಂಥಾದ್ದು ನಿಜವೇ ? ಎಷ್ಟುಮಟ್ಟಿಗೆ ನಿಜವೋ ಎಂಬುವದನ್ನು ತಮ್ಮ ಚಂದಾದಾರರಲ್ಲಿ ಕೆಲವರ ಅನುಭವಕ್ಕೆ ಬಂದಿರಬಹುದು. ಈ ಮಾತ್ರೆಗಳು ಮುಖ್ಯವಾಗಿ ಜಾಜೀಕಾಯಿ, ಜಾಪತ್ರೆ, ಲವಂಗ ಈ ಮೂರು ದಿನಸುಗಳನ್ನು ವಿಶೇಷವಾಗಿ ಸೇರಿಸಿ ಚನ್ನಾಗಿ ಅರೆದು ಕಸ್ತೂರಿ, ಪಚ್ಚಕರ್ಪೂರವನ್ನು ಬೆರಸಿ ಕಟ್ಟಿರತಕ್ಕಂಥಾ ಮಾತ್ರೆಗಳಾಗಿವೆ. ಕಸ್ತೂರಿ ಬಹಳ ದುಬಾರಿಯಾದದ್ದು. ಅಂಥಾದ್ದು ಈ ಮಾತ್ರೆಗಳಲ್ಲಿ ವಿಶೇಷವಾಗಿರುತ್ತೆ. ತಾಂಬೂಲದಲ್ಲಿ ಸೇವಿಸಿದರೆ ಬಾಯಿ ಸುವಾಸನೆಯೇ ಹೊರತು ಮತ್ತೇನೂ ಗುಣಗಳು ಕಾಣಬರಲಿಲ್ಲವು. ಈ ಮಾತ್ರೆಗಳನ್ನು ಸೇವಿಸಿದರೆ ಬಾಯಿ ಚನ್ನಾಗಿ ನಾಲಿಗೆ ಒಡೆಯುವದಕ್ಕೇನೂ ಸಂಶಯವಿಲ್ಲವು. ಅನೇಕ ಜನಗಳು ಈ ಮಾತ್ರೆಗಳನ್ನು ಮಾಡಬಲ್ಲರು. ಈ ಕಂಪನಿಯವರು ಇಟ್ಟ ಬೆಲೆ ಬಹಳ ಜಾಸ್ತಿ. ಆದ್ದರಿಂದ ತಾವೇ ತಾನೇ ಈ ಮಾತ್ರೆಗಳನ್ನು ಸುಲಭವಾಗಿ ಮಾಡಬಹುದು. ಅದರ ವಿಧಾನವೇನೆಂದರೆ—ಜಾಜೀಕಾಯಿ, ಜಾಪತ್ರೆ, ಲವಂಗ, ಮೆಣಸು, ಶುಂಠಿ, ಈ ದಿನಸುಗಳನ್ನು ಸಮವಾಗಿ ಪನ್ನೀರಿನಲ್ಲಿ ಅರೆದು, ಕೊಂಚ ಕಸ್ತೂರಿ, ಪಚ್ಚಕರ್ಪೂರ ಬೆರಸಿ, ಮಾಮೂಲ ಮಾದರಿಯಂತೆ ಮಾಡಿಕೊಳ್ಳಬಹುದು.

ಬಿ. ಶಂಕರ್ ರಾಮದಾಸ್.

*********

#### "ದೇಶಾಭ್ಯುದಯ ಸಂಘ—ಬೆಂಗಳೂರು."

ಅಯ್ಯಾ,

ಮೇಲ್ಕಂಡ ಸಂಘದ ಉದ್ದೇಶಗಳನ್ನು ತಮ್ಮ ಪತ್ರಿಕೆಯಲ್ಲಿ ಅದರಿಂದ ಪ್ರಚಾರಗೊಳಿಸುವದಕ್ಕಾಗಿ ತಮ್ಮಲ್ಲಿಗೆ ಕಳುಹಿಸುತ್ತೇನೆ. ಸದರಿ ಉದ್ದೇಶಗಳನ್ನು ಸೂಚಿಸುವದರಲ್ಲಿ ಉಂಟಾದ ಒಂದೆರಡು ಅಚ್ಚು ದೋಷಗಳಿಂದ ವಾಚಕರಿಗೆ ಭಿನ್ನಾಭಿಪ್ರಾಯವಾಗಬಹುದೆಂದು ತೋರುವದರಿಂದ ಇವನ್ನು ಸರಿಪಡಿಸಬೇಕೆಂದು ಕೋರುತ್ತೇನೆ. "ಜನರು ವಿಚಾರಪರರಾಗಿ ಧನಪತ್ರಗಳಲ್ಲಿ ಆಸಕ್ತರಾಗಲು" ಎಂಬುದಾಗಿ ಬರೆದಿರುತ್ತೆ. "ಧನ ಪ್ರಯತ್ನಗಳಲ್ಲಿ" ಎಂಬುದಾಗಿರಬೇಕು.

ಸಂಘದ ಉದ್ದೇಶಗಳಿಗೆ ಸಂಬಂಧಪಡುವ ವಿಷಯಗಳನ್ನು ಕುರಿತು ತಮ್ಮ ವಾಚಕರ ಪೈಕಿ ದೇಶೋನ್ನತಿಯಲ್ಲಿ ಉತ್ಸಾಹಶೀಲರು ಉಪನ್ಯಾಸಗಳನ್ನು ಬರೆದು ಕಳುಹಿಸಿದರೆ ಅವುಗಳನ್ನು ಅದರಿಂದ ಬರಮಾಡಿಕೊಂಡು ಬೋಧಕ ಪತ್ರರೂಪವಾಗಿ ಪ್ರಚಾರ ಮಾಡಲು ಸಾಧ್ಯವಾದಮಟ್ಟಿಗೂ ಯತ್ನಿಸಲ್ಪಡುವದು. ತಾವು ಹಾರೈಸುವಂತೆ ದೇಶಾಭಿಮಾನಿಗಳೆಲ್ಲರೂ ಸಂಘದ ಕಾರ್ಯಗಳಿಗೆ ಸಹಾಯಕರಾಗಬೇಕೆಂದು ಕೋರುತ್ತೇನೆ. ಮೆಂಬರಾಗಲಪೇಕ್ಷಿಸುವವರು ಸಂವತ್ಸರಕ್ಕೆ ಒಂದು ರೂಪಾಯಿಗೆ ಕಡಿಮೆ ಇಲ್ಲದೆ ದ್ರವ್ಯಸಹಾಯ ಮಾಡುವವರಾಗಿರಬೇಕು. ಮೆಂಬರುಗಳಿಗೆ ಕೆಲವು ಪ್ರಯೋಜನಗಳು ಕಲ್ಪಿಸಲ್ಪಟ್ಟಿವೆ. ಅವು ಯಾವುವೆಂದರೆ—

(೧) ದೈವಗತಿಯನ್ನು ಹೊಂದಿದ ಮೆಂಬರುಗಳ ಕಡೆಯವರಿಗೆ ಅನುಕೂಲಸೂಚಕ ದ್ರವ್ಯಸಹಾಯವು ದೊರೆಯುವದು.

(೨) ಕೆಲವು ಮೆಂಬರುಗಳಿಗೆ ಪುಸ್ತಕ ಮಾಸಪತ್ರಗಳ ರೂಪವಾಗಿ ಬಹುಮಾನಗಳು ಕೊಡಲ್ಪಡುವವು.

(೩) ಸಂಘಕ್ಕೆ ಮೆಂಬರುಗಳನ್ನು ಸೇರಿಸುವವರಿಗೆ ಕಮಿಷನ್ ಕೊಡಲ್ಪಡುವದು.

ಸಂಘದ ಉದ್ದೇಶ ಪತ್ರಿಕೆಯಲ್ಲಿ ಮೇಲ್ಕಂಡ ವಿಷಯಗಳು ಸವಿಸ್ತಾರವಾಗಿ ನಮೂದಿಸಲ್ಪಟ್ಟಿವೆ.

ಎಸ್. ವೆಂಕಟಾಚಲೈಯಂಗಾರ್,
ಅಡ್ವೊಕೇಟ್, (ಆ ಸೆಕ್ರಟರಿ)

*********

#### ಬಡ ಮಾಸ್ತರುಗಳ ದುರವಸ್ಥೆ.

ಅಯ್ಯಾ,

ತಮ್ಮ ೧೯೧೩ನೇ ಇಸವಿ ಆಗಸ್ಟ್ ೨ನೇ ತಾರೀಖಿನ ವೃತ್ತಾಂತ ಪತ್ರಿಕೆಯ ೬ನೇ ಪುಟದಲ್ಲಿರುವ "ಚಪಲಚಿತ್ತದಿಂದ ಕಂಗೆಟ್ಟವರನ್ನು ಸ್ಥಿರಪಡಿಸುತ್ತಾ" ಎಂಬ ವಾಕ್ಯವನ್ನು ಓದಿದ ಕೂಡಲೇ ತಮ್ಮಂತಹ ಮಹೋಪಕಾರಿಗಳಿಂದ ಪರೋಪಕಾರದಿಂದಿರುವ ನನ್ನ ಅವಸ್ಥೆ ಇಂದಿಗೆ ನಿವೃತ್ತಿಯಾಗುವದೆಂಬ ಭರವಸೆಯುಂಟಾಗಿ ಹೇಳಲಸದಳವಾದ ಸಂತಸವು ಚಂದಾದಾರನಾದ ನನಗೆ ಜನಿಸಿ ತಮ್ಮಲ್ಲಿ ಕೇಳಿಕೊಳ್ಳುವದೇನೆಂದರೆ:—

ವಿದ್ಯಾಭ್ಯಾಸದ ಇಲಾಖಾ ಬಡ ತಾಲ್ಲೂಕು ಮತ್ತು ಹೋಬಳಿ ಸ್ಕೂಲ್ ಮಾಸ್ತರುಗಳಿಗೆ ಗ್ರೇಡುಗಳು ಮಂಜೂರಾಗುವ ನಿಮಿತ್ತ ಈಗ ೩—೪ ವರ್ಷಗಳಿಂದಲೂ ಇಟ್ಟಿರುವ ತಮ್ಮ ಬಿನ್ನಹಕ್ಕೆ ನೇಮ್ಯವನ್ನು. ಹೀಗಿರುವಲ್ಲಿ ಯಾರಾದರೂ ಬೇರೆ ಇಲಾಖೆಗೆ ಹೋಗಿಬಂದ ಒಬ್ಬರು ಈ ಬಡ ಮಾಸ್ತರುಗಳನ್ನು ನೋಡಿ, ನಿಮಗೆಲ್ಲರಿಗೂ ಗ್ರೇಡುಗಳು ಮಂಜೂರಾಗಿವೆ ಎಂದು ಹೇಳಿದ್ದಲ್ಲೂ, ಓಹೋ, ನಮ್ಮ ಅದೃಷ್ಟದ ಬಾಗಿಲಿಗೆ ದೇವರ ದಯೆಯು ಇಂದಿಗೆ ಪ್ರಾಪ್ತವಾಯಿತೇ ಎಂದು ಅತ್ಯಂತಾನಂದವನ್ನು ಥಟ್ಟನೆ ಹೊಂದಿ, ಹಾಗೆ ಮಂಜೂರಾಗಿದ್ದಲ್ಲಿ ಬಂಧಿತವಾದ ವರ್ತಮಾನ ಇದುವರೆಗೂ ತಿಳಿಯಲಿಲ್ಲವಲ್ಲ ಎಂದು ರಾತ್ರಿ ಹಗಲೂ ಚಿಂತಿಸುತ್ತಾ, ಆ ಚಿಂತೆಯಿಂದ ಕ್ಷೀಣರಾಗುತ್ತಿರುವಲ್ಲಿ ಆ ವರ್ತಮಾನವೇ ಸುಳ್ಳು, ಇನ್ನೂ ಯಾವ ಮಂಜೂರಿಯೂ ಇಲ್ಲವೆಂದು ಯಾರಾದರೂ ಬಂದು ಹೇಳಲು ಥಟ್ಟನೆ ಈ ಮಾಸ್ತರುಗಳಿಗೆ ಆಗುವ ವ್ಯಸನವು ಅಪಾರವಾಗಿ ಈ ರೀತಿ ಅನೇಕವೇಳೆ ಜಂಗಟ್ಟು ಬೇಸರಿಕೆಯನ್ನು ಹೊಂದಿ ನಿರಾಶರಾಗಿದ್ದಾರೆ. ಈಗ ಪ್ರಜಾ ಅನೇಕ ವನಂತಿಯು ಹುಟ್ಟಿದಾಗಿನಿಂದ ಸಧ್ಯಕ್ಕೂ ಸಮಸ್ತ ಸಂಗತಿಗಳನ್ನೂ ತಿಳಿಸಿ ಮನೋರಂಜಕ ಮಾಡುತ್ತಿರುವ ತಮ್ಮ ವೃತ್ತಾಂತ ಪತ್ರಿಕೆಯೇ ಈ ಚಿಂತಾವ್ಯಸನವನ್ನು ಸಮುಖವಾಗಿ ಕಾದಿರುವ ಕಾರಣವೇನೆಂದರೆ ತಮ್ಮ ಪತ್ರಿಕೆಯನ್ನು ಸದರಿ ಬಡ ಮಾಸ್ತರುಗಳು ವಾರ ವಾರವೂ ಇದಿರು ನೋಡಿ ತಮ್ಮ ಪತ್ರಿಕೆಗಳೂ ಈ ಬಡ ಮಾಸ್ತರುಗಳಿಗೆ ವ್ಯಸನಮುಕ್ತಿ ತೋರುತಲ್ಲ ಎಂದು ವ್ಯಸನಪಡುತ್ತಿದ್ದಾರೆ.

ಚಂದಾದಾರ.

[ಈ ವಿಷಯವು ಗೌರ್ನಮೆಂಟಿನಲ್ಲಿ ಇನ್ನೂ ವ್ಯವಸ್ಥೆ ಆಗಿ ಇಲ್ಲ.—ಎಡಿ.]

*********

#### ಶ್ಯಾನುಭೋಗರ ಹಿಂಸೆ

ಅಯ್ಯಾ,

ನಂಜನಗೂಡು ತಾಲ್ಲೂಕ್ ದೇವನೂರು ಗ್ರಾಮದಲ್ಲಿ ಇರುವ ಪೋಲೀಸಿನ ಮಗ ಬಿ ವಸಯ್ಯನು ಮಾಡುವ ವಿಜ್ಞಾಪನೆಗಳು ಯೇನೆಂದರೆ—

ನನಗೆ ದೇವನೂರು ಶ್ಯಾನುಭೋಗ ಸುಬ್ರಾಯರು ನ್ಯಾಜ ೯೨ನೆ ನಂಬರು ದರಖಾಸ್ತ ವಿಷಯದಲ್ಲಿ ಮೋಸದ ರಿಕಾರ್ಡ್ ಮಾಡಿ ತಪ್ಪಿಸಿದ್ದಕ್ಕಾಗಿ ತಾಲ್ಲೂಕಿನಿಂದ ಡೆಪ್ಯೂಟಿ ಕಮಿಷನರ್ ಸಾಹೇಬರವರಿಗೂ ಫಿರ್ಯಾದು ಸಂಗತಿ ತಿಳಿಸಿ ತನಿಖೆ ಕಾಲದಲ್ಲಿ ಶ್ಯಾನುಭೋಗ ತನ್ನ ತಪ್ಪಿಗೆ ಒಪ್ಪಿಕೊಂಡಾಗ್ಯೂ ಶಿಕ್ಷೆ ಮಾಡದೆ ಬಿಟ್ಟದ್ದರಿಂದ ದಿವಾನ್ ಸಾಹೇಬರಿಗೆ ಅರ್ಜಿ ಬರೆದುಕೊಂಡದ್ದರ ಮೇಲೆ ಪೈನಲ್ ಬಗ್ಗೆ ಡೆಪ್ಯೂಟಿ ಕಮಿಷನರಲ್ಲಿ ಕಳುಹಿಸುವದಾಗಿ ಹುಕುಂ ಬಂದಿರುವದನ್ನು ಸಹ ತಮ್ಮ ಪತ್ರಿಕೆಯಲ್ಲಿ ಚಾಪಿಸಬೇಕೆಂದು ಅರಿಕೆ ಮಾಡಿಕೊಂಡಮೇರೆ ೧೯೧೦ ನೆ ಅಗ್ಟೋಬರ್ ೧೧ ನೆ ತಾರೀಖಿನ ಪತ್ರಿಕೆಯಲ್ಲಿ ಪ್ರಕಟಿಸಿ ಇರತಕ್ಕ ಅಂಶ ತಮಗೆ ಕೃತಜ್ಞನಿರಬಹುದು.

ಈ ಸಂಗತಿ ತಾವು ಪ್ರಸಿದ್ಧಪಡಿಸಿದ ಬಳಿಕ ಈ ವರೆಗೂ ಚರ್ಚೆಯಲ್ಲಿದ್ದು ಈಗ ಡೆಪ್ಯೂಟಿ ಕಮಿಷನರು ಕೆಲಸಕ್ಕೆ ದಯಮಾಡಿಸಿ ಇರುವ ಶ್ರೀ ಮಾನ್ ರಾಜ ಕಾಂತರಾಜೇ ಅರಸಿನವರು ಮೇಲ್ಕಂಡ ಸಂಗತಿ ಚರ್ಚೆಗೆ ತೆಗೆದುಕೊಂಡು ತಪ್ಪಿತಸ್ಥರಾದ ಶ್ಯಾನುಭೋಗ ಸುಬ್ರಾಯರವರಿಗೆ ಆರು ತಿಂಗಳು ಸಸ್ಪೆಂಡ್ ಮಾಡಿರುವದಾಗಿ ಹುಕುಂ ದಯಪಾಲಿಸಿದರು.

ಅಯ್ಯಾ-ಹಿಂದೆ ಇವರಿಂದ ಪಟ್ಟ ತೊಂದರೆಯನ್ನ ನಿವಾರಣೆ ಮಾಡಿಕೊಂಡು ಊರಲ್ಲಿ ಇದರವಳ್ಳೆ ಕಾಗಲೂ ಮತ್ತಷ್ಟು ಹಿಂಸೆ ಉಂಟಾಗಿದೆ. ಅದು ಯೇನೆಂದರೆ—

ಚಾಲ್ತಿ ಇಸವಿಯ ಏಪ್ರೀಲ್ ೨೮ ನೆ ಮುದ್ದತಿನಲ್ಲಿ ಕೊಟ್ಟ ಕಂದಾಯವನ್ನು ೧೯೧೨ ನೆ ಸಾಲಿಗೆ ಕಟ್ಟಿಕೊಂಡಂತೆ ರಸೀತಿ ಕೊಟ್ಟಿದ್ದಾರೆ

ಇವರು ಸರ್ಕಾರದ ನೌಕರದಾರರಾಗಿ ಖಾಲಿ ಬಿದ್ದಿರತಕ್ಕ ಜಮೀನಿನಲ್ಲಿ ಮನೆ ಕಟ್ಟುತ್ತೇನೆಂದು ತಾಲ್ಲೂಕಿನಿಂದ ಲೇಸನ್ಸು ಪಡೆದು ಅಂತೆ ಮನೆ ಕಟ್ಟದೆ ಅಲ್ಲಿ ಕಲ್ಲುಗಳನ್ನು ತೆಗೆದು ಸರ್ಕಾರದ ಜಾಗವನ್ನು ವಿಶಾಲ ಮಾಡಿಕೊಂಡು ಮನೆ ಕಟ್ಟಿಸ್ತಾರೆ.

ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಶ್ರೀಮನ್ ಮಹಾರಾಜ ಸಾಹೇಬ್ ಬಹದ್ದೂರ್ರವರ ಉತ್ಸವಕ್ಕೆ ಬೇಕಾದ ಸರಬರಾಯಿಗೋಸ್ಕರ ಸರ್ಕಾರದಿಂದ ಪಡಿ ಬಂದಿರುವ ಸೈಪು ದರ ಸೇರು ೧ಕ್ಕೆ ೭ ದುಡ್ಡಿನಂತೆ ಎತ್ತಿ ಮಾರಿ, ಸರ್ಕಾರದಿಂದ ದರ ಸೇರು ೧ಕ್ಕೆ ೬೭ ದುಡ್ಡಿನಂತೆ ತೆಗೆದುಕೊಂಡು ಇರುತ್ತಾರೆ. ಈ ಮೂರು ಸಂಗತಿಗಳನ್ನು ಕುರಿತು ನಾನು ಅರ್ಜಿ ಕೊಟ್ಟದ್ದರ ಮೇಲೆ ತನಿಖೆ ಶುರು ಆಗಿದೆ.

---

### ಮತ ವಿಷಯವಾದ ಪ್ರಶ್ನೋತ್ತರಗಳು.

*********

ಚಾಮಾಶಾಸ್ತ್ರಿಯವರನ್ನು ಕೇಳುವ ಪ್ರಶ್ನೆಗಳು —

(೧) ನಿಮ್ಮ ಯೇಸುಸ್ವಾಮಿಯು ಗುರುವು, ಪ್ರೇಮನು, ಶ್ರೇಷ್ಠನು, ಸಮಾನನು ಎಂದು ಬಹಳ ಸ್ತೋತ್ರ ಮಾಡುತ್ತೀರಿ. ಗುರುಕೃಪೆ ಸುಮ್ಮನೆ ಬರಲಾರದು. ತನ್ನ ಸ್ವರೂಪ ತಿಳಿದಂಥಾವರಿಗೆ ಗುರುಕೃಪೆ ಬರುತ್ತೆಯೇ ಹೊರತು ಇತರರಿಗೆ ಸೇರುವದು ಕಷ್ಟ. ತಮಗೆ ಆ ಯೇಸುವಿನ ಸ್ವರೂಪ ವಿಷಯವಾದ ಗುರುತು ತಮ್ಮಗಳಲ್ಲಿ ಯಾರಿಗಾದರೂ ತೋರಿ ಇದ್ದರೆ ಅವರು ಅದಕ್ಕೆ ಸಮ್ಮತಿಸಲ್ಲ ಸಾಧನೆ ಮಾಡಿ ಸ್ವಾನುಭವ ಪಡೆಯುವರು.

(೨) ಚಾಮಾಶಾಸ್ತ್ರಿಯವರು "ಜ್ಞಾನಸಿಂಧು" ಎನ್ನುವ ಪುಸ್ತಕವು ಬಹಳ ಕೀರ್ತಿಗೆ ಕಾರಣವಾಯಿತು ಎಂದು ಬಹಳ ನಿಂದಿಸುತ್ತೀರಿ. ಆದರೆ ಮಾಹಾತ್ಮ್ಯ ಮನಸ್ಸಿನಲ್ಲಿ ಇಟ್ಟರೆ ಅದರ ಪ್ರಯೋಜನ ತಿಳಿಯುವದೇ ? ಅದರಂತೆ ಆ ಗ್ರಂಥವು ಓದಿದ ಮಾತ್ರಕ್ಕೆ ದೇವ ತಿರುಗಿದ ಮಾತ್ರಕ್ಕೆ ಸಿದ್ಧಿ ತಿಳಿಯದು. ಆ ಗ್ರಂಥವು ಯೋಗ ತತ್ತ್ವದರ್ಶನಕ್ಕೆ ಅರ್ಥವಾಗುತ್ತೆ; ಅನ್ಯರಿಗೆ ಆಗಲಾರದು. ತಮಗೆ ಅದಕ್ಕೆ ಅರ್ಥ ಮಾಡುವುದಕ್ಕೆ ಸಾಮರ್ಥ್ಯವು ಸಾಲದು. ಅಂಥಾ ತಿಳುವಳಿಕೆ ಇದ್ದರೆ ಅದೇ ಜ್ಞಾನಸಿಂಧು ಗ್ರಂಥದಲ್ಲಿ "ಬಡಿವೇಕ" ಎನ್ನುವ ಅಧ್ಯಾಯದಲ್ಲಿ ೬೧ನೆ ಪಾದದಿಂದ ಹಿಡಿದು ೬೯ ವರೆಗೂ ಇರುವ ಅಕ್ಷರಗಳು ಎಂಟು ಪಾದವಾಗುತ್ತೆ. ಆ ಪಾದಕ್ಕೆ ಲಕ್ಷ್ಯಾರ್ಥವೇನು ? ವಾಚ್ಯಾರ್ಥವೇನು ? ತಿಳಿಸಿದರೆ ಆ ಮೇಲೆ ನಾನು ಕೇಳುತ್ತೇನೆ.

(೩) ತಾವುಗಳು "ವಿಗ್ರಹಾರಾಧನೆ ಮತ್ತು ಮಣ್ಣು ಕಲ್ಲು ಪೂಜೆ ಮಾಡುತ್ತೀರಿ, ಮೂಢರು" ಎಂದು ಹೇಳುತ್ತೀರಿ. ಆದರೆ ಸಗುಣ, ನಿರ್ಗುಣ ಎಂದು ಎರಡು ವಿಧಗಳುಂಟು. ಸಗುಣವೇ ವಿಗ್ರಹಾರಾಧನೆ ಅದು ತಮಗೆ ಇಲ್ಲ. ನಿರ್ಗುಣ ಎಂಬುದೆ ಹೃದಯಸ್ಥನಾದ ಸ್ವಪ್ರಕಾಶ ಬ್ರಹ್ಮವನ್ನು ನೋಡುವದು. ತಮಗೆ ಈ ವಿಷಯ ಕಿಂಚಿತ್ತಾದರೂ ಅನುಭವವಿಲ್ಲ. ಎರಡೂ ಇಲ್ಲದೆ ಉಭಯ ಭ್ರಷ್ಟರಾಗುತ್ತೀರಿ. ಆದ್ದರಿಂದ ತಾವು ದಯಪಾಲಿಸಿ ನನಗೆ ಉತ್ತರ ಬರೆದರೆ ಆ ಮೇಲೆ ನಾನು ಇನ್ನು ಅನೇಕ ಪ್ರಶ್ನೆಗಳನ್ನು ಅರಿಕೆ ಮಾಡಿಕೊಳ್ಳುತ್ತೇನೆ.

ಚನ್ನಪಟ್ಟಣದ ವೆಂಕಟರಾಮಯ್ಯ.

ಉತ್ತರ.

೧. ಪರಮಗುರುವಾದ ಯೇಸು ಸ್ವಾಮಿಯ ಪ್ರೇಮವನ್ನು ಅನುಭವಪೂರ್ವಕವಾಗಿ ತಿಳಿದವನನೇ ನಿಜವಾದ ಕ್ರಿಸ್ತಭಕ್ತನು. ಇವನು ಆ ಸ್ವಾಮಿಗೆ ಸಂಪೂರ್ಣವಾಗಿ ತನ್ನನ್ನು ಒಪ್ಪಿಸಿ ಕೊಟ್ಟವನಾಗಿರುತ್ತಾನೆ.

೨. ನೀವು ಸೂಚಿಸಿರುವ ಮೊದಲನೇ ವಿಷಯವಾಗಿ ಹೇಳಬೇಕಾದದ್ದೇನಂದರೆ—ಯೇಸು ಸ್ವಾಮಿಯು ದೇವರೂ ಮನುಷ್ಯನೂ ಆಗಿರುವದರಿಂದ ಸಗುಣನೆಂದು ತಿಳಿಯತಕ್ಕದ್ದು. ಇದನ್ನು ನಾವು ಮೊದಲೇ ಹೇಳಿದ್ದೇವಷ್ಟೆ. ದೇವರು ನಿಜವಾಗಿ ದ್ವೈಸ್ವಭಾವವುಳ್ಳ ಧ್ಯಾಸನಾಗಿರುವಲ್ಲಿ ಅಂಥ ನಿರ್ಗುಣ ಸ್ವರೂಪವನ್ನು ಆರಾಧಿಸುವದು ಸರ್ವಥಾ ಪ್ರಯೋಜನಕಾರಿಯಾಗಲಾರದು. ನಿರ್ಗುಣ ಬ್ರಹ್ಮನೆಂಬ ವಿಷಯದಲ್ಲಿ ಹೇಳಬೇಕಾದದ್ದೇನಂದರೆ—ದೇವರನ್ನು ಆತನ ನಿಜತತ್ವದಲ್ಲಿ ಯಾವನಾದರೂ ಕಣ್ಣಿನಿಂದ ಕಾಣಲಾರನೆಂದು ಸತ್ಯವೇದದಲ್ಲಿ ಬರೆದಿರುತ್ತದೆ. ಆತನ ದಿವ್ಯ ಸ್ವಭಾವ ತತ್ವವನ್ನು ಗ್ರಹಿಸುವದು ಮನುಷ್ಯಮಾತ್ರದವನಿಗೆ ಅಸಾಧ್ಯವಾಗಿದೆ. ದೇವರ ಇರುವಿಕೆಯನ್ನು ಕುರಿತು ಸಂಪೂರ್ಣವಾಗಿ ವಿವರಿಸಬಲ್ಲೆವೆಂದು ವೇದಾಂತಿಗಳು ಹೇಳುತ್ತಾರಷ್ಟೆ. ಇದು ಯಾರಿಂದಲೂ ಆಗಲಾರದು. ವಿವರಿಸುವದಕ್ಕೆ ಪ್ರಯತ್ನಿಸಿದವರ ಶ್ರಮವೆಲ್ಲಾ ವ್ಯರ್ಥವಾಗಿ ಹೋಗಿದೆ. ಆದಕಾರಣ ಜ್ಞಾನಿಯಾದವನು ಭಗವಂತನ ಸ್ಥಿತಿಯನ್ನು ಕುರಿತು ಆಲೋಚಿಸುವಲ್ಲಿ—ಓ ಭಗವಂತನೇ, ನಿನ್ನ ಸ್ವಭಾವವು ರೂಪವೂ ನನ್ನ ಬಾಯಿ ಮಾತಿನಿಂದ ವಿವರಿಸುವದಕ್ಕಾಗಲಿ ಆಲೋಚನೆಯಿಂದ ಗ್ರಹಿಸುವದಕ್ಕಾಗಲಿ ನಿಲುಕದಷ್ಟು ಅಪಾರವಾಗಿದೆ ಎಂದು ಹೇಳಿ ವಿನಯವಾಗಿ ತಗ್ಗಿಸಿಕೊಳ್ಳುವನು

---

### ತಾಲ್ಲೋಕು ವರ್ತಮಾನಗಳು.

ಕುಣಿಗಲು.—ಇಲ್ಲಿ ಸುಮಾರು ೧೦—೧೨ ದಿವಸಗಳಿಂದ ಸಾಧಾರಣ ಮಳೆಯಾಗಿ ಪೈರುಗಳು ಎಲ್ಲಾ ಕಡೆಯಲ್ಲೂ ಪುಷ್ಕಳವಾಗಿವೆ. ರೈತರುಗಳೆಲ್ಲರೂ ಆನಂದಪಡುತ್ತಾರೆ.—ಈ ಊರಿಗೆ ದೊಡ್ಡಬಳ್ಳಾಪುರದಿಂದ ವರ್ಗವಾಗಿ ಬಂದಿರುವ ಅಸಿಸ್ಟೆಂಟ್ ಅಸಿಸ್ಟೆಂಟರು ಬಹಳ ಅನುಭವಶಾಲಿಗಳಾಗಿಯೂ ದಯಾಳುಗಳಾಗಿಯೂ ಇದ್ದಾರೆ. ಗೌರ್ನಮೆಂಟಿನವರು ಇವರನ್ನು ನಮ್ಮ ತಾಲ್ಲೂಕಿಗೆ ಕಳುಹಿಸಿದ್ದು ನಮ್ಮ ಪುಣ್ಯವೇ ಸರಿ.—ಈ ದರ್ಜೆ ಮ್ಯುನಿಸಿಪಲ್ ಲಾಂದ್ರಗಳು ರಾತ್ರಿಯಲ್ಲೆಲ್ಲಾ ಅಂಧಕಾರವನ್ನು ಸೂಚಿಸುತ್ತಲಿವೆ. ಮಾರ್ಗಗಳ ಕಾಟ ಹೆಚ್ಚಾಗಿದೆ. ಚರಂಡಿ ಗಲೀಜಾಗಿದೆ. ಮತ್ತು ಗ್ರಾಮ ಸುತ್ತಲೆಲ್ಲಾ ಜಲದಿಂದ ಹೊರಕ್ಕೆ ಹೋಗಿದೆ, ರುಂಬಾ ಕೊಳಕಾಗಿದೆ. ಸಾಂಕ್ರಾಮಿಕ ಜಾಡ್ಯಗಳು ಉದ್ಭವಿಸಲು ಆಸ್ಪದವಾಗಿದೆ. ನಮ್ಮ ಅಮಲ್ದಾರರು ಗಮನಕೊಡುವರೆಂದು ನಂಬುತ್ತೇನೆ.—ಹುಳಿಯಾರ್ ನಾಡ್ ತಾಲ್ಲೂಕಿನಿಂದ ಇಲ್ಲಿಗೆ ವರ್ಗವಾಗಿ ಬಂದಿಪ್ಪ ಪೋಲೀಸ್ ಜಮಾದಾರ್ ಪುಟ್ಟಸಂಗಯ್ಯನವರು ಸುಮಾರು ೧೧ ವರುಷಗಳಿಂದ ಇಲ್ಲಿನ ಜನಗಳ ಪ್ರೀತಿಗೆ ಪಾತ್ರರಾಗಿಯೂ ಸರ್ಕಾರಿ

ಕೊನೆಯಲ್ಲಿ ಜಾಗರೂಕರಾಗಿರುವ ಪೋಲೀಸಿನವರುಗಳ ವಿಷಯದಲ್ಲಿ ಪಟ್ಟಣವಾಸಿಗಳೆಲ್ಲರೂ ತೃಪ್ತರಾಗಿದ್ದಾರೆ. ಸರ್ಕಾರದವರು ತುಂಬ ಕರ್ತವ್ಯವನ್ನು ವಹಿಸುತ್ತಾರೆ. ಆದ್ದರಿಂದ ಹೊಸ ಪೋಲೀಸ್ ಇನ್ಸ್ಪೆಕ್ಟರು ಬಂದ ಬಳಿಕ ಅವರ ಕೈ ಕೆಳಗಿನ ನೌಕರರುಗಳು ಬಹು ಎಚ್ಚರಿಕೆಯಾಗಿ ಪಗಾರ ಪಗಿ, ರಾಜೇಸಾಬ್, ರಜಾ, ಈ ವಿಷಯಗಳಲ್ಲೇ ನಿರತರಾಗಿರುತ್ತಾರೆ.—ಈ ಊರು ಸ್ಕೂಲಿನಿಂದ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ೧೫ ಹುಡುಗರು ಕಳಿಸಿ, ಇಂಟರ್‌ಮೀಡಿಯಟ್ ಪರೀಕ್ಷೆಗೆ ಹೋಗುವವರಾಗಿದ್ದಾರೆ. ಸ್ಕೂಲು ತುಂಬು ಅಭಿವೃದ್ಧಿಯಾಗುತ್ತಿದೆ.

ಕುಂಬಕೋಣ.—ಇಲ್ಲಿ ೧೪ ದಿನಗಳ ಬಳಿಕ ಬಹು ಹೆಚ್ಚಾಗಿ ಮಳೆಯಾಗಿ ರಾಗಿ ಬೆಳೆ ಬಹು ಸೊಗಸಾಗಿದೆ.—ಈ ತಾಲ್ಲೂಕು ಕಲ್ಲಹಳ್ಳಿ ಎಂಬ ಗ್ರಾಮದಲ್ಲಿ ಒಬ್ಬ ಹೆಂಗಸು ತನ್ನ ಸಂಪತ್ತನ್ನು ಧಾನಧರ್ಮಗಳಿಗೆ ತೆರೆದು ೭ ದಿನಗಳ ತನಕ ಉತ್ಸವ ಮಾಡಿಸಿದಳು. ಸದರಿ ವೆಂಕಟಸ್ವಾಮಿ ಇಲ್ಲಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯುತ್ತಾ ಇದೆ.—ಈ ಊರಿನಲ್ಲಿ ಕೆಲವು ಗಲ್ಲಿ ಬೀದಿಗಳು ಅಶುಚಿಯಾಗಿರುತ್ತವೆ. ಮ್ಯುನಿಸಿಪಾಲಿಟಿಯವರು ಚೆನ್ನಾಗಿ ನಿಗಾ ಕೊಟ್ಟರೆ ಮುಂದೆ ರೋಗಾದಿಗಳಿಗೆ ಅವಕಾಶವಿರುವದಿಲ್ಲ.—ಈ ಊರಿನ ಪ್ರಸಿದ್ಧರಾದ ಮತ್ತೀ ಬೀದಿಯ ನಿವಾಸಿಗಳೆಲ್ಲ ಸೇರಿ ಸುಮಾರು ೧೫ ದಿನಗಳಿಂದ ಮೌಲೂದ್ ಎಂಬ ಪೈಗಂಬರರುಗಳ ಚರಿತ್ರೆಯನ್ನು ಬಹು ವಿದ್ಯಾಂಸರಿಂದ ಓದಿಸಿದರು. ಇದಕ್ಕೆ ಸ್ಥಳವನ್ನು ಸುಮಾರು ೨ ತಿಂಗಳಿಂದ ಬಹು ಶ್ರಮಪಟ್ಟು ಸೊಗಸಾದದ್ದಾಗಿ ಅಲಂಕರಿಸಿದ್ದರು. ಪ್ರತಿದಿನವೂ ಸಾವಿರಾರು ಪ್ರಜೆಗಳು ಬಂದು ನೋಡಿ ಸಂತೋಷಿಸುತ್ತಿದ್ದರು. ಕಟ್ಟಡದಲ್ಲಿ ದೀಪಗಳು ಬಹುವಿಧವಾದ ಲ್ಯಾಂಪುಗಳಿಂದ ಪ್ರಕಾಶಮಾನವಾಗಿತ್ತು. ಇದಕ್ಕಾಗಿ ಬೆಂಗಳೂರಿನಿಂದ ಒಬ್ಬ ಮೌಲ್ವಿಯವರನ್ನು ಕರೆಸಿದ್ದರು. ಮೌಲ್ವಿಯವರು ಚರಿತ್ರೆಯನ್ನು ಗಾನದ ಮೂಲಕವಾಗಿ ಹೇಳುವದಕ್ಕೆ ಮೈಸೂರಿನಿಂದ ಕೆಲವರನ್ನು ಕರೆಸಿದ್ದರು. ಈ ಉತ್ಸವವನ್ನು ನೋಡಲು ಚನ್ನಪಟ್ಟಣ, ಕನಕಪುರ, ಬೆಂಗಳೂರು ಮೊದಲಾದ ಸ್ಥಳಗಳಿಂದಲೂ ಅನೇಕ ಮಹನೀಯರು ಬಂದಿದ್ದರು. ಕೊನೆಯ ದಿವಸವಾದ ನೆನ್ನೆ ಮುಂಗಡವಾಗಿ ಸುಮಾರು ೩೦೦ ಜನ ಬಡಬಗ್ಗರನ್ನು ಸೊಗಸಾದ ಭೋಜನದಿಂದ ತೃಪ್ತಿಪಡಿಸಿ ಸ್ವಲ್ಪ ಹೊತ್ತು ಅಂಗಡಿಗಳಿಗೆ ದ್ರವ್ಯವನ್ನು ಸಹ ಕೊಟ್ಟರು. ಮುಖ್ಯವಾಗಿ ಈ ಊರು ಆದ ಬಳಿಕ ಇದುವರೆಗೂ ಇಂಥಾ ಉತ್ಸವ ನಡೆದಿಲ್ಲವೆಂದು ಅನೇಕರು ಹೇಳುತ್ತಾರೆ.

ಸೊರಬ:—ಮೊದಲೆ ತಮ್ಮ ಪೇಪರ್‌ನಲ್ಲಿ ಈ ಸೊರಬದ ಬಳಿ ಇರುವ ಗಲ್ಲಿ ವಿಷಯಕ್ಕೆ ಸ್ವಲ್ಪ ಸ್ಥಳ ಕೊಟ್ಟದ್ದರಿಂದ ಮ್ಯುನಿಸಿಪಾಲಿಟಿಯವರು ಗಮನ ಕೊಟ್ಟು ಇದ್ದರು. ಸದರಿ ಗಲ್ಲಿ ವಿನಹ ಇನ್ನುಳಿದ ಗಲ್ಲಿಗಳ ವಿಷಯದಲ್ಲೂ ಬಾಕೀ ವಿಷಯದಲ್ಲಿ ಗಮನ ಕೊಡಲಿಲ್ಲವೆಂಬ ಸಂಗತಿ ಬಡಬಗ್ಗರು ಮಾತನಾಡುವ ಕೆಲವು ಸಣ್ಣ ಸಣ್ಣ ಗಲ್ಲಿಗಳೇ ಹೇಳಿಕೊಳ್ಳುತ್ತಾ ಇವೆ. ಮ್ಯುನಿಸಿಪಾಲಿಟಿ ಮೆಂಬರುಗಳಾಗಿ ಆರಿಸುವುದು ಪ್ರಜೆಗಳ ಆರೋಗ್ಯಕ್ಕೆ ನಿರ್ವಿಘ್ನವಾಗಿ ಮ್ಯುನಿಸಿಪಾಲಿಟಿ ಕೆಲಸ ಜರುಗಿಸುವದಕ್ಕೆ ಅಲ್ಲವೆ. ಆದರೆ ಈಚೆಗೆ ಚುನಾಯಿಸಲ್ಪಡುವ ಮೆಂಬರುಗಳು ಆ ರೀತಿ ಅರ್ಥ ಮಾಡಿಕೊಳ್ಳದೆ ಏನೋ ಒಂದು ವಿಧವಾದ ಅಧಿಕಾರವೆಂದು ತಿಳಿದು ತಾಲೂಕು ಕಚೇರಿಯಿಂದ ಮ್ಯುನಿಸಿಪಾಲಿಟಿ ಕೆಲಸವನ್ನು ದೃಷ್ಟಿಸುವ ಹಾಗೆ ಮಾಡದೆ ಹೋದ್ದಕ್ಕೆ ಈ ಬಡ ಪ್ರಜೆಗಳ ದುರಾದೃಷ್ಟವೆಂದು ತಿಳಿಯಬೇಕಾಗಿದೆ.—ಇದೇ ತಾಲ್ಲೂಕು ಆನವಟ್ಟಿಯಲ್ಲಿ ಒಬ್ಬ ಗಂಡಸಿನ ಮೇಲಾಗಿ ೩ ದಿನ ಅನಾಥಿಗಳು ಸಿಕ್ಕಿ, ಸರ್ಕಾರಿ ಲೋಕಲ್ ಫಂಡ್ ಆಸ್ಪತ್ರೆ, ಡಿಸ್ಪೆನ್ಸರಿ ಜಾಗ್ರತೆಯಿಂದ ಬಹಳ ಇದೆ. ಈ ತಾಲ್ಲೂಕು ಇನ್‌ಸ್ಪೆಕ್ಟರ್ ಡಾಕ್ಟರು ಒಬ್ಬ ಕೊಂಡ ಎರಡನೆ ಬ್ರಾಂಚಿನ ಡಿಸ್ಪೆನ್ಸರಿಯಿಂದ ಒಬ್ಬ ಕೆಲಸ ಮಾಡುತ್ತಾರೆ. ಈ ಬಗೆ ಮಾಡಿದವರನ್ನು ಪತ್ತೆ ಮಾಡುವ ಬಗ್ಗೆ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಮಾಸ್ತರರಿಗೂ ಇಲ್ಲಿನ ಇನ್ಸ್‌ಪೆಕ್ಟರರಿಗೂ ನೇಮಿಸಿರುವದಾಗಿ ಕೇಳಿಸುತ್ತೆ. ಇದೇ ತಾಲ್ಲೂಕು ತ್ಯಾವರೆ ಗ್ರಾಮದ ಲಕ್ಷ್ಮೀಸೇಬ ಎಂಬವನು ಒಬ್ಬರಿಗೆ ತಿಳಿಸದೆ ಆ ಗ್ರಾಮದಿಂದ ಎಲ್ಲಿಯೋ ಹೋಗಿ ಹೊಸದಾಗಿ ಒಂದು ಸ್ಥಳಕ್ಕೆ ಸೇರಿಕೊಂಡಿದ್ದಾನೆ. ಕೆಲವು ದಿವಸಗಳ ಹಿಂದೆ ೩—೪ ಬಾವಿಗಳಿಂದ ಪತ್ತೆ ಮಾಡುವ ಕಾರ್ಯ ಇನ್ನೂ ಆಗುತ್ತಿದೆ. ಇಂಥಾ ಗಲಾಟೆ ಸಂದರ್ಭಗಳಲ್ಲಿ ಈ ಸದರಿ ತಾಲ್ಲೂಕುಗಳಲ್ಲಿ ಕೆಲವು ಪೋಲೀಸ್ ಸಿಬ್ಬಂದಿಯನ್ನು ಸ್ಪೆಷಲ್ ಆಗಿ ಸರ್ಕಾರದವರು ನೇಮಿಸಿದರೆ ಅನುಕೂಲವೆಂದು ತೋರುತ್ತೆ.—ಇಲ್ಲಿಯ ಎಕ್ಸೈಜ್ ಸೂಪರಿಂಟೆಂಡೆಂಟ್ ಸಾಹೇಬರು ಇಲ್ಲಿಗೆ ಬಂದು ಸುಮಾರು ೨ ತಿಂಗಳಾಯಿತು. ಇವರು ಬಂದನಂತರ ಎಷ್ಟೋ ಎಕ್ಸೈಜ್ ಕೇಸುಗಳನ್ನು ಹಿಡಿದು ಮುಖ್ಯರಿಗೆ ಶಿಕ್ಷೆ ಮಾಡಿದ್ದಾರೆ. ಇಂಥಾದ್ದರಲ್ಲಿ ಇದ್ಯಾಕೆ ಮುಖ್ಯವಾದುದೋ ಗೊತ್ತಾಗಲಿಲ್ಲ. ಇವರ ಪರಿಣಾಮ ಇಲ್ಲಿಗೆ ನೆಂಟರಂಗೆ ವ್ಯಾಪಾರ ಬಂದು ಚಟುವಟಿಕೆಯಿಂದ ಕೆಲಸವಾಗುತ್ತಿದೆ. ಅವರೂ ಇವರಿಗೆ ಮರೆಯಾಗಿ ಏನೂ ಆಗುವದಿಲ್ಲವೆಂದು ಇವರು ಬಂದ ಲಾಗಾಯ್ತು ಇರುವಸ್ಥಿತಿಯ ಮೇಲೆ ಕಾಣುತ್ತೆ.—ಈ ತಾಲ್ಲೂಕಿಗೆ ಬರತಕ್ಕ ಮಿಷ್ ವೈಫ್ ಇದುವರೆಗೆ ಇಲ್ಲಿಗೆ ಬರಲಿಲ್ಲ. ಸರ್ಕಾರದವರು ಈ ವಿಷಯದಲ್ಲಿ ಗಮನ ಕೊಡಬೇಕಾದ್ದಕ್ಕೆ ಇಲ್ಲಿಯ ಜನರು ಬಹಳ ತೊಂದರೆ ಪಡುತ್ತಾರೆ.—ಈ ಬಾರಿ ಮಳೆ ಬೆಳೆ ಸಹ ಚಿಕ್ಕ ವಿದ್ದಾಗಲಿ ಸಮಾಧಾನಕ್ಕೆ ಕಾರಣವಾಗಿದೆ.

ಚನ್ನಪಟ್ಟಣ.—ಇಲ್ಲಿ ಮಳೆ ಆಗಾಗ್ಯೆ ಸುರಿಯುತ್ತಾ ಇದೆ. ಸಿಂಪಿನ ಬೆಳೆಗೆ ಬೋಳುಗಳಿಗೆ ಏನೂ ಕೊರತೆಯಿಲ್ಲ. ಈಗ ತಿರುಗಿ ಪ್ಲೇಗ್ ಪ್ರಾರಂಭವಾಗುವದನ್ನು ಕೇಳುತ್ತಾ ಇದ್ದೇವೆ. ಇನ್ನೂ ಊರು ಕೆಲವು ಕಡೆ ಇನ್ನು ತಾವಾಗಿವೆ. ಮ್ಯುನಿಸಿಪಲ್ ರಸ್ತೆಗಳು ಕೆಲವು ಕಡೆ ಕೆಟ್ಟು ಹೋಗಿವೆ. ಕತ್ತಲೆ ಕಾಲದಲ್ಲಿ ಜನರು ತಿರುಗಾಡುವದಕ್ಕೆ ಭಯಪಡುತ್ತಾರೆ. ಯಾಕೆಂದರೆ ತಗ್ಗು ಗುಂಡಿಗಳು ಇರುವದು. ಲಾಂದ್ರಗಳು ಬಹು ದೂರಕ್ಕೆ ಒಂದೊಂದು ಇವೆ. ಅಲ್ಲಲ್ಲಿ ಗಲ್ಲಿಗಳಿಗೆ ತಿರುಗುವ ಕಡೆಯಲ್ಲಿ ಲಾಂದ್ರಗಳಿಲ್ಲ. ಗರುಡುಗಂಬದ ಬೀದಿಯಲ್ಲಿ ಒಂದು ಲಾಂದ್ರವೂ ಇಲ್ಲ, ಇದು ಮುಖ್ಯವಾದ ವ್ಯಾಪಾರದ ಬೀದಿಯಾಗಿದೆ. ಮಂಗಳವಾರ ಪೇಟೆಯು ದೊಡ್ಡದಾಗಿದ್ದರೂ ಆ ಊರಿಗೆಲ್ಲಾ ೨—೩ ಲಾಂದ್ರಗಳಿವೆ. ಜನರು ಇದರ ವಿಷಯ ಗುಣುಗುಟ್ಟುತ್ತಾರೆ. ಚನ್ನಪಟ್ಟಣದಲ್ಲಿ ಕರ್ನಾಟಕ ಮನೆಯ ಸ್ಥಳದಲ್ಲಿ ವಿಷ್ಣು ಮಾಡುತ್ತಾರೆಂತಲೂ, ಜನದ ದಹಿಂದ ಮಾಡುವ ಅಂಗಡಿಯನ್ನು ಆಚಾರರ ಮನೆಗಳಿಗೆ ಸಮೀಪದಲ್ಲಿ ಇಟ್ಟಿದ್ದಾರೆಂತಲೂ, ಮೌಲ್ವಿ ಸಾಹೇಬರು ಸಾರ್ವಜನಿಕರ ಇಷ್ಟಗಳನ್ನು ದಿಕ್ಕರಿಸಿ ಬೇರೆ ಸ್ಥಳದಲ್ಲಿ ಮಾಡುವ ಹಾಗೆ ಕಟ್ಟು ಮಾಡಿದ್ದಾರೆಂತಲೂ ಜನರು ಹೇಳುತ್ತಾರೆ. ಇಂಥಾ ಸಂಗತಿಗಳಿಗೆ ಮೇಲ್ಪಟ್ಟವರು ಗಮನ ಕೊಡಬೇಕಾಗಿದೆ.—ತಾ॥ ೨೨ ರಲ್ಲಿ ಕೆಂಗಲ್ಲು ಹನುಮಂತ್ರಾಯನ ಗುಡಿ ಹತ್ತಿರ ಚಿಕ್ಕ ಜಾತ್ರೆಯು ನಡೆಯಿತು. ಈ ಜಾತ್ರೆಯಲ್ಲಿ ನಂಜಪ್ಪ, ಕೊಂಡ, ಎಂಬ ಕೊರಮರು ಒಬ್ಬ ಹೆಂಗಸಿನ ಕತ್ತಿನಲ್ಲಿದ್ದ ಅಡ್ಡಿಕೆಯನ್ನು ಕತ್ತರಿಸುತ್ತಿರುವದನ್ನು ಬೆಳ್ಳಿಯಪ್ಪನೆಂಬ ಪೋಲೀಸ್ ಜವಾನನು ಹಿಡಿದು, ವಿಚಾರಣೆಗೆ ಗುರಿಮಾಡಿದನು. ಸದರಿ ವೆಂಕಟನಿಗೆ ಒಂದು ತಿಂಗಳೂ ಕೊಂಡನಿಗೆ ೧೫ ದಿವಸ ಸಜಾ ವಿಧಿಸಲ್ಪಟ್ಟಿತು.—ಯಾತಕೋ ವೆಂಕಟರಮಣಶೆಟ್ಟಿ ಕಾಮೂರ್ತಿ ರಾಮಶೆಟ್ಟಿ ಎಂಬವರು ಜಾಪರ್ ರಲ್ಲಿ ಪ್ಲೇಗ್ ಗಲಾಟೆಯಲ್ಲಿ ಅಪಕಾರವಾಗುವದನ್ನು ತಿಳಿದು, ಚನ್ನಪಟ್ಟಣದಲ್ಲಿ ಪ್ಲೇಗ್ ಗಲಾಟೆಯಿಂದ ಕ್ರೈಸ್ತರ ಕಂಡಮೇಲ್ಪರಿ ಜೀವನ್ಮುಕ್ತ ಕಟ್ಟಿ, ನಿಂತು ಹೋದದ್ದನ್ನು ಜೀರ್ಣೋದ್ಧಾರ ಮಾಡುವದಕ್ಕಾಗಿ ತಮ್ಮ ಆಸ್ತಿಯನ್ನೆಲ್ಲಾ ಅಂದರೆ ಚಿನ್ನ ಬೆಳ್ಳಿ ಸುಮಾರು ೨,೮೦೦ ರೂ., ಬಾಕಿ ಸುಮಾರು ೨,೫೦೦ ರೂ., ಭೋಸ್ತಿ ೨ ಅಂಗಡಿ, ೧ ಮನೆ, ಇತ್ತಿಗಳ ಬೆಲೆ ಸುಮಾರು ೧,೫೦೦ ರೂ., ಒಟ್ಟು ೬,೫೦೦ ರೂಪಾಯಿ ಆಸ್ತಿಯನ್ನು ಚನ್ನಪಟ್ಟಣದಲ್ಲಿರುವ ಮೇ॥ ಮುಳ್ಳೂರು ರಾಮಕಂಚೀಸೆಟ್ಟಿರಿಗೂ, ಬಿಡದಿ ವೆಂಕಟಸ್ವಾಮಿ ಶೆಟ್ಟರಿಗೂ, ಪ್ರೋಟಿನಲ್ಲಿ ರಾಮಕಂಚೀಸೆಟ್ಟರಿಗೂ ಈ ದೇವಸ್ಥಾನ ಕಟ್ಟಿಸುವ ಉದ್ದೇಶ್ಯ ಅವರ ವಶಕ್ಕೆ ಕೊಟ್ಟಿದ್ದಾರೆ. ಈಗ ಕೆಲಸವು ಸಹ ಆರಂಭವಾಗುತ್ತಾ ಇದೆ. ವಿಚಿತ್ರವಾದ ಕೆತ್ತನೆ ಕಲ್ಲು ಕೆಲಸವು ಸಹ ಬಹಳ ದಿನಗಳಿಂದ ನಡೆಯುತ್ತಾ ಇದೆ.—ತಾ॥ ೨೪ ರಲ್ಲಿ ಬಿಡದಿ ಹತ್ತಿರ ಮೆಯಿಲ್ ಟ್ರೈನ್ ಹೋಗುವಾಗ ಒಂದು ಟ್ರಾಲಿಗೆ ತಗಲಿ ಟ್ರಾಲಿಯು ಚೂರಾಗಿ ಒಡೆದು ಹೋಯಿತು. ಆಗ್ಯೆ ಜನರು ಆ ಟ್ರಾಲಿಯಲ್ಲಿ ಇರಲಿಲ್ಲ. ಅಲ್ಲಿಗೆ ೧೦ ನಿಮಿಷಗಳು ಮುಂಚಾಗಿ ರೈಟ್ ಬಂದಿದ್ದರೆ ಈ ಅಪಾಯ ಬಾರದಾಯಿತೆಂದು ಅಭಿಪ್ರಾಯಪಡುತ್ತಾರೆ.

## ವಿದೇಶ ವರ್ತಮಾನಗಳು.

ಚೀನಾ ರಾಜ್ಯದವರು ಯುದ್ಧ ಸಾಮಗ್ರಿಗಳನ್ನು ಕೊಂಡು ತರಿಸಕೂಡದೆಂದು ಪರರಾಜ್ಯಗಳವರು ಮಾಡಿದ್ದ ಆಜ್ಞೆಯನ್ನು ಕಳೆದ ವಾರ ರದ್ದುಮಾಡಿದ್ದಾರೆ.

*****

ಚೀನಾ ಚಕ್ರವರ್ತಿಯವರು ಪೇಸಿಗೆಯನ್ನು ಕಳೆಯುವದಕ್ಕೆ ಹೋಗಿ ವಾಸಮಾಡುವ ಅರಮನೆಗೆ ಸುಮಾರು ೨೦೦ ಮಂದಿ ಕಳ್ಳರು ಬಿದ್ದು ೧೫ ಲಕ್ಷ ದ್ರವ್ಯವನ್ನು ಅಪಹರಿಸಿದರು.

*****

ಗ್ರಿಂಸ್‌ಬಿ ಎಂಬ ಪಟ್ಟಣದಲ್ಲಿ ರೈಲ್ವೆ ಕಂಪನಿಯವರು ಕಟ್ಟಿಸಿದ್ದ ಸುಮಾರು ಜೋಡಿಗಳೂ, ರೈಲ್ವೆ ಸಾಮಾನುಗಳೂ ಬೆಂಕಿಬಿದ್ದು ಸುಟ್ಟುಹೋದವು. ಕಂಪನಿಯವರಿಗೆ ೧೫ ಲಕ್ಷ ರೂ. ನಷ್ಟವಾಗಿದೆ.

*****

ರಷ್ಯಾ ರಾಜ್ಯದ ದೊರೆಯವರಿಗೆ ಜವಾಹಿರಿ ಒಡವೆಗಳನ್ನು ಸರಭರಾಜು ಮಾಡುತ್ತಿದ್ದ ಫ್ಯಾಂಕಾಸ್ ಪಟ್ಟಣದ ಒಬ್ಬ ವರ್ತಕನ ಅಂಗಡಿಗೆ ಕಳ್ಳರುಬಿದ್ದು ಸುಮಾರು ಎರಡು ಲಕ್ಷ ರೂಪಾಯಿಗಳ ನಗಗಳನ್ನು ದೋಚಿಕೊಂಡು ಹೋದರು.

*****

ವ್ಯಾನಿಸ್ ನಗರದಲ್ಲಿ ಬಿರ್ಟ ಮುಕ್ಲೀ ಎಂಬೊಬ್ಬ ರಾಕ್ಷಸ ಹುಡುಗನಿರುವನು. ಅವನ ವಯಸ್ಸು ೧೦ ವರುಷ. ಅವನ ತಲೆ ೩೦ ಅಂಗುಲ ಅಗಲವಾಗಿರುವದು. ಅವನು ೧೫೦ ಪೌಂಡು ಭಾರವಾಗಿರುವನು. ಅವನಿಗೆ ಕೈಗಳಲ್ಲೂ ಕಾಲುಗಳಲ್ಲೂ ಆರಾರು ಬೆರಳುಗಳಿವೆ.

*****

ಜರ್ಮನಿ ರಾಜ್ಯದಲ್ಲೆಲ್ಲಾ ಪ್ರಜೆಗಳು ಒಟ್ಟು ೩೧,೫೦,೦೦೦ ಬೈಸಿಕಲ್ ಗಾಡಿಗಳನ್ನು ಇಟ್ಟುಕೊಂಡಿದಾರೆ. ಇದಕ್ಕೆ ಪ್ರತಿ ಗಾಡಿಗೂ ಸರ್ಕಾರದವರು ೧ರೂ. ೧೫ ಕ್ಕೆ ನೋಂತೆ ಪ್ರತಿವರ್ಷವೂ ಸುಂಕ ವಸೂಲ್ಮಾಡುವರು. ಈ ಒಂದು ಬಾಬಿನಲ್ಲೇ ಗವರ್ನ್ಮೆಂಟಿಗೆ ೪೦ ಲಕ್ಷದ ೫೦ ಸಾವಿರ ರೂಪಾಯಿ ಉತ್ಪತ್ತಿಯಾಗುವುದು.

*****

ಬೆಲ್ಜಿಯಂ ರಾಜ್ಯದ ದೊರೆಯಾದ ಲಿಯೋಪೋಲ್ಡ್ ಯವರು ಪ್ರತಿದಿನವೂ ಬೆಳಗಿನ ಹೊತ್ತು ಕಾವಲುಗಾರರಿಲ್ಲದೆ ಉದ್ಯಾನವನಗಳಲ್ಲಿ ಸಂಚಾರ ಮಾಡುವರು. ಇವರ ಹಿಂದೆ ಬೇಗಾವಲಾಗಿ ದೂರದಲ್ಲಿ ಪ್ರಾಯಿವೇಟು ಇನ್ಸ್ಪೆಕ್ಟರ್ ಪೋಲೀಸಿನವರು ಹೋಗುವರು. ದೊರೆಯು ದಾರಿಯಲ್ಲಿ ಸಿಕ್ಕುವ ಸಕಲ ಪ್ರಜೆಗಳ ಸಂಗಡಲೂ ಧಾರಾಳವಾಗಿ ಮಾತನಾಡುತ್ತಾರೆಂದು ಪ್ರಕಟವಾಗಿದೆ.

*****

ಪ್ಯಾಟ್ರಿಕ್ ಮಾರ್ಗನ್ ಎಂಬಾತನು ಕೈಕಾಲುಗಳು ಮಾಯುವರೋಗದಿಂದ ಹಿಡಿದು ನರಳುತ್ತಿರುವ ರೋಗಿಗಳನ್ನು ಬಹಳ ಸುಲಭವಾಗಿ ವಾಸಿಮಾಡಿ ಪ್ರಸಿದ್ಧಿಗೆ ಬಂದಿದಾನೆ. ಇವನು ಆ ರೋಗಿಗಳ ಕೀಲುಗಳಮೇಲೆ ಜೇನುಹುಳುಗಳನ್ನು ಬಿಟ್ಟು ಕಚ್ಚಿಸಿ, ರಕ್ತವನ್ನು ಹೀರಿಸುತ್ತಾನೆ. ಸ್ವಲ್ಪವೂ ಬಾಧೆಯಾಗುವುದಿಲ್ಲ. ತರುವಾಯ ಅವರಿಗೆ ವಾಯುರೋಗ ಬರುವುದೇ ಇಲ್ಲವಂತೆ.

*****

ಆಸ್ಟ್ರಿಯಾ ಹಂಗೇರೀ ರಾಜ್ಯದ ಮುಖ್ಯ ಪಟ್ಟಣವಾದ ಬುಡಾಪೆಸ್ಟನಲ್ಲಿ ಒಂದು ದೊಡ್ಡ ಅಂಗಡಿಗೆ ಬೆಂಕಿಬಿದ್ದು ಅಂಗಡಿಯಲ್ಲಿದ್ದ ವಿಶೇಷವಾದ ಸಾಮಾನೆಲ್ಲಾ ಸುಟ್ಟು ಹೋದುದಲ್ಲದೆ, ಅದರ ಪಕ್ಕದಲ್ಲಿರುವ ಕೆಲವು ಮನೆಗಳು ಹತ್ತಿಕೊಂಡವು. ಜನರು ಗಾಬರಿಬಿದ್ದು ಕಿಟಕಿಗಳಿಂದ ದುಮಿಕಿದರು. ೧೩ ಮಂದಿ ಸತ್ತರು, ೧೪ ಮಂದಿಗೆ ಗಾಯಗಳಾದವು. ಇನ್ನೂ ೩೦ ಜನಜನರ ಬೆಂಕಿ ಉರಿಯಲ್ಲಿ ಸಿಕ್ಕಿ ಸತ್ತಿರಬೇಕೆಂದು ಹೇಳುತ್ತಾರೆ.

*****

ಜಪಾನಿನವರು ದೋಣಿಗಳಲ್ಲಿ ಕುಳಿತುಕೊಂಡು ಕಾಮುಶ್ಚಾಟ್ಕಾ ಎಂಬ ಪರ್ಯಾಯ ದ್ವೀಪದ ಬಳಿಗೆ ಹೋಗಿ ಅಲ್ಲಿ ಬೆಸ್ತರಿಂದ ಮೀನುಗಳನ್ನು ಕೊಂಡು ತರುತ್ತಿದ್ದರು. ರಷ್ಯಾದವರು ಅಂಥಾ ಕೆಲವು ದೋಣಿಗಳನ್ನು ಹಿಡಿದುಕೊಂಡು, ಅದು ನ್ಯಾಯವಿರುದ್ಧವಾದ ವ್ಯಾಪಾರವೆಂದು ಹೇಳಿ, ೬೪ ಮಂದಿ ಜಪಾನೀಯರನ್ನು ಕೈಸೆರೆ ಹಿಡಿದರು. ೬೩೪ ಜನರನ್ನು ಬೇರೆ ಹಿಡಿದು ಅವರಿಂದ ಭಾಷೆ ತೆಗೆದುಕೊಂಡು ಬಿಟ್ಟುಬಿಟ್ಟರು. ಜಪಾನ್ ರಾಜ್ಯಕ್ಕೂ ರಷ್ಯಾದವರಿಗೂ ಯುದ್ಧ ನಡೆಯಲು ಇದೇ ಕಾರಣವಾಗುವುದೋ ಏನೋ.

*****

ಉತ್ತರ ನೈಗೇರಿಯಾ ರಾಜ್ಯದಲ್ಲಿ ಇಂಗ್ಲೀಷರಿಗೂ ಅಲ್ಲಿನ ಅರಬರಿಗೂ ಬುರ್ಮಿ ಎಂಬ ಸ್ಥಳದಲ್ಲಿ ಕಳೆದ ತಿಂಗಳು ೨೯ ರಲ್ಲಿ ಒಂದು ಭಯಂಕರವಾದ ಯುದ್ಧ ನಡೆದು ಇಂಗ್ಲೀಷರಿಗೆ ಜಯಪ್ರದ ಉಂಟಾಯಿತು. ಇಂಗ್ಲೀಷರ ಕಡೆ ೫೩೦ ಮಂದಿ ಸೈನಿಕರು ಆ ಸ್ಥಳವನ್ನು ಮುಗ್ಗಿ ಹಲ್ಲೆ ಹತ್ತಿದರು. ಅರಬರ ಕಡೆ ಅವರೂ ಅವರ ಕೈಕೆಳಗಿನ ಮುಖಂಡರೂ ಸೇರಿ ೬೦೦ ಮಂದಿಯು ಜನ ಮೃತಪಟ್ಟರು. ಇಂಗ್ಲೀಷರ ಕಡೆಯವರಲ್ಲಿ ಒಬ್ಬ ಉದ್ಯೋಗಸ್ಥನೂ ಹಾಲ್ಯರು ಸೈನಿಕರೂ ಕೊಲ್ಲಲ್ಪಟ್ಟರು. ಮೂವರು ಉದ್ಯೋಗಸ್ಥರಿಗೂ ೬೦ ಮಂದಿ ಸೈನಿಕರಿಗೂ ಗಾಯಗಳಾಗಿವೆ.

*****

ಅಮೇರಿಕಾ ರಾಜ್ಯದಲ್ಲಿ ನ್ಯೂಯಾರ್ಕ್ ಸೆಂಟ್ರಲ್ ಎಂಬ ರೈಲ್ವೆ ಕಂಪನಿಯವರು ತಮ್ಮ ರೈಲ್ ಗಾಡಿಗಳಲ್ಲಿ ಪ್ರತಿವರುಷವೂ ಒಂಭತ್ತು ಕೋಟಿ ಪ್ರಜೆಗಳನ್ನು ಊರಿಂದೂರಿಗೆ ಒಯುತ್ತಾರೆ. ಈ ಕಂಪನಿ ಪ್ರಾರಂಭವಾದಾರಭ್ಯ ಆ ರೈಲ್ವೆ ಗಾಡಿಗಳಲ್ಲಿ ಇದುವರೆಗೆ ೫೦ ಕೋಟಿಯೂ ೫೦ ಲಕ್ಷ ಪ್ರಜೆಗಳು ಪ್ರಯಾಣ ಮಾಡಿರುತ್ತಾರೆ. ಒಬ್ಬನಿಗಾದರೂ ಕಷ್ಟ ಅಪಾಯ ಸಂಭವಿಸಲಿಲ್ಲ. ಅಮೇರಿಕ ರಾಜ್ಯದಲ್ಲೆಲ್ಲಾ ಪ್ರತಿ ೧೫೦—೧೬೦ ಲಕ್ಷ ರೈಲ್ವೆ ಪ್ರಯಾಣಸ್ಥರಲ್ಲಿ ಒಬ್ಬನಂತೆ ಪ್ರಾಣ ಕಳೆಕೊಳ್ಳುವನು. ಅಮೇರಿಕೆಯಲ್ಲಿ ರೈಲ್ವೆ ಪ್ರಯಾಣವು ಬಹು ಸುರಕ್ಷಿತವಾದುದೆನ್ನುವುದಕ್ಕೆ ಸಂಶಯವಿಲ್ಲ.

*****

ಇಟಲಿ ರಾಜ್ಯಕ್ಕೆ ಸೇರಿದ ನೇಪಲ್ಸ್ ಪಟ್ಟಣದ ಬಳಿ ಇರುವ ವಿಸೂವಿಯಸ್ ಎಂಬ ಪರ್ವತದ ಬಾಯಿಯಿಂದ ಕಾದ ಲೋಹಗಳ ಕಲ್ಲುಮಣ್ಣು ದ್ರವರೂಪವಾಗಿ ಹರಿದು ಬರುತ್ತಿವೆ. ಆಗಾಗ್ಯೆ ಬಹು ಬಲವಾದ ಸ್ಫೋಟವಾಗುವುವು. ಅದರ ಸುತ್ತಲೂ ಇರುವ ಗ್ರಾಮಗಳಿಗೆ ಅವಘಡ ಅಪಾಯವೇನೂ ಆಗಲಾರದೆಂದು ಹೇಳುತ್ತಾರೆ. ಕಾದ ಲೋಹಗಳೂ ಮಣ್ಣು ಕಲ್ಲು ಪೂರ್ವದಲ್ಲಿ ನಾಶಹೊಂದಿದ ಪಾಂಪೆಯ ನಗರದ ಕಡೆ ಹರಿದು ಹೋಗುತ್ತಿದೆ. ನೇಪಲ್ಸ್ ಪಟ್ಟಣಕ್ಕೆ ಯಾವ ಅಪಾಯವೂ ಸಂಭವಿಸುವಂತೆ ತೋರುವದಿಲ್ಲ. ಆ ಪರ್ವತದ ತಪ್ಪಲಿನಲ್ಲಿದ್ದ ಕೆಲವು ಹೊಲಗಳು ನಾಶಹೊಂದಿದವು.

*****

ಮೆಸಿಡೋನಿಯಾ ರಾಜ್ಯದಲ್ಲಿ ಪ್ರಜೆಗಳು ದಂಗೆಯೆದ್ದು ಪ್ರೆಸಿಡೆಂಟ್ ಕಾಸ್ತ್ರೋ ಎಂಬಾತನನ್ನು ಅಧಿಕಾರದಿಂದ ತಪ್ಪಿಸಬೇಕೆಂದು ಪ್ರಯತ್ನ ಪಡುತ್ತಿದ್ದಾರೆ. ಆ ದಂಗೆಕೋರರು ಅಲ್ಲಿರುವ ಫ್ರೆಂಚ್, ಜರ್ಮನ್, ಇಟಾಲಿಯನ್ ದೇಶಸ್ಥರಾದ ವರ್ತಕರಿಂದ ಕಂದಾಯಗಳನ್ನು ವಸೂಲ್ಮಾಡಿಕೊಂಡರು. ಈಗ ಪ್ರೆಸಿಡೆಂಟ್ ಕಾಸ್ತ್ರೋ ಎಂಬ ಅಧಿಪತಿಯು ಅದೇ ವರ್ತಕರಿಂದ ಕಂದಾಯಗಳನ್ನು ತಗೆದುಕೊಳ್ಳಬೇಕೆಂದು ಕೇಳಿದ್ದಕ್ಕೆ ಅವರು ಎರಡುಸಲ ಕೊಡುವುದಕ್ಕಾಗುವದಿಲ್ಲವೆಂದು ಉತ್ತರ ಕೊಟ್ಟರು. ಈ ಕಾರಣಕ್ಕಾಗಿ ಆ ಅಧಿಪತಿಯು ಅವರನ್ನೆಲ್ಲಾ ಸೆರೆಮನೆಗಳಲ್ಲಿ ಹಾಕಿಸಿರುವಂತೆ ಒಂದು ವರ್ತಮಾನಬಂದಿದೆ.

*****

ರಷ್ಯಾ ರಾಜ್ಯದ ಸೇನಾಪತಿಯಾದ ಕುರೋಪಾಟ್ಕಿನ್ ಎಂಬಾತನು ಜಪಾನ್ ರಾಜ್ಯದ ಕಡೆ ಸಂಚಾರ ಮಾಡುತ್ತಾ ಟೋಕಿಯೋ ಎಂಬ ನಗರದಿಂದ ರಷ್ಯಾ ಚಕ್ರವರ್ತಿಯವರಿಗೆ ೧,೬೦೦ ಮಾತುಗಳುಳ್ಳ ಒಂದು ದೊಡ್ಡ ತಂತೀ ವರ್ತಮಾನವನ್ನು ಕಳುಹಿಸಿದನು. ಕೊಟ್ಟ ದಿನವೇ ಈ ವರ್ತಮಾನವು ಚಕ್ರವರ್ತಿಯವರಿಗೆ ತಲುಪಬೇಕಾಗಿತ್ತು; ಆದರೆ ಮೂರು ದಿನ ತಡವಾಗಿ ನಾಲ್ಕನೆ ದಿನ ಚಕ್ರವರ್ತಿಯವರಿಗೆ ಮುಟ್ಟಿತು. ಅವರು ಅದನ್ನು ಓದಿ ನೋಡಿಕೊಂಡು ಬಹಳ ಆಗ್ರಹಯುಕ್ತರಾಗಿ—ನನಗೆ ಬರುವ ವರ್ತಮಾನವನ್ನೇ ಈ ಆಲಸ್ಯದಿಂದ ಇಷ್ಟು ತಡವಾಗಿ ಕಳುಹಿಸುವುದಾದರೆ ಸಾಧಾರಣ ಜನರಿಗೆ ಬರುವ ವರ್ತಮಾನವ ಇನ್ನೆಷ್ಟು ಸಾವಕಾಶಕ್ಕೆ ಬರುವುದೋ ಎಂದು ಹೇಳುತ್ತಾ, ಆ ತಂತೀ ವರ್ತಮಾನ ಮಾರ್ಗದಲ್ಲಿದ್ದ ಸಿಬ್ಬಂದಿ ಗುಮಾಸ್ತರೆಲ್ಲಾ ಆ ಕೂಡಲೆ ಕೆಲಸದಿಂದ ವಜಾಮಾಡಿಸಿಬಿಟ್ಟರು.

## ಒಳ್ಳೇ ಔಷಧಗಳು.

8

**ಮಕ್ಕಳವ್ಯಾಧಿಗೆ ಸುಖಸಂಜೀವಿನಿ.**—ಹೊಸತಾಗಿ ಅಥವಾ ಬಹು ಕಾಲದಿಂದ ಕಣ್ಣಿನಲ್ಲಿ ಇರುತ್ತಿದ್ದ ಎಲ್ಲ ಪ್ರಕಾರದ ಬಾಧೆಗಳು ಇದರಿಂದ ಬಹು ಬೇಗನೆ ಗುಣ ಹೊಂದುವವು. ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು, ಪಿಸರೂ ಬರುತ್ತಿರುವದೂ, ಇರಿ, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದೂ, ದೃಷ್ಟಿಮಾಂದ್ಯ ಮುಂತಾದ ವಿಶಿಷ್ಟ ವ್ಯಾಧಿಗಳು ಗುಣ ಹೊಂದುತ್ತವೆ. ಕ್ರಯ ಡಬ್ಬಿಗೆ ೦ ಆ. ಪೋಸ್ಟ ಖರ್ಚು ಆಣೆ ೨.

**ಮಹಾನಾರಾಯಣ ತೈಲ (ಬಾಹ್ಯಲೇಪನಕ್ಕೆ ಮಾತ್ರ).**—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವ ಇತರ ವಾಯುಗಳ ಬಾಧೆ, ತಲೆನೋವು, ಚಿಕ್ಕ ಮಕ್ಕಳ ಕಾಸ, ಕೆಮ್ಮು, ಕೂಸ ಗುಣ ಹೊಂದುವವು. ಕುಪ್ಪಿಗೆ ೧ ರೂ. ಖರ್ಚು ಆಣೆ ೨.

*ಗರ್ಭಪಾತಕ ಮಾತ್ರೆ.*—೨ ಯಾ ೩ ಅವಧಿ ಕೆಟ್ಟು ಹೋದ ಕೂಡಲೇ ಎಂಥ ಕಠಿಣವಾದ ಗರ್ಭವಾದರೂ ಇದ್ದರೂ ಪೂರ್ಣ ಗುಣ ಹೊಂದುವದು. ಡಬ್ಬಿಗೆ ಆಣೆ ೮. ಖರ್ಚು ೧ ರಿಂದ ೬ ಡಬ್ಬಿ ವರೆಗೆ ಆಣೆ ೨.

**ಕರ್ಣಸ್ರಾವಕ್ಕೆ ವನೌಷಧಿ ತೈಲ (ಬಾಹ್ಯೋಪಚಾರಕ್ಕೆ ಮಾತ್ರ).**—ಚಿಕ್ಕ ಪ್ರಾಯದವರ ಮತ್ತು ಪ್ರೌಢ ಪ್ರಾಯದವರ ಕಿವಿಯಿಂದ ರಕ್ತವಾಗಲಿ ಕೀವು ಆಗಲಿ ನೀರಿನಂಥ ದ್ರವವಾಗಲಿ ಹೊಸತಾಗಿ ಅಥವಾ ಬಹುಕಾಲದಿಂದ ಹರಿಯುತ್ತಿದ್ದರೆ ಮತ್ತು ಅದರ ಮೂಲಕ ನೋವೂ ಕಳತವೂ ಕುರುಹುವಿಕೆಯೂ ಇರುತ್ತಿದ್ದರೆ, ಇದರ ಉಪಯೋಗದಿಂದ ಬಹು ಬೇಗನೇ ಸಂಪೂರ್ಣ ಗುಣವು ಪ್ರಾಪ್ತವಾಗುವದು. ಕ್ರಯ ರೂ. ೧. ಖರ್ಚು ಆಣೆ ೨.

ವ್ಹಿ. ಪಿ. ಯಿಂದಲೂ ರವಾನಿಸುವೆವು. ಇನ್ನೂ ಅನೇಕ ಉತ್ತಮವಾದ ಔಷಧಗಳ ಬಗ್ಗೆ ನಮ್ಮ ಕ್ಯಾಟ್ಲಾಗು ತರಿಸಿ ಓದಿ ನೋಡಿ. ನಮ್ಮ ವಿಳಾಸವೇನಂದರೆ.—

ಶಾಬವೈದ್ಯ ಮತ್ತು ಕಂಪನಿ, ಬಿಳಗಿ, ಉತ್ತರ ಕನ್ನಡಾ ಜಿಲ್ಲಾ.

---

## ಹೋಮೋಸಿಯಾ.

ಸಕಲ ಪೀಡಾಹರ.

ತಗಲುತ್ತಲೇ ನೋವು ಮಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಪ್ರಪಂಚದಲ್ಲಿ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಸೆಳೆತ, ಗಾಯ, ಹುಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಹುಣ್ಣುಗಳು, ಗೆಡ್ಡೆಗಳು, ದಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್, ಖರ್ಚು ಮಾಫಿ ಬಿಡುತ್ತೆ.

❖❖❖❖❖❖❖❖❖

ಹೋಮೋಸಿಯಾ ಯಂಬ್ರೊಕೇಷನ್.

---

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಹೀರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ಕುಂಬ ೮ ಆಣೆಗೂ, ೧ ರೂ. ಗೂ ಬಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಭಾಗಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರವೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪನಿ, ೨೯ ಸೆಕಂಡು ಬೀಚ್ ಲೈನ್, ಮದರಾಸ್.

## ಶ್ರೀ ಕೃಷ್ಣವಿಲಾಸ ಪ್ರೆಸ್.

41

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್ ಫಾರಂ, ವಿಜಿಟಿಂಗ್ ಕಾರ್ಡ್, ನೋಟೀಸ್ ಫಾರಂ, ಬ್ಯಾಲನ್ಸ್ ಷೀಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಛಾರ್ಜುಗಳಿಗೆ ಮಾಡಲ್ಪಡುತ್ತವೆ.

ರೋಜು, ವರ್ಗ, ಮುಂತಾದ ಖಾಲೀ ಪುಸ್ತಕಗಳು; ನಾನಾ ವಿಧವಾದ ಗೋಲ್ಡ ಗಿಲ್ಟ ಕೆಲಸಗಳು; ಇನ್ನು ಇತರವಾದ ಸಮಸ್ತ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿನಂತೆ ಬಹು ಅಂದವಾಗಿ ತಯಾರಿಸಲ್ಪಡುತ್ತವೆ.

ಲಾಯರ್‌ಗಳ ಉಪಯೋಗಾರ್ಥವಾಗಿ ಬೇಕಾಗಿರುವ ವಕಾಲತ್ ನಾಮಾ, ಚಾರ್ಜಿ, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಛಾಪಿರಿಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯಿತಿಯಿಂದ ನವೀನವಾದ ಟೈಪು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯಕರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಜವಾಬನ್ನು ಅಪೇಕ್ಷಿಸುವವರು ಟಪ್ಪಾಲು ಹಾಸಲನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯತಕ್ಕವರು ನಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡ ಪೇಟೆ ೨೫ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

---

ಜ್ವರ ಹರಿ. 47




ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೬೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೬೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ೨ ರೂ., ೧೧ ರೂ.; ಅನೇಕರು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

❖❖❖❖❖❖❖❖❖

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಕೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ವರತು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹನ್ನಿಯು ಓಮಂ ಕರ್ಪೂರವನ್ನು ನಾನೂ ನನ್ನ ಸಾಹೇಬರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ದಾಸ್ತಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರನ್ನಿಂದ ನಿಕೇವ:—
ಕಲ್ಲಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕಂಡ್ ಬೀಚ್ ಲೈನ್, ಮದರಾಸ್.

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

14—8—1903 ರಿಂದ 21—8—1903 ರ ವರೆಗೆ.

| ಸ್ಥಳ. | ಪ್ಲೇಗ್ ಹಿಡಿದವು. | ಪ್ಲೇಗ್ ಸತ್ತವು. | ಹಿಂದಿನ ಸಂಖ್ಯೆಗಳು |
|---|---|---|---|
| ಬೆಂಗಳೂರು ಪಟ್ಟಣ | 9 | 8 | 5 |
| ಮೈಸೂರು ,, | 74 | 65 | 64 |
| ಬೆಂಗಳೂರು ಡಿಸ್ಟ್ರಿಕ್ಟ್ | 89 | 71 | 197 |
| ಮೈಸೂರು ,, | 105 | 82 | 40 |
| ಕೋಲಾರ್ ,, | 32 | 30 | 58 |
| ಕೋಲಾರ್ ಚಿನ್ನದ ಗಣಿಗಳು | 9 | 4 | 7 |
| ತುಂಕೂರು ಡಿಸ್ಟ್ರಿಕ್ಟ್ | 78 | 72 | 105 |
| ಹಾಸನ ,, | 7 | 9 | 35 |
| ಚಿತ್ರದುರ್ಗ ,, | 123 | 90 | 151 |
| ಕಡೂರ್ ,, | 1 | 1 | 1 |
| ಶಿವಮೊಗ್ಗ ,, | 75 | 63 | 80 |
| ಒಟ್ಟು. | 600 | 473 | [illegible] |

---

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರದ ಭಾದ್ರಪದ ಶುದ್ಧ ದ್ವಾದಶಿ ಗುರುವಾರದಿಂದ ಭಾದ್ರಪದ ಬಹುಳ ಬಿದಿಗೆ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಸೆಪ್ಟಂಬರ್.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. |
|---|---|---|---|---|---|
| 3 | ಗುರು * | ದ್ವಾದಶಿ | 42 26 | ಉ.ಷಾ | 36 20 |
| 4 | ಶುಕ್ರ | ತ್ರಯೋದಶಿ | 47 17 | ಶ್ರ | 42 52 |
| 5 | ಶನಿವಾರ † | ಚತುರ್ದಶಿ | 52 8 | ಧ | 49 8 |
| 6 | ರವಿವಾ ‡ | ಪೌರ್ಣಮಿ | 56 20 | ಶ | 54 18 |
| 7 | ಚಂದ್ರ | ಪಾಡ್ಯಮಿ | 60 0 | ಪೂ.ಭಾ | 60 0 |
| 8 | ಭೌಮ | ಪಾಡ್ಯಮಿ | 0 8 | ಪೂ.ಭಾ | 0 4 |
| 9 | ಬುಧ ¶ | ಬಿದಿಗೆ | 2 10 | ಉ.ಭಾ | 3 32 |

* ವಾಮನಜಯಂತಿ. † ಅನಂತಪದ್ಮನಾಭ ವ್ರತ ‡ ಉಮಾಮಹೇಶ್ವರ ವ್ರತ. ಅಪರಪಕ್ಷಾರಂಭ. ¶ ಯಮತ್ರಿತೀಯಾ

---

## ಪೇಟೆ ಧಾರಣೆ.

| ದಿನಸು. | | ಮೈಸೂರು. | ಬೆಂಗಳೂರು |
|---|---|---|---|
| ಕಿತ್ತೀ ಅಕ್ಕಿ ಪಲ್ಲಾ ೧ಕ್ಕೆ | ರೂ. | ೧೧-೮-೦ | ೧೦- |
| ಕೆಂಬತ್ತಿ ಅಕ್ಕಿ ಅವಲ್ | .. | ೧೦-೪-೦ | ೧೦- |
| ,, ದುಯಂ | .. | ೯-೮-೦ | ೯- |
| ಜಾಬ್ರಾಳೆ ಅಕ್ಕಿ | .. | ೯-೪-೦ | ೧೩- |
| ಸಣ್ಣಕ್ಕಿ ಅವಲ್ | .. | ೧೨-೮-೦ | ೧೩- |
| ,, ದುಯಂ | .. | ೧೨-೬-೦ | ೧೧-೦ |
| ತೊಗರೀ ಬೇಳೆ ಪಲ್ಲಾ ೧ಕ್ಕೆ | .. | ೧೩ ೦-೦ | ೧೪- |
| ,, ದುಯಂ | .. | ೧೨-೮-೦ | ೧೩- |
| ಕೈರ್ ರಾಗಿ ಪಲ್ಲಾ ೧ಕ್ಕೆ | .. | ೩-೧೪-೦ | ೩- |
| ಕಾರ್ರಾಗಿ | .. | ೩-೮-೦ | ೩- |
| ಜೋಳ | .. | ೩-೧೦-೦ | ೫- |
| ಹುರುಳಿ ಪಲ್ಲಾ ೧ಕ್ಕೆ | .. | ೩-೧೨-೦ | ೩- |
| ಬಿಳೀ ಅವರೆ | .. | ೩ ೦-೦ | ೩- |
| ಹೆಸರು | .. | ೮-೦-೦ | ೮- |
| ಉದ್ದು | .. | ೮ ೪ ೦ | ೮- |
| ಕಡಲೆ | .. | ೯ ೮-೦ | ೯- |
| ಎಳ್ಳು | .. | ೧೬ ೧೨ ೦ | ೧೬- |
| ಹುರುಳಿ | .. | ೪-೦ ೦ | ೪- |
| ಹರಳು ೧೨೩ ಸೇರಿಗೆ | .. | ೯-೧೨-೦ | ೫-೦ |
| ಸೀಗೇಕಾಯಿ ಮಣ ೧ಕ್ಕೆ | .. | ೧-೮-೦ | ೧- |
| ಮೆಣಸಿನಕಾಯಿ | .. | ೨-೮-೦ | ೨- |
| ,, ದುಯಂ | .. | ೨-೪ ೦ | ೧- |
| ಬೆಲ್ಲ ಹೊಸ್ತು ಅಚ್ಚು | .. | ೪-೮-೦ | ಮ ೦- |
| ಒಳ್ಳೆಣ್ಣೆ ಮಣ ೧ಕ್ಕೆ | .. | ೫-೦ ೦ | ೪- |
| ಹರಳೆಣ್ಣೆ ,, | .. | ೩-೧೨-೦ | ೨- |
| ಕೊತ್ತುಂಬರಿ ಪಲ್ಲ ೧ಕ್ಕೆ | .. | ೫-೮-೦ | ೪- |
| ಉಪ್ಪು ,, | .. | ೯-೦-೦ | ೮- |
| ಹುಣಸೇ ಹಣ್ಣು | .. | ೬-೧೪-೦ | ೬-೦ |
| ,, ಹಳೇದು | .. | ೬-೧೦-೦ | ೬-೦. |
| ಹುಕ್ಕು | .. | ೧೬-೧೨-೦ | ೧೬- |
| ಸೀಮೆಯೆಂಣೆ ಪೆಟ್ಟಿ ೧ಕ್ಕೆ | .. | ೪ ೯-೦ | ೩-೦ |
| ತೆಂಗಿನಕಾಯಿ ೧೦೦ ಕ್ಕೆ | .. | ೪-೪-೦ | ೩-೦ |
| ಅಳಲೇಕಾಯಿ ಮಣ ೧ಕ್ಕೆ | .. | ೬-೧೪ ೦ | ೬-೦ |
| ಅಂಟ್ವಾಳದಕಾಯಿ ಮಣ ೧ಕ್ಕೆ | .. | ೬-೧೪-೦ | ೬- |
| ಚಿನ್ನ (ಪೌನ್) ಕೆಂಪು | .. | ೧೫-೪-೦ | ೧೫- |
| ,, ,, ಪಸುಮೆ | .. | ೧೫-೮-೦ | ೧೫-೦ |
| ,, ,, ಗಟ್ಟಿ ತೊಲ ೧ಕ್ಕೆ | .. | ೨೩-೦-೦ | ೨೪- |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ | .. | ೯೨-೦-೦ | ೯೦- |

---

Printed and Published by the Rev E. W. Thompson, the Proprietor and Manager, Wesleyan Mission Press, Mysore. 3/9/1903.

# ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು —:0:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩ | ಮೈಸೂರು—ಸನ್ ೧೯೦೬ ನೇ ಇಸವಿ ಸೆಪ್ಟೆಂಬರ್ ತಾರೀಖು ೧೦ ನೇ ಗುರುವಾರ. | ಸಂಚಿಕೆ ೧೫



## ಕ್ಷೇತ್ರಗಣಿತ ಸಂಗ್ರಹ.

7

ಈ ಹೊಸ ಪುಸ್ತಕವನ್ನು ಮೈಸೂರು ಶಿವರಾಮಪೇಟೆ ಸ್ಕೂಲು ಹೆಡ್ಮಾಸ್ಟರು ಟಿ. ಯಂ. ರಾಮಸ್ವಾಮಯ್ಯನವರು ಬರೆದಿರುತ್ತಾರೆ. ಇದರಲ್ಲಿ ಸುಮಾರು ಸಾವಿರ ಲೆಕ್ಕಗಳೂ ಮೈಸೂರು ದೇಶೀಯ ಪರೀಕ್ಷೆಯ ಪ್ರಶ್ನಪತ್ರಿಕೆಗಳೂ ಉತ್ತರಗಳೊಡನೆ ಅಡಕವಾಗಿವೆ. ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆಯುವಂತೆ ಅಲ್ಪಕ್ರಯಕ್ಕೆ ಮಾರಲ್ಪಡುತ್ತದೆ. ಕ್ರಯ ೪ ಆಣೆ, ಹಾಸಲು ೧ ಪೈ. ವಿಳಾಸ.—

ಪ್ರಾಪ್ರೈಟರ್,

ಸಿ. ಎಲ್. ಎಸ್. ಬುಕ್ ಡಿಪ್ಪೋ, ಮೈಸೂರು.

---

## ಸ್ಟಾಂಡರ್ಡ್ ಲೈಫ್ ಅಷ್ಯೂರೆನ್ಸ್ ಕಂಪೆನಿ.

6

ಸನ್ ೧೮೨೫ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಇಂಡಿಯಾ ದೇಶದಲ್ಲಿ ಲೈಫ್ ಇನ್ಷ್ಯೂರೆನ್ಸ್ ಯಾನೆ ಜೀವ ವಿಮೆಯನ್ನು ಭೀಮಾ ಮಾಡಿಕೊಳ್ಳುವ ಕಂಪೆನಿಗಳಲ್ಲಿ ಇದು ಬಹು ಹಳೇದಾಗಿಯೂ ಕಟ್ಟುಬದ್ಧ ಬಂಡವಾಳವುಳ್ಳದ್ದಾಗಿಯೂ ಇದೆ.

ಭೀಮಾದಾರರಾಗತಕ್ಕವರು (ಲೈಫ್ ಎಷ್ಯೂರ್ ಮಾಡತಕ್ಕವರು) ಈ ಕಂಪೆನಿಯ ಚಂದಾ ದರ, ಷರತ್ತುಗಳು ಮೊದಲಾದವುಗಳನ್ನು ಇತರ ಕಂಪೆನಿಯವುಗಳೊಡನೆ ಹೋಲಿಸಿನೋಡಿದರೆ ಇಲ್ಲಿ ಜೀವವಿಮೆಯನ್ನು ಭೀಮಾ ಮಾಡುವವರಿಗೆ ಎಷ್ಟು ಸೌಕರ್ಯಗಳುಂಟೆಂಬುದು ಗೊತ್ತಾಗುತ್ತದೆ.

ಈ ಕಂಪೆನಿಯ ಭೀಮಾ ನಿಬಂಧನೆಗಳು ಬಹು ಅನುಕೂಲವಾದುವು. ಭೀಮಾದಾರರುಗಳಿಗೆ ತೊಂದರೆಯನ್ನುಂಟುಮಾಡುವ ನಿರ್ಬಂಧಗಳೇನೂ ಇಲ್ಲ.

ನಿಶ್ಚಿತವಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲೇ ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂಪಾಯಿಗಳನ್ನು ಕಂಪೆನಿಯವರು ಕೊಡುವ ಲಾಭಸಹಿತವಾಗಿ ಪಡೆಯಬೇಕಾದರೆ ಭೀಮಾದಾರನು ಕಂಪೆನಿಗೆ ಕೊಡಬೇಕಾದ ಚಂದಾ ವಿಷ ದರಗಳ ಪೈಕಿ ಕೆಲವನ್ನು ಇಲ್ಲಿ ನೋಡಿ

| ಪಾಲಿಸಿಯೆತ್ತುವ ವಯಸ್ಸು. | ೬೦ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಪಡೆಯಬೇಕಾದರೆ ವಾರ್ಷಿಕವಾಗಿ ಕಂಪೆನಿಗೆ ಕೊಡುವದು. | ೫೫ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಯನ್ನು ಪಡೆಯಬೇಕಾದರೆ ವಾರ್ಷಿಕವಾಗಿ ಕಂಪೆನಿಗೆ ಕೊಡುವದು. |
|---|---|---|
| ೨೦ | ರೂ. ೩—೧೨—೮ | ರೂ. ೩—೦—೦ |
| ೨೫ | ,, ೩—೧೫—೪ | ,, ೩—೧೪—೧ |
| ೩೦ | ,, ೯—೧೨—೮ | ,, ೪—೨—೦ |
| ೩೫ | ,, ೧೨—೧೪—೮ | ,, ೧೦—೧—೪ |
| ೪೦ | | ,, ೧೩—೪—೪ |

೨,೦೦೦ ರೂ. ಗಿಂತಲೂ ಹೆಚ್ಚಾದ್ದಕ್ಕಾಗಲಿ ಕಡಮೆಯಾದ್ದಕ್ಕಾಗಲಿ ವಯಸ್ಸಿನಲ್ಲಿ ಹೆಚ್ಚು ಕಡಮೆ ಇದ್ದರಾಗಲಿ ಚಂದಾ ದರವೇನೆಂಬುದನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಇದುವರೆಗೆ ಜಾರಿಯಲ್ಲಿದ್ದ ಚಂದಾ ದರಗಳನ್ನು ಕಡಮೆ ಮಾಡಿರುತ್ತೇವೆ. ಈ ವರ್ಷಕ್ಕೆ ತಯಾರಾಗಿರುವ ಹೊಸ ಚಂದಾ ಪಟ್ಟಿಯನ್ನೂ ಭೀಮಾ ದರಖಾಸ್ತು ಫಾರಂಗಳನ್ನೂ ಇದೇ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಎಂ. ಸೂರ್ಯನಾರಾಯಣಪ್ಪ,

ಇನ್ಸ್‌ಪೆಕ್ಷನ್ ಮತ್ತು ಜನರಲ್ ಏಜನ್ಸಿ,

ಶಿವಮೊಗ್ಗೆ.

---

## ಸರಸ್ವತೀಕರ ಕಸ್ತೂರಿ ಮಾತ್ರೆಯು.

13

ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥಾವರಿಗೆ ಅತ್ಯಂತ ಉಪಯುಕ್ತವಾದದ್ದು. ಈ ಮಾತ್ರೆ ೧—೨ ತಾಂಬೂಲದ ಸಂಗಡ ಸೇವಿಸುವದರಿಂದ ಬಾಯಿಯ ಸುವಾಸನೆಯುಂಟಾಗಿ ಬಾಯಿಯ ದುರ್ಗಂಧ, ಬೋಗಿ ಅಜೀರ್ಣ, ಉಷ್ಣರೋಗ, ಬಾಯಿಯ ಹೋಲ್ಕು, ಉಗ್ಗಿಸುತ್ತಾ ಮಾತಾಡುವದು, ವಾಯು, ಶೀತ, ಪಿತ್ಥ, ಮಲಬದ್ಧ, ದಂತದೋಷ, ಬಾಯಿಹುಣ್ಣು, ಹಸಿವು, ಜ್ವರ, ಛರ್ದಿ, ನೆಗಡಿ, ತಲೆಶೂಲೆ ಇತ್ಯಾದಿ ಅನೇಕ ರೋಗಗಳೆಲ್ಲಾ ದೂರವಾಗುವಂತಿರುವದು. ಹೆಂಗಸರ ಗುಪ್ತವಾದ ಅನೇಕ ಜಾಡ್ಯಗಳಿಗೆ ವಜ್ರಾಯುಧದಂತಿರುವದು. ಚಿಕ್ಕ ಮಕ್ಕಳಿರುವ ಮನೆಯಲ್ಲಿ ಈ ಮಾತ್ರೆಯು ಸಂಜೀವನವು. ಈ ಮಾತ್ರೆಯು ನಿಮ್ಮಲ್ಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸ್ವಾಧೀನದಲ್ಲಿದ್ದಂತೆಯೇ. ೨೦೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೫ ಆಣೆ, ೫ ಆಣೆ ದ ಷ ಧ ರ ೨ ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವೇ ನನ್ನ ಬರೆಯುವಹಾಗೆ ಬಲಾತ್ಕಾರಪಡಿಸುವದು.

ಸಿ. ಪಿ. ಅಂಡ್ ಕಂಪೆನಿ, ಬೆಂಗಳೂರು ಸಿಟಿ.

---

## ROBINSON'S PATENT BARLEY.

## ರಾಬಿನ್ಸನ್‌ಯವರ ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಏಕಧಾನ್ಯದಿಂದ ಮಾಡಿದೆ. ಹಸ್ತಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾರಾದ್ದರಿಂದ ನಾತಿ ನ್ಯಾಯವಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ಸವ್ಯರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

---

## MELLIN'S FOOD.

ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

76

೧. ಮೆಲ್ಲಿನ್'ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್'ರು ಮಾಡಿರುವ ಆಹಾರವು ದೇಹದ ನರಗಳೂ ಮೂಳೆಗಳೂ ಚೆನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್'ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್'ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಕಮಾಡತಕ್ಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ

೫. ಮೆಲ್ಲಿನ್'ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನ್'ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್'ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್'ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಪಾಕ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಕೂಸುಗಳಿಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್'ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ಹಿಟ್ಟು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್'ರು ಮಾಡಿರುವ ಆಹಾರವು ಕೂಸುಗಳಿಗೆ ಸಿಡುಬು ಹಾಕಿದ ಕಾಲದಲ್ಲಿಯೂ ಜ್ವರದಲ್ಲಿಯೂ ಒದಗುವ ವಿಕಾರ್ಯದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್'ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್'ರು ಮಾಡಿರುವ ಆಹಾರದಲ್ಲಿ ಗುಣಕ್ಕೆ ಪದಾರ್ಥವು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್'ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ಪಕ್ಕತಕ್ಕದ್ದಾಗಿದೆ.

೧೪. ಮೆಲ್ಲಿನ್'ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ದೃಢಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ತಡೆಯ ಮಟ್ಟಿಗೆ ಕಡಮೆಮಾಡುತ್ತದೆ.

೧೫. ಮೆಲ್ಲಿನ್'ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಷಾಪುಗಳಿಗೂ ಬರೆದು ತರಿಸಿಕೊಳ್ಳಬಹುದು:—

ಮದ್ರಾಸ್ :—ಮೆ। ಕಾಪಸಿ ದಿವ್'ಷಾ ಬ್ರದರ್ಸ್.

ಬೊಂಬಾಯಿ :—ಮೆ। ಲೇಹಂ ಅಚೆರ್'ಕ್ರಾಂಬಿ ಕಂಪೆನಿ.

ಕಲ್ಕತ್ತಾ :—ಮೆ। ಮೆಕ್ಕೆನ್'ಜಿ ಲಯಲ್ ಕಂಪೆನಿ.

ಕೊಲಂಬೋ :—ಮೆ। ಹಾಲ್ ವಿಲ್ಸನ್ ಕಂಪೆನಿ.

ಕರಾಚಿ :—ಮೆ। ಎಚ್. ಜೆ. ಬುಸ್ತಾಂಜಿ ಕಂಪೆನಿ.

ರಂಗೂನು :—ಮೆ। ಓಕ್ ಕಂಪೆನಿ.

ರಂಗೂನ್—ಲೇಡಂ ಬ್ಲ್ಯಾಕ್ ಕಂಪೆನಿ.

## ಗೋತ್ತಸಂಜೀವಿನಿ.

2

೧ ರೂ. ೯ ಆ.; ವಿ. ಪಿ. ಚಾರ್ಜ್ ೩ ಆ.

ಕೆ. ನರಸಿಂಹಯ್ಯ ಮತ್ತು ಕಂಪನಿ, ಮೈಸೂರು.



### "ಬಸವರಾಜವಿಜಯ."

ಷಟ್ಪದರೂಪವಾಗಿದ್ದು. ಬಾಲಕರು ಕೂಡ ಸುಲಭವಾಗಿ ಓದಿ ತಿಳಿದುಕೊಳ್ಳಬಹುದು. ಬಸವಪುರಾಣದ ಕಥೆಗಳೆಲ್ಲಾ ಇದರಲ್ಲಿ ಎ. ಉದ್ಧವಾದ ಈ ದೊಡ್ಡ ಪುಸ್ತಕ ೧ಕ್ಕೆ ವಿ. ಪಿ. ಸಹಿತ ೧—೪—೦. ೧೨ ಪ್ರತಿಗಳನ್ನು ತರಿಸಿಕೊಂಡರೆ ೧ ಉಚಿತ. ಬೇಕಾದವರು ಮೈಸೂರು ದೊಡ್ಡಪೇಟೆ ಎಂ. ಆರ್. ಕರಿಬಸವಶಾಸ್ತ್ರಿಗಳಿಗೆ ಬರೆದು ತರಿಸಿಕೊಳ್ಳಬೇಕು.


### ಇಸ್ತಿಹಾರ್.

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ.—

ನಾಳೆ ಮೊದಲುಗೊಂಡು ತಾರೀಖು ೧೫ ಲಾಗಾಯತು ಮುಂದೆ ನೋಟೀಸ್ ಕೊಡುವ ವರಿಗೂ ಬೆಳಗುಳದ ವಾಟರ್ ವರ್ಕ್ಸ್‌ನಲ್ಲಿ ರಿಪೇರಿಗೋಸ್ಕರ ಎರಡು ಟರ್ಬೈನುಗಳು ಕೆಲಸ ಮಾಡುವದನ್ನು ನಿಲ್ಲಿಸಲ್ಪಟ್ಟು ಒಂದು ಟರ್ಬೈನ್ ಮಾತ್ರ ಕೆಲಸಮಾಡುವದರಿಂದ ಮೇಲ್ಕಂಡ ಕಾಲದಲ್ಲಿ ಸಹರಿನ ತಗ್ಗು ಪ್ರದೇಶಗಳಲ್ಲಿ ಕುಕ್ಕರಹಳ್ಳಿ ಕೆರೆಯಿಂದ ನಲ್ಲಿಗಳಿಗೆ ನೀರು ಸರಬರಾಯಿ ಮಾಡಲ್ಪಡುವದಲ್ಲದೆ ಎತ್ತರ ಪ್ರದೇಶದ ನಲ್ಲಿಗಳಿಗೆ ಕಾವೇರಿ ನೀರನ್ನು ಪ್ರಾತಃಕಾಲ ೬ ಘಂಟೆ ಲಾಗಾಯತು ೧೦ ಘಂಟೆ ವರಿಗು ಸಂಧ್ಯಾಕಾಲ ೫ ಘಂಟೆ ಲಾಗಾಯತು ೭ ಘಂಟೆ ವರಿಗು ಬಿಡುವಂತೆ ಏರ್ಪಾಟುಮಾಡಿರುತ್ತೆ. ಅಲ್ಲದೆ ಒಂದೇ ಟರ್ಬೈನ್ ಕೆಲಸಮಾಡುವದರಿಂದ ಎತ್ತರ ಪ್ರದೇಶದಲ್ಲಿರತಕ್ಕ ಪಬ್ಲಿಕ್ ಫೌಂಟನುಗಳಲ್ಲಿ ನೀರಿನ ವೇಗವು ಕಮ್ಮಿ ಆಗಬಹುದು. ಆದಕಾರಣ ಫೌಂಟನುಗಳಿಗೆ ನೀರು ಬಿಟ್ಟಿರತಕ್ಕ ಕಾಲದಲ್ಲಿಯೇ ಆ ಪ್ರದೇಶದವರೆಲ್ಲರು ತಮಗೆ ಬೇಕಾಗುವಷ್ಟು ನೀರನ್ನು ತುಂಬಿಕೊಳ್ಳಬೇಕು.

ತಾ|| ೭ನೆ ಸೆಪ್ಟಂಬರು ೧೯೦೩. K. SRINIVASA RAO,
*Vice President*


### ನಿಮ್ಮ ತಲೆಯಮೇಲಿರುವದೇನು?
### ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?
ಹಾಸನದ ಟೋಪಿಗಳೇ.

ಹಾಸನದ ಟೋಪಿಗಳು ಹೊಲಿಯಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಸರಬರಾಜಾದವು? ಬಂದಿರುವದೂ ಹಾಸನದಿಂದಲೇ.

ಈಗ ಇತರ ಕಡೆಗಳಲ್ಲಿ ಸಹಾ ಬಳಕೆ ಆಗುತ್ತಿರುವ ಟೋಪಿಗಳ ದಾರವೆಲ್ಲಾ ಬಿಳಿಯದಾದವು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಸಹಜವಾಗಿ ಬಿಳುಪಿನಿಂದಲೇ ಇರುವದು. (೨) ಟೋಪಿಗಳನ್ನು ಚನ್ನಾಗಿ ನಾವೇ ನಿಂತು ಚನ್ನಾಗಿ ಮಾಡಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಕಸೂತಿಯ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೇ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ.


### ನೋಟೀಸ್.

ಮೈಸೂರು ಅಡಿಷನಲ್ ಮುನ್ಸೀಫ್ ಕೋರ್ಟಿನಲ್ಲಿ.

೧೯೦೩—೦೪ನೆ ಇಸ್ವಿ ಸಿವಿಲ್ ನಂಬರು ೧೫೩.

| ವಾದಿಗಳು. | ಪ್ರತಿವಾದಿ. |
|---|---|
| (೧) ಹುಣಸೂರು ತಾಲ್ಲೂಕು ಪಿರ್ಯಾಪಟ್ಟಣದಲ್ಲಿರುವ ಗೊಲ್ಲರ ದಾಸೇಗೌಡ, (೨)ನೆ ಯಜಮಾನ ಬಲಿವೇಗೌಡ. | ಬಿಟ್ಟೋಜಿ ಗ್ರಾಮದಲ್ಲಿರುವ ಗೊಲ್ಲರ ಚಿಕ್ಕ ಉಗ್ರನಾಯಕನ ಮಗ ನರಸೈಯ್ಯ. |

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.—

ಮೇಲ್ಕಂಡ ನಂಬರಿನಲ್ಲಿ ವಾದಿಗಳು ಪ್ರತಿವಾದಿಯಮೇಲೆ ಹುಣಸೂರು ತಾಲ್ಲೂಕು ಪಿರ್ಯಾಪಟ್ಟಣದ ಗ್ರಾಮದಲ್ಲಿ ವಾದಿಗಳಿಗೂ ಇನ್ನೂ ಗೊಲ್ಲರಜಾತಿ ಗ್ರಾಮಸ್ಥರಿಗೂ ಸೇರಿದ ಕೃಷ್ಣಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟ ಪ್ರತಿವಾದಿಯಲ್ಲಿರುವ ದೇವಸ್ಥಾನದ ಒಡವೆ ವಸ್ತ್ರಗಳು ಮತ್ತು ದನಗಳಿಂದ ವಸೂಲ್ಮಾಡತಕ್ಕ ೧೨೦ ರೂಪಾಯಿಗಳಿಗೂ ಕೋರ್ಟು ಖರ್ಚು ಬಡ್ಡಿ ಬಟ್ಟಗೂ ಸಹ ಈ ಕೋರ್ಟಿನಲ್ಲಿ ದಾವಾ ಹಾಕಿರುತ್ತಾರೆ. ಈ ಮೊಕದ್ದಮೆಗೆ ಕಕ್ಷಿಗಾರನಾಗಿ ಸೇರಲು ಅಪೇಕ್ಷೆಯುಳ್ಳವರು ೧೯೦೩ನೆ ಇಸ್ವಿ ಅಕ್ಟೋಬರು ೫ನೆ ತಾ|| ಬೆಳಿ ೧೧ ಘಂಟೆಗೆ ಕೋರ್ಟು ರೂಬರೂಬು ಹಾಜರಾಗಬೇಕು.

ANANDA RAO SIRSI,
Additional Munsiff's Court, *Additional Munsiff.*
*Mysore,*
3—9—1903.


### ಚೇಂಬರ್ಲೇನ್ ಮನವ ಹೊಟ್ಟೆಕಡಿತ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.




36

ಕೆಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಕಿಬ್ಬಿಲುಗಳ ನೋವು, ಹೊಟ್ಟೆಉಬ್ಬರ—ಈ ರೋಗಗಳಿಗೆ ತಕ್ಕ ಪರಿಹಾರಕ ಈ ಔಷಧಕ್ಕಿಂತಲೂ ಶ್ರೇಷ್ಠವಾದದ್ದು ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬ ಹೊಸ್ಪಿಟಲ್ ಡಾಕ್ಟರು ಹೇಳುತಾನವನ್ನು ಕೇಳಿ:—"ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ನೋವು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಕೂಡ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಗಲೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರೆಯುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ:—

ಡಬ್ಲ್ಯೂ. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.


### ಇಸ್ತಿಹಾರ್.

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನೆಂದರೆ.—

ಸಿಟಿ ಮೊಹಲ್ಲಾಗಳಲ್ಲಿ ಹೌಸು ಸರ್ವೀಸು ಪೈಪು ಯಾ ನೀರು ಸಪ್ಲೈಗಾಗಿ ಅವರವರ ಮನೆಯಲ್ಲಿ ನಲ್ಲಿ ಇಡಿಸಿಕೊಂಡು ಇದಕ್ಕಾಗಿ ಸಾಲಿಯಾನಾ ಒಂದು ಇಂಚು ಪೈಪಿಗೆ ೨೫ ರೂಪಾಯಿಯಂತೆಯೂ, ಅರ್ಧ ಇಂಚ್ ಪೈಪಿಗೆ ೧೫ ರೂಪಾಯಿಯಂತೆಯೂ, ವಾಟರು ರೇಟು ಕೊಡುತ್ತಾ ಇರುವದು ಸರಿಯಷ್ಟೆ.

೨. ಅಂಥಾ ಮನೆಗಳ ಮಾಲೀಕರು ಅಥವಾ ಬಾಡಿಗೆದಾರರು ಮನೆ ಖಾಲಿ ಮಾಡಿದ್ದರ ದೆಸೆಯಿಂದಲಾಗಲಿ ಅಥವಾ ಇನ್ಯಾವ ಇತರ ಕಾರಣದಿಂದಾಗಲಿ ಅವರವರ ಮನೆಗಳಲ್ಲಿ ವಾಟರು ಪೈಪು ಬಂದುಮಾಡಿಸಿ ನೀರು ನಿಲ್ಲಿಸಿದ್ದ ಕಾಲಕ್ಕೆ ತಕ್ಕಷ್ಟು ದಾಮಾಷಾಯಿನಂತೆ ವಾಟರು ರೇಟು ಕಮ್ಮಿ ಮಾಡಿಸಿಕೊಡಬೇಕೆಂದು ಮ್ಯುನಿಸಿಪಾಲಿಟಿಗೆ ಅರ್ಜಿ ಕೊಟ್ಟರೆ ಅರ್ಜಿ ಕೊಟ್ಟ ತಾರೀಖು ಲಾಗಾಯತು ಪುನಃ ನೀರು ಬಿಡಿಸಿಕೊಳ್ಳುವ ತಾರೀಖಿನ ವರಿಗೆ ಮ್ಯುನಿಸಿಪಲ್ ರೆಗ್ಯುಲೇಷನ್ ೪೬ನೆ ಸೆಕ್ಷನಂತೆ ಸಾಲು ಪೂರ್ತಾ ಅಥವಾ ಭಾಗಶಃ ಯಾವತ್ತಿಗೆ ಕಂದಾಯ ಕಮ್ಮಿ ಮಾಡಲ್ಪಡುತ್ತಿತ್ತು.

೩. ಈ ರೀತಿ ಕಮ್ಮಿ ಮಾಡುವಿಕೆಯು ರೂಲ್ಸಿಗೆ ವಿರೋಧವೆಂತಲೂ, ಮೈಸೂರು ಸಿಟಿ ವಾಟರು ರೇಟು ವಸೂಲಾತಿಯು ಸ್ಪೆಷಲ್ ಆರ್ಡರಿನಂತೆ ಸಾಲಿಯಾನಾ ವಸೂಲಾಗತಕ್ಕದ್ದೆಂತಲೂ, ಇತಃಪರ ಯಾವದೊಂದು ರಿಯಾಯಿತಿಯನ್ನು ತೋರಿಸದೆ ಪೂರಾ ಸಾಲಿಗೆ ರೇಟು ವಸೂಲ್ಮಾಡಬೇಕೆಂತಲೂ, ಸರ್ಕಾರ ಗೌರ್ನಮೆಂಟಿನಿಂದ 23—7—1903 ನೇ ಮುರ್ತಬ 3-6 ನೇ ನಂಬರು ಆರ್ಡರು ಸಾದರಾಗಿರುವದರಿಂದ ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನೆಂದರೆ:—

ಸಿಟಿಯಲ್ಲಿ ಯಾವಾವ ಮನೆಗಳಿಗೆ ವಾಟರು ಪೈಪು ಇಡಿಸಿಕೊಂಡಿರತಕ್ಕ ಮನೆ ಮಾಲೀಕರು ಯಾ ಬಾಡಿಗೆದಾರರು ಅಥವಾ ಆಧಾರ ಮಾಡಿಕೊಂಡಿರತಕ್ಕವರು ಸರ್ಕಾರಿ ಸಾಲಿನಲ್ಲಿ ಪೂರ್ತಾ ನಲ್ಲಿಯಿಂದ ನೀರು ಉಪಯೋಗಿಸಲಿ, ಅಥವಾ ಉಪಯೋಗಿಸದೆ ಹೋಗಲಿ, ಮನೆಯು ಖಾಲಿಯಾಗಿರಲಿ, ಅಥವಾ ವಾಸವಿಲ್ಲದ್ದಾಗಿರಲಿ, ಆಯಾಯ ಪೈಪುಗಳಿಗೆ ಮೊಕರರಾಗಿರುವ ದರದಂತೆ ಸಾಲಿಯಾನಾ ಪೂರಾ ಕಂದಾಯ ಕೊಡುತ್ತಾ ಬರಬೇಕು. ರಿಯಾಯಿತಿ ಏನೂ ದೊರೆಯಬಾರದು. ಪೈಪನ್ನು ಖಾಯಮ್ಮಾಗಿ ವಜಾಮಾಡಲು ಅರ್ಜಿ ಕೊಟ್ಟು ವಜಾ ಮಾಡಿಸಿಕೊಂಡರೆ ದಾಖಲಾಗತಕ್ಕ ಕಂದಾಯವನ್ನು ಸರ್ಕಾರ ಕಮ್ಮಿ ಮಾಡಿಸುತ್ತೆ. ತಿಳಿಯುವದು.

K. SRINIVASA RAO,
*Vice President.*

### ನಮ್ಮ ಚಂದಾದಾರರಿಗೆ ನೋಟೀಸು.

"ವೃತ್ತಾಂತ ಪತ್ರಿಕೆ"ಯ ಚಂದಾ ವಸೂಲ್ಮಾಡಿಕೊಂಡದ್ದಕ್ಕೆ ರಶೀತಿ ಬರೆದು ಕೊಡಲ್ಪಡುವದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವದಿಲ್ಲ.

ಮ್ಯಾನೇಜರ್,
ಮೈಸೂರು. "ವೃತ್ತಾಂತ ಪತ್ರಿಕೆ" ಆಫೀಸ್.

## ವೃತ್ತಾಂತ ಪತ್ರಿಕೆ.

:o:

೧೯೦೩ನೇ ಇಸವಿ ಸೆಪ್ಟೆಂಬರ್ ತಾ|| ೧೦ ನೇ ಗುರುವಾರ.

### ಮೈಸೂರು ಪುರಾಭಿವೃದ್ಧಿಯ ಕಾನೂನು.

ಮೈಸೂರು ಸಂಸ್ಥಾನದ ರಾಜಧಾನಿಯನ್ನು ಬದಲಾವಣೆ ಮಾಡಿ ಪ್ರಜಾ ಆರೋಗ್ಯವನ್ನು ಅಭಿವೃದ್ಧಿಪಡಿಸುವದಕ್ಕೆ ಪ್ಲಾನ್ ಮುಂತಾದ್ದನ್ನು ತಯಾರುಮಾಡಬೇಕೆಂದು ಸರ್ಕಾರದವರು ಸುಮಾರು ವರುಷದ ಕೆಳಗೆ ಒಂದು ಕಮಿಟಿಯನ್ನು ಏರ್ಪಾಡು ಮಾಡಿದರಷ್ಟೆ. ಈ ಕಮಿಟಿಯವರು ಪ್ಲಾನ್ ಮುಂತಾದ್ದನ್ನೆಲ್ಲಾ ಮಾಡಿ ಈಗ ಸಿದ್ಧಪಡಿಸಿದ್ದಾಯಿತು. ಇನ್ನು ಅವರಂತೆ ಅಭಿವೃದ್ಧಿಯ ಕಾರ್ಯಗಳು ಪ್ರಾರಂಭವಾಗುವುದೇ ಮುಂದಿನ ಕೆಲಸವು. ಸರ್ಕಾರದವರು ಈ ಕೆಲಸವನ್ನು, ಹೊಸದಾಗಿ ಏರ್ಪಾಡಾಗುವ ಒಂದು ಕಮಿಟಿಗೆ ವಹಿಸುತ್ತಾರೆ. ಈ ಕಮಿಟಿಗೆ ಇಂಪ್ರೂವ್‌ಮೆಂಟ್ ಟ್ರಸ್ಟ್ ಎಂದು ಹೆಸರು ಕೊಡುವರು. ಸರ್ಕಾರದವರು ಈ ಕಮಿಟಿಯವರಿಗೆ ವಹಿಸತಕ್ಕ ಜವಾಬ್ದಾರಿ, ಅವರ ಅಧಿಕಾರ, ಅವರು ಅಭಿವೃದ್ಧಿ ಕಾರ್ಯಗಳನ್ನು ನಡಸತಕ್ಕ ಕ್ರಮ, ಇನ್ನೇ ಮೊದಲಾದ ಸಂಗತಿಗಳನ್ನು ವಿವರಿಸಿ, ಒಂದು ಹೊಸದಾದ ಕಾನೂನನ್ನು ಮಾಡಿ, ಪ್ರಕಟಿಸಿದ್ದಾರೆ. ಈ ಇಂಪ್ರೂವ್‌ಮೆಂಟು ಟ್ರಸ್ಟಿನಲ್ಲಿ ಎಂಟು ಮಂದಿ ಮೆಂಬರುಗಳಿರುವರು. ಗೌರ್ನಮೆಂಟಿನಿಂದ ನೇಮಕವಾಗುವ ಒಬ್ಬ ಅಧ್ಯಕ್ಷರು, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರು, ಸಿವಿಲ್ ಸರ್ಜನ್‌ರು, ಗೌರ್ನಮೆಂಟಿನವರು ನೇಮಿಸುವ ಇನ್ನು ಮೂವರು, ಮ್ಯುನಿಸಿಪಲ್ ಕಮಿಷನರುಗಳು ತಮ್ಮಲ್ಲೇ ಆರಿಸುವ ಇಬ್ಬರು ಕಮಿಷನರು—ಅಂತು ಎಂಟು ಮಂದಿ ಮೆಂಬರುಗಳಾಗುವರು.

ಈ ಮೆಂಬರುಗಳ ಪೈಕಿ ಯಾರಾದರೂ ತಮಗೆ ಲಾಭವಾಗುವಂತೆ ಸಲಹೆ ಕೊಟ್ಟು ಕಾರ್ಯ ನಡೆಸಿದರೂ, ಮಿಟಿಂಗಿಗೆ ಹಾಜರಾಗದೆ ಹೋದರೂ ಅಂಥವರ ವಿಷಯದಲ್ಲಿ ಈ ಕಾನೂನು ಬಹು ಕಠಿನವಾಗಿರುವುದು. ಈ ಕಾನೂನಿನ ಪ್ರಕಾರ ಈ ಟ್ರಸ್ಟು ಕಮಿಟಿಯವರು ಸ್ಥಳ, ಕಟ್ಟಡ, ಮೊದಲಾದ ಸ್ವತ್ತನ್ನು ವಶಮಾಡಿಕೊಳ್ಳಬಹುದು; ಮಾಲೀಕರಿಗೆ ನೋಟೀಸು ಕೊಡಬಹುದು; ಮಾಲೀಕರು ಒಂದು ತಿಂಗಳು ಮಾಡಿದಷ್ಟು ಬಾಡಿಗೆ ಕೊಡಬೇಕು. ಈ ಟ್ರಸ್ಟಿಗಳು ಆರೋಗ್ಯಕರವಾದ ಮನೆಗಳನ್ನು ಕಟ್ಟಿಸಲೂ, ಬಾಡಿಗೆ ಮುಂತಾದ್ದನ್ನು ವಿಧಿಸಿ ವಸೂಲು ಮಾಡಿಕೊಳ್ಳಲೂ ಅಧಿಕಾರ ಹೊಂದಿದ್ದಾರೆ. ಅಭಿವೃದ್ಧಿ ಕಾರ್ಯಗಳೆಲ್ಲಾ ಪೂರೈಸಿದ ಮೇಲೆ ಮ್ಯುನಿಸಿಪಾಲಿಟಿಯವರು ವಹಿಸಿಕೊಳ್ಳಬೇಕು.

ಮುಖ್ಯವಾಗಿ ಈ ಹೊಸದಾದ ಕಾನೂನನ್ನು ಬೊಂಬಾಯಿ ಪಟ್ಟಣದವರು ಮಾಡಿಕೊಂಡಿರುವ ಪುರಾಭಿವೃದ್ಧಿಯ ಕಾನೂನಿನಂತೆಯೇ ನಮ್ಮ ಸರ್ಕಾರದವರು ರಚಿಸಿ ಪ್ರಕಟಿಸಿರುತ್ತಾರೆ.

### ದೇಶಾಂತರದ ವಿಶೇಷ ಸಮಾಚಾರಗಳು.

ಕೊರಿಯಾ ರಾಜ್ಯಭಾರದ ವಿಷಯದಲ್ಲಿ ರಷ್ಯಾ ದೇಶದವರಿಗೂ ಜಪಾನ್ ರಾಜ್ಯದವರಿಗೂ ಕೆಲವು ಕಾಲದಿಂದ ಕಲಹಗಳು ನಡೆಯುತ್ತಿವೆಯೆಂಬುದು ವಾಚಕರಿಗೆ ತಿಳಿದಿರುವುದಷ್ಟೆ. ಕೊರಿಯಾ ದೇಶವು ಚೀನಾ ಚಕ್ರಾಧಿಪತ್ಯಕ್ಕೆ ಉತ್ತರದಲ್ಲಿರುವ ಒಂದು ಪರ್ಯಾಯ ದ್ವೀಪವಾಗಿದೆ. ಇದು ಬಹು ಪುರಾತನಕಾಲದಿಂದಲೂ ಪ್ರತ್ಯೇಕವಾದ ರಾಜ್ಯವಾಗಿದ್ದರೂ ಚೀನಾ ಚಕ್ರಾಧಿಪತ್ಯಕ್ಕೆ ಒಳಪಟ್ಟದ್ದಾಗಿದೆ. ಇದು ಚೀನದ ಒಂದು ಭಾಗವಾದ ಮ್ಯಾಂಚೂರಿಯಾ ಪ್ರಾಂತಕ್ಕೆ ಪಕ್ಕದಲ್ಲಿರುವದರಿಂದ ರಷ್ಯಾ ರಾಜ್ಯದವರು ಮ್ಯಾಂಚೂರಿಯಾ ಪ್ರಾಂತ್ಯವನ್ನು ಹೇಗೆ ಕಡೆಗೆ ತಮ್ಮದಾಗಿ ಮಾಡಿಕೊಂಡಿರುವರೋ ಹಾಗೆಯೇ ಕೊರಿಯಾ ಸೀಮೆಯನ್ನು ಉತ್ತರೋತ್ತರ ಸ್ವಂತವಾಗಿ ಮಾಡಿಕೊಳ್ಳಬೇಕೆಂಬ ದುರಾಶೆಯಿಂದ ಆ ಸೀಮೆಯಲ್ಲಿ ತಮ್ಮದೊಂದು ವಾಸಸ್ಥಾನವನ್ನು (ಅಂದರೆ ನೆಲೆಯಾಗಿ ಇರತಕ್ಕ ಬಂದರು) ಸ್ಥಾಪಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿದ್ದಾರೆಂದು ಹೇಳುವದು. ಈ ವರಿವಿಗೂ ಜಪಾನಿನವರೇ ಕೊರಿಯಾದಲ್ಲಿ ಪ್ರಬಲವಾದ ಅನ್ಯದೇಶೀಯರಾಗಿದ್ದಾರೆ. ಅವರಿಂದಲೇ ಅಲ್ಲಿನ ವ್ಯಾಪಾರವು ಅಧಿಕವಾಗಿ ನಡೆಯುತ್ತಿದೆ. ಆದಕಾರಣ ತಮ್ಮನ್ನು ಅಲ್ಲಿಂದ ಹೊರಡಿಸುವ

ಕ್ರಮಗಳನ್ನು ಯಜಮಾನರು ನೋಡಿದರೆ ಅವರು ಆಶಂಕರಾಗುವುದು ಸ್ವಭಾವವಷ್ಟೆ. ಬರ್ಮಾ ಸೀಮೆಯಾಗಿರುವ ದ್ವೀಪಗಳ ಸಮುದಾಯವು ಕೊರಿಯಾಕ್ಕೆ ಎದುರಾಗಿದೆ. ತಮ್ಮ ವ್ಯಾಪಾರಕ್ಕೂ ರಾಜಕಾರ್ಯ ಪ್ರಾಬಲ್ಯಕ್ಕೂ ಅನುಕೂಲವಾಗಿರುವ ಈ ಕೊರಿಯಾ ದೇಶದಲ್ಲಿ ರಷ್ಯ ಪ್ರಾಬಲ್ಯವನ್ನು ಸಿದ್ಧಪಡಿಸಿಕೊಳ್ಳುವುದಕ್ಕೆ ಜಪಾನಿನವರು ಒಪ್ಪಲಾರರೆಂಬುವದು ಇದರಿಂದ ಪರಿಷ್ಕಾರವಾಗುತ್ತಷ್ಟೆ.

ಈ ವಿಚಾರದ ದೆಸೆಯಿಂದ ರಷ್ಯದವರಿಗೂ ಜಪಾನಿನವರಿಗೂ ಯುದ್ಧವಾಗಬೇಕೇನೋ ಎಂದು ತೋರುತ್ತಲಿತ್ತು. ಆದರೆ ಸದ್ಯಕ್ಕೆ ಅಂಥ ಕಾರ್ಯವೇನೂ ನಡೆಯಲಾರದೆಂದು ತಿಳಿದುಬರುತ್ತದೆ. ಜಪಾನಿನವರ ಬಲಕ್ಕೂ ರಷ್ಯದವರ ಬಲಕ್ಕೂ ತಾರತಮ್ಯವಿದೆ. ಈಗಿನ ನವನಾಗರಿಕ ಕಾಲಕ್ಕೆ ಯೋಗ್ಯವಾದ ಅನೇಕ ಯುದ್ಧ ನಾವೆಗಳ ಸೈನ್ಯವನ್ನು ಜಪಾನಿನವರು ಇಟ್ಟುಕೊಂಡಿದ್ದಾಗ್ಯೂ, ಯುದ್ಧವೇನಾದರೂ ಸಂಭವಿಸಿದರೆ ಇತರ ರಾಜ್ಯಗಳವರೂ ಇದಕ್ಕೆ ಕೈ ಹಚ್ಚಬೇಕಾಗಿ ಬಂದೀತೆಂಬ ಹೆದರಿಕೆಯುಂಟು. ಈಗ ಇಂಗ್ಲಿಷರಿಗೂ ಜಪಾನಿನವರಿಗೂ ಒಡಂಬಡಿಕೆಯು ನಡೆದಿರುವದರಿಂದ ಯುದ್ಧಕಾಲದಲ್ಲಿ ಜಪಾನಿನವರೂ ಇಂಗ್ಲಿಷರೂ ಒಂದು ಪಕ್ಷವಾಗುವರು. ಆಗ ರಷ್ಯದವರ ಸ್ನೇಹಿತರಾದ ಫ್ರೆಂಚರು ಅವರ ಪಕ್ಷವನ್ನು ಹಿಡಿಯುವರು.

* * *

ಇಂಗ್ಲಾಂಡಿನ ಎಡ್ವರ್ಡ್ ಮಹಾರಾಜರು ಸಮಾಧಾನ ಕರ್ತರೆಂಬ ಶ್ರೇಷ್ಠವಾದ ಹೆಸರನ್ನು ಪಡೆಯುತ್ತ ಬಂದಿದ್ದಾರೆ. ಅವರು ಈ ವರ್ಷ ಯುರೋಪ ಖಂಡದ ಬೇರೆಬೇರೆ ದೇಶಗಳಲ್ಲಿ ಸಂಚರಿಸಿದ ಕಾರ್ಯದಿಂದ ಎಲ್ಲರ ಪ್ರೀತಿಯನ್ನು ಪಡೆದುದು ಬಹಳ ಒಳ್ಳೇ ಫಲವಾಗಿದೆ. ಸಾರ್ವಭೌಮರು ಮೊದಲು ಇಂಗ್ಲಾಂಡಿನ ಪೂರ್ವಸ್ನೇಹಿತರಾದ ಪೋರ್ಚುಗಲ್ ಸೀಮೆಯ ರಾಜರನ್ನು ದರ್ಶಿಸಿ, ಅಲ್ಲಿಂದ ಇಟಲಿಗೆ ದಯಮಾಡಿದರು. ಮುವತ್ತು ವರ್ಷಗಳ ಕೆಳಗೆ ಈ ದೇಶದ ಬೇರೆಬೇರೆ ವಿಭಾಗಗಳವರೆಲ್ಲಾ ಒಂದಾಗಿ ಕೂಡಿ ಒಂದು ರಾಜ್ಯವಾಗಬೇಕಾಗಿ ನಡೆದ ಯುದ್ಧಗಳಲ್ಲಿ ಆಸ್ಟ್ರಿಯಾ ರಾಜ್ಯದ ಬಿಕ್ಕಟ್ಟಿನಿಂದ ಬಿಡುಗಡೆ ಹೊಂದುವದಕ್ಕೆ ಇಂಗ್ಲಾಂಡಿನವರು ಕೊಟ್ಟ ಸಹಾಯವನ್ನು ಇಟಲಿಯವರು ಮರೆತಿಲ್ಲ. ಸ್ವಾತಂತ್ರ್ಯಕೋಸ್ಕರ ಹೋರಾಡುತ್ತಿದ್ದ ಪ್ರಜೆಗಳಿಗೆಲ್ಲಾ ನಾಯಕನಾಗಿದ್ದ ಗಾರಿಬಲ್ಡಿ ಎಂಬ ದೇಶಾಭಿಮಾನಿಯು ಪದೇಪದೇ ಇಂಗ್ಲಾಂಡಿಗೆ ಬಂದು ಸನ್ಮಾನಪೂರ್ವಕವಾದ ದ್ರವ್ಯ ಸಹಾಯವನ್ನೂ ಸೇನಾ ಸಹಾಯವನ್ನೂ ಹೊಂದುತ್ತಲಿದ್ದನು. ಆದಕಾರಣ ಇಟಲಿಯವರಿಗೂ ಇಂಗ್ಲಾಂಡಿನವರಿಗೂ ಅನೇಕ ವರ್ಷಗಳಿಂದ ಸ್ನೇಹವು ಪರಿಪೂರ್ಣವಾಗಿದೆ. ಎಡ್ವರ್ಡ್ ಸಾರ್ವಭೌಮರು ಇಟಲಿಯಿಂದ ಹೊರಟು ಫ್ರಾನ್ಸ್ ದೇಶಕ್ಕೆ ಹೋದರು. ಫ್ರೆಂಚ್ ದೇಶದವರಿಗೂ ಇಂಗ್ಲಿಷರಿಗೂ ಅನೇಕ ಶತಮಾನಗಳಿಂದ ನೆಲದಮೇಲೆಯೂ ಸಮುದ್ರದ ಮೇಲೆಯೂ ಅನೇಕ ಯುದ್ಧಗಳು ನಡೆದಿವೆ. ಮತ್ತು ಎರಡು ಮೂರು ವರ್ಷಗಳ ಹಿಂದೆ ನಡೆದ ಬೋಯರ ಯುದ್ಧದಲ್ಲಿ ಇಂಗ್ಲಿಷರು ಅನೇಕ ಅನ್ಯಾಯಗಳನ್ನು ನಡಿಸಿದರೆಂದು ಫ್ರೆಂಚರು ಬಹಳ ದೂಷಿಸಿದರು. ವೃತ್ತಪತ್ರಿಕೆಗಳ ವಿಶ್ವೇಶ್ವರಿಯಾ ಮಹಾರಾಣಿಯವರ ವಿಷಯದಲ್ಲಿ ಕೇವಲ ಅವಮಾನಕರವಾದ ದೂಷಣೆಗಳನ್ನು ಬರೆದು ಬೀದಿಗಳಲ್ಲಿ ಗೋಡೆಗಳಿಗೆ ಹಚ್ಚಿದ್ದರು. ಆದಾಗ್ಯೂ ನಮ್ಮ ಎಡ್ವರ್ಡ್ ಮಹಾರಾಜರವರು ಅಲ್ಲಿಗೆ ಹೋಗುವಾಗ ಆ ದೇಶಸ್ಥರು ಕೇವಲ ಮಾಧ್ಯಸ್ಥದಿಂದಲೂ ಮಹಾ ವಿಜೃಂಭಣೆಯಿಂದಲೂ ಸಾರ್ವಭೌಮರನ್ನು ಉಪಚರಿಸಿದರು. ಆಮೇಲೆ ಇಂಗ್ಲಿಷರಲ್ಲಿ ಮುಖಂಡರಾದ ಹಲವರು ಮಂದಿಗೂ ಫ್ರೆಂಚರಲ್ಲಿ ಪ್ರಮುಖರಿಗೂ ವಿವಿಧ ಸಂದರ್ಭಗಳಲ್ಲಿ ಪರಸ್ಪರ ಸನ್ಮಾನ ಮರ್ಯಾದೆಗಳು ನಡೆದವು. ಇಂಗ್ಲಿಷರ ಪಾರ್ಲಿಮೆಂಟು ಸಭೆಗಳವರಿಗೂ ಫ್ರೆಂಚ ಪಾರ್ಲಿಮೆಂಟು ಸಭೆಗಳವರಿಗೂ ಪರಸ್ಪರ ರಾಯಭಾರಗಳು ನಡೆದವು.

ಎಡ್ವರ್ಡ್ ಸಾರ್ವಭೌಮರು ಫ್ರಾನ್ಸಿನಿಂದ ಐರ್ಲೆಂಡು ಸೀಮೆಗೆ ಹೋದರು. ಗ್ರೇಟ್ ಬ್ರಿಟನ್ ರಾಜ್ಯದ ಅಂತರ್ಭಾಗವಾದ ಈ ಸೀಮೆಯಲ್ಲೇ ಅನೇಕ ಕಾಲದಿಂದ ರಾಜ್ಯಭಾರದ ವಿಷಯವಾದ ಅತೃಪ್ತಿ ಪ್ರಜೆಗಳಿಗೆ ಬಹಳವಾಗಿರುವದು. ನಿಶ್ಚಿತಿಯ ಸಂಬಂಧವಾದ ಈ ಅತೃಪ್ತಿಯು ಆ ಸೀಮೆಯ ನಾನಾಭಾಗಗಳಲ್ಲಿ ಹುಟ್ಟಿಗಿದ್ದರೂ ಆಯಾ ಭಾಗಗಳನ್ನೆಲ್ಲಾ ಮಹಾರಾಜರು ತಮ್ಮ ರಾಣಿಯವರ ಸಹಿತವಾಗಿ ಬಹು ಸಂತೋಷದ ರೀತಿಯಲ್ಲಿ ಪ್ರಯಾಣ ಮಾಡಿ, ತಮ್ಮ ಅತಿಶಯವಾದ ಸಾಮರ್ಥ್ಯದಿಂದಲೂ ದಯೆಯಿಂದಲೂ ಎಲ್ಲಾ ಕಡೆಯ ಪ್ರಜೆಗಳ ಪ್ರೀತಿಯನ್ನು ಸಂಪಾದಿಸಿಕೊಂಡರು. ಐರ್ಲೆಂಡಿನ ರಾಜಧಾನಿಯಾದ ಡಬ್ಲಿನ್ ಪಟ್ಟಣದ ಮ್ಯುನಿಸಿಪಾಲಿಟಿಯವರು ಮಹಾರಾಜರಿಗೆ ಸಭಾಗಮನ ಪತ್ರಿಕೆಯನ್ನು ಒಪ್ಪಿಸುವದಿಲ್ಲವೆಂದು ಮುನ್ನವೇ ಹಠಹಿಡಿದಾಗ್ಯೂ, ಪ್ರಜೆಗಳೆಲ್ಲರೂ ಮಹಾರಾಜರನ್ನು ಬಹು ಆನಂದದಿಂದ ಬರಮಾಡಿಕೊಂಡರು.

ಕಡೆಯಲ್ಲಿ ಮಹಾರಾಜರು ಆಸ್ಟ್ರಿಯಾ ರಾಜ್ಯಕ್ಕೆ ಹೋಗಿ ಅಲ್ಲಿನ ವೃದ್ಧ ಚಕ್ರವರ್ತಿಯವರಲ್ಲಿ ಮ್ಯಾಸಿಡೋನಿಯಾ ಸೀಮೆಯನ್ನು ಸಮಾಧಾನಪಡಿಸುವ ವಿಷಯ ತಮಗೆ ತೋರಿದ ಅಭಿಪ್ರಾಯವನ್ನು ತಿಳಿಸಿ ಬಂದಿದ್ದಾರೆಂಬುದಕ್ಕೆ ಸಂಶಯವೇನೂ ಇಲ್ಲ. ಆಸ್ಟ್ರಿಯಾ, ರಷ್ಯ ರಾಜ್ಯಗಳಿಗೆ ಮಾತ್ರವಲ್ಲದೆ ಯೂರೋಪಿನ ಎಲ್ಲಾ ರಾಜ್ಯಗಳಿಗೂ ವ್ಯಾಕುಲಕ್ಕೆ ಕಾರಣವಾದ ಈ ವಿಚಾರವು ಸ್ಥಿಮಿತಕ್ಕೆ ಬರುವದೆಂದು ನಿರೀಕ್ಷಿಸಬಹುದು.

ಇಷ್ಟು ವಿಸ್ತಾರವಾಗಿ ಪ್ರಯಾಣ ಮಾಡಿ ಬಂದಿರುವದರಿಂದ ಮಹಾರಾಜರವರ ದೇಹಸ್ಥಿತಿಯು ಅತ್ಯಂತ ಸಮರ್ಪಕವಾಗಿದೆಯೆಂದು ತಿಳಿಯಬಹುದು. ಮತ್ತು ಪ್ರಯಾಣಕಾಲದಲ್ಲಿ ಇವರು ನಡೆಸಿದ ಫಲವನ್ನು ನೋಡುವಲ್ಲಿ ಇವರ ಜ್ಞಾನ ವಿವೇಕಗಳೂ ಕಾರ್ಯಸಾಧಕ ಸಾಮರ್ಥ್ಯಗಳೂ ಅತಿಶಯವಾದವುಗಳೆಂದು ತೋರುವದು.

## ಸ್ವದೇಶದ ವೃತ್ತಾಂತಗಳು.

ಅನೇಕಲ್ ಟವನ್ನಲ್ಲಿ ಮಳೆಯಿಲ್ಲ ಹಾಲದೇಶಕ್ಕೆ ಕೆರೆಗೆ ನೀರು ಹೋಗದಂತೆ ಮಧ್ಯ ಅಡ್ಡಗಟ್ಟ ಹಾಕಬೇಕೆಂದು ಗೊತ್ತುಮಾಡಲ್ಪಟ್ಟಿದೆ.

****

ನಮ್ಮ ರೆಸಿಡೆಂಟರಾದ ಸರ್ ಡೊನಾಲ್ಡ್ ರಾಬರ್ಟ್‌ಸನ್‌ರವರು ಕಳೆದ ಬುಧವಾರದ ದಿನ ಬೆಂಗಳೂರಿನಿಂದ ಸಿಂಲಾ ಪಟ್ಟಣಕ್ಕೆ ಪ್ರಯಾಣಮಾಡಿದರು.

****

ರಾಜಧಾನಿಯಲ್ಲಿ ಮರಿಮಲ್ಲಪ್ಪನವರ ಸ್ಕೂಲ್ ಪಕ್ಕದಲ್ಲಿರುವ ಲೇಟ್ ದಿವಾನರ ಬಂಗಲೆಯನ್ನು ಸರ್ಕಾರದವರು ೫೦,೦೦೦ ರೂ ಪಾಯಿಗೆ ತೆಗೆದುಕೊಂಡರೆಂದು ಪ್ರಕಟವಾಗಿದೆ.

****

ಹಿಂದಿನ ವರುಷಗಳಲ್ಲಿ ಪ್ರಾರಂಭಿಸಿ ಮುಗಿಯದೆ ಇರುವ ಲೋಕಲ್ ಫಂಡ್ ಕಾಮಗಾರಿಗಳನ್ನೆಲ್ಲಾ ಬೇಗನೆ ಪೂರೈಸಬೇಕೆಂದು ಸರ್ಕಾರದವರು ೪೩,೦೯೫ ರೂ. ಸ್ಯಾಂಕ್ಷನ್ ಮಾಡಿದಾರೆ.

****

ತಿಪ್ಟೂರು ಪೇಟೆ ಚೌಕದ ಹೊಸ್ತ ರಸ್ತೆಯಲ್ಲಿ ಸಾಹುಕಾರ್ ಶಿಂಗ್ರಿ ಸಂಪಣ್ಣನವರ ಜವಳಿ ಅಂಗಡಿಗೆ ಕಳ್ಳರು ಬಿದ್ದು ೬೦೦—೭೦೦ ರೂ. ಜವಳಿಯನ್ನು ಅಪಹರಿಸಿದರು. ಕಳ್ಳರು ಇನ್ನೂ ಪತ್ತೆ ಆಗಿಲ್ಲ.

****

ನಮ್ಮ ಯುವರಾಜರು ವಿದ್ಯಾಭ್ಯಾಸವನ್ನು ಪೂರೈಸಿಕೊಂಡು ಬರುವುದಕ್ಕಾಗಿ ಇಷ್ಟರಲ್ಲೇ ಉತ್ತರ ದೇಶಕ್ಕೆ ಪಯಣಮಾಡಿ, ಅಲ್ಲಿರುವ ರಾಜಕುಮಾರರ ಕಾಲೇಜನ್ನು ಸೇರುವವರಾಗಿದ್ದಾರೆ. ಇವರ ಸಂಗಡ ಮಿ॥ ವಾಂಟ್ರಿಯರು ಹೋಗಬಹುದು.

****

ಜೇಮಾಲಸ್ ಪದಾರ್ಥಗಳನ್ನು ಖರೀದಿ ಮಾಡಬೇಕಾಗಲಿ ಅಥವಾ ಇನ್ನು ನಾನಾವಿಧವಾಗಿ ವಿನಿಯೋಗಪಡಿಸಬೇಕಾಗಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೇ ಸ್ವಂತ ಹುಕುಂ ಕೊಡಬೇಕೆಂತಲೂ, ಈ ಕೆಲಸವನ್ನು ತಮ್ಮ ಕೈಕೆಳಗಿನ ಇತರ ಮ್ಯಾಜಿಸ್ಟ್ರೇಟರಿಗೆ ಒಪ್ಪಿಸಕೂಡದೆಂತಲೂ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

****

ಒಬ್ಬ ಬಾತ್ಮೀದಾರರು ಬರೆಯುವದೇನೆಂದರೆ,—"ಚನ್ನಪಟ್ಟಣ ತಾಲ್ಲೂಕ ನಾಯಕನ ಹಟ್ಟಿ ಸಮೀಪ ಕೋಲಾರ ಗ್ರಾಮದ ಸಾಹುಕಾರ ಪಾಪಣ್ಣನವರ ಮನೆಗೆ ಕಳ್ಳರು ಬಿದ್ದು ೧,೦೦೦ ರೂ ಮಾಲ್ ಅಪಹರಿಸಿದರು. ಕಳ್ಳರು ಪತ್ತೇ ಇಲ್ಲ. ಎರಡು ಮೂರು ದಿನದಿಂದ ಹಗಲೂ ರಾತ್ರಿ ಮಳೆ ಹಿಡಿದಿರುವದು. ಪೈರುಗಳೆಲ್ಲಾ ಚನ್ನಾಗಿವೆ."

****

ರಾಜಧಾನಿಯ ಸಮೀಪದಲ್ಲಿರುವ ಸರ್ಕಾರಿ ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ಕಳೆದ ವಾರ ಒಂದು ಬೋರ್ಡಿಗೆ ಬೆಂಕಿ ಬಿದ್ದು ಉರಿಯಹತ್ತಿತು. ಸ್ಕೂಲ್ ಅಧಿಕಾರಿಗಳಾದ ಮಿ॥ ರಾಮಯ್ಯರವರೂ, ಮಿ॥ ರಿಸ್ಕಾಟ್‌ರವರೂ ತುಂಬ ಸಾಹಸಪಟ್ಟು ಬೆಂಕಿಯನ್ನು ಆರಿಸಿದರು. ಬೆಂಕಿ ಬೀಳಲು ಕಾರಣವೇನೋ ತನಿಖೆಯಾಗುತ್ತಿದೆ.

****

ರಜಿಸ್ಟ್ರೇಷನ್ ಆಫೀಸಿನಿಂದ ನೋಟೀಸ್ ಪ್ರಕಾರ ಸರ್ಚ್ ಜಾರಿ ಮಾಡಲು ಕಚೇರಿಯಿಂದ ಸ್ಟ್ಯಾಂಪುಗಳ ಮೂಲಕ ಭತ್ಯವನ್ನು ತೆಗೆದುಕೊಂಡು, ಜಾಬ್ ರಸೀತಿನ ಪಡಾನಿನ ಮೂಲಕವೇ ಜಾರಿ ಮಾಡಿಸಬೇಕೆಂತಲೂ, ಇದಕ್ಕಾಗಿ ಪ್ರತ್ಯೇಕವಾದ ಸಿಬ್ಬಂದಿಯನ್ನು ನೇಮಿಸಬೇಕಾದ ಅಗತ್ಯವಿಲ್ಲವೆಂತಲೂ ಸರ್ಕಾರದವರು ಅಪ್ಪಣೆ ಕೊಟ್ಟಿದಾರೆ

****

ತಿಪ್ಟೂರು ಆ. ಕನ್ನಡ ಸ್ಕೂಲ್ ಹೆಡ್ಮಾಸ್ಟರ್ ಮಿ॥ ಎಚ್. ವೆಂಕಟರಾಮಯ್ಯ ರಾವ್ ರಚಿಸಿರುವ "ಶ್ರೀ ಕೃಷ್ಣರಾಜಶತಕ" ಎಂಬ ಕವನವನ್ನು ಶ್ರೀಮನ್ ಮಹಾರಾಜರವರಿಗೆ ಸಮರ್ಪಿಸಿದರು. ಶ್ರೀಮನ್ ಮಹಾರಾಜರವರು ಅದನ್ನು ನೋಡಿ ಸಂತೋಷಪಟ್ಟರೆಂದು ಪ್ರೈವೇಟ್ ಸೆಕ್ರೆಟರಿಯವರು ಅವರಿಗೆ ಜವಾಬು ದಯಪಾಲಿಸಿರುತ್ತಾರೆ.

****

ಗುಬ್ಬಿಯಲ್ಲಿ ಒಂದೇ ದಿನ ಮೂರು ಖೂನಿಗಳು ನಡೆದವಷ್ಟೆ. ಸರ್ಕಾರದವರು ೬ ಮಂದಿಯನ್ನು ಹಿಡಿದು ಬೆಂಗಳೂರು ಚೀಫ್ ಕೋರ್ಟಿನಲ್ಲಿ ವಿಚಾರಣೆ ಮಾಡಿಸಿದರು. ಈ ಆರು ಜನರಿಗೂ ಬಿಡುಗಡೆಯಾಯಿತು. ಈ ಖೂನಿ ನಡೆದದ್ದೇನೋ ನಿಜವೆಂದು ಹೇಳಲಾದರು. ಆದರೆ ಆ ಕೃತ್ಯ ನಡೆಸಿದವರನ್ನು ಸರ್ಕಾರದವರು ಹಿಡಿಯಲಾರದೆ ಹೋದರಲ್ಲಾ ಎಂದು ಬಹು ಮಂದಿ ವ್ಯಸನಪಡುತ್ತಾರೆ.

****

"ಈ ಶ್ರೀರಂಗಪಟ್ಟಣದ ಅಂಚೆ ಬೀದಿಯನ್ನು ಯಾರಾದರೂ ನೋಡಿದರೂ ಎಲ್ಲೆಲ್ಲಿಯೂ ಕಸಕಡ್ಡಿ ತುಂಬಿದೆ. ವಿಚಾರಿಸುವವರೇ ಇಲ್ಲ. ಪ್ಲೇಗಿಗೆ ಆಸ್ಪದವಾಗಿದೆ. ಲಾಂದ್ರಕಂಭಗಳಲ್ಲಿ ರಾತ್ರಿವೇಳೆ ಉರಿಯುವುದಕ್ಕೆ ಎಣ್ಣೆ ಬೇಕಾದರೆ. ಮೋರೀ ನೀರಿನಲ್ಲಿ ಕಸದ ಕೊಳೆತು ದುರ್ವಾಸನೆಯಿಂದ ಜನ ಕೆಟ್ಟು ಅನೇಕರು ಚಳಿ ಜ್ವರ, ಸೆಗಡಿ, ಕೆಮ್ಮು ಇವುಗಳಿಗೆ ಗುರಿಯಾಗಿದಾರೆ" ಎಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

****

ರಾಜಧಾನಿಯಾದ ಮೈಸೂರು ಪಟ್ಟಣವನ್ನು ಸದ್ಯ ಆಡಳಿತ ಮಾಡುವುದಕ್ಕೂ, ಅದು ಇನ್ನು ಮುಂದೆ ಅಭಿವೃದ್ಧಿಯಾಗಲು ಅನುಕೂಲವಾಗುವಂತೆಯೂ ಸರ್ಕಾರದವರು ಒಂದು ಮಸೂದೆ ಕಾನೂನನ್ನು ಮಾಡಿ ಈ ವಾರದ ಗೆಜೆಟ್ಟಿನಲ್ಲಿ ಪ್ರಕಟ ಮಾಡಿರುತ್ತಾರೆ. ಒಂದು ತಿಂಗಳೊಳಗಾಗಿ ಈ ಕಾನೂನಿನ ವಿಷಯದಲ್ಲಿ ಬರತಕ್ಕ ಪ್ರಜೆಗಳ ಆಕ್ಷೇಪಣೆಗಳನ್ನೆಲ್ಲಾ ಸರ್ಕಾರದವರು ಅಂಗೀಕರಿಸಿ, ಅನಂತರ ಆವಶ್ಯವಿದ್ದಂತೆ ಅದನ್ನು ತಿದ್ದಿ ಜಾರಿಗೆ ತರುವರು.

****

ರಾಜಧಾನಿಯ ಪುರಾಭಿವೃದ್ಧಿ ಸಂಘದವರು ನೆನ್ನೆ ಬೆಳಿಗ್ಗೆ ಒಂದು ಮೀಟಿಂಗ್ ನಡಿಸಿದರು. ಗವರ್ನಮೆಂಟ್ ಛೀಫ್ ಇಂಜಿನಿಯರ್ ಮಿ॥ ಮೆಕ್ಹಚಿನ್ ಯವರು ಇದಕ್ಕಾಗಿ ಬೆಂಗಳೂರಿಂದ ಬಂದಿದ್ದರು. ಈ ಸಂಘದ ಸಬ್ ಕಮಿಟಿಯವರು ಬರೆದು ಇದ್ದ ರಿಪೋರ್ಟನ್ನು ಗವರ್ನಮೆಂಟಿಗೆ ಕಳುಹಿಸಬೇಕೆಂತಲೂ, ಆದಷ್ಟು ಬೇಗನೆ ಅಭಿವೃದ್ಧಿಕಾರ್ಯಗಳನ್ನು ಪ್ರಾರಂಭಿಸುವಂತೆ ಗವರ್ನಮೆಂಟಿಗೆ ತಿಳಿಸಬೇಕೆಂತಲೂ ನೆನ್ನೆ ಮೀಟಿಂಗಿನಲ್ಲಿ ತೀರ್ಮಾನವಾಯಿತು.

****

ದಾವಣಗೆರೆ ಅಮಲ್ದಾರ್ ಮಿ॥ ನರಸಿಂಗರಾಯರವರು ಕಳೆದ ವಾರ ಕಾಲವಾದರೆಂದು ಕೇಳಿ ವಿಷಾದಿಸುತ್ತೇವೆ. ಇವರು ಮೊದಲು ಮೈಸೂರು ಇಂಜಿನಿಯರ್ ಇಲಾಖೆಯಲ್ಲಿದ್ದು, ತರುವಾಯ ಬೆಂಗಳೂರಿನಲ್ಲಿ ಮಾಜಿಸ್ಟ್ರೇಟರಾದರು. ತರುವಾಯ ಮೈಸೂರಿನಲ್ಲಿ ಒಂದು ವರುಷ ಮಾಜಿಸ್ಟ್ರೇಟರಾಗಿದ್ದು ಪ್ರಜೆಗಳ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡರು. ಅನಂತರ ಇವರಿಗೆ ಬಡ್ತಿ ಆಯಿತು. ಕೆಲವು ದಿನಗಳಲ್ಲೇ ಅಮಲ್ದಾರಿಯಾಗಿ ಹೋದರು. ಇವರಿಗೆ ಮರಣಕಾಲದಲ್ಲಿ ೩೭ ವರುಷ ವಯಸ್ಸು ಆಗಿತ್ತು.

****

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ಬಹಳವಾಗಿ ಹೆಚ್ಚುತ್ತಾ ಇದೆ. ಮತ್ತೆ ಮೋಡವೂ ಮಳೆಯೂ, ಶೀತಗಾಳಿಯೂ ಪ್ರಾರಂಭವಾಗಿದೆ. ದಿನಕ್ಕೆ ೩೦ ಮಂದಿಗೆ ಕಡಿಮೆಯಿಲ್ಲದೆ ಸಾಯುತ್ತಿದ್ದಾರೆ. "ಬಗಸ್ಕೋಟದ ಬಂಗಲೆಯು ಆಸ್ಪತ್ರೆಯಾಗಿರುವದರಿಂದ ರೋಗಿಗಳೂ ಕಾಯಿಲೆಯವರನ್ನೂ ಅವರ ಸಂಪರ್ಕದಲ್ಲಿರತಕ್ಕವರನ್ನೂ ಎಲೆತೋಟದಿಂದ ಪ್ರತ್ಯೇಕ ಸ್ಥಳಕ್ಕೆ ಸಾಗಿಸಬೇಕೆಂದು ಗವರ್ನಮೆಂಟಿನವರು ಹುಕುಂ ಮಾಡುತ್ತಾರೆ" ಎಂದು ಬೆಂಗಳೂರು ಪತ್ರಿಕೆಯೊಂದು ಹೇಳುತ್ತಿದೆ. ಇದು ನಿಜವಲ್ಲ.

****

ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ವಿದ್ಯಾಭ್ಯಾಸಮಾಡಿದ ವಿಶಾಲಾಕ್ಷಮ್ಮನೆಂಬ ಬ್ರಾಹ್ಮಣಸ್ತ್ರೀಯು ಈಗ ಮದರಾಸಿನಲ್ಲಿ ಪ್ರಕಟವಾಗುತ್ತಿರುವ ಲೋಕೋಪಕಾರಿ ಎಂಬ ತಮಿಳು ವರ್ತಮಾನ ಪತ್ರಿಕೆಯ ಸಬ್ ಎಡಿಟರಾಗಿ ಆ ಪತ್ರಿಕೆಯನ್ನು ನಡೆಸುತ್ತಾ ಬಂದಿರುವರು. ಈಕೆ ಈಗ ತಮಿಳಿನಲ್ಲಿ ಒಂದು ಕಥೆಯನ್ನು ರಚಿಸಿ, ಅದರ ಒಂದು ಪ್ರತಿಯನ್ನು ನಮ್ಮಲ್ಲಿಗೆ ಕಳುಹಿಸಿಕೊಟ್ಟಿದಾರೆ. ರಾಯಬಹದೂರ್ ಆರ್. ನರಸಿಂಹಯ್ಯಂಗಾರ್ಯರು ಈಕೆಗೆ ವಿವೇಕಶಾಲಿನಿ ಎಂಬ ಹೆಸರಿಟ್ಟಿರುವರು. ಈ ದೇಶದ ಸ್ತ್ರೀಪುರುಷರಿಗೆ ಸನ್ಮಾರ್ಗವನ್ನು ಬೋಧಿಸುವದಕ್ಕಾಗಿ ಈಕೆ ಸಾಹಸಪಡುತ್ತಿರುವುದನ್ನು ನೋಡಿ ನಾವು ತುಂಬ ಸಂತೋಷಪಡುತ್ತೇವೆ. ತಮಿಳು ಬರತಕ್ಕ ನಮ್ಮ ವಾಚಕರೆಲ್ಲಾ ವಿಮಲಾ ಎಂಬ ಕಥೆಯನ್ನು ತರಿಸಿಕೊಂಡು ಓದುವುದರ ಮೂಲಕ ಈಕೆಗೆ ಪ್ರೋತ್ಸಾಹಪಡಿಸುವರೆಂದು ನಿರೀಕ್ಷಿಸುವೆವು.

****

ಚನ್ನಪಟ್ಟಣದ ಬಾತ್ಮೀದಾರರು ಬರೆಯುವದೇನೆಂದರೆ.—ಇಲ್ಲಿನ ಜನಸಂಖ್ಯೆಯಲ್ಲಿ ಅರ್ಧ ಜನರು ನೇಕಾರ ವೃತ್ತಿಯಿಂದಲೇ ಜೀವಿಸುತ್ತಾರೆ. ಇವರ ಹೆಂಗಸರಿಗೆ ಕಾಯಿಲೆ ಬಂದಾಗ ಬಹಳ ಹೆಂಗಸರ ಹಾಗೆ ಆಸ್ಪತ್ರೆಗೆ ಹೋಗದಿರುವದರಿಂದ ಬಹಳ ಕಷ್ಟಕ್ಕೆ ಗುರಿಯಾಗುತ್ತಾರೆ. ಆದ್ದರಿಂದ ಇಲ್ಲಿ ಒಂದು ಗೋಷಾ ಆಸ್ಪತ್ರೆ ಇರಬೇಕೆಂದು ಮಹಮ್ಮದೀಯರು ಕೇಳಿಕೊಂಡರು. ಈಗ ಬೆಂಗಳೂರು ವಿಕ್ಟೋರಿಯಾ ಗೋಷಾ ಆಸ್ಪತ್ರೆಯಿಂದ ಪ್ರಸೂತಿಗೆ ಬರುವರು ಗುಡಿಮನೆಯಲ್ಲಿ ಇಬ್ಬರು ಮೂರು ದಿನಗಳು ಬಿದ್ದು, ನೋವು ಹೆಂಗಸರಿಗೆ ಮಾತ್ರ ಕೊಟ್ಟು ಕ್ಷಮಿಸಿ ಎರಡು ಗಂಟೆ ಗಾಡಿಯಲ್ಲಿ ಬೆಂಗಳೂರಿಗೆ ಹೋಗುತ್ತಾರೆ. ಈಗ ೩ ಜನ ಹೆಂಗಸರು ಪ್ರಸೂತಿ ಮರಣ ಹೊಂದಿದ್ದಾರೆ. ಇನ್ನು ಮೇಲೆ ಕಷ್ಟವಾಗಿ ಹೆಂಗಸರು ಸಾಯುವದಾದರೆ ಇಲ್ಲಿ ಒಂದು ಗೋಷಾ ಆಸ್ಪತ್ರೆಯನ್ನು ಕಟ್ಟಬೇಕು. ಯಾವ ಜಾತಿಯ ಹೆಂಗಸಾದರೂ ಬಂದು ಔಷಧ ಪಡೆಯಬಹುದು.—ಮಿ॥ ಶಿ ಐಲ್ಲಿ ಸೀತಾ ಗೌಡ್ರು ಮಗ ಅಂಕನ ಗೌಡರಿಂದ ಈ ಪ್ರಾಂತದ ಜನಕ್ಕೆ ಎಂಬುವರು ಚಿತ್ರಸಂಧ್ಯದಲ್ಲಿ ನೇತ್ರ ರೋಗಿಗಳಿಗೆ ಸಹಾಯ ಮಾಡಿದರು. ಡಾಕ್ಟರ್ ಪಾಲ್ ಅಂಚೆ ಗೌಡರು ಪೊಲೀಸಿಗೆ ರಿಪೋರ್ಟು ಮಾಡಿದರು. ಇನ್ಸ್‌ಪೆಕ್ಟರು ಹೋಗಿ ಹೆಣವನ್ನು ಆಸ್ಪತ್ರೆಗೆ ಕಳುಹಿಸಿದರು. ಆಸ್ಪತ್ರೆಯಲ್ಲಿ ಪರೀಕ್ಷೆಯಾಗಿ ಮೂರನೆಯ ದಿನ ೬ ತಿಂಗಳ ಗರ್ಭವು ಹೊಟ್ಟೆಯಲ್ಲಿತ್ತು. ಮತ್ತು ಹೊಡೆದ ಗಾಯಗಳು ಇದ್ದವೆಂತಲೂ, ಹಿಂದಿನಿಂದ ತಲೆಯ ಮೇಲೆ ಹೊಡೆದು ಕೊಲೆ ಮಾಡಿರುವರೆಂತಲೂ ಅಭಿಪ್ರಾಯಪಡುತ್ತಾರೆ.—ಇಲ್ಲಿನ ಶಿರಸ್ತೇದಾರ್ ಮಿ॥ ನಾರಾಯಣರಾಯರಿಗೆ ಅಮಲ್ದಾರಿ ಆಗುತ್ತದೆಂದು ಹೇಳುತ್ತಾರೆ. ಇವರಿಗೆ ಪ್ರಮೋಷನ್ ಆಗುವದು ತುಂಬಾ ಸಂತೋಷ. ಇವರು ಬಹಳ ಒಳ್ಳೇ ಮನುಷ್ಯರೂ, ತಕ್ಕವರಾಗಿಯೂ ಇದ್ದಾರೆ.

## ಇಂಡಿಯಾ ದೇಶದ ವೃತ್ತಾಂತಗಳು.

ಉತ್ತರ ದೇಶದಲ್ಲಿ ಕ್ಷಾಮಪೀಡಿತರ ಸಂಖ್ಯೆಯು ತುಂಬಾ ಕಡಿಮೆಯಾಗಿದೆ. ಮಧ್ಯ ಪ್ರಾಂತ್ಯಗಳಲ್ಲಿ ಮಾತ್ರ ೧೦,೭೩೯ ಮಂದಿ ಸರ್ಕಾರದವರ ಪೋಷಣೆಯಲ್ಲಿರುತ್ತಾರೆ.

❖❖❖❖

ಮದರಾಸ್ ಗವರ್ನರ್ ಲಾರ್ಡ್ ಆಂಟ್ಹಿಲ್‌ಯವರ ಸಹೋದರರಾದ ಆ। ವಿಕ್ಟರ್ ರಸ್ಸಲ್‌ರವರು ವಿಲಾಯತಿಯಿಂದ ಬಂದು, ಕೆಲವುಕಾಲ ನೀಲಗಿರಿ ಬೆಟ್ಟದಮೇಲೆ ಗವರ್ನರರವರ ಅತಿಥಿಗಳಾಗಿರುತ್ತಾರೆಂದು ತಿಳಿದುಬಂದಿದೆ.

❖❖❖❖

ಅಲಿಘಡದಲ್ಲಿ ದೊಡ್ಡಮನುಷ್ಯನಾಗಿಯೂ, ಪ್ರಜೆಗಳಿಂದಲೂ ಸರ್ಕಾರದವರಿಂದಲೂ ಗೌರವಿಸಲ್ಪಡುತ್ತಲೂ ಇದ್ದ ರಾವ್ ಬಹದೂರ್ ಮುನ್ಷಿ ಬ್ರಿಜೆಧೀರಜ್ ಲಾಲ್ ಎಂಬಾತನು ಕಳೆದ ವಾರ ಕಾಲವಾದುದರಿಂದ ಅಲ್ಲಿನವರೆಲ್ಲಾ ವಿಷಾದಪಡುತ್ತಿದ್ದಾರೆ.

❖❖❖❖

ಆಫ್ಘಾನಿಸ್ಥಾನದ ಅಮೀರರು ಮತ್ತೆ ಆಫ್ರಿದಿ ಜನರನ್ನು ತಮ್ಮ ಸೈನ್ಯಕ್ಕೆ ಸೇರಿಸಿಕೊಳ್ಳಬೇಕೆಂದು ಗೊತ್ತುಮಾಡಿ, ಅಕ್ಬರ್ ಖಾನ್ ಎಂಬ ಮುಸ್ಸದ್ದಿದಾರರನ್ನು ಆ ಕೆಲಸಕ್ಕೆ ನೇಮಿಸಿ ಕಳುಹಿಸಿದ್ದಾರೆ. ಇವರು ಪೆಷಾವರೆಂಬ ಪ್ರಾಂತ್ಯಕ್ಕೆ ಬಂದು ಜನರನ್ನು ಸೈನ್ಯಕ್ಕೆ ಸೇರಿಸುತ್ತಿರುವರು.

❖❖❖❖

ಕಲ್ಕತ್ತಾ ನಗರದಲ್ಲಿ ಯದುನಾಥ ಭಟ್ಟಾಚಾರಿ ಎಂಬೊಬ್ಬ ದೇವಸ್ಥಾನದ ಪೂಜಾರಿಯು ತಾನು ಪೂಜೆಮಾಡುತ್ತಿದ್ದ ವಿಗ್ರಹದ ನಗಗಳನ್ನು ಗುಟ್ಟಾಗಿ ಮಾರಿ, ಹಣವನ್ನು ದುರುಪಯೋಗಪಡಿಸಿಕೊಂಡನು. ಇದಕ್ಕಾಗಿ ಅವನಿಗೆ ಮ್ಯಾಜಿಸ್ಟ್ರೇಟರು ಆರು ತಿಂಗಳ ಕಠಿಣ ಸಜಾ ವಿಧಿಸಿದರು.

❖❖❖❖

ಪೂನೆಯಲ್ಲಿ ಕಳೆದ ೨೯ನೆ ತಾರೀಖಿನ ದಿನ ಮಹಮದೀಯರ ವಿದ್ಯಾಪ್ರವರ್ಧಕ ಸಮಾಜವು ನಡೆಯಿತು. ಸುಮಾರು ೬೦೦ ಮಂದಿ ಮಹಮದೀಯ ಪ್ರತಿನಿಧಿಗಳು ಹಾಜರಾಗಿದ್ದರು. ಮಹಮದೀಯರಲ್ಲಿ ವಿದ್ಯೆ ಅಭಿವೃದ್ಧಿ ಬಹಳ ವಿರಳವಾಗಿರುವ ಕಾರಣ ಅದಕ್ಕೆ ತಕ್ಕ ಪ್ರೋತ್ಸಾಹವನ್ನು ಕಲ್ಪಿಸಬೇಕೆಂಬದಾಗಿ ಸಭಿಕರು ಆ ದಿನ ತೀರ್ಮಾನಮಾಡಿದರು.

❖❖❖❖

ಸೋಮಾಲಿಲ್ಯಾಂಡಿನಲ್ಲಿ ಇಂಗ್ಲಿಷ್ ಸೈನಿಕರಿಗೆ ನೀರು ಸಿಕ್ಕುವುದು ಕಷ್ಟವಾದಕಾರಣ ಪೀಪಾಯಿಗಳಲ್ಲಿ ನೀರು ತುಂಬಿ ಸಾಗಿಸಿಕೊಂಡು ಹೋಗುತ್ತಾರೆ. ಇದಕ್ಕಾಗಿ ಇಂಡಿಯಾ ಗವರ್ನಮೆಂಟಿನವರು ೧,೬೦೦ ಭಾರೀ ಪೀಪಾಯಿಗಳನ್ನು ಅಲ್ಲಿಗೆ ಕಳೆದ ವಾರ ರವಾನಿಸಿದರು. ಪ್ರತಿ ಒಂದು ಪೀಪಾಯಿನಲ್ಲೂ ೧೬ ಗ್ಯಾಲನ್ ನೀರು ಹಿಡಿಯುತ್ತೆ.

❖❖❖❖

ಕಲ್ಕತ್ತೆಯ ಬಳಿ ಸೀರಾಂಪುರದಲ್ಲಿ ಒಂದು ಭಾರೀ ಹತ್ತಿ ಕಾರ್ಖಾನೆ ಇರುವುದು. ಇದು ೨೦ ಲಕ್ಷ ರೂಪಾಯಿ ಮುಟ್ಟಿಸಿ ಏರ್ಪಾಡಾದದ್ದು. ಈ ಕಾರ್ಖಾನೆಯು ಕಳೆದ ವಾರ ಹರಾಜಾಯಿತು. ಬೊಂಬಾಯಿನಲ್ಲಿ ಪ್ರಸಿದ್ಧನಾದ ಮೆ। ಗೋವರ್ಧನದಾಸ್ ಖಟಾವೋ ಎಂಬೊಬ್ಬ ದೊಡ್ಡ ವರ್ತಕನು ಆ ಕಾರ್ಖಾನೆಯನ್ನು ೫,೩೦,೦೦೦ ರೂಪಾಯಿಗೆ ಕೊಂಡುಕೊಂಡನು.

❖❖❖❖

ವಾರಂಗಲ್ ಡಿಸ್ಟ್ರಿಕ್ಟಿನಲ್ಲಿ ಪ್ರವಾಹಗಳ ಹೆಸರಿಂದ ಕೆಲವು ಕೆರೆ ಕಟ್ಟೆಗಳು ಒಡೆದುಹೋಗಿ ರೈಲ್ವೆ ಕಂಪನಿಯವರ ರಸ್ತೆಗಳನ್ನೆಲ್ಲಾ ಕೊಚ್ಚಿಬಿಟ್ಟುದಲ್ಲದೆ ಕೆಲವು ರೈಲ್ವೆ ಸೇತುವೆಗಳೂ ಮುರಿದು ಬಿದ್ದುಹೋದುವು. ರೈಲ್ವೆ ಕಂಪನಿಯವರು ತಮಗುಂಟಾದ ನಷ್ಟವನ್ನು ಪರಿಹರಿಸಿಕೊಡಬೇಕೆಂದು ಹೈದರಾಬಾದು ಸರ್ಕಾರದವರಿಗೆ ಬರೆದುಕೊಂಡಿದ್ದಾರೆ. ಈ ಅರ್ಜಿಯನ್ನು ಖಜಾನಾ ಭಕ್ಷಿಯವರು ಹಿಡಿದು ತನಿಖೆಮಾಡುತ್ತಿರುವರು.

❖❖❖❖

ಆಫ್ಘಾನಿಸ್ಥಾನದ ರಾಜಧಾನಿಯಾದ ಕಾಬೂಲ್ ನಗರದಲ್ಲಿ ಶಾಂತಿಭೇದಿ ಉಪದ್ರವು ಬಹಳ ಜೋರಾಗಿದೆ. ದಿನಕ್ಕೆ ೧೫೦ ಮಂದಿ ಸಾಯುತ್ತಾರೆ. ಪ್ರಜೆಗಳು ಗಾಬರಿ ಬಿದ್ದು ಕೊಹಿಸ್ಥಾನದ ಪ್ರಾಂತ್ಯಕ್ಕೆ ತಂಡತಂಡವಾಗಿ ಓಡಿಹೋದರು. ಅಮೀರರು ರಾಜಧಾನಿಯಲ್ಲೇ ಇದ್ದುಕೊಂಡು, ಜನರಿಗೆ ಧೈರ್ಯ ಹೇಳುತ್ತಿದ್ದಾರೆ. ಈ ಉಪದ್ರದಲ್ಲಿ ಅಮೀರರ ಆಸ್ಥಾನದ ಹುದ್ದೆದಾರರುಗಳ ಪೈಕಿ ಆರೇಳು ಮಂದಿ ಕಾಲವಾದರು.

❖❖❖❖

ಹಿಂದಿನ ವಾರ ಇಂಡಿಯಾದಲ್ಲೆಲ್ಲಾ ೬,೯೧೭ ಮಂದಿ ಪ್ಲೇಗ್ ಉಪದ್ರ ತಗಲಿ ಸತ್ತುಹೋದರು. ಕಳೆದ ವಾರ ಸತ್ತವರ ಸಂಖ್ಯೆಯು ೭,೧೫೮ ಕ್ಕೆ ಹೆಚ್ಚಿತು. ಈ ಪೈಕಿ ಮಧ್ಯ ಪ್ರಾಂತ್ಯಗಳಲ್ಲಿ ೭೭೮ ಮರಣಗಳಾದವು; ಹೈದರಾಬಾದ್ ಸಂಸ್ಥಾನದಲ್ಲಿ ೩೪೫, ಬೀರಾರ್ ೧೩೭, ಮಧ್ಯ ಇಂಡಿಯಾ ೫೧, ಬೊಂಬಾಯಿ ಅಧಿಕಾರ ೫,೦೯೭, ಬೊಂಬಾಯಿ ಪಟ್ಟಣ ೭೪, ಮದರಾಸ್ ಅಧಿಕಾರ ೧೦೩, ಮೈಸೂರು ಸಂಸ್ಥಾನ ೪೯೭ ಈ ಪ್ರಕಾರ ಮರಣಗಳಾಗಿವೆ.

❖❖❖❖

ಕಳೆದ ವಾರ ಕೊಲ್ಹಾಪುರದ ಮಹಾರಾಜರವರೂ ಕಾಗಲದ ರಾಜರೂ ಒಂದು ಸಾರೋಟಿನಲ್ಲಿ ಕೂತುಕೊಂಡು ಪೂನಾ ಪಟ್ಟಣದಲ್ಲಿ ಸವಾರಿ ಹೋಗುತ್ತಿದ್ದಾಗ ಕುದುರೆಗಳು ಬೆದರಿ ಗಾಡಿಯನ್ನು ಹಳ್ಳಕ್ಕೆ ಕೆಡವಿದವು. ಮಹಾರಾಜರು ಅಪಾಯವಾಗದೆ ದುಮಿಕಿ ತಪ್ಪಿಸಿಕೊಂಡರು. ರಾಜರಿಗೆ ಮಾತ್ರ ಸ್ವಲ್ಪ ಜಖಂ ಆಯಿತು. ಗಾಡಿ ಮುರಿದುಹೋಯಿತು. ಕುದುರೆಗಳಿಗೂ ಪೆಟ್ಟಾಯಿತು. ಅವರಿಬ್ಬರೂ ಒಬ್ಬ ಪಾರ್ಸಿ ದೊಡ್ಡಮನುಷ್ಯನ ಗಾಡಿಯಲ್ಲಿ ಕುಳಿತು ಅರಮನೆಗೆ ದಯಮಾಡಿದರು.

❖❖❖❖

ಬೊಂಬಾಯಿ ಅಧಿಪತ್ಯಕ್ಕೆ ಚಕ್ರವರ್ತಿಯವರು ಲಾರ್ಡ್ ಲಾಮಿಂಗ್‌ಟನ್‌ರವರನ್ನು ಗವರ್ನರಾಗಿ ನೇಮಕಮಾಡಿರುತ್ತಾರೆ. ಇವರು ೧೮೬೦ ನೆ ಇಸವಿ ಜುಲೈ ತಿಂಗಳಲ್ಲಿ ಜನಿಸಿದರು. ಇವರು ಕೆಲವು ಕಾಲ ಲಾರ್ಡ್ ಸಾಲಿಸ್‌ಬರಿಯವರ ಅಸಿಸ್ಟೆಂಟ್ ಪ್ರೈವೆಟ್ ಸೆಕ್ರೆಟರಿಯಾಗಿಯೂ, ತರುವಾಯ ಪಾರ್ಲಿಮೆಂಟಿನಲ್ಲಿ ಮೆಂಬರಾಗಿಯೂ ಇದ್ದರು. ಅನಂತರ ಅವರು ೧೮೯೫ ರಿಂದ ೧೯೦೧ನೆ ಇಸವಿ ತನಕ ಕ್ವೀನ್ಸ್‌ಲ್ಯಾಂಡಿನ ಗವರ್ನರಾಗಿ ಕೆಲಸ ನೋಡಿರುತ್ತಾರೆ. ಇವರು ೧೮೯೫ನೆ ಇಸವಿಯಲ್ಲಿ ವಿವಾಹಮಾಡಿಕೊಂಡರು.

❖❖❖❖

ಮದರಾಸ್ ಪಟ್ಟಣದ ಸರ್ಕಾರಿ ಉಪ್ಪಿನ ಮತ್ತು ಅಬ್ಕಾರಿ ಇಲಾಖೆಯ ಹೆಡ್ ಅಕೌಂಟೆಂಟ್ ರಂಗಸ್ವಾಮಿ ಪಿಳ್ಳೆಯು ಸರ್ಕಾರದ ಲೆಕ್ಕಗಳನ್ನು ತಬ್ಬಿಲ್ ಮಾಡಿ, ಹನ್ನೆರಡು ಸಹಸ್ರ ರೂಪಾಯಿ ತಿಂದುಹಾಕಿದನೆಂತಲೂ, ತನಿಖೆಗೆ ಹೊರಟಾಗ ಅವನು ತಲೆ ತಪ್ಪಿಸಿಕೊಂಡು ಹೋದಕಾರಣ ಅವನನ್ನು ಹಿಡಿದುಕೊಡುವವರಿಗೆ ೫೦೦ ರೂ. ಇನಾಮು ಸಿಕ್ಕುವುದೆಂದು ಸರ್ಕಾರದವರು ಘೋಷಣೆ ಮಾಡಿದರೆಂತಲೂ ತಿಳಿಸಿರುತ್ತೇವಷ್ಟೆ. ಸುಮಾರು ಎರಡು ತಿಂಗಳ ಕೆಳಗೆ ಅವನು ಸಿಕ್ಕಿದನು. ಸೆಷನ್ಸ್ ಜಡ್ಜರು ದರ್ಯಾಫ್ತು ಮಾಡಿ, ಅವನಿಗೆ ೧೮ ತಿಂಗಳ ಕಠಿಣ ಸಜಾ ವಿಧಿಸಿದರು.

❖❖❖❖

ಕೊಚ್ಚಿ ಸಂಸ್ಥಾನದ ಕಾಡಿನಲ್ಲಿ ಎರಡು ಆನೆಗಳ ದಂತಗಳು ಸಿಕ್ಕಿದವೆಂದು ತಿರುವಾಂಕೂರು ಸರ್ಕಾರದವರು ಕೇಳಿದ ಕೂಡಲೇ ಆ ದಂತಗಳು ತಮಗೆ ಸೇರಬೇಕೆಂತಲೂ, ಆ ಎರಡು ಆನೆಗಳೂ ತಿರುವಾಂಕೂರು ಕಾಡುಗಳಲ್ಲಿ ಸತ್ತವುಗಳೆಂತಲೂ ಹೇಳಕಳುಹಿಸಿದರು. ಕೊಚ್ಚಿ ಸಂಸ್ಥಾನದವರು ಆ ದಂತಗಳನ್ನು ಕೊಡುವುದಿಲ್ಲವೆಂದು ತಿಳಿಸಿದರು. ಬ್ರಿಟಿಷ್ ರೆಸಿಡೆಂಟರು ಈ ವ್ಯಾಜ್ಯವನ್ನು ಫೈಸಲ್ ಮಾಡಬೇಕೆಂದು ಪ್ರವೇಶಿಸಿ, ಆ ದಂತಗಳನ್ನು ತಿರುವಾಂಕೂರಿಗೆ ಕೊಚ್ಚಿಯವರು ಕಳುಹಿಸಿಕೊಡುವಂತೆ ಬರೆದರು. ಕೊಚ್ಚಿಯವರು—ಏನಾದರೂ ಸರಿಯೆ, ನಾವು ಈ ದಂತಗಳನ್ನು ಕೊಡುವುದಿಲ್ಲವೆಂದು ಹೇಳಿಕಳುಹಿಸಿದ್ದಾರೆ. ಇದರ ತೀರ್ಮಾನ ಹ್ಯಾಗೋ ಮುಂದೆ ತಿಳಿಯಬೇಕು.

❖❖❖❖

ಮಲಬಾರ್ ಪ್ರಾಂತ್ಯದಲ್ಲಿ ಸಾಮೂರಿನ್ ವಂಶದವರು ಸುಮಾರು ೩೦೦ ಮಂದಿ ಇರುತ್ತಾರೆ. ಇವರಲ್ಲಿ ನೂರಾರು ಮಂದಿಯನ್ನು (ಇವರಿಗೆಲ್ಲಾ ರಾಜರೆಂದು ಹೆಸರಿದೆ) ಸರ್ಕಾರದವರು ಸರ್ವ ವಿಚಾರಣೆಯಾಗುವಾಗ್ಯೆ ಅಸೆಸರುಗಳಾಗಿ (ಪಂಚಾಯತದಾರಾಗಿ) ಬರಬೇಕೆಂದು ಹೆಸರು ಬರೆದುಕೊಂಡರು. ಆ ಪೈಕಿ ನಾಲ್ವತ್ತೈದು ಮಂದಿ ರಾಜರು ತಾವು ಪಂಚಾಯತದಾರಾಗಿ ಕೋರ್ಟಿಗೆ ಬರುವುದು ತಮಗೆ ಅವಮಾನವೆಂಬದಾಗಿ ಅರ್ಜಿ ಬರೆದುಕೊಂಡರು. ಸೆಷನ್ಸ್ ಜಡ್ಜರೂ ಕಲೆಕ್ಟರರೂ ಸೇರಿ ಅವರೆಲ್ಲರ ಅಹವಾಲುಗಳನ್ನೂ ಕೇಳಿ ೧೦ ಮಂದಿಯ ಹೆಸರುಗಳನ್ನು ಮಾತ್ರ ವಜಾ ಮಾಡಿ, ಉಳಿದವರ ಹೆಸರನ್ನು ಪಟ್ಟಿಯಿಂದ ತೆಗೆಯುವದಿಲ್ಲವೆಂದು ಹೇಳಿದರು. ಇದರ ಮೇಲೆ ಅವರು ಗವರ್ನಮೆಂಟಿಗೆ ಅರ್ಜಿ ಬರೆದುಕೊಂಡಿದ್ದಾರೆ.

❖❖❖❖

ಕೊಚ್ಚಿ ಸಂಸ್ಥಾನದ ರಾಜಧಾನಿಯಾದ ಎರ್ನಾಕುಳದಲ್ಲಿ ತಿರುವಂಚಕುಳಂ ಎಂಬೊಂದು ದೇವಸ್ಥಾನವಿರುವುದು. ಇದರ ಪಕ್ಕದಲ್ಲಿ ಇದುವರೆಗೆ ಸಕಲ ಪ್ರಜೆಗಳೂ ಜಾತಿ ಭೇದವಿಲ್ಲದೆ ರಸ್ತೆಯಲ್ಲಿ ಹೋಗಿ ಬರುತ್ತಿರುವರು. ಈಚೆಗೆ ಕೊಚ್ಚಿ ದರ್ಬಾರಿನವರು ಆ ದೇವಸ್ಥಾನದ ಮುಂದಿರುವ ರಸ್ತೆಯಲ್ಲಿ ದೇಶೀಯ ಕ್ರೈಸ್ತರ್‍ಯಾರೂ ಸಂಚರಿಸಕೂಡದೆಂದು ಆಟಂಕಪಡಿಸಿರುತ್ತಾರೆ. ಇದು ಕ್ರೈಸ್ತ ಪ್ರಜೆಗಳಲ್ಲಿ ತುಂಬಾ ಅಸಮಾಧಾನವನ್ನುಂಟುಮಾಡಿರುವುದು. ಅನಾದಿಯಿಂದಲೂ ಸಕಲರೂ ಯಾವ ಅಡ್ಡಿಯೂ ಇಲ್ಲದೆ ಆ ರಸ್ತೆಯಲ್ಲಿ ತಿರುಗಾಡುತ್ತಿದ್ದರು. ಈಗಮಾತ್ರ ತಿರುಗಾಡಿದರೆ ದೇವಸ್ಥಾನದ ಕೆಲಸಕಾರ್ಯಗಳಿಗೆ ಯಾವ ಅಡಚಣೆಯುಂಟಾಗುವುದೋ ಕಾಣಲಿಲ್ಲ. ಆದಕಾರಣ ಅಲ್ಲಿನ ದೇಶೀಯ ಕ್ರೈಸ್ತರೆಲ್ಲಾ ಸೇರಿ ಸರ್ಕಾರಕ್ಕೆ ಅರ್ಜಿ ಬರೆದುಕೊಂಡಿರುವರು.

❖❖❖❖

ಹುಡುಗಿಯು ದೊಡ್ಡದಾಗಿದ್ದರೂ ಹನ್ನೆರಡು ವರುಷಕ್ಕಿಂತ ಮೊದಲು ವಿಶೇಷ ಪ್ರಸ್ತ ಮಾಡಕೂಡದೆಂದು ಇಂಡಿಯಾ ಗವರ್ನಮೆಂಟಿನವರು ಒಂದು ಕಾನೂನು ಮಾಡಿ ಜಾರಿಯಲ್ಲಿ ತಂದಿರುತ್ತಾರಷ್ಟೆ. ಇದುವರೆಗೆ ಈ ಕಾನೂನಿಗೆ ವಿರೋಧವಾಗಿ ನಡೆದ ವಿಶೇಷ ಪ್ರಸ್ತಗಳು ವಿಶೇಷವಾಗಿಲ್ಲ. ಹಿಂದುಗಳಲ್ಲೇ ವಿದ್ಯಾವಂತರಾದವರು ತಮ್ಮ ಮಕ್ಕಳು ದೊಡ್ಡವರಾಗುವತನಕ ಅವರಿಗೆ ವಿಶೇಷ ಮಾಡದೆ ಇರಬೇಕೆಂದು ಕಲಿತುಕೊಳ್ಳುತ್ತಿದ್ದಾರೆ. ಆದರೆ ಧಿರಾ ಪಟ್ಟಣದಲ್ಲಿ ಒಬ್ಬ ಮುಸಲ್ಮಾನರವನು ತನ್ನ ಹೆಂಡತಿಗೆ ೧೨ ವರುಷ ತುಂಬುವುದಕ್ಕೆ ಮೊದಲೇ ಅವಳಲ್ಲಿ ಸಂಸಾರ ಸುಖವನ್ನನುಭೋಗಿಸಿದನು. ಅಪರಾಧ ಅವನ ಮೇಲೆ ಮೊಕದ್ದಮೆ ತರಲ್ಪಟ್ಟಿತು. ಸೆಷನ್ಸ್ ಜಡ್ಜರು ಅವನಿಗೆ ೬ ತಿಂಗಳ ಕಠಿಣ ಸಜವನ್ನೂ ೨೦ ರೂ. ಜುಲ್ಮಾನೆಯನ್ನೂ ವಿಧಿಸಿರುತ್ತಾರೆ.

❖❖❖❖

ಲಾಹೋರ್ ಪಟ್ಟಣದಲ್ಲಿ ದೈಸಿಂಗ್ ವೀರಸಿಂಗ್, ಕೃಷ್ಣಸಿಂಗ್, ಭಗವತ್‌ಸಿಂಗ್ ಎಂಬೀ ನಾಲ್ವರೂ ಸೇರಿ ಕರೆನ್ಸಿ ನೋಟುಗಳನ್ನು ತಯಾರ್ಮಾಡಿ ವರ್ತಕರಿಗೆ ಕೊಟ್ಟು ಮುರಿಸುತ್ತಾ ಬಂದರು. ಪೋಲೀಸಿನವರು ಇವರನ್ನು ಪತ್ತೆಮಾಡಿ, ದೈಸಿಂಗನಿಗೆ ಒಳ್ಳೆ ಮಾತು ಹೇಳಿ, ಅವನ ಮೂಲಕ ಎಲ್ಲಾ ರುಜುವಾತುಮಾಡಿದರು. ಅವರು ವಿಲಾಯತಿಯಿಂದ ನೋಟ್ ತಯಾರ್ಮಾಡತಕ್ಕ ಕಾಗದವನ್ನು ತರಿಸಿ, ಎಲ್ಲಾ ಸಲಕರಣೆಗಳನ್ನೂ ಒದಗಿಸಿಟ್ಟುಕೊಂಡು ನೋಟುಗಳನ್ನು ಮಾಡುತ್ತಿದ್ದರು. ಅವರು ಮಾಡಿ ಚಲಾವಣೆಗೆ ತಂದ ನೋಟುಗಳ ಪೈಕಿ ಇಪ್ಪತ್ತು ನೋಟುಗಳು ಸಿಕ್ಕಿದವು. ವೀರಸಿಂಗನು ಕಳ್ಳ ನೋಟುಗಳನ್ನು ಮಾಡತಕ್ಕ ಕ್ರಮಗಳನ್ನೆಲ್ಲಾ ವಿವರಿಸಿ ಮಾಡಿ ತೋರಿಸಿದನು. ಸೆಷನ್ಸ್ ಜಡ್ಜರು ಮೊದಲನೆ ಅಪರಾಧಿಗೆ ಒಂದು ವರುಷವೂ, ಉಳಿದ ಮೂವರಿಗೂ ತಲಾ ಏಳೇಳು ವರುಷಗಳೂ ಕಠಿಣ ಸಜ ವಿಧಿಸಿದ್ದಲ್ಲದೆ ಜುಲ್ಮಾನೆಯನ್ನೂ ಹಾಕಿದರು.

❖❖❖❖

ದಕ್ಷಿಣ ಆಫ್ರಿಕದಲ್ಲಿ ೨೫,೦೦೦ ಇಂಗ್ಲಿಷ್ ಸೈನಿಕರನ್ನು ನೇಮಿಸಿಡುವುದಾಗಿಯೂ, ಈ ಪೈಕಿ ಕೆಲವು ಸೈನ್ಯದ ಖರ್ಚನ್ನು ಇಂಡಿಯಾ ಗವರ್ನಮೆಂಟಿನವರು ವಹಿಸಿಕೊಳ್ಳಬೇಕೆಂತಲೂ ವಿಲಾಯತಿ ರಾಜ್ಯದ ಯುದ್ಧದ ಇಲಾಖೆಯ ಸೆಕ್ರೆಟರಿ ಮೆ। ಬ್ರಾಡ್ರಿಕ್‌ಯವರು ತಿಳಿಸಿದ್ದಾರೂ, ಹಿಂದುಸ್ಥಾನದಲ್ಲೂ ವಿಲಾಯತಿಯಲ್ಲೂ ಬಹು ಮಂದಿ ದೊಡ್ಡಮನುಷ್ಯರೂ ವರ್ತಮಾನ ಪತ್ರಿಕೆಗಳೂ ಈ ಸಲಹೆಯು ನ್ಯಾಯವಾದುದಲ್ಲವೆಂತಲೂ, ಹಿಂದುಸ್ಥಾನದ ಸೈನ್ಯದ ಖರ್ಚು ಈಗಲೇ ಹೆಚ್ಚಿರುವುದರಿಂದ ಅದನ್ನು ಇನ್ನೂ ಜಾಸ್ತಿ ಮಾಡುವುದು ತರವಲ್ಲವೆಂತಲೂ ಆಕ್ಷೇಪಣೆಮಾಡಿದ್ದು ನಮ್ಮ ವಾಚಕರಿಗೆ ತಿಳಿದಿದೆಯಷ್ಟೆ. ಈಚೆಗೆ ಹಿಂದುಸ್ಥಾನದ ಸೈನ್ಯಾಧಿಪತಿಯಾದ ಲಾರ್ಡ್ ಕಿಚ್ನರ್‌ಯವರೂ ವೈಸ್‌ರಾಯಿ ಲಾರ್ಡ್ ಕರ್ಜನ್ ಪ್ರಭುಗಳೂ ಈ ದುಬಾರೀ ಖರ್ಚನ್ನು ಹಿಂದುಸ್ಥಾನದ ಮೇಲೆ ಹಾಕಕೂಡದೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ಬರೆದರು. ಇದರಮೇಲೆ ವಿಲಾಯತಿ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆಯಿತು. ಕಡೆಗೆ ಮೆ। ಬ್ರಾಡ್ರಿಕ್‌ಯವರು ಈ ಖರ್ಚನ್ನು ಹಿಂದುಸ್ಥಾನಕ್ಕೆ ವಹಿಸುವುದಿಲ್ಲವೆಂತಲೂ, ದಕ್ಷಿಣ ಆಫ್ರಿಕದಲ್ಲಿ ೧೫,೦೦೦ ಇಂಗ್ಲಿಷ್ ಸೈನಿಕರನ್ನು ಮಾತ್ರ ಇಡುವುದಕ್ಕೆ ಏರ್ಪಾಡು ಮಾಡುವುದಾಗಿಯೂ, ಇನ್ನು ಮುಂದೆ ಹಿಂದುಸ್ಥಾನದಲ್ಲೇ ಹೆಚ್ಚು ಸೈನ್ಯವನ್ನು ಇಟ್ಟುಕೊಳ್ಳಬೇಕಾದ ಸಂಭವ ಪ್ರಾಪ್ತವಾದೀತೆಂತಲೂ ಹೇಳಿ, ಈ ಖರ್ಚನ್ನು ಸದ್ಯ ವಜಾಮಾಡಿಬಿಟ್ಟರು.

❖❖❖❖

ಬೊಂಬಾಯಿ ಪಟ್ಟಣದ ಕೆಲವು ಮಂದಿ ಮ್ಯುನಿಸಿಪಲ್ ಕಮಿಷನರುಗಳೂ, ವಿದ್ಯಾವಂತರಾದ ಪ್ರಜೆಗಳ ಮುಖಂಡರು ಕೆಲವರೂ ಸೇರಿ ಒಂದು ಸಂಘವನ್ನು ಮಾಡಿಕೊಂಡಿದ್ದಾರೆ. ಇವರು ಆ ಪಟ್ಟಣದಲ್ಲಿರುವ ಬಡಬಗ್ಗರಾದ ಪ್ರಜೆಗಳಿಗೆ ಆರೋಗ್ಯ ಸೂತ್ರಗಳನ್ನು ಕಲಿಸಿಕೊಡಬೇಕೆಂದು ಉದ್ದೇಶಪಟ್ಟಿರುವರು. ಅವರು ಪ್ರಜೆಗಳಿಗೆ ಕಲಿಸಬೇಕೆಂದಿರುವ ವಿಷಯಗಳಾವೆಂದರೆ.—ನಿರ್ಮಲವಾದ ಗಾಳಿ, ನೀರು, ಬಿಸಿಲು ಇವುಗಳ ಪ್ರಯೋಜನ; ಒತ್ತೊತ್ತಾಗಿ ಜನರು ಮನೆ ಕಟ್ಟಿಕೊಳ್ಳುವುದರಲ್ಲೂ, ಸಣ್ಣ ಸಣ್ಣ ಮನೆಗಳಲ್ಲಿ ಹೆಚ್ಚು ಜನರು ವಾಸಮಾಡುವುದರಲ್ಲೂ ತುಂಬಾ ಕೆಡಕಾಗುವುದು, ಅಂಟು ರೋಗಗಳನ್ನು ಹಬ್ಬದಂತೆ ತಡೆಯುವುದಕ್ಕೆ ಮಾಡಬೇಕಾದ ಕಾರ್ಯಗಳು. ಕಾಯಿಲೆಯ ಕಾಲದಲ್ಲಿ ಜನರು ವೈದ್ಯರ ಸಹಾಯವನ್ನು ಪಡೆಯಬೇಕಾದ ಆವಶ್ಯಕತೆ; ಮಕ್ಕಳನ್ನು ಪೋಷಿಸುವುದರಲ್ಲಿ ತಾಯಿತಂದೆಗಳು ನಡಸಬೇಕಾದ ಕ್ರಮಗಳು; ಶರೀರವನ್ನೂ ಬಟ್ಟೆಬರೆಗಳನ್ನೂ ತುಂಬಾ ಚೊಕ್ಕಟವಾಗಿಟ್ಟುಕೊಳ್ಳುವುದರ ಪ್ರಯೋಜನಗಳು; ವಾಸಮಾಡತಕ್ಕ ಮನೆಗಳಲ್ಲೇ ಜನರು ಗೋಕರುಗಳನ್ನು ಕಟ್ಟಿಕೊಂಡು ಸಾಕುವುದರಿಂದ ಉಂಟಾಗುವ ನಾನಾ ಕೇಡುಗಳು; ಅಡಿಗೆಮಾಡಿದ ಆಹಾರ ಪದಾರ್ಥಗಳನ್ನೂ ಹಾಲನ್ನೂ ಬಹಳ ಜೋಪಾನವಾಗಿ ಮುಚ್ಚಿಡುವುದರ ಆವಶ್ಯಕತೆ—ಇವೇ ಮೊದಲಾದ ವಿಷಯಗಳನ್ನು ಕುರಿತು ಬಡಬಗ್ಗರಿಗೆ ತಿಳಿಸಿ, ವಿವೇಕ ಹೇಳಿಕೊಡುವವರಾಗಿದ್ದಾರೆ. ಇದೇಂಥಾ ಸ್ತೋತ್ರಾರ್ಹವಾದ ಕಾರ್ಯ!

❖❖❖❖

ಕಾಶೀ ಮಹಾರಾಜರವರ ಎರಡು ದಂತದ ಕುರ್ಚಿಗಳನ್ನು ವೈಸ್‌ರಾಯಿ ಲಾರ್ಡ್ ಕರ್ಜನರವರು ತೆಗೆದುಕೊಂಡು ಇಡುವ ವಿಚಾರವಾಗಿ ವಿಲಾಯತಿ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆದುದನ್ನೂ ಅದಕ್ಕೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಕೊಟ್ಟ ಜವಾಬನ್ನೂ ನಾವು ಕಳೆದ ವಾರ ತಿಳಿಸಿರುತ್ತೇವಷ್ಟೆ. ಈ ವಿಷಯವನ್ನು ಕಾಶೀ ಮಹಾರಾಜರಾದ ಪ್ರಭು ನಾರಾಯಣರವರು ಕೇಳಿ, ವಿಲಾಯತಿಯಲ್ಲಿ ಪ್ರಕಟವಾಗುವ ಮುಖ್ಯ ಮುಖ್ಯವಾದ ವರ್ತಮಾನ ಪತ್ರಿಕೆಗಳಲ್ಲಿ ಜವಾಬು ಬರೆದಿರುವುದೇನೆಂದರೆ:—ಮಿಸೆಸ್ ಸ್ಟ್ರೀಟ್ ಎಂಬಾಕೆಯು ನನ್ನ ಖಾಸಗೀ ಸಾಮಾನುಗಳ ವಿಷಯವನ್ನು ಕುರಿತು ಬರೆದಿರುವುದು ನಿಜವಲ್ಲ. ನಾನು ವೈಸ್‌ರಾಯಿಯವರಲ್ಲಿ ಇಟ್ಟುಕೊಂಡಿರುವ ಪ್ರೀತಿ ಗೌರವಗಳನ್ನು ಪ್ರಕಾಶಕ್ಕೆ ತರುವ ಉದ್ದೇಶದಿಂದ ನನ್ನಲ್ಲಿದ್ದ ಮುಮುಕಲಾದ ಈ ದಂತದ ಕುರ್ಚಿಗಳನ್ನು ಅವರಿಗೆ ನಜರು ಒಪ್ಪಿಸಬೇಕೆಂದು ಅರಿಕೆಮಾಡಿಕೊಂಡೆನು. ವೈಸ್‌ರಾಯಿಯವರು ನನ್ನಿಂದ ನಜರು ಸ್ವೀಕರಿಸುವುದಿಲ್ಲವೆಂದು ಹೇಳಿಬಿಟ್ಟರು. ಅನಂತರ ನಾನು ಅವರಿಂದ ಒಂದು ಬಂದೂಕವನ್ನು ಪ್ರತಿಫಲವಾಗಿ ಪಡೆದು, ಆ ಕುರ್ಚಿಗಳನ್ನು ಅವರಿಗೆ ಒಪ್ಪಿಸಿದೆನು. ಇದರಲ್ಲಿ ನನಗೆ ಅನ್ಯಾಯವಾಯಿತೇ ಹೊರತು ನಷ್ಟವೇನೂ ಉಂಟಾಗಲಿಲ್ಲ. ಈ ಕುರ್ಚಿಗಳನ್ನು ನಮ್ಮ ಹಿರಿಯರು ದಂಗೆಯ ಕಾಲದಲ್ಲಿ ಇಂಗ್ಲಿಷರಿಗೆ ಸಹಾಯಮಾಡಿದುದಕ್ಕಾಗಿ ಅವರು ಬಹುಮಾನವಾಗಿ ನಮ್ಮ ಹಿರಿಯರಿಗೆ ಕೊಟ್ಟರು ಎಂಬೀ ಮಾತು ಈಗಲೇ ನನಗೆ ಗೊತ್ತಾಯಿತು. ಮೊದಲು ನನಗೆ ತಿಳಿದಿ

...ಲ್ಲ. ನಾನು ಈ ಕಾರ್ಡುಗಳನ್ನು ಮೈಸೂರಾಯುಯವರಿಗೆ ಕೊಡುವುದ ಕ್ಕೆ ಮೊದಲೇ ಡೇಲಿ ಮೆಯಿಲ್ ಎಂಬ ಪತ್ರಿಕೆಯಾಗಲಿ, ಆ ಪತ್ರಿಕೆಯ ಬಾತ್ಮಿದಾರರಾಗಲಿ ನನಗೆ ತಿಳಿಸಿದ್ದ ಪಕ್ಷಕ್ಕೆ ಅವು ಇಂಥಾ ಉತ್ಕೃಷ್ಟವಾದ ಪದಾರ್ಥಗಳೆಂದು ನಾನು ತಿಳುಕೊಂಡು ನನ್ನಲ್ಲಿಯೇ ಇಟ್ಟುಕೊಳ್ಳುತ್ತಿದ್ದೆನು. ಇವು ನಮ್ಮ ಹಿರಿಯರಿಗೆ ಬಹುಮಾನವಾಗಿ ಬಂದವುಗಳಲ್ಲ. ಇಂಗ್ಲಿಷರು ನಮ್ಮ ಹಿರಿಯರಿಗೆ ಶಾಶ್ವತವಾದ ಅನೇಕ ಸಹಾಯಗಳನ್ನು ಮಾಡಿರುತ್ತಾರೆ. ಮಿ॥ ಜಾವೆಲ್‌ಯವರೂ, ಬ್ರಿಟಿಷ್ ಸ್ಕ್ರಿಪ್ ಎಂಬಾಕೆಯೂ ಈ ಕಾರ್ಡುಗಳ ಬೆಲೆ ಮೊದಲು ೫೦,೦೦೦ ರೂ. ಆಗುತ್ತೆಂತಲೂ, ಈಗ ಅದರ ಬೆಲೆ ಅಷ್ಟು ಇಷ್ಟೆಂದು ನಿರ್ಣಯವಿದಕ್ಕಾಗುವುದಿಲ್ಲವೆಂತಲೂ, ಅವು ಬಹು ವಿಚಿತ್ರ ವಸ್ತುಗಳೆಂತಲೂ ಹೇಳಿರುವುದು ನಿಜವಲ್ಲ. ನಮ್ಮ ಹಿರಿಯರು ಸಂಪಾದಿಸಿದ ಪದಾರ್ಥಗಳ್ಯಾವನ್ನೂ ನಾನು ಯಾರಿಗೂ ಇದುವರೆಗೆ ತೋರಿಸಲೂ ಇಲ್ಲ, ಯಾರಿಂದಲೂ ಕ್ರಯ ಕಟ್ಟಿಸಲೂ ಇಲ್ಲ.

## ಬಾತ್ಮಿದಾರರಿಗೆ ನೋಟಿಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯುಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಬೆಂಗಳೂರು ವಿದ್ಯಾರ್ಥಿಗಳು; ಜಿ. ಆ., ಹೊಸಂಗಡಿ; ಎಂ. ಶರಣಂಗರಾವ್, ಬಾಡಾ; ಯಥಾರ್ಥವಾದಿ, ಚಿಕ್ಕನಾಯಕನಹಳ್ಳಿ— ನಿಮ್ಮ ಬಾತ್ಮಿಯಲ್ಲಿ ಪ್ರಕಟನೆಗೆ ಅರ್ಹವಾದ ಸಂಗತಿಗಳೇನೂ ಇಲ್ಲ.

ರಾ. ಉಪ್ಪಾರಪೇಟೆ—ನೀವು ಹೇಳುವಂಥಾ ದೂರಗಾಲಿ ಇರುವುದೆಂದು ನಾವು ಈ ಪತ್ರಿಕೆಯಲ್ಲಿ ಹಿಂದೆ ಯಾವಾಗಲೂ ಪ್ರಕಟಿಸಿದ್ದ ಜ್ಞಾಪಕವಿಲ್ಲ. ಯಾವ ವಾರದ ಪತ್ರಿಕೆಯಲ್ಲಿ ನೀವು ಅದನ್ನು ಓದಿದಿರೋ ದಯವಿಟ್ಟು ತಿಳಿಸಿ.

ಎಡಿ.

## ಕರೆಸ್ಪಾಂಡೆನ್ಸ್.

### ರೂಪಾಯಿ.

ಅಯ್ಯಾ,

ಈಗ ಚಲಾವಣೆಯಲ್ಲಿರುವ ರೂಪಾಯಿಗಳಲ್ಲಿ ಕೆಲವು ರೂಪಾಯಿಗಳ ಮೇಲೆ ಬಿ. ಎಸ್. ಎಂಬ ಇಂಗ್ಲಿಷ್ ಅಕ್ಷರಗಳ ಸನ್ನೆ ಮೊಹರೊತ್ತಿರುವದು. ಈ ರೂಪಾಯಿ ಯಾರೂ ತೆಗೆದುಕೊಳ್ಳುವದಿಲ್ಲ. ಇದರ ಕಾರಣವೇನು ಎಂಬ ವಿವರವನ್ನು ತಮ್ಮ ಪತ್ರಿಕೆಯ ಮೂಲಕ ತಿಳಿಸಬೇಕಾಗಿ ಅಪೇಕ್ಷಿಸುತ್ತೇನೆ.

ಕಾರ್ಕಳ ಕೆ. ಗಸ್ಟೇಕಾಂಟ.

[ಈ ತರಹಾ ರೂಪಾಯಿಗಳನ್ನು ನಾವು ನೋಡಿ ಇಲ್ಲ. ಎಡಿ.]

*********

### ಚರ್ಚೆದಾರರಿಗೆ ಉತ್ತರ.

ಅಯ್ಯಾ,

ಬಸೇ ಸಾಬರೇ, ನಾನು ಮುಕಂಪಿದನನ್ನು ದೂಷಿಸಿ ಬರೆದದ್ದಾಗಿ ಬರೆಯುತ್ತೀರಿ. ನನ್ನ ತಾತ್ಪರ್ಯ ಅಂಥಾದ್ದಲ್ಲ. ನಮ್ಮವರನ್ನು ನರಿಯಾದ ದಾರಿಯಲ್ಲಿ ತರಲು ನಮ್ಮ ಹಿಂದಿನವರು ಹೇಳಿರತಕ್ಕ ಪಾಠಕಗಳಿಗೆ ಉದಾಹರಣೆಯಾಗಿ ಹೇಳಿದೆನೆಯೇ ಹೊರ್ತು ಮತ್ತೆ ಬೇರೆಯಲ್ಲ. ನಾನು ಖುರಾನನ್ನು ನೋಡಿದ್ದೇನೆಂತಲೂ ಅದರಲ್ಲಿ ಆ ಪಾಠ ಇದೆಯೆಂತಲೂ ನಾನು ಬರೆದಿಲ್ಲ. ಇನ್ನೊಂದಾವರ್ತಿ ಪತ್ರಿಕೆಯನ್ನು ನೋಡಿಕೊಳ್ಳಿ, ಗೊತ್ತಾಗುತ್ತೆ. ಯಾರೋ ಒಬ್ಬರು ಇಂಗ್ಲೀಷ್ ಪುಸ್ತಕದಲ್ಲಿ ಕಥೆ ಹೇಳುವ ನೆಪದಲ್ಲಿ ಹೇಳಿದ್ದನ್ನು ಕೇಳಿದ್ದೆನಾಗಿ ಖುರಾನಿನಲ್ಲಿ ಹೇಳಿದಂತೆ ಎಂದು ಬರೆದಿದ್ದೇನೆ.

ಕೃಷ್ಣಪ್ಪ.

*********

### ಅಮಲ್ದಾರ್ರುಗಳೂ ಪ್ರಜಾ ಪ್ರತಿನಿಧಿಗಳೂ.

ಅಯ್ಯಾ,

ಆಯಾ ತಾಲ್ಲೂಕುಗಳ ಅಹವಾಲುಗಳನ್ನು ಹೇಳಿಕೊಳ್ಳುವುದಕ್ಕೋಸ್ಕರ ಮೆಂಬರುಗಳು ಚುನಾಯಿಸಲ್ಪಡುತ್ತಾರೆ. ಎಲ್ಲಾ ಭಾಗಗಳೂ ಅಮಲ್ದಾರ್ರಿಗೆ ಸೇರಿದ್ದಾಗಿರುವದರಿಂದ ಯಾವ ಭಾಗದಲ್ಲಿಯೂ ದರೂ ಇರುವ ನ್ಯೂನತೆಯನ್ನು ಹೊರಪಡಿಸಿದರೆ ಅಮಲ್ದಾರ್ರು ಆಗ್ರಹಕ್ಕೆ ಪಾತ್ರರಾಗುತ್ತೇವೆಂಬ ಭಯದಿಂದ, ನಮ್ಮ ಮೆಂಬರುಗಳು ತಮ್ಮ ಕಷ್ಟಸುಖಗಳನ್ನು ಧೈರ್ಯವಾಗಿ ಹೇಳಿಕೊಳ್ಳುವದಿಲ್ಲ. ಇದರಿಂದ ಪ್ರಜಾಪ್ರತಿನಿಧಿ ಸಭೆಯ ಮುಖ್ಯ ಉದ್ದೇಶವು ಸಫಲವಾಗದೇ ಹೋಗಲು ಅವಕಾಶವಾಗುತ್ತೆ. ಆದ್ದರಿಂದ ದಯಾಳುಗಳಾದ ನಮ್ಮ ಮೈಸೂರು ಸರ್ಕಾರದವರು ಈಗ ಅಮಲ್ದಾರ್ರಿಗೆ ಇರತಕ್ಕ ಅಧಿಕಾರಿಗಳ ಪೈಕಿ ಕೆಲವು ಅಧಿಕಾರಗಳನ್ನು ಪ್ರತ್ಯೇಕ ಪಡಿಸಿದರೆ ಜನಗಳಿಗೆ ಧೈರ್ಯವೂ ಕ್ಷೇಮವೂ ಉಂಟಾಗುತ್ತೆ. ಮನುಷ್ಯಸ್ವಭಾವವು ಅತಿ ದುರ್ಬಲವಾದದ್ದರಿಂದಲೂ, ಒಬ್ಬ ಮನುಷ್ಯನಲ್ಲಿ ಅನೇಕ ಅಧಿಕಾರಗಳಿರೋಣದರಿಂದ ಕಾಲಾನುಕಾಲದಲ್ಲಿ ಅಲ್ಪಜನಗಳಿಗೆ ಅವಕಾಶ ಕೊಟ್ಟು ಆ ಅಧಿಕಾರಿಯು ಅಜ್ಞಾನವಶಾತ್ ಬಹು ಜನಗಳಿಗೆ ತೊಂದರೆಯನ್ನುಂಟು ಮಾಡಬಹುದು. ಈ ಸಂಗತಿಗಳಿಗೆ ನಮ್ಮ ಸರ್ಕಾರದವರು ಗಮನ ಕೊಟ್ಟಾರೆಂದು ನಂಬುತ್ತೇನೆ.

ಸತ್ಯವಾದಿ.

### ಬಾಳೆನಾರು ತೆಗೆಯುವ ಯಂತ್ರಗಳು.

ಅಯ್ಯಾ,

ಬಾಳೆ ನಾರನ್ನು ಯಂತ್ರಕ್ಕೆ ಕೊಟ್ಟು ನಾರನ್ನು ಶೋಧಿಸಿ ವಸ್ತ್ರಗಳನ್ನು ತಯಾರ್ಮಾಡುವ ಯಂತ್ರವಿದೆ ಎಂದು ತಮ್ಮ ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸಿದ್ದಾಗ ಜ್ಞಾಪಕವಿದೆ. ಆದರೆ ಅದು ಎಲ್ಲಿಸಿಕ್ಕುತ್ತೋ ತಿಳಿಯದು. ಸದರಿ ಯಂತ್ರವು ಯಾರಲ್ಲಿ ಸಿಕ್ಕುತ್ತೆ? ಅದರ ಕ್ರಯವೆಷ್ಟಿರಬಹುದು? ಈ ಸಂಗತಿ ದಯವಿಟ್ಟು ತಿಳಿಸಬೇಕಾಗಿ ಕೋರುವ ತಮ್ಮ ವಿಧೇಯ

ಟಿ. ಪುಟ್ಟಶಾಸ್ತ್ರಿ, ತರೀಕೆರೆ.

[ಬಾಳೆಪಟ್ಟೆಯಿಂದ ನಾರಿನ ಎಳೆಗಳನ್ನು ತೆಗೆದು, ಈ ನಾರದಿಂದ ನಾರಿನ ವಸ್ತ್ರಗಳನ್ನು ನೇಯಬಹುದೆಂದು ತಿಳಿಸಿದ್ದೆವಷ್ಟೆ. ಈ ನಾರನ್ನು ಬಿಡಿಸಿ ತೆಗೆಯುವದಕ್ಕೆ ಯಂತ್ರ ಮಾಡಿದ್ದಾರೆ. ಅದರ ಕ್ರಯ ೧೦ ರೂ. ಗಿಂತ ಕೆಚ್ಚಿಲ್ಲ. ಈ ಯಂತ್ರವನ್ನು ಯಾರು ಬೇಕಾದರೂ ಮುಂದಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು. ಪ್ರಾನ್ಸಿಪಾಲ್, ಸ್ಕೂಲ್ ಆಫ್ ಆರ್ಟ್ಸ್, ತಿರುವಾಂಕೂರು.—ಎಡಿ.]

*********

### ಕೃತಜ್ಞತೆ.

ಅಯ್ಯಾ,

ಅರಸೀಕೆರೆ ತಾಲ್ಲೂಕಿನಲ್ಲಿ ದೊಡ್ಡ ಮೇಟಿ ಕುರ್ಕೆ ಎಂಬ ಗ್ರಾಮವಿರುತ್ತೆ. ಈ ಗ್ರಾಮದಲ್ಲಿ ಕುಡಿಯುವುದಕ್ಕೆ ಅನುಕೂಲವಾದ ಭಾವಿ ಹೊರ್ತು ದನಕರುಗಳಿಗೆ ಅತ್ಯವಶ್ಯಕವಾದ ಕೆರೆಯೇ ಆಗಲೀ ಕುಂಟೆಯೇ ಆಗಲಿ ಇರುವುದಿಲ್ಲ. ಈ ಅನಾನುಕೂಲದಿಂದ ಗ್ರಾಮದಲ್ಲಿನ ದನಕರುಗಳು ಪಡುತ್ತಿದ್ದ ಶ್ರಮವನ್ನು ಹೇಳಬೇಕಾದ್ದೇನಿದೆ? ಹೀಗಿರುವುದನ್ನು ದಯಾಳುವಾದ ಈ ಗ್ರಾಮದ ಪಟೇಲರು ಎಂಬಾತನು ನೋಡಿ ಮೂಗುದಾನಗಳ ದುಃಖವನ್ನು ನಿವಾರಣೆ ಮಾಡಬೇಕೆಂದು ಪ್ರಯತ್ನಪಟ್ಟದ್ದನ್ನು ಏನೆಂದು ಹೇಳೋಣ! ಈ ಗ್ರಾಮಕ್ಕೆ ಎರಡು ಫರ್ಲಾಂಗ್ ದೂರದಲ್ಲಿ ಒಂದು ಹಳ್ಳವಿದೆ. ಅದರಲ್ಲಿ ಸಾಧಾರಣವಾಗಿ ಮಳೆಗಾಲದಲ್ಲಿ ಒಂದು ಆಳುದ್ದ ನೀರು ಬರುತ್ತದೆ. ಹೀಗೆ ಬರುವ ನೀರನ್ನು ತಡೆಮಾಡಿ, ಎರಡು ಆಳುದ್ದ ಏರಿ ಕಟ್ಟಿ, ನೀರು ನಿಲ್ಲುವಂತೆ ತನ್ನ ಸ್ವಂತ ಬಾಗೋಡಿನಿಂದ ನೂರಾರು ರೂಪಾಯಿ ಖರ್ಚುಮಾಡಿ ಮಾಡಿಸಿರುತ್ತಾನೆ. ಇದರಿಂದ ಮೂಗು ಪ್ರಾಣಿಗಳಿಗೂ ಗ್ರಾಮದ ಜನಗಳಿಗೂ ಆದ ಸಂತೋಷವೂ, ಉಪಕಾರವೂ ಸ್ತೋತ್ರಾರ್ಹವಾಗಿದೆ. ಇಂಥಾ ಸತ್ಕಾರ್ಯದಲ್ಲಿ ಪ್ರಯತ್ನಿಸಿರುವವರ ಹೆಸರನ್ನು ತಮ್ಮ ಅಮೋಘವಾದ ಪತ್ರಿಕೆಯಲ್ಲಿ ಪ್ರಕಟಿಸುವಿರಿಯೆಂದು ನಂಬುತ್ತೇನೆ.

ಎಂ. ಹೆಚ್. ಹರಿಯಣ್ಣ.

*********

### ತುಂಕೂರಿಗೂ ಕುಣಿಗಲಿಗೂ ರೈಲ್ ಆಗಬೇಕು.

ಅಯ್ಯಾ,

ಬರುವ ದಸರಾದಲ್ಲಿ ಮೈಸೂರಿನಲ್ಲಿ ನಡೆಯುವ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮೆಂಬರುಗಳಾಗಿರತಕ್ಕವರು ಅನೇಕ ವಿಷಯಗಳನ್ನು ಸರ್ಕಾರಕ್ಕೆ ಸಲಹೆ ಕೊಡುತ್ತಾರಷ್ಟೆ. ಆ ಕಾಲದಲ್ಲಿ ಈ ಕೆಳಗೆ ನಮೂದಿಸಿರುವ ಸಂಗತಿಯನ್ನು ತಮ್ಮ ಘನವಾದ ಪತ್ರಿಕೆಯ ಮೂಲಕ ಗೌರ್ನಮೆಂಟಿನವರ ತಿಳುವಳಿಕೆಗೆ ಬರುವಂತೆ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಈ ಮೈಸೂರು ದೇಶದಲ್ಲಿ "ಕುಣಿಗಲು" ಸರ್ಕಾರಕ್ಕೆ ಒಂದು ಮುಖ್ಯ ಸ್ಥಳವಾಗಿಯೂ, ವ್ಯಾಪಾರಸ್ಥಳವಾಗಿಯೂ ಇರುತ್ತೆ. ಇಲ್ಲಿ ಕುದುರೆಗಳ ಇಲಾಖೆ ಇದೆ. ಇದು ಇನ್ನೂ ಅಭಿವೃದ್ಧಿಯಾಗುವದರಲ್ಲಿದೆ. ಈ ಸ್ಥಳವು ಮೈಸೂರಿಗೂ ತುಮಕೂರಿಗೂ ಮಧ್ಯಪ್ರದೇಶವಾಗಿರುತ್ತೆ. ಆದ್ದರಿಂದ ತುಮಕೂರಿನಿಂದ ಕುಣಿಗಲು ಮಾರ್ಗವಾಗಿ ಮದ್ದೂರು ವರೆಗೆ ರೈಲ್ವೆ ಹಾಕಿದರೆ ಸರ್ಕಾರಕ್ಕೂ, ಪ್ರಜೆಗಳಿಗೂ ಬಹಳ ಅನುಕೂಲವಾಗಿರುತ್ತೆ. ಮುಖ್ಯವಾಗಿ ಕುಣಿಗಲಿನಲ್ಲಿ ಕುದುರೆಗಳ ಇಲಾಖೆ ಇರುವದರಿಂದ ಮೈಸೂರು ಕಡೆಯಿಂದಲೂ, ತುಮಕೂರು ಕಡೆಯಿಂದಲೂ ರೈಲ್ವೆ ಹಾಕತಕ್ಕದ್ದು ಸರ್ಕಾರಕ್ಕೆ ಬಹಳ ಅವಶ್ಯಕವಾದ ಕೆಲಸವಾಗಿರುತ್ತದೆ. ಇದರಿಂದ ವ್ಯಾಪಾರಕ್ಕೂ ಪ್ರಯಾಣಿಕರಿಗೂ ಬಹಳ ಸೌಕರ್ಯವುಂಟಾಗುತ್ತೆ.

ಕುಣಿಗಲು. ಸಾಹುಕಾರ್ ನರಸಿಂಹಶೆಟ್ಟಿ.

*********

### ಹಾಸನದ ಹೆಂಗಸರ ಆಸ್ಪತ್ರೆ.

ಅಯ್ಯಾ,

ಹಾಸನದಲ್ಲಿ ನಮ್ಮ ಧರ್ಮಿಷ್ಠರಾದ ಸರ್ಕಾರದವರು ಹೆಂಗಸರ ಮತ್ತು ಮಕ್ಕಳ ಪ್ರಯೋಜನಾರ್ಥವಾಗಿ ಒಂದು ಪ್ರತ್ಯೇಕವಾದ ಆಸ್ಪತ್ರೆಯನ್ನೇರ್ಪಡಿಸಿ ಇದರಿಂದ ಪ್ರಜೆಗಳಿಗೆ ಮಹದುಪಕಾರವಾಗಲೆಂದು ಕೋರಿ, ಇದಕ್ಕಾಗಿ ಒಬ್ಬ ಲೇಡಿ ಆಫೀಸರನ್ನೂ ಬೇರೆ ಸಿಬ್ಬಂದಿಯನ್ನೂ ನೇಮಿಸಿ, ತಿಂಗಳಿಗೆ ನೂರಾರು ರೂಪಾಯಿ ಖರ್ಚು ಇಟ್ಟು ನಡೆಸುತ್ತಿದ್ದಾರೆ. ಆದರೆ ಈಚೀಚೆಗೆ ಹೆಂಗಸರ ಆಸ್ಪತ್ರೆಗೆ ಹೋಗುವ ಹೆಂಗಸರ ಮತ್ತು ಮಕ್ಕಳ ಸಂಖ್ಯೆ ತೀರ ಕಡಿಮೆಯಾಗಿ ಇವರೆಲ್ಲಾ ಇಲ್ಲಿನ ದೊಡ್ಡ ಸಿವಿಲ್ ಆಸ್ಪತ್ರೆಗೆ ಹೋಗುತ್ತಿದ್ದಾರೆ. ಇದರಿಂದ ಇಲ್ಲಿನ ಹೆಂಗಸರ ಆಸ್ಪತ್ರೆ ವಿಷಯವಾದ ಭರವಸ ಪ್ರಜೆಗಳಿಗೆ ತೀರ ಕಡಿಮೆಯಾದಂತೆ ತೋರುತ್ತೆ. ಒಂದು ವೇಳೆ ದಿನಕ್ಕೆ ೩ ಅಥವ ೪ ಮಂದಿ ಹೋಗುವರೋ ಇಲ್ಲವೋ ಹೇಳಲಿಕ್ಕಾಗದು. ಇದು ಹಾಗಿರಲಿ; ಅನಾಥರಾದ ಗರ್ಭಿಣಿ ಸ್ತ್ರೀಯರು ಬಂದು ಹೆರಿಗೆ ಮಾಡಿಸಿಕೊಳ್ಳಲಿಕ್ಕೆ ಇಲ್ಲಿನ ಹೆಂಗಸರ ಆಸ್ಪತ್ರೆಯಲ್ಲಿ ಸ್ಥಳವೂ ಇಲ್ಲ ಮತ್ತು ಸರ್ಕಾರದವರ ಅಪ್ಪಣೆಯೂ ಇಲ್ಲ. ಗರೀಬರಾದ ಹೆಂಗಸರು ಈ ವರೆಗೂ ಮಹಾ ದುರವಸ್ಥೆಗೆ ಸಿಕ್ಕಿ ಬಿದ್ದಿದ್ದಾರೆ. ಕಷ್ಟತರವಾದ ಹೆರಿಗೆಗಳು ಸಾಧಾರಣ ಸೂಲಗಿತ್ತಿಯರಿಂದ ಆಗುವದಿಲ್ಲ. ಅಂಥಾ ಸಂದರ್ಭದಲ್ಲಿ ಲೇಡಿ ಡಾಕ್ಟರವರೇ ಬರಬೇಕಾಗುತ್ತೆ. ಇವರು ಬಂದ ಪಕ್ಷಕ್ಕೆ ಇವರು ಕೇಳುವಷ್ಟು ಫೀಜ್ ಹಣವನ್ನು ಬಡವರು ಕೊಡಲು ಶಕ್ತರೇ? ಈ ಊರು ಬೆಂಗಳೂರಿಗೆ ೧೧೦ ಮೈಲು ದೂರವಾಗಿಯೂ, ಮೈಸೂರಿಗೆ ೭೦ ಮೈಲು ದೂರವಾಗಿಯೂ ಇರುವಲ್ಲಿ ಗರ್ಭಿಣಿ ಸ್ತ್ರೀಯರು ಅಷ್ಟು ದೂರ ಹೋಗುವದು ಎಷ್ಟರಮಟ್ಟಿಗೆ ಸಾಧ್ಯವಾಗಿರುವದೋ ವಾಚಕರೇ ತೀರ್ಮಾನಿಸಬೇಕಾಗಿದೆ. ಇದರೊಳಗೂ ಸಾಧಾರಣ ಚಕ್ರಗಾಡಿಗಳಲ್ಲಿ ಇಲ್ಲಿಂದ ಹೋಗುವದು ಇನ್ನೆಷ್ಟರಮಟ್ಟಿಗೆ ಗರ್ಭಿಣಿಯರಿಗೆ ಸುಖವಾಗಿದ್ದೀತು! ದೊಡ್ಡದೊಡ್ಡ ಹುದ್ದೆದಾರರಿಗೂ ಸಾಹುಕಾರರಿಗೂ ಲೇಡಿ ಡಾಕ್ಟರವರು ಇದ್ದೇ ಇರುತ್ತಾರೆ. ಬಡವರ ಗತಿ ಏನಾಗಬೇಕು? ಆದ್ದರಿಂದ ಸರ್ಕಾರದವರು ಕೃಪೆಯಿಟ್ಟು ಇಲ್ಲಿನ ಆಸ್ಪತ್ರೆಯಲ್ಲಿ ಬದಲಾವಣೆಯನ್ನು ಮಾಡಿ, ಪ್ರಜೆಗಳ ಕಷ್ಟವನ್ನು ಬೇಗನೆ ನಿವಾರಣೆ ಮಾಡುವರೆಂದು ಎಲ್ಲರೂ ನಿರೀಕ್ಷಿಸಿಕೊಂಡಿದ್ದಾರೆ.

ಪ್ರಜಾಭಿಮಾನಿ.

*********

### ಮಾಂಸಾಹಾರ.

ಅಯ್ಯಾ,

೩೦—೭—೧೯೦೩ನೇ ವೃತ್ತಾಂತ ಪತ್ರಿಕೆಯ ೩ನೇ ಪೇಜಿನಲ್ಲಿ ನನ್ನ ಸಹೋದರರ ಪ್ರತಿ ಸಮಾಧಾನವನ್ನು ನೋಡಿದೆನು. ಅವರು ನಾನು ಬರೆದ ೯—೭—೧೯೦೩ನೇ ತಾರೀಖಿನ ವೃತ್ತಾಂತ ಪತ್ರಿಕೆಯನ್ನು ನೋಡದೆ, ಪ್ರತಿ ಸಮಾಧಾನವನ್ನು ಬರೆದದ್ದಕ್ಕೆ ವಿಷಾದಿಸುತ್ತೇನೆ.

ಪ್ರಾಚೀನಾರ್ಯರು ಯಾವ ರೀತಿಯಲ್ಲಿದ್ದರೆಂಬದನ್ನು ಶ್ರುತಿಸ್ಮೃತಿ ಪುರಾಣೇತಿಹಾಸಗಳಿಂದ ತಿಳಿಯಬೇಕಲ್ಲದೆ, ಕೇವಲ ಚರಿತ್ರೆಯಿಂದಲ್ಲವೆಂದು ಬರೆಯುತ್ತಾರೆ. ಅದು ನಿಜವೇ ಸರಿ. ಅವುಗಳನ್ನು ಪರಿಶೀಲಿಸಿದರೆ ಆರ್ಯರಲ್ಲಿ ಉತ್ತಮ ಜಾತಿಯವರು ಕೇವಲ ಮಾಂಸ ತಿಂದವರಲ್ಲಿ ಹೆಣ್ಣು ತರುತ್ತಿದ್ದರೆಂಬುವದು ಗೊತ್ತಾಗುವದೆಂದು ಬರೆಯುತ್ತಾರೆ. ನನಗೆ ಹಾಗೆ ತೋರುವದಿಲ್ಲ. ಹ್ಯಾಗೆಂದರೆ, ಶೂದ್ರಸ್ತ್ರೀಯನ್ನು ಮದುವೆ ಮಾಡಿಕೊಂಡ ಆರ್ಯನು ನರಕ ಭಾಗಿಯಾಗುತ್ತಾನೆಂದು ಮಹಾ ಭಾರತದ ಅನುಶಾಸನಿಕಪರ್ವದ ೪೭ನೇ ಅಧ್ಯಾಯದಲ್ಲಿ ಹೇಳಿದೆ. ಮತ್ತು ಭೋಜನ ಪ್ರತಿ ಭೋಜನದ ವಿಷಯದಲ್ಲಿ ಏನೂ ಅಡ್ಡಿ ಇರಲಿಲ್ಲವೆಂದು ಹೇಳುತ್ತಾರೆ. ಇದಕ್ಕೆ

ಕ್ಷೋ॥ ಶೂದ್ರಾನ್ನಂ ಗೋರಸಾನ್ನಂಚ ಅಭೋಜ್ಯಸ್ಯಾನ್ನ
ಮೇವಚ। ಶಂಕಿತಂ ಪ್ರತಿಷಿದ್ಧಾನ್ನಂ ಪೂರ್ವೋಚ್ಛಿಷ್ಟಂ ತಥೈವ
ಚ। ಯದಿಭುಕ್ತಂ ತುವಿಪ್ರೇಣ ಅಜ್ಞಾನಾದಾಪದೋಪಿವಾ।
ಜ್ಞಾತ್ವಾಸಮಾಚರೇತ್ಕೃಚ್ಛ್ರಂ ಬ್ರಹ್ಮಕೂರ್ಚೇನ ಪಾವನಂ॥

ಎಂದು ಪರಾಶರಮಾಧವೀಯಸ್ಮೃತಿಯ ಪ್ರಾಯಶ್ಚಿತ್ತಕಾಂಡದ ೧೧ನೇ ಅಧ್ಯಾಯದಲ್ಲಿ ನಿಷೇಧಿಸಿರುತ್ತಾರೆ. ಮುಖ್ಯ ಕಾಲ ಪಕ್ಷಪ್ರಮಾಣದಲ್ಲಿ ವೈಶ್ಯ ಅಧೋಗತಿಗಳೆಂಬುತ್ತ ಸ್ಪಷ್ಟವೆಂದು ಹೇಳುವದು ಸರಿಯಾದ್ದಲ್ಲ. ಜನಗಳು ಪುರುಷಪ್ರಯತ್ನ ಮಾಡುವದು ಬಿಟ್ಟವನ್ನು ಅವನ್ನೂ ಬಿಡುವುದು ಅಧೋಗತಿಯನ್ನೂ ಹೊಂದುತ್ತಾರೆಯೇ ಹೊರ್ತು ಕಾಲಚಕ್ರವು ವೈಶ್ಯ ಅಧೋಗತಿಯನ್ನು ಕೊಡುವದಿಲ್ಲವೋ? ಇದಕ್ಕೆ ಪುರುಷ ಪ್ರಯತ್ನ ಮಾಡುವ ಇಂಗ್ಲೀಷರಿಗೂ, ಅವನ್ನು ಬಿಟ್ಟಿರುವ ನಮಗೂ ಹೋಲಿಸಿ ನೋಡಿದರೆ ಗೊತ್ತಾಗುತ್ತೆ. ಬೌದ್ಧ, ಜೈನ, ಕ್ರೈಸ್ತ ಮತದವರು ರಾಜ್ಯಭಾರ ಮಾಡುತ್ತಾ ಇದ್ದಾಗ ಮಾಂಸಾಹಾರ ಮಾಡತಕ್ಕ ತುರುಷ್ಕರ ಮತ್ತು ಐರೋಪ್ಯರ ದೃಷ್ಟಿಯು ಇಂಡ್ಯದ ಮೇಲೆ ವಿಶೇಷ ಬೀಳಲಿಲ್ಲವಾಗಿ ಅವರು ಜೇಯಿಸಿದ್ದರೇ ಹೊರ್ತು ಕುರಾನ್ನರೇ ಮುಂತಾದವರ ದೃಷ್ಟಿಯು ಇಂಡಿಯದ ಮೇಲೆ ಬಿದ್ದಿದ್ದರೆ ಹ್ಯಾಗಿತ್ತೆಂಬುದನ್ನು ಚತುರರು ತಿಳಿಯುವರು.

ಬಾಲಕಿಯರಿಗೆ ಅಂಗಗಳು ಬಲಿಯುವ ಪೂರ್ವದಲ್ಲೇ ಗರ್ಭಾಧಾನವಾಗುವದರಿಂದ ಉಂಟಾದ ಈ ಅಶಕ್ತತೆಯನ್ನು ಮಾಂಸಾಹಾರ ಮಾಡಿದ್ದರ ದೋಷವೆಂದು ಹೇಳಲಾಗುವದಿಲ್ಲವೆಂದು ಹೇಳುತ್ತಾರೆ. ಪ್ರಾಯಶಃ ಬಾಲಕಿ ಎಂದರೆ ೧೪ ವರುಷ ವಯಸ್ಸಿನ ಒಳಗೆ ಇರತಕ್ಕವರಿಗೆ ಅನ್ವಯವಾಗುತ್ತೆ. ಸ್ತ್ರೀಯರ ಪೈಕಿ ೧೪ ವರುಷದ ಒಳಗೆ ಪತಿವಾಗತಕ್ಕವರು ಈ ಕಾಲಕ್ಕೆ ಕಾಲು ಭಾಗವಿರುತ್ತಾರೆ. ಮುಕ್ಕಾಲು ಭಾಗದ ಸ್ತ್ರೀಯರು ೧೪ ವರುಷದ ಮೇಲೆ ಋತುವಾಗುತ್ತಾರಾದ್ದರಿಂದ ಅವರು ಹೇಳುವದು ಅಂಗಪುಷ್ಟಿಗೆ ಮುಖ್ಯ ಕಾರಣವಲ್ಲವು. ಗಂಡಸರಿಗೆ ೧೮ ವರುಷವೂ ಹೆಂಗಸರಿಗೆ ೧೬ ವರುಷವೂ ಯೌವನಕ್ಕೆ ಕಾಲವೆಂತಾ ನಿಶ್ಚಯಿಸಲ್ಪಟ್ಟಿರುತ್ತೆಯಲ್ಲದೆ

ಶ್ಲೋ॥ ಘೃತೇನವರ್ಧತೆಬುದ್ಧಿಃ ಕ್ಷೀರಮಾಯುರ್ವಿವರ್ಧನಂ॥
ಶಾಕೇನವರ್ಧತೇವ್ಯಾಧಿಃ ಮಾಂಸಂ ಮಾಂಸೇನ ವರ್ಧತೇ॥

ಎಂಬ ವಚನದಿಂದ ಅಂಗಪುಷ್ಟಿಗೆ ಮಾಂಸಾಹಾರವೇ ಮುಖ್ಯ ಕಾರಣವಾಗಿರುತ್ತೆ ಮತ್ತು ವೈದ್ಯ ಯಾನೆ ಡಾಕ್ಟರುಗಳನ್ನು ಕೇಳಿದರೂ ಹೇಳುತ್ತಾರೆ. ಪರಾಶರಮಾಧವೀಯದಲ್ಲಿ ಮಾಂಸಾಹಾರ ಮಾಡಬಹುದು ಎಂದು ಹೇಳಿದೆ ಎಂತಾ ನಾನು ಮೊದಲೇ ಬರೆದಿರುತ್ತೇನೆ. ಆ ಸ್ಮೃತಿಯನ್ನು ನೋಡಿದ್ದರೆ ಗೊತ್ತಾಗುತ್ತಿತ್ತು. ಪತ್ರಿಕೆಯನ್ನೇ ನೋಡದವರು ಶಾಸ್ತ್ರಗಳನ್ನು ನೋಡುವರೇ? ಕನ್ನಡ ವಾಕ್ಯರಚನೆಗೂ, ಶ್ರುತಿಸ್ಮೃತಿಗಳ ಪರಿಚಯಕ್ಕೂ ಸಂಬಂಧವಿಲ್ಲವು. ಹಿಂಸೆಯೇ ಪರಮಪಾತಕವಾದುದರಿಂದ ಮಾಂಸಾಹಾರವನ್ನು ನಾವು ನಿಶ್ಚಯವಾಗಿಯೂ ನಿಷೇಧಿಸಲೇಬೇಕೆಂದು ಹೇಳುವುದು ಜ್ಞಾನನಿಷ್ಠರ ಮಾತೇ ಹೊರ್ತು ದೇಹಪೌಷ್ಟಿಕಾರಿಗಳ ಮಾತಲ್ಲ. ಅದು ಹ್ಯಾಗಂದರೆ—ಕಲಿಯುಗಕ್ಕೆ ಅನುಪಯೋಗವಾಗಿರುವ ಸ್ಮೃತಿಗಳಲ್ಲಿ ಮಾಂಸಾಹಾರವನ್ನು ಕಾಣೆ ನಿಷೇಧಿಸಿರುವದರಿಂದಲೂ, ಕೃತ,

ಜೈನ, ಬೌದ್ಧ, ವೈಷ್ಣವ ಮತಸ್ಥಾಪಕರು ಮಾಂಸಾಹಾರ ಪಾಪ ಕೃತ್ಯವೆಂದು ಬೋಧಿಸಿದ್ದರಿಂದಲೂ ಮಾಂಸಾಹಾರವನ್ನು ಬಿಟ್ಟ ಕಾರಣ ಅದರಿಂದ ಭಾರತೀಯರಿಗೆ ನಿರ್ವೀರ್ಯಕ್ಕೆ ಕಾರಣವಾಗಿ ದೇಹಸೌಖ್ಯಕ್ಕೆ ಹಾನಿಕರವಾಗಿರುತ್ತೆ. ಇದಕ್ಕೆ ಕೃತ, ತ್ರೇತ, ದ್ವಾಪರ [illegible] ಭಾರತೀಯರು ಎಲ್ಲರಿಂದಲೂ ಅಜೇಯ್ಯರಾಗಿ ಪ್ರಸಿದ್ಧನ್ನಾ, ಈಗಿನ ಭಾರತೀಯರೆನಿಸಿಕೊಂಡಿರುವ ನಾವುಗಳು ಬಲ ಹೀನರಾಗಿ ಎಲ್ಲರಿಂದಲೂ ತಿರಸ್ಕೃತರಾಗಿರುವವನ್ನೂ ಬುದ್ಧಿವಂತ ರಾದವರು ಪರ್ಯಾಲೋಚಿಸಿ ನೋಡಿದರೆ ಮಾಂಸಾಹಾರವೇ ಅಂಗಗಳ ಬಲವೃದ್ಧಿಗೆ ಮುಖ್ಯ ಕಾರಣವೆಂಬುವದು ಗೊತ್ತಾಗುತ್ತೆ. ಐರೋಪ್ಯರಲ್ಲೂ ಕೆಲವರು ತಮ್ಮಂತೆ ಭಾರತೀಯರು ಬಲಿಷ್ಠರಾದ ರೆಂಬ ಅಭಿಪ್ರಾಯದಿಂದ ತಾವು ಮಾಂಸಾಹಾರ ಮಾಡುತ್ತಿದ್ದರೂ ಕೂಡ "ಮಾಂಸಾಹಾರವನ್ನು ಮಾಡಿದರೆ ಕೆಲವು ರೋಗಗಳುಂಟಾಗುತ್ತೇವಲೂ, ಧಾನ್ಯಾದಿಗಳಿಂದಲೇ ಬಲ ಹೆಚ್ಚುತ್ತೆಂತಲೂ" ಸ ತ್ಯವರಿಗ ವಿರೋಧವಾಗಿ ಹೇಳುತ್ತೇನೆ. ಈ ರೀತಿ ಬೋಧಿಸು ವರು ತಾವು ಮೊದಲು ಮಾಂಸಾಹಾರವನ್ನು ಸಂಪೂರ್ಣವಾಗಿ ೧ ಶತಮಾನದ ವರೆಗೆ ಬಿಟ್ಟರೆ ಆ ಜನಾಂಗದ ಸ್ಥಿತಿ ಮುಂದೆ ಗೊತ್ತಾಗುತ್ತೆ. ಸ್ವಾನುಭವ ಮತ್ತು ಈ ಯುಗಕ್ಕೆ ಅನುಕೂಲವಾದ ಶಾಸ್ತ್ರಾಧಾರವಿಲ್ಲದ [illegible] ಎಲ್ಲಿ ಉಪಯೋಗ? ಈ ಹಿಂಸೆಯನ್ನು ಶಾಸ್ತ್ರ ಮಾಡದೆ ಧರ್ಮಶಾಸ್ತ್ರ ದ್ರಾವಿಡರು ಮಾಡಿದರೆ ಅವರಿಗೆ ಪಾಪವಿಲ್ಲವೆಂಬ ನಂಬಿಗೆಯು ಬಿಟ್ಟು ಅಸಂಗತವಾದುದೆಂದು ಹೇಳುತ್ತಾರೆ. ಇದು ತಪ್ಪು. ವ್ಯಾಸರು,

ಶ್ಲೋ॥ "ಕೃತೆ ಸಂಭಾಷಣಾದೇವ ತ್ರೇತಾಯಾಂ ಸ್ಪರ್ಶನೇನ ಚ। ದ್ವಾಪರೇ ತ್ವನ್ನಮಾದಾಯ ಕಲೌ ಪತತಿ ಕರ್ಮಣಾ॥"

ಎಂದು ಪರಾಶರಸ್ಮೃತಿಯ ಆಚಾರಕಾಂಡದ ೧ನೇ ಅಧ್ಯಾಯದಲ್ಲಿ "ಈನೇ ಸ್ವಾತಂತ್ರ್ಯದ ಮಾಡಿದರೆ ಕಲಿಯುಗದಲ್ಲಿ ನರಕ [illegible] ಮಾಡಿದ್ದಕ್ಕೆ ಆ [illegible] ಎಂದು ಹೇಳಿದೆ. ಮತ್ತು ಈ ವಿಷಯ [illegible] ಅಧ್ಯಾಯದಲ್ಲಿ ವಿಶದವಾಗಿ [illegible]. ಮನುಷ್ಯರೆಲ್ಲರೂ ಹಿಂದಿನವರಿಗಿಂತಲೂ [illegible] ಹೇಳುತ್ತಾರೆ. ಇದು ಸರಿಯಾದದ್ದಲ್ಲ. [illegible] ಇಂಗ್ಲೀಷರ ಸಾಹಚರ್ಯದಿಂದ [illegible]. [illegible] ಮತ್ತು [illegible] ಬೌದ್ಧ, ಜೈನ, ಶೈವ [illegible] ಇವರ [illegible] ನಾಗರಿಕರಾಗುವದು [illegible]. [illegible] ಎಂಬವರು ಶ್ರುತಿ ಸ್ಮೃತಿ [illegible] ನಾನು ಪತ್ರಿಕೆಯಲ್ಲಿ ಉದಾಹರಿಸಿದ್ದಾಗ್ಯೂ [illegible] ಇವರು ಯಾವ ಜನಾಂಗದವರೋ [illegible]. ಈ ಕೆಳಗಿನ ವಚನವನ್ನು ನೋಡಿದರೆ [illegible] ಶಾಸ್ತ್ರ ಇಂಥಾದ್ದೆಂಬುವದು ಗೊತ್ತಾಗುತ್ತೆ.

ಶ್ಲೋ॥ [illegible] ಗೌತಮಃ [illegible] ॥

[illegible] ೧ನೇ ಅಧ್ಯಾಯ,
[illegible]

[ಈಗಿನ [illegible] ಎಲ್ಲರಿಂದಲೂ [illegible] ಕಾರಣವು [illegible] ಮಾಂಸಾಹಾರಿಗಳಾದ [illegible] ಎಂಬ [illegible] ಮಾಂಸಾಹಾರಿಗಳೆಂದು [illegible] ಮನುಷ್ಯರು [illegible] ಎಂಬುದಾಗಿ ಹೇಳುವರು. [illegible] ತಿನ್ನುವ [illegible] ಧಾನ್ಯಗಳನ್ನು [illegible] ಮಾಂಸಾಹಾರದಿಂದ [illegible] ಹೇಳುವೆವು. ಇಂಗ್ಲೀಷರು [illegible] ಆಹಾರವೆನಿಸುವ [illegible]. ಅದರಿಂದ [illegible] ಮಾಡಿದರೆ [illegible] ಹುಟ್ಟದು ನಮಗೆ [illegible].

[ಈ ವಿಷಯವಾಗಿ ಇನ್ನು ಮುಂದೆ ಚರ್ಚೆಗಳನ್ನು ಪ್ರಕಟಿಸಲಾರೆವು.

—ಎಡಿಟರ್.]

ಸೆನ್ಸಸ್ ಇಲಾಖೆಯ ಕೆಲಸಗಳು.

ಅಯ್ಯಾ,

ಎಲ್ಲಾ ಸಂಸ್ಥಾನಗಳ ಸೆನ್ಸಸ್ ರಿಪೋರ್ಟುಗಳೂ ಬಹು ಬೇಗ ತಯಾರಾಗಿವೆ. ಈ ಸಂಸ್ಥಾನದ ರಿಪೋರ್ಟುಗಳು ತಯಾರಾಗುವದಕ್ಕೆ ಬಹು ದೀರ್ಘಕಾಲ ಹಿಡಿಯಿತು. ಇಷ್ಟು ಕಾಲ ಹಿಡಿದು ತಯಾರಾದ ರಿಪೋರ್ಟುಗಳು ಎಷ್ಟು ಮಟ್ಟಿಗೆ ತೃಪ್ತಿಕರವಾಗಿಯೂ ತಪ್ಪಿಲ್ಲದೆ ನಿರ್ದಷ್ಟವಾಗಿಯೂ ಇರುವದೋ ಯೋಚಿಸತಕ್ಕದ್ದು ಗಿದೆ. ಸೆನ್ಸಸ್ ಲೆಕ್ಕಗಳನ್ನು ಬರೆಯುವಾಗ ಕೂಲಿ ಮಜೂರಿ ಕೊಟ್ಟಿದ್ದರು. ಕೂಲಿ ಮಜೂರಿಯನ್ನು ಬಾನೇ ಸಂಪಾದಿಸಬೇಕೆಂಬುವ ಉದ್ದೇಶದಿಂದ ಸ್ವಲ್ಪ ಕ್ಲಾರ್ಕುಗಳು ವಿಶೇಷವಾದ ತಪ್ಪುಗಳನ್ನು ಮಾಡಿ ಕೆಲವು ಮಾತುಗಳನ್ನು ಕೂಡ ಬಿಟ್ಟುಬಿಟ್ಟರು. ಆಕ್ಷಪಾದ ಕಷ್ಟಂಥಾ ಚಕ್ಕರ್‌ಗಳು ನಿದ್ರೆ ಮಾಡುವವರಲ್ಲಿ ಕಾಲವನ್ನು ಕಳೆದರು. ಯಾವದೇ ಲೆಕ್ಕದಲ್ಲಾಗಲೀ ಟೋಟಲ್ ಸರಿಯಾಗಿ ಬಾರದೇ ಇದ್ದದ್ದನ್ನು ಆಫೀಸರಿಗೆ ತೋರಿಸುತ್ತಿದ್ದಾಗ ಅವರು ಪುನಹ ಲೆಕ್ಕವನ್ನು ಸರಿಯಾಗಿ ಮಾಡಿಸದೇ ಟ್ಯಾಲಿ ಮಾಡುವವರಲ್ಲಿ ಲೆಕ್ಕಗಳನ್ನು ಪೂರೈಸಿದರು. ಕೊನೇ ವರಿಗೂ ಈ ಪ್ರಕಾರವಾಗಿ ಜರಿಗಿತು ಎಂಬುವದಕ್ಕೆ ಸಂಶಯವಿಲ್ಲ. ಇನ್ನೂ ಈ ಆಫೀಸಿಗೆ ಕೊನೆಗಾಲವು ಯಾವಾಗ ಸಂಭವಿಸುತ್ತದೋ! ಎರಡುತಿಂಗಳು ಎರಡುತಿಂಗಳು ಎಂಬದಾಗಿ ಮೂರು ವರ್ಷಗಳ ಕಾಲವಾಯಿತು. ಇದನ್ನು ಸರಿಯಾಗಿ ನಡಿಸಿದ ಪಕ್ಷಕ್ಕೆ ಒಂದೂವರೆ ವರ್ಷದಲ್ಲಿ ಎಲ್ಲಾ ಲೆಕ್ಕಗಳು ತಯಾರ್ ಆಗುತ್ತಿದ್ದವು. ಇಷ್ಟು ದೀರ್ಘಕಾಲಕ್ಕೆ ಹಣವನ್ನು ಸ್ಯಾಂಕ್‌ಷನ್ ಮಾಡಿ ನಡಿಸಿದ್ದಕ್ಕೆ ಇದರಲ್ಲಿ ಏನುಪ್ರಯೋಜನವಿದೆಯೋ ಎಂಬುವದನ್ನು ವಾಚಕರೇ ಊಹಿಸಲಿ.

ಅನುಭವಿ.

ಚಿಂತೆಯ ಪರಿಹಾರ.

ಯೇಸುಸ್ವಾಮಿಯ ದಿವ್ಯ ಚರಿತ್ರೆಯನ್ನು ಓದುವಲ್ಲಿ ಆತನು ಸಕಲ ವಿಧವಾದ ಜನಗಳಿಗೆ ಅವರವರ ಸ್ಥಿತಿಗತಿಗಳಿಗೆ ತಕ್ಕ ಬುದ್ಧಿವಾದಗಳನ್ನು ಹೇಳುತ್ತಿದ್ದನೆಂದು ಗೊತ್ತಾಗುವದು. ಆತನು ಕೆಲವು ಸಂದರ್ಭಗಳಲ್ಲಿ ಐಶ್ವರ್ಯವಂತರಾದ ಶ್ರೇಷ್ಠ ಜನಗಳಿಗೆ ಬೋಧನೆ ಮಾಡಿದನು. ಮತ್ತೆ ಕೆಲವು ಸಂದರ್ಭಗಳಲ್ಲಿ ಆತನು ಬಡವರೂ ನಿಕೃಷ್ಟರೂ ಆಗಿ ಭಾವಿಸಲ್ಪಟ್ಟಿರುವ ಜನಗಳಿಗಾಗಿಯೇ ವಿಶೇಷವಾಗಿ ಬೋಧನೆ ಮಾಡಿದನು. ಇಂಥ ಬುದ್ಧಿವಾದಗಳಲ್ಲಿ ಕೆಲವನ್ನು ಈ ವಾರ ವಿವರಿಸುತ್ತೇನೆ.

"ಅಡವಿಯ ಹೂವುಗಳು ಬೆಳೆಯುವ ರೀತಿಯನ್ನು ಯೋಚನೆಗೆ ತಂದುಕೊಳ್ಳಿರಿ. ಅವು ದುಡಿಯುವದಿಲ್ಲ, ನೂಲುವದಿಲ್ಲ. ಸಣ್ಣ ಅಲ್ಪವಿಶ್ವಾಸಿಗಳೇ, ಈ ಹೊತ್ತು ಇದ್ದು ನಾಳೆ ಒಲೆಯ ಪಾಲಾಗುವ ಅಡವಿಯ ಹುಲ್ಲಿಗೆ ದೇವರು ಹೀಗೆ ಉಡಿಸಿದರೆ, ಅದಕ್ಕಿಂತಲೂ ಎಷ್ಟೋ ಹೆಚ್ಚಾಗಿ ನಿಮಗೆ ಉಡಿಸಿ ಕೊಡಿಸುವದಿಲ್ಲವೇ! ಏನು ಊಟ ಮಾಡಬೇಕು? ಏನು ಕುಡಿಯಬೇಕು? ಎಂದು ಚಿಂಬಲಿಸುತ್ತಾ ಇರಬೇಡಿರಿ. ಮೊದಲು ಆತನ ರಾಜ್ಯವನ್ನು ಪಡಕೊಳ್ಳುವದಕ್ಕೆ ಪ್ರಯತ್ನಿಸಿರಿ. ಆಗ ಇವೆಲ್ಲ ಕೂಡ ಅವು ನಿಮಗೆ ದೊರಕುವವು."

ಈ ವಾಕ್ಯಗಳನ್ನು ಹೇಳಿದ್ದರಲ್ಲಿ ಯೇಸುಸ್ವಾಮಿಯ ಅಭಿಪ್ರಾಯವೇನು? ಬಡತನದಿಂದ ಕಂಗಾಲಾಗಿ, ಹೊಟ್ಟೆಗಿಲ್ಲದೆ [illegible] ಇಲ್ಲ, ಎಂಬುದಾಗಿ ಸಂಕಟಪಡುತ್ತಿರುವ ಬಡಜನಗಳ ಚಿಂತೆಯನ್ನು ಪರಿಹರಿಸುವದಕ್ಕೋಸ್ಕರವೇ ಇದನ್ನು ಹೇಳಿದನೆಂದು ಗ್ರಹಿಸತಕ್ಕದ್ದು. ಅವರಿಗೋಸ್ಕರ ಬಹಳವಾಗಿ ಚಿಂತಿಸುವವನಂದ ಸ ಲವು ತಂದೆಯಿದ್ದಾನೆಂದೂ, ಅನ್ನ ಪಾನ ವಸ್ತ್ರ ಮೊದಲಾದ ಪದಾರ್ಥಗಳಿಗಿಂತ ಎಷ್ಟೋ ಅಮೂಲ್ಯವಾದ ಜೀವಿಯುಳ್ಳ ವರಗಳನ್ನು ಭಗವಂತನಿಂದ ಪಡೆಯತಕ್ಕದ್ದಾಗಿದೆ ಎಂದೂ, ಆತನು ಬೋಧಿಸುತ್ತಾನೆ.

[illegible] ಯೇಸುಸ್ವಾಮಿಯು ಅಡವಿಯಲ್ಲಿ ಬೆಳೆಯುವ ಹೂಗಳನ್ನು ಸೂಚಿಸುತ್ತಾನೆ. ಇವುಗಳನ್ನು ಯಾವ ತೋಟಗಾರನೂ ನೀರು ಗೊಬ್ಬರ ಮೊದಲಾದವುಗಳನ್ನು ಹಾಕಿ [illegible] ಬೆಳೆಸುವದಿಲ್ಲ, [illegible] ಬಗೆಬಗೆಯ ಬಣ್ಣಗಳನ್ನು ಕಾಣುತ್ತೇವೆ. ಇದನ್ನು ನೋಡುವ ಕ್ಕೆ ಬಗೆಬಗೆಯ ಮನುಷ್ಯರ ಮೇಲಿರುವ ಅತಿಶಯವಾದ ಕನಿಕರವನ್ನೂ ಪ್ರೀತಿಯನ್ನೂ ಇವು ಸೂಚಿಸುತ್ತವೆಂದು ಸರಿಯಾಗಿ ತಿಳಿಯುತ್ತದಲ್ಲವೇ? ಪ್ರೀತಿಸುವ ತಾಯಿ ಮಗನು ಬಡು ಶಾಲೆಗೆ ಮೇಲೆ ಹಿಂದಿರುಗಿ ಬರುವದರಲ್ಲಿ ಸಂತೋಷವನ್ನು ಸೂಚಿಸುವ ಕೊಡುಗೆಯ ತಂದಿಟ್ಟವನು [illegible] ಹೊಸ ಬಟ್ಟೆಗಳು ಮೊದಲಾದವುಗಳಿಂದ ಅಲಂಕರಿಸುತ್ತಾನೆ. ಆ ಅಲಂಕಾರಗಳನ್ನು ನೋಡಿ ಮಗನು ಇದು ನನ್ನ ತಂದೆಯ ಪ್ರೀತಿಗೆ ಗುರುತು ಎಂದು ತಿಳಿಕೊಳ್ಳುತ್ತಾನೆ. ಅದೇ ಪ್ರಕಾರ ಈ ಭೂಲೋಕದಲ್ಲಿ ಸುಂದರವಾದ ಅನೇಕ ಪದಾರ್ಥಗಳನ್ನು ನೋಡುವಲ್ಲಿ ಇದೆಲ್ಲವನ್ನೂ ಅಂದವಾದ ದೇವರು ತನ್ನ ಮಕ್ಕಳಾದ ಮನುಷ್ಯರ ಸಂತೋಷಕ್ಕೋಸ್ಕರ ಇಟ್ಟಿರುವ ವಸ್ತುಗಳು, ಆತನ ಮಮತೆ [illegible] ಎಂದು ಹೇಳುವದಕ್ಕೆ [illegible].

ದೇವರ ವಿಚಾರದಲ್ಲಿ ಇಂಥ ಗೊತ್ತಾದ ತಿಳುವಳಿಕೆಯನ್ನು ಯಾವಾತನು ಸಂಪಾದಿಸಿಯೋ ಆತನೇ ಕ್ರಿಸ್ತನು ಹೇಳುವ ದೇವರ ರಾಜ್ಯವೆಂಬ ಪದವಿಯನ್ನು ಹೊಂದಿದವನಾಗಿದ್ದಾನೆಂದು ಗ್ರಹಿಸತಕ್ಕದ್ದು. ದೇವರ ರಾಜ್ಯವೆಂದರೇನು? ಮನುಷ್ಯನಲ್ಲಿ ಹುಟ್ಟುವ ಸಕಲ ಆಲೋಚನೆಗಳನ್ನು ಭಗವಂತನು ನಡಿಸುತ್ತಾ ಇರುವ ಹಾಗೆ ಯಾರು ತನ್ನ [illegible] ಚಿತ್ತವನ್ನು ದೇವರಿಗೆ ಸಂಪೂರ್ಣವಾಗಿ ವಶಮಾಡಿ ಕೊಟ್ಟಿದ್ದಾರೋ ಅಂಥವರ ಮನಸ್ಸಿನಲ್ಲಿ ದೇವರ ರಾಜ್ಯವಿದೆಯೆಂದು [illegible]. ಇಂಥ ಮನೋಸ್ಥಿತಿಯನ್ನು ಹೊಂದುವದು ಮಹಾ ಮಹಾ ಋಷಿಗಳಿಗೆ ಸಾಧ್ಯವೇ ಹೊರತು ಸಾಧಾರಣವಾದ ಮನುಷ್ಯರಿಗೆ ಸಾಧ್ಯವಲ್ಲವೆಂದು ನಾವು ನೆನಸಬಾರದು. ಅದರಿಂದಲೇ ನಾವು ಭಗವಂತನನ್ನು ತಿಳಿಯುವದಕ್ಕಾಗಿ [illegible] ಬೇಕೆಂದು ಆತನು ಅಪ್ಪಣೆಯಿತ್ತಾನೆ. ಮತ್ತು ಆತನನ್ನು [illegible] ಹಿಡಿಯುವದಕ್ಕೆ ಪ್ರಯತ್ನಿಸುವದಿಲ್ಲ. ಆತನ ಸ್ವಭಾವವನ್ನು ತಿಳಿಕೊಂಡು, ಅವನ್ನು ನಿಜವಾಗಿ ಪ್ರೀತಿಸುವವೆಂದು ಯೇಸುವೆಂಬುಯೂ ಅಪೇಕ್ಷಿಸುತ್ತಾನೆ. ನಮಗೆ ಆ ದಿವ್ಯ ರಾಜ್ಯವನ್ನು ಕೊಡುವದು ದೇವರ ದಿವ್ಯಚಿತ್ತವಾಗಿದೆ.

## ಮೈಸೂರು ಗೆಜೆಟ್ ಸಂಗ್ರಹ.

ಬಾಲರೆಡ್ಡಿಹಳ್ಳಿಯ ಪಟೇಲ್ ಮ॥ ವೆಂಕಟರೆಡ್ಡಿಯವ [illegible] ಲಾರ್ ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನ ಮೆಂಬರಾಗಿ ನೇಮಿ[illegible]

ಕೋಲಾರ್ ಚಿನ್ನದ ಗಣಿಗಳಲ್ಲಿ ೧೯೦೩ನೇ ಇಸವಿ [illegible] ರ ಬಾಗಾಯಿತು ಒಂದು ಮ್ಯಾಜಿಸ್ಟ್ರೇಟ್ ಕೋರ್ಟು ಸ್ಥಾಪಿಸ[illegible] ದು. ಈ ಕೋರ್ಟಿನಲ್ಲಿ ಮಾಲೂರು, ಬೌರಿಂಗ್‌ಪೇಟೆ (ಚಿನ್ನದ ಗಣಿಗಳ ಸಹಿತ), ಮುಳಬಾಗಲು, ಈ ಮೂರು ತಾಲ್ಲೂಕುಗಳ ವ್ಯಾಜ್ಯಗಳು ವ್ಯವಹರಿಸಲ್ಪಡುವವು. ಕೋಲಾರದ ಮ್ಯಾಜಿಸ್ಟ್ರೇಟ್ ಆ ತಾರೀಖಿನಿಂದ ಆ ತಾಲ್ಲೂಕುಗಳ ವ್ಯಾಜ್ಯಗಳನ್ನು [illegible] ಕೂಡದು.

ಬಳ್ಳಾಪುರಗಳೂರಿನ ಮತ್ತು ಚಿತ್ರದುರ್ಗದ ಸಬ್ ಡಿವಿಷನ್‌ಗಳು ಶಿವಮೊಗ್ಗಾ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜರು ಸಿವಿಲ್ ಅಪೀಲ್ ಮೊಕದ್ದಮೆಗಳನ್ನು ವ್ಯವಹರಿಸುವಂತೆ ಗೊತ್ತುಮಾಡಿದರೆ ಆಯಾ ಜಡ್ಜರು ಶಿವಮೊಗ್ಗೆಯಲ್ಲೇ ತಮ್ಮ ಕೋರ್ಟನ್ನು ನಡಸಬೇಕು.

ಜಾಟೆ ಮ॥ ಸ್ಕೋಯಡ್ ಮಾದಮ್‌ಯವರು ಶಿವಮೊಗ್ಗೆ ಮ್ಯುನಿಸಿಪಲ್ ಮೆಂಬರಾಗಿ ನೇಮಿಸಲ್ಪಟ್ಟಿದಾರೆ.

ಬಳ್ಳಾಪುರಗಳೂರು ಗುರುದತ್ತಾತ್ರೇಯ ಬಾಬಾಬುಡನ್‌ಸ್ವಾಮಿ ದರ್ಗಾವಿನ ಸಜ್ಜಾದೆ ಯಾಪ್ಯಾನೀ [illegible] ಮ॥ ಸ್ಕೋಯಡ್ [illegible] ತಸ್ವಿಯಾಷಾ [illegible] ಯವರು ಆಯುಧಗಳನ್ನು ಇಟ್ಟುಕೊಳ್ಳಬೇಕೆಂದು ಪೇಕ್ಷಿಸಿದರೆ ಅವರು ಲೈಸೆನ್ಸನ್ನು ಪಡೆಯಬೇಕಾದ ಅಗತ್ಯವಿ[illegible]

ಮೈಸೂರು ಸಿಟಿ ಇಂಪ್ರೂವ್‌ಮೆಂಟ್‌ಕಮಿಟಿನ ಆ॥ ಇಂಜನಿಯರ್ ಮ॥ ಬ್ರಿ. ಇ. ಎ. ಡಿಕ್ರೂಸ್‌ಯವರನ್ನು ಮೈಸೂರು ಗವರ್ನಮೆಂಟ್ ಕಸಬುಗಳ ಪಾಠಶಾಲೆಯ ಮೇಲ್ವಿಚಾರಣಾ ಕಮಿಟಿಯಲ್ಲಿ ಮೆಂಬರಾಗಿ ನೇಮಿಸಿದೆ.

ಮೈಸೂರು ಚೀಫ್ ಕೋರ್ಟ ರೆಜಿಸ್ಟ್ರಾರ್ ಮ॥ ವಿ. ಎ. [illegible] ಪಾರ್ಥಸಾರಥಿ ಮುದಲಿಯಾರ್‌ಗೆ ಐವತ್ತೆಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ॥ ಜೆ. ಕ್ರಾಫರ್ಡ್‌ರವರು ಇವರ ಕೆಲಸಗಳನ್ನು ನೋಡತಕ್ಕದ್ದು.

ಚಿತ್ರದುರ್ಗದ ಪೋಲೀಸ್ ಅ॥ ಸೂಪರಿಂಟೆಂಡೆಂಟ್ ಜಹಗೀರ[illegible] ಮೊಹಿಯುದ್ದೀನರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದ್ದು [illegible]

ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಮ॥ [illegible] ದ. ಭಾಭಾಯವರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಎರಡು ವಾರ ಜಾಸ್ತಿ ಮಾಡಿದೆ.

ಕಾಟೆಗಲ್ ಅಮಲ್ದಾರ್ ಮ॥ ವಿ. ಎಸ್. ಗುರುರಾವ[illegible] ಕೊಟ್ಟಿದ್ದ ಎರಡುವರ ತಿಂಗಳ ಪ್ರಿವಿಲೆಜ್ ರಜವನ್ನು ಇನ್ನು [illegible] ಳು ದಿನ ಜಾಸ್ತಿ ಮಾಡಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಎಕ್ಸ್‌ಟ್ರಾ ಅ॥ ಕಮೀಷನರ್ ವಿ. ಅನಂತರಾಯರಿಗೆ ಅವರು ಉಪಯೋಗಿಸಿಕೊಳ್ಳುವ [illegible] ಯ ಅನಾರೋಗ್ಯ ೧ ತಿಂಗಳೂ ೨೭ ದಿನಗಳ ಪ್ರಿವಿಲೆಜ್ [illegible] ಕೊಟ್ಟಿದೆ.

ಶಿವಮೊಗ್ಗ ಡೆಪ್ಯುಟಿ ಕಮೀಷನರ್ ಮ॥ ಕೆ. ಪಿ. ಪುಟ್ಟ[illegible] ಟ್ಟಯವರಿಗೆ ರಜಾ ಕೊಟ್ಟಿರುವದರಿಂದ ಮುಂದೆ ಹೇಳುವ ಏ[illegible] ದು ಜಾರಿಯಲ್ಲಿ ಇರತಕ್ಕದ್ದು:—

೧. ಮ॥ ಎನ್. ವೆಂಕಟರಾಯರು ಶಿವಮೊಗ್ಗಾ ಡಿಸ್ಟ್ರಿಕ್ಟ್ [illegible] ಡೆಪ್ಯುಟಿ ಕಮೀಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ [illegible] ದ್ದವು.

೨. ಮ॥ ಎಂ. ಚೆಂಗೈಯಶೆಟ್ಟರು ಫ್ರೀ ಲ್ಯಾಂಡ್ಸ್ ಸಬ್ [illegible] ಚಾರ್ಜನ್ನು ವಹಿಸತಕ್ಕದ್ದು.

೩. ಚನ್ನಗಿರಿ ತಾಲ್ಲೂಕು ಅಮಲ್ದಾರ್ ಮ॥ ಟಿ. [illegible] ಸ್ವಾಮಯ್ಯನವರು ಹಂಗಾಮಿ ಎಕ್ಸ್‌ಟ್ರಾ ಅ॥ ಕಮೀಷನರ[illegible] ನೇಮಿಸಲ್ಪಟ್ಟು ದಾವಣಗೆರೆಗೆ ವರ್ಗಮಾಡಲ್ಪಟ್ಟಿದಾರೆ.

ಮೈಸೂರು ಪೋಲೀಸ್ ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರ್ [illegible] ಅಹೋಬಲರಾಯರು ೧೯೦೩ನೇ ಏಪ್ರಿಲ್ ೨೪ ರಿಂದ ೧೯೦೩ ಏಪ್ರಿಲ್ ೩೦ರ ವರೆಗೆ ಯಳಂದೂರು ತಾಲ್ಲೂಕು ಅಮಲ್ದಾರ್ [illegible] ಕೆಲಸ ನೋಡಿರುತ್ತಾರೆ.

ಮೈಸೂರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟ್ ಮೆಡಿಕಲ್ ಚಾರ್ಜನ್ನು ವಹಿಸಿರುವ ಅ॥ ಸರ್ಜನ್ ಮ॥ ಎಸ್. ಜೆ. ಪೆಟ್ಟಿ [illegible] ರಿಗೆ ತಂಬತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಲೋಕಲ್ ಸರ್ವಿಸ್ ರೆಜಿಮೆಂಟಿನ ರಿಸಾಲ್ದಾರ್ ಎಚ್. ಕೃಷ್ಣರಾಯರಿಗೆ ೧೯೦೩ನೇ ಆಗಸ್ಟು ೩ರ ಆರಾಭ್ಯ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ರಜಾ ಪ್ರಾರಂಭದ ನಂತರ ಅವರು ಕೆಲಸ ಬಿಟ್ಟು ಪೆನ್ಷನ್ ಪಡೆಯತಕ್ಕದ್ದು.

ತಾಲ್ಲೂಕುಗಳ ವರ್ತಮಾನಗಳು.

ಹುಣಸೂರು.—ಕಳೆದ ತಿಂಗಳು ೨೭ನೇ ತಾ॥ ಹೊರ[illegible] ದ ಚಿನ್ನಸ್ವಾಮಿಯೆಂಬುವವನು ಲೈಸನ್ಸು ಇಲ್ಲದೆ ಕಾಡಿನ [illegible] ಒಂದು ಹುಲಿಯನ್ನು ಹೊಡೆದನು. ಆತನಿಗೆ ಲೈಸನ್ಸು ಇ[illegible] ನ್ನು ಲೈಸನ್ಸು ಇಲ್ಲ ಮತ್ತೊಬ್ಬ ಹೊಡೆಯಿದವನು ಕೇಳಿ, [illegible] ಗೆ ಹೋಗಿ ಹೊಡೆದಂಥ ಹುಲಿಯನ್ನು ತನ್ನ ಸ್ವಾಧೀನ ಮಾಡಿ[illegible] ಡು, ಸರ್ಕಾರದಲ್ಲಿ ತನ್ನ ಹೆಸರಿಗೆ ಬಹುಮಾನ ಪಡಕೊಂಡ[illegible] ಇದೇ ಸಮಯದಲ್ಲಿ ಅಮ್ಮಲ್ದಾರ್ ಜನಗಳನ್ನು ನೋಡು[illegible] ಕ್ಕಾಗಿ ಜರ್ಮನಿ ದೇಶದಿಂದ ಇಬ್ಬರು ಇಂಗ್ಲೀಷ್‌ನವರು ಬಂ[illegible] ರು. ಇವರು ಈ ಹುಲಿಯನ್ನು ೩೦ ರೂ. ಕೊಟ್ಟು ಕೊ[illegible] ಕೊಂಡರು.—ಈ ಮೇಲ್ಕಂಡ ಸಾಹೇಬರುಗಳೇ ೩ನೇ [illegible] ನಲ್ಲಿ ಕಾಡಿಗೆ ಹೋಗಿ ಒಂದು ಹುಲಿಯನ್ನು ಶಿಕಾರಿಮಾಡಿ, [illegible] ನ್ನು ತಮಟೆ ಕೊಂಬು ಮೊದಲಾದ ವಾದ್ಯಗಳಿಂದ ಊರಲ್ಲಿ[illegible]

...ಮಾಡಿಸಿದ ನಂತರ ಮಿ॥ ಹೇ ಯವರ ಬಂಗ್ಲೆಯಲ್ಲಿ ಅವರ ಛಾಯಾಗ್ರಾಹಕರು ಪ್ರತ್ಯೇಕವಾಗಿ ಅವರ ಫೋಟೋ ತೆಗೆದಲ್ಲದೆ ಈ ಸಾಹೇಬರುಗಳ ಜೊತೆಯಲ್ಲಿ ಕಾಡಿಗೆ ಹೋಗಿ ಹುಲಿಗಳನ್ನು ಆಯುಧ ಸಮೇತ ಫೋಟೋ ತೆಗೆದರು.—ಜುಲೈ ತಾ॥ ನಲ್ಲಿ ಮಿ॥ ಹೇ ಯವರ ಕಾವಲುದಾರರು ತಮ್ಮ ಬಂಗ್ಲೆಯಲ್ಲೇ ಒಂದು ಚಿರತೆಯನ್ನು ಹೊಡೆದರು. ಇದು ಊರೊಳಗೆ ನುಗ್ಗಿ ಅನೇಕ ದನಕರುಗಳಿಗೆ ಬಹು ತೊಂದರೆಯನ್ನು ಕೊಡುತ್ತ ಇತ್ತು. ಇದನ್ನು ನಾಶಮಾಡಿದ್ದಕ್ಕಾಗಿ ಅನೇಕರು ತುಂಬಾ ಸಂತೋಷಪಡುತ್ತಾರೆ.—ಈ ಊರಿನಲ್ಲಿರುವ ನೀರಿನ ನಲ್ಲಿಗಳು ಬಹು ದಿವಸಗಳಿಂದ ರಿಪೇರಿ ಇಲ್ಲದೆ ಒಡೆದುಹೋಗಿ ನೀರು ಸೋರುತ್ತಾ ಇತ್ತು. ಇದನ್ನು ಕೇಳುವವರೇ ದಿಕ್ಕಿರಲಿಲ್ಲ. ಆದರೆ ಸರ್ಕಾರದವರು ಈಗ ದೃಷ್ಟಿಯಿಟ್ಟು ಎಲ್ಲಾ ನಲ್ಲಿಗಳನ್ನು ರಿಪೇರಿ ಮಾಡಿಸಿದ್ದಕ್ಕಾಗಿ ಪ್ರಜೆಗಳು ತುಂಬಾ ಕೃತಜ್ಞತೆಯುಳ್ಳವರಾಗಿರುತ್ತಾರೆ. ಆದರೂ ಪಾಪಣ್ಣ ಬೀದಿ ಸಮೀಪದಲ್ಲಿರುವ ನಾಲ್ಕು ನಲ್ಲಿಗಳಲ್ಲಿ ಮುಂಚಿನಹಾಗೆ ಎರಡೇ ನಲ್ಲಿಗಳಲ್ಲಿ ನೀರು ಬರುತ್ತದೆ. ಮತ್ತೆರಡಕ್ಕೆ ಬೀಗ ಮುಚ್ಚಿಸಿ, ಸರ್ಕಾರದವರು ಯಾಕೆ ರಿಪೇರಿ ಮಾಡಿಸುತ್ತಾರೋ ತಿಳಿಯದು.—ಮೈಸೂರಿನಲ್ಲಿ ಪ್ಲೇಗ್ ಇರುವ ಕಾರಣ ಅಲ್ಲಿಂದ ಬರತಕ್ಕ ಜನರನ್ನು ಪರೀಕ್ಷಿಸುವುದಕ್ಕೆ ಒಬ್ಬ ಪೋಲೀಸ್ ಜವಾನನನ್ನು ಇಟ್ಟಿರುವುದನ್ನು ಕೇಳಿ ತುಂಬಾ ಸಂತೋಷಪಡುತ್ತೇನೆ. ಮೈಸೂರಿಂದ ವರ್ತಕರು ವಿಶೇಷವಾಗಿ ಬಂದು ಸೇರುತ್ತಲಿದ್ದಾರೆ. ಮೈಸೂರಿನಲ್ಲಿ ಒಂದು ಕುಟುಂಬಕ್ಕೆ ಸೇರಿದ ಇಬ್ಬರನ್ನು ಪ್ಲೇಗಿನಲ್ಲಿ ಕಳೆದುಕೊಂಡು, ಮತ್ತೊಬ್ಬರಿಗೆ ತಗಲಿದ ಕೂಡಲೆ ಆ ರೋಗಿಯನ್ನು ಇಲ್ಲಿಗೆ ಸಾಗಿಸಿಕೊಂಡು ಬಂದು ಗುಟ್ಟಾಗಿ ತನ್ನ ಮನೆಯಲ್ಲಿಟ್ಟದ್ದು ಪೋಲೀಸಿನವರಿಗೆ ತಿಳಿದು ಬರಲು, ಪೋಲೀಸ್ ದಫೇದಾರ್ ಇನ್ಸ್ಪೆಕ್ಟರವರಲ್ಲಿ ರಿಪೋರ್ಟು ಕೊಡಲು, ಇವರು ಅಮಲ್ದಾರರಿಗೂ ಅಮಲ್ದಾರರು ಡಾಕ್ಟರಿಗೂ ಡಾಕ್ಟರವರು ಸ್ಯಾನಿಟರಿ ಇನ್ಸ್‌ಪೆಕ್ಟರಿಗೂ, ಇವರು ಮಿ॥ ಹೇ ಯವರಿಗೂ ಸುದ್ದಿ ಕೊಡುವಷ್ಟರಲ್ಲಿ ರೋಗಿಯು ಸತ್ತು ಹೋದ್ದರಿಂದ ಕೂಡಲೆ ಆ ಪ್ಲೇಗ್ ರೋಗಿಯನ್ನು ಬೇರೆ ಕಡೆ ಎತ್ತಿಕೊಂಡು ಹೋಗಿ ದಹನ ಮಾಡಿಸುವ ಏರ್ಪಾಡು ಇಲ್ಲವೇ ಇಲ್ಲ. ಈ ವಿಷಯದಲ್ಲಿ ಮೇಲ್ಪಟ್ಟ ಅಧಿಕಾರಿಗಳು ತುಂಬಾ ವಿಚಾರಿಸತಕ್ಕದ್ದು ಅತ್ಯವಶ್ಯವಾಗಿದೆ. ಮತ್ತು ಊರಿನ ಪಾಕೀಜಾ ವಿಷಯದಲ್ಲಿ ಮ್ಯುನಿಸಿಪಾಲಿಟಿಯವರು ಜಬ್ಬಾದ ನಿಗಾ ಕೊಡುವರೆಂದು ಕೋರುತ್ತೇನೆ.—ಈ ಕಾಲ್ಲೋರಿನ ಸುತ್ತು ಮುತ್ತಲೂ ದಾಗಿ ಸೇಳೆ ಬಹು ಚೆನ್ನಾಗಿದೆ. ಈಗಾಗಲೇ ಕೆಲವು ಕಡೆಗಳಲ್ಲಿ ಕಟಾವಾಗುತ್ತಾ ಇದೆ. ಇನ್ನೂ ೧೦-೧೫ ದಿನ ಮಳೆ ಬಾರದಿದ್ದರೆ ಹಾನಿ ಎಂಬದಾಗಿ ಜನರು ಹೇಳಿಕೊಳ್ಳುತ್ತಾರೆ. ಇದರ ಮೇಲೆ ದೈವಸಂಕಲ್ಪ ಹ್ಯಾಗೋ ತಿಳಿಯದು.

ಚಿಕ್ಕಮಗಳೂರು.—ಪ್ರಜಾಕ್ಷೇಮ ಸ್ವಾಧಾರಣವಾಗಿ ಚೆನ್ನಾಗಿದೆ. ಪೈರುಗಳೆಲ್ಲಾ ಫಲವತ್ತಾಗಿ ಸುಭಿಕ್ಷವನ್ನು ಸೂಚಿಸುತ್ತವೆ. ಆದರೆ ಕಳೆದ ಜುಲೈ ತಿಂಗಳೆಲ್ಲಾ ಸುರಿದ ಅತಿವೃಷ್ಟಿಯಿಂದ ಕಾಫಿ ತುಂಬಾ ನಷ್ಟವಾಯಿತೆಂಬುವದರಲ್ಲಿ ಲೇಶವೂ ಅನುಮಾನವಿಲ್ಲ. ಕಾಫಿ ಬರಬರ ಹೆಚ್ಚುತ್ತಿದೆ.—ಮಾರ್ಲೆಬೋರ್ನ್ ಪ್ಲಾಂಟರುಗಳೆಲ್ಲಾ ಮುಂದಣ ವಾರ ಚಿಕ್ಕಮಗಳೂರಿಗೆ ದಯಮಾಡಿಸುತ್ತಾರೆ. ಇವರು ಬ್ರಿಟಿಷ್ ಸೈನ್ಯದಲ್ಲಿ ಉಮೇದುವಾರ್‌ರಾಗಿ ಕವಾಯಿತು ಮುಂತಾದ್ದನ್ನು ಕಲಿಯುತ್ತಾ ಅವಶ್ಯವಾದಾಗ ಬ್ರಿಟಿಷ್ ಸೈನ್ಯಕ್ಕೆ ಸಹಾಯ ಕೊಡುವುದಕ್ಕೂ ಸಿದ್ಧರಾಗಿದ್ದಾರೆ. ಇವರಿಗೆ ಸರ್ಕಾರದಿಂದ ಯಾವ ಸಂಬಳವೂ ಸಹಾಯವೂ ದೊರೆಯುವದಿಲ್ಲ. ಹಾಗೆಯೇ ಸ್ವಂತ ಸ್ವದೇಶಾಭಿಮಾನಕ್ಕಾಗಿಯೂ ಉಪಾಧ್ಯಾಯನ್ ಮಾಡುವಂತಿರುವುದೆ. ಇಂಥವರಿಗೆಲ್ಲಾ ಚಕ್ರವರ್ತಿಯವರು ಪ್ರೀತ್ಯಾದರ ತೋರುವಂತೆ ವರ್ಷಕ್ಕೊಂದು ಸಾರಿ ಪಾರಿತೋಷಕವನ್ನೂ ವಿನೋದ ಆಟಪಾಟಗಳನ್ನೂ ನಡೆಸುತ್ತಾರೆಂದು ಕೇಳಿದೆ. ಈ ಸರದಾರರುಗಳೆಲ್ಲಾ ಈಗ ಚಿಕ್ಕಮಗಳೂರಲ್ಲಿ ಎರಡು ವಾರಗಳ ಪರ್ಯಂತ ಇದ್ದು ಕವಾಯಿತು ಮುಂತಾದವುಗಳನ್ನು ನಡೆಸುತ್ತಾ ಪ್ರತಿ ದಿನ ಸಂಭ್ರಮಪಡುವರಂತೆ.—ಹೊಸದಾಗಿ ಒಂದು ಕಟ್ಟಡವು ಅಂಚೆ ಪೋಸ್ಟ್ ಆಫೀಸ್ ನಲ್ಲಿ ಕಟ್ಟಲ್ಪಟ್ಟಿದೆ. ಇದೇ ಟೌನ್‌ಹಾಲ್ ಎದುರಿಗೆ ಕಟ್ಟಲ್ಪಟ್ಟಿರುವ ಈ ಕಟ್ಟಡದಲ್ಲಿ ಉತ್ತಮ ವ್ಯಾಪಾರ ನಡೆಸಲಾಗಬಹುದು. ಹೊಸಕಟ್ಟಡವು ಬೇರೆ ಇರುವಂತೆ ತೋರಿಲ್ಲ. ಈ ಪೋಸ್ಟ್ ಆಫೀಸ್ ಬಹಳ ಕೊಳೆಯಾದ ಪ್ರದೇಶದಲ್ಲಿದೆ. ಪ್ಲೇಗ್ ಕಾಲದಲ್ಲಿ ನಡೆಸುತ್ತಿದ್ದ ಸ್ಥಳವು ತುಂಬಾ ವಿಶಾಲವಾಗಿಯೂ ಚೊಕ್ಕಟವಾಗಿಯೂ ಇತ್ತು. ಆದರೆ ಈಗ ಸಂತೆಯಾಗುವ ಸ್ಥಳವು ಬಹು ಕೊಳಕಾದ ಪ್ರದೇಶವಾಗಿಯೂ ಮಳೆಯಲ್ಲಿ ಅತ್ಯಂತ ಕೆಸರುಮಯವಾಗುವ ಸ್ಥಳವಾಗಿಯೂ ಸುತ್ತಮುತ್ತ ಮಾಂಸದ ಅಂಗಡಿಗಳು, ಅಸಹ್ಯಕರ ಮನೆಗಳು, ಇನ್ನೂ ಇತರ ಬಹಳ ಅನಾರೋಗ್ಯಕರವಾದ ಸ್ಥಳವಾಗಿದೆ. ಸರ್ಕಾರದವರು ಈ ಅತಿ ಇಕ್ಕಟ್ಟಾದ ಕೊಳೆಯೂ ಆಗಿರುವ ಸ್ಥಳದ ಸುತ್ತ ಒಂದು ಕಟ್ಟಿಗೆಯ ಬೇಲಿ ಹಾಕಿಸಿ ವಿಸ್ತಾರಪಡಿಸಿದರೆ ಆರೋಗ್ಯಕ್ಕೆ ಅನುಕೂಲವಾಗುತ್ತೆ. ಬಸವನಹಳ್ಳಿ ಮನೆಗಳಲ್ಲಿ ಹೆಚ್ಚು ಕೊಳೆ ತುಂಬಿರುವಂತವುಗಳು. ಅದರಂತೆ ಕೋಟೆಯಲ್ಲೂ ಬಹು ಸಂಖ್ಯೆ ಉಂಟು. ಇದರಿಂದ ಜುಲೈ ತಿಂಗಳೊಂದರಲ್ಲೇ ಹಳೆಯ ಮನೆಗಳೂ ಅನೇಕ ಗೋಡೆಗಳೂ ಭೂಮಿಯನ್ನು ಚುಂಬಿಸಿದವು. ಆದರೆ ಚಿಕ್ಕಮಗಳೂರಿನ ಸುತ್ತಲೂ ಅತಿ ಸಮೀಪದ ಊರಿಗೆ ಅಂಟಿಕೊಂಡು ಪ್ರಾರ್ಥ ಮಕ್ಕಳು ಕಡೆಗಳಲ್ಲಿ ಗದ್ದೆಗಳು ಕಟ್ಟಿಕೊಂಡಿರುವದರಿಂದಲೂ ಸುತ್ತಲಿರುವ ಬೆಟ್ಟ ಗುಡ್ಡಗಳು ಪ್ರದೇಶದಿಂದಲೂ ಈ ಸ್ಥಳದ ಹವೆಯು ಪದೇ ಪದೇ ಕೆಡುತ್ತದೆ. ಕಳೆದ ವರ್ಷದಲ್ಲಿ ತೆಗೆದುಬಿಡುವಂತೆ ಗೊತ್ತುಮಾಡಿದ ಕೆಲವು ಮನೆಗಳು ಅವರಿಗೂ ಹಾಗೇ ನಿಂತಿವೆ. ಮುನಿಸಿಪಾಲಿಟಿಯವರು ಲಕ್ಷ್ಯವಿಲ್ಲದಂತೆ ತೋರುವದು.—ಕಳೆದ ಜನವರಿಯಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಸಬ್ ಜಡ್ಜ್ ಕೋರ್ಟಿನಲ್ಲಿ ಈಚೆಗೆ ಕೆಲಸವು ಹೆಚ್ಚು ಆಗುತ್ತಿದೆ ಎಂತಲೂ, ಬಿರೂರು ಅಡಿಕೆ ವ್ಯಾಪಾರಸ್ಥರು ಕಾಫಿ ಧಾರಣೆಯೂ ಬಿದ್ದುಹೋಗಿ ದಿನದಿನಕ್ಕೆ ದಿವಾಳಿಯಾಗುವದೇ ಕಾರಣವೆಂತಲೂ ಮುಂದೆ ಈ ಕೋರ್ಟು ಸ್ಥಿರವಾಗಿ ನಿಲ್ಲುವದೋ ಇಲ್ಲವೋ ಎಂತಲೂ ಬಹುಮಂದಿ ಭಾವಿಸುತ್ತಿದ್ದಾರೆ.—ಈ ಊರಲ್ಲಿರುವ ತಾಲ್ಲೂಕ್ ಅಮಲ್ದಾರರಿಗೆ ಶೀಘ್ರವಾಗಿ ವರ್ಗವಾಗುವಂತಿದೆ. ಇವರು ಈ ಸ್ಥಳಕ್ಕೆ ಬಂದು ಎರಡು ವರ್ಷಗಳ ಮೇಲೆ ಆಯಿತೆಂತ ಹೇಳಬಹುದು. ಈ ಅಮಲ್ದಾರರು ವಿಶೇಷವಾದ ಯಶಸ್ಸಿಗೆ ಪಾತ್ರರಾಗಬಹುದು. ಜನರಲ್ಲಿ ತುಂಬಾ ಸ್ನೇಹಪರರಾಗಿದ್ದಾರೆ.—ಈ ಊರಲ್ಲಿ ತುಂಬಾ ಅಲಂಕಾರವಾಗಿರುವ ಹೆಂಗಸರ ಆಸ್ಪತ್ರೆಯು ಬಡ ಗರ್ಭಿಣಿಯರುಗಳಿಗೂ ರೋಗಿಗಳಿಗೂ ತುಂಬಾ ಪಸಂದಯಾಗಿದೆ. ಲೇಡಿ ಅಪಾತಿಕೆರಿಯವರು ತಮ್ಮ ಕೆಲಸವನ್ನು ಅತ್ಯಂತ ತೃಪ್ತಿಕರವಾಗಿ ನಡಿಸುತ್ತಿದ್ದಾರೆ. ಇವರು ತೋರಿಸುವ ಕರುಣೆಯು ಎಲ್ಲಾ ಜನರಲ್ಲೂ ಪಕ್ಷಪಾತರಹಿತವಾದದರಿಂದ ಅನೇಕಾನೇಕರು ಇವರಿಗೆ ವಂದನೆ ಹೇಳುತ್ತಾರೆ.—ಕೊಪ್ಪ ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ ಸುಮಾರು ೫೦ ರೂಪಾಯಿ ವ್ಯತ್ಯಾಸ ಮಾಡಿದಂತೆ ಕಂಡು ಬಂದ ಅಳಸಿಂಗ್ರಯ್ಯಂಗಾರಿಗೆ ಎರಡು ವರುಷ ಸಜಾ ಆಗಿದೆ. ಈತನು ತನ್ನ ಬಳಿಗೆ ಬಂದ ೧೦೦ ರೂಪಾಯನ್ನು ಸೇವಿಂಗ್ಸ್ ಬ್ಯಾಂಕಿಗೆ ಸೇರಿಸದೆ ತನ್ನ ಸ್ವಂತ ಸಾಲಕ್ಕಾಗಿ ೫೦ ರೂಪಾಯಿ ವಜಾಮಾಡಿಕೊಂಡಂತೆಯೂ, ಡಿಪಾಜಿಟರ್ ಅನುಮತಿಯ ತಿಳುವಳಿಕೆ ಇಲ್ಲದೆ ನಡಿಸಿದಂತೆಯೂ ಕೇಳಲಾಗಿದೆ.—ಕಳೆದ ಗುರುವಾರ ಒಬ್ಬ ಕುಂಬಾರ ಗರ್ಭಿಣಿ ಸ್ತ್ರೀ ಕಾಲುಜಾರಿ ಬಸವನ ಕೆರೆಯಲ್ಲಿ ಬಿದ್ದು ಮೃತಳಾದಳು.—ಈ ಊರಲ್ಲಿ ಬಸವನಹಳ್ಳಿ ಕೆರೆಯು ದಂಟರಮಕ್ಕಿ ಲೆಕ್ಕಕ್ಕೆ ಸೇರಿದೆ. ಈ ಗ್ರಾಮ ವಲ್ಲದೆ ಬೇರೆ ೭ ಗ್ರಾಮಗಳು ಈ ಕೆರೆಯ ನೀರಿನಿಂದ ಗದ್ದೆ ಸಾಗುವಳಿಯನ್ನು ಅನುಭವಿಸುತ್ತವೆ. ಸುಮಾರು ೧೦ ಸಾವಿರ ರೂಪಾಯಿ ಕಂದಾಯ ವಸೂಲಾಗುತ್ತೆ. ಸೀತಾಳಗಿರಿಯಿಂದ ಬರುವ ನೀರನ್ನು ಈ ಕೆರೆಗೆ ತಿರುಗಿಸಿದ್ದಾರೆ. ಆದರೆ ಅಣೆಕಟ್ಟು ಒಡೆದು ಹೋಗಿರುವದರಿಂದ ನೀರೆಲ್ಲಾ ಬೇರೆ ನಾಲೆಗಳಿಗೆ ತಿರುಗುವದು. ಸೀತಾಳಗಿರಿಯಿಂದ ಬರುವ ನೀರನ್ನು ಈ ಕೆರೆಗೆ ತಿರುಗಿಸಿದ್ದಾರೆ. ಆದರೆ ಅಣೆಕಟ್ಟು ಒಡೆದು ಹೋಗಿರುವದರಿಂದ ನೀರೆಲ್ಲಾ ಬೇರೆ ನಾಲೆಗಳಿಗೆ ತಿರುಗುವದು. ಸೀತಾಳಗಿರಿಯ ಅಡ್ಡಕಲ್ಲನ್ನು ತೆಗೆದರೆ ಬಹು ತೃಪ್ತಿಕರವಾಗಿ ನೀರು ಬರುತ್ತೆ. ಎಲ್ಲಾ ನಾಲೆಗಳಿಗೂ ಸಮೃದ್ಧಿ ಆಗುತ್ತೆ. ಈ ವಿಷಯವನ್ನು ಸ್ಟೇಟ್ ಮಹಾರಾಜರವರೂ ಇಂಜನೀರ್ ಸಾಹೇಬರೂ ಮೆಚ್ಚಿ ಪರಾಂಬರಿಸಿದ್ದಾರಂತೆ. ಖರ್ಚು ಎರಡು ಮೂರು ಸಾವಿರ ರೂಪಾಯಿಗಿಂತ ಸ್ವಲ್ಪವೂ ಹೆಚ್ಚು ಆಗಲ್ಲವೆಂದ ಗ್ರಾಮಸ್ಥರು ಅಂದಾಜು ಮಾಡುತ್ತಾರೆ. ಇಂಥ ಕೆಲಸಕ್ಕೆ ಬೇಗನೆ ಸರ್ಕಾರದವರು ಸಹಾಯ ಮಾಡುವರೆಂತ ನಿರೀಕ್ಷಿಸುವರು.

## ವಿದೇಶ ವರ್ತಮಾನಗಳು.

ಆಫ್ರಿಕಕ್ಕೆ ಸೇರಿದ ಬ್ರಿಟಿಷ್ ಗಯಾನಾ ಸೀಮೆಯಲ್ಲಿ ನಮ್ಮ ಹಿಂದುಸ್ಥಾನದ ಪ್ರಜೆಗಳು ೧,೧೭,೭೫೦ ಮಂದಿ ಇರುತ್ತಾರೆ.

✦✦✦✦

ರಷ್ಯಾ ಚಕ್ರವರ್ತಿ ಯವರು ಇನ್ನೂ ೫೦,೦೦೦ ಸೈನಿಕರನ್ನು ಮಂಚೂರಿ ರಾಜ್ಯದ ಕಡೆಗೆ ರವಾನಿಸುವವರಾಗಿದ್ದಾರೆಂದು ವರ್ತಮಾನ ಬಂದಿದೆ.

✦✦✦✦

ವಿಲಾಯಿತಿಯ ಚಕ್ರವರ್ತಿಯವರು ಇಷ್ಟರಲ್ಲೇ ಪ್ರಯಾಣ ಹೊರಟು ಆಸ್ಟ್ರಿಯ, ಜರ್ಮನಿ, ರಷ್ಯಾ ರಾಜ್ಯಗಳ ಮೇಲೆ ಸಂಚಾರ ಮಾಡಿಕೊಂಡು ಬರುವವರಾಗಿದಾರೆ.

✦✦✦✦

ದಕ್ಷಿಣ ಆಫ್ರಿಕದ ಈಗಿನ ಸ್ಥಿತಿಯು ತುಂಬಾ ಕಳವಳವನ್ನುಂಟುಮಾಡುವದಾಗಿದೆ ಎಂತಲೂ, ಅಲ್ಲಿ ಪ್ರಜಾ ನೆಮ್ಮದಿಯನ್ನು ಕಾಪಾಡುವದಕ್ಕೆ ಕಡೇ ಪಕ್ಷ ೨೫ ಸಾವಿರ ಮಂದಿ ಇಂಗ್ಲಿಷ್ ಸೈನಿಕರನ್ನಾದರೂ ನೇಮಿಸಬೇಕೆಂತಲೂ ಮಿ॥ ಲಿನಪರ್ ಕೋರ್ಟ್‌ನೇ ಎಂಬೊಬ್ಬ ದೊಡ್ಡ ಮನುಷ್ಯನು ತಿಳಿಸುತ್ತಾನೆ.

✦✦✦✦

ರಷ್ಯಾ ರಾಯಭಾರಿಯಾದ ರಾಸ್ಟ್‌ಕೋಸ್ಕಿ ಎಂಬಾತನನ್ನು ತುರ್ಕಿ ಸೈನಿಕರಿಬ್ಬರು ಕೊಂದು ಹಾಕಿದರಷ್ಟೆ. ಆ ಸೈನಿಕರನ್ನು ಕೂಡಲೆ ವಿಚಾರಣೆ ಮಾಡಿ ಗಲ್ಲಿಗೆ ಏರಿಸಿದರು. ಕೊಲೆಯಾದ ರಾಯಭಾರಿಯ ಸಂಸಾರಕ್ಕೆ ತುರ್ಕಿ ಗವರ್ನಮೆಂಟಿನವರು ೩ ಲಕ್ಷ ದ್ರವ್ಯವನ್ನು ಪರಿಹಾರ ಕೊಡುತ್ತೇವಾಗಿ ತಿಳಿಸಿದರು. ಇದನ್ನು ಅವರು ಒಪ್ಪಿಕೊಂಡಿದಾರೆ.

✦✦✦✦

ಜರ್ಮನ್ ರಾಜ್ಯಕ್ಕೆ ನ್ಯೂಜಿಲೆಂಡಿನಿಂದ ಗೋಧಿಯನ್ನು ರಫ್ತು ಮಾಡಕೂಡದೆಂದು ರಷ್ಯಾದವರು ಆಜ್ಞೆಮಾಡಿರುವದರಿಂದ ಜರ್ಮನಿಯವರು ಬರ್ಮಾಕ್ಕೆ ವರ್ತಕರನ್ನು ಕಳುಹಿಸಿ ವಿಪರೀತವಾಗಿ ಅಕ್ಕಿಯನ್ನು ತರಿಸಿಕೊಳ್ಳುತ್ತಿದಾರೆ. ಇದರಿಂದ ಬರ್ಮಾದಲ್ಲಿ ಅಕ್ಕಿಯ ಧಾರಣೆ ಚಡಾವಾಗಿರುತ್ತದೆ. ಪ್ರತಿನಿತ್ಯವೂ ಹಡಗುಗಳಲ್ಲಿ ಅಕ್ಕಿ ಭರ್ತಿಯಾಗಿ ಜರ್ಮನಿಗೆ ಹೋಗುತ್ತಿದೆ.

✦✦✦✦

ಆಸ್ಟ್ರೇಲಿಯದ ಪಾರ್ಲಿಮೆಂಟಿಗೆ ಮೆಂಬರುಗಳನ್ನು ಚುನಾಯಿಸುವುದಕ್ಕೆ ಅಲ್ಲಿನ ವಿದ್ಯಾವತಿಯರಾದ ಸ್ತ್ರೀಯರಿಗೂ ಹಕ್ಕುಂಟೆಂತಲೂ, ಸ್ತ್ರೀಯರೇ ಚುನಾಯಿಸಲ್ಪಟ್ಟು ಮೆಂಬರಾಗಿ ಹೋಗಿ ಪಾರ್ಲಿಮೆಂಟಿನಲ್ಲಿ ಕುಳಿತು, ಸರ್ಕಾರಿ ಮತ್ತು ಸಾಹುಕಾರಿ ವಿಷಯಗಳನ್ನು ಚರ್ಚಿಸಬಹುದೆಂತಲೂ ತೀರ್ಮಾನವಾಗಿದೆ. ಈ ಹೊಸ ತೀರ್ಮಾನವು ಮುಂದಿನ ನೊವೆಂಬರಿನಿಂದ ಜಾರಿಯಲ್ಲಿ ಬರುವುದು.

✦✦✦✦

ಸೋಮಾಲಿಲಾಂಡಿನ ಯುದ್ಧಕ್ಕೆ ಇಂಗ್ಲಿಷ್ ಗವರ್ನಮೆಂಟಿನವರು ೫,೫೮೩ ಒಂಟೆಗಳನ್ನು ಕಳುಹಿಸಿದ್ದರು. ಈ ಪೈಕಿ ೧೩೩ ಮಾತ್ರ ಸತ್ತುಹೋದವು. ವಿಶೇಷವಾದ ಹುಲ್ಲು ತಿಂದದ್ದರಿಂದ ಇವು ಮೃತಪಟ್ಟವು.

✦✦✦✦

ರಷ್ಯಾ ರಾಜ್ಯದಲ್ಲಿ ವಿದ್ಯಾಭ್ಯಾಸಂಗ ಮಾಡುವವರೂ, ಕೂಲಿ ಮಾಡಿ ಜೀವನ ಮಾಡತಕ್ಕವರೂ, ಇನ್ನೂ ಬೇರೆ ಬೇರೆ ಜನರೂ ಸರ್ಕಾರದವರ ಕಾರುಬಾರುಗಳ ಮೇಲೆ ಅಸಮಾಧಾನವನ್ನು ತೋರಿಸುತ್ತಾ, ಪ್ರಜಾ ನೆಮ್ಮದಿಗೆ ಭಂಗವನ್ನುಂಟುಮಾಡುವ ಕೃತ್ಯಗಳನ್ನು ನಡಸುತ್ತಾ ಬಂದಿದಾರಷ್ಟೆ. ರಷ್ಯಾ ಗವರ್ನಮೆಂಟಿನವರು ಅದನ್ನು ಅಡಗಿಸುವುದಕ್ಕೆ ಒಂದು ಸರ್ಕಾರಿ ಪತ್ರಿಕೆಯನ್ನು ಪ್ರಕಟಿಸಬೇಕೆಂತಲೂ, ಈ ಪತ್ರಿಕೆಯನ್ನು ಪ್ರತಿ ಒಂದು ಸ್ಥಾವಿಸಲ್ಲಿ ಎಲ್ಲರೂ ಓದುವಂತೆ ಮಾಡಬೇಕೆಂತಲೂ ಹುಕುಂ ಕೊಟ್ಟಿದಾರೆ.

✦✦✦✦

ವಿಲಾಯಿತಿ ರಾಜ್ಯದ ಒಂದು ಪಟ್ಟಣದಲ್ಲಿ ಒಬ್ಬನು ೧೮೩೫ ಪೌಂಡನ್ನು ಒಬ್ಬ ಸಾಹುಕಾರನಲ್ಲಿ ಸಾಲ ತೆಗೆದುಕೊಂಡು, ಎರಡು ವರುಷಗಳಲ್ಲಿ ೧೫೦ ಪೌಂಡು ತೀರಿಸಿದನು. ಆ ಸಾಹುಕಾರನು ಅವನಿಗೆ ಇನ್ನೂ ೪೨೫ ಪೌಂಡು ಅವನಿಂದ ಬರಬೇಕೆಂದು ದಾವಾ ಮಾಡಿದನು. ೧೮೫ ಪೌಂಡು ಸಾಲ ತೆಗೆದುಕೊಂಡುದಕ್ಕೆ ಎರಡು ವರುಷದಲ್ಲಿ ಅವನು ೬೨೫ ಪೌಂಡು ಕೊಡಬೇಕಾಗಿದೆಯಲ್ಲಾ; ಬಡ್ಡಿ ತುಂಬಾ ಹೆಚ್ಚು ಎಂಬದಾಗಿ ನ್ಯಾಯಾಧಿಪತಿಗೆ ಅರಿಕೆ ಮಾಡಿಕೊಂಡನು. ನ್ಯಾಯಾಧಿಪತಿಯು ಅನಿಕಡಿಮೆ ಕ್ರಯವಾದ ಬಡ್ಡಿಗಿಂತ ಜಾಸ್ತಿ ಕೊಡಬೇಕಾಗಿಲ್ಲವೆಂದು ದಾವಾ ವಜಾಮಾಡಿದನು.

✦✦✦✦

ಬಲ್ಗೇರಿಯಾ ಗವರ್ನಮೆಂಟಿನವರು ತುರ್ಕಿ ಸುಲ್ತಾನರವರ ಮೇಲೂ ಅವರ ಪ್ರಜೆಗಳಾದ ಮುಸಲ್ಮಾನರ ಮೇಲೂ ಅನೇಕವಾಗಿ ಆಕ್ಷೇಪಣೆಗಳನ್ನು ಬರೆದು, ಯೂರೋಪಿನ ರಾಜ್ಯಾಧಿಕತಿಗಳಿಗೆಲ್ಲಾ ಕಳುಹಿಸಿಕೊಟ್ಟು, ತುರ್ಕಿಯವರ ಹಿಂಸೆಗಳನ್ನು ತಪ್ಪಿಸಿಕೊಡಬೇಕೆಂದು ಬೇಡಿಕೊಂಡಿದಾರೆ. ಆಕ್ಷೇಪಣೆ ಏನೆಂದರೆ—ತುರ್ಕಿ ಜನರು ಕ್ರಿಸ್ತ ಪ್ರಜೆಗಳನ್ನು ನಾನಾಪ್ರಕಾರವಾಗಿ ಗಾಬರಿಪಡಿಸಿ, ಮನೆಮಠಗಳನ್ನೂ ಆಸ್ತಿಪಾಸ್ತಿಗಳನ್ನೂ ಸುಡುತ್ತಾರೆ; ಲೂಟಿಮಾಡುತ್ತಾರೆ, ಹೆಂಗಸರ ಮಾನಭಂಗಪಡಿಸುತ್ತಾರೆ; ನಿರಪರಾಧಿಗಳನ್ನು ಹಸ್ತಗಿರಿ ಮಾಡಿ ಗಡೀಪಾರು ಮಾಡುವರು; ಸ್ಕೂಲುಗಳನ್ನೂ ದೇವಸ್ಥಾನಗಳನ್ನೂ ಮುಚ್ಚಿಸಿಬಿಟ್ಟರು. ಇದೆಲ್ಲಾ ತುರ್ಕಿ ಗವರ್ನ್‌ಮೆಂಟಿನವರ ಅವಿವೇಕವಾದ ನಡತೆಯಿಂದಲೇ ಪ್ರಾಪ್ತವಾಗಿರುವವು. ಇದಕ್ಕೆ ಆ ಗವರ್ನ್‌ಮೆಂಟಿನವರೇ ಕಾರಣರಾಗಿರುತ್ತಾರೆ. ಆ ಗವರ್ನಮೆಂಟಿನವರು ಪರರಾಜ್ಯಗಳಿಗೆ ಮಾತುಕೊಟ್ಟ ಪ್ರಕಾರ ಬಂದೋಬಸ್ತುಗಳನ್ನು ಮಾಡದೆ ಇರುವುದರಿಂದ ಈ ದುಸ್ಥಿತಿಗಳು ಪ್ರಾಪ್ತವಾಗುತ್ತಿವೆ.

✦✦✦✦

ವಿಲಾಯಿತಿ ಚಕ್ರವರ್ತಿಯವರು ಪಾರ್ಲಿಮೆಂಟಿಗೆ ಒಂದು ಲೇಖನವನ್ನು ಬರೆದು ಕಳುಹಿಸಿದರು. ಅದರಲ್ಲಿ ರಾಜ್ಯದ ಹಿತಾಂಶಗಳನ್ನೂ ಪರರಾಜ್ಯಗಳ ಸಮಾಧಾನ ಮತ್ತು ಸ್ನೇಹಭಾವದ ಸಂಗತಿಗಳನ್ನೂ ಕುರಿತು ಆಜ್ಞಾಪಿಸಿರುತ್ತಾರೆ. ಮುಖ್ಯ ಸಂಗತಿ ಏನೆಂದರೆ—"ನಾವು ಈಚೆಗೆ ಪೋರ್ಚುಗಲ್, ಇಟಲಿ, ಫ್ರಾನ್ಸ್ ಮೊದಲಾದ ರಾಜ್ಯಗಳ ಮೇಲೆ ಸಂಚಾರ ಹೋಗಿ ಬಂದುದರಿಂದ ಆಯಾ ರಾಜ್ಯಗಳವರು ನಮ್ಮ ವಿಷಯದಲ್ಲಿ ವಿಶೇಷವಾದ ಸ್ನೇಹವನ್ನೂ ಪ್ರೀತಿಯನ್ನೂ ತೋರಿಸಿರುತ್ತಾರೆ. ರಾಜ್ಯಗಳಲ್ಲಿ ಪರಸ್ಪರ ಸ್ನೇಹವು ವೃದ್ಧಿಹೊಂದಿತು. ತುರ್ಕಿಗೆ ಸೇರಿದ ಬಾಲ್ಕನ್ ಪ್ರಾಂತ್ಯಗಳಲ್ಲಿ ಗಲಭೆಯುಂಟಾಗಿದೆ. ಅದನ್ನು ನಿವಾರಣೆ ಮಾಡಲು ನಮ್ಮ ಮಂತ್ರಿಗಳೂ ಪ್ರಯತ್ನಪಡುತ್ತಿದ್ದಾರೆ. ಜಪಾನಿನವರಿಗೂ ನಮಗೂ ಒಂದು ಕರಾರಾಯಿತು. ಇದರ ಪ್ರಕಾರ ಕೆಲಸಗಳು ಜಾರಿಯಲ್ಲಿ ತರಲ್ಪಟ್ಟಿವೆ. ನಾವು ಫ್ರೆಂಚಿಯವರ ರಾಜ್ಯದವರ ಸಂಗಡ ವ್ಯಾಪಾರ ವಿಷಯವಾಗಿ ಒಂದು ಕರಾರು ಮಾಡಿಕೊಂಡಿರುತ್ತೇವೆ. ಇದರಿಂದ ಆ ಪ್ರಾಂತ್ಯದಲ್ಲಿ ನಮ್ಮ ವ್ಯಾಪಾರಸ್ಥರಿಗೆ ತುಂಬಾ ಅನುಕೂಲವಾಯಿತು. ಟ್ರಾನ್ಸ್‌ವಾಲ್ ಅರೆಂಜ್ ನದೀ ಸ್ವಾತಂತ್ರ್ಯದ ಎಲ್ಲಾ ಬೋಯರರು ಮನಸಾರ ಒಪ್ಪಿಕೊಂಡು ಪ್ರಾರ್ಥನೆಯಂತೆ ತಮ್ಮ ತಮ್ಮ ಕಸಬುಗಳನ್ನು ಅವಲಂಬಿಸಿಕೊಳ್ಳುತ್ತಿದಾರೆ. ಹಿಂದೂಸ್ಥಾನದಲ್ಲಾದರೋ ಮತ್ತು ಸುಭಿಕ್ಷಕಾಲವು ಬಂದು ಎಲ್ಲಾ ಕ್ಷೇಮವಾಗಿರುವದರಿಂದ ರಾಜಾದಾಯವು ಹೆಚ್ಚು ಸಂತೋಷವನ್ನುಂಟುಮಾಡಿದೆ. ಮತ್ತು ಸುಂಕವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಲು ಅವಕಾಶವಾಯಿತೆಂದು ಸಂತೋಷಪಡುತ್ತೇವೆ. ಇದರಿಂದ ಪ್ರಜೆಗಳಿಗೆಲ್ಲಾ ಪ್ರಯೋಜನವಾಯಿತೆಂದು ನಿರೀಕ್ಷಿಸುತ್ತೇವೆ. ಹಿಂದೂಸ್ಥಾನದ ವ್ಯಾಪಾರವು ವೃದ್ಧಿಹೊಂದುತ್ತಾ ಬಂದಿದೆ. ಈಚೆಗೆ ಮಳೆ ಚೆನ್ನಾಗಿಯೂ ಸಾವತ್ರಿಕವಾಗಿಯೂ ಆಗಿರುವದರಿಂದ ಬೆಳೆಗಳು ಚೆನ್ನಾಗಿವೆ. ಸೋಮಾಲಿಲಾಂಡಿನಲ್ಲಿ ಯುದ್ಧ ಕಾರ್ಯಗಳು ಪೂರೈಸಲಿಲ್ಲ. ಶತ್ರುಗಳು ತಮ್ಮ ಪ್ರಾಂತಸ್ಥಾನಗಳನ್ನು ಬಿಟ್ಟು ಓಡಿಹೋಗಿರುವುದು ನಮ್ಮ ಸೈನ್ಯಕ್ಕೆ ತುಂಬಾ ಅನುಕೂಲವಾಗಿದೆ. ನಾವು ನಮ್ಮ ರಾಜ್ಯಾಂಗವಾದ ಸ್ಕಾಟ್ಲೆಂಡ್, ಐರ್ಲೆಂಡ್‌ಗಳಿಗೆ ಹೋಗಿ ಪ್ರಜೆಗಳ ಆತಿಥ್ಯವನ್ನು ಸ್ವೀಕರಿಸಿ ಬಂದೆವು. ಅಲ್ಲಿನ ಪ್ರಜೆಗಳು ಅತ್ಯಂತ ಭಕ್ತಿಯುಳ್ಳವರಾಗಿಯೂ, ಸರ್ಕಾರಿ ಅಧಿಕಾರಿಗಳ ಕಾರ್ಯಗಳಲ್ಲಿ ಸಹಾಯಕರಾಗಿಯೂ ಇರುತ್ತಾರೆ. ಐರ್ಲೆಂಡಿನಲ್ಲಿ ಇನ್ನು ಮುಂದೆ ಪ್ರಜಾ ನೆಮ್ಮದಿಗೆ ಬೇರೆ ಬಾಧಕವಿಲ್ಲವೆಂದು ನಿರೀಕ್ಷಿಸುವೆವು.

## ಒಳ್ಳೇ ಔಷಧಗಳು.

9

**ಕಣ್ಣುವ್ಯಾಧಿಗೆ ಸುಬಾಂಜನವು.**—ಹೊಸದಾಗಿ ಅಥವಾ ಬಹು ಕಾಲದಿಂದ ಕಣ್ಣುಗಳಲ್ಲಿ ಇರುತ್ತಿದ್ದ ಎಲ್ಲ ಪ್ರಕಾರದ ಬಾಧೆಗಳು ಇದರಿಂದ ಬಹು ಬೇಗನೆ ಗುಣ ಹೊಂದುವವು. ಕಣ್ಣುಗಳಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು, ಪಿಸರೂ ಬರುತ್ತಿರುವದೂ, ಉರಿ, ದೃಷ್ಟಿಗೆ ಹೋಲಿಕೆ ಆಗದೆ ಇರುವದೂ, ದೃಷ್ಟಿಮಾಂದ್ಯ ಮುಂತಾದ ವಿಶಿಷ್ಟ ವ್ಯಾಧಿಗಳು ಗುಣ ಹೊಂದುತ್ತವೆ. ಕ್ರಯ ೧ಡಬ್ಬಿಗೆ ೧ ರೂ. ಪೋಸ್ಟ ಖರ್ಚು ಆಣೆ ೬.

**ವಾಯುಹಾರಕ ತೈಲ (ಬಾಹ್ಯಲೇಪನಕ್ಕೆ ಮಾತ್ರ).**—ಇದನ್ನು ಲೇಪಿಸಿದ ೫ ನಿಮಿಷದೊಳಗೆ ಸಂಧಿವಾತ, ಶೂಲವಾತ, ವ ಇತರ ವಾಯುಗಳ ಬಾಧೆ, ತಲೆನೋವು, ಚಿಕ್ಕ ಮಕ್ಕಳ ಉಬ್ಬಸ, ಕೆಮ್ಮು, ಕಫ ಗುಣ ಹೊಂದುವವು. ಬುಡ್ಡಿಗೆ ೧ ರೂ. ಖರ್ಚು ಆಣೆ ೬.

ಗಜಕರ್ಣದ ಮುಲಾಮು.—೨ ಅಥವಾ ೩ ಆವರ್ತಿ ಹಚ್ಚುವದರೊಳಗೆ ಎಂಥ ಕಠಿಣವಾದ ಗಜಕರ್ಣವಾದದ್ದು ಇದ್ದರೂ ಪೂರ್ಣ ಗುಣ ಹೊಂದುವದು. ಡಬ್ಬಿಗೆ ಆಣೆ ೮. ಖರ್ಚು ೧ ರಿಂದ ೬ ದಷ್ಟು ವರೆಗೆ ಆಣೆ ೬.

ಕರ್ಣಸ್ರಾವಕ್ಕೆ ವನೌಷಧಿ ತೈಲ (ಬಾಹ್ಯೋಪಚಾರಕ್ಕೆ ಮಾತ್ರ).—ಚಿಕ್ಕ ಪ್ರಾಯದವರ ಮತ್ತು ಪ್ರೌಢ ಪ್ರಾಯದವರ ಕಿವಿಯಿಂದ ರಕ್ತವಾಗಲಿ ಕೀವು ಆಗಲಿ ನೀರಿನಂಥ ದ್ರವವಾಗಲಿ ಹೊಸದಾಗಿ ಅಥವಾ ಬಹುಕಾಲದಿಂದ ಹರಿಯುತ್ತಿದ್ದರೆ ಮತ್ತು ಅದರ ಮೂಲಕ ನೋವೂ ಕಳಕಳವೂ ತುರುಸುವಿಕೆಯೂ ಇರುತ್ತಿದ್ದರೆ, ಇದರ ಉಪಯೋಗದಿಂದ ಬಹು ಬೇಗನೇ ಸಂಪೂರ್ಣ ಗುಣವು ಪ್ರಾಪ್ತವಾಗುವದು. ಕ್ರಯ ರೂ. ೧. ಖರ್ಚು ಆಣೆ ೬.

ವ್ಹಿ. ಪಿ. ಯಿಂದಲೂ ರವಾನಿಸುವೆವು. ಇನ್ನೂ ಅನೇಕ ಉತ್ತಮವಾದ ಔಷಧಗಳ ಬಗ್ಗೆ ನಮ್ಮ ಕ್ಯಾಟ್ಲಾಗು ತರಿಸಿ ಓದಿ ನೋಡಿ. ನಮ್ಮ ವಿಳಾಸವೇನಂದರೆ.—

ರಾಜವೈದ್ಯ ಮತ್ತು ಕಂಪನಿ, ಬೆಳಗಿ, ಉತ್ತರ ಕನ್ನಡಾ ಜಿಲ್ಲಾ.

---

ಹೋಮಿಯೋಪತಿ ಮಿಶ್ರ ದೀಪಿಕಾ.

ಪ್ರಜ್ಞಾ ಪ್ರಕಾರ. ಜಗಲುತ್ತಲೇ ನೋವು ಮಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಆಫೀಸು, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ಹತ್ತು ಲಕ್ಷ ಜನರಿಗೆ ಮಹತ್ತಾಗಿ ಸಿದ್ಧತ ವಾದ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಹೊಟ್ಟೆನೋವು, ಚರ್ಮವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಸೆಳೆಯುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮೂಲನೋವು, ಊತಗಳು, ಗಡ್ಡೆಗಳು, ವ್ರಣಗಳು ಮುಳ್ಳುಕಡ್ಡಿ, ಸೂಜಿ ಮತ್ತು ಚೇಳು ಕಡಿದದ್ದು, ಚಿಟ್ಟುರುವದು, ಬೆಂಕಿಯಲ್ಲಿ ಸುಟ್ಟು ಹೊಂದದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ದಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ ೨—೮ ಆ.; ಒಂದೇ ಸಲ ೧೨ ದಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಟ್ಲು ದಬ್ಬಿಯದು ೧ ರೂ. ದಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ದಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

◆◆◆◆◆◆◆◆◆

ಹೋಮಿಯೋಪತಿ ಕ್ಲಾಸಿಕ್ ಕನ್ಸನ್ಟ್ರೇಷನ್.

---

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಪತಿಯ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಹಚ್ಚಿದರೆ ಬಹು ಬೇಗನೆ ಸೇದಿಕೊಳ್ಳಬಲ್ಲದು. ದಬ್ಬಿಗಳು ಒಂದು ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಊರುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

**ವಿಳಾಸ:—ಹೋಮಿಯೋಪತಿ ಕಂಪನಿ, ೨೩ ಕೆಂಪು ಬೀದಿ ಸ್ಟ್ರೀಟ್, ಮದರಾಸ್.**

---

# ಶ್ರೀ ಕೃಷ್ಣವಿಲಾಸ ಪ್ರೆಸ್.

45

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡ್, ನೋಟೀಸ್ ಫಾರಂ, ಬ್ಯಾಲೆನ್ಸ್ ಷೀಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇರ್ಪಾಸಂದಕರವಾಗಿಯೂ ಸುಲಭ ಧಾರಣೆಗಳಿಗೆ ಮಾಡಲ್ಪಡುತ್ತವೆ.

ರೋಲು, ಪಗಡೆ, ಮುಂತಾದ ಬಾಕೀ ಪುಸ್ತಕಗಳು; ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು; ಇನ್ನು ಇತರವಾದ ನಮೂನೆಯ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿನಂತೆ ಬಹು ಅಂದವಾಗಿ ತಯಾರ್ಮಾಡಲ್ಪಡುತ್ತವೆ.

ಆಯರ್‌ಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್ ಹೋಲ್‌ನಾಮಾ, ಜಾರೀ, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಮಾರಿಕೆಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇನೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯತರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಅವಶ್ಯವನ್ನು ಅಪೇಕ್ಷಿಸುವವರು ಸ್ಟಾಂಪು ಕಾಗದವನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯನ್ನು ಸ್ಯಾಯಾದು ಬಜಾರ್ ಮೊಹಲ್ಲಾ ದೊಡ್ಡ ಪೇಟೆ ೨೬ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇನೆ.

ವಿಳಾಸ:—ಎಂ ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,

ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

---

ಜ್ವ ರ ಹ ರಿ. 45

ಇದು ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಪಿತ್ತಜ್ವರ, ಶೀತಜ್ವರ, ನಾಳಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಖಾತೆಯ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ೩ ರೂ., ೧೦ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲ್ಪಡುವದು.

◆◆◆◆◆◆◆◆

ಸು ಮಂ ಗ ಲ ಪ್ರ ದ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ಪಾಂಡುಭೇದಿ, ನಾನಾ ತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಸರ್ವೋತ್ತಮವಾದ ಔಷಧಿ, ಅತಿ ಜಾಗ್ರತೆಯಲ್ಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಬಹಿಷ್ಠರಾದಾಗ ಆಗುವಾಗ್ಯ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪಟ್ಟಿ ಜ್ವರಹರಿ ಎಂಬ ಔಷಧದಂತೇ. ಸೀಸೆಗಳಲ್ಲಿ ದೊರಕುವದು.

ಕತಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜೆನ್ರಿಯ ಪಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಪರೀಕ್ಷೆಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇನೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಚಾರಿಸಿ.—

ಜೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಕೋಮಂಡ್ ಬೀಚ್ ರೋಡ್, ಮದರಾಸ್.

---

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೧—೮—೧೯೦೩ ರಿಂದ ೨೮—೮—೧೯೦೩ ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | 9 | 6 | 9 | 6 |
| ಮೈಸೂರು ,, | 109 | 88 | 78 | 65 |
| ಬೆಂಗಳೂರು ಡಿಸ್ಟ್ರಿಕ್ಟು | 56 | 46 | 49 | 31 |
| ಮೈಸೂರು ,, | 61 | 39 | 105 | 81 |
| ಕೋಲಾರ್ ,, | 15 | 17 | 39 | 38 |
| ಕೋಲಾರ್ ಚಿನ್ನದ ಗಣಿಗಳು | 3 | 1 | 8 | 4 |
| ತುಂಕೂರು ಡಿಸ್ಟ್ರಿಕ್ಟು | 102 | 69 | 78 | 70 |
| ಹಾಸನ ,, | 11 | 10 | 7 | 5 |
| ಚಿತ್ರದುರ್ಗ ,, | 93 | 63 | 123 | 90 |
| ಕಡೂರ್ ,, | 1 | 2 | 1 | 1 |
| ಶಿವಮೊಗ್ಗ ,, | 72 | 70 | 75 | 43 |
| ಒಟ್ಟು. | 529 | 369 | 600 | 478 |

---

ಶಾಲೀವಾಹನ ಶಕೆ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಭಾದ್ರಪದ ಬಹುಳ ತದಿಗೆ ಗುರುವಾರದಿಂದ ಭಾದ್ರಪದ ಬಹುಳ ದಶಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಸೆಪ್ಟೆಂಬರ್.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ಸಂತ ಮಾಸ ತೇದಿ. |
|---|---|---|---|---|---|---|
| 10 | ಗುರು * | ತದಿಗೆ | 2 50 | ರೇ | 5 - 6 | 25 |
| 11 | ಶುಕ್ರ † | ಚೌತಿ | 9 25 | ಅ | 7 -10 | 26 |
| 12 | ಶನಿವಾರ | ಪಂಚಮಿ | 0 55 | ಭರಣಿ | 57 4 | 27 |
| 13 | ರವಿವಾ | ಸಪ್ತಮಿ | 51 6 | ಕೃ | 6—8 | 28 |
| 14 | ಸೋಮ ‡ | ಅಷ್ಟಮಿ | 19 29 | ರೋ | 3 57 | 29 |
| 15 | ಮಂಗಳ ¶ | ನವಮಿ | 41 23 | ಮೃ | 1 10 | 30 |
| 16 | ಬುಧ | ದಶಮಿ | 38 36 | ಆ | 53 28 | 31 |

* ಸಂಕಷ್ಟಚತುರ್ಥಿ. † ಮಹಾಭರಣಿ. ‡ ಮಧ್ಯಾಷ್ಟಮಿ, ಶ್ರೀರವನವಮೀ ಶ್ರೀಕೃಷ್ಣಜಯಂತಿ. ¶ ಮಹಾವ್ಯತೀಪಾತ, ಅವಿಧವಾ

---

## ಪೇಟೆ ಧಾರಣೆ.

| ದಿನಸಿ. | ಮೈಸೂರು. | ಬೆಂಗಳೂರು |
|---|---|---|
| ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ | ರೂ. ೧೦ ೮—೦ | ೧೦—೦— |
| ಕೆಂಬೂತಿ ಅಕ್ಕಿ ಅವಲ್ .. | ೧೦-೪ ೦ | ೧೦—೧೨— |
| ,, ದಾಯಂ .. | ೯—೮—೦ | ೧೦—೮— |
| ಜಾಬೋಲ ಅಕ್ಕಿ .. | ೯—೪—೦ | ೧೧—೦— |
| ಸಣ್ಣಕ್ಕಿ ಅವಲ್ .. | ೧೨ ೮—೦ | ೧೨—೦— |
| ,, ದಾಯಂ .. | ೧೨.೦—೦ | ೧೦—೮— |
| ತೊಗರೀ ಬೇಳೆ ಪಲ್ಲಾ ೧ಕ್ಕೆ .. | ೧೩, ೦ ೧ | ೧೪—೪— |
| ,, ದಾಯಂ .. | ೧೨ ೮—೧ | ೧೩—೮— |
| ಕೈರ ರಾಗಿ ಪಲ್ಲಾ ೧ಕ್ಕೆ .. | ೩. ೧೪—೦ | ೩—೪— |
| ಕಾರ್ರಾಗಿ .. | ೩—೮- ೦ | ೩—೦— |
| ಜೋಳ .. | ೩—೧೦—೦ | ೪—೦— |
| ಹಲಸಂದೆ ಪಲ್ಲಾ ೧ಕ್ಕೆ .. | ೩—೧೨. ೦ | ೮—೪— |
| ಬಿಳೀ ಅವರೆ .. | ೩. ೦-೦ | ೩—೮— |
| ಹೆಸರು .. | ೮-೦—೦ | ೧೦—೦— |
| ಉದ್ದು .. | ೮ ೪ ೦ | ೯—೦— |
| ಕಡಲೆ .. | ೯ ೮—೦ | ೮—೪— |
| ಎಳ್ಳು .. | ೧೬ ೧೨ ೦ | ೮—೦— |
| ಹುರುಳಿ .. | ೪—೦ ೦ | ೪—೮— |
| ಹರಳು ೧೨೩ ಸೇರಿಗೆ .. | ೯—೧೨—೦ | ೫—೮— |
| ಸೀಗೆಕಾಯಿ ಮಣ ೧ಕ್ಕೆ .. | ೧—೮—೦ | ೧—೬— |
| ಮೆಣಸಿನಕಾಯಿ .. | ೨—೭—೦ | ೨—೦— |
| ,, ದಾಯಂ .. | ೨—೪ ೦ | ೧—೧೨— |
| ಬೆಲ್ಲ ದೊಡ್ಡ ಅಚ್ಚು .. | ೪—೮—೦ | ಮ ೧—೬— |
| ಒಳ್ಳೆಣ್ಣೆ ಮಣ ೧ಕ್ಕೆ .. | ೫—೦ ೦ | ೪—೮— |
| ಹರಳೆಣ್ಣೆ ,, .. | ೩—೧೨—೦ | ೨—೧೨— |
| ಕೊತ್ತುಂಬರಿ ಪಲ್ಲ ೧ಕ್ಕೆ .. | ೫—೮—೦ | ೪—೮— |
| ಉಪ್ಪು ,, .. | ೯—೦—೦ | ೮—೪— |
| ಹುಣಸೇ ಹಣ್ಣು .. | ೬-೧೪—೦ | ೬—೧೪— |
| ,, ಹಳೇದು .. | ೬—೧೦—೦ | ೬—೧೦— |
| ಹುಷ್ಟು .. | ೧೬-೧೨—೦ | ೧೦—೪— |
| ಸೀಮೆಯೆಂಣೆ ಪೆಟ್ಟಿ ೧ಕ್ಕೆ .. | ೪ ೯—೦ | ೪—೦— |
| ತೆಂಗಿನಕಾಯಿ ೧೦೦ಕ್ಕೆ .. | ೪—೪—೦ | ೩—೮— |
| ಅಡಿಕೆ(ಕಾಯಿ ಮಣ ೧ಕ್ಕೆ .. | ೬—೧೪ ೦ | ೬—೧೨— |
| ಅಂಬ್ಯಾಳಹಕಾಯಿ ಮಣ ೧ಕ್ಕೆ .. | ೬—೧೪—೦ | ೬—೮— |
| ಚಿನ್ನ (ಚೌಕ) ಕೆಂಪು .. | ೧೫—೪—೦ | ೧೫—೪— |
| ,, ,, ಹಸಿರು .. | ೧೫—೮—೦ | ೧೫—೦— |
| ,, ,, ಗಟ್ಟಿ ತೊಲ ೧ಕ್ಕೆ .. | ೨೬—೦—೦ | ೨೪—೮— |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ .. | ೭೨—೦—೦ | ೭೨— |

---

Printed and Published by the Rev. E. W. Thompson, the Proprietor and Manager, Wesleyan Mission Press, Mysore. 10/9/1903.

# ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು ——:೦—— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೨. ಮೈಸೂರು ೨೮.—ಸನ್ ೧೯೦೩ ನೇ ಇಸವಿ ಸೆಪ್ಟೆಂಬರ್ ತಾರೀಖು ೧೭ ನೇ ಗುರುವಾರ. ಸಂಚಿಕೆ ೧೩.

## ಕ್ಷೇತ್ರಗಣಿತ ಸಂಗ್ರಹ.

ಈ ಹೊಸ ಪುಸ್ತಕವನ್ನು ಮೈಸೂರು ಶಿವರಾಮಪೇಟೆ ಸ್ಕೂಲು ಹೆಡ್ಮಾಸ್ಟರು ಟಿ. ಎಂ. ರಾಮಸ್ವಾಮಯ್ಯನವರು ಬರೆದಿರುತ್ತಾರೆ. ಇದರಲ್ಲಿ ನೂರಾರು ಸಾವಿರ ಲೆಕ್ಕಗಳೂ ಮೈಸೂರು ಬೋರ್ಡು ಪರೀಕ್ಷೆಯ ಪ್ರಶ್ನಪತ್ರಿಕೆಗಳೂ ಉತ್ತರಗಳೊಡನೆ ಅಡಕವಾಗಿವೆ. ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆಯುವಂತೆ ಅಲ್ಪಕ್ರಯಕ್ಕೆ ಮಾರಲ್ಪಡುತ್ತದೆ. ಕ್ರಯ ೪ ಆಣೆ, [illegible]. ವಿಳಾಸ —

ಮ್ಯಾನೇಜರ್,

ಸಿ. ಎಲ್. ಎನ್. ಬುಕ್ ಡಿಪೋ, ಮೈಸೂರು.

## ಸ್ಟಾಂಡರ್ಡ್ ಲೈಫ್ ಅಷ್ಯೂರೆನ್ಸ್ ಕಂಪೆನಿ.

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಇಂಡಿಯಾ ದೇಶದಲ್ಲಿ [illegible] ಯಾವ ಜೀವ [illegible] ಭೀಮಾ [illegible] ಇದು ಬಹು ಕಾಲದ್ದಾಗಿಯೂ [illegible] ಇದೆ.

ಭೀಮಾ [illegible] (ಲೈಫ್ ಅಷ್ಯೂರೆನ್ಸ್ [illegible]) ಈ ಕಂಪೆನಿ [illegible] ಒಂದು [illegible] ಇತರ ಕಂಪೆನಿ [illegible] ಭೀಮಾ [illegible] ಕಂಪೆನಿಯ [illegible].

ಈ ಕಂಪೆನಿಯು ಭೀಮಾ [illegible] ಬಹು ಅನುಕೂಲ ವಾದುವು ಭೀಮಾದಾರರುಗಳಿಗೆ [illegible] ನಿಬಂಧನೆಗಳಿವೆ [illegible].

ಕ್ಲಿಷ್ಟವಾದ ವಯಸ್ಸು [illegible] ಆ ವಯಸ್ಸಿಗೆ ಮೊದಲೇ ಮೃತನಾದ ಪಕ್ಷದಲ್ಲಿ [illegible] ೨,೦೦೦ ರೂ [illegible] ಕಂಪೆನಿಯವರು [illegible] ಭೀಮಾದಾರರು ಕಂಪೆನಿಗೆ [illegible] ವಿವರಗಳ ಪಟ್ಟಿ ಕೆಳಗಿನಂತೆ ಇದೆ [illegible].

| ಈಗಿನ ವಯಸ್ಸು | ೫೫ ವಯಸ್ಸಿನವರೆಗೆ ಇದ್ದರೆ ಮೊದಲೇ ಸತ್ತರೆ ಆಗ್ಗಾಗಲಿ ೨,೦೦೦ ರೂ. ಪಡೆಯಬೇಕಾದರೆ ಕಂಪೆನಿಗೆ ಕೊಡತಕ್ಕದ್ದು | ೫೫ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೫,೦೦೦ ರೂ. ಯನ್ನು ಪಡೆಯಬೇಕಾದರೆ [illegible] ಕಂಪೆನಿಗೆ ಕೊಡುವದು. |
|---|---|---|
| ೨೦ | ರೂ. ೩—೧—೮ | ರೂ. ೩—೨—೦ |
| ೨೫ | ,, ೩—೧೫—೩ | ,, ೩—೧೪—೯ |
| ೩೦ | ,, ೯—೧—೮ | ,, ೮—೨—೦ |
| ೩೫ | ,, ೧೨—೧೪—೮ | ,, ೧೧—೧—೪ |
| ೪೦ | | ,, ೧೩—೪—೮ |

೨,೦೦೦ ರೂ. [illegible] ವಯಸ್ಸಿನಲ್ಲಿ [illegible] ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಇದುವರೆಗೆ [illegible] ಭೀಮಾ [illegible] ಇದೇ ವಿಳಾಸಕ್ಕೆ ಬರೆದು ಕಳುಹಿಸಬಹುದು.

ಎಂ. ಸೂರ್ಯನಾರಾಯಣಯ್ಯ,

ಕಮಿಷನ್ ಮತ್ತು ಜನರಲ್ ಏಜೆಂಟ್,

ಶಿವಮೊಗ್ಗೆ.

## ಸರಸ್ವತೀಕರ ಕಸ್ತೂರಿ ಮಾತ್ರೆಯು.



ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥವರಿಗೆ ಅತ್ಯಂತ ಉಪಯುಕ್ತವಾದದ್ದು. ಈ ಮಾತ್ರೆ ೧—೨ ತಾಂಬೂಲದ ಸಂಗಡ ಸೇವಿಸುವದರಿಂದ ಬಾಯಿಯ ಸುವಾಸನೆಯುಂಟಾಗಿ ಬಾಯಿಯ ದುರ್ಗಂಧ, [illegible], ಬಾಯಿಯ ಹುಣ್ಣು, [illegible], ವಾಯು, ಶೀತ, ಪಿತ್ತ, ಮಲಬದ್ಧ, ದಂತದೋಷ, [illegible], ಜ್ವರ, [illegible] ಇತ್ಯಾದಿ ಅನೇಕ ರೋಗಗಳನ್ನು ದೂರಮಾಡುವಂತಿರುವದು. ಹೆಂಗಸರ [illegible] ಅನೇಕ ಜಾಡ್ಯಗಳಿಗೆ [illegible] ಈ ಮಾತ್ರೆಯು ನಿಮ್ಮಲ್ಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸಮೀಪದಲ್ಲಿದ್ದಂತೆಯೇ. ೨೦೦ ಮಾತ್ರೆಗಳುಳ್ಳ ಶೀಸೆ ೧ಕ್ಕೆ ೫ ಆಣೆ, [illegible] ೨ ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವನ್ನು ನಮಗೆ ಬರೆಯಬೇಕೆಂದು [illegible].

ಸಿ. ಹಿ. ಅಂಡ್ ಕಂಪೆನಿ, ಬೆಂಗಳೂರು ಸಿಟಿ.

## ROBINSON'S PATENT BARLEY.

## ರಾಬಿನ್‌ಸನ್‌ಯವರ ಬಾರ್ಲಿ ಹಿಟ್ಟು.

ಸರ್ಕಾರಿನಲ್ಲಿ ರಿಜಿಷ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ [illegible] ತಯಾರಿಸಲ್ಪಟ್ಟಿದೆ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ [illegible] ಗಂಟೆ [illegible] ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಸೇರಿಸಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುವದು.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ [illegible] ರುಚಿಯಾದಂಥ ಮತ್ತು ತಾಪಶಾಂತಿಯನ್ನು ಕೊಡತಕ್ಕಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹಣ್ಣಿನ ರಸ ಸಕ್ಕರೆಯನ್ನೂ ಸೇರಿಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ [illegible] ವಸ್ತುವನ್ನು ಕೆಲವರು ಮೋಸದಿಂದ [illegible] ಖ್ಯಾತಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

## MELLIN'S FOOD.

ಮೆಲಿನ್ ಎಂಬವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶೀಘ್ರವಾಗಿ ಕೊಡುತ್ತದೆ.

೨. ಮೆಲ್ಲಿನ್‌ರು ಮಾಡಿರುವ ಆಹಾರದ [illegible] ಚೆನ್ನಾಗಿ ಬೆಳೆಯುವಂತೆ ಪ್ರೇರೇಪಿಸುತ್ತದೆ.

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ [illegible] ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣವಾಗಿ, ಜೀವನೋಪಯುಕ್ತ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸಂಪೂರ್ಣ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣ [illegible] ಕಾಲವಾದರೂ [illegible].

೭. ಮೆಲ್ಲಿನ್‌ರು ಮಾಡಿರುವ ಆಹಾರವು [illegible] ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಉಪಯೋಗಿಸಿದರೆ ತಾಯಿ ಹಾಲಿಗೆ ಸಮಾನವಾಗಿ [illegible] ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ [illegible] ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್‌ರು ಮಾಡಿರುವ ಆಹಾರವು [illegible] ಕಾಲದಲ್ಲಿಯೂ [illegible] ರೋಗಗಳಲ್ಲಿಯೂ [illegible] ತಪ್ಪಿಸುತ್ತದೆ.

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಉಪಯೋಗಕ್ಕೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ [illegible] ಸೇರಿರುವದಿಲ್ಲ. [illegible] ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ [illegible].

೧೪. ಮೆಲ್ಲಿನ್‌ರು ಮಾಡಿರುವ ಆಹಾರವು [illegible] ರೋಗಕಾಲದ [illegible].

೧೫. ಮೆಲ್ಲಿನ್‌ರು ಮಾಡಿರುವ ಆಹಾರವು [illegible] ಅತ್ಯಂತ ಫಲಕಾರಿಯಾಗಿರುತ್ತದೆ. [illegible] ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡಬೇಕೆಂದವರು ಕೆಳಗೆ ಕಂಡಿರುವ ನಮ್ಮ ಏಜೆಂಟರುಗಳಲ್ಲಿ [illegible] ಬರೆದು [illegible]:—

ಮದರಾಸ್:—ಮೆ॥ [illegible]
ಬೊಂಬಾಯಿ:—ಮೆ॥ [illegible] ಕಂಪೆನಿ.
ಕಲ್ಕತ್ತಾ:—ಮೆ॥ [illegible] ಕಂಪೆನಿ.
[illegible]:—ಮೆ॥ [illegible] ಕಂಪೆನಿ.
ಕರಾಚಿ:—ಮೆ॥ ಎಚ್. ಜೆ. [illegible] ಕಂಪೆನಿ.
[illegible]:—ಮೆ॥ [illegible] ಕಂಪೆನಿ
ರಂಗೂನ್—[illegible] ಕಂಪೆನಿ

# ಗರ್ಭಸಂಜೀವಿನಿ.

೧ ಶೀ. ೪ ಆ.; ವಿ. ಪಿ. ಚಾರ್ಜ್ ೩ ಆ.

ಕೆ. ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.

"ಪ್ರಸವರೋಗವಿನಾಶ."

ಹೆಂಗಸರೂ ಮಕ್ಕಳೂ ಕ್ಷೇಮದಿಂದಿರುವದಕ್ಕೆ ಬಹಳ ಅನುಕೂಲವಾದದ್ದು. ಬಾಲಕರು ಕೂಡ ಸುಲಭವಾಗಿ ಹಿಡಿದುಕೊಳ್ಳಬಹುದು. ಖಸನವುರಾಣಕ ಕಥೆಗಳೆಲ್ಲಾ ಇವರಲ್ಲಿ ಔ. ಉತ್ತಮವಾದ ಈ ಹೊಸ್ತ ಪುಸ್ತಕ ೧ ಕ್ಕೆ ವಿ. ಪಿ. ಮೂಲಕ ೦—೩—೦. ೧೨ ಪ್ರತಿಗಳನ್ನು ತರಿಸಿಕೊಂಡರೆ ೧ ಉಚಿತ. ಬೇಕಾದವರು ಮೈಸೂರು ದೊಡ್ಡ ಪೇಟೆ ಎಸ್. ಆರ್. ಕರಿಬಸವಶಾಸ್ತ್ರಿಗಳಿಗೆ ಬರೆದು ತರಿಸಿಕೊಳ್ಳಬೇಕು.

## A WONDERFUL REMEDY.

ಕುಳಕಡ್ಡಿ, ಎಲ್ಲಾ ತರಹಾ ಕಜ್ಜಿ ಮತ್ತು ಕುರುಪಣ್ಣ ಇತ್ಯಾದಿಗಳಿಗೆ ಶೀಘ್ರ ವಾಸಿಮಾಡುವ ಮುಲಾಮುಗಳು. ಕ್ರಯ ಡಬ್ಬಿ ೧ಕ್ಕೆ ೪ ಆಣೆ. ೧೦ ಕ್ಕೆ ೧ ಬಾಕ್ಸು, ೫೦—೧೦೦ ಕ್ಕೆ ೭೫. ಯಂತೆ ಕೊಡುತ್ತೇವೆ. ನಮಗೆ ಇನ್ನೂ ಏಜಂಟರು ಬೇಕಾಗಿದೆ. ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು. ಹೊಳೇನರಸೀಪುರದಲ್ಲಿರುವ ನಮ್ಮ ಏಜಂಟರು ಸಿಂಧಗಟ್ಟದ ರಾಮಸ್ವಾಮಯ್ಯನವರು ಮತ್ತು ಚನ್ನಪಟ್ಟಣದ ಶೆಟ್ರು, ಮೈಸೂರಲ್ಲಿರುವ ಮೈಸೂರು ಅ. ಮು. ಕೋರ್ಟು ಗುಮಾಸ್ತೆ ಎಸ್. ರಾಮಚಂದ್ರಶಾಸ್ತ್ರಿಗಳು.

ಎ. ಕೆ. ನರಸಿಂಹಯ್ಯ,

ತಿಪ್ಪ ನಾಜರ್, ಹೊಳೇನರಸೀಪುರ ಮುನಸೀಫ್ ಕೋರ್ಟು.



### ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

೧೮೯೫ ನೇ ಇಸವಿ ಮೈಸೂರು ಕಂಪೆನಿ ಆಕ್ಟಿಗೆ ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ಶ್ರೀಮನ್ ಮೈಸೂರು ಮಹಾರಾಜರವರ ಗೌರ್ನಮೆಂಟಿನವರಿಂದ ಗ್ಯಾರಂಟಿ ಮಾಡಲ್ಪಟ್ಟ ಸದರಿ ಕಂಪೆನಿಯ ಷೇರು ಒಂದಕ್ಕೆ ೫೦ ರೂಪಾಯಿ ಪ್ರಕಾರ ೨೦,೦೦೦ ಷೇರುಗಳಿಂದ ಆಗುವ ೧೦,೦೦,೦೦೦ ರೂಪಾಯಿ ಭಂಡವಾಳ. ಷೇರುಗಳು ತೆಗೆದುಕೊಳ್ಳುವವರು ಇದರ ಸೆಕ್ರೆಟರಿ ಮಾಡಿರುವವರಿಂದ ವಿಶೇಷ ತಪಸೀಲು ತಿಳಿದುಕೊಳ್ಳಬಹುದು.

ಬಿ. ವಿ. ರಾಮಸ್ವಾಮಿ ಶೆಟ್ರು, ಬಿ. ಎ.,

ಅಡ್ವೋಕೇಟ್ ಮತ್ತು ಜನರಲ್ ಏಜಂಟ್,

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ,

ನಗರ್ತಪೇಟೆ, ಬೆಂಗಳೂರು.


### ಇಸ್ತಿಹಾರ್.

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದಾ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ.—

ಸಿಟಿ ಮಜಕೂರಿನಲ್ಲಿ ಹೌಸು ಸರ್ವೀಸು ಪೈಪು ಯಾ ನೀರು ತೊಟ್ಟಿಗಾಗಿ ಅವರವರ ಮನೆಯಲ್ಲಿ ನಲ್ಲಿ ಇಡಿಸಿಕೊಂಡು ಇದಕ್ಕಾಗಿ ಸಾಲಿಯಾನಾ ಒಂದು ಇಂಚು ಟ್ಯೂಬಿಗೆ ೨೫ ರೂಪಾಯಿಯಂತೆಯೂ, ಅರ್ಧ ಇಂಚ್ ಟ್ಯೂಬಿಗೆ ೧೫ ರೂಪಾಯಿಯಂತೆಯೂ, ವಾಟರು ರೇಟು ಕೊಡುತ್ತಾ ಇರುವದು ಸರಿಯಷ್ಟೆ.

೨. ಅಂಥಾ ಮನೆಗಳ ಮಾಲೀಕರು ಅಥವಾ ಬಾಡಿಗೆದಾರ್ರು ಮನೆ ಖಾಲಿ ಮಾಡಿದ್ದರ ದೆಸೆಯಿಂದಲಾಗಲಿ ಅಥವಾ ಇನ್ಯಾವ ಇತರ ಕಾರಣದಿಂದಾಗಲಿ ಅವರವರ ಮನೆಗಳಲ್ಲಿ ವಾಟರು ಟ್ಯೂಬು ಬಂದುಮಾಡಿ ನೀರು ನಿಲ್ಲಿಸಿದ್ದ ಕಾಲಕ್ಕೆ ತಕ್ಕಷ್ಟು ವಾಪಸ್ಸಾಯಿತಂತೆ ವಾಟರು ರೇಟು ಕಮ್ತಿ ಹಾಕಿಸಿಕೊಡಬೇಕೆಂದು ಮ್ಯುನಿಸಿಪಾಲಿಟಿಗೆ ಅರ್ಜಿ ಕೊಟ್ಟರೆ ಅರ್ಜಿ ಕೊಟ್ಟ ತಾರೀಖು ಲಾಗಾಯಿತು ಪುನಃ ನೀರು ಬಿಡಿಸಿಕೊಡುವ ತಾರೀಖಿನ ವರಿಗೆ ಮ್ಯುನಿಸಿಪಲ್ ರೆಗ್ಯುಲೇಷನ್ ೬೭ನೆ ಸೆಕ್ಷನಂತೆ ಸಾಲು ಪೂರಾ ಅಥವಾ ಭಿನ್ನಾಂಶದ ಕ್ವಾರ್ಟರಿಗೆ ಕಂದಾಯ ಕಮ್ತಿ ಮಾಡಲ್ಪಡುತ್ತಿತ್ತು.

೩. ಈ ರೀತಿ ಕಮ್ತಿ ಮಾಡುವಿಕೆಯು ರೂಲ್ಸ್‌ಗೆ ವಿರೋಧವೆಂತಲೂ, ಮೈಸೂರು ಸಿಟಿ ವಾಟರು ರೇಟು ವಸೂಲಾತಿಯು ಸ್ಪೆಷಲ್ ಆರ್ಡರಿನಂತೆ ಸಾಲಿಯಾನಾ ವಸೂಲಾಗತಕ್ಕದ್ದೆಂತಲೂ, ಇತರ ಪರ ಯಾವದೊಂದು ರಿಯಾಯಿತಿಯನ್ನೂ ತೋರಿಸದೆ ಪೂರಾ ಸಾಲಿನ ರೇಟು ವಸೂಲ್ಮಾಡಬೇಕೆಂತಲೂ, ಸಹಾ ಗೌವರ್ನಮೆಂಟಿನಿಂದ 22—7—1903 ನೇ ಮಾರ್ಕಂ $\frac{316}{\text{ಎಲ್ ಎಫ್. 2—93}}$ ನೇ ನಂಬರು ಆರ್ಡರು ಕಾದರವಾಗಿರುವದ್ದರಿಂದ ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನೆಂದರೆ —

ಸಿಟಿಯಲ್ಲಿ ಆಯಾಯ ಮನೆಗಳಿಗೆ ವಾಟರು ಟ್ಯೂಬು ಇಡಿಸಿಕೊಂಡಿರತಕ್ಕ ಮನೆ ಮಾಲೀಕರು ಯಾ ಬಾಡಿಗೆದಾರರು ಭೋಗ್ಯದಾರರು ಅಥವಾ ಆಧಾರ ಮಾಡಿಕೊಂಡಿರತಕ್ಕವರು ಸರ್ಕಾರಿ ಸಾಲಿ ನಲ್ಲಿ ಪೂರಾ ನಲ್ಲಿಯಿಂದ ನೀರು ಉಪಯೋಗಿಸಲಿ, ಅಥವಾ ಉಪಯೋಗಿಸದೆ ಹೋಗಲಿ, ಮನೆಯು ಖಾಲಿಯಾಗಿರಲಿ, ಅಥವಾ ನಾಸವುಳ್ಳದ್ದಾಗಿರಲಿ, ಆಯಾಯ ಟ್ಯೂಬುಗಳಿಗೆ ಮೊಕರರೂದಾಗಿರುವ ದರದಂತೆ ಸಾಲಿಯಾನಾ ಪೂರಾ ಕಂದಾಯ ಕೊಡುತ್ತಾ ಬರಬೇಕು. ರಿಯಾಯಿತಿ ಏನೂ ದೊರೆಯಲಾರದು. ಟ್ಯೂಬನ್ನು ಖಾಯಮ್ಮಾಗಿ ವಜಾಮಾಡಿಸಲು ಅರ್ಜಿ ಕೊಟ್ಟು ವಜಾ ಮಾಡಿಸಿಕೊಂಡರೆ ಜಾಬಿತಾಗಿರತಕ್ಕ ಕಂದಾಯವನ್ನು ಖರ್ಚ ಕಮ್ತಿ ಮಾಡಿಸುತ್ತೆ. ತಿಳಿಯುವದು.

K. SRINIVASA RAO,
Vice President.


### ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.




ಈ ಔಷಧವು ಪ್ರತಿ ಮನೆಯವರಿಗೂ ಅಗಾಗ್ಗೆ ಬೇಕಾಗುತ್ತೇ ಇರುವದು. ಇದು ಎಲ್ಲಾ ವಿಷಯಗಳಿಗೂ ಬಹಳ ಅನುಕೂಲವಾದದ್ದು. ಶರೀರಕ್ಕೆ ಪೆಟ್ಟು ತಗಲಿ ಅಥವಾ ಉಳುಕಿಯಂತ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜುವದರ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ೧ಕ್ಕೆ ೧ ರೂ.; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು:—

ಡಬ್ಲ್ಯು. ಇ. ಸ್ಮಿತ್ ಅಂಡ್‌ಕಂಪೆನಿ,

ಮೌಂಟ್ ರೋಡ್,

ಮದರಾಸ್.



### ನಿಮ್ಮ ತಲೆಯಮೇಲಿರುವದೇನು? ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

ಒಳ್ಳೇ ಟೋಪಿಗಳು ಯಾವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳೇ.

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ.

ಈಗ ಇತರ ಕಡೆಗಳಲ್ಲಿ ತಯಾರಿ ಬಳಕೆ ಆಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಶುದ್ಧವಾಗಿ ಹಾಸೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ 'ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ.


### ನೋಟೀಸ್.

ಅರಕಲಗೂಡು ತಾಲ್ಲೂಕು ಕಸಬಾದಲ್ಲಿ ವಾಸವಾಗಿರುವ ಸಾತೇನಹಳ್ಳಿ ಕಾಳಾಚಾರಿ ಮಗ ಕಳನಾಚಾರಿಯಾದ ನಾನೂ ಇದರಿಂದಾ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ನಾಗಮಂಗಲದ ತಾಲ್ಲೂಕು ಕಸಬಾ ಹೋಬಳಿ ಸಾತೇನಹಳ್ಳಿಯಲ್ಲಿ ನಮ್ಮ ಪಿತ್ರಾರ್ಜಿತ ಅಂದರೆ ನನ್ನ ಅಜ್ಜನವರಾದ ಚಿಕ್ಕಾಚಾರಿಯವರು ಸಂಪಾದಿಸಿದನಂತರ ಸ್ವತ್ತುಗಳೂ ನಾಲ್ಕು ಜಮೀನು ಮನೆಗಳೂ ಸ್ವಲ್ಪ ತರೀ ಸ್ವಲ್ಪ ಖುಷ್ಕಿ ಜಮೀನೂ ಇದೆ. ಈ ಸ್ವತ್ತುಗಳೂ ನನ್ನ ಚಿಕ್ಕಪ್ಪನವರಾದ ಗಾಳೀ ಹೊನ್ನಾಚಾರಿಯವರು ನೋಡಿಕೊಳ್ಳುತ್ತಿದ್ದರು. ನನ್ನ ತಂದೆಯವರು ಈ ತಾಲ್ಲೂಕಿನಲ್ಲಿ ಗತಿಸಿ ಈಗ್ಗೆ ಸುಮಾರು ಇಪ್ಪತ್ತುಮೂರು ವರುಷವಾಗಿರಬಹುದು. ಸ್ವಲ್ಪ ಹೆಚ್ಚು ಕಡಿಮೆ ಅದೇ ಕಾಲದಲ್ಲಿಯೇ ನನ್ನ ದೊಡ್ಡ ತಂದೆಯವರ್ರು ಗತಿಸಿದ ಕಾಲಕ್ಕೆ ನಾನು ಚಿಕ್ಕವನು. ಆ ಕಾಲದಲ್ಲಿ 'ಸರ್ಕಾರದವರು ಮೇಲ್ಕಂಡ ನನ್ನ ದೊಡ್ಡ ತಂದೆಯವರಾದ ಹೊನ್ನಾಚಾರ್ರಿಗೆ ಮೂರು ಪತ್ನಿಯರು ಗತಿಸಿ ನಾಲ್ಕನೇ ಪತ್ನಿಯವರಾದ ಕಾಳಮ್ಮನ ಹೆಸರಿಗೂ ನನ್ನ ಹೆಸರಿಗೂ ಜಂಟಿ ಖಾತೇ ದಾಖಲ್ಮಾಡಿ ತಹಲ್ವಾರಿಗೂ ಸದರಿ ಕಾಳಮ್ಮನ ಅನುಭವದಲ್ಲಿದೆ. ಈಕೆಗೆ ಗಂಡು ಮಕ್ಕಳು ಹೆಣ್ಣು ಮಕ್ಕಳು ಸಹಾ ಇಲ್ಲಾ. ಈ ವಿಷಯ ಈವರೆಗೆ ಯಾವದೊಂದು ವಿಷಯಕ್ಕಾಗಿ ತಾಲ್ಲೂಕಿನಲ್ಲಿ ರಿಕಾರ್ಡು ನಡೆದಿದ್ದ ಇದರ ಕಾಪಿಯೂ ಸಹಾ ನಾನು ತೆಗದಿಟ್ಟಿದ್ದೇನೆ. ಈಗ ಮೇಲ್ಕಂಡ ಕಾಳಮ್ಮನು ಯಾವ ಯೋಚನೆಯಿಂದಲೋ ತಾಲ್ಲೂಕಿನಲ್ಲಿ ಜಂಟಿ ಮಾಡಿ ಇರುವ ಖಾತೆಯನ್ನು ವಜಾ ಮಾಡಿ ತನ್ನ ಹೆಸರಿಗೆ ನಾವು ತಬ್ದಿಲ್ ಮಾಡಿಸಬೇಕೆಂದು ಹೇಳಿಕೊಂಡದ್ದರ ಮೇಲೆ ಈ ತಾಲ್ಲೂಕಿಗೆ ನನ್ನ ತಿಳುವಳಿಕೆಗೋಸ್ಕರ ಯಾದೀ ಬಂದಿತ್ತು. ನಾನು ಹಾದರಾಗಿ—ಈಕೆ ಅಪುತ್ರವತಿ, ಜೀವಂತಳಾಗಿ ಇರುವವರಿಗೂ ಅನುಭವಿಸಿಕೊಂಡು ಬರಬಹುದು. ನಾವು ತಬ್ದಿಲ್ ಮಾಡಕೂಡದೆಂಬದಾಗಿ ಅಮಲ್ದಾರ್ರವರ ರೂಬ ರೂಬು ಬರಸಿ ಕೆಳಗೆ ರುಜು ಮಾಡಿ ಇರುತ್ತೇನೆ. ಆದ್ದರಿಂದ ಈ ಮೇಲ್ಕಂಡ ಕಾಳಮ್ಮನಿಂದ ಮೇಲ್ಕಂಡ ಸ್ವತ್ತುಗಳ ಮೂಲಕ ಯಾರಾದರೂ ಯಾವ ವಿಧವಾದ ಯಾವ ತರದಾದಲ್ಲಿಯಾದರೂ ಲೇವಾದೇವಿ ನಡಸಿದಲ್ಲಿ ಈ ಮೇಲ್ಕಂಡ ಸ್ಥಿರ ಸ್ವತ್ತುಗಳು ಈ ಬಾಗದಾರವು.

೩—೯—೧೯೦೩.  ಅ. ಕಳನಾಚಾರಿ ರುಜುವು.

### ನಮ್ಮ ಚಂದಾದಾರರಿಗೆ ನೋಟಿಸ್.

"ವೃತ್ತಾಂತ ಪತ್ರಿಕೆ" ಯ ಏಜಂಟರು ಚಂದಾ ವಸೂಲ್ಮಾಡಿಕೊಳ್ಳುವದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲ.

ಮ್ಯಾನೇಜರ್,

ಮೈಸೂರು.  "ವೃತ್ತಾಂತ ಪತ್ರಿಕೆ" ಆಫೀಸ್.

# ವೃತ್ತಾಂತ ಪತ್ರಿಕೆ.

———:o:———

ಸನ್ ೧೯೦೩ ನೇ ಇಸವಿ ಸೆಪ್ಟೆಂಬರ್ ತಾ ೧೭ ನೇ ಗುರುವಾರ.

### ಬಲ್ಗೇರಿಯಾ, ತುರ್ಕಿ ರಾಜ್ಯಗಳು.

ಮ್ಯಾಸಿಡೋನಿಯದಿಂದ ಕಳೆದವಾರ ಬಂದ ವರ್ತಮಾನವು ಸ್ವಲ್ಪ ಗಾಬರಿ ಹುಟ್ಟಿಸುವುದಾಗಿದೆ. ದಂಗೆ ಎದ್ದಿರುವವರು ರೈಲ್ವೆಗಳನ್ನೂ ತಂತೀ ಕಂಭಗಳನ್ನೂ ನಾಶಪಡಿಸಿರುವುದರಿಂದ ಅಲ್ಲಿನ ಯಥಾರ್ಥ ಸಂಗತಿಗಳು ತಿಳಿದು ಬರಲು ಅವಕಾಶ ಕಡಿಮೆ. ಆದರೆ ಸಾಲೋನಿಕದಲ್ಲಿರುವ ಪರರಾಜ್ಯಗಳ ರಾಯಭಾರಿಗಳು—ಕೆಲವು ಸ್ಥಳಗಳಲ್ಲಿ ದಂಗೆಯವರು ಕ್ರೈಸ್ತ ಪ್ರಜೆಗಳನ್ನೆಲ್ಲಾ ಸಂಪೂರ್ಣವಾಗಿ ಕೊಂದುಬಿಟ್ಟಿದಾರೆ; ಶತ್ರುಗಳ ಮಧ್ಯದಲ್ಲಿ ಬಂದು ಬಿದ್ದವರು ಕೂಡ ಸಂಹಾರ ಮಾಡಲ್ಪಟ್ಟಿರು ಎಂಬದಾಗಿ ತಿಳಿಸಿರುತ್ತಾರೆ. ಮ್ಯಾಸಿಡೋನಿಯದ ಪ್ರಜೆಗಳಲ್ಲಿ ಬಹುಮಂದಿ ಬಲ್ಗಾರ್ ಕ್ರೈಸ್ತರಿರುವುದರಿಂದ ಬಲ್ಗೇರಿಯದವರು ಸ್ವಭಾವಿಕವಾಗಿ ತುರ್ಕಿಯವರ ಮೇಲೆ ತುಂಬಾ ಆಗ್ರಹಯುಕ್ತರಾಗಿದಾರೆ. ಇದರಿಂದ ಬಲ್ಗೇರಿಯದವರಿಗೂ ತುರ್ಕಿಯವರಿಗೂ ಯುದ್ಧಪ್ರಾಪ್ತವಾಗದೆ ಇರಲಾರದೆಂದು ಕಾಣುತ್ತದೆ. ಬಲ್ಗೇರಿಯದವರು ಎರಡು ಡಿವಿಜನ್ ನಷ್ಟು ಸೈನ್ಯವನ್ನು ಸಿದ್ಧಮಾಡಿಕೊಂಡಿದ್ದಾರೆ. ಅವರ ಸೈನ್ಯವೆಲ್ಲಾ ೨,೩೦,೦೦೦ ಆಗಬಹುದು. ಇವರು ತುಂಬಾ ನಿಪುಣಸ್ಥರು, ಮಹಾ ಪರಾಕ್ರಮಿಗಳೂ ಎಂದು ಹೇಳುವರು.

### ಮ್ಯುನಿಸಿಪಲ್ ಕಮಿಷನರ ಚುನಾವಣೆ.

ರಾಜಧಾನಿಯ ಮ್ಯುನಿಸಿಪಲ್ ಬೋರ್ಡಿಗೆ ಆಯಾ ಮೊಹಲೆಯ ಪ್ರಜೆಗಳು ಮೆಂಬರುಗಳನ್ನು ಈ ವಾರದಿಂದ ಚುನಾಯಿಸಬೇಕೆಂದು ವಿಧಿಸಲ್ಪಟ್ಟಿದೆ. ಮೈಸೂರಿನಲ್ಲಿರುವ ಏಳು ಮೊಹಲೆಗಳ ಪೈಕಿ ನಜರ್ಬಾದು, ಮಂಡಿ, ಚಾಮರಾಜ ಎಂಬೀ ಮೂರು ಮೊಹಲೆಗಳಲ್ಲಿ ಮೆಂಬರಾಗಬೇಕೆಂದು ಒಬ್ಬೊಬ್ಬರೇ ಅರ್ಜಿ ಕೊಟ್ಟಿರುವುದರಿಂದ ಅವರಿಗಲ್ಲದೆ ಮತ್ಯಾರಿಗೂ ಆ ಪದವಿಯು ದೊರಕುವುದಿಲ್ಲ. ಉಳಿದ ನಾಲ್ಕು ಮೊಹಲೆಗಳಲ್ಲಿ ಹೆಚ್ಚು ಜನ ಅರ್ಜಿ ಕೊಟ್ಟಿರುವುದರಿಂದ ಪ್ರಜೆಗಳು ಚುನಾಯಿಸುವದರಲ್ಲಿ ಬುದ್ಧಿವಿವೇಕಗಳನ್ನು ಉಪಯೋಗಿಸಬಹುದಾಗಿದೆ. ಈಗ ಮೆಂಬರುಗಳಾಗಿರತಕ್ಕವರಲ್ಲಿ ಕೆಲವರು ಮ್ಯುನಿಸಿಪಲ್ ವಿಷಯಗಳನ್ನು ಚನ್ನಾಗಿ ಬಲ್ಲವರಲ್ಲವಾದ್ದರಿಂದ ಅವರನ್ನೇ ಮತ್ತೆ ಜನರು ಚುನಾಯಿಸುವದು ಸಹಜವಲ್ಲ. 'ಓಟುಗಳನ್ನು ಕೊಡಿ, ನಾನು ಒಳ್ಳೆ ಚನ್ನಾಗಿ ಬೋರ್ಡಿನಲ್ಲಿ ಹೋರಾಡುತ್ತೇನೆ' ಎಂದು ಜನರಿಗೆ ಸಲಾಮ್ ಹೇಳತಕ್ಕವರನ್ನಾಗಲಿ, ದೊಡ್ಡ ಮನುಷ್ಯರು ಬಂದು—'ನನ್ನ ಕಡೆಯವರಿಗೇ ಓಟು ಹಾಕಿ. ಇವರು ಬಹಳ ಬುದ್ಧಿವಂತರು' ಎಂದು ಶಿಫಾರಸು ಮಾಡತಕ್ಕವರನ್ನಾಗಲಿ ಜನರು ನಂಬಿ ಮೋಸಹೋಗಕೂಡದು. ನಿಜವಾಗಿಯೂ ಯಾವ ಮೆಂಬರು ಆ ಕೆಲಸಕ್ಕೆ ಯೋಗ್ಯತೆ, ಸಾವಕಾಶ, ವಿದ್ಯಾಸಾಮರ್ಥ್ಯ, ಧೈರ್ಯ, ಇವೇ ಮೊದಲಾದ ಗುಣಗಳನ್ನು ಪಡೆದಿರುವರೋ ಅವರು ಅಂಥವರನ್ನೇ ತಮ್ಮ ಮೊಹಲೆಗೆ ಕಮಿಷನರಾಗಿ ಚುನಾಯಿಸಿಕೊಳ್ಳಬೇಕು

ಮೆಂಬರುಗಳು ಮ್ಯುನಿಸಿಪಾಲಿಟಿಯವರ ಹಣಗಳನ್ನು ವಿನಿಯೋಗಿಸುವದರಲ್ಲೇ ಸಂತೋಷಪಡತಕ್ಕವರಾಗಿದ್ದಾರೆ. ಇಂಥವರಿಂದ ವರ್ತಕರುಗಳಿಗಾಗಲಿ, ಸರ್ಕಾರಿ ಕೆಲಸಗಳಿಗಾಗಲಿ ಯಾವ ಸಹಾಯವೂ ಆಗುವದಿಲ್ಲ. ಲಾಯರುಗಳು ಬಹು ಮಂದಿ ಈ ಸಲ ಮೆಂಬರುಗಳಾಗಬೇಕೆಂದು ಅಪೇಕ್ಷಿಸುತ್ತಿರುವರು. ಇವರು ಮೊಕದ್ದಮೆಗಳನ್ನು ನಡಿಸುವ ಕೆಲಸ ಮಾಡುವದರಲ್ಲಿ ಗಟ್ಟಿಗರು. ಪ್ರಜೆಗಳ ಸೌಕರ್ಯಕ್ಕೆ ಅನುಕೂಲವಾಗುವಂಥಾ ವಿಚಾರದಿಗೆ ಅವಕಾಶ ಕೊಡಲು ಇವರಿಗೆ ಸಮಯವೆಲ್ಲಿ ದೊರೆಯುವದೋ ನಾವು ಕಾಣೆವು. ಇದಕ್ಕೆ ಅವರಿಗೆ ಸಮಯವಿದ್ದರೆ ಅವರಿಂದ ಪ್ರಜೆಗಳಿಗೆ ತುಂಬಾ ಉಪಕಾರವಾದೀತೆಂಬುವದರಲ್ಲಿ ಅಡ್ಡಿಯಿಲ್ಲ. ಲಾಯರುಗಳಲ್ಲದೆ ಇರುವ ಉಮೇದುವಾರರಲ್ಲಿ ಒಬ್ಬಿಬ್ಬರು ಉದ್ಯೋಗಸ್ಥರು. ಇವರಿಗೆ ವಿದ್ಯಾದಿ ಸಾಮರ್ಥ್ಯಗಳಿದ್ದರೂ ಇವರಿಂದ ಮೆಂಬರ ಕೆಲಸವು ಸಾರ್ಥಕವಾಗಲಾರದೆಂದು ನಮಗೆ ತೋರುತ್ತದೆ. ಬೇರೋಜುಗಾರರಾದ ದೊಡ್ಡ ಮನುಷ್ಯರೇ ಇಂಥಾ ಕಾರ್ಯಕ್ಕೆ ಮುಖಂಡರಾಗಿ ನಿಲ್ಲಬೇಕು. ವಿದ್ಯಾವಂತರಾಗಿಯೂ ಪುಣ್ಯವಂತರಾಗಿಯೂ ಇರುವ ಬೇರೋಜುಗಾರರಾದ ದೊಡ್ಡ ಮನುಷ್ಯರು ಸುಖಜೀವನವನ್ನಪೇಕ್ಷಿಸುತ್ತಾರಲ್ಲದೆ, ಪ್ರಜೆಗಳಿಗೆ ಅನುಕೂಲಮಾಡಿಕೊಟ್ಟು ಅವರನ್ನು ಮುಂದಕ್ಕೆ ತರೋಣವೆಂಬ ಕುತೂಹಲವುಳ್ಳವರಾಗಿಲ್ಲ. ಈಗ ಉಮೇದುವಾರರಾಗಿ ನಿಂತಿರುವವರಲ್ಲಿ ಕೆಲವರು—ಏನಾದರೂ ಕೆಲಸಮಾಡಿ ತ್ಯಾಗವಾದರೂ ಪ್ರತಿಷ್ಠೆ ಸಂಪಾದಿಸಿಕೊಳ್ಳೋಣವೆನ್ನುವವರಾಗಿದ್ದಾರೆ. ಆದುದರಿಂದ ಪ್ರಜೆಗಳು ಮೆಂಬರ ಕೆಲಸದಲ್ಲಿ ಮಾಹಿತುದಾರರಾಗಿರತಕ್ಕವರನ್ನು ಚುನಾಯಿಸಬೇಕು; ಮತ್ತು ಹೊಸಬರಲ್ಲಿ ಯಾರನ್ನಾದರೂ ಚುನಾಯಿಸುವುದಾದರೆ ಯಥಾರ್ಥವಾಗಿಯೂ ಪ್ರಜಾಪಕ್ಷಪಾತಿಗಳಾಗಿಯೂ ಪರಹಿತಚಿಂತಕರಾಗಿಯೂ ಇರತಕ್ಕವರನ್ನೇ ಚುನಾಯಿಸತಕ್ಕದ್ದು. ಇನ್ನು ಮುಂದೆ ಪುರಾಭಿವೃದ್ಧಿಯ ಕಾರ್ಯವು ವಿಶೇಷವಾಗಿ ನಡೆಯಬೇಕಾಗಿರುವದರಿಂದ ಪ್ರಜೆಗಳು ತಮ್ಮ ಹಿತಚಿಂತಕರಾಗಿರತಕ್ಕ ದೊಡ್ಡ ಮನುಷ್ಯರನ್ನೇ ಮೆಂಬರಾಗಿ ಚುನಾಯಿಸಿಕೊಳ್ಳಬೇಕೆಂದು ಸೂಚಿಸುತ್ತೇವೆ. ಯಾಕೆಂದರೆ ಜನರಲ್ಲಿ ಪ್ರೀತಿ ಇಟ್ಟಿರತಕ್ಕ ದೊಡ್ಡ ಮನುಷ್ಯರು ಮೆಂಬರಾಗಿದ್ದರೆ ಪ್ರಜೆಗಳಿಗೆ ಅನುಕೂಲವಾಗುವುದಲ್ಲದೆ ಸರ್ಕಾರದವರು ಮಾಡಬೇಕೆಂದಿರುವ ಅಭಿವೃದ್ಧಿ ಕಾರ್ಯಗಳು ಜಾಗ್ರತೆಯಾಗಿಯೂ, ಸರಾಗವಾಗಿಯೂ, ಸರ್ವಸಮರ್ಪಕವಾಗಿಯೂ ನಡೆಯಲು ತುಂಬಾ ಸಹಾಯವಾಗುವದು.

## ಧರ್ಮಸಾಧನವು.

ಮನುಷ್ಯನು ಎಷ್ಟೇ ತನ್ನ ಶಕ್ತಿ ಸಾಮರ್ಥ್ಯಗಳನ್ನು ಖರ್ಚುಮಾಡಿದರೂ ದೇವರ ಆಶೀರ್ವಾದವಿಲ್ಲದೆ ಏನೂ ಸಾಧಿಸಲಾರನು. ಪ್ರತಿಯೊಬ್ಬನಲ್ಲಿರುವ ಆಸ್ತಿ ಸೊತ್ತುಗಳೆಲ್ಲಾ ಭಗವದನುಗ್ರಹ ಮಾತ್ರದಿಂದಲೇ ಸಂಪ್ರಾಪ್ತವಾದುವೆಂದು ಭಾವಿಸಬೇಕು. ಹಾಗಾದರೆ ಈ ಭಾಗದಲ್ಲಿ ಸರ್ವರೂ ತಮ್ಮ ಕೃತಜ್ಞತೆಯನ್ನು ತೋರಿಸುವದಕ್ಕಾಗಿ ತಮ್ಮ ಸಂಪಾದನೆಯಲ್ಲಿ ಸ್ವಲ್ಪ ಭಾಗವನ್ನಾದರೂ ದೇವರಿಗೆ ಅಥವ ದೇವರ ಹೆಸರಿನಲ್ಲಿ ಬಡವರಿಗೆ ಕೊಡಬೇಕಾದದ್ದು ವಿಹಿತವಾಗಿದೆ. ಕೆಲವರು ತಮ್ಮ ಆಸ್ತಿ ಸೊತ್ತುಗಳನ್ನು ತಾವು ತಿನ್ನದೆ ಮತ್ತೊಬ್ಬರಿಗೂ ಕೊಡದೆ ಮಾರ್ಜಾಲವು ಮಣ್ಣು ತೋಡಿ ತನ್ನ ಮಲವನ್ನು ಮುಚ್ಚುವಂತೆ ಭೂಮಿಯಲ್ಲಿ ಮುಚ್ಚಿಟ್ಟು ಸತ್ತುಹೋಗುತ್ತಾರೆ. ಕೆಲವರು ಎಷ್ಟು ಬಾಧೆಯಾದರೂ ಅದು ತಮಗಿರಲೆಂದು ಮತ್ತೊಬ್ಬರಿಗೆ ಎಳ್ಳಷ್ಟನ್ನಾದರೂ ಕೊಡುವದಿಲ್ಲ. ಇಂಥವರು ಕೃಪಣರೆಂದು ಧಾರಾಳವಾಗಿ ಹೇಳಬಹುದು. ಹೀಗಾದರೂ ಧರ್ಮಮಾಡುವವರು ಅನೇಕರಿದ್ದಾರೆ. ಇಂಥ ಗುಣವೇ ದೇವರ ಮುಂದೆ ಅತಿ ಶ್ಲಾಘ್ಯವಾದದ್ದು. ತಕ್ಕೊಳ್ಳುವದಕ್ಕಿಂತ ಕೊಡುವ ಅಭ್ಯಾಸವು ಸಕಲರಲ್ಲಿಯೂ ಇರುವದು ಉಚಿತವಾಗಿದೆ. ಸಂತೋಷವಾಗಿಯೂ ಧಾರಾಳವಾಗಿಯೂ ಕೊಡುವವನನ್ನು ದೇವರು ಮೆಚ್ಚುತ್ತಾನೆ.

ಕೊಟ್ಟರೂ ಒಳ್ಳೇ ಗುರಿಯಿಂದಲೇ ಕೊಡಬೇಕು. ಅನೇಗ ದಾನ. ಬಲವಂತಕ್ಕಾಗಲೀ ಅರ್ಥವುಳ್ಳ ನಿಂದೆಗಾಗಲೀ ಕೊಡುವದು ದಾನವಾಗಲಾರದು. ಕೆಲವರು ಮತ್ತೊಬ್ಬರಿಂದ ಹೊಗಳಿಕೆಯನ್ನು ಸಂಪಾದಿಸಿಕೊಳ್ಳುವದಕ್ಕಾಗಿ ದಾನ ಮಾಡುವದುಂಟು. ದುಷ್ಟರು ಅವರನ್ನು ಹೊಗಳಿದ ಮಾತ್ರಕ್ಕೆ ಅವರಿಗೆ ಕೀರ್ತಿಬರಲಾರದು. ಇದಕ್ಕೆ ಸರಿಯಾಗಿ ಜನರು ನೋಡಲಿ ಎಂದು ನಿಮ್ಮ ಧರ್ಮಕಾರ್ಯಗಳನ್ನು ಅವರ ಮುಂದೆ ಮಾಡಬೇಡಿರಿ. ನೋಡಿರಿ, ಹಾಗೆ ಮಾಡಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯಿಂದ ನಿಮಗೆ ಫಲ ದೊರೆಯದು. 'ಹಾಗಾದರೆ ನೀನು ಧರ್ಮಮಾಡುವಾಗ ನಿನ್ನ ಮುಂದೆ ತುತೂರಿ ಊದಿಸಬೇಡ. ಜನರಿಂದ ಹೊಗಳಿಸಿಕೊಳ್ಳಬೇಕೆಂದು ಕಪಟಿಗಳು ಸಭಾಮಂದಿರಗಳಲ್ಲಿಯೂ, ಬೀದಿಗಳಲ್ಲಿಯೂ ಹಾಗೆ ಮಾಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಆದರೆ ನೀನು ಧರ್ಮಮಾಡುವಾಗ ನಿನ್ನ ಬಲಗೈ ಮಾಡಿದ್ದು ನಿನ್ನ ಎಡಗೈಗೆ ತಿಳಿಯದಿರಲಿ. ಆಗ ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು' ಎಂದು ಶಾಸ್ತ್ರೋಕ್ತಿಯುಂಟು.

ಮತ್ತು ಗೊತ್ತುನೋಡಿ ದಾನಮಾಡಬೇಕು. ದೇಹಿ ಎಂದು ಕೈ ನೀಡುವವರಿಗೆಲ್ಲಾ ಕೊಡಬೇಕೆಂದು ಈ ದೇಶದಲ್ಲಿ ಅನೇಕರು ತಪ್ಪಾಗಿ ಭಾವಿಸಿಕೊಂಡಿದ್ದಾರೆ. ತಕ್ಕ ಯೋಚನೆ ಇಲ್ಲದೆ ಕೊಡುವದರಿಂದ ಅನೇಕ ಭಯಂಕರವಾದ ಕೇಡುಗಳುಂಟಾಗುತ್ತವೆಂದು ಸಂಶಯವಿಲ್ಲದೆ ತಿಳಿಯಬೇಕಾಗಿದೆ. ಅನೇಕರು ಕೈಕಾಲು ಮೊದಲಾದ ಅವಯವಗಳಲ್ಲಿ ಸರಿಯಾಗಿದ್ದೂ ಕೆಲಸ ಮಾಡುವದಕ್ಕೆ ಶಕ್ತರಾಗಿದ್ದೂ ಇದ್ದಾಗ್ಯೂ ಯಾಚಕಮಾಡಿ ಜೀವಿಸುವದನ್ನೇ ಒಂದು ವೃತ್ತಿಯಾಗಿ ಭಾವಿಸಿಕೊಂಡಿದ್ದಾರೆ. ಇದು ಬಹು ನಾಚಿಕೆಯಾಗಿದ್ದರೂ ಈ ದೇಶಸ್ಥರು ಇದನ್ನು ಗಂಭೀರವಾಗಿ ಎಣಿಸಿ ಭಿಕ್ಷೆ ನೀಡಿ ನೀಡಿ ಪ್ರೋತ್ಸಾಹಿಸುತ್ತ ಬರುವದರಿಂದ ಅನೇಕರು ತಮ್ಮ ಕೆಲಸ ಕಾರ್ಯಗಳನ್ನೆಲ್ಲಾ ಬಿಟ್ಟು ಯಾಚಕ ವೃತ್ತಿಗೆ ಸೇರಿಕೊಂಡು ದುರ್ವ್ಯಸನವಾಗಿ ಕಾಲ ಕಳೆಯುವದಕ್ಕೆ ಅಸ್ಪದವಾಗಿದೆ. ಇಂಥ ಸೋಮಾರಿಗಳು ಕಂಬಳಿ, ಜಾಗಟೆ, ಬಸವಾಸಿಗಳನ್ನು ಸಂಪಾದಿಸಿಕೊಂಡು, ಗುಂಪುಗುಂಪಾಗಿ ಊರೂರು ಸುತ್ತುತ್ತಾ ಇರುತ್ತಾರೆ. ಪ್ರಾಯಶಃ ಹಿಂದೂದೇಶದಲ್ಲಿ ಹಲವತ್ತು ಲಕ್ಷಕ್ಕೆ ಮೇಲ್ಪಟ್ಟ ಭಿಕ್ಷರು ಇರಬಹುದು. ಆದ್ದರಿಂದ ಹಿಂದೂದೇಶಕ್ಕೆ ಭಿಕ್ಷರ ದೇಶವೆಂದೂ ಧರ್ಮಕೊಡುವವರ ದೇಶವೆಂದೂ ಹೆಸರಾಗಿದೆ. 'ಕೆಲಸಮಾಡದವನು ಉಣ್ಣಬಾರದೆಂದು' ಭಗವಂತನ ಅಪ್ಪಣೆಯಾಗಿದೆ. ಇಂಥವರ ವಿಷಯ ಒಬ್ಬ ಮಹಾ ಜ್ಞಾನಿಯು—ಸೋಮಾರಿಯೇ 'ಇರುವೆಯ ಹತ್ತಿರ ಹೋಗಿ, ಅದರ ನಡತೆಗಳನ್ನು ನೋಡಿ ಜ್ಞಾನಿಯಾಗು. ಅದು ಸುಗ್ಗೀಕಾಲದಲ್ಲಿ ತನ್ನ ಆಹಾರವನ್ನು ಕೂಡಿಸುತ್ತದೆ. ಸೋಮಾರಿಯೇ, ನೀನು ಎಷ್ಟರವರೆಗೆ ಮಲಗುವಿ? ಯಾವಾಗ ನಿನ್ನ ನಿದ್ದೆ ತಿಳಿದು ಏಳುವಿ, ಎಂದು ಹೇಳುತ್ತಾನೆ. ಇಷ್ಟೊಂದು ಮಂದಿಯೂ ಯಾಚಕವೃತ್ತಿಯನ್ನು ಬಿಟ್ಟು ಕೆಲಸಕಾರ್ಯಗಳನ್ನು ಮಾಡುವದಾದರೆ ಈಗ ಇರುವದಕ್ಕಿಂತಲೂ, ದವಸ ಧಾನ್ಯಗಳು ಅಗ್ಗವಾಗುವದಲ್ಲದೆ ದೇಶವು ದಿನೇ ದಿನೇ ಅಭಿವೃದ್ಧಿಸ್ಥಿತಿಗೆ ಬರುವದು. ಇಲ್ಲದಿದ್ದರೆ ಹಿಂದೂದೇಶವು ಬಡತನ ಕ್ಷಾಮಾದಿಗಳಿಗೆ ಬೇಗನೆ ಒಳಪಡಬೇಕಾಗುವದು. ಅನೇಕರು ಯೋಚನೆ ಇಲ್ಲದೆ ಕೊಡುವದರಿಂದ ತಮ್ಮ ದೇಶಕ್ಕೆ ತಾವೇ ವಿಪತ್ತನ್ನು ತಂದುಕೊಳ್ಳುತ್ತಾರೆ. ಕೆಲಸವಿಲ್ಲದ ಸೋಮಾರಿಯು 'ಕೆಲಸವಿಲ್ಲದ ಕೋತಿ ವನವನ್ನೆಲ್ಲಾ ಕೆಡಿಸಿದಂತೆ' ದೇಶವನ್ನೆಲ್ಲಾ ಕೆಡಿಸುವನು. ಕೆಲಸವಿಲ್ಲದಿರುವದರಿಂದ ಮಹಾ ಭಯಂಕರವಾದ ದ್ರೋಹಗಳನ್ನು ಮಾಡುವದಕ್ಕೆ ಲೇಶವೂ ಅಡ್ಡಿ ಇರುವದಿಲ್ಲ. ಇಂಥವರಿಗೆ ಧರ್ಮ ಕೊಡುವದು ಭಗವಂತನ ಸನ್ನಿಧಿಯಲ್ಲಿ ಮಹಾ ದೋಷವಾಗಿದೆ.

ಆದರೆ ಕುರುಡರು ಕುಂಟರು ಮೊದಲಾದ ಅಂಗಹೀನರು ಕೆಲಸ ಮಾಡುವದಕ್ಕೆ ಅಶಕ್ತರಾಗಿರುವದರಿಂದ ಅಂಥವರಿಗೆ ಧರ್ಮ ಕೊಡುವದು ನ್ಯಾಯವಾಗಿದೆ. ದೇವರು ಅವರನ್ನು ನಿಷ್ಪ್ರಯೋಜನಕ್ಕಾಗಿ ಈ ಲೋಕದಲ್ಲಿ ಇಟ್ಟಿಲ್ಲ. ನಾನಾ ಉದ್ದೇಶಗಳಿಗಾಗಿ ಅವರನ್ನು ಈ ಭೂಲೋಕದಲ್ಲಿ ಇಟ್ಟಿದ್ದಾನೆ. ಅವರು ದುಃಖಿಯಾದಿದ್ದರೂ ಅವರ ಪಾಲನ್ನು ಬೆಳೆಯುವವರ ಕೈಯಲ್ಲಿ ಕೊಟ್ಟಿದ್ದಾನೆ. ಅವರು ತಮ್ಮ ಕೈಯಲ್ಲಿ ಇರುವ ಸಮಸ್ತಕ್ಕೂ ದೇವರಿಗೆ ಲೆಕ್ಕ ಒಪ್ಪಿಸಬೇಕಾಗಿರುವದರಿಂದ, ಅವರು ನ್ಯಾಯವಾಗಿ ಅದನ್ನು ಸದ್ವಿನಿಯೋಗ ಮಾಡಬೇಕು. ಈ ವಿಷಯದಲ್ಲಿ ಭಗವಂತನು ಅಧಿಕ ಸಂತೋಷಪಡುವನಲ್ಲದೆ ಆ ಧರ್ಮವು ತನಗೆ ಸೇರಿತೆಂದು ಹೇಳುವನು. ಈ ವಿಷಯದಲ್ಲಿ ಯೇಸುಕ್ರಿಸ್ತನು ಹೇಳಿದ ಮಾತೇನೆಂದರೆ, 'ನನ್ನ ತಂದೆಯಿಂದ ಆಶೀರ್ವಾದಹೊಂದಿದವರೇ, ಬನ್ನಿರಿ. ಲೋಕಾದಿಯಿಂದ, ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತಕ್ಕೊಳ್ಳಿರಿ. ಯಾಕಂದರೆ ನಾನು ಹಸಿದಿದ್ದೆನು; ನನಗೆ ಊಟಕ್ಕೆ ಕೊಟ್ಟಿರಿ. ನಾನು ಬಾಯಾರಿದ್ದೆನು; ಕುಡಿಯುವದಕ್ಕೆ ಕೊಟ್ಟಿರಿ. ಪರದೇಶಿಯಾಗಿದ್ದೆನು; ನನ್ನನ್ನು ಸೇರಿಸಿಕೊಂಡಿರಿ. ಬಟ್ಟೆ ಇಲ್ಲದವನಾಗಿದ್ದೆನು; ನನಗೆ ಉಡುವದಕ್ಕೆ ಕೊಟ್ಟಿರಿ. ರೋಗದಲ್ಲಿ ಬಿದ್ದಿದ್ದೆನು; ನನ್ನನ್ನು ಆರೈಕೆಮಾಡುವದಕ್ಕೆ ಬಂದಿರಿ. ಸೆರೆಮನೆಯಲ್ಲಿದ್ದೆನು; ನನ್ನನ್ನು ನೋಡುವದಕ್ಕೆ ಬಂದಿರಿ. ಯಾಕಂದರೆ ಈ ನನ್ನ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದು ನನಗೆ ಮಾಡಿದಂತಾಯಿತು' ಎಂದು ಹೇಳುತ್ತಾನೆ

ಎಲ್ಲಾ ಧರ್ಮಗಳಲ್ಲಿ ಉತ್ಕೃಷ್ಟವಾದ ಧರ್ಮವ್ಯಾವದೆಂದರೆ, ಒಬ್ಬೊಬ್ಬನು ತನ್ನ ಜೊತೆ ಸೃಷ್ಟಿಗಳನ್ನು ಸನ್ಮಾರ್ಗದಲ್ಲಿ ನಡಿಸಿ, ಮುಕ್ತಿಗೆ ಸೇರಿಸುವದಕ್ಕಾಗಿ ತನ್ನ ಶಕ್ತಿ ಸಾಮರ್ಥ್ಯಗಳನ್ನು ಖರ್ಚುಮಾಡುವದೇ ಆಗಿದೆ. ಸಕಲರೂ ಸತ್ಪುರುಷನಾಗಿ ಬಾಳುವದೇ ನಿಜವಾದ ಮತ. ಗುಣದಿಂದ ಮತದ ಶ್ರೇಷ್ಠತೆ ತೋರಬರುತ್ತದೆ. ಈ ಭೂಲೋಕದವರೆಲ್ಲರೂ ಒಂದೇ ಕುಟುಂಬದವರಂತಿದ್ದು ಒಬ್ಬನೇ ಧಣಿಯಾದ ಭಗವಂತನನ್ನು ಪೂಜಿಸಿ ಸಹಜವಾದ ಸುಖವನ್ನು ಪಡೆಯಬೇಕೆಂಬುವದೇ ಆತನ ಉದ್ದೇಶವಾಗಿದೆ. ಇದರ ಸಾರಾಂಶವೇನಂದರೆ, "ನಿನ್ನ ದೇವರಾದ ಯೆಹೋವನನ್ನು ನಿನ್ನ ಪೂರ್ಣ ಮನಸ್ಸಿನಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಮಾಡು. ಮತ್ತು ನಿನ್ನ ನೆರೆಯವನನ್ನು ನಿನ್ನ ಹಾಗೇ ಪ್ರೀತಿಮಾಡು." ಇದರಲ್ಲೇ ಸಕಲ ಶಾಸ್ತ್ರಗಳ ಸಾರವು ಅಡಕವಾಗಿದೆ.

## ಸ್ವದೇಶದ ವೃತ್ತಾಂತಗಳು

ಅಕ್ಟೋಬರ್ ೫ ನೇ ತಾರೀಖು ಸೋಮವಾರದಿಂದ ಈ ಸಲ ಪ್ರತಿನಿಧಿ ಸಭೆಯು ರಾಜಧಾನಿಯಲ್ಲಿ ನಡೆಯಬಹುದೆಂದು ವರ್ತಮಾನವಿದೆ.

❖❖❖❖

ಸಿಂಲಾ ಪಟ್ಟಣಕ್ಕೆ ವೈಸ್‌ರಾಯಿಯವರ ಭೇಟಿಗಾಗಿ ಪ್ರಯಾಣಮಾಡಿರುವ ನಮ್ಮ ರೆಸಿಡೆಂಟರು ನಾಳೆ ಸೋಮವಾರ ವಾಪಸು ಬರುವವರಾಗಿದ್ದಾರೆ.

❖❖❖❖

ಹೊಳೆನರಸೀಪುರದ ಹೊಳೆಯಲ್ಲಿ ಈಜುವದಕ್ಕೆ ಹೋದ ಇಬ್ಬರು ಮೃತಪಟ್ಟರೆಂದು [redacted] ಬರೆದಿರುವುದನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ.

❖❖❖❖

ನಮ್ಮ ರೆಸಿಡೆಂಟರಾದ ಸರ್ ಡೊನಾಲ್ಡ್ ರಾಬರ್ಟ್‌ಸನ್ ರವರಿಗೂ ಅವರ ಪತ್ನಿಯವರಿಗೂ ಮುಂದಿನ ತಿಂಗಳು ೧೦ ನೆ ತಾರೀಖಿಗೆ ಬೆಂಗಳೂರಿನಲ್ಲಿ ಭಾರೀ ಔತಣಮಾಡುವರು.

❖❖❖❖

ಮೈಸೂರು ಸಂಸ್ಥಾನದ ಕಂಟ್ರೋಲರ್ ಮೆ॥ ಇ. ಆರ್. ಸುಬ್ಬಯ್ಯರವರು ಅಪೇಕ್ಷೆ ಪಟ್ಟಂತೆ ಸರ್ಕಾರದವರು ಅವರಿಗೆ ೩ ತಿಂಗಳ ರಜಾ ಕೊಟ್ಟು ಅನಂತರ ಕೆಲಸ ಬಿಡಬಹುದೆಂದು ಹುಕುಂ ಮಾಡಿದಾರೆ.

ಕೆಲವು ದಿವಸಗಳ ಕೆಳಗೆ ಸಕಲೇಶಪುರ ಪ್ರಾಂತ್ಯದಲ್ಲಿ ೧೦೦ ಎಕರೆಯ ಒಂದು ಕಾಫಿತೋಟವು ೧೦ ಸಾವಿರ ರೂಪಾಯಿಗೆ ಹರಾಜು ಆಯಿತು. ಇದೇ ತೋಟ ಕಾಫಿ ಧಾರಣೆ ಜಾಸ್ತಿಯಾಗಿದ್ದಾಗ ೩೦ ಸಾವಿರ ರೂಪಾಯಿ ಬಾಳುತ್ತಿತ್ತು.

❖❖❖❖

ಬೆಂಗಳೂರು ಪ್ರಾಂತ್ಯದಲ್ಲಿ ಪ್ರಾರಂಭ ಮಾಡಿರುವ ಕೆರೆ, ಕಾಲುವೆ, ಬಾವಿ, ಸೇತುವೆ, ರಸ್ತೆ ಮೊದಲಾದ್ದರ ಕಾಮಗಾರಿಗಳನ್ನು ಜಾಗ್ರತೆಯಿಂದ ಪೂರೈಸಬೇಕೆಂದು ಹೇಳಿ ಸರ್ಕಾರದವರು ಅದಕ್ಕಾಗಿ ೪,೭೩೬ ರೂ. ಸ್ಯಾಂಕ್ಷನ್ ಮಾಡಿದಾರೆ.

❖❖❖❖

ಅರಮನೆಯ ಜವಾನಿ ನೌಕರರಾಗಿರುವ ಒಬ್ಬಿಬ್ಬರು ಗೌಡರಿಗೆ ಪ್ಲೇಗ್ ಕಾಯಿಲೆ ಪ್ರಾಪ್ತವಾದುದರಿಂದ ಮಹಾರಾಜರೂ, ಮಹಾರಾಣಿಯವರೂ, ರಾಜವರ್ಗದವರೂ ಅರಮನೆಯನ್ನು ಬಿಟ್ಟು, ಬೇರೆ ಬೇರೆ ಬಂಗಲೆಗಳಲ್ಲಿ ಇರುತ್ತಾರೆ. ದಯಮಾಡಿದರು.

❖❖❖❖

ಅಕ್ಟೋಬರು ೧ ರಿಂದ ಬೆಂಗಳೂರಿನಲ್ಲಿ ಸರ್ಕಾರಿ ಪೋಲೀಸ್ ಸ್ಕೂಲು ಪ್ರಾರಂಭವಾಗುವದು. ಅದರಲ್ಲಿ ಓದಿ ಉತ್ಕೃಷ್ಟವಾಗಿ ತೇರ್ಗಡೆ ಹೊಂದುವ ಮೊದಲನೇ ಇಬ್ಬರಿಗೆ ಇನ್ಸ್‌ಪೆಕ್ಟರ ಮತ್ತು ಹವಲ್ದಾರಿ ಕೆಲಸಗಳನ್ನು ಖಂಡಿತವಾಗಿ ಕೊಡುತ್ತೇವೆಂದು ಮೆ॥ ಮಾಡ್ಸ್ಲೇಯವರು ಪ್ರಕಟಿಸಿರುತ್ತಾರೆ.

❖❖❖❖

ಪ್ಲೇಗಿನ ಹಾವಳಿ ನಿಲ್ಲಿಸುವ ವಿಚಾರದ ಮಾಡುವದಕ್ಕೆ ಕೌನ್ಸಿಲರ್ ಮೆ॥ ಪಿ. ಶ್ರೀನಿವಾಸಯ್ಯಂಗಾರ್ಯ, ಸೀನಿಯರ್ ಸರ್ಜನ್ ಕರ್ನಲ್ ಸ್ಮಿತ್ ಯವರೂ ಕಳೆದ ಗುರುವಾರ ಹೊರಟರು. ಇವರು ಚಿತ್ರದುರ್ಗ, ಶಿವಮೊಗ್ಗ, ತುಮಕೂರು ಪ್ರಾಂತ್ಯಗಳಲ್ಲಿ ಸಂಚಾರ ಮಾಡಿಕೊಂಡು ಬರುವವರಾಗಿದ್ದಾರೆ.

❖❖❖❖

ಈ ದಿನ ಸಾಯಂಕಾಲ ೭ ಗಂಟೆಗೆ ಬೆಂಗಳೂರು ನಗರ್ತಪೇಟೆಯಲ್ಲಿರುವ ಮೆ॥ ಬಿ. ವಿ. ರಾಮಸ್ವಾಮಿಶೆಟ್ಟರ ಆಫೀಸಿನಲ್ಲಿ "ಬೆಂಗಳೂರು—ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪನಿಯ ಜನರಲ್ ಮೀಟಿಂಗ್" ನಡೆಸಲ್ಪಡುತ್ತದೆಂದು ಆ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಮೆ॥ ಎ. ಸುಬ್ಬರಾಯರು ತಿಳಿಸಿದಾರೆ.

❖❖❖❖

ಬೆಂಗಳೂರಿನಲ್ಲಿ ಇಂಗ್ಲಿಷ್ ಸ್ವಭಾವದ ಲೆಕ್ಕನೇಕಂಬ ಹುದ್ದೇದಾರನಾಗಿದ್ದ ಸಿ. ಬಿ. ಪ್ಲೇಟನು ತನ್ನ ಹಣ ಬ್ಯಾಂಕಿನಲ್ಲಿ ಇಲ್ಲದಿದ್ದರೂ ಚೆಕ್ಕು ಬರೆದುಕೊಟ್ಟು ಜನರಿಗೆ ಮೋಸಮಾಡಿದನೆಂದೂ, ಇವನನ್ನು ಮದರಾಸ್ ಹೈಕೋರ್ಟಿನವರು ದರ್ಯಾಫ್ತು ಮಾಡುತ್ತಿದ್ದಾರೆಂತಲೂ ತಿಳಿಸಿದ್ದೆವಷ್ಟೆ. ಜಡ್ಜಿಗಳು ಇವನಿಗೆ ಕಳೆದ ವಾರ ಆರು ತಿಂಗಳ ಕಠಿಣ ಸಜಾ ವಿಧಿಸಿದಾರೆ.

❖❖❖❖

ಬೆಂಗಳೂರು ತಾಲ್ಲೂಕು ಕೇತಮಾರನಹಳ್ಳಿಯ ಸನ್ಯಾಸಿ ಕಟ್ಟೆ ಶ್ರೀ ಆಂಜನೇಯಸ್ವಾಮಿ ವಿಗ್ರಹವನ್ನು ಬೆಂಗಳೂರು ಮಲ್ಲೇಶ್ವರದ ಶ್ರೀ ಗೋಪಾಲಕೃಷ್ಣಸ್ವಾಮಿ ದೇವಸ್ಥಾನದಲ್ಲಿ ತಂದಿಟ್ಟು ಪ್ರತಿಷ್ಠೆ ಮಾಡಿದರು. ಈ ವಿಗ್ರಹದ ಅರ್ಚನೆಗೆ ವರುಷಕ್ಕೆ ರೂ. ೧೦—೧೦—೦ ಯನ್ನು ಮುಜರಾಯಿ ಫಂಡಿನಿಂದ ಖಾವತಿ ಮಾಡತಕ್ಕದ್ದೆಂದು ಸರ್ಕಾರದವರು ಹುಕುಂ ಕೊಟ್ಟಿದಾರೆ.

❖❖❖❖

ಡಿಸೆಂಬರ್ ತಿಂಗಳ ಕಡೇ ವಾರ ಮದರಾಸಿನಲ್ಲಿ ಕಸಬುದಾರಿ ವಸ್ತುಗಳನ್ನು ಪ್ರದರ್ಶನ ಮಾಡಿ, ಶ್ರೇಷ್ಠವಾದವುಗಳಿಗೆ ಮೆಡಲ್‌ಗಳನ್ನು ಕೊಡುವಂತೆ ಏರ್ಪಾಡಾಗುತ್ತಿದೆ. ನಮ್ಮ ಮೈಸೂರು ಸಂಸ್ಥಾನದಿಂದಲೂ ಅನೇಕ ವಸ್ತುಗಳನ್ನು ಆ ಪ್ರದರ್ಶನಶಾಲೆಗೆ ಕಳುಹಿಸುವರು. ಈ ಕಾರ್ಯವನ್ನು ಸರ್ಕಾರದವರು ರಾಯಬಹದೂರ್ ಮೆ॥ ಸಿ. ಮಾದಯ್ಯನವರಿಗೂ, ಆ॥ ಕಮೀಷನರ್ ಮೆ॥ ವಿ ಆನಂದರಾಯರಿಗೂ ವಹಿಸಿರುತ್ತಾರೆ.

❖❖❖❖

ಶ್ರೀಮನ್ ಮಹಾರಾಜರವರು ಕೆಲವು ಮಂದಿ ಅರಸುಗಳಿಗೆ ಅವರ ಭೂಮಿಕಾಣಿಗಳ ಆಧಾರದ ಮೇಲೆ ೫,೩೦,೭೦೦ ರೂ. ಸಾಲ ಕೊಡುವಂತೆ ಸ್ಯಾಂಕ್ಷನ್ ಮಾಡಿದಾರೆ. ಮೆ॥ ದಳವಾಯಿ ದೇವರಾಜೇ ಅರಸಿನವರಿಗೆ ೨,೪೮,೪೦೦ ರೂ., ಮೆ॥ ಭಕ್ಷಿ ಬಸಪ್ಪಾಜೇ ಅರಸಿನವರಿಗೆ ೨ ಲಕ್ಷ ರೂ., ಮೆ॥ ಎಂ. ನಂಜರಾಜೇ ಅರಸಿನವರು ಮತ್ತು ಇವರ ಸಹೋದರರಿಗೆ ೫೦ ಸಾವಿರ ರೂ., ಈ ಪ್ರಕಾರ ಸಾಲ ಕೊಡುವರೆಂದು ಬೆಂಗಳೂರು ಪತ್ರಿಕೆಯು ತಿಳಿಸುತ್ತದೆ.

❖❖❖❖

ಅರ್ಬತ್ನಾಟ್ ಕಂಪನಿಯವರಿಗೂ ಗಣಪತಿ ಚೆಟ್ಟಿಯವರಿಗೂ ಬಹುಕಾಲದಿಂದ ಬಂದು ಸಿವಿಲ್ ವ್ಯಾಜ್ಯ ಹುಟ್ಟಿ ನಡೆಯುತ್ತಿದೆ. ಇದು ೫—೬ ಲಕ್ಷ ರೂಪಾಯಿನ ವ್ಯಾಜ್ಯ; ಕಳೆದ ೧೮೯೫ ರಲ್ಲಿ ಪ್ರಾರಂಭವಾಯಿತು. ೫—೬ ಸಲ ಈ ಮೊಕದ್ದಮೆ ಹೈಕೋರ್ಟಿಗೆ ಹೋಗಿತ್ತು. ಕೆಲವು ಕಾಲಕ್ಕೆ ಮುಂಚೆ ೩,೯೦,೦೦೦ ರೂಪಾಯಿಗೆ ಡಿಕ್ರಿ ಆಯಿತು. ಈಗ ಶಿವಮೊಗ್ಗದ ಡಿಸ್ಟ್ರಿಕ್ಟ್ ಜಡ್ಜರು ಈ ವ್ಯಾಜ್ಯದ ಲೆಕ್ಕಪತ್ರಗಳನ್ನು ತನಿಖೆ ಮಾಡುತ್ತಿದಾರೆ.

❖❖❖❖

ರಾಜಧಾನಿಯಲ್ಲಿ ನವರಾತ್ರಿ ಉತ್ಸವಗಳು ತುಂಬಾ ವಿಜೃಂಭಣೆಯಾಗಿ ನೆರವೇರುವವೆಂತಲೂ, ಪೂರ್ವದಂತೆ ಬಹು ಮಂದಿ ಬರುವರೆಂತಲೂ ನೆನಸಿ, ಪಾರ್ಸಿ ನಾಟಕದ ಕಂಪನಿಯವರು ಸಂಪಾದನೆಗಾಗಿ ಬಂದಿದಾರೆ. ಪ್ಲೇಗ್ ಉಪದ್ರವವು ದಿನೇ ದಿನೇ ಹೆಚ್ಚುತ್ತಿದೆ; ದಿನದಿನದ ಮರಣಸಂಖ್ಯೆಯು ಈಗ ೪೦ ಕ್ಕೆ ಹತ್ತಿತು. ಮಳೆಯಂತೂ ತಪ್ಪದೆ ಪ್ರತಿದಿನವೂ ಸುರಿಯುತ್ತಿದೆ ಇಂಥಾ ಸಾಂಕ್ರಾಮಿಕ ವ್ಯಾಧಿಯಿರುವಾಗ ಟೌನಹಾಲಿನಲ್ಲಿ ನಾಟಕ ಆಡುವದಕ್ಕೆ ಹೇಗೆ ಅವಕಾಶ ಕೊಡುತ್ತಾರೋ ತಿಳಿಯದು.

## ಗರ್ಭಸಂಜೀವಿನಿ.

3

೧ ರೂ. ೮ ಆ.; ವಿ. ಪಿ. ಚಾರ್ಜ್ ೩ ಆ.
ಕೆ. ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.

“ಬಸವರಾಜವಿಜಯ.”

2

ವಚನರೂಪವಾದದ್ದು. ಬಾಲಕರು ಕೂಡ ಸುಲಭವಾಗಿ ಓದಿ ತಿಳಿದುಕೊಳ್ಳಬಹುದು. ಬಸವಪುರಾಣದ ಕಥೆಗಳೆಲ್ಲಾ ಇದರಲ್ಲಿವೆ. ಕ್ರಯವಾದ ಈ ದೊಡ್ಡ ಪುಸ್ತಕ ೧ಕ್ಕೆ ವಿ. ಪಿ. ಮೂಲಕ ೨—೩—೦. ೧೨ ಪ್ರತಿಗಳನ್ನು ತರಿಸಿಕೊಂಡರೆ ೧ ಉಚಿತ. ಬೇಕಾದವರು ಮೈಸೂರು ದೊಡ್ಡ ಪೇಟೆ ಎಸ್. ಆರ್. ಕರಿಬಸವಶಾಸ್ತ್ರಿಗಳಿಗೆ ಬರೆದು ತರಿಸಿಕೊಳ್ಳಬೇಕು.



## A WONDERFUL REMEDY.

ಮಲಹಸ್ತಿ, ಎಲ್ಲಾ ತರಹ ಕಜ್ಜಿ ಮತ್ತು ಹುಣ್ಣುಗಳನ್ನು ಅತಿ ಜಾಗ್ರತೆಯಿಂದ ವಾಸಿಮಾಡುವ ಮುಲಾಮುಗಳು. ಕ್ರಯ ಡಬ್ಬಿ ೧ಕ್ಕೆ ೪ ಆಣೆ. ೧೦ ಕ್ಕೆ ೧ ಜಾಸ್ತಿ, ೫೦—೧೦೦ ಕ್ಕೆ ೭ಳ. ಯಂತೆ ಕೊಡುತ್ತೇವೆ. ನಮಗೆ ಇನ್ನೂ ಏಜೆಂಟರು ಬೇಕಾಗಿದೆ. ಈ ಕೆಳಗಣ ವಿಳಾಸದವರಿಗೆ ಬರೆದು ತರಿಸಿಕೊಳ್ಳಬಹುದು. ಹೊಳೇನರಸೀಪುರದಲ್ಲಿ ಮುಖ್ಯ ನಮ್ಮ ಏಜೆಂಟರು ಸಿಂಧಗಟ್ಟದ ರಾಮಸ್ವಾಮಯ್ಯನವರು ಮತ್ತು ಚನ್ನಮಲ್ಲಶೆಟ್ರು; ಮೈಸೂರಲ್ಲಿರುವ ಮೈಸೂರು ಅ. ಮು. ಕೋರ್ಟು ಗುಮಾಸ್ತೆ ಎಸ್. ರಾಮಚಂದ್ರಶಾಸ್ತ್ರಿಗಳು.

ಎ. ಕೆ. ನರಸಿಂಹಯ್ಯ,
ಶಿಪ್ಟಿ ನಾಜರ್, ಹೊಳೇನರಸೀಪುರ ಮುನ್ಸೀಫ್ ಕೋರ್ಟು.


### ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

೧೮೯೫ ನೆ ಇಸವಿ ಮೈಸೂರು ಕಂಪೆನಿ ಆಕ್ಟಿಗೆ ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ಶ್ರೀಮತ್ ಮೈಸೂರು ಮಹಾರಾಜರವರ ಗೌರ್ನಮೆಂಟಿನವರಿಂದ ಗ್ಯಾರಂಟಿ ಮಾಡಲ್ಪಟ್ಟ ಸದರಿ ಕಂಪೆನಿಯ ಷೇರು ಒಂದಕ್ಕೆ ೨೫ ರೂಪಾಯಿ ಪ್ರಕಾರ ೨೦,೦೦೦ ಷೇರುಗಳಿಂದ ಆಗುವ ೫,೦೦,೦೦೦ ರೂಪಾಯಿ ಭಂಡವಾಳ. ಷೇರುಗಳು ತೆಗದುಕೊಳ್ಳುವವರು ಇದರ ಸೆಕ್ರೆಟರಿ ಯಾದವರಿಂದ ವಿಶಿಷ್ಟ ತಪಸೀಲು ತಿಳಿದುಕೊಳ್ಳಬಹುದು.

ಬಿ. ವಿ. ರಾಮಸ್ವಾಮಿ ಶೆಟ್ರು, ಬಿ. ಎ.,
ಅಡ್ವೋಕೇಟ್ ಮತ್ತು ಜನರಲ್ ಏಜೆಂಟ್,
ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ,
ನಗರ್ತಪೇಟೆ, ಬೆಂಗಳೂರು.

### ಇಸ್ತಿಹಾರ್.

2

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ.—

ಸಿಟಿ ಮಹಲ್ಲೂರಿನಲ್ಲಿ ಹೌಸು ಸರ್ವೀಸು ಪೈಪು ಯಾ ನೀರು ನಳ್ಳಿಗಾಗಿ ಅವರವರ ಮನೆಯಲ್ಲಿ ನಳ್ಳಿ ಇಡಿಸಿಕೊಂಡು ಇದಕ್ಕಾಗಿ ಸಾಲಿಯಾನಾ ಒಂದು ಇಂಚು ಟ್ಯಾಪಿಗೆ ೨೫ ರೂಪಾಯಿಸಂತೆಯೂ, ಅರ್ಧ ಇಂಚ್ ಟ್ಯಾಪಿಗೆ ೧೫ ರೂಪಾಯಿಸಂತೆಯೂ, ವಾಟರು ರೇಟು ಕೊಡುತ್ತಾ ಇರುವದು ಸರಿಯಷ್ಟೆ.

೨. ಅಂಥಾ ಮನೆಗಳ ಮಾಲೀಕರು ಅಥವಾ ಬಾಡಿಗೆದಾರ್ರು ಮನೆ ಖಾಲಿ ಮಾಡಿದ್ದರ ದೆಸೆಯಿಂದಲಾಗಲಿ ಅಥವಾ ಇನ್ಯಾವ ಇತರ ಕಾರಣದಿಂದಾಗಲಿ ಅವರವರ ಮನೆಗಳಲ್ಲಿ ವಾಟರು ಟ್ಯಾಪು ಬಂದುಮಾಡಿ ನೀರು ನಿಲ್ಲಿಸಿದ್ದ ಕಾಲಕ್ಕೆ ಎಷ್ಟು ವಾದಾಷಾಯಿಸಂತೆ ವಾಟರು ರೇಟು ಕಮ್ಮಿ ಹಾಕಿಸಿಕೊಡಬೇಕೆಂದು ಮ್ಯುನಿಸಿಪಾಲಿಟಿಗೆ ಅರ್ಜಿ ಕೊಟ್ಟರೆ ಅರ್ಜಿ ಕೊಟ್ಟ ತಾರೀಖು ಲಾಗಾಯತು ಪುನಃ ನೀರು ಬಿಡಿಸಿಕೊಡುವ ತಾರೀಖಿನ ವರಿಗೆ ಮ್ಯುನಿಸಿಪಲ್ ರೆಗ್ಯುಲೇಷನ್ ೭೭ನೆ ಸೆಕ್ಷನಿನಂತೆ ಸಾಲು ಪೂರ್ತಾ ಅಥವಾ ಭಾಗದ ಕ್ವಾರ್ಟರ್ಲಿ ಕಂದಾಯ ಕಮ್ಮಿ ಮಾಡಲ್ಪಡುತ್ತಿತ್ತು.

೩. ಈ ರೀತಿ ಕಮ್ಮಿ ಹಾಕುವಿಕೆಯು ರೂಲ್ಸಿಗೆ ವಿರೋಧವೆಂತಲೂ, ಮೈಸೂರು ಸಿಟಿ ವಾಟರು ರೇಟು ವಸೂಲಾತಿಯು ಸ್ಪೆಷಲ್ ಆರ್ಡರಿನಂತೆ ಸಾಲಿಯಾನಾ ವಸೂಲಾಗತಕ್ಕದ್ದೆಂತಲೂ, ಇತರ ಪರಯಾವದೊಂದು ರಿಯಾಯಿತಿಯನ್ನೂ ತೋರಿಸದೆ ಪೂರಾ ಸಾಲಿನ ರೇಟು ವಸೂಲ್ಮಾಡಬೇಕೆಂತಲೂ, ಸಹಾ ಗೌವರ್ನಮೆಂಟಿನಿಂದ 22—7—1903 ನೇ ಮರ್ಸ್ಕಂ $\frac{316}{\text{ಎಸ್ ಎಳ್. 2—93}}$ ನೇ ನಂಬರು ಆರ್ಡರು ಸಾದರಾಗಿರುವಪ್ರಿಂದ ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನಂದರೆ —

ಸಿಟಿಯಲ್ಲಿ ಆಯಾಯ ಮನೆಗಳಿಗೆ ವಾಟರು ಟ್ಯಾಪು ಇಡಿಸಿಕೊಂಡಿರತಕ್ಕ ಮನೆ ಮಾಲೀಕರು ಯಾ ಬಾಡಿಗೆದಾರರು ಭೋಗ್ಯದಾರರು ಅಥವಾ ಆಧಾರ ಮಾಡಿಕೊಂಡಿರತಕ್ಕವರು ಸರ್ಕಾರಿ ಸಾಲಿನಲ್ಲಿ ಪೂರ್ತಾ ನಳ್ಳಿಯಿಂದ ನೀರು ಉಪಯೋಗಿಸಲಿ, ಅಥವಾ ಉಪಯೋಗಿಸದೆ ಹೋಗಲಿ, ಮನೆಯು ಖಾಲಿಯಾಗಿರಲಿ, ಅಥವಾ ನಾಶಶಿಲ್ಪವಾಗಿರಲಿ, ಆಯಾಯ ಟ್ಯಾಪುಗಳಿಗೆ ಮೇಕರೂರಾಗಿರುವ ದರದಂತೆ ಸಾಲೀಯಾನಾ ಪೂರಾ ಕಂದಾಯ ಕೊಡುತ್ತಾ ಬರಬೇಕು. ರಿಯಾಯಿತಿ ಏನೂ ದೊರೆಯಲಾರದು. ಟ್ಯಾಪನ್ನು ಖಾಯಮ್ಮಾಗಿ ಜಾಮಾಡಲು ಅರ್ಜಿ ಕೊಟ್ಟು ವಜಾ ಮಾಡಿಸಿಕೊಂಡರೆ ದಾಖಲಾಗತಕ್ಕ ಕಂದಾಯವನ್ನು ಮಾತ್ರ ಕಮ್ಮಿ ಹಾಕಿಸುತ್ತೆ, ತಿಳಿಯುವದು.

K. SRINIVASA RAO,
*Vice President.*


### ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

37




ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಗೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಏಟು ಬಿದ್ದರೂ ಆಯಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೇನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು ಕ್ರಯ ಬಾಟ್ಲಿ ೧ಕ್ಕೆ ೧ ರೂ.; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು.—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.



### ನಿಮ್ಮ ತಲೆಯಮೇಲಿರುವದೇನು? ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇಕೆ? ಹಾಸನದ ಟೋಪಿಗಳೇ.

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿ ಆಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ.


### ನೋಟೀಸ್.

ಅರಕಲಗೂಡು ತಾಲ್ಲೂಕು ಕಸಬಾದಲ್ಲಿ ವಾಸವಾಗಿರುವ ಸಾತೇನಹಳ್ಳಿ ಕಾಳಾಚಾರಿ ಮಗ ಕಳಸಾಚಾರಿಯಾದ ನಾನೂ ಇದರಿಂದಾ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ನಾಗಮಂಗಲದ ತಾಲ್ಲೂಕು ಕಸಬಾ ಹೋಬಳಿ ಸಾತೇನಹಳ್ಳಿಯಲ್ಲಿ ನಮ್ಮ ಪಿತ್ರಾರ್ಜಿತ ಅಂದರೆ ನಮ್ಮ ಅಜ್ಜನವರಾದ ಚಿಕ್ಕಾಚಾರಿಯವರು ಸಂಪಾದಿಸಿದನಂತರ ಸ್ವತ್ತುಗಳೂ ನಾಲ್ಕು ಐದು ಮನೆಗಳೂ ಸ್ವಲ್ಪ ತರೀ ಸ್ವಲ್ಪ ಖುಷ್ಕಿ ಜಮೀನೂ ಇದೆ ಈ ಸ್ವತ್ತುಗಳೂ ನಮ್ಮ ದೊಡ್ಡಪ್ಪನವರಾದ ಗಾಳೀ ಹೊನ್ನಾಚಾರಿಯವರು ನೋಡಿಕೊಳ್ಳುತ್ತಿದ್ದರು. ನಮ್ಮ ತಂದೆಯವರು ಈ ತಾಲ್ಲೂಕಿನಲ್ಲಿ ಗತಿಸಿ ಈಗ್ಯೆ ಸುಮಾರು ಇಪ್ಪತ್ತುಮೂರು ವರುಷವಾಗಿರಬಹುದು. ಸ್ವಲ್ಪ ಹೆಚ್ಚು ಕಡಮೆ ಅದೇ ಕಾಲದಲ್ಲಿಯೇ ನಮ್ಮ ದೊಡ್ಡ ತಂದೆಯವರ್ರು ಗತಿಸಿದ ಕಾಲಕ್ಕೆ ನಾನು ಚಿಕ್ಕವನು ಆ ಕಾಲದಲ್ಲಿ ಸರ್ಕಾರದವರು ಮೇಲ್ಕಂಡ ನಮ್ಮ ದೊಡ್ಡ ತಂದೆಯವರಾದ ಹೊನ್ನಾಚಾರ್ರಿಗೆ ಮೂರು ಪತ್ನಿಯರು ಗತಿಸಿ ನಾಲ್ಕನೇ ಪತ್ನಿಯವರಾದ ಕಾಳಂಮನ ಹೆಸರಿಗೂ ನನ್ನ ಹೆಸರಿಗೂ ಜಂಟಿ ಖಾತೇ ಮಾಡಲ್ಮಾಡಿ ತಹಲ್ವಾರಿಗೂ ಸದರಿ ಕಾಳಂಮನ ಅನುಭವದಲ್ಲಿದೆ. ಈಕೆಗೆ ಗಂಡು ಮತ್ತು ಹೆಣ್ಣು ಮಕ್ಕಳು ಸಹಾ ಇಲ್ಲಾ. ಈ ವಿಷಯ ಈತಿಗೆ ಯಾವದೊಂದು ವಿಷಯಕ್ಕಾಗಿ ತಾಲ್ಲೂಕಿನಲ್ಲಿ ರಿಕಾರ್ಡು ನಡದಿದೆ. ಇದರ ಕಾಪಿಯೂ ಸಹಾ ನಾನು ತೆಗದಿಟ್ಟಿದ್ದೇನೆ. ಈಗ ಮೇಲ್ಕಂಡ ಕಾಳಂಮನು ಯಾವ ಯೋಚನೆಯಿಂದಲೋ ತಾಲ್ಲೂಕಿನಲ್ಲಿ ಜಂಟಿ ಮಾಡಿ ಇರುವ ಖಾತೆಯನ್ನು ವಜಾ ಮಾಡಿ ತನ್ನ ಹೆಸರಿಗೆ ನಾಮಜಸ್ತಿಲ್ ಮಾಡಿಸಬೇಕೆಂದು ಹೇಳಿಕೊಂಡದ್ದರ ಮೇಲೆ ಈ ತಾಲ್ಲೂಕಿಗೆ ನನ್ನ ತಿಳುವಳಿಕೆಗೋಸ್ಕರ ಯಾದೀ ಬಂದಿತ್ತು. ನಾನು ಹಾಜರಾಗಿ—ಈಕೆ ಅಪುತ್ರವತಿ, ಜೀವಂತಳಾಗಿ ಇರುವವರಿಗೂ ಅನುಭವಿಸಿಕೊಂಡು ಬರಬಹುದು. ನಾನು ತಖ್ತಿಲ್ ಮಾಡಕೂಡದೆಂಬದಾಗಿ ಅಮಲ್ದಾರ್ರವರ ರೂಬರೂಬು ಬರೆಸಿ ಕೊಳಗೆ ಕೆ ಬು ಮಾಡಿ ಇರುತ್ತೇನೆ. ಆದ್ದರಿಂದ ಈ ಮೇಲ್ಕಂಡ ಕಾಳಂಮನಿಂದ ಮೇಲ್ಕಂಡ ಸ್ವತ್ತುಗಳ ಮೂಲಕ ಯಾರಾದರೂ ಯಾವ ವಿಧವಾದ ಯಾವ ತರಹದಲ್ಲಿಯಾದರೂ ಲೇವಾದೇವಿ ನಡಸಿದಲ್ಲಿ ಈ ಮೇಲ್ಕಂಡ ಸ್ಥಿರ ಸ್ವತ್ತುಗಳು ಈಡಾಗಲಾರವು.

೩—೯—೧೯೦೩. ಅ. ಕಳಸಾಚಾರಿ ರುಜುವು.

### ನಮ್ಮ ಚಂದಾದಾರರಿಗೆ ನೋಟಿಸ್.

“ವೃತ್ತಾಂತ ಪತ್ರಿಕೆ” ಯ ಏಜಂಟರು ಚಂದಾ ವಸೂಲ್ಮಾಡಿಕೊಳ್ಳತಕ್ಕಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡತಕ್ಕದ್ದಲ್ಲ. ಈ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲ.

ಮ್ಯಾನೇಜರ್,
ಮೈಸೂರು. “ವೃತ್ತಾಂತ ಪತ್ರಿಕೆ” ಆಫೀಸ್.

## ವೃತ್ತಾಂತ ಪತ್ರಿಕೆ.

—:೦:—

ಸನ್ ೧೯೦೩ ನೇ ಇಸವಿ ಸೆಪ್ಟೆಂಬರ್ ತಾ॥ ೧೭ ನೇ ಗುರುವಾರ.

### ಬಲ್ಗೇರಿಯಾ, ತುರ್ಕಿ ರಾಜ್ಯಗಳು.

ಮ್ಯಾಸಿಡೋನಿಯದಿಂದ ಕಳೆದವಾರ ಬಂದ ವರ್ತಮಾನವು ಸ್ವಲ್ಪ ಗಾಬರಿ ಹುಟ್ಟಿಸುವುದಾಗಿದೆ. ದಂಗೆ ಎದ್ದಿರುವವರು ರೈಲ್ವೆಗಳನ್ನೂ ತಂತೀ ಕಂಭಗಳನ್ನೂ ನಾಶಪಡಿಸಿರುವುದರಿಂದ ಅಲ್ಲಿನ ಯಥಾರ್ಥ ಸಂಗತಿಗಳು ತಿಳಿದುಬರಲು ಅವಕಾಶ ಕಡಿಮೆ. ಆದರೆ ಸಾಲೋನಿಕದಲ್ಲಿರುವ ಪರರಾಜ್ಯಗಳ ರಾಯಭಾರಿಗಳು—ಕೆಲವು ಸ್ಥಳಗಳಲ್ಲಿ ದಂಗೆಯವರು ಕ್ರೈಸ್ತ ಪ್ರಜೆಗಳನ್ನೆಲ್ಲಾ ಸಂಪೂರ್ಣವಾಗಿ ಕೊಂದುಬಿಟ್ಟಿವಾರೆ; ಶತ್ರುಗಳ ಮಧ್ಯದಲ್ಲಿ ಬಂದು ಸಿಕ್ಕಿದ್ದವರು ಕೂಡ ಸಂಹಾರ ಮಾಡಲ್ಪಟ್ಟಿರು ಎಂಬದಾಗಿ ತಿಳಿಸಿರುತ್ತಾರೆ. ಮ್ಯಾಸಿಡೋನಿಯದ ಪ್ರಜೆಗಳಲ್ಲಿ ಬಹುಮಂದಿ ಬಲ್ಗಾರ್ ಕ್ರೈಸ್ತರಿರುವುದರಿಂದ ಬಲ್ಗೇರಿಯದವರು ಸ್ವಭಾವಿಕವಾಗಿ ತುರ್ಕಿಯವರ ಮೇಲೆ ತುಂಬಾ ಆಗ್ರಹಯುಕ್ತರಾಗಿದಾರೆ. ಇದರಿಂದ ಬಲ್ಗೇರಿಯದವರಿಗೂ ತುರ್ಕಿಯವರಿಗೂ ಯುದ್ಧಪ್ರಾಪ್ತವಾಗದೆ ಇರಬಾರದು ಕಾಣುವುದು. ಬಲ್ಗೇರಿಯದವರು ಎರಡು ಡಿವಿಜನ್ ನಷ್ಟು ಸೈನ್ಯವನ್ನು ಸಿದ್ಧಮಾಡಿಕೊಂಡಿದ್ದಾರೆ. ಅವರ ಸೈನ್ಯವೆಲ್ಲಾ ೨,೨೦,೦೦೦ ಆಗಬಹುದು. ಇವರು ದೇಶಾಭಿಮಾನಸ್ಥರು, ಮಹಾ ಪರಾಕ್ರಮಿಗಳೂ ಎಂದು ಹೇಳುವರು.

### ಮ್ಯುನಿಸಿಪಲ್ ಕಮಿಷನರ್‌ರ ಚುನಾವಣೆ.

ರಾಜಧಾನಿಯ ಮ್ಯುನಿಸಿಪಲ್ ಬೋರ್ಡಿಗೆ ಆಯಾ ಮೊಹಲ್ಲೆಯ ಪ್ರಜೆಗಳು ಮೆಂಬರುಗಳನ್ನು ಈ ವಾರದಿಂದ ಚುನಾಯಿಸಬೇಕೆಂದು ವಿಧಿಸಲ್ಪಟ್ಟಿದೆ. ಮೈಸೂರಿನಲ್ಲಿರುವ ಏಳು ಮೊಹಲ್ಲೆಗಳ ಪೈಕಿ ನಜರ್ಬಾದು, ಮಂಡಿ, ಚಾಮರಾಜ ಎಂಬೀ ಮೂರು ಮೊಹಲ್ಲೆಗಳಲ್ಲಿ ಮೆಂಬರಾಗಬೇಕೆಂದು ಒಬ್ಬೊಬ್ಬರೇ ಅರ್ಜಿ ಕೊಟ್ಟಿರುವುದರಿಂದ ಅವರಿಗಲ್ಲದೆ ಮತ್ಯಾರಿಗೂ ಆ ಪದವಿಯು ದೊರಕುವುದಿಲ್ಲ. ಉಳಿದ ನಾಲ್ಕು ಮೊಹಲ್ಲೆಗಳಲ್ಲಿ ಹೆಚ್ಚು ಮಂದಿ ಅರ್ಜಿ ಕೊಟ್ಟಿರುವುದರಿಂದ ಪ್ರಜೆಗಳು ಚುನಾಯಿಸುವುದರಲ್ಲಿ ಬುದ್ಧಿ ವಿವೇಕಗಳನ್ನು ಉಪಯೋಗಿಸಬಹುದಾಗಿದೆ. ಈಗ ಮೆಂಬರುಗಳಾಗಿರತಕ್ಕವರಲ್ಲಿ ಕೆಲವರು ಮ್ಯುನಿಸಿಪಲ್ ವಿಷಯಗಳನ್ನು ಚನ್ನಾಗಿ ಬಲ್ಲವರಲ್ಲವಾದ್ದರಿಂದ ಅವರನ್ನೇ ಮತ್ತೆ ಜನರು ಚುನಾಯಿಸುವದು ಸಹಜವಲ್ಲ. ‘ಓಟುಗಳನ್ನು ಕೊಡಿ, ನಾನು ನಿಮಗೋಸ್ಕರ ಬೋರ್ಡಿನಲ್ಲಿ ಹೋರಾಡುತ್ತೇನೆ’ ಎಂದು ಜನರಿಗೆ ಧರಣಿ ಹೇಳತಕ್ಕವರನ್ನಾಗಲಿ, ದೊಡ್ಡ ಮನುಷ್ಯರು ಬಂದು—‘ನೀವು ನನಗೇ ಓಟು ಹಾಕಿ ಇವರು ಬಹಳ ಬುದ್ಧಿವಂತರು’ ಎಂದು ಶಿಫಾರಸು ಮಾಡತಕ್ಕವರನ್ನಾಗಲಿ ಜನರು ನಂಬಿ ಮೋಸಹೋಗಬಾರದು. ನಿಜವಾಗಿಯೂ ಯಾವ ಮೆಂಬರು ಆ ಕೆಲಸಕ್ಕೆ ಯೋಗ್ಯತೆ, ಸಾಮರ್ಥ್ಯ, ವಿದ್ಯಾಸಾಮರ್ಥ್ಯ, ಬುದ್ಧಿ, ಇವೇ ಮೊದಲಾದ ಗುಣಗಳನ್ನು ಪಡೆದಿರುವರೋ ಜನರು ಅಂಥವರನ್ನೇ ತಮ್ಮ ಮೊಹಲ್ಲೆಗೆ ಕಮಿಷನರಾಗಿ ಚುನಾಯಿಸಿಕೊಳ್ಳಬೇಕು

[illegible] ಮಂಬರುಗಳು ವ್ಯಾಸಂಗಮಾಡುತ್ತಿರುವವರ ಉತ್ಸಾಹವನ್ನು ಎ[illegible]ಮಾಡುವದರಲ್ಲೇ ಸಂತೋಷಪಡತಕ್ಕವರಾಗಿದಾರೆ. ಇಂಥವರಿಂ[illegible] ಪ್ರಜೆಗಳಿಗಾಗಲಿ, ಸರ್ಕಾರಿ ಕೆಲಸಗಳಿಗಾಗಲಿ ಯಾವ ಸಹಾಯ[illegible] ಆಗುತ್ತಿಲ್ಲ. ಲಾಯರುಗಳು ಬಹು ಮಂದಿ ಈ ಸಲ ಮೆಂಬ[illegible] ಆಗಬೇಕೆಂದು ಅಪೇಕ್ಷೆಪಟ್ಟಿರುವರು. ಇವರು ಮೊಕದ್ದಮೆಗಳ[illegible] ವಾದಿಸುವುದರಲ್ಲಿ ಗಟ್ಟಿಗರು. ಪ್ರಜೆಗಳ ಸೌಕರ್ಯ [illegible] ಅನುಕೂಲವಾಗುವಂಥಾ ವಿಚಾರದಿಗೆ ಅವಕಾಶ ಕೊಡಲು ಇ[illegible] ಸಮಯವೆಲ್ಲಿದೆಯೋ ನಾವು ಕಾಣೆವು. ಇದಕ್ಕೆ ಅವರಿಗೆ [illegible]ವಿದ್ದರೆ ಅವರಿಂದ ಪ್ರಜೆಗಳಿಗೆ ತುಂಬಾ ಉಪಕಾರವಾದೀ[illegible]ವಕರಲ್ಲಿ ಅಡ್ಡಿಯಿಲ್ಲ. ಲಾಯರುಗಳಲ್ಲದೆ ಇರುವ ಉಮೇ[illegible]ವಾರರಲ್ಲಿ ಒಬ್ಬಿಬ್ಬರು ಉದ್ಯೋಗಸ್ಥರು. ಇವರಿಗೆ ವಿದ್ಯಾದಿ [illegible]ಗಳಿದ್ದರೂ ಇವರಿಂದ ಮೆಂಬರ ಕೆಲಸವು ಸಾರ್ಥಕವಾಗ[illegible]ದೆಂದು ನಮಗೆ ತೋರುತ್ತದೆ. ಬೇರೋಜುಗಾರರಾದ ದೊ[illegible] ಮನುಷ್ಯರೇ ಇಂಥಾ ಕಾರ್ಯಕ್ಕೆ ಮುಖಂಡರಾಗಿ ನಿಲ್ಲಬೇ[illegible]. ವಿದ್ಯಾವಂತರಾಗಿಯೂ ಪುಣ್ಯವಂತರಾಗಿಯೂ ಇರುವ ಬೇ[illegible]ಜುಗಾರರಾದ ದೊಡ್ಡ ಮನುಷ್ಯರು ಸುಖಜೀವನವನ್ನಪೇಕ್ಷಿ[illegible]ತ್ತಾರಲ್ಲದೆ, ಪ್ರಜೆಗಳಿಗೆ ಅನುಕೂಲಮಾಡಿಕೊಟ್ಟು ಅವರನ್ನು ಮುಂದಕ್ಕೆ ತರಬೇಕೆಂಬ ಕುತೂಹಲವುಳ್ಳವರಾಗಿಲ್ಲ. ಈಗ ಉಮೇದುವಾರರಾಗಿ ನಿಂತಿರುವವರಲ್ಲಿ ಕೆಲವರು—ಏನಾದರೂ [illegible]ಪ್ಪಮಟ್ಟಿಗೆ ತ್ಯಾಗಮಾಡಿಯೂ, ಪ್ರತಿಷ್ಠೆ ಸಂಪಾದಿಸಿಕೊಳ್ಳಬೇಕೆಂಬುವವರಾಗಿದಾರೆ. ಆದುದರಿಂದ ಪ್ರಜೆಗಳು ಮೆಂಬರ ಕೆಲಸದ [illegible] ಮಹತ್ತುದಾರರಾಗಿರತಕ್ಕವರನ್ನು ಚುನಾಯಿಸಬೇಕು; ಮ[illegible] ಹೊಸಬರಲ್ಲಿ ಯಾರನ್ನಾದರೂ ಚುನಾಯಿಸುವುದಾದರೆ ಯಥಾ[illegible]ರ್ಥವಾಗಿಯೂ ಪ್ರಜಾಪಕ್ಷಪಾತಿಗಳಾಗಿಯೂ ಪರಹಿತಚಿಂತಕರಾ[illegible]ಗಿಯೂ ಇರತಕ್ಕವರನ್ನೇ ಚುನಾಯಿಸತಕ್ಕದ್ದು. ಇನ್ನು ಮುಂ[illegible] ಅಭಿವೃದ್ಧಿಯ ಕಾರ್ಯವು ವಿಶೇಷವಾಗಿ ನಡೆಯಬೇಕಾಗಿರು[illegible]ದರಿಂದ ಪ್ರಜೆಗಳು ತಮ್ಮ ಹಿತಚಿಂತಕರಾಗಿರತಕ್ಕ ದೊಡ್ಡ ಮ[illegible]ಷ್ಯರನ್ನೇ ಮೆಂಬರಾಗಿ ಚುನಾಯಿಸಿಕೊಳ್ಳಬೇಕೆಂದು ಸೂಚಿ[illegible]ಸುತ್ತೇವೆ. ಯಾಕೆಂದರೆ ದೇಶದಲ್ಲಿ ಪ್ರೀತಿ ಇಟ್ಟಿರತಕ್ಕ ದೊಡ್ಡ ಮನುಷ್ಯರು ಮೆಂಬರಾಗಿದ್ದರೆ ಪ್ರಜೆಗಳಿಗೆ ಅನುಕೂಲವಾಗುವುದ[illegible]ಲ್ಲದೆ ಸರ್ಕಾರದವರು ಮಾಡಬೇಕೆಂದಿರುವ ಅಭಿವೃದ್ಧಿ ಕಾರ್ಯಗ[illegible] ಜಾಗ್ರತೆಯಾಗಿಯೂ, ಸರಾಗವಾಗಿಯೂ, ಸರ್ವಸಮ್ಮತವಾಗಿಯೂ ನಡೆಯಲು ತುಂಬಾ ಸಹಾಯವಾಗುವುದು.

---

ಧರ್ಮಪ್ರಮಾಣ.

ಮನುಷ್ಯನು ಎಷ್ಟೇ ತನ್ನ ಶಕ್ತಿ ಸಾಮರ್ಥ್ಯಗಳನ್ನು ಉಪಯೋಗ ಮಾಡಿದರೂ ದೇವರ ಆಶೀರ್ವಾದವಿಲ್ಲದೆ ಏನೂ ಸಂಪಾದಿಸಲಾರನು. ಪ್ರತಿಯೊಬ್ಬನಲ್ಲಿರುವ ಆಸ್ತಿ ಸೊತ್ತುಗಳೆಲ್ಲಾ ಭಗವದನುಗ್ರಹ ಮಾತ್ರದಿಂದಲೇ ಸಂಪಾದಿಸಲ್ಪಟ್ಟವೆಂದು ಭಾವಿಸಬೇಕು. ಹಾಗಾದರೆ ಈ ಭಾಗದಲ್ಲಿ ಸರ್ವರೂ ತಮ್ಮ ಕೃತಜ್ಞತೆಯನ್ನು ತೋರಿಸುವದಕ್ಕಾಗಿ ತಮ್ಮ ಸಂಪಾದನೆಯಲ್ಲಿ ಸ್ವಲ್ಪ ಭಾಗವನ್ನಾದರೂ ದೇವರಿಗೆ ಅ[illegible] ದೇವರ ಹೆಸರಿನಲ್ಲಿ ಬಡವರಿಗೆ ಕೊಡಬೇಕಾದದ್ದು ವಿಹಿತ[illegible]ಸರಿ. ಕೆಲವರು ತಮ್ಮ ಆಸ್ತಿ ಸೊತ್ತುಗಳನ್ನು ತಾವು ವಿಸ್ಮರಿಸ[illegible]ತ್ತಿದ್ದರಿಗೂ ಕೊಡದೆ ಸಮಾಜಾರ್ಥವು ಮತ್ತು ದೇವರ ತಮ್ಮ [illegible]ಯನ್ನು ಪಾತಾಳದ ಭೂಮಿಯಲ್ಲಿ ಬಚ್ಚಿಟ್ಟು ಸತ್ತುಹೋಗು[illegible]ತ್ತಾರೆ. ಕೆಲವರು ಎಷ್ಟು ಬಂದರೂ ಅದು ತಮಗಿರಲೆಂದು ಮತ್ತೊ[illegible]ಬ್ಬರಿಗೆ ಎಳ್ಳಷ್ಟನ್ನಾದರೂ ಕೊಡುವದಿಲ್ಲ. ಇಂಥವರು ಕೃತಘ್ನ[illegible]ರೆಂದು ಭಾವಿಸಲಾಗುವುದು. ಹೀಗಾದರೂ ಧರ್ಮಮಾಡು[illegible]ವವರು ಅನೇಕರಿದ್ದಾರೆ. ಇಂಥ ಗುಣವೇ ದೇವರ ಮುಂದೆ ಅತಿ ಶ್ರೇ[illegible]ಷ್ಠವಾದದ್ದು. ಕೆಟ್ಟ ಕೆಲಸಕ್ಕಿಂತ ಕೊಡುವ ಅಭ್ಯಾಸವು ಸಕಲರ[illegible]ಲ್ಲಿಯೂ ಇರುವುದು ಉಚಿತವಾಗಿದೆ. ಸಂತೋಷವಾಗಿಯೂ ಧಾರಾ[illegible]ಳವಾಗಿಯೂ ಕೊಡುವವರನ್ನು ದೇವರು ಮೆಚ್ಚುತ್ತಾನೆ.

ಕೊಟ್ಟರೂ ಒಳ್ಳೇ ಗುರಿಯುಳ್ಳದ್ದಾಗಿ ಕೊಡಬೇಕು. ಅವಿವೇ[illegible]ಕದಾನ. ಬಲವಂತದಿಂದಾಗಲೀ ಅರೆಮನಸ್ಸಿನಿಂದಾಗಲೀ ಕೊಡುವ[illegible]ದು ದಾನವಾಗಲಾರದು. ಕೆಲವರು ಮತ್ತೊಬ್ಬರಿಂದ ಹೊಗಳಿಕೆಯ[illegible]ನ್ನು ಸಂಪಾದಿಸಿಕೊಳ್ಳುವದಕ್ಕಾಗಿ ದಾನ ಮಾಡುವದುಂಟು. ಮ[illegible]ಷ್ಯರು ಅವರನ್ನು ಹೊಗಳಿದ ಮಾತ್ರಕ್ಕೆ ಅವರಿಗೆ ಕೀರ್ತಿಬರಲಾರ[illegible]ದು. ಇದಕ್ಕೆ ಸರಿಯಾಗಿ ಜನರು ನೋಡಲಿ ಎಂದು ನಿಮ್ಮ ಧರ್ಮ ಕಾರ್ಯಗಳನ್ನು ಅವರ ಮುಂದೆ ಮಾಡಬೇಡಿ. ನೋಡಿರಿ, ಹಾಗೆ ಮಾಡಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯಿಂದ ನಿಮಗೆ ಫಲ ದೊರೆಯದು. 'ಹಾಗಾದರೆ ನೀನು ಧರ್ಮಮಾಡುವಾಗ ನಿನ್ನ ಮುಂದೆ ತುತೂರಿ ಊದಿಸಬೇಡ. ಜನರಿಂದ ಹೊಗಳಿಸಿಕೊಳ್ಳಬೇಕೆಂದು ಕಪಟಿಗಳು ಸಭಾಮಂದಿರಗಳಲ್ಲಿಯೂ, ಬೀದಿಗಳಲ್ಲಿಯೂ ಹಾಗೆ ಮಾಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಆದರೆ ನೀನು ಧರ್ಮ ಮಾಡುವಾಗ ನಿನ್ನ ಬಲಗೈ ಮಾಡಿದ್ದು ನಿನ್ನ ಎಡಗೈಗೆ ತಿಳಿಯದಿರಲಿ. ಆಗ ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು' ಎಂದು ಶಾಸ್ತ್ರೋಕ್ತಿಯುಂಟು.

ಮತ್ತು ಪಾತ್ರವರಿತು ದಾನಮಾಡಬೇಕು. ದೇಹಿ ಎಂದು ಕೈ ನೀಡುವವರಿಗೆಲ್ಲಾ ಕೊಡಬೇಕೆಂದು ಈ ದೇಶದಲ್ಲಿ ಅನೇಕರು [illegible]ಕ್ಕಾಗಿ ಭಾವಿಸಿಕೊಂಡಿದ್ದಾರೆ. ತಕ್ಕ ಯೋಚನೆ ಇಲ್ಲದೆ ಕೊಡುವದರಿಂದ ಅನೇಕ ಭಯಂಕರವಾದ ಕೇಡುಗಳುಂಟಾಗುತ್ತವೆಂದು ಸಂ[illegible]ಶಯವಿಲ್ಲದೆ ತಿಳಿಯಬೇಕಾಗಿದೆ. ಅನೇಕರು ಕೈಕಾಲು ಮೊದಲಾದ ಅವಯವಗಳಲ್ಲಿ ಸರಿಯಾಗಿಯೂ ಕೆಲಸ ಮಾಡುವದಕ್ಕೆ ಶಕ್ತ[illegible]ರಾಗಿಯೂ ಆರೋಗ್ಯ ಯಾಚಕಮಾಡಿ ಜೀವಿಸುವದನ್ನೇ ಒಂದು ವೃತ್ತಿಯಾಗಿ ಭಾವಿಸಿಕೊಂಡಿದ್ದಾರೆ. ಇದು ಬಹು ನಾಚಿಕೆಯಾಗಿದ[illegible] ಈ ದೇಶಸ್ಥರು ಇದನ್ನು ಗಂಭೀರವಾಗಿ ಎಣಿಸಿ ಭಿಕ್ಷ ನೀಡಿ ನೀ[illegible] ಉತ್ತೇಜಿಸುತ್ತಾ ಬರುವದರಿಂದ ಅನೇಕರು ತಮ್ಮ ಕೆಲಸ ಕಾರ್ಯಗಳನ್ನೆಲ್ಲಾ ಬಿಟ್ಟು ಯಾಚಕ ವೃತ್ತಿಗೆ ಸೇರಿಕೊಂಡು ಸೋಮಾರಿತನದಿಂದ ಕಾಲ ಕಳೆಯುವದಕ್ಕೆ ಆಸ್ಪದವಾಗಿದೆ. ಇಂಥ ಸೋಮಾರಿಗಳು ಕಂಬಿ, ಜಾಗಟೆ, ಬಿರುದುಗಳನ್ನು ಸಂಪಾದಿಸಿಕೊಂಡು, ಗುಂಪುಗುಂಪಾಗಿ ಊರೂರು ಸುತ್ತುತ್ತಾ ಇರುತ್ತಾರೆ. ಪ್ರಾಯಶಃ ಹಿಂದೂದೇಶದಲ್ಲಿ ನಲವತ್ತು ಲಕ್ಷಕ್ಕೆ ಮೇಲ್ಪಟ್ಟ ಭಿಕ್ಷರು ಇರಬಹುದು. ಆದ್ದರಿಂದ ಹಿಂದೂದೇಶವು ಭಿಕ್ಷರ ದೇಶವೆಂದೂ ಧರ್ಮಕೊಡುವವರ ದೇಶವೆಂದೂ ಹೆಸರಾಗಿದೆ. 'ಕೆಲಸಮಾಡದವರು ಉಣ್ಣಬಾರದೆಂದು' ಭಗವಂತನ ಅಪ್ಪಣೆಯಾಗಿದೆ. ಇಂಥವರ ವಿಷಯ ಒಬ್ಬ ಮಹಾ ಜ್ಞಾನಿಯು—ಸೋಮಾರಿಗಳನ್ನೇ 'ಇರುವೆಯ ಹತ್ತಿರ ಹೋಗಿ, ಅದರ ನಡತೆಗಳನ್ನು ನೋಡಿ ಜ್ಞಾನಿಯಾಗು. ಅದು ಸುಗ್ಗೀಕಾಲದಲ್ಲಿ ತನ್ನ ಆಹಾರವನ್ನು ಕೂಡಿಸುತ್ತದೆ. ಸೋಮಾರಿಗಳೇ, ಎಷ್ಟುವರೆಗೆ ಮಲಗುವಿ? ಯಾವಾಗ ನಿನ್ನ ನಿದ್ದೆ ತಿಳಿದು ಏಳುವಿ, ಎಂದು ಹೇಳುತ್ತಾನೆ. ಇಷ್ಟೊಂದು ಮಂದಿಯೂ ಯಾಚಕವೃತ್ತಿಯನ್ನು ಬಿಟ್ಟು ಕೆಲಸಕಾರ್ಯಗಳನ್ನು ಮಾಡುವದಾದರೆ ಈಗ ಇರುವದಕ್ಕಿಂತಲೂ, ದವಸ ಧಾನ್ಯಗಳು ಅಗ್ಗವಾಗುವದಲ್ಲದೆ ದೇಶವು ದಿನೇ ದಿನೇ ಅಭಿವೃದ್ಧಿಸ್ಥಿತಿಗೆ ಬರುವದು. ಇಲ್ಲದಿದ್ದರೆ ಹಿಂದೂದೇಶವು ಬಡತನ ಕ್ಷಾಮಾದಿಗಳಿಗೆ ಬೇಗನೆ ಒಳಪಡಬೇಕಾಗುವದು. ಅನೇಕರು ಯೋಚನೆ ಇಲ್ಲದೆ ಕೊಡುವದರಿಂದ ತಮ್ಮ ದೇಶಕ್ಕೆ ಯಾವ ವಿಪತ್ತನ್ನು ತಂದುಕೊಳ್ಳುತ್ತಾರೆ. ಕೆಲಸವಿಲ್ಲದ ಸೋಮಾರಿಯು 'ತಾನು ಕೆಡುವದಲ್ಲದೆ ಕೋತಿ ವನವನ್ನೆಲ್ಲಾ ಕೆಡಿಸಿದಂತೆ' ದೇಶವನ್ನೆಲ್ಲಾ ಕೆಡಿಸುವನು. ಕೆಲಸವಿಲ್ಲದಿರುವದರಿಂದ ಮಹಾ ಭಯಂಕರವಾದ ಪಾಪಗಳನ್ನು ಮಾಡುವದಕ್ಕೆ ಲೇಶವೂ ಅಡ್ಡಿ ಇರುವದಿಲ್ಲ. ಇಂಥವರಿಗೆ ಧರ್ಮ ಕೊಡುವದು ಭಗವಂತನ ಸನ್ನಿಧಿಯಲ್ಲಿ ಮಹಾ ದೋಷವಾಗಿದೆ.

ಆದರೆ ಕುರುಡರು ಕುಂಟರು ಮೊದಲಾದ ಅಂಗಹೀನರು ಕೆಲಸ ಮಾಡುವದಕ್ಕೆ ಅಶಕ್ತರಾಗಿರುವದರಿಂದ ಅಂಥವರಿಗೆ ಧರ್ಮ ಕೊಡುವದು ನ್ಯಾಯವಾಗಿದೆ. ದೇವರು ಅವರನ್ನು ನಿಷ್ಪ್ರಯೋಜನಕ್ಕಾಗಿ ಈ ಲೋಕದಲ್ಲಿ ಇಟ್ಟಿಲ್ಲ. ನಾನಾ ಉದ್ದೇಶಗಳಿಗಾಗಿ ಅವರನ್ನು ಈ ಭೂಲೋಕದಲ್ಲಿ ಇಟ್ಟಿದ್ದಾನೆ. ಅವರು ಮಾಡಿಯದಿದ್ದರೂ ಅವರ ಭಾರವನ್ನು ಹೊರಿಸುವವರ ಕೈಯಲ್ಲಿ ಕೊಟ್ಟಿದ್ದಾನೆ. ಅವರು ತಮ್ಮ ಕೈಯಲ್ಲಿ ಇರುವ ಸಮಸ್ತಕ್ಕೂ ದೇವರಿಗೆ ಲೆಕ್ಕ ಒಪ್ಪಿಸಬೇಕಾಗಿರುವದರಿಂದ, ಅವರು ನ್ಯಾಯವಾಗಿ ಅದನ್ನು ಸದ್ವಿನಿಯೋಗ ಮಾಡಬೇಕು. ಈ ವಿಷಯದಲ್ಲಿ ಭಗವಂತನು ಅಧಿಕ ಸಂತೋಷಪಡುವದಲ್ಲದೆ ಆ ಧರ್ಮವು ತನಗೆ ಸೇರಿತೆಂದು ಹೇಳುವನು. ಈ ವಿಷಯದಲ್ಲಿ ಯೇಸುಕ್ರಿಸ್ತನು ನುಡಿದ ಮಾತೇನಂದರೆ, 'ನನ್ನ ತಂದೆಯಿಂದ ಆಶೀರ್ವಾದಹೊಂದಿದವರೇ, ಬನ್ನಿರಿ. ಲೋಕಾದಿಯಿಂದ, ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ಥ್ಯವಾಗಿ ತಕ್ಕೊಳ್ಳಿರಿ. ಯಾಕಂದರೆ ನಾನು ಹಸಿದಿದ್ದೆನು; ನನಗೆ ಊಟಕ್ಕೆ ಕೊಟ್ಟಿರಿ. ನಾನು ಬಾಯಾರಿದ್ದೆನು; ಕುಡಿಯುವದಕ್ಕೆ ಕೊಟ್ಟಿರಿ. ಪರದೇಶಿಯಾಗಿದ್ದೆನು; ನನ್ನನ್ನು ಸೇರಿಸಿಕೊಂಡಿರಿ. ಬಟ್ಟೆ ಇಲ್ಲದವನಾಗಿದ್ದೆನು; ನನಗೆ ಉಡುವದಕ್ಕೆ ಕೊಟ್ಟಿರಿ. ರೋಗದಲ್ಲಿದ್ದೆನು; ನನ್ನನ್ನು ವಿಚಾರಿಸುವದಕ್ಕೆ ಬಂದಿರಿ. ಸೆರೆಮನೆಯಲ್ಲಿದ್ದೆನು; ನನ್ನನ್ನು ನೋಡುವದಕ್ಕೆ ಬಂದಿರಿ. ಯಾಕಂದರೆ ಈ ನನ್ನ ಕೇವಲ ಅಲ್ಪರಾದವರೊಬ್ಬನಿಗೆ ನೀವೇನು ಮಾಡಿದಿರೋ ಅದು ನನಗೆ ಮಾಡಿದಂತಾಯಿತು' ಎಂದು ಹೇಳುತ್ತಾನೆ.

ಎಲ್ಲಾ ಧರ್ಮಗಳಲ್ಲಿ ಉತ್ಕೃಷ್ಟವಾದ ಧರ್ಮವ್ಯಾವದೆಂದರೆ, ಒಬ್ಬೊಬ್ಬನು ತನ್ನ ಜೊತೆ ಸೃಷ್ಟಿಗಳನ್ನು ಸನ್ಮಾರ್ಗದಲ್ಲಿ ನಡಿಸಿ, ಮುಕ್ತಿಗೆ ಸೇರಿಸುವದಕ್ಕಾಗಿ ತನ್ನ ಶಕ್ತಿ ಸಾಮರ್ಥ್ಯಗಳನ್ನು ಖರ್ಚುಮಾಡುವದೇ ಆಗಿದೆ. ಸಕಲರೂ ಸತ್ಪುರುಷರಾಗಿ ಬಾಳುವದೇ ನಿಜವಾದ ಮತ. ಗುಣದಿಂದ ಮತದ ಶ್ರೇಷ್ಠತೆ ತೋರಬರುತ್ತದೆ. ಈ ಭೂಲೋಕದವರೆಲ್ಲರೂ ಒಂದೇ ಕುಟುಂಬದವರಂತಿದ್ದು ಒಬ್ಬನೇ ಪಾಲಕನಾದ ಭಗವಂತನನ್ನು ಪೂಜಿಸಿ ಸಕಲವಾದ ಸುಖವನ್ನು ಪಡೆಯಬೇಕೆಂಬುವದೇ ಆತನ ಉದ್ದೇಶವಾಗಿದೆ. ಇದರ ಸಾರಾಂಶವೇನಂದರೆ, "ನಿನ್ನ ದೇವರಾದ ಯೆಹೋವನನ್ನು ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು. ಮತ್ತು ನಿನ್ನ ನೆರೆಯವನನ್ನು ನಿನ್ನ ಹಾಗೇ ಪ್ರೀತಿಮಾಡು." ಇದರಲ್ಲೇ ಸಕಲ ಶಾಸ್ತ್ರಗಳ ಸಾರತ್ವ ಅಡಕವಾಗಿದೆ.

---

ಬೀಳುವ ಚಿಲ್ಲರೆ ವೃತ್ತಾಂತಗಳು

ಅಕ್ಟೋಬರ್ ೫ ನೇ ತಾರೀಖು ಸೋಮವಾರದಿಂದ ಈ ಸಲ ಪ್ರತಿನಿಧಿ ಸಭೆಯು ರಾಜಧಾನಿಯಲ್ಲಿ ನಡೆಯುಬಹುದೆಂದು ವರ್ತಮಾನವಿದೆ.

****

ಸಿಂಲಾ ಪಟ್ಟಣಕ್ಕೆ ವೈಸರಾಯಿಯವರ ಭೇಟಿಗಾಗಿ ಪ್ರಯಾಣ ಮಾಡಿರುವ ನಮ್ಮ ರೆಸಿಡೆಂಟರು ನಾಳೆ ಸೋಮವಾರ ವಾಪಸು ಬರುವವರಾಗಿದಾರೆ.

****

ಕೋಲಾರದ ಪೇಟೆಯಲ್ಲಿ ಈವಾರದಲ್ಲಿ ಮೊದಲು ಇಬ್ಬರು ವ್ಯರಪಟ್ಟರೆಂದು ನಮ್ಮ ಬಾತ್ಮೀದಾರರು ಬರೆದಿರುವದನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ.

****

ನಮ್ಮ ರೆಸಿಡೆಂಟರಾದ ಸರ್ ಡೊನಾಲ್ಡ್ ರಾಬರ್ಟ್‌ಸನ್ ರವರಿಗೂ ಅವರ ಪತ್ನೀರವರಿಗೂ ಮುಂದಿನ ತಿಂಗಳು ೧೦ ನೆ ತಾರೀಖಿಗೆ ಬೆಂಗಳೂರಿನಲ್ಲಿ ಭಾರೀ ಔತನಮಾಡುವರು.

****

ಮೈಸೂರು ಸಂಸ್ಥಾನದ ಕಂಟ್ರೋಲರ್ ಮೆ॥ ಇ. ಆರ್. ಸುಬ್ರಾಯ ಐಯರು ಅಪೇಕ್ಷೆ ಪಟ್ಟಂತೆ ಸರ್ಕಾರದವರು ಅವರಿಗೆ ೩ ತಿಂಗಳ ರಜಾ ಕೊಟ್ಟು, ಅನಂತರ ಕೆಲಸ ಬಿಡಬಹುದೆಂದು ಹುಕುಂ ಮಾಡಿದಾರೆ.

ಕೆಲವು ದಿವಸಗಳ ಕೆಳಗೆ ಸಕಲೇಶಪುರ ಪ್ರಾಂತ್ಯದಲ್ಲಿ ೧೦೦ ಎಕರೆಯ ಒಂದು ಕಾಫಿತೋಟವು ೧೦ ಸಾವಿರ ರೂಪಾಯಿಗೆ ಮಾರಾಟ ಆಯಿತು. ಅದೇ ತೋಟ ಕಾಫಿ ಧಾರಣೆ ಚೆನ್ನಾಗಿದ್ದಾಗ ೩೦ ಸಾವಿರ ರೂಪಾಯಿ ಬಾಳುತ್ತಿತ್ತು.

****

ಬೆಂಗಳೂರು ಪ್ರಾಂತ್ಯದಲ್ಲಿ ಪ್ರಾರಂಭ ಮಾಡಿರುವ ಕೆರೆ, ಕೊಳ, ಭಾವಿ, ಸೇತುವೆ, ರಸ್ತೆ ಮೊದಲಾದ್ದರ ಕಾಮಗಾರಿಯನ್ನು ಜಾಗ್ರತೆಯಿಂದ ಪೂರೈಸಬೇಕೆಂದು ಹೇಳಿ ಸರ್ಕಾರದವರು ಅದಕ್ಕೆ ಆಗಾಟ ೪,೭೭೭ ರೂ. ಸ್ಯಾಂಕ್ಷನ್ ಮಾಡಿದಾರೆ.

****

ಅರಮನೆಯ ಜವಾಬಿ ನೌಕರರಾಗಿರುವ ಒಬ್ಬಿಬ್ಬರು ಗೌಡೀರಿಗೆ ಪ್ಲೇಗ್ ಕಾಯಿಲೆ ಪ್ರಾಪ್ತವಾದುದರಿಂದ ಮಹಾರಾಜರೂ, ಮಹಾರಾಣಿಯವರೂ, ರಾಜವರ್ಗದವರೂ ಅರಮನೆಯನ್ನು ಬಿಟ್ಟು ಬೇರೆ ಬೇರೆ ಬಂಗಲೆಗಳಲ್ಲಿ ಇರುತ್ತಾರೆ. ದಯಮಾಡಿದರು.

****

ಅಕ್ಟೋಬರು ೧ ರಿಂದ ಬೆಂಗಳೂರಿನಲ್ಲಿ ಸರ್ಕಾರಿ ಪೋಲೀಸ್ ಸ್ಕೂಲು ಏರ್ಪಾಡಾಗುವುದು. ಅದರಲ್ಲಿ ಓದಿ ಉತ್ತೀರ್ಣನಾಗಿ ಶೀಘ್ರಗತಿ ಹೊಂದುವ ಮೊದಲನೇ ಇಬ್ಬರಿಗೆ ಇನ್ಸ್‌ಪೆಕ್ಟರ ಮತ್ತು ಅಮಲ್ದಾರಿ ಕೆಲಸಗಳನ್ನು ಖಂಡಿತವಾಗಿ ಕೊಡುತ್ತೇವೆಂದು ಮೆ॥ ಮಾದೈಯನವರು ಪ್ರಕಟಿಸಿರುತ್ತಾರೆ.

****

ಪ್ಲೇಗಿನ ಹಾವಳಿ ನಿಲ್ಲಿಸುವ ಏರ್ಪಾಡು ಮಾಡುವದಕ್ಕೆ ಕೌನ್ಸಲರ್ ಮೆ॥ ಸಿ. ಶ್ರೀನಿವಾಸಯ್ಯಂಗಾರ್ಯ, ಸೀನಿಯರ್ ಸರ್ಜನ್ ಕರ್ನಲ್ ಸ್ಮಿತ್ ಯವರೂ ಕಳೆದ ಗುರುವಾರ ಹೊರಟರು. ಅವರು ಚಿತ್ರದುರ್ಗ, ಶಿವಮೊಗ್ಗ, ತುಂಕೂರು ಪ್ರಾಂತ್ಯಗಳಲ್ಲಿ ಸಂಚಾರ ಮಾಡಿಕೊಂಡು ಬರುವವರಾಗಿದಾರೆ.

****

ಈ ತಿಂಗಳ ಸಾಯಂಕಾಲ ೭ ಗಂಟೆಗೆ ಬೆಂಗಳೂರು ನಗರ್ತಪೇಟೆಯಲ್ಲಿರುವ ಮೆ॥ ಬಿ. ವಿ. ರಾಮಸ್ವಾಮಿಶೆಟ್ಟರ ಆಫೀಸಿನಲ್ಲಿ "ಬೆಂಗಳೂರು—ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪನಿಯ ಜನರಲ್ ಮೀಟಿಂಗ್" ನಡೆಸಲ್ಪಡುವುದೆಂದು ಆ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಮೆ॥ ಎ. ಸುಬ್ಬರಾಯರು ತಿಳಿಸಿದಾರೆ.

****

ಬೆಂಗಳೂರಿನಲ್ಲಿ ಇಂಗ್ಲಿಷ್ ಸೈನ್ಯದ ಲೆಫ್ಟಿನೆಂಟೆಂಬ ಹುದ್ದೇದಾರನಾಗಿದ್ದ ಸಿ. ಜಿ. ಪ್ಲಾಂಟನು ತನ್ನ ಹಣ ಬ್ಯಾಂಕಿನಲ್ಲಿ ಇಲ್ಲದಿದ್ದರೂ ಚೆಕ್ಕು ಬರೆದುಕೊಟ್ಟು ಜನರಿಗೆ ಮೋಸಮಾಡಿದನೆಂದೂ, ಇವನನ್ನು ಮದರಾಸ್ ಹೈಕೋರ್ಟಿನವರು ವಿಚಾರಣೆ ಮಾಡುತ್ತಿದಾರೆಂದೂ ತಿಳಿಸಿದ್ದೆವಷ್ಟೆ. ಜಡ್ಜಿಗಳು ಇವನಿಗೆ ಕಳೆದ ವಾರ ಆರು ತಿಂಗಳ ಕಠಿಣ ಸಜಾ ವಿಧಿಸಿದಾರೆ.

****

ಬೆಂಗಳೂರು ತಾಲ್ಲೂಕು ಕೇತಮಾರನಹಳ್ಳಿಯ ಸನ್ಯಾಸಿ ಕಟ್ಟೆ ಶ್ರೀ ಆಂಜನೇಯಸ್ವಾಮಿ ವಿಗ್ರಹವನ್ನು ಬೆಂಗಳೂರು ಮಲ್ಲೇಶ್ವರದ ಶ್ರೀ ಗೋಪಾಲಕೃಷ್ಣಸ್ವಾಮಿ ದೇವಸ್ಥಾನದಲ್ಲಿ ತಂದಿಟ್ಟು ಪ್ರತಿಷ್ಠೆ ಮಾಡಿದರು. ಈ ವಿಗ್ರಹದ ಅರ್ಚನೆಗೆ ವರುಷಕ್ಕೆ ರೂ. ೧೧—೧೦—೦ ಯನ್ನು ಮುಜರಾಯಿ ಫಂಡಿನಿಂದ ಪಾವತಿ ಮಾಡತಕ್ಕದ್ದೆಂದು ಸರ್ಕಾರದವರು ಹುಕುಂ ಕೊಟ್ಟಿದಾರೆ.

****

ಡಿಸೆಂಬರ್ ತಿಂಗಳ ಕಡೇ ವಾರ ಮದರಾಸಿನಲ್ಲಿ ಕಸಬುದಾರಿ ವಸ್ತುಗಳನ್ನು ಪ್ರದರ್ಶನ ಮಾಡಿ, ಶ್ರೇಷ್ಠವಾದವುಗಳಿಗೆ ಮೆಡಲ್‌ಗಳನ್ನು ಕೊಡುವಂತೆ ಏರ್ಪಾಡಾಗುತ್ತಿದೆ. ನಮ್ಮ ಮೈಸೂರು ಸಂಸ್ಥಾನದಿಂದಲೂ ಅನೇಕ ವಸ್ತುಗಳನ್ನು ಆ ಪ್ರದರ್ಶನಶಾಲೆಗೆ ಕಳುಹಿಸುವರು. ಈ ಕಾರ್ಯವನ್ನು ಸರ್ಕಾರದವರು ರಾಯಬಹದೂರ್ ಮೆ॥ ಸಿ. ಮಾದೈಯನವರಿಗೂ, ಅ॥ ಕಮಿಷನರ್ ಮೆ॥ ಎ. ಆನಂದರಾಯರಿಗೂ ವಹಿಸಿರುತ್ತಾರೆ.

****

ಶ್ರೀಮನ್ ಮಹಾರಾಜರವರು ಕೆಲವು ಮಂದಿ ಅರಸುಗಳಿಗೆ [illegible] ವರ ಭೂಮಿಕಾಣಿಗಳ ಆಧಾರದ ಮೇಲೆ ೫,೩೧,೨೦೦ ರೂ. ಸಾಲ ಕೊಡುವಂತೆ ಸ್ಯಾಂಕ್ಷನ್ ಮಾಡಿದಾರೆ. ಮೆ॥ ವಳನಾಯ ದೇವರಾಜೇ ಅರಸಿನವರಿಗೆ ೨,೪೧,೭೦೦ ರೂ., ಮೆ॥ ಭಕ್ಷಿ ಬಸಪ್ಪಾಜಿ ಅರಸಿನವರಿಗೆ ೨ ಲಕ್ಷ ರೂ., ಮೆ॥ ಎಂ. ನಂಜರಾಜೇ ಅರಸಿನವರು ಮತ್ತು ಇವರ ಸಹೋದರನಿಗೆ ೫೦ ಸಾವಿರ ರೂ., ಈ ಪ್ರಕಾರ ಸಾಲ ಕೊಡುವರೆಂದು ಬೆಂಗಳೂರು ಪತ್ರಿಕೆಯು ತಿಳಿಸುತ್ತದೆ.

****

ಅರ್ಬತ್‌ನಾಟ್ ಕಂಪನಿಯವರಿಗೂ ಗಣಪತಿ ಹೆಬ್ಬಾರ್ ಯವರಿಗೂ ಬಹುಕಾಲದಿಂದ ಬಂದು ಸಿವಿಲ್ ವ್ಯಾಜ್ಯ ಹುಟ್ಟಿ ನಡೆಯುತ್ತಿದೆ. ಇದು ೫—೬ ಲಕ್ಷ ರೂಪಾಯಿನ ವ್ಯಾಜ್ಯ; ಕಳೆದ ೧೮೯೫ ರಲ್ಲಿ ಪ್ರಾರಂಭವಾಯಿತು. ೫—೬ ಸಲ ಈ ಮೊಕದ್ದಮೆ ಛೀಫ್ ಕೋರ್ಟಿಗೆ ಹೋಗಿತ್ತು. ಕೆಲವು ಕಾಲಕ್ಕೆ ಮುಂಚೆ ೩,೯೦,೦೦೦ ರೂಪಾಯಿಗೆ ಡಿಕ್ರಿ ಆಯಿತು. ಈಗ ಶಿವಮೊಗ್ಗೆಯ ಡಿಸ್ಟ್ರಿಕ್ಟ್ ಜಡ್ಜರು ಈ ವ್ಯಾಜ್ಯದ ಲೆಕ್ಕಪತ್ರಗಳನ್ನು ತನಿಖೆ ಮಾಡುತ್ತಿದಾರೆ.

****

ರಾಜಧಾನಿಯಲ್ಲಿ ನವರಾತ್ರಿ ಉತ್ಸವಗಳು ತುಂಬಾ ವಿಜೃಂಭಣೆಯಾಗಿ ನೆರವೇರುವವೆಂತಲೂ, ಪೂರ್ವದಂತೆ ಬಹು ಮಂದಿ ಬರುವರೆಂತಲೂ ನೆನಸಿ, ಪಾರ್ಸಿ ನಾಟಕದ ಕಂಪನಿಯವರು ಸಂತೋಷದಿಂದ ನಗರಕ್ಕೆ ಬಂದಿದಾರೆ. ಪ್ಲೇಗ್ ಉಪದ್ರವು ದಿನೇ ದಿನೇ ಹೆಚ್ಚುತ್ತಿದೆ; ದಿನದಿನದ ಮರಣಸಂಖ್ಯೆಯು ಈಗ ೩೦ ಕ್ಕೆ ಹತ್ತಿತು. ಮಳೆಯಾದರೋ ತಪ್ಪದೆ ಪ್ರತಿದಿನವೂ ಸುರಿಯುತ್ತಿದೆ. ಇಂಥಾ ಸಾಂಕ್ರಾಮಿಕ ಜಾಡ್ಯವಿರುವಾಗ ಟೌನಹಾಲಿನಲ್ಲಿ ನಾಟಕ ಆಡುವದಕ್ಕೆ ಯಾರು ಅವಕಾಶ ಕೊಡುತ್ತಾರೋ ತಿಳಿಯದು.

## ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಬರೆಯುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

## ಕರೆಸ್‌ಪಾಂಡೆನ್ಸ್.

### ಬದಲಿಮಾಸ್ತರುಗಳ ಸಂಬಳ ಬಡ್ತಿ ವಿಷಯ.

ಅಯ್ಯಾ,

ತಾವು ಬದಲಿಮಾಸ್ತರುಗಳ ಬಡ್ತಿ ವಿಷಯದಲ್ಲಿ ತಾ॥ ೩—೯—೦೩ ರ ಪತ್ರಿಕೆಯಲ್ಲಿ "ಇನ್ನೂ ಯಾವುದೂ ಗೌರ್ನಮೆಂಟಿನಲ್ಲಿ ಇತ್ಯರ್ಥವಾಗಿಲ್ಲ" ಎಂಬದಾಗಿ ಬರೆದು ಇರುತ್ತೀರಿ. ಹಿಂದೆ ಒಂದು ದಫೆ ತಮ್ಮ ಪತ್ರಿಕೆಯಲ್ಲಿಯೇ ದಿವಾನರವರು ಶಿಫಾರಸ್ಸು ಮಾಡಿದ್ದರ ಮೇಲೆ ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರು ಲೋಕಲ್ ಫಂಡ್ ಹಣದಲ್ಲಿ ವರ್ಷಾ ೩೩ ರಂತೆ ಹಣವನ್ನು ಕೆಳಗಿನ ಮಾಸ್ತರುಗಳಿಗೆ ಬಡ್ತಿ ಕೊಡಲು ಮಂಜೂರ್ ಮಾಡಿರುತ್ತಾರೆಂದು ಪ್ರಕಟಿಸಿದ್ದೀರಿ. ಹೀಗೆ ಒಂದು ದಫೆ ಮಂಜೂರಾಯಿತೆಂದು ಪ್ರಕಟಿಸಿ, ಈಗ ಇತ್ಯರ್ಥವಾಗಿ ಇಲ್ಲವೆಂದು ಹೇಳುವುದಕ್ಕೇನು ಕಾರಣ? ಹಾಗೆ ಮಂಜೂರಾಗಿರುವುದು ನಿಜವೇ? ನಿಜವಾದ ಪಕ್ಷದಲ್ಲಿ ಈ ಕೆಳಗಿನ ಮಾಸ್ತರುಗಳಿಗೆ ಯಾವಾಗ ಬಡ್ತಿಯಾಗುವುದು? ಮ॥ ಭಾಬಾ ಸಾಹೇಬರವರಿಗೆ ಈ ಮಾಸ್ತರುಗಳ ವಿಷಯದಲ್ಲಿ ಕನಿಕರವಿಲ್ಲವೇ? ಇವರೇ ಅನೇಕ ದಫೆ ತಾ॥ ಬಂ। ಮ॥ ಸ್ಕೂಲ್, ಗ॥ ಕ॥ ಸ್ಕೂಲ್‌ಗಳಿಗಿಂತ ಮೋ। ಸ್ಕೂಲ್‌ಗಳೇ ಉತ್ತಮಸ್ಥಿತಿಯಲ್ಲಿರುತ್ತವೆಂದು ಹೇಳಿರುತ್ತಾರಲ್ಲ. ಹಾಗಾದರೆ ಈ ಮಂಜೂರಾದ ಹಣದಿಂದ ೭ ರೂ. ನ ಬದಲಿಮಾಸ್ತರುಗಳಿಗೆಲ್ಲಾ ಏಕೆ ಬಡ್ತಿ ಕೊಡಬಾರದು? ಒಂದು ವೇಳೆ ಲೋಕಲ್ ಫಂಡ್ ಹಣ ಸಾಲದಿದ್ದರೆ ಹೋ॥ ಸ್ಕೂಲ್ ವಿದ್ಯಾರ್ಥಿಗಳಿಗೆಲ್ಲಾ ಫೀಜನ್ನು ಹಾಕಬಾರದೇ? ಮ॥ ಭಾಭಾ ಸಾಹೇಬರವರ ಮನಸ್ಸಿನಲ್ಲಿ ಈ ವಿಷಯವು ಹುಟ್ಟಿರುತ್ತದಲ್ಲ, ನಿಜ ಇನ್ನೂ ಬಡ್ತಿಗೆ ಅವಕಾಶ ಕೊಡಲಿಲ್ಲ?

ಇನ್ನೊಬ್ಬ [illegible]

[ಈ ಮಾಸ್ತರುಗಳಿಗೆ ಬಡ್ತಿ ಕೊಡಬೇಕಾದದ್ದು ಬಹಳ ಅವಶ್ಯ. ಗವರ್ನಮೆಂಟಿನವರು ಜಾಗ್ರತೆಯಲ್ಲಿ ಮಂಜೂರ್ ಮಾಡಿಯಾರೆಂದು ನಂಬುತ್ತೇವೆ. ಬಡ್ತಿ ಕೊಡುವುದೂ ಫೀಜು ಹಾಕುವುದೂ ಮುಂತಾದ್ದೆಲ್ಲಾ ಗವರ್ನಮೆಂಟಿನಲ್ಲಿ ಚರ್ಚೆಯಾಗುತ್ತಿದೆ ಎಂದು ನಿರೀಕ್ಷಿಸುತ್ತೇವೆ. ಇದೆಲ್ಲಾ ಇತ್ಯರ್ಥವಾಗಿ ಜಾರಿಗೆ ಬರಲು ಇನ್ನೂ ಒಂದು ವರುಷ ಹಿಡಿಯಬಹುದೆಂದು ಕಾಣುತ್ತೆ.]—ಎಡಿ.

### ದುರಾಗತ.

ಅಯ್ಯಾ,

ತುಂಕೂರು ಡಿಸ್ಟ್ರಿಕ್ಟ್, ಹುಳಿಯಾರಿನಲ್ಲಿ ನಾನು ಬಳೆ ಅಂಗಡಿ ಇಟ್ಟಿರುತ್ತೇನೆ. ನಾನು ಬಳೆ ಸಹಿತ ಹುಳಿಯಾರಿನಿಂದ ಸೋಮವಾರ ರಾತ್ರಿ ಹೊರಟು, ಮಂಗಳವಾರ ಬೆಳಗ್ಗೆ ಕಣಕಟ್ಟೆ ಸಂತೆ ಕೂಡುವ ಶಿವ ಲಿಂಗಾಲದಲ್ಲಿರುವ ದೇವಸ್ಥಾನದ ಮುಂಭಾಗದ ಜಗಲಿಯ ಮೇಲೆ ಬಳೆಸಿಂಡಿಗಳನ್ನು ಇಳಿಸಿ, ಕಂಭಗಳಿಗೆ ಪರದೆ ಕಟ್ಟಿ ಊಟಕ್ಕೆ ಕೂತುಕೊಂಡೆನು. ಅಷ್ಟರಲ್ಲೇ ಈ ಊರು ಶಾನುಭೋಗರು (ಇವರು ಪೊಲೀಸ್ ಅಧಿಕಾರಿಗಳು), ಇವರ ಹಿಂದೆ ದೊಡ್ಡ ದಫೇದಾರ್ ನಡಸುವ ಮುಸಲ್ಮಾನ್ ಜವಾನ, ಇವರಿಬ್ಬರೂ ಬಂದು ಏನ್ತಂ ಬ...ಗೆ ಬಂದಂತೆ ಬೈಯುತ್ತಾ, ಪರದೆ ಕಿತ್ತು ಒಳಕ್ಕೆ ಬಂದು ಊಟಮಾಡುತ್ತಿದ್ದ ನನ್ನನ್ನು ಎಬ್ಬಿಸಿ, ಆ ಜಾಗವನ್ನು ಬಿಡಿಸಿ, ಇವರು ಊರಿಂದ ತರೆದು ಕೊಂಡು ಬಂದಿದ್ದ ಪಟವೆಗಾರ ಸಾಮಾನನ್ನು ಇಳಿಸಿ, ಆವರಿಗೆ ಅಂಗಡಿ ಹಚ್ಚಿಸಿ ಹೊರಟು ಹೋದರು. ನಾನು ಬೇರೆ ಸ್ಥಳದಲ್ಲಿ ಅಂಗಡಿ ಹಚ್ಚಿಕೊಂಡು ಕೂತಿದ್ದೆ. ಮಧ್ಯಾಹ್ನ ಸ್ವಾಮಿಗಳು ಸಂತೆ ಒಳಗೆ ಸುತ್ತಿನೋಡಿ ನನ್ನ ಅಂಗಡಿ ಬಳಿ ಬಂದು ಕೂತರು. ಅಷ್ಟರಲ್ಲೇ ಊರೊಳಗಿಂದ ಒಬ್ಬ ಹುಡುಗ ಬಂದು—ಸ್ವಾಮಿ, ನಮ್ಮ ಒಂದು ಕರು ದೊಡ್ಡಿಗೆ ಹೋಯಿತಾರೆ; ಏನು ಕೊಡಲೇ? ಎಂತಾ ಕೇಳಿದ. ಐದಾಣೆ ಕೊಡಬೇಕೆಂತಾ ಹೇಳಿದರು. ನನ್ನ ಕೂಡಿದ ಕರುವಿಗೆ ೫ ಆಣೆ ಕೊಡಬೇಕೇ ಎಂತಾ ಕೇಳಿದ್ದಕ್ಕೆ ಸ್ವಾಮಿಗಳು—ಬುಕ್ಕು ತೆಗೆದುನೋಡು; ಮೂರು ದಿವಸವಾಯಿತು ಎಂದು ಹೇಳಿದರು. ಅದಕ್ಕೆ ಅವನು ಹೊರಟು ಹೋದನು. ನಾಟಕದ ಸ್ವಾಮಿಗಳಿಗೆ ಯಾವದೂ ವಸೂಲ್ ಆಗಲಿಲ್ಲ, ಖರ್ಚಿಗೆ ಹ್ಯಾಗೆ ಮಾಡಬೇಕೆಂತಾ ಕೇಳಿದರು. . . . . ಸ್ವಾಮಿಗಳು ಸಂತೆ ಒಳಕ್ಕೆ ಹೋದರು. ವ್ಯಾಪಾರ ನಿಂತಿತು. ನಾನು ಬಳೆ ಕಟ್ಟಿ ಥಂಡಿಗೆ ಭರ್ತಿಮಾಡಿ ಊರ ರಸ್ತೆಗೆ ಹೊರಟೆನು. ಅಷ್ಟರಲ್ಲಿ ಸ್ವಾಮಿಗಳು ಬಂದು ನಾಯಕರನ್ನು ಕಳಸಿ ಗಾಡಿ ಹಿಡಿಸಿಬಿಟ್ಟರು. ನಾನು ಗಾಡಿ ಇಳಿದು—ಏನು ಸ್ವಾಮಿ ಹಿಡಿಸಿದ್ದು? ಎಂದು ಕೈಮುಗಿದೆ. ನಮ್ಮ ನಾಲ್ಕಾಣೆ ಕೊಟ್ಟು ಹೋಗಬೇಕೇ ಹೊರತು ಹಾಗೇ ಹೋಗಕೂಡದು ಎಂದು ಹೇಳಿದರು. ಅದಕ್ಕೆ ನಾನು—ಎಲ್ಲರಿಂದಲೂ ವಸೂಲ್ಮಾಡಿದ್ದ ಪಟ್ಟಿ ಇದ್ದರೆ ನಾನೂ ಕೊಡುತ್ತೇನೆ ಎಂತಾ ಹೇಳಿದ್ದಕ್ಕೆ ಸ್ವಾಮಿಗಳು— . . . . . ನಾಲ್ಕಾಣೆ ಕೊಟ್ಟು ಆಚೆಗೆ ಹೋಗು ಎಂತಾ ಹೇಳಿದರು. ನಾಯಕರಿಗೆ—ಗಾಡಿ ಬಿಡಬೇಡವೋ ಖಂಡಿತ ವಸೂಲ್ಮಾಡಿಬಿಡುವಂತೆ ಹುಕುಂ ಆಯಿತು. ನಾಯಕ ಹುಕುಂ ಹೋಯಿತು. ಹೊತ್ತಿಲ ಹೋಗಿ ಹೊರಟು ಹೋದೆವು. ಪೋಲೀಸ್ ಕಾನ್ಸ್‌ಟೇಬಲ್‌ರು ಮುಸಲ್ಮಾನರು ನೂರು ಜನ ನಿಂತುಕೊಂಡು ನನಗೆ ಮಾಡುವ ನಿರ್ಬಂಧವನ್ನು ನೋಡುತ್ತಲೇ ನಿಂತಿದ್ದರು. ನನಗೆ ಯಾರ ಸಹಾಯವೂ ತಪ್ಪಿ ಹೋಯಿತು. ಆದಕಾರಣ ನಾಲ್ಕಾಣೆಯನ್ನು ಕೊಟ್ಟು ಮಾನಭಯದಿಂದ ಜಾಗ್ರತೆ ಹೊರಟು ಹೋದೆನು. . . . . . ಅಧಿಕಾರಿಗಳು ವಿಚಾರಿಸಿ ಮುಂದೆ ಈ ರೀತಿ ಆಗದಂತೆ ಏರ್ಪಾಡು ಮಾಡಬೇಕೆಂದು ಅರಿಕೆ ಮಾಡಿದೇನೆ.

೧೦—೯—೦೩ ಸುಂಕೋಜಿರಾವ್.

ಹುಳಿಯಾರು.

### ಪ್ರಜಾಪ್ರತಿನಿಧಿಗಳು,—ನೆಲಮಂಗಲ.

ಅಯ್ಯಾ,

ತಮ್ಮ ಆಗೋಷ್ಟು ೨೭ ನೇ ಪತ್ರಿಕೆಯಲ್ಲಿ ಯಥಾರ್ಥವಾದಿ ಎಂಬುವರು ನೆಲಮಂಗಲ ತಾಲ್ಲೂಕಿನಲ್ಲಿ ದಸರಾ ಮೀಟಿಂಗು ನಡೆಯುವ ಮೆಂಬರುಗಳನ್ನು ಚುನಾಯಿಸತಕ್ಕ ವಿಷಯದಲ್ಲಿ ದಾಸಪ್ಪನೆಂಬುವರು ಸಾವಿರಾರು ಖಂಡಗ ರಾಗಿ ಭತ್ತಗಳು ಬೆಳೆಯತಕ್ಕ ಜಮೀನು ಸಂಪಾದನೆ ಮಾಡಿರುತ್ತಾರೆಂತಲೂ ಇಂಥಾ ಪುಣ್ಯವಂತರು ಯಾರೂ ಈ ತಾಲ್ಲೂಕಿನಲ್ಲಿ ಇಲ್ಲವೆಂತಲೂ ಪ್ರಕಟಿಸಿರುತ್ತಾರೆ. ಮತ್ತು ಈ ವರಿಗೆ ನಾಲ್ಕು ಅಗರತಕ್ಕದ್ದು ಸುಳ್ಳೆಂತಲೂ ಈ ಮಾತು ಯಾರ ಕೇಳುವವಿಲ್ಲವೆಂತಲೂ ಅಷ್ಟನ್ನೇ ಕೊಟ್ಟಿರುತ್ತಾರೆ. ಇವರಿಗೆ ಮೊದಲ ರಿಜಿಸ್ಟರ್ ಸಾಹೇಬರವರಲ್ಲಿ ನಾನು ರಿಪ್ಲೈ ಅರ್ಜಿ ಮಹಜರಿನ ಮೊಕದ್ದಮೆಯಲ್ಲಿ ಕೊಟ್ಟಿದ್ದಕ್ಕಾಗಿ ಮೆ॥ ರಿಜಿಸ್ಟರು ಸಾಹೇಬರವರು ವಿಚಾರಣೆಯಿಂದ ೧ ತಿಂಗಳು ಕಠಿಣ ಸಜಾ ಕೊಟ್ಟು ಅನುಭವಿಸತಕ್ಕದಾಗಿ ಹುಕುಂ ಮೇಲೆ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರ ನೋಟೀಸಿಗೆ ತರಲು ಪ್ರಿಂಟಿಗೆ ಕೊಟ್ಟಿರುತ್ತೇನೆ. ಇವಿಗೂ ಒಂದು ಕಾಪಿಯನ್ನೂ ಕಳುಹಿಸಿ ಕೊಡುತ್ತೇನೆ. ಆದರೆ ಸಾವಿರಾರು ಖಂಡಗ ರಾಗಿ ಭತ್ತ ಬೆಳೆಯುತ್ತಾರೆ ಮತ್ತು ೩೦೦—೪೦೦ ರೂ. ಕಂದಾಯ ಕೊಡುತ್ತಾರೆಂತಾ ನಮೂದಿಸಿರುತ್ತೀರಿ. ಅದು ಪ್ರಿಂಟು ಮಾಡುವಾಗ್ಯವೊಳಗೆ ಜೋಡಿಸುವವರ ಮಿಸ್ಟೇಕೋ ಏನೋ ತಿಳಿಯದು. ೩೦ ರೂ., ೫ ನೋ ತಿಳಿಯದೆ ಮಾನವನ್ನು ಬಹಳ ಚಂಚಲವಾಗಿದೆ.

ದೊಡ್ಡಮನುಷ್ಯರಾಗಿಯೂ ಪುಣ್ಯವಂತರಾಗಿಯೂ ಇರುವ ಮೆ॥ ದಾಸಪ್ಪನವರು ಇದು ಸುಳ್ಳಾಗಿದ್ದ ಪಕ್ಷದಲ್ಲಿ ನನ್ನ ಮೇಲೆ ಛಾರ್ಜು ಮಾಡಬಹುದಾಗಿತ್ತಲ್ಲವೇ! ಅವರು ಛಾರ್ಜು ಮಾಡದೇ ಮೌನವೇ ತಿದ್ದನೆ ಇರುವದರಿಂದ ನನ್ನ ವಿಜ್ಞಾಪನೆ ನಿಜವೆಂದು ನಂಬುವುದಕ್ಕೆ ಮೊದಲನೇ ಸಾಕ್ಷಿಯಾಗಿರುತ್ತಲ್ಲವೇ!

ಗಂಗಯ್ಯನವರಿಗೆ ಕಂದಾಯ ಆದ್ದು ಸುಳ್ಳೆಂತಲೂ ತಿಳಿಸಿರುತ್ತಾರೆ. ಆದರೆ ಚಿಟ್ಟಿ ಕಾನಿಸ್ಟ್ರೇಶನ್ ಕೆಲಸದಲ್ಲಿದ್ದವರು ತಾಲ್ಲೂಕು ಬೋರ್ಡಿಗೆ ಒಪ್ಪಿ ಬರುವುದು ಯಾವ ನಂಬಿಕೆಯಾದ ಮಾತೋ! ಆದದರಿಂದ ಇವರೂ ಮಾನ್ಯಂಯುಳ್ಳವರು ಸಬ್ ರಿಜಿಸ್ಟ್ರಾರಾಗಿ ಬಂದರೆಂದು ತಿಳಿಯಬೇಕಾಗಿದೆ.

ಚನ್ನಿಂಗಪ್ಪನವರು ೨,೦೦೦ ಪಲ್ಲ ರಾಗಿ ಬೆಳೆಯುವದಾಗಿಯೂ, ಅವರ ಮನೇ ಆಶ್ರಿತರನ್ನು ಅವರೇ ಸಾಕಿಕೊಳ್ಳುವಂತೆಯೂ ತಿಳಿಸಿರುತ್ತಾರೆ. ಲೋಕದಲ್ಲಿ ಅನೇಕ ಧನಗಳು ಅನಕ್ಷರಸ್ಥರಾಗಿದ್ದಾಗ್ಯೂ ಪುಣ್ಯವಂತರಲ್ಲವೇ? ಇದಕ್ಕೆ ದೃಷ್ಟಾಂತವಾಗಿ ಹಿಂದೆ ಅಲ್ಲಾವುದ್ದೀನ್ ಮಹಮೂದನು ಚಕ್ರವರ್ತಿ ಎಂಬ ಹೆಸರಿನಿಂದ ಆಳಿದಾಗ್ಯೂ ನಿರಕ್ಷರಕುಕ್ಷಿ ಎಂಬ ಹೆಸರು ತಪ್ಪಿತೇ? ಆದರೆ ಚನ್ನಿಂಗಪ್ಪನವರು ೫,೦೦೦ ರೂ. ನ ಆಸ್ತಿ ಉಳ್ಳವರೇ ಸರಿ, ೪,೦೦೦ ನ ವರಿಗೆ ಇರತಕ್ಕ ಸಾಲ ಮಾತ್ರ, ಆವರಿಗೆ ಗಮನೆ ಆದ್ದಲ್ಲಾ. ಅದನ್ನೆಲ್ಲಾ ಆವರ ಋಣವೆಂಬದಾಗಿ ತಿಳಿದಿದ್ದಾರೇ ಹೊರತು ಸಾಲವಾಗಿ ಕಾಣಲಿಲ್ಲ.

ನ್ಯಾಯವಾಗಿರತಕ್ಕ ಸಂದರ್ಭವನ್ನ ನಾನು ತಮ್ಮ ಪತ್ರಿಕಾ ಮೂಲಕ ತಿಳಿಸಿದ್ದಕ್ಕೆ ಅಸ್ಪೃತನೆಂದು ತಿಳಿಸುವುದು ತುಂಬಾ ಶೋಚನೀಯವಾಗಿದೆ. ಮುಂಚಿತವಾಗಿಯೇ ನಮ್ಮ ಅಮಲ್ದಾರ್ ಸ್ವಾಮಿಯವರಿಗೆ ಈ ದೊಡ್ಡ ಮನುಷ್ಯರ ಯೋಗ್ಯತೆಗಳು ತಿಳಿದಿದ್ದ ಪಕ್ಷದಲ್ಲಿ ಬೇರೆ ಏರ್ಪಾಡೇ ಮಾಡುತ್ತಿದ್ದರೆಂಬದಾಗಿ ನಂಬುತ್ತೇನೆ. ಆದರೆ ಹೋಗಬಹುದು. ಇಂಥಾ ಪುಣ್ಯವಂತರು ಮೆಂಬರಾಗಿರುವಾಗ್ಯೆ ನೆಲಮಂಗಲ ತಾಲ್ಲೂಕಿನ ಪ್ರಜೆಗಳಿಗೆ ಯಾತಕ್ಕೆತಾನೇ ಚಿಂತೆ? ದೊಡ್ಡಮನುಷ್ಯರನ್ನು ಬದ್ನಾಮು ಮಾಡುವುದಕ್ಕೆ ಪ್ರಜಾಹಿತಚಿಂತಕನೆಂಬ ನಾನು ಮಾಡಿರುವ ಕುಚೋದ್ಯವೆಂದು ತಿಳಿಸಿರುತ್ತಾರೆ. ಇದು ಸುಳ್ಳು ಆಗಿದ್ದ ಪಕ್ಷದಲ್ಲಿ ಸರ್ಕಾರದವರೇ ಆಗಲಿ ಮೇಲ್ಕಂಡ ಮೆಂಬರುಗಳೇ ಆಗಲಿ ಏನು ಪ್ಯಾನಿಷ್ ಕೊಟ್ಟರೂ ಬದ್ಧನಾಗಿರುತ್ತೇನೆ. ಎದುರವರೇ, ದೂಷಿಸಬೇಕೆಂಬ ಆಸೆಯು ನನಗೆ ಇರುವುದಿಲ್ಲಾ. ಇದ್ದ ಲೋಪಗಳನ್ನ ತಮ್ಮ ಪತ್ರಿಕಾ ಮೂಲಕ ತಿಳಿಸಿರುತ್ತೇನೆ.

ಪ್ರಜಾ ಹಿತಚಿಂತಕ.

### ಕೊರಟಗೆರೆ ವಿಷಯಗಳು.

ಅಯ್ಯಾ

ಕೆಲವು ದಿವಸಗಳಿಂದ ಮಳೆಗಳಿಲ್ಲದೆ ಅಲ್ಪಸ್ವಲ್ಪವಾಗಿದ್ದ ಇರುವ ಬೆಳೆಗಳು ಮಗ್ಗುತ್ತಿವೆ. ಗ್ರಾಮವು ಅಲ್ಲಲ್ಲಿ ಗಲೀಜಾಗಿ ಮ್ಯುನಿಸಿಪಾಲ್ಟಿಯವರ ಸಹಾಯವನ್ನಪೇಕ್ಷಿಸುತ್ತಿದೆ. ಸುತ್ತಲೂ ವ್ಯಾಪಿಸಿರುವ ಸಾಂಕ್ರಾಮಿಕ ರೋಗವನ್ನು ತರದಂತೆ ಮಾಡಲು ಮ್ಯುನಿಸಿಪಾಲ್ಟಿಯವರು ಈ ಭಾಗಕ್ಕೆ ತುಂಬಾ ಗಮನಕೊಡಬೇಕಾಗಿದ್ದೆ. ಮೊನ್ನೆ ತಾನೆ ಬಂದ ಇಲ್ಲಿನ ಇನ್ಸ್‌ಪೆಕ್ಟರ್ ಅಧಿಕಾರಿಗಳು ಈಗೀಗ ಜನಾನುರಾಗ ಹೊಂದುತ್ತಿರುವದು ತುಂಬಾ ಸಂತೋಷ. ಮೊಹರಿರುವರು ಸ್ಥಳವನ್ನ ಗಳಿಸುವುದಕ್ಕಾಗಿ ಖಟಾಟಸರು ಬೇಡಿಸುತ್ತಿದ್ದಾರೆ. ಹೊಸದಾಗಿ ೨,೦೦೦ ರೂ. ಮಂಜೂರಿಸಿ ರಿಪೇರಿಮಾಡಿಸಿದ ತಾಲ್ಲೂಕ ಕಚೇರಿಯ ಮುಕ್ಕಾಲು ಭಾಗವೆಲ್ಲಾ ಸ್ಕೂಲಿಗಾಗಿ ವಹಿಸಿಕೊಟ್ಟಿರುವರು.

ಈ ತಾಲ್ಲೂಕಿನ ಅನೇಕ ಬಾಬುಗಳು ನಾಲಾ ಆಸ್ತಿಗೆ ಸೇರಿದವುಗಳು. ಈ ಊರು ಬಳಿಯಿರುವ ಸುವರ್ಣಮುಖಿ ನದಿಯ ನಾಲಾ ಕೆಳಗೆ ಬೆಳೆಯಾಗಿ ೩ ವರ್ಷಗಳಾದವು. ಇದು ಜೀವನದಿಯಲ್ಲದಿದ್ದರೂ ಕೃಷೀವಲರಾದ ರೈತರ ಆಕ್ರೋಶವನ್ನು ಕೇಳಿದರೂ, ಫಸಲಿನ ಸ್ಥಿತಿ ನೋಡಿದರೂ ಪೂರಾ ಕಂದಾಯವನ್ನೇ ವಸೂಲ್ ಮಾಡುತ್ತಾರೆ. ಈ ಮೂಲಕ ಪಡುವ ಪ್ರಜಾಕ್ಷೋಭೆಯು ಬರೆಯುವದಕ್ಕೇ ಆಗದು. ಲೇಟ್ ಚೀಫ್ ಕಮಿಷನರ ಸರ್ಕ್ಯುಲರ್ ಇಂಥ ವಿಚಾರದಲ್ಲಿ ರಿಮಿಷನ್ ಕೊಟ್ಟೇ ತೀರಬೇಕೆಂದಿರುವುದು. ಈಗಿನ ಅಧಿಕಾರಿಗಳು. . . . . . . ಫಸಲಿನ ಸ್ಥಿತಿ ಎಷ್ಟೇ ನಿಜವಾಗಿದ್ದರೂ ಬರುವ ಮೂಲಕ ಉತ್ತಮ ಸ್ಥಿತಿಗೆ ಬರುವರೆಂದು ಊಹಿಸಬೇಕಾಗಿದೆ. ಈ ಅನಾನುಕೂಲಗಳನ್ನು ನಮ್ಮ ಪ್ರೇಮಾರ್ದ್ರ ಮಹಾರಾಜಾವರರಾದರೂ ತೊಲಗಿಸಲಾರರೇ!

ನಮ್ಮ ಸಬ್ ತಾಲ್ಲೂಕನ್ನು ತಾಲ್ಲೂಕನ್ನಾಗಿ ಮಾಡಿಕೊಳ್ಳಲು ಗೌರ್ನಮೆಂಟಿಗೆ ಕಳುಹಿದ್ದ ಇಲ್ಲಿನವರ ಅರ್ಜಿಗೆ ಉತ್ತರವು ಇನ್ನೂ ಬರಲಿಯಿಲ್ಲ. ಶೀಘ್ರದಲ್ಲಿಯೇ ದೊರೆಯಬಹುದು.

ಬಹಳ ಬಲವಾಗಿ ಅನ್ಯರ ಕೈಸೇರಿದ್ದ ದೇವದಾಯ ಬ್ರಹ್ಮದಾಯಗಳನ್ನು ಹೊಸೋದ್ಧಾರ ಮಾಡಲೆಳಸಿರುವ ಆಳುವ ಮಹಾಸ್ವಾಮಿಯವರಾದ ಶ್ರೀಮತ್ಕೃಷ್ಣರಾಜ ಪ್ರಭುಗಳೂ ತನ್ಮಂತ್ರಿವರ್ಯರಾದ ಶ್ರೀಮಂತ ಕೃಷ್ಣಮೂರ್ತಿಗಳೂ ಈಗ ನಡೆಸುತ್ತಿರುವ ವಿಷಯಗಳೆಲ್ಲಾ ಸರ್ವಜನಾನುಮೋದವುಗಳೇ. ಆದರೂ ಗ್ರಾಮನಕ್ಷೆಯಿಂದ ಬಿಟ್ಟಿರತಕ್ಕವರ ವರೆಗೂ ಬಂತಿದ್ದರೆಲ್ಲರೂ ಕೆಲವು ವಿಷಯದಲ್ಲಿ ಏಕಕಾಲ್ಯವಾಗುವ ಪದ್ಧತಿಯೇ ವಿಶೇಷವಿರುವುದರಿಂದಲೂ, ಇಂತಹ ವಿಷಯಗಳಲ್ಲಿ ತಮ್ಮ ನ್ಯಾಯವನ್ನು ತಿಳಿಸಬೇಕೆಂದು ಕೌನ್ಸಿಲರ್ ಮೊದಲಾದವರಲ್ಲಿ ಅಪೀಲ್ ಮಾಡುವರು. ಇಂಥಾ ಅಪೀಲುಗಳು ವಿಶೇಷ ಪರೀಕ್ಷೆಯಾಗಿ ವಿಚಾರಿಸುವ ಸಂಭವ ಬಹುಕಾಲದಿಂದ ಬೇಜಾರಿನಿಂದಲೋ ಕೆಳಗಿನ ಕೋರ್ಟಿನವರು ಯಾವ ಯಾವ ವಿಚಾರದಿಂದ ಧನವನ್ನೆಯಿಂದಲೋ ಮೊದಲಿನವರ ಮಾರ್ಗವನ್ನೇ ಆಯಾ ಅಧಿಕಾರಿಗಳೂ ಅನುಸರಿಸುತ್ತಿರುವರು. ಇದರಿಂದ ನಷ್ಟಕಷ್ಟವನ್ನು ಪಕ್ಷಗಾರರು ನ್ಯಾಯಮಾರ್ಗದಿಂದನ್ನು ಕಾಣವೇ ಹೋದರೂ ಏನೂ ದುಃಖಿಸುವೆಂದು ಬರೆಯಲೇಬೇಕಾಗಿದೆ. ಈ ತಾಲ್ಲೂಕಿನ ಬೋರಬಂಡೇನಹಳ್ಳಿಗಾಮದ ಒಳಗೆರೆಯಲ್ಲಿ ನಾಲ್ಕರದ ದತ್ತಿನ ಒಂದನ್ನು ಹೋದರೆ ಪ್ರಪ್ರಭ ಶಿಷ್ಯಗಳು ಬಹುಕಾಲ ಮೂಲಕ ಪಡೆದು, ನಾಗಬಹುದಾದಲೂ ಬಿಟ್ಟು, ರಕ್ಷಕರೆಲ್ಲಾ ತಮ್ಮ ಮನೆಯಿಂದ ಹಾಕಿಕೊಳ್ಳುವರು. ದೇವಾಲಯಕ್ಕೆ ಗೋಜರವಿಲ್ಲದೇನೆ ಇತರರಿಗೆ ಖರ್ಚು ಮಾಡುವ ಮೊದಲಿನವರ ಸ್ವಾಧೀನಕ್ಕೆ ಜಮೀನು ಬಂತು. ಈ ವಾರ್ತೆಯನ್ನು ಕೇಳಿದ ಜೋಯಿಸರು ಒಳಗೆರೆ ಜಮೀನು ನಮಗೆ ಕೊಡಬೇಕೆಂಬ ಲೇಟ್ ಚೀಫ್ ಕಮಿಷನರ ಸರ್ಕ್ಯುಲರ್ ಇದೆಯೆಂತಲೂ, ಮೋದರ್ ಮತ್ತು ಪ್ಯುನರ್ ಕರೆಗಳ ರಿಪೇರಿಗಳನ್ನು ನಿಗಾಯಿಟ್ಟು ಮಾಡಿಸಬೇಕೆಂಬ ಈಗಿನ ನಮ್ಮ ಮಹಾರಾಜರವರ ಪ್ರೊಸೀಡಿಂಗ್ಸ್ ನ ಸಕ್ರಮದಶಕ್ಕೆ ಇದು ಅಭ್ಯಂತರವಾಗಿದೆಯೆಂತಲೂ, ಹೀಗೆ ಕೊಡಲು ಅನುಕೂಲಕರದ ಭಾಗಕ್ಕೆ ಹಾಲೀ ನಮೂದಾದ ದೇವಿಗಳನ್ನು ಕೊಟ್ಟು ಸೆಟ್ಲ್‌ಮೆಂಟ್ ಕಂಡಾಯಕೊಟ್ಟುಕೊಂಡು ಕೆರೆಗೆ ಹೆಚ್ಚಲು ಮುಕ್ಕಾದಂತೆ ಮಾಡುವೆವೆಂದೂ ಕೊಟ್ಟಿನ ಪಂತ ಸಿ, ಯಾವಾಗಲಿ ಮತ್ತೊಬ್ಬರಾಗಲಿ ಕೊಡಬೇಕೆಂತಲೂ, ಇನ್ನೂ ಕೆಲವಂಶಗಳನ್ನು ತೋರಿಸಿ, ಡಿಸ್ಟ್ರಿಕ್ಟ್ ವರ ವರಿಗೂ ಕೊಟ್ಟ ಅರ್ಜಿಗಳನ್ನು ಅನುಮೋದಿಸದೇಲೂ, ನ್ಯಾಯವನ್ನು ವಿನಿಯೋಗಿಸದೇ ಬಲ ಪೂರ್ವದಿಂದ ರೆವಿನ್ಯೂ ಕೌನ್ಸಿಲ್ ಕೋರ್ಟಿಗೆ ಅಪೀಲ್ ಹಾಕಿದರು. ಅಲ್ಲಿ ಇದೇ ದಿವಿವಾದವನ್ನು ಲೇಟ್ ಅಮಲ್ದಾರ್ ಮ. ಬಿ. ತಿರುನಾರಣಯ್ಯಂಗಾರ್ಯರು ರೀಂಪ್ಲಾಂಟೇಷನ್ನಿಗೆ ಸೇರಿಸುವದರಿಂದ ಯಾವ ಸಿದ್ಧಂಥವೂ ಉಂಟಾದೆಂದು ಶಿಫಾರಸು ಮಾಡಿದ್ದರೆಂಬ ಮೊದಲಿನ ಅಪೀಲ್ ಕಾಗದದ ವಿನಯದಿಂದ ಜೋಯಿಸರು ತೋರಿಸಿದರೂ, ಸರಿಯಾಗಿ ಇದನ್ನು ಮೊದಲಿದ್ದ ಜೋಡಿದಾರರನ್ನು ತುಂಬಾ ನಿರಾಕರಿಸಿದರು. ತಮ್ಮ ವಿಚಾರವನ್ನು ನುಂಗಿಕೊಂಡು ಮುಖಾಂತರದಲ್ಲಿ ಆದನ್ನು ತಿಳಿಸಿದಲ್ಲಿ ನ್ಯಾಯದೊರೆಯದೇ ಹೋಗದೆಂದು ಅನೇಕರು ಅವರಿಗೆ ಪ್ರೋತ್ಸಾಹಿಸುತ್ತಿದ್ದಾರೆ. ಇಂಥಾ ಅನಾನುಕೂಲ ನಿವಾರಣೆಯು ಯೋಚನೆ ಮಾಡಬೇಕಾದ್ದು ಮೇಲ್ಕಂಡವರ ಮುಖ್ಯ ಕೆಲಸವಾಗಿದೆಯೆಂತಲೂ, ದಿನೇ ದಿನೇ ಸುಕಾರ್ಯತತ್ಪರರಾಗಿರುವ ನಮ್ಮ ಪ್ರೇಮಾರ್ದ್ರ ಮಹಾರಾಜರವರಿಗೂ ಅವರ ಮಂತ್ರಿವರರಿಗೂ ದೇವರು ಆರೋಗ್ಯಾದಿ ಸುಖಗಳನ್ನು ಕೊಡಲೆಂದೂ ಸರ್ವರೂ ಪ್ರಾರ್ಥಿಸುತ್ತಿದ್ದಾರೆ.

ತಮ್ಮ ವಿಧೇಯ,

ಕೊರಟಗೆರೆ ಜಗನ್ನಾಥರಾವ್.

## ಇಂಡಿಯಾ ದೇಶದ ವೃತ್ತಾಂತಗಳು.

ಸೋಮಾಲಿಲ್ಯಾಂಡಿನ ಯುದ್ಧಕ್ಕೆ ಕಳೆದ ವಾರ ಬೊಂಬಾಯಿಂದ ೫೪೦ ಮಂದಿಯುಳ್ಳ ಸಿಕ್ಕರ ಸೈನ್ಯವನ್ನು ಹಡಗಿನ ಮೇಲೆ ಕಳುಹಿಸಿಕೊಟ್ಟರು.

****

ಪಂಜಾಬ್ ಅಧಿಕಾರ್ಯದಲ್ಲಿ ಕಲಾಯ ಎಂಬೊಂದು ನಾಲಾ ಕಾಮಗಾರಿ ಮಾಡಿಸಿ ಜಮೀನ್ ವ್ಯವಸಾಯವನ್ನು ಅಭಿವೃದ್ಧಿ ಪಡಿಸಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ೧೭ ಲಕ್ಷ ರೂಪಾಯಿ ಮಂಜೂರು ಮಾಡಿದ್ದಾರೆ.

...ಟಾಯಿಸಲ್ಲಿ ಸಿಕ್ಕಿಬಿದ್ದ ಫ್ರಾಂಸಿಸನವನೊಬ್ಬನೂ, ಸ್ವಿಸ್ಸ ...ವನೊಬ್ಬನೂ ಅಂತರಂಗದಲ್ಲಿ ಬೋಯರು ಸಾಧ್ಯಗಳನ್ನು ...ದ್ದರು. ಕಳೆದ ವಾರ ಅವರಿಬ್ಬರಿಗೂ ೫, ೭ ವರ್ಷಗಳ ...ಸಜಾ ಆಯಿತು.

* * * *

...ವ್ಯಸಿರಾಯಿ ಪ್ರಭುಗಳು ನೊವೆಂಬರ್ ೧೯ಕ್ಕೆ ಸಿಂಲಾ ...ಹೊರಟು, ಪಟಿಯಾಲಾ, ಜೀಂದ್, ನಭಾ, ಭಾವಲ್‌ಪುರ, ...ವೊದಲಾದ ದೇಶೀಯ ಸಂಸ್ಥಾನಗಳಲ್ಲಿ ಸಂಚಾರ ಮಾಡಿ ...ಬರುವವರಾಗಿದ್ದಾರೆ.

* * * *

...ಮೇರಿಕದಿಂದ ಬಂದಿರುವ ತಂತಿ(ವರ್ತಮಾನದಿಂದ ಶ್ರುತವಾಗು ...ದೆನೆಂದರೆ, ನಮ್ಮ ವೈಸಿರಾಯಿಯವರ ಪತ್ನೀಯವರು ಮುಂದಿನ ೩ ...ಬರ್ ತಿಂಗಳಲ್ಲಿ ಅಮೇರಿಕಕ್ಕೆ ಹೋಗಿ ಕೆಲವು ಕಾಲ ಅಲ್ಲಿದ್ದು ...ವವರಾಗಿದ್ದಾರೆ.

* * * *

ಮದರಾಸ್ ಹೈಕೋರ್ಟಿನ ಚೀಫ್ ಜಸ್ಟಿಸರಾದ ಸರ್ ಆರ್ನಾ ...ವೈಟ್ ಯವರು ಅಕ್ಟೋಬರು ೩ ರಿಂದ ಆರು ತಿಂಗಳ ರಜಾ ...ಯುತ್ತಾರೆ. ಅವರ ಕೆಲಸವನ್ನು ಸರ್ ಎಸ್. ಸುಬ್ರಹ್ಮಣ್ಯ ಅ ...ರ್, ಕೆ. ಸಿ. ಐ. ಇ. ಯವರು ಬದಲಿ ನೋಡುವರು.

* * * *

ಕಲ್ಕತ್ತಾ ಪಟ್ಟಣದಲ್ಲಿರುವ ಸೆಂಟ್ ...ದ ... ...ವರನ್ನು ... ... ಅವರನ್ನು ... ... ...ದ ... ...ಬಿಸಿ ... ಮುಂಬಯಿಗಳು ... ...ನ ...

* * * *

... ... ... ... ೩,೯೯೦ ... ... ... ... ... ... ... ... ... ... ... ... ... ... ... ..., ೧,೫೯೦ ... ... ... ... ...

* * * *

ಮುಂಬಯಿ ... ... ಮ್ಯುನಿಸಿಪಲ್ ... ... ... ... ... ... ... ... ... ... ... ... ... ... ... ... ... ... ... ... ... ... ...

* * * *

... ಮ್ಯುನಿಸಿಪಾಲಿಟಿಯವರು ... ... ... ... ... ... ... ... ... ... ... ... ... ... ... ... ... ... ... ... ಮ್ಯುನಿಸಿಪಾಲಿಟಿಯಿಂದ ರೂ. ...,೦೦೦ ... ... ... ... ...

* * * *

... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... '... ...' ... ... ... ... ... ... ...ತ್ತಾರೆ.

* * * *

... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ೧೫—೨೦ ... ... ... ... ... ...

* * * *

ಮೆ|| ಟಿ. ರತ್ನಸಭಾಪತಿ ಪಿಳ್ಳೆಯವರು ನಾಗಪಟ್ಟಣದಲ್ಲಿ ಅನಾ ...ರಿಗೂ ದಿಕ್ಕಿಲ್ಲದವರಿಗೂ ಒಂದು ದೊಡ್ಡ ಮನೆಯನ್ನು ಬಹಳ ...ವಾಗಿ ಕಟ್ಟಿಸಿ, ಕಳೆದವಾರ ಅದನ್ನು ಪ್ರತಿಷ್ಠೆ ಮಾಡಿಸಿದರು. ಆ ದಿನ ಅಲ್ಲಿ ಸುಮಾರು ೧,೦೦೦ ಜನಕ್ಕಿಂತಲೂ ಹೆಚ್ಚಾಗಿ ಬಡಬ ...ರಿಗೆ ಸಂತರ್ಪಣೆಯನ್ನು ಮಾಡಿಸಿದರು. ಇದಲ್ಲದೆ ಆ ಅನ್ನಸತ್ರ ...ಕಾಲ ನಡೆಸಂತೆ ೧೦,೦೦೦ ರೂ. ಫಂಡು ಹಾಕಿದ್ದಾರೆ. ಅವರ ...ಯನ್ನೂ ಧರ್ಮಬುದ್ಧಿಯನ್ನೂ ಎಲ್ಲರೂ ಕೊಂಡಾಡಬೇಕಾಗಿದೆ.

* * * *

ಪಿಬೆರ್ (ಅಂಗ್ಲ) ದ್ವೀಪದಲ್ಲಿ ಗೌವರ್ನರಾಗಿರುವ ಸರ್ ...ವೇ ಯವರಿಗೆ ಅಲ್ಲಿಂದ ವರ್ಗವಾಯಿತು. ಆ ಕೆಲಸಕ್ಕೆ ಸರ್ ಹೆನ್ರಿಬ್ಲೇಕ್ ಯವರು ನೇಮಕವಾಗಿದ್ದಾರೆ. ಇವರು ಐರ್ಲಾಂ ಡಿನಲ್ಲಿ ಹುಟ್ಟಿ ಬೆಳೆದವರು; ಅವರಿಗೆ ೬೩ ವರ್ಷ ವಯಸ್ಸಾಗಿದೆ. ಇವರು ಇದಕ್ಕೆ ಮುಂಚೆ ಇಂಗ್ಲಿಷರ ಅನೇಕ ಸ್ವಾಸ್ಥ್ಯಗಳಲ್ಲಿ ಗೌವರ್ನರ್ ಪದವಿಯನ್ನನುಭೋಗಿಸಿ ಬಂದಿರುವರು. ಈಗಲೂ ಕಳೆದ ೧೮೯೭ ರಿಂದ ಇದುವರೆಗೆ ಅವರು ಹಾಂಕಾಂಗಿನಲ್ಲಿ ಗೌವರ್ನರಾಗಿರುವರು.

* * * *

ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರವು ಪನ್ನೆರಡು ಪ್ರಾಂತ್ಯಗನ್ನು ಆವರಿಸಿಕೊಂಡಿರುವುದು. ಕಳೆದ ವಾರ ಆ ಪ್ರತಿ ಎಂಟು ಪ್ರಾಂತ್ಯಗಳಲ್ಲಿ ಹಿಂದಿನ ವಾರಕ್ಕಿಂತ ಪ್ಲೇಗ್ ಮರಣಗಳು ಹೆಚ್ಚಿದವು. ಹ್ಯಾಗೆಂದರೆ, ಬೊಂಬಾಯಿ ಅಧಿಪತ್ಯ ೭,೫೭೭, ಮಧ್ಯ ಇಂಡಿಯ ೩,೧೭೭, ಬೇರಾರ್ ೬೩೭೩, ಮದರಾಸ್ ಅಧಿಪತ್ಯ ೧೬೨, ಮಧ್ಯಪ್ರಾಂತ್ಯಗಳು ೬೫, ಪಂಜಾಬ್ ೩೧, ಕಲ್ಕತ್ತೆ ೧೩, ಬಂಗಾಳ ೧೧; ಹೈದರಾಬಾದ್ ಸಂಸ್ಥಾನದಲ್ಲಿ ಪ್ಲೇಗ್ ಮರಣಗಳು ೭೯೦ ರಿಂದ ೭೨೦ ಕ್ಕೂ, ಬೊಂಬಾಯಿಪಟ್ಟಣದಲ್ಲಿ ೯೭ ರಿಂದ ೯೧ ಕ್ಕೂ ಕಡಿಮೆಯಾದವು.

* * * *

ಬಂಗಾಳಾ ಅಧಿಪತ್ಯಕ್ಕೆ ಸೇರಿದ ೩೦ ಸಹಸ್ರ ಪ್ರಜಾಸಂಖ್ಯೆಯುಳ್ಳ ... ಮ್ಯುನಿಸಿಪಲ್ ಕಮಿಷನರುಗಳು ಆ ಪಟ್ಟಣವನ್ನು ... ೧೮೯೫ನೆ ಇಸವಿಯಲ್ಲಿ ... ಸರ್ಕಾರದವರು ಅವರನ್ನು ... ಅವರು ... ಪಟ್ಟಣದ ಆರೋಗ್ಯ ... ... ಇದನ್ನು ನೋಡಿ ಗೌವರ್ನಮೆಂಟಿನವರು ಆ ಮ್ಯುನಿಸಿಪಲ್ ಕಮಿಷನರುಗಳನ್ನೆಲ್ಲಾ ಒಂದು ವರ್ಷದ ತನಕ ... ಮಾಡಿ, ತಾವೇ ಸ್ವತಂತ್ರರಾಗಿ ಪಟ್ಟಣವನ್ನು ... ಮಾಡಿಸುತ್ತಿದ್ದಾರೆ.

* * * *

ಅಮೇರಿಕ ರಾಜ್ಯಕ್ಕೆ ಸೇರಿದ ಫಿಲಿಡೆಲ್ಫಿಯಾ ನಗರದಲ್ಲಿ ... ಕಾರ್ಖಾನೆಗಳನ್ನು (ಹರಿಸಿ, ಬುದ್ಧ, ಗಣೇಶ ಮೊದಲಾದ ವಿಗ್ರಹಗಳನ್ನು ... ... ಬಹು ಸುಂದರವಾಗಿ ... ಹಿಂದುಸ್ಥಾನಕ್ಕೆ ರವಾನೆ ಮಾಡುತ್ತಿದ್ದಾರೆ. ... ... ಹಿಂದುಗಳು ಈ ವಿಗ್ರಹಗಳಲ್ಲಿ ... ... ಇಲ್ಲವೆಂದು ತಿಳಿದಿರುವುದರಿಂದಲೂ ಅಂಥಾ ವಿಗ್ರಹಗಳು ... ... ಹಿಂದುಗಳು ... ... ಪ್ರತಿ ವಿಗ್ರಹಕ್ಕೂ ೧೦೦ ರಿಂದ ೧೫೦ ರೂ. ವರೆಗೆ ಬೆಲೆಯಾಗುತ್ತದೆ.

* * * *

ಕಳೆದ ವಾರ ಸಿಂಲಾ ಪಟ್ಟಣದ ... ಬಂಗಲೆಯಲ್ಲಿ ದೊಡ್ಡ ದೊಡ್ಡ ಸರ್ಕಾರದವರೆಲ್ಲಾ ಸೇರಿ ... ವಿಷಯವಾಗಿ ... ಸರ್ ... ... ... ... ಕಳೆದ ವರ್ಷ ೫೦ ಲಕ್ಷ ... ... ... ... ... ... ... ... ... ... ... ... ... ... ... ... ... ... ... ... ... ... ... ... ಎಂದು ತಿಳಿಯಪಡಿಸಿದರು.

* * * *

ಕಳೆದ ... ತಿಂಗಳಲ್ಲಿ ಕಾಶ್ಮೀರದಲ್ಲಿ ಪ್ರಾಪ್ತವಾದ ವಿಪರೀತ ಮಳೆಯಿಂದ ಪ್ರಜೆಗಳಿಗೆ ಎಷ್ಟು ಕಷ್ಟ ... ... ... ... ... ಸರ್ಕಾರದವರು ... ... ... ... ಅಲ್ಲಿ ೭,೦೦೦ ಮನೆಗಳು ... ... ೩೦,೦೦೦ ಪ್ರಜೆಗಳು ಮನೆಗಳನ್ನು ಕಳೆದುಕೊಂಡು ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ಅಲ್ಲಿ ... ... ... ... ... ... ...

* * * *

ಬೊಂಬಾಯಿ ಗೌವರ್ನರಾಗಿದ್ದ ಲಾರ್ಡ್ ನಾರ್ಥಕೋಟ್ ಯವರು ಪತ್ನೀಸಹಿತ ಕಳೆದವಾರ ದಕ್ಷಿಣ ... ... ಗೌವರ್ನರವರು ಸವಾರಿ ಹೊರಟು ಪಟ್ಟಣದ ಮುಖ್ಯ ಬೀದಿಗಳಿಗೆಲ್ಲಾ ಹೋಗಿ ಜನರ ಸಂತೋಷಧ್ವನಿಯನ್ನು ಅಂಗೀಕರಿಸಿ ವಂದಿಸಿದರು. ... ... ... ... ರಾಣೀಯರುಗಳು ಗೌವರ್ನರವರ ಪತ್ನೀಯವರನ್ನು ಕರೆಸಿಕೊಂಡು, ... ... ಮರ್ಯಾದೆ ಮಾಡಿದರು. ... ... ... ... ... ... ... ... ಸುಮಾರು ೭೦ ಮಂದಿ ಹಾಜರಾಗಿದ್ದು ಗೌವರ್ನರ ಪತ್ನೀಯರನ್ನು ಉಪಚರಿಸಿ ಸಂತೋಷಪಡಿಸಿದರು. ಹೊಸ ಗೌವರ್ನರು ಬಂದು ಛಾರ್ಜ ತೆಗೆದುಕೊಳ್ಳುವ ತನಕ ಸರ್ ಜಾನ್ ... ಯವರು ಗೌವರ್ನರಾಗಿ ಕೆಲಸ ನೋಡುವರು.

* * * *

ಸಿಂಲಾ ಪಟ್ಟಣದಲ್ಲಿ ... ಎಂಬಾತನು ಒಂದು ಛಾರೀ ಹೊಟೇಲನ್ನು ಇಟ್ಟು ನಡಸುತ್ತಾ ಬಂದಿದ್ದಾನೆ. ಈ ಹೊಟೇಲಿಗೆ ಯೂರೋಪಿಯನ್ ಸರ್ಕಾರದವರೆಲ್ಲ ಹೋಗಿ ಇಳಕೊಳ್ಳುತ್ತಾರೆ. ಅವರಿಗೆ ಬೇಕಾದ ಸೌಕರ್ಯಗಳೆಲ್ಲಾ ಆ ಹೊಟೇಲಿನಲ್ಲಿ ಸ್ವಲ್ಪವೂ ಲೋಪವಿಲ್ಲದೆ ಒದಗಿಸಲ್ಪಟ್ಟವೆ. ಇಂಥಾ ಕಟ್ಟಡಕ್ಕೆ ಕಳೆದವಾರ ಬೆಂಕಿ ಬಿದ್ದು ಬಹು ಭಾಗವೆಲ್ಲಾ ಉರಿದುಹೋಯಿತು. ... ಈ ಹೊಟೇಲಿನ್ನೆಲ್ಲಾ ಕಟ್ಟಡದ ... ಬೆಂಕಿಯು ಬಹು ಬೇಗ ಹತ್ತಿ ಎಲ್ಲಾ ಕಡೆಗಳಿಗೂ ವ್ಯಾಪಿಸಿ ... ... ಮಾಡಿದ ಪ್ರಯತ್ನಗಳೆಲ್ಲಾ ನಿಷ್ಫಲವಾದುವು. ಬೆಂಕಿ ಹತ್ತಿಕೊಂಡಾಗ ... ... ... ಸಂಸಾರಗಳೆಲ್ಲಾ ಬೇಗ ಬೇಗನೆ ತಮ್ಮ ಪದಾರ್ಥಗಳನ್ನು ಹೊರಕ್ಕೆ ಸಾಗಿಸಿಕೊಂಡು ಬಂದರು. ಪ್ರಾಣನಷ್ಟವೇನೂ ಆಗಲಿಲ್ಲ.

* * * *

ಅಮೇರಿಕಕ್ಕೆ ಸೇರಿದ ಸೆಂಟ್ ಲೂಯಿಸ್ ನಗರದಲ್ಲಿ ಬರುವ ವರ್ಷ ಪ್ರದರ್ಶನೋತ್ಸವ ನಡೆಯುವುದು. ಹಿಂದುಸ್ಥಾನದಲ್ಲಿ ದಕ್ಷಿಣ ದೇಶದ ... ... ಈ ಪ್ರದರ್ಶನದ ... ... ತೋಟಗಳಲ್ಲಿ ಬೆಳೆವ ವ್ಯಾಪಾರ ಸರಕುಗಳನ್ನು (ಟೀ, ಕಾಫಿ ಮುಂತಾದ್ದನ್ನು) ಕಳುಹಿಸಿಕೊಟ್ಟು, ಅಲ್ಲಿ ಈ ... ... ... ... ... ಪ್ರಯತ್ನಪಟ್ಟರು. ಈ ಕಾರ್ಯಕ್ಕೆ ಸುಮಾರು ೬೫,೦೦೦ ರೂ. ಬೇಕಾಗುವುದೆಂದು ... ... ... ... ದಕ್ಷಿಣ ದೇಶದ ... ... ... ... ... ... ... ೫೫,೦೦೦ ರೂ.; ಮದರಾಸ್ ಗೌವರ್ನಮೆಂಟಿನವರು ... ರೂ., ... ... ೧೦,೦೦೦ ರೂ., ... ... ... ... ... ... ... ... ... ... ... ... ... ... ... ... ಎಂದು ನಿರೀಕ್ಷಿಸಲ್ಪಟ್ಟಿದೆ.

* * * *

... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ...

* * * *

ಜಯಪುರ ಸಂಸ್ಥಾನದ ದೊಡ್ಡ ದೊಡ್ಡ ... ... ... ಹಿಂದುಗಳು ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ಯಾಗಲಾರದು.

## ತಾಲ್ಲೂಕು ವರ್ತಮಾನಗಳು.

ಕುರಿಕ್ಕೋಡೆ.—... ... ... ... ... ... ... ... ... ... ಬೆಳಗಿನ ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ಅವರು ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ರೈಲ್‌ವೆ ಅಧಿಕಾರಿಗಳು ... ... ... ... ... ... ... ... ... ... ... ೨೦ ರೂ. ... ... ... ... ... ... ೧೦ ರೂ. ... ... ... ... ... ... ... ... ... ... ...

ಸಮೀಪವಾಗಿ ತಿಳಿಬಂದಿದೆ. ರಾತ್ರಿ ಕಾಲದಲ್ಲಿ ಜನರು ಪ್ರಯಾಣಮಾಡುವಾಗ್ಯೆ ಹಳ್ಳದಲ್ಲಿ ಕಾಲು ಜಾರಿ ಬೀಳುವುದು ಕಷ್ಟವಾಗುತ್ತೆ. ಇಂಥಾ ಒಂದು ಹಾದಿಯು ರಸ್ತೆಯಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರು ಟ್ರೈಸಿಕಲ್ ಗಾಡಿಯ ಮೇಲೆ ಹೋಗುವಾಗ ಬೀಳುತ್ತಿದ್ದರೆಂದು ಜನರು ಹೇಳುತ್ತಾರೆ. ಕೆಲವು ಗಲ್ಲಿಗಳಲ್ಲಿ ಕಸದ ಕೊಳೆ, ಅಲ್ಲಲ್ಲೇ ಗುಡ್ಡೆ ಬಿದ್ದಿದೆ. ಮಳೆಗೆ ಅದೆಲ್ಲಾ ಕೊಳೆತು ದುರ್ವಾಸನೆಗೆ ಆಸ್ಪದ ಉಂಟು. ಈ ಹೆಚ್ಚು ಅನುಕೂಲಗಳನ್ನೆಲ್ಲಾ ನಮ್ಮ ಅದುಸ್ತರದ ಮುನಿಸಿಪಲ್ ಮೆಂಬರುಗಳು ಸಹ ನೋಡುತ್ತಿದ್ದರೂ ಪರಿಹರಿಸದೆ ಇರುವುದು ಆಶ್ಚರ್ಯ.—ಇಲ್ಲಿನ ಸಬ್ ಡಿವಿಜನ್ ಸಾಹೇಬರು ಜನರ ಕಷ್ಟ ದುಃಖಗಳನ್ನು ಬಹು ನ್ಯಾಯದಿಂದಲೂ, ಧರ್ಮದಿಂದಲೂ, ವಿಚಾರಿಸುವುದರಿಂದ ಜನರಿಗೆಲ್ಲಾ ಬಹು ಸಂತೋಷ ಉಂಟು.

**ಕನಕಪುರ:**—ಕನಕಪುರ ತಾಲ್ಲೂಕು ಕಾಡೀಹಳ್ಳಿ ಗ್ರಾಮವು ೩೦೦ ಮನೆಯುಳ್ಳದ್ದಾಗಿಯೂ, ಜನಭರಿತವಾದದ್ದಾಗಿಯೂ, ಒಳ್ಳೇ ಎತ್ತರ ಪ್ರದೇಶದಲ್ಲಿರುವುದಾಗಿಯೂ ಇದೆ. ಇಂಥಾ ಗ್ರಾಮಕ್ಕೆ ನೀರಿನ ಅನುಕೂಲವು ಎಷ್ಟು ಹೇಳಿದರೂ ಸ್ವಲ್ಪವೇ ಸರಿ ಮತ್ತು ಇಲ್ಲಿಗೆ ೪ ಮೈಲ್ ಫಾಸಲೆಯಲ್ಲಿ ಅಯ್ಯನ ಕೆರೆ ಎಂಬ ದೊಡ್ಡ ಕೆರೆ ಇದೆ. ಆ ಕೆರೆಯಿಂದಲಾದರೂ ನಾಲಾ ತಂದು, ಈ ಗ್ರಾಮದಲ್ಲಿ ಹರಿಯುವಂತೆ ಮಾಡಿದರೆ ಸರ್ಕಾರಕ್ಕೆ ಉತ್ಪತ್ತಿಯೂ, ರೈತರಿಗೆ ಅನುಕೂಲವೂ ಆಗುತ್ತೆ. ಇಲ್ಲಿಗೆ ೩ ಮೈಲ್ ಫಾಸಲೆಯಲ್ಲಿ ಹಿರೇಗೌಡನ ಹಳ್ಳ ಹೊಸದಾಗಿ ದೊಡ್ಡ ಕೆರೆಯಾಗುತ್ತಿರುವುದೂ, ಸರ್ವೆ ಆಗಿದೆ ಎಂದಲೂ ಹೇಳುತ್ತಾರೆ. ಅಲ್ಲಿ ಕರೆಯಾದರೂ ಈ ಗ್ರಾಮಕ್ಕೆ ನೀರು ಬರಬಹುದಾಗಿ ಕಾಣುತ್ತೆ. ಈ ಗ್ರಾಮವು ಒಂದು ಕಡೆ ಗೊಂದಿಯಲ್ಲಿರುವುದರಿಂದ ಸರ್ಕಾರಿ ಹುದ್ದೆದಾರರ ದರ್ಶನವೇ ಅಪರೂಪವಾಗಿದೆ. ಇಂಜನಿಯರ್ ಇಲಾಖೆಯವರು ಅಂದಾಜು ಮಾಡಿ, ಇಲ್ಲಿಗೆ ೧ ಮೈಲ್ ಫಾಸಲೆಯಲ್ಲಿ ಹರಿಯುವ ಗಾಮದ ಗುಂಡಿ ಎಂಬ ಹಳ್ಳಕ್ಕೆ ಅಡ್ಡಗಾತಿರಿಸಿ ದೊಡ್ಡ ಕೆರೆಯಾಗಬಹುದೆಂತಲೂ, ಅಲ್ಲದೆ ಈ ಊರಿನ ಪೂರ್ವದ ಹಳ್ಳ ಕೆರೆಯನ್ನೇ ಕಟ್ಟಿಸಿದರೂ ಆಗಬಹುದೆಂತಲೂ ಜನರು ಹೇಳುತ್ತಾರೆ. ಅಂತೂ ಇಂಜನಿಯರ್ ಇಲಾಖೆಯವರು ನಿಗಾ ಇಟ್ಟರೆ ಈ ಗ್ರಾಮದಲ್ಲಿ ತರೀ ಆಗುವುದಕ್ಕೆ ಸಂದೇಹವಿಲ್ಲ. ಅಲ್ಲಿಗೆ ಆರುಮಾಸ ಹಳ್ಳಿಗಳೂ ಕೂಡ ತರೀ ಆಗಿ ಸುಮಾರು ೧೦ ಸಾವಿರ ರೂಪಾಯಿ ವರಮಾನಬಂದ ಆಗಲು ಅನುಕೂಲವಿರುತ್ತೆ.

**ಚಿತ್ರದುರ್ಗ**.—ಕಳೆದ ಶನಿವಾರ ಬೆಳಿಗ್ಗೆ ಫಸ್ಟ್ ಕ್ಲಾಸ್ ಸಾಹೇಬರವರು ಈ ಊರಿಗೆ ದಯಮಾಡಿ ಮಿಡ್ಲ ಸ್ಕೂಲನ್ನು ಪರೀಕ್ಷಿಸಿ ಅದೇ ಸಾಯಂಕಾಲ ಇಲ್ಲಿನ ಟೌನ್‌ಹಾಲಿನಲ್ಲಿ ವಿದ್ಯಾರ್ಥಿಗಳಿಗೆ ಇಂಗ್ಲೀಷಿನಲ್ಲಿ ಹೃದಯಂಗಮವಾದ ಉಪನ್ಯಾಸವನ್ನು ಮಾಡಲು, ಆಗ ಸಭೆಯನ್ನು ಮಿಸ್ಟರ್ ಎ. ಕೃಷ್ಣ ಸ್ವಾಮಿ ಅಯ್ಯಂಗಾರ್ ಬಿ. ಎ. ಯವರು ಡೆಪ್ಯುಟಿ ಕಮಿಷನರ್ ರಾಯಸಹೇಬ್ ಅಯ್ಯಂಗಾರ್ಯರೂ ಇತರ ಮುಖ್ಯರೂ ಅತ್ಯಂತ ಸಂತೋಷಪಟ್ಟರು. ಈ ವಿದ್ಯಾರ್ಥಿಗಳಿಗೆ ಉಪನ್ಯಾಸಗಳನ್ನು ಮಾಡಿ ಅವರ ಮಧ್ಯದಲ್ಲಿ ಆಗಾಗ್ಗೆ ನಗಿಸುತ್ತಾ, ಬರುವುದಾದರೆ ವಿದ್ಯಾರ್ಥಿಗಳಿಗೆ ಬಹು ಪ್ರಯೋಜನವಾಗುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದರು. ಮಿ॥ ಗ್ರೀನ್ ಸಾಹೇಬರು ಉದ್ಯೋಗಸ್ಥರ ಹಸ್ತದಿಂದ ತಮ್ಮ ವಿಚಾರಕ್ಕೆ ವಂದನೆ ಹೇಳಿದರು. ನಾನೀ ದಿವಸಗಳಲ್ಲಿ ಬೆಳಿಗ್ಗೆ ಇಲ್ಲಿನ ಗಣಪತಿ ದೇವಸ್ಥಾನದಲ್ಲಿ ಶ್ರೀ ಗಣಪತಿ ಆರಾಧನೆಯನ್ನೂ ಕಳೆದ ರಾತ್ರಿ ಧಿಲೀಪ ಸಂತೋಷವಾಗಿ ನಡೆಯಿತು. ಅಲ್ಲದೆ ನಾಯಕನ ಹಟ್ಟಿ ಆರಾಧನೆಯಲ್ಲೂ ವಿಶೇಷವಾದ ಸಿದ್ಧವಾಗಿದ್ದ ಗ್ರಾಮದಲ್ಲಿ ಕೆಲವು ಬೆಂಗಳೂರಿಗೆ ವಾಪಸ್ ದಯಮಾಡಿಸಿದರು.—ಟೌನ್ ನಲ್ಲಿ ನಾಲ್ಕೈದು ಕಡೆ ಇಲಿ ಬಿದ್ದುದರಿಂದ ಜನರು ಮನೆ ಬಿಟ್ಟು ಹೋಗುತ್ತಿದ್ದಾರೆ. ಬೆಂಗಳೂರಿನಲ್ಲಿ ಇಲಿ ಸತ್ತುದ್ದರಿಂದ ಸುಮಾರು ದಿನಗಳು ಬೀಗಲೆಯನ್ನು ಬಿಟ್ಟು ಶುದ್ಧಿಯಾದನಂತರ ಬೀಗ ತೆಗೆದು ಪುನಃ ಮನೆಗೆ ಬರುವುದಾದರೆ ಹುಷಾರು. ಮುನಿಸಿಪಲ್ ಬೀಗಲೆಗಳು ನಗರದಲ್ಲಿ ಬೇರೆ ಬಾಡಿಗೆ ಕೊಂಡು ವಾಸ ಮಾಡುತ್ತಿರುವವರು ಜನರ ಪಾಡು ಕೇಳುವವರು ಇಲ್ಲದೆ ಬಹು ಮುದ್ದತಿಯಾಗಿ ನಡೆಯುತ್ತಲಿದೆ. ಪ್ರೆಸ್ ಪ್ರೆಸಿಡೆಂಟರು ಬಹು ಜಾಗ್ರತೆಯಲ್ಲಿಯೇ ಮಿ॥ ಡಿಸ್ಟ್ರಿಕ್ಟ್ ಸರ್ಜನ್‌ರವರನ್ನು ಕೋರಿಯಾದರೂ ನಿರ್ಧರಿಸಲಿಕ್ಕೆ ಆದಷ್ಟು ಬೇಗ ಮಾಡುತ್ತಿರುವುದು. ಈ ಪರಿಗೂ ಕಿರಿದಾಗಿದ್ದ ಆಸ್ಪತ್ರೆಗಳಲ್ಲಾ ಈಗ ರೋಗ, ರೋಗಿಗಳಿಂದ ತುಂಬಿಕೊಳ್ಳುತ್ತಲಿದೆ.—ಡಿ ಸಿ ಕಲ್ ಮಿ॥ ಶ್ರೀನಿವಾಸಯ್ಯಂಗಾರ್ಯರು ನಾಳೆ ಭಾನುವಾರ ಈ ಊರಿಗೆ ದಯಮಾಡಿಸುವುದಾಗಿ ದಾವಣಗೆರೆಯಿಂದ ವರ್ತಮಾನ ಬಂದಿದೆ. ಅವರು ಇಲ್ಲಿಗೆ ಬಂತೆ ವರ್ತಮಾನಕೇಳಿದ್ದರಿಂದ ಅವರನ್ನು ಯಥೋಚಿತವಾಗಿ ಬರಮಾಡಿಕೊಳ್ಳಲೋಸ್ಕರ ಊರಿನಲ್ಲಿ ಉದ್ಯೋಗಸ್ಥರ ತಾಲೀಮು ಬಹಳವಾಗಿದೆಯಲ್ಲದೆ, ಮಿ॥ ಶ್ರೀನಿವಾಸಯ್ಯಂಗಾರ್ಯರು ಈ ಊರಿನಲ್ಲಿದ್ದು ಇದನ್ನು ತುಂಬಾ ಒಳ್ಳೆಯ ಸ್ಥಿತಿಗೆ ತಂದು ಪ್ರಜಾನುರಾಗವನ್ನು ಅಪರಿಮಿತವಾಗಿ ಸಂಪಾದಿಸಿಕೊಂಡವರಾದ್ದರಿಂದ ಪ್ರಜೆಗಳೆಲ್ಲರೂ ಅವರ ಪುನರಾಗಮನವನ್ನು ಕೇವಲ ಮಮತಾರಾಧಿತರಂತೆ ಸಾರ್ಥಪಡಿಸುತ್ತಿರುವರು ಶ್ರೀ ಅಯ್ಯರು ಪ್ರಜಾ ಸಿಸಾರಕ್ಕಾಗಿ ಪಡಿಸಿದ್ದು, ಮುನ್ಸಿಪಲ್ಲಿನ ಡಿಪಾರ್ಟ್ ಮೆಂಟ್ ಗಳಿಗೆ ಈ ಪರಿಷತ್ತು ಮಿ॥ ರಾಮರಾವ್ ಜೈಯಂಗಾರ್ಯರ ಸುಖವೃತ್ತಿಯಿಂದ ಆರ್ಜಿತನನ್ನು ಹೊಂದಿರುವ ಜೀವನವನ್ನು ಪರಿಶೀಲಿಸಿ ಕಾರ್ಯಕರರು ನೋಡಿ ಸಂತೋಷಪಡತಕ್ಕ ಬಲಾಬಲ.

**ಸೊರಬ.**—ಈ ತಾಲ್ಲೂಕ್ ರೇಂಜಿಗೆ ವರ್ಗವಾಗಿ ಬಂದಿರುವ ಮಿ॥ ವೆಂಕಟರಾಮಯ್ಯನವರು ಈ ಮುಂಚೆ ಶಿಕಾರಿಪುರ

ಕಲಗಳಲ್ಲಿ ಡಿಪ್ಯುಟಿ ಫಾರೆಸ್ಟ್ ಆಫೀಸರಾಗಿದ್ದರು. ಈ ತಾಲ್ಲೂಕಿಗೆ ವರ್ಗವಾಗಿ ಬಂದು, ಒಂದು ವರ್ಷದಲ್ಲಿ ಸದರಿ ತಾಲ್ಲೂಕಿನೊಳಗೆ ಅನೇಕ ಕಾಡುಗಳಲ್ಲಿ ಅಳತೆ ಮಾಡಿಸಿ ಸಂರಕ್ಷಿತವಾದವುಗಳನ್ನು ಬ್ಲಾಕ್ ಗಳಾಗಿ ಮಾಡಿಸಿ, ಅಲ್ಲದೆ ತಮ್ಮ ರೇಂಜಿನಲ್ಲಿ ೬ ಕೇಸು, ಹೋಗಿಲಾಗಿದ್ದಲ್ಲಿ ೧ ಕೇಸು, ಸಾಗರ ರೇಂಜಿನಲ್ಲಿ ೨ ಕೇಸು, ಬೇರೆ ಮತ್ತೂ ರೇಂಜಿನಲ್ಲಿ ೯ ಕೇಸು ಹಿಡಿದು, ಪ್ರಾಸಿಕ್ಯೂಟ್ ಮಾಡಿಸಿ ಅಪರಾಧಿಗಳಿಗೆ ಶಿಕ್ಷೆ ಸಹ ವಿಧಿಸಲ್ಪಟ್ಟಿತು. ಸೊರಬ ರೇಂಜಿನಲ್ಲಿ ಎಲ್ಲ ಕಲಸಗಳೂ ಸರಿಯಾಗಿ ನಡೆಯದೆ, ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿದು ಇಲ್ಲಿಗೆ ಹೋಗಿ ಕೆಲಸವಾಡಬೇಕೆಂದು ಹುಕುಂ ಬಂದಿದ್ದರಿಂದ ಇವರು ಬಂದು ಚಾರ್ಜು ತೆಗೆದುಕೊಂಡು ಕೆಲಸ ಮಾಡುತ್ತಾ ಇದ್ದಾರೆ.—ಈ ತಾಲ್ಲೂಕು ಚವಟ ಬ್ಲಾಕ್ ಕೇಸಿನ ವಿಷಯದಲ್ಲಿ ಹೋದವಾರ ಸೆಷನ್ ವಿಚಾರಣೆ ಪೂರೈಸಿ, ಜಡ್ಜ್‌ಮೆಂಟಿಗೆ ಆಸ್ಪದ ಆಗಿರುವದಾಗಿ ತಿಳಿಸಿರುವುದು ಸರಿಯಷ್ಟೆ. ಸದರಿ ಕೇಸಿನಲ್ಲಿ ಪಕ್ಷಗಿರಿಯಾದ ಅಪರಾಧಿಗಳಿಗೆ ಬಿಡುಗಡೆಯಾಯಿತು.—ಹೋದ ವಾರ ಶನಿವಾರ ರಾತ್ರಿ ಸೊರಬದ ಸರಕಾರಿಯಲ್ಲಿ ಕೂಡಿಸಿದ ಗಣಪತಿ ಉತ್ಸವದ ಬಗ್ಗೆ ದೊಡ್ಡ ಮನುಷ್ಯರು ಸರ್ಕಾರ ಕಚೇರಿಯ ಸಭಾಸ್ಥಾನವನ್ನು ಅಲಂಕರಿಸಿದ್ದರು. ಅಲ್ಲಿ ನರ್ತನ ಗೀತ ವಗೈರೆ ಬಹಳ ಚನ್ನಾಗಿ ನಡೆಯುತ್ತಾ, ಬಂದ ಮಹನೀಯರಿಗೆ ತಾಂಬೂಲ ಅತ್ತರ ಗುಲಾಬಿ ವಗೈರೆ ಕೊಟ್ಟನಂತರ ಸರ್ವರು ದಾಕ್ಷಿಣ್ಯದ ಅಪೇಕ್ಷೆಯ ಮೇಲೆ ಅನಂತ್ರದವರು ಇನ್ನು ಮುಂತಾದ ಮಹನೀಯರುಗಳು ತೆರಳಿದರು. ಅಲ್ಲಿಯೂ ನಡೆದ ವಿಸ್ತಾರವಾಗಿಯೇ ನಾಟ್ಯ ಸಂಗೀತ ವಗೈರೆ ನಡೆದು ದಾಕ್ಷಿಣ್ಯದಿಂದ ಪಲತಾಂಬೂಲ ಅತ್ತರ್ ಸ್ವೀಕರಿಸಿ ಉತ್ಸವದಿಂದ ಗಣಪತಿಯು ಕೋರಿದಿಸಿಕೊಂಡು ದರ್ಶನೀಯ ಬೀದಿಗೆ ಬಂದು ಸಾಹುಕಾರರು ಪೆನ್ನಾಂಗಿನವರ ಸಗೈರೆ ಗಣಪತಿ ಪೋರಿಸಿಕೊಂಡು ದೊಡ್ಡ ಬೀದಿಯಲ್ಲಿ ಇರುವ ಬಚ್ಚೇಯವರ ಮನೆಯ ಮುಂದೆ ಬಂದು ಅಲ್ಲಿಯೂ ನಾಟ್ಯವಾದ ತರುವಾಯ ಈ ಟರ್ವನಿಸಕೆಲವು ದ ದೇವಾಲಯ ಚಿಕ್ಕ ಬಾಲಕರು ಗುರುವಿನ್ನೆ ಇಲ್ಲದೆ ಕಲಿತ ಸರ್ಕಸ್ ಆಟವನ್ನು ಆಡಿದರು. ಇವರ ಪೈಕಿ ಒಬ್ಬ ಬಾಲಕನು ಬೇವ್ ಬಾಜು ಬಾಯಿಬೇನೇ ಸಿಳ್ಳೆಹಾಕಿ ಪ್ರದರ್ಶಿಸಿದನು. ಇದನ್ನು ನೋಡಲು ಅಮಲ್ದಾರರು, ಪೊಲೀಸ್ ಇನ್ಸ್ಪೆಕ್ಟರು ಇನ್ನು ಮುಂತಾದ ಮಹನೀಯರುಗಳು ಬಂದಿದ್ದು ಬಹಳ ಸಂತೋಷಪಟ್ಟು ಗ್ರಾಮಸ್ಥರು ಈ ಸರ್ಕಸ್ ಆಟವನ್ನು ಅಭಿವೃದ್ಧಿ ಪಡಿಸುವುದರಲ್ಲಿ ಸ್ಥಳಿಕರು ಅಂದರೆ ಪಾರಿಶ್ರಮಿಕರ ಮಗ್ಗಿಗೆ ಗುರುಗಳೊಂದು ಸದರಿ ಬಾಲಕರಿಗೆ ಪ್ರೋತ್ಸಾಹ ಕೊಟ್ಟದ್ದು ಇವರ ಆತ್ಮಸ್ಥೈರ್ಯಕ್ಕೆ ಬಹಳ ಸಂತೋಷವಾದ್ದು ಈ ನಾಟ್ಯಕ್ಕೆ ಕೂಡ ಶಾಬಾಸು ಹಾಡಿನಿಂದ ಎಲ್ಲಾ ಗೌರವಿಗಳನ್ನು ಕೊಡಬೇಕೆಂದು ಇವರಲ್ಲಿಯೇ ಒಬ್ಬ ಬಾಲಕನು ನಿಪುಣನಾಗಿ ಶಿಕ್ಷಣವನ್ನು ಹೊಂದಿರುವ ವಗೈರೆಗಳನ್ನು ಬಹು ಅಚ್ಚುಕಟ್ಟಾಗಿ ಮಾಡಿದನು. ಹೋಗುವ ಉತ್ಸವವನ್ನು ನೋಡಲು ಬೇರೆ ಗ್ರಾಮಗಳಿಂದ ಬಂದ ಜನರು ಸುಮಾರು ೨೦೦–೩೦೦ ಜನಗಳು ಬಹಳ ಸಂತೋಷದಿಂದ ನಡೆದ ಸಭೆಯ ಬೆಳಗಿನಲ್ಲಿ ಗಣಪತಿ ಗಂಗೆಯನ್ನು ಸೇರಿದರು. ಗಣಪತಿ ಉತ್ಸವದ ಬಳಿಕ ಬಾವಾ ಸಾಹೇಬರ ಅಪ್ಪಣೆಯಂತೆ ಟರ್ವನ್ ಸಾಹುಕಾರರು ಕೊಡಿಸಿದ್ದ ನರ ಪರ ಜಮೀನು ಹಾಕಿದ ಗಣಪತಿ ಉತ್ಸವದ ಬಗ್ಗೆ ಅಮಲ್ದಾರರವರು, ಡಾಕ್ಟರರು, ಸರ್ಕಾರ ನೌಕರರು, ಗ್ರಾಮದ ಹಿರಿಯರು ಮುಂತಾದ ದೊಡ್ಡ ಮನುಷ್ಯರು ಸೇರಿದ್ದರು. ಬಹಳ ವಿಜೃಂಭಣೆಯಿಂದ ನಡೆಯಿತು.

**ದೊಡ್ಡಬಳ್ಳಾಪುರ.**—ಈ ತಿಂಗಳ ೭ ನೇ ತಾ ಮಧ್ಯಾಹ್ನ ೧೦ ಘಂಟೆಯಲ್ಲಿ ಇಲ್ಲಿ ಊರಿನ ಮುನ್ಸಿಪಲ್ ಸೂಪರ್‌ವೈಸರು ನಾಗರಾಜರಾಯರು, ಅಮಲ್ದಾರರವರೂ, ಸುಸಿಸದ ಗೌಡರು ಸಹಾ ಈ ಹೆಡ್ ಪೋಸ್ಟ್ ಮಾಸ್ಟರ್ ಸಾಹೇಬರ ಬಳ್ಳಿಯ ಸುತ್ತಲೂ ನಿಂತುಕೊಂಡಿದ್ದು ಭವ್ಯ ಸಭೆಯ ಒಳ್ಳರ ಮೇಲೆ ಭಟರು ಒಬ್ಬರು ಈ ಸಿಪಾಯಿ ಪ್ರತಿಯೊಬ್ಬರೂ ಮತ್ತು ಜನಗಳ ಪ್ರತಿನಿಧಿಗಳು ಸಭೆಗೆ ಸೇರಿದ್ದರು. ಸಭೆಯ ಕಾರ್ಯ ಪ್ರಾರಂಭವಾಯಿತು. ಹೋದ ಸಲ ಸಭೆಯ ನಡಾವಳಿ ಓದಿ ಪಾಸ್ ಮಾಡಲಾಯಿತು. ಮುಂದೆ ಹೊಸ ಮೆಂಬರುಗಳಿಗೆ ಪ್ರಮಾಣವಚನವಾಗಿ ಬಳಿಕ ಡಾಕ್ಟರು ಸಾಹೇಬರ ಇನ್ನೂ ಬಳಿಕ ಡಾಕ್ಟರ್ ಆಸ್ಪತ್ರೆಯ ವಿಷಯ ಹೇಳಿದರು. ಆಸ್ಪತ್ರೆ ಅಸಿಸ್ಟೆಂಟರೂ, ಪೊಲೀಸ್ ಇನ್ಸ್ಪೆಕ್ಟರೂ ವಗೈರೆ ಅಧಿಕಾರಿಗಳೂ ನ್ಯಾಯವಾಗಿ ವಿಚಾರಿಸಿದರು. ಅಲ್ಲಿ ನಾಲ್ಕು ಮಂದಿ ಇದ್ದವರು ತುಂಬಾ ತಮ್ಮ ಪಕ್ಷದ ಮೇಲೆ ನೀರು ಕಾಲುವೆ ಸಮ್ಮತಿಸಲು ಅರ್ಜಿ ಹಾಕಿದ್ದರು. ನಂತರ ವಿಚಾರಣೆ ನಡೆದು ನಾಗೋಕಾರ್ ಹಿರಿಯ ವ್ಯವಹಾರದ ಸೂಪರ್‌ವೈಸರ್ ಸಾಹೇಬರು ಪ್ರೆಸ್ ಸಾಹೇಬರ ಕಿರಿಯ ಕಾರ್ಯದರ್ಶಿಯಿಂದ ವಿವರವನ್ನು ಕಾರಿಸಿ, ಸುಧಾರಿಸುತ್ತಾ ಇದ್ದರು. ನೀರಿನಲ್ಲಿ ಮುಳುಗಿ ಸತ್ತವರ ವಿಷಯ ಆಡಿದ್ದರಿಂದ ನಾವು ಗೊತ್ತಿಲ್ಲದೆ ವಿಸ್ತಾರವಾಗಿ ಎಲ್ಲಾ ನಿಂತಿದ್ದರು. ಇವರಿದ್ದರೂ ತಿಳಿಸದೆ ಮೇಲಿನ ಸರಕಾರದವರ ಸೂಚನೆಯ ಮೇರೆಗೆ ವಗೈರೆ ನಡಿಸಲ್ಪಟ್ಟಿತು. ಸರಕಾರದವರ ಬಹು ಪ್ರಿಕಾಂತಿನಿಂದ ಈ ಊರಿನ ಪ್ರಿಸ್ಥರು ಆ ಇಬ್ಬರು ಯಜಮಾನ್ಯರ ಹೆಸರುಗಳನ್ನು ಸಲ್ಲಿಸಿ ವಿರಾಮವಿಲ್ಲದೆ ಹುಡುಕಿಸಿದರೂ, ಯಾವುದೊಂದಾದರೂ ಸಿಕ್ಕಲಿಲ್ಲ. ರಾತ್ರಿಯೆಲ್ಲಾ ಜನಗಳು ಕೇಳಿ ಮುಂದಕ್ಕೆ ಹೋದಮೇಲೆ ಆಯಾ ಸ್ಥಳಗಳಲ್ಲಿ ಬೆಸ್ತರಿಂದ ದೊಡ್ಡ ಹಗ್ಗದ ಬಲೆಗಳನ್ನು ಆತ್ತ ಹಾಕಿದ್ದರು. ರಾತ್ರಿಯೆಲ್ಲಾ ಕಾದಿದ್ದರೂ ಒಂದು ಹೆಣ ಮಾತ್ರ ಬಿದ್ದು ಸ್ಥಳದಲ್ಲೇ ಮಾರನೇ ಬೆಳಿಗ್ಗೆ ಸಿಕ್ಕಿತು. ಅದು ನಮ್ಮ ಅಮಲ್ದಾರರ ಪತ್ನಿಯ ಹೆಣವಾಗಿ, ಸಮಸ್ತ ಮುಸಲ್ಮಾನರಿಂದ ಮೈಯುಟ್ಟು ಸಮಾಧಿ ಮಾಡಲಾಯಿತು. ಆ ದಿವಸಲ್ಲೇ ಜೀವಿತ ಕ್ರಿಸ್ ಸಾಹೇಬರು ಆಸ್ಪತ್ರೆಗೆ

ಟಿ. ಇವರು ಶಕಿತರೂನಿಂದು ಅರೆಯಂದಲೂ ಮಹಾ ಸ್ವತಂತ್ರನಾಯಿತು. ಕ್ರಿಸ್ ಸಾಹೇಬರು ನಿರೀಕ್ಷೆ ಪಟ್ಟಿಗಿ ಬೇಸದಿಂದಿರುವ ತಮ್ಮ ತಿರೇ ಮಗನನ್ನು ಕೂಡ ಕರೆತಂದು ಪತ್ರಕೊಡಿಸಿದ ತಮ್ಮ ಪತ್ನಿಯವರನ್ನು ಆತನ ಜೊತೆ ಕಳುಹಿದರು. ೯ ನೇ ತಾ. ಜೊತೆಯ ಸಾಹೇಬರ ಅರಸಿಕೆರೆಗೆ ೩ ಮೈಲ್ ಫಾಸಲೆಯಲ್ಲಿ ಸಿಕ್ಕಿತು. ಈ ಸ್ತ್ರೀ ಗ್ಯಾರಿಯವರ ಮಗಳು ಮಹಾ ಸುಂದರ ಸ್ವರೂಪವಾಗಿಯೂ, ಧರ್ಮಶೀಲೆಯಾಗಿಯೂ, ಬಹುಜನ ಮಿತ್ರಳಾಗಿಯೂ, ಬಿ.ಎಸ್. ಎ. ಆಗಿಯೂ, ಬೆಂಗಳೂರ್ ಸೆಂಟ್ರಲ್ ಕಾಲೇಜಿಗೆ ೯ ನೇ ಸಲ ಬರಿಸಲ್ಲಿ ಹಾಜರಾಗುತ್ತೇನೆಂದು ತಿಳಿಸಿದ್ದವಳಾಗಿಯೂ, ಸರ್ಕಾರ ಪಟ್ಟಿಗೆಯಲ್ಲಿ ಹಾಳಿಸಲ್ಪಟ್ಟು, ಪೋಲ್ ಹೊರಿ, ಕ್ರಿಸ್ ಕಾವಲರಿಂದಿಗೆ ಸ್ಮಶಾನದ ಸೂಪರ್‌ವೈಸರ್ ಗಾಡಿಯ ಚಿಕಲ್ಪಟ್ಟು ಮರ್ಯಾದೆಗಳಿಂದ ಹಾಸನದಲ್ಲಿ ದಫನ ಮಾಡಲಾಯಿತು. ಈ ಅನಾಹುತವು ಊರಲ್ಲೆಲ್ಲಾ ತುಂಬಾ ದುಃಖವುಂಟುಮಾಡಿದೆ.—ಈಗ್ಗೆ ಒಂದು ತಿಂಗಳಲ್ಲಿ ನರಸೀಪುರಕ್ಕೆ ೪ ದ ಅಡುವಿಸಕೊಡಿಯ ಗ್ರಾಮದಲ್ಲಿ ಚಿಕ್ಕಸ್ವಾಮಿ ಗೌಡನ ಹನ್ನೆರಡು ವರುಷದ ಹುಡುಗ ಕೆಮ್ಮಿಯಿಂದ ಸಾಯುವ ಸ್ಥಿತಿಯಲ್ಲಿದ್ದು ನಮ್ಮ ಊರಿನ ಆಸ್ಪತ್ರೆ ಅಸಿಸ್ಟೆಂಟರು ಹುಡುಕ್ಕು ವಿಷದ ನಾಶಕ ಔಷಧಗಳನ್ನು ಹಾಕಿದ ಮೇಲೆ ಶೀಘ್ರದಿಂದ ಗುಣವಾಯಿತು.—ಇದೇ ದೀಪದಲ್ಲಿ ನರಸೀಪುರ ಟೌನ್‌ನಲ್ಲಿ ವೈಶ್ಯರ ಗುಜ್ಜರಿಕಟ್ಟೆಯ ತಮ್ಮನ ಒಂದು ಮಗುವು ಬೆಂಕಿಯ ಗಳಿಗೆ ಮಲಗಿರುವಾಗ ಬೆಂಕಿಯನ್ನೆತ್ತ ದೀಪದಲ್ಲಿ ಅ ರಾತ್ರಿ ಇದ್ದ ದೀಪವನ್ನು ತೆಗೆದು ಸುಡಲ್ಪಟ್ಟು ಮಾರನೆ ದಿನ ಸತ್ತಿತು.—ಈ ಊರು ಮುನಿಸಿಪಾಲಿಟಿಗೆ ಒಳಪಟ್ಟ ತೋಟದ ಹಿಂದೆ ಬಾವಿಗಳು ಎರಡುಮೂರುಂಟು. ಇಂಥ ಒಂದು ಬಾವಿಯಲ್ಲಿ ಮಳೆ ನೀರು ತುಂಬಿರುತ್ತೆ. ಇವರಲ್ಲಿ ಒಬ್ಬ ೧೦ ವರ್ಷದ ಹುಡುಗ ಬಿದ್ದು ಸತ್ತು ತೇಲುತ್ತಾ ಇದ್ದನು. ಸರಕಾರದವರು ಮುನಿಸಿಪಾಲಿಟಿ ಅಧಿಕಾರಿಗಳಿಂದ ದರ್ಪಣ ಮಾಡಿಸಿದರು.—ಸಾಯಂಕಾಲ ೪ ಘಂಟೆಯಲ್ಲಿ ಆಡುವಿಸಕೊಡಿಯ ಪೀರ್ಲಗೋಪನ ತಮ್ಮ ಮಗ ಮುನಿಸ್ವಾಮಿ ಜೆಂಡ ಕಾದು ಸಿದ್ದಿವರನ್ನೆಲ್ಲಾ ಕರೆದು ಬರುತ್ತಾ, ಪೇಟೆ ಮಧ್ಯದಲ್ಲಿ ಬಂದು ತಿರುಗಾಡುವವರನ್ನೆಲ್ಲಾ ದರಿಸುತ್ತಾ, ವೈಶ್ಯರ ಕೆಲವು ಮಕ್ಕಳ ಗಾಡಿಯನ್ನು ಓಡಿಸುತ್ತಾ ಆ ಗಾಡಿಯಲ್ಲಿ ಚನ್ನಮಲ್ಲಪ್ಪಶೆಟ್ಟರ ಮಗುವಿನ ಕೊರಳಲ್ಲಿದ್ದ ಒಂದು ಪದಕವನ್ನು ಕಿತ್ತುಕೊಂಡು, ಯಾರಿಗೂ ಸಿಕ್ಕದೆ, ತುಂಗಾ ದರಿಯ ಹಳ್ಳದೊಳಗೆ ಧುಮುಕಿ ಈಜುತ್ತಾ, ಮುಳುಗಿ ಹೋಗುತ್ತಾ ಇದ್ದನು. ಜನರು ಸಾವಿರಾರು ದಿನಗಳು ಅಂಜಿಕೆಯಿಲ್ಲ, ಆತನನ್ನು ಹಿಡಿಯಹೋದರು. ಕಡೆಯಲ್ಲಿ ಸಿಕ್ಕಿ ಅಡಿಸುವಿಗೆ ಒಪ್ಪಿಸಲ್ಪಟ್ಟನು. ಈಗ ಹಾಸನದಲ್ಲಿ ಇವನನ್ನು ವಿಚಾರಣೆ ಮಾಡುತ್ತಾ ಇದ್ದಾರೆ.

ಸರ್ ಶೇಷಾದ್ರಿ ಅಯ್ಯರವರ ಮೆಮೋರಿಯಲ್.

**ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗು.**

ಮೇಲ್ಕಂಡ ಕಮಿಟಿ ಮೆಂಬರುಗಳು ಕಳೆದ ೩ನೇ ತಾರೀಖು ಶನಿವಾರ ಸಾಯಂಕಾಲ ೩ ಗಂಟೆಗೆ ಬೆಂಗಳೂರು ಪಬ್ಲಿಕ್ ಆಫೀಸಿನಲ್ಲಿ ಸಭೆ ಸೇರಿದರು. ಆಗ ಹಾಜರಿದ್ದ ಮೆಂಬರುಗಳು.—ಮಿ॥ ವಿ. ಪಿ ಮಾಧವರಾಯರು (ವೈಸ್ ಪ್ರೆಸಿಡೆಂಟ್), ಮಿ॥ ಗಳಾಸಿ ಶ್ರೀನಿವಾಸಯ್ಯಂಗಾರ್ಯರು, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ ಯವರು ಇ. ಆರ್ ಸುಬ್ಬರಾಯರು, ಎಚ್. ವಿ. ನಂಜುಂಡಯ್ಯನವರು (ಸೆಕ್ರೆಟರಿ), ಟಿ ಆರ್ ವೆಂಕಟಸ್ವಾಮಿ ನಾಯುಡು ಯವರು (ಜಾಯಿಂಟ್ ಸೆಕ್ರೆಟರಿ) ಮದರಾಸ್ ಗೌವರ್ನಮೆಂಟಿನ ಕನ್‌ಸಲ್ಟಿಂಗ್ ಆರ್ಕಿಟೆಕ್ಟ್ ಮಿ॥ ಇರ್ವಿನ್ ಯವರು ದಯವಿಟ್ಟು ಮೀಟಿಂಗಿಗೆ ಬಂದಿದ್ದರು.

ಮೀಟಿಂಗ್ ಪ್ರಾರಂಭದಲ್ಲಿ ಅಧ್ಯಕ್ಷರು ಎದ್ದು—ಕೆಲವು ದಿನಗಳ ಕೆಳಗೆ ಒಂದು ಜನರಲ್ ಮೀಟಿಂಗ್ ನಡೆದು ಮಿ. ಸರ್ ಶೇಷಾದ್ರಿ ಅಯ್ಯರವರ ಜ್ಞಾಪಕಾರ್ಥವನ್ನು ಶಾಶ್ವತಪಡಿಸುವುದಕ್ಕೆ ಮಾಡಬೇಕಾದ ಕಾರ್ಯಗಳು ಆ ಮೀಟಿಂಗಿನಲ್ಲಿ ತೀರ್ಮಾನವಾಗಿ, ಆ ಕೆಲಸವನ್ನು ನಡೆಸಲು ಈಗ ಇಲ್ಲಿ ನೆರೆದಿರುವ ಕಮಿಟಿ ನಿರ್ಧಾರವಾಗಿರುವುದು. ಕೆಲಸ ನಡೆಸುವ ವಿಚಾರವನ್ನು ಈಗ ನಾವು ಚರ್ಚಿಸಬೇಕಾಗಿದೆ. ಮಿ॥ ಇರ್ವಿನ್ ಯವರು ಯೋಚಿಸಿ ಗೊತ್ತುಮಾಡಿರುವ ಸಲಹೆಗಳನ್ನು ನಮಗೆಲ್ಲಾ ತಿಳಿಸುವರೆಂದು ನಿರೀಕ್ಷಿಸುತ್ತೇನೆ ಎಂದು ಹೇಳಿದರು.

ತರುವಾಯ ಈ ಕಮಿಟಿಯವರು ಆ ದಿನ ಚರ್ಚಿಸಿ ತೀರ್ಮಾನಮಾಡಿದ್ದೇನೆಂದರೆ —(೧) ಅಸ್ತಿಭಾರದ ಕಲ್ಲಿನ ಮೇಲೆ ಕೆಲವು ಮಾತುಗಳನ್ನು ಸಕ್ಕೆತ್ತರಿಯವರು ಕೆತ್ತಿಸಬೇಕು. (೨) ಸರ್ ಶೇಷಾದ್ರಿ ಅಯ್ಯರವರ ಪ್ರತಿಮೆಯನ್ನು ಕಂಚಿನಲ್ಲಿ ಮಾಡಿಸಬೇಕು. ಅವರು ದರ್ಬಾರ್ ದಿರಿಸಿನಲ್ಲಿ ನಿಂತುಕೊಂಡಿರುವಂತೆ ಮಾಡಿ ಮೇಲೆ ಗುಬುರು ಇಲ್ಲದೆ ಮೈದಾನದಲ್ಲಿ ನಿಲ್ಲಿಸಬೇಕು; ಈ ಪ್ರತಿಮೆಯ ಪೀಠವು ಬಹುದೊಡ್ಡದ ಕಲ್ಲಿನಿಂದ ಮಾಡಿದ್ದಾಗಿರಬೇಕು. (೩) ಬೆಂಗಳೂರಿನಲ್ಲಿ ಲಾಲ್ ಬಾಗಿಗೆ ಎಂಬ ಉದ್ಯಾನವನದಲ್ಲಿ ಸರ್ ಶೇಷಾದ್ರಿ ಅಯ್ಯರವರಿಗೆ ಜ್ಞಾಪಕಾರ್ಥದಲ್ಲಿ ಒಂದು ಪ್ರತಿಮೆ ಮಾಡಿಸಿ ಕಟ್ಟಿಸಬೇಕು; ಆ ಪ್ರಮಾಣವನ್ನು ಕಮಿಟಿಯವರು ಸರಿಮಾಡಿದ ಎಂದು ಒಪ್ಪಿದ ಮೇಲೆ ಅದನ್ನು ಬೇಗನೆ ಮಾಡುವಲ್ಲಿ ಮುಂದಿನ ಎಲ್ಲಾ ಶ್ಯಕ್ತಿ ವೆಚ್ಚ ಆಗಬೇಕು. ಪ್ರತಿಮೆ ನಿಲ್ಲಿಸುವ ಸ್ಥಳ, ಅದರ ಬಗೆ ಮುಂತಾದವನ್ನೂ ಕಮಿಟಿಯವರಿಗೆ ತಿಳಿಯಬೇಕು. ಆದ್ದರಿಂದ ಒಪ್ಪಿಯ ಒಂದು ಫೋಟೋ ಸಹಾ ಇವರಿಂದ ತರಿಸಿ ಕಳುಹಿಸುವಂತೆ

ಮುದಾದ ಮೆಂಬರುಗಳಲ್ಲಾ ಕಬ್ಬನ್ ಪಾರ್ಕ, ಮ್ಯೂಸಿಯಂ, ಪಬ್ಲಿಕ್ ಸ್ಥಳ, ಸಿಲ್ಕ್ ಫ್ಯಾಕ್ಟರಿ ವೃಂದಾವನ, ಈ ಮುಂತಾದ ಸ್ಥಳಗಳಿಗೆ ಹೋಗಿ ನೋಡಿಕೊಂಡು ಬಂದರು. ಈ ಪ್ರತಿ ಮೂಲಸ್ಥಳವೇ ಪಟ್ಟಣಕ್ಕೆ ಎಲ್ಲಾ ವಿಷಯಗಳಲ್ಲೂ ಅನುಕೂಲವಾದ್ದೆಂತಲೂ, ಊರಿಗೂ ಬಡಾವಣೆಗೂ ಮಧ್ಯ ಪ್ರದೇಶವಾಗಿರುವುದೆಂತಲೂ, ಪಬ್ಲಿಕ್ ಪಾರ್ಕ ಮಾಡಲು ಅಲ್ಲಿ ಅವಕಾಶವಿರುವುದು ಗೊತ್ತುಮಾಡಿಕೊಂಡು ಬಂದರು. ಈ ವಿಷಯವಾಗಿ ಮೆಂಬರುಗಳು ಮತ್ತೆ ಕಳೆದ ಗುರುವಾರವೂ ಸೇರಿದ್ದರು.

## ಮೈಸೂರು ಗೆಜೆಟ್ ಸಂಗ್ರಹ.

ಕೋಲಾರ್ ಡಿಸ್ಟ್ರಿಕ್ಟ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ॥ ಸಿ. ವಿ. ಕೃಷ್ಣಮೂರ್ತಿ ಯವರಿಗೆ ಕೊಟ್ಟಿದ್ದ ಪ್ರಿವಿಲೆಜ್ ರಜದ ಮೇಲೆ ಅನ್ನು ೧೫ ದಿನ ಜಾಸ್ತಿ ಮಾಡಿದೆ.

ಅಕೌಂಟೆಂಟ್ ಆಫೀಸ್ ಅಕೌಂಟ್ ಪ್ರೊಬೇಷನರ್ ಮೆ॥ ಟಿ. ನಾರಾಯಣ ಚೆಟ್ಟಿಯವರಿಗೆ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚಿಕ್ಕಬಳ್ಳಾಪುರದ ಕಸಬಾ ಮುನ್ಸೀಫರು ಕವರೇಜ್‌ಹಳ್ಳಿಯ ಸರ್ವೆ ಬಡಾವಣೆ ಮಾಡುವುದಕ್ಕೆ ೧ ಎಕರೆ ಸರ್ಕಾರಕ್ಕೆ ಬೇಕಾಗಿದೆ.

ಚನ್ನಪಟ್ಟಣದ ತಾಲ್ಲೂಕು ಶಿರಸ್ತೇದಾರ್ ಜಿ. ನಾರಾಯಣ ರಾಯರನ್ನು ಗುಂಡ್ಲುಪೇಟೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರಿಗೆ ಆಫೀಷಿಯೇಟಿಂಗಾಗಿ ನೇಮಿಸಿದೆ. ಆದರೆ ಹೊಸ ಕೆಲಸದ ಮೇಲೆ ಹಾಜರಾಗಬೇಕಾದ್ದು.

ಶ್ರೀಮನ್ ಮಹಾರಾಜರವರು ಕೋಲಾರ್ ಚಿನ್ನದ ಗಣಿಗಳ ಪಾರ್ಶ್ವದಲ್ಲಿ ಏರ್ಪಾಡಾಗಿರುವ ಹೊಸ ಊರಿಗೆ ಮೈಸೂರು ರೆಸಿಡೆಂಟರವರ ಹೆಸರಿನ ಮೇಲೆ ಆಗೀಗ ೧೫ ರಲ್ಲಿ ರಾಬರ್ಟ್‌ಸನ್ ಪೇಟೆ ಎಂದು ಹೆಸರಿಟ್ಟಿರುವ ಕಾರಣ ಇನ್ನು ಮುಂದೆ ಆ ಊರು ರಾಬರ್ಟ್‌ಸನ್ ಪೇಟೆ ಎಂದು ಕರೆಯಲ್ಪಡತಕ್ಕದ್ದು.

ಬೆಂಗಳೂರು ತಾಲ್ಲೂಕ್ ಅಮಲ್ದಾರ್ ಮೆ॥ ಕೆ. ಜಿ. ರಾಮಯ್ಯನವರು ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮಿಷನರಾಗಿ ಕೆಲಸ ನೋಡುವಂತೆ ನೇಮಿಸಲ್ಪಟ್ಟಿದ್ದಾರೆ. ಇವರು ಸರ್ವೆ ಇಲಾಖೆಯಲ್ಲಿ ಕೆಲಸ ಮಾಡತಕ್ಕದ್ದು.

ಈ ಕೆಳಗೆ ತೋರುವಂತೆ ಅಮಲ್ದಾರರ ತರಗತಿಯು ಹೆಚ್ಚಿಸಲ್ಪಟ್ಟಿರುತ್ತೆ —

೩ ನೇ ತರಗತಿಯಿಂದ ೨ ನೇ ತರಗತಿಗೆ ಖಾಯಂ. ೧ ಮೆ॥ ನಾಗ ಸುಬ್ಬರಾಯರು, ೨ ಮೆ॥ ಜಿ. ಹನುಮಂತರಾಯರು.

೪ನೇ ತರಗತಿಯಿಂದ ೩ನೇ ತರಗತಿಗೆ ಖಾಯಂ. ೧ ಮೆ॥ ಸಿ. ಕೃಷ್ಣಮ್ಮನಾಯುಡು ಯವರು, ೨ ಮೆ॥ ಬಿ. ಕೃಷ್ಣಯ್ಯಂಗರು, ೩ ಮೆ॥ ಸಿ. ವಿ. ನಾರಾಯಣರಾಯರು. ೪ ಮೆ॥ ಎಮ್. ಲಕ್ಷ್ಮಣ ಶಾಸ್ತ್ರಿಗಳು, ೫ ಮೆ॥ ಎಮ್. ಎಸ್. ಪುಟ್ಟಣ್ಣನವರು.

೩ನೇ ತರಗತಿಯಿಂದ ೨ನೇ ತರಗತಿಗೆ ಹಂಗಾಮು. ೧ ಮೆ॥ ವಿ. ಕೃಷ್ಣರಾಚಾರ್ಯ, ೨ ಮೆ॥ ಪಿ. ಸುಬ್ರಾಯುಲು ನಾಯ್ಡುರು.

೪ನೇ ತರಗತಿಯಿಂದ ೩ನೇ ತರಗತಿಗೆ. ೧ ಮೆ॥ ಬಿ. ರಾಮಸ್ವಾಮಯ್ಯನವರು, ೨ ಮೆ॥ ಎ. ಕೃಷ್ಣೋಜಿರಾವ್‌ರವರು, ೩ ಮೆ॥ ಕೆ. ಕೆ. ರಾಮಣ್ಣನವರು, ೪ ಮೆ॥ ಎ. ವೇದಾಂತದೇಶಿಗಂ ಅಯ್ಯಂಗಾರ್ರು.

೪ನೇ ತರಗತಿಯಿಂದ ೩ನೇ ತರಗತಿಗೆ ೧ ಮೆ॥ ಡಿ. ಸುಬ್ಬರಾಯರು, ೨ ಮೆ॥ ಎಮ್. ರಂಗನಾಥರಾಯರು, ೩ ಮೆ॥ ಎಮ್. ಕೃಷ್ಣಸ್ವಾಮಯ್ಯಂಗಾರ್ರು, ೪ ಮೆ॥ ಎ. ಕೃಷ್ಣಸ್ವಾಮಯ್ಯಂಗಾರ್ರು.

ಅಮಲ್ದಾರರಾದ ಮೆ॥ಸಿ. ನರಸಿಂಗರಾಯರು ಬೇಲೂರಿಂದ ದಾವಣಗೆರೆಗೂ, ೨ ಮೆ॥ಡಿ. ಸುಬ್ಬರಾಯರು ಚಿಕ್ಕಬಳ್ಳಾಪುರದಿಂದ ಗೋರಿಬಿದನೂರಿಗೂ, ೩ ಮೆ॥ ಕೃಷ್ಣಸ್ವಾಮಯ್ಯಂಗಾರ್ರು ಮಾಲೂರಿಂದ ಚಿಕ್ಕಬಳ್ಳಾಪುರಕ್ಕೂ, ೪ ಮೆ॥ಸಿ. ಮಾಚಯ್ಯನವರು ಗೋರಿಬಿದನೂರಿಂದ ಮಾಲೂರಿಗೂ, ೫ ಮೆ॥ಜಿ. ಶ್ರೀನಿವಾಸರಾಯರು ಕಾನಕಾನಹಳ್ಳಿಯಿಂದ ತರೀಕೆರೆಗೂ, ೬ ಮೆ॥ಎ. ವೇದಾಂತದೇಶಿಗಮಯ್ಯಂಗಾರ್ರು ಚನ್ನರಾಯಪಟ್ಟಣದಿಂದ ನೆಲಮಂಗಲಕ್ಕೂ, ೭ ಮೆ॥ ಎಮ್. ಎಸ್. ಪುಟ್ಟಣ್ಣನವರು ನೆಲಮಂಗಲದಿಂದ ಚಾಮರಾಜನಗರಕ್ಕೂ, ೮ ಮೆ॥ ಕೆ. ಆರ್. ಸುಬ್ಬರಾಯರು ಶಿಕಾರಿಪುರದಿಂದ ಚನ್ನಗಿರಿಗೂ, ೯ ಮೆ॥ ಎಸ್. ಕೃಷ್ಣಯ್ಯರ್ ಚನ್ನಗಿರಿಯಿಂದ ಬೇಲೂರಿಗೂ, ೧೦ ಮೆ॥ ಸಿ. ಕೃಷ್ಣಸ್ವಾಮಯ್ಯರು ಹಾಸನದಿಂದ ಕಾನಕಾನಹಳ್ಳಿಗೂ, ೧೧ ಮೆ॥ ಟಿ. ಬಿ. ಚನ್ನಪ್ಪಾಪಿಳ್ಳೆಯವರು ಹೊನ್ನಾಳಿಯಿಂದ ಚನ್ನರಾಯಪಟ್ಟಣಕ್ಕೂ, ೧೨ ಮೆ॥ವಿ. ಕೃಷ್ಣರಾಯರು ಮ್ಯಾಸೂರಿಂದ ಮದ್ದೂರಿಗೂ, ೧೩ ಮೆ॥ ಪಿ. ಸುಬ್ಬರಾಯುಲುನಾಯ್ಡುರು ಮದ್ದೂರಿಂದ ಶಿಕಾರಿಪುರಕ್ಕೂ, ೧೪ ಮೆ॥ ಟಿ. ಕೆ. ಸುಂದರರಾಜಯ್ಯಂಗಾರ್ರು ಚಾಮರಾಜನಗರದಿಂದ ಮೈಸೂರಿಗೂ, ೧೫ ಮೆ॥ ಸಿ. ವೆಂಕಟರಾಮರು ನಂಜನಗೂಡಿನಿಂದ ಶ್ರೀರಂಗಪಟ್ಟಣಕ್ಕೂ, ೧೬ ಮೆ॥ ಕೆ. ಶ್ರೀಕಂಠಯ್ಯನವರು ಶ್ರೀರಂಗಪಟ್ಟಣದಿಂದ ನಂಜನಗೂಡಿಗೂ ೧೭ ಮೆ॥ ಟಿ. ಎಸ್. ವಂಕಟವೆಂಕಯ್ಯ ಮೊಳಕಾಲ್ಮೂರಿಯಿಂದ ಅರಸೀಕೆರೆಗೂ, ೧೮ ಮೆ॥ ಜಿ. ಆರ್. ಶ್ರೀನಿವಾಸಯ್ಯಂಗಾರ್ರು ಅರಸೀಕೆರೆಯಿಂದ ಗುಬ್ಬಿಕ್ಕೂ, ೧೯ ಮೆ॥ ಬಿ ಎಸ್ ನಾಗೋಜಿರಾಯರು ನಗರದಿಂದ ಹೊನ್ನಾಳಿಕ್ಕೂ, ೨೦ ಮೆ॥ ಟಿ. ಜಿ ಲಕ್ಷ್ಮಣಯ್ಯರು ಹೆಗ್ಗಡದೇವನಕೋಟೆಯಿಂದ ಮೊಳಕಾಲ್ಮೂರಿಗೂ, ೨೧ ಮೆ॥ ಎಮ್. ಲಕ್ಷ್ಮಣಶಾಸ್ತ್ರಿ ... ಯಿಂದ ನಾಗಮಂಗಲಕ್ಕೂ, ೨೨ ಮೆ॥ ಸಿ. ವಿ. ಕೃಷ್ಣಸ್ವಾಮಿರಾಯರು ಯಡತೊರೆಯಿಂದ ಮಂಡ್ಯಕ್ಕೂ, ೨೩ ರಜಾದ ಮೇಲಿರುವ ಮೆ॥ ಸಿ. ಕೃಷ್ಣರಾಯರು ದಾವಣಗೆರೆಯಿಂದ ಯಡತೊರೆಗೂ ವರ್ಗಮಾಡಲ್ಪಟ್ಟಿರುತ್ತಾರೆ.

## ವಿದೇಶ ವರ್ತಮಾನಗಳು.

ಜರ್ಮನಿ ಚಕ್ರವರ್ತಿಯವರು ತಮ್ಮ ಪ್ರಜೆಗಳಿಗೆ ವಿದ್ಯೆ ಕಲಿಸುವುದಕ್ಕೆ ಪ್ರತಿವರ್ಷವೂ ೬೦ ಕೋಟಿ ದ್ರವ್ಯವನ್ನು ಖರ್ಚುಮಾಡುತ್ತಾರೆ.

●●●●

ಈಗ ವಿಲಾಯತಿಯಲ್ಲಿ ೧೫,೦೦೦ ಮಂದಿ ಖೈದಿಗಳು ಬಂದೀಖಾನೆಗಳಲ್ಲಿರುತ್ತಾರೆ. ಇವರನ್ನು ಸಾಕುವುದಕ್ಕೆ ಗೌರ್ನಮೆಂಟಿಗೆ ವರ್ಷಕ್ಕೆ ೧೦ ಲಕ್ಷ ಪೌಂಡು ಖರ್ಚಾಗುವುದು.

●●●●

ಸರ್ವಿಯಾ ರಾಜ್ಯದ ಸ್ವಾಮಿಯು ತಮ್ಮ ಹೊಸ ದೊರೆಯಾದ ಪೀಟರನ ಮೇಲೆ ಅಕ್ರೋಶವನ್ನು ಪ್ರಕಾಶಪಡಿಸಿದ್ದರಿಂದ ದೊರೆಯು ತನಗೆ ದೊರೆತನವೇ ಬೇಡವೆಂದೂ ಸಿಂಹಾಸನವನ್ನು ಬಿಟ್ಟು ಹೋಗುವುದಾಗಿಯೂ ತಿಳಿಸಿರುತ್ತಾರೆ.

●●●●

ಟರ್ಕಿ ರಾಜ್ಯಕ್ಕೆ ಸೇರಿದ ಬೈರೂ ಎಂಬ ಪ್ರಾಂತ್ಯದಲ್ಲಿ ವಿಪರೀತ ಪ್ರವಾಹಗಳು ಬಂದುದರಿಂದ ಸುಮಾರು ೭೦೦ ಮಂದಿ ಜನರು ಲಯವಾದರೆಂತಲೂ ವಿಪರೀತ ಸಾವಿರಾರು ಆಸ್ತಿಪಾಸ್ತಿಗಳೂ ನಷ್ಟವಾದುವೆಂತಲೂ ತಿಳಿದುಬಂದಿದೆ.

●●●●

ಇಟಲಿ ರಾಜ್ಯಕ್ಕೆ ಸೇರಿದ ಯುಡ್ವೀನ ಪಟ್ಟಣದಲ್ಲಿ ಕಳೆದ ವಾರ ಎರಡು ರೈಲ್ ಗಾಡಿಗಳು ಎದುರುಬದುರಾಗಿ ಬಂದು ಢಿಕ್ಕಿ ಹೊಡೆದವು. ೯ ಮಂದಿ ಸತ್ತರು, ೪೦ ಜನರಿಗೆ ಗಾಯಗಳಾಗಿವೆ. ಇವರೆಲ್ಲಾ ಇಟಲಿ ರಾಜ್ಯದ ಸೋಲ್ಜರುಗಳೆಂದು ತಿಳಿವುದು.

●●●●

ಗತಿಸಿದ ಪೋಪ್ ಸ್ವಾಮಿ ಯವರ ಮನೆಯ ಒಂದು ಕೋಣೆಯಲ್ಲಿ ಅವರ ಬಾಬತು ೨,೪೦,೦೦೦ ಪೌಂಡುಗಳು ಸಿಕ್ಕಿದ್ದವು. ಅವರಿಗೆ ಬಹುಮಾನವಾಗಿ ಬಂದು ಅವರು ಯಾವಾಗಲೂ ಧರಿಸಿಕೊಳ್ಳದೆ ಇಟ್ಟಿದ್ದ ಒಂದು ಭಾರೀ ಜವಾಹಿರಿ ನಗವೂ ಸಿಕ್ಕಿರುತ್ತದೆ.

●●●●

ರಷ್ಯಾ ಚಕ್ರವರ್ತಿಯವರು ಏಷ್ಯಾಖಂಡದ ಉತ್ತರ ಪ್ರಾಂತ್ಯಕ್ಕೆ ಅಡ್ಮಿರಲ್ ಅಲೆಕ್ಸೀಫ್ ಎಂಬ ಉದ್ಯೋಗಸ್ಥರನ್ನು ವೈಸರಾಯಾಗಿ ನೇಮಕಮಾಡಿರುತ್ತಾರೆ. ಈ ವೈಸರಾಯರು ಅಮೂರ್, ಕ್ವಾಂಗ್‌ಟಂಗ್ ಪ್ರಾಂತ್ಯಗಳಲ್ಲಿ ತಮ್ಮ ಅಧಿಕಾರವನ್ನು ಚಲಾಯಿಸುವರು.

●●●●

ಸಿರಿಯಾ ದೇಶದ ಮುಖ್ಯ ತೀರಪಟ್ಟಣವಾದ ಬೇರೂಟಿನಲ್ಲಿದ್ದ ಅಮೇರಿಕದ ರಾಯಭಾರಿಯನ್ನು ಅಲ್ಲಿನವರು ಕೊಂದುಹಾಕಿದರಂತೆ. ಅಮೇರಿಕದವರು ಪ್ರತಿಫಲಕೊಡಬೇಕೆಂದೂ, ಇಲ್ಲವಾದರೆ ಆ ಡಗಿನಲ್ಲಿ ಸೈನ್ಯವನ್ನು ಕಳುಹಿಸಿ ಶಿಕ್ಷಿಸುತ್ತೇವೆಂದೂ ಸಿರಿಯಾದವರಿಗೆ ಹೇಳಿಕಳುಹಿಸಿದಾರೆ.

●●●●

ಸೋಮಾಲಿಲ್ಯಾಂಡಿನ ಮುಲ್ಲಾ ವಿನ ಕಡೆಯವರು ಯುದ್ಧಕ್ಕಾಗಿ ವಿಲಾಯತಿಯಿಂದಲೂ, ಫ್ರಾನ್ಸಿನಿಂದಲೂ ೭೦ ಲಕ್ಷ ತೋಟಾಗಳನ್ನೂ ಮದ್ದುಗುಂಡನ್ನೂ ಗುಟ್ಟಾಗಿ ತರಿಸಿಕೊಂಡಿದ್ದರು. ಅದೆಲ್ಲಾ ಕಳೆದ ವಾರ ಏಡನ್ ಪಟ್ಟಣದಲ್ಲಿ ಸಿಕ್ಕಿತು. ಲಂಡನ್ ಪಟ್ಟಣದ ಒಂದು ಕಂಪೆನಿಯವರು ಸಿಕ್ಕಿಬಿದ್ದಿದಾರೆ.

●●●●

ಅಮೇರಿಕ್ ರಾಜ್ಯಕ್ಕೆ ಸೇರಿದ ಮಿಸೌರಿ ಡಿಸ್ಟ್ರಿಕ್ಟಿನ ಗೋರ್ಡ ಎಂಬೊಂದು ಗ್ರಾಮದಲ್ಲಿ ಮಿಸ್ ಎಲ್ಲಾ ಎಂಬೊಬ್ಬ ಹೆಂಗಸಿರುವಳು. ಈಕೆ ೮ ಅಡಿ ೪ ಅಂಗುಲ ಎತ್ತರವಾಗಿ ಬೆಳದಿದ್ದಾಳೆ. ಇಷ್ಟೆಷ್ಟು ಅಜಾನುಬಾಹುವಾಗಿ ಬೆಳೆದಿರುವ ಹೆಂಗಸು ಪ್ರಪಂಚದಲ್ಲೇ ಇಲ್ಲ. ಇವಳು ಇನ್ನೂ ಬೆಳೆವುದರಲ್ಲೇ ಇದ್ದಾಳೆ.

●●●●

ವೆಸ್ಟ್ ಇಂಡೀಸ್ ಎಂಬ ದ್ವೀಪಸಮೂಹಗಳಲ್ಲಿ ಈಚೆಗೆ ಪರ್ವತದಿಂದ ಅಗ್ನಿಯು ಕಾರಿ ತುಂಬಾ ಅನಾಹುತವಾಯಿತಷ್ಟೆ. ಕಳೆದ ತಿಂಗಳಲ್ಲಿ ಆ ಪ್ರಾಂತ್ಯ ಭಯಂಕರವಾದ ಸುಳಿ ಗಾಳಿಗಳು ಪ್ರಾರಂಭವಾದವು. ಇವುಗಳ ದೆಸೆಯಿಂದ ಅನೇಕರು ಮೃತಪಟ್ಟರು, ಮಾರ್ಟಿನಿಕ್ ದ್ವೀಪದಲ್ಲಿ ಕಬ್ಬು, ಕೋಕೋ, ಕಾಫಿ ತೋಟಗಳೆಲ್ಲಾ ನಾಶಹೊಂದಿರುತ್ತವೆ.

●●●●

ಅಮೇರಿಕಕ್ಕೆ ಸೇರಿದ ಚಿಕಾಗೋ ಎಂಬ ಮಹಾ ನಗರದಲ್ಲಿ ವಿದ್ಯಾರ್ಥಿನಿಯರಾದ ಕೆಲವು ಹುಡುಗಿಯರು ಒಂದು ಸಂಘವನ್ನು ಮಾಡಿಕೊಂಡು—ಪ್ರಪಂಚದಲ್ಲಿ ಹೆಂಗಸಿಗೆ ವಿದ್ಯಾ ಪ್ರೌಢಿಮೆಯು ಪ್ರಾಧಾನ್ಯವಲ್ಲವೆಂತಲೂ, ಸೌಂದರ್ಯವೇ ಮುಖ್ಯವೆಂತಲೂ, ಹೆಂಗಸು ಮನೇ ಕೆಲಸಗಳಲ್ಲೇ ನಿರತಳಾಗಿರತಕ್ಕದ್ದೆಂತಲೂ ತೀರ್ಮಾನ ಮಾಡಿಕೊಂಡಿದ್ದಾರೆ.

●●●●

ಟರ್ಕಿ ಸುಲ್ತಾನರ ಪಡಗುಗಳ ಅಧ್ಯಕ್ಷರಾಗಿದ್ದ ವೇಜೆಟ್ ಪಾಷಾ, ಅಲ್ಲಿ ಪಾಷಾ, ಎಂಬವರಿಬ್ಬರೂ ಅಂತರಂಗದಲ್ಲೇ ಎರಡು ಪಡಗುಗಳನ್ನು ಆಯುಧಸಾಲೆಯಿಂದ ಬೇರೆ ಕಡೆಗೆ ಸಾಗಿಸುತ್ತಿದ್ದು ಸಿಕ್ಕಿಬಿದ್ದರು. ಸುಲ್ತಾನರು ಅವರಿಬ್ಬರನ್ನೂ ಗಡೀಪಾರು ಮಾಡಿರುತ್ತಾರೆ. ಅವರನ್ನು ಯೂರೋಪಿಗೆ ಕಳುಹಿಸಿ, ಅಲ್ಲಿ ಬಂದೀಖಾನೆಯೊಳಗಿಡಬೇಕೆಂದು ಹುಕುಂ ಆಗಿದೆ.

●●●●

ವಿಲಾಯತಿಯಿಂದ ಹಿಂದುಸ್ತಾನಕ್ಕೆ ಅಂಚೆ ಕಾಗದ ಪತ್ರಗಳು ಹಿಂದಿನವಾರ ಸಾಗಿಬರುತ್ತಿದ್ದಾಗ ಫ್ರಾನ್ಸಿನಲ್ಲಿ ಆ ವಸ್ತುಗಳಿದ್ದ ರೈಲ್ ಗಾಡಿಗೆ ಬೆಂಕಿಬಿದ್ದು ಉರಿದುಹೋಯಿತು. ಈ ಬೆಂಕಿಯಲ್ಲಿ ೩೫ ಚೀಲಗಳು ಸುಟ್ಟು ಬೂದಿಯಾದುವು. ಇನ್ನು ೩೫ ಚೀಲಗಳು ಅಲ್ಪಸ್ವಲ್ಪ ನಷ್ಟಪಟ್ಟವು. ಅವೆಲ್ಲಾ ಹಿಂದುಸ್ತಾನಕ್ಕೆ ಬರುತ್ತಿದ್ದ ವರ್ತಮಾನ ಪತ್ರಿಕೆಗಳೆಂದು ಹೇಳುವರು.

●●●●

ಅಮೇರಿಕಕ್ಕೆ ಸೇರಿದ ಫಿಲಡೆಲ್ಫಿಯಾ ಪಟ್ಟಣದಲ್ಲಿ ಸಾವಿರಾರು ಜನರು ಬಿದಿರು ತಡಿಕೆಗಳಮೇಲೆ ಏರು ವೇದಿಕೆಯಲ್ಲಿ ನಡೆಯುತ್ತಿದ್ದ ಚೆಂಡಾಟವನ್ನು ನೋಡಿ ಸಂತೋಷಪಡುತ್ತಿರುವಲ್ಲಿ ಆ ತಡಿಕೆಗಳು ಅನಾಮತ್ತು ಮುರಿದು ಕಳಚಿಕೊಂಡವು. ಜನರ ತುಳಿತದಲ್ಲಿ ೪ ಮಂದಿ ಮೃತಪಟ್ಟರು; ೧೫೦ ಜನರಿಗೆ ಗಾಯಗಳಾದುವು. ಈ ಪ್ರತಿ ೦೨ ಮಂದಿ ಬದುಕುವಹಾಗಿಲ್ಲ.

●●●●

ಕ್ಯಾಥರೀನ್ ರಾಡ್ವಿಲ್ ಎಂಬ ರಾಜಕುಮಾರ್ತಿಯು ರೋಡ್ಸ್ ಎಂಬ ಕೋಟ್ಯಾಧೀಶ್ವರನ ರುಜುವಿನಂತೆ ರುಜು ಹಾಕಿ ೨೪,೦೦೦ ಪೌಂಡು ತೆಗೆದುಕೊಂಡುದರಿಂದ ಅವಳಿಗೆ ಕೇಪ್ ಟೌನ್ ನಗರದಲ್ಲಿ ಮ್ಯಾಜಿಸ್ಟ್ರೇಟರು ೧೯೦೨ನೆ ಏಪ್ರಿಲ್ ೩೦ ರಲ್ಲಿ ಎರಡು ವರ್ಷ ಸಜಾ ವಿಧಿಸಿದ್ದರು. ಈಕೆಯನ್ನು ಕಳೆದ ವಾರ ಬಂದೀಖಾನೆಯಿಂದ ಬಿಟ್ಟುಬಿಟ್ಟರು; ಈಗ ವಿಲಾಯತಿಗೆ ಪ್ರಯಾಣ ಮಾಡುತ್ತಿದ್ದಾಳೆ.

●●●●

ಕಾರ್ಖಾನೆಗಳಲ್ಲಿ ಹೊಗೆಯು ವ್ಯರ್ಥವಾಗಿ ಹೋಗುವುದಲ್ಲಾ ಎಂದೂ, ಅದನ್ನು ಹ್ಯಾಗಾದರೂ ಉಪಯೋಗಪಡಿಸಿಕೊಳ್ಳಬೇಕೆಂದೂ ಬೆಲ್ಜಿಯಂ ರಾಜ್ಯದಲ್ಲಿ ಕೆಲವು ಮಂದಿ ಪ್ರಯತ್ನಪಡುತ್ತಿದಾರೆ. ಹೊಗೆಯನ್ನು ದ್ರಾಕ್ಷಿಗಳುಳ್ಳ ದೊಡ್ಡ ತೊಟ್ಟಿಗಳಿಗೆ ತುಂಬಿ, ಅದನ್ನು ತೀವ್ರ ಯಂತ್ರಗಳ ಬೆರಸಿ ಹೊಗೆಗೆ ಬೆಂಕಿ ತೋರಿಸಿ, ಎಂಜಿನ್‌ಗಳು ಓಡುವುದಕ್ಕೆ ಪ್ರಯೋಗ ಮಾಡಿಕೊಳ್ಳುತ್ತಿರುವರು. ಇದನ್ನು ನೋಡಿ ಅನೇಕರು ಆಶ್ಚರ್ಯಯುಕ್ತರಾಗಿದಾರೆ.

●●●●

ರಷ್ಯಾ ರಾಜ್ಯಕ್ಕೆ ಸೇರಿದ ಕಿಷಿನೆಫ್ ಪ್ರಾಂತ್ಯದಲ್ಲಿ ಭಯಂಕರವಾದ ಕೊಲೆಗಳೂ ಕೊಳ್ಳೆಯೂ ನಡೆದವೆಂದು ತಿಳಿಸಿರುತ್ತೇವಷ್ಟೆ. ಒಡೆಸ್ಸಾ ತೀರಪಟ್ಟಣದಲ್ಲಿರುವ ಇಂಗ್ಲಿಷ್ ರಾಯಭಾರಿಯು ಈ ಆ ನಾಹುತವನ್ನು ವಿವರಿಸಿ ಬರೆದಿರುವುದೇನೆಂದರೆ—ಸರ್ಕಾರದವರು ೪೪೦ ಮಂದಿ ದಂಗೇ ಕೋರರನ್ನು ದಸ್ತಗಿರಿಮಾಡಿ, ವಿಚಾರಣೆಯಿಂದ ೩೦೪ ಜನರನ್ನು ಶಿಕ್ಷಿಸಿ, ೭೦೬ ಜನರನ್ನು ಖುಲಾಸ್ ಮಾಡಿದರು. ಇನ್ನೂ ೩೬೦ ಜನರ ವಿಚಾರಣೆ ಮುಗಿದಿಲ್ಲ. ಯೆಹೂದ್ಯರು ೭೦ ಲಕ್ಷ ದ್ರವ್ಯವನ್ನು ಈ ಅನಾಹುತದಲ್ಲಿ ಕಳೆದುಕೊಂಡರೆಂದು ಹೇಳುತ್ತಾರೆ.

●●●●

ಡೆನ್ಮಾರ್ಕಿನ ರಾಜಕುಮಾರ್ತಿಯು ಸಮುದ್ರದಲ್ಲಿ ಆಕಸ್ಮಾತ್ತಾಗಿ ಮುಳುಗಿ ಸತ್ತುಹೋಗಿದ್ದಳು. ಬೀದಿಯಲ್ಲಿ ಹೋಗುತ್ತಿದ್ದವನೊಬ್ಬನು ಆಕೆಯನ್ನು ಕಂಡು ಓಡಿಹೋಗಿ ಅನಾಮತ್ತು ಸಮುದ್ರದೊಳಗಿಂದ ಎತ್ತಿಕೊಂಡು ಬಂದನು. ಆಕೆ ಬದುಕಿದಳು. ಯುವರಾಜರು ಆ ಮನುಷ್ಯನನ್ನು ದರ್ಬಾರಿಗೆ ಕರೆಸಿಕೊಂಡು, ಬಹಳವಾಗಿ ವಂದಿಸಿ ಚಿನ್ನದ ನಾಣ್ಯ ಭರ್ತಿಮಾಡಿದ ಒಂದು ಚೀಲವನ್ನು ಬಹುಮಾನವಾಗಿ ಕೊಟ್ಟರು. ಇದಲ್ಲದೆ ಆ ರಾಜಕುಮಾರ್ತಿಯೂ ಅವನ ಧೈರ್ಯ ಸಾಹಸಗಳನ್ನು ಹೊಗಳಿ ಇನಾಮು ಕೊಟ್ಟು ಸಂತೋಷಪಡಿಸಿದಳು.

●●●●

ವಿಲಾಯತಿಯ ದೊರೆಯವರು ಕಳೆದ ವಾರ ದೇಶಸಂಚಾರ ಹೊರಟು ಆಸ್ಟ್ರಿಯಾ ರಾಜ್ಯಕ್ಕೆ ದಯಮಾಡಿದರು. ಇಂಗ್ಲಿಷ್ ದೊರೆಗಳು ಇದುವರೆಗೆ ಆ ರಾಜ್ಯಕ್ಕೆ ಹೋದುದೇ ಇಲ್ಲ. ರಾಜಧಾನಿಯಾದ ವಿಯನಾ ಪಟ್ಟಣದಲ್ಲಿ ಆಸ್ಟ್ರಿಯಾ ಚಕ್ರವರ್ತಿಯವರೂ ಅವರ ಆಸ್ಥಾನದ ಮಂತ್ರಿಗಳೂ ರೈಲ್ ಸ್ಟೇಷನ್ನಲ್ಲಿ ಕಾದಿದ್ದು ಇಂಗ್ಲಿಷ್ ದೊರೆಯನ್ನು ಕಂಡು, ಅವರಿಗೆ ಸುಸ್ವಾಗತವನ್ನು ಹೇಳಿ, ವಿಶೇಷ ಮರ್ಯಾದೆಯೊಡನೆ ಅವರನ್ನು ಅರಮನೆಗೆ ಕರೆದುಕೊಂಡುಹೋಗಿ ಸತ್ಕರಿಸಿದರು. ಪ್ರಜೆಗಳು ಪುರವನ್ನು ನಾನಾ ಪ್ರಕಾರವಾಗಿ ಶೃಂಗರಿಸಿ ತಂಡತಂಡವಾಗಿ ನಿಂತು ದೊರೆಯನ್ನು ನೋಡಿ ಜಯಧ್ವನಿ ಮಾಡಿದರು.

●●●●

ಅಮೇರಿಕಕ್ಕೆ ಸೇರಿದ ಮಿಚಿಗನ್ ಪಟ್ಟಣಕ್ಕೆ ಪ್ರಸಿದ್ಧರಾದ ಸರ್ಕಸ್ ಕಂಪನಿಯವರು ರೈಲ್ ಗಾಡಿಗಳಲ್ಲಿ ಹೋಗುತ್ತಿದ್ದರು. ಈ ಗಾಡಿಗಳು ಎದುರಿಗೆ ಬಂದ ರೈಲ್ ಗಾಡಿಗೆ ಢಿಕ್ಕಿ ಹೊಡೆದು ತುಂಬಾ ಅನಾಹುತವಾಯಿತು. ೨೦ ಜನ ಸರ್ಕಸ್‌ನವರು ಸತ್ತರು, ೨೫—೩೦ ಜನರಿಗೆ ಗಾಯಗಳಾಗಿವೆ. ಬೋನುಗಳಲ್ಲಿ ನಾನಾ ಕ್ರೂರ ಮೃಗಗಳನ್ನು ಕೂಡಿ, ಆ ಕಂಪನಿಯವರು ರೈಲಿನಮೇಲೆ ತೆಗೆದುಕೊಂಡು ಹೋಗುತ್ತಿದ್ದರು. ಢಿಕ್ಕಿ ಹೊಡೆದ ಕೂಡಲೇ ೫೦ ಮೃಗಗಳೂ ಅರ್ಧಜೀವವಾದುವು. ಬೋನುಗಳನ್ನು ಮುರಿದು ಹೊರಗೆ ಬರಬೇಕೆಂದು ಪ್ರಯತ್ನಪಟ್ಟವು ಅವರೆ ಏನು ಸಾಧ್ಯವಾಗಲಿಲ್ಲ. ಬಗ್ಗಿಸಿಕೊಂಡವರು ಕೂಡಲೇ ಹೋಗಿ ಆನೆ, ಹುಲಿ, ಚಿರತೆ, ಸಿಂಹ ಮೊದಲಾದ ಮೃಗಗಳ ಆರ್ಭಟವನ್ನು ಶಮನಮಾಡಿದರು. ಆ ಬೋನುಗಳೂ, ಒಂದು ಆನೆಯೂ ... ಈಕೆ ಒಳ್ಳೊಳ್ಳೆ ಕುದುರೆಗಳು ಗಾಯಪಟ್ಟು, ... ಕಂಪನಿಯವರು ಅವುಗಳನ್ನೆಲ್ಲಾ ... ಕೊಂದುಹಾಕಬೇಕಾಯಿತು. ಗಾಡಿಗಳು ... ಜನರು ಅಷ್ಟು ಗಾಬರಿಪಡಲಿಲ್ಲ. ಈ ... ಮೃಗಗಳು ಎಲ್ಲಿ ತಮ್ಮ ಮೇಲೆ ... ಲೆ ನುಗ್ಗಿ ಬರುವವೋ ಎಂದು ಗಾಬರಿಪಟ್ಟು ... ರು. ದೇವರದಯದಿಂದ ... ಇಲ್ಲ. ಅಂತು ಈ ... ನಾಹುತದಿಂದ ಆ ಸರ್ಕಸ್ ಕಂಪನಿಯವರಿಗೆ ... ಲಕ್ಷ ದ್ರವ್ಯ ನಷ್ಟವಾಯಿತು.

# ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ರ ದ

—— o ——

ಕ್ರಯ ೧ ರ ದ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩ | ಮೈಸೂರು—ಸನ್ ೧೯೦೩ ನೇ ಇಸವಿ ಸೆಪ್ಟೆಂಬರ್ ತಾರೀಖು ೨೩ ನೇ ಗುರುವಾರ. | ಸಂಚಿಕೆ ೧೩

## ಕ್ಷೇತ್ರಗಣಿತ ಸಂಗ್ರಹ.

7

ಈ ಗ್ರಂಥವನ್ನು ಮೈಸೂರು ಶಿವರಾಮಪೇಟೆ ಸ್ಕೂಲು ಹೆಡ್ಮಾಸ್ಟರು ಟಿ. ಲಂ. ರಾಮಸ್ವಾಮಯ್ಯನವರು ಬರೆದಿರುತ್ತಾರೆ. ಇದರಲ್ಲಿ ನೂರಾರು ಸಾವಿರ ಲೆಕ್ಕಗಳೂ ಮೈಸೂರು ದೇಶೀಯ ಪರೀಕ್ಷೆಯ ಪ್ರಶ್ನಪತ್ರಿಕೆಗಳೂ ಉತ್ತರಗಳೊಡನೆ ಅಡಕವಾಗಿವೆ. ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆಯುವಂತೆ ಅಲ್ಪಕ್ರಯಕ್ಕೆ ಮಾರಲ್ಪಡುತ್ತವೆ. ಕ್ರಯ ೪ ಆಣೆ, ಟಪಾಲು ೧ ಪೈ. ವಿಳಾಸ—

ಮ್ಯಾನೇಜರ್,

ಸಿ. ಎಚ್. ಎಸ್. ಬುಕ್ ಡಿಪ್ಪೋ, ಮೈಸೂರು.

## ಸ್ಟಾಂಡರ್ಡ್ ಲೈಫ್ ಅಷ್ಯೂರೆನ್ಸ್ ಕಂಪನಿ

10

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟಿದ್ದು.

ಇಂಡಿಯಾ ದೇಶದಲ್ಲಿ ಲೈಫ್ ಇನ್ಷೂರೆನ್ಸ್ ಮಾಡುವ ಜೀವ ವಿಮಾಗಳನ್ನು ಬೀಮಾ ಮಾಡುವ ಎಲ್ಲಾ ಕಂಪನಿಗಳಲ್ಲಿ ಇದು ಬಹು ಹಳೇದಾಗಿಯೂ ಹೆಚ್ಚಾದ ಬಂಡವಾಳವುಳ್ಳದ್ದಾಗಿಯೂ ಇದೆ

ಭೀಮಾದಾರರುಗಳಿಗೆ ಕೊಡತಕ್ಕ ಬೋನಸ್ಸು (ಲಾಭ ಸಮ್ಮ) ಈ ಕಂಪೆನಿಯು ಕೊಡುವದರ ಕ್ರಮಗಳು ಮೊದಲಾದವುಗಳನ್ನು ಇತರ ಕಂಪೆನಿಯವರುಗಳೊಡನೆ ಹೋಲಿಸಿ ನೋಡಿದರೆ ಇಲ್ಲಿ ಜೀವವಿಮಾವನ್ನು ಭೀಮಾ ಮಾಡುವವರಿಗೆ ಎಷ್ಟು ಸೌಕರ್ಯಗಳು ಉಂಟೆಂಬುದು ಗೊತ್ತಾಗುತ್ತದೆ

ಈ ಕಂಪೆನಿಯು ಬೀಮಾ ನಿಬಂಧನೆಗಳು ಬಹು ಅನುಕೂಲವಾದವು. ಬೀಮಾದಾರರುಗಳಿಗೆ ತೊಂದರೆಯನ್ನುಂಟುಮಾಡುವ ನಿಬಂಧನೆಗಳೇನೂ ಇಲ್ಲ

ನಿಷ್ಕರ್ಷೆಯಾದ ವಯಸ್ಸನ್ನು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲೇ ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂಪಾಯಿಗಳನ್ನು ಕಂಪನಿಯವರು ಕೊಡುವ ಲಾಭಸಹಿತವಾಗಿ ಪಡೆಯಬೇಕಾದರೆ ಭೀಮಾದಾರನು ಕಂಪನಿಗೆ ಕೊಡಬೇಕಾದ ಚಂದಾ ವಿಕ ದರಗಳ ಪೈಕಿ ಕೆಲವನ್ನು ಇಲ್ಲಿ ಕೊಡಲಾಗಿದೆ.

| ಸಾವಿ ಸಡೆಯುತ್ತಿರುವ ವಯಸ್ಸು. | ೫೦ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ ಪಡೆಯಬೇಕಾದರೆ ಮಾಸಿಕವಾಗಿ ಕಂಪನಿಗೆ ಕೊಡತಕ್ಕದು | ೫೫ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ ಯನ್ನು ಪಡೆಯಬೇಕಾದರೆ ಮಾಸಿಕವಾಗಿ ಕಂಪನಿಗೆ ಕೊಡುವದು |
|---|---|---|
| ೨೦ | ರೂ ೩—೧೨—೯ | ರೂ. ೩—೦—೦ |
| ೨೫ | ,, ೩—೧೪—೨ | ,, ೩—೧೪—೦ |
| ೩೦ | ,, ೯—೧೨—೯ | ,, ೮—೨—೦ |
| ೩೫ | ,, ೧೨—೧೪—೯ | ,, ೧೦—೧—೪ |
| ೪೦ | | ,, ೧೩—೪—೮ |

೨,೦೦೦ ರೂ ಗಿಂತಲೂ ಹೆಚ್ಚಾದದ್ದಾಗಲಿ ಕಡಮೆಯಾದ್ದಾಗಲಿ ವಯಸ್ಸಿನಲ್ಲಿ ಹೆಚ್ಚು ಕಡಮೆ ಇದ್ದರಾಗಲಿ ಚಂದಾ ದರವೇನೆಂಬುದನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಇದುವರೆಗೆ ಜಾರಿಯಲ್ಲಿದ್ದ ಚಂದಾ ದರಗಳನ್ನು ಕಡಮೆ ಮಾಡಿದ್ದೇವೆ. ಹಾಲಿ ವರ್ಷಕ್ಕೆ ತಯಾರಾಗಿರುವ ಹೊಸ ಚಂದಾ ಪಟ್ಟಿಯನ್ನೂ ಭೀಮಾ ದರಖಾಸ್ತು ಫಾರಂಗಳನ್ನೂ ಇದೇ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಎಂ. ಸೂರ್ಯನಾರಾಯಣಪ್ಪ,

ಕಮಿಷನ್ ಮತ್ತು ಜನರಲ್ ಏಜನ್ಸಿ,

ಶಿವಮೊಗ್ಗೆ.

## ಸರಸ್ವತೀ ಕರ ಕಸ್ತೂರಿ ಮಾತ್ರೆಯು:

15



ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥವರಿಗೆ ಅತ್ಯಂತ ಉಪಯುಕ್ತವಾದದ್ದು. ಈ ಮಾತ್ರೆ ೧—೨ ತಾಂಬೂಲದ ಸಂಗಡ ಸೇವಿಸುವದರಿಂದ ಬಾಯಿ ಸುವಾಸನೆಯುಂಟಾಗಿ ಬಾಯಿಯ ದುರ್ಗಂಧ, ಹೋಗಿ ಅಜೀರ್ಣ, ಉಷ್ಣರೋಗ, ಬಾಯಿ ಹೋಲ್ಲು, ಉಗ್ಗಿಸುತ್ತಾ ದಾಹದ ಪಿತ್ತ, ವಾಯು, ಶೀತ, ಪಿತ್ಥ, ಮಲಬದ್ಧ, ದಂತದೋಷ ಬಾಯಿಹುಣ್ಣು, ಹಸಿವು, ಜ್ವರ, ಚಳಿ, ನೆಗಡಿ, ತಲೆನೋವು ಇತ್ಯಾದಿ ಅನೇಕ ರೋಗಗಳೆಲ್ಲಾ ಉಪಶಮನವಾಗುವದು. ಹೆಂಗಸರ ಗುಪ್ತವಾದ ಅನೇಕ ಬಾಧ್ಯಗಳಿಗೆ ಪರೀಕ್ಷೆಯುಳ್ಳಂತಹ ರಾಮಬಾಣ ಮುಖ್ಯವಾದ ಮಾಸೆಲ್ಲಿ ಈ ಮಾತ್ರೆಯು ಸಂಜೀವನದ ಈ ಮಾತ್ರೆಯು ನಿಮ್ಮಲ್ಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸ್ವಾಧೀನದಲ್ಲಿದ್ದಂತೆಯೇ. ೨೦೦ ಮಾತ್ರೆಗಳುಳ್ಳ ಸೀಸೆ ಒಂದಕ್ಕೆ ೧ ಆಣೆ, ೧ ಆಣೆ ಟಪಾಲು ೨ ತಿಂಗಳು ಸೇವಿಸಿದರಿಂದ ನಿಮಗುಂಟಾಗುವ ಅನುಭವವು ನಮಗೆ ಬರೆಯುವದಾಗಿ ಬಿನ್ನಹ.

ಸಿ. ಬಿ. ಅಂಡ್ ಸನ್ಸ್ ಬೆಂಗಳೂರು ಸಿಟಿ

## ROBINSON'S PATENT BARLEY.

## ರಾಬಿನ್‌ಸನ್‌ಯವರ ಬಾರ್ಲಿ ಹಿಟ್ಟು

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಜವೆಗೋಧಿಯಿಂದ ನವೀನ ಹಸ್ತಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾರಾದ್ದರಿಂದ ಜಾತಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು

## MELLIN'S FOOD.

ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ

78

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮೂಳೆಯೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಶೀಘ್ರ ಪುಷ್ಟವಾಗುವದಕ್ಕೆ ಸಹಾಯಕವಾಗಿದೆ

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಕಮನಾಸುತಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಕಯುಂಟಾಗುತ್ತದೆ

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಹವೆ ವಾಯುಗುಣದಿಂದಲಾದರೂ ಕೆಡುವದಿಲ್ಲ

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾ ದೊಡ್ಡವರಿಗೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಪಾಕ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಕಂದಿಗೆ ಅರ್ಹವಾದದ್ದಾಗುತ್ತದೆ

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ದಿನಸು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ಕ್ಷಣ ದೇಹದ ಒಂದಂಶವಾಗುತ್ತದೆ

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳ ಸಿಡುಬು ಹಾಕಿದ ಕಾಲದಲ್ಲಿಯೂ ಶೈಶವದಲ್ಲಿಯೂ ಒದಗುವ ವಿಕಾರದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುರುತರ ಪದಾರ್ಥವೇನೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥಗಳೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ದಕ್ಕತಕ್ಕದ್ದಾಗಿದೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ವೃದ್ಧಿಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ತಡೆಯ ಮಟ್ಟಿಗೆ ಕಡಮೆ ಮಾಡುತ್ತದೆ.

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಷಾಪುಗಳಿಗೂ ಬರೆದು ತರಿಸಿಕೊಳ್ಳಬಹುದು —

ಮದನ್.—ಮೆ। ಕಾಪರ್ ಗಿಬ್‌ಬ್ರ ಬ್ರದರ್ಸ್.

ಬೊಂಬಾಯಿ.—ಮೆ। ಥೀಮಂ ಅಬರ್‌ಕ್ರಾಂಬಿ ಕಂಪೆನಿ.

ಕಲ್ಕತ್ತಾ.—ಮೆ। ಮೆಕ್ನೀಲ್ ಅಯಾಕ್ ಕಂಪೆನಿ.

ಕೊಲಂಬೋ.—ಮೆ। ಹಾರ್ ವಿಲ್ಸನ್ ಕಂಪೆನಿ

ಕರಾಚಿ.—ಮೆ। ಎಚ್. ಜೆ. ಮಸ್ತ್ರ ಕಂಪೆನಿ.

ಪಂಜಾಬು.—ಮೆ। ... ಕಂಪೆನಿ

ರಂಗೂನ್.—ಮೆ। ... ಕಂಪೆನಿ.

# ಗರ್ಭಸಂಜೀವಿನಿ.

೧ ತೊ. ೮ ಆ.; ವಿ. ಪಿ. ಚಾರ್ಜ್ ೩ ಆ.

ಕೆ. ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.



"ಬಸವರಾಜವಿಜಯ."

3

ಪಠನರೂಪವಾದದ್ದು. ಬಾಲಕರು ಕೂಡ ಸುಲಭವಾಗಿ ಓದಿ ತಿಳಿದುಕೊಳ್ಳಬಹುದು. ಬಸವಪುರಾಣದ ಕಥೆಗಳೆಲ್ಲಾ ಇದರಲ್ಲಿ ಕೆ.ಸ್ಥಿತವಾದ ಈ ದೊಡ್ಡ ಪುಸ್ತಕ ೧ಕ್ಕೆ ವಿ. ಪಿ. ಮೂಲಕ ೦—೩—೦. ೧೨ ಪ್ರತಿಗಳನ್ನು ತರಿಸಿಕೊಂಡರೆ ೧ ಉಚಿತ. ಬೇಕಾದವರು ಮೈಸೂರು ದೊಡ್ಡ ಪೇಟೆ ಎಸ್. ಆರ್. ಕರಿಬಸವಶಾಸ್ತ್ರಿಗಳಿಗೆ ಬರೆದು ತರಿಸಿಕೊಳ್ಳಬೇಕು.



## A WONDERFUL REMEDY.

2

ಮೂಳೆಕಟ್ಟು, ಎಲ್ಲಾ ತರಹಾ ಕಜ್ಜಿ ಮತ್ತು ಹುಣ್ಣುಗಳನ್ನು ಅತಿ ಜಾಗ್ರತೆಯಿಂದ ವಾಸಿಮಾಡುವ ಮುಲಾಮುಗಳು. ಕ್ರಯ ಡಬ್ಬಿ ೧ಕ್ಕೆ ೪ ಆಣೆ. ೧೦ಕ್ಕೆ ೧ ಜಾಸ್ತಿ, ೫೦—೧೦೦ಕ್ಕೆ ೫ ಜಾಸ್ತಿ ಯಂತೆ ಕೊಡುತ್ತೇವೆ. ನಮಗೆ ಇನ್ನೂ ಏಜಂಟರು ಬೇಕಾಗಿದೆ. ಈ ಕೆಳಗಣ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು. ಹೊಳೇನರಸೀಪುರದಲ್ಲಿರುವ ನಮ್ಮ ಏಜಂಟರು ಸಿಂಧಘಟ್ಟದ ರಾಮಸ್ವಾಮಯ್ಯನವರು ಮತ್ತು ಚನ್ನಮಲ್ಲಶೆಟ್ರು; ಮೈಸೂರಲ್ಲಿರುವ ಮೈಸೂರು ಅ. ಮು. ಕೋರ್ಟು ಗುಮಾಸ್ತೆ ಎಸ್. ರಾಮಚಂದ್ರಶಾಸ್ತ್ರಿಗಳು.

ಎಂ. ಕೆ. ಹರಸಿಂಹಯ್ಯ,

ಟೈಪ್ಪಿ ನಾಜರ್, ಹೊಳೇನರಸೀಪುರ ಮುನ್ಸೀಫ್ ಕೋರ್ಟು.


## ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

2

೧೮೯೫ ನೆ ಇಸವಿ ಮೈಸೂರು ಕಂಪೆನಿ ಆಕ್ಟಿಗೆ ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ಶ್ರೀಮನ್ ಮೈಸೂರು ಮಹಾರಾಜರವರ ಗೌರ್ನಮೆಂಟಿನವರಿಂದ ಗ್ಯಾರಂಟಿ ಮಾಡಲ್ಪಟ್ಟ ಸದರಿ ಕಂಪೆನಿಯ ಷೇರು ಒಂದಕ್ಕೆ ೨೫ ರೂಪಾಯಿ ಪ್ರಕಾರ ೨೦,೦೦೦ ಷೇರುಗಳಿಂದ ಆಗುವ ೫,೦೦,೦೦೦ ರೂಪಾಯಿ ಭಂಡವಾಳ. ಷೇರುಗಳು ತೆಗದುಕೊಳ್ಳುವವರು ಇದರ ಡೈರೆಕ್ಟರುಗಳಿಂದ ವಿಶಿಷ್ಟ ತಪಸೀಲು ತಿಳಕೊಳ್ಳಬಹುದು.

ಬಿ. ವಿ. ರಾಮಸ್ವಾಮಿ ಶೆಟ್ರು, ಬಿ. ಏ.,

ಅಡ್ವೊಕೇಟ್ ಮತ್ತು ಜನರಲ್ ಏಜಂಟ್,

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ,

ನಗರ್ತಪೇಟೆ, ಬೆಂಗಳೂರು.

## ಇಸ್ತಿಹಾರ್.

3

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದಾ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ.—

ಸಿಟಿ ಮುನಿಸಿಪಾಲಿಟಿಯಲ್ಲಿ ಹೌಸು ಸರ್ವೀಸು ಪೈಪು ಯಾ ನೀರು ಸಪ್ಲೈಗಾಗಿ ಅವರವರ ಮನೆಯಲ್ಲಿ ನಲ್ಲಿ ಇಡಿಸಿಕೊಂಡು ಇದಕ್ಕಾಗಿ ಸಾಲಿಯಾನಾ ಒಂದು ಇಂಚು ಟ್ಯಾಪಿಗೆ ೫ ರೂಪಾಯಿನಂತೆಯೂ, ಅರ್ಧ ಇಂಚ್ ಟ್ಯಾಪಿಗೆ ೨½ ರೂಪಾಯಿನಂತೆಯೂ, ವಾಟರು ರೇಟು ಕೊಡುತ್ತಾ ಇರುವದು ಸರಿಯಷ್ಟೆ.

೨. ಅಂಥಾ ಮನೆಗಳ ಮಾಲೀಕರು ಅಥವಾ ಬಾಡಿಗೆದಾರ್ರು ಮನೆ ಖಾಲಿ ಮಾಡಿದ್ದರ ದೆಸೆಯಿಂದಲಾಗಲಿ ಅಥವಾ ಅನ್ಯಾವ ಇತರ ಕಾರಣದಿಂದಾಗಲಿ ಅವರವರ ಮನೆಗಳಲ್ಲಿ ವಾಟರು ಟ್ಯಾಪು ಬಂದುಮಾಡಿಸಿ ನೀರು ನಿಲ್ಲಿಸಿದ್ದ ಕಾಲಕ್ಕೆ ತಕ್ಕಷ್ಟು ದಾಮಾಷಾಯಿನಂತೆ ವಾಟರು ರೇಟು ಕಮ್ಮಿ ಹಾಕಿಸಿಕೊಡಬೇಕೆಂದು ಮ್ಯುನಿಸಿಪಾಲಿಟಿಗೆ ಅರ್ಜಿ ಕೊಟ್ಟರೆ ಅರ್ಜಿ ಕೊಟ್ಟ ತಾರೀಖು ಲಗಾಯಿತು ಪುನಃ ನೀರು ಬಿಡಿಸಿಕೊಂಡುವ ಅರ್ಜಿಯ ವರೆಗೆ ಮ್ಯುನಿಸಿಪಲ್ ರಗ್ಯುಲೇಷನ್ ೬೬ನೆ ಸೆಕ್ಷನಂತೆ ಸಾಲು ಪೂರ್ತಾ ಅಥವಾ ಭಾಗ್ಯತೆಯ ಕ್ವಾರ್ಟರ್ಲಿ ಕಂದಾಯ ಕಮ್ಮಿ ಮಾಡಲ್ಪಡುತ್ತಿತ್ತು.

೩. ಈ ರೀತಿ ಕಮ್ಮಿ ಹಾಕುವಿಕೆಯು ರೂಲ್ಸಿಗೆ ವಿರೋಧವೆಂತಲೂ, ಮೈಸೂರು ಸಿಟಿ ವಾಟರು ರೇಟು ವಸೂಲಾತಿಯು ಸ್ಪೆಷಲ್ ಆರ್ಡರಿನಂತೆ ಸಾಲಿಯಾನಾ ವಸೂಲಾಗತಕ್ಕದ್ದೆಂತಲೂ, ಇತ್ಯರ್ಥ ಯಾವದೊಂದು ರಿಯಾಯಿತಿಯನ್ನೂ ತೋರಿಸದೆ ಪೂರಾ ಸಾಲಿಗೆ ರೇಟು ವಸೂಲ್ಮಾಡಬೇಕೆಂತಲೂ, ಸಹಾ ಗೌರ್ನಮೆಂಟಿನಿಂದ 22—7—1903 ನೇ ಮಸ್ತೂರು $\frac{316}{ಎಸ್. ಎಸ್. 2-93}$ ನೇ ನಂಬರು ಆರ್ಡರು ಸಾದರಾಗಿರುವದ್ದರಿಂದ ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನೆಂದರೆ:—

ಸಿಟಿಯಲ್ಲಿ ಆಯಾಯ ಮನೆಗಳಿಗೆ ವಾಟರು ಟ್ಯಾಪು ಇಡಿಸಿಕೊಂಡಿರತಕ್ಕ ಮನೆ ಮಾಲೀಕರು ಯಾ ಬಾಡಿಗೆದಾರರು ಭೋಗ್ಯದಾರರು ಅಥವಾ ಆಧಾರ ಮಾಡಿಕೊಂಡಿರತಕ್ಕವರು ಸಪ್ಲೈರಿ ಸಾಲಿನಲ್ಲಿ ಪೂರ್ತಾ ನಲ್ಲಿಯಿಂದ ನೀರು ಉಪಯೋಗಿಸಲಿ, ಅಥವಾ ಉಪಯೋಗಿಸದೆ ಹೋಗಲಿ, ಮನೆಯು ಖಾಲಿಯಾಗಿರಲಿ, ಅಥವಾ ನಾಶವಾಗಲಿ, ಆಯಾಯ ಟ್ಯಾಪುಗಳಿಗೆ ನೇಮಕರೂಪಾಗಿರುವ ದರದಂತೆ ಸಾಲಿಯಾನಾ ಪೂರಾ ಕಂದಾಯ ಕೊಡುತ್ತಾ ಬರಬೇಕು. ಯಾವುದೆ ವಿನಾ ದೊರೆಯಲಾರದು. ಟ್ಯಾಪನ್ನು ಖಾಯಮ್ಮಾಗಿ ಬಂದುಮಾಡಲು ಅರ್ಜಿ ಕೊಟ್ಟು ವಜಾ ಮಾಡಿಸಿಕೊಂಡರೆ ಹಾಗೂ ರತಕ್ಕ ಕಂದಾಯವನ್ನು ಅರ್ಜಿ ಕಮ್ಮಿ ಹಾಕಿಸಲ್ಪಡುತ್ತದೆ.

K. Srinivasa Rao,
*Vice President.*


## ಚೇಂಬರ್ಲಿನ್ ಯವರು ಕಂಡುಹಿಡಿದ ಕೆಮ್ಮಿನ ಔಷಧವು.




38

ಶೀತ, ಕೆಮ್ಮು, ಗಂಟಲು ಗೂರಲುಗಳು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಖಾಯಿಲೆಗಳಿಗೆ ಈ ಔಷಧವು ಬಹಳ ಶ್ರೇಷ್ಠವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತವಾ ಬಹಳ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಉಪೇಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಬಾಗಿಹೋಗುವದು. ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನ ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಈ ಹೊತ್ತೇ ಒಂದು ಶೀಸೆಯನ್ನು ಕೊಂಡುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ.; ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇಲ್ಲದಿದ್ದ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುತ್ತೆ:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,

ಮವುಂಟ್ ರೋಡ್,

ಮದರಾಸ್.



## ಶ್ರೀಕೃಷ್ಣರಾಜಶತಕಂ.

ಈಗಿನ ನಮ್ಮ ಶ್ರೀಮನ್ಮಹಾರಾಜರವರ ಮೇಲೆ ರಚಿಸಲ್ಪಟ್ಟಿದೆ. ಕ್ರಯ ೨ ಆಣೆ ೧೦ಕ್ಕೆ ೧ ಉಚಿತ; ವಿ. ಪಿ. ಮೂಲಕ ತರಿಸಿಕೊಳ್ಳಬಹುದು.

ಹೆಚ್. ವೆಂಕಟರಾಯ, ಹೆಡ್ಮಾಸ್ತರು;

ಕಳಲೆ, ತಿಪ್ಪೂರ್ ತಾ.



## ನಿಮ್ಮ ತಲೆಯಮೇಲಿರುವದೇನು? ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

3

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳೇ.

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿ ಆಗುತ್ತಿರುವ ಟೋಪಿಗಳ ಮಾದರಿಯೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಮಾದರಿಯೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವವು. (೨) ಟೋಪಿಗಳನ್ನು ಮುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೆದಾದ, ಚನ್ನಾಗಿ ಕೆಲಸದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ.



## ವಿಲಾಯತಿಯಿಂದ ಈಗತಾನೆ ಬಂದಿವೆ.

ಲೇಬಲ್ ಹಚ್ಚಿರುವ ಪುರಸ್ಕೃತ ಉಲ್ ೫,೦೦೦ ಪೌಂಡು ಮತ್ತು ಉಕ್ಕಿನ ನಂ. ೨, ೩ ಕ್ರೋಷೆ ಕಡ್ಡಿ ೫೦ ಗ್ರೋಸ್

ಮಿಶ್ರವಾದ ಬಣ್ಣದ ಉಲ್ ಪೌಂಡಿಗೆ ರೂ. ೧—೧—೦; ಇತರ ಬಣ್ಣದ್ದು ರೂ. ೧—೩ ಆ. ಏಕದಂ ೧೦೦ ಪೌಂಡುಗಳಿಗಿಂತ ಜಾಸ್ತಿಯಾಗಿ ತರಿಸಿಕೊಳ್ಳುವವರಿಗೆ ಪೌಂಡಿಗೆ ರೂ ೧—೬ ಆ.

ಈ ಉಲ್ ದಾರವು ಕ್ರೋಷೆ ಕಡ್ಡಿಗಳೂ ದಿನೇ ದಿನೇ ಹೆಚ್ಚು ಬೆಲೆ ಯಾಗಿ ಮಾರಾಟವಾಗುತ್ತಿರುವುದರಿಂದ ಬರುವ ಅಕ್ಟೋಬರ್ ಆಖೈರ ಒಳಗಾಗಿ ಬರೆದು ತರಿಸಿಕೊಳ್ಳುವವರಿಗೆ ಸಿಕ್ಕುವುವು.

ಪವಾಕ್ಕೆ ತಕ್ಕ ಪಂಜಾಬಿ ಶಾಲುಗಳು.

೬×೩ ಮೊಳ, ನಂ. ೩. ರೂ. ೩—೧೨ ಆ. ನಂ. ೪. ರೂ. ೩—೧೦ ಆ. ಕೆಂಪ್ಪಳೆ ಬಣ್ಣ, ಅಚ್ಚಗೆಂಪು, ರಕ್ತಗೆಂಪು, ಎಣ್ಣೆಗೆಂಪು, ಬೂದಿ ಬಣ್ಣ ಮೊದಲಾದ ಬಗೆ ಬಗೆ ಬಣ್ಣದ ಶಾಲುಗಳನ್ನು ನಾವು ಹೇಳಿ ತಯಾರ್ಮಾಡಿಸಿರುವುದರಿಂದ ಈ ಶಾಲುಗಳು ಬಾಳಿಕೆಯಲ್ಲಿ ಬೇರೆ ಕಡೆ ಮಾರುವ ಶಾಲುಗಳಿಗಿಂತ ಉತ್ತಮವಾದುವು. ಇವುಗಳನ್ನು ತರಿಸಿ ಪರೀಕ್ಷಿಸಬೇಕೆಂದು ಅಪೇಕ್ಷಿಸುತ್ತೇವೆ.

ದೊಡ್ಡ ಸೈಜಿನ ಪೋಸ್ಟ್ ಕಾರ್ಡುಗಳು.

ಬಗೆ ಬಗೆ ಬಣ್ಣದ ಕಾರ್ಡುಗಳ ಮೇಲೆ ಚಿತ್ರ ಛಾಪಿಸಿರುವುದು ೧೦೦ಕ್ಕೆ ೫ ಆ; ೧,೦೦೦ಕ್ಕೆ ರೂ. ೨—೦ ಆ. ಸಾದಾ ಕಾರ್ಡುಗಳು ೧೦೦ಕ್ಕೆ ೩ ಆ; ೧,೦೦೦ಕ್ಕೆ ರೂ. ೨—೩ ಆ.

L. A. Pochwat & Co.,
*Bangalore City.*


## ನಮ್ಮ ಚಂದಾದಾರರಿಗೆ ನೋಟೀಸ್.

"ವೃತ್ತಾಂತ ಪತ್ರಿಕೆ" ಯ ಏಜಂಟರು ಚಂದಾ ವಸೂಲ್ಮಾಡಿಕೊಳ್ಳತಕ್ಕ ರಶೀದಿ ಬರೆದು ಕೊಡತಕ್ಕದ್ದು. ಮತ್ತು ರಶೀದಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಈ ಕೆಲಸಕ್ಕೆ ಅಂಥಾ ಜನಕ್ಕೆ ನಾವು ಅಧಿಕಾರ ಕೊಟ್ಟಿರುವುದಿಲ್ಲ.

ಮ್ಯಾನೇಜರ್,

ಮೈಸೂರು. "ವೃತ್ತಾಂತ ಪತ್ರಿಕೆ" ಆಫೀಸ್.

# ವೃತ್ತಾಂತ ಪತ್ರಿಕೆ.

——:o:——

ಸನ್ ೧೯೦೩ ನೇ ಇಸವಿ ಸೆಪ್ಟೆಂಬರ್ ತಾ ೩೦ ನೇ ಬುಧವಾರ.

## ಇಂಗ್ಲೆಂಡು ರಾಜ್ಯಭಾರದ ಕನ್ಸರ್ವೆಟಿವ್ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದು.

ಬ್ರಿಟಿಷ್ ರಾಜ್ಯದ ಮಂತ್ರಾಲೋಚನಾ ಸಭೆಗೆ ಸೇರಿದ ಮಿ॥ ಚೇಂಬರ್ಲೇನರೂ, ರಿಚ್ಚಿ ಸಾಹೇಬರೂ, ಇಂಡಿಯಾ ಸ್ಟೇಟ್ ಸೆಕ್ರೆಟರಿಗಳಾದ ಲಾರ್ಡ್ ಜಾರ್ಜ್ ಹಾಮಿಲ್ಟನ್ ಯವರೂ ಇನ್ನೂ ಕೆಲವು ಮಂತ್ರಿಗಳೂ ತಮ್ಮ ತಮ್ಮ ಉದ್ಯೋಗಗಳಿಗೆ ರಾಜೀನಾಮೆಯನ್ನು ಕೊಟ್ಟರು. ಇದಕ್ಕೆ ಕಾರಣವೇನೆಂದರೆ—ಅನೇಕ ವರ್ಷಗಳಿಂದ ಗ್ರೇಟ್ ಬ್ರಿಟನ್ ಪ್ರಭುತ್ವದವರು ಫ್ರೀಟ್ರೇಡ್ ಎಂಬ ರಾಜ್ಯಕಾರ್ಯವನ್ನು ಅನುಸರಿಸುತ್ತ ಬಂದಿದ್ದಾರೆ. ಇದರ ವಿವರವೇನೆಂದರೆ—ಇಂಗ್ಲೆಂಡಿಗೆ ಇತರ ದೇಶಗಳಿಂದ ಬರುವ ದಿನಸಿಗಳ ಮೇಲಾಗಲಿ ಇತರ ದೇಶಗಳಿಗೆ ಹೋಗುವ ಪದಾರ್ಥಗಳ ಮೇಲಾಗಲಿ ಸುಂಕವನ್ನು ವಸೂಲ್ಮಾಡಕೂಡದೆಂಬುವದು. ಹೀಗಿರುವಲ್ಲಿ ಕೆಲ ವರ್ಷಗಳಿಂದ ಜೆರ್ಮನಿಯವರೂ ಸಂಯುಕ್ತ ಸಂಸ್ಥಾನಗಳವರೂ ತಮ್ಮ ತಮ್ಮ ರಾಜ್ಯಗಳಲ್ಲಿ ದೇಶೀಯ ಕೈಗಾರಿಕೆಗೆ ಪ್ರೋತ್ಸಾಹವನ್ನು ಕೊಡುವದಕ್ಕೋಸ್ಕರ ಇತರ ದೇಶಗಳಿಂದ ಬರುವ ಪದಾರ್ಥಗಳ ಮೇಲೆ ಸುಂಕವನ್ನು ಹೆಚ್ಚಾಗಿ ವಸೂಲ್ಮಾಡುತ್ತ ಬಂದಿದ್ದಾರೆ. ಅದರಿಂದ ಆಯಾ ದೇಶಗಳಲ್ಲಿ ಉತ್ಪತ್ತಿಯಾಗುವ ಪದಾರ್ಥಗಳಿಗಿಂತ ಪರದೇಶಗಳ ಪದಾರ್ಥಗಳ ಕ್ರಯವು ಹೆಚ್ಚಿ ದೇಶೀಯರ ಕೈಗಾರಿಕೆಯು ವೃದ್ಧಿಯಾಗುವದಕ್ಕೆ ಕಾರಣವಾಯಿತು. ಇದನ್ನೆಲ್ಲಾ ನೋಡಿ ಈಗ ಬ್ರಿಟಿಷರು ಫ್ರೀಟ್ರೇಡನ್ನು ಬಿಟ್ಟು, ಪರದೇಶೀಯರು ಮಾಡುವಂತೆಯೇ ತಾವೂ ಆಮದುಗಳ ಮೇಲೆ ಹೆಚ್ಚಾದ ಸುಂಕವನ್ನು ಹಾಕಬೇಕೆಂತಲೂ, ಬ್ರಿಟಿಷ್ ಆಧಿಪತ್ಯದ ಸರ್ವ ಭಾಗಗಳಿಂದ ಬರುವ ಆಮದು ವಸ್ತುಗಳ ಮೇಲೆ ಸುಲಭವಾದ ಸುಂಕ ಹಾಕುವದನ್ನು ವಿಧಿಸುವದಕ್ಕೆ ಒಂದು ಅನ್ಯೋನ್ಯ ಸಮಾಜವನ್ನು ಏರ್ಪಡಿಸಬೇಕೆಂತಲೂ ಮಿ॥ ಚೇಂಬರ್ಲೇನರು ಅಭಿಪ್ರಾಯ ಪಟ್ಟರು. ಈ ವಿಷಯದಲ್ಲಿ ಪಕ್ಷ ಪರ ಪಕ್ಷಗಳುಂಟಾಗಿರುವದರಿಂದ ಈಗ ರಾಜ್ಯಭಾರ ನಡೆಸುತ್ತಿರುವ ಮಂತ್ರಾಲೋಚನಾ ಸಮಾಜಿಕರು ಪ್ರಸ್ತುತದಲ್ಲೇ ತಮ್ಮ ಕೆಲಸಗಳನ್ನು ಬಿಟ್ಟು ಹೋಗಿ ಬೇರೊಂದು ಅಭಿಪ್ರಾಯವನ್ನನುಮೋದಿಸುವ ಮಂತ್ರಿಗಳು ರಾಜ್ಯಭಾರವನ್ನು ನಡೆಸುವರೆಂದು ಹೇಳಬೇಕಾಗಿದೆ.

## ಇಂಡಿಯಾ ಸರ್ಕಾರದವರು ನೀರಾವರಿ ಕಾಮಗಾರಿಯ ವಿಷಯ ವಿಚಾರಣೆ ಮಾಡಿ ಬರೆದಿರುವ ರಿಪೋರ್ಟು.

ಶ್ರೀ ವೈಸರಾಯಿ ಲಾರ್ಡ್ ಕರ್ಜನ್ ಪ್ರಭುಗಳು ಇಂಡಿಯಾ ದೇಶದ ಪ್ರಭುತ್ವವನ್ನು ವಹಿಸಿದ ನಂತರ ಇಲ್ಲಿ ಸಂಭವಿಸಿದ ಕ್ಷಾಮದ ಅನರ್ಥ ಕಾಲಗಳು ಸಮಯಗಳಲ್ಲಿ ಈ ದೇಶದಲ್ಲಿ ಕ್ಷಾಮದ ಅನರ್ಥ ಗಳನ್ನು ತಪ್ಪಿಸುವದಕ್ಕಾಗಿ ನೀರಾವರಿ ಕಾಮಗಾರಿಗಳನ್ನು ಅವರ್ಧಿ ಸಮಾಡುವದೇ ಒಳ್ಳೇ ಉಪಾಯವೆಂದು ತಿಳಿದು ಇದರ ಸಾಧಕ ಬಾಧಕಗಳನ್ನು ಕಂಡು ಹಿಡಿಯುವದಕ್ಕೋಸ್ಕರ ಕೆಲವು ಕಾರ್ಯ ಸ್ಥರನ್ನು ನೇಮಿಸಿದ್ದರು; ಈ ಕಮಿಷನರು ಇಂಡಿಯಾ ದೇಶದಲ್ಲಿ ಕ್ಷಾಮ ಸಂಚರಿಸಿ ಪರಿಶೀಲನೆ ಮಾಡಿ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಿದ್ದಾರೆ. ಇವರು ಬರೆದಿರುವ ರಿಪೋರ್ಟು ದೊಡ್ಡ ಪುಸ್ತಕ ವಾಗಿಯೂ ಈ ಇಂಡಿಯಾ ದೇಶದ ಸಮಸ್ತ ಭಾಗವನ್ನು ಕುರಿತ ದ್ದಾಗಿಯೂ ಇದೆ. ಅದನ್ನೆಲ್ಲಾ ಇಲ್ಲಿ ವಿವರಿಸುವದಕ್ಕೆ ಆಗದು. ಕೆಲವು ಸಂಗತಿಗಳನ್ನು ಮಾತ್ರ ಇಲ್ಲಿ ಉದಾಹರಿಸಲವಕಾಶವಿದೆ.

ಬಹು ಮುಖ್ಯವಾದ ವಿಚಾರ. ಕ್ಷಾಮದ ಬಾಧೆಯನ್ನು ತಪ್ಪಿ ಸುವದಕ್ಕೆ ನೀರಾವರಿ ಕಾಮಗಾರಿಯನ್ನು ಹೆಚ್ಚಿಸುವದು ಪ್ರಯೋ ಜನವೇ? ರೈಲ್ವೆಯನ್ನು ಹೆಚ್ಚಿಸುವದು ಪ್ರಯೋಜನವೇ? ಎಂಬ ವಿಷಯವು ಬಹು ದೀರ್ಘವಾಗಿ ಚರ್ಚಿಸಲ್ಪಟ್ಟ ವಿಷಯವಾಗಿದೆ. ಆ ದರೂ ನೀರಾವರಿ ಏರ್ಪಾಡನ್ನು ಹೆಚ್ಚಿಸುವದರಿಂದ ಕ್ಷಾಮದ ಬಾಧೆ ಯನ್ನು ತಡೆಯುವದು ಸ್ವಲ್ಪಮಟ್ಟಿಗಾದರೂ ಸಾಧ್ಯವಾಗಿದೆಯೆಂ ಬದನ್ನು ಯಾರೂ ಆಕ್ಷೇಪಿಸಲಾರರು. ಕರ್ಜನ್ ಪ್ರಭುಗಳು ಆ ಲೋಚಿಸುವ ಈ ಏರ್ಪಾಡು ಅಪೂರ್ವವಾದ ಸಾಹಸಕಾರ್ಯವೆಂ ದು ಎಲ್ಲರೂ ಒಪ್ಪಿಕೊಳ್ಳಬಹುದು. ಹ್ಯಾಗೆಂದರೆ—

೧. ಇದಕ್ಕೆ ಹಿಡಿಯತಕ್ಕ ದ್ರವ್ಯ ವ್ಯಯವು ಅಪರಿಮಿತವಾಗಿದೆ. ಇದು ಎರಡು ವರ್ಷಗಳಲ್ಲಿ ಮಾಡಿ ಮುಗಿಯತಕ್ಕ ಕಾರ್ಯವಲ್ಲ. ಇಂಡಿಯಾ ಸರ್ಕಾರದವರು ಆಲೋಚಿಸಿರುವದನ್ನೆಲ್ಲಾ ಮಾಡಿ ಮು ಗಿಸುವದಕ್ಕೆ ೨೦ ವರ್ಷಗಳು ಹಿಡಿಯುವವು. ಆಗ್ಯೂ ಒಟ್ಟು ಈಗ ಇರುವದಕ್ಕಿಂತಲೂ ಹೆಚ್ಚಾಗಿ ೬೦ ಲಕ್ಷವು ೫೦ ಸಾವಿರ ಎಕರೆಗಳ ಜಮೀನು ನೀರಾವರಿಗೆ ಬರುವದು. ಇಷ್ಟನ್ನು ಮಾಡುವ ಕಾಲ ಕ್ಕೆ ಒಟ್ಟು ೪೪ ಕೋಟಿ ರೂಪಾಯಿಗಳು ವ್ಯಯವಾಗುವದೆಂದು ಅಂದಾಜಾಗಿದೆ. ಇಷ್ಟು ಹಣವನ್ನು ಸರ್ಕಾರದ ಬೊಕ್ಕಸದಿಂದಲೇ ತೆಗೆದುಕೊಳ್ಳುವದು ಅಸಾಧ್ಯವಾದದರಿಂದ ಸಾಲ ಮಾಡಬೇಕಾಗು ವದು. ಸಾಲದ ಬಡ್ಡಿಗಾಗಿಯೇ ವರ್ಷ ವರ್ಷವು ೯೦ ಲಕ್ಷ ರೂ ಪಾಯಿಯನ್ನು ಸಾಲಿಯಾನಾ ಬಜೆಟ್ಟಿನಿಂದ ಕೊಡಬೇಕಾಗಿ ಬರು ತ್ತೆ. ಇದರಲ್ಲಿ ಸಾಗುವಳಿಯ ಮೇಲೆ ಹುಟ್ಟುವಳಿಯಾಗಬಹುದಾ ದ ಸುಮಾರು ೧೮ ಲಕ್ಷ ರೂಪಾಯಿಗಳನ್ನು ಕಳೆದರೆ ಬಾಕಿ ೭೪ ಲಕ್ಷ ರೂ॥ ಸಾಲಿಯಾನಾ ಖರ್ಚಾಗುವದೆಂದು ಹೇಳಬಹುದು. ಇ ಷ್ಟು ಹಣವು ವೃಥಾ ನಷ್ಟವಾಗುವದಲ್ಲಾ ಎನ್ನುವ ಪಕ್ಷಕ್ಕೆ ಹೆ ಚ್ಚಾಗಿ ಸಾಗುವಳಿ ಬರುವ ಜಮೀನಿನ ಕಂದಾಯದಿಂದಲೇ ಇಷ್ಟು ಹ ಣವು ಸರ್ಕಾರಕ್ಕೆ ಹಿಂದಿರುಗಿ ಬಾರದೆ ಹೋದಾಗ್ಯೂ ಬೇರೆ ವಿಧವಾ ಗಿ ಆದಾಯವಾಗುವದರಲ್ಲಿ ಸಂಶಯವಿಲ್ಲ. ದೇಶದ ಸಮೃದ್ಧಿ ಹೆ ಚ್ಚುವದು ವಿಶೇಷ ಆದಾಯವಾಗಿರುವದು. ಮತ್ತು ಈಗ ಕ್ಷಾಮ ತಿಂಗಳೂ ಅನಾವೃಷ್ಟಿಯಿಂದಲೂ ರೈತರಿಗೆ ಕಂದಾಯಗಳನ್ನು ರಿ ಮಿಷನ್ ಮಾಡತಕ್ಕ ಅವಶ್ಯಕತೆಯೂ ಅಗ್ಯೆ ಕಡಮೆಯಾಗಿ ಅದರಿಂ ದಲೂ ಸಹಾಯವಾಗುವದು. ಇದಲ್ಲದೆ ಪದೇ ಪದೇ ಕ್ಷಾಮನಿವಾರ ಣ ಕಾರ್ಯಗಳಿಗಾಗಿ ಸರ್ಕಾರದವರಿಗೆ ಸಾಲಿಯಾನಾ ೩೧ ಲಕ್ಷ ದ್ರವ್ಯವು ಖರ್ಚಾಗುತ್ತಿರುವದು. ಈ ಹಣದಿಂದ ಪ್ರೋಪಕ್ಷಿಯನ್ನು ಹೊಂದುತ್ತಿರುವ ಬಡಜನಗಳನ್ನು ಈ ಕಡೆಗಾಗಿ ಆಲೋಚಿಸಿದ ರೆ ನೀರಾವರಿ ಕಾಮಗಾರಿಗಳ ಮೇಲೆ ಬಿಟ್ಟರೆ ಆ ಹಣವು ಮಿ ಕ್ಕು ಕಡೆಗೆ ವರ್ಷ ವರ್ಷವು ಸರ್ಕಾರಕ್ಕೆ ೪೩ ಲಕ್ಷ ದ್ರವ್ಯವು ವ್ಯಯ ವಾಗುವದು. ಈ ಹೆಚ್ಚು ವ್ಯಯದಿಂದ ಬಂದು ನೂತನವಾದ ಬಾ ಬನ್ನು ಇಂಡಿಯಾ ಗವರ್ನ್ಮೆಂಟಿನವರು ಸಾಲಿಯಾನಾ ನಡಿಸುತ್ತಾ ಬರಬೇಕಾದ ಅವಶ್ಯಕತೆ ಬಂದಾಗುತ್ತದೆ. ಆದರೂ ಮೇಲೆ ತೋರಿಸಿ ರುವಂತೆ ಇದರಿಂದ ನಷ್ಟಕ್ಕೆ ಕ್ರಿಯಸ್ಸಾಗುವದರಲ್ಲಿ ಸಂಶಯವಿಲ್ಲ.

ಸರ್ಕಾರದವರು ಸಾಲಿಯಾನಾ ಸ್ವಂತಕ್ಕೆ ಮೇಲ್ಕಂಡ ಪ್ರಕಾರ ದ್ರವ್ಯ ವ್ಯಯ ಮಾಡುವದರೊಂದಿಗೆ ಈ ದೇಶೀಯರೇ ತಮ ತಮ ಗೆ ಬೇಕಾದ ಕಡೆ ನೀರಾವರಿಯನ್ನು ಹೆಚ್ಚಿಸಿಕೊಳ್ಳುವದರಲ್ಲಿ ಪ್ರೋತ್ಸಾಹಪಡಿಸುವದಕ್ಕಾಗಿ ಸಾಲಿಯಾನಾ ೧೭ ಲಕ್ಷ ರೂಪಾಯಿಗ ಳನ್ನು ಸಹಾಯದ್ರವ್ಯವಾಗಿ ವ್ಯಯ ಮಾಡುವದಕ್ಕೆ ಉದ್ದೇಶಿಸಿದ್ದಾರೆ. ಇದರ ವಿಷಯವಾಗಿ ರಿಪೋರ್ಟಿನಲ್ಲಿ ಹೇಳಿರುವದನ್ನು ಇಲ್ಲಿ ಸೂಚಿ ಸುತ್ತೇವೆ. ಸರ್ಕಾರದಿಂದಲೇ ಹೊಸ ಹೊಸ ಕಾಮಗಾರಿಗಳನ್ನು ಮಾಡಿಸುವದರಿಂದ ಎಷ್ಟು ಫಲಪ್ರಾಪ್ತಿಯಾಗುವದೋ ಅಷ್ಟು ಫಲವ ನ್ನು ದೇಶೀಯರೇ ಸ್ವಂತವಾಗಿ ಏರ್ಪಾಡು ಮಾಡುವ ಕಾರ್ಯಕ್ಕೆ ಸಹಾಯ ಮಾಡುವದರಿಂದಲೂ ಪಡೆಯಬಹುದೆಂದು ಅಭಿಪ್ರಾಯ ಪಡುತ್ತೇವೆ. ಈ ಭಾಗದಲ್ಲಿ ನಾವು ಶಿಫಾರಸ್ಸು ಮಾಡುವ ಸಂಗತಿ ಗಳನ್ನು ಸಂಕ್ಷೇಪಿಸಿ ಬರೆಯುವದೇನಂದರೆ—೧. ವ್ಯವಸಾಯಾಭಿವೃ ದ್ಧಿಗಾಗಿ ಸರ್ಕಾರದಲ್ಲಿ ಮುಂಗಡವಾಗಿ ಹಣವನ್ನು ಪಡೆಯುವದ ಕ್ಕೋಸ್ಕರ ಈಗ ಜಾರಿಯಲ್ಲಿರುವ ಏರ್ಪಾಡನ್ನು ಪ್ರಜೆಗಳಿಗೆ ಇ ನ್ನೂ ಅನುಕೂಲವಾಗಿ ಮಾಡುವದು, ಅದಾಗಿ—ಸಾಲದ ಹಣವ ನ್ನು ಕೊಟ್ಟು ತೀರಿಸುವದಕ್ಕೆ ನಿಯಮಿಸಲ್ಪಡುವ ಕಾಲವ ನ್ನು ಹೆಚ್ಚು ಮಾಡುವದು, ಮತ್ತು ಬಡ್ಡಿಯ ದರವನ್ನು ಕಡಮೆ ಮಾಡುವದು, ೨. ಕ್ಷಾಮದಿಂದ ಕೇವಲ ಬಡವರಾಗಿರುವವರಿಗೂ ಅಭಿವೃದ್ಧಿ ಮಾಡುವದಕ್ಕೆ ಮನಸ್ಸಿದ್ದರೂ ಯತ್ನವಿಲ್ಲದೆ ಕಷ್ಟಪಡು ತ್ತಿರುವವರಿಗೂ ಗ್ರಾಂಟು ಎಂಬ ಸಹಾಯದ್ರವ್ಯವನ್ನು ಕೊಡುವ ದು, ೩.—ವ್ಯವಸಾಯಾಭಿವೃದ್ಧಿಗೋಸ್ಕರ ಪ್ರಯತ್ನಪಡುವದರ ದೆಯಿಂದ ಯಾವ ಯಾವ ಭಾಗದಲ್ಲಿ ಪ್ರಜೆಗಳಿಗೆ ಅಂದಾಯವನ್ನು ಹೆಚ್ಚು ಮಾಡುವದನ್ನು ತಾತ್ಕಾಲಿಕವಾಗಿ ಒಂದು ಏಕುಕಾಲವರೆಗೆ ನಿಲ್ಲಿಸಬೇಕೆಂಬ ಅವಶ್ಯಕ ತೋರುವದೋ ಅಂಥ ಭಾಗದಲ್ಲಿ ಈ ರೀತಿಯಾಗಿಯನ್ನು ತೋರಿಸತಕ್ಕದ್ದನ್ನು ವಿಸ್ತರಿಸಬೇಕು, ೪. ವ್ಯವಸಾಯಾಭಿವೃದ್ಧಿಗಾಗಿ ಕ್ಷಾಮದ ರಿಲೀಫ್ ಕಾಮಗಾರಿಗೆ ಬರುತ್ತಿರುವ ಕೂಲಿ ಆಳುಗಳನ್ನೇ ಒಟ್ಟು ಕೆಲಸ ಮಾಡಿಸುವದು. ಇವರನ್ನು ಸರ್ಕಾರೀ ಮಾರೀಫತ್ತಾಗಿ ನಡೆಸುವ ವ್ಯವಸಾಯಾಭಿವೃ ದ್ಧಿಗೆ ಮಾತ್ರವೇ ಅಲ್ಲ, ಪ್ರೈವೇಟಾಗಿ ಪ್ರಜೆಗಳು ಮಾಡಿಸುವ ಕೆ ಲಸಗಳ ಮೇಲೂ ಬಿಟ್ಟು ಮಾಡಿಸಿ, ಅವರಿಂದ ಕೂಲಿ ಆಳುಗಳ ಗಾಗಿ ಖರ್ಚಾದ ಹಣವು ವಾಪಸು ಬಾರದೆ ಹೋದಾಗ್ಯೂ, ಇದೂ ರಿಲೀಫ್ ಕಾಮಗಾರಿಯ ಬಗ್ಯೆ ವ್ಯಯವಾದದ್ದೆಂದು ಖರ್ಚು ಬರೆ ಯುವದು.

೨. ಸರ್ಕಾರದವರು ಕೈಗೊಳ್ಳುವದಕ್ಕೆ ಆಲೋಚಿಸಿರುವ ದೊ ಡ್ಡ ದೊಡ್ಡ ಕಾಮಗಾರಿಗಳ ವಿವರವು ಮುಖ್ಯವಾಗಿದೆ.

ಇದರೊಳಗೆ ಉತ್ತರ ಹಿಂದುಸ್ಥಾನದ ಪಂಜಾಬ್ ಸೀಮೆಯಲ್ಲಿ ನಡಸಬೇಕೆಂದಿರುವ ಪ್ರಯತ್ನವು ಬಹು ದೊಡ್ಡದು. ಅಲ್ಲಿ ಹರಿ ಯುತ್ತಿರುವ ಜೀಲಮ್ ನದಿಯಲ್ಲಿ ಒಂದು ಕಾಲುವೆ ತೋಡಿ ರಾವಿ ನದಿ ಯು ಹರಿಯುವ ಕಣಿವೆಯನ್ನು ದಾಟಿಸಿ ಇವೆರಡು ನದಿಗಳ ಮಧ್ಯ ಪ್ರದೇಶವನ್ನೆಲ್ಲಾ ನೀರಾವರಿ ಮಾಡುವದು.

ಇದಲ್ಲದೆ ಸಿಂಧೂ ನದಿಯ ನೀರನ್ನು ಉಪಯೋಗಿಸಿ ಸಿಂಧೂ ದೇಶ ಮರುಸ್ಥಾನದ ಅನೇಕ ಭಾಗವನ್ನು ಸಾಗುವಳಿಗೆ ತರುವದು.

ಮತ್ತು ಇಂಡಿಯಾ ದೇಶದ ಪಶ್ಚಿಮ ಭಾಗವನ್ನು ಹಿಡಿದು ಪಶ್ಚಿ ಮ ಘಟ್ಟಗಳಲ್ಲಿ ಹರಿಯುವ ನದಿಗಳ ನೀರನ್ನು ಅಡ್ಡಗಟ್ಟಿ ಸರೋ ವರಗಳಾಗಿ ಮಾಡಿಕೊಂಡು ಸಂದರ್ಭಾನುಸಾರವಾಗಿ ಉಪಯೋ ಗಿಸಿಕೊಳ್ಳುವದು.

ಮದ್ರಾಸು ಅಧಿಕಾರ್ಯದಲ್ಲಿ ಕೈಗೊಳ್ಳುವದಾಗಿ ಆಲೋಚಿಸುವ ಪ್ರಾಜೆಕ್ಟುಗಳು ಯಾವವೆಂದರೆ—

ಕೃಷ್ಣಾ ನದಿಯ ಪ್ರಾಜೆಕ್ಟು, ತುಂಗಭದ್ರಾ ನದಿಯ ಪ್ರಾಜೆ ಕ್ಟು, ಕಾವೇರಿ ನದಿಯ ಪ್ರಾಜೆಕ್ಟು. ಇವುಗಳೊಳಗೆ ತುಂಗಭದ್ರಾ ಪ್ರಾಜೆಕ್ಟು ಬಹು ಹಣವನ್ನೂ ಕಾಲವನ್ನೂ ಹಿಡಿಯತಕ್ಕದಾಗಿ ಯೂ ಇಂಡಿಯಾ ದೇಶದಲ್ಲಿ ನಡಸಿರುವ ನೀರಾವರಿ ಕಾಮಗಾರಿಗಳ ಪೈಕಿ ಬಹು ದೊಡ್ಡದಾಗಿಯೂ ಇರುವದು, ಮದ್ರಾಸು ಪ್ರಾಂತ್ಯದಲ್ಲಿ ನಡಸುವದಕ್ಕಿರುವ ಈ ಪ್ರಾಜೆಕ್ಟುಗಳಿಗಾಗಿ ಒಟ್ಟು ೧೫೪೦ ಲಕ್ಷ ರೂಪಾಯಿಗಳನ್ನು ವ್ಯಯ ಮಾಡುವದಾಗಿ ಅಂದಾಜು ಮಾಡಿದ್ದಾರೆ. ಅದರ ವಿಲೇವಾರಿ ಹ್ಯಾಗೆಂದರೆ—ಕೃಷ್ಣಾನದಿಯ ಪ್ರಾಜೆಕ್ಟಿಗಾಗಿ ೬೦೦ ಲಕ್ಷ, ತುಂಗಭದ್ರಾ ನದೀ ಪ್ರಾಜೆಕ್ಟು ೬೦೦ ಲಕ್ಷ, ಕಾವೇರಿ ಪ್ರಾಜೆಕ್ಟು ೧೭೦ ಲಕ್ಷ; ಕರ್ನೂಲು ಕಾಲುವೆಯನ್ನು ಅ ಭಿವೃದ್ಧಿ ಮಾಡುವದಕ್ಕೆ ೧೦೦ ಲಕ್ಷ, ಪೆರಿಯಾರ್ ಕ್ರೀ ಪೈಕಾಂಠ ಮ್ ಮೊದಲಾದ ಕೆಲವು ಚಿಲ್ಲರೆ ಕಾರ್ಯಗಳಿಗಾಗಿ ಒಟ್ಟು ೧೭೦ ಲಕ್ಷ. ಇವುಗಳೆಲ್ಲಾ ಪೂರಯಿಸುವದಕ್ಕೆ ಇಂಡಿಯಾ ಸರ್ಕಾರದವರು ನೇಮಿಸಿರುವ ಕಾಲವು ೨೦ ವರ್ಷ.

ಈ ಕಮಿಷನರವರು ನಮ್ಮ ಮೈಸೂರು ಸಂಸ್ಥಾನದ ನೀರಾ ವರಿ ಏರ್ಪಾಡಿನ ವಿಷಯವನ್ನೂ ತಿಳುಕೊಂಡು ಹೋಗುವದಕ್ಕೆ ಬಂದಿದ್ದರಷ್ಟೆ. ಇವರು ಬೆಂಗಳೂರಿನಲ್ಲಿ ಎಂಟು ದಿವಸಗಳು ಇದ್ದು ಕೊಂಡು ಸಭೆ ಮಾಡಿ ಪರಿಶೀಲಿಸಿದ್ದರಲ್ಲಿ—ಮೈಸೂರು ಸಂಸ್ಥಾನದ ಲ್ಲಿ ನೀರಿನ ಸರಬರಾಯಿ ವಿಷಯಕವಾದ ಏರ್ಪಾಡು ಬಹು ತೃಪ್ತಿ ಕರವಾಗಿದೆಯೆಂತಲೂ, ಪ್ರಕೃತ ಮರಾಮತಿಯಲ್ಲಿ ನಡೆಯುತ್ತಿ ರುವ ಕೆಲಸವು ಬಹು ಶ್ರೇಷ್ಠವಾದದ್ದೆಂತಲೂ ಬಹು ಸಂತೋಷಪ ಟ್ಟರು. ಹಾಲಿ ಸಂಸ್ಥಾನಾಮುಳ ಕೆರೆಗಳನ್ನು ಏರ್ಪಾಡು ಮಾಡಿಟ್ಟು ಕೊಂಡರೆ ಅನಾವೃಷ್ಟಿ ಅಲ್ಪವೃಷ್ಟಿಗಳಲ್ಲಿ ಭಯಪಡುವದಕ್ಕವಕ್ಯ ವಿಲ್ಲ ಎಂದು ಹೇಳಿದರು.

ದೇಶದ ವ್ಯವಸಾಯಕ್ಕೆ ಮುಖ್ಯಾಧಾರವಾಗಿರುವ ನೀರಿನ ಸರ ಬರಾಯನ್ನು ಪ್ರಜೆಗಳಿಗೆ ಒದಗಿಸಿಕೊಡುವ ಬಗ್ಯೆ ಸರ್ಕಾರದವರು ಎಷ್ಟು ಪ್ರಯತ್ನಪಟ್ಟಾಗ್ಯೂ ಎಷ್ಟು ಹಣವನ್ನು ವ್ಯಯಮಾಡಿದಾ ಗ್ಯೂ ಇಂಡಿಯಾ ದೇಶದಲ್ಲೆಲ್ಲಾ ನೀರಿನ ಕ್ಷಾಮವನ್ನೇ ನಿರ್ಮೂಲ ಮಾಡುವದು ಸಾಧ್ಯವೆಂದು ಯಾರೂ ತಿಳಿಯಬಾರದು. ಸರ್ಕಾರದ ವರ ಅಥವ ಮನುಷ್ಯಪ್ರಯತ್ನದಿಂದ ಬಹಳ ಮಟ್ಟಿಗೆ ಸಹಾಯ ಮಾಡಿಕೊಳ್ಳಬಹುದಾದಾಗ್ಯೂ ದೇವರು ಕೃಪೆಯಿಟ್ಟು ಮಳೆಯ ಸ ಹಾಯವನ್ನು ಅನುಗ್ರಹಿಸದೆ ಹೋದರೆ ಕಷ್ಟವು ಬೇರೆ ತಪ್ಪುವದೇ ಇಲ್ಲ. ಈ ಕಮಿಷನರವರು ರಿಪೋರ್ಟಿನ ಕೊನೆಯಲ್ಲಿ ಹೇಳಿರು ವದು ಇಷ್ಟೇ ಅಲ್ಲಾ. ಅವರು ಕಡೆಯಲ್ಲಿ ಹೇಳಿ ಮುಗಿಸಿರುವ ಮಾ ತನ್ನು ಇಂಡಿಯಾ ದೇಶಸ್ಥರೆಲ್ಲರೂ ಮುಖ್ಯವಾಗಿ ನಮ್ಮ ಮೈಸೂ ರು ದೇಶಸ್ಥರು ಎಂದೆಂದಿಗೂ ಮರೆಯಬಾರದು. ಅದೇನಂದರೆ— ಅನಾವೃಷ್ಟಿಯಿಂದ ಬೆಳೆಯು ಹಾನಿಯಾಗದಂತೆ ಸರ್ಕಾರದವರೊಡ ನೆ ಸೇರಿ ಪ್ರಜೆಗಳು ತಮ್ಮಿಂದಾದಷ್ಟು ಪ್ರಯತ್ನಗಳನ್ನು ಮಾಡುವ ದರಲ್ಲಿ ಫಲವೇನೋ ಉಂಟು. ಆದರೂ ಕೂಡ ಈ ದೇಶೀಯರು ಬೆಳೆದದ್ದನ್ನೆಲ್ಲಾ ಸಾಲಕ್ಕೋ ಬೇರೆ ಯಾವ ಖರ್ಚಿಗೋ ಹಾಕಿ ನಿರ್ಗತಿಕರಾಗಿ ಹೋಗದೆ ಕಷ್ಟಕಾಲಕ್ಕೆ ಒದಗುವಂತೆ ಹಣವನ್ನು ಕೂಡಿಟ್ಟುಕೊಳ್ಳುವ ಅಭ್ಯಾಸವನ್ನು ಮಾಡಿಕೊಳ್ಳುವದೇ ವಿವೇ ಕವಾಗಿದೆ. ಮತ್ತು ಸರ್ಕಾರದವರು ಮಾಡಿಕೊಡುವ ಈ ಸಹಾಯಗ ಳಿಂದ ಶಾಶ್ವತವಾದ ಫಲವು ದೊರಕುವದು.

---

### ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಪ್ಲೇಗ್ ೧೬–೯–೦೩ ರಿಂದ ೨೨–೯–೦೩ ವರಿವಿಗೆ ಒಟ್ಟು ಮರಣಗಳು – ಪಿಸ್ಕರ್ ೩೯, ಮಂಡಿ ೭೫, ದೇವ ರಾಜ ೩೨, ಚಾಮರಾಜ ೬, ಕೃಷ್ಣರಾಜ ೧೮, ಕೋಟೆ ೮, ನಜ ರುಬಾದು ೮, ಪ್ಲೇಗ್ ಕ್ಯಾಂಪು ೧೯.

ರಾಜಧಾನಿಯಲ್ಲಿ ಯಥಾಪ್ರಕಾರ ದಸರಾ ಉತ್ಸವವು ಪ್ರಾರಂ ಭವಾಗಿದೆ. ಮಳೆಯೂ ಚನ್ನಾಗಿ ಸುರಿಯುತ್ತಿರುವದು. ಹೊರಗಿ ನಿಂದ ಜನಗಳು ಅಷ್ಟವಾಗಿ ಬಂದಿಲ್ಲ.

****

ರಾಜಧಾನಿಯ ಪುರಾಭಿವೃದ್ಧಿಗಾಗಿ ಏರ್ಪಾಡಾಗಬೇಕಾಗಿರುವ ಇಂಪ್ರೂವ್‌ಮೆಂಟು ಟ್ರಸ್ಟ್ ಎಂಬುದಕ್ಕೆ ಸರ್ಕಾರದವರು ಮೆ॥ ರಾ॥ ಪ॥ ಕೆ॥ ಪುಟ್ಟಣ್ಣ ಚೆಟ್ಟರನ್ನು ಪ್ರೆಸಿಡೆಂಟರಾಗಿಯೂ ಮೆ॥ ಬಿಕ್ರಾಸ್ ಸಾಹೇಬರನ್ನು ಇಂಜನಿಯರಾಗಿಯೂ ನೇಮಿಸುವದೆಂ ದು ಪ್ರಮಾಣವಿದೆ.

****

ರಾಜಧಾನಿಯಲ್ಲಿ ಕಳೆದ ತಿಂಗಳು ಸೇಟರ ಬಾಕಿಗೆ ಸೇರಿದ ಒಬ್ಬ ಯುವತಿಯನ್ನು ಆತ್ಮಹತ್ಯ ಮಾಡಿಕೊಂಡಳೆಂದು ಹೇಳಲ್ಪಟ್ಟಿತ್ತು. ಇದರ ವಿಷಯ ಇನ್ನೂ ವಿಚಾರಿಸಲಾಗಿ ಆ ಸೇಟರವರಿಗೆ ವಿರೋಧಿ ಗಳಾದವರು ಯಾರೋ ಆ ಯುವತಿಯನ್ನು ಕೊಂದು ಹಾಳುಬಾ ವಿಯಲ್ಲಿ ಹಾಕಿದ್ದರೆಂದು ಹೇಳುವದಕ್ಕೆ ಆಧಾರವಿದೆಯೆಂಬದಾಗಿ ಸ್ಟ್ಯಾಂಡರ್ಡ್ ಪತ್ರಿಕೆಯು ತಿಳಿಸುವಂಥಾದ್ದಾಗಿದೆ.

****

ನವರಾತ್ರಿ ಉತ್ಸವಗಳಲ್ಲಿ ಸರ್ಕಾರದವರು ಏರ್ಪಡಿಸಿರುವ ಪ್ರೋ ಗ್ರಾಮ್ ಏನಂದರೆ—ಸೆಪ್ಟೆಂಬರ್ ೨೯ಕ್ಕೆ ಯೂರೋಪಿಯನ್ ಅತಿ ಥಿಗಳು ಬರುವದು, ೩೦ಕ್ಕೆ ಯೂರೋಪಿಯನ್ ದರ್ಬಾರ್, ಅ ಕ್ಟೋಬರ್ ೧ಕ್ಕೆ ವಿಜಯದಶಮಿ ಮೆರವಣಿಗೆ, ೨ಕ್ಕೆ ಆಟಗಳು, ೩ಕ್ಕೆ ಪೋಲೋ ಟೋರ್ನಮೆಂಟ್, ೪ ಭಾನುವಾರ, ೫ಕ್ಕೆ ಪ್ರಜಾ ಪ್ರತಿನಿಧಿಸಭೆಯ ಆರಂಭ ಮತ್ತು ದರ್ಬಾರ್ ಔತಣ, ೬ಕ್ಕೆ ಅಂಬಾ ವಾ ವಂದ್ಯಗಳು, ೭ಕ್ಕೆ ಪೋಲೋ ಟೋರ್ನಮೆಂಟ್ ಸಮಾಪ್ತಿ, ೮ಕ್ಕೆ ಯೂರೋಪಿಯನ್ ಅತಿಥಿಗಳು ಹೊರಟುಹೋಗುವರು.

****

ನಮ್ಮ ದಿವಾನರವರಿಗೆ ಅಸಿಸ್ಟೆಂಟ್ ಸೆಕ್ರೆಟರಿಯವರಾದ ಮೆ॥ ಶಾಮರಾವ್ ಎಂ. ಎ. ಯವರು ಮದ್ರಾಸ್ ಯೂನಿವರ್ಸಿಟಿಯ ವಿದ್ಯಾಪರೀಕ್ಷಕ ಸಮಾಜಕ್ಕೆ ಒಬ್ಬ ಮೆಂಬರಾಗಿ ಚುನಾಯಿಸಲ್ಪಡು ವದಕ್ಕೆ ಪ್ರಯತ್ನಿಸುತ್ತಿದ್ದಾರೆ. ಮೈಸೂರು ಸಂಸ್ಥಾನಕ್ಕೆ ಅಲಂಕಾ ರಪ್ರಾಯರಾದ ಈ ವಿದ್ವಾಂಸರ ಯೋಗ್ಯತೆಯನ್ನು ಯೂನಿವರ್ಸಿ ಟಿಯವರು ಮನ್ನಿಸಿ ಈ ಪದವಿಯನ್ನು ಕೊಡುವಂತೆ ನಮ್ಮ ಮೈಸೂರು ದೇಶೀಯರಾದ ವಿದ್ಯಾವಂತರೆಲ್ಲಾ ಅವರ ಪಕ್ಷವಾಗಿಯೇ ತಮ್ಮ ವೋಟುಗಳನ್ನು ಕೊಡುವರೆಂದು ಕೋರಬೇಕಾಗಿದೆ.

****

ಚನ್ನಪಟ್ಟಣ ಕೋಟೆ ಮಂಗಳವಾರ ಪೇಟೆ ಚಿಕ್ಕಮಳೂರು ದೊಡ್ಡಮಳೂರಿನಲ್ಲಿಯೂ ಸತ್ತವರ ಸುಡತಕ್ಕ ಹೆಣಗಳನ್ನು ದಹನ ಮಾಡುವದಕ್ಕಾಗಿ ದೊ॥ ಮಳೂರು ಅಪ್ರಮೇಯ ಸ್ವಾಮಿ ಪಾರ್ಥಸಾರಥಿಯಂ ಗಾರ್ರು ಕಾಲದಲ್ಲಿ ಸರ್ಕಾರದವರು ೧ ಸಾವಿರ ರೂಪಾಯಿಗೆ ಮುಫ ತಗಟ್ಟವನ್ನು ತೆಗೆದುಕೊಂಡು, ಅಲ್ಲಿಗೆ ಸುಡುವ ಸೌದೆ ಮುಂತಾ ದ್ದನ್ನು ಕೊಂಡು ಹೋಗುವದಕ್ಕೆ ರಸ್ತೆಯನ್ನು ಮಾಡಿಸಿದ್ದರಂತೆ. ಈಗ ಆ ರಸ್ತೆಯನ್ನು ರೈತರು ಉತ್ತು ಗಾಡಿಗಳು ಹೋಗದಂತೆ ತುಂಬಾ ಅಡ್ಡಿಯಾಗಿದೆ, ಇದನ್ನು ಮೇಲಿನವರು ಗಮನಿಸಿ ನೋಡ ಬೇಕು. ಇಲ್ಲವಿದ್ದರೆ ಜನರಿಗೆ ತುಂಬಾ ತೊಂದರೆಯಾಗುತ್ತಾ ಇದೆ ಎಂದು ಜನರು ತಿಳಿಸುತ್ತಾರೆ.

****

ರಾಜಧಾನಿಯಲ್ಲಿ ಆಡಿಷನಲ್ ಮುನಸೀಫರಾದ ಮೆ॥ ಎಸ್. ಅನಂದರಾಯರವರ ಪತ್ನಿಯವರು ಪ್ಲೇಗಿನ ದೆಸೆಯಿಂದ ಚಾಮರಾ ಜಪೇಟೆಯಲ್ಲಿರುವ ತಮ್ಮ ಮನೆಯಲ್ಲಿ ಕಾಲವಾದದ್ದಕ್ಕಾಗಿ ನಾವು ವಿಷಾದಿಸುತ್ತೇವೆ. ಇವರಿನ್ನು ಚಿಕ್ಕವಯಸ್ಸಿನವರಾಗಿದ್ದರು. ಇವ ರು ಶಿವಮೊಗ್ಗೆಯಲ್ಲಿ ತಮ್ಮ ತವರುಮನೆಗೆ ಹೋಗಿದ್ದು ಅಲ್ಲಿ ಪ್ಲೇ ಗಿನ ಹಾವಳಿ ವಿಪರೀತವಾಗಿರುವದರಿಂದ ಮೈಸೂರಿಗೆ ಬಂದರು. ಆದರೆ ಇಲ್ಲಿಗೆ ಬಂದೊಡನೆಯೇ ಭಯಂಕರವಾದ ಈ ರೋಗಕ್ಕೆ ವಶರಾದರು. ಇವರಿಗೆ ಇಬ್ಬರು ಹೆಣ್ಣುಮಕ್ಕಳುಂಟು. ಮೆ॥ ಅನಂ ದರಾಯರಿಗೆ ಈ ಪತ್ನಿವಿಯೋಗ ದುಃಖವಲ್ಲದೆ, ಶಿವಮೊಗ್ಗೆಯಲ್ಲಿ ಯೂ ಬೆಂಗಳೂರು ಪೇಟೆಯಲ್ಲಿಯೂ ಕೆಲವರು ನೆಂಟರನ್ನು ಕಳ ಕೊಂಡ ವಿಯೋಗ ದುಃಖವೂ ಬಂದುದಕ್ಕಾಗಿ ತುಂಬಾ ವಿಷಾದಿಸ ಬೇಕಾಗಿದೆ.

****

ಮೈಸೂರು ಸಂಸ್ಥಾನದಲ್ಲಿ ಸಂಸ್ಕೃತ ವಿದ್ವತ್ ಪರೀಕ್ಷೆಗಳನ್ನು ಕೇವಲ ಸಮರ್ಪಕವಾದ ರೀತಿಯಲ್ಲಿ ನಡಸುವದಕ್ಕಾಗಿ ಕೆಲವು ವಿ ಶೇಷ ನಿಬಂಧನೆಗಳನ್ನು ಕ್ರೋಢೀಕರಿಸುವದಕ್ಕೋಸ್ಕರ ಸರ್ಕಾ ರದವರು ಕೆಲವು ಮಂದಿ ಘನ ವಿದ್ವಾಂಸರನ್ನು ಕಮಿಟಿಯಾಗಿ ನೇ ಮಿಸಿದ್ದಾರೆ. ಇದಕ್ಕೆ ಮಾ॥ ರಾ॥ ವಿ. ಎನ್. ನರಸಿಂಹಯ್ಯಂಗಾರ್ರು ಪ್ರೆಸಿಡೆಂಟರು; ಮಾ॥ ರಾ॥ ಎ. ಮಹದೇವಶಾಸ್ತ್ರಿಗಳು ಸೆಕ್ರೆಟರಿ ಯವರು; ಇದಕ್ಕೆ ಮೆಂಬರುಗಳು—ಧರ್ಮಾಧಿಕಾರಿ ಕುಂಬ ಕೋಣಂ ಶ್ರೀನಿವಾಸಾಚಾರ್ರು, ಧರ್ಮಾಧಿಕಾರಿ ಸುಂದರ ಶಾಸ್ತ್ರಿಗಳು, ಧರ್ಮಾಧಿಕಾರಿ ಕಟ್ಟೆ ನರಸಿಂಹಶಾಸ್ತ್ರಿಗಳು, ಪಂಡಿತ ಕಸ್ತೂರಿ ರಂಗಾಚಾರ್ರು, ಪಂಡಿತ ವಿಶ್ವೇಶ್ವರ ಶಾಸ್ತ್ರಿಗಳು, ಪಂಡಿತ ಸ್ವಾಮಿಕಂ ಕುಪ್ಪಣ್ಣಯ್ಯಂಗಾರ್ರು, ಪಂಡಿತ ನಾಮಗೊಂಡ್ಲು ಶಾ ಮಾಚಾರ್ರು, ಮೆ॥ ಆರ್. ನರಸಿಂಹಾಚಾರ್ರು, ಮೆ॥ ಎಸ್. ವೆಂಕ ಟ್ರಾಮ ಶಾಸ್ತ್ರಿಗಳು, ಮೆ॥ ಜೆ. ಕಸ್ತೂರಿ ರಂಗಯ್ಯಂಗಾರ್ರು. ಇ ವರು ಕಲ್ಕತ್ತಾ, ಬರೋಡ, ಮೊದಲಾದ ವಿದ್ಯಾನಿಲಯಗಳ ಪರೀ ಕ್ಷಾ ವಿಧಾನಗಳನ್ನು ತಿಳಿದು ತಮ್ಮ ಅಭಿಪ್ರಾಯಗಳನ್ನು ಗೌವರ್ನ್ ಮೆಂಟಿನವರಿಗೆ ತಿಳಿಸಬೇಕು. ಇದೇ ಕಾರ್ಯಕ್ಕೋಸ್ಕರ ೧೯೦೩ ನೇ ಮೆ॥ ೨೯ ರಲ್ಲಿ ಕೊಟ್ಟಿದ್ದ ಸಬ್ ಕಮಿಟಿ ವಿಷಯವಾದ ಹುಕುಮನ್ನು ಇದರಿಂದ ರದ್ದುಮಾಡಿದೆ. ಕಮಿಟಿಯವರು ತಮ್ಮ ಮೀ ಟಿಂಗುಗಳನ್ನು ದಸರಾ ಹಬ್ಬದ ರಜಾಕಾಲದಲ್ಲಿ ಮೈಸೂರು ರಾ ಜಧಾನಿಯಲ್ಲಿ ನಡೆಯುವಂತೆ ಹುಕುಂ ಕೊಟ್ಟಿದೆ.

## ಶ್ರೀಮನ್ಮಹಾರಾಜ ಕೃಷ್ಣರಾಜೇಂದ್ರ ಒಡೆಯರು ಬಹದ್ದೂರವರು ಕಿವುಡ ಮೂಕರ ವಿಷಯದಲ್ಲಿ ತೋರಿಸಿದ ಮಮತೆ.

೧೯೦೩ ನೆ ಸೆಪ್ಟೆಂಬರ್ ೧೭ ನೆ ತಾ॥ ನ ಬೆಳಗ್ಗೆ ೮ ಗಂಟೆಗೆ ಸರಿಯಾಗಿ ಶ್ರೀಮನ್ಮಹಾರಾಜ ರಾಜಾ ಸಾಹೇಬ ಬಹದ್ದೂರವರು ತಮ್ಮ ಪ್ರೈವೆಟ್ ಸೆಕ್ರೆಟರಿಯವರಾದ ಮಿ॥ ಮೆಕಾನೆಕ್ಕಿ ಸಾಹೇಬರವರೊಡನೆ ಮೈಸೂರು ರಾಜಧಾನಿ ಮೂಕಬಧಿರಾಂಧರ ಪಾಠಶಾಲೆಗೆ ದಯಮಾಡಿಸಿದರು. ಪಾಠಶಾಲೆಯ ಸೆಕ್ರೆಟರಿಗಳಾದ ಮಿ॥ ಎಂ. ಶ್ರೀನಿವಾಸರಾಯರವರು, ಅಂಬಳೆ ಅಣ್ಣಯ್ಯಪಂಡಿತರವರು ಮತ್ತು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರವರು ಕೆ. ಶ್ರೀನಿವಾಸರಾಯರವರೂ ಸಹ ವಂದನಾ ಪೂರ್ವಕವಾಗಿ ಎದುಗೊಂಡು ಬರಮಾಡಿಕೊಂಡರು.

ಪ್ರಾಭುಗಳವರ ಸವಾರಿಯು ಒಳಗೆ ದಯಮಾಡಿಸಿದ ಕೂಡಲೆ ಮುಖ್ಯೋಪಾಧ್ಯಾಯರಿಂದೊಡಗೂಡಿದ ವಿದ್ಯಾರ್ಥಿಗಳ ವಂದನೆಗಳನ್ನು ಸ್ವೀಕರಿಸಿ ಅಂಗಹೀನರಾದ ಬಾಲಕರನ್ನು ಕೃಪಾಕಟಾಕ್ಷದಿಂದೀಕ್ಷಿಸಿದರು.

ಅನಂತರ ಕೈಗಾರಿಕೆಗಳನ್ನು ಪರಾಂಬರಿಸಲು ದಯಮಾಡಿಸಿ ಅಂಧ ವಿದ್ಯಾರ್ಥಿಯೊಬ್ಬನು ನೇಯುತ್ತಿದ್ದ ಹುಲ್ಲಿನ ಮಂದಲಿಗೆಯ ಕೆಲಸವನ್ನೂ ಇಬ್ಬರು ಅಂಧ ವಿದ್ಯಾರ್ಥಿಗಳು ಇಬ್ಬರು ಮೂಕ ವಿದ್ಯಾರ್ಥಿಗಳ ಸಹಾಯದಿಂದ ಮಾಡುತ್ತಿದ್ದ ಹಗ್ಗಿನ ಕೆಲಸವನ್ನು ಸಹ ಬಹಳ ವಿಶ್ವಾಸದಿಂದ ಪರಾಂಬರಿಸಿದರು. ಆ ಸಮಯದಲ್ಲಿ ಮಿ॥ ಪ್ರೈವೆಟ್ ಸೆಕ್ರೆಟರಿ ಸಾ॥ ರವರು ಈ ಮಂದಲಿಗೆ ಕೆಲಸದಿಂದ ಇವರಿಗೆ ಏನು ಪ್ರಯೋಜನವಾಗಬಹುದೆಂದು ಪ್ರಶ್ನೆ ಮಾಡಿದ್ದಕ್ಕೆ ಸ್ಕೂಲ್ ಸೆಕ್ರೆಟರಿ ಶ್ರೀನಿವಾಸರಾಯರವರು ಗ್ರಾಮಾಂತರವಾಸಿಯಾದ ಒಬ್ಬ ಅಂಧನನ್ನು ನಾನು ನೋಡಿರುತ್ತೇನೆ. ಅವನು ಇದೇ ಕೆಲಸದಿಂದ ದಿನ ೧ ಕ್ಕೆ ೬—೭ ಆಣೆಗಳವರೆಗೂ ಸಂಪಾದಿಸಿಕೊಂಡು ಜೀವಿಸುತ್ತಲಿದ್ದಾನೆಯೆಂದು ಹೇಳಿದರು.

ಅನಂತರ ರತ್ನಗಂಬಳಿ ಜಮಖಾನಗಳ ಮಗ್ಗಗಳನ್ನು ಪರಾಂಬರಿಸಲು ಸವಾರಿಯು ಚಿತ್ತೈಸಿತು. ಅಲ್ಲಿ ಇಬ್ಬರು ಮೂಕ ವಿದ್ಯಾರ್ಥಿಗಳು ಜಮಖಾನದ ಕೆಲಸವನ್ನೂ, ಒಬ್ಬ ಮೂಕ ವಿದ್ಯಾರ್ಥಿಯು ಮೇಸ್ತ್ರಿಯೊಡನೆ ಸೇರಿಕೊಂಡು ರತ್ನಕಂಬಳಿಯನ್ನು ಮಾಡುತ್ತಿದ್ದರು. ಅವನ್ನು ಪರೀಕ್ಷಿಸಿ ಪ್ರಾಭುಗಳವರು ತುಂಬಾ ಸಂತೋಷಪಟ್ಟರು. ಆ ಕಾಲದಲ್ಲಿ ಮಿ॥ ಪ್ರೈವೆಟ್ ಸೆಕ್ರೆಟರಿ ಸಾ॥ ರವರು ರತ್ನಗಂಬಳಿಗೆ ಹಾಕಿರತಕ್ಕ ಬಣ್ಣಗಳ ವಿಷಯದಲ್ಲಿ ಕೆಲವು ಹೊಸ ಏರ್ಪಾಡುಗಳನ್ನು ಅಪ್ಪಣೆ ಕೊಡಿಸಿದರು.

ಬಳಿಕ ಮೂಕ ವಿದ್ಯಾರ್ಥಿಗಳು ಕಲಿಯುತ್ತಿರುವ ಉರ್ಲಾ ಧಾರದ ಟೋಪಿ, ಕತ್ತುಪಟ್ಟಿ, ವೇಲೂರು ಜೈಲಿನಲ್ಲಿ ತಯಾರಾಗತಕ್ಕಂಥ ಟ್ವೈನ್ ಧಾರದ ಜೋಲದಂತಿರುವ ಚೀಲ, ಮತ್ತು ಗ॥ ಇ॥ ಸ್ಕೂಲ್‌ನಲ್ಲಿ ಕೆಲಸ ಮಾಡಿ ತಯಾರ್‍ಮಾಡಿರತಕ್ಕ ಮಣ್ಣಿನ ಬೊಂಬೆ, ಚಿತ್ತಾದ ಪೆಟ್ಟಿಗೆ, ತಟ್ಟೆ, ನಾರದ ಬಂಡಿ, ಮಂಚ ಮೊದಲಾದ ಸಾಮಾನುಗಳು ಇವುಗಳನ್ನೆಲ್ಲಾ ಪರಾಂಬರಿಸಿದರು.

ಹೆ॥ ಮಾ॥ ಎಚ್. ಶಂಕರನಾರಣಪ್ಪನವರು ಮೂಕ ವಿದ್ಯಾರ್ಥಿಗಳನ್ನೆಲ್ಲಾ ಕ್ರಮವಾಗಿ ನಿಲ್ಲಿಸಿ ಅವರು ಬಾಯಿಯಲ್ಲಿ ಮಾತನಾಡತಕ್ಕ ಕ್ರಮಗಳನ್ನೂ, ಹೇಳಿದ್ದನ್ನು ತಿಳಿದುಕೊಂಡು ಬರೆಯತಕ್ಕದ್ದನ್ನೂ, ಉಚ್ಚರಿಸಿದ ಪದಾರ್ಥಗಳನ್ನು ತೋರಿಸತಕ್ಕದ್ದನ್ನೂ, ಗಣಿತ ಮಾಡುವ ಕ್ರಮಗಳನ್ನು ಸಹ ವಿಶದವಾಗಿ ತೋರಿಸಿದರು. ಈ ಸಂದರ್ಭವು ಪ್ರಾಭುಗಳವರ ಚಿತ್ತಕ್ಕೆ ಬಹು ಆನಂದಕರವಾಗಿತ್ತು.

ತರುವಾಯ ಕುರುಡು ವಿದ್ಯಾರ್ಥಿಗಳ ತರಗತಿಯನ್ನು ಪರಾಂಬರಿಸಿದ್ದರಲ್ಲಿ ಒಬ್ಬ ವಿದ್ಯಾರ್ಥಿಯು ಇಂಗ್ಲಿಷ್ ಮತ್ತು ಕನ್ನಡ ಪದ್ಯ, ಗದ್ಯ ಕಾವ್ಯಗಳನ್ನೂ, ಮತ್ತೊಬ್ಬ ವಿದ್ಯಾರ್ಥಿಯು ರಾಮಾಯಣದಲ್ಲಿ ಕೆಲವು ಪದ್ಯಗಳನ್ನು ಓದಿದರು. ಬೇರೊಬ್ಬ ವಿದ್ಯಾರ್ಥಿಯು "ಮಹಾಸ್ವಾಮಿ, ತಮ್ಮ ಕೃಪಾ ವಿಶೇಷದಿಂದ ನಾವುಗಳು ಧನ್ಯರಾದೆವು" ಎಂದು ಆ ಕೂಡಲೇ ಪ್ರಿಂಟು ಮಾಡಿದನು. ಅವನ್ನೆಲ್ಲಾ ಬಹಳ ಸಂತೋಷದಿಂದ ಪರಾಂಬರಿಸಿದರು.

ಅಷ್ಟರಲ್ಲೇ ಸಂಗೀತ ವಿದ್ಯಾ ಕಂಠೀರವರಾದ ಬಿ. ಕರಿಗಿರಿರಾಯರವರಿಂದ ಶಿಕ್ಷೆಯನ್ನು ಹೊಂದಿದ್ದ ಇಬ್ಬರು ಕುರುಡು ವಿದ್ಯಾರ್ಥಿಗಳು ಸ್ವಂತವಾಗಿ ತಂಬೂರಿ ಮೀಟಿಕೊಂಡು ಕೀರ್ತನೆಯನ್ನು ಹಾಡಿದರು.

ಬಳಿಕ ಸ್ಕೂಲ್ ಸೆಕ್ರೆಟರಿಯವರು ಹಾರಗಳನ್ನು ಒಪ್ಪಿಸಿದರು. ಅದನ್ನು ದಯಾಪೂರ್ವಕ ಅಂಗೀಕರಿಸಿ ಮಹಾರಾಜಾ ರಾಜಾ ಸಾಹೇಬ ಬಹದ್ದೂರವರು ಆದರದಿಂದ ಸ್ಕೂಲಿನ ವಿಷಯವಾಗಿ ಕೇಳಿದ ಪ್ರಶ್ನೆಗಳಿಗೆ ಸ್ಕೂಲ್ ಸೆಕ್ರೆಟರಿಗಳು ಪಾಠಶಾಲೆಯ ಆದಾಯವ್ಯಯಗಳನ್ನೂ, ಮುಂದೆ ಆಗಬೇಕಾಗಿರತಕ್ಕ ಅನುಕೂಲತೆಗಳನ್ನೂ ಸಹ ವಿಜ್ಞಾಪಿಸಿದರು.

ಬಳಿಕ ಸ್ಕೂಲ್ ಸೆಕ್ರೆಟರಿಗಳ ಉಪಾಧ್ಯಾಯರ, ವಿದ್ಯಾರ್ಥಿಗಳ ವಂದನೆಗಳನ್ನು ಸ್ವೀಕರಿಸಿ ದಯಮಾಡಿಸಿದರು.

ಕೊನೆಯಲ್ಲಿ ಶ್ರೀನಿವಾಸರಾಯರವರು ವಿದ್ಯಾರ್ಥಿಗಳಿಗೆಲ್ಲಾ ಮಿಠಾಯಿ ಮುಂತಾದ್ದನ್ನು ಹಂಚಿದರು

## ಇಂಡಿಯಾ ದೇಶದ ವೃತ್ತಾಂತಗಳು.

ಭೋಪಾಲ ಸಂಸ್ಥಾನದ ಬೇಗಂ ಸಾಹಿಬಾಯವರು ನೊವೆಂಬರ್ ತಿಂಗಳಲ್ಲಿ ಪರಿವಾರಸಹಿತ ಮಕ್ಕಾಕ್ಕೆ ಯಾತ್ರೆ ಹೊರಟು ಮುಂದಿನ ವರುಷ ಮಾರ್ಚಿ ತಿಂಗಳಿಗೆ ವಾಪಸು ಬರುವವರಾಗಿದ್ದಾರೆ.

ಹಿಂದುಸ್ಥಾನದಿಂದಲೂ ಸಿಲೋನ್ ದ್ವೀಪದಿಂದಲೂ ರಷ್ಯಾ ರಾಜ್ಯಕ್ಕೆ ರಫ್ತಾಗುವ ಟೀ ಸೊಪ್ಪಿಗೆ ಅಲ್ಲಿನ ಸರ್ಕಾರದವರು ಇದುವರೆಗೆ ವಸೂಲ್ಮಾಡುತ್ತಿದ್ದ ಸುಂಕದ ದರವನ್ನು ಕಳೆದ ವಾರ ಹೆಚ್ಚಿಸಿರುತ್ತಾರೆ. ಇದರಿಂದ ಈ ರಾಷ್ಟ್ರದ ವರ್ತಕರಿಗೆ ಆ ಸರಕು ಬಿಕರಿ ಆಗಲು ಸ್ವಲ್ಪ ಕಷ್ಟವಾಗಿರುವುದು.

✤✤✤✤

ಕೂರಿ ಬಂದರ್ ಸಂಸ್ಥಾನದ ಮಹಾರಾಜ ರಾಣಾರವರಿಗೆ ಆಕಸ್ಮಿಕ ಪ್ರಾಪ್ತವಾದ ಅಪಾಯವು ದೇವರ ದಯದಿಂದ ನಿವಾರಣೆಯಾಗಿ ಆರೋಗ್ಯ ಹೊಂದಿದರು. ಈ ಸಂತೋಷಕ್ಕಾಗಿ ತಮ್ಮ ಸಂಸ್ಥಾನದ ಬಡಬಗ್ಗರಿಗೆ ೧೦,೦೦೦ ರೂಪಾಯನ್ನೂ ಬೊಂಬಾಯಿ ಪಟ್ಟಣದ ಬಡಬಗ್ಗರಿಗೆ ೫೦೦ ರೂಪಾಯನ್ನೂ ಧರ್ಮ ಕೊಡುವಂತೆ ಕಳುಹಿಸಿದರು.

✤✤✤✤

ಅಹಮದ್‌ನಗರದ ಸ್ಪೆಷಲ್ ಜೈಲಿನಲ್ಲಿ ಇನ್ನೂ ೫೧೮ ಮಂದಿ ಬೋಅರ್ ಖೈದಿಗಳು ಉಳಕೊಂಡಿದ್ದಾರೆ. ಇವರು ಇಂಗ್ಲಿಷರಿಗೆ ಶರಣಾಗತರಾದೆವೆಂದು ಹೇಳಿ ರುಜು ಹಾಕಿ ಕೊಡುವುದಿಲ್ಲವೆಂದು ಹೇಳಿ ಹಟ ಹಿಡಿದಿರತಕ್ಕವರು. ಅವರು ಇನ್ನು ಕೆಲವು ಕಾಲ ಹೀಗೆ ಹಟವಾದಿಗಳಾಗಿರುವದಾದರೆ ಅವರನ್ನೆಲ್ಲಾ ಖೈದಿಗಳಂತೆ ಭಾವಿಸಿ ಸಾಧಾರಣವಾದ ಜೈಲ್‌ಖಾನೆಗಳಲ್ಲೇ ಸರ್ಕಾರದವರು ಇಟ್ಟಾರೆಂದು ತೋರುವುದು.

✤✤✤✤

ಫ್ರಾನ್ಸಿನ ತೀರಪಟ್ಟಣದಿಂದ ೧೦೦ ಕೋಟಿ ದ್ರವ್ಯದ ಸರಕನ್ನು ಭರ್ತಿಮಾಡಿಕೊಂಡು ಪ್ರಯಾಣಮಾಡಿದ ಅಡ್ಮಿರಲ್ ಗೈರ್ಡ್ ಎಂಬ ಹಡಗು ಆಗೋಷ್ಟು ೮ ಕ್ಕೆ ಸಿಲೋನ್ ದ್ವೀಪದ ಕೊಲಂಬೋ ತೀರಪಟ್ಟಣಕ್ಕೆ ಬಂದು ತಲಪಬೇಕಾಗಿತ್ತು. ಆದರೆ ಇದುವರೆಗೆ ಅದರ ಹೆಸರೇ ಇಲ್ಲದೆ ಇದೆ. ಹಡಗು ಒಂದೇ ೨೮ ಲಕ್ಷ ದ್ರವ್ಯ ಬಾಳುವುದು. ಈ ಹಡಗಿಗೆ ದಾರಿಯಲ್ಲಿ ಏನು ಅನಾಹುತವಾಗಿ ಎಲ್ಲಿ ಒಡೆದುಹೋಯಿತೋ ಎಂಬದಾಗಿ ಬಹುಮಂದಿ ವರ್ತಕರು ಚಿಂತಿಸುತ್ತಿದ್ದಾರೆ.

✤✤✤✤

ಪಂಜಾಬಿನಲ್ಲಿ ಕೆಲವು ಮಂದಿ ಸೇರಿಕೊಂಡು ಹೆಂಗಸರನ್ನು ಹಿಡಿದು ಗುಲಾಮ ಚಾಕರಿಗೆ ಬಿಕರಿ ಮಾಡುವುದು ೧೮೯೬—೯೮ ನೆ ಇಸವಿಗಳಲ್ಲಿ ಬಹಳ ಹೆಚ್ಚಾಗಿದ್ದಿತು. ಆಗಿನ ಲೆಫ್ಟಿನೆಂಟ್ ಗೌವರ್ನರು ಈ ದುರ್ವ್ಯಾಪಾರವನ್ನು ನಿಲ್ಲಿಸುವುದಕ್ಕೆ ತುಂಬಾ ಸಾಹಸಪಟ್ಟು ಇರುತ್ತಾರೆ. ಈಗಲೂ ಮತ್ತೆ ಈ ದುರ್ವ್ಯಾಪಾರವು ಹೆಚ್ಚಿರುವುದು ಪ್ರಕಾಶಕ್ಕೆ ಬಂದಿತು. ಪಂಜಾಬಿನ ಸ್ತ್ರೀಯರು ಬಹುಮಂದಿ ಸಿಂಧುದೇಶದಲ್ಲಿ ಗುಲಾಮರಾಗಿ ಸೇವಾವೃತ್ತಿಯಲ್ಲಿ ಸೇರಿಕೊಂಡಿರುವುದನ್ನು ಪೊಲೀಸಿನವರು ತಿಳಿದು ಅದಕ್ಕೆ ಕಾರಣರಾದ ದುಷ್ಟರನ್ನು ಹಿಡಿವುದಕ್ಕೆ ಏರ್ಪಾಡು ಮಾಡಿರುತ್ತಾರೆ.

✤✤✤✤

ನಾಯವ್ಯ ಪ್ರಾಂತ್ಯಕ್ಕೆ ಸೇರಿದ ಗೋರಖಪುರದಲ್ಲಿ ಒಬ್ಬ ದೊಡ್ಡ ಜಮೀನ್ದಾರನು ತನ್ನ ಒಂದು ಗ್ರಾಮದಲ್ಲಿ ಕೆಲವು ರೈತರಿಂದ ಜಮೀನು ಬಿಡಿಸಿಕೊಂಡು ಇತರರಿಗೆ ಕೊಡಬೇಕೆಂದು ತಾನೇ ನೇಗಿಲು ಹಿಡಿದು ಜಮೀನು ಉಳುವುದಕ್ಕೆ ನಿಂತನು. ಆಗ ಒಬ್ಬ ಹೆಂಗಸು ಬಂದು ನೇಗಲಿಗೆ ಅಡ್ಡಗಟ್ಟಿ ತಡೆದಳು. ಇಷ್ಟಕ್ಕೆ ಆ ಜಮೀನ್ದಾರನಿಗೆ ಕೋಪಹುಟ್ಟಿ ಅವಳನ್ನು ನೂಕಿದನು. ಅವಳು ಹೋಗದೆ ಅಡ್ಡಲಾಗಿ ಮಲಗಿಕೊಂಡಳು. ಆಗ ಅವನು ಅವಳನ್ನು ಹೊಡೆದು ಕತ್ತರಿಸಿಬಿಟ್ಟನು ಎಂಬದಾಗಿ ಒಂದು ಮೊಕದ್ದಮೆ ವಿಚಾರಣೆಯಾಗುತ್ತಿದೆ. ಸೆಷನ್ ಜಡ್ಜರು ಹ್ಯಾಗೆ ತೀರ್ಮಾನಮಾಡುವರೋ ನೋಡತಕ್ಕದಾಗಿದೆ.

✤✤✤✤

ತಂಜಾವೂರಿನಲ್ಲಿ ಆ ಡಿಸ್ಟ್ರಿಕ್ಟಿಗೆ ಸೇರಿದ ದೊಡ್ಡ ದೊಡ್ಡ ಮಿರಾಸೆದಾರರುಗಳೆಲ್ಲಾ (ಜಮೀನ್ದಾರರು) ಸೇರಿ ಒಂದು ವ್ಯವಸಾಯಾಭಿವೃದ್ಧಿಯ ಸಂಘವನ್ನು ಕಳೆದ ವಾರ ಏರ್ಪಡಿಸಿರುತ್ತಾರೆ. ಎಲ್ಲರೂ ಅಲ್ಪ ಸ್ವಲ್ಪ ಚಂದಾ ಹಾಕುವರು. ವ್ಯವಸಾಯಕ್ಕೆ ಅನುಕೂಲಿಸುವ ವಿಷಯಗಳನ್ನು ಚರ್ಚಿಸತಕ್ಕ ಪುಸ್ತಕಗಳನ್ನೂ ವರ್ತಮಾನ ಪತ್ರಿಕೆಗಳನ್ನೂ ನೇಗಿಲು ಮೊದಲಾದ ಸಾಮಗ್ರಿಗಳನ್ನೂ ತರಿಸಿಡುವರು. ಆಗಾಗ್ಯ ವ್ಯವಸಾಯ ವಿಷಯವಾಗಿ ರೈತರನ್ನು ಕರೆಸಿ ಉಪನ್ಯಾಸಗಳನ್ನು ಮಾಡುವರು. ವರುಷ ವರುಷ ವ್ಯವಸಾಯಮಾಡಿದ ಜನರು ಮುಂತಾದ ವಸ್ತುಗಳನ್ನು ಇಟ್ಟು ಪ್ರದರ್ಶನ ಮಾಡುವರು. ಇದೇ ಆ ಸಂಘದವರ ಉದ್ದೇಶ. ಇಂಥಾ ಇವರ ಪ್ರಯತ್ನವು ಸಾರ್ಥಕವಾಗಲೆಂದು ಹಾರೈಸುತ್ತೇವೆ.

✤✤✤✤

ಸಿಂಗರ್ ಕಂಪನಿಯವರ ಹೊಲಿಯುವ ಯಂತ್ರಗಳನ್ನೇ ಎಲ್ಲಿ ಎಲ್ಲಿ ದರ್ಜಿಯವರು ಉಪಯೋಗಿಸುತ್ತಿದ್ದಾರಷ್ಟೆ. ಈ ಯಂತ್ರಗಳು ಹಳೆದಾಗಿ ಕೆಟ್ಟುಹೋದರೆ ಅಂದವುಗಳನ್ನು ಕಂಪನಿಯವರು ಅಲ್ಪ ಸ್ವಲ್ಪ ದುಡ್ಡುಕೊಟ್ಟು ಕೊಂಡುಕೊಂಡು, ಒಡೆದು ಪುಡಿಪುಡಿಮಾಡುವರು. ಅವುಗಳನ್ನು ಎಂದಿಗೂ ರಿಪೇರಿಮಾಡಿ ಮಾರುವುದಿಲ್ಲ. ಹೊಸದಾಗಿ ವಿಲಾಯತಿಯಿಂದ ತಯಾರಾಗಿ ಬರತಕ್ಕ ಯಂತ್ರಗಳನ್ನೇ ಬಿಕರಿಮಾಡುತ್ತಾರೆ. ಈ ಕಂಪನಿಗೆ ಹಿಂದುಸ್ಥಾನದಲ್ಲಿ ಏಜಂಟರಾಗಿರುವ ಮಿ॥ ಎಚ್. ಎಂ. ಪಟೇಲ್‌ಯವರು ಊರೂರುಗಳಮೇಲೆ ಈಗ ಸಂಚಾರ ಹೊರಟು, ದರ್ಜಿಯವರು ಇಟ್ಟು ಉಪಯೋಗಿಸುತ್ತಿರುವ ಯಂತ್ರಗಳನ್ನು ನೋಡುತ್ತಾ, ಹಳೆಯವುಗಳನ್ನು ಕೊಂಡುಕೊಂಡು, ಹೊಸ ಯಂತ್ರಗಳನ್ನು ಬಿಕರಿಮಾಡುತ್ತಾ ಬಂದಿದ್ದಾರೆ. ಇದರಿಂದ ಕಂಪನಿಯ ಹೆಸರು ಕೆಡದ ಹಾಗಾಯಿತು.

ಬೊಂಬಾಯಿ ಪಟ್ಟಣದಲ್ಲಿ ಸೀತಾರಾಮ ಲಕ್ಷ್ಮಣ ಎಂಬ ಸಾಹುಕಾರನು ಜಗನ್ನಾಥಾಲಂ ಎಂಬ ಕಂಟ್ರಾಕ್ಟರ ಮೂಲಕ ... ಲವು ಅಂತಸ್ತುಗಳುಳ್ಳ ದೊಡ್ಡ ಮನೆಯನ್ನು ಕಟ್ಟಿಸಿ ಬಾಡಿಗೆ ... ಕೊಟ್ಟನು. ಅದಕ್ಕೆ ಹಾಕಿದ ತೊಲೆಗಳು ಗಟ್ಟಿಯಾದವುಗಳಲ್ಲ ... ದ್ದರಿಂದ ಆ ಕಟ್ಟಡವೇ ಕಳಚಿ ಬಿದ್ದುಹೋಯಿತು. ಆದರೊಳ ... ದು ಮಂದಿ ಮೃತಪಟ್ಟರು. ಇದೆಲ್ಲಾ ಕಳೆದ ಮೇ ತಿಂಗಳಲ್ಲಿ ... ಯಿತಷ್ಟೆ. ಇದಕ್ಕಾಗಿ ಆ ಇಬ್ಬರನ್ನೂ ಸರ್ಕಾರದವರು ಹಿಡಿಸಿ ... ಡಿ, ಐದು ಮಂದಿಯ ಕೊಲೆಗೆ ಇವರು ಕಾರಣರೆಂದು ಹೇಳಿ ... ಷನ್ ವಿಚಾರಣೆಗೆ ಗುರಿಮಾಡಿದರು. ಈ ಮೊಕದ್ದಮೆಯು ಕಳೆದ ವಾರ ಪರ್ಯಾಪ್ತಿ ಆಗಿ ತೀರ್ಮಾನಹೊಂದಿತು. ಪಂಚಾಯಿತ... ಅಪರಾಧಿಗಳ ಮೇಲೆ ತಪ್ಪು ರುಜುವಾತಾಗುವುದಿಲ್ಲವೆಂದು ಹೇಳಿ ... ರಾದಕಾರಣ ಜಡ್ಜರು ಅವರಿಬ್ಬರನ್ನೂ ಖುಲಾಸ್‌ಮಾಡಿಬಿಟ್ಟರು.

✤✤✤✤

ತಿರುವಾಂಕೂರಿನಲ್ಲಿ ಒಂದು ಬಾಲಿಕಾ ಪಾಠಶಾಲೆಗೆ ದ್ರವ್ಯ ಸಹಾಯ ಮಾಡಬೇಕೆಂದು ಅಲ್ಲಿನ ಕೆಲವು ಮಂದಿ ವಿದ್ಯಾವಂತರಾ... ಮಳೆಯಾಳಿಗಳ ಮಾಡಿನ ಪ್ರಕಾರ ಗೌವರ್ನಮೆಂಟಿನವರು ಹೋ... ವರುಷ ಸೆಪ್ಟೆಂಬರ್ ತಿಂಗಳಲ್ಲಿ ಒಂದು ಲಾಟರಿಯನ್ನು ಪ್ರಾರಂ... ಸಿದರು. ಟಿಕೆಟ್ ೧ ಕ್ಕೆ ೧ ರೂ. ನಂಟ ೧ ಲಕ್ಷ ರೂಪಾಯಿ ಎ... ೬೦,೦೦೦ ರೂಪಾಯನ್ನು ಬಾಲಿಕಾ ಪಾಠಶಾಲೆಗೂ, ೨೦,೦೦೦ ರೂಪಾಯನ್ನು ಚಂದಾ ಹಾಕಿದವರಿಗೆ ಬಹುಮಾನಕೊಡುವುದಕ್ಕೂ ವಿನಿಯೋಗಿಸಬೇಕೆಂದು ಗೊತ್ತುಮಾಡಿದರು. ಬಹುಮಂದಿ ಬಡಬಗ್ಗರೆಲ್ಲಾ ಈ ಲಾಟರಿಯಲ್ಲಿ ಏನೋ ದ್ರವ್ಯ ಸಂಪಾದನೆಯಾಗುವುದೆಂದು ನೆನಸಿ ರೂಪಾಯಿ ಕೊಟ್ಟು ಲಾಟ್ ಚೀಟಿಗಳನ್ನು ... ಟ್ಟುಕೊಂಡಿದ್ದಾರೆ. ವರುಷವಾದರೂ ಇನ್ನೂ ಗೌವರ್ನಮೆಂಟಿನವರು ಲಾಟ್ ಚೀಟಿ ಎತ್ತಲಿಲ್ಲ. ಈ ತಿಂಗಳ ಕೊನೆಗೆ ಎತ್ತುತ್ತಾರೆಂದು ಹೇಳುವರು.

✤✤✤✤

ಕಳೆದ ಮಾರ್ಚಿ, ಏಪ್ರಲ್ ತಿಂಗಳಲ್ಲಿ ಹರಿದ್ವಾರದಲ್ಲಿ ಒಂದು ಜಾತ್ರೆ ನಡೆಯಿತಷ್ಟೆ. ಆ ಅಮಾವಾಸ್ಯೆಯ ದಿನ ಸುಮಾರು ೭ ಲಕ್ಷ ಪ್ರಜೆಗಳು ಸೇರಿ ಸ್ನಾನಮಾಡಿದರು. ಗೌವರ್ನಮೆಂಟಿನವರು ಪ್ರಜಾ ಆರೋಗ್ಯಕ್ಕೆ ಅನುಕೂಲಿಸುವಂತೆ ಅನೇಕ ಏರ್ಪಾಡುಗಳನ್ನು ಮಾಡಿದ್ದರು. ಇದಕ್ಕಾಗಿ ಸುಮಾರು ೬೩ ಸಹಸ್ರ ರೂಪಾಯಿ ಖರ್ಚಾಯಿತು. ಆಗ ಬಂದಿದ್ದ ಯಾತ್ರಾರ್ಥಿಗಳಿಂದಲೂ, ಅಂಗಡಿ ಮುಂಗಟ್ಟುಗಳಿಂದಲೂ ತೆರಿಗೆ ಎತ್ತಿದ್ದರಲ್ಲಿ ೧೯,೦೦೦ ರೂಪಾಯಿ ಮಾತ್ರ ಹುಟ್ಟುವಳಿ ಆಯಿತು. ಅಷ್ಟು ಜನರು ಅಲ್ಲಿ ಸೇರಿದ್ದಾಗ್ಯೂ ಪ್ಲೇಗ್ ಉಪದ್ರವು ಹುಟ್ಟಲಿಲ್ಲ. ಕೆಲವರು ಮಾತ್ರ ವಾಂತಿಭೇದಿ ಹಿಡಿದು ಸತ್ತರು. ಪ್ರಜಾ ಆರೋಗ್ಯವು ಬಹಳ ಅನುಕೂಲವಾಗಿತ್ತು. ಪ್ರಜೆಗಳ ನೆಮ್ಮದಿಯನ್ನು ಉಸ್ತುವಾರಿ ಇಟ್ಟು ಕಾಪಾಡುವುದಕ್ಕಾಗಿ ಸರ್ಕಾರದವರು ಪೊಲೀಸ್ ಮೊದಲಾದ ನೌಕರರಿಗೆಲ್ಲಾ ... ನಾಮುಗಳನ್ನು ಕೊಡಿಸಿದರು.

✤✤✤✤

ಐದು ಮಂದಿ ಕಳ್ಳರು ಪೂನೆಯಲ್ಲಿರುವ ಒಬ್ಬ ದೊಡ್ಡ ಕಂಟ್ರಾಕ್ಟರ ಬಳಿಗೆ ಹೋಗಿ ತಾವು ಯಾವದೋ ಒಂದು ದೇವತಾ ಕಾರ್ಯ ಮಾಡಬೇಕೆಂದು ಹೇಳಿ ಸ್ವಲ್ಪ ಹಣ ಸಾಲ ಕೇಳಿದರು. ... ವನು ಹಣವಿಲ್ಲವೆಂದು ಹೇಳಿಬಿಟ್ಟನು. ಈ ಕಂಟ್ರಾಕ್ಟರ ಸಹೋದರನಿಗೆ ಒಂದು ರೋಗವಿತ್ತು. ಆ ಐದು ಮಂದಿಯ ಒಬ್ಬ ಪಕೀರನಿಂದ ಈ ರೋಗವನ್ನು ವಾಸಿಮಾಡಿಸಿ ಕೊಡುತ್ತೇವೆಂದೂ, ಅದಕ್ಕೆ ೧,೦೦೦ ರೂ. ಪ್ರತಿಫಲ ಕೊಡಬೇಕೆಂದೂ ಹೇಳಿದರು. ಕಂಟ್ರಾಕ್ಟರು ಇದಕ್ಕೆ ಒಪ್ಪಿಕೊಂಡನು. ಅವರಿಗೆ ಅಷ್ಟು ಹಣ ಬೇಕೆಂದು ಕೇಳಿದಾಗ ಕಂಟ್ರಾಕ್ಟರು ತನ್ನ ಪೆಟ್ಟಿಗೆಯನ್ನು ತೆಗೆಸಿ ಅವರ ಮುಂದೆಯೇ ತೆರೆದು, ನೋಟುಗಳನ್ನು ಒಟ್ಟಿ ತೋರಿಸಿ, ಅವರಿಗೆ ಧೈರ್ಯ ಹೇಳಿ ಕಳುಹಿಸಿದನು. ಅವರು ಹ್ಯಾಗೋ ಆ ಗಂಟನ್ನೇ ಅಪಹರಿಸಿದರು. ಅದರಲ್ಲಿ ೫,೫೦೦ ರೂಪಾಯಿನ ನೋಟುಗಳಿದ್ದವು. ಅವರು ಅದನ್ನು ಕದ್ದು ನಾನಾ ಕಡೆಯಲ್ಲಿ ಹೊರಟುಹೋದರು. ಪೊಲೀಸಿನವರು ಎಲ್ಲರನ್ನೂ ಹಿಡಿದು ತಂದಿದ್ದಾರೆ. ಅವರ ಹತ್ತಿರ ೪,೦೦೦ ರೂಪಾಯಿನ ನೋಟುಗಳು ಸಿಕ್ಕಿರುತ್ತವೆ.

✤✤✤✤

ಜಯಪುರದ ಮಹಾರಾಜರವರು ವಿಲಾಯತಿಗೆ ಗಂಗಾ ನದಿಯ ನೀರು, ಪುರೋಹಿತರು, ದೇವರ ಪೂಜೆ ಪೆಟ್ಟಿಗೆ ಮೊದಲಾದವುಗಳ ಸಹಿತವಾಗಿ ಹೋಗಿ ತಮ್ಮ ಮತಾಚಾರ ಕೃತ್ಯಗಳಿಗೆ ಸ್ವಲ್ಪವೂ ಲೋಪ ಉಂಟಾಗದಂತೆ ಇದ್ದು ಬಂದರಷ್ಟೆ. ಈಗ ಅದೇ ರೀತಿಯಾಗಿ ಬೊಂಬಾಯಿಪಟ್ಟಣದ ಮಿ॥ ಮುಲ್‌ಜಿ ಹಾರಾಖಾಯಾ ಎಂಬೊಬ್ಬ ಸಾಹುಕಾರನು ಪತ್ನಿಸಹಿತವಾಗಿ ವಿಲಾಯಿತಿಗೆ ಹೋಗಿ ಒಂದು ಪ್ರತ್ಯೇಕವಾದ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು, ತನ್ನ ಪರಿಚಾರಕರಿಂದಲೇ ಅಡಿಗೆ ಮುಂತಾದ್ದನ್ನು ಮಾಡಿಸಿಕೊಳ್ಳುತ್ತಾ ವಾಸಮಾಡಿಕೊಂಡಿದ್ದಾನೆ. ಅಡಿಗೆ ಮನೆಯೊಳಕ್ಕೆ ಯಾರನ್ನೂ ಬಿಡುವುದಿಲ್ಲ. ಅನ್ನ ಸಾರು ಕಾಳಿನ ಉಪ್ಪು ಮೊದಲಾದುವುಗಳನ್ನೇ ಮಾಡಿಸಿ ತಿನ್ನುತ್ತಿದ್ದಾನೆ. ನಿಷಿದ್ಧವಾದ ಮಾಂಸ ವಸ್ತುವನ್ನು ಮುಟ್ಟುವುದಿಲ್ಲ. ದಿನಕ್ಕೆ ಎರಡೇಸಲ ಊಟಮಾಡುವನು. ಇವನನ್ನು ಕೇಳಿದರೆ—"ಹಿಂದುಗಳು ಸಮುದ್ರಯಾನ ಮಾಡುವುದರಿಂದ ಅವರ ಜಾತಿಯನ್ನು ಕೆಡಿಸಿಕೊಳ್ಳಬೇಕಾದ ಅಗತ್ಯವೇನೂ ಇಲ್ಲ. ದೇಶಾಟನೆ ಮಾಡದೆಹೋದರೆ ಹಿಂದುಗಳು ಎಂದಿಗೂ ಅಭಿವೃದ್ಧಿ ಹೊಂದಲಾರರು" ಎಂಬದಾಗಿ ಹೇಳುತ್ತಾನೆ.

✤✤✤✤

ಮೂಗು ಪ್ರಾಣಿಗಳಿಗೆ ಬರತಕ್ಕ ರೋಗಾದಿಗಳಿಗೆ ಚಿಕಿತ್ಸೆ ಮಾಡಲು ಅನೇಕರಿಗೆ ತಿಳಿಯದು. ಇಂಥಾ ಚಿಕಿತ್ಸೆಯನ್ನು ಕಲಿಸುವುದಕ್ಕೆ ಬೊಂಬಾಯಿನಲ್ಲಿ ಒಂದು ವಿದ್ಯಾಶಾಲೆ ಇರುತ್ತದೆ. ಪತ್ತೆಯ

ಅಂಥಾ ವಿದ್ಯಾಶಾಲೆಯೊಂದನ್ನು ಸ್ಥಾಪಿಸಬೇಕೆಂದು [illegible] ಗೌವರ್ನಮೆಂಟಿನ ಮೆಂಬರ್ ಆಗಿ ಎಂಬವರು [illegible] ಗೌವರ್ನಮೆಂಟಿನವರ ಸ್ಯಾಂಕ್ಷನ್ ಪಡಕೊಂಡಿದ್ದಾರೆ. ಅವರು [illegible] ನಗರದಲ್ಲಿ ಅಂಥಾ ಒಂದು ವಿದ್ಯಾಶಾಲೆಯನ್ನು [illegible]ಸುವರು. ಯಾರು ಬೇಕಾದರೂ ಅಲ್ಲಿಗೆ ಹೋಗಿ ಆ ವಿದ್ಯೆಯನ್ನು ಕಲಿತುಕೊಂಡು ಬರಬಹುದಾಗಿದೆ. ವಿದ್ಯಾರ್ಥಿಗಳು [illegible] ಮೆಟ್ರಿಕ್ಯುಲೇಷನ್ ಪರೀಕ್ಷೆ ಕೊಟ್ಟಿರಬೇಕು. ಮತ್ತು [illegible] ಆ ಪಾಠಶಾಲೆಯಲ್ಲಿದ್ದು ವ್ಯಾಸಂಗ ಮಾಡಬೇಕು. [illegible] ಫೀಜ್ ಕೊಡಬೇಕಾದದ್ದಿಲ್ಲ. ಅವರು ಮುಂದೆ [illegible] ಗಳಿಗೆ ತಕ್ಕ ಹಾಗೆ ರೂಪಾಯಿನಂತೆ ಗೌವರ್ನಮೆಂಟು ವೇತನ ಕೊಡುವರು. ಪಾಠಶಾಲೆಯು ೧೯೧೦ ನೇ ಅಕ್ಟೋಬರು ೧ ರಿಂದ ಪ್ರಾರಂಭವಾಗುವುದು. ೩ ವರುಷ ಓದಿ ತೇರ್ಗಡೆಯಾದವರಿಗೆ ೫೦ ರಿಂದ ೭೫ ರೂ. ವರೆಗೆ ಸಂಬಳವಾದೀತೆಂದು ತಿಳಿದು ಬಂದಿದೆ.

✽✽✽✽

ಮದರಾಸು ಪಟ್ಟಣಕ್ಕೆ ಸೇರಿದ ಪುರುಷವಾಕಂ ಎಂಬ [illegible]ದಲ್ಲಿ ಕೆಲವು ಮಂದಿ ಸೇರಿಕೊಂಡು "ಹಿಂದೂ ಧನಾನುಕೂಲ ನಿಧಿ" ಎಂಬ ಬ್ಯಾಂಕನ್ನು ಏರ್ಪಡಿಸಿ ಕಳೆದ ೧೯೦೭ ನೆ ಇಸವಿಯಲ್ಲಿ ನಡಿಸಿಕೊಂಡು ಬಂದರು. ಜೊತೆಗೆ ಅದಕ್ಕೆ ಸಂಬಂಧಪಟ್ಟಂತೆಯೇ ಇನ್ನೆರಡು ಬ್ಯಾಂಕುಗಳನ್ನು ಸ್ಥಾಪಿಸಿದರು. ಮೊದಲನೇ ಬ್ಯಾಂಕಿನ ಹಣಕಾಸೆಲ್ಲಾ ಎಷ್ಟುಮಟ್ಟಿಗೆ ಅವ್ಯವಸ್ಥಿತವಾದವೆಂದರೆ ಷೇರುದಾರರಿಗೆ ಅಧೈರ್ಯ ಹುಟ್ಟುವಂತೆ ಆಡಿಟರೂ ಡೈರೆಕ್ಟರರೂ ಸೇರಿ ಸುಳ್ಳುಸುಳ್ಳಾದ ಲೆಕ್ಕಾಚಾರ ರಿಪೋರ್ಟನ್ನು ಪ್ರಕಟಿಸಿದರು. ಈ ರಿಪೋರ್ಟು ರಜಿಸ್ಟ್ರಾರ್ ಬಳಿಗೆ ಹೋದಾಗ ಅವರು ಅದನ್ನು ಪರೀಕ್ಷೆಮಾಡಿ ಏನೋ ಅನುಮಾನ ಕಂಡುಬಂದಕಾರಣ ಆ ಬ್ಯಾಂಕಿಗೆ ಅಧಿಕಾರಿಗಳನ್ನು ಕಳುಹಿಸಿ, ಲೆಕ್ಕಪತ್ರಗಳನ್ನೂ ರಿಜಿಸ್ಟರುಗಳನ್ನೂ ತನಿಖೆಮಾಡಿಸಿದರು. ಡೈರೆಕ್ಟರುಗಳ ಮೋಸಕ್ಕೆ ಸಿಕ್ಕಿಹೋಯಿತು. ಪೋಲೀಸು ಮಾಡಿಯ ಮೇಲೆ ಮೊಕದ್ದಮೆ ತಂದು [illegible] ವಿಚಾರಣೆ ಮಾಡಿಸಿದರು. ವಿಚಾರಣೆಯು ಬಹಳ ದೀರ್ಘಕಾಲ ನಡೆಯಿತು. ಸೆಷನ್ಸ್ ಜಡ್ಜರು ೩ ಮಂದಿಯನ್ನು ಖುಲಾಸ್ ಮಾಡಿ, ಮೂರು ಮಂದಿಗೆ ತಲಾ ಒಂದೊಂದು ಸಂವತ್ಸರದ ಕಠಿಣ ಶಿಕ್ಷೆ ವಿಧಿಸಿರುತ್ತಾರೆ. ಬ್ಯಾಂಕುಗಳ ಯೋಗ್ಯತಾ ಸಿದ್ಧಿಯನ್ನು ಸರ್ಕಾರದವರು ಆಗಾಗ್ಯೆ ಬಂದು ತನಿಖೆಮಾಡುತ್ತಿದ್ದರೆ ಇಂಥಾ ಮೋಸಕ್ಕೆ ಅವಕಾಶವಿರುವುದಿಲ್ಲ. ಷೇರು ಹಾಕುವವರಿಗೂ ತುಂಬಾ ಕ್ಷೇಮವಾದೀತು.

✽✽✽✽

ಲೇಬಲ್ ಹಚ್ಚಿರುವ ಪ್ರರಸ್ಪಿತ್ ಉಲ್ ೫,೦೦೦ ಪೌನ್ಡು. ಮತ್ತು ಉಕ್ಕಿನ ನಂ. ೨, ೨॥ ಕ್ರೋಷೆ ಕಡ್ಡಿ. ೫೦ ಗ್ರೋಸ್

ವಿಶ್ವಾದ ಬಣ್ಣದ ಉಲ್ ಪೌನ್ಡಿಗೆ ರೂ ೧—೧೨ ಆ; ಇತರ ಬಣ್ಣದ್ದು ರೂ. ೧—೮ ಆ. ನಿಕರ ೦೦೦ ಪೌಂಡುಗಳಿಗಿಂತಲೂ ಹೆಚ್ಚಾಗಿ ತರಿಸಿಕೊಳ್ಳುವವರಿಗೆ ಪೌಂಡಿಗೆ ರೂ ೧—೬ ಆ.

ಕ್ರೋಷೆ ಕಡ್ಡಿ ೧ಕ್ಕೆ ಆ. ೨; ೧ ಡಜನ್‌ಗೆ ರೂ. ೧—೪ ಆ.

ಈ ಉಲ್ ದಾರವೂ ಕ್ರೋಷೆ ಕಡ್ಡಿಗಳೂ ದಿನೇ ದಿನೇ ಹೆಚ್ಚು ಹೆಚ್ಚಾಗಿ ಮಾರಾಟವಾಗುತ್ತಿರುವುದರಿಂದ ಬರುವ ಅಕ್ಟೋಬರ್ ಅಖೈರ ಒಳಗಾಗಿ ಬರೆದು ತರಿಸಿಕೊಳ್ಳುವವರಿಗೆ ಸಿಕ್ಕುವವು.

## ಹವಾಕ್ಕೆ ತಕ್ಕ ಪಂಜಾಬಿ ಶಾಲುಗಳು.

೩×೩ ಮೊಳ. ನಂ. ೩. ರೂ. ೩—೧೪ ಆ. ನಂ. ೪. ರೂ. ೩—೧೦ ಆ. ಕಿತ್ತಳೆ ಬಣ್ಣ, ಅಚ್ಚಗೆಂಪು, ರಕ್ತಗೆಂಪು, ಎಣ್ಣೆಗೆಂಪು, ಬೂದಿ ಬಣ್ಣ ಮೊದಲಾದ ಬಗೆ ಬಗೆ ಬಣ್ಣದ ಶಾಲುಗಳನ್ನು ನಾವು ಹೇಳಿ ತಯಾರುಮಾಡಿಸಿರುವುದರಿಂದ ಈ ಶಾಲುಗಳು ಬಾಳಿಕೆ ಮೊದಲಾದ್ದರಲ್ಲಿ ಬೇರೆ ಕಡೆ ಮಾರುವ ಶಾಲುಗಳಿಗಿಂತ ಉತ್ತಮವಾದುವು. ಮಾಲನ್ನು ತರಿಸಿ ಪರೀಕ್ಷಿಸಬೇಕೆಂದು ಅಪೇಕ್ಷಿಸುತ್ತೇವೆ.

## ದೊಡ್ಡ ಸೈಜಿನ ಪೋಸ್ಟ್ ಕಾರ್ಡುಗಳು.

ಬಗೆ ಬಗೆ ಬಣ್ಣದ ಕಾರ್ಡುಗಳ ಮೇಲೆ ಚಿತ್ರ ಛಾಪಿಸಿರುವವು ೧೦೦ಕ್ಕೆ ೫ ಆ; ೧,೦೦೦ಕ್ಕೆ ರೂ. ೨—೧೨ ಆ. ಸಾದಾ ಕಾರ್ಡುಗಳು ೧೦೦ಕ್ಕೆ ೩ ಆ; ೧,೦೦೦ಕ್ಕೆ ರೂ. ೨—೪ ಆ.

L. A. Pourwal & Co.,
*Bangalore City.*

## ಚೇಂಬರ್ಲಿನ್ ಯವರ ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

36




ಕೆಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಸೆಳೆತ, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಯೋಜನ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬ ಹೆಸರುಹೊಂದಿದ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ:—"ಈ ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ಕೊಳ್ಳುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಕ್ಷಣದಲ್ಲಿ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಗಲೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ:—

ಡಬ್ಲ್ಯೂ. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

## "ಬಸವರಾಜವಿಜಯ."

4

ವಚನರೂಪವಾದದ್ದು. ಬಾಲಕರು ಕೂಡ ಸುಲಭವಾಗಿ ಓದಿ ತಿಳಿದುಕೊಳ್ಳಬಹುದು. ಬಸವಪುರಾಣದ ಕಥೆಗಳೆಲ್ಲಾ ಇದರಲ್ಲಿವೆ. ಶುದ್ಧವಾದ ಈ ದೊಡ್ಡ ಪುಸ್ತಕ ೧ಕ್ಕೆ ವಿ. ಪಿ. ಮೂಲಕ ೧—೪—೦. ೧೨ ಪ್ರತಿಗಳನ್ನು ತರಿಸಿಕೊಂಡರೆ ೧ ಉಚಿತ. ಬೇಕಿದ್ದವರು ಮೈಸೂರು ದೊಡ್ಡಪೇಟೆ ಎಸ್. ಆರ್. ಕರಿಬಸವಶಾಸ್ತ್ರಿಗಳಿಗೆ ಬರೆದು ತರಿಸಿಕೊಳ್ಳಬೇಕು.


## ನಮ್ಮ ಚಂದಾದಾರರಿಗೆ ನೋಟೀಸ್.

"ವೃತ್ತಾಂತ ಪತ್ರಿಕೆ"ಯ ಏಜಂಟರು ಚಂದಾ ವಸೂಲ್ಮಾಡಿಕೊಂಡದ್ದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವದಿಲ್ಲ.

ಮ್ಯಾನೇಜರ್,
ಮೈಸೂರು. "ವೃತ್ತಾಂತ ಪತ್ರಿಕೆ" ಆಫಿಸ್.


# ವೃತ್ತಾಂತ ಪತ್ರಿಕೆ.

:o:

ಸನ್ ೧೯೦೩ನೇ ಇಸವಿ ಅಕ್ಟೋಬರ್ ತಾ॥ ೧ನೇ ಗುರುವಾರ.


## ಬಾಳೇ ನಾರಿನ ಪ್ರಯೋಜನವು.

ಈ ದೇಶದ ಜನರು ಅನೇಕ ಪದಾರ್ಥಗಳನ್ನು ನಿಷ್ಪ್ರಯೋಜನವಾದವುಗಳೆಂದು ಕಸಕಡ್ಡಿಯಂತೆ ಎಸೆದು ಬಿಡುವುದುಂಟು. ಈಗಲೂ ಅನೇಕ ಕಡೆಗಳಲ್ಲಿ ಹೀಗೆ ಮಾಡುತ್ತಾರೆ. ಆದರೆ ಕೈಗಾರಿಕೆ ವಿದ್ಯದಲ್ಲಿ ಪ್ರವೀಣರಾದ ಕೆಲವು ಮಂದಿ ಇಂಥಾ ಪದಾರ್ಥಗಳ ಯೋಗ್ಯತೆಯನ್ನು ನಾನಾ ಪ್ರಕಾರವಾಗಿ ಪರಿಶೋಧನೆ ಮಾಡಿ, ಇವುಗಳಿಂದ ಮನುಷ್ಯನಿಗೆ ಬೇಕಾಗುವ ಅನೇಕ ವಸ್ತುಗಳನ್ನು ತಯಾರುಮಾಡಬಹುದೆಂದು ಗೊತ್ತುಮಾಡಿರುತ್ತಾರೆ. ದೃಷ್ಟಾಂತವಾಗಿ ರೈಲ್ ರಸ್ತೆಗಳ ಉಭಯಪಾರ್ಶ್ವಗಳಲ್ಲೂ ತೋಟ ತುಡಿಕೆಗಳ ಅಂಚುಗಳಲ್ಲೂ ಹೇರಳವಾಗಿ ಬೇಲಿ ಹಾಕಿ ಬೆಳೆಯಿಸಿರುವ ಭೂತಾಳೆಯನ್ನು ಪರೀಕ್ಷೆ ಮಾಡಿದ್ದರಲ್ಲಿ ಅದರಿಂದ ಬಹಳ ಉತ್ಕೃಷ್ಟವಾದ ಹಗ್ಗಗಳು ಆಗುತ್ತವೆಂದು ಗೊತ್ತಾಗುವುದು. ನಮ್ಮ ದೇಶದ ಜನರು ಈ ಭೂತಾಳೆಯಲ್ಲಿ ಹಗ್ಗ ಮಾಡುವುದನ್ನು ಕಲಿತಿದ್ದಾರೆನ್ನುವುದಕ್ಕೆ ಸಂಶಯವಿಲ್ಲ; ಆದರೆ ನಾಜೂಕಾಗಿಯೂ ಸುಲಭವಾಗಿಯೂ ಲಾಭಕರವಾಗಿಯೂ ಮಾಡುವುದು ಹೇಗೋ ನಮ್ಮ ಜನರಿಗೆ ತಿಳಿಯದು. ಯಂತ್ರಗಳ ಸಹಾಯವೇ ಇದಕ್ಕೆ ಬಹಳ ಅವಶ್ಯ. ಇತ್ತಲಾಗಿ ಬಾಳೇ ಗಿಡಗಳನ್ನು ನಮ್ಮ ಜನರು ಬಹಳವಾಗಿ ಬೆಳೆಯುವರು. ಅದರ ಫಲವನ್ನು ಬಿಕರಿ ಮಾಡುವುದರಲ್ಲೇ ತೃಪ್ತಿ ಪಟ್ಟುಕೊಳ್ಳುವರು. ಬಾಳೇಪಟ್ಟೆಯಲ್ಲಿ ಧಾನ್ಯವನ್ನು ಮೂಟೆ ಕಟ್ಟುತ್ತಾರೆ, ನಾರಿನಲ್ಲಿ ಹೂವು ಕಟ್ಟುತ್ತಾರೆ. ಇಷ್ಟಲ್ಲದೆ ಇನ್ನಾವುದಕ್ಕೂ ಬಾಳೇ ಪಟ್ಟೆಯನ್ನು ಉಪಯೋಗಿಸುವುದಿಲ್ಲ. ಈ ಪಟ್ಟೆಯಿಂದ ನಾರಿನ ಎಳೆಗಳನ್ನು ಬಿಡಿಸಿ ಅದರಿಂದಲೂ ಬಲವಾದ ಹಗ್ಗಗಳನ್ನು ಹೊಸೆಯಬಹುದೆಂತಲೂ, ಬಹು ಶುಭ್ರವೂ ಹಗುರವೂ ಆದ ಬಟ್ಟೆಗಳನ್ನು ನೇಯಬಹುದೆಂತಲೂ ಕಂಡುಹಿಡಿದಿದ್ದಾರೆ. ಮದರಾಸ್ ಪಟ್ಟಣದಲ್ಲಿರುವ ಕೈಗಾರಿಕೆಯ ಪಾಠಶಾಲೆಯಲ್ಲಿ ಈಗ ಈ ಕಸಬನ್ನು ಪ್ರಾರಂಭಿಸಿರುವರು. ತಿರುವಾಂಕೂರು ಸಂಸ್ಥಾನದ ರಾಜಧಾನಿಯಾದ ತ್ರಿವಾಂಡ್ರಂ ನಗರದಲ್ಲಿ ಕಸಬುದಾರಿ ಪಾಠಶಾಲೆಯ ಸೂಪರೇಂಟರು ಬಾಳೇ ಪಟ್ಟೆಯಿಂದ ಸುಲಭವಾಗಿ ನಾರು ಬಿಡಿಸುವಂಥಾ ಯಂತ್ರವನ್ನು ಕಂಡುಹಿಡಿದಿದ್ದಾರೆಂತಲೂ, ಈ ಯಂತ್ರವು ಹತ್ತು ರೂಪಾಯಿಗಿಂತ ಹೆಚ್ಚು ಕ್ರಯವಾಗುವುದಿಲ್ಲವೆಂತಲೂ ಮೊದಲೇ ವಾಚಕರಿಗೆ ತಿಳಿಸಿರುತ್ತೇವೆ. ಆದಕಾರಣ ನಮ್ಮ ದೇಶದ ಇತರರೂ ಜಮೀನುದಾರರೂ ಈಗ ನಿಷ್ಪ್ರಯೋಜನವೆಂದು ಎಸೆಯುವ ಈ ಬಾಳೆ ಪಟ್ಟೆಯನ್ನು ಇನ್ನುಮೇಲೆ ತುಚ್ಛವೆಂದು ಎಣಿಸದೆ ಅದರಿಂದಲೂ ತುಂಬಾ ಪ್ರಯೋಜನವನ್ನು ಪಡೆಯಲು ಸಾಹಸಪಟ್ಟಾರೆಂದು ನಿರೀಕ್ಷಿಸುತ್ತೇವೆ.

## ಪ್ರಭುವಿನ ಪ್ರಾರ್ಥನೆ.—I.

ಪ್ರಭುವಿನ ಪ್ರಾರ್ಥನೆಯೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಪ್ರಾರ್ಥನೆಯ ವಿಷಯದಲ್ಲಿ ಕೆಲವು ಸಂಗತಿಗಳನ್ನು ವಿವರಿಸಿ ನಮ್ಮ ವಾಚಕರ ಅವಗಾಹನೆಗೆ ತರಬೇಕೆಂದು ಉದ್ದೇಶಿಸಿದ್ದೇವೆ. ಯೇಸು ಸ್ವಾಮಿಯೇ ಪ್ರಾರ್ಥಿಸುವಾಗ ಈ ಮಾತುಗಳನ್ನು ಹೇಳಿದನಾದಕಾರಣ ಈ ಹೆಸರು ಬಂತೆಂದು ತಿಳಿಯಬಾರದು. ಯಾಕೆಂದರೆ ಇದರಲ್ಲಿ ಉಪಯೋಗಿಸಿರುವ ಕೆಲವು ಭಾಗಗಳನ್ನು ನೋಡುವಲ್ಲಿ ಕ್ರಿಸ್ತಸ್ವಾಮಿಯಂಥ ದಿವ್ಯ ಪುರುಷನೂ ಪಾಪರಹಿತನೂ ಪ್ರಾರ್ಥಿಸಿಕೊಳ್ಳುವದಕ್ಕೆ ಅವಶ್ಯವಿಲ್ಲವೆಂದು ಗೊತ್ತಾಗುವದು. ಸ್ವಾಮಿಯ ಶಿಷ್ಯರು ಒಂದು ಸಂದರ್ಭದಲ್ಲಿ ಪ್ರಾರ್ಥನೆಮಾಡುವ ರೀತಿಯನ್ನು ಕಲಿಸಬೇಕೆಂದು ಕೇಳಿಕೊಂಡಾಗ ಆತನು ಅವರಿಗೆ ಇದನ್ನು ಹೇಳಿಕೊಟ್ಟದರಿಂದ ಈ ಪ್ರಾರ್ಥನೆಗೆ ಈ ಹೆಸರು ಬಂದಿದೆ.

ಪ್ರಾರ್ಥನೆಯು ಮನುಷ್ಯರಾದವರಿಗೆ ಮಾತ್ರ ಸಾಧ್ಯವಾದದ್ದು. ಮನುಷ್ಯನು ಬೇರೆ, ಪಶುಗಳು ಬೇರೆ ಎಂದು ನಿರ್ಧರಿಸುವಂಥಾದ್ದು ಪ್ರಾರ್ಥನೆಯೇ. ಕುರಿ, ಕೋಣ, ಆಕಳು, ಕುದುರೆ ಮುಂತಾದ ಪಶುಗಳಿಗೆ ಪೋಷಣೆಯು ಬೇಕಾದಲ್ಲಿ ಅವೆಲ್ಲಾ ದೇವರನ್ನೇ ಆಶ್ರಯಿಸಬೇಕಾಗಿದೆ. ಈ ಭಾಗದಲ್ಲಿ ಅವೂ ಮನುಷ್ಯನೂ ಒಂದೇ. ಆದರೆ ಸಕಲ ಮನುಷ್ಯರ ಪೋಷಕನೂ ಸಂರಕ್ಷಕನೂ ಆಗಿರುವ ಆ ಒಬ್ಬನೇ ತಂದೆಯು ಮಾಡುತ್ತ ಬರುವ ಈ ಉಪಕಾರಗಳಿಗಾಗಿ ಆತನನ್ನು ಸ್ತೋತ್ರಮಾಡುವದಕ್ಕೂ, ಇನ್ನೂ ಬೇಕಾದ ಪದಾರ್ಥಗಳಿಗಾಗಿ ಆತನನ್ನು ಬೇಡಿಕೊಳ್ಳುವದಕ್ಕೂ ಭಗವಂತನು ಮನುಷ್ಯರಿಗೆ ಮಾತ್ರ ಅನುಗ್ರಹಿಸಿದ್ದಾನೆ.

ಸಾಮಾನ್ಯವಾಗಿ ಮನುಷ್ಯರು "ಸಂಕಟ ಬಂದಾಗ ವೆಂಕಟರಮಣ" ಎಂದು ಹೇಳುವದಕ್ಕೆ ಸರಿಯಾಗಿ ಪ್ರಾರ್ಥನೆಯನ್ನು ಮನುಷ್ಯನು ಸಂಕಟ ಬಂದೊದಗಿದಾಗಲೋ, ಬೇರೆ ಬೇರೆ ಸಂದರ್ಭಗಳಲ್ಲಿ ಏನಾದರೂ ಅವಶ್ಯ ಬಿದ್ದಾಗಲೋ ಪ್ರಾರ್ಥನೆ ಮಾಡುವದು ವಾಡಿಕೆಯಾಗಿದೆ. ಆದರೆ ಇಷ್ಟುಮಾತ್ರಕ್ಕೆ ಪ್ರಾರ್ಥನೆಯಾಗಲಾರದು. ಕಷ್ಟಕಾಲದಲ್ಲಿ ಪ್ರಾರ್ಥನೆಮಾಡುವದು ಸುಲಭ. ಆದರೆ ನಿರಂತರವೂ ಸ್ವಭಾವಸಿದ್ಧವಾಗಿ ಪ್ರಾರ್ಥಿಸುವದು ಸುಲಭವಲ್ಲ. ದುಃಕಾಲದಲ್ಲಿಯೂ ಸುಕಾಲದಲ್ಲಿಯೂ ನಿಷ್ಕಳಂಕವಾದ ಸಹವಾಸದಿಂದ ಪ್ರಾರ್ಥನೆಮಾಡುವ ಅಭ್ಯಾಸವನ್ನು ರೂಢಿಗೆ ತರುವದು ಎಷ್ಟು ಕಷ್ಟವೆಂದು ಪರೀಕ್ಷೆಯಿಂದ ತಿಳಿಯಬೇಕೇ ಹೊರತು ಬೇರೆ ವಿಧವಾಗಿ ತಿಳಿಯುವದಕ್ಕಾಗದು. "ಬೇಸರಗೊಳ್ಳದೆ ಯಾವಾಗಲೂ ದೇವರ ಪ್ರಾರ್ಥನೆ ಮಾಡಬೇಕೆಂದು" ಯೇಸು ಗುರುವೇ ಬೋಧಿಸಿದನು. ದೇವರ ಪ್ರಾರ್ಥನೆಯು ನಮಗೆ ಅನ್ನಪಾನದಷ್ಟು ಶ್ರಮವಾಗಿಯೂ ಅವಶ್ಯವಾಗಿಯೂ ಇದೆ. ದೇವರ ಪ್ರಾರ್ಥನೆಯ ಮೂಲಕ ಭಗವಂತನೊಂದಿಗೆ ಎಡೆಬಿಡದೆ ಸಂಭಾಷಿಸುವದರಿಂದ ಮಾತ್ರವೇ ನಾವು ಪವಿತ್ರರಾಗಿ ಬದುಕುವದಕ್ಕೆ ಆಗುವದು.

ಪ್ರಾರ್ಥನೆಯ ಅವಶ್ಯಕತೆಯು ಇಷ್ಟು ವಿಶೇಷವಾಗಿದ್ದಾಗ್ಯೂ ಇದನ್ನು ಅಭ್ಯಾಸಕ್ಕೆ ತಂದುಕೊಳ್ಳುವದು ನಮಗೆ ಎಷ್ಟು ಕಠಿಣವಾಗಿದೆ! ಎಷ್ಟು ನಿರ್ಬಂಧವಾಗಿದೆ!

ಪ್ರಾರ್ಥನೆಯು ಮಂತ್ರೋಚ್ಚಾರಣೆಯೂ ಅಲ್ಲ, ಯಂತ್ರ ತಿರುಗುವ ಪ್ರಕಾರ ಯಾವದೋ ಒಂದು ಆಚರಣೆಯನ್ನು ಪದೇ ಕಣ್ಣು ಮುಚ್ಚಿಕೊಂಡು ಮಾಡುತ್ತಿರುವದೂ ಅಲ್ಲ. ನಾವು ಭಗವಂತನನ್ನು ಸ್ತೋತ್ರಿಸುವಾಗಲೂ, ನಮಗೆ ಬೇಕಾದವುಗಳನ್ನು ಆತನಿಂದ ಕೇಳಿಕೊಳ್ಳುವಾಗಲೂ ನಮ್ಮ ಬುದ್ಧಿಯು ಏನನ್ನು ಒಪ್ಪುವದೋ ಆ ಅಭಿಪ್ರಾಯವನ್ನು ಭಾಷೆಯ ಮೂಲಕ ತಿಳಿಯಪಡಿಸುವದೇ ಪ್ರಾರ್ಥನೆ. ನಾವು ಈ ಪ್ರಕಾರ ಪ್ರಾರ್ಥನೆ

...ದಕ್ಕೆ ಯುಕ್ತಿ ಸ್ಥಿರವೆ, ಯಾವಾಗನ್ನು ಕುರಿತು ಪ್ರಾರ್ಥಿಸಬೇಕು, ಯಾವ ರೀತಿಯಲ್ಲಿ ಪ್ರಾರ್ಥಿಸಬೇಕೋ ನಮಗೆ ತಿಳಿಯದು. ಅಂಥಾದ್ದೊಂದು ಸಂದರ್ಭದಲ್ಲಿ ಯೇಸು ಸ್ವಾಮಿಯು ತನ್ನ ಶಿಷ್ಯರಿಗೆ ಈ ಪ್ರಾರ್ಥನೆಯನ್ನು ಹೇಳಿಕೊಟ್ಟನು. ಆತನು ಪ್ರತ್ಯೇಕವಾಗಿ ಒಂದಾನೊಂದು ಸಂದರ್ಭದಲ್ಲಿ ದೇವರ ಪ್ರಾರ್ಥನೆ ಮಾಡುತ್ತಿದ್ದನು. ಆತನನ್ನು ನೋಡುತ್ತಿದ್ದವರಲ್ಲಿ ಆ ಶಿಷ್ಯನ ಹೃದಯಗಳಿರಬೇಕು! ಆತನು ತಂದೆಯ ಬಳಿಯಲ್ಲಿ ಮಗನು ಮಾತಾಡುತ್ತಿರುವಂತೆ ಸುಲಭವಾಗಿ ತಿಳಿಯುವಂತೆಯೂ ಕೇವಲ ಸಹಜವಾಗಿಯೂ ದೇವರ ಪ್ರಾರ್ಥನೆ ಮಾಡುವಾಗ ದೇವರು ಪ್ರತ್ಯಕ್ಷವಾಗಿ ಆತನ ಸಮೀಪದಲ್ಲೇ ಇರುವಂತೆ ಆ ಶಿಷ್ಯರಿಗೆ ತೋರುತ್ತಿತ್ತು! ಮತ್ತು ಆತನ ಪ್ರಾರ್ಥನೆಯನ್ನು ಕಿವಿಯಾರ ಕೇಳುತ್ತಿರುವ ಆ ಶಿಷ್ಯರ ಮನಸ್ಸನ್ನೇ ಪವಿತ್ರಪಡಿಸತಕ್ಕ ಎಂಥ ಘನವಾದ ಭಾಗಗಳೂ, ಉತ್ಕೃಷ್ಟವಾದ ಚಿನ್ಹೆಗಳೂ ಆತನ ಪ್ರಾರ್ಥನೆಯಲ್ಲಿ ಕೇಳಬರುತ್ತಿದ್ದವು! ಇಂಥ ಅಪೂರ್ವವಾದ ಪ್ರಾರ್ಥನೆಯನ್ನು ಕೇಳಿ ಆ ಶಿಷ್ಯರು ನಾವೂ ಇದೇ ಪ್ರಕಾರ ಪ್ರಾರ್ಥನೆಮಾಡಲಾರೆವಲ್ಲ. ಇದು ಯಾಕೆ? ಈ ಸ್ವಾಮಿಯು ಭಗವಂತನ ಬಳಿಯಲ್ಲಿ ಇಷ್ಟು ಸರಾಗವಾಗಿ ಇಷ್ಟು ನೆಟ್ಟಗೆ ಮಾತಾಡುವಂತೆಯೇ ನಾವು ಯಾಕೆ ಸಂಭಾಷಿಸಲಾರೆವು? ಎಂದು ಮನಸ್ಸಿನಲ್ಲಿ ಆಲೋಚಿಸುತ್ತಾ, ಸ್ವಾಮಿಯು ಪ್ರಾರ್ಥಿಸಿ ಮುಗಿಸಿದ ಕೂಡಲೆ ಆತನನ್ನು ಕುರಿತು—ಸ್ವಾಮೀ, ದೇವರ ಪ್ರಾರ್ಥನೆ ಮಾಡುವ ರೀತಿಯನ್ನು ನಮಗೂ ಉಪದೇಶಿಸು ಎಂದು ಕೇಳಿಕೊಂಡರು. ಆಗ ಆತನು ಈ ಪ್ರಾರ್ಥನೆಯನ್ನು ಹೇಳಿಕೊಟ್ಟನು. ಅದೇನಂದರೆ-

ತಂದೆಯೇ, ನಿನ್ನ ನಾಮವು ಪರಿಶುದ್ಧವಾಗಿಯೇ ಇರಲಿ.
ನಿನ್ನ ರಾಜ್ಯವು ಬರಲಿ.
ನಮಗೆ ಬೇಕಾದ ಅನ್ನವನ್ನು ದಿನ ದಿನವೂ ಕೊಡುತ್ತಾ ಬಾ.
ನಮ್ಮ ಪಾಪಗಳನ್ನು ಕ್ಷಮಿಸು; ಯಾಕೆಂದರೆ,
ನಮ್ಮ ಋಣದಲ್ಲಿ ಬಿದ್ದವರಿಗೆಲ್ಲಾ ನಾವೂ ಬಿಡುತ್ತೇವೆ.
ನಮ್ಮನ್ನು ದುಷ್ಪ್ರೇರಣೆಗೆ ಗುರಿಮಾಡಬೇಡ
ಎಂಬುವದೇ.

ಈ ಪ್ರಾರ್ಥನೆಯನ್ನು ಕ್ರೈಸ್ತನ ಶಿಷ್ಯರು ಸುಮಾರು ಎರಡು ಸಾವಿರ ವರ್ಷಗಳಿಂದ ಬಳಸುತ್ತಾ ಬಂದಿದ್ದಾರೆ. ತಾವು ಸಭೆಗಳಾಗಿ ಕೂಡಿಬರುವ ವಿಶೇಷ ಸಂದರ್ಭಗಳಲ್ಲಿಯೂ, ತಮ್ಮ ತಮ್ಮ ಮನೆಗಳಲ್ಲಿ ಪ್ರತ್ಯೇಕವಾಗಿ ಕೂತು ಪ್ರಾರ್ಥಿಸುವ ಸಮಯಗಳಲ್ಲಿಯೂ ಈ ಪ್ರಾರ್ಥನೆಯನ್ನು ಹೇಳುವದು ವಾಡಿಕೆಯಾಗಿದೆ. ಆದರೆ ಸ್ವಾಮಿಯು ಹೇಳಿಕೊಟ್ಟ ಮಾತು ಹೊರತು ಬೇರೆ ಯಾವ ಮಾತನ್ನೂ ಪ್ರಾರ್ಥನೆಯಾಗಿ ಉಪಯೋಗಿಸಬಾರದೆಂದು ತಿಳಿಯಬೇಕೋ? ಕೂಡದು. ಯಾಕೆಂದರೆ ಸ್ವಾಮಿಯು ಇದನ್ನು ಹೇಳಿಕೊಡುವ ಸಂದರ್ಭದಲ್ಲಿ—"ನೀವು ಪ್ರಾರ್ಥನೆ ಮಾಡತಕ್ಕ ರೀತಿ ಹ್ಯಾಗೆಂದರೆ" ಎಂದು ಹೇಳಿದನು. ಇದರಲ್ಲಿ ಸ್ವಾಮಿಯ ಅಭಿಪ್ರಾಯವೇನೆಂದರೆ—ಪ್ರಾರ್ಥನೆ ಮಾಡುವವನಲ್ಲಿ ಯಾವ ಗುಣತ್ವ, ಯಾವ ಭಾವವು, ಯಾವ ಉದ್ದೇಶವು ಇರಬೇಕೆಂಬುದನ್ನು ಸೂಚಿಸುವದೇ ಆತನ ಅಭಿಪ್ರಾಯ. ಈ ಪ್ರಾರ್ಥನೆಯಲ್ಲಿ ಪ್ರಕಟಿಸಲ್ಪಟ್ಟಿರುವ ಗುಣಭಾವಗಳನ್ನು ಯಾವಾತನು ಪ್ರಾರ್ಥನೆ ಮಾಡುವಲ್ಲಿ ಪ್ರಕಟಿಸುತ್ತಾನೋ, ಇದರಲ್ಲಿ ಸೂಚಿಸಲ್ಪಟ್ಟಿರುವ ಯಾವ ವಿಷಯಗಳನ್ನು ಪ್ರಾರ್ಥನೆಯಲ್ಲಿ ಕೇಳಿಕೊಳ್ಳುತ್ತಾನೋ ಅವನ ಪ್ರಾರ್ಥನೆಯೇ ನಿಜವಾದ ಪ್ರಾರ್ಥನೆಯೆಂದು ತಿಳಿಯತಕ್ಕದ್ದು. ಹೀಗಿರುವದರಿಂದ ನಾವು ಪ್ರಾರ್ಥನೆ ಮಾಡುವಲ್ಲಿ ನಮ್ಮ ಹೃದಯವು ಭಕ್ತಿಭಾವವನ್ನು ವಹಿಸುವದಕ್ಕೋಸ್ಕರ ನಮ್ಮ ಸ್ವಂತ ಚಿನ್ಹೆಗಳನ್ನು ತಿಳಿಸುವದಕ್ಕೆ ಮುಂಚೆ ಈ ಪ್ರಾರ್ಥನೆಯನ್ನು ಹೇಳಬಹುದು ಅಥವಾ ನಮಗೆ ತೋರಿದ ಹಾಗೆಲ್ಲಾ ಪ್ರಾರ್ಥಿಸಿಕೊಂಡ ತರುವಾಯ ಅದರಲ್ಲಿ ಕಂಡು ಬಂದಿರುವ ಕೊರತೆಗಳನ್ನು ಸರಿಮಾಡಿಕೊಳ್ಳುವದಕ್ಕಾಗಿ ಈ ಪ್ರಾರ್ಥನೆಯನ್ನು ಹೇಳಬಹುದು ನಮ್ಮ ಪ್ರಾರ್ಥನೆಯ ಕೊನೆಯಲ್ಲಿ ಇದನ್ನು ಹೇಳುವದರಿಂದ ಚಿನ್ಹೆಗಳ ತರುವಾಯ ಕೃತಜ್ಞತಾಸ್ತುತಿಯನ್ನು ಹೇಳಿ ನಮ್ಮ ಆರಾಧನೆಯನ್ನು ಉಚಿತಪ್ರಕಾರವಾಗಿ ಮುಗಿಸಿದ ಹಾಗಾಗುತ್ತದೆ.

ಈ ಪ್ರಾರ್ಥನೆಯಿಂದ ನಮ್ಮ ಹೃದಯದಲ್ಲಿ ಗುಣಭಾವಗಳಾಗ ಕುಶಲವಾಗಿ ಫಲಿತ್ತೆಂಬುವದೇ ಹೊರತು, ಆಲೋಚನೆಯಿಲ್ಲದೆ ಅದನ್ನು ನಾವು ಎಷ್ಟು ಸಾರಿ ಹೇಳಿದರೂ ಏನೂ ಪ್ರಯೋಜನವಿಲ್ಲವೆಂದು ತಿಳಿದಿರಬೇಕು. ಇದನ್ನು ಇಷ್ಟು ಸಾರಿ ಹೇಳಿದರೆ ಇಷ್ಟು ಫಲವುಂಟೆಂದು ಹೇಳುವದು ತಪ್ಪು, ಮತ್ತು ಸ್ವಾಮಿಯೇ ಇದನ್ನು ಹೇಳಿಕೊಡುವದಕ್ಕೆ ಮುಂಚೆ—"ಹೇಳಿದ್ದನ್ನೇ ಸುಮ್ಮನೆ ಸುಮ್ಮನೆ ಹೇಳಬೇಡ" ಎಂದು ವಿಧಿಸಿದ ಅಪ್ಪಣೆಗೆ ವಿರೋಧವಾಗಿರುತ್ತದೆ.

ಈ ಪ್ರಾರ್ಥನೆಯು ಕ್ರೈಸ್ತರು ಹೇಳತಕ್ಕದ್ದಾಗಿದ್ದರೂ ಅನ್ಯಮತದವರೆಲ್ಲರೂ ಇದನ್ನು ಹೇಳಬಹುದು. ಇದು ಸಕಲ ಜನಾಂಗಗಳಿಗೂ ಸಾಮಾನ್ಯವಾಗಿದೆ. ಅಲ್ಪಮತಿಗಳಾದ ಸಾಕ್ಷಿಗಳಾಗಲಿ ಬುದ್ಧಿವಂತರಾದ ಪೊಸ್ತಕರಾಗಲಿ, ಹಿಂದುಗಳಾಗಲಿ ಮುಸಲ್ಮಾನರಾಗಲಿ, ಯಾರಾಗಲಿ ಇದನ್ನು ಏಕಮತ್ಯವಾಗಿ ಹೇಳಬಹುದು. ಇದರಲ್ಲಿ ಅಡಗಿರುವ ವಿಷಯಗಳನ್ನು ಮುಂದಿನ ಸಂಚಿಕೆಯಲ್ಲಿ ಆಲೋಚನೆ ಮಾಡೋಣ.

## ಬಳಸೀಕರ ವೃತ್ತಾಂತಗಳು

ನಮ್ಮ ಮಹಾರಾಜರವರ ವಿದ್ಯಾ ಗುರುಗಳಾಗಿದ್ದು ಈಗ ಸೀಮೆಗೆ ಹೋಗಿರುವ ಮಿ॥ ಎಸ್. ಎಂ. ಫ್ರೇಸರ್‌ಯವರಿಗೆ ಇಂಡಿಯಾ ಗೌವರ್ನಮೆಂಟಿನಲ್ಲಿ ಫಾರಿನ್ ಇಲಾಖಾ ಡೆಪ್ಯುಟಿ ಸೆಕ್ರೆಟರಿ ಕೆಲಸವಾಗಿದೆ ಎಂತಲೂ, ಅವರು ಈ ತಿಂಗಳ ಅಖೈರಿಗೆ ವಿಲಾಯಿತಿಯಿಂದ ಹೊರಡಾಗಿದ್ದಾರೆಂತಲೂ ತಿಳಿದುಬಂದಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ನ್ಯಾಮತಿ ಗ್ರಾಮದಲ್ಲಿ ಒಂದು ಸರ್ಕಾರಿ ಆಸ್ಪತ್ರೆಯನ್ನು ಸ್ಥಾಪಿಸಬೇಕೆಂದು ಗೌವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ.

****

ಮೈಸೂರು ಸಂಸ್ಥಾನದ ಛೀಫ್ ಜಡ್ಜರಾದ ಮಿ॥ ಎ. ರಾಮಚಂದ್ರಯ್ಯರವರು ಈ ದಸರಾ ರಜವನ್ನು ಕಳೆವುದಕ್ಕೆ ಶೃಂಗೇರಿ ಮಠಕ್ಕೆ ಹೋಗಿರುವದಾಗಿ ಕೇಳುತ್ತೇವೆ.

****

ಕೋಲಾರ್ ಚಿನ್ನದ ಗಣಿಗಳ ಕೆರೆ ಯೇರಿಯನ್ನು ರಿಪೇರಿ ಮಾಡಿ ನೀರುವ ಕಟ್ಟಿಸಿಕೊಡಬೇಕೆಂದು ಗಣಿಗಳ ಕಂಪನಿಯವರೇ ಸರ್ಕಾರಕ್ಕೆ ಒಂದು ಸಾವಿರ ರೂಪಾಯಿ ಕೊಟ್ಟಿರುವರು

****

ರಾಜಧಾನಿಯನ್ನು ಅಭಿವೃದ್ಧಿಗೆ ತರುವುದಕ್ಕೆ ನೇಮಕವಾಗುವ ಟ್ರಸ್ಟ್ ಕಮಿಟಿಗೆ ಸರ್ಕಾರದವರು ಡೆ॥ ಕಮಿಷನರ್ ಮಿ॥ ಕೆ. ಪಿ. ಪುಟ್ಟಣ್ಣ ಚೆಟ್ಟಿರನ್ನು ಪ್ರೆಸಿಡೆಂಟರಾಗಿ ಗೊತ್ತುಮಾಡುತ್ತಾರೆಂದು ವರ್ತಮಾನವಿದೆ.

****

ನಾಳೆ ಸೋಮವಾರ ದಿವಿ ೧೦ ಗಂಟೆಗೆ ರಾಜಧಾನಿಯ ಪಬ್ಲಿಕ್ ಆಫೀಸಿನಲ್ಲಿ ಪ್ರತಿನಿಧಿ ಸಭೆ ನಡೆಯುವದು. ಆ ರಾತ್ರಿಯೇ ಇಂಗ್ಲಿಷ್ ಸರ್ದಾರರಿಗೆಲ್ಲಾ ರಸಿಡೆನ್ಸಿ ಬಂಗಲೆಯಲ್ಲಿ ಔತನವೂ ಬಾಣಬಿರಸುಗಳೂ ಆಗುವವು.

****

ಮದ್ರಾಸಿನಿಂದ ಶಿವಸಮುದ್ರದ ವಿದ್ಯುಚ್ಛಕ್ತಿಯ ಕಾರ್ಖಾನೆಯ ತನಕ ರೈಲ್ ಕಂಬಗಳನ್ನು ಹಾಕಿ ಟ್ರಾಂವೇ ಎಂಬ ಗಾಡಿಗಳು ಹೋಗಿಬರುವಂತೆ ಮಾಡಬೇಕೆಂತಲೂ, ಈ ಗಾಡಿಗಳನ್ನು ವಿದ್ಯುಚ್ಛಕ್ತಿಯಿಂದಲೇ ಓಡಿಸಬೇಕೆಂತಲೂ ಒಂದು ಸಲಹೆ ಹುಟ್ಟಿದೆ.

****

ಶ್ರೀಮನ್ ಮಹಾರಾಜರವರು ಅರಮನೆ ಖಜಾನಾ ಶಿರಸ್ತೇದಾರ್ ಮಿ॥ ಸೀತಾರಾಮಯ್ಯರಿಗೆ ಕೊಡಿಸಿದ್ದ ೨,೩೦೦ ಚಿಲ್ಲರೆ ರೂಪಾಯಿ ಸಾಲವನ್ನು ಮಾಫಿ ಬಿಟ್ಟರೆಂತಲೂ, ಅರಮನೆ ಪುರೋಹಿತರಾದ ಮಿ॥ ಗರಳಪುರಿ ಶಾಸ್ತ್ರಿಗಳಿಗೆ ೧,೦೦೦ರೂ. ಇನಾಮನ್ನೂ ೨,೦೮೦ರೂ. ಅದ್ವಾನ್ಸನ್ನೂ ಕೊಡುವಂತೆ ಅಪ್ಪಣೆ ಮಾಡಿದರೆಂತಲೂ ಕೇಳುತ್ತೇವೆ.

****

ರಾಜಧಾನಿಯಲ್ಲಿ ಈಗ ಪ್ರತಿದಿನವೂ ತಪ್ಪದೆ ಮಳೆ ಬರುತ್ತಿದೆ. ಉಪದ್ರವು ಕಮ್ಮಿಯಾಗಿಲ್ಲ. ರಸ್ತೆಗಳೆಲ್ಲಾ ಬಹಳ ಕೆಸರಾಗಿ ಕೆಟ್ಟುಹೋಗಿವೆ. ಕಲ್ಪದಕೇರಿಯಲ್ಲಿದ್ದ ಪ್ಲೀಡರ್ ಮಿ॥ ಕೃಷ್ಣರಾಯರೂ, ಮೈಸೂರು ಸ್ಟಾಂಡರ್ಡ್ ಮತ್ತು ನಡೆಗನ್ನಡಿ ಆಫೀಸಿಗೆ ವರ್ತಮಾನಗಳನ್ನು ಸಂಗ್ರಹಮಾಡಿ ತಂದುಕೊಡುತ್ತಿದ್ದ ಮಿ॥ ಶ್ರೀನಿವಾಸರಾಯರೂ ಕಳೆದ ವಾರ ಪ್ಲೇಗಿನಲ್ಲಿ ಕಾಲವಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಮಿ॥ ಶ್ರೀನಿವಾಸರಾಯರು ಬಹಳ ಸಾಹಸವಂತರಾಗಿಯೂ, ಬಡು ಮಂದಿ ದೊಡ್ಡ ಮನುಷ್ಯರಿಗೆ ಆಪ್ತರಾಗಿಯೂ, ಪ್ರಜಾಪಕ್ಷಪಾತಿಗಳಾಗಿಯೂ ಇದ್ದರು.

****

ತುಂಕೂರು ಡಿಸ್ಟ್ರಿಕ್ಟ್ ತಿಪ್ಟೂರು ತಾಲ್ಲೂಕು ನೊಣವಿನಕೆರೆಯಲ್ಲಿ ಪ್ಲೇಗ್ ಪ್ರಾರಂಭವಾಗಿ ಕೆಲವರು ಸತ್ತುಹೋದರು. ಒಬ್ಬ ಬಾತ್ಮೀದಾರರು ಅಲ್ಲಿನ ಸ್ಥಿತಿಯನ್ನು ವಿವರಿಸಿ ಕಡೆಯಲ್ಲಿ ಬರೆದಿರುವುದೇನೆಂದರೆ —"ಈಗಲಾದರು ಸರ್ಕಾರದಿಂದ ಕಾಯಿಲೆಯಾದವರನ್ನು ಅಲಾಯಿದಾ ಇಟ್ಟು ಪೋಷಣೆಮಾಡುವದಕ್ಕೆ ಸಾಕಾದಷ್ಟು ಷೆಡ್ಡುಗಳನ್ನು ಏರ್ಪಡಿಸಿಕೊಡಬೇಕಲ್ಲದೆ ಡಾಕ್ಟರು ಎರಡು ದಿವಸಕ್ಕೊಂದಾವರ್ತಿಯಾದರೂ ಬಂದು ರೋಗಿಗಳಿಗೆ ತಕ್ಕ ಔಷಧಗಳನ್ನು ಕೊಟ್ಟು, ಗಾಬರಿಪಡುತ್ತಿರುವ ಜನಗಳಿಗೆ ಧೈರ್ಯ ಹೇಳುವಂತೆ ಮಾಡಬೇಕು. ಮತ್ತು ಮ್ಯುನಿಸಿಪಲ್ ಮೆಂಬರುಗಳು ಈ ವಿಷಯದಲ್ಲಿ ವಿಸಿಟಿಂಗ್ ಮಾಡಿ ಪ್ರಜೆಗಳ ಕ್ಷೇಮಕ್ಕೆ ಬೇಕಾಗುವ ಸಾಮಗ್ರಿಗಳನ್ನು ಒದಗಿಸುವ ಕರದೂದು ಮಾಡಿ ಕೀರ್ತಿ ಸಂಪಾದಿಸುವರೆಂದು ನಂಬಿದ್ದೇನೆ."

****

ರಾಜಧಾನಿಯ ಪ್ರಜೆಗಳು ಕಳೆದ ವಾರ ಮ್ಯುನಿಸಿಪಲ್ ಕಮಿಷನರುಗಳನ್ನು ಚುನಾವಣೆ ಮಾಡಿದರು. ಮೊದಲುವಾರು ಚುನಾಯಿಸಿರುವ ಮೆಂಬರುಗಳ್ಯಾರೆಂದರೆ ಮಿ॥ ಅನಂತರಾಮಯ್ಯನವರೂ, ಮಿ॥ ಅಬೂಬಾಕರ್ ಸೇಟರೂ ಲಷ್ಕರ್ ಮೊಹಲ್ಲೆಗೆ; ಮಿ॥ ತಿರುವೆಂಗಡಮೊದಲಿಯಾರ್‍ರು ಪಡುವಾರದ ಮೊಹಲ್ಲೆಗೆ; ಮಿ॥ ನರಸಿಂಹಸ್ವಾಮಿಯವರೂ, ಮಿ॥ ಸೀತಾರಾಮಯ್ಯರೂ ಕಿಲ್ಲೇ ಮೊಹಲ್ಲೆಗೆ, ಮಿ॥ ಅಡ್ವೊಕೇಟ್ ರಾಘವಾಚಾರ್‍ರು ಕೃಷ್ಣರಾಜ ಮೊಹಲ್ಲೆಗೆ; ಮಿ॥ ವೆಂಕಟಕೃಷ್ಣಯ್ಯನವರು ಚಾಮರಾಜ ಮೊಹಲ್ಲೆಗೆ; ಮಿ॥ ಪ್ಲೀಡರ್ ವೆಂಕೋಬರಾಯರೂ, ಮಿ॥ ಅಡ್ವೊಕೇಟ್ ರಂಗೈಯಂಗಾರರೂ ದೇವರಾಜ ಮೊಹಲ್ಲೆಗೆ. ಈ ಪೈಕಿ ಮಿ॥ ಗಳಾದ ಅಡ್ವೊಕೇಟ್ ರಾಘವಾಚಾರ್ಯರೂ, ಅಡ್ವೊಕೇಟ್ ರಂಗೈಯಂಗಾರ್ಯರೂ ಈ ಸಲ ಹೊಸದಾಗಿ ಮೆಂಬರಾದರು. ಉಳಿದವರೆಲ್ಲಾ ಮೊದಲಿದ್ದವರೇ.

****

ಮೈಸೂರು ಸಂಸ್ಥಾನದಲ್ಲಿ ತಾಲ್ಲೂಕ್ ಯಾ ಸಬ್ ತಾಲ್ಲೂಕ್ ಹೆಡ್ ಕ್ವಾರ್ಟರುಗಳಲ್ಲದೇನೂ, ೩,೦೦೦ ಪ್ರಜಾಸಂಖ್ಯೆಯನ್ನು ಪಡೆಯದೇನೂ ಇರುವ ೩೪ ಭಾರೀ ಗ್ರಾಮಗಳಲ್ಲಿ ಸರ್ಕಾರದವರು ಮ್ಯುನಿಸಿಪಾಲಿಟಿ ಇಟ್ಟು ನಡಸುತ್ತಾ ಬಂದಿದ್ದರೆ ೧೯೦೩ನೇ ನೊವೆಂಬರ್ ೧ರ ಲಾಗಾಯತು ಅವುಗಳನ್ನು ಮ್ಯುನಿಸಿಪಾಲಿಟಿಗಳೆಂಬ ಕರೆಯಕೂಡದೆಂದೂ 'ಯೂನಿಯನ್' ಯಾನೆ ಸಂಘಗಳೆಂದು ಕರೆಯಬೇಕೆಂದೂ ವಿಧಿಸಿರುವರು. ಈ ಸಂಘಗಳಲ್ಲಿ ಮೆಂಬರುಗಳು ೫ ಮಂದಿಗಿಂತ ಕಡಿಮೆಯಾಗಲಿ, ೧೦ ಮಂದಿಗಿಂತ ಹೆಚ್ಚಾಗಲಿ ನೇಮಿಸಲ್ಪಡಕೂಡದೆಂದು ಗೊತ್ತುಮಾಡಿದ್ದಾರೆ. ಈ ಮೆಂಬರುಗಳ ಚುನಾವಣೆ, ಅವರ ಅಧಿಕಾರ, ಜವಾಬ್ದಾರಿ, ಮೀಟಿಂಗ್ ನಡೆಸತಕ್ಕ ಕ್ರಮ, ಈ ಮೊದಲಾದ ವಿಷಯಗಳನ್ನು ಸರ್ಕಾರದವರು ಗೊತ್ತುಮಾಡಿ, ಒಂದು ಕಾನೂನು ಪ್ರಕಟಿಸಿರುವರು. ಈ ಕಾನೂನು ನೊವೆಂಬರ್ ೧ರಿಂದ ಜಾರಿಯಲ್ಲಿ ಬರುವುದು.

****

ಅಮಲ್ದಾರರುಗಳ ಅಧಿಕಾರವು ತಾಲ್ಲೂಕುಗಳಲ್ಲಿ ನಾನಾ ಬಗೆಯಾಗಿರುವುದರಿಂದ ಪ್ರಜಾ ಪ್ರತಿನಿಧಿಗಳು ಧೈರ್ಯವಾಗಿ ತಾಲ್ಲೂಕು ಮಳೆಯ ಕೊರತೆಗಳನ್ನು ಗೌವರ್ನಮೆಂಟಿಗೆ ಅರಿಕೆ ಮಾಡಲು ಅವಕಾಶ ಕಡಿಮೆ. ತಿದ್ದುಪಾಟಾಗಬೇಕಾದ ಸಂಗತಿಗಳನ್ನು ಮೆಂಬರುಗಳು ಬರೆದು ಅಮಲ್ದಾರರಿಗೆ ಒಪ್ಪಿಸಬೇಕಾಗಿದೆ. ಇದರಿಂದ ಅಮಲ್ದಾರರಿಗೆ ಇಷ್ಟವಿಲ್ಲದ ವಿಷಯಗಳನ್ನು ಮೆಂಬರುಗಳು ಬರೆದುಕೊಡಲು ಹಿಂತೆಗೆಯುತ್ತಾರೆ. ಪ್ರತಿನಿಧಿಗಳ ಮುಖೇನ ಸ್ಥಳೀಯ ಕೊರತೆಗಳನ್ನು ತಿಳಿದು ಪರಿಹರಿಸಬೇಕೆಂಬ ಉದ್ದೇಶವು ಸರ್ಕಾರದವರಿಗಿರುವುದಾದರೆ ಅವರು ಈ ಅಮಲ್ದಾರರುಗಳ ಅಧಿಕಾರವನ್ನು ಕಡಿಮೆ ಮಾಡಬೇಕು ಮತ್ತು ಪ್ರತಿನಿಧಿಗಳ ಹೇಳಿಕೆಯನ್ನು ಆಲಿಸುವಾಗ್ಯೆ ತಾಲ್ಲೂಕ್ ಅಥವಾ ಡಿಸ್ಟ್ರಿಕ್ಟ್ ಅಧಿಕಾರಿಗಳನ್ನು ಎದುರಿಗಿಟ್ಟುಕೊಂಡಿರದೆ ಗೌವರ್ನಮೆಂಟ್ ಮೆಂಬರುಗಳೇ ಕೇಳುತ ಇರಬೇಕು ಎಂಬದಾಗಿ ಒಬ್ಬ ಬಾತ್ಮೀದಾರರು ಮದರಾಸ್ ಪತ್ರಿಕೆಯಲ್ಲಿ ಬರೆದಿರುವರು.

****

ಈಸಲ ನವರಾತ್ರಿ ಉತ್ಸವಗಳು ಪದ್ಧತಿಯ ಪ್ರಕಾರ ನೆರವೇರಿದವು. ಜಗನ್ಮೋಹನ ಬಂಗಲೆಯಲ್ಲೇ ದಸರಾ ದರ್ಬಾರುಗಳು ನಡೆದವು. ಒಂಭತ್ತು ದಿನಗಳೂ ಬೆಳಿಗ್ಗೆ ಪಟ್ಟದ ಆನೆ ಕುದುರೆಗಳು ಮರ್ಯಾದೆಗಳೊಡನೆ ಕರೆಗೆ ಹೋಗಿಬರುವ ಮೆರವಣಿಗೆಯೂ, ಸಾಯಂಕಾಲ ಆರುಗಂಟೆಯಿಂದ ಎಂಟುಗಂಟೆ ತನಕ ಶ್ರೀಮನ್ ಮಹಾರಾಜರವರು ಸಿಂಹಾಸನದ ಮೇಲೆ ಬಿಜಮಾಡುವುದು, ಜೆಟ್ಟಿಕಾಳಗ ಪಟ್ಟುವರಿಸೆ ಮೊದಲಾದ ವಿನೋದಗಳು ನಡೆವುದು, ಸೈನಿಕರ ಮತ್ತು ಸಿಪಾಯಿಗಳ ಸಾಹಸ ಮತ್ತು ಚಮತ್ಕಾರ ಕಾರ್ಯಗಳು ನಡೆವುದು, ದಿನಸಾವರಿ ಬಾಣಬಿರಸುಗಳು ಹಾರಿಸುವುದು, ನಡದು ಮುಬರೆ ಅದಮೇಲೆ ಶ್ರೀಮನ್ ಮಹಾರಾಜರವರು ದರ್ಬಾರನ್ನು ಮುಕ್ತಾಯಕ್ಕೆ ತರುವುದು—ಈ ಮುಂತಾದ್ದೆಲ್ಲಾ ಯಥಾಕ್ರಮವಂತೆ ನೆರವೇರಿದವು. ನೆನ್ನೆ ಬೆಳಿಗ್ಗೆ ತುಲಾ ಲಗ್ನದಲ್ಲಿ ಆನೆ ಕುದುರೆಗಳೂ ಆಯುಧಗಳೂ ಮರ್ಯಾದಾ ಪೂರ್ವಕವಾಗಿ ಕೆರೆ ಬಳಿಗೆ ಬಿಜಮಾಡಿದವು. ಅನಂತರ ಆಯುಧ ಗಜಾಶ್ವಾದಿಗಳ ಪೂಜೆಯೂ, ಸಾಯಂಕಾಲ ಏಳುಗಂಟೆಗೆ ಇಂಗ್ಲಿಷ್ ದರ್ಬಾರೂ ನೆರವೇರಿದವು. ಮೈಸೂರು ಸಂಸ್ಥಾನದ ರೆಸಿಡೆಂಟರೇ ಮೊದಲಾದ ಯೂರೋಪಿಯನ್ ಸರ್ದಾರರು ದರ್ಬಾರಿಗೆ ದಯಮಾಡಿದ್ದರು. ಬಹು ಬಗೆ ವಿಚಿತ್ರವಾದ ಬಾಣ ಬಿರಸುಗಳು ಹಾರಿಸಲ್ಪಟ್ಟವು. ಈ ದಿನ ವಿಜಯದಶಮಿಯಾದ್ದರಿಂದ ಬೆಳಿಗ್ಗೆ ಕನ್ಯಾಲಗ್ನದಲ್ಲಿ ಆಯುಧ ಗಜಾಶ್ವಗಳು ಮೆರವಣಿಗೆಯಾಗಿ ಬನ್ನೀಮಂಟಪಕ್ಕೆ ಬಿಜಮಾಡುವವು. ನಂತರ ಜಗನ್ಮೋಹನ ಬಂಗ್ಲೆಯಲ್ಲಿ ಪಟ್ಟೇಕಾಳಗವಾಗುವದು. ಸಾಯಂಕಾಲ ೪ ಗಂಟೆಗೆ ಶ್ರೀಮನ್ ಮಹಾರಾಜರವರು ದಿವ್ಯಾಲಂಕಾರಯುತರಾಗಿ ಸಕಲ ಮರ್ಯಾದೆಗಳೊಡನೆ ಜಂಬೂಸವಾರಿ ಹೊರಟು ಬನ್ನೀಮಂಟಪಕ್ಕೆ ದಯಮಾಡಿ, ಇಂಪೀರಿಯಲ್ ಸೈನ್ಯದವರು ನಡೆಸುವ ಕವಾತು ಮುಂತಾದ್ದನ್ನು ಪರಾಂಬರಿಸಿ, ವಾಪಸು ಮೆರವಣಿಗೆಯಲ್ಲಿ ಜಗನ್ಮೋಹನ ಬಂಗಲೆಗೆ ಬಂದು ಕಲಪುವವರಾಗಿದ್ದಾರೆ.

## ಮೈಸೂರು ಗೆಜೆಟ್ ಸಂಗ್ರಹ.

ತುಂಕೂರ್ ಮುನ್ಸಿಫ್ ಮಿ॥ ಎಸ್. ಶೇಷಗಿರಿ ರಾಯರಿಗೆ ಆರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಕೃಷ್ಣರಾಜಪೇಟೆ ಡೆಪ್ಟಿ ಅಮಲ್ದಾರ್ ಮಿ॥ ಕೆ. ಹನುಮಂತರಾಯರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಡೆಪ್ಟಿ ಕಮಿಷನರ್ ಮಿ॥ ಬಿ. ಕೆ. ವೆಂಕಟವರದೈಯಂಗಾರ್ರಿಗೆ ಕೊಟ್ಟಿದ್ದ ಮೂರು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ತಿಂಗಳು ಹದಿಮೂರು ದಿನಗಳು ಜಾಸ್ತಿಮಾಡಿದೆ

ಮಿ॥ ಟಿ. ಗೋಪಾಲಕೃಷ್ಣನವರನ್ನು ಥರ್ಡ್ ಕ್ಲಾಸ್ ಅಸಿಸ್ಟೆಂಟ್ ಕಮಿಷನರಾಗಿ ಖಾಯಂ ಮಾಡಲ್ಪಟ್ಟಿದೆ.

ಮುಂದೆ ಹೇಳುವ ಅಮಲ್ದಾರರುಗಳ ಬತ್ತಿಗಳು ತಾತ್ಕಾಲಿಕವಾಗಿದೆ—ಮಿ॥ ಗಳಾದ ಪಿ. ರಂಗರಾಯರು, ಬಿ. ಎಸ್. ವೆಂಕಟೇಶಯ್ಯನವರು, ಸಿ. ವೆಂಕಟರಾಯರು—ಇವರಿಗೆ ಅಮಲ್ದಾರಿ ಖಾಯಂ ಮಾಡಿದೆ; ಮಿ॥ ಗಳಾದ ಕೆ. ಅನುಮಂತರಾಯರು, ಗುಲಾಂ ಮಹಮದ್ ಮೊಕ್ರಿ ಯವರು—ಇವರಿಗೆ ಡೆಪ್ಟಿ ಅಮಲ್ದಾರಿಯಿಂದ ಅಮಲ್ದಾರರಾಗಿ ಕೆಲಸ ನೋಡುವಂತೆ ಹಂಗಾಮಿ ಬಡ್ತಿ ಕೊಟ್ಟಿದೆ.

ಅ. ಕಮಿಷನರ್ ಮಿ॥ ಸಿ. ನಾರಾಯಣ ರಾಯರು ಇತರ ಕೆಲಸದ ಮೇಲೆ ಇರುವತನಕ ಮುನ್ಸಿಫ್ ಮಿ॥ ಜೋಲ್ಸ್ ಯವರು ಶಿವಮೊಗ್ಗೆಯ ಡಿಸ್ಟ್ರಿಕ್ಟ್ ಟ್ರೆಜರಿ ಭಾರವನ್ನೂ ವಹಿಸತಕ್ಕದ್ದು

ಮೈಸೂರು ಅರಮನೆ ಡಿವಿಜನ್ ಸಬ್ ಅ. ಇಂಜನಿಯರ್ ಮಿ॥ ಎ. ರಂಗಾಚಾರ್‍ರಿಗೆ ಒಂದು ತಿಂಗಳ ಕಾಯಿಲೇ ರಜಾ ಕೊಟ್ಟಿದೆ.

ಮಿ॥ ಆರ್. ಜೋಶೀ ಯವರನ್ನು ಗಣಿಗಳ ಇನ್ಸ್ಪೆಕ್ಟರಾಗಿ ನೇಮಿಸಿದೆ. ಇವರು ಛೀಫ್ ಇನ್ಸ್ಪೆಕ್ಟರ ಕೈಕೆಳಗೆ ಕೆಲಸಮಾಡತಕ್ಕದ್ದು.

ಮೈಸೂರು ಸ್ಟೇಟ್ ಸೈನ್ಯಗಳ ಛೀಫ್ ಕಮ್ಯಾಂಡೆಂಟರ ಅಸಿಸ್ಟೆಂಟ್ ಮಿ॥ ಆರ್. ಪುಟ್ಟಣ್ಣನವರಿಗೆ ನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

## ಮೈಸೂರು ಸರ್ಕಾರದ ಹುಕುಮುಗಳು.

### ವಿದ್ವತ್ ಪರೀಕ್ಷೆಗಳು.

ಮೈಸೂರು ಮಹಾರಾಜರವರ ಸಂಸ್ಕೃತ ಕಾಲೇಜಿನಲ್ಲಿ ವರುಷೇ ವರುಷ ಸಂಸ್ಕೃತದಲ್ಲಿ ವಿದ್ವತ್ ಪರೀಕ್ಷೆಗಳು ನಡೆವುದೂ, ಅವುಗಳಲ್ಲಿ ತೇರ್ಗಡೆ ಹೊಂದುವ ಪಂಡಿತರಿಗೆಲ್ಲಾ ಯೋಗ್ಯತಾನುಸಾರ ಮಹಾರಾಜರವರೇ ಬಹುಮಾನಗಳನ್ನು ದಯಪಾಲಿಸುವುದೂ ಪ್ರಸಿದ್ಧವಾಗಿದೆ. ಈ ಪರೀಕ್ಷೆಗಳು ಬಹು ಕಠಿಣವಾದವು ತರ್ಕ, ನ್ಯಾಯ, ಮೀಮಾಂಸ, ವೇದಾಂತ, ಇವೇ ಮೊದಲಾದ ಶಾಸ್ತ್ರಗಳಲ್ಲಿ ಪರೀಕ್ಷೆಗಳು ನಡೆಯುತ್ತವೆ. ತೇರ್ಗಡೆ ಹೊಂದಿದ ಪಂಡಿತರನ್ನು ಮಹಾ ಗಟ್ಟಿಗರೆಂದು ಹಿಂದುಸ್ಥಾನದವರೆಲ್ಲಾ ಒಪ್ಪಿ ಸನ್ಮಾನ ಮಾಡುತ್ತಾರೆ. ಇಂಥಾ ಪರೀಕ್ಷೆಗಳನ್ನು ನಡಸುವವರೂ, ನಡಸತಕ್ಕ ಕ್ರಮಗಳೂ ಸರ್ವಶ್ರೇಷ್ಠವಾಗಿಯೂ, ಸರ್ವಸಮರ್ಪಕವಾಗಿಯೂ ಇರಬೇಕು. ಇದಕ್ಕಾಗಿ ಮೈಸೂರು ಗೌವರ್ನಮೆಂಟಿನವರು ಒಂದು ಕಮಿಟಿಯನ್ನು ಏರ್ಪಡಿಸಿರುತ್ತಾರೆ. ಈ ಕಮಿಟಿಯ ಮೆಂಬರುಗಳು ಸಭೆಸೇರಿ, ಕಲ್ಕತ್ತ, ಬರೋಡ, ಮೊದಲಾದ ಕಡೆಗಳಿಂದ ಇಂಥಾ ವಿದ್ವತ್ ಪರೀಕ್ಷೆಗಳ ಕ್ರಮ ಮುಂತಾದ್ದನ್ನು ತರಿಸಿಕೊಂಡು, ಅವುಗಳಂತೆ ಹೊಸಕ್ರಮವನ್ನು ಮಾಡಿಟ್ಟುಕೊಂಡು, ಅದರಂತೆ ಆಚರಣೆಯಲ್ಲಿ ತರಬೇಕು. ಈ ಕಮಿಟಿಯ ಮೆಂಬರುಗಳ್ಯಾರೆಂದರೆ —ಪ್ರೆಸಿಡೆಂಟ್ ಮ॥ ವಿ. ಪಿ. ನರಸಿಂಹಯ್ಯಂಗಾರು (ಅರಮನೆ ಕಂಟ್ರೋಲರವರು), ಸೆಕ್ರೆಟರಿ ಮ॥ ಎ. ಮಹದೇವಶಾಸ್ತ್ರಿಯವರು (ಮಹಾರಾಜಾ ಸಂಸ್ಕೃತ ಕಾಲೇಜ್ ಕಮಿಟಿ ಸೆಕ್ರೆಟರಿಯವರು) ಧರ್ಮಾಧಿಕಾರಿ ಕಾಂತಕೋಟಂ ಶೇಷಾಚಾರ್ರು, ಧರ್ಮಾಧಿಕಾರಿ ಸುಂದರಶಾಸ್ತ್ರಿಗಳು, ಪಂಡಿತರತ್ನಂ ಕಸ್ತೂರಿ ರಂಗಾಚಾರ್ರು (ಮಹಾರಾಜಾ ಸಂಸ್ಕೃತ ಕಾಲೇಜ್ ಪಂಡಿತರು), ಪಂಡಿತ ವಿಶ್ವೇಶ್ವರ ಶಾಸ್ತ್ರಿಗಳು (ಬೆಂಗಳೂರು ಸೆಂಟ್ರಲ್ ಕಾಲೇಜಿನ ಪಂಡಿತರು), ಪಂಡಿತ ಸ್ಥಾನೀಕಂ ಕೃಷ್ಣಯ್ಯಂಗಾರು (ಮೇಲ್ಕೋಟೆ ಸಂಸ್ಕೃತ ಕಾಲೇಜ್ ಹೆಡ್ ಮಾಸ್ಟರು), ಪಂಡಿತ ನಾಮಗೊಂಡ್ಲು ಶಾಮಾಚಾರ್ರು (ಮಹಾರಾಜಾ ಸಂಸ್ಕೃತ ಕಾಲೇಜ್ ಪಂಡಿತರು), ಮ॥ ಆರ್. ನರಸಿಂಹಾಚಾರ್ರು (ಲಿಪ್ಯನ್ವೇಷಣ ಇಲಾಖಾ ಡೈರೆಕ್ಟರ ಅಸಿಸ್ಟೆಂಟರು), ಮ॥ ಎಸ್. ವೆಂಕಟರಾಮಶಾಸ್ತ್ರಿಗಳು (ಹಾಲಿ ಬೆಂಗಳೂರು ಸಂಸ್ಕೃತ ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವವರು) ಮ॥ ಜಿ. ಕಸ್ತೂರಿ ರಂಗೈಯಂಗಾರು (ಮಹಾರಾಜಾ ಕಾಲೇಜ್ ಲೆಕ್ಚರರ್) ಇವರು ಕಮಿಟಿ ಮೀಟಿಂಗ್ [illegible] ಪ್ರಯಾಣ ಮಾಡಬೇಕಾದ ಸಂದರ್ಭದಲ್ಲಿ ಸರ್ಕಾರದವರು ಅವರ ಪ್ರಯಾಣದ ಖರ್ಚನ್ನು ಮೈಸೂರು ಮಹಾರಾಜರವರ ಸಂಸ್ಕೃತ ಕಾಲೇಜಿನ ಫಂಡಿನಿಂದ ಪಾವತಿ ಮಾಡತಕ್ಕದ್ದು.

### ಮಾವಿನ ಕೆರೆಯ ಶ್ರೀ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಸ್ಥಾನ.

ಕಡೂರು ಡಿಸ್ಟ್ರಿಕ್ಟ್ ಕಳಸದಿಂದ ೩—೪ ಮೈಲಿ ದೂರದಲ್ಲಿ ಕಳಸ—ಬಾಳೆಹೊನ್ನೂರು ರಸ್ತೆಯಲ್ಲಿ ಭದ್ರಾ ನದಿಯ ಬಳಿ ಇರುವ ಶ್ರೀ ಕಳಶೇಶ್ವರ ಸ್ವಾಮಿ ದೇವಸ್ಥಾನಕ್ಕೆ ಇನಾಮತಿ ಗ್ರಾಮವಾದ ಮಾವಿನ ಕೆರೆಯಲ್ಲಿ ಹುಳುವಳ್ಳಿ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಸ್ಥಾನವಿರುವುದು. ಇಲ್ಲಿ ನಡೆವ ಮಹೋತ್ಸವಕ್ಕೆ ಸಾವಿರಾರು ಜನರು ಕೂಡುತ್ತಾರೆ. ನದಿಯಲ್ಲಿ ಪ್ರವಾಹ ಹೆಚ್ಚಾಗಲೂ ಅನೇಕ ಪ್ರಜೆಗಳು ಅಲ್ಲಿ ಹೋಗಿ ನಿಲ್ಲುವುದು ವಾಡಿಕೆ. ಇದನ್ನೆಲ್ಲಾ ನೋಡಿ ಗೌವರ್ನಮೆಂಟಿನವರು ಕಳಸದ ದೇವಸ್ಥಾನದ ಫಂಡಿನಿಂದ [illegible]೦ ರೂಪಾಯಿ ಸ್ಯಾಂಕ್ಷನ್ ಮಾಡಿ, ಈ ದೇವಸ್ಥಾನವನ್ನು ಬಹಾಯಿಸಿ ಸ್ಥಳವಸತಿಯಾಗುವಂತೆ ಕಾಮಗಾರಿ ಮಾಡಿಸಿರುತ್ತಾರೆ.

ಈ ದೇವಸ್ಥಾನಕ್ಕೆ ವರ್ಷಕ್ಕೆ ೧೨ ರೂಪಾಯಿ ತಸ್ತೀಕು ಇರುವುದು. ಡೆಪ್ಯುಟಿ ಕಮಿಷನರು ಇನ್ನೂ ೧೪೦ ರೂಪಾಯಿ ಜಾಸ್ತಿ ಸ್ಯಾಂಕ್ಷನ್ ಮಾಡಿಕೊಡಬೇಕೆಂದು ಶಿಫಾರಸು ನಡಸುತ್ತಾರೆ. ಅವರು ಸೂಚಿಸುವ ಖರ್ಚು ಬಾಬು ಯಾವವೆಂದರೆ —

| | |
|---|---|
| ಅರ್ಚಕನ ಸಂಬಳ ತಿಂಗಳಿಗೆ ೩ ರೂ. ಸಂತೆ.ರೂ. | ೩೬ |
| ದೇವಸ್ಥಾನದ ಪಡಿತರಕ್ಕೆ. | ,, ೧೮ |
| ರಥೋತ್ಸವದಲ್ಲಿ ೫೦೦ ಜನರಿಗೆ ಸಂತರ್ಪಣೆಗೆ | ,, ೫೦ |
| ನಂದಾ ದೀಪಕ್ಕೆ | ,, ೨೪ |
| ತಂತ್ರಿಕಾದಿಗಳಿಗೆ | ,, ೧೨ |
| ಜುಮ್ಲಾ ರೂ. | ೧೪೦ |

ಮೇಲ್ಕಂಡ ಸಂಗತಿಗಳನ್ನು ನೋಡಲಾಗಿ ಗೌವರ್ನಮೆಂಟಿನವರು ಕಳಸದ ದೇವಸ್ಥಾನದ ಫಂಡಿನಿಂದ ಈ ದೇವಸ್ಥಾನಕ್ಕೆ ಸ್ವಲ್ಪ ಹಣ ಸ್ಯಾಂಕ್ಷನ್ ಮಾಡಬೇಕೆಂದು ಒಪ್ಪುತ್ತಾರೆ. ಆದರೆ ೧೪೦ ರೂಪಾಯಿ ತುಂಬಾ ಹೆಚ್ಚು. ಆದ್ದರಿಂದ ೧೯೦೩ನೇ ಸೆಪ್ಟೆಂಬರ್ ೧ರಿಂದ ಜಾರಿಯಲ್ಲಿ ಬರುವಂತೆ ಸರ್ಕಾರದವರು ಕೊಡುವ ಹುಕುಂ ಏನೆಂದರೆ.—

| | |
|---|---|
| ಅರ್ಚಕನ ಸಂಬಳ ೩ ರೂ. ಸಂತೆ. | ರೂ. ೩೬ |
| ಪಡಿತರ. | ,, ೧೮ |
| ಜುಮ್ಲಾ ರೂ. | ೫೪ |

ಈಗ ಸಲ್ಲುತ್ತಿರುವ ೧೨ ರೂಪಾಯಿಗಳನ್ನು ವಿನಿಯೋಗಿಸಿ ಅದರಿಂದಲೇ ನಂದಾದೀಪವನ್ನು ಇಡಿಸಬೇಕು. ಅವಶ್ಯವಿದ್ದರೆ ಗವರ್ನಮೆಂಟಿನವರ ಸ್ಯಾಂಕ್ಷನ್ ಪಡೆದು ದೇವಸ್ಥಾನದಲ್ಲಿ ಒಂದು ಗೋಲಕವನ್ನಿಟ್ಟು ಭಕ್ತಾದಿಗಳಿಂದ ಕಾಣಿಕೆಗಳನ್ನು ಕೂಡಿಸಿ, ಈ ಹಣದಲ್ಲಿ ಬೇಕಾದರೆ ರಥೋತ್ಸವ ಕಾಲ್ಲಿ ಸಮಾರಾಧನೆ ಮಾಡಿಸಿಕೊಳ್ಳಬಹುದು. ಮೇಲ್ಕಂಡ ೫೪ ರೂಪಾಯಿಗಳನ್ನು ಕಳಸದ ದೇವಸ್ಥಾನದ ಫಂಡಿನಿಂದ ಪಾವತಿ ಮಾಡತಕ್ಕದ್ದು. ಕಳಸದ ದೇವಸ್ಥಾನದ ಪೇಷ್ಕಾರರು ಆಗಾಗ್ಯೆ ಶ್ರೀ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಸ್ಥಾನಕ್ಕೆ ಹೋಗುತ್ತಾ, ಅಲ್ಲಿ ಪೂಜೆ ಪುನಸ್ಕಾರಾದಿಗಳು ಲೋಪವಿಲ್ಲದೆ ನಡೆಯುವ ಭಾಗವನ್ನು ತನಿಖೆ ಮಾಡುತ್ತಾ ಬರತಕ್ಕದ್ದು

## ಬ್ರಿಟಿಷ್ ರಾಜ್ಯಭಾರದಲ್ಲಿ ನೇಮಿಸಲ್ಪಟ್ಟಿರುವ ಹೊಸ ಮಂತ್ರಿಗಳು.

ಮ॥ ಚೇಂಬರ್ಲೇನರೇ ಮೊದಲಾದ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟರೆಂದು ಕಳೆದ ವಾರ ತಿಳಿಸಿದೆವಷ್ಟೆ. ಇವರಿಗೆ ಬದಲಾಗಿ ಇಂಗ್ಲೆಂಡಿನ ಮಹಾರಾಜರವರು ಮ॥ ಆಸ್ಟಿನ್ ಚೇಂಬರ್ಲೇನರನ್ನು ಖಜಾನಾ ಛಾನ್ಸಲರಾಗಿ ನೇಮಿಸಿದ್ದಾರೆಂದು ವಿಶ್ವಸ್ತವಾಗಿ ಗೊತ್ತಾಗಿದೆ. ಲಾರ್ಡ್ ಸೆಲ್ಬೋರ್ನ್ ಯವರನ್ನು ಕಲೋನಿಯಲ್ ಸೆಕ್ರೆಟರಿಯಾಗಿಯೂ, ಮ॥ ಆರ್ನಾಲ್ಡ್ ಫಾರ್ಸ್ಟರ್ ಯವರನ್ನು ಯುದ್ಧವಿಷಯವಾದ ಸೆಕ್ರೆಟರಿಯಾಗಿಯೂ, ಮ॥ ಬ್ರಾಡ್ರಿಕ್ ಯವರನ್ನು ಇಂಡಿಯಾ ಸೆಕ್ರೆಟರಿಯಾಗಿಯೂ, ಮ॥ ಸ್ಟಾನ್ಲಿಯವರನ್ನು ಪೋಸ್ಟ್ ಮಾಸ್ಟರ್ ಜನರಲಾಗಿಯೂ ನೇಮಿಸಿದ್ದಾರೆಂತಲೂ ಪ್ರವಾದವಿದೆ.

## ಹತ್ತೀ ಬೀಜದ ಉಪಯೋಗ.

ಅಮೇರಿಕ ಮೊದಲಾದ ದೇಶಗಳಲ್ಲಿ ಈ ಬೀಜವನ್ನು ಸುಮ್ಮನೆ ಬಿಸಾಡದೆ ಅದನ್ನು ಗಾಣಕ್ಕೆ ಕೊಟ್ಟು ಎಣ್ಣೆ ಮಾಡಿಕೊಳ್ಳುವದು, ಅದರ ಹಿಂಡಿಯನ್ನು ಗೊಬ್ಬರವಾಗಿ ಉಪಯೋಗಿಸಿಕೊಳ್ಳುವದು ಈ ಮುಂತಾದ ಕೆಲಸಕ್ಕೆ ಬರುತ್ತದೆಂದು ಮೊದಲೇ ತಿಳಿಸಿದ್ದೆವಷ್ಟೆ. ಈ ವಿಷಯದಲ್ಲಿ ಉತ್ತರ ಇಂಡಿಯದ ವ್ಯಾಪಾರದ ಸಮಾಜದವರು, ಲಕ್ನೋ ಪಟ್ಟಣದಲ್ಲಿ ಹತ್ತೀ ಬೀಜವನ್ನು ಗಾಣವಾಡುವ ಒಂದು ಕಾರ್ಖಾನೆಯನ್ನು ಸ್ಥಾಪಿಸುವದು ಅವಶ್ಯವೆಂದು ತಿಳಿದು, ಇದಕ್ಕೋಸ್ಕರ ಬೇಕಾಗಿರುವ ಗಾಣದ ಸಾಮಾನುಗಳನ್ನು ಸರ್ಕಾರದವರು ಅಮೇರಿಕದಿಂದ ತರಿಸಿಕೊಟ್ಟು ಸಹಾಯ ಮಾಡಬೇಕೆಂಬುದಾಗಿ ಸರ್ಕಾರಕ್ಕೆ ಮನವಿ ಮಾಡಿಕೊಂಡರು. ಎಣ್ಣೆ ಬೀಜಗಳನ್ನು ಈ ದೇಶದಿಂದ ಬೇರೆ ದೇಶಗಳಿಗೆ ಕಳುಹಿಸಲ್ಪಡುವದರಿಂದ ಸ್ವದೇಶಕ್ಕೆ ಬಹಳ ನಷ್ಟವಾಗುತ್ತದೆಯಾದಕಾರಣ ಇಲ್ಲಿಯೇ ಅವುಗಳನ್ನು ವಿನಿಯೋಗಿಸಿಕೊಳ್ಳಬೇಕೆಂದು ಅಭಿಪ್ರಾಯ ಪಡುತ್ತಾರೆ. ಕಳೆದ ನಾಲ್ಕು ವರ್ಷಗಳೊಳಗೆ ಇಲ್ಲಿಂದ ರಫ್ತಾದ ಹತ್ತೀ ಬೀಜದ ಬೆಲೆಯು ೭೬,೦೦೦ ರೂ. ಯಿಂದ ೧ ಕೋಟಿಯ ವರಿವಿಗೆ ಹೆಚ್ಚಿರುತ್ತದೆ. ವ್ಯವಸಾಯಾಭಿವೃದ್ಧಿಯ ಇನ್ಸ್ಪೆಕ್ಟರ್ ಜನರಲ್‌ರವರು ಮೇಲ್ಕಂಡ ಸಾಮಾಜಿಕರ ಅಭಿಪ್ರಾಯವನ್ನು ಅನುಮೋದಿಸದೆ ಪರೀಕ್ಷಾರ್ಥವಾಗಿ ಅಮೇರಿಕ ದೇಶದ ಒಂದು ಕಾರ್ಖಾನೆಗೆ ಇಲ್ಲಿಂದ ಸ್ವಲ್ಪ ಸ್ವಲ್ಪ ಹತ್ತೀ ಬೀಜಗಳನ್ನು ಕಳುಹಿಸಿಕೊಡುತ್ತಾ ಬರುತ್ತಿರುವದು ಈ ದೇಶಕ್ಕೆ ಶ್ರೇಯಸ್ಕರವಾದದ್ದಲ್ಲವೆಂದೂ ಆ ಸಮಾಜಿಕರು ಮೊರೆಯಿಡುವವರಾಗಿದ್ದಾರೆ.

## ದ್ರವ್ಯ ವಿನಿಯೋಗ.

ಅಮೇರಿಕ ದೇಶದ ಸಂಯುಕ್ತ ಸಂಸ್ಥಾನಗಳಲ್ಲಿ ನ್ಯೂಯಾರ್ಕ್ ಪಟ್ಟಣದ ಒಬ್ಬ ದೊಡ್ಡ ಸಾಹುಕಾರನು ೫ ಲಕ್ಷ ಪೌನುಗಳನ್ನು ಆ ದೇಶದಲ್ಲಿ ವೃತ್ತಾಂತ ಪತ್ರಿಕೆಗಳ ನಡಸುವದರ ವಿಷಯಕವಾದ ಮಾರ್ಗಗಳನ್ನು ಬೋಧಿಸುವ ಸ್ಕೂಲನ್ನು ಸ್ಥಾಪಿಸುವದಕ್ಕೆ ದಾನಮಾಡಿದ್ದಾನೆ. ಇದೇ ಪ್ರಕಾರ ನಮ್ಮ ಇಂಡಿಯಾ ದೇಶದಲ್ಲಿಯೂ ದೇಶಾಭಿಮಾನಿಗಳಾದ ಸಾಹುಕಾರರ್‍ಯಾರಾದರೂ ಪ್ರಯತ್ನಪಟ್ಟರೆ ಎಷ್ಟು ಪ್ರಯೋಜನವಾಗಿರುವದು! ಈ ದೇಶೀಯರು ವೃತ್ತಾಂತ ಪತ್ರಿಕೆಗಳ ಸ್ಥಾಪನೆಯು ದಿನೇದಿನೇ ಹೆಚ್ಚುತ್ತಾ ಬರುತ್ತಿವೆ. ಪತ್ರಿಕಾ ಕರ್ತರು ತಮಗೆ ತೋಚಿದ ಅಭಿಪ್ರಾಯಗಳನ್ನು ಬರೆಯುವ ವಿಷಯದಲ್ಲಿ ಬಹಳ ಸ್ವಾತಂತ್ರ್ಯವನ್ನು ಕೊಟ್ಟಿರುವದರಿಂದಲೂ ಬರವಣಿಗೆಯಲ್ಲಿ ದೇಶೀಯರು ಸಾಮಾನ್ಯವಾಗಿ ಬುದ್ಧಿವಂತರಾಗಿರುವದರಿಂದಲೂ ಪತ್ರಿಕಾ ಪ್ರಾಬಲ್ಯಕ್ಕೆ ಈ ದೇಶದಲ್ಲಿ ಬಹಳ ಪ್ರಶಸ್ತಿಯಿದೆ. ಇದನ್ನು ತಿಳಿದು ಅನೇಕ ದೇಶೀಯ ಪತ್ರಿಕಾರರು ಇದ್ದ ವಿಷಯಗಳನ್ನು ಬಹಳವಾಗಿ ಉತ್ಪ್ರೇಕ್ಷಿಸಿ ಬರೆಯುವುದುಂಟು. ಇವರು ಪ್ರಕಟಿಸುವ ವರ್ತಮಾನಗಳನ್ನು ನೋಡಿದರೆ, ನಾಗರಿಕರಾದ ಜನಗಳಿರುವ ದೇಶಗಳಲ್ಲಿ ಇವರನ್ನು ನ್ಯಾಯಸ್ಥಾನಕ್ಕೆ ಎಳದುಕೊಂಡು ಹೋಗುವಷ್ಟು ವಿರೋಧವಾಗಿರುವವು. ರಾಜ್ಯವಾಳುವ ಪರದೇಶೀಯರಾದ ಇಂಗ್ಲಿಷರಿಗೂ ದೇಶೀಯರಿಗೂ ಸ್ವಭಾವವಾಗಿರುವ ವ್ಯತ್ಯಾಸವನ್ನು ಇವರು ಹಗೆತನವಾಗಿ ಮಾರ್ಪಡಿಸುವದಕ್ಕೆ ಅವಕಾಶವಾಗುವಂತೆ ಮಾಡಿಬಿಡುವರು. ಈ ವಿಧವಾದ ಪ್ರಬಲಕಾರಣಗಳಿರುವದರ ದೆಸೆಯಿಂದ ಈ ದೇಶದಲ್ಲಿ ವೃತ್ತಾಂತ ಪತ್ರಿಕೆಗಳನ್ನು ಬರೆಯುವ ರೀತಿಯನ್ನು ಬೋಧಿಸುವ ಪಾಠಶಾಲೆಗಳು ಬಹು ಅವಶ್ಯವಾಗಿವೆ ಎಂಬುವದಕ್ಕೆ ಸಂಶಯವಿಲ್ಲ. ಇದನ್ನು ದೇಶಾಭಿಮಾನಿಗಳು ಲಕ್ಷ್ಯಕ್ಕೆ ತರುವರೆಂದು ನಿರೀಕ್ಷಿಸಬೇಕಾಗಿದೆ.

## ಭೂಪ್ರದಕ್ಷಿಣವನ್ನು ಮಾಡಿಕೊಂಡು ಬರುತ್ತಲಿರುವ ಇಬ್ಬರು ಸಾಹಸವಂತರು.

ಕ್ಯೂಬಾ ದ್ವೀಪದ ಇಬ್ಬರು ಯೌವನಸ್ಥರು ಕಳೆದ ವರ್ಷಾಂತ್ಯಭಾಗದಲ್ಲಿ ತಮ್ಮ ಊರನ್ನು ಬಿಟ್ಟು ಕೈಯಲ್ಲಿ ಒಂದು ಕಾಸೂ ಇಲ್ಲದೆ ಭೂಲೋಕವನ್ನೇ ಸುತ್ತಿ ಸಂಚರಿಸಿಕೊಂಡು ಬರಬೇಕೆಂದು ಹೊರಟರು. ಆ ದೇಶದ ಹೆಚ್ಚು ವೃತ್ತಾಂತ ಪತ್ರಿಕೆಗಳಿಗೆ ರಿಪೋರ್ಟರುಗಳಾದ ಇವರು ಮೊದಲು ಸಂಯುಕ್ತ ಸಂಸ್ಥಾನಗಳಲ್ಲಿಯೂ ಕ್ಯಾನಡಾ ಸೀಮೆಯಲ್ಲಿಯೂ ಬೈಸಿಕಲಿನಮೇಲೆ ಸಂಚರಿಸಿ, ಅಲ್ಲಿಂದ ಒಂದು ಹಡಗಿನಲ್ಲಿ ಕೆಲಸ ಮಾಡುವದಕ್ಕೊಪ್ಪಿ ಹಡಗುಹತ್ತಿ ಇಂಗ್ಲೆಂಡಿನ ಲಿವರ್ಪೂಲ್ ನಗರವನ್ನು ಸೇರಿದರು. ತರುವಾಯ ಲಂಡನ್ ನಗರಕ್ಕೂ ಅಲ್ಲಿಂದ ಸ್ಪೇನ್‌ದೇಶದ ಮ್ಯಾಡ್ರಿಡ್ ರಾಜಧಾನಿಗೂ ಹೋದರು. ಅಲ್ಲಿ ಸ್ವಲ್ಪಕಾಲ ವಿಶ್ರಮಿಸಿಕೊಂಡಿದ್ದು ಫ್ರಾನ್ಸಿನ ರಾಜಧಾನಿಯಾದ ಪ್ಯಾರಿಸ್ ನಗರಕ್ಕೆ ಹೋದರು. ಹಾಗೆಯೇ ಜೆನೋವ, ರೋಮ್, ನೇಪಲ್ಸ್ ಮೊದಲಾದ ಸ್ಥಳಗಳನ್ನೆಲ್ಲಾ ನೋಡಿಕೊಂಡು, ಯಥಾಪ್ರಕಾರ ಒಂದು ಹಡಗಿನ ಮೇಲೆ ಕೆಲಸಮಾಡುತ್ತಾ ಕೊಲೊಂಬೊ ನಗರಕ್ಕೆ ಬಂದರು. ಅಲ್ಲಿಂದ ಚೀನ ದೇಶಕ್ಕೆ ಹೋಗಬೇಕೆಂದು ಮನಸ್ಸು ಮಾಡಿದರೂ ಯಾವ ಹಡಗೂ ದೊರಕದೆ ಹೋಗಲು ನಮ್ಮ ಇಂಡಿಯಾ ದೇಶದ ದಕ್ಷಿಣದಲ್ಲಿರುವ ತುತ್ತುಕುಡಿಯನ್ನು ಸೇರಿ ಅಲ್ಲಿಂದ ಮದ್ರಾಸಿಗೂ ಬಂದರು. ಈಗ ಅವರು ರಂಗೂನ್ ಪಟ್ಟಣಕ್ಕೆ ಹೋಗಿ ಅಲ್ಲಿಂದ ಸುತ್ತಿಕೊಂಡು ಸಿಂಗಪೂರಿಗೂ, ಫಿಲಿಪೈನ್ ದ್ವೀಪಗಳಿಗೂ ತರುವಾಯ ಸಂಯುಕ್ತ ಸಂಸ್ಥಾನಗಳಿಗೂ ಹೋಗಿ ಕಡೆಯಲ್ಲಿ ಸ್ವದೇಶವನ್ನು ಸೇರಬೇಕೆಂದಿದ್ದಾರೆ ಈ ಪ್ರಯಾಣವನ್ನೆಲ್ಲಾ ಮುಗಿಸುವಾಗ್ಯೆ ಈ ವರ್ಷವೆಲ್ಲಾ ಹಿಡಿಯಬಹುದೆಂದು ಅವರು ಆಲೋಚಿಸುತ್ತಾರೆ. ಇಷ್ಟು ದೀರ್ಘವಾದ ಪ್ರಯಾಣವನ್ನು ಕೈಗೊಂಡಿರುವ ಇವರಿಗೆ ಅನೇಕ ಸಂದರ್ಭಗಳಲ್ಲಿ ಅನೇಕ ಕಷ್ಟಗಳು ಬಂದಿರಬೇಕೆಂಬುವದಕ್ಕೆ ಸಂಶಯವಿಲ್ಲ. ಇವರು ವಾರವಾರವೂ ತಮ್ಮ ತಮ್ಮ ಪತ್ರಿಕೆಗೆ ತಮ್ಮ ಪ್ರಯಾಣದ ವೃತ್ತಾಂತವನ್ನು ಬರೆದು ಕಳುಹಿಸುತ್ತಿದ್ದಾರೆ.

## ಮದ್ರಾಸಿನ "ಹಿಂದೂ" ಪತ್ರಿಕೆಯ ೨೫ನೇ ವಾರ್ಷಿಕೋತ್ಸವವು.

ಮದ್ರಾಸಿನಲ್ಲಿ ಪ್ರಕಟವಾಗುತ್ತಿರುವ "ಹಿಂದೂ" ಎಂಬ ಪತ್ರಿಕೆಯನ್ನು ಪ್ರಾರಂಭಿಸಿ ಈಗ ೨೫ ವರ್ಷಗಳು ತುಂಬಿತು. ಈ ಅಪೂರ್ವವಾದ ವಿಷಯವನ್ನು ಯಥೋಚಿತವಾಗಿ ಸ್ಮರಿಸುವದಕ್ಕೋಸ್ಕರ ಆ ಪತ್ರಿಕೆಯ ಪ್ರೊಪ್ರೈಟರಾದ ಮ॥ ರಾ॥ ವಿಜಯರಾಘವಾಚಾರ್ಯರು ಕಳೆದ ೨೦ನೇ ತಾರೀಖಿನಲ್ಲಿ ಮದ್ರಾಸಿನ ದೊಡ್ಡ ದೊಡ್ಡ ಮನುಷ್ಯರನ್ನೆಲ್ಲಾ ತಮ್ಮ ಆಫೀಸಿಗೆ ಬರಮಾಡಿಕೊಂಡು ನಾನಾಬಗೆಯಾಗಿ ಉಪಚರಿಸಿದರು. ಆನರಬಲ್ ಆನಂದಾಚಾರ್ಲುಯವರು, ಆ ಪತ್ರಿಕೆಯ ಮೊದಲನೇ ಎಡಿಟರಾಗಿದ್ದ ಮ॥ ರಾ॥ ಸುಬ್ರಹ್ಮಣ್ಯ ಅಯ್ಯರವರು, ಇನ್ನೂ ಅನೇಕ ಇಂಗ್ಲಿಷ್ ಮತ್ತು ದೇಶೀಯ ದೊಡ್ಡಮನುಷ್ಯರು ದಯಮಾಡಿಸಿದ್ದರು. ಎಲ್ಲರೂ ಒಂದು ಗಂಟೆ ಹೊತ್ತಿನವರಿವಿಗೂ ಸಂಗೀತಾದಿ ವಿವಿಧ ಉಪಚಾರಗಳಿಂದ ಸತ್ಕರಿಸಲ್ಪಟ್ಟನಂತರ ಸಭಾಸ್ಥಾನಕ್ಕೆ ದಯಮಾಡಿಸಲು, ಪ್ರೊಪ್ರೈಟರಾದವರು ಆ ಪತ್ರಿಕೆಯು ಸ್ಥಾಪಿಸಲ್ಪಟ್ಟದ್ದು ಮೊದಲಾದ ವಿಷಯಗಳನ್ನು ಆದ್ಯಂತವಾಗಿ ತಿಳಿಸಿದರು. ಇದರಿಂದ ತಿಳಿಯಬರುವದೇನಂದರೆ—ಪತ್ರಿಕೆಯು ೧೮೭೮ನೇ ಇಸ್ವಿ ಸೆಪ್ಟೆಂಬರ್ ೨೦ನೇ ತಾರೀಖಿನಲ್ಲಿ ಆರಂಭವಾಯಿತು. ವಾರಕ್ಕೊಂದಾವರ್ತಿ ಪ್ರಕಟಿಸಲ್ಪಡುತ್ತಿದ್ದದ್ದು ೧೮೮೩ರಲ್ಲಿ ವಾರಕ್ಕೆ ಮೂರಾವರ್ತಿಯೂ ೧೮೮೯ನೇ ವರ್ಷದಲ್ಲಿ ದಿನದಿನವೂ ಪ್ರಕಟಿಸಲ್ಪಡುವಂತಾದ್ದಾಯಿತು. ಇದನ್ನು ಸ್ಥಾಪನೆ ಮಾಡಿದವರು ಐದು ಮಂದಿ. ಪತ್ರಿಕೆಯನ್ನು ಬಹಳ ಯಶಸ್ಸಿಗೆ ತಂದವರು ಅದರ ಮೊದಲನೇ ಎಡಿಟರವರೇ. ಇವರು ೧೮೯೮ರ ವರಿವಿಗೂ ಎಡಿಟರಾಗಿದ್ದು ಬಿಟ್ಟುಬಿಟ್ಟರು. ಈ ಪ್ರಕಾರ ಮ॥ ರಾ॥ ವಿಜಯರಾಘವಾಚಾರ್ಯರು ಪತ್ರಿಕೆಯ ಪೂರ್ವೋತ್ತರವನ್ನು ತಿಳಿಸಿದಮೇಲೆ ನೆಂಟುಬಂದಿದ್ದ ಅತಿಥಿಗಳ ಪಕ್ಷವಾಗಿ ಮಿ॥ ಗ್ರಹಾಮ್ ಸಾಹೇಬರು ಪ್ರೊಪ್ರೈಟರನ್ನು ವಂದಿಸಿ ಆ ಪತ್ರಿಕೆಯು ಚಿರಸ್ಥಾಯಿಯಾಗಿರಬೇಕೆಂದು ಬಯಸಿದರು. ತರುವಾಯ ಆನರಬಲ್ ಆನಂದಾಚಾರ್ಲುಯವರೂ, ಮ॥ ರಾ॥ ಸುಬ್ರಹ್ಮಣ್ಯ ಅಯ್ಯರವರೂ ಯಥೋಚಿತವಾಗಿ ಕೆಲವು ಮಾತುಗಳನ್ನು ಹೇಳಿದರು. ಕಡೆಯಲ್ಲಿ ಮ॥ ರಾ॥ ವಿಜಯರಾಘವಾಚಾರ್ಯರು ಎಲ್ಲರನ್ನು ವಂದಿಸಿ ಕಳುಹಿಸಿ ಬೀಳ್ಕೊಟ್ಟರು.

## ಖಾತ್ರಿದಾರರಿಗೆ ನೋಟಿಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ಎಡೆ ಕೊಡಲಾರೆವು. ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ಕಳುಹಿಸತಕ್ಕದ್ದು. ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಎಡೆ ಕೊಡಲಾರೆವು.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಪ॥.

ಚಿತ್ರದುರ್ಗ —ನೀವು ಬರೆದಿರುವ ವಿಷಯವನ್ನು ಪ್ರಕಟಿಸಲಾರೆವು.

ನಿಖಿಲ ರೋಗಹಾರಿ.—ನೀವುಗಳು ಕಳುಹಿಸಿರುವ ವಿಷಯವನ್ನು ಪ್ರಕಟಿಸುವದಕ್ಕೆ ಚಾರ್ಜ್ ಕೊಟ್ಟರೆ ಆಗುತ್ತೆ.

ಕಲ್ಕಗಟ್ಟದ ಸಂಶಿಂಗಪ್ಪನವರು.—ಪ್ರಕಟಿಸುವದಕ್ಕೆ ಅರ್ಹವಾದ ವಿಷಯವಲ್ಲ.

ಪುರುಷೋತ್ತಮ [illegible].—ಪ್ರಕಟಿಸಲಾರೆವು.

## ಕರೆಸ್ಪಾಂಡೆನ್ಸ್.

### ಒಬ್ಬ ದೊಡ್ಡ ಮನುಷ್ಯರ ಮರಣ.

ಅಯ್ಯಾ,

ಈ ಗ್ರಾಮದಲ್ಲಿ ಭಾರೀ ಸಾಹುಕಾರರಾಗಿಯೂ, ಸುಮಾರು ೮೦—೯೦ ಸಾವಿರ ರೂಪಾಯಿ ಆದಾಯ ಪಡೆವವರಾಗಿಯೂ, ಗೌವರ್ನಮೆಂಟು ಮೆಂಬರಾಗಿಯೂ, ಈ ತಾಲ್ಲೂಕು [illegible] ಮೂರು ೩ ಹೋಬಳಿ ಪಟೇಲರುಗಳಿಗೆ ಸಮಾಯ [illegible]

ಹನಗೆಳಗಾದರೂ ಸಹಾಯಕರಾಗಿಯೂ, ಅನೇಕ ವಿಷಯದಲ್ಲಿ ಕಷ್ಟಗಳಿಗೆ ಭಾಗಿಗಳಾಗಿಯೂ ಇದ್ದ ಗುರುನಾಜ ಶೆಟ್ಟರು ಇದೇ ಮಾಹೆ ೧೭ನೇ ಭಾನುವಾರ ಶಿವಲೋಕಪ್ರಾಪ್ತಿಯನ್ನು ಕುರಿತು ಪ್ರಯಾಣ ಬೆಳೆಸಿಬಿಟ್ಟರು. ಇದಕ್ಕಾಗಿ ಎಲ್ಲರೂ ಅಪಾರವಾದ ದುಃಖ ಪಟ್ಟು ಮರುಗುತ್ತಿರುವರು. ಇಂಥಾ ಮಹನೀಯರಾಗಿಯೂ, ಧರ್ಮಾರ್ಥಕಾರ್ಯಗಳನ್ನು ತಿಳಿದವರಾಗಿಯೂ, ತಮ್ಮನ್ನು ನಂಬಿದವರ ಪೋಷಕರಾಗಿಯೂ ಇದ್ದವರು ಇನ್ನು ಕೆಲವು ಕಾಲ ಭೂಲೋಕದಲ್ಲಿ ಇದ್ದರೆ ಎಷ್ಟೋ ಪ್ರಯೋಜನವಾಗುತ್ತಿತ್ತು. ಲಭ್ಯವಿಲ್ಲವೆಂದು ಸಕಲರೂ ಶೋಕಿಸುವರು. ಶವವನ್ನು ಆ ದಿವಸವೇ ಚಿತ್ರ ಮಂಟಪದಿಂದಲಂಕರಿಸಿ ಅನೇಕ ವಾದ್ಯಘೋಷಗಳಿಂದ ಮಹದುತ್ಸವದೊಡನೆ ತೆಗೆದುಕೊಂಡು ಹೋದರು. ಆ ಕಾಲದಲ್ಲಿ ಸುಮಾರು ೩,೦೦೦ ಜನರವರೆಗೂ ಸೇರಿದ್ದರು. ಆ ಚಿತ್ರಮಂಟಪದಲ್ಲಿ ಶವವನ್ನು ಅಲಂಕರಿಸಿದ್ದ ಅಲಂಕಾರ ವೈಭವವನ್ನು ನೋಡುತ್ತಿದ್ದರೆ ಕಲ್ಯಾಣ ಮಹೋತ್ಸವವೋ ಎಂಬುವಂತೆ ತೋರುತ್ತಿತ್ತು.

ಹೆಚ್. ಅಶ್ವತ್ಥನಾರಾಯಣಯ್ಯ.

---

ಮಹಮ್ಮದೀಯರ ರೋದನ.

ಅಯ್ಯಾ,

ಈ ಬಂಗಳೂರು ಟವನ್ನಿನಲ್ಲಿ ೫೦೦೦ ಮನೆಗಳು ಮುಸಲ್ಮಾನರವು ಇರುತ್ತವೆ. ೭೦೦ಕ್ಕೆ ಮೇಲ್ಪಟ್ಟ ಬಾಲಕರಿರುತ್ತಾರೆ. ಹಿಂದೂಸ್ಥಾನಿ ಸ್ಕೂಲ್ ಇಲ್ಲದ್ದರಿಂದ ಕ್ರಮೇಣ ಹಿಂದೂಸ್ಥಾನಿ ಭಾಷೆಯೇ ಕಾಣೆಯಾಗುತ್ತಾ ಬಂದಿದೆ. ಪರ ಊರಿನಿಂದ ಒಂದು ಕಾಗದ ಬಂದರೆ ಅದನ್ನು ಓದಿಸಿ ತಿಳುಕೊಳ್ಳುವುದಕ್ಕೂ ಕೂಡ ಸಾಧ್ಯವಿಲ್ಲ. ಈ ರೋದನವನ್ನು ಹೋಗಲಾಡಿಸಿಕೊಳ್ಳಲು ಈ ಟವನ್ನಿನಲ್ಲಿ ಹಿಂದೂಸ್ಥಾನಿ ಸ್ಕೂಲನ್ನು ಸ್ಥಾಪಿಸಿ ಕೊಡಬೇಕೆಂಬದಾಗಿ ಡಿ|| ವಿದ್ಯಾ ಇಲಾಖೆ ಇನ್ಸ್‌ಪೆಕ್ಟರ್ ಸಾಹೇಬರವರಿಗೂ ಹಿಂದೂಸ್ಥಾನಿ ಸ್ಕೂಲ್‌ಗಳ ಡೆಪ್ಟಿ ಇನ್ಸ್‌ಪೆಕ್ಟರ್ ಸಾಹೇಬರವರಿಗೂ ಅರಿಕೆ ಮಾಡಿಕೊಳ್ಳಲಾಗಿ "ಸ್ಕೂಲನ್ನು ಮಾಡಿಕೊಡುತ್ತೇವೆ" ಎಂದು ಅಭಯವನ್ನು ಕೊಟ್ಟಿರುತ್ತಾರೆ. ಈ ವಿಷಯವನ್ನೇ ಕುರಿತು ಮ|| ಡೆಪ್ಟಿ ಕಮಿಷನರ್ ಸಾಹೇಬರವರಿಗೂ ಅರ್ಜಿ ಮಾಡಿಕೊಂಡಿದ್ದೇವೆ. ಈ ಪ್ರಕಾರ ೮ ೧೦ ವರುಷದ ಲಾಗಾಯಿತು ಸರ್ಕಾರದಲ್ಲಿ ನಮ್ಮ ದುರವಸ್ಥೆಯನ್ನು ಅರಿಕೆ ಮಾಡಿಕೊಂಡಾಗ್ಯೂ ಕನಿಕರಪಟ್ಟಿಲ್ಲದೆ ಇರುತ್ತಾರೆ. ೧೨೧೯ ಮನೆಗಳಿರುವ ಗ್ರಾಮಗಳಲ್ಲಿ ಕೂಡಾ ಹಿಂದೂಸ್ಥಾನಿ ಸ್ಕೂಲುಗಳನ್ನು ಇಟ್ಟಿದ್ದಾರೆ. ನಮ್ಮ ದುರದೃಷ್ಟದಿಂದ ಇದುವರಿಗೂ ಸ್ಕೂಲ್ ಆಗದೆ ಇರುವ ವ್ಯಸನವನ್ನು ಕುರಿತು ರೋದನ ಮಾಡುತ್ತಿರುವ ಈ ಬಡ ಮುಸಲ್ಮಾನರ ಕಡೆಗೆ ಸರ್ಕಾರದವರ ಪೂರ್ಣದೃಷ್ಟಿಯು ಎಂದಿಗೆ ಬಿದ್ದೀತೋ? ಎಂದಿಗೆ ಕನಿಕರ ಹುಟ್ಟೀತೋ? ಎಂದು ಕಾಲವನ್ನು ನಿರೀಕ್ಷಿಸುತ್ತಲಿರುವ ಮಹಮ್ಮದೀಯರ ಅಹವಾಲನ್ನು ನಿಮ್ಮ ವೃತ್ತಾಂತ ಪತ್ರಿಕೆಯಲ್ಲಿ ಬರೆಯಬೇಕೆಂದು ಬೇಡುವ

ಬಡೇಸಾಬಿ.

---

ಗಾಣದೆತ್ತಿನ ಹಿಂಸೆ.

ಅಯ್ಯಾ,

ಬಟ್ಟೆ ಒಂಟೆತ್ತಿನ ಭಂಡಿ, ಎರಡೆತ್ತಿನ ಭಂಡಿ, ಇವುಗಳನ್ನು ಎಳೆಯುವ ಕುದುರೆ ಎತ್ತುಗಳ ಕ್ರಮವು ಸರ್ಕಾರದವರು ನಿಗಾ ಇಟ್ಟು ಕ್ರಮ ಹೋಗಲಾಡಿಸಿ ಧರ್ಮ ಸಂಪಾದನೆ ಮಾಡುತ್ತಾ ಬರುತ್ತಾರೆ. ಆದರೆ ಸರ್ಕಾರದವರು ಇನ್ನೊಂದು ನಿಗಾ ಇಟ್ಟು ಕಾಣಲಿಲ್ಲ. ಗಾಣಿಗರು ಗಾಣಕ್ಕೆ ಬೆಳಗ್ಗೆ ಎತ್ತುಗಳು ಕಟ್ಟಿ ಕೆಲಸ ಮಧ್ಯಾಹ್ನದವರಿವಿಗೂ ತೆಗೆದುಕೊಂಡು ಒಂದು ಗಂಟೆ ಬಿಡುತ್ತ ಬಿಟ್ಟು ಅದಕ್ಕೆ ಮೇವು ಹಾಕಿ ಪುನಃ ಅದೇ ಎತ್ತುಗಳಿಂದಲೇ ಗಾಣಕ್ಕೆ ರಾತ್ರಿ ಎಂಟು ಗಂಟೆವರಿವಿಗೂ ಗಾಣದ ಕೆಲಸ ತೆಗೆದುಕೊಂಡು ಎತ್ತುಗಳನ್ನ ಹಿಂಸಿಸುತ್ತಾರೆ. ಮತ್ತು ಹಬ್ಬಗಳೇನಾದರೂ ಬಂದಲ್ಲಿ ರಾತ್ರಿ ಹಗಲೂ ಬಿಡದಂತೆ ಗಾಣಕ್ಕೆ ಕಟ್ಟಿ ಜಾನುವಾರುಗಳಿಗೆ ತುಂಬಾ ಶ್ರಮಪಡಿಸುತ್ತಾರೆ. ಒಂದು ವೇಳೆ ಅವು ಬಡಕಲಾದರೆ ಕಸಾಯಿ ಜನಗಳಿಗೆ ಮಾರಿಬಿಡುತ್ತಾರೆ. ಈ ಗಾಣಕ್ಕೆ ಕಟ್ಟುವ ಜಾನುವಾರುಗಳಿಗೆ ತುಂಬಾ ಶ್ರಮ ಇರತ್ತೆ. ಈ ಜಾನುವಾರುಗಳಿಗೆ ಇರತಕ್ಕ ಶ್ರಮೆಯನ್ನು ಹೋಗಲಾಡಿಸಿ ಧರ್ಮಸಂಪಾದನೆ ಯನ್ನು ಮಾಡಿಕೊಳ್ಳುವಂತೆ ಕೋರುತ್ತೇನೆ. "ಸಾಯುವರಿಗೆ ಅಳಾಗವೇಕೆ, ಗಾಣಿಗನಿಗೆ ಎತ್ತಾಗಬೇಕೆ" ಎಂಬ ಈ ಗಾದೆಗೆ ಸರಿಯಾಗಿ ಜಾನುವಾರುಗಳಿಗೆ ಹಿಂಸಿಸುತ್ತಾರೆ. ದಯವಿಟ್ಟು ಇವುಗಳ ಶ್ರಮವ ಹೋಗಲಾಡಿಸುತ್ತಾರೆಂದು ನಂಬುತ್ತೇನೆ.

ಟಿ. ಬಾಲಾಜಿಸಿಂಗ್.

[ಮೂಗುಪ್ರಾಣಿಗಳ ವಿಷಯದಲ್ಲಿ ಕನಿಕರಪಡುವ ಪುಣ್ಯಾತ್ಮರು ಅಂಥಾ ಹಿಂಸೆಯನ್ನು ಕಂಡಕೂಡಲೇ ಸರ್ಕಾರಕ್ಕೆ ತಿಳಿಸಿದಲ್ಲಿ ಅವರು ಅಂಥಾ ಹಿಂಸಕರನ್ನು ತಕ್ಕಹಾಗೆ ಶಿಕ್ಷಿಸುತ್ತಾರೆನ್ನುವದಕ್ಕೆ ಸಂಶಯವಿಲ್ಲ. ಇದು ಪ್ರಜೆಗಳ ಕರ್ತವ್ಯವಾಗಿರುತ್ತೆ. ಸರ್ಕಾರದವರು ಮನೆಗಳೊಳಕ್ಕೆ ಪ್ರವೇಶಿಸಿ ಅಂಥಾ ಹಿಂಸಕರನ್ನು ಗುರುತಿಸಲು ಸಾಧ್ಯವಿಲ್ಲ.—ಎಡಿ.]

---

ಮಲ್ನಾಡ್ ಕಾಫಿ ರೋಗವನ್ನು ನಿಲ್ಲಿಸುವದಕ್ಕಾಗಿ ಬಂದಿದ್ದ ಡಾಕ್ಟರುಗಳು—ಆಕ್ಷೇಪಣೆ.

ಅಯ್ಯಾ,

ಮ|| ಲೇಮರ್, ಮ|| ಖಿಲ್ಲಲ್, ಮ|| ಕೆ. ಬಟ್ಲರ್ ಎಂಬೀ ಮೂರುಜನ ಡಾಕ್ಟರ್‌ಗಳು ಇದೇ ತಿಂಗಳು ತಾರೀಖು ೧೦ನೇ ಬೆಳಿಗ್ಗೆ ಸುಮಾರು ೬ ಗಂಟೆ ಸಮಯಕ್ಕೆ ಕೊಪ್ಪಕ್ಕೆ ದಯಮಾಡಿದರು. ಇವರು ೧೦ನೇ ತಾರೀಖು ಬೆಳಿಗ್ಗೆ ೬ ಘಂಟೆಗೆ ನಾರ್ವೆಗೆ ಬಂದು, ನಾರ್ವೆಯಿಂದ ಕೊಪ್ಪಕ್ಕೆ ೧೦ ಘಂಟೆಗೆ ಬರುತ್ತಾರಾಗಿ ಮುಳುಂಬಂದಿತ್ತು ಎಂತ ಕೇಳಿದೆ. ನೇಟಿವ್ ಜನಗಳು ಯಾವಾಗಲೂ ಕಾಲಕ್ಕೆ ವ್ಯತಿರಿಕ್ತವಾಗಿ ನಡೆಯುತ್ತಾರೆಂತಲೂ, ಯೂರೋಪಿಯರ್ ಜನಗಳು ಕಾಲ ಕ್ಲುಪ್ತವಾಗಿ ನಡೆಯುತ್ತಾರೆಂತಲೂ ಹೇಳತಕ್ಕ ವಿಷಯದಲ್ಲಿ ಎಲ್ಲಾ ಜನಗಳಿಗೂ ಒಂದೊಂದು ವೇಳೆ ಕ್ಲುಪ್ತಕಾಲವು ವಿಹಿತವಾಗುವುದೆಂತ ಮೇಲಿನ ಅಂಶದಿಂದಲೇ ವ್ಯಕ್ತವಾಗಬಹುದು.

ಈ ಸಾಹೇಬರುಗಳು ಬಂದು, ಇಲ್ಲಿಯ ಕಾಫಿ ಪ್ಲಾಂಟರ್ ಮ|| ಪಿಲ್‌ಕಿಂಗ್‌ಟನ್ ಸಾಹೇಬರ ಬಂಗ್ಲೆಯಲ್ಲಿ ಇಳಿದುಕೊಂಡರು. ಮಧ್ಯಾಹ್ನ ಬಾಗಾಯಿತು ಕಾಫಿ ರೋಗವನ್ನು ನೋಡುತ್ತಾರೆಂತ ಈ ಊರಿನವರೆಲ್ಲರೂ ಸೇರಿ, ಸಾಹೇಬರುಗಳನ್ನು ಭೇಟಿಮಾಡಲು ಹೋದಾಗ ಅವರು ಏನೊಂದೂ ಮಾತನಾಡಲಿಲ್ಲ. ನಂತರ ಎಲ್ಲರೂ ಸೇರಿ, ಇದೇ ಕಸಬಾಕ್ಕೆ ಸೇರಿದ ಒಬ್ಬರ ತೋಟಕ್ಕೆ ಹೋಗಿ ೫—೬ ಒಳ್ಳೇ ಮರಗಳನ್ನು ಕತ್ತರಿಸಿ, ನಂತರ ವಾಪಸು ಮ|| ಪಿಲ್‌ಕಿಂಗ್‌ಟನ್ ಸಾಹೇಬರ ಬಂಗ್ಲೆಗೆ ಹೊರಟು ಹೋದರು. ಈ ರೋಗ ಯಾವಕಾಲದಲ್ಲಿ ಬರುತ್ತೆ ಎಂತ ಆಗಲಿ, ನಿವೃತ್ತಿಸಾಧನ ಹ್ಯಾಗೆ ಎಂತಲೇ ಆಗಲಿ, ಏನೊಂದೂ ವಿಚಾರಿಸದೇಲೂ, ಅಜಮಾಯಿಷಿ ಬಗ್ಯಾಗಿ ಕತ್ತರಿಸಿದ ಮರಗಳನ್ನು ತೆಗೆದುಕೊಂಡು ಹೋಗದೇಲೂ, ಉದಾಸೀನ ಪಕ್ಷವನ್ನು ಅವಲಂಬಿಸಿದರು. ಅನಂತರ ಮ|| ಪಿಲ್‌ಕಿಂಗ್‌ಟನ್‌ರವರೇ ಒಂದು ಮರವನ್ನು ಕತ್ತರಿಸಿ ತರಿಸಿ ತಾವು ಸಾಹೇಬರಿಗೆ ಹೇಳಿ, ಅಜಮಾಯಿಷಿ ಮಾಡಿಸುತ್ತೇವೆಂತ ತೆಗಸಿಕೊಂಡು ಹೋದರು. ಅನಂತರ ಏನಾಯಿತೋ ನಮಗೆ ಗೊತ್ತಾಗಲಿಲ್ಲ. ಮಾರನೇ ದಿವಸವೇ ಕಾಫಿ ತೋಟಗಳಿಗೆ ಹೋಗಿ ೫—೬ ದಿವಸ ಅಲ್ಲಿಯೇ ಇದ್ದರೆಂತ ವರ್ತಮಾನ ಕೇಳಿದೆ. ಕಾಫಿ ಪ್ಲಾಂಟರುಗಳೆಲ್ಲಾ ಸ್ವಜಾತಿಯವರಾದ್ದರಿಂದ ಕಾಫಿ ಗಿಡಕ್ಕೆ ಬರತಕ್ಕ ರೋಗಗಳನ್ನು ಸಾಹೇಬರುಗಳು ಚೆನ್ನಾಗಿ ಪರಿಕ್ಷಿಸಿರಬಹುದು. ಯೂರೋಪಿಯನ್ ಜನಗಳಲ್ಲಿ ಪಕ್ಷಪಾತವಿಲ್ಲವೆಂತ ಯೋಚಿಸಿದರೆ ಈ ಗಾಯಿತು ತೋಟದ ಕಾಫಿ ಅಜಮಾಯಿಷಿ ೧೦—೧೫ ನಿಮಿಷದಲ್ಲಿ ಡಾಕ್ಟರ್ ಸಾಹೇಬರು ಪೂರೈಸಿದರು. ನೇಟಿವ್ ಜನಗಳು ಸದರಿ ಅಜಮಾಯಿಷಿ ಬಗ್ಯೆ ಬಂದಿದ್ದರೂ ಯುರೋಪಿಯನ್ ಜನಗಳಿಗೆ ಭಯಪಟ್ಟು ಅವರ ಕೆಲಸದಲ್ಲಿಯೇ ಚೆನ್ನಾಗಿ ನಿಗಾ ಇಟ್ಟು, ನೇಟಿವ್ ಜನಗಳನ್ನು ಕಣ್ಣಿನಿಂದಲೂ ನೋಡದೆ, ಉದಾಸೀನ ಪಕ್ಷವನ್ನು ವಹಿಸಬೇಕಾಗಿ ಬರುತ್ತಿತ್ತು. ಅಂತು ಸರ್ಕಾರದಲ್ಲಿಯೂ ನಹ ನೇಟಿವ್ ಜನಗಳನ್ನು ಕೇಳತಕ್ಕವರೇ ಇಲ್ಲ. ಈ ಪ್ರಾಂತ್ಯ ಕಾಫಿ ರೋಗ ಬಂದು ೧೦೦—೧೫೦ ಪಣ ಅರಿಕೆ ಆಗತಕ್ಕವನಿಗೆ ೬ ಅಥವಾ ೮ ಮಣ ಅರಿಕೆ ಸಿಕ್ಕಿದರೆ ಅವನೇ ಪುಣ್ಯವಂತನೆಂತ ಯೋಚಿಸಬೇಕಾಗಿದೆ.

ಸಾಹೇಬರುಗಳು ಅಜಮಾಯಿಷಿ ಮಾಡಿದ ತೋಟದ ಮಾಲೀಕನಿಗೆ ಕಾಫಿ ಬಾರದಿದ್ದರೆ ೧೫೦ ಮಣ ಅರಿಕೆ ಆಗಬೇಕಾಗಿತ್ತು. ಅವನಿಗೆ ಒಂದು ಕಾಳು ಅಡಿಕೆಯಾದರೂ ಸಿಕ್ಕುವಹಾಗಿಲ್ಲ. ಈ ಪ್ರಾಂತ್ಯ ಅಡಿಕೆ ತೋಟಮಾಡಿದವರ ವಿದ್ಯಮಾನವೆಲ್ಲ ಈ ರೀತಿ ಇದ್ದರೂ ಪೊಕ್ಕದೊಕ್ಕ ಅಧಿಕಾರವರ ಕಣ್ಣಿಗೆ ಬೀಳದೇಲೂ, ಆ ರೋಗ ನಿಲ್ಲಲು ತಕ್ಕ ಔಷಧವನ್ನು ಕಂಡು ಹಿಡಿಯದೇಲೂ ಇದ್ದದ್ದು ಮಲ್ನಾಡು ಪ್ರಜೆಗಳ ದುರದೃಷ್ಟವೆಂತ ತೋರುತ್ತೆ. ಗೌವರ್ನ್‌ಮೆಂಟಿನವರೂ ಈ ವಿಷಯದಲ್ಲಿ ನಿಗಾ ಕೊಡದೆ ಇನ್ನೂ ವಿಳಂಬ ಮಾಡುವದರಲ್ಲಿ ಎಲ್ಲರೂ ಮನೆಯಿದೆಬಿಟ್ಟು, ಚರ ಸ್ಥಿರ ಆಸ್ತಿಗಳೆಲ್ಲವೂ ಕಂದಾಯ ಬಾಕಿಗೆ ಹರಾಜು ಮಾಡಿಸಿಕೊಂಡು, ತಿನ್ನುವುದಕ್ಕೆ ಹಿಟ್ಟಿಲ್ಲದೆ, ಸಾಲಗಾರನ ತೊತ್ತಾಗಿ ಬಾಳಬೇಕಾಗುತ್ತೆ. ಸರ್ಕಾರದವರು ಎಲ್ಲಾ ಬಾಬುಗಳಿಗೂ ಅಧಿಕಾರಿಗಳನ್ನು ನೇಮಿಸಿದ್ದಾಗ್ಯೂ ಅಧಿಕಾರಿಗಳು ತಮ್ಮ ಕೆಲಸದಲ್ಲಿ ಮುತುವರ್ಜಿ ವಹಿಸಿ, ಪ್ರಜೆಗಳ ಕಷ್ಟ ಸುಖಗಳನ್ನು ನೋಡಿದೆ, ಇದ್ದರೆ ಪ್ರಜೆಗಳ ಕಷ್ಟವನ್ನು ವಿಚಾರಿಸುವವರ್‍ಯಾರೆಂತ ಯೋಚನೆ ಮಾಡಬೇಕಾಗಿದೆ. ಯಾರಾದರೂ ದೊಡ್ಡ ಅಧಿಕಾರಿಗಳು ಈಗಲೇ ಬಂದು, ಈ ಪ್ರಾಂತ್ಯ ಎಲ್ಲಾ ತೋಟಗಳನ್ನೂ ತಿರಿಗಿ, ಚೆನ್ನಾಗಿ ಅಜಮಾಯಿಷಿ ಮಾಡಿದರೆ ಇಲ್ಲಿಯ ಜನಗಳಿಗೆ ಇರತಕ್ಕ ಕಷ್ಟವೆಲ್ಲವೂ ಅವಗಾಹನೆಗೆ ಬರುವದರಲ್ಲಿ ಏನೂ ಸಂಶಯವಿರುವದಿಲ್ಲ. ಮತ್ತು ೩—೪ ವರುಷದಲ್ಲಿ ಈ ಪ್ರಾಂತ್ಯ ಎಷ್ಟು ಜಮೀನುಗಳು ಕಂದಾಯದ ಬಾಕಿಗಾಗಿ ಹರಾಜಾಗಿ ಸರ್ಕಾರಕ್ಕೆ ಸೇರಿವೆ ಎಂಬದನ್ನೂ, ಹೀಗೆ ಸರ್ಕಾರಕ್ಕೆ ಸೇರಲು ಕಾರಣವೇನೆಂಬದನ್ನೂ ವಿಚಾರಮಾಡಿದಾಗ್ಯೂ ಎಲ್ಲಾ ವಿಷಯಗಳೂ ತಿಳಿದುಕೊಳ್ಳಬಹುದು.

ಚಂದಾದಾರ್.

[ಈ ಬಾತ್ಮಿಯನ್ನು ಮೇಲ್ಕಂಡ ಸಾಹೇಬರುಗಳಿಗೆ ಕಳುಹಿಸಿ ಅವರಿಂದ ಜವಾಬು ಬಂದೊಡನೆ ಪ್ರಕಟಿಸುತ್ತೇವೆ.—ಎಡಿ.]

---

ತಾಲ್ಲೋಕು ವರ್ತಮಾನಗಳು.

ಕೊಲೀಸ್‌ಪೇಟೆ.—ಇಲ್ಲಿ ಮಳೆ ವಿಪರೀತವಾದ್ದರಿಂದ ವ್ಯವಸಾಯಗಾರರು ಪೈರುಗಳು ಕೆಟ್ಟುಹೋದವೆಂದು ದುಃಖಿಸುತ್ತಾರೆ. ಇಲ್ಲಿನ ಡಿಪ್ಟಿ ಅಮಲ್ದಾರ್ ಮ|| ಹನುಮಂತರಾಯರಿಗೆ ಹೊಸದುರ್ಗಕ್ಕೆ ಅಮಲ್ದಾರಿಗೆ ವರ್ಗವಾದ ವಿಷಯ ಇಲ್ಲಿನ ಪ್ರಜೆಗಳಲ್ಲಿ ತುಂಬಾ ವ್ಯಸನವನ್ನುಂಟುಮಾಡಿದೆ. ಈ ಮಹನೀಯರು ನಿಧಾನಿಗಳು, ಕೆಲಸಕಾರ್ಯಗಳಲ್ಲಿ ತುಂಬಾ ಚಟುವಟಿಕೆಯುಳ್ಳವರು. ಮೂರು ವರ್ಷಗಳ ಕಾಲ ಪ್ರಜೆಗಳ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರು.—ಮುಸಲ್ಮಾನ್ ಜಾತಿ ಖಾಸಿಂಖಾನ್ ಎಂಬವನು ಇಲ್ಲಿನ ಸಾಹುಕಾರ್ ಕುಮಾರ್ಸ್ವಾಮಿಯವರ ತಮ್ಮನಾದ ಪುಟ್ಟಯ್ಯನನ್ನು ರಾಜಬೀದಿಯಲ್ಲಿ ಕಾರಣಾಂತರದಿಂದ ಅವಮಾನಕರವಾದ ಮಾತುಗಳನ್ನಾಡಿದ್ದರಿಂದ ಸದರೀ ಪುಟ್ಟಯ್ಯನು ಕೋರ್ಟಿನಲ್ಲಿ ಫಿರ್ಯಾದು ಮಾಡಿದ್ದಕ್ಕೆ ಜಡ್ಜಿಯವರು ಅಪರಾಧಿಗೆ ೫೦ ರೂಪಾಯಿ ಜುಲ್ಮಾನೆ, ಮೂರು ತಿಂಗಳ ಸಜವನ್ನು ವಿಧಿಸಿದರು. ಕೂಡ್ಲೆ ಅಪರಾಧಿಗೆ ಕೋರ್ಟು ಬಂದು ಜಾಮೀನಿನಿಂದ ಜಡ್ಜಿಯವರ ಮುಂದೆ ಫಿರ್ಯಾದಿಯನ್ನು ಹೊಡೆದನು. ಇದಕ್ಕಾಗಿ ಅಪರಾಧಿಗೆ ಜಡ್ಜಿಯವರು ಇನ್ನೂ ಹತ್ತು ತಿಂಗಳ ಶಿಕ್ಷೆಯನ್ನು ಹೆಚ್ಚು ಮಾಡಿದರೆಂದೂ, ಅಪರಾಧಿಯನ್ನು ಕಟಕಟೆಯಲ್ಲಿ ನಿಲ್ಲಿಸಿದ್ದರೆ ಇಂಥಾ ಅಪಾಯಕ್ಕೆ ಗುರಿಯಾಗುತ್ತಿರಲಿಲ್ಲವೆಂದೂ ಜನರು ಹೇಳಿಕೊಳ್ಳುತ್ತಾರೆ.

ಕೊಲೀಸ್‌ಪೇಟೆಯಲ್ಲಿ ಕಬ್ಬಿಣ ಕೆಲಸದ ಗೋಪಾಲ್‌ಸಿಂಗ್ ಎಂಬವರ ತಾಯಿ, ಅತ್ತಿಗೆಯವರು ಮೈಸೂರಿನಲ್ಲಿ ಖಾಯಿಲೆಯ ದೆಸೆಯಿಂದ ತಾ|| ೧೫ ರಲ್ಲಿ ಕೊಟ್ಟ ಟೆಲಿಗ್ರಾಫ್ ತಾ|| ೧೭ ರಲ್ಲಿ ಬಂತು. ಗೋಪಾಲ್‌ಸಿಂಗ್ ಅದೇ ದಿನ ಮೈಸೂರಿಗೆ ಹೋಗಿ ನೋಡುವಾಗ್ಯೆ ತಾಯಿ ತೀರಿಹೋಗಿದ್ದರು. ಈ ಸಂಗತಿಯನ್ನು ತಾ|| ೧೩ ರಲ್ಲಿ ಅಣ್ಣಾ ಸುಂದರಸಿಂಗ್‌ರಿಗೆ ೨ ರೂಪಾಯಿ ಕೊಟ್ಟು ಅರ್ಜೆಂಟ್ ಟೆಲಿಗ್ರಾಫ್ ಕೊಟ್ಟನು. ಅದು ಈ ತನಕವರಿವಿಗೂ ತಲುಪಲಿಲ್ಲ. ಹಾಗಿದ್ದರೆ ಅದು ಎಲ್ಲಿಗೆ ಹೋಯಿತು? ಕೊಲೀಸ್‌ಪೇಟೆ ರೈಲ್ವೆ ಸ್ಟೇಷನ್ನಲ್ಲಿ ಕೇಳಿದಾಗ ಅದು ನಮ್ಮಲ್ಲಿ ಬರಲಿಲ್ಲವೆಂದು ಹೇಳಿದರು. ಎಂಬದಾಗಿ ಕೇಳುತ್ತೇನೆ. ಈ ವಿಷಯಕ್ಕೆ ಟೆಲಿಗ್ರಾಫಿನ ಅಧಿಕಾರಿಗಳು ಸರಿಯಾಗಿ ಗಮನ ಕೊಡದ ಪಕ್ಷದಲ್ಲಿ ಇಲಾಖೆಗೆ ಕೀರ್ತಿಯೂ ಪ್ರಜೆಗಳಿಗೆ ಅನುಕೂಲವೂ ಉಂಟಾಗಲಾರದು.

ಕುಣಿಗಲ್.—ಹವಾ ಚೆನ್ನಾಗಿದೆ. ಸಕಾಲದಲ್ಲಿ ಸುವೃಷ್ಟಿಯಾಗುತ್ತಿರುವದರಿಂದ ಸಸ್ಯಾದಿಗಳೆಲ್ಲಾ ಅಭಿವೃದ್ಧಿ ಸ್ಥಿತಿಯಲ್ಲಿವೆ. ಉಭಯ ತಟಾಕಗಳೂ ಪೂರ್ಣವಾಗಿ ಪ್ರವಾಹವಾಗುತ್ತಿರುವವು. ಕೆಲವು ತಟಾಕಗಳು ದೇವೇಂದ್ರನ ಭೀತಿಯಿಂದ ಕಾಣಿಸಿಯಲ್ಲಿ ಮೊಗೆಯುತ್ತಿರುವವು.—ಇಲ್ಲಿನ ದೊಡ್ಡ ಕೆರೆಯ ಕೋಡೀ ಸೇತುವೆಯ ಹೊಸ ರಸ್ತೆಯು ಬಹಳ ಕಿರಿದಾಗಿರುವದರಿಂದಲೂ, ಕೈಹಿಡಿ ಸಾಲದ್ದರಿಂದಲೂ, ಗಾಡಿಗಳು ತಿರುಗುವಾಗ್ಗೆ ಬಲಭಾಗದಲ್ಲಿರುವ ಆನೇ ಮಡುವಿನ ಹಳ್ಳಕ್ಕೆ ಅನೇಕಸಾರಿ ಬೀಳುತ್ತಿದ್ದದ್ದನ್ನು ಪ್ರಯಾಸದಿಂದ ತಪ್ಪಿಸಲ್ಪಟ್ಟಿದೆ. ಡಿಸ್ಟ್ರಿಕ್ಟ್ ಇಂಜಿನೀರ್ ಇಲಾಖೆಯವರು ಈ ಅಪಾಯ ಸ್ಥಳವನ್ನು ಜಲ್ದಿ ಅಜಮಾಯಿಷಿ ಮಾಡಿ ಹಳೇ ಕೈಹಿಡಿಯನ್ನನುಸರಿಸಿ ಪುನಃ ಕಟ್ಟಿ ದೂರ ಕಟ್ಟುವುದು ಅವಶ್ಯವಾಗಿದೆ.—ಮ್ಯುನಿಸಿಪಲ್ ಲಾಂದ್ರಗಳು ಈ ದೊಡ್ಡ ಪಟ್ಟಣಕ್ಕೆ ಬಹು ಕೊಂಚ. ಇವುಗಳಲ್ಲಿಯೂ ಕೆಲವು ಮುಖ್ಯಸ್ಥಳಗಳಾಗಿಯೂ, ಕೆಲವು ವಿಧವೆಗಳಾಗಿಯೂ ಇರುವವು. ಕೆಲವಕ್ಕೆ ಚಿಮಿಣಿಗಳೂ ಕೆಲವಕ್ಕೆ ಬತ್ತಿಗಳೂ ಉಂಟು. ಗಲ್ಲಿಗಳಲ್ಲಿರುವ ಲಾಂದ್ರಗಳಿಗೆ ಗೃಹಚಾರ ಬಿಡುಗಡೆಯಾದಾಗ ಮಾತ್ರ ದೀಪದ ಬೆಳಕು ಕಾಣುವುದು. ಇಲ್ಲದಾಗ ಜನರ ನಕ್ಷತ್ರಪಂಕ್ತಿಗಳು ಕಂಡೇ ಇದೆ. ಪ್ರತಿ ಲಾಂದ್ರಕ್ಕೂ ಅರ್ಧ ಗ್ರಹಣ, ಪೂರ್ಣ ಗ್ರಹಣಗಳು ಇದ್ದೇ ಇರುವವು. ಮ್ಯುನಿಸಿಪಾಲಿಟಿಯವರು ಗಲ್ಲಿಗಳ ಕಿರಿದಾದವನ್ನೂ, ನೆಲದ ಅನಾಗರಿಕವನ್ನೂ, ಕಶ್ಮಲವನ್ನೂ, ಅಂಧಕಾರವನ್ನೂ ಒಂದು ರಾತ್ರಿಯಾದರೂ ಅನುಭವಿಸಿ ಪರಿಹಾರದ ಯೋಚನೆಯನ್ನು ಮಾಡಬೇಕು.—ಮುಖ್ಯ ಸ್ಥಳಗಳಾದ ಟೌನ್ ಕೆರೆಯ ಏರಿಯಲ್ಲಿರುವ ಮರಗಳ ಗುಂಪು, ಕೋಟೆ, ದೇವಸ್ಥಾನ, ಅಕ್ಕಸಾಲಿಗರ ಬೀದಿಯ ಪಶ್ಚಿಮ ರಸ್ತೆ, ಮಸೀದಿಗಳಲ್ಲಿಯ ಪಶ್ಚಿಮ ರಸ್ತೆ, ಇನ್ನೂ ಅನೇಕ ಗಲ್ಲಿಗಳಲ್ಲಿರುವ ಭಯಂಕರವಾದ ಸ್ಥಳಗಳು ಲಾಂದ್ರಗಳನ್ನು ಇಚ್ಛೈಸುತ್ತವೆ. ಆದರೆ ಇವುಗಳ ಅದೃಷ್ಟವು ಮುಂದೆ ಹ್ಯಾಗಿರುವುದೋ? ಮಳೆಯ ಹೊಡತದಿಂದ ಅನೇಕ ಹಳೇ ಮನೆಗಳೂ, ಗೋಡೆಗಳೂ, ಬಿದ್ದುಹೋದವು. ಇನ್ನೂ ಬೀಳುವುದರಲ್ಲಿವೆ. ಇವು ತಿರುಗಾಡುವವರಿಗೆ ಪ್ರಾಣಸಂಕಟವಾಗಿದೆ. ಸರ್ಕಾರಿ ಚಾವಡಿಯೋ ಗೆಜ್ಜೆಕಟ್ಟಿಕೊಂಡು ಸಿದ್ಧವಾಗಿರುವಲ್ಲಿ ಬಿಳ್ಳ ಕಟ್ಟಡಗಳು ಕುಸಿಯುದೆ ಸುಮ್ಮನಿರಬೇಕೆ? ಬೆಂಗಳೂರು ರಸ್ತೆಯ ಮಾರೀ ಗುಡಿಯ ಬಳಿಯಲ್ಲಿ ಸಮುದ್ರದಂತೆ ನೀರು ನಿಂತಿದೆ. ಇದರ ಮಧ್ಯೆ ಒಂದು ಮನೆಯು ಪೂರ್ಣ ದ್ವೀಪವಾಗಿಯೂ, ಕೆಲವು ಮನೆಗಳು ಅರ್ಧ ದ್ವೀಪವಾಗಿಯೂ ಪರಿಣಮಿಸಿ, ವಾಸಸ್ಥರು ಅನಾರೋಗ್ಯಾದಿ ಕಷ್ಟಗಳಿಂದ ಪ್ರಲಾಪಿಸುವರು. ಈ ನೀರು ಹೊರಗೆ ಹೋಗುವುದಕ್ಕೆ ಮೋರಿ ಇದ್ದರೂ ಅತ್ತಿಯಾಗಿರುವ ಕಾರಣವನ್ನು ನೋಡಿದವರೇ ಇಲ್ಲ.—ಇಲ್ಲಿನ ಪೊಲೀಸ್ ಇನ್ಸ್‌ಪೆಕ್ಟರ್ ಕೆ. ಬಿ. ಪಕುರುಲ್ಲಾ ಖಾನರು ಮೈಸೂರಿಗೆ ವರ್ಗವಾಗಿ ಹೋದದ್ದಕ್ಕಾಗಿ ಇಲ್ಲಿನ ಪ್ರಜೆಗಳೆಲ್ಲರಿಗೂ ಅತ್ಯಂತ ವಿಷಾದವಾಗಿದೆ. ಇವರು ಸರ್ಕಾರಕ್ಕೂ, ಪ್ರಜೆಗಳಾದ ಆ ಬಾಲವೃದ್ಧರಿಗೂ ಅತ್ಯಂತ ಗೌರವವುಳ್ಳವರಾಗಿಯೂ, ಕೆಲಸದಲ್ಲಿ ಮಹಾ ದಕ್ಷರಾಗಿಯೂ, ಸದ್ಗುಣಯುಳ್ಳವರಾಗಿಯೂ, ದುಷ್ಟನಿಗ್ರಹರಾಗಿಯೂ, ನಿಷ್ಪಕ್ಷಪಾತರಾಗಿಯೂ ಇದ್ದದ್ದಲ್ಲದೆ, ತಮ್ಮ ಅಧೀನದಲ್ಲಿದ್ದ ಪೊಲೀಸ್ ನೌಕರರನ್ನೂ ಪ್ರೀತಿಯಿಂದ ಕಾಣುತ್ತಾ, ದರ್ಪವನ್ನಿಟ್ಟಿದ್ದರು. ಅದಲ್ಲದೆ ಈ ತಾಲ್ಲೂಕು ನರಹತ್ಯ, ಅಸತ್ಯ, ಜೋರಿ, ದ್ಯೂತ ಮೊದಲಾದವುಗಳಲ್ಲಿ ಪ್ರಸಿದ್ಧಿಯಾಗಿದ್ದರೂ ಈ ಸಮರ್ಥರು ಇಲ್ಲಿಗೆ ಬಂದಮೇಲೆ ಅಂಥಾ ದುಷ್ಕಾರ್ಯಗಳು ಬಹಳ ಮಟ್ಟಿಗೆ ನಾಶವಾದವು.

ಚಿಕ್ಕಮಗಳೂರು.—ಕಳೆದ ಗುರುವಾರ ಸಾಯಂಕಾಲದಲ್ಲಿ ಡಿ|| ಕೆ|| ನಾರಾಯಣರಾಯರವರು ಎಲ್ಲಾ ಯೂರೋಪಿಯನ್ ಪ್ಲಾಂಟರ್ ಸರದಾರರಿಗೆ ಟೀಪಾರ್ಟಿ ಕೊಟ್ಟು ಸಂತೋಷಪಡಿಸಿದರು. ಆ ಕಾಲದಲ್ಲಿ ಕೆಲವು ಸ್ವದೇಶ ದೊಡ್ಡ ಮನುಷ್ಯರೂ ಹಾಜರಾಗಿದ್ದರು. ಮ|| ಎಮ್. ನಾರಾಯಣ ರಾಯರವರ ಪ್ರೀತಿ ಸ್ನೇಹಗಳಿಗೋಸ್ಕರ ವಂದನೆಗಳು ಅರ್ಪಿಸಲ್ಪಟ್ಟವು. ಡಾಕ್ಟರ್ ನಂಜಪ್ಪನವರು ತುಂಬಾ ಮುತುವರ್ಜಿಯಿಂದಲೂ ಆಸಕ್ತಿಯಿಂದಲೂ ಅಧಿಕಕೆಲಸವನ್ನು ಡಿ|| ಕೆ|| ಸಾ|| ರ ಪರವಾಗಿ ಅಂಗೀಕರಿಸಿದರಂತೆ.—ಕೆಲವು ಕಾಲದ ಹಿಂದೆ ಕಳಸ ಎಂಬ ಪೂರ್ವ ಮಲ್ನಾಡ್ ಪರ್ವತಗಳಲ್ಲಿ ಕಾಫಿತೋಟ ಮಾಡಿಕೊಂಡು ಈವರಿಗೂ ಅಲ್ಲಿ ಕುಟುಂಬ ಸಮೇತ ವಾಸಿಸುವ ಗೌಡನ ಮನೆಯಲ್ಲಿ ೪ ಮಂದಿ ಹೆಂಗಸರೂ ತಾನು ಮಾತ್ರ ಗಂಡಸು ಹೀಗೆ ಇರುವಲ್ಲಿ ಈತನು ಎರಡು ಕೊಡಪಾನಗಳಲ್ಲಿ ಹೂಳಿಟ್ಟು ಭಂಗಾರ ನಾಣ್ಯಗಳು ತುಂಬಿದ್ದ ವಿಷಯ ಹ್ಯಾಗೋ ಅಲ್ಲಿನ ನಾಲ್ಕು ಮಂದಿ ಗೌಡ ಬ್ರಾಹ್ಮಣರಿಗೆ ತಿಳಿದು ಮಾಡಿದುದು

## ಒಳ್ಳೇ ಔಷಧಗಳು.

19

**ಜಯವ್ಯಾಧಿಗೆ** ಸುಖಾಂಜನತೈ.—ಹೊಸದಾಗಿ ಅಥವಾ ಬಹು ಕಾಲದಿಂದ ಕಣ್ಣಿನಲ್ಲಿ ಇರುತ್ತಿದ್ದ ಎಲ್ಲಾ ಪ್ರಕಾರದ ಬಾಧೆಗಳು ಈ ಅಂಜನದಿಂದ ಬಹು ಬೇಗನೆ ಗುಣ ಹೊಂದುವುವು. ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರು, ಪಿಸರು ಬರುತ್ತಿರುವದೂ, ಉರಿ, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದೂ, ದೃಷ್ಟಿಮಾಂದ್ಯ ಮುಂತಾದ ವಿಶಿಷ್ಟ ವ್ಯಾಧಿಗಳು ಗುಣ ಹೊಂದುತ್ತವೆ. ಕ್ರಯ ಒಡಪ್ಪಿಗೆ ೬ ಆ. ಪೋಸ್ಟ್ ಖರ್ಚು ಆ ೩.

**ನಾರಾಯಣತೈಲ** (ಬಾಹ್ಯಲೇಪನಕ್ಕೆ ಮಾತ್ರ)—ಇದನ್ನು ಶರೀರದ ಮೇಲೆ ಲೇಪಿಸುವದರಿಂದ ಸಂಧಿವಾತ, ಕಟಿವಾತ, ಪಕ್ಷವಾತ ಇತರ ವಾಯುಗಳ ಬಾಧೆ, ತಲೆನೋವು, ಚಳಿ, ಮುಂತಾದ ಉಬ್ಬಸ, ಕೆಮ್ಮು, ಕಫ ಗುಣ ಹೊಂದುವುವು. ಬುಡ್ಡಿಗೆ ೧ ರೂ. ಖರ್ಚು ಆ ೩.

**ಗಜಕರ್ಣದ ಗುಳಿಗೆ**—೨ ಡಬ್ಬ ೩ ಆಣೆ ಹಚ್ಚುವದರಿಂದ ಶರೀರದಲ್ಲಿ ಎಂಥ ಕಠಿನವಾದ ಗಜಕರ್ಣವಾದರೂ ಇದ್ದರೂ ಪೂರ್ಣ ಗುಣ ಹೊಂದುವದು. ಡಬ್ಬಿಗೆ ಆ ೪. ಖರ್ಚು ೧ ರಿಂದ ೬ ಡಬ್ಬಿ ವರೆಗೆ ಆ ೩.

**ಕರ್ಣಸ್ರಾವಕ್ಕೆ** ಪಂಚೌಷಧಿ ತೈಲ (ಬಾಹ್ಯೋಪಯೋಗಕ್ಕೆ ಮಾತ್ರ)—ಚಿಕ್ಕ ಪ್ರಾಯದವರ ಮತ್ತು ಹಿರಿಯ ಪ್ರಾಯದವರ ಕಿವಿಯಿಂದ ರಕ್ತವಾಗಲಿ ಕೀವಾಗಲಿ ನೀರಾಗಲಿ ಸ್ರವಿಸುತ್ತಿರುವದು, ಕಿವಿ ಕೇಳದೆ ಇರುವದು ಅಥವಾ ಬಹುಕಾಲದಿಂದ ಕಿವಿಯಲ್ಲಿ ನೋವು ಮತ್ತು ಒಂದು ಪ್ರಕಾರ ಶಬ್ದವಾಗುತ್ತಿರುವದು ಇವೆಲ್ಲಾ ಈ ತೈಲದಿಂದ ಗುಣವಾಗುವವು. ಕ್ರಯ ಬು ೧ ಖರ್ಚು ಆಣೆ ೩.

ಮೈಸೂರು ಸಂಸ್ಥಾನದಲ್ಲಿ ಹಿಂದಿನಿಂದ ಬಳಕೆಯಲ್ಲಿರುವ ಈ ಔಷಧಗಳ ಪಟ್ಟಿ ನಮ್ಮ ಕ್ಯಾಟಲಾಗು ಉಚಿತ ಕಳಿಸಿ ಕೊಡುತ್ತೇವೆ. ನಮ್ಮ ವಿಳಾಸ ಇಂತಿದೆ:—

ರಾಜವೈದ್ಯ ಮತ್ತು ಕಂಪನಿ, ಧಾರವಾಡ, ಉತ್ತರ ಕನ್ನಡ ಜಿಲ್ಲಾ.

### ಹೋಮಿಯೋಪಥಿ.

ಕಳೆದ ಚೈತನ್ಯವು ಮರಳಿ ಉಂಟಾಗುತ್ತದೆ. ಶರೀರಕ್ಕೆ ಪುಷ್ಟಿಯು ಬರುತ್ತದೆ.

ಈ ಔಷಧಿಯು ಮುಖ, ಎದೆ, ಕಾಲುಗಳ ಬೆವರು, ಮೈಬಿಳುಪು, ನಿದ್ರಾಹೀನತೆ, ಕೈಕಾಲು ನಡುಕ ಮುಂತಾದ ಸ್ವಲ್ಪ ಸಲ್ಪಗಳಲ್ಲಾ ಇದ್ದರೆ ಬೇಗ ಗುಣ ಹೊಂದುವವು; ಸಂಶಯವಿಲ್ಲ ಎಂಬುವದು ಅನೇಕ ಸಲ ಸಿದ್ಧವಾಗಿದೆ.

ಈ ತೈಲವು ಆಸ್ಪತ್ರೆಗಳಲ್ಲಿ ಮಾತ್ರ ಪ್ರಸಿದ್ಧ ವೈದ್ಯರು ಉಪಯೋಗಿಸಿ ಶ್ಲಾಘಿಸಿದ ಔಷಧ. ಇದರ ಗುಣವನ್ನು ತಿಳಿದು ಕೊಂಡ ಜನರು ಹೊಗಳಿ ಬರೆದ ಪತ್ರಗಳನ್ನು ಕೊಟ್ಟರೆ ನೋಡಿ ಕಳಿಸುತ್ತೇವೆ.

ಈ ತೈಲವು ಅತಿ ತಲೆನೋವು, ಹೊಟ್ಟೆನೋವು, ವಾತಜ್ವರ, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹಿಡಿದಿರುವದು, ಉಗುರು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರೋಗಗಳು, ಹುಳುಕಡ್ಡಿ, ಬೆನ್ನು ಮತ್ತು ಕೀಲು ನೋವನ್ನು ಬಿಟ್ಟಿರುವದು, ಹೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಬೆಳಗಾಗುವದರೊಳಗೆ ಸೇರುವದಿಲ್ಲ.

ಕ್ರಯ.—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ೭೩ ೨—೮ ಆ.; ಒಂದೇ ಸಲ ೬ ಡಬ್ಬಿ ತರಿಸಿಕೊಂಡರೆ ಪಾರ್ಸಲ್ ಖರ್ಚು ಮಾಫಿ ಬಿಡುತ್ತದೆ. ೫ ರೂ. ೨—೮ ಆಣೆ ಬಾಟ್ಲಿ ಡಬ್ಬಿಯ ೧ ಲೀ ಡಬ್ಬಿಯಲ್ಲಿರುವದಕ್ಕಿಂತ ೬ ರಷ್ಟು ಹೆಚ್ಚು ಔಷಧವಿರುವದು. ೫ ರೂ. ೨—೮ ಆ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಪಾರ್ಸಲ್ ಖರ್ಚು ಮಾಫಿ ಬಿಡುತ್ತೇವೆ.

*********

### ಹೋಮಿಯೋಪಥಿ ಮೆಡಿಸಿನ್ ಕಂಪನಿ.

ಈ ತೈಲವು ಎಲ್ಲ ರೋಗಗಳಿಗೆ ಉಪಯೋಗಿಸಲ್ಪಡುವದು. ಕರ್ಪೂರ ಎಣ್ಣೆ ಕೊಡ ಇದನ್ನು ತಯಾರಿಸುವದು. ಇದರಲ್ಲಿ ಹೋಮಿಯೋಪತಿಯ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತ ಬೇರೆ ಬಗೆಯಲ್ಲಿ ಇನ್ನೆರಡು ಗುಣಗಳನ್ನು ಹೊಸ ಭಾಗವಿರುತ್ತವೆ. ಇದನ್ನು ಚರ್ಮದ ಮೇಲೆ ಬಹು ಬೇಗನೆ ಸೇವಿಸಲ್ಪಡಲ್ಲದು. ಡಬ್ಬಿಗಳಲ್ಲಿ ಕೊಳ್ಳಲಾಗಿದೆ. ೧ ರೂ. ಗಳು ಒಂದರಂತೆ ಬರೆದ ಪತ್ರವನ್ನು ಕಳುಹಿಸಿ. ೧೨ ಡಬ್ಬಿ ಕಳುಹಿಸುವಂತೆ ಪಾರ್ಸಲ್ ಖರ್ಚು ಮಾಫಿ. ಎಲ್ಲಾ ಔಷಧಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರವನ್ನೂ, ಸರ್ಟಿಫಿಕೇಟುಗಳನ್ನೂ ಉಚಿತವಾಗಿ ಕಳುಹಿಸುವೆವು. ಈ ಪ್ರಕಾರ ಬರೆದು ಕೇಳಿಕೊಳ್ಳಬಹುದು.

ವಿಳಾಸ.—ಹೋಮಿಯೋಪಥಿ ಮೆಡಿಸಿನ್ ಕಂಪನಿ, ೪೩ ಕೋಲಾರ್ ರಸ್ತೆ, ಮದರಾಸು.

## ಶ್ರೀ ಕೃಷ್ಣವಿಲಾಸ ಪ್ರೆಸ್.

48

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಆಹ್ವಾನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡ್, ನೋಟೀಸ್ ಫಾರಂ, ಹ್ಯಾಂಡ್ ಬಿಲ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇರ್ಪಾಗಿಯೂ ಸುಲಭ ಧಾರಣೆಗಳಿಗೆ ಮಾಡಲ್ಪಡುತ್ತವೆ.

ರೋಜು, ವರ್ಗ, ಮುಂತಾದ ಬಾಹಿ ಪುಸ್ತಕಗಳು; ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು, ಇನ್ನು ಇತರವಾದ ಸಮಸ್ತವಿಧ ಬೈಂಡು ಕೆಲಸಗಳು ಇಂಗ್ಲೀಷ್ ಬೈಂಡಿನಂತೆ ಬಹು ಅಂದವಾಗಿ ತಯಾರು ಮಾಡಲ್ಪಡುತ್ತವೆ.

ಆಫೀಸುಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್ ಕಾಗದ, ಪೇಪರ್, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಛಾಪಿಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಈ ಕಾರಣದಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವೂ ಸುಂದರವೂ ನಯವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ನಾನಾ ವಿಷಯವನ್ನು ಕುರಿತು ತಿಳಿಯಲು, ಜವಾಬನ್ನು ಅಪೇಕ್ಷಿಸುವ ... ಸ್ಟಾಂಪು ಕಳುಹಿಸಬೇಕು. ಕಾಗದಗಳನ್ನು ಬರೆಯುವಾಗ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯ ... ಅವರ್ ಮೊದಲ್ಗೊಂಡು ಹೊಸ ಕೆಲಸ ೧೯೦೩ನೇ ಜೂಲೈ ೧೫ನೇ ... ಕ್ಕೆ ಪ್ರಾರಂಭಿಸಿದೇವೆ.

ವಿಳಾಸ.—ಎಂ. ಆರ್. ... ಮತ್ತು ಕಂಪನಿ,

ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

ಜ್ವರಹರಿ 41

ಇದು ಸಾಧಾರಣ ಜ್ವರ, ಚಳಿಜ್ವರ, ಮಲೇರಿಯಾ ಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಒಳ ಇರುವಂಥಾ, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ನಿವಾರಿಸುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಹಳ್ಳಿಕೆರೆಯಲ್ಲಿರುವ ಪಬ್ಲಿಕ್ ವರ್ಕ್ಸ್ ಸಬ್ ಓವರ್‌ಸಿಯರ್ ಆಫೀಸರ್ ಎಸ್. ಬಿ. ವೆಂಕಟಪತಿ ಅಯ್ಯಂಗಾರರು—ನೀವು ಕಳುಹಿ ಕೊಟ್ಟ ಜ್ವರಹರಿ ಔಷಧವು ನನಗೆ ಬಹಳ ಉಪಯುಕ್ತವಾಯಿತು. ಇದನ್ನು ಸ್ವಲ್ಪ ಕಾಲದಲ್ಲೇ ಉಪಯೋಗಿಸಿದ್ದರಿಂದ ಅನೇಕ ಮಂದಿ ಜ್ವರದಿಂದ ಪೀಡಿತರು ಪೂರ್ಣವಾಗಿ ಗುಣ ಹೊಂದಿರುವರು. ಇನ್ನೂ ಜನರಿಗೆ ಹಂಚಲು ಬೇಕಾಗಿರುವದರಿಂದ ದಯವಿಟ್ಟು ಇನ್ನೊಂದು ಎಂ ಬಾಟಲು ವಿ. ಪಿ. ಮೂಲಕ ಕಳುಹಿಸಬೇಕು ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ೧ಕ್ಕೆ ೪ ಆಣೆ, ೧ ರೂ., ೧—೪ ರೂ., ರೂ. ೨—೧೦ ಆ. ೧೧ ರೂ; ಡಜನ್ ಲೆಕ್ಕದಲ್ಲಿ ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

*********

### ಜಿ ಮ ಂ ಕ ಪೂ ರ ನ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆನೋವು, ವಾಂತಿಭೇದಿ, ನಾನಾ ತರದ ಹೊಟ್ಟೆನೋವುಗಳು—ಮುಂತಾದವುಗಳಲ್ಲಿ ಮಹೌಷಧವಾಗಿ ಪರಿಣಮಿಸಿ, ಕಾಲರೆ ಗುಣಪಡಿಸುವದು. ಇದು ಕೆಂಗಸರು ಶಿಶುಗಳಿಗೆ ಬಂದಿರುವ ಹೊರಗೆ ಅಗುವ ಅನೇಕ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯ ಪತ್ತೆ ಪ್ರಕಾರ ಎಂಬ ಔಷಧದಂಗಡಿ ಮೊ. ಸೀಸೆಗಳಲ್ಲಿ ದೊರೆಯುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗೋಪಾಲರಾಯರು—ಜಿಂಪೂರ ನನ್ನ ಕೈಯಲ್ಲಿಯೇ ಬಹಳ ಸಲ ಪರೀಕ್ಷಿಸಿ ನೋಡಿರುತ್ತೇನೆ. ನಮ್ಮ ಆಸ್ಪತ್ರೆಯಲ್ಲಿ ಅನೇಕ ಸಲ ಕಾಲರಾ, ಅಜೀರ್ಣ, ಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇನೆ. ಹೊಟ್ಟೆನೋವು ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ಎರಡು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ಹೊಸ್ತ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದಿದ್ದರೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಡಿಸ್ಪೆನ್ಸರಿ ... ಅಂಡ್ ಕಂಪನಿ,

ಕೋರ್ಟ್ ಬೀಚ್ ರೋಡ್, ಮದರಾಸ್.

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

11—9—1903 ರಿಂದ 18—9—1903 ರ ವರೆಗೆ.

| ಸ್ಥಳ. | ಪ್ಲೇಗ್ ಹಿಡಿದದ್ದು. | ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | 13 | 9 | 13 | 4 |
| ಮೈಸೂರು ,, | 9 9 | 166 | 139 | 150 |
| ಬೆಂಗಳೂರು ಡಿಸ್ಟ್ರಿಕ್ಟ್ | 194 | 99 | 100 | 88 |
| ಮೈಸೂರು ,, | 26 | 17 | 56 | 41 |
| ಕೋಲಾರ್ ,, | 109 | 71 | 48 | 32 |
| ಕೋಲಾರ್ ಚಿನ್ನದ ಗಣಿಗಳು | 2 | 2 | 8 | 6 |
| ತುಂಕೂರು ಡಿಸ್ಟ್ರಿಕ್ಟ್ | 87 | 72 | 94 | 55 |
| ಹಾಸನ ,, | 31 | 23 | 8 | 7 |
| ಚಿತ್ರದುರ್ಗ ,, | 87 | 65 | 69 | 85 |
| ಕಡೂರ್ ,, | 1 | 1 | | |
| ಶಿವಮೊಗ್ಗ ,, | 141 | 90 | 193 | 56 |
| ಜುಮ್ಲಾ | 933 | 645 | 769 | 546 |

ಶಾಲಿವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಆಶ್ವೀಜ ಶುದ್ಧ ದಶಮಿ ಗುರುವಾರದಿಂದ ಆಶ್ವೀಜ ಬಹುಳ ಶಾಷ್ಠಿ ಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಅಕ್ಟೋಬರು

| ತಾ. | ವಾರ | ತಿಥಿ. | ಘಳಿಗೆ. | ನಕ್ಷತ್ರ | ಘಳಿಗೆ. | ಕನ್ನಡ ತೇದಿ. |
|---|---|---|---|---|---|---|
| 1 | ಗುರು * | ದಶಮಿ | 11 12 | ಶ್ರ | 60 0 | 15 |
| 2 | ಶುಕ್ರ † | ಏಕಾದಶಿ | 19-24 | ಶ್ರ | 0 30 | 16 |
| 3 | ಶನಿವಾರ ‡ | ದ್ವಾದಶಿ | [illegible] | ಧ | [illegible] | 17 |
| 4 | ರವಿವಾ | ತ್ರಯೋ | [illegible] 10 | ಶ | 12 48 | 18 |
| 5 | ಚಂದ್ರ | ಚತುರ್ದಶಿ | 31 54 | ಪೂಭಾ | 17 [illegible] | 19 |
| 6 | ಕುಜ ¶ | ಪೌರ್ಣಮಿ | 31 2 | ಉಭಾ | 21 39 | 20 |
| 7 | ಬುಧ | ಪಾಡ್ಯಮಿ | 35 20 | ರೇ | 24 32 | 21 |

* ವಿಜಯದಶಮಿ. † ಶೂನ್ಯತಿಥಿ, ಸರ್ವತ್ರ ಏಕಾದಶಿ. ‡ ಶನಿಪ್ರದೋಷ ಮಹಾವ್ಯಪು. ¶ ಚಿಟ್ಟದಲ್ಲಿ ಬಾಪಾಂಡುವಾದೀ ...

### ಪೇಟೆ ಧಾರಣೆ.

| ದಿನಸಿ | ಮೈಸೂರು | ಬೆಂಗಳೂರು. |
|---|---|---|
| ಸಣ್ಣ ಅಕ್ಕಿ ಪಲ್ಲಾ ೧ಕ್ಕೆ | ರೂ ೧೦ ೮—೦ | ೧೦—೦—೦ |
| ದೊಡ್ಡ ಅಕ್ಕಿ ಅವಲ್ | ೧೦ ೬—೦ | ೧೦—೦—೦ |
| ,, ದುಯಂ | ೯—೮—೦ | ೯—೬—೦ |
| ಜಾಪ್ಪಾಳೆ ಅಕ್ಕಿ | ೯—೬—೦ | [illegible] |
| ಸಣ್ಣಕ್ಕಿ ಅವಲ್ | ೧೦—೪ ೮—೦ | ೧೦—೮—೦ |
| ,, ದುಯಂ | ೧೦—೦—೦ | ೧೦—೮—೦ |
| ತೊಗರಿ ಬೇಳೆ ಪಲ್ಲಾ ೧ಕ್ಕೆ | ೧೩ ೦ ೦ | ೧೩—೦—೦ |
| ,, ದುಯಂ | [illegible] | [illegible] |
| ಕೆಂಪು ರಾಗಿ ಪಲ್ಲಾ ೧ಕ್ಕೆ | ೩ ೧೨—೦ | ೩—೦—೦ |
| ಕಾಳು ರಾಗಿ | ೩—೮—೦ | ೩—೧೦—೦ |
| ಜೋಳ | ೩—೦—೦ | ೬—೦—೦ |
| ಹುರುಳಿ ಪಲ್ಲಾ ೧ಕ್ಕೆ | ೩—೧೦—೦ | ೪—೦—೦ |
| ಬಿಳೀ ಅವರೆ | ೭ ೦ ೦ | ೮—೮—೦ |
| ಹೆಸರು | ೮—೦—೦ | ೯—೩—೦ |
| ಉದ್ದು | ೮ ೩ ೦ | ೮—೦—೦ |
| ಕಡಲೆ | ೯ ೮—೦ | ೮—೦—೦ |
| ಎಳ್ಳು | [illegible] | ೭—೮—೦ |
| ಹುರುಳಿ | ೩—೮ ೦ | ೩—೩—೦ |
| ಹರಳು ೧೦೦ ಸೇರಿಗೆ | ೫—೦—೦ | ೫—೩—೦ |
| ತುಪ್ಪ ೧೦೦ ಮಣ ೧ಕ್ಕೆ | ೧—೪—೦ | ೧—೪—೦ |
| ಮೆಣಸಿನಕಾಯಿ | ೧—೪—೦ | ೧—೪—೦ |
| ,, ದುಯಂ | ೧—೩ ೦ | ೧—೪—೦ |
| ಬೆಲ್ಲ ದೊಡ್ಡ ಅಚ್ಚು | ೬—೦—೦ | ೧—೬—೦ |
| ಒಳ್ಳೆಣ್ಣೆ ಮಣ ೧ಕ್ಕೆ | ೬—೦ ೦ | ೩—೦—೦ |
| ಹರಳೆಣ್ಣೆ | ೬—೦—೦ | ೬—೦—೦ |
| ಕೊಬ್ಬರಿ ಎಣ್ಣೆ ೧ಕ್ಕೆ | ೭ ೦—೦ | ೬—೦—೦ |
| ಉಪ್ಪು ,, | ೧೦—೦—೦ | ೮—೮—೦ |
| ಹುಣಸೇ ಹಣ್ಣು | ೬—೧೩—೦ | ೬—೦—೦ |
| ,, ಶೀಗೇದು | ೬—೧೩—೦ | ೬—೦—೦ |
| ಉಪ್ಪು | ೧೦—೧೦—೦ | ೧೦—೦—೦ |
| ಶೀಮೆಯೆಂಣೆ ಪಟ್ಟಿ ೧ಕ್ಕೆ | ೩ ೯—೦ | ೩—೦—೦ |
| ತೆಂಗಿನಕಾಯಿ ೧೦೦೦ ಕ್ಕೆ | ೩—೩—೦ | ೩—೦—೦ |
| ಅಡಿಕೆ ಮಣ ೧ಕ್ಕೆ | ೩—೦—೦ | ೩—೦—೦ |
| ಅಂಟ್ವಾಳಕಾಯಿ ಮಣ ೧ಕ್ಕೆ | ೦—೧೦—೦ | ೦—೮—೦ |
| ಹತ್ತಿ (ಕೇ) ಕೆಂಪು | ೦೫—೩—೦ | ೦೫—೦—೦ |
| ,, ,, ಬಿಳುಪು | ೦೫—೮—೦ | ೦೫—೪—೦ |
| ,, ಗಟ್ಟಿ ಕಂಡಿ ೧ಕ್ಕೆ | ೩೩—೦—೦ | ೩೩—೦—೦ |
| ಬೆಲ್ಲ ಗಟ್ಟಿ ಕೊಡ ೧೦೦ | ೩೦—೦—೦ | ೩೩—೦—೦ |

Printed and Published by the Rev. E. W. Thompson, M.A., the Proprietor and Manager, Wesleyan Mission Press, Mysore, 1/10 1903.

# ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು —:o:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩. ಮೈಸೂರು—ಸನ್ ೧೯೦೩ ನೇ ಇಸವಿ ಅಕ್ಟೋಬರ್ ತಾರೀಖು ೮ ನೇ ಗುರುವಾರ. ಸಂಚಿಕೆ ೪೧



## ಕ್ಷೇತ್ರಗಣಿತ ಸಂಗ್ರಹ.

11

ಈ ಹೊಸ ಪುಸ್ತಕವನ್ನು ಮೈಸೂರು ಶಿವರಾಮಪೇಟೆ ಸ್ಕೂಲು ಮಾಸ್ಟರು ಟಿ. ಯಂ. ರಾಮಸ್ವಾಮಿಯ್ಯನವರು ಬರೆದಿರುತ್ತಾರೆ. ಇದರಲ್ಲಿ ಸುಮಾರು ಸಾವಿರ ಲೆಕ್ಕಗಳೂ ಮೈಸೂರು ದೇಶೀಯ ಪರೀಕ್ಷೆಯ ಪ್ರಶ್ನಪತ್ರಿಕೆಗಳೂ ಉತ್ತರಗಳೊಡನೆ ಅಡಕವಾಗಿವೆ. ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆಯುವಂತೆ ಅಲ್ಪಕ್ರಯಕ್ಕೆ ಮಾರಲ್ಪಡುವದು ಕ್ರಯ ೪ ಆಣೆ, ಅಂಚೆ ೬ ಪೈ. ವಿಳಾಸ —

ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

## ಸ್ಟಾಂಡರ್ಡ್ ಲೈಫ್ ಅಷ್ಯೂರೆನ್ಸ್ ಕಂಪೆನಿ.

12

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಇಂಡಿಯಾ ದೇಶದಲ್ಲಿ ಲೈಫ್ ಇನ್ಷ್ಯೂರೆನ್ಸ್ ಯಾನೆ ಜೀವ ವಿಮೆ ಮಾಡುವ ಕಂಪೆನಿಗಳಲ್ಲಿ ಇದು ಬಹು ಹಳೇದಾಗಿಯೂ ಹೆಚ್ಚಾದ ಬಂಡವಾಳವುಳ್ಳದ್ದಾಗಿಯೂ ಇದೆ. ಭೀಮೆದಾರರಾಗತಕ್ಕವರು (ಲೈಫ್ ಎಸ್ಯೂರ್ ಮಾಡತಕ್ಕ) ಈ ಕಂಪೆನಿಯ ಚಂದಾ ದರ, ಷರತ್ತುಗಳು ಮೊದಲಾದವುಗಳನ್ನು ಇತರ ಕಂಪೆನಿಯವುಗಳೊಡನೆ ಹೋಲಿಸಿನೋಡಿದರೆ ಇಲ್ಲಿ ಭೀಮೆಯನ್ನು ಮಾಡುವವರಿಗೆ ಎಷ್ಟು ಸೌಕರ್ಯಗಳುಂಟೆಂಬುದು ಗೊತ್ತಾಗುವದು.

ಈ ಕಂಪೆನಿಯ ಭೀಮಾ ನಿಬಂಧನೆಗಳು ಬಹು ಅನುಕೂಲವಾದವು. ಭೀಮೆದಾರರುಗಳಿಗೆ ತೊಂದರೆಯನ್ನುಂಟುಮಾಡುವ ನಿಬಂಧನೆಗಳೇನೂ ಇಲ್ಲ.

ನಿರ್ದಿಷ್ಟವಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲು ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂಪಾಯಿಗಳನ್ನು ಕಂಪೆನಿಯವರು ಕೊಡುವ ಲಾಭಸಹಿತವಾಗಿ ಪಡೆಯಬೇಕಾದರೆ ಭೀಮೆದಾರನು ಕಂಪೆನಿಗೆ ಕೊಡಬೇಕಾದ ಚಂದಾ ದರಗಳ ಪೈಕಿ ಕೆಲವನ್ನು ಇಲ್ಲಿ ನೋಡಿ

| ಭೀಮೆಯಾಗುತ್ತಿರುವ ವಯಸ್ಸು | ೫೦ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ ಪಡೆಯಬೇಕಾದರೆ ಮಾಹೆಯಾನ ಕಂಪೆನಿಗೆ ಕೊಡುವದು | ೫೫ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ ಯನ್ನು ಪಡೆಯಬೇಕಾದರೆ ಮಾಹೆಯಾನ ಕಂಪೆನಿಗೆ ಕೊಡುವದು. |
|---|---|---|
| ೨೦ | ರೂ ೬—೧೨—೮ | ರೂ ೬—೧—೦ |
| ೨೫ | ,, ೭—೧೫—೪ | ,, ೬—೧೪—೦ |
| ೩೦ | ,, ೯—೧೨—೮ | ,, ೮—೭—೦ |
| ೩೫ | ,, ೧೦—೧೪—೮ | ,, ೧೦—೧—೪ |
| ೪೦ | | ,, ೧೩—೪—೮ |

೨,೦೦೦ ರೂ ಗಿಂತಲೂ ಹೆಚ್ಚಾದದ್ದಕ್ಕಾಗಲಿ ಕಡಮೆಯಾದ್ದಕ್ಕಾಗಲಿ ವಯಸ್ಸಿನಲ್ಲಿ ಹೆಚ್ಚು ಕಡಮೆ ಇದ್ದರಾಗಲಿ ಚಂದಾ ದರವೇನೆಂಬುದನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು. ಇದುವರೆಗೆ ಜಾರಿಯಲ್ಲಿದ್ದ ಚಂದಾ ದರಗಳನ್ನು ಕಡಮೆ ಮಾಡಿ ಈ ಬಾರಿ ವರ್ಷಕ್ಕೆ ತಯಾರಾಗಿರುವ ಹೊಸ ಚಂದಾ ಪಟ್ಟಿ ಭೀಮಾ ದರಖಾಸ್ತು ಫಾರಂಗಳನ್ನು ಇದೇ ವಿಳಾಸದಿಂದ ತರಿಸಿಕೊಳ್ಳಿರಿ.

ಎಂ. ಸೂರ್ಯನಾರಾಯಣಪ್ಪ,

ಡಿವಿಜನ್ ಮತ್ತು ಜನರಲ್ ಏಜನ್ಸಿ,

ಶಿವಮೊಗ್ಗೆ.

## ಸರಸ್ವತೀಕರ ಕಸ್ತೂರಿ ಮಾತ್ರೆಯು.

17



ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥಾವರಿಗೆ ಅತ್ಯಂತ ಉಪಯುಕ್ತವಾದದ್ದು. ಈ ಮಾತ್ರೆ ೧–೨ ತಾಂಬೂಲದ ಸಂಗಡ ಸೇವಿಸುವದರಿಂದ ಬಾಯಿಯ ಸುವಾಸನೆಯುಂಟಾಗಿ ಬಾಯಿಯ ದುರ್ಗಂಧ, ಹೋಗಿ ಅಜೀರ್ಣ, ಉಷ್ಣರೋಗ, ಬಾಯಿಯ ಜೊಲ್ಲು, ಉಗ್ಗಿಸುತ್ತಾ ಮಾತಾಡುವದು, ವಾಯು, ಶೀತ, ಪಿತ್ಥ, ಮಲಬದ್ಧ, ದಂತದೋಷ, ಬಾಯಿಹುಣ್ಣು, ಹಸಿವು, ಜ್ವರ, ಭ್ರ, ನೆಗಡಿ, ತಲೆನೋವು ಇತ್ಯಾದಿ ಅನೇಕ ರೋಗಗಳಿಗೆಲ್ಲಾ ಗಾಮಬಾಣದಂತಿರುವದು. ಹಿಂಗಸರ ಗರ್ಭ ಮಾದ ಅನೇಕ ಬಾಧ್ಯತೆಗಳಿಗೆ ವಜ್ರಾಯುಧದಂತಿರುವದು ಚಿಕ್ಕ ಮಕ್ಕಳಿರುವ ಮನೆಯಲ್ಲಿ ಈ ಮಾತ್ರೆಯು ಸಂಜೀವನವು. ಈ ಮಾತ್ರೆಯು ನಿಮ್ಮ ಕೈಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸ್ವಾಧೀನದಲ್ಲಿದ್ದಂತೆಯೇ. ೨೦೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೫ ಆಣೆ, ೫ ಆಣೆ ಬೆಲೆ ಧವ ೨ ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವೇ ನಿಮಗೆ ಖಚಿತವಾಗಿ ಮನವರಿಕೆ ಮಾಡಿಕೊಡುವದು.

ಸಿ. ಪಿ. ಅಂಡ್ ಕಂಪನಿ, ಬೆಂಗಳೂರು ಸಿಟಿ.

## ROBINSON'S PATENT BARLEY.

## ರಾಬಿನ್ಸನ್ನರವರ ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಎತಿಗೋಧಿಯಿಂದ ಮಾಡಿದೆ. ಹಸ್ತಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಕಾಲ ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾ ಇದ್ದಾರೆ. [illegible] ಜಾವನನ್ನು ನೋಡಿ [illegible]

## MELLIN'S FOOD.

ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

60

೧. ಮೆಲ್ಲಿನ್'ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್'ರು ಮಾಡಿರುವ ಆಹಾರವು ದೇಹದ ನರಗಳೂ ಸ್ನಾಯುಗಳೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್'ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ.

೪. ಮೆಲ್ಲಿನ್'ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಕಪೂರಕ ರಕ್ತಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್'ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನ್'ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್'ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್'ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಹಾಲು ಕೂಡ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಕಂದಿಗಳಿಗೆ ಅರ್ಹವಾಗುತ್ತದೆ.

೯. ಮೆಲ್ಲಿನ್'ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ಪಿಷ್ಟವು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ತಕ್ಷಣ ದೇಹದ ಒಂದಂಶವಾಗುತ್ತದೆ.

೧೦. ಮೆಲ್ಲಿನ್'ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿಯೂ ಕ್ಷೀಣದಲ್ಲಿಯೂ ಒದಗುವ ವಿಕಾರವಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್'ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್'ರು ಮಾಡಿರುವ ಆಹಾರದಲ್ಲಿ ಗಂಜಿ ಪದಾರ್ಥವು ಯಾವದೂ ಸೇರಿರುವದಿಲ್ಲ. ತಾಯಿಹಾಲಿನಲ್ಲಿರುವ ಪದಾರ್ಥಗಳೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್'ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ತಕ್ಕಂತೆ ಸೃಷ್ಟಿಯಾಗಿದೆ.

೧೪. ಮೆಲ್ಲಿನ್'ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ವೃದ್ಧಿಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ದಾಟುವಂತೆ ಮಾಡುತ್ತದೆ.

೧೫. ಮೆಲ್ಲಿನ್'ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಕೊಡುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು [illegible] ಏಜಂಟರುಗಳಲ್ಲಿ ಯಾರಿಗಾದರೂ, [illegible] ಪಟ್ಟಣಗಳಲ್ಲಿರುವ ಷಾಪುಗಳಿಗೆ [illegible] ತರಿಸಿಕೊಳ್ಳಬಹುದು —

ಮದ್ರಾಸ್ —ಮೆ॥ ಕಾವಸ್ ದಿನ್‌ಷಾ ಬ್ರದರ್ಸ್

ಬೆಂಗಳೂರು —ಮೆ॥ ಲೇಮಂ [illegible]

ಕಲ್ಕತ್ತಾ —ಮೆ॥ ಮೆಕ್ಕೆನ್‌ಜಿ ಲಯಾಲ್ ಕಂಪೆನಿ

ಸಿಕಂದರಾಬಾದ್ —ಮೆ॥ ಹಾಲ್ ವಿಲ್ಸನ್ ಕಂಪೆನಿ

ಕರಾಚಿ —ಮೆ॥ ಎಚ್. ಜೆ. [illegible]

[illegible] —ಮೆ॥ [illegible]

[illegible] —ಲೇಮಂ ಬ್ಲಾಕ್ ಕಂಪೆನಿ

ನಿಮ್ಮ ತಲೆಯಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

5

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳೇ.

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿ ಆಗುತ್ತಿರುವ ಟೋಪಿಗಳ ಮಾದರಿಯೆಲ್ಲಾ ಬೇರೆಯದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಮಾದರಿಯೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವವು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ರೂಪಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೇ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ.

ವಿಜಯದಶಮಿ ದೀಪಾವಳಿ ಬಹುಮಾನಗಳು!

ಭಾರೀ ಬೆಲೆಯುಳ್ಳ ಅತಿ ಶ್ರೇಷ್ಠವಾದ ಗ್ರಂಥಗಳನ್ನು ಸಂಗ್ರಹಿಸುವವರಿಗೆ ಇದೇ ಒಳ್ಳೇ ಸಂಧಿ !!

ಬೇಗ ಬೇಗ ಬರೆದು ಕೊಳ್ಳುವ ದರಖಾಸ್ತುದಾರರಿಗೆ ಬಹಳ ಲಾಭ!!!

ಅಕ್ಟೋಬರು ೧೫ ನೇ ತಾರೀಖಿನ ಮೊದಲು ನವಂಬರು ೨೫ ನೇ ತಾರೀಖು ಒಳಗೆ.

ಪ್ರಶ್ನೋತ್ತರ ಲೇಖ್ಯಬೋಧಿನಿ ಮೊದಲನೆ ಭಾಗ ಸಾಧಾರಣ ಕಾಗದದ ಪ್ರತಿ ೧ಕ್ಕೆ ವಿ. ಪಿ. ಯಲ್ಲಿ ಕ್ರಯ ಅಧಿಕ್ಯಾಣೆ ಮಾತ್ರವೆ.

ಭೂಮಿಯ ಅಳತೆ ವಿ. ಪಿ. ಮೂಲಕ ಒಂದೇ ರೂಪಾಯಿ

ಕನ್ನಡ ಟೀಕೆಯೊಂದಿಗಿರುವ ಜಗದ್ಗುರು ಶ್ರೀ ಶಂಕರಾಚಾರ್ಯರ ...

ವೇದಾಂತ ಗ್ರಂಥರತ್ನ ಚತುಷ್ಟಯಂ ವಿ. ಪಿ. ಯಲ್ಲಿ ಹದಿಮೂರಾಣೆ ಮಾತ್ರ.

ಈ ಪುಸ್ತಕಗಳನ್ನು ವಿ. ಪಿ. ದ್ವಾರ ತರಿಸಿಕೊಳ್ಳುವವರ ಸ್ಥಳದ ನಮ್ಮ ಗಿರಾಕಿಗಳಿಗೆ ಈ ಕೆಳಗೆ ನಮೂದಿಸುವ ಪುಸ್ತಕಗಳಲ್ಲಿ ಯಾವುದಾದರೊಂದು ಉಚಿತವಾಗಿ ದೊರೆಯುವುದು.

ಬಹುಮಾನದ ಪುಸ್ತಕಗಳು ನಾಲ್ಕು ಚೀಟುಗಳಾಗಿ ವಿಂಗಡವಾಗಿ ಇದ್ದು, ಪರಿಮಾಸ್ಸು ಬಂದಹಾಗೆ ಅನುಕ್ರಮವಾಗಿ ಹೆಸರುಗಳ ಬರೆದು ಆಯಾ ನಂಬರುಗಳಿಗೆ ಲಾಟರಿ ವಿಧಾಯಕದಂತೆ ಪ್ರತಿ ಚೀಟಿಗೂ ಯಾವುದಾದರೂ ಒಂದು ಪುಸ್ತಕ ಕ್ರಯವಿಲ್ಲದೆ ಉಚಿತವಾಗಿ ದೊರೆಯುವ ಏರ್ಪಾಡು ಮಾಡಿರುತ್ತೆ. ಎಲ್ಲಾ ಪುಸ್ತಕಗಳನ್ನೂ ವಿ. ಪಿ. ದ್ವಾರ ಕಳುಹಿಸಲಾದೀತು.

ಅಂಚೆ ಖರ್ಚು ಮಾತ್ರ ಗ್ರಾಹಕರೇ ವಹಿಸಬೇಕು.

| | |
|---|---|
| ಚಿತ್ರಪ್ರಭಾಮಂಜರಿ | ಟೀಕು ಅಧ್ಯಾತ್ಮರಾಮಾಯಣ |
| ವಚನರಾಮಾಯಣ | ಯಾಜ್ಞವಲ್ಕ್ಯಯೋಗ ಪ್ರದೀಪಿಕೆ |
| ಕೊಂಡೆ ನಾಟಕ | ವೈದ್ಯಶಾಸ್ತ್ರಸಂಗ್ರಹ ದೊಡ್ಡದು |
| ಹಾಸ್ಯ ತಿಲಕಚರಿತ್ರೆ | ಟೀಕು ಭಗವದ್ಗೀತೆ ದೊಡ್ಡದು |
| ಮುದ್ರಾರಾಕ್ಷಸ ನಾಟಕ | ಟೀಕು ಶಾಲಾಮೃತ |
| ಪ್ರಶ್ನೋತ್ತರ ರತ್ನಮಂಜರಿ | ಟೀಕು ಮುಕುಂದದರ್ಪಣ |
| ಕೃಷ್ಣಬೋಧಾಮೃತ | ಕಠೋಪನಿಷತ್ತು |
| ಹರಿಶ್ಚಂದ್ರಚರಿತ್ರೆ | ಟೀಕು ಶಿವಗೀತೆ |
| ಶ್ರೀಕೃಷ್ಣಸ್ತವ | ಟೀಕು ಶಿವಾನಂದಲಹರಿ |
| ಮುಷ್ಟಿಕ ಧಾತು | ಚಿಕಿತ್ಸಾಸಾರ |
| ಕಲಾವತೀ ಪರಿಣಯ | ಪ್ರಭುರಾಜ |
| ಚಂದ್ರಹಾಸನ ಕಥೆ | ಸೂರ್ಯನಾರಾಯಣ ಕಾವ್ಯ |
| ವೃಷಭೇಂದ್ರ ವಿಜಯ | ನಿವಿದೀಪಿಕಾರತ್ನ |
| ಕನ್ನಡ ಪಂಚತಂತ್ರದ ಪದ್ಯ | ಟೀಕು ಸುಭಾಷಿತ |
| ಟೀಕು ಪ್ರಶ್ನೋತ್ತರ | ಕಬರಧನಂಜಯವಿಲಾಸ |
| ಟೀಕು ಭಾಸ್ಕರೀಯ | ಕರಣಲೀಲಾಮೃತ |
| ಟೀಕು ಮುಕ್ತಾ ಸಂದೇಶ | ಹನುಮದ್ವಿಲಾಸ |
| ಬಸವಲೀಲಾ | ಸರ್ಪಜ್ಞನ ಪದ್ಯಗಳು |
| ಪ್ರಭುಲಿಂಗ ಚರಿತ್ರೆ | ಜ್ಯೋತಿಷ ಬಾಲಬೋಧೆ |
| ಟೀಕು ಅನರ್ಘ ರತ್ನ | ನವಗ್ರಹ ಚಿಂತಾಮಣಿ |
| ಹರಿಶ್ಚಂದ್ರ ನಾಟಕ | ಕೃಷ್ಣ ಲೀಲಾವಳಿ |
| ಗಾಂಧರ್ವವಿವಾಹ ನಾಟಕ | ಧ್ರುವನಾಟಕ |
| ರಾಕ್ಷಸ ಲೀಲಾ ನಾಟಕ | ಮಾರ್ಕಂಡೇಯ ನಾಟಕ |
| ಪ್ರಭಾವತಿ ಪರಿಣಯ ನಾಟಕ | ಕೃತಕೀರ್ತಿ ನಾಟಕ |
| ಮಾಳವಿಕಾಗ್ನಿಮಿತ್ರ ನಾಟಕ | ಇಂದ್ರಸಭಾ ನಾಟಕ |

ಕಾಗದ ಬರೆಯುವವರು "ವಿಜಯದಶಮಿ ದೀಪಾವಳಿಯ ಬಹುಮಾನ" ದ ಸಂಬಂಧ ತಮಗೆ ಬೇಕಾದ ಪುಸ್ತಕ ಬೇಕೆಂದೂ ಸವಿಸ್ತಾರ ವಿಳಾಸ ಸಹಿತ ವಿವರಿಸಬೇಕು.

ಭಾರತಿ ಸಂಪಂಗಿರಾಮು,
ಚಿಕ್ಕಪೇಟೆ, ಬೆಂಗಳೂರು ಸಿಟಿ

ಚೇಂಬರ್ಲೀನ್ ಯವರು ಮಾಡಿದ ನೋವುಹರ ಔಷಧವು.

40




ಈ ಔಷಧವು ಪ್ರತಿ ಮನೆಯವರಿಗೂ ಅಗತ್ಯ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷದ ರೋಗಗಳಿಗೂ ಅನುಕೂಲವಾದದ್ದು. ಶರೀರಕ್ಕೆ ಮೂಗು ಪಟು ಇದ್ದರೂ ಆಯಿಯಂತ ಗಾಯವಾದರೂ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಪೂರ್ತಿ ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೀನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ೧ಕ್ಕೆ ೧ ರೂ. ; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗೆ ವಿಳಾಸದಾರರಲ್ಲೂ ಸಿಕ್ಕುವದು:—

ಡಬ್ಲ್ಯು. ಇ. ಸ್ಮಿತ್ ಅಂಡ್‌ಕಂಪೆನಿ,
ಮೌಂಟ್ ರೋಡ್,
ಮದರಾಸ್.

"ಬಸವರಾಜವಿಜಯ."

5

ಪಠನರೂಪವಾದದ್ದು. ಬಾಲಕರು ಕೂಡ ಸುಲಭವಾಗಿ ಓದಿ ತಿಳಿದುಕೊಳ್ಳಬಹುದು. ಬಸವಪುರಾಣದ ಕಥೆಗಳೆಲ್ಲಾ ಇದರಲ್ಲಿವೆ. ಶುದ್ಧವಾದ ಈ ದೊಡ್ಡ ಪುಸ್ತಕ ೧ಕ್ಕೆ ವಿ. ಪಿ. ಮೂಲಕ ೧—೩—೦. ೧೨ ಪ್ರತಿಗಳನ್ನು ತರಿಸಿಕೊಂಡರೆ ೧ ಉಚಿತ. ಬೇಕಿದ್ದವರು ಮೈಸೂರು ದೊಡ್ಡ ಪೇಟೆ ಎಂ. ಆರ್. ಕರಿಬಸವಶಾಸ್ತ್ರಿಗಳಿಗೆ ಬರೆದು ತರಿಸಿಕೊಳ್ಳಬೇಕು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

4

೧೮೯೫ ನೆ ಇಸವಿ ಮೈಸೂರು ಕಂಪೆನಿ ಆಕ್ಟಿಗೆ ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ಶ್ರೀಮಾನ್ ಮೈಸೂರು ಮಹಾರಾಜರವರ ಗವರ್ನಮೆಂಟಿನವರಿಂದ ಗ್ಯಾರಂಟಿ ಮಾಡಲ್ಪಟ್ಟ ಸದರಿ ಕಂಪೆನಿಯ ಷೇರು ಒಂದಕ್ಕೆ ೨೫ ರೂಪಾಯಿ ಪ್ರಕಾರ ೨೦,೦೦೦ ಷೇರುಗಳಿಂದ ಆಗುವ ೫,೦೦,೦೦೦ ರೂಪಾಯಿ ಭಂಡವಾಳ. ಷೇರುಗಳು ತೆಗೆದುಕೊಳ್ಳುವವರು ಇದರ ಸ್ಕೀಂ ಮಾಡಿರುವವರಿಂದ ವಿಶಿಷ್ಟ ತಪಸೀಲು ತಿಳಿದುಕೊಳ್ಳಬಹುದು. ಅಪ್ಲಿಕೇಷನ್‌ಗಳನ್ನು ಮತ್ತು ಮೊಬಲಗನ್ನೂ ಇವರಲ್ಲೇ ಕಳುಹಿಸಬಹುದು.

ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,
ಅಡ್ವೊಕೇಟ್ ಮತ್ತು ಜನರಲ್ ಏಜಂಟ್,
ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ,
ನಗರ್ತಪೇಟೆ, ಬೆಂಗಳೂರು.

ನಮ್ಮ ಚಂದಾದಾರರಿಗೆ ನೋಟಿಸ್.

"ವೃತ್ತಾಂತ ಪತ್ರಿಕೆ" ಯ ಏಜಂಟರು ಚಂದಾ ವಸೂಲ್ಮಾಡಿ ಕೊಂಡದ್ದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲ.

ಮ್ಯಾನೇಜರ್,
ಮೈಸೂರು. "ವೃತ್ತಾಂತ ಪತ್ರಿಕೆ" ಆಫೀಸ್.

# ವೃತ್ತಾಂತ ಪತ್ರಿಕೆ.

:o:

ಸರ್ ೧೯೦೩ ನೇ ಇಸವಿ ಅಕ್ಟೋಬರ್ ತಾ ೮ ನೇ ಗುರುವಾರ.

## ಪ್ರಜಾಪ್ರತಿನಿಧಿ ಸಭೆಯಲ್ಲಿ ಶ್ರೀಮನ್ಮಹಾರಾಜರವರು ಮಾಡಿದ ಉಪನ್ಯಾಸ.

ಈ ವರ್ಷ ರಾಜಧಾನಿಯಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯನ್ನು ಪ್ರಾರಂಭಿಸುವ ಕಾಲದಲ್ಲಿ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ ಉಪನ್ಯಾಸವು ಬಹು ಮುಖ್ಯವಾದುದು. ಈ ಸಲವೂ ಹೀಗು ದಾವಳಿಯ ದೆಸೆಯಿಂದ ಪ್ರಜಾಪ್ರತಿನಿಧಿಸಭೆಯನ್ನು ನಡೆಯಗೊಡದೆ ಇರುವುದಕ್ಕೆ ಕಾರಣವಿದ್ದರೂ ಶ್ರೀಮನ್ಮಹಾರಾಜರವರು ಇದನ್ನು ನಡಸಲೇ ಬೇಕೆಂದು ನಿರ್ಧರಿಸಿ ಕೊಂಡು, ಈ ಸಭೆಯು ಮುಂದೆಯೂ ದೇಶದ ಕಟ್ಟಳೆಗಳಲ್ಲೊಂದಾಗಿ ಅಚಂದ್ರಾರ್ಕವಾಗಿರ ಬೇಕೆಂಬ ತಮ್ಮ ಘನವಾದ ಉದ್ದೇಶವನ್ನು ಪ್ರಕಟಿಸಿದುದರಿಂದ ನಾವು ಸಂತೋಷಿಸುತ್ತೇವೆ. ಕಳೆದ ಒಂದೆರಡು ವರ್ಷಗಳು ಸಭೆಯು ನಡೆಯದೆ ಹೋಗಿರಲು ಇದನ್ನು ನಿಂಪೂರ್ಣವಾಗಿ ನಿಲ್ಲಿಸಿ ಬಿಡುತ್ತಾರೆಯೋ ಏನೋ ಎಂದು ಪ್ರಜೆಗಳು ಸಂದೇಹಿಸಲು ಕಾರಣವಿತ್ತು. ಲೇಟ್ ದಿವಾನರಾದ ಸರ್ ಶೇಷಾದ್ರಯ್ಯರವರೂ ಈ ಪ್ರಜಾಪ್ರತಿನಿಧಿ ಸಭೆಯ ವಿಷಯದಲ್ಲಿ ಅನುರಾಗವುಳ್ಳವರಾಗಿರದೆ, ಇದರಿಂದ ಪ್ರಯೋಜನವೇನೂ ಇಲ್ಲವೆಂಬ ಅಭಿಪ್ರಾಯವಿಡುತ್ತಿದ್ದರೆಂಬುದಾಗಿ ಸಾಮಾನ್ಯವಾಗಿ ಹೇಳುತ್ತಿರುವರಷ್ಟೆ. ಸರ್ ಶೇಷಾದ್ರಯ್ಯರವರು ಈ ಅಭಿಪ್ರಾಯವುಳ್ಳವರಾಗಿದ್ದರೋ ಇಲ್ಲವೋ ನಿರ್ಧರಿಸಿ ಹೇಳುವದಕ್ಕವಕಾಶವಿಲ್ಲ. ಅದು ಹಾಗಿರಲಿ, ಶ್ರೀಮನ್ಮಹಾರಾಜರವರು ಈ ಸಲ ಸಭೆಯ ಮುಂದೆ ಹೇಳಿದ ಉಪನ್ಯಾಸದಿಂದ ಪ್ರತಿನಿಧಿಸಭೆಯ ವಿಷಯ ಪ್ರಜೆಗಳಲ್ಲಿರ ಬಹುದಾದ ಸಂಶಯಗಳೆಲ್ಲಾ ನಿವರ್ತಿಯಾಗುತ್ತವೆ. ಪ್ರತಿನಿಧಿಗಳು ತಮ್ಮ ಪ್ರಾಂತ್ಯಗಳ ಪಕ್ಷವಾಗಿ ಮನವಿಗಳನ್ನು ಯಥೋಚಿತವಾದ ರೀತಿಯಲ್ಲಿ ಸರ್ಕಾರಕ್ಕೆ ತಿಳಿಯ ಪಡಿಸುತ್ತಿರುವರಿಗೂ ತಮ್ಮ ಈ ಸಭೆಯನ್ನು ಶಾಶ್ವತವಾಗಿ ನಡಸುವ ಭಾಗದಲ್ಲಿ ಯಾವ ಸಂಶಯವೂ ಇರುವದಿಲ್ಲವೆಂದು ಆ ಮಹಾಸ್ವಾಮಿಯವರು ಅಭಯವನ್ನು ಅನುಗ್ರಹಿಸಿದ್ದಾರೆ. ಇದೊಂದು ವಿಶೇಷವಾದ ಕೃಪೆಯೇ. ಆದರೂ ಪ್ರತಿನಿಧಿಗಳು ರಾಜ್ಯಭಾರವನ್ನು ನಡಸುವ ವಿಷಯದಲ್ಲಿ ಯಾವ ವಿಧವಾದ ಜವಾಬ್ದಾರಿಕೆಯನ್ನಾಗಲಿ ತಮ್ಮ ಮೇಲೆ ತೆಗೆದುಕೊಳ್ಳುವದಕ್ಕೆ ಎಷ್ಟುಮಾತ್ರವೂ ಹಕ್ಕುಳ್ಳವರಲ್ಲವೆಂಬುದೂ ಇಂಥ ಅಧಿಕಾರವು ಈ ಪ್ರಜಾಪ್ರತಿನಿಧಿಗಳ ಸಭೆಗೆ ಎಂದಿಗೂ ಸೇರಿರಲೂ ಇಲ್ಲ, ಸೇರತಕ್ಕುದೂ ಅಲ್ಲವೆಂದು ಶ್ರೀಮನ್ಮಹಾರಾಜರವರು ಅತ್ಯಂತ ಪರಿಷ್ಕಾರವಾಗಿ ತಿಳಿಯಪಡಿಸಿದರು. ಬ್ರಿಟಿಷ್ ಚಕ್ರಾಧಿಪತ್ಯವನ್ನು ನಡಸುತ್ತಿರುವ ಪಾರ್ಲಿಮೆಂಟ್ ಮಹಾ ಮಂತ್ರಾಲೋಚನೆಯ ಸಭೆಯಂತೆಯೇ ನಮ್ಮ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯೂ ಇರುತ್ತದೆಂದಾಗಲಿ, ಅಥವಾ ಅದನ್ನನುಸರಿಸುವುದಕ್ಕೆ ಈಗಲೇ ಆರಂಭಿಸಿರುತ್ತದೆಂದಾಗಲಿ ಊಹಿಸುವುದು ತಪ್ಪು; ಈ ಇಂಡಿಯಾ ದೇಶದ ಸಕಲ ಭಾಗಗಳಲ್ಲಿ ನಡೆಯುತ್ತಿರುವ ರಾಜ್ಯಭಾರಕ್ರಮವನ್ನು ಪರಿಶೋಧಿಸಿ ನೋಡುವಲ್ಲಿ ದೇಶೀಯ ಸಂಸ್ಥಾನಗಳ ರಾಜ್ಯಭಾರ ವಿಶಿಷ್ಟವೂ ಆಯಾ ಸಂಸ್ಥಾನಾಧಿಪತಿಗಳನ್ನು ಮಾತ್ರ ಸೇರಿದೆ, ಬ್ರಿಟಿಷ್ ರಾಜ್ಯಭಾರಕ್ಕೊಳಪಟ್ಟ ಭಾಗಗಳಲ್ಲಿ ಸಾರ್ವಭೌಮರ ಪ್ರತಿನಿಧಿಯಾಗಿ ಆಳುತ್ತಿರುವ ವೈಸರಾಯಿಗಳನ್ನು ಮಾತ್ರ ಸೇರಿದೆ; ಪ್ರಜಾಧಿಪತ್ಯವೆಂದೆನಿಸಿಕೊಳ್ಳುವ ರಾಜ್ಯಭಾರಕ್ರಮವೇನೆಂದು ಅಲ್ಪಸ್ವಲ್ಪವಾದರೂ ತಿಳಿದಿರುವವರು ಇಂಥಾ ಅಧಿಪತ್ಯಕ್ರಮವನ್ನು ಇಂಡಿಯಾ ದೇಶದವರಲ್ಲಿ ರೂಢಿಸುವುದಕ್ಕೆ ಪೇಕ್ಷೆಯುರ ವಿಷಭೀವೃದ್ಧಿ ಮುಂತಾದ ವಿದ್ಯಮಾನವು ಇನ್ನೂ ಸಮರ್ಪಕವಾಗಿಲ್ಲವೆಂದು ನಿಸ್ಸಂದೇಹವಾಗಿ ಅಭಿಪ್ರಾಯಪಡುವರು. ಆದಕಾರಣ ಈ ಮೈಸೂರು ಸಂಸ್ಥಾನದ ರಾಜ್ಯಭಾರದ ಸಕಲ ಭಾಗದಲ್ಲಿ ನಾವೊಬ್ಬರೇ ಉತ್ತರವಾದಿತ್ವವನ್ನು ವಹಿಸಿರುತ್ತೇವೆ, ಇದು ಇನ್ನ್ಯಾರಿಗೂ ಸೇರಿದುದಲ್ಲ ಎಂದು ಶ್ರೀಮನ್ಮಹಾರಾಜರವರು ಬಹು ಪರಿಷ್ಕಾರವಾಗಿ ತಿಳಿಯ ಪಡಿಸಿದರು,

ಸರ್ಕಾರದವರು ತಾವು ರಾಜ್ಯಭಾರದಲ್ಲಿ ರಚಿಸತಕ್ಕ ಅನೇಕ ಕಾರ್ಯಗಳನ್ನು ಪ್ರಜೆಗಳ ಲಕ್ಷ್ಯಕ್ಕೆ ತರುವುದರಲ್ಲಿಯೂ, ಪ್ರಜೆಗಳು ತಮ್ಮ ಮನವಿಗಳನ್ನು ಪ್ರಭುಗಳ ಗಮನಕ್ಕೆ ತರುವುದರಲ್ಲಿಯೂ ಈ ಪ್ರಜಾಪ್ರತಿನಿಧಿಗಳ ಸಭೆಯು ಬಹು ಅನುಕೂಲವಾದುದಾಗಿರುವುದರಿಂದ ಇದು ಪ್ರಯೋಜನಕರವಾದುದೆಂಬುದನ್ನು ನಾ

ಸಂಪೂರ್ಣವಾಗಿ ಅನುಮೋದಿಸುತ್ತೇವೆ. ಆದರೆ ಈ ಸ ಮಾಜವನ್ನು ಏರ್ಪಡಿಸಿರುವ ಕ್ರಮದಲ್ಲಿ ಕೆಲವು ಕೊರತೆ ಗಳುಂಟೆಂದು ನಾವು ಅಭಿಪ್ರಾಯ ಪಡುತ್ತೇವೆ. ಈ ಕೊ ರತೆಗಳು ಯಾವುವೆಂಬುದನ್ನೂ ಅವುಗಳನ್ನು ತಿದ್ದಿ ಪ್ರತಿ ಷ್ಠಿತರು ಸ್ಥಾಪನೋದ್ದೇಶವನ್ನು ಸಾರ್ಥಕ ಪಡಿಸಿ ಕೊಳ್ಳುವುದು ಹೇಗೆಂಬುದನ್ನೂ ಮುಂದೆ ಸಂದರ್ಭೋ ಚಿತವಾಗಿ ವಾಚಕರಿಗೆ ತಿಳಿಯಪಡಿಸುವೆವು.

## ಪ್ರಭುವಿನ ಪ್ರಾರ್ಥನೆ— II.

ಯೇಸುಸ್ವಾಮಿಯು ಹೇಳಿಕೊಟ್ಟ ಈ ಪ್ರಾರ್ಥನೆಯಲ್ಲಿ ಸ್ಪ ಷ್ಟವಾಗಿ ತೋರುವ ವಿಭಾಗಗಳು ಯಾವವೆಂದು ಪರೀಕ್ಷಿಸುವದಾ ದರೆ ಅದರಲ್ಲಿ ಏಳು ಬಿನ್ನಹಗಳವೆಯೆಂದು ಗೊತ್ತಾಗುವದು. ಈ ಏಳು ಬಿನ್ನಹಗಳ ಮೊದಲಲ್ಲಿ "ಪರಲೋಕದಲ್ಲಿರುವ ನಮ್ಮ ತಂದೆ ಯೇ" ಎಂದು ಹೇಳಿ ಭಗವಂತನನ್ನು ಯಾವಪ್ರಕಾರ ಕರೆಯಬೇ ಕೆಂದು ತಿಳಿಸಿರುತ್ತದೆ. ಬಿನ್ನಹಗಳನ್ನೆಲ್ಲಾ ಹೇಳಿ ಮುಗಿಸಿದಮೇಲೆ ಕಡೆಯಲ್ಲಿ ಭಗವಂತನ ಸ್ತೋತ್ರರೂಪವಾಗಿ "ರಾಜ್ಯವೂ ಬಲ ವೂ ಮಹಿಮೆಯೂ ನಿನ್ನವೇ" ಎಂಬ ಮಂಗಳ ವಾಕ್ಯವನ್ನು ಹೇ ಳುತ್ತದೆ. ಈ ಪ್ರಾರ್ಥನೆಯಲ್ಲಿ ಅಡಗಿರುವ ಏಳು ಬಿನ್ನಹಗಳಲ್ಲಿ ಮೊದಲನೆಯ ಮೂರು ಬಿನ್ನಹಗಳು ನಾವು ದೇವರ ವಿಷಯವಾಗಿ ಪ್ರಾರ್ಥಿಸಬೇಕಾದ ಕಾರ್ಯಗಳನ್ನೂ, ಕಡೆಯ ನಾಲ್ಕು ಬಿನ್ನಹಗ ಳು ಮನುಷ್ಯರ ವಿಷಯವಾಗಿ ಪ್ರಾರ್ಥಿಸಬೇಕಾದ ಕಾರ್ಯ ಗಳನ್ನೂ ಸೂಚಿಸುತ್ತವೆ. ದೇವರ ವಿಷಯವಾಗಿ ಪ್ರಾರ್ಥಿಸಬೇಕಾ ದ ಮೂರು ಅಂಶಗಳು ಯಾವವೆಂದರೆ—(೧) ನಿನ್ನ ನಾಮವು ಪರಿ ಶುದ್ಧವಾಗಿಯೇ ಇರಲಿ" ಎಂಬಲ್ಲಿ ದೇವರ ನಾಮದ ವಿಷಯವಾಗಿ ಯೂ, (೨) "ನಿನ್ನ ರಾಜ್ಯವು ಬರಲಿ" ಎಂಬದಾಗಿ ಹೇಳುವಲ್ಲಿ ದೇ ವರ ರಾಜ್ಯದ ವಿಷಯವಾಗಿಯೂ, (೩) ನಿನ್ನ ಚಿತ್ತವು ಪರಲೋಕ ದಲ್ಲಿ ನೆರವೇರುವಂತೆ ಭೂಲೋಕದಲ್ಲಿಯೂ ನೆರವೇರಲಿ" ಎಂಬು ದರಲ್ಲಿ ದೇವರ ಚಿತ್ತದ ವಿಷಯವಾಗಿಯೂ ಹೇಳಲ್ಪಟ್ಟಿದೆ. ಮನುಷ್ಯ ರ ವಿಷಯದಲ್ಲಿ ಪ್ರಾರ್ಥಿಸಬೇಕಾದ ನಾಲ್ಕು ವಿಜ್ಞಾಪನೆಗಳು ಯಾ ವ ಅಂಶಗಳನ್ನು ಸೂಚಿಸುತ್ತವೆಂದರೆ—(೧) "ನಮಗೆ ಬೇಕಾದ ಅನ್ನವನ್ನು ಈ ಹೊತ್ತು ನಮಗೆಕೊಡು" ಎಂಬಲ್ಲಿ ನಿ ತ್ಯವೂ ನಮಗೆ ಅವಶ್ಯವಾಗಿರುವ ಆಹಾರವನ್ನು ಕುರಿತು; (೨) ನಮ್ಮ ಋಣದಲ್ಲಿದ್ದವರಿಗೆ ನಾವು ಋಣಬಿಟ್ಟಂತೆ ನಮ್ಮ ಋಣಗಳ ನ್ನು ಬಿಡು" ಎಂಬಲ್ಲಿ ನಿತ್ಯವೂ ನಾವು ಮಾಡುವ ಅಕೃತ್ಯಗಳ ನಿ ಮಿತ್ತ; (೩) "ನಮ್ಮನ್ನು ಪರೀಕ್ಷೆಗೆ ಗುರಿಮಾಡದೆ" ಎಂಬಲ್ಲಿ ನಿ ತ್ಯವೂ ನಮಗೆ ಸಂಭವಿಸುವ ದುಷ್ಪ್ರೇರಣೆಗಳನ್ನು ಕುರಿತು, (೪) ಕೇಡಿನಿಂದ ಅಥವಾ ಕೆಡಕನಿಂದ ನಮ್ಮನ್ನು ತಪ್ಪಿಸು" ಎಂಬ ಲ್ಲಿ ನಿತ್ಯವೂ ನಮಗೆ ಕಾದುಕೊಂಡಿರುವ ಅಪಾಯಗಳ ನಿಮಿತ್ತ.

ಹೀಗೆ ಈ ಪ್ರಭುವಿನ ಪ್ರಾರ್ಥನೆಯನ್ನೂ ಪೂರ್ವದಲ್ಲಿ ಭಗ ವಂತನು ಮೋಶೆಯೆಂಬವನ ಮೂಲಕ ಇಸ್ರಾಯೇಲ್ಯರಿಗೆ ನಿರೂಪಿ ಸಿದ ದಶಾಜ್ಞೆಗಳನ್ನೂ ಹೋಲಿಸಿ ನೋಡಿದರೆ ಇವೆರಡಕ್ಕೂ ಬಹು ನಿಕಟವಾದ ಸಂಬಂಧವಿದೆಯೆಂದು ಗೊತ್ತಾಗುವದು. ಆ ದಶಾಜ್ಞೆಗ ಳಲ್ಲಿ ಮೊದಲನೆಯ ನಾಲ್ಕು ಆಜ್ಞೆಗಳು ದೇವರಿಗೆ ಸಲ್ಲತಕ್ಕ ಮ ನುಷ್ಯನ ಕರ್ತವ್ಯವನ್ನು ವಿಧಿಸುತ್ತವೆ. ಈ ಭಾಗದಲ್ಲಿ ಹೇಳಲುವ ದನ್ನು ನಾವು ಪ್ರಭುವಿನ ಪ್ರಾರ್ಥನೆಯಲ್ಲಿ "ಪರಲೋಕದಲ್ಲಿರು ವ ನಮ್ಮ ತಂದೆಯೇ" ಎಂದು ಹೇಳುವದನ್ನೂ ನೋಡಿದರೆ ಒಂ ದಕ್ಕೊಂದು ಚನ್ನಾಗಿ ಒಪ್ಪುತ್ತದೆ. "ನಾನೇ ಯೆಹೋವನು," ಎಂದು ಭಗವಂತನು ತನ್ನ ವಿಷಯದಲ್ಲಿ ಪ್ರಕಟಮಾಡಿಕೊಂಡಿರು ವದಕ್ಕೂ ಪ್ರಾರ್ಥನೆಯ ಮೊದಲಲ್ಲಿ ಪರಲೋಕದಲ್ಲಿರುವ ಅಂದರೆ ಸರ್ವಶ್ರೇಷ್ಠನಾದ ಭಗವಂತನೇ ಎಂದು ಹೇಳುವದಕ್ಕೂ ಒಪ್ಪುತ್ತ ದೆ. ದಶಾಜ್ಞೆಗಳಲ್ಲಿ ಮೊದಲನೆಯ ನಾಲ್ಕು ಆಜ್ಞೆಗಳು ಭಗವಂತ ನ ಏಕತ್ವವನ್ನೂ ಆತನ ಆರಾಧನೆಯನ್ನೂ, ಆತನ ನಾಮದ ಮಹಿಮೆಯನ್ನೂ, ಆತನಿಗೋಸ್ಕರ ಪರಿಶುದ್ಧವಾಗಿರತಕ್ಕ ದಿನವ ನ್ನು ಕುರಿತು ನಿರೂಪಿಸುವಂಥವುಗಳಾಗಿವೆ. ಇವುಗಳ ತರುವಾ ಯ ಹೇಳಿರುವ ಉಳಿದ ಆರು ಆಜ್ಞೆಗಳಲ್ಲಿ ಮನುಷ್ಯರು ಪರಸ್ಪರ ವಾಗಿ ಸಲ್ಲಿಸತಕ್ಕ ಕರ್ತವ್ಯವನ್ನು ವಿಧಿಸುವವುಗಳಾಗಿವೆ. ಭಗವಂ ತನಿಗೆ ಮನುಷ್ಯನು ಸಲ್ಲಿಸಬೇಕಾದ ಕರ್ತವ್ಯಗಳನ್ನೇ ಮೊದಲು ಹೇಳುವಂಥ ಈ ಕ್ರಮವು ಕ್ರಿಸ್ತ ಸ್ವಾಮಿಯು ಒಂದಾನೊಂದು ಸಂದರ್ಭದಲ್ಲಿ—"ನಿನ್ನ ದೇವರಾದ ಯೆಹೋವನನ್ನು ನಿನ್ನ ಪೂ ರ್ಣ ಮನಸ್ಸಿನಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂ ರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು ಎಂಬುವ ಆಜ್ಞೆಯೇ ಮು ಖ್ಯವಾದದ್ದು ಮತ್ತು ಮೊದಲನೇದು, ಇದಕ್ಕೆ ಸಮಾನವಾದ ಎರ ಡನೇ ಆಜ್ಞೆ ಒಂದು ಉಂಟು, ಅದು ಯಾವದಂದರೆ—ನೀನು ನಿನ್ನ ನ್ನು ಪ್ರೀತಿಸಿಕೊಳ್ಳುವಂತೆ ನಿನ್ನ ನೆರೆಯವನನ್ನು ಪ್ರೀತಿಸಬೇಕು ಎಂಬುವದೇ" ಎಂದು ಹೇಳಿದ್ದಕ್ಕೆ ಅನುಗುಣವಾಗಿದೆ.

ಪ್ರಭುವಿನ ಪ್ರಾರ್ಥನೆಯಲ್ಲಿ ಅನುಸರಿಸಿರುವ ಬಿನ್ನಹಗಳ ಕ್ರ ಮವನ್ನು ನಾವು ಮೇಲೆ ವಿವರಿಸಿರುವ ಪ್ರಕಾರ ನೋಡಿದರೆ ಪ್ರಾ ರ್ಥನೆ ಮಾಡುವ ಯೋಗ್ಯವಾದ ವಿಧಾನವನ್ನು ಕುರಿತು ಒಂದು ಬಹು ವಿಶೇಷವಾದ ಅಂಶವು ಗೊತ್ತಾಗುವದು ಅದು ಯಾವದಂ ದರೆ—ನಾವು ನಮ್ಮ ಅವಶ್ಯಕತೆಗಳನ್ನೂ ನಮ್ಮ ಆರೋಗ್ಯತೆಯ ನ್ನೂ ಕುರಿತು ಬಿನ್ನವಿಸುವದಕ್ಕಿಂತ ಮುಂಚಿತವಾಗಿ ಭಗವಂತನ ಅಪರಿಮಿತವಾದ ಮಹಿಮೆ, ಪವಿತ್ರತ್ವ, ಶಕ್ತಿ ಎಂಬೀ ಲಕ್ಷಣಗಳ ವಿಷಯವಾಗಿ ಆಲೋಚಿಸುವದು ಉಚಿತವಾಗಿದೆ. ಆದದರಿಂದ ಮಿತ್ರರೇ, ನೀವು ದೇವರ ಪ್ರಾರ್ಥನೆಯನ್ನು ಮಾಡುವದಕ್ಕೆ ಮುಂ ಚಿತವಾಗಿ ದೊಟ್ಟ ಮೊದಲು ನಿಮ್ಮ ಮನಸುಗಳನ್ನು ಭಗವಂತನ ಧ್ಯಾನದಲ್ಲಿ ನಿಲ್ಲಿಸಿ ಆತನ ವಿಷಯ ಅತ್ಯಂತ ಗಂಭೀರವಾದ ಭಯಭಕ್ತಿಯೂ ಪ್ರೀತಿಯೂ ನಿಮ್ಮ ಮನಸ್ಸನ್ನು ತುಂಬಿರಲಿ; ಪ್ರಾರ್ಥನೆಯ ಕಾಲದಲ್ಲಿ ಸರ್ವಶಕ್ತನಾದ ತಂದೆಯೂ, ನಿತ್ಯರೂ ಪನೂ ಪವಿತ್ರ ದೇವನೂ ಆಗಿರುವಾತನ ಸನ್ನಿಧಾನದಲ್ಲಿ ನೀವು ಇ ದ್ದೀರೆಂದು ಹೃದಯಪೂರ್ವಕ ತಿಳುಕೊಂಡಿರಬೇಕು. ಈ ಪ್ರಕಾರ ದೇವರ ಪ್ರಾರ್ಥನೆಯೆಂಬುದು ತಾನು ಬಯಸುವುದನ್ನು ನಡಸಿ ಕೊಡಬೇಕೆಂದು ಕೇಳಿಕೊಳ್ಳುವ ಸ್ವಾರ್ಥಪರತ್ವವಾದ ವಿಜ್ಞಾಪ ನೆಯಾಗಿರದೆ, ನಮಗವಶ್ಯವಾದದ್ದನ್ನು ಕೇಳಿಕೊಳ್ಳುವದಕ್ಕೆ ಮುಂ ಚೆ ಆ ಪರಮಾತ್ಮನಿಗೆ ನಮ್ಮನ್ನು ಸಂಪೂರ್ಣವಾಗಿ ವಶಮಾಡಿಕೊ ಟ್ಟು, ಆತನ ಉಪಕಾರ ಸ್ಮರಣೆಮಾಡಿ ಸ್ತುತಿಸತಕ್ಕ ವಿಶೇಷವಾದ ದೇವಾರಾಧನೆಯಾಗಿರಬೇಕೆಂದು ತಿಳಿಯತಕ್ಕದ್ದು.

---

## ಸ್ವದೇಶದ ವೃತ್ತಾಂತಗಳು.

ಇಲ್ಲಿ ಚಾಮುಂಡೇಶ್ವರಿಯ ರಥೋತ್ಸವವು ನಾಳೆ ಶುಕ್ರವಾರ ದಿವಸ ನಡೆಯುವುದು.

****

ಈ ತಿಂಗಳು ೧ ನೇ ತಾರೀಖಿನಲ್ಲಿ ೯ ಅಂಗುಲ ೬೩ ಸೆಂಟ್ ಮಳೆಯಾಯಿತು. ಈಚೆಗೆ ಸ್ವಲ್ಪ ಕಡಿಮೆಯಾಗಿದೆ.

****

ಚೀಫ್ ಜಡ್ಜರಾದ ರಾಮಚಂದ್ರಯ್ಯನವರು ಮುಂಗಿನ ಮಾ ರ್ಚಿ ತಿಂಗಳಲ್ಲಿ ಅಧಿಕಾರದಿಂದ ನಿವೃತ್ತರಾಗುವರೆಂದು ವರ್ತಮಾ ನ ಹುಟ್ಟಿದೆ.

****

ರಾಜಧಾನಿಯಲ್ಲಿ ಈಗ ೧—೨ ದಿನಗಳಿಂದ ಮಳೆ ಸ್ವಲ್ಪ ಮಾ ನಸಿಕ ಮಾಡಿದೆ. ಬಿಸಿಲು ಕಾಯುವುದು, ಆದರೆ ಪ್ಲೇಗ್ ಉಪದ್ರ ವು ಇನ್ನೂ ಶಮನವಾಗಲಿಲ್ಲ. ದಿನಕ್ಕೆ ೨೦—೨೫ ಜನರಂತೆ ಪ್ಲೇಗ್ ತಗಲಿ ಸಾಯುತ್ತಿದ್ದಾರೆ.

****

ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಕೊಟ್ಟು ಗ್ರೇಡ ನ್ನು ಹೊಂದಿದ್ದು ಯಾವ ಕೆಲಸವೂ ಇಲ್ಲದೆ ಇರುವವರಿಗೆ ನಮ್ಮ ದಿವಾನರವರು ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಕೆಲಸವ ನ್ನು ಕೊಡಬೇಕೆಂಬದಾಗಿ ಆಲೋಚಿಸಿದ್ದಾರಂತೆ.

****

ಸಂಸ್ಥಾನದ ಕಂಟ್ರೋಲರಾಗಿದ್ದ ಮೆ॥ ಇ. ಆರ್ ಸುಬ್ರಾಯ ಐಯರವರು ಹಿಂದಿನವಾರ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟ ರು. ಸದ್ಯ ಅವರ ಕೆಲಸವನ್ನು ಮೆ॥ ಈಗಲ್ಸ್ ಯವರು ಬದಲಿ ನೋಡುತ್ತಿದ್ದಾರೆ. ಖಾಯಂದಾರರು ಈ ತಿಂಗಳಲ್ಲಿ ನೇಮಕವಾಗ ಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

****

ನಮ್ಮ ಮಹಾರಾಜರವರ ಸಹೋದರರಾದ ಯುವರಾಜರ ನರ ಸರಾಜ ಒಡೆಯರವರು ಈ ತಿಂಗಳಲ್ಲಿ ಅಜ್ಮೀರದ ರಾಜಕುಮಾರ ಕಾಲೇಜೆಂಬ ವಿದ್ಯಾಶಾಲೆಗೆ ದಯಮಾಡುವವರಾಗಿದ್ದಾರೆ. ಅವರು ಅಲ್ಲಿ ಎರಡು ಸಂವತ್ಸರಗಳಿದ್ದು ವಿದ್ಯಾಪರಿಪೂರ್ಣತೆಯನ್ನು ಹೊಂ ದಿ ಬರುವರೆಂದು ಕೇಳುತ್ತೇವೆ.

****

ಅರಮನೆ ಖರ್ಚು ದಿನೇದಿನೇ ಹೆಚ್ಚುತ್ತಾ ಬಂದಿರುವುದನ್ನು ನೋಡಿ, ಅದಕ್ಕಾಗಿ ಸಂಸ್ಥಾನದ ಹುಟ್ಟುವಳಿ ಹಣದಿಂದ ಈಗ ಸ ಲ್ಲುತ್ತಿರುವ ೧೪ ಲಕ್ಷ ರೂಪಾಯಿಗಳನ್ನು ತಪ್ಪಿಸಿ, ಇನ್ನುಮೇಲೆ ೧೬ ಲಕ್ಷದಂತೆ ಕೊಡಬಹುದೆಂದು ಇಂಡಿಯಾ ಗವರ್ನಮೆಂಟಿನ ವರು ಒಪ್ಪಿಕೊಂಡಿರುವಂತೆ ವರ್ತಮಾನವಿದೆ.

****

ಈಗ ೪ ಆಣೆಗಿಂತ ಕಡಿಮೆಯಾಗಿ ತಂತೀವರ್ತಮಾನ ಕೊಡ ಲಾಗದು. ಇಂಡಿಯಾ ಗವರ್ನಮೆಂಟಿನವರು ಈ ದರವನ್ನು ೬ ಆಣೆಗೆ ಇಳಿಸಬಹುದೆಂತಲೂ, ಇದು ಮುಂದಿನ ಮಾರ್ಚಿ ಅಪ್ರಿಲಿ ನಿಂದ ಜಾರಿಗೆ ಬರಬಹುದೆಂತಲೂ ಪ್ರಕಟವಾಗಿದೆ. ಇದರಿಂದ ಬ ಡಬಗ್ಗರಿಗೂ ವರ್ತಕರಿಗೂ ತುಂಬಾ ಉಪಕಾರವಾಗುವುದಕ್ಕೆ ಸಂಶಯವಿಲ್ಲ.

****

ಈಸಲ ಮಳೆ ಬೆಳೆಗಳು ಎಲ್ಲಾ ಕಡೆಗಳಲ್ಲೂ ಬಹಳ ಚನ್ನಾಗಿ ಆಗಿವೆ. ಕೆರೆ ಕಟ್ಟೆ ಕುಂಟೆಗಳೆಲ್ಲಾ ತುಂಬಿ ತುಳುಕಾಡುತಿವೆ. ಬೆಂಗಳೂರಿಗೆ ಕುಡಿಯುವ ನೀರು ಸರಬರಾಯಿ ಆಗುವ ಹೆಸರುಗ ಟ್ಟವೆಂಬ ಭಾರೀ ಕೆರೆಯೂ, ಸೂಳೆಕೆರೆಯೂ, ಆಲನೂರು ಕೆರ ಯೂ ತುಂಬಿ ಕೋಡಿ ಹರಿಯುತ್ತಿರುವವು. ಮೈಸೂರಿನಲ್ಲೂ ಕೆ ರೆಗಳೆಲ್ಲಾ ತುಂಬಿವೆ

****

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ಪಟ್ಟಣದ ಆರೋ ಗ್ಯ ವಿಚಾರವನ್ನು ಕ್ರಮಪಡಿಸುವುದಕ್ಕೆ ಆರೋಗ್ಯ ವಿಷಯಗಳ ನ್ನು ಪರೀಕ್ಷೆಗೆ ಕಳಿಸಿಕೊಡುವುದಕ್ಕೆ ಒಂದು ಕಮಿಟಿಯನ್ನು ಏರ್ಪಡಿಸಿಕೊಂಡಿದ್ದಾರೆ. ಈ ಕಮಿಟಿಗೆ ಪ್ರೆಸಿಡೆಂಟ್ ಕಮಿಷನರ ವರೇ ಪ್ರೆಸಿಡೆಂಟರು [illegible] ಹೊಸ [illegible] ಟ್ಟಿರುವ ಮ್ಯುನಿಸಿಪಲ್ ಕಮಿಷನರುಗಳಲ್ಲಿ ಮೂವರೂ ಮೆಂಬ ರುಗಳಾಗಿದ್ದಾರೆ

****

ವಿವೇಕಾನಂದ [illegible] ಸ್ವಾಮಿಗಳು [illegible] ನಾರಾಯಣಸ್ವಾಮಿಯಂಗಾರ್ಯ ಮನೆಯಲ್ಲಿ ಇಳುಕೊಂಡಿದ್ದಾರೆ. ಇವರು ಇಲ್ಲಿನ ಟೌನ್‌ಹಾಲ್ ಬಂಗಲೆಯಲ್ಲಿ ಹಿಂದುಮತ ತತ್ವವಿಚಾರವಾಗಿ ಉಪನ್ಯಾಸಗಳನ್ನು ಮಾಡಿದರು. ಮೊದಲನೇ ದಿನ ಕೌನ್ಸಿಲರ್ ಮತ್ತು ರೆವಿನ್ಯೂ ಕಮಿಷನರ್ ಮೆ॥ ವಿ. ಪಿ. ಮಾಧವರಾಯರು ಅಗ್ರಾಸನವನ್ನು ವಹಿಸಿದ್ದರು.

****

ಕಳೆದವಾರ ಕೋಲಾರದ ಗಣಿಗಳಿಂದ ಬಂಗಾರವು ವಿಲಾಯ ತಿಗೆ ಕಳುಹಿಸಲ್ಪಟ್ಟಿತು. ಬಂಗಾರದ ಬೆಲೆಯು ೧೧ ಲಕ್ಷ ರೂಪಾ ಯಿ. ಒಂದು ತಿಂಗಳಲ್ಲಿ ಒಟ್ಟು ೩೦ ಲಕ್ಷ ರೂ. ಬಾಳುವ ಬಂಗಾ ರವು ಈ ದೇಶದಲ್ಲಿ ತೆಗೆಯಲ್ಪಟ್ಟಿತು.

****

ಕೋಲಾರದ ಚಿನ್ನದ ಗಣಿಗಳಿಗೆ ಪ್ರತ್ಯೇಕವಾದ ಒಂದು ಮ್ಯಾಜಿಸ್ಟ್ರೇಟ್ ಕೋರ್ಟನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿ ಕೊಟ್ಟಿದ್ದಾರಷ್ಟೆ. ಸದ್ಯ ಈ ಕೋರ್ಟನ್ನು ಅಲ್ಲಿನ ರಾಬರ್ಟ್‌ಸನ ಪೇಟೆಯಲ್ಲಿರುವ ಹೋಟೆಲ್ ಬಂಗಲೆಯಲ್ಲಿ ಮಾಡುವರು. ಅದರ ಲ್ಲೇ ಮ್ಯಾಜಿಸ್ಟ್ರೇಟರು ವಾಸಮಾಡುವುದಕ್ಕೂ ಸ್ಥಳವಿದೆ. ಈ ಬಂಗ ಲೆಯನ್ನು ಗವರ್ನಮೆಂಟಿನವರು ಮೆ॥ ಹಾಜಿ ಇಸ್ಮಾಯಿಲ್ ಸೇಟರಿಂ ದ ಬಾಡಿಗೆಗೆ ತೆಗೆದುಕೊಂಡಿದ್ದಾರೆ.

****

ಮೈಸೂರು ಲೋಕಲ್ ಸರ್ವಿಸ್ ಸಿಲ್ಲೇದಾರ್ರ ಕಮ್ಯಾಂಡೆಂಟ್ ಮೆ॥ ಕೃಷ್ಣರಾಯರನ್ನು ಸರ್ಕಾರದವರು ಪೆನ್ಷನ್ ಕೊಟ್ಟು ಕೆಲ ಸ ಬಿಡಿಸಿರುತ್ತಾರಷ್ಟೆ. ಈ ಕೆಲಸಕ್ಕೆ ಬೆಂಗಳೂರು ಇಂಪೀರಿಯ ಲ್ ಸರ್ವಿಸ್ ಕುದುರೇ ಸೈನ್ಯದ ಹುದ್ದೇದಾರರಾಗಿರುವ ಮೆ॥ ಚಾ ಮರಾಜೇ ಅರಸಿನವರನ್ನು ಶ್ರೀಮನ್ ಮಹಾರಾಜರವರು ನೇಮಕ ಮಾಡುತ್ತಾರೆಂದು ಕೇಳುತ್ತೇವೆ. ಇವರು ಬಹಳ ಗಟ್ಟಿಗರು; ಗಂಜಾಮದಲ್ಲಿ ನಡೆದ ಪ್ಲೇಗ್ ದಂಗೆಯನ್ನು ಅಡಗಿಸುವುದರಲ್ಲಿ ತುಂಬಾ ಸಾಹಸಪಟ್ಟು ಅಧಿಕಾರಿಗಳ ಮೆಚ್ಚಿಕೆಯನ್ನು ಪಡೆದಿರು ತ್ತಾರೆ.

****

ಕಡೂರು ರೈಲ್ವೆ ಸ್ಟೇಷನಿನಿಂದ ಚಿಕ್ಕಮಗಳೂರಿಗೂ ಮೂಡಿ ಗೆರೆಗೂ ಟಾಂಗಾ ಗಾಡಿಗಳು ಹೋಗಿಬರುತ್ತವೆ. ಮತ್ತು ಮೈಸೂರಿ ಗೂ ಮಡಿಕೇರಿಗೂ ಟಾಂಗಾ ಗಾಡಿಗಳು ಹೋಗಿಬರುವವು. ಈ ಗಾಡಿಗಳಿಗೆ ಕಟ್ಟಿ ಹೊಡೆಯುವ ಕುದುರೆಗಳ ಪಾಡು ನೋಡಿದರೆ ತುಂಬಾ ದುಃಖವಾಗುವುದು. ಕೆಲವಕ್ಕೆ ಅಸ್ಥಿಚರ್ಮಗಳೇ ಉಳಿದಿ ವೆ. ಈ ಬಡ ಮೂಗುಪ್ರಾಣಿಗಳಮೇಲೆ ಸ್ವಲ್ಪವಾದರೂ ಕನಿಕರವಿ ಡದೆ ಲಾಭದಮೇಲೆ ದೃಷ್ಟಿಯಿಟ್ಟು ಅವುಗಳನ್ನು ಹಿಂಸಿಸುವುದು ಮ ಹಾ ಪಾಪಕೃತ್ಯವೆಂತಲೂ, ಇದನ್ನು ದಯಾಪ್ರೇರಕರಯರ್ಯರಾ ದರೂ ತಪ್ಪಿಸಲು ಪ್ರಯತ್ನಪಡಬಾರದೇ ಎಂತಲೂ ಒಬ್ಬ ಬಾತ್ಮೀದಾರ ರು ಮದರಾಸ್ ಪತ್ರಿಕೆಯಲ್ಲಿ ಬರೆದಿರುತ್ತಾರೆ. ಸರ್ಕಾರದವರಾಗ ಲಿ, ಪ್ರಜೆಗಳಾಗಲಿ, ಮಾಲೀಕರಾಗಲಿ ಇಂಥಾ ಕ್ರೂರಕೃತ್ಯ ನಡೆ ಯದಂತೆ ಮಾಡುವುದು ಯೋಗ್ಯವಾಗಿದೆ.

****

ಒಬ್ಬ ಬಾತ್ಮೀದಾರರು ಬರೆಯುವದೇನಂದರೆ —"ಶಿವಮೊಗ್ಗ ದ ಪಟ್ಟಣದ ಅಮಲ್ದಾರ್ ಮ॥ ರಾ॥ ಬಿ. ಎಸ್. ರಾಘೋಜಿರಾಯ ರಿಗೆ ಶಿವಮೊಗ್ಗಕ್ಕೆ ವರ್ಗವಾದ್ದರಿಂದ ಅವರನ್ನು ವಂದಿಸುವದ ಕ್ಕೋಸ್ಕರ ಪಟ್ಟಣದ ನಿವಾಸಿಗಳು ಬಾಲಕಪಾಠಶಾಲೆಯನ್ನಲಂಕರಿ ಸಿ, ತಾ॥ ೨೬ ರಲ್ಲಿ ಸಭಸೇರಿ, ಅವರ ಗುಣಕಥನವನ್ನು ಸಿಜೋ ಕ್ತಿಯಿಂದ ವಿಜ್ಞಾಪಿಸಿಕೊಂಡರು. ಆ॥ ಕ॥ ಮೆ॥ ಸಿ. ಎಸ್. ಬಾ ಲಸುಂದರಂ ಅಯ್ಯರವರು ಸಭಾಧ್ಯಕ್ಷರಾಗಿದ್ದರು. ಗೌರವಮಾ ಡತಕ್ಕ ಸತ್ಕೋಪಚಾರಗಳೂ ನೆರವೇರಿದವು. ಈ ಅಮಲ್ದಾರ್ರು ಮಹಾ ಸುರಾಗಿಗಳು, ಕೇವಲ ಪ್ರಾಮಾಣಿಕತೆಯಿಂದ ಸರ್ಕಾರ ಕೆಲಸವ ನ್ನು ನಿರ್ವಹಿಸಿದವರು. ಆದ್ದರಿಂದಲೇ ಇವರನ್ನಗಲುವಿಕೆಯಿಂದ ಇಲ್ಲಿನ ಸಮಸ್ತ ಪ್ರಜೆಗಳೂ ವಿಷಾದಿಸುವವರಾಗಿದ್ದಾರೆ. ದೇವರು ಇವರಿಗೆ ಆಯುರಾರೋಗ್ಯಾಭಿವೃದ್ಧಿಯನ್ನೂ, ಉನ್ನತ ಪದವಿಯ ನ್ನೂ ಉಂಟುಮಾಡಲಿ ಎಂದು ಶ್ರೇಯಃ ಪ್ರಾರ್ಥನೆ ಮಾಡಿದರು."

****

ಶ್ರೀಮನ್ ಮಹಾರಾಜರವರ ಇಂಗ್ಲಿಷ್ ಬ್ಯಾಂಡ್ ವಾದ್ಯಗಾರ ರಲ್ಲಿ ಸುಮಾರು ಅರೆವಾಸಿ ವಾದ್ಯಗಾರರು ಕಾರಣಾಂತರದಿಂದ ಕೆ ಲಸ ಬಿಟ್ಟರೆಂದು ಮೊದಲೇ ತಿಳಿಸಿರುತ್ತೇವಷ್ಟೆ. ಈ ನವರಾತ್ರಿ ಉತ್ಸವ ಕಾಲದಲ್ಲಿ ಬ್ಯಾಂಡ್ ವಾದ್ಯ ಮಾಡಿಸುವದಕ್ಕೆ ಮಹಾರಾಜ ರವರು ಬೆಂಗಳೂರಿನಿಂದ ಸೈನ್ಯದ ಬ್ಯಾಂಡಿನವರನ್ನು ಕರೆಸಿಕೊಂ ಡಿದ್ದರು. ಈಗ ಖಾಯಂ ವಾದ್ಯಗಾರರನ್ನು ಪಂಜಾಬಿನಿಂದ ಗೊ ತ್ತುಮಾಡಿ ಕರೆಸಿರುತ್ತಾರೆ ಇವರು ಸುಮಾರು ೫೦ ಮಂದಿ ಇರ ಬಹುದು. ಅವರಲ್ಲಿ ಪಂಜಾಬಿಗಳೂ, ಸಿಖ್ಖರೂ [illegible] ವಿಶೇ ಷವಾಗಿರುತ್ತಾರೆ. ಇವರೆಲ್ಲಾ ಮೊನ್ನೆ ಬುಧವಾರ ಬೆಳಗಿನ ೭ ಘಂಟೆ ಯಲ್ಲಿ ರಾಜಧಾನಿಗೆ ಬಂದರು. [illegible] ಕರ್ನಲ್ [illegible] ಅವರು [illegible] ಸ್ಟೇಷನಿಗೆ ದಯಮಾಡಿದ್ದರು. ಇಲ್ಲಿನ ಮಿಲಿಟರಿ ಬ್ಯಾಂಡಿನವರು ಅವರನ್ನು ಗಾಡಿಯಿಂದ ಇಳಿಸಿ ಅವರ ಮುಂದೆ ವಾ ದ್ಯಮಾಡುತ್ತಾ ಮೆರವಣಿಗೆಯಲ್ಲಿ ಅವರನ್ನು ಕರೆದುಕೊಂಡು [illegible] ಬಂದರು. ಅಲ್ಲೇ [illegible] [illegible] ಮಾಡಿಕೊಟ್ಟಿದ್ದಾರೆ

## ಪ್ರಜಾಪ್ರತಿನಿಧಿ ಸಭಾಹುಕ್ಕು.

ಶ್ರೀಮನ್ಮಹಾರಾಜರವರು ಪ್ರಜಾಪ್ರತಿನಿಧಿ ಸಭೆಯವರನ್ನು ಕುರಿತು ಅಪ್ಪಣೆಕೊಡಿಸಿದ್ದೇನೆಂದರೆ.—

ಸರ್ ಜೇಮ್ಸ್ ಬೋರ್ಡಿಲನ್, ದಿವಾನ್ ಸಾಹೇಬರು ಮತ್ತು ಮೆಂಬರುಗಳೇ,

ನಾವು ರಾಜ್ಯಭಾರವನ್ನು ವಹಿಸಿಕೊಂಡ ಬಳಿಕ ನಮ್ಮ ಸಂಸ್ಥಾನದ ಮುಖಂಡರಾದ ರೈತರು, ವರ್ತಕರು ಮತ್ತು ಸ್ಥಳೀಯ ಸಂಘಗಳ ಪ್ರತಿನಿಧಿಗಳೂ ಆದ ನಿಮ್ಮನ್ನು ಪ್ರಥಮತಃ ನೋಡಲು ಈಗ ಅವಕಾಶ ಉಂಟಾದ್ದಕ್ಕಾಗಿ ಸಂತೋಷಪಡುತ್ತೇವೆ. ಕಳೆದ ವರ್ಷದಲ್ಲಿ ಪ್ಲೇಗ್ ರೋಗವು ಬಹಳ ಪ್ರಬಲವಾಗಿದ್ದದ್ದು, ಅದು ಇಳಿದು ಹೋಗಬಹುದೆಂದು ಎಷ್ಟುಕಾಲ ನಿರೀಕ್ಷಿಸಿದರೂ ಆದವು ಬಾರಗದ ಕ್ರಮವಾಗಿ ಸಭೆಯನ್ನು ನಿಲ್ಲಿಸುವಂತೆ ಬಹಳ ಅನಿವಾರ್ಯವಾದುದರಿಂದ ಅಪ್ಪಣೆ ಮಾಡಬೇಕಾಯಿತು. ಹಾಗಿಲ್ಲದಿದ್ದರೆ ನಿಮ್ಮನ್ನೆಲ್ಲಾ ಹೋದವರ್ಷವೇ ನೋಡಬೇಕೆಂದಿದ್ದ ನಮ್ಮ ಕೋರಿಕೆಯು ನೆರವೇರುತ್ತಿತ್ತು. ನಮ್ಮ ಪೂಜ್ಯರಾದ ತೀರ್ಥರೂಪರುಗಳವರ ಆಜ್ಞಾನುಸಾರವಾಗಿ, ದಿವಾನ್ ರಂಗಾಚಾರ್ಲುರವರು ಈ ಸಭೆಯು ಪ್ರಥಮ ಸಂವತ್ಸರದ ಸಭೆಗಳನ್ನು ಕರೆಯಿಸಿ ಇಲ್ಲಿಗೆ ೨೦ ವರ್ಷಗಳಾಗಿವೆ. ಈ ಸಭೆಯನ್ನು ಸ್ಥಾಪಿಸಿದ ಉದ್ದೇಶವು ಪ್ರಜೆಗಳ ಅಭ್ಯುದಯಕ್ಕೋಸ್ಕರ ಸರ್ಕಾರದವರು ನಡೆಸುವ ಕಾರ್ಯಗಳೂ ಅವರ ಅಭಿಪ್ರಾಯಗಳೂ, ದೇಶದ ಜನರಿಗೆ ಸರಿಯಾಗಿ ತಿಳಿಯಬೇಕೆಂದು ಅವರು ಅನುಭವಿಸುವ ಲಾಭವನ್ನು ಚೆನ್ನಾಗಿ ಗ್ರಹಿಸಿಕೊಳ್ಳುವಂತೆ ಮಾಡುವುದು. ಹೀಗೆ ಪ್ರಜೆಗಳು ಪರಿಪಾಲಕರೊಡನೆ ಆಗಾಗ್ಗೆ ಸೇರಿ ಸಂಭಾಷಿಸಿದರೆ, ಸರ್ಕಾರದವರ ಆಲೋಚನೆಗಳೂ ಇರಾದೆಗಳೂ ಇವರಿಗೆ ಚೆನ್ನಾಗಿ ತಿಳಿದು, ಅವುಗಳ ವಿಷಯದಲ್ಲಿರುವ ಸಂದೇಹ ನಿವೃತ್ತಿಯಾಗುವುದರಿಂದ, ಪ್ರಜೆಗಳ ಅಭ್ಯುದಯವೂ ಸರ್ಕಾರದವರ ಧ್ಯೇಯವೂ ಒಂದೇ ಆಗಿರುವುದೆಂಬುವುದು ಜನರಿಗೆ ವಿದಿತವಾಗುವುದು.

ರಾಜ್ಯಭಾರವನ್ನು ಸರಿಯಾಗಿ ನಿರ್ವಹಿಸಿ ಅದರ ಆಡಳಿತಗಳನ್ನೆಲ್ಲಾ ಧರ್ಮಾನುಸಾರವಾಗಿ ನಡಿಸುವ ಭಾರವು ನಮ್ಮನ್ನು ಹೊಂದಿರುವುದರಿಂದ ಆ ವಿಷಯಗಳಲ್ಲಿ ನಿಮ್ಮ ಸಭೆಯಲ್ಲಿ ಸೇರಿರುವವರಿಗೆ ಅರ್ಹತೆಯಿಲ್ಲವೆಂದು ಅಂತೋಷ್ಟವಾಗಿ ಹೇಳಬೇಕಾಗಿಲ್ಲ. ಇದುವರೆಗೆ ನೀವು ಸಭೆಯಲ್ಲಿ ನಡಿಸಿದ ಚರ್ಚೆಗಳನ್ನೆಲ್ಲಾ, ವಿಚಾರಣೆಯೂ, ವಿವೇಕದೊಡನೆಯೂ, ಉಚಿತವಾದ ಲೌಕಿಕ ಪ್ರಸಂಗ ಜ್ಞಾನದೊಡನೆಯೂ ನಡೆಸಿಕೊಂಡು ಬಂದಿರುವಿರೆಂದು ಹಿಂದಿನವರು ಬಿಟ್ಟಿರುವ ಅಭಿಪ್ರಾಯವನ್ನು ನೋಡಿ ಸಂತೋಷಪಡುತ್ತೇವೆ. ಈ ಸಭೆಯಿಂದುಂಟಾದ ಮುಖ್ಯ ಫಲವು ಜನರಿಗೂ ಸರ್ಕಾರದವರಿಗೂ ಒಂದೇ ಮಾರ್ಗವು ಸಾಮಾನ್ಯವಾಗಿ ಶ್ರೇಯಸ್ಕರವಾಗಿರುವುದೆಂಬ ಸಂಗತಿಯು ದೃಢವಾಗಿ ತಿಳಿಯಬಂದಿರುವುದು.

ನಮ್ಮ ಪ್ರಜೆಗಳು ತಮ್ಮ ಕೊರತೆಗಳನ್ನೂ ಆಕಾಂಕ್ಷೆಗಳನ್ನೂ ಕಷ್ಟಗಳನ್ನೂ ತಿಳಿಯಪಡಿಸಿಕೊಳ್ಳುವುದಕ್ಕೆ ಸುಲಭವಾದ ಮಾರ್ಗವನ್ನು ಕಲ್ಪಿಸಿಕೊಡುವುದರಲ್ಲಿಯೂ, ನಮ್ಮ ಸರ್ಕಾರದವರು ಹಿಂದಿನ ವರ್ಷ ಮಾಡಿದ ಕಾರ್ಯಗಳನ್ನೂ ಮುಂದೆ ಮಾಡಲು ಉದ್ದೇಶಿಸಿರುವ ಕಾರ್ಯಗಳನ್ನೂ ತಿಳಿಯಪಡಿಸುವುದಕ್ಕೆ ಅವಕಾಶವನ್ನುಂಟುಮಾಡಿ ಕೊಡುವುದರಲ್ಲಿಯೂ, ಸರ್ಕಾರವೂ ಪ್ರಜೆಗಳೂ ಒಟ್ಟಾರೆ ಮನೋಗತವನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡು, ರೆವಿನ್ಯೂ ಸರ್ಕಾರದ ಆಡಳಿತಗಳ ವಿಷಯವಾಗಿ ಎಲ್ಲಾ ವಿಧವಾದ ತಪ್ಪು ತಿಳುವಳಿಕೆಗಳನ್ನೂ ಹೋಗಲಾಡಿಸಿ ಕೊಡುವುದರಲ್ಲಿಯೂ, ಈ ಸಭೆಯು ನಮಗೆ ಬಹಳ ಸಹಾಯವನ್ನುಂಟುಮಾಡುವ ಸ್ಥಳದಲ್ಲಿ ಹೀಗೆ ಪ್ರತಿ ವರ್ಷವೂ ಸಭೆ ಸೇರುವುದು ನಮ್ಮ ಸರ್ಕಾರಕ್ಕೆ ನಿಜವಾಗಿಯೂ ಅಮೂಲ್ಯವಾದ ಉಪಾಂಗವಾಗಿ ನಮ್ಮ ಆಳ್ವಿಕೆಯ ಪರ್ವಕ್ಕೆ ಕಾರಣವಾಗುವ ಪ್ರಜೆಗಳ ಸಂತುಷ್ಟಿಯನ್ನೂ ಕ್ಷೇಮವನ್ನೂ ಅಭಿವೃದ್ಧಿಪಡಿಸುವುದೆಂದು ನಾವು ದೃಢವಾಗಿ ನಂಬುತ್ತೇವೆ.

ಈ ಬಯಕೆಗಳನ್ನೂ ಉದ್ದೇಶಗಳನ್ನೂ ನೆರವೇರಿಸುತ್ತಿರುವ ಸರಕಾರ ಈ ಸಭೆಗೆ ನಾವು ಸಂಪೂರ್ಣಕವಾಗಿಯೂ ನಡೆಯುವ ನಮ್ಮ ಪ್ರೋತ್ಸಾಹವನ್ನು ಕೊಡುವೆವೆಂದು ನೀವು ದೃಢವಾಗಿ ನಂಬಬಹುದು. ಈ ಸಭೆಗೆ ಸೇರುವುದು ಒಂದು ವಿಶೇಷವಾದ ಗೌರವವೆಂದು ಭಾವಿಸಲ್ಪಟ್ಟಿರುವುದಾಗಿ ತಿಳಿಯಬರುತ್ತದೆ. ಈ ಗೌರವವನ್ನು, ನೀವು ಮಿತವ್ಯವರ್ತನೆಯಿಂದಲೂ ವಿವೇಕವಾದ ಸಲಹೆಗಳಿಂದಲೂ, ನೀವು ನಿಮ್ಮ ಅನಂತರ ಬರುವ ಸಭಿಕರಿಗೂ ವಿಶೇಷವಾಗಿ ಬಿಟ್ಟುಹೋಗುವಿರೆಂದು ನಂಬುತ್ತೇವೆ.

ಸಭಿಕರೇ, ಇನ್ನು ನಮ್ಮ ದಿವಾನರು ಸರ್ ಕೃಷ್ಣಮೂರ್ತಿಗಳವರು ನಮ್ಮ ರಾಜ್ಯಭಾರದ ಪ್ರಥಮವರ್ಷದ ಆಡಳಿತಗಳನ್ನು ನಿಮಗೆ ತಿಳಿಸಿ, ಎಂದಿನಂತೆ ನಿಮ್ಮ ಸಭೆಯ ಅಗ್ರಾಸನಾಧಿಪತ್ಯವನ್ನು ವಹಿಸುವರು. ನಾವು ಮಾಡಿದ ಪ್ರಯತ್ನಗಳಕ್ಕೆಲ್ಲಾ ತಿರಸ್ಕರಿಸಿ ದುಃಖಪ್ರದವಾದ ಪ್ಲೇಗು ರೋಗವು ಇನ್ನೂ ಈ ಪಟ್ಟಣದಲ್ಲಿ ಇರುತ್ತಿದ್ದಾಗ್ಯೂ, ನೀವು ಈ ಕಾಲದಲ್ಲಿ ಇಲ್ಲಿಗೆ ಬಂದು, ನಿಮ್ಮ ಸ್ವಂತ ಅನುಕೂಲಕ್ಕಿಂತ ಇದೇ ನಿಮಗೆ ಶ್ರೇಷ್ಠವಾದ ಕರ್ತವ್ಯವೆಂದು [illegible] ನೀವು ವ್ಯಕ್ತಪಡಿಸಿರುವುದನ್ನು ನೋಡಿ ಸಂತೋಷಿಸಿ [illegible] ಇಲ್ಲಿ ನೀವು ಸುಖವಾಗಿಯೂ ನಿರಪಾಯವಾಗಿ [illegible] ನಿಮ್ಮ ಕ್ಷೇಮಕ್ಕೋಸ್ಕರ ಮಾಡಿದ ಏರ್ಪಾಟುಗಳು ನಿಮಗೆ ತೃಪ್ತಿಕರ [illegible] ಎಂದು ನಂಬುತ್ತೇವೆ.

## ಪ್ರತಿನಿಧಿಗಳ ಉತ್ತರ.

ಮೈಸೂರು ಸಂಸ್ಥಾನಾಧೀಶರಾದ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರ ಮಹಾ ಸನ್ನಿಧಾನದಲ್ಲಿ. ಮೈಸೂರು ಸಂಸ್ಥಾನದ ಪ್ರಜೆಗಳ ಪ್ರತಿನಿಧಿಗಳು ಅರ್ಪಿಸುವ ಅನೇಕಾನೇಕ ಧನ್ಯವಾದಗಳು—ಮಹಾಸ್ವಾಮಿ.

೧. ಅಗಲಿ ಮಹಾಸ್ವಾಮಿಯವರಾದ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಯವರು ರಾಜ್ಯಭಾರವನ್ನು ವಹಿಸಿದ ಕೂಡಲೆ ಪ್ರಜೋಪಕಾರಕ್ಕಾಗಿ ಸ್ಥಾಪಿಸಿದ ಈ ಸಭೆಯನ್ನು ಮಹಾಸ್ವಾಮಿಯವರೇ ಈ ದಿವಸ ಸಾಕ್ಷಾತ್ತಾಗಿ ಅಲಂಕರಿಸಿದ್ದರಿಂದ, ಈ ಸಭೆಯು ಅತ್ಯಂತ ವಿಶೇಷವಾದ ಅಭಿವೃದ್ಧಿಯನ್ನು ಹೊಂದುವುದಕ್ಕೆ ಇದೇ ಶುಭಸೂಚಕ ಎಂದು ನಾವುಗಳು ನಂಬಿದ್ದೇವೆ,—ಮಹಾಸ್ವಾಮಿ.

೨. ರಾಜ್ಯಭಾರವನ್ನು ವಹಿಸಿ ಸ್ವಲ್ಪ ಕಾಲವಾಗಿದ್ದಾಗ್ಯೂ ಮಹಾಸ್ವಾಮಿಯವರು ರಾಜ್ಯಾಡಳಿತಗಳ ವಿಷಯದಲ್ಲಿ ವಿಮರ್ಶೆಯಿಂದ ನ್ಯಾಯ್ಯಕರರಾಗಿ ಮಾಡುತ್ತಿರುವ ತೀರ್ಮಾನಗಳು ಪ್ರಜೆಗಳಿಗೆಲ್ಲಾ ಅತ್ಯಂತ ಸಂತೋಷವನ್ನು ಉಂಟುಮಾಡುತ್ತಿವೆ.—ಮಹಾಸ್ವಾಮಿ.

೩. ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ । ದೇಶೋಯಂ ಕ್ಷೋಭರಹಿತಃ ಸುಜನಾಸ್ಸಂತು ನಿರ್ಭಯಾಃ ॥ ಎಂಬ ಮಂಗಳಶ್ಲೋಕಕ್ಕನುಸಾರವಾಗಿ ಮಹಾಸ್ವಾಮಿಯವರು ಈ ಸಂಸ್ಥಾನದ ರಾಜ್ಯಭಾರವನ್ನು ವಹಿಸಿದ ಕೂಡಲೇ ಕಾಲಕಾಲಕ್ಕೆ ತಕ್ಕ ಮಳೆ, ಅದರಿಂದಾದ ಸಂಪೂರ್ಣವಾದ ಬೆಳೆ, ಇವುಗಳಿಂದ ಈ ಸಂಸ್ಥಾನದ ಪ್ರಜೆಗಳೆಲ್ಲರೂ ಸೌಖ್ಯದಿಂದಿರುವರೆಂದು ಮಹಾಸ್ವಾಮಿಯವರ ಸನ್ನಿಧಾನದಲ್ಲಿ ವಿಜ್ಞಾಪಿಸುವುದಕ್ಕೆ ಇದು ಸುಸಮಯವಾಗಿದೆ,—ಮಹಾಸ್ವಾಮಿ.

೪. ಮಹಾಸ್ವಾಮಿಯವರು ದೀರ್ಘಾಯುಷ್ಮಂತರಾಗಿ ಪುತ್ರ ಪೌತ್ರ ಪ್ರಪೌತ್ರಸಂಪನ್ನರಾಗಿ 'ಸತ್ಯಮೇವೋದ್ಧರಾಮ್ಯಹಂ' ಎಂಬ ಬಿರುದನ್ನು ಕಾಪಾಡುತ್ತ, ಚಿರಕಾಲ ಧವರ್ಗೆ, ಈ ದೇಶದ ಪ್ರಜೆಗಳಾದ ನಮ್ಮನ್ನು ಸಂರಕ್ಷಿಸಬೇಕೆಂದು ಜಗದೀಶ್ವರನನ್ನು ನಿರಂತರದಲ್ಲೂ ಭಕ್ತಿಯಿಂದ ಪ್ರಾರ್ಥಿಸುತ್ತೇವೆ,—ಮಹಾಸ್ವಾಮಿ.

'ಪಾತು ಶ್ರೀ ಕೃಷ್ಣರಾಜೇಂದ್ರಂ ಸಾನುಜಂ ಸಪರಿಚ್ಛದಂ ।
ಸಭಾರ್ಯಂ ಸಪ್ರಜಂ ದೇವೀ ಚಾಮುಂಡಾ ಜಗದಂಬಿಕಾ ॥'

## ಇಂಡಿಯಾ ದೇಶದ ವೃತ್ತಾಂತಗಳು.

ರಷ್ಯದ ವರ್ತಕರು ಕಲ್ಕತ್ತಾ ಪಟ್ಟಣದಲ್ಲಿ ಒಂದು ಬ್ಯಾಂಕನ್ನು ಇಡಬೇಕೆಂದು ಬಂಗಲೆ ಮುಂತಾದ್ದನ್ನು ಸಿದ್ಧಪಡಿಸಿಕೊಳ್ಳುತ್ತಿದ್ದಾರೆ.

****

ತಿರುವಾಂಕೂರು ಸಂಸ್ಥಾನದ ದಿವಾನರಾದ ದಿವಾನ್ ಬಹದ್ದೂರ್ ಕೃಷ್ಣಸ್ವಾಮಿರಾಯರು ಇಷ್ಟರೊಳಗೇ ಆ ಕೆಲಸಕ್ಕೆ ರಾಜೀನಾಮೆ ಕೊಡುವವರಾಗಿದ್ದಾರೆಂದು ವರ್ತಮಾನ ಹುಟ್ಟಿದೆ.

****

ವ್ಯವಸಾಯ ವಿಷಯವಾದ ಸಂಗತಿಗಳನ್ನು ಮದರಾಸ್ ಗೌವರ್ನಮೆಂಟಿನವರು ದೇಶಭಾಷೆಗಳಲ್ಲಿ ಅಚ್ಚು ಹಾಕಿಸಿ ಮದರಾಸ್ ಆಧಿಪತ್ಯದ ರೈತ ಪ್ರಜೆಗಳಿಗೆಲ್ಲಾ ಆಗಾಗ್ಗೆ ಹಂಚುತ್ತ, ಆ ಮೂಲಕ ವ್ಯವಸಾಯವನ್ನು ಅಭಿವೃದ್ಧಿಗೆ ತರಬೇಕೆಂಬುದಾಗಿ ಹುಕುಂ ಮಾಡಿರುತ್ತಾರೆ.

****

ನಮ್ಮ ವೈಸರಾಯಿ ಲಾರ್ಡ್ ಕರ್ಜನ್ ಪ್ರಭುಗಳು ಬರುವ ತಿಂಗಳು ಹಿಮಾಚಲದ ತಪ್ಪಲುಗಳಲ್ಲಿ ಸಂಚಾರ ಹೊರಡುವವರಾಗಿದ್ದಾರಷ್ಟೆ. ಹುಸೂರ್ಪತಿ ಪೆಟ್ರೋಲಿಯಂನಲ್ಲಿ ಮೂರು ದಿನಗಳ ತನಕ ಶಿಕಾರಿ ಮಾಡಿಕೊಂಡು ಸುಮಾರು ೨೦೦ ಮೈಲಿ ಬಾಸಲೆ ವರೆಗೆ ಕುದುರೆ ಸವಾರಿ ಮಾಡುವರು.

****

ಸೊಮಾಲಿಲ್ಯಾಂಡಿನ ಯುದ್ಧ ಸೇನೆಗೆ ಇಂಡಿಯಾ ಗೌವರ್ನಮೆಂಟಿನವರು ೧,೦೦೦ ಎತ್ತಿನ ಗಾಡಿಗಳನ್ನೂ ೧,೦೦೦ ಮಂದಿ ಗಾಡಿ ಆಳುಗಳನ್ನೂ ೧,೦೦೦ ಒಂಟೆಗಳನ್ನೂ ಕಳುಹಿಸಿಕೊಡುವಂತೆ ಏರ್ಪಾಡಾಗಿದೆ. ಬೊಂಬಾಯಿನ ಒಂದೇ ಸೈನ್ಯದ ಸಹಾಯಾರ್ಥವಾಗಿ ಇನ್ನೂ ೫೦ ಮಂದಿ ಸವಾರರನ್ನೂ ೧೫೦ ಒಂಟೆಗಳನ್ನೂ ಅಲ್ಲಿಗೆ ಕಳುಹಿಸುತ್ತಾರೆ.

****

ಮಕ್ಕಾಕ್ಕೆ ರೈಲು ರಸ್ತೆ ಹಾಕುವುದಕ್ಕೆ ತುರ್ಕಿ ಸುಲ್ತಾನರು ೩೦ ಮುಸಲ್ಮಾನರಲ್ಲೂ ಸಹಾಯದಿಂದ ಹಣ ಎತ್ತುತ್ತಿದ್ದಾರಷ್ಟೆ. ಈ ಫಂಡಿಗೆ ಬರ್ಮಾ ದೇಶದಲ್ಲಿ ೧,೦೩,೦೦೦ ರೂ. ಕೂಡಿಸಲ್ಪಟ್ಟಿವೆ. ಈ ಹಣವನ್ನು ಬೊಂಬಾಯಿನಲ್ಲಿ ಒಟ್ಟಿಗೆ ಸಲ ತೆಗೆದಿದ್ದ ೧೦,೯೯೦ ರೂಪಾಯಿಯನ್ನೂ ಸೇರಿಸಿ ತುರ್ಕಿ ರಾಯಭಾರಿಗೆ ಕಳುಹಿಸಿದರು.

****

ಹಿಂದಿನ ವಾರ ಬೊಂಬಾಯಿ ಪಟ್ಟಣದಲ್ಲಿ ಒಂದು ದಿನ ವಿಪರೀತ ಮಳೆ ಸುಂಟರಗಾಳಿಗಳು ಜೋರಾಗಿ ಒಂದು ನೂಲ್ವ ಹತ್ತಿ ಕಾರ್ಖಾನೆಗೆ ಸಿಡಿಲು ಬಿದ್ದಿತು. ಕಾರ್ಖಾನೆ ಹತ್ತಿಕೊಂಡು ಉರಿಯ ಪ್ರಾರಂಭಿಸಿತು. ಕೂಡಲೇ ಯಂತ್ರಗಳನ್ನಿಟ್ಟು ನೀರು ಹೊಯ್ದು ಬೆಂಕಿಯನ್ನು ಆರಿಸಿದರು. ಆದರೂ ಅಷ್ಟರಲ್ಲೇ ಕಾರ್ಖಾನೆಯಲ್ಲಿದ್ದ ಸುಮಾರು ಮೂರು ಲಕ್ಷ ರೂಪಾಯಿನ ಸಾಮಾನು ಸುಟ್ಟುಹೋಯಿತು.

****

ಹಿಂದುಸ್ಥಾನದ ವೈಸರಾಯಿಯವರೇ ಮೊದಲಾದ ಭಾರಿ ಭಾರೀ ಉದ್ಯೋಗಸ್ಥರುಗಳ ಸಂಬಳವನ್ನು ಏರಿಸಿ ಮಾಡಬೇಕಾಗಿದೆ ಎಂದು ಇಂಡಿಯಾ ಗೌವರ್ನಮೆಂಟಿನವರು ವಿಲಾಯತಿಗೆ ಬರೆದುಕೊಂಡಿದ್ದರು. ಬಂಗಾಳಾ ಲೆಫ್ಟಿನೆಂಟ್ ಗೌವರ್ನರ್, ಮಧ್ಯಪ್ರಾಂತ್ಯಗಳ ಚೀಫ್ ಕಮಿಷನರ್, ಇವರಿಬ್ಬರ ಸಂಬಳವನ್ನು ಮಾತ್ರ ವಿಲಾಯತಿ ಗೌವರ್ನಮೆಂಟಿನವರು ಜಾಸ್ತಿ ಮಾಡಿ, ಉಳಿದ ಉದ್ಯೋಗಸ್ಥರ ಸಂಬಳವನ್ನು ಏರಿಸಿ ಮಾಡಲಾಗುವುದಿಲ್ಲವೆಂದು ಹುಕುಂ ಕೊಟ್ಟಿದ್ದಾರೆ.

ಹಿಂದುಸ್ಥಾನದಲ್ಲಿ ಪ್ಲೇಗ್ ರೋಗದಿಂದ ಮರಣಗಳು [illegible]. ಹಿಂದಿನವಾರ ಒಟ್ಟು ೩೬,೦೦೦ ಜನರು ಈ ರೋಗದಿಂದ ಸತ್ತುಹೋದರು. ಬೊಂಬಾಯಿ ಆಧಿಪತ್ಯದಲ್ಲಿ ೯,೧೩೬, [illegible] ೭,೩೧೨, ಹೈದರಾಬಾದ್ ಸಂಸ್ಥಾನ ೯೪೦, [illegible], ಮೈಸೂರು ಸಂಸ್ಥಾನ ೬೬೩, ಮಧ್ಯಪ್ರಾಂತ್ಯಗಳು [illegible], ಮದರಾಸ್ ಆಧಿಪತ್ಯ ೧೧೩, ಬಂಗಾಳಾ ೬೬, ರಾಜಪುತ್ರ [illegible] ೩೦, ಪಂಜಾಬ್ ೪೩, ರಾಜಪುತಾನಾ ೬, ಕಾಶ್ಮೀರ ಸಂಸ್ಥಾನ [illegible] ಈ ಪ್ರಕಾರ ಮರಣಗಳಾಗಿವೆ.

****

ಹೈದರಾಬಾದ್ ನೈಜಾಮರವರು ತಮ್ಮ ಸಂಸ್ಥಾನದಲ್ಲಿ ವಿಧವೆಯರು ಮತ್ತೆ ವಿವಾಹ ಮಾಡಿಕೊಳ್ಳುವುದು ಒಳ್ಳೆಯದೆಂದು ಅಭಿಪ್ರಾಯಪಟ್ಟು, ಹಾಗೆ ದ್ವಿತೀಯ ವಿವಾಹ ಮಾಡಿಕೊಂಡವರಿಗೆ ಇಷ್ಟಿಷ್ಟೆಂದು ಸರ್ಕಾರದಿಂದ ಬಹುಮಾನ ಕೊಡುತ್ತಾರೆ. ಪುನರ್ವಿವಾಹವು ಇನ್ನೂ ಬೇಗನೆ ಬಳಕೆಯಲ್ಲಿ ಬರಲೆಂದು ಸ್ತ್ರೀಯರಿಗೆ ಕಾಗದಗಳನ್ನು, ಇವುಗಳಿಗೆ ಕೊಡುತ್ತಿರುವ ಹಣಗಳನ್ನು ಇನ್ನು ಕೆಲವು ಕಾಲದವರೆಗೆ ಕೊಡುತ್ತಲೇ ಇರಬೇಕೆಂದು ಮಂತ್ರಿಯವರಿಗೆ ಹುಕುಂ ಕೊಟ್ಟಿದ್ದಾರೆ.

****

ಸಿಲೋನ್ (ಲಂಕಾ) ದ್ವೀಪದ ಬೌದ್ಧ ಗುರುವಾದ ಧರ್ಮಪಾಲ ಎಂಬುವರು ಹಿಂದುಸ್ಥಾನದಲ್ಲಿರುವ ಕಷ್ಟಪಡುವ ನಾನಾ ಜನರಿಗೆ ಕೈಗಾರಿಕಾ ವಿದ್ಯೆಗಳನ್ನು ಕಲಿಸಿಕೊಟ್ಟು, ಅವರನ್ನು ಅಭಿವೃದ್ಧಿಗೆ ತರಬೇಕೆಂದು ಸಾಹಸಪಡುತ್ತಿದ್ದಾರೆ. ಇವರು ಈಗ ಅಮೆರಿಕದಲ್ಲಿ ಮೇಲ್ಕಂಡ ವಿಷಯವಾಗಿ ಉಪನ್ಯಾಸಗಳನ್ನು ಮಾಡುತ್ತಾ, ಅಲ್ಲಿನ ಜನರಿಂದ ದ್ರವ್ಯ ಮೊದಲಾದ ಸಹಾಯವನ್ನು ಪಡೆಯುತ್ತ ಇರುವರು. ಕಾಶೀ ಪಟ್ಟಣದಲ್ಲಿ ಈ ಉದ್ದೇಶಕ್ಕೆ ಒಂದು ಪಾಠಶಾಲೆಯನ್ನು ಸ್ಥಾಪಿಸುವ ವಿಚಾರವು ನಡೆದಿದೆ.

****

ಮದರಾಸ್ ಗೌವರ್ನಮೆಂಟಿನವರು ಅಲ್ಲಿನ ಸರ್ಕಾರಿ ಕಾರಾಗಾರ [illegible] ಕಾರಾಗೃಹದೊಳಗೆ ಅಲ್ಯುಮಿನಿಯಂ ಎಂಬ ಹೊಸ ಲೋಹದಲ್ಲಿ ಅಡಿಗೆ ಪಾತ್ರೆ ಮುಂತಾದವುಗಳನ್ನು ತಯಾರು ಮಾಡಿಸುತ್ತಿದ್ದರಷ್ಟೆ. ಈ ಪಾತ್ರೆಗಳನ್ನು ಬಹುಮಂದಿ ಕೊಂಡುಕೊಂಡು ಉಪಯೋಗಿಸುತ್ತಿರುವರು. ಈ ಲೋಹವು ಉಪಯೋಗದ ಜನರಿಗೆ ಚೆನ್ನಾಗಿ ಅನುಭವಕ್ಕೆ ಬಂದಿದೆ. ಆದ್ದರಿಂದ ಈ ಪಾತ್ರೆಗಳನ್ನು ಸರ್ಕಾರದವರು ಇನ್ನು ಮುಂದೆ ಮಾಡಿಸಿ ವ್ಯಾಪಾರ ಮಾಡುವುದು ಉಚಿತವಲ್ಲವೆಂದು ಹೇಳಿ ನಿಲ್ಲಿಸಿಬಿಟ್ಟರು. ಮದರಾಸಿನಲ್ಲಿರುವ ಸಾಹುಕಾರಿ ಕಾರ್ಖಾನೆಯವರೇ ಇನ್ನು ಮುಂದೆ ಈ ಕಸಬನ್ನು ಮಾಡುತ್ತಾರೆ.

****

ಮೊಂಟ್ಗೊಮರಿ ಎಂಬ ತಾಲ್ಲೂಕದಲ್ಲಿ ಸರ್ಕಾರದವರು ಒಂದು ಕಾರ್ಖಾನೆಯನ್ನಿಟ್ಟು ಡಾಕ್ಟರುಗಳಿಂದ ಒಂದು ತರಹಾ ಔಷಧವನ್ನು ತಯಾರು ಮಾಡಿಸುತ್ತಿದ್ದಾರೆ. ಗೋಶಾಲೆಗಳಿಗೆ [illegible] ಜ್ವರ ಮುಂತಾದ ರೋಗ ತಗಲಿದರೆ ಅವು ವಿಶೇಷವಾಗಿ ಒಟ್ಟೊಟ್ಟಾಗಿ ಸತ್ತುಹೋಗುವವು. ಈ ರೋಗಗಳು [illegible] ಗೋಶಾಲೆಗಳಿಗೆ ಮೇಲ್ಕಂಡ ಹಾಲಿನಿಂದ ಶಿಘ್ರ ವಾಸಿಯಾಗುತ್ತದೆ. ಇಂಥಾ ಹಾಲನ್ನು ಈ ಕಾರ್ಖಾನೆಯವರು ೨—೩ ತಿಂಗಳಲ್ಲಿ ೩೫,೦೦೦ ಗೋಶಾಲೆಗಳಿಗೆ ಬೇಕಾಗುವಷ್ಟು ತಯಾರುಮಾಡಿ ಗ್ರಾಮಾಂತರಗಳಿಗೆ ಕಳುಹಿಸಿದರು. ಈಗ ರೈತರೇ ಮುಂತಾದವರು ಈ ಹಾಲಿನ ಪ್ರಯೋಜನವನ್ನು [illegible] ಬಂದಿದ್ದಾರೆ.

****

ವೈಸರಾಯಿ ಪ್ರಭುಗಳು ನವೆಂಬರ್ ಮೊದಲನೇ ವಾರದಲ್ಲಿ ಸಿಮ್ಲಾದಿಂದ ಹೊರಟು ಘಾಟ್ಯಾಲಾ, ನಭಾ, ಜೀಂದ್ ಮೊದಲಾದ ಸಂಸ್ಥಾನಗಳಿಗೆ ದಯಮಾಡುತ್ತಾರೆ. ಅಲ್ಲಿನ ಭಾವಲ್‌ಪುರಕ್ಕೆ ಹೋಗಿ ಮೂರು ದಿನ ಇದ್ದು ಬಲೂಚಿಸ್ತಾನದ ಸಮಾಚಾರಿಗೆ ಪಟ್ಟ ಕಟ್ಟಿ ತೀರ ಪಟ್ಟಣವಾದ ಕರಾಚಿ ನಗರಕ್ಕೆ ಬಂದು ಅಲ್ಲಿ [illegible] ಎಂಬ ಜಹಜನ್ನು ಹತ್ತಿ ಪಾರ್ಶಿಯಾದೇಶದಲ್ಲಿರುವ [illegible] ಮೊದಲಾದ ತೀರ ಪಟ್ಟಣಗಳಿಗೆ ಹೋಗುವರು. ಆ ಪ್ರಾಂತ್ಯದ ಇಂಗ್ಲೀಷ್ ರ ಅಧಿಕಾರಕ್ಕೊಳಪಟ್ಟ ಪಟ್ಟಣಗಳ ಸ್ಥಿತಿಗತಿಗಳನ್ನು ರಾಜಕೀಯ ವಿಷಯಗಳನ್ನೂ ತನಿಖೆ ಮಾಡುವರು. ಇಲ್ಲಿಂದ ಅಲ್ಲಿ ಇಂಗ್ಲೀಷರಿಗೆ ಅಧೀನವಾಗಿರತಕ್ಕ ದೇಶೀಯ ಸುಲ್ತಾನರು ನವಾಬರು ಮುಂತಾದವರನ್ನು ಕಂಡು ಅವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬರುವರು. ಪರ್ಷಿಯಾ ರಾಜ್ಯದಲ್ಲಿರುವ ಇಂಗ್ಲೀಷ್ ರಾಜ್ಯದ ರಾಯಭಾರಿಯಾದ ಸರ್ ಆರ್ಥರ್ ಹಾರ್ಡಿಂಜ್ ಎಂಬವರು ವೈಸರಾಯಿಯವರ ಸಂಗಡಲೇ ಇದ್ದು ಆ ಪ್ರಾಂತ್ಯದ ರಾಜಕೀಯ ವಿಷಯಗಳನ್ನೆಲ್ಲಾ ವೈಸರಾಯಿಯವರಿಗೆ ವಿಶದ ಪಡಿಸುವರು. ಈ ಸಂಚಾರದಲ್ಲಿ ವೈಸರಾಯಿಯವರು [illegible] ವಾರಗಳನ್ನು ಕಳೆಯುವವರಾಗಿದ್ದಾರೆಂದು ತಿಳಿದುಬಂದಿದೆ.

****

ಬೊಂಬಾಯಿ ಪಟ್ಟಣದಲ್ಲಿ ಹೋದ ತಿಂಗಳು ೧೫ನೆ ತಾರೀಖು ಮಧ್ಯಾಹ್ನ ೧೨ ಗಂಟೆಯಲ್ಲಿ ಜೈನರ ಸಮಾಜವು ನಡೆಯಿತು. ೨,೦೦೦ ಮಂದಿ ಪ್ರತಿನಿಧಿಗಳೂ, ೩,೦೦೦ ನೋಟಕರೂ ಸಭೆಯಲ್ಲಿ ಹಾಜರಾಗಿದ್ದರು. ಈ ಪೈಕಿ ೨೦೦ ಮಂದಿ ಸ್ತ್ರೀಯರು, ಯತಿಗಳೂ ೨೦ ಮಂದಿ ಇದ್ದರು. ಇವರೆಲ್ಲಾ ದಖನ, ಕಛ್, ಕಾಠ್ಯವಾಡ, ಪಂಜಾಬ್, ಮೊದಲಾದ ಭಾಗಗಳಿಂದ ಬಂದವರಾಗಿದ್ದರು. ಸಭಾಮಂಟಪವು ಬಹು ಸುಂದರವಾಗಿ ಅಲಂಕರಿಸಲ್ಪಟ್ಟಿತ್ತು. [illegible] ಹುಮಂದಿ ಪ್ರೋತ್ಸಾಹಕರು ಪ್ರತಿನಿಧಿಗಳನ್ನು ನಾನಾ ಬಗೆಯಾಗಿ ಸತ್ಕರಿಸಿ ಸಂತೋಷಪಡಿಸಿದರು. ಸಭೆ ಪ್ರಾರಂಭವಾಗುವುದಕ್ಕೆ ಮುಂಚೆ ದೇವರಪೂಜೆ ಕೀರ್ತನೆಗಳು ಹಾಡಲ್ಪಟ್ಟವು. ಪ್ರೇಮಚಂದ ರಾಯಚಂದ ಎಂಬಾತನೆಂಬ ಸಭಾ ನಾಯಕರಿಗೆ ಮೃದಿತ ಮಾಲೆ

ಹಿಸ್ಸಲಾಗಿದೆ. ಸರ್ಕಾರು ಅಧಿಕಾರಿಗಳು ಮೊದಲಾದ ಜನರ ನಾನಾ ವಿಧವಾದ ಪ್ರತಿನಿಧಿಗಳಿಗೆ ಸುಮಾರು ಐದಾರು ಸಾವಿರ ಜನರು ಬಂದಿದ್ದರು. ಈ ಸಭೆಯಲ್ಲಿ ಸ್ವರಾಜ್ಯದ ಸಂಬಂಧವಾದ ಸೇವೆ ಕಾರ್ಯವು ನಡೆಯಿತು. ಅನಂತರ ಒಂದು ಸಮಿತಿಯು ನೇಮಿಸಲ್ಪಟ್ಟಿತು. ಆ ಸಮಿತಿಯವರು ಜನರ ಹಿತವನ್ನು ಗೊತ್ತುಮಾಡಬೇಕೆಂದು ನಿರ್ಧರಿಸಿ ಸಭೆಯನ್ನು ಮುಗಿಸಿದರು.

****

ಗೋಂಡಾಲ್ ಸಂಸ್ಥಾನದ ಠಾಕೂರ್ ಸಾಹೇಬ್ ರವರು ತಮ್ಮ ರಾಜಧಾನಿಯಾದ ಧೋರಾಜಿ ಎಂಬ ಪಟ್ಟಣದಲ್ಲಿ ಮಾರೀ ಜಾಡ್ಯದ ಕಾರಣಕ್ಕಾಗಿ ಜನರು, ಎತ್ತು, ಕುದುರೆಗಳನ್ನು ಹೊರಡಿಸಿದರು. ಹಾಗೆ ಹೊರಟವರಿಗೆ ಸರ್ಕಾರದಿಂದ ೬ ತಿಂಗಳವರೆಗೆ ೨೦೦ ರೂ. ಕರ್ಚು ಮಾಡುವುದಕ್ಕೆ ಶಿಕ್ಷೆ ವಿಧಿಸಲಿಲ್ಲ ಎಂಬುದಾಗಿ ತಿಳಿಸುತ್ತಾರೆ. ಆ ಪಟ್ಟಣದಲ್ಲಿರುವ ೬೦ ರಷ್ಟು ಪ್ರಜೆಗಳು ಮುಸಲ್ಮಾನರು. ಅವರ ಅಭಾವ ಮಾಡಲಿಕ್ಕೆ ಬೇರೆ ಇಲ್ಲ. ಅವರು ಅಧಿಕಾರಕ್ಕೆ ಮನೆಗಳಿಂದ ಹೊರಟು ಹೋಗಿ ಗೋವುಗಳನ್ನೂ ಎತ್ತುಗಳನ್ನೂ ಕುದುರೆಗಳನ್ನೂ ಕೊಲ್ಲದಿದ್ದರೆ ತೀರುವುದಿಲ್ಲ. ಸರ್ಕಾರದವರು ಕೊಟ್ಟಿರುವ ಮೇಲ್ಕಂಡ ಆಜ್ಞೆಯು ಅವರಿಗೆ ಬಹು ಕಠಿಣವಾಗಿ ಪರಿಣಮಿಸಿತು. ಆದಕಾರಣ ಅವರೆಲ್ಲ ಸೇರಿ ಈ ಜಾಡ್ಯವನ್ನು ತಪ್ಪಿಸಬೇಕೆಂದು ಮುಖ್ಯವಾಗಿ ನ್ಯಾಯವಾದ ಪ್ರಭುಗಳಿಗೆ ಅರ್ಜಿ ಬರೆದುಕೊಂಡಿದ್ದಾರೆ. ಆ ಅರ್ಜಿಯಲ್ಲಿ ಈ ವಿಷಯವನ್ನು ಕುರಿತು ಬೊಂಬಾಯಿ, ಮದರಾಸು, ಕಲ್ಕತ್ತಾ, ಲಾಹೋರು, ಸೂರತ್ತು, ಕರಾಚಿ ಮೊದಲಾದ ಸ್ಥಳಗಳಲ್ಲಿರುವ ಮಹಮ್ಮದೀಯ ಸಂಘಗಳವರು ಚರ್ಚಿಸಿ ಸರ್ಕಾರದವರಿಗೆ ಅರ್ಜಿ ಹಾಕಿಕೊಂಡಿರುತ್ತಾರೆ. ಹೀಗೆ ಈ ಹಿಂದೆ ಒಬ್ಬ ಸಂಸ್ಥಾನದವರು ೧೮೯೬ನೇ ಇಸವಿಯಲ್ಲಿ ಒಂದು ವೇಳೆ ಪಟ್ಟದ ದಿನಗಳಲ್ಲಿ ಮನೆಯನ್ನು ಬಿಡುವ ಜನರು ಎತ್ತು, ಕುದುರೆಗಳನ್ನು ಕೊಲ್ಲಬೇಕೆಂದು ವಿಧಿಸಿದ್ದರು. ಆಗ ಮಹಮ್ಮದೀಯರೆಲ್ಲಾ ಸೇರಿ ಬೊಂಬಾಯಿ ಗವರ್ನ್ಮೆಂಟಿಗೆ ಅರ್ಜಿ ಬರೆದುಕೊಂಡರು. ಬೊಂಬಾಯಿ ಗವರ್ನರವರು ಆ ಆಜ್ಞೆಯನ್ನು ರದ್ದು ಮಾಡುವಂತೆ ಗೋಂಡಾಲ್ ಸಂಸ್ಥಾನದ ಸರ್ಕಾರದವರಿಗೆ ಬರೆದು ಪತ್ರ ಕಳುಹಿಸಿದರು. ಈಗ ನ್ಯಾಯಶೀಲರಾದ ಅವರು ಹೊಸ ಅರ್ಜಿ ಕರಡ ಹಾಳುಮಾಡುವುದನ್ನು ಕೊಟ್ಟು ಪ್ರಜೆಗಳಿಗೆ ಹಿಂಸೆಯಾಗದ ಮೇಲ್ಕಂಡ ಆಜ್ಞೆಯನ್ನು ರದ್ದು ಮಾಡುತ್ತಾರೆಂದು ನಿರೀಕ್ಷಿಸಲ್ಪಡುತ್ತದೆ.

## ವಿದೇಶ ವರ್ತಮಾನಗಳು.

ಮನೀಲಾ ರಾಜ್ಯದ ಪ್ರಧಾನ ಮಂತ್ರಿಯವರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

****

ಇಟಲಿ ರಾಜ್ಯದ ಗವರ್ನರವರು, ಆಸ್ಟ್ರಿಯಾ ರಾಜ್ಯದ ಚಕ್ರವರ್ತಿಯವರ ಜನ್ಮದಿನದ ದಿವಸದಲ್ಲಿ ವಿಯನ್ನಾಗೆ ಬರುವರು. ನಮ್ಮ ಚಕ್ರವರ್ತಿಯವರ ಆತಿಥ್ಯವನ್ನು ಸ್ವೀಕರಿಸುವವರಾಗಿದ್ದಾರೆ.

****

ಪಾರಿಸ್ ಪಟ್ಟಣದ [illegible] ಪರಿವಾರದವರು [illegible] ವಿಚಾರಣೆ [illegible] ದಾಕ್ಷಿಣ್ಯವಾಗಿ ಕೊಟ್ಟಿದ್ದಾರೆ.

****

ಆಫ್ರಿಕಕ್ಕೆ ಸೇರಿದ [illegible] ಸಂಸ್ಥಾನದ ರಾಜಧಾನಿ [illegible] ಎಂಬ ಸ್ಥಳದಲ್ಲಿ ಜನರು [illegible] ಇಂಗ್ಲೀಷರು [illegible] ಕೇಳಿದೆಂದು ತಿಳಿದು ಬಂದಿದೆ.

****

[illegible] ಗವರ್ನರು [illegible] ವಿಚಾರಮಾಡುತ್ತಾರೆಂತಲೂ [illegible] ಪ್ರಕಟವಾಯಿತು [illegible] ಕೇಳಲಾಗಿ [illegible] ವಿಶ್ವಾಸಬಂದಿದೆ.

****

ಅಮೇರಿಕಕ್ಕೆ ಸೇರಿದ [illegible] ರಾಜ್ಯದಲ್ಲಿ [illegible] ವಿಶೇಷಗಳು [illegible] ರಾಜ್ಯದವರು [illegible] ಕೊಡುತ್ತಾರೆ [illegible] ದವರೆಗೂ ಈ ಪ್ರಕಾರ ಬರಬೇಕೆಂದು ಕೇಳುವರು.

****

ದಕ್ಷಿಣ ಆಫ್ರಿಕಕ್ಕೆ ಸೇರಿದ ಕೇಪ್ ಕಾಲೋನಿಯಲ್ಲಿ ರೈತರು ಸೈನಿಕರಾಯ ಪಾಡಿರುವಕಕ್ಕೆ ಅನುಕೂಲವಾದ ಚಳುವಳಿಯನ್ನು ಕೊಡುವುದು ಬೇಡ ಎಂದು [illegible] ಬಿಡಬೇಕೆಂದು ಹೇಳುತ್ತಿರುವುದು.

[illegible] ಪ್ರಯತ್ನ [illegible] ಸ್ವರಾಜ್ಯ [illegible] ನಮ್ಮ ನಡೆಯುವ ಸ್ಥಿತಿಯು ಈ ದೇಶದ ಜನರಿಗೆ ಸಂಬಂಧಪಟ್ಟ ಕಾರ್ಯಗಳನ್ನು ಸರ್ಕಾರದವರು ತಿಳಿಸಿದರೆ ಪ್ರಯೋಜನವಾಗುವುದು. [illegible] ರೂಪಾಯಿ ಬಹುಮಾನ ಮಾಡುವುದಾಗಿ [illegible] ದವರು ೧,೫೦,೦೦೦ ರೂಪಾಯಿ ಬಹುಮಾನ ಮಾಡುವುದಾಗಿದೆ.

****

ಫ್ರಾನ್ಸಿನಲ್ಲಿ ಒಬ್ಬ ಒಂದು ಸ್ತ್ರೀಯು ಕೊಳ್ಳೆ ಹೊಡೆದ [illegible] ಎಂಬ ಅವಳ ಮಕ್ಕಳನ್ನು [illegible] ಸೇರಿಸುವ [illegible] ಇವರು ಒಂದು ಮಗುವಿಗೆ ಕ್ಷಯರೋಗ [illegible] ಎಂದು ಡಾಕ್ಟರ್ ಡಾಕ್ಟರು ಎಂಬುವರು ತಿಳಿದು [illegible] ಆ ಸ್ತ್ರೀಯ ದುಷ್ಕೃತ್ಯವನ್ನು [illegible] ಕ್ಷಯರೋಗ [illegible] ಹಿಂದೆ ಹಿಂದೆ [illegible] ಸಜ್ಜುಮಾಡಬೇಕೆಂದು ಹೇಳುತ್ತಾರೆ.

****

ರಷ್ಯಾ ರಾಜ್ಯದಲ್ಲಿ ೧೮೩೦ನೇ ಇಸವಿಯಲ್ಲಿ [illegible] ಎಂಬ ಅಧಿಕಾರಿಯು [illegible] ವರ್ಷಗಳ ಪರ್ಯಂತರ ಸರ್ಕಾರದವರು ಅವನ ಆಸ್ತಿಯನ್ನು ರಕ್ಷಿಸುತ್ತಾ ಬಂದರು. ಅವನು ೧೮೦ ವರ್ಷಗಳ [illegible] ಈ ಜನರನ್ನೆಲ್ಲಾ ಅವನ ವಾರಸುದಾರರಿಗೆ [illegible] ಸರ್ಕಾರದವರು ಈಗ ಅದೇ ಪ್ರಕಾರ [illegible] ಬಹು ಹಣವು [illegible] ನಂಬಿಕೆ [illegible] (ಸುಮಾರು ೯ ಕೋಟಿ ರೂಪಾಯಿ) ಈ ವಾರಸುದಾರರಿಗೆ ಪಾವತಿ ಮಾಡಬೇಕೆಂದು ಸರ್ಕಾರದವರು [illegible] ಕೇಳಿದ್ದಾರೆ. ಆ ಪರಿಶ್ರಮವಾಗಿ ಈ ವಾರಸುದಾರರು [illegible] ಹಣವನ್ನು ಪಡೆದರು.

****

ಜರ್ಮೇನಿ ದೇಶದಲ್ಲಿ [illegible] ಎಂಬ ಊರಿನಲ್ಲಿ ಅಗ್ನಿ ಬಿದ್ದು [illegible] ರಾತ್ರಿ ೧೧ ಗಂಟೆಗೆ [illegible] ಬೆಳಗಿನ ೭ ಗಂಟೆಯ ವರೆಗೆ ನಿಲ್ಲಲಿಲ್ಲ. ಈ ಸುಂದರ [illegible] ಮನೆಗಳನ್ನು ಕೆಡವಿಬಿಟ್ಟರು. ಮನೆಗಳು [illegible] ಸುಟ್ಟುಹೋದವು [illegible] ಆ ಪ್ರಾಂತ್ಯದಲ್ಲಿ ರತ್ನಗಳು [illegible] ಮುತ್ತು [illegible] ಸಂಗ್ರಹ [illegible] ಬಿದ್ದು ನೆಲಸಮ [illegible] ಗಳು [illegible] ನಷ್ಟ [illegible] ಇಲ್ಲ.

## ಮೈಸೂರು ಸಂಸ್ಥಾನ.

ಬೆಂಗಳೂರಿನಲ್ಲಿ ಈ ವರ್ಷ [illegible] ನಾವು [illegible] ಕೇಳುತ್ತೇವೆ [illegible] ವರ್ತಮಾನಗಳನ್ನು ಬರೆದು ತಿಳಿಸಬೇಕು [illegible] ನಾವು ಕೊಡುವೆವು.

[illegible] ಉತ್ಸವವು [illegible] ಮಹೋತ್ಸವ [illegible] ನಡೆಯಿತು [illegible] ಬೇಕಾದ [illegible] ಜನರು [illegible] ತೋರಿದ್ದರಿಂದ [illegible] ಮಾಡಿದರು.

[illegible] ಸೋಮವಾರ [illegible] ಒಂದು [illegible] ಬಂದಿರುತ್ತದೆ. ಈ [illegible] ನಂಬಿದ್ದೇವೆ.

ಬೆಂಗಳೂರು [illegible]

## [illegible]

ಅಯ್ಯಾ,

[illegible] ವಿಜಯಪುರ [illegible] ದಯಾ [illegible] ಸರ್ಕಾರದ

ಪ್ರಜೆಗಳಲ್ಲಿರುವ ಸಿಕ್ಕ ವ್ಯಾಧಿಗಳು [illegible] ಪ್ಲೇಗ್ ಜಾಡ್ಯ [illegible] ಜನರ [illegible] ಹೊಂದಿರುವರಿಗೂ [illegible] ಮನೆಗಳನ್ನು [illegible] ಸರ್ಕಾರದವರು [illegible] ಬಿಡುವುದರಿಂದ [illegible] ಸರ್ಕಾರದವರ [illegible] ಪ್ಲೇಗ್ [illegible] ವಿಚಾರ [illegible] ಕೃತಜ್ಞತೆಯನ್ನು [illegible] ಅದು [illegible] ಕಷ್ಟಾನುಭವವಾಗುವದಲ್ಲವೆ?

ಸಿ. ವಿ.

## ಚಳಿಗಾಲದ ಪ್ಲೇಗ್ [illegible]

ಅಯ್ಯಾ,

ಈಗ ಚಳಿಗಾಲಗಳ ಪ್ಲೇಗ್, ಬಹಳ ಪ್ರಾರಂಭಿಸಿ [illegible] ಪಟ್ಟಣಗಳಲ್ಲಿ ಪ್ಲೇಗ್ ಜಾಡ್ಯ [illegible] ಸ್ಥಳ [illegible] ಅಂತಹ [illegible] ಕರಿಯಪ್ಪ [illegible] ಪ್ಲೇಗ್ [illegible] ಜನರ [illegible] ಮನೆಯ ಬಿಟ್ಟು [illegible] ಪ್ಲೇಗ್ [illegible] ಮನೆ ಬಿಟ್ಟು [illegible] ಮನೆಯನ್ನು ಬಿಟ್ಟು [illegible] ಎಂದಿರಬಹುದು?

ಅಯ್ಯಾ! ಪ್ರಜೆಗಳೆಲ್ಲರು ಪ್ಲೇಗಿನ [illegible] ವಿಷಯದಲ್ಲಿ [illegible] ಇದರಿಂದ [illegible] ಜನರ [illegible] ಮನೆ [illegible] ಬಿಡುವರು [illegible] ಮನೆಗಳನ್ನು ಬಿಟ್ಟು [illegible] ಪಟ್ಟಣಗಳಲ್ಲಿ ವಾಸ [illegible] ಬಲ್ಲೀರ?

ನಿಮ್ಮಗಳ [illegible]

## ಸರ್ವಜ್ಞ [illegible]

ಅಯ್ಯಾ,

[illegible] ಸಿ. ವಿ. [illegible] ಸರ್ವಜ್ಞ [illegible] ಎಂದು [illegible] ಪ್ಲೇಗ್ [illegible] ಪ್ಲೇಗ್ [illegible] ಮಾಡುವವರು [illegible] ಕೆಲಸ [illegible] ಮಾತ್ರ [illegible] ಪ್ರಕಟ [illegible] ತಿಳಿಸಬೇಕು.

ಮ್ಯಾನೇಜರ್,

ಸಿ. ವಿ. ಕಾಂಪೆನಿ.

## ನವರಾತ್ರಿ ಉತ್ಸವಗಳು.

### ವಿಜಯದಶಮಿ.

ಕಳೆದ ಗುರುವಾರ ಬೆಳಗ್ಗೆ ಶ್ರೀಮನ್ಮಹಾರಾಜರವರು ಅಶ್ವಾರೂಢರಾಗಿ ಜಗನ್ಮೋಹನ ಬಂಗಲೆಯಿಂದ ಸಕಲ ಮರ್ಯಾದೆಯೊಡನೆ ಶಮೀವೃಕ್ಷ ಪುಷ್ಪದ ಕಡೆಗೆ ದಯಮಾಡಿ, ಪಟ್ಟದ ಆನೆ ಕುದುರೆ ಆಯುಧಗಳನ್ನು ಬನ್ನೀ ಮಂಟಪಕ್ಕೆ ಕಳುಹಿಸಿ ಕೊಟ್ಟು ವಾಪಸು ಅರಮನೆಗೆ ದಯಮಾಡಿದರು. ಆಗ ಪಟ್ಟ ಕಾಳಗಗಳು ನಡೆದವು. ತರುವಾಯ ಸಾಯಂಕಾಲ ೫ ಗಂಟೆಗೆ ಆನೆಯ ಮೇಲೆ ಅಂಬಾರಿಯಲ್ಲಿ ಸರ್ವಾಲಂಕಾರ ಭೂಷಿತರಾಗಿ ಚಿತ್ತೈಸಿ ಸಕಲ ಮರ್ಯಾದೆಗಳೊಡನೆ ವಿಜಯ ಯಾತ್ರೆ ದಯಮಾಡಿದರು. ಆನೆ ಕುದುರೆಗಳು, ಸಿಪಾಯಿಗಳು, ವಾದ್ಯಗಾರರು, ಓಲಗ ತಾಳ ಮೇಳಗಳು, ಅರಸು ಮಕ್ಕಳು, ಅಧಿಕಾರಿಗಳು ದಿವಾನರು, ಕೌನ್ಸಿಲ್ ಮೆಂಬರುಗಳು, ಮೆ॥ ತಂಬೂಚೆಟ್ಟಿಯವರು, ಸೆಕ್ರೆಟರಿಗಳು, ಡೆಪ್ಯುಟಿ ಕಮೀಷನರುಗಳು ಮೊದಲಾದವರೆಲ್ಲಾ ಮೆರವಣಿಗೆಯಲ್ಲಿ ಬಂದರು. ಮಳೆ ಸುರಿಯುತ್ತಲೇ ಇತ್ತು. ಆದರೂ ಸಾವಿರಾರು ಜನರು ರಸ್ತೆಯ ಉದ್ದಕ್ಕೂ ನಿಂತು ಮಹಾರಾಜರನ್ನು ನೋಡಿ ಸಂತೋಷಪಟ್ಟರು. ಶ್ರೀಮನ್ಮಹಾರಾಜರು ಬೋಸ್ಪನ ಹಳ್ಳಿ ಕೆರೆ ಬಳಿ ಇರುವ ಬನ್ನಿ ಮಂಟಪಕ್ಕೆ ದಯಮಾಡಿ, ಆಯುಧ ಮುಂತಾದವುಗಳನ್ನು ಪೂಜೆ ಮಾಡಿ, ಅಶ್ವಾರೂಢರಾಗಿ ಮೈದಾನಿಗೆ ಚಿತ್ತೈಸಿ ಕುದುರೆ ಸವಾರರೂ, ಸಿಪಾಯಿಗಳೂ ಮಾಡಿ ತೋರಿಸಿದ ಕವಾತು ಸಾಹಸ ಕಾರ್ಯಗಳನ್ನು ಪರಾಂಬರಿಸಿದರು. ಅಲ್ಲಿ ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು. ಸಿಪಾಯಿಗಳು ಕವಾತು ಮಾಡುವಾಗ ೩—೪ ಸಲ ಸುರುಟುಗಳನ್ನು ಹಾರಿಸಿದರು. ಅನಂತರ ಶ್ರೀಮನ್ಮಹಾರಾಜರವರು ಅಂಬಾರಿಯಲ್ಲಿ ಕುಳಿತು ಮೆರವಣಿಗೆಯಾಗಿ ದಯಮಾಡಿದರು. ತರುವಾಯ ಪದ್ಧತಿ ಪ್ರಕಾರ ಅರಮನೆಯಲ್ಲಿ ಆರತ್ಯಕ್ಷತೆಗಳು ಬೇಡು, ದೊಡ್ಡ ಮನುಷ್ಯರೆಲ್ಲಾ ತಮ್ಮ ತಮ್ಮ ಗೃಹಗಳನ್ನು ಕುರಿತು ತೆರಳಿದರು.

### ಆಟಗಳು.

ಶುಕ್ರವಾರ ಸಾಯಂಕಾಲ ೩ ಗಂಟೆಗೆ ರೆಸಿಡೆನ್ಸಿ ಮೈದಾನಿನಲ್ಲಿ ಕುದುರೆ ಸವಾರರೇ ಮುಂತಾದವರಿಂದ ನಾನಾ ಆಟಗಳನ್ನು ಆಡಿಸಿ ಇನಾಮು ಕೊಡಿಸಿದರು. ಶ್ರೀಮನ್ಮಹಾರಾಜರವರು, ರೆಸಿಡೆಂಟರವರು, ಇವರ ಪತ್ನೀರವರು ಯೂರೋಪಿಯನ್ ಸರ್ದಾರರುಗಳು ಮೊದಲಾದವರೆಲ್ಲಾ ಹಾಜರಾಗಿದ್ದರು. ಸೈನಿಕರು ಮತ್ತು ಸರ್ದಾರರೂ ಕುದುರೆ ಸವಾರಿ ಮಾಡಿಕೊಂಡು ಕಟ್ಟಿಹಾರಿಸಿ ಕುದುರೆಗಳನ್ನು ವೇಗವಾಗಿ ಓಡಿಸುತ್ತಾ ಒಂದು ಕಂಭಕ್ಕೆ ನೇತುಹಾಕಿದ್ದ ತೆಂಗಿನ ಕಾಯಿಯನ್ನು ಭರ್ಜಿಯ ಮೊನೆಯಿಂದ ತಿವಿದು, ಮುಂದಕ್ಕೆ ಹೋಗಿ ನೆಲದಲ್ಲಿ ಹುಗಿದಿದ್ದ ಸಣ್ಣ ಪಟ್ಟಿಗಳನ್ನು ಭರ್ಜಿ ತುದಿಯಲ್ಲಿ ಚುಚ್ಚಿ ಎತ್ತಿಕೊಂಡು ಹೋಗುವದು ; ಇಬ್ಬರಿಗೆ ಮೈಗೆಲ್ಲಾ ಜಾರುವ ಎಣ್ಣೆ ಬಳಿದು ಅವರು ಓಡುವಾಗ್ಯೆ ಆರಾರು ಮಂದಿ ಡಿಟೆಕ್ಟಿವ್ ಪೋಲೀಸಿನವರು ಬೇದಿರಸಿಗಲ್ಲಿ ಅವರ ಹಿಂದೆ ಕಳ್ಳರನ್ನು ಹಿಡಿಯುವವರಂತೆ ಓಡುತ್ತಾ, ಹಿಡಿದರೂ ಅವರು ಸಿಕ್ಕದೆ ತಪ್ಪಿಸಿಕೊಂಡು ಹೋಗುತ್ತಾ ಕಡೆಗೆ ೩—೪ ಜನ ಸೇರಿ ಕೈಕಾಲು ತಲೆಗಳನ್ನು ಹಿಡಿದು ದಸ್ತಗಿರಿ ಮಾಡುವುದು ; ಯುದ್ಧದಲ್ಲಿ ಶತ್ರುಗಳು ಒಬ್ಬರ ಮೇಲೊಬ್ಬರು ಬಿದ್ದು ಹೊಡೆದಾಡುವಾಗ್ಗೆ ಒಬ್ಬರ ಸಾಮಾನು ಆಹಾರ ಪದಾರ್ಥ ಮುಂತಾದ್ದನ್ನು ಇನ್ನೊಬ್ಬರು ಹೊಡೆದು ಕಿತ್ತುಕೊಂಡು ಹೋಗುವುದು ಪ್ಯಾಗೋ ಹಾಗೆ ನಕ್ಲಿ ಯುದ್ಧ ಮಾಡುವುದು ; ಒಂದೊಂದು ಪಕ್ಷದಲ್ಲಿ ೧೨ ಮಂದಿಯಂತೆ ಸಿಪಾಯಿಗಳೂ, ಸವಾರರೂ ನಿಂತು ಹಗ್ಗಗಳನ್ನೆಳೆವುದು ; ೨೪ ಜನ ಸವಾರರು ಕುದುರೆ ಸವಾರಿ ಮಾಡುತ್ತಾ ಬ್ಯಾಂಡ್ ವಾದ್ಯದ ಲಯಕ್ಕೆ ಸರಿಯಾಗಿ ಬೇರೆ ಬೇರೆ ವಿಧವಾಗಿ ಕುದುರೆಗಳನ್ನು ತಿರುಗಿಸುವದು ಇವೇ ಮೊದಲಾದ ವಿನೋದಗಳೆಲ್ಲಾ ನಡೆದವು. ಕಡೆಯಲ್ಲಿ ಗೆದ್ದವರನ್ನೆಲ್ಲಾ ಕರೆದು ರೆಸಿಡೆಂಟರವರ ಪತ್ನೀರವರ ಹಸ್ತದಿಂದ ಅವರಿಗೆ ರೂಪಾಯಿಗಳನ್ನು ಬಹುಮಾನವಾಗಿ ಕೊಡಿಸಿದರು. ಈ ವಿನೋದವನ್ನು ನೋಡಲು ಮೈದಾನಿನ ಸುತ್ತಲೂ ಅನೇಕ ಪ್ರಜೆಗಳು ಸೇರಿದ್ದರು.

### ತಸ್ವೀರುಗಳನ್ನು ಒಪ್ಪಿಸಿದ್ದು.

ಶನಿವಾರ ಮಧ್ಯಾಹ್ನ ೧೨ ಗಂಟೆಗೆ ಕೋಲಾರ್ ಚಿನ್ನದ ಗಣಿ ಕಂಪನಿಯವರ ಪ್ರತಿನಿಧಿಗಳಾದ ಮೆ॥ ಥಾಮಸ್ ರಿಚರ್ಡ್ಸ್ ಯವರು ಕೆಲವು ಮಂದಿ ಯೂರೋಪಿಯನ್ ಸರ್ದಾರರೊಡನೆ ಜಗನ್ಮೋಹನ ಬಂಗಲೆಗೆ ಹೋಗಿ ಶ್ರೀಮನ್ಮಹಾರಾಜರವರಿಗೆ ಗಣಿ ಕಂಪನಿಗಳವರ ಪರವಾಗಿ ತಂದಿದ್ದ ಎರಡು ದೊಡ್ಡ ತಸ್ವೀರುಗಳನ್ನು ಒಪ್ಪಿಸಿದರು. ಅವು ವಿಲಾಯಿತಿಯ ಮಹಾರಾಜಾ ಚಕ್ರವರ್ತಿಯವರಾದ ಎಡ್ವರ್ಡ್ ಯವರ ಮತ್ತು ಚಕ್ರವರ್ತಿನಿಯವರಾದ ಅಲೆಕ್ಸಾಂಡ್ರಾ ರಾಣಿಯವರ ಭಾವಚಿತ್ರಗಳಾಗಿರುತ್ತವೆ. ಅವರ ಆಕೃತಿಗಳು ಎಷ್ಟು ದೊಡ್ಡವಾಗಿರುವವೋ ಈ ಭಾವಚಿತ್ರಗಳೂ ಅಷ್ಟು ದೊಡ್ಡವಾಗಿ ಬರೆಯಲ್ಪಟ್ಟಿವೆ. ಗಣಿಗಳ ಕಂಪನಿಯ ಮೊಖ್ತೇಸರರಾದ ಜಾರ್ಜ್ ಟೇಲರ್ ಸನ್ಸ್ ಎಂಬುವರು ಹೋದವರುಷ ನಮ್ಮ ಮಹಾರಾಜರವರಿಗೆ ಪಟ್ಟಾಭಿಷೇಕವಾದಾಗ ಅದರ ಜ್ಞಾಪಕಾರ್ಥವಾಗಿ ಈ ತಸ್ವೀರುಗಳನ್ನು ಒಪ್ಪಿಸಬೇಕೆಂದು ಉದ್ದೇಶಪಟ್ಟಿದ್ದರು. ಶ್ರೀಮನ್ಮಹಾರಾಜರವರು ಅಂಗೀಕರಿಸುವದಾಗಿ ಸೂಚನೆ ಕೊಟ್ಟಿದ್ದರ ಮೇಲೆ ವಿಲಾಯಿತಿಯಲ್ಲಿ ಪ್ರಸಿದ್ಧನಾದ ಹೆರಾಲ್ಡ್ ಸ್ಪೀಡ್ ಎಂಬ ಚಿತ್ರಗಾರನಿಂದ ಬಹು ಸುಂದರವಾದ ಬಣ್ಣಗಳಿಂದ ಅವೆರಡು ತಸ್ವೀರುಗಳನ್ನೂ ಬರೆಸುವುದಕ್ಕಾರಂಭಿಸಿದರು. ಅವೆರಡೂ ತಯಾರಾಗುವುದಕ್ಕೆ ಇಷ್ಟು ದಿವಸಗಳೂ ಹಿಡಿದವು. ಅವು ಎಣ್ಣೆ ಬಣ್ಣಗಳಲ್ಲಿ ಬರೆಯಲ್ಪಟ್ಟಿವೆ ; ಪ್ರತಿ ಒಂದೂ ೫×೬ ಅಡಿ ಪ್ರಮಾಣವುಳ್ಳದ್ದು. ತಸ್ವೀರುಗಳಿಗೆ ಸ್ವಲ್ಪ ಹೆಚ್ಚು ಕಡಿಮೆ ಗಣಿ ಕಂಪನಿಯವರಿಗೆ ೭—೮ ಸಹಸ್ರ ರೂಪಾಯಿ ಖರ್ಚಾಗಿರಬಹುದು. ಇವೆರಡನ್ನೂ ಕಂಪನಿಗಳ ಪ್ರತಿನಿಧಿಯಾದ ಮೆ॥ ರಿಚರ್ಡ್ಸ್ ಯವರು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಿದರು. ಶ್ರೀಮನ್ಮಹಾರಾಜರವರು ಸ್ವೀಕರಿಸಿ ಬಹು ಸಂತೋಷದಿಂದ ಅಪ್ಪಣೆ ಕೊಡಿಸಿದ್ದೇನೆಂದರೆ—ಈ ತಸ್ವೀರುಗಳು ಬಹು ಸುಂದರವಾಗಿರುತ್ತವೆ. ಇವುಗಳನ್ನು ಕಂಪನಿಯವರು ನಮಗೆ ಒಪ್ಪಿಸಿದ್ದಕ್ಕಾಗಿ ತುಂಬಾ ಸಂತೋಷಪಟ್ಟು ಅವರನ್ನು ವಂದಿಸುತ್ತೇವೆ. ಇವೆರಡನ್ನೂ ನಾವು ವಂಶಪಾರಂಪರ್ಯವಾಗಿ ಮಹೋತ್ಕೃಷ್ಟವಾದ ವಸ್ತುವಿನಂತೆ ಕಂಡು ವಿಶೇಷ ಪ್ರೀತಿಯೊಡನೆ ಕಾಪಾಡಿಕೊಂಡು ಬರುವೆವು. ಅನಂತರ ಸಭೆಯು ಬರಖಾಸ್ತಾಯಿತು.

### ಅತಿಥಿಗಳ ವಿಹಾರ.

ಭಾನುವಾರ ಬೆಳಗಿನ ರೈಲಿನಲ್ಲಿ ಕೆಲವು ಮಂದಿ ಯೂರೋಪಿಯನ್ ಸರ್ದಾರರು ಶ್ರೀರಂಗಪಟ್ಟಣಕ್ಕೆ ಹೋಗಿ ಗಂಜಿ ಮನೆ, ಹಲ್ಲಾ ಹತ್ತಿದ ಸ್ಥಳ, ಸುಲ್ತಾನರು ಸತ್ತ ಸ್ಥಳ, ಗುಂಬಜು, ದರಿಯಾ ದೌಲತ್ತು, ಸುಲ್ತಾನರ ಗೋರಿ ಮೊದಲಾದ ಚರಿತ್ರಾರ್ಹವಾದ ವಿಷಯಗಳನ್ನೆಲ್ಲಾ ನೋಡಿಕೊಂಡು ಕುದುರೆ ಗಾಡಿಗಳಲ್ಲಿ ವಾಪಸು ರಾಜಧಾನಿಗೆ ಬಂದರು.

### ಪ್ರಜಾಪ್ರತಿನಿಧಿ ಸಭೆ.

ಈಸಲ ಪ್ರಜಾಪ್ರತಿನಿಧಿಗಳು ರಾಜಧಾನಿಯಲ್ಲಿ ಪ್ಲೇಗ್ ಉಪದ್ರವಿರುವದನ್ನು ನೋಡಿ ಬಹುಮಂದಿ ಬಾರದೆ ನಿಂತುಬಿಟ್ಟು ಸುಮಾರು ೭೦ ಮಂದಿ ಬಂದಿರಬಹುದು. ಇವರಲ್ಲಿ ಬಹುಮಂದಿ ನಾರ್ಮಲ್ ಸ್ಕೂಲು, ಹಳೇ ಡಿಸ್ಟ್ರಿಕ್ಟ್ ಆಫೀಸ್ ಬಂಗಲೆ, ನಂಜರಾಜಬಹದ್ದೂರ ಛತ್ರ ಮೊದಲಾದ ಕಡೆಗಳಲ್ಲಿ ಇಳುಕೊಳ್ಳುವಂತೆ ಸರ್ಕಾರದವರು ಏರ್ಪಾಡು ಮಾಡಿದಾರೆ. ಇದರಿಂದ ಅವರಿಗೆ ಎಲ್ಲಾ ವಿಷಯಗಳಲ್ಲೂ ತುಂಬಾ ಅನುಕೂಲವಾಯಿತೆನ್ನುವುದಕ್ಕೆ ಸಂದೇಹವಿಲ್ಲ.

೫ ನೆ ತಾರೀಖು ಸೋಮವಾರ ೧೨ ಗಂಟೆಗೆ ಇಲ್ಲಿನ ಪಬ್ಲಿಕ್ ಆಫೀಸ್ ಕಟ್ಟಡದ ಮೇಲ್ಗಡೆ ದೊಡ್ಡ ಹಾಲ್‌ನೊಳಗೆ ಪ್ರಜಾಪ್ರತಿನಿಧಿ ಸಮಾಜವು ನಡೆಯಿತು. ಸಭಾ ಮಂಟಪವನ್ನು ನೇತ್ರಾನಂದಕರವಾಗಿ ಅಲಂಕರಿಸಿದ್ದರು. ಸಾಲು ಸಾಲಾಗಿ ಕುರ್ಚಿಗಳನ್ನು ಹಾಕಿದ್ದರು. ಮೆಂಬರುಗಳೆಲ್ಲಾ ಅಲ್ಲದೆ ಅಧಿಕಾರಿಗಳೂ ರಾಜಧಾನಿಯಲ್ಲಿರುವ ದೊಡ್ಡಮನುಷ್ಯರೂ ಹಾಜರಾಗಿ ಉಚಿತಾಸನಗಳಲ್ಲಿ ಕುಳಿತುಕೊಂಡರು. ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳಿಗೆ ಮುಂಭಾಗದಲ್ಲಿ ಕುರ್ಚಿ ಮೇಜುಗಳನ್ನು ಸಿದ್ಧಪಡಿಸಿದ್ದರು. ಹಿಂಭಾಗದಲ್ಲಿ ಸ್ವಲ್ಪ ಎತ್ತರವಾದ ಸ್ಥಾನದಲ್ಲಿ ಶ್ರೀಮನ್ಮಹಾರಾಜರವರು, ರೆಸಿಡೆಂಟರವರು, ಇವರ ಪತ್ನೀರವರು, ದಿವಾನರವರು, ಕೌನ್ಸಿಲ್ ಮೆಂಬರುಗಳು, ಇವರ ಹಿಂಭಾಗದಲ್ಲಿ ಆಲಾಬಾ ಹುದ್ದೇದಾರರುಗಳು, ಡೆಪ್ಯುಟಿ ಕಮೀಷನರುಗಳು, ಯೂರೋಪಿಯನ್ ಸರ್ದಾರರುಗಳು, ದೊರೆಸಾನಿಗಳು ಮೊದಲಾದವರೆಲ್ಲಾ ಕುಳಿತುಕೊಂಡರು. ೧೨ ಗಂಟೆಗೆ ಸರಿಯಾಗಿ ಶ್ರೀಮನ್ಮಹಾರಾಜರವರು ಎದ್ದು ಮೃದು ಮಧುರವಾದ ಸ್ವರದಿಂದ ಪ್ರಜಾಪ್ರತಿನಿಧಿಗಳನ್ನು ಕುರಿತು ಕೆಲವು ಶ್ರೇಷ್ಠ ವಾಕ್ಯಗಳನ್ನು ಪಯಮಾಯಿಸಿದರು. [ಇದನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ.—ಎಡಿ.] ತರುವಾಯ ದಿವಾನರವರು ಅದನ್ನೇ ಕನ್ನಡದಲ್ಲಿ ಓದಿ ಹೇಳಿದರು. ಕೂಡಲೇ ಮೆ॥ ಅಂಬಳೇ ಪಂಡಿತರು ಪ್ರತಿನಿಧಿಗಳ ಪರವಾಗಿ ಒಂದು ವಿಜ್ಞಾಪನೆಯನ್ನು ಓದಿದರು. [ಇದನ್ನು ಇನ್ನೊಂದು ಕಡೆ ಪ್ರಕಟಿಸಿದ್ದೇವೆ.—ಎಡಿ.] ಆಮೇಲೆ ಬೆಂಗಳೂರ್ ಅಮಲ್ದಾರ್ ಮೆ॥ ಹರ್ಸ್ ಅಬಿಜೇಗ್ ಯವರು ಪಾರ್ಸಿಯಲ್ಲಿ ಒಂದು ವಿಜ್ಞಾಪನೆಯನ್ನು ಓದಿದರು. ಅನಂತರ ದಿವಾನರವರು ಸಂಸ್ಥಾನದ ಕಳೆದ ವರುಷದ ಜಮಾ ಖರ್ಚು, ಸ್ಥಿತಿಗತಿ ಮೊದಲಾದ ಬಾಬುಗಳನ್ನು ಕುರಿತು ಇಂಗ್ಲಿಷಿನಲ್ಲಿ ಓದಿ ಹೇಳಿದರು. ಇದರ ಸಾರಾಂಶವನ್ನು ಇನ್ನೊಂದು ಕಡೆ ಪ್ರಕಟಿಸಿದ್ದೇವೆ.—ಎಡಿ.] ಇದಾದ ಮೇಲೆ ಶ್ರೀಮನ್ಮಹಾರಾಜರವರು ಸಭೆಯನ್ನು ಬಿಟ್ಟು ಅರಮನೆಗೆ ತೆರಳಿದರು. ರೆಸಿಡೆಂಟರು, ಯೂರೋಪಿಯನ್ ಸರ್ದಾರರು, ದೊರೆಸಾನಿಗಳು ಮೊದಲಾದವರೆಲ್ಲಾ ತಮ್ಮ ತಮ್ಮ ಬಿಡಾರಗಳನ್ನು ಕುರಿತು ಹೊರಟುಹೋದರು. ಇವರೆಲ್ಲಾ ಹೊರಟುಹೋದ ಮೇಲೆ ಸೆಕ್ರೆಟರಿಯವರು ದಿವಾನರವರ ಉಪನ್ಯಾಸವನ್ನು ಕನ್ನಡದಲ್ಲಿ ಸಭಿಕರಿಗೂ ಪ್ರತಿನಿಧಿಗಳಿಗೂ ಓದಿ ಹೇಳಿದರು. ಇಲ್ಲಿಗೆ ಪ್ರತಿನಿಧಿ ಸಭೆಯ ಮೊದಲನೇ ದಿನದ ಕಾರ್ಯಗಳು ಸಮಾಪ್ತಿಯಾದವು.

ಮೊನ್ನೆಯೂ, ನೆನ್ನೆಯೂ ಯಥಾಪ್ರಕಾರ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಪ್ರತಿನಿಧಿ ಸಮಾಜವು ನಡೆಯಿತು. ದಿವಾನರು, ಕೌನ್ಸಿಲ್ ಮೆಂಬರುಗಳು, ಸೆಕ್ರೆಟರಿಗಳು, ಚೀಫ್ ಕೋರ್ಟ್ ಜಡ್ಜಿಯವರು, ಇಲಾಖೆಗಳ ಹುದ್ದೇದಾರರುಗಳು ಮೊದಲಾದವರೆಲ್ಲಾ ಸಭೆಯಲ್ಲಿ ಹಾಜರಾಗಿ ಡಿಸ್ಟ್ರಿಕ್ಟುಗಳ ಪ್ರತಿನಿಧಿಗಳು ಅರಿಕೆ ಮಾಡಿಕೊಂಡಿದ್ದ ವಿಷಯಗಳನ್ನು ಕುರಿತು ಅವರ ಸಂಗಡ ಚರ್ಚೆಮಾಡಿ ಉತ್ತರಗಳನ್ನು ಕೊಟ್ಟರು. ಈ ವಿಷಯಗಳನ್ನು ಬರುವ ವಾರ ಪ್ರಕಟಿಸುತ್ತೇವೆ.—ಎಡಿ.]

### ಯೂರೋಪಿಯನ್ನರಿಗೆ ಔತನ.

ಈಸಲ ಶ್ರೀಮನ್ಮಹಾರಾಜರವರು ನವರಾತ್ರಿ ಉತ್ಸವಗಳನ್ನು ನೋಡಿಕೊಂಡು ಹೋಗುವುದಕ್ಕೆ ಸುಮಾರು ೨೦೦ ಮಂದಿ ಸರ್ದಾರರುಗಳಿಗೆ ಆಹ್ವಾನಪತ್ರಿಕೆಗಳನ್ನು ಕಳುಹಿಸಿದ್ದರು. ೫೦—೬೦ ಮಂದಿ ಮಾತ್ರ ರಾಜಧಾನಿಗೆ ಬಂದಿರುತ್ತಾರೆ. ಇವರೆಲ್ಲಾ ರೆಸಿಡೆನ್ಸಿ ಬಂಗಲೆಯಲ್ಲೂ ಮೈದಾನಿನಲ್ಲಿ ಸಾಲು ಸಾಲಾಗಿರುವ ಡೇರಾಗಳಲ್ಲೂ ಬಿಡಾರ ಮಾಡಿ ಕೊಟ್ಟಿರುವರು. ಬ್ರಿಟಿಷ್ ರೆಸಿಡೆಂಟ್ ಸರ್ ಡೊನಾಲ್ಡ್ ರಾಬರ್ಟ್‌ಸನ್‌ರವರು ಪತ್ನಿ ಸಹಿತ ಮಹಾಭಿವೃದ್ಧಿಯಲ್ಲಿರುವ ಪಬ್ಲಿಕ್ ಆಫೀಸ್ ಕಟ್ಟಡ ಬಳಿ ಇಳಿದುಕೊಂಡಿರುವರು. ಈ ಸರ್ದಾರರುಗಳ ಸಂತೋಷಾರ್ಥವಾಗಿ ಪೋಲೋ ಪಂದ್ಯ, ಕುದುರೆ ಜೂಜು, ಬೇಟೆ, ನಾನಾ ವಿಧ ಆಟಗಳು, ನೃತ್ಯ ಮೊದಲಾದವುಗಳನ್ನು ಕಲ್ಪಿಸಿದ್ದರು.

ಮೊನ್ನೆ ಸೋಮವಾರ ರಾತ್ರಿ ಈ ಸರ್ದಾರರುಗಳಿಗೆಲ್ಲಾ ಶ್ರೀಮನ್ಮಹಾರಾಜರವರು ರೆಸಿಡೆನ್ಸಿ ಬಂಗಲೆಯಲ್ಲಿ ಶ್ರೇಷ್ಠವಾದ ಔತನವನ್ನು ಮಾಡಿಸಿದರು. ಭೋಜನಾನಂತರ ಚಿತ್ರ ವಿಚಿತ್ರವಾದ ಬಾಣ ಬಿರುಸುಗಳು ಅವರಿಗೆ ನೇತ್ರಾನಂದವನ್ನುಂಟು ಮಾಡಿದವು. ಬ್ರಿಟಿಷ್ ರೆಸಿಡೆಂಟರವರು ಶ್ರೀಮನ್ಮಹಾರಾಜರವರ ಶ್ರೇಯಸ್ಸಿಗೆ ಪ್ರಾರ್ಥನೆ ಮಾಡಿ ಅಪ್ಪಣೆ ಕೊಡಿಸಿದ್ದೇನೆಂದರೆ :—ನಾನು ಇಲ್ಲಿ ಇಂತಹ ಸಂತೋಷೋತ್ಸವದಲ್ಲಿ ಬೆರೆಯುವುದು ಇದೇ ಕಡೆ. ಏಳು ವರುಷಗಳಿಂದಲೂ ನಾನು ಈ ಸಂಸ್ಥಾನದಲ್ಲಿದ್ದುಕೊಂಡು, ಶ್ರೀಮನ್ಮಹಾರಾಜರವರ ಬಾಲ್ಯ, ಅವರ ವಿದ್ಯಾಭ್ಯಾಸ, ಅವರ ಪುರೋಭಿವೃದ್ಧಿಗಳನ್ನು ನೋಡಿಕೊಳ್ಳುತ್ತಾ ಬಂದಿರುತ್ತೇನೆ. ಅವರು ಬಹು ಸಾಮರ್ಥ್ಯವುಳ್ಳವರಾಗಿದ್ದಾರೆ. ಹಿಂದುಸ್ಥಾನದ ದೇಶೀಯ ರಾಜರುಗಳಲ್ಲಿ ಇಷ್ಟು ಮಟ್ಟಿಗೆ ಯೋಗ್ಯತಾಸಿದ್ಧಿಯನ್ನು ಪಡೆದಿರುವವರು ವಿರಳರಾಗಿರುತ್ತಾರೆ. ಇವರ ಆಳ್ವಿಕೆಯಲ್ಲಿ ಈ ಸಂಸ್ಥಾನವು ತುಂಬಾ ಅಭಿವೃದ್ಧಿಗೆ ಬಂದೀತೆನ್ನುವದಕ್ಕೆ ಸಂಶಯವಿಲ್ಲ. ಇವರ ಅತಿಥಿಸತ್ಕಾರದಲ್ಲಿ ಅದ್ವಿತೀಯರಾದ ಇವರ ಮಾತೃಶ್ರೀ ಮಹಾರಾಣಿಯವರೂ ಚಿರಕಾಲ ಆಯುರಾರೋಗ್ಯಾದಿಗಳನ್ನು ಪಡೆದು ಸುಖದಿಂದಿರಲಿ ಎಂಬುವದೊಂದೇ ನನ್ನ ಪ್ರಾರ್ಥನೆಯಾಗಿದೆ.

ಶ್ರೀಮನ್ಮಹಾರಾಜರವರು ಅದಿನ ರಾತ್ರಿ ಅಲ್ಲಿಗೆ ದಯಮಾಡಲು ಅವಕಾಶವಾಗಲಿಲ್ಲ. ಆದಕಾರಣ ಅವರ ಪರವಾಗಿ ಅವರ ಪ್ರೈವೇಟ್ ಸೆಕ್ರೆಟರಿ ಮೆ॥ ಇ. ಮೆಕಾನಿಕಿಯವರು ರೆಸಿಡೆಂಟರವರನ್ನೂ ಸರ್ದಾರರುಗಳನ್ನೂ ವಂದಿಸಿದರು.

ಅದಿನ ಬೆಳಗ್ಗೆ ಎರಡುಸಲ ಸ್ಪೆಷಲ್ ರೈಲು ಬೆಂಗಳೂರಿಗೆ ಹೋಗುವದು. ಅವೆರಡರಲ್ಲೂ ಯೂರೋಪಿಯನ್ ಸರ್ದಾರರೂ ದೊರೆಸಾನಿಗಳೂ ಬೆಂಗಳೂರಿಗೆ ಪ್ರಯಾಣ ಮಾಡುವವರಾಗಿದ್ದಾರೆ. ನೆನ್ನೆ ಬೆಳಗ್ಗೆ ಬ್ರಿಟಿಷ್ ರೆಸಿಡೆಂಟರು ಪತ್ನಿ ಪರಿವಾರಸಹಿತರಾಗಿ ಬೆಂಗಳೂರಿಗೆ ದಯಮಾಡಿದರು. ಆಗ್ಗೆ ಶ್ರೀಮನ್ಮಹಾರಾಜರವರು, ದಿವಾನರವರು, ಕೌನ್ಸಿಲ್ ಮೆಂಬರುಗಳೇ ಆದಿಯಾಗಿ ಸಮಸ್ತ ಹುದ್ದೇದಾರರೂ ರೈಲ್ವೆ ಸ್ಟೇಷನಿಗೆ ಹೋಗಿ ರೆಸಿಡೆಂಟರವರನ್ನು ಸಾಗಕಳುಹಿಸಿ ಬಂದರು.

---

## ಪ್ರಜಾಪ್ರತಿನಿಧಿ ಸಮಾಜವು.

### ೨೬ನೇ ಸಭೆ.

ಈ ಸಲ ದಿವಾನರವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಓದಿದ ಉಪನ್ಯಾಸದ ಮುಖ್ಯ ಭಾಗಗಳನ್ನು ಮಾತ್ರ ಪ್ರಕಟಿಸುವೆವು.

### ಖಜಾನೆಯ ಶಿಲ್ಕು.

ಮೈಸೂರು ಸಂಸ್ಥಾನದ ಸೇವಿಂಗ್ಸ್ ಬ್ಯಾಂಕು ಫಂಡು, ಪೋರೆಸು ಫಂಡು, ಧರ್ಮದ ಫಂಡು—ಇವೆಲ್ಲಾ ಸೇರಿ ೧೯೦೩ ಜುಲೈ ೧ ನೆ ತಾರೀಖಿನಲ್ಲಿ ಖಜಾನೆಯಲ್ಲಿ ೧,೧೩,೭೨,೬೨೩ ರೂ. ಶಿಲ್ಕು ಉಳಿದಿತ್ತು. ಕಳೆದ ಸಾಲಿನಲ್ಲಿ ಸಂಸ್ಥಾನಕ್ಕೆ ಎಲ್ಲಾ ಬಾಬುಗಳಿಂದಲೂ ೨,೯೬,೨೪,೧೨೬ ರೂ. ಹುಟ್ಟುವಳಿ ಆಗಿದೆ. ಈ ಪೈಕಿ ಖರ್ಚು ೨,೧೧,೯೮,೭೬೬ ರೂ. ಆಯಿತು.

### ಮುಖ್ಯ ಜಮಾ ಬಾಬುಗಳು.

| | | |
|---|---|---|
| ದವಿರ್ಜ ಮುಂತಾದ ಬಾಬು | ರೂ. | ೧,೬೨,೨೬,೪೧೨ |
| ಡಿಪಾಜಿಟ್ ಹಣದ ವೃದ್ಧಿ | ,, | ೨,೫೨,೨೩೧ |
| ರೈಲ್ವೆಗಳ ಹುಟ್ಟುವಳಿ | ,, | ೫,೨೭,೨೩೬ |
| ಚಿನ್ನದ ಗಣಿಗಳ ರಾಜಾದಾಯ | ,, | ೧೫,೩೨,೦೯೯ |
| ವಿದ್ಯುಚ್ಛಕ್ತಿಯ ಉತ್ಪತ್ತಿ | ,, | ೧೧,೮೫,೧೪೮ |

### ಮುಖ್ಯ ಖರ್ಚು ಬಾಬುಗಳು.

| | | |
|---|---|---|
| ಸಾಧಾರಣ ಬಾಬುಗಳಿಗೆ | ರೂ. | ೧,೮೭,೨೨,೦೦೨ |
| ಚಿನ್ನದ ಗಣಿಗಳಿಗೆ | ,, | ೧೩,೨೪೫ |
| ರೈಲ್ವೆ ಖರ್ಚು | ,, | ೫,೭೯,೬೪೧ |
| ವಿದ್ಯುಚ್ಛಕ್ತಿಯ ಕಾರ್ಖಾನೆಗೆ | ,, | ೭,೭೩,೭೨೪ |

ಹೋದ ಸಾಲಿನಲ್ಲಿ ಹುಟ್ಟುವಳಿಗಿಂತಲೂ ಖರ್ಚು ಬಾಬು ೨೨ ಲಕ್ಷ ರೂಪಾಯಿ ಜಾಸ್ತಿಯಾಗಿತ್ತು. ಈ ಸಾಲಿನಲ್ಲಿ ಖರ್ಚಿಗಿಂತಲೂ ಹುಟ್ಟುವಳಿಯೇ ೬,೧೪,೮೫೦ ರೂಪಾಯಿ ಹೆಚ್ಚಾಗಿದೆ.

### ಮುಂದಿನ ವರುಷದ ಬಡ್ಜೆಟ್.

ಜಮಾ ಬಾಬು.—ದವಿರ್ಜ ಮುಂತಾದ ಬಾಬುಗಳಿಂದ ೧,೬೮,೯೪,೦೦೦ ರೂ., ಬಡ್ಡಿ ೨,೮೬,೦೦೦ ರೂ.; ರೈಲ್ವೆಗಳ

...,೦೫,೦೦೦ ರೂ., ವಿದ್ಯುಚ್ಛಕ್ತಿ ೧೩,೬೩,೦೦೦ ರೂ.; ಚಿನ್ನದ ಗಣಿಗಳಿಂದ ೧೬ ಲಕ್ಷ ; ಅಂತು ಒಟ್ಟು ೨,೦೬,೫೯,೦೦೦ ರೂಪಾಯಿ ಹುಟ್ಟುವಳಿ ಆದೀತೆಂದು ಅಂದಾಜು ಮಾಡಲ್ಪಟ್ಟಿದೆ.

ಖರ್ಚುಬಾಬು.—ಸಾಧಾರಣ ಖರ್ಚುಗಳು ೧,೯೬,೨೫,೦೦೦, ಪಬ್ಲಿಕ್ ವರ್ಕ್ಸ್ ಇಲಾಖೆಗೆ ೩೮,೭೮,೦೦೦, ರೈಲ್ವೆಗೆ ೯,೦೫,೦೦೦, ವಿದ್ಯುಚ್ಛಕ್ತಿಯ ಕಾರ್ಖಾನೆಗೆ ೧೧,೬೩,೦೦೦. ಈ ಪೈಕಿ ವಿದ್ಯುಚ್ಛಕ್ತಿಯನ್ನು ಇನ್ನೂ ಹೆಚ್ಚಾಗಿ ಉತ್ಪತ್ತಿ ಮಾಡುವುದಕ್ಕೆ ೫ ಲಕ್ಷ ಮಂಜೂರಾದೀತು. ಅಂತು ಒಟ್ಟು ಖರ್ಚು ೨,೧೫,೩೩,೦೦೦ ರೂಪಾಯಿ ಆಗಬಹುದೆಂದು ಅಂದಾಜು ಕಟ್ಟಿದೆ.

ಪಬ್ಲಿಕ್ ವರ್ಕ್ಸ್ ಇಲಾಖೆಯ ಮೂಲಕ ಹಾಲಿ ವರುಷದಲ್ಲಿ ಖರ್ಚುಮಾಡಬೇಕೆಂದಿರುವ ಬಾಬುಗಳು ಯಾವವೆಂದರೆ :—

| | |
|---|---|
| ಇಂಟೀರಿಯಲ್ ಸರ್ವಿಸ್ ಸ್ಟೇಷನ್‌ಗೆ ಠಾಣೆಮನೆಗಳನ್ನು ಕಟ್ಟುವುದಕ್ಕೆ | ೧೫,೦೦೦ |
| ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ | ೬೦,೦೦೦ |
| ಮೈಸೂರಿನಲ್ಲಿ ಅರಮನೆ ಕಟ್ಟಡ | ೩,೫೦,೦೦೦ |
| ಮೈಸೂರು ಪಟ್ಟಣವನ್ನು ಅಭಿವೃದ್ಧಿ ಮಾಡುವುದಕ್ಕೆ | ೩,೦೦,೦೦೦ |
| ಬೆಂಗಳೂರು ಪಟ್ಟಣವನ್ನು ಅಭಿವೃದ್ಧಿ ಮಾಡುವುದಕ್ಕೆ | ೧,೦೭,೫೦೯ |
| ಕೋಲಾರ್ ಚಿನ್ನದ ಗಣಿಗಳಿಗೆ ನೀರನ್ನು ತಂದೊದಗಿಸುವುದಕ್ಕೆ | ೬,೩೭,೦೦೦ |
| ಶ್ರೀರಂಗಪಟ್ಟಣ, ಕಲ್ಕತ್ತೆಗಳಲ್ಲಿ ಲೇಟ್ ಮಹಾರಾಜರವರ ಮೆಮೋರಿಯಲ್‌ಗಳಿಗೆ | ೪೯,೦೦೦ |
| ಚಿಕ್ಕದೇವರಾಯಸಾಗರದ ಅಣೆಕಟ್ಟನ್ನು ಪುನಃ ಕಟ್ಟುವುದಕ್ಕೆ | ೬೦,೦೦೦ |
| ಮಾರಿಕಣಿವೆ ಜಲಾವಿನ ಕಾಮಗಾರಿ | ೩,೦೦,೦೦೦ |
| ಅಚ್ಚಿನ ಕಾರ್ಖಾನೆಗಳಿಗೆ | ೩೦,೦೦೦ |
| ಪಟ್ಟಾಭಿಷೇಕದ ಮತ್ತು ದೆಹಲಿ ದರ್ಬಾರ್ ಕ್ಯಾಂಪಿನ ಖರ್ಚುಗಳಿಗೆ | ೧,೬೩,೦೦೦ |
| ಕಲ್ಕತ್ತಾ ಪಟ್ಟಣದಲ್ಲಿ ತಯಾರಾಗುವ ವಿಕ್ಟೋರಿಯಾ ಮೆಮೋರಿಯಲ್ ಫಂಡಿನ ಎರಡನೇ ಚಂದ | ೧,೫೦,೦೦೦ |
| ಪ್ಲೇಗ್ ಇಲಾಖೆಯ ಖರ್ಚುಗಳಿಗೆ | ೧,೦೦,೦೦೦ |

ಸಂಸ್ಥಾನದ ಖರ್ಚು ಬಾಬುಗಳನ್ನು ಕೂಡಿದ ಮಟ್ಟಿಗೂ ಮಿತಿ ಮಾಡುತ್ತಾ ಬರುವೆವು. ಹೊಸ ತೆರಿಗೆಗಳು ಹಾಕದಂತೆ ನೋಡಿಕೊಳ್ಳುತ್ತೇವೆ. ಏನಾದರೂ ಸಾಹಸ ಮಾಡಿ ಸಂಸ್ಥಾನದ ಖಜಾನೆಯಲ್ಲಿ ೧೦೦ ಲಕ್ಷ ರೂಪಾಯಿಗಳನ್ನು ಕೂಡಿಸಬೇಕೆಂತಲೂ, ಪ್ರತಿಸಾಲಿನ ಪ್ರಾರಂಭದಲ್ಲೂ ಖರ್ಚು ಮಾಡುವುದಕ್ಕೆ ಖಜಾನೆಯಲ್ಲಿ ೩೫ ಲಕ್ಷ ರೂಪಾಯಿಗಳಾದರೂ ಶಿಲ್ಕು ಉಳಿಯುವಂತೆ ಮಾಡಬೇಕೆಂತಲೂ ಕುತೂಹಲ ಪಟ್ಟು ಕಾರ್ಯಸಾಧಕರಾಗುವೆವು.

ಕಾಫಿ ವಿಚಾರ.

ಕಾಫಿ ಬೆಳೆಯು ಬಹಳ ಹೀನಸ್ಥಿತಿಗೆ ಬಂತು. ಈಚೆಗೆ ಮೈಸೂರು ಸಂಸ್ಥಾನದಲ್ಲಿದ್ದ ಕಾಫಿ ವ್ಯವಸಾಯದ ಜಮೀನಿನಲ್ಲಿ ೫,೦೦೦ ಎಕರೆಗಳು ಕಡಿಮೆಯಾದವು. ಕಾಫಿ ಬೆಲೆಯು ಕಡಿಮೆಯಾದ್ದೇ ಇದಕ್ಕೆ ಮುಖ್ಯಕಾರಣ. ಹೋದ ವರುಷ ೨೦,೦೦೦ ಎಕರೆ ಕಾಫಿ ಜಮೀನು ರಾಜೀನಾಮೆ ಆಗಿರುತ್ತೆ. ಕಾಫಿ ವ್ಯವಸಾಯಗಾರರಿಗೆ ಬೇಕಾದ ಸಹಾಯ ಸಂಪತ್ತುಗಳನ್ನೆಲ್ಲಾ ಒದಗಿಸಿಕೊಡಬೇಕೆಂದು ಗವರ್ನಮೆಂಟಿನವರು ಅಭಿಲಾಷೆ ಪಡುತ್ತಾರೆ.

ಸಂಸ್ಕೃತ ವಿದ್ವತ್ಪರೀಕ್ಷಾ ಬಹುಮಾನ ಸಭೆ.

ಈ ಬಹುಮಾನ ಸಭೆಯು, ಪ್ರತಿ ವರುಷದಲ್ಲಿಯೂ ನಡೆಯುತ್ತೆ, ಈ ವರ್ಷವೂ ಜಗನ್ಮೋಹನ ಬಂಗಲೆಯಲ್ಲಿ ತಾ॥ ೩ ನೇ ಸೆಪ್ಟಂಬರ್ ೩ ಘಂಟೆಯಲ್ಲಿ ಸೇರಿತ್ತು. ಶ್ರೀಮನ್ಮಹಾರಾಜರವರು ಅಗ್ರಾಸನವನ್ನು ಹೊಂದಿದ್ದರು. ದಿವಾನ್ ಸರ್. ಕೃಷ್ಣಮೂರ್ತಿಯವರು, ಕೌನ್ಸಿಲರ್ ಮೆಂಬರುಗಳಾದ ಮೆ॥ ವಿ. ಪಿ. ಮಾಧವರಾವ್, ಸಿ. ಐ. ಇ., ಅವರೂ, ಮೆ॥ ಪಿ. ಶ್ರೀನಿವಾಸೈಯ್ಯಂಗಾರರೂ, ಸರದಾರ್ ಕಾಂತರಾಜೆಅರಸಿನವರೂ, ಮೆ॥ ವಿ. [illegible] ಐಯ್ಯಂಗಾರ್ರು, ಆನಂದರಾಯರೂ, ಎಲ್ಲಾ ಡೆಪ್ಯುಟಿ ಕಮಿಷನರುಗಳೂ, ಅನೇಕ ವಿದ್ವಾಂಸರೂ ಬಂದಿದ್ದರು. ಮಹಾರಾಜರು ಆಸನವನ್ನು ಹೊಂದಿದ ಮೇಲೆ, ಮಿಲಿಟರಿ ಡಿಪಾರ್ಟ್‌ಮೆಂಟಿನವರೂ ಪ್ರತಿನಿಧಿ ಸಭೆಯ ಮೆಂಬರುಗಳೂ ಮಹಾರಾಜರಿಗೆ ನಜರು ಒಪ್ಪಿಸಿದರು. ಅನಂತರ ಮೆ॥ ಎ. ಅನಂತಸ್ವಾಮಿರಾಯರು ಪ್ರೊಫೆಸರ್ ಒಂದು ರಿಪೋರ್ಟನ್ನು ಬಹಳ ಚನ್ನಾಗಿ ಓದಿದರು. ರಿಪೋರ್ಟಿನಿಂದ ತಿಳಿಯುವ ಮುಖ್ಯ ಸಾರಾಂಶವೇನೆಂದರೆ ನಡೆದ ಸಂಸ್ಕೃತ ವಿದ್ವತ್ಪರೀಕ್ಷೆಗೆ ಈ ಸಾಲು ಒಟ್ಟು ೨೧ ಜನ ಬಂದಿದ್ದರು. ಈ ಪೈಕಿ ೩ ಜನರು ಗೈರುಹಾಜರು. ೩ ಜನರು ತೇರ್ಗಡೆಯಾಗಲಿಲ್ಲ. ಉಳಿದ ೧೫ ಜನರು ಮಾತ್ರ ತಾವು ತೆಗೆದುಕೊಂಡಿದ್ದ ಶಾಸ್ತ್ರ ಭಾಗಗಳಲ್ಲಿ ತೇರ್ಗಡೆಯನ್ನು ಹೊಂದಿ ಯೋಗ್ಯತಾನುಸಾರವಾಗಿ ಬಹುಮಾನವನ್ನು ಪಡೆದರು. ಅನಂತರ ವೇ॥ ಕುಂಭಕೋಣಂ ಶೇಷಾಚಾರ್ಯರು ಧರ್ಮಾಧಿಕಾರಿ ಸುಂದರಶಾಸ್ತ್ರಿಗಳು, ಮೇಲುಕೋಟೆ [illegible], ಕುಪ್ಪಣ್ಣಯ್ಯಂಗಾರ್ಯರು, ಇವರುಗಳು ದೊಡ್ಡ ವಿದ್ವಾಂಸರಾದ್ದರಿಂದ ಇವರುಗಳ ಪರೀಕ್ಷೆ ಮಾಡದೆ ಇವರುಗಳಿಗೆ "ಪಂಡಿತರತ್ನ" ಎಂಬ ಬಿರುದನ್ನು ಮಹಾರಾಜರವರು ದಯಪಾಲಿಸಿ, ಶಾಲುಜೋಡಿಗಳನ್ನು ಕೊಟ್ಟರು. ಅನಂತರ ತೇರ್ಗಡೆಯಾದ ಮಿಕ್ಕ ಜನಗಳಿಗೆ ಯೋಗ್ಯತಾನುಸಾರವಾಗಿ ಕೆಳಗೆ ವಿವರಿಸುವಂತೆ ನಗದು ಹಣವನ್ನೂ, ಶಾಲುಗಳನ್ನೂ ಮಹಾರಾಜರವರು ಸ್ವಹಸ್ತದಿಂದ ದಯಪಾಲಿಸಿದ ಮೇಲೆ, ಅಲ್ಲಿ ನೆರೆದಿದ್ದ ಸಭಿಕರಿಗೆ ಪುಷ್ಪಹಾರ ತಾಂಬೂಲಾದಿಗಳಿಂದ ಸನ್ಮಾನವು ನಡೆಯಿತು. ಸಾಯಂಕಾಲ ೮—೨೦ ಘಂಟೆಗೆ ಸರಿಯಾಗಿ ದರ್ಬಾರು ಬರಖಾಸ್ತ್ ಆಯಿತು.

ಮಹಾರಾಜರವರ ಸಂಸ್ಕೃತ ಪಾಠಶಾಲಾ

(೧) ಸಕ್ಕರೆಪಟ್ಟಣ ಸೂರ್ಯನಾರಾಯಣಶಾಸ್ತ್ರಿ ಸಾಹಿತ್ಯ, ೧ ನೇ ಭಾಗ ರೂ. ೪೦. (೨) ಯಡತೊರೆ ಚಂದ್ರಶೇಖರ ಶಾಸ್ತ್ರಿ ಸಾಹಿತ್ಯ, ೨ ನೇ ಭಾಗ ರೂ. ೭೫. (೩) ಕನ್ನಂಬಾಡಿ ಗೋಪಾಲಕೃಷ್ಣಶಾಸ್ತ್ರಿ ಸಾಹಿತ್ಯ, ೨ ನೇ ಭಾಗ ರೂ. ೭೫. (೪) ಗೋಕರ್ಣ ಕೃಷ್ಣಶಾಸ್ತ್ರಿ ಸಾಹಿತ್ಯ, ೨ ನೇ ಭಾಗ ರೂ. ೭೫. (೫) ಕಾನಕಾನಹಳ್ಳಿ ನರಸಿಂಹ ಶಾಸ್ತ್ರಿ ಸಾಹಿತ್ಯ ೨ ನೇ ಭಾಗ ರೂ. ೭೫. (೬) ಮೇಲುಕೋಟೆ ಶ್ರೀನಿವಾಸೈಯ್ಯಂಗಾರ್ ಸಾಹಿತ್ಯ, ೨ ನೇ ಭಾಗ ರೂ. ೭೫. (೭) ಪಾವಗಡ ಕೃಷ್ಣಾಚಾರ್ ತರ್ಕ, ೨ನೇ ಭಾಗ ರೂ. ೭೫. (೮) ನಡೀಪುರಂ ಕೃಷ್ಣಮಾಚಾರ್ ತರ್ಕ, ೨ನೇ ಭಾಗ ರೂ. ೧೦೦ ಶಾಲುಜೋಡಿ ಸಹಾ (೯) ಅಳಿಯಮ್ ಶ್ರೀನಿವಾಸಾಚಾರ್ ತರ್ಕ, ೨ನೇ ಭಾಗ ರೂ. ೭೫ (೧೦) ದೇವಿಶಿಖಾಮಣಿ ರಾಮಾನುಜೈಯಂಗಾರ್ ಮೀಮಾಂಸ, ೧ನೇ ಭಾಗ ರೂ. ೪೦ (೧೧) ಗ್ರಾಮಂ ವೆಂಕಟಾಚಾರ್ಯ ಮೀಮಾಂಸ, ೨ನೇ ಭಾಗ ರೂ. ೭೫. (೧೨) ಕಟ್ಟೆ ವೆಂಕಟರಾಮಾವಧಾನಿ ಯಜುರ್ವೇದ, ರೂ. ೫೦ ಶಾಲುಜೋಡಿ ಸಹಾ. (೧೩) ರೋಹಿಣಿಕಾರ್ ಚಕ್ರಪಾಣಿ ಆಚಾರ್ ಕುಂಭಕೋಣ ಶ್ರೌತಪ್ರಯೋಗ ರೂ. ೧೨೫ ಶಾಲುಜೋಡಿ ಸಹಾ. (೧೪) ವಟುಕನಾಥ್ [illegible] ಜ್ಯೋತಿಷ್ಯ, ರೂ. ೧೨೫ (೧೫) ಅನಂತಪುರ [illegible] ತರ್ಕ ಶಾಸ್ತ್ರ, ರೂ. ೧೨೫ (೧೬) ನವೀನಂ ರಾಮಾನುಜಾಚಾರ್ಯರು ಪರೀಕ್ಷೆಯಿಲ್ಲದೆ ರೂ. ೧೦೦ ಶಾಲುಜೋಡಿ ಸಹ. (೧೭) ಅರಮನೆ ವಿದ್ವಾಂಸರು, ವೆಂಕಟರಂಗಾಚಾರ್ರು ಪರೀಕ್ಷೆಯಿಲ್ಲದೆ, ರೂ. ೧೦೦ ಶಾಲುಜೋಡಿ ಸಹ. (೧೮) ಅರಮನೆ ವಿದ್ವಾಂಸರು, ಗಂಗಾಧರ ಶಾಸ್ತ್ರಿಗಳು ಪರೀಕ್ಷೆಯಿಲ್ಲದೆ ರೂ. ೧೦೦ ಶಾಲುಜೋಡಿ ಸಹ.

## ತಾಲ್ಲೂಕು ವರ್ತಮಾನಗಳು.

ಹೊನ್ನಾಳಿ.—ಹವಾ ಚನ್ನಾಗಿದೆ. ಮಳೆ ವಿಪರೀತವಾಗಿರುವದರಿಂದ ವ್ಯವಸಾಯಗಾರರು ಪೈರುಗಳು ಕೆಟ್ಟುಹೋದವೆಂದು ದುಃಖಿಸುತ್ತಾರೆ. ಶಿವಮೊಗ್ಗೆಯಲ್ಲಿ ಪ್ಲೇಗ್ ರೋಗವು ಬಹಳ ಭಯಂಕರವಾಗಿರುತ್ತದೆ. ಅಲ್ಲಿನ ಕೆಲವು ಜನಗಳು ಇಲ್ಲಿಗೆ ಬಂದು ಕೋಟೆ ಪೇಟೆಗಳಲ್ಲಿ ವಾಸಮಾಡುತ್ತಿದ್ದಾರೆ. ಇದುವರಿಗೆ ದೇವತಾ ಅನುಗ್ರಹದಿಂದ ಪ್ಲೇಗ್ ಭಯವು ಇರುತಿದ್ದಿಲ್ಲಾ. ಆದರೂ ಈಗ ಎರಡು ವಾರದ ಕೆಳಗೆ ಕುರುಬಗೇರಿಯಲ್ಲಿ ಇಲಿಗಳು ಬಿದ್ದಿರುತ್ತವೆ. ಜನಗಳು ಊರು ಬಿಡುವ ಯೋಚನೆಯಲ್ಲಿದ್ದಾರೆ. ಇಲ್ಲಿನ ಅಮಲ್ದಾರ್ ಮ॥ ರಾ॥ ಐ. ಡಿ. ಚನ್ನಪ್ಪಪಿಳ್ಳೆಯವರಿಗೆ ವರ್ಗವಾದ ವಿಷಯದಲ್ಲಿ ಇಲ್ಲಿನ ಪ್ರಜೆಗಳಲ್ಲಿ ತುಂಬಾ ವ್ಯಸನವನ್ನುಂಟುಮಾಡಿದೆ. ಈ ಮಹನೀಯರು ತಾ॥ ೧—೧೦—೧೯೦೩ ರಲ್ಲಿ ಇಲ್ಲಿಗೆ ವರ್ಗವಾದ ಮ॥ ರಾ॥ ಅಮಲ್ದಾರ್ ಕೃಷ್ಣರಾಯರವರಿಗೆ ಛಾರ್ಜು ವಹಿಸಿ ಅದಿನ ರಾತ್ರಿ ಹೊರಟು ಬಂಗಲೆಯಲ್ಲಿ ಮೊಕ್ಕಾಂ ಮಾಡಿದ್ದರು. ಮಾರನೇ ದಿನ ಬೆಳಗ್ಯೆ ಇಲ್ಲಿನ ಅಸಿಸ್ಟೆಂಟ್ ಇಂಜನಿಯರ್, ಮ॥ ರಾ॥ ಪೊನ್ನಪ್ಪನವರು ಮುತುವರ್ಜಿಯಿಂದಲೂ ಆಸಕ್ತಿಯಿಂದಲೂ, ಅವರನ್ನು ಫಲಾರಾದಿಗಳಿಂದ ಸತ್ಕರಿಸಿದರು. ಮತ್ತು ಈಗ ಬಂದಿರುವ ಅಮಲ್ದಾರವರು, ಅಸಿಸ್ಟೆಂಟ್ ಇಂಜನಿಯರ್‌ರವರು ಆಸ್ಪತ್ರೆ ಅಸಿಸ್ಟೆಂಟರವರು ಇನ್ನೂ ಮುಂತಾದ ಸರ್ಕಾರಿ ಆಫೀಸಿನವರೆಲ್ಲರು ಸೇರಿ ಅವರ ಪ್ರೀತಿ ಜ್ಞಾಪಕಾರ್ಥವಾಗಿ ಫೋಟೋ ತೆಗಿಸಿದರು.

ಚಿತ್ರದುರ್ಗ.—ಇಲ್ಲಿ ಮಳೆಯು ಆಗುತ್ತಲೆ ಇದೆ. ಕಳೆದ ತಿಂಗಳು ೩೦ ನೇ ತಾ॥ ನಲ್ಲಿ ಆದ ಮಳೆಯಿಂದ ಉಂಟಾದ ನಷ್ಟವನ್ನು ಹೇಳಲಿಕ್ಕಾಗದು. ಮನೆಗಳ ಗೋಡೆಗಳೆಲ್ಲಾ ಉರುಳಿ ಬಿದ್ದವು. ಪಸಲಿಕಲ್ಲೆಲ್ಲಾ ನೀರು ನಿಂತಿರುವದರಿಂದ ಕೈಗೆ ಬಂದ ಜೋಳದ ತೆನೆಗಳೆಲ್ಲಾ ಮೊಳಕೆ ಹೊರಡುವವಾಗಿದೆ. ಬೆಟ್ಟದ ತಪ್ಪಲಿನಲ್ಲಿ ಕಟ್ಟಿರುವ ಈ ದುರ್ಗವಲ್ಲಿಯಾದರೋ ಹನ್ನೆರಡು ವರುಷಗಳಿಗೆ ಮುಂಚೆ ಈ ಊರು ಯಾವ ಸ್ಥಿತಿಯಲ್ಲಿತ್ತೋ ಆ ಸ್ಥಿತಿಗೆ ಈಗ ಈ ಊರು ಮಾರ್ಪಟ್ಟಿದೆ. ಗುಡ್ಡ ತಪ್ಪಲಲ್ಲಿಯೂ ಹುಟ್ಟಿರುವ ಜಲಬುಗ್ಗೆಗಳಿಂದ ಸದಾ ಹೊರಡುತ್ತಿರುವ ನೀರು ಸಣ್ಣ ಸಣ್ಣ ಪ್ರವಾಹಗಳಾಗಿ ಹರಿಯುತ್ತಿರುವುದಲ್ಲದೆ ಮನೆಗಳ ಹಿತ್ತಲುಗಳಲ್ಲೆಲ್ಲಾ ಪ್ರವಾಹವೇ ಆಗಿರುತ್ತೆ. ಕೆರೆಗಳು ಕೋಡಿ ಬಿದ್ದವೆ. ಇನ್ನೂ ಕೆಲವು ಈಗಲೋ ಆಗಲೋ ಬೀಳುವದರಲ್ಲಿವೆ. ಸುಮಾರು ೬ ವರ್ಷಗಳ ಲಾಗಾಯಿತು ಕಾಮಗಾರಿ ನಡೆಯುತ್ತಾ ಈಗತಾನೆ ಮುಗಿಯುವದಕ್ಕಿದ್ದ ಸುಮಾರು ಎಪ್ಪತ್ತು ಸಾವಿರ ರೂಪಾಯಿಗಳನ್ನು ತಿಂದ ಕೆರೆಯು ಮಧ್ಯಕ್ಕೆ ಒಡೆದು ನೀರೆಲ್ಲಾ ಹರಿದುಹೋಯಿತು. ಈ ಪ್ರವಾಹವು ಹರಿದು ಒಂದು ಸೇತುವೆಯನ್ನು ಹಾಳುಮಾಡಿತು. ಮಳೆ ಜಾಗ್ರತೆ ನಿಲ್ಲದೆ ಹೋದಲ್ಲಿ ಈಗ ಬಿಡುತಿರುವ ಪಸಲೆಲ್ಲಾ ಹಾಳಾಗುತ್ತೆಯೆಂದು ಜನರು ಹೇಳುತ್ತಾರೆ. ಮಳೆ ಬಂದರೂ ಕಷ್ಟ ಬಾರದೆ ಇದ್ದಾಗ್ಯೂ ಕಷ್ಟವಲ್ಲ. ಅಕಟಾ! ಜನರನ್ನು ಮೆಚ್ಚಿಸುವದಕ್ಕೆ ಭಗವಂತನಿಂದಲೇ ಆಗದೇ ಇರುವಲ್ಲಿ ಮನುಷ್ಯರಿಂದಾದೀತೇ

ಹೊಳಲ್ಕೆರೆ. ಕಳೆದ ತಿಂಗಳು ೧೩ ನೆ ತಾ॥ ನಲ್ಲಿ ಅ॥ ಮ॥ ಶ್ರೀನಿವಾಸಯ್ಯಂಗಾರ್ಯರು ಚಿತ್ರದುರ್ಗಕ್ಕೆ [illegible] ಅದೇ ದಿನ [illegible] ಲೇಟ್ ಅಮಲ್ದಾರ್ ಮ॥ ನರಸಿಂಗ್ರಾವ್ ಯವರ ಕುಟುಂಬವು ತಮಗೆ ದಾವಣಗೆರೆಯಲ್ಲಿ ಪ್ರಾಪ್ತವಾದ ಪತಿವಿಯೋಗ ದುಃಖದಿಂದ ಆ ಸ್ಥಳವನ್ನು ಬಿಟ್ಟು ಬೆಂಗಳೂರಿಗೆ ಪ್ರಯಾಣ ಮಾಡಲುದ್ಯುಕ್ತರಾ[illegible] ಹೊಳಲ್ಕೆರೆಯಲ್ಲಿ ತಮ್ಮ ನೆ[illegible] ಯವರ ಬಳಿಯಲ್ಲಿ ಕೆಲವು ಕಾಲವಿದ್ದು ಹೋಗಲು ಸದರಿ ಹೊಳಲ್ಕೆರೆಗೆ ಬಂದು ಇರುತ್ತಿರಲು, ಬಹುಕಾಲದಿಂದಲೂ ಪ್ಲೇಗ್ ಸೋಂಕು ಇಲ್ಲದ ಈ ಊರಿಗೆ ಇನ್‌ಫೆಕ್ಷನ್ ತಂದರಲ್ಲಾ ಎಂದು ಊರಿನ ಜನರು ಗಾಬರಿಪಟ್ಟವರಾಗಿ ಅವರನ್ನು ಹೊರಡಿಸುವದಕ್ಕೆ ಪ್ರಯತ್ನಪಟ್ಟಾಗ್ಯೂ ಅವರ ಪ್ರಯತ್ನ ಸಾಗದೆ ಹೋಗಲಾಗಿ ಆ ವೇಳೆಗೆ ಸರಿಯಾಗಿ ಆ ಊರಿನ ಮೇಲೆ ಹಾದು ಬಂದ ಕ॥ ಮೆ॥ ಶ್ರೀ ಆರ್ಯರಿಗೆ ಸದರಿ ಜನರು ವಿಜ್ಞಾಪನೆ ಮಾಡಿಕೊಳ್ಳಲಾಗಿ ಕ॥ ಯವರು ಸದರಿ ಕುಟುಂಬವನ್ನು ಜಾಗ್ರತೆಯಲ್ಲಿಯೇ ಆ ಸ್ಥಳದಿಂದ ಕಳುಹಿಸಿಕೊಡಬೇಕೆಂದು ಸದರಿ ಹರಿಸಿಂಗ್ ಯವರಿಗೆ ಅಪ್ಪಣೆ ಮಾಡಿ ಹೊರಟು ದುರ್ಗಕ್ಕೆ ಬಂದಹಾಗೂ ಈ ಮಧ್ಯೆ ಆ ಕುಟುಂಬದಲ್ಲಿ ಒಂದು ಇಸಂ ಕಾಯಿಲೆ ಇದ್ದು ಖೋತಿ ಆದಹಾಗೂ, ಮತ್ತೊಂದು ಇಸಂಗೆ ಕಾಯಿಲೆ ಪ್ರಾಪ್ತವಾದ ಹಾಗೂ ಮೆ॥ ಹರಿಸಿಂಗ್ ಯವರು ಹುಕುಂನ ಮೇಲೆ ಒಂದು ಗಾಡಿಗೆ ಪಂಚೆ ಹಾಕಿ ಗಾಡಿಯನ್ನು ಸಾಗಕಳುಹಿಸಿದ ಹಾಗೂ ಇದನ್ನು ನೋಡುತ್ತಿರೇ ಇದ್ದ ಸದರಿ ಊರಿನ ಜನರು ಕಾರಣಾಂತರದಿಂದ ಸದರಿ ಕುಟುಂಬವು ವಾಸಮಾಡುತ್ತಿದ್ದ ಛತ್ರಕ್ಕೆ ಬೆಂಕಿ ಹಾಕಲಿಕ್ಕೆ ಬಂದಹಾಗೂ ಅಲ್ಲಿ ಮೆ॥ ಹರಿಸಿಂಗ್ ಯವರಿಗೂ ಜನರಿಗೂ ಮಾರಾಮಾರಿ ಆಗಿ ಹರಿಸಿಂಗ್ ಯವರಿಗೆ ತುಂಬಾ ಪೆಟ್ಟು ಬಿದ್ದಹಾಗೂ ಮಾರನೆ ದಿನ ದುರ್ಗದಿಂದ ವಾಪಸ್ ಹೊರಟು ಬಂದ ಕ॥ ಯವರು ನಡೆದದ್ದೆಲ್ಲವನ್ನು ಪ್ರಾರಂಭಿಸಿ ಬೆಂಗಳೂರಿಗೆ ದಯಮಾಡಿಸಿ ನಂತರ ಮುಖಂಡರಾದವರಲ್ಲಿ ೯ ಜನರನ್ನು ದಸ್ತಗಿರಿ ಮಾಡಿಸಿ ಒಂಭತ್ತು ಜನರಿಗೆ ಡೆ॥ ಕ॥ ಮೆ॥ ರಾಮಾನುಜಯ್ಯಂಗಾರ್ಯರೇ ಒಂದು ತಿಂಗಳು ಸಜಾ ಕೊಟ್ಟರೆಂತಲೂ ಸದರಿ ಆಸಾಮಿಗಳೂ ಚಿತ್ರದುರ್ಗದ ಜಯಿಲ್‌ನಲ್ಲಿ ಸಜಾ ಅನುಭವಿಸುತ್ತಾ ಇರುತ್ತಿರಲು ಪುನರ್ವಿಚಾರಣೆಗೋಸ್ಕರ ಅಪೀಲ್ ಮಾಡಿಕೊಂಡದ್ದರ ಮೇಲೆ ಇವರುಗಳನ್ನೆಲ್ಲಾ ಜಾಮೀನ್ ಮೇಲೆ ಖುಲಾಸ್ ಮಾಡಿದ್ದಾರೆಂತಲೂ ತಿಳಿದುಬರುತ್ತೆ.

ತುಮಕೂರು.—ಈ ಟವುನಿಗೆ ಈ ವರ್ಷದ ಪ್ರಾರಂಭದಿಂದಲೂ ಪ್ಲೇಗ್ ರೋಗವು ವ್ಯಾಪಿಸಿಯೇ ಇತ್ತು. ಆದರೆ ಹಿಂದಿನ ಮೂರು ತಿಂಗಳುಗಳಿಂದಲೂ ಸಂಪೂರ್ಣವಾದ ಆಹುತಿಯನ್ನು ತೆಗೆದುಕೊಂಡಿತು. ಮೈಸೂರು ಸೀಮೆಯಲ್ಲೆಲ್ಲಾ ತುಮಕೂರು ಅತ್ಯಂತ ಆರೋಗ್ಯ ಸ್ಥಳವೆಂದು ಹೆಸರುಗೊಂಡಿದೆಯಾದರೂ ಇಲ್ಲಿನ ಮ್ಯುನಿಸಿಪಾಲಿಟಿಯವರ ಅಜಾಗರೂಕತೆಯಿಂದ ಆ ಹೆಸರಿಗೆ ಈಗ ದೊಡ್ಡ ಅಪೋಹವುಂಟಾಗಿ ಅನಾರೋಗ್ಯಸ್ಥಳವೆಂಬ ದುರ್ನಾಮಾಂಕಿತವನ್ನು ಹೊಂದಬೇಕಾಯಿತು. ಹಿಂದೆ ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ರೀತಿ ಬಾರ್‌ಲೈನ್, ಚಿಕ್ಕಪೇಟೆ ಈ ಸ್ಥಳಗಳಲ್ಲಿ ಸರಿಯಾದ ರಸ್ತೆ ವಗೈರೆ ಕಾರ್ಯಗಳು ಜಾಗ್ರತೆ ನಡೆಸಬೇಕಾದದ್ದು ಬಹಳ ಅವಶ್ಯಕತೆಯಂತಲೂ ಹಾಗೆ ನಡೆಸದೆಹೋದರೆ ಅನೇಕ ತೊಂದರೆಗಳುಂಟಾಗುವವೆಂಬುವ ವಿಷಯಗಳನ್ನು ಪ್ರಕಟಿಸಿದ್ದರೂ ಕೂಡ ಮುನ್ಸಿಪಲ್ ಅಧಿಕಾರಿಗಳು ಗಮನಿಸದೆಹೋದದ್ದು ಇಲ್ಲಿನ ಪ್ರಜೆಗಳ ದುರದೃಷ್ಟವೆಂದು ಹೇಳಬೇಕಾಗಿರುವುದು. ಸುಮಾರು ಇಪ್ಪತ್ತು ಮೂವತ್ತು ಮನೆಗಳು ಹೊರ್ತು ಬಾಕಿ ಜನರೆಲ್ಲಾ ಈ ಟವುನ್ ಹೊರಗೆ ಷಡ್ಡುಗಳಲ್ಲಿ ವಾಸಮಾಡುತ್ತಿದ್ದಾರೆ. ಮೊದಲು ಬಾರ್‌ಲೈನಲ್ಲಿ ಪ್ಲೇಗ್ ರೋಗವು ವ್ಯಾಪಿಸಿ ಚಿಕ್ಕಪೇಟೆ ವಗೈರೆ ಸ್ಥಳಗಳಲ್ಲೆಲ್ಲಾ ಸಂಚರಿಸಿ ಪುನಃ ಬಾರ್‌ಲೈನಿಗೆ ಬಂದು ನೆಲೆಗೊಂಡಿದೆ. ಈ ಊರಿನ ಮ್ಯುನಿಸಿಪಾಲಿಟಿಯು ಐಶ್ವರ್ಯವಂತರಿಗೂ ಅಧಿಕಾರಿಗಳಿಗೂ ಮಾತ್ರವೇ ಏರ್ಪಡಿಸಲ್ಪಟ್ಟಿದ್ದಾಗಿ ತೋರುತ್ತೆ. ಹ್ಯಾಗೆಂದರೆ ಮೂರು ಪಾಲು ಮ್ಯುನಿಸಿಪಾಲಿಟಿ ಹಣವೆಲ್ಲಾ ಕೋಟೆಯಲ್ಲಿನ ಕಾರ್ಯಗಳಿಗಾಗಿ ಖರ್ಚುಮಾಡುತ್ತಿರುವರೇ ಹೊರ್ತು ಪೇಟೆಯ ಕಡೆ ಗಮನಿಸತಕ್ಕವರೇ ಇಲ್ಲ. ಇದೇಕಾರಣದಿಂದಲೇ ಪೇಟೆಯಲ್ಲಿ ಪ್ಲೇಗ್ ಮರಣಗಳು ಅಧಿಕವಾಗಿರುತ್ತವೆಯಲ್ಲದೆ ಅದು ಪೇಟೆಯನ್ನು ಬಿಟ್ಟು ಹೋಗಲಾರದೇನೋ ಪುನಃ ಪುನಃ ಅಲ್ಲಲ್ಲಿ ತಲೆದೋರುತ್ತಿರುವುದು. ಅಯ್ಯೋ ಇಲ್ಲಿನವರ ಸಂಕಟಗಳನ್ನು ಎಷ್ಟೆಂದು ಹೇಳಲಿ ಕೆಲವು ವಂಶಗಳೇ ಹೆಸರಿಲ್ಲದಂತಾದವು. ರೆವರೆಂಡ್ [illegible] ದೊರೆಯವರು ಅವರ ದೊರೆಸಾನಿಯವರೂ ಮಿಸ್ [illegible] ರವರೂ ಈ ಕಾಲದಲ್ಲಿ ಬಡವರಾದಿಯಾಗಿ ಸಮಸ್ತರಿಗೂ ಮಾಡುತ್ತಿರುವ ಉಪಕಾರವನ್ನು ಇಷ್ಟೆಂದು ಲಿಖಿತ ಮೂಲಕ ವಿವರಿಸಲಸಾಧ್ಯವಾಗಿರುವುದು. ಪ್ರಜೆಗಳೆಲ್ಲಾ ಇವರೇ ನಮಗೆ ತಂದೆತಾಯಿಗಳು ಆಪದ್ಬಂಧುಗಳೆಂದು ಹೇಳುತ್ತಿರುವರು. ಈ ಕಾಲದಲ್ಲೇ ವಿಶಪ್ [illegible] ಮಹಾಸ್ವಾಮಿಯವರು ಈ ಊರಿಗೆ ದಯಮಾಡಿಸುವರೆಂಬುವ ವರ್ತಮಾನವನ್ನು ಇಲ್ಲಿನವರು ಕೇಳಿ ತುಂಬಾ ಸಂತೋಷಿಸುತ್ತಿರುವರು. ತುಮಕೂರು ತಾಲ್ಲೂಕಿಗೆ ಸೇರಿದ ಬೆಳ್ಳಾವೆ, ಊರುಕೆರೆ, ಕ್ಯಾತ್ಸಂದ್ರ, ವಗೈರೆ ಸ್ಥಳಗಳಿಗೆಲ್ಲಾ ಈ ಪ್ಲೇಗ್ ರೋಗವು ವ್ಯಾಪಿಸಿರುವದರಿಂದ ಊರುಗಳೆಲ್ಲಾ ಖಾಲಿಮಾಡಲ್ಪಟ್ಟಿವೆ. ಮಳೆಯಂತು ವಿಪರೀತವಾಗಿದೆ. ಈ ಟವುನ್ ಕೆರೆಯು ಹಿಂದಿನ ೧೮೯೮ನೇ ವರ್ಷದ ಪ್ಲೇಗಿನಲ್ಲಿ ತುಂಬಿತ್ತು. ಆ ಲಾಗಾಯಿತು ಇದುವರೆಗೂ ತುಂಬಿರಲೇ ಇರಲಿಲ್ಲ. ಈ ಪ್ಲೇಗಿನ ಕಾಲದಲ್ಲಿ ತುಂಬಿ ಕೋಡಿಬೀಳುತ್ತಿರುವುದು. ಎಲ್ಲಾ ಬೆಳೆಗಳು ಬಹಳ ಚನ್ನಾಗಿವೆ ಇಲ್ಲಿನ ಪ್ರಜೆಗಳ ಮುಖದಲ್ಲಿ ಸ್ವಲ್ಪವಾದರೂ ಕಾಂತಿಯಿಲ್ಲ. ಬೆಳಗ್ಗೆ ನೋಡಿದವರನ್ನು ಸಾಯಂಕಾಲ ನೋಡಬೇಕಾದರೆ ಸಿಕ್ಕುವದಿಲ್ಲ. ಇಲ್ಲಿನ ಅಮಲ್ದಾರ್ ಮ॥ ಅಲ್‌ಫ್ರೆಡ್ [illegible] ರವರು ವೈಸ್‌ಪ್ರೆಸಿಡೆಂಟರಾಗಿ ಮುತುವರ್ಜಿಯಿಂದ ಕೆಲಸ ಮಾಡುತ್ತಿರುವರಾದರೂ ಅವರ ಕೈಕೆಳಗಿನ ನೌಕರರು ಅವುಗಳನ್ನು ಸರಿಯಾಗಿ ಜಾರಿಯಲ್ಲಿ ತರುವದಿಲ್ಲ. ಈ ಕಾರಣದಿಂದ "ದೇವರು ವರ ಕೊಟ್ಟರೂ ಪೂಜಾರಿ ಆಗಗೊಡ" ಎಂಬುವ ಗಾದೆಯಂತೆ ದೊಡ್ಡವರು ಅಪ್ಪಣೆ ಮಾಡಿದಾಗ್ಯೂ ಚಿಕ್ಕವರು ಆಗಗೊಡರು.

## ಗೋಪ್ರಸಂಜೀವಿನಿ

[illegible]

# ವಿಲಾಯತಿಯಿಂದ ಈಗತಾನ ಬಂದಿವೆ.

[illegible]

L. A. POURVAL & Co.,
*Bangalore City*

[illegible]

[illegible]

## ಶ್ರೀ ಕೃಷ್ಣವಿಲಾಸ ಪ್ರೆಸ್.

[illegible]

ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

[illegible]

[illegible]

[illegible]

11—9—1908 ರಿಂದ 18—9—1908 ರ ವರೆಗೆ.

| [illegible] | [illegible] | [illegible] | [illegible] |
|---|---|---|---|
| [illegible] | 19 | 9 | 13 |
| ಮೈಸೂರು ,, | 219 | 198 | 199 |
| [illegible] | 184 | 99 | 100 |
| ಮೈಸೂರು ,, | 26 | 17 | 36 |
| [illegible] ,, | 209 | 71 | 60 |
| [illegible] | 3 | 9 | 6 |
| [illegible] | 67 | 72 | 84 |
| [illegible] ,, | 31 | 23 | 6 |
| [illegible] ,, | 67 | 65 | 60 |
| [illegible] ,, | 1 | 1 | |
| [illegible] ,, | 141 | 60 | 133 |
| [illegible] | [illegible] | [illegible] | [illegible] |

[illegible]

| ತಾ. | ವಾರ. | ತಿಥಿ | ಘಳಿಗೆ. | ನಕ್ಷತ್ರ. | ಘಳಿಗೆ. | [illegible] |
|---|---|---|---|---|---|---|
| 8 | ಗುರು * | ಬಿದಿಗೆ | 34 46 | [illegible] | 25 10 | [illegible] |
| 9 | ಶುಕ್ರ † | ತದಿಗೆ | 33 18 | [illegible] | 26 2 | [illegible] |
| 10 | ಶನಿವಾರ | ಚೌತಿ | 30 37 | [illegible] | 25 16 | [illegible] |
| 11 | ರವಿವಾ | ಪಂಚಮಿ | 27 56 | [illegible] | 23 22 | [illegible] |
| 12 | ಚಂದ್ರ ‡ | ಷಷ್ಠಿ | 24-30 | [illegible] | 20 46 | [illegible] |
| 13 | ಭೌಮ ¶ | ಸಪ್ತಮಿ | 17 24 | [illegible] | 17 18 | [illegible] |
| 14 | ಬುಧ | ಅಷ್ಟಮಿ | 11 58 | [illegible] | 13 30 | [illegible] |

[illegible]

## ಪೇಟೆ ಧಾರಣೆ.

| ವಿಷಯ. | ಮೈಸೂರು. | ಬೆಂಗಳೂರು. |
|---|---|---|
| [illegible] | [illegible] | [illegible] |

Printed and Published by the Rev. E. W. Thompson, ... Proprietor and Manager, Wesleyan Mission Press, Mysore. [illegible]

# ವೃತ್ತಾಂತ ಪತ್ರಿಕೆ.

REGISTERED M 20

೫ ೧ ದು ಡ್ಡು —.೦— ಕ್ರ ೨ ೫ ೧ ದು ಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩ ಮೈಸೂರು—ಸನ್ ೧೯೦೩ ನೇ ಇಸವಿ ಅಕ್ಟೋಬರ್ ತಾರೀಖು ೧೫ ನೇ ಗುರುವಾರ. ಸಂಖ್ಯೆ ೨೦



ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್

5

೧೮೯೫ ನೆ ಇಸವಿ ಮೈಸೂರು ಕಂಪೆನಿ ಆಕ್ಟಿಗೆ ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟಿದೆ

ಶ್ರೀಮನ್ ಮೈಸೂರು ಮಹಾರಾಜರವರ ಗೌರ್ನಮೆಂಟಿನವರಿಂದ ಗ್ಯಾರಂಟಿ ಮಾಡಲ್ಪಟ್ಟ ಸದರಿ ಕಂಪೆನಿಯ ಷೇರು ಒಂದಕ್ಕೆ ರೂಪಾಯಿ ಪ್ರಕಾರ ೨೦,೦೦೦ ಷೇರುಗಳಿಂದ ಆಗುವ ೨,೦೦,೦೦೦ ರೂಪಾಯಿ ಬಂಡವಾಳ ಷೇರುಗಳು ತೆಗೆದುಕೊಳ್ಳುವರು ಅದರ ಸ್ಟೇಟ್ ಮಾಡಿರುವವರಿಂದ ವಿಶೇಷ ಅವರಿಗೆ ಕೊಳ್ಳಬಹುದು ಅಪ್ಲಿಕೇಷನ್‌ಗಳನ್ನು ಮತ್ತು ಮೊದಲಾದ ವಿವರಗಳನ್ನು ಕೆಳಗೆ ಕಂಡಿರುವವರಿಂದ ಕಳುಹಿಸಬಹುದು

ಬಿ ಪಿ ರಾಮಸ್ವಾಮಿ ಚೆಟ್ಟಿ, ಬಿ ಎ,
ಅಡ್ವೊಕೇಟ್ ಮತ್ತು ಜನರಲ್ ಏಜೆಂಟ್,
ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ,
ನಗರ್ತಪೇಟೆ, ಬೆಂಗಳೂರು



## ಸ್ಟಾಂಡರ್ಡ್
## ಲೈಫ್ ಅಶ್ಯೂರೆನ್ಸ್ ಕಂಪೆನಿ.

13

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟದ್ದು

ಹಿಂದೂ ದೇಶದಲ್ಲಿ ಲೈಫ್ ಇನ್ಷೂರೆನ್ಸ್ ಯಾನೆ ಜೀವ ವಿಮಾ ಮಾಡಿಕೊಳ್ಳುವ ಕಂಪೆನಿಗಳಲ್ಲಿ ಇದು ಬಹು ಹಳೆಯದಾಗಿಯೂ ಹೆಚ್ಚಾದ ಬಂಡವಾಳವುಳ್ಳದ್ದಾಗಿಯೂ ಇದೆ

ಭೀಮಾದಾರರಾಗತಕ್ಕವರು (ಲೈಫ್ ಎಶ್ಯೂರ್ ಮಾಡತಕ್ಕ) ಈ ಕಂಪೆನಿಯ ಚಂದಾ ದರ, ಷರತ್ತುಗಳು ಮೊದಲಾದವುಗಳನ್ನು ಇತರ ಕಂಪೆನಿಯವುಗಳೊಡನೆ ಹೋಲಿಸಿನೋಡಿದರೆ ಇಲ್ಲಿ ವಿಮಾವನ್ನು ಬೀಮಾ ಮಾಡುವವರಿಗೆ ಎಷ್ಟು ಸೌಕರ್ಯಗಳಿರುವವು ಗೊತ್ತಾಗುವುದು

ಈ ಕಂಪೆನಿಯ ಭೀಮಾ ನಿಬಂಧನೆಗಳು ಬಹು ಅನುಕೂಲವಾಗಿವೆ ಭೀಮಾದಾರರುಗಳಿಗೆ ಜಿಹಾಕೆಯನ್ನುಂಟುಮಾಡುವ ನಿಬಂಧನೆಗಳೇನೂ ಇಲ್ಲ

ಗೊತ್ತಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲು ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂ ಗಳನ್ನು ಕಂಪೆನಿಯವರು ಕೊಡುವ ಲಾಭಸಹಿತವಾಗಿ ಪಡೆಯಬೇಕಾದರೆ ಭೀಮಾದಾರನು ಕಂಪೆನಿಗೆ ಕೊಡತಕ್ಕ ಚಂದಾ ದರಗಳ ಪೈಕಿ ಕೆಲವನ್ನು ಇಲ್ಲಿ ನೋಡಿ

| ನಡೆಯುತ್ತಿರುವ ವಯಸ್ಸು | ೬೦ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨೦೦೦ ರೂ ಪಡೆಯಬೇಕಾದರೆ ವಾರ್ಷಿಕವಾಗಿ ಕಂಪೆನಿಗೆ ಕೊಡುವದು | ೫೫ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ ಯನ್ನು ಪಡೆಯಬೇಕಾದರೆ ವಾರ್ಷಿಕವಾಗಿ ಕಂಪೆನಿಗೆ ಕೊಡತಕ್ಕದು |
|---|---|---|
| ೨೩ | ರೂ ೩—೧೦—೮ | ರೂ ೩—೦—೦ |
| ೨೫ | ,, ೩—೧೫—೪ | ,, ೩—೧೪—೧ |
| ೩೦ | ,, ೯—೧೨—೮ | ,, ೮—೨— |
| ೩೫ | ,, ೦—೧೪—೮ | ,, ೧೦ ೧ ೭ |
| ೪೦ | | ,, ೧೩—೪ ೮ |

[illegible]



ಸರಸ್ವತೀಕರ ಕಸ್ತೂರಿ ಮಾತ್ರೆಯು

19

ಈ ಮಾತ್ರೆಯು ತಾಂಬೂಲವನ್ನು ಸೇವಿಸತಕ್ಕಂಥಾವರಿಗೆ ಅತ್ಯಂತ ಉಪಯುಕ್ತವಾದದ್ದು. ಈ ಮಾತ್ರೆ ೧—೨ ತಾಂಬೂಲದ ಸಂಗಡ ಸೇವಿಸುವದರಿಂದ ಬಾಯಿಯು ಸುವಾಸನೆಯುಳ್ಳುದಾಗಿ ಬಾಯಿಯ ದುರ್ಗಂಧ, ಹಲ್ಲಿ ಅಜೀರ್ಣ, ಉಷ್ಣರೋಗ, ಬಾಯಿಯ ಹುಣ್ಣು, ಉಗ್ಗಿಸುತ್ತಾ ವಮನಮಾಡುವದು, ವಾಯು, ಶೀತ, ಪಿತ್ಥ, ಮಲಬದ್ಧ, ದಂತದೋಷ, ಬಾಯಿಹುಣ್ಣು, ಹಸಿವು, ಜ್ವರ, ಧಾತು ನಷ್ಟ, ತಲೆಬೇನೆ ಇತ್ಯಾದಿ ಅನೇಕ ರೋಗಗಳೆಲ್ಲಾ ಶಮನವಾಗುವಂತಿರುವದು ಹೆಂಗಸರ ಗುಪ್ತವಾದ ಅನೇಕ ಜಾಡ್ಯಗಳಿಗೆ ವಜ್ರಾಯುಧದಂತಿರುವದು ಚಿಕ್ಕ ಮಕ್ಕಳಿರುವ ಮನೆಯಲ್ಲಿ ಈ ಮಾತ್ರೆಯು ಸಂಜೀವನವು. ಈ ಮಾತ್ರೆಯು ನಿಮ್ಮ ಲ್ಲಿದ್ದರೆ ಅನುಭವಸ್ಥನಾದ ಒಬ್ಬ ವೈದ್ಯನು ನಿಮ್ಮ ಸ್ವಾಧೀನದಲ್ಲಿದ್ದಂತೆಯೇ ೨೦೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೪ ಆಣೆ, ೫ ಆಣೆ ಟಪಾಲ ಖರ್ಚು ೨ ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವು ನಮಗೆ ಬರೆಯುವುದಕ್ಕೆ ಬಲಾತ್ಕಾರಪಡಿಸುವದು.

ಸಿ ಟಿ ಅಂಡ್ ಕಂಪನಿ, ಬೆಂಗಳೂರು ಸಿಟಿ.



## ROBINSON'S
## PATENT BARLEY.

## ರಾಬಿನ್‌ಸನ್‌ಯವರ
## ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ತಮವಾದ ಬಾರ್ಲಿ ಎಂಬ ಧಾನ್ಯದಿಂದ ಎಚ್ಚರಿಕೆಯಿಂದ ಮಾಡಿದೆ ರಸಸ್ಪರ್ಶದಿಂದ ಆದದ್ದು.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ಶಕ್ತಿಹೀನರಾದವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿದೆ

[illegible]



## MELLIN'S FOOD.

ಮೆಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

81

೧ ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಒಳ್ಳೆಯ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ

೨ ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮೂಳೆಗಳೂ ಚೆನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯಕವಾಗಿದೆ

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಕಮಾಡುವ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ

೬ ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭ ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಹಾಕಿ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಕಂದಳಿಗೆ ಅರ್ಹವಾದದ್ದಾಗುತ್ತದೆ

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ಹಿಟ್ಟು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಅದು ಶಕ್ತಿ ದೇಹದ ಬಲವಾಗುತ್ತದೆ

೧೦ ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಬರುವ ಕಾಲದಲ್ಲಿಯೂ ಶೈಶವದಲ್ಲಿಯೂ ಒದಗುವ ಮಿಶ್ರವಾದ ರೋಗಗಳಲ್ಲಿಯೂ ವಿಪತ್ತನ್ನು ತಪ್ಪಿಸುತ್ತದೆ

೧೧ ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨ ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುಣದಪದಾರ್ಥವು ಯಾವದೂ ಸೇರಿರುವದಿಲ್ಲ ತಾಯಿಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನಕೋಶಕ್ಕೆ ಪಥ್ಯಕರವಾದ್ದಾಗಿದೆ

೧೪ ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ವೃದ್ಧಿಮಾಡುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ತಪ್ಪಿಸುವುದಕ್ಕೆ ಸಹಾಯಮಾಡುತ್ತದೆ

೧೫ ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ ಹಾಲು ಕೊಡುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮಾನವಾಗಲಾರದು

[illegible]

## ಇಲ್ಲಿನೋಡಿ.

ಮಹಾರಾಜರವರ ಫೋಟೋಗಳು ವಿಲಾಯಿತಿಯಿಂದ ಬಂದಿವೆ. ಮುಗಿದುಹೋದಾವು! ಜಾಗ್ರತೆ ನೋಡಿ. ಬಹಳ ಸೊಗಸಾಗಿವೆ. ನಿಮ್ಮ ಮನೆಯನ್ನು ಅಲಂಕರಿಸತಕ್ಕವುಗಳಲ್ಲ. ಕ್ರಯ ಎರಡು ಆಣೆಗಳು ಮಾತ್ರ. ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

"ಬಸವರಾಜವಿಜಯ."

ಸಜ್ಜನರ ಉಪಯೋಗಕ್ಕಾಗಿ. ಬಾಲಕರು ಕೂಡ ಸುಲಭವಾಗಿ ಓದಿ ತಿಳಿದುಕೊಳ್ಳಬಹುದು. ಬಸವಪುರಾಣದ ಕಥೆಗಳೆಲ್ಲಾ ಇದರಲ್ಲಿವೆ. ಶುದ್ಧವಾದ ಈ ದೊಡ್ಡ ಪುಸ್ತಕ ೧ ಕ್ಕೆ ವಿ. ಪಿ. ಮೂಲಕ ೧—೪—೦ ೧೨ ಪ್ರತಿಗಳನ್ನು ತರಿಸಿಕೊಂಡರೆ ೧ ಉಚಿತ. ಬೇಕಿದ್ದವರು ಮೈಸೂರು ದೊಡ್ಡಪೇಟೆ ಎಸ್. ಆರ್. ಕರಿಬಸವಶಾಸ್ತ್ರಿಗಳಿಗೆ ಬರೆದು ತರಿಸಿಕೊಳ್ಳಬೇಕು.

## ಕ್ಷೇತ್ರಗಣಿತ ಸಂಗ್ರಹ.

ಈ ಹೊಸ ಪುಸ್ತಕವನ್ನು ಮೈಸೂರು ಶಿವರಾಮಪೇಟೆ ಸ್ಕೂಲು ಹೆಡ್ಮಾಸ್ಟರು ಟಿ. ಯಂ. ರಾಮಸ್ವಾಮಯ್ಯನವರು ಬರೆದಿದ್ದಾರೆ. ಇದರಲ್ಲಿ ನೂರಾರು ಸಾವಿರ ಲೆಕ್ಕಗಳೂ ಮೈಸೂರು ದೇಶೀಯ ಪರೀಕ್ಷೆಯ ಪ್ರಶ್ನಪತ್ರಿಕೆಗಳೂ ಉತ್ತರಗಳೊಡನೆ ಅಡಕವಾಗಿವೆ. ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆಯುವಂತೆ ಅಲ್ಪಕ್ರಯಕ್ಕೆ ಮಾರಲ್ಪಡುವುದು. ಕ್ರಯ ೪ ಆಣೆ, ಹಾಸಲು ೩ ಪೈ. ವಿಳಾಸ:—

ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

### ಜನರಂಜಿತವಾದ ಪುಸ್ತಕಗಳು! ಬೇಗನೋದಬಾರದೇ

ಮೈಸೂರು ಸರ್ಕಾರದ ವಿದ್ಯಾ ಇಲಾಖೆಯವರು ಈ ಪುಸ್ತಕಗಳ ಅಮೂಲ್ಯತ್ವವನ್ನು ತಿಳಿದು ನೂರೈವತ್ತು ರೂಪಾಯಿಗಳಿಗಿಂತ ಜಾಸ್ತಿಯಾಗಿಯೇ ತರಿಸಿಕೊಂಡಿದ್ದಾರೆ.

ಫ್ರೆಡರಿಕ್ ಗ್ರೇಟರ ಚರಿತ್ರೆ. ಬಹು ರಸಿಕವಾಗಿದೆ. ಚಿತ್ರಗಳಿಂದ ಕೂಡಿದ್ದು ಕ್ರಯ ೦—೨—೦

ಪ್ರಾಚೀನ ಮೃಗಗಳ ವರ್ಣನೆ. ಚಿತ್ರಗಳಿಂದ ತುಂಬಿದೆ ೦—೧—೦

ಖಗೋಳ ಶಾಸ್ತ್ರ ಸಿದ್ಧಾಂತ. ಎಲ್ಲರೂ ಓದತಕ್ಕದ್ದು. ಅನೇಕ ಪಟಗಳಿವೆ ೦—೧—೦

ಪಕ್ಷಿಗಳ ವರ್ಣನೆ. ಸ್ಕೂಲ್ ಹುಡುಗರಿಗೆ ಬಹುಮಾನ ಕೊಡುವದಕ್ಕೆ ಯೋಗ್ಯವಾಗಿದೆ. ಅನೇಕ ಪಕ್ಷಿಗಳ ಪಟಗಳೂ, ಅವುಗಳ ಚರಿತ್ರೆಗಳೂ ಇದರಲ್ಲಿ ಅಡಕವಾಗಿವೆ ೦—೧—೦

ಇಂಡಿಯಾ ಚಕ್ರವರ್ತಿಯವರಾದ ಎಡ್ವರ್ಡ್ ಸಾರ್ವಭೌಮರ ಮತ್ತು ಚಕ್ರವರ್ತಿನಿಯರಾದ ಅಲೆಕ್ಸಾಂಡರಾ ಅಮ್ಮನವರ ಜೀವಮಾನಗಳ ಚರಿತ್ರೆ. ಇದರಲ್ಲಿ ಗ್ಲೇಜ್ ಕಾಗದದಮೇಲೆ ಹಾಕಿರುವ ಪಟಗಳು ಅನೇಕವಾಗಿವೆ. ಪ್ರತಿಯೊಬ್ಬರ ಮನೆಯಲ್ಲೂ ಇರತಕ್ಕ ಪುಸ್ತಕ. ಇಂಥಾ ಉತ್ಕೃಷ್ಟವಾದ ಪುಸ್ತಕಕ್ಕೆ ಬೆಲೆಯು ಬಹು ಕಡಿಮೆಯಾಗಿದೆ. ಕ್ರಯ ೦—೪—೦

| | |
|---|---|
| ಚಕ್ರವರ್ತಿಗಳ ಕಿರೀಟಧಾರಣೆಯ ಪುಸ್ತಕ ಕ್ರಯ | ೦—೨—೬ |
| ಕ್ರಿಮಿಗಳ ವರ್ಣನೆ (ಸಚಿತ್ರ) | ೦—೧—೦ |
| ದೇಹವೆಂಬ ನನ್ನಮನೆ (ಸಚಿತ್ರ) | ೦—೧—೦ |
| ಪ್ರಬೋಧಚಂದ್ರಿಕೆ | ೦—೨—೦ |
| ಚಿಕ್ಕವರಿಗೆ ಹೇಳಿದ ಕಥೆಗಳು | ೦—೧—೦ |
| ಕಾಂಟ್ರಾಕ್ಟರನಾದ ಪಾಲಿಸಿಯ ಚರಿತ್ರೆ | ೦—೧—೦ |
| ಗ್ರೀಸ್ ದೇಶದ ಚರಿತ್ರೆ | ೦—೨—೬ |
| ಮಾರ್ಟಿನ್ ಲೂಥರನ ಚರಿತ್ರೆ | ೦—೧—೬ |
| ಆರ್ಯರ ಪೂರ್ವೋತ್ತರ ಚರಿತ್ರೆ | ೦—೧—೬ |
| ಘನತೆಯುಳ್ಳ ಸ್ತ್ರೀಯರ ಚರಿತ್ರೆ | ೦—೨—೬ |

(೧) ವೇದಗಳನ್ನು ಬರೆದವರು ಯಾರು? (೨) ಶುದ್ಧವಾದ ನೀರಿನ ಬಿಲ, (೩) ಸಾಲ ಮತ್ತು ಸಾಲತೀರಿಸುವ ಮಾರ್ಗ, (೪) ಇಂಡಿಯಾದೇಶದ ಬಡತನದ ಕಾರಣಗಳು, (೫) ಬಾಲ್ಯವಿವಾಹ, (೬) ಪ್ರಾಯಶ್ಚಿತ್ತವು, (೭) ಬಯ್ಯುವದು, (೮) ಮಾನವಧರ್ಮಶಾಸ್ತ್ರ, (೯) ಗ್ರಹಣಗಳು, (೧೦) ಮಕ್ಕಳನ್ನು ಬೆಳಸತಕ್ಕವಿಧ. (೧೧) ಶ್ರಾದ್ಧಗಳು, (೧೨) ಎಲ್ಲರೂ ಸಹೋದರರು, (೧೩) ಮಂತ್ರ, ತಂತ್ರ, ಯಂತ್ರಗಳು, (೧೪) ಜ್ಯೋತಿಷಶಾಸ್ತ್ರ (೧೫) ಆರೋಗ್ಯಪ್ರಕಾಶಿಕೆ ಈ ಪುಸ್ತಕಗಳ ಪ್ರತಿಯೊಂದಕ್ಕೆ ಮೂರು ಕಾಸು ಕ್ರಯವಿದೆ. ಮೇಲ್ಕಂಡ ಹದಿನೈದು ಪುಸ್ತಕಗಳನ್ನು ಒಟ್ಟಾಗಿ ತರಿಸತಕ್ಕದ್ದು. ಬಿಡಿಯಾಗಿ ಮಾರಲಾರೆವು. ಈ ಪುಸ್ತಕಗಳನ್ನು ಓದಿದಮೇಲೆ ಬರುವ ಸಂತೋಷವನ್ನು ವಿವರಿಸಲಾಗದು. ಜಾಗ್ರತೆ ನೋಡಿ. ವಿ. ಪಿ. ಪಿ. ಮೂಲಕವಾಗಿಯಾಗಲಿ ಅಥವಾ ಹಣವನ್ನು ಮುಂಗಡವಾಗಿ ಕಳುಹಿಸೋಣದ್ದರಿಂದಲಾಗಲಿ ಪುಸ್ತಕಗಳನ್ನು ಪಡೆಯಬಹುದು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

### ಚೇಂಬರ್ಲೆನ್ ಯವರು ಕಂಡುಹಿಡಿದ ಕೆಮ್ಮಿನ ಔಷಧವು.

ಶೀತ, ಕೆಮ್ಮು, ಗಂಟಲು ಗೂರಿಸುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿಕೆಗೆ ಔಷಧವು ಬಹುಪ್ರಿಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ, ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತಜ್ವರ ಬಂದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳಲಿಕ್ಕೆ ಮಾಡದಿದ್ದರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಬಿಗಿಹೋಗುವದು. ಇದರಿಂದಲೇ ಕೆಲವರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನ ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ದ್ರವ್ಯವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತದೆ. ಹೊತ್ತೇ ಒಂದು ಸೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಸೀಸೆ ೧ಕ್ಕೆ ೧ ರೂ, ೨ ರೂ. ಈ ಔಷಧವು ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಇದನ್ನು ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ:—

ಡಬ್ಲ್ಯೂ. ಇ. ಸ್ಮಿತ್ ಅಂಡ್ ಕಂಪೆನಿ,

ಮೌಂಟ್ ರೋಡ್,

ಮದರಾಸ್.

ನಿಮ್ಮ ತಲೆಯಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳೇ.

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿ ಆಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ "ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ.

ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತದ ಕನ್ನಡ ಟೀಕು.

ಆದಿಪರ್ವ ಎರಡನೇ ಭಾಗ ೩ ರೂ. ವಿರಾಟಪರ್ವ ೧ ರೂ. ಭೀಷ್ಮಪರ್ವ ೨ ರೂ. ದ್ರೋಣಪರ್ವ ಎರಡನೇ ಭಾಗ ೨—೮—೦ ಸ್ತ್ರೀಪರ್ವ ೩ ಆ. ಅನುಶಾಸನೀಕಪರ್ವ ೩—೧೨—೦ ರೂ.

ಶ್ರೀ ಚಾಮರಾಜೋಕ್ತಿ ವಿಲಾಸವೆಂಬ ಕನ್ನಡ ರಾಮಾಯಣ

ಬಾಲಕಾಂಡ ೧ ರೂ. ಅಯೋಧ್ಯಾಕಾಂಡ ೨ ರೂ. ಅರಣ್ಯಕಾಂಡ ೧ ರೂ. ಕಿಷ್ಕಿಂಧಾಕಾಂಡ ೧ ರೂ. ಸುಂದರಕಾಂಡ ೧ರೂ. ಯುದ್ಧಕಾಂಡ ೨—೮—೦ ರೂ. ಉತ್ತರಕಾಂಡ ೧—೮—೦

ಶ್ರೀ ಕೃಷ್ಣರಾಜ ವಾಣೀ ವಿಲಾಸ ಶ್ರೀಮದ್ಭಾಗವತದ ಕನ್ನಡ ಟೀಕು.

ಪ್ರಥಮ ದ್ವಿತೀಯ ತೃತೀಯ ಸ್ಕಂಧಗಳು ೨ ರೂ. ಚತುರ್ಥ ಪಂಚಮ ಸ್ಕಂಧಗಳು ೧—೧೨—೦ ರೂ. ಷಷ್ಠಸಪ್ತಮ ಅಷ್ಟಮ ನವಮಸ್ಕಂಧಗಳು ೨—೮—೦ ರೂ. ದಶಮಸ್ಕಂಧ ೨—೮—೦ ರೂ. ಏಕಾದಶ ದ್ವಾದಶಸ್ಕಂಧಗಳು ೧—೧೨—೦ ರೂ.

ನಮ್ಮಲ್ಲಿರುವ ಹಣ್ಣಿನ ಗಿಡಗಳ, ಹೂವಿನ ಗಿಡಗಳ ಮತ್ತು ಬೀಜಗಳ ಕ್ಯಾಟಲಾಗನ್ನು ಅಪೇಕ್ಷಿಸಿದಲ್ಲಿ ಕಳುಹಿಸುತ್ತೇವೆ.

ಎಂ. ರುದ್ರಪ್ಪ ಅಂಡ್ ಸನ್,

ಲಾಲ್‌ಬಾಗ್ ರೋಡ್, ಬೆಂಗಳೂರು ಸಿಟಿ.


### ನೋಟೀಸು.

ಬೆಂಗಳೂರು ಚಾಮರಾಜೇಂದ್ರಪೇಟೆಯಲ್ಲಿ ೨ ನೆ ಮೇನ್ ರೋಡು ೫ ನೆ ನಂಬರು ಮನೆಯಲ್ಲಿರುವ ಬಿ. ವಿ. ಶೇಷಣ್ಣನವರು ಸರ್ವರಿಗೂ ತಿಳಿಯಪಡಿಸುವದೇನೆಂದರೆ—

ಮೈಸೂರು ಡಿಸ್ಟ್ರಿಕ್ಟ್ ತಿರುಮಕೂಡ್ಲು ನರಸೀಪುರದ ತಾಲ್ಲೂಕು ಬನ್ನೂರು ಗ್ರಾಮದಲ್ಲಿರುವ ಕಾಶೀ ಸುಬ್ಬಣ್ಣನವರ ಮಗ ಬಿ. ಶೇಷಗಿರಿರಾಯನಿಗೆ ನನ್ನ ಮಗಳು ಜೇಪುಬಾಯಿ ಉರುಫ್ ಲಕ್ಷ್ಮೀಬಾಯಿಯನ್ನು ಕೊಟ್ಟು ಲಗ್ನಮಾಡಿ ಈಗ್ಗೆ ೩ ವರುಷಗಳಾಯಿತು. ಸದರಿ ನನ್ನ ಅಳಿಯನಾದ ಬಿ. ಶೇಷಗಿರಿರಾಯನು ಈಗ್ಗೆ ಒಂದು ವರುಷದ ಕೆಳಗೆ ಪ್ಲೇಗಿನಲ್ಲಿ ಮೃತಪಟ್ಟುಹೋದನು.

ಆ ಲಾಗಾಯಿತು ನನ್ನ ಮಗಳು ಜೇಪುಬಾಯಿ ಉರುಫ್ ಲಕ್ಷ್ಮೀಬಾಯಿ ಪೋಷಣೆಗೆ ಈಕೆ ಮಾವನಾದ ಡಿಟೋ ಕಾಶೀ ಸುಬ್ಬಣ್ಣನವರನ್ನು ಎಷ್ಟು ವಿಧದಿಂದ ಕೇಳಿದರೂ ಸದರಿಯವರು ಯಾವದೊಂದು ಏರ್ಪಾಟೂ ಮಾಡದೆ ಇವರಿಗೆ ಕುಟುಂಬ ಮತ್ತು ಸಂತಾನವಿಲ್ಲದ್ದರಿಂದ ತನ್ನ ಸೊಸೆಗೆ ಇರುವ ಹಕ್ಕನ್ನು ತಪ್ಪಿಸಿ ಚರ ಸ್ಥಿರ ಯಾವತ್ತು ಜಂಡಗಿ ದರಭಾರಿ ಮಾಡಿ, ತಾವು ದೇಶಕ್ಕೆ ಹೊರಡುವಂತೆ ಮಾತಾರ್ ಹುಟ್ಟಿರುವಕಾರಣ ಈ ಕೆಳಗೆ ಮುದ್ರಿಸಿರುವ ಸ್ಥಿರಸ್ವತ್ತುಗಳು ಈ ಲಾಗಾಯಿತು ಸದರಿ ಸುಬ್ಬಣ್ಣನವರಿಂದ ಯಾರಾದರೂ ಯಾವ ವಿಧವಾಗಿಯೇ ಆಗಲಿ ತೆಗೆದುಕೊಳ್ಳಕೂಡದೆಂದು ಇದರಿಂದ ಸಾಫ್ ತಿಳಿಸಿರುತ್ತೆ.

ಸ್ಥಿರಸ್ವತ್ತಿನ ತಪಶೀಲು—ಬನ್ನೂರು ಗ್ರಾಮದಲ್ಲಿರುವ ೧೮೧ ನೆ ನಂಬರು ಮನೆಗಳು ಎರಡು, ಅದೇ ಗ್ರಾಮಕ್ಕೆ ಸೇರಿದ ಕೆರೆ ಕೆಳಗೆ ಗದ್ದೆ ತಾಕು ೧ ಕ್ಕೆ ಸರ್ವೆ ೧೨೭ ನೆ ನಂಬರು ಬೀಜವರಿ ೨—೦—೧೧—೦ ಕಾಂಟು, ಆಕಾರ ರೂ ೧ ೨೭ ಡಿಟೋ ದವನಿ ಕಟ್ಟೆ ಅಚ್ಚುಕಟ್ಟು ತಾಕು ೧ ಕ್ಕೆ ಸರ್ವೆ ೫೬೮ ನೆ ನಂಬರು ಪೈಕಿ ೨, ಬೀಜವರಿ ೧—೧, ಆಕಾರ ರೂ ೬—೮—೦, ಸರ್ವೆ ೫೦೭ ನೆ ನಂಬರು ಬೀಜವರಿ ೭—೮, ಆಕಾರ ರೂ ... ಬನ್ನೂರು ಕೋಟೆ ಪೂರೋವಳ್ಳಿ ಗ್ರಾಮಕ್ಕೆ ಸೇರಿದ ತಾಕು ೧ ಕ್ಕೆ ಸರ್ವೆ ೯೩ ನೆ ನಂಬರು ಪೈಕಿ ೨, ಬೀಜವರಿ ೦—೯—೦, ಆಕಾರ ರೂ ೧ ೮—೦. ಸರ್ವೆ ೧೦೧ ನೆ ನಂಬರು ಬೀಜವರಿ ೧—೯, ಆಕಾರ ರೂ ೮—೮—೦, ಶಟ್ಟಿ ಗ್ರಾಮಕ್ಕೆ ಸೇರಿದ ಸರ್ವೆ $\frac{೪೪೨}{೪೪೫}$ ನೆ ನಂಬರು ಬೀಜವರಿ ಆಕಾರ ರೂ.

| | |
|---|---|
| ೦—೩—೦ | ೦—೪—೦ |
| ೦—೧೨—೦ | ೦—೪—೦ |
| ೦—೨೦—೦ | ೦—೮—೦ |

ತಾ|| ೨೩—೯—೦೩,

ಬೆಂಗಳೂರು. ಬಿ. ವಿ. ಶೇಷಣ್ಣ.

### ನಮ್ಮ ಚಂದಾದಾರರಿಗೆ ನೋಟೀಸ್.

"ವೃತ್ತಾಂತ ಪತ್ರಿಕೆ"ಯ ಏಜೆಂಟರು ಚಂದಾ ವಸೂಲು ಕೊಂಡದ್ದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವದಿಲ್ಲ.

ಮ್ಯಾನೇಜರ್,

ಮೈಸೂರು. "ವೃತ್ತಾಂತ ಪತ್ರಿಕೆ" ಆಫೀಸ್


## ವೃತ್ತಾಂತ ಪತ್ರಿಕೆ.

ಸನ್ ೧೯೦೩ ನೇ ಇಸವಿ ಅಕ್ಟೋಬರ್ ತಾ|| ೧೫ ನೇ ಗುರು


### ಮ್ಯಾಸಿಡೋನಿಯಾ ಗಲಭೆಯು.

ಈಚೆಗೆ ರಷ್ಯಾ ಆಸ್ಟ್ರಿಯಾ ಗವರ್ನಮೆಂಟುಗಳು ವಿಶೇಷವಾಗಿ ಸಾಹಸಪಡುತ್ತಿರುವ್ಯರಿಂದ ತುರ್ಕಿ ಬಲ್ಗೇರಿಯಾಕ್ಕೂ ಯುದ್ಧ ಪ್ರಸಂಗವು ಉಂಟಾಗಲಾರದೆಂದು ನಂಬಿಕೆಯುಂಟಾಗಿದೆ. ನೀವಿಬ್ಬರೂ ಯುದ್ಧಮಾಡಿ ಯಾರು ಗೆದ್ದರೂ ಸೋತವರ ಸೀಮೆಯನ್ನು ಆಕ್ರಮಿಸಿಕೊಳ್ಳುವ ಭಾಗದಲ್ಲಿ ಪರರಾಜ್ಯಗಳವರು ಅವಕಾಶ ಕೊಡುವುದಿಲ್ಲವಾದಕಾರಣ ಯುದ್ಧವೇ ನಿಷ್ಪ್ರಯೋಜನವೆಂದು ಆ ಎರಡು ಗವರ್ನಮೆಂಟುಗಳವರೂ ತುರ್ಕಿಗೂ ಬಲ್ಗೇರಿಯಾಕ್ಕೂ ತಿಳಿಸಿದರು. ಹೀಗಿರುವಲ್ಲಿ ಈ ಯುದ್ಧಕ್ಕಾಗಿ ಅವರವರು ವಿಪರೀತ ದ್ರವ್ಯವನ್ನೂ ಬಹು ಪ್ರಾಣಗಳನ್ನೂ ಕಳೆದುಕೊಳ್ಳುವುದು ಯೋಗ್ಯವಾದುದಾಗಿ... ಆದರೆ ತುರ್ಕಿ ಸೈನಿಕರು ಮಹಾ ಕ್ರೌರ್ಯದಿಂದ ನಿರ್ಪಾಯರಾದ ಗಂಡಸರು, ಹೆಂಗಸರು, ಮಕ್ಕಳನ್ನು ಕತ್ತರಿಸಿಹಾಕಿ ದಂಗೆಯನ್ನು ಅಣಗಿಸಿರುತ್ತಾರೆನ್ನುವ ಸಾಕಾದಷ್ಟು ವೃತ್ತಾಂತಗಳು ಹೊರಪಟ್ಟವು. ಈ ಕ್ರೂರ ಕೃತ್ಯವು ಫ್ರಾನ್ಸಿನಲ್ಲೂ ವಿಲಾಯತಿಯಲ್ಲೂ ವಿಶೇಷವಾದ ಆಗ್ರಹವನ್ನುಂಟುಮಾಡಿತು. ಆದಕಾ

ರಿಯ ಗವರ್ನಮೆಂಟುಗಳವರೂ ವ್ಯಾಪಿಸಿದೋಸಿಯ ನ್ನು ಮುಂದೆ ೧೦ ವರ್ಷದ ಗಳವರೂ ನೆಲಸುದಂ ತ್ರಿ ಪ್ರನಾ ನಿಮ್ಮ ಓಗ ಉತ್ತರ ವಾಗಿರುವ ಕಾ ಪ್ರ ಅ ಡು ಬರಬಾರದೆಂದು ನಮ್ಮ ಮಹಾರಾಜ ರೂಢಿಯಲ್ಲ ತದ ನು ಸಾಧಾರಣವಾಗಿ ತನ್ನ ಅಭಿಪ್ರಾಯವನ್ನು ತ ರದ ಗವರ್ನಮೆಂಟಿನವರಿಗೆ ತಿಳಿಸಿದ್ದಾರೆ -ಇನ್ನು ಮುಂದೆ ವ್ಯಾಪಿಸದೋಸಿಯನ್ನು ಬ ನೇ ಗವರ್ನರಾಗಿಯೂ ಬರ್ಸ್ತಿಸ ಸ್ಥಸ್ಥದ ಮತ್ತು ಇಲಾಖೆಗಳಲ್ಲಿ ಉಪಯೋಗಿಸತಕ್ಕೆ ಮು ಅಧಿಕಾರಸಡಾಯವು ಇರುವಂತೆ ನೇಮ ನಿಸಬೇಕೆಂದು

## ಪ್ರಮುಖನ ಪ್ರಾರ್ಥನೆ—III

ಈ ಪ್ರಾರ್ಥನೆಯಲ್ಲಿ ಅಡಗಿರುವ ವಿಭಾಗಗಳನ್ನು ನಾವು ಕಳೆ ದ ತಿಳಿದೆವಷ್ಟೆ. ಆ ವಿಭಾಗಗಳನ್ನ ಸೇರಿಸಿ ಈ ಸಂಬಳ ಭಗವಂತನಿಗೆ ಕೊಟ್ಟಿರುವ ನಾಮಧೇಯವನ್ನು ಪರಿಶೀಲನೆ ಮಾಡಿ "ಪರಲೋಕದಲ್ಲಿರುವ ನನ ತಂದೆಯೇ" ಎಂಬ ವಾಕ್ಯವು ಸಂಕ್ಷೇಪವಾಗಿಯೂ ಸುಲಭವಾಗಿಯೂ ಇದೆ. ಲ್ಲಿ 'ತಂದೆ' ಎಂಬದೊಂದು ನಾಮವಾಚಕವು, "ನನ್ನ ಪರಲೋಕದಲ್ಲಿರುವ" ಎಂಬುವು ಎರಡು ವಿಶೇಷಣಗಳೂ

ತಂದೆ—ಎಂಬುದರ ಅರ್ಥವಾದ ಆ ಮಹಾತ್ಮನ ಸ್ವಭಾವ ವಾಗಿರಬಹುದೆಂದು ಕಳೆದ ತರಹವೂ ಅತ್ಯಂತ ಅಲೋ ಚಿಸ ತಕ್ಕವರು—ಎಂದರೆ ಆತನು ಜಲಿವಿಲ್ಲದ ಸರ್ವಜ್ಞ ನಾಗಲಿ, ಸರ್ವಶಕ್ತನಾಗಲಿ ಅಪರಿಮಿತನಾದ ದೇವನು ವಾಗಿದ್ದಾ ನೆ. ಆತನು ತಾನಾಗಿ ಏನೂ ತಿಳಿಯದವನಾಗಿದ್ದರೂ ಜ್ಞಾನಿ ಯಾದನೆಯೇ? ತಾನೇ ಅನುಭವಶಾಲಿಯಾಗಿರದಿದ್ದಾಗ್ಯೂ ದಯೋನಾಗಿದ್ದಾನೆಯೋ? ಮನುಷ್ಯರು ಏನು ದುಃಖ ಪಟ್ಟರೂ ಲಕ್ಷ್ಯ ತಾರದೆ ತಾನೇ ರಾಜನಾಗಿದ್ದಾನೆಯೋ? ಆತನು ನಮ್ಮನ್ನು ಎಳೆಯುವವನೂ ಪ್ರೀತಿಸುವವನೂ ಸ್ವರ್ಗದಲ್ಲಿರುವವನೂ ಆಗಿದ್ದಾನೆಂದು ಭಾವಿಸಬೇಕೋ? ಸಕಲ ತತ್ವಶಾಸ್ತ್ರಗಳ ವ ಧರ್ಮಗಳ ಮಹಾ ವಿಚಾ ರ. ಈ ವಿಷಯದಲ್ಲಿ ಮಹಾ ಬೋಧಕನಾದ ಯೇಸುಸ್ವಾ ಮಿ ಹೇಳುವುದೆನೆಂದು ಕೇಳಿದರೆ—ಭಗವಂತನನ್ನು ಒಬ್ಬ ತಂದೆಯಾಗಿ ಭಾವಿಸುವುದು ಸರಿಯೆಂದು ಆತನು ಅಪ್ಪಣೆ ಕೊಟ್ಟನು. ತಂದೆಯು ಬಳಿಗೆ ಬರತಕ್ಕ ಮಗನು ಯಾವ ಮ ನೋಭಾವವುಳ್ಳವನಾಗಿರುವನೋ, ಅದೇ ಮನೋಭಾವವು ನಮ್ಮ ಲ್ಲಿ ಭಗವಂತನ ಸನ್ನಿಧಾನವನ್ನು ಸೇರುವ ಮನುಷ್ಯರಲ್ಲಿ ರಬೇಕಾದ್ದು. ಭಗವಂತನು ರಾಗದ್ವೇಷಾದಿಗಳಿಲ್ಲದ ವಸ್ತುವೆಂ ದು ನಾವು ಭಾವಿಸಬಾರದು.

ಪರಲೋಕದಲ್ಲಿರುವ ಭಗವಂತನು ವಿಗ್ರಹನಲ್ಲದೆ ತಂದೆಯಾಗಿದ್ದಾನೆಂದರೆ—ಯಾವ ಅಭಿಪ್ರಾಯದಲ್ಲಿ ಆತನು ತಂದೆಯಾಗಿದ್ದಾನೆಂದು ಯಾರಾದರೂ ಕೇಳಬಹುದಷ್ಟೆ. ತಂದೆ ಯು ಭೂಲೋಕನ್ಯನಕಾರದಲ್ಲಿ ಮಕ್ಕಳನ್ನು ಪಡೆಯುವಂತ ಪ ರಲೋಕದಲ್ಲಿಯೂ ಭಗವಂತನು ತಂದೆಯೋ? ಇದು ಭಗವಂತನ ಲ್ಲಿ ಅಸಾಧ್ಯವಾಗಿಯೂ ಅಗೌರವವಾಗಿಯೂ ಇದೆ. ಅತನು ಪರಲೋಕದಲ್ಲಿರುವ "ನನ್ನ ತಂದೆಯಾಗಿದ್ದಾನೆ" ಎಂದರೆ, ಸೃಷ್ಟಿಯಲ್ಲಿ ಇರುವ ನಾಯಿ ನರಿ ಹಂದಿ ಮೊದಲಾದವುಗಳಲ್ಲಿ ಎಲ್ಲೋ ಒಂದು ವಿಗ್ರಹವಾಗಿ ವಾಸಮಾಡಿಕೊಂಡಿರುವಂತೆ, ಈ ವಿಷಯವೋ? ಸ್ವರ್ಗದಲ್ಲಿ ಮನುಷ್ಯರಿಗೆ ಕಿವಿಗಳಿರುವಂತೆ ಜೀವವುಳ್ಳವನು ಹಾಗೆ ವಾದಗಳೂ, ಅವುಗಳ ಸಹ ಮಕ್ಕಳೂ, ತಿಳುವಳಿಕೆ ಸಹಿತ ದೇವರ ವಿಷಯದಲ್ಲಿ ಈ ಅಭಿಪ್ರಾಯವನ್ನಿಟ್ಟು ಕೊಳ್ಳುವರಷ್ಟೆ. ಆದರೆ ಪರಲೋಕವೆಂದರೆ—ನಾವು ವಾಸಿಸುವ ಭೂಲೋಕವನ್ನು ಅತಿಕ್ರಮಿಸುವಂಥ ಮಹಾ ಮಹಿಮೆಯುಳ್ಳ ದೆಂದು ತಿಳಿಯತಕ್ಕದ್ದು. ನನ್ನ ಪ್ರಾರ್ಥನೆಗೆ ವಿಷಯವಾದ ತಂದೆಯು ಭೂಸಮ್ಮಂಧವಾದ ತಂದೆಯಲ್ಲ, ಅತನು ಮಹಿಮೆ ಯುಳ್ಳವನಾಗಿಯೂ, ಸರ್ವಶ್ರೇಷ್ಠನಾದ ಪ್ರಭುವನೆಂದು ತಿಳಿಯಲು "ಭೂಲೋಕಕ್ಕೆ ಸಂಬಂಧಪಟ್ಟ ಯಾವ ಅನಿಷ್ಟವಾದ ಅಭಿಪ್ರಾಯವನ್ನೂ "ತಂದೆ" ಎಂಬ ಪದಕ್ಕೆ ಕಲ್ಪಿಸುವದಕ್ಕೆ ಅ ವಕಾಶವಿಲ್ಲದಂತೆ ಯೇಸುಸ್ವಾಮಿಯು ಅದರೊಂದಿಗೆ "ಪರಲೋ ಕದಲ್ಲಿರುವ" ಎಂಬ ವಿಶೇಷಣವನ್ನು ಸೇರಿಸಿ ಹೇಳಿದನು. ಭಗ ವಂತನು ಯಾವ ಅಭಿಪ್ರಾಯದಲ್ಲಿ ತಂದೆಯೆಂದರೆ—(೧) ಅತನು ಸಕಲಕ್ಕೂ ಅದರೊಳಗಿರುವವೆಲ್ಲವುಗಳ ಸೃಷ್ಟಿಕರ್ತನು, (೨) ಆತನ ಸ್ವಭಾವ ತತ್ವದಲ್ಲಿ ತಂದೆ ಮಕ್ಕಳಿಗಿರು ವ ಸಂಬಂಧವಾದ ಒಂದು ವಿಧವಾದ ಅರುಪಾದಕಾರಣವು ತು) ವಿಷಯಗಳು ಸ್ಥಾಪಿಸಲ್ಪಟ್ಟವೆಯೋ, ಯೇಸುಸ್ವಾಮಿಯು ಮಾತಲ ಯಾರ ಸ್ಥಾನದಲ್ಲಿ ಪವಿತ್ರನಾಗಿರುವನೋ ಅವನು ನಿತ್ಯನಾಗಿ ಭಗವಂತನ ಅವತಾರನಾಗಿರುವ ಕಾರಣವು ಭಗ ವಂತನು ತಂದೆಯಾಗಿದ್ದಾನೆ. ಈ ಸಕರೇ ಉಪಾಖ್ಯಾನಗಳ ವಿಷ ಯದಲ್ಲಿ ಸತ್ಯವೇದದ ಉಪಾಖ್ಯಾನಗಳನ್ನು ಇಲ್ಲಿ ತಿಳಿಸ ರ ನೆ ಸರ್ವರೂ ಆತನನ್ನು ಒಪ್ಪಿಕೊಂಡರೋ ಅವರಿಗೆ, ಎಂದರೆ ಆತನ ಹೆಸರಿನಲ್ಲಿ ನಂಬಿಕೆ ಇಟ್ಟವರಿಗೆ, ದೇವರ ಮಕ್ಕಳಾ ಗುವ ಹಕ್ಕನ್ನು ಆತನು ಕೊಟ್ಟನು; ಅವರು ರಕ್ತದಿಂದಾಗಲಿ ಶರೀರದ ಇಚ್ಛೆಯಿಂದಾಗಲಿ ಮನುಷ್ಯನ ಇಚ್ಛೆಯಿಂದಾಗಲಿ ಹುಟ್ಟದೆ ದೇವರಿಂದ ಹುಟ್ಟಿದವರು" (ಯೋಹಾನ ೧ ೧೨, ೧೩) ಈ ಪ್ರಕಾರ ದೇವರಿಂದ ಹುಟ್ಟಿದವರಾದ ಇವರು ಪ್ರೀತಿಯುಳ್ಳ ಪರಿಶುದ್ಧವಾದ ಸಂಬಂಧದಿಂದ ಆ ಭಗವಂತನಿಂದಲೇ ಹೊಂದುವವರಾಗುತಾರೆ. ಭಗವಂತನಿಂದ ಈ ಪ್ರಕಾರ ಅಂದರೆ ಇರುವುದರಲ್ಲಿ ಸಂಬ ಪಟ್ಟು ನಿತ್ಯವಾದ ಪ್ರೀತಿ ವಿಶ್ವಾಸಗಳನ್ನು ಹೊಂದುವವರು ನಿಜತ್ತ ಈ ಪ್ರಭುವಿನ ಸ್ತೋತ್ರವನ್ನು ಸಮರ್ಪಿಸುವವ ಹೇಳ ಬಲ್ಲರೇ ಹೊರತಾಗಿ ಬೇರೆ ಇದು ಸಾಧ್ಯವಲ್ಲ. ಅದಕ್ಕೆ ನೇರೋದ ಹೇಳಿಯೇನೆಂದರೆ—"ನೀನ ಮಕ್ಕಳಾಗಿರುವದರಿಂದ ದೇವರು ಅಪ್ಪಾ ತಂದೆ ಎಂದು ಕೂಗುವ ತನ್ನ ಮಗನ ಆತ್ಮ ನನ್ನು ನಿಮ್ಮ ಹೃದಯಗಳೊಳಗೆ ಕಳುಹಿಸಿ ಇಟ್ಟನು" (ಗಲ ೪, ೬).

ನನ್ನ ಇಲ್ಲಿ "ನನ್ನ" ಎಂದು ಹೇಳಿಕೊಳ್ಳದೆ "ನಮ್ಮ" ಎಂದು ಹೇಳಿಕೊಳ್ಳುವ ಉದ್ದೇಶ ನಾನು ತಿಳಿಯತಕ್ಕ ಬಗ್ಗೆ ಬ ಹು ಮುಖ್ಯವಾದುದಾಗಿದೆ. "ನನ್ನ" ಕುಟುಂಬದವರ ಬಳಿಯಲ್ಲಿ ಸೇರಿರು ವವರೆಂದು ತಿಳಿಯುವುದು ಕೇವಲ ಬಳಿಗೆ ಬರಬೇಕಾದುದು ನಾವು ದೇ ವಿಷಯಕೊಳ್ಳತಕ್ಕದ್ದು. ನಿತ್ಯ ಪ್ರಾರ್ಥನೆಯಲ್ಲಿ ಈ ಪದವನ್ನು ಹೇಳುವಲ್ಲಿ ನಮ್ಮ ಸಹೋದರರಾದವರನ್ನೆಲ್ಲಾ ಜ್ಞಾಪಕಕ್ಕೆ ತರಬೇಕು. ಅಂದರೆ ನಮ್ಮ ಮನೆಯಲ್ಲಿ ವಾಸಿಸುವವರನ್ನೂ ನಮ್ಮ ಕೆತ್ತ ಹೊರೆಯವರನ್ನೂ ಸಮಸ್ತ ಮನುಷ್ಯರನ್ನೂ ಭಗವಂತನ ಸನ್ನಿಧಾ ನದಲ್ಲಿ ಎತ್ತಿಸಿಕೊಳ್ಳಬೇಕು. ಆದರೆ ಒಂದೊಂದು ವೇಳೆ ನ ಮ್ಮ ಸಂಕಟವು ಅಪರಿಮಿತವಾಗಿರುವುದರಿಂದ ಒಬ್ಬನು ಪ್ರಾರ್ಥಿ ಸುವಾಗ "ನನ್ನ ತಂದೆಯೇ" ಎನ್ನುವುದಕ್ಕೆ ಬದಲು "ನನ್ನ ತಂದೆಯೇ" ಎನ್ನುವುದು ತನ್ನ ಸ್ವಂತ ಮಾತ್ರ ವಿಷಯವಾದ ತಪ್ಪೇ ಆದಾಗ್ಯೂ ಅದು ನಿರ್ದೇಶಿಸುವುದಲ್ಲಿ ಅದರ ಸ್ವಾರ್ಥ್ಯವನ್ನು ಗಿ ನ ನೋಡಿದರೆ ನಾವು ಪ್ರಾರ್ಥನೆ ಮಾಡುವಾಗೆಲ್ಲಾ ಇತರರೂ ಸೇರಿ ದರೆ ಇತರರ ಶ್ರೇಯಸ್ಸನ್ನು ಕೋರಿಕೊಂಡಿರುವ ನನ್ನ ಸ್ವಾರ್ಥ ಬುದ್ಧಿ ತಪ್ಪುವುದು ಇದರಿಂದ ತಿಳಿದು ಬರುತ್ತದೆ.

## ಒಳಲೋಕದ ವೃತ್ತಾಂತಗಳು

ಕಳೆದ ಶುಕ್ರವಾರ ಬೆಳಿಗ್ಗೆ ನಮ್ಮ ರೆಸಿಡೆಂಟರು ಬೆಂಗಳೂರು ಅಂಡ್ ಮಿಷನ್ ಹೈಸ್ಕೂಲಿನ ಪಯನಾಮ ವಿದ್ಯಾರ್ಥಿಗಳಿಗೆ ಬಹು ಮಾನಗಳನ್ನು ಹಂಚಿಕೊಟ್ಟರು.

****

ಮಾರಿಕುಪ್ಪದಲ್ಲಿ ಸ್ವಚ್ಛತೆ ಮನೆಗಳನ್ನು ಹೆಚ್ಚಾಗಿ ಕಟ್ಟಿಸು ವುದಕ್ಕೆ ಇಂಡಿಯಾ ಗವರ್ನಮೆಂಟಿನವರು ಇನ್ನೂ ೨೦ ೦೦೦ ರೂ ಸ್ಯಾಂಕ್ಷನ್ ಮಾಡಿದಾರೆ.

****

ಶ್ರೀಮನ್ಮಹಾರಾಜರವರೂ, ಯುವರಾಜರೂ ಮಹಾ ಮಾ ತೋಶ್ರೀಯವರೂ ಪರಿವಾರ ಸಹಿತ ಮುಂದಿನ ತಿಂಗಳ ಮೊದಲನೇ ವಾರದಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡುವವರಾಗಿದ್ದಾರೆಂದು ವರ್ತಮಾನವಿದೆ.

****

ಕೋಲಾರ್ ಚಿನ್ನದ ಗಣಿಗಳಲ್ಲಿ ಒಂದು ಮ್ಯುನಿಸಿಪಲ್ ಕೋ ರ್ಟ್ ಹೊಸದಾಗಿ ಏರ್ಪಾಡಾಯಿತಷ್ಟೆ. ಮೈಸೂರಿನಲ್ಲಿ ಮ್ಯುನಿ ಪನಾಗಿದ್ದ ಮಿ॥ ತಿಮ್ಮಯ್ಯನವರನ್ನು ಸರ್ಕಾರದವರು ಆ ಹೊಸ ಕೋರ್ಟಿಗೆ ವರ್ಗಮಾಡಿದರು.

****

ದಕ್ಷಿಣ ಮರಾಠಾ ರೈಲ್ವೆ ಸ್ಟೇಷನ್‌ಗಳಿಂದ ಮಂಗಳೂರು ಬ್ರಾಂಚ್‌ಗೆ ಸಾಹುಕಾರರು ಗಂಧದಮರ, ಬಳ್ಳಿ, ಭತ್ತಿಗಳನ್ನು ರಫ್ತು ಮಾಡುವುದಕ್ಕೆ ಅನುಕೂಲಿಸುವಂತೆ ಕಂಪನಿಯವರು ಬಾ ಡಿಗೆ ದರಗಳನ್ನು ಬದಲಾಯಿಸಿ ಮಾಡಿರುತ್ತಾರೆ.

****

ಈ ಸಲ ಪ್ರತಿನಿಧಿ ಸಭೆಗೆ ಒಟ್ಟು ೬೦ ಮಂದಿ ಪ್ರಜಾಪ್ರತಿ ನಿಧಿಗಳು ಬರಬೇಕಾಗಿತ್ತು. ಆ ಪೈಕಿ ೪೯ ಮಂದಿ ಮಾತ್ರ ರಾಜ ಧಾನಿಗೆ ಬಂದಿದ್ದರೆಂದು ಹೇಳುವಾಗ ಸಭೆಯಲ್ಲಿ ಎಷ್ಟು ವಿಷಯ ಗಳು ಚರ್ಚೆಯಾಗದೆ ಬಿಟ್ಟುಹೋದವೋ ವಾಚಕರೇ ಊಹಿಸಿಕೊ ಳ್ಳಬಹುದು.

****

ರಾಜಧಾನಿಯಲ್ಲಿ ನೆನ್ನೆ ಬೆಳಿಗಿನ ಝಾಮದಲ್ಲಿ ಪೂರಾ ಮಳೆ ಸುರಿಯಿತು. ಪ್ಲೇಗ್ ಉಪದ್ರವ ಶಮನವಾಗುವಂತೆ ಕಾಣುವುದಿ ಲ್ಲ. ಮೊನ್ನೆ ಮಂಗಳವಾರ ೩೭ ಜನರಿಗೆ ತಗಲಿತು, ಎಲ್ಲಾ ಕಾರ ಇಗಳಿಂದಲೂ ೩೧ ಜನ ಮೃತಪಟ್ಟರು. ಉಪದ್ರವ ಪಟ್ಟಣದ ಎಲ್ಲಾ ಮೊಹಲ್ಲೆಗಳಿಗೂ ವ್ಯಾಪಿಸಿಕೊಂಡಿದೆ.

****

ನವರಾತ್ರಿ ಉತ್ಸವ ಪ್ರತಿನಿಧಿ ಸಭೆಗಳನ್ನು ಆಗ ಮಾಡಿಸುವು ದಕ್ಕೆ ರಾಜಧಾನಿಗೆ ಬಯಸಿಬಿಟ್ಟ ವಿವಾಹಾದಿ ಕಾರ್ಯಗಳು ಮುಂಬ ರುಗಳು, ಇಲಾಖೆಗಳ ಅಧಿಕಾರಿಗಳು ಡಿಪ್ಟಿ ಕಮಿಷನರುಗಳು, ಪ್ರಜಾಪ್ರತಿನಿಧಿಗಳು ಮೊದಲಾದವರೆಲ್ಲಾ ಮೊನ್ನೆ ಶನಿವಾರವು ಭಾ ನುವಾರವೂ ತಮ್ಮ ತಮ್ಮ ಸ್ಥಳಗಳಿಗೆ ಪ್ರಯಾಣಮಾಡಿದರು.

****

ಮೈಸೂರು ಸರ್ಕಾರದವರು ಹೊಸ್ತ ದೊಡ್ಡ ಗ್ರಾಮಗಳಲ್ಲಿ ಲೋಕಲ್ ಫಂಡ್ ಬೋರ್ಡುಗಳನ್ನು ಏರ್ಪಡಿಸುವುದಕ್ಕೋಸ್ಕರ ಒಂದು ಹೊಸ ಶಾಸನವನ್ನು ಮಾಡಿದ್ದಾರೆಂತಲೂ, ಈ ಶಾಸನವು ಇದೇ ಬರುವ ನೊವೆಂಬರ್ ಒಂದನೇ ತಾರೀಖಿನಿಂದ ಜಾರಿಗೆ ಬರುವದೆಂತ ಲೂ ಮೊದಲು ಪ್ರಕಟಿಸಿದ್ದಷ್ಟೆ. ಈ ಶಾಸನವನ್ನು ಜಾರಿಗೆ ತ ರುವದಕ್ಕೆ ಬೇಕಾಗುವ ಮುಖ್ಯ ಸಂಗತಿಗಳನ್ನು ಜ ರೀ ಬಿ ಏರ್ಪಡಿಸುವ ಸರ್ಕಾರದವರು ತ. ನೀ. ಇವರು ಸ ನಿಷದ ಪ್ರಕಟಿಸಿದರು.

****

ಈ ವಾರ ಬೆಂಗಳೂರಿನಲ್ಲಿ ನಮ್ಮ ರೆಸಿಡೆಂಟರಾದ ಸರ್ ಡೊ ನಾಲ್ಡ್ ರಾಬರ್ಟ್‌ಸನವರು ಬಿಡತಕ್ಕ ಸರ್ಬಾರಿನ ನ ಮೈ ಎವಾರ್ಡನರ ಅವರನ್ನು ಒಂದು ಸ ಸತ್ಕರಿಸುವವರಾಗಿದಾರೆ. ರೆಸಿಡೆಂಟರು ನಾಳೆ ಸೋಮವಾರ ಕೆಲಸದ ಮದರಾಸನ್ನು ಬಿಟ್ಟು, ಮಂಗಳವಾರ ಬೆಳಿಗ್ಗೆ ಬಿಕ್ಕಿಸು ಕ ರೈಲು ಹತ್ತಿ ಬೆಂಗಳೂರಿಗೆ ಪ್ರಯಾಣ ಮಾಡುವವರಾಗಿದ್ದಾರೆ. ಹೊಸ ರೆಸಿಡೆಂಟರಾದ ಮಿ॥ ಬರ್ಟನ್ ರವರು ಬೆಂಗಳೂರಿಗೆ ಮುಂಚಿನವರಾದ ದರ್ಬಾರಿಗೆ ಕೆಲಸದ ಮದರಾಸನ್ನು ಬಿಡುವುದೆಂದು ತಿಳಿದು ಬಂದಿದೆ.

****

ಕೋಲಾರದ ಡಿಸ್ಟ್ರಿಕ್ಟ್ ಮುಳಬಾಗಲು ತಾಲ್ಲೂಕಿನಿಂದ ಈ ಸಲ ಪ್ರತಿನಿಧಿ ಸಭಾ ಮೆಂಬರಾಗಿ ಬಂದಿದ್ದ ಮಿ॥ ರಂಗನಾಥರಾ ಏಗಲು ಪಟ್ಟಣ ಕಳೆದ ಕೇರಿಯಲ್ಲಿ ಇರುತ್ತಿದ್ದರು. ಜಂದನ ಗುರುವಾರ ಅವರಿಗೆ ಪ್ಲೇಗ್ ಕಾಣಿಸಿಕೊಂಡು ಮಾಯವಾಯಿತು. ಕೌಶಿಕ ಬರೆ ಆದರೆ ಅವರಿಗೆ ಆಪ್ತರಿಗಳು ಕೂಡಿ ಅವರನ್ನು ಪ್ಲೇಗ್ ಆಸ್ಪತ್ರೆಗೆ ಕಳುಹಿಸಿ, ಅಲ್ಲಿ ಎಷ್ಟು ಶುಶ್ರೂಷೆ ಮಾಡಿದಾಗ್ಯೂ ಪ್ರಯೋಜನ ವಾಗಲಿಲ್ಲ. ಆದರೆ ಮಿ॥ ಅವರ ನೀಗಲು ಮೊನ್ನೆ ಶನಿವಾರ ಕಾಲವಾದರು. ಪ್ರಜೆಗಳ ಪ್ರತಿನಿಧಿಗಳು ಗವರ್ನ ಮೆಂಟಿಗೆ ಅರಿಕೆ ಮಾಡುವುದಕ್ಕಾಗಿ ಬಂದ ಇವರಿಗೆ ಇಲ್ಲಿ ಅಕಾಲ ಮರಣ ಪ್ರಾಪ್ತವಾಯಿತಲ್ಲಾ ಎಂದು ತುಂಬಾ ವಿಷಾದಿಸುತ್ತೇವೆ.

****

ಕಳೆದ ಗುರುವಾರ ಮಧ್ಯಾಹ್ನ ನಮ್ಮ ರೆಸಿಡೆಂಟರವರು ಪತ್ನಿ ಸಹಿತ ಕೋಲಾರ್ ಚಿನ್ನದಗಣಿಗಳಿಗೆ ಹಯಿಸಿದರು. ಅಲ್ಲಿನವರು ಮಾಡಿದ ಆತಿಥ್ಯವನ್ನು ಸ್ವೀಕರಿಸಿದರು. ಆ ರಾತ್ರಿಯವರು ಅಲ್ಲಿ ಒಂದು ಹೊಸ ದೇವಾಲಯಕ್ಕೆ ಅಸ್ತಿಭಾರವನ್ನು ಹಾಕಿದರು. ಗಣಿ ಗಳ ಕಂಪನಿಯವರು ಸರ್ಕಾರದವರು ಅವರಿಗೆ ಆ ರಾತ್ರಿ ಭೋಜನ ಪಾರ್ಟಿ ನನ್ನು ಮಾಡಿದರು. ಭೋಜನಾನಂತರ ಸ್ಟಾಟ್ ಕ್ಲಬ್ ಯವರು ಸರ್ ರಾಬರ್ಟ್‌ಸನ್‌ರವರ ಗುಣಕಥನವನ್ನು ನೋಡಿ "ಇ ವರು ರೆಸಿಡೆಂಟರಾಗಿ ಬಂದನಂತರ ಜನಗಳಿಗೆ ಕೊಡಬೇಕಾದ ದು ಹೊರತಾಗಿ ಇತರ ಸೌಲಭ್ಯಗಳನ್ನೆಲ್ಲಾ ಒದಗಿಸಿಕೊಟ್ಟರು. ಇವರ ಸಹಾಯದಿಂದಲೇ ಕೋಲಾರ್ ಗಣಿಗಳಿಗೆ ಹೆಚ್ಚಿನ ಅನುಕೂಲತೆ ಚಿನ್ನದಗಣಿ ಪೋಲೀಸ್ ಬಂದೋಬಸ್ತಿಗೆ ಜಾಸ್ತಿ ಹಣವು ದೊರೆ ತದ್ದು ಇವರ ಉಪಕಾರದಿಂದಲೇ" ಎಂಬದಾಗಿ ಹೇಳಿದರು. ಆದ ರೆಸಿಡೆಂಟರು ಬೆಂಗಳೂರಿಗೆ ದಯಮಾಡಿದರು.

## ಮೈಸೂರು ಗೆಜೆಟ್ ಸಂಗ್ರಹ

ಮಿ॥ ಕರೀಂಖಾನರವರನ್ನು ತುಮಕೂರು ಡಿಸ್ಟ್ರಿಕ್ಟ್ ಫಂಡ್ ಬೋರ್ಡಿಗೂ, ಮಿ॥ ವೈ ರಂಗರಾಯರನ್ನು ತುಮಕೂರು ಟೌನ್ ಮ್ಯುನಿಸಿಪಲ್ ಬೋರ್ಡಿಗೂ, ಮಿ॥ ಕೇಶವ್ ನರಸಿಂಗರಾ ಯರನ್ನು ಕಡಿಯೂರ್ ಟೌನ್ ಮ್ಯುನಿಸಿಪಲ್ ಬೋರ್ಡಿಗೂ ಮೆಂ ಬರಾಗಿ ನೇಮಕ ಮಾಡಿದೆ.

ಪೋಲೀಸ್ ಇಲಾಖೆಯಲ್ಲಿ ಮುಂದೆ ಹೇಳುವ ಬದ್ಲಿ ಮುಂತಾ ದ್ದು ಹುಕುಂ ಮಾಡಿದೆ:—ಮಿ॥ ಮಹಮದ್ ಜಾಫರ್‌ರವರು ೨ ನೆ ಕ್ಲಾಸ್ ಸಬ್ ಇನ್ಸ್‌ಪೆಕ್ಟರಾಗಿರತಕ್ಕದ್ದು. ಮಿ॥ ಗಳಿಂದ ಬದಲು ಡ್ರಿಲ್ ಮೇಸ್ತ್ರಿಯವರೂ ವೈ ವಿ ಕೃಷ್ಣಮೂರ್ತಿಯವರೂ ೧ ನೆ ಕ್ಲಾಸ್ ಸಬ್ ಇನ್ಸ್‌ಪೆಕ್ಟರಾಗಿರತಕ್ಕದ್ದು. ಮಿ॥ ಸಿ ಡಿ ರಾಮಸ್ವಾಮಯ್ಯ ನವರು ೧ ನೆ ಕ್ಲಾಸ್ ಸಬ್ ಇನ್ಸ್‌ಪೆಕ್ಟರಾಗಿ ನೇಮಿಸಲ್ಪಟ್ಟರು. ರಂ ಗುಲಾಂ ಖಾದರ್‌ಸಾಹೇಬರವರಿಗೆ ೨ ನೆ ಕ್ಲಾಸ್ ಇನ್ಸ್‌ಪೆಕ್ಟರ್ ಕೆಲಸ ಖಾಯಂ ಮಾಡಿದೆ.

ಮೈಸೂರು ಓರಿಯಂಟಲ್ ಲೈಬ್ರರಿ ಕ್ಯೂರೇಟರ್ ಮಿ॥ ಎ ಮಹದೇವ ಶಾಸ್ತ್ರಿಯವರಿಗೆ ೧ ತಿಂಗಳು ಪ್ರಿವಿಲೇಜ್ ರಜಾ ಕೊ ಟ್ಟಿತು.

ಲೈಬ್ರರಿಯ ಮಿ॥ ಆರ್ ಶಾಮಶಾಸ್ತ್ರಿಯವರು ಅವರ ಕೆ ಲಸವನ್ನು ನೋಡುತ್ತಿದ್ದರು.

ಮೈಸೂರು ಎಕ್ಸಿಕ್ಯೂಟಿವ್ ಡಿಪ್ಯುಟೀ ಕಮಿಷನರ್ ಮಿ॥ ಜೆ ಕೃಷ್ಣಮೂರ್ತಿಯವರಿಗೆ ೩ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮಿ॥ ಟಿ ಆರ್ ದಸಪ್ಪರವರು ಬಿಟ್ಟ ಅವರ ಕೆಲಸವನ್ನು ಬದಲಿ ನೋಡತಕ್ಕದ್ದು.

ಕಡೂರ್ ಡಿವಿಷನ್ ಬಾಬ್ತನ್ನು ವಹಿಸಿರುವ ಅಸಿಸ್ಟೆಂಟ್ ಎ ಜಿ ಕಮಿಷನರ್ ಮಿ॥ ನಂಜುಂಡ ಸುಬ್ಬರಾಯರಿಗೆ ೪ ದಿನಗಳ ಪ್ರಿವಿ ಲೇಜ್ ರಜಾ ಕೊಟ್ಟಿದೆ.

ಎಕ್ಸಿಕ್ಯೂಟಿವ್ ಇಲಾಖಾ ಎಕ್‌ಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ಮಿ॥ ಟಿ ಎಸ್ ವಿಶ್ವನಾಥಯ್ಯರವರಿಗೆ ೪ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಅಮಲ್ದಾರ್ ಮಿ॥ ಆರ್ ಮಾಧವರಾಯರನ್ನು ಹಾಸನದಿಂದ ಬೆಂಗಳೂರು ತಾಲ್ಲೂಕಿಗೆ ವರ್ಗ ಮಾಡಿದೆ. ಕಚೇರಿ ಕೆಲಸ ದ ಏರ್ಪಾಡು ಸಹ ತಕ್ಕದ್ದು.

ಮಿ॥ ವೆಂಕಟರಂಗಯ್ಯಂಗಾರ್ಯರನ್ನ ಪ್ರೊಬೇಷನ್ ಮೇಲೆ ಕೆಲಸ ಕ್ಕಿಡಿಸಿದ್ದರಿಂದ ಕೋಲಾರ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಎಕ್‌ಸ್ಟ್ರಾ ಅಸಿ ಸ್ಟೆಂಟ್ ಕಮಿಷನರಾದ ಮಿ॥ ಎನ್ ಗೋಪಾಲೈಯ್ಯಂಗಾರ್ಯರನ್ನ ಎಕ್ಸೈಸ್ ಕಮಿಷನರ್ ಆಫೀಸಿನಲ್ಲಿ ಕೆಲಸ ಮಾಡುವುದಕ್ಕಾಗಿ ವರ್ಗ ಮಾಡಿದೆ. ಕ್ವಾರ್ಟರ್ ಕೆಲಸದ ಛಾರ್ಜು ವಹಿಸತಕ್ಕದ್ದು.

ಶಿವಮೊಗ್ಗ ಡಿಸ್ಟ್ರಿಕ್ಟ್ ಎಕ್‌ಸ್ಟ್ರಾ ಅ ಕಮಿಷನರ್ ಮಿ॥ ೩ ಆಸೆಂಬ್ಲಿ ಯವರಿಗೆ ಒಂದು ತಿಂಗಳು ೨೨ ನಗರ ಪ್ರಿವಿಲೇಜ್ ರಜಾ ಕೊಟ್ಟಿತ್ತು. ಅವರ ಕೆಲಸ ನೆ ಡಿಸೆಂಬರ್ ತಿಂಗಳಲ್ಲಿ ಮಾಡ ಬೇಕ್ ಪಟ್ಟಣದಲ್ಲಿ ನಡೆಯುವ ಜನಗಣತಿ ಕೆಲಸ ವೃದ್ಧಿಗಾಗಿಯೂ ಪಕ್ಷ ಸಂಬಂಧಪಡುವ ಕಾರ್ಯಗಳನ್ನು ನೋಡಿಕೊಳ್ಳುವದಕ್ಕಾ ಗಿ ಅವರನ್ನು ಇದರಿಂದ ಕರೆ ನೇಮಿಸಿದೆ.

ಮಿ॥ ಜೆ ಬಿ ಪೈ ಮುನಿಯರನ್ನು ಮದರಾಸ್ ಗವರ್ನಮೆಂಟ ನವರು ೩ ನೆ ಕ್ಲಾಸ್ ಸ ಇಂಜಿನಿಯರ್ ದರ್ಜೆಗೆ ಬಡ್ತಿ ಮಾಡಿರುತ್ತಾರೆ.

ಇವರಿಗೆ ಈ ಕೆಲಸಕ್ಕೆ ಮಿ॥ ಜೆ ಆ ರಿಕೆಟ್‌ರವರ ಗೆ ೫ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿತು.

## ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನ್‌ರವರು ಮಾಡಿದ ಉಪನ್ಯಾಸ.

೧೯೦೩ ನೇ ಇಸವಿ ಅಕ್ಟೋಬರ್ ತಾ॥ ೫ನೆಯ ಸೋಮವಾರ.

ಹೊಸ ರಾಜ್ಯಭಾರಕ್ರಮ.—ಮುಖ್ಯವಾದ ವಿಷಯಗಳೆಲ್ಲಾ ಶ್ರೀಮನ್ಮಹಾರಾಜರವರಿಂದಲೇ ತೀರ್ಮಾನವಾಗತಕ್ಕದ್ದಾದ್ದರಿಂದಲೂ ಅದಕ್ಕೆ ವಿರೋಧವಿಲ್ಲದಂತೆಯೂ, ಕೌನ್ಸಿಲ್ಲಿನ ಪ್ರಯೋಜನಕ್ಕೆ ಕುಂದಕವಿಲ್ಲದಂತೆಯೂ, ಕೌನ್ಸಿಲರುಗಳಲ್ಲಿ ಕಾರ್ಯೋತ್ಸಾಹವನ್ನುಂಟುಮಾಡಿ ಅವರು ಸಹಕಾರಿಗಳಾಗಿರುವಂತೆ ಮಾಡುವದು ಹೊಸ ಏರ್ಪಾಡುಗಳ ಮುಖ್ಯೋದ್ದೇಶವಾಗಿತ್ತು. ಆದಕಾರಣ ಮಹಾರಾಜರವರು ರಾಜ್ಯವನ್ನು ವಹಿಸಿಕೊಂಡ ಬಳಿಕಲೂ, ಆ ಹಿಂದೆ ಇದ್ದ ಕೌನ್ಸಿಲನ್ನೇ ಇಟ್ಟುಕೊಳ್ಳುವದು ಸರಿಯಲ್ಲವಾದ್ದರಿಂದ, ಅದನ್ನು ಮಂತ್ರಾಲೋಚಕವಾಗಿ ಏರ್ಪಡಿಸುವದು ಆವಶ್ಯಕವಾಯಿತು. ಇದಕ್ಕಾಗಿ ಕೌನ್ಸಿಲರುಗಳ ಪರ್ಯಾಲೋಚನೆಗೆ ಬರತಕ್ಕ ವಿಷಯಗಳ ಸಂಖ್ಯೆಯನ್ನು ವಿಮರ್ಶೆಯಿಂದ ಹೆಚ್ಚಿಸಲಾಯಿತು. ಈಗ ರಾಜ್ಯದ ಆಡಳಿತದ ಎಲ್ಲಾ ಇಲಾಖೆಗಳಲ್ಲಿಯೂ ಕಾರ್ಯಗಳು ಸಮರ್ಪಕವಾಗಿ ನಡೆಯುವದಕ್ಕೆ ದಿವಾನರವರೇ ಮಹಾರಾಜರವರಿಗೆ ಜವಾಬ್ದಾರರಾದ ಅಧಿಕಾರಿಗಳಾಗಿರುತ್ತಾರೆ. ಮಹಾರಾಜರವರ ಬಳಿಗೆ ಹೋಗಿ ಬರುವ ಎಲ್ಲಾ ವಿಷಯಗಳೂ ಇವರ ಮೂಲಕವಾಗಿಯೇ ಹೋಗಿಬರಬೇಕು. ಆದರೂ ಕೌನ್ಸಿಲರುಗಳಿಗೆ ಆಯಾ ಇಲಾಖೆಗಳ ಆಡಳಿತಗಳ ಪೂರ್ವಾಪರದ ತಿಳುವಳಿಕೆಯನ್ನೂ ಅವುಗಳಲ್ಲಿ ಆಸಕ್ತಿಯನ್ನೂ ಉಂಟುಮಾಡುವದಕ್ಕಾಗಿ, ಅವರಿಗೆ ಸರಕಾರದ ತೀರ್ಮಾನಕ್ಕೆ ಹೋಗಬೇಕಾದ ಆಯಾ ಇಲಾಖೆಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಕೊಡುವಂತೆ ಅಧಿಕಾರವನ್ನು ಕೊಟ್ಟು, ಇಲಾಖೆಗಳು ಹಂಚಲ್ಪಟ್ಟಿವೆ.

ಮೇಲೆ ವಿವರಿಸಿದ ಈ ರಾಜ್ಯಕ್ರಮವು ೧೯೦೨ನೆಯ ಆಗಸ್ಟ್ ೮ನೆಯ ತಾರೀಖಿನಿಂದ ನಡೆಯುತ್ತಾ ಇದೆ. ಕೆಳಗಿನ ಪಟ್ಟಿಯು, ಇನ್ನೂ ತೀರ್ಮಾನವಾಗದ ವಿಷಯಗಳು ಸಹಾ, ಕಳೆದ ವರ್ಷದಲ್ಲಿಯೂ ರೀಜನ್ಸಿಯ ಕಡೆಯ ವರ್ಷದಲ್ಲಿಯೂ ನಡೆದ ಕೆಲಸಗಳನ್ನು ಹೋಲಿಸಿ ತೋರಿಸುತ್ತದೆ. ಮಹಾರಾಜರವರ ತೀರ್ಮಾನಕ್ಕೆ ಕಳುಹಿಸಿದ ವಿಷಯಗಳು ೮೦೦ಕ್ಕಿಂತ ಹೆಚ್ಚಾಗಿದ್ದವು. ಮಹಾರಾಜರವರಿಂದ ತೀರ್ಮಾನವಾಗಿ ಬಂದ ವಿಷಯಗಳು ಅರ್ಜಿಗಳು ಸಹಿತವಾಗಿ ೯೦೦ಕ್ಕಿಂತ ಹೆಚ್ಚಾಗಿದ್ದವು. ಕೇವಲ ಪರಿಮಾಣವನ್ನೇ ನೋಡಿದರೂ ಕೂಡ ಮಹಾರಾಜರವರು ರಾಜ್ಯಕಾರ್ಯದಲ್ಲಿ ಬಹಳ ಭಾಗವನ್ನು ನಿರ್ವಹಿಸಿರುವರು ವ್ಯಕ್ತವಾಗುತ್ತದೆ. ಮಹಾರಾಜರವರು ತೀರ್ಮಾನ ಮಾಡಿದ ಬೇರೆ ಬೇರೆ ವಿಷಯಗಳು ಯಾವವೆಂದರೆ —ರಾಜ್ಯದಲ್ಲಿ ನಡೆಯತಕ್ಕ ಅತಿಶಯವಾದ ಸಂಗತಿಗಳನ್ನೆಲ್ಲಾ ಶ್ರೀಮನ್ಮಹಾರಾಜರವರಿಂದ ತೀರ್ಮಾನ ಹೊಂದಬೇಕಾದುದರಿಂದ, ನಾನಾ ವಿಧವಾದ ಅನೇಕ ಸಂಗತಿಗಳು ಅವರ ಪ್ರಾಮುಖ್ಯಕ್ಕೆ ಹೋದವೆಂದು ಹೇಳಬೇಕಾದುದೇ ಇಲ್ಲ.

ವ್ಯವಸ್ಥೆಯಾದ ವಿಷಯಗಳ ಸಂಖ್ಯೆ.

| | ೧೯೦೧.೦೨. | ೧೯೦೨.೦೩. |
|---|---|---|
| ರೆವಿನ್ಯು | ೨,೯೬೧ | ೨,೩೫೨ |
| ಜನರಲ್ | ೨,೮೧೨ | ೩,೫೨೯ |
| ಪೊಲಿಟಿಕಲ್ ಮೆನ್ಸರ್ | ೯೦ | ೯೩ |
| ವಿದ್ಯಾಭ್ಯಾಸ | ೩೬೬ | ೬೩೨ |
| ಜ್ಯುಡಿಷಿಯಲ್ | ೧,೭೩೫ | ೧,೫೬೦ |
| ರಿಜಿಸ್ಟ್ರೇಷನ್ | ೭೭ | ೫೩ |
| ಲೋಕಲ್ ಫಂಡ್ | ೪೮೦ | ೬೬೫ |
| ಲೋಕಲ್ ಬೋರ್ಡ್ಸ್ | ೧,೭೮೩ | ೧,೩೭೫ |
| ಮ್ಯುನಿಸಿಪಲ್ ಫಂಡ್ | ೧,೫೬೭ | ೧,೩೩೮ |
| ಫೈನಾನ್ಸ್ | ೧,೦೩೭ | ೧,೩೨೨ |
| ಅಬ್ಕಾರಿ | ೬೭೪ | ೬೩೩ |
| ಆರ್ಜಿ | ೩,೦೭೩ | ೭,೨೮೦ |
| ಜಂಗಲು | ೪೫೬ | ೬೬೩ |
| ಸೈನ್ಯ | ೮೧ | ೧೭೩ |
| ಮುಜರಾಯಿ | ೧,೬೪೦ | ೧,೩೦೬ |
| ಪಬ್ಲಿಕ್ ವರ್ಕ್ಸ್ (ಜನರಲ್) | ೮೦೦ | ೯೬೮ |
| ರೈಲ್ವೆ | ೩೦೭ | ೭೨೦ |
| ಜಿಯೊಲಾಜಿಕಲ್ | ೭೬೩ | ೬೩೧ |
| ಒಟ್ಟು | ೧೯,೫೫೦ | ೧೯,೫೮೭ |

ಪ್ರಜಾಸಂಖ್ಯೆ.—ಕಳೆದ ವರ್ಷ [illegible] ಜನ್ಮ ಮರಣಗಳಲ್ಲಿ ನಮೂದಾದವರ ಸಂಖ್ಯೆಯೂ ಸಂಭವಿಸಿದ ಜನ್ಮ ಮರಣಗಳ ಸಂಖ್ಯೆಯೂ ೧೮೯೧ರಲ್ಲಿದ್ದದ್ದಕ್ಕಿಂತ ಕಡಮೆಯಾಯಿತು. ಎಂದರೆ ಕಳೆದ ವರ್ಷ [illegible] ನಮೂದಾದವರ ಸಂಖ್ಯೆಯು ೧೮೯೧ನೆಯ ವರ್ಷದ ಸೆನ್ಸಸ್ಸಿನ ಪ್ರಕಾರ ೧೮,೦೩೨ ಇದ್ದದ್ದು ಈ ಸೆನ್ಸಸ್ಸಿನಲ್ಲಿ [illegible] ಸಂಭವಿಸಿದವರ ಸಂಖ್ಯೆಯು [illegible] ಇದ್ದದ್ದು [illegible]

ವಿದ್ಯಾಭ್ಯಾಸದ ವಿಷಯದಲ್ಲಿ [illegible] ಒಂದು ಭಾಷೆಯನ್ನು ಓದುವದಕ್ಕೂ ಬರೆಯುವದಕ್ಕೂ ಬಂದವರೆಂದು [illegible] ಸೆನ್ಸಸ್ಸಿನ ವಿದ್ಯಾಭ್ಯಾಸದ [illegible] ಈ ರೀತಿಯಲ್ಲಿ ನೋಡಿದರೆ [illegible] ಬಲ್ಲವರ ಸಂಖ್ಯೆಯು ಒಟ್ಟು ಪ್ರಜಾಸಂಖ್ಯೆಯಲ್ಲಿ [illegible] ಎಂದರೆ [illegible] ಹೆಂಗಸರಲ್ಲಿ [illegible] ಎಂತೆಯೂ ಇತ್ತು.

ಮಳೆಬೆಳೆ ಮತ್ತು ಪ್ರಜಾರೋಗ್ಯ.—ಶ್ರೀಮನ್ಮಹಾರಾಜರವರ ಆಳ್ವಿಕೆಯ ಈ ಪ್ರಥಮ ವರ್ಷದಲ್ಲಿ ಮಳೆಯು ಸಮೃದ್ಧಿಯಾಗಿ ಬಿತ್ತು, ಬೆಳೆಗಳು ಸೌಖ್ಯವಾಗಿದ್ದುವು. ಫಸಲುಗಳು ಚೆನ್ನಾಗಿ ಆದವು, ವ್ಯವಸಾಯದ ಸ್ಥಿತಿಯು ಒಟ್ಟು ಬಹಳ ತೃಪ್ತಿಕರವಾಗಿತ್ತು, ಆಹಾರಕ್ಕೆ ಉಪಯೋಗಿಸುವ ದವಸ ಧಾನ್ಯಗಳೆಲ್ಲಾ ಹಿಂದಿನ ವರ್ಷಕ್ಕಿಂತ ಅಗ್ಗವಾಗಿದ್ದವು.

ಆದಾಗ್ಯೂ ಪ್ರಜೆಗಳ ಆರೋಗ್ಯಾಭಿವೃದ್ಧಿಯ ವಿಷಯದಲ್ಲಿ ಒಟ್ಟು ಅನೇಕ ಕೊರತೆಗಳಿದ್ದವು. ಕಳೆದ ವರ್ಷ ಕಾಲರಾ ತಗುಲಿದವರ ಸಂಖ್ಯೆಯು ೨೦೨ ಮಾತ್ರವೇ ಇದ್ದರಿಂದಲೂ ಹಿಂದಿನ ವರ್ಷ ಅದಕ್ಕಿಂತಲೂ ಸ್ವಲ್ಪ ಹೆಚ್ಚಾಗಿದ್ದದ್ದರಿಂದಲೂ ಕಳೆದ ವರ್ಷ ಕಾಲರಾ ಜಾಡ್ಯವು ಇರಲೇ ಇಲ್ಲವೆಂದು ಹೇಳಬಹುದು. ಸಿಡುಬು ತಗುಲಿದವರ ಸಂಖ್ಯೆಯೂ ಬಹಳ ಮಟ್ಟಿಗೆ ಕಡಿಮೆಯಾಯಿತು—ಎಂದರೆ ಹಿಂದಿನ ವರ್ಷ ೬,೦೩೨ ಇದ್ದದ್ದು ಕಳೆದ ವರ್ಷ ೩,೨೧೬ಕ್ಕೆ ಇಳಿಯಿತು. ಜ್ವರ ಪ್ಲೇಗು ಈ ರೋಗಗಳ ವಿಷಯದಲ್ಲಿ ಹೀಗೆ ಹೇಳಲಾಗಲಿಲ್ಲವಲ್ಲಾ ಎಂದು ವಿಷಾದಿಸುತ್ತೇನೆ. ಜ್ವರ ತಗುಲಿದವರ ಸಂಖ್ಯೆಯು ಹಿಂದಿನ ವರ್ಷಕ್ಕಿಂತ ಕಳೆದ ವರ್ಷ ೩,೦೦೦ ಹೆಚ್ಚಾಯಿತು; ಈ ವ್ಯಾಧಿಯಿಂದ ೬೩,೦೬೩ ಮಂದಿ ಮೃತಪಟ್ಟರು. ಪ್ಲೇಗು ತಗುಲಿದವರ ಸಂಖ್ಯೆಯೂ ಪ್ಲೇಗಿನಿಂದ ಸತ್ತವರ ಸಂಖ್ಯೆಯೂ ಹಿಂದಿನ ವರ್ಷಕ್ಕಿಂತ ಹೆಚ್ಚಾಗಿದ್ದವು. ಕಳೆದ ವರ್ಷ ಸಂಸ್ಥಾನದಲ್ಲಿ ಜಾಡ್ಯತಗುಲಿದವರ ಒಟ್ಟು ಸಂಖ್ಯೆ ೩೫,೬೮೦ ಆಗಿಯೂ ಮರಣಸಂಖ್ಯೆ ೭,೧೫೫ ಆಗಿಯೂ ಇದ್ದವು. ತುಮಕೂರು ಚಿತ್ರದುರ್ಗದ ಡಿಸ್ಟ್ರಿಕ್ಟುಗಳು ವಿನಾ ಉಳಿದ ಎಲ್ಲಾ ಭಾಗಗಳಲ್ಲಿಯೂ ಕಳೆದ ವರ್ಷ ಈ ಜಾಡ್ಯವು ಮೊದಲಿಗಿಂತ ಹೆಚ್ಚಿತು. ಪ್ಲೇಗು ರೋಗದ ನಿವಾರಣೆಗಾಗಿ ಇದುವರೆಗೂ ಒಟ್ಟು ೧೮ ಲಕ್ಷಕ್ಕೆ ಮೀರಿ ಖರ್ಚುಮಾಡಲಾಗಿದೆ.

ಆದಾಯವ್ಯಯ.—ರೀಜನ್ಸಿ ಕಾಲದ ಲೆಕ್ಕಗಳನ್ನೆಲ್ಲಾ ಮಿ॥ ಕೀರ್‌ನಾಂಡರವರು ಪರೀಕ್ಷಿಸಿ ಮುಗಿಸಿದ್ದು ಈ ವರ್ಷ ನಡೆದ ಮುಖ್ಯವಾದ ಕೆಲಸವಾಗಿದೆ. ಅವರ ರಿಪೋರ್ಟು, ಸರ್ಕಾರದ ೧೯೦೩ನೆಯ ಫೆಬ್ರವರಿ ೭ನೆಯ ತಾರೀಖಿನ ಪ್ರೊಸೀಡಿಂಗ್ಸ್ ನಂಬರು Fl. ೧೧೫೦—೧೧೯೭—೦೮ರಲ್ಲಿ ಪ್ರಕಟ ಆಗಿದೆ.

ಹೊಗದಿಯ ಮೊಬಲಗು, ಸಾಧಾರಣ ವ್ಯಯ, ಕಾವೇರಿ ವೈದ್ಯುತಶಕ್ತಿ ಪಾಹೋನೆ, ಮತ್ತು ಇತರ ವಿಷಯಗಳು ಇವುಗಳಿಗಾಗಿ ವಿಶೇಷವಾಗಿ ಖರ್ಚು ಹೆಚ್ಚಿದರೂ ಕೂಡ ೧೮೯೩—೯೪ನೆಯ ವರ್ಷದಿಂದ ಈ ಸಂಸ್ಥಾನದ ಸುವರ್ಣದಾಯವು ಉತ್ತಮ ಸ್ಥಿತಿಯಲ್ಲಿರುವದಾಗಿ ಮಿ॥ ಕೀರ್‌ನಾಂಡರವರು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಖರ್ಚು ಹೆಚ್ಚಿದ್ದರಿಂದ ಖಜಾನೆಯಲ್ಲಿದ್ದ ನಗದೂ ಸರ್ಕಾರಿ ಪತ್ರಗಳೂ ಕಡಿಮೆಯಾಗಿ, ೧,೦೩,೭೭,೬೭೩ ರೂಪಾಯಿ ಉಳಿದಿದ್ದವು. ಈ ಮೊಬಲಗಿನಲ್ಲಿ ಸರ್ಕಾರದಿಂದ ಪಾವತಿಯಾಗತಕ್ಕ ಸೇವಿಂಗ್ಸ್ ಬ್ಯಾಂಕ್ ಠೇವಣಿ ಸುಮಾರು ೩೦ ಲಕ್ಷ ರೂಪಾಯೂ, ಸರ್ಕಾರಿ ಫೀಮೇಲ್ ಫಂಡ್ ೮ ಲಕ್ಷ ರೂಪಾಯೂ, ಸಾರ್ವಜನಿಕ ಧರ್ಮಫಂಡ್ ೩,೭೭,೬೩೦ ರೂಪಾಯೂ ಸೇರಿವೆ.

ಒಟ್ಟು ಸಂಕಲನವೇನೆಂದರೆ—ಹಿಂದಿನ ವರ್ಷದಲ್ಲಿ ಆದಾಯಕ್ಕಿಂತ ವ್ಯಯವು ೭೭,೬೪,೭೩೯ ರೂಪಾಯಿ ಹೆಚ್ಚಾಗಿದ್ದದ್ದು (ಆದಾಯಗಳು ೧,೯೧,೯೪,೩೭೭ ರೂಪಾಯಿ, ವ್ಯಯ ೨,೧೬,೧೭೭ ರೂ.) ಈ ವರ್ಷ ದುಬ್ಬಗುರ್ತಿಯಲ್ಲಿ ಖರ್ಚು ಕಳೆದು ೬,೯೬,೯೮೦ ರೂಪಾಯಿಯಷ್ಟು ಶಿಲ್ಕು ಉಳಿಯಿತು.

ಕಳೆದ ವರ್ಷ ಜಮೀನ್ ಕಂದಾಯ, ಅಬ್ಕಾರಿ, ಮತ್ತು ಜಂಗಲು ಈ ಬಾಬುಗಳಲ್ಲಿ ಹೆಚ್ಚು ಉತ್ಪತ್ತಿಯಾಗಿದೆ. ಜಮೀನ್ ಕಂದಾಯವನ್ನು ಚಿಲ್ಲರೆ ಇನಾಮುಗಳ ಮೇಲಿನ ಕ್ವಿಟ್‌ರೆಂಟನ್ನು ಚೆನ್ನಾಗಿ ವಸೂಲ್ಮಾಡಿದ್ದರಿಂದಲೂ, ಸಾಗುವಳಿಯನ್ನು ಹೆಚ್ಚಿಸಿದ್ದರಿಂದಲೂ, ಜಮೀನು ಬಾಬಿನಲ್ಲಿ ಹೆಚ್ಚು ಉತ್ಪತ್ತಿಯಾಯಿತು. ಸಾರಾಯದ ಕಂಡಿಕವು ಹೆಚ್ಚಾದ್ದರಿಂದಲೂ, ಸೇಂದಿ ಅಂಗಡಿಗಳ ಬಾಡಿಗೆ ಹೆಚ್ಚಿದ್ದರಿಂದಲೂ, ಈ ದೇಶದ ಬಿಯರಿನಮೇಲಿನ ತೆರಿಗೆಯಿಂದಲೂ, ಅಬ್ಕಾರಿ ಬಾಬಿನಲ್ಲಿ ಸುಮಾರು ೭ ಲಕ್ಷ ರೂಪಾಯಿ ಹೆಚ್ಚು ಉತ್ಪತ್ತಿಯಾಯಿತು. ಜಮೀನ್ ಕಂದಾಯ, ಅಬ್ಕಾರಿ ಈ ಎರಡು ಬಾಬುಗಳಲ್ಲಿ ಆದ ಗತವರ್ಷದ ಉತ್ಪತ್ತಿಯು ಹಿಂದಿನ ಎಲ್ಲಾ ವರ್ಷಗಳ ಉತ್ಪತ್ತಿಗಿಂತಲೂ ಹೆಚ್ಚಾಗಿತ್ತು. ಜಂಗಲ್ ಬಾಬಿನಲ್ಲಿ ಸುಮಾರು ೯ ಲಕ್ಷದಷ್ಟು ನಿವ್ವಳ ಹುಟ್ಟುವಳಿ ಅಧಿಕವಾಯಿತು. ಈ ವೃತ್ತಿ ರಾಜ್ಯಭಾರವಹನ ಕಾಲದಲ್ಲಿ ನಡೆದ ಖೆಡ್ಡಾವಿನಲ್ಲಿ ಹಿಡಿಯಲ್ಪಟ್ಟ ಆನೆಗಳ ಮಾರಾಟದಿಂದ ಬಂದ ೭೩,೫೦೬ ರೂಪಾಯಿಯೂ ಒಂದು ವಿಶೇಷವಾದ ಬಾಬಾಗಿದೆ. ಗಂಧದಮರದ ಬಾಬಿನಲ್ಲಿ ಗಿರಾಕಿ ಕಡಿಮೆಯಾದ್ದರಿಂದ ಹುಟ್ಟುವಳಿ ಕಡಿಮೆಯಾದಾಗ್ಯೂ ಇತರ ಬಾಬುಗಳಿಂದ ೮೫,೦೦೦ ರೂಪಾಯಿಯಷ್ಟು ಹೆಚ್ಚು ಹುಟ್ಟುವಳಿಯಾಯಿತು. ಚಿನ್ನದ ಗಣಿಯಲ್ಲಿ ಹಿಂದಿನ ವರ್ಷಕ್ಕಿಂತ ಗತವರ್ಷದಲ್ಲಿ ೫೩ ಲಕ್ಷ ರೂಪಾಯಿ ಬೆಲೆಬಾಳುವ ಚಿನ್ನವು ಹೆಚ್ಚಾಗಿ ಉತ್ಪತ್ತಿಯಾಗಿ ಸುಮಾರು ೭ ಲಕ್ಷ ರೂಪಾಯಿನಷ್ಟು ಹೆಚ್ಚು [illegible] ಬಂದದ್ದರಿಂದ ಈ ಬಾಬಿನಲ್ಲಿ ಹಿಂದಿನ ವರ್ಷಕ್ಕಿಂತ ಕಡಿಮೆಯಾಯಿತೆಂದು ತೋರಿಸಿರುವ [illegible] ರೂಪಾಯಿಯು ನಿಜವಾದ ಕಮ್ಮಿಯೆಂದು ಹೇಳಲಾಗದು. ವರ್ಷಾಂತ್ಯದೊಳಗಾಗಿ [illegible] ಗಣಿಗಳ [illegible] ಲೆಕ್ಕವು [illegible] ಕೊಟ್ಟಿರುವದ[illegible] ಕಾವೇರಿ ವಿದ್ಯುಚ್ಛಕ್ತಿಯ ಬಾಬಿನಲ್ಲಿ [illegible] ರೂಪಾಯಿ ಜಮೆಯಾದ್ದು ಇವುಗಳೆಲ್ಲಾ ಸಂತೋಷಕರವಾಗಿರುವದು. ಇತರ ಬಾಬುಗಳಿಂದ ಆದ ಹುಟ್ಟುವಳಿಯು [illegible] ವಿಷಯದಲ್ಲಿ ಪಟ್ಟಿಯಲ್ಲಿ ತೋರಿಸಿರುವದಕ್ಕಿಂತ ಹೆಚ್ಚಾಗಿ ಹೇಳಬೇಕಾದ್ದಿಲ್ಲ.

ರಾಜ್ಯಭಾರವನ್ನು ವಹಿಸಿದ ಉತ್ಸವದ ಖರ್ಚು ೩,೮[illegible] ರೂಪಾಯೂ ಮೇಜಲಿ ಪ್ರಯಾಣದ ಖರ್ಚು ೩,೬೬,೭೦೪ ರೂಪಾಯೂ ಖರ್ಚು ಬಾಬಿನಲ್ಲಿ ಮುಖ್ಯವಾದ ಅಂಶಗಳಾಗಿವೆ.

೧೯೦೨ನೆಯ ಆಗಸ್ಟು ತಿಂಗಳಲ್ಲಿ ಪಾವತಿಯಾಗಬೇಕಾದ ಮೈಸೂರು ರೈಲ್ವೆ ಸಾಲದ ಬಾಬತು ೨೦ ಲಕ್ಷ ರೂಪಾಯಿ ಒಳಪಟ್ಟು ತಪ್ಪ್ರಯುಕ್ತವಾದ ಸಾಲದ ಭಾರವು ನಿವೃತ್ತಿಯಾ[illegible]

ಈ ವರ್ಷದ ದುರ್ಭ ಮೊದಲನೆಯ ತಾರೀ[illegible] ೧,೨೫,೬೬,೭೬೧ ರೂಪಾಯಿ ಶೇಷವು ಉಳಿದಿತ್ತು. ಈ ೬೨,೮೩,೭೦೦ ರೂಪಾಯಿ ಸರ್ಕಾರಿ ಪತ್ರರೂಪವಾಗಿತ್ತು ಪ್ರಾಸ್ ಬ್ಯಾಂಕಿನಲ್ಲಿ ನಗದು ೬೫,೨೭,೦೮೩ ರೂಪಾಯಿ ಇತ್ತು. ಸರ್ಕಾರಿ ಖಜಾನೆಗಳಲ್ಲಿ ೩೭,೭೩,೭೮೩ ರೂಪಾಯಿ ಬೇರೆ ಬೇರೆ ಇಲಾಖೆ ಉದ್ಯೋಗಸ್ಥರಲ್ಲಿ ೭೨,೭೮೦ ರೂಪಾಯಿ ಇದ್ದವು. ಈ ಪ್ರಕಾರ ಖರ್ಚು ಬಾತಾ ಶಿಲ್ಕು ೫೧,೦೧,೬೨ ರೂಪಾಯಿಗಳು ಉಳಿದಿದ್ದವು.

ಕೋಲಾರಿಯನ್ನು ಉತ್ತಮ ಸ್ಥಿತಿಗೆ ತರಬೇಕಾದ್ದು [illegible]ಕ್ಯವಾಗಿರುವದರಿಂದ ಲ್ಯಾಂಡ್ ರೆವಿನ್ಯು ಇಲಾಖೆಯಲ್ಲಿ [illegible]ಕಾದ ಕೆಲವು ಹೆಚ್ಚು ಖರ್ಚುಗಳನ್ನು ಬಹಳ ಕಾಲ ತಪ್ಪಿ[illegible]ಗುವದಿಲ್ಲವೆಂಬ ವಿಷಯವನ್ನು ನೆನಪಿನಲ್ಲಿಡಬೇಕು. [illegible] ಇತರ ಇಲಾಖೆಗಳಲ್ಲಿಯೂ ಕೂಡ ಈ ರೀತಿಯಾಗಿ ಅಧಿಕ ಮಾಡಬೇಕಾಗಿದೆ. ಕಳೆದ ವರ್ಷದ ಉಪನ್ಯಾಸದಲ್ಲಿ ನಾನು ಚಿಸಿದ ಇರ್ರಿಗೇಷನ್ ಕಮಿಟಿಯವರ ಕೆಲಸವು ಪೂರ್ತಿಯಾಗಿ[illegible] ರಿಪೋರ್ಟು ಸರ್ಕಾರದವರ ಪರ್ಯಾಲೋಚನೆಯಲ್ಲಿರುವದರಿಂದ [illegible]ರೆಯೇ ಮೊದಲಾದ ನೀರಾವರಿ ಕೆಲಸಗಳ ರಕ್ಷಣೆಗಾಗಿ ಹೆಚ್ಚು[illegible]ವನ್ನು ಕೊಡಬೇಕಾದ ಆವಶ್ಯಕತೆಯೂ ಕ್ಷಿಪ್ರದಲ್ಲಿಯೇ [illegible]ವಾಗುತ್ತದೆ. ಮಲೆನಾಡು ಅಡಕೆಯ ಮೇಲಿನ ಸಾಯರ್ [illegible]ಯವು ಬಹಳ ಹಿಂಸೆಯನ್ನು ಮಾಡುವದೆಂದು ಫಿರ್ಯಾದು [illegible]ದ್ದಾಗ್ಯೂ, ಅದರ ವಿಷಯದಲ್ಲಿ ಸದ್ಯಃ ಏನು ಮಾಡಲು [illegible]ವೋ ಅದನ್ನು ಪ್ರಕೃತದಲ್ಲಿ ತಿಳಿಸುವದು ಸೂಕ್ತವಾಗಿ ತೋ[illegible]ವಿಲ್ಲ. ಈಗಿರುವ ತೆರಿಗೆಯನ್ನು ಕಡಿಮೆ ಮಾಡಬೇಕಾದ್ದು [illegible]ಕ್ಯಕವೆಂದು ತಿಳಿಸುವದಕ್ಕಾಗಿ ಮಾತ್ರವೇ ಇಲ್ಲಿ ಅದರ ವಿ[illegible]ವಾಗಿ ಪ್ರಸ್ತಾಪಿಸಲಾಯಿತು.

ಈ ಸನ್ನಿವೇಶದಲ್ಲಿ, ಸಾಧಾರಣವಾದ ಖರ್ಚುಗಳಲ್ಲಿ ಯೋಚಿತವಾಗಿ ಮಿತವಾಗಿದ್ದುಕೊಂಡು, ಹೆಚ್ಚು ಖರ್ಚಿನ ಬಾ[illegible]ಗಳಿಗೆ ವಿಶೇಷ ಜಾಗರೂಕತೆಯಿಂದ ಪ್ರವೇಶ ಮಾಡುವದೇ [illegible]ತ್ತಮವಾದ ಮಾರ್ಗವೆಂದು ತೋರುತ್ತದೆ. ಪ್ರಕೃತದಲ್ಲಿ ನ[illegible]ತ್ತಿರುವ ಭಾರಿ ಕೆಲಸಗಳು ಪೂರ್ತಿಯಾದ ತರುವಾಯ, ಚಿನ್ನದ ಗಣಿಯ ರಾಜಧನವು, ವೈದ್ಯುತ ಶಕ್ತಿಯ ವಿಕ್ರಯ, ಚಿನ್ನದ ಗಣಿ[illegible]ವೀರು ಸರಬರಾಯಿ ಇವೇ ಮೊದಲಾದ ನಿಯತವಲ್ಲದ ಬಾ[illegible]ಳಿಂದ ಉತ್ಪತ್ತಿಯಾಗುವ ಹಣವನ್ನು, ಸಂಸ್ಥಾನಕ್ಕೆ ನಿಯತ[illegible] ಹೆಚ್ಚು ಹುಟ್ಟುವಳಿಯನ್ನು ಕೊಡುವ ಕಾರ್ಯಗಳಲ್ಲಿ ವಿನಿ[illegible]ಗಿಸುವದೇ ನಮ್ಮ ಉದ್ದೇಶವಾಗಿರಬೇಕು. ಸಾಲ ತೆಗೆದುಕೊ[illegible]ವ ಶಕ್ತಿಯು ನಮಗೆ ಬಹು ಮಿತವಾಗಿದೆ ಎಂಬ ಅಂಶವು [illegible]ಲ್ಲರಿಗೂ ತಿಳಿದೇ ಇದೆ. ಹೊಸ ತೆರಿಗೆ ಹಾಕುವ ವಿಷಯ[illegible] ಸಾಮಾನ್ಯ ವರ್ಷಗಳಲ್ಲಿ ನಾವು ಪ್ರಯತ್ನಿಸದಿರುವದೇ ಒಳ್ಳೆ[illegible]ದು, ಕ್ಷಾಮ ಪ್ರಾಪ್ತವಾದ ಕಾಲದಲ್ಲಂತೂ ಅವನ್ನು ಬಿಡ್ಡ[illegible]ವಾಗಿ ಬಿಟ್ಟುಬಿಡಬೇಕು. ಆದ ಪ್ರಯುಕ್ತ, ಇಂಡಿಯಾ ದೇ[illegible]ಇತರ ಭಾಗಗಳಲ್ಲಿ ಪ್ರಾಪ್ತವಾಗುವಂತೆಯೇ, ಇಲ್ಲಿಯೂ ಆ[illegible]ಗೆ ಪ್ರಾಪ್ತವಾಗುತ್ತಿರುವ ಕ್ಷಾಮ ಮತ್ತು ಪ್ಲೇಗು ಮೊದಲಾ[illegible]ಷ್ಟಗಳನ್ನು ನಿವಾರಣೆಮಾಡುವದಕ್ಕಾಗಿ, ಯಾವ ವಿಧವಾದ [illegible]ಕ್ಕೂ ಈಡಾಗದೆಯೇ ಸುಮಾರು ಒಂದು ಕೋಟಿಗೆ ಕಡಮೆ[illegible]ಗದೆಯೂ ಇರುವ ಮೂಲಧನವೂ, ವರ್ಷವರ್ಷಕ್ಕೆ ಖರ್ಚಿಗೆ[illegible]ಗುವ ಹಾಗೆ ೩೦ ಲಕ್ಷ ರೂಪಾಯಿ ಶಿಲ್ಕು, ಇದ್ದರೆ ನಮ್ಮ ಸಂ[illegible]ನದ ಆದಾಯವ್ಯಯವು ನಿರುಪದ್ರವವಾದ ದೃಢವಾದ ಸ್ಥಿತಿ[illegible]ನಿಲ್ಲುವದು.

ರಿವಿಜನ್ ಸೆಟಲ್‌ಮೆಂಟ್.—ಅನೇಕ ತಾಲ್ಲೂಕುಗಳಲ್ಲಿ [illegible]ವತ್ತು ವರ್ಷದ ಮಾಯಿದೆ ಕಳೆದುಹೋದ್ದರಿಂದ ಪುನಃ ಸೆಟಲ್ಮೆಂಟನ್ನು ಉಪಕ್ರಮಿಸಬೇಕೆಂದು ೧೯೦೦ ರಲ್ಲಿ ಹುಕುಂ ಮಾಡಲಾಯಿತು. ಹೀಗೆ ಪುನಃ ಆರಂಭಿಸಿದ ಸರ್ವೆಯಲ್ಲಿ ಬಹಳ ಕೆಲಸ ನ[illegible]ದೆ. ಕಳೆದ ವರ್ಷದಲ್ಲಿ ೧,೩೩೮ ಚದರಮೈಲಿ ಅಳತೆಯು [illegible] ಜಮೀನುಗಳುಳ್ಳ ೮೩೦ ಗ್ರಾಮಗಳನ್ನು ಸರ್ವೆ ಮಾಡಲಾಯಿ[illegible] ಎಂದರೆ ಚಳ್ಳಕೆರೆ, ನೊಳಂಬಾಲ್ಕೂರು, ಹಾಜೆ ಬೊನಿಕಾಳು[illegible]ಲ್ಲೂಕುಗಳಲ್ಲಿ ಪೂರ್ತಿಯಾಗಿಯೂ, ಚನ್ನಗಿರಿ ತಾಲ್ಲೂಕಿನಲ್ಲಿ [illegible]ಕಳ ಭಾಗದಲ್ಲಿಯೂ, ಸೊರಬ ಸಾಗರ ಮತ್ತು ಸೀರಾ ತಾ[illegible]ಕುಗಳಲ್ಲಿ ಕೆಲವು ಭಾಗಗಳಲ್ಲಿಯೂ, ಪುನಃ ಸರ್ವೆ ನಡೆಯಿ[illegible]

ದಾವಣಗೆರೆ ಮತ್ತು ಹಿರಿಯೂರು ತಾಲ್ಲೂಕುಗಳಲ್ಲಿ ಕ[illegible]ಯದ ಹೊಸ ದರಗಳನ್ನು ಮುಂಚಿನ ಎಂಗಾಲದಲ್ಲಿ ಪ್ರಕಟ[illegible]ವಾಗಿ ಸರ್ಕಾರದವರು ಮುಂದುವರಿಸಿದರೆ ಮೊದಲನೆ ಸರ್ವೆ ಬಂದೋಬಸ್ತಿಯಲ್ಲಿ ಮಾಡಿದ ಜಮೀನಿನ ತರಗತಿಯು ವಿ[illegible]ನೇ ಬಹಳ ತೃಪ್ತಿಕರವಾಗಿದ್ದದ್ದರಿಂದ ಪುನಃ ತರಗತಿ ವಿಭಾಗದ ಅವಶ್ಯಕತೆಯಿಲ್ಲದೇ ಇದ್ದದ್ದು ವಿಶೇಷ ವಿಷಯವಾಗಿದೆ.

ಕಾಫಿ.—ಬ್ರೆಜಿಲ್ಲಿನಲ್ಲಿ ಕಾಫಿ ಫಸಲು ಹೆಚ್ಚಾಗಿದ್ದುದರಿಂದಲೂ ಇ[illegible] ಕಾರಣಗಳಿಂದಲೂ ಕಾಫಿ ವ್ಯಾಪಾರವು ಕ್ಷೀಣಸ್ಥಿತಿಗೆ ಬಂದದ್ದು[illegible]ದ. ಹಿಂದೂ ದೇಶದಲ್ಲೆಲ್ಲಾ ಕಾಫಿ ವ್ಯವಸಾಯಕ್ಕೆ ಕುಂದಕವುಂ[illegible]ಗಿರುವ ಅಂಶವು ಎಲ್ಲರಿಗೂ ತಿಳಿದೇ ಇದೆ. ಮೈಸೂರು ಸಂಸ್ಥಾ[illegible]ದಿ ಕಾಫಿ ವ್ಯವಸಾಯವಾಗುತ್ತಿದ್ದ ಭೂಮಿಯಲ್ಲಿ ಒಟ್ಟು ೧೦,೦[illegible] ಎಕರೆಯಷ್ಟು ವಿಸ್ತಾರದ ಪ್ರದೇಶವು ಕಡಿಮೆಯಾಯಿತು. ಈ ವ[illegible] ಈ ವರ್ಷ ಕಡಿಮೆಯಾದ್ದು ೬,೭೦೦ ಎಕರೆಗಳು. ಆದಕಾ[illegible]

ವೇ, ಉತ್ತರ ಮತ್ತು ದಕ್ಷಿಣ ಮೈಸೂರು ಪ್ಲಾಂಟರ್ ಸಂಘದವರು ಸಭೆಸೇರಿ, ಈ ವಿಷಯವನ್ನು ಚರ್ಚಿಸುವದಕ್ಕಾಗಿ ಮೈಸೂರು ಸರ್ಕಾರದವರ ಪರವಾಗಿ ಒಬ್ಬ ಅಧಿಕಾರಿಯನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳಲು, ಸರ್ಕಾರದವರು ಮನಃಪೂರ್ವಕವಾಗಿ ಒಪ್ಪಿಕೊಂಡು, ಅದಕ್ಕಾಗಿ ಅಲ್ಲಿ ಮಾಡಬೇಕಾದ ಕೆಲಸಗಳನ್ನು ...ಳಿ, ಮೆ॥ ಮಾಧವರಾವ್, ಸಿ. ಐ. ಇ. ಯವರನ್ನು ಕಳುಹಿಸಿ ಕೊಟ್ಟರು. ಇವರು ಮೆ॥ ಗ್ರಾಹಂ ಅಂಡರ್‌ಸನ್ ಸಿ. ಐ. ಇ. ಯವರನ್ನು ಇತರ ಮುಖಂಡರಾದ ಪ್ಲಾಂಟರುಗಳನ್ನೂ ಕಂಡು, ಕಾಫೀ ವ್ಯವಸಾಯಕ್ಕೆ ಮುಖ್ಯ ಪ್ರದೇಶಗಳಾದ ಮೂಡಗೆರೆಯಲ್ಲಿಯೂ ಸಕಲೇಶಪುರದಲ್ಲಿಯೂ ಸಭೆಸೇರಿ, ಕಾಫೀ ವ್ಯವಸಾಯದ ಪ್ರಕೃತ ಸ್ಥಿತಿಯನ್ನು ಕುರಿತು ಅವರ ಸಂಗಡ ಪರ್ಯಾಲೋಚನೆ ಮಾಡಿದರು. ಅಲ್ಲಿ ಪರ್ಯಾಲೋಚಿಸಿದ ಮುಖ್ಯ ಸಂಗತಿಗಳು ಯಾವೆಂದರೆ—ಪ್ಲಾಂಟರ ಹಕ್ಕುಗಳನ್ನು ರಿಜಿಸ್ಟರ್ ಮಾಡುವದು, ಕಾಫಿ ತೆರಿಗೆಯ ವಸೂಲಿ, ಕಾಫೀ ಕಳವಟವಾಗದಿರುವಂತೆ ಮಾಡುವ ಉಪಾಯಗಳು, ಇನ್ನು ಕೆಲವು ಇತರ ವಿಷಯಗಳು—ಇವೇ. ಅಲ್ಲಿ ಕಾಫೀ ಕಳುವಿನ ಆಕ್ಟು, ಕೂಲಿಯವರಿಗೆ ಸಂಬಂಧಪಟ್ಟ ಕಾನೂನು, ಇವೂ ಕೂಡ ಯಥಾಯೋಗ್ಯವಾಗಿ ಆಲೋಚಿಸಲ್ಪಟ್ಟವು. ತಮ್ಮ ಕೃಷಿಯಿಂದ ಈ ಸಂಸ್ಥಾನಕ್ಕೆ ವಿಶೇಷ ಪ್ರಯೋಜನವನ್ನುಂಟುಮಾಡಿದ ಸಾಹಸಿಗಳಾದ ಈ ಕಾಫೀ ಪ್ಲಾಂಟರುಗಳ ಸಂಬಂಧವಿಷಯದಲ್ಲಿ ಸರ್ಕಾರದವರು ತಾವು ಅಭಿಮಾನವಿಟ್ಟಿರುವದಾಗಿಯೂ ತಮ್ಮಿಂದಾಗುವ ಸಹಾಯವನ್ನು ಮಾಡುವದಾಗಿಯೂ ಸಂಪೂರ್ಣವಾದ ಭರವಸೆ ಕೊಟ್ಟಿದ್ದಾರೆ. ೧೯೦೪ ನೆಯ ವರ್ಷದಲ್ಲಿ ಲೂಯಿಸಾನ ಎಂಬಲ್ಲಿ ನಡೆಯುವ ಪರ್ಚೇಸ್ ಎಕ್ಸ್‌ಪೊಸಿಷನ್ ಎಂಬ ಸಂಸ್ಥೆಯಲ್ಲಿ ಇಲ್ಲಿಯ ಕಾಫೀ ಮತ್ತು ಏಲಕ್ಕಿಗಳನ್ನು ಪ್ರದರ್ಶನ ಮಾಡಲು ಸಹಾಯ ಮಾಡುವದಕ್ಕಾಗಿ ಸರ್ಕಾರದವರು ಪ್ಲಾಂಟರುಗಳ ಸಂಘಕ್ಕೆ ೫,೦೦೦ ರೂಪಾಯಿ ಕೊಡುವಂತೆ ಆಜ್ಞೆ ಮಾಡಿದ್ದಾರೆ.

ವ್ಯವಸಾಯದ ಬ್ಯಾಂಕುಗಳು.— ವ್ಯವಸಾಯದ ಬ್ಯಾಂಕುಗಳ ಅತೃಪ್ತಿಕರವಾದ ಸ್ಥಿತಿಯು ಹಿಂದಿನ ಉಪನ್ಯಾಸಗಳಲ್ಲಿ ವಿವರಿಸಿದೆ. ಈ ವರ್ಷ ಸರ್ಕಾರಕ್ಕೆ ಬರಬೇಕಾದ ಕಿಸ್ತುಗಳನ್ನು ವಸೂಲಿ ಮಾಡುವದಕ್ಕಾಗಿ ಕ್ಲಿಷ್ಟ ಕಾಲಗಳನ್ನು ವಿಧಿಸಿ, ಹುಕುಂ ಕೊಡಲಾಯಿತು. ಈ ಪ್ರಕಾರ ೩೪,೫೮೦ ರೂಪಾಯಿ ವಸೂಲಾಯಿತು. ಎಲ್ಲಾ ಬ್ಯಾಂಕುಗಳಿಂದಲೂ ಸರ್ಕಾರಕ್ಕೆ ಒಟ್ಟು ರೂಪಾಯಿ ೧,೯೯,೪೨೩ ಬಾಕಿ ಬರಬೇಕಾಗಿದೆ. ಚಿಕ್ಕಮಗಳೂರು ಮತ್ತು ಸಕಲೇಶಪುರದ ಕಾಫಿ ಬ್ಯಾಂಕುಗಳಿಗೆ ಆಧಾರವಾಗಿರುವ ಕಾಫಿ ತೋಟಗಳು ಇತೋಪ್ಯಧಿಕವಾದ ಹೀನಸ್ಥಿತಿಗೆ ಬಾರದಂತೆ ನೋಡಿಕೊಳ್ಳುವದಕ್ಕೋಸ್ಕರ ಮಾಡಬೇಕಾದ ಅಂಶಗಳನ್ನು ಸರ್ಕಾರಕ್ಕೆ ತಿಳಿಸುವದಕ್ಕಾಗಿ ಕಳೆದ ವರ್ಷ ಒಬ್ಬ ಇನ್ಸ್‌ಪೆಕ್ಟರನ್ನು ನೇಮಿಸಿತು.

ಈ ಬ್ಯಾಂಕುಗಳು ದುರದೃಷ್ಟವಶದಿಂದ ಅಭಿವೃದ್ಧಿಗೆ ಬರಲಿಲ್ಲ. ಪ್ರಥಮತಃ ಜನಗಳಲ್ಲಿ ಏಕೀಭವಿಸಿ ಕಾರ್ಯ ಮಾಡುವ ಗುಣವಿಲ್ಲದ್ದರಿಂದಲೂ ಸಾಲ ತೆಗೆದುಕೊಂಡ ಹಣದ ವಿನಿಯೋಗದ ವಿಷಯದಲ್ಲಿ ಬ್ಯಾಂಕು ನಿರ್ವಹಿಸಿದವರು ಸರಿಯಾಗಿ ನೋಡಿಕೊಳ್ಳದೆ ಹೋದ್ದರಿಂದಲೂ, ಇದುವರೆಗೂ ನೋಡಿದ್ದಲ್ಲಿ, ಈ ಪದ್ಧತಿ ಸಫಲವಾಗಲಿಲ್ಲವೆಂದು ಹೇಳಬೇಕಾಗಿದೆ. ಈ ಬ್ಯಾಂಕುಗಳಿಗೆ ಬೇಕಾದ ಎಲ್ಲಾ ಹಣವನ್ನೂ ಸರ್ಕಾರದವರೇ ನೇರಾಗಿ ಕೊಡುವುದು, ಜನಗಳಲ್ಲಿ, ಸ್ವಸಹಾಯ ಬುದ್ಧಿಯೂ ಏಕೀಭವಿಸಿ ಕಾರ್ಯ ಮಾಡುವ ಶಕ್ತಿಯೂ ಕಡಿಮೆಯಾಗುವದಕ್ಕೆ ಕಾರಣವಾಗಿರುವುದು. ಆದಕಾರಣ ಸರ್ಕಾರದವರು ಈ ಬ್ಯಾಂಕುಗಳಿಗೆ ... ಮೊಬಲಗನ್ನು ಸಾಲ ಕೊಡುವ ಸಾಮರ್ಥ್ಯವುಳ್ಳವರಾಗಿ ... ಕೂಡ ಹಾಗೆ ಕೊಡುವುದು ಸೂಕ್ತವಾಗಿ ತೋರುವುದಿಲ್ಲ. ...ಕ್ಕೆ ಪ್ರತಿಯಾಗಿ ಸರ್ಕಾರದವರು ಕೆಲವು ಗೊತ್ತಾದ ಸಂದರ್ಭಗಳಲ್ಲಿ ಉಪಕಾರಿ ಸಂಸ್ಥೆಗಳಿಗೆ ತಾವೇ ಜವಾಬ್ದಾರರಾಗಿ ನಿಂತು ಬಾಕಿ ವಸೂಲಾತಿಯಲ್ಲಿಯೂ ಜಮೀನುಗಳ ಬೆಲೆ ಗೊತ್ತುಮಾಡುವದರಲ್ಲಿಯೂ ಸಾಲ ತೆಗೆದುಕೊಂಡ ಮೊಬಲಗಿನ ಉಪಯೋಗದ ವಿನಿಯೋಗದಲ್ಲಿಯೂ ಸಾಲಗಾರರ ಮೇಲೆ ಬ್ಯಾಂಕುಗಳ ಹಕ್ಕನ್ನು ... ತೀರ್ಮಾನಮಾಡುವ ಮಾರ್ಗದಲ್ಲಿ ... ಸಹಾಯಮಾಡಿ ... ವ್ಯವಸ್ಥೆಗಳು ... ವ್ಯವಸಾಯದ ... ಮೊಬಲಗನ್ನು ... ಈ ಬ್ಯಾಂಕುಗಳು ಇಲ್ಲಿಯ ಜನದಲ್ಲಿ ಐಕ್ಯತೆಯನ್ನೂ ಪರಸ್ಪರ ನಂಬಿಕೆಯನ್ನೂ ಸಾಲ ತೀರಿಸುವ ... ಮಾಡುವ ಬುದ್ಧಿಯನ್ನೂ ... ವೆಂದು ಹೇಳಬಹುದು. ಇದು ಬಹಳ ಗೌರವವಾದ ವಿಷಯವಾಗಿದೆ. ... ಇರುವ ಬ್ಯಾಂಕುಗಳು ಸಾಧ್ಯವಾದ ಮಟ್ಟಿಗೆ ಒಳ್ಳೆಯ ಸ್ಥಿತಿಗೆ ... ಅನುಕೂಲವಾದ ರೀತಿಯಲ್ಲಿ ಕೆಲಸ ... ಉಪಯೋಗಿಸಿ ... ವನ್ನು ... ಕಾಲವನ್ನು ... ಸಂದೇಹವೇ ಇಲ್ಲ.

## ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಎಡೆ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ಎಡೆ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಎ. ಹೊನ್ನಪ್ಪನವರು—ತಮ್ಮ ಬಾತ್ಮಿ ತಲುಪಿತು. ಅದು ಬಹು ದೀರ್ಘವಾಗಿರುವದರಿಂದ ಪ್ರಕಟಿಸಲಾಗುವದಿಲ್ಲ. ಇದಲ್ಲದೆ ನೀವು ಚರ್ಚಿಸಲುದ್ದೇಶಿಸಿರುವ ವಿಷಯವನ್ನು ನಮ್ಮ ಪತ್ರಿಕೆಯಲ್ಲಿ ಪ್ರಸ್ತಾಪಿಸಬೇಕೆಂಬ ಕುತೂಹಲವು ನಮಗಿರುವದಿಲ್ಲ.

ಬಗಲೂರು ಬಡೆಸಾಬರು—ನಿಮ್ಮ ಕರೆಸ್ಪಾಂಡೆನ್ಸ್ ಪ್ರಕಟಿಸಬೇಕಾದ ಅವಶ್ಯಕತೆಯಿರುವದಾಗಿ ನಮಗೆ ತೋರುವದಿಲ್ಲ. ಲಿವರ್‌ಪೂಲ್ ಮುಂತಾದ ಪಟ್ಟಣಗಳಲ್ಲಿ ಮಹಮ್ಮದೀ ಮತವು ಹರೆಯುತ್ತಿದೆಯೆಂದು ನಾವು ನಂಬಿರುವದು ತಪ್ಪು. ಅಲ್ಲೊಬ್ಬ ಕ್ವಿಲಿಯಾಮೆಂಬುವನು ಮಹಮ್ಮದೀ ಮತವನ್ನು ಅವಲಂಬಿಸಿದವನಾಗಿ ಆತನಂತೆ ಇನ್ನು ಕೆಲವರು ಮಹಮ್ಮದೀಯ ಮತಸ್ಥರಾಗಿದ್ದರೂ ಅವರಿಗೆ ಆ ಮತದ ವಿಷಯ ಏನೇನೂ ತಿಳಿದಿಲ್ಲವೆಂತಲೂ, ಆ ಕ್ವಿಲಿಯಮನು ತನ್ನ ಜೀವನವನ್ನು ನಡಿಸಿಕೊಳ್ಳುವದಕ್ಕೋಸ್ಕರ ಇತರರಿಂದ ಹಣ ವಸೂಲ್ಮಾಡಿಕೊಳ್ಳುತ್ತಾ ಇರುವ ಮೋಸಗಾರನೆಂತಲೂ, ಅವನಿಂದ ವಂಚಿಸಲ್ಪಡದಂತೆ ಎಲ್ಲರೂ ಎಚ್ಚರಿಕೆಯಾಗಿರಬೇಕೆಂತಲೂ ಇಂಗ್ಲಾಂಡ್ ದೇಶದಲ್ಲಿ ಸಂಚರಿಸಿ ಬಂದಿರುವ ಒಬ್ಬ ಮುಸಲ್ಮಾನ ಪಂಡಿತರು ಒಂದಾನೊಂದು ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

ಪ್ರಜಾ ಹಿತಚಿಂತಕ, ಗುಬ್ಬಿ ; ಸರ್ಕಾರುಬಾಧಿತ..., ಬೆಂಗಳೂರು : ಆರ್. ನ., ಕೊರಟಗೆರೆ —ಈ ಬಾತ್ಮಿಗಳಲ್ಲಿ ಪ್ರಕಟನೆಗೆ ಅರ್ಹವಾದ ವಿಷಯವೇನೂ ಕಂಡು ಬರುವದಿಲ್ಲ.

## ಕರೆಸ್‌ಪಾಂಡೆನ್‌ಸ್.

ಮೈಸೂರು ಡಿಸ್ಟ್ರಿಕ್ಟು ಡೆಪ್ಟಿ ಕಮಿಷನರ್ ಸಾಹೇಬರವರು ಮಾಡಿರುವ ಅವ್ಯವಸ್ಥೆ ಹುಕುಂ.

ಅಯ್ಯಾ,

ಮಳವಳ್ಳಿ ತಾಲ್ಲೂಕು ಕಸಬ ಹೋಬಳಿ ಕಿರ್ಗವಹಳ್ಳಿ ಮತ್ತು ಕೊದಬಿಹಳ್ಳಿ ಗ್ರಾಮದ ಯಲ್ಲಿ ಸರಹದ್ದಿನಲ್ಲಿ ಬಹುದೂರದಿಂದ ಬರುವ ಸರ್ವೆನಕಾಶೆಯಲ್ಲಿ ತೆಗೆದಿರುವ ಸರ್ಕಾರಿ ಹಳ್ಳಕ್ಕೆ ಬ್ಯಾಟಿ ಎಂಬುವನು ಕಲ್ಲಿನಿಂದ ಅಡ್ಡಗಟ್ಟೆಯನ್ನು ಕಟ್ಟಿ ಹಳ್ಳವನ್ನು ಮುಚ್ಚಿ ಬಗರ್ ಹುಕುಂ ಸಾಗುವಳಿ ಮಾಡಿಕೊಂಡದ್ದರಿಂದ ಸರ್ಕಾರಕ್ಕೂ ಬಾಜೂ ರೈತರಿಗೂ ತೊಂದರೆಯಾಗಲು ಬಾಜೂರೈತರಲ್ಲಿ ಒಬ್ಬನಾದ ಚನ್ನಪ್ಪಯನೆಂಬುವನು ಸಾರ್ಕಾರಕ್ಕೆ ತಿಳಿಯಪಡಿಸಲು ಗ್ರಾಮದ ಪಟೇಲ ಶಾನುಭೋಗ ನಮ್ಮತು ಶೇಕದಾರು ತಾಲ್ಲೂಕು ಅಮಲ್‌ದಾರು ತಾಲ್ಲೂಕು ಬ್ಯಾಂಕು ಇನ್ಸ್‌ಪೆಕ್ಟರವರು ಸಬ್‌ಡಿವಿಜನ್ ನಕ್ಷೆ ಇನ್ಸ್‌ಪೆಕ್ಟರವರು ಡಿಸ್ಟ್ರಿಕ್ಟು ಸರ್ವೆಯವರು ಸಹ ಹಿರ್ರ್ಯಾದು ಸ್ಥಳವನ್ನು ರೂಬು ರೂಬು ಅಜಮಾಯಿಷಿಯಿಂದ ಬ್ಯಾಟಿಯೆಂಬುವನು ಸರ್ಕಾರಿ ಹಳ್ಳ ಗಂಟಿ ಜಮೀನಿಗೆ ಬಗರ್ ಹುಕುಂನಿಂದ ಬಾಳೇ ಪೈರು ಮಾಡಿ ಬಂದು ಕಲ್ಲು ಕಿತ್ತು ಬಿಸಾಟು ಇರುತ್ತಾನೆಂದು ರಿಪೋರ್ಟನೊಡನೆ ಪ್ಲಾನ್ ಸಹ ತಯಾರ್ಮಾಡಿ ಸಬ್‌ಡಿವಿಜನ್‌ಗೆ ರವಾನಿಸಲು ಮ॥ ಸಬ್ ಡಿವಿಜನ್ ಸಾಹೇಬರವರು ಸದರಿ ನಡವಳಿಕೆಯನ್ನು ಪರಾಂಬರಿಸಿ ಸದರಿ ರೈತನೂ ಮಾಡಿರುವ ತಪ್ಪಿತಕ್ಕೆ (...) ಅಕೆ ಜುಲ್ಮಾನೆ ವಿಧಿಸಿ ಸರ್ವೆ ನಕಾಶೆ ಹದ್ದುಬಸ್ತು ಅನುಸರಿಸಿ ಬೆಳೆವನ್ನು ಬಿಡಿಸಿ ಬಿಡಬೇಕೆಂದು ಅರ್ಡರು ಅಪ್ಪಣೆ ಕೊಡಿಸಿದರು.

ತಪ್ಪಿತ ರೈತನು ಡಿಸ್ಟ್ರಿಕ್ಟಿನಲ್ಲಿ ಅಪ್ಪೀಲ್ ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ವಿಚಾರಣೆ ಇಲ್ಲದೇನೇ ಸದರಿ ರೈತನ ಹೇಳಿಕೆ ಮೇರೆ ಸಬ್‌ಡಿವಿಜನ್ ಸಾಹೇಬರವರ ಅರ್ಡರನ್ನು ಕ್ಯಾನ್ಸಲ್ ಮಾಡಿ ಕೋರ್ಟಿನಲ್ಲಿ ಪೈಸಲ್ ಕೊಂಡುವಂತೆ ತೀರ್ಮಾನ ಮಾಡಿರುತ್ತಾರೆ.

ಈವಾಗ ರೆವಿನ್ಯು ಕಮಿಷನರ್ ಸಾಹೇಬರವರಲ್ಲಿ ಅಪೀಲಾಗಿದೆ. ಈವಾಗಲೂ ಈ ವ್ಯಾಜ್ಯ ಯಾವ ರೀತಿ ಫೈಸಲಾಗುವುದೋ ನೋಡಬೇಕೆಂದು ಅನೇಕನೇಕರೂ ಎದುರು ನೋಡುತಿದ್ದಾರಲ್ಲದೆ ರೆವಿನ್ಯು ಕಮಿಷನರ್ ಸಾಹೇಬರು ಡಿಸ್ಟ್ರಿಕ್ಟಿನ ಆರ್ಡರನ್ನೇ ... ಸರ್ಕಾರದ ನಕಾಶೆ ಹದ್ದು ಬಸ್ತು ಪ್ರಯೋಜನವಿಲ್ಲನೆಂಬುದಕ್ಕೆ ಈ ವ್ಯಾಜ್ಯವೇ ಮೇಲುಪಂಕ್ತಿಯಾಗಿರುತ್ತಯೆಂದು ಅಲ್ಲಲ್ಲಿ ... ಜನಗಳು ಅಂದುಕೊಳ್ಳುತ್ತಾರೆ. ರೆವಿನ್ಯು ಕಮಿಷನರ್ ಸಾಹೇಬರು ... ಅವಕಾಶ ಕೊಡಲಾರರು ಎಂದು ನಂಬಿರುವ

ಪ್ರಜಾಹಿತಚಿಂತಕ

ಆಕ್ಷೇಪಣೆಗೆ ಸಮಾಧಾನ.

ವೃತ್ತಾಂತ ಪತ್ರಿಕಾ ಎಡಿಟರವರಿಗೆ—

ಅಯ್ಯಾ,

ತಾವು ತಮ್ಮ ೧—೧೦ ೧... ನೇ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟ "ಮಲ್ನಾಡ್ ಕೊಳೆ ರೋಗವನ್ನು ನಿಲ್ಲಿಸುವದಕ್ಕಾಗಿ ಬಂದಿದ್ದ ಡಾಕ್ಟರುಗಳು" ಎಂಬದೊಂದು ಆಕ್ಷೇಪಣೆಯನ್ನು ಇಂಗ್ಲಿಷಿನಲ್ಲಿ ಭಾಷಾಂತರ ಮಾಡಿ ನನಗೆ ಕಳುಹಿಸಿಕೊಡಬೇಕೆಂದು ನಂಬನೆ

ಬಾತ್ಮಿದಾರರ ಲೇಖನದಲ್ಲಿ ಅನೇಕ ತಪ್ಪುಗಳು ಇರುವ ಪ್ರಯುಕ್ತವೂ, ನಾವು ಕೊಪ್ಪದಲ್ಲಿ ನಡಿಸಿದ ಪರಿಶೀಲನಾ ಕಾರ್ಯದ ವಿಷಯದಲ್ಲಿ ಅಪರಿಚಯಸ್ಥರಾಗಿರುವ ನಿಮ್ಮ ಬಾತ್ಮಿದಾರರು ಇಂಥಾ ರಿಪೋರ್ಟನ್ನು ಬರೆಯುವದಕ್ಕೆ ಉದ್ಯೋಗಿಸಿದ್ದರಿಂದಲೂ ವಿವಾದಿಸಬೇಕಾಗಿದೆ. ಅಡಿಕೆ ತೋಟಗಳ ಪೈರುದಾರರನ್ನು ನಾವು ಅಲಕ್ಷ್ಯ ಮಾಡಿದೆವೆಂಬುದಾಗಿ ಬಾತ್ಮಿದಾರರು ಬರೆದಿರುತ್ತಾರೆ. ಇದು ವಿಸ್ಮಯಕ್ಕೆ ಕಾರಣವಾದ ಮಾತು. ಯಾಕೆಂದರೆ ನಾವು ಕೊಪ್ಪದ ಕಡೆ ಪ್ರಯಾಣ ಮಾಡಿದುದು ಅಡಿಕೆ ಮರಗಳಿಗೆ ತಗಲುವ ಕೊಳೆ ರೋಗವನ್ನು ಪರಿಶೋಧಿಸುವುದಕ್ಕಾಗಿಯೇ. ಹೀಗಿರಲು ನಾವು ಅಡಿಕೆ ತೋಟಗಾರರನ್ನೇ ಧಿಕ್ಕರಿಸಿದೆವೆಂದು ಹೇಳಿದರೆ ಹ್ಯಾಗೆ ಒಪ್ಪುತ್ತದು. ?

ಈ ಇಂಡಿಯಾ ದೇಶದ ವನಸ್ಪತಿಗಳಿಗೆ ತಗಲತಕ್ಕ ರೋಗಗಳನ್ನು ಕುರಿತು ವಿಶೇಷ ಪರಿಶ್ರಮ ಪಡದಿರತಕ್ಕವರೆಂದು ನಾನು ತಿಳಿದಿರುವ ಡಾಕ್ಟರ್ ಬಟ್ಲರ್ ಸಾಹೇಬರು ಗಂಧದ ಮರಕ್ಕೆ ತಗಲುವ ರೋಗವನ್ನೂ ಕಾಫಿ ಗಿಡಗಳಿಗೆ ತಗಲುವ ರೋಗವನ್ನೂ ಪರೀಕ್ಷಿಸಬೇಕೆಂಬ ಉದ್ದೇಶದಿಂದ ಈ ಸಂಸ್ಥಾನಕ್ಕೆ ಬಂದಿದ್ದರು. ಅವರು ತಮ್ಮ ಕೆಲಸದ ಜೊತೆಗೆ ಅಡಿಕೆ ಮರಗಳ ಕೊಳೆ ರೋಗವನ್ನು ಕುರಿತು ಸ್ವಲ್ಪ ವಿಚಾರ ಮಾಡುವದು ಅನುಕೂಲವಾದರೆ ಆದೀತೆಂದು ನಾನು ಕೇಳಿಕೊಂಡದರ ಮೇಲೆ ಅವರು ಒಪ್ಪಿದರು. ಇದಲ್ಲದೆ ಡಾಕ್ಟರ್ ಬಟ್ಲರ್ ಯವರು ಗಂಧ ಕಾಫಿ ಮರಗಳ ವಿಷಯದಲ್ಲಿ ಮಾಡುವದಕ್ಕೆ ಬಂದ ಕೆಲಸವು ನಮ್ಮ ಈ ಸಂಸ್ಥಾನಕ್ಕೆ ಉಚಿತವಾಗಿ ಮಾಡಿದ ಉಪಕಾರವಾಗಿರುತ್ತದೆ. ಹೀಗಿರುವಲ್ಲಿ ಅವರು ಏನೂ ಮಾಡದೆ ಸುಮ್ಮನೆ ಹೊರಟುಹೋದರೂ ಅವರ ಮೇಲೆ ಯಾರೂ ಆಕ್ಷೇಪಿಸುವುದಕ್ಕೆ ಕಾರಣವಿಲ್ಲ. ಆದರೆ ನಿಮ್ಮ ಬಾತ್ಮಿದಾರರು "ತೋಟದ ಕೊಳೆ ಅಪಮಾನಯುಪ್ ೧೦—೧೫ ನಿಮಿಷದಲ್ಲಿ ಡಾಕ್ಟರ್ ಸಾಹೇಬರು ಪೂರೈಸಿದರು" ಎಂದು ಬರೆದಿರುವರಷ್ಟೆ. ೧೦—೧೫ ನಿಮಿಷಗಳಿಗೆ ಬದಲಾಗಿ ಡಾಕ್ಟರವರು ತಾವು ಕೊಪ್ಪದಲ್ಲಿದ್ದಷ್ಟು ಕಾಲದೊಳಗೆ ಅರ್ಧ ಭಾಗವನ್ನು ಕೊಳೆ ರೋಗದ ಪರಿಶೋಧನೆಯಲ್ಲಿ ವೆಚ್ಚಮಾಡಿದರು. ಈ ಪರಿಶೋಧನಾ ಕಾರ್ಯಕ್ಕೆ ಅನೇಕ ಯಂತ್ರ ಸಹಾಯವು ಅವಶ್ಯವಾಗಿತ್ತು, ಮತ್ತು ಒಬ್ಬ ಕಾಫಿ ಪ್ಲಾಂಟರು ನಮ್ಮ ಉಪಯೋಗಕ್ಕೋಸ್ಕರ ದಯವಿಟ್ಟು ಕೊಟ್ಟ ಬಂಗಲೆಯಲ್ಲೇ ಈ ಕಾರ್ಯವನ್ನು ಮಾಡಿದ್ದಾಯಿತು.

ನಾವು ಕೊಪ್ಪದ ಅಡಿಕೆ ತೋಟಗಳನ್ನು ನೋಡಿಕೊಂಡು ಬಂದದರಲ್ಲಿ, ಕೊಳೆ ರೋಗದ ವಿಷಯ ನೂತನ ಸಂಗತಿಗಳೇನೂ ತಿಳಿಯದೆ ಹೋಯಿತೆಂಬುದು ನಿಜವೇ. ಇದು ನಮ್ಮ ತಪ್ಪು ಅಲ್ಲ, ತೋಟಗಳ ಮಾಲೀಕರ ತಪ್ಪು ಅಲ್ಲ. ನಮ್ಮ ಪರಿಶೋಧನೆಗೆ ಆ ರೋಗವು ಪರಿಪಾಕವಾದ ಸ್ಥಿತಿಯಲ್ಲಿ ಇಲ್ಲದೆಹೋಗಿದ್ದುದೇ ತಪ್ಪು. ಆದರೂ ನಮ್ಮ ಪರಿಶೋಧನೆಗೆ ಅನುಕೂಲವಾದ ರೋಗವುಳ್ಳ ಫಲಗಳನ್ನು ಮಾದರಿಗಾಗಿ ಶೃಂಗೇರಿ ಮಠದ ಏಜೆಂಟರು ಕೊಟ್ಟರು. ನಾವು ಕೊಪ್ಪದಲ್ಲಿ ಕಡಿಸಿದ ಮರಗಳೆಲ್ಲಾ ಒಂದೂ ತಪ್ಪದೆ ರೋಗ ಹಿಡಿದಿದ್ದುವುಗಳೇ.

ನಾವು ಕೊಪ್ಪಕ್ಕೆ ಬಂದು ಅಲ್ಲಿನ ಅಡಿಕೆ ತೋಟಗಾರರಿಂದ ತಕ್ಕಮಟ್ಟಿಗೆ (ಅಂದರೆ ಬಾತ್ಮಿದಾರರು ಅವಶ್ಯನೆಂದು ತಿಳಿದಿರುವ ಮಟ್ಟಿಗೆ) ರೈತರನ್ನು ವಿಚಾರಿಸದೆ ಹೋದೆವೆಂಬುದಾಗಿ ಬಾತ್ಮಿದಾರರು ಬರೆದಿರುವ ಒಂದು ಆಕ್ಷೇಪಣೆಯು ಮಾತ್ರ ಸಕಾರಣವಾಗಿರುವಂತೆ ತೋರುವುದು. ಈ ಕೊಳೆ ರೋಗದ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ರೋಗ ಹಿಡಿದ ಫಲವನ್ನು ತೆಗೆದುಕೊಂಡು ಪರೀಕ್ಷಿಸುವುದರಲ್ಲಿ ಕಷ್ಟಪಡುವುದು ಅವಶ್ಯವಾಗಿದೆಯೇ ಹೊರತು ಎಷ್ಟು ಮಂದಿಯ ಬಳಿಯಲ್ಲಿ ಎಷ್ಟು ಮಾತಾಡಿದರೂ ಪ್ರಯೋಜನವಾಗಲಾರದೆಂದು ತಿಳುಕೊಂಡಿರುತ್ತೇವೆ. ನಾವು ಕೊಪ್ಪದಲ್ಲಿದ್ದಷ್ಟು ಕಾಲವೂ ಈ ವಿಷಯದಲ್ಲಿ ಕಷ್ಟಪಟ್ಟೆವು, ಇನ್ನುಮೇಲೂ ಸಾಧ್ಯವಾದಮಟ್ಟಿಗೂ ಕಷ್ಟಪಡುತ್ತಿರುವೆವು.

ಈವರಿವಿಗೂ ಪರೀಕ್ಷಿಸಿದರಲ್ಲಿ ನಮಗೆ ತೋರುವುದೇನಂದರೆ—ರೋಗ ಹಿಡಿದ ಅಡಿಕೆಯ ಗೊನೆಗಳನ್ನು ಸಾಧ್ಯವಾದಷ್ಟು ಬೇಗ ಕತ್ತರಿಸಿ ತೆಗೆಯಬೇಕು, ಮರಗಳ ಮೇಲೇ ಇರಗೊಡಿಸುತ್ತಿರುವ ಪದ್ಧತಿಯು ಹಾನಿಕರವಾದದ್ದು, ಗೊನೆಗಳನ್ನು ಸಾಧ್ಯವಾದಷ್ಟು ಬೇಗ ಮುಚ್ಚುಡುವ ಪದ್ಧತಿಯು ಪ್ರಯೋಜನಕರವಾಗಿದೆ.

ಕ್ಯಾಂಪ್, ಮೈಸೂರು,
೯—೧೦—೦೩

ಎ. ಲೇಮನ್.

## ತಾಲ್ಲೋಕು ವರ್ತಮಾನಗಳು.

ಬೇಳೂರು —ಈ ಊರಲ್ಲಿ ಈಗ್ಯೆ ಆರುತಿಂಗಳಲ್ಲಿ ಪ್ಲೇಗು ರೋಗವು ತಲೆದೋರಿದ್ದರಿಂದ ಎಲ್ಲರೂ ಊರುಬಿಟ್ಟು ಹೊರಗೆ ಗುಡಿಸಲು ಹಾಕಿಕೊಂಡು ಇದ್ದರೂ ಭಗವಂತನ ಕೃಪೆಯಿಂದ ಗುಡಿಸಲುಗಳಲ್ಲಿ ಪ್ಲೇಗು ಸಂಭವಿಸಿಯೇನೂ ಇರಲಿಲ್ಲ. ಈಗ್ಯೆ ಮೂರು ತಿಂಗಳಲ್ಲಿಯೇ ಅರ್ಧ, ಮುಕ್ಕಾಲು ಮಟ್ಟಿಗೆ ಜನಗಳು ಊರು ಸೇರಿದರೂ ಇದುವರೆಗೂ ಅಂಥಾ ಗಲಾಟೆಯೇನೂ ಇಲ್ಲ. ದೇವರ ದಯದಿಂದ ಮಳೆಯು ಸರಿಯಾಗಿ ನಡೆದು ಬೆಳೆಯು ಸಹ ನೋಡುವದಕ್ಕೆ ಬಹಳ ಆನಂದವನ್ನುಂಟುಮಾಡಿ ಇರುತ್ತದೆ. ಕೊನೆ ವರಿಗೆ ಇದರಂತೆಯೇ ದೇವರು ಸಮೃದ್ಧಿಯನ್ನುಂಟುಮಾಡಬೇಕೆಂದು ಪ್ರಾರ್ಥಿಸುತ್ತೇವೆ. ಈ ಊರಿನಲ್ಲಿ ಇರುವ ... ಶ್ರೀ ... ದೇವ ಸಂಸ್ಥಾನ ... ಸ್ಕೂಲ್ ಮಾಸ್ಟರ್ ... ವೈದ್ಯಗಾರ ... ಇವರುಗಳ ಮೇಲೆ ಕ್ರಿಮಿನಲ್ ಕೇಸ್ ನಡಿಸಿದರು. ... ಕೇಸು ವಿಚಾರಣೆ ಆಗಿ ನಿರಪರಾಧಿಗಳಾದ್ದರಿಂದ ಬಾಹಿರ ಕೇಸ ಆಗದೆ ವಿಚಾರಣೆ ಆಯಿತು.

ಸುರಪುರ.—ಸುರಪುರ ನಿವಾಸಿಗಳು ನಿಮ್ಮ ಪತ್ರಿಕೆಯನ್ನು ಬಹು ಸಂತೋಷದಿಂದ ಓದುವದನ್ನು ಕಂಡು, ಇಲ್ಲಿಯ ಸಮಾಚಾರ ಬರೆಯ ಬರೆಯಲ್ಪಟ್ಟಿತು. ಪೂರ್ವದಲ್ಲಿ ಸುರಪುರ ಸಂಸ್ಥಾನವು ಸ್ವತಂತ್ರವಾಗಿದ್ದಾಗಿತ್ತು. ೧೮೫೭ನೇ ವರ್ಷದ ಬಂಡಾಯದ ಸಂಸ್ಥಾನ ನಷ್ಟವಾಗಿ ಹೋಯಿತು. ಇಂಗ್ಲೀಷರು ಸ್ವಲ್ಪ ವರ್ಷ ಇದನ್ನು ಆಳಿ ನಿಜಾಮರಿಗೆ ಒಪ್ಪಿಸಿದರು. ನಿಜಾಮ ರಾಜ್ಯದಲ್ಲಿ ಇದೊಂದು ಜಿಲ್ಲಾ ಆಗಿತ್ತು. ಕಾಲಾನುಗತಿಯಿಂದ ಈಗ ತಾಲೂಕಾಗಿದೆ. ಪೂರ್ವದ ರಾಜರ ವಂಶಸ್ಥರು ಇನ್ನೂ ಜಾಹಗೀರಗಳನ್ನು ಅನುಭವಿಸುತ್ತಿದ್ದಾರೆ. ರಾಜರಿಂದ ಸಂಬಂಧಿಸಿಕೊಂಡ ಜಹಗೀರಗಳನ್ನು ಅನುಭವಿಸುವ ಬ್ರಾಹ್ಮಣರನೇಕರು ಇಲ್ಲಿ ಇದ್ದಾರೆ. ತಾಲೂಕಿನ ಅಧಿಕಾರಸ್ಥರೂ, ಜಹಗೀರದಾರರನೇಕರು ಇಲ್ಲಿರುವದರಿಂದ ವಾರನಾರಿ ವ್ಯಭಿಚಾರಸ್ಥರು ಸಹ ನೂರಾರು ಮಂದಿ ಇಲ್ಲಿ ಇದ್ದಾರೆ. ಶ್ಯಾಗೂ ಇದೊಂದು ಉತ್ತಮ ಸ್ಥಳವಿದೆ.—ಕೃಷ್ಣಾ ತೀರದಲ್ಲಿ ಯಜ್ಞವನ್ನು ಮಾಡಿ ಬ್ರಾಹ್ಮಣರಾದ ಮಾ॥ ಗೋವಿಂದಸ್ವಾಮಿ ಶಾಸ್ತ್ರಿ ಇಲ್ಲಿ ತಾಲೂಕದಾರರಾಗಿದ್ದಾರೆ. ಎರಡು ವರ್ಷದಿಂದ ಇವರು ಇಲ್ಲಿ ಇದ್ದು, ಕೆಲವು ಮಹಸಂಬಂಧಗಳ ಕಾರ್ಯಗಳನ್ನು ಆಸಕ್ತಿಯಿಂದ ನಡಿಸಿದ್ದಾರೆ. ಹನುಮಂತನ ಜಾತ್ರೆಗೆ ಹೊಸರೂಪು ತಂದರು. ಮಹಮ್ಮದಿಯರ ಸಮಾಧಿಯ ಜಾತ್ರೆ (ಉರುಸ್) ಹೊಸದಾಗಿ ಏರ್ಪಡಿಸಿದರು. ಸಂಸ್ಕೃತ ಪಾಠಶಾಲೆ ಪ್ರಾರಂಭ ಮಾಡಿ ಬ್ರಾಹ್ಮಣರ ಕೈಗೆ ಒಪ್ಪಿಸಿದರು. ಬ್ರಾಹ್ಮಣರು ಅದನ್ನು ಆರು ತಿಂಗಳೊಳಗಾಗಿ ಜೀರ್ಣಸ್ಥಿತಿಗೆ ತಂದು ಅಂತ್ಯಸಹ ತೋರಿಸಿಬಿಟ್ಟರು. ಕೃಷ್ಣಾತೀರದಲ್ಲಿ ಪುರಾತನದಿಂದ ಇದ್ದ ದೇವಾಲಯ ಮತ್ತು ಧರ್ಮಶಾಲೆ ಜೀರ್ಣೋದ್ಧಾರ ಮಾಡಿದರು. ಸಾಗರದಲ್ಲಿ ಇದ್ದ ಮಹಮ್ಮದಿಯರ ಮಸೀದಿ ದುರಸ್ತು ಮಾಡಿಸಿದರು. ಸುರಪುರದಲ್ಲಿ ಧರ್ಮಸಭಾ ಎಂಬುವದೊಂದನ್ನು ಸ್ಥಾಪನೆ ಮಾಡಿ ಪ್ರತಿ ಬುಧವಾರ ಸಾಯಂಕಾಲ ನಡಿಸುತ್ತಾರೆ. ಕೂಡಿ ಬಂದವರಲ್ಲಿ ಬೇಕಾದವರು ಬೇಕಾದದನ್ನು ಮಾತಾಡುವ ಅಪ್ಪಣೆ ಇತ್ತು. ಒಬ್ಬನು ಪುನರ್ವಿವಾಹವನ್ನು ಕುರಿತು ಮಾತಾಡಿ ಅನೇಕರ ಕೋಪಕ್ಕೆ ಪಾತ್ರನಾದನು. ಶಾಸ್ತ್ರಿಗಳು ವಿಷಯದ ಕಡೆಗೆ ಅಷ್ಟು ಲಕ್ಷ್ಯಕೊಡದೆ ವಕೀಲ ಮುಲಾ ರರಾಯರನ್ನೇ ಕುರಿತು ತಮ್ಮ ಪುರಾಣ ಓದಿದರು. ಕಡೆಯಲ್ಲಿ ತಾಲೂಕದಾರ ಸಾಹೇಬರು ಆ ವಿಷಯವನ್ನೇ ಕಿತ್ತು ಹಾಕಿದರು. ಸುರಪುರ ಕ್ಲಬ್ ಎಂಬದೊಂದು ಸಂಸ್ಥೆ ಸ್ಥಾಪನೆಯಾಗಿದೆ. ಇಂಗ್ಲಿಷ್, ಉರ್ದು, ಮರಾಠಿ, ಕನ್ನಡ ಪತ್ರಿಕೆಗಳು ಬರುತ್ತವೆ. ಕನ್ನಡ ಕೇಸರಿ ಸಹ ಬರುತ್ತದೆ. ಇನ್ನು ಮುಂದೆ ಈ ಕ್ಲಬ್ಬಿನ ಆಯುಷ್ಯ ಎಷ್ಟಿದೆಯೋ ತಿಳಿಯದು. ಎಲ್ಲರು ಸಹಾಯ ಮಾಡಿದರೆ, ಚಿರಂಜೀವಿಯಾಗುವದು. ಈಗ ಸದ್ಯಕ್ಕೆ ತಾಲೂಕದಾರ ಸಾಹೇಬರು ಆಗ್ರಹಾರ ಕಟ್ಟಿಸುವ ಕೆಲಸದಲ್ಲಿ ರಾತ್ರಿ ಹಗಲು ಚಿಂತಿಸುತ್ತಿದ್ದಾರೆ.—ಈ ತಾಲೂಕಿನ ಪಶ್ಚಿಮ ಭಾಗದಲ್ಲಿ ಗುಳ್ಳೆ ರೋಗ ಹೆಚ್ಚಿದೆ. ಕೊಡಲಗಿ ಎಂಬ ಹಳ್ಳಿಯಲ್ಲಿ ೧೫೦ ಮಂದಿ ರೋಗದಲ್ಲಿದ್ದಾರೆ. ೪೦ ಮಂದಿ ಸತ್ತರು. ಸುರಪುರಕ್ಕೆ ತಗಲುವ ಸಂಭವ ಉಂಟು. ದೇವರು ಕಾಪಾಡಲಿ.—ಕಳ್ಳತನದ ಸುದ್ದಿಯನ್ನು ಕೇಳುವ ಹಾಗಿಲ್ಲ. ಪೇಟೆಯ ಮಧ್ಯದಲ್ಲಿರುವ ಅಂಗಡಿಯಿಂದ ಎಂಟು ಸಾವಿರ ರೂಪಾಯಿ ಕಳ್ಳತನವಾಯಿತು. ಮತ್ತು ಎರಡು ಭಾರಿ ಕಳ್ಳತನಗಳಾದವು. ಕೊತವಾಲರು ಹೊಸದಾದದೊಂದು ನಿವನವನ್ನು ಕಂಡು ಹಿಡಿಯುವ ಪ್ರಯತ್ನದಲ್ಲಿದ್ದಾರೆ. ಕಳ್ಳರನ್ನು ಹುಡುಕಿ ತೆಗೆಯುವದಕ್ಕಿಂತ ನಿವನವನ್ನು ಹುಡುಕುವದರಲ್ಲಿ ಕಾಲ ಹೆಚ್ಚು ವೆಚ್ಚವಾಗುತ್ತದೆ.—ಈವರೆಗೆ ಮಳೆ ಬೆಳೆ ಚನ್ನಾಗಿದೆ. ಜನರಿಗೆ ಕಳ್ಳರ ಮತ್ತು ಪ್ಲೇಗಿನ ವಿನಹ ಇನ್ಯಾವ ಭಯವಿಲ್ಲ. ಖಜ್ಜಿ ಎಲ್ಲಿ ನೋಡಿದರು ಇದ್ದೇ ಇದೆ. ಹೆಚ್ಚು ಬರೆದರೆ ಸ್ಥಳ ದೊರೆಯದೆಂಬ ಭಯದಿಂದ ಇಲ್ಲಿಗೆ ನಿಲ್ಲಿಸುತ್ತೇನೆ.

ತಿಪ್ಟೂರು.—ತಾ॥ ೨೭—೯—೩ರಲ್ಲಿ ಎ. ವಿ. ಸ್ಕೂಲಿನಲ್ಲಿ ಹೆಡ್ಮಾಸ್ಟರ್ ಕೃಷ್ಣಯ್ಯನವರೂ ಇತರ ಸಹಾಯೋಪಾಧ್ಯಾಯರೂ ಸಹಾ ಒಂದು ವಿಶೇಷ ಉಪನ್ಯಾಸವನ್ನು ನಡಿಸಿದರು. ಆ ದಿನ ಮ॥ ಗಳಾದ ಸಬ್ ರೆಜಿಸ್ಟ್ರಾರ್ ಶಿರಸ್ತೇದಾರ್ ಪೊಲೀಸ್ ಇನ್ಸ್ಪೆಕ್ಟರ್, ಡಾಕ್ಟರ್, ಮೊದಲಾದ ಉದ್ಯೋಗಸ್ಥರೂ ವರ್ತಕ ಮಂಡಳಿಯವರೂ ಸಭೆಯನ್ನಲಂಕರಿಸಿದ್ದರು. ಕನ್ನಡ ಹೆಡ್ಮಾಸ್ಟರ್ ವೆಂಕಟವರದಯ್ಯನವರು ಓದಿದ ಉಪನ್ಯಾಸದ ಸಾರಾಂಶವೇನೆಂದರೆ ಬ್ರಿಟಿಷ್ ಜನಗಳು ಈ ದೇಶಕ್ಕೆ ಬಂದು ನಮ್ಮ ಪೂರ್ವಿಕರ ಸಹಗಮನ ಶಿಶುಹತ್ಯ ಮೊದಲಾದ ಕ್ರೂರಕೃತ್ಯಗಳನ್ನು ನಿಲ್ಲಿಸಿ, ಥಂಗ್ ಪಾಳೆಯಗಾರರನ್ನು ಸೂಳೆಗೆ ಹಾಕಿಸಿ ದುಃಖವೆಂಬ ಕತ್ತಲಲ್ಲಿ ಕಣ್ಣು ಮಿಟುಕಿಸುತ್ತಿದ್ದ ನಮ್ಮವರನ್ನು ಕೊನೆಗೆ (ಬೆಳಕಿಗೆ) ತಂದು ವಿದ್ಯೆಯೆಂಬ ದೊಡ್ಡ ಕಣ್ಣುಗಳನ್ನು ಕೊಟ್ಟರು. ಈ ಸಂಯೋಜನೆಗಳನ್ನು ಸರಿಯಾಗಿ ಉಪಯೋಗಿಸಿದವರು ದೂರದೃಷ್ಟಿಯುಳ್ಳವರಾಗಿ ಒಳ್ಳೇ ಮಾರ್ಗದಲ್ಲಿ ನಡೆಯುತ್ತಾರೆ. ಮಹನೀಯರೇ, ನಿಮ್ಮ ಬಾಲಕರ ವಿದ್ಯಾಭಿವೃದ್ಧಿಯನ್ನು ಕೋರುತ್ತೇನೆ ಸಂಬದ್ಧವೆ ಮುಖ್ಯ ಪ್ರಯೋಜನಕ್ಕಾಗಿ ಧನ, ಮಾನ, ಪ್ರಾಣಗಳನ್ನು ಪ್ರಯೋಗಮಾಡುವ ಬ್ರಿಟಿಷರಿಗೆ ನಮ್ಮ ವಂದನೆಗಳನ್ನು ಹೇಳೋಣ |ಕರತಾಡನವಾಯಿತು |—ವಿದ್ಯಾ ಪ್ರೋತ್ಸಾಹಕರಾದ ನಮ್ಮ ಘನ ಸರ್ಕಾರ ಶ್ರೀಮನ್ಮಹಾರಾಜರವರಿಗೆ ವಂದನೆ | ಕರತಾಡನವಾಯಿತು. |—ಕೆಲವರು ಬಾಲಕರು ಸಂಗೀತವನ್ನು ಹಾಡಿದರು. ಪನ್ನೀರು, ಗಂಧ, ಪುಷ್ಪ, ತಾಂಬೂಲಾದಿಗಳಿಂದ ಸಭೆಯವರು ಸಂತುಷ್ಟರಾಗಿ ಸ್ವಸ್ಥಾನವನ್ನು ಬಿಜಯ್ ಮಾಡಿದರು.—ತಾ॥ ೪—೯—೧೯೦೩ರಲ್ಲಿ ಗವರ್ನಮೆಂಟ್ ಸೈನ್ಸ್ ಸ್ಕೂಲ್ ಹೆಡ್ಮಾಸ್ಟರ್ ಮೊದಲಾದವರೂ, ತಮ್ಮಯ್ಯನವರೂ, ವಿದ್ಯಾರ್ಥಿಗಳೂ ಸೇರಿ ಸಭೆ ನಡಿಸಿದರು. ಆ ದಿನ ಮ॥ ಗಳಾದ ಸಬ್ ರೆಜಿಸ್ಟ್ರಾರ್, ಶಿರಸ್ತೇದಾರ್, ಪೊಲೀಸ್ ಇನ್ಸ್ಪೆಕ್ಟರ್ ಸ್ಟೇಷನ್ ಮಾಸ್ಟರುಗಳೂ ಮುಂತಾದ ಅಧಿಕಾರಿಗಳೂ ವರ್ತಕರೂ ಮಂಡಳಿಯವರೂ, ಸುಂದರವಾದ ಚಪ್ಪರದ ಕೆಳಗೆ ಕುಳಿತಿರಲು ಪ್ರವೀಣ ಸಂಗೀತಗಾರರು, ಸಭಿಕರನ್ನು ಸಂತೋಷಗೊಳಿಸಿದರು. ಇನ್ನೂ ರು ಜಳಾಪಿನಿಂದ ಎಲ್ಲರೂ ಬೆಚ್ಚಿ ತೆಳದು ಸವರಿಸಿಕೊಳ್ಳುವದರೊಳಗೆ ಗವರ್ನಮೆಂಟಿನವರು ಸೈನ್ಸ್ ಸ್ಕೂಲ್ ಇಟ್ಟಿರುವವರ ಎದರಿಗೆ ವಿಸ್ತರಿಸಿದ ಮೇಲೆ ಪುಷ್ಪ, ಗಂಧ, ತಾಂಬೂಲ. ಆಗ ಸಮಸ್ತ ಪ್ರೇಕ್ಷಕರಿಂದ ಎ. ವಿ. ಸ್ಕೂಲ್ ಹೆಡ್ಮಾಸ್ಟರ್ ಕೃಷ್ಣಯ್ಯನವರಿಗೂ ವಂದನೆಗಳಾದ ಬಳಿಕ ಚಪ್ಪರವು ಖಾಲಿಯಾಯಿತು. —ರಾಬರ್ಟ್ ಕಟ್ಟೆಯ ಸುಕಾಲಿಗರೆಂಬ ಒಂದು ಗ್ಯಾಂಗ್ ಬಂದಿದೆ, ಈ ಜನರು ಕುಶಲ ಜಾತಿ ಭಿನ್ನ ಬೇಡಿ ತಿನ್ನುತ್ತಾರೆ. ಕೆಲಸವಂತೂ ಇಲ್ಲವೇ ಇಲ್ಲ. ಇವರ ಸ್ಥಿತಿಯನ್ನು ನೋಡಿ ನಮ್ಮ ಪೊಲೀಸ್ ಇನ್ಸ್ಪೆಕ್ಟರ್ ಮಿ॥ ದೊರೆಸ್ವಾಮಿ ಅಯ್ಯಂಗಾರ್ ಅವರೇ ಕೊಂಚ ಧನವನ್ನು ದಾನ ಮಾಡಿದರೂ ಮುಖ್ಯವಾಗಿ ಕೆಲಸವಿಲ್ಲದವರು ಸುಗ್ಗಿರೆಂದು ಈಕ್ಷ ಪೊಲೀಸ್ ಉಸ್ತುವಾರಿಯಿಂದ ಇವರ ಬಾಕಿ ಗೊತ್ತಾದಂತೆ ತಿಳಿಯಬಂತು. —ನೊಣವಿನಕೆರೆ ಸೀಮೆಯಲ್ಲಿ ಎಲ್ಲಾ ಗ್ರಾಮಗಳು ಬಿಟ್ಟವೆ. ಜಾತಿ ಗಲಾಟೆ ಸದ್ಯಕ್ಕಿಲ್ಲ. ರೈಲ್ವೆ ಸ್ಟೇಷನ್ ಅಸಿಸ್ಟೆಂಟ್ ಮಾಸ್ಟರ್, ಮಿ॥ ಕೃಷ್ಣಸ್ವಾಮಿ ನಾಯುಡು ಯವರು ವರ್ಗವಾಗಿ ಬೆಂಗಳೂರಿಗೆ ಹೋದದ್ದಕ್ಕಾಗಿ ಎಲ್ಲರೂ ವ್ಯಸನಪಡುತ್ತಾರೆ.

ಸಕ್ಕರೆಪಟ್ಟಣ.—ಇಲ್ಲಿನ ಹವಾ ಕೆಟ್ಟುಹೋಗಿದೆ. ಈ ವರ್ಷವೆಲ್ಲಾ ಅತಿಯಾದ ಮಳೆ ಬಂದು ಜನಗಳಿಗೆ ಬಹು ತೊಂದರೆ ಮಾಡಿಬಿಟ್ಟಿತು. ಕೆರೆ ಕೋಡಿ ಬಿದ್ದಿತು. ಗದ್ದೆಗಳೆಲ್ಲಾ ಜವುಗು ಭೂಮಿಯಾಗಿ ಇದ್ದಾವೆ. ಎಲ್ಲಿ ನೋಡಿದರೂ ಮಲೇರಿಯ ಜ್ವರವೇ ಹಳವಾಗಿ ಇದ್ದಾರೆ. ಮಿ॥ ಆ ಜ ಎ. ಮಾಸಿಲಾಮಣಿ ಮೊದಲಿಯಾರ್ರವರು ಕೋಲಾರದ ಸಿವಿಲ್ ಆಸ್ಪತ್ರೆಯಿಂದ ಇಲ್ಲಿಗೆ ನರ್ಸ್ ಆಗಿ ಬಂದ ಬಳಿಕ ಅನೇಕ ಜನಗಳಿಗೆ ಕಾಯಿಲೆಯನ್ನು ವಾಸಿ ಮಾಡಿ ಇರುತ್ತಾರೆ. ಇಲ್ಲಿನ ಚಿಕಿತ್ಸೆಗಳಲ್ಲಿಯೂ ಬಹು ಘಟ್ಟಿಗರಾಗಿ ಇರುತ್ತಾರೆ—ಇವರು ಬಡವರಲ್ಲಿ ತುಂಬಾ ಪ್ರೀತಿ ಇಟ್ಟು ಒಳ್ಳೇ ಔಷಧಿಗಳನ್ನು ಕೊಡುತ್ತಾ ಜನಗಳ ಪ್ರೀತಿಗಳಿಗೆ ಪಾತ್ರರಾಗಿರುತ್ತಾರೆ. ಇವರನ್ನೇ ಇನ್ನೂ ಕೊಂಚಕಾಲಗಳ ವರೆಗೆ ಇಲ್ಲಿಯೇ ಕಾಯಂ ಆಗಿ ಇಡಬೇಕಾಗಿ ಅಪೇಕ್ಷಿಸುತ್ತಾರೆ. ಟಪಾಲ್ ಅಭಿವೃದ್ಧಿಸ್ಥಿತಿಯಲ್ಲಿ ಇವರು ತುಂಬಾ ಮುತುವರ್ಜಿ ವಹಿಸಿ ಇರುತ್ತಾರೆ. ಸರಿಯಾದ ಆಸ್ಪತ್ರೆ ಇಲ್ಲ. ಇರುವ ಈ ಹಳೇ ಕಟ್ಟಡವು ಕೇವಲ ಶಿಥಿಲವಾಗಿ ಇರುತ್ತೆ. ಪೂರ್ವದೊಳಗೆ ಕೊಂಚ ಜನಗಳು ಮಾತ್ರ ಇದ್ದಾರೆ. ಜಾತಿ ೨೦೦ ಮನೆಯವರೆಲ್ಲಾ ಕಲಬುರಿಯಾಗಿ ಅಲ್ಲಲ್ಲಿ ಕ್ಯಾಂಪಿನಲ್ಲಿಯೇ ಇದ್ದಾರೆ. ಯಾವಾಗ ಊರಲ್ಲಾ ಒಂದಾಗುತ್ತೋ ಕಾಣೆ. ಈ ಮಧ್ಯೆ ಬಹು ಪುರಾತನವಾದ ಈ ಊರನ್ನೇ ಸಹಜವಾಗಿ ಬಿಟ್ಟು ಕಡೂರು ಕಡೆಗೆ ಅರ್ಧ ಮೈಲಿಯ ಮೈದಾನದಲ್ಲಿ ಹೊಸದಾಗಿ ಊರನ್ನು ಕಟ್ಟಬೇಕೆಂತಾ ತವಾಲೆಯು ನಡಿಸುತ್ತಾ ಇದ್ದಾರೆ. ಇದು ಯಾವಾಗ್ಗೆ ನೆರವೇರುತ್ತೋ ಕಾಣೆ. ಹೀಗೆ ಮಾಡಿದರೆ ಜನಗಳ ಆರೋಗ್ಯಕ್ಕೆ ಸದ್ವೈದ್ಯರ ಪ್ರೋತ್ಸಾಹಕ್ಕೆ ತುಂಬಾ ಅನುಕೂಲವೇ ಸರಿ. ಈಗ ಇರುವ ಊರು ತುಂಬಾ ಕೆಟ್ಟು ಹೋಗಿರುವದೇನೋ ವಾಸ್ತವ. ಸ್ಕೂಲ್ ಚೆಲಮವಾಗುತ್ತಾ ಬಂತು. ಮೇಲ್ಬಾವಣಿಯಲ್ಲಾ ಬಿದ್ದು ಹೋಯಿತು. ಅಂಥಾದ್ದರಲ್ಲೇ ನಿರ್ವಾಹವಿಲ್ಲದೆ ಸ್ಕೂಲ್ ಮಾಡುತ್ತಾ ಇದ್ದಾರೆ. ಪ್ಲೇಗಿನಿಂದ ಬಾಲಕರು ನೋಡಿದಂತೆ ಬಲ್ಲ ದೂರ ಛಾಸಲೆಯೇ ಕಾರಣವಾಗಿ ಇದೆ. ಪೊಲೀಸ್ ಕಾವಲು ಹೆಚ್ಚಾದಾಗಲ್ಲಾ ಕ್ಯಾಂಪುಗಳಲ್ಲಿ ಅಲ್ಲಲ್ಲಿ ಕಳ್ಳತನ ಹೆಚ್ಚುತ್ತಾ ಬಂತು ಈ ದಿವಸ ನಮ್ಮ ತಾ॥ ಅಮಲ್ದಾರ್ ಮಿ॥ ಎಂ. ಲಕ್ಷ್ಮಣಶಾಸ್ತ್ರಿಯವರು ತಿಂಗಳಕಟ್ಟೆ ವಿಸಿಟಿಂಗಿಗಾಗಿ ಇಲ್ಲಿಗೆ ದಯಮಾಡಿಸಿ ಇದ್ದರು. ನಮ್ಮಗಳ ದುರದೃಷ್ಟದಿಂದ ಇವರಿಗೆ ಹಾಸನಕ್ಕೆ ವರ್ಗವಾಯಿತು. ಇವರು ಇಲ್ಲಿನ ಜನಗಳಿಗೆ ತುಂಬಾ ಉಪಕಾರ ಮಾಡಿದ ಕಾರಣ ಮಿ॥ ಮುಂಬರಾದ ಜಿ. ಶ್ರೀನಿವಾಸರಾಯರು, ಮಿ॥ ಡಾಕ್ಟರು ಎ. ಮಾಸಿಲಾಮಣಿ ಮೊದಲಿಯಾರ್ರವರೂ ಸಹಾ ವಿಸಿಟಿಂಗ್ ಕಾಲದಲ್ಲಿ ಇವರಿಗೆ ಅಡ್ರೆಸ್ಸನ್ನು ಕೊಟ್ಟು ತಾರಾ ತುರಾಯಿಗಳಿಂದ ಬಹುಮಾನ ಮಾಡಿ ಇವರು ಹೊರಟು ಹೋಗತಕ್ಕ ವಿಚಾರದಲ್ಲಿ ತುಂಬಾ ವಿಷಾದಪಟ್ಟು ನಗ್ಗರೆ ಪ್ರಿಯಮಾಡಿ ನಂತರ ಮರ್ಯಾದೆಯಿಂದ ಇವರನ್ನು ಕಡೂರಿಗೆ ಪ್ರಯಾಣ ಮಾಡಿಸಿ ಕಳುಹಿಸಿ ಕೊಟ್ಟರು. ವಿಸಿಟಿಂಗ್ ಖರಾಬು ಆಯಿತು. ಚಿಕ್ಕಮಗಳೂರು ಸಬ್ ಆರ್ಡಿನೇಟ್ ಜಡ್ಜಿಯವರಾದ ಮಿ॥ ಪಿ. ಪರಮಶಿವೈಯರ್ರವರು ತುಂಬಾ ಘಟ್ಟಿಗರೆಂದೂ ಪ್ರತಿವಾದಿಗಳ ಪರ ಮತ್ತು ವಾದಿಗಳ ಪರ ಸಹಾ ಬಿದ್ದ ಎಲ್ಲಾ ಮೇಲ್ಮನವಿಗಳನ್ನು ಚನ್ನಾಗಿ ಪರ್ಯಾಲೋಚಿಸಿ ಕೇಸುಗಳನ್ನು ದೀರ್ಘಕಾಲ ಮಾಡದೆ ಸರಿಯಾದ ತೀರ್ಮಾನಗಳ ಮಾಡುತ್ತಾ ಎಲ್ಲರಿಂದಲೂ ಅನೇಕವಾಗಿ ಹೊಗಳಿಸಿಕೊಳ್ಳುತ್ತಾ ಇಂಥಾ ಮಹನೀಯರೇ ಇನ್ನೂ ಕೊಂಚಕಾಲ ನಮ್ಮ ಈ ಚಿಕ್ಕಮಗಳೂರಲ್ಲಿಯೇ ಕಾಯಂ ಆಗಿರಬೇಕೆಂದು ಜನಗಳೆಲ್ಲರೂ ಹೇಳಿಕೊಳ್ಳುತ್ತಾರೆ. ಸಂತೆಯ ಬಳ್ಳೆ ಬೀದಿಯೊಂದು ಜಾಗ ಮಾಡಿರುತ್ತಾರೆ. ಆದರೆ ಜಾಗವೇನೂ ಒಳ್ಳೇದಾದರೂ ಜನಗಳಿಗೆ ನೆರಳಿಲ್ಲ. ನೀರಿಗೆ ದೂರ, ಆದರೆ ಪ್ರತಿ ಸಂತೆಯಲ್ಲಿಯೂ ಆಸ್ಪತ್ರೆಯ ಮುತ್ಸದ್ದಿಗಳೂ ಅಂಗಡಿಕಾರರೂ ಜನಗಳ ಸಹಾಯ ನಡಿಸುತ್ತೆ. ಮುನ್ಸಿಪಾಲಿಟಿಯವರು ಗಾಡಿಗಳನ್ನು ಬಿಟ್ಟುಕೊಳ್ಳುವ ಸ್ಥಳ ಒಂದು ಕೈಸಾಗಿ ಬಿಡದೆ ಅಂಗಡಿ ಇವರೇ ಧುಂಡಿ ಹಾಕಲ್ಲಾ ಸರ್ಕಾರಿ ನೌಕರ ಮೇಲೆ ವಿಮರು ಬೀಳುತ್ತಾರೆ. ಇವರ ಸಮಾಧಾನಕ್ಕೆ ಪೊಲೀಸ್ ಕುಮ್ಮಕ್ಕು ಕೊಟ್ಟಲ್ಲಿ ಕೊಂಚ ಅವಸಾನಕ್ಕೆ ಬರಬಹುದಾಗಿ ಕಾಣುತ್ತೆ. ಬೆಂಗಳೂರಿನ ಸಾಹುಕಾರರು ಬಿತ್ತಿದ್ದನ್ನು ವರ್ದಿ ಬಂದಿತ್ತು ಕೆಲ ಕಾಗಿ ಅನೇಕ ಪ್ರಯೋಜನ ನಡೆಸಿಕೊಂಡು ಬಿಡಿಸು—ಅವರಿಗೆ ತೊಂದರೆ ಕೊಡುತ್ತಾರೆಂದು ಪುಕಾರು ಮಾಡುತ್ತಾರೆ. ಸುಲಿಕೆರೆಯಲ್ಲಿ ಖಜಾನೆ ನಡದ ಕೇಸಿನ ವಿಚಾರದಲ್ಲಿ ಅಸಿಸ್ಟೆಂಟ್ ಕಮಿಷನರ್ ಸಹಾ ಬಂದು ಪೋಲೀಸ್ ಕಸ್ಟಡಿ ಪ್ರಕರಣದಲ್ಲಿ ರಾ. ರಂಬಗು ಮತ್ತು ಪಟೇಲರಾದ ಮಿ. ಜಿ. ಟೋಲನಾಯಕರಲ್ಲಿ ಪ್ರತಿ ಬುಧವಾರದಂತೆ ೧೯೫ ಸ್ಟ್ರೈಕಿಂದ ಗರ್ವಿಗಳವರಿಗೂ ತೋರಿಸು ಉದ್ಯೋಗದಲ್ಲಿಯೂ ಎಲ್ಲಾ ಊರುಗಳಂತೆ ಮನೆಗಳನ್ನು ಕಟ್ಟತಕ್ಕ ಏರ್ಪಾಡು ಇಟ್ಟಲ್ಲಿ ಆ ಪ್ರಯೋಜನ ಹಿತವಾಗಿ ಕಾಣುತ್ತಾಗಿ ಒಳ್ಳೇದು ಸದ್ಯ ನೀರಿಲ್ಲದ ಕಾಲದಲ್ಲಿ ಹೋಗಿ ಊರು ವ್ಯಾಪನೆ ಮಾಡುವುದಕ್ಕಿಂತಲೂ ಈಗ ಮಿ ಜಿ ಟೋಲನಾಯಕರು ಅಭಿಪ್ರಾಯಪಟ್ಟಿರುವ ಜಾಗ ಅನುಕೂಲವಾಗಿರುವಂತೆ ಕಾಣುತ್ತೆ

## ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲಾದ ಸಾರ್ವಜನಿಕ ವಿಷಯಗಳು.

### ಮಂಗಳವಾರ ಮೊದಲನೇ ದಿನ.

ಪ್ರಾರ್ಥನೆ ಅನೇಕ ಗ್ರಾಮಗಳಲ್ಲಿ ಈಗ ಪಟೇಲರೇ ಮುಂತಾದವರು ತಕ್ಕಷ್ಟು ವಿದ್ಯಾವಂತರಾಗಿದ್ದಾರೆ. ಗ್ರಾಮಗಳಲ್ಲಿ ಪಂಚಾಯತರನ್ನು ಏರ್ಪಡಿಸಿ ಮಾಡಿ, ೧೦ ರೂ. ಒಳಪಟ್ಟ ಸಿವಿಲ್ ವ್ಯಾಜ್ಯಗಳನ್ನು ಅವರು ಫೈಸಲ್ ಮಾಡುವಂತೆ ಆದರೆ ರೈತರೇ ಮುಂತಾದ ಜನರು ಸಿವಿಲ್ ಕೋರ್ಟುಗಳಿಗೆ ಅಲೆಯುವದು ತಪ್ಪುತ್ತೆ. ಸಿವಿಲ್ ಕೋರ್ಟುಗಳಲ್ಲಿ ಕೆಲಸವೂ ಕಡಿಮೆಯಾಗುತ್ತೆ.

ದಿವಾನರವರ ಉತ್ತರ.—ಸದ್ಯ ನಮ್ಮ ಪಟೇಲರಿಗೆ ಅಷ್ಟು ಮಟ್ಟಿನ ಯೋಗ್ಯತೆ ಬಂದಿಲ್ಲ. ಕಾಲಕ್ರಮದಲ್ಲಿ ಈ ವಿಚಾರ ಮಾಡತಕ್ಕದ್ದಾಗಿದೆ.

ಪ್ರ.—ಫಾರೆಸ್ಟ್ ಕಾನೂನಿನ ೬೦ನೇ ಸೆಕ್ಷನ್ ಬದಲಾವಣೆ ಮಾಡಿಕೊಡಬೇಕು. ಫಾರೆಸ್ಟರುಗಳು ರೈತಾಪಿ ಜನರ ಬಳಿ ಇದ್ದ ತಕ್ಕ ಹಳೇ ನಾಟಗಳನ್ನು ಕೂಡ ಹಿಡಿದು, ಜಂಗಲಿನಲ್ಲಿ ಕಳುವಾದದ್ದೆಂದು ಮೊಕದ್ದಮೆ ತಂದು, ಬಂಧಿಸುತ್ತಾರೆ

ಉ.—ಅಂಥಾ ಮೊಕದ್ದಮೆಗಳು ಆಗಿವೆಯೇ? ಕೆಲವರು ನವರು ಅನ್ಯಾಯಮಾಡಿದ್ದು ತಿಳಿಸಿ, ೪—೧೦ ವರುಷಗಳ ನಾಟಗಳನ್ನು ಹಿಡಿದದ್ದು ಉಂಟೋ? ಇಂಥಾ ಸಂಗತಿಗಳನ್ನು ಸ್ಪಷ್ಟಂತವಾಗಿ ತಿಳಿಸಿದರೆ ವಿಚಾರಿಸುತ್ತೇವೆ.

ಪ್ರ.—ಗೇಣಿ ವಸೂಲಿಗೆ ಸರ್ಕಾರದವರು ಕಾನೂನು ಮಾಡಿಲ್ಲವಾದ್ದರಿಂದ ಜಮೀನ್ ಕುಮ್ಮಲಿದಾರರಿಗೂ ಇನಾಂದಾರರಿಗೂ ತಮ್ಮ ರೈತರಿಂದ ಗೇಣಿಯ ವಸೂಲ್ಮಾಡಿಕೊಳ್ಳುವದಕ್ಕೆ ಅವಕಾಶವಿಲ್ಲದೆ ತುಂಬಾ ನಷ್ಟಪಡುತ್ತಿದ್ದಾರೆ. ಅದರ ವಸೂಲಿಗೆ ಸದ್ಯ ಸಿವಿಲ್ ಕೋರ್ಟಿಗೆ ಹೋಗಿ ವ್ಯವಹರಿಸಬೇಕಾಗಿದೆ. ಮದರಾಸ್ ಪ್ರಾಂತ್ಯದಲ್ಲಿ ಜಾರಿಯಲ್ಲಿರುವ ರೆಂಟ್ ರಿಕವರಿ (ಗೇಣಿಯ ವಸೂಲಾತಿ) ಆಕ್ಟನ್ನು ನಮ್ಮ ಸೀಮೆಗೂ ಜಾರಿಗೆ ತಂದರೆ ಉಪಕಾರವಾಗುತ್ತೆ

ಉ.—ರೆವಿನ್ಯೂ ಕೋಡಿನ ೯೩ನೇ ಸೆಕ್ಷನ್ ಪ್ರಕಾರ ಜಮೀನ್ದಾರರು ನೋಟೀಸ್ ಕಮಿಷನರಿಗೆ ಕೇಳಿಕೊಂಡರೆ ಅವರು ವಸೂಲ್ ಮಾಡಿಸಿ ಕೊಡುತ್ತಾರೆ. ಮದರಾಸ್ ಸರ್ಕಾರದವರು ರೆಂಟ್ ರಿಕವರಿ ಆಕ್ಟಿನಲ್ಲಿ ಬದಲಾವಣೆ ಮಾಡುತ್ತಿದ್ದಾರಂತೆ. ಅದನ್ನು ಅನುಸರಿಸಿ ನಾವೂ ಕಾನೂನು ಮಾಡಬೇಕೆಂದು ಯೋಚಿಸಿರುತ್ತೇವೆ.

ಪ್ರ.—ನಮ್ಮ ದೇಶದಲ್ಲಿ ಗ್ಯಾಂಬ್ಲಿಂಗ್ ಆಕ್ಟು (ಜೂಜು ನಿರೋಧಕ ಕಾನೂನು) ಜಾರಿಗೆ ಬಂದಿಲ್ಲ. ಪ್ರತಿ ವರುಷವೂ ಈ ವಿಷಯ ಚರ್ಚೆಯಾಗುವದರಲ್ಲೇ ಪರ್ಯವಸಾನವಾಗಿದೆ. ಶಿಕ್ಷೆಯಾಗುತ್ತೆಂಬ ಭೀತಿ ಇಲ್ಲದಿರುವದರಿಂದ ಬಹು ಜನರು ಕೆಟ್ಟುಹೋಗುತ್ತಿದ್ದಾರೆ.

ಉ.—ಇದು ಪೊಲೀಸ್ ರೆಗ್ಯುಲೇಷನಿಗೆ ಸಂಬಂಧಪಟ್ಟದ್ದು ಆದಷ್ಟು ಬೇಗ ಜಾರಿಯಲ್ಲಿ ತರಬೇಕೆಂದು ಯೋಚಿಸಿದ್ದೇವೆ.

ಪ್ರ.—ವಾರ ಸಾಗುವಳಿ ಮಾಡತಕ್ಕವರು ಎಷ್ಟು ವರುಷ ಜಮೀನ್ ವ್ಯವಸಾಯ ಮಾಡಿದಾಗ್ಯೂ ಅವರಿಗೆ ಜಮೀನಿನ ಹಕ್ಕು ಉಂಟಾಗದಂತೆ ಕಾನೂನು ಬದಲಾಯಿಸಿ ಕೊಡಬೇಕು.

ಉ.—ಈಗ ಖಾತೆದಾರನು ೧೨ ವರುಷಗಳೊಳಗಾಗಿ ಯಾವಾಗ ಬೇಕಾದರೂ ಹೋಗಿ ತನ್ನ ಜಮೀನನ್ನು ಸಾಗುವಳಿದಾರನಿಂದ ಪಡೆಯಬಹುದಾಗಿದೆ. ಇದಕ್ಕಿಂತಲೂ ಹೆಚ್ಚು ಸೌಲಭ್ಯವನ್ನು ಕಲ್ಪಿಸಿ ಕೊಡಲಾಗುವದಿಲ್ಲ.

ಪ್ರ.—ಕೆಲವು ಜಾತಿಯವರಲ್ಲಿ ವಿಧವೆಗಳನ್ನು ಧಾರಾಳವಾಗಿ ಮದುವೆ ಮಾಡಿಕೊಳ್ಳುವದು ರೂಢಿಯಲ್ಲಿದೆ. ಇಂಥಾ ಜನರಿಗೆ ಬಾಲ್ಯವಿವಾಹ ನಿರೋಧಕ ಕಾನೂನನ್ನು ಅನ್ವಯಿಸದಂತೆ ಬದಲಾವಣೆ ಮಾಡಿಕೊಡಬೇಕು.

ಉ.—ಬ್ರಾಹ್ಮಣೇತರರಲ್ಲೇ ಇದುವರೆಗೆ ಬಹಳ ಶಿಕ್ಷೆ ಆಗಿರುವುದು. ಕಾನೂನು ಬದಲಾಯಿಸುವದಕ್ಕಾಗುವದಿಲ್ಲ.

ಪ್ರ.—ತೂಕದ ಸೇರು, ಅಳತೆ ಸೇರು ಸರ್ಕಾರದಿಂದ ನಿಯಮವಾಗಿಲ್ಲ. ವರ್ತಕರು ಬಹು ಜನರಿಗೆ ಮೋಸ ಪಡಿಸಲು ಅವಕಾಶವಾಗಿದೆ. ಸರ್ಕಾರದವರು ತೂಕದ ಸೇರಿಗೆ ಇಷ್ಟು ತೂಕವು ಅಳತೆ ಸೇರಿಗೆ ಇಷ್ಟು ರೂಪಾಯಿ ಎಂದು ಏರ್ಪಡಿಸಿ ಕೊಟ್ಟರೆ ಸ್ಥಳ ಪದ್ಧತಿಯ ಪ್ರಕಾರ ಅಳತೆ ನಡೆಯುವರು ನೋಡಿಕೊಳ್ಳುತ್ತಾರೆ.

ಉ.—ಈ ಭಾಗದಲ್ಲಿ ರೆಗ್ಯುಲೇಷನ್ ಮಾಡುತ್ತೇವೆ. ಅದರ ಡ್ರಾಫ್ಟು ತಯಾರಾಗುತ್ತಿದೆ. ಅದು ಕೂಡಲೇ ಜಾರಿಯಲ್ಲಿ ತರಲಾಗುತ್ತೆ.

ಪ್ರ.—ಪ್ರಜಾಪ್ರತಿನಿಧಿಗಳು, ಮ್ಯುನಿಸಿಪಲ್ ಮತ್ತು ಲೋಕಲ್ ಫಂಡ್ ಬೋರ್ಡುಗಳ ಮೆಂಬರುಗಳು, ಸತ್ರ ದೇವಾಲಯಗಳ ಧರ್ಮದರ್ಶಿಗಳು ತುಪಾಕಿ ಇಟ್ಟುಕೊಳ್ಳುವದಕ್ಕೆ ಲೈಸೆನ್ಸು ಅಪ್ಪಣೆ ಬೇಕೆಂದು ೬ ವರುಷಗಳಲ್ಲಿ ಅರಿಕೆ ಮಾಡಿಕೊಂಡಿದೆ. ಇನ್ನೂ ಸರ್ಕಾರದವರು ಹುಕುಂ ದಯಪಾಲಿಸಲಿಲ್ಲ. ಪ್ಲೇಗ್ ಹಿಡಿಯುವ ಕ್ಯಾಂಪುಗಳ ಬಳಿ ಕಷ್ಟವಾಗಿದೆ.

ಉ.— ೧೮೯೯ ನೇ ಇಸವಿಯಲ್ಲೇ ಹುಕುಂ ಕೊಟ್ಟಿದೆ.

ಪ್ರ.—ಫಸಲನ್ನು ಹಾಳುಮಾಡುವ ನವಿಲು, ಹಂದಿ, ನರಿ ಮೊದಲಾದವುಗಳನ್ನು ಬಂದೂಕಿಯಿಂದ ಹೊಡೆಯುವದಕ್ಕೆ ಅನುಕೂಲ ಮಾಡಬೇಕು.

ಉ.—ಯಾವಾಗಲೂ ಅಪ್ಪಣೆ ಇಲ್ಲ. ಬೆಳೆ ಕೆಡಿಸುತ್ತವೆಂದು ಸ್ವಾಮಿ ರೈತರು ಅರ್ಜಿಗಳನ್ನು ಕೊಡಬಹುದು. ಹಂದಿಗಳನ್ನು ಕೊಲ್ಲುವುದಕ್ಕೆ ಅಡ್ಡಿ ಇಲ್ಲ.

ಪ್ರ.—ಪೋಲೀಸ್ ಕೇಸು ವಿಚಾರಕ್ಕೆ ಹಳ್ಳಿಯವರಿಗೆ ೨ ಧಂ ಜುಲುಮೆ ಸಲ್ಲುತ್ತಿದೆ. ಇದನ್ನು ಬಿಟ್ಟು ಮಾಡಿಕೊಡಬೇಕು.

ಉ.—ಹಾಗಿಲ್ಲ, ಜುಲ್ಮಿಯಲ್ಲಿಗೆ ಮಾರ್ಗ ತೋರಿಸಿ, ಕೊಡು ಕ. ಮದರಾಸ್ ಅಧಿಪತ್ಯದಲ್ಲಿ ಜಾರಿಯಲ್ಲಿರುವಂಥಾ ವಿಲ್ಲೇಜ್ ಸಸ್ ಪ್ರೊಗ್ರಾಮು ತರಿಸಿಯನ್ನು ಇನ್ನೂ ಜಾರಿಗೆ ತರುವದಕ್ಕೆ ಸಿಕ್ರಮದ ಬಟ್ಟೆಕೊಡ ಬಹುದು.

ಪ್ರ.—ಜಮಲ್ದಾರಿಗಳಿಗೆ ಮ್ಯಾಜಿಸ್ಟ್ರೇಟ್ ಅಧಿಕಾರವ ಸ್ಟ್ರೇಟ್ ರಿಜಿಸ್ಟ್ರಾರುಗಳಿಗೆ ಸಿವಿಲ್ ಕೋರ್ಟಿನ ಮೊಕದ್ದಮೆಗಳು ತೀರ್ಮಾನಿಸಲಾಗುವದಕ್ಕೆ ಅವಕಾಶವಾಗುತ್ತೆ.

ಉ.—ಸದ್ಯ ಈ ವಿಷಯ ಚರ್ಚಿಸಲು ಆರ್ಹವಾಗಿಲ್ಲ.

ಪ್ರ.—ಅರ್ಜಿ ಮೊದಲಾದದ್ದನ್ನು ಶಾಸಿನ ಸರ್ಕಾರಿ ಆಗ ಲ್ಲಿ ಬರೆಯ ಬೇಕೆಂಬ ನಿರ್ಬಂಧವನ್ನು ತಪ್ಪಿಸಿಕೊಡಬೇಕು. ಗ್ರಾಮಾಂತರಗಳಲ್ಲಿ ರಹಕ್ಕೆ ಮಸಿಗೆ ತುಂಬಾ ತೊಂದರೆಯಾಗಿದೆ.

ಉ.—ತಪ್ಪಿಸುವದು ಸಾಧ್ಯವಲ್ಲ. ಈಗಿನ ಕಾಗದ ನಮೂನಾ ಸಹ ನಾಜೂಕಾಗಿಯೂ ಇಲ್ಲವೆಂದು ತಿಳಿದು ಬಂದಿದೆ. ಈ ವಿಷಯಕ್ಕೆ ಗಮನ ಕೊಡುವೆವು.

ಪ್ರ.—ಸೆಂಟ್ರಲ್ ನಾಬರ್ ಎಂಬ ಹೊಸ ಪದ್ಧತಿಯಿಂದ ತುಂಬಾ ತೊಂದರೆಯುಂಟಾಗಿದೆ. ಅದರಿಂದ ಕೋರ್ಟುಗಳ ಕೆಲಸ ಬೇಗವಾಗಿ ನಡೆಯುವದಿಲ್ಲ. ಅದನ್ನು ವಜಾ ಮಾಡಿಕೊಡಬೇಕು.

ಉ.—ಈ ವಿಷಯದಲ್ಲಿ ಹೈಕೋರ್ಟಿಗೆ ಬರೆದಿದ್ದೇವೆ. ಅಲ್ಲಿಂದ ಇನ್ನೂ ಜವಾಬು ಬಂದಿಲ್ಲ.

ಪ್ರ.—೧೦೦ ರೂಪಾಯಿಗೆ ವಿವಾದದ ದಾವಾಕ್ಕೆ ಕೇಳಿದ ೫೦ ರಂತೆ ಕೋರ್ಟು ಫೀಜು ಇಟ್ಟುಕೊಡಬೇಕು. ಬಡಬಗ್ಗರಿಗೆ ತುಂಬಾ ಉಪಕಾರವಾಗುತ್ತೆ.

ಉ.—ಸದ್ಯ ಆಗಲಾರದು.

ಪ್ರ.—೧೦೦ ರೂ. ಒಳಪಟ್ಟ ಸಾಲವನ್ನು ವಸೂಲ್ಮಾಡಿಕೊಳ್ಳುವದಕ್ಕೆ ವಾರಸ್ ಸರ್ಟಿಫಿಕೇಟಿನ ಫೀಜನ್ನು ಮಾಫ ಬಿಟ್ಟುಕೊಡಬೇಕು. ಮತ್ತು ಎಲ್ಲಾ ಮುನ್ಸಿಫರಿಗೂ ವಾರಸ್ ಸರ್ಟಿಫಿಕೇಟ್ ಕೊಡುವ ಅಧಿಕಾರವಿರಬೇಕು.

ಉ.—ಆಗಬಹುದು. ನೋಡೋಣ.

ಪ್ರ.—ಕೋಲಾರ್ (?) ಪೇಟೆಯಲ್ಲಿ ಮುನ್ಸಿಫ್ ಕೋರ್ಟು ಇಡಬೇಕು. ೪೦—೪೫ ಮೈಲಿಯಿಂದ ಕಕ್ಷಿಗಾರರು ಬೆಂಗಳೂರು ಅಡಿಷನಲ್ ಮುನ್ಸಿಫ್ ಕೋರ್ಟಿಗೆ ಅಲೆಯಬೇಕಾಗಿದೆ.

ಉ.—ಇದು ಸದ್ಯ ಆಗುವದಿಲ್ಲ. ಅಡಿಷನಲ್ ಮುನ್ಸಿಫ್ ಕೋರ್ಟಿನಲ್ಲಿ ಬೇಗ ಮೊಕದ್ದಮೆಗಳು ಫೈಸಲಾಗುವಂತೆ ಏರ್ಪಾಡು ಮಾಡುತ್ತೇವೆ.

ಪ್ರ.—ಮೈಸೂರು ಕರ್ನಾಟಕ ಆಸ್ಪತ್ರೆಯಲ್ಲಿ ಸರ್ಕಾರಿ ವೇತನ ಪಡೆದು ಏಳು ಮಂದಿ ವಿದ್ಯಾರ್ಥಿಗಳು ಕರ್ನಾಟಕ ಔಷಧ ಚಿಕಿತ್ಸೆಯನ್ನು ಕಲಿತು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಾರೆ. ಇವರಿಗೆ ತಾಲ್ಲೂಕು ಮುಂತಾದ ಕಡೆಗಳಲ್ಲಿ ೧೦—೧೫ ರೂ. ಸಂಬಳ ಕೊಟ್ಟು ವೈದ್ಯಮಾಡುವಂತೆ ನೇಮಿಸಬೇಕು.

ಉ.—ಈ ಪಂಡಿತರನ್ನು ನೇಮಿಸಿಕೊಳ್ಳುತ್ತೀರಾ ಎಂದು ಎಲ್ಲಾ ಬೋರ್ಡಿನವರನ್ನೂ ಕೇಳಿದ್ದಾಯಿತು. ಕೆಲವರು ಬೇಡವೆಂದು ಹೇಳಿದರು. ಸರ್ಕಾರದಿಂದ ಗ್ರಾಂಟು ಕೊಟ್ಟು ಇವರನ್ನು ಅಲ್ಲಿ ನೇಮಿಸೋಣವೆಂದು ಯೋಚಿಸಿದೆ.

ಪ್ರ.—ಚಿಕ್ಕಮಂಗಳೂರಿಗೆ ಹೊಸ ರಸ್ತೆಗಳು ಅವಶ್ಯವಿಲ್ಲದಿದ್ದರೂ ಸರ್ಕಾರದವರು ೧೫೪ ಮನೆಗಳನ್ನು ಕೆಡವಬೇಕೆಂದು ಗೊತ್ತುಮಾಡಿದಾರೆ. ಮನೆಗಳಿಗೆ ಕಾಂಪೆನ್ಸೇಷನ್ ಗೊತ್ತು ಮಾಡಿರುವದು ಬಹಳ ಸ್ವಲ್ಪ. ಒಂದು ಮನೆಗೆ ೧೫ ಅಡಿ ಕೊಡುತ್ತಾರಂತೆ. ಬೇರೆ ಕಡೆ ಮನೆ ಕಟ್ಟಿಕೊಳ್ಳುವದಕ್ಕೆ ಸ್ಥಳ ಗೊತ್ತು ಮಾಡಿಲ್ಲ. ಅಧಿಕಾರಿಗಳು ಬಡಬಗ್ಗರನ್ನು ಹಿಡಿದು, ಪ್ಲೇಗ್ ರೂಲ್ಸ್ ಪ್ರಕಾರ ಅವರಿಗೆ ದುಲ್ಮಾನೆ ಹಾಕಿಸಿರುತ್ತಾರೆ. ಜನರ ಕಷ್ಟ ಅಪಾರವಾಗಿದೆ. ತಪ್ಪಿಸಿ ಕೊಡಬೇಕು.

ಉ.—ಅಧಿಕಾರ ಬಂದಮಾತ್ರಕ್ಕೆ ಕರುಣೆ, ದಯೆ, ದಾಕ್ಷಿಣ್ಯಾದಿಗಳು ಹೋಗಿ ಬಿಡುತ್ತವೆಂದು ತಿಳಿಯ ಬಾರದು. ಅಧಿಕಾರಿಗಳು ತುಂಬಾ ಮರುಗುತ್ತಾರೆ. "ಗಲೀಜು ಬೇಡ, ಬೆಳಕು ಗಾಳಿ ಧಾರಾಳವಾಗಿ ಬರುವಂತೆ ಮಾಡಿಕೊಳ್ಳಿ" ಎಂಬುವದೊಂದೇ ಸರಕಾರದವರ ಮಾತು. ಚಿಕ್ಕಮಗಳೂರಿನಲ್ಲಿ ಅಧಿಕಾರಿಗಳು ಕೆಲವು ಪೌರೋದ್ಯೋಗಾಧಿಕಾರರನ್ನೂ ಸೇರಿಸಿ ಒಂದು ಕಮಿಟಿ ಮಾಡಿಕೊಂಡು ಮನೆ ಒಡೆಯುವದೇ ಮುಂತಾದ ವಿಚಾರವನ್ನು ಇತ್ಯರ್ಥವಮಾಡುವಂತೆ ಡೆಪ್ಯುಟಿ ಕಮಿಷನರಿಗೆ ತಿಳಿಸುತ್ತೇವೆ.

ಪ್ರ.—ಕ್ವಿನೈನಾ ಎಂಬ ಜ್ವರದ ಪುಡಿ ಪೊಟ್ಟಣಗಳನ್ನು ಗ್ರಾಮಾಂತರಗಳಲ್ಲಿ ವಿಕರಿ ಮಾಡುವಂತೆ ಪಟೇಲ್ ಶ್ಯಾನುಭೋಗರಿಗೂ ಕಳುಹಿಸಿ ಕೊಟ್ಟರೆ ಹಳ್ಳಿಗಾಡಿನ ಪ್ರಜೆಗಳಿಗೆ ತುಂಬಾ ಉಪಕಾರವಾಗುತ್ತೆ. ಗ್ರಾಮಾಂತರಗಳಲ್ಲಿ ರಹಕ್ಕೆ ರೋಗಿಗಳಿಗೆ ಔಷಧ ದೊರೆಯುವದಿಲ್ಲ.

ಉ.—ಆ ಪೊಟ್ಟಣಗಳ ಬಟವಾಡೆ, ಲೆಕ್ಕಾಚಾರ, ಇದೆಲ್ಲಾ ಇರುವದು ಅಸಾಧ್ಯ. ಮುಂದೆ ನೋಡೋಣ.

---

## ಇಂಡಿಯಾ ದೇಶದ ವೃತ್ತಾಂತಗಳು.

ಬರ್ಮಾ ದೇಶದಲ್ಲಿ ದರೋಡೆ ಕಳ್ಳತನವು ಸಂಪೂರ್ಣವಾಗಿ ನಿಂತು ಹೋಯಿತೆಂದು ತೋರುವದು. ೧೯೧೨ ನೇ ವರುಷದಲ್ಲಿ ನಡೆದ ಕ್ರಿಮಿನಲ್ ಕೇಸುಗಳ ಪೈಕಿ ಒಂದು ದರೋಡೆ ಮಾತ್ರ ನಡೆಯಿತೆಂತಲೂ, ದರೋಡೆಯಿಂದ ಒಂದು ಕೊಲೆಯಾದರೂ ನಡೆಯಲಿಲ್ಲವೆಂತಲೂ ಪೋಲೀಸು ರಿಪೋರ್ಟಿನಿಂದ ಗೊತ್ತಾಗಿದೆ.

****

ಬಲೂಚಿಸ್ಥಾನದಲ್ಲಿ ಆನೆ ತಿನ್ನುವ ಜೋಳದಿಂದ ಯಾವದೋ ಒಂದು ಬಗೆಯ ಆಹಾರ ಪದಾರ್ಥವು ತಯಾರ್ಮಾಡಲ್ಪಟ್ಟು ಉಪಯೋಗಿಸಲ್ಪಡುತ್ತಾ ಇದೆ ಯೆಂದು ಸರ್ಕಾರದವರ ಗಮನಕ್ಕೆ ಬಂದಿರುತ್ತದೆ. ಈ ಹುಲ್ಲಿನ ಹಳದಿ ಬಣ್ಣದ ಕಾಳುಗಳನ್ನು ಹಿಟ್ಟಾಗಿಯೂ ರೊಟ್ಟಿಯಾಗಿಯೂ ಸಿಂಧುದೇಶ ಮತ್ತು ಬೊಂಬಾಯಿ ಈ ಪ್ರಾಂತ್ಯಗಳಲ್ಲಿ ಉಪಯೋಗಿಸುತ್ತಿದಾರೆಂದು ಗೊತ್ತಾಗಿದೆ.

****

ರಂಗೂನಿನಲ್ಲಿ ಮಹಮ್ಮದ್ ಹುಸೇನ್ ಎಂಬವನು ಅಫೀಮನ್ನು ಕಳ್ಳತನದಿಂದ ಮಾರುತ್ತಿದ್ದನೆಂಬದಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅವನಿಗೆ ಒಂದು ವರ್ಷ ಕಠಿಣ ಸಜಾ ಶಿಕ್ಷೆಯನ್ನೂ ೧,೦೦೦ ರೂ. ದುಲ್ಮಾನೆಯನ್ನೂ ವಿಧಿಸಿದ್ದರು. ಅವನು ಅದರ ಮೇಲೆ ಅಫೀಲ್ ಮಾಡಿಕೊಳ್ಳಲಾಗಿ ಮೆ॥ ಜಸ್ಟಿಸ್ ಫಾಕ್ಸ್ ಯವರು ಅಪೀಲನ್ನು ತಿರಸ್ಕರಿಸಿ ಶಿಕ್ಷೆಯನ್ನು ಖಾಯಂ ಮಾಡಿದರು.

****

ತಿರುವಾಂಕೂರು ಸಂಸ್ಥಾನದ ಶ್ರೀಮನ್ಮಹಾರಾಜರವರಿಗೆ ಕಳೆದ ತಿಂಗಳ ೩೮ ರಲ್ಲಿ ೫೬ ನೇ ವರ್ಷ ವರ್ಧಂತಿಯು ಯಥೋಚಿತವಾದ ಆಡಂಬರದಿಂದ ಸಾಗಿತು. ಮಹಾರಾಜರವರು ಸಕಲ ರಾಜಮರ್ಯಾದೆಗಳೊಡನೆ ಸರ್ಕಾರೀ ಉದ್ಯೋಗಸ್ಥರಿಂದ ಪರಿವೇಷ್ಟಿತರಾಗಿ ಮೆರವಣಿಗೆ ದಯಮಾಡಿಸಿದರು. ಆ ದಿನ ಮಧ್ಯಾಹ್ನದಲ್ಲಿ ಅನೇಕ ಸಾವಿರ ಮಂದಿ ಬಡವರಿಗೆ ಅನ್ನದಾನವು ಬಹು ವಿಜೃಂಭಣೆಯಿಂದ ಜರುಗಿತು.

****

ಮದರಾಸ್ ಯೂನಿವರ್ಸಿಟಿಯು ಕಳೆದ ವರುಷದ ಮೆಟ್ರಿಕ್ಯುಲೇಷನ್ ಪರೀಕ್ಷಾ ಫಲಿತಾಂಶಗಳನ್ನು ಪರಿಶೀಲನೆ ಮಾಡಿ ನೋಡಿದರೆ ೧೧ ವರುಷದ ಒಬ್ಬ ಹುಡುಗನೂ ೧೨ ವರುಷದವನೊಬ್ಬನೂ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕುಂದಿರಾಗಿ ತೇರ್ಗಡೆ ಹೊಂದಿರುತ್ತಾರೆ. ಬಾಲ್ಯದಲ್ಲೇ ಇವರು ಬಿ. ಎ. ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿಯಾರೆಂದು ತೋರುವದು. ಸಾಮಾನ್ಯವಾಗಿ ೧೪—೧೫ ವರುಷದ ಹುಡುಗರೇ ವಿಶೇಷ ಮಂದಿ ತೇರ್ಗಡೆಹೊಂದಿದಾರೆ.

****

ಎಂಜನಿಯರಿಂಗ್ ಯಂತ್ರ ಸಾಮಾನುಗಳನ್ನು ಉಪಯೋಗಿಸಬೇಕಾದ ಸರ್ಕಾರೀ ಮುಖ್ಯ ಮುಖ್ಯ ಕೆಲಸಗಳಲ್ಲಿ ಅವಶ್ಯಕವಾದ ಯಂತ್ರದ ಸಾಮಾನುಗಳನ್ನೆಲ್ಲಾ ಗವರ್ನ್ಮೆಂಟಿನವರು ಪಬ್ಲಿಕ್ ಇನ್ಸ್ಟಿಟ್ಯೂಟ್ (?) ಮೂಲಕ ಟೆಂಡರುಗಳನ್ನು ಕರಿಸಿ ಕೊಳ್ಳುವದಾಗಿಯೂ ಟೆಂಡರುಗಳನ್ನು ಕೊಡುವದರೊಳಗೆ ಸ್ಥಳಿಕರಾದ ವ್ಯಾಪಾರಸ್ಥರಾದ ಟೆಂಡರುಗಳಿಗೆ, ಸರ್ಕಾರಕ್ಕೆ ನಷ್ಟವಾಗದ ರೀತಿಯಲ್ಲಿ ನೋಡಿಕೊಂಡು, ಪ್ರೋತ್ಸಾಹವನ್ನು ಕೊಡುತ್ತೇವೆಂಬದಾಗಿಯೂ ಮದ್ರಾಸ್ ಗವರ್ನ್ಮೆಂಟಿನವರು ಅಪ್ಪಣೆ ಕೊಟ್ಟಿದಾರೆ.

****

ಬರ್ಮಾ ದೇಶದಲ್ಲಿ ಮುಖ್ಯ ಗುರುವಾದ ಮೋಂಗ್‌ಪೋಸು ಎಂಬಾತನು ಬರ್ಮಾ ಜನರಿಗಾಗಿಯೇ ಪ್ರತ್ಯೇಕವಾದ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸುವದು ಅವಶ್ಯವೆಂಬದಾಗಿ ಬರೆದನು. ಮಹಮದೀಯರು ಅಲಿಘಡದಲ್ಲೂ, ಹಿಂದುಗಳು ಕಾಶಿಯಲ್ಲೂ ಸ್ವಾಗಸ್ವಂತ ವಿದ್ಯಾಶಾಲೆಗಳನ್ನೇರ್ಪಡಿಸಿಕೊಂಡಿದ್ದಾರೆಯೋ ಅದರಂತೆ ಬರ್ಮಾದಲ್ಲಿ ಬರ್ಮೀಯರಿಗೇ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸುವದಕ್ಕೆ ಒಬ್ಬ ಗೊತ್ತುಮನುಷ್ಯನು ೫,೦೦೦ ರೂ. ಚಂದಾ ಕೊಡುವುದಾಗಿ ವಾಗ್ದಾನ ಮಾಡಿದಾನೆ.

****

ಪೂನಾ ಪಟ್ಟಣದ ಮೆ॥ ಬಾಲಗಂಗಾಧರ ತಿಲಕರ ಮೇಲೆ ದತ್ತು ಸ್ವೀಕಾರದ ಕ್ರಿಮಿನಲ್ ಮೊಕದ್ದಮೆ ನಡೆಯುತ್ತಿದೆಯಷ್ಟೆ. ಇದರಲ್ಲಿ ಫಿರ್ಯಾದಿಯಾದ ತಾಯಿ ಮಹಾರಾಜ್ ಎಂಬಾಕೆಯು ಕಳೆದವಾರ ಕಾಲವಾದಳು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಶವವನ್ನು ದಹನ ಮಾಡುವದಕ್ಕೆ ಅಪ್ಪಣೆ ಕೊಟ್ಟರು. ಕೂಡ್ಲೆ ಇಬ್ಬರು ದತ್ತುಮಕ್ಕಳ ವ್ಯಾಜ್ಯಕ್ಕೂ ಕಾರಣವಾದ ಆಕೆಯ ಬಳಿಯಾಣ ಸ್ಥಿರಚರ ಆಸ್ತಿಗಳನ್ನೆಲ್ಲಾ ಕೋರ್ಟಿನವರು ಸ್ವಾಧೀನಪಡಿಸಿಕೊಳ್ಳಬೇಕೆಂದು ಮೆ॥ ತಿಲಕರು ಅರ್ಜಿ ಕೊಟ್ಟರು. ಅದರಂತೆ ಆಸ್ತಿಯನ್ನು ಕೋರ್ಟಿನವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು.

****

ಡಾಕ್ಟರ್ ವರ್ಕ್‌ಮಾನ್ ಎಂಬಾತನು ಪತ್ನಿಯನ್ನೊಡಗೂಡಿ ಹಿಮವತ್ಪರ್ವತಗಳ ಕೆಲವು ದುರ್ಗಮವಾದ ಶಿಖರಗಳನ್ನು ಹತ್ತಿ ಪರೀಕ್ಷೆ ಮಾಡಿಕೊಂಡು ಬಂದ ವಿಷಯವಾಗಿ ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿದೆ. ಇವರಿಬ್ಬರು ಹತ್ತಿಹೋದ ಒಂದು ಶಿಖರವು ೨೨,೫೬೮ ಅಡಿ ಇದ್ದಿತು. ಹಿಂದೆ ಈ ಪ್ರಕಾರ ಪ್ರಯತ್ನ ಪಟ್ಟ ಸಾಹಸವಂತರಿಗಿಂಗಲೂ ಈಕೆ ೧,೯೦೦ ಅಡಿ ಹೆಚ್ಚು ಎತ್ತರವಾಗಿ ಹತ್ತಿದಂತಾಯಿತು. ಅಲ್ಲಿಂದ ಇವರು ೨೩,೨೯೬ ಅಡಿಗಳ ಎತ್ತರವೆಂದು ಸರ್ವೆ ಇಲಾಖೆಯವರು ನಿರ್ಣಯಿಸಿರುವ ಬೇರೊಂದು ಶಿಖರವನ್ನು, ಇಬ್ಬರು ದಾರೀ ತೋರಿಸುವವರನ್ನು ಕರೆದು ಕೊಂಡು, ಹತ್ತಿಹೋದರು. ಅದರ ತುದಿಯನ್ನು ಮುಟ್ಟಲಿಲ್ಲ. ೨೩,೩೯೪ ಅಡಿಗಳಷ್ಟು ಎತ್ತರದ ವರೆಗೂ ಹೋದರು.

---

## ವಿದೇಶ ವರ್ತಮಾನಗಳು.

ಆಸ್ಟ್ರಿಯಾ ದೇಶದ ಬುಡಾಪೆಸ್ಟ್ ಪಟ್ಟಣದ ಬಾಡಿಗೆ ಗಾಡಿಯವರು ಒಟ್ಟಾಗಿ ಗಾಡಿಗಳನ್ನು ಬಿಡುವದಿಲ್ಲವೆಂದು ಮುಷ್ಕರ ಹಿಡಿಯಲು ಅವರಿಗೂ ಪೋಲೀಸಿನವರಿಗೂ ಕಲಹವಾಗಿ ಪರಸ್ಪರ ಪಿಸ್ತೂಲುಗಳನ್ನು ಪ್ರಯೋಗಿಸಲು ಕೆಲವರು ಮೃತಪಟ್ಟದಲ್ಲದೆ ಅನೇಕರಿಗೆ ಗಾಯವಾಯಿತು.

****

ರಷ್ಯಾ ರಾಜ್ಯಭಾರದವರು ವ್ಲಾಡಿವಾಸ್ಟಾಕ್ (?) ಬಳಿಯಲ್ಲಿ ತಮ್ಮ ಸೇನೆ ಸುಮಾರು ೭,೫೦,೦೦೦ ಮಂದಿಯನ್ನೂ ಪೋರ್ಟ್ ಆರ್ಥರ್ ಮತ್ತು ಟಾಲಿಯನ್‌ವಾನ್ ಎಂಬಲ್ಲಿ ೪೦ ಯುದ್ಧನಾವೆಗಳನ್ನೂ ನಿಲ್ಲಿಸಿಕೊಂಡಿದ್ದಾರೆಂದು ಟೀಂಟ್‌ಸಿನ್ನಿಂದ ತಂತೀ ವರ್ತಮಾನ ಬಂದಿತ್ತು.

****

ಸರ್ವಿಯಾ ದೇಶದಲ್ಲಿ ಕೊಲೆಪಾತಕವನ್ನು ನಡಸಿದ ಘಾತುಕರನ್ನು ರಾಜಧಾನಿಯಾದ ಬೆಲ್‌ಗ್ರೇಡಿನಲ್ಲಿ ನ್ಯಾಯಾಧಿಕಾರಿಗಳು ವಿಚಾರಣೆ ಮಾಡಿದರು. ಘಾತುಕರಿಗೆ ಮುಖಂಡನಾದ ಕ್ಯಾಪ್ಟನ್ ನೋಗಳೋವಿಕ್ಕನಿಗೂ ಇನ್ನೊಬ್ಬನಿಗೂ ಭರತವರ್ಷ, ಎರಡೆರಡು ವರ್ಷಗಳ ಕಾರಾಗೃಹ ಶಿಕ್ಷೆಯೂ ವಿಧಿಸಲ್ಪಟ್ಟಿತು. ಉಳಿದವರಿಗೆ ಒಂದು ತಿಂಗಳ ಲಾಗಾಯತು ಒಂದು ವರ್ಷದ ವರೆವಿಗೆ ಶಿಕ್ಷೆಯಾಯಿತು. ಈಗಿನ ದೊರೆಗಳಾದ ಪೀಟರ್ ಯವರು ಇವರಿಗೆಲ್ಲಾ ಕ್ಷಮಾಪಣೆಯನ್ನು ಕೊಡುವರೆಂದು ನಿರೀಕ್ಷಿಸಲ್ಪಟ್ಟಿತ್ತು.

****

ಷಿಕಾಗೊ ಪಟ್ಟಣದ ಡಾಕ್ಟರ್ ಕಾಟನ್ ಎಂಬಾತನು ಒಂದು ನವೀನವಾದ ವಿಷಯವನ್ನು ಪ್ರಕಟಿಸಿದ್ದಾನೆ. ಏನಂದರೆ—ಮನುಷ್ಯರಲ್ಲಿ ಹುಟ್ಟುವ ಜ್ವರವೇ ಮುಂತಾದ ರೋಗಾದಿಗಳಿಗೆ ಬಸಿಲಸ್ ಎಂಬ ಏಕಕ್ರಿಮಿಯು ಕಾರಣವಾಗಿರುವಂತೆಯೇ ಪರಸ್ಪರ ಪ್ರೇಮವೆಂಬುದೂ ಇದೇ ವಿಧ ಕ್ರಿಮಿಯಿಂದ ಉತ್ಪನ್ನವಾಗುತ್ತದೆಂದೂ, ಇದು ಮನುಳಿಗೆ ಹಿಡಿದು ಹುಚ್ಚುತನಕ್ಕೆ ಸಮಾನವಾದ ಪ್ರೇಮವೆಂಬ ಭಾವವು ಹುಟ್ಟುವದೆಂದು ನಂಬುವದಕ್ಕೆ ವಿಶೇಷ ಆಕ್ಷೇಪವೇನೂ ತೋರುವದಿಲ್ಲವೆಂದೂ, ಈ ಕ್ರಿಮಿಯ ವಿದ್ಯಮಾನವನ್ನೂ ಇದನ್ನು ನಾಶಮಾಡುವ ವಿಧಾನವನ್ನೂ ಕಂಡುಹಿಡಿದ ಕಾಲಕ್ಕೆ ವಿವಾಹವೆಂಬ ಮಾನುಷ ಸಂಸ್ಥೆಯನ್ನು ಸಕಲರ ಪ್ರಯೋಜನದ ಪರಿಪಾಕಕ್ಕೆ ಅನುಕೂಲವಾಗಿ ಏರ್ಪಡಿಸುವದು ಸಾಧ್ಯವಾದೀತೆಂದೂ ತಿಳಿಯಪಡಿಸುತ್ತಾನೆ.

****

ಅಮೆರಿಕದ ಸಂಯುಕ್ತ ಸಂಸ್ಥಾನದವರು ಹೋನೊಲುಲು (?) ಸಮೀಪದಲ್ಲಿರುವ ಕೆಲವು ದ್ವೀಪಸಮುದಾಯಗಳನ್ನು ಹಿಡಿದುಕೊಂಡರು. ಇವು ಸುಮಾರು ೭೫ ವರ್ಷಗಳಿಂದಲೂ ಬ್ರಿಟಿಷ್ ರಾಜ್ಯಭಾರಕ್ಕೆ ಸೇರಿರುವದರಿಂದ ಅವರು ಅಮೆರಿಕದ ಸರ್ಕಾರಕ್ಕೆ ದೂರು ಹೇಳಿಕೊಂಡಿದ್ದಾರೆ. ಸಂಯುಕ್ತ ಸಂಸ್ಥಾನದ ಸ್ಟೇಟ್ ಸೆಕ್ರೆಟರಿಯವರಾದ ಮಿ. ಹೇ ಸಾಹೇಬರು ಇದನ್ನು ವಿಚಾರಿಸುವದಾಗಿ ಮಾತು ಕೊಟ್ಟಿದ್ದಾರೆ. ವಿಚಾರಣೆಯಲ್ಲಿ—ಹೋನೊಲುಲು ಪಕ್ಕದ ಬ್ರಿಟಿಷ್ ಸ್ವಾಧೀನದಲ್ಲಿನ ಸೀಮೆಗೂ ಅಮೆರಿಕದವರ ಸ್ವಾಸ್ತ್ಯಕ್ಕೂ ನಡುವೆ ಎಲ್ಲೆಯನ್ನು ನಿರ್ಣಯಿಸುವದಕ್ಕಾಗಿ ಒಂದು ಕಮಿಷನ್ ಏರ್ಪಾಡು ಮಾಡುವರೆಂದು ತೋರುತ್ತೆ. ಹಿಂದೆ ಸ್ಪೇನ್ ರಾಜ್ಯದವರು ವ್ಯಾಪಾರವನ್ನು ಕಾಪಾಡಿಕೊಳ್ಳುವದಕ್ಕಾಗಿ ಬ್ರಿಟಿಷರಿಗೆ ಈ ದ್ವೀಪಗಳನ್ನು ಒಪ್ಪಿಸಿ ಕೊಟ್ಟಿದ್ದರಿಂದಲೇ ಈಗ ಈ ತೊಂದರೆಯು ಪ್ರಾಪ್ತವಾಗಿದೆಯೆಂದು ಹೇಳುತ್ತಾರೆ.

****

ಒಬ್ಬಾನೊಬ್ಬ ಬಾತ್ಮೀದಾರನು ಕಳೆದ ಜೂನ್ ತಿಂಗಳಲ್ಲಿ ರಷ್ಯಾ ದೇಶದ ಸೈಬೀರಿಯಾ ಪ್ರಾಂತ್ಯದ ರೇಲ್ವೆ ಮೂಲಕ ತಾನು ಪ್ರಯಾಣಮಾಡಿದ ವೃತ್ತಾಂತವನ್ನು ಲಂಡನ್ನಿನೊಂದು ಪತ್ರಿಕೆಗೆ ಬರೆದು ತಿಳಿಸಿರುತ್ತಾನೆ. ಈ ಮಾರ್ಗವಾಗಿ ಪ್ರಯಾಣ ಮಾಡುವದು ಸ್ಟೀಮರಿನ ಪ್ರಯಾಣಕ್ಕಿಂತ ಜಾಗ್ರತೆಯಾಗಿಯೂ ಸುಲಭ ಖರ್ಚಿನಲ್ಲಿಯೂ ಆಗುವದಾಗಿದ್ದರೂ ಚಿಕ್ಕ ಮಕ್ಕಳನ್ನು ಕರೆದುಕೊಂಡು ಈ ಮಾರ್ಗವಾಗಿ ಪ್ರಯಾಣ ಮಾಡುವದು ಅನುಕೂಲವಾಗಲಾರದೆಂತಲೂ ಇತರರಿಗೆ ಎಷ್ಟುಮಾತ್ರಕ್ಕೂ ಅನನುಕೂಲವಾಗಿರಲಾರದೆಂತಲೂ ಹೇಳುತ್ತಾನೆ. ಈತನು ಡಾಲ್ನಿ ಎಂಬಲ್ಲಿಂದ ಮಾಸ್ಕೋ ವರೆವಿಗೆ ಎರಡನೇ ಕ್ಲಾಸಿನಲ್ಲಿಯೂ ಅಲ್ಲಿಂದ ಲಂಡನ್ ಪಟ್ಟಣಕ್ಕೆ ಮೊದಲನೇ ಕ್ಲಾಸಿನಲ್ಲಿಯೂ ಪ್ರಯಾಣ ಮಾಡಿದಕ್ಕೆ ರೈಲ್ ಚಾರ್ಜು ಊಟ ಉಪಚಾರ ಮುಂತಾದ ಎಲ್ಲಾ ಖರ್ಚು ೩೭ ಪೌಂಡುಗಳಾದವು. ಡಾಂಗ್ಸ್ (?) ಯಿಂದ ಲಂಡನ್ ಪಟ್ಟಣಕ್ಕೆ ಒಟ್ಟು ೧೮ ದಿವಸವೂ ೪ ಗಂಟೆಗಳ ಹೊತ್ತು ಹಿಡಿಯಿತು, ಮಧ್ಯೆ ಡಾಲ್ನಿಯೆಂಬಲ್ಲಿ ೨೪ ಗಂಟೆ ಹೊತ್ತೂ, ಬ್ರಸೆಲ್ಸ್ ಎಂಬಲ್ಲಿ ೫ ಗಂಟೆ ಹೊತ್ತೂ ಗಾಡಿಗಳು ನಿಂತು ಪ್ರಯಾಣಿಕರಿಗೆ ವಿರಾಮ ದೊರಕುತ್ತದೆ. ಡಾಲ್ನಿಯಿಂದ ಹೊರಡುವ ರೈಲು ಸ್ಟೇಷನ್ನನ್ನು ದಾಟುವ ವರೆಗೂ ಗಂಟೆಗೆ ೧೫ ರಿಂದ ೩೦ ಮೈಲುಗಳ ವರೆವಿಗೂ ಓಡುತ್ತದೆ.

## ಗರ್ಭರಕ್ಷಾಸಂಜೀವಿನಿ.

೧ ರೂ. ೮ ಆ.; ವಿ. ಪಿ. ಚಾರ್ಜ್ ೩ ಆ.

ಕೆ. ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.

## ವಿಲಾಯತಿಯಿಂದ ಈಗತಾನೆ ಬಂದಿವೆ.

ಲೇಬಲ್ ಹಚ್ಚಿರುವ ಪುರಸ್ಪೆಡ್ ಉಲ್ ೫,೦೦೦ ಪೌನ್ಡ್ ಮತ್ತು ಉತ್ತಿನ ನಂ. ೨, ೭ ಕ್ರೋಷೆ ಕಡ್ಡಿ. ೫೦ ಗ್ರೋಸ್

ವಿಶ್ರವಾದ ಬಣ್ಣದ ಉಲ್ ಪೌನ್ಡಿಗೆ ರೂ ೧—೧೨ ಆ; ಇತರ ಬಣ್ಣಬಟ್ಟೆ ರೂ. ೧—೮ ಆ. ಏಕದಂ ೧೦೦ ಪೌಂಡುಗಳಿಗಿಂತಲೂ ಹೆಚ್ಚಾಗಿ ತರಿಸಿಕೊಳ್ಳುವವರಿಗೆ ಪೌಂಡಿಗೆ ರೂ ೧—೬ ಆ.

ಕ್ರೋಷೆ ಕಡ್ಡಿ ೧ ಕ್ಕೆ ಆ. ೨; ೧ ಡಜನಿಗೆ ರೂ. ೧—೪ ಆ.

ಈ ಉಲ್ ದಾರವೂ ಕ್ರೋಷೆ ಕಡ್ಡಿಗಳೂ ದಿನೇ ದಿನೇ ಹೆಚ್ಚು ಹೆಚ್ಚಾಗಿ ವ್ಯಾಪಾರವಾಗುತ್ತಿರುವುದರಿಂದ ಬರುವ ಅಕ್ಟೋಬರ್ ಆಖೈರ ಒಳಗಾಗಿ ಬರೆದು ತರಿಸಿಕೊಳ್ಳುವವರಿಗೆ ಸಿಕ್ಕುವುವು.

ಹವಾಕ್ಕೆ ತಕ್ಕ ಪಂಜಾಬಿ ಶಾಲುಗಳು.

೬×೩ ಮೊಳ. ನಂ. ೩. ರೂ. ೩—೧೪ ಆ. ನಂ. ೪. ರೂ. ೩—೧೦ ಆ. ಕೆಂಪು ಬಣ್ಣ, ಅಚ್ಚಗೆಂಪು, ರಕ್ತಗೆಂಪು, ಎಣ್ಣೆಗೆಂಪು, ಬೂದಿ ಬಣ್ಣ ಮೊದಲಾದ ಬಗೆ ಬಗೆ ಬಣ್ಣದ ಶಾಲುಗಳನ್ನು ನಾವು ಹೇರಳ ತಯಾರುಮಾಡಿಸಿರುವುದರಿಂದ ಈ ಶಾಲುಗಳು ಬಾಳಿಕೆ ಮೊದಲಾದ್ದರಲ್ಲಿ ಬೇರೆ ಕಡೆ ಮಾರುವ ಶಾಲುಗಳಿಗಿಂತ ಉತ್ತಮವಾದುವು. ಮಾಲನ್ನು ತರಿಸಿ ಪರೀಕ್ಷಿಸಬೇಕೆಂದು ಅಪೇಕ್ಷಿಸುತ್ತೇವೆ.

ದೊಡ್ಡ ಸೈಜಿನ ಪೋಸ್ಟ್ ಕಾರ್ಡುಗಳು.

ಬಗೆ ಬಗೆ ಬಣ್ಣದ ಕಾರ್ಡುಗಳ ಮೇಲೆ ಚಿತ್ರ ಛಾಪಿಸಿರುವುದು ೧೦೦ ಕ್ಕೆ ೫ ಆ; ೧,೦೦೦ ಕ್ಕೆ ರೂ. ೨—೧೨ ಆ. ಸಾದಾ ಕಾರ್ಡುಗಳು ೧೦೦ ಕ್ಕೆ ೪ ಆ, ೧,೦೦೦ ಕ್ಕೆ ರೂ. ೨—೪ ಆ.

L. A. POLLAIAH & Co.,
*Bangalore City*

## ಹೋಮೋಸಿಯಾ.

ಚರ್ಮದ ಔಷಧ. ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಹೊಟ್ಟೆನೋವು, ಬಾರ್ಬಾದು, ಶೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಟ್ಟುನೋವು, ಊದುಗಳು, ಗಜ್ಜೆಗಳು, ರಣಗಳು, ತುಳುಕಟ್ಟು, ಸೊಳ್ಳೆ ಮತ್ತು ಜೇಳು ಕಡಿದದ್ದು, ಚಿಪ್ಪಿದುವದು, ಗಂಟಲಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ.—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಾದಲ್ಲಿ ೧ ರೂ. ಡಬ್ಬಾದಲ್ಲಿರುವದಕ್ಕಿಂತ ೩ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್, ಖರ್ಚು ಮಾಫಿ ಬಿಡುತ್ತೆ.

✻✻✻✻✻✻✻✻✻

ಹೋಮೋಸಿಯಾ ಎಂಬ್ರೊಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. [illegible] ಇದನ್ನು ಹಚ್ಚಿ [illegible] ಇದರಲ್ಲಿ [illegible] [illegible]

ಈ [illegible]

ವಿಳಾಸ.—[illegible] ಮದರಾಸ್.



## ಶ್ರೀ ಕೃಷ್ಣವಿಲಾಸ ಪ್ರೆಸ್.

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಆಹ್ವಾನಪತ್ರಿಕೆ, ಬಿಲ್‌ಫಾರಂ, ವಿಸಿಟಿಂಗ್ ಕಾರ್ಡ್, ನೋಟೀಸ್ ಫಾರಂ, ಪ್ಯಾಂಪ್ಲೆಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಛಾರ್ಜುಗಳಿಗೆ ಮಾಡಲ್ಪಡುತ್ತವೆ.

ಲೋಡು, ಹರ್ಗ, ಮುಂತಾದ ಖಾಲೀ ಪುಸ್ತಕಗಳು; ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು; ಇನ್ನು ಇತರವಾದ ನಮೂನೆಯ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿನಂತೆ ಬಹು ಅಂದವಾಗಿ ತಯಾರುಮಾಡಲ್ಪಡುತ್ತವೆ.

ಲಾಯರುಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್, ವಕಾಲತ್‌ನಾಮಾ, ಜಾರೀ, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ವಿಕ್ರಯಕ್ಕೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯಿತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯಕರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಅವಕಾಶವನ್ನು ಅಪೇಕ್ಷಿಸುವವರು ಟಪ್ಪಾಲು ಹಾಸಲನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯತಕ್ಕವರು ನಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡ ಪೇಟೆ ೬೫ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ.

ವಿಳಾಸ.—ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

## ಜ್ವರಹರಿ

ಇದು ಸಾಧಾರಣ ಜ್ವರ, ಚಳೀಜ್ವರ, ಮರುಕಳಿಸುವ ಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುನಿಸಿಪಲ್ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೬೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೬೦ ಡೋಸಿನ ಸೀಸೆ ಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೭—೧೨ ಆ. ೧೧ ರೂ.; ಎರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

✻✻✻✻✻✻✻✻✻

ಓಮಂ ಕರ್ಪೂರ

Omum Camphor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, 'ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊಂದಿ ಆಗುವಾಗ್ಯ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. [illegible] ಸೀಸೆಗಳಲ್ಲಿ ದೊರೆಯುವದು.

[illegible]

[illegible]

ನೇಟಿವ್ ಮೆಡಿಕಲ್ ಸ್ಟೋರ್, ಮದರಾಸ್.


## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೫—೯—೧೯೦೩ ರಿಂದ ೭—೧೦—೧೯೦೩ ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | 29 | 20 | 16 | 15 |
| ಮೈಸೂರು ,, | 60 | 143 | 186 | 161 |
| ಬೆಂಗಳೂರು ಡಿಸ್ಟ್ರಿಕ್ಟ್ | 118 | 94 | 131 | 117 |
| ಮೈಸೂರು ,, | 64 | 48 | 31 | 21 |
| ಕೋಲಾರ್ ,, | 36 | 28 | 57 | 45 |
| ಕೋಲಾರ್ ಚಿನ್ನದ ಗಣಿಗಳು | 3 | 2 | 2 | 2 |
| ತುಮಕೂರು ಡಿಸ್ಟ್ರಿಕ್ಟ್ | 70 | 45 | 70 | 46 |
| ಹಾಸನ ,, | 30 | 16 | 25 | 16 |
| ಚಿತ್ರದುರ್ಗ ,, | 69 | 43 | 47 | 37 |
| ಕಡೂರ್ ,, | 17 | 8 | 1 | 1 |
| ಶಿವಮೊಗ್ಗ ,, | 92 | 63 | 123 | 96 |
| ಜುಮ್ಲಾ | 675 | 509 | 691 | 553 |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಆಶ್ವೀಜ ಬಹುಳ ನೌಮಿ ಗುರುವಾರದಿಂದ ಕಾರ್ತೀಕ ಶುದ್ಧ ಪಾಡ್ಯಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಅಕ್ಟೋಬರ್.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ಚಾಂದ್ರಮಾನ ತೇದಿ. |
|---|---|---|---|---|---|---|
| 15 | ಗುರು | ನೌಮಿ | 5 46 | ಪುಷ್ಯ | 9-15 | 29 |
| 16 | ಶುಕ್ರ * | ದಶಮಿ | 0 23 | ಆಶ್ಲೇಷ | 51-2 | 30 |
| 17 | ಶನಿವಾರ † | ದ್ವಾದಶಿ | 19 0 | ಮಘ | 1-8 | 1 |
| 18 | ರವಿವಾರ ‡ | ತ್ರಯೋದಶಿ | 13-35 | ಉತ್ತರ | 51 2 | 2 |
| 19 | ಚಂದ್ರ | ಚತುರ್ದಶಿ | 39 2 | ಹಸ್ತ | 52 2 | 3 |
| 20 | ಕುಜ | ಅಮಾವಾಸ್ಯೆ | 34 49 | ಚಿತ್ತ | 50 36 | 4 |
| 21 | ಬುಧ ¶ | ಪಾಡ್ಯಮಿ | 32 58 | ಸ್ವಾತಿ | 50 1 | 5 |

* ಸ್ಮಾರ್ತ ೧೧ † ವೈಷ್ಣವ ೧೧. ‡ ನರಕಚತುರ್ದಶಿ, ನೀರುತುಂಬೋ ಹಬ್ಬ. ಧನಲಕ್ಷ್ಮೀ ಪೂಜೆ. ¶ ದೀಪಾವಳಿ, ಬಲೀಂದ್ರಪೂಜೆ.

## ಪೇಟೆ ಧಾರಣೆ.

| ದಿನಸಿ. | ಮೈಸೂರು. | ಬೆಂಗಳೂರು. |
|---|---|---|
| ಕಣ್ಣೀ ಅಕ್ಕಿ ಪಲ್ಲ ೧ ಕ್ಕೆ | ರೂ. ೧೦-೦-೦ | ೮-೦-೦ |
| ಕೆಂಬೂತಿ ಅಕ್ಕಿ ಅವಲ್ .. | .. ೧೦-೧೨-೦ | ೧೦-೮-೦ |
| ,, ಮಾಯಂ | .. ೧೧-೪-೦ | ೯-೭-೦ |
| ಜಾಪಾಳ ಅಕ್ಕಿ .. | .. ೯-೧೦-೦ | ೧೨-೬-೦ |
| ಸಣ್ಣಕ್ಕಿ ಅವಲ್ .. | .. ೧೨-೮-೦ | ೮-೩-೦-೦ |
| ,, ಮಾಯಂ .. | .. ೧೨-೦-೦ | ೧೧-೦-೦ |
| ತೊಗರೀ ಬೇಳೆ ಪಲ್ಲ ೧ ಕ್ಕೆ | .. ೧೩-೧೨-೦ | ೧೪-೦-೦ |
| ,, ಮಾಯಂ .. | .. ೧೩-೮-೦ | ೧೨-೭-೦ |
| ಪೈರ ರಾಗಿ ಪಲ್ಲ ೧ ಕ್ಕೆ .. | .. ೩-೧೨-೦ | ೩-೦-೦ |
| ಹಾರಾಗಿ .. .. | .. ೩-೮-೦ | ೨-೧೦-೦ |
| ಜೋಳ .. .. | .. ೩-೨-೦ | ೩-೦-೦ |
| ಹುರುಳಿ ಪಲ್ಲ ೧ ಕ್ಕೆ .. | .. ೩-೧-೦ | ೮-೦-೦ |
| ಬಿಳೀ ಅವರೆ .. | .. ೮-೧೨-೦ | ೮-೦-೦ |
| ಹೆಸರು .. .. | .. ೯-೮-೦ | ೮-೮-೦ |
| ಉದ್ದು .. .. | .. ೮-೬-೦ | ೯-೦-೦ |
| ಕಡಲೆ .. .. | .. ೧೦-೦-೦ | ೮-೮-೦ |
| ಎಳ್ಳು .. .. | .. ೧೨-೦-೦ | ೮-೦-೦ |
| ಹುರುಳಿ .. .. | .. ೩-೮-೦ | ೪-೦-೦ |
| ಹರಳು ೧೨೩ ಸೇರಿಗೆ .. | .. ೯-೮-೦ | ೫-೪-೦ |
| ಸೀಗೇಕಾಯಿ ಮಣ ೧ ಕ್ಕೆ | .. ೧-೮-೦ | ೧-೧-೦ |
| ಮೆಣಸಿನಕಾಯಿ .. | .. ೩-೦-೦ | ೨-೦-೦ |
| ,, ಪುಡಿ .. | .. ೨-೧೨-೦ | ೧-೮-೦ |
| ಬೆಲ್ಲ ದೊಡ್ಡ ಅಚ್ಚು .. | .. ೬-೮-೦ ಮು | ೧-೭-೦ |
| ಪಿಳ್ಳನ್ನಕ್ಕೆ ಮಣ ೧ ಕ್ಕೆ .. | . ೩-೪-೦ | ೪-೯-೦ |
| ಸಕ್ಕರೆ ,, .. | .. ೩-೧-೦ | ೨-೧-೦ |
| [illegible] ಪಲ್ಲ ೧ ಕ್ಕೆ .. | . ೬-೦-೦ | ೪-೮-೦ |
| ಉಪ್ಪು ,, . | .. ೧೦-೬-೦ | ೮-೮-೦ |
| [illegible] .. | .. ೧-೪- | ೬-೬-೦ |
| ,, [illegible] .. | . ೦-೯-೦ | [illegible] |
| [illegible] .. | .. ೦೦-೧-೦ | [illegible] |
| [illegible] ಪಲ್ಲ ೧ ಕ್ಕೆ .. | . ೩-೯-೦ | ೨-೦ |
| [illegible] .. | .. ೪-೩-೦ | ೩-೮-೦ |
| [illegible] .. | [illegible] | ೦-೯-೦ |
| [illegible] ೧ ಕ್ಕೆ .. | .. [illegible] | ೦-೮-೦ |
| [illegible] | [illegible] | [illegible] |
| [illegible] | [illegible] | [illegible] |
| [illegible] | [illegible] | [illegible] |
| [illegible] | [illegible] | [illegible] |

[illegible] Printed and published by [illegible] Manager, Wesleyan Mission Press, Mysore. [illegible] 1903

# ವೃತ್ತಾಂತ ಪತ್ರಿಕೆ.

REGISTERED M 20

೨೧ ನೆ ಪುಸ್ತಕ —o— ಕ್ರಯ ೧ ನೆ ಪುಸ್ತಕ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಪುಸ್ತಕ ೧೬ ಮೈಸೂರು—ಸನ್ ೧೯೦೬ ನೇ ಇಸವಿ ಅಕ್ಟೋಬರ್ ತಾರೀಖು ೨೨ ನೇ ಗುರುವಾರ. ಸಂಚಿಕೆ ೨೧



ಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತದ ಕನ್ನಡ ಟೀಕು

ಆದಿಪರ್ವ ಎರಡನೇ ಭಾಗ ೩ ರೂ. ವಿರಾಟಪರ್ವ ೧ ರೂ. ಬೀಷ್ಮ ೨ ರೂ. ಅನುಶಾಸನಿಕಪರ್ವ ...

ರಾಮಾಯಣ ... ಕನ್ನಡ ರಾಮಾಯಣ ಬಾಲಕಾಂಡ ೧ ರೂ. ಅಯೋಧ್ಯಾಕಾಂಡ ೨ ರೂ. ಅರಣ್ಯಕಾಂಡ ೧ ರೂ. ಕಿಷ್ಕಿಂಧಾಕಾಂಡ ೧ ರೂ. ಸುಂದರಕಾಂಡ ...

ಶ್ರೀ ಕೃಷ್ಣರಾಜ ವಾಣೀವಿಲಾಸ ಭಾಗವತದ ಕನ್ನಡ ಟೀಕು

... ಸ್ಕಂಧಗಳು ... ದಶಮಸ್ಕಂದ ...

... ಗಳ ಕ್ಯಾಟಲಾಗನ್ನು ಅಪೇಕ್ಷಿಸಿದಲ್ಲಿ ಕಳುಹಿಸುತ್ತೇವೆ

ಎಂ. ರಾಮಪ್ಪ ಅಂಡ್ ಸನ್,

... ಬೆಂಗಳೂರು ಸಿಟಿ

## ಸ್ಟಾಂಡರ್ಡ್

## ಲೈಫ್ ಇನ್ಶ್ಯೂರೆನ್ಸ್ ಕಂಪೆನಿ.

11

[illegible]

ಸರಸ್ವತೀಕರ ಕಸ್ತೂರಿ ಮಾತ್ರೆಯು

19

ಈ ಮಾತ್ರೆಯು ತಾಂಬೂಲದನ್ನು ಸೇವಿಸತಕ್ಕಂಥವರಿಗೆ ಅತ್ಯಂತ ಉಪಯುಕ್ತವಾದದ್ದು ಈ ಮಾತ್ರೆ ೧-೨ ತಾಂಬೂಲದ ಸಂಗಡ ಸೇವಿಸುವದರಿಂದ ಬಾಯಿಯು ಸುವಾಸನೆಯುಳ್ಳದಾಗಿ ಬಾಯಿಯ ದುರ್ಗಂಧ, ಕೋಗಿ ಅಜೀರ್ಣ, ಉಷ್ಣರೋಗ, ಬಾಯಿಯ ಹುಣ್ಣು, ... ವಾಯು, ಶೀತ, ಪಿತ್ಥ, ಮಲಬದ್ಧ, ದಂತರೋಗ, ..., ಕೆಮ್ಮು, ಜ್ವರ, ..., ಅತಿಸಾರ ಇತ್ಯಾದಿ ಅನೇಕ ರೋಗಗಳೆಲ್ಲಾ ... ಈ ಮಾತ್ರೆಯು ನಿಮ್ಮ ... ಅನುಭವಕ್ಕೆ ... ೨೦೦ ಮಾತ್ರೆಗಳುಳ್ಳ ... ಬೆಲೆ ... ಆಣೆ ... ತಿಂಗಳು ಸೇವಿಸುವದರಿಂದ ನಿಮಗುಂಟಾಗುವ ಅನುಭವವೆ ...

... ಕಂಪೆನಿ, ಬೆಂಗಳೂರು ಸಿಟಿ

ROBINSON'S

PATENT BARLEY.

ರಾಬಿನ್ಸನ್ಸ್ ಪೇಟೆಂಟ್

ಬಾರ್ಲಿ ಹಿಟ್ಟು

[illegible]

## MELLIN'S FOOD.

ಮೆಲಿನ್ಸ್ ಯವರು ಧಾನ್ಯಗಳಿಂದಲೇ ತಯಾರು

ಮಾಡಿರುವ ಆಹಾರ.

81

೧ ಮೆಲ್ಲಿನ್‌ರು ಮಾಡಿರುವ ಆಹಾರವು ಕೇವಲ ... ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ

೨ ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶರಗಳೂ ... ಬಲವಾಗುವಂತೆ ಪೋಷಿಸುತ್ತದೆ

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ... ಬೆಳೆಯುವದಕ್ಕೆ ಸಹಾಯಕವಾಗಿದೆ

೪. ಮೆಲ್ಲಿನ್‌ರ ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ... ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ

೫ ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ... ಬೆಳೆಯುವ ಕೂಸುಗಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ

೬ ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ... ಕೆಡುವದಿಲ್ಲ

೭ ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ... ಕೂಸುಗಳಿಗಾದರೂ ... ಯೋಗ್ಯವಾದದ್ದಾಗಿದೆ

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ... ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಕೂಸುಗಳಿಗೆ ಆಹಾರವಾದಂತಾಗುತ್ತದೆ

೯ ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ... ಸುಲಭವಾಗಿ ಜೀರ್ಣಿಸಿ ... ದೇಹವು ... ವಾಗುತ್ತದೆ

೧೦ ಮೆಲ್ಲಿನ್‌ರು ಮಾಡಿರುವ ಆಹಾರವು ... ತಪ್ಪಿಸುತ್ತದೆ

೧೧ ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರಿಗೂ ... ಯೋಗ್ಯವಾಗಿದೆ

೧೨ ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ...

೧೩ ಮೆಲ್ಲಿನ್‌ರ ಮಾಡಿರುವ ಆಹಾರವು ...

೧೪ ಮೆಲ್ಲಿನ್‌ರು ಮಾಡಿರುವ ಆಹಾರವು ...

೧೫ ಮೆಲ್ಲಿನ್‌ರು ಮಾಡಿರುವ ಆಹಾರವು ...

ಈ ಆಹಾರವನ್ನು ...

... ಕಂಪೆನಿ.

... ಕಂಪೆನಿ

## ಗಾತ್ರಸಂಜೀವಿನಿ.

8

೧ ರೂ. ೪ ಆ.; ವಿ. ಪಿ. ಚಾರ್ಜ್ ೩ ಆ.

ಕೆ. ಸರಸುಬ್ಬಯ್ಯ ಮತ್ತು ಕಂಪೆನಿ, ಮೈಸೂರು.

### ಮಹಾರಾಜರವರ ಫೋಟೋಗಳು.

ಇತ್ತ ವಿಲಾಯತಿಯಿಂದ ಬಂದಿವೆ. ಮುಗಿದುಹೋದಾವು! ಜಾಗ್ರತೆ ನೋಡಿ! ಬಹಳ ಸೊಗಸಾಗಿವೆ, ದೊಡ್ಡ ಸೈಜನವು, ಕಪ್ಪು ಬಣ್ಣಗಳಲ್ಲ. ಕ್ರಯ ಎರಡೇ ಆಣೆ.

ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ತಸ್ವೀರುಗಳು; ಸುಂದರವಾದ ಬಣ್ಣಗಳಾಗಿವೆ. ಕ್ರಯ ದೊಡ್ಡ ಸೈಜನವು ೪ ಆಣೆ; ಸಣ್ಣ ಸೈಜನವು ೨ ಆಣೆ.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.



ಇಗೋ ಇಷ್ಟರಲ್ಲಿಯೇ ಹೊಸ ಪುಸ್ತಕ! ಬೇಗ ನೋಡಿರಿ !!

### ಸ್ವಪ್ರಯಾಸ ಫಲದೀಪಿಕೆ.

ಈ ಪುಸ್ತಕವು ಸ್ಮೈಲ್ಸ್ ಸೆಲ್ಫ್ ಹೆಲ್ಪ್ ಎಂಬ ಲೋಕಪ್ರಸಿದ್ಧವಾದ ಪುಸ್ತಕದ ಆಧಾರದ ಮೇಲೆ, ಕನ್ನಡಿಗರಿಗೆ ಅನುಕೂಲವಾಗಿ ಬರೆಯಲ್ಪಟ್ಟಿದೆ. ಈ ಪುಸ್ತಕವು ವಿಶೇಷವಾದ ಹೆಸರನ್ನೂ ಕೀರ್ತಿಯನ್ನೂ ಪಡೆದಿರುವದರಿಂದ ಲೋಕದ ಅನೇಕ ಭಾಷೆಗಳಲ್ಲಿ ತರ್ಜುಮೆ ಮಾಡಲ್ಪಟ್ಟಿದೆ. ಅನೇಕ ಜನಾಂಗದವರು ಈ ಪುಸ್ತಕವನ್ನೇ ಓದಿದ್ದರಿಂದಲೇ ನಾಗರೀಕವಂತರಾದರು. ಈ ಪುಸ್ತಕವು ಧೈರ್ಯಗುಂದಿದವರಿಗೆ ಧೈರ್ಯವನ್ನೂ ಸಮರ್ಥರಿಗೆ ಮತ್ತಷ್ಟು ಸಾಮರ್ಥ್ಯವನ್ನೂ ಪಡ್ಡರಿಗೆ ವಿವೇಕವನ್ನೂ ಕೊಡುವದಾಗಿಯೂ ಪ್ರಸಿದ್ಧವಾಗಿದೆ. ಪುಸ್ತಕದ ಕ್ರಯ ನಾಲ್ಕಾಣೆ ಮಾತ್ರ. ವಿ. ಪಿ. ಬಿ. ಯಲ್ಲಿ ತರಿಸಿಕೊಂಡರೆ ಆರು ಆಣೆಗಳಾಗುವವು. ಬೇಗ ತರಿಸಿಕೊಳ್ಳಿ ! ವಿಳಾಸ — ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.



### ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

6

೧೮೯೫ ನೆ ಇಸವಿ ಮೈಸೂರು ಕಂಪೆನಿ ಆಕ್ಟಿಗೆ ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ಶ್ರೀಮನ್ ಮೈಸೂರು ಮಹಾರಾಜರವರ ಗೌರ್ಮೆಂಟಿನವರಿಂದ ಗ್ಯಾರಂಟೀ ಮಾಡಲ್ಪಟ್ಟ ಸದರಿ ಕಂಪೆನಿಯ ಷೇರು ಒಂದಕ್ಕೆ ೨೫ ರೂಪಾಯಿ ಪ್ರಕಾರ ೨೦,೦೦೦ ಷೇರುಗಳಿಂದ ಆಗುವ ೫,೦೦,೦೦೦ ರೂಪಾಯಿ ಭಂಡವಾಳ. ಷೇರುಗಳು ತೆಗೆದುಕೊಳ್ಳುವವರು ಇದರಡಿ ಸೈನ್ ಮಾಡಿರುವವರಿಂದ ವಿಶಿಷ್ಟ ಖಬರೀಲು ತಿಳಿದುಕೊಳ್ಳಬಹುದು. ಅಪ್ಲಿಕೇಷನ್‌ಗಳನ್ನು ಮತ್ತು ಮೊಬಲಗನ್ನು ಅವರಲ್ಲೇ ಕಳುಹಿಸಬಹುದು.

ಬಿ. ವಿ ರಾಮಸ್ವಾಮಿ ಶೆಟ್ರು, ಬಿ. ಏ.,

ಅಡ್ವೊಕೇಟ್ ಮತ್ತು ಜನರಲ್ ಏಜಂಟ್,

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ,

ನಗರ್ತಪೇಟೆ, ಬೆಂಗಳೂರು.


### ನಮ್ಮ ಚಂದಾದಾರರಿಗೆ ನೋಟೀಸ್.

" ವೃತ್ತಾಂತ ಪತ್ರಿಕೆ " ಯ ಏಜಂಟರು ಚಂದಾ ವಸೂಲ್ಮಾಡಿಕೊಂಡಲ್ಲಿ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವೆ ಜವಾಬ್ದಾರರಾಗುವುದಿಲ್ಲ.

ಮ್ಯಾನೇಜರ್,

ಮೈಸೂರು. " ವೃತ್ತಾಂತ ಪತ್ರಿಕೆ " ಆಫೀಸ್.

## ವೃತ್ತಾಂತ ಪತ್ರಿಕೆ.

:o:

ಸ೯ ೧೯೦೩ನೇ ಇಸವಿ ಅಕ್ಟೋಬರ್ ತಾ|| ೨೨ ನೇ ಗುರುವಾರ.

### ರಷ್ಯಾ ಜಪಾನ್ ರಾಜ್ಯಗಳಿಗೆ ಯುದ್ಧ ಸಂಭವಿಸುವುದೋ ?

ನೆನ್ನೆ ಮೊನ್ನೆ ಬಂದ ತಂತೀವರ್ತಮಾನಗಳನ್ನು ನೋಡಲಾಗಿ ರಷ್ಯಾ ಜಪಾನ್ ರಾಜ್ಯಗಳಿಗೆ ಮನಸ್ತಾಪಗಳು ಹೆಚ್ಚಾಗಿವೆ ಎಂತಲೂ, ಅವರವರಿಗೆ ಯುದ್ಧ ಪ್ರಾಪ್ತವಾಗಬಹುದೆಂತಲೂ ಕಾಣುವುದು. ಎರಡು ಮೂರು ವರ್ಷಗಳ ಕೆಳಗೆ ಚೀಣದಲ್ಲಿ ಗಲಭೆಯುಂಟಾಗಿ ಯೂರೋಪಿನ ರಾಜ್ಯಗಳವರು ಚೀಣೆಯವರ ಮೇಲೆ ಯುದ್ಧ ಮಾಡುತ್ತಿದ್ದಾಗ ರಷ್ಯಾರಾಜ್ಯದವರು ಚೀಣದ ಒಂದು ಭಾಗವಾದ ಮಾಂಚೂರಿಯಾ ಸೀಮೆಯನ್ನು ಆಕ್ರಮಿಸಿಕೊಂಡುಬಿಟ್ಟರು. ಇದನ್ನು ಅವರಿಂದ ಬಿಡಿಸಿಕೊಳ್ಳಬೇಕೆಂದು ಚೀಣೆಯವರು ಕೆಲವು ಕಾಲದಿಂದ ಸಾಹಸಪಡುತ್ತಿದ್ದಾರೆ. ರಷ್ಯಾದವರಾದರೋ ಮಾಂಚೂರಿಯವನ್ನು ಆಕ್ರಮಿಸಿಕೊಂಡ ತರುವಾಯ ಅನೇಕ ಕೋಟಿ ದ್ರವ್ಯವನ್ನು ವೆಚ್ಚ ಮಾಡಿ, ಆ ಸೀಮೆಯಲ್ಲಿ ಪೋರ್ಟ್ ಆರ್ಥರೆಂಬ ತೀರಪಟ್ಟಣದ ತನಕ ದೊಡ್ಡ ರೈಲನ್ನು ಹಾಕಿಕೊಂಡರು; ಅನೇಕ ಕೋಟೆಕೊತ್ತಲಗಳನ್ನೂ, ಸಮುದ್ರತೀರಗಳಲ್ಲಿ ಹಡಗುಗಳು ನಿಲ್ಲುವುದಕ್ಕೆ ಅನುಕೂಲಿಸುವಂಥಾ ರೇವುಗಳನ್ನೂ, ಸೈನಿಕರಿಗೋಸ್ಕರ ಬ್ಯಾರಕ್ ಮನೆಗಳನ್ನೂ, ರೈಲ್ ರಸ್ತೆಯ ಉದ್ದಕ್ಕೂ ಅನೇಕ ಪಟ್ಟಣಗಳನ್ನೂ ಕಟ್ಟಿಕೊಂಡರು; ಇವಲ್ಲದೆ ಅವರು ಮಾಂಚೂರಿಯದಲ್ಲಿ ಕಳ್ಳಕಾಕರನ್ನು ಸದೆದು, ಪ್ರಜಾಸೌಖ್ಯವನ್ನು ಕಾಪಾಡುತ್ತಿದ್ದಾರೆ. ಇಂಥಾದ್ದರಲ್ಲಿ ಅವರು ಈಗ ಆ ಸೀಮೆಯನ್ನು ಚೀಣೆಯವರಿಗೆ ಬಿಟ್ಟುಕೊಡುತ್ತಾರೆಂದು ಊಹಿಸುವುದು ಸಾಧ್ಯವಲ್ಲ. ಆದರೂ ರಷ್ಯಾದವರು ಪೋರ್ಟ್ ಆರ್ಥರಿನಲ್ಲೂ, ರೈಲ್ವೆ ಲೈನಿನಲ್ಲೂ ತಮ್ಮ ಸೈನ್ಯಗಳನ್ನು ಉಳಿಸಿಕೊಂಡು, ಉಳಿದ ಭಾಗಗಳಲ್ಲಿ ರಕ್ಷಕ ಸೈನ್ಯವನ್ನು ರಷ್ಯಾಕ್ಕೆ ವಾಪಸು ಕರೆಸಿಕೊಳ್ಳುತ್ತೇವೆಂಬದಾಗಿ ಕೆಲವು ತಿಂಗಳ ಕೆಳಗೆ ಮಾತುಕೊಟ್ಟರು. ಅದರಂತೆ ಅವರು ಇದುವರೆಗೂ ನಡೆಕೊಳ್ಳಲಿಲ್ಲ, ಬಹುಶಾ ಇನ್ನು ಮುಂದಾದರೂ ನಡೆಕೊಳ್ಳುತ್ತಾರೆಂಬ ನಿರೀಕ್ಷೆಯೂ ಕಾಣುವುದಿಲ್ಲ. ಇವಲ್ಲದೆ ರಷ್ಯಾದವರು ಪೆಸಿಫಿಕ್ ಸಾಗರದ ದಡದಲ್ಲಿ ಹಿಮದಿಂದ ಕಟ್ಟದೆ ಸರ್ವದಾ ಹಡಗುಗಳ ಸಂಚಾರಕ್ಕೆ ಅನುಕೂಲಿಸುವಂಥಾ ಒಂದು ತೀರಪಟ್ಟಣವನ್ನು ಹ್ಯಾಗಾದರೂ ಸಂಪಾದಿಸಿಕೊಳ್ಳಬೇಕೆಂದು ಸಾಹಸಪಡುತ್ತಿದ್ದಾರೆ. ಇಂಥಾಪಟ್ಟಣದಿಂದ ಅವರ ವ್ಯಾಪಾರಾಭಿವೃದ್ಧಿಗೂ ಸೈನ್ಯನಿವಾಸಕ್ಕೂ ತುಂಬಾ ಸಹಾಯವಾದೀತು.

ಮಾಂಚೂರಿಯಾ ಸೀಮೆಯ ಸಮೀಪದಲ್ಲೇ ಕೋರಿಯಾರಾಜ್ಯವಿರುವುದು. ಬಹಳ ಕಾಲದಿಂದಲೂ ಜಪಾನ್ ರಾಜ್ಯದವರು ಕೋರಿಯಾ ರಾಜ್ಯದವರಲ್ಲಿ ಪೊಕ್ಕುಬಳಕೆಯನ್ನು ಮಾಡಿಕೊಂಡಿದ್ದಾರಾದಕಾರಣ ಜಪಾನಿನವರಿಗೆ ಮಾಂಚೂರಿಯವನ್ನು ಆಕ್ರಮಿಸಿಕೊಂಡಿರುವ ರಷ್ಯಾದವರು ಎಲ್ಲಿ ಕೋರಿಯಕ್ಕೂ ಪ್ರವೇಶಿಸಿ ಅದನ್ನೂ ಆಕ್ರಮಿಸಿಕೊಳ್ಳುವರೋ ಎಂಬ ಅನುಮಾನ ಉಂಟಾಗಿದೆ. ಆದುದರಿಂದ ಜಪಾನ್‌ನವರು— ರಷ್ಯಾದವರನ್ನು ಬೇಗನೆ ಮಾಂಚೂರಿಯದಿಂದ ಹೊರಡಿಸಿಬಿಡಿ ಎಂಬದಾಗಿ ಚೀನಾ ಸರ್ಕಾರದವರನ್ನು ಬಲವಂತ ಮಾಡುತ್ತಿದ್ದಾರೆ. ಅದರಂತೆಯೇ ಚೀಣೆಯವರು ರಷ್ಯಾದವರಿಂದ ಮಾಂಚೂರಿಯಾ ಸೀಮೆಯನ್ನು ಬಿಡಿಸಿಕೊಳ್ಳಬೇಕೆಂದು ಪ್ರಯತ್ನಪಡುತ್ತಿರುವರು. ಈ ಭಾಗದಲ್ಲಿ ಅಮೇರಿಕ, ಇಂಗ್ಲಾಂಡ್ ರಾಜ್ಯಗಳವರು ಚೀಣೆಯವರಿಗೆ ಒತ್ತಾಸೆಯಾಗಿದ್ದಾರೆ ಆದರೆ ಈ ವಿಷಯಕ್ಕೆ ಯುದ್ಧವೇನಾದರೂ ಆಗಬೇಕಾಗಿ ಬಂದಲ್ಲಿ ಅಮೇರಿಕದವರಾಗಲಿ ಇಂಗ್ಲಾಂಡಿನವರಾಗಲಿ ಜಪಾನ್‌ನವರಿಗೆ ಸಹಾಯಮಾಡುವವರಾಗಿಲ್ಲ. ಜಪಾನ್‌ನವರೊಬ್ಬರೇ ರಷ್ಯಾದವರ ಮೇಲೆ ಯುದ್ಧಮಾಡಿಕೊಳ್ಳಬೇಕಾಗುವುದು.

ರಷ್ಯಾದವರು ಮಾಂಚೂರಿಯದಲ್ಲಿ ಎರಡು ಲಕ್ಷ ಸೈನ್ಯವನ್ನಿಟ್ಟುಕೊಂಡಿದ್ದಾರೆ; ಪೋರ್ಟ್‌ಆರ್ಥರಿನಲ್ಲೇ ಅವರ ೯೦,೦೦೦ ಸೈನ್ಯವೂ, ೪೦ ಹಡಗುಗಳೂ ಇರುತ್ತವೆ. ಆದರೆ ಜಪಾನ್‌ರಾಜ್ಯದ ಸೈನ್ಯವೂ ನಾವೆಯೂ ಬಹಳ ಉತ್ಕೃಷ್ಟವಾದವುಗಳೇ ಆದಾಗ್ಯೂ ಅವರು ಏಕಾಂಗಿಗಳಾಗಿ ನಿಂತು ರಷ್ಯಾದವರ ಮೇಲೆ ಯುದ್ಧಮಾಡುವುದರಲ್ಲಿ ಫಲವಾಗುವುದು ಕಷ್ಟವೆಂದು ತೋರುತ್ತದೆ.


### ಛೇಂಬರ್ಲಿನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

42

ಹೊಟ್ಟೆಹುಳ್ಳಿಯ ನೋವು, ವಾಂತಿಭೇದಿ, ಕಲರಾ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಕಿಬ್ಬಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಸಂಶನೀಯ ಮತ್ತೆ ಬೇರೆ ಇಲ್ಲ. ಇದಕ್ಕೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳುವದನ್ನು ಕೇಳಿ:—"ಅಜೀರ್ಣ ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ತತ್‌ಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,

ಮೌಂಟ್ ರೋಡ್,

ಮದರಾಸ್.


### ಪ್ರಭುವಿನ ಪ್ರಾರ್ಥನೆ—IV.

ಭಗವಂತನ ವಿಷಯವಾದ ಮೂರು ಬಿನ್ನಹಗಳು.

" ನಿನ್ನ ನಾಮವು ಪರಿಶುದ್ಧವಾಗಿಯೇ ಇರಲಿ,
ನಿನ್ನ ರಾಜ್ಯವು ಬರಲಿ,
ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವಂತೆ, ಭೂಲೋಕದಲ್ಲಿಯೂ ನೆರವೇರಲಿ "

ನಾವು ಹಿಂದಿನ ಸಂಚಿಕೆಯಲ್ಲಿ ದೇವರ ಹೆಸರನ್ನು ಕುರಿತು ಓದಿದೆವಷ್ಟೆ. ಅದು ಬಹು ಸುಲಭವಾಗಿ ಗ್ರಹಿಸತಕ್ಕದ್ದಾಗಿ ತೋರಿದರೂ, ದೇವರ ಸ್ವಭಾವ ಲಕ್ಷಣಗಳನ್ನು ತಿಳಿಸುವದಕ್ಕೆ ನಮ್ಮ ಮಾನುಷ ಭಾಷೆಯಲ್ಲಿ ಉಪಯೋಗಿಸುವ ಹೆಸರುಗಳಲ್ಲಿ ಇದಕ್ಕಿಂತ ಚನ್ನಾಗಿ ಒಪ್ಪುವಂಥಾದ್ದು ಬೇರೆ ಯಾವದೂ ಇಲ್ಲ. ಪ್ರಾರ್ಥನೆಗೆ ಮುಂಕೊಂಡವನು ಈ ಉತ್ಕೃಷ್ಟವಾದ ಹೆಸರನ್ನು ಉಚ್ಚರಿಸಿದ ಕೂಡಲೆ—" ನಿನ್ನ ದೇವರಾದ ಯೆಹೋವನ ಹೆಸರನ್ನು ವ್ಯರ್ಥವಾಗಿ ಎತ್ತಬೇಡ " ಎಂಬ ದಿವ್ಯಾಜ್ಞೆಯು ನೆನಪಿಗೆ ಬರುತ್ತದೆ.

ದೇವರಿಗೆ ಸಲ್ಲುವ ಪ್ರತಿಯೊಂದು ಯೋಗ್ಯವಾದ ಹೆಸರೂ ಆತನ ಮಹಿಮೆಯನ್ನು ಪ್ರಕಟಿಸುವಂಥಾದ್ದಾಗಿದೆ ಆ ಹೆಸರು ದೇವರ ನಿಜವಾದ ಸ್ವಭಾವ ಲಕ್ಷಣಗಳನ್ನು ಸ್ವಲ್ಪ ಮಟ್ಟಿಗಾದರೂ ಪ್ರಕಟಿಸುತ್ತದೆ. ಆದಕಾರಣ ದೇವರು ಯಾವದಾದರೊಂದು ಹೆಸರಿನ ಮೂಲಕವಾಗಿ ನಮ್ಮ ಗಮನಕ್ಕೆ ತಂದ್ಪಟ್ಟ ಕೂಡಲೆ ನಮ್ಮ ಹೃದಯವು ಕೇವಲ ಭಯಭಕ್ತಿಯಿಂದ ತುಂಬಬೇಕು. ನಾವು ಹಳೇ ಒಡಂಬಡಿಕೆಯನ್ನು ಪರೀಕ್ಷಿಸುವಲ್ಲಿ ದೇವರಿಗೆ—" ಸರ್ವಶಕ್ತನು (ಕೊರ. ೬.೩) " ಸೈನ್ಯಗಳ ಕರ್ತನು " (ಯೆಶ. ೧೦ ...) ಎಂದು ಮೊದಲಾದ ಬೇರೆಬೇರೆ ನಾಮಾಂಕಿತಗಳು ಕೊಟ್ಟಿರುವದನ್ನು ಕಾಣಬಹುದು. ಹಳೇ ಒಡಂಬಡಿಕೆಯಲ್ಲಿ ಸಲ್ಲುವ ಸಕಲ ನಾಮಾಂಕಿತಗಳಲ್ಲಿ ಯಾಹ್ವೆ ಎಂದು ಹೇಳಿರುವ ನಾಮವೇ (ಹೊ. ೬.೩) ಮಹಾ ಘನವಾದದ್ದೆಂದು ತಿಳಿಯತಕ್ಕದ್ದು. ಈ ಹೆಸರಿನ ಅರ್ಥವೇನೆಂದರೆ—ಸ್ವಯಂಭು ಮತ್ತು ಸಂರಕ್ಷಕನು ಎಂಬುದು. ಈ ಹೆಸರು ಯೆಹೂದ್ಯರೊಳಗೆ ಮಹಾ ಪವಿತ್ರವಾದದ್ದೆಂದೆಣಿಸಲ್ಪಟ್ಟ ಕಾರಣ ಅವರು ಇದನ್ನು ಬಾಯಿಯಿಂದ ಉಚ್ಚರಿಸುತ್ತಲೇ ಇರಲಿಲ್ಲ. ಕ್ರೀಸ್ತಸ್ವಾಮಿಯು ನಮಗೆ ಕಲಿಸಿಕೊಟ್ಟಿರುವ " ತಂದೆ " ಎಂಬ ಹೆಸರಾದರೋ ಬಗವಂತನ ಶಕ್ತಿಯನ್ನೂ ಜ್ಞಾನವನ್ನೂ ಸಂಪೂರ್ಣವಾಗಿ ಪ್ರಕಟಿಸತಕ್ಕದ್ದಾಗಿದೆ. ಭಗವಂತನ ಹೆಸರುಗಳೊಳಗೆ ಆತನ ಮಹಿಮಾಲಕ್ಷಣಗಳನ್ನು ಪ್ರಕಟಿಸತಕ್ಕ ಹೆಸರುಗಳಿಗೆ ಸಮಾನವಾದದ್ದು ಬೇರೆ ಯಾವದೂ ಇಲ್ಲ. ಹೀಗಿರುವಲ್ಲಿ ಈ ಹೆಸರನ್ನು ನಾವು ಯಥೋಚಿತವಾಗಿ ಆಲೋಚಿಸದೆ ಅಥವಾ ಭಯಭಕ್ತಿಯುಳ್ಳದೆ ಉಚ್ಚರಿಸುವದು ಎಷ್ಟು ಭಯಂಕರವಾದ ಪಾಪ! ಆದಕಾರಣವೇ ನಾವು—" ನಿನ್ನ ನಾಮವು ಪರಿಶುದ್ಧವಾಗಿಯೇ ಇರಲಿ " ಎಂದು ಮೊದಲು ಪ್ರಾರ್ಥಿಸುವದು ಬಹು ಅವಶ್ಯವಾಗಿದೆ. ಈ ಬಿನ್ನಹದ ಅಭಿಪ್ರಾಯವೇನೆಂದರೆ—ಯಾವ ಸ್ಥಳದಲ್ಲಿ ನಿನ್ನ ಸ್ವಭಾವ ಲಕ್ಷಣಗಳು ಪ್ರತ್ಯಕ್ಷವಾಗುತ್ತವೆಯೋ ಅಲ್ಲೆಲ್ಲಾ ಜನಗಳು ನಾಗಲಿ ಮತ್ತಾರೇ ಆಗಲಿ ಯಥೋಚಿತವಾದ ನಮ್ರತೆಯಿಂದ ಅವನ್ನು ಗ್ರಹಿಸುವವನಾಗಲಿ ಎಂಬುದು ಇಷ್ಟೇ ಅಲ್ಲ, ನಿನ್ನ ಹೆಸರಿನ ನಿನ್ನ ವಿಷಯಕವಾದ ಯಾವ ತಿಳುವಳಿಕೆಯನ್ನು ಗ್ರಹಿಸಬೇಕೋ ಅದನ್ನು ಕ್ರಮೇಣ ಗ್ರಹಿಸುವಂತೆಯೂ ಅನುಗ್ರಹಿಸಬೇಕೆಂಬ ಅಭಿಪ್ರಾಯವೂ ಈ ಬಿನ್ನಹದಲ್ಲಿ ಅಡಕವಾಗಿದೆ. ಮತ್ತು ಈ ಬಿನ್ನಹದಲ್ಲಿ ಇನ್ನೊಂದು ಅಭಿಪ್ರಾಯವೂ ಸೂಚಿತವಾಗಿದೆ. ಅದೇನೆಂದರೆ—ಮನುಷ್ಯರೆಲ್ಲರ ಬಾಹಸ್ಥಿತಿಯೇ. ಅದು ಹ್ಯಾಗಂದರೆ—ದೇವರ ಹೆಸರನ್ನು ತಿಳಿಯದೆಯೂ, ಅಥವಾ ತಿಳಿದಿದ್ದರೂ ಅದನ್ನು ಘನಪಡಿಸದೆಯೂ ಇದ್ದು ಭಗವಂತನನ್ನು ತಿರಸ್ಕರಿಸುವ ಜನರಿದ್ದಾರೆಂಬ ಅಭಿಪ್ರಾಯವೂ ಇದರಲ್ಲುಂಟು. ಈ ಬಿನ್ನಹದ ತರುವಾಯ ಬರುವ ಮತ್ತೆರಡು ಬಿನ್ನಹಗಳನ್ನು ನೋಡಿದಲ್ಲಿ ಈ ಅಭಿಪ್ರಾಯವು ಸ್ಪಷ್ಟವಾಗಿ ಕಂಡುಬರುತ್ತದೆ.

ಹಾಗಾದರೆ ದೇವರು ಸಕಲ ಮನುಷ್ಯರಿಗೂ ರಾಜನಲ್ಲವೆಂಬ ಅಭಿಪ್ರಾಯವಾಯಿತಲ್ಲವೆ? ಅಂದರೆ ಆತನ ಚಿತ್ತವನ್ನು ನೆರವೇರಿಸುವರು ಭೂಲೋಕದಲ್ಲಿದ್ದಾರಲ್ಲವೇ ? ಹೌದು ಈ ಪ್ರಾರ್ಥನೆಯಿಂದ ನಾವು ಭಗವಂತನೊಡನೆ ಅನ್ಯೋನ್ಯ ಸಂಭಾಷಣೆಯನ್ನು ಬೆಳೆಸುತ್ತಿರುವಾಗ ನಾವು ಜೀವಿಸುತ್ತಿರುವ ಈ ಲೋಕದಲ್ಲಿ ಕಾಣಬರುವ ಪಾಪಸ್ಥಿತಿಯನ್ನು ಸ್ಮರಿಸಿ ದುಃಖಪಡಬೇಕಾಗುತ್ತೆ. ಈ ದುಃ

...ತ್ತು ದೇವರ ಪವಿತ್ರತ್ವವೆಂಬ ತೇಜಸ್ಸು ಕಂಗೊಳಿಸುತ್ತಿರುವಾ ಗಲೂ ಸುತ್ತೆಂದು ಕಡೆಯಲ್ಲಿ ಮನುಷ್ಯರ ಪಾಪತ್ವವೆಂಬ ಕತ್ತಲೆ ಕವಿದದ್ದು ತೋರ ಬರುತ್ತದೆ. ಒಳ್ಳೇದು. ದೇವರ ರಾಜ್ಯವು ಬರಲೆಂಬಲ್ಲಿ ಅಭಿಪ್ರಾಯವೇನು? ಅವನು ಸರ್ವಶಕ್ತನಲ್ಲವೇ? ಅವನ ಅಧಿಕಾರಕ್ಕೆ ಎಲ್ಲರೂ ಒಳಪಟ್ಟಿಲ್ಲವೇ? ಆಹಾ! ಅವನು ಸರ್ವಶಕ್ತನೇ ಹೌದು, ಎಲ್ಲರೂ ಅವನ ಅಧೀನದಲ್ಲೇ ಇದ್ದಾರೆ. ಆದರೆ ಭಗವಂತನು ಮನುಷ್ಯರಿಗೆ ಸ್ವತಂತ್ರವಾದ ಚಿತ್ತಗಳನ್ನು ಕೊಟ್ಟು ನಿರ್ಮಿಸಿದ್ದಾನೆ. ಆದುದರಿಂದ ಯಾರು ಸ್ವತಃ ದೇವರ ವಶಕ್ಕೆ ತಮ್ಮ ಚಿತ್ತಗಳನ್ನು ಒಪ್ಪಿಸಿ ಕೊಟ್ಟಿದ್ದಾರೋ ಅವರು ಮಾತ್ರ ಭಗವಂತನ ಆತ್ಮಿಕ ರಾಜ್ಯಭಾರಕ್ಕೆ ಒಳಪಟ್ಟಿರುವರು. ಈ ಆತ್ಮಿಕ ರಾಜ್ಯವನ್ನು ಕುರಿತು ಬೋಧಿಸುವದಕ್ಕೋಸ್ಕರವೇ ಯೇಸು ಸ್ವಾಮಿಯು ಬಂದದ್ದು. ಮನುಷ್ಯರನ್ನು ತಮ್ಮ ಸ್ವೇಚ್ಛೆ, ಅವಿಧೇಯತ್ವಗಳೆಂಬ ದುರ್ಮಾರ್ಗಗಳಿಂದ ಬಿಡಿಸಿ ದೇವರಿಗೆ ವಿಧೇಯರಾಗಿ ಆತನೊಡನೆ ಅನ್ಯೋನ್ಯವಾಗಿ ಬದುಕುವ ಸನ್ಮಾರ್ಗಕ್ಕೆ ತಿರುಗಿಸುವದಕ್ಕೋಸ್ಕರವೇ ಕ್ರೀಸ್ತನು ಭೂಲೋಕಕ್ಕೆ ಬಂದನು.

ದೇವರ ವಿಷಯವಾಗಿ ಪ್ರಾರ್ಥಿಸಬೇಕೆಂದು ಸ್ವಾಮಿ ಕಲ್ಪಿಸಿಕೊಟ್ಟಿರುವ ಈ ಬಿನ್ನಹಗಳ ಅಭಿಪ್ರಾಯವೇನಂದರೆ—ಮನುಷ್ಯರ ಕರ್ತನಾದ ಸಕಲ ವಿಧವಾದ ಸ್ತೋತ್ರವೂ ವಿಧೇಯತ್ವವೂ ನಿಂತು ಕೊಳ್ಳಲಿ, ಸಕಲಮನುಷ್ಯರೂ ನಿನ್ನೊಬ್ಬನನ್ನೇ ರಾಜನೆಂದು ಒಪ್ಪಿಕೊಳ್ಳಲಿ, ಈ ಪ್ರಕಾರ ಪರಲೋಕದಲ್ಲಿರುವ ಪವಿತ್ರರೂ ಸಾಧುಗಳೂ ಆದ ದೇವದೂತರು ನಿನ್ನ ದಿವ್ಯಚಿತ್ತವನ್ನು ಎಷ್ಟು ಸಮರ್ಪಕವಾಗಿ ನಡಸುತ್ತಾರೋ ಹಾಗೆಯೇ ಭೂಲೋಕದಲ್ಲಿಯೂ ನಡಸುವಂತೆಯಾಗಲಿ! ಎಂಬುವದೇ. ಹೀಗೆ ಯೇಸು ಸ್ವಾಮಿಯು ಬಿನ್ನಹಗಳ ಆದಿಯಲ್ಲಿ ದೇವರ ಮಹಾ ಮಹಿಮೆಯು ಸ್ಥಿತಿಯು ಜ್ಞಾಪಕಕ್ಕೆ ತಂದು, ಮಧ್ಯದಲ್ಲಿ ಮನುಷ್ಯನ ಪಾಪಸ್ಥಿತಿಯೆಂಬ ಅಂಧಕಾರವನ್ನು ಕುರಿತು ಸೂಚಿಸಿದಾಗ್ಯೂ ಕಡೆಯಲ್ಲಿ ಪುನಃ ಪರಲೋಕದ ದಿವ್ಯ ತೇಜಸ್ಸನ್ನು ಮನಸ್ಸಿಗೆ ತಂದು ಉಲ್ಲಾಸ ಪಡಿಸುತ್ತಾನೆ.

## ಒಳದೇಶದ ವೃತ್ತಾಂತಗಳು.

ನಮ್ಮ ಸಂಸ್ಥಾನಕ್ಕೆ ಹೊಸದಾಗಿ ನೇಮಿಸಲ್ಪಟ್ಟಿರುವ ಬ್ರಿಟಿಷ್ ರೆಸಿಡೆಂಟ್ ಮಿ॥ ಬೋರ್ಡಿಲಾನ್ ಯವರು ಬೊಂಬಾಯಿಂದ ನೊವೆಂಬರ್ ೧ನೇ ಶುಕ್ರವಾರ ಬೆಳಿಗ್ಗೆ ಬೆಂಗಳೂರಿಗೆ ದಯಮಾಡಿ ಕೆಲಸ ಕಾರ್ಯವನ್ನು ವಹಿಸುವರೆಂದು ತಂತೀ ವರ್ತಮಾನ ಬಂದಿದೆ.

✽✽✽✽

ಕಳೆದ ವರ್ಷದಿಂದಲೂ ಈ ಸಂಸ್ಥಾನದಲ್ಲಿ ರೆಸಿಡೆಂಟರಾಗಿ ಕೀರ್ತಿ ಸಂಪಾದಿಸಿದ ಸರ್ ಡಿ. ರಾಬರ್ಟ್‌ಸನ್‌ರವರು ಪತ್ನಿ ಸಮೇತರಾಗಿ ನಿನ್ನೆ ಮಂಗಳವಾರ ರಾತ್ರಿ ರೈಲು ಹತ್ತಿ ಸೀಮೆಯನ್ನು ಕುರಿತು ಹೊರಟರು. ಈ ದಂಪತಿಗಳು ಚಿರಕಾಲ ವಿಶ್ರಾಂತಿಯಲ್ಲಿ ವಿಶ್ರಾಂತಿಸುವನ್ನು ಪಡೆಯಲೆಂದು ಹಾರೈಸುತ್ತೇವೆ.

✽✽✽✽

ದಾರ್ವಾಡದಿಂದ ೩೦ ಮೈಲಿ ದೂರದಲ್ಲಿರುವ ಬೆಂಗಳೂರಿಗೆ ಕೆಲವು ಪರಿವಾರ ಪಕ್ಷಿಗಳನ್ನು ಕೂಡಿ ಕಟ್ಟಿ ಬಿಟ್ಟರು. ಆ ಪೈಕಿ ಒಂದು ಎಂಬುತನ ಪಕ್ಷಿಯು ಮೊದಲನೆಯದಾಗಿ ಬಂದು ಬೆಂಗಳೂರನ್ನು ತಲುಪಿತು. ಅದು ಗಂಟೆಗೆ ೩೭ ಮೈಲಿಯಂತೆ ಹಾರಿ ಬಂದಿತೆಂದು ಗೊತ್ತುಮಾಡಿ, ಬಹುಮಾನ ಕೊಟ್ಟರು.

✽✽✽✽

ಪವಿತ್ರ ಉತ್ಸವಕಾಲದಲ್ಲಿ ರಾಜಧಾನಿಯು ಆರೋಗ್ಯವಿಚಾರವನ್ನು ನೋಡಿಕೊಳ್ಳುವದಕ್ಕಾಗಿ ಸರ್ಕಾರದವರು ಬೆಂಗಳೂರಿಂದ ಸ್ಯಾನಿಟರಿ ಇನ್ಸ್‌ಪೆಕ್ಟರ್ ವರದ್ಸಾನವರನ್ನು ಕರೆಸಿಕೊಂಡಿದ್ದರು. ಇವರು ಕಳೆದ ವಾರ ವಾಪಸು ಬೆಂಗಳೂರಿಗೆ ಪ್ರಯಾಣ ಮಾಡುತ್ತಾ ರೈಲ್ ಗಾಡಿಯಲ್ಲೇ ಕಾಲವಾಗಿದ್ದರು. ಅವರಿಗೆ ಪ್ಲೇಗ್ ಜಾಡ್ಯ ಸೋಂಕಿತ್ತೆಂದು ತಿಳಿದುಬಂದಿದೆ.

✽✽✽✽

ಈ ಸಲ ನಡೆದ ಬೆಟ್ಟದ ಜಾತ್ರೆಯಲ್ಲಿ ಕಾಡುಕರ ತೊಂದರೆಯೂ ಇತ್ತು. ಯಾರಾಗಲೂ ಸೊರಾಯನ ಅಂಗಡಿ ಬೆಟ್ಟದ ಜಾತ್ರೆಗೆ ಹೋಗುತ್ತಿರಲಿಲ್ಲ. ಅದು ಊರಲ್ಲೇ ಇರುತ್ತಿತ್ತು. ಈ ಸಲ ಈ ಅಂಗಡಿ ಬೆಟ್ಟದ ಬಾದದಲ್ಲಿಟ್ಟದ್ದರು. ಕೆಲವರು ಕುಡಿದು ಮತ್ತರಾಗಿ ಜನರ ಮೇಲೆ ಬಿದ್ದು ದೊಂಬಿಮಾಡಿದರು. ಪೊಲೀಸಿನವರು ಅವರನ್ನು ಹಿಡಿದುತಂದಿದ್ದಾರೆ.

✽✽✽✽

ಕಲ್ಕತ್ತೆಯಲ್ಲಿ ಪ್ರೈವರಾಯ ಪ್ರಭುಗಳು ಕಟ್ಟಿಸಬೇಕೆಂದು ಹೇಳಿದ್ದ ಮಾಡಿರುವ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಸಂಬಂಧ ಕಟ್ಟಡದ ಫಂಡಿಗೆ ಎರಡನೇ ಚಂದಾ ಕೊಟ್ಟದ್ದು ಒಂದೂವರೆ ಲಕ್ಷ ರೂಪಾಯಿಗಳೆಂದು ವಿದ್ವಾಂಸರು ಹೇಳುವರು. ಈ ರೀತಿ ಹಣವನ್ನು ಮೈಸೂರು ಸರ್ಕಾರಿ ಕಟ್ಟುವಲ್ಲಿಯಂದ ಕೆಲವರು ಕೊಡುತ್ತಿದ್ದು ನ್ಯಾಯವೇ ಎಂದು ಅನೇಕರು ಆಕ್ಷೇಪಣೆ ಮಾಡುತ್ತಾರೆ.

✽✽✽✽

ಫ್ರೆಂಚ್‌ರಾಕ್ಸ್ ಸಬ್ ಡಿವಿಜನಲ್ಲಿ ಅಸಿಸ್ಟೆಂಟ್ ಇಂಜನಿಯರಾಗಿದ್ದ ಮಿ॥ ದುಗ್ಗಪ್ಪಯ್ಯನವರು ೮ ದಿನ ವ್ಯಾಧಿಯನ್ನನುಭವಿಸಿ, ನೊವೆಂಬರ್ ೧೬ನೇ ಬುಧವಾರ ಬೆಳಿಗ್ಗೆ ಫ್ರೆಂಚ್‌ರಾಕ್ಸಿನಲ್ಲಿ ಕಾಲವಾದರೆಂದು ಕೇಳಿ ನಾವು ವಿಷಾದಿಸುತ್ತೇವೆ. ಇವರು ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಾ, ಆ ಡಿಪಾರ್ಟ್‌ಮೆಂಟಿನ ಜನರ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು. ತುಂಬಾ ಸ್ನೇಹಪರರಾಗಿಯೂ, ನಿಸ್ಪೃಹರಾಗಿಯೂ, ಗುಣವಂತರಾಗಿಯೂ, ಇದ್ದು ಬಾಲಸಂಸಾರಿಗಳಾಗಿಯೂ ಇದ್ದರು. ಅಂತ್ಯ ಕಾಲದಲ್ಲಿ ಅವರಿಗೆ ಸುಮಾರು ೩೫ ವರ್ಷ ವಯಸ್ಸಾಗಿದ್ದಿತು. ಒಂದು ಗಂಡು ಮಗುವೂ ಚಿಕ್ಕ ಬಳುವಳಿಸಿದ ಬಳಿಯೂ ಇರುತ್ತಾರೆ.

ಒಬ್ಬ ಬಾತ್ಮೀದಾರರು ಬರೆದಿರುವೇನೆಂದರೆ—"ಅರಸೀಕೆರೆ ತಾಲ್ಲೂಕು ಹಾರನಹಳ್ಳಿ ಹೋಬಳಿ ಕೊತ್ತನಹಳ್ಳಿ ಗ್ರಾಮದ ಕುಲಗೌಡರ ನಾಗ ತಂಡೇಗೌಡನ ಕೊಟ್ಟಿಗೆಯಲ್ಲಿ ಕೊಂಬು ಸಹಿತಕ್ಕಾಗಿ ಹಾರನಹಳ್ಳಿ ಪೋಲೀಸ್ ಇನ್ಸ್‌ಪೆಕ್ಟರವರ ಮುಸ್ಸು ಜಮ್ಮ ಯ್ಯ ಪಗೆನೆ ೧೫ ಜನಗಳ ಮೇಲೆ ಕೊಲೆಪ್ರಸಂಗ ನಡೆದು ಆ ಸ್ತ್ರೀ ಅರು ಜನರ ಮೇಲೆ ವಾರಂಟು ಕಟ್ಟಿ, ಅವರನ್ನೆಲ್ಲಾ ಹಿಡಿದು ಜಾಮೀನಿನ ಮೇಲೆ ಬಿಟ್ಟಿದಾರೆ. ಈ ಕೊಲೆಪ್ರಸಂಗ ಸರಿಸುಮಾರಿಗೆ ಹಾಸನದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಇನ್ಸ್‌ಪೆಕ್ಟರು ಬರುತ್ತಾರೆಂದು ಕೇಳಿ ಬಹು ಸಂತೋಷಪಡುತ್ತೇನೆ."

✽✽✽✽

ನಮ್ಮ ಎರಡನೇ ರಾಜಪುತ್ರಿಯರು ಈ ತೀರಿಗಳ ಕೊನೆಗೆ ದೇಹಾರೋಗ್ಯಕ್ಕೋಸ್ಕರ ಪರಿವಾರ ಸಹಿತರಾಗಿ ಬಳ್ಳಾರಿಗೆ ಪ್ರಯಾಣ ಮಾಡುವವರಾಗಿದ್ದಾರೆ. ಬಳ್ಳಾರಿಯಲ್ಲಿ ಅವರಿಗೋಸ್ಕರ ಒಂದು ಹೊಸಬಂಗಲೆಯನ್ನು ತೆಗೆದುಕೊಂಡು, ರಿಪೇರಿ ಮಾಡಿ ಬಣ್ಣ ಮುಂತಾದ್ದು ಹಾಕಿ ಅಣಿಮಾಡಿಟ್ಟು ಮಾಡಿದ್ದಾಯಿತು. ಬಂಗಲೆಯ ಸುತ್ತಲೂ ಜನಾನಿಗೆ ಯೋಗ್ಯವಾಗುವಂತೆ ದೊಡ್ಡ ಕೌಂಪೌಂಡು ಗೋಡೆಯನ್ನು ಹಾಕಿಸಿದರು. ಈ ಬಂಗಲೆಯನ್ನು ಪ್ರಸಿದ್ಧರಾದ ಕ್ಯಾಪ್ಟನ್ ನೆಲ್ಸನ್‌ರವರು ಪೂರ್ವದಲ್ಲಿ ವಾಸಸ್ಥಾನ ಮಾಡಿಕೊಂಡಿದ್ದರೆಂದು ತಿಳಿದು ಬರುತ್ತದೆ.

✽✽✽✽

ನಾಳೆ ನೊವೆಂಬರ್ ೩ನೇ ತಾರೀಖು ಸೋಮವಾರ ನಮ್ಮ ಮಹಾರಾಜರವರ ಸಹೋದರರಾದ ಚಿಕ್ಕರಾಜ ಒಡೆಯರವರು ಅಜ್ಮೀರ್ ಪಟ್ಟಣದ ರಾಜಕುಮಾರ್ ಕಾಲೇಜಿಗೆ ಪ್ರಯಾಣ ಮಾಡುವರು. ಇವರ ವಿದ್ಯಾಗುರುಗಳಾಗಿರುವ ಮಿ॥ ಎಂ. ಎ. ನರಸಿಂಹಯ್ಯಂಗಾರ್, ಬಿ. ಎ., ಬಿ. ಎಲ್. ಯವರು ಅವರ ಸಂಗಡ ಹೋಗುವರು. ಅಲ್ಲಿ ಅವರ ಸೇವಾವೃತ್ತಿ ಮಾಡುವದಕ್ಕಾಗಿ ಒಟ್ಟು ೧೫ ಮಂದಿಯನ್ನು ಅರಮನೆಯಿಂದ ಕಳುಹಿಸಬೇಕೆಂದು ನಿಶ್ಚಯ ಮಾಡಿದೆ. ಈ ಪೈಕಿ ಮುಂದಾಗಿ ೪ ಮಂದಿಯೂ, ಅವರ ಸಂಗಡ ೭ ಮಂದಿಯೂ ಹೋಗುವರು. ಅವರು ಆ ವಿದ್ಯಾಶಾಲೆಯಲ್ಲಿ ಎರಡು ಸಂವತ್ಸರಗಳಕಾಲ ಇದ್ದು ವಿದ್ಯಾ ಸಂಪೂರ್ಣತೆಯನ್ನು ಪಡೆದು ವಾಪಸು ಬರುವವರಾಗಿದ್ದಾರೆ.

✽✽✽✽

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವ ಉಲ್ಬಣ ಸ್ಥಿತಿಯಲ್ಲಿದೆ. ಒಟ್ಟು ಮರಣ ಸಂಖ್ಯೆಯು ದಿನಕ್ಕೆ ೪೦ರ ತನಕ ಹೆಚ್ಚಿರುವದು ಆಗಾಗ್ಯೆ ಸ್ವಲ್ಪ ಸ್ವಲ್ಪ ಮಳೆಯೂ ಆಗುತ್ತಿದೆ. ಬಿಸಿಲು ಕಾಯುವುದು ಕಡಿಮೆಯಾಗಿಲ್ಲ. ಕಳೆದ ವಾರ ಮಿ॥ ಸ್ಲೇಟರ್ ಸಿಂಗ್ಪುರ, ಜಯರಾಯರು, ಕೆರಲ್ಸ್ ಮತ್ತು ವೃತ್ತಾಂತ ಪಂಡಿತನು ಆಫೀಸು ಮಿ॥ ಬಿ. ಸುಬ್ಬರಾಯರು ಈ ಉಪದ್ರವ ತಗಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಸುಂಕಿನ ಮನೆಗಳನ್ನು ಪ್ರವೇಶಗಳನ್ನು ಬಿಟ್ಟು ಬೇರೆ ಕಡೆ ಹೋಗಿರಬೇಕೆಂದು ಅಪ್ಪಣೆಯಾದಂಥಾ ಬಳಿಯಂದ ಉಪವನ್ನು ಜನರಿಗೆ ರಾಜಧಾನಿಯಲ್ಲಿ ಪಸತಿಯಾದ ಸ್ಥಳ ದೊರಕದೆ ಇರುವಲ್ಲಿ ಏಪಟ್ಟಿಗರ ಬಾಡನ್ನು ಅವರ ಮನೋವ್ಯಥೆಯನ್ನು ಇಷ್ಟೆಂದು ವಿವರಿಸಲಾರದು.

✽✽✽✽

ನಮ್ಮ ರೆಸಿಡೆಂಟರು ಕಳೆದವಾರ ಬೆಂಗಳೂರು ಕಬ್ಬನ್ ಪಾರ್ಕಿನ ಉದ್ಯಾನವನದಲ್ಲಿ ಲೇಟ್ ಸರ್ ಶೇಷಾದ್ರಿ ಅಯ್ಯರವರ ಮೆಮೋರಿಯಲ್ ಹಾಲ್ ಬಂಗಲೆಗೆ ಶಂಕುಸ್ಥಾಪನವನ್ನು ಹಾಕಿ, ಆ ಖ್ಯಾತಿ ಹೊಂದಿದ ಮಂತ್ರಿಶ್ರೇಷ್ಠರ ಗುಣಕಥನವನ್ನು ಮಾಡಿದರು. ಈ ಕಲ್ಲಿನ ಕಲ್ಲಿನ ಮೇಲೆ ಕೆತ್ತಿರುವ ಮಾತುಗಳೇನೆಂದರೆ—"ಸ್ವ ೧೮೮೩ನೆ ಇಸ್ವಿಯಿಂದ ೧೯೦೧ರ ವರೆಗೆ ಮೈಸೂರು ಸಂಸ್ಥಾನದಲ್ಲಿ ದಿವಾನಗಿರಿ ನಡಸಿದ ರಾಜ್ಯಧುರಂಧರರಾದ ಸರ್ ಕೆ. ಶೇಷಾದ್ರಿ ಅಯ್ಯರ್, ಕೆ. ಸಿ. ಎಸ್. ಐ. ಯವರ ಸನ್ಮಾನಾರ್ಥವಾಗಿ ಎತ್ತಿದ ಚಂದಾದ್ರವ್ಯದಿಂದ ನಿರ್ಮಿತವಾದ ಅವರ ಜ್ಞಾಪಕಾರ್ಥವಾದ ಈ ಕಟ್ಟಡದ ಈ ಅಸ್ತಿವಾರ ಕಲ್ಲನ್ನು ಮೈಸೂರು ರೆಸಿಡೆಂಟ್ ಆನರೆಬಲ್ ಸರ್ ಡೋನಾಲ್ಡ್ ರಾಬರ್ಟ್‌ಸನ್, ಕೆ. ಸಿ. ಎಸ್. ಐ. ಯವರು ಸ್ವ ೧೯೦೩ನೆ ಇಸ್ವಿ ಅಕ್ಟೋಬರ್ ತಾ॥ ೨೯ರಲ್ಲಿ ಪ್ರತಿಷ್ಠೆ ಮಾಡಿರುತ್ತಾರೆ."

✽✽✽✽

ನಮ್ಮ ಹುಣಸೂರು ಬಾತ್ಮೀದಾರರು ಬರೆದಿರುವೇನಂದರೆ—"ಮೈಸೂರಿನಿಂದ ಹುಣಸೂರು ಕಡೆಗೆ ಅನೇಕರು ಗಾಡಿಗಳಲ್ಲಿ ಪ್ರಯಾಣ ಮಾಡುತ್ತಾರಷ್ಟೆ. ಮೈಸೂರಿಂದ ಗಾಡಿಗಳು ಸುಮಾರು ರಾತ್ರಿ ೮ ಗಂಟೆಗೆ ಹೊರಡುತ್ತವೆ. ಆ ಗಾಡಿಗಳನ್ನು ಕುಕ್ಕರಹಳ್ಳಿ ಕೆರೆ ಸಮೀಪದಲ್ಲಿ ಅಂದರೆ ಹದಿನಾರಕ್ಕೆ ಹೋಗುವ ದಾರಿ ಬಳಿಯಲ್ಲಿ ಪೊಲೀಸಿನವರು ತಡೆಯುತ್ತಾರೆ. 'ಯಾಕಪ್ಪ' ಎಂದು ಕೇಳಿದರೆ 'ಡೆಪ್ಯುಟಿ ಕಮಿಷನರು ಮೈಸೂರಿಂದ ಬಿಸ್ಕಲ್ ಬಳಿಯಲ್ಲಿರುವ ತಮ್ಮ ಬಂಗ್ಲೆಗೆ ದಯಮಾಡುವ ಪರಿವಿಗೂ ಗಾಡಿಗಳನ್ನು ಮುಂದಕ್ಕೆ ಬಿಡಬಾರದೆಂದು ಹುಕುಂ ಆಗಿದೆ' ಎಂಬದಾಗಿ ಹೇಳುತ್ತಾರೆ. ಕಳೆದ ಶನಿವಾರ ರಾತ್ರಿ ೮ ಘಂಟೆಗೆ ಹೊರಟ ಗಾಡಿಗಳು ೯॥ ಘಂಟೆಯ ವರಿವಿಗೂ ಅಲ್ಲೇ ಕಾದು ಬಿದ್ದಿದ್ದವು. ಅದರೆ ಡೆಪ್ಯುಟಿ ಕಮಿಷನರು ಆ ಗರ್ವೆ ತಮ್ಮ ಬಂಗ್ಲೆಗೆ ದಯಮಾಡಿಸಿದರೆಂದು ತಿಳಿದು ಬಂದಮೇಲೆ ಗಾಡಿಗಳನ್ನು ಮುಂದಕ್ಕೆ ಬಿಟ್ಟರು. ಡೆಪ್ಯುಟಿ ಕಮಿಷನರು ಬಂಗ್ಲೆಗೆ ಹೋದದ್ದೂ, ಬಂದದ್ದೂ ತಿಳಿಯದೆ ಪೊಲೀಸ್ ಜವಾನರು ಪ್ರಯಾಣಿಕರನ್ನು ನಿಲ್ಲಿಸಿದ್ದು ತುಂಬಾ ಅವಿವೇಕವೇ ಸರಿ. ಮತ್ತು ಮೇಲ್ಪಟ್ಟ ಅಧಿಕಾರಿಗಳು ಅಂಥಾ ಹುಕುಂ ಮಾಡಿದ್ದರೆ ಪ್ರಯಾಣಿಕರಿಗೆ ಬಹಳ ಅನಾನುಕೂಲವಾಗುವದು. ತಾವು ಹೋಗುವಂಥಾ ಸ್ಥಳಗಳಿಗೆ ಸರಿಯಾದ ಹೊತ್ತಿಗೆ ಹೋಗಲಾರರು. ಈ ವಿಷಯದಲ್ಲಿ ಮೇಲ್ಪಟ್ಟ ಅಧಿಕಾರಿಗಳು ಏನಾ ಕೊಟ್ಟು, ಪ್ರಯಾಣಿಕರಿಗೆ ಸರಿಯಾಗಿ ಪ್ರಯಾಣಮಾಡುವಂತೆ ಏರ್ಪಾಡು ಮಾಡುವರೆಂದು ನಂಬುತ್ತೇನೆ."

ಚನ್ನಪಟ್ಟಣದ ತಾಲ್ಲೂಕು ಸೋಗಾಲ, ಗರಕಹಳ್ಳಿ ಗ್ರಾಮಗಳಲ್ಲಿರುವ ಅಂಜನೇಯಸ್ವಾಮಿ, ಅಕ್ಕೂರಿ ಅಂಜನೇಯಸ್ವಾಮಿ, ಸೋಮೇಶ್ವರಸ್ವಾಮಿ, ವರದಪ್ಪ, ಪಟ್ಟಲದಮ್ಮ, ಸೋಮೇಶ್ವರಸ್ವಾಮಿ, ಸಂಗಮೇಶ್ವರಸ್ವಾಮಿ, ಸಿದ್ಧೇಶ್ವರಸ್ವಾಮಿ, ಅಂಜನೇಯ ದೇವರು—ಎಂಬ ೯ ದೇವಸ್ಥಾನಗಳಿಗೆ ಮುಮ್ಮಡಿ ಕೃಷ್ಣರಾಜ ಒಡೆಯರವರು ಕೆಲವು ಜೋಡಿ ಇನಾಂ ಜಮೀನುಗಳನ್ನು ಬಿಟ್ಟಿದ್ದರು. ಕಳೆದ ೧೮೯೦ರಲ್ಲಿ ಆ ಜಮೀನುಗಳನ್ನು ಅರಮನೆಯವರು ಸೇರಿಸಿಕೊಂಡರು. ಈಗ ಅವೆಲ್ಲಾ ಸರ್ಕಾರದವರ ಅನುಭವಕ್ಕೆ ಬಂದು ಆ ಜಮೀನುಗಳಿಗೆ ಸರ್ವೆ ಮಾಡಿಸಿದರು. ಈಗ ಆ ದೇವಸ್ಥಾನಗಳ ಪೂಜಾರಿಗಳು ಆ ಜಮೀನುಗಳನ್ನು ದೇವಾದಾಯದ ಇನಾಂತಿಯಾಗಿ ಬಿಟ್ಟುಕೊಡಬೇಕೆಂದೂ, ಪೂರ್ವದಲ್ಲಿದ್ದಂತೆ ೩೬ ರೂ ಜೋಡಿಯನ್ನು ಮಾತ್ರ ತೆರುತ್ತೇವೆಂದೂ ಶ್ರೀಮನ್ಮಹಾರಾಜರವರಿಗೆ ಅರ್ಜಿ ಬರೆದುಕೊಂಡರು. ಗೌರ್ನಮೆಂಟವರು ಈಗ ಪೂರ್ವ ಅಮಲನ್ನೆಲ್ಲಾ ಪರಿಶೀಲಿಸಿ, ನೋಡಿ ಬಿನಂತಿಯೇ ೩೬ ರೂ ಜೋಡಿ ಕೊಡುತ್ತಾ ಬರಬೇಕೆಂದೂ, ಆ ದೇವಸ್ಥಾನಗಳಲ್ಲಿ ಪೂಜೆ ಮುಂತಾದ್ದು ಕ್ರಮವಾಗಿ ನಡೆಯುತ್ತಾ ಬಂದರಲ್ಲಿ ಮೇಲ್ಕಂಡ ಜಮೀನುಗಳನ್ನು ದೇವಾದಾಯದ ಇನಾಂತಿಯಾಗಿ ಬಿಟ್ಟುಕೊಡಬೇಕೆಂದೂ, ಇನಾಂ ಸೂಪರೆಂಟರು ತಪ್ಪು ಕಲಿಸಾಯರ ಇರಾದೆಯನ್ನು ಕೇಳಿ, ಇನಾಂ ಸನ್ನದನ್ನು ಬರೆದು ಅವರಿಗೆ ಕೊಡತಕ್ಕದ್ದೆಂದೂ ಹುಕುಂ ಮಾಡಿದಾರೆ.

✽✽✽✽

ಒಳದೇಶದ ಸ್ಟಾರ್ ಪತ್ರಿಕೆಯು ತನ್ನ ವಿಮರ್ಶನದ ವಿಷಯವಾಗಿ ಬರೆದಿರುವೇನಂದರೆ—"ನಮ್ಮ ಸರ್ ಕೃಷ್ಣಮೂರ್ತಿಯವರು ದಿವಾನಗಿರಿಯು ದೇಶೀಯ ಪ್ರೇಮಿಗಳಾಗಿದ್ದು ಒಳ್ಳೇ ಹಿತಸ್ವನ್ನು ಪ್ರಜೆಗಳ ಮಧ್ಯೆ ಪಡೆಯಬೇಕಾದರೆ ಉತ್ತಮವಾದ ಒಂದೇ ಒಂದು ಮಾರ್ಗವಿರುವದೆಂದು ನಮಗೆ ತೋರುವದು. ಏನೆಂದರೆ ಸರ್ ಕೆ. ಶೇಷಾದ್ರಿ ಅಯ್ಯರವರು ರಾಜ್ಯದ ಆದಾಯವನ್ನು ಹೆಚ್ಚಿಸಿ, ತಮ್ಮ ನಾಡಿನವರಿಗಾಗಿಯೂ ಬಂಧುಬಳಗಕ್ಕಾಗಿಯೂ ವಿಧವಿಧವಾದ ಅಧಿಕಾರಗಳನ್ನು ಕಲ್ಪಿಸಿ, ಅವರಿಗೆ ಹಂಚಿಕೊಟ್ಟು, ಹುದ್ದೆಗಳಿಗೆ ಅಸ್ಪದಮಾಡಿ, ಸ್ವದೇಶೀಯರನ್ನು ನಿಸ್ಸಾರರನ್ನಾಗಿ ಮಾಡಿ ಪ್ರಜೆಗಳ ಕಷ್ಟವನ್ನು ಕಡೆಗಣಿಸಿದರೆಂದು ಅಪಖ್ಯಾತಿಯುಂಟಾಗಿರುವದಷ್ಟೆ. ಅಂತಹ ಅನರ್ಥವನ್ನು ಇವರ ಅಧಿಕಾರದಲ್ಲಿ ತಪ್ಪಿಸುವಂತೆ ಮಾಡಬೇಕು. ಏನೆಂದರೆ, ರಾಜ್ಯಕಾರ್ಯವು ವಿಸ್ತಾರವಾದ ಪೆಟ್ಟಿಗೆಯಂತೆ ಏರ್ಪಡಿಸದೆ ಇಟ್ಟುಕೊಂಡು ಕೆಲಗುವಂತೆ ಮಾಡಬೇಕು. ಇದಕ್ಕಾಗಿ ಒಬ್ಬನು ಮಾಡುವ ಕೆಲಸವನ್ನು ೩—೪ ಮಂದಿಗಳಿಗೆ ಹಂಚಿ, ದಂಡಾಗಿ ವೆಚ್ಚವಾಗುತ್ತಿರುವ ದಾರಿಯನ್ನೆಲ್ಲಾ ಮೊದಲು ತಪ್ಪಿಸಬೇಕು. ಸರ್ಕಾರದ ಹಣವನ್ನು ತಿಂದು ದಿನಪ್ರತಿಯಲ್ಲೂ ೧—೨ ಗಂಟೆಗಳ ಕಾಲವೂ ಸರಿಯಾಗಿ ಕೆಲಸಮಾಡದೆ ಮತ್ತರಾಗಿರುವ ಅಧಿಕಾರಿಗಳಿಗೆಲ್ಲಾ ತಕ್ಕ ನಿರ್ಬಂಧವನ್ನು ಕಲ್ಪಿಸಿ, ಸರ್ಕಾರದ ಪ್ರತಿಯೊಬ್ಬ ಅಧಿಕಾರಿಯಿಂದಲೂ ತಾನು ತಿನ್ನುವ ಉಪ್ಪಿಗೆ ನ್ಯಾಯವಾದಂತೆ ಸರಿಯಾಗಿ ಕೆಲಸವನ್ನು ತೆಗೆದುಕೊಳ್ಳಬೇಕು. ಮತ್ತು ಈಗ ಅಧಿಕಾರಿಗಳಿಗೆ ವಿನಿಯೋಗವಾಗುತ್ತಿರುವ ಮಾಸಂತರದ ಭಾಗದಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆಮಾಡಬೇಕು. ಹೀಗೆ ಮಾಡಿದರೆ ಹೆಚ್ಚು ಆದಾಯವಾಗಿ ಪ್ರಜೆಗಳ ತಲೆಯಮೇಲೆ ಬಿದ್ದಿರುವ ವಿಪರೀತ ಕಂದಾಯದ ಹೊರೆಯನ್ನು ತಪ್ಪಿಸಬಹುದು. ಒಳ್ಳೇ ಹೆಸರೂ ಇವರಿಗೆ ಬರುವದು. ಆದರೆ ಪ್ರಜೆಗಳಿಗಿಂತಲೂ ಸರ್ಕಾರದ ಅಧಿಕಾರಿಗಳಿಗೇನೇ ತಾವು ಒಳ್ಳೆಯವರಾಗಬೇಕೆಂದು ಇವರು ನೆನಸಿದರೆ ಮಾತ್ರ ಇವರಿಗೆ ಈ ಘನತರವಾದ ಯಶಸ್ಸು ದೊರೆಯಲಾರದು."

## ಮೈಸೂರು ಗೆಜೆಟ್ ಸಂಗ್ರಹ.

ಬೆಂಗಳೂರು ಅಡ್ವೊಕೇಟ್ ಮಿ॥ ಎಸ್. ನರಸಿಂಹಯ್ಯಂಗಾರ್, ಬಿ. ಎ., ಬಿ. ಎಲ್. ಯವರನ್ನು ೩ನೆ ಕ್ಲಾಸ್ ಮುನಸೀಫರಾಗಿ ನೇಮಕ ಮಾಡಿದೆ.

ಮುಂದೆ ಹೇಳುವ ಮುನಸೀಫರ ವರ್ಗಾವರ್ಗಿ ಹುಕುಂ ಮಾಡಿದೆ—ಮಿ॥ ಟಿ. ಎಸ್. ಎ. ರಾಜಯ್ಯಂಗಾರ್‌ಯವರು ಮೈಸೂರಿಂದ ಕೋಲಾರ್ ಟಿನ್ನಿಕ ನಗರಗಳಿಗೆ (ಕ್ಲಾಸ್ ಕೆಲಸದಮೇಲೆ ದಾಖಲಾಗತಕ್ಕದ್ದು), ಮಿ॥ ಸಿ. ಸುಬ್ಬರಾಯರು ಚಿಕ್ಕಬಳ್ಳಾಪುರದಿಂದ ಮೈಸೂರಿಗೆ (ಪ್ರಿನ್ಸಿಪಲ್ ಮುನಸೀಫರಾಗಿ), ಮಿ॥ ಎ. ನರಸಿಂಹಯ್ಯಂಗಾರ್‌ರು ದೇವನಹಳ್ಳಿಯಿಂದ ಚಿಕ್ಕಬಳ್ಳಾಪುರಕ್ಕೆ, ಮಿ॥ ಎಸ್. ನರಸಿಂಹಯ್ಯಂಗಾರ್‌ರು ದೇವನಹಳ್ಳಿಗೆ (ಕ್ಲಾಸ್ ಕೆಲಸಕ್ಕೆ ದಾಖಲಾಗತಕ್ಕದ್ದು).

ಶೃಂಗೇರಿ ಜಹಗೀರಿಯ ಏಜೆಂಟರಿಗೆ ಎಕ್ಸ್‌ಟ್ರಾ ರೆಗ್ಯುಲೇಷನ್ ಪ್ರಕಾರ ಆ ಜಹಗೀರಿಯಲ್ಲಿ ಡೆಪ್ಯುಟಿ ಕಮಿಷನರ ಎಲ್ಲಾ ಅಧಿಕಾರಗಳನ್ನು ವಹಿಸಿದೆ.

ತುಮಕೂರು ತಾಲ್ಲೂಕು ಗುಳೂರು ಹೋಬಳಿ ಚನ್ನಿಗಪ್ಪನ ಪಾಳ್ಯದಲ್ಲಿ ಮನೆಗಳನ್ನು ಕಟ್ಟುವದಕ್ಕೆ ಅಕ್ಕನೆಂಬ ಹಿಡುವಳಿದಾರನ ಖುಷ್ಕಿ ಜಮೀನಿನಲ್ಲಿ ೧ ಎಕರೆ ೨೦ ಗುಂಟೆಗಳು ಸರ್ಕಾರಕ್ಕೆ ಬೇಕಾಗಿದೆ.

ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್ ಮಿ॥ ವಿ. ಎಸ್. ಗೋಪಾಲರಾಯರು ಆಕ್ಟಿಂಗ್ ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮಿಷನರಾಗಿ ನೇಮಿಸಲ್ಪಟ್ಟಿದಾರೆ. ಇವರು ಕೋಲಾರ್ ಡಿಸ್ಟ್ರಿಕ್ಟ್ ಟ್ರೆಜರಿ ಛಾರ್ಜ್ ವಹಿಸತಕ್ಕದ್ದು.

ಚಾಮರಾಜನಗರದ ತಾಲ್ಲೂಕು ಸಂತೇ ಮರಹಳ್ಳಿ ಬಳಿ ಹರದನಹಳ್ಳಿ ಚಾಮರಾಜನಗರದ ರಸ್ತೆಯನ್ನು ಬೇರೆ ಕಡೆ ತಿರುಗಿಸು ವದಕ್ಕಾಗಿ ಸಂತೇಮರಹಳ್ಳಿ ಕಸಬಾ ಮುರಿಗೌಡನೆಂಬ ಹಿಡುವಳಿದಾರನ ಖುಷ್ಕಿ ಜಮೀನಿನಲ್ಲಿ ೪೪ ಕಂಟಿಗಳ (೩ಗುಂಟೆ) ಸರ್ಕಾರಕ್ಕೆ ಬೇಕಾಗಿದೆ. ಇದಕ್ಕೆ ೩೩ ರೂ ೧೧ ಆ. ಕಾಂಪೆನ್ಸೇಷನ್ ಗೊತ್ತುಮಾಡಿದೆ.

### ಬಾತ್ಮೀದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬುದಾರರಾಗುವದಿಲ್ಲವೆಂಬೋದನ್ನು ಸಕಲರೂ ತಿಳಿಯತಕ್ಕದ್ದು —ಎಡಿ

ವೇದ, ಅರಕಲಗೋಡು; ಮುನಿಸ್ವಾಮಿಚೆಟ್ಟಿ, ಅರಕಲಗೋಡು; ಚರಿತ್ರ, ಮಾಯಸಂದ್ರ, ಹೈಸ್ಕೂಲ್ ವಿದ್ಯಾರ್ಥಿ, ಚಿತ್ರದುರ್ಗ; ಮಲ್ಲಿಕಾರ್ಜುನ ಸ್ವಾಮಿ, ಚೆನ್ನಪಟ್ಟಣ, ಸ್ಕೂಲ್ ವಿಚಾರ, ತೀರ್ಥ, ಪ್ರಜಾಹಿತಚಿಂತಕ, ದೊಡ್ಡ ಮೇಟೀಕುರಿಕೆ, ಧರ್ಮಶೀಲ, ದೊಡ್ಡ ಮೇಟೀಕುರಿಕೆ, ಚಂದಾದಾರ, ನಾಗರನವಿಲೆ.—ಈ ಬಾತ್ಮಿಗಳಿಗೆ ಈ ಪತ್ರಿಕೆಯಲ್ಲಿ ಸ್ಥಳ ಸಿಕ್ಕಲಾರದು.

ಕಂಚಾ ಊರು ಬ್ರಹ್ಮಾನಂದ ಯತೀಶ್ವರರು, ಮೈಸೂರು — ನೀವು ಹೇಳುವ ವಿಷಯವನ್ನು ಅರ್ಜಿ ಬರೆದು ತಕ್ಕ ಅಧಿಕಾರಿಗೆ ಒಪ್ಪಿಸಿದಲ್ಲಿ ಪರಿಹಾರ ದೊರೆವುದು.

—ಎಡಿ ]

### ಕರೆಸ್ಪಾಂಡೆನ್ಸ್.

#### ಗಾಣಭೋಗರ ಅಹವಾಲು.

ಅಯ್ಯಾ,

ತಮ್ಮ ಪತ್ರಿಕೆಯೊಂದರಲ್ಲಿ ಗೌಡ ಗಾಣಭೋಗರಿಂದ ರೈತರಿಗೆ ತೊಂದರೆಯುಂಟಾಗುತ್ತಿದೆಯೆಂತಲೂ, ಕಾಲಕಾಲಕ್ಕೆ ಸರಿಯಾಗಿ ಲೆಕ್ಕಗಳನ್ನು ರವಾನಿಸುವದಿಲ್ಲವೆಂತಲೂ ಪಗ್ಗೆ ಪ್ರಕಟಿಸಿರುವುದು ಸರಿಯಷ್ಟೆ.

ಇದು "ಮಾರೀಕಣ್ಣು ಹೋತನ ಮೇಲೆ" ಎಂಬ ಗಾದೆಗೆ ಸರಿಯಾಗಿದೆ. ಜವಾಬ ನೋಡಬೇಕೆಂದು ವಿಮಾನದ ವರಿಗೂ ಕಾಣಬೇಕೆಂತಕ್ಕ ಬಡ ನಮ್ಮವರನ್ನು ಅಷ್ಟೆ ಹಿಸುಕುವದೇನೂ ಹೆಚ್ಚಲ್ಲ. ಮುಖ್ಯವಾಗಿ ಸರ್ಕಾರಕ್ಕೆ ನೇತ್ರರೋಪಾದಿಯಲ್ಲಿರುವ ಗೌಡ ಗಾಣಭೋಗರನ್ನೂ ಮೇಲ್ಪಟ್ಟ ಅಧಿಕಾರಿಗಳನ್ನು ಒಂದೇ ಸಮನಾಗಿ ಕಾಣತಕ್ಕದ್ದು ಸರ್ಕಾರದವರ ಕೆಲಸವಂದರಲ್ಲ್ಯ ಒಬ್ಬ ಗೌಡ ಅಥವಾ ಶ್ಯಾನುಭೋಗನಿಗೆ ಸಾಲೀಯಾನ ಬರತಕ್ಕ ಹೀನವಾದ ಪ್ರೋಟಿಗಿಯೆಂಬ ಕೆಲವು ಸಾಧಾರಣ ಕೂಲಿಯವನಿಗಿಂತಲೂ ಕಡಿಮೆಯಾಗಿರುವದು ಸರ್ವಜನ ವಿದಿತವಾಗಿದೆ. ಇಂಥಾ ಅಲ್ಪ ಪ್ರಯೋಜನದಿಂದ ನನ್ನನ್ನೂ ತನ್ನ ಸಂಸಾರವನ್ನೂ ಕಾಪಾಡಿಕೊಳ್ಳುವದರೊಡನೆ ಸರ್ಕಾರದ ಕೆಲಸವನ್ನು ಬಗೆಪ್ರಕಾರ ನಡಿಸುತ್ತಿರುವನು ಗೊತ್ತೇ ಇದೆ.

ಹೀಗಿರುವಲ್ಲಿ ರೈತರಿಗೆ ಹಿಂಸೆಪಡಿಸುತ್ತಾರೆಂದು ಹೇಳಿದರೆ "ಚಿಕ್ಕಪ್ಪ ತಾನೂ ಇದ ಭಿಕ್ಷ ಹಾಕೇದಲೀಸ" ಎಂಬಂತೆ ಹೊಟ್ಟೆ ಪಾಡಿಗೆ ಇತರರನ್ನು ಕೇಳುವದನ್ನೂ ನೋಡಿ ಸಹಿಸಲಾರದವರು ಧನರು! ಅಲ್ಲದೆ, ಈಗಿನ ಕಾನೂನು ತಿಳಿಯದ ರೈತರ್‍ಯಾರು? ವರುಷಕ್ಕೊಂದಾವರ್ತಿ ಬರುವ ಪ್ರೋಟಿಗಿಯು ಸರ್ಕಾರಕ್ಕೇ ಪ್ರಸನ್ನವೇ ಕೊಡದು ಕೈಗೆ ಮಾತ್ರ ಒಂದು ಕಾನೂನು ಬಂದಿದ್ದಿಲ್ಲ, ಇದನ್ನು ಬರುವರಿಗೆ ಇದ್ದರೆ ಕಲ್ಲಿನ ಮೂರ್ತಿ ಆಗಿಗಳಂತಿರುವ ನೌಕರರ ಶಾಪದಿಂದ ಸರ್ವಕ್ಕೂ ಬರೀ ಕೈಲಿ ಬಿಟ್ಟರೆ ಸಾಕೆಂದು ತಪ್ಪಿಸಿಕೊಂಡು ಬರಬೇಕು ಮತ್ತು ಕಂದಾಯದ ಬಾಕಿ ಏನಾದರೂ ಇದ್ದರೆ ಆಸಾಮಿ ಎಲ್ಲಿದ್ದರೂ ಹೋಗಿ ಸ್ವಂತ ಖರ್ಚಿನಿಂದ ವಸೂಲ್ ಮಾಡಿಕೊಂಡು ಬರಬೇಕು. ಇಲ್ಲವಾದರೆ ಅವನ ಮಗನಾಗಿ ತೆರಬೇಕು! ಹೀಗಿರುವಲ್ಲಿ ರೂಕ್ಕ ಮೇರಿಗೆ ಯಾಕೆ ನಡಿಸಬಾರದು? ಫಲದ ಸಂಬಳವು ಆಗಲಿಲ್ಲವೆಂದು ಪಟೇಲ್ ಶಾನುಭೋಗರಿಂದ ದಂಡತೆರಿಸುವದು ಯಾವ ನ್ಯಾಯ? ಇದು ಪಟೇಲರು ಮಾಡತಕ್ಕ ಕೆಲಸ, ಇದು ಶಾನುಭೋಗರು ಮಾಡತಕ್ಕ ಕೆಲಸ ಎಂಬ ವಿವೇಚನೆಯೇ ಇಲ್ಲ.

ಲೆಕ್ಕಗಳು ಸಕಾಲಕ್ಕೆ ಬರುವದಿಲ್ಲವೆಂಬ ಕಾರಣದಿಂದ ಮೇಲಕ್ಕೆ ಲೆಕ್ಕಗಳು ರವಾನೆಯಾಗುವುದಕ್ಕೆ ಸಾವಕಾಶವಾಗುವುದು ಯಾಕೆ? ಹೊಟ್ಟೆ ತುಂಬ ಅನ್ನದಾಕಿ ಕೆಲಸ ತೆಗೆದುಕೊಳ್ಳುವದು ನ್ಯಾಯ. ಸರ್ಕಾರದಿಂದ ಕೊಡುವ ಕಾಸು ಗಂಜಿಗಾಗುವದು. ಇಗೇ ರೀತಿ ಕೆಲಸ ಮಾಡುವ ಇತರ ನೌಕರರಿಗೆ ತಿಂಗಳು ೧೫—೨೦ಕ್ಕೆ ಕಡಿಮೆ ಇಲ್ಲದೆ ಕೊಡುವದಿಲ್ಲವೇ? ಒಂದು ಕಣ್ಣಿಗೆ ಸುಣ್ಣ, ಮತ್ತೊಂದಕ್ಕೆ ಬೆಣ್ಣೆಯೋ? ತಾಲ್ಲೂಕಿನವರು ಮಾಡಬೇಕಾದ ಕೆಲಸವೆಲ್ಲವೂ ಗ್ರಾಮಾಧಿಕಾರಿಗಳಿಂದ ಮಾಡಿಸಬೇಕೆಂದರೆ ಸಾಧ್ಯವೇ? ಹೆಸರಿಗೆ ಮಾತ್ರ ಬಾರಾ ನಮೂನೆ ಲೆಕ್ಕಗಳು. ಕೆಲಸದಲ್ಲಿ ಲೆಕ್ಕವಿಲ್ಲವಷ್ಟು, ಮತ್ತೆ ಅನವಶ್ಯಕವಾದವುಗಳೆಷ್ಟೋ! ಇದೂ ಅಲ್ಲದೆ ವರುಷಕ್ಕೊಂದಾವರ್ತಿ ಹೊಸ ಹೊಸ ಲೆಕ್ಕಗಳು ಹೆಚ್ಚುತ್ತಲೇ ಇವೆ. ಕೂಲೀ ಮಾತ್ರ ಯಥಾಪ್ರಕಾರವೇ. ಲೆಕ್ಕಗಳ ಕಾಲದಲ್ಲಿ ಕಾಗದಗಳ ಮತ್ತು ಹೆಡ್ ಕ್ವಾರ್ಟರಿನಲ್ಲಿರುವ ಖರ್ಚು ಸಾಗದಾಗುತ್ತ ದವಾಖ ಮೊದಲಾಗಿ ಅಟೈರು ಗೆಜೆಟ್ ಆಫಿಸರ ವರಿಗೆ ಮಾನೂಲು ಸಲ್ಲಿಸುವದು ಅರ್ಧಕ್ಕಿಂತಲೂ ಜಾಸ್ತಿಯಾಗುತ್ತೆ. ಇದು ಆಗುವ ವರಿಗೂ ಲೆಕ್ಕಗಳು ಸರಿಹೋಗುವದೇ ಇಲ್ಲ. ಉಳಿಯುವ ಹಾಗಹಾಲಿನಲ್ಲಿ ಮೇಲೆ ಹೇಳಿದ ಕೆಲಸವನ್ನೆಲ್ಲಾ ನಡಿಸಬೇಕು. ಅದಕ್ಕೇನಾದರೂ ತಿಲಾಂಶ ಪ್ರಯಾಣದಲ್ಲಿ ಹಿಂಬಾಳ ಶಿಪಾಯಿಗಳು ಆಫೀಸರಿಗೆ ಈಗ ಬಂದಿರುವ ಸ್ವಾತಂತ್ರ್ಯವು ಪ್ರತಿ ತಪ್ಪಿತಕ್ಕೂ ೨ ರೂಪಾಯಿ ಜುಲ್ಮಾನೆ ವಿಧಿಸುವದರಲ್ಲಿ ಸರಿಹೋಗುತ್ತೆ.

ಇಂಥಾ ಕಷ್ಟಗಳನ್ನನುಭವಿಸಿಕೊಂಡು ಅದಾಯವಿಲ್ಲದೆ ಯಾಕೆ ಕೆಲಸ ಮಾಡಬೇಕು? ಬಿಟ್ಟುಬಿಡಬಾರದೇ? ಎಂದರೆ, "ಅಪ್ಪ ಹಾಕಿದ ಆಲದಮರವೆಂತ ನೇಣುಹಾಕಿಕೊಳ್ಳಬೇಕು" ಎಂಬಂತೆ ಪೂರ್ವಾರಭ್ಯ ನಡೆದು ಬರುತ್ತಿರುವದೊಂದೂ, ಸ್ವಲ್ಪಾಭಿಮಾನವೊಂದೂ, ಪರಸ್ಥಳ ತಿರುಗಿ ಕೆಲಸ ಮಾಡಲಾರದ ಸೋಮಾರಿತನವೊಂದೂ ಕಾರಣಗಳಾಗಿವೆ. ದಸರಾ ಸಭೆಗೆ ಸಂಸ್ಥಾನದ ಅನೇಕ ಜನ ಪಟೇಲ್ ಶಾನುಭೋಗರು ಮೆಂಬರಾಗಿ ಚುನಾಯಿಸಲ್ಪಟ್ಟಾಗ್ಯೂ ಮೇಲ್ಕಂಡ ತೊಂದರೆಗಳನ್ನು ಹೇಳಿಕೊಳ್ಳುವದಕ್ಕೆ ಸ್ವಪ್ರಯೋಜನವನ್ನು ತಾವಾಗಿ ತಿಳಿಸದಿರುವದು ಉತ್ತಮವೆಂದು ಯೋಚಿಸಿ ರುಜುಕ್ಕೆ ಗುರಿಮಾಡಿರುವದು ಆಶ್ಚರ್ಯವು!

ಗ್ರಾಮ ನೌಕರರಿಗಿರುವ ಕಷ್ಟಗಳನ್ನು ವಿವರಿಸಲು ಸ್ಥಳ ಸಂಕೋಚದಿಂದ ಮುಗಿಸಬೇಕಾಗಿದೆ. ಮುಖ್ಯವಾಗಿ ಸರ್ಕಾರದವರು ಘನವಾದ ಚಿತ್ತಕ್ಕೆ ತಂದು ಅನುಕೂಲಪಡಿಸ್ಯಾರೆಂದು ಈ ಮೂಲಕ ಪ್ರಾರ್ಥಿಸುವ

ಸಜ್ಜನ ವಿಧೇಯ.

### ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನ್‌ರವರು ಮಾಡಿದ ಉಪನ್ಯಾಸ.

[ಕಳೆದವಾರದ ಶೇಷ ]

#### ಸಾಮಾನ್ಯ ವ್ಯವಸಾಭಿವೃದ್ಧಿ.

ರಾಜ್ಯವನ್ನು ವಹಿಸಿಕೊಂಡಂದಿನಿಂದ ರೈತರ ಸ್ಥಿತಿಯು ಏಕರೀತಿಯಾಗಿ ಅಭಿವೃದ್ಧಿಗೆ ಬರುತ್ತಿರುವದರಲ್ಲಿ ಸಂದೇಹವಿಲ್ಲ. ಆದರೂ ಈ ವಿಷಯದಲ್ಲಿ ಇನ್ನೂ ಮಾಡತಕ್ಕ ಕಾರ್ಯಗಳು ಅನೇಕವಾಗಿವೆ. ಆದರೂ ಈ ವಿಷಯದಲ್ಲಿ ಇನ್ನೂ ಮಾಡತಕ್ಕ ಕಾರ್ಯಗಳು ಅನೇಕವಾಗಿವೆ. ಈ ವರ್ಷದ ಜುಲೈ ಗುರ್ರ್ಯಲ್ಲಿ ವ್ಯವಸಾಯದಲ್ಲಿದ್ದ ಜಮೀನನ್ನು ಈ ಪಟ್ಟಿಯಲ್ಲಿ ತೋರಿಸಿದೆ —

| | | ೧೮೮೧. | ೧೯೦೪ |
|---|---|---|---|
| ತರಿ | ಎಕರೆಗಳು | ೭,೭೭,೭೬೨ | ೩,೯೮,೯೦೩ |
| ಖುಷ್ಕಿ | ,, | ೩೫,೭೦,೬೮೭ | ೭೫,೯೭,೩೭೧ |
| ಬಾಗಾಯತು | ,, | ೧,೩೮,೭೭೪ | ೭,೪೬,೮೭೭ |
| | ಒಟ್ಟು | ೩೯,೭೬,೧೭೪ | ೬೪,೦೦,೧೧೧ |

ಕಳೆದ ವರ್ಷ ೯೮,೩೦೬ ರೂಪಾಯಿ ಕಂದಾಯವುಳ್ಳ ೧೭೯೩೦ ಎಕರೆಗಳು ಹೊಸದಾಗಿ ವ್ಯವಸಾಯಕ್ಕೆ ಬಂದವು. ೭೭,೯೩೦ ರೂಪಾಯಿ ಕಂದಾಯವುಳ್ಳ ೭೩,೪೭೮ ಎಕರೆ ಜಮೀನುಗಳು ರಾಜೀನಾಮೆ ಕೊಡಲ್ಪಟ್ಟವು. ಖುಷ್ಕಿ ಜಮೀನಿನ ನಿವಳ ಹುಟ್ಟುವಳಿಯು ಎಕರೆ ಒಂದಕ್ಕೆ ೧೨ ರೂಪಾಯಿಯಂತೆಯೂ, ತರೀ ಜಮೀನಿನದು ೪೦ ರೂಪಾಯಿಯಂತೆಯೂ, ಬಾಗಾಯತಿನದು ೮೦ ರೂಪಾಯಿಯಂತೆಯೂ ಆಗುವದಾಗಿ ಪರಿಗಣಿಸಲ್ಪಟ್ಟಿದೆ. ಈ ಅಂದಾಜು ಪ್ರಾಯಶಃ ಸರಿಯಾದ್ದೆಂದು ಇಟ್ಟುಕೊಂಡು, ಸರಾಸರಿಯಾಗಿ ಫಸಲು ಬಂದ ೧೯೦೨—೩ ನೇ ವರ್ಷದ ಬೆಳೆಗೆ ಲೆಕ್ಕಿಸಿದರೆ ಆ ವರ್ಷದ ಒಟ್ಟು ಫಸಲಿನ ಬೆಲೆಯು ೫,೫೭,೩೩,೯೮೭ ರೂಪಾಯಿಯಂತೆ ಆಗುತ್ತದೆ.

೧೯೦೧ ನೆಯ ಸೆನ್ಸಿನ ಪ್ರಕಾರ ರೈತರ ಒಟ್ಟು ಸಂಖ್ಯೆ ೩೬ ಲಕ್ಷವಾದ್ದರಿಂದ ಈ ವರಮಾನವು, ತಲೆ ಒಂದಕ್ಕೆ ೩೫ ರೂಪಾಯಿಯಂತೆ ಆಗುತ್ತದೆ. ರೈತರ ಸಂಖ್ಯೆ ೩೩ ಲಕ್ಷವಾಗಿದ್ದ ೧೮೮೧ ರಲ್ಲಿ ತಲೆಗೆ ಸುಮಾರು ೨೪ ರೂಪಾಯಿಯಂತೆ ಇತ್ತು. ಆದ್ದರಿಂದ ಒಟ್ಟು ಸಾಗುವಳಿ ಜಮೀನು ಹೆಚ್ಚಿದ್ದರಿಂದಲೂ ತರೀ ಬಾಗಾಯ್ತು ಹೆಚ್ಚಿದ್ದರಿಂದಲೂ ಬೆಲೆಗಳು ಹೆಚ್ಚಿದ್ದರಿಂದಲೂ ಹೀಗೆ ವ್ಯವಸಾಯದಿಂದ ಹುಟ್ಟು ಹೆಚ್ಚಾಯಿತೆನ್ನುವದರಲ್ಲಿ ಸಂದೇಹವಿಲ್ಲ. ಒಟ್ಟಿನಲ್ಲಿ ನೋಡಿದರೆ ರೈತರ ಸ್ಥಿತಿಯು ಒಂದೇ ರೀತಿಯಾಗಿ ಅಭಿವೃದ್ಧಿಗೆ ಬರುತ್ತಿದೆಯೇ ಹೊರತು ಅದಕ್ಕೆ ಯಾವ ಪ್ರಬಲವಾದ ಪ್ರತಿಬಂಧಕವೂ ಇರುವ ಹಾಗೆ ಕಾಣುವದಿಲ್ಲ.

#### ಫಸಲಿನ ಅಭಿವೃದ್ಧಿಕ್ರಮ.

ಫಸಲಿನ ಅಭಿವೃದ್ಧಿಕ್ರಮವನ್ನು ಕೆಲವು ಮಾರ್ಗಗಳಲ್ಲಿ ಅಭಿವೃದ್ಧಿ ಪಡಿಸಬಹುದು ಪ್ರಕೃತದಲ್ಲಿ ರೈತರಿಗೆ ಅಂತಹ ಕೆಲಸಗಳಲ್ಲಿ ಅಭಿರುಚಿಯಿಲ್ಲ. ಆದ್ದರಿಂದ ತಾಲ್ಲೂಕುಗಳ ಸಮೀಪದಲ್ಲಿರುವ ಗ್ರಾಮಗಳಲ್ಲಿ ಬುದ್ಧಿವಂತರಾದ ಒಬ್ಬಿಬ್ಬ ರೈತರನ್ನು ಗೊತ್ತುಮಾಡಿ ಅವರಿಗೆ ಒಳ್ಳೆ ಬಿತ್ತನೆ ಕಾಳನ್ನೂ ಗೊಬ್ಬರವನ್ನೂ ಕೊಂಡುಕೊಳ್ಳುವದಕ್ಕೆ ಸಹಾಯ ಮಾಡಿ ಅವರ ಜಮೀನಿನ ಒಂದೆರಡು ತಾಕುಗಳಲ್ಲಿ ಸರಿಯಾದ ಕಾಲದಲ್ಲಿ ಪೈರು ಮಾಡುವಂತೆ ಏರ್ಪಾಡು ಮಾಡಬಹುದು. ಬೇರೆ ಬೇರೆ ತಾಲ್ಲೂಕುಗಳಲ್ಲಿ ಆದ ಪೈರುಗಳನ್ನು ಪ್ರತಿವರ್ಷವೂ ಆಯಾ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿ ಮಿಳಿತವಾಗಿ ಪ್ರದರ್ಶನ ಮಾಡುವಂತೆ ಏರ್ಪಡಿಸಿ ಉತ್ತಮವಾದವುಗಳಿಗೆ ಬಹುಮಾನಗಳನ್ನು ಕೊಡಬಹುದು ಈ ಕಾರ್ಯಕ್ಕಾಗಿ ಸರಕಾರದವರು ಸ್ವಲ್ಪ ಹಣವನ್ನು ಖರ್ಚುಮಾಡಿದಲ್ಲಿ ರೈತರುಗಳಲ್ಲಿ ಪರಸ್ಪರ ಪೋಟಾಪೋಟಿಯುಂಟಾಗಿ ಅವರಿಗೆ ಅನೇಕ ಉಪಯುಕ್ತವಾದ ಅಂಶಗಳು ತಿಳಿಯುವದಕ್ಕೆ ಕಾರಣವಾಗುವದು. ಈ ಪ್ರದರ್ಶನಗಳಿಗೆ, ದನಗಳನ್ನೂ ಅವುಗಳಿಂದುಂಟಾಗುವ ಹಾಲು ಬೆಣ್ಣೆ ಮೊದಲಾದವುಗಳನ್ನೂ ಕೂಡ ಸೇರಿಸಬಹುದು.

#### ವ್ಯವಸಾಯ ವಿದ್ಯಾಭ್ಯಾಸ.

ಇದರ ಮೇಲೂ ವ್ಯವಸಾಯ ವಿದ್ಯಾಭ್ಯಾಸ ವಿಷಯದಲ್ಲಿ ಈಗಲೇ ಅಕ್ಕ ಪರ್ಯಾಪ್ತಗಳನ್ನು ಮಾಡಬೇಕಾಗಿದೆ. ಈ ವಿಷಯದಲ್ಲಿ ಅನ್ನಡದಲ್ಲಿ ಒಂದು ಪ್ರಸ್ತಕವನ್ನು ಬರೆದು ಅದನ್ನು ಸ್ಕೂಲುಗಳಲ್ಲಿ ಪಾಠ ಹೇಳಿಸುವ ಏರ್ಪಾಡು ಮಾಡಿದ್ದು ಒಂದು ಹೊರತು ಇನ್ನೇನೂ ಹೆಚ್ಚಾಗಿ ಮಾಡಿಲ್ಲ. ಮದ್ರಾಸ್ ಸೈದಾಪೇಟೆ ವ್ಯವಸಾಯ ಪಾಠಶಾಲೆಯಲ್ಲಿ ಶಿಕ್ಷಿತರಾದ ಮೈಸೂರು ವಿದ್ಯಾರ್ಥಿಗಳಿಂದ ಇಲ್ಲಿಯ ರೈತರಿಗೆ ವಿಶೇಷ ಪ್ರಯೋಜನವೇನೂ ಆದಹಾಗೆ ಕಾಣುವದಿಲ್ಲ. ಯದ್ಯಪಿ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ವ್ಯಾಸಂಗಮಾಡುವ ಉಪಾಧ್ಯಾಯರುಗಳಿಗೆ ವ್ಯವಸಾಯವನ್ನು ಕಾರ್ಯತಃ ಕಲಿಸುತ್ತಾರೆ. ಆದರೆ ಈ ಉಪಾಧ್ಯಾಯರಲ್ಲಿ ಯಾರಿಗೂ, ತಮ್ಮ ಪಾಠಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ವ್ಯವಸಾಯ ವಿಷಯಕ್ಕೆ ಉಪಯುಕ್ತಾಂಶಗಳನ್ನು ಬೋಧಿಸುವದಕ್ಕೆ ತಕ್ಕ ಉತ್ಸಾಹವೂ ಇಲ್ಲ, ಉಪಪತ್ತಿಯೂ ಇಲ್ಲ. ಇದೂ ಅಲ್ಲದೆ ಆ ಉಪಾಧ್ಯಾಯರಿಗೆ ವ್ಯವಸಾಯವನ್ನು ಬೋಧನೆ ಮಾಡುವ ಕ್ರಮದಲ್ಲಿಯೇ ತಿದ್ದುಪಾಟು ಮಾಡತಕ್ಕ ಅಂಶಗಳಿವೆ. ಈ ಉದ್ದೇಶದಿಂದಲೇ, ಆ ಉಪಾಧ್ಯಾಯರುಗಳ ತಿಳುವಳಿಕೆಯು ಹೆಚ್ಚು ಕಾರ್ಯತಃ ಉಪಯೋಗವಾಗುವಂತೆ ಮಾಡುವದಕ್ಕಾಗಿ ಅವರು ವ್ಯಾಸಂಗ ಮಾಡುವ ಕಾಲವನ್ನು ಇನ್ನೂ ಸ್ವಲ್ಪ ಹೆಚ್ಚಿಸಬೇಕೆಂದು ಆಲೋಚನೆ. ಮೇಲೆಯೂ ಮುಖ್ಯವಾದ ಗ್ರಾಮಗಳಲ್ಲಿರುವ ಪಾಠಶಾಲೆಗಳಿಗೆ ಸಣ್ಣ ಸಣ್ಣ ತಾಕುಗಳನ್ನೂ, ಒಳ್ಳೇ ಬೀಜವನ್ನೂ ಗೊಬ್ಬರವನ್ನೂ ಕೊಂಡುಕೊಳ್ಳುವದಕ್ಕಾಗಿ ಸ್ವಲ್ಪ ಮೊಬಲಗನ್ನೂ, ಕೊಟ್ಟರೆ ಪ್ರಯೋಜನಕಾರಿಯಾಗುವದು. ಈ ತಾಕುಗಳಲ್ಲಿ ವ್ಯವಸಾಯದ ಕೆಲಸವನ್ನು, ಉಪಾಧ್ಯಾಯರು, ತಮ್ಮ ಮೇಲ್ವಿಚಾರಣೆಯಲ್ಲಿ ಹುಡುಗರಿಂದಲೇ ಮಾಡಿಸಬೇಕು. ಒಂದೊಂದು ತಾಲ್ಲೂಕಿಗೆ ಸೇರಿದ ಪಾಠಶಾಲೆಗಳ ಬೆಳೆಗಳ ಪ್ರದರ್ಶನವನ್ನು ಆಯಾ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ನಡಿಸಿ ಉತ್ತಮವಾದವುಗಳಿಗೆ ಬಹುಮಾನಗಳನ್ನು ಕೊಟ್ಟರೆ ಹಾಗೆ ಬಹುಮಾನವನ್ನು ಪಡೆದ ಹುಡುಗರ ತಂದೆಗಳಿಗೆ ಈ ವಿಷಯದಲ್ಲಿ ಆಸಕ್ತಿಯುಂಟಾಗುವದು ಸಹಜವಾಗಿಯೇ ಇದೆ.

#### ಸಾಮಾನ್ಯ ವ್ಯವಸಾಯಾಭಿವೃದ್ಧಿ.

ಇಂಡಿಯಾ ದೇಶದ ಇತರ ಭಾಗಗಳಲ್ಲಿರುವ ರೈತರಂತೆಯೇ ಮೈಸೂರು ರೈತನೂ ತನ್ನ ಹಳೇ ಪದ್ಧತಿಯನ್ನು ಬಿಡಲಾರದವನಾದರೂ ಕಾರ್ಯತಃ ಸುಲಭವಾದ ಮಾರ್ಗವನ್ನು ತೋರಿಸಿಕೊಟ್ಟಲ್ಲಿ ತನ್ನ ಸ್ಥಿತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳುವದಕ್ಕೆ ಸಿದ್ಧನಾಗಿದ್ದಾನೆ. ಕಬ್ಬಿಣವಲ್ಲಿ ಮಾಡಿದ ಉತ್ತಮವಾದ ಆಲೆಯ ಗಾಣಗಳನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಿಕೊಳ್ಳುತ್ತಿರುವದೇ ಇದಕ್ಕೆ ದೃಷ್ಟಾಂತವಾಗಿದೆ. ಹೊಸ ನೇಗಿಲುಗಳನ್ನೂ ಇತರ ಕಾದ ವ್ಯವಸಾಯದ ಉಪಕರಣಗಳನ್ನೂ ಇಲ್ಲಿ ಬಳಕೆಯಲ್ಲಿ ತರುವದಕ್ಕಾಗಿ ಹಿಂದೆ ಮಾಡಿದ ಪ್ರಯತ್ನಗಳು ವಿಶೇಷವಾಗಿ ಫಲಕಾರಿಗಳಾಗಲಿಲ್ಲ. ಸಣ್ಣ ಸಣ್ಣ ಹಿಡುವಳಿಗಳಿರುವ ಇಂಥ ದೇಶದಲ್ಲಿ ಉತ್ತಮವಾದ ಯಂತ್ರಗಳನ್ನು ಬಳಕೆಯಲ್ಲಿ ತರುವದಕ್ಕೆ ವಿಶೇಷ ಅವಕಾಶವಿಲ್ಲವೆಂಬುದನ್ನು ಜ್ಞಾಪಕದಲ್ಲಿಡಬೇಕು. ಪ್ರಕೃತದಲ್ಲಿ ಉತ್ತಮ ಯಂತ್ರಗಳನ್ನು ಬಳಕೆಯಲ್ಲಿ ತರಲವಕಾಶವಿಲ್ಲವೆಂಬುದನ್ನು, ಮಿ ಎ ಫೋರ್ಕ್ನರವರು, ಇಂಡಿಯಾ ವ್ಯವಸಾಯಾಭಿವೃದ್ಧಿ ವಿಷಯವಾಗಿ ಬರೆದಿರುವ ತಮ್ಮ ರಿಪೋರ್ಟಿನಲ್ಲಿ ಹೇಳಿದ್ದಾರೆ. ಆದಕಾರಣ ಸಾಮಾನ್ಯ ರೈತನ ಶಕ್ತಿಗೆ ಮೀರಿದ ಬೆಲೆಯುಳ್ಳ ಅಪೂರ್ವ ಯಂತ್ರಗಳನ್ನು ತಂದು ಅಭಿವೃದ್ಧಿ ಮಾಡುವದಕ್ಕಿಂತಲೂ ಇಲ್ಲಿ ಪ್ರಕೃತದಲ್ಲಿ ಉಪಯೋಗದಲ್ಲಿರುವ ವ್ಯವಸಾಯದ ಮುಟ್ಟುಗಳನ್ನೇ ಅಭಿವೃದ್ಧಿ ಪಡಿಸುವದು ಉತ್ತಮವಾಗಿ ತೋರುತ್ತದೆ.

ಈ ವಿಷಯಗಳಲ್ಲಿ ಕೆಲವಕ್ಕೆ ಈ ವರೆಗೆ ಅವಧಾನವನ್ನು ಕೊಟ್ಟಿದೆ. ಅವು ಯಾವುವೆಂದರೆ—ಚಿಕ್ಕದಿಂದ ಕಬ್ಬು ಬೆಳೆಯುವದು, ಅನ್ಯದೇಶದ ಒಳ್ಳೆ ಹತ್ತಿಯ ಬೀಜವನ್ನು ತಂದು ಹತ್ತಿಯ ಬೆಳೆಯನ್ನು ಅಭಿವೃದ್ಧಿ ಮಾಡುವದು, ಹೊಸ ಜಾತಿಯ ಗಿಡಗಳನ್ನು ಬೆಳಸುವದು, ಮೈದಾನದಲ್ಲಿ ಕಾಫಿ ಪೈರು ಮಾಡುವದು, ಇವೆ. ಆದರೆ ಈ ಪ್ರಯತ್ನಗಳು ಇನ್ನೂ ವಿಚಾರಸ್ಥಿತಿಯಲ್ಲಿಯೇ ಇವೆ. ವ್ಯವಸಾಯ ವಿಷಯದಲ್ಲಿ ಪಂಡಿತರಾದವರ ವಿಚಾರವು ಅತ್ಯವಶ್ಯಕವೆಂಬುದು ವ್ಯಕ್ತವಾಗಿಯೇ ಇದೆ. ಆದಕಾರಣ ಡಾಕ್ಟರ್ ಲೆಹ್ಮನ್ ರವರನ್ನು ಕೃಷಿರಸಾಯನ ಕಾರ್ಯದಲ್ಲಿ ಇನ್ನೂ ೫ ವರ್ಷಕಾಲ ಇಟ್ಟುಕೊಂಡದ್ದು ಯುಕ್ತವಾದ ಕೆಲಸವಾಗಿದೆ. ಡಾಕ್ಟರ್ ಲೆಹ್ಮನ್ ರವರು ಈ ದೇಶದ ವ್ಯವಸಾಯದ ಮುಖ್ಯ ಪ್ರಾಂತ್ಯಗಳ ವಿಷ್ಯವನ್ನು ತಿಳಿದುಕೊಳ್ಳುವದಕ್ಕೂ ಪ್ರಯೋಗಶಾಲೆಯನ್ನು ಏರ್ಪಡಿಸಿಕೊಳ್ಳುವದಕ್ಕೂ ಇಷ್ಟು ಕಾಲ ಹಿಡಿಯಿತು. ಈಗ ಅವರು ಇಲ್ಲಿಯ ರೈತರುಗಳ ಉದ್ದೇಶಗಳನ್ನೂ ಕೊರತೆಗಳನ್ನೂ ಕಷ್ಟಗಳನ್ನೂ ತಿಳಿದುಕೊಂಡಿರಬಹುದು. ಅವರು ಮಾಡುವ ಪರೀಕ್ಷೆಗಳು ಸಫಲವಾಗಬೇಕಾದರೆ, ರೈತನಿಗೆ ಉಪಯುಕ್ತವಾದ ಅಂಶಗಳನ್ನು ತಿಳಿಸುವದಕ್ಕಾಗಿಯೇ ಮಾಡಬೇಕು. ಅವರು ಸಂಸ್ಥಾನದ ಎಲ್ಲಾ ಭಾಗಗಳ ಭೂಗುಣಗಳನ್ನೂ ಕ್ರಮವಾಗಿ ಪರೀಕ್ಷಿಸುವದಕ್ಕೂ ಯಾವ ಯಾವ ಭೂಮಿಗೆ ಯಾವ ಯಾವ ವಿಧದ ಗೊಬ್ಬರ ಬೇಕೆಂಬುದನ್ನು ನಿರ್ಣಯಿಸುವದಕ್ಕೂ ಪೈರಿಗೆ ಅನುಭವವಾಗುವ ರೋಗಗಳೇ ಮೊದಲಾದವುಗಳನ್ನು ತಪ್ಪಿಸುವದಕ್ಕೆ ತಕ್ಕ ವಿಧಾನಗಳನ್ನು ಕಲ್ಪಿಸುವದಕ್ಕೂ ಸಾಮಾನ್ಯವಾಗಿ ಉತ್ತಮ ವ್ಯವಸಾಯಕ್ರಮಗಳನ್ನು ಬಳಕೆಗೆ ತರುವದಕ್ಕೂ ಮತ್ತು ಇವಕ್ಕೆ ಸಂಬಂಧಪಟ್ಟ ಇತರ ಉದ್ದೇಶಗಳನ್ನು ನೆರವೇರಿಸುವದಕ್ಕೂ ಪ್ರಯತ್ನಿಸಬೇಕು. ಒಬ್ಬ ಕ್ರಿಮಿ ಶಾಸ್ತ್ರಜ್ಞನ ಸಹಾಯವೂ ಇಲಾಖೆಗೆ ಆವಶ್ಯಕವೆಂದು ಭಾವಿಸಿ ಕೈಸರುವಾಯವನ್ನು ಬರೆದ ಅರ್ಜಿಯು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

#### ಕೈಗಾರಿಕೆ ಪದಾರ್ಥಗಳು ಕಡಿಮೆಯಾದ್ದು.

ಈ ದೇಶದ ಕೈಗಾರಿಕೆಯು ಕೆಲಸದವರು, ಹಿಂದೂ ದೇಶದ ಇತರ ಭಾಗಗಳಲ್ಲಿರುವವರಂತೆಯೇ, ಸಾಮಾನ್ಯವಾಗಿ ತಮ್ಮ ತಮ್ಮ

[illegible]ನಲ್ಲಿ ತಮ್ಮ ತಮ್ಮ ಉದ್ಯೋಗವನ್ನು ಮಾಡಿಕೊಂಡು ನೆರೆ ಹೊರೆಯವರಿಗೋ ಅಥವಾ ಸ್ವಲ್ಪ ದೂರದಲ್ಲಿರುವವರಿಗೋ ತಾವು [illegible] ಪದಾರ್ಥಗಳನ್ನು ಮಾರುತ್ತಾರೆ. ಪದಾರ್ಥಗಳನ್ನು ಸುಲಭವಾಗಿ ಸಾಗಿಸಲಾಗುವದಕ್ಕೆ ಮಾಡಿಕೊಟ್ಟ ಅನುಕೂಲ್ಯವು, ಇಲ್ಲಿ [illegible]ಕಾರ್ಯಗಳ ಮಾರಾಟಕ್ಕೆ ಉತ್ತೇಜನವಾದರೂ, ಅವೇ, ಹೊರಗಿನ ಅಗ್ಗವಾದ ಸಾಮಾನುಗಳು ನಮ್ಮ ದೇಶಕ್ಕೆ ಬರುವುದ[illegible] ಇಲ್ಲಿನ ಕೈಗಾರಿಕೆ ಬಹಳಮಟ್ಟಿಗೆ ಕ್ಷಯಿಸುವ[illegible] ಕಾರಣವಾಯಿತು. ೧೮೯೦ ರಿಂದ ೧೯೦೦ ರ ವರೆಗಿನ ಹತ್ತು ವರ್ಷಗಳಲ್ಲಿ ರೈಲುಗಳ ಮೂಲಕ ಸಾಗಿದ ಪದಾರ್ಥಗಳನ್ನು ನೋಡಿದರೆ, ಭತ್ತ, ಅಕ್ಕಿ, ಉಪ್ಪು, ಜೀರಿಗೆ ಮೊದಲಾದ [illegible] ಚರ್ಮಗಳು, ಕೊಂಬುಗಳು, ಎಣ್ಣೆ ಬೀಜಗಳು, ಹಸಿಯ [illegible] ಇತರ ಹಸಿಯ ಪದಾರ್ಥಗಳು—ಇವುಗಳು ಇಲ್ಲಿಂದ ರಫ್ತು [illegible] ಬಹುವಾಗಿಯೂ ಚರ್ಮದಿಂದಾದ ಪದಾರ್ಥಗಳು, ಹತ್ತಿ [illegible]ಬಟ್ಟೆಗಳು, ಯೂರೋಪಿನ ಮದ್ಯಗಳು, ಎಣ್ಣೆಗಳು, ಉಪ್ಪು [illegible] ಇತರ ಪದಾರ್ಥಗಳು ಇಲ್ಲಿಗೆ ಆಮದಾಗುವದಾಗಿಯೂ ತಿಳಿಯುತ್ತದೆ. ಇಲ್ಲಿಯ ಕೈಗಾರಿಕೆಯವರು ಇತರ ದೇಶದ ಕೈಗಾರಿಕೆಯವರೊಡನೆ ಯಾವ ವಿಧವಾದ ಸಂಬಂಧವನ್ನೂ ಇನ್ನೂ [illegible] ಇದ್ದಾರೆ. ಕೈಗಾರಿಕೆಯವನು ನೆಸೂ [illegible] ಇಷ್ಟಬಂದಂತೆ ಇದ್ದುಕೊಂಡು ರೈತನ ಹಾಗೆಯೇ ಇತರರ [illegible] ಏಕೀಭವಿಸಿ ತನ್ನ ಗುಂಪಿಗೆ ಪ್ರಯೋಜನಕರವಾದ ಯಾ[illegible]ವನ್ನು ಮಾಡಿಕೊಳ್ಳುವುದಕ್ಕೂ ಅಸಮರ್ಥನಾಗಿದ್ದಾನೆ. [illegible] ಹಣ ಸಾಲಮಾಡುವದು, ಪ್ರಬಲವಾದ ಕಟ್ಟಿನ ಕಾರ್ಖಾನೆಗ[illegible] ಏರ್ಪಡಿಸುವುದು, ಯಂತ್ರದಿಂದ ರೇಷ್ಮೆಯನ್ನು ನೂಲು[illegible]ಮಾಡುತ್ತಿರುವುದು, ಇವೇ ಮೊದಲಾದ ಕೈಗಾರಿಕೆಗಳಿಗೆ [illegible] ಪ್ರೋತ್ಸಾಹದಿಂದಲೂ ಏನೂ ಪ್ರಯೋಜನವಾಗಲಿಲ್ಲ.

## ಕೈಗಾರಿಕೆ ವಿದ್ಯಾಭ್ಯಾಸ.

"ಈ ಕೈಗಾರಿಕೆ ವಿದ್ಯಾಭ್ಯಾಸವನ್ನು ಏರ್ಪಡಿಸಿದ್ದು ಕೇವಲ [illegible] ವಿಷಯಗಳನ್ನಾಗಲಿ ಕೇವಲ ವಿಚಾರಭಾಗಗಳನ್ನಾಗಲಿ [illegible] ಉದ್ದೇಶದಿಂದ ಮಾಡಿದ್ದಲ್ಲ; ಮತ್ತೇನೆಂದರೆ ಪ್ರಜೆಗಳಿಗೆ [illegible] ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವದಕ್ಕಾಗಿ, [illegible] ನೆಯ್ಗೆ ಕೆಲಸ, ರೇಷ್ಮೆ ಹುಳು ಸಾಕುವದು, ಕಬ್ಬಿಣದ ಕೆಲಸ, ಬಡಗಿ ಇವೇ ಮೊದಲಾದ ಕೆಲಸಗಳನ್ನು [illegible] ಉತ್ತಮವಾದ ಮಾರ್ಗದಲ್ಲಿ ಕಲಿಸುವ ಉದ್ದೇಶದಿಂದ [illegible] ಪ್ರತಿವರ್ಷದಲ್ಲೂ ಕೆಲವು ಹುಡುಗರಿಗೆ ತಮ್ಮ ಜೀವನೋಪಾಯವನ್ನು ಸಂಪಾದಿಸಿಕೊಳ್ಳುವಂತೆ ಕಸಬನ್ನು ಕಲಿಸುವ [illegible] ಏರ್ಪಡಿಸುವದು." ಈ ಕೈಗಾರಿಕೆಯ ಪಾಠ[illegible]ಗಳನ್ನು, ಕಾರ್ಖಾನೆಗಳಂತೆ, ಬಹಳಮಟ್ಟಿಗೆ [illegible] ನಡೆಸಬೇಕು. ಇದಕ್ಕೆ ಉದಾಹರಣೆಯಾಗಿ [illegible] ನೆಯ್ಗೆ, ಸಿಂಗರ, ಚಿತ್ರಗಾರ, ಬಡಗಿ[illegible]ಗಳ ಕಸಬು,

[illegible] ಈ ಸ್ಥಳಗಳಲ್ಲಿ ಕೈಗಾರಿಕೆ ಪಾಠಶಾಲೆಗಳನ್ನು ಇಡಲಾಗಿದೆ. ಯಾವನೂ ಪಾಠಶಾಲೆಗಳಲ್ಲಿ ಮಂಗಳೂರು ಹೆಂಚಿನ [illegible] ನಡೆಯುತ್ತದೆಯೋ ಅಲ್ಲಲ್ಲಿ ಇತರ ಪದಾರ್ಥಗಳನ್ನು [illegible] ಸುಲಭವಾಗಿ ದೊರಕುವ ಹಳ್ಳಿಯ ಬಡಗಿ [illegible] ನೇಗಿಲುಗಳು ಇವೇ ಮೊದಲಾದ ಉತ್ತಮವಾದ ವ್ಯವಸಾಯದ ಮುಟ್ಟುಗಳನ್ನೂ ತಯಾರುಮಾಡಲಾಗುತ್ತದೆ. ಹೀಗೆ [illegible] ಮುಟ್ಟುಗಳನ್ನು ಉಪಯೋಗಿಸಿ ವ್ಯವಸಾಯ ಪರೀಕ್ಷೆ [illegible] ಇಲ್ಲಿಯ ಸನ್ನಿವೇಶಗಳಿಗೆ ತಕ್ಕನಾಗಿ ಕಂಡ[illegible] ಅವುಗಳ ಮಾದರಿಗಳನ್ನು ಇಂಥ ತರಗತಿಗಳಿರುವ ಎಲ್ಲ [illegible] ಪಾಠಶಾಲೆಗಳಿಗೂ ಕಳುಹಿಸಿ ಕೊಡಲಾಗುತ್ತದೆ. [illegible] ಕಲಿಸಲು ಅನುಕೂಲವಿಲ್ಲದ ಕೈಗಾರಿಕೆಗಳನ್ನು [illegible] ಕಲಿಸುವದಕ್ಕಾಗಿ ತಿಂಗಳಿಗೆ ೫ ರಿಂದ ೨೦ ರೂಪಾಯಿ [illegible] ವಿದ್ಯಾರ್ಥಿ ವೇತನಗಳನ್ನು ಕೊಡಲಾಗುತ್ತದೆ. ಈ ವಿದ್ಯಾರ್ಥಿ [illegible] ಮದ್ರಾಸಿನ ಅಥವಾ ಬೊಂಬಾಯಿನ ಕಲಾಪಾಠಶಾಲೆಯಲ್ಲಾಗಲಿ, ಇಲ್ಲವೇ ಬೊಂಬಾಯಿ ವಿಕ್ಟೋರಿಯಾ ಜ್ಯೂಬಿಲಿ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಎಂಬ ಪಾಠಶಾಲೆಯಲ್ಲಾಗಲಿ ಅಥವಾ ಇಂಥ ಕೈಗಾರಿಕೆ[illegible] ಕಲಿಸುವ ಇತರ ಪಾಠಶಾಲೆಗಳಲ್ಲಾಗಲಿ ಓದಬೇಕು.

[illegible] ನರಸೀಪುರ, ದೊಡ್ಡಬಳ್ಳಾಪುರ, ಚನ್ನರಾಯಪಟ್ಟಣ [illegible] ಈ ಸ್ಥಳಗಳಲ್ಲಿ ನೆಯ್ಗೆ ಪಾಠಶಾಲೆಗಳನ್ನು ಇಡು[illegible] ಅವುಗಳಿಗೆ ಸೇರಿದ ಹಾಗೆ ಮಗ್ಗಗಳ [illegible] ಕಲಿಸುವ ತರಗತಿಯನ್ನು ಇಡುವದಕ್ಕೂ [illegible] ನಾನಾ ಮಾರ್ಗಗಳಲ್ಲಿ, ಅನಾಗಿ ಮಾಡುವ [illegible] ಉಪಯೋಗಿಸಿ ಈ ಮಾರ್ಗಗಳಲ್ಲಿ ಸನಾತನದ ಬಟ್ಟೆಗಳ ನೆಯ್ಗೆಯ[illegible] ಈ ದೇಶದ ಹುಡುಗರಿಗೆ ಕಲಿಸುವದೇ ಈ ನೆಯ್ಗೆ ಪಾಠಶಾಲೆ[illegible] ನಡೆಸುವ ವಿಶೇಷ ವಿಷಯವಾಗಿದೆ. ಈ ನೆಯ್ಗೆ ಪಾಠಶಾ[illegible] ಒಂದು ಕ್ರಮಕ್ಕೆ ಬಂದು ಕೆಲಸಕ್ಕೆ ಮೊದಲು ಮಾಡ[illegible] ಅವುಗಳಿಗೆ ಸೇರಿದ ಹಾಗೆ ಬಣ್ಣಹಾಕುವ ತರಗತಿಗಳನ್ನೂ [illegible]ಲಾಗುತ್ತದೆ.

ಬೆಂಗಳೂರಲ್ಲಿ ಮೊ॥ ಶಾಸ್ತ್ರಾಯವರ ಪರೀಕ್ಷೆಶಾಲೆಯಲ್ಲಿ ಹಿ[illegible] ಯನ್ನು ಚೆನ್ನಾಗಿ ಬೆಳಯುವ ಕ್ರಮವನ್ನೂ, ರೇಷ್ಮೆ ಹುಳು[illegible]ವದನ್ನೂ, ರೇಷ್ಮೆ ಹಾಕದ ಕೋಟಿಗೆ ಸುತ್ತುವದನ್ನೂ ಕಲಿಯು[illegible]ಕ್ಕಾಗಿ, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಕೆಲವರು ಉಪಾಧ್ಯಾ[illegible]ಗಳನ್ನು ಆರಿಸಿಕೊಂಡು ಪರೀಕ್ಷಾರ್ಥವಾಗಿ ಅವರನ್ನು [illegible] ತಿಂಗಳು ಕಾಲ ಅಲ್ಲಿಗೆ ಕಳುಹಿಸಿಕೊಡಲಾಗುತ್ತದೆ [illegible]ಧ್ಯಾಯರು. ಜಪಾನ್ ದೇಶದಲ್ಲಿರುವ ಸ್ಪೆಷಲ್ ಇನ್‌ಸ್ಪೆಕ್ಟರ್ [illegible] ಹಾಗೆಯೇ, ಸೂಕ್ಷ್ಮದರ್ಶಕಗಳ ಸಹಾಯದಿಂದ ರೋಗವಿದ್ದ [illegible]ಗಳನ್ನು ತೆಗೆದುಹಾಕಿ ಸರ್ವದಾ ಒಳ್ಳೇ ಹುಳುಗಳನ್ನೇ ಸ್ವೈರ

ಮಾಡುವದಕ್ಕೆ ಸಹಾಯವಾಗುವಂತೆ, ಅವರಿಗೆ ವಿದ್ಯೆಯನ್ನು ಕಲಿಸುವದೇ ಈ ಏರ್ಪಾಡಿನ ಮುಖ್ಯೋದ್ದೇಶವಾಗಿದೆ.

ಈ ಕಾರ್ಯಗಳಿಗಾಗಿಯೂ ಇದೇ ರೀತಿಯಾಗಿ ಕೆಲಸ ಮಾಡುತ್ತಿರುವ ಸಾಮ್ಯಾರಿ ಪಾಠಶಾಲೆಗಳಿಗೆ ಸಹಾಯ ಮಾಡುವದಕ್ಕಾಗಿಯೂ ಶ್ರೀಮನ್ಮಹಾರಾಜರವರು ಕಳೆದ ಏಪ್ರಿಲ್ ತಿಂಗಳಲ್ಲಿ ರೋಕಲ್ ಫಂಡ್ ಜನರಲ್ ಬಾಬಿನಿಂದ ವರ್ಷಕ್ಕೆ ೩೦,೦೦೦ ರೂಪಾಯನ್ನು ಕೊಡುವಂತೆ ಅಪ್ಪಣೆ ಮಾಡಿದ್ದಾರೆ.

ಕೈಗಾರಿಕೆಯವರ ಸಾಮರ್ಥ್ಯವನ್ನೂ ಅವರ ಉಪಕರಣಗಳನ್ನೂ ಅಭಿವೃದ್ಧಿಗೆ ತರುವದಲ್ಲದೆ ಅವರ ಕಸಬುಗಳಿಗೂ ಗೌರವವನ್ನು ಉಂಟುಮಾಡ ಬೇಕು. ಈಗ ಅವುಗಳಿಗೆ ವಿಶೇಷ ಗೌರವ ವಿರುವದಿಲ್ಲವಾದ್ದರಿಂದ ಮೇಲುದರ್ಜೆಗೆ ಸೇರಿದ ಜನರು, ಅವುಗಳಿಗೆ ಗೌರವವಿದ್ದಲ್ಲಿ ಎಷ್ಟು ಧಾರಾಳವಾಗಿ ಪ್ರವೇಶಿಸುತ್ತಿದ್ದರೋ ಅಷ್ಟು ಧಾರಾಳವಾಗಿ ಪ್ರವೇಶಿಸುವದಿಲ್ಲ. ಈ ಉದ್ದೇಶವನ್ನು ನೆರವೇರಿಸುವದಕ್ಕಾಗಿ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಕೆಲವು ಕಸಬುಗಳನ್ನು ಕಲಿಸಿಕೊಡುವದು ಒಳ್ಳೆಯದೆಂದು ತೋರುತ್ತದೆ. ಇದರಿಂದ ಅವರಿಗೆ ಆ ಕಸಬಿನಲ್ಲಿ ಪಾಂಡಿತ್ಯವನ್ನು ಉಂಟುಮಾಡ ಬೇಕಾದ್ದಿಲ್ಲ; ಆಯಾ ಕಸಬುಗಳ ಅಭಿವೃದ್ಧಿಯಲ್ಲಿ ಅವರಿಗೆ ಕುತೂಹಲವುಂಟಾಗುವಂತೆ ಮಾಡಿದರೆ ಸಾಕಾಗಿರುತ್ತದೆ. ಮತ್ತು ಮೇಲುದರ್ಜೆಯ ಜನರಲ್ಲಿ ಕೈಗಾರಿಕೆ ಕಲೆಗಳ ತಿಳುವಳಿಕೆಯನ್ನು ಹೆಚ್ಚಿಸುವದಕ್ಕಾಗಿ ಅನ್ಯದೇಶಗಳಲ್ಲಿ ಕೆಲವು ಉಪಯುಕ್ತವಾದ ಕೈಗಾರಿಕೆಗಳನ್ನು ಕಲಿತುಕೊಂಡು ಬರುವಂತೆ ಕೆಲ ವಿದ್ಯಾರ್ಥಿಗಳನ್ನು ಕಳುಹಿಸಿದರೆ ಬಹಳ ಪ್ರಯೋಜನವುಂಟು. ಪ್ರಕೃತದಲ್ಲಿ ಮೂವರು ಮಂದಿ ಮೈಸೂರು ವಿದ್ಯಾರ್ಥಿಗಳು ಷೆನೆಕ್ಟಾಡಿ ಎಂಬಲ್ಲಿ ಜನರಲ್ ಇಲೆಕ್ಟ್ರಿಕ್ ಕಂಪೆನಿಯವರ ಕಾರ್ಯಾಲಯದಲ್ಲಿ ವಿದ್ಯುಚ್ಛಕ್ತಿ ಇಂಜನಿಯರಿಂಗ್ ಕೆಲಸವನ್ನೂ ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳನ್ನೂ ಕಲಿಯುತ್ತಿದ್ದಾರೆ. ಈ ವರ್ಷ, ಭೂಗರ್ಭಶಾಸ್ತ್ರದ ಪ್ರಾಯೋಗಿಕ ಭಾಗಗಳನ್ನು ಕಲಿಯುವದಕ್ಕಾಗಿ ಜಿಯೊಲಾಜಿಕಲ್ ಇಲಾಖೆಯ ಸೌ' ಬಿ. ಜಯರಾಮ್ ಎಂಬವರನ್ನು ಶ್ರೀಮನ್ಮಹಾರಾಜರವರು ಇಂಗ್ಲೆಂಡಿಗೆ ಕಳುಹಿಸಿ ಕೊಟ್ಟಿದ್ದಾರೆ.

## ಸಾಮಾನ್ಯ ವಿದ್ಯಾಭ್ಯಾಸ.

ಈ ವರ್ಷವಿದ್ದ ಸರಕಾರಿ ಪಾಠಶಾಲೆಗಳ ಸಂಖ್ಯೆ ೨,೩೩೨. ಇವುಗಳಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ ೯೨,೯೭೯ ಸರ್ಕಾರಿಯಲ್ಲದ ಪಾಠಶಾಲೆಗಳ ಸಂಖ್ಯೆ ೧,೬೩೬. ಅಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ೧೯,೧೦೭. ಈ ವಿದ್ಯಾರ್ಥಿಗಳ ಸಂಖ್ಯೆಯು ಹಿಂದಿನ ವರ್ಷಕ್ಕಿಂತ ಕಡಿಮೆಯಾಗಿದೆ. ಓದುವ ಗಂಡು ಹುಡುಗರ ಸಂಖ್ಯೆ ೯೫,೨೩೮. ಹೆಣ್ಣು ಹುಡುಗರ ಸಂಖ್ಯೆಯು ೧೬,೩೮೬.

ರಾಜ್ಯವನ್ನು ವಹಿಸಿಕೊಂಡಂದಿನಿಂದೀಚೆಗೆ ಜನರ ಸಾಮಾನ್ಯ ವಿದ್ಯಾಭ್ಯಾಸವು ಬಹಳಮಟ್ಟಿಗೆ ಅಭಿವೃದ್ಧಿಗೆ ಬಂದಿದ್ದಾಗ್ಯೂ, ಪ್ರಜೆಗಳಲ್ಲಿ, ಇನ್ನೂ ಜ್ಞಾನವೆಂಬ ಬೆಳಕು ಸೋಕದ, ಅಪಾರವಾದ ಅಜ್ಞಾನಾಂಧಕಾರವು ನೆಲೆಗೊಂಡಿದೆ. ೫೫ ಲಕ್ಷ ಪ್ರಜೆಗಳಲ್ಲಿ ೨,೬೨,೧೯೨ ಮಂದಿ ಮಾತ್ರವೇ, ಎಂದರೆ ನೂರಕ್ಕೆ ೪ ೮ ರಷ್ಟು ಮಾತ್ರ—ಓದುಬರಹ ತಿಳಿದವರೆಂದು—ಎಂದರೆ ನೂರಕ್ಕೆ ೯೫.೨ ರಂತೆ ಏನೂ ತಿಳಿಯದವರೆಂದು—೧೯೦೧ನೆಯ ವರ್ಷದ ಸೆನ್ಸಸಿನಿಂದ ಗೊತ್ತಾಗುತ್ತದೆ. ಓದುಬರಹ ಬರುವ ಪುರುಷರ ಮತ್ತು ಸ್ತ್ರೀಯರ ಸಂಖ್ಯೆಯನ್ನು ಪ್ರತ್ಯೇಕವಾಗಿ ನೋಡುವಲ್ಲಿ ಪುರುಷರಲ್ಲಿ ೨,೪೬,೮೮೬ ಮಂದಿ ಎಂದರೆ ನೂರಕ್ಕೆ ೮ ೮ ರಂತೆಯೂ ಸ್ತ್ರೀಯರಲ್ಲಿ ೧೬,೨೦೦ ಮಂದಿ ಎಂದರೆ ನೂರಕ್ಕೆ [illegible] ರಂತೆಯೂ ಓದುಬರಹ ಬಲ್ಲವರೆಂದು ತಿಳಿಯಬರುತ್ತದೆ. ಸ್ಕೂಲಿಗೆ ಹೋಗುವ ವಯಸ್ಸಿನ ಹುಡುಗರ ಲೆಕ್ಕವನ್ನು ನೋಡಿದಾಗಲೂ ಇದೇ ರೀತಿಯಾದ ಅಸಮಾಧಾನವುಂಟಾಗುತ್ತದೆ. ಓದುವ ಗಂಡುಹುಡುಗರ ಸಂಖ್ಯೆಯು ನೂರಕ್ಕೆ ೨೩.೯ ರಂತೆಯೂ ಹೆಣ್ಣು ಹುಡುಗಿಯರ ಸಂಖ್ಯೆಯು ೪ ೧೭ ರಂತೆಯೂ ಎಂದರೆ ಹೆಣ್ಣು ಗಂಡು ಒಟ್ಟು ಸಂಖ್ಯೆಯಲ್ಲಿ ನೂರಕ್ಕೆ ೧೩.೬೨ ರಂತೆ ಆಗುತ್ತದೆ. ಪಟ್ಟಣಗಳು ಹಳ್ಳಿಗಳು ಇವುಗಳ ಒಟ್ಟು ಸಂಖ್ಯೆಯನ್ನೂ ಪಾಠಶಾಲೆಗಳ ಒಟ್ಟು ಸಂಖ್ಯೆಯನ್ನೂ ಹೋಲಿಸಿ ನೋಡಿದರೆ ನೂರಕ್ಕೆ ೨೩.೨೯ ಪಾಠಶಾಲೆಗಳಿದ್ದಂತೆ ಆಗುತ್ತದೆ. ಆದ ಪ್ರಯುಕ್ತ ಶೀಘ್ರದಲ್ಲಿಯೇ ಈ ಭಯಂಕರವಾದ ಅಜ್ಞಾನಾಂಧಕಾರವನ್ನು ಹೋಗಲಿಸಿ ಸಾಮಾನ್ಯ ವಿದ್ಯಾಭಿವೃದ್ಧಿಗೆ ಸಹಾಯಮಾಡಿ, ಬುದ್ಧಿ ಸಂಸ್ಕಾರವನ್ನೂ ಉಂಟುಮಾಡಿ ಮುಖ್ಯವಾಗಿ ಕೈಗಾರಿಕೆಯಲ್ಲಿಯೂ ವ್ಯಾಪಾರದಲ್ಲಿಯೂ ಇತೋಪ್ಯಕರವಾದ ತಿಳುವಳಿಕೆಯನ್ನು ಉಂಟುಮಾಡುವದು ಸುಲಭಸಾಧ್ಯವಾಗಿ ಕಾಣುವದಿಲ್ಲ. ಬಾಲ್ಯಪಾಠಶಾಲೆಗಳಲ್ಲಿಯೂ ಮಧ್ಯಮ ಪಾಠಶಾಲೆಗಳಲ್ಲಿಯೂ ನಡೆಯುವ ವಿದ್ಯಾಭ್ಯಾಸವನ್ನು ಇನ್ನೂ ವಿಸ್ತರಿಸಿ ಇವುಗಳನ್ನು ಬಲಪಡಿಸುವದಕ್ಕಾಗಿ ವಿದ್ಯಾಇಲಾಖೆಯ ಇಲಾಖೆಗೆ, ಈಗ ನಮಗೆ ಇರುವ ಶಕ್ತಿಗೆ ಮೀರಿ, ಹಣವನ್ನು ಕೊಡಬೇಕಾಗುತ್ತದೆ. ಪ್ರಕೃತದಲ್ಲಿ ಲೋಕಲ್ ಬೋರ್ಡ್ ಜನರಿಂದ ವಿದ್ಯಾಭ್ಯಾಸಕ್ಕಾಗಿ ಸಲ್ಲುತ್ತಿದ್ದ ಹಣವನ್ನು ಶೇಕಡ ೨೫ ರಿಂದ ೩೩ಕ್ಕೆ ಹೆಚ್ಚಿಸಿ, ಈ ಕೆಲಸವನ್ನು ನೆರವೇರಿಸಲು ಯಥೋಚಿತವಾಗಿ ಪ್ರಯತ್ನ ಮಾಡಿದೆ.

---

## ಸ್ಥಾನಿಕ ವರ್ತಮಾನಗಳು.

ಸೀರಾ.—ಇಲ್ಲಿ ಮಳೆ ಬಹು ಚೆನ್ನಾಗಿ ಆಗಿದೆ. ಕೆರೆಗಳೆರಡೂ ತುಂಬಿ ಕೋಡಿಬಿದ್ದಿವೆ. ಇನ್ನೂ ಮಳೆ ಬರುವಹಾಗಿದೆ. ಹುಲ್ಲು ಬೆಳೆಯೆಲ್ಲಾ ಬಹು ಚೆನ್ನಾಗಿದೆ. ದವಸ ಧಾನ್ಯಗಳೆಲ್ಲಾ ಅಗ್ಗವಾಗಿವೆ. ರಾಗಿ ಪಲ್ಲ ಒಂದಕ್ಕೆ ೩॥ ರೂ., ಅಕ್ಕಿ ೧೨—೧೪ ಸೇರು ಸಿಕ್ಕುತ್ತವೆ. ಬಡಬಗ್ಗರಿಗೂ, ಎಲ್ಲಾ ಪ್ರಜೆಗಳಿಗೂ ತುಂಬಾ ಸಂತೋಷವಾಗಿದೆ.—ಮ್ಯುನಿಸಿಪಲ್ ಮೀಟಿಂಗಿನಲ್ಲಿ ಉಭಯ ಪಕ್ಷದ

ಮೆಂಬರುಗಳೂ ಸಂತೆ ವಿಷಯ ತಮ್ಮ ತಮ್ಮ ಅಭಿಪ್ರಾಯಗಳನ್ನು ಲಿಖಿತಮೂಲಕ ಒಪ್ಪಿಸಿದರು. ವೈಸ್ ಪ್ರೆಸಿಡೆಂಟರು ಬೇಗನೇ ಅದನ್ನು ತೀರ್ಮಾನಿಸಿ ಆರೋಗ್ಯ ವಿಚಾರದಲ್ಲಿ ಆಸ್ಪತ್ರೆ ಆಸ್ಪತ್ರೆ[illegible] ಕಳಿಗೆ ರವಾನಿಸಬೇಕೆಂಬ ತೀರ್ಮಾನವಂತೆ ಕಳುಹಿಸಿಕೊಟ್ಟು, ನೋಟೀಸಿಯನ್ನು ಅಬಾದಿಗೆ ತರುತ್ತಾರೆಂದು ಪ್ರಜೆಗಳೆಲ್ಲಾ ಅವಲವಿಕೆಯಿಂದ ನಿರೀಕ್ಷಿಸುತ್ತಾ ಇದ್ದಾರೆ.—ಈ ಊರು ಹೊರಗಣ ಕೋಟೆ ದಿಬ್ಬದ ಬಳಿ ಜನರು ಮಣ್ಣಿಗಾಗಿ ಅಗೆಯುತ್ತಾ ಇರುವಾಗ ಮೊದಲು ಒಂದು ಗಾರೆ ಗೋಪುರದ ಹಾಗೆ ಕಂಡಕಾರಣ ಅನೇಕ ಮುಸಲ್ಮಾನರು ದಮಾಯಿಸಿ ಕೊಡಿಯವರ ಮೂಲಕ ಎಲ್ಲಾ ಅಗೆಸಿದರು. ಒಂದು ಪುರಾತನ ಸಮಾಧಿಯು ದೊರೆಯಿತು. ಇದು ಗಾರೆಯಿಂದ ಬಹು ಚೆನ್ನಾಗಿ ಕಟ್ಟಿದೆ. ತಲೆಬಳಿ ಗೋಪುರದಹಾಗೆ ಚಿಕ್ಕದಾಗಿ ಒಂದು ಇದೆ. ಗಾರೆಯ ಕಟ್ಟಡವು ಹೊಸದರ ಹಾಗೆಯೂ, ಗಟ್ಟಿಯಾಗಿಯೂ ಇದೆ. ಅದರ ಮೇಲೆ ಯಾವ ಲಿಪಿಯೂ ಇಲ್ಲದಿರುವದರಿಂದ ಕಾಲವನ್ನು ಗೊತ್ತು ಹಿಡಿಯಲು ಆಗುವದಿಲ್ಲ. ಅಂತು ಹಿಂದೆ ಇದ್ದ ಯಾರೋ ಒಬ್ಬ ದೊಡ್ಡ ಮನುಷ್ಯನದಾಗಿದೆ. ಅದನ್ನೆಲ್ಲಾ ಚನ್ನಾಗಿ ಜೀರ್ಣೋದ್ಧಾರಮಾಡಿಸಿ ಒಬ್ಬ ಫಕೀರನ್ನು ಅಲ್ಲಿ ಇರಿಸಬೇಕೆಂಬ ಯೋಚನೆ ಮುಸಲ್ಮಾನರಲ್ಲಿ ನಡೆಯುತ್ತಿದೆ. ಇದು ಪ್ಲೇಗ್ ಮಾಡಿದ ಸ್ಥಳವಾಗಿರುವದರಿಂದ ಸಾವಿರಾರು ಸಮಾಧಿಗಳು ಮಣ್ಣಿನಲ್ಲಿ ಮುಚ್ಚಿಕೊಂಡಿರುವದು ಆಶ್ಚರ್ಯವಲ್ಲ.—ಕೆಲವು ದಿನಗಳ ಹಿಂದೆ ಹೊಸದಾಗಿ ಕಟ್ಟಿರುವ ಎ. ವಿ. ಸ್ಕೂಲ್ ಪ್ರತಿಷ್ಠೆಯು ಬಹು ವಿಜೃಂಭಣೆಯಿಂದ ಜರಗಿತು. ಬೆಳಿಗ್ಗೆ ೯ ಘಂಟೆ ವರೆಗೂ ಕ್ರಿಕೆಟ್ ಮ್ಯಾಚ್ ಜರಗಿತು. ನಂತರ ಪ್ರವೇಶದ ಆಚರಣೆ ನಡೆಯಿತು. ಬೆಳ್ಳಿ ಬೀಗದ ಕೈಯನ್ನು ಅಮಲ್ದಾರರವರ ವಶಕ್ಕೆ ಕೊಟ್ಟಮೇಲೆ ಅವರು ಬಾಗಿಲನ್ನು ತೆರೆದರು. ಅಧಿಕಾರಿಗಳೂ, ಲಾಯರುಗಳೂ, ಮ್ಯುನಿಸಿಪಲ್ ಮೆಂಬರುಗಳೂ, ಸಾಹುಕಾರರೂ, ಪ್ರಜೆಗಳೂ, ಬಹುಪ್ರಜೆ ನೆರದಿತ್ತು. ಪ್ರವೇಶವಾದ ಮೇಲೆ ಬಾಲಕಿಯರ ಮಂಗಳ ಗಾನವಾಯಿತು. ನಂತರ ಟೀಚರ್ ಶ್ರೀನಿವಾಸನವರ ಕರ್ನಾಟಕ ಗಾಯನವಾಯಿತು. ಹೆಡ್‌ಮಾಸ್ಟರು ಸ್ಕೂಲ್ ರಿಪೋರ್ಟನ್ನು ಓದಿದರು. ಅಗ್ರಾಸನರಾದ ಅಮಲ್ದಾರರು ಸಮಯೋಚಿತವಾದ ಕೆಲವು ಮಾತುಗಳಿಂದ ಉಪನ್ಯಾಸ ಮಾಡಿ ಸಭಾ ಜನರನ್ನು ಸಂತೋಷಪಡಿಸಿದ ಮೇಲೆ ಪುಷ್ಪ ಗಂಧ ತಾಂಬೂಲ ಸುಪಾರಿಯೊಂದಿಗೆ ಸಭಾ ಬರಖಾಸ್ತಾಯಿತು.

ದೇವನಹಳ್ಳಿ.—ಮಳೆ ವಿಚಾರ ತಿಳಿಸಲು ಅಸಾಧ್ಯ. ಇದರಿಂದ ಅನೇಕರು ತಮ್ಮ ಮನೆಮಠಗಳನ್ನು ಕಳೆದುಕೊಂಡು [illegible] ಇಡಲು ಜಾಗದಲ್ಲಿ ಒಂದು ದಿನವನ್ನು ಒಂದು ಯುಗವಾಗಿ ಕಳೆಯುತ್ತಾ ಇದ್ದಬದ್ದದ್ದನ್ನು ಕಳ್ಳರಿಗೆ ಬೋಚಿಟ್ಟು ಅನೇಕ ಕಷ್ಟನಷ್ಟಗಳಿಗೆ ಗುರಿಯಾಗಿ ಅಂಡಲೆಯುತ್ತಿರುವುದು ತುಂಬಾ ವ್ಯಸನವಾಗಿದೆ.—ಈ ಊರು ಸಮೀಪದಲ್ಲಿರುವ ಬೆಟ್ಟೇನಹಳ್ಳಿ ಪುಟ್ಟಮ್ಮನ ಕಡೆ ವಿಚಾರ ಮೊದಲು ಒಂದಾವರ್ತಿ ತಿಳಿಸಿದ್ದೆವಷ್ಟೆ. ಈ ಮೋಸವು ಕೆಲವು ದಿವಸಗಳ ಒಳಗೆ ಹೊರಬಿದ್ದು ತಾಲ್ಲೂಕು ಅಧಿಕಾರಿಗಳು ಇಂಥಾ ದಾಂಧ್ಲೆಗೆ ಅವಕಾಶ ಕೊಡದಂತೆ ಅಪ್ಪಣೆ ಮಾಡಿದ್ದರು. ಈಚೆಗೆ ಅದು ಈ ಒಂದೇ ಸ್ಥಳದಲ್ಲಲ್ಲದೆ ಈ ಊರು ಪಾದಿಗರ ದೊಡ್ಡದಲ್ಲಿ ಕೂಡ ಕೆಲವರು ಈ ಮೋಸ ಸಂಘವನ್ನು ಏರ್ಪಾಟು ಮಾಡಿಕೊಂಡು, ನಾನಾ ಕಡೆಗಳಲ್ಲಿ ಬುತ್ತಿಗಳನ್ನು ಇಟ್ಟು, ಸಂತರ್ಪಣೆಗಳನ್ನು ತಿಳಿದು, ದೇವತೆಯು ಮೈಮೇಲೆ ಬಂದು ಭೂತ ಭವಿಷ್ಯದ್ವರ್ತಮಾನಗಳನ್ನು ಹೇಳುತ್ತದೆಂದು ಪ್ರಕಟಿಸಿ, ಜನಗಳ ಮನಸ್ಸನ್ನು ಹಿಂದುಮುಂದು ತೋರದ ಬೀತಿಗೆ ಗುರಿಮಾಡಿ, [illegible] ಮಾಡದ ವಿಷದ ಪಥ್ಯಗಳನ್ನು ಬಿಡುವಂತೆ ಹೇಳಿ, ಆಸ್ಪತ್ರೆ ಔಷಧಚಿಕಿತ್ಸೆಗಳಿಂದ ಅನೇಕರಿಗೆ [illegible] ವಿಘ್ನವಿಸಿ ಬಹು ಜಾಗ್ರತೆಯಾಗಿ ರೋಗಗಳು ವೃದ್ಧಿಗೆ ತಾಕುತ್ತಿರುವರು. ಹೀಗೆ ಕಪಟ ದೊಡ್ಡವರು ಹೇಳುವದಕ್ಕಿಂತಲೂ ಚಿಕ್ಕವಯಸ್ಸಿನವರ ಮಾತಿನಲ್ಲಿ ಜನಗಳಿಗೆ ನಂಬಿಗೆ ಹೆಚ್ಚು ಉಂಟೆಂದು ಈ ಮೋಸಗಾರರು ಸಣ್ಣಸಣ್ಣ ಹುಡುಗಿಯರನ್ನು ತಯಾರ್ಮಾಡಿ ಇಟ್ಟುಕೊಂಡಿರುವರು. ಹೀಗೆ ಮಾಡಿಗರ ಹಳ್ಳದಲ್ಲಿ ಮೈತುಂಬ ಕಪಟ ಹೇಳುತ್ತಿದ್ದ ಒಬ್ಬ ಪೂಜಾರಿ ಪ್ಲೇಗ್ ಮಾರಿಯ ವಶವಾದಂತೆ ತಿಳಿದುಬರುತ್ತದೆ. ದೇವತೆಯು ಇಂಥಾ ತನ್ನ ಭಕ್ತನನ್ನು ಕೈಬಿಟ್ಟದ್ದು ತುಂಬಾ ಆಶ್ಚರ್ಯವಲ್ಲವೇ? ಮಾರಿ ದೇವರವರಿಗೆ ಜಯಶಕ್ತಿಗಳಿಂದ ವಶಾನುಗಳು ಕೊಡುವ ಕಷ್ಟ ಕಾಣಿಕೆಗಳ್ಯಾವತ್ತೂ ಈ ಗುಂಪಿನ ಪುಂಡು ಜನಗಳು ಹಂಚಿಕೊಂಡು, ಸಾಯಂಕಾಲಕ್ಕೆ ಹೊಸಪಂಗ[illegible]ಗುತ್ತಿರುವದಕ್ಕಾಗಿ ವಿಷಾದಿಸಬೇಕಾಗಿದೆ. ಆದ್ದರಿಂದ ಜನಗಳನ್ನು ಅನ್ಯಾಯವಾಗಿ ಸುಲಿದು ತಿನ್ನುವ ಈ ದೊಂಬ ಆಟಗಳು, ಈ ಸಂಘದ ವಳಗೆಗೆ ಅವಕಾಶವಿಲ್ಲದಂತೆ ಮಾಡಿ, ಜನಗಳಿಗೆ ಜ್ಞಾನವನ್ನು ಸರ್ಕಾರದವರು ಉಂಟುಮಾಡತಕ್ಕದ್ದು ಆವಶ್ಯಕವಾಗಿದೆ.—ಹೊಸದಾಗಿ ಬಂದಿರುವ ಪೋಲೀಸ್ ಇನ್ಸ್‌ಪೆಕ್ಟರು ಪ್ರತಿದಿನವೂ ಊರಿನಲ್ಲೂ ಸುತ್ತುಮುತ್ತಲೂ ಇರುವ ಗುಡಿಸಲುಗಳಿಗೂ ದಯಮಾಡಿ ಎಲ್ಲರ ಯೋಗಕ್ಷೇಮವನ್ನೂ ವಿಚಾರಿಸುತ್ತಾ ಜನಗಳಿಗೆ ಧೈರ್ಯವನ್ನು ಕೊಡುತ್ತಿದ್ದಾರೆ. ಇಲ್ಲಿ ವೈದ್ಯರಾಗಿರುವ ಗೋವಿಂದಶೆಟ್ರು ತಮ್ಮ ದಿವ್ಯಔಷಧದಿಂದ ತುಂಬಾ ಬಡವರಿಂದ ಈ ಊರಿನ ಅನೇಕರಿಗೆ ಧರ್ಮಾರ್ಥವಾಗಿ ಔಷಧಗಳನ್ನು ಕೊಟ್ಟು ಸುಮಾರು ೨೦—೨೫ ಪ್ಲೇಗ್ ಕೇಸುಗಳನ್ನು ಗುಣಪಡಿಸಿದ್ದಾರೆ. ಈ ಕಷ್ಟ ಕಾಲದಲ್ಲಿ ಈ ಉಭಯತ್ರರೂ ಜನಗಳಿಗೆ ಮಾಡುತ್ತಿರುವ ಸಹಾಯಕ್ಕಾಗಿ ಎಲ್ಲರೂ ಕೃತಜ್ಞರಾಗಿರಬೇಕು.

ಹಾಸನ.—ಕಳೆದ ೧೫—೨೦ ದಿವಸಗಳಿಂದೀಚೆಗೆ ಇಲ್ಲಿನ ಮಿವರ್ ಕೋರ್ಟ್ ಸಭೆಯಲ್ಲಿ ನಡೆದ ವರ್ತಮಾನಗಳು ಅತಿ ವಿಶೇಷವಾದವುಗಳಾಗಿರುತ್ತವೆ. ಧರನ್ಯಾಯ ಧೊರೆಯವರು ಇಷ್ಟು ಕಾಲದ ಮಟ್ಟಿಗೂ ಬಂದಿರಲಿಲ್ಲದ್ದು ಕಳೆದ ತಿಂಗಳ ಮಧ್ಯಭಾಗ

ಹಳ್ಳಿ ದಾಂಪತ್ಯ ಸ್ಥಿತಿಯಲ್ಲಿ ಸೇರಿದರು. ಇವರ ಧೊರೆಸಾನಿಯವ ರು ವಿಲಾಯಿತಿಯಿಂದ ಬಂದು, ಬೆಂಗಳೂರಲ್ಲಿ ಸದರಿ ಧೊರೆಗಳ ನ್ನು ವಿವಾಹ ಮಾಡಿಕೊಂಡರು. ದಂಪತಿಗಳಿಬ್ಬರು ವಿವಾಹವಾದ ಕೂಡಲೇ ಬೆಂಗಳೂರನ್ನು ಬಿಟ್ಟು ಮಾರನೆ ದಿನ ಹಾಸನಕ್ಕೆ ಬಂದರು. ಇಲ್ಲಿನ ಕ್ರೈಸ್ತ ಸಭೆಯವರು ಇವರನ್ನು ಉಚಿತ ಮರ್‍ಯಾದೆಗಳಿಂ ದ ಬರಮಾಡಿಕೊಂಡರು. ಇವರು ಇಲ್ಲಿಗೆ ಬಂದ ೪ನೇ ದಿವಸ ಇವರನ್ನು ಸಂತೋಷಪಡಿಸಲಿಕ್ಕಾಗಿ ಇಲ್ಲಿನ ಆರ್ಫನೇಜ್ ದೊಡ್ಡ ಹಾಲ್ ರೂಮಿನಲ್ಲಿ ಸುಮಾರು ದೊಡ್ಡ ಸಭೆ ಸೇರಿತ್ತು. ಕೆಲವು ಯೂ ರೋಪಿಯರ್ ಧೊರೆಸಾನಿಗಳು ಸಭೆಯನ್ನಲಂಕರಿಸಿದ್ದರು. ಸದರಿ ಆರ್ಫನೇಜ್ ಹಾಲ್ ವಿವಿಧವಾದ ಪುಷ್ಪ, ಎಲೆ, ಬಳ್ಳಿ, ಫಲಗಳಿಂದ ಅಲಂಕೃತವಾಗಿ ದಂಪತಿಗಳು ಕೂರುವುದಕ್ಕಾಗಿ ಪ್ರತ್ಯೇಕ ಮಂ ಟಪವು ಬರೀ ಹಸುರಾದ ಎಲೆ, ಪುಷ್ಪ, ಇತರ ವಸ್ತುಗಳಿಂದ ಶೋ ಭಾಯಮಾನವಾಗಿ ರಚಿತವಾಗಿತ್ತು. ನೇಮಕವಾದ ಹೊತ್ತಿಗೆ ದಂ ಪತಿಗಳು ದಯಮಾಡಿಸಿದರು. ಭಜನೆಯವರು ವಿವಿಧ ಕೀರ್ತನೆಗ ಳನ್ನು ಹಾಡಿದರು. ಪ್ರತ್ಯೇಕವಾಗಿ ಒಂದು ಅಡ್ರೆಸ್ ಓದಿ ಬಹು ಮಾನ ಮಾಡಲಾಯಿತು. ತರುವಾಯ ನೂತನ ದಂಪತಿಗಳೂ ಬೇರೆ ಇನ್ನಿಬ್ಬರು ಯೂರೋಪಿಯರ್ ಮಿಸ್ಸಿಗಳೂ ಔತಣಾದಿಗಳು ನಡೆ ಸಿದರು. ಒಂದೆರಡು ದಿವಸಗಳಾದಮೇಲೆ ಸದರಿ ಧೊರೆ ಧೊರೆಸಾನಿ ಯವರು ಎಲ್ಲರನ್ನು ಸಂತೋಷಪಡಿಸಲಿಕ್ಕಾಗಿ ಒಂದು ಭಾರಿ ಔತ ಣವನ್ನು ಮಾಡಿಸಿದರು.—ವರ್ಷದ ಕಡೇ ವಿಶೇಷ ಆರಾಧನೆಗಳು ಸದರಿ ಮಿಷನ್ ಇಲಾಖೆಯಲ್ಲಿ ಈ ತಿಂಗಳಲ್ಲಿ ನಡೆಸಲಾಯಿತು. ಈ ಸರ್ಕೀಟಿಗೆ ಸೇರಿದ ಎಲ್ಲಾ ಉಪದೇಶಿಗಳು ಹಾಜರಾಗಿದ್ದರು. ಪ್ರ ತಿನಿತ್ಯವೂ ಮಂಗಳಕರವಾದ ಕೂಟ, ಉಪನ್ಯಾಸಗಳು ನಡೆಸಲಾಯಿ ತು. ಪ್ರತಿ ಕೂಟದಲ್ಲಿಯೂ ಸಭಿಕರು ದೇವಾಲಯವನ್ನು ತುಂ ಬುತ್ತಿದ್ದರು. ಕಳೆದ ಭಾನುವಾರ ಬೆಳಿಗ್ಗೆ ನಮ್ಮ ಚೇರ್‌ಮೆನ್ರಾದ ಫಿಶ ರೀಸ್ ದೊರೆಯವರು ಪ್ರಸಂಗಿಸಿದರು. ವಾಕ್ಯಳು ಸೇರಿ ೨೦೦ ಜನರು ಆಲಯದಲ್ಲಿ ಇದ್ದರು. ಹಾನೆ ಜನರಿಗೆ ತಕ್ಕ ಸ್ಥಳ ದೊರೆಯದೆ ಕೆಳಗೆ ಇಕ್ಕಟ್ಟಾಗಿ ಕೂತುಕೊಂಡರು. ದೇವಾಲಯ ವು ಬಹು ಬೇಗನೇ ವಿಸ್ತರಿಸದೆಹೋದರೆ ಸಭಿಕರು ಹೊರಗೆ ಕೂತು ಕೊಳ್ಳಬೇಕಾಗುವದೆಂದು ಕೆಲವರು ಹೇಳಿಕೊಂಡರು. ಭಾನು ವಾರ ಸಾಯಂಕಾಲ ಅನುಭವ ಕೂಟವು ಆಚರಿಸಲಾಯಿತು. ಸದ ರಿ ಚೇರ್‌ಮನ್ ಧೊರೆಯವರೇ ಅಗ್ರಾಸನಾಧಿಪತಿಗಳಾಗಿ ಕೂಟವ ನ್ನು ನಡೆಸಿದರು. ಮಾರನೆ ದಿನ ಇಲ್ಲಿನ ಕ್ರೈಸ್ತ ಯೌವನಸ್ತರ ಗಿಲ್ಡ್ ೩ನೇ ವರುಷೋತ್ಸವವು ಆರ್ಫನೇಜ್ ದೊಡ್ಡ ಹಾಲ್‌ನಲ್ಲಿ ನಡೆಯಿತು. ಅದಕ್ಕೂ ಫಿಶರೀಸ್ ದೊರೆಯವರು ಅಗ್ರಾಸನರಾ ಗಿದ್ದರು. ಅನೇಕರು ಕನ್ನಡ, ಸಂಸ್ಕೃತ, ತೆಲುಗು ಹಿಂದುಸ್ಥಾನಿ, ಅರ್ಕ ಮೊದಲಾದ ಭಾಷೆಗಳಲ್ಲಿ ಭಕ್ತಿ ಸಮ್ಮಂಧವಾದವುಗಳನ್ನು ಬಾಯಿಪಾಠವಾಗಿ ಹೇಳಿದರು. ಭಜನೆಯೊಂದಿಗೆ ಹಾಡಿದರು. ಮ ನೋರಂಜಕವಾದ ಸಂಭಾಷಣೆ ನಡೆಯಿತು. ಚೇರ್‌ಮನ್ ಧೊರೆ ಯವರೇ ಆದಿಯಾಗಿ ಸಭಿಕರೆಲ್ಲ ಆನಂದಪಟ್ಟರು. ಕಡೆಯಲ್ಲಿ ಫಲಾಹಾರ, ಪುಷ್ಪ ತಾಂಬೂಲಾದಿಗಳನ್ನು ಕೊಟ್ಟು ಸಭೆಯು ಬರ ಖಾಸ್ತಾಯಿತು.

ಮಂಡ್ಯ.—ಸಂತೆಗೆ ಬಂದಿದ್ದ ಒಬ್ಬ ವರ್ತಕನು ನೂರಾರು ರೂಪಾಯಿ ಸೊಂಟದಲ್ಲಿ ಕಟ್ಟಿಕೊಂಡು ಗಾಡಿಯನ್ನು ಕಚೇರಿ ಸಮೀಪದ ತೋಟದಲ್ಲಿ ಬಿಟ್ಟು, ಆಳನ್ನು ಗಾಡಿಯಲ್ಲಿ ಮಲಗಿಸಿ ತಾ ನುಮಾತ್ರ ಗಾಡಿಯ ಕೆಳಗೆ ನಿದ್ರಿಸುತ್ತಿರಲು ಮಧ್ಯರಾತ್ರಿ ಕೆಲವರು ಬಂದು ಗಾಡಿಯೊಳಗೆ ಸಾಹುಕಾರನಿರಬಹುದೆಂದು ಯೋಚಿಸಿ ಆಳನ್ನು ಸ್ವಲ್ಪದೂರ ಹೊತ್ತುಕೊಂಡು ಹೋಗಿ ಶೋಧಿಸಿ ಆವನಲ್ಲಿದ್ದ ೩—೪ ರೂ. ತೆಗೆದುಕೊಂಡು ಅವನು ಸಹ ಕೊಟ್ಟು ಓಡಿಹೋದ ರು —೨—೩ ದಿನಗಳ ಹಿಂದೆ ಒಬ್ಬ ಮಹ್ಮದೀಯ ಶಿಪಾಯಿಯು ರಾತ್ರಿ ಗಾಡಿಯಲ್ಲಿ ಪ್ರಯಾಣ ಮಾಡುತ್ತಾ ಮಂಡ್ಯದಲ್ಲಿಳಿದು, ಮರಳಿ ಬರುವದರಲ್ಲಿ ಗಾಡಿ ಎಲಿಯೂರಿಗೆ ಹೊರಟಿತು. ಅವನು ಪಾಪನು ರೈಲಿನಲ್ಲಿತ್ತು ಸ್ಟೇಷನ್ ಮಾಸ್ತರನ್ನು ಕೇಳಿದ್ದಕ್ಕೆ ಎಲಿಯೂರಿಗೆ ಓಡಿಹೋದರೆ ಗಾಡಿ ಸಿಕ್ಕುತ್ತೆಂದು ಹೇಳಿದರು. ಅ ದರಂತೆ ಅವನು ಎಲಿಯೂರಿಗೆ ೫ ಮೈಲಿ ರೈಲ್ ಮಾರ್ಗದಲ್ಲೇ ಓಡಿ, ೩೫ ನಿಮಿಷದಲ್ಲಿ ಗಾಡಿಯನ್ನು ಸಂಧಿಸಿ ಕೂತುಕೊಂಡನು ಕೂಡ್ಲೆ ಅಲ್ಲಿಂದ ವರ್ತಮಾನ ಬಂತು — ಶಿವಪುರದಲ್ಲಿ ೯—೬ ಜ ನರು ಪ್ಲೇಗಿನಿಂದ ಮೃತರಾದರು. ಕೊಪ್ಪೆ ಜನರಲ್ಲಾ ಊರುಬಿ ಟ್ಟು ಗುಡಿಸಲುಗಳಲ್ಲಿ ವಾಸಿಸುತ್ತಾ ಇದ್ದಾರೆ —ಮದ್ದೂರಿನ ಛತ್ರದ ಮೇಲ್ವಿಚಾರಣೆಯನ್ನು ಅಲ್ಲಿನ ಆಸ್ಪಿಟಲ್ ಅಸಿಸ್ಟೆಂಟರಿಗೆ ನಮ್ಮ ಅ ಮಲ್ದಾರರು ವಹಿಸಿದ್ದರು. ಅದರಿಂದ ಜನರಿಗೆ ಉಪಯೋಗವೂ ಸ ರ್ಕಾರಕ್ಕೆ ಲಾಭವೂ ಆಗಿತ್ತು. ಆದು.ಕೆಲವರಿಗೆ ಅತೃಪ್ತಿಯಾದ್ದ ರಿಂದ ಅಮಲ್ದಾರರನ್ನು ಕೆಲವರು ಕಂಡು ಬ್ರಾಹ್ಮಣರ ವಶಕ್ಕೇನೇ ಛತ್ರದ ಅಧಿಕಾರ ವಹಿಸಬೇಕೆಂದು ಕೇಳಿಕೊಂಡಿದ್ದರ ಮೇಲೆ ಅಲ್ಲಿನ ಶೇಕ್ದಾರರು ನೋಡಿಕೊಳ್ಳಬೇಕೆಂದು ಅಪ್ಪಣೆ ಕೊಟ್ಟರು. ಆದರೆ ಆಸ್ಪಿಟಲ್ ಅಸಿಸ್ಟೆಂಟರು ನಮಗೆ ಆ ಕೆಲಸ ಆಗತ್ಯವಿಲ್ಲವೆಂ ದು ಬರೆದುಬಿಟ್ಟರು. ಇನ್ನುಮೇಲೆ ಹ್ಯಾಗೆ ನಡೆಯುತ್ತೋ ನೋ ಡಬೇಕು —ಮಳೆಯಿಂದ ಈ ಪ್ರಾಂತ್ಯದ ಕೆರೆಗಳೆಲ್ಲಾ ತುಂಬಿ ಏರಿಮೇಲೆ ಕೋಡಿ ಬೀಳುತ್ತಿವೆ. ಹೊಲ ಗದ್ದೆಗಳು ಜನರ ಕಣ್ಮನ ಗಳನ್ನು ಆಕರ್ಷಿಸುತ್ತವೆ. ಜನರ ಮನಸ್ಸು ಈಗ ತುಂಬಾ ಸಮಾ ಧಾನವಾಗಿದೆ. ಪ್ಲೇಗಿನ ಭೀತಿ ಮಾತ್ರ ಆನಾಗ್ಯ ಜನರನ್ನು ಖಿನ್ನ ರನ್ನಾಗಿ ಮಾಡುವದು

ಹಾಸನ.—ನಮ್ಮ ಅಮಲ್ದಾರ್ ಮಿ॥ ಕಂಠೀರವಾಚಾರ್ಯ ರವರನ್ನು ಶುದ್ಧಿಮಾಡಿಸುವದರಲ್ಲಿ ಅಸಕ್ತರಾಗಿ ಜನರು ತಮ್ಮ ಮ ನೆಗಳ ಬಳಿ ಬೆಳೆದಿರುವ ಕಚರಾವನ್ನು ಶುದ್ಧ ಮಾಡಕೂಡದೆಂತಲೂ ಮಾಡದಿದ್ದರೆ ಶಿಕ್ಷೆಯಾಗುವದೆಂತಲೂ, ಅಂಟುಜಾಡ್ಯ ಪ್ರದೇಶಗಳಿಂದ ಬಂದವರು ೧೦ ದಿನಗಳವರಿಗೂ ಆಸ್ಪತ್ರೆಗೆ ಹಾಜರಾಗಬೇಕೆಂದೂ ಕಟ್ಟು ಮಾಡಿಸಿದ್ದಾರೆ —ಇವರು ತಮ್ಮ ಹೆಣ್ಣುಮಕ್ಕಳನ್ನು ಕ್ರಮವಾಗಿ ಇಲ್ಲಿನ ಗರಲ್ಸ್ ಸ್ಕೂಲಿಗೆ ಕಳುಹಿಸುತ್ತಾರೆ. ಇವರ ಮಾದರಿಯನ್ನು ಇತರರೂ ಅನುಸರಿಸುವರೆಂದು ನಿರೀಕ್ಷಿಸಲ್ಪಟ್ಟಿದೆ. ಈಗ ಇಲ್ಲಿರುವ ಪೊಲೀಸ್ ಇನ್ಸ್‌ಪೆಕ್ಟರ್ ಮಿ॥ ಕೃಷ್ಣಪ್ಪನವರು ಈ ತಾಲ್ಲೂಕಿಗೆ ಬಂದ ಮೇಲೆ ಕೊಲೆ, ಕಳವು, ಜೂಜು ಮೊ ದಲಾದ ದುಷ್ಕಾರ್ಯಗಳು ಬಹು ಮಟ್ಟಿಗೆ ಕಡಿಮೆಯಾದವೆಂದು ಕೇಳಲು ತುಂಬಾ ಸಂತೋಷಪಡುತ್ತೇವೆ —ಹಾಸನದಿಂದ ಸುಮಾ ರು ೧೦—೧೨ ಮೈಲಿ ದೂರದಲ್ಲಿ ಕುಮ್ಮರು ಮುದ್ದನಹಳ್ಳಿ ಎಂಬ ಗ್ರಾಮದ ಬಳಿ ಜಂಗಲಿನಲ್ಲಿ ಯಾರೋ ಕೆಲವು ಮರಗಳನ್ನು ಕಳ್ಳತನದಲ್ಲಿ ಕತ್ತರಿಸಿ ಹಾಕಿದ್ದು ಫಾರೆಸ್ಟ್ ಇಲಾಖೆಯವರಿಗೆ ತಿ ಳಿದು ಬರಲು, ಇವರು ಕತ್ತರಿಸಿದವರನ್ನು ಪತ್ತೆಮಾಡಿ ಅವರಮೇಲೆ ಮೊಕದ್ದಮೆ ಮಾಡಿದರು. ಯಾವಾಗ ಇವರು ಮಾಡಿದರೋ ಅವ ರೂ ಫಾರೆಸ್ಟಿನವರ ಮೇಲೆ ಅಂದರೆ ಫಾರೆಸ್ಟಿನವರು ಲಂಚ ತೆಗೆದು ಕೊಂಡರೆಂದು ಒಂದು ಮೊಕದ್ದಮೆ ಮಾಡಿದರು. ಇವೆರಡೂ ಮೈಸೂರಿನಲ್ಲಿ ಈಗ ಒಂದು ವರ್ಷದಿಂದಲೂ ನಡೆಯುತ್ತಿದ್ದು, ಇ ದೇ ತಿಂಗಳು ೧೨ ನೇ ತಾರೀಖು ಖುಲಾಸೆಯಾಯಿತು. ಫಾರೆಸ್ಟಿ ನವರು ಅವರಮೇಲೆ ಮಾಡಿದ್ದ ಮೊಕದ್ದಮೆಯು ಸಹ ಕಳೆದ ವರ್ಷವೇ ವಿಚಾರಣೆಯಾಗಿ ಖುಲಾಸೆಯಾಯಿತು.

---

## ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಸಾಮಾನ್ಯ ವಿಷಯಗಳು.

ಮಂಗಳವಾರ—ಮೊದಲನೇ ದಿನ.

ಪ್ರಾರ್ಥನೆ —ಅನೇಕ ಗ್ರಾಮಗಳ ಗೋಮಾಳಗಳನ್ನು ಸ್ಟೇಟ್ ಫಾರೆಸ್ಟಿಗೆ ಸೇರಿಸಿಕೊಂಡಿದಾರೆ. ಇದರಿಂದ ಗೋಕಾಯಿಗಳ ಮೇವಿಗೆ ತುಂಬಾ ಕಷ್ಟವಾಗಿದೆ. ಅಂಥಾ ಗೋಮಾಳಗಳನ್ನೆಲ್ಲಾ ಆಯಾ ಗ್ರಾಮಕ್ಕೆ ಬಿಡಿಸಿಕೊಡಬೇಕು.

ದಿವಾನರವರ ಉತ್ತರ.—ಆಯಾ ಗ್ರಾಮಕ್ಕೆ ಸಾಕಾಗುವಷ್ಟು ಗೋಮಾಳಗಳನ್ನು ಬಿಟ್ಟು, ಉಳಿದ ಜಮೀನನ್ನು ಫಾರೆಸ್ಟಿಗೆ ಸೇರಿ ಸಿಕೊಂಡಿದೆ. ಯಾವ ಗ್ರಾಮಕ್ಕೆ ಇಲ್ಲವೋ ಅಥವಾ ಕಡಿಮೆಯಾಗಿ ದೆಯೋ ಹೇಳಿದರೆ ವಿಚಾರಿಸಿ ಬಿಡಿಸಿಕೊಡುವೆವು.

ಬುಧವಾರ—ಎರಡನೇ ದಿನ.

ಪ್ರ.—(೧) ಮಲ್ನಾಡಿನಲ್ಲಿ ಪ್ರಜೆಗಳು ಸೌದೆಗೆ ತುಂಬಾ ಭಂಗಪಡುತ್ತಾರೆ. ಆಲದ ಮರ, ಮುಳ್ಳು ಗಿಡ ವಿನಾ ಇನ್ಯಾವ ದನ್ನು ಮುಟ್ಟಿದರೂ ಫಾರೆಸ್ಟಿನವರು ಮೊಕದ್ದಮೆ ಮಾಡಿ ಶಿಕ್ಷೆ ವಿಧಿ ಸುತ್ತಾರೆ. ಮೊದಲು ತಪ್ಪಿತಸ್ಥರಿಗೆ ಬರೀ ಜುಲ್ಮಾನೆ ಹಾಕುತ್ತಿದ್ದ ರು ; ಈಗ ಜೇಲ ಅನುಭವಿಸಬೇಕಾಗಿದೆ ಕಾನೂನು ತುಂಬಾ ಕಠಿಣಮಾಡಿಬಿಟ್ಟಿದಾರೆ. (೨) ಹಿಡುವಳಿ ಭೂಮಿಯೊಳಗೆ ಸೇರಿದ ಅಳಲೆಕಾಯಿ ಶೀಗೇಕಾಯಿ ಮುಂತಾದ್ದನ್ನು ಮಾರಿಕೊಳ್ಳುವುದಕ್ಕೆ ಫಾರೆಸ್ಟಿನಿಂದ ರಹದಾರಿ ತರಬೇಕಾಗಿದೆ. ಮೊದಲು ಶೇಕ್ದಾರರು ಕೊಡುತ್ತಿದ್ದದ್ದು ತುಂಬಾ ಅನುಕೂಲವಾಗಿತ್ತು (೩) ಕಾಡಿನ ಲ್ಲಿ ಮೇಯುವ ದನಕ್ಕೆ ಮೊದಲು ೧ ಆ., ೨ ಆ. ರುಸುಂ ಕೊಡು ತ್ತಾ ಇದ್ದೆವು. ಈಗ ಈ ರುಸುಮು ೪ ಆ., ೪ ಆ. ಆಗಿದೆ.

ಉ —ಮತ್ತಿ ಮರವನ್ನು ರೈತರಿಗೆ ಬಿಟ್ಟುಕೊಡುವಂತೆಯೂ, ಶೇಕ್ದಾರ್ರೇ ಇನ್ನುಮೇಲೆ ರಹದಾರಿ ಕೊಡುವಂತೆಯೂ ಹುಕುಂ ಕೊಡುತ್ತೇವೆ. ದನ ಮೇಯುವದಕ್ಕೆ ಇಪ್ಪರುವ ರುಸುಮನ್ನು ಕಡಿಮೆಮಾಡಲಾಗುವುದಿಲ್ಲ ಮತ್ತು ಕಾನೂನು ಬದಲಾಯಿಸಿ ಜೇಲಿಗೆ ಬದಲಾಗಿ ಜುಲ್ಮಾನೆ ಮಾತ್ರ ಇಡುವುದಕ್ಕಾಗುವುದಿಲ್ಲ.

ಪ್ರ.—ಸ್ವಂತ ಜಮೀನಿನಲ್ಲಿರತಕ್ಕ ಸೌದೆಯನ್ನು ಕಡಿದು ತಂದು ಮೈಸೂರಿನಲ್ಲಿ ಮಾರಿ ಮಾಡುವುದಕ್ಕೆ ೪ ಆಣೆ ಲೇಸನ್ಸ್ ಫೀಜು ಕೊಡಬೇಕು. ಹೀಗೆ ವಸೂಲ್ಮಾಡುವುದು ಗೌವರ್ನಮೆಂಟ್ ಹುಕುಮಿಗೆ ವಿರೋಧವಾಗಿದೆ. ಮೊನ್ನೆ ಜುಲೈ ೧೫ ರಿಂದ ೪ ಆ. ಯಂತೆ ವಸೂಲ್ಮಾಡುತ್ತಿದಾರೆ. ಸೌದೆ ತಂದು ಮಾರಿ ಅನೇಕರು ಹೊಟ್ಟೆಹೊರಕೊಳ್ಳಬೇಕಾಗಿದೆ. ಈ ಹಿಂಸೆ ತಪ್ಪಿಸಿಕೊಡಬೇಕು

ಉ.—ಹಬೇಲನಿಂದ ರೈತನು ಚೀಟಿ ತಂದರೆ ೪ ಆ. ವಸೂಲ್ಮಾ ಡುವದಿಲ್ಲ. ಅಥವಾ ಗ್ರಾಮದಲ್ಲಿ ಮಾತುಬರಹದವರ್‍ಯಾರಾದರೂ ಚೀಟಿ ಬರೆದುಕೊಟ್ಟರೆ ಸಾಕು. ಆದರೂ ಆ ಪ್ರಕಾರ ವಸೂಲ್ಮಾ ಡದಂತೆ ಹುಕುಂ ಕೊಡುತ್ತೇವೆ.

ಪ್ರ.—ಹಿಡುವಳಿ ಜಮೀನಿನಲ್ಲಿ ಬೆಳೆವ ಗಂಧದ ಮರಗಳನ್ನು ಸಾಕಿ ಕಾಪಾಡತಕ್ಕ ರೈತನಿಗೆ ಆ ಮರದ ಕ್ರಯದಲ್ಲಿ ಸ್ವಲ್ಪ ಭಾಗ ಸಲ್ಲುವಂತೆ ಮಾಡಿಕೊಡಬೇಕು.

ಉ —ಇದು ದೊಡ್ಡ ವಿಷಯ, ಚನ್ನಾಗಿ ಆಲೋಚಿಸಬೇಕಾ ಗಿದೆ. ಶೀಘ್ರದಲ್ಲಿ ಆಗಲಾರದು.

ಪ್ರ.—ಫಾರೆಸ್ಟ್ ಇಲಾಖೆಯವರು ಹುಲ್ಲು ಬನ್ನಿ ಜಮೀನುಗಳ ಲ್ಲಿ ಗಂಧದ ಬೀಜಗಳನ್ನು ಚೆಲ್ಲಿ ಗಿಡ ಬೆಳೆಸಿ, ಆ ಜಮೀನುಗಳಿಗೆ ದನ ಬಿಡದಂತೆ ಕಟ್ಟು ಮಾಡುತ್ತಾರೆ. ಇದರಿಂದ ಗೋಮಾಳವೇ ಇಲ್ಲದಂತಾಗುತ್ತೆ.

ಉ.—ಫಾರೆಸ್ಟಿನವರು ಗೋಮಾಳದ ಭೂಮಿಗಳ ತಂಟೆಗೆ ಹೋಗದಂತೆ ಹುಕುಂ ಕೊಡುತ್ತೇವೆ.

ಪ್ರ.—ಡಿಸ್ಟ್ರಿಕ್ಟ್ ಫಾರೆಸ್ಟಿಗಳಿಂದಾಗಲಿ, ಇತರ ಹಿಡುವಳಿ ಜಮೀನುಗಳಿಂದಲಾಗಲಿ ಉಗನಿ ಮುಂತಾದ ಎಲೆಗಳನ್ನು ಗೊಬ್ಬ ರಕ್ಕಾಗಿ ಸಾಗಿಸಿಕೊಂಡು ಬಂದರೆ ಸರ್ಕಾರದವರು ಅಂಥಾ ಎಲೆಗ ಳನ್ನು ಸುರಿಸಿ ಹರಾಜುಮಾಡಿಸಿ ತಂದವನಿಗೆ ಜುಲ್ಮಾನೆ ವಿಧಿಸುತ್ತಾರೆ.

ಉ.—ಹೊಂಗೇ ಸೊಪ್ಪಿಗೆ ಮಾತ್ರ ಗಾಡೀಗೆ ೧ ಅಥವಾ ೧। ರೂ. ಕೊಡಬೇಕೆಂಬ ರೂಲಿರುವಂತೆ ಜ್ಞಾಪಕವಿದೆ. ಬೇರೆ ಯಾ ವದಕ್ಕೂ ಏನೂ ಕೊಡಬೇಕಾದ್ದಿಲ್ಲ. ಈ ವಿಷಯದಲ್ಲಿ ರೈತರಿಗೆ ತೊಂದರೆಯಾಗದಂತೆ ಹುಕುಂ ಕೊಡುತ್ತೇವೆ.

ಪ್ರ.—ಸಣ್ಣ ಕೆರೆಗಳನ್ನು ಸರ್ಕಾರದವರೇ ವಹಿಸಿಕೊ ರಿಪೇರಿ ಮಾಡಬೇಕು.

ಉ.—ಕೆರೆ ನಾಲೆಗಳ ವಿಚಾರವನ್ನು ಒಂದು ಕಮಿಟಿಯ ಚರ್ಚೆಮಾಡಿ ಗೌವರ್ನಮೆಂಟಿಗೆ ರಿಪೋರ್ಟು ಕೊಟ್ಟಿದಾರೆ ನ್ನು ಮುಂದೆ ಅದನ್ನು ನೋಡಿ ಗೌವರ್ನಮೆಂಟಿನವರು ತೀ ನ ಮಾಡುವರು.

ಪ್ರ.—ಕಡೂರಿನಿಂದ ಚಿಕ್ಕಮಗಳೂರು, ಬೇಲೂರು, ಸದ ಮುಖಾಂತ್ರ ಬ್ರಾಂಚ್‌ರಾಕ್ಷಿಗೂ, ಸಂಪಿಗೆಹೊಸ ರೋಡಿಗೂ ರೈಲ್‌ರಸ್ತೆ ಹಾಕಿಸಿಕೊಡಬೇಕು.

ಉ.—ಈ ವರುಷದಲ್ಲಿ ರೈಲ್ವೆ ಮಾಡಿಸುವ ಯೋಚನೆ ಮುಂದೆ ರೈಲ್ ಕೆಲಸ ಹಿಡಿಯುವದಾದರೆ, ಸಂಪಿಗೆಹೊಸ ಹರೋಡಿಗೆ ರೈಲು ಹಾಕುವುದನ್ನೇ ಮೊದಲು ಮಾಡಬೇಕೆ ದ್ದೇವೆ.

ಪ್ರ —ನಮ್ಮ ಸಂಸ್ಥಾನಕ್ಕೆ ಸೇರಿದ ರೈಲ್ ಗಾಡಿಗಳಲ್ಲಿ ತ್ತೀಯ ಪ್ರಯಾಣಿಕರಿಗೇನೇ ಪ್ರತ್ಯೇಕವಾದ ಗಾಡಿಗಳನ್ನು ವಂತೆ ಏರ್ಪಾಡು ಮಾಡಿಕೊಡಬೇಕು

ಉ —ನಮ್ಮ ರೈಲ್ ರಸ್ತೆ ಬಹಳ ಸ್ವಲ್ಪ ಮಾತ್ರವಾ ಇಷ್ಟು ಸಣ್ಣ ರೈಲ್‌ನಲ್ಲಿ ಈ ಏರ್ಪಾಡು ಮಾಡುವುದು ಸಾಧ್ಯ ಸಾರ್ವತ್ರಿಕವಾಗಿ ಹಿಂದುಸ್ಥಾನದಲ್ಲೆಲ್ಲಾ ಈ ರಿಯಾಯಿತಿ ಕೊಡುವುದಾದರೆ ನಾವೂ ಮಾಡಿಕೊಳ್ಳಬಹುದು

ಪ್ರ —ದೊಡ್ಡ ಕೆರೆ ಕೆಳಗಣ ತರೀ ಜಮೀನಿನ ಕಂದಾ ದರವನ್ನೇ ಸಣ್ಣ ಕೆರೆ ಕೆಳಗಣ ಜಮೀನುಗಳಿಗೂ ಹಾಕಿ ಹೀಗೆ ತರೀ ಕಂದಾಯ ಏಕರೀತಿ ಇರುವುದು ರೈತರಿಗೆ ಕಷ್ಟ.

ಉ.—ಹೊಸದಾಗಿ ಆಗುವ ರಿವಿಜನ್ ಸರ್ವೇಯಲ್ಲಿ ಭೂಮಿ ಳಕ್ಕದಿಲ್ಲ, ಕೆರೆ ನೀರಿನ ಸರ್ಟಿಫಿಕೇಟನ್ನು ಮಾತ್ರ ಬದಲಾಯಿಸುತ್ತ

ಪ್ರ —ತರಿ ಖುಷ್ಕಿ ಜಮೀನುಗಳಲ್ಲಿ—ವಿಶೇಷವಾಗಿ ಸರ ದಲ್ಲಿ ಇರುವ ಜಮೀನುಗಳಲ್ಲಿ ಮಣ್ಣಿನ ಬಾಂದು ತಪ್ಪಿಸಿ ಬಾಂದು ಹಾಕುವಂತೆ ಅಪ್ಪಣೆ ಆಗಬೇಕು.

ಉ.—ನವಿ ಸರಹದ್ದಿನಲ್ಲಿರುವ ಜಮೀನುಗಳ ಬಾಂದಿನ ವಿ ರ ಗವರ್ನಮೆಂಟಿನವರ ಆಲೋಚನೆಯಲ್ಲಿದೆ. ಬೇಗ ಹು ಕೊಡುತ್ತೇವೆ.

ಪ್ರ —ಸರ್ಕಾರಿ ಕಂದಾಯವು ಜಮೀನಿನ ಮೇಲೆ ಮೊದ ಬೇಕೆಯಾಗಿದೆ. ಇನಾಂ ಗ್ರಾಮಗಳ ಕಂದಾಯ ಕಾಗಿಲ್ಲ ಕ್ಕಾಗಿ ಲ್ಯಾಂಡ್ ರೆವಿನ್ಯು ಕೋಡನ್ನು ಬದಲಾವಣೆ ಮಾಡಿ ಕೊಡಬೇಕು.

ಉ —ಈ ಭಾಗದಲ್ಲಿ ಚೀಫ್ ಕೋರ್ಟಿಗೆ ಬರೆದು ಅವರ ಪ್ರಾಯವನ್ನು ತರಿಸಿಕೊಂಡು ಹುಕುಂ ಕೊಡುತ್ತೇವೆ

ಪ್ರ —ಪಟೇಲಿ, ಶ್ಯಾನುಭೋಗಿಕೆಗಳ ಶಿಸ್ತೇದಾರರುಗಳ ಒಬ್ಬರಾದ ಮೇಲೊಬ್ಬರ ಪ್ರಕಾರ ಕೆಲಸ ನೋಡುವಂತೆ ಆಗಬೇಕು.

ಉ.—ಈ ಭಾಗದಲ್ಲಿ ಬೊಂಬಾಯಿ ಆಧಿಪತ್ಯದಲ್ಲಿ ಜಾರಿ ಲ್ಲಿರುವ ಕಾನೂನನ್ನು ಇಲ್ಲಿಗೆ ಜಾರೀಗೆ ತರಬೇಕೆಂದು ಆಲೋ ಚನೆಯಲ್ಲಿದೆ.

ಪ್ರ —ಪಟೇಲ್ ಶ್ಯಾನುಭೋಗರುಗಳ ಪೋಟಿಗೆಯನ್ನು ಸ್ತಿ ಮಾಡಿಕೊಡಬೇಕು.

ಉ —ಇದು ಸಣ್ಣ ಸಂಸ್ಥಾನ; ಜಾಸ್ತಿ ಕೊಡಲಾಗದು. ಮ ನೆ ನೋಡೋಣ.

ಪ್ರ —೧.೦೦೦ ರೂಪಾಯಿಗಿಂತ ಜಾಸ್ತಿ ಜೇರೀಜುಳ್ಳ ಗ್ರಾ ಮಗಳ ಪಟೇಲರು ಜಾಮೀನು ಕೊಡುವಂತೆ ಮಾಡಬೇಕು.

ಉ.—ಆಗುವುದಿಲ್ಲ, ಮಂಜೂರ್‌ದಸ್ತುರಿಗೆ ಹಲೀಲಿ ಕೊಡುವ ಒಳ್ಳೇದು.

ಪ್ರ.—ಗ್ರಾಮಾಂತ್ರಗಳ ಅಲ್ಪ ನೌಕರರಿಗೆ ಜಮೀನ್ದಾರ ಸರಿಯಾಗಿ ಮಿರಾಸು ಕೊಡುವುದಿಲ್ಲ. ಕೆಲವರು ಕೊಡುತ್ತಾ ಕೆಲವರು ಕೊಡುವುದಿಲ್ಲ. ದವಾಖಂದಿ ಕಾಲದಲ್ಲಿ ಅಮಲ್ದಾ ತನಿಖೆಯಿಂದ ದೊಡ್ಡ ತಳವಾರಿಗಳಿಗೆ ಮಿರಾಸ್ ಹಾವತಿ ಆಗುವ ಮಾಡಿಕೊಡಬೇಕು

ಉ.—ಆಗಲಿ; ಅಮಲ್ದಾರರು ವಿಚಾರಣೆ ಮಾಡಿ ರೂಲು ಕಾರ ಕೊಡಿಸುವಂತೆ ಹುಕುಂ ಕೊಡುತ್ತೇವೆ.

ಪ್ರ.—ಒಡೆದು ಹೋಗಿರುವ ಕೆರೆಗಳ ಒಳಾಯವನ್ನು ಸಾಯಕ್ಕೆ ಕೇಳಿದರೆ ಕೊಡಿಸಬೇಕು ರಿಪೇರಿ ಆಗುವಾಗ್ಯೆ ಜೇ ದರೆ ಬಿಡಿಸಿಕೊಳ್ಳಬಹುದು.

ಉ —ರೂಲಿನಲ್ಲಿ ಕೊಡುವುದಕ್ಕೆ ಅವಕಾಶವಾದೆ. ಕೊಡಲಿಲ್ಲ ಹೇಳಿದರೆ ವಿಚಾರಿಸುತ್ತೇವೆ.

ಪ್ರ —ಜಮೀನಿಗೆ ದರ್ಖಾಸ್ತು ಕೊಟ್ಟರೆ ಅದನ್ನು ಪ ಸ್ತುದಾರನಿಗೆ ಖರೀದಿ ಗೊತ್ತುಮಾಡಿ ಕೊಡದೆ ಹರಾಜು ಹಾ ತ್ತಾರೆ. ಇದರಿಂದ ಬಡವರಿಗೆ ಜಮೀನು ಸಿಕ್ಕುವುದಿಲ್ಲ. ಐಶ್ವ ವಂತರು ಜಾಸ್ತಿ ಬೀಟು ಮಾಡಿ ತೆಗೆದುಕೊಳ್ಳುತ್ತಾರೆ.

ಉ.—ಈ ಭಾಗದಲ್ಲಿ ಈಗಿರುವ ರೂಲನ್ನು ಬದಲಾಯಿ ಅವಶ್ಯ ಕಂಡುಬರುವುದಿಲ್ಲ.

ಪ್ರ —ಜಮೀನ್ದಾರನು ಜಮೀನಿರುವ ಗ್ರಾಮದ ಪಟೇಲನಿ ಸೀದಾ ಕಂದಾಯವನ್ನು ಕಳುಹಿಸಿಕೊಡಬೇಕು ಎಂಬುದಾಗಿ ಸ ರದವರು ಈಚೆಗೆ ಹೊಸ ರೂಲನ್ನು ಮಾಡಿದಾರೆ. ಎರಡು ಮೂ ಗ್ರಾಮಗಳಲ್ಲಿ ಜಮೀನು ಪಡೆದಿರುವವರಿಗೆ ಈ ರೂಲು ತುಂ ಹಿಂಸಕರವಾಗಿದೆ. ಈ ರೂಲನ್ನು ಬಿಟ್ಟುಬಿಟ್ಟು, ಮೊದಲಿ ಆಯಾ ತಾಲ್ಲೂಕು ಅಥವಾ ಡಿಸ್ಟ್ರಿಕ್ಟ್ ಟ್ರೆಜರಿಗಳಿಗೆ ಕಂದಾ ಪಾವತಿ ಮಾಡುವಂತೆ ಅಪ್ಪಣೆ ಆಗಬೇಕು. [ಬಹು ಮಂದಿ ಪ್ರತಿನಿ ಧಿಗಳು ಎದ್ದು ಕೇಳಿಕೊಂಡರು.]

—ಬಲ್ಲೆವು; ಹೊಸ ರೂಲಸನ್ನು ಬದಲಾಯಿಸಬೇಕೆಂದು ಅಪೇಕ್ಷಿಸುತ್ತೇವೆ.

—ಕೃಷಕರು ಹೊಸ ಜಮೀನಿಗೆ ಡಿಸೆಂಬರ್, ಜನವರಿಯಲ್ಲಿ ಅರ್ಜಿ ಕೊಡುತ್ತಾರೆ. ಜಮೀನ್ ಅವರ ಸ್ವಾಧೀನಕ್ಕೆ ಬರುವುದರೊಳಗೆ ಮಳೆಗಾಲ ಕಳೆದು ಬೇಸಿಗೆ ಬಂದಿರುತ್ತೆ. ಅವರು ಬೇಸಿಗೆಯಲ್ಲಿ ಆ ಜಮೀನಿನಲ್ಲಿ ಫಸಲು ಮಾಡಲಾಗುವುದಿಲ್ಲ. ಆದರೂ ಅವರು ಇಡೀ ಸಾಲಿನ ಕಂದಾಯವನ್ನು ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಈ ಕಂದಾಯವನ್ನು ಬಿಡಿಸಿಕೊಡಬೇಕು.

—ಅಂಥಾ ಕಂದಾಯವನ್ನು ಸಾರ್ವತ್ರಿಕವಾಗಿ ಬಿಟ್ಟುಬಿಡಲು ಸಾಧ್ಯವಿಲ್ಲ. ಆದರೆ ಅಪೇಕ್ಷೆಯುಳ್ಳವರು ಅರ್ಜಿ ಕೊಟ್ಟು ಕೇಳಿಕೊಂಡರೆ ಅವರಿಗೆ ಯುಕ್ತ ತೋರಿದ ಪಕ್ಷದಲ್ಲಿ ಮಾಫಿ ಮಾಡಬಹುದೆಂದು ರೂಲಸು ಇದೆ.

—ಶಿವಸಮುದ್ರದ ವಿದ್ಯುಚ್ಛಕ್ತಿಯು ಕಾರ್ಯಾನೆಗೋ ... ಕಾವೇರಿ ನಾಲೆಗಳ ನೀರು ಬಹಳ ಕಮ್ಮಿಯಾಗಿದೆ. ಇದರಿಂದ ... ರವರಿಗೆ ತುಂಬಾ ನಷ್ಟ. ಕರೀ ಕಂದಾಯ ಬಹಳ ಹೆಚ್ಚಾಗಿ ... ತ್ತಿದಾರೆ.

—ಇದನ್ನು ನೋಡಿ ಈಟಿಗೆ ಎಕರೆ ಒಂದಕ್ಕೆ ಸುಮಾರು ... ರೂಪಾಯಿಯಂತೆ ಕಂದಾಯ ಕಮ್ಮಿ ಮಾಡಿದೆ. ಸರ್ಕಾರದ ... ಒಟ್ಟು ೨,೦೦೦ ರೂ. ನಷ್ಟ. ಕಂದಾಯ ಕಡಿಮೆ ಮಾಡಿದ ಈ ಹುಕುಮು ಇಷ್ಟರಲ್ಲೇ ಜಾರೀಗೆ ಬರುತ್ತೆ.

## ಇಂಡಿಯಾ ದೇಶದ ವೃತ್ತಾಂತಗಳು.

ಹರಿಕೋಬೆಯೊಳಗೆ ಇಂಗ್ಲಿಷ್ ಸೈನ್ಯವನ್ನು ಇಟ್ಟಿರುತ್ತಾರೆ. ಸೈನಿಕರ ಮನೆಗಳಿಗೆಲ್ಲಾ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸಿ. ಇದಕ್ಕೆ ೪೯,೦೦೦ ರೂ. ಖರ್ಚಾಗಿದೆ.

* * * *

ಪರಿಷ್ಪುರದ ರಾ॥ ಉಪೇಂದ್ರ ನಾರಾಯಣರಾಯ ಎಂಬ ... ಜಮೀನ್ದಾರನು ಡಾರ್ಜಿಲಿಂಗ್ ಪಟ್ಟಣದ ಆಸ್ಪತ್ರೆಯಲ್ಲಿ ರೋಗಿಗಳನ್ನಿಟ್ಟು ಚಿಕಿತ್ಸೆ ಮಾಡುವುದಕ್ಕೆ ಪ್ರತ್ಯೇಕವಾದ ... ವನ್ನು ಕಟ್ಟಿಸಬೇಕೆಂದು ೧೭,೦೦೦ ರೂ. ಧರ್ಮ ಕೊಟ್ಟಿದ್ದಾನೆ

* * * *

ಕಾಶಿನಾಥಾ ಪಟ್ಟಣದಲ್ಲಿ ಜನರಿಗೆ ಕುಡಿಯುವದಕ್ಕೆ ಒಳ್ಳೇ ನೀರನ್ನು ಒದಗಿಸಿ ಕೊಡಬೇಕೆಂದು ಪ್ಯಾಸಾ ಸುಬ್ರಾಯುಡು ... ಸಹೋದರರು ಸರ್ಕಾರದವರ ವಶಕ್ಕೆ ೩೦,೦೦೦ ರೂ. ಧರ್ಮವಾಗಿ ಕೊಟ್ಟಿದಾರೆ. ಇವರ ಔದಾರ್ಯವನ್ನು ಮದರಾಸ್ ... ರವರು ಬಹಳವಾಗಿ ಹೊಗಳಿ ಅವರನ್ನು ವಂದಿಸಿದಾರೆ.

* * * *

ಬಂಗಾಳಾ ಅಧಿಕಾರಕ್ಕೆ ಸೇರಿದ ಪೂಸಾ ಪಟ್ಟಣದಲ್ಲಿ ಇಂಡಿಯಾ ಗವರ್ನಮೆಂಟಿನವರು ವ್ಯವಸಾಯ ಕ್ರಮಗಳನ್ನು ಪರಿಶೋಧನೆ ಮೂಲಕ ಕಲಿಸುವುದಕ್ಕೆ ಒಂದು ಕಾಲೇಜನ್ನು ಕಟ್ಟಿಸುವುದು ಪ್ರಾರಂಭಿಸಿದರು. ಇದಕ್ಕೆ ಬೇಕಾಗುವದನ್ನು ಸಾಮಾನು ... ದುವೆಲ್ಲಾ ವಿಲಾಯಿತಿಯಿಂದ ಬಂದಿವೆ. ಈ ಕಟ್ಟಡಕ್ಕೇನೆ ... ಲಕ್ಷ ರೂಪಾಯಿ ಖರ್ಚಾಗುವದು.

* * * *

ಸಾರಸ್ವತ ಬ್ರಾಹ್ಮಣ ಜಾತಿಯ ವಿ. ಪಾಂಡುರಂಗರಾವ್ ಎಂಬ ಯುವಕನು ೧೯೦೦ನೆ ಇಸವಿಯಲ್ಲಿ ಮದರಾಸಿನಲ್ಲಿ ಬಿ. ಎ. ಪರೀಕ್ಷೆ ... ಮೈ॥ ಸಂಸ್ಥಾನದವರಿಂದ ವೇತನವನ್ನು ಪಡೆದು ವಿಲಾಯಿತಿಗೆ ಹೋಗಿ ವಿದ್ಯಾವ್ಯಾಸಂಗ ಮಾಡುತ್ತಿದ್ದನು. ಈತನು ಈ ಸಲ ... ನಡೆದ ಸಿವಿಲ್ ಸರ್ವಿಸ್ ಎಂಬ ಪರೀಕ್ಷೆಯಲ್ಲಿ ೨ನೆ ಯವನಾಗಿ ತೇರ್ಗಡೆ ಹೊಂದಿರುತ್ತಾನೆಂದು ತಂತೀವರ್ತಮಾನ ಬಂದಿದೆ.

* * * *

ಪೆಷಾವರ್ ಪಟ್ಟಣದಿಂದ ಮಹಮ್ಮದೀಯ ಯಾತ್ರಾಸ್ಥಳಗಳಾದ ಮಕ್ಕಾ, ಮದೀನಾ ಎಂಬೀ ನಗರಗಳಿಗೆ ರೈಲ್‌ರಸ್ತೆ ಹಾಕಿಸುವುದ ... ತುರ್ಕರೂ ಹಿಂದೂಸ್ಥಾನವೇ ಮೊದಲಾದ ಕಡೆಗಳಲ್ಲಿ ... ಎತ್ತಿದಾರಷ್ಟೆ. ಇದುವರೆಗೆ ಈ ರೈಲ್ ಕಾಮಗಾರಿಯು ಸುಮಾರು ೧೯೦ ಮೈಲಿ ದೂರ ನಡೆದು ಪೂರೈಸಿತೆಂತಲೂ, ಅದಕ್ಕೆ ... ಆದ ಅರೆವಾಸಿ ಹಣವೆಲ್ಲಾ ಖರ್ಚಾಯಿತೆಂತಲೂ ತಿಳಿದುಬಂದಿದೆ

* * * *

ವಿಲಾಯಿತಿಯಲ್ಲಿರುವ ಕೌಂಟ್ ಪ್ಯಾಕ್ ಎಂಬ ದೊಡ್ಡ ಮನುಷ್ಯನು ತನ್ನ ತಂಗಿಯು ಗತಿಸಿಹೋದಳೆಂತಲೂ, ಆಕೆ ತನ್ನ ಆಸ್ತಿಯಲ್ಲಿ ೨೦,೦೦೦ ರೂಪಾಯಿಗಳನ್ನು ಕಾಶೀ ಪಟ್ಟಣದ ಹಿಂದೂ ಕಾಲೇಜ್ ಫಂಡಿಗೆ ಕೊಡುವಂತೆ ತೆಗೆದಿಟ್ಟಿದ್ದಾಳೆಂತಲೂ ಆ ವಿದ್ಯಾಶಾಲೆಯ ಮ್ಯಾನೆಜರಿಗೆ ತಿಳಿಸಿರುತ್ತಾನೆ. ಕಳೆದ ಅಗೋಸ್ತು ಅಖೈರ್ ವರೆಗೆ ಈ ಫಂಡಿಗೆ ನಾಲ್ಕೂವರೆ ಲಕ್ಷ ರೂಪಾಯಿ ಕೂಡಿತೆಂದು ತಿಳಿದುಬಂದಿದೆ.

* * * *

ಹಿಂದುಸ್ಥಾನದಲ್ಲಿ ಇನ್ನೂ ಉಳಿದಿರುವ ಬೋಅರ್ ಕೈದಿಗಳಿಗೆ ಕೆಲ ಹೇಳಿ, ಅವರಿಂದ ಕರಾರುಪತ್ರಗಳಿಗೆ ಇಂಗ್ಲೀಷರಿಗೆ ... ಒಪ್ಪಿಸಿ, ವಾಪಸು ಟ್ರಾನ್ಸ್‌ವಾಲಿಗೆ ಕಳುಹಿಸಿಕೊಂಡುಹೋಗು ... ಪ್ರಸಿದ್ಧ ಬೋಅರ್ ಜನರಲ್‌ಗಳಾದ ಬೋಥಾ, ಡಿವೆಟ್, ... ಎಂಬೀ ಮೂವರೂ ದಕ್ಷಿಣ ಆಫ್ರಿಕಾದಿಂದ ಹಿಂದುಸ್ಥಾನಕ್ಕೆ ಬರುವವರಾಗಿದಾರೆ. ಅವರು ಬಂದು ಇಲ್ಲಿನ ಕೆಲಸ ತೀರಿಸಿಕೊಂಡು ... ಯೂರೋಪಿಗೆ ಹೋಗುತ್ತಾರೆ.

* * * *

ಗುಜರಾತ್ ದೇಶದ ಉತ್ತರ ಭಾಗದಲ್ಲಿ ಮಿಡತೆಗಳ ಕಾಟ ಅಧಿಕವಾಗಿದೆ. ಪಂಚಮಹಲ್ ತಾಲ್ಲೂಕಿಗೆ ಸೇರಿದ ೬೬ ಗ್ರಾಮಗಳಲ್ಲಿ ... ಬೆಳೆ ಮಾಡಿದ್ದ ಪೈರನ್ನೆಲ್ಲಾ ಮಿಡತೆಗಳು ತಿಂದು ಹಾಳುಮಾಡಿದವೆ ಅಲ್ಲದೆ ಈಗ ಜಾಸರಾವಿ ಎಂಬ ಡಿಸ್ಟ್ರಿಕ್ಟಿನ ಕಡೆ ಹೊರಟವೆ. ಈ ಹಾಳು ಮಿಡತೆಗಳ ಕಾಟವನ್ನು ಹೋಗಲಾಡಿಸುವುದಕ್ಕೆ ಇದುವರೆಗೆ ಯಾರೂ ಉಪಾಯವನ್ನು ಕಂಡುಹಿಡಿದಿಲ್ಲ. ಆ ಪ್ರಾಂತ್ಯ ರೈತರ ಸಂಕಟ ವಿವರಿಸಲಶಕ್ಯವಾಗಿದೆ.

* * * *

ಕಲ್ಕತ್ತಾ ಪಟ್ಟಣದಲ್ಲಿ ಲಾರ್ಡ್ ಕರ್ಜನ್ ಪ್ರಭುಗಳು ವಿಕ್ಟೋರಿಯಾ ಮೆಮೋರಿಯಲ್‌ಹಾಲ್ ಎಂಬ ಬಂಗಲೆಯನ್ನು ಕಟ್ಟಿಸಬೇಕೆಂದು ತೀರ್ಮಾನ ಮಾಡಿರುತ್ತಾರಷ್ಟೆ. ಅದನ್ನು ಕಟ್ಟುವದಕ್ಕೆ ಕ್ರಮ ಮುಂತಾದ್ದು ತೋರಿಸುವ ನಕ್ಷೆಯನ್ನು ವಿಲಾಯಿತಿಯಲ್ಲಿ ಪ್ರಸಿದ್ಧಿ ಹೊಂದಿದ ಒಬ್ಬ ಇಂಜನಿಯರಿಂದ ಬರೆಸಿ ತರಿಸುತ್ತಾರೆ. ಕಟ್ಟುವದನ್ನು ಸಾವಕಾಶ ಮಾಡದೆ ಪ್ರಾರಂಭಿಸಿ ಜನವರಿಯೊಳಗಾಗಿ ತಳಹದಿ ಮುಂತಾದ ಕಾಮಗಾರಿಯನ್ನು ಪೂರೈಸಬೇಕೆಂದು ಹುಕುಂ ಆಗಿದೆ

* * * *

ಹಿಂದುಸ್ಥಾನದ ವೈಸ್‌ರಾಯ ಲಾರ್ಡ್ ಕರ್ಜನ್ ಪ್ರಭುಗಳಿಗೆ ವರ್ಷಕ್ಕೆ ಎರಡೂವರೆಲಕ್ಷ ರೂಪಾಯಿ ಸಂಬಳಬರುವುದು ಅಲ್ಲದೆ ಅವರ ಎಲ್ಲಾ ಖರ್ಚುಗಳನ್ನು ಇಂಡಿಯಾ ಗೌವರ್ನಮೆಂಟಿನವರೇ ವಹಿಸಿಕೊಳ್ಳುತ್ತಾರೆ. ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯ ಮೆಂಬರುಗಳಿಗೆ ತಲಾ ೬,೬೬೬ ರೂ. ಹಂತ ಪ್ರತಿ ತಿಂಗಳಲ್ಲೂ ಸಂಬಳ ದೊರಕಿ ಆಗುವದು. ಆದರೆ ಜಪಾನ್ ರಾಜ್ಯದ ಮಂತ್ರಿಯವರಿಗೆ ತಿಂಗಳಿಗೆ ೧,೫೦೦ ರೂ. ಮಾತ್ರ ಸಂಬಳವೆಂದು ಹೇಳುತ್ತಾರೆ. ಇದು ನಂಬತಕ್ಕದ್ದಲ್ಲವೆಂದು ತೋರುವದು.

* * * *

ಉತ್ತರದೇಶದಲ್ಲಿ ೩೯ ವರುಷಗಳು ಮಿಷನೆರಿಯಾಗಿ ಕೆಲಸ ಮಾಡಿ ಕೇಸುಗೆ ಹೋದ ಮಿಸ್ ಗಾರ್ಡ್ನರ್ ಎಂಬ ಧರ್ಮಿಷ್ಠೆಯು ಕಾಲವಾದಳೆಂದು ತಿಳಿದುಬಂದಿದೆ. ಆಕೆಯು ಸಾಹಸದಿಂದ ಇಂಡಿಯಾ ಗವರ್ನಮೆಂಟಿನವರು ೧೦ ವರುಷಕ್ಕೆ ಮುಂಚೆ ಯಾವ ಹುಡುಗಿಗೂ ಹಿಂದೂಸ್ಥಾನದಲ್ಲಿ ವಿಷೇಶಪ್ರಸ್ತ ಮಾಗಕೂಡದೆಂಬ ಕಾನೂನನ್ನು ಮಾಡಿ ಜಾರಿಗೆ ತಂದರು. ಬಾಲ್ಯ ವಿವಾಹಗಳನ್ನು ವಿರೋಧಿಸುವುದರಲ್ಲಿ ಆಕೆ ತುಂಬಾ ಸಾಹಸಪಟ್ಟು ಜನರಿಗೆ ವಿವೇಕ ಹೇಳಿಕೊಡುತ್ತಿದ್ದಳು. ಆಕೆ ಬರೆದ ಪುಸ್ತಕಗಳು ಹಿಂದೂಸ್ಥಾನದಲ್ಲಿ ತುಂಬಾ ಪ್ರಚಾರದಲ್ಲಿರುತ್ತವೆ.

* * * *

ಕಳೆದ ವಾರ ಹೈದರಾಬಾದ್ ಪಟ್ಟಣದಲ್ಲಿ ೪ ದಿನ ವಿಪರೀತ ಮಳೆ ಸುರಿಯಿತು. ಇದರಿಂದ ಸಮಸ್ತ ಕೆರೆಗಳೂ ತುಂಬಿದ್ದಲ್ಲದೆ ಮೂಸೀ ನದಿಯಲ್ಲಿ ವಿಪರೀತ ಪ್ರವಾಹ ಬಂದಿತು. ನಾಲ್ಕಾರು ದಿನಗಳ ತನಕ ರೈಲ್ ಗಾಡಿಗಳ ಸಂಚಾರ ನಿಂತುಹೋಯಿತು. ಇದಲ್ಲದೆ ೨೦ ಮೈಲಿ ದೂರದಲ್ಲಿರುವ ಮೂರು ಭಾರೀ ಕೆರೆಗಳು ತುಂಬಿ ಒಡೆದುಹೋದುದರಿಂದ ನೀರೆಲ್ಲಾ ಹೈದರಾಬಾದ್ ಪಟ್ಟಣಕ್ಕೆ ನುಗ್ಗಿತು. ಹುಸೇನ್‌ಸಾಗರವೆಂಬ ದೊಡ್ಡ ಕೆರೆ ಕೆಳಗೆ ನೂರಾರು ಮನೆಗಳು ಕೊಚ್ಚಿಹೋದವು. ರಸ್ತೆಗಳಲ್ಲೆಲ್ಲಾ ನಾಲ್ಕಾರು ಅಡಿ ನೀರು ನಿಂತು ಹರಿಯುತ್ತಿತ್ತು. ೨೧ ಜನರು ಒಂದು ಗೋಡೆಯ ಮೇಲೆ ನಿಂತು ಇದ್ದರು. ಗೋಡೆ ಕುಸಿದು ಬಿದ್ದು ಅವರೆಲ್ಲಾ ನೀರಿನ ಪಾಲಾದರು. ಸಾವಿರಾರು ಮನೆಗಳು, ಗೋಶಾಲೆಗಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದವು. ಎರಡು ಮೂರು ರೈಲ್ವೆ ಸೇತುವೆಗಳೂ, ೧—೭ ಮೈಲಿ ದೂರ ರೈಲ್ ಕಂಬಿಗಳೂ ಕಿತ್ತು ಕೊಚ್ಚಿ ಹೋಗಿವೆ. ಸಾವಿರಾರು ಜನರು ಮನೆ ಮಠ ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡು, ಹೊಟ್ಟೆಗಿಲ್ಲದೆ ಸಂಕಟಪಡುತ್ತಿದಾರೆ. ಆದರೆ ನೈಜಾಮರವರು ಎಲ್ಲರಿಗೂ ಆಹಾರ ಸಾಮಗ್ರಿಗಳನ್ನು ಕೊಡುವಂತೆ ಹುಕುಂ ಮಾಡಿ, ಬಹಳ ಮುತುವರ್ಜಿಯಿಂದ ನೋಡಿಕೊಳ್ಳುತ್ತಿರುವರು.

* * * *

ಬೆಜ್ವಾಡೆಯಲ್ಲಿ ಕೃಷ್ಣಾನದಿಗೆ ಸರ್ಕಾರದವರು ಭಾರೀ ಅಣೆಕಟ್ಟನ್ನು ಹಾಕಿದ್ದಾರಷ್ಟೆ. ಈ ಅಣೆಯು ಹಿಂದುಸ್ಥಾನದಲ್ಲೆಲ್ಲಾ ಬಹಳ ಪ್ರಸಿದ್ಧವಾದುದು. ಕಳೆದ ವಾರ ಆ ಸರಹದ್ದಿನಲ್ಲಿ ವಿಪರೀತ ಮಳೆ ಸುರಿದುದರಿಂದ ಕೃಷ್ಣಾನದಿಯೊಳಗೆ ಅಪೋರವಾದ ಪ್ರವಾಹ ಬಂದುಬಿಟ್ಟಿತು. ಇಷ್ಟು ಹೆಚ್ಚು ಪ್ರವಾಹ ಹಿಂದೆ ಯಾವಾಗಲೂ ಬಂದಿರಲಿಲ್ಲ. ನೀರಿನ ರಭಸವು ಇಷ್ಟಿಷ್ಟೆಂದು ವಿವರಿಸಲಾಗದು. ಅದರ ಜೋರಿಗೆ ಅಣೆಕಟ್ಟೆಯಲ್ಲಿ ಸುಮಾರು ೧—೦ ಅಡಿ ಉದ್ದ ಕಿತ್ತು ಹೊರಟುಹೋಯಿತು. ನಾಲೆಗಳಲ್ಲಿ ನೀರು ನುಗ್ಗಿ ರೈಲ್ವೆ ಸೇತುವೆಗಳನ್ನು ಉರುಳಿಸಿಬಿಟ್ಟಿದೆ. ಹಳೇ ಅಣೆಕಟ್ಟೆಗಳಿಗೆ ಅಪಾಯವೇನೂ ಸಂಭವಿಸಲಿಲ್ಲ. ಸಾಧಾರಣವಾಗಿ ನಾಲೆಗಳಲ್ಲಿ ೧೦ ಅಡಿ ನೀರು ಇರುತ್ತಿದ್ದು ತಪ್ಪಿ ೩೦ ಅಡಿ ವರೆಗೆ ಹೆಚ್ಚಿತು. ಪ್ರವಾಹ ಕಡಿಮೆಯಾಗುವುದಕ್ಕೆ ಮುಂಚೆ ನದಿಯ ನೀರು ಊರೊಳಕ್ಕೆ ನುಗ್ಗಿ ಎಲ್ಲೆಲ್ಲೂ ೬ ಅಡಿಯಷ್ಟು ನಿಂತಿತ್ತು. ಬಕಿಂಗ್‌ಹಂ ಕೇಜಿನೊಳಗೂ ೨—೩ ಅಡಿ ನೀರು ನಿಂತಿತ್ತು. ಈ ಪ್ರವಾಹದ ದೆಸೆಯಿಂದ ನೂರಾರು ಮನೆಗಳೂ, ಸಾಮಾನುಗಳೂ, ಸಾವಿರಾರು ಗೋಶಾಲೆಗಳೂ ಕೊಚ್ಚಿಹೋದವು. ಮಚಲಿ ಪಟ್ಟಣದಿಂದ ಆ ಪ್ರಾಂತ್ಯವೆಲ್ಲಾ ಪ್ರವಾಹದಿಂದ ಮುಳುಗಿಹೋಗಿದೆ ಎಂತಲೂ, ಅನೇಕ ಗೋಶಾಲೆಗಳೂ ಮನೆಗಳೂ ಕೊಚ್ಚಿಕೊಂಡುಹೋದವೆಂತಲೂ, ಎಷ್ಟು ಮಂದಿ ಪ್ರಾಣ ಕಳೆದುಕೊಂಡರೋ ಗೊತ್ತಾಗಲಿಲ್ಲವೆಂತಲೂ ತಂತೀವರ್ತಮಾನ ಬಂದಿದೆ. ಕಳೆದ ೧೯೬೬ನೆ ಇಸವಿಯಿಂದೀಚೆಗೆ ಕೃಷ್ಣಾನದಿಯಲ್ಲಿ ಎರಡು ಸಲ ದೊಡ್ಡ ಪ್ರವಾಹಗಳು ಬಂದವು. ಎರಡು ಸಲವೂ ಅಣೆಕಟ್ಟಿನ ಮೇಲೆ ೨೦ ಅಡಿಗೀಚೆ ಹೆಚ್ಚಾಗಿ ನೀರು ಹತ್ತಲಿಲ್ಲ. ಈ ಸಲವಾದರೋ (ಕಳೆದ ೬—೬ ನೆ ತಾರೀಖಿನ ಮಧ್ಯಾಹ್ನ) ಅಣೆಕಟ್ಟಿನ ಮೇಲೆ ೨೩ ಅಡಿಗಿಂತ ಹೆಚ್ಚಾಗಿ ನೀರು ಹರಿಯುತ್ತಿತ್ತು. ಯಾವಾಗಲೂ ದುರ್ಬ್ಯ ಅಗ್ರೀಸ್ಸಿನಲ್ಲಿ ಪ್ರವಾಹ ಬರಬೇಕು. ಈಗ ಬಂದುದು ಆಶ್ಚರ್ಯವಾಗಿದೆ. ಬೆಜ್ವಾಡದ ಕೆಳಭಾಗದಲ್ಲಿರುವ ಕೆಲವು ಗ್ರಾಮಗಳೂ ಜಮೀನುಗಳೂ ನಾಶಹೊಂದಿದವು. ರೈಲ್ವೆ ಇಲಾಖೆಯವರು, ಮಹಮ್ಮತ್ ಇಲಾಖೆಯವರು, ಸಿವಿಲ್ ಇಲಾಖೆಯವರು ಆ ಸ್ಥಳದಲ್ಲಿ ಸೇರಿ ಪ್ರಜೆಗಳಿಗೆ ಸಹಾಯ ಸಂಪತ್ತುಗಳನ್ನು ಒದಗಿಸುವುದರಲ್ಲೂ, ಕಿತ್ತುಹೋಗಿರುವ ಅಣೆ, ನಾಲೆ, ಸೇತುವೆ, ರಸ್ತೆ, ರೈಲು ಮೊದಲಾದವುಗಳನ್ನು ದುರಸ್ತು ಮಾಡುವುದರಲ್ಲೂ ಸಾಹಸ ಪಡುತ್ತಿದಾರೆ.

## ವಿದೇಶ ವರ್ತಮಾನಗಳು.

ವಿಲಾಯಿತಿ ರಾಜ್ಯದಲ್ಲಿ ಬಹುಕಾಲ ಮಂತ್ರಿ ಪದವಿಯಲ್ಲಿದ್ದ ಪ್ರಸಿದ್ಧರಾದ ಲೇಟ್ ಸಾಲಿಸ್‌ಬರಿ ಪ್ರಭುಗಳ ಆಸ್ತಿ ೩,೧೦,೦೦೦ ಪೌಂಡುಗಳೆಂದು ಗೊತ್ತಾಗಿದೆ.

* * * *

ತುರ್ಕಿಯವರು ಬಲ್ಗೇರಿಯಾದಲ್ಲಿ ೨೦ ದೊಡ್ಡ ಗ್ರಾಮಗಳನ್ನು ಸುಟ್ಟು ಹಾಕಿದ್ದಲ್ಲದೆ ೩,೦೦೦ ಪ್ರಜೆಗಳನ್ನು ಕೊಂದು ಹಾಕಿದರೆಂದು ವರ್ತಮಾನ ಬಂದಿದೆ.

* * * *

ಡೆನ್‌ಮಾರ್ಕ್ ರಾಜರಿಗೆ ೫೦ ವರುಷದ ಪಟ್ಟಾಭಿ ಉತ್ಸವ ನಡೆಯುತ್ತಿದೆ. ಅವರು ಪಟ್ಟಕ್ಕೆ ಬಂದು ೬೦ ವರುಷಗಳಾದವು. ಅಪಾರವಾದ ಉತ್ಸವಗಳೂ ಸುಖಭೋಜನಗಳೂ ನಡೆಯುತ್ತಿವೆ.

* * * *

ಅಮೇರಿಕದಲ್ಲಿದ್ದ ಇಂಗ್ಲಿಷ್ ರಾಯಭಾರಿ ಸರ್ ಮಿಕೇಲ್ ಹರ್‌ಬರ್ಟ್‌ಯವರು ಕಳೆದ ವಾರ ಕಾಲವಾದರು. ಅವರ ಕೆಲಸಕ್ಕೆ ಸರ್ ಥಾಮಸ್ ಹೆನ್ರಿ ಸಾಂಡರ್ಸನರವರು ನೇಮಕವಾಗುತ್ತಾರೆಂದು ವದಂತಿ ಇದೆ.

* * * *

ಕಳೆದವಾರ ರಷ್ಯಾ ಚಕ್ರವರ್ತಿಯವರು ಇಸ್ಪ್ರಿಯಕ್ಕೆ ದಯಮಾಡಿ ವಯನ್ನಾ ಪಟ್ಟಣದಲ್ಲಿ ಚಕ್ರವರ್ತಿಯವರ ಆತಿಥ್ಯವನ್ನು ಸ್ವೀಕರಿಸಿದರು. ಅಲ್ಲಿಂದ ಇಟಲಿಗೆ ಬರಬೇಕೆಂದಿದ್ದ ಪ್ರಯಾಣವನ್ನು ನಿಲ್ಲಿಸಿ ಬಿಟ್ಟು, ವಾಪಸು ರಷ್ಯಾಕ್ಕೆ ದಯಮಾಡಿದರು.

* * * *

ಡೆನ್‌ಮಾರ್ಕ್ ರಾಜ್ಯಕ್ಕೆ ಸೇರಿದ ವೆಸ್ಟ್‌ಇಂಡಿಯಾ ದ್ವೀಪಗಳನ್ನು ಅಮೇರಿಕದವರು ಎರಡುಕೋಟಿ ದ್ರವ್ಯಕೊಟ್ಟು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಅದನ್ನು ಡೆನ್‌ಮಾರ್ಕ್ ಪಾರ್ಲಿಮೆಂಟಿನವರು ಒಪ್ಪಲಿಲ್ಲ. ಆ ದ್ವೀಪಗಳಲ್ಲಿ ಕೆಲವು ಒಳ್ಳೇ ಏರ್ಪಾಡುಗಳನ್ನು ಮಾಡಿದರೆ ತುಂಬಾ ಅಭಿವೃದ್ಧಿಗೆ ತರ ಬಹುದೆಂದು ಪಂಚಾಯಿತರು ಹೇಳಿದಾರೆ

* * * *

ಗ್ರೀಸ್ ರಾಜ್ಯದ ರಾಜಕುಮಾರರಾದ ಆಂಡ್ರೂಯವರು ಬ್ಯಾಟೆನ್‌ಬರ್ಗ್‌ನ ಆಲಿಸ್ ಎಂಬ ರಾಜಕುಮಾರಿಯನ್ನು ವರಿಸಿ ಕಳೆದ ವಾರ ಡಾರ್ಮ್‌ಸ್ಟಾಡಿನಲ್ಲಿ ವಿವಾಹಮಾಡಿಕೊಂಡರು. ಈ ಉತ್ಸವ ಕಾಲದಲ್ಲಿ ರಷ್ಯಾ ಚಕ್ರವರ್ತಿಯವರು, ವಿಲಾಯಿತೀ ಮಹಾರಾಣಿಯವರು, ಗ್ರೀಸ್ ದೇಶದ ದೊರೆ ರಾಣಿಯವರು ಮೊದಲಾದ ಅನೇಕ ರಾಜವರ್ಗದವರು ಹಾಜರಾಗಿದ್ದು, ನೂತನ ವಧೂವರರನ್ನು ಆಶೀರ್ವದಿಸಿದರು.

* * * *

ಅಮೇರಿಕಾದ ರಾಜಧಾನಿಯಾದ ನ್ಯೂಯಾರ್ಕ್ ನಗರದಲ್ಲಿ ಟೈಂಸ್ ಎಂಬ ವರ್ತಮಾನ ಪತ್ರಿಕೆಯ ಆಫಿಸ್ ಕಟ್ಟಡವು ನೆಲಮಟ್ಟದಿಂದ ೩೦ ಅಡಿ ಕೆಳಗೆ ಇರುವಂತೆಯೂ, ನೆಲದ ಮೇಲೆ ೫೫೫ ಅಡಿ ಎತ್ತರವಾಗಿರುವಂತೆಯೂ ಇಪ್ಪತ್ತರಲ್ಲಿ ೧೬ ಅಂತಸ್ತುಗಳುಳ್ಳದ್ದಾಗಿಯೂ ಕಟ್ಟಲ್ಪಟ್ಟಿದೆ. ಎರಡು ಅಂತಸ್ತುಗಳನ್ನು ಮಾತ್ರ ಬಾಡಿಗೆಗೆ ಕೊಟ್ಟಿದಾರೆ. ಉಳಿದ ೧೪ ಅಂತಸ್ತುಗಳಲ್ಲೂ ಆ ವರ್ತಮಾನ ಪತ್ರಿಕೆಯ ಬೇರೆ ಬೇರೆ ಅಂಗಗಳನ್ನು ಇಟ್ಟು ಇರುವರು.

* * * *

ಬ್ರಿಟಿಷ್ ನ್ಯೂಗಿನಿಗೆ ಸೇರಿದ ಪಾಪುವಾ ಎಂಬ ದ್ವೀಪದಲ್ಲಿ ಒಂದು ತರಹಾ ಕಾಡು ಜನರನ್ನು ಕಂಡು ಹಿಡಿದಿದಾರೆ. ಅಲ್ಲಿ ಭೂಮಿಯು ಯಾವಾಗಲೂ ಕೆಸರಾಗಿರುವುದರಿಂದ ಆ ಜನರು ದೊಡ್ಡ ಮರಗಳ ಮೇಲೆಯೇ ವಾಸಮಾಡುತ್ತಾರೆ. ಅವರ ಕಾಲುಗಳು ಅತಿ ಕೃಶವಾಗಿಯೂ, ನಡುವಿನಿಂದ ಮೇಲ್ಭಾಗವೆಲ್ಲಾ ಬಹಳ ಚನ್ನಾಗಿ ಬೆಳುವಳಿಗೆ ಹೊಂದಿಯೂ ಇರುವುವು. ಸರ್ಕಾರದವರು ಆ ಜನರ ಗುಣ, ಶೌಚಶಕ್ತಿ, ಅಭ್ಯಾಸಗಳೇ ಮುಂತಾದ ವಿಷಯಗಳನ್ನು ವಿಚಾರಿಸಿ ಗೊತ್ತು ಮಾಡುತ್ತಿದಾರೆ.

* * * *

ಹಂಗೇರಿ ರಾಜ್ಯದ ದಕ್ಷಿಣಭಾಗಕ್ಕೆ ಸೇರಿದ ಪೀಜರ್ ಎಂಬ ಸಣ್ಣ ಊರಿನಲ್ಲಿ ಮ್ಯುನಿಸಿಪಲ್ ಮೆಂಬರುಗಳು ೬ ಮಂದಿ ಸೇರಿ ಮ್ಯುನಿಸಿಪಾಲಿಟಿಗೆ ಸೇರಿ ಕೆಲವು ಸ್ಥಿರಸ್ವತ್ತುಗಳನ್ನು ಗುಟ್ಟಾಗಿ ಮಾರಾಟಮಾಡಿ, ಅದರಿಂದ ಉತ್ಪತ್ತಿಯಾದ ಹಣವನ್ನು ತಾವೇ ಹಂಚಿಕೊಂಡರು. ಕೆಲವು ದಿನಗಳಮೇಲೆ ಅವರ ಕೃತ್ಯ ಬಯಲಾಯಿತು. ಆಗ ತಮಗೆ ಅವಮಾನವಾಗುವುದಲ್ಲಾ ಎಂದು ಹೆದರಿ ಆ ಆರು ಮಂದಿಯೂ ಏಕಕಾಲದಲ್ಲಿ ಆತ್ಮಹತ್ಯ ಮಾಡಿಕೊಂಡುಬಿಟ್ಟರು ಎಂಬದಾಗಿ ವರ್ತಮಾನ ಬಂದಿದೆ.

* * * *

ರಷ್ಯಾ ಸರ್ಕಾರದವರು ಕಾಕಸಸ್ ಪ್ರಾಂತ್ಯದಲ್ಲಿರುವ ಆರ್ಮೀನ್ಯ ಪ್ರಜೆಗಳ ದೇವಾಲಯಗಳಲ್ಲಿದ್ದ ಆಸ್ತಿಪಾಸ್ತಿಯನ್ನೆಲ್ಲಾ (ಸುಮಾರು ಹನ್ನೆರಡುವರೆ ಕೋಟಿ ದ್ರವ್ಯ) ಸರ್ಕಾರಕ್ಕೆ ಸೇರಿಸಿಕೊಂಡರು. ಆ ದ್ರವ್ಯವೆಲ್ಲಾ ಸಾವಿರಾರು ವರುಷಗಳಿಂದ ಭಕ್ತಾದಿಗಳು ಕೊಟ್ಟಿದ್ದ ಕಾಣಿಕೆ ಎಂತಲೂ, ಅದನ್ನು ಟಾರ್ಟರರು, ಪರ್ಷಿಯನ್ನರು, ಟರ್ಕಿಷರು ಯಾರಾಗಲಿ ಇದುವರೆಗೆ ಅಪಹರಿಸಿರಲಿಲ್ಲವೆಂತಲೂ, ಇದರಿಂದ ಅನೇಕ ಪಟ್ಟಣಗಳಲ್ಲಿರುವ ಆರ್ಮೀನ್ಯ ಪ್ರಜೆಗಳಿಗೆ ಅತೃಪ್ತಿ ಉಂಟಾಗಿದೆಯೆಂತಲೂ ತಿಳಿದುಬಂದಿದೆ.

## "ಭುವನರಾಜವಿಜಯ"

[illegible] ಬಾಲಕರು ಕೂಡ ಸುಲಭವಾಗಿ ಓದಿ ತಿಳಿಯಬಹುದಾದ ಮನೋಹರವಾದ ಕಥೆಗಳೆಲ್ಲಾ ಇದರಲ್ಲಿ ವೆ. [illegible] ದೊಡ್ಡ ಪುಸ್ತಕ [illegible] [illegible] ಪ್ರತಿಗಳನ್ನು ತರಿಸಿಕೊಂಡರೆ [illegible] ಕೃಷಣ ಮೈಸೂರು ದೊಡ್ಡ ಪೇಟೆ ಎಂ ಆರ್. [illegible] ಗಳಿಗೆ ಬರೆದು ತರಿಸಿಕೊಳ್ಳಬೇಕು

## ನಿಮ್ಮ ತಲೆಯಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳೇ.

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ತರಲ್ಪಟ್ಟವು? ಬಂಡಿತವಾಗಿಯೂ ಹಾಸನದಿಂದಲೇ

ಈಗ ಇತರ ಕಡೆಗಳಲ್ಲಿ ತಯಾರಾಗುತ್ತಿರುವ ಟೋಪಿಗಳ ಮಾರಿಕೆಯಲ್ಲಾ ಬೇಗನೆ ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಮಾರಿಕೆಯಲ್ಲಾ ಸಿಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಬುದ್ಧಿಗೆ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ "ಒಳ್ಳೆ ಚನ್ನಾಗಿರತಕ್ಕವುಗಳನ್ನೇ" ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ ಚನ್ನಾಗಿ ಕಾಣುವ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾ ದವು, ಚನ್ನಾಗಿಲ್ಲದವು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ

## ಹೋಮೋಸಿಯಾ.

ಕತ್ತಲ ಜಿರಳೆ [illegible] ಜಗತ್ತಿನಲ್ಲೇ [illegible] ಯಾಗುತ್ತೆ.

[illegible]

## ಸ್ಪೆಷಲ್ ನೋಟೀಸು.

[illegible]

## ಶ್ರೀ ಕೃಷ್ಣವಿಲಾಸ ಪ್ರೆಸ್.

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಸಿಟಿಂಗ್ ಕಾರ್ಡು, ನೋಟೀಸ್ ಫಾರಂ, ಲ್ಯಾಬಲ್ಸ್ ಶೀಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೀಟ್ಯಾಗಿಯೂ [illegible] ಧಾರಣೆಗಳಿಗೆ ಮಾಡಲ್ಪಡುತ್ತವೆ

ರೋಲು, ಪಗ್ಗ, ಮ್ಯಾಂಚಾರ್ ಮಾರ್ಬಲ್ ಪುಸ್ತಕಗಳು, ನಾನಾ ವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು, ಇನ್ನು ಇತರವಾದ ಸಮಸ್ತ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿಂಗಿಗೆ ಬಹು ಚಂದಾಗಿ ಕಟ್ಟಲ್ಪಡುತ್ತವೆ.

[illegible] ಬೇಕಾಗಿರುವ [illegible] ಕಾಗದ, ಚೆಕ್, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಮಾರಿಕೆಗೆ ಸಿದ್ಧವಾಗಿರುತ್ತವೆ

ನಮ್ಮ ಕಂಪನಿಗೆ ವಿಲಾಯಿತಿಯಿಂದ ನವೀನವಾದ ಪ್ರಿಂಟು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ ಕೆಲಸಗಳು ಬಹು ತೃಪ್ತಿಕರವಾಗಿಯೂ ಶೀಘ್ರತರವಾಗಿಯೂ ಮಾಡಲ್ಪಡುತ್ತವೆ

ನಮ್ಮ ಆಫೀಸಿನಿಂದ [illegible] ವಿಷಯವನ್ನಾಗಲಿ ತಿಳಿಯಲು ಇಚ್ಛಿಸುವವರು [illegible] ಕಾಗದಗಳನ್ನು ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು

ನಮ್ಮ ಕಂಪನಿಯು ಮೈಸೂರು ಲಕ್ಷ್ಮೀಪುರದಲ್ಲಿ ದೊಡ್ಡ ಪೇಟೆ ೨೫ನೇ ನಂಬರು [illegible]

ವಿಳಾಸ —ಎಂ ಆರ್ [illegible] ಮತ್ತು ಕಂಪನಿ,

ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು

ಜ್ವರಹರಿ

ಇದು ಸಾಧಾರಣ ಜ್ವರ, ಚಳಿಜ್ವರ, ಮೈಲಿಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, [illegible] ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿ ಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ [illegible]

[illegible]



[illegible]

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೪—10—1903 ರಿಂದ ೪—10—1903 ರ ವರೆಗೆ

| ಸ್ಥಳ. | ಪ್ಲೇಗ್ ಜಗತಿ ಪ್ರ. | ಪ್ಲೇಗ್ ಸತ್ತ ಪ್ರ. | ಹಿಂದಿನ ಸಂಖ್ಯೆ | [illegible] |
|---|---|---|---|---|
| ಬೆಂಗಳೂರು ಪಟ್ಟಣ | 29 | 22 | [illegible] | [illegible] |
| ಮೈಸೂರು ,, | [illegible] | 176 | [illegible] | [illegible] |
| ಬೆಂಗಳೂರು ಡಿಸ್ಟ್ರಿಕ್ಟ್ | [illegible] | [illegible] | [illegible] | [illegible] |
| ಮೈಸೂರು ,, | [illegible] | 60 | 64 | [illegible] |
| ಕೋಲಾರ್ ,, | 44 | 31 | 34 | [illegible] |
| ಕೋಲಾರ್ ಚಿನ್ನದ ಗಣಿಗಳು | 5 | 4 | 3 | |
| ತುಂಕೂರು ಡಿಸ್ಟ್ರಿಕ್ಟ್ | [illegible] | 51 | 70 | [illegible] |
| ಹಾಸನ ,, | [illegible] | [illegible] | 30 | [illegible] |
| ಚಿತ್ರದುರ್ಗ ,, | 42 | 37 | [illegible] | [illegible] |
| ಕಡೂರ್ ,, | [illegible] | 6 | [illegible] | |
| ಶಿವಮೊಗ್ಗ ,, | 112 | 95 | [illegible] | [illegible] |
| ಒಟ್ಟು | [illegible] | 611 | 67 | [illegible] |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಕಾರ್ತೀಕ ಶುದ್ಧ ಪಾಡ್ಯ ಗುರುವಾರದಿಂದ ಕಾರ್ತೀಕ [illegible] ಬುಧವಾರದ ವರೆಗಿನ ವಾರದ ಪಂಚಾಂಗ

೧೯೦೩ ನೇ ಇಸವಿ ಅಕ್ಟೋಬರ್

| ತಾ. | ವಾರ | ತಿಥಿ | ಘಳಿಗೆ | ನಕ್ಷತ್ರ | ಘಳಿಗೆ | [illegible] |
|---|---|---|---|---|---|---|
| [illegible] | ಗುರು | ಪಾಡ್ಯ | [illegible] | [illegible] | [illegible] | [illegible] |
| [illegible] | ಶುಕ್ರ | [illegible] | [illegible] | [illegible] | [illegible] | [illegible] |
| [illegible] | ಶನಿ | [illegible] | [illegible] | [illegible] | [illegible] | [illegible] |
| [illegible] | ರವಿ | [illegible] | [illegible] | [illegible] | [illegible] | [illegible] |
| [illegible] | ಚಂದ್ರ | ಷಷ್ಠಿ | [illegible] | [illegible] | [illegible] | [illegible] |
| [illegible] | ಭೌಮ | ಸಪ್ತಮಿ | [illegible] | [illegible] | [illegible] | [illegible] |
| [illegible] | ಬುಧ | ಅಷ್ಟಮಿ | [illegible] | [illegible] | [illegible] | [illegible] |

[illegible]

## ಪೇಟೆ ಧಾರಣೆ

[illegible]

Printed [illegible] Mysore [illegible]

# ವೃತ್ತಾಂತ ಪತ್ರಿಕೆ.

REGISTERED M 29

ಕ್ರಯ ೧ ದುಡ್ಡು —:o.— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩. ಮೈಸೂರು—ಸನ್ ೧೯೦೩ ನೇ ಇಸವಿ ಅಕ್ಟೋಬರ್ ತಾರೀಖು ೨೯ ನೇ ಗುರುವಾರ. ಸಂಚಿಕೆ ೨೦


ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತದ ಕನ್ನಡ ಟೀಕು.

ಆದಿಪರ್ವ ಎರಡನೇ ಭಾಗ ೩ ರೂ. ವಿರಾಟಪರ್ವ ೧ ರೂ. ಭೀಷ್ಮಪರ್ವ ೨ ರೂ. ದ್ರೋಣಪರ್ವ ಎರಡನೇ ಭಾಗ ೨—೮—೦ ಸ್ತ್ರೀ ಪರ್ವ ೬ ಅನುಶಾಸನೀಕಪರ್ವ ೩—೧—೦ ರೂ.

ಶ್ರೀ ಚಾಮರಾಜೋಕ್ತಿ ವಿಲಾಸವೆಂಬ ಕನ್ನಡ ರಾಮಾಯಣ.

ಬಾಲಕಾಂಡ ೧ ರೂ. ಅಯೋಧ್ಯಾಕಾಂಡ ೨ ರೂ. ಅರಣ್ಯಕಾಂಡ ೧ ರೂ. ಕಿಷ್ಕಿಂಧಾಕಾಂಡ ೧ ರೂ. ಸುಂದರಕಾಂಡ ೧ರೂ. ಯುದ್ಧಕಾಂಡ ೨—೮—೦ ರೂ. ಉತ್ತರಕಾಂಡ ೧—೮—೦

ಶ್ರೀ ಕೃಷ್ಣರಾಜ ವಾಣೀ ವಿಲಾಸ ಶ್ರೀಮದ್ಭಾಗವತದ ಕನ್ನಡ ಟೀಕು.

ಪ್ರಥಮ ದ್ವಿತೀಯ ತೃತೀಯ ಸ್ಕಂಧಗಳು ೨ ರೂ. ಚತುರ್ಥ ಪಂಚಮ ಸ್ಕಂಧಗಳು ೧—೧೨—೦ ರೂ. ಷಷ್ಠ ಸಪ್ತಮ ಅಷ್ಟಮ ಸ್ಕಂದಗಳು ೨—೮—೦ ರೂ. ದಶಮಸ್ಕಂಧ ೨—೮—೦ ಏಕಾದಶ ದ್ವಾದಶಸ್ಕಂಧಗಳು ೧—೧೨—೦ ರೂ.

ನಮ್ಮಲ್ಲಿರುವ ಹಣ್ಣಿನ ಗಿಡಗಳ, ಹೂವಿನ ಗಿಡಗಳ ಮತ್ತು ಬೀಜಗಳ ಕ್ಯಾಟಲಾಗನ್ನು ಅಪೇಕ್ಷಿಸಿದಲ್ಲಿ ಕಳುಹಿಸುತ್ತೇವೆ.

ಎಂ ರುದ್ರಪ್ಪ ಅಂಡ್ ಸನ್,

ಲಾಲ್‌ಬಾಗ್ ರೋಡ್, ಬೆಂಗಳೂರು ಸಿಟಿ.



## ಸ್ಟಾಂಡರ್ಡ್
## ಲೈಫ್ ಅಷ್ಯೂರೆನ್ಸ್ ಕಂಪೆನಿ.

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಇಂಡಿಯಾ ದೇಶದಲಿ ಲೈಫ್ ಇನ್‌ಷ್ಯೂರೆನ್ಸ್ ಯೆಂಬ ಜೀವ ವಿಮೆಯನ್ನು ಭೀಮಾ ಮಾಡಿಕೊಳ್ಳುವ ಕಂಪೆನಿಗಳಲ್ಲಿ ಇದು ಬಹು ಹಳೆಯದಾಗಿಯೂ ಹೆಚ್ಚಾದ ಬಂಡವಾಳವುಳ್ಳದ್ದಾಗಿಯೂ ಇದೆ.

ಭೀಮಾದಾರರಾಗತಕ್ಕವರು (ಲೈಫ್ ಎಷ್ಯೂರ್ ಮಾಡತಕ್ಕವರು) ಈ ಕಂಪೆನಿಯು ಹಂಡಾ ದರ, ನಿಬಂಧನೆಗಳು ಮೊದಲಾದವುಗಳನ್ನು ಇತರ ಕಂಪೆನಿಯವುಗಳೊಡನೆ ಹೋಲಿಸಿನೋಡಿದರೆ ಇಲ್ಲಿ ಜೀವವನ್ನು ಭೀಮಾ ಮಾಡುವವರಿಗೆ ಎಷ್ಟು ಸೌಕರ್ಯಗಳಿರುವುದು ಗೊತ್ತಾಗುವುದು.

ಈ ಕಂಪೆನಿಯ ಭೀಮಾ ನಿಬಂಧನೆಗಳು ಬಹು ಅನುಕೂಲವಾಗಿವೆ. ಭೀಮಾದಾರರುಗಳಿಗೆ ತೊಂದರೆಯನ್ನುಂಟುಮಾಡುವ ನಿಬಂಧನೆಗಳೇನೂ ಇಲ್ಲ.

ನಿಶ್ಚಿತವಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲು ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂಪಾಯಿಗಳನ್ನು ಕಂಪೆನಿಯವರು ಕೊಡುವ ಲಾಭಸಹಿತವಾಗಿ ಪಡೆಯಬೇಕಾದರೆ ಭೀಮಾದಾರನು ಕಂಪೆನಿಗೆ ಕೊಡಬೇಕಾದ ಹಂಡಾ ದರಗಳ ಪೈಕಿ ಕೆಲವನ್ನು ಇಲ್ಲಿ ನೋಡಿ.

| ಈಗಿನ ವಯಸ್ಸು. | ೫೦ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಪಡೆಯಬೇಕಾದರೆ ವಾರ್ಷಿಕವಾಗಿ ಕಂಪೆನಿಗೆ ಕೊಡುವದು. | ೫೫ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಯನ್ನು ಪಡೆಯಬೇಕಾದರೆ ವಾರ್ಷಿಕವಾಗಿ ಕಂಪೆನಿಗೆ ಕೊಡುವದು. |
|---|---|---|
| ೨೦ | ರೂ. ೬—೧೨—೮ | ರೂ. ೬—೦—೦ |
| ೨೫ | „ ೩—೧೫—೪ | „ ೬—೧೪—೦ |
| ೩೦ | „ ೯—೧೨—೮ | „ ೮—೨—೦ |
| ೩೫ | „ ೧೨—೧೪—೮ | „ ೧೦—೧—೪ |
| ೪೦ | | „ ೧೩—೪—೮ |

೨,೦೦೦ ರೂ. ಗಿಂತಲೂ ಹೆಚ್ಚಾದ್ದಕ್ಕಾಗಲಿ ಕಡಮೆಯಾದ್ದಕ್ಕಾಗಲಿ ವಯಸ್ಸಿನಲ್ಲಿ ಹೆಚ್ಚು ಕಡಮೆ ಇದ್ದರಾಗಲಿ ಹಂಡಾ ದರವೇನೆಂಬುದನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಜಾಹೀರಿನ ಜಾರಿಯಲ್ಲಿಲ್ಲದ ಹಂಡಾ ದರಗಳನ್ನು ಕಡಮೆ ಮಾಡಿದೆ. ಜಾಸ್ತಿ ವರ್ಷಗಳಿಗೆ ಚಲಾಯಿಸಬೇಕಾದ ಹೊಸ ಹಂಡಾ ದರಗಳನ್ನು ಭೀಮಾ ಪತ್ರಗಳನ್ನು ಭಾಗಗಳನ್ನು ಅದೇ ವಿಳಾಸದಿಂದ ತರಿಸಿಕೊಳ್ಳಿರಿ. ಎಂ. ಸೂರ್ಯನಾರಾಯಣಪ್ಪ,

ಅಡಿಟರ್ ಮತ್ತು ಜನರಲ್ ಏಜಂಟು, ತಿಪಟೂರ್ರು.



## ಗುಣಾತ ಸಂಜೀವಿನಿ.

೧ ರೂ. ೮ ಆ.; ವಿ. ಪಿ. ಚಾರ್ಜ್ ೩ ಆ.

ಕೆ. ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.



ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

೧೮೯೫ ನೆ ಇಸವಿ ಮೈಸೂರು ಕಂಪೆನಿ ಆಕ್ಟಿಗೆ ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟಿದೆ

ಶ್ರೀಮನ್ ಮೈಸೂರು ಮಹಾರಾಜರವರ ಗೌರ್ನಮೆಂಟಿನವರಿಂದ ಗ್ಯಾರಂಟಿ ಮಾಡಲ್ಪಟ್ಟ ಸದರಿ ಕಂಪೆನಿಯ ಷೇರು ಒಂದಕ್ಕೆ ೨೫ ರೂಪಾಯಿ ಪ್ರಕಾರ ೨೦,೦೦೦ ಷೇರುಗಳಿಂದ ಆಗುವ ೫,೦೦,೦೦೦ ರೂಪಾಯಿ ಬಂಡವಾಳ. ಷೇರುಗಳು ತೆಗೆದುಕೊಳ್ಳುವವರು ಇದರಡಿ ಸ್ಟೇಟ್ ಮಾಡಿರುವವರಿಂದ ವಿಶಿಷ್ಟ ತಪಸೀಲು ತಿಳಿದುಕೊಳ್ಳಬಹುದು. ಅಪ್ಲಿಕೇಷನ್‌ಗಳನ್ನು ಮತ್ತು ಮೊಬಲಗನ್ನೂ ಇವರಲ್ಲೇ ಕಳುಹಿಸಬಹುದು.

ಬಿ. ವಿ ರಾಮುಸ್ವಾಮಿ ಶೆಟ್ಟಿ, ಬಿ. ಏ.,

ಅಡ್ವೊಕೇಟ್ ಮತ್ತು ಜನರಲ್ ಏಜಂಟ್,

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ,

ನಗರ್ತಪೇಟೆ, ಬೆಂಗಳೂರು



## ROBINSON'S
## PATENT BARLEY.

## ರಾಬಿನ್‌ಸನ್‌ಯವರ ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಏವೆಗೋಧಿಯಿಂದ ಮಾಡಿದೆ. ಹಸ್ತಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಸುಂದವಾದ ಪರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತಕರವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾರಾದ್ದರಿಂದ ಖಾತಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.



ಇಗೋ ಇನ್ನೊಂದು ಹೊಸ ಪುಸ್ತಕ! ಬೇಗ ನೋಡಿರಿ!!

ಸ್ವಪ್ನಮಹಾಸ ಫಲದೀಪಿಕೆ.

ಈ ಪುಸ್ತಕವು ಸ್ಮೈಲ್ಸ್ ಸೆಲ್ಫ್ ಹೆಲ್ಪ್ ಎಂಬ ಲೋಕಪ್ರಸಿದ್ಧವಾದ ಪುಸ್ತಕದ ಆಧಾರದ ಮೇಲೆ, ಕನ್ನಡಿಗರಿಗೆ ಅನುಕೂಲವಾಗಿ ಬರೆಯಲ್ಪಟ್ಟಿದೆ. ಈ ಪುಸ್ತಕವು ವಿಶೇಷವಾದ ಹೆಸರನ್ನೂ ಕೀರ್ತಿಯನ್ನೂ ಪಡೆದಿರುವದರಿಂದ ಲೋಕದ ಅನೇಕ ಭಾಷೆಗಳಲ್ಲಿ ತರ್ಜುಮೆ ಮಾಡಲ್ಪಟ್ಟಿದೆ. ಅನೇಕ ಜನಾಂಗದವರು ಈ ಪುಸ್ತಕವನ್ನೇ ಓದಿದ್ದರಿಂದಲೇ ನಾಗರೀಕವಂತರಾದರು. ಈ ಪುಸ್ತಕವು ಧೈರ್ಯಗುಂದಿದವರಿಗೆ ಧೈರ್ಯವನ್ನೂ ಸಮರ್ಥರಿಗೆ ಮತ್ತಷ್ಟು ಸಾಮರ್ಥ್ಯವನ್ನೂ ಬುದ್ಧರಿಗೆ ವಿವೇಕವನ್ನೂ ಕೊಡುವದಾಗಿಯೂ ಪ್ರಸಿದ್ಧವಾಗಿದೆ. ಪುಸ್ತಕದ ಕ್ರಯ ಪಾವ್ಲಾನೆ ಮಾತ್ರ. ವಿ. ಪಿ. ಪಿ. ಯಲ್ಲಿ ತರಿಸಿಕೊಂಡರೆ ಆರು ಆಣೆಗಳಾಗುವವು. ಬೇಗ ತರಿಸಿಕೊಳ್ಳಿ! ವಿಳಾಸ — ಮ್ಯಾನೇಜರ್,

ಸಿ. ಎಲ್ ಎಸ್. ಬುಕ್ ಡಿಪೋ, ಮೈಸೂರು.



ಜನರಂಜಿತವಾದ ಪುಸ್ತಕಗಳು! ಬೇಗನೋಡಬಾರದೇ

ಮೈಸೂರು ಸರ್ಕಾರದ ವಿದ್ಯಾ ಇಲಾಖೆಯವರು ಈ ಪುಸ್ತಕಗಳ ಅಮೂಲ್ಯತ್ವವನ್ನು ತಿಳಿದು ನೂರೈವತ್ತು ರೂಪಾಯಿಗಳಿಗಿಂತ ಹೆಚ್ಚಾಗಿಯೇ ತರಿಸಿಕೊಂಡಿದ್ದಾರೆ.

ಪುರಾತನ ಗ್ರೀಕರ ಚರಿತ್ರೆ ಬಹು ರಸಿಕವಾಗಿದೆ. ಚಿತ್ರಗಳಿಂದ ಕೂಡಿದ್ದು ಕ್ರಯ ೦—೨—೦

ಪ್ರಾಚೀನ ಮೃಗಗಳ ವರ್ಣನೆ. ಚಿತ್ರಗಳಿಂದ ತುಂಬಿದೆ. ೦—೧—೦

ಖಗೋಳ ಶಾಸ್ತ್ರ ಸಿದ್ಧಾಂತ. ಎಲ್ಲರೂ ಓದತಕ್ಕದ್ದು. ಅನೇಕ ಪಟಗಳವೆ ೦—೧—೦

ಪಕ್ಷಿಗಳ ವರ್ಣನೆ. ಸ್ಕೂಲ್ ಹುಡುಗರಿಗೆ ಬಹುಮಾನವಾಗಿ ಕೊಡುವದಕ್ಕೆ ಯೋಗ್ಯವಾಗಿದೆ. ಅನೇಕ ಪಕ್ಷಿಗಳ ಪಟಗಳೂ, ಅವುಗಳ ಚರಿತ್ರೆಗಳೂ ಇದರಲ್ಲಿ ಅಡಕವಾಗಿವೆ ೦—೧—೦

ಇಂಡಿಯಾ ಚಕ್ರವರ್ತಿಯವರಾದ ಎಡ್ವರ್ಡ್ ಸಾರ್ವಭೌಮರ ಮತ್ತು ಚಕ್ರವರ್ತಿನಿಯರಾದ ಅಲೆಕ್ಸಾಂದರಾ ಅಮ್ಮನವರ ಜೀವಮಾನಗಳ ಚರಿತ್ರೆ ಇದರಲ್ಲಿ ಗ್ಲೇಜ್ ಕಾಗದದಮೇಲೆ ಹಾಕಿರುವ ಪಟಗಳು ಅನೇಕವಾಗಿವೆ. ಪ್ರತಿಯೊಬ್ಬರ ಮನೆಯಲ್ಲೂ ಇರತಕ್ಕ ಪುಸ್ತಕ. ಇಂಥಾ ಉತ್ಕೃಷ್ಟವಾದ ಪುಸ್ತಕಕ್ಕೆ ಬೆಲೆಯು ಬಹು ಕಡಿಮೆಯಾಗಿದೆ. ಕ್ರಯ ೩—೪—೦

| | |
|---|---|
| ಚಕ್ರವರ್ತಿಗಳ ಕಿರೀಟಧಾರಣೆಯ ಪುಸ್ತಕ ಕ್ರಯ | ೦—೨—೬ |
| ಕ್ರಿಮಿಗಳ ವರ್ಣನೆ (ಸಚಿತ್ರ) | ೦—೧—೦ |
| ದೇಹವೆಂಬ ನನ್ನ ಮನೆ (ಸಚಿತ್ರ) | ೦—೧—೦ |
| ಪ್ರಬೋಧಚಂದ್ರಿಕೆ | ೦—೨—೦ |
| ಚಿಕ್ಕವರಿಗೆ ಹೇಳಿದ ಕಥೆಗಳು | ೦—೧—೦ |
| ಕಾಂಬೋಡನಾದ ಪಾಲಿಸಿಯ ಚರಿತ್ರೆ | ೦—೧—೦ |
| ಗ್ರೀನ್‌ಲಾಂಡಿನ ಚರಿತ್ರೆ | ೦—೨—೬ |
| ಮಾರ್ಟಿನ್ ಲೂಥರನ ಚರಿತ್ರೆ | ೦—೧—೬ |
| ಆರ್ಯರ ಪೂರ್ವೋತ್ತರ ಚರಿತ್ರೆ | ೦—೧—೬ |
| ಘನತೆಯುಳ್ಳ ಸ್ತ್ರೀಯರ ಚರಿತ್ರೆ | ೦—೨—೬ |

(೧) ವೇದಗಳನ್ನು ಬರೆದವರು ಯಾರು? (೨) ಶುದ್ಧವಾದ ನೀರಿನಬಲ, (೩) ಸಾಲ ಮತ್ತು ಸಾಲತೀರಿಸುವ ಮಾರ್ಗ, (೪) ಇಂಡಿಯಾದೇಶದ ಬಡತನದ ಕಾರಣಗಳು, (೫) ಬಾಲ್ಯವಿವಾಹ, (೬) ಪ್ರಾಯಶ್ಚಿತ್ತವು, (೭) ಬಯ್ಯುವದು, (೮) ಮಾನವಧರ್ಮಶಾಸ್ತ್ರ, (೯) ಗ್ರಹಣಗಳು, (೧೦) ಮಕ್ಕಳನ್ನು ಬೆಳೆಸತಕ್ಕವಿಧ. (೧೧) ಶ್ರಾದ್ಧಗಳು, (೧೨) ಎಲ್ಲರೂ ಸಹೋದರರು, (೧೩) ಮಂತ್ರ, ತಂತ್ರ, ಯಂತ್ರಗಳು, (೧೪) ಜ್ಯೋತಿಷಶಾಸ್ತ್ರ (೧೫) ಆರೋಗ್ಯಪ್ರಕಾಶಿಕೆ. ಈ ಪುಸ್ತಕಗಳ ಪ್ರತಿಯೊಂದಕ್ಕೆ ಮೂರು ಕಾಸು ಕ್ರಯವಿದೆ ಮೇಲ್ಕಂಡ ಹದಿನೈದು ಪುಸ್ತಕಗಳನ್ನು ಒಟ್ಟಾಗಿ ತರಿಸತಕ್ಕದ್ದು. ಬಿಡಿಯಾಗಿ ಮಾರಲಾರೆವು. ಈ ಪುಸ್ತಕಗಳನ್ನು ಓದಿದಮೇಲೆ ಬರುವ ಸಂತೋಷವನ್ನು ವಿವರಿಸಲಾಗದು. ಜಾಗ್ರತೆ ನೋಡಿ. ವಿ. ಪಿ. ಪಿ. ಮೂಲಕವಾಗಿಯಾಗಲಿ ಅಥವಾ ಹಣವನ್ನು ಮುಂಗಡವಾಗಿ ಕಳುಹಿಸೋಣದ್ದರಿಂದಲಾಗಲಿ ಪುಸ್ತಕಗಳನ್ನು ಪಡೆಯಬಹುದು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

## ಬೇಕಾಗಿದೆ.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ೩—೪ ಮಂದಿ ಒಳ್ಳೇ ಕನ್ನಡ ಕಂಪಾಸಿಟರುಗಳು ಬೇಕು. ಯೋಗ್ಯರಿಗೆ ಒಳ್ಳೇ ಸಂಬಳಕೊಡಲಾಗುವುದು. ಮೇಲ್ಕಂಡ ಪ್ರೆಸ್ಸಿಗೆ ಬಂದು ಮಾತನಾಡಬೇಕು.



ಮಹಾರಾಜರವರ ಫೋಟೋಗಳು.

ಇವು ವಿಲಾಯತಿಯಿಂದ ಬಂದಿವೆ. ಮುಗಿದುಹೋದಾವು! ಜಾಗ್ರತೆ ನೋಡಿ! ಬಹಳ ಸೊಗಸಾಗಿವೆ, ದೊಡ್ಡ ಸೈಜಿನವು, ಕೆಡತಕ್ಕವುಗಳಲ್ಲ. ಕ್ರಯ ಎರಡೇ ಆಣೆ.

ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ಪಟ್ಟದಗಳು; ಸುಂದರವಾದ ಬಣ್ಣಗಳುಳ್ಳದ್ದು. ಕ್ರಯ ದೊಡ್ಡ ಸೈಜಿನದು ೮ ಆಣೆ; ಸಣ್ಣ ಸೈಜಿನದು ೨ ಆಣೆ.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೊ, ಮೈಸೂರು.


## ನಮ್ಮ ಚಂದಾದಾರರಿಗೆ ನೋಟಿಸ್.

"ವೃತ್ತಾಂತ ಪತ್ರಿಕೆ" ಯ ಏಜಂಟರು ಚಂದಾ ವಸೂಲ್ಮಾಡಿಕೊಂಡದ್ದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲ.

ಮ್ಯಾನೇಜರ್,

ಮೈಸೂರು. "ವೃತ್ತಾಂತ ಪತ್ರಿಕೆ" ಆಫೀಸ್.

# ವೃತ್ತಾಂತ ಪತ್ರಿಕೆ.

ಸನ್ ೧೯೦೩ ನೇ ಇಸವಿ ಅಕ್ಟೋಬರ್ ತಾ॥ ೨೯ ನೇ ಗುರುವಾರ

## ಪ್ರಾಚೀನವಸ್ತು ಸಂರಕ್ಷಣಾ ಕಾರ್ಯವು.

ಕಳೆದವಾರ ಸಿಂಲಾ ನಗರದಲ್ಲಿ ನಡೆದ ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ಎರಡು ಕಾನೂನುಗಳನ್ನು ಜಾರಿಗೆ ತರಬೇಕೆಂದು ಸರ್ ಇಬೆಟ್ಸನ್‌ರವರು ಸೂಚಿಸಿದರು. ಮೊದಲನೆಯದು ವ್ಯವಸಾಯದ ಬ್ಯಾಂಕುಗಳಿಗೆ ಸಂಬಂಧಪಟ್ಟದ್ದು; ಎರಡನೆಯದು ಹಿಂದುಸ್ಥಾನದಲ್ಲಿ ರಕ್ಷಕ್ಕೆ ಚರಿತ್ರಾರ್ಹವಾದ ಪ್ರಾಚೀನಕಾಲದ ಕಟ್ಟಡ, ಪ್ರತಿಮೆ, ಚಿತ್ರಕೆಲಸ, ಶಾಸನ, ಇನ್ನೇ ಮೊದಲಾದವುಗಳನ್ನು ಉಚಿತವಾಗಿ ರಕ್ಷಿಸಲು ಸಹಕಾರಿಯಾದದ್ದು.

ಮೇಲ್ಕಂಡ ಎರಡನೆಯ ಕಾನೂನನ್ನು ಹಿಂದುಸ್ಥಾನದಲ್ಲಿ ಜಾರಿಗೆ ತರಬೇಕೆಂಬರ್ಥಕ್ಕೆ ಸರ್ ಇಬೆಟ್ಸನ್ ರವರು ಹೇಳಿದ್ದೇನೆಂದರೆ:—ಇಂಥಾ ಪ್ರಾಚೀನಕಾಲದ ವಿಚಿತ್ರ ಕಟ್ಟಡಗಳೇ ಮೊದಲಾದುವನ್ನು ಕಾಪಾಡುವುದಕ್ಕೆ ಇತರ ದೇಶಗಳಲ್ಲಿ ಕಾನೂನ್ ಮಾಡಿಕೊಂಡಿದ್ದಾರೆ. ನಮ್ಮ ದೇಶದಲ್ಲಿ ಮಾತ್ರ ಜಾರಿಯಲ್ಲಿಲ್ಲ. ಹಿಂದುಸ್ಥಾನದಲ್ಲಿ ರಕ್ಷಕ್ಕೆ ಪ್ರಾಚೀನ ವಸ್ತುವಿಶೇಷಗಳಿಂದಲೇ ಪೂರ್ವಚರಿತ್ರೆಯನ್ನು ಸವಿಸ್ತಾರವಾಗಿ ರಚಿಸಬಹುದಾಗಿದೆ. ಇಂಥವುಗಳನ್ನು ಕಾಪಾಡಿಕೊಳ್ಳುವುದಕ್ಕೆ ಕಾನೂನ್ ಮಾಡಿಲ್ಲವಾದಕಾರಣ ಅನೇಕ ಅಮೂಲ್ಯವಸ್ತುಗಳನ್ನು ಮೂಢರಾದ ಗ್ರಾಮವಾಸಿಗಳೂ, ಕೊಳ್ಳೆ ಹೊಡೆವ ಪರದೇಶೀಯರೂ ಹಾಳುಮಾಡಿಬಿಟ್ಟರು; ಇದಲ್ಲದೆ ಅನೇಕ ವಸ್ತುಗಳನ್ನು ಬಹುಮಂದಿ ಸಾಗಿಸಿಕೊಂಡು ಹೋಗಿ ಯೂರೋಪಿನ ಮ್ಯೂಜಿಯಂ (ಚಿತ್ರವಸ್ತುಪ್ರದರ್ಶನಶಾಲೆ) ಗಳಲ್ಲಿ ಇಟ್ಟುಕೊಂಡರು. ಈ ಕಾನೂನಿನಿಂದ ಆಗತಕ್ಕ ಪ್ರಯೋಜನವೇನೆಂದರೆ:—ಪ್ರಾಚೀನಕಟ್ಟಡಗಳ ಮಾಲೀಕರು ಒಪ್ಪಿಕೊಂಡರೆ ಅವುಗಳನ್ನು ಗವರ್ನಮೆಂಟಿನವರೇ ಕಾಪಾಡುವರು; ಇಲ್ಲವಾದರೆ ಮಾಲೀಕರೇ ಅವುಗಳನ್ನು ರಿಪೇರಿಮಾಡಿ ಒಳ್ಳೇ ಸ್ಥಿತಿಯಲ್ಲಿಟ್ಟುಕೊಳ್ಳಬೇಕು. ಅವರು ಅಸಡ್ಡೆಮಾಡಿದರೆ ಸರ್ಕಾರದವರು ಅವುಗಳನ್ನು ತಮ್ಮ ಸ್ವಾಧೀನಮಾಡಿಕೊಳ್ಳುವರು. ಇದಲ್ಲದೆ ಚರಿತ್ರಾರ್ಹವಾದ ವಸ್ತುಗಳನ್ನು ಈ ರಾಷ್ಟ್ರದಿಂದ ಹೊರಕ್ಕೆ ತೆಗೆದುಕೊಂಡು ಹೋಗದಂತೆಯೂ, ಸ್ಥಳದಿಂದ ಸ್ಥಳಕ್ಕೆ ಸಾಗಿಸದಂತೆಯೂ ಗವರ್ನಮೆಂಟಿನವರಿಗೆ ತಡೆಯುವ ಅಧಿಕಾರ ಬರುವುದು. ಚರಿತ್ರಾರ್ಹವಸ್ತುಗಳಿರುವ ಸ್ಥಳಗಳನ್ನು ಅಗೆಸಿ ಶೋಧನೆಮಾಡುವದಕ್ಕೂ ಸರ್ಕಾರದವರಿಗೆ ಸ್ವಾತಂತ್ರ್ಯವುಂಟಾದೀತು.

ಇಂಥಾ ಕಾನೂನು ನಮ್ಮ ಮೈಸೂರು ಸಂಸ್ಥಾನಕ್ಕೂ ತುಂಬಾ ಆವಶ್ಯವಾಗಿರುತ್ತದೆ. ಹಳೇಬೀಡು, ನಗರ, ತಲಕಾಡು ಮೊದಲಾದ ಅನೇಕ ಕಡೆಗಳಲ್ಲಿ ಬಹು ಅಮೂಲ್ಯವಸ್ತುಗಳಿರುತ್ತವೆ. ಅನೇಕ ಪ್ರತಿಮೆಗಳನ್ನೂ ಚಿತ್ರವಸ್ತುಗಳನ್ನೂ ಶಾಸನಗಳನ್ನೂ ಸ್ಥಳಾಂತರ ಮಾಡಿಬಿಟ್ಟಿದ್ದಾರೆ. ಯೂರೋಪಿನ ಚಿತ್ರಶಾಲೆಗಳಿಗೂ ಕೆಲವು ಸಾಗಿಹೋಗಿರುವುದುಂಟು. ಹಳೇಬೀಡಿನಲ್ಲಿರುವ ಅಂಥಾ ಪದಾರ್ಥಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುವವು. ಚರಿತ್ರಾರ್ಹವಸ್ತುಗಳು ಸಿಕ್ಕುವ ಸ್ಥಳಗಳನ್ನು ಅಗೆಸಿ ಶೋಧನೆಮಾಡುವುದರಲ್ಲಿ ಯಾವ ಕ್ರಮವೂ ಇರುವಂತೆ ಕಾಣುವುದಿಲ್ಲ.


## ಚೇಂಬರ್ಲೀನ್ ಯವರು ಮಾಡಿದ ನೋವುಹರ ಔಷಧವು.

43




ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಧದವರಿಗೂ ತುಂಬಾ ಅನುಕೂಲವಾದದ್ದು. ಕರೀರಕ್ಕೆ ಮೂಗು ಏಟು ಬಿದ್ದರೂ ಚೂರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋಗುತ್ತದೆ. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೀನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ಒಕ್ಕೆ ೧ ರೂ.; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು:—

ಡಬ್ಲ್ಯು. ಇ. ಸ್ಮಿತ್ ಅಂಡ್‌ಕಂಪೆನಿ,

ಮೌಂಟ್ ರೋಡ್,

ಮದರಾಸ್.


## ದೇಶಾಂತರ ವಿಶೇಷ ಸಮಾಚಾರಗಳು.

ಮೊರಾಕೋ ರಾಜ್ಯದ ಆಡಳಿತಗಳು ಎಂದಿಗಿಂತ ಕೆಟ್ಟಾಗಿ ನಡೆಯುತ್ತಾ ಬಂದಿರುವದರಿಂದ ಅಲ್ಲಿನ ಆಲ್ಜೀರ್ಸ್ ಪಟ್ಟಣದಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿಕೊಂಡಿರುವ ಫ್ರೆಂಚರು ಯುರೋಪಿನ ಇತರ ರಾಜ್ಯಗಳವರ ಅನುಮತಿಯನ್ನು ಪಡೆದು ಮೊರಾಕೋ ರಾಜ್ಯದ ಆಡಳಿತವನ್ನು ಕ್ರಮಪಡಿಸುವರೆಂದು ಗೊತ್ತಾಗಿದೆ. ಫ್ರೆಂಚರು ಸುಲ್ತಾನರನ್ನೇ ಮೂಲೆಗೆ ಕೂರಿಸದೆ ಅವರ ಕೈಯಲ್ಲಿ ತಾವೇ ಉಪಕರಣವಾಗಿ ನಿಂತು ರಾಜ್ಯವನ್ನು ಕಟ್ಟುಬಂದಿಗೆ ತರುವರು.

* * *

ವಿಲಾಯತಿಯಲ್ಲಿ ಈಗ ವಿದ್ಯುಚ್ಛಕ್ತಿಯ ಮೂಲಕವೇ ರೈಲು ಗಾಡಿಗಳನ್ನು ನಡಸುವದನ್ನು ಸಾಧಾರಣವಾಗಿ ಉಪಯೋಗಿಸುವದರಲ್ಲಿದ್ದಾರೆ. ಬಹು ದೂರವಾಗಿ ಪ್ರಯಾಣಮಾಡಬೇಕಾದಲ್ಲಿ ಇಂಥ ವಿದ್ಯುಚ್ಛಕ್ತಿಯ ರೈಲುಗಳನ್ನು ಉಪಯೋಗಿಸುವದೇ ಅನುಕೂಲವೆಂದು ಅಲ್ಲಿನವರು ಅಭಿಪ್ರಾಯ ಪಡುತ್ತಾ ಬಂದಿರುತ್ತಾರೆ. ಜರ್ಮನಿ ಚಕ್ರಾಧಿಪತ್ಯದ ಬರ್ಲಿನ್ ರಾಜಧಾನಿಯಿಂದ ಕೊಲೋನ್ ನಗರಕ್ಕೆ ಸುಮಾರು ೬೦೦ ಮೈಲಿಗಳುಂಟು. ಸಾಧಾರಣವಾದ ಹಬೆಯ ರೈಲು ಗಾಡಿಗಳಲ್ಲಿ ಇಷ್ಟು ದೂರದ ಪ್ರಯಾಣಕ್ಕೆ ೯ ಗಂಟೆ ಹಿಡಿಯುವದು. ವಿದ್ಯುಚ್ಛಕ್ತಿಯಿಂದ ನಡೆಯುವ ಗಾಡಿಯಲ್ಲಿ ಮೂರೂ ಕಾಲು ಗಂಟೆಹೊತ್ತಿನಲ್ಲಿ ಪ್ರಯಾಣ ಮುಗಿಸಬಹುದೆಂದು ಗೊತ್ತುಮಾಡಿದ್ದಾರೆ. ಕೆಲವು ದಿನಗಳ ಕೆಳಗೆ ಇದೇ ಮಾರ್ಗದಲ್ಲಿ ಓಡಿದ ಒಂದು ಗಾಡಿಯು ಒಂದು ಸ್ಥಳದಲ್ಲಿ ಒಂದೂವರೆ ನಿಮಿಷಗಳಲ್ಲಿ ೩ ಮೈಲು ಫಾಸಲೆ ಓಡಿತೆಂದು ತಿಳಿದುಬಂತು.

* * *

ಚೀನ ರಾಜ್ಯದಲ್ಲಿ ಇಂಗ್ಲೀಷರಿಗೆ ಸೇರಿರುವ ಹಾಂಗ್‌ಕಾಂಗ್ ದ್ವೀಪದಲ್ಲಿ ಪ್ಲೇಗ್ ಜಾಡ್ಯವು ಪ್ರಬಲವಾಗಿರುವಾಗ ಸರ್ಕಾರದವರು ಆರೋಗ್ಯವರ್ಧಕವಾದ ಕೆಲವು ಏರ್ಪಾಡುಗಳನ್ನು ಜಾರಿಪಡಿಸಬೇಕೆಂದು ಪ್ರಯತ್ನಪಡಲಾಗಿ ದೇಶೀಯರಾದ ಚೀನರು ಇದನ್ನು ಒಪ್ಪದೆ, ಸರ್ಕಾರಕ್ಕೆ ಪ್ರತಿಭಟಿಸಿ ನಿಲ್ಲದೆ ಹೋದಾಗ್ಯೂ, ಏರ್ಪಾಡುಗಳನ್ನು ಮಾತ್ರ ಅನುಸರಿಸದೆ ಕಾಲಿಡದೆ ಸರ್ಕಾರದವರ ಉದ್ದೇಶಗಳನ್ನೆಲ್ಲಾ ನಿರರ್ಥಕ ಮಾಡಿದರು. ಪ್ಲೇಗಿನಿಂದ ಸತ್ತವರನ್ನು ಬೀದಿಗಳಲ್ಲಿಯೋ, ಗುಡ್ಡಗಳ ತಪ್ಪಲಲ್ಲಿಯೋ ಯಾರೂ ಕಾಣದಂತೆ ಬಿಟ್ಟು ಹೋಗುತ್ತಾ ರೋಗವು ಹೆಚ್ಚುವದಕ್ಕೆ ಅವಕಾಶ ಕೊಡುತ್ತಿದ್ದರು. ಇದನ್ನು ಗವರ್ನರಾದ ಸರ್ ಹೆನ್ರಿ ಬ್ಲೇಕ್‌ಎಂಬಾತನು ನೋಡಿ ಆ ದ್ವೀಪದಲ್ಲಿ ರೋಗವು ಅತ್ಯಧಿಕವಾಗಿ ಪ್ರಬಲವಾಗಿದ್ದ ೩,೩೦೦ ಮಂದಿ ಜನಸಂಖ್ಯೆಯುಳ್ಳ ಒಂದು ಭಾಗವನ್ನು ಸ್ಯಾನಿಟರಿ ಇಲಾಖೆಯವರಿಂದ ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಆ ಪ್ರಾಂತ್ಯದ ಚೀನರಲ್ಲಿ ಮುಖಂಡರನ್ನೆಲ್ಲಾ ಕೂಡಿ ಬರುವಂತೆ ಮಾಡಿ, ಆರೋಗ್ಯಕ್ಕೂ, ಕ್ರಿಮಿನಾಶನಕ್ಕೂ, ಅವಶ್ಯಕವಾದ ಏರ್ಪಾಡುಗಳ ವಿಷಯವೂ, ರೋಗಿಗಳಾದವರನ್ನು ಇಂಗ್ಲಿಷ ಅಥವ ಚೀನ ವೈದ್ಯರ ಬಳಿಯಲ್ಲಿ ಉಪಚಾರ ಪಡೆಯುವ ವಿಷಯವೂ ಅವರಿಗೆಲ್ಲಾ ಚನ್ನಾಗಿ ತಿಳಿಯ ಹೇಳಿದನು. ಅವರು ಗವರ್ನರವರ ಜೊತೆಯಲ್ಲಿ ಸೇರಿ ಎಲ್ಲಾ ಏರ್ಪಾಡುಗಳನ್ನು ನಡಸುವದಕ್ಕೆ ಬಹು ಮುತುವರ್ಜಿಯಿಂದ ಸಹಾಯ ಕೊಟ್ಟದರಿಂದ ಆ ಪ್ರಾಂತ್ಯದ ಜನರ ಆರೋಗ್ಯಸ್ಥಿತಿಯು ಮೂರು ತಿಂಗಳೊಳಗಾಗಿ ಬಹಳ ವೃದ್ಧಿಯಾಯಿತು.

* * *

ರೇಲ್ವೆ ಎಂಬ ಉಪಾಯವನ್ನು ರಚಿಸಿ ಈಗ ಸುಮಾರು ೭೦ ವರ್ಷಗಳಾದವು. ಇಂಗ್ಲಾಂಡಿನ ಲಿವರ್ಪೂಲ್ ಪಟ್ಟಣಕ್ಕೂ ಮ್ಯಾಂಚೆಸ್ಟರ್ ಪಟ್ಟಣಕ್ಕೂ ನಡುವೆ ಒಂದು ರೈಲು ಗಾಡಿಯನ್ನು ಹಾಕಬೇಕೆಂದು ಪ್ರಯತ್ನಿಸಿ, ಅದರ ಮೇಲೆ ಅತಿ ವೇಗವಾಗಿ ಓಡತಕ್ಕ ಒಂದು ಎಂಜಿನ್ ಗಾಡಿಯನ್ನು ಮಾಡಿಕೊಟ್ಟವರಿಗೆ ೫೦೦ ಪೌಂಡುಗಳ ಬಹುಮಾನವನ್ನು ಕೊಡುತ್ತೇವೆಂದು ಸಾಹುಕಾರರು ಪ್ರಕಟಿಸಿದರು. ಇದರ ಪರೀಕ್ಷಾರ್ಥವಾಗಿ ಮೂರು ಮಂದಿ ಮೂರು ಎಂಜಿನ್‌ಗಳನ್ನು ಕಳುಹಿಸಿದರು. ಅದರೊಳಗೆ ಸ್ಟೀವಿನ್‌ಸನ್ನೆಂಬುವನು ಗಂಟೆಗೆ ೨೯ ಮೈಲು ಪ್ರಕಾರ ಓಡಿ ಬಹುಮಾನವನ್ನು ಗಳಿಸಿತು. ಇದನ್ನೂ ಇದಕ್ಕೆ ಎರಡನೇದಾದದ್ದನ್ನೂ ಈಗಲೂ ಕೆನ್ಸಿಂಗ್‌ಟನ್ ಎಂಬ ವಿಚಿತ್ರ ವಸ್ತುಪ್ರದರ್ಶನ ಶಾಲೆಯಲ್ಲಿಟ್ಟಿದ್ದಾರೆ. ಮೂರನೇದಾದರೋ ಮೂರು ಮೈಲು ಮಾತ್ರ ಓಡಿ ನಿಂತುಹೋಯಿತು. ಇದು ಈ ವರೆಗೂ ಎಲ್ಲಿದೆಯೆಂಬುದು ಗೊತ್ತಾಗಿರಲಿಲ್ಲ. ಇದು ನಿಂತುಬಿದ್ದ ಸ್ಥಳದ ಬಳಿಯಲ್ಲಿ ಮಿ॥ ಮೆಲ್ಲಿಂಗ್ ಬಂಬಾತನ ಯಂತ್ರ ಕಾರ್ಖಾನೆಯಿತ್ತು. ಆ ಕಾರ್ಖಾನೆಯ ಯಜಮಾನನೂ ಆ ಎಂಜಿನ್ನ ಸ್ವಂತಗಾರನೂ ಸ್ನೇಹಿತರಾಗಿದ್ದ ಕಾರಣ ಆತನು ಇದನ್ನು ಆ ಯಂತ್ರ ಕಾರ್ಖಾನೆಯಲ್ಲೇ ಬಿಟ್ಟುಬಿಟ್ಟನು. ಯಜಮಾನನು ಅದರ ಚಕ್ರಗಳನ್ನು ತೆಗೆದುಹಾಕಿ, ಬಾಯ್ಲರನ್ನು ಕಾರ್ಖಾನೆಯಲ್ಲೇ ಉಪಯೋಗಿಸಿಕೊಳ್ಳುತ್ತಾ ಬಂದಿರುತ್ತಾನೆಂಬುದು ಈಗ ಗೊತ್ತಾಯಿತು. ಇನ್ನು ಮೇಲೆ ಈ ಅಪೂರ್ವವಾದ ಎಂಜಿನನ್ನು ಆ ಎರಡು ಗಾಡಿಗಳನ್ನಿಟ್ಟಿರುವ ಬಳಿಯಲ್ಲೇ ತೆಗೆದುಕೊಂಡು ಹೋಗಿ ಇಡುವರೆಂದು ತಿಳಿದುಬಂದಿದೆ.

## ಸ್ವದೇಶದ ವೃತ್ತಾಂತಗಳು.

ಗುಂಡ್ಲುಪೇಟೆಯಲ್ಲಿ ಪ್ಲೇಗ್ ಪ್ರಾರಂಭವಾಗಿ ದಿನಕ್ಕೆ ೪—೫ ಜನ ಕಾಲವಾಗುತ್ತಿದ್ದಾರೆಂದು ವರ್ತಮಾನ ಬಂದಿದೆ.

◆◆◆◆

ಕಳೆದ ಸೆಪ್ಟೆಂಬರ್ ತಿಂಗಳಲ್ಲಿ 'ಕೋಲಾರ' ಚಿನ್ನದ ಗಣಿಕಂಪೆನಿಯವರು ಗಣಿಗಳಲ್ಲಿ ೨೯ ಲಕ್ಷ ರೂಪಾಯಿನ ಚಿನ್ನವನ್ನು ತೆಗೆದು ಶುದ್ಧಮಾಡಿ ವಿಲಾಯತಿಗೆ ರವಾನೆಮಾಡಿರುತ್ತಾರೆ.

◆◆◆◆

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಸಹಾಯೋಪಾಧ್ಯಾಯರಾಗಿದ್ದ ಮಿ॥ ಗ್ರೇವ್ ಸಾಹೇಬರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ವಿಲಾಯತಿಗೆ ಹೊರಟು ಹೋಗುವವರಾಗಿದ್ದಾರೆ.

◆◆◆◆

ಬೆಂಗಳೂರು ದಂಡಿನಲ್ಲೂ ಪಟ್ಟಣದಲ್ಲೂ ಪ್ಲೇಗ್ ಉಪಶಮನವು ಕಾಣುತ್ತಿದೆ. ದಿನವಹಿ ೧೫—೨೦ ಜನರು ಈ ಉಪದ್ರವಕ್ಕೆ ಸಾಯಲಾರಂಭವಾಗಿರುವಂತೆ ವರ್ತಮಾನ ಬಂದಿರುವುದು.

◆◆◆◆

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ೧೦ ವರುಷ ಕಠಿಣ ಶಿಕ್ಷೆ ಅನುಭವಿಸಬೇಕಾಗಿದ್ದ ಜೋಸೆಫ್ ಎಂಬೊಬ್ಬ ಖೈದಿಯು ಕಳೆದವಾರ ಬಂದೀಖಾನೆಯಿಂದ ತಪ್ಪಿಸಿಕೊಂಡು ಓಡಿಹೋಗಿದ್ದನು. ಮೂರು ನಾಲ್ಕು ದಿನಗಳ ಮೇಲೆ ಅವನು ಸಿಕ್ಕಿಬಿದ್ದು ಹಿಡಿಯಲ್ಪಟ್ಟನು.

◆◆◆◆

ದೇವರಿ ಪಟ್ಟಣದಲ್ಲಿರುವ ಪ್ರಖ್ಯಾತವಾದ ಕಾಸ್ಟ್ ಮಿನಾರ್ ಎಂಬ ಪ್ರಾಚೀನ ಕಟ್ಟಡದಲ್ಲಿ ಕೆಲವು ವಿಚಿತ್ರವಾದ ಕಮಾನುಗಳಿರುತ್ತವೆ. ಅವುಗಳ ರಚನೆ ಮುಂತಾದದ್ದನ್ನು ಚನ್ನಾಗಿ ನೋಡಿಕೊಂಡು ಬರುವುದಕ್ಕಾಗಿ ಮೈಸೂರು ಸರ್ಕಾರದವರು ಮಿ॥ ಕೆ ಸೇಸ್ ಎಂಬವರನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ.

◆◆◆◆

ಕಲ್ಕತ್ತೆಯಲ್ಲಿರುವ ದೇಶೀಯ ದೊಡ್ಡ ಮನುಷ್ಯರೆಲ್ಲಾ ಕೂಡಿಕೊಂಡು, ನಮ್ಮ ರೆಸಿಡೆಂಟರಾಗಿ ಬರುವ ಮಿ॥ ಬೂರ್ಡಿಲನ್ ಯವರಿಗೆ ಭಾರೀ ಔತಣ ಮಾಡುವವರಾಗಿದ್ದಾರೆ. ಇದರಿಂದ ಇವರು ಬಂಗಾಳ ಲೆಫ್ಟಿನೆಂಟ್ ಗವರ್ನರಾಗಿ ಪ್ರಜೆಗಳ ಪ್ರೀತಿ ಗೌರವಗಳನ್ನು ಎಷ್ಟುಮಟ್ಟಿಗೆ ಸಂಪಾದಿಸಿಕೊಂಡಿದ್ದಾರೆಂಬುದು ಸ್ಪಷ್ಟವಾಗುವುದು.

◆◆◆◆

ಬೆಂಗಳೂರು ಕಬ್ಬನ್ ಪಾರ್ಕಿನಲ್ಲಿ ಸರ್ ಶೇಷಾದ್ರಿ ಅಯ್ಯರ ಮೆಮೋರಿಯಲ್ ಹಾಲ್ ಎಂಬ ಕಟ್ಟಡವನ್ನು ಕಟ್ಟುತ್ತಾರೆ. ಅದರ ನಕ್ಷೆಯನ್ನು ಮಿ॥ ಇರ್ವಿನ್‌ಯವರು ಬರೆದುಕೊಟ್ಟಿದ್ದಾರೆ. ಈ ಕಟ್ಟಡಕ್ಕೆ ೮೨,೦೦೦ ರೂ. ಖರ್ಚಾಗುವುದೆಂದೂ, ಈ

ಸ್ಥಿತಿಯನ್ನು ಮಾಡಿಸುವುದಕ್ಕೆ ೨೦,೦೦೦ ರೂ. ಖರ್ಚಾಗುವುದೆಂದು ಅಂದಾಜಾಗಿದೆ.

****

ಅರಸೀಕೆರೆಯಿಂದ ಮೂಡಿಗೆರೆಗೆ ಹೋಗಿಬರುವ ಟಾಂಗಾ ಗಾಡಿಗಳು ಅವುಗಳಿಗೆ ಕಟ್ಟತಕ್ಕ ಕುದುರೆಗಳೂ ತುಂಬಾ ಹೀನಸ್ಥಿತಿಯಲ್ಲಿದ್ದಾಗ್ಯೂ ಪ್ರಯಾಣಿಕರಿಂದ ವಸೂಲ್ಮಾಡುವ ಭಾಡಿಗೆಯನ್ನು ಜಾಸ್ತಿ ಮಾಡಿರುತ್ತಾರೆಂತಲೂ, ಇದರಿಂದ ಹೋಗಿಬರುವ ಜನರಿಗೆ ಬಹಳ ಅನಾನುಕೂಲವಾಗಿದೆ ಎಂತಲೂ ಒಬ್ಬ ವಾರ್ತಾದಾರನು [illegible]ಸ್' ಪತ್ರಿಕೆಗೆ ಬರೆದಿರುತ್ತಾನೆ.

****

ತುಂಬನಗೂಡು ಅಮಲ್ದಾರ್ ಮಿ॥ ಬಿ. ಶ್ರೀಕಂಠಯ್ಯನವರನ್ನೂ ತೀರ್ಥಹಳ್ಳಿ ಅಮಲ್ದಾರ್ ಮಿ॥ ಕೆ. ಆರ್. ಸುಬ್ಬರಾಯರನ್ನೂ ಮೈಸೂರು ಸರ್ಕಾರದವರು ಆಕ್ಟಿಂಗ್ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರುಗಳನ್ನಾಗಿ ನೇಮಿಸಿ, ಮೊದಲನೆಯವರನ್ನು ಬೆಂಗಳೂರು ಸಬ್ ಡಿವಿಜನಲ್ಲೂ ಎರಡನೆಯವರನ್ನು ಶಿವಮೊಗ್ಗ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿನಲ್ಲೂ ಕೆಲಸಮಾಡುವಂತೆ ನೇಮಿಸಿರುತ್ತಾರೆಂದು ಕೇಳುತ್ತೇವೆ.

****

ಬೌರಿಂಗ್ ಪೇಟೆಗೂ ಮಾಂಪಿಯರ್ ರೀಫಿಗೂ ಹೋಗಿಬರುವ ಕೋಲಾರ ಗಣಿ ಬ್ರಾಂಚ್ ರೈಲ್ ಗಾಡಿಗಳು ತುಂಬಾ ನಿಧಾನವಾಗಿ ಹೋಗಿಬರುವುದರಿಂದ ಗಣಿಗಳ ಆಫೀಸರುಗಳಿಗೆ ಬಹಳ ಅಡಚಣೆಯಾಗುತ್ತಿರುವಂತೆ ಅಲ್ಲಿನ ಕೆಲವರು ಆಕ್ಷೇಪಣೆ ಮಾಡಿದ್ದಾರೆ. ರಾತ್ರಿ ಹೊತ್ತಲ್ಲಾದರೂ ಸ್ಟೇಷನ್ ಗಳಲ್ಲಾಗಲಿ ಗಾಡಿಗಳಲ್ಲಾಗಲಿ ದೀಪ ಇರುವುದಿಲ್ಲವಂತೆ. ಕಂಪೆನಿಯವರು ಈ ಲೋಪಗಳನ್ನು ಬೇಗ ನಿವಾರಿಸುವರೆಂದು ನಿರೀಕ್ಷಿಸಲ್ಪಟ್ಟಿದೆ

****

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವವು ಒಂದೇ ಸಮನಾಗಿದೆ. ಕಿಲ್ಲೆ[illegible]ನವರ ಮತ್ತು ಬಿಸ್ಟ[illegible]ನವರ ಲೈನ್ ಮನೆಗಳಲ್ಲಿ ಇಲಿಗಳು ಬೀಳುತ್ತವೆ ಎಂದು ಆ ಪ್ರಾಂತ್ಯದಲ್ಲಿರತಕ್ಕವರು ಹೇಳುವರು. [illegible]ಗಳು ಇನ್ನೂ ನಿಂತಹಾಗೆ ಕಾಣುವುದಿಲ್ಲ. ಮೊನ್ನೆ ಶನಿವಾರ ಸಾಯಂಕಾಲ ೪ ಗಂಟೆಗೆ ಹಿಡಿದ ಮಳೆ ರಾತ್ರಿ ೧ ಗಂಟೆಗೆ ಬಿಟ್ಟಿತು. ವಿಪರೀತ ಮಳೆಯು ಬಿದ್ದುದರಿಂದ ಇಲ್ಲಿನ ಎಲ್ಲಾ ಕೆರೆಕಟ್ಟೆಗಳು ತುಂಬಿ ಕೋಡಿ ಬೀಳುತ್ತಿರುವುದು ಸಕಲರೂ ಹೋಗಿ ಕೋಡಿ ಬಿದ್ದುದನ್ನು ನೋಡಿ ಬರುತ್ತಿದ್ದಾರೆ.

****

ಮುತ್ತಿನ ಕಂಠಿಯನ್ನು ಕಳುವು ಕಾಲಕ್ಕೆ ಮುಂಚೆ ಪ್ರಯತ್ನ[illegible] ರಾಜಧಾನಿಯಲ್ಲಿ ಹರಾಜು ಹಾಕಿದರಷ್ಟೆ. ಆ ಹರಾಜಿನ ವಿಷಯದಲ್ಲಿ ಅವರು ಪ್ಲೀಡರ್ ಮಿ॥ ರಾಮಯ್ಯನವರ ಮೂಲಕ, [illegible]ಬಾಯಿ ಉಸ್ಮಾನ್ ಖಾನ್ ರವರ [illegible]ರ ಮೇಲೂ ಇಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಫಿರ್ಯಾದು ಮಾಡಿಕೊಂಡಿದ್ದರಷ್ಟೆ. ಕಳೆದವಾರ [illegible] ಕಾಲವಾದ ಕಾರಣ ಈ ಮೊಕದ್ದಮೆ ಹ್ಯಾಗೆ ಇತ್ಯರ್ಥವಾಗುವುದೋ ತಿಳಿದುಬರಲಿಲ್ಲ.

****

ಇಲ್ಲಿನ ಕೋಟೆ ಬಾಗಿಲೊಳಗಡೆ ಮೈದಾನದಲ್ಲಿರುವ ಲೇಟ್ ಬಕ್ಷಿ[illegible] ಅರಸಿನವರ ಮನೆಯಲ್ಲಿ ಕಳೆದ ವಾರ ಯಾರೋ ಕೊಠಡಿಗಳ ಬೀಗಗಳನ್ನು ಮುರಿದು ಒಡವೆ ಅಪಹರಿಸಲು ಪ್ರಯತ್ನ ಪಟ್ಟಿದ್ದರಂತೆ. ಬಾಗಿಲಲ್ಲಿ ಸಿಪಾಯಿ ಪಹರೆ ಇದ್ದು ಹೀಗಾಗುವುದಕ್ಕೆ ಕಾರಣವೇನೋ ತಿಳಿಯದು. ಕೋಟೆ ಒಳಗೆ ಮನೆಗಳು ಕೆಲವು ಮಾತ್ರ ಇರುವುವು. ಅಲ್ಲಿನ ಸ್ಟೇಷನ್ ಪೋಲೀಸಿನವರು. ಪ್ಲೇಗಿನ ಭೀತಿಗಾಗಿ ಬಿಟ್ಟುಹೋಗಿರುವಂಥವರ ಮನೆಗಳನ್ನು ರಾತ್ರಿ ಕಾಲಗಳಲ್ಲಿ ಉಸ್ತುವಾರಿ ನೋಡಿಕೊಳ್ಳತಕ್ಕದ್ದಾಗಿದೆ

****

ಬೆಂಗಳೂರಿನಲ್ಲಿ ಪಶುಗಳಿಗೆ ಚಿಕಿತ್ಸೆ ಮಾಡುವುದಕ್ಕೆ ಒಂದು ಆಸ್ಪತ್ರೆಯನ್ನು ಇಡಿಸಿದರೆ ಪ್ರಾಣಿಗಳಿಗೆ ಧರ್ಮಕ್ಕೆ ಚಿಕಿತ್ಸೆ ಮಾಡುವುದಾಗಿ ಸರ್ಕಾರಿ ಪಶುವೈದ್ಯ ಡಾಕ್ಟರಾದ ಮಿ॥ ಎನ್. ನರಸಿಂಹಯ್ಯಂಗಾರ್ಯರು ಸಿಟಿ ಮ್ಯುನಿಸಿಪಾಲಿಟಿಗೆ ಒಂದು ಸಲಹೆ ಕೊಟ್ಟಿದ್ದರು. ಕಳೆದವಾರ ಮೆಂಬರುಗಳು ಚರ್ಚೆಮಾಡಿ, ಅವರ ಸಲಹೆಯಂತೆ ಪ್ರಯೋಗಾರ್ಥವಾಗಿ ಸಿಟಿಯಲ್ಲಿ ೬ ತಿಂಗಳ ತನಕ ಒಂದು ಪಶುವೈದ್ಯಶಾಲೆಯನ್ನು ಮ್ಯುನಿಸಿಪಾಲಿಟಿಯವರು ಇಡಬೇಕೆಂದು ನಿಷ್ಕರ್ಷೆ ಮಾಡಿದಾರೆ. ಗೌವರ್ನ್ಮೆಂಟಿನವರು ಇದನ್ನು ಸ್ಯಾಂಕ್ಷನ್ ಮಾಡಬೇಕಾಗಿದೆ.

****

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಎಲ್ಲೆಕಟ್ಟಿನಲ್ಲಿ ಯಾರಿಗಾದರೂ ಪ್ಲೇಗ್ ಮೊದಲಾದ ಅಂಟುರೋಗವಿದೆ ಎಂದು ಯಾರಿಗಾದರೂ ತಿಳಿದು ಬಂದ ಕೂಡಲೆ ಅವರು ಸರ್ಕಾರಕ್ಕೆ ರಿಪೋರ್ಟ್ ಮಾಡಬೇಕೆಂತಲೂ, ಅಂಥಾ ಅಂಟುಜಾಡ್ಯವನ್ನನುಭವಿಸುವ ರೋಗಿಗೆ ಯಾವ ವೈದ್ಯನಾದರೂ ಚಿಕಿತ್ಸೆ ಮಾಡುತ್ತಿದ್ದಲ್ಲಿ ಆ ವೈದ್ಯನು ಆ ಸಂಗತಿಯನ್ನು ಸರ್ಕಾರಕ್ಕೆ ಕೂಡಲೆ ರಿಪೋರ್ಟ್ ಮಾಡಬೇಕೆಂತಲೂ ಅಲ್ಲಿನ ಸ್ಯಾನಿಟರಿ ಬೋರ್ಡಿನವರು ಒಂದು ನಿಬಂಧನೆ ಮಾಡಿಕೊಂಡಿದಾರೆ. ಇದನ್ನು ಸರ್ಕಾರದವರು ಒಪ್ಪಿ ಸ್ಯಾಂಕ್ಷನ್ ಮಾಡುವರೋ ಏನೋ ಮುಂದೆ ತಿಳಿಯತಕ್ಕದ್ದಾಗಿದೆ.

****

ನಮ್ಮ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾಗಿದ್ದ ಸರ್ ಡೊನಾಲ್ಡ್ ರಾಬರ್ಟ್ಸನ್ನರವರು ಹಿಂದಿನ ಸೋಮವಾರ ರಾತ್ರಿ ದಿವಾನರ ಮನೆಯಲ್ಲಿ ನಡೆದ ಔತಣ ಮುಗಿದ ಮೇಲೆ ಮರುದಿನ ಬೆಳಗ್ಗೆ ೬ ಗಂಟೆಗೆ ಹತ್ತುವ ರೈಲು ಹತ್ತಿ ಸೀಮೆಗೆ ಪ್ರಯಾಣ ಮಾಡಿದರು. ಮಂಗಳವಾರ ಬೆಳಗ್ಗೆ ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು. ಅವರು ಗೊತ್ತುಮಾಡಿಕೊಂಡಿದ್ದ ಹಡಗು ಒಂದು ದಿನ ಮುಂಚಿತವಾಗಿಯೇ ಪ್ರಯಾಣ ಮಾಡುತ್ತದೆಂದು ತಂತೀವರ್ತಮಾನ ಬಂದುದೇ ಅದಕ್ಕೆ ಕಾರಣ. ಇವರು ಮದರಾಸಿನಿಂದ ಸಿಲೋನ್ ದ್ವೀಪಕ್ಕೂ, ಅಲ್ಲಿಂದ ಆಸ್ಟ್ರೇಲಿಯಕ್ಕೂ ಹೋಗಿ ದೇಶಸಂಚಾರ ಮಾಡಿಕೊಂಡು ಸೀಮೆಯನ್ನು ತಲಪುವವರಾಗಿದ್ದಾರೆ.

****

ರಾಜಧಾನಿಯಲ್ಲಿ ಕುರುಡರಿಗೂ ಕಿವುಡ ಮೂಕರಿಗೂ ವಿದ್ಯೆಯನ್ನೂ ಕಸಬನ್ನೂ ಕಲಿಸುವುದಕ್ಕೆ ಒಂದು ಪಾಠಶಾಲೆ ಇರುವುದೂ, ಅಲ್ಲಿಗೆ ಶ್ರೀಮನ್ಮಹಾರಾಜರವರು ದಯಮಾಡಿ ಅದರ ಸ್ಥಿತಿಗತಿಯನ್ನು ಪರಾಂಬರಿಸಿ, ಅದನ್ನು ಅಭಿವೃದ್ಧಿಗೆ ತರಬೇಕೆಂದು ಕುತೂಹಲವುಳ್ಳವರಾಗಿರುವುದೂ ಸಕಲರಿಗೂ ತಿಳಿದಿರುವಷ್ಟೆ. ಈಚೆಗೆ ವಿದ್ಯಾವಂತನಾದ ಒಬ್ಬ ಯೌವನಸ್ಥನನ್ನು ಸರ್ಕಾರಿ ಖರ್ಚಿನಿಂದ ಕಲ್ಕತ್ತೆ ಬೊಂಬಾಯಿ ಮೊದಲಾದ ಊರುಗಳಿಗೆ ಕಳುಹಿಸಿ, ಆಯಾ ಸ್ಥಳಗಳಲ್ಲಿ ಕುರುಡರ ಮತ್ತು ಕಿವುಡ ಮೂಕರ ಪಾಠಶಾಲೆಗಳನ್ನು ಯಾವ ರೀತಿಯಲ್ಲಿ ನಡಸುತ್ತಿದ್ದಾರೆಂಬುದನ್ನು ಚೆನ್ನಾಗಿ ಪರಿಶ್ರಮಮಾಡಿಕೊಂಡು ಬರುವಂತೆ ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿರುತ್ತಾರೆಂದು ಕೇಳಿ ಸಂತೋಷಿಸುವೆವು.

****

ರಾಜಧಾನಿಯಲ್ಲಿ ಮುದ್ರಾವಿಲಾಸ ಪ್ರೆಸ್ಸಿನಲ್ಲಿ ಪ್ರಕಟವಾಗುವ "ಮೈಸೂರ್ ಹೆರಲ್ಡ್." "ವೃತ್ತಾಂತ ಚಿಂತಾಮಣಿ" ಎಂಬೀ ವಾರ ಪತ್ರಿಕೆಗಳ ಎಡಿಟರ್ ಕೆಲಸವನ್ನು ಇಲ್ಲಿರುವ ಅಡ್ವೊಕೇಟ್ ಮಿ॥ ಎಂ. ಕೃಷ್ಣರಾಯರು ಕಳೆದ ವಾರದಿಂದ ವಹಿಸಿಕೊಂಡಿದ್ದಾರೆಂದು ತಿಳಿದು ಸಂತೋಷಪಡುತ್ತೇವೆ. ಇವರು ಬಿ. ಎ. ಪದವೀಧರರು; ಆವಿಯಲ್ಲಿ ಮರಿಮಲ್ಲಪ್ಪನವರ ಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದು ಈಚೆಗೆ ಬಹುಕಾಲದಿಂದಲೂ ಅಡ್ವೊಕೇಟರಾಗಿ ಕಕ್ಷಿಗಾರರ ಮತ್ತು ಜಡ್ಜಿಗಳ ನಂಬಿಕೆ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದಾರೆ; ಇಂಗ್ಲಿಷ್, ಕನ್ನಡ, ಹಿಂದುಸ್ಥಾನಿ ಭಾಷೆಗಳಲ್ಲಿ ಇವರಿಗೆ ಒಳ್ಳೆ ಪರಿಶ್ರಮವಿದೆ. ರಾಜಕೀಯ ವಿಷಯಗಳನ್ನೂ ಪ್ರಜೆಗಳ ಕೊರತೆಗಳನ್ನೂ ಚೆನ್ನಾಗಿ ಬಲ್ಲವನಾಗಿದಾರೆ ಇವರು ಈಗ ಈ ಪತ್ರಿಕೆಗಳನ್ನು ನಡಸುವ ಜವಾಬ್ದಾರಿ ವಹಿಸಿಕೊಂಡುದರಿಂದ ಆ ಮೂಲಕ ಸರ್ಕಾರದವರ ಉದ್ದೇಶಗಳನ್ನು ಪ್ರಜೆಗಳಿಗೆ ತಿಳಿಯಪಡಿಸಿ ಅವರನ್ನು ವಿವೇಕಿಗಳನ್ನಾಗಿ ಮಾಡಿ ಅಭಿವೃದ್ಧಿಗೆ ತರುವರೆಂದು ಹಾರೈಸುತ್ತೇವೆ.

****

ನಮ್ಮ ವಾರ್ತಾದಾರರು ಬರೆಯುವದೇನೆಂದರೆ.—"ಮೈಸೂರು ಸಂಸ್ಥಾನದ ಜೈನಮತದ ಪಟ್ಟಾಚಾರ್ಯ ಭಟ್ಟಾರಕ ಸ್ವಾಮಿಗಳವರು ತಾ॥ ೪—೧೦. ೧೯೦೩ನೇ ಗುರುವಾರ ಮಠದಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿ, ಅದನ್ನು ಪ್ರಾರಂಭಿಸಿದರು. ಈಗ ಸದ್ಯದಲ್ಲಿ ಸುಮಾರು ಇಪ್ಪತ್ತನಾಲ್ಕು ಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಾ ಇದ್ದಾರೆ. ವಿದ್ವತ್ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ರಾಜಸಭೆಯಲ್ಲಿ ಬಹುಮಾನ ಪಡೆದಿರುವ ಮಾ॥ ನರಸೀಪುರದ ಶ್ರೀನಿವಾಸಯ್ಯಂಗಾರ್ಯರನ್ನು ಈ ಪಾಠಶಾಲೆಗೆ ಉಪಾಧ್ಯಾಯರನ್ನಾಗಿ ನೇಮಿಸಿರುತ್ತಾರೆ ಇವರು ಹುಡುಗರನ್ನು ತಯಾರು ಮಾಡುವುದರಲ್ಲಿ ಸಮರ್ಥರಾಗಿದಾರೆ. ಈ ಪಾಠಶಾಲೆಗೆ ಇತರರು ಬಂದು ವಿದ್ಯಾಭ್ಯಾಸ ಮಾಡುವುದರಲ್ಲಿ ಯಾವ ಅಭ್ಯಂತರವೂ ಇರುವದಿಲ್ಲ. ಪರಸ್ಥಳಗಳಿಂದ ಬರತಕ್ಕ ಜೈನ ವಿದ್ಯಾರ್ಥಿಗಳಿಗೆ ಭೋಜನಶಾಲೆಯನ್ನು ಏರ್ಪಡಿಸಿ ವಾಸಕ್ಕೂ ಅಶನಾಚ್ಛಾದನಗಳಿಗೂ ತಕ್ಕ ಅನುಕೂಲಗಳನ್ನು ಕಲ್ಪಿಸಿರುತ್ತಾರೆ. ಈ ಪಾಠಶಾಲೆಯನ್ನು ಪ್ರೋತ್ಸಾಹಪಡಿಸಿ ಜೈನ ಮತಾವಲಂಬಿಗಳೆಲ್ಲರೂ ತಮ್ಮ ಶಕ್ತ್ಯನುಸಾರ ದ್ರವ್ಯಸಹಾಯ ಮಾಡುವರೆಂದು ಹಾರೈಸುತ್ತೇನೆ."

****

ಕಳೆದ ಭಾನುವಾರ ಸಮರಾತ್ರಿ ರಾಜಧಾನಿಯಲ್ಲಿದ್ದ ವಿದ್ವಾನ್ ಗಂಗಾಧರಶಾಸ್ತ್ರಿಗಳು ಕಾಲುಫಣಿಯ ರೋಗದಿಂದ ಸ್ವಗೃಹದಲ್ಲಿ ಕಾಲವಾದರು. ಮರಣಕಾಲದಲ್ಲಿ ಇವರಿಗೆ ೫೬ ವರುಷ ವಯಸ್ಸಾಗಿತ್ತು. ಇವರಿಗೆ ಒಬ್ಬ ಪತ್ನಿಯೂ, ೮—೧೦ ವರುಷದ ಮೊಮ್ಮಗನೂ ಇರುವರು. ಗತಿಸಿದ ಶಾಸ್ತ್ರಿಗಳು ತರ್ಕ, ವೇದಾಂತ ಶಾಸ್ತ್ರಗಳಲ್ಲಿ ವಿದ್ವಾಂಸರಾಗಿಯೂ, ಧರ್ಮಶಾಸ್ತ್ರದಲ್ಲಿ ಪಂಡಿತರಾಗಿಯೂ ಇದ್ದರು. ಈಚೆಗೆ ಶ್ರೀಮನ್ಮಹಾರಾಜರವರು ಇವರನ್ನೇ ತಮ್ಮ ಪುರೋಹಿತರನ್ನಾಗಿ ನೇಮಿಸಿಕೊಂಡಿದ್ದರು. ಶಾಸ್ತ್ರಿಗಳು ಪಾಂಡಿತ್ಯವನ್ನು ಸಂಪಾದಿಸಿಕೊಂಡಮೇಲೆ ಉತ್ತರ ದಕ್ಷಿಣ ದೇಶದೇಶಗಳಲ್ಲೆಲ್ಲಾ ಸಂಚಾರಮಾಡಿ, ಅನೇಕ ದೊಡ್ಡಮನುಷ್ಯರಿಂದಲೂ ಪಂಡಿತ ಮಂಡಲಿಗಳಿಂದಲೂ ನಾನಾ ಬಹುಮಾನಗಳನ್ನೂ ಪ್ರಶಂಸೆಗಳನ್ನೂ ಪಡೆದಿದ್ದರು. ಬೊಂಬಾಯಿ ಹೈಕೋರ್ಟಿನ ಜಡ್ಜಿಯವರು, ಚಿಕಾಕೋಲ್ ಮತ್ತು ಭೀಮುನಿ ಪಟ್ಟಣಗಳ ಡಿಸ್ಟ್ರಿಕ್ಟ್ ಮುನಸೀಫರುಗಳು, ರಾಜಮಹೇಂದ್ರಿಯ ಸದ್ದರ್ ಅಮೀನರು, ಬೊಬ್ಬಿಲಿ ಸಂಸ್ಥಾನದ ರಾಜರು, ವೇಲೂರು, ಚಿಕಾಕೋಲ್, ರಾಜಮಹೇಂದ್ರಿ, ನರಸಾಪುರ, ಅಮಲಾಪುರ, ಏಲೂರು ನಗರಗಳಲ್ಲಿರತಕ್ಕ ಪಂಡಿತ ಮಂಡಲಿಯವರು, ರಾಂನಾಡಿನ ಜಮೀನ್ದಾರರೂ ಮ್ಯಾನೇಜರೂ, ತಿನ್ನವೆಲ್ಲಿಯ ಸಬ್ ಜಡ್ಜರು, ತಿರುವಾಂಕೂರು ಮಹಾರಾಜರವರು—ಈ ಮೊದಲಾದವರೆಲ್ಲಾ ಶಾಸ್ತ್ರಿಗಳ ಯೋಗ್ಯತೆಯನ್ನು ಪರೀಕ್ಷೆಮಾಡಿ ಅವರಿಗೆ ಬಹು ಶ್ರೇಷ್ಠವಾದ ಇನಾಮುಗಳನ್ನು ಕೊಟ್ಟಿದಾರೆ. ಅವರಿಗೆ ಅರಮನೆಯಲ್ಲೂ ಋತ್ವಿಕ್ ಕೆಲಸವಿತ್ತು. ಶ್ರೀಮನ್ಮಹಾರಾಜರವರು ಈಸಲ ನವರಾತ್ರಿ ಉತ್ಸವಗಳಾದನಂತರ ಪಂಡಿತ ಮಂಡಲಿಯಲ್ಲಿ ಈ ಶಾಸ್ತ್ರಿಗಳಿಗೆ ಘನತರವಾದ ಇನಾಂ ದಯಪಾಲಿಸಿದರು. ಇಂಥಾ ವಿದ್ವಾಂಸರು ಕಾಲವಾದುದಕ್ಕಾಗಿ ಸಕಲರೂ ವಿಷಾದಿಸುತ್ತಾರೆ.

## ತಂತೀ ವರ್ತಮಾನಗಳು.

### ರಷ್ಯಾ ಜಪಾನ್ ರಾಜ್ಯಗಳ ಮನಸ್ತಾಪ.

ಲಂಡನ್: ೨೪ನೇ ಅಕ್ಟೋಬರ್.—ಕೊರಿಯಕ್ಕೆ ಸೇರಿದ ಯೊಂಗಾಂಪೊ ಎಂಬ ತೀರಪಟ್ಟಣವನ್ನು ರಷ್ಯಾದವರು ಕರಾರು ಮೂಲಕ ಪಡೆದು ತಮ್ಮ ಸ್ವಂತಕ್ಕೆ ಇಟ್ಟುಕೊಂಡಿದಾರೆ. ಆ ಪಟ್ಟಣಕ್ಕೆ ಪರರಾಜ್ಯಗಳವರನ್ನೂ ಬರುವಂತೆ ಅವಕಾಶಮಾಡಿಕೊಡಬೇಕೆಂದು ಇಂಗ್ಲಿಷರೂ ಜಪಾನಿನವರೂ ಕೊರಿಯಾದವರನ್ನು ಒತ್ತಾಯ ಮಾಡುತ್ತಿದಾರೆ.

ಇದಕ್ಕೆ ಕೊರಿಯಾ ರಾಜ್ಯದ ರಾಯಭಾರಿಯು ಒಪ್ಪಿಕೊಳ್ಳುತ್ತಾನೆ. ಆದರೆ ಕೊರಿಯಾ ಚಕ್ರವರ್ತಿಯವರು ಅರಮನೆಯೊಳಗೇ ಸೇರಿಕೊಂಡು, ಯಾವ ಮಾತಿಗೂ ಒಪ್ಪುವುದಿಲ್ಲ. ಪ್ರತಿ ಒಂದು ಸಂದರ್ಭದಲ್ಲೂ ಚಕ್ರವರ್ತಿಯವರು ಆಸ್ಥಾನದ ಜೋಯಿಸರನ್ನು ಕೇಳಿ ಅವನ ಸಲಹೆ ತೆಗೆದುಕೊಳ್ಳುತ್ತಾರೆ. ಈಚೆಗೆ ಜಪಾನ್ ಯುದ್ಧದ ಹಡಗುಗಳು ಮಸಾಂಪೊ ಎಂಬ ತೀರಪಟ್ಟಣಕ್ಕೆ ಬಂದುದನ್ನು ನೋಡಿ ಚಕ್ರವರ್ತಿಯವರು ಬೆಚ್ಚಿಬೀಳುತ್ತಿದಾರೆ.

ಜಪಾನ್ ರಾಜಧಾನಿಯಾದ ಟೋಕಿಯೋ ನಗರದ ಆಸ್ಥಾನದಲ್ಲಿ ಮಂತ್ರಿಗಳೂ ಮುಖ್ಯ ದೊಡ್ಡಮನುಷ್ಯರೂ ಈ ದಿನ ಸಭೆಸೇರಿ ಏಳು ಗಂಟೆಹೊತ್ತು ಕೌನ್ಸಲ್ ಮಾಡಿದರು. ಚೀನಾಯನ್ನೂ ಕೊರಿಯಾವನ್ನೂ ಪರರಾಜ್ಯಗಳವರ್ಯಾರೂ ಆಕ್ರಮಿಸಿಕೊಳ್ಳಕೂಡದೆಂತಲೂ, ಈ ಅರ್ಥಕ್ಕೆ ರಷ್ಯದವರು ಒಪ್ಪಿಕೊಳ್ಳಬೇಕೆಂತಲೂ, ಅವರು ಮ್ಯಾಂಚೂರಿಯವನ್ನು ಬಿಟ್ಟುಹೋಗಬೇಕೆಂದು ಒತ್ತಾಯಮಾಡಬೇಕಾದದ್ದಿಲ್ಲವೆಂತಲೂ ಮಾರ್ಕ್ವಿಸ್ ಇಟೋಯವರು ಸೂಚಿಸಿದ್ದನ್ನು ಸಭಿಕರು ಚರ್ಚಿಸಿದರು. ಸಭೆಯು ಮುಕ್ತಾಯವಾದನಂತರ ಮಾರ್ಕ್ವಿಸ್ ಇಟೋಯವರೂ, ಮಂತ್ರಿಶ್ರೇಷ್ಠರೂ, ರಾಯಭಾರಿಯೂ ಪ್ರತ್ಯೇಕವಾಗಿ ಬಹಳ ಹೊತ್ತು ಮಾತನಾಡುತ್ತಿದ್ದರು.

ಲಂಡನ್, ೨೫ನೇ ಅಕ್ಟೋಬರ್.—ಜಪಾನ್ ರಾಜ್ಯದ ಮಂತ್ರಿಗಳು ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದ ಸಂಗತಿ ಇಂಥಾದ್ದೇ ಎಂದು ಗೊತ್ತಾಗಿ ಹೇಳುವುದಕ್ಕಾಗದಿದ್ದರೂ ಆ ಸಭಿಕರು—ಇದುವರೆಗೆ ನಡೆದಂತೆಯೇ ಇನ್ನು ಮುಂದೆಯೂ ರಾಜಕೀಯ ವಿಷಯಗಳು ನಡೆಯಬೇಕೆಂತಲೂ. ರಷ್ಯದವರು ಒಪ್ಪಂದ ಮಾಡಿಕೊಂಡಿರುವಂತೆ ನಡೆದುಕೊಳ್ಳುವ ವಿಷಯದಲ್ಲಿ ಅವರನ್ನು ಒತ್ತಾಯ ಮಾಡಬೇಕೆಂತಲೂ ತೀರ್ಮಾನಿಸಿರಬಹುದೆಂದು ತೋರುತ್ತದೆ.

### ತುರ್ಕಿ ಬಲ್ಗೇರಿಯಾ ವಿಚಾರವು

ಲಂಡನ್, ೨೩ನೇ ಅಕ್ಟೋಬರ್.—ಮ್ಯಾಸಿಡೋನಿಯಾ ಕಾರ್ಯಭಾರಗಳನ್ನು ಕ್ರಮಪಡಿಸುವುದಕ್ಕೆ ಆಸ್ಟ್ರಿಯಾ ರಷ್ಯಾ ರಾಜ್ಯಗಳವರು ಏರ್ಪಾಡು ಮಾಡಿಕೊಂಡಿರುವುದೇನೆಂದರೆ:—ಇವೆರಡು ರಾಜ್ಯಗಳವರೂ ಮ್ಯಾಸಿಡೋನಿಯದ ಸಕಲ ಇಲಾಖೆಗಳನ್ನೂ ಎರಡು ವರುಷಗಳ ತನಕ ಮೇಲುಸ್ತುವಾರಿ ನೋಡಿಕೊಳ್ಳುವುದು ಮ್ಯಾಸಿಡೋನಿಯಾ ಅಧಿಪತಿಯಾದ ಹಿಲ್ಮಿ ಪಾಷಾ ಯವರ ಸಹಾಯಕ್ಕೆ ರಷ್ಯಾದವರೂ ಆಸ್ಟ್ರಿಯದವರೂ ಒಬ್ಬೊಬ್ಬ ಮುಖ್ಯಾಲೋಚಕನನ್ನು ನೇಮಿಸಿ ಕಳುಹಿಸುವುದು. ತುರ್ಕಿ ಸೈನ್ಯಕ್ಕೆ ಒಬ್ಬ ಯೂರೋಪ್ಯನು ಅಧಿಪತಿಯಾಗಿರುವನು. ಯೂರೋಪಿನ ರಾಜ್ಯಗಳ ಸೇನಾಪತಿಗಳು ತುರ್ಕಿ ಸೈನ್ಯವನ್ನು ಕ್ರಮಪಡಿಸುವುದಕ್ಕೆ ಸಹಾಯ ಮಾಡುವರು. ಮನೆಮಾರು ಆಸ್ತಿಪಾಸ್ತಿಗಳನ್ನು ಬಿಟ್ಟು ಓಡಿಹೋಗಿರತಕ್ಕ ಪ್ರಜೆಗಳಿಗೆ ಪೋಷಣೆಗಳನ್ನು ಒದಗಿಸಿಕೊಡುವುದು; ನಾಶಮಾಡಲ್ಪಟ್ಟ ಗ್ರಾಮ, ಸ್ಕೂಲು, ದೇವಾಲಯಗಳನ್ನು ಪುನಃ ಕಟ್ಟಿಸುವುದು; ಅಭ್ಯಾಸವಿಲ್ಲದೆ ಸೈನ್ಯಕ್ಕೆ ಸೇರಿಕೊಂಡಿರುವವರನ್ನು ಸೈನ್ಯದಿಂದ ಬಿಡಿಸುವುದು; ಬಾಷಿ ಬಜೂಕ್ ಎಂಬ ಗುಂಪುಗಳು ಮತ್ತೆ ಸೇರದಂತೆ ಒಡೆದು ಚದರಿಸುವುದು; ಇವೇ ಮೊದಲಾದ ಏರ್ಪಾಡುಗಳನ್ನು ಮಾಡುವರು. ತುರ್ಕಿ ಸುಲ್ತಾನರು ಆರ್ಬೇನಿಯಾ ರೆಡಿಫ್ಸ್ ಎಂಬ ತಮ್ಮ ಸೈನ್ಯವನ್ನು ಒಡೆದು ಚದರಿಸಬೇಕೆಂದು ಹುಕುಂ ಕೊಟ್ಟಿದಾರೆ.

### ಅರಬ್ಬಿಯವರ ದಂಗೆ.

ಕಲ್ಕತ್ತೆ, ೨೬ನೇ ಅಕ್ಟೋಬರ್.—ಅರೇಬಿಯಕ್ಕೆ ಸೇರಿದ ಯೆಮೆನ್ ಸೀಮೆಯಲ್ಲಿ ಅರಬ್ಬಿಯವರು ದಂಗೆಯೆದ್ದು ಅಲ್ಲಿದ್ದ ತುರ್ಕಿ ಗವರ್ನರನ್ನೂ ೮೦೦ ಸೈನ್ಯವನ್ನೂ ಕೊಂದುಹಾಕಿದರೆಂತಲೂ, ತುರ್ಕಿ ಸುಲ್ತಾನರು ಕಾನ್ಸ್ಟಾಂಟಿನೋಪಲಿನಿಂದ ಸೈನ್ಯವನ್ನು ಅಲ್ಲಿಗೆ ರವಾನೆಮಾಡಿರುತ್ತಾರೆಂತಲೂ ಕಲ್ಕತ್ತೆಗೆ ವರ್ತಮಾನ ಬಂದಿದೆ.

### ಹಿಂದುಸ್ಥಾನದ ವೈಸ್ ರಾಯಿಯವರು.

ಮೊನ್ನೆ ಶುಕ್ರವಾರ ವೈಸ್ರಾಯ್ ಲಾರ್ಡ್ ಕರ್ಜನರವರು ಮಂತ್ರಾಲೋಚನಾ ಸಭೆಯನ್ನು ನಡಸಿದರು. ಮೆಂಬರುಗಳನ್ನು ಎದ್ದುನಿಂತು ವಂದಿಸಲು ಅವರಿಗೆ ಶಕ್ತ್ಯವಿಲ್ಲದೆ ಕೂತುಕೊಂಡೇ ಕ್ಷಮಾಪಣೆಯನ್ನು ಕೇಳಿಕೊಂಡರು. ಅವರು ಕುಮಾವರ್ ಪ್ರಾಂತ್ಯದಲ್ಲಿ ಬಹಳ ದೂರ ಕುದುರೆ ಸವಾರಿಮಾಡಿದ್ದರಿಂದ ಅವರಿಗೆ ಸ್ವಲ್ಪ ಅಸೌಖ್ಯವಾಗಿತ್ತು. ಈಗ ಅವರು ಸೌಖ್ಯವಾಗಿದ್ದರೂ ದೇಹಶಕ್ತಿ ಸ್ವಲ್ಪ ಕಡಿಮೆಯಾಗಿದೆ.

ವೈಸ್ರಾಯಿಯವರಿಗೆ ಇದುವರೆಗೆ ಸರ್ ವಾಲ್ಟರ್ ಲಾರೆನ್ಸ್ ಯವರು ಪ್ರೈವೆಟ್ ಸೆಕ್ರೆಟರಿಯಾಗಿದ್ದು, ಕೆಲಸ ಬಿಟ್ಟು ಸೀಮೆಗೆ ಪ್ರಯಾಣಮಾಡಬೇಕಾಯಿತು. ವೈಸ್ರಾಯಿಯವರು ಆ ಕೆಲಸಕ್ಕೆ ಮಿ॥ ಜಾನ್ ಒಂಟೇರಿಯೋ ಮಿಲ್ಲರ್, ಸಿ. ಎಸ್. ಐ. ಯವರನ್ನು ನೇಮಿಸಿಕೊಂಡಿರುತ್ತಾರೆ. ಇವರು ಇದುವರೆಗೆ ರೆವಿನ್ಯೂ ಮತ್ತು ವ್ಯವಸಾಯದ ಇಲಾಖೆಯಲ್ಲಿ ಇಂಡಿಯಾ ಗವರ್ನ್ಮೆಂಟ್ ಸೆಕ್ರೆಟರಿಯಾಗಿದ್ದರು. ಡಿಸೆಂಬರ್ ಎರಡನೇ ವಾರದಲ್ಲಿ ವೈಸ್ರಾಯಿಯವರು ಕಲ್ಕತ್ತೆಗೆ ಬಂದ ಮೇಲೆ ಇವರು ಹೋಗಿ ಪ್ರೈವೆಟ್ ಸೆಕ್ರೆಟರಿ ಕೆಲಸದ ಚಾರ್ಜನ್ನು ವಹಿಸುವರು.

## ಮತ ಸಂಬಂಧವಾದ ಪ್ರಶ್ನೋತ್ತರಗಳು.

ಶೇಷಣ ಹಳ್ಳಿಯಿಂದ ಮಾ॥ ರಾ॥ ಗೋಪಾಲಕೃಷ್ಣಯ್ಯನವರು ಈ ಪ್ರಶ್ನೆಗಳನ್ನು ಕಳುಹಿಸಿದ್ದಾರೆ:—

ಪ್ರಶ್ನೆಗಳು.—ಅದೃಷ್ಟವೆಂಬುವದು ಸ್ವಾಮಿ ಕೃಪೆಗೆ ಅರ್ಥವೋ? ಇಲ್ಲವೇ ಪೂರ್ವಾರ್ಜಿತಕ್ಕೆ ಅರ್ಥವೋ? ಪ್ರಪಂಚದಲ್ಲಿರುವ ಪ್ರಜೆಗಳಿಗೆ ಅದೃಷ್ಟವಿದೆ ಅಥವ ಇಲ್ಲ ಎಂಬ ಭಾವವನ್ನು ಯಾವ ಆಧಾರದ ಮೇಲೆ ಹೇಳುವಿರಿ? ನಮ್ಮ ಬುದ್ಧಿಯಿಂದ ಸರಿಯಾದ ಕಾರ್ಯ ಮಾಡಿದ ಮೇಲೆ ದೈವಕೃಪೆ ಉಂಟಾಗುತ್ತೋ? ಇಲ್ಲವೇ ದೈವ ಕೃಪೆಯಿಂದ ಬುದ್ಧಿಯುಂಟಾಗುತ್ತೋ? ದೇವರ ಅಧೀನದಲ್ಲಿ ನಮ್ಮ ಬುದ್ಧಿ ಇದ್ದರೆ ನಾವು ನಡಿಸುವ ಪಾಪವು ಯಾರದು?

ಉತ್ತರ.—ಈ ಚಾಕ್ರಿದಾರರು ಕಳುಹಿಸಿರುವ ಪ್ರಶ್ನೆಗಳಿಗೆ ನಾವು ತೃಪ್ತಿಕರವಾಗಿ ಉತ್ತರ ಕೊಡಬಲ್ಲೆವೆಂದು ಅವರು ನಂಬಿರುವದು ನಮ್ಮ ಸಾಮರ್ಥ್ಯವು ಅಪರಿಮಿತವಾದದ್ದೆಂದು ಹೇಳಿದಂತಾಯಿತು. ಇಂಥ ಕಠಿಣವಾದ ಪ್ರಶ್ನೆಗಳನ್ನು ಲೋಕಾದಿಯಿಂದ ಮಹಾ ಮಹಾ ಪಂಡಿತರು ಚರ್ಚಿಸುತ್ತಲೇ ಇದ್ದಾರೆ. ಆದರೆ ತಕ್ಕ ಉತ್ತರವು ಇನ್ನೂ ದೊರಕಿಲ್ಲ. ಈ ಪ್ರಶ್ನೆಗಳ ವಿಷಯ ನಮ್ಮ ಅಭಿಪ್ರಾಯವೇನೆಂದು ಕೇಳಿದರೆ ಅದನ್ನು ಒಂದು ದೃಷ್ಟಾಂತದಿಂದ ತಿಳಿಯಪಡಿಸುವೆವು. ಒಂದು ಪಶುವನ್ನು ಹಗ್ಗದಿಂದ ಒಂದು ಮರಕ್ಕೆ ಕಟ್ಟಿರುತ್ತದೆ. ಹಗ್ಗವು ಎಷ್ಟು ಉದ್ದವಿದೆಯೋ ಅದಕ್ಕೆ ತಕ್ಕಷ್ಟು ಸ್ವಾತಂತ್ರ್ಯದಿಂದ ಅದು ತನ್ನ ಅಂಗಾಂಗಗಳನ್ನು ಚಲಿಸಬಲ್ಲದು. ಮನುಷ್ಯನ ಸ್ಥಿತಿಯೂ ಇದೇ ಪ್ರಕಾರ ಉಂಟು. ಭಗವಂತನು ನಮಗೆ ಕೊಟ್ಟಿರುವ ಸ್ವಾತಂತ್ರ್ಯವು ಸ್ವೇಚ್ಛಾವಿಹಾರವಲ್ಲ. ಅದಕ್ಕೆ ನಿರ್ಣಯ ಉಂಟು ನಾವು ಇಚ್ಛೈಸುವದನ್ನೆಲ್ಲಾ ಮಾಡಲಾರೆವು. ನಮಗೆ ಹುಟ್ಟಿದ ಸ್ಥಳವಾಗಲಿ, ಆಡುವ ಭಾಷೆಯಾಗಲಿ, ವಾಸಮಾಡುವ ದೇಶವಾಗಲಿ, ನಮ್ಮ ಮನೆತನದ ಸಕಲ ಸ್ಥಿತಿಗತಿಗಳೇ ಆಗಲಿ, ನಮ್ಮ ದೇಹಗಳ ಸರ್ವ ಲಕ್ಷಣಗಳಾಗಲಿ, ನಮ್ಮ ಮನಸ್ಸಿಗೆ ಸಂಬಂಧಪಟ್ಟ ಶಕ್ತಿಯಾಗಲಿ, ನಮ್ಮ ಸ್ವಂತ ಇಷ್ಟದಿಂದ ನಮಗೆ ಬಂದವುಗಳಲ್ಲ. ನಮ್ಮನ್ನು ಬಂಧಿಸಿರುವ ಹಗ್ಗಗಳಲ್ಲಿ ಇವೆಲ್ಲಾ ಒಂದೊಂದು ಹುರಿಗಳಾಗಿವೆ. ಇವು ಎಷ್ಟರ ಮಟ್ಟಿಗೆ ನಮಗೆ ಸ್ವಾತಂತ್ರ್ಯವನ್ನು ಕೊಡುತ್ತವೆಯೋ ಅಷ್ಟರ ಮಟ್ಟಿಗೆ ಮಾತ್ರ ನಾವು ಕಾರ್ಯಗಳನ್ನು ಮಾಡಲಾಪೆವು. ಹೀಗಿರುವಲ್ಲಿ ಈ ಹಗ್ಗವನ್ನು ಈ ಬಗೆಯಾಗಿ ಹೊಸೆದವರು ಯಾರು? ಇದನ್ನು ನಾವೇ ನಮ್ಮ ಪೂರ್ವಾರ್ಜಿತವಾಗಿ ಹೊಸೆದು ತಕ್ಕೊಂಡು ಬಂದೆವೋ? ಇದನ್ನು ಹೇಳುವದಕ್ಕೆ ಸಾಕಾದಷ್ಟು ಆಧಾರವಿಲ್ಲ. ಸ್ವಲ್ಪ ಮಟ್ಟಿಗೆ ಇವುಗಳೆಲ್ಲಾ ನಮ್ಮ ಹಿರಿಯರಿಂದ ನಾವು ಅರ್ಜಿಸಿದವುಗಳಾಗಿವೆ, ಅವರ ಶಾರೀರಿಕ ಮತ್ತು ಮಾನಸಿಕ ಸುಲಕ್ಷಣಗಳನ್ನು ನಾವೂ ಅವಶ್ಯವಾಗಿ ಹೊಂದಿರುತ್ತೇವೆ. ಆದರೂ ಕೂಡ ನಮಗೆ ಭೂಲೋಕದಲ್ಲಿ ಬಂದಿರುವ ವಿದ್ಯಮಾನವು ಭಗವಂತನಿಂದಲೇ ಬಂತೆಂದು ನಿಸ್ಸಂದೇಹವಾಗಿ ತಿಳಿಯಬೇಕು.

ಲಾಳ ಕಟ್ಟುವದಕ್ಕಾಗಿ ಎತ್ತನ್ನು ನಾಲ್ಕು ಕಾಲೂ ಕಟ್ಟಿ ಉರುಳಿಸುವಂತೆ ಮನುಷ್ಯ ಯತ್ನವೇನೂ ಇಲ್ಲದ ಹಾಗೆ ಭಗವಂತನೇ ಎಲ್ಲವನ್ನೂ ಮಾಡಿಸುತ್ತಾನೆಂದು ಆಲೋಚಿಸುವುದು ನಮ್ಮ ದೇಶೀಯರ ಅಭಿಪ್ರಾಯ. ಆದರೆ ಮೇಲೆ ವಿವರಿಸಿರುವಂತೆ ನಾವು ಮರಕ್ಕೆ ಬಂಧಿಸಲ್ಪಟ್ಟ ಆಕಳಿನಂತಿದ್ದೇವೆ. ಕಟ್ಟಿರುವ ಹಗ್ಗವನ್ನು ಕಿತ್ತುಹಾಕುವದಕ್ಕೆ ನಾವು ಹಠ ಪ್ರಯತ್ನ ಮಾಡಿ ಕೀಳಬಹುದು; ಹತ್ತಿರ ಬರುವವರನ್ನೆಲ್ಲಾ ಗುದ್ದಿ ಗಾಯ ಮಾಡುವಂತೆ ಹಾರಾಡಬಹುದು; ಅಥವಾ ಶಾಂತವಾಗಿ ಹುಲ್ಲು ಮೇಯುತ್ತಾ ಅಮೃತವನ್ನು ಕರೆಯುವ ಪ್ರಕಾರ ನಾವು ಲೋಕಕ್ಕೆ ಪರೋಪಕಾರಿಗಳಾಗಿ ಬಹುಕಾಲ ಬದುಕಬಹುದು. ಹೀಗೆ ನಮ್ಮ ಸ್ಥಿತಿಯನ್ನು ಪರೀಕ್ಷಿಸಿದಲ್ಲಿ ಭಗವಂತನ ಅಂಕೆಯೂ, ಆಜ್ಞೆಯೂ, ಮನುಷ್ಯನ ಸ್ವಾತಂತ್ರ್ಯವೂ ಪ್ರತ್ಯಕ್ಷವಾಗುವದು. ನಮ್ಮ ನಂಬಿಕೆಯೇನಂದರೆ—ಭಗವಂತನು ಸರ್ವಶಕ್ತನು; ಮನುಷ್ಯನಾದರೋ ತನಗೆ ಭಗವಂತನಿಂದ ನಿಯಮವಾದಂಥ ಸ್ಥಿತಿಯೊಳಗೆ ತಕ್ಕಷ್ಟು ಸ್ವತಂತ್ರನಾಗಿದ್ದಾನೆ. ಹಾಗಾದರೆ ನಾವೇನಾದರೂ ಸತ್ಕಾರ್ಯವನ್ನು ಮಾಡಿದರೆ ಅದು ನಮ್ಮ ಸ್ವಂತ ಪ್ರಯತ್ನ ಪರಿಣಾಮವೆಂದು ಹೇಳಬೇಕೋ? ಅಥವಾ ಅದು ಭಗವಂತನ ಕೃಪಾಪ್ರಸಾದವೋ! ಯಾವ ಸತ್ಪುರುಷನಾಗಲಿ ತನ್ನ ಸತ್ಕಾರ್ಯವು ತನ್ನ ಸ್ವಪ್ರಯತ್ನ ಫಲವೆಂದು ಹೆಚ್ಚಿಸಿಕೊಳ್ಳುವದಕ್ಕೆ ಧೈರ್ಯಪಡಲಾರನು ಕ್ರಿಸ್ತ ಸ್ವಾಮಿಯು ಸೇವಕ ವೃತ್ತಿಯನ್ನು ದೃಷ್ಟಾಂತವಾಗಿ ತಕ್ಕೊಂಡು—"ನಿಮಗೆ ಹೇಳಿದ್ದನ್ನೆಲ್ಲಾ ಮಾಡಿದ ಮೇಲೆ—ನಾವು ಯಾವ ಉಪಕಾರವನ್ನೂ ಮಾಡದ ಆಳುಗಳಾಗಿದ್ದೇವೆ, ಮಾಡಬೇಕಾದದ್ದನ್ನು ಮಾತ್ರ ಮಾಡಿದ್ದೇವೆ ಅನ್ನಿರಿ" ಎಂದು ಬೋಧಿಸಿದ್ದಾನೆ (ಲೂಕ ೧೭. ೭—೧೦). ಇದರಲ್ಲಿ ವಿಚಾರವೇನಂದರೆ—ಯಾವ ಸತ್ಕಾರ್ಯವನ್ನು ಮಾಡಬೇಕಾದರೂ ಸ್ವಪ್ರಯತ್ನವೂ ಭಗವಂತನ ಕೃಪೆಯೂ ಅವಶ್ಯವಾಗಿದೆಯೆಂದು ತಿಳಿಯತಕ್ಕದ್ದು. ಶ್ರೀ ಪೌಲನು—"ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನೂ ಪ್ರಯತ್ನವನ್ನೂ ಉಂಟುಮಾಡುವವನಾಗಿದ್ದಾನೆ" ಎಂದು ಹೇಳಿದ್ದಾನೆ. ದೇವರೂ ಪರಿತ್ರಾಣ ಕಾರ್ಯವನ್ನು ನಡಿಸುವವನಾಗಿದ್ದಾನೆ, ನಾವು ಅವನೊಡನೆ ಸೇರಿ ಕಾರ್ಯಗಳನ್ನು ನಡಿಸಬೇಕು. ಇದೀಗ ನಮ್ಮ ಜೀವನಕ್ಕೆ ಉತ್ಕೃಷ್ಟವಾದ ಸೂತ್ರವಾಗಿದೆ. ನಿಮ್ಮಿಂದ ಲಾಗುವಷ್ಟು ಮಾಡಿ ಭಗವಂತನ ಸಹಾಯವನ್ನು ಪಡೆಯಲು ಪ್ರಾರ್ಥಿಸಿರಿ.

—ಎಡಿ.]

## ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಸಾಮಾನ್ಯ ವಿಷಯಗಳು.

### ಮೂರನೆಯ ದಿನ—ಗುರುವಾರ.

ಪ್ರಾರ್ಥನೆ.—ಅನೇಕ ಕೆರೆಗಳ ಕೆಳಗೆ ಬುಷ್ಕಿ ಮತ್ತು ತರೀ ಜಮೀನುಗಳಿರುತ್ತವೆ. ಸರ್ಕಾರದವರು ಬುಷ್ಕಿ ಫಸಲಿಗೆ ನೀರು ಕೊಟ್ಟುಬಿಡುತ್ತಾರೆ. ಇದರಿಂದ ತರೀ ಜಮೀನು ಹಿಡುವಳಿದಾರರಿಗೆ ಬೆಳೆ ಕೈಗೂಡದೆ ತುಂಬಾ ನಷ್ಟವಾಗುತ್ತೆ. ಅಂಥಾ ಸಂದರ್ಭಗಳಲ್ಲಿ ಬುಷ್ಕಿ ಜಮೀನಿಗೆ ನೀರು ಕೊಡದಂತೆ ಅಪ್ಪಣೆ ಆಗಬೇಕು.

ದಿವಾನರವರ ಉತ್ತರ.—ಕೆರೆಗಳಲ್ಲಿ ನೀರು ಹೆಚ್ಚಾಗಿದ್ದು ತರೀ ಜಮೀನುಗಳಿಗೂ ಆಗಿ ಮಿಗುತ್ತೆಂದು ಗೊತ್ತಾದರೆ ರೈತರ ಸಮ್ಮತಿ ಪಡೆದು ಆ ಹೆಚ್ಚು ನೀರನ್ನು ಬುಷ್ಕಿ ಜಮೀನಿಗೆ ಕೊಡಬೇಕೆಂದು ರೂಲಸು ಮಾಡಿದೆ. ಅದರಂತೆಯೇ ನಡೆಯುತ್ತಲೂ ಇದೆ. ಸಂದರ್ಭ ಬಿದ್ದಂತೆ ವಿಚಾರಿಸಿ ಕೊಡುವರು. ಬುಷ್ಕಿ ಫಸಲಿಗೆ ನೀರು ಕೊಡಲೇ ಕೂಡದೆಂತಾ ಹೇಳುವುದಕ್ಕಾಗುವುದಿಲ್ಲ.

ಪ್ರ.—ಹುಲ್ಲುಬನ್ನಿ ಹರಾಜಿನಲ್ಲಿ ಪರ್ಲಸು ಜಾಸ್ತಿ ಬಾಬು ಮಾಡಿ ವಹಿಸಿಕೊಂಡು, ಗೋಕಾಯಿಗಳನ್ನು ಬಿಡುವ ರೈತರಿಂದ ಹೆಚ್ಚು ದರದಂತೆ ವಸೂಲ್ಮಾಡಿಕೊಳ್ಳುತ್ತಾನೆ. ಇದು ರೈತರಿಗೆ ತುಂಬಾ ಲುಕ್ಸಾನಾದ್ದರಿಂದ ಸರ್ಕಾರದವರೇ ಕುಳುವಾರು ಇಷ್ಟಂತಾ ದರ ಗೊತ್ತು ಮಾಡಿ ವಸೂಲ್ಮಾಡಿಕೊಂಡರೆ ಉಪಕಾರವಾಗುತ್ತೆ.

ಉ.—ರೈತರಿಂದ ಕುಳುವಾರು ವಸೂಲಾಗುವಂತೆ ಪಟೇಲನ ಹೆಸರಿಗೆ ಹರಾಜು ನಿಲ್ಲಿಸಿ ಹಿಂಬಾಕಿಯಿಂದ ವಸೂಲ್ಮಾಡುತ್ತಿದೆ. ಇದರಲ್ಲಿ ರೈತರಿಗೆ ಹೆಚ್ಚು ನಷ್ಟವಾಗದಂತೆ ನೋಡಿಕೊಳ್ಳಬೇಕೆಂದು ಹುಕುಂ ಕೊಡುತ್ತೇವೆ.

ಪ್ರ.—೪ ರೂ. ಗಿಂತ ಕ್ರಯ ಹೆಚ್ಚದ ಹುಲ್ಲು ಮನೆಗಳಿಗೆ ಮೊಹತರ್ಫಾ ಕಂದಾಯವನ್ನು ಮಾಫಿ ಬಿಟ್ಟುಕೊಡಬೇಕು. ಅಂಥಾ ಮನೆಗಳಲ್ಲಿರತಕ್ಕವರು ಬಹಳ ದರಿದ್ರರು; ತೆರಿಗೆಯನ್ನು ಕೊಡಲಾರರು.

ಉ.—ಮೊಹತರ್ಫಾ ಬಾಬನ್ನೆಲ್ಲಾ ರಿವಿಷ ಮಾಡಿ ಕ್ರಮಪಡಿಸಬೇಕೆಂದಿದ್ದೇವೆ. ಆಗ್ಯೆ ಈ ರಿಯಾಯತಿ ಆಗಬಹುದು.

ಪ್ರ.—ಮನೆ ಕಟ್ಟಿಕೊಳ್ಳುವದಕ್ಕೆ ಸ್ಥಳ ಬೇಕೆಂದು ಅರ್ಜಿ ಕೊಟ್ಟರೆ ಅಂಥಾ ಜಮೀನುಗಳಿಗೆ ೩೦ ವರುಷದ ಕಂದಾಯವನ್ನು ಖರೀದಿ ಮೊಬಲಗಿಗಾಗಿ ವಸೂಲ್ಮಾಡುತ್ತಾರೆ. ಇದು ಬಹಳ ಕಷ್ಟ. ಬಡಬಗ್ಗರಿಗೆ ಕೊಡಲು ಆಗುವುದಿಲ್ಲ. ಈ ಕಂದಾಯವನ್ನು ಮಾಫಿ ಬಿಟ್ಟು, ಜಮೀನು ಮುಫತ್ತಾಗಿ ಕೊಡಿಸಬೇಕು. ಮನೆ ಹಿಂದೆ ರೈತರು ಬಿಟ್ಟುಕೊಳ್ಳುವ ಹಿತ್ತಲುಗಳಿಗೆ ಕಂದಾಯವನ್ನು ಹಾಕದಂತೆ ಅಪ್ಪಣೆ ಆಗಬೇಕು.

ಉ.—ಈ ಬಾಗದಲ್ಲಿ ಮನೆಗೆ ಇಷ್ಟು ಜಾಗ, ಹಿತ್ತಲಿಗೆ ಇಷ್ಟು ಜಾಗ ಬಿಟ್ಟುಕೊಡಬೇಕೆಂತಲೂ, ಹಿತ್ತಲು ಐದೋ ಆರೋ ಮಾರೆಯೋ ಗುಂಟೆಗಳಿಟ್ಟಿದ್ದರೆ ಕಂದಾಯ ಹಾಕಕೂಡದೆಂತಲೂ ಮೊನ್ನೆತಾನೇ ಹುಕುಂ ಕೊಟ್ಟಿದೆ. ಅದು ಕೂಡ್ಲೆ ಜಾರಿಗೆ ಬರುತ್ತೆ.

ಪ್ರ.—ಅಡಿಕೆ ತೋಟಗಳಿಗೆ ಕಂದಾಯ ದುಬಾರಿಯಾಗಿದೆ. ಇದರ ಮೇಲೆ ಅದನ್ನು ರೇಟೆ ಮಾಡುವದರಲ್ಲಿ ಸ್ವೈರುದಾರರಿಗೆ ತುಂಬಾ ಹಿಂಸೆ ಇದೆ. ಮತ್ತು ಮಣಕ್ಕೆ ೧॥ ಆಣೆ ಸಾಯರ್ ಸುಂಕ ಬೇರೆ ಕೊಡಬೇಕು. ಇದರ ದೆಸೆಯಿಂದ ಸ್ವೈರುದಾರರು ಅಡಿಕೆಯನ್ನು ತಮಗೆ ಬೀಳುವ ಖರ್ಚಿಗಿಂತಲೂ ಕಮ್ಮಿ ಧಾರಣೆಗೆ ಬಿಕರಿ ಮಾಡಿ ನಷ್ಟಪಡುತ್ತಿದಾರೆ. ಈ ಸಾಯರ್ ಸುಂಕವನ್ನು ವಜಾಮಾಡಿ ಕೊಡಬೇಕು. ಮರದ ಮೇಲೆಯೇ ಲೆಕ್ಕಮಾಡಿ ಹಾಸಲು ತೀರಿಸುವಂತಾದರೆ ತುಂಬಾ ಅನುಕೂಲ. ಮತ್ತು ಸುಮಾರಿ ಕಂದಾಯಕ್ಕೆ ಬದಲಾಗಿ ಬಾಗಾಯತು ಕಂದಾಯ ಹಾಕಿದರೆ ಉತ್ತಮ.

ಉ.—ಸಾಯರ್ ವಜಾ ಮಾಡುವುದು ಸಧ್ಯ ಆಗಲಾರದು: ಮುಂದೆ ನೋಡೋಣ. ಹೊಸದಾಗಿ ರಿವಿಜನ್ ಸರ್ವೆ ಸೆಟ್ಲ್ ಮಾಡುವ ಕಾಲದಲ್ಲಿ ಸರ್ಕಾರದವರು ಈ ಸಲಹೆಗಳನ್ನೆಲ್ಲಾ ಕುರಿತು ಆಲೋಚನೆ ಮಾಡುತ್ತಾರೆ. ಮತ್ತು ಈ ಸಾಯರ್ ಬಾಬಿನಲ್ಲಿ ಸ್ವೈರುದಾರರಿಗೆ ತುಂಬಾ ತಿರಿಕಿರಿ ಇದೆ ಎಂಬ ಸಂಗತಿ ಈಗೀಗ ನಮ್ಮ ಮಹಾರಾಜರವರ ತಿಳುವಳಿಕೆಗೆ ಬಂದಿದೆ ಇನ್ನು ಮುಂದೆ ಅವರು ಎಲ್ಲಾ ವಿಷಯಗಳನ್ನೂ ಅನುಭವಕ್ಕೆ ತಂದುಕೊಳ್ಳುತ್ತಾ, ರಿಯಾಯತಿ ತೋರಿಸಬಹುದು.

ಪ್ರ.—ಮಲ್ನಾಡು ಅಡಿಕೆ ತೋಟಗಳಿಗೆ ಈಚೆಗೆ ಪ್ರತಿ ವರುಷವೂ ಕೊಳೆ ರೋಗ ಬರುತ್ತಿದೆ. ಜಮೀನ್ದಾರನಿಗೆ ಅದರ ದೆಸೆಯಿಂದ ಕಂದಾಯಕ್ಕೆ ತಕ್ಕಷ್ಟು ಫಸಲೂ ಕೈಹತ್ತುವುದಿಲ್ಲ. ಆದ್ದರಿಂದ ಅಮಲ್ದಾರರು ಈ ತೋಟಗಳನ್ನು ಖುದ್ದಾಗಿ ಆಜಮಾಯಿಷಿ ಮಾಡಿ, ಕೆಟ್ಟುಹೋಗಿರುವ ಗಿಡಗಳನ್ನು ಬಿಟ್ಟು, ಉಳಿದ ಗಿಡಗಳಿಗೆ ದಾಮಾಷಾ ಪ್ರಕಾರ ಕಂದಾಯ ಹಾಕಿ ವಸೂಲ್ಮಾಡುವಂತಾಗಬೇಕು. ಮತ್ತು ಅಗ್ರಿಕಲ್ಚರಲ್ ಕೆಮಿಸ್ಟಂಬ ಸರ್ಕಾರಿ ಅಧಿಕಾರಿಯು ಆಗೀಸ್ಟು ಸೆಪ್ಟೆಂಬರ್ ತಿಂಗಳಲ್ಲಿ ಈ ತೋಟಗಳನ್ನು ಬಂದು ನೋಡಿ, ಆ ರೋಗಕ್ಕೆ ತಕ್ಕ ಪರಿಹಾರವನ್ನು ಕಂಡು ಹಿಡಿಯುವಂತೆ ಅಪ್ಪಣೆ ಆಗಬೇಕು.

ಉ.—ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ೩—೪ ಮಂದಿ ಸಾಹೇಬರುಗಳು ಆ ಪ್ರಾಂತ್ಯ ಸಂಚಾರ ಮಾಡಿ, ಕೊಳೆ ರೋಗದ ಲಕ್ಷಣವನ್ನು ಚೆನ್ನಾಗಿ ಪರಿಕ್ಷೆಮಾಡಿಕೊಂಡು ಬಂದು, ಅದರ ವಿಷಯದಲ್ಲಿ ಒಂದು ರಿಪೋರ್ಟು ಬರೆದು ಕೊಟ್ಟಿದಾರೆ. ಅಲ್ಲಿಗೆಸ್ಟಗೆ ಹಿಡಿಯುವಂಥಾ ಹುಳುವೇ ಅಡಿಕೆ ಫಸಲಿಗೂ ಹಿಡಿಯುತ್ತೆಂತಲೂ, ರೋಗ ಹಿಡಿದ ಗೊಂಚಲುಗಳನ್ನು ಸ್ವೈರುದಾರರು ಆಜಮಾಯಿಷಿ ಮಾಡಿ ಕತ್ತರಿಸಿ ಹಾಕುತ್ತಲೂ, ಕಚರಾವನ್ನೆಲ್ಲಾ ಸುಡುತ್ತ... ಬಂದರೆ ಈ ರೋಗವು ವ್ಯಾಪಿಸುವುದಿಲ್ಲವೆಂಬದಾಗಿ ಅವರು ಹೇ... ತ್ತಾರೆ. ಆ ರಿಪೋರ್ಟನ್ನು ಗವರ್ನಮೆಂಟಿನವರು ಛಾಪ... ನೋಡಿ, ರೈತರಿಗೆ ವಿಷಯಗಳನ್ನು ಸಮಗ್ರವಾಗಿ ತಿಳಿಸುವರು.

ಪ್ರ.—ಕಂದಾಯದ ಬಾಕಿಗೆ ಹುಟ್ಟುವ ನೋಟಿಸನ್ನು ... ಮೊಧಿಕಾರಿಗಳೇ ಜಾರಿ ಮಾಡುತ್ತಾರೆ. ಇದಕ್ಕಾಗಿ ಬೇರೆ ಜವಾ... ರನ್ನು ನೇಮಿಸುವುದಿಲ್ಲ; ನೋಟಿಸ್ ಹುಟ್ಟಿತೆಂದು ತಾಲ್ಲೂಕಿನ ... ರೆಕ್ಕರ್ಡಿಗೆ ಜಾಮೀಲಾದ ಕೂಡಲೆ ಜಾರಿ ಆಗದೆ ಇದ್ದಾಗ್ಯೂ ಫೀಯ... ವಸೂಲ್ಮಾಡುತ್ತಾರೆ. ಒಂದು ಬಿಸ್ತಿನ ಕಂದಾಯ ಬಾಕಿ ನಿಂ... ಬಿಟ್ಟು ಹಣ ವಸೂಲ್ಮಾಡಬೇಕೆಂದು ನೋಟಿಸ್ ಹುಟ್ಟುತ್ತೆ. ಭಾಗಗಳೆಲ್ಲಾ ರೈತರಿಗೆ ತುಂಬಾ ನಷ್ಟಕರವಾಗಿರುವದರಿಂದ ನೋ... ಟಿಸ್ ಫೀಯನ್ನು ಕಮ್ಮಿ ಮಾಡಿಕೊಡಬೇಕು.

ಉ.—ಕಂದಾಯಕ್ಕೆ ನಾಲ್ಕು ಬಿಸ್ತು ಮಾಡಿದೆ. ಕಾರೀಖು... ಳಗೆ ಆಯಾ ಬಿಸ್ತಿನ ಹಣವನ್ನು ಕೊಟ್ಟುಬಿಟ್ಟರೆ ಮೇಲ್ಕಂಡ ... ಕಿರಿಯಲ್ಲಾ ತಪ್ಪಿಹೋಗುತ್ತೆ. ನೋಟಿಸ್ ಫೀ ಕಮ್ಮಿ ಮಾಡತಕ್ಕ... ವುದಿಲ್ಲ. ಮುಂದೆ ವಿಚಾರಿಸಿ ನೋಡೋಣ.

ಪ್ರ.—ಜಮೀನ್ ಕಂದಾಯದ ಬಾಕಿಗೆ ಜಮೀನನ್ನು ಹರಾ... ಹಾಕುತ್ತಾರೆ. ಅದರಲ್ಲಿ ಉತ್ಪತ್ತಿಯು ಕಡಿಮೆಯಾದ ಜಮೀನ್ದಾ... ರನ ಚರಸ್ವತ್ತನ್ನು ಜಫ್ತಿ ಮಾಡುತ್ತಾರೆ. ಇದನ್ನು ತಪ್ಪಿಸಿ, ಮೊ... ದಲೇ ಚರಸ್ವತ್ತು ಜಫ್ತಿ ಆಗುವಂತೆ ಬದಲಾಯಿಸಿ ಕೊಡಬೇಕು. [ಇನ್ನು ಕೆಲವು ಮೆಂಬರುಗಳು ಎದ್ದು—ಸ್ವಾಮಿ, ಇದು ... ಕೂಡದು; ಮೊದಲು ಜಮೀನ್ ಜಫ್ತಿ ಆಗಿ, ನಂತರ ಚರಸ್ವತ್ತ... ಹರಾಜು ಹಾಕಬೇಕು. ಈಗಿರುವ ಪದ್ಧತಿಯನ್ನೇ ಬಾಹಾ... ಮಾಡಬೇಕು ಎಂತಾ ಕೇಳಿಕೊಂಡರು.]

ಉ.—ನಿಮ್ಮಲ್ಲೇ ಎರಡು ಪಂಗಡವಾಯಿತಲ್ಲಾ. ಯಾರ ... ತಿನಂತೆ ಬದಲಾವಣೆ ಮಾಡಬೇಕೋ ತಿಳಿಯುವದಿಲ್ಲ. ಮೆಂಬ... ಗಳೆಲ್ಲಾ ಇನ್ನೂ ಚೆನ್ನಾಗಿ ಆಲೋಚನೆ ಮಾಡಿಕೊಂಡು ಬಂ... ಕೇಳಿದರೆ ಆ ಪ್ರಕಾರ ನಡೆಸುತ್ತೇವೆ. ಅದುವರೆಗೆ ಈಗ ಜಾರಿ... ರುವ ಪದ್ಧತಿಯನ್ನು ಬದಲಾಯಿಸುವುದಕ್ಕಾಗುವುದಿಲ್ಲ.

ಪ್ರ.—ಹರಾಜಿನಲ್ಲಿ ಸ್ಥಿರಸ್ವತ್ತನ್ನು ಕಳೆದುಕೊಳ್ಳುವ ರೈ... ನು ಆರು ತಿಂಗಳೊಳಗಾಗಿ ಹಣ ಕಟ್ಟಿದರೆ ಅಮಲ್ದಾರರು ಆ... ಸ್ವತ್ತನ್ನು ಅವನಿಗೆ ಬಿಡಿಸಿಕೊಡುವಂತೆ ಬೊಂಬಾಯಿನಲ್ಲಿರು... ಕಾನೂನನ್ನು ಇಲ್ಲಿಗೂ ಜಾರಿಗೆ ತರಬೇಕು.

ಉ.—ಆ ಕಾನೂನನ್ನು ಜಾಗ್ರತೆಯಲ್ಲಿ ಜಾರಿಗೆ ತರಬೇಕೆಂ... ಗವರ್ನಮೆಂಟಿನವರು ಯೋಚಿಸಿಕೊಂಡಿದ್ದಾರೆ.

ಪ್ರ.—ಗ್ರಾಮಾಂತರಗಳ ಪಹಣಿ ದಾರಿ ನಕಲಿನ ವಿಷಯ... ಲ್ಲಿ ರೆವೆನ್ಯೂ ಮೊಕದ್ದಮೆಗಳನ್ನು ಈಗ ಅಸಿಸ್ಟೆಂಟ್ ಕಮಿಷನ... ಕೋರ್ಟುಗಳಲ್ಲಿ ದಾಖಲ್ ಮಾಡಿ ಬಹಳ ದೂರ ಅಲೆದು ವ್ಯಾಜ್ಯ... ನಡಸಬೇಕಾಗಿದೆ. ಇದರಿಂದ ತುಂಬಾ ತೊಂದರೆಯುಂಟಾಗಿ... ನೆದು. ಆದಕಾರಣ ಇನ್ನು ಮುಂದೆ ತಾಲ್ಲೂಕ್ ಅಮಲ್ದಾರ... ಅಂಥಾ ವ್ಯಾಜ್ಯಗಳನ್ನು ಹಿಡಿದು ಫೈಸಲ್ಮಾಡುವಂತೆ ಮಾಡಿಕೊಟ್ಟ... ಗ್ರಾಮವಾಸಿಗಳಿಗೆ ತುಂಬಾ ಅನುಕೂಲ.

ಉ.—ಇಂಥಾ ಮೊಕದ್ದಮೆಗಳನ್ನು ಅಮಲ್ದಾರರು ಹಿಡಿ... ಇತ್ಯರ್ಥ ಮಾಡುವುದಕ್ಕಿಂತಲೂ ಮೇಲ್ದರ್ಜೆಯಲ್ಲಿರುವ ಅಸಿಸ್ಟೆಂಟ್ ಕ... ಮಿಷನರು ದರ್ಯಾಫ್ತು ಮಾಡುವುದೇ ಜನರಿಗೆ ಅನುಕೂ... ಆದ್ದರಿಂದ ಈಗಿರುವ ಪದ್ಧತಿಯನ್ನು ಬದಲಾಯಿಸಲಾಗದು.

ಪ್ರ.—ರೆವೆನ್ಯೂ ಅಲಾಟೆಗೆ ಸಂಬಂಧಪಟ್ಟ ರಿಕಾರ್ಡುಗ... ಅನೇಕ ಸಂದರ್ಭಗಳಲ್ಲಿ ರೈತರ ಮೊಕದ್ದಮೆಗಳಿಗೆ ತುಂಬಾ ಸಹಾ... ಯವಾಗುವವು. ಅಂಥಾ ರಿಕಾರ್ಡುಗಳ ಕಾಪಿ ಕೊಡಿಸಬೇಕೆಂ... ಅರ್ಜಿ ಕೊಟ್ಟು ಕೇಳಿದರೆ ಕೊಡುವುದಿಲ್ಲ. ಕೊಡಿಸುವಂತೆ ಹುಕುಂ ಆಗಬೇಕು.

ಉ.—ರೆವೆನ್ಯೂ ಇಲಾಖೆಯ ಕಾಗದ ಪತ್ರಗಳ ಕಾಪಿ ಕೊಡಲು ಸಾಧ್ಯವಿಲ್ಲ. ಅರ್ಜಿಯ ಮೇಲೆ ಕಾರಣಗಳನ್ನೆಲ್ಲಾ ವಿಸ್ತಾರವಾಗಿ ಕಾಪಿಗೆ ಹುಕುಂ ಬರೆದುಕೊಡಬೇಕೆಂದು ರೂಲಸು ಇದೆ. ಅದರಂತೆಯೇ ಕೊಡುತ್ತಿದಾರೆ. ರೆವೆನ್ಯೂ ಅಧಿಕಾರಿಗಳು ಒಬ್ಬರಿಗೊಬ್ಬರಿಗೆ ಬರೆಯುವ ವಿಷಯಗಳನ್ನೆಲ್ಲಾ ಕಾಪಿ ಎತ್ತಿಕೊಡುವುದಕ್ಕಾಗಲಾರದು.

ಪ್ರ.—ಇನಾಂ ಗ್ರಾಮಗಳನ್ನು ಸರ್ಕಾರದವರೇ ವಹಿಸಿಕೊಂಡು, ಸರ್ವೆ ಮುಂತಾದ್ದು ಮಾಡಿಸಿ, ಪ್ರಜೆಗಳನ್ನು ಕಾಪಾಡಬೇಕು. ಗ್ರಾಮಗಳಿಗೆ ಸರ್ಕಾರದಿಂದಲೇ ಏಜಂಟ್, ಗುಮಾಸ್ತರುಗಳನ್ನು ನೇಮಿಸಿ, ಹುಟ್ಟುವಳಿಯಲ್ಲಿ ಅಲ್ಪ ಸ್ವಲ್ಪವನ್ನು ಸರ್ಕಾರದವರು ತೆಗೆದುಕೊಂಡು ಉಳಿದ ಮೊಬಲಗನ್ನು ವೃತ್ತಿವಂತರಿಗೇ ಕೊಟ್ಟರೆ ಇನಾಂತಿಯನ್ನು ದಯಪಾಲಿಸಿದವರ ಉದ್ದೇಶವು ಸಾರ್ಥಕವಾಗುವದು. ಈಗ ಸರ್ಕಾರದವರು ಸರ್ಕಾರಿ ಬಾಕಿಗಾಗಿ ಜಫ್ತು ಹಾಕುವ ಗ್ರಾಮಗಳಲ್ಲಿ ಇನಾಂತಿ ಗ್ರಾಮಗಳೇ ಬಹಳ ಹೆಚ್ಚಾಗಿರುತ್ತವೆ.

ಉ.—ಇದನ್ನೆಲ್ಲಾ ಮಾಡುವುದೇನೋ ಸುಲಭವಲ್ಲ. ವೃತ್ತಿವಂತರೆಲ್ಲಾ ಏಕೀಭವಿಸಿ ಬಂದು ಕೇಳಿಕೊಂಡರೆ ಸರ್ಕಾರದವರು ಏಜಂಟರನ್ನು ನೇಮಿಸಬೇಕೆಂಬದಾಗಿ ರೂಲಸು ಇದೆ. ಇನಾಂದಾರರನೇಕರು ಒಟ್ಟಾಗಿ ಬಂದು ಗವರ್ನಮೆಂಟವರೇ ಎಲ್ಲಾ ಇನಾಂ ಗ್ರಾಮಗಳನ್ನೂ ವಹಿಸಿಕೊಂಡು ರಕ್ಷಿಸುವಂತೆ ಕೇಳಿಕೊಳ್ಳದಿದ್ದಾದರೆ ಸರ್ಕಾರದವರೂ ಏನಾದರೂ ಮಾಡಬಹುದು. ಒಬ್ಬಿಬ್ಬರು ವೃತ್ತಿವಂತರಾಗಲಿ, ಒಂದೆರಡು ಇನಾಂ ಗ್ರಾಮಗಳವರಾಗಲಿ ಕೇಳಿಕೊಂಡರೆ ಸಾರ್ವತ್ರಿಕವಾಗಿ ಏನೂ ಮಾಡಲಾಗುವುದಿಲ್ಲ.

ಪ್ರ.—ಇನಾಂ ಗ್ರಾಮಗಳಲ್ಲಿ ಗೋಕಾಯಿಗಳಿಗೆ ಗೋಮಾಳಗಳೇ ಅಭಾವವಾಗಿದೆ. ದನಗಳು ಮೇವಿಗೆ ಗತಿ ಇಲ್ಲದೆ ಕಷ್ಟಪಡುವವು. ಗೋಮಾಳಗಳನ್ನು ಪ್ರತಿ ಇನಾಂ ಗ್ರಾಮದಲ್ಲೂ ಬಿಡಿಸುವಂತೆ ಅಪ್ಪಣೆ ಆಗಬೇಕು.

ಉ.—ಈ ವಿಷಯವು ಮುಖ್ಯವಾದದ್ದು, ಬೇಗನೆ ಜವಾಬು ಕೊಡುತ್ತೇನೆ.

ಪ್ರ.—ಅಮೇರಿಕದಿಂದ ೧೫ ರೂ. ಗೆ ಒಂದರಂತೆ ಸರ್ಕಾರದವರು ತರಿಸಿದ ನೇಗಿಲುಗಳನ್ನು ತರಿಸಿ ರೈತರಿಗೆಲ್ಲಾ ಬಿಕರಿ ಮಾಡಬಾರದೇಕೆ.

ಉ.—ನೀವೇ ಕೋಲಾರಕ್ಕೆ ಬರೆದರೆ ೧೬—೧೭ ರೂಪಾಯಿಗೆ ಒಂದೊಂದು ನೇಗಿಲನ್ನು ತರಿಸಿಕೊಳ್ಳಬಹುದು. ಇದಕ್ಕೆ ಸರ್ಕಾರದವರೇಕೆ ಬರಬೇಕು?

ಪ್ರ.—ಓಟ್ಸ್ ಎಂಬ ಧಾನ್ಯವನ್ನು ನಮ್ಮ ದೇಶದಲ್ಲಿ ಬೆಳೆವುದಿಲ್ಲ. ಇದನ್ನು ಬೆಳೆದರೆ ಕುದುರೆಗಳಿಗೂ, ಎತ್ತುಗಳಿಗೂ ಒಳ್ಳೇ ಆಹಾರವು ಆಗುವುದು. ಮತ್ತು ಅದರ ವ್ಯಾಪಾರ ಹೆಚ್ಚಿ ರೈತರುಗಳಿಗೆ ತುಂಬಾ ಸಹಾಯವಾಗುತ್ತೆ. ಆದಕಾರಣ ಆ ಧಾನ್ಯವನ್ನು ಬೆಳೆಯುವ ಕ್ರಮ ಮುಂತಾದ್ದನ್ನು ಸರ್ಕಾರಿ ವ್ಯವಸಾಯ ಶಾಸ್ತ್ರಜ್ಞರ ಮೂಲಕ ರೈತರಿಗೆ ತಿಳಿಸಿಕೊಡಬೇಕು.

ಉ.—ಇದು ವರುಷಕ್ಕೆ ಎರಡು ಪೈರಾಗುವುದು. ರೈತರು ಉತ್ತರದೇಶದಲ್ಲಿರುವ ಕಾಶೀಪುರಕ್ಕೆ ಬರೆದು ಬೀಜದ ಕಾಳನ್ನು ತರಿಸಿಕೊಳ್ಳಬಹುದು. ರೈತರು ಬೆಳೆ ಮಾಡುವುದರಲ್ಲಿ ಅದು ಕೆಟ್ಟರೆ ಅಧಿಕಾರಿಗಳು ನೋಡಿ ತಿದ್ದಬಹುದು. ಇಂಥಾದ್ದಕ್ಕೆ ಸರ್ಕಾರದವರ ಸಹಾಯ ಅಗತ್ಯವೆಂದು ಕಾಣುವದಿಲ್ಲ.

## ಇಂಡಿಯಾ ದೇಶದ ವೃತ್ತಾಂತಗಳು.

ಪೂನೆಯಲ್ಲಿ ಈ ಸಲ ಪ್ಲೇಗ್ ಪ್ರಾರಂಭವಾಗಿದೆ. ಜನರು ದಿಕ್ಕುಗೆಟ್ಟು ಓಡುತ್ತಿದ್ದಾರೆ.

****

ಬರ್ಮಾ ದೇಶದಲ್ಲಿ ವರುಷೇ ವರುಷ ಮದ್ಯಪಾನವೂ, ಅಫೀಮಿನ ಅಭ್ಯಾಸವೂ ಹೆಚ್ಚುತ್ತಿದೆ ಎಂಬದಾಗಿ ಹೇಳುವರು. ಇದರಿಂದ ಬೇಗನೆ ದೇಶವು ಕ್ಷೀಣಗತಿಗೆ ಬಂದೀತೆಂಬುವುದಕ್ಕೆ ಸಂಶಯವಿಲ್ಲ.

****

ಬೊಂಬಾಯಿನಲ್ಲಿ ತಯಾರಾಗುವ ಪ್ಲೇಗ್ ಔಷಧಿಯ ಹಾಲನ್ನು ಕಳೆದ ವಾರ ಬೆಂಗಳೂರು, ಜಮ್ಮು, ಇಂಡೋರ್, ಎಲಿಚ್‌ಪುರ, ಹೈದರಾಬಾದ್ ಅಮರಾವತಿ, ಸ್ನೂರ್ ಎಂಬೀ ಊರುಗಳಿಗೆ ವಿಶೇಷವಾಗಿ ಕಳುಹಿಸಿರುತ್ತಾರೆ.

****

ಅಫ್ಘಾನಿಸ್ಥಾನಕ್ಕೆ ಸೇರಿದ ಕೀಲತೀ ಜಿಲ್‌ಜೈ ಎಂಬ ಕೋಟೆಯಲ್ಲಿ ಶೇಖರಮಾಡಿದ್ದ ಮದ್ದಿನ ಮನೆಗೆ ಬೆಂಕಿಬಿದ್ದು ಮಹಾ ಶಬ್ದದೊಡನೆ ಹಾರಿ, ೬೦ ಜನರನ್ನು ಕೊಂದುಹಾಕಿತು; ಕೋಟೆ ಕೊತ್ತಲಗಳು ಬಿದ್ದುಹೋದವು.

****

ಹೈದರಾಬಾದ್ ಸಂಸ್ಥಾನದ ಅಂಚೆ ಇಲಾಖೆಯನ್ನು ಕುಂಪನೀ ಪೋಸ್ಟ್ ಇಲಾಖೆಗೆ ಸೇರಿಸಿಕೊಳ್ಳಬೇಕೆಂದು ಚರ್ಚೆ ನಡೆಯುತ್ತಿತ್ತು. ನೈಜಾಮರವರು ತಮ್ಮ ಅಂಚೆಯನ್ನು ಕುಂಪನೀ ಇಲಾಖೆಗೆ ಸೇರಿಸುವ ವಿಷಯದಲ್ಲಿ ತಮಗೆ ಇಷ್ಟವಿಲ್ಲವೆಂದು ಹೇಳಿದಂತೆ ವರ್ತಮಾನವಿದೆ.

****

ಕಾಠಿವಾಡದಲ್ಲಿರುವ ಕುವ್ವಾರಿ ಬಳವಿಭಿಗಾರು ಎಂಬ ಮಹೈಶ್ವರ್ಯವಂತನು ಆನಕಲ್ಲಿಯಲ್ಲಿ ಸುಮಾರು ೧೦,೦೦೦ ರೂ. ಗಿಂತಲೂ ಹೆಚ್ಚು ಬೆಲೆ ಬಾಳುವ ಒಂದು ಭಾರೀ ಬಂಗಲೆಯನ್ನು ಚಂದ್ರಶೇಖರ ಶಾಸ್ತ್ರಿಯವರ ಬೋರ್ಡಿಂಗ್ ಸ್ಕೂಲಿಗೆ ಬಿಟ್ಟು ಕೊಟ್ಟಿರುತ್ತಾನೆ. ಆ ಪ್ರಾಂತ್ಯದ ಪ್ರಜೆಗಳೆಲ್ಲ ಆತನನ್ನು ಕೊಂಡಾಡುತ್ತಾರೆ.

****

ಮಿ|| ಗುಡ್‌ವರ್ಗ್ ಎಂಬೊಬ್ಬ ಚಿತ್ರಗಾರನು ಕಳೆದ ವಾರ ವಿಲಾಯಿತಿಯಿಂದ ಬೊಂಬಾಯಿಗೆ ಬಂದನು. ಇವನು ಹಿಂದುಸ್ಥಾನದ ಮುಖ್ಯ ನಗರಗಳಲ್ಲೂ ಕಾಡುಗಳಲ್ಲೂ ಬೆಟ್ಟ ಶಿಖರಗಳಲ್ಲೂ ಸಂಚಾರ ಮಾಡಿ, ಆಯಾ ಕಡೆಯ ಜನರ ಮುಖಭಾವ, ಆಕಾರ ಮುಂತಾದವುಗಳನ್ನು ಚಿತ್ರ ಬರೆದುಕೊಂಡು ಹೋಗುವುದಕ್ಕಾಗಿಯೇ ಬಂದಿರುತ್ತಾನೆ.

****

ಜೀವಸಹಿತ ಇರುವ ಇಲಿಯನ್ನು ಹಿಡಿದು ಪ್ಲೇಗ್ ರೋಗಿಗೆ ಬರುವ ಗಡ್ಡೆಯಮೇಲೆ ಸ್ವಲ್ಪ ಹೊತ್ತು ಬಿಟ್ಟದ್ದರೆ ರೋಗವು ಇಲಿಗೆ ಹತ್ತಿ ರೋಗಿಯು ವಾಸಿಯಾಗುವನೆಂಬದಾಗಿ ಒಬ್ಬ ವೈದ್ಯನೂ, ಕಾರ್ಬಾಲಿಕ್ ಆಸಿಡ್ ಎಂಬ ಔಷಧವನ್ನು ಹೆಚ್ಚಾಗಿ ರೋಗಿಗೆ ಕೊಡುತ್ತಾ ಬಂದರೆ ಪ್ಲೇಗ್ ನಿವಾರಣೆಯಾಗುವುದೆಂದು ಇನ್ನೊಬ್ಬ ವೈದ್ಯನೂ ತಿಳಿಸಿರುತ್ತಾರೆ.

****

ಮದರಾಸ್ ಪ್ರಾಂತ್ಯದಲ್ಲಿ ೧೩,೦೦೦ ಮೈಲಿ ಉದ್ದದಷ್ಟು ನಾಲೆಗಳಿರುತ್ತವೆ. ಕಳೆದ ವರುಷ ೧೦ ಲಕ್ಷ ರೂಪಾಯಿ ಖರ್ಚುಮಾಡಿ ೬೭ ಮೈಲಿ ಹೊಸನಾಲೆ ತೆಗೆಸಿದರು. ಇದುವರೆಗೆ ಈ ನಾಲೆಗಳಿಗೆ ಖರ್ಚಾಗಿರುವುದು ೯ ಕೋಟಿ ರೂಪಾಯಿ. ಖರ್ಚು ಜಾ ೬೩ ಲಕ್ಷ ರೂ. ಉತ್ಪತ್ತಿ ಆಗಿದೆ, ಅಂದರೆ ಮೂಲಧನಕ್ಕೆ ಶೇಕಡ ೭ರಂತೆ ಬಡ್ಡಿ ಉತ್ಪತ್ತಿ ಆಯಿತು.

****

ಬೆಂಗಾಳದಲ್ಲಿ ಕಳೆದ ವರುಷ ೩೭ ವ್ಯವಸಾಯದ ಬ್ಯಾಂಕುಗಳು ಏರ್ಪಾಡಾದುವು. ಈಗ ಒಟ್ಟು ೩೮ ಬ್ಯಾಂಕುಗಳಿವೆ. ಇವುಗಳಿಗೆ ಸರ್ಕಾರದವರು ೧೩,೫೮೦ ರೂ. ಸಾಲ ಕೊಟ್ಟಿದ್ದಾರೆ. ಈ ಬ್ಯಾಂಕುಗಳು ತೃಪ್ತಿಕರವಾದ ಸ್ಥಿತಿಯಲ್ಲಿವೆ ಎಂತಲೂ, ಅವರೂ ಇನ್ನೂ ಕೆಲವು ಕಾಲ ಅವುಗಳ ಫಲಾಫಲಗಳನ್ನು ಅಜಮಾಯಿಷಿ ಮಾಡಬೇಕಾಗಿದೆ ಎಂತಲೂ ಲೆಫ್ಟಿನೆಂಟ್ ಗವರ್ನರವರು ಅಭಿಪ್ರಾಯಪಡುತ್ತಾರೆ.

****

ಹೈದರಾಬಾದ್ ಸಂಸ್ಥಾನದಲ್ಲಿ ಪೇಷ್ಕಾರರಾಗಿಯೂ, ಮಂತ್ರಿಶ್ರೇಷ್ಠರಾಗಿಯೂ ಇರುವ ಮಹಾರಾಜಾ ಕೃಷ್ಣಪ್ರಸಾದ್ ಬಹದೂರ್ ಯವರಿಗೆ ದಿವಾನಗಿರಿ ಖಾಯಂ ಆಗಿ ೯ ತಿಂಗಳಾಗಿದ್ದಾಗ್ಯೂ ಅವರಿಗೆ ಪೇಷ್ಕಾರಿ ಸಂಬಳ ಒಂದೇ ತಿಂಗಳಿಗೆ ೬,೦೦೦ ರೂಪಾಯಿನಂತೆ ಪಾವತಿ ಆಗುತ್ತಿತ್ತು. ಈಗ ನೈಜಾಮರವರು ಅವರಿಗೆ ದಿವಾನಗಿರಿ ಸಂಬಳವೂ ತಿಂಗಳಿಗೆ ೧೦,೦೦೦ ರೂಪಾಯಿನಂತೆ ಸಲ್ಲಬೇಕೆಂದು ಮೊನ್ನೆ ತಾನೇ ಹುಕುಂ ಕೊಟ್ಟರು.

****

ವೈಸ್‌ರಾಯಿಯವರು ಮುಂದಿನ ತಿಂಗಳು ೧೬ಕ್ಕೆ ಕರಾಚಿಯಲ್ಲಿ ಹಾರ್ಡಿಂಜ್ ಎಂಬ ಜಹಜು ಹತ್ತಿ ಪರ್ಷಿಯಾ ಖಾರಿಯನ್ನು ತಲಪಿ, ೧೭ ರಿಂದ ಡಿಸೆಂಬರ್ ೭ರ ತನಕ ಆ ಪ್ರಾಂತ್ಯದಲ್ಲಿ ಸಂಚಾರ ಮಾಡಿಕೊಂಡು, ಡಿಸಂಬರ್ ೧೬ಕ್ಕೆ ಕಲ್ಕತ್ತಾ ಪಟ್ಟಣವನ್ನು ಬಂದು ಸೇರುವವರಾಗಿದ್ದಾರೆ. ಲಾರ್ಡ್ ಕರ್ಜನರವರು ಬಾಗ್ದಾದ್ ನಗರದಲ್ಲಿ (ಪ್ರಖ್ಯಾತಿ ಹೊಂದಿದ ಮಹಮದೀಯ ಕಾಲಿಫರ ರಾಜಧಾನಿ) ಒಂದು ವಿಶೇಷವಾದ ದರ್ಬಾರ್ ಮಾಡಿ, ಅಲ್ಲಿಗೆ ಸಕಲ ಸಾಮಂತ ರಾಜರನ್ನೂ, ಪ್ರಜೆಗಳ ಮುಖಂಡರನ್ನೂ ಬರಮಾಡಿಕೊಂಡು, ಇಂಗ್ಲಿಷ್ ರಾಜ್ಯಭಾರದ ಕ್ರಮಗಳನ್ನೂ ಅವರ ಉದ್ದೇಶವನ್ನೂ ಎಲ್ಲರಿಗೂ ವಿವರಿಸಿ ಹೇಳಿ, ಅವರ ಕೃತಜ್ಞತೆ, ಪ್ರೀತಿ, ಸಹಾಯಗಳನ್ನು ಗಟ್ಟಿಮಾಡಿಕೊಂಡು ಬರುತ್ತಾರೆಂದು ವರ್ತಮಾನವಿದೆ.

****

ಕಳೆದ ವರುಷ ಹಿಂದುಸ್ಥಾನದ ಟೆಲಿಗ್ರಾಫ್ ಇಲಾಖೆಯಲ್ಲಿ ಖರ್ಚು ಕಳೆದು ೩೩ ಲಕ್ಷ ರೂಪಾಯಿ ಸರ್ಕಾರಕ್ಕೆ ಲಾಭವುಂಟಾಯಿತು. ಸಿಲೋನ್ ದ್ವೀಪದಲ್ಲಿ ತಂತೀ ವರ್ತಮಾನಗಳಿಗೆ ಛಾರ್ಜನ್ನು ಬಹಳ ಸುಲಭವಾಗಿಕೊಟ್ಟದ್ದರೂ ಪ್ರತಿವರುಷವೂ ಹಿಂದಿನ ವರುಷಕ್ಕಿಂತ ಉತ್ಪತ್ತಿ ಹೆಚ್ಚುತ್ತಿದೆ. ಹ್ಯಾಗಂದರೆ—ಅರ್ಜಂಟ್ ಆಕಾರದ ತಂತೀ ವರ್ತಮಾನಕ್ಕೆ ಹಿಂದುಸ್ಥಾನದಲ್ಲಿ ೨ ರೂ. ಛಾರ್ಜು ಕೊಡಬೇಕು. ಸಿಲೋನಿನಲ್ಲಿ ೧೨ ಆಣೆ ಮಾತ್ರ ಇಟ್ಟಿದ್ದಾರೆ. ಮತ್ತು ಆರ್ಡಿನೆರಿ ಎಂಬ ಸಾಧಾರಣ ತಂತೀ ವರ್ತಮಾನಕ್ಕೆ ಹಿಂದುಸ್ಥಾನದಲ್ಲಿ ೧ರೂ. ಛಾರ್ಜು ಕೊಡಬೇಕು; ಸಿಲೋನಿನಲ್ಲಿ ೬ ಆಣೆ ಮಾತ್ರ ತೆಗೆದುಕೊಳ್ಳುವರು. ಈ ಭಾಗದಲ್ಲಿ ಹಿಂದುಸ್ಥಾನಕ್ಕಿಂತಲೂ ಸಿಲೋನ್ ದ್ವೀಪದಲ್ಲಿ ಜನರಿಗಿರುವ ಸೌಲಭ್ಯವೇ ಹೆಚ್ಚಾಗಿದೆ.

****

ಕಾಲ್ಯದಲ್ಲಿ ಒಬ್ಬ ಹಿಂದೂ ಸ್ತ್ರೀಯು ತನ್ನ ಗಂಡನಿಗೆ ಬಂದ ರೋಗ ನಿವಾರಣೆಯಾಗಬೇಕೆಂದು ನಾನಾ ಪ್ರಯತ್ನಗಳನ್ನು ಮಾಡಿದಳು, ಔಷಧ ಕೊಡಿಸಿದಳು; ಪೂಜೆ ಹರಕೆಗಳನ್ನು ಹಾಕಿಸಿದಳು. ಆದರೂ ಪತಿಯು ಬದುಕದೆ ಕಳೆದ ವಾರ ಕಾಲವಾದನು. ಆ ಕೂಡಲೆ ಅವಳು ಪತಿವಿಯೋಗ ದುಃಖವನ್ನು ತಡೆಯಲಾರದೆ ಬಾವಿಯಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡಳು. ಸತಿಪತಿಯರಿಬ್ಬರನ್ನೂ ಒಂದೇ ಚಿತಿಯಮೇಲಿಟ್ಟು ದಹನಮಾಡಿದರು. ಇದನ್ನು ನೋಡಿ ಅಲ್ಲಿನ ಪತ್ರಿಕೆಯು ಸಂತೋಷಪಟ್ಟು ಹೆಂಗಸು ತನ್ನ ಗಂಡನ ಗುಲಾಮಗಿತ್ತಿ ಎಂತಲೂ ಆತನ ಕಾಲಾನಂತರ ಅವಳು ಬದುಕಿರಬಾರದೆಂತಲೂ ಸೂಚನೆ ಕೊಡುವಂತೆ ಬರೆಯುತ್ತಿದೆ. ಪತ್ರಿಕೆಗಳು ಹೀಗೆ ಹೇಳುವುದು ದೇಶಾಭಿಮಾನಿಗಳಲ್ಲಿ ತುಂಬಾ ವಿವಾದವನ್ನುಂಟುಮಾಡದಿರಲಾರದು.

****

ಬೊಂಬಾಯಿನಲ್ಲಿ ದೊಡ್ಡ ವ್ಯಾಪಾರಸ್ಥರೆಂದು ಪ್ರಸಿದ್ಧಿಹೊಂದಿದ ವಿಶ್ರಾಮ ಇಬ್ರಾಹಿಂ ಎಂಬ ದೇಶೀಯ ಕಂಪನಿಯು ಕಳೆದ ವಾರ ದಿವಾಳಿ ಎದ್ದಿತು. ಇವರು ತಮ್ಮ ವ್ಯಾಪಾರದ ಅಂಗಡಿಗಳನ್ನು ಕಲ್ಕತ್ತೆ, ಚಿತ್ತಗೊಂಡ, ಕಬಾಳ್, ರಂಗೂನ್, ಮೌಲ್ಮೇನ್, ಮಾರಿಷಸ್ ಎಂಬೀ ಊರುಗಳಲ್ಲಿ ಇಟ್ಟುಕೊಂಡು, ನಾನಾ ಸರಕುಗಳನ್ನು ಲಂಡನ್, ನ್ಯೂಯಾರ್ಕ್, ಜಾಂಜೆಬಾರ್, ಜಿಡ್ಡಾ, ಏಡನ್, ಕರಾಚಿ ಎಂಬೀ ಸ್ಥಳಗಳಿಗೆ ಕಳುಹಿಸಿಕೊಟ್ಟು ಬಿಕರಿ ಮಾಡಿಸಿ, ಆಯಾ ಕಡೆಗಳಿಂದ ಸಾಮಾನ್ ತರಿಸಿಕೊಳ್ಳುತ್ತಿದ್ದರು. ಈ ಕಂಪನಿಗೆ ೮೮ ಲಕ್ಷ ರೂಪಾಯಿ ಸಾಲವಾಗಿದೆ ಎಂತಲೂ, ಕಂಪನಿಗೆ ಬರತಕ್ಕದ್ದು ೧ ಲಕ್ಷ ರೂಪಾಯಿ ಬಾಕಿ ಇದೆ ಎಂತಲೂ ಪ್ರಕಟವಾಯಿತು. ಇಂಥಾ ದೊಡ್ಡ ದೇಶೀಯ ಕಂಪನಿಯು ದಿವಾಳಿಯಾದುದಕ್ಕಾಗಿ ದೇಶಾಭಿಮಾನಿಗಳೆಲ್ಲರೂ ವಿಷಾದಿಸಬೇಕಾಗಿದೆ.

****

ಕಾಶೀ ಪಟ್ಟಣದಲ್ಲಿ ಮಿಸೆಸ್ ಬೆಸಂಟ್ ಎಂಬ ಇಂಗ್ಲಿಷ್ ಸ್ತ್ರೀಯು ಹಿಂದೂ ಬಾಲಕರಿಗೆ ಸಂಸ್ಕೃತ ಇಂಗ್ಲಿಷ್ ವಿದ್ಯೆಗಳನ್ನು ಕಲಿಸುವುದಕ್ಕೆ ಒಂದು ದೊಡ್ಡ ವಿದ್ಯಾಶಾಲೆಯನ್ನು ಸ್ಥಾಪಿಸಿರುವುದೂ, ಅದು ದಿನೇದಿನೇ ವೃದ್ಧಿ ಹೊಂದುತ್ತಿರುವುದೂ, ಅದರ ಮೂಲಧನವು ಕೆಲವು ಲಕ್ಷ ರೂಪಾಯಿಗಳೆಂಬುದೂ ನಮ್ಮ ವಾಚಕರಿಗೆ ತಿಳಿದಿದೆಯಷ್ಟೆ. ಈಗ ಅದೇ ಸ್ತ್ರೀಯು ಆ ಪಟ್ಟಣದಲ್ಲೇ ಹಿಂದೂ ಬಾಲಿಕೆಯರಿಗಾಗಿ ಒಂದು ದೊಡ್ಡ ವಿದ್ಯಾಶಾಲೆಯನ್ನು ಸ್ಥಾಪಿಸಬೇಕೆಂದು ಕುತೂಹಲ ಪಡುತ್ತಿದ್ದಾಳೆ. ಈ ವಿದ್ಯಾಶಾಲೆಗೆ ಕಟ್ಟಡವೂ, ಖಾಲಿ ನಿವೇಶನವೂ, ಅದರ ಮೂಲಧನಕ್ಕೆ ೧೦ ಲಕ್ಷ ರೂಪಾಯಿಗಳೂ ಬೇಕಾಗಿವೆ ಎಂತಲೂ, ಈ ಪೈಕಿ ಆಗಲೇ ಆಕೆ ಅರೆವಾಸಿ ದ್ರವ್ಯವನ್ನು ಕೂಡಿಸಿರುತ್ತಾಳೆಂತಲೂ, ಬಾಕಿ ಹಣವನ್ನು ದೇಶದೇಶಗಳಲ್ಲಿ ಚಂದಾ ಎತ್ತಿ ಕೂಡಿಸುವವಳಾಗಿದ್ದಾಳೆಂತಲೂ ತಿಳಿದುಬಂದಿದೆ.

ಮದರಾಸ್ ಪಟ್ಟಣದ ಕ್ರಿಶ್ಚಿಯನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುವ ಬ್ರಾಹ್ಮಣ, ಕ್ರೈಸ್ತ ಹುಡುಗರಿಗೆ ಅನುಕೂಲವಾದ ವಿದ್ಯಾರ್ಥಿ ನಿಲಯಗಳನ್ನು ಪ್ರಸಿದ್ಧರಾದ ಡಾಕ್ಟರ್ ಮಿಲ್ಲರ್ ಯವರು ಕಟ್ಟಿಸಿಕೊಟ್ಟಿದ್ದಾರಷ್ಟೆ. ಈಗ ಅವುಗಳ ಸಮೀಪದಲ್ಲೇ ಬ್ರಾಹ್ಮಣೇತರ ವಿದ್ಯಾರ್ಥಿಗಳಿಗಾಗಿ ೬೦,೦೦೦ ರೂಪಾಯಿ ಮುಟ್ಟಿಸಿ ಹೊಸ ನಿಲಯವನ್ನು ಕಟ್ಟಿಸಿದರು. ಇದರಲ್ಲಿ ೬೦ ಮಂದಿ ಹುಡುಗರು ಇದ್ದು ವ್ಯಾಸಂಗಮಾಡುವುದಕ್ಕೆ ಅನುಕೂಲವಾಗಿದೆ. ಅದರ ಮೇಲೆ ೬೦ ಅಡಿ ಎತ್ತರದ ಒಂದು ಗೋಪುರವನ್ನು ಕಟ್ಟಿಸಿದ್ದಾರೆ. ಕಳೆದ ಸೋಮವಾರ ಈ ಕಟ್ಟಡವನ್ನು ಪ್ರತಿಷ್ಠೆಮಾಡಿ, ಡಾಕ್ಟರ್ ಮಿಲರ್ ಯವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು. ದಕ್ಷಿಣ ದೇಶದಲ್ಲಿ ಹಿಂದುಗಳ ವಿದ್ಯಾಭಿವೃದ್ಧಿಗೆ ಇವರಷ್ಟು ಸಾಹಸಪಟ್ಟು ಸಹಾಯಮಾಡಿರತಕ್ಕವರು ಬೇರೆ ಯಾರೂ ಇಲ್ಲವೇ ಇಲ್ಲ. ಅವರು ತಮ್ಮ ಸರ್ವಸ್ವವನ್ನೂ ವಿದ್ಯಾರ್ಥಿಗಳ ಪ್ರಯೋಜನಾರ್ಥವಾಗಿ ವಿನಿಯೋಗಿಸಿರುವರು.

****

ಹಿಂದುಸ್ಥಾನದಲ್ಲಿರುವ ಮಕ್ಕಳನ್ನು ಯಾವತರದ ಹಿಂಸೆಗೂ ಯಾರೂ ಗುರಿಮಾಡದಂತೆ ನೋಡಿಕೊಳ್ಳಬೇಕೆಂತಲೂ, ಹಿಂಸೆಪಡಿಸಿದವರು ಇಂಥವರೆಂದು ಗೊತ್ತಾದ ಕೂಡಲೆ ಅವರನ್ನು ಹಿಡಿದು ಸರ್ಕಾರದಿಂದ ಅವರಿಗೆ ಶಿಕ್ಷೆಯಾಗುವಂತೆ ಮಾಡುವುದಕ್ಕೂ ಕಲ್ಕತ್ತೆಯಲ್ಲಿ ಒಂದು ಸಂಘ ಏರ್ಪಾಡಾಗಿದೆಯಷ್ಟೆ. ಈ ಸಂಘದವರೂ ಬೊಂಬಾಯಿ ಅಧಿಪತ್ಯದ ಮಿಷನ್ ಸಂಘದವರೂ ಸೇರಿ ಇಂಡಿಯಾ ಗವರ್ನಮೆಂಟಿಗೆ ಒಂದು ವಿಜ್ಞಾಪನೆಯನ್ನು ಬರೆದುಕೊಂಡಿದ್ದಾರೆ. ಹಿಂದುಸ್ಥಾನದೊಳಗೆ ದುಷ್ಟಶೀಲರಾದ ಬಹುಮಂದಿ ಸ್ತ್ರೀಯರು ಅನೇಕ ಹೆಣ್ಣುಮಕ್ಕಳನ್ನು ನಾನಾ ಉಪಾಯಗಳಿಂದ ತಮ್ಮ ಪೋಷಣೆಗೆ ತೆಗೆದುಕೊಂಡು, ಅವರನ್ನು ಸಾಕಿ ಸಲಹಿ ದೇಹವಿಕ್ರಯವೇ ಮೊದಲಾದ ಹೀನವೃತ್ತಿಗಳನ್ನು ಅವರಿಗೆ ಕಲಿಸಿ ಕೆಡಿಸಿ, ದುಃಖಕ್ಕೂ ಕಷ್ಟಕ್ಕೂ ಈಡುಮಾಡುವರು. ಇಂಥಾ ಹುಡುಗಿಯರನ್ನು ಅವರ ಪೋಷಣೆಯಿಂದ ಬಿಡಿಸಿ ಕೊಡಬೇಕೆಂದು ದಾವಾ ಮಾಡಿದರೆ ಜಡ್ಜಿಗಳು ಬಿಡಿಸಿಕೊಡುವಂತೆ ಹುಕುಂ ದಯಪಾಲಿಸಬೇಕೆಂಬುದೇ ಈ ವಿಜ್ಞಾಪನೆಯ ಸಾರಾಂಶ. ಇಂಡಿಯಾ ಗವರ್ನಮೆಂಟಿನವರು ಈ ಭಾಗದಲ್ಲಿ ಯಾವತರಹ ರಿಯಾಯತಿ ತೋರಿಸಬಹುದೆಂದು ಎಲ್ಲಾ ಸರ್ಕಾರಗಳವರನ್ನೂ ಅಭಿಪ್ರಾಯ ಕೇಳಿದಾಗ, ಈ ಅಧಿಪತ್ಯಗಳ ಅಧಿಕಾರಿಗಳು ತಮ್ಮತಮ್ಮ ಸರಹದ್ದಿಗೆ ಸೇರಿರುವ ಹೈಕೋರ್ಟುಗಳು, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮುಂತಾದವರಿಂದ ಅವರವರ ಅಭಿಪ್ರಾಯಗಳನ್ನು ತರಿಸಿಕೊಂಡು, ಅದನ್ನೆಲ್ಲಾ ಕ್ರೋಢೀಕರಿಸಿ ಇಂಡಿಯಾ ಗವರ್ನಮೆಂಟಿಗೆ ತಿಳಿಸುವವರಾಗಿದ್ದಾರೆ.

## ತಾಲ್ಲೋಕು ವರ್ತಮಾನಗಳು.

ಚನ್ನಪಟ್ಟ:—ಮ್ಯುನಿಸಿಪಾಲಿಟಿಯು ಪುರಾಭಿವೃದ್ಧಿಗೂ ಪ್ರಜೆಗಳ ಸೌಕರ್ಯಕ್ಕಾಗಿಯೂ ಏರ್ಪಾಡಾದ ಇಲಾಖೆಯಾಗಿದೆ. ಆದರಂತೆ ಎಲ್ಲಾ ಕಡೆಯಲ್ಲೂ ಸಮರ್ಪಕವಾಗಿ ಕೆಲಸ ನಡೆಸುತ್ತಲೂ, ರೂಲ್ಸ್‌ಮೇರೆ ೫ ವರುಷ ಟರ್ಮ್ ತೀರಿದ ಬಳಿಕ ಲಾಯಖಾದ ಹೊಸ ಮೆಂಬರುಗಳನ್ನು ಚುನಾಯಿಸುವ ಏರ್ಪಾಡು ಇರುತ್ತೆ. ಈ ಚನ್ನಪಟ್ಟದಲ್ಲಿ ಮಾತ್ರ ಸುಮಾರು ೨೦ ವರುಷದಲ್ಲಿ ಮ್ಯುನಿಸಿಪಾಲಿಟಿ ಏರ್ಪಾಡಾದಾಗ್ಯೂ ಚುನಾಯಿಸಲ್ಪಟ್ಟ ಮೆಂಬರುಗಳೇ ಇರುತ್ತಾರೆ. ಯಾತಕ್ಕೋಸ್ಕರ ಬದಲಾಯಿಸಲಿಲ್ಲವೋ? ಈಗಲಾದರೂ ಅಧಿಕಾರಿಗಳು ಮನಸ್ಸಿಗೆ ತಂದು, ಪ್ರಜಾಹಿತಚಿಂತಕರಾಗಿಯೂ ಸುಗುಣವಂತರಾಗಿಯೂ ಇರುವಂಥಾ ಹೊಸ ಮೆಂಬರುಗಳನ್ನು ಚುನಾಯಿಸುವದರ ಮೂಲಕ ಇಲ್ಲಿನ ಪ್ರಜೆಗಳಿಗೆ ಅನುಕೂಲವಾದೀತೆನ್ನುವದರಲ್ಲಿ ಸಂಶಯವಿಲ್ಲ.

ದೇವನಹಳ್ಳಿ:—ಈ ಗ್ರಾಮದಲ್ಲಿ ಮಳೆ ಬಹಳ ವಿಶೇಷವಾಗಿ ಸುರಿದದ್ದರಿಂದ ಮನೆಗಳೆಲ್ಲಾ ನಿರ್ಮೂಲವಾದವು. ಬಡಬಗ್ಗರ ಗೋಳಾಟವು ಹೇಳಲಸಾಧ್ಯವಾಗಿರುತ್ತೆ. ಇಲ್ಲಿ ಪೈರುಗಳು ಬಹಳ ಮನಸ್ಸಿಗೆ ಆನಂದವನ್ನುಂಟುಮಾಡುತ್ತಿದ್ದರೂ ಈಗ ಪ್ರಸ್ತುತವಾಗಿ ಬಂದ ಪ್ಲೇಗ್ ಮಾರಿಯು ದೆಸೆಯಿಂದ ೩೦೦—೩೫೦ ರ ವರೆಗೂ ಹೋಗಿರುವವಲ್ಲದೆ ದಿನ ದಿನಕ್ಕೂ ಹೆಚ್ಚುತ್ತಲೇ ಇದೆ. ಇಂಥಾದ್ದರಲ್ಲಿ ಈ ಟವನ್ನಿನಲ್ಲಿ ಮಾ|| ರಾ|| ನಂದಿಗಿರಿ ದೀಕ್ಷಿತರೆಂಬ ನೇಟಿವ್ ವೈದ್ಯರು ಅನೇಕ ಬಡಬಗ್ಗರಿಗೆ ಧರ್ಮಾರ್ಥವಾಗಿ ಸ್ವಂತ ಖರ್ಚಿನಿಂದ ಔಷಧಗಳು ತಯಾರುಮಾಡಿ ಕೊಡುತ್ತಿರುವದಲ್ಲದೆ ಈ ಪ್ಲೇಗ್ ರೋಗಿಗಳು ಇರತಕ್ಕ ಮನೆಗಳಿಗೂ ಗುಡಿಸಲುಗಳಿಗೂ ಅಹೋರಾತ್ರಿಗಳಲ್ಲಿಯೂ ತಿರುಗಿ ಸರಿಯಾದ ಇಲಾಜಿನಿಂದ ೨೫—೩೦ ಜನಗಳ ವರಿಗೂ ಗುಣಪಡಿಸಿರುತ್ತಾರೆ. ಇವರು ಮಾಡಿದ ಸಾಹಸಕ್ಕೆ ಸಮಸ್ತ ಪ್ರಜೆಗಳೂ ರೋಗಿಗಳೂ ಸಹಾ ಕೊಂಡಾಡುತ್ತಾರೆ.

ತರೀಕೆರೆ:—ಇಲ್ಲಿ ಪ್ಲೇಗ್ ಪ್ರಾರಂಭವಾಗಿ ಸುಮಾರು ಒಂದು ತಿಂಗಳಾಯಿತು. ಜನರನ್ನು ಊರು ಬಿಡಿಸಿ ಕ್ಯಾಂಪುಗಳಲ್ಲಿ ವಾಸ ಮಾಡುವ ಹಾಗೆ ಇಲ್ಲಿನ ಹೊಸ ಅಮಲ್ದಾರರು, ಹಾಸ್ಪಿಟಲ್ ಅಸಿಸ್ಟೆಂಟರು, ಪೊಲೀಸ್ ಇನ್ಸ್‌ಪೆಕ್ಟರು ಬಹಳ ಮುತುವರ್ಜಿಯಿಂದ ಮುಕ್ಕಾಲು ಪಾಲು ಜನರನ್ನು ಹೊರಡಿಸಿದರು. ರೋಗವು ಸ್ವಲ್ಪ ಉಪಶಮನಕ್ಕೆ ಬಂದಿತ್ತು. ಆದರೆ ತಿರುಗಿ ಊರಲ್ಲಿಯೂ, ಕ್ಯಾಂಪುಗಳಲ್ಲಿಯೂ ರೋಗವು ಬಹಳವಾಗಿ ಹರಡಿಕೊಂಡು ಜನರಲ್ಲಿ ಬಹಳ ಭೀತಿಯೂ ಗಲಿಬಿಲಿಯೂ ಉಂಟುಮಾಡಿದೆ. ಹವಾ ಅಷ್ಟು ಚನ್ನಾಗಿಲ್ಲ. ಯಾವಾಗಲೂ ಮೋಡ ಮುಚ್ಚಿಕೊಂಡಿದೆ. ಮಳೆ ೯ ದಿನದಿಂದ ಬಹಳವಾಗಿದೆ. ಸೂರ್ಯನನ್ನು ಕಾಣುವದು ಕಷ್ಟ. ಇದುವರಿವಿಗೂ ಈ ರೋಗದ ಬಾಯಿಗೆ ತುತ್ತಾದವರು ೩೫ ಮಂದಿ. ವೈಶ್ಯರ ಒಬ್ಬರ ಮನೆಯಲ್ಲಿ ಮಾತ್ರ ೪ ಮಂದಿ ಸತ್ತರು. ಕಡೂರಲ್ಲಿಯೂ ಈಗ ಹರಡಿದೆ. ಮಿಷನ್ ಸ್ಕೂಲಿನಲ್ಲಿ ಬಾಲಕಿಯರು

ಇಲ್ಲದ್ದರಿಂದ ಮುಚ್ಚಲ್ಪಟ್ಟಿತು. ಬಾಲಕರ ಸರ್ಕಾರಿ ಸ್ಕೂಲಿನಲ್ಲಿ ೨–೩ ಇಲಿಗಳು ಸತ್ತುಹೋಯಿತು. ಅಸ್ಪಿಟಲ್ ಅಸಿಸ್ಟೆಂಟರು ಇದನ್ನು ಅಧಿಸೂಚಿಸಿ ಪಟ್ಟಣ ಸರ್ಕಾರಕ್ಕೆ ಸ್ಕೂಲ್ ಮುಚ್ಚಬೇಕೆಂದು ತಿಳಿಯಪಡಿಸಿದ್ದಾರೆ. ಭಗವಂತನು ಬೇಗನೆ ಈ ರೋಗವನ್ನು ಉಪಶಮನಕ್ಕೆ ತಂದು ಜನರಿಗೆ ಸಂತೋಷವನ್ನುಂಟುಮಾಡಬೇಕೆಂದು ಪ್ರಾರ್ಥಿಸುತ್ತೇವೆ.—ಇಲ್ಲಿನ ಮುಸಲ್ಮಾನರ ಚಿಕ್ಕ ಮೊಹಲ್ಲಾದ ಹತ್ತಿರ ಒಂದು ಹಾಳು ಭಾವಿ ಇದೆ. ಅದನ್ನು ಸರಿಯಾಗಿ ಕಟ್ಟದೆ ಹಾಗೆಯೇ ಬಿಟ್ಟಿರುತ್ತಾರೆ. ಅನೇಕ ಜಾನುವಾರುಗಳು ರಾತ್ರಿ ಕಾಲದಲ್ಲಿ ಬಿದ್ದು ಸಾಯುತ್ತವೆ. ಆದ್ದರಿಂದ ಮ್ಯುನಿಸಿಪಾಲಿಟಿಯವರು ಈ ಸಂಗತಿಯನ್ನು ವಿಚಾರಕ್ಕೆ ತಂದು, ಬೇಗನೆ ಭಾವಿಯನ್ನು ಕಟ್ಟಿಸಿ, ಜಾನುವಾರುಗಳಿಗೆ ಮಾತ್ರವೇ ಅಲ್ಲ ಎಲ್ಲಾದಕ್ಕೂ ಕ್ಷೇಮ ಉಂಟುಮಾಡುವರೆಂದು ನಂಬುತ್ತೇವೆ.

ತಿಪ್ಟೂರು.—ಕೆಲವು ದಿನಗಳ ಕೆಳಗೆ ಪೊಲೀಸ್ ಇನ್ಸ್ಪೆಕ್ಟರ್ ದೊರೆಸ್ವಾಮಯ್ಯಂಗಾರ್ರವರು ಬಾಣಸಂದ್ರಕ್ಕೆ ಸರ್ಕೀಟು ಹೋಗಿರಲು ಕಿಬ್ಬನಹಳ್ಳಿ ಸ್ಟೇಷನ್ ದಫೇದಾರ್ ಲಕ್ಕಪ್ಪನು ಬಾಣಸಂದ್ರದ ತಂಗೇಗೌಡನಿಗೆ ಕೊಡಬೇಕಾಗಿದ್ದ ಬಾಕಿ ೧೫೫ ರೂಪಾಯಿಗಳನ್ನು ಕಾನ್ಸ್ಟೆಬಲ್ ಅಬ್ದುಲ್‌ರಹಿಮಾನ್ ಎಂಬವನ ಕೈಯಲ್ಲಿ ಕಳುಹಿಸಿದ್ದನು. ಇನ್ಸ್ಪೆಕ್ಟರು ಸದರಿ ರೂಪಾಯಿಗಳನ್ನು ಪರೀಕ್ಷಿಸುವಲ್ಲಿ ಅವುಗಳೊಳಗೆ ೬ ಖೋಟಾ ನಾಣ್ಯಗಳು ಸಿಕ್ಕಿದವು. ಕೂಡಲೆ ಬಹಿರಂಗ ಮಾಡದೆ ಛದ್ಮವೇಷದಿಂದ ಕಿಬ್ಬನಹಳ್ಳಿಗೆ ಹೋಗಿ ವಿಚಾರಿಸುವಲ್ಲಿ ಉಚ್ಚಪ್ಪ ಮತ್ತು ಕಾನ್ಸ್ಟೆಬಲ್ ಸೈಡ್ ಮಹಮದ್ ಇವರುಗಳಲ್ಲಿಯೂ ನಾಲ್ಕು ಖೋಟಾ ನಾಣ್ಯ ಸಿಕ್ಕಿದ್ದಲ್ಲದೆ ದಫೇದಾರ್ ಲಕ್ಕಪ್ಪನ ಮೂಲಕ ತಯಾರ್ ಮತ್ತು ಚಲಾವಣೆ ಎಂಬುದು ತಿಳಿಯಿತು. ಕಡಪ ಜಿಲ್ಲಾ ರಾಯಲ್ಚೇಟ್ ತಾಲ್ಲೂಕು ಕಾಲುವೆಂಗ್ಲ ಗ್ರಾಮದಿಂದ ಬಂದಿರುವ ರುಸ್ತುಂಖಾನ್ ಉರಫ್ ಪೀರ್‌ಖಾನ್ ತಯಾರ್ಮಾಡಿದನೆಂಬುದು ಸಹಾ ಪತ್ತೆಯಾಯಿತು. ಪೊಲೀಸ್ ಸೂಪರಿಂಟೆಂಡೆಂಟರೂ, ಹೆಡ್‌ಕ್ವಾರ್ಟರ್ ಇನ್ಸ್ಪೆಕ್ಟರೂ ಅಮಲ್ದಾರರೂ ಸಂಗತಿಗಳನ್ನೆಲ್ಲಾ ಪರಾಂಬರಿಸಿ, ಉಳಿದ ತನಿಖೆ ಬಗ್ಗೆ ರುಸ್ತುಂಖಾನ್ ಸಾಬನನ್ನು ತಿಪ್ಟೂರ್ ಟವರ್ ದಫೇದಾರ್ ನರಸೋಜಿ ವಶಕ್ಕೆ ಒಪ್ಪಿಸಲು ಹೊರಟ್ಟ. ನಾಣ್ಯ ತಯಾರಿ ಯಂತ್ರದ ವಿವರವೇನೆಂದರೆ—ಬೇಟೆ ಕಲ್ಲಿನ ಪುಡಿ ಕಿಟ್ಟದ ಘಟಗಳನ್ನು ಬೆಲ್ಲದ ನೀರಿನಲ್ಲಿ ಕಲಸಿ ಅಚ್ಚು ತಯಾರ್ಮಾಡಿ, ಗವರ್ನಮೆಂಟ್ ಒಂದು ರೂಪಾಯಿಯನ್ನು ಅದಕ್ಕೆ ಒತ್ತುತ್ತ ಬೇರೆ ಕರಗಿಸಿದ ದ್ರಾವಕಗಳನ್ನು ಅದರಲ್ಲಿ ಹೊಯ್ದು ಬಿಟ್ಟರೆ ಹೊರಗೆ ಬರತಕ್ಕದ್ದು ಖೋಟಾ ನಾಣ್ಯವೇ ಎಂದು ಗೊತ್ತಾಯಿತು. ನಮ್ಮ ಅಮಲ್ದಾರರು ಆದಿಮಧ್ಯ ಬಗ್ಗೆ ಕೆಲವು ನ್ಯಾಯಮಾಡಿಸಿ ಮ್ಯಾಜಿಸ್ಟ್ರೇಟ್ ಮಾಡಿಕೊಂಡರಂತೆ. ಡಿಸ್ಟ್ರಿಕ್ಟಿನಲ್ಲಿ ವಿಚಾರಣೆಯಾಗುವದರ ಪರಿಣಾಮವನ್ನು ಮುಂದೆ ನೋಡಬೇಕು. ಸದ್ಯಕ್ಕೆ [illegible] ಉತ್ತಮ ಸ್ಥಿತಿಯೊಳಗೂ ಇದಾರೆಂದು ತಿಳಿಯುತ್ತದೆ.—ಈ ದಿನ ಪಟ್ಟಣದ ವಿಷಯಗಳೂ ಪೊಲೀಸ್ ಸೂಪರಿಂಟೆಂಡೆಂಟರೂ ಪರಿಶೀಲಿಸಿ, ಊರಿನ ಕ್ಷೇಮ ಲಾಭಗಳನ್ನು ಪರಾಂಬರಿಸಿದರು.—ಕೆಲವು ದಿನಗಳ ಕೆಳಗೆ ತಡಸೂರು ಬೆಸರ ಕರೇ ಹನುಮನು ೩೧ ಬೆಂಗಿನ ಕಾಯಿ ಕದ್ದನೆಂದು ದಫೇದಾರ್ ನರಸೋಜಿಯು ಮುತುವರ್ಜಿ ವಿಚಾರದಿಂದ ತಪ್ಪು ಸ್ಥಾಪಿತವಾಗಿ ೨೦ ರೂ ಜುಲ್ಮಾನೆಯಾಯಿತೆಂದು ತಿಳಿಯಿತು.

ಚಿಕ್ಕಮಗಳೂರು:—ಹವ ಬದಲಾಯಿಸುತ್ತಾ ಹಿಮಕಾಲ ಸುರುವಾಗಲು ಪ್ರಾರಂಭಿಸುತ್ತಿರುವದರಿಂದ ಜನರ ಕಾಯಿಲೆಯೂ ಸ್ವಲ್ಪ ಹೆಚ್ಚುತ್ತಿದೆ. ಈ ಪಟ್ಟಣದ ಸುತ್ತುಮುತ್ತಲೂ ಪ್ಲೇಗ್ ಬಾಧೆಯೂ ಭಯವೂ ಏನೂ ಇರುವದಿಲ್ಲವು. ಈ ವರ್ಷದಲ್ಲಿ ಮುಕ್ಕಾಲು ಪೈರುಗಳು ಮುಕ್ತಾಯವಾದವು. ನೀರಿನ ಸರಬರಾಯಿ ಸಾಧಾರಣವಾಗಿದೆ. ಆದರೆ ಪಟ್ಟಣದ ಗಲೀಜು ಮಾತ್ರ ಅಭಿವೃದ್ಧಿಯಾಗುತ್ತಿದೆ. ಪೋಸ್ಟ್‌ಮಾಸ್ಟರಿಗೆ ಇಬ್ರಾಫೆ ಸಂಬಳದ ಮೇಲೆ ಮಂಗಳೂರಿಗೆ ವರ್ಗವಾಯಿತು.—ಕಳೆದ ೨೧ ನೆ ಭಾನುವಾರ ಸಾಯಂಕಾಲ ವೆಸ್ಲಿಯನ್ ದೇವಾಲಯದಲ್ಲಿ ಘನ ನ್ಯಾಯ ಬಾಧ್ಯಯುವರು ಕನ್ನಡ ಕ್ರೈಸ್ತರಿಗೋಸ್ಕರ ತುಂಬಾ ಅನುಕೂಲವಾದ ಉಪನ್ಯಾಸವನ್ನೂ ಆರಾಧನೆಯನ್ನೂ ನಡಿಸಿದರು. ೨೨ ನೇ ಗುರುವಾರ ಬೆಳಿಗ್ಗೆ ೮ ಗಂಟೆಯಲ್ಲಿ ಮಿಷನ್ ಮೇನ್ ಸ್ಕೂಲಲ್ಲಿ ಒಂದು ಸಭೆಯು ನೆರೆದು ಬಂತು. ಅದರಲ್ಲಿ ಘನ ನ್ಯಾಯ ಧೊರೆಸಾನಿಯವರು ಅಗ್ರಾಸನವನ್ನಲಂಕರಿಸಿದ್ದರು. ಭಗವತ್ಪ್ರಾರ್ಥನೆಯೂ ನಂತರ ಮಿಷನ್ ಸ್ಕೂಲ್‌ಗಳ ರಿಪೋರ್ಟ್ ಓದಲ್ಪಟ್ಟಿತು. ತರುವಾಯ ನಾರ್ಮಲ್ ಮತ್ತು ಬ್ರ್ಯಾಂಚ್ ಸ್ಕೂಲುಗಳ ವಿದ್ಯಾರ್ಥಿನಿಯರುಗಳು ಮನೋಹರವಾದ ವಿದ್ಯಾಭ್ಯಾಸದ ವಿಷಯ ಉಪನ್ಯಾಸಗಳನ್ನೂ, ಕಾವ್ಯ ರಂಜನೆಯನ್ನೂ ಪದ್ಯಗಳನ್ನೂ ಪಾಠನ್ನೂ ಹೇಳಿ ಮುಗಿಸಿದ ಮೇಲೆ ಸರ್ವರೂ ಸಂತೋಷವನ್ನು ಧ್ವನಿಗೈದರು. ಆ ಕೂಡಲೇ ಘನ ನ್ಯಾಯ ಧೊರೆಯವರೂ ಧೊರೆಸಾನಿಯವರೂ ಪ್ರತಿ ಹುಡುಗಿಗೂ ಯೋಗ್ಯತಾನುಸಾರ ಮಾತ್ರವಲ್ಲ ಆ ಬಾಲಕಿಯ ಅಳೆಯ ಪ್ರಕಾರವೂ ಅದು ಕೊಳ್ಳುವ ಇನಾಂ ಬಹುಮಾನಗಳನ್ನು ಕೊಟ್ಟರು. ಈ ವರ್ಷದಲ್ಲಿ ಬಹುಮಾನಗಳ ವಿನಿಯೋಗವು ಎಲ್ಲರಿಗೂ ಅತ್ಯಾನಂದವನ್ನುಂಟು ಮಾಡಿತು. ತರುವಾಯ ಘನ ನ್ಯಾಯ ಧೊರೆಯವರು ಎದ್ದು ಸಭಿಕರನ್ನೂ ನೆರೆತ್ತ ಮನುಷ್ಯರನ್ನೂ ವಿದ್ಯಾರ್ಥಿನಿಗಳನ್ನೂ ಉಪಾಧ್ಯಾಯರನ್ನೂ ಕುರಿತು ವಿದ್ಯಾಭ್ಯಾಸದ ಫಲಗಳನ್ನೂ ಈ ಸ್ಕೂಲುಗಳು ಒಳ್ಳೆ ಸ್ಥಿತಿಯಲ್ಲಿರುವದನ್ನೂ ಈ ಪಟ್ಟಣದಲ್ಲಿ ಮಿಷನ್ ಮತ್ತು ಸರ್ಕಾರದ ಸ್ಕೂಲ್ ಉಪಾಧ್ಯಾಯರೆಲ್ಲರೂ ತುಂಬಾ ಅನ್ಯೋನ್ಯವಾಗಿಯೂ ಸ್ನೇಹವಾಗಿಯೂ ಸಹಾಯಕರಾಗಿರುವದನ್ನೂ ಕುರಿತು ಉಪನ್ಯಾಸ ಮಾಡಿದರು. ಮತ್ತು ಸ್ತ್ರೀ ವಿದ್ಯಾಭ್ಯಾಸದಲ್ಲಿ ಪೂರ್ವ ದಿನರು ಅಡ್ಡಿಮಾಡುತ್ತಿದ್ದ ಕಷ್ಟಗಳನ್ನೂ ಈಗಿನ ಕಾಲದಲ್ಲಿ ಅವು ಮಾಯವಾಗುತ್ತಿರುವದನ್ನೂ ವಿವರಿಸಿ ಅತ್ಯಾನಂದದೊಡನೆ ಮುಗಿಸಿದರು. ನಂತರ ಅಸಿಸ್ಟೆಂಟ್ ಕಮಿಷನರ್ ಮೆ॥ ಡಿಸೋಜಾಯವರು ರೆವರೆಂಡ್ ನ್ಯಾಯ ಧೊರೆಯವರ ಅಧ್ಯಕ್ಷತೆಗೆ ಪ್ರತಿಯಾಗಿ ಅವರನ್ನು ಆದರಿಸುವಂತೆಯೂ ಪ್ರೋತ್ಸಾಹಿಸುವಂತೆಯೂ ಇಂಗ್ಲಿಷಿನಲ್ಲಿ, ಮಿಷನರಿಗಳ ವಿದ್ಯಾಭ್ಯಾಸದ ಪ್ರಾರಂಭವನ್ನೂ ಫಲಗಳನ್ನೂ ಅಂದರೆ ಅವರ ಮೂಲಕ ಇಂಡಿಯಾ ದೇಶಕ್ಕೆ ಮೊದಲು ಇಂಗ್ಲಿಷ್ ಭಾಷೆಯೂ, ವಿದ್ಯಾ ಪ್ರಚುರತೆಯೂ, ಸವಿಸ್ತಾರವೂ, ಹ್ಯಾಗೆ ಬಹಳವಾಗಿ ಹೆಚ್ಚುತ್ತಿವೆ ಎಂತಲೂ ಅದರ ಪ್ರಯೋಜನಗಳೊಡನೆ ಸಂಕ್ಷೇಪವಾಗಿ ಮಾತನಾಡಿದರು. ತರುವಾಯ ಸಭಿಕರೆಲ್ಲರಿಗೂ ಪುಷ್ಪತಾಂಬೂಲಗಳು ಹಂಚಲ್ಪಡುತ್ತಿರುವಾಗ್ಗೆ ಬಾಲಕಿಯರು ನೂತನ ಮಂಗಳವನ್ನು ಕರ್ಣಾನಂದವಾಗಿ ಹಾಡಿ ಸಭೆ ಬರಖಾಸ್ತು ಆಯಿತು. ಕಡೆಯಲ್ಲಿ ಸಕಲ ಬಾಲಕಿಯರಿಗೂ ಮಿಠಾಯಿ ತಿಂಡಿ ಪದಾರ್ಥಗಳು ಹಂಚಲ್ಪಟ್ಟವು.

## ಮೈಸೂರು ಗೆಜೆಟ್ ಸಂಗ್ರಹ.

೧೯೦೩ ನೇ ಫೆಬ್ರವರಿ ೨೦ರ ಆಗಾಯಿತು ಬಸವನ ಗುಡಿ, ಮಲ್ಲೇಶ್ವರಗಳನ್ನು ಬೆಂಗಳೂರು ಸಿಟಿಗೆ ಸೇರಿಸಿರುವದರಿಂದ ಬೆಂಗಳೂರು ಸಿಟಿಯನ್ನು ಒಂಭತ್ತು ಡಿವಿಜನ್ (ನೋಹಲೆ) ಗಳನ್ನಾಗಿ ವಿಭಾಗ ಮಾಡಿದೆ.

ಬೆಂಗಳೂರು ಸಿಟಿಗೆ ೨೪ ಮಂದಿಯೂ, ಮೈಸೂರಿಗೆ ೨೦ ಮಂದಿಯೂ ಮ್ಯುನಿಸಿಪಲ್ ಕಮಿಷನರು ಪ್ರಜೆಗಳಿಂದಲೂ, ಸರ್ಕಾರದವರಿಂದಲೂ ನೇಮಕನಾಗಿತಕ್ಕದ್ದು.

ಸ್ಟೇಟ್‌ಕೋರ್ಟ್ ಡೆಪ್ಯುಟಿ ರಿಜಿಸ್ಟ್ರಾರ್ ಮೆ ಜೆ. ರಾಜ್ಞಪ್ಪ ಯವರಿಗೆ ಕೊಟ್ಟಿದ್ದ ೨೭ ದಿನಗಳ ಪ್ರಿವಿಲೆಜ್ ರಜವನ್ನು ಇನ್ನು ೧೫ ದಿನ ಜಾಸ್ತಿ ಮಾಡಿದೆ.

ಅಕೌಂಟ್ ಪ್ರೊಬೇಷನರ್ ಮೆ॥ ಎಲ್ ಶ್ರೀನಿವಾಸಂತ್ ಬಾಬಾಮಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀ ವಿನಾ ರಿನ್ಯ ಒಂದುವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆ॥ ಟಿ. ಬೊಕ್ಕಣ್ಣನವರಿಗೆ ೭ದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ತುಂಕೂರ್ ಡಿವಿಜನ್ ಎಕ್ಸೈಸ್ ಇಲಾಖಾ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ಮೆ॥ ಟಿ ಎನ್ ವಿಜಯ್ ನೀಲಮುದ್ದಿನ್ ಅಲ್ಲಿಖಾನ್ ಯವರಿಗೆ ಕೊಟ್ಟಿದ್ದ ಪ್ರಿವಿಲೆಜ್ ರಜವನ್ನು ಇನ್ನು ೭ದು ದಿನ ಜಾಸ್ತಿ ಮಾಡಿದೆ.

ಚನ್ನಗಿರಿ ತಾಲ್ಲೂಕು ಹೊಳೆ ಹಳ್ಳಿಯನ್ನು ಬೇರೆ ಜಾಗದಲ್ಲಿ ಕಟ್ಟುವದಕ್ಕೆ ಆ ಗ್ರಾಮದಲ್ಲಿರುವ ಮಸ್ಕರ ವಾಸಾಬೋರೆಯಿಗೆ ಸೇರಿದ ೧೦ ಎಕರೆ ೨೧ ಗುಂಟೆ ಖುಸ್ಕಿ ಜಮೀನು ಸರ್ಕಾರಕ್ಕೆ ಬೇಕಾಗಿದೆ.

ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಸಿ. ಈ ಸಂಸ್ಥಾನಕ್ಕೆ ಸೇರಿದ ಇತರ ಕಡೆಗಳಲ್ಲಿ ಪ್ಲೇಗಿನ ನೆಪದಿಂದ ಊರು ಗ್ರಾಮಗಳನ್ನು ಖಾಲಿಮಾಡಬೇಕಾದ್ದ ಪ್ರಜೆಗಳ ಜಂಪಗಿಯನ್ನು ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಖಜಾನೆಗಳಲ್ಲಿಟ್ಟು ಕಾಪಾಡತಕ್ಕದ್ದು. ಆಯಾ ಸ್ಥಳದಲ್ಲಿ ಪ್ಲೇಗ್ ನಿವಾರಣೆಯಾದ ಮೇಲೆ ಅವುಗಳನ್ನು ವಾಪಸುಮಾಡತಕ್ಕದ್ದು.

ಚಿಕ್ಕಬಳ್ಳಾಪುರದ ಸ್ಕೂಲ್ ೬ನೇ ಫಾರಂ ವಿದ್ಯಾರ್ಥಿ ಡಿ. ದಾಸಪ್ಪನು ಬಹಳ ತುಂಟತನ ಮಾಡಿ ಅವಿಧೇಯನಾಗಿರುವದರಿಂದ ಅವನನ್ನು ಸ್ಕೂಲಿನಿಂದ ವಜಾ ಮಾಡಿದೆ. ಅವನನ್ನು ೧೯೦೪ನೇ ಜನವರಿ ೧ರತನಕ ಈ ಸಂಸ್ಥಾನದ ಯಾವ ಸ್ಕೂಲಿಗೂ ಸೇರಿಸಿಕೊಳ್ಳಕೂಡದು.

ಬೆಂಗಳೂರು ತಾಲ್ಲೂಕಿನಲ್ಲಿ ೧೯೦೩ ನೆ ನವಂಬರ್ ೧ ರಿಂದ ಟೀ ಆ ತರುವಾಯ ...ಗಸೆಯೋ ಪುರೆ ಜಮೀನುಗಳ ಸರ್ವೇ ಕೆಲಸಗಳು ಪ್ರಾರಂಭಿಸಲ್ಪಡುತ್ತವೆಂದು ಸರ್ವೇ ಸೆಟಲ್‌ಮೆಂಟ್ ಕಮಿಷನರಾದ ಕರ್ನಲ್ ಜೆ ಪಿ ಗ್ರಾಂಟ್‌ಯವರು ತಿಳಿಸಿದಾರೆ.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ, ಗವರ್ನಮೆಂಟ್ ನೇತ್ರವೈದ್ಯದ ಆಸ್ಪತ್ರೆ, ಮೆಟರ್ನಿಟಿ ಆಸ್ಪತ್ರೆ—ಈ ಮೂರು ಕಡೆಗಳಲ್ಲೂ ವೈದ್ಯರು ಪ್ಲೇಗ್‌ಟೀಕಾಬನ್ನು ಹಾಕುವಂತೆ ಏರ್ಪಾಡು ಮಾಡಿದೆ. ಅಪೇಕ್ಷೆಯುಳ್ಳವರು ಆಯಾ ಸ್ಥಳಗಳಿಗೆ ಹೋಗಿ ಟೀಕಾಬು ಹಾಕಿಸಿಕೊಳ್ಳಬಹುದು.

## ತಂತೀ ವರ್ತಮಾನಗಳ ಛಾರ್ಜು.

****

ಬಹಳ ಕಡಿಮೆ ಆಯಿತು.

ಇಂಡಿಯಾ ಗವರ್ನಮೆಂಟಿನವರು ತಂತೀ ವರ್ತಮಾನದ ಚಾರ್ಜನ್ನು ಬಹಳ ಮಟ್ಟಿಗೆ ಕಡಿಮೆಮಾಡಿರುತ್ತಾರೆ. ಇದುವರೆಗೆ ಇದ್ದ ಛಾರ್ಜಿನ ದರಗಳು ಏನೆಂದರೆ—(೧) ಅರ್ಜೆಂಟೆಂಬ ಆತುರದ ವರ್ತಮಾನ ಕಳುಹಿಸುವದಕ್ಕೆ ಮೊದಲನೇ ೮ ಮಾತಿಗೆ ೨ ರೂ. ಛಾರ್ಜು; ಆ ಮೇಲೆ ಪ್ರತಿ ಮಾತಿಗೂ ೪ ಆಣೆ ಕೊಡಬೇಕು. (೨) ಆರ್ಡಿನರಿ ಎಂಬ ಸಾಧಾರಣ ರೀತ್ಯಾ ವರ್ತಮಾನ ಕಳುಹಿಸುವದಕ್ಕೆ ಮೊದಲನೇ ೮ ಮಾತಿಗೆ ೧ ರೂ. ಛಾರ್ಜು; ಆ ಮೇಲೆ ಪ್ರತಿ ಮಾತಿಗೂ ೨ ಆಣೆಯಂತೆ ಕೊಡಬೇಕು. (೩) ಡಿಫರ್ಡ್ ಎಂಬ ಅಂಚೆ ಕಾಗದಗಳ ನಂಗವ ಪಾವತಿ ಆಗುವ ವರ್ತಮಾನಕ್ಕೆ ಮೊದಲನೇ ೮ ಮಾತಿಗೆ ೮ ಆಣೆ ಛಾರ್ಜು; ಆ ಮೇಲೆ ಪ್ರತಿ ಮಾತಿಗೂ ೧ ಆಣೆಯಂತೆ ಕೊಡಬೇಕು.

ಈಗ ಮೇಲ್ಕಂಡ ಛಾರ್ಜಿನ ದರಗಳನ್ನು ಸರ್ಕಾರದವರು ಕಡಿಮೆಮಾಡಿರುತ್ತಾರೆ. ಈ ಹುಕುಂ ೧೯೦೪ನೇ ಜನವರಿ ೧ರ ಆಗಾಯಿತು ಹಿಂದುಸ್ಥಾನದಲ್ಲಿ ಜಾರಿಯಲ್ಲಿ ಬರುತ್ತದೆ. ಹೊಸ ದರಗಳು ಹ್ಯಾಗೆಂದರೆ.—

ಅರ್ಜೆಂಟ್ ವರ್ತಮಾನಗಳು —ವಿಳಾಸದಲ್ಲಿ ಬರೆಯತಕ್ಕ ಮಾತುಗಳೂ ಸೇರಿ ಮೊದಲನೇ ೧೨ ಮಾತುಗಳಿಗೆ ೨ ರೂಪಾಯಿ ಛಾರ್ಜು; ಆ ಮೇಲೆ ಪ್ರತಿ ಮಾತಿಗೂ ೪ ಆಣೆಯಂತೆ ಕೊಡಬೇಕು.

ಆರ್ಡಿನರಿ ವರ್ತಮಾನಗಳು —ವಿಳಾಸದಲ್ಲಿ ಬರೆಯತಕ್ಕ ಮಾತುಗಳೂ ಸೇರಿ ಮೊದಲನೇ ೧೨ ಮಾತುಗಳಿಗೆ ೧ ರೂಪಾಯಿ ಛಾರ್ಜು; ಆ ಮೇಲೆ ಪ್ರತಿ ಮಾತಿಗೂ ೨ ಆಣೆಯಂತೆ ಕೊಡಬೇಕು.

ಡಿಫರ್ಡ್ ವರ್ತಮಾನಗಳು —ಮೊದಲನೇ ೪ ಮಾತುಗಳಿಗೆ ೪ ಆಣೆ ಛಾರ್ಜು, ಆ ಮೇಲೆ ಪ್ರತಿ ಮಾತಿಗೂ ೧ ಆಣೆಯಂತೆ ಕೊಡಬೇಕು. ವಿಳಾಸದಲ್ಲಿ ಬರುವ ಮಾತುಗಳ ತನಕ ಇದ್ದಾಗ್ಯೂ ಛಾರ್ಜು ಕೊಡಬೇಕಾದದ್ದಿಲ್ಲ. ಆ ಮಾತುಗಳಿಗಿಂದ ಹೆಚ್ಚಾಗಿದ್ದರೆ ಹೆಚ್ಚಾದ ಪ್ರತಿ ಮಾತಿಗೂ ೧ ಆಣೆಯಂತೆ ಕೊಡಬೇಕು.

ಇದಲ್ಲದೆ ವರ್ತಮಾನ ಪತ್ರಿಕೆಗಳಿಗೆ ಬಾತ್ಮಿದಾರರು ಕಳುಹಿಸುವ ವರ್ತಮಾನಗಳಿಗೂ ಛಾರ್ಜಿನ ದರಗಳನ್ನು ತುಂಬಾ ಸುಲಭ ಮಾಡಿ ಕೊಟ್ಟಿದಾರೆ.

ಬಹುಕಾಲದಿಂದ ಚರ್ಚೆಯಲ್ಲಿದ್ದ ಈ ದರಗಳನ್ನು ಇಂಡಿಯಾ ಗವರ್ನಮೆಂಟಿನವರು ಈಗಲಾದರೂ ಕಡಿಮೆಮಾಡಿ ಕೊಟ್ಟದ್ದಕ್ಕಾಗಿ ಸಕಲ ಪ್ರಜೆಗಳೂ ಅವರನ್ನು ಮನಃಪೂರ್ವಕವಾಗಿ ಕೊಂಡಾಡುವರು. ಈ ರಿಯಾಯಿತಿಯನ್ನು ಸರ್ಕಾರದವರು ತೋರಿಸಿರುವುದರಿಂದ ಹಿಂದುಸ್ಥಾನದ ವರ್ತಕ ಮಂಡಲಿಗೂ ಸಾಮಾನ್ಯ ಪ್ರಜಾಕೋಟಿಗೂ ಮಹದುಪಕಾರವಾಯಿತೆನ್ನುವದಕ್ಕೆ ಸಂಶಯವಿಲ್ಲ. ತಂತೀ ವರ್ತಮಾನಗಳಲ್ಲಿ ಈಗಿರುವ ಮೂರು ತರಗತಿಗಳನ್ನು ಎರಡಕ್ಕೆ ಇಳಿಸಬೇಕೆಂತಲೂ ಗವರ್ನಮೆಂಟಿನಲ್ಲಿ ಚರ್ಚೆ ನಡೆದಂತೆಯೂ, ಆದರೆ ಸದ್ಯಕ್ಕೆ ಈಗಿನ ಮೂರು ದರ್ಜೆಗಳೂ ಕೆಲವು ಕಾಲ ಇದ್ದಂತೆಯೇ ಇರಲಿ ಎಂದು ತೀರ್ಮಾನ ಮಾಡಿದಂತೆಯೂ ತಿಳಿದು ಬಂದಿದೆ.

## ಬಾತ್ಮಿದಾರರಿಗೆ ನೋಟೀಸ್.

ಸೀಯರ್ ತಾಲ್ಲೂಕು ಬುಕ್ಕಾಪಟ್ಟಣದ ಪ್ರಾಂತ್ಯ ಗ್ರಾಂಗಿಕಹಾವಳಿ ಬಹಳವಾಗಿರುತ್ತೆಂದು ನಮ್ಮ ಬಾತ್ಮಿದಾರರು ಬರೆಯುತ್ತಾರೆ. ಅವರು ಕೇಳುವ ಪ್ರಶ್ನೆಗಳನ್ನೆಲ್ಲಾ ಪ್ರಕಟಿಸಲು ಪತ್ರಿಕೆಯಲ್ಲಿ ಸ್ಥಳವಿಲ್ಲವಾದಕಾರಣ ಬಾತ್ಮಿದಾರರು ಪೊಲೀಸ್ ಅಧಿಕಾರಿಗಳನ್ನು ಕೇಳಿ ಪ್ರಶ್ನೆಗಳಿಗೆ ಸದುತ್ತರಗಳನ್ನು ಪಡೆಯಬಹುದಾಗಿದೆ ಎಂದು ಸೂಚಿಸುತ್ತೇವೆ.

ಗುಬ್ಬಿ ತಾಲ್ಲೂಕು ಹೊಸ ಕೆರೆಯಲ್ಲಿ ಜನರು ಎರಡು ಗುಂಪಾಗಿ ಒಂದು ಗುಂಪಿನವರು ಇನ್ನೊಂದು ಗುಂಪಿನವರನ್ನು ನೀರು ಸಿಡಿಗೆ ಬಾವಿಗೆ ಹೋಗದಂತೆ ಅಪ್ಪಣೆ ಮಾಡುತ್ತಾರೆಂತಲೂ, ಪಂಚದ್ರೋಹಗಳನ್ನು ತೆರೆಸುತ್ತಾರೆಂತಲೂ, ಕ್ಷೌರಿಕನಿಗೆ ೫ ಗುಂಪಿನವರಿಗೆ ಯಾವ ಕೆಲಸವನ್ನೂ ಮಾಡಿಕೊಡದಂತೆ ಕಟ್ಟುಮಾಡಿದಾರೆಂತಲೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ. ಇವನ್ನು ಪತ್ರಿಕೆಯಲ್ಲಿ ಪ್ರಕಟಿಸುವುದಕ್ಕಿಂತಲೂ ಅವರು ಡೆಪ್ಯುಟಿ ಕಮಿಷನರಿಗೆ ಅರ್ಜಿ ಕೊಟ್ಟು ಪರಿಹಾರ ಹೊಂದಿದರೆ ಅನುಕೂಲವಾಗುವದೆಂದು ನಮಗೆ ತೋರುತ್ತದೆ —ಎಡಿ.

## ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನ್‌ರವರು ಮಾಡಿದ ಉಪನ್ಯಾಸ.

(ಕಳೆದವಾರದ ಶೇಷ.)

ಅಬ್ಕಾರಿ.

ಸಾರಾಯಿ ಮಾಡಿ ಸರಬರಾಯಿ ಮಾಡುವ ಹೊಸ ಕಂಟ್ರಾಕ್ಟಿನ ಪ್ರಕಾರ ಗ್ಯಾಲನ್ ಒಂದಕ್ಕೆ ಆಣೆಗೆ ಬದಲಾಗಿ ೮ ಆಣೆಯ ಹೆಚ್ಚು ದರಕ್ಕೆ ಕೊಡಲಾಯಿತು. ಡಿಸ್ಟಿಲರಿಯಿಂದ ಮಾರಾಟಕ್ಕೆ ಕಳುಹಿಸಿದ್ದು ೩,೩೦,೮೦೦ ಗ್ಯಾಲನ್ ಸಾರಾಯಿ. ಇದು ಹಿಂದಿನ ವರ್ಷಕ್ಕಿಂತ ೨೧,೦೦೦ ಗ್ಯಾಲನ್ನಷ್ಟು ಹೆಚ್ಚಾಗಿದೆ. ಕಳ್ಳತನದಿಂದ ಸಾರಾಯಿ ಮಾಡುವದನ್ನೂ ಕಳ್ಳತನದಿಂದ ಬಟ್ಟಿ ಇಳಿಸುವದನ್ನೂ ಕಂಡು ಹಿಡಿದು ಅದನ್ನು ಹಿಂದಿನದಕ್ಕಿಂತ ಹೆಚ್ಚಾದ ಮೊಕದ್ದಮೆಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ಮಾಡಿಸಲಾಯಿತು.

ಹಿಂದಿನ ವರ್ಷ ಖರ್ಚಾದ ಸಾರಾಯಿಯೊಡನೆ ಹೋಲಿಸಿ ನೋಡಿದಾಗ ಮಾತ್ರ ಕಳೆದ ವರ್ಷದ ಖರ್ಚು ಹೆಚ್ಚಾಗಿ ಕಾಣುತ್ತದೆ. ಚಿಲ್ಲರೆ ಮಾರಾಟದ ದರವನ್ನು ಡ್ರಾಂ ಒಂದಕ್ಕೆ ೧ ಆಣೆ ೬ ಪೈಯಿಂದ ೨ ಆಣೆಗೆ ಹೆಚ್ಚು ಮಾಡಿದ್ದರಿಂದ ೧೮೯೬–೯೭ ನೇ ವರ್ಷದ ಆಗಾಯಿತು ಸಾಮಾನ್ಯವಾಗಿ ಕುಡಿಯೋಣವು ಬಹಳ ಕಡಿಮೆಯಾಗಿದೆ. ಕಳೆದ ವರ್ಷಕ್ಕೆ ಹಿಂದಿನ ೫ ವರ್ಷಗಳಲ್ಲಿ, ವರ್ಷ ಒಂದಕ್ಕೆ ಸರಾಸರಿ ೪,೦೦,೧೭೦ ಗ್ಯಾಲನ್‌ಗಳು ಖರ್ಚಾಗುತ್ತಿದ್ದವು. ಇದು ಕಳೆದ ವರ್ಷದ ಖರ್ಚಿಗಿಂತ ೭೯,೩೩೬ ಗ್ಯಾಲನ್‌ನಷ್ಟು ಹೆಚ್ಚಾಗಿದೆ. ಇದರಿಂದ, ಸಾರಾಯಿನ ತೆರಿಗೆಯನ್ನೂ ಚಿಲ್ಲರೆ ಮಾರಾಟದ ದರವನ್ನೂ ಹೆಚ್ಚಿಸುವದರ ಮೂಲಕ, ಕುಡಿತ ತಗ್ಗುವಂತೆ ಮಾಡಿದ ಪ್ರಯತ್ನವು ಇನ್ನೂ ಸಫಲವಾಗಿ ನಡೆಯುತ್ತಾ ಇದೆ ಎಂಬುದು ವ್ಯಕ್ತವಾಗುತ್ತದೆ. ಆಹಾರದ ಧಾನ್ಯಗಳು ಅಗ್ಗವಾಗಿದ್ದದ್ದೇ ಹೀಗೆ ಎಲ್ಲಾ ಕಡೆಯಲ್ಲಿಯೂ ಕುಡಿತ ಹೆಚ್ಚುವದಕ್ಕೆ ಕಾರಣವಾಯಿತು.

ಸೇಂದಿ ಮರಗಳಿರುವ ಜಮೀನುಗಳು ಅಬ್ಕಾರಿ ಇಲಾಖೆಗೆ ಬೇಕಾದಪಕ್ಷದಲ್ಲಿ ಅವುಗಳನ್ನು ಸಂಪೂರ್ಣವಾಗಿ ಉಳಿಸಿಕೊಳ್ಳಬೇಕೆಂದೂ ಮರಗಳನ್ನು ಮಾತ್ರ ಉಳಿಸಿಕೊಂಡು ಅಂಥ ಜಮೀನುಗಳನ್ನು ಸಾಗುವಳಿಗೆ ಕೊಡುತ್ತಿದ್ದ ಪದ್ಧತಿಯನ್ನು ತಪ್ಪಿಸಬೇಕೆಂದೂ ಶ್ರೀಮನ್ಮಹಾರಾಜರವರು ಅಜ್ಞಾಪಿಸಿದ್ದಾರೆ.

ಮರಗಳನ್ನು ಮಾತ್ರ ಉಳಿಸಿಕೊಳ್ಳುವದರಿಂದ ರೈತರಿಗೆ ಅಂಬಾಗಹುದಾದ ತೊಂದರೆಯನ್ನು ತಪ್ಪಿಸುವದಕ್ಕೋಸ್ಕರ ಹೀಗೆ

ಪಡಿಸಲಾಯಿತು. ಹೀಗೆ ಸರ್ಕಾರದವರು ಮಾಡಿಕೊಟ್ಟ ಸಹಾಯವು ಕೃಷಿಕರಿಗೆ ಅನುಕೂಲವಾಗಿರುವದೆಂದೂ ಇದರಿಂದ ಹಿಡುವಳಿದಾರರ ಜಮೀನುಗಳಲ್ಲಿರುವ ಮರಗಳೂ ಪೋಲಾಗದೆ ಉಳಿದು, ಮುಂದೆ ನಿರ್ಧರಿಸಿದ ಪ್ರಕಾರ, ಅವರ ಮರಗಳ ಮೇಲೆ ಪೂರ್ಣ ಸ್ವಾಮ್ಯವು ಉತ್ಪತ್ತಿಯಾಗಿ ಅವರಿಗೆ ನಿರಂತರವಾದ ಲಾಭವುಂಟಾಗುವದೆಂದೂ ನಂಬಿದೆ.

ಜಂಗಲು.

ಈ ಇಲಾಖೆಯ ನಿಬಂಧನೆಗಳ ಕಾನೂನು ಬಹಳ ಕಾಲದಿಂದ ಸರ್ಕಾರದವರ ಪರ್ಯಾಲೋಚನೆಯಲ್ಲಿತ್ತು. ಅದರಲ್ಲಿ ಟೀಕ್ಕಿಗೆ ಸಂಬಂಧಪಟ್ಟ ಮೊದಲನೆಯ ಭಾಗವು ೧೯೦೫ನೇ ಇಸವಿ ಸೆಪ್ಟಂಬರ್ ಗುತ್ತಿಗೆ ಲಾಗಾಯಿತು ಜಾರಿಗೆ ತರಲ್ಪಟ್ಟಿತು. ಡಿಸ್ಟ್ರಿಕ್ಟ್ ಬೋರ್ಡುಗಳಿಂದ ತರಲ್ಪಡುವ ಸರ್ಟಿಫಿಕೇಟು ತಲೆ ಹೊರೆಗಳಿಗೆ ಸುಂಕ ಪಡೆಯುವದನ್ನು ನಿಲ್ಲಿಸಿಬಿಟ್ಟಿತು. ಸ್ವಂತ ಹಿಡುವಳಿಯಲ್ಲಿರುವ ಗಂಧದ ಮರಗಳಿಗೆ ಸಂಭವಿಸುವ ನಷ್ಟವನ್ನು ಸರ್ಕಾರದವರಿಗೆ ತಿಳಿಸದೆ ತಪ್ಪಿದರೆ, ಕ್ರಿಮಿನಲ್ ಶಿಕ್ಷೆಯಾಗಬಹುದೆಂದು ಜಂಗಲಿ ಕಾನೂನಿನ ೪೦ನೆಯ ಪ್ರಕರಣಕ್ಕೆ ಅನುಸಾರವಾಗಿ ಮಾಡಲ್ಪಟ್ಟಿದ್ದ ನಿಬಂಧನೆಯನ್ನು ಗತವರ್ಷದಲ್ಲಿ ರದ್ದು ಮಾಡಲಾಯಿತು.

ಮರಮ್ಮತ್ ಕಾಂಗಾರಿಗಳು ಕಟ್ಟಡಗಳು.

ಮುಖ್ಯವಾದ ಕಟ್ಟಡದ ಕೆಲಸಗಳಲ್ಲಿ ಮೈಸೂರು ಹೊಸ ಅರಮನೆಯನ್ನು ಕಟ್ಟುವ ಕೆಲಸವು ಬಹಳ ತೃಪ್ತಿಕರವಾಗಿ ನಡೆಯಿತು. ಇದಕ್ಕಾಗಿ ಈ ವರ್ಷ ೫,೬೦,೦೦೦ ರೂಪಾಯಿ ಖರ್ಚಾಯಿತು. ದೇವರಾಜ ಬಹಾದ್ದರ್ ಬಜಾರ, ಬಳೆಪೇಟೆ, ಕಲ್ಯಾಣಮಂಟಪ, ಕೋಟೆಬಾಗಿಲು ಮುಂದುಗಡೆಯ ಮೊಗಸಾಲೆ ಉತ್ತರ ದಕ್ಷಿಣದ ಮಹಡಿ ಮೆಟ್ಟಲುಗಳು, ಸರಸ್ವತೀ ಭಂಡಾರದ ಕಟ್ಟಡ, ಇವು ಮೊದಲನೆಯ ಅಂತಸ್ತಿನ ಮಾಳಿಗೆಯವರೆಗೆ ಸುಮಾರಾಗಿ ಮುಗಿದಿದ್ದವು. ೨,೭೩,೦೦೦ ರೂಪಾಯಿ ಅಂದಾಜಾಗಿದ್ದ ಬೆಂಗಳೂರಲ್ಲಿರುವ ಪ್ರೌಢ ಯುದ್ಧಸಾಮಗ್ರಿವಾಹಕ ಸೈನ್ಯಗಳ (ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್) ಲೈನುಗಳು ತೃಪ್ತಿಕರವಾಗಿ ಮುಗಿದು ಪಾಕಕ್ಕಾಗಿ ಮಿಲಿಟರಿ ಇಲಾಖೆಯವರಿಗೆ ಕೊಡಲ್ಪಟ್ಟವು.

ನೀರು ಸರಬರಾಯಿ.

ಈ ಬಾಬಿಗೆ ಸಂಬಂಧಪಟ್ಟ ಮುಖ್ಯ ಕಾರ್ಯಗಳು ಯಾವವೆಂದರೆ—ಚೇತಮಂಗಲ, ಹೊಳಲಿ ಈ ಕೆರೆಗಳಿಂದ ಕೋಲಾರದ ಚಿನ್ನದ ಗಣಿಗೆ ನೀರು ಸರಬರಾಯಿ ಮಾಡುವದಕ್ಕಾಗಿ ೧೧ ಲಕ್ಷ ಅಂದಾಜು ಮಂಜೂರಾಗಿ ಈ ವರ್ಷದಲ್ಲಿ ಕೆಲಸವನ್ನು ಚನ್ನಾಗಿ ಆರಂಭಿಸಲಾಯಿತು. ಇದರಿಂದ, ಬಂಡವಾಳದ ಮೇಲೆ, ಮೊದಲು ೪ ವರ್ಷಕಾಲ ನೇಕಡ ೫ ರಂತೆಯೂ, ಆ ಮೇಲೆ ೪ ವರ್ಷಕಾಲ ನೇಕಡ ೭ ರಂತೆಯೂ, ಉತ್ಪತ್ತಿಯಾಗುವ ಕಾರಣ ಈ ಕೆಲಸವು ಪೂರ್ತಿಯಾದಾಗ ಸರಕಾರಕ್ಕೆ ವಿಶೇಷ ಲಾಭಕರವಾಗಿರುವದು.

ನೀರಾವರಿ ಕಾಂಗಾರಿ.

ಮಾರಿಕಣಿವೆಯಲ್ಲಿ ನಡೆದ ಕೆಲಸವು ಹಿಂದಿನವರ್ಷದಲ್ಲಿಯೂ ಗುಣಕ್ಕಿಂತಲೂ ಎಂದಿನಂತೆ ತೃಪ್ತಿಕರವಾಗಿತ್ತು. ಈ ವರ್ಷದಲ್ಲಿ ಸುಮಾರು ೧೫,೫೯,೦೦೦ ಕಲಿ ಅಡಿ ಕಲ್ಲು ಕೆಲಸವು ನಡೆಯಿತು. ಇದರಿಂದ ಕೆರೆ ಕಟ್ಟೆಯ ಎತ್ತರವು ೯೦ ಅಡಿಯಿಂದ ೧೨೩-೩೫ ಅಡಿಗೆ ಏರಿತು. ಇಂಗ್ಲೆಂಡಿನಿಂದ ತರಿಸಿದ ತೂಬಿನ ಮುಚ್ಚಳಗಳು ಇಡಲ್ಪಟ್ಟವು. ತೂಬಿನ ಕಾಲುವೆಗಳೂ ಹಿಂದಿನ ತೊಟ್ಟಿಗಳೂ ಕಟ್ಟಿ ಮುಗಿದವು. ಮುಂದೆ ಪ್ರಕೃತಬಿಸ್ವರ ಕೈಗಾರಿಕೆಯ ಕೆಲಸಕ್ಕಾಗಿ ಜಲದ ತ್ರಾಣದ ವೈದ್ಯುತಶಕ್ತಿಯನ್ನು ಉಂಟುಮಾಡು ವದಕ್ಕೋಸ್ಕರ ಕೊಳವೆಗಳನ್ನು ಕಟ್ಟುವ ವಿಷಯದಲ್ಲಿ ಆಖೈರ್ ತೀರ್ಮಾನ ಮಾಡಲಾಯಿತು. ಈ ಕಾಲುವೆಗಳ ಸರ್ವೆಯೂ ಮುಗಿಯಿತು. ಹಿಂದಿನ ವರ್ಷ ಇದ್ದ ೭೬ ಅಡಿ ನೀರಿಗೆ ಬದಲಾಗಿ ಕಳೆದ ವರ್ಷ ೭೯ ಅಡಿ ನೀರು ಸೇಕಲ್ಪಟ್ಟಿತು. ಈ ಕಾಂಗಾರಿಯಲ್ಲಿ ಮಿ॥ ದಳವಾಯಿವರು ಮಾಡಿದ ಕೆಲಸದಿಂದ ಸಂತುಷ್ಟರಾಗಿ ಶ್ರೀಮನ್ಮಹಾರಾಜರವರು ಅವರನ್ನು ಸೂಪರಿಂಟೆಂಡಿಂಗ್ ಇಂಜನಿಯರ್ ಕೆಲಸದಲ್ಲಿ ಖಾಯಂಮಾಡಿದ್ದಾರೆ.

ದುರ್ಭಿಕ್ಷ ಪರಿಹಾರದ ಕೆಲಸಗಳು.

ದುರ್ಭಿಕ್ಷ ಪರಿಹಾರಾರ್ಥವಾದ ಕೆಲಸಗಳಲ್ಲಿ ಗೊತ್ತಾದ ೪೯ ನೀರಾವರಿ ಕಾರ್ಯಗಳ ವಿಷಯವಾಗಿ ಅಂದಾಜನ್ನು ತಯಾರ್ ಮಾಡುವದಕ್ಕೋಸ್ಕರವೇ ನೇಮಿಸಿದ ಸೂಪರಿಂಟೆಂಡಿಂಗ್ ಇಂಜನಿಯರವರು ಅನೇಕ ಕಾಂಗಾರಿಗಳ ಅಂದಾಜನ್ನು ಮುಗಿಸಿ ಉಳಿದ ಕಾಂಗಾರಿಗಳ ವಿಷಯದಲ್ಲಿ ಸ್ಥಳೀಯ ಕಾರ್ಯಗಳನ್ನು ಪೂರ್ತಿಮಾಡಿದ್ದಾರೆ. ಈ ಪೈಕಿ ೪೯ ಲಕ್ಷ ರೂಪಾಯಿಯಂದಾಜಿನ ೧೧ ಕಾರ್ಯಗಳನ್ನು ಈವರೆಗೆ ಮಂಜೂರ್ ಮಾಡಲಾಯಿತು ; ಲಾಭಕರವಲ್ಲವೆಂದು ಎಂಟನ್ನು ಬಿಟ್ಟು ಬಿಡಲಾಯಿತು ; ಮಿಕ್ಕವು ಪರ್ಯಾಲೋಚನೆಯಲ್ಲಿವೆ. ಇದೂ ಅಲ್ಲದೆ ಬಹುಕಾಲದಿಂದ ಸರ್ಕಾರದವರ ಪರ್ಯಾಲೋಚನೆಯಲ್ಲಿದ್ದ ಒಟ್ಟು ಸಂಕ್ರಾಂತಿಯ ಕೆರೆಗಳ ನಕ್ಷೆಗಳನ್ನು ತಯಾರ್ ಮಾಡುವ ಕೆಲಸವನ್ನು ಈಚೆಗೆ ಈ ಸೂಪರಿಂಟೆಂಡಿಂಗ್ ಇಂಜನಿಯರವರಿಗೇ ಕೊಟ್ಟಿದೆ.

ಕಾವೇರೀ ಪ್ರಪಾತದ ವೈದ್ಯುತಶಕ್ತಿಯನ್ನು ಹೆಚ್ಚಿಸುವದು.

೧೨ ಲಕ್ಷ ರೂಪಾಯಿ ಮುಟ್ಟಿಸಿ ೫,೦೦೦ ಅಶ್ವಶಕ್ತಿ ಹುಟ್ಟಿಸುವ ಎರಡನೆಯ ಸ್ಥಾಪನೆಗೆ ಬೇಕಾದ ಏರ್ಪಾಡುಗಳನ್ನು ಮಾಡುವ ಕೆಲಸವನ್ನು ಉಪಕ್ರಮಿಸಿ ಈ ವರ್ಷದಲ್ಲಿ ಇದಕ್ಕಾಗಿ ೯೩,೬೭೭ ರೂಪಾಯಿ ಖರ್ಚು ಮಾಡಲಾಯಿತು.

ಮುಜರಾಯಿ.

ಗತ ವರ್ಷದಲ್ಲಿ ೭೭,೪೯೨ ರೂಪಾಯಿ ಮುಟ್ಟಿಸಿ ೧೦೪ ಕಟ್ಟಡಗಳನ್ನು ದುರಸ್ತು ಮಾಡಲಾಯಿತು. ಈ ಮೊಬಲಗಿನಲ್ಲಿ ಕೆಲಭಾಗವು ಅಯಾ ಕಟ್ಟಡಗಳ ಫಂಡಿನಿಂದಲೂ ಕೆಲಭಾಗವು ಭಕ್ತರಿಂದ ಕೊಟ್ಟ ಹಣದಿಂದಲೂ ಬಂದಿತು.

ಗಣಿಗಳ ಉತ್ಪತ್ತಿ.

ಎಲ್ಲಾ ಗಣಿಗಳಿಂದ ಒಟ್ಟು ೬೩೦ ಲಕ್ಷಕ್ಕೆ ಮೀರಿ ಬೆಲೆ ಬಾಳತಕ್ಕ ಚಿನ್ನವು ಉತ್ಪತ್ತಿಯಾಯಿತು. ಹಿಂದಿನವರ್ಷ ೫೭೩ ಲಕ್ಷ ಬಾಳತಕ್ಕ ಚಿನ್ನ ಮಾತ್ರ ಉತ್ಪತ್ತಿಯಾಗಿತ್ತು.

ವ್ಯವಹಾರ ವಿಷಯ.

ಸ್ಮಾಲ್‌ಕಾಸ್ ಮೊಖದ್ದಮೆಗಳೂ ಸೇರಿ ಸಿವಿಲ್ ಮೊಕದ್ದಮೆಗಳ ಸಂಖ್ಯೆಯು ಹಿಂದಿನವರ್ಷ ೫೦,೬೦೫ ಇದ್ದದ್ದು ಗತವರ್ಷದಲ್ಲಿ ೧೯,೬೩೫ಕ್ಕೆ ಇಳಿದಿದ್ದರಿಂದ ಸಿವಿಲ್ ವ್ಯಾಜ್ಯವು ಬಹಳಮಟ್ಟಿಗೆ ಕಡಿಮೆಯಾಯಿತು. ಫೈಸಲಾದ ಮೊಕದ್ದಮೆಗಳ ಸಂಖ್ಯೆ ೧೯,೭೫೭. ಇದು ಹಿಂದಿನವರ್ಷದ ಸಂಖ್ಯೆಗಿಂತ ೫,೦೪೭ ರಷ್ಟು ಕಡಿಮೆಯಾಗಿಯೂ ದಾಖಲ್ಮಾಡಿದ ಮೊಖದ್ದಮೆಗಳ ಸಂಖ್ಯೆಗಿಂತ ೯ ಕಡಿಮೆಯಾಗಿಯೂ ಇದೆ. ಕ್ರಿಮಿನಲ್ ಮೊಖದ್ದಮೆಗಳು ಕೂಡ ೧೭,೭೯೭ ರಿಂದ ೧೩,೩೩೪ಕ್ಕೆ ಇಳಿದವು.

ಕಾನೂನು.

ಲೋಕಲ್ ಬೋರ್ಡ್ ರೆಗ್ಯುಲೇಷನಿಗೆ ಅನುಸಾರವಾದ ನಿಬಂಧನೆಗಳು ಸಂಪೂರ್ಣವಾಗಿ ಪರಿಷ್ಕರಿಸಲ್ಪಟ್ಟು ಈಗತಾನೆ ಮಂಜೂರಾಗಿವೆ. ಇವುಗಳಲ್ಲಿ ರೆಗ್ಯುಲೇಷನಿಗೆ ಒಳಪಡದ ಎಲ್ಲಾ ಮುನಿಸಿಪಾಲಿಟಿಗಳನ್ನು ಸಂಘಗಳನ್ನಾಗಿ ಮಾಡುವದಕ್ಕೂ ಪ್ರತಿ ಒಂದು ರೆವಿನ್ಯೂ ಡಿಸ್ಟ್ರಿಕ್ಟಿನಲ್ಲಿಯೂ ಒಂದೊಂದು ಡಿಸ್ಟ್ರಿಕ್ಟ್ ಮೇಲ್ವಿಚಾರಣೆ ಸಂಘವನ್ನು ಏರ್ಪಡಿಸುವದಕ್ಕೂ ಪ್ರತಿ ಒಂದು ತಾಲ್ಲೂಕು ಮತ್ತು ಸಬ್ ತಾಲ್ಲೂಕುಗಳಲ್ಲಿಯೂ ತಾಲ್ಲೂಕು ಮೇಲ್ವಿಚಾರಣೆ ಸಂಘಗಳನ್ನು ಏರ್ಪಡಿಸುವದಕ್ಕೂ ಪ್ರತಿ ಒಂದು ಸಂಘಕ್ಕೂ ಒಂದು ಪಂಚಾಯತರ ಸಭೆಯನ್ನು ಏರ್ಪಡಿಸುವದಕ್ಕೂ ಅವಕಾಶವನ್ನು ಕಲ್ಪಿಸಿದೆ. ಈ ಮೇಲ್ವಿಚಾರಣೆ ಸಂಘಗಳ ಮತ್ತು ಪಂಚಾಯತರ ಸಭೆಯ ಅಧಿಕಾರಗಳನ್ನೂ ಕರ್ತವ್ಯಗಳನ್ನೂ ಸರಿಯಾಗಿ ನಿಷ್ಕರ್ಷಿಸಿದೆ. ಈ ಸಭೆಗಳನ್ನು ಉತ್ತಮಸ್ಥಿತಿಗೆ ತರಬೇಕೆಂದು ೧೮೯೯ರಲ್ಲಿ ಪ್ರಥಮತಃ ಆರಂಭಿಸಿದ ಕಾರ್ಯವು ಈಗ ತೀರ್ಮಾನವಾಯಿತು. ಈ ಸಭೆಗಳು ಈಗ ಮಾಡಿರುವ ಏರ್ಪಾಡುಗಳಿಂದ, ಮುಂದೆ ವಿಶೇಷೋತ್ಸಾಹಪೂರ್ಣವಾಗಿ ಕೆಲಸ ಮಾಡುವವೆಂದು ಕೋರುತ್ತೇವೆ.

ಅಂತ್ಯೋಕ್ತಿಗಳು.

ಇದೇ ಶ್ರೀಮನ್ಮಹಾರಾಜರವರ ಆಳ್ವಿಕೆಯ ಪ್ರಥಮ ವರ್ಷದ ವೃತ್ತಾಂತವು. ಈ ಕಾಲದಲ್ಲಿ ನನ್ನ ಅವಧಾನಕ್ಕೆ ಬಂದ ವಿಷಯಗಳ ಮನನದಿಂದ ಈ ಸಂಸ್ಥಾನದ ಪ್ರಕೃತಸ್ಥಿತಿಯನ್ನು ಸಂಗ್ರಹವಾಗಿ ಪರೀಕ್ಷಿಸಿ, ಅದು ಮುಂದೆ ಎಂದರೆ ಕೊನೆಯ ಪಕ್ಷ ಸ್ವಲ್ಪ ಕಾಲದ ವರೆಗಾದರೂ ಹೇಗಾಗಬಹುದೆಂದು ವಿಶದವಾಗಿ ತಿಳಿಸುಕೊಳ್ಳುವದಕ್ಕೋಸ್ಕರ ಶ್ರೀಮನ್ಮಹಾರಾಜರವರ ರಾಜ್ಯಭಾರ ವರ್ಣನಾ ಪ್ರಕರಣದಲ್ಲಿ ನನ್ನ ಅಭಿಪ್ರಾಯಗಳನ್ನು ಅಲ್ಲಲ್ಲಿ ಸೂಚಿಸುವದು ಉಚಿತವೆಂದು ಭಾವಿಸಿ ಹಾಗೆ ಮಾಡಿದ್ದೇನೆ. ಸಭಾಸ್ತರೇ, ಈ ಮೈಸೂರು ದೇಶವನ್ನೂ ಅದರ ಅವಶ್ಯಕತೆಗಳನ್ನೂ ಕೂಲಂಕಷವಾಗಿ ತಿಳಿದುಕೊಳ್ಳಲು ಅಸದೃಶವಾದ ಅವಕಾಶವನ್ನು ಪಡೆದವರಾಗಿಯೂ ಬಹುಪ್ರಯೋಜನಕರವಾದ ತಮ್ಮ ದೀರ್ಘಕಾಲೋದ್ಯೋಗದಿಂದ ನಿವೃತ್ತರಾಗಿ ತಮ್ಮ ನ್ಯಾಯಾರ್ಜಿತವಾದ ವಿಶ್ರಾಂತಿ ಸುಖವನ್ನು ಅನುಭವಿಸಲು ಸ್ವದೇಶಕ್ಕೆ ತೆರಳುವವರಾಗಿಯೂ ಇರುವ ಸರ್ ಡೊನಾಲ್ಡ್ ರಾಬರ್ಟ್‌ಸನ್ ಸಾಹೇಬರವರು, ತಮ್ಮ ಹೆಸರನ್ನು ಶಾಶ್ವತಗೊಳಿಸುವ ರಾಬರ್ಟ್‌ಸನ್ ಪೇಟೆಯಲ್ಲಿ ಸ್ವಲ್ಪ ಕಾಲಕ್ಕೆ ಮುಂಚೆ ಆಶ್ಚರ್ಯಯುಕ್ತರಾಗಿ ವಿವರಿಸಿದಂತೆ, ರಾಜಭಕ್ತಿಯುಕ್ತರಾದ ನಾವು ಕೂಡ, ಶ್ರೀಮನ್ಮಹಾರಾಜರವರ ರಾಜ್ಯಭಾರೋಪಕ್ರಮದ ಮಾರ್ಗವನ್ನೂ ಮುಂದೆ ಮಹಾರಾಜರವರ ಆಳ್ವಿಕೆಯಲ್ಲಿ ಈ ಸಂಸ್ಥಾನಕ್ಕೆ ಉಂಟಾಗಬಹುದಾದ ಅಭ್ಯುದಯವನ್ನು ಸೂಚಿಸುವ ಪ್ರಾರಂಭಿತವಾದ ರಾಜ್ಯಭಾರದ ಆದರಾತಿಶಯವನ್ನೂ ನೋಡಿ ಆಶ್ಚರ್ಯಭರಿತರಾಗಿ ಶ್ಲಾಘಿಸುವದು ಯೋಗ್ಯವಾಗಿಯೇ ಇದೆ.

ಮೈಸೂರು, ೫-೧೦-೦೬ | ವಿ ಪಿ ಕೃಷ್ಣಮೂರ್ತಿ, ಮೈಸೂರು ಸಂಸ್ಥಾನದ ದಿವಾನರವರು.

---

## ವಿದೇಶ ವರ್ತಮಾನಗಳು

ರಷ್ಯಾ ರಾಜ್ಯದಲ್ಲಿ ತಯಾರಾಗುವ ಸರಕುಗಳನ್ನು ಪರ್ಷಿಯಾ ಆಫ್ಘಾನಿಸ್ಥಾನಗಳಿಗೆ ತೆಗೆದುಕೊಂಡು ಹೋಗಿ ಬಿಕರಿ ಮಾಡತಕ್ಕವರಿಗೆ ರಷ್ಯಾ ಸರ್ಕಾರದವರು ವಿಶೇಷ ದ್ರವ್ಯಸಹಾಯ ಮಾಡುವುದಾಗಿ ವಾಗ್ದಾನ ಮಾಡಿರುವರು.

****

ಕೇಪ್ ಕಾಲೊನಿಯಲ್ಲಿ ಮಳೆ ಇಲ್ಲದೆ ಕ್ಷಾಮ ಪ್ರಾಪ್ತವಾಗುವಂತಿದೆ. ಕುರಿ ಆಡು ಸಾವಿರಗಟ್ಟಲೆ ಸಾಯುತ್ತಿವೆ. ಗೋಕಾಯಿಗಳೆಲ್ಲಾ ಮೃತಪಟ್ಟವು. ಜನರಿಗೆ ಹಾಲು ಸಿಕ್ಕುವದಿಲ್ಲ. ಆಹಾರಕ್ಕಾಗಿ ಉಪಯೋಗಿಸುವ ಮಾಂಸವು ಸ್ವಲ್ಪವೂ ಒಳ್ಳೇದಲ್ಲ.

****

ಲಂಡನ್ ನಗರದಿಂದ ಬೀಸುವ ತಂತೀ ವರ್ತಮಾನವನ್ನು ನೋಡಲಾಗಿ ಆ ಪ್ರಾಂತ್ಯ ಕಳೆದವಾರ ಅಮೋಘವಾದ ಮಳೆ ಸುರಿದು ಎಲ್ಲೆಲ್ಲೂ ಪ್ರವಾಹಗಳು ಹರಿದು ಹೊಲ ಗದ್ದೆ ತೋಟ ಉದ್ಯಾನವನವೇ ಮೊದಲಾದುವೆಲ್ಲಾ ಕೆಟ್ಟುಹೋಗಿವೆ ಎಂದು ಗೊತ್ತಾಗುತ್ತದೆ.

****

ಚದರಂಗದ ಆಟದಲ್ಲಿ ಗಟ್ಟಿಗರು ವಿಲಾಯಿತಿಯಲ್ಲಿ ಇಲ್ಲ. ಯಾಕೆಂದರೆ ಈ ಆಟಕ್ಕೆ ಮನಸ್ಸು ಕೊಡತಕ್ಕವರು ಇತರ ಯಾವ ಅಂಗಸಾಧನೆಯ ವಿಹಾರಕ್ಕೂ ಪ್ರವೇಶಿಸುವದಕ್ಕಾಗುವದಿಲ್ಲ. ಸಮಯವೆಲ್ಲಾ ಇದಕ್ಕೇ ವಿನಿಯೋಗಿಸಬೇಕಾಗುತ್ತೆ. ಆದುದರಿಂದ ಇಂಥಾ ಆಟದಲ್ಲಿ ಇಂಗ್ಲಿಷರಿಗೆ ಅಭಿರುಚಿ ಕಡಿಮೆ.

ತುಲಸೀ ದಳವನ್ನು ಮಂಚಕ್ಕೆ ಸವರಿಕೊಂಡು ಮಲಗಿದರೆ ಸೊಳ್ಳೆಗಳ ಕಾಟವಿರುವುದಿಲ್ಲ. ಬಡಬಗ್ಗರು ಸೊಳ್ಳೆ ಪರದೆಗಳನ್ನು ಕಟ್ಟಿಕೊಂಡು ಮಲಗುವುದಕ್ಕೆ ಅವರಿಗೆ ಚೈತನ್ಯವಿಲ್ಲ. ಇಂಥವರೆಲ್ಲ ತುಲಸೀ ರಸವನ್ನು ಧಾರಾಳವಾಗಿ ಉಪಯೋಗಿಸಲಿ ; ಅದರಿಂದ ಯಾವ ವಿಧವಾದ ಕೇಡೂ ಉಂಟಾಗಲಾರದು ಎಂಬದಾಗಿ ಒಬ್ಬ ವೈದ್ಯನು ಸ್ವತಃ ಪರೀಕ್ಷೆಮಾಡಿ ತಿಳಿಸಿರುತ್ತಾನೆ.

****

ತುರ್ಕಿಯವರೂ ಬಲ್ಗೇರಿಯದವರೂ ಮನಸ್ಸಮಾಧಾನ ಹೊಂದಿದ್ದು ಯಥಾರ್ಥವಾದುದಲ್ಲವೆಂತಲೂ, ಈಚೆಗೆ ತುರ್ಕಿಯವರು ಸಲೋನಿಕ, ಮೊನಾಸ್ಟರ್, ಕೊಸ್ಸೋವೋ ಎಂಬೀ ಪ್ರಾಂತ್ಯಗಳಿಗೆ ೩೬ ಪಟಾಲಂ ಸೈನ್ಯವನ್ನು ಕಳುಹಿಸಿಕೊಟ್ಟರೆಂತಲೂ, ಈ ಪೈಕಿ ೨೫ ಪಟಾಲಮಿನವರು ಸ್ಮರ್ನಾ ಅನಟೋಲಿಯಾ ಶೀಮೆಗಳಿಂದ ಸಲೋನಿಕಕ್ಕೆ ಹೋಗಿರುತ್ತಾರೆಂತಲೂ ತಂತೀವರ್ತಮಾನ ಬಂದಿದೆ.

****

ಮಿ॥ ಕ್ಲೀರ್‌ಗೂ ಎಂಬೊಬ್ಬ ಕೋಟ್ಯಾಧೀಶ್ವರನು ಹತ್ತು ವರುಷಗಳ ಕೆಳಗೆ ಅಮೇರಿಕದಿಂದ ಕೆನಡಾ ರಾಜ್ಯಕ್ಕೆ ಹೋಗಿ ನಿಂತು ೧೨ ಕೋಟಿ ದ್ರವ್ಯವನ್ನು ಹಾಕಿಕೊಂಡು ನಾನಾ ಕಸಬುದಾರಿ ಕಾರ್ಖಾನೆಗಳನ್ನು ಏರ್ಪಡಿಸಿ, ೧೦ ಸಹಸ್ರ ಪ್ರಜಾಸಂಖ್ಯೆಯುಳ್ಳ ಒಂದು ಪಟ್ಟಣವನ್ನು ಕಟ್ಟಿ, ಅಷ್ಟು ಜನರನ್ನೂ ತನ್ನ ಕಾರ್ಖಾನೆಗಳಲ್ಲಿ ಕೆಲಸಕ್ಕೆ ನೇಮಿಸಿಕೊಂಡು, ತಾನೂ ಲಾಭ ಹೊಂದುತ್ತಲೂ, ಅವರಿಗೂ ಜೀವನ ನಡಿಸುತ್ತಲೂ ಬಂದನು. ಅವನು ಸ್ಥಾಪಿಸಿದ ಇಂಥಾ ಭಾರಿಯಾದ ಕಂಪನಿಯು ಈಗ ದಿವಾಳಿಯಾಯಿತೆಂದು ವರ್ತಮಾನ ಬಂದಿದೆ. ಆ ಹತ್ತು ಸಹಸ್ರ ಪ್ರಜೆಗಳೂ ಜೀವನಕ್ಕೆ ಮಾರ್ಗವಿಲ್ಲದೆ ನಾನಾ ದುಃಖ ಕಷ್ಟ ನಷ್ಟಗಳಿಗೆ ಗುರಿಯಾಗಿ ಅಲೆಯುತ್ತಿದ್ದಾರೆ.

****

ತುರ್ಕಿ ಸೈನಿಕರ ಹಿಂಸೆಯನ್ನು ತಡೆಯಲಾರದೆ ೫೦,೦೦೦ ಮ್ಯಾಸಿಡೋನಿಯಾ ಪ್ರಜೆಗಳು ಮನೆ ಮಠಗಳನ್ನು ಬಿಟ್ಟು ಸೋಫಿಯಾ ಸೀಮೆಯಲ್ಲಿ ಅಡಗಿಸಿಕೊಂಡಿದ್ದಾರೆ. ದಂಗೆಕೋರರಿಂದ ನಾಶಮಾಡಲ್ಪಟ್ಟ ಅವರ ಮನೆಗಳನ್ನು ಮತ್ತೆ ಕಟ್ಟಿಸಿಕೊಡಬೇಕೆಂತಲೂ, ಅವರನ್ನೆಲ್ಲಾ ವಾಪಸು ಕರಸಬೇಕೆಂತಲೂ ತುರ್ಕಿಯವರೂ ಬಲ್ಗೇರಿಯದವರೂ ಸನ್ನಾಹ ಮಾಡುತ್ತಿದ್ದಾರೆ. ಇದಕ್ಕಾಗಿ ತುರ್ಕಿ ಗವರ್ನಮೆಂಟಿನವರು ೩೦,೦೦೦ ಪೌಂಡುಗಳನ್ನು ಕೊಡುವರು. ಬಲ್ಗೇರಿಯದವರಿಗೂ ತುರ್ಕಿಯವರಿಗೂ ಇದ್ದ ದ್ವೇಷಾಸೂಯೆಗಳು ನಿವಾರಣೆಯಾದ ಕಾರಣ ಅವರು ತಮ್ಮ ಸೈನ್ಯದಿಂದ ೧೦,೦೦೦ ಮಂದಿಯನ್ನೂ, ಇವರು ತುರ್ಕಿ ಸೈನ್ಯದಿಂದ ೫೦,೦೦೦ ಮಂದಿಯನ್ನೂ ಕೆಲಸ ಬಿಡಿಸುವುದಾಗಿ ಮಾತು ಕೊಟ್ಟಿದ್ದಾರೆ.

****

ಚೀನಾ ರಾಜ್ಯಕ್ಕೆ ಸೇರಿದ ಕ್ವಾಂಗ್‌ಸಿ ಅಧಿಪತ್ಯದಲ್ಲಿ ಕ್ವೇಹಿಸಿನ್ ಪಟ್ಟಣದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅಧಿಕಾರಿಯಾಗಿದ್ದ ಚೇನ್ ಚಂಗ್ ಹುವಾ ಎಂಬ ದೊಡ್ಡಮನುಷ್ಯನನ್ನು ಆ ಅಧಿಪತ್ಯದ ವೈಸ್‌ರಾಯಿ ಅಪ್ಪಣೆಯ ಪ್ರಕಾರ ಕಳೆದವಾರ ಶಿರಚ್ಛೇದನ ಮಾಡಿಬಿಟ್ಟರು. ಆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟು ಅಧಿಕಾರಕ್ಕೆ ಬಂದು ೧॥ ವರುಷವಾಗಿತ್ತು. ಇಷ್ಟು ಸ್ವಲ್ಪ ಕಾಲದಲ್ಲೇ ಅವನು ಮಹಾ ಕ್ರೂರತನವನ್ನು ಪ್ರಕಾಶಪಡಿಸಿ, ತನ್ನ ಅಧಿಕಾರಕ್ಕೊಳಪಟ್ಟ ಪ್ರಜೆಗಳಲ್ಲಿ ಸುಮಾರು ೩,೦೦೦ ಮಂದಿಯನ್ನು ಕೊಲ್ಲಿಸಿರುತ್ತಾನೆಂಬುದೇ ಅವನ ಮೇಲೆ ಉಂಟಾದ ಅಪವಾದ. ದುಷ್ಟರೆಂದು ಕಂಡುಬಂದವರನ್ನೆಲ್ಲಾ ಅವನು ಹಿಡಿತರಿಸಿ ಕೊಲ್ಲಿಸದೆ, ಪ್ರಾಣ ಹೋಗುವತನಕ ದೊಣ್ಣೆಗಳಿಂದಲೂ ಸುತ್ತಿಗೆಗಳಿಂದಲೂ ಕೊರಡೆಗಳಿಂದಲೂ ಹೊಡೆಸುತ್ತಿದ್ದನಂತೆ. ಇವನೆಂಥಾ ಕ್ರೂರಿ.

****

ಸರ್ವಿಯಾ ರಾಜ್ಯದ ದೊರೆಯನ್ನೂ ರಾಣಿಯೇ ಮೊದಲಾದವರನ್ನೂ ಘಾತುಕಿ ಮಾಡಿ ಕೊಂದುಹಾಕಿದ ೭೮ ಮಂದಿ ಸೈನ್ಯಾಧಿಪತಿಗಳೂ, ಅವರ ಇಷ್ಟಮಿತ್ರರೂ ಈಗಿನ ದೊರೆಯಾದ ಪೀಟರನನ್ನು ಆವರಿಸಿಕೊಂಡು, ತಮ್ಮ ಮಾತಿನ ಪ್ರಕಾರವೇ ಅವನು ರಾಜ್ಯಭಾರ ಮಾಡುವಂತೆ ನೋಡಿಕೊಳ್ಳುತ್ತಿದ್ದಾರೆ. ಆ ಗುಂಪಿನವರೇ ಸಿವಿಲ್ ಮಿಲಿಟರಿ ಅಧಿಕಾರಗಳನ್ನೆಲ್ಲಾ ಚಲಾಯಿಸುತ್ತಿರುವರು. ಆಯುಧಶಾಲೆ, ಖಜಾನೆ ಮೊದಲಾದವು ಅವರ ಸ್ವಾಧೀನದಲ್ಲಿವೆ. ಇದನ್ನು ನೋಡಿ ಇತರ ಸೈನ್ಯಾಧಿಪತಿಗಳೂ ಉದ್ಯೋಗದಾರರೂ ಪ್ರಜೆಗಳ ಮುಖಂಡರೂ ಅಸಮಾಧಾನಪಟ್ಟು, ಅಂತರಂಗದಲ್ಲೇ ಘಾತುಕಿ ಮಾಡುತ್ತಿರುವರೆಂದೂ, ಆ ರಾಜ್ಯದಲ್ಲಿ ಪ್ರಜಾ ನೆಮ್ಮದಿಗೆ ಇಷ್ಟರಲ್ಲೇ ಭಂಗವುಂಟಾಗಬಹುದೆಂದೂ ಅಲ್ಲಿನ ಒಬ್ಬ ಬಾತ್ಮೀದಾರನು ವಿಲಾಯಿತಿಯ ಟೈಂಸ್ ಪತ್ರಿಕೆಗೆ ಬರೆದು ತಿಳಿಸಿರುತ್ತಾನೆ.

****

ಫ್ರೆಂಚ್ ಭಾಷೆ ತಿಳಿಯದವರು ಫ್ರಾನ್ಸ್ ದೇಶದಲ್ಲಿ ಸಂಚಾರ ಮಾಡುವಾಗ್ಯೆ ಅವರಿಗೆ ಕಷ್ಟ ನಷ್ಟಗಳುಂಟಾಗುವಂತೆ ಅಲ್ಲಿನ ರೈಲ್ವೆ ಕಂಪನಿಯವರು ಒಂದು ಉಪಾಯವನ್ನು ಮಾಡಿದ್ದಾರೆ. ಸಾಧಾರಣವಾಗಿ ಪ್ರಯಾಣ ಮಾಡತಕ್ಕವರ ಬಳಿ ಯಾವ ಯಾವ ತರಹ ಪದಾರ್ಥಗಳಿರುವವೋ ಅಂಥಾ ಪದಾರ್ಥಗಳ ಚಿತ್ರಗಳನ್ನು ಮಾಡಿಸಿ, ಪುಸ್ತಕ ಪ್ರಿಂಟು ಹಾಕಿಸಿ ಪ್ರಯಾಣಿಕರಿಗೆ ಹಂಚುತ್ತಾರೆ. ಪ್ರಯಾಣ ಮಾಡುವಾಗ್ಯೆ ಅವರು ತಮ್ಮ ಪದಾರ್ಥಗಳನ್ನು ಕಳೆಕೊಂಡರೆ ಆ ಚಿತ್ರ ಪುಸ್ತಕವನ್ನು ಅಧಿಕಾರಿಗಳಿಗೆ ತೋರಿಸಿ, ಇಂಥಾ ವಸ್ತುಗಳು ಕಳುವಾದುವೆಂದು ಸನ್ನೆ ಮಾಡಿ ತಿಳಿಸುವರು. ಅವರು ತೋರಿಸುವಂಥಾ ಪದಾರ್ಥಗಳನ್ನು ಅಧಿಕಾರಿಗಳು ಪತ್ತೆ ಮಾಡಿ ಕೊಡಲು ಅನುಕೂಲವಾಗಿದೆ. ಪದಾರ್ಥಗಳ ಹೆಸರು ಹೇಳುವುದಕ್ಕೆ ಪ್ರತಿಯಾಗಿ ಅವರು ಪದಾರ್ಥಗಳ ಚಿತ್ರವನ್ನು ತೋರಿಸುತ್ತಾರೆ.

"ಬಸವರಾಜವಿಜಯ."

ವಚನರೂಪವಾದದ್ದು. ಬಾಲಕರು ಕೂಡ ಸುಲಭವಾಗಿ ಓದಿ ತಿಳಿದುಕೊಳ್ಳಬಹುದು. ಬಸವಪುರಾಣದ ಕಥೆಗಳೆಲ್ಲಾ ಇದರಲ್ಲಿವೆ. ಶುದ್ಧವಾದ ಈ ದೊಡ್ಡ ಪುಸ್ತಕ ೧ಕ್ಕೆ ವಿ. ಪಿ. ಮೂಲಕ ೧—೪—೦. ೧೨ ಪ್ರತಿಗಳನ್ನು ತರಿಸಿಕೊಂಡರೆ ೧ ಉಚಿತ. ಬೇಕಾದವರು ಮೈಸೂರು ದೊಡ್ಡ ಪೇಟೆ ಎಂ. ಆರ್. ಕರಿಬಸವಶಾಸ್ತ್ರಿಗಳಿಗೆ ಬರೆದು ತರಿಸಿಕೊಳ್ಳಬೇಕು.

ನಿಮ್ಮ ತಲೆಯಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳೇ

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿ ಆಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ *ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ.

ದೋ ನೋ ಸಿಯಾ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತೊಂದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ಕಲ್ಕತ್ತದಲ್ಲಿ ಚೀಪರಾತಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಬಾರ್ಕವಾಯು, ಕುಷ್ಠವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ಹಣ್ಣುಗಳು, ತುಳುಕಡ್ಡಿ, ಸೊಳ್ಳೆ ಮತ್ತು ಹೇಳು ಕಡಿದದ್ದು, ಚಚ್ಚಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ಕ್ಕೆ ೦ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯು ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್, ಖರ್ಚು ಮಾಫಿ ಬಿಡುತ್ತೆ.

*********

ಹೋಮಿಯೋಪತಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಖರ್ಚು ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಪತಿಯ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳು ಕ್ರಯ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಡಿಪೋಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಪತಿಯಾ ಕಂಪೆನಿ, ೨೩ ಸೆಕೆಂಡು ಬೀಚ್ ಲೈನ್, ಮದರಾಸ್.

# ಶ್ರೀ ಕೃಷ್ಣವಿಲಾಸ ಪ್ರೆಸ್.

ನಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಪ್ರಸಿದ್ಧ ಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡ್ಸ್, ನೋಟೀಸ್ ಫಾರಂ, ಬ್ಯಾಲನ್ಸ್ ಷೀಟ್, ಪುಸ್ತಕಗಳು, ಇವೇ ಮೊದಲಾದ ವಿವಿಧವಾದ ಪ್ರಿಂಟಿಂಗ್ ಕೆಲಸಗಳು ಬಹು ಸೊಗಸಾಗಿಯೂ, ನೇತ್ರಾನಂದಕರವಾಗಿಯೂ ಸುಲಭ ಕ್ರಯಗಳಿಗೆ ಮಾಡಲ್ಪಡುತ್ತವೆ.

ಗೋಡು, ವರ್ಗ, ಮುಂತಾದ ಖಾಲೀ ಪುಸ್ತಕಗಳು; ನಾನಾವಿಧವಾದ ಗೋಲ್ಡ್ ಗಿಲ್ಟ್ ಕೆಲಸಗಳು; ಇನ್ನು ಇತರವಾದ ನಮೂನೆಯ ಬೈಂಡು ಕೆಲಸಗಳು ಇಂಗ್ಲೀಷು ಬೈಂಡಿನಂತೆ ಬಹು ಅಂದವಾಗಿ ತಯಾರು ಮಾಡಲ್ಪಡುತ್ತವೆ.

ಲಾಯರ್‌ಗಳ ಉಪಯೋಗಾರ್ಥವಾಗಿ ಬೇಕಾಗಿರುವ ಕವರ್ ವಕಾಲತ್‌ನಾಮಾ, ಜಾರಿ, ರಸೀದಿ, ನೋಟೀಸ್ ಫಾರಂಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಯಾವಾಗಲೂ ಬಿಕರಿಗೆ ಸಿದ್ಧವಾಗಿರುತ್ತವೆ.

ನಮ್ಮ ಕಂಪನಿಗೆ ವಿಲಾಯತಿಯಿಂದ ನವೀನವಾದ ಪ್ರಿಂಟುಗಳು ಮತ್ತು ಬೈಂಡು ಮಾಡುವ ಯಂತ್ರಗಳನ್ನು ತರಿಸಿರುತ್ತೇವೆ. ಇವುಗಳಿಂದ ಎಲ್ಲಾ ವಿಧವಾದ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಬಹು ತೃಪ್ತಿಕರವಾಗಿಯೂ, ರಮ್ಯತರವಾಗಿಯೂ ಮಾಡಲ್ಪಡುತ್ತವೆ.

ನಮ್ಮ ಆಫೀಸಿನಿಂದ ಯಾವ ವಿಷಯವನ್ನಾಗಲಿ ತಿಳಿಯಲು ಅಪೇಕ್ಷಿಸುವವರು ಟಪ್ಪಾಲು ಹಾಸಲನ್ನು ಕಳುಹಿಸಬೇಕು. ಕಾಗದಗಳನ್ನು ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ಕಂಪನಿಯನ್ನು ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡಪೇಟೆ ೨೫ನೇ ಡೋರ್ ನಂಬರ್ ಸ್ಥಳಕ್ಕೆ ವರ್ಗಾಯಿಸಿದೇವೆ.

ವಿಳಾಸ:—ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಮತ್ತು ಕಂಪನಿ,

ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

ಜ್ವರಹರಿ.




ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಜಳ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವೀಜನ್ ಆಫೀಸರ್ ಎಸ್. ಬಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಅನೇಕ ಜನಗಳು ಕಾಹಿಲೇ ಬಿಕ್ಕುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೩—೧೨ ಆ. ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

*********

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಸುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, 'ಕೂಡಲೇ ಗುಣ'ಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜೆನ್ರಿಯು ಓಮಂ ಕರ್ಪೂರವನ್ನು ನಾನೂ ನನ್ನ ಆಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟಕೂಡಲೆ ಆತರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ಖಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಹೊಸ್ತ ಡಿಪೋಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಜೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೩—೧೦—೧೯೦೩ ರಿಂದ ೯—೧೦—೧೯೦೩ ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರ ಸಂಖ್ಯೆಗಳು | |
|---|---|---|---|---|
| ಬೆಂಗಳೂರು ಪಟ್ಟಣ | 29 | 22 | 24 | 20 |
| ಮೈಸೂರು ,, | 229 | 178 | 00 | 143 |
| ಬೆಂಗಳೂರು ಡಿಸ್ಟ್ರಿಕ್ಟು | 133 | 93 | 118 | 94 |
| ಮೈಸೂರು ,, | 94 | 60 | 61 | 42 |
| ಕೋಲಾರ್ ,, | 44 | 31 | 34 | 28 |
| ಕೋಲಾರ್ ಚಿನ್ನದ ಗಣಿಗಳು | 5 | 4 | 3 | 2 |
| ತುಂಕೂರು ಡಿಸ್ಟ್ರಿಕ್ಟು | 63 | 51 | 70 | 45 |
| ಹಾಸನ ,, | 72 | 36 | 30 | 16 |
| ಚಿತ್ರದುರ್ಗ ,, | 42 | 37 | 49 | 43 |
| ಕಡೂರ್ ,, | 9 | 6 | 17 | 8 |
| ಶಿವಮೊಗ್ಗ ,, | 115 | 95 | 98 | 83 |
| ಒಟ್ಟು. | 826 | 611 | 675 | 509 |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಕಾರ್ತೀಕ ಶುದ್ಧ ೯ಮಿ ಗುರುವಾರದಿಂದ ಕಾರ್ತೀಕ ಶುದ್ಧ ಚತುರ್ದಶಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಅಕ್ಟೋಬರ್ ಮತ್ತು ನೊವೆಂಬರ್.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ತುಲಾ ಮಾಸ ತೇದಿ. |
|---|---|---|---|---|---|---|
| 29 | ಗುರು | ೯ಮಿ | 53 52 | ಶ್ರ | 17 18 | 13 |
| 30 | ಶುಕ್ರ * | ೧೦ಮಿ | 56 55 | ಧ | 21 12 | 14 |
| 31 | ಶನಿವಾರ | ಏಕಾದಶಿ | 60 0 | ಶ | 30 8 | 15 |
| 1 | ರವಿವಾ † | ಏಕಾದಶಿ | 3 21 | ಪೂಭಾ | 35 21 | 16 |
| 2 | ಚಂದ್ರ ‡ | ದ್ವಾದಶಿ | 6 50 | ಉತ್ತಭಾ | 39 10 | 17 |
| 3 | ಭೌಮ ¶ | ತ್ರಯೋದಶಿ | 9 6 | ರೇ | 42 33 | 18 |
| 4 | ಬುಧ : | ಚತುರ್ದಶಿ | 10 0 | ಅ | 11-21 | 19 |

* ತುಲಾ ಸಂಕ್ರಮಣ. † ಸರ್ವತ್ರ ಏಕಾದಶಿ. ‡ ಉತ್ಥಾನದ್ವಾದಶಿ. ¶ ಮೃತ್ಯುಯೋಗ. : ವೈಕುಂಠಚತುರ್ದಶಿ.

ಪೇಟೆ ಧಾರಣೆ.

| ದಿನಸಿ. | ಮೈಸೂರು. | ಬೆಂಗಳೂರು. |
|---|---|---|
| ಕಡ್ಡೀ ಅಕ್ಕಿ ಸಲ್ಲಾ ೧ಕ್ಕೆ | ರೂ. ೧೦—೦—೦ | ೧೦—೪—೦ |
| ಕೆಂಬೂತಿ ಅಕ್ಕಿ ಅವಲ್ .. | .. ೧೦—೧೨—೦ | ೧೧—೪—೦ |
| ,, ಮಧ್ಯಮ | .. ೧೮—೪—೦ | ೧೦—೮—೦ |
| ಜಾಪ್ರಾಣಿ ಅಕ್ಕಿ .. | .. ೯—೧೦—೦ | ೯೦—೦—೦ |
| ಸಣ್ಣಕ್ಕಿ ಅವಲ್ .. | .. ೧೨ ೮—೦ | ೧೨—೦—೦ |
| ,, ಮಧ್ಯಮ .. | .. ೧೨—೦—೦ | ೧೦—೬—೦ |
| ತೊಗರೀ ಬೇಳೆ ಸಲ್ಲಾ ೧ಕ್ಕೆ | .. ೧೩—೧೨—೦ | ೧೪—೦—೦ |
| ,, ಮಧ್ಯಮ .. | .. ೧೩ ೮—೦ | ೧೩—೦—೦ |
| ಕೈಗ ರಾಗಿ ಸಲ್ಲಾ ೧ಕ್ಕೆ .. | .. ೩—೧೨—೦ | ೨—೧೦—೬ |
| ಕಾರ್ರಾಗಿ .. .. | .. ೩—೮—೦ | ೨—೭—೩ |
| ಜೋಳ .. .. | .. ೨—೬—೦ | ೪—೪—೦ |
| ಹಲಸಂದೆ ಸಲ್ಲಾ ೧ಕ್ಕೆ .. | .. ೩—೪—೦ | ೮—೬—೦ |
| ಬಿಳೀ ಅವರೆ .. | .. ೮—೧೨—೦ | ೭—೦—೦ |
| ಹೆಸರು .. .. | .. ೯—೮—೦ | ೮—೦—೦ |
| ಉದ್ದು .. .. | .. ೮ ೧೨—೦ | ೭—೧೨—೦ |
| ಕಡಲೆ .. .. | .. ೧೦—೦—೧ | ೮—೮—೦ |
| ಎಳ್ಳು .. .. | .. ೧೨—೬ ೦ | ೭—೧೩—೬ |
| ಹುರುಳಿ .. .. | .. ೩—೮ ೦ | ೪—೨—೦ |
| ಹರಳು ೧೨ ಸೇರಿಗೆ .. | .. ೯—೮—೦ | ೪—೧೨—೦ |
| ಸೀಗೇಕಾಯಿ ಮಣ ೧ಕ್ಕೆ .. | .. ೧—೮—೦ | ೧—೮—೦ |
| ಮೆಣಸಿನಕಾಯಿ .. .. | .. ೩—೦—೦ | ೩—೦—೦ |
| ,, ಮಧ್ಯಮ .. | .. ೩—೦ ೦ | ೨—೮—೦ |
| ಬೆಲ್ಲ ದೊಡ್ಡ ಅಚ್ಚು .. | .. ೪—೮—೦ | ಮ ೨—೦—೦ |
| ಒಳ್ಳೆಣ್ಣೆ ಮಣ ೧ಕ್ಕೆ .. | .. ೩—೧೪ ೦ | ೪—೦—೦ |
| ಹರಳೆಣ್ಣೆ ,, .. | .. ೩—೧೨—೦ | ೨—೧೨—೦ |
| ಕೊತ್ತುಂಬರಿ ಸಲ್ಲ ೧ಕ್ಕೆ .. | .. ೬—೦—೦ | ೬—೪—೦ |
| ಉಪ್ಪು ,, .. | .. ೧೦—೬—೦ | ೯—೬—೦ |
| ಹುಣಸೇ ಹಣ್ಣು .. | .. ೬—೧೪—೦ | ೧—೬—೦ |
| ,, ಕಳೇದು .. | .. ೬—೧೦—೦ | ೬—೧೪—೦ |
| ಹುಲ್ಲು .. .. | .. ೧೦ ೮—೦ | ೧೧—೮—೦ |
| ಸೀಮೆಯಂಚು ಬೆಟ್ಟ ೧ಕ್ಕೆ .. | .. ೪—೯—೦ | ೩—೮—೦ |
| ತೆಂಗಿನಕಾಯಿ ೧೦೦ ಕ್ಕೆ .. | .. ೪—೪—೦ | ೩—೮—೦ |
| ಅಳಲೇಕಾಯಿ ಮಣ ೧ಕ್ಕೆ .. | .. ೬—೧೪—೦ | ೬—೧೨—೦ |
| ಅಂಟ್ವಾಳದಕಾಯಿ ಮಣ ೧ಕ್ಕೆ .. | .. ೦—೧೪—೬ | ೬—೧೬—೦ |
| ಚಿನ್ನ (ಪೌನ್) ಕೆಂಪು .. | .. ೧೫—೪—೦ | ೧೫—೪—೦ |
| ,, ,, ಹಸಿಮ .. | .. ೧೫—೮—೦ | ೧೫—೮—೦ |
| ,, ,, ಗಟ್ಟಿ ತೊಲ ೧ಕ್ಕೆ .. | .. ೨೩—೦—೦ | ೨೪—೫—೦ |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ .. | .. ೭೨—೦—೦ | ೭೫—೮—೦ |

Printed and Published by the Rev. E. W. Thompson, M.A., the Proprietor and Manager, Wesleyan Mission Press, Mysore. 29/10/1903.

# ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು —:o:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩ | ಮೈಸೂರು—ಸನ್ ೧೯೦೩ ನೇ ಇಸವಿ ನೊವೆಂಬರ್ ತಾರೀಖು ೫ ನೇ ಗುರುವಾರ. | ಸಂಚಿಕೆ ೨೩

ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತದ ಕನ್ನಡ ಟೀಕು.

4

ವಿರಾಟಪರ್ವ ಎರಡನೇ ಭಾಗ ೩ ರೂ. ವಿರಾಟಪರ್ವ ೧ ರೂ. ಬೀಷ್ಮಪರ್ವ ೨ ರೂ. ದ್ರೋಣಪರ್ವ ಎರಡನೇ ಭಾಗ ೨—೮—೦ ...ಪರ್ವ ೬ ಆ. ಅನುಶಾಸನೀಕಪರ್ವ ೩—೧೨—೦ ರೂ.

ಶ್ರೀ ಚಾಮರಾಜೋಕ್ತಿ ವಿಲಾಸವೆಂಬ ಕನ್ನಡ ರಾಮಾಯಣ.

ಬಾಲಕಾಂಡ ೧ ರೂ. ಅಯೋಧ್ಯಾಕಾಂಡ ೨ ರೂ. ಅರಣ್ಯಕಾಂಡ ೧ ರೂ. ಕಿಷ್ಕಿಂಧಾಕಾಂಡ ೧ ರೂ. ಸುಂದರಕಾಂಡ ೧ರೂ. ಯುದ್ಧಕಾಂಡ ೨—೮—೦ ರೂ. ಉತ್ತರಕಾಂಡ ೧—೮—೦

ಶ್ರೀ ಕೃಷ್ಣರಾಜ ವಾಣೀ ವಿಲಾಸ ಶ್ರೀಮದ್ಭಾಗವತದ ಕನ್ನಡ ಟೀಕು

ಪ್ರಥಮ ದ್ವಿತೀಯ ತೃತೀಯ ಸ್ಕಂದಗಳು ೨ ರೂ. ಚತುರ್ಥ ಪಂಚಮ ಸ್ಕಂಧಗಳು ೧—೧೨—೦ ರೂ. ಷಷ್ಟಸಪ್ತಮ ಅಷ್ಟಮ ನವಮಸ್ಕಂದಗಳು ೨—೮—೦ ರೂ. ದಶಮಸ್ಕಂದ ೨—೮—೦ ಏಕಾದಶ ದ್ವಾದಶಸ್ಕಂಧಗಳು ೧—೧೨—೦ ರೂ.

ನಮ್ಮಲ್ಲಿರುವ ಹಣ್ಣಿನ ಗಿಡಗಳ, ಹುವ್ವಿನ ಗಿಡಗಳ ಮತ್ತು ಬೀಜಗಳ ಕ್ಯಾಟಲಾಗನ್ನು ಅಪೇಕ್ಷಿಸಿದಲ್ಲಿ ಕಳುಹಿಸುತ್ತೇವೆ

ಎಂ ರುದ್ರಪ್ಪ ಅಂಡ್ ಸನ್ಸ್,

ಲಾಲ್‌ಬಾಗ್ ರೋಡ್, ಬೆಂಗಳೂರು ಸಿಟಿ.

## ಸ್ಟಾಂಡರ್ಡ್

## ಲೈಫ್ ಇನ್ಶೂರೆನ್ಸ್ ಕಂಪೆನಿ.

16

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಇಂಡಿಯಾ ದೇಶದಲ್ಲಿ ಲೈಫ್ ಇನ್ಶೂರೆನ್ಸ್ ಯಾನೆ ಜೀವವನ್ನು ಭೀಮಾ ಮಾಡಿಕೊಳ್ಳುವ ಕಂಪೆನಿಗಳಲ್ಲಿ ಇದು ಬಹು ಹಳೆದಾಗಿಯೂ ಹೆಚ್ಚಿನ ಬಂಡವಾಳದ್ದಾಗಿಯೂ ಇದೆ ಭೀಮಾದಾರರಾಗತಕ್ಕವರು (ಲೈಫ್ ಎಶ್ಯೂರ್ ಮಾಡತಕ್ಕವರು) ಈ ಕಂಪೆನಿಯ ಚಂದಾ ದರ, ಷರತ್ತುಗಳು ನೋಡಲಾದವಾಗ ಲ್ಲಿ ಇತರ ಕಂಪೆನಿಯವುಗಳೊಡನೆ ಹೋಲಿಸಿನೋಡಿದರೆ ಇಲ್ಲಿ ಜೀವಮಾನವನ್ನು ಭೀಮಾ ಮಾಡುವವರಿಗೆ ಎಷ್ಟು ಸೌಕರ್ಯಗಳುಂಟೆಂಬುದು ಗೊತ್ತಾಗುವುದು.

ಈ ಕಂಪೆನಿಯ ಭೀಮಾ ನಿಬಂಧನೆಗಳು ಬಹು ಅನುಕೂಲವಾದವು. ಭೀಮಾದಾರರುಗಳಿಗೆ ಚಿಕಾಸೆಯನ್ನುಂಟುಮಾಡುವ ನಿಬಂಧಗಳೇನೂ ಇಲ್ಲ

ಗೊತ್ತಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲೇ ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂಪಾಯಿಗಳನ್ನು ಕಂಪನಿಯವರು ಕೊಡುವ ಬಾಧ್ಯತೆಯಾಗಿ ಪಡೆಯಬೇಕಾದರೆ ಭೀಮಾದಾರನು ಕಂಪೆನಿಗೆ ಕೊಡಬೇಕಾದ ಚಂದಾ ದರಗಳ ಪೈಕಿ ಕೆಲವನ್ನು ಇಲ್ಲಿ ನೋಡಿ.

| | ೫೦ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಪಡೆಯಬೇಕಾದರೆ ಪಾಲಿಸಿಯಾನ ಕಂಪೆನಿಗೆ ಕೊಡುವದು. | ೫೫ ವಯಸ್ಸಿನಲ್ಲಾಗಲಿ ಇದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಯನ್ನು ಪಡೆಯಬೇಕಾದರೆ ಪಾಲಿಸಿಯಾನ ಕಂಪೆನಿಗೆ ಕೊಡುವದು. |
|---|---|---|
| ಪಾಲಿಸಿ ಪಡೆಯುತ್ತಿದ್ದ ವಯಸ್ಸು | | |
| ೨೦ | ರೂ. ೬—೧೨—೮ | ರೂ. ೬—೦—೦ |
| ೨೫ | ,, ೭—೧೫—೪ | ,, ೬—೧೪—೦ |
| ೩೦ | ,, ೯—೧೨—೮ | ,, ೮—೨—೦ |
| ೩೫ | ,, ೧೬—೧೨—೮ | ,, ೧೦—೧—೪ |
| ೪೦ | | ,, ೧೩—೪—೮ |

೨,೦೦೦ ರೂ. ಗಿಂತಲೂ ಕಡಿಮೆಯಾಗಲಿ ಹೆಚ್ಚಾಗಲಿ ಹಣವನ್ನು ಯಾವಾಗಲಿ ವಯಸ್ಸಿನಲ್ಲಿ ಪಡೆಯಬೇಕೆಂದಿದ್ದರೂ ಅದಕ್ಕೆ ಚಂದಾ ದರವೇನೆಂಬುದನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಇದುವರೆಗೆ ಜಾರಿಯಲ್ಲಿದ್ದ ಚಂದಾ ದರಗಳನ್ನು ಕಡಮೆ ಮಾಡಿದ್ದೇವೆ. ಹಾಲಿ ವರ್ಷಕ್ಕೆ ತಯಾರಾಗಿರುವ ಹೊಸ ಚಂದಾ ಪಟ್ಟಿಯನ್ನೂ ಭೀಮಾ ದರಖಾಸ್ತು ಫಾರಂಗಳನ್ನೂ ಇದೇ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ. ಎಂ ಸೂರ್ಯನಾರಾಯಣಪ್ಪ,

ಕಮಿಷನ್ ಮತ್ತು ಜನರಲ್ ಏಜಂಟ್, ಶಿವಮೊಗ್ಗ

## ಗ್ರಾಂತಸಂಜೀವಿನಿ.

10

೧ ರೂ. ೮ ಆ.; ವಿ. ಪಿ. ಚಾರ್ಜ್ ೩ ಆ.

ಕೆ. ನರಸುಂಕ್ಸೈಯ್ಯ ಮತ್ತು ಕಂಪೆನಿ, ಮೈಸೂರು

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

8

೧೮೯೫ ನೆ ಇಸವಿ ಮೈಸೂರು ಕಂಪೆನಿ ಆಕ್ಟಿಗೆ ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ಶ್ರೀಮನ್ ಮೈಸೂರು ಮಹಾರಾಜರವರ ಗೌರ್ನಮೆಂಟಿನವರಿಂದ ಗ್ಯಾರಂಟಿ ಮಾಡಲ್ಪಟ್ಟ ಸದರಿ ಕಂಪೆನಿಯ ಷೇರು ಒಂದಕ್ಕೆ ೨೫ ರೂಪಾಯಿ ಪ್ರಕಾರ ೨೦,೦೦೦ ಷೇರುಗಳಿಂದ ಆಗುವ ೫,೦೦,೦೦೦ ರೂಪಾಯಿ ಭಂಡವಾಳ. ಷೇರುಗಳು ತೆಗೆದುಕೊಳ್ಳುವವರು ಇದರ ಡೈರೆಕ್ಟರ್ ಮಾಡಿರುವವರಿಂದ ವಿಶೇಷ ತಪಸೀಲು ತಿಳಿದುಕೊಳ್ಳಬಹುದು. ಅಪ್ಲಿಕೇಷನ್‌ಗಳನ್ನು ಮತ್ತು ಮೊಬಲಗನ್ನೂ ಇವರಲ್ಲೇ ಕಳುಹಿಸಬಹುದು.

ಬಿ. ವಿ. ರಾಮಸ್ವಾಮಿ ಶೆಟ್ರು, ಬಿ. ಏ.,

ಅಡ್ವೊಕೇಟ್ ಮತ್ತು ಜನರಲ್ ಏಜಂಟ್,

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ,

ನಗರ್ತಪೇಟೆ, ಬೆಂಗಳೂರು.

## ROBINSON'S

## PATENT BARLEY.

## ರಾಬಿನ್‌ಸನ್‌ಯವರ

## ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿವ

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಪವೆಗೋಧಿಯಿಂದ ಮಾಡಿದೆ. ಹಸ್ತ ಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೆ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ಬೇರೆ ದ್ರವ್ಯವನ್ನು ಕೆಲವರು ಮಾರುತ್ತಾ ಇರುವದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನು ಕೆಳಗ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

ಇಗೋ! ಇನ್ನೊಂದು ಹೊಸ ಪುಸ್ತಕ! ಬೇಗ ನೋಡಿರಿ!!

ಸ್ವಪ್ರಯಾಸ ಫಲದೀಪಿಕೆ.

ಈ ಪುಸ್ತಕವು ಸ್ಮೈಲ್ಸ್ ಸೆಲ್ಫ್ ಹೆಲ್ಪ್ ಎಂಬ ಲೋಕಪ್ರಸಿದ್ಧವಾದ ಪುಸ್ತಕದ ಆಧಾರದ ಮೇಲೆ, ಕನ್ನಡಿಗರಿಗೆ ಅನುಕೂಲವಾಗಿ ಬರೆಯಲ್ಪಟ್ಟಿದೆ. ಈ ಪುಸ್ತಕವು ವಿಶೇಷವಾದ ಹೆಸರನ್ನೂ ಕೀರ್ತಿಯನ್ನೂ ಪಡೆದಿರುವದರಿಂದ ಲೋಕದ ಅನೇಕ ಭಾಷೆಗಳಲ್ಲಿ ತರ್ಜುಮೆ ಮಾಡಲ್ಪಟ್ಟಿದೆ. ಅನೇಕ ಜನಾಂಗದವರು ಈ ಪುಸ್ತಕವನ್ನೇ ಓದಿದ್ದರಿಂದಲೇ ನಾಗರೀಕವಂತರಾದರು. ಈ ಪುಸ್ತಕವು ಧೈರ್ಯಗುಂದಿದವರಿಗೆ ಧೈರ್ಯವನ್ನೂ, ಸಮರ್ಥರಿಗೆ ಮತ್ತಷ್ಟು ಸಾಮರ್ಥ್ಯವನ್ನೂ ದಕ್ಷರಿಗೆ ವಿವೇಕವನ್ನೂ ಕೊಡುವದಾಗಿಯೂ ಪ್ರಸಿದ್ಧವಾಗಿದೆ. ಪುಸ್ತಕದ ಕ್ರಯ ನಾಲ್ಕಾಣೆ ಮಾತ್ರ. ವಿ. ಪಿ ಪಿ ಯಲ್ಲಿ ತರಿಸಿಕೊಂಡರೆ ಆರು ಆಣೆಗಳಾಗುವವು. ಬೇಗ ತರಿಸಿಕೊಳ್ಳಿ! ವಿಳಾಸ — ಮ್ಯಾನೇಜರ್,

ಸಿ. ಎಲ್. ಎಸ್ ಬುಕ್ ಡಿಪೋ, ಮೈಸೂರು.

ಉಪರಂಜಿತವಾದ ಪುಸ್ತಕಗಳು! ಬೇಗನೋಡಬಾರದೇ

ಮೈಸೂರು ಸರ್ಕಾರದ ವಿದ್ಯಾ ಇಲಾಖೆಯವರು ಈ ಪುಸ್ತಕಗಳ ಅಮೂಲ್ಯತ್ವವನ್ನು ತಿಳಿದು ನೂರೈವತ್ತು ರೂಪಾಯಿಗಳಿಗಿಂತ ಹೆಚ್ಚಾಗಿಯೇ ತರಿಸಿಕೊಂಡಿದ್ದಾರೆ.

ಪುರಾತನ ಗ್ರೀಕರ ಚರಿತ್ರೆ ಬಹು ರಸಿಕವಾಗಿದೆ. ಚಿತ್ರಗಳಿಂದ ಕೂಡಿದ್ದು ಕ್ರಯ ೦—೨—೧

ಪ್ರಾಚೀನ ಮೃಗಗಳ ವರ್ಣನೆ. ಚಿತ್ರಗಳಿಂದ ತುಂಬಿದೆ. ೦—೧—೦

ಖಗೋಳ ಶಾಸ್ತ್ರ ಸಿದ್ಧಾಂತ. ಎಲ್ಲರೂ ಓದತಕ್ಕದ್ದು ಅನೇಕ ಪಟಗಳಿವೆ ೦—೦—೦

ಪಕ್ಷಿಗಳ ವರ್ಣನೆ ಸ್ಕೂಲ್‌ಹುಡುಗರಿಗೆ ಇನಾಮಾಗಿ ಕೊಡುವದಕ್ಕೆ ಯೋಗ್ಯವಾಗಿದೆ. ಅನೇಕ ಪಕ್ಷಿಗಳ ಪಟಗಳೂ, ಅವುಗಳ ಚರಿತ್ರೆಗಳೂ ಇದರಲ್ಲಿ ಅಡಕವಾಗಿವೆ ೦—೦—೦

ಇಂಡಿಯಾ ಚಕ್ರವರ್ತಿಯವರಾದ ಎಡ್ವರ್ಡ್ ಸಾರ್ವಭೌಮರ ಮತ್ತು ಚಕ್ರವರ್ತಿನಿಯರಾದ ಅಲೆಕ್ಸಾಂಡರಾ ಅಮ್ಮನವರ ಜೀವಮಾನಗಳ ಚರಿತ್ರೆ. ಇದರಲ್ಲಿ ಗ್ಲೇಜ್ ಕಾಗದದಮೇಲೆ ಹಾಕಿರುವ ಪಟಗಳು ಅನೇಕವಾಗಿವೆ ಪ್ರತಿಯೊಬ್ಬರ ಮನೆಯಲ್ಲೂ ಇರತಕ್ಕ ಪುಸ್ತಕ. ಇಂಥಾ ಉತ್ಕೃಷ್ಟವಾದ ಪುಸ್ತಕಕ್ಕೆ ಬೆಲೆಯು ಬಹು ಕಡಿಮೆಯಾಗಿದೆ. ಕ್ರಯ ೦—೪—೦

ಚಕ್ರವರ್ತಿಗಳ ಕಿರೀಟಧಾರಣೆಯ ಪುಸ್ತಕ ಕ್ರಯ ೦—೨—೬

ಕ್ರಿಮಿಗಳ ವರ್ಣನೆ (ಸಚಿತ್ರ) ೦—೯—೦

ದೇಹವೆಂಬ ನನ್ನ ಮನೆ (ಸಚಿತ್ರ) ೦—೧—೦

ಪ್ರಬೋಧಚಂದ್ರಿಕೆ) ೦—೨—೧

ಚಕ್ರವರ್ತಿ ಹೇಳಿದ ಕತೆಗಳು ೦—೧—೦

ಕುಂಬಾರನಾದ ಪಾಲಿಸಿಯ ಚರಿತ್ರೆ ೦—೧—೦

ಗ್ರೀನ್‌ಲಾಂಡಿನ ಚರಿತ್ರೆ ೦—೧—೬

ಮಾರ್ಟಿನ್ ಲೂಥರನ ಚರಿತ್ರೆ ೦ ೧—೬

ಆರ್ಯರ ಪೂರ್ವೋತ್ತರ ಚರಿತ್ರೆ ೦—೧—೬

ಘನತೆಯುಳ್ಳ ಸ್ತ್ರೀಯರ ಚರಿತ್ರೆ ೦—೧—೬

(೧) ವೇದಗಳನ್ನು ಬರೆದವರು ಯಾರು ? (೨) ಶುದ್ಧವಾದ ನೀರಿನ ಬೆಲೆ, (೩) ಸಾಲ ಮತ್ತು ಸಾಲತೀರಿಸುವ ಮಾರ್ಗ, (೪) ಇಂಡಿಯಾದೇಶದ ಬಡತನದ ಕಾರಣಗಳು, (೫) ಬಾಲ್ಯವಿವಾಹ, (೬) ಪ್ರಾಯಶ್ಚಿತ್ತವು, (೭) ಬಯ್ಯುವದು, (೮) ಮಾನವಧರ್ಮಶಾಸ್ತ್ರ, (೯) ಗ್ರಹಣಗಳು, (೧೦) ಮಕ್ಕಳನ್ನು ಬೆಳಸತಕ್ಕ ವಿಧ. (೧೧) ಶ್ರಾದ್ಧಗಳು, (೧೨) ಎಲ್ಲರೂ ಸಹೋದರರು, (೧೩) ಮಂತ್ರ, ತಂತ್ರ, ಯಂತ್ರಗಳು, (೧೪) ಜ್ಯೋತಿಷಶಾಸ್ತ್ರ (೧೫) ಆರೋಗ್ಯಪ್ರಕಾಶಿಕೆ. ಈ ಪುಸ್ತಕಗಳ ಪ್ರತಿಯೊಂದಕ್ಕೆ ಮೂರು ಕಾಸು ಕ್ರಯವಿದೆ ಮೇಲ್ಕಂಡ ಹದಿನೈದು ಪುಸ್ತಕಗಳನ್ನು ಒಟ್ಟಾಗಿ ತರಿಸತಕ್ಕದ್ದು. ಬಿಡಿಯಾಗಿ ಮಾರಲಾರೆವು ಈ ಪುಸ್ತಕಗಳನ್ನು ಓದಿದಮೇಲೆ ಬರುವ ಸಂತೋಷವನ್ನು ವಿವರಿಸಲಾಗದು ಜಾಗ್ರತೆ ನೋಡಿ. ವಿ. ಪಿ. ಪಿ. ಮೂಲಕವಾಗಿಯಾಗಲಿ ಅಥವಾ ಹಣವನ್ನು ಮುಂಗಡವಾಗಿ ಕಳುಹಿಸೋಣದ್ದರಿಂದಲಾಗಲಿ ಪುಸ್ತಕಗಳನ್ನು ಪಡೆಯಬಹುದು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

## ನಮ್ಮ ಚಂದಾದಾರರಿಗೆ ನೋಟಿಸ್.

"ವೃತ್ತಾಂತ ಪತ್ರಿಕೆ" ಯ ಏಜಂಟರು ಚಂದಾ ವಸೂಲ್ಮಾಡಿ ಕೊಂಡದ್ದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲ.

ಮ್ಯಾನೇಜರ್,

ಮೈಸೂರು. "ವೃತ್ತಾಂತ ಪತ್ರಿಕೆ" ಆಫಿಸ್.

## ವೃತ್ತಾಂತ ಪತ್ರಿಕೆ.

ಸನ್ ೧೯೦೩ ನೇ ಇಸವಿ ನೊವೆಂಬರ್ ತಾ|| ೫ ನೇ ಗುರುವಾರ.

### ಇಂಗ್ಲಾಂಡು ಪ್ರಭುತ್ವದಲ್ಲಿ ಸಂಭವಿಸಿರುವ ಪ್ರಕೃತ ಮಹಾ ತರ್ಕವು.

ದೇಶಾಂತರಗಳಿಂದ ಗ್ರೇಟ್ ಬ್ರಿಟನಿನೊಳಕ್ಕೆ ಆಮದಾಗುವ ಪದಾರ್ಥಗಳ ಮೇಲೆ ತೆರಿಗೆಯನ್ನು ವಿಧಿಸುವ ವಿಷಯದಲ್ಲಿ ಇಂಗ್ಲಾಂಡಿನ ರಾಜ್ಯಕಾರ್ಯಧುರಂಧರರು ದೇಶದಲ್ಲೆಲ್ಲಿಯೂ ಭಾಷಣಗಳನ್ನು ಮಾಡುತ್ತಾ, ತಮ್ಮ ಅಭಿಪ್ರಾಯಗಳನ್ನು ಪ್ರಜೆಗಳ ಲಕ್ಷ್ಯಕ್ಕೆ ತರುವ ಮಹಾ ಕಾರ್ಯವನ್ನು ಕೈಗೊಂಡಿದ್ದಾರೆ. ೧೮೪೬ ನೇ ಸಂವತ್ಸರದಿಂದೀಚೆಗೆ ಇಂಗ್ಲಾಂಡಿನೊಳಕ್ಕೆ ಆಮದಾಗುವ ಪರದೇಶಗಳ ಯಾವ ವಸ್ತುವಿನ ಮೇಲಾಗಲಿ ಇಂಗ್ಲಿಷಿನವರು ತೆರಿಗೆಯನ್ನು ಹಾಕದೇನೇ ತರಿಸಿಕೊಳ್ಳುವವರಾಗಿದ್ದಾರೆ. ಆದರೆ ಅಮೇರಿಕದ ಸಂಯುಕ್ತ ಸಂಸ್ಥಾನಗಳು, ಜರ್ಮನಿ, ಫ್ರಾನ್ಸು, ಈ ದೇಶಗಳವರಾದರೋ ತಮ್ಮ ತಮ್ಮ ದೇಶಗಳೊಳಕ್ಕೆ ಬರುವ ಇಂಗ್ಲಿಷ್ ತಯಾರಿಯಾದ, ಮುಖ್ಯವಾಗಿ ಯಂತ್ರವಿಶೇಷಗಳಿಂದ ಮಾಡಿದ, ವಸ್ತುಗಳ ಮೇಲೆ ತೆರಿಗೆಯನ್ನು ಹಾಕುತ್ತ ಬಂದಿದ್ದಾರೆ. ಇದರಿಂದೇನಾಗಿದೆಯೆಂದರೆ—ಆ ಪರದೇಶಗಳವರು ಇಂಗ್ಲಾಂಡಿನಲ್ಲಿ ತಯಾರಾಗಲ್ಪಟ್ಟ ವಸ್ತುಗಳನ್ನು ತಮ್ಮಲ್ಲಿಗೆ ತರಿಸಿಕೊಳ್ಳುವುದೇ ಕಡಮೆಯಾಯಿತು. ಮತ್ತು ಆಯಾ ದೇಶಗಳ ಕಾರ್ಖಾನೆಯವರೇ ಅಂಥ ವಸ್ತುಗಳನ್ನು ತಯಾರುಮಾಡಿಕೊಳ್ಳುವುದು ಹೆಚ್ಚಾಯಿತು. ಇದಕ್ಕೊಂದು ದೃಷ್ಟಾಂತವನ್ನಿಲ್ಲಿ ಉದಾಹರಿಸಬಹುದು. ಭೂಲೋಕದ ಹೆಚ್ಚು ಕಡಮೆ ಎಲ್ಲಾ ದೇಶಗಳಲ್ಲಿಯೂ ಉಪಯೋಗಿಸುವ ಕಬ್ಬಿಣದ ಯಂತ್ರವಿಶೇಷಗಳೆಲ್ಲವೂ ಗ್ರೇಟ್ ಬ್ರಿಟನಿನೊಳಗೇ ತಯಾರಾಗುತ್ತಿತ್ತು. ಆದರೆ ಅವು ಜರ್ಮನಿಗೆ ಹೋಗ, ವಾಗ ಅವುಗಳ ಮೇಲೆ ಆ ಸರ್ಕಾರದವರು ತೆರಿಗೆಯನ್ನು ಬಹಳ ಹೆಚ್ಚು ಮಾಡಿದ ಕಾರಣ ಅವುಗಳ ಕ್ರಯವೂ ಹೆಚ್ಚಿ, ಆ ದೇಶದವರು ತಾವೇ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೂ ಸ್ವಂತವಾಗಿ ಅಂಥ ಯಂತ್ರಗಳನ್ನು ಮಾಡಿ ಲಾಭಕ್ಕೆ ಮಾರುವುದಕ್ಕೂ ಶಕ್ತರಾದರು. ಇದೇ ಪ್ರಕಾರ ಅಮೇರಿಕದಲ್ಲೂ ಆಯಿತು. ಇದಲ್ಲದೆ ಯಾವ ದೇಶದಿಂದ ಈ ಸಾಮಾನುಗಳನ್ನು ತರಿಸಿಕೊಳ್ಳುತ್ತಿದ್ದರೋ ಆ ಇಂಗ್ಲಾಂಡ್ ದೇಶದಲ್ಲಿಯೇ ತಮ್ಮ ಸ್ವಂತ ಸಾಮಾನುಗಳನ್ನು ಮಾರುವಷ್ಟರಮಟ್ಟಿಗೆ ತಮ್ಮ ದೇಶದ ಕೈಗಾರಿಕೆಗಳನ್ನು ವೃದ್ಧಿಪಡಿಸಿಕೊಂಡರು. ಇಷ್ಟೇ ಅಲ್ಲ. ಇಂಗ್ಲಾಂಡಿನಲ್ಲಿ ನಡೆಯುತ್ತಿದ್ದ ಕೆಲವು ಕಾರ್ಖಾನೆಗಳೇ ಲಯವಾದುವು.

ವ್ಯಾಪಾರ ವಿಷಯದಲ್ಲಿ ಇಂಗ್ಲಾಂಡಿನ ಸ್ಥಿತಿಯು ಹೀಗಾಗಿರುವುದರಿಂದ ಇತರ ದೇಶಗಳಿಂದ ಇಂಗ್ಲಾಂಡಿನೊಳಕ್ಕೆ ಬರುವ ಸಾಮಾನುಗಳ ಮೇಲೆ ತೆರಿಗೆಯನ್ನು ಹಾಕಿ ಪರದೇಶಗಳವರಿಗೆ ಪ್ರತೀಕಾರವನ್ನು ಮಾಡುವುದು ಸಮ್ಯುಚಿತವೇ ಅಲ್ಲವೇ ಎಂಬ ವಿಷಯದಲ್ಲಿ ಈ ರಾಜ್ಯಕಾರ್ಯಧುರಂಧರರು ತರ್ಕ ಮಾಡುತ್ತಿದ್ದಾರೆ. ಈ ಪ್ರಕಾರ ಬ್ರಿಟಿಷರು ಪರದೇಶೀಯ ವಸ್ತುಗಳ ಮೇಲೆ ತೆರಿಗೆಯನ್ನು ಹೆಚ್ಚಾಗಿ ಹಾಕುವ ಅಭಿಪ್ರಾಯವುಳ್ಳವರಾಗಿದ್ದಾರೆಂದು ತಿಳಿದರೆ ಆ ವಿದೇಶೀಯ ಸರ್ಕಾರಗಳವರು ಬ್ರಿಟಿಷರ ಸಾಮಾನುಗಳ ಮೇಲೆ ತೆರಿಗೆಹಾಕುವ ವಿಷಯ ಪುನರಾಲೋಚನೆಮಾಡಿ ತಮ್ಮ ಕಾನೂನನ್ನು ಬದಲಾಯಿಸುವರೆಂದು ಒಂದು ಪಕ್ಷದವರು ವಾದಿಸುವವರಾಗಿದ್ದಾರೆ.

ಈ ಭಾಗದಲ್ಲಿ ಅಗ್ರಗಾಮಿಯಾಗಿರುವ ಮಿ. ಚೇಂಬರ್ಲೇನ್ ಕೊಟ್ಟ ತನ್ನ ಅಭಿಪ್ರಾಯವೇನೆಂದರೆ—ಆಮದು ರಫ್ತುಗಳ ವಿಷಯದಲ್ಲಿ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಒಳಪಟ್ಟಿರುವ ಪ್ರವಾಸಸ್ಥಾನಗಳನ್ನೂ ಸೇರಿಸಿಕೊಂಡು ಒಂದು ಕಟ್ಟುಮಾಡಿಕೊಳ್ಳಬೇಕು. ಆಗ ಗ್ರೇಟ್ ಬ್ರಿಟನಿನಲ್ಲಿ ತಯಾರಾಗುವ ವಸ್ತುವಿಶೇಷಗಳನ್ನು ಆ ಪ್ರವಾಸಸ್ಥಾನಗಳವರು ತೆರಿಗೆಯಿಲ್ಲದೆ, ಅಥವಾ ಸ್ವಲ್ಪ ಮಾತ್ರ ತೆರಿಗೆ ಹಾಕಿ, ತಮ್ಮ ದೇಶಕ್ಕೆ ತರಿಸಿಕೊಳ್ಳತಕ್ಕದ್ದು. ಆದರೆ ಜರ್ಮನಿ ಫ್ರಾನ್ಸು ದೇಶಗಳಿಂದ ಬರುವ ಅದೇ ವಿಧದ ಸಾಮಾನುಗಳ ಮೇಲೆ ತೆರಿಗೆ ಹೆಚ್ಚಾಗಿ ಹಾಕತಕ್ಕದ್ದು. ಈ ಪ್ರಕಾರ ಆಯಾ ಪ್ರವಾಸಸ್ಥಾನಗಳಲ್ಲಿ ಬ್ರಿಟಿಷರ ಸರಕುಗಳ ಖರ್ಚು ಹೆಚ್ಚಾಗುವುದಕ್ಕೂ ವಿದೇಶೀಯ ಸರಕುಗಳ ಖರ್ಚು ಕಡಮೆಯಾಗುವುದಕ್ಕೂ ಅವಕಾಶವಾಗುವುದು. ಆ ಪ್ರವಾಸಸ್ಥಾನಗಳಿಂದ ಬ್ರಿಟನಿಗೆ ಬರುವ ಸಾಮಾನುಗಳನ್ನೂ, ಅಂದರೆ ಕ್ಯಾನಡಾ ಸೀಮೆಯಿಂದ ಬರುವ ಧಾನ್ಯದ ಮೇಲೂ ಆಸ್ಟ್ರೇಲಿಯದಿಂದ ಬರುವ ದ್ರಾಕ್ಷಾರಸ ಮದ್ಯಗಳ ಮೇಲೂ, ತೆರಿಗೆ ಹಾಕದೆ ತರಿಸಿಕೊಳ್ಳುತ್ತ, ಅದೇ ಸರಕುಗಳು ಫ್ರಾನ್ಸಿನಿಂದಾಗಲಿ, ಸ್ಪೇನಿನಿಂದಾಗಲಿ, ಸಂಯುಕ್ತ ಸಂಸ್ಥಾನಗಳಿಂದಾಗಲಿ ಬಂದರೆ ಅವುಗಳ ಮೇಲೆ ತೆರಿಗೆಯನ್ನು ಹಾಕಬೇಕೆಂದು ಸಲಹೆಕೊಟ್ಟಿದ್ದಾನೆ. ಮತ್ತು ಮನುಷ್ಯನ ಜೀವನಕ್ಕೆ ಆವಶ್ಯವಾದ ಯಾವ ಪದಾರ್ಥವನ್ನೇ ಆಗಲಿ, ಅಂದರೆ ಆಹಾರ ಪದಾರ್ಥಗಳ್ಳೋ, ಕೈಗಾರಿಕೆಯಿಂದ ತಯಾರಾಗುವ ಪದಾರ್ಥಗಳ್ಳೋ ಯಾವದೇ ಆಗಲಿ, ಬ್ರಿಟಿಷ್ ಚಕ್ರಾಧಿಪತ್ಯಕ್ಕೊಳಪಟ್ಟ ದೇಶಗಳೊಳಗೇ ಬೇಕಾದಷ್ಟು ಸಿಕ್ಕುವುದು. ಆದಕಾರಣ ಮೇಲೆ ವಿವರಿಸಲ್ಪಟ್ಟಿರುವ ಅಭಿಮಾನಸೂಚಕವಾದ ತೆರಿಗೆಯ ಕಟ್ಟಳೆಯನ್ನು ಅನುಸರಿಸುವುದರಿಂದ ವಿಸ್ತಾರವಾದ ಈ ರಾಜ್ಯಕ್ಕೊಳಪಟ್ಟ ಪ್ರವಾಸಸ್ಥಾನಗಳ ಪರಸ್ಪರ ವ್ಯಾಪಾರವು ವೃದ್ಧಿಯಾಗುವುದಕ್ಕೂ, ಏಕಮತ್ಯವು ಹೆಚ್ಚುವುದಕ್ಕೂ, ಪರದೇಶದವರ ವ್ಯಾಪ್ತಿ ಕಡಮೆಯಾಗುವುದಕ್ಕೂ ಕಾರಣವಾಗಿರುವುದೆಂದೂ ಮಿ. ಚೇಂಬರ್ಲೇನರು ಹೇಳುತ್ತಾರೆ. ಈ ಪ್ರಕಾರ ಅವುದಾದರೊಂದು ಉಪಾಯವನ್ನು ಕಂಡುಹಿಡಿದು ಸ್ಥಾಪನೆಮಾಡದೆಹೋದರೆ ಬ್ರಿಟನಿನ ವ್ಯಾಪಾರವೇ ದುರ್ಗತಿಯನ್ನು ಹೊಂದಿ, ಬ್ರಿಟಿಷರ ಕೈಗಾರಿಕೆಗಳು ಲಯವಾಗಿ ಹೋಗುವುದರಲ್ಲಿ ಸಂಶಯವಿಲ್ಲವೆಂದು ಅವರು ಅಭಿಪ್ರಾಯಪಡುತ್ತಾರೆ.

ಮಿ. ಚೇಂಬರ್ಲೇನರು ಪ್ರವಾಸಸ್ಥಾನಗಳ ಸರಕುಗಳ ವಿಷಯ ಕೊಟ್ಟಿರುವ ಈ ಸಲಹೆಯನ್ನು ಇಂಗ್ಲಾಂಡಿನ ಪ್ರಧಾನಮಂತ್ರಿಗಳಾದ ಮಿ. ಬಾಲ್ಫೊರ್ ಯವರೂ ಅವರ ಕನ್‌ಸರ್ವೆಟಿವ್ ಪಕ್ಷದವರೂ ಒಪ್ಪಂಬಟ್ಟಾಗ್ಯೂ, ಧಾನ್ಯದ ಮೇಲೆ ತೆರಿಗೆಹಾಕುವ್ರದನ್ನು ಮಾತ್ರ ಅವರು ಒಪ್ಪುವುದಿಲ್ಲ. ಯಾಕೆಂದರೆ ಇಂಗ್ಲಾಂಡಿನ ಪ್ರಜೆಗಳೆಲ್ಲರಿಗೂ ಮುಖ್ಯಾಹಾರಪದಾರ್ಥವಾಗಿರುವ ಗೋಧಿಯೇ ಇತರ ದೇಶಗಳಿಂದ ಆಮದಾಗಿ ಬರುವ ಜಿನಸು. ಇದಕ್ಕೇ ತೆರಿಗೆಯನ್ನು ಹಾಕಿದರೆ ಆಹಾರದ ಕ್ರಯವು ಹೆಚ್ಚಾಗಿ ಬಡಬಗ್ಗರು ಬದುಕುವುದು ಈಗಿರುವುದಕ್ಕಿಂತ ಕಷ್ಟವಾಗುವುದು. ಇದೇ ಪ್ರಕಾರ ೬೦ ವರ್ಷಗಳ ಹಿಂದೆ ಆಹಾರ ಪದಾರ್ಥದ ಮೇಲೆ ತೆರಿಗೆಹಾಕಿದ್ದರ ದೆಸೆಯಿಂದ ಆಗ ದೇಶದಲ್ಲಿ ಮಹಾ ಪ್ರಜಾಕ್ಷೋಭೆಯುಂಟಾಗಿ ಅನರ್ಥಕ್ಕೆ ಕಾರಣವಾಯಿತು. ಆದಕಾರಣ ಇಂಥ ಹೆಚ್ಚು ತೆರಿಗೆಯನ್ನು ಒಪ್ಪುವ ವಿಷಯದಲ್ಲಿ ಪ್ರಜೆಗಳು ಇನ್ನೂ ಸಿದ್ಧರಾಗಿಲ್ಲ. ಈಗ ಈ ಕಾಯುವನ್ನು ಕಟ್ಟಳೆಯಾಗಿ ಪರ್ಯವಸಿಸುವುದಕ್ಕೆ ಸಮಯವು ಅನುಕೂಲವಾಗಿಲ್ಲ ಎಂದು ಮಿ|| ಬಾಲ್ಫೊರ್ ಯವರು ಅಭಿಪ್ರಾಯಪಡುತ್ತಾರೆ. ಇದಕ್ಕೆ ಮಿ. ಚೇಂಬರ್ಲೇನರು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟು ಪ್ರಜೆಗಳಿಗೆ ಈ ವಿಷಯದಲ್ಲಿ ತಕ್ಕ ಅಭಿಪ್ರಾಯವನ್ನು ಹುಟ್ಟಿಸುವಂತೆ ದೇಶಸಂಚಾರಹೊರಟು ಉಪನ್ಯಾಸಗಳನ್ನು ಮಾಡುತ್ತ ಇದ್ದಾರೆ. ಪರದೇಶಗಳ ಕಡೆಯಿಂದ ಬರುವ ಆಹಾರಪದಾರ್ಥಗಳ ಮೇಲೆ ತೆರಿಗೆ ಹಾಕುವುದರಿಂದ ಆಹಾರದ ಕ್ರಯವು ಹೆಚ್ಚಾದರೂ ಕೂಡ ಇದರಿಂದ ದೇಶದಲ್ಲಿ ಕೈಗಾರಿಕೆಗಳು ವೃದ್ಧಿಯಾಗುವುದರ ಕಾರಣ ಪ್ರಜೆಗಳ ಐಶ್ವರ್ಯವೂ ವೃದ್ಧಿಯಾಗಿ ಕೂಲಿ ಜನಗಳ ಸಂಪಾದನೆಯೂ ಹೆಚ್ಚಾಗುವುದು ಎಂತಲೂ ಒಂದು ಪಕ್ಷದಲ್ಲಿ ಬರುವ ನಷ್ಟಕ್ಕಿಂತ ಬೇರೊಂದು ವಿಧವಾಗಿ ಬರುವ ಲಾಭವು ಹೆಚ್ಚಾಗಿಯೇ ಇರುವುದು ಎಂತಲೂ ಮಿ|| ಚೇಂಬರ್ಲೇನರು ಸಾಧಿಸುವವರಾಗಿದ್ದಾರೆ.

ಇವರ ಅಭಿಪ್ರಾಯಕ್ಕೆ ವ್ಯತಿರಿಕ್ತರಾಗಿ ತಮ್ಮ ತಮ್ಮ ಕೆಲಸಕ್ಕೆ ರಾಜಿನಾಮೆಕೊಟ್ಟಿರುವ ಕನ್‌ಸರ್ವೆಟಿವ್ ಪಕ್ಷದ ಮಂತ್ರಿಗಳಾದ ಡ್ಯೂಕ್ ಆಫ್ ಡೆವನ್‌ಷೈರವರೂ, ಮಿ|| ರಿಚಿಯವರೂ, ಲಾರ್ಡ್ ಜಾರ್ಜ್ ಹ್ಯಾಮಿಲ್ಟನ್ ಯವರೂ, ಲಾರ್ಡ್ ಲ್ಯಾನ್ಸ್‌ಡೌನ್ ಯವರೂ ಪ್ರಕೃತ ಜಾರಿಯಲ್ಲಿರುವ ನಿರ್ಬಂಧವಿಲ್ಲದೆ ವ್ಯಾಪಾರನಡಸಬಹುದೆಂಬ ಕಟ್ಟಳೆಯನ್ನು ಅನುಮೋದಿಸುವವರಾಗಿದ್ದಾರೆ. ಸ್ವದೇಶದ ಕೈಗಾರಿಕೆಗಳಿಗೆ ಸ್ವಭಾವಸಿದ್ಧವಾದ ರೀತಿಗಳಲ್ಲಿ ಅಭಿವೃದ್ಧಿಯನ್ನೂ ಬೆಳೆಯನ್ನೂ ಹೊಂದಿಸುವುದನ್ನು ಬಿಟ್ಟು ತೆರಿಗೆಯನ್ನು ಹೆಚ್ಚಿಸುವುದೆಂಬ ಕೃತಕರೀತಿಯಲ್ಲಿ ಅವಕ್ಕೆ ಬೆಳೆಯನ್ನು ಕಲ್ಪಿಸುವುದು ಅನರ್ಥಕರವಾದುದೆಂದು ಅವರು ಅಭಿಪ್ರಾಯಪಡುತ್ತಾರೆ. ಪರದೇಶಗಳ ಪೋಟಾಪೋಟಿಯಿಂದಲೇ ಯಾವ ಸರಕೇ ಆಗಲಿ ಉತ್ಕೃಷ್ಟವಾಗಿಯೂ ಸುಲಭವಾಗಿಯೂ ಉತ್ಪನ್ನವಾಗುತ್ತದೆ. ಬ್ರಿಟಿಷರು ತಯಾರುಮಾಡುವ ಸರಕುಗಳ ಮೇಲೆ ತೆರಿಗೆಹಾಕಿ ಅವರ ಕೈಗಾರಿಕೆಗಳನ್ನು ಅಭಿವೃದ್ಧಿಮಾಡುವುದಕ್ಕೆ ಪ್ರಯತ್ನಿಸುವುದರಿಂದ ಆ ಸಾಮಾನುಗಳ ಕ್ರಯವೂ ಹೆಚ್ಚಿ ಕಡೆಗೆ ದೇಶದ ಶ್ರೇಯಸ್ಸಿಗೇ ಹಾನಿಯಾಗುವುದೆಂದು ಈ ಮಹನೀಯರು ಸಾಧಿಸುತ್ತಾರೆ.

## ಚೇಂಬರ್ಲೀನ್ ಯವರು ಕಂಡುಹಿಡಿದ ಕೆಮ್ಮು ಔಷಧವು.


44




ಶೀತ, ಕೆಮ್ಮು, ಗಂಟಲು ಗಾರೆನ್ನುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಜಾಡ್ಯಕ್ಕೆ ಈ ಔಷಧವು ಬಹಳ ಶ್ರೇಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತಹಿಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಉಪೇಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಒಣಗಿಹೋಗುವದು. ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮು ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ನೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಈ ಜೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ.; ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ:—

ಡಬ್ಲ್ಯು. ಇ. ಸ್ಮಿತ್ ಆಂಡ್ ಕಂಪೆನಿ,
ಮವುಂಟ್ ರೋಡ್,
ಮದರಾಸ್.


## ಒಳದೇಶದ ವೃತ್ತಾಂತಗಳು.

ಮಿ|| ಕೆ. ಎಸ್. ದೊರೆಸ್ವಾಮಿ ಐಯರನ್ನು ಸರ್ಕಾರದವರು ಸ್ಪೆಂಟ್‌ರಾಕ್ಸ್ ಸಬ್‌ಡಿವಿಜನಿಗೆ ವರ್ಗಮಾಡಿದಾರೆಂದು ಕೇಳುತ್ತೇವೆ.

****

ಕೋಲಾರ್ ಡಿಸ್ಟ್ರಿಕ್ಟಿನಲ್ಲೆಲ್ಲಾ ಸಮೃದ್ಧಿ ಮಳೆಯಾಗಿದೆ ಎಂತಲೂ, ಒಂದು ತಾಲ್ಲೂಕಿನಲ್ಲೇ ೪೦ ಕೆರೆಗಳಿಗಿಂತಲೂ ಹೆಚ್ಚಾಗಿ ತುಂಬಿ ಒಡೆದುಹೋದುವೆಂತಲೂ ತಿಳಿದುಬಂದಿದೆ.

****

ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರಾಗಿದ್ದ ಮಿ|| ಬಿ. ಕಾಶೀರಾಜೇ ಅರಸಿನವರು ಒಂದುವರೆ ತಿಂಗಳ ಪ್ರಿವಿಲೆಜ್ ರಜ ಪಡೆದುಕೊಂಡರು. ಮಿ|| ಬಿ. ಕೆ. ವೆಂಕಟವರದೈಯಂಗಾರ್ಯರು ಮೊನ್ನೆ ಭಾನುವಾರ ರಾಜಧಾನಿಗೆ ಬಂದು, ಡಿಸ್ಟ್ರಿಕ್ಟಿನ ಛಾರ್ಜನ್ನು ವಹಿಸಿ ಕೆಲಸನೋಡುತ್ತಿದ್ದಾರೆ.

****

ಅರಮನೆ ಡಿವಿಜನಲ್ಲಿ ಕೆಲಸ ಮಾಡುತ್ತಿದ್ದ ಅಸಿಸ್ಟೆಂಟ್ ಇಂಜನಿಯರ್ ಮಿ|| ಜಿ. ಭೋರ್ ಯವರನ್ನು ಸ್ಯಾನಿಟರಿ ಎಂಜನಿಯರ್ ವಿದ್ಯೆ ಕಲಿತುಕೊಂಡು ಬರುವುದಕ್ಕಾಗಿ ಮೈಸೂರು ಸರ್ಕಾರ

ಇವರು ವಿಲಾಯತಿಗೆ ಕಳುಹಿಸಿಕೊಟ್ಟಿದ್ದಾರೆ. ಇವರು ಕಳೆದ ವಾರ ಮೈಸೂರಿನಿಂದ ಪ್ರಯಾಣವಾದರು.

****

ನಮ್ಮ ಶಹರ ರೆಸಿಡೆಂಟರಾದ ಮೆ॥ ಜೆ. ಎ. ಬೋರ್ಡಿಲಾನ್ ರವರು ಪತ್ನಿಸಹಿತ ಕಳೆದ ಗುರುವಾರ ಡಾರ್ಜಿಲಿಂಗಿನಿಂದ ಹೊರಟರು. ಅವರು ೭ ಗಂಟೆಗೆ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನಿನಲ್ಲಿ ಬಂದು ಇಳಿಯುವವರಾಗಿದ್ದಾರೆ. ಇವರು ರೆಸಿಡೆಂಟ್ ಪದವಿಯ ಭಾರವನ್ನು ವಹಿಸಿಕೊಂಡು, ಮುಂದಿನ ವಾರ ರಾಜಧಾನಿಗೆ ಬಂದು, ನಮ್ಮ ಮಹಾರಾಜರವರನ್ನು ಕಾಣಿಸಿಕೊಳ್ಳುತ್ತಾರೆಂದು ಕೇಳುತ್ತೇವೆ.

****

ಮೈಸೂರು ಸರ್ಕಾರದಲ್ಲಿ ಅರ್ಜಿಗಳು ಫೈಸಲಾಗುವುದು ತುಂಬ ತಾಪಸಾರವೆಂದು ಬಹುಮಂದಿ ಆಕ್ಷೇಪಣೆ ಮಾಡುತ್ತಾರಷ್ಟೆ. ೧೯೦೩ನೆ ಜೂನ್ ೩೦ರವರೆಗೆ ಮೈಸೂರು ಗವರ್ನಮೆಂಟಿಗೆ ೩,೦೯೧ ಅರ್ಜಿಗಳು ತಲುಪಿದವೆಂತಲೂ ಈ ಪೈಕಿ ೩,೧೯೨ ಅರ್ಜಿಗಳು ಫೈಸಲಾದವೆಂತಲೂ, ವರುಷಾಂತ್ಯದಲ್ಲಿ ೯ ಅರ್ಜಿಗಳು ಮಾತ್ರ ಉಳಿದವೆಂತಲೂ ತಿಳಿದುಬರುತ್ತೆ. ಇದನ್ನು ನೋಡಿದರೆ ಮೇಲ್ಕಂಡ ಆಕ್ಷೇಪಣೆಯು ನಿರಾಧಾರವಾದದ್ದೆಂದು ಕಾಣುವುದು.

****

ಶ್ರೀರಂಗಪಟ್ಟಣದ ಮುನಸಿಫ್ ಕೋರ್ಟಿನಲ್ಲಿ ಬಹಳ ಮೊಕದ್ದಮೆಗಳು ಫೈಸಲಾಗದೆ ಬಾಕಿ ಉಳಿದಿವೆ. ಇವನ್ನು ಜಲ್ದಿಯಾಗಿ ಫೈಸಲ್ಮಾಡಬೇಕೆಂದು ಸರ್ಕಾರದವರು ಮಧುಗಿರಿ ಮುನಸಿಫ್ ಕೋರ್ಟನ್ನು ಹಂಗಾಮಿಯಾಗಿ ಶ್ರೀರಂಗಪಟ್ಟಣಕ್ಕೆ ವರ್ಗ ಮಾಡಿದ್ದರು. ಈಗ ಈ ಕೋರ್ಟಿನ ಮುನಸಿಫರಿಗೆ ರಾಜಧಾನಿಗೆ ವರ್ಗವಾಯಿತು. ಇದರಿಂದ ಮಧುಗಿರಿ, ಶ್ರೀರಂಗಪಟ್ಟಣಗಳ ಕೋರ್ಟುಗಳಿಗೆ ಅನನುಕೂಲವುಂಟಾಗಿದೆ. ಸರ್ಕಾರದವರು ಇದನ್ನು ಬೇಗನೆ ನಿವಾರಣೆಮಾಡುವರೆಂದು ನಿರೀಕ್ಷಿಸಲ್ಪಟ್ಟಿದೆ.

****

ಕೆಲವು ಕಾಲಕ್ಕೆ ಮುಂಚೆ ಮೈಸೂರು ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ಸುಪರೆಂಟೆಂಟರಾಗಿದ್ದ ಶ್ರೀನಿವಾಸಯ್ಯಂಗಾರ್ಯರು ಗುಮಾಸ್ತೆ ಸುಬ್ಬಯ್ಯನವರ ಸಹಾಯದಿಂದ ಕೆಲವು ದಸ್ತಾವೇಜುಗಳನ್ನು ಸೃಷ್ಟಿಸಿ, ಸುಮಾರು ೬೦೦ ರೂ ಅಪಹರಿಸಿದರೆಂದು ವರ್ತಮಾನವಿತ್ತಷ್ಟೆ. ಈಗ ಸರ್ಕಾರದವರು ಅವರಿಬ್ಬರ ಮೇಲೂ ಇಲ್ಲಿನ ಟೌನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದುಮಾಡಿದರು. ಈ ಮೊಕದ್ದಮೆಯ ವಿಚಾರಣೆ ಮುಂದಿನ ಬುಧವಾರ ಪ್ರಾರಂಭವಾಗುವುದು. ಪ್ಲೀಡರ್ ಮೆ॥ ರಂಗಯ್ಯಂಗಾರ್ಯರು ಅಪರಾಧಿಗಳ ಪರ ವಕೀಲರಾಗಿದ್ದಾರೆ.

****

ಸೋಮವಾರ ಬೆಳಗ್ಗೆ ೮ ಗಂಟೆಗೆ ನಮ್ಮ ಯುವರಾಜರ ನರಸರಾದ ಒಡೆಯರವರು ಪರಿವಾರಸಹಿತ ಅಜ್ಮೀರದ ರಾಜಕುಮಾರ್ ಕಾಲೇಜಿಗೆ, ಎರಡನೇ ರಾಜಕುಮಾರ್ತೆಯವರು ಆರೋಗ್ಯಕ್ಕೆ ಮದ್ರಾಸಿಗೂ ೭೦ ಮಂದಿ ಪರಿವಾರದವರ ಸಹಿತ ಬಳ್ಳಾರಿ ಬಿಟ್ಟು ಸ್ಪೆಷಲ್ ರೈಲಿನಲ್ಲಿ ಪ್ರಯಾಣಮಾಡಿದರು. ಪ್ರಿನ್ಸ್ ಕ್ಯಾಲಿಂಜರ್ ಅರಸಿನವರ, ಮೆ॥ ಎಂ. ಎ. ನಾರಣ್ಣಯ್ಯ ಡಾ॥ ಅಣ್ಣಯ್ಯನವರ ಯುವರಾಜರ ಸಂಗಡ ಅಜ್ಮೀರಕ್ಕೆ ಹೋಗಿರುತ್ತಾರೆ. ಮತ್ತು ಅವರ ಸೇವಾವೃತ್ತಿಗೆ ೧೪ ಜನ ಆಳುಕಾಳು ಹೋಗಿರುವರು.

****

ಇಲ್ಲಿನ ದೇವಸ್ಥಾನದ ಪೇಟೆಯಲ್ಲಿ ದವಸ ಅಂಗಡಿ ಇಟ್ಟಿದ್ದ ಸಾಹುಕಾರ್ ಮೆ॥ ವೀರಣ್ಣನವರು ಕಳೆದ ಶನಿವಾರ ಮಧ್ಯಾಹ್ನ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಲೇಟ್ ಚಾಮರಾಜ ಒಡೆಯರವರ ಕಾಲದಲ್ಲಿ ಅವರ ಪ್ರೋತ್ಸಾಹದಿಂದ ದಾಟ್ಯದ ನೆಯ್ಗೆ ಕೆಲಸವನ್ನು ಇಲ್ಲಿಗೆ ತರಿಸಿ ಅನೇಕ ಮಗ್ಗಗಳನ್ನು ಇಡಿಸಿ, ಅದಕ್ಕಾಗಿ ಪಟ್ಟಣದ ಪಶ್ಚಿಮಾಭಿವೃದ್ಧಿಯಲ್ಲಿ ನಾಲ್ಕಾರು ಮನೆಗಳನ್ನು ಕಟ್ಟಿಸಿದರು. ಈಗ ಆ ಮನೆಗಳಿಗೆ ವೀರಣ್ಣನವರ ಲೈನ್ ಎಂದು ಹೆಸರಾಗಿದೆ. ಕಾರಣಾಂತರಗಳಿಂದ ನೆಯ್ಗೆ ಉದ್ಯೋಗವು ಕ್ಷೀಣವಾಯಿತು. ಈ ಮನೆಗಳು ಸಧ್ಯ ಪೆಲ್ಲ್ ಕ್ಯಾಂಪಾಗಿ ಪರಿಣಮಿಸಿವೆ.

****

ಶುಕ್ರವಾರ ಪೇಟೆ ಸಂಸ್ಥಾನದ ನಿವೃತ್ತ ರೀಜಂಟರಾಗಿದ್ದು, ಅನಂತರ ರಾಜ್ಯದ ದಿವಾನರಾಗಿದ್ದು ವೃದ್ಧಾಪ್ಯದ ದೆಸೆಯಿಂದ ವಿಶ್ರಾಂತಿ ಹೊಂದಿದ್ದ ಸರ್ ಎ. ಶೇಷಯ್ಯಶಾಸ್ತ್ರಿಯರ್, ಕೆ. ಸಿ. ಎಸ್. ಐ. ಯವರು ಕಳೆದ ಗುರುವಾರ ತಮ್ಮ ಸ್ವಗೃಹದಲ್ಲಿ ಸಂಸಾರ ಮಧ್ಯೆ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಸುಮಾರು ೭೫ ವರುಷ ವಯಸ್ಸಾಗಿತ್ತು. ಪ್ರಖ್ಯಾತಿ ಹೊಂದಿದ ಸರ್ ಟಿ. ಮಾಧವರಾವ್, ಸರ್ ವಿ. ರಾಮಯ್ಯಂಗಾರ್ಯರು, ಸರ್ ಟಿ. ಮಾಧವರಾಯರು, ಮೆ॥ ರಂಗಾಚಾರ್ಯರು, ಮೆ॥ ರಾಮಯ್ಯಂಗಾರ್ಯರು ಇವರೆಲ್ಲಾ ಸರ್ ಶೇಷಯ್ಯಶಾಸ್ತ್ರಿಯವರ ಸಹಪಾಠಿಗಳಾಗಿ ಬಹಳ ಪ್ರಖ್ಯಾತಿ ಪಡೆದಿದ್ದರು.

****

ರಾಜಧಾನಿಯ ಅಭಿವೃದ್ಧಿಗಾಗಿ ನೇಮಕವಾದ ಸಬ್ ಕಮಿಟಿ ಮೆಂಬರುಗಳು ಪಟ್ಟಣವನ್ನೆಲ್ಲಾ ಸುತ್ತಿ ಎಲ್ಲಿ ಮನೆ ಒಡೆಯಬೇಕು, ಎಲ್ಲಿ ರಸ್ತೆ ಹಾಕಬೇಕು, ಎಲ್ಲಿ ಡ್ರೈನೇಜ್ ಬಿಡಬೇಕು, ಎಲ್ಲಿ ಚರಂಡಿ ಮುಂತಾದ್ದು ಕಟ್ಟಬೇಕು, ಇವೇ ಮುಂತಾದ ವಿಷಯಗಳನ್ನೆಲ್ಲಾ ವಿಮರ್ಶೆಮಾಡಿದ್ದಾಯಿತು. ಇವರು ಪ್ರೆಸಿಡೆಂಟ್ ಮೀಟಿಗೆ ತಿಳಿಸಲು ರಿಪೋರ್ಟು ತಯಾರುಮಾಡುತ್ತಿದ್ದಾರೆ. ಗವರ್ನಮೆಂಟವರು ಅಭಿವೃದ್ಧಿಕಾರ್ಯಗಳನ್ನು ಜಾಗ್ರತೆಯಲ್ಲಿ ಪ್ರಾರಂಭಿಸುವ ಟ್ರಸ್ಟ್ ಕಮಿಟಿಯನ್ನು ಬೇಗನೆ ನೇಮಕಮಾಡುವರೆಂದು ಹೇಳಲಾಗಿದೆ. ಈ ಟ್ರಸ್ಟ್ ಕಮಿಟಿಗೆ ಡೆಪ್ಯುಟಿ ಕಮಿಷನರ್ ಮೆ॥ ಕೆ. ಪಿ. ಪುಟ್ಟಣ್ಣಚೆಟ್ಟಿಯವರೂ, ಎಕ್ಸಿಕ್ಯೂಟಿವ್ ಎಂಜಿನಿಯರ್ ಮೆ॥ ಡಿ. ಸೀತಾರಾಮರಾಯರೂ ಮೆಂಬರಾಗಿ ನೇಮಕವಾಗಬಹುದೆಂದು ಕೇಳುತ್ತೇವೆ.

****

ಬಳ್ಳಾರಿಯ ರಾವ್ ಬಹದೂರ್ ಎ. ಸಭಾಪತಿ ಮೊದಲಿಯಾರ್ಯರು ಕಳೆದ ವಾರ ಮದರಾಸ್ ನಗರದಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ೬೭ ವರುಷ ವಯಸ್ಸಾಗಿತ್ತು. ಸುಮಾರು ೧೫ ವರುಷ ಸರ್ಕಾರಿ ತಾಬೆ ಮಾಡಿ, ಅದನ್ನು ಬಿಟ್ಟು ಬಳ್ಳಾರಿಯಲ್ಲೇ ಬಹಳ ದೊಡ್ಡ ಅಂಗಡಿಯನ್ನಿಟ್ಟುಕೊಂಡು ದೇಶ ದೇಶಗಳ ಗೆಲ್ಲಾ ಹತ್ತಿ ಮೊದಲಾದ ಸರಕನ್ನು ರಫ್ತು ಮಾಡಿ, ಕುಂಬಾ ಅಭಿವೃದ್ಧಿಗೆ ಬಂದು, ಇವರು ೧೯೦೨—೧೯ನೆ ಇಸವಿಯ ಕ್ಷಾಮದಲ್ಲಿ ೨,೦೦೦ ಒಪತ್ತುಜೆಗಳನ್ನು ಕಾಪಾಡಿದ್ದಲ್ಲದೆ, ಮಾತಾಪಿತೃಗಳನ್ನು ಕಳೆದುಕೊಂಡ ೨೦೦ ಮಂದಿ ಅನಾಥರನ್ನು ಆರು ವರುಷಗಳ ಪರ್ಯಂತ ಪೋಷಣೆ ಮಾಡಿ ಕೀರ್ತಿ ಸಂಪಾದಿಸಿಕೊಂಡರು.

****

ಅರಮನೆ ಖಜಾನೆಯಲ್ಲಿರುವ ಚಿಲ್ಲರೆ ನೌಕರರಿಗೆಲ್ಲಾ ನವರಾತ್ರಿ ಹಬ್ಬಕ್ಕೆ ಬಿಳೀ ದುಸ್ತನ್ನು ಮಾಡಿಸಿಕೊಡುವುದು ಪದ್ಧತಿ. ಅರಮನೆಯ ಖಜಾನೆ ಕಿರಸ್ತೇದಾರರೇ ಮುಂತಾದವರು ಈ ಸಲವೂ ನಾಲ್ಕಾರು ದಿನ ಟೇಲರ್ ಜನರ ಸಾಕ್ಷಾತ್ಕಾರದಿಂದ (ಮೆ॥ ಗಳಾದ ಅಬ್ಬಾಸ್ ಅಬ್ದುಲ್ ಸೇಟರು, ಸಟ್ಟಾಜಿರಾಯರು, ಜಾನ್ ಮಹಮದ್ ಸೇಟರು, ಬಿ ದಗುಂಚೆ ರಾಮಚೆಟ್ಟಿ) ೨,೦೦೦ ಚಿಲ್ಲರೆ ರೂಪಾಯಿಯನ್ನು ಬಟ್ಟೆ ಥಾನುಗಳನ್ನು ತೆಗೆದುಕೊಂಡು, ಆ ವರ್ತಕರಿಂದ ೩,೦೦೦ ಚಿಲ್ಲರೆ ರೂಪಾಯಿಗೆ ಬಿಲ್ ಮತ್ತು ರಶೀತಿಗಳನ್ನು ಹೊಂದಿ, ಅವರಿಗೆ ಪಾವತಿ ಆಗಬೇಕಾದದ್ದು ಜಾಸ್ತಿ ೧,೫೦೦ ಚಿಲ್ಲರೆ ರೂಪಾಯಿ ನನ್ನ ಯಾವ ಉದ್ದೇಶದಿಂದಲೋ ಅನಾಮತ್ತಾಗಿ ಇಟ್ಟಿದ್ದರಂತೆ. ಆ ವರ್ತಕರಲ್ಲಿ ಒಬ್ಬರು ಆಗಮನ ಕಂಟ್ರೋಲರಿಗೆ ಮೇಲ್ಕಂಡ ಸಂಗತಿಗಳನ್ನು ಅರಿಕೆಮಾಡಿದಕಾಗೂ, ಕಂಟ್ರೋಲರವರು ವರ್ತಕರನ್ನೂ ಖಜಾನೆ ನೌಕರರನ್ನೂ ಕರೆಸಿ ತನಿಖೆಮಾಡಿ ವಾಜ್ಮೂಲಗಳನ್ನು ಬರೆದುಕೊಂಡದ್ದಲ್ಲದೆ ವರ್ತಕರ ಲೆಕ್ಕಗಳನ್ನೂ ತರಿಸಿ ನೋಡಿದ ಹಾಗೆ, ಖಜಾನೆಯ ಎರಡನೇ ಅಂತಸ್ತಿನಲ್ಲಿ ಸಿಕ್ಕಿದ ೧,೫೦೦ ಚಿಲ್ಲರೆ ರೂಪಾಯಿನ ಗಂಟನ್ನು ಕಂಟ್ರೋಲರವರೇ ತೆಗೆದುಕೊಂಡು ಬಂದರಂತೆ. ಮೆ॥ ರಾಮಚೆಟ್ಟಿ ಅಂಗಡಿಯಲ್ಲಿ ಅದಾಗಲೇ ಉಳಿದಿದ್ದ ೩೦೦ ಚಿಲ್ಲರೆ ರೂಪಾಯನ್ನು ತರಿಸಿಕೊಂಡ ಹಾಗೆ, ಕಂಟ್ರೋಲರವರು ತನಿಖೆ ಆದಮೇಲೆ ಆ ಕಾಗದ ಪತ್ರಗಳನ್ನೆಲ್ಲಾ ಶ್ರೀಮನ್ ಮಹಾರಾಜರವರಿಗೆ ಕಳುಹಿಸುವವರಾಗಿದ್ದಾರೆಂತಲೂ ಸಮಾಚಾರ ಬಂದಿದೆ. ಆದರೆ ಕಿರಸ್ತೇದಾರರು ಇದಕ್ಕೆ ಸೇರಿದ್ದಾರೋ ಇಲ್ಲವೋ ನಮಗೆ ತಿಳಿಯದು. ಅಂತು ಶ್ರೀಮನ್ ಮಹಾರಾಜರವರ ಅಪ್ಪಣೆ ಪ್ರಕಾರ ಮೊನ್ನೆ ಮೆ॥ ಹುಟ್ಟಿ ರಂಗಯ್ಯಂಗಾರ್ಯರು ಕಿರಸ್ತೇದಾರರಿಂದ ಖಜಾನೆಯ ಭಾರವನ್ನು ವಹಿಸಿಕೊಂಡರು.

## ಮೈಸೂರು ಗೆಜೆಟ್ ಸಂಗ್ರಹ.

ಮೆ॥ ಎಸ್. ಜೆ. ಆಶೀರ್ವಾದಂ ಯವರನ್ನು ಸೆಪ್ಟೆಂಬರ್ ೨೩ ರಿಂದ ೨ನೇ ಕ್ಲಾಸ್ ಸಬ್ ಅ॥ ಸರ್ಜನ್ ದರ್ಜೆಗೆ ಬಡ್ತಿ ಮಾಡಿದೆ.

ಚನ್ನಪಟ್ಟಣದ ತಾಲ್ಲೂಕ್ ಅಮಲ್ದಾರ್ ಮೆ॥ ಎಚ್. ಸೀತಾರಾಮಯ್ಯನವರು ಅಪರಾಧಿಗಳಿಗೆ ಛಡಿ ಶಿಕ್ಷೆಯನ್ನು ವಿಧಿಸುವ ಅಧಿಕಾರ ಹೊಂದಲ್ಪಟ್ಟಿದ್ದಾರೆ.

ಹೊಳೆನರಸೀಪುರದ ಮುನಸಿಫ್ ಮೆ॥ ಎಂ. ಎಲ್. ಶ್ರೀಕಂಠೇಶಗೌಡರಿಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಗೌರಿಬಿದನೂರು ತಾಲ್ಲೂಕ್ ಮಂಚೇನಹಳ್ಳಿ ಹೋಬಳಿಯನ್ನು ಮೊದಲು ಬಳ್ಳಾಪುರದಿಂದ ಚಿಕ್ಕಬಳ್ಳಾಪುರದ ಮುನಸಿಫ್ ಕೋರ್ಟಿಗೂ, ಚಿಂತಾಮಣಿ ತಾಲ್ಲೂಕ್ ಕೈವಾರ ಹೋಬಳಿಯನ್ನು ಚಿಕ್ಕಬಳ್ಳಾಪುರದಿಂದ ಕೋಲಾರ ಮುನಸಿಫ್ ಕೋರ್ಟಿಗೂ ವರ್ಗ ಮಾಡಿದೆ. ಈ ವರ್ಗಾವರ್ಗಿಯು ೧೯೦೪ನೇ ಜನವರಿ ೧ರಿಂದ ಜಾರಿಗೆ ಬರತಕ್ಕದ್ದು.

ದಾವಣಗೆರೆ ಸಬ್ ಅ॥ ಸರ್ಜನ್ ಮೆ॥ ಟಿ. ಎಸ್. ಸಿದ್ದಪ್ಪನವರಿಗೆ ೧೫ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಕೋಲಾರ ಚಿನ್ನದ ಗಣಿಗಳ ಮುನಸಿಫ್ ಮೆ॥ ಟಿ. ಎಸ್. ಎ. ಡಿಕ್ರೂಜ್ ಯವರಿಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಲ್ಪಟ್ಟಿದೆ.

ತುಮಕೂರು ಡಿಸ್ಟ್ರಿಕ್ಟ್ ಪೊಲೀಸ್ ಪ್ರೊಬೇಷನರಿ ಅ॥ ಸೂಪರೆಂಟ್ ಮೆ॥ ಎ. ಸಿ. ಬಸವರಾಜೇ ಅರಸಿನವರಿಗೆ ಆರು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದ್ದು.

ಮೈಸೂರು ಮಹಾರಾಣಿಯವರ ಕಾಲೇಜ್ ಲೇಡಿ ಸೂಪರೆಂಟೆಂಟ್ ಮಿಸ್ ಜೆ. ಎಲ್. ಪಲಿಕಾರ್ಡ್ ಯವರು ಅಕ್ಟೋಬರ್ ೭ ರಲ್ಲಿ ಕೆಲಸದಮೇಲೆ ಹಾಜರಾದ ಸಬಬು ಅವರು ಉಪಯೋಗಿಸಿಕೊಳ್ಳದಿರುವ ರಜವನ್ನು ವಜಾ ಮಾಡಿದೆ.

ಬಾಗೇಪಲ್ಲಿ ತಾಲ್ಲೂಕ್ ಅಮಲ್ದಾರ್ ಮೆ॥ ಬಿ. ಕೃಷ್ಣಸಿಂಗರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಹಿರಿಯೂರು ತಾಲ್ಲೂಕ್ ಶಿರಸ್ತೇದಾರ್ ಕೆ. ಕೇಶವಾಚಾರ್ಯರು ಬಗಲೂರು ತಾಲ್ಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕದ್ದು.

ಮಂಡ್ಯ ತಾಲ್ಲೂಕ್ ಅಮಲ್ದಾರ್ ಮೆ॥ ಸಿ. ಕೇಶಗಿರಿರಾಯರಿಗೆ ೧೯೦೩ನೇ ಇಸವಿ ಜುಲೈ ೩೦ ರಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ರಜಾ ಪೂರೈಸಿದ ಮೇಲೆ ಅವರು ಪೆನ್ಷನ್ ಪಡೆಯತಕ್ಕದ್ದು.

ಕೊಪ್ಪ ತಾಲ್ಲೂಕ್ ಅಮಲ್ದಾರ್ ಮೆ॥ ಬಿ. ಎಂ. ವೆಂಕಟೇಶಯ್ಯನವರಿಗೆ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಕೊಪ್ಪ ತಾಲ್ಲೂಕ್ ಪೊಲೀಸ್ ಇನ್ಸ್‌ಪೆಕ್ಟರ್ ಮಹಮದ್ ಜಾಫರ್ ಮೊಕ್ರಿ ಯವರು ತಾಲ್ಲೂಕ್ ಭಾರವನ್ನು ವಹಿಸತಕ್ಕದ್ದು.

ಮುಂದೆ ಹೇಳುವ ಹಂಗಾಮಿ ವರ್ಗಾದ ಹುಕುಂ ಮಾಡಲ್ಪಟ್ಟಿದೆ.—(೧) ಹಂಜನಗೂಡು ತಾಲ್ಲೂಕ್ ಅಮಲ್ದಾರ್ ಮೆ॥ ಕೆ. ಶ್ರೀಕಂಠಯ್ಯನವರು ಫ್ರೆಂಚ್‌ರಾಕ್ಸಿನಲ್ಲಿ ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮಿಷನರ್ ಮತ್ತು ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಆಗಿ ಕೆಲಸ ನೋಡತಕ್ಕದ್ದು. (೨) ಚನ್ನಗಿರಿ ತಾಲ್ಲೂಕ್ ಅಮಲ್ದಾರ್ ಮೆ॥ ಕೆ. ಆರ್. ಸುಬ್ಬರಾಯರು ಶಿವಮೊಗ್ಗದಲ್ಲಿ ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮಿಷನರ್ ಆಗಿ ಕೆಲಸ ನೋಡತಕ್ಕದ್ದು.

ಸ್ಪೆಷಲ್ ಡ್ಯೂಟಿ ಸೀನಿಯರ್ ಅ॥ ಕಮಿಷನರ್ ಮೆ॥ ಟಿ. ರಾಮಸ್ವಾಮಯ್ಯಂಗಾರ್ಯರನ್ನು ಹಂಗಾಮಿಯಾಗಿ ಬೆಂಗಳೂರ್ ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ.

ಅಮಲ್ದಾರ್ ಮೆ॥ ವಿ. ಎನ್. ಗೋಪಾಲರಾಯರು ಎಕ್ಸ್‌ಟ್ರಾ ಅ॥ ಕಮಿಷನರಾಗಿ ಕೆಲಸದ ಅವಧಿ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಹೊರಡುವವರೆಗೆ ಗೌರಿಬಿದನೂರ್ ತಾಲ್ಲೂಕ್ ಶಿರಸ್ತೇದಾರ್ ಕನ್ನಯ್ಯಶಾಸ್ತ್ರಿಯವರು ದೊಡ್ಡಬಳ್ಳಾಪುರದ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕದ್ದು.

ಮುಂದೆ ಹೇಳುವ ಅಮಲ್ದಾರ್ರು ವರ್ಗಾವರ್ಗಿಗೆ ಹುಕುಂ ಮಾಡಿದೆ—(೧) ಮೆ॥ ಗುಲಾಂ ಮಹಮದ್ ಪೌಳ್ಳೆಯವರು ಹರಿಯೂರು ತಾಲ್ಲೂಕಿಗೆ, (೨) ಮೆ॥ ಕೆ. ಹನುಮಂತರಾಯರು ಹೊಸದುರ್ಗ ತಾಲ್ಲೂಕಿಗೆ.

ಯುವರಾಜರ ಉಪಾಧ್ಯಾಯರಾಗಿದ್ದ ಮೆ॥ ಬಿ. ಭೀಮರಾಯರನ್ನು ಮೆ॥ ಹಸನರಲ್ಲಿ ಯವರನ್ನೂ ಪ್ರೊಬೇಷನರಿ ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮಿಷನರರನ್ನಾಗಿ ನೇಮಿಸಿದೆ.

ಮೈಸೂರ್ ಅರಮನೆ ಡಿವಿಜನ್ ಟೆಂ. ಸಬ್ ಅ. ಎಂಜಿನಿಯರ್ ಮೆ॥ ವಿ. ರಂಗಾಚಾರ್ರಿಗೆ ಮೊದಲು ಕೊಟ್ಟಿದ್ದ ಒಂದು ತಿಂಗಳ ಕಾಯಿಲೆ ರಜವನ್ನು ಇನ್ನೂ ಎರಡು ತಿಂಗಳು ಜಾಸ್ತಿಮಾಡಿದೆ.

ಚಿತ್ರದುರ್ಗ ಡಿವಿಜನ್ ಅಸಿಸ್ಟೆಂಟ್ ಎಂಜಿನಿಯರ್ ಮೆ॥ ಕೆ. ಶ್ರೀಧರ್ ಭಾವು ಮುಂಗಿಕರ್ ಯವರಿಗೆ ಕೊಟ್ಟಿದ್ದ ಆರು ತಿಂಗಳ ಕಾಯಿಲೆ ರಜವನ್ನು ಒಂಭತ್ತು ತಿಂಗಳಿಗೆ ಜಾಸ್ತಿ ಮಾಡಿದೆ.

ದಾವಣಗೆರೆ ತಾಲ್ಲೂಕಿಗೆ ಸೇರಿದ ೨೫೬ ಗ್ರಾಮಗಳ ಸರ್ವೆ ಸೆಟ್ಲ್ ಮೆಂಟನ್ನು ಹೊಸದಾಗಿ ಪೂರೈಸಿದೆ. ಇದನ್ನು ಗವರ್ನಮೆಂಟವರು ಸ್ಯಾಂಕ್ಷನ್ ಮಾಡಿರುತ್ತಾರೆ. ನವಂಬರ್ ೨೫ ರಿಂದ ದಾವಣಗೆರೆಯಲ್ಲಿ ಈ ಸಂಗತಿಯನ್ನು ಪ್ರಸಿದ್ಧಿಗೊಳಿಸಲಾಗುವುದು.

## ಮೈಸೂರು ಸರ್ಕಾರಿ ಮುಕುಮು

****

### ಮುಜರಾಯಿ ಬಾಬು.

೧. ಕಳೆದ ೧೯೦೨ನೇ ಇಸವಿ ದಸರಾ ಪ್ರತಿನಿಧಿ ಸಭೆಯಲ್ಲಿ ಗುಬ್ಬಿ ತಾಲ್ಲೂಕಿನಿಂದ ಬಂದ ಮೆಂಬರುಗಳು—ಕಂಪಿನಗ್ರಾಮದಲ್ಲಿರುವ ಶ್ರೀನಿವಾಸ ದೇವರ ಮತ್ತು ಕೇಶವ ದೇವರ (ಚನ್ನಿಗರಾಯರು ಎಂತಲೂ ಕರೆಯುತ್ತಾರೆ) ದೇವಸ್ಥಾನಗಳ ಇನಾಂತಿ ಜಮೀನುಗಳು ಅನ್ಯಾಕ್ರಾಂತವಾದುವೆಂದು ಹೇಳಿಕೊಂಡರು. ಅದರ ಮೇಲೆ ಗವರ್ನಮೆಂಟವರು ಡೆಪ್ಯುಟಿ ಕಮಿಷನರಿಗೆ ಬರೆದು ಈ ವಿಷಯವನ್ನು ತನಿಖೆಮಾಡಿ ರಿಪೋರ್ಟು ಕಳುಹಬೇಕೆಂದು ತಿಳಿಸಿದರು. ಈಗ ಆ ಅಧಿಕಾರಿಯು ಪರಿಶೀಲನೆ ಮಾಡಿ ರಿಪೋರ್ಟುಗಳನ್ನೆಲ್ಲಾ ಸರ್ಕಾರಕ್ಕೆ ಕಳುಹಿಸಿದಾರೆ. ಶ್ರೀನಿವಾಸ ದೇವರ ದೇವಸ್ಥಾನದ ಇನಾಂತಿ ಜಮೀನುಗಳ್ಯಾವೂ ಅನ್ಯಾಕ್ರಾಂತವಾಗಿಲ್ಲವೆಂತಲೂ, ಆ ಜಮೀನುಗಳು ದೇವಸ್ಥಾನದ ಸೇವಕರ ಸ್ವಾಧೀನಾನುಭವದಲ್ಲಿವೆ ಎಂತಲೂ, ಅವರು ನ್ಯಾಯವಾದ ಘಟೆ ಥವಸ್ಕಾರಗಳನ್ನು ನಡಿಸಿಕೊಂಡು ಬರುತ್ತಿದ್ದಾರೆಂತಲೂ ಡೆಪ್ಯುಟಿ ಕಮಿಷನರು ರಿಪೋರ್ಟ್ ಕೊಟ್ಟಿದ್ದಾರೆ. ಆದಕಾರಣ ಈ ವಿಷಯದಲ್ಲಿ ಗವರ್ನಮೆಂಟವರು ಯಾವ ಹುಕುಮನ್ನೂ ಹೊರಡಿಸಬೇಕಾದ ಅಗತ್ಯವಿಲ್ಲ.

೨. ಕೇಶವ ದೇವರ ದೇವಸ್ಥಾನದ ಇನಾಂತಿ ಜಮೀನುಗಳ ಸ್ಥಿತಿಗತಿಯನ್ನು ನೋಡಿದರೆ ಕಂಪಿನ ಗ್ರಾಮದಲ್ಲಿರುವ ಸರ್ವೆ ನಂಬರ್ ೨೦—೨೫ನೇ ಬಾಬಾಯಿತು ಜಮೀನುಗಳು ಪರಾಧೀನವಾಗಿವೆ ಎಂದು ಗೊತ್ತಾಗುವುದು. ಅನುಭವದಾರರು ದೇವಸ್ಥಾನಕ್ಕೆ ಸಂಬಂಧಪಟ್ಟವರಲ್ಲ. ಡೆಪ್ಯುಟಿ ಕಮಿಷನರು ಕಳುಹಿಸಿರುವ ರಿಪೋರ್ಟಿನಿಂದ ಈ ಜಮೀನುಗಳು ೧೮೦೩—೧೮೦೩ನೇ ಇಸವಿ ಸುಮಾರಿನಲ್ಲಿ ಪರಭಾರೆಯಾಗಿ ಆಗಿನಿಂದಲೂ ಸಿದ್ದಲಿಂಗಪ್ಪ, ದೊಡ್ಡ ನಂಜಯ್ಯ, ಚಿಕ್ಕ ನಂಜಯ್ಯ ಎಂಬುವರು ಅನುಭವಿಸುತ್ತಿರುವುದು ವ್ಯಕ್ತವಾಗುತ್ತೆ. ಇವರಿಗೆ ಇನ್ಯಾರೋ ಆ ಜಮೀನುಗಳನ್ನು ಕೊಟ್ಟರೆಂತಲೂ, ಅವರಿಗೆ ಹೇಗೆ ಹಕ್ಕು ಬಂದಿತೆಂತಲೂ ತಿಳಿಯಲಿಲ್ಲವೆಂತಲೂ ಡೆಪ್ಯುಟಿ ಕಮಿಷನರು ಹೇಳುತ್ತಾರೆ. ಅದ್ದರಿಂದ ಈಗ ಆ ಸುಪರ್ದುದಾರರಾಗಿರತಕ್ಕವರಿಗೇನೇ ಆ ಜಮೀನುಗಳನ್ನು ವಹಿಸತಕ್ಕದ್ದು. ಈಗ ಅವರು ಗವರ್ನಮೆಂಟಿಗೆ ಜೋಡಿಯನ್ನು ಕೊಡುತ್ತಿದ್ದಾರಷ್ಟೆ. ಇದರ ಮೇಲೆ ಇನ್ನು ಮುಂದೆ ಅರ್ಧ ಕಂದಾಯವನ್ನು ಸಿದ್ಧಾಯ ದೇವಸ್ಥಾನಕ್ಕೇನೇ ಪಾವತಿಮಾಡುತ್ತಾ ಬರಬೇಕು.

೩. ಮೇಲ್ಕಂಡ ೨೦—೨೫ನೆ ಸರ್ವೆ ನಂಬರುಗಳ ಜಮೀನುಗಳ ಅನುಭವದಾರರು ಎಷ್ಟು ಜೋಡಿ ಹಣ ಪಾವತಿ ಮಾಡತಕ್ಕದ್ದಾಗಿದೆಯೋ ಅದನ್ನು ಸರ್ವೆ ಮತ್ತು ಸೆಟ್ಲಮೆಂಟ್ ಕಮಿಷನರು ನಿಗದಿ ಮಾಡಿ, ಆ ವಿಷಯವನ್ನು ಆದಷ್ಟು ಬೇಗನೆ ಮುಜರಾಯಿ ಇಲಾಖೆಯ ಮೂಲಕ ಗವರ್ನಮೆಂಟಿಗೆ ತಿಳಿಸಬೇಕಾಗಿದೆ.

## ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರು ಟೌನ್‌ಹಾಲ್ ಬಂಗಲೆಯಲ್ಲಿ ಸಭೆಸೇರಿ ತಿಂಗಳು ಕಟ್ಟಳೆಯ ಮ್ಯುನಿಸಿಪಲ್ ಮೀಟಿಂಗು ನಡಿಸಿದರು. ಮೊದಲು ಸೆಪ್ಟಂಬರ್ ತಿಂಗಳ ಜಮಾ ಖರ್ಚು ಮುಂತಾದ ಲೆಕ್ಕಗಳು ಓದಲಾಯಿತು. ಆ ತಿಂಗಳಲ್ಲಿ ಜಮಾ ರೂ. ೧೨,೧೮೪—೮—೯ ಪೈ, ಖರ್ಚು ರೂ. ೧೩,೮೫೭—೧೩—೨ ಪೈ. ಹೋದ ವರುಷ ಆ ತಿಂಗಳಲ್ಲಿ ೩ ಅಂಗುಲ ಮಳೆ ಆಗಿತ್ತು; ಈ ವರುಷ ೭ ಅಂಗುಲ ಮಳೆ ಆಗಿದೆ. ಆದ್ದರಿಂದ ಕುಕ್ಕರಹಳ್ಳಿ ಕೆರೆಯಲ್ಲಿ ಈಗ ೨೧ ಅಡಿಗಿಂತಲೂ ನೀರು ಜಾಸ್ತಿ ಬಂದಿದೆ.

ಪಟ್ಟಣದ ಕಸರಾ ಗುಡಿಸುವದಕ್ಕೆ ಸರ್ಕಾರದಿಂದ ಸ್ಯಾಂಕ್ಷನ್ ಆಗಿರುವಷ್ಟು ಮಂದಿ ಗುಡಿಸುವವರನ್ನು ಹೆಲ್ತ್‌ಆಫೀಸರು ನೇಮಿಸಿಕೊಂಡಿಲ್ಲ. ಈ ಪೈಕಿ ಉಳಿಯುವ ಹಣದಲ್ಲಿ ಅವರು ಕೆಲವು ಜವಾನರನ್ನು ನೇಮಿಸಿಕೊಂಡಿದಾರೆ; ಮತ್ತು ಕಸರಾ ಗಾಡಿಗಳನ್ನು ಇಟ್ಟುಕೊಂಡಿದಾರೆ. ಇದನ್ನು ಗವರ್ನಮೆಂಟಿನವರು ಒಪ್ಪದೆ ಗುಡಿಸುವವರನ್ನೇ ನೇಮಿಸಬೇಕೆಂದು ಹುಕುಂ ಕೊಟ್ಟಿದ್ದಾಗ್ಯೂ ಹೆಲ್ತ್‌ಆಫೀಸರು ಆ ಹುಕುಮನ್ನು ಚಲಾವಣೆಗೆ ತಂದಿಲ್ಲವೆಂದು ಆಡಿಟರು ರಿಪೋರ್ಟ್ ಬರೆದಿದ್ದರು. ಇದಕ್ಕೆ ಹೆಲ್ತ್‌ಆಫೀಸರು—ಈ ಬೋರ್ಡಿನವರು ಮೊದಲೇ ಈ ಬಾಬನ್ನು ಚರ್ಚಿಸಿ ಗುಡಿಸುವವರು ಸಿಕ್ಕುವದಿಲ್ಲವಾದ್ದರಿಂದ ಈಗಿನಂತೆ ಜವಾನರನ್ನೇ ನೇಮಿಸಿಕೊಂಡಿರತಕ್ಕದ್ದೆಂದು ತೀರ್ಮಾನ ಮಾಡಿರುತ್ತಾರೆ. ಅದರಂತೆ ನಾನು ಕೆಲಸ ಮಾಡಿಸುತ್ತಿದ್ದೇನೆ ಎಂಬದಾಗಿ ಹೇಳಿದರು.

ವೈಸ್ ಪ್ರೆಸಿಡೆಂಟರು ಹೇಳಿದ್ದೇನೆಂದರೆ —ದರ್ಜಿಯವರು ಮನೆಗಳಲ್ಲಿ ಹೊಲಿಯುವ ಯಂತ್ರ ಇಟ್ಟುಕೊಂಡು ಕಸಬು ನಡಸುತ್ತಾರೆ. ಅನೇಕಮಂದಿ ಅಂಗಡಿಗಳನ್ನಿಟ್ಟು ಹೊಲಿಯುತ್ತಾರೆ; ಇವರಲ್ಲಿ ಕೆಲವರು ಬಟ್ಟೆಗಳನ್ನು ತಯಾರುಮಾಡಿ ವಿಕರಿ ಮಾಡುವದೂ ಉಂಟು. ಹೊಲಿಯುವ ಯಂತ್ರಗಳ ಮೇಲೆ ತೆರಿಗೆ ಹಾಕಿ ವಸೂಲ್ಮಾಡುವದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಅಂಗಡಿ ತೆರಿಗೆ ವಸೂಲಾಗುತ್ತಿದೆ. ಮನೆಗಳಲ್ಲೇ ಯಂತ್ರವಿಟ್ಟು ಹೊಲಿಯತಕ್ಕವರಿಗೆ ತೆರಿಗೆ ಹಾಕದೆ ಇತರರಿಗೆ ಸಾಕಿ ವಸೂಲ್ಮಾಡುವದಕ್ಕೆ ಬೋರ್ಡಿನವರ ಅಭಿಪ್ರಾಯ ಅವಶ್ಯವಾಗಿದೆ. ಈ ವಿಷಯ ಸ್ವಲ್ಪ ಹೊತ್ತು ಚರ್ಚೆಯಾಯಿತು. ಹೀಗೆ ಯಂತ್ರಗಳ ಮೇಲೆ ತೆರಿಗೆ ಹಾಕುವದು ಸರಿಯಲ್ಲವೆಂತಲೂ, ಅಂಥಾ ಅಂಗಡಿಗಳಿಗೆ ಮಾಮೂಲು ಪ್ರಕಾರ ಅಂಗಡಿ ಕಂದಾಯ ದಾಖಲ್ಮಾಡಬೇಕೆಂತಲೂ, ಈ ವಿಷಯವನ್ನು ಗವರ್ನಮೆಂಟಿಗೆ ತಿಳಿಸಿ ಅವರ ಅನುಮತಿ ಪಡೆಯಬೇಕೆಂತಲೂ ಮೆಂಬರುಗಳು ತೀರ್ಮಾನಿಸಿರುತ್ತಾರೆ.

ಚಾಮರಾಜ ಪೇಟೆಯಲ್ಲಿ ಕಾಸ್ಮಾಪಾಲಿಟನ್ ಕ್ಲಬ್ ಪೂರ್ವಕ್ಕಿರುವ ಮುಕ್ಕೋಣದ ಖಾಲೀ ಜಾಗವನ್ನು ತನಗೆ ಕ್ರಯಕ್ಕೆ ಕೊಡಿಸಬೇಕೆಂದು ಆ ಬಂಗಲೆಯ ಮಾಲೀಕರಾದ ಮೆ॥ ಬಸವರಾಜೇ ಅರಸಿನವರು ಮ್ಯುನಿಸಿಪಾಲಿಟಿಯವರನ್ನು ಕೇಳಿದ್ದರು. ಈ ಖಾಲೀ ನಿವೇಶನವು ಮುಂದೆ ಮ್ಯುನಿಸಿಪಾಲಿಟಿಗೆ ಬೇಕಾಗಬಹುದಾದ್ದರಿಂದ ಅದನ್ನು ಮಾರುವದು ಸರಿಯಲ್ಲವೆಂತ ಮೆಂಬರುಗಳು ತೀರ್ಮಾನ ಮಾಡಿದಾರೆ.

ಚಾಮರಾಜ ಪೇಟೆಯಲ್ಲಿ ಕಂಟ್ರೋಲರೇ ಮುಂತಾದವರು ವಾಸಮಾಡುವ ಬಂಗಲೆಗಳ ಹಿಂಭಾಗದಲ್ಲಿ ಒಂದು ದೊಡ್ಡ ಮೋರಿ ಚರಂಡಿ(?)ಯನ್ನು ಕಟ್ಟಿಸಬೇಕೆಂತಲೂ, ಆ ಬಂಗಲೆಗಳ ಕಸರಾ ನೀರು ಚರಂಡಿನೀರು ಮುಂತಾದ್ದೆಲ್ಲಾ ಈಗ ಅಲ್ಲೇ ಇಂಗುತ್ತಿದೆ ಎಂತಲೂ, ಇದಕ್ಕೆ ಸುಮಾರು ೧,೪೦೦ ರೂ. ಖರ್ಚಾಗಬಹುದೆಂತಲೂ ವೈಸ್ ಪ್ರೆಸಿಡೆಂಟರು ಸೂಚಿಸಿದರು. ಮೆಂಬರುಗಳು ಈ ಕೆಲಸವನ್ನು ಸದ್ಯ ಸ್ಯಾಂಕ್ಷನ್ ಮಾಡಬೇಕಾದ ಅಗತ್ಯವಿಲ್ಲವೆಂದು ಹೇಳಿದರು.

ದೊಡ್ಡ ಕೆರೆ ಏರಿ ಕೆಳಗೆ ಗಾಡಿಗಳ ಸಂಚಾರ ಬಹಳವಾಗಿದೆ. ಆ ರಸ್ತೆಗೆ ಝಲ್ಲಿ ಕಲ್ಲು ಹಾಕಿಸಿ ಬಹಳ ಚನ್ನಾಗಿ ಮಾಡಿಸಬೇಕೆಂದು ಮೆ॥ ನರಸಿಂಹಸ್ವಾಮಿಯವರು ಸೂಚಿಸಿದರು. ಇದು ತುಂಬಾ ಅವಶ್ಯವಾದ್ದರಿಂದ ಅದನ್ನು ಚನ್ನಾಗಿ ಮರಮ್ಮತ್ತು ಮಾಡಿಸುವದಕ್ಕೆ ಎಷ್ಟು ಖರ್ಚಾದೀತೋ ಅಂದಾಜು ಪಟ್ಟಿ ತಯಾರಾಗಬೇಕೆಂದು ಮೆಂಬರುಗಳು ಕೇಳಿರುತ್ತಾರೆ.

ವಿವಾರ(?) ರೋಡಿಗೂ ಮೊಹದ್ದೀನ್ ಸಾಹೇಬರ ಕಾರ್ಖಾನೆ ರೋಡಿಗೂ ನಡುವೆ ಕುಕ್ಕರಹಳ್ಳಿ ಕೆರೆ ನೀರು ಬರುವುದಕ್ಕೆ ಕಟ್ಟಿರುವ ಆಳವಾದ ಕೊಳಾಯಿಯನ್ನು ಮುಚ್ಚಿಬಿಡಬೇಕೆಂದು ಮೆಂಬರುಗಳು ಸಮ್ಮತಿ ಕೊಟ್ಟರು. ಇದಕ್ಕೆ ಸುಮಾರು ೧೦೦ ಚಿಲ್ಲರೆ ರೂಪಾಯಿ ಖರ್ಚಾಗಬಹುದು.

ಹೊಸದಾಗಿ ಏರ್ಪಡಾಗುವ ಮೈಸೂರು ತಾಲ್ಲೂಕ್ ಬೋರ್ಡಿಗೆ ಈ ಮ್ಯುನಿಸಿಪಾಲಿಟಿಯಿಂದ ಒಬ್ಬ ಮೆಂಬರನ್ನು ಬೋರ್ಡಿನವರೇ ಚುನಾಯಿಸಿ ಕಳುಹಿಸಬೇಕೆಂದು ಸರ್ಕಾರದವರು ಕೇಳಿದ್ದರು. ಮೆಂಬರುಗಳು ಸಮ್ಮತಿಹಾಕಿದ್ದರಲ್ಲಿ ಅಡ್ವೊಕೇಟ್ ಮೆ॥ ವಿ. ರಾಘವಾಚಾರ್ಯರೇ ಹೆಚ್ಚು ವೋಟುಗಳನ್ನು ಪಡೆದದ್ದರಿಂದ ಅವರು ಮೆಂಬರಾಗಿ ಚುನಾಯಿಸಲ್ಪಟ್ಟರು.

ಪ್ಲೇಗ್ ನಿವಾರಣಾರ್ಥವಾಗಿ ೧೯೦೦ನೆ ಇಸವಿಯಲ್ಲಿ ಸರ್ಕಾರದವರು ರಾಜಧಾನಿಯಲ್ಲಿ ಪ್ರಜೆಗಳ ಮನೆಗಳಲ್ಲಿ ಪಾಯಖಾನೆಗಳನ್ನು ಸರಿಯಾಗಿ ಕಟ್ಟಿಸಿಕೊಡುವುದಕ್ಕೂ ಕಸರಾ ಸಾಗುವುದಕ್ಕೂ ಏರ್ಪಾಡುಮಾಡಿ, ಪ್ಲೇಗ್ ಫಂಡಿನಿಂದ ಮ್ಯುನಿಸಿಪಾಲಿಟಿಗೆ ೫,೦೦೦ ರೂ. ಕೊಟ್ಟಿದ್ದರು. ಈ ಪೈಕಿ ೪,೪೦೦ ರೂ. ತನಕ ಖರ್ಚಾಗಿದೆ. ಇದನ್ನು ಸಾಲ ಕೊಟ್ಟಂತೆ ಎಣಿಸೋಣವೇ ಎಂಬದಾಗಿ ಗವರ್ನಮೆಂಟಿನ ಕಂಟ್ರೋಲರವರು ಮ್ಯುನಿಸಿಪಾಲಿಟಿಯವರನ್ನು ಕೇಳಿದರು. ಮೆಂಬರುಗಳು ಈ ವಿಚಾರವನ್ನು ಸ್ವಲ್ಪ ಹೊತ್ತು ಚರ್ಚೆ ಮಾಡಿ, ಈ ವಿಷಯದಲ್ಲಿ ಸರ್ಕಾರಕ್ಕೂ ಮ್ಯುನಿಸಿಪಾಲಿಟಿಗೂ ಮೊದಲಿಂದ ನಡೆದಿರುವ ಕಾಗದಪತ್ರಗಳನ್ನು ಮೆಂಬರುಗಳಿಗೆ ಕಳುಹಿಸಿಕೊಟ್ಟಲ್ಲಿ ಅವರು ನೋಡಿ ತೀರ್ಮಾನಹೇಳುವದಾಗಿ ಗೊತ್ತು ಮಾಡಿದರು.

## ಮೈಸೂರು ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚೆಯಾದ ಸಾಮಾನ್ಯ ವಿಷಯಗಳು.

### ಮೂರನೆಯದಿನ—ಗುರುವಾರ.

ಪ್ರಾರ್ಥನೆ.—(೧) ವ್ಯವಸಾಯಕ್ಕೆ ದನಕರಗಳೇ ಆಧಾರ. ಅವುಗಳಿಗೆ ರೋಗ ಮುಂತಾದ್ದು ಬಂದು ವರುಷೇವರುಷ ಸತ್ತು ಹೋಗುವವು. ಚಿಕಿತ್ಸೆ ಮಾಡಲು ಜನರಿಗೆ ತಿಳುವಳಿಕೆ ಸಾಲದು. ಪಶುವೈದ್ಯ ವಿಚಾರವಾಗಿ ಕನ್ನಡದಲ್ಲಿ ಪುಸ್ತಕಗಳನ್ನು ಬರೆಸಿ ಅಚ್ಚುಹಾಕಿಸಿ ಗ್ರಾಮಾಂತರಗಳಿಗೆಲ್ಲಾ ಹಂಚಬೇಕು. (೨) ಒಳ್ಳೆ ಗೋಕಾಯಿಗಳ ಬೆಳುವಳಿಗೆಗೆ ಅನುಕೂಲಿಸುವಂತೆ ಒಳ್ಳೆ ಗೂಳಿಗಳನ್ನು ಸರ್ಕಾರದವರು ಪ್ರತಿ ತಾಲ್ಲೂಕಿಗೂ ಒಂದರಂತೆ ತರಿಸಿ ಇಡಿಸಬೇಕು.

ದಿವಾನರವರ ಉತ್ತರ —(೧) ಸಾಧ್ಯವಾದಷ್ಟು ಮಾಡಬೇಕೆಂದಿದ್ದೇವೆ. (೨) ಗೂಳಿಗಳನ್ನು ತರಿಸಿ ಕಚೇರಿ ಆವರಣದಲ್ಲಿ ಕಟ್ಟಿಹಾಕುವುದು ಸಾಧ್ಯವಿಲ್ಲ; ಮತ್ತು ಕಟ್ಟಿಹಾಕಿದರೆ ಅವು ಕೆಟ್ಟುಹೋಗುವವು. ವಿಶೇಷವಾಗಿ ದನಗಳನ್ನಿಟ್ಟುಕೊಂಡಿರುವವರು ಬೇಕಾದರೆ ಗೂಳಿಗಳನ್ನು ತರಿಸಿಕೊಳಬಹುದು.

ಪ್ರಾ.—ಸ್ವಂತ ಹಿಡುವಳಿ ಜಮೀನಿನಲ್ಲಿರುವ ಈಚಲ ಮರಗಳಿಂದ ಹೆಂಡ ಇಳಿಸಿದರೆ ಸರ್ಕಾರಕ್ಕೆ ಪ್ರತಿ ಮರಕ್ಕೂ ೦| ರೂ. ತೆರಿಗೆ ಕೊಡಬೇಕು. ಇದು ಹಿಡುವಳಿ ಜಮೀನುದಾರನಿಗೆ ನಷ್ಟಕ್ಕಾಗಿದೆ. ಅರೆವಾಸಿಯಾದರೂ ಕೊಡಿಸಿಕೊಡಬೇಕು. ಇನಾಂದಾರರಿಗೆ ಕೊಡುತ್ತಿದಾರೆ.

ಉ.—ಶೇಂದಿ ಉತ್ಪತ್ತಿ ಸರ್ಕಾರಕ್ಕೆ ಸೇರತಕ್ಕದ್ದು. ಶೇಂದಿ ಇಳಿಸಿದರೆ ಪ್ರತಿ ಮರಕ್ಕೂ ಇಷ್ಟೆಂತಾ ತೆರಿಗೆ ಗೊತ್ತಾಗಿದೆ. ಜಮೀನುದಾರರು ಇಷ್ಟಪಟ್ಟರೆ ತಮ್ಮ ಜಮೀನಿನಲ್ಲಿರುವ ಈಚಲನ್ನು ಕತ್ತರಿಸಿಹಾಕಬಹುದು. ಸರ್ಕಾರದವರ ಅಡ್ಡಿಯೇನೂ ಇರುವುದಿಲ್ಲ. ಬೆಳೆದಿರುವ ಗಿಡದಲ್ಲಿ ಶೇಂದಿ ಇಳಿಸಿದರೆ ಸರ್ಕಾರಕ್ಕೆ ತೆರಿಗೆ ಕೊಡಬೇಕು. ಇದರಲ್ಲಿ ಹಿಡುವಳಿದಾರನಿಗೆ ಒಂದು ಕಾಸೂ ಸಲ್ಲತಕ್ಕದ್ದಲ್ಲ.

ಪ್ರಾ.—ಸರ್ಕಾರಕ್ಕೆ ಸೇರಿರತಕ್ಕ ಈಚಲ ವನಗಳನ್ನು ಪಟೇಲರು ಉಸ್ತುವಾರಿ ನೋಡಿಕೊಳ್ಳಬೇಕಾಗಿದೆ. ಇದು ತುಂಬಾ ಶ್ರಮಸಾಧ್ಯವಾದ ಜವಾಬ್ದಾರಿ ಕೆಲಸ. ಇದಕ್ಕಾಗಿ ಅವರಿಗೇನಾದರೂ ಸರ್ಕಾರದಿಂದ ರುಸುಂ ಸಲ್ಲುವಂತೆ ಅಪ್ಪಣೆ ಆಗಬೇಕು.

ಉ.—ಪಟೇಲರು ಮಾಡಬೇಕಾಗಿರುವ ಪ್ರತಿ ಸರ್ಕಾರಿ ಮಸ್ಲತ್ತಿಗೂ ಪ್ರತ್ಯೇಕವಾಗಿ ಅವರಿಗೆ ರುಸುಂ ಕೊಡುವುದಕ್ಕಾದೀತೇ? ಇದು ಅಸಾಧ್ಯ.

ಪ್ರಾ.—ವ್ಯವಸಾಯದ ಕೆಲಸಗಳಿಗೆ ಉಪಯೋಗಿಸಿಕೊಳ್ಳುವದಕ್ಕೆ ಈಗ ಒಣಗಿದ ಈಚಲ ಮರಗಳನ್ನು ರೈತರಿಗೆ ಕೊಡುತ್ತಾರೆ. ಒಣಗಿದ ಬಗನಿಮರವನ್ನೂ ಕೊಡಿಸಿದರೆ ತುಂಬಾ ಪ್ರಯೋಜನವಾಗುವುದು.

ಉ.—ಪಟೇಲರಿಂದ ಚೀಟಿ ತರುವವರಿಗೆ ಬಗನೀ ಮರವನ್ನೂ ಕೊಡಬಹುದೆಂತಾ ಹುಕುಂ ಕೊಡುತ್ತೇವೆ.

ಪ್ರಾ.—ಗಾಂಜಾ ಬೆಳೆಯುವ ರೈತರುದಾರರಿಗೆ ಸರ್ಕಾರದವರು ಸ್ವಲ್ಪ ರಿಯಾಯಿತಿ ತೋರಿಸಬೇಕೆಂತಾ ಅನೇಕಸಲದಿಂದ ಪ್ರಾರ್ಥಿಸಿಕೊಳ್ಳುತ್ತಿದ್ದೇವೆ.

ಉ.—ಮೊದಲು ಹೊರಗಿನಿಂದ ಗಾಂಜಾ ಕೊಂಡು ತರಿಸುತ್ತಿದ್ದೆವು. ಈಗ ಈ ಸಂಸ್ಥಾನಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ (ಅಂದರೆ,೧೫೦—೨೦೦ ಎಕರೆಗಳಷ್ಟು) ಬೆಳೆಯುವಂತೆ ನೋಡಿಕೊಳ್ಳುವೆವು. ಜಾಸ್ತಿ ಅವಶ್ಯವಿಲ್ಲ.

ಪ್ರಾ —(೧) ತಿರುವಾಂಕೂರು ಮೈಸೂರಿಗಿಂತ ಚಿಕ್ಕ ಸಂಸ್ಥಾನವಾದರೂ ಅಲ್ಲಿನವರು ಒಂದು ಲಾ ಕಾಲೇಜನ್ನು (ವಕೀಲರ ಪಾಠಶಾಲೆ) ಇಟ್ಟುಕೊಂಡಿದ್ದಾರೆ. ಇಲ್ಲೂ ಅಂಥಾ ವಿದ್ಯಾಶಾಲೆಯನ್ನು ಇಡಬೇಕು. (೨) ವೈದ್ಯವನ್ನು ಕಲಿಯುವದಕ್ಕೆ (ಹಿಂದು, ಯುನಾನಿ, ಇಂಗ್ಲಿಷ್) ಒಂದು ಪಾಠಶಾಲೆ ಇಡಿಸಿಕೊಡಬೇಕು.

ಉ.—ಇದೆಲ್ಲಾ ಅವಶ್ಯವಾದವುಗಳೇ ಹೌದು; ಇದಕ್ಕೆ ದುಡ್ಡಾಗಬೇಕಾಗುತ್ತೆ. ಹಣ ಒದಗಿದಾಗ ಯೋಚಿಸಬೇಕಾಗಿದೆ.

ಪ್ರಾ.—(೧) ಗ್ರಾಮಾಂತರಗಳ ಉಪಾಧ್ಯಾಯರ ಸಂಬಳವನ್ನು ಬಡ್ತಿ ಮಾಡಿಕೊಡಬೇಕು. (೨) ಅವರ ಸಂಬಳವನ್ನು ಶೇಕ್‌ದಾರ್ ಮೂಲಕ ತಲುಪಿಸುವುದು ಸಾವಕಾಶವಾಗುತ್ತೆ. ತಾಲ್ಲೂಕ್ ಸ್ಕೂಲ್‌ಗಳ ಜವಾನರ ಮೂಲಕ ಪಾವತಿ ಆಗುವಂತೆ ಹುಕುಂ ಮಾಡಬೇಕು.

ಉ.—(೧) ಗ್ರಾಮಸ್ಥರು ಈಗ ಕೊಡುವ ಲೋಕಲ್ ಫಂಡನ್ನು ರೂಪಾಯಿಗೆ ೧ ಆಣೆಗೆ ಬದಲಾಗಿ ೨ ಆಣೆಯಂತೆ ಕೊಡುತ್ತಾ ಬರುವದಾದರೆ ಉಪಾಧ್ಯಾಯರ ಸಂಬಳ ಬೇಗನೆ ಬಡ್ತಿ ಮಾಡಬಹುದು. ಕ್ರಮೇಣ ಮಾಡುತ್ತೇವೆ. ಗ್ರಾಮಾಂತರಗಳಲ್ಲೂ ಸ್ಕೂಲ್ ವಿದ್ಯಾರ್ಥಿಗಳಿಂದ ಅಲ್ಪಸ್ವಲ್ಪ ಫೀಜು ವಸೂಲ್ಮಾಡುವ ವಿಷಯ ಈ ವರುಷ ಗೊತ್ತಾಗಬಹುದು. (೨) ಸಂಬಳ ಪಾವತಿ ಮಾಡುವದರಲ್ಲಿ ಶೇಕ್‌ದಾರ್ ಮಾಡುವುದೇ ತುಂಬಾ ಅನುಕೂಲ. ಆದರೆ ಅವರೇನಾದರೂ ಸಾವಕಾಶ ಮಾಡಿದರೆ ಶಿಕ್ಷೆಯಾಗುತ್ತೆ. ಒಂದೆರಡು ಸಂದರ್ಭಗಳಲ್ಲಿ ಶಿಕ್ಷೆ ಮಾಡಿದೆ.

ಪ್ರಾ.—ರಾಜಧಾನಿಯಲ್ಲಿರುವ ಸಂಸ್ಕೃತ ಕಾಲೇಜನ್ನು ಕ್ರಮಪಡಿಸಬೇಕು. ಅಲ್ಲಿ ಕಷ್ಟಪಟ್ಟು ಹೇಳಿಕೊಡುವ ಮಹಾ ಮಹಾ ಪಂಡಿತರಿಗೆ ತುಂಬಾ ಅಲ್ಪ ಸಂಬಳ ಕೊಡುತ್ತಿದಾರೆ. ಅದನ್ನು ಅವರವರ ಯೋಗ್ಯತೆಗೆ ತಕ್ಕಂತೆ ಬಡ್ತಿ ಮಾಡಬೇಕು. ಮತ್ತು ಅಲ್ಲಿ ಇಂಗ್ಲಿಷನ್ನೂ ಇಡಬೇಕು. ಈ ಪಾಠಶಾಲೆಯು ದಕ್ಷಿಣದೇಶದಲ್ಲೂ ಉತ್ತರದೇಶದಲ್ಲೂ ತುಂಬಾ ಪ್ರಖ್ಯಾತಿ ಪಡೆದಿದೆ. ಇಂಥಾದ್ದನ್ನು ಕ್ರಮಪಡಿಸಿ ಉತ್ತಮಸ್ಥಿತಿಗೆ ತರಬೇಕು. ಕೆಲವು ಪಂಡಿತರು ಶಾಲೆಗೆ ಬರುವುದೇ ಇಲ್ಲ.

ಉ.—ಈ ಪಾಠಶಾಲೆಯನ್ನು ಯಾವರೀತಿಯಲ್ಲಿ ಕ್ರಮಪಡಿಸಬಹುದೆಂದು ಗೊತ್ತುಮಾಡುವುದಕ್ಕೆ ಕೆಲವು ವಿದ್ಯಾವಂತರನ್ನು ನೇಮಿಸಿರುತ್ತೇವೆ. ಅವರು ಸೇರಿ ಚರ್ಚೆಮಾಡಿ ಆಗಬೇಕಾದ ಬದಲಾವಣೆಗಳನ್ನು ಕುರಿತು ರಿಪೋರ್ಟ್ ಬರೆಯುತ್ತಾರೆ. ಈ ರಿಪೋರ್ಟ್ ಬಂದನಂತರ ಸರ್ಕಾರದವರು ಅದರಂತೆ ತಿದ್ದುಪಾಟು ಮಾಡಲು ಪ್ರಯತ್ನಿಸುವರು.

### ನಾಲ್ಕನೆಯದಿನ—ಶುಕ್ರವಾರ.

ಪ್ರಾ —೨,೩ನೆ ಸ್ಟಾಂಡರ್ಡ್ ವರೆಗೆ ಕನ್ನಡ ಕಲಿತುಕೊಂಡ ಹೊರತು ಯಾರನ್ನೂ ಇಂಗ್ಲಿಷ್ ಸ್ಕೂಲಿಗೆ ಸೇರಿಸಿಕೊಳ್ಳಕೂಡದು. ಈಚೆಗೆ ವಿದ್ಯಾಭ್ಯಾಸದ ಇಲಾಖೆಯವರು ರೂಲ್ಸು ಮಾಡಿರುವದರಿಂದ ಇಂಗ್ಲಿಷ್ ವಿದ್ಯೆ ಕಲಿಯುವುದು ಬಹಳ ಸಾವಕಾಶವಾಗುವುದು. ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಸರ್ಕಾರಿ ಉದ್ಯೋಗಗಳಿಗೆ ಬರಲು ವಯಸ್ಸು ಮೀರಿಹೋಗುತ್ತೆ.—ಇಂಗ್ಲಿಷ್ ಸ್ಕೂಲುಗಳಲ್ಲಿ ಲೋವರ್ ಸೆಕೆಂಡರಿ ಕ್ಲಾಸಿನ ತನಕ ಕನ್ನಡದಲ್ಲೇ ಚರಿತ್ರೆ ಭೂಗೋಳ ಮೊದಲಾದುವನ್ನು ಹೇಳಿಕೊಡಬೇಕೆಂದು ವಿಧಿಸಿದಾರೆ. ಇದರಿಂದ ಇಂಗ್ಲಿಷ್ ವಿದ್ಯೆ ಹುಡುಗರಿಗೆ ಚನ್ನಾಗಿ ರೂಢಿಯಾಗುವುದಿಲ್ಲ. ಅನೇಕರು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದದೆ ಕಷ್ಟಪಡುತ್ತಾರೆ.—ಪರೀಕ್ಷೆಯ ಫೀಜನ್ನು ೧ ರೂಪಾಯಿನಿಂದ ೪ ರೂಪಾಯಿಗೆ ಹೆಚ್ಚಿಸಿದ್ದಾರೆ. ಬಡಬಗ್ಗರಿಗೆ ಅಷ್ಟು ಕೊಡಲು ಚೈತನ್ಯಸಾಲದು. ಇದನ್ನು ಕಡಿಮೆಮಾಡಿ ಕೊಡಬೇಕು.

ಉ.—ಜನರಿಗೆ ಈ ಭಾಗದಲ್ಲಿ ತುಂಬಾ ತೊಂದರೆಯುಂಟಾಗಿದೆ ಎಂದು ಸರ್ಕಾರಕ್ಕೆ ತಿಳಿದು ಬಂದಿರುವುದು. ಕೆಲವು ವಿದ್ಯಾವಂತರ ಸಲಹೆಯನ್ನು ಕೇಳಿ, ಈ ಕಷ್ಟಗಳನ್ನು ಪರಿಹಾರ ಮಾಡಿಕೊಡಲು ಎಷ್ಟು ಮಟ್ಟಿಗೆ ಸಾಧ್ಯವೋ ಮುಂದೆ ನೋಡಬೇಕಾಗಿದೆ.

ಪ್ರಾ.—ಬಾಲಿಕಾ ಪಾಠಶಾಲೆಗಳಲ್ಲಿ ಗಂಡಸರನ್ನು ಉಪಾಧ್ಯಾಯರನ್ನಾಗಿ ನೇಮಿಸುವುದು ಯೋಗ್ಯವಾದುದಲ್ಲ. ಮೈಸೂರು ಮಹಾರಾಣಿಯವರ ಕಾಲೇಜಿನಲ್ಲಿ ತೇರ್ಗಡೆ ಹೊಂದಿಯೂ, ಹೊಂದದೆಯೂ ಇರುವಂಥಾ ವೃದ್ಧ ಸ್ತ್ರೀಯರನ್ನು ಸುಪರಿಂಟೆಂಡರ ಶಿಫಾರಸಿನ ಮೇಲೆ ಸಂಸ್ಥಾನದ ಎಲ್ಲಾ ಬಾಲಿಕಾ ಪಾಠಶಾಲೆಗಳಲ್ಲೂ ಉಪಾಧ್ಯಾಯಿನಿಯರನ್ನಾಗಿ ನೇಮಕ ಮಾಡಬೇಕು. ಹೆಂಗಸರು ಭೂಗೋಳ, ಚರಿತ್ರೆ, ವಿಶೇಷ ಲೆಕ್ಕ, ಪ್ರೌಢ ವಿದ್ಯೆ ಮೊದಲಾದುವನ್ನು ಗಂಡು ಹುಡುಗರಂತೆ ಕಲಿತು ಗಟ್ಟಿಗರೆನಿಸಿಕೊಳ್ಳಬೇಕಾದ ಅಗತ್ಯವಿಲ್ಲ. ಸಾಧಾರಣ ಓದು ಬರಹ, ಲೆಕ್ಕಾಚಾರ, ಆರೋಗ್ಯ ವಿಚಾರ, ಮನೇ ಕೆಲಸ, ಹೊಲಿಗೆ, ಕಸೂತಿ ಮೊದಲಾದುವನ್ನು ಕಲಿತು ಹೆಣ್ಣು ಮಕ್ಕಳಿಗೆ ಹೇಳಿಕೊಡುವಂತಾದರೆ ಸಾಕು. ಮುಖ್ಯವಾಗಿ ಸ್ತ್ರೀಧರ್ಮವ್ಯಾವದೆಂಬದನ್ನು ತಿಳಿತಿದ್ದರೆ ಸಾಕಾಗಿದೆ.

ಉ.—ಅನುಕೂಲವಾದ ಹಾಗೆಲ್ಲಾ ಹೆಂಗಸರನ್ನೇ ಬಾಲಿಕಾ ಪಾಠಶಾಲೆಗಳಿಗೆ ಉಪಾಧ್ಯಾಯಿನಿಯರನ್ನಾಗಿ ನೇಮಿಸುತ್ತಾ ಇದ್ದೇವೆ. ಪಾಠದ ಪಟ್ಟಿಯ ವಿಷಯದಲ್ಲಿ ಈಗ ಸೂಚಿಸಿರುವ ವಿಷಯಗಳನ್ನು ಗುರುತು ಮಾಡಿಕೊಂಡಿರುವೆವು. ವಿಚಾರ ಮಾಡಿ ಗೊತ್ತುಮಾಡುತ್ತೇವೆ.

ಪ್ರಾ.—ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲೆಲ್ಲಾ ಕಿವುಡ ಮೂಕರಿಗೂ ಕುರುಡರಿಗೂ ಒಂದೊಂದು ಪಾಠಶಾಲೆಯನ್ನು ಸ್ಥಾಪಿಸಿಕೊಡಬೇಕು.

ಉ —ಆಗಬಹುದು, ಇದನ್ನು ಗುರುತು ಮಾಡಿಕೊಂಡಿದ್ದೇವೆ.

ಪ್ರಾ.—ಅನೇಕ ಸತ್ರ ದೇವಸ್ಥಾನಗಳು ಮುಜರಾಯಿ ಇಲಾಖೆಯ ಮೇಲ್ವಿಚಾರಣೆಗೆ ಒಳಪಟ್ಟಿಲ್ಲ. ಅವೆಲ್ಲಾ ಹಾಳಾಗಿ ಹೋಗುತ್ತಿವೆ. ಮುಸಲೂ(?) ಸೊರಬ ತಾಲ್ಲೂಕಿನಲ್ಲಿ ೩೦೦ ದೇವಸ್ಥಾನಗಳಿವೆ. ಇವುಗಳ ಕಾರುಬಾರು ಸ್ವಲ್ಪವೂ ಚನ್ನಾಗಿಲ್ಲ. ಸರಿಪಡಿಸಬೇಕೆಂದು ಅರ್ಜಿ ಕೊಟ್ಟು ಐದು ವರುಷಗಳಾದರೂ ನಿಷ್ಪ್ರಯೋಜನವಾಗಿದೆ.

ಉ.—ಸೊರಬದ ಸತ್ರ ದೇವಸ್ಥಾನಗಳ ವಿಚಾರವನ್ನು ತನಿಖೆ ಮಾಡುವಂತೆ ಹುಕುಂ ಕೊಡಲಾಗುತ್ತೆ.

ಪ್ರಾ.—ಶ್ರೀಮತಸ್ಥರ ಮಠಗಳ ಉತ್ಪತ್ತಿಯನ್ನೂ ಖರ್ಚನ್ನೂ ಆಯಾ ಮಠದ ಶಿಷ್ಯರಾಗಿಯೂ ಮಾತುಬಲರಾಗಿಯೂ ಇರುವ ಕೆಲವು ದೊಡ್ಡ ಮನುಷ್ಯರು ಮುಖಂಡರಾಗಿ ನಿಂತು ನೋಡಿಕೊಳ್ಳುವಂತೆ ಕಮಿಟಿ ಆಗಬೇಕು. ಮಠದವರು ಕಮಿಟಿ ಮಾಡಿಕೊಳ್ಳದೆ ಹೋದರೆ ಮುಜರಾಯಿ ಸುಪರಿಂಟೆಂಡರಾದರೂ ಪ್ರವೇಶಿಸಿ ಒಂದೊಂದು ಕಮಿಟಿ ಏರ್ಪಾಡು ಮಾಡಬೇಕು.

ಉ.—ಮಠಗಳ ವಿಚಾರದಲ್ಲಿ ಸಾಧ್ಯವಾದ ಮಟ್ಟಿಗೂ ಸರ್ಕಾರಿ ವಿಚಾರಣೆ ಕಮ್ಮಿ ಮಾಡಬೇಕೆಂತಲೂ, ಅವರವರಲ್ಲೆ ಮುಖಂಡರು ನೋಡಿಕೊಳ್ಳುವಂತೆ ಮಾಡಬೇಕೆಂತಲೂ ಸರ್ಕಾರದವರು ಆಲೋಚಿಸುತ್ತಿದಾರೆ.

ಪ್ರಾ.—(೧) ಧರ್ಮಿಷ್ಠರ್‍ಯಾರಾದರೂ ಅನ್ನ ಸತ್ರ ಇಟ್ಟು ಅದು ನಡೆಯುವಂತೆ ಜಮೀನು ಮಾಡಬೇಕೆಂದು ಅಪೇಕ್ಷಿಸಿದರೆ ಅಂಥವರಿಗೆ ಜಮೀನು ಕಂದಾಯವನ್ನು ಸ್ವಲ್ಪ ಮಟ್ಟಿಗೆ ಮಾಫಿ ಬಿಡುವದರ ಮೂಲಕವೋ, ಜಮೀನನ್ನೇ ಸ್ವಲ್ಪ ಮುಫತ್ತಾಗಿ ಕೊಡಿಸುವದರ ಮೂಲಕವೋ! ಸರ್ಕಾರದವರು ಪ್ರೋತ್ಸಾಹ ಪಡಿಸಬೇಕು. ಹಿಂದೆ

ಗಳಲ್ಲಿ ಶಿವಕೂಟ, ಸತ್ರಗಳಿಗೆ ವಿನಿಯೋಗಿಸುವದಕ್ಕಾಗಿ ಅರ್ಪಣ ಪತ್ರ ಕಾಣಿಕೆಯನ್ನು ಪ್ರಾರಂಭ ಮಾಡಿ, ವರುಷಕ್ಕೆ ೩೦೦ ರೂ. ಗಿಂತಲೂ ಹೆಚ್ಚಾಗಿ ವಸೂಲಾಗುತ್ತಿದ್ದರೂ, ಆ ಹಣವನ್ನು ಶಿವಕೂಟ, ಸತ್ರಗಳಿಗೆ ವಿನಿಯೋಗಿಸುವುದಿಲ್ಲ. ಸತ್ರ ನಿಂತುಹೋಗಿದೆ.

ಉ.—(೧) ಧರ್ಮಕರ್ತರಾದವರು ಹಾಗೆ ಅನ್ನ ಸತ್ರಕ್ಕೆ ಜವಾಬ್ದಾರಿಕೆ ವಹಿಸಿಕೊಳ್ಳಬೇಕೆಂದು ಕೇಳಿಕೊಂಡರೆ ವಿಚಾರಿಸಿ ಸಂದರ್ಭಾನುಸಾರ ರಿಯಾಯಿತಿ ತೋರಿಸಲಾಗುತ್ತೆ. (೨) ನಂದನಗೂಡಿನ ಶಿವಕೂಟ, ಸತ್ರಗಳ ಸಂಗತಿಯನ್ನು ವಿಚಾರಿಸುತ್ತೇವೆ.

ಪ್ರ.—ಸಣ್ಣ ಸಣ್ಣ ದೇವಾಲಯದ ಇನಾಂತಿಗಳಿಗೆ ಖಾಲ್ಸಾತನ್ನು ಈಚಿಗೆ ವಜಾ ಮಾಡಿದ್ದಾರೆ. ಅದರ ಹಿಂದೆ ವಸೂಲ್ಮಾಡಿಕೊಂಡಿರುವ ಹಣವನ್ನು ವಾಪಸು ಕೊಡಿಸಬೇಕು.

ಉ.—ಹುಕುಂ ಕೊಡುವ ತನಕ ಎಷ್ಟು ಬಾಕಿ ಇತ್ತೋ ಅದನ್ನೆಲ್ಲಾ ಬಿಟ್ಟುಬಿಟ್ಟೆವು. ಅದರ ಹಿಂದೆ ಈ ಬಾಬಿನಲ್ಲಿ ವಸೂಲಾದ ಮೊಬಲಗನ್ನು ವಾಪಸು ಕೊಡಿಸಲಾಗುವುದಿಲ್ಲ.

ಪ್ರ.—ಸರ್ಕಾರಿ ಸತ್ರಗಳಲ್ಲಿ ಪ್ರಯಾಣಿಕರಿಗೆ ಮೊದಲು ಅಡಿಗೆ ಮಾಡಿಸಿ ಅನ್ನ ಹಾಕಿಸುತ್ತಿದ್ದರು. ಈಚಿಗೆ ಇದನ್ನು ತಪ್ಪಿಸಿ ಸಾಮಾನನ್ನು ಮಾತ್ರ ಕೊಟ್ಟುಬಿಡುತ್ತಾರೆ. ಇದರಿಂದ ಜನರಿಗೆ ನಾನಾ ಕಷ್ಟಗಳುಂಟಾಗುತ್ತಿವೆ. ದಯಮಾಡಿ ಮೊದಲಿನ ಪದ್ಧತಿಯನ್ನೇ ಖಾಯಂ ಮಾಡಿಕೊಡಬೇಕು.

ಉ.—ಇದನ್ನು ಮಾಡಿಕೊಡಬೇಕೆಂದು ಗವರ್ನಮೆಂಟಿನವರು ಯೋಚಿಸಿಕೊಂಡಿದ್ದೇವೆ. ಇಷ್ಟರಲ್ಲೇ ನಿಮ್ಮ ಪ್ರಾರ್ಥನೆಯಂತೆ ಹುಕುಂ ಕೊಡಲಾದೀತು.

ಪ್ರ.—ಮಾಗಡಿ ತಾಲ್ಲೂಕು ತಿರುಮಲೆ ದೇವಸ್ಥಾನದಲ್ಲಿ ದೊಡ್ಡ ಕಳುವಾದ ಸಬಬು ಅರ್ಚಕರೇ ಮುಂತಾದವರ ಸಂಬಳವನ್ನು ೬-೭ ವರುಷಗಳಿಂದ ತಡೆದುಬಿಟ್ಟಿದ್ದಾರೆ. ಇದರಿಂದ ದೇವಸ್ಥಾನದಲ್ಲಿ ಪೂಜೆ ನೈವೇದ್ಯಾದಿಗಳು ನಡೆಯುದು ಆಟಂಕವಾಗಿದೆ. ಹೀಗಾಗದಂತೆ ಅಪ್ಪಣೆ ಆಗಬೇಕು.

ಉ.—ಈ ಒಂದು ವಿಷಯ ಇಲ್ಲಿನ ತನಕ ಬರಬೇಕೇ? ಒಳ್ಳೇದು, ವಿಚಾರಿಸುತ್ತೇವೆ.

ಪ್ರ.—ಬಿ. ಎ., ಬಿ. ಎಲ್. ಎಂಬ ಘನತರವಾದ ಪರೀಕ್ಷೆಗಳಲ್ಲಿ ಕೆಲವು ಶ್ಯಾನುಭೋಗರು ತೇರ್ಗಡೆ ಹೊಂದಿ ಪ್ರೋತ್ಸಾಹವಿಲ್ಲದೆ ಇದ್ದಾರೆ. ಸರ್ಕಾರದವರು ಇವರಿಗೆ ಒಳ್ಳೇ ನೌಕರಿ ಕೊಟ್ಟು ಪ್ರೋತ್ಸಾಹ ಪಡಿಸಬೇಕು.

ಉ.—ಇಂಥಾ ವಿಷಯಗಳನ್ನೆಲ್ಲಾ ನೀವು ಇಲ್ಲಿಗೆ ಯಾಕೆ ತಿಳಿಸಬೇಕು? ನಿಮಗೂ ಇದಕ್ಕೂ ಸಂಬಂಧವೇನೂ ಇಲ್ಲ.

ಪ್ರ.—ಲೋಕಲ್ ಸರ್ವಿಸ್ ಪರೀಕ್ಷೆಗಳಿಗೆ ಪಟೇಲ್ ಶ್ಯಾನುಭೋಗರು ಸಹಾ ಹಣ ಕಟ್ಟಿ ಹಾಜರಾಗಬಹುದೆಂಬ ರಿಯಾಯಿತಿಯನ್ನು ತೋರಿಸಬೇಕು.

ಉ.—ಒಳ್ಳೇದು, ಈ ವಿಷಯದಲ್ಲಿ ಚೀಫ್ ಕೋರ್ಟಿನವರು ಗವರ್ನಮೆಂಟಿಗೆ ಬರೆದಿರುವ ಕಾಗದಪತ್ರಗಳನ್ನು ನೋಡಿ ಇತ್ಯರ್ಥ ಮಾಡುತ್ತೇವೆ.

ಪ್ರ.—ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲೆಲ್ಲಾ ಅನಾಥಾಲಯಗಳನ್ನು ಇಡಿಸಬೇಕು; ಮತ್ತು ಸಾಹುಕಾರಿಯಾಗಿ ನಡೆಯುತ್ತಿರುವ ಅನಾಥಾಲಯಗಳಿಗೆ ಸರ್ಕಾರದವರು ಗ್ರ್ಯಾಂಟು (ದ್ರವ್ಯಸಹಾಯ) ಕೊಡಬೇಕು.

ಉ.—ಇವುಗಳಿಗೆ ಸಹಾಯಮಾಡುವದೇನೋ ಅವಶ್ಯ. ಸರ್ಕಾರದವರು ಈ ವಿಷಯದಲ್ಲಿ ಹುಕುಂ ಕೊಡುವವರಾಗಿದ್ದಾರೆ. ಸಾಹುಕಾರಿಯಾಗಿ ನಡೆಯುತ್ತಿರುವ ಆಲಯಗಳ ಮೇಲ್ವಿಚಾರಕರು ಅರ್ಜಿ ಬರೆದುಕೊಂಡರೆ ದ್ರವ್ಯಸಹಾಯ ಮಾಡಬಹುದು.

ಪ್ರ.—ಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಹೇಳಿಕೊಳ್ಳುವ ಪ್ರಾರ್ಥನೆಯನ್ನು ಸರ್ಕಾರದವರು ಹ್ಯಾಗೆ ತೀರ್ಮಾನ ಮಾಡುವರೋ ಬೇಗ ಮೆಂಬರುಗಳಿಗೆ ತಿಳಿದುಬರುವಂತೆ ಪ್ರಿಂಟಾದ ಪ್ರೊಸೀಡಿಂಗ್ಸನ್ನು ಕಳುಹಿಸಿಕೊಡಬೇಕು.

ಉ.—ಒಳ್ಳೇದು; ಬೇಗನೆ ಮೆಂಬರುಗಳಿಗೆ ತಿಳಿಸಲು ಏರ್ಪಾಟು ಮಾಡುತ್ತೇವೆ.

ಪ್ರ.—ಪ್ರತಿನಿಧಿಗಳಿಗೆ ಸರ್ಕಾರಿ ಗಜೆಟ್ ಬೇಕಾದರೆ ಅವರು ಅರ್ಧ ಛಾರ್ಜ ಕೊಡಬೇಕಾಗಿದೆ. ಇದನ್ನು ಮಾಫಿ ಮಾಡಿಕೊಟ್ಟು, ಮೆಂಬರುಗಳಿಗೆ ಬಿಟ್ಟಿಯಾಗಿ ಒಂದೊಂದು ಪ್ರತಿ ಕಳುಹಿಸಿಕೊಡಬೇಕು.

ಉ.—ಇದು ಆಗಲಾರದು. ಸಾಕಾದಷ್ಟು ರಿಯಾಯಿತಿ ತೋರಿಸಿದೆ.

ಪ್ರ.—ಬಿ. ಎ. ಮತ್ತು ಬಿ. ಎಲ್. ಪರೀಕ್ಷೆಗಳನ್ನು ಕೊಟ್ಟವರು, ಅಡ್ವೋಕೇಟರು, ಸರ್ವಿಸ್‌ದಾರರಾದ ಪ್ಲೀಡರುಗಳು—ಈ ಮೊದಲಾದ ವಿದ್ಯಾವಂತರನ್ನು ಈ ಪ್ರತಿನಿಧಿ ಸಭೆಗೆ ಚುನಾಯಿಸಿ ಕಳುಹಿಸುವಂತೆ ಚುನಾವಣೆಯ ರೂಲ್ಸನ್ನು ಬದಲಾಯಿಸಿಕೊಡಬೇಕು. ಈಗ ಮೆಂಬರುಗಳಾಗಬೇಕೆನ್ನುವವರು ಜಮೀನ್ದಾರರಾಗಿ ಮಾತ್ರ ಇರಬೇಕೆಂದು ವಿಧಿಸಿರುತ್ತೆ. ವಿದ್ಯಾವಂತರಿಗೂ ಅವಕಾಶವನ್ನುಂಟುಮಾಡಿಕೊಡಬೇಕು.

ಉ.—ವಿದ್ಯಾವಂತರು ಜಮೀನನ್ನು ಸಂಪಾದಿಸಿಕೊಂಡು, ಸ್ಥಳೀಕ ಪ್ರಜೆಗಳಲ್ಲಿ ಪ್ರೀತಿ ಗೌರವಗಳನ್ನು ಪಡೆದುಕೊಳ್ಳುವದಕ್ಕೆ ಪ್ರಯತ್ನಪಟ್ಟರೆ ಅವರೂ ಪ್ರತಿನಿಧಿಗಳಾಗಿ ಚುನಾಯಿಸಲ್ಪಡಬಹುದಾಗಿದೆ. ಈಗಿರುವ ಚುನಾವಣೆಯ ನಿಬಂಧನೆಯನ್ನು ಸದ್ಯ ಬದಲಾಯಿಸಲಾಗುವುದಿಲ್ಲ. ಮುಂದೆ ಸಂದರ್ಭ ಬಿದ್ದಂತೆ ಮಾಡಬೇಕಾಗಿದೆ.

## ಇಂಡಿಯಾ ದೇಶದ ವೃತ್ತಾಂತಗಳು.

ಮಲಬಾರ್ ಕಾಡಿನಲ್ಲಿ ಹಿಡಿದಿದ್ದ ಎಂಟು ಆನೆಗಳನ್ನು ಕಳೆದ ವಾರ ಬೇಪೂರಿನಲ್ಲಿ ಹರಾಜು ಹಾಕಿದರು. ಸರ್ಕಾರಕ್ಕೆ ಹರಾಜಿನಿಂದ ೧೦,೨೫೦ ರೂ. ಹುಟ್ಟುವಳಿ ಆಯಿತು.

****

ಅನೇಕ ವರುಷಗಳಿಂದ ಜುನಾಘಡ ಸಂಸ್ಥಾನದಲ್ಲಿ ನಾಯಬ್ ದಿವಾನರಾಗಿದ್ದು ಪ್ರಜಾಪ್ರೀತಿ ಗೌರವಗಳನ್ನು ವಿಶೇಷವಾಗಿ ಸಂಪಾದಿಸಿಕೊಂಡಿದ್ದ ರಾಯಬಹದ್ದೂರ್ ಪುರುಷೋತ್ತಮ ರಾಯ ಸುಂದರಜಿ ಜಾಲಾ ಯವರು ಕಳೆದ ವಾರ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟರು.

****

ಬೊಂಬಾಯಿಗೆ ಸೇರಿದ ಕೊಲಾಬಾದಲ್ಲಿ ಒಂದು ಮನೆಗೆ ಹಿಂದಿನ ವಾರ ಬೆಂಕಿಬಿದ್ದು ಹತ್ತಿಯ ಮೂಟೆಗಳು ಸುಟ್ಟುಹೋದವು. ಮಾಲೀಕರಿಗೆ ಸುಮಾರು ೧೧,೦೦೦ ರೂ. ನಷ್ಟವಾಗಿರುತ್ತದೆ. ಮನೆಗೆ ಕಿಟಕಿಗಳಿಲ್ಲದೆ ಹತ್ತಿ ಮೂಟೆಗಳನ್ನು ಬಹಳ ಒತ್ತಾಗಿ ಅಡಕಿದ್ದದರಿಂದ ಒಳಗೇ ಕಾವುಹುಟ್ಟಿ ಬೆಂಕಿಯಾಗಿ ಹತ್ತಿ ಉರಿದುಹೋಯಿತೆಂದು ಹೇಳುವರು.

****

ಲಂಕಾ ದ್ವೀಪದಿಂದ ಕೀವ್ ಎಂಬೊಂದು ಹಡಗು ಕಳೆದ ಜುಲೈ ೧೬ ರಲ್ಲಿ ಸಕ್ಕರೆಯನ್ನು ಭರ್ತಿಮಾಡಿಕೊಂಡು ಆಸ್ಟ್ರೇಲಿಯಕ್ಕೆ ಪ್ರಯಾಣ ಮಾಡಿತು. ಅದು ಹೊರಟಾರಭ್ಯ ಇದುವರೆಗೆ ಏನಾಯಿತೋ ತಿಳಿದುಬರಲಿಲ್ಲ. ಅದರಲ್ಲಿ ಸಾಮಾನಲ್ಲದೆ ೨೫—೩೦ ಜನರು ಸಹ ಇದ್ದರು. ಅರಬ್ಬೀ ಸಮುದ್ರದಲ್ಲಿ ಎಲ್ಲೋ ಅದು ಮುಳುಗಿಕೊಂಡಿತೆಂದು ಊಹಿಸುತ್ತಾರೆ.

****

ಹೈದರಾಬಾದಿನಲ್ಲಿ ಎರಡು ವಾರಗಳ ಕೆಳಗೆ ಪ್ರವಾಹ ಬಂದು ಮನೆಗಳು ನಾಶವಾದುವಷ್ಟೆ. ಈ ಪೈಕಿ ಮೂಸೀ ನದಿಯ ಪಕ್ಕಗಳಲ್ಲಿದ್ದ ಮನೆಗಳನ್ನು ಮತ್ತೆ ಕಟ್ಟಕೂಡದೆಂತಲೂ, ಬೇರೆ ಕಡೆಗಳಲ್ಲಿ ಅವರಿಗೆಲ್ಲಾ ಸ್ಥಳಗಳನ್ನು ಕೊಡಿಸಬೇಕೆಂತಲೂ, ಬಡಬಗ್ಗರಿಗೆ ಸಾಮಾನು ಮತ್ತು ಸ್ಥಳವನ್ನು ಮುಫತ್ತಾಗಿ ಕೊಡಬೇಕೆಂತಲೂ ನೈಜಾಮರವರು ಹುಕುಂ ಮಾಡಿದ್ದಾರೆ.

****

ಅಹಮ್ಮದ್ ನಗರದಲ್ಲಿ ನೆಯ್ಗೆಯವರು ಇಂಗ್ಲಿಷ್ ತಿಳಿಯದೆ ತುಂಬಾ ಹೀನಸ್ಥಿತಿಯಲ್ಲಿರುವದನ್ನು ತಪ್ಪಿಸಬೇಕೆಂದು ಅಲ್ಲಿನ ರಾವ್ ಬಹದೂರ್ ಮಾರುತಿರಾವ್ ಭುಜಂಗರಾವ್ ಪಾಳ್ವಾರವಾಲಾ ಎಂಬ ದೊಡ್ಡ ಮನುಷ್ಯನು ೫೫,೫೦೦ ರೂ ಧರ್ಮಾರ್ಥವಾಗಿ ಕೊಟ್ಟು, ಇದರ ಬಡ್ಡಿ ಹಣದಿಂದ ನೆಯ್ಗೆಯವರ ಹುಡುಗರಿಗೆ ವೇತನ ಕೊಟ್ಟು ಇಂಗ್ಲಿಷ್ ಕಲಿಸಬೇಕೆಂದು ತಿಳಿಸಿರುತ್ತಾನೆ. ನೆಯ್ಗೆಯವರೆಲ್ಲಾ ಆತನನ್ನು ಕೊಂಡಾಡುತ್ತಿದ್ದಾರೆ.

****

ವಿಲಾಯತಿ ರಾಜ್ಯದ ಸರ್ಕಾರದವರು ತಮ್ಮ ಸ್ವಾಸ್ಥ್ಯಗಳಲ್ಲಿ ಪಹರೆ ಮುಂತಾದ ಕೆಲಸಕ್ಕೆ ಹಿಂದುಸ್ಥಾನದ ದೇಶೀಯ ಸೈನಿಕರನ್ನು ನೇಮಿಸಿಕೊಳ್ಳುವದು ಲಾಭಕರವೆಂದು ಯೋಚಿಸಿ ಹೊಸದಾಗಿ ೫ ಪಟಾಲಂ ಕಾಲ್ಬಲವನ್ನು ಸೈನ್ಯಕ್ಕೆ ಸೇರಿಸಿಕೊಂಡು ಅವರನ್ನು ತರಬೇತುಮಾಡಿ ಕಳುಹಿಸಬೇಕೆಂಬದಾಗಿ ಇಂಡಿಯಾ ಗವರ್ನಮೆಂಟಿಗೆ ಬರೆದು ಅದರ ಖರ್ಚಿಗೆ ಸದ್ಯ ಒಂದು ಲಕ್ಷ ಪೌಂಡು (ಅಂದರೆ, ೧೫ ಲಕ್ಷ ರೂಪಾಯಿ) ಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ.

****

ಲೇಟ್ ಸರ್ ಸಯ್ಯದ್ ಅಹಮದ್ ಯವರ ಏಕಕುಮಾರನಾದ ಸಯ್ಯದ್ ರಾಸ್ ಮಸೂದ್ ಎಂಬವನಿಗೆ ಅವನ ವಿದ್ಯಾಭ್ಯಾಸಕ್ಕೋಸ್ಕರ ತಿಂಗಳಿಗೆ ೨೦೦ ರೂ., ಅವನ ಹೆಂಡತಿಗೆ ೧೦೦ ರೂ., ಅವರ ಹಿರೀ ಸೊಸೆಗೆ ೫೦ ರೂ., ಈ ಪ್ರಕಾರ ಮಾಸಾಶನ ಕೊಡಬೇಕೆಂದೂ, ಆ ಕುಮಾರಕನ ವಿದ್ಯಾಭಿವೃದ್ಧಿಯ ವಿಷಯದಲ್ಲಿ ವಾಯುವ್ಯ ಪ್ರಾಂತ್ಯದ ಸರ್ಕಾರದವರು ಸರಿಯಾಗಿ ಮೇಲ್ವಿಚಾರಣೆ ನೋಡಿಕೊಳ್ಳಬೇಕೆಂದೂ ಇಂಡಿಯಾ ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ.

****

ಬೊಂಬಾಯಿನಲ್ಲಿ ಭಾಟಿಯಾ ಎಂಬ ಗುಂಪಿನ ಜನರಲ್ಲಿ ಎರಡು ಪಂಗಡ ಉಂಟಾಗಿ ಒಂದು ಗುಂಪಿನವರು ಎದುರು ಕಕ್ಷಿಯ ೩೦೦ ಜನರನ್ನು ಬಹಿಷ್ಕಾರ ಮಾಡಿರುತ್ತಾರೆ. ೩೦೦ ಜನರು ತಮ್ಮಲ್ಲಿ ಹೆಣ್ಣು ಸಿಕ್ಕದ್ದರಿಂದ ಹರಿದ್ವಾರದ ಹೆಣ್ಣುಗಳನ್ನು ತಂದು ಮದುವೆ ಮಾಡಿಕೊಂಡದ್ದೇ ಈ ಬಹಿಷ್ಕಾರಕ್ಕೆ ಕಾರಣ. ಇದಲ್ಲದೆ ಕೆಲವರು ವಿಲಾಯತಿಗೆ ಹೋಗಿ ಬಂದಿದ್ದರೂ ಜಾತಿಯೊಳಗೇ ಇದುವರಗೆ ಸೇರಿಕೊಂಡಿದ್ದರು. ಇವರನ್ನು ಸಹ ಈಗ ಬಹಿಷ್ಕರಿಸಿರುತ್ತಾರೆ. ಈ ವಿಷಯದಲ್ಲಿ ಕೆಲವು ಮೊಕದ್ದಮೆಗಳೂ ದಾಖಲಾಗಿ ವಿಚಾರಣೆಯಾಗುತ್ತಿವೆ.

****

ಕ್ರೈಸ್ತಮತ ಪ್ರಸಾರಕರಾದ ಮಿಷನ್ ಸಂಘದವರು ಹಿಂದುಸ್ಥಾನದಲ್ಲಿ ೬೬ ದೊಡ್ಡ ಆಸ್ಪತ್ರೆಗಳನ್ನಿಟ್ಟಿದ್ದಾರೆ, ನೂರಾರು ಸ್ಥಳಗಳಲ್ಲಿ ಔಷಧಗಳನ್ನು ಕೊಡುವಂತೆ ಏರ್ಪಾಡು ಮಾಡಿದ್ದಾರೆ. ಕಾಶ್ಮೀರ, ಇಸ್ಲಾಮಾಬಾದು, ಕ್ವೆಟ್ಟಾ, ಬನ್ನೂ, ಪೆಷಾವರ್, ಡೆರಾ ಇಸ್ಮೈಲ್‌ಖಾನ್, ಡೆರಾಘಾಜೆಖಾನ್, ಅಮೃತಸಾರ, ತಿರುವಾಂಕೂರು, ಬೊಂಬಾಯಿ ಅಧಿಪತ್ಯವೇ ಮೊದಲಾದ ಅನೇಕ ಕಡೆಗಳಲ್ಲಿ ಮಿಷನ್ ಆಸ್ಪತ್ರೆಗಳು ಇರುವವು. ಇವುಗಳಿಂದ ಹಿಂದುಸ್ಥಾನದ ಪ್ರಜಾಕೋಟಿಗಳು ಔಷಧೋಪಚಾರಗಳನ್ನು ಹೊಂದಿ ಭಕ್ತಿಮಾರ್ಗವನ್ನು ಕಂಡುಕೊಳ್ಳುವರು.

ಕೊಚ್ಚಿ ಸಂಸ್ಥಾನದ ಸರ್ಕಾರದವರು ಕೊಯಮುತ್ತೂರು ಜಿಲ್ಲೆಯ ಒತ್ತಿನಲ್ಲಿರುವ ತಮ್ಮ ಸಂಸ್ಥಾನಕ್ಕೆ ಸೇರಿದ ಜಂಗಲ್‌ಗಳಲ್ಲಿ ತೇಗ ಮೊದಲಾದ ಗಿಡಗಳನ್ನು ಬೆಳಸಬೇಕೆಂದು ಪ್ರಯತ್ನಪಟ್ಟರು. ಕೊಯಮುತ್ತೂರುಜಿಲ್ಲೆಯ ರೈತರು ತಮ್ಮ ಜಮೀನುಗಳ ಪಕ್ಕದಲ್ಲಿ ಜಂಗಲ್ ಆಗುವುದರಿಂದ ಕಾಡುಮೃಗಗಳು ಹೆಚ್ಚಿ ತಮ್ಮ ಬೆಳೆ ನಾಶವಾಗುವದೆಂಬದಾಗಿ ಮದರಾಸ್ ಗವರ್ನರಿಗೆ ಅರ್ಜಿ ಬರೆದುಕೊಂಡರು. ಅದರ ಮೇಲೆ ಮದರಾಸ್ ಸರ್ಕಾರದವರು ತಮ್ಮನ್ನು ಸಲಹೆ ಕೇಳದೆ ಯಾಕೆ ಜಂಗಲ್ ಮಾಡುವದಕ್ಕೆ ಪ್ರಯತ್ನಪಟ್ಟಿರೆಂಬದಾಗಿ ಕೊಚ್ಚಿ ಸರ್ಕಾರದವರನ್ನು ಕೇಳಿದರು. ಕೂಡಲೇ ಕೊಚ್ಚಿಯವರು ಅಲ್ಲಿ ಜಂಗಲ್ ಮಾಡುವ ಕಾರ್ಯವನ್ನು ನಿಲ್ಲಿಸಿಬಿಟ್ಟರು.

****

ಕೊಚ್ಚಿ ಸರ್ಕಾರದವರು ಅಂಗಮಾಲಿ ಎಂಬ ಸ್ಥಳದಲ್ಲಿ ರೈಲ್ ರಸ್ತೆ ಹಾಕುವಾಗ್ಯೆ ತಿರುವಾಂಕೂರು ಸಂಸ್ಥಾನಕ್ಕೆ ಸೇರಿದ ೧೩ ದೇವಸ್ಥಾನಗಳನ್ನು ಅವು ರಸ್ತೆಗೆ ಅಡ್ಡಲಾಗಿವೆ ಎಂದು ಹೇಳಿ ಕೆಡವಿಸಿದರು. ತಿರುವಾಂಕೂರು ಸರ್ಕಾರದವರು ಅದಕ್ಕಾಗಿ ೩೦,೦೦೦ ರೂ ನಷ್ಟದ್ರವ್ಯ ಬರಬೇಕೆಂದು ಕೊಚ್ಚಿಯವರ ಮೇಲೆ ದಾವಾ ಮಾಡಿ, ಮೊಕದ್ದಮೆ ನಡಸುತ್ತಿದ್ದರು. ಇವೆರಡು ಸ್ಥಾನಗಳ ರೆಸಿಡೆಂಟರೂ ಈ ವಿಷಯವನ್ನು ತನಿಖೆ ಮಾಡಿ, ಕೊಚ್ಚಿಯವರು ತಿರುವಾಂಕೂರಿನವರಿಗೆ ೩,೧೦೦ ರೂ. ನಷ್ಟದ್ರವ್ಯ ಕೊಡಬೇಕೆಂದು ತೀರ್ಮಾನ ಮಾಡಿರುತ್ತಾರೆ. ಇದು ಸ್ವಲ್ಪವೆನ್ನುವ ಪಕ್ಷದಲ್ಲಿ ತಿರುವಾಂಕೂರಿನವರು ಮದರಾಸ್ ಗೌವರ್ನಮೆಂಟಿಗೆ ತಿಳಿಸಿ, ಅವರ ತೀರ್ಮಾನದಂತೆ ನಡಕೊಳ್ಳಬೇಕಾಗಿದೆ.

****

ಕೊಚ್ಚಿ ಸಂಸ್ಥಾನದ ರಾಜರು ಡಿಸೆಂಬರ್ ೬ ಕ್ಕೆ ಕೊಚ್ಚಿಯಿಂದ ಹೊರಟು ತಿರುಚನಾಪಲ್ಲಿ, ಪುದುಚೇರಿ, ತಂಜಾವೂರುಗಳನ್ನು ಸುತ್ತಿಕೊಂಡು ಮದರಾಸಿಗೆ ಬಂದು ೧೨ ದಿನಗಳ ತನಕ ಅಲ್ಲಿದ್ದು, ಗವರ್ನರನ್ನು ಕಂಡು ತಮ್ಮ ಸಂಸ್ಥಾನಕ್ಕೆ ಸಂಬಂಧಪಟ್ಟ ಕೆಲವು ರಾಜಕೀಯ ವಿಷಯಗಳನ್ನು ಕುರಿತು ಅವರ ಸಂಗಡ ಪರ್ಯಾಲೋಚನೆ ಮಾಡಿಕೊಂಡು, ಹಾಗೇ ಅಲ್ಲಿ ನಡೆಯುವ ಸಕಲ ವಸ್ತು ಪ್ರದರ್ಶನೋತ್ಸವವನ್ನೂ ಹೋಗಿ ನೋಡಿಕೊಂಡು ಬಂದಮೇಲೆ ಮದರಾಸಿನಿಂದ ರಾಮೇಶ್ವರಕ್ಕೆ ಪ್ರಯಾಣ ಮಾಡುತ್ತಾ ದಾರಿಯಲ್ಲೇ ತಿರುವಾಂಕೂರು ಸಂಸ್ಥಾನವನ್ನೂ ಪ್ರವೇಶಿಸಿ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ, ಕೊಚ್ಚಿ ತಿರುವಾಂಕೂರು ಸಂಸ್ಥಾನಗಳಿಗೆ ಈಚಿಗೆ ಉಂಟಾಗಿರುವ ಮನಸ್ತಾಪ ವಿಷಯಗಳನ್ನು ಇತ್ಯರ್ಥ ಮಾಡಿಕೊಳ್ಳುತ್ತಾರೆಂದು ತಿಳಿದುಬಂದಿದೆ.

****

ಮೆ॥ ಎಸ್ ಬಿ. ವಾಗಳೆ ಎಂಬೊಬ್ಬ ದೇಶೀಯನು ಬೊಂಬಾಯಿನಲ್ಲಿ ಹುಟ್ಟಿ ಬೆಳೆದು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ವಿಲಾಯತಿಗೆ ಹೋಗಿ ಗಾಜಿನ ತಯಾರಿ ಕ್ರಮಗಳನ್ನು ಕಾರ್ಖಾನೆಗಳಲ್ಲಿ ಕಲಿತುಕೊಂಡು, ಕಳೆದವಾರ ವಾಪಸು ಹಿಂದುಸ್ಥಾನಕ್ಕೆ ಬಂದಿರುವನು. ಈತನು ಚೋಟಾನಾಗಪುರವೆಂಬ ನಗರದಲ್ಲಿ ಗಾಜಿನ ತಯಾರಿಗಾಗಿ ಒಂದು ಕಾರ್ಖಾನೆಯನ್ನು ಇಡುವುದಕ್ಕೆ ಏರ್ಪಾಡು ಮಾಡುತ್ತಿದ್ದಾನೆ. ಈ ದೇಶದಲ್ಲಿ ಕಲ್ಲಿದ್ದಲು ಅಗ್ಗವಾಗಿದೆ. ಕೂಲಿ ಸುಲಭ. ಅನುಕೂಲವಾದ ಮರಳು ಸಿಕ್ಕುವುದು. ಹಿಂದುಸ್ಥಾನಕ್ಕೆ ಬೇಕಾಗಿರುವ ಸಾಧಾರಣ ಗಾಜಿನ ಪದಾರ್ಥಗಳನ್ನು ಬೆಲ್ಜಿಯಂ, ಹಾಲೆಂಡ್ ರಾಜ್ಯಗಳಿಂದ ತರಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಇಲ್ಲೇ ತಯಾರುಮಾಡಬಹುದೆಂದು ಈತ ಹೇಳುವನು. ಮೊದಲು ೧೦೦ ಜನರನ್ನಿಟ್ಟು ಒಂದು ಸಣ್ಣ ಕಾರ್ಖಾನೆಯನ್ನು ಪ್ರಾರಂಭಿಸುತ್ತೇನೆಂತಲೂ, ಇದಕ್ಕೇನೇ ಒಂದು ಲಕ್ಷ ರೂಪಾಯಾದರೂ ಬೇಕಾಗುವುದೆಂತಲೂ, ಹಿಂದುಸ್ಥಾನದಲ್ಲಿ ಈ ಹಣ ದೊರಕದೆ ಹೋದರೆ ವಿಲಾಯತಿಯಿಂದಲೇ ತಂದು ಕಾರ್ಖಾನೆಯನ್ನು ಇಟ್ಟು ನಡಸುತ್ತೇನೆಂತಲೂ ತಿಳಿಸಿರುವನು. ಈತನ ಉದ್ದೇಶವು ಬೇಗನೆ ನೆರವೇರಲೆಂದು ಹಾರೈಸುತ್ತೇವೆ.

****

ಮಲಬಾರ್ ಡಿಸ್ಟ್ರಿಕ್ಟಿಗೆ ಸೇರಿದ ವಲುವನಾಡ್ ತಾಲೂಕಿನಲ್ಲಿ ಮಾಪಿಳ್ಳೆ ವರ್ತಕರು ಮಜ್ಜಿಗೆ ಹುಲ್ಲು (ನಿಂಬೇ ಹುಲ್ಲು) ನಲ್ಲಿ ಧೃತಿಯನ್ನು ತೆಗೆಯುತ್ತಾರೆ ಇಂಥಾ ಕಾರ್ಖಾನೆಗಳು ಅಲ್ಲಿ ೧೧ ಇರುತ್ತವೆ. ಬಟ್ಟಿ ಇಳಿಸುವುದಕ್ಕೆ ಅವರು ಒಳದೇಶದಲ್ಲೇ ತಯಾರಾಗುವ ದೊಡ್ಡ ದೊಡ್ಡ ತಾಂಬ್ರದ ಪಾತ್ರೆಗಳನ್ನು ಉಪಯೋಗಿಸುತ್ತಾರೆ. ಒಂದೊಂದಕ್ಕೆ ೨೦೦—೨೫೦ ರೂ ಖರೀದಿಯಾಗುವುದು. ಒಂದಾಳು ಕೊಯ್ದು ತರುವ ಹೊರೆಯನ್ನು ಹುಲ್ಲಿಗೆ ೨ ಆಣೆ ಕೂಲಿ ಕೊಟ್ಟು ತೆಗೆದುಕೊಂಡು, ಅಂಥಾ ೧೬ ಹೊರೆಗಳನ್ನು ಒಂದೊಂದು ಸಲ ಬಟ್ಟಿ ಇಳಿಸುವ ಪಾತ್ರೆಯಲ್ಲಿ ಹಾಕಿ, ಎಣ್ಣೆ ತೆಗೆಯುತ್ತಾರೆ. ಈ ಎಣ್ಣೆಯನ್ನು ಮಾಪಿಳ್ಳೆಗಳು ಕೊಚ್ಚಿಯ ವರ್ತಕರಿಗೆ ಕಳುಹಿಸಿ ಬಿಕರಿ ಮಾಡುವರು. ಅವರು ಬಹಳ ಕ್ರಯ ಕೊಟ್ಟು ಕೊಂಡುಕೊಳ್ಳುತ್ತಾರೆ. ಮಜ್ಜಿಗೆ ಹುಲ್ಲು ಏರ್ನಾಡು, ವಲುವನಾಡುಗಳ ಬೆಟ್ಟಗಳಲ್ಲೂ ಜಂಗಲುಗಳಲ್ಲೂ ವಿಪರೀತವಾಗಿ ಬೆಳೆವುದೆಂತಲೂ, ಅದರಲ್ಲಿ ೨೬ ಜಾತಿಗಳಿದ್ದಾಗ್ಯೂ ಆ ಪೈಕಿ ಎರಡು ಜಾತಿಯವುಗಳಲ್ಲಿ ಮಾತ್ರ ಎಣ್ಣೆ ತೆಗೆದರೆ ಬಹಳ ಸುವಾಸನೆಯುಳ್ಳ ಧೃತಿ ಬರುವುದೆಂತಲೂ ಮಾಪಿಳ್ಳೆಗಳು ಹೇಳುತ್ತಾರೆ. ಈ ಧೃತಿಯು ತುಂಬಾ ಸುವಾಸನೆಯುಳ್ಳದ್ದಾದ ಕಾರಣ ಅದನ್ನು ವಿಲಾಯತಿಯವರೂ ಯೂರೋಪಿನ ಇತರ ರಾಜ್ಯಗಳವರೂ ಬಹಳ ಖರೀದಿ ಕೊಟ್ಟು ಕೊಂಡುಕೊಳ್ಳುವರು.

****

ಮದರಾಸ್ ಅಧಿಪತ್ಯದಲ್ಲಿ ವರ್ಷ ವರ್ಷ ಸರ್ಕಾರಿ ಪರೀಕ್ಷೆಗಳು ನಡೆಯುವವು. ಈ ಪರೀಕ್ಷೆಗಳ ಪ್ರಶ್ನಪತ್ರಿಕೆಗಳನ್ನು ಕೆಲವು ಜನರು ಗುಟ್ಟಾಗಿ ಮೊದಲೇ ಸಂಪಾದಿಸಿ, ಪರೀಕ್ಷೆಗೆ ಹೋಗತಕ್ಕವರಿಗೆ

ಬಿಕರಿ ಮಾಡಿ, ಹಣ ತೆಗೆದುಕೊಳ್ಳುತ್ತಿದ್ದರು. ಬಂಗಲ್ಪೇಟೈನ ಪೊಲೀಸ್ ಇನ್ಸ್ಪೆಕ್ಟರು ಏಕಾಂಟಾಗಿ ನಿಂತು ಗುಟ್ಟಾಗಿ ಈ ಪ್ರಶ್ನಪತ್ರಿಕೆಗಳನ್ನು ಜನರಿಗೆ ಕರಿಸಿಕೊಡುತ್ತಿದ್ದಾನೆಂಬುದು ಏಕಾಂಬ್ರ ಐಯರೆಂಬ ರೈಲ್ವೆ ಪೊಲೀಸ್ ಆಫಿಸರಿಗೆ ತಿಳಿಯಿತು. ಆ ಇನ್ಸ್ಪೆಕ್ಟರನ್ನು ಗುಟ್ಟಾಗಿ ಮನೆಗೆ ಕರೆಸಿಕೊಂಡು ಏಕಾಂಬ್ರ ಐಯರು ಅವನಿಗೆ ಕೆಲವು ಸವರಿನ್ಗಳನ್ನೂ ಕೆಲವು ನೋಟುಗಳನ್ನೂ ಲಂಚ ಕೊಟ್ಟು, ಆ ಪ್ರಶ್ನಪತ್ರಿಕೆಗಳ ಒಂದೊಂದು ನಕಲನ್ನು ತಂದುಕೊಡುವಂತೆ ಉಪಾಯವಾಗಿ ಕೇಳಿದನು. ಆ ಪೊಲೀಸ್ ಇನ್ಸ್ಪೆಕ್ಟರು ೩೦೦ ರೂ. ಲಂಚ ತೆಗೆದುಕೊಂಡದ್ದಕ್ಕೆ ಸಾಲದ ಪತ್ರ ಬರೆದುಕೊಟ್ಟು ಕೆಲವು ದಿನಗಳ ಮೇಲೆ ಪ್ರಶ್ನಪತ್ರಿಕೆಗಳ ನಕಲುಗಳನ್ನು ತಂದು ಏಕಾಂಬ್ರ ಐಯರಿಗೆ ಕೊಟ್ಟನು. ಆ ಸಮಯದಲ್ಲಿ ಪಕ್ಕದ ಮನೆಯಲ್ಲಿದ್ದ ಪೊಲೀಸ್ ನೌಕರರೆಲ್ಲಾ ಇವರಿಬ್ಬರ ಮಧ್ಯೆ ಬಂದು, ಬಂಗಲ್ಪೇಟೈನ ಇನ್ಸ್ಪೆಕ್ಟರನ್ನೂ ಅವನು ತಂದಿದ್ದ ನಕಲುಗಳನ್ನೂ ಹಿಡಿದು ಲಾಕಪ್ಪಿಗೆ ಕೊಟ್ಟರು. ಏಕಾಂಬ್ರ ಐಯರು ಆ ಕಳ್ಳನನ್ನು ಹಿಡಿಯುವದಕ್ಕಾಗಿ ಮಾಡಿದ ಪ್ರಯತ್ನವು ಸಾರ್ಥಕವಾಯಿತು. ತನಿಖೆಯಲ್ಲಿ ಡಿಪ್ಟಿ ಕಮಿಷನರ ಆಫೀಸಿನ ಒಬ್ಬ ಗುಮಾಸ್ತೆಯು ಈ ನಕಲುಗಳನ್ನು ಎಲ್ಲರಿಗೂ ಕೊಡುತ್ತಿದ್ದದ್ದೂ, ಏಕಾಂಬ್ರ ಐಯರು ಆ ಪೊಲೀಸ್ ಇನ್ಸ್ಪೆಕ್ಟರಿಗೆ ಕೊಟ್ಟಿದ್ದ ನೋಟುಗಳು ಆ ಗುಮಾಸ್ತೆಯ ಹತ್ತರಲೇ ಸಿಕ್ಕಿದ್ದೂ, ಇದಲ್ಲದೆ ಆ ಗುಮಾಸ್ತೆಯ ಮನೆಯಲ್ಲಿ ಇಂಥಾ ಪ್ರಶ್ನಪತ್ರಿಕೆಗಳಿಗೆ ಸಂಬಂಧಪಟ್ಟ ಕಾಗದ ಪತ್ರಗಳು ಅನೇಕವಾಗಿ ಸಿಕ್ಕಿದ್ದೂ ಮೊಕದ್ದಮೆಗೆ ಸಹಾಯವಾಯಿತು. ಆದರೆ ಆ ಗುಮಾಸ್ತೆಯು ಪೊಲೀಸಿನವರಿಗೆ ತಾನು ಯಾವ ತರಹ ವಾಜ್ಮೂಲವನ್ನೂ ಹೇಳ ಬರಸುತ್ತೆವಿಲ್ಲವೆಂದು ತಿಳಿಸಿದನು. ಪೊಲೀಸಿನವರು ಇನ್ನೂ ಪತ್ತೇ ತರದೂದು ಮಾಡುತ್ತಿದ್ದಾರೆ.

## ಬಾತ್ಮಿದಾರರಿಗೆ ನೋಟಿಸ್.

ರಂಗ್ಗೈಯ, ಚನ್ನಪಟ್ಣ; ಶ್ರೀಕಂಠೈಯ, ಮಾಯಸಂದ್ರ, ಅಂಬಾಜೀರಾವ್, ಮಧುಗಿರಿ; ನರಸಿಂಹೈಯಂಗಾರ್, ಅಮೃತೂರು; ಚಾಮುಂಡೇಶ್ವರಿ ವಾಕ್ಯಾರ್ಥ;—ಈ ಬಾತ್ಮಿಗಳಲ್ಲಿ ಪ್ರಕಟನೆಗೆ ಅರ್ಹವಾದ ವರ್ತಮಾನಗಳೇನೂ ಕಂಡುಬರುವುದಿಲ್ಲ.

ಮಿನೆಜರ್, ಬಿಂಡಿಗನವಿಲೆ—ಪ್ರಶ್ನೆಗಳನ್ನು ಕಳುಹಿಸಿದರೆ ಪ್ರಯೋಜನವೇನೂ ಇಲ್ಲವೆಂತಲೂ, ಸಂತೋಷಕ್ಕಾಗಿ ಜನರು ಕೇಳುತ್ತಾರೆಂತಲೂ, ಪೋಸ್ಟ್ ಕಳುಹಿಸುವವರು ಅವುಗಳನ್ನು ತೆಗೆದುಕೊಳ್ಳುವುದಿಲ್ಲವೆಂತಲೂ ಮೊದಲೇ ತಿಳಿಸಿರುತ್ತೇನೆ.

ಸಿದ್ದಲಿಂಗಪ್ಪ, ಅರಕಲಗೂಡು—ಕಬ್ಬಿಣದ ನೇಗಿಲುಗಳು ಬೇಕಾದರೆ ನೀವು ಕೋಲಾರದಲ್ಲಿರುವ ಎಂ. ಇ. ಮಿಷನ್ ಇಂಡಸ್ಟ್ರಿಯಲ್ ಸ್ಕೂಲ್ ಮ್ಯಾನೆಜರಿಗೆ ಬರೆದು ತರಿಸಿಕೊಳ್ಳಬಹುದು. ಮತ್ತು ಓಟ್ಸ್ ಧಾನ್ಯವನ್ನು ಬೆಂಗಳೂರಿನಲ್ಲಿ ದಿನಸಿ ಅಂಗಡಿ ವರ್ತಕರು ಸೇರುಗಟ್ಲೆ ಬಿಕರಿ ಮಾಡುತ್ತಾರೆ. ಅಲ್ಲಿಗೆ ಹೋಗುವವರ ಕೈಲಿ ತರಿಸಿಕೊಂಡು ಬಿತ್ತನೆಗೆ ಉಪಯೋಗಿಸಿಕೊಳ್ಳಬಹುದು.

—ಎಡಿ.]

## ಕರೆಸ್ಪಾಂಡೆನ್ಸ್.

*********

### ಬಾಳೇ ನಾರಿನ ಯಂತ್ರ.

ಬಾಳೇಪಟ್ಟೆಯಲ್ಲಿ ನಾರು ತೆಗೆಯುವಂಥಾ ಯಂತ್ರದ ವಿಷಯವಾಗಿ ಮೈಸೂರು ಗವರ್ನಮೆಂಟ್ ಆಗ್ರಿಕಲ್ಚರಲ್ ಕೆಮಿಸ್ಟರಾದ ಡಾಕ್ಟರ್ ಎ. ಲೆಹ್ಮನ್ಯವರು ನಮಗೆ ಬರೆದಿರುವದೇನೆಂದರೆ—"ಈ ಕೆಲಸಕ್ಕೆ ಹಿಂದುಸ್ತಾನದಲ್ಲಿ ಅಗ್ಗವಾದ ಯಂತ್ರವನ್ನು ಮಾಡಿರುವದು ನನಗೆ ತಿಳಿದು ಬಂದಿಲ್ಲ. ಆದರೆ ಅಪೇಕ್ಷೆಯುಳ್ಳವರು ಸುಲಭವಾಗಿ ಯಂತ್ರವನ್ನು ಮಾಡಿಟ್ಟುಕೊಳ್ಳಬಹುದು. ಗಟ್ಟಿಯಾಗಿಯೂ ನುಣುಪಾಗಿಯೂ ಇರುವ ಒಂದು ಮರದ ಹಲಿಗೆ, ಪಪ್ಪನಾದ ಒಂದು ಮೊಂಡುಕತ್ತಿ, ಇವೆರಡಿದ್ದರೆ ಸಾಕು. ಮರದ ಹಲಿಗೆಯ ಎದುರು ಪಾರ್ಶ್ವದಲ್ಲಿ ಒಂದು ಗೂಟವನ್ನಿಟ್ಟು ಅದಕ್ಕೆ ಆ ಮೊಂಡು ಕತ್ತಿಯನ್ನು ಕೀಲಿನ ಮೂಲಕ ಭದ್ರಪಡಿಸಿ, ಮಣಿಯ ಉದ್ದಕ್ಕೂ ಕತ್ತಿಯನ್ನು ಸುಲಭವಾಗಿ ಎತ್ತುವದಕ್ಕೂ ಇಳಿಸುವದಕ್ಕೂ ಆಗುವಂತೆ ಮಾಡಿಕೊಳ್ಳಬೇಕು. ಈ ಕತ್ತಿಯು ಬಲಪಾರ್ಶ್ವದ ಕೊನೆಗೆ ಒಂದು ಕೈಪಿಡಿ ಹಾಕಿಕೊಳ್ಳಬಹುದು. ಅದಿಲ್ಲದಿದ್ದರೆ ಕಾಲಿನಿಂದ ಒತ್ತಿದರೆ ಈ ಕತ್ತಿ ಮೇಲಕ್ಕೂ ಕೆಳಕ್ಕೂ ಹೋಗಿ ಬಂದು ಕೆಲಸ ಮಾಡುವಂತೆ ಕೀಲನ್ನು ಇಟ್ಟುಕೊಳ್ಳಬಹುದು. ಈ ಪಟ್ಟೆಯ ನಾರಿನಿಂದ ಬಟ್ಟೆ ನೇಯುವದಕ್ಕೆ ಪ್ರತ್ಯೇಕ ಯಂತ್ರವ್ಯಾವದೂ ಇರುವಂತೆ ನನಗೆ ತಿಳಿದುಬಂದಿಲ್ಲ."

ತೀರ್ಥಹಳ್ಳಿಯ ಮಿ॥ ವೈ. ಶೇಷಪ್ಪನವರು ಇಂಥಾ ಯಂತ್ರವನ್ನು ಮಾಡಿಟ್ಟುಕೊಂಡು ನಾರು ತೆಗೆಯಬಹುದು. ಹಾಗಿಲ್ಲದಿದ್ದರೆ ತಿರುವಾಂಕೂರಿನಲ್ಲಿರುವ ಇಂಡಸ್ಟ್ರಿಯಲ್ ಸ್ಕೂಲ್ ಸೂಪರೇಂಟರಿಗೆ ಕಾಗದ ಬರೆದು ಅವರು ತಯಾರುಮಾಡಿರುವ ಯಂತ್ರವನ್ನು ಸುಲಭಕ್ರಯಕ್ಕೆ ತರಿಸಿಕೊಳ್ಳಬಹುದು. ಈ ಯಂತ್ರಕ್ಕೆ ೧೦—೧೫ರೂ. ಮಾತ್ರ ಕ್ರಯವಾಗುತ್ತೆಂದು ಅವರು ಪ್ರಕಟಿಸಿರುತ್ತಾರೆ —ಎಡಿ.]

*********

### ಹೊಳೆನರಸೀಪುರದ ಪ್ಲೇಗ್ ಗಲಾಟೆಯು.

ಅಯ್ಯಾ,

ಈ ಊರಿನಲ್ಲಿ ಅಕ್ಟೋಬರ್ ೧೨ರ ಲಾಗಾಯಿತು ಕೋಟೆಯ ಚಿಕ್ಕನಳ ಬೀದಿಯೊಳಗೆ ಬ್ರಾಹ್ಮಣರ ಬೀದಿಯಲ್ಲಿ ಇಲಿಗಳು ಸತ್ತವು. ಪ್ಲೇಗ್ ಸೋಂಕಿನ ಜನರನ್ನು ಬಿಟ್ಟುಬಿಟ್ಟುಕೊಂಡೇ ಇದ್ದರು. ಒಬ್ಬ ಬಾಣಂತಿಗೂ ಇಬ್ಬರು ಹುಡುಗರಿಗೂ ಮರಣ ಸಂಭವಿಸಿದ ನಂತರ ಬ್ರಾಹ್ಮಣರೆಲ್ಲಾ ಏಕಾಏಕಿಯಾಗಿ ಹೊರವಲಿಕ್ಕೆ ಮರುವಮಾಡಿದರು. ಕೆಲವರು ಪತ್ರ್ಯ ಮಾಸ್ಟರ ಸಂಗಡ ಚಾತರ್ಕಕ್ಕೆ ನಿಂತರು. ಇನ್ನು ಕೆಲವರು ಸಾಯುವಷ್ಟರೊಳಗೆ ಹೆಣಗಳನ್ನು ಕೆಡವಾಗಾಡಿಯಲ್ಲಿ ಹಾಕಿ ಸುಡವಿಕ್ಕೆ ಒಪ್ಪಿದ್ದರು. ೩೦ ಮನೆಯ ಬಂಧುಬಳಗಗಳು ಹತ್ತರಕ್ಕೆ ಸೇರದೆ ಭಯಸ್ಥರಾಗಿ ಕುಲ, ಜಾತಿ, ಮತಾಭಿಮಾನಗಳಿಲ್ಲದೆ, ಸುಮ್ಮನಾದರು. ಇದು ತುಂಬಾ ವಿಷಾದಕರವಾದ ಸಂಗತಿಯೆಂದು ವಾಚಕರು ಊಹಿಸಬಹುದು.

ಪೇಟೆಯಲ್ಲಿ ಯಾವತರವಾದ ಭೀತಿಯೂ ಇನ್ನೂ ತೋರುವದಕ್ಕಿಂತ ಮುಂಚೆಯೇ ಭಾರಿ ಭಾರಿ ಸಾಹುಕಾರರೂ ವರ್ತಕರೂ ತಮ್ಮಷ್ಟಕ್ಕೆ ತಾವೇ ಊರುಬಿಟ್ಟು ಗ್ರಾಮಾಂತರಗಳಿಗೆ ತಮ್ಮ ಸಾಮಾನುಗಳನ್ನು ಸಾಗಿಸಿಕೊಂಡು ೫೦—೬೦ ರೂಪಾಯಿ ಮನೆ ಬಾಡಿಗೆಗಾಗಿಯೂ ಊರು ಗೌಡರಿಗೆ ಬೇರೆ ಮರ್ಯಾದೆಯಾಗಿಯೂ ಕೊಟ್ಟು ಮನೆಗಳಿಗೆ ಸೇರಿಕೊಂಡರು. ಆದರೆ ಈ ಊರಿನ ಬಡ ಮಗ್ಗದವರೂ ದೇವಾಂಗದವರೂ ಮತ್ತು ಪಟ್ಟೆನೂಲಿನವರೂ—ಮಳೆಯ ಹೊಡತವನ್ನೂ, ಹೊಟ್ಟೆಗಿಲ್ಲದ ಚಿಂತೆಯನ್ನೂ ಯಾರಿಗೆ ಮೊರೆಯಿಡೋಣ್ಕೆ? ಯಾವ ಅಧಿಕಾರಿಯೂ ನಮ್ಮ ಜೀವನವನ್ನು ಕಷ್ಟವನ್ನೂ ನೀಗಿಸುವದಿಲ್ಲವಲ್ಲಾ ಎಂದು ವೇದನೆಯುತ್ತಾ, ಅಮಲ್ದಾರ ಮೇಲೆಯೂ ಆಸ್ಪಿಟಲ್ ಅಸಿಸ್ಟೆಂಟರ ಮೇಲೆಯೂ ಕೋಪಿಸಿಕೊಳ್ಳುತ್ತಾ, ಪೇಚಾಡುತ್ತಾ ಸಹಾಯ ಕೋರುತ್ತಾ ಹಾಗೆ, ಹೀಗೆ, ಊರನ್ನು ಬಿಟ್ಟು ಹೊರಗೆ ಹೋಗಿದ್ದಾರೆ. ಆದರೆ ದಯಾಳುಗಳಾದ ನಮ್ಮ ಅಮಲ್ದಾರರು ತುಂಬಾ ಮುತುವರ್ಜಿಯಿಂದಲೂ ಸಹನೆಯಿಂದಲೂ ಪ್ರಜೆಗಳನ್ನು ಸಮ್ಮತಿಪಡಿಸಿ, ಎಲ್ಲಾ ಕಡೆಗಳಿಂದಲೂ ಗಳ ಬಾಬೆ ವಗೈರೆಗಾಗಿ ಬರೆದು ತರಸಿ, ಬಡವರಿಗೆ ಬಲ್ಲಿದರಿಗೆ ಮುನಾಸಬ್ ಸಹಾಯ ಮಾಡಿದರು. ಪ್ರತಿಯೊಂದು ಮನೆಯವರನ್ನೂ ಎಚ್ಚರಿಸಿ ತಾವೇ ದಯಮಾಡಿ ಬೇಡಿಕೊಂಡದ್ದರಿಂದ ಜನರು ಯಾವನೊಂದು ಗಲಾಟೆ ಇಲ್ಲದೆ ಊರು ಬಿಟ್ಟರು.

ಆದರೆ ಬಡ ಜನರ ಕಷ್ಟವನ್ನು ಏನೆಂದು ವಿವರಿಸಲಿ! ಒಂದು ಕಡೆಯಲ್ಲಿ ಮಳೆಯ ಭಯವೂ, ರೋಗದ ಭಯವೂ, ಕಳ್ಳಕಾಕರ ಭಯವೂ, ಸಂಪಾದನೆಯಿಲ್ಲದ ವ್ಯಥೆಯೂ ಅವರನ್ನು ಬಾಧಿಸಿಬಿಡುತ್ತಾ ಇದೆ. ಮುಂದೆ ತಾಲ್ಲೂಕು ಅಧಿಕಾರಿಗಳು ಏನುಮಾಡುತ್ತಾರೋ ಎಂಬ ಕಳವಳದಿಂದ ತುಂಬಿರುತ್ತಾರೆ.

ಈ ಊರು ನಿವಾಸಿಗಳನ್ನು ಗ್ರಾಮಗಳೊಳಗೆ ಸೇರಿಸಕೂಡದೆಂದು ಹುಕುಮು ಕೊಟ್ಟು ಅಧಿಕಾರಿಗಳು ತಾವೇ ಊರೊಳಗೆ ಹ್ಯಾಗೆ ಸೇರಿದರೋ ಗೊತ್ತಿಲ್ಲ.

ಈ ಸ್ಥಿತಿಯು ನರಸೀಪುರಕ್ಕೆ ಅಭಿಸಿದ್ದರಿಂದ ಗ್ರಾಮಾಂತರದಿಂದ ಪಟೇಲರಿಗೂ, ಗ್ರಾಮ ನಿವಾಸಿಗಳಿಗೂ ಸುಗ್ಗಿಯೆಂದೆನಿಸಲ್ಪಟ್ಟಿದೆ. ಮನೆಯ ಬಾಡಿಗೆಯ ಅಲಾದೆ ಕೊಟ್ಟು, ೧೦ ರೂಪಾಯಿಗಳನ್ನು ಪಟೇಲರಿಗೆ ಅರ್ಪಿಸಬೇಕಂತೆ. ಹಾಗಿಲ್ಲದವರನ್ನು ಗ್ರಾಮದೊಳಗೆ ಸೇರಿಸುವದೇ ಇಲ್ಲವೆಂದು ಕಟ್ಟುಪಾಡು ಮಾಡಿದ್ದಾರಂತೆ.

ಬಾತ್ಮಿಗಾರ್.

## ದೇಶಾಂತರ ವಿಶೇಷ ಸಮಾಚಾರಗಳು.

ಇಂಗ್ಲಾಂಡಿನ ಪ್ರಧಾನ ಮಂತ್ರಿಗಳಾದ ಮಿ॥ ಬಾಲ್ಫರ್ ಯವರು ಕೆಲವು ದಿನಗಳ ಹಿಂದೆ ಷೆಫೀಲ್ಡ್ ನಗರದಲ್ಲಿ ಒಂದು ಉಪನ್ಯಾಸ ಮಾಡಿದರು. ಇದನ್ನು ಕೇಳುವದಕ್ಕೆ ಕೆಲವು ಮುಂಬಿ ಪತ್ರಿಕಾ ಬಾತ್ಮಿದಾರರು ಲಂಡನ್ ನಗರದ ಒಂದು ಕೊಟಡಿಯಲ್ಲಿ ಕುಳಿತಿದ್ದರು. ಷೆಫೀಲ್ಡಿನಿಂದ ಲಂಡನಿಗೆ ೧೬೯ ಮೈಲು ಇರುವದು. ಇಷ್ಟು ದೂರದ ಮಿ॥ ಬಾಲ್ಫರ್ ಯವರ ಉಪನ್ಯಾಸವು ಕೇಳಿಸುವ ಬಗ್ಗೆ ಎಲೆಕ್ಟ್ರೊಫೋನ್ ಎಂಬುದೊಂದು ನೂತನ ಯಂತ್ರವನ್ನು ಷೆಫೀಲ್ಡಿನ ಉಪನ್ಯಾಸ ಮಂದಿರದಲ್ಲಿಟ್ಟಿದ್ದರು. ಅಲ್ಲಿಂದ ಲಂಡನ್ ನಗರದ ಬಾತ್ಮಿದಾರರು ಕುಳಿತಿದ್ದ ಕೊಟಡಿಗೆ ಮುಟ್ಟುವಂತೆ ತಂತಿಗಳನ್ನು ಜೋಡಿಸಿದ್ದರು. ಉಪನ್ಯಾಸಕರ ಬಾಯಿಂದ ಹೊರಟಂಥ ಪ್ರತಿಯೊಂದು ಧ್ವನಿಯೂ ಲೇಶಮಾತ್ರವಾದರೂ ವ್ಯತ್ಯಾಸವಿಲ್ಲದಂತೆ ಆ ಪತ್ರಿಕಾ ಬಾತ್ಮಿದಾರರು ತಾವೇ ಆ ಮಂದಿರದಲ್ಲಿ ಇದಿರಿಗೆ ಕುಳಿತು ಕೇಳುತ್ತಿರುವ ಪ್ರಕಾರವಾಗಿ ಕೇಳಿಸುತ್ತಿತ್ತು.

* * *

ಚೀನಾ ದೇಶದಲ್ಲಿ ಒಬ್ಬ ಪತ್ರಿಕಾ ಕರ್ತನು ಸ್ವದೇಶ ಪ್ರೇಮಾಭಿಮಾನದಿಂದ ಪ್ರೇರಿತನಾಗಿ ಪ್ರಕೃತ ಸಿಂಹಾಸನಾಧಿಪತಿಗಳ ವಿಷಯದಲ್ಲಿ ಮನಸ್ತಾಪಕರವಾದ ಸಂಗತಿಯನ್ನು ಬರೆದು ಪ್ರಕಟಿಸಿದನು. ಇದು ರಾಜದ್ರೋಹವೆಂದು ಚೀನಾ ಸರ್ಕಾರದವರು ಭಾವಿಸಿ ಅವನನ್ನು ಹಿಡಿದೊಪ್ಪಿಸಬೇಕೆಂದು ಅವನಿದ್ದ ಪ್ರದೇಶಕ್ಕೆ ಅಧಿಕಾರಿಗಳಾದ ಬ್ರಿಟಿಷರಿಗೆ ಹೇಳಿಕೊಂಡರು. ಅವರು ಅವನನ್ನು ಒಪ್ಪಿಸಿಕೊಡಲು, ಚೀನಾ ಸರ್ಕಾರದವರು ಅವುಗೊಂದು ವಿಚಾರಣೆಯನ್ನೂ ಮಾಡದೆ ಆ ಬಡ ಮನುಷ್ಯನನ್ನು ಚಿತ್ರಹಿಂಸೆಮಾಡಿ ಕೊಂದು ಹಾಕಿದರು. ಇವನಲ್ಲದೆ ಇವನ ಜೊತೆಯಲ್ಲಿ ಸೇರಿದ್ದ ಇನ್ನೂ ಕೆಲವರನ್ನು ಹಿಡಿದೊಪ್ಪಿಸಬೇಕೆಂದು ಸರ್ಕಾರದವರು ಕೇಳಿಕೊಳ್ಳಲು, ಮೊದಲಿನವನನ್ನು ಕೊಂದಪ್ರಕಾರವಾಗಿ ಇವರನ್ನೂ ಕೊಲ್ಲದೆ ತಕ್ಕ ಪ್ರಕಾರ ನ್ಯಾಯವಿಚಾರಣೆಮಾಡಿ ಶಿಕ್ಷೆ ವಿಧಿಸಿದರೆ ಒಪ್ಪಿಸಿಕೊಡುತ್ತೇವೆಂದು ಹೇಳಿ ಕೆಲವು ನಿಬಂಧನೆಗಳನ್ನು ವಿಧಿಸಿದರು. ಅದರ ಪ್ರಕಾರ ಚೀನಾ ಸರ್ಕಾರದವರು ನಡೆಯಲಿಲ್ಲವಾದಕಾರಣ ಬ್ರಿಟಿಷ ರಾಯಭಾರಿಗಳು ಆ ಅಪರಾಧಿಗಳನ್ನು ಇನ್ನೂ ತಮ್ಮ ಬಳಿಯಲ್ಲೇ ಪಹರೆಯಲ್ಲಿಟ್ಟಿದ್ದಾರೆ.

* * *

ಅಮೇರಿಕದಲ್ಲಿ ಪ್ರೊಫೆಸರ್ ಲಾಂಗ್ಲೇ ಎಂಬಾತನು ಆಕಾಶಬುಟ್ಟಿಗಳ ಸಹಾಯವಿಲ್ಲದೆ ಅಂತರಿಕ್ಷದಲ್ಲಿ ಸಂಚರಿಸುವಂಥಾ ಒಂದು ಸಣ್ಣ ಹಡಗವನ್ನು ಕಟ್ಟಿ ತಯಾರುಮಾಡಿದನು. ಅದರಲ್ಲಿ ಒಬ್ಬ ಮಾತ್ರ ಕುಳಿತು ಸಂಚರಿಸುವದಕ್ಕೆ ಅವಕಾಶ ಮಾಡಿದ್ದನು. ಈ ಹಡಗವು ಸರಾಗವಾಗಿ ವಾಯುಮಂಡಲದಲ್ಲಿ ಸಂಚರಿಸುವುದು ಸಿದ್ಧವಾದರೆ ಸರ್ಕಾರದವರು ಆತನಿಗೆ ೧೫,೦೦೦ ಪೌಂಡು (ಅಂದರೆ, ೨,೨೫,೦೦೦ ರೂಪಾಯಿ) ಗಳನ್ನು ಬಹುಮಾನ ಕೊಡುವುದಾಗಿ ಮಾತು ಕೊಟ್ಟರು. ಅದೆ. ಪ್ರಕಾರ ಪ್ರೊಫೆಸರ್ ಲಾಂಗ್ಲೆಯು ಹಡಗಿನಲ್ಲಿ ಕುಳಿತುಕೊಂಡು, ಪೊಟೋಮ್ಯಾಕ್ ಎಂಬ ನದಿಯ ಮೇಲೆ ಅಂತರಿಕ್ಷದಲ್ಲಿ ಹಾರಿಕೊಂಡು ಹೊರಟನು. ಆದರೆ ಸ್ವಲ್ಪ ದೂರ ಅಂತರಿಕ್ಷಕ್ಕೆ ಹಾರಿಹೋದ ಕೂಡಲೇ ಆ ಹಡಗವು ಅನಾಮತ್ತಾಗಿ ನದಿಯೊಳಕ್ಕೆ ಮುಗುಚಿಕೊಂಡಿತು. ಒಳಗಿದ್ದವನು ನೀರಿನಲ್ಲಿ ಸ್ವಲ್ಪ ಮುಣುಗುವಷ್ಟರೊಳಗಾಗಿ ದೈವವಶಾತ್ತು ಪ್ರೊಫೆಸರ್ ಮ್ಯಾನ್ಲಿ ಬಾತನು ಹೋಗಿ ಆತನನ್ನು ಕರೆಗೆ ತಂದು ಹಾಕಿದನು. ಮೊದಲ ಪ್ರಯತ್ನವು ಈ ಪ್ರಕಾರ ಅಸಾರ್ಥಕವಾಯಿತಲ್ಲಾ ಎಂದು ಆತ ವಿಷಾದಿಸುತ್ತಿದ್ದಾನೆ.

* * *

ಆಸ್ಟ್ರಿಯ ರಾಜ್ಯದ ಆಂಟನ್ ಹಾಸ್ಟರ್ ಎಂಬೊಬ್ಬನು ಕೆಲವರ ಶಪಥಮಾಡಿಕೊಂಡು, ಆರು ವರುಷಗಳೊಳಗೆ ಪ್ರಪಂಚವೆಲ್ಲಾ ಕಾಲ್ನಡಿಗೆಯಲ್ಲೇ ಸುತ್ತಿಕೊಂಡು ಬರಬೇಕೆಂದು ೧೯೦ ಸೆಪ್ಟಂಬರ್ ೧೨ರಲ್ಲಿ ವಿಯನ್ನಾ ನಗರದಿಂದ ಹೊರಟನು. ಇವ ತನ್ನ ಹೆಂಡತಿಯನ್ನೂ ತನ್ನ ಚಿಕ್ಕ ಮಗುವನ್ನೂ ಒಂದು ಗಾಡಿಯಲ್ಲಿ ಕೂರಿಸಿಕೊಂಡು, ತಾನೇ ಆ ಗಾಡಿಯನ್ನು ನೂಕಿಕೊಂಡು ಹೋಗಿ ಬರಬೇಕಾಗಿದೆ. ಈ ಪ್ರಕಾರ ಹೊರಟ ಹಾಸ್ಟನನು ಕಳೆದ ಅಕ್ಟೋಬರ್ ೩ರಲ್ಲಿ ಪಲರ್ಮವನ್ನು ತಲಪಿದನು. ಅಲ್ಲಿನ ಪ್ರಜೆಗಳೆಲ್ಲಾ ಈತನ ಸಂಕಲ್ಪವನ್ನೂ, ತನ್ನ ಹೆಂಡತಿ ಮಗುವನ್ನು ಕೂರಿಸಿ ತಾನೇ ತಳ್ಳಿಕೊಂಡು ಹೋಗುತ್ತಿದ್ದನ್ನೂ ನೋಡಿ ಆಶ್ಚರ್ಯ ಸಂತೋಷಗಳೆರಡನ್ನೂ ಪಡೆದು, ಅಲ್ಲಲ್ಲಿ ಅವರನ್ನು ನಿಲ್ಲಿಸಿಕೊಂಡು ಅತಿಥಿಸತ್ಕಾರ ಮಾಡುತ್ತಾ ಮುಂದು ಮುಂದಕ್ಕೆ ಸಾಗಕಳುಹಿಸುತ್ತಾ ಬಂದಿದ್ದಾರೆ. ಅವನು ಇದುವರೆಗೆ ೨೦,೦೦೦ ಮೈಲಿ ಸಂಚರಿಸಿದಂತಾಯಿತು.

* * *

ಫ್ರಾನ್ಸ್ ರಾಜ್ಯದ ರಾಜಧಾನಿಯಾದ ಪ್ಯಾರಿಸ್ ನಗರದಲ್ಲಿ ಒಂದು ವಿಚಿತ್ರವಾದ ಪಾಠಶಾಲೆಯನ್ನಿಟ್ಟಿದ್ದಾರೆ. ಈ ಪಾಠಶಾಲೆಯಲ್ಲಿ ಉಪಾಧ್ಯಾಯರು ಸಣ್ಣ ಸಣ್ಣ ಹುಡುಗರಿಗೆ ಕಳುವನ್ನು ಕಲಿಸಿಕೊಡುತ್ತಾರೆ. ಬೀದಿಗಳಲ್ಲೂ ಅಂಗಡಿ ಮಾರ್ಕೆಟ್ಟುಗಳಲ್ಲೂ ಜನರ ಗುಂಪಿನಲ್ಲಿ ದಾರಿ ಬಿಟ್ಟುಕೊಂಡು ನ್ಯಾಯವಾದ ಮಾರ್ಗಕ್ಕೆ ಜನರಿಂದ ಅವರಿಗೆ ಸ್ವಲ್ಪವೂ ಗೊತ್ತಾಗದಂತೆ ಈ ಸ್ಕೂಲಿನಲ್ಲಿ ವಿದ್ಯಾರ್ಥಿಗಳಾದ ಹುಡುಗರು ಅವರ ಜೇಬುಗಳನ್ನು ಧುಮ್ ಸಹಿತವಾಗಿ ಕತ್ತರಿಸಿಕೊಂಡು ಬರುವರು. ಈ ಪಾಠಶಾಲೆಯಲ್ಲಿ ಯಂತ್ರಗಳಾಗ್ಯ ಸುಳ್ಳು ಮನುಷ್ಯರನ್ನು ಕಾಗದದಲ್ಲಿ ಮಾಡಿಟ್ಟಿದ್ದಾರೆ. ಎಷ್ಟು ಸ್ವಸ್ಥವಾಗಿ ಈ ಬೊಂಬೆಗಳನ್ನು ಮುಟ್ಟಿದಾಗ್ಯೂ ಅವು ಅಲ್ಲಾಡುವನು. ಆಲಿಸಿ ತಕ್ಕ ಹುಡುಗರು ಆ ಬೊಂಬೆಗಳ ಜೇಬನ್ನು ಅವು ಅಲುಗದಂತೆ ಕತ್ತರಿಸುವಷ್ಟು ಸಾಮರ್ಥ್ಯವನ್ನು ಪಡೆದಾಗ ಅವರು ಪ್ರವೀಣರಾದರೆಂದು ಒಪ್ಪುವರು ಎಂಬದಾಗಿ ಅಲ್ಲಿ ಪ್ರಕಟವಾಗುವ ರಿಬಿರ್ಟನ್ ಎಂಬ ಪತ್ರಿಕೆಯು ತಿಳಿಸುತ್ತದೆ.

## ತಾಲೂಕು ವರ್ತಮಾನಗಳು.

ಗುಂಡ್ಲುಪೇಟೆ—ಈ ಪ್ರಾಂತ್ಯ ಮಳೆ ಬೆಳೆ ಸಂಪೂರ್ಣವಾಗಿ ಎಲ್ಲಾ ಸುಖವಾಗಿದ್ದಾರೆ. ನಮ್ಮ ಗುಂಡ್ಲುಪೇಟೆಯಲ್ಲಿ ಈ ಪ್ಲೇಗಿನಿಂದ ದಿನಕ್ಕೆ ೫—೬ ಜನಗಳು ಸಾಯುತ್ತಾ ಇದ್ದಾರೆ. ಗುಂಡ್ಲುಪೇಟೆಗೆ ಈಗ್ಗೆ ೨ ತಿಂಗಳಿಂದ ಪ್ಲೇಗು ಪ್ರಾರಂಭವಾಗಿದೆ. ಈಗ ಎಲ್ಲಾ ಜನರು ಗ್ರಾಮ ಬಿಟ್ಟು ಬೇರೆ ಷೆಡ್ ಹಾಕಿಕೊಂಡು ವಾಸಮಾಡುತ್ತಾರೆ. ಪೆಡ್ಡಿನಲ್ಲೂ ಜನಗಳು ಸಾಯುತ್ತಾರೆ.

ತಿಪಟೂರು:—ಕೆಲವು ದಿನಗಳಿಗೆ ಮುಂಚೆ ಸಾಹುಕಾರ ಕೆಂಗಿ ನಂಜಪ್ಪನವರ ಅಂಗಡಿಯಲ್ಲಿ ಕಳುವಾಗಿದ್ದ ಜವಳಿಯು ಪತ್ತೆಯಾಯಿತು. ನಂಜೇಗೌಡರು ಟವರ್ ಗಸ್ತುಮಾಡುತ್ತಿರುವಾಗ ಕಾಶಿ ವಿಶ್ವೇಶ್ವರ ದೇವಸ್ಥಾನದ ಬಳಿ ಇರುವ ದೊಡ್ಡ ಚರಂಡಿ ಒಳಗೆ ಒಂದು ಸೀರೆ ಮಳೆನೀರಿನಿಂದ ಕೊಚ್ಚಿ ಬರುತ್ತಿರುವದನ್ನು ಕಂಡು, ಡ್ಯೂಟಿ ಆಫೀಸರನ್ನು ಬರಮಾಡಿಕೊಂಡು, ಸದರಿ ಚರಂಡಿ ಕಲ್ಲುಗಳನ್ನು ತೆಗೆದು ಹಾಕಲು ಸಿಕ್ಕಿದ್ದು ತುಕ್ಕುಹಿಡಿದು ತುಂಡುತುಂಡಾಗಿದ್ದ ಜವಳಿ ಗಂಟೇ. ಈ ಮಾಲನ್ನೆಲ್ಲಾ ಕಚೇರಿಯಲ್ಲಿಟ್ಟಿರುತ್ತಾರೆ. ಮತ್ತು ಕಳ್ಳರ ಪತ್ತೆ ತರದೂದಿನಲ್ಲಿಯೇ ಇದ್ದಾರೆ—ಸಾಹುಕಾರ್ ಹಗಲು ಕಳ್ಳಕೆರಬಸಪ್ಪನವರು ತೀರಿಹೋದ್ದರಿಂದ ಅನೇಕರು ನಾನಾ ವಿಧವಾಗಿ ಹಂಗಲಾಚಿಕೊಳ್ಳುತ್ತಾರೆ. ಇವರ ವಿಯೋಗದುಃಖವನ್ನನುಭವಿಸುವವಳ್ಳಿ ಪತ್ನಿಯು ಒಂದು ಹೆಣ್ಣು ಕೂಸೂ ಇದ್ದಾರೆಂದು ತಿಳಿಯಿತು.—ಎಲ್ಲಾ ಪ್ರಾಂತ್ಯಗಳಲ್ಲಿ ಕೆರೆ ಕಾಲುವೆಗಳು ಕೋಡಿ ಬಿದ್ದವಂತೆ. ಆದರೆ ಈ ಊರಿನ ಚಿಕ್ಕ ಕೆರೆಯು ಇನ್ನೂ ತುಂಬುವದರಲ್ಲಿಯೇ ಇದೆ. ಬೆಳೆಗಳು ಚನ್ನಾಗಿವೆ.

ಚನ್ನರಾಯಪಟ್ಣ—ಇಲ್ಲಿನ ಆಸ್ಪಿಟಲ್ ಅಸಿಸ್ಟೆಂಟ್ ಮಿ॥ ಶ್ರೀನಿವಾಸಯ್ಯಂಗಾರ್ರು ಮೂರು ತಿಂಗಳು ರಜಾದ ಮೇಲೆ ಹೋಗಿರುವದರಿಂದ ಅವರ ಬದಲಾಗಿ ಆಸ್ಪಿಟಲ್ ಅಸಿಸ್ಟೆಂಟ್ ಮಿ॥ ಶಾಂತಪ್ಪಶೆಟ್ಟಿಯವರು ಬಂದಿರುತ್ತಾರೆ. ಇವರು ಬಂದು ಸುಮಾರು ಒಂದು ತಿಂಗಳಾಗಿರಬಹುದು. ಇವರು ದೊಡ್ಡಮನುಷ್ಯರಾಗಿಯೂ, ಚಿಕಿತ್ಸಾ ವಿಷಯದಲ್ಲಿ ತುಂಬಾ ಅನುಭವಶಾಲಿಗಳಾಗಿಯೂ ಕಾಣುತ್ತಾರೆ. ಇವರು ಚಿಕ್ಕವರು ದೊಡ್ಡವರು ಎಂಬ ತಾತ್ಪರ್ಯವಿಲ್ಲದೆ ಸರ್ವರಲ್ಲಿಯೂ ವಿಶ್ವಾಸವುಳ್ಳವರಾಗಿ ಆಸ್ಪತ್ರೆಗೆ ಬರತಕ್ಕ ರೋಗಿಗಳವರ ದೇಹಸ್ಥಿತಿಯನ್ನು ಚನ್ನಾಗಿ ವಿಚಾರಿಸಿ ಔಷಧ ಕೊಡುತ್ತಾರೆ. ಈ ಊರಿನ ಜನರು ಇಂಥ ಮಹನೀಯರೇ ಈ ಸ್ಥಳದಲ್ಲಿದ್ದರೆ ನಮಗೆ ಮಹದುಪಕಾರವಾಗುವದೆಂದು ಭಾವಿಸಿ, ಸೀನಿಯರ್ ಸರ್ಜನ್‌ರಿಗೆ ಒಂದು ಅರ್ಜಿ ಬರೆಕೊಳ್ಳುವನರಾಗಿದ್ದಾರೆಂದು ಕೇಳುತ್ತೇನೆ.—ನಮ್ಮ ಅಮಲ್ದಾರರು ಊರು ಪಾಕೀಜ ವಿಷಯದಲ್ಲಿ ತುಂಬಾ ಮುತುವರ್ಜಿ ವಹಿಸಿರುವದರಿಂದ ಸಕಲರೂ ಬಹಳ ಸಂತೋಷಪಡುತ್ತಾರೆ.

ತ್ತ ಈಚೆಗೆ ಮಳೆ ಚನ್ನಾಗಿ ಆಗಿ ಕೆರೆ ತುಂಬಿ ಬಹಳ ದಿನಗಳಿಂದ ಕೋಡಿ ಬಿದ್ದಿದೆ.

ತಲಕಾಡು.—ಇದು ಪೂರ್ವ ಪಶ್ಚಿಮ ದಕ್ಷಿಣ ಭಾಗಗಳಲ್ಲಿ ಕಾವೇರೀ ನದಿಯಿಂದ ಸುತ್ತಲ್ಪಟ್ಟಿರುವ ಒಂದು ಪರ್ಯಾಯ ದ್ವೀಪವಾಗಿದೆ. ಹೀಗೆ ನೀರಿನಿಂದ ಸುತ್ತಲ್ಪಟ್ಟಿದ್ದಾಗ್ಯೂ ಯಾವ ಕಡೆಯಲ್ಲಿ ನೀರಿಗೆ ಹೋಗಬೇಕಾದರೂ ಅರ್ಧ ಮೈಲ್ ಮೇಲೆಯೇ ಹೋಗಬೇಕಾಗುತ್ತೆ. ಇವುಗಳಲ್ಲೆಲ್ಲಾ ಕೇವಲ ಸಮೀಪವಾಗಿರುವ ದಕ್ಷಿಣ ಭಾಗದ ಹೊಳೆ ಕರೆಯು ಅರ್ಧ ಮೈಲಿ ಇದ್ದಾಗ್ಯೂ ಉದ್ದಕ್ಕೂ ಮರಳಿನಿಂದ ನಿಬಿಡೀಕೃತವಾದ ದಿಣ್ಣೆಗಳನ್ನು ದಾಟಿಕೊಂಡು ಹೋಗುವದು ಅತ್ಯಂತ ಪ್ರಯಾಸವಾಗಿತ್ತು. ಮತ್ತು ಒಂದು ಕಾಲುವೆ ದಾಟಿಬಿಟ್ಟ ಮೇಲೆ ಸ್ನಾನಪಾನಾದಿಗಳಿಗೆ ಈ ದಾರಿಯಲ್ಲಿಯೇ ಹೋಗಬೇಕಾಗಿತ್ತು. ಬಿಸಲಿನ ತಾಪದಿಂದ ಮರಳು ಕಾದು ಅಗ್ನಿಗೆ ಸಮಾನವಾಗಿ ತೋರುತಲಿದ್ದಿತ್ತು. ಹಾಲಿ ತಾಲ್ಲೂಕು ಅಮಲ್ದಾರರು ಇಲ್ಲಿನ ಪ್ರಜೆಗಳ ಕಷ್ಟವನ್ನು ನೋಡಲಾರದೆ ದಕ್ಷಿಣ ಪಾರ್ಶ್ವದ ಹೊಳೆ ಕರೆಗೆ ಹೋಗಲು ತೊಂದರೆ ಮಾಡುವ ಮರಳಿನಲ್ಲಿ ಸಾಧ್ಯವಾದಷ್ಟನ್ನು ತೆಗಿಸಿ ಆ ಜಾಗದಲ್ಲಿ ೬—೭ ಅಡಿ ಕಪ್ಪು ಮಣ್ಣನ್ನು ಹಾಕಿಸಿ ಅದರ ಮೇಲೆ ಗ್ರಾವಲ್ ಮಣ್ಣನ್ನು ಹರಡಿಸಿ ಸುಮಾರು ಮುಕ್ಕಾಲು ಮೈಲಿ ವರಿಗೆ ೧೬—೧೭ ಅಡಿ ಅಗಲವುಳ್ಳ ರಸ್ತೆಯನ್ನು ತಯಾರ್ ಮಾಡಿಸಿ, ಆಬಾಲವೃದ್ಧರು ಅದಿಯಾಗಿ ಇಲ್ಲಿನ ಪ್ರಜೆಗಳ ಮತ್ತು ಕೊಳ್ಳೇಗಾಲ, ಮರಳ್ಳೀ ಸಂತೆ ಕಡೆಯಿಂದ ಬರತಕ್ಕ ವರ್ತಕ ಸಮುದಾಯದ ಕಷ್ಟಗಳನ್ನು ನಿವಾರಣೆ ಮಾಡಿದಂಥಾ ಮತ್ತು ಪೂರ್ವದಲ್ಲಿ ಹಳೇ ಬೀದಿಗ ಪಿನಾಯಕನ ಗುಡಿಗೆ ಬಿದ್ದಿದ್ದ ಅಗಾಧವಾದ ಮರಳನ್ನು ತೆಗೆಸಿದಂಥಾ ಪ್ರಜಾಹಿತೈಷಿಗಳಾದ ಆ ಮಹನೀಯರನ್ನು ಎಲ್ಲರೂ ಕೊಂಡಾಡುತ್ತಿದ್ದಾರೆ.—ಈ ಊರಿನ ನಾಲಾ ಏರಿಗಳ ಪಕ್ಕಗಳಲ್ಲಿ ಗಲೀಜು ಮಾಡುವದರಿಂದ ಮಳೆ ಬಿದ್ದಾಗ ಅದೆಲ್ಲಾ ಕೊಚ್ಚಿ ನೀರಿನಲ್ಲಿ ಬೀಳುವದರಿಂದ ಈ ನೀರನ್ನ ಸ್ನಾನ ಪಾನಾದಿಗಳಿಗೆ ಉಪಯೋಗಿಸುವವರಿಂದ ಆರೋಗ್ಯಕ್ಕೆ ಭಂಗ ಉಂಟಾಗುತ್ತೆ. ಆದ್ದರಿಂದ ಇಲ್ಲಿನ ಮ್ಯುನಿಸಿಪಾಲಿಟಿಯವರು ಇದರ ಮೇಲೆ ಒಬ್ಬ ನಿಗಾ ಇಟ್ಟಲ್ಲಿ ಜನಗಳಿಗೆ ಪ್ರಯೋಜನವಾಗುವದರಲ್ಲಿ ಸಂಶಯವಿಲ್ಲ. ಇಲ್ಲಿನ ಪೋಸ್ಟಾಫೀಸಿನ ಕೆಲಸಗಳು ತೃಪ್ತಿಕರವಾಗಿ ನಡೆಯುತ್ತವೆ.

ದೇವನಹಳ್ಳಿ.—ಈ ಊರಿನಲ್ಲಿ ಪ್ಲೇಗ್ ಇನ್ನೂ ಕಡಿಮೆ ಆಗಿಲ್ಲ. ದಿನಕ್ಕೆ ೩—೪ ಪ್ಲೇಗ್ ಮರಣ ಆಗುತ್ತ ಇದೆ. ಜನರು ಹೇಳಲಾರದ ಸಂಕಟಕ್ಕೆ ಒಳಪಟ್ಟಿದ್ದಾರೆ. ಜನರು ಊರನ್ನೆಲ್ಲಾ ೪—೫ ದಿನದ ವರೆಗೆ ಖಾಲಿ ಮಾಡಿದರೆ ಒಂದು ವೇಳೆ ಈ ರೋಗ ತಗ್ಗ ಬಹುದು. ಕೆಲವು ದೊಡ್ಡ ಮನುಷ್ಯರು ಈ ವಿಚಾರದಲ್ಲಿ ಊರು ಖಾಲಿ ಮಾಡುವದಕ್ಕೆ ಪ್ರೋತ್ಸಾಹ ಕೊಡುವದಕ್ಕೆ ಬದಲಾಗಿ ತಾವೇ ಊರು ಬಿಡುವದಿಲ್ಲ ಎಂದು ಸಾಧಿಸುವ ಹಾಗೆ ಕಾಣುತ್ತದೆ. ಸರ್ಕಾರದವರಾದರೂ ಪ್ರಜೆಗಳು ಊರು ಬಿಡುವ ಹಾಗೆ ಪ್ರೋತ್ಸಾಹ ಪಡಿಸಿದರೆ ಪ್ರಜೆಗಳಿಗೆ ಬಹಳ ಉಪಕಾರವಾಗುವದು. ತಮ್ಮ ಕಳೆದ ಎರಡು ಪತ್ರಿಕೆಗಳಲ್ಲಿ ಪ್ಲೇಗ್ ರೋಗಿಗಳಿಗೆ ಔಷಧ ಮಾಡಿ ಧರ್ಮಾರ್ಥವಾಗಿ ಕೊಟ್ಟು ಗುಣಪಡಿಸಿದ ವೈದ್ಯರು—ಇದರ ವಿಷಯವನ್ನು ತಮ್ಮ ಪತ್ರಿಕೆಯಲ್ಲಿಯೇ ಪ್ರಕಟಿಸಿದರೆ ಲೋಕೋಪಕಾರವಾದೀತು.—ಗೌಪರ ಸಂಬೇಪಪ್ಪನ ಮನೆಗೆ ಖಾಯಿಖಾನೆ ಹಾಕಿಸಬೇಕೆಂದು ಫಿರ್ಯಾದು ಆಗಿದ್ದು ಅಪರಾಧಿಯಾಗಿದ್ದ ಕೋನಪ್ಪನವರ ಸಂಬಪ್ಪನ ಮೇಲೆ ಕೇಸು ವಜಾ ಆಯಿತು ಎಂದು ಕೇಳುತ್ತೇನೆ.—ಈ ಊರು ಮುಸಲ್ಮಾನರ ಮಕ್ಕಳಿಗೆ ಅನುಕೂಲವಾದ ಸ್ಥಳದಲ್ಲಿ ಸ್ಕೂಲು ಇಲ್ಲದೆ ಬಹಳ ತೊಂದರೆಯಾಗಿರುವದನ್ನು ಹೋಗಲಾಡಿಸಬೇಕೆಂದು ಮುಸಲ್ಮಾನರು ಬಹು ಕಾಲದಿಂದಲೂ ಅಪೇಕ್ಷಿಸಿ ತಮ್ಮ ಗಂಡು ಮಕ್ಕಳು, ಹೆಣ್ಣು ಮಕ್ಕಳು ಓದುವದಕ್ಕೆ ಒಂದು ಸ್ಕೂಲನ್ನು ಕಟ್ಟುವ ಹಾಗೆ ಏರ್ಪಾಡು ಮಾಡಿದ್ದಾರೆ. ಇದಕ್ಕೆ ಈ ಊರಿನ ಬಾಬು ಸಾಹೇಬರು ಒಬ್ಬರೇ ನಗದಾಗಿ ೨೦೦ ರೂಪಾಯಿಗಳನ್ನೂ, ಅಂಗಡಿ ಮನೆ ಕಟ್ಟುವುಳ್ಳ ೩೦೦ ರೂಪಾಯಿ ಕ್ರಯದ ಜಮೀನನ್ನೂ ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ. ಕಾಲಸ್ಥಿತಿಯಿಂದ ಸೇರುವ ಚಂದಾ ೨೦೦ ರೂ. ಆಗುತ್ತದೆ. ಕಟ್ಟಡಕ್ಕೆ ಬೇಕಾಗಿರುವ ಸಾಮಾನು ಸುಮಾರು ೧೦೦ ರೂಪಾಯಿನ ವರೆಗೆ ಕೊಡುವದಕ್ಕೆ ಕೆಲವರು ವಾಗ್ದಾನ ಮಾಡಿರುತ್ತಾರೆ ಎಂದು ಕೇಳುತ್ತೇನೆ. ಮುಸಲ್ಮಾನರು ಇರುವ ಮನೆಗಳ ಸಮೀಪದಲ್ಲಿಯೇ ಈ ಸ್ಕೂಲನ್ನು ಕಟ್ಟುತ್ತಾರೆ. ಇದು ಬಹು ಒಳ್ಳೇ ಕಾರ್ಯವಾಗಿದೆ. ಸರ್ಕಾರದವರು ಈ ಜನರ ಅಪೇಕ್ಷೆಯಂತೆ ಎಲ್ಲಾ ಕಾರ್ಯಗಳಿಗೆ ಪ್ರೋತ್ಸಾಹ ಕೊಟ್ಟು ನೆರವೇರಿಸುವರೆಂದು ನಿರೀಕ್ಷಿಸುತ್ತಾರೆ.

ಚನ್ನಪಟ್ಟಣ.—ಈ ಕಾಲದಲ್ಲಿ ಆದಂಥ ಮಳೆಯಿಂದ ಬಹು ಭಾರಿ ಕೆರೆಗಳೆಲ್ಲಾ ಎಲ್ಲಾ ಕಡೆಗಳಲ್ಲಿ ತುಂಬಿ ಕೋಡಿ ಬಿದ್ದಿವೆ ಎಂದು ವರ್ತಮಾನ ಕೇಳುತ್ತೇವೆ. ಆದರೆ ನಮ್ಮ ಚನ್ನಪಟ್ಟಣಕ್ಕೆ ಆಧಾರವಾದ ಕುನ್ನೂರು ಕಟ್ಟೆಯು ಇನ್ನು ಕೋಡಿ ಬೀಳಲಿಲ್ಲ. ಇಂಥ ಮಳೆಗಳಿಗೆ ಕೋಡಿ ಬೀಳದಿದ್ದರೆ ಇನ್ಯಾವ ಮಳೆಗೆ ತುಂಬೀತು? ಇದನ್ನು ಮೇಲಿನ ಅಧಿಕಾರಿಗಳು ತಿಳಿದು ಕೆರೆಗೆ ನೀರು ಬರುವ ಹಳ್ಳಗಳನ್ನು ನೋಡಿ, ಇದಕ್ಕೆ ತಿರುಗಿಸುವ ಹಾಗೆ ಮಾಡಿದರೆ ಬಹು ಪ್ರಯೋಜನ. ಬೇಸಿಗೆಯಲ್ಲಿ ನೀರಿಗೆ ತೊಂದರೆ ಬರುವದಿಲ್ಲ.—ನವೆಮ್ಬರು ಇರುವ ನಾಣ್ಯಗಳನ್ನು ಇಲ್ಲಿ ಹಿಡಿಯದೆ ಇರುವದರಿಂದ ದೊಡ್ಡ ಮನುಷ್ಯರಿಗೂ ಬಡವರಿಗೂ ಬಹು ತೊಂದರೆಯಾಗಿದೆ. ನವಕಲು ಇವುಗಳನ್ನು ಕಚೇರಿಯಲ್ಲಿ ತೆಗೆದುಕೊಳ್ಳುವದಿಲ್ಲವೆಂದು ಹೇಳುತ್ತಾರೆ. ಕಚೇರಿಯಲ್ಲಿ ತಕ್ಕೊಳ್ಳದಿದ್ದರೆ ವರ್ತಕರು ತಕ್ಕೊಳ್ಳುವದಿಲ್ಲ. ಕಂದಾಯದ ಕಾಲದಲ್ಲಿ ರೈತರು ನವೆದ ದುಡ್ಡು ಕೊಟ್ಟರೆ ಕಂದಾಯ ವಸೂಲಿಯವರು ಮುಟ್ಟುವದಿಲ್ಲ. ಹಾಗಾದರೆ ಇನ್ಯಾರ ಬಳಿಯಲ್ಲಿ ಈ ಕಾಸುಗಳನ್ನು ಚಲಾವಣೆ ಮಾಡಬಹುದು? ಈ ವಿಷಯದಲ್ಲಿ ಸರ್ಕಾರದವರು ಎಲ್ಲರಿಗೂ ತಿಳಿಯುವ ಹಾಗೆ ಒಂದು ಕ್ರಮವನ್ನು ಮಾಡಿ ನಮ್ಮಗಳ ಕಷ್ಟವನ್ನು ತಪ್ಪಿಸಬಾರದೇ ಎಂದು ಜನರು ಕೇಳುತ್ತಾರೆ. ಇದನ್ನು ನಮ್ಮ ಸರ್ಕಾರದವರು ತಪ್ಪಿಸುತ್ತಾರೆಂದು ನಿರೀಕ್ಷೆಯಲ್ಲಿ ಇದ್ದಾರೆ.—ಇಲ್ಲಿ ಮಳೂರ್ ಕೆರೆ ಕೋಡಿ ಬಿಟ್ಟಿದ್ದು ಮಳೂರ್ ಸೇತುವೆ ಬಿದ್ದುಹೋದಾಗ ಎಂದು ಹೇಳುತ್ತಾರೆ. ಈ ಮಳೂರ್ ಕೆರೆಯನ್ನು ರಿಪೇರಿ ಮಾಡುವದಕ್ಕೆ ಹುಕುಂ ಬಂದಿದೆ ಆದ್ದರಿಂದ ಕೋಡಿ ಒಡೆದು ನೀರು ಬಿಟ್ಟು ರಿಪೇರಿ ಮಾಡಬಹುದೆಂದು ಇಲ್ಲಿನ ಅಧಿಕಾರಿಗಳು ಹೇಳಿದರೆಂದು ಜನರು ತಿಳಿದು ಬಹಳ ವ್ಯಸನಪಡುತ್ತಾರೆ. ಈ ೩ ವರುಷದಿಂದ ಕೆರೆ ಸರಿಯಾಗಿ ತುಂಬದೆ ಇದ್ದ ಕಾರಣ ಫಸಲು ಸರಿಯಾಗಿ ಆಗಲಿಲ್ಲ. ಈಗಲೂ ಸರಿಯಾದ ಕಾಲದಲ್ಲಿ ಬಿತ್ತುವದಕ್ಕೆ ಮಳೆಯು ಅವಕಾಶ ಕೊಡದ ಕಾರಣ ಬೆಳೆಯು ತೃಪ್ತಿಯಾಗಿಲ್ಲ. ಕೆರೆ ತುಂಬಿದ್ದೇ ಒಂದು ವಿಶೇಷ. ಇಂಥಾದ್ದರಲ್ಲಿ ನೀರು ಬಿಟ್ಟುಬಿಟ್ಟರೆ ಮುಂದಿನ ಕಾರು ಭತ್ತವೂ ಆಗುವದಿಲ್ಲ. ಇದು ರೈತರಿಗೆ ಬಹು ನಷ್ಟವಾಗುತ್ತದೆಂದು ಹೇಳುತ್ತಾರೆ. ಮುಂದಿನ ಕಾರುಬೆಳೆಗೆ ನೀರು ಬಿಟ್ಟರೆ ಫಸಲೂ ಆಗುತ್ತೆ. ನೀರು ಕಮ್ಮಿಯಾಗುತ್ತದೆ. ಬೇಸಿಗೆಗೆ ಕೆರೆಯನ್ನು ರಿಪೇರಿ ಮಾಡಿಸಿದರೆ ಸರ್ಕಾರಕ್ಕೂ ಪ್ರಯೋಜನವಾಗುತ್ತದೆ. ಇದರ ವಿಷಯ ಇಲ್ಲಿನ ಕಚೇರಿಗೆ ಸಹ ಒಂದು ಅರ್ಜಿಯನ್ನು ರೈತರು ಕೊಟ್ಟಿದ್ದಾರೆ. ಮೇಲ್ಪಟ್ಟವರು ಉಭಯತ್ರರಿಗೂ ಪ್ರಯೋಜನವಾಗುವ ರೀತಿಯಲ್ಲಿ ಮಾಡುವರೆಂದು ಕೋರುತ್ತೇವೆ.—ಬೈರಾಪಟ್ಟಣದಲ್ಲಿ ಪ್ರಾಯದ ಚನ್ನನೆಂಬವನನ್ನು ಎದೆ ಮೂಳೆಗಳು ಮುರಿಯುವ ಹಾಗೆ ಹೊಡೆದು ಭಾವಿಯಲ್ಲಿ ಹಾಕಿದ್ದರು. ಇಲ್ಲಿ ಆಸ್ಪತ್ರೆಯಲ್ಲಿ ಕೊಯಿದು ಪರೀಕ್ಷಿಸಿದರು. ಒಬ್ಬ ಗುಮಾನಿಯನ್ನು ಹಿಡಿದು ವಿಚಾರಣೆಗೆ ಗುರಿಮಾಡಿದ್ದಾರೆಂದು ತಿಳಿಯುತ್ತೆ.—ಇಲ್ಲಿಗೆ ೪ ಮೈಲಿ ದೂರದಲ್ಲಿರುವ ಹುಲಿಕೆರೆ ನಲ್ಲಿಯು ದಶವಾರದಲ್ಲಿಯು ಪ್ಲೇಗ್ ಬಂದು ೧೫—೧೬ ಜನರು ಸತ್ತುಹೋದರು. ಜನರು ಊರುಬಿಟ್ಟಿದ್ದಾರೆ. ರಾಂಪುರದಲ್ಲಿ ಒಬ್ಬ ಬ್ರಾಹ್ಮಣ ಹೆಂಗಸು ನೇಣು ಹಾಕಿಕೊಂಡು ಸತ್ತಳು.

ಹುಣಸೂರು.—ಪ್ಲೇಗ್ ಇರುವ ಪ್ರದೇಶಗಳಿಂದ ಈ ಊರಿಗೆ ಬಂದು ಸತ್ತವರು ಮೂರು ಜನ. ಅಷ್ಟೇ ಎಂದು ಪ್ರಜೆಗಳು ಸಂತೋಷಭರಿತರಾಗಿದ್ದರು. ಆದರೆ ಕಳೆದ ವಾರ ಅಮಲ್ದಾರ್ರ ಮನೆಯಲ್ಲಿ ಇಲಿ ಸತ್ತದ್ದು ಅಮಲ್ದಾರ್ರು ಮೂರು ಮೈಲಿ ದೂರದಲ್ಲಿ ವಾಸಮಾಡುತ್ತಾ ಇರುವದನ್ನು ನೋಡಿದರೆ ಜನಗಳ ಮನಸ್ಸು ಕಳವಳಗೊಂಡಿದೆ. ಈ ಊರಿಗೆ ಸುತ್ತುಮುತ್ತು ಇರುವ ಹಳ್ಳಿಯವರು ತುಂಬಾ ಗಾಬರಿಪಡುತ್ತಾರೆ. ಪ್ರತಿ ಗುರುವಾರ ಕೂಡುವ ಸಂತೆಗೇನಾದರೂ ವಿಘ್ನ ಬಂದೀತೇನೋ ಎಂಬ ಭಯವು ಅನೇಕರನ್ನು ಹಿಡಿದಿದೆ.—ಈ ಟವುನಿನ ಕೆಲವು ಭಾಗಗಳಲ್ಲಿ ಅಂದರೆ ಮುಖ್ಯವಾಗಿ ಮುಸಲ್ಮಾನರು ವಾಸಮಾಡುವ ಕೆಲವು ಗಲ್ಲಿಗಳಲ್ಲಿ ಕಸರ ಹಾಕುವದಕ್ಕೆ ತೊಟ್ಟಿಗಳನ್ನು ಇಡುವದು ಅವಶ್ಯ. ದೂರದಲ್ಲಿಟ್ಟಿರುವ ತೊಟ್ಟಿಗಳಲ್ಲಿ ಕಸರ ಹಾಕುವದಕ್ಕೆ ಘೋಷಾ ಹೆಂಗಸರು ಬರುವದಕ್ಕಾಗುವದಿಲ್ಲವಾದ್ದರಿಂದ ತಮ್ಮ ಮನೆಯ ಹಿತ್ತಲು ಗೋಡೆ ಮೇಲಿಂದ ಹೊರಗೆಸೆ ಬಿಡುತ್ತಾರೆ. ಇದು ಕೆಲವು ಸಮಯಗಳಲ್ಲಿ ಆ ಮಾರ್ಗವಾಗಿ ಹೋಗುತ್ತಿರುವವರ ತಲೆಯಮೇಲೆ ಬೀಳುತ್ತದೆ. ಇದು ಮಾತ್ರವಲ್ಲದೆ ಇನ್ನೂ ಕೆಲವು ಗಲ್ಲಿಗಳು ಮ್ಯುನಿಸಿಪಲ್ ದೀಪಗಳನ್ನು ನಿರೀಕ್ಷಿಸುತ್ತಿವೆ. ರಾತ್ರಿ ಕಾಲಗಳಲ್ಲಿ ಪೋಲೀಸಿನವರು ಕೂಡ ಅಂಥಾ ಗಲ್ಲಿಗಳಿಗೆ ಹೋಗುವದಕ್ಕೆ ಹೆದರಬಹುದು.—ಈ ಊರಿಗೆ ನಾಲ್ಕು ಮೈಲಿ ದೂರದಲ್ಲಿರುವ ಕಷ್ಟ ಮಳಲವಾಡಿ ಎಂಬ ಗ್ರಾಮದಲ್ಲಿ ಕೆಲವು ಬ್ರಾಹ್ಮಣರು ಸೇರಿ, ಒಂದು ಸಂಘವನ್ನು ಮಾಡಿಕೊಂಡು, ನಿರ್ದೋಷಿಗಳಲ್ಲಾ ದಂಪರೂಪವಾಗಿ ಹಣವನ್ನು ವಸೂಲ್ಮಾಡುವದಾಗಿಯೂ, ಇದೇ ಗ್ರಾಮದಲ್ಲಿರುವ ಕೃಷ್ಣ, ಸುಬ್ರಹ್ಮಣ್ಯ ಹೋಯಿಸ ಮುಂತಾದವರಲ್ಲಿ ಇಸಂ ಒಂದಕ್ಕೆ ನಾಲ್ಕರೂಪಾಯಿ ವಸೂಲ್ಮಾಡಿರುವದಾಗಿಯೂ ವರ್ತಮಾನ ಕೇಳುತ್ತೇನೆ. ಈ ರೀತಿಯಾಗಿ ವಸೂಲ್ಮಾಡಿದರೆ ಮುಂದಕ್ಕೆ ಇದರಿಂದಲೇ ಮನಸ್ತಾಪ ಉಂಟಾಗಿ, ಇವರ ಸಂಘಕ್ಕೆ ತುಂಬಾ ಅವಮಾನವೂ, ಹಾನಿಯೂ ಉಂಟಾಗುತ್ತದೆಂಬುವದರಲ್ಲಿ ಯಾವ ಸಂದೇಹವೂ ಇರಲಾರದು.—ಈ ಟವುನ್ ಮಧ್ಯೆ ಅಮೃತಮಹಲ್ ಇಲಾಖೆಯವರಿಗೆ ಸೇರಿದ ಒಂದು ಜಮೀನ್ ಇರುತ್ತದೆ. ಈ ಜಮೀನ್ ಸುತ್ತಲೂ ಬೇಲಿ ಹಾಕಿಸಿರುತ್ತಾರೆ. ಈ ಬೇಲಿಗಳು ವಿಪರೀತವಾಗಿ ಬೆಳೆದು, ವಿಷಜಂತುಗಳಿಗೆ ಆಶ್ರಯವಾಗಿರುತ್ತದೆ. ರಾತ್ರಿ ಕಾಲ ಹಾವುಗಳು ರಸ್ತೆಯಲ್ಲೇ ಸಿಕ್ಕುವವು. ಈ ವಿಷಯದಲ್ಲಿ ಜನರು ಅರ್ಜಿ ಬರೆದುಕೊಂಡಾಗ್ಯೂ ಯಾವ ಉತ್ತರವೂ ದೊರೆಯಲಿಲ್ಲವೆಂದು ಹೇಳುತ್ತಾರೆ. ಅಧಿಕಾರಿಗಳು ನಿಗಾ ಕೊಟ್ಟು, ಅಮೃತಮಹಲ್ ಇಲಾಖಾ ಅಧಿಕಾರಿಗೆ ತಿಳಿಸಿ, ಈ ಬೇಲಿಯನ್ನು ತೆಗೆಸಿ ಸುತ್ತಲೂ ಗೋಡೆ ಹಾಕಿಕೊಳ್ಳುವ ಏರ್ಪಾಡು ಮಾಡಿದರೆ ವಿಷಜಂತುಗಳ ಕಾಟ ಸ್ವಲ್ಪಮಟ್ಟಿಗೆ ಕಡಿಮೆಯಾದೀತೆಂದು ಜನರು ನಿರೀಕ್ಷಿಸುತ್ತಾರೆ.—ಈ ಊರಿನ ಮಸೀದಿ ಬಳಿಯಲ್ಲಿ ಒಂದು ಭಾವಿ ಇದೆ. ಈ ಭಾವಿಯನ್ನು ಒಬ್ಬ ಹೆಂಗಸು ತನ್ನ ಹಣದಿಂದ ಧರ್ಮಾರ್ಥವಾಗಿ ಎಲ್ಲಾ ಜನರ ಉಪಯೋಗಕ್ಕಾಗಿ ಕಟ್ಟಿಸಿ ಮೃತಪಟ್ಟಳು. ಈಗ ಈ ಭಾವಿಯಲ್ಲಿ ಕ್ರೈಸ್ತರು ನೀರು ಸೇದಬಾರದೆಂದು ಕಂದಸ್ವಾಮಿ ಎಂಬವನು ತಡೆಮಾಡುತ್ತಾನೆ. ಇದರಲ್ಲಿ ಮುಸಲ್ಮಾನರು ಸೇದುವಾಗ್ಯೆ ಕ್ರೈಸ್ತರು ನೀರು ಸೇದುವದಕ್ಕೆ ಅಡ್ಡಿ ಏನಿದೆ?

## ವಿದೇಶ ವರ್ತಮಾನಗಳು.

ರಷ್ಯಾ ರಾಜ್ಯಕ್ಕೆ ಸೇರಿದ ಟ್ರಾನ್ಸ್ ಕಕೇಷಿಯಾ ಎಂಬಲ್ಲಿ ರಷ್ಯಾ ಸರ್ಕಾರದವರು ಎರಿವಾನಿಂದ ಜುಲ್ಫಾ ಎಂಬ ಊರಿನ ತನಕ ೯೭ ಮೈಲಿ ದೂರ ರೈಲ್ ರಸ್ತೆ ಹಾಕಬೇಕೆಂದು ತೀರ್ಮಾನ ಮಾಡಿ, ಕಾಮಗಾರಿ ಪ್ರಾರಂಭಿಸಿರುತ್ತಾರೆ.

ಟ್ರಾನ್ಸ್‌ವಾಲ್ ಯುದ್ಧದಲ್ಲಿ ಬೋಯರ್ ದಳಪತಿಯಾಗಿದ್ದ ಕ್ರಿಚ್ಚಿಯರ್ ದಿವೆಟ್ ಎಂಬಾತನು ಬಂದೂಕದ ಲೈಸೆನ್ಸ್ ಪಡೆಯಲಿಲ್ಲವೆಂದು ಅವನನ್ನು ದಫಯಾಫ್ತು ಮಾಡಿ, ಇಂಗ್ಲಿಷ್ ಮ್ಯಾಜಿಸ್ಟ್ರೇಟರು ಅವನ ಬಳಿ ಇದ್ದ ಬಂದೂಕನ್ನು ಕಿತ್ತುಕೊಂಡು ಕಳುಹಿಸಿದರು.

❖❖❖❖

ವಿಲಾಯತಿಗೆ ಸೇರಿದ ಬರ್ಮಿಂಗ್‌ಹಂ ಪಟ್ಟಣದಲ್ಲಿ ಶವಗಳನ್ನು ಸುಡುವದಕ್ಕೆ ಒಂದು ಕಟ್ಟಡವನ್ನು ಕಟ್ಟಿಸಬಹುದೆಂದು ಮೂವರು ಮಠಾಧಿಪತಿಗಳು ಸಮ್ಮತಿ ಕೊಟ್ಟಿದ್ದಾರೆ. ಇದರಿಂದ ಶವಗಳನ್ನು ಹೂಳುವುದು ಕಾಲಾನುಕಾಲದಲ್ಲಿ ತಪ್ಪುತ್ತಾ ಬರಬಹುದೆಂದು ಕಾಣುವದು.

❖❖❖❖

ರಷ್ಯಾ ರಾಜ್ಯದಲ್ಲಿ ಸ್ಮಾರ್ಲೆನ್ಸ್ಕ್ ನಗರದಿಂದ ೯೫ ಮೈಲಿ ದೂರದಲ್ಲಿರುವ ಮೊಹಲೇಫ್ ಪಟ್ಟಣದಲ್ಲಿ ಯಾವದೋ ಒಂದು ವಿಚಾರದಲ್ಲಿ ಜನರು ರಸ್ತೆಯಲ್ಲೇ ಜಗಳವಾಡಿದರು. ಈ ಜಗಳವು ಘೋರವಾಗಿ ಪರಿಣಮಿಸಿ ೪೦೦ ಜನರು ಮಡಿದು ಹೋದರೆಂದು ತಂತೀವರ್ತಮಾನ ಬಂದಿದೆ.

❖❖❖❖

ಸೋಮಲಿಲಾಂಡಿನಲ್ಲಿ ಇಂಗ್ಲಿಷರಿಗೆ ಪ್ರತಿಪಕ್ಷಿಯಾಗಿ ನಿಂತಿರುವ ಮುಲ್ಲಾನನ್ನು ಇಂಗ್ಲಿಷರು ಈ ತಿಂಗಳ ಅಂತ್ಯದೊಳಗೆ ಸೋಲಿಸಿ ಸೆರೆ ಹಿಡಿಯುವದಕ್ಕಾಗದಿದ್ದರೆ, ಇಂಗ್ಲಿಷ್ ಸೈನ್ಯವನ್ನು ಆ ಸೀಮೆಯಿಂದ ವಾಪಸು ಕರೆಸಬೇಕಾದೀತೆಂತಲೂ, ಅಲ್ಲಿನ ಹವಾ ಅನಾರೋಗ್ಯವಾಗುವುದೆಂತಲೂ ಆಸ್ಟ್ರೇಲಿಯದವರು ಹೇಳುತ್ತಾರೆ.

❖❖❖❖

ವಿಲಾಯತಿ ರಾಜ್ಯಕ್ಕೆ ಸೇರಿದ ಮಿಡ್‌ಹರ್ಸ್ಟ್ ಎಂಬ ಸ್ಥಳದಲ್ಲಿ ಕ್ಷಯರೋಗ ಪೀಡಿತರಿಗೆ ಚಿಕಿತ್ಸೆ ಮಾಡುವುದಕ್ಕಾಗಿ ಒಂದು ಆಸ್ಪತ್ರೆಯನ್ನು ಕಟ್ಟುವರು. ಈ ಕಟ್ಟಡಕ್ಕೆ ಮೊನ್ನೆ ಮಂಗಳವಾರದ ದಿನ ಚಕ್ರವರ್ತಿಯವರು ಅಸ್ತಿಭಾರವನ್ನು ಹಾಕಿ, ಕಾಮಗಾರಿ ಪ್ರಾರಂಭಿಸುವಂತೆ ಅಜ್ಞೆ ಮಾಡಿದರೆಂದು ಸಮಾಚಾರ ಬಂದಿದೆ.

❖❖❖❖

ಆಸ್ಟ್ರೇಲಿಯಾದಲ್ಲಿ ಪ್ರತಿವರುಷವೂ ಹಿಂದಿನ ವರುಷಕ್ಕಿಂತ ಪ್ರಜೆಗಳಲ್ಲಿ ಜನನ ಸಂಖ್ಯೆಯು ಕಡಿಮೆಯಾಗುತ್ತಿದೆ. ಸರ್ಕಾರದವರು ಇದನ್ನು ನೋಡಿ ಪ್ರಜಾಸಂಖ್ಯೆಯನ್ನು ವೃದ್ಧಿಮಾಡಲು ಯಾವ ತರಹಾ ಕಾನೂನು ಮಾಡಿದರೆ ಆಗುತ್ತೆಂಬುದನ್ನು ತನಿಖೆಮಾಡಿ ಗೊತ್ತುಮಾಡಬೇಕೆಂದು ಕೆಲವು ಮಂದಿ ದೊಡ್ಡ ಮನುಷ್ಯರನ್ನು ಅದೇ ಕೆಲಸಕ್ಕಾಗಿ ನೇಮಕಮಾಡಿರುತ್ತಾರೆ.

❖❖❖❖

ರಷ್ಯಾ ಜಪಾನ್ ರಾಜ್ಯಗಳವರು ಬಹಳ ಆತುರವಾಗಿ ಯುದ್ಧ ಸಾಮಗ್ರಿಗಳನ್ನು ಒದಗಿಸಿಕೊಳ್ಳುತ್ತಿದ್ದಾರೆ. ಹಡಗುಗಳಿಗೆ ಕಲ್ಲಿದ್ದಲನ್ನೂ, ತೋಟಾ ತಯಾರಿಗೆ ಸೀಸವನ್ನೂ ಎರಡು ರಾಜ್ಯಗಳವರೂ ವಿಪರೀತವಾಗಿ ಕೊಂಡು ತರಿಸಿಕೊಳ್ಳುತ್ತಿರುವರು. ಜಪಾನ್‌ನವರು ಟೋಗೋ ಎಂಬಾತನನ್ನು ತಮ್ಮ ನಾವೆಗೆ ಅಧಿಪತಿಯನ್ನಾಗಿ ನೇಮಿಸಿಕೊಂಡರು. ಇವನು ಬಹಳ ಸಮರ್ಥನೆಂತಲೂ, ಬಹು ಬಂಧಿತಗಾನೆಂತಲೂ ತಿಳಿದುಬಂದಿದೆ.

❖❖❖❖

ಫ್ರಾನ್ಸ್ ರಾಜ್ಯದ ರಾಜಧಾನಿಯಾದ ಪ್ಯಾರಿಸ್ ನಗರದ ನಿವಾಸಿಗಳು ೧೯೦೨ ನೆ ಇಸವಿಯಲ್ಲಿ ಒಟ್ಟು ೫೯,೯೩,೧೫೭ ಪ್ರಾಣಿಗಳನ್ನು ಕೊಂದು ಅವುಗಳ ಮಾಂಸವನ್ನು ಆಹಾರಕ್ಕಾಗಿ ಉಪಯೋಗಿಸಿಕೊಂಡಿದ್ದಾರೆ. ಈ ಪೈಕಿ ೧೯,೯೬,೧೦೭ ಪ್ರಾಣಿಗಳು ಕುರಿಗಳೆಂತಲೂ, ೩,೧೭,೭೧೭ ಹಸುಗಳೆಂತಲೂ ತಿಳಿವುದು. ಆದರೆ ಉಳಿದ ೬,೭೯,೩೩೩ ಪ್ರಾಣಿಗಳು ಯಾವ ಯಾವ ಜಾತಿಯವೋ ಎಂಬುವದನ್ನು ತಿಳಿಕೊಳ್ಳಲು ಅನೇಕರು ಆಶಿಸುತ್ತಾರೆ.

❖❖❖❖

ಡ್ಯೂಕ್ ಆಫ್ ವೆಸ್ಟ್ ಮಿನ್‌ಸ್ಟರ್ ಯವರು ದಕ್ಷಿಣ ಆಫ್ರಿಕಕ್ಕೆ ಸೇರಿದ ಕೇಪ್ ಕಾಲನಿಯಲ್ಲಿ ೧,೬೦,೦೦೦ ಎಕರೆ ಜಮೀನನ್ನು ಕೊಂಡುಕೊಂಡಿದ್ದಾರೆ. ಚಷೈರೆಂಬ ಡಿಸ್ಟ್ರಿಕ್ಟಿನಿಂದ ಯುದ್ಧಭಟರಾಗಿ ಹೋಗಿದ್ದ ಜನರನ್ನು ಸಂಸಾರ ಸಹಿತ ಅಲ್ಲಿಗೆ ಕರೆದುಕೊಂಡು ಹೋಗಿ ನಿಲ್ಲಿಸಿ, ಅವರಿಗೆಲ್ಲಾ ಆ ಜಮೀನನ್ನು ಹಂಚಿಕೊಟ್ಟು, ಧಾನ್ಯ ಮೊದಲಾದ ಫಸಲು ಮಾಡಿಸಬೇಕೆಂದು ಡ್ಯೂಕರು ಗೊತ್ತುಮಾಡಿದ್ದಾರೆ. ಈಗ ಆ ಜಮೀನ್ ಸ್ಥಿತಿಗತಿಯನ್ನು ನೋಡಿಕೊಂಡು ಬರುವುದಕ್ಕಾಗಿ ಡ್ಯೂಕರು ದಕ್ಷಿಣ ಆಫ್ರಿಕಕ್ಕೆ ಪ್ರಯಾಣ ಮಾಡಿರುತ್ತಾರೆ.

❖❖❖❖

ಬ್ರೆಜಿಲ್ ಸರ್ಕಾರದವರು ರಿಯೋಡಿಜನಿರೋ ಎಂಬ ನಗರದಲ್ಲಿ ೧೯೦೪ ನೆ ಇಸವಿ ಮೇ ತಿಂಗಳಿಂದ ಡಿಸೆಂಬರ್ ವರೆಗೆ ಅಂತರಿಕ್ಷದಲ್ಲಿ ಸಂಚರಿಸುವ ಆಕಾಶ ಬುಟ್ಟಿಗಳ ಜೂಜು ಬಿಡಿಸುತ್ತಾರೆ. ಇದರಲ್ಲಿ ಯಾರ ಬುಟ್ಟಿಯು ಸರ್ವಸಮರ್ಪಕವಾಗಿ ಅಂತರಿಕ್ಷದಲ್ಲಿ ಸಂಚಾರ ಮಾಡುವದೋ ಅವರಿಗೆ ಆ ಸರ್ಕಾರದವರು ಮೂರು ಲಕ್ಷ ರೂಪಾಯಿ ಇನಾಂ ಕೊಡುವವರಾಗಿದ್ದಾರೆ. ಪ್ರಸಿದ್ಧನಾದ ಎಂ. ಸಾಂಟಸ್ ಡ್ಯೂಮೋ ಎಂಬಾತನು ತನ್ನ ವಿದ್ಯಾ ಕೌಶಲತೆಯನ್ನು ಈ ಜೂಜಿನಲ್ಲಿ ಪ್ರಕಾಶಪಡಿಸಿ, ಬಹುಮಾನ ಪಡೆವನೆಂದು ಬಹು ಮಂದಿ ನಿರೀಕ್ಷಿಸುತ್ತಾರೆ.

❖❖❖❖

ಅಮೇರಿಕಕ್ಕೆ ಸೇರಿದ ಫಿಲಡೆಲ್ಫಿಯಾ ಡಿಸ್ಟ್ರಿಕ್ಟಿನಲ್ಲಿ ವೆಂಟ್ಸ್ ಎಂಬೊಬ್ಬ ಕೋಟ್ಯಾಧೀಶ್ವರನು ವರ್ಜಿನಿಯಾ ಪ್ರಾಂತ್ಯದ ಬೆಟ್ಟ ಪ್ರಾಂತ್ಯಕ್ಕೆ ಹೋಗಿದ್ದನು. ಅವನ ಪೂರ್ವೋತ್ತರ ಗೊತ್ತಾಗಲಿಲ್ಲ. ಅವನನ್ನು ಯಾರೋ ಎತ್ತಿಕೊಂಡು ಹೋಗಿಬಿಟ್ಟರೆಂತಲೂ, ಈಗ ದ್ರವ್ಯ ಕೊಟ್ಟರೆ ಬಿಡುತ್ತೇವೆಂತಲೂ ಹೇಳುವಂತೆಯೂ, ಆತನನ್ನು ಹುಡುಕುವುದಕ್ಕೆ ಸಾವಿರಾರು ಜನರು ನಾನಾ ಕಡೆಗಳಿಗೆ ಹೋಗಿರುವಂತೆಯೂ ತಿಳಿದುಬಂದಿದೆ. ಆ ಪ್ರಾಂತ್ಯ ಕೆಲವರು ಸೇರಿಕೊಂಡು ಐಶ್ವರ್ಯವಂತರನ್ನು ಹಿಡಿದು ಅವರ ಐಶ್ವರ್ಯವನ್ನು ಹಾಳುಮಾಡಬೇಕೆಂದು ಪ್ರಯತ್ನಪಡುತ್ತಿದ್ದಾರೆ.

ಇಟಲಿ ರಾಜ್ಯದ ದೊರೆಯವರು ಪತ್ನಿಸಹಿತ ಕಳೆದವಾರ ಫ್ರಾನ್ಸ್ ರಾಜ್ಯದ ರಾಜಧಾನಿಯಾದ ಪ್ಯಾರಿಸ್ ನಗರಕ್ಕೆ ದಯ ಮಾಡಿದರು. ಅಲ್ಲಿ ಪುರವನ್ನೆಲ್ಲಾ ನೇತ್ರಾನಂದಕರವಾಗಿ ಶೃಂಗಾರ ಮಾಡಿಸಿ, ವಿಶೇಷ ಆದರದಿಂದಲೂ, ಸಗೌರವವಾಗಿಯೂ ಪ್ರೆಸಿಡೆಂ ಟರೂ ಅವರ ಪತ್ನಿಯವರೂ ರೈಲ್ವೆ ಸ್ಟೇಷನ್ನಲ್ಲಿ ದೊರೆಯವರ ನ್ನು ಎದುರುಗೊಂಡು, ಪುರವೀಧಿಗಳಲ್ಲಿ ಪ್ರಜೆಗಳು ಜಯ ಘೋಷ ಮಾಡುತ್ತಿರುವಲ್ಲಿ, ಮೆರವಣಿಗೆಯಾಗಿ ಅರಮನೆಗೆ ಕರೆದುಕೊಂಡು ಹೋದರು. ಅತ್ತಲಾಗಿ ಇಟಲಿಯ ಮುಖ್ಯ ಪಟ್ಟಣವಾದ ರೋಂ ನಗರದೊಳಗೆ ಫ್ರಾನ್ಸಿನಲ್ಲಿ ತಮ್ಮ ದೊರೆಗೆ ನಡೆದ ಸಂತೋಷಪೂ ರ್ವಕವಾದ ಸನ್ಮಾನಗಳನ್ನು ಕೇಳಿ ಪ್ರಜೆಗಳೆಲ್ಲಾ ಆನಂದಪಟ್ಟು, ಇಟಲಿಗೂ ಫ್ರಾನ್ಸಿಗೂ ಅವಿಚ್ಛಿನ್ನವಾದ ಸ್ನೇಹವಿರುವುದೆಂದು ನಾನಾ ಉತ್ಸವಗಳನ್ನು ಮಾಡಿದರು. ದೊರೆಯವರೂ ರಾಣಿಯವ ಪ್ಯಾರಿಸ್ಸಿನಲ್ಲಿ ಮೂರು ದಿನಗಳಿದ್ದು ವಾಪಸು ಇಟಲಿಗೆ ದಯಮಾ ಡಿದರು.

****

ಫ್ರಾನ್ಸಿನಲ್ಲಿ ಕೆಲವು ಮಂದಿ ಶಾಸ್ತ್ರಜ್ಞರು ಸೇರಿ ಒಂದು ಸಂಘವನ್ನು ಮಾಡಿಕೊಂಡಿದ್ದಾರೆ. ಆಕಾಶ ಮಾರ್ಗದಲ್ಲಿ ಸಂಚರಿ ಸುವಂಥಾ ಯಂತ್ರಗಳನ್ನು ಮಾಡುವುದೇ ಈ ಸಂಘದವರ ಉದ್ದೇಶ. ಈ ಸಂಘದ ಪೈಕಿ ಮೂರು ಮಂದಿ ಒಂದು ದೊಡ್ಡ ಆಕಾಶಬುಟ್ಟಿ ಯನ್ನು ಕಟ್ಟಿ ಅದರೊಳಗೆ ಕುಳಿತುಕೊಂಡು, ಫ್ರಾನ್ಸಿನಲ್ಲಿರುವ ಸೇಂಟ್ ಕ್ಲೌಡ್ ಎಂಬ ಪಟ್ಟಣದಿಂದ ಹೊರಟು ಅಂತರಿಕ್ಷದಲ್ಲೇ ಸಂಚಾರ ಮಾಡುತ್ತಾ ೩೬೦ ಮೈಲ್ ದೂರದಲ್ಲಿರುವ ವಿಲಾಯತಿಗೆ ಸೇರಿದ ಹಲ್ ಎಂಬ ನಗರದ ಸಮೀಪಕ್ಕೆ ೧೩ ಗಂಟೆ ಹೊತ್ತಿನಲ್ಲಿ ಹೋಗಿ ಸೇರಿದರು. ಅಲ್ಲಿ ತಮ್ಮ ಆಕಾಶಬುಟ್ಟಿಯಿಂದ ಭೂಮಿಗೆ ಇಳಿದು ಬಂದು, ಒಬ್ಬ ರೈತನು ಮಾಡಿದ ಆತಿಥ್ಯವನ್ನು ಸ್ವೀಕರಿಸಿ, ಮರುದಿನ ರೈಲ್ ಹತ್ತಿ ಲಂಡನ್ ನಗರಕ್ಕೂ ಅಲ್ಲಿಂದ ಜಹಜಿನ ಮೇಲೆ ಫ್ರಾನ್ಸಿಗೂ ವಾಪಸು ಬಂದರು. ಫ್ರಾನ್ಸಿನಿಂದ ವಿಲಾಯತಿಗೆ ಇದುವರೆಗೆ ಅಂತರಿಕ್ಷಮಾರ್ಗವಲ್ಲಿ ಯಾರೂ ಬಂದಿದ್ದಿಲ್ಲ. ಇದೇ ಮೊದಲು. ಕಳೆದ ೧೮೮೫ನೆ ಇಸವಿಯಲ್ಲಿ ಕೆಲವರು ಈ ಪ್ರಯತ್ನ ಮಾಡಿದರು; ಸಫಲವಾಗದೆ ಹೋಯಿತು. ಈಗ ಸಂಚಾರಮಾಡಿದ ಆಕಾಶಬುಟ್ಟಿಯು ಭೂಮಿಯ ಮೇಲೆ ೨,೦೦೦ ಗಜಗಳ ದೂರ ಅಂತರಿಕ್ಷದಲ್ಲಿ ಪ್ರಯಾಣಮಾಡಿತು. ಇದು ಪರೀಕ್ಷಾರ್ಥವಾಗಿ ಮಾಡಿದ ಪ್ರಯತ್ನವೇ ಹೇಳುವರು.

ಜ್ವ ರ ಹ ರಿ. 1

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಬೀಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಬೀಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ— ಎಂದು ಬರೆದಿದ್ದಾರೆ.

ಕ್ರಯ :—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ಕ್ರ. ೨—೧೨ ಆ. ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

*********

ಓ ಮಂ ಕ ರ್ಪೂ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು— ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, 'ಕೂಡಲೇ ಗುಣಕೊಡುವದು. ಇದು ಸೆಂಗಪುರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಚಾಜೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ :—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಮಹಾರಾಜರವರ ಪ್ರೋಟೋಗಳು.

ಇವು ವಿಲಾಯತಿಯಿಂದ ಬಂದಿವೆ. ಮುಗಿದುಹೋದಾವು! ಜಾಗ್ರತೆ ನೋಡಿ! ಬಹಳ ಸೊಗಸಾಗಿವೆ. ದೊಡ್ಡ ಸೈಜಿನವು, ಕೆಲಸಕ್ಕೆ ವುಗಳಲ್ಲ. ಕ್ರಯ ಎರಡೇ ಆಣೆ. ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ಚಿತ್ರಗಳು; ಸುಂದರವಾದ ಬಣ್ಣಗಳುಳ್ಳದ್ದು. ಕ್ರಯ ದೊಡ್ಡ ಸೈಜಿನವು ೮ ಆಣೆ, ಸಣ್ಣ ಸೈಜಿನವು ೨ ಆಣೆ.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ನಿಮ್ಮ ತಲೆಯಮೇಲಿರುವದೇನು?
ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ
ಬರೆದು ತರಿಸಿಕೊಳ್ಳಿ.

9

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳೇ.

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿ ಆಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ 'ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇಬಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ.

ಹೋಮೋಸಿಯಾ.

ಬಣ್ಣ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಮತ್ತೊಂದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ದಾಕರ್ಗವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಎಳೆಯುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗೆಡ್ಡೆಗಳು, ಪಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ಪಟ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

*********

ಹೋಮೋಸಿಯಾ ಪುಂಜಾಲೇಪನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇವಿಸಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಪುಸ್ತಕಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೨೭ ಸೆಕೆಂಡು ಬೀಚ್ ಲೈನ್, ಮದರಾಸ್.

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

16—10—1903 ರಿಂದ 23—10—1903 ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು | |
|---|---|---|---|---|
| ಬೆಂಗಳೂರು ಪಟ್ಟಣ | 72 | 59 | 49 | 2[illegible] |
| ಮೈಸೂರು ,, | 975 | 232 | 198 | 287 |
| ಬೆಂಗಳೂರು ಡಿಸ್ಟ್ರಿಕ್ಟ್ | 218 | 178 | 234 | 18[illegible] |
| ಮೈಸೂರು ,, | 116 | 89 | 67 | 46 |
| ಕೋಲಾರ್ ,, | 76 | 58 | 80 | 57 |
| ಕೋಲಾರ್ ಚಿನ್ನದ ಗಣಿಗಳು | 10 | 9 | 2 | 1 |
| ತುಮಕೂರು ಡಿಸ್ಟ್ರಿಕ್ಟ್ | 94 | 53 | 55 | 31 |
| ಹಾಸನ ,, | 33 | 18 | 29 | 22 |
| ಚಿತ್ರದುರ್ಗ ,, | 109 | 73 | 65 | 45 |
| ಕಡೂರ್ ,, | 24 | 11 | 9 | 8 |
| ಶಿವಮೊಗ್ಗ ,, | 111 | 57 | 68 | 40 |
| ಜುಮ್ಲಾ | 1198 | 840 | 930 | 662 |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸ ಕಾರ್ತೀಕ ಶುದ್ಧ ಪೌರ್ಣಮಿ ಗುರುವಾರದಿಂದ ಕಾರ್ತೀಕ ಬಹುಳ ಸಪ್ತಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ನೊವೆಂಬರ್.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ತುಲಾ ಮಾಸ ತೇದಿ. |
|---|---|---|---|---|---|---|
| 5 | ಗುರು * | ಪೌರ್ಣ | 9 18 | ಭ | 41 58 | 20 |
| 6 | ಶುಕ್ರ | ಪ್ರಾಡ್ಯಮಿ | 8-30 | ಕೃ | 45-22 | 21 |
| 7 | ಶನಿವಾರ | ಬಿದಿಗೆ | 5 18 | ರೋ | 13 18 | 22 |
| 8 | ರವಿವಾ | ತದಿಗೆ | 2 12 | ಮೃಗಶಿ | 55 23 | 23 |
| 9 | ಸೋಮ † | ಪಂಚಮಿ | 52 10 | ಆ | 36 55 | 24 |
| 10 | ಮಂಗಳ ‡ | ಷಷ್ಠಿ | 47 2 | ಪುನ | 33 13 | 25 |
| 11 | ಬುಧ | ಸಪ್ತಮಿ | 40 50 | ಪುಷ್ಯ | 29 16 | 26 |

* ದಕ್ಷಸಾವರ್ಣಿಕಮನ್ವಾದಿ, ವ್ಯಾಸಪೂರ್ಣಿಮಾ, ಧಾತ್ರೀಪೂಜಾ
† ಕಾರ್ತಿಕಸೋಮವಾರ. ‡ ಮಹಾವ್ಯತಿ.

## ಪೇಟೆ ಧಾರಣೆ.

| ದಿನಸಿ. | ಮೈಸೂರು. | ಬೆಂಗಳೂರು |
|---|---|---|
| ಸಣ್ಣ ಅಕ್ಕಿ ಪಲ್ಲ ೧ಕ್ಕೆ | ರೂ. ೧೦-೦-೦ | ೧೦-೦-೦ |
| ಕೆಂಬೂತಿ ಅಕ್ಕಿ ಅವಲ್ .. | .. ೧೦-೧೨-೦ | ೧೦-೦-೦ |
| ,, ದುಯಂ | .. ೧೦-೩-೦ | ೯-೮-೦ |
| ಜಾಡಾಳಿ ಅಕ್ಕಿ .. | .. ೯-೧೦-೦ | ೧೨-೮-೦ |
| ಸಣ್ಣಕ್ಕಿ ಅವಲ್ .. | .. ೧೨-೮-೦ | ೧೨-೮-೦ |
| ,, ದುಯಂ .. | .. ೧೨-೦-೦ | ೧೧-೦-೦ |
| ತೊಗರೀ ಬೇಳೆ ಪಲ್ಲ ೧ಕ್ಕೆ | .. ೧೩-೧೨-೦ | ೧೪-೦-೦ |
| ,, ದುಯಂ .. | .. ೧೩-೮-೦ | ೧೩-೦-೦ |
| ಪೈರ ರಾಗಿ ಪಲ್ಲ ೧ಕ್ಕೆ .. | .. ೩-೧೨-೦ | ೨-೮-೦ |
| ಕಾರ್ರಾಗಿ .. .. | .. ೩-೮-೦ | ೨-೫-೩ |
| ಜೋಳ .. .. | .. ೨-೭-೦ | ೪-೦-೦ |
| ಹಲಸಂದೆ ಪಲ್ಲ ೧ಕ್ಕೆ .. | .. ೬-೪-೦ | ೮-೦-೦ |
| ಬಿಳೀ ಅವರೆ .. | .. ೮-೧೨-೦ | ೭-೦-೦ |
| ಹೆಸರು .. .. | .. ೯-೮-೦ | ೭-೮-೦ |
| ಉದ್ದು .. .. | .. ೮-೧೨-೦ | ೮-೦-೦ |
| ಕಡಲೆ .. .. | .. ೧೦-೦-೦ | ೮-೮-೦ |
| ಎಳ್ಳು .. .. | .. ೧೨-೦-೦ | ೯-೧೩-೯ |
| ಹುರುಳಿ .. .. | .. ೩-೮-೦ | ೪-೨-೦ |
| ಹರಳು ೧೨೭ ಸೇರಿಗೆ .. | .. ೯-೮-೦ | ೬-೦-೦ |
| ಸೀಗೇಕಾಯಿ ಮಣ ೧ಕ್ಕೆ | .. ೧-೮-೦ | ೧-೮-೦ |
| ಮೆಣಸಿನಕಾಯಿ .. | .. ೩-೦-೦ | ೨-೮-೦ |
| ,, ದುಯಂ .. | .. ೩-೦-೦ | ೨-೦-೦ |
| ಬೆಲ್ಲ ದೊಡ್ಡ ಅಚ್ಚು .. | .. ೬-೮-೦ | ಮು ೧-೮-೦ |
| ಒಳ್ಳೆಣ್ಣೆ ಮಣ ೧ಕ್ಕೆ .. | .. ೩-೧೪-೦ | ೪-೦-೦ |
| ಹರಳೆಣ್ಣೆ ,, .. | .. ೩-೧೨-೦ | ೨-೦-೦ |
| ಕೊತ್ತಂಬರಿ ಪಲ್ಲ ೧ಕ್ಕೆ .. | .. ೬-೦-೦ | ೬-೮-೦ |
| ಉಪ್ಪು ,, .. | .. ೧೦-೦-೦ | ೯-೦-೦ |
| ಹುಣಸೇ ಹಣ್ಣು .. | .. ೦-೧೪-೦ | ೧-೦-೦ |
| ,, ಹಳೇದು .. | .. ೦-೧೦-೦ | ೦-೧೪-೦ |
| ತುಪ್ಪ .. .. | .. ೧೦ ೮-೦ | ೧೦-೦-೦ |
| ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ .. | .. ೪-೯-೦ | ೩-೮-೦ |
| ತೆಂಗಿನಕಾಯಿ ೧೦೦ಕ್ಕೆ .. | .. ೪-೪-೦ | ೩-೮-೦ |
| ಅಳಲೇಕಾಯಿ ಮಣ ೧ಕ್ಕೆ .. | .. ೦-೧೪-೦ | ೦-೧೦-೦ |
| ಅಂಟುವಾಳದಕಾಯಿ ಮಣ ೧ಕ್ಕೆ | .. ೦-೧೪-೦ | ೦-೮-೦ |
| ಚಿನ್ನ (ಪೌನ) ಕೆಂಪು | .. ೧೫-೪-೦ | ೧೫-೪-೦ |
| ,, ,, ಹಸಿರು | .. ೧೫-೮-೦ | ೧೫-೮-೦ |
| ,, ,, ಗಟ್ಟಿ ತೊಲ ೧ಕ್ಕೆ .. | ೨೬-೦-೦ | ೨೫-೬-೦ |
| ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ .. | ೩೨-೦-೦ | ೩೫-೦-೦ |

Printed and Published by the Rev E W Thomson, M.A. the Proprietor and Manager, Wesleyan Mission Press. Mysore. 5/11/1903.

# ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು —:o:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩. ಮೈಸೂರು—ಸನ್ ೧೯೦೩ ನೇ ಇಸವಿ ನೊವೆಂಬರ್ ತಾರೀಖು ೧೨ ನೇ ಗುರುವಾರ. ಸಂಚಿಕೆ ೨೪



ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತದ ಕನ್ನಡ ಟೀಕು.

5

ಆದಿಪರ್ವ ಎರಡನೇ ಭಾಗ ೩ ರೂ. ವಿರಾಟಪರ್ವ ೧ ರೂ. ಭೀಷ್ಮಪರ್ವ ೨ ರೂ. ದ್ರೋಣಪರ್ವ ಎರಡನೇ ಭಾಗ ೨—೮—೦ ಸ್ತ್ರೀಪರ್ವ ೬ ಆ. ಅನುಶಾಸನಿಕಪರ್ವ ೩—೧೨—೦ ರೂ.

ಶ್ರೀ ಚಾಮರಾಜೋಕ್ತಿ ವಿಲಾಸವೆಂಬ ಕನ್ನಡ ರಾಮಾಯಣ.

ಬಾಲಕಾಂಡ ೧ ರೂ. ಅಯೋಧ್ಯಾಕಾಂಡ ೨ ರೂ. ಅರಣ್ಯಕಾಂಡ ೧ ರೂ. ಕಿಷ್ಕಿಂಧಾಕಾಂಡ ೧ ರೂ. ಸುಂದರಕಾಂಡ ೧ರೂ. ಯುದ್ಧಕಾಂಡ ೨—೮—೦ ರೂ. ಉತ್ತರಕಾಂಡ ೧—೮—೦

ಶ್ರೀ ಕೃಷ್ಣರಾಜ ವಾಣೀ ವಿಲಾಸ ಶ್ರೀಮದ್ಭಾಗವತದ ಕನ್ನಡ ಟೀಕು.

ಪ್ರಥಮ ದ್ವಿತೀಯ ತೃತೀಯ ಸ್ಕಂಧಗಳು ೨ ರೂ. ಚತುರ್ಥ ಪಂಚಮ ಸ್ಕಂಧಗಳು ೧—೧೨—೦ ರೂ. ಷಷ್ಠ ಸಪ್ತಮ ಅಷ್ಟಮ ನವಮಸ್ಕಂಧಗಳು ೨—೮—೦ ರೂ. ದಶಮಸ್ಕಂಧ ೨—೮—೦ ರೂ. ಏಕಾದಶ ದ್ವಾದಶಸ್ಕಂಧಗಳು ೧—೧೨—೦ ರೂ.

ಇನ್ನುಳಿದಿರುವ ಪುಸ್ತಕಗಳ, ಹುಟ್ಟಿನ ಗಿಡಗಳ, ಹುವಿನ ಗಿಡಗಳ ಮತ್ತು ಬೀಜಗಳ ಕ್ಯಾಟಲಾಗನ್ನು ಅಪೇಕ್ಷಿಸಿದಲ್ಲಿ ಕಳುಹಿಸುತ್ತೇವೆ.

ಎಂ. ರುದ್ರಪ್ಪ ಅಂಡ್ ಸನ್,

ಲಾಲಬಾಗ್ ದೆಪೋ, ಬೆಂಗಳೂರು ಸಿಟಿ



## ಸ್ಟಾಂಡರ್ಡ್

## ಲೈಫ್ ಅಷ್ಯುರೆನ್ಸ್ ಕಂಪೆನಿ.

17

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಇಂಡಿಯಾ ದೇಶದಲ್ಲಿ ಲೈಫ್ ಇನಷ್ಯೂರೆನ್ಸ್ ಯಾನೆ ಜೀವ ವಿಮೆಯನ್ನು ಭೀಮಾ ಮಾಡಿಕೊಳ್ಳುವ ಕಂಪೆನಿಗಳಲ್ಲಿ ಇದು ಬಹು ಹಳೆಯದಾಗಿಯೂ ಹೆಚ್ಚಿನ ಬಂಡವಾಳವುಳ್ಳದ್ದಾಗಿಯೂ ಇದೆ.

ಭೀಮಾದಾರರಾಗತಕ್ಕವರು (ಲೈಫ್ ಎಷ್ಯೂರ್ಡ್ ಮಾಡತಕ್ಕವರು) ಈ ಕಂಪೆನಿಯ ಹಂಚಿನ ದರ, ಷರತ್ತುಗಳು ಮೊದಲಾದವುಗಳನ್ನು ಇತರ ಕಂಪೆನಿಯವುಗಳೊಡನೆ ಹೋಲಿಸಿನೋಡಿದರೆ ಇಲ್ಲಿ ಭೀಮಾ ಮಾಡುವವರಿಗೆ ಎಷ್ಟು ಸೌಕರ್ಯಗಳುಂಟೆಂಬುದು ಗೊತ್ತಾಗುವದು.

ಈ ಕಂಪೆನಿಯ ಭೀಮಾ ನಿಬಂಧನೆಗಳು ಬಹು ಅನುಕೂಲವಾಗಿವೆ. ಭೀಮಾದಾರರುಗಳಿಗೆ ತೊಂದರೆಯನ್ನುಂಟುಮಾಡುವ ನಿರ್ಬಂಧಗಳೇನೂ ಇಲ್ಲ.

ತೃಪ್ತವಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲೇ ಮೃತನಾದ ಪಕ್ಷದಲ್ಲಿ ಪುರಾತಂತರವಾಗಲಿ ೨,೦೦೦ ರೂಪಾಯಿಗಳನ್ನು ಕಂಪೆನಿಯವರು ಕೊಡುವ ಲಾಭಸಹಿತವಾಗಿ ಪಡೆಯಬೇಕಾದರೆ ಭೀಮಾದಾರನು ಕಂಪೆನಿಗೆ ಕೊಡಬೇಕಾದ ಚಂದಾ ದರಗಳ ಪ್ರತಿ ಕೆಲವನ್ನು ಇಲ್ಲಿ ನೋಡಿ.

| ಭೀಮೆಯಾಗುವ ವಯಸ್ಸು. | ೫೦ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಪಡೆಯಬೇಕಾದರೆ ವರ್ಷೆಯಾಗಿ ಕಂಪೆನಿಗೆ ಕೊಡುವದು | ೫೫ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಯನ್ನು ಪಡೆಯಬೇಕಾದರೆ ವರ್ಷೆಯಾಗಿ ಕಂಪೆನಿಗೆ ಕೊಡುವದು. |
|---|---|---|
| ೨೦ | ರೂ. ೬೧—೨—೮ | ರೂ. ೬—೦—೦ |
| ೨೫ | ,, ೭—೧೫—೪ | ,, ೬ ೧೪—೦ |
| ೩೦ | ,, ೯—೧೨—೮ | ,, ೮—೨—೦ |
| ೩೫ | ,, ೧೨—೧೪—೮ | ,, ೧೦—೧—೪ |
| ೪೦ | | ,, ೧೩—೪—೮ |

೨,೦೦೦ ರೂ. ಗಿಂತಲೂ ಹೆಚ್ಚಿನದ್ದಕ್ಕಾಗಲಿ ಕಡಮೆಯದ್ದಕ್ಕಾಗಲಿ ವಯಸ್ಸಿನಲ್ಲಿ ಹೆಚ್ಚು ಕಡಮೆ ಇದ್ದರಾಗಲಿ ಚಂದಾ ದರವೇನೆಂಬುದನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಇದುವರೆಗೆ ಪ್ರಾದಿಯಲ್ಲಿದ್ದ ಚಂದಾ ದರಗಳನ್ನು ಕಡಮೆ ಮಾಡಿದ್ದೇವೆ. ಇಲ್ಲಿ ಪ್ರಕಟಿಸಲ್ಪಟ್ಟ ಚಲಾವಣೆಯಾಗುವ ಹೊಸ ಚಂದಾ ಪಟ್ಟಿಯನ್ನೂ ಭೀಮಾ ದರಖಾಸ್ತು ಫಾರಂಗಳನ್ನೂ ಇದೇ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ. ಎಂ ಸೂರ್ಯನಾರಾಯಣಪ್ಪ,

ಕವಿಷನ್ ಮತ್ತು ಜನರಲ್ ಏಜೆಂಸಿ, ಶಿವಮೊಗ್ಗೆ.



## ಗೀತಸಂಗ್ರಹ ಚಿತ್ರಾವಳಿ.

11

೧ ರೂ. ೮ ಆ.; ವಿ. ಪಿ. ಚಾರ್ಜ್ ೩ ಆ.

ಜೆ. ನರಸುಂಡೈಯ್ಯ ಮತ್ತು ಕಂಪೆನಿ, ಮೈಸೂರು.



ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

9

೧೮೯೬ ನೆ ಇಸವಿ ಮೈಸೂರು ಕಂಪೆನಿ ಆಕ್ಟಿಗೆ ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ಶ್ರೀಮತ್ ಮೈಸೂರು ಮಹಾರಾಜರವರ ಗೌರ್ನಮೆಂಟಿನವರಿಂದ ಗ್ಯಾರಂಟಿ ಮಾಡಲ್ಪಟ್ಟ ಸದರಿ ಕಂಪೆನಿಯ ಷೇರು ಒಂದಕ್ಕೆ ೨೫ ರೂಪಾಯಿ ಪ್ರಕಾರ ೨೦,೦೦೦ ಷೇರುಗಳಿಂದ ಆಗುವ ೫,೦೦,೦೦೦ ರೂಪಾಯಿ ಬಂಡವಾಳ. ಷೇರುಗಳು ತೆಗೆದುಕೊಳ್ಳುವವರು ಅದರ ಸ್ಟಾಕ್ ಮಾಡಿರುವವರಿಂದ ವಿಶಿಷ್ಟ ತಪಸೀಲು ತಿಳಿದುಕೊಳ್ಳಬಹುದು. ಅಪ್ಲಿಕೇಷನ್‌ಗಳನ್ನು ಮತ್ತು ಮೊಬಲಗನ್ನೂ ಇವರಲ್ಲೇ ಕಳುಹಿಸಬಹುದು.

ಬಿ ಪಿ. ರಾಮಸ್ವಾಮಿ ಶೆಟ್ರು, ಬಿ. ಎ.,

ಅಡ್ವೊಕೇಟ್ ಮತ್ತು ಜನರಲ್ ಏಜೆಂಟ್,

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ,

ನಗರ್ತಪೇಟೆ, ಬೆಂಗಳೂರು.



## ROBINSON'S

## PATENT BARLEY.

## ರಾಬಿನ್‌ಸನ್‌ಯವರ

## ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ

ಈ ಹಿಟ್ಟಿನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಎವೆಗೋಧಿಯಿಂದ ಮಾಡಿದೆ. ಹಸ್ತಸ್ಪರ್ಶದಿಂದ ಆಗೆದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮುಂದ ಪಾರ ಸರ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾ ಇದ್ದಾರೆ. ಆದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ತಬ್ಬಿಯ ಮೇಲ್ಭಾಗದಲ್ಲಿ ಮೊಹರಿನಂತೆ ನೆಲ್ಸನನ್ನು ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.



ಇಗೋ! ಇನ್ನೊಂದು ಹೊಸ ಪುಸ್ತಕ! ಬೇಗ ನೋಡಿರಿ!!

### ಸ್ವಪ್ರಯತ್ನ ಫಲದೀಪಿಕೆ.

ಈ ಪುಸ್ತಕವು ಸ್ಮೈಲ್ಸ್ ಸೆಲ್ಫ್ ಹೆಲ್ಪ್ ಎಂಬ ಲೋಕಪ್ರಸಿದ್ಧವಾದ ಪುಸ್ತಕದ ಆಧಾರದ ಮೇಲೆ, ಕನ್ನಡಿಗರಿಗೆ ಅನುಕೂಲವಾಗಿ ಬರೆಯಲ್ಪಟ್ಟಿದೆ. ಈ ಪುಸ್ತಕವು ವಿಶೇಷವಾದ ಹೆಸರನ್ನೂ ಕೀರ್ತಿಯನ್ನೂ ಪಡೆದಿರುವದರಿಂದ ಲೋಕದ ಅನೇಕ ಭಾಷೆಗಳಲ್ಲಿ ತರ್ಜುಮೆ ಮಾಡಲ್ಪಟ್ಟಿದೆ. ಅನೇಕ ಜನಾಂಗದವರು ಈ ಪುಸ್ತಕವನ್ನೇ ಓದಿದ್ದರಿಂದಲೇ ನಾಗರೀಕರೆಂತಾದರು. ಈ ಪುಸ್ತಕವು ಧೈರ್ಯಗುಂದಿದವರಿಗೆ ಧೈರ್ಯವನ್ನು ಸಮರ್ಥರಿಗೆ ಮುತ್ತಷ್ಟು ಸಾಮರ್ಥ್ಯವನ್ನೂ ದಡ್ಡರಿಗೆ ವಿವೇಕವನ್ನೂ ಕೊಡುವದಾಗಿಯೂ ಪ್ರಸಿದ್ಧವಾಗಿದೆ. ಪುಸ್ತಕದ ಕ್ರಯ ನಾಲ್ಕಾಣೆ ಮಾತ್ರ. ವಿ. ಪಿ. ಪಿ. ಯಲ್ಲಿ ತರಿಸಿಕೊಂಡರೆ ಆರು ಆಣೆಗಳಾಗುವವು. ಬೇಗ ತರಿಸಿಕೊಳ್ಳಿ! ವಿಳಾಸ — ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ. ಮೈಸೂರು.



ಜನರಂಜಕವಾದ ಪುಸ್ತಕಗಳು! ಬೇಗ ಸೊಲ್ಲುವ ದರ!

ಮೈಸೂರು ಸರ್ಕಾರದ ವಿದ್ಯಾ ಇಲಾಖೆಯವರು ಈ ಪುಸ್ತಕಗಳ ಅಮೂಲ್ಯತ್ವವನ್ನು ತಿಳಿದು ನೂರೈವತ್ತು ರೂಪಾಯಿಗಳಿಗಿಂತ ಹೆಚ್ಚಾಗಿಯೇ ತರಿಸಿಕೊಂಡಿದ್ದಾರೆ.

ಪುರಾತನ ಗ್ರೀಕರ ಚರಿತ್ರೆ ಬಹು ರಸಿಕವಾಗಿದೆ. ಚಿತ್ರಗಳಿಂದ ಕೂಡಿದೆ ಕ್ರಯ ೦—೨—೦

ಪ್ರಾಚೀನ ಮೃಗಗಳ ವರ್ಣನೆ. ಚಿತ್ರಗಳಿಂದ ತುಂಬಿದೆ. ೦—೧—೦

ಖಗೋಳ ಶಾಸ್ತ್ರ ಸಿದ್ಧಾಂತ ಎಲ್ಲರೂ ಓದತಕ್ಕದ್ದು. ಅನೇಕ ಪಟಗಳಿವೆ ೦—೧—೦

ಪಕ್ಷಿಗಳ ವರ್ಣನೆ. ಸ್ಕೂಲ್ ಹುಡುಗರಿಗೆ ಇನಾಮಾಗಿ ಕೊಡುವದಕ್ಕೆ ಯೋಗ್ಯವಾಗಿದೆ. ಅನೇಕ ಪಕ್ಷಿಗಳ ಪಟಗಳೂ, ಅವುಗಳ ಚರಿತ್ರೆಗಳೂ ಇದರಲ್ಲಿ ಅಡಗಿರುವವು ೦—೧—೦

ಇಂಡಿಯಾ ಚಕ್ರವರ್ತಿನಿ ಏಳನೆಯ ಎಡ್ವರ್ಡ್ ಸಾರ್ವಭೌಮರ ಮತ್ತು ಚಕ್ರವರ್ತಿನಿಯರಾದ ಅಲೆಕ್ಸಾಂಡರಾ ಅಮ್ಮನವರ ಜೀವಮಾನಗಳ ಚರಿತ್ರೆ. ಇದರಲ್ಲಿ ಗ್ಲೇಜ್ ಕಾಗದದಮೇಲೆ ಹಾಕಿರುವ ಪಟಗಳು ಅನೇಕವಾಗಿವೆ. ಪ್ರತಿಯೊಬ್ಬರ ಮನೆಯಲ್ಲೂ ಇರತಕ್ಕ ಪುಸ್ತಕ. ಇಂಥಾ ಉತ್ಕೃಷ್ಟವಾದ ಪುಸ್ತಕಕ್ಕೆ ಬೆಲೆಯು ಬಹು ಕಡಿಮೆಯಾಗಿದೆ. ಕ್ರಯ ೦—೪—೦

ಚಕ್ರವರ್ತಿಗಳ ಕಿರೀಟಧಾರಣೆಯ ಪುಸ್ತಕ ಕ್ರಯ ೦—೨—೬

ಕ್ರಿಮಿಗಳ ವರ್ಣನೆ (ಸಚಿತ್ರ) ೦—೩—೦

ಗೋಪಾಲನ ಸನ್ಮನನೆ (ಸಚಿತ್ರ) ೦—೧—೦

ಪ್ರಬೋಧಚಂದ್ರಿಕೆ ೦—೨—೦

ಚಿಕ್ಕವರಿಗೆ ಹೇಳುವ ಕಥೆಗಳು ೦—೧—೦

ಶಾಂಭವನಾದ ವಾಲಿಸಿಯ ಚರಿತ್ರೆ ೦—೧—೦

ಗ್ರೀಕ ಲಂಡನ ಚರಿತ್ರೆ ೦—೨—೬

ಮಾರ್ಟಿನ್ ಲೂಥರನ ಚರಿತ್ರೆ ೦—೧—೬

ಆರ್ಯರ ಪೂರ್ವೋತ್ತರ ಚರಿತ್ರೆ ೦—೧—೬

ಘನತೆಯುಳ್ಳ ಸ್ತ್ರೀಯರ ಚರಿತ್ರೆ ೦—೨—೬

(೧) ವೇದಗಳನ್ನು ಬರೆದವರು ಯಾರು? (೨) ಶುದ್ಧವಾದ ವೀರಶೈವಿ, (೩) ನಾಲು ಮತ್ತು ನಾಲತೀರಿಸುವ ಮಾರ್ಗ, (೪) ಇಂಡಿಯಾದೇಶದ ಬಡತನದ ಕಾರಣಗಳು, (೫) ಬಾಲ್ಯವಿವಾಹ, (೬) ಪ್ರಾಯಶ್ಚಿತ್ತ, (೭) ಬಿಯ್ಯವದು, (೮) ಮಾನವಧರ್ಮಶಾಸ್ತ್ರ, (೯) ಗ್ರಹಣಗಳು, (೧೦) ಮಕ್ಕಳನ್ನು ಬೆಳಸತಕ್ಕವಿಧ. (೧೧) ಕ್ರಾಸ್ಡುಗಳು, (೧೨) ಎಲ್ಲರೂ ಸಹೋದರರು, (೧೩) ಮಂತ್ರ, ತಂತ್ರ, ಯಂತ್ರಗಳು, (೧೪) ಜ್ಯೋತಿಷಶಾಸ್ತ್ರ (೧೫) ಆರೋಗ್ಯಪ್ರಕಾಶಿಕೆ. ಈ ಪುಸ್ತಕಗಳ ಪ್ರತಿಯೊಂದಕ್ಕೆ ಮೂರು ಕಾಸು ಕ್ರಯವಿದೆ. ಮೇಲ್ಕಂಡ ಹದಿನೈದು ಪುಸ್ತಕಗಳನ್ನು ಒಟ್ಟಾಗಿ ತರಿಸತಕ್ಕದ್ದು. ಬಿಡಿಯಾಗಿ ಕಳುಹಿಸಲಾರೆವು. ಈ ಪುಸ್ತಕಗಳನ್ನು ಓದಿದಮೇಲೆ ಬರುವ ಸಂತೋಷವನ್ನು ವಿವರಿಸಲಾಗದು. ಜಾಗ್ರತೆ ಬೇಡಿ. ವಿ. ಪಿ. ಪಿ. ಮೂಲಕವಾಗಿಯಾಗಲಿ ಅಥವಾ ಹಣವನ್ನು ಮುಂಗಡವಾಗಿ ಕಳುಹಿಸಿಕೊಡುವದರಿಂದಲಾಗಲಿ ಪುಸ್ತಕಗಳನ್ನು ಪಡೆಯಬಹುದು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೊ, ಮೈಸೂರು.

ಸದರನ್ ಮರಾಟ ರೈಲ್ವೆ ಕಂಪಾನಿ ಲಿಮಿಟೆಡ್.
(ಮೈಸೂರು ಸ್ಟೇಟ್ ರೈಲ್ವೆ)
ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.—ಕಡೂರು ಡಿಸ್ಟ್ರಿಕ್ಟ್ ಕಡೂರು ತಾಲ್ಲೂಕು ಬಾಗೂರು ಹನುಮೈಯ್ಯನೆಂಬವನ ಬಾಬತು ೩ ಕೋಣಗಳು ಕಡೂರು ರೈಲ್ವೆ ಸ್ಟೇಷನಲ್ಲಿ ಬಹಳ ದಿವಸಗಳಿಂದ ಬಿದ್ದಿರುತ್ತವೆ. ಅವುಗಳನ್ನು ಸದರಿ ಹನುಮೈಯ್ಯನು ಇದೇ ಇಸವಿ ನವಂಬರು ತಾರೀಖು ೧೦ ರೊಳಗಾಗಿ ತೆಗೆದುಕೊಂಡು ಹೋಗದೇ ಆಗಲಿ ಅಥವಾ ರೈಲು ಮೂಲಕ ರವಾನೆ ಮಾಡದೆ ಆಗಲಿ ಇದ್ದಪಕ್ಷದಲ್ಲಿ ಅದೇ ತಾರೀಖಿನ ದಿವಸ ಬೆಳಗ್ಗೆ ೧೦ ಗಂಟೆಗೆ ಸದರಿ ೩ ಕೋಣಗಳು ಕಡೂರು ರೈಲ್ವೆ ಸ್ಟೇಷನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ.

ಬೆಂಗಳೂರು, | S. J. Mercer,
೩—೧೧—೧೯೦೩. | *Dist. Traffic Superintendant.*



WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಪುಸ್ತಕ, ಚಿತ್ರ, ಬೈಂಡಿಂಗ್ ಮುಂತಾದ ಸಮಸ್ತ ಪ್ರಿಂಟಿಂಗ್ ಕೆಲಸಗಳನ್ನು ಬಹಳ ಸುಲಭ ಛಾರ್ಜಿಗೂ, ಜಾಗ್ರತೆಯಿಂದಲೂ, ನೇತ್ರಾನಂದಕರವಾಗಿಯೂ ಮಾಡಿಕೊಡುತ್ತಾರೆ. ಅಪೇಕ್ಷೆಯುಳ್ಳವರು ಕೆಲಸವನ್ನು ಕಳುಹಿಸಿಕೊಟ್ಟು ಪರೀಕ್ಷೆ ಮಾಡಬೇಕು. ಆ ಪುಸ್ತಕಗಳು ಬಹಳ ಗಟ್ಟಿಯಾಗಿಯೂ ಅಂದವಾಗಿಯೂ ಬೈಂಡಾಗುತ್ತವೆ. ಎಲ್ಲಾ ವಿಷಯಗಳನ್ನೂ ಪ್ರೆಸ್ ಮ್ಯಾನೇಜರಿಗೆ ಬರೆದು ಅಥವಾ ಅವರನ್ನು ಮುಖಾಂತರ ಕಂಡು ತಿಳಿದುಕೊಳ್ಳಬಹುದು.

ವಿಳಾಸ:—ಮಿ ಎ. ಛಾರ್ಲ್ಸ್, ಮಾನೇಜರ್,
ಮೈಸೂರು.


ನಮ್ಮ ಚಂದಾದಾರರಿಗೆ ನೋಟೀಸ್.

"ವೃತ್ತಾಂತ ಪತ್ರಿಕೆ" ಯ ಏಜಂಟರು ಚಂದಾ ವಸೂಲ್ಮಾಡಿಕೊಂಡದ್ದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವದಿಲ್ಲ.

ಮ್ಯಾನೇಜರ್,
ಮೈಸೂರು. "ವೃತ್ತಾಂತ ಪತ್ರಿಕೆ" ಆಫೀಸ್.

ವೃತ್ತಾಂತ ಪತ್ರಿಕೆ.

—:o:—

ಸ್ ೧೯೦೩ ನೇ ಇಸವಿ ನೊವೆಂಬರ್ ತಾ ೧೨ ನೇ ಗುರುವಾರ.

## ಪಟಿಯಾಲಾ ಸಂಸ್ಥಾನಕ್ಕೂ ವೈಸ್‌ರಾಯಿಯವರೂ.

ರಾಜಸತ್ಕಾರವು.

ಕಳೆದ ೮ ನೆ ತಾರೀಖು ಭಾನುವಾರ ಬೆಳಿಗ್ಗೆ ೮ ಗಂಟೆಗೆ ವೈಸ್‌ರಾಯಿ ಲಾರ್ಡ್ ಕರ್ಜನ್ ಪ್ರಭುಗಳು ಪಟಿಯಾಲಾ ನಗರದ ಸ್ಟೇಷನ್ನಲ್ಲಿ ರೈಲ್ ಗಾಡಿಯಿಂದ ಇಳಿದರು. ಬಾಲ್ಯವಯಸ್ಸಿನ ಮಹಾರಾಜರವರೂ ರೀಜನ್ಸಿ ಕೌನ್ಸಿಲ್ ಮೆಂಬರುಗಳೂ ಇತರ ಉದ್ಯೋಗಸ್ಥರೂ ಪ್ಲಾಟ್‌ಫಾರಮಿನಲ್ಲಿ ಕಾದಿದ್ದು ಬಹು ಸಂಭ್ರಮದೊಡನೆ ವೈಸ್‌ರಾಯಿಯವರನ್ನು ಎದುರುಗೊಂಡು ಅವರಿಗೆ ಸುಸ್ವಾಗತವನ್ನು ಬಯಸಿದರು. ಕೂಡಲೇ ಗೌರವಾರ್ಥವಾದ ೩೧ ತೋಪುಗಳು ಹಾರಿಸಲ್ಪಟ್ಟವು. ವೈಸ್‌ರಾಯಿಯವರು ಶ್ರೀಮನ್ಮಹಾರಾಜರವರೊಡನೆ ಅರಮನೆಯ ಗಾಡಿಯಲ್ಲಿ ಕುಳಿತು ರಾಜೇಂದ್ರ ಎಂಬ ಹೆಸರುಳ್ಳ ತುರುಫ್ ಕುದುರೆಗಳನ್ನು ಹಿಂದೆ ಮುಂದೆ ಬಿಟ್ಟುಕೊಂಡು ರಾಜವೀಧಿಗಳಲ್ಲಿ ಮೆರವಣಿಗೆಯಾಗಿ ದಯಮಾಡಿ ಪಟ್ಟಣದಲ್ಲಿ ಮಾಡಿದ್ದ ಶೃಂಗಾರವನ್ನು ಸಂಭ್ರಮಿಸುತ್ತಾ ಮುಗುಳುನಗೆಯಿಂದ ಕೂಡಿದವರಾಗಿ ತಮ್ಮ ಬಿಡಾರಕ್ಕೋಸ್ಕರ ನಿರ್ಮಿತವಾಗಿದ್ದ ನವೀನವಾದ ಕ್ಯಾಂಪನ್ನು ತಲಪಿದರು. ಅಲ್ಲಿಯೂ ಸೈನಿಕರು ೩೧ತು ಸೆಲ್ಯೂಟ್ ಮಾಡಿದರು; ಮತ್ತೊಂದು ಸಲ ಗೌರವಾರ್ಥವಾದ ೩೧ ತೋಪುಗಳು ಹಾರಿದವು. ಶ್ರೀಮನ್ಮಹಾರಾಜರವರು ವೈಸ್‌ರಾಯಿಯವರನ್ನು ಬಿಡಾರದಲ್ಲಿಳಿಸಿ ಅರಮನೆಗೆ ದಯಮಾಡಿದರು. ತರುವಾಯ ವೈಸ್‌ರಾಯಿಯವರಿಗೂ ಮಹಾರಾಜರವರಿಗೂ ಭೇಟಿ ಮರುಭೇಟಿಗಳು ಯಥಾವಿಧಿಯಾಗಿ ನಡೆದುವು.

ವಿಕ್ಟೋರಿಯಾ ಮೆಮೋರಿಯಲ್.

ಅದೇ ಭಾನುವಾರ ಮಧ್ಯಾಹ್ನ ಸಾವಿರಾರು ಪ್ರಜೆಗಳೂ ನೂರಾರು ಉದ್ಯೋಗಸ್ಥರೂ ಕೂಡಿ ಇದ್ದ ಮೈದಾನಿಗೆ ದಯಮಾಡಿ ಚಿತ್ರಮಂಟಪವನ್ನು ಪ್ರವೇಶಿಸಿ ಎತ್ತರವಾದ ಪೀಠದ ಮೇಲೆ ಮಹಾರಾಜರವರ ಪಕ್ಕದಲ್ಲಿದ್ದ ಶ್ರೇಷ್ಠಾಸನವನ್ನಲಂಕರಿಸಿದರು. ಕೂಡಲೇ ರೀಜನ್ಸಿ ಕೌನ್ಸಿಲಿನ ಒಬ್ಬ ಮೆಂಬರು ಎದ್ದು ವೈಸ್‌ರಾಯಿಯವರಿಗೆ ಒಂದು ಅಡ್ರೆಸ್ಸನ್ನು ದೇಶಭಾಷೆಯಲ್ಲಿ ಓದಿ ಒಪ್ಪಿಸಿದರು. ಮೇಜರ್ ನವಾಬ್ ಸಿಂಗ್ ಯವರು ಅದರ ಅಭಿಪ್ರಾಯವನ್ನು ಇಂಗ್ಲೀಷಿನಲ್ಲಿ ಅರಿಕೆ ಮಾಡಿದರು. ತರುವಾಯ ಶ್ರೀಮನ್ಮಹಾರಾಜರವರು ಎದ್ದು ಸಮಯೋಚಿತವಾದ ಕೆಲವು ಮಾತುಗಳನ್ನಾಡಿ, ವಿಕ್ಟೋರಿಯಾ ಮಹಾರಾಣೀಯವರ ಪ್ರತಿಮೆಯನ್ನು ಪ್ರತಿಷ್ಠೆ ಮಾಡಬೇಕೆಂದು ವೈಸ್‌ರಾಯಿಯವರನ್ನು ಕೇಳಿಕೊಂಡರು.

ವೈಸ್‌ರಾಯಿಯವರ ಉಪನ್ಯಾಸವು.

ಆಗ ವೈಸ್‌ರಾಯಿ ಲಾರ್ಡ್ ಕರ್ಜನ್ ಪ್ರಭುಗಳು ಎದ್ದು ಪ್ರತಿಮೆಯನ್ನು ಪ್ರತಿಷ್ಠೆ ಮಾಡುವುದಕ್ಕೆ ಪೂರ್ವಭಾವಿಯಾಗಿ ಮಹಾರಾಜರನ್ನೂ, ರೀಜನ್ಸಿ ಕೌನ್ಸಿಲ್ ಮೆಂಬರುಗಳನ್ನೂ, ಇತರ ಸಭಾಸದರನ್ನೂ ಕುರಿತು ಅಪ್ಪಣೆ ಕೊಡಿಸಿದ ಮಾತುಗಳ ಮುಖ್ಯಾಭಿಪ್ರಾಯವೇನೆಂದರೆ:—

ನೂರು ವರ್ಷಗಳಿಂದಲೂ ಈ ಪಟಿಯಾಲಾ ಸಂಸ್ಥಾನವು ಬ್ರಿಟಿಷ್ ರಾಜ್ಯದ ವಿಷಯದಲ್ಲಿ ವಿಶೇಷವಾದ ರಾಜಭಕ್ತಿ ವಿಶ್ವಾಸಗಳನ್ನು ಪ್ರಕಾಶಪಡಿಸುತ್ತಾ ಬಂದಿರುವಂಥಾ ಸಂಸ್ಥಾನವೆಂದು ಕೀರ್ತಿಯನ್ನು ಪಡೆದಿರುವುದು. ಈ ಪ್ರತಿಮೆಯನ್ನು ಪ್ರತಿಷ್ಠೆ ಮಾಡುವುದಕ್ಕೆ ಇಂಥಾ ಸಂಸ್ಥಾನದ ರಾಜಧಾನಿಯಲ್ಲದೆ ಇನ್ನಾವ ಸ್ಥಳವು ಇಷ್ಟು ತಕ್ಕದ್ದಾಗಿರಲಾರದು. ಬ್ರಿಟಿಷ್ ಇಂಡಿಯಾದಲ್ಲಿ ಇಂಗ್ಲೀಷ್ ಜನರು ವಾಸಿಸುವಂಥಾ ಪಟ್ಟಣಗಳೊಳಗೆ ಈ ಮಹಾರಾಜ್ಞೀಯವರ ಹೆಸರನ್ನು ಶಾಶ್ವತಪಡಿಸುವುದು ಸಹಜವೇ ಆಗಿರುತ್ತೆ. ಇದಕ್ಕಿಂತಲೂ, ಇಂಥಾ ದೇಶೀಯ ಸಂಸ್ಥಾನಗಳ ರಾಜರುಗಳೂ ಪ್ರಜೆಗಳೂ ಪರಾಪೇಕ್ಷೆಯಿಲ್ಲದೆ ತಾವಾಗಿಯೇ ಈ ಮಹಾನ ಭಾವಳ ಹೆಸರನ್ನು ಚಿರಸ್ಥಾಯಿಯಾಗಿ ಮಾಡಿಟ್ಟುಕೊಳ್ಳುವದನ್ನು ನೋಡಿ ಸಂತೋಷಪಡುವೆನು. ಯಾವ ರಾಜನೇ ಆಗಲಿ ಆಕೆಯ ಮೇಲ್ಪಂಕ್ತಿಯನ್ನೇ ಅನುಸರಿಸಿ ಅಂತರಂಗದಲ್ಲೂ ಬಹಿರಂಗದಲ್ಲೂ ರತ್ನ ನಡೆನುಡಿಗಳನ್ನು ತಿದ್ದಿಕೊಳ್ಳುತ್ತಾ ಬಂದ ಪಕ್ಷದಲ್ಲಿ ಅಥಾ ರಾಜನು ಆಗಿರುವುದಕ್ಕಿಂತಲೂ ಎಷ್ಟೋ ಉತ್ತಮನಾದಾನೆನ್ನುವುದಕ್ಕೆ ಸಂಶಯವಿಲ್ಲ. ಈ ಪ್ರಕಾರ ಹೇಳುತ್ತಾ ಪ್ರತಿಮೆಯನ್ನು ಪ್ರತಿಷ್ಠೆ ಮಾಡಿದರು.

ವೈಸ್‌ರಾಯಿಯವರ ಬಿಡಾರಕ್ಕೆ ಬೆಂಕಿ ಬಿದ್ದದ್ದು.

ವೈಸ್‌ರಾಯಿಯವರಿಗೋಸ್ಕರ ಪ್ರೈವೇಟಿನಲ್ಲಿ ಪಟಿಯಾಲಾ ದರ್ಬಾರಿನವರು ಅನೇಕ ಡೇರೆಗಳನ್ನು ಹಾಕಿಸಿ, ಥರಾವರಿ ಮಾಡಿ ಅಲಂಕರಿಸಿದ್ದರು. ಕಳೆದ ೩ ನೆ ತಾರೀಖು ಮಂಗಳವಾರ ಈ ಕ್ಯಾಂಪಿಗೆ ಬೆಂಕಿ ಬಿದ್ದು ಆವಾಸದ ಡೇರೆಗಳು ಸಾಮಾನುಸಹಿತ ಉರಿದುಹೋದವು. ದರ್ಬಾರ್ ಕುರ್ಚಿಗಳು, ತಸ್ವೀರುಗಳು, ಮೇಲುಕಟ್ಟುಗಳು ಮೊದಲಾದವನ್ನು ಹೊರಕ್ಕೆ ಸಾಗಿಸಿ ಉಳಿಸಿಕೊಂಡರು. ಪ್ರಾಣನಷ್ಟವೇನೂ ಆಗಲಿಲ್ಲ. ಇದರಿಂದ ಸರ್ಕಾರದವರಿಗೆ ಸುಮಾರು ೩೦ ಲಕ್ಷ ರೂಪಾಯಿ ನಷ್ಟವಾಯಿತೆಂದು ತಂತೀವರ್ತಮಾನ ಬಂದಿದೆ. ಈಚೆಗೆ ಹೊಸದಾಗಿ ಕ್ಯಾಂಪನ್ನು ಕಟ್ಟಿಸಿ, ವೈಸ್‌ರಾಯಿಯವರಿಗೂ ಅವರ ಪರಿವಾರದವರಿಗೂ ಬಿಡಾರ ಮಾಡಿಕೊಟ್ಟರು.

## ಪ್ರಭುವಿನ ಪ್ರಾರ್ಥನೆ.

V—ದಿನದಿನದ ಆಹಾರ.

ಮೊದಲು ಮೂರು ಬಿನ್ನಹಗಳಲ್ಲಿ ದೇವರ ವಿಷಯವಾಗಿ ನಾವು ಬೇಡಿಕೊಳ್ಳಬೇಕಾದ ಅಂಶಗಳನ್ನು ಕುರಿತು ನೋಡಿದ್ದಾಯಿತಷ್ಟೆ. ಅಂದರೆ ಭಗವಂತನಿಗೆ ಸಲ್ಲತಕ್ಕ ಘನಮಾನಗಳನ್ನು ಕುರಿತೂ, ಮನುಷ್ಯರೊಳಗೆ ಆತನ ದಿವ್ಯೋದ್ದೇಶವು ನೆರವೇರುವುದಕ್ಕೋಸ್ಕರವೂ, ಪ್ರಾರ್ಥಿಸುವುದು ಏನೆಂದು ತಿಳುಕೊಂಡೆವು. ಈಗ ಈ ಪ್ರಭುವಿನ ಪ್ರಾರ್ಥನೆಯ ಎರಡನೆಯ ಭಾಗದಲ್ಲಿ ನಾವು ನಮ್ಮ ಕೊರತೆಗಳನ್ನು ತಿಳಿದು ಅವುಗಳನ್ನು ಬಗೆ ಹರಿಸಿಕೊಳ್ಳುವ ರೀತಿಯ ವಿಷಯದಲ್ಲಿ ತಿಳಿಸಿರುವದನ್ನು ಕುರಿತು ಓದಬೇಕಾಗಿದೆ. ಈ ಭಾಗದಲ್ಲಿ ಮೂರು ಬಿನ್ನಹಗಳನ್ನು ಸೂಚಿಸಿದ ಅವುಗಳಲ್ಲಿ ಮೊದಲನೆಯದನ್ನು ಅಂದರೆ ನಮಗೆ ಬೇಕಾದ ದಿನದಿನದ ಆಹಾರವನ್ನು ಕುರಿತಂಥ ಬಿನ್ನಹವನ್ನು ನೋಡೋಣ. ಆ ಬಿನ್ನಹವೇನೆಂದರೆ—

"ನಮಗೆ ಬೇಕಾದ ಅನ್ನವನ್ನು ಈಹೊತ್ತು ನಮಗೆ ಕೊಡು"—ಮತ್ತಾ ೬. ೧೧

"ನಮಗೆ ಬೇಕಾದ ಅನ್ನವನ್ನು ದಿನದಿನವೂ ಕೊಡುತ್ತಾ ಬಾ"—ಲೂಕ ೧೧. ೩.

ಈ ಬಿನ್ನಹದಲ್ಲಿ ಪ್ರಾಮುಖ್ಯವಾಗಿ ತೋರುವುದೇನೆಂದರೆ—ನಮಗೆ ಏನು ಬೇಕಾದರೂ ದೇವರೆ ಆಧಾರವೆಂದು ತಿಳಿಯುತ್ತೇವೆ. ಮನುಷ್ಯರಿಗೆ ಅವಶ್ಯವಾದ ಯಾವ ವರವನ್ನಾದರೂ ಭಗವಂತನೇ ಕೊಡಬೇಕು. ಪ್ರಾಣಕ್ಕೆ ಆತನೇ ಆಧಾರ, ಪ್ರಾಣವನ್ನು ಸಂರಕ್ಷಿಸುವದಕ್ಕೂ ಆತನೇ ಆಧಾರ. ಇದರಲ್ಲಿ ಮನುಷ್ಯರಿಗೂ ಪಶುಗಳಿಗೂ ಇರುವ ಭೇದವನ್ನು ತಿಳಿಯಬೇಕಾಗಿದೆ. ಆ ಪಶುಗಳಿಗೂ ದೇವರೇ ಆಧಾರವಲ್ಲವೇ? ಭಗವಂತನು ಕಾಗೆಗಳನ್ನು ಪೋಷಿಸುತ್ತಾನೆ, ಪ್ರಾಯದ ಸಿಂಹಗಳಿಗೆ ಅವುಗಳ ಆಹಾರವನ್ನು ನಡಿಸುತ್ತಾನೆ, ಆತನು ವನಚರುಗಳಿಗೆ ಆಹಾರ ಕೊಟ್ಟು ಕಾಪಾಡುತ್ತಾನೆ, ಭೂಮಿಯನ್ನು ನೀರಿನಿಂದ ತೇವ ಮಾಡಿ, ಹುಲ್ಲು ಗಿಡ ಮರಗಳನ್ನು ಪೋಷಿಸಿ ಬೆಳಸುತ್ತಾನೆ. ಭಗವಂತನಿಂದ ಈ ಪ್ರಕಾರ ಪೋಷಣೆಯನ್ನು ಹೊಂದುವ ಈ ಜಂತುಗಳು ಆತನನ್ನು ಕೇಳಿಕೊಳ್ಳದೇನೇ ಕಾಪಾಡಲ್ಪಟ್ಟು, ಪೋಷಣೆಯನ್ನು ಹೊಂದಿದ ಮೇಲೆ ಅದಕ್ಕಾಗಿ ಭಗವಂತನನ್ನು ವಂದಿಸುವದೂ ಇಲ್ಲ. ಯಾಕಂದರೆ ಅವುಗಳಿಗೆ ಭಗವಂತನು ಇದ್ದಾನೆಂಬ ತಿಳುವಳಿಕೆಯೂ ಇಲ್ಲ, ಉಪಕಾರಸ್ಮರಣೆಯೆಂಬುದೂ ಇಲ್ಲ. ಯೇಸುಸ್ವಾಮಿಯಾದರೋ ಭಗವಂತನನ್ನು ಬೇಡಿಕೊಳ್ಳಬೇಕೆಂದು ಅಜ್ಞಾಪಿಸುತ್ತಾನೆ. ಯಾತಕ್ಕೆ? ಯಾತಕ್ಕೆಂದರೆ ದೇವರನ್ನು ಬೇಡಿಕೊಳ್ಳುವದರಿಂದ ಆತನಿಗೂ ನಮಗೂ ಇರುವ ಸಂಬಂಧವೇನೆಂದು ತಿಳುಕೊಳ್ಳುತ್ತೇವೆ. ನಮಗೂ ಭಗವಂತನಿಗೂ ಪರಸ್ಪರ ಪ್ರೀತಿಯೂ ತಿಳುವಳಿಕೆಯೂ ಇರಬೇಕೆಂದು ಆತನು ಅಪೇಕ್ಷಿಸುತ್ತಾನೆ. ಈ ಪ್ರೀತಿಯೂ ತಿಳುವಳಿಕೆಯೂ ತಂದೆಗೂ ಮಕ್ಕಳಿಗೂ ಇರತಕ್ಕ ಥಾದ್ದಾಗಿರಲೇಬೇಕು. ನಾವು ಆತನನ್ನು ಬೇಡಿಕೊಳ್ಳದಿದ್ದರೆ ಆತನು ನಮಗೆ ವರಗಳನ್ನೆಲ್ಲಾ ಕೊಡುವದಿಲ್ಲ. ಈ ಪ್ರಕಾರ ದೇವರಿಗೂ ನಮಗೂ ಇರುವ ಅನ್ಯೋನ್ಯತೆಯು ಬಲಪಡುವದಕ್ಕೆ ಪ್ರಾರ್ಥನೆಯು ಒಂದು ಯುಕ್ತವಾಗಿದೆ.

ಈ ವಿಜ್ಞಾಪನೆಯಲ್ಲಿ "ಅನ್ನ" ವೆಂದು ಹೇಳುವಾಗ ನಮ್ಮ ಶರೀರದ ಪೋಷಣೆಗೆ ಅವಶ್ಯವಾಗಿರುವ ಅನ್ನ, ಬಟ್ಟೆ, ಮನೆ ಮೊದಲಾದ ಸಕಲ ಪದಾರ್ಥಗಳು ಸೂಚಿತವಾಗಿವೆಯೆಂದು ತಿಳಿಯತಕ್ಕದ್ದು. ಹೀಗಿರುವದರಿಂದ ಈ ಬಿನ್ನಹವನ್ನು ಎಷ್ಟೇ ಬಡವರಾಗಲಿ, ಎಷ್ಟೇ ಐಶ್ವರ್ಯವಂತರಾಗಲಿ, ಎಷ್ಟೇ ದೊಡ್ಡವರಾಗಲಿ ಹೇಳಬೇಕಾಗಿದೆ. ಯಾಕಂದರೆ ಶರೀರದ ಪೋಷಣೆಗೆ ಅವಶ್ಯವಾಗಿರುವ ದಿನ ದಿನದ ಆಹಾರವು ಎಲ್ಲರಿಗೂ ಬೇಕಾಗಿದೆ. "ಅನ್ನ" ವೆಂಬ ಮಾತಿನಲ್ಲಿ ಇನ್ನೂ ಹೆಚ್ಚು ಅಭಿಪ್ರಾಯವಿದೆ. ಆತ್ಮವನ್ನು ಪೋಷಿಸುವ ಮತ್ತೊಂದು ವಿಧ ಆಹಾರವುಂಟೆಂದು ಯೇಸುಸ್ವಾಮಿಯು ಹಲವು ಸಾರಿ ಸೂಚಿಸಿದ್ದಾನೆ. ಮನುಷ್ಯನು ಆಹಾರ ಮಾತ್ರದಿಂದ ಬದುಕುವದಿಲ್ಲ, ದೇವರ ವಾಕ್ಯದಿಂದಲೇ ಬದುಕುತ್ತಾನೆ ಎಂದು ಆತನು ಹೇಳಿದ್ದಾನೆ. ಆದಕಾರಣ ಶರೀರಕ್ಕೆ ಮಾತ್ರವಲ್ಲ, ಆತ್ಮಕ್ಕೂ ಅವಶ್ಯವಾದ ಸಕಲ ವಿಷಯಗಳಿಗಾಗಿ ಪ್ರಾರ್ಥಿಸಬೇಕೆಂದು ಈ ವಿಜ್ಞಾಪನೆಯಲ್ಲಿ ಸೂಚಿಸಿದೆ.

ಇದಲ್ಲದೆ—ನಾವು ದೇವರನ್ನು ದಿನದಿನವೂ ಆಧಾರವಾಗಿ ಭಯಸಬೇಕು. ಪ್ರತಿಕ್ಷಣವೂ ದೇವರಮೇಲೆ ಆತುಕೊಳ್ಳಬೇಕೆಂದು ಹೇಳಿದರೂ ಬಾಧೆಯಿಲ್ಲ. ಮೇಲೆ ನಾವು ಉದಾಹರಿಸಿರುವ ವೇದ ವಚನದಲ್ಲಿ "ದಿನದಿನವೂ" ಎಂದು ಕನ್ನಡಿಸಿರುವದಕ್ಕೆ ಅಭಿಪ್ರಾಯವೇನೆಂಬ ವಿಷಯದಲ್ಲಿ ಗೊತ್ತಾದ ಅರ್ಥವಿಲ್ಲ. ಆದುದರಿಂದ ಈ ವಿಜ್ಞಾಪನೆ "ಬರುವ ದಿನಕ್ಕೆ ಅವಶ್ಯವಾಗಿರುವ ಆಹಾರವನ್ನು ಈ ಹೊತ್ತು (ಅಥವಾ ದಿನದಿನವೂ) ಅನುಗ್ರಹಿಸು" ಎಂದಿರಬೇಕು ಎಂಬುವಾಗಿ ಅನೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ನಾವು ಹೀಗೆ ಪ್ರಾರ್ಥನೆ ಮಾಡುವದಕ್ಕೆ ಕಲಿತುಕೊಳ್ಳುವಾಗ—


ಚೇಂಬರ್ಲಿನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.




45

ಕೆಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಕಿಬ್ಬಲುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ:—"ಕೆಳಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಒಡದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ನೋಡಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತು ಕೊಂಡು ಹರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಮುಂದೆ ಇರುವ ದಿನದಲ್ಲಿ ನಮಗೆ ಏನೇನು ಬೇಕೋ ಅದನ್ನೆಲ್ಲಾ ದೇವರಿಂದ ಕೇಳಿಕೊಳ್ಳುತ್ತೇವೆ. ಸಾಯಂಕಾಲದಲ್ಲಿ ಪ್ರಾರ್ಥನೆ ಮಾಡುವಾಗ ಮಾರನೇ ದಿವಸಕ್ಕೆ ಬೇಕಾದದ್ದನ್ನೆಲ್ಲಾ ಕೇಳಿಕೊಳ್ಳುತ್ತೇವೆ. ನಮಗೆ ಕೆಲವು ಕಾಲದ ವರೆಗೆ ಬೇಕಾಗದ್ದು ಎಷ್ಟೋ ಇದ್ದನ್ನು ದೇವರು ಕೊಡುತ್ತಾನೆ. ಆತನು ನಮ್ಮ ಮಾರ್ಗದ ಬಳಿನ ಭೋಜನವನ್ನು ತಕ್ಕಂದಮೇಲೆ ಸ್ವಲ್ಪ ಹಸಿವಾದಾಗ ಆತನ ಬಳಿಗೆ ಪ್ರಾರ್ಥನೆ ಬರಬೇಕು. ಈ ಪ್ರಕಾರ ಆತನ ಸಂಗಡ ನಾವು ನಡವಳಿಕೆ ಪ್ರಯತ್ನ ನಿರಂತರವಾಗಿಯೂ ಹದೇ ಹದೇ ಆಗಿಯೂ ಇಟ್ಟದ್ದು ಇನ್ನು ಮೇಲೆ ಏನು ಕಷ್ಟ ಬರುವದಕ್ಕಿದೆಯೋ, ಏನು ವಿಪತ್ತು ಬರುವದಕ್ಕಿದೆಯೋ, ಅವುಗಳು ಪರಿಹಾರವಾಗ್ಯವು ಹ್ಯಾಗೋ ಎಂದು ಚಿಂತಿಸುವವರನ್ನು ಈ ಚಿನ್ನದ ಆದರ್ಶ ಪ್ರಚುರಪ್ಪಾಗಿದೆ. "ನಾಳೆಗೆ ಮಾತ್ರ ಅವಶ್ಯವಾದ ಆಹಾರವನ್ನು ಕೊಡು, ಇನ್ನು ಮುಂದವಾದ ದಿನಕ್ಕೇನು ಬೇಕೋ ಎಂದು ಚಿಂತಿಸಬೇಡ" ಎಂದು ಯೇಸುಸ್ವಾಮಿಯು ಬೋಧಿಸುತ್ತಾನೆ. ಅಂಥ ಕರೆಯು ಕಾಲವು ಬಂದಾಗ ದೇವರೇ ಬೇಕಾದದ್ದನ್ನು ಕೊಡುವನು. ನಾಳೆಗೆ ಬೇಕಾದ ಆಹಾರಕ್ಕೋಸ್ಕರ ಮಾತ್ರ ಇಂದು ಉಳಿದ ಕೆಲಸವನ್ನು ಮಾಡುತ್ತಿರು ಎಂದು ಅತನು ಅಪ್ಪಣೆ ಕೊಡುತ್ತಾನೆ.

## ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ಈ ವಾರದ ಕಡೆಯಲ್ಲಿ ರಾಜಧಾನಿಯನ್ನು ಬಿಟ್ಟು ಬೆಂಗಳೂರಿಗೆ ದಯಮಾಡುವವರಾಗಿದ್ದಾರೆ.

****

ರಾಜಧಾನಿಯಲ್ಲಿ ಸ್ಕೂಲ್‌ಗಳ ಸರ್ಕಲ್ ಇನ್ಸ್‌ಪೆಕ್ಟರಿಗೆ ಸ್ವಂತ ಆಫೀಸ್ ಏರ್ಪಾಡಾಗುವದು. ಮೆ' ವೆಂಕಟಸಾಮಿ ನಾಯುಡುರವರು ಇನ್ಸ್‌ಪೆಕ್ಟರಾಗಿ ನೇಮಕವಾಗಿದ್ದಾರೆ.

****

ರಾಜಧಾನಿಯ ಪಶ್ಚಿಮ ಭಾಗದಲ್ಲಿರುವ ಕನ್ನೇಗೌಡನ ಕೊಪ್ಪಲಲ್ಲಿ ಒಬ್ಬ ಹೆಂಗಸು ತನ್ನ ಮೂರು ಮಕ್ಕಳನ್ನು ಪ್ಲೇಗ್ ರೋಗದಿಂದ ಕಳೆದುಕೊಂಡಳು. ಆ ಮಕ್ಕಳ ತೀರಿಕೊಂಡವು.

****

ಹೊಸಕೋಟೆ ತಾಲ್ಲೂಕು ಬಿಂದಿಗನಹಳ್ಳಿ ಕಲ್ಲುಮಂಟಪದಲ್ಲಿ ಇದ್ದ ಮುನಿರಾಮಪ್ಪನವರು ವಾಸಮಾಡಿಕೊಂಡಿರುವಲ್ಲಿ ಅವರ ಮನೆಯಲ್ಲಿ ೧,೨೦೦ ರೂ. ನಗನಾಣ್ಯಗಳು ಕಳುವಾದವೆಂದು ತಿಳಿದು ಬಂತು.

****

ಈ ಸಂಸ್ಥಾನದ ಹೊಸ ಬ್ರಿಟಿಷ್ ರೆಸಿಡೆಂಟರಾದ ಮೆ' ಬಾರ್ನ್ಸ್‌ರವರು ಈ ದಿನ ರಾಜಧಾನಿಗೆ ದಯಮಾಡುವವರಾಗಿದ್ದಾರೆ. ಶ್ರೀಮನ್ ಮಹಾರಾಜರಿಗೂ ಅವರಿಗೂ ಮರ್ಯಾದಾಪೂರ್ವಕವಾದ ಸಮಾಲೋಚನೆಗಳು ನಡೆಯುವವು.

****

ಚಿಕ್ಕಮಗಳೂರು ತಾಲ್ಲೂಕು ಲಿಂಗದಹಳ್ಳಿಯಲ್ಲಿ ಕುಡಿಯುವ ನೀರಿನ ಬಾವಿಯೊಂದನ್ನು ತೆಗಸಬೇಕೆಂದು ೪೦೦ ರೂ. ಗ್ರ್ಯಾಂಟ್ ಮಾಡಿ, ಅಮಲ್ದಾರ್ ಎಕ್ಸಿಕ್ಯುಟಿವ್ ಇಂಜಿನಿಯರಿಗೆ ನೋಡಿಸ ಹೇಳಿ ಕೆಲಸ ಮಾಡಿ ಬಾವಿ ತೆಗಿಸುವವರಾಗಿದ್ದಾರೆ.

****

ರಾಜಧಾನಿಯಲ್ಲಿ ಕಳೆದವಾರವೆಲ್ಲಾ ಮಳೆ ವಿಪರೀತವಾಗಿ ಸುರಿಯಿತು. ಈ ಮಳೆಯಿಂದಲೇ ಪ್ಲೇಗ್ ಉಪದ್ರ ಕಡಿಮೆಯಾಗುವದೆಂದು ಹೇಳುತ್ತಾರೆ. ಉಪದ್ರವು ಜಾಸ್ತಿಯಾದ ದಕ್ಷಿಣ ಕಡೆಯಲ್ಲಿ ಪ್ಲೇಗ್ ಜಾಸ್ತಿಯಾಗಿದೆ. ಬಿಸಿಲು, ಉಪದ್ರ, ಮಳೆ, ಈ ಮೂರರ ಕಾಟದಿಂದ ಜನರು ತುಂಬಾ ಕಷ್ಟ ನಷ್ಟಗಳಿಗೆ ಗುರಿಯಾಗಿದ್ದಾರೆ.

****

ಚಿಕ್ಕಮಗಳೂರಿನಲ್ಲಿ ಸರ್ಕಾರದವರು ಒಂದು ಕರ್ನಾಟಕ ವೈದ್ಯಶಾಲೆಯನ್ನು ಇಟ್ಟು, ಮೈಸೂರು ವೈದ್ಯಶಾಲೆಯಲ್ಲಿ ತರಪೇತಾಗಿ ಬಂದ ಒಬ್ಬ ಪಂಡಿತರನ್ನು ನೇಮಿಸುವವರಾಗಿದ್ದಾರೆ. ಈ ಆಸ್ಪತ್ರೆಯ ಖರ್ಚಿಗೆ ಚಿಕ್ಕಮಗಳೂರ್ ಮ್ಯುನಿಸಿಪಾಲಿಟಿಯವರು ತಿಂಗಳು ೧೦ ರೂ. ನಂತೆಯೂ, ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನವರು ೧೫ ರೂ. ನಂತೆಯೂ ಕೊಡುವುದಾಗಿ ಒಪ್ಪಿಕೊಂಡಿದ್ದಾರೆ.

****

ರಾಜಧಾನಿಯಲ್ಲಿ ಬಹು ಕಾಲದಿಂದಲೂ ವಕೀಲರಾಗಿದ್ದ ಮೆ' ಕೃಷ್ಣ ವೆಂಕಟಾಚಲರಾಯರು ಕಳೆದ ಭಾನುವಾರ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಅವಸಾನ ಕಾಲದಲ್ಲಿ ಸುಮಾರು ೬೦ ವರುಷ ವಯಸ್ಸಾಗಿತ್ತು. ೨೩ ವರುಷ ಕಾಲದಲ್ಲೂ ಇವರು ಮ್ಯುನಿಸಿಪಲ್ ಕಮಿಷನರಾಗಿದ್ದು ಜನರ ವಿಶ್ವಾಸ ಮತ್ತು ಅಧಿಕಾರಿಗಳ ಪ್ರೀತಿಯನ್ನು ಸಂಪಾದಿಸಿಕೊಂಡಿದ್ದರು.

****

ಮೈಸೂರು ಸರ್ಕಾರಿ ವ್ಯವಸಾಯ ಶಾಸ್ತ್ರ ಪರೀಕ್ಷಣ ಇಲಾಖೆಯಲ್ಲಿ ಶಾಸ್ತ್ರವನ್ನು ಕಲಿಯುವುದಕ್ಕೆ ನಾಲ್ವರು ಉಮೇದುವಾರರು ಬೇಕಾಗಿರುವುದೆಂತಲೂ, ಇವರಿಗೆ ಒಂದು ವರುಷದ ತನಕ ತಿಂಗಳಿಗೆ ೩೦ ರೂ. ನಂತೆ ವೇತನ ಕೊಡಲ್ಪಡುವದೆಂತಲೂ, ಬಿ. ಎ. ಪರೀಕ್ಷೆ ಕೊಟ್ಟವರಕ್ಕವರು ಮಾತ್ರ ಈ ತಿಂಗಳು ೨೦ ರೊಳಗಾಗಿ ಅರ್ಜಿ ಕಳುಹಿಸಿಕೊಳ್ಳಬೇಕೆಂತಲೂ ಗವರ್ನಮೆಂಟಿನವರು ಸರ್ಕಾರಿ ಗೆಜೆಟಿನಲ್ಲಿ ಪ್ರಕಟಿಸಿ ಮಾಡುತ್ತಾರೆ.

****

ಕಳೆದ ಶುಕ್ರವಾರ ಬೆಳಗ್ಗೆ ಶ್ರೀಮನ್ ಮಹಾರಾಜರವರು ಇಲ್ಲಿ ಕೋಟೆಯೊಳಗೆ ತ್ರಿನೇತ್ರೇಶ್ವರನ ಗುಡಿ ಹಿಂಭಾಗದಲ್ಲಿ ಕಟ್ಟಿಸ್ತ ಮನೆಗಳನ್ನೂ ಪೋಲೀಸ್ ಠಾಣೆ ಬೀದಿಯನ್ನೂ ಬಹಳ ಹೊತ್ತು ಪರಾಂಬರಿಸಿದರು. ಈ ಭಾಗವೆಲ್ಲಾ ತುಂಬಾ ಕಶ್ಮಲವಾಗಿಯೂ ರೋಗ ಜನ್ಯವಾಗಿಯೂ ಇದೆ ಎಂತಲೂ, ಅಲ್ಲಿನ ಕೆಲವು ಮನೆಗಳನ್ನು ಒಡೆದು ಬಯಲುಮಾಡಬೇಕೆಂತಲೂ ಅವರೂ ಅವರ ಪ್ರೈವೆಟ್ ಸೆಕ್ರೆಟರಿಯವರೂ ಆಲೋಚನೆಮಾಡಿಕೊಂಡಂತೆ ಕೇಳುತ್ತೇವೆ.

****

ರಾಜಧಾನಿಯಲ್ಲಿರುವ ಮಹಾರಾಣಿಯವರ ಕಾಲೇಜಿನ ಮೇಲ್ವಿಚಾರಣಾ ಕಮಿಟಿ ಮೆಂಬರುಗಳು ಮೊನ್ನೆ ಸೋಮವಾರ ಸ್ಕೂಲ್ ಕಟ್ಟಡದಲ್ಲಿ ಸೇರಿ ಮೀಟಿಂಗ್ ನಡಿಸಿದರು. ಇದಕ್ಕಾಗಿ ಮೆ॥ ವಿ. ಪಿ. ಮಾಧವರಾಯರವರು, ಮೆ' ಅಂಬಿಲ್ ನರಸಿಂಹಯ್ಯಂಗಾರ್ಯರೂ ಬೆಂಗಳೂರಿಂದ ಬಂದಿದ್ದರು. ಕಮಿಟಿಯವರು ಒಪ್ಪಿದರೆ ಇನ್ನು ಮೇಲೆ ಯುರೇಷಿಯನ್, ಪಾರ್ಸಿ, ಮಹಮದೀಯ ಹುಡುಗಿಯರೂ ಈ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಬಹುದೆಂದು ತೀರ್ಮಾನವಾದಂತೆ ಕೇಳುತ್ತೇವೆ.

****

ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಮೇಲುಕೋಟೆಯೊಳಗೆ ಜನರು ಊರು ಬಿಟ್ಟು ಮೈದಾನಗಳಲ್ಲಿ ವಾಸಮಾಡುತ್ತಿದ್ದರು. ನಾಲ್ಕು ಮನೆಗಳವರು ಅಲ್ಲಿನ ಅನಂದಾಳ್ವಾರ ತೋಟದಲ್ಲಿ ಇರುವಾಗ್ಯ ೧೬ ನೇ ತಾರೀಖು ರಾತ್ರಿ ಕಳ್ಳರು ಬಿದ್ದು ಒಡವೆ ವಸ್ತುಗಳನ್ನು ಅಪಹರಿಸಿದ್ದಲ್ಲದೆ ಒಬ್ಬ ಬೆಸ್ತರವನನ್ನು ಹೊಡೆದು ಕೊಂದುಹಾಕಿ, ಒಬ್ಬ ಬ್ರಾಹ್ಮಣನ ತಲೆಯನ್ನು ಒಡೆದುಬಿಟ್ಟರು. ಆ ಬ್ರಾಹ್ಮಣನಿಗೆ ವಾಸಿಯಾಗಲು ಒಂದು ತಿಂಗಳು ಹಿಡಿಯಿತು. ಸರ್ಕಾರದವರು ೯ ಮಂದಿಯನ್ನು ಹಿಡಿದು, ಕಳುವಾದ ಒಡವೆಗಳನ್ನು ಪತ್ತೆಮಾಡಿದರು. ಈಗ ಸೆಷನ್ ವಿಚಾರಣೆ ನಡೆಯುತ್ತಿದೆ. ಅಪರಾಧಿಗಳ ಕಡೆ ಅಡ್ವೊಕೇಟ್ ಮೆ॥ ರಂಗೈಯಂಗಾರ್ ರು ಶ್ರೀರಂಗಪಟ್ಟಣದ ಇಬ್ಬರು ಲಾಯರುಗಳು ವಕಾಲತ್ತು ವಹಿಸಿದ್ದಾರೆ. ಕೋರ್ಟಿನಿಂದ ಒಬ್ಬ ಲಾಯರು ೪ ನೇ ಅಪರಾಧಿಯ ಪರ ಲಾಯರಾಗಿ ನೇಮಕವಾಗಿರುವರು.

****

ಕಿಲ್ಬರ್ನ್ ಎಂಬ ಕಂಪನಿಯವರು ಲಂಡನ್ ಪಟ್ಟಣದಲ್ಲಿ ಮೈಸೂರು ಸರ್ಕಾರದವರ ಏಜೆಂಟರಾಗಿ ನಿಂತು, ಚಿನ್ನದಗಣಿ ಕಂಪನಿಯಿಂದ ಸರ್ಕಾರಕ್ಕೆ ಬಾಪತಿ ಆಗಬೇಕಾಗಿರುವ ರಾಜಾದಾಯವನ್ನು ವಸೂಲ್ಮಾಡಿ, ವಿಲಾಯಿತಿ ಮುಂತಾದ ಕಡೆಗಳಿಂದ ಮೈಸೂರು ಸರ್ಕಾರಕ್ಕೆ ಬೇಕಾದ ಸಾಮಾನು ಮುಂತಾದ್ದನ್ನು ಕೊಂಡು ಕಳುಹಿಸುವ ಮಾಮೂಲಿಯಾಗಿದೆ. ವರುಷಕ್ಕೊಂದು ಸಾರಿ ಈ ಕಂಪನಿಯವರು ಶಿಲ್ಕಿ ಹಣವನ್ನು ಗವರ್ನಮೆಂಟಿಗೆ ಕಳುಹಿಸಿ ಲೆಕ್ಕ ಫೈಸಲ್ ಮಾಡಿಕೊಳ್ಳುತ್ತಾರೆ. ಈಚೆಗೆ ಶಿವಸಮುದ್ರದಲ್ಲಿ ಸರ್ಕಾರದವರು ಹೆಚ್ಚಾಗಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವುದಕ್ಕೆ ಹೊಸ ಯಂತ್ರ ಮುಂತಾದ್ದನ್ನು ತರಿಸಬೇಕೆಂದು ಗೊತ್ತುಮಾಡಿರುತ್ತಾರಷ್ಟೆ. ಇದಕ್ಕೆ ಸರ್ಕಾರದವರಲ್ಲೇ ಕೂಡಿಟ್ಟ ಹಣ ಬಹಳ ಇರುವಲ್ಲಿ ಅವರು ಮೇಲ್ಕಂಡ ಕಂಪನಿಯವರಿಂದ ಕೆಲವು ಲಕ್ಷ ದ್ರವ್ಯವನ್ನು ಸಾಲ ಮಾಡಿದರೆಂತಲೂ, ಇದರ ಬಡ್ಡಿ ದರವು ದುಬಾರಿಯಾಗಿದೆ ಎಂತಲೂ, ಕೆಲವರು ಆಕ್ಷೇಪಿಸಲಾರಂಭಿಸಿದ್ದಾರೆ. ಮೈಸೂರು ಸರ್ಕಾರದವರು ಮೇಲ್ಕಂಡ ರೀತಿಯಲ್ಲಿ ಆ ಕಂಪನಿಯವರಲ್ಲಿ ಲೇವಾದೇವಿ ಮಾಡಿದಮಾತ್ರಕ್ಕೇ ಅವರು ಸಾಲಮಾಡಿದರೆಂಬ ವರ್ತಮಾನ ಹುಟ್ಟಿಸಿರುವದನ್ನು ಏನೆಂದು ಹೇಳೋಣ.

## ಹೊಸ ರೆಸಿಡೆಂಟರವರ ಆಗಮನ.

ಕಳೆದ ಗುರುವಾರ ಬೆಳಗ್ಗೆ ಬೆಂಗಳೂರು ಸಿಟಿ ರೈಲ್ ಸ್ಟೇಷನ್ನು ವಿಶೇಷವಾಗಿ ಅಲಂಕರಿಸಲ್ಪಟ್ಟಿತ್ತು. ಯುರೋಪಿಯನ್ ಮತ್ತು ದೇಶೀಯ ಜನ ಸಮೂಹಗಳಿಂದ ಗಿಜಗುಡುತ್ತಿತ್ತು. ಸಕಲರೂ ರೈಲ್‌ಗಾಡಿ ಬರುವುದನ್ನೇ ಉತ್ಸಾಹಪೂರ್ವಕವಾಗಿ ಎದುರುನೋಡುತ್ತಿದ್ದರು. ಪ್ರಾತಃಕಾಲ ೭ ಗಂಟೆಗೆ ಸರಿಯಾಗಿ ರೈಲ್ ಗಾಡಿಯು ಬಂದು ನಿಂತಿತು. ದಿ ಆನರೆಬಲ್ ಮೆ' ಜೆ. ಎ. ಬೂರ್ಡಿಲ್ಲನ್, ಸಿ. ಎಸ್. ಐ. ಯವರು ರೈಲ್ ಗಾಡಿಯಿಂದ ಇಳಿದರು. ಇವರೇ ನಮ್ಮ ಸಂಸ್ಥಾನಕ್ಕೆ ಹೊಸದಾಗಿ ನೇಮಕವಾಗಿ ಬಂದಿರುವ ಬ್ರಿಟಿಷ್ ರೆಸಿಡೆಂಟರು. ಸ್ಟೇಷನ್ನಿನಲ್ಲಿ ಕಾದಿದ್ದ ಸಮಸ್ತ ದೊಡ್ಡ ಮನುಷ್ಯರೂ ಅವರನ್ನು ಬಹು ಸಂತೋಷ ಪೂರ್ವಕವಾಗಿಯೂ ಸನ್ಮಾನದಿಂದಲೂ ಇದಿರುಗೊಳ್ಳಲಾರಂಭಿಸಿದರು. ಅವರ ಹೆಸರುಗಳನ್ನೆಲ್ಲಾ ವಿವರಿಸುವದು ಸಾಧ್ಯವಿಲ್ಲ.

ಮೆ॥ ಬೂರ್ಡಿಲ್ಲನ್‌ರವರು ಪತ್ನಿಸಹಿತರಾಗಿ ತಮ್ಮ ಲೇಟ್ ಪ್ರೈವೆಟ್ ಸೆಕ್ರೆಟರಿಗಳಾದ ಮೆ॥ ಕ್ಯಾಮ್ಮಿಂಗ್‌ರವರ ಸಂಗಡ ರೈಲ ಗಾಡಿಯನ್ನು ಬಿಟ್ಟಿಳಿದ ಕೂಡಲೆ ಮೈಸೂರು ಸಂಸ್ಥಾನದ ದಿವಾನರಾದ ಸರ್ ಪಿ. ಎನ್. ಕೃಷ್ಣಮೂರ್ತಿಯವರೂ, ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರಾದ ಮೆ॥ ಮಾಲ್‌ಕಿಂಗ್ ಯವರೂ, ಬೆಂಗಳೂರ್ ದಂಡಿನ ಕಲೆಕ್ಟರಾದ ಮೆ॥ ಇ. ಎನ್. ಟ್ಯಾಲ್ಬಟ್ ಯವರೂ ಮುಂದಕ್ಕೆ ಹೋಗಿ ಅವರನ್ನು ಕಾಣಿಸಿಕೊಂಡು ಅವರಿಗೆ ಸುಸ್ವಾಗತ ಮನವನ್ನು ಬಯಸಿ, ಸ್ವಲ್ಪ ಹೊತ್ತು ಪರಸ್ಪರ ಯೋಗಕ್ಷೇಮಗಳನ್ನು ವಿಚಾರಿಸುತ್ತಾ ಇದ್ದು, ತದನಂತರ ಮೈಸೂರ್ ಸಂಸ್ಥಾನದ ಕೌನ್ಸಿಲ್ ಮೆಂಬರುಗಳನ್ನೂ, ಚೀಫ್ ಕೋರ್ಟ್ ಜಡ್ಜಿಗಳನ್ನೂ, ಬೇರೆ ಬೇರೆ ಇಲಾಖೆಗಳ ಸೆಕ್ರೆಟರಿಗಳನ್ನೂ, ಬೆಂಗಳೂರ್ ದಂಡಿನ ಮತ್ತು ಸಿಟಿಯ ಮ್ಯುನಿಸಿಪಲ್ ಕಮಿಷನರುಗಳನ್ನೂ ರೆಸಿಡೆಂಟರವರಿಗೆ ಕಾಣಿಸಿ ಪರಿಚಯಮಾಡಿಸಿದರು. ರೆಸಿಡೆಂಟರು ಪ್ರತಿ ಒಬ್ಬರನ್ನೂ ಬಹು ಉಚಿತವಾಗಿಯೂ ಸಂತೋಷದಿಂದಲೂ ಮಾತನಾಡಿಸಿದರು.

ರೆಸಿಡೆಂಟರು ಸ್ಟೇಷನ್ ಪ್ಲಾಟ್‌ಫಾರಮನ್ನು ದಾಟಿ ಮುಂದೆ ಹೋಗುವಷ್ಟರಲ್ಲಿ ಕಂಟೋನ್ಮೆಂಟ್ ಮೈದಾನದಲ್ಲಿ ಸಾಲುಸಾಲಾಗಿ ನಿಲ್ಲಿಸಲ್ಪಟ್ಟಿದ್ದ ಬಾರ್ ಸೈನಿಕರೂ, ಇಂಪೀರಿಯಲ್ ಸರ್ವಿಸ್ ಸವಾರರೂ ಆಯುಧಗಳನ್ನೆತ್ತಿ ಸನ್ಮಾನಮಾಡಿದರು. ರೆಸಿಡೆಂಟರು ನೋಡಿ ಸಂತೋಷಪಟ್ಟು ವಾಹನಾರೂಢರಾಗಿ ರೆಸಿಡೆನ್ಸಿ ಬಂಗಲೆಯನ್ನು ಕುರಿತು ತೆರಳಿದರು. ಅಲ್ಲಿ ಇಂಗ್ಲಿಷ್ ಸೈನಿಕರು ಸಾಲಾಗಿ ನಿಂತು ವಾದ್ಯಘೋಷವಾಗುತ್ತಿರುವಾಗ ಫರೇಡ್ ಮಾಡಿದರು. ಇಂಗ್ಲಿಷ್ ಸೈನ್ಯದ ಹುದ್ದೇದಾರರಾದ ಬ್ರಿಗೇಡಿಯರ್ ಜನರಲ್ ಜೆ. ಇ. ನಿಕ್ಸನ್, ಸಿ. ಬಿ. ಯವರು ರೆಸಿಡೆನ್ಸಿಯ ಬಾಗಿಲಲ್ಲಿ ಕಾದಿದ್ದು, ತಮ್ಮ ಕೈಕೆಳಗಣ ಹುದ್ದೇದಾರರನ್ನು ರೆಸಿಡೆಂಟರಿಗೆ ಕಾಣಿಸಿದರು. ರೆಸಿಡೆಂಟರು ಅವರ ಸಂಗಡ ಸ್ವಲ್ಪಹೊತ್ತು ಸಂಭಾಷಣೆಮಾಡಿಕೊಂಡು, ಸೈನಿಕರು ಮಾಡಿದ ಸನ್ಮಾನವನ್ನು ಅಂಗೀಕರಿಸಿ, ಬಂಗಲೆಯೊಳಕ್ಕೆ ದಯಮಾಡಿದರು. ಕೂಡಲೇ ಇಂಗ್ಲಿಷ್ ಸೈನಿಕರ ಫಿರಂಗಿಗಳು ಗೌರವಾರ್ಥವಾದ ತೋಪುಗಳನ್ನು ಹಾರಿಸಿದವು.

ರೆಸಿಡೆಂಟರವರ ಸಂಗಡ ಅವರ ಕುವರರು ಕುಮಾರ್ತೆಯರು ಬಂದಿದ್ದಾರೆ. ಇವರು ದಂಡಿನ ಸ್ಟೇಷನ್ನಿನಲ್ಲಿಯೇ ರೈಲ್‌ಗಾಡಿ ಇಳಿದು ರೆಸಿಡೆನ್ಸಿ ಬಂಗಲೆಗೆ ಹೋಗಿ ಸೇರಿಕೊಂಡರು. ಮೆ॥ ಬೂರ್ಡಿಲ್ಲನ್‌ರವರ ಲೇಟ್ ಪ್ರೈವೆಟ್ ಸೆಕ್ರೆಟರಿಯವರಾದ ಮೆ॥ ಕ್ಯಾಮ್ಮಿಂಗ್‌ರವರು ಕೂಡಲೇ ಕೂರ್ಗ್ ಬಿಹಾರ ಸಂಸ್ಥಾನದ ಸೂಪರಿಂಟೆಂಡೆಂಟ್ ಕೆಲಸದ ಭಾರವನ್ನು ವಹಿಸುವುದಕ್ಕಾಗಿ ತೆರಳುವವರಾಗಿದ್ದಾರೆ.

## ಮೈಸೂರು ಗೆಜೆಟ್ ಸಂಗ್ರಹ.

ಹೊಳಲ್ಕೆರೆ ತಾಲ್ಲೂಕ್ ಛಾರ್ಜನ್ನು ವಹಿಸಿರುವ ಶಿರಸ್ತೇದಾರ್ ಕೆ. ರಾಮರಾಯರಿಗೆ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ದಾವಣಗೆರೆ ಆಕ್ಟಿಂಗ್ ಎಕ್ಸೈಜ್ ಆ॥ ಕ॥ ಮೆ॥ ಬಿ. ರಾಮಸ್ವಾಮಯ್ಯನವರಿಗೆ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಮುಂದೆ ಹೇಳುವ ಅಮಲ್ದಾರ್‌ರುಗಳಿಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ:—ನಾಗಮಂಗಲದ ಅಮಲ್ದಾರ್ ಮೆ॥ ಎ. ಕೃಷ್ಣೆ ಅರಸಿನವರು, ಮಳವಳ್ಳಿ ಅಮಲ್ದಾರ್ ಮೆ॥ ಬಿ. ಕೇಸರ್ ಸಿಂಗರು, ಶ್ರೀರಂಗಪಟ್ಟಣದ ಅಮಲ್ದಾರ್ ಮೆ॥ ಸಿ. ವೆಂಕಟರಾಯರು.

ದಾವಣಗೆರೆ ತಾಲ್ಲೂಕ್ ಅಮಲ್ದಾರ್ ಮೆ॥ ಬಿ. ಎಸ್. ವೆಂಕಟೇರಯ್ಯನವರಿಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳೂ, ೪ನೇ ಷೆಡ್ಯೂಲ್‌ನಲ್ಲಿ ಕಂಡ ಇನ್ನು ಕೆಲವು ಹೆಚ್ಚು ಅಧಿಕಾರಗಳೂ ಕೊಡಲ್ಪಟ್ಟಿವೆ. ಇವರು ದಾವಣಗೆರೆಯಲ್ಲಿ ಅಮಲ್ದಾರ್ ಮ್ಯಾಜಿಸ್ಟ್ರೇಟರಾಗಿರುವ ತನಕಲೇ ಈ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

ಯಡೆಹಳ್ಳಿಯ ಮುನ್ಸಿಫ್ ಮೆ॥ ಎನ್. ನರಸಿಂಹಯ್ಯಂಗಾರ್ರಿಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿದೆ.

೧೯೦೩ನೇ ಅಕ್ಟೋಬರ್ ೧೭ ರಲ್ಲಿ ಮೆ॥ ಕೆ. ಎಸ್. ದೊರೆಸಾಮಿ ಐಯರು ತುಮಕೂರು ಡಿಸ್ಟ್ರಿಕ್ಟ್ ಮತ್ತು ಟ್ರೆಜರಿಯ ಛಾರ್ಜನ್ನು ಮೆ॥ ಎಂ. ಎಸ್. ನಾರಾಯಣರಾಯರಿಗೆ ಕೊಟ್ಟರು.

ಮಾಗಡಿಗೆ ತಾಲ್ಲೂಕ್ ಅಮಲ್ದಾರ್ ಮೆ॥ ಅಬ್ದುಲ್ ಹಕೀಂಯವರಿಗೆ ೧೪ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಶಿರಸ್ತೇದಾರ್ ವ್ಯಾಸರಾಯರು ತಾಲ್ಲೂಕಿನ ಚಾಲ್ತಿ ಕೆಲಸಗಳನ್ನು ನೋಡಿಕೊಳ್ಳತಕ್ಕದ್ದು.

ಮೆ॥ ಕೆ. ಎಸ್. ದೊರೆಸಾಮಿ ಐಯರನ್ನು ಮೈಸೂರು ಡಿಸ್ಟ್ರಿಕ್ಟ್ ಫ್ರಂಟಿಯರ್ ಸಬ್ ಡಿವಿಜನಿಗೆ ವರ್ಗಮಾಡಿದೆ.

ಸೀನಿಯರ್ ಅ ಕಮಿಷನರ್ ಮೆ॥ ಎಂ. ಚೆಂಗೈಯ ಚಟ್ಟಿಯವರನ್ನು ಜನರಲ್ ಡ್ಯೂಟಿಗಾಗಿ ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ.

ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಮುಂದೆ ಹೇಳುವವರಿಗೆಲ್ಲಾ ಒಂದು ದರ್ಜೆ ಬಡ್ತಿ ಸ್ಯಾಂಕ್ಷನ್ ಮಾಡಲ್ಪಟ್ಟಿದೆ—

ಮೆ॥ ಗಳಾದ ಕೆ. ಅನಂತಾಚಾರ್ಯರು, ಬಿ. ಗರುಡಾಚಾರ್ಯರು, ಬಿ. ನಂಜುಂಡಾರಾಧ್ಯರು, ಬಿ. ಬಿ. ಗರುಡಾಚಾರ್ಯರು, ಟಿ. ಜಿ. ಲಕ್ಷ್ಮೀನಾರಾಯಣರು, ಎ. ಪುಟ್ಟಸ್ವಾಮಯ್ಯನವರು, ನಿಜಗಲ್ ವೆಂಕಟರಾಯರು, ಟಿ. ಎಸ್. ರಾಘವಾಚಾರ್ಯರು, ಬಿ. ಸಿ. ಶ್ರೀನಿವಾಸಯ್ಯಂಗಾರ್ಯರು, ಕೆ. ಶ್ರೀನಿವಾಸಯ್ಯಂಗಾರ್ಯರು.

ಫಾರೆಸ್ಟ್ ಅ ಕನ್ಸರ್ವೇಟರ್ ಮೆ॥ ಬಿ. ರಾಮಸ್ವಾಮಿ ಐಯರವರು ಬೆಂಗಳೂರು ಡಿಸ್ಟ್ರಿಕ್ಟ್ ನಂದಿಗಿರಿ ಬೆಟ್ಟದ ಮತ್ತು ಸೋಲ್ದೇವನಹಳ್ಳಿ ಬೆಟ್ಟದ ಕಾಡುಗಳ ಸೆಟ್ಲ್‌ಮೆಂಟ್ ಆಫೀಸರಾಗಿ ನಿಯಮಿಸಲ್ಪಟ್ಟಿದ್ದಾರೆ.

ಮೈಸೂರ್ ಸ್ಟೇಟ್ ಟ್ರೂಪ್ಸ್ ಚೀಫ್ ಕಮ್ಯಾಂಡೆಂಟ್ ಲೆಫ್ಟಿನೆಂಟ್ ಕರ್ನಲ್ ಜೆ. ದೇಸರಾಜೆ ಅರಸಿನವರಿಗೆ ನೊವೆಂಬರ್ ೭ ರಿಂದ ೫ ದಿನಗಳ ಕ್ಯಾಜುಯಲ್ ರಜಾ ಕೊಟ್ಟಿದೆ.

ಚಿಯೂರ್ ತಾಲ್ಲೂಕಿನ ೧೪೯ ಗ್ರಾಮಗಳ ಮತ್ತು ಹೊಸದುರ್ಗ ತಾಲ್ಲೂಕಿನ ೫೯ ಸರ್ಕಾರಿ ಗ್ರಾಮಗಳ ಕಂದಾಯದ ರಿವಿಜನ್ ಸರ್ವೆ ಸೆಟ್ಲನ್ನು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ. ಡಿಸೆಂಬರ್ ೧ ರಿಂದ ರಿಯಾಯಿತಿ ಕಸಬಾದಲ್ಲಿ ಈ ಸಂಗತಿಯನ್ನು ಪ್ರಕಟಿಸಲಾರಂಭಿಸಲ್ಪಡುವದು.

ಚಿಕ್ಕಬಳ್ಳಾಪುರದ ಐದನೇ ಫಾರಂ ವಿದ್ಯಾರ್ಥಿ ಸಿ. ಎಲ್. ಗೋವಿಂದರಾಯನು ಅವಿಧೇಯನಾಗಿಯೂ, ದುರ್ನಡತೆಯುಳ್ಳವನಾಗಿಯೂ ಇದ್ದದರಿಂದ ಅವನನ್ನು ಆ ಸ್ಕೂಲಿನಿಂದ ಓಡಿಸಿದೆ. ೧೯೦೬ನೇ ಜನವರಿ ವರೆಗೆ ಅವನನ್ನು ಯಾವ ಸ್ಕೂಲಿನವರೂ ಸೇರಿಸಿಕೊಳ್ಳಕೂಡದು.

## ಹಿಂದುಸ್ಥಾನದ ರಾಜಕುಮಾರರು ಸೈನಿಕರಾಗುವುದು.

ಹಿಂದುಸ್ಥಾನದಲ್ಲಿರುವ ದೇಶೀಯ ರಾಜರುಗಳನ್ನೂ ರಾಜಕುಮಾರರನ್ನೂ ನಮ್ಮ ವೈಸ್‌ರಾಯಿಯವರು ಚುನಾಯಿಸಿ ಅವರದೇ ಪ್ರತ್ಯೇಕವಾದ ಸೈನ್ಯವಾಗಿ ತರಬೇತು ಮಾಡಿಸುತ್ತಿದ್ದಾರೆ. ಈ ಸೈನ್ಯಕ್ಕೆ ಇಂಪೀರಿಯಲ್ ಕ್ಯಾಡೆಟ್ ಕೋರ್ ಎಂಬ ಹೆಸರನ್ನಿಟ್ಟಿದ್ದಾರೆ. ಈ ಸೈನ್ಯದಲ್ಲಿ ಸದ್ಯ ೩೦ ಮಂದಿ ರಾಜರೂ ರಾಜಕುಮಾರರೂ ಇರುವರು. ಈ ಪೈಕಿ ಐದು ಮಂದಿ ದೇಶೀಯ ರಾಜರುಗಳೇ ಆಗಿರುತ್ತಾರೆ. ಇಡಾರ್ ಸಂಸ್ಥಾನದ ಮಹಾರಾಜರಾದ ಸರ್ ಪ್ರತಾಪ ಸಿಂಹರವರು ಈ ಸೈನ್ಯಕ್ಕೆ ಕರ್ನಲ್ಲಾಗಿ ನೇಮಕವಾಗಿದಾರೆ. ಜೋಧಪುರದ ಮಹಾರಾಜರವರು, ಕಿಶನ್‌ಘಡದ ಮಹಾರಾಜರವರು, ಜವೂರಾ ಸಂಸ್ಥಾನದ ಮಹಾರಾಜರವರು, ರತ್ಲಾಂ ರಾಜರವರು, ಧೋಲ್‌ಪುರದ ದೊರೆಯವರು—ಇವರೆಲ್ಲಾ ಈ ಸೈನ್ಯಕ್ಕೆ ಸೇರಿಕೊಂಡಿದಾರೆ. ಇವರಲ್ಲದೆ ಕೆಲವು ರಾಜಕುಮಾರರೂ ಹೋಗಿ ಸೇರಿ ತರಬೇತಾಗುತ್ತಿರುವರು.

ಇವರನ್ನೆಲ್ಲಾ ಹಿಂದು ಮಹಮ್ಮದೀಯರಾಗಿ ಎರಡು ಪಂಗಡವಾಗಿ, ಬೇರೆಬೇರೆ ಕಡೆಗಳಲ್ಲಿ ಅವರಿಗೆ ಊಟ ಉಪಚಾರಾದಿಗಳು ನಡೆಯುವಂತೆ ಏರ್ಪಾಡಾಗಿದೆ. ಈ ಸೈನ್ಯಕ್ಕೆ ಸೇರತಕ್ಕವರು ಮೊದಲು ಯಾವುದಾದರೊಂದು ರಾಜಕುಮಾರ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿರಬೇಕು; ಮತ್ತು ಅವರ ವಯಸ್ಸು ೧೭ಕ್ಕಿಂತ ಕಡಿಮೆಯಾಗಲಿ ೨೦ಕ್ಕೆ ಮೇಲ್ಪಟ್ಟಾಗಲಿ ಇರಕೂಡದು. ಇವರ ವಿಲಾಯಿತಿ ದಿರಸುಗಳು ಬಹಳ ನವೀನವಾಗಿಯೂ ಅತಿ ಗಂಭೀರಯುಕ್ತವಾಗಿಯೂ ಇರುತ್ತವೆ. ಈ ದಿರಸಿಗೆ ಪ್ರತಿ ಒಬ್ಬರೂ ಮೊದಲು ೧,೫೦೦ ರೂಪಾಯಿ ಮಾತ್ರ ಖರ್ಚು ಮಾಡಿದರೆ ಸಾಕಾಗುತ್ತೆ. ಇದರಲ್ಲೇ ಅವರಿಗೆ ಬೇಕಾಗುವ ಸಾಮಾನೆಲ್ಲಾ ಮಾಡಿಕೊಳ್ಳಬಹುದು. ಸೈನ್ಯಕ್ಕೆ ಸೇರಿಕೊಂಡಮೇಲೆ ಇಂಡಿಯಾ ಗವರ್ನಮೆಂಟಿನವರು ಪ್ರತಿ ಒಬ್ಬರಿಗೂ ತಿಂಗಳಿಗೆ ೫೦೦ರೂ. ನಂತೆ ಅಲೋವೆನ್ಸು ಕೊಡುತ್ತಾ ಬರುವರು. ಪ್ರತಿ ಒಬ್ಬರೂ ಇಬ್ಬರು ಸೇವಕರನ್ನೂ, ಒಬ್ಬ ಕಾಸ್ತಾರನನ್ನೂ ನೇಮಿಸಿಕೊಂಡು, ಮೂರು ಕುದುರೆಗಳನ್ನು ಇಟ್ಟುಕೊಳ್ಳತಕ್ಕದ್ದು.

ಈ ರಾಜಕುಮಾರ ಯುವಕರನ್ನು ಬಹಳ ಎಚ್ಚರಿಕೆಯಿಂದ ಮೇಲ್ವಿಚಾರಣೆ ನೋಡಿಕೊಳ್ಳುತ್ತಾರೆ. ಅವರಲ್ಲಿ ಸ್ವಲ್ಪವಾದರೂ ಸೋಮಾರಿತನವಾಗಲಿ, ಆಜ್ಞೋಲ್ಲಂಘನೆಯಾಗಲಿ, ದುರ್ನಡತೆಯಾಗಲಿ ಹುಟ್ಟದಂತೆ ಬಹು ಕಠಿಣವಾದ ಕಾನೂನು ಮಾಡಿದ್ದಾರೆ. ಅವರ ನಡತೆಯ ವಿಷಯದಲ್ಲಿ ವೈಸ್‌ರಾಯಿಯವರು ವಿಶೇಷ ಶ್ರದ್ಧೆಯಿಂದ ನೋಡಿಕೊಳ್ಳುತ್ತಾ, ಯಾರಲ್ಲಾದರೂ ದುರ್ನಡತೆ ಕಂಡು ಬಂದರೆ ಆ ವಿಷಯವು ನೇರಾ ತಮಗೇ ರಿಪೋರ್ಟಾಗಬೇಕೆಂದು ವಿಧಿಸಿರುತ್ತಾರೆ.

ಈ ರಾಜಕುಮಾರ ಸೈನಿಕರನ್ನು ತರಬೇತು ಮಾಡುವುದಕ್ಕೆ ಎರಡು ಮೂರು ವರುಷ ನೇಮಕ ಮಾಡಿದಾರೆ. ಪ್ರತಿ ವರುಷ ಅಕ್ಟೋಬರಿನಿಂದ ಮಾರ್ಚಿ ಆಖೈರ್ ವರೆಗೆ ಒಂದು ಸಲವೂ, ಮೇ ಆರಂಭದಿಂದ ಆಗಸ್ಟು ತನಕ ಎರಡನೇ ಸಲವೂ ಈ ರಾಜಕುಮಾರರಿಗೆ ಶಸ್ತ್ರ ವಿದ್ಯೆಯನ್ನು ಹೇಳಿಕೊಟ್ಟು ತರಬೇತು ಮಾಡುವರು. ಚಳಿಗಾಲದಲ್ಲಿ ಬೆಳಗ್ಗೆ ೮ ರಿಂದ ೯ ಗಂಟೆ ತನಕ ಪೆರೇಡ್ ಡ್ರಿಲ್, ತರುವಾಯ ಊಟ, ಅನಂತರ ೧೦ ರಿಂದ ೧೧ ಗಂಟೆಯವರೆಗೆ ಕುದುರೆ ಸವಾರಿ ಡ್ರಿಲ್, ೧೨ ರಿಂದ ೨ ಗಂಟೆ ತನಕ ಉಪನ್ಯಾಸ ಮತ್ತು ವಿದ್ಯಾಭ್ಯಾಸ, ತರುವಾಯ ಎಲ್ಲಿ ಬೇಕಾದರೂ ಹೋಗ ಬಹುದು. ಆದರೆ ಯಾರೇ ಆಗಲಿ ಅಧಿಕಾರಿಯ ಅಪ್ಪಣೆ ಇಲ್ಲದೆ ರಾತ್ರಿ ೯॥ ಗಂಟೆಯ ಮೇಲೆ ಗೈರ್ ಹಾಜರಾಗಕೂಡದು. ನಿದ್ರೆ ಹೋಗುವಾಗ್ಗೆ ಎಲ್ಲರೂ ತಮ್ಮ ತಮ್ಮ ಕೊಠಡಿಗಳಲ್ಲಿ ಹಾಜರಿರಬೇಕು.

ಬೇಸಿಗೆಯಲ್ಲಿ ಈ ಸೈನಿಕರಿಗೆ ಪ್ರಾತಃಕಾಲ ೬ ಗಂಟೆಯಿಂದ ೭॥ ತನಕ ಪೆರೇಡ್, ೯ ರಿಂದ ೧೨ ರ ತನಕ ವಿದ್ಯಾಭ್ಯಾಸ, ಮಧ್ಯಾಹ್ನಾನಂತರ ಸವಾರಿ, ಪೋಲೋ, ಕ್ರಿಕೆಟ್ ಮೊದಲಾದ ಆಟಪಾಟ, ಇವುಗಳು ನಡೆಯುತ್ತವೆ. ಅವರ ಶರೀರವು ಗಟ್ಟಿಯಾಗುವುದಕ್ಕೆ ಮೈದಾನದಲ್ಲಿ ಅವರು ವಿಶೇಷವಾಗಿ ಆಟಗಳನ್ನಾಡುವಂತೆ ಏರ್ಪಾಡು ಮಾಡಿದಾರೆ. ಆದರೆ ಯಾರೇ ಆಗಲಿ ಯಾವ ವಸ್ತುಗಳನ್ನೂ ಬಾಕಿ ಕೊಳ್ಳಕೂಡದು.

ಈ ಉತ್ಕೃಷ್ಟವಾದ ಸೈನಿಕರನ್ನು ಲಾರ್ಡ್ ಕರ್ಜನ್ ಪ್ರಭುಗಳೇ ಚುನಾವಣೆ ಮಾಡಿ ನೇಮಿಸಿಕೊಂಡಿರುತ್ತಾರೆ. ಇವರನ್ನು ವೈಸ್‌ರಾಯಿಯವರು "ನನ್ನ ಸ್ವೀಯಮಿತ್ರರು" ಎಂದು ಕರೆಯುವರು. ಮೊನ್ನೆ ಜನವರಿಯಲ್ಲಿ ಡೆಹಲಿ ದರ್ಬಾರಿನಲ್ಲಿ ನಡೆದ ಚಕ್ರವರ್ತಿಯವರ ಕಿರೀಟಧಾರಣೋತ್ಸವದ ಜ್ಞಾಪಕಾರ್ಥವೂ ದಿಗಂತ ವಿಶ್ರಾಂತವೂ ಆದ ಆ ಚಮತ್ಕಾರವಾದ ರಾಜರುಗಳ ಮೆರವಣಿಗೆಯಲ್ಲಿ ಈ ರಾಜಕುಮಾರರ ಸೈನ್ಯವನ್ನು ವೈಸ್‌ರಾಯ್ ಪ್ರಭುಗಳು ತಮ್ಮ ಎಡಬಲ ಪಾರ್ಶ್ವಗಳಲ್ಲಿ ಕರೆದುಕೊಂಡು ಹೋದರು. ಇಂಥಾ ಸನ್ಮಾನವು ಇತರರಿಗೆ ಲಭ್ಯವಾಗಲಿಲ್ಲ.

ನಮ್ಮ ಮೈಸೂರು ಸಂಸ್ಥಾನದ ಮಹಾರಾಜರವರ ಸಹೋದರರಾದ ರಾಜಕುಮಾರ್ ನರಸರಾಜ ಒಡೆಯರವರು ವಿದ್ಯಾಭ್ಯಾಸ ಮಾಡುವುದಕ್ಕಾಗಿ ಕಳೆದ ೬ನೆ ತಾರೀಖು ಸೋಮವಾರ ಅಜ್ಮೀರಕ್ಕೆ ದಯಮಾಡಿರುತ್ತಾರಷ್ಟೆ. ಇವರು ಅಲ್ಲಿ ವಿದ್ಯಾಭ್ಯಾಸ ಮಾಡಿ ಆದ ನಂತರ ಈ ಇಂಪೀರಿಯಲ್ ಕ್ಯಾಡೆಟ್ ಕೋರ್ ಎಂಬ ರಾಜಕುಮಾರ್ ಸೈನ್ಯಕ್ಕೆ ಸೇರಿಕೊಂಡು ತರಬೇತಾಗಿ ಬರುವರೆಂದು ತಿಳಿಯಬಂದಿದೆ.

## ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಸಾಮಾನ್ಯ ವಿಷಯಗಳು.

### ಐದನೆಯ ದಿನ—ಶನಿವಾರ.

ಪ್ರತಿನಿಧಿಗಳ ಪ್ರಾರ್ಥನೆ—ಪ್ಲೇಗಿನ ನೆಪದಿಂದ ಪ್ರತಿನಿಧಿ ಸಭೆಯು ರಾಜಧಾನಿಯಲ್ಲಿ ನವರಾತ್ರಿ ಕಾಲದಲ್ಲಿ ನಡೆಯದೆ ತಪ್ಪಿ ಹೋಗುತ್ತೆ. ಪ್ರಜೆಗಳ ಸುಖದುಃಖಗಳನ್ನು ಗೌವರ್ನಮೆಂಟಿಗೆ ಅರಿಕೆ ಮಾಡಿಕೊಳ್ಳಲು ಅವಕಾಶವಾಗುತ್ತಿಲ್ಲ. ಆದುದರಿಂದ ಪ್ರತಿ ವರ್ಷವೂ ಪ್ರತಿನಿಧಿ ಸಭೆಯನ್ನು ರಾಜಧಾನಿಯಲ್ಲಿ ಒಂದಾವೃತ್ತಿ, ಬೆಂಗಳೂರಿನಲ್ಲಿ ಒಂದಾವೃತ್ತಿ, ಅಂತು ಎರಡು ವೇಳೆ ನಡೆಸುವಂತೆ ಆಜ್ಞೆಯಾದರೆ ಪ್ರತಿನಿಧಿಗಳಾದ ನಾವು ಪ್ರಜೆಗಳ ಕಷ್ಟಸುಖಗಳನ್ನು ನಮ್ಮ ಸ್ವಂತ ಖರ್ಚಿಟ್ಟುಕೊಂಡು ಬಂದು ಅರಿಕೆಮಾಡಿಕೊಳ್ಳುವೆವು.

ದಿವಾನರವರ ಉತ್ತರ—ಇದು ನಡೆಯತಕ್ಕ ವಿಷಯವಲ್ಲ; ಆಗ ತಕ್ಕದ್ದಲ್ಲ.

ಪ್ರ—ವಿಶೇಷ ಉತ್ಸವ ಕಾಲಗಳಲ್ಲಿ ಪ್ರತಿನಿಧಿಗಳಿಗೆ ಭಾರೀ ದರ್ಬಾರುಗಳಿಗೂ ಅರಮನೆಯಲ್ಲೂ ಆಸ್ಥಾನದಲ್ಲೂ ತಕ್ಕ ಮರ್ಯಾದೆಗಳು ದೊರಕುವುದಿಲ್ಲ. ಅಧಿಕಾರಿಗಳಿಗೆ ಪ್ರಯಾಣದ ಖರ್ಚು, ಊಟದ ಖರ್ಚು ಮೊದಲಾದ್ದನ್ನು ಕೊಡುವುದಲ್ಲದೆ ಖಿಲ್ಲತ್ತುಗಳನ್ನೂ ಕೊಡುತ್ತಾರೆ.

ಉ.—ಶ್ರೀಮನ್ ಮಹಾರಾಜರವರು ಇಷ್ಟ ಬಂದಂತೆ ಮಾಡುತ್ತಾರೆ. ಇಂಥಾ ವಿಷಯವನ್ನು ನಾವು ಚರ್ಚಿಸುವುದು ಸರಿಯಲ್ಲ.

ಪ್ರ.—ಸಿಕಾರಿಗೆ ಲೈಸೆನ್ಸು ದೊರಕುವುದು ಬಹಳ ಪ್ರಯಾಸಕರ. ಜಾಗ್ರತೆಯಾಗಿ ಕೊಡುವಂತೆ ಅನುಕೂಲಮಾಡಿಕೊಡಬೇಕು.

ಉ.—ಯಾರಿಗಾದರೂ ಅಂಥಾ ಲೈಸೆನ್ಸು ಸಿಕ್ಕುವುದು ಸಾವಕಾಶವಾಯಿತೆಂದು ತಿಳಿದುಬಂದರೆ ವಿಚಾರಿಸಬಹುದೇ ಹೊರ್ತು ಇದಕ್ಕೋಸ್ಕರ ಕಾನೂನಿನಲ್ಲೇ ಬದಲಾವಣೆ ಮಾಡಲಾಗುವುದಿಲ್ಲ.

ಪ್ರ—ನಮ್ಮ ಸೀಮೆಯಲ್ಲಿ ಪ್ಲೇಗಿನ ಜಾಡ್ಯ ವಿಶೇಷವಾಗಿರುವುದರಿಂದ ಆರೋಗ್ಯ ಸೂತ್ರಗಳನ್ನು ಹಳ್ಳಿಗಾಡಿನ ಪ್ರಜೆಗಳು ತಿಳಿದುಕೊಳ್ಳುವಂತೆ ಸರ್ಕಾರದವರು ಸಣ್ಣ ಸಣ್ಣ ಪುಸ್ತಕಗಳನ್ನು ಅಚ್ಚುಹಾಕಿಸಿ ಹಳ್ಳಿ ಸ್ಕೂಲ್ ಮಾಸ್ಟರುಗಳಿಗೆಲ್ಲಾ ಹಂಚಿಕೆಯಾಗುವಂತೆ ಮಾಡಿದರೆ ಅವರು ಆ ಆರೋಗ್ಯ ಸೂತ್ರಗಳನ್ನು ಓದಿಕೊಂಡು, ವಾರಕ್ಕೊಂದಾವರ್ತಿಯಾದರೂ ಪ್ರಜೆಗಳ ಮುಖಂಡರನ್ನು ಬರಮಾಡಿಕೊಂಡು, ಅವುಗಳ ವಿಷಯವಾಗಿ ಉಪನ್ಯಾಸ ಮಾಡಿ, ವಿವೇಕ ಕಲಿಸಿಕೊಡಲು ಸುಲಭವಾಗುತ್ತೆ.

ಉ—ಇದು ಒಳ್ಳೆ ಉಪಾಯ. ಹಾಗೆ ಮಾಡಬಹುದೆಂದು ತೋರುತ್ತೆ.

ಪ್ರ—ವ್ಯವಸಾಯದ ಬ್ಯಾಂಕುಗಳಲ್ಲಿ ಒಬ್ಬ ಮೆಂಬರು ಸಾಲದೆಯ ವ್ಯವಸಾಯಕ್ಕಲ್ಲದೆ ಇತರ ಕೆಲಸಗಳಿಗೆ ಆ ಹಣವನ್ನು ಖರ್ಚುಮಾಡಿಕೊಂಡರೆ ಆ ಸಾಲಕ್ಕೆ ಮೆಂಬರುಗಳೆಲ್ಲಾ ಹೊಣೆಗಾರರಾಗಬೇಕಾಗಿದೆ ಮತ್ತು ಆ ಸಾಲವನ್ನು ಸರ್ಕಾರದವರು ಕಂದಾಯದ ಬಾಕಿಯಂತೆ ವಸೂಲ್ ಮಾಡಬೇಕೆಂದು ಹುಕುಂ ಆಗಿದೆ. ಇದನ್ನು ತಪ್ಪಿಸಿಕೊಡಬೇಕು, ಅಲ್ಲದೆ ಸಾಲ ತೀರಿಸುವುದಕ್ಕೆ ಇನ್ನು ಸ್ವಲ್ಪ ಹೆಚ್ಚು ಮಿಯಾದಿ ಕೊಡಬೇಕು.

ಉ—ಬಹಳ ಸಣ್ಣ ಬಾಕಿ ನಿಂತುಕೊಂಡಿದೆ. ಆದುದರಿಂದ ಈ ವಿಷಯದಲ್ಲಿ ಸದ್ಯ ಇರುವ ಕಾನೂನನ್ನು ಬದಲಾಯಿಸಲಾಗದು.

ಪ್ರ—ಗ್ರಾಮಾಂತರಗಳಲ್ಲಿ ಕೆಂಗಸರಿಗೂ, ಹಾಮಗರಿಗೆ, ಅಬಲರಾದ ರೈತರಿಗೂ ಸೇರಿದ ಜಮೀನು, ತೋಟ, ಹಿತ್ತಲು ಮುಂತಾದ ಸ್ವತ್ತನ್ನು ಬಲಿಷ್ಠರು ಆಕ್ರಮಿಸಿಕೊಳ್ಳುತ್ತಾರೆ. ಇಂಥಾ ಮೊಕದ್ದಮೆಗಳನ್ನು ತಾಲ್ಲೂಕ್ ಅಮಲ್ದಾರರೇ ಹಿಡಿದು ತನಿಖೆ ಮಾಡುವಂತೆ ಅವರಿಗೆ ಅಧಿಕಾರ ಕೊಟ್ಟರೆ ತುಂಬಾ ಉಪಕಾರವಾಗುತ್ತೆ.

ಉ—ಮೊಂಟಾಯಿ ಮ್ಯಾಜಿಸ್ಟ್ರೇಟರ ಆಕ್ಟನ್ನು ಬದಲಾವಣೆಯಿಂದ ಇಲ್ಲಿಗೂ ಜಾರಿಗೆ ತಂದ ಮೇಲೆ ಈ ಕೊರತೆಗಳು ತಕ್ಕಮಟ್ಟಿಗೆ ನಿವಾರಣೆಯಾಗುವುವು.

ಪ್ರ.—ಸರ್ಕಾರದವರು ಅಸಿಸ್ಟೆಂಟ್ ಕಮೀಷನರ ದರ್ಜೆಗೆ ಜನರನ್ನು ದಾಖಲ್ ಮಾಡಿಕೊಳ್ಳುವುದಕ್ಕೆ ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ಆಗಾಗ್ಗೆ ನಡಸುವರು. ಇದರಲ್ಲಿ ಪರದೇಶೀಯರು ಸಹಾ ಪರೀಕ್ಷೆಗೆ ಬಂದು ತೇರ್ಗಡೆ ಹೊಂದಿ ಅಧಿಕಾರ ಪಡೆಯಲು ಅವಕಾಶವಿರುವುದನ್ನು ತೆಗೆದುಬಿಡಬೇಕು.

ಉ—ಸದ್ಯ ಆ ಪರೀಕ್ಷೆಯನ್ನು ನಡಿಸುವ ಯೋಚನೆಯೇ ಇಲ್ಲ; ನಡಿಸಬೇಕಾದಾಗ ನೋಡೋಣ.

### ಪ್ರತಿನಿಧಿಗಳ ವಿಜ್ಞಾಪನೆ.

ಸಾಮಾನ್ಯ ವಿಷಯಗಳೆಲ್ಲಾ ಪೂರೈಸಿದ ಕೂಡಲೇ ಮ॥ ಶ್ರೀನಿವಾಸರಾಯರು ದಿವಾನರವರನ್ನು ಕುರಿತು ಪ್ರತಿನಿಧಿಗಳ ಪರವಾಗಿ ಅರಿಕೆಮಾಡಿದ್ದೇನೆಂದರೆ—

ಈ ಸಲ ರಾಜಧಾನಿಯಲ್ಲಿ ಪ್ಲೇಗ್ ಉಪದ್ರವ ಹಾವಳಿಯು ಹೆಚ್ಚಾಗಿದ್ದರೂ ಶ್ರೀಮನ್ಮಹಾರಾಜರವರು ಸಂಸ್ಥಾನಾಧಿಕಾರವನ್ನು ವಹಿಸಿದ್ದ ಇದೇ ಮೊದಲನೇ ಸಂವತ್ಸರವಾದ್ದರಿಂದ ಅವರು ಈ ಪ್ರತಿನಿಧಿ ಸಭೆಯನ್ನು ನಡಿಸಿದ್ದೂ ಅಲ್ಲದೇ ದಯವಿಟ್ಟು ಇಲ್ಲಿಗೆ ದಯಮಾಡಿ ಅಗ್ರಾಸನವನ್ನು ವಹಿಸಿ ತಮಗಿರುವ ಪ್ರಜಾಕ್ಷೇಮ ಚಿಂತನೆಯನ್ನೂ, ದಯಾಪೂರ್ಣ ಹೃದಯವನ್ನೂ ಪ್ರಕಾಶಪಡಿಸಿದ್ದು ನಮ್ಮಗಳಿಗೆಲ್ಲಾ ತುಂಬಾ ಸಂತೋಷವನ್ನುಂಟುಮಾಡಿದೆ; ನಾವುಗಳು ತುಂಬಾ ಕೃತಜ್ಞರಾಗಿರುತ್ತೇವೆ. ಶ್ರೀಮನ್ ಮಹಾರಾಜಾ ಸರ್ಕಾರದವರು ರೈತರ ಹಿತ್ತಲು ಕಂದಾಯವನ್ನು ವಜಾ ಮಾಡಿದರು; ಹೊಸವಳಿ ಜಮೀನ್ ಸೇಂದಿ ಹಕ್ಕನ್ನು ಜಮೀನ್ದಾರರಿಗೆ ವಹಿಸಿ ಕೊಟ್ಟರು; ಸಾಯರ್ ಸುಂಕವನ್ನು ರೂ ೧—೧೨—೦ ಯಿಂದ ರೂ ೦—೧೨—೦ ಗೆ ಇಳಿಸಿದರು. ಇದನ್ನು ಇನ್ನೂ ಕಮ್ಮಿ ಮಾಡಬೇಕೆಂದು ನಮ್ಮ ಭಾಗದಲ್ಲಿ ಶ್ರೀಮನ್ ಮಹಾರಾಜರವರು ಆಲೋಚನೆ ಮಾಡುತ್ತಿರುವರಾಗಿ ತಾವು ಅಪ್ಪಣೆ ಕೊಡಿಸಿರುತ್ತೀರಿ. ಶೇಕ್ದಾರ [illegible] ಬೇಗನೆ ಜಾರಿಗೆ ಬರುವುದೆಂತಲೂ, ತಾಲ್ಲೂಕ್ [illegible]ಗಳನ್ನು ವಿಸ್ತರಿಸುವುದಕ್ಕೆ ಹೊಸ ಕಾನೂನ್ ಜಾರೀ ಆಗುವುದಾಗಿದೆಯೆಂತಲೂ ತಾವು ಅಪ್ಪಣೆ ಕೊಟ್ಟಿರುವುದರ ವಿಷಯದಲ್ಲಿ ನಾವು ತುಂಬಾ ಕೃತಜ್ಞರಾಗಿರುತ್ತೇವೆ. ಈ ನಮ್ಮಗಳ ಕೃತಜ್ಞತೆಯನ್ನು ತಾವು ಶ್ರೀಮನ್ ಮಹಾರಾಜರವರಿಗೆ ಅರಿಕೆ ಮಾಡಬೇಕೆಂದು ಬೇಡುತ್ತೇವೆ.

### ಡಿಸ್ಟ್ರಿಕ್ಟ್ ವಾರ್ ವಿಷಯಗಳು.

ತರುವಾಯ ದಿವಾನರವರು ಎಂಟು ಡಿಸ್ಟ್ರಿಕ್ಟುಗಳನ್ನೂ ಒಂದೊಂದಾಗಿ ಕರೆದು ಪ್ರತಿ ಡಿಸ್ಟ್ರಿಕ್ಟಿನವರೂ ವರ್ತಕರಿಗೂ ರೈತರ ಮುಂತಾದವರಿಗೂ ಇರುವ ಕೊರತೆಗಳನ್ನು ಕೇಳಿ ಸಂದರ್ಭಾನುಸಾರವಾಗಿ ಉತ್ತರಗಳನ್ನಿತ್ತರು. ಇಲ್ಲಿಗೆ ೧೯೦೩ನೆ ಇಸವಿಯ ಪ್ರಜಾಪ್ರತಿನಿಧಿ ಸಭಾ ಕಾರ್ಯಗಳು ಮುಕ್ತಾಯವಾದುವು.

### ಪ್ರತಿನಿಧಿಗಳ ವಿಜ್ಞಾಪನೆ.

ಕಡೆಯಲ್ಲಿ ಮ॥ ಪ॥ ಅಮಲ್ದಾರ್ ಮಾ॥ ಹಸನಲ್ಲಿ ಬೇಗ್‌ರವರು ಎದ್ದು, ದಿವಾನರವರನ್ನು ಕುರಿತು ಪಾರ್ಸಿ ಭಾಷೆಯಲ್ಲಿ ಅವರೇ ಖುದ್ದು ರಚಿಸಿದ್ದ ಒಂದು ಕವನವನ್ನು ಹೇಳಿ, ಕನ್ನಡದಲ್ಲಿ ಅರಿಕೆ ಮಾಡಿದ್ದೇನೆಂದರೆ—

ಈ ಸಲ ನಡೆದ ಪ್ರತಿನಿಧಿ ಸಭೆಯನ್ನು ನೋಡಿದರೆ ಲೇಟ್ ರಂಗಾಚಾರ್ಯರ ಕಾಲವು ಜ್ಞಾಪಕಕ್ಕೆ ಬರುತ್ತದೆ. ಆಗಿನಂತೆಯೇ ಈ ಸಲ ಪ್ರತಿನಿಧಿಗಳಿಗೆ ತುಂಬಾ ಉಪಚಾರ ನಡೆಯಿತು. ಸರ್ಕಾರದಿಂದ ಬಂದಂಥವರಿಗೆ ಪ್ರತ್ಯೇಕವಾದ ಬಿಡಾರಗಳನ್ನು ಬಿಡಿಸಿಕೊಟ್ಟು, ಅವರ ಯೋಗಕ್ಷೇಮಗಳನ್ನು ವಿಚಾರಿಸಿಕೊಳ್ಳುವುದಕ್ಕೂ ಭೋಜನಾದಿಗಳಿಗೂ ತುಂಬಾ ಸಹಾಯವನ್ನು ಉಂಟುಮಾಡಿದಂತೆ [illegible]. ಈ ಸಭೆಯಲ್ಲಾದರೇ ನಾವುಗಳು ಅವಿವೇಕವಾದ ಅನೇಕ ವಿಷಯಗಳನ್ನು ಎತ್ತಿ ಚರ್ಚೆಮಾಡುವುದಕ್ಕಾರಂಭಿಸಿದಾಗ್ಯೂ ತಾವು ಸ್ವಲ್ಪವೂ ಬೇಸರಪಟ್ಟುಕೊಳ್ಳದೆ ಸಮಾಧಾನವಾದ ಉತ್ತರಗಳನ್ನೆಲ್ಲಾ ದಯಪಾಲಿಸಿದ್ದಕ್ಕಾಗಿ ನಾನು ಎಷ್ಟು ಕೃತಜ್ಞತೆಯನ್ನು ಹೇಳಿದರೂ ಕಡಿಮೆಯಾಗಿರುತ್ತೆ. [illegible] ತಾವು ಸಕಲ ವಿಷಯಗಳನ್ನೂ ತಿಳಿದವರಾಗಿರುತ್ತೀರಿ. [illegible] ನಾವು ವಿಷಯಗಳನ್ನು ಹೆಚ್ಚಾಗಿ ಹೇಳುವುದು [illegible] ಮುಂದೆ ಬಂದು ಹುಟ್ಟುವಂತೆಯೆ [illegible] 'ಆ[illegible]ಡುತ್ತೇವೆ,' ಆಗಲಿ ಎಂಬ ರೀತಿಯಲ್ಲಿ ಉತ್ತರ ದಯಪಾಲಿಸಿದುದರಿಂದ ನಾನು ತುಂಬಾ ಕೃತಜ್ಞನಾಗಿದ್ದೇನೆ.

### ದಿವಾನರವರ ಉತ್ತರ.

ಮೇಲ್ಕಂಡ ಮಾತುಗಳನ್ನು ದಿವಾನರವರು ಕೇಳಿ ತುಂಬಾ ಸಂತೋಷಪಟ್ಟು ಪ್ರತಿನಿಧಿಗಳನ್ನು ಕುರಿತು ಅಪ್ಪಣೆ ಕೊಡಿಸಿದ್ದೇನೆಂದರೆ—

ನೀವುಗಳೆಲ್ಲಾ ರಾಜಧಾನಿಯಲ್ಲಿ ಉಪದ್ರವವಿದ್ದಾಗ್ಯೂ ಪ್ರಜೆಗಳಿಗೆ ಉಪಕಾರ ಮಾಡಬೇಕೆಂದು, ಅವರ ಕಷ್ಟಗಳನ್ನು ಗವರ್ನಮೆಂಟಿಗೆ ಅರಿಕೆಮಾಡಬೇಕೆಂದು ಉತ್ಸಾಹಪಟ್ಟು, ನಿಮ್ಮ ಕಷ್ಟವನ್ನು ಲಕ್ಷ್ಯಮಾಡದೆ, ಪ್ರಯಾಣಪಟ್ಟು ಬಂದಿರುತ್ತೀರಿ. ಇದು ತುಂಬಾ ಶ್ಲಾಘ್ಯವಾದದ್ದು. ಪ್ರಜೆಗಳ ಕಷ್ಟವನ್ನು ನೀವು ಗಂಭೀರವಾಗಿಯೂ ಯೋಗ್ಯವಾದ ರೀತಿಯಲ್ಲೂ ತಿಳಿಸಿದ್ದಕ್ಕಾಗಿ ಗವರ್ನಮೆಂಟಿನವರು ಕೃತಜ್ಞರಾಗಿದಾರೆ.

ಕೆಲವು ಕಾಲಕ್ಕೆ ಮುಂಚೆ ಉತ್ತರ ದೇಶದಲ್ಲಿ ಒಂದು ದೊಡ್ಡ ಸಭಾಮಂದಿರದಲ್ಲಿ ಲಾರ್ಡ್ ಕರ್ಜನ್ ಪ್ರಭುಗಳು ಅಧಿಕಾರಿಗಳನ್ನು ಕುರಿತು—ಜನರು ನಿಮ್ಮ ಬಳಿಗೆ ಬಂದ ಮಾತ್ರಕ್ಕೇ ಅವರಿಗೆ ಸಕಲ ವಿಷಯಗಳೂ ತಿಳಿದಿರುತ್ತವೆಂದು ನೀವು ತಿಳಿಯುವುದು ಸರಿಯಲ್ಲ; ಅನೇಕ ಸಂಗತಿಗಳು ಅವರಿಗೆ ತಿಳಿಯುವುದಿಲ್ಲ. ಪ್ರಜೆಗಳಲ್ಲಿ ಬೇರೆಬೇರೆ ನಾನಾರೀತಿಯ ಮನುಷ್ಯರು ಇರುತ್ತಾರೆ. ಅವರಿಗೆ ಇತರ ವಿಷಯ ಜ್ಞಾನವೂ, ವಿವೇಕವೂ ಅಧಿಕಾರಿಗಳಿಗಿರುವಷ್ಟು [illegible] ಅಧಿಕಾರಿಗಳು ಅವರಿಂದ ಅನೇಕ ಹೊಸ ವಿಷಯಗಳನ್ನು ಕಲಿತುಕೊಳ್ಳಬಹುದಾಗಿದೆ. ಅಂಥಾ ಜನರ ಮುಖಂಡರನ್ನು ಅಧಿಕಾರಿಗಳು ತಿರಸ್ಕರಿಸುವುದು ಯೋಗ್ಯವಲ್ಲ ಎಂಬದಾಗಿ ಅಪ್ಪಣೆ ಕೊಡಿಸಿರುತ್ತಾರೆ. ಅದಕಾರಣ ನಮಗೆ ಎಲ್ಲಾ ವಿಷಯಗಳೂ ತಿಳಿದಿವೆ ಎಂತಲೂ ನಿಮಗೆ ಏನೂ ತಿಳಿಯುವುದಿಲ್ಲವೆಂತಲೂ ಹೇಳಲಾಗದು. ಕಳೆದ ಐದು ದಿನಗಳಲ್ಲಿ ನೀವು ಮಾಡಿದ ಚರ್ಚೆಯಿಂದ ನಾನು ಅನೇಕ ಹೊಸ ವಿಷಯಗಳನ್ನು ಕಲಿತುಕೊಂಡಿರುತ್ತೇನೆ.

ಪ್ರತಿನಿಧಿಗಳೆಲ್ಲಾ ಸುಖವಾಗಿ ಹೋಗಿ ಸೇರಲೆಂತಲೂ, ಈ ಪ್ರತಿನಿಧಿ ಸಭೆಯು ಎಲ್ಲಾ ವಿಷಯಗಳಲ್ಲೂ ಸರಾಗವಾಗಿಯೂ ಸಂತೋಷಕರವಾಗಿಯೂ ನಡೆಯಿತೆಂತಲೂ ಶ್ರೀಮನ್ ಮಹಾರಾಜರವರಿಗೆ ಅರಿಕೆ ಮಾಡುತ್ತೇನೆ.

## ಇಂಡಿಯಾ ದೇಶದ ವೃತ್ತಾಂತಗಳು.

ವೈಸ್‌ರಾಯಿಯವರು ಅರಬ್ಬೀ ದೇಶದಿಂದ ವಾಪಸು ಬಂದನಂತರ ರಾಜಪುಟಾನಾಕ್ಕೆ ಹೋಗಿ ಡಿಸೆಂಬರ್ ೧೨ ರಲ್ಲಿ [illegible]ರ್ ಸಂಸ್ಥಾನದಲ್ಲಿ ಮಹಾರಾಜರವರಿಗೆ ರಾಜ್ಯಾಭಿಷೇಕ ಮಾಡುವರೆಂದು ಗೊತ್ತಾಗಿದೆ.

ಪೂಂಸಾ, ವಾಲ್ಟರ್ಸ್ ಎಂಬಿಬ್ಬರು ಸ್ತ್ರೀಯರು ಸುಂಕ ಕಟ್ಟ ದೆ ಮೋಸಮಾಡಿ ಬಹಳ ಅಫೀಮನ್ನು ರಂಗೂನಿಗೆ ಸಾಗಿಸಿಕೊಂಡು ಹೋಗಿದ್ದರಷ್ಟೆ. ಅವರಿಬ್ಬರಿಗೂ ೧,೫೦೦ ರೂ. ಜುಲ್ಮಾನೆಯೂ ೬ ತಿಂಗಳ ಸಜಾವೂ ಆಯಿತು.

❖❖❖❖

ಕೃಷ್ಣಾನದಿಯ ಪ್ರವಾಹದ ದೆಸೆಯಿಂದ ಬೆಜ್ವಾಡಾದಲ್ಲಿದ್ದ ಭಾರೀ ಅಣೆಕಟ್ಟಿಗೂ ನಾಲೆಗಳಿಗೂ ಕಳೆದ ತಿಂಗಳಲ್ಲಿ ತುಂಬಾ ಅಪಾಯವಾಯಿತಷ್ಟೆ. ಈಗ ಸರ್ಕಾರದವರು ಅವುಗಳ ರಿಪೇರಿ ಕೆಲಸಕ್ಕೆ ೫-೬ ಲಕ್ಷ ರೂಪಾಯಿ ಖರ್ಚು ಮಾಡಬೇಕಾಗಿರುವುದು.

❖❖❖❖

ಆಗ್ರಾ ಪಟ್ಟಣದಲ್ಲಿರುವ ಲೋಕ ಪ್ರಖ್ಯಾತವಾದ ತಾಜ್‌ಮಹಲ್ ಕಟ್ಟಡಕ್ಕೆ ಸಿಡ್ಲುಬಿದ್ದು ಏನೋ ಅಪಾಯವಾಗಿದೆ ಎಂದು ಕೇಳುವುದರಿಂದ ಕಾರಣ ಅದನ್ನು ನೋಡಿಕೊಂಡು ಬರುವುದಕ್ಕಾಗಿ ಲಾರ್ಡ್ ಕರ್ಜನ್ ಪ್ರಭುಗಳು ಸ್ವತಃ ಅಲ್ಲಿಗೆ ದಯಮಾಡುತ್ತಾರೆ.

❖❖❖❖

ಕಳೆದ ವರುಷ ಕಲ್ಕತ್ತಾ ಪಟ್ಟಣದ ಸರ್ಕಾರಿ ಟಂಕಸಾಲೆಯಲ್ಲಿ ೯,೯೫,೦೩,೩೭೫ ಬೆಳ್ಳಿ ನಾಣ್ಯಗಳು (ರೂಪಾಯಿ, ಪಾವಲಿ, ದೊಡ್ಡಾಣೆಗಳು) ಅಚ್ಚು ಹಾಕಲ್ಪಟ್ಟುವು. ಬೊಂಬಾಯಿ ಪಟ್ಟಣದ ಟಂಕಸಾಲೆಯಲ್ಲಾದರೋ ಬರೀ ರೂಪಾಯಿಗಳೇ ೭,೦೩,೯೧,೫೦೭ನ್ನು ಛಾಪಾ ಹಾಕಿರುತ್ತಾರೆ.

❖❖❖❖

ಕೆನಡಾ ರಾಜ್ಯದಲ್ಲಿ ಗವರ್ನರ್ ಜನರಲ್ಲಾಗಿರುವ ಲಾರ್ಡ್ ಮಿಂಟೋ ಪ್ರಭುಗಳು ಲಾರ್ಡ್ ಕರ್ಜನವರ ಕಾಲಾನಂತರ ಹಿಂದೂಸ್ಥಾನದ ವೈಸ್‌ರಾಯಿ ಪದವಿಗೆ ಬರುವವರಾಗಿದ್ದಾರೆಂದು ಕೆನಡಾ ರಾಜ್ಯದ ಮುಖ್ಯ ಪಟ್ಟಣವಾದ ಒಟ್ಟಾವಾ ನಗರದಲ್ಲಿ ಅಧಿಕಾರಿಗಳು ಮಾತನಾಡಿಕೊಳ್ಳುತ್ತಿರುವರು ಎಂಬದಾಗಿ ತಂತೀ ವರ್ತಮಾನ ಬಂದಿದೆ.

❖❖❖❖

ಬರ್ಮಾ ದೇಶಕ್ಕೆ ಸೇರಿದ ಮಾಂಡಲೇ ನಗರದಲ್ಲಿ ನಾಳೆ ಒಂದು ಭಾರೀ ದರ್ಬಾರ್ ನಡೆಯುತ್ತೆ. ಅಲ್ಲಿನ ಲೆಫ್ಟಿನೆಂಟ್ ಗವರ್ನರವರು ಟಾಂಗ್ ಸಾಯಿತಾ ಎಂಬಾತನಿಗೆ ಸೋಲಾ ಬರ್ಮಾದ ಪಾರಂಪರ್ಯವನ್ನು ವಹಿಸುತ್ತಾರೆ. ಇದಕ್ಕಾಗಿ ಆತನಿಗೆ ಒಂದು ಸನ್ನದು ಕೊಡಲ್ಪಡುತ್ತದೆ. ಮತ್ತು ನಾನಾ ಸಂತೋಷೋತ್ಸವಗಳು ನಡೆಯಬೇಕೆಂದು ಏರ್ಪಾಡಾಗಿದೆ.

❖❖❖❖

ಪಂಜಾಬಿಗೆ ಸೇರಿದ ಎಗರ್ಪುರದಲ್ಲಿ ಮಹಮದಿಯರು ತಮ್ಮ ಜನರಲ್ಲಿ ಯಾವ ಮನೆಯಲ್ಲಿ ವಿವಾಹವಾದರೂ ಗಂಡಿನ ಕಡೆಯವರು ೨೫ ರೂ., ಹೆಣ್ಣಿನ ಕಡೆಯವರು ೨೫ ರೂ. ಪ್ರಕಾರ ಕೊಡುವ ಹಣವನ್ನು ಅಂಜುಮನ್ ಇಸ್ಲಾಂ ಎಂಬ ತಮ್ಮ ಸಭೆಗೆ ಪ್ರತಿಯೊಬ್ಬರೂ ತೆರಬೇಕೆಂದು ಅದರಲ್ಲಿ ಹಿರಿಯರು ವಿಧಿಸಿ, ಆ ಪ್ರಕಾರ ಹಣವನ್ನು ವಸೂಲ್ಮಾಡುತ್ತಿದ್ದಾರೆ.

❖❖❖❖

ವೈಸ್‌ರಾಯಿ ಲಾರ್ಡ್ ಕರ್ಜನರವರು ಅರಬ್ಬೀ ಪೇಟೆ ಕಡೆ ಮುಂದಿನ ವಾರ ಸಂಚಾರ ಹೊರಡುವರು. ಪರ್ಷಿಯಾ ಕೊಲ್ಲಿ ಯ ಪ್ರಾಂತ್ಯದ ಜೊತೆಗೆ ಸುಲ್ತಾನರೇ ಮುಂತಾದ ಮುಖಂಡರಿಗೆ ಸನ್ಮಾನ ಮಾಡುವುದಕ್ಕಾಗಿ ಬಹು ಭಾರೀ ಅಲಂಕಾರಗಳನ್ನು ಇಲ್ಲಿಂದಲೇ ಕೊಂಡು ತೆಗೆದುಕೊಂಡು ಹೋಗುವಂತೆ ಏರ್ಪಾಟು ಮಾಡಿದರು. [illegible] ರೂಪಾಯಿನ ಅಮೂಲ್ಯವಸ್ತುಗಳನ್ನು ಕೊಂಡುಕೊಳ್ಳುತ್ತಿದ್ದಾರೆ.

❖❖❖❖

ಲಾರ್ಡ್ ಕರ್ಜನ್ ಪ್ರಭುಗಳು ಬರುವ ಏಪ್ರಿಲ್ ತಿಂಗಳ ಕಡೆಗೆ ವಿಲಾಯಿತಿಗೆ ಹೋಗಿಬರುತ್ತಾರಾದುದರಿಂದ ಅವರು ಹಿಂದಿರುಗಿ ಬರುವತನಕ ಮದರಾಸ್ ಗವರ್ನರ್ ಲಾರ್ಡ್ ಆಂಪ್ಟಿಲ್‌ರವರೇ ವೈಸ್‌ರಾಯಿ ಪದವಿಯನ್ನು ಅನುಭೋಗಿಸುತ್ತಿರುವಂತೆ ಏರ್ಪಾಡಾಗಿದೆ ಎಂತಲೂ, ಇವರು ಮಾರ್ಚಿ ತಿಂಗಳಲ್ಲಿ ಕಲ್ಕತ್ತೆಗೆ ದಯಮಾಡಿ, ಲಾರ್ಡ್ ಕರ್ಜನರವರಿಂದ ಛಾರ್ಜು ವಹಿಸಿಕೊಳ್ಳುತ್ತಾರೆಂತಲೂ ಸಿಂಲಾ ಪಟ್ಟಣದ ಪತ್ರಿಕೆಯು ತಿಳಿಸಿರುವುದು.

❖❖❖❖

ಹಿಂದುಸ್ಥಾನದಲ್ಲಿ ೧ನೇ ಅಕ್ಟೋಬರ್ ವಾರ ಪ್ಲೇಗ್ ಉಪದ್ರದಲ್ಲಿ ಸತ್ತವರ ಸಂಖ್ಯೆಯು ೧೬,೩೦೦ರಿಂದ ೧೯,೧೭೭ಕ್ಕೆ ಹೆಚ್ಚಿತು. ಬೊಂಬಾಯಿ ಅಧಿಪತ್ಯದ ಸಂಖ್ಯೆಯೇ ಬಹಳವಾಗಿ ಹೆಚ್ಚಿರುವುದು. ಹಿಂದಿನ ವಾರ ಅಲ್ಲಿ ಪ್ಲೇಗ್ ಮರಣಗಳು ೧೧,೭೫೬, ಮಧ್ಯಪ್ರಾಂತಗಳಲ್ಲಿ ೧,೫೮೨, ಮೈಸೂರು ಸಂಸ್ಥಾನ ೯೩೧, ಪಂಜಾಬ್ ೫೯೩, ಸಂಯುಕ್ತ ಸೀಮೆ ೫೨೯, ಬಂಗಾಳಾ ೨೧೯, ಕಾಶ್ಮೀರ ಸಂಸ್ಥಾನ ೩೩, ಕರಾಚಿ ೧೭; ಮಧ್ಯ ಇಂಡಿಯಾ ೧,೭೩೩, ಹೈದರಾಬಾದ್ ಸಂಸ್ಥಾನ ೯೭೩.

❖❖❖❖

ಮದರಾಸ್ ಪಟ್ಟಣದ ಆರ್ಮೇನಿಯನ್ ಬೀದಿಯಲ್ಲಿ ಶ್ರೀಕಚ್ಚಾಲೇಶ್ವರಸ್ವಾಮಿ ದೇವಸ್ಥಾನವಿದೆ. ಆ ದೇವಸ್ಥಾನದ ವಾಹನಗಳಿಗೆ ದಶಾವತಿಗಳು ಚಿನ್ನದ ತಗಡುಗಳನ್ನು ಹಾಕಿಸಿಕೊಟ್ಟಿದ್ದರು. ಬೆಳ್ಳಿ ತಗಡು ಬಡಾಯಿಸಿದ ಎರಡು ಭಾರೀ ವೃಷಭಗಳಿದ್ದುವು. ಕಳೆದ ವಾರ ಕಳ್ಳರು ನುಗ್ಗಿ ಎಲ್ಲಾ ಅಪಹರಿಸಿಬಿಟ್ಟರೆಂತಲೂ, ಅದರಿಂದ ಸುಮಾರು ೧೨ ಸಹಸ್ರ ರೂಪಾಯಿ ನಷ್ಟವಾಯಿತೆಂತಲೂ ತಿಳಿದುಬಂದಿದೆ. ಕಳೆದ ೩೦ ವರ್ಷಗಳಿಂದ ಈ ವಾಹನಗಳನ್ನೇ ಉತ್ಸವಕ್ಕೆ ಉಪಯೋಗಿಸುತ್ತಿದ್ದರು. ಪೋಲೀಸಿನವರು ಕಳ್ಳರನ್ನು ಪತ್ತೆ ಮಾಡುತ್ತಲಿದ್ದಾರೆ.

❖❖❖❖

ಮಹಮದಿಯರ ಯಾತ್ರಾಸ್ಥಾನಗಳಾದ ಮಕ್ಕೆಗೂ ಮದೀನಕ್ಕೂ ರೈಲ್ ರಸ್ತೆ ಮಾಡಬೇಕೆಂದು ಏರ್ಪಾಡಾಗಿದೆಯಷ್ಟೆ. ಇದಕ್ಕಾಗಿ ಹೈದರಾಬಾದಿನ ನೈಜಾಮರವರು ತಮ್ಮ ಪ್ರಜೆಗಳಲ್ಲಿ ಮುಖಂಡರನ್ನೂ ಅಧಿಕಾರಿಗಳನ್ನೂ ಕರೆಸಿಕೊಂಡು ಒಂದು ದೊಡ್ಡ ದರ್ಬಾರ್ ನಡಿಸಿ, ಆ ರೈಲ್ ರಸ್ತೆಯ ಉದ್ದೇಶವನ್ನು ಸಭಿಕರಿಗೆಲ್ಲಾ ತಿಳಿಯ ಪಡಿಸಿ, ಸಕಲರೂ ಅದಕ್ಕೆ ಹೆಚ್ಚು ಕಡಿಮೆಗಿ ದ್ರವ್ಯ ಸಹಾಯ ಮಾಡಬೇಕೆಂದು ಹೇಳಿದರು. ಕೂಡಲೇ ಅಲ್ಲಿ ಸೇರಿದ್ದವರೆಲ್ಲಾ ೫೦ ಲಕ್ಷ ರೂಪಾಯಿ ಚಂದಾ ಕೊಟ್ಟರು. ಅದಕ್ಕಾಗಿ ಏರ್ಪಟ್ಟ ಕಮಿಟಿಯವರು ಈ ಹಣವನ್ನು ಟರ್ಕಿ ಸುಲ್ತಾನರಿಗೆ ರವಾನೆ ಮಾಡಿದರೆಂದು ತಿಳಿದು ಬಂದಿದೆ.

❖❖❖❖

ಸಿರಾಜಪಟ್ಟಣದಲ್ಲಿ ಎಸಿಂಕೋಟೆ ಎಂಬುದೊಂದು ದೊಡ್ಡ ಜಮೀನ್ದಾರಿ ಇರುತ್ತೆ. ಅಲ್ಲಿ ಮಿ॥ ಟಿ. ಸಿ. ದತ್ತರವರು ಅಸಿಸ್ಟೆಂಟ್ ಕಲೆಕ್ಟರಾಗಿರುತ್ತಾರೆ. ಇವರೂ ಅಲ್ಲಿನ ಇನ್ನಿಬ್ಬರು ದೊಡ್ಡವ್ಯಕ್ತಿಗಳೂ ಸೇರಿ ಕಳೆದ ವಾರ ಗೋಕಾಯಿಗಳ ಪ್ರದರ್ಶನವನ್ನು ಮಾಡಿಸಿದರು. ಸುಮಾರು ೩೦೦ ರ ೩ ಹನಕ ಚಂದಾ ಎತ್ತಿ ರೈತರು ಚನ್ನಾಗಿ ಸಾಕಿದ್ದ ದನಗಳಿಗೆಲ್ಲಾ ಬಹುಮಾನವನ್ನು ಕೊಟ್ಟರು. ಆ ದಿನ ಸುಮಾರು ೧,೦೦೦ ದನಗಳು ಸೇರಿದ್ದುವು. ಸಾವಿರಾರು ಜನರು ಕಬ್ಬು, ಎತ್ತು, ಹಸು, ಎಮ್ಮೆ, ಕೋಣ, ಆಡು, ಕುರಿ ಮೊದಲಾದ ಗೋ ಕಾಯಿಗಳನ್ನು ನೋಡಿ ತುಂಬಾ ಸಂತೋಷಪಟ್ಟುಕೊಂಡರು. ಕಲೆಕ್ಟರ್ ಮಿ॥ ಕ್ಯಾಂಪ್‌ಬೆಲ್‌ರವರೇ ಬಹುಮಾನಗಳನ್ನು ಹಂಚಿ, ರೈತರಿಗೆಲ್ಲಾ ಗೋಕಾಯಿಗಳನ್ನು ಬಹಳ ಚನ್ನಾಗಿ ಸಾಕುವುದರಲ್ಲಿ ಉಂಟಾಗುವ ಪ್ರಯೋಜನಗಳನ್ನು ತಿಳಿಸಿದರು.

❖❖❖❖

ವಿಸ್ತಾರವಾದ ಪ್ರಾಂತ್ಯದಲ್ಲಿ ಈ ಸಲ ರೈತರು ಮಾಡಿದ್ದ ಬೆಳೆಯು ಬಹಳ ಚೆನ್ನಾಗಿ ಬೆಳೆದಿತ್ತು. ಪ್ರಜೆಗಳು ಸ ಭಿಕ್ಷವನ್ನು ನಿರೀಕ್ಷಿಸಿ ಬಹಳ ಸಂತೋಷಪಡುತ್ತಿದ್ದರು. ಅಷ್ಟರಲ್ಲೇ ಚಿಟ್ಟೆಗಳ ಗುಂಪು ದಿಮಿಸಾಗಿಗಳ ಮೇಲೆ ಬಂದು ಬೆಳೆಯನ್ನೆಲ್ಲಾ ನಿರ್ಮೂಲ ಮಾಡಿಬಿಟ್ಟುವು. ದುರ್ಭಾಗ್ಯದಲ್ಲಿ ಇಟ್ಟರು ತಮ್ಮ ಅಗಾಧವಾದ ಬೆಳೆ ಹಾಳಾಯಿತಲ್ಲಾ ಎಳವು ತು ಬಾ ದುಃಖಪಟ್ಟು ಹಸ್ತಹಸ್ತ ಮಾಡಿಕೊಂಡರು. ಈ ಚಿಟ್ಟೆಗಳು ಸೀರಂಗಂ, ಉತ್ತರ ಬರೋಡ, ಬ್ರೋಚ್ ಮುಂತಾದ ಪ್ರಾಂತ್ಯಗಳಲ್ಲಿ ಬೆಳೆಯನ್ನು ನಾಶಮಾಡಿವೆ. ಮತ್ತು ಅವು ಬೊಂಬಾಯಿಂದ ೨೦ ಮೈಲಿ ದೂರದ ಸಮೀಪಕ್ಕೆ ಬಂದು ಥಾನಾ ಪ್ರಾಂತ್ಯದಲ್ಲೂ ಬೆಳೆಯನ್ನು ನಾಶಮಾಡಲಾರಂಭಿಸಿರುತ್ತವೆ. ಇದನ್ನು ನೋಡಿ ಆ ಪ್ರಾಂತ್ಯದ ರೈತರು ಮುಂಚಾಗಲೇ ಪಕ್ವವಾಗಿರುವ ಬೆಳೆಯನ್ನೇ ಕೊಯಿದು ಮನೆ ಹಾಕಿಕೊಳ್ಳುತ್ತಿದ್ದಾರೆ.

❖❖❖❖

ನಮ್ಮ ವೈಸ್‌ರಾಯಿ ಲಾರ್ಡ್ ಕರ್ಜನ್ ಪ್ರಭುಗಳು ಕೆಲವು ದಿನಗಳಿಗೆ ಮುಂಚೆ ವಿಲಾಯಿತಿಯಲ್ಲಿರುವ ತಮ್ಮ ಸ್ನೇಹಿತರಲ್ಲೊಬ್ಬರಿಗೆ ಖಾಸಗಿಯಾಗಿ ಬರೆದಿರುವ ಕಾಗದದಿಂದ ಕೆಲವು ಭಾಗವನ್ನು ಅಲ್ಲಿನ ಒಂದು ಪತ್ರಿಕೆಯು ಎತ್ತಿ ಪ್ರಕಟಿಸಿರುವುದು. ಅವರು ಬರೆದಿರುವುದೇನೆಂದರೆ:—ನಾನು ಬರುವ ವರ್ಷದ ಮೇ ತಿಂಗಳಲ್ಲಿ ನಾಲ್ಕು ವಿಲಾಯಿತಿಗೆ ಪ್ರಯಾಣ ಮಾಡುವನು. ಆನಂತರ ತಿಂಗಳಲ್ಲೇ ಹಿಂದಕ್ಕೆ ಬರುವೆನು. ಹಿಂದುಸ್ಥಾನದಿಂದ ಹೊರಟು ಫೆಬ್ರವರಿ ಪ್ರಾರಂಭಕ್ಕೆ ವಿಲಾಯಿತಿಯನ್ನು ತಲುಪುವನು. "ನಾನು ಒಂದು ಸ್ಥಾನದಲ್ಲಿ ಕೆಲಸ ಮಾಡಿದ್ದೂ ಇದ್ದೇ ಇರುತ್ತೇನೆ. ನನ್ನ ಕರ್ತವ್ಯಗಳನ್ನು ಪೂರೈಸಿದನೆಂದು ಹೇಳಲಾಗಿಲ್ಲ. ಇಲ್ಲಿಗೆ ಬಂದು ಕೆಲವು ಕಾಲ ವಿಶ್ರಾಂತಿ ತೆಗೆದುಕೊಂಡರೆ ನಾನು ಯಥಾಪ್ರಕಾರ ಕೆಲಸಮಾಡಲು ಶಕ್ತಿ ಸಾಮರ್ಥ್ಯಗಳನ್ನು ಪಡೆಯುವೆನು. ಮತ್ತು ನಾನು ಇಲ್ಲಿ ಪ್ರಾರಂಭಿಸಿರುವ ಅನೇಕ ಕಾರ್ಯಗಳನ್ನು ಆ ನಂತರ ಸಾರ್ಥಕವಾಗಿ ಪೂರೈಸುವೆನು" ಎಂಬುದೇ.

❖❖❖❖

ಕಳೆದ ತಿಂಗಳ ೨೫ನೆ ತಾರೀಖಿನ ದಿನ ಧಾರವಾಡದಲ್ಲಿ ಸಂಘದರ್ಶನ ಪ್ರಥಮ ಸಮಾಜದ ಸಭೆಯು ನಡೆಯಿತು. ಮಿ॥ ವಿ. ಎಂ. ಜೋಶೀಕರ್‌ರವರು ಸಭಾನಾಯಕರಾಗಿದ್ದರು. ಅವರು ಆ ದಿನ ತೀರ್ಮಾನ ಮಾಡಿದ ಸಂಘದರ್ಶನದ ಕಾರ್ಯಗಳಾವೆಂದರೆ— (೧) ವಿವಾಹ ಕಾಲದಲ್ಲಿ ವರದಕ್ಷಿಣೆ ಕೊಡಬಾರದು; ಮದುವೆ ಖರ್ಚನ್ನು ತುಂಬಾ ಕಡಿಮೆ ಮಾಡಬೇಕು. ಬಾಲ್ಯ ವಿವಾಹಗಳನ್ನು ಮಾಡಕೂಡದು. ಮತ್ತು ಮಣ ಸ್ವಲ್ಪ ವಯಸ್ಸಿನವರನ್ನು ಮದುವೆ ಮಾಡಿಕೊಳ್ಳುವುದು ಅಯೋಗ್ಯವಾದುದು. (೨) ಪ್ರತಿ ಜಿಲ್ಲೆಗಳಲ್ಲೂ ಈ ಸಮಾಜದ ಉದ್ದೇಶಗಳನ್ನು ನೆರವೇರಿಸುವುದಕ್ಕೆ ಸಂಘಗಳು ಏರ್ಪಡಬೇಕು. (೩) ಬಾಲೆಯರಿಗೆ ವಿದ್ಯೆ ಕಲಿಸುವುದು ಇನ್ನೂ ಹೆಚ್ಚಾಗಿ ರೂಢಿಯಲ್ಲಿ ಬರಬೇಕು. (೪) ವಿಧವೆಯರಿಗೆ ಪುನರ್ವಿವಾಹ ಮಾಡುವುದು ಬಹಳ ಒಳ್ಳೆಯದು. ಮತ್ತು ಅವರಿಗೆ ತಲೆ ಬೋಳಿಸಿ ವಿಕಾರ ಮಾಡುವುದೇ ಮುಂತಾದ ಕ್ರೂರ ಕೃತ್ಯಗಳನ್ನು ಸಕಲರೂ ನಿರೋಧಿಸತಕ್ಕದು. (೫) ಪ್ರಜೆಪುನಸ್ಕಾರಾದಿಗಳಿಗೆ ಬಹಳ ಹಣವು ಖರ್ಚಾಗುವುದು, ಕಾಳೆಯ ಕಾಫಿ ಕಟ್ಟಿಸುವುದು, ಅಫೀಮು ಸಹಮಾಡುವುದು,—ಇವುಗಳನ್ನು ತ್ಯಜಿಸುವಂತೆ ಬುದ್ಧಿ ಹೇಳಬೇಕು. ದೇಶಾಂತರ ಸಂಚಾರ ಮಾಡುವುದನ್ನು ಪ್ರೋತ್ಸಾಹಿಸಬೇಕು.

## ತಾಲ್ಲೋಕು ವರ್ತಮಾನಗಳು.

ಚಿತ್ರದುರ್ಗ.—ಈ ವರುಷದ ಪ್ರಾರಂಭದಿಂದ ಈ ವರೆಗೂ ಈ ಊರಿಗೆ ಆದ ಮಳೆ ಸುಮಾರು ೫೫ ಇಂಚುಗಳಿಗೆ ಕಡಿಮೆ ಇರಲಾರದೆಂದು ತಿಳಿಯಬಹುದು. ಈಗ ಮೂರು ದಿನಗಳಿಂದಲೂ ಜಡಿ ಮಳೆಯು ಹಿಡಿದು ಕೊರಕ್ಕೆ ಅಡ್ಡಾದುವದೇ ಪ್ರಯಾಸವಾಗಿದೆ. ಊರು ಕೇವಲ ಥಂಡಿಯಾಗಿರುವದು. ಸುಮಾರು ಒಂದು ತಿಂಗಳಿಂದಲೂ ಊರಿನಲ್ಲಿ ಕಾಯಿಲೆಯುವರನೇಕರು ಚಳಿ ಜ್ವರ ತಲೆನೋವಿನಿಂದ ಶ್ರಮಪಡುತ್ತಿರುವರು. ಕಾಯಿಲೆಯವರಿಲ್ಲದ ಮನೆಯೇ ಅಪರೂಪ. ಹೀಗಿದ್ದಾಗ್ಯೂ ಇಂಥಾವರಲ್ಲಿ ಅನೇಕರು ಅಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಿ ಗುಣ ಹೊಂದಲಿಕ್ಕೆ ಮನಸ್ಸಿಲ್ಲದೆ ಅಜ್ಞಾನಿಕ ಪಂಡಿತರನ್ನೇ ನಂಬಿ ದೀರ್ಘಕಾಲ ಕಾಯಿಲೆಯ ಹಾಸಿಗೆಯಲ್ಲಿ ನರಳುತ್ತಿರುವರು.—ಈ ಊರಿಗೆ ಸುಮಾರು ಎರಡು ಮೈಲಿಯಲ್ಲಿ ಲಿಂಗಾಯುತರ ಮುರುಗಿ ಸ್ವಾಮಿಗಳ ಮಠ ಉಂಟು. ಈ ಮಠಕ್ಕೆ ಸ್ವಾಮಿಗಳಾಗಿದ್ದವರು ಕಳೆದ ವರುಷ ಬ್ಯಾಡಗಿಯಲ್ಲಿ ಕಾಲಾಧೀನರಾದ ಪ್ರಯುಕ್ತ ಆ ಲಾಗಾಯಿತು ಲಿಂಗಾಯಿತ ಸಭಾ ಮುಖಂಡರು ಸದರಿ ಮಠಕ್ಕೆ ಯೋಗ್ಯರಾದ ಒಂದು ಮರಿಯನ್ನು (ಸ್ವಾಮಿಗಳು ಯಾ ಗುರುಗಳು) ಹುಡುಕಿ ತಂದು ಪಟ್ಟ ಕಟ್ಟಿ ಮಠಸ್ವಾಮಿಗಳಾಗಿ ಅಂಗೀಕಾರ ಮಾಡಬೇಕೆಂದು ಅರತರದೂಯ ಮಾಡುತ್ತ ಬಂದು ಕಡೆಯಲ್ಲಿ ಕಾಶಿಯಲ್ಲಿದ್ದ ಸುಮಾರು ೨೬ ವರುಷ ವಯಸ್ಸಿನ ಒಂದು ಮರಿಯನ್ನು ಬರಮಾಡಿಕೊಂಡು ಕಳೆದ ಬುಧವಾರ ಬೆಳಗ್ಗೆ ಜಯದೇವಶಾಸ್ತ್ರಿಗಳೆಂಬ ಆ ಮರಿಗೆ ಸಭಾಮಂಡಲಿಯವರ ಒಪ್ಪಿಗೆಯಿಂದಲೂ ಮೈಸೂರು ಗವರ್ನಮೆಂಟಿನವರ ಅಪ್ಪಣೆಯಿಂದಲೂ ಪಟ್ಟಾಭಿಷೇಕ ಮಾಡಿ ಮಠಸ್ವಾಮಿಗಳನ್ನಾಗಿ ಅಂಗೀಕಾರ ಮಾಡಿದರು. ಈ ಉತ್ಸವಕ್ಕಾಗಿ ನಾನಾ ಕಡೆಗಳಿಂದ ಬಂದಿದ್ದ ಜನರು ಸುಮಾರು ಹತ್ತು ಸಾವಿರಕ್ಕೆ ಕಡಿಮೆಯಿಲ್ಲದೆ ಇತ್ತು. ಉತ್ಸವವು ಅತ್ಯಂತ ವೈಭವದಿಂದಲೇ ಜರುಗಿತು. ಸಾವಿರಾರು ಜನರಿಗೆ ಅನ್ನ ಪಾನಾದಿಗಳಿಗೆ ಅನುಕೂಲಮಾಡಿದ್ದರು. ಪಟ್ಟಾಭಿಷೇಕದ ದಿನ ಜನಸಮೂಹದ ಸ ಕೋಟಲೆಯೂ ತಳ್ಳಾಟವೂ ಹೇಳತೀರದ ಗದ್ದಲಕ್ಕೆ ಆಸ್ಪದವಿದ್ದಾಗ್ಯೂ ಮುಂದಾಲೋಚನೆಯಿಂದ ಸದರಿ ಉತ್ಸವ ಕಾಲಕ್ಕೆ ಬೇಕಾಷ್ಟು ಜನ ಪೋಲೀಸ್ ಸಿಬ್ಬಂದಿಯನ್ನು ಏರ್ಪಡಿಸಿದ್ದರಾದ್ದರಿಂದ ಗದ್ದಲಕ್ಕೆ ಸ್ವಲ್ಪವೂ ಅವಕಾಶವಾಗದೆ ಸಕಲವೂ ಸಮರ್ಪಕವಾಗಿ ನಡೆಯಲು ಅನುಕೂಲವಾಗಿತ್ತು. ಇದಕ್ಕೋಸ್ಕರ ಮೊದಲು ಇನ್ಸ್‌ಪೆಕ್ಟರುಗಳೂ ಇದ್ದರು ಹವಾಲ್ದಾರರು ೧೭ ಜನ ದಫೇದಾರರು ೫೦ ಜನ ಕಾನ್ಸ್‌ಟೇಬಲ್‌ಗಳೂ ನೇಮಕವಾಗಿದ್ದರೆಂದೂ ಪ್ಲೇಗ್ ವ್ಯಾಪಕಸ್ಥಳದಿಂದ ಬಂದವರನ್ನು ಅವಿಸ್ಮಯಿಸಿ ಪರೀಕ್ಷೆ ಮಾಡಲು ಆಸ್ಪತ್ರೆ ಅಸಿಸ್ಟೆಂಟ್ ಮಿ॥ ಮುರಳಿಯವರನ್ನು ನೇಮಕ ಮಾಡಿದ್ದರಾಗಿ ಇವರೂ ಇವರ ಸಹಾಯಕರೂ ಎಲ್ಲರೂ ತುಂಬಾ ಶ್ರದ್ಧೆಯಿಂದ ತಮ್ಮ ಕರ್ತವ್ಯವನ್ನು ನೆರವೇರಿಸಿದ್ದರಿಂದ ಗದ್ದಲ ಯಾ ಪ್ಲೇಗ್ ಸೋಂಕು ಯಾವದಕ್ಕೂ ಆಸ್ಪದವಿಲ್ಲದೆ ಉತ್ಸವನೆಲ್ಲಾ ಸುಖವಾಗಿ ನೆರವೇರಿತು.

ಚಿಕ್ಕಮಗಳೂರು.—ಇವೆ ಬರ ಬರ ಅತಿಶಯವಾಗಿ ಪ್ರಜಾಕ್ಷೇಮ ಕೆಡುತ್ತಿದೆ. ಹಿಮಂತಕಾಲದ ಚಳಿಮುಗಿಯದಲ್ಲಿ ಜನಗಳ ಕ್ಷೇಮವನ್ನು ಬದಲಾಯಿಸುತ್ತಿದೆ. ಡೆಪ್ಯುಟಿ ಕಮಿಷನರರೂ, ಡಾ॥ ನಂಜಪ್ಪನವರೂ ಮುಲ್ಲಾಮ ಸರ್ಕಿಟುಗಳನ್ನು ಮುಗಿಸಿಕೊಂಡು ಬಂದರು. [illegible] ಮಾಡಿದ ಮೇಲೆ ಮದ್ರಾಸಿಗೆ ಹೊರಡುವರಾಗಿದ್ದಾರೆ. ಅನ್ನದಿಂದ ಅವರ ಜಾಗಕ್ಕೆ ಮಿಸ್ಟರ್ [illegible] ಬಂದರೆ ಪ್ರಜೆಗಳಿಗೆ ಸಂತೋಷವಾಗುವುದು. ಇಲ್ಲಿನ ಸ್ಕೂಲಿನಲ್ಲಿ ಕ್ರಿಸ್ಟಿಯನ್ನರನ್ನು ಉಪಾಧ್ಯಾಯರಾಗಿ ಮಾಡಿ [illegible] ಪ್ರೊಫೆಸರ್ [illegible] ಬಂದವರಿಗೆ [illegible] ಆಗುತ್ತಿದೆ. [illegible] ಎಲ್ಲಾ [illegible] ಆಫೀಸಿನಲ್ಲಿ ಅನೇಕರಿಗೆ [illegible] ಏಳು ಮೂರು ವಾರ [illegible] ಅಲ್ಲಿನ [illegible] ಆಗುತ್ತಿದೆ. [illegible] ಮುನಿಸಿಪಾಲಿಟಿಯಿಂದ [illegible] ಆದರೆ ಎಲ್ಲೆ ಎಲ್ಲಿ [illegible] ಪ್ರಕಾರ ಮಾಡಲು ತೆರಳುತ್ತಿದ್ದಾರೆ. [illegible] ಮಿ॥ ಸ್ವಾರ್ [illegible] ಈಗ [illegible] ಆರೋಗ್ಯ ಕಾರ್ಯಗಳಲ್ಲೂ ಕಾಣಿಸುವದಿಲ್ಲ.— ಊರಲ್ಲಿ ಇಲಿಗಳು ಸಾಯುತ್ತಿವೆ ಎಂದು ಜನರು ಗುಸುಗುಟ್ಟುತ್ತಿದ್ದಾರೆ. ಗವರ್ನಮೆಂಟ್ ಪತ್ರ ಪೇಪರ್‌ಗಳನ್ನು ಹಾಕುವಂತೆ ವೈದ್ಯಮಂಡಲಿಯವರು ಪ್ರಯತ್ನ ಮತ್ತು ಆಲೋಚನೆ ಮಾಡುತ್ತಿದ್ದಾರಂತೆ. ಸದ್ಯ ಬಹಿರಂಗವಾಗಿ ಯಾರೂ ಪ್ಲೇಗ್ ಬಾಧೆಯಿಂದ ಸತ್ತಿಲ್ಲ. ಮತ್ತು ಸರ್ಕಾರದವರಾಗಲೀ ಈ ವರೆಗೂ ಇಲಿಗಳು ಸಾಯುವದನ್ನಾಗಲೀ ರೋಗ ಉಂಟಾಗುವದನ್ನಾಗಲೀ ಪ್ರಸ್ತಾಪ ಮಾಡಿಲ್ಲ. ಮತ್ತು ಪ್ರಚರಿಸಿಯೂ ಇಲ್ಲ. ಆದರೆ ಸುತ್ತಮುತ್ತ ಪ್ಲೇಗ್ ಇರುವದರಿಂದ ಷೆಡ್ ಹಾಕುವ ಪ್ರಯತ್ನದಲ್ಲಿರುವ ಪ್ರಜೆಗಳು ಬುದ್ಧಿಶಾಲಿಗಳೇ ಹೌದು.—ಅಲ್ಲಿನ ಕಾನ ಸ್ಕೂಲಿಗೆ ಜಾವಳಿಯಿಂದ ಬಂದ ಒಬ್ಬ ಮಾಸ್ಟರನ್ನು ನರಸಿಂಗರಾಯರ ಬದಲಿಗೆ ನೇಮಿಸಿದ್ದಾರಂತೆ. ಫಸಲ್ ಯಥಾಪ್ರಕಾರವಿದೆ. ಕಾಫಿ ಫಸಲ್ ಕಳೆದ ವರ್ಷಕ್ಕಿಂತ ಹೆಚ್ಚಾಗಿದೆ. ಮಣ ಅಥವ ೪ ಪೌಂಡಿಗೆ ಅಕ್ಕಿ ೪ ರೂ., ರಾಗಿ ೩ ರೂ., ಕೇಯು ೩ ರೂ. ಇದೆ. ಸೌದೆ ಗಾಡಿಗಳು ಬಹು ತುಟ್ಟಿ

ವಾಗಿ ಬರ್ತಿ ಮಾಡಲ್ಪಟ್ಟು ಒಂದಕ್ಕೆ ಎರಡರಷ್ಟು ಇಲ್ಲವೆ ಮೂರರಷ್ಟು ಖರೀದಿ ಏರ್ಪಡಿಸಿದ್ದಾರೆ. ಮುನಿಸಿಪಲ್ ತರಕಾರಿ ತೋಟಗಳೂ ಜೈಲ್ ತರಕಾರಿಗಳೂ ಸಾಕಾದಷ್ಟು ವ್ಯವಸಾಯ ಮಾಡಲ್ಪಟ್ಟರೆ ವೃದ್ಧಿಗೂ ಬರಬಹುದು ; ಅಧಿಕಾರಿಗಳು ಮಾತ್ರವಲ್ಲ ಅನ್ಯರೂ ಅಲ್ಪಸ್ವಲ್ಪ ರುಚಿ ನೋಡಬಹುದು. ಇಂಜನಿಯರ್ ಮಿ॥ ಮಲಾಯಿ ಸಾಹೇಬರು ತಮ್ಮ ಅಧಿಕಾರವನ್ನು ತುಂಬಾ ಆಸಕ್ತಿಯಿಂದಲೂ ದಯೆಯಿಂದಲೂ ನಡಿಸುತ್ತಿದ್ದಾರೆಂತಲೂ, ಕಂಟ್ರ್ಯಾಕ್ಟರ್ ಮಿ॥ ಬಿಡೀ ಸಾಹೇಬರು ಬೆಂಗಳೂರಲ್ಲೇ ನಿಂತುಬಿಟ್ಟರೆಂತಲೂ, ಇತರ ಕಂಟ್ರ್ಯಾಕ್ಟರುಗಳಲ್ಲಿ ಕೆಲವರಿಗೆ ಅವರಿಂದ ಬಾಕಿ ಹಣ ವಸೂಲಾಗಬೇಕಾಗಿದೆ ಎಂತಲೂ ಹೇಳುತ್ತಾರೆ. ರೇಲ್ವೆ ಬಿಡ್ ಪಾರ್ಸೆಲ್ ಆಫೀಸ್ ಮಿ॥ ಕ್ಲಿಫರ್ಡ್ ಷಾಪ್‌ಕೀಪರ್ ಕಮಿಷನ್ ಏಜಂಟ್ ಯವರಿಗೆ ಸರ್ಗವಾದ ಲಾಗಾಯತು ವೃತ್ತಾಂತ ಪತ್ರಿಕೆ ಕ್ರಮವಾಗಿ ಬರುವದಿಲ್ಲ ವಾರದಲ್ಲೇ ಮೂರು ದಿವಸವಿದ್ದು ಭಾನುವಾರ ಬರುತ್ತದೆ. ಜನರಿಗೆ ಇದರಿಂದ ತುಂಬಾ ಅಸಮಾಧಾನವೂ ಅತೃಪ್ತಿಯೂ ಗುಣುಗುಟ್ಟುವಿಕೆಯೂ ಆಗಿದೆ. ಪೂರ್ವದಲ್ಲಿ ಶುಕ್ರವಾರ ತಪ್ಪಿದರೆ ಶನಿವಾರ ಬರುತ್ತಿತ್ತು. ಮಿ॥ ಕ್ಲಿಫರ್ಡ್‌ರವರು ಈ ನ್ಯೂನತೆಯನ್ನು ಹೋಗಲಾಡಿಸಿ ಅನುಕೂಲ ಉಂಟುಮಾಡುವಂತೆ ಕೋರುತ್ತೇನೆ.

ಚಾಮರಾಜನಗರ:—ಕಳೆದ ವಾರ ನಮ್ಮೂರು ಗವರ್ನಮೆಂಟ್ ಸ್ಕೂಲಿನಲ್ಲಿ ಬಹು ಅಲಂಕಾರವಾಗಿ ಬಾಲಕರಿಗೆ ಬಹುಮಾನಗಳನ್ನು ಕೊಟ್ಟರು. ಅಸಿಸ್ಟೆಂಟ್ ಕಮಿಷನರ್ ಮಿ॥ ಸಿ ವೆಂಕಟಪ್ಪಯ್ಯನವರು ಅಗ್ರಾಸನವನ್ನು ವಹಿಸಿದ್ದರು. ಆ ವಿದ್ಯಾರ್ಥಿಗಳಲ್ಲಿ ಒಬ್ಬನು ಮೈಸೂರು ಪ್ರಾವಿನ್ಸಿಗೆ ೧ ನೆಯವನಾಗಿ ತೇರ್ಗಡೆ ಹೊಂದಿದ್ದರಿಂದ ಅವನಿಗೆ ೧೦ ರೂ. ಬಹುಮಾನ ಕೊಡಲಾಯಿತು. ನಮ್ಮ ಸ್ಕೂ॥ ಮಾ॥ ಬ್ರಹ್ಮಸೂರ ಪಂಡಿತರ ಪ್ರಯಾಸವು ಸಾರ್ಥಕವಾಯಿತೆಂದು ಸಂತೋಷಪಡುತ್ತೇನೆ.—ನಮ್ಮೂರಿಗೆ ೩ ಮೈಲಿ ದೂರದ ಮೈಸೂರು ರಸ್ತೆ ಮರಿಯಾಲ ಗ್ರಾಮಕ್ಕೆ ದಕ್ಷಿಣಭಾಗದಲ್ಲಿ ೮ ಮೊಳ ಸುತ್ತಳತೆಯುಳ್ಳ ಒಂದು ಭಾರೀ ಆಲಮರವಿತ್ತು. ಮೊನ್ನೆ ಸೋಮವಾರ ಮಳೆ ಗಾಳಿ ವಿಪರೀತವಾಗಿ ಬಂದುದರಿಂದ ಆರು ಜನರು ಹೋಗಿ ಆ ಮರದ ಕೆಳಗೆ ಆಶ್ರಯಹೊಂದಿ ನಿಂತುಕೊಂಡರು. ಆದರೆ ಆ ಮರದ ಬೇರಿನಲ್ಲಿ ಶಕ್ತಿಯಿಲ್ಲದೆ ಗಟ್ಟಿಯಾಗಿ ಗಾಳಿ ಬೀಸಿದಾಗ ಅದು ಅನಾಮತ್ತು ಉರುಳಿಕೊಂಡಿತು. ಮೂರು ಜನರು ಅದರ ಕೆಳಗೆ ಇಲಿಗಳಂತೆ ಸಿಕ್ಕಿ ಪ್ರಾಣ ಕೊಟ್ಟರು. ಈ ಹೆಣಗಳನ್ನು ಹೊರಗೆ ತೆಗೆಯಲೂ ದರ್ಪ ಮಾಡಿಸಲೂ ನಮ್ಮ ಪೋಲೀಸ್ ದಫೇದಾರ್ ರಾಮಸ್ವಾಮಿ ಐಯರು ಬಹಳ ಶ್ರಮಪಟ್ಟರು.—ಇಲ್ಲಿ ಕೆಲವು ಮನೆಗಳಲ್ಲಿ ಇಲಿಗಳು ಸಾಯಲಾರಂಭವಾಗಿದೆ. ಜನರು ಗಾಬರಿಬಿದ್ದು ಹೊರಗಡೆ ಜೋಪಡಿ ಹಾಕಿಕೊಳ್ಳಬೇಕೆಂದು ಆಲೋಚಿಸುತ್ತಿರುವರು. ಪರ ಊರುಗಳಿಂದ ಇಲ್ಲಿಗೆ ಬಂದ ಒಬ್ಬೊಬ್ಬರಿಗೆ ಪ್ಲೇಗು ಉಪದ್ರ ಪ್ರಾಪ್ತವಾಯಿತೆಂದು ಸಮಾಚಾರವಿದೆ. ಪ್ಲೇಗಿನ ಸಂಬಂಧವಾದ ಸರ್ಕಾರದ ಆಜ್ಞೆಯೇ ಅಸಲು; ಮೂಲೆಯ ಕಳೆದವಾರ ಛತ್ರಿಗೆ ಸಾರಿಯಿತು ಹೊರಗಿನಿಂದ ಬರತಕ್ಕವರನ್ನು ಊರಾಚೆ ಹತ್ತು ದಿನ ಇರಿಸಬೇಕೆಂದು ಅಮಲ್ದಾರರು ಹುಕುಂ ಮಾಡಿದ್ದಾರೆಂದು ವರ್ತಮಾನವಿದೆ. ಊರಲ್ಲೇ ಇಲಿ ಸಾಯಲಾರಂಭಿಸಿರುವಾಗ ಈ ನಿರ್ಬಂಧದಿಂದ ಪ್ರಯೋಜನವೇನೋ ತಿಳಿಯದು.

## ದೇಶಾಂತರ ವಿಶೇಷ ಸಮಾಚಾರಗಳು.

ಲಂಡನ್, ನೊವೆಂಬರ್ ೮ —ಲಾರ್ಡ್ ಕರ್ಜನ್ ಪ್ರಭುಗಳನ್ನು ಸನ್ಮಾನ ಪೂರ್ವಕವಾಗಿ ಎದುರುಗೊಳ್ಳುವುದಕ್ಕೋಸ್ಕರ ಅವರನ್ನು ಅಷ್ಟು ಕಾಲದಿಂದ ಸತ್ಕರಿಸುತ್ತಿರುವ ಬುಷೈರ್ ಪಟ್ಟಣದಲ್ಲಿ ಬಹು ವಿಶೇಷವಾದ ಏರ್ಪಾಡುಗಳನ್ನು ಮಾಡುತ್ತಿದ್ದಾರೆ. ಬಾದಷಹರಿಗೆ ಪ್ರತಿನಿಧಿಯಾಗಿ ಕರ್ನಾಟಕದ ಗವರ್ನರವರು ಅಲ್ಲಿಗೆ ಹೋಗಿರುತ್ತಾರೆ.

ಸಿಂಲಾ, ನೊವೆಂಬರ್ ೬ —ವೈಸ್‌ರಾಯವರು ಫಾರಸೀ ಖಾರಿಯಲ್ಲಿ ಸಂಚಾರ ಮಾಡುವ ತಾರೀಖುಗಳ್ಯಾವುವೆಂದರೆ —ನೊವೆಂಬರ್ ೧೮ಕ್ಕೆ ಮಸ್ಕತ್; ೨೧ಕ್ಕೆ ಷಾರ್ಗಾ; ೨೨ ಬಂದರ್ ಅಬ್ಬಾಸ್; ೨೬ ಬುಷೈರ್; ೩೦ ಕೌವೈಟ್; ಡಿಸೆಂಬರ್ ೪ ಬುಷೈರ್, ೭ ಮಸ್ಕತ್, ಕರಾಚಿ ಪಟ್ಟಣಕ್ಕೆ ಬರುವದು, ೮.

ವೈಸ್‌ರಾಯವರು ಮಸ್ಕತ್, ಷಾರ್ಗಾ, ಬುಷೈರ್, ಈ ಪಟ್ಟಣಗಳಲ್ಲಿ ಭಾರೀ ದರ್ಬಾರ್ ನಡಸುವವರಾಗಿದ್ದಾರೆ.

*   *   *

ಅಮೆರಿಕದ ಕೊಲಂಬಿಯಾ ಎಂಬ ಪ್ರಾಂತ್ಯದಲ್ಲಿ ಸಂಯುಕ್ತ ಸಂಸ್ಥಾನಗಳ ಸರ್ಕಾರದವರು ಪನಾಮ ಭೂಕಂಠವನ್ನು ಒಡೆದು ಕಾಲುವೆ ಮಾಡಬೇಕೆಂದು ಪ್ರಯತ್ನ ಪಟ್ಟು ಕೊಲಂಬಿಯಾ ಸರ್ಕಾರದ ಹತ್ತಿರ ಈ ವಿಷಯ ಕರಾರು ಮಾಡುವದಕ್ಕೋಸ್ಕರ ಒಂದು ಕಮಿಷನ್ ಏರ್ಪಡಿಸಿದ್ದರಷ್ಟೆ. ಈ ಕಮಿಷನಿನವರು ಕೊಟ್ಟ ಸಲಹೆಯನ್ನು ಸಂಯುಕ್ತ ಸಂಸ್ಥಾನಗಳವರು ಒಪ್ಪಿದರು. ಆದರೆ ಕೊಲಂಬಿಯಾದವರು ಒಪ್ಪದೆ ಹೋದರು. ಇದರಿಂದ ಆ ಕೊಲಂಬಿಯಾ ದೇಶಸ್ಥರೊಳಗೆ ಕೆಲವರು ಕೋಪಗೊಂಡು ತಮ್ಮ ಸರ್ಕಾರದವರ ಮೇಲೆ ತಿರುಗಬಿದ್ದರು. ಸರ್ಕಾರದ ಸೈನ್ಯವನ್ನು ಸೋಲಿಸಿ ರಾಜ್ಯಭಾರವನ್ನು ತಾವೇ ವಹಿಸಿ ಸಂಯುಕ್ತ ಸಂಸ್ಥಾನಗಳವರ ಸಲಹೆಯ ಪ್ರಕಾರ ಒಪ್ಪಿಕೊಂಡರು. ದಂಗೆ ಎದ್ದ ಪಕ್ಷದವರ ಕಾರ್ಯವನ್ನು ಸಂಯುಕ್ತ ಸಂಸ್ಥಾನಗಳ ಸರ್ಕಾರದವರು ಅನುಮೋದಿಸಿ ಅವರಿಗೆ ಸಹಾಯಕರಾಗಿದ್ದಾರೆ.

*   *   *

ಮ್ಯಾಸಿಡೋನಿಯ ದೇಶದ ರಾಜ್ಯಭಾರವನ್ನು ಕ್ರಮಪಡಿಸಿ ದೇಶವನ್ನು ತಹಬಂದಿಗೆ ತರುವ ವಿಷಯದಲ್ಲಿ ಜನರ ಒಡೆಯರೆನಿಸಿಕೊಳ್ಳುವ ತುರ್ಕಿ ಸುಲ್ತಾನರಿಗೂ ಯೂರೋಪಿನ ಇತರ ರಾಜ್ಯಗಳವರಿಗೂ ಬಹು ಕಾಲದಿಂದ ವ್ಯವಹಾರ ನಡೆಯುತ್ತಿರುವದಷ್ಟೆ. ಮ್ಯಾಸಿಡೋನಿಯಕ್ಕೆ ಕ್ರೈಸ್ತನಾದ ಒಬ್ಬ ಅಧಿಕಾರಿಯನ್ನು ನೇಮಿಸಬೇಕೆಂಬುದೇ ಮುಂತಾದ ನೂತನವಾದ ಏರ್ಪಾಡುಗಳನ್ನು ಆ ದೇಶದಲ್ಲಿ ಸ್ಥಾಪಿಸುವುದೇ ಸಮರ್ಪಕವಾಗಿದೆಯೆಂದು ಬ್ರಿಟಿಷ್ ಸರ್ಕಾರದವರು ಆಸ್ಟ್ರಿಯ ರಷ್ಯಾ ರಾಜ್ಯಗಳವರಿಗೆ ತಮ್ಮ ಅಭಿಪ್ರಾಯವನ್ನು ತಿಳಿಯಪಡಿಸಿದರು. ಈ ಅಭಿಪ್ರಾಯದಂತೆಯೇ ತಮ್ಮ ಅಭಿಪ್ರಾಯವೂ ಇತ್ತೆಂಬುದಾಗಿ ಆ ಎರಡು ರಾಜ್ಯಗಳವರೂ ಒಪ್ಪಿ ಈ ಸಲಹೆಯನ್ನು ತುರ್ಕಿ ಸುಲ್ತಾನರವರಿಗೆ ತಿಳಿಯಪಡಿಸಲೆತ್ನಿಸಿದರು. ಇದನ್ನು ಸುಲ್ತಾನರು ಮೊದಲು ಅಂಗೀಕರಿಸದೇ ಹೋದರಂತೆ. ಅಂದರೆ ಆ ಸಲಹೆಗಳು ಸುಲ್ತಾನರ ಸನ್ನಿಧಾನದವರಿವಿಗೂ ಮುಟ್ಟಲೇ ಇಲ್ಲವಂತೆ. ಈಚೆಗೆ ಸುಲ್ತಾನರು ಸಲಹೆಯ ವಿವರವನ್ನು ತಿಳಿದು ಮ್ಯಾಸಿಡೋನಿಯದಲ್ಲಿ ನಡೆಯುತ್ತಿರುವ ಅಕ್ರಮಗಳನ್ನೆಲ್ಲಾ ತಿದ್ದುಪಡಿ ಮಾಡುತ್ತಾ ಇದ್ದೇವಾದಕಾರಣ ಈ ಸಲಹೆಯನ್ನು ಆಲೋಚಿಸುವದು ಅವಶ್ಯವಿಲ್ಲವೆಂದು ಉತ್ತರ ಕಳುಹಿಸಿದರು. ಇದಕ್ಕೆ ಬ್ರಿಟಿಷ್, ಆಸ್ಟ್ರಿಯ, ರಷ್ಯಾ ರಾಜ್ಯಗಳವರು ಸುಲ್ತಾನರಿಗೆ—ಇಂತಹ ತಾರೀಖಿನೊಳಗಾಗಿ ಆ ಮ್ಯಾಸಿಡೋನಿಯದಲ್ಲಿ ನಾವು ಅಪೇಕ್ಷಿಸುವ ಅಧಿಕಾರಿಯನ್ನು ನೇಮಿಸದೆ ಹೋದಲ್ಲಿ ನಾವೇ ಬಲಾತ್ಕಾರವಾಗಿ ನೇಮಿಸಬೇಕಾಗುತ್ತೆ ಎಂದು ಹೇಳಿದ್ದಾರೆ.

ಮ್ಯಾಸಿಡೋನಿಯದಲ್ಲಿ ಕಷ್ಟಕ್ಕೆ ಸಿಕ್ಕಿ ತಾಳಲಾರದೆ ಬಲ್ಗೇರಿಯಕ್ಕೆ ಓಡಿಹೋಗಿ ಆಶ್ರಿತರಾಗಿರುವ ಜನರ ಸಂಖ್ಯೆ ಸದ್ಯ ೩೦,೦೦೦ ಎಂದು ಗೊತ್ತಾಗಿದೆ. ಇಷ್ಟು ಮಂದಿ ಸುಲ್ತಾನರವರ ಆಳಿಕೆಗೊಳಪಟ್ಟ ಪ್ರಾಂತ್ಯಗಳಿಂದ ತಪ್ಪಿಸಿಕೊಂಡು ಹೋಗುವದಕ್ಕೇನು ಕಾರಣವೆಂದು ಕೇಳಿದರೆ ಆ ದೇಶದಲ್ಲಿ ತಮಗುಂಟಾದ ಸಂಕಟವೂ ಹಿಂಸೆಯೂ ವಿವರಿಸಲಶಕ್ಯವಾಗಿತ್ತೆಂಬುದೇ ಎಂದು ತಿಳಿಯಬಹುದು.

ಈಗ ಸುಲ್ತಾನರವರ ಮೇಲೆ ತಿರುಗಬಿದ್ದಿರುವ ದಂಗೆಗಾರರ ಮುಖಂಡರಲ್ಲೊಬ್ಬನು—ಸುಲ್ತಾನರ ಜೀವ ಸೇನೆಯು ಈ ಮಾಗಿ ಕಾಲದಲ್ಲಿ ನಿರುದ್ಯೋಗಿಯಾಗಿರದ ಹಾಗಿರುವಂತೆ ಮಾಡುವದಕ್ಕೋಸ್ಕರ ನಾವು ಅಲ್ಲಲ್ಲಿ ಅವರ ಮೇಲೆ ಬಿದ್ದು, ಹಾನಿ ಮಾಡುತ್ತಿದ್ದು ಪುನಃ ಬೇಸಗೆ ಬಂದಾಗ ಪೂರ್ಣ ಪ್ರಯತ್ನ ಮಾಡಿ ದೊಡ್ಡ ಕಾಳಗವನ್ನೇ ನಡಸುವದಕ್ಕಿದ್ದೇವೆ ಎಂದು ತಿಳಿಯಪಡಿಸಿದ್ದಾನೆ. ತುರ್ಕಿಯ ಸಿಪಾಯಿಗಳು ಮ್ಯಾಸಿಡೋನಿಯದವರನ್ನು ಹಿಂಸೆಪಡಿಸುವ ವಿಷಯದಲ್ಲಿ ಅಲ್ಲಿನ ಬಾತ್ಮಿದಾರನೊಬ್ಬನು ಬರೆದಿರುವದೇನಂದರೆ—ಹೆಂಗಸರನ್ನೂ ಮಕ್ಕಳನ್ನೂ ಕೊಂದುಹಾಕಿದುದು ಕೆಲವು ಸಂದರ್ಭಗಳಲ್ಲಿ [illegible] ಹಳ್ಳಿಗಳನ್ನು ಸುಟ್ಟು [illegible] ದೇಶನಿವಾಸಿಗಳಲ್ಲಿ ಗಂಡಸರಾದವರನ್ನೆಲ್ಲಾ [illegible] ತುರ್ಕಿಯವರ ಉದ್ದೇಶವೆಂದು ತೋರುತ್ತದೆ ಎಂಬುದೇ.

*   *   *

ಮೊರಾಕೊ ದೇಶದಲ್ಲಿ ಅನಾಯಕತ್ವವು ವಿಪರೀತವಾಗಿ ಪರಿಣಮಿಸಿದೆ. ಸರ್ಕಾರದ ಕಂದಾಯವನ್ನು ವಸೂಲ್ಮಾಡುವದಕ್ಕೆ ಬಂದವರನ್ನು ಆ ದೇಶದ ದಕ್ಷಿಣ ಭಾಗದಲ್ಲಿರುವ ಕೆಲವು ಗುಂಪಿನವರು ಎದುರಿಸಿದ್ದಲ್ಲದೆ ತಮ್ಮ ಗವರ್ನರುಗಳನ್ನು ಓಡಿಸಿ ಅವರ ಮನೆಗಳನ್ನು ಸುಟ್ಟುಹಾಕಿದರು. ಇವರನ್ನು ಅಡಗಿಸುವದಕ್ಕೋಸ್ಕರ ಸರ್ಕಾರದ ಸೇನೆಯು ಬರಲು ಅವರನ್ನು ದಂಗೆಗಾರರು ಸೋಲಿಸಿ ಓಡಿಸಿದರು. ಸುಲ್ತಾನರೇ ನಿಂತು ಯುದ್ಧ ನಡಿಸುವದಕ್ಕೆ ಹೋದಾಗ ಸೈನಿಕರಲ್ಲಿ ಕೆಲವರು ಯುದ್ಧಮಾಡಲೊಲ್ಲದೆ ಹೋದರು. ಮೊರಾಕೊ ದೇಶದಲ್ಲಿ ವ್ಯಾಪಾರಗಳನ್ನು ಮಾಡುವ ಹಡಗಿನ ವ್ಯಾಪಾರಿಗಳು ಮುಂತಾದ ಪರದೇಶದವರು ಲಂಡನ್ ಪಟ್ಟಣದಲ್ಲಿ ಸಭೆ ಮಾಡಿ, ಈಗ ಸಕಲ ದೇಶಸ್ಥರು ಮೊರಾಕೋನಿನಲ್ಲಿ ವ್ಯಾಪಾರ ಮಾಡುವ ಸೌಲಭ್ಯಕ್ಕೆ ಕುಂದಕ ಬಾರದ ರೀತಿಯಲ್ಲಿ ರಾಜಕಾರ್ಯವನ್ನು ನಡಸಬೇಕೆಂಬ ಅಭಿಪ್ರಾಯಕ್ಕೆ ಗವರ್ನ್‌ಮೆಂಟಿಗೆ ಅರ್ಜಿ ಬರೆದುಕೊಳ್ಳತಕ್ಕದ್ದೆಂದು ಗೊತ್ತುಮಾಡಿದರು.

*   *   *

ಅಬಿಸಿನಿಯಾ ದೇಶದಲ್ಲಿ ಗುಲಾಮ ವ್ಯಾಪಾರವನ್ನು ನಿಷೇಧಿಸುವದೆಂಬರ್ಥಕ್ಕೆ ಮೆನಿಲೆಕ್ ದೊರೆಯು ಕೆಲವು ಕಾಲಕ್ಕೆ ಮುಂಚೆ ಅಪ್ಪಣೆ ಕೊಟ್ಟನು. ಇದನ್ನು ಕೆಲವು ಪ್ರಾಂತ್ಯದವರು ಮೀರಿ ನಡೆದ ಕಾರಣ ಆ ದೊರೆಯು ಇನ್ನುಮೇಲೆ ಇಂಥ ತಪ್ಪಿಗೆ ಸಿಕ್ಕಿದವರನ್ನು ಜುಲ್ಮಾನೆ ವಿಧಿಸಿ ಶಿಕ್ಷಿಸುವದಿಲ್ಲ. ಅಂಗಹೀನತ್ವವೆಂಬ ಶಿಕ್ಷೆಯನ್ನು ವಿಧಿಸುವೆವು ಎಂದು ಅಪ್ಪಣೆ ಕೊಟ್ಟಿರುತ್ತಾನೆ.

*   *   *

ಅಮೆರಿಕಖಂಡದ ಉತ್ತರದಲ್ಲಿ ಅಲಾಸ್ಕವೆಂಬ ಪ್ರಾಂತ್ಯವಿದೆ. ಇದು ರಷ್ಯಾ ದೇಶಕ್ಕೆ ಸೇರಿತ್ತು. ಅದಕ್ಕೂ ಬ್ರಿಟಿಷರ ವಶದಲ್ಲಿದ್ದ ಕ್ಯಾನಡಾ ಸೀಮೆಗೂ ಮೇರೆಗಳು ಯಾವುವೆಂದು ಗೊತ್ತುಮಾಡುವ ಸಂಬಂಧಕ್ಕೆ ೧೮೨೫ ರಲ್ಲಿ ಬ್ರಿಟಿಷರಿಗೂ ರಷ್ಯದವರಿಗೂ ಒಂದು ಕರಾರು ನಡೆಯಿತು. ಆಗ ಸಮುದ್ರ ತೀರದಿಂದ ಹತ್ತು ಮೈಲು ದೂರದವರೆವಿಗೂ ರಷ್ಯದವರ ಪ್ರಾಂತ್ಯವೆಂದು ಗೊತ್ತುಮಾಡಿಕೊಂಡಿದ್ದರು. ಸುಮಾರು ೧೮೬೭ ರಲ್ಲಿ ರಷ್ಯದವರಿಗೆ ಆ ಪ್ರಾಂತ್ಯ ನಷ್ಟವಾದಕಾರಣ ಮಾರಿಬಿಡುತ್ತೇವೆಂದು ಹೇಳಿದರು. ಬ್ರಿಟಿಷರಿಗೆ ಆಗ್ಯೆ ಅವಶ್ಯ ತೋರಲಿಲ್ಲವಾದದರಿಂದ ಅದನ್ನು ಅವರು ತೆಗೆದುಕೊಳ್ಳಲಿಲ್ಲ. ಅಮೆರಿಕದ ಸಂಯುಕ್ತ ಸಂಸ್ಥಾನಗಳವರು ಕೊಂಡುಕೊಂಡರು. ಕೆಲವು ವರ್ಷಗಳ ಹಿಂದೆ ಆ ಪ್ರಾಂತ್ಯದ ಕ್ಲಾಂಡೈಕೆಂಬಲ್ಲಿ ಭಂಗಾರವು ಸಿಕ್ಕುವದಕ್ಕೆ ಮೊದಲಾಯಿತು. ಆಗ ಅಲ್ಲಿಗೆ ಲಕ್ಷಾಂತರ ಮಂದಿ ಹೋಗುವವರಾದರು. ಅವರ ಸೌಲಭ್ಯಕ್ಕೋಸ್ಕರವೂ ದೇಶದ ಲಾಭಕ್ಕೋಸ್ಕರವೂ ಕ್ಯಾನಡಾ ಸರ್ಕಾರದವರು ಒಂದು ರೇವು ಪಟ್ಟಣವನ್ನು ಸ್ಥಾಪಿಸಿಕೊಳ್ಳುವದಕ್ಕೆ ನೋಡಿದರು. ಕೊನೆಗೆ ಆ ರೇವು ಪಟ್ಟಣವು ಯಾರಿಗೆ ಸೇರಬೇಕೆಂಬ ವಿಷಯದಲ್ಲಿ ವಾಗ್ವಾದವು ನಡೆಯಲಾರಂಭಿಸಿತು. ಸಮುದ್ರ ತೀರದಿಂದ ಹತ್ತು ಮೈಲುಗಳ ದೂರವೆಂದರೆ ಪೆಸಿಫಿಕ್ ಸಾಗರದ ತೀರದಿಂದಲೋ ಅಥವಾ ಆ ಸಮುದ್ರ ಶಾಖೆಗಳ ತೀರದಿಂದಲೋ ಎಂಬ ಸಂಶಯ ಉಂಟಾಯಿತು. ಇದನ್ನು ಗೊತ್ತುಮಾಡುವದಕ್ಕಾಗಿ ಅಮೆರಿಕದವರ ಕಡೆ ಮೂವರೂ, ಕ್ಯಾನಡಾದವರ ಕಡೆ ಇಬ್ಬರೂ ಪ್ರತಿನಿಧಿಗಳಾಗಿರುವಂತೆಯೂ ಇವರು ಸೇರುವ ಸಭೆಗೆ ಇಂಗ್ಲಾಂಡಿನ ಮುಖ್ಯ ನ್ಯಾಯಾಧಿಪತಿಯು ಅಗ್ರಾಸನಾಗಿರುವಂತೆಯೂ ಏರ್ಪಾಡು ಮಾಡಲಾಯಿತು. ಈ ಧನವಂತನು ಪಕ್ಷಪರಪಕ್ಷಗಳ ನ್ಯಾಯಗಳನ್ನೆಲ್ಲಾ ವಿಮರ್ಶೆಮಾಡಿ ಕಡೆಗೆ ಕ್ಯಾನಡಾದವರು ವಾದಿಸುವ ಭಾಗಕ್ಕೂ ಅಮೆರಿಕಜನರು ವಾದಿಸುವ ಭಾಗಕ್ಕೂ ನಡುವೆ ಇರುವಂತೆ ಮೇರೆಯನ್ನು ಗೊತ್ತುಮಾಡಿದನು. ಇದನ್ನು ಅಮೆರಿಕದ ಪ್ರತಿನಿಧಿಗಳು ಒಪ್ಪಿ ಕರಾರು ಪತ್ರಕ್ಕೆ ರುಜು ಹಾಕಿದರು. ಕ್ಯಾನಡಾದವರು ರುಜುಹಾಕಲಿಲ್ಲ, ಆದರೂ ಅವರ ದೇಶಸ್ಥರು ಒಪ್ಪಲೇಬೇಕಾಗುವದು.

ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರಜೆಗಳ ವಿದ್ಯಾಭ್ಯಾಸದ ವಿಷಯದಲ್ಲಿ ಒಂದು ಕಮಿಷನ್ ಏರ್ಪಾಡಾಗಿ ವಿಧಿಸಲ್ಪಟ್ಟಿರುವದೇನಂದರೆ—ಪ್ರತಿಯೊಂದು ಸಂಸ್ಥಾನದೊಳಗೆ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸ್ಥಾಪಿಸಲ್ಪಡುವ ಶಾಲೆಗಳ ಪೋಷಣಾರ್ಥವಾಗಿ ಮಾನ್ಯಗಳನ್ನು ಪ್ರತ್ಯೇಕಿಸಿಡತಕ್ಕದ್ದು. ಮತ್ತು ಪ್ರತಿಯೊಂದು ಸಂಸ್ಥಾನದಲ್ಲಿಯೂ ೧ ಇಲ್ಲವೆ ೨ ಯೂನಿವರ್ಸಿಟಿಗಳಿಗಾಗಿ ಎರಡು ಪಟ್ಟಣಗಳ ಆದಾಯವನ್ನೇ ವಿನಿಯೋಗಿಸತಕ್ಕದ್ದು. ಈ ತೀರ್ಮಾನದ ದೆಸೆಯಿಂದ ಒಟ್ಟು ೧,೩೦,೦೦೦ ಚದರ ಮೈಲುಗಳಷ್ಟು ವಿಸ್ತಾರವಾದ ಭೂಮಿಯನ್ನೂ ಸುಮಾರು ೯೦ ಕೋಟಿ ರೂಪಾಯಿಗಳ ಹಣವನ್ನೂ ಸಂಯುಕ್ತ ಸಂಸ್ಥಾನಗಳವರು ತಮ್ಮ ದೇಶಸ್ಥರ ವಿದ್ಯಾಭ್ಯಾಸಕ್ಕಾಗಿ ಬಿಟ್ಟುಕೊಟ್ಟ ಹಾಗಾಯಿತು. ಇದಲ್ಲದೆ ಸರ್ಕಾರದವರೇ ರಾಜಕೀಯ ವಿದ್ಯೆಯನ್ನು ಅಂದರೆ ಸೈನಿಕ ಮತ್ತು ನಾವಿಕ ವಿಷಯಗಳ ವಿದ್ಯೆಯನ್ನು ಕಲಿಸುವ ಖರ್ಚನ್ನು ವಹಿಸಿಕೊಂಡಿದ್ದಾರೆ.

ಜರ್ಮನಿ ದೇಶದಲ್ಲಿ ಕೈಗಾರಿಕೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕೂಲಿಯಾಳುಗಳು ಪರಸ್ಪರ ಸಹಾಯದ್ರವ್ಯ ನಿಧಿಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಕಾರ್ಖಾನೆಗಳಲ್ಲಿ ಕೆಲಸ ಮಾಡಿ ಅಂಗಹೀನರಾದವರೂ, ಅನಾರೋಗ್ಯದಿಂದ ಕೆಲಸ ಮಾಡಲಾರದೆ ಹೋದವರೂ, ಮರಣಪಟ್ಟವರ ಕುಟುಂಬಗಳವರೂ ಈ ನಿಧಿಗಳಿಂದ ಸಹಾಯವನ್ನು ಹೊಂದುವ ಬಗ್ಗೆ ಸ್ಥಾಪಿಸಲ್ಪಟ್ಟಿರುವ ಈ ನಿಧಿಗಳಿಗೆ ಕೂಲಿಯಾಳುಗಳು ಹಣ ಕಟ್ಟುವದಲ್ಲದೆ, ಕಾರ್ಖಾನೆಗಳ ಸಾಹುಕಾರರೂ ತಲಾ ಇಷ್ಟಿಷ್ಟೆಂದು ಜಾಮೀನುದಾಯ ಪ್ರಕಾರ ಹಣವನ್ನು ಹಾಕುತ್ತಾರೆ. ಹೀಗೆ ಈ ದ್ರವ್ಯನಿಧಿಗಳ ಹಣವೂ, ಸಹಾಯವೂ ವರ್ಷ ವರ್ಷಕ್ಕೆ ಪರಿಮಾಣದಲ್ಲಿ ಹೆಚ್ಚುತ್ತಲಿರುತ್ತದೆ. ಈ ವಿಷಯವು ೧೯೦೨ನೆಯ ವರ್ಷದ ರಿಪೋರ್ಟಿನಿಂದ ಪರಿಷ್ಕಾರವಾಗುವದು—ಹ್ಯಾಗೆಂದರೆ, ಸಹಾಯವನ್ನು ಹೊಂದಿದ ವಿವರ:—೩೮,೦೦,೦೦೦ ಖಾಯಿಲೆಯವರು ೧,೦೩,೦೦,೦೦೦ ಪೌಂಡು [illegible] ಅಂಗಹೀನರು ೩,೬೦,೦೦೦ ಪೌಂಡು [illegible] ೧೦,೦೦,೦೦೦ ಅಶಕ್ತರು [illegible] ೧೦,೦೦೦ ಪೌಂಡು [illegible] ವರ್ಷ ವರ್ಷವೂ ಈ ಪ್ರಕಾರ ಸಹಾಯವನ್ನು ಪಡೆಯುತಕ್ಕವರ ಸಂಖ್ಯೆಯು ಹೆಚ್ಚುವದರಿಂದ ದ್ರವ್ಯನಿಧಿಗಳವರಿಗೆ ಸ್ವಲ್ಪ ಭಯಕ್ಕೆ ಕಾರಣವಾಯಿತು. ಆದಕಾರಣ ಖಾಯಿಲೆಯವರ ಸಂಖ್ಯೆಯನ್ನು ಕಡಮೆ ಮಾಡುವದಕ್ಕೋಸ್ಕರ ಅವರು ರೋಗಿಗಳ ಉಪಯೋಗಕ್ಕೋಸ್ಕರ ಚಿಕಿತ್ಸಾಗೃಹಗಳನ್ನು ಆರೋಗ್ಯಕರವಾದ ಪ್ರದೇಶಗಳಲ್ಲಿ ಸ್ಥಾಪಿಸಿ ನಡಸುತ್ತಿದ್ದಾರೆ. ಇಂಥ ಪ್ರದೇಶಗಳು ಈಗ ೬೦—೮೦ ಇವೆ. ಇವುಗಳಲ್ಲಿ ಸುಮಾರು ೩,೦೦೦ ಮಂದಿಗೆ ಸ್ಥಳವುಂಟು. ಪ್ರತಿಯೊಬ್ಬ ರೋಗಿಗೆ ೩ ತಿಂಗಳ ಚಿಕಿತ್ಸೆ ದೊರೆಯುವದು. ಹೀಗೆ ವರ್ಷಕ್ಕೆ ಸರಾಸರಿ ೩೦,೦೦೦ ಮಂದಿಗೆ ಚಿಕಿತ್ಸೆಯಾಗುವದೆಂದು ಗೊತ್ತುಮಾಡಿರುತ್ತಾರೆ. ಇದರ ಫಲಿತಾಂಶವೇನಂದರೆ—ಚಿಕಿತ್ಸೆ ಹೊಂದತಕ್ಕವರಲ್ಲಿ ಸರಾಸರಿ ಶೇಕಡಾ ೭೩.೩ ಮಂದಿ ಸ್ವಸ್ಥರಾಗಿ ಕೆಲಸಕ್ಕೆ ಹಾಜರಾಗುತ್ತಾರೆ. ಕ್ಷಯವೇ ಈ ಕೂಲಿಯಾಳುಗಳನ್ನು ಪೀಡಿಸುವ ರೋಗವಾಗಿದೆಯೆಂದು ತಿಳಿದು ಬಂದಿದೆ.

*   *   *

ಲಂಡನ್ ನಗರದಲ್ಲಿ ಭೂಮಿಯ ಕೆಳಗೆ ರೈಲುಗಳನ್ನು ಹಾಕಿರುತ್ತಾರಷ್ಟೆ. ಕೆಳಗಿನಿಂದ ಭೂಮುಖದ ಮೇಲಕ್ಕೆ ಬರಬೇಕಾದರೆ ಯಂತ್ರ ಸಹಾಯದಿಂದ ಮೇಲಕ್ಕೆಳೆದುಕೊಳ್ಳುವ ಲಿಫ್ಟ್ಸ್ ಎಂಬ ಅನುಕೂಲಗಳುಂಟು. ಆದರೆ ಇದರಲ್ಲಿಯೂ ಕಾಲಹರಣವಾಗುವದೆಂದು ಕಂಡುಬಂದಿರುವದರಿಂದ ಈಗ ಇನ್ನೊಂದು ಉಪಾಯವನ್ನು ಕಂಡು ಹಿಡಿದಿರುವರು. ಇದರ ವಿವರವೇನಂದರೆ—ಮೆಟ್ಟಿಲುಗಳನ್ನೊಳಗೊಂಡಿರುವ ಒಂದು ಆಕಾರವಾದ ಚಕ್ರವನ್ನು ಮಾಡಿರುವರು. ಇದು ಯಂತ್ರಸಹಾಯದಿಂದ ನಿರಂತರವೂ ಸುತ್ತುತ್ತಲೇ ಇರುವುದು. ಮೇಲಕ್ಕೆ ಬರಬೇಕೆಂದಿರುವ ಪ್ರಯಾಣಿಕನು ಒಂದು ಮೆಟ್ಟಿಲ ಮೇಲೆ ಕಾಲಿಡುವುದೇ ಬೇಕಾದುದು. ಕೂಡಲೆ ಆ ಯಂತ್ರವು ಅವನನ್ನು ಮೇಲಕ್ಕೆ ತೆಗೆದುಕೊಂಡು ಹೋಗುವದು. ಅವನು ಭೂಮಿಯ ಮಟ್ಟಕ್ಕೆ ಬಂದಕೂಡಲೆ ನೆಲದ ಮೇಲೆ ಹೆಜ್ಜೆಯಿಟ್ಟು ಮುಂದಕ್ಕೆ ಹೊರಟು ಹೋಗಬಹುದಾಗಿದೆ.

## ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರೆದ ಬಾತ್ಮಿಗಳಿಗೆ ನಾವು ವಿನಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ತಮ್ಮ ತಿಳುವಳಿಕೆಗೋ

ಕ್ಕವನ್ನು ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬರೆದವರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಚಿಕ್ಕಬಳ್ಳಾಪುರದ ಇಂಜನಿಯರ್ ಇಲಾಖೆಯ ಕಂಟ್ರಾಕ್ಟರುಗಳ ವಿಚಾರ—ಈ ವಿಷಯವಾಗಿ ಬಂದಿರುವ ಬಾತ್ಮಿಗೆ ಸ್ಥಳ ಅವಕಾಶ ಕೊಡಲಾರೆವು. ಬಾತ್ಮಿದಾರರು ಮೊದಲು ಮೇಲ್ಪಟ್ಟ ಅಧಿಕಾರಿಗಳಿಗೆ ಈ ಸಂಗತಿಗಳನ್ನೇ ತಿಳಿಸಿದಲ್ಲಿ ಅವರು ತನಿಖೆಯಿಂದ ಕಷ್ಟ ನಿವಾರಣೆ ಮಾಡಿಕೊಡುತ್ತಾರೆ.

—ಎಡಿ.}

## ಕರೆಸ್ಪಾಂಡೆನ್ಸ್.

### ಚಳ್ಳಕೆರೆ—ನಾಯಕನ ಹಟ್ಟಿ.

ಸ್ವಾಮಿ,

ಕಳೆದ ವರ್ಷ ಅಕ್ಟೋಬರು ಮಾಸದಲ್ಲಿ ಜೋಳಕಾಲ್ಮುರು ತಾಲ್ಲೂಕು ಪುರದ ಕೆರೆಗೆ ನೀರು ಬರುವ ಕಾಲ್ವೆಯು ೨೦೦—೩೦೦ ಗಜ ದೂರದವರೆಗೂ ಕಿತ್ತುಕೊಂಡು ಹೋಯಿತು. ಇದು ಹೋಗುವುದಕ್ಕೆ ಆ ಗ್ರಾಮದವರ ಅಶ್ರದ್ಧೆಯಿಂದಲೇ ಆಯಿತು. ಆದಾಗ್ಯೂ ಆ ಸ್ಥಳದಲ್ಲಿ ನಿಲ್ಲಿಸಿಕೊಳ್ಳಬೇಕೆಂದು ಗ್ರಾಮದ ಜನಗಳೆಲ್ಲಾ ಸೇರಿ ಪ್ರಯತ್ನ ಮಾಡಿದರು. ದನ್ನಿಗೆ ಹಳ್ಳದಲ್ಲಿ ಪ್ರವಾಹವು ಜಾಸ್ತಿಯಾದ್ದರಿಂದ ನಿಲ್ಲಿಸುವುದಕ್ಕೆ ರೈತರಿಗೆ ಸಾಧ್ಯವಾಗದೆ ಸಬ್ ಇಂಜನಿಯರ್ ರವರಿಗೆ ಅರ್ಜಿ ಹಾಕಿಕೊಂಡರು. ಅದಕ್ಕೆ ಅವರು ಖುದ್ದು ಬಂದು ನೋಡಿ ಹೋಗಿ ಆಗಿತ್ತು. ಈ ವರೆಗೂ ಕಾಮಗಾರಿಗೆ ಬರಲಿಲ್ಲ. ಆದ್ದರಿಂದ ಆ ಗ್ರಾಮದ ರೈತರ ಅಹವಾಲ್ ಕೇಳುವವರೇ ಇಲ್ಲದಂತೆ ಆಯಿತು. ಆ ಗ್ರಾಮದ ರೈತರುಗಳೆಲ್ಲಾ ನಮ್ಮ ಚಿಕ್ಕಣ್ಣಯ್ಯ ಒಡೆಯರು ಕೆರೆಗೆ ಬರುವ ಕಾಲ್ವೆಯನ್ನು ಮೈಸೂರು ಗವರ್ನಮೆಂಟಿನವರು ಬೇಗ ಕಾಮಗಾರಿ ಮಾಡಿಸಿ ಪೋಷಿಸಿ ನಮ್ಮನ್ನು ಕಾಪಾಡುವರೆಂದು ಪ್ರಾರ್ಥನೆಯನ್ನು ಮಾಡುತ್ತಾ ಇರುವರು.

ಚಳ್ಳಕೆರೆ ತಾಲ್ಲೂಕು ಅನುಬಾಗ್ರಾಮ ಮಾಡನಾಯಕನಹಳ್ಳಿಯಲ್ಲಿರುವ ಹಿಂದೂ ಜಾಗಗಳಲ್ಲಿ ಬಹಳ ವಿಶೇಷವನ್ನು ಇಟ್ಟಿರುವುದಲ್ಲದೆ ಜೀರ್ಣವಾಗಿರುವ ಹಿಂದೂ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಹಿಂದೂಜನಗಳಿಗೆಲ್ಲಾ ಪ್ರೋತ್ಸಾಹ ಉಂಟುಮಾಡಿ ಪೂರ್ವದವರಿಗೂ ಮಾತ ವರ್ಷ ಮಹಿಳಾ ಕಾರ್ಯವನ್ನು ನೆರವೇರಿಸುವರು. ಇವರೊಬ್ಬರು ಹಿಂದೂಜನಗಳಿಗೆಲ್ಲಾ ಮಿತ್ರರಾಗಿರುವರು.

ಚಾದಾರ.

### ಕಾರ್ಖಾನೆಗಳಿಗೆ ಸಂಬಂಧಪಟ್ಟ ಕಾನೂನು

ಸ್ವಾಮಿ,

ಈ ಪತ್ರಿಕೆಯ ಹಿಂದಿನ ಸಂಚಿಕೆಗಳಲ್ಲಿ ಪ್ರಕಟಿಸಿರುವ ವೃತ್ತಾಂತವು ಅದರಲ್ಲಿನ ಎಡಿಟರವರ ಅಭಿಪ್ರಾಯವೂ ನೋಡಿದ್ದೆ. ಈ ಸಂಗತಿಗಳನ್ನು ಗವರ್ನಮೆಂಟ್ ಆಫೀಸರುಗಳು ಗಮನಿಸಿ ಬೇಗ ಜಾರಿಗೆ ತರುತ್ತಾರೆಂಬ ಭರವಸೆ ಇದ್ದಾಗ್ಯೂ ೨ ತಿಂಗಳ ಒಳಗಾಗಿ "ಇಂಡಿಯನ್ ಫ್ಯಾಕ್ಟರೀಸ್ ಆಕ್ಟ್" ಜಾರಿಗೆ ತರಬೇಕೆಂತ ಅಕಸ್ಮಾತ್ ಗೆಜೆಟ್ಟಿನಲ್ಲಿ ಪ್ರಕಟಿಸಿ ಆಗಿರುವುದನ್ನು ನೋಡಿ ಬಹಳ ಸಂತೋಷವಾಗಿ ಈ ವಿಷಯವನ್ನು ಈ ಕೆಲಸಗಳ ಬಡಪಾಯಿಗಳಿಗೆ ಉಪಕಾರವಾಗುವಂತೆ ಮಾಡಿದ ದಿವಾನ್ ಸಿ. ಮಾಧವರಾಯರವರನ್ನೂ, ಸದರೀ ಉಪನ್ಯಾಸ ಪ್ರಚುರಿಸಿ ಕೀರ್ತಿಗೆ ಪಾತ್ರರಾಗಿರುವ ಈಗಿನ ದಿವಾನ್ ಮ ಬಿ. ಸುಬ್ಬರಾಯರವರನ್ನೂ, ಇವರುಗಳ ಪ್ರೋತ್ಸಾಹಕರಾದ ಮತ್ತು ಪ್ರಜಾಪಾಲನೆ ತತ್ಪರರಾದ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರನ್ನೂ ಈ ಮೂಲಕ ಮನಃಪೂರ್ವಕವಾಗಿ ವಂದಿಸುತ್ತೇನೆ.

ಆದರೆ ಈ ಸಂದರ್ಭದಲ್ಲಿ ಕೆಲವು ಅಂಶಗಳು ತಿಳಿಸೋಣವೆಂದು ಸ್ವಪ್ನೇತ ಭಾವಿಸಿ ಬರೆಯುವದೇನೆಂದರೆ —(೧) ರಾತ್ರಿ ಹಗಲು ಕೆಲಸ ನಡೆಯುವ ಫ್ಯಾಕ್ಟರಿಗಳಲ್ಲಿ ಪ್ರತಿ ಒಬ್ಬ ಮನುಷ್ಯನೂ ೮ ಗಂಟೆಗಳ ಕಾಲ ಮಾತ್ರವೇ ಕೆಲಸ ಮಾಡಬೇಕೆಂದೂ, (೨) ಗಂಟೆಗಳ ಶಿವಾಯಿ ಮ್ಯಾನೇಜರ್ ಅನುಮತಿ ವಿನಹ ಹೆಚ್ಚು ಕೆಲಸವನ್ನು ಮಾಡಿಸಿದಾಗ ಆ ಕೆಲಸಕ್ಕೆ ಹೆಚ್ಚು ಸಂಬಳ ಕೊಡಬೇಕೆಂದೂ, (೩) ಹದಿನೈದು ರೂಪಾಯಿಗಳ ಮೇಲ್ಪಟ್ಟು ಸಂಬಳವುಳ್ಳವರನ್ನು ಯಾವ ಕಾರಣದಿಂದಲೇ ಆಗಲಿ ನಿವೃತ್ತಿ ಹೊಂದಿಸಬೇಕಾದಲ್ಲಿ ಒಂದು ತಿಂಗಳು ಮುಂಚಿತವಾಗಿ ನೋಟೀಸ್ ಕೊಡಬೇಕೆಂದೂ, ಇದಲ್ಲದೆ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಕ ಹೊಂದಿದ ಅಮಲ್ದಾರುಗಳು ಫ್ಯಾಕ್ಟರಿ ಇನ್ಸ್ಪೆಕ್ಟರ್ ರಾಗಿದ್ದಾಗ್ಯೂ, ಅವರುಗಳಿಗಿರುವ ಅಸಂಖ್ಯಾತವಾದ ಕೆಲಸಗಳಲ್ಲಿ ಈ ಕೆಲಸವು ನೋಡಿಕೊಳ್ಳಲು ಅನಿವಾರ್ಯವಾದ ಸಬ್ ಇನ್ಸ್ಪೆಕ್ಟರ್ ಫ್ಯಾಕ್ಟರಿ ಇನ್ಸ್ಪೆಕ್ಟರನ್ನು ನೇಮಿಸುವ ಕೆಲಸಗಳು ಸಮರ್ಪಕವಾಗಿ ನಡೆದರೆ ಈ ಮೂಲಕ ಬಡವರಿಗೆ ಉಪಯೋಗವಾಗಿ ನಮ್ಮ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರ ಶ್ರೇಯಃಪ್ರಾರ್ಥನೆಯನ್ನು ಮಾಡದೆ ಇರಲಾರರೆಂತ ನಂಬುತ್ತೇನೆ.

ಕರುಣಾಲಿ.

### ಮೈಸೂರು ಸರ್ಕಾರ ಹುಕುಂಗಳು.

ಸೋಸಲೆಯು ಶ್ರೀ ವ್ಯಾಸರಾಯಸ್ವಾಮಿಗಳ ಮಠ.

ಮೈಸೂರು ಹೋಬಳಿಯಲ್ಲಿ ಸೋಸಲೆಯು ಶ್ರೀ ವ್ಯಾಸರಾಯಸ್ವಾಮಿಗಳ ಮಠ ಗ್ರಾಮ ಭೂಮಿಗಳಲ್ಲಿ ಉತ್ಪತ್ತಿ ಆಗತಕ್ಕ ಹಣ ಕಾಸನ್ನು ಬೆಂಗಳೂರ್ ಡಿಸ್ಟ್ರಿಕ್ಟ್ ಖಜಾನೆಗೆ ಕಳುಹಿಸಿಕೊಡಬೇಕೆಂತಲೂ, ಈ ಹಣವನ್ನು ಖಜಾನೆಯವರು ಮುಜರಾಯಿ ಡೆಪ್ಯುಟಿ ಸೆಕ್ರೆಟರಿಯವರ ಹೆಸರಿನಲ್ಲಿ ಸೇವಿಂಗ್ಸ್ ಬ್ಯಾಂಕಿಗೆ ಹಾಕಬೇಕೆಂತಲೂ ಸರ್ಕಾರದವರು ಕಳೆದ ಮೇ ತಿಂಗಳಲ್ಲಿ ಹುಕುಂ ಕೊಟ್ಟಿದ್ದರು. ಈಚೆಗೆ ಜುಲೈ ತಿಂಗಳಲ್ಲಿ ಡಿಪ್ಯುಟಿ ಕಮೀಷನರು ಈ ಮಠದ ವಿಭಾಗಗಳ ಉತ್ಪತ್ತಿಯ ಹಣವನ್ನು (ರೂ. ೧,೨೬೬—೪—೮ ಪೈ.) ಮೇಲ್ಕಂಡ ಹುಕುಂ ಪ್ರಕಾರ ಬೆಂಗಳೂರು ಡಿಸ್ಟ್ರಿಕ್ಟ್ ಖಜಾನೆಗೆ ಕಳುಹಿಸಿಕೊಟ್ಟರು. ಖಜಾನೆಯವರು ಅದನ್ನು ಸ್ವೀಕರಿಸದೆ ವಾಪಸು ಮಾಡಿದರು. ಅದರಮೇಲೆ ಈ ವಿಷಯವಾಗಿ ಕಂಟ್ರೋಲರಿಗೂ ಗವರ್ನಮೆಂಟಿಗೂ ಕಾಗದಪತ್ರಗಳು ನಡೆದವು. ಈಗ ಸರ್ಕಾರದವರು ಕೊಟ್ಟಿರುವ ಹುಕುಂ ಏನೆಂದರೆ —ಇನ್ನುಮುಂದೆ ಹಣಕಾಸನ್ನು ಕಳುಹಿಸತಕ್ಕವರು ಮುಜರಾಯಿ ಡೆಪ್ಯುಟಿ ಸೆಕ್ರೆಟರಿಯವರಿಗೆ ಕಳುಹಿಸಬೇಕು. ಅವರು ಅದರ ಚೆಕ್ಕುಗಳನ್ನು ಗುಮಾಸ್ತೆ ಮಾಡಿಕೊಂಡು ಬೆಂಗಳೂರು ಡಿಸ್ಟ್ರಿಕ್ಟ್ ಖಜಾನೆಗೆ ಆ ಚೆಕ್ಕುಗಳನ್ನು ಕಳುಹಿಸತಕ್ಕದ್ದು. ಆ ಹಣವನ್ನು ಖಜಾನೆಯವರು ಸೇವಿಂಗ್ಸ್ ಬ್ಯಾಂಕಿನಲ್ಲಿ ಇಡಬೇಕು.

### ಶ್ರಿಂಗೇರಿ ಮ್ಯುನಿಸಿಪಲ್ ಹುಟ್ಟುವಳಿ ಖರ್ಚು.

ಶ್ರಿಂಗೇರಿ ಮ್ಯುನಿಸಿಪಾಲಿಟಿಯಲ್ಲಿ ೧೯೦೩—೦೪ ನೆ ಸಾಲಿನ ಜಮಾ ಖರ್ಚಿನ ಅಂದಾಜು ಪಟ್ಟಿಯನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ. ಈ ಮ್ಯುನಿಸಿಪಾಲಿಟಿಯಲ್ಲಿ ಖರ್ಚು ಜಾತಾ ೧೯೦೪ ನೆ ಜೂನ್ ೩೦ ರಲ್ಲಿ ೭೨೦ ರೂ ಮಾತ್ರ ಶಿಲ್ಕು ಉಳಿಯುವಂತೆ ಅಂದಾಜು ತಯಾರಿಸಲ್ಪಟ್ಟಿದೆ. ಈ ಶಿಲ್ಕು ೩,೫೧೦ ರೂ. ಗಿಂತ ಜಾಸ್ತಿ ಉಳಿಯುವ ಹಾಗೆ ಖರ್ಚುಬಾಬುಗಳನ್ನು ಕಡಿಮೆ ಮಾಡುವ ವಿಚಾರದಲ್ಲಿ ಮ್ಯುನಿಸಿಪಾಲಿಟಿಯವರು ಗಮನ ಕೊಡಬೇಕೆಂದು ಸರ್ಕಾರದವರು ತಿಳಿಸಿದಾರೆ. ಈಗ ಸ್ಯಾಂಕ್ಷನ್ ಆಗಿರುವ ಜಮಾ ಖರ್ಚು ಬಾಬುಗಳೇನೆಂದರೆ —

| ಜಮಾಬಾಬು. | ರೂ. | ಖರ್ಚುಬಾಬು. | ರೂ. |
|---|---|---|---|
| | | ಶಾಲೆಗೆ | ೧,೩೯೮ |
| ಅಬ್ಕಾರಿ | ೧ ೫೧೦ | ಹೆಡ್ ಆಫೀಸ್ | ೩೩೬ |
| ಮನೆ ತೆರಿಗೆ | ೮೬೧ | ವಸೂಲಿ ಬಾಬಿಗೆ | ೨೧೦ |
| ಅಂಗಡಿ ತೆರಿಗೆ | ೩೨೫ | ಕನ್ಸರ್ವೆನ್ಸಿಗೆ | ೮೩೦ |
| ಗಾಡಿ ಕಂದಾಯ | ೮೦ | ದೀಪಕ್ಕೆ | ೨೪೦ |
| ದುಲ್ಮಾನೆ | ೫ | ಕಾಮಗಾರಿಗಳಿಗೆ | ೧೧,೫೩೭ |
| ಚಿಲ್ಲರೆ ಬಾಬುಗಳು | ೬೦,೦೨೫ | ಧರ್ಮದ ಗ್ರಾಂಟು | ೨೪೦ |
| ಗ್ರಾಂಟುಗಳು | ೧,೩೯೮ | ಚಿಲ್ಲರೆ | ೩೦ |
| ಶಿಲ್ಕು | ೩ ೦೮೪ | ಮುಚಳ್ಕೆ | ೧,೩೯೮ |
| ಜುಮ್ಲಾ | ೧೩,೩೩೮ | ಜುಮ್ಲಾ. | ೧೩,೬೦೮ |

## ವಿದೇಶ ವರ್ತಮಾನಗಳು.

ಆಫ್ಘಾನಿಸ್ಥಾನದ ಅಮೀರರ ಆಸ್ಥಾನದಲ್ಲಿ ಇಂಗ್ಲಿಷ್ ರಾಯಭಾರಿಯಾಗಿದ್ದು ವಿಲಾಯತಿಗೆ ಪ್ರಯಾಣ ಮಾಡಿದ ಸರ್ ಮಾರ್ಟಿಮರ್ ಡ್ಯೂರಾಂಡ್ ಯವರಿಗೆ ಅಮೇರಿಕ ರಾಜ್ಯದಲ್ಲಿ ಇಂಗ್ಲಿಷ್ ರಾಯಭಾರಿಯ ಕೆಲಸವಾಯಿತು.

❖❖❖❖

ಲಂಡನ್ ನಗರದಲ್ಲಿ ಹುಚ್ಚರ ಸಂಖ್ಯೆಯು ಕಳೆದ ೧೪ ವರುಷಗಳಿಂದಲೂ ಹೆಚ್ಚಾಗುತ್ತಲೇ ಬಂದಿದೆ. ಹೋದ ವರುಷಕ್ಕಿಂತ ಈ ವರುಷ ೭೯೭ ಮಂದಿ ಹುಚ್ಚರು ಹೆಚ್ಚಿದರು. ಈಗ ಆ ಪಟ್ಟಣದಲ್ಲಿ ಒಟ್ಟು ೨೭,೯೫೨ ಮಂದಿ ಹುಚ್ಚರಿರುತ್ತಾರೆ; ೧೮೯೦ ನೇ ಇಸವಿಯಲ್ಲಿ ೧೭,೩೪೮ ಮಂದಿ ಇದ್ದರು.

❖❖❖❖

ಜರ್ಮನವರಿಗೂ ರಷ್ಯಾದವರಿಗೂ ಯುದ್ಧ ಪ್ರಾಪ್ತವಾಗುವ ಸಂಭವವಿದೆ ಎಂಬದಾಗಿ ತಿಳಿಸಿದ್ದವಷ್ಟೆ. ಈಚೆಗೆ ಅನೇಕ ರಾಜ್ಯಗಳ ಪ್ರತಿನಿಧಿಗಳೂ ಸೇರಿ ಸಾವಧಾನವಾಗಿ ಎಲ್ಲಾ ವಿಷಯಗಳನ್ನೂ ಕುರಿತು ಚರ್ಚೆಮಾಡಿ, ಸಮಾಧಾನದಿಂದಿರುವುದಕ್ಕೆ ಅನುಕೂಲಿಸುವ ಏರ್ಪಾಡು ಮಾಡಿಕೊಳ್ಳುತ್ತಿದ್ದಾರೆಂದು ತಂತೀ ವರ್ತಮಾನ ಬಂದಿದೆ.

❖❖❖❖

ಲಂಡನ್ ಪಟ್ಟಣದಲ್ಲಿ ಹಾಲು ವಿಕರಿ ಮಾಡತಕ್ಕವರು ಹಾಲನ್ನು ಪಾತ್ರೆಯಲ್ಲಿ ಹಾಕಿ ಮೇಲೆ ಬಲವಾಗಿ ಮುಚ್ಚಿಕೊಂಡು ತರಬೇಕು. ಮುಚ್ಚದೆ ಮಾರುವದಕ್ಕೆ ತರುವ ಹಾಲನ್ನು ಯಾರೂ ಕೊಂಡುಕೊಳ್ಳಕೂಡದೆಂತಲೂ, ಅಂಥ ಹಾಲಿನವರನ್ನು ಪೋಲೀಸಿನವರು ಹಿಡಿದು ಮ್ಯಾಜಿಸ್ಟ್ರೇಟರಿಂದ ದುಲ್ಮಾನೆ ಹಾಕಿಸುತ್ತೇನೆಂತಲೂ ಕಾನೂನು ಮಾಡಿ ಪ್ರಕಟಿಸಿದ್ದಾರೆ.

❖❖❖❖

ಆಫ್ರಿಕಕ್ಕೆ ಸೇರಿದ ಸಹಾರಾ ಎಂಬ ಮರುಭೂಮಿಯಲ್ಲಿ ಲಿಬಿಯ ಕಾಡು ಇರುತ್ತದೆ. ಈ ಪ್ರದೇಶದಲ್ಲಿ ಪ್ರಾಚೀನ ಕಾಲದವರು ಚಿನ್ನ ಬೆಳ್ಳಿ ಮೊದಲಾದ ಲೋಹಗಳನ್ನು ಗಣಿಗಳಿಂದ ತೆಗೆಯುತ್ತಿದ್ದುದನ್ನು ಈಗೀಗ ಕಂಡು ಹಿಡಿದಿದ್ದಾರೆ. ಅದೇ ಗಣಿಗಳಲ್ಲಿ ಈಗಲೂ ಲೋಹ ತೆಗೆಯುವದಕ್ಕೋಸ್ಕರ ಕೆಲವರು ಲಂಡನ್ ಪಟ್ಟಣದಿಂದ ಕೆಲವು ಜನರು ಪ್ರಯಾಣ ಮಾಡಿದರು.

❖❖❖❖

ಪ್ಯಾರಿಸ್ ನಗರದ ವೈದ್ಯರುಗಳು ವಿದ್ಯುಚ್ಛಕ್ತಿಯಿಂದ ರೋಗಗಳಿಗೆ ಪರಿಹಾರವನ್ನು ಕಂಡು ಹಿಡಿಯಬೇಕೆಂದು ಬಹು ಸಾಹಸ ಪಡುತ್ತಿದ್ದಾರೆ. ವಿದ್ಯುಚ್ಛಕ್ತಿಯಿಂದ ಮೂರ್ಛೆ ರೋಗ ನರರೋಗಗಳನ್ನು ಕಡಿಮೆಮಾಡಿ, ಅವರಿಗೆ ನಾನಾ ಪ್ರಕಾರವಾಗಿ ಚಿಕಿತ್ಸೆ ಮಾಡುತ್ತಿರುವರು. ಚೀನಾ ರಾಜ್ಯದಲ್ಲಿ ಪ್ಲೇಗ್ ರೋಗಿಗಳಿಗೆ ಕೊಟ್ಟು ಗುಣಮಾಡಿದಂತೆ ಕಾರ್ಬಾಲಿಕ್ ಆಸಿಡ್ ಎಂಬ ಧೃತಿಯನ್ನೇ ಈ ವಿದ್ಯಾ ರೋಗಿಗಳಿಗೂ ಪ್ರಯೋಗ ಮಾಡುತ್ತಿದ್ದಾರೆ.

❖❖❖❖

ಇದುವರೆಗೆ ಲಾರ್ಡ್ ಜಾರ್ಜ್ ಹ್ಯಾಮಿಲ್ಟನ್‌ರವರು ವಿಲಾಯತಿಯಲ್ಲಿ ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿಯವರಾಗಿದ್ದರು. ಇವರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟದರಿಂದ ಕಳೆದ ೧೦ ನೆ ತಾರೀಖಿನ ದಿನ ಮ॥ ಬ್ರಾಡ್ರಿಕ್ ಯವರು ಖಾಯಮ್ಮಾಗಿ ಕೆಲಸ ನೋಡುತ್ತಿದ್ದಾರೆ.. ಇದುವರೆಗೆ ಇವರು ವಿಲಾಯತಿ ರಾಜ್ಯದ ಯುದ್ಧದ ಇಲಾಖೆಯಲ್ಲಿ ಒಬ್ಬ ಸೆಕ್ರೆಟರಿಯಾಗಿದ್ದರು.

❖❖❖❖

ಡೆನ್ಮಾರ್ಕ್, ನಾರ್ವೆ, ಸ್ವೀಡನ್ ಎಂಬೀ ರಾಜ್ಯಗಳಿಂದ ವಿಲಾಯತಿಗೆ ಪ್ರತಿನಿತ್ಯದಲ್ಲೂ ಬೇಕಾಗುವ ಆಹಾರ ವಸ್ತುಗಳು ವಿಪರೀತವಾಗಿ ರಫ್ತಾಗುತ್ತಿರುವವು. ಈ ವಸ್ತುಗಳಿಗೆ ವಿಲಾಯತಿ ಸರ್ಕಾರದವರು ಇನ್ನು ಮೇಲೆ ಸುಂಕ ಹಾಕಿ ವಸೂಲ್ಮಾಡಬೇಕೆಂದು ಆಲೋಚಿಸುತ್ತಿರುವುದನ್ನು ಕೇಳಿ, ಆ ರಾಜ್ಯಗಳವರು ಸುಂಕ ಹಾಕಿದ ಪಕ್ಷದಲ್ಲಿ ಆ ಜಿನಸುಗಳನ್ನು ವಿಲಾಯತಿಗೆ ಕಳುಹಿಸುವದನ್ನೇ ನಿಲ್ಲಿಸಿಬಿಡಬೇಕೆಂದು ತಮ್ಮಲ್ಲೇ ಗೊತ್ತುಮಾಡಿಕೊಂಡಿರುವರು.

❖❖❖❖

ರಷ್ಯಾ ರಾಜ್ಯಕ್ಕೆ ಸೇರಿದ ಕಾಕಸಸ್ ಅಧಿಪತ್ಯದಲ್ಲಿ ಪ್ರೈನ್ಸ್ ಯು ಎ. ಗಾಲಿಟ್ಜಿನ್‌ರವರು ಟಿಫ್ಲಿಸ್ ನಗರದಲ್ಲಿ ಗಾಡಿಸವಾರಿ ಹೋಗುತ್ತಿದ್ದಾಗ ಮೂವರು ಘಾತುಕರು ಅವರ ಗಾಡಿಯೊಳಕ್ಕೆ ಹತ್ತಿ ಅವರ ತಲೆಯ ಮೇಲೆ ಹೊಡೆದು ಪೂರಾ ಗಾಯಮಾಡಿದರು. ಅವರ ಬೆಂಗಾವಲಾಗಿ ಬರುತ್ತಿದ್ದ ಕುದುರೆ ಸವಾರರು ಈ ಘಾತುಕರನ್ನು ಓಡಿಸಿಕೊಂಡು ಹೋಗಿ ಹಿಡಿವುದಕ್ಕಾಗದೆ ಕೊನೆಗೆ ಗುಂಡು ಹೊಡೆದು ಅವರನ್ನೂ ಕೊಂದು ಬಿಟ್ಟರು. ಪ್ರೈನ್ಸ್‌ರವರಿಗೆ ಪೂರಾ ಜಖಂ ಆಗಿದೆ.

❖❖❖❖

ಅಫ್ಘಾನಿಸ್ಥಾನಕ್ಕೆ ರಷ್ಯದವರು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿರುವ ಪ್ರಾಂತ್ಯಕ್ಕೂ ನಡುವೆ ಎಲ್ಲೆ ಕಟ್ಟನ್ನು ಗೊತ್ತುಮಾಡಿ, ಭಾರಿ ಭಾರಿ ಕಲ್ಲುಗಳನ್ನೂ ಕಂಭಗಳನ್ನೂ ನಿಲ್ಲಿಸಿ ಬಂದು ೧೭ ವರುಷಗಳಾದುವು. ಈಗ ಆ ಎಲ್ಲೆ ಕಟ್ಟಿನ ಗುರುತುಗಳೆಲ್ಲಾ ಅದೃಶ್ಯವಾಗಿರುತ್ತವೆ. ಆದಕಾರಣ ಇಂಗ್ಲಿಷರು, ರಷ್ಯಾದವರು, ಅಫ್ಘಾನಿಸ್ಥಾನದವರು ತಮ್ಮ ತಮ್ಮ ಕಡೆಯ ಒಬ್ಬೊಬ್ಬ ಮುದ್ದೇದಾರರನ್ನು ಅಲ್ಲಿಗೆ ಕಳುಹಿಸಿ ಎಲ್ಲೆಕಟ್ಟುಗಳನ್ನು ಮತ್ತೆ ಹಾಕಿಸಿ ಬರುವಂತೆ ಏರ್ಪಾಡಾಗಿದೆ.

❖❖❖❖

ರಷ್ಯಾ ರಾಷ್ಟ್ರದೊಳಗೆ ಈ ಸಾಲ ರೈತ ಪ್ರಜೆಗಳು ಕಷ್ಟಮಾಡಿ ಬೆಳೆದ ಬೆಳೆಯೆಲ್ಲಾ ಮುಕ್ಕಾಲು ಪಾಲು ಕೆಟ್ಟು ಹೋಗಿರುವಕಾರಣ ಅನೇಕ ಅಧಿಪತ್ಯಗಳಲ್ಲಿ ೧೮೯೧ ನೇ ಇಸವಿಯ ವಿಲಕ್ಷಣವಾದ ಕ್ಷಾಮವೇ ಮತ್ತೆ ಪ್ರಾಪ್ತವಾಗುವಂತೆ ಕಾಣುವುದು. ಗೋಧಿ ಪೈರೆಲ್ಲಾ ನಾಶವಾಯಿತು. ಓಟ್ಸು, ರೈ ಎಂಬ ಧಾನ್ಯವೂ ಬಹಳ ಸ್ವಲ್ಪ ಬೆಳೆಯಾಗಿದೆ. ಪ್ರಜೆಗಳಲ್ಲಿ ಆಗಲೇ ಹಾಹಾಕಾರ ಉಂಟಾಗಿರುವುದು. ಅಲ್ಲಲ್ಲಿ ಜನರು ಹೊಟ್ಟೆಗಿಲ್ಲದೆ ಏನೇನೋ ತಿಂದು ವ್ಯಾಧಿರೋಗಗಳಲ್ಲಿ ಬಿದ್ದು ಸಾಯಲಾರಂಭವಾಗಿದೆ

❖❖❖❖

ಟ್ರಾನ್ಸ್‌ವಾಲ್ ರಾಜ್ಯದ ಮಾಜಿ ಪ್ರೆಸಿಡೆಂಟ್ ಕ್ರೂಗರ್ ರವರು ತಮ್ಮ ಪುತ್ರಿಯನ್ನು ಸೆಕ್ರೆಟರಿಗಳನ್ನೂ ಕರೆದುಕೊಂಡು ಚಳಿಗಾಲವನ್ನು ಕಳೆಯುವದಕ್ಕಾಗಿ ಹಾಲೆಂಡಿನಿಂದ ಇಟಲಿಯಲ್ಲಿರುವ ಮೆಂಟೋನ್ ಎಂಬ ಊರಿಗೆ ಪ್ರಯಾಣ ಮಾಡಿದರು. ಕೆಲವು ದಿನಗಳಿಗೆ ಮುಂಚೆ ಇವರು ೭೮ ನೇ ವರುಷ ವರ್ಧಂತಿಯನ್ನು ಮಾಡಿಕೊಂಡರು. ಮೆ॥ ಸ್ಟೈನ್ ಯವರಾದರೋ ಫ್ರಾನ್ಸಿಗೆ ಸೇರಿದ ಹೇಗ್ಸ್ ನಗರದಲ್ಲಿರುತ್ತಾರೆ. ಇವರ ಕೈಗಳಿಗೆ ಪಾರ್ಶ್ವವಾಯು ಹಿಡಿದು ಮನೆಯಿಂದ ಹೊರಕ್ಕೆ ಹೋಗದಂತೆ ಮಾಡಿದೆ.

❖❖❖❖

ಅಮೇರಿಕದ ರಾಜಧಾನಿಯಾದ ನ್ಯೂಯಾರ್ಕ್ ನಗರದಲ್ಲಿ ಹೋದ ತಿಂಗಳು ೮—೯ ನೇ ತಾರೀಖುಗಳಲ್ಲಿ ಅಪಾರವಾದ ಮಳೆ ಸುರಿಯಿತು. ೩೦ ಗಂಟೆ ಕಾಲದೊಳಗೆ ೭೦ ಅಂಗುಲ ಪ್ರಮಾಣದಷ್ಟು ಮಳೆ ಬಂದುದರಿಂದ ಚರಂಡಿಗಳೇ ಮುಂತಾದುವು ಒಡೆದುಹೋದುವು. ಉದ್ಯಾನವನಗಳೆಲ್ಲಾ ನೀರಿನ ಪ್ರವಾಹದಿಂದ ಕೆಟ್ಟುಹೋದುವು. ಅನೇಕಕಡೆ ಮನೆ ಮಠಗಳು ಬಿದ್ದು ಕೊಚ್ಚಿಹೋದುವು. ರೈಲ್ ಗಾಡಿಗಳ ಸಂಚಾರಕ್ಕೆ ತುಂಬಾ ಅಟಂಕವಾಯಿತು. ರಸ್ತೆಗಳೆಲ್ಲಾ ಹೊಳೆಗಳಾಗಿ ಪರಿಣಮಿಸಿದುವು. ಇದು ಅಪೂರ್ವವಾದ ಮಳೆಯೆಂದು ಬಹು ಮಂದಿ ಆಶ್ಚರ್ಯ ಪಡುತ್ತಿದ್ದಾರೆ.

❖❖❖❖

ಸ್ಪೈನ್ ರಾಜ್ಯಕ್ಕೆ ಸೇರಿದ ಬಿಲ್ಬಾವೋ ಪಟ್ಟಣದಲ್ಲಿ ಮುಷ್ಕರ ಹೂಡಿದ ಕೆಲವು ದಂಗೆಕೋರರು ಕೂಲಿ ಜನಗಳನ್ನೆಲ್ಲಾ ಎತ್ತಿಕಟ್ಟಿ ಗಲಾಟೆ ಹುಟ್ಟಿಸಿದರು. ಅವರ ಮಾತಿನಂತೆ ಸುಮಾರು ೪೦ ಸಾವಿರ ಮಂದಿ ಕೂಲಿಕಾರರು ದಂಗೆಮಾಡಿ, ರೈಲ್ ರಸ್ತೆಗಳಿಗೂ ಕಾರ್ಖಾನೆಗಳಿಗೂ ಡೈನಮೈಟ್ ಹಾಕಿ ಹಾಳುಮಾಡಿದ್ದಲ್ಲದೆ, ಸರ್ಕಾರದವರನ್ನು ಹೊಡೆದು ಹಾಕುತ್ತೇವೆಂದೂ ಬಂದರು. ಸರ್ಕಾರದವರು ಮಿಲ್ಟ್ರೀ ಸೈನ್ಯವನ್ನು ಅನೇಕವಾಗಿ ಕಳುಹಿಸಿದಾಗ ಅವರು ದಂಗೆ ಕೋರರಲ್ಲಿ ೩ ಮಂದಿಯನ್ನು ಕೊಂದು ಹಾಕಿ ೧೦೦ ಜನ ಮೇಲೆಯೇ ಗಾಯಮಾಡಿ, ಎಲ್ಲರನ್ನೂ ಚದರಿಸಿ ಬಿಟ್ಟರು. ಈ ದಂಗೆಯು ಆ ಪಟ್ಟಣದಲ್ಲಿ ಸಣ್ಣಗಾಯಿತು. ಈತಿಗ ಬಾರ್ಸಿಲೋನಾ ಪಟ್ಟಣದಲ್ಲಿ ಜನರು ದಂಗೆ ಏಳುವಂತೆ ಏರ್ಪಾಡಾಗುತ್ತಿದೆ.

ನ್ಯೂಯಾರ್ಕ್ ನಗರದಲ್ಲಿ ಒಂದು ದೊಡ್ಡ ಮನೆಗೆ ಬೆಂಕಿ ಬಿದ್ದು ೨೪ ಮಂದಿ ಸುಟ್ಟು ಹೋದರು. ಅವರಲ್ಲಿ ಬಹು ಮಂದಿ ಹೆಂಗಸರು ಮಕ್ಕಳೇ ಎಂದು ತಂತೀ ವರ್ತಮಾನ ಬಂದಿದೆ.

****

ಅಮೇರಿಕಕ್ಕೆ ಸೇರಿದ ಇಂಡಿಯನಾಪೋಲಿಸ್ ಎಂಬ ಪಟ್ಟಣದ ಬಳಿ ಕಳೆದವಾರ ಎರಡು ರೈಲ್ ಗಾಡಿಗಳು ಢಿಕ್ಕಾ ಹೊಡದು ೧೭ ಮಂದಿ ಸತ್ತರು; ೩೩ ಮಂದಿಗೆ ಗಾಯಗಳಾದುವು; ಈ ಪೈಕಿ ೨೩ ಜನರು ಬದುಕುವಹಾಗಿಲ್ಲ.

****

ರಷ್ಯಾದವರು ಮಂಚೂರಿಯಾದಲ್ಲಿ ಜನರನ್ನು ಪೋಲೀಸ್ ಸಿಬ್ಬಂದಿಗೆ ಸೇರಿಸಿಕೊಂಡು, ಈ ಪೋಲೀಸಿನವರ ಮೇಲೆ ಒಬ್ಬ ಚೀನೀಯವನನ್ನು ಅಧಿಕಾರಿಯಾಗಿ ನೇಮಿಸಿದರು. ಈ ಚೀನೀಯವನು ಅನೇಕ ಅಪರಾಧಗಳನ್ನು ನಡಿಸಿರುತ್ತಾನೆಂತಲೂ, ಅವನನ್ನು ಕೆಲಸಕ್ಕೆ ನೇಮಿಸಿಕೊಳ್ಳದೆ ಕೈಸೆರೆಯಾಗಿ ಹಿಡಿದುತಂದು ಚೀನಾ ಅಧಿಕಾರಿಗಳಿಗೆ ಒಪ್ಪಿಸಬೇಕೆಂತಲೂ ಚೀನೀಯುವರು ರಷ್ಯಾದವರನ್ನು ಬಹಳವಾಗಿ ಕೇಳಿದ್ದರಿಂದ ಅವರು ಅವನನ್ನು ಚೀನಾ ಅಧಿಕಾರಿಗಳ ವಶಕ್ಕೆ ಒಪ್ಪಿಸಿದರು. ಈ ಅಧಿಕಾರಿಗಳು ಅವನನ್ನು ದರ್ಶನಮಾತ್ರದಲ್ಲಿ ಕಾಣದೇನೇ ಕತ್ತರಿಸಿಹಾಕಿಬಿಟ್ಟರು. ಹೀಗೆಯೇ ಕತ್ತರಿಸಿಹಾಕು ಎಂತ ಅಪ್ಪಣೆಕೊಟ್ಟ ಚೀನಾ ಅಧಿಕಾರಿಯನ್ನು ಐದು ದಿನಗಳೊಳಗಾಗಿ ತಮ್ಮ ವಶಕ್ಕೆ ಒಪ್ಪಿಸಬೇಕೆಂದೂ, ತಪ್ಪಿದರೆ ತಾವು ಮುಕ್ಡೆನ್ ಎಂಬ ಪಟ್ಟಣವನ್ನು ಆಕ್ರಮಿಸಿಕೊಳ್ಳುತ್ತೇವೆಂದೂ ರಷ್ಯಾದವರು ಚೀನೀಯುವರಿಗೆ ಹೇಳಿಕಳುಹಿಸಿದರು. ಚೀನೀಯುವರು ಆ ತಮ್ಮ ಅಧಿಕಾರಿಯನ್ನು ಕೊಡುವುದಕ್ಕೆ ಸಾವಕಾಶಮಾಡಿದರು. ಐದು ದಿನ ಕಳೆದುಹೋಯಿತು. ರಷ್ಯಾದವರು ಮುಕ್ಡೆನ್ ಪಟ್ಟಣವನ್ನು ಆಕ್ರಮಿಸಿಕೊಂಡೇ ಬಿಟ್ಟರು ಮತ್ತು ಅಲ್ಲಿದ್ದ ಚೀನಾ ಸೈನ್ಯಾಧಿಪತಿಯನ್ನು ಕೈಸೆರೆಯಾಗಿಟ್ಟುಕೊಂಡಿದ್ದಾರೆ. ಈಗ ಚೀನಾ ಚಕ್ರವರ್ತಿಯವರು, ಅವರ ಮಂತ್ರಿಯವರು, ದೊಡ್ಡ ದೊಡ್ಡ ಹುದ್ದೆದಾರರು ಎಲ್ಲಾ ಗಾಬರಿಬಿದ್ದು ಆಲೋಚನೆಮಾಡಿಕೊಂಡು, ಪರರಾಜ್ಯಗಳವರು ತಮ್ಮ ಸಹಾಯಕ್ಕೆ ಬಂದು ಮುಕ್ಡೆನ್ ನಗರವನ್ನು ರಷ್ಯಾದವರ ವಶದಿಂದ ತಮಗೆ ಬಿಡಿಸಿಕೊಡಬೇಕೆಂದು ಕೇಳುತ್ತಿದ್ದಾರೆ.

ಜ್ವರಹರಿ. 2

ಇದು ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ ಇವೆಲ್ಲ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿದ್ದ ೨ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ದಿನಗಳು ಕಳೆಯುತ್ತಿರುವದರಿಂದ ದಯವಿಟ್ಟು ಇನ್ನೊಂದು ೨ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮುಖಾಂತರ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ಕ್ಕೆ ೮ ಆಣೆ. ೧ ರ., ೧—೮ ರೂ. ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಮಾಡಲಾಗುವದು.

********

ಪಿ ಮ ಂ ಕ ಪ್ರಾ ಗ ರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮುಖ್ಯವಾಗಿ ಶಮನಮಾಡಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ವಿಷಯ ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕನಕದ ಅಸಿಸ್ಟೆಂಟ್ ಸರ್ಜನ್ ಗಣಪತಿಯುವರು—ತೆನ್ನಿಯ ಒಮ್ಮ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —
ಚೆನ್ನಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

## ಮಹಾರಾಜರವರ ಫೋಟೋಗಳು.

ಇವು ವಿಲಾಯತಿಯಿಂದ ಬಂದಿವೆ. ಮುಗಿದುಹೋದಾವು! ಜಾಗ್ರತೆ ನೋಡಿ! ಬಹಳ ಸೊಗಸಾಗಿವೆ, ದೊಡ್ಡ ಸೈಜಿನವು, ಕರಿಯ ಬಣ್ಣದವುಗಳಲ್ಲ. ಕ್ರಯ ಎಂಟೇ ಆಣೆ. ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ಚಿತ್ರಗಳು; ಸುಂದರವಾದ ಬಣ್ಣಗಳುಳ್ಳದ್ದು. ಕ್ರಯ ದೊಡ್ಡ ಸೈಜಿನವು ೮ ಆಣೆ; ಸಣ್ಣ ಸೈಜಿನವು ೨ ಆಣೆ.
ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೊ, ಮೈಸೂರು.

ನಿಮ್ಮ ತಲೆಯಮೇಲಿರುವದೇನು?
ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ
ಬರೆದು ತರಿಸಿಕೊಳ್ಳಿ.

10

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?
ಹಾಸನದ ಟೋಪಿಗಳೇ

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿ ಆಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಬಿಗಿಯಾಗಿ ಹಾಗೇ ನೀಟು ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರುವ ಕಸೂತಿಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇನಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚೆನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.
ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ.

ಪೋಮೋಸಿಯಾ.

ತಕ್ಷಣ ಪರಿಹಾರ.

ರಾಗಲು ತಲೆ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಆಫೀಸು, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇರಬೇಕಾದದ್ದು. ಇದಕ್ಕೆ ಸಮಾನವಾದ ಔಷಧವು ಕ್ವಾಪಿಯೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮುಖ್ಯವಾಗಿ ಸಿದ್ಧವಾದ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಇರುವಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂತ್ರವ್ಯಾಧಿ, ಉಬ್ಬಸ, ವಾಯುಗಳು, ನರ ಹಿಡಿಯುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ ನೋವು, ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ ೨—೮ ಆ; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ. ರೂ. ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ಆ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

*********

ಪೋಮೋಸಿಯಾ ಎಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಪೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇವಿಸಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫು. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ—ಪೊಮೊಸಿಯಾ ಕಂಪನಿ, ೨೩ ಸೆಕೆಂಡು ಬೀಚ್ ಲೈನ್, ಮದರಾಸ್.

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

16—10—1903 ರಿಂದ 23—10—1903 ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು | |
|---|---|---|---|---|
| ಬೆಂಗಳೂರು ಪಟ್ಟಣ | 72 | 59 | 49 | 96 |
| ಮೈಸೂರು ,, | 815 | 632 | 798 | 861 |
| ಬೆಂಗಳೂರು ಡಿಸ್ಟ್ರಿಕ್ಟು | 218 | 178 | 234 | 185 |
| ಮೈಸೂರು ,, | 118 | 86 | 87 | 49 |
| ಕೋಲಾರ್ ,, | 78 | 58 | 60 | 57 |
| ಕೋಲಾರ್ ಚಿನ್ನದ ಗಣಿಗಳು | 10 | 4 | 2 | 1 |
| ತುಂಕೂರು ಡಿಸ್ಟ್ರಿಕ್ಟು | 94 | 53 | 55 | 31 |
| ಹಾಸನ ,, | 31 | 18 | 29 | 22 |
| ಚಿತ್ರದುರ್ಗ ,, | 109 | 73 | 85 | 45 |
| ಕಡೂರ್ ,, | 24 | 14 | 9 | 4 |
| ಶಿವಮೊಗ್ಗ ,, | 111 | 57 | 69 | 40 |
| ಮೊತ್ತ. | 1138 | 840 | 730 | 862 |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಕಾರ್ತೀಕ ಬಹುಳ ಅಷ್ಟಮಿ ಗುರುವಾರದಿಂದ ಕಾರ್ತೀಕ ಬಹುಳ ಚತುರ್ದಶಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ನೋವೆಂಬರ್.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ಮುಸಲ್ಮಾನರ ತೇದಿ. |
|---|---|---|---|---|---|---|
| 12 | ಗುರು | ಅಷ್ಟಮಿ | 31 46 | ಶ್ಲೇ | 25-2 | 27 |
| 13 | ಶುಕ್ರ | ನವಮಿ | 29 2 | ಮ | 20-58 | 28 |
| 14 | ಶನಿವಾರ | ದಶಮಿ | 23 33 | ಪು | 17 2 | 29 |
| 15 | ರವಿವಾ * | ಏಕಾದಶಿ | 18 38 | ಉ | 13 50 | 30 |
| 16 | ಸೋಮ † | ದ್ವಾದಶಿ | 14 22 | ಹ | 11 18 | 1 |
| 17 | ಮಂಗಳ ‡ | ತ್ರಯೋ | 10 58 | ಚಿ | 9-20 | 2 |
| 18 | ಬುಧ | ಚತುರ್ದಶಿ | 8 40 | ಸ್ವಾ | 8 45 | 3 |

* ತಿಥಿವ್ಯಯಂ. † ವಿಷ್ಣುಪದಪುಣ್ಯಕಾಲ, ಸೋಮಪ್ರದೋಷ
‡ ಮಾಸಶಿವರಾತ್ರಿ, ಸರ್ವತ್ರ ಅಮಾವಾಸ್ಯ

## ಪೇಟೆ ಧಾರಣೆ.

| ದಿನಸಿ. | ಮೈಸೂರು. | ಬೆಂಗಳೂರು |
|---|---|---|
| ಚಿನ್ನೀ ಅಕ್ಕಿ ಪಲ್ಲ ೧ಕ್ಕೆ ರೂ. | ೧೦-೦-೦ | ೧೦-೦- |
| ಗಂಧಸಾಲಿ ಅಕ್ಕಿ ಅವಲ್ | ೧೦-೧೨-೦ | ೧೦-೬- |
| ,, ಮಧ್ಯಮ | ೧೬-೪-೦ | ೯-೮- |
| ಬಾವ್ರಾಕಿ ಅಕ್ಕಿ | ೯-೧೦-೦ | ೧೨-೮- |
| ಗುಣ್ಣಕ್ಕಿ ಅವಲ್ | ೧೨-೮-೦ | ೧೨-೮- |
| ,, ಮಧ್ಯಮ | ೭-೨-೦ | ೧೦-೦- |
| ತೊಗರೀ ಬೇಳೆ ಪಲ್ಲ ೧ಕ್ಕೆ | ೧೩-೧೨-೦ | ೧೪-೦- |
| ,, ಮಧ್ಯಮ | ೧೩-೮-೦ | ೧೩-೦- |
| ಸ್ವರ್ಣ ರಾಗಿ ಪಲ್ಲ ೧ಕ್ಕೆ | ೩-೧೨-೦ | ೨-೮- |
| ಕಾರ್ರಾಗಿ | ೩-೮-೦ | ೨-೫- |
| ಜೋಳ | ೨-೪-೦ | ೪-೦- |
| ಹಲಸಂದೆ ಪಲ್ಲ ೧ಕ್ಕೆ | ೩-೪-೦ | ೮-೦- |
| ಬಿಳೀ ಅವರೆ | ೮-೧೨-೦ | ೩-೦- |
| ಹೆಸರು | ೯-೮-೦ | ೩-೮- |
| ಉದ್ದು | ೮-೧೦-೦ | ೮-೦- |
| ಕಡಲೆ | ೧೦-೦-೦ | ೮-೮- |
| ಎಳ್ಳು | ೧೨-೦-೦ | ೯-೧೩- |
| ಹುರುಳಿ | ೩-೮-೦ | ೪-೪- |
| ಹಗಲು ೧೨. ಸೇರಿಗೆ | ೯-೮-೦ | ೬-೦- |
| ಸೀಗೇಕಾಯಿ ಮಣ ೧ಕ್ಕೆ | ೧-೮-೦ | ೧-೮- |
| ಮೆಣಸಿನಕಾಯಿ | ೩-೦-೦ | ೨-೮- |
| ,, ಮಧ್ಯಮ | ೩-೦-೦ | ೨-೦- |
| ನೆಲ್ಲ ದೊಡ್ಡ ಅಚ್ಚು | ೪-೮-೦ | ಮ ೧-೮- |
| ಒಳ್ಳೆಣ್ಣೆ ಮಣ ೧ಕ್ಕೆ | ೩-೧೪-೦ | ೪-೦- |
| ಹರಳೆಣ್ಣೆ ,, | ೩-೧-೨-೦ | ೨-೧೬- |
| ಕೊತ್ತುಂಬರಿ ಪಲ್ಲ ೧ಕ್ಕೆ | ೬-೦-೦ | ೬-೮- |
| ಉಪ್ಪು ,, | ೧೦-೦-೦ | ೯-೬- |
| ಹುಣಸೇ ಹಣ್ಣು | ೦-೧೪-೦ | ೦-೦- |
| ,, ಹಳೇದು | ೦-೧೦-೦ | ೦-೧೪- |
| ಬೆಲ್ಲ | ೧೦-೮-೦ | ೧೬-೦- |
| ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ | ೪-೯-೦ | ೩-೮- |
| ತೆಂಗಿನಕಾಯಿ ೧೦೦ಕ್ಕೆ | ೪-೪-೦ | ೩-೮- |
| ಅಳಲೇಕಾಯಿ ಮಣ ೧ಕ್ಕೆ | ೦-೧೪-೦ | ೦-೧೦- |
| ಅಂಟುವಾಳದಕಾಯಿ ಮಣ ೧ಕ್ಕೆ | ೦-೧೪-೦ | ೦-೮- |
| ಹತ್ತಿ (ಬೀಜ) ಕೆಂಪು | ೧೫-೪-೦ | ೧೫-೪- |
| ,, ,, ಹಸಿರು | ೧೫-೮-೦ | ೧೫-೮- |
| ,, ,, ಗಟ್ಟಿ ತೊಲ ೧ಕ್ಕೆ | ೨೬-೦-೦ | ೨೪-೬- |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ | ೩೨-೦-೦ | ೩೫-೦- |

Printed and Published by the Rev E. W. Thompson, M.A. the Proprietor and Manager, Wesleyan Mission Press Mysore. 12/11/1903.

# ವೃತ್ತಾಂತ ಪತ್ರಿಕೆ.

REGISTERED M. 20

ಯ ೧ ದುಡ್ಡು —:o:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಪುಸ್ತಕ ೧೩ | ಮೈಸೂರು—ಸನ್ ೧೯೦೩ ನೇ ಇಸವಿ ನೊವೆಂಬರ್ ತಾರೀಖು ೧೯ ನೇ ಗುರುವಾರ. | ಸಂಚಿಕೆ ೪೭



ನಿಮ್ಮ ತಲೆಯಮೇಲಿರುವದೇನು ?
ಹಾಸನದ ಟೋಪಿ ಅಲ್ಲವೋ ? ಹಾಗಾದರೆ ಬೇಗ
ಬರೆದು ತರಿಸಿಕೊಳ್ಳಿ.

11

ಸ್ವದೇಶಿ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?
ಹಾಸನದ ಟೋಪಿಗಳೇ.

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿ ಆಗುತ್ತಿರುವ ಟೋಪಿಗಳೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಕೊಂಡುಕೊಂಡು ಮೋಸಹೋಗುವರು.

ಇದರ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳೆಲ್ಲಾ ಸೆಟ್ಟಿಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಬುದ್ಧಿಯಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹುತ್ತೇವೆ.

ಒಳ್ಳೇದಾದ ಚನ್ನಾಗಿ ಹೊಸೆದ, ಬಹಳ ಬಾಳಿಕೆ ಬರುವ ಟೋಪಿ ಬೇಕಾದರೆ ನಮಗೇ ನೀವೂ ಬರೆದು ತರಿಸಿಕೊಳ್ಳಿ. ಅಗ್ಗವಾದ ಚನ್ನಾಗಿಲ್ಲದದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ.

## ಸ್ಟಾಂಡರ್ಡ್

## ಲೈಫ್ ಅಷ್ಯೂರನ್ಸ್ ಕಂಪೆನಿ.

15

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಹಿಂದೂ ದೇಶದಲ್ಲಿ ಲೈಫ್ ಇನ್ಷ್ಯೂರೆನ್ಸ್ ಎಂದರೆ ಜೀವವನ್ನು ಭೀಮಾ ಮಾಡಿಕೊಳ್ಳುವ ಕಂಪೆನಿಗಳಲ್ಲಿ ಇದು ಬಹು ಹಳೆಯದಾಗಿಯೂ ಶ್ರೇಷ್ಠ ಬಂಡವಾಳವುಳ್ಳದ್ದಾಗಿಯೂ ಇದೆ. ಪಾಲುದಾರರಾಗತಕ್ಕವರು (ಲೈಫ್ ಎಷ್ಯೂರ್ ಮಾಡತಕ್ಕವರು) ಈ ಕಂಪೆನಿಯು ಕೊಡುವ ದರ, ಷರತ್ತುಗಳು ಮೊದಲಾದವುಗಳನ್ನು ಇತರ ಕಂಪೆನಿಯವುಗಳೊಡನೆ ಹೋಲಿಸಿನೋಡಿದರೆ ಇಲ್ಲಿ ಜೀವವನ್ನು ಭೀಮಾ ಮಾಡುವವರಿಗೆ ಎಷ್ಟು ಸೌಕರ್ಯಗಳು ಇರುವವು ಗೊತ್ತಾಗುವುದು.

ಈ ಕಂಪೆನಿಯ ಭೀಮಾ ನಿಬಂಧನೆಗಳು ಬಹು ಅನುಕೂಲವಾಗಿವೆ. ಭೀಮಾದಾರರುಗಳಿಗೆ ತೊಂದರೆಯನ್ನುಂಟುಮಾಡುವ ನಿಬಂಧನೆಗಳೇನೂ ಇಲ್ಲ.

ಗೊತ್ತಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲು ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂ ಗಳನ್ನು ಕಂಪೆನಿಯವರು ಕೊಡುವ ಲಾಭಸಹಿತವಾಗಿ ಪಡೆಯಬೇಕಾದರೆ ಭೀಮಾದಾರನು ಕಂಪೆನಿಗೆ ಕೊಡಬೇಕಾದ ಚಂದಾ ಹಣಗಳ ಪ್ರತಿ ಕೆಲವನ್ನು ಇಲ್ಲಿ ನೋಡಿ.

| ವಯಸ್ಸು. | ೫೦ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ ಪಡೆಯಬೇಕಾದರೆ ವಾರ್ಷಿಕವಾಗಿ ಕಂಪೆನಿಗೆ ಕೊಡುವದು. | ೫೫ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಯನ್ನು ಪಡೆಯಬೇಕಾದರೆ ವಾರ್ಷಿಕವಾಗಿ ಕಂಪೆನಿಗೆ ಕೊಡುವದು. |
|---|---|---|
| [illegible] | ರೂ. ೬—೧೨—೮ | ರೂ. ೬—೦—೦ |
| [illegible] | ,, ೭—೧೫—೩ | ,, ೬—೧೪—೦ |
| [illegible] | ,, ೯—೧೨—೮ | ,, ೮—೨—೦ |
| [illegible] | ,, ೧೨—೧೪—೮ | ,, ೧೦—೧—೪ |
| [illegible] | | ,, ೧೩—೪—೮ |

೦೦೦ ರೂ. ಗಿಂತಲೂ ಹೆಚ್ಚಿದ್ದಕ್ಕಾಗಲಿ ಕಡಮೆಯಾದ್ದಕ್ಕಾಗಲಿ ಯಸ್ಸಿನಲ್ಲಿ ಹೆಚ್ಚು ಕಡಮೆ ಇದ್ದರಾಗಲಿ ಚಂದಾ ಹಣವೇನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು. ಬರೆಗೆ ಜಾರಿಯಲ್ಲಿದ್ದ ಚಂದಾ ದರಗಳನ್ನು ಕಡಮೆ ಮಾಡಿ. ಇಪ್ಪತ್ತು ವರ್ಷಕ್ಕೆ ಪರ್ಯಾಯವಾಗಿರುವ ಹೊಸ ಚಂದಾ ಭೀಮಾ ದಕ್ಷತೆಯ ಫಾರಂಗಳನ್ನೂ ಇದೇ ವಿಳಾಸದಿಂದ ತರಿಸಿಕೊಳ್ಳಿರಿ. ಎಂ ಸೂರ್ಯನಾರಾಯಣಪ್ಪ,

ಕಮಿಷನ್ ಮತ್ತು ಜನರಲ್ ಏಜೆಂಸಿ, ಶಿವಮೊಗ್ಗ.

## ಗಣಿತಸಂಜೀವಿನಿ.

12

೧ ರೂ. ೮ ಆ.; ವಿ. ಪಿ. ಚಾರ್ಜ್ ೩ ಆ.

ಕೆ. ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.

## WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಪುಸ್ತಕ, ಚಿತ್ರ, ಬೈಂಡಿಂಗ್ ಮುಂತಾದ ಸಮಸ್ತ ಪ್ರಿಂಟಿಂಗ್ ಕೆಲಸಗಳನ್ನೂ ಬಹಳ ಸುಲಭ ಛಾರ್ಜಿಗೂ, ಜಾಗ್ರತೆಯಿಂದಲೂ, ನೇತ್ರಾನಂದಕರವಾಗಿಯೂ ಮಾಡಿಕೊಡುತ್ತಾರೆ. ಅಪೇಕ್ಷೆಯುಳ್ಳವರು ಕೆಲಸವನ್ನು ಕಳುಹಿಸಿಕೊಟ್ಟು ಪರೀಕ್ಷೆ ಮಾಡಬೇಕು. ಆ ಪುಸ್ತಕಗಳು ಬಹಳ ಗಟ್ಟಿಯಾಗಿಯೂ ಅಂದವಾಗಿಯೂ ಬೈಂಡಾಗುತ್ತವೆ. ಎಲ್ಲಾ ವಿಷಯಗಳನ್ನೂ ಪ್ರೆಸ್ ಮ್ಯಾನೇಜರಿಗೆ ಬರೆದು ಅವರಿಂದ ಅವರನ್ನು ನೋಡುತ್ತ ಕಂಡು ತಿಳಿದುಕೊಳ್ಳಬಹುದು.

ವಿಳಾಸ.—ಜೆ ಎಂ. ಛಾರ್ಲ್ಸ್, ಮ್ಯಾನೇಜರ್,

ಮೈಸೂರು.

## ROBINSON'S

## PATENT BARLEY.

## ರಾಬಿನ್‌ಸನ್‌ಯವರ

## ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಜವೆಗೋಧಿಯಿಂದ ಮಾಡಿದೆ. ಹಸ್ತ ಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾರಾದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

ಈಗಲೇ ಇನ್ನೊಂದು ಹೊಸ ಪುಸ್ತಕ ! ಬೇಗ ನೋಡಿರಿ !!

## ಸ್ವಪ್ರಯಾಸ ಫಲದೀಪಿಕೆ.

ಈ ಪುಸ್ತಕವು ಸ್ಮೈಲ್ಸ್ ಸೆಲ್ಫ್ ಹೆಲ್ಪ್ ಎಂಬ ಲೋಕಪ್ರಸಿದ್ಧವಾದ ಪುಸ್ತಕದ ಆಧಾರದ ಮೇಲೆ, ಕನ್ನಡಿಗರಿಗೆ ಅನುಕೂಲವಾಗಿ ಬರೆಯಲ್ಪಟ್ಟದೆ. ಈ ಪುಸ್ತಕವು ವಿಶೇಷವಾದ ಜನರನ್ನು ಕೀರ್ತಿಯನ್ನು ಪಡೆದಿರುವದರಿಂದ ಲೋಕದ ಅನೇಕ ಭಾಷೆಗಳಲ್ಲಿ ತರ್ಜುಮೆ ಮಾಡಲ್ಪಟ್ಟದೆ. ಅನೇಕ ಜನಾಂಗದವರು ಈ ಪುಸ್ತಕವನ್ನೇ ಓದಿದ್ದರಿಂದಲೇ ಸಾರ್ಥಕವಂತರಾದರು. ಈ ಪುಸ್ತಕವು ಸ್ತ್ರೀಪುರುಷರಿಗೆ ಧೈರ್ಯವನ್ನೂ ಸಮರ್ಥರಿಗೆ ಪುಷ್ಟಿ ಸಾಮರ್ಥ್ಯವನ್ನೂ ದಡ್ಡರಿಗೆ ವಿವೇಕವನ್ನೂ ಕೊಡುವದಾಗಿಯೂ ಪ್ರಸಿದ್ಧವಾಗಿದೆ. ಪುಸ್ತಕದ ಕ್ರಯ ನಾಲ್ಕಾಣೆ ಮಾತ್ರ. ವಿ. ಪಿ. ಯಲ್ಲಿ ತರಿಸಿಕೊಂಡರೆ ಆರು ಆಣೆಗಳಾಗುವವು. ಬೇಗ ತರಿಸಿಕೊಳ್ಳಿ ! ವಿಳಾಸ — ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೊ. ಮೈಸೂರು.

## ಜನರಂಜಿತವಾದ ಪುಸ್ತಕಗಳು ! ಬೇಗನೋಡಬಾರದೇ

ಮೈಸೂರು ಸರ್ಕಾರದ ವಿದ್ಯಾ ಇಲಾಖೆಯವರು ಈ ಪುಸ್ತಕಗಳ ಅಮೂಲ್ಯತ್ವವನ್ನು ತಿಳಿದು ನೂರೈವತ್ತು ರೂಪಾಯಿಗಳಿಗಿಂತ ಹೆಚ್ಚಾಗಿಯೇ ತರಿಸಿಕೊಂಡಿದ್ದಾರೆ.

ಪುರಾತನ ಗ್ರೀಕರ ಚರಿತ್ರೆ. ಬಹು ರಸಿಕವಾಗಿದೆ. ಚಿತ್ರಗಳಿಂದ ಕೂಡಿದ್ದು ಕ್ರಯ ೦—೨—೦

ಪ್ರಾಚೀನ ನೃಗಗಳ ವರ್ಣನೆ. ಚಿತ್ರಗಳಿಂದ ತುಂಬಿದೆ ೦—೧—೦

ಖಗೋಲ ಶಾಸ್ತ್ರ ಸಿದ್ಧಾಂತ. ಎಲ್ಲರೂ ಓದತಕ್ಕದ್ದು ಅನೇಕ ಚಿತ್ರಗಳಿವೆ ೦—೧—೨

ಪಕ್ಷಿಗಳ ವರ್ಣನೆ. ಸ್ಕೂಲ್‌ಹುಡುಗರಿಗೆ ಬಹುಮಾನವಾಗಿ ಕೊಡುವದಕ್ಕೆ ಯೋಗ್ಯವಾಗಿದೆ. ಅನೇಕ ಪಕ್ಷಿಗಳ ಪಟಗಳೂ, ಅವುಗಳ ಚರಿತ್ರೆಗಳೂ ಇದರಲ್ಲಿ ಅಡಕವಾಗಿವೆ ೦—೧—೬

ಇಂಡಿಯಾ ಚಕ್ರವರ್ತಿಯವರಾದ ಎಡ್ವರ್ಡ್ ಸಾರ್ವಭೌಮರ ಮತ್ತು ಚಕ್ರವರ್ತಿನಿಯರಾದ ಅಲೆಕ್ಸಾಂಡರಾ ಅಮ್ಮನವರ ಜೀವಮಾನಗಳ ಚರಿತ್ರೆ. ಇದರಲ್ಲಿ ಗ್ಲೇಜ್ ಕಾಗದದಮೇಲೆ ಹಾಕಿರುವ ಪಟಗಳು ಅನೇಕವಾಗಿವೆ. ಪ್ರತಿಯೊಬ್ಬರ ಮನೆಯಲ್ಲೂ ಇರತಕ್ಕ ಪುಸ್ತಕ. ಇಂಥಾ ಉತ್ಕೃಷ್ಟವಾದ ಪುಸ್ತಕಕ್ಕೆ ಬೆಲೆಯು ಬಹು ಕಡಿಮೆಯಾಗಿದೆ. ಕ್ರಯ ೦—೪—೦

ಚಕ್ರವರ್ತಿಗಳ ಕಿರೀಟಧಾರಣೆಯ ಪುಸ್ತಕ ಕ್ರಯ ೦—೨—೬

ಕ್ರಿಮಿಗಳ ವರ್ಣನೆ (ಸಚಿತ್ರ) ೦—೧—೬

ದೇಹವೆಂಬ ನನ್ನ ಮನೆ (ಸಚಿತ್ರ) ೦—೧—೬

ಪ್ರಬೋಧಚಂದ್ರಿಕೆ ೦—೨—೬

ಚಿಕ್ಕವರಿಗೆ ಹೇಳುವ ಕಥೆಗಳು ೦—೧—೦

ಕಂಟೂರಿನಾದ ಪಾಲಿಸಿಯ ಚರಿತ್ರೆ ೦—೧—೦

ಗ್ರೀನ್‌ಲಾಂಡಿನ ಚರಿತ್ರೆ ೦—೨—೬

ಮಾರ್ಟಿನ್ ಲೂಥರನ ಚರಿತ್ರೆ ೦—೧—೬

ಆರ್ಯರ ಪೂರ್ವೋತ್ತರ ಚರಿತ್ರೆ ೦—೧—೬

ಘನತೆಯುಳ್ಳ ಸ್ತ್ರೀಯರ ಚರಿತ್ರೆ ೦—೨—೬

(೧) ವೇದಗಳನ್ನು ಬರೆದವರು ಯಾರು ? (೨) ಶುದ್ಧವಾದ ನೀರಿನಬಲೆ, (೩) ಸಾಲ ಮತ್ತು ಸಾಲತೀರಿಸುವ ಮಾರ್ಗ, (೪) ಇಂಡಿಯಾದೇಶದ ಬಡತನದ ಕಾರಣಗಳು, (೫) ಬಾಲ್ಯವಿವಾಹ, (೬) ಪ್ರಾಯಶ್ಚಿತ್ತವು, (೭) ಬಿಯ್ಯುವದು, (೮) ಮಾನವಧರ್ಮಶಾಸ್ತ್ರ, (೯) ಗ್ರಹಣಗಳು, (೧೦) ಮಕ್ಕಳನ್ನು ಬೆಳಸತಕ್ಕವಿಧ. (೧೧) ಶ್ರಾದ್ಧಗಳು, (೧೨) ಎಲ್ಲರೂ ಸಹೋದರರು, (೧೩) ಮಂತ್ರ, ತಂತ್ರ, ಯಂತ್ರಗಳು, (೧೪) ಜ್ಯೋತಿಷಶಾಸ್ತ್ರ (೧೫) ಆರೋಗ್ಯಪ್ರಕಾಶಿಕೆ. ಈ ಪುಸ್ತಕಗಳ ಪ್ರತಿಯೊಂದಕ್ಕೆ ಮೂರು ಕಾಸು ಕ್ರಯವಿದೆ ಮೇಲ್ಕಂಡ ಹದಿನೈದು ಪುಸ್ತಕಗಳನ್ನು ಒಟ್ಟಾಗಿ ತರಿಸತಕ್ಕದ್ದು. ಬಿಡಿಯಾಗಿ ಮಾರಬಾರದು. ಈ ಪುಸ್ತಕಗಳನ್ನು ಓದಿದಮೇಲೆ ಬರುವ ಸಂತೋಷವನ್ನು ವಿವರಿಸಲಾಗದು. ಜಾಗ್ರತೆ ನೋಡಿ. ವಿ. ಪಿ. ಮೂಲಕವಾಗಿಯಾಗಲಿ ಅಥವಾ ಹಣವನ್ನು ಮುಂಗಡವಾಗಿ ಕಳುಹಿಸೋಣದ್ದರಿಂದಲಾಗಲಿ ಪುಸ್ತಕಗಳನ್ನು ಪಡೆಯಬಹುದು

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೊ, ಮೈಸೂರು.

## ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

10

೧೮೮೫ ನೆ ಇಸವಿ ಮೈಸೂರು ಕಂಪೆನಿ ಆಕ್ಟಿಗೆ ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ಶ್ರೀಮನ್ ಮೈಸೂರು ಮಹಾರಾಜರವರ ಗೌರ್ನಮೆಂಟಿನವರಿಂದ ಸ್ಯಾಂಕ್ಷನ್ ಮಾಡಲ್ಪಟ್ಟ ಸದರಿ ಕಂಪೆನಿಯ ಷೇರು ಒಂದಕ್ಕೆ ೨೫ ರೂಪಾಯಿ ಪ್ರಕಾರ ೨೦,೦೦೦ ಷೇರುಗಳಿಂದ ಆಗುವ ೫,೦೦,೦೦೦ ರೂಪಾಯಿ ಬಂಡವಾಳ. ಷೇರುಗಳು ತೆಗೆದುಕೊಳ್ಳುವವರು ಇದರ ಸ್ಪೆಷಲ್ ಮಾಡಿರುವವರಿಂದ ವಿಶಿಷ್ಟ ತಪಸೀಲು ತಿಳಿದುಕೊಳ್ಳಬಹುದು. ಅಪ್ಲಿಕೇಷನ್‌ಗಳನ್ನೂ ಮತ್ತು ಹಣವನ್ನೂ ಇವರಲ್ಲೇ ಕಳುಹಿಸಬಹುದು.

ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,
ಅಡ್ವೊಕೇಟ್ ಮತ್ತು ಜನರಲ್ ಏಜೆಂಟ್,
ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ,
ನಗರ್ತಪೇಟೆ, ಬೆಂಗಳೂರು.

## ಚೇಂಬರ್ಲಿನ್ ಎಂಬವರು ಮಾಡಿದ ನೋವುಹರ ಔಷಧವು.

46




ಈ ಔಷಧವು ಪ್ರತಿ ಮನೆಯವರಿಗೂ ಅಗತ್ಯ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಏಟು ಬಿದ್ದರೂ ಚೂರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ತಿಕ್ಕಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಅಷ್ಟು ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವುಹರನೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಸುಖ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ಒಕ್ಕೆ ೧ ರೂ. ; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗೆ ವಿಳಾಸದಾರರಲ್ಲೂ ಸಿಕ್ಕುವದು —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮವುಂಟ್ ರೋಡ್,
ಮದರಾಸ್.

## ನಮ್ಮ ಚಂದಾದಾರರಿಗೆ ನೋಟೀಸ್.

"ವೃತ್ತಾಂತ ಪತ್ರಿಕೆ" ಯ ಏಜಂಟರು ಚಂದಾ ವಸೂಲ್ಮಾಡಿಕೊಂಡದ್ದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲ.

ಮ್ಯಾನೇಜರ್,
ಮೈಸೂರು. "ವೃತ್ತಾಂತ ಪತ್ರಿಕೆ" ಆಫೀಸ್.

# ವೃತ್ತಾಂತ ಪತ್ರಿಕೆ.

—:o:—

ಸನ್ ೧೯೦೩ ನೇ ಇಸವಿ ನೊವೆಂಬರ್ ತಾ॥ ೧೯ ನೇ ಗುರುವಾರ

## ಗ್ರಾಮ ಪಂಚಾಯತರ ಸಭೆ.

ಬೊಂಬಾಯಿಯಲ್ಲಿರುವ ಪ್ರಸಿದ್ಧ ರಾವ್ ಮಿ ಮಲಬಾರಿ ಎಂಬ ದೊಡ್ಡ ಮನುಷ್ಯರು ಹಿಂದೂಸ್ಥಾನದಲ್ಲಿ ಗ್ರಾಮ ಪಂಚಾಯತಿ ಕೂಟವನ್ನು ಸ್ಥಾಪಿಸಿಕೊಡಬೇಕೆಂದು ಇಂಡಿಯಾ ಗವರ್ನಮೆಂಟಿಗೆ ಒಂದು ಅರ್ಜಿ ಬರೆದುಕೊಂಡರು. ಅವರ ಮುಖ್ಯಾಭಿಪ್ರಾಯವೇನೆಂದರೆ :—

ಗ್ರಾಮಾಂತರಗಳಲ್ಲಿ ಇಂಥಾ ಕೂಟಗಳನ್ನು ಮಾಡಿಟ್ಟು, ಲೋಕಲ್ ಸೆಸ್ ಎಂಬ ಕಂದಾಯದಲ್ಲಿ ಕೆಲವು ಭಾಗವನ್ನು ಈ ಕೂಟಗಳಿಗೆ ವಹಿಸಿದಲ್ಲಿ ಈ ಕೂಟದವರು ಆಯಾ ಗ್ರಾಮದ ಆರೋಗ್ಯವಿಚಾರ, ರಸ್ತೆ, ಪಾಠಶಾಲೆ, ವೈದ್ಯಶಾಲೆ, ಇವೇ ಮೊದಲಾದವುಗಳಿಗೆ ಖರ್ಚು ಮಾಡುವುದರ ಮೂಲಕ ಗ್ರಾಮಾಂತರಗಳನ್ನು ಅಭಿವೃದ್ಧಿಗೆ ತರುವರು. ಜನರಲ್ಲಿ ಸ್ವಸಾಮರ್ಥ್ಯವೂ ಧೈರ್ಯವೂ ಹೆಚ್ಚುವುದು. ಪ್ರಜೆಗಳು ಅಭಿವೃದ್ಧಿಗೆ ಬಂದಾರು. ಚಿಲ್ಲರೆ ಗ್ರಾಮಾಧಿಕಾರಿಗಳ ಕಿರಿಕಿರಿಗಳೆಲ್ಲಾ ತಪ್ಪುವವು. ಗ್ರಾಮದ ಗೋಮಾಳಗಳೂ ಈ ಕೂಟಕ್ಕೆ ವಹಿಸಿದಲ್ಲಿ ಗೋಕಾಯಿಗಳೂ ಚೆನ್ನಾಗುವವು.

ಇದಕ್ಕೆ ಲಾರ್ಡ್ ಕರ್ಜನ್ ಪ್ರಭುಗಳು ಜವಾಬು ಕೊಟ್ಟಿರುವದೇನೆಂದರೆ :—ಈ ಸಲಹೆಯನ್ನು ನಾವು ಬಹಳ ಚೆನ್ನಾಗಿ ಪರಿಶೀಲನೆ ಮಾಡಿ, ಡಿಸ್ಟ್ರಿಕ್ಟ್ ಅಧಿಕಾರಿಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವದಕ್ಕಾಗಿ ಕಳುಹಿಸಿರುತ್ತೇವೆ. ಈ ಗ್ರಾಮಕೂಟಗಳನ್ನು ಕಲ್ಪಿಸಿ ಸರ್ಕಾರಿ ಹಣವನ್ನು ಅವರಿಗೆ ವಹಿಸುವುದು ಸಾಧ್ಯವಲ್ಲವೆಂದು ಕಾಣುವುದು. ಹಣದ ಲೆಕ್ಕಾಚಾರವು ಗಲಿಬಿಲಿಯಾಗುತ್ತೆ. ಗ್ರಾಮಕೂಟಗಳನ್ನು ಏರ್ಪಡಿಸಬೇಕೆಂದು ಗವರ್ನಮೆಂಟಿನವರು ಪಟ್ಟ ಶ್ರಮ ಕೆಲವೆಡೆಗಳಲ್ಲಿ ಸಾರ್ಥಕವಾಗಲಿಲ್ಲ.

ಇತ್ತಲಾಗಿ ನಮ್ಮ ಸರ್ಕಾರದವರು ಗ್ರಾಮ ಪಂಚಾಯತಿ ಸಭೆಯನ್ನು ಕಲ್ಪಿಸಿ, ಸಣ್ಣ ಸಣ್ಣ ಸಿವಿಲ್ ವ್ಯಾಜ್ಯಗಳನ್ನು ಫೈಸಲ್ ಮಾಡುವಂತೆ ಏರ್ಪಾಡು ಮಾಡಿದರೆ ಜನರಿಗೆ ಈಗ ಉಂಟಾಗುತ್ತಿರುವ ದೇಶಶ್ರಮವೂ, ಅರ್ಥವ್ಯಯವೂ ಬಹುಮಟ್ಟಿಗೆ ಕಡಿಮೆಯಾಗಿ ಕ್ಷೇಮವಾದೀತೆಂದು ನಮಗೆ ತೋರುತ್ತಿದೆ. ಮಿ॥ ಮಾಧವರಾಯರು ಮೊನ್ನೆ ದಸರಾ ದಿವಾನ್‌ಗಿಸಲ್ಲಿ ಇಂಥಾ ಸಭೆಗಳನ್ನು ಕಲ್ಪಿಸುವುದಕ್ಕೆ ಏರ್ಪಾಡಾಗುತ್ತಿರುವಂತೆ ಅಪ್ಪಣೆ ಕೊಡಿಸಿದ ಹಾಗೆ ಕಾಣುವುದು. ಇದು ಜಾಗ್ರತೆಯಲ್ಲಾದರೆ ತುಂಬಾ ಉಪಕಾರವೇ ಸರಿ.

## ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ಈ ತಿಂಗಳಲ್ಲಿ ಬೆಂಗಳೂರಿಗೆ ದಯಮಾಡುವ ಸಂಭವವಿಲ್ಲವೆಂತಲೂ, ಡಿಸೆಂಬರ್ ತಿಂಗಳ ಮೊದಲನೇ ವಾರದಲ್ಲಿ—ಅಂದರೆ ೭ನೇ ತಾರೀಖು ಬುಧವಾರ—ರಾಜಧಾನಿಯಿಂದ ಪ್ರಯಾಣ ಮಾಡಬಹುದೆಂತಲೂ ಕೇಳುತ್ತೇವೆ.

✦✦✦✦

ಬಹುಕಾಲದಿಂದ ರಜದಮೇಲಿದ್ದ ಮಿ॥ ಸಿ ಶ್ರೀಕಂಠೇಶ್ವರ ಅಯ್ಯರವರು ಕೆಲಸದ ಮೇಲೆ ಹಾಜರಾದರೆಂತಲೂ, ಸರ್ಕಾರದವರು ಅವರಿಗೆ ಚಿತ್ರದುರ್ಗದ ಡಿಸ್ಟ್ರಿಕ್ಟ್ ದಾವಣಗೆರೆ ಸಬ್ ಡಿವಿಜನ್ ಚಾರ್ಜನ್ನು ವಹಿಸುವಂತೆ ಅಪ್ಪಣೆಕೊಟ್ಟರೆಂತಲೂ ಕೇಳುತ್ತೇವೆ.

✦✦✦✦

ರಾಜಧಾನಿಯಾದ ಮೈಸೂರು ಪಟ್ಟಣವನ್ನು ಅಭಿವೃದ್ಧಿ ಮಾಡುವುದಕ್ಕೂ, ಇನ್ನು ಮುಂದೆ ಪಟ್ಟಣದ ಬಡಾವಣೆಗೆ ಸ್ಥಳವನ್ನು ಸಂಪಾದಿಸುವುದಕ್ಕೂ ಅನುಕೂಲಿಸುವಂತೆ ನಮ್ಮ ಸರ್ಕಾರದವರು ಒಂದು ಕಾನೂನ್ ಮಾಡಿ, ಈ ವಾರದ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ.

✦✦✦✦

ಚನ್ನರಾಯಪಟ್ಟಣ ವೃಷ್ಟಿಕಾಮಿ ಶೆಟ್ಟರು ತಮ್ಮ ಪ್ರತ್ಯಯ ಕವನವನ್ನು ದಹನಮಾಡುವುದಕ್ಕೆ ಪಟ್ಟ ಕಷ್ಟಗಳನ್ನು ನಮ್ಮ ಬಾತ್ಮಿದಾರರು ಬರೆದಿರುತ್ತಾರೆ. ಚನ್ನರಾಯಪಟ್ಟಣದ ವರ್ತಮಾನದಲ್ಲಿ ಅದನ್ನು ವಾಚಕರು ಓದಬಹುದು. ಆ ಊರಿನ ಜನರು ಶೆಟ್ಟರನ್ನು ಅಷ್ಟು ಕಷ್ಟಕ್ಕೆ ಗುರಿಮಾಡಿದ್ದು ಯೋಗ್ಯವಾದುದಲ್ಲ.

✦✦✦✦

ಕೋಲಾರ್ ಚಿನ್ನದ ಗಣಿಗಳಲ್ಲಿ ಒಬ್ಬನು ೮ ವರುಷದ ಹುಡುಗನನ್ನು ಜೋಳಕ್ಕೆ ಕರೆದುಕೊಂಡು ಹೋಗಿ ಹೆದರಿಸಿ ಅವನ ನಡುವಿನಲ್ಲಿದ್ದ ಬೆಳ್ಳಿ ದಾರವನ್ನು ಕಿತ್ತುಕೊಂಡು, ಒಬ್ಬ ಮಾರ್ವಾಡಿಯಲ್ಲಿ ಅಡವಿಟ್ಟದ್ದಕ್ಕೆ ಪತ್ತೇ ಆಗಿ ಮ್ಯಾಜಿಸ್ಟ್ರೇಟರು ತನಿಖೆಮಾಡಿ ಮೊಕದ್ದಮೆಯನ್ನು ಸೆಷನ್ ವಿಚಾರಣೆಗೆ ಕಳುಹಿಸಿರುತ್ತಾರೆ.

✦✦✦✦

ಕೋಲಾರ್ ಚಿನ್ನದ ಗಣಿಗಳ ಪೈಕಿ ಛಾಂಪಿಯನ್ ರೀಫ್ ಎಂಬ ಗಣಿಯಲ್ಲಿ ಹಿಂದಿನ ವರುಷ ೫,೫೧,೨೦೨ ಪೌಂಡು (೧೯೮೦ ... ೧ ಪೌಂಡು) ಚಿನ್ನವೂ, ಕಳೆದ ವರುಷ ೭೩,೦೦೦ ಪೌಂಡು ಚಿನ್ನವೂ ಉತ್ಪತ್ತಿಯಾಗಿದೆ. ಪ್ರಪಂಚದಲ್ಲಿ ಚಿನ್ನ ಉತ್ಪತ್ತಿಯಾಗತಕ್ಕ ಮಹಾ ಪ್ರಸಿದ್ಧ ಗಣಿಗಳ ಪೈಕಿ ಇದೂ ಒಂದೆಂದು ಎಣಿಸಲ್ಪಟ್ಟಿದೆ.

✦✦✦✦

ಕೋಲಾರ್ ಚಿನ್ನದ ಗಣಿಗಳಲ್ಲಿ ಉತ್ಪತ್ತಿಯಾಗುವ ಚಿನ್ನವು ಕಳುವಾಗಿ ಬೊಂಬಾಯಿಗೆ ರವಾನೆಯಾಗುವುದೆಂದು ಸಮಾಚಾರ ಹುಟ್ಟಿರುವುದರಿಂದ ಅಂಥಾ ಕಳುವನ್ನು ಪತ್ತೆ ಮಾಡುವುದಕ್ಕೆ ಕಂಪನಿಗಳವರು ತಮ್ಮ ಕಡೆಯ ಚತುರರನ್ನು ಬೊಂಬಾಯಿನಲ್ಲಿಟ್ಟು, ಅವರಿಗೆ ತಲಬು ಕೊಡುತ್ತಾ ಬರುವಂತೆ ಏರ್ಪಡಿಸುತ್ತಿದ್ದಾರೆ.

✦✦✦✦

ವರುಷೇ ವರುಷ ರಾಜಧಾನಿಯಲ್ಲಿ ಅರಮನೆ ಕಚೇರಿಯಾಗಿ ನಡೆವ ಘಾತ್ರೀಹವನ ಸಂತರ್ಪಣೆಯು ಈ ಸಲ ಈ ತಿಂಗಳ ೨೬ ನೇ ನಡೆಯುವಂತೆ ಏರ್ಪಾಡಾಗಿತ್ತು. ಆದರೆ ಕಳೆದ ವಾರದ ಮಳೆಗಳನ್ನು ನೋಡಿ ಆ ದಿನ ಅನುಕೂಲವಾಗಲಾರದೆಂದು ನಿರೀಕ್ಷಿಸಿ, ಡಿಸೆಂಬರ್ ೬ನೇ ತಾರೀಖು ಭಾನುವಾರ ನಡೆಯುವಂತೆ ಗೊತ್ತು ಮಾಡಿರುತ್ತಾರೆ.

✦✦✦✦

ಹಾಸನದ ಡಿಸ್ಟ್ರಿಕ್ಟಿನಲ್ಲಿ ಪರೀಕ್ಷಾರ್ಥವಾಗಿ ೨—೩ ಕಡೆ ಕರ್ನಾಟಕ ವೈದ್ಯಶಾಲೆಗಳನ್ನು ಇಡಬೇಕೆಂತಲೂ, ಅವುಗಳಿಗೆ ಮೈಸೂರು ಸರ್ಕಾರಿ ಕರ್ನಾಟಕ ವೈದ್ಯಶಾಲೆಯಲ್ಲಿ ತರಬೇತಾಗಿರುವ ವೈದ್ಯರನ್ನು ನೇಮಿಸಬೇಕೆಂತಲೂ, ಈ ಆಸ್ಪತ್ರೆಗಳ ಖರ್ಚಿಗೆ ಡಿಸ್ಟ್ರಿಕ್ಟ್ ಮತ್ತು ಮ್ಯುನಿಸಿಪಲ್ ಫಂಡುಗಳಿಂದ ಹಣವನ್ನು ಕೊಡುತ್ತಾ ಬರಬೇಕೆಂತಲೂ ಗೊತ್ತುಮಾಡಿದ್ದಾರೆ.

✦✦✦✦

ಚಿನ್ನದ ಗಣಿಗಳ ಕಂಪನಿಯವರು ಕೋಲಾರದಲ್ಲಿ ಹೊಗೆಯ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿಕೊಳ್ಳುವದಕ್ಕೆ ವಿಲಾಯತಿಯಿಂದ ಕೆಲವು ಯಂತ್ರಗಳನ್ನು ತರಿಸಿಕೊಳ್ಳುವ ಏರ್ಪಾಡು ಮಾಡಿದಾರೆ. ಇದಕ್ಕೆ ಸುಮಾರು ನಾಲ್ಕುವರೆ ಲಕ್ಷ ರೂಪಾಯಿ ಖರ್ಚಾಗುವುದೆಂತಲೂ, ಸುಮಾರು ೧೨ ತಿಂಗಳೊಳಗಾಗಿ ಈ ಕಾರ್ಖಾನೆಯು ಸಿದ್ಧವಾಗುವುದೆಂತಲೂ ತಿಳಿದು ಬಂದಿದೆ.

ಚಿಕಲೇಘಾಟ ರಸ್ತೆಯನ್ನು ದುರಸ್ತುಮಾಡಿ ಒಳ್ಳೇ ಸ್ಥಿತಿಯಲ್ಲಿಡಬೇಕೆಂದು ಸರ್ಕಾರದವರು ಅದಕ್ಕಾಗಿ ೬೦,೦೨೨ ರೂ ಸ್ಯಾಂಕ್ಷನ್ ಮಾಡಿರುತ್ತಾರೆ. ಈ ಮೈಕಿ ಬಾಲ್ತಿ ಸಾಲಿನಲ್ಲಿ ೧೧,೦೭೨ ಉಪಯೋಗಿಸಿಕೊಂಡು ಸೂಪರಿಂಟೆಂಡಿಂಗ್ ಇಂಜನಿಯರು ಮೊದಲು ೨೮ ರಿಂದ ೩೧ ನೇ ಮೈಲಿ ವರೆಗೆ ಆಗಬೇಕಾಗಿರುವ ಕಾಮಗಾರಿಗಳನ್ನೆಲ್ಲಾ ಮಾಡಿಸಿ ಪೂರೈಸಬೇಕೆಂದು ತಿಳಿಸಿರುವ...

✦✦✦✦

ಮುಂದಿನ ಜನವರಿ ತಿಂಗಳಲ್ಲಿ ದೊಡ್ಡಬಳ್ಳಾಪುರದ ... ಇಂಗ್ಲಿಷ್ ಸೈನಿಕರ ಕವಾತು ಮುಂತಾದ್ದು ಬಹಳ ವಿಶೇಷವಾ... ನಡೆವುದೆಂತಲೂ, ದಕ್ಷಿಣ ಆಫ್ರಿಕದ ಯುದ್ಧದಲ್ಲಿ ತುಂಬಾ ಯ... ನ್ನು ಪಡೆದು ಈಗ ಹಿಂದುಸ್ಥಾನದ ಇಂಗ್ಲಿಷ್ ಸೈನಿಕರ ಮೇಲೆ ಮ್ಯಾಂಡರ್ ಚೀಫರಾಗಿ ನೇಮಕವಾಗಿರುವ ಲಾರ್ಡ್ ಕಿಚ್ನರ್ ... ವರು ಈ ಕವಾತನ್ನು ನೋಡುವುದಕ್ಕಾಗಿ ಬೆಂಗಳೂರಿಗೆ ಬರುವ... ಗಿದ್ದಾರೆಂತಲೂ ವರ್ತಮಾನವಿದೆ

✦✦✦✦

ಅರಸಿಕೆರೆಯ ಗೌವರ್ನಮೆಂಟ್ ಸ್ಕೂಲಿನ ಒಬ್ಬ ಅಸಿಸ್ಟೆಂ... ಮಾಸ್ಟರು ಅಲ್ಲಿ ಒಂದು ಕಾರ್ಖಾನೆಯನ್ನು ಇಡುವುದಕ್ಕಾಗಿ ... ದಾ ಎತ್ತುತ್ತಿದ್ದಾರೆಂತಲೂ, ಈ ಕಾರ್ಖಾನೆಯಲ್ಲಿ ಹಲ್ಲು ಪುಡಿ, ... ಕಾಫಿಗೆ ಪ್ರತಿಯಾಗಿ ಒಂದು ಪಾನ ಪದಾರ್ಥ, ಅಳಿಸಿಹೋಗದಂಥ ... ಉತ್ಕೃಷ್ಟವಾದ ಶಾಯಿ, ಸರ್ಪದ ಮತ್ತು ಚೇಳಿನ ವಿಷಕ್ಕೆ ತ... ಔಷಧ, ಇವುಗಳನ್ನು ತಯಾರ್ಮಾಡಿಸುವವರಾಗಿದ್ದಾರೆಂತಲೂ ... ಗಳೂರು ಪತ್ರಿಕೆಗೆ ಒಬ್ಬ ಬಾತ್ಮಿದಾರನು ಬರೆದಿರುತ್ತಾನೆ. ಇವ... ಲಾ ಒಂದೇ ಮದ್ದನ್ನು ಮಾಡಿಸುವರೋ ಏನೋ ಎಂದು ನಮ್ಮ ಅನುಮಾನ ಉಂಟಾಗಿದೆ.

✦✦✦✦

ರಾಜಧಾನಿಯ ಅರಮನೆ ಖಜಾಂಚಿ ಮಿ॥ ಸೇತೂರಾಯ... ಮೇಲೆ ಅವರು ಅವಳ ವ್ಯಾಪಾರದಲ್ಲಿ ಖಜಾನೆಯ ಹಣವನ್ನು ... ವ್ಯಸ್ತ ಮಾಡಿದರೆಂಬ ವರ್ತಮಾನ ಹುಟ್ಟಿ, ಕಂಟ್ರೋಲರವರು ಲೆಕ್ಕ ಪತ್ರಗಳನ್ನು ತನಿಖೆಮಾಡುತ್ತಿದ್ದಾರೆಂತಲೂ, ರಿಪೋರ್ಟನ್ನು ಶ್ರೀಮನ್ ಮಹಾರಾಜರವರಿಗೆ ಒಪ್ಪಿಸುವವರಾಗಿದ್ದಾರೆಂತಲೂ ತಿಳಿಸುವವಷ್ಟೆ. ಈಚೆಗೆ ಮಿ॥ ಸೌಕಾನಕಿ ಯವರು ಸಹ ಖಜಾನೆಯ ಲೆಕ್ಕಗಳನ್ನು ಚನ್ನಾಗಿ ನೋಡಿಕೊಂಡು ಹೋದರು. ಶ್ರೀಮನ್ ಮಹಾರಾಜರವರು ಈ ವಿಚಾರದಲ್ಲಿ ಇನ್ನೂ ಹುಕುಂ ಮಾಡಿಲ್ಲವೆಂತಲೂ ಸದ್ಯ ಮಿ॥ ಸೇತೂರಾಯರನ್ನು ಸಸ್ಪೆಂಡ್ ಮಾಡಿರುತ್ತಾರೆಂತಲೂ ತಿಳಿದು ಬಂದಿದೆ.

✦✦✦✦

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಮೈಸೂರ್ ಕ್ಯಾಂಪಿನ ಒಂದು ಬಂಗಲೆಯಲ್ಲಿ ಒಬ್ಬರೂ ಅವನ ಹೆಂಡತಿಯೂ ನಾ... ಕೊಠಡಿಯಲ್ಲಿ ಬೆಂಕಿ ಹೊತ್ತಿಸಿ ಮಲಗಿ ನಿದ್ರೆ ಮಾಡಿದರು. ಅ... ಬ್ಬರೂ ಸತ್ತಿದ್ದರು; ಸಾಹೇಬರ ನಾಯಿಯೂ ಎರಡು ಹೆಗ್ಗಣಗಳೂ ಸತ್ತುಹೋಗಿದ್ದವು. ಮರುದಿನ ಬೆಳಿಗ್ಗೆ ಬಾಗಿಲು ಒಡೆದು ತೆರೆದು ನೋಡಿ, ಅವರಿಗೆ ಪ್ಲೇಗ್ ಆಗಿತ್ತೆಂದು ಗೊತ್ತುಮಾಡಿದರು. ... ಗೆ ಚನ್ನಾಗಿ ಅವಮಾಯಿಷಿ ಮಾಡಿದ್ದರಲ್ಲಿ ಕಲ್ಲಿದ್ದಲಿನ ಹೊಗೆ... ದೆಸೆಯಿಂದ ಅವರೆಲ್ಲಾ ಉಸುರುಕಟ್ಟಿ ಸತ್ತುಹೋದರೆಂದು ತಿಳಿ... ಬಂತು. ಬೆಂಕಿ ಇಡುವಗಳನ್ನಿಟ್ಟು, ಎಲ್ಲಾ ಬಾಗಿಲುಗಳನ್ನೂ ಮು... ಚ್ಚಿಕೊಂಡು ಮಲಗುವುದರ ದೆಸೆಯಿಂದ ಇದೇ ಅಪಾಯವಾದೀತು.

✦✦✦✦

ಸುಮಾರು ನಾಲ್ಕು ವರುಷಗಳಿಂದಲೂ ಮಿ॥ ಎ ಕೋರ... ಪಾಟೆ ಮೊದಲಿಯಾರು ರಾಜಧಾನಿಯಲ್ಲಿ ಹೆಲ್ತ್ ಆಫಿಸರಾಗಿ ನೇಮಿಸಲ್ಪಟ್ಟು, ಪಟ್ಟಣದ ಪಾಕೀಜಾ ವಿಚಾರವನ್ನು ನೋಡಿಕೊಳ್ಳುತ್ತಿದ್ದರು. ಇವರು ಆದಿಯಿಂದಲೂ ವೈಸ್‌ಪ್ರೆಸಿಡೆಂಟರ ಅಧೀನದಲ್ಲಿ ಕೆಲಸಮಾಡುವುದಿಲ್ಲವೆಂತಲೂ, ತಾವು ಸ್ವತಂತ್ರರಾಗಿಯೇ ಕೆಲಸ ನೋಡಬೇಕೆಂತಲೂ ಹೋರಾಡುತ್ತಿದ್ದರು. ಗವರ್ನಮೆಂಟಿನವರು ಪಟ್ಟಣದ ಪಾಕೀಜಾ ವಿಚಾರವು ಅಷ್ಟು ಸಮರ್ಪಕವಾಗಿಲ್ಲವೆಂದು ತಿಳಿದು, ಅದನ್ನು ವೈಸ್ ಪ್ರೆಸಿಡೆಂಟರ ಶಾಖೆಯಲ್ಲಿ ಕೆಲಸ ಮಾಡುವಂತೆ ಹುಕುಂ ಕೊಟ್ಟರಾಗಿ, ಅದಕ್ಕೆ ಮಿ॥ ಪಾಟೆಯವರು ಇಷ್ಟಪಡದೆ ರಾಜೀನಾಮೆ ಕೊಡಬೇಕಾಗಿ ಕೇಳುತ್ತೇವೆ. ಅಂತು ಕಳೆದ ವಾ...

...ರವರು ಕೆಲ್ಸ ಅಧಿಕಾರವನ್ನು ವಹಿಸಿದ್ದರು, ಈ ಸಿಬ್ಬಂದಿಯು ... ಪ್ರೆಸಿಡೆಂಟರೇ ವಹಿಸಿಕೊಂಡು ಬಟ್ಟೆಯ ಪಾಕೀಟು ... ಅವರೇ ನೋಡಿಕೊಳ್ಳಬೇಕೆಂದೂ ವೆ ... ಕೆಲಸದವರು ವಾಪಸು ಹೋಗಿ ಸೈನ್ಯ ಖರ್ಚಿನಲ್ಲಿ ಕೆಲಸ ... ಕೆಯೂ ಹ.ಕ೦ ಮಾಡಿದರು. ಮೆ॥ ಡಾಕ್ಟರು ... ಸೋಮವಾರ ರಾತ್ರಿಗೆ ಕೆಲ್ಸ ಆಫೀಸಿನ ಛಾರ್ಜನ್ನು ವೈಸ್ ಪ್ರೆಸಿಡೆಂಟರಿಗೆ ವಹಿಸಿ, ಬೆಂಗಳೂರಿಗೆ ಪ್ರಯಾಣಮಾಡಿದರೆಂದು ... ಬಂದಿದೆ.

◆◆◆◆

ಕಳೆದ ಗುರುವಾರ ಬೆಳಿಗ್ಗೆ ನಮ್ಮ ಸಂಸ್ಥಾನದ ಹೊಸ ಬ್ರಿಟಿಷ್ ರೆಸಿಡೆಂಟ್ ಮೆ॥ ಜೆ. ಎ. ಬೋರ್ಡಿಲಾನ್ ರವರು ಅಸಿಸ್ಟೆಂಟ್ ರೆಸಿಡೆಂಟ್ ಸಂಗಡ ರಾಜಧಾನಿಗೆ ದಯಮಾಡಿದರು. ದಿವಾನರು, ಮೆ॥ ... ರಾಯರು, ಮೆ॥ ಕಾಂತರಾಜೇ ಅರಸಿನವರು, ಕರ್ನಲ್ ದೇ ... ಅರಸಿನವರೇ ಮೊದಲಾದವರೆಲ್ಲಾ ಸ್ಟೇಷನ್ನಿನಲ್ಲಿ ಕಾದಿದ್ದು ... ಆಗಮನವನ್ನು ಬಯಸಿದರು. ಗೌರವಾರ್ಥವಾದ ೧೩ ತೋಪುಗಳು ಹಾರಿಸಲ್ಪಟ್ಟವು. ಮೆ॥ ಬೋರ್ಡಿಲಾನ್ ರವರು ರೆಸಿಡೆನ್ಸಿ ... ಯಲ್ಲಿ ಇಳುಕೊಂಡು, ಫಲಾಹಾರಾನಂತರ ೧೦ ಗಂಟೆಗೆ ಪ ... ರೊಡನೆ ಅರಮನೆಗೆ ದಯಮಾಡಿ, ಶ್ರೀಮನ್ ಮಹಾರಾಜ ... ರನ್ನು ಕಂಡು, ಸ್ವಲ್ಪ ಹೊತ್ತು ಸಂಭಾಷಣೆ ಮಾಡಿಕೊಂಡು ವಾಪಸು ಬಂದು ... ವಧ್ಯಾಹ್ನದ ಮೇಲೆ ೩ ಗಂಟೆಗೆ ಶ್ರೀಮನ್ ಮಹಾರಾಜರವರು ... ಮಯೂರ್ ದೇವ ಸಹಿತವಾಗಿ ರೆಸಿಡೆನ್ಸಿ ಬಂಗಲೆಗೆ ದಯಮಾಡಿ, ರೆಸಿಡೆಂಟರನ್ನು ನೋಡಿ ಅವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬಂದರು. ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು. ಸಾಯಂಕಾಲ ೫ ಗಂಟೆಗೆ ಶ್ರೀಮನ್ ಮಹಾರಾಜರವರು ರೆಸಿಡೆಂಟರವರನ್ನು ತಮ್ಮ ಸಾರೋಟಿನಲ್ಲಿ ಕೂರಿಸಿಕೊಂಡು ಪಟ್ಟಣದ ಎಲ್ಲಾ ಭಾಗಗಳನ್ನೂ ತೋರಿಸಿಕೊಂಡು ಬಂದರು. ಆ ರಾತ್ರಿ ರೆಸಿಡೆಂಟರು ರೈಲ್ ಹತ್ತಿ ಬೆಂಗಳೂರಿಗೆ ಪ್ರಯಾಣ ಮಾಡಿದರು.

## ಮೈಸೂರು ಗೆಜೆಟ್ ಸಂಗ್ರಹ.

ಮಧುಗಿರಿಯ ಪೊಲೀಸಿನವರು ಸೇರಿ ಹಾಕಿ ಕೆಲಸ ಮಾಡುತ್ತಿದ್ದ ... ಪೊಲೀಸಿನವರೇ ಮಧುಗಿರಿ ಮುನಿಸಿಪಲ್ ಕೌನ್ಸಿಲಿನ ... ಸದಸ್ಯರನ್ನೂ ಹಿಡಿದು ವಿಚಾರಣೆ ಮಾಡತಕ್ಕದ್ದು.

ಚಿಂತಾಮಣಿ ಮ್ಯುನಿಸಿಪಲ್ ಬೋರ್ಡಿಗೆ ಹೊಸದಾಗಿ ನೇಮಿಸಲ್ಪಟ್ಟಿರುವ ಮೆಂಬರುಗಳ್ಯಾರೆಂದರೆ — ಮೆ॥ ಗುಲಾಬ್ ಪಟೇಲ್ ಜ್ಯೂ(ವೆಲರ್), ಜವಿನ್ದಾರ್ ವರ್ತಕ ... ಮಹಮದ್ ... ನಾರಾಯಣಪ್ಪನವರು.

ಚಿಕ್ಕಬಳ್ಳಾಪುರದ ಮ್ಯುನಿಸಿಪಲ್ ಬೋರ್ಡಿಗೆ ಹೊಸದಾಗಿ ನೇಮಿಸಲ್ಪಟ್ಟಿರುವ ಮೆಂಬರುಗಳ್ಯಾರೆಂದರೆ — ಮೆ॥ ಗುಲಾಂ ಸ್ಟೀವರ್ ... ಸಾಹೇಬರು, ವರ್ತಕ ದೊಡ್ಡ ನರಸಿಂಹಯ್ಯನವರು, ... ಸಿಂಗನ್ನನವರು.

ಬೆಂಗಳೂರ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆ॥ ಕೆ. ... ಯ್ಯನವರಿಗೆ ಜುಲೈ ೨೦ ರಿಂದ ಆರು ತಿಂಗಳ ಕಾಯಿಲೆ ರಜಾ ಕೊಟ್ಟಿದೆ.

ಎಕ್ಸೈಜ್ ಇಲಾಖಾ ಅಸಿಸ್ಟೆಂಟ್ ಕಮಿಷನರ್ ಮೆ॥ ಟಿ. ಬಿ. ... ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ... ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಡೆಪ್ಯುಟಿ ಅಮಲ್ದಾರ್ ಸಿ. ಕೇಶವಯ್ಯಂಗಾರ್ಯರಿಗೆ ಜುಲೈ ೧ ರಿಂದ ... ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ; ರಜಾ ಪೂರೈಸಿದ ... ಅವರು ಖರ್ಷಿಕ ಮೇಲೆ ಕೆಲಸ ಬಿಡತಕ್ಕದ್ದು.

ಮೈಸೂರ್ ಗವರ್ನಮೆಂಟ್ ಕಂಟ್ರೋಲರ್ ಮೆ॥ ಇ. ಆರ್. ... ಐಯ್ಯರವರು ಸೆಪ್ಟೆಂಬರ್ ೨೩ ರಲ್ಲಿ ಕಂಟ್ರೋಲರ್ ಆಫೀಸಿನ ಛಾರ್ಜನ್ನು ಆ(ಸಿಸ್ಟೆಂಟ್) ಕಂಟ್ರೋಲರ್ ಮೆ॥ ಜೆ. ... ಯವರಿಗೆ ವಹಿಸಿಕೊಟ್ಟಿರುತ್ತಾರೆ.

ಎಕ್ಸೈಜ್ ಕಮಿಷನರ ಆಫೀಸಿನಲ್ಲಿ ಕೆಲಸಮಾಡುವ ಆಕ್ಟಿಂಗ್ (ಡೆಪ್ಯುಟಿ) ಅಸಿಸ್ಟೆಂಟ್ ಕಮಿಷನರ್ ಮೆ॥ ಎನ್. ಗೋಪಾಲಯ್ಯಂ(ಗಾರ್ಯ)ರನ್ನು ಅದೇ ಕೆಲಸದಲ್ಲಿ ಖಾಯಂ ಮಾಡಿದೆ.

ಮುಂದೆ ಸೇರುವ ಅಮಲ್ದಾರ್ರುಗಳ ಖಾಯಂ ಮತ್ತು ಬಡ್ತಿಗಳ ... ಖಾಯಂ ಮಾಡಲ್ಪಟ್ಟವೆ —

ಮೆ॥ ಕಂ... ರಾಚಾರ್ರು, ಮೆ॥ ವಿ. ಸುಬ್ರಹ್ಮಣ್ಯಯ್ಯನವರು — ಇವರಿಬ್ಬರನ್ನೂ ೧ ನೆ ಕ್ಲಾಸಿನಲ್ಲಿ ಖಾಯಂ ಮಾಡಿದೆ.

ಮೆ॥ ಬಿ. ರಾಮಸ್ವಾಮಯ್ಯನವರು, ಮೆ॥ ಎ. ಕೃಷ್ಣೋಜಿರಾವ್ ... ರವರು — ಇವರಿಬ್ಬರನ್ನೂ ೨ ನೆ ಕ್ಲಾಸಿನಲ್ಲಿ ಖಾಯಂ ಮಾಡಿದೆ.

ಮೆ॥ ಬಿ. ಸುಬ್ಬರಾಯರು, ಮೆ॥ ಎಂ. ರಂಗನಾಥರಾಯರು — ಇವರಿಬ್ಬರನ್ನೂ ೩ ನೆ ಕ್ಲಾಸಿನಲ್ಲಿ ಖಾಯಂ ಮಾಡಿದೆ.

ಮೆ॥ ಆರ್. ಮಹದೇವರಾಯರು, ಮೆ॥ ಟಿ. ಕೆ. ಸುಂದರರಾಮಯ್ಯಂಗಾರ್ರು, ಮೆ॥ ವಿ. ಎನ್. ಗುರುರಾಯರು — ಇವರಿಗೆ ೩ ರಿಂದ ೨ ನೆ ಕ್ಲಾಸಿಗೆ ಬಡ್ತಿ (ಆಕ್ಟಿಂಗ್).

ಮೆ॥ ಟಿ. ಆರ್. ವೆಂಕಟರಾಮಯ್ಯನವರು, ಮೆ॥ ಎಚ್. ... ವೆಂಕಟಾಚಾರ್ರು, ಮೆ॥ ಬಿ. ಎಸ್. ರಾಮೋಜಿರಾಯರು — ಇವರಿಗೆ ೪ ರಿಂದ ೩ ನೆ ಕ್ಲಾಸಿಗೆ ಬಡ್ತಿ (ಆಕ್ಟಿಂಗ್).

ಮೆ॥ ಬಿ. ರಾಮಸ್ವಾಮಯ್ಯನವರು ಇತರ ಕೆಲಸದ ಮೇಲಿರು ... ಕೋಲಾರ್ ಡೆಪ್ಯುಟಿ ಕಮಿಷನರ ಆಫೀಸ್ ಹೆಡ್ ಕ್ಲರ್ಕ್ ... ಎಸ್. ಧರ್ಮರಾಯರು ಚಿಂತಾಮಣಿ ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡ ಬೇಕು.

ಮೆ॥ ಎಂ. ಎಸ್. ನಾರಾಯಣರಾಯರು, ಶಿವಮೊಗ್ಗೆಯ ... ಸ್ಟೇಷನ್ ಬಳಿ ಅವರ ಚಿಕ್ಕಪ್ಪನವರಿಂದ ಕಟ್ಟಿಸಲ್ಪಟ್ಟಿರುವ ಶ್ರೀ ಅಕ್ಕೇಶ್ವರಸ್ವಾಮಿ ದೇವಸ್ಥಾನದ ಕೆಲಸಗಳನ್ನು ನೋಡಿ ಬಾ(ರಿಸ) ನೋಡಿಕೊಳ್ಳುವಂತೆ ವಿಶಿಷ್ಟ ಧರ್ಮದರ್ಶಿಯಾಗಿ ನೇಮಿಸಲ್ಪಟ್ಟಿರುತ್ತಾರೆ.

## ದಕ್ಷಿಣ ಇಂಡಿಯಾದಲ್ಲಿ ಅತಿವೃಷ್ಟಿಯಿಂದಾದ ಅನರ್ಥಗಳು.

ಈ ವಾರ ನಾವು ಪ್ರಕಟಿಸಿರುವ ತಾಲ್ಲೂಕು ವರ್ತಮಾನಗಳಿಂದ ಈ ಸಂಸ್ಥಾನದ ಸಕಲ ಭಾಗಗಳಲ್ಲೂ ಅತಿವೃಷ್ಟಿಯುಂಟಾಗಿ ಪ್ರಜೆಗಳ ಸೌಕರ್ಯಕ್ಕೆ ಬಹು ಪ್ರತಿಕೂಲವನ್ನುಂಟುಮಾಡಿದೆಯೆಂಬ ವಿಷಯವು ಪ್ರಕಟವಾಗುವುದು. ಹೀಗೆ ಅತಿವೃಷ್ಟಿಯಾಗಿರುವುದು ನಮ್ಮ ಸಂಸ್ಥಾನದಲ್ಲಿ ಮಾತ್ರವಲ್ಲದೆ ದಕ್ಷಿಣ ಇಂಡಿಯದ ಅನೇಕ ಭಾಗಗಳಲ್ಲಿಯೂ ಆಗಿದೆಯೆಂದು ವರ್ತಮಾನ ಪತ್ರಿಕೆಗಳಿಂದ ಗೊತ್ತಾಗಿರುವುದು. ಈ ವರಿವಿಗೂ ತಿಳಿದು ಬಂದಿರುವ ಈ ವಿಷಯವಾದ ವರ್ತಮಾನವನ್ನು ಇಲ್ಲಿ ಪ್ರಕಟಿಸಿರುವೆವು.

### ಮದ್ರಾಸಾಧಿಪತ್ಯದಲ್ಲಿ.

ಮದ್ರಾಸು ನಗರದಿಂದ ಮೂರು ದಿಕ್ಕುಗಳಿಗೂ ಹೋಗುವ ಎಲ್ಲಾ ರೈಲು ಹಾದಿಗಳಲ್ಲೂ ಅನೇಕ ಸೇತುವೆಗಳು ಒಡೆದು ಕೆಲವು ದಿನಗಳ ವರಿವಿಗೂ ಗಾಡಿಗಳು ನಡೆಯುವುದಕ್ಕೆ ಅವಕಾಶವಿಲ್ಲದೆ ಹೋದುದರಿಂದ ಟಪಾಲಾಗಲಿ ಪ್ರಯಾಣಿಕರಾಗಲಿ ಊರಿಂದೂರಿಗೆ ಸಂಚರಿಸುವುದು ತಪ್ಪಿತು. ಮದ್ರಾಸಿಗೂ ಬೊಂಬಾಯಿಗೂ ನಡುವೆ ತಪ್ಪಿದ್ದ ಮಾರ್ಗವು ಸರಿಮಾಡಲ್ಪಟ್ಟು ಟಪಾಲು ಸಲೀಸಾಗಿ ನಡೆಯಲು ಅನುಕೂಲವಾಯಿತು. ಬೆಂಗಳೂರಿಗೂ ಮದ್ರಾಸಿಗೂ ನಡುವೆ ಗುಡಿಯಾತ್ತದ ವರೆಗೂ ಗಾಡಿಯನ್ನು ಮದ್ರಾಸಿನಿಂದ ಬಿಟ್ಟು, ಒಂದೆರಡು ದಿನಗಳಿಂದ ನಂತರ ಕಿತ್ತುಹೋಗಿದ್ದ ರಸ್ತೆಯನ್ನು ಸರಿಮಾಡಿ ಟಪಾಲನ್ನೂ ಪ್ರಯಾಣಿಕರನ್ನೂ ಯಥಾಪ್ರಕಾರ ಬಿಡುತ್ತಾ ಇದ್ದರೆ. ಮದ್ರಾಸಿನಿಂದ ಈಶಾನ್ಯ ದಿಕ್ಕಿಗೆ ರೈಲು ರಸ್ತೆಯು ತಂಗತ್ತೂರಿಗೂ ಚಿಂಗಲ್ಪೆಟ್ಟಿಗೂ ನಡುವೆ ೧೭ ಸ್ಥಳಗಳಲ್ಲಿ ಕಿತ್ತುಹೋಯಿತು. ಇದೇ ರಸ್ತೆಯಲ್ಲಿ ಸುಮಾರು ೬ ಮೈಲುಗಳ ಮಧ್ಯದಲ್ಲಿ ರೇಲ್ವೆಯವರು ಮಾಡಿಸಿದ್ದ ರಿಪೇರಿ ಕೆಲಸಗಳೆಲ್ಲಾ ಪ್ರವಾಹದಲ್ಲಿ ಕೊಚ್ಚಿ ಹೋಗಿರುತ್ತವೆ.

ಪಾಲಾರ್ ನದಿಯಲ್ಲಿ ಅಪರಿಮಿತವಾದ ಪ್ರವಾಹವುಂಟಾದ ಕಾರಣ ಆಂಬೊರೆಂಬ ಪಟ್ಟಣದಲ್ಲಿ ಬಹು ಪ್ರಾಣನಷ್ಟಕ್ಕೆ ಕಾರಣವಾಗಿದೆ. ನೂರಾರು ಮನೆಗಳು ನೀರಿನಲ್ಲಿ ಮುಳುಗಿಹೋಗಿವೆ. ಸುಮಾರು ೬ ಲಕ್ಷ ರೂಪಾಯಿಗಳಷ್ಟು ಬಾಳತಕ್ಕ ಹೊಗೆಸೊಪ್ಪಿನ ಕಾರ್ಖಾನೆಯೆಲ್ಲಾ ನೀರಿನಲ್ಲಿ ಮುಳುಗಿದೆ. ಇದರ ಮಾಲೀಕರಾದ ಮೆ॥ ಖಾದರ್ ಬಾಟ್ಚಾ ಸಾಹೇಬರು ಬಹು ಧರ್ಮಿಷ್ಠರು. ಇವರಿಗೆ ಇಷ್ಟು ಅಪಾರವಾದ ನಷ್ಟ ಪ್ರಾಪ್ತವಾದುದಕ್ಕಾಗಿ ಎಲ್ಲಾ ಜನಗಳೂ ಸಂತಾಪಪಡುತ್ತಿದ್ದಾರೆ. ಅಲ್ಲಿನ ಮ್ಯಾಜಿಸ್ಟ್ರೇಟರಾದ ಮ॥ ರಾ॥ ಸುಂದರರಾಮಯ್ಯಂಗಾರ್ರು ಅನೇಕ ಜನಗಳ ಪ್ರಾಣಗಳನ್ನು ರಕ್ಷಿಸುವುದರಲ್ಲಿ ತುಂಬಾ ಪ್ರಯತ್ನಪಟ್ಟರು. ಇವರಲ್ಲದೆ ಅಲ್ಲಿನ ಇತರ ಉದ್ಯೋಗಸ್ಥರೂ ಪ್ರಜೆಗಳ ಕೃತಜ್ಞತೆಗೆ ಪಾತ್ರರಾದರು.

### ಮೈಸೂರು ಸಂಸ್ಥಾನದಲ್ಲಿ.

ಕೋಲಾರದ ಡಿಸ್ಟ್ರಿಕ್ಟಿಲ್ಲಾ ಪ್ರವಾಹಮಯವಾಗಿದೆಯೆಂದು ತೋರುವುದು. ಮುಳಬಾಗಿಲು, ಕೋಲಾರ ಎಂಬ ಊರುಗಳ ಕೆರೆಗಳು ಒಡೆದು ನೀರು ಬೇತಮಂಗಲ ಕೆರೆಗೆ ನುಗ್ಗಿ ಅದನ್ನೂ ಕಿತ್ತು ಹಾಕಿತು. ಕೆರೆಯ ಏರಿಯು ಮೂರು ಸ್ಥಳಗಳಲ್ಲಿ ಕಿತ್ತುಹೋಯಿತು. ತರುವಾಯ ರಾಮಸಾಗರದ ಕೆರೆಯೂ ಒಡೆದುಹೋಯಿತು. ಕೋಲಾರದ ಚಿನ್ನದ ಗಣಿಗಳ ಪ್ರಾಂತ್ಯಕ್ಕೆ ಬೇತಮಂಗಲದ ಕೆರೆಯಿಂದಲೇ ನೀರನ್ನು ಸರಬರಾಜು ಮಾಡಬೇಕೆಂಬುದಾಗಿ ಸರ್ಕಾರದವರು ಆಲೋಚಿಸಿದ್ದರು. ಇನ್ನೂ ಎಷ್ಟು ಕೆರೆಗಳು ಕಿತ್ತುಹೋದುವೋ ಗೊತ್ತಾಗಿಲ್ಲ. ಆ ಡಿಸ್ಟ್ರಿಕ್ಟಿಗೆ ಕೆರೆ ನೀರೇ ವ್ಯವಸಾಯಕ್ಕೆ ಆಧಾರವಾಗಿರುವುದರಿಂದ ಮುಂದೆ ಬಹು ಕಷ್ಟಕ್ಕೆ ಕಾರಣವಾಗಿದೆ. ಈ ಕೆರೆಗಳಲ್ಲಿ ಹೋಗಿಬಿದ್ದ ನೀರೆಲ್ಲವೂ ಪಾಲಾರಿಗೇ ಸೇರುವುದರಿಂದ ಆ ನದಿಯಲ್ಲಿ ಅತ್ಯಧಿಕ ಪ್ರವಾಹವುಂಟಾಯಿತು. ಮದ್ರಾಸು ರೈಲ್ವೆಯು ಪಾಲೂರಿನ ಬಳಿಯಲ್ಲಿ ಕಿತ್ತುಹೋಗಿತ್ತು.

ಇತ್ತ ಸದರ್ನ್ ಮರಾಟ ರೇಲ್ವೆಯಲ್ಲಿ ಇತರ ರೈಲುಗಳಿಗಾದಷ್ಟು ನಷ್ಟವೇನೂ ಸಂಭವಿಸದಿದ್ದರೂ ಪ್ರಯಾಣಿಕರ ಪ್ರತಿಕೂಲಕ್ಕೆ ಬೇಕಾದಷ್ಟು ತೊಂದರೆಯೇನೋ ಆಯಿತು. ಗೊಲ್ಲಹಳ್ಳಿಯ ಬಳಿಯಲ್ಲಿ ರಸ್ತೆ ಕಿತ್ತುಹೋಗಿ ರಿಪೇರಿಯಾಗಿದೆ. ಫ್ರೆಂಚ್ ರಾಕ್ಸ್ ಸ್ಟೇಷನಿನ ಉತ್ತರದಲ್ಲಿ ಒಂದು ಸೇತುವೆ ಪ್ರವಾಹದಲ್ಲಿ ಕೊಚ್ಚಿಕೊಂಡುಹೋಗಿತ್ತು. ಎರಡು ಮೂರು ದಿವಸ ಪ್ರಯಾಣಿಕರು ಸ್ವಲ್ಪ ದೂರ ನಡೆದು ಹೋಗಿ ರೈಲು ಹತ್ತಬೇಕಾಗಿದ್ದಿತು. ೧೬ನೇ ತಾರೀಖಿನಿಂದ ರಸ್ತೆ ಯಥಾಪ್ರಕಾರ ಪ್ರಯಾಣಕ್ಕೆ ಅನುಕೂಲವಾಗಿದೆ. ದೊಡ್ಡಬಳ್ಳಾಪುರಕ್ಕೂ ಮಾಕಳಿದುರ್ಗಕ್ಕೂ ನಡುವೆ ಬಂಡೆಗಳು ಕುಸಿದು ರಸ್ತೆಗೆ ಅಡ್ಡವಾಗಿ ಬಿದ್ದಿವೆ. ಬೆಂಗಳೂರು ನೀರಿನ ಸರಬರಾಯಿಗೆ ಆಧಾರವಾಗಿರುವ ಹೆಸರುಘಟ್ಟದ ಸರೋವರಕ್ಕೂ ಅಪಾಯವುಂಟಾಯಿತೆಂದು ಬೆಂಗಳೂರಿನಲ್ಲಿ ಪ್ರಜೆಗಳು ಕಳವಳಗೊಂಡಿದ್ದರು. ಅದರಲ್ಲಿ ೩೭ ಅಡಿಗಳ ವರೆಗೂ ನೀರು ಬಂದು, ಕೋಡಿಯೆಲ್ಲಾ ಕಿತ್ತುಹೋಗಿ, ಕೋಡಿಯ ಮಟ್ಟಕ್ಕಿಂತ ಮೇಲೆ ನಾಲ್ಕು ಅಡಿಗಳ ವರೆಗೂ ನೀರು ಹರಿಯುತ್ತಿತ್ತು. ಬರಬರುತ್ತ ಇದೂ ಕಡಿಮೆಯಾಯಿತು. ಬೆಂಗಳೂರು ದಂಡಿನಲ್ಲಿಯೂ ಪೇಟೆಯಲ್ಲಿಯೂ ಅನೇಕ ಮನೆಗಳು ಕುಸಿದು ಪ್ರಾಣಾರ್ಥಹಾನಿಗೆ ಕಾರಣವಾದುವು. ಸಂಪಂಗಿ ಕೆರೆಯು ತುಂಬಿ ತುಳುಕುತ್ತಿದೆ. ಅಲಸೂರು ಕೆರೆಯೂ ತುಂಬಿ ಕೋಡಿ ಬಿದ್ದಿದೆ.

ರಾಜಧಾನಿಯಾದ ಮೈಸೂರಿನಲ್ಲಿಯೂ ಮಳೆಯು ೧೦—೧೨ ದಿನಗಳು ಬಿಡದೆ ಸುರಿದು ಅನೇಕ ಮನೆಗಳು ಕುಸಿದು ಬಿದ್ದವು. ಕೋಟೆಯ ಉತ್ತರ ಮುಖವಾಗಿರುವ ಬಾಗಿಲ ಪಕ್ಕದ ಬತೇರಿ ಗೋಡೆಯು ಕೆಲವು ಗಜಗಳ ದೂರ ಕುಸಿದು ಬಿದ್ದುಹೋಯಿತು. ಇಷ್ಟು ಮಹತ್ತರವಾದ ನಷ್ಟಕ್ಕೂ ಪ್ರಜೆಗಳ ಭಯಕ್ಕೂ ಕಾರಣವಾದ ಮಳೆಯು ಎರಡು ಮೂರು ದಿನಗಳಿಂದೀಚೆಗೆ ನಿಂತಿರುವುದು.

## ಈಗ ಬಂದಿರುವ ವರ್ತಮಾನಗಳು.

### ಮದರಾಸ್ ರೈಲ್ವೆ.

ಮದರಾಸ್ ರೈಲ್ ಗಾಡಿಗಳು ಸಂಚರಿಸುವ ಈಶಾನ್ಯ ಪ್ರದೇಶಗಳಲ್ಲಿ ಇನ್ನೂ ಮಳೆ ಸುರಿಯುತ್ತಲೇ ಇರುವುದರಿಂದ ಕೆಟ್ಟುಹೋಗಿರತಕ್ಕ ಲೈನುಗಳನ್ನು ರಿಪೇರಿ ಮಾಡಿ ಗಾಡಿಗಳನ್ನು ಬಿಡಲು ಅವಕಾಶವಿಲ್ಲ. ತುಂಗತ್ತೂರು ಒಂಗೋಲ್ ಇವೆರಡು ಊರುಗಳ ನಡುವೆ ಮಾತ್ರ ರಸ್ತೆ ರಿಪೇರಿ ಆಗುತ್ತಿದೆ. ತುಂಗತ್ತೂರಿನಿಂದ ದಕ್ಷಿಣಕ್ಕೆ ನದಿಗಳೆಲ್ಲಾ ಇನ್ನೂ ತುಂಬಿ ಹರಿಯುತ್ತಿರುವವು.

ಬೆಂಗಳೂರ್ ಬ್ರಾಂಚ್ ರೈಲ್ವೆ ೧೯೪ ನೆ ಮೈಲಿ ಬಳಿ ರಸ್ತೆಯು ಬೇಗನೆ ದುರಸ್ತಾಗುವುದರಲ್ಲಿದೆ. ಆದರೆ ೧೯೯ ನೆ ಮೈಲಿ ಬಳಿಯ ರಸ್ತೆ ಸರಿಯಾಗಲು ಇನ್ನೂ ನಾಲ್ಕಾರು ದಿನ ಹಿಡಿಯಬಹುದು. ಯಾಕೆಂದರೆ ಆ ಪ್ರಾಂತ್ಯ ಇನ್ನೂ ಮಳೆ ಸುರಿಯುತ್ತಲೇ ಇದೆ. ಮೈಲ್‌ಪಟ್ಟಿ ಸ್ಟೇಷನಿನಿಂದ ವರ್ತಮಾನವೇ ಬಂದಿಲ್ಲ. ಛೀಫ್ ಇಂಜನಿಯರು ಅಲ್ಲಿಗೆ ಹೋಗಿರುತ್ತಾರೆ. ಸ್ಟೇಷನೆಲ್ಲಾ ಕೊಚ್ಚಿಹೋಗಿರುವಂತೆ ಸಮಾಚಾರವಿದೆ. ಆ ಸ್ಟೇಷನ್ ಬಳಿ ಜಂಗಾಮಿಯಾಗಿ ಒಂದು ರೈಲ್ ರಸ್ತೆ ತಯಾರಾಗುತ್ತಿರುವುದು. ಎರಡು ಕಡೆಗಳಲ್ಲೂ ಗಾಡಿಗಳನ್ನು ತಂದು ನಿಲ್ಲಿಸಿಕೊಂಡು ಜನರನ್ನೂ ಸಾಮಾನನ್ನೂ ಈ ರಸ್ತೆಯ ಮೇಲೆ ಸಾಗಿಸುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆ.

### ಸೌತ್ ಇಂಡಿಯನ್ ರೈಲ್ವೆ

ಸೌತ್ ಇಂಡಿಯಾ ರೈಲ್ ಗಾಡಿಗಳು ಚಿರಂಜೂರಿನಿಂದ ಕಾಡ್ಪಾಡಿ ಸ್ಟೇಷನಿಗೆ ಹೋಗದಂತೆ ಮಧ್ಯೆ ಕಾಲು ಮೈಲಿ ಫಾಸಲೆ ರಸ್ತೆಯು ನೀರಿನಲ್ಲಿ ಮುಳುಗಿಹೋಗಿತ್ತು. ೨—೩ ದಿನ ರೈಲ್ ಗಾಡಿಗಳ ಸಂಚಾರ ನಿಂತುಹೋಗಿತ್ತು. ಶನಿವಾರದಿಂದೀಚೆಗೆ ಪ್ರವಾಹ ಇಳಿದುದರಿಂದ ಗಾಡಿಗಳನ್ನು ಯಥಾಪ್ರಕಾರ ಬಿಡುತ್ತಿದ್ದಾರೆ.

### ಬೆಂಗಳೂರಿನ ಮಳೆ.

ಒಂದೇ ದಿನ ೫ ಅಂಗುಲ ಪ್ರಮಾಣವಷ್ಟು ಮಳೆ ಸುರಿಯಿತು. ಮಾಲೂರಿಗೂ ವೈಟ್‌ಫೀಲ್ಡಿಗೂ ನಡುವೆ ರಸ್ತೆಗಳೆಲ್ಲಾ ನೀರಿನಲ್ಲಿ ಮುಳುಗಿಕೊಂಡವು. ಮದರಾಸಿನ ಟಪ್ಪಾಲ್ ಬರುವುದು ಪ್ರಯಾಸವಾಗಿದೆ. ಬೆಂಗಳೂರ್ ಗುಂಟಕಲ್ ಬ್ರಾಂಚ್ ರಸ್ತೆಯಲ್ಲಿ ೪೨ನೇ ಮೈಲಿ ಕಲ್ಲಿನ ಬಳಿ ದೊಡ್ಡ ದೊಡ್ಡ ಬಂಡೆಗಳು ಉರುಳಿಬಂದು ಬಿದ್ದಿರುತ್ತವೆ. ಇವುಗಳನ್ನೆಲ್ಲಾ ಒಡೆಯಿಸಿದಲ್ಲದೆ ಹೊರಕ್ಕೆ ಸಾಗಿಸಲು ಅಸಾಧ್ಯ. ಈ ಕಲ್ಲು ಸಾಗಿದಲ್ಲದೆ ರಸ್ತೆ ಸರಿಯಾಗುವುದಿಲ್ಲ. ಆದುದರಿಂದ ಕೆಲವು ದಿನಗಳ ತನಕ ರೈಲ್ ಗಾಡಿಗಳ ಸಂಚಾರಕ್ಕೆ ಅಡ್ಡಿಯಾಗಿದೆ. ಆದರೂ ಸಾಮಾನನ್ನೂ ಪ್ರಯಾಣಸ್ಥರನ್ನೂ ಜಂಗಾಮಿಯಾದ ಬೇರೆ ರಸ್ತೆಯ ಮೂಲಕ ಸಾಗಿಸುತ್ತಿದ್ದಾರೆ. ಬೆಂಗಳೂರಿನಿಂದ ಮದರಾಸ್ ಕಡೆಗೆ ಹೋಗುವ ಗಾಡಿಗಳು ಮಾಲೂರಿನಲ್ಲೇ ನಿಂತುಬಿಡುವುವು. ೨—೩ ಗಾಡಿಗಳು ಹಿಂತಿರುಗಿ ಬೆಂಗಳೂರಿಗೆ ಬಂದದ್ದೂ ಉಂಟು. ಮದರಾಸ್ ಟಪ್ಪಾಲನ್ನು ರೈಲ್ ರಸ್ತೆ ಬಿಟ್ಟು ಗಾಡಿ ರಸ್ತೆಯಲ್ಲಿ ಸಾಗಿಸಿ, ಬೆಂಗಳೂರಿಗೆ ತರುತ್ತಿದ್ದಾರೆ.

### ಕೋಲಾರದ ಪ್ರಾಂತ್ಯ.

ಕಳೆದ ಬುಧವಾರ ರಾತ್ರಿ ಕೋಲಾರ್ ಡಿಸ್ಟ್ರಿಕ್ಟಿನ ಅನೇಕ ಕಡೆಗಳಲ್ಲಿ ಪ್ರವಾಹಗಳು ಬಂದವು. ಪಾಲಾರ್ ನದಿಯ ಮೇಲ್ಗಡೆ ಇರುವ ಹೊಲ್ಲಹಳ್ಳಿ ಕೆರೆಯು ಒಡೆದು ನೀರೆಲ್ಲಾ ನದಿಗೆ ಬಂದು ಬಿದ್ದು ಬಿಟ್ಟುದರಿಂದ ಪ್ರವಾಹ ಹೆಚ್ಚಿ ಬೇತಮಂಗಲದ ಕೆರೆಗೆ ನುಗ್ಗಿತು. ಬೇತಮಂಗಲದ ಕೆರೆ ಏರಿಯು ನೀರಿನ ರಭಸವನ್ನು ತಡೆಯಲಾರದೆ ಎರಡು ಕಡೆ ಕಿತ್ತುಹೋಯಿತು. ಒಂದು ಕಡೆ ಕಿತ್ತುಹೋದ ೧೦೦ ಗಜದಷ್ಟು ಏರಿಯನ್ನು ಇನ್ನೊಂದು ಕೋಡಿಯನ್ನೂ ರಿಪೇರಿ ಮಾಡಿಸುವುದಕ್ಕೆ ಸರ್ಕಾರದವರು ಒಂದು ಲಕ್ಷ ರೂಪಾಯಿಯನ್ನಾದರೂ ಖರ್ಚುಮಾಡಬೇಕೆಂದು ತೋರುವುದು. ಬೇತಮಂಗಲದ ಸೇತುವೆಯು ಕಿತ್ತು ಕೊಚ್ಚಿಹೋಗಿದೆ. ಆ ನೀರು ರಾಮಸಾಗರ ಕೆರೆಗೆ ಬಂದು ಬಿದ್ದು ಬಹಳ ನಷ್ಟವಾಯಿತು. ಪಾಲಾರ್ ನದಿಯ ದಿಮ್ಮಿಯು ಒಂದು ಕಡೆ ಮಾತ್ರ ಕಿತ್ತುಹೋಗಿರುವುದು.

### ಪ್ರಾಣಹಾನಿಯುಂಟಾಗದ ನಷ್ಟ.

ಪಾಲಾರ್ ನದಿಯಲ್ಲಿ ಬಂದ ಪ್ರವಾಹದ ನೀರೆಲ್ಲಾ ಮಾಸ್ತಿ ... ಊರಿನೊಳಕ್ಕೆ ನುಗ್ಗಿದ್ದರಿಂದ ಊರಿನಲ್ಲಿ ಅರವಾಸಿ ನೀರಿನಲ್ಲಿ ಮುಳುಗಿಹೋಯಿತು. ಆದರೆ ಮೊದಲೇ ಜನರು ಎಚ್ಚರಗೊಂಡದ್ದರಿಂದ ಪ್ರಾಣನಷ್ಟವೇನೂ ಆಗಲಿಲ್ಲ. ಅನೇಕ ಮನೆ ಮಠಗಳೂ ಆಸ್ತಿಪಾಸ್ತಿಯೂ ನಷ್ಟವಾದವು. ಹೊಲ್ಲಹಳ್ಳಿ ಕೆರೆಯ ಕೆಳಗಿದ್ದ ಎರಡು ಗ್ರಾಮಗಳು ಸಂಪೂರ್ಣವಾಗಿ ನಾಶಹೊಂದಿದವು. ಇದರಿಂದ ಜನರಿಗೂ ಸರ್ಕಾರಕ್ಕೂ ಎಷ್ಟು ನಷ್ಟವಾಗಿರಬಹುದೋ ವಿವರಿಸಲಾಗದು. ಈ ಕೆರೆಗಳೆಲ್ಲಾ ದುರಸ್ತಾಗಬೇಕಾದರೆ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ.

ಕೋಲಾರ್ ಚಿನ್ನದ ಗಣಿಗಳಿಗೆ ಮೈಸೂರು ಸರ್ಕಾರದವರು ಕುಡಿಯುವ ನೀರನ್ನು ತಂದೊಗಿಸಬೇಕೆಂದು ಕಾಮಗಾರಿ ಏರ್ಪಡಿಸಿದ್ದರಷ್ಟೆ. ಬೇತಮಂಗಲದ ಕೆರೆಯ ನೀರೇ ಇದಕ್ಕೆ ಆಧಾರವಾಗಿತ್ತು. ಈಗ ಈ ಕೆರೆಯು ಎರಡು ಕಡೆಗಳಲ್ಲಿ ಕಿತ್ತುಹೋಗಿ ಬರಿದಾಗಿ ನಿಂತಿದೆ. ಬೆಂಗಳೂರಿಗೂ ಚಿನ್ನದ ಗಣಿಗಳಿಗೂ, ಅತ್ತಲಾಗಿ ಚಿನ್ನದ ಗಣಿಗಳಿಗೂ ಮದರಾಸಿಗೂ ಹೋಗಿರುವ ಮಾರ್ಗಗಳೆಲ್ಲಾ ಈ ಪ್ರವಾಹಗಳ ದೆಸೆಯಿಂದ ಕಟ್ಟಿಹೋಗಿರುತ್ತವೆ. ಜನಸಂಚಾರವೂ ನಿಂತಿರುವಂತೆ ಸಮಾಚಾರ ಕೇಳುತ್ತೇವೆ. ಈ ಕಾಲದಲ್ಲಿ ಇಂಥಾ ಮಳೆಗಳು ಬಂದದ್ದು ಅಪೂರ್ವವೆಂದು ಎಲ್ಲರೂ ಎಲ್ಲಾ ಊರುಗಳಲ್ಲೂ ಹೇಳುತ್ತಿದ್ದಾರೆ.

## ಪ್ರಭುವಿನ ಪ್ರಾರ್ಥನೆ.

### VI—ಐದನೆ ದಿನವೂ ಅವಶ್ಯವಾದ ಪಾಪಕ್ಷಮೆ.

"ನಮ್ಮ ಋಣದಲ್ಲಿದ್ದವರಿಗೆ ನಾವು ಋಣಬಿಟ್ಟಂತೆ ನಮ್ಮ ಋಣಗಳನ್ನು ಬಿಡು."—ಮತ್ತಾ. ೬. ೧೨.

"ನಮ್ಮ ಪಾಪಗಳನ್ನು ಕ್ಷಮಿಸು; ಯಾಕಂದರೆ—ನಮ್ಮ ಋಣದಲ್ಲಿ ಬಿದ್ದವರಿಗೆಲ್ಲಾ ನಾವೂ ಬಿಡುತ್ತೇವೆ."—ಲೂಕ ೧೧: ೪.

ಹಿಂದಣ ಸಂಚಿಕೆಯಲ್ಲಿ—ಮೊದಲು, ಶರೀರ ಪೋಷಣೆಯ ವಿಷಯದಲ್ಲೂ, ಎರಡನೇದು ಆತ್ಮ ಪೋಷಣೆಯ ವಿಷಯದಲ್ಲೂ ಹೇಳಲ್ಪಟ್ಟಿರುವ ಬಿನ್ನಹವನ್ನು ಕುರಿತು ಬರೆದುತ್ತೇವಷ್ಟೆ. ಈ ಎರಡನೇ ಬಿನ್ನಹದಲ್ಲಿ ನಮ್ಮ ಪಾಪಗಳ ದೆಸೆಯಿಂದ ಆತ್ಮಕ್ಕೆ ನಿರಂತರವೂ ಬೇಕಾಗಿರುವ ಪಾಪಕ್ಷಮೆಯನ್ನು ಪರಿಷ್ಕಾರವಾಗಿ ತಿಳಿಯಪಡಿಸಿಕೊಳ್ಳುತ್ತೇವೆ.

೧. ಮನುಷ್ಯನು ಪಾಪಮಾಡಿದ್ದಾನೆಂಬುದೂ, ಆ ಪಾಪವನ್ನು ಕ್ಷಮಿಸಿಕೊಳ್ಳುವದಕ್ಕೆ ಭಗವಂತನ ಉಚಿತವಾದ ಕೃಪೆಯು ಕಾರಣವೇ ವಿನಾ ನಮ್ಮ ಪುಣ್ಯಕಾರ್ಯವೇನೂ ಅಲ್ಲವೆಂಬುದೂ ಕ್ರಿಸ್ತಸದ್ಧರ್ಮದಲ್ಲಿ ಅತ್ಯಂತ ವಿಶೇಷವಾಗಿ ಸಂಚಿತಕ್ಕೆ ಬೋಧನೆಯಾಗಿದೆ. ನಾವೆಷ್ಟು ಸತ್ಕೃತಶಾಲಿಗಳಾಗಿದ್ದರೂ ನಾವು ಆ ಭಗವಂತನ ಬಳಿಗೆ ಬಂದು, ಆತನ ಕ್ಷಮಾಪಣೆಯನ್ನು ಕೇಳಿಕೊಂಡು, ನಮ್ಮನ್ನು ಆತನು ಹೇಗಾದರೂ ಪುನಃ ತನ್ನ ಮಕ್ಕಳಂತೆ ಭಾವಿಸಿ ಅಂಗೀಕರಿಸಬೇಕೆಂಬುದಾಗಿ ಪ್ರಾರ್ಥಿಸಿಕೊಳ್ಳುವ ಆವಶ್ಯಕತೆಯು ಬೇರೆ ತಪ್ಪುವದಿಲ್ಲ. ಮನುಷ್ಯರಿಗೆ ಶರೀರಾರೋಗ್ಯಕ್ಕೆ ಹೇಗೋ ಲೌಕಿಕ ಪ್ರಿಯಸ್ನೇಹಿತರೂ ಪಾಪಕ್ಷಮೆಯನ್ನು ಹೊಂದುವದೇ ಅತ್ಯಂತಾವಶ್ಯಕವೆಂದು ಕ್ರಿಸ್ತಸ್ವಾಮಿಯು ಬಹು ಪರಿಷ್ಕಾರವಾಗಿ ಬೋಧಿಸಿದನು. ಆತನು ಎಷ್ಟೋ ಮಂದಿಗೆ—"ನಿನ್ನ ಪಾಪಗಳು ಪರಿಹರಿಸಲ್ಪಟ್ಟವೆ" ಎಂದು ಹೇಳಿದ್ದಾನೆ "ನನ್ನ ಪಾಪವನ್ನು ಮನ್ನಿಸು" ಎಂಬ ಪ್ರಾರ್ಥನೆಯನ್ನು ಹೇಳುವದಕ್ಕೇ ಅವಶ್ಯವಿಲ್ಲದ ಪುರುಷರು ಭೂಲೋಕದಲ್ಲಿ ಯಾರೂ ಇಲ್ಲವೇ! ಬಹು ಕಾಲದ ವರೆಗೂ ದೇವಭಕ್ತಿಯಿಂದ ನಡದು, ಸಕಲ ಸುಗುಣಗಳನ್ನು ಅಭ್ಯಾಸಿಸಿ, ತನ್ನ ದುರಾಚಾರ ಕಗಳಿಗೆ ಒಳಬೀಳದೆ ಬದುಕಿದ ಪುರುಷನು ಈ ಬಿನ್ನಹವನ್ನು ಮಾಡಬೇಕೇ! ಎಂದು ಯಾರಾದರೂ ಪ್ರಶ್ನಿಸಬಹುದು. ಇದಕ್ಕೆ ನಾವ ಹೇಳುವದೇನಂದರೆ ಲೋಕದಲ್ಲಿ ಯಾವನು ಅತ್ಯಂತ ಪರಿಶುದ್ಧನಾಗಿರುತ್ತಾನೇ! ಅಂಥವನೇ ದೇವರ ಧರ್ಮಸೂತ್ರಗಳು ವಿಧಿಸುವ ಮಹಾ ಪವಿತ್ರವಾದ ಮತ್ತು ಮಹೋನ್ನತವಾದ ಕಟ್ಟಳೆಗಳನ್ನು ನೋಡಿ, ಅವುಗಳಿಗನುಸರಿಸುವ ಸ್ವಂತ ನಡತೆಗೆ ಇರುವ ಅಂತರವಾದ ವ್ಯತ್ಯಾಸವನ್ನು ಗ್ರಹಿಸಿ, ತನ್ನಷ್ಟು ಪಾಪಿಷ್ಠರೇ ಯಾರೂ ಇಲ್ಲವೆಂದು ಅತ್ಯಂತ ವಿನೀತನಾಗಿ ಒಪ್ಪಿಕೊಳ್ಳುತ್ತಾರೆ. ಸರಿಯೆಂದು ತಿಳಿದಿರುವ ಕಾರ್ಯಗಳನ್ನು ನಡತೆಯೇ ಮಾಡತಕ್ಕಷ್ಟು ಪವಿತ್ರಶಕ್ತಿಯನ್ನು ಹೊಂದಿರುವ ಮನುಷ್ಯರು ಭೂಲೋಕದಲ್ಲಿ ಕೆಲವರಾದರೂ ಇದ್ದಾರೆಂದು ಸಂಶಯವಿಲ್ಲದೆ ನಂಬಬಹುದು. ಇವರಾದರೂ ಅರಿಯದಂತೆ ಪಾಪಮಾಡುವದಿಲ್ಲವೇ? ಅಜ್ಞಾನದಿಂದ ಪಾಪಕೃತ್ಯವನ್ನು ಮಾಡಿದವರು ಪಾಪಕ್ಷಮೆಗೆ ಪ್ರಾರ್ಥನೆ ಮಾಡುವದು ಅವಶ್ಯವಷ್ಟೆ.

೨. ಈ ಬಿನ್ನಹದಲ್ಲಿ ಸೂಚಿಸಿರುವ ಎರಡನೇ ವಿಷಯವಾವುದೆಂದರೆ—ನಮ್ಮ ಪಾಪವು ಕ್ಷಮಿಸಲ್ಪಡಬೇಕಾದರೆ ನಮ್ಮ ಹೃದಯದ ಸ್ಥಿತಿಯೇ ಅದಕ್ಕೆ ಅವಶ್ಯವಾದ ಒಂದು ನಿಬಂಧನೆಯಾಗಿದೆ. ಎಂದರೆ—ನಾವು ಯಾರ ಮೇಲಾದರೂ ಕೋಪವನ್ನಾಗಲಿ ಮತ್ಸರವನ್ನಾಗಲಿ ಇಟ್ಟುಕೊಂಡವರಾಗಿದ್ದರೆ, ನಮ್ಮ ಪಾಪಗಳನ್ನು ದೇವರಿಂದ ಕ್ಷಮಿಸಿಕೊಳ್ಳುವದಕ್ಕೆ ನಾವು ಯೋಗ್ಯರಾಗಿರಲಾರೆವು. ನಾವೇ ಇತರರ ವಿಷಯದಲ್ಲಿ ಕೇವಲ ದಯಾಶಾಲಿಗಳಾಗಿದ್ದರೆ ಹೊರತು ಭಗವಂತನಿಂದ ಕ್ಷಮಾಪಣೆಯನ್ನು ಬೇಡಿಕೊಳ್ಳುವದಕ್ಕೆ ಧೈರ್ಯಗೊಳ್ಳಲಾರೆವು. ಇದನ್ನು ಯೇಸುಸ್ವಾಮಿಯು ಇಬ್ಬರು ಸಾಲಗಾರರ ಸಾಮ್ಯವನ್ನು ಹೇಳಿ ಬೋಧಿಸಿದ್ದಾನೆ. ಆ ಸಾಮ್ಯವನ್ನು ಇಲ್ಲಿ ಉದಾಹರಿಸುತ್ತೇವೆ. ಇಬ್ಬರು ಸೇವಕರಿದ್ದರಂತೆ. ಇವರೊಳಗೆ ಒಬ್ಬನು ಯಜಮಾನನಿಗೆ ಅಪಾರವಾದ ಹಣವನ್ನು ಸಾಲವಾಗಿ ಕೊಡಬೇಕಾಗಿದ್ದಿತು. ಇವನು ಇಷ್ಟು ಸಾಲವನ್ನೂ ಕೊಟ್ಟು ತೀರಿಸುವದು ಅಸಾಧ್ಯವಾದುದರಿಂದ ಯಜಮಾನನು ಅವನ ಮೇಲೆ ಕರುಣೆಯಿಟ್ಟು ಸಾಲವನ್ನೆಲ್ಲಾ ಕ್ಷಮಿಸಿಬಿಟ್ಟನು. ತರುವಾಯ ಈ ಆಳು ಯಜಮಾನನ ಬಳಿಯಿಂದ ಆಚೆಗೆ ಹೋದ ಕೂಡಲೆ ತನಗೆ ಅತ್ಯಲ್ಪ ದ್ರವ್ಯವನ್ನು ಸಾಲವಾಗಿ ಕೊಡಬೇಕಾಗಿದ್ದ ಒಬ್ಬ ಆಳನ್ನು ಕಂಡು—ಸಾಲವನ್ನು ತೀರಿಸುವದಕ್ಕೆ ಸ್ವಲ್ಪ ಸಮಯವನ್ನು ಕೇಳಿಕೊಂಡರೂ ಒಪ್ಪದೆ ಸೆರೆಮನೆಯಲ್ಲಿ ಇರಿಸಿದನು. ಈ ಪ್ರಕಾರ ಈ ಆಳಿನ ದುರ್ನಡತೆಯನ್ನು ಯಜಮಾನನು ಕೇಳಿ, ಅವನನ್ನು ತನ್ನ ಸನ್ನಿಧಾನಕ್ಕೆ ಕರೆಯಿಸಿಕೊಂಡು, ಬಹು ಕಠಿಣವಾದ ಶಿಕ್ಷೆಯನ್ನು ಮಾಡಿಸಿದನು. ಈ ಸಾಮ್ಯದ ಅಭಿಪ್ರಾಯವು ಸಕಲರಿಗೂ ಪರಿಷ್ಕಾರವಾಗಿ ತಿಳಿಯುತ್ತದಷ್ಟೆ. ಆ ಯಜಮಾನನು ದೇವರೇ. ನಾವೆಲ್ಲರೂ ದೇವರ ಬಳಿಯಲ್ಲಿ ಕೆಲಸಮಾಡುವ ಜೊತೆಯಾಳುಗಳು. ನಾವು ಭಗವಂತನಿಗೆ ವಿರೋಧವಾಗಿ ಮಾಡಿರುವ ಪಾಪಕೃತ್ಯಗಳನ್ನೂ, ನಮಗೆ ವಿರೋಧವಾಗಿ ಇತರರು ಮಾಡಿರುವ ತಪ್ಪುಗಳನ್ನೂ ಹೋಲಿಸಿ ನೋಡಿಕೊಂಡರೆ ಅಜಗಜಾಂತರವಿರುವದು.

ಅಷ್ಟೇ ಅಲ್ಲ. ನಾವು ಇತರರನ್ನು ಕ್ಷಮಿಸುವ ವಿಷಯದಲ್ಲಿ ಎಷ್ಟು ಮಾತ್ರವೂ ನಿರ್ಣಯಿಸಿಟ್ಟುಕೊಳ್ಳಬಾರದೆಂದು ಸ್ವಾಮಿಯು ಬೋಧಿಸಿದ್ದಾನೆ. ಒಂದಾನೊಂದು ದಿನ ಶಿಷ್ಯರೊಳಗೊಬ್ಬನಾದ ಪೇತ್ರನು ಸ್ವಾಮಿಯನ್ನು ನೋಡಿ—"ಸ್ವಾಮಿ ತಪ್ಪುಮಾಡಿದವರಿಗೆ ಎಷ್ಟುಸಾರಿ ಮನ್ನಿಸಬೇಕು? ಏಳುಸಾರಿ ಕ್ಷಮಿಸಿದರೆ ಸಾಕೋ?" ಎಂದು ಕೇಳಲು, ಸ್ವಾಮಿಯು ಪ್ರತ್ಯುತ್ತರವಾಗಿ—"ಏಳೆಪ್ಪತ್ತು ಸಾರಿ" ಎಂದರೆ ಎಣಿಕೆಯಿಲ್ಲದಷ್ಟು ಸಾರಿ ಎಂಬುದಾಗಿ ಅಪ್ಪಣೆ ಕೊಟ್ಟನು.

ಪ್ರಭುವು ಹೇಳಿಕೊಟ್ಟ ಈ ಪ್ರಾರ್ಥನೆಯನ್ನು ಭಾಷಾಂತರ ಮಾಡಿ ಬರೆಯುವಾಗ ಮತ್ತಾಯನ ಸುವಾರ್ತೆಯಲ್ಲಿರುವುದಕ್ಕೂ ಲೂಕನ ಸುವಾರ್ತೆಯಲ್ಲಿರುವುದಕ್ಕೂ ವ್ಯತ್ಯಾಸವೇನಿದೆಯೆಂಬುದು ಮೇಲೆ ಉದಾಹರಿಸಿರುವ ವಾಕ್ಯಗಳಿಂದ ಗೊತ್ತಾಗುವುದು. ಲೂಕನು ಹೇಳಿರುವುದನ್ನು ನೋಡಿದರೆ—"ನಾವು ಈಗಲೇ ಕ್ಷಮಿಸುತ್ತಿದ್ದೇವೆ; ಅಂದರೆ ಕ್ಷಮಿಸುವದು ನಮಗೆ ಅಭ್ಯಾಸವಾಗಿದೆ" ಎಂಬ ಭಾವವು ತೋರುವುದು. ಮತ್ತಾಯನು ಬರೆದಿರುವುದನ್ನು ನೋಡಿದರೆ—"ನಾವು ಕ್ಷಮಿಸಿದ್ದೇವೆ" ಅಂದರೆ "ಈ ಪ್ರಾರ್ಥನಾಸ್ಥಾನಕ್ಕೆ ಬರುವದಕ್ಕಿಂತ ಮುಂಚೆಯೇ ಕ್ಷಮಿಸಿದ್ದೇವೆ" ಎಂಬ ತಾತ್ಪರ್ಯವು ಬರುವದು. ಆದರೆ ಇವೆರಡು ವಿಧಗಳಲ್ಲಿಯೂ ಪ್ರಾರ್ಥನೆಯ ವಿಷಯ ಸ್ವಾಮಿಯು ಬೋಧಿಸಬೇಕಾದ ಅಂಶವು ಬದಲಾವಣೆಯೇನೂ ಆಗುವದಿಲ್ಲ. ಎರಡರ ಅಭಿಪ್ರಾಯವೂ ಒಂದೇ. ಅದೇನೆಂಬುದು ಸುವಾರ್ತೆಗಳ ಇತರ ಭಾಗಗಳಲ್ಲಿ ಸೂಚಿಸಲ್ಪಟ್ಟಿದೆ ಹೇಗಂದರೆ—"ನೀವು ಪ್ರಾರ್ಥನೆ ಮಾಡುತ್ತಾ ನಿಂತಿರುವಾಗಲೆಲ್ಲಾ ನಿಮಗೆ ಯಾರ ಮೇಲೆ ಏನಾದರೂ ವಿರೋಧವಿದ್ದರೆ, ಅದನ್ನು ಅವನಿಗೆ ಕ್ಷಮಿಸಿಬಿಡಿರಿ; ಕ್ಷಮಿಸಿಬಿಟ್ಟರೆ, ಪರಲೋಕದಲ್ಲಿರುವ ನಿಮ್ಮ ತಂದೆಯು ನಿಮ್ಮ ತಪ್ಪುಗಳನ್ನು ನಿಮಗೆ ಕ್ಷಮಿಸುವನು" ಎಂಬುದಾಗಿ ಮಾರ್ಕ ೧೧: ೨೫ ರಲ್ಲಿಯೂ, "ನೀವು ಜನರ ತಪ್ಪುಗಳನ್ನು ಕ್ಷಮಿಸಿದರೆ, ಪರಲೋಕದಲ್ಲಿರುವ ನಿಮ್ಮ ತಂದೆಯು ನಿಮ್ಮ ತಪ್ಪುಗಳನ್ನು ಕ್ಷಮಿಸುವನು. ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದೆ ಹೋದರೆ, ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವದಿಲ್ಲ" ಎಂದು ಮತ್ತಾ. ೬: ೧೪, ೧೫ ರಲ್ಲಿಯೂ ಸ್ವಾಮಿಯ ಬೋಧನೆಯನ್ನು ಪರಿಷ್ಕಾರವಾಗಿ ತಿಳಿಯಪಡಿಸಿದೆ.

ಆದರೆ ಕೆಲವರು—ಮನ್ನಿಸುವ ಗುಣವನ್ನು ಹೊಂದುವದು ಹ್ಯಾಗೆ? ಕೇಡು ಮಾಡಿದವರನ್ನು ಪ್ರತಿಯಾಗಿ ಹಗೆ ಮಾಡುವದು ಮನುಷ್ಯನಿಗೆ ಸ್ವಭಾವ ಎಂದು ಆಕ್ಷೇಪಿಸಬಹುದು. ತಮಗೆ ವಿರೋಧವಾಗಿ ತಪ್ಪು ಮಾಡಿದವರಿಗೆ ಕ್ಷಮಾಪಣೆಯನ್ನು ಕೊಡುವದು ಕೆಲವರಿಗೆ ಅಸಾಧ್ಯವಾಗಿಯೇ ತೋರುವದು. ಆದರೆ ತನ್ನ ಸ್ವಂತ ತಪ್ಪುಗಳು ಎಷ್ಟು ಅಗಣಿತವಾಗಿದೆಯೆಂದೂ ಅವುಗಳನ್ನು ಕ್ಷಮಿಸುವ ಭಗವಂತನ ಪ್ರೀತಿಯು ಎಷ್ಟು ಅಪಾರವಾಗಿದೆಯೆಂದೂ ಯಾವಾತನು ಗ್ರಹಿಸುತ್ತಾನೋ, ಮತ್ತು ಕ್ರಿಸ್ತಸ್ವಾಮಿಯ ಮಾದರಿಯನ್ನು ಯಾವಾತನು ಚೆನ್ನಾಗಿ ಗೊತ್ತುಮಾಡಿಕೊಂಡಿರುತ್ತಾನೋ ಆತನು ಇತರರ ತಪ್ಪುಗಳನ್ನು ಮನ್ನಿಸದೆ ಇರಲಾರನೆಂದು ನಾವು ಹೇಳುತ್ತೇವೆ. ಶ್ರೀ ಪೌಲನು ಎಫೆಸದಲ್ಲಿದ್ದ ಕ್ರಿಸ್ತಭಕ್ತರಿಗೆ—"ದೇವರು ನಿಮಗೆ ಕ್ರಿಸ್ತನಲ್ಲಿ ಕ್ಷಮಿಸಿದಂತೆಯೇ ನೀವು ಒಬ್ಬರಿಗೊಬ್ಬರು ಕ್ಷಮಿಸಿರಿ" ಎಂದೂ, ಕೊಲೊಸ್ಸೆಯಲ್ಲಿದ್ದವರಿಗೆ—"ನಿಮ್ಮೊಳಗೆ ಯಾವನ ಮೇಲಾಗಲಿ ತಪ್ಪು ಹೊರಿಸುವದಕ್ಕೆ ಕಾರಣವಿದ್ದರೂ ಕರ್ತನು ನಿಮಗೆ ಮಾಡಿದ ಪ್ರಕಾರ ನೀವು ಒಬ್ಬರನ್ನೊಬ್ಬರು ಕ್ಷಮಿಸಿರಿ" ಎಂದೂ ಅಪ್ಪಣೆ ಕೊಟ್ಟನು.

ಶ್ರೀ ಪೌಲನ ಒಡೆಯನೂ ನಮ್ಮ ಪಾಪದ ನಿಮಿತ್ತವಾಗಿ ಪ್ರಾಣದಾನ ಮಾಡಿದವನೂ ಆದ ಯೇಸುಸ್ವಾಮಿಯು ನಮಗೆ ಪಾಪಕ್ಷಮೆಯನ್ನು ಅವಶ್ಯವೆಂಬುದನ್ನು ಬೋಧಿಸಿದ್ದಾನೆ. ಇಂಥ ಪ್ರಭುವಿನ ಅಪ್ಪಣೆಯನ್ನು ವಿಚಾರಿಸದೆ ಯಾರಿಗೂ ಏನನ್ನು ಬರಲಾರದು. ಶಿಲುಬೆಯಲ್ಲಿ ಆ ಸ್ವಾಮಿಯು ತನ್ನನ್ನು ಕೊಂದು ಹಾಕಿದ ಶತ್ರುಗಳ ವಿಷಯದಲ್ಲಿ—"ತಂದೆಯೇ, ಇವರನ್ನು ಕ್ಷಮಿಸು" ಎಂದು ಪ್ರಾರ್ಥಿಸಿದ್ದನ್ನು ನೋಡುವಲ್ಲಿ ಹಗೆತನದಿಂದ ಕಲ್ಲಾಗಿರುವ ಎಂಥ ಹೃದಯವಾದರೂ ಕರಗಿ ನಾವೂ ಕ್ಷಮಿಸಲ್ಪಡುವದಕ್ಕೆ ಯೋಗ್ಯರಾಗಬೇಕೆಂದು ಆಶಿಸುವಂತೆ ಪ್ರೇರಿಸದಿರುವುದೇ?

---

## ಬಾತ್ಮೀದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬುದಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಪ್ರಜಾಹಿತೈಷಿ—ಮಧುಗಿರಿ; ಒಬ್ಬನೊಬ್ಬ ಪಟೇಲ್—ತೀರ್ಥಹಳ್ಳಿ; ಗ್ರಾಮಾಭಿಮಾನಿ—ಕಂಟೋನ್ಮೆಂಟ್, ಸೀಗೆಗೌಡನಮಠ ಜಾತ್ರೆ, ನಾಯಕನಹಟ್ಟಿ—ಇವರ ಲೇಖನಗಳಿಗೆ ಸ್ಥಳ ದೊರೆಯಲಾರದು.

ಮೋಘನಾದ, ಆದವಾನಿ—ಈ ಬಾತ್ಮಿಗೆ ಈ ಪತ್ರಿಕೆಯಲ್ಲಿ ಅವಕಾಶ ಸಿಕ್ಕಲಾರದೆಂದು ವಿಷಾದಿಸುತ್ತೇವೆ. ಸೂಳೆಯರ ನಾಟ್ಯಕ್ಕೆ ಪ್ರೋತ್ಸಾಹ ಕೊಡತಕ್ಕವರು ಕಲೆಕ್ಟರಾಗಲಿ, ಜಾಯಿಂಟಾಗಲಿ, ಎಂಥವರೇ ಆಗಲಿ ಯೋಗ್ಯವಾಗಿರಲಾರರೆಂದೂ. ಸಾನಿಯರ ಸನಮಾನ ಮಾಡತಕ್ಕ ಜನರ ಯೋಗ್ಯತಾಪಕ್ಷವು ಉತ್ತಮವೆನಿಸಿಕೊಳ್ಳಲಾರದೆಂದೂ ನಾವು ನಂಬಿದ್ದೇವೆ.

---

## ಕರೆಸ್‌ಪಾಂಡೆನ್ಸ್.

### ಕಳುವು ಪತ್ತೆ ಇರದದ್ದು.

ಅಯ್ಯಾ,

ತಮ್ಮ ೧೯೦೩ನೆ ನವಂಬರು ೧೨ನೆ ವೃತ್ತಾಂತ ಪತ್ರಿಕೆಯ ೩ ಪೇಜಿನ "ಬಳಿಯೇರದ ವೃತ್ತಾಂತಗಳು" ಎಂಬುವದರ ೪ನೇ ಪ್ಯಾರದಲ್ಲಿ ನೆಲಮಂಗಲ ತಾಲ್ಲೂಕು ಚಂದ್ರಗಾನಹಳ್ಳಿ ಕೇಳ್ಮೆ ಮಂಟಪದಲ್ಲಿ ನಾಗ ಮುನಿಯಪ್ಪನವರು ವಾಸಮಾಡಿಕೊಂಡಿರುವಲ್ಲಿ ಅಷ್ಟು ಬಾಕಿ ೧,೨೦೦ ರೂಪಾಯಿಗಳ ನಗನಾಣ್ಯಗಳು ಕಳುವಾಗಿರುವದು ತಿಳಿದುಬಂದಿದೆ ಎಂಬುವ ಸಂಗತಿಯಲ್ಲಿ—

ಈ ಕೇಸನ್ನು ನೆಲಮಂಗಲ ತಾಲ್ಲೂಕು ಅಸ್ಟಿಂಗ್ ಪೊಲೀಸ್ ದಫೇದಾರರು ಚಿಕ್ಕಯ್ಯನೆಂಬುವರು ಬೆಂಗಳೂರು ಡಿಸ್ಟ್ರಿಕ್ಟ್ ನಕಾನಹಳ್ಳಿ ತಾಲ್ಲೂಕು ಮುದುಮಾರಿ ಹೋಬಳಿಯಲ್ಲಿ ಪತ್ತೆ ಮಾಡಿ ಮಾಲು ಮತ್ತು ಆಸಾಮಿ ಸಹಿತವಾಗಿ ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರವರಲ್ಲಿ ಹಾಜರ್‌ಪಡಿಸಿದರು. ನೆಲಮಂಗಲ ತಾಲ್ಲೂಕು ಚಂದ್ರಗಾನಹಳ್ಳಿ ಗಾಣಕಾನಹಳ್ಳಿ ತಾಲ್ಲೂಕು ಚಿಕ್ಕ ಮುದುಮಾರಿಗೂ ೩೦ ಮೈಲಿ ಫಾಸಲೆ ಇರುತ್ತೆಯಾಗಿ ಆ ಯಾಸದಿಂದ ಈ ಮೊಕದ್ದಮೆ ಹಿಡಿದ ವಿಚಾರವನ್ನೂ, ಇವರ ಸಾಮರ್ಥ್ಯಕ್ಕೆ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಇವರಿಗೆ ಬಹುಮಾನ ಕೊಟ್ಟರೆಂದು ನಂಬುತ್ತೇವೆಂದೂ ತಮ್ಮ ಪತ್ರಿಕೆಯಲ್ಲಿ ಒಂದು ಸ್ಥಳ ದಯಮಾಡಿ ಪ್ರಸಿದ್ಧಪಡಿಸಬೇಕಾಗಿ ಪ್ರಾರ್ಥನೆ.

ಬಿ. ರಾಮರಾವ್.

---

### ಸಂಗೀತವಿದ್ಯೆ—ವಿಜ್ಞಾಪನಾ.

ಅಯ್ಯಾ,

ಸಂಗೀತ ವಿದ್ಯವಾದ ನಾದವಿದ್ಯವು ೪ನೆ ಗಾಂಧರ್ವವೇದವಾಗಿಯ, ವೇದಾಂತ ಸಾರವು ಶೃಂಗಾರ ರಸವು ಉಳ್ಳದ್ದಾಗಿಯೂ ಇದರಲ್ಲಿ ಸುಖವು ಪರದಲ್ಲಿ ಮೋಕ್ಷವು ಕೊಡುವಂಥಾದ್ದಾಗಿಯು ಮನೋವ್ಯಥೆಯೆಂಬ ರೋಗಕ್ಕೆ ಔಷಧವಾಗಿಯೂ ಸರ್ವ ಜನಾನಂದಕರವಾದ ಗಾನವಿದ್ಯವೆಂದು ಸ್ಮೃತಿವಚನಗಳು ಇರುವದಲ್ಲದೆ ಅನೇಕ ಜನಗಳಿಗೆ ಅನುಭವಸಿದ್ಧವಾಗಿ ಇದೆ. ಈ ವಿದ್ಯೆ ಕಲಿಯುವ ಜನರೇ ಜನಗಳಲ್ಲಿ ಇದರಕ್ಕೆ ಮಾನ್ಯತೆ ಹೋಗಿ, ನಾಗರಿಕತೆಯೂ ಅದರ ವೃದ್ಧಿಯನ್ನೂ ನಾಡೊಳಗೆ ಸಹ ತಿಳಿಯುತ್ತೆ. ಇಂಥಾ ಉತ್ತಮವಾದ ವಿದ್ಯೆಗೆ ಇತರ ದೇಶದಲ್ಲಿ ಇರತಕ್ಕ ಗೌರವವೂ ಘನತೆಯೂ ಅಭಿವೃದ್ಧಿಯೂ ನಮ್ಮ ದೇಶದಲ್ಲಿ ಇಲ್ಲದೆ ಇರುವ ಸಂಗತಿಯನ್ನು ಈ ಸಲದ ಪ್ರಜಾಪ್ರತಿನಿಧಿ ಸಭೆಯಲ್ಲಿ ಯಾವ ಮೆಂಬರೂ ನಮ್ಮ ಮಹಾ ಪ್ರಭುಗಳ ಸನ್ನಿಧಾನದಲ್ಲಿ ವಿಜ್ಞಾಪನೆ ಮಾಡದಿಲ್ಲವಾಗಿ ನಾನು ಹೇಳಲಾಗಿ ಈ ವಿದ್ಯೆ ಕಲಿತಿರತಕ್ಕ ನಮ್ಮ ದೇಶೀಯರಾದ ಅನೇಕರು ಈ ವಿದ್ಯೆಯಿಂದ ಜೀವನ ಮಾಡುವುದಕ್ಕೆ ಜನಗಳೂ ಸಹ ತುಂಬಾ ವಿಷಾದಪಡಬೇಕಾಗಿದೆ. ಈಗ ಎಲ್ಲಾ ಕುಶಲವಿದ್ಯೆಗಳಿಗೂ ಪೂರ್ಣವಾಗಿ ಇರುವ ಕೈಗಾರಿಕೆ ಪಾಠಶಾಲೆಯಂತೆ ಈ ವಿದ್ಯೆಯಿಂದ ಜೀವನ ಮಾಡತಕ್ಕವರಿಗೂ, ಇತರ ಜನಗಳಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಸಂಗೀತ ಪಾಠಶಾಲೆ ಏರ್ಪಡಿಸಿ ಕೇಳುವದಕ್ಕೆ ಯೋಗ್ಯರಾದ ಉಪಾಧ್ಯಾಯರನ್ನು ನೇಮಿಸಿ ಶ್ಲಾಘ್ಯವಾದ ಗಾನವಿದ್ಯವನ್ನು ನಮ್ಮ ದೇಶದಲ್ಲಿ ಅಭಿವೃದ್ಧಿಯಾಗುವಂತೆಯೂ, ಈ ವಿದ್ಯೆ ಕಲಿತಿರತಕ್ಕವರಿಗೆ ಗೌರವವಾದ ಜೀವನವಾಗುವಂತೆಯೂ, ಮಾಡಕೊಟ್ಟರೆ ಬಹಳಷ್ಟಾಗಿ ಈ ವಿದ್ಯೆಯಿಂದ ಜೀವನ ಮಾಡತಕ್ಕವರಿಗೆ ಅನುಕೂಲವಾಗಿಯೂ ಆಗುತ್ತೆಯಾಗಿ ಈ ವಿಷಯವನ್ನು ನಮ್ಮ ಮಹಾಪ್ರಭುಗಳವರೂ ನಮ್ಮ ಶ್ರೀಮಂತರಾದ ದಿವಾನ್ ಸಾಹೇಬರವರೂ ಈ ವಿದ್ಯೆ ಚಿತ್ತಕ್ಕೆ ತರಬೇಕೆಂದು ಪ್ರಾರ್ಥಿಸುತ್ತೇನೆ.

ಕೆ. ಸಂಜೀವಯ್ಯ

[ಬಾತ್ಮೀದಾರರು ಬರೆದಿರುವ ವಿಷಯವು ಈ ಕಾಲದಲ್ಲಿ ಅಷ್ಟು ಅವಶ್ಯವಾಗಿ ತೋರುವದಿಲ್ಲ. ಸಂಗೀತ ವಿದ್ಯೆಯು ಪ್ರೋತ್ಸಾಹವಿಲ್ಲದೆ ಮಡಿದಿರುವುದಕ್ಕೆ ಸಂಶಯವೇನೂ ಇಲ್ಲ. ಈ ವಿಷಯದಲ್ಲಿ ಪ್ರಜೆಗಳೇ ಪ್ರೋತ್ಸಾಹಕ್ಕೆ ಕಾರಣಭೂತರಾಗುವುದು ಅವಶ್ಯವು.—ಎಡಿ.]

---

### ತಾಲ್ಲೂಕು ಸರ್ವೇಯರುಗಳ ಅಹವಾಲ್.

ಅಯ್ಯಾ,

ಮೈಸೂರು ಸೀಮೆಯಲ್ಲಿ ಆಯಾಯ ತಾಲ್ಲೂಕುಗಳಿಂದ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿಗೆ ಆಗಲಿ ಅಲ್ಲಿಂದ ಬೆಂಗಳೂರಿಗೆ ಆಗಲಿ ಸರ್ಕಾರ್ ಕಾರುಬಾರಿನ ಬಗ್ಗೆ ಹೋಗಬೇಕಾದರೆ ಮೈಲಿಗೆ ೪ ಆಣೆಯಂತೆ ಮತ್ತು ದಿನಕ್ಕೆ ೪ ಆಣೆಯಂತೆ ಭತ್ಯವು ಸಹಾ ಕೊಡುವ ಅನೇಕ ದಿವಸಗಳಿಂದಲೂ ಗವರ್ನಮೆಂಟಿನವರು ದಯಮಾಡುತ್ತಾ ಇರುತ್ತಾರೆ. ಹೀಗೆ ಸರ್ವೇಯರವರು ಕೊಟ್ಟರೂ ಡಿಪಾರ್ಟಮೆಂಟಿನಲ್ಲಿ ಸಂಬಳಾನುಸಾರ ೧—೨ ತಿಂಗಳು ಸಿಲ್ಲಬೇಕಾಗುತ್ತೆ. ಇಂಥಾ ಸಂದರ್ಭದಲ್ಲಿ ಅಲ್ಲಿ ಅನ್ಯಕ್ಕಾಗಿ ಹೋಟಲಿಗೆ ದಿನಂಪ್ರತಿ ೩ ಆಣೆಯಂತೆ ತೆರುತ್ತಾರೆ. ಗವರ್ನಮೆಂಟಿನವರು ದಿನ ೧ಕ್ಕೆ ೩ ಆಣೆ ಕೊಟ್ಟರೆ ಅವರುಗಳ ಕೈಯಿಂದ ಮುಂಗಡವು ಜಾಸ್ತಿಯಾಗುತ್ತೆ. ಅಂತು ತಿಂಗಳು ೧ಕ್ಕೆ ೫—೧೦—೦ ಯಂತೆ ತಿಂಗಳಿಗೆ ೫—೬ ತಿಂಗಳಿಗೆ ೩೦ ರೂಪಾಯಿಗಳು ಕೈಯಿಂದ ತೆರಬೇಕಾಗುತ್ತೆ. ಹೀಗಾದರೂ ಬಂಡಿಬಾಡಿಗೆ ತೆಗೆದುಕೊಂಡು ಹೆಡ್ಡುಮುಂಗಡ ಪರ್ತಕಡಿದ ಸಾಲ ಮಾಡಿ ತೆಗೆದುಕೊಂಡು ಹೋಗಿ ಉಪಯೋಗವಾಗುವ ಟ್ರಿಪ್ ಮೇಲೆ ಸಾದರಾಗಿ ಮೈಲೇಜು ಸಿಲ್ಲದ್ದು ಕಳುಹಿಸಿದರೆ ಪಡೆಯಬಲ್ಲ. ಮರುವಾಂತರಕ್ಕೆ ಯಾವುದೂ ಸ್ಯಾಂಕ್ಷನ್ ಆಗಿ ಬರುವದೇ ಇಲ್ಲ. ನಾಳೆಯಾದ ನಂತರ ರೂ. ತಲಬು ಸರಿಯುವದು ಕ್ರಿ ತಿ ಮಾಡಿಯುಳ್ಳದ್ದು ಸಂಬಳದಲ್ಲಿ ಮೈಲೇಜು ಬಿಲ್ ಕಳುಹಿಸಿದರು.

ಕವಸಕ್ಕೆ ಸರಿಯಾಗಿ ಸ್ಯಾಂಕ್ಷನ್ ಆಗಿ ಬರುತ್ತೆ. ಇದು ಬಡವರ ಸಂಸಾರಗಳ ದುರಾದೃಷ್ಟವೆಂದು ಎಣಿಸಬೇಕಾಗಿದೆ. ಈ ರೀತಿಯಾಗಿ ಬಡ ಸಂಸಾರರು ತೊಂದರೆ ಪಡುತ್ತಾ ಇದ್ದರೂ ಕೆಲವು ಅತ್ಯುತ್ತಮರಾದ ಚಿಟ್ಟಿ ಕಮಿಷನರುಗಳು "ಪಾಠಶಾಲೆ ಹೊಸ ಮೇಲೆ ಎಂದು" ಬಡವರ ಮೇಲೆ ದೃಷ್ಟಿಯಿಟ್ಟು ಮೊದಲೇ ಕಷ್ಟದಲ್ಲಿದ್ದ ಮ್ಯುಲೇಜ್ ಅವಶ್ಯಕವಿಲ್ಲವೆಂತಲೂ ಮ್ಯುಲಿಗೆ ಒಂದು ಅಥವಾ ಎರಡು ದಿನಗಳಂತೆ ಬಿಲ್ ಕಳುಹಿಸಬೇಕೆಂತಲೂ ತಾಲ್ಲೂಕು ಆಫೀಸರ್‌ರಿಗೆ ಹುಕುಂ ಕೊಟ್ಟು ಬಿಲ್ಲುಗಳನ್ನು ತರಿಸಿಕೊಂಡು ಇದುವರೆಂತಲೂ ಬಿಲ್‌ಗಳು ಸಹಾ ತರಿಸಿಕೊಂಡು ೯-೧೦ ತಿಂಗಳು ಆಗಿದ್ದು ಯಾವ ಮೊಬಲಗೂ ಸಲ್ಲದೇ ಸಾಲಗಾರರಿಂದ ಪೆಟ್ಟು ತಿನ್ನುತ್ತಾ ಇರುತ್ತಾರೆ. ದೊಡ್ಡವರ ಕಣ್ಣು ಈ ಬಡ ಸಂಸಾರರುಗಳ ಮೇಲೆ ಬೀಳುವುದಕ್ಕಿಂತಲೂ ನೂರಾರು ರೂ. ಸಂಬಳ ತೆಗೆದುಕೊಳ್ಳುವರ ಮೇಲಾದರೂ ಬಿದ್ದಿದ್ದ ಪಕ್ಷದಲ್ಲಿ ಗವರ್ನಮೆಂಟಿಗೆ ಸಾವಿರಾರು ರೂಪಾಯಿಗಳಾದರೂ ಲಾಭದಾಯಕವಾಗುತ್ತಾ ಇತ್ತು. ಇವರುಗಳಿಗೆ ದೇವರು ಇಂಥಾ ಕನಿಕರವಿಲ್ಲದ ಬುದ್ಧಿ ಕೊಟ್ಟಿರುವುದು ಬಡವರ ದುರಾದೃಷ್ಟವೇ ಹೊರತು ಮತ್ತೆ ಬೇರೆ ಇಲ್ಲ. ಅನೇಕ ವರುಷಗಳಿಂದ ಗವರ್ನಮೆಂಟಿನವರು ಬಡವರ ಮೇಲೆ ದಯೆಯನ್ನು ಪರಾಂಬರಿಸಿ ಮ್ಯುಲೇಜು ಪಾವತಿ ಮಾಡುತ್ತಾ ಇದ್ದದ್ದನ್ನು ಈಗ ಮಾತ್ರ ಚಿಟ್ಟಿ ಕಮಿಷನರವರು ತಪ್ಪಿಸಿ ಇರುವದು ಸಂಸಾರರ ದುರಾದೃಷ್ಟವೋ ಅಥವಾ ಗವರ್ನಮೆಂಟಿಗೆ ಹಾನಿಯನ್ನು ತೋರಿಸಿ ತಾವು ಒಳ್ಳೇ ಹೆಸರು ಪಡೆಯಬೇಕೆಂತ ಚಿಟ್ಟಿ ಕಮಿಷನರುಗಳು ಮಾಡುತ್ತಾರೋ ದೇವರಿಗೇನೆ ತಿಳಿಯಬೇಕು. ಈಗಲೂ ನಮ್ಮ ಘನವೊಂದಿದ ದಿವಾನ್ ಸಾಹೇಬರವರು ಈ ವಿಷಯಗಳನ್ನು ಲಕ್ಷ್ಯಕ್ಕೆ ತೆಗೆದುಕೊಂಡು ಚಿಟ್ಟಿ ಕಮಿಷನರುಗಳು ಮಾಡಿರುವ ಆರ್ಡರಿಗೆ ಗಮನಕೊಟ್ಟು ಪೂರ್ವ ಪದ್ಧತಿ ಸಲ್ಲುತ್ತಾ ಇದ್ದಂತೆಯೇ ಮ್ಯುಲೇಜ್ ಕೊಡಿಸಲು ನ್ಯಾಯವಾಗಿರುತ್ತೆಂದು ಚಿಟ್ಟಿ ಕಮಿಷನರುಗಳಿಗೆ ಹುಕುಂ ದಯಪಾಲಿಸಿದರೆ ಬಡ [illegible] ಸಂಸಾರರುಗಳು ಜೀವನ ಮಾಡಲು ಅವಕಾಶವಾಗುತ್ತೆಂದು ಕೇಳಿಕೊಳ್ಳುತ್ತೇನೆ.

ಪ್ರಜಾಹಿತೈಷಿ.

---

## ಶಿವನಸಮುದ್ರದ ಜಹಗೀರು ವಿಚಾರವು.

ಅಯ್ಯಾ,

ಶಿವನಸಮುದ್ರಂ ಜಹಗೀರ್‌ದಾರ್ ರಾಮಸ್ವಾಮಿ ಮೊದಲ್ಯಾರವರ ಮಕ್ಕಳು ಟಿ. ಆನಂದರಾಯ ಮೊದಲ್ಯಾರ್‌ರು ಮೈನರ್ ಆಗಿದ್ದರಿಂದ ಇವರ ತಾಯಿಯವರು ತಮ್ಮ ಸಹೋದರರಾದ ರಾಜಾ [illegible] ಮೊದಲ್ಯಾರ್ ಎಂಬವರನ್ನು ತಮ್ಮ ಜಹಗೀರ್ ಕಾರುಬಾರಿಗೆ ಉಸ್ತುವಾರಿ ಏಜೆಂಟರನ್ನಾಗಿ ನೇಮಿಸಿ ನಂತರ ಜಹಗೀರ್ ಆದಾಯಗಳನ್ನು ತೋರಿಸುತ್ತಾ ಬಂದರು.

ಈ ಜಹಗೀರಿಗೆ ಸೇರಿದ ಪೂರಿಗಾಲಿ ಮತ್ತು ಕಗ್ಗಲೀಪುರ, ಈ ಎರಡು ಗ್ರಾಮಗಳ ರೈತರು ಜಹಗೀರ್ ಸರ್ಕಾರಕ್ಕೆ ಕೊಡಬೇಕಾದ ಕಂದಾಯಗಳನ್ನು ಸಕಾಲಕ್ಕೆ ಪಾವತಿ ಮಾಡದೇ ಇದ್ದದ್ದಕ್ಕೂ, ಇವರು ಕೊಡದೇ ಇರುವ ಸಬಬು ಇವರ ಮೇಲೆ ಏಜೆಂಟರವರು ಶ್ರೀರಂಗಪಟ್ಟಣದ ಮುನ್ಸಿಫ್ ಕೋರ್ಟಿನಲ್ಲಿ ದಾವಾ ದಾಖಲ್ಮಾಡಿ ಅದರ ಫಲಿತಾಂಶವನ್ನು ಕಂಡತಕ್ಕ ಚಿಹ್ನವನ್ನು ಅನುಭವಿಸತಕ್ಕ ಶಕ್ತಿ ಇಲ್ಲದೇ ಇದ್ದದ್ದರಿಂದಲೂ, ಮತ್ತು ಆ ಗ್ರಾಮಗಳ ರೈತರು ವ್ಯಾಜ್ಯಕೋರರಾಗಿ ನಡೆಯುತ್ತಿದ್ದದರಿಂದಲೂ ಏಜೆಂಟರಿಂದ ನಿರ್ವಹಿಸಲು ಶಕ್ತಿ ಸಾಲದೇ ಇದ್ದದರಿಂದ ಪೂರಿಗಾಲಿ, ಕಗ್ಗಲೀಪುರ, ಈ ಎರಡು ಗ್ರಾಮಗಳನ್ನು ಮೈಸೂರು ಗವರ್ನಮೆಂಟಿಗೆ ಸೇರಿಸಿಕೊಂಡು ಅದರ ಆದಾಯಗಳನ್ನೆಲ್ಲಾ [illegible] ಅದರ ಖರ್ಚು ಕಳೆದು ಬಾಕಿಯನ್ನು ನಮ್ಮ ಜಹಗೀರಿಗೆ ಸಲ್ಲಿಸುತ್ತಾ ಬರಬೇಕೆಂದು ಈ ಎರಡು ಗ್ರಾಮಗಳನ್ನು ಸರ್ಕಾರಕ್ಕೆ ಏಜೆಂಟರವರೇ ವಹಿಸಿದರು. ಈ ಎರಡು ಗ್ರಾಮಗಳನ್ನು ಸರ್ಕಾರಕ್ಕೆ ವಹಿಸುವ ಕಾಲದಲ್ಲಿ ಮೂರು ಸಾವಿರ ಚಿಲ್ಲರೆ ರೂಪಾಯಿಗಳ ಜಮಾ ಬಂದು ಇದ್ದದ್ದು ಸರ್ವೆ ಸೆಟ್ಲು ಆದ ಮೇಲೆ ೧೨ ಸಾವಿರ ಚಿಲ್ಲರೆ ರೂಪಾಯಿಗಳ ಆದಾಯ ಬರುವ ಗ್ರಾಮಗಳಾಗಿರುತ್ತೆ. ಈ ಗ್ರಾಮಗಳ ಹಿಂದಲಿನ ವರುಷದ ಕಂದಾಯದ ಬಾಕಿಯೆಲ್ಲಾ ಸರ್ಕಾರದವರು ಹಣಾದು ಬಿಟ್ಟು ಕೃಪಾಪೂರ್ವಕರಾದ ಮಹಾರಾಜರ ಜಹಗೀರ್ ಉತ್ಪತ್ತಿಯು ಸರ್ಕಾರದಲ್ಲಿ ಶಿಲ್ಕು ನಿಂತಿರುವಲ್ಲಿ ಏಜೆಂಟರವರು ತಾವು ವಹಿಸಿದ ಗ್ರಾಮಗಳನ್ನು ಸರ್ಕಾರದಿಂದ ವಾಪಸು ಬಿಟ್ಟುಕೊಡಬೇಕೆಂದು ಕೇಳಿದ್ದಕ್ಕೆ ಈ ಜಹಗೀರುದಾರ್‌ರಿಗೆ ಈ ಎರಡು ಗ್ರಾಮಗಳ ಮಟ್ಟಿಗೆ ಜಹಗೀರಿ ಕೊಟ್ಟಿದ್ದಲ್ಲ, ಶಿವನಸಮುದ್ರ ರಂಗನಾಥ ದೇವರ ಪಡಿತರ ಸೀಗಾರಾಧನೆಗೆ ಸರ್ಕಾರ ಕೊಟ್ಟಿದ್ದೆಂದು ಸನದಿನಲ್ಲಿ ನಮೂದಿರುತ್ತೆ. ಆದ್ದರಿಂದ ವಾಪಸು ಬರುವದಿಲ್ಲವೆಂದು ಸರ್ಕಾರದ ಜವಾಬು ಆಯಿತೆಂದು ವ್ಯಕ್ತವಾಗುತ್ತೆ. ಈ ಜಹಗೀರಿಗೆ ಏಜೆಂಟರನ್ನಾಗಿ ನೇಮಿಸಿದ್ದರಿಂದ ಜಹಗೀರನ್ನು ಹೀನಸ್ಥಿತಿಗೆ ತಂದಿರುವದಲ್ಲದೆ ಜಹಗೀರ್‌ದಾರ್‌ರಿಗೆ ಜಹಗೀರನ್ನು ಕೈತಪ್ಪಿಸುವದಕ್ಕೆ ಮೂಲಕಾರಣವಾಯಿತು.

ನಂತರ ಜಹಗೀರ್ ಸೇರಿದ ಗ್ರಾಮಗಳ ರೈತರು ತಮ್ಮ [illegible] ಪ್ರಕಾರ ನಡೆಯುವದಿಲ್ಲ. ತಮ್ಮ ಮಾತು ಗಣನೆಗೆ ಬಾರದಿಲ್ಲವೆಂತಲೂ ಏಜೆಂಟರವರು ಆಲೋಚನೆಗೆ ತಂದು ತಾವು ಶಿಥಿಲಪಡಿಸಿರುವ ಜಹಗೀರನ್ನು ಅಭಿವೃದ್ಧಿ ಪಡಿಸುವವರ ಸ್ವೀಕಾರದಿಂದ ಮೇಜಿಸ್ಟ್ರೇಟ್ ಪವರುಳ್ಳ ಅಮಲ್ದಾರ್‌ರನ್ನು ತಂದು ಇಟ್ಟರೆ ತಾವು ಮೇಲ್ವಿಚಾರಣೆಯಾಗಿ ತಮ್ಮ ಕೈಕೆಳಗೆ ಅಮಲ್ದಾರ್‌ರನ್ನ ಇಟ್ಟುಕೊಂಡು ತಮ್ಮ ಇಷ್ಟಪ್ರಕಾರ ಜಹಗೀರ್ ಕಾರ್ಯಗಳನ್ನು ನಡೆಸಬಹುದೆಂದು ಆಲೋಚನ ಮಾಡಿ ಲೇಟ್ ದಿವಾನರವರ ದಿವಸದಲ್ಲಿ ಲೇಟ್ ಕೌನ್ಸಿಲ್ ಸಭಾಪತಿ ಮೊದಲ್ಯಾರ್‌ರವರ ಶಿಫಾರಸಿನಿಂದ ಅಮಲ್ದಾರ್‌ರನ್ನು ಜಹಗೀರಿಗೆ ಕೊಡುವ ಹಾಗೆ ಹುಕುಂ ಆಗಿ ನಂತರ ಟಿ. ಕೃಷ್ಣಸಿಂಗ್ ಯವರು ಇಲ್ಲಿಗೆ ಅಮಲ್ದಾರ್ ಕೆಲಸಕ್ಕೆ ಬರಮಾಡಿಸಿದರು. ನಂತರ ಜಹಗೀರ್ ಆಫೀಸಗಳನ್ನು ಅಮಲ್ದಾರ್ ರವರು ಬಹಳ ಸಲಿಕರಣೆಯಿಂದ ನೋಡಿ ಎಲ್ಲಾ ವಿಷಯದಲ್ಲಿಯೂ ಬಹಳ ಶಕ್ತರಾಗಿ ಜಹಗೀರ್ ಅಭಿವೃದ್ಧಿಸ್ಥಿತಿಯಲ್ಲಿ ತಂದರು. ಮೈನರ್ ಜಹಗೀರ್‌ದಾರ್‌ರನ್ನು ಮೆಜಾರ್ಟಿಗೆ ತಂದು ಅವರ ಪರಿಪೂರ್ಣತೆಯಿಂದ ಜಹಗೀರ್ ಕಾರುಬಾರುಗಳನ್ನು ನಡೆಸಬೇಕೆಂದು ಬಹಳ ಆಸಕ್ತರಾಗಿ ಇದ್ದರು. ಸರ್ಕಾರದ ಮೇಜಿಸ್ಟ್ರೇಟ್ ಅಮಲ್ದಾರ್‌ರವರು ಬಿಟ್ಟ ಇಷ್ಟದಂತೆ ಅಧಿಕಾರ ಮಾಡತಕ್ಕದ್ದು ನ್ಯಾಯವೇ. ಏಜೆಂಟರವರು ತಮ್ಮ ಇಷ್ಟದಂತೆ ಅಮಲ್ದಾರ್‌ರವರು ನಡೆಯುವದಿಲ್ಲವೆಂದು ದುರಾಲೋಚನೆಯಿಂದ ಅಮಲ್ದಾರ್‌ರವರಿಗೂ ಏಜೆಂಟರವರಿಗೂ ಪರಸ್ಪರ ದ್ವೇಷವುಂಟಾಗಿ ಕಾರ್ಯನಿರ್ವಾಹಕ್ಕೆ ಬಾಧಕ ಈ ಜಹಗೀರಿನಲ್ಲಿ ಅಮಲ್ದಾರ್ ಕೆಲಸ ಮಾಡತಕ್ಕದ್ದು ಯೋಗ್ಯವಾದದ್ದಲ್ಲವೆಂದು ಅಮಲ್ದಾರರ ಮನಸ್ಸನ್ನು ಕಂಗೆಡಿಸಿದರು. ನಂತರ ಮೈನರ್ ಜಹಗೀರ್‌ದಾರ್‌ರವರ ತಾಯಿ ಗಾರ್ಡಿಯನ್ ಯವರು ತಮ್ಮಂದಿರಾದ ಏಜೆಂಟರವರ ದುಷ್ಪ್ರೇರಣೆ ಕೇಳಿ ಅಮಲ್ದಾರ್‌ರವರನ್ನ ವಜಾ ಮಾಡಿಸಿ ಮ್ಯಾನೇಜರವರನ್ನ ಕೊಡಬೇಕೆಂದು ಸರ್ಕಾರಕ್ಕೆ ತಿಳಿಯಪಡಿಸಿದರು. ಇವರ ಇಷ್ಟಪ್ರಕಾರ ಸರ್ಕಾರದವರು [illegible] ಅಮಲ್ದಾರ್‌ರನ್ನು ವಜಾ ಮಾಡಿದೆ, ಮ್ಯಾನೇಜರವರನ್ನು ನೇಮಕಮಾಡುತ್ತೆ ಎಂದು ಹುಕ್ಕುಂ ಆಗಿ ನಂತರ ಮಳವಳ್ಳಿ ತಾಲ್ಲೂಕು [illegible] ಅಮಲ್ದಾರ್ ರಾಮಸ್ವಾಮಯ್ಯನವರು ಮ್ಯಾನೇಜರ್ ಕೆಲಸಕ್ಕೆ ಬರಮಾಡಿಸಿದ ಮೇಲೆ ಏಜೆಂಟರವರ ಅಧಿಕಾರಕ್ಕೆಲ್ಲೂ ಪ್ರಖ್ಯಾತಿಯನ್ನು ಹೊಂದಿ ಸ್ವರ್ಗಸ್ಥರಾದರು. ಇವರ ತರುವಾಯ ಮತ್ತೆ ಮ್ಯಾನೇಜರವರನ್ನು ನೇಮಿಸಬಹುದಾಗಿತ್ತು. ಈ ರೀತಿ ನಡೆದ ಏಜೆಂಟರವರು ಮೈಸೂರು ಗವರ್ನಮೆಂಟಿನವರ ಆರ್ಡರಿನಂತೆ ನಡೆದರೆ ತಮಗೆ ಅನ್ಯಾಯ ಮಾಡುತ್ತಾರೆಂದು ಮದ್ರಾಸ್ ಕೋರ್ಟ್ ಆಫ್ ವಾರ್ಡ್ಸ್ ರವರಿಗೆ ಮೈನರ್ ಜಹಗೀರ್‌ದಾರ್‌ರಿಗೆ ಮೈನರ್ ನಿವೃತ್ತಿ ಆಗುವವರೆಗೆ ಅಲ್ಲಿನ ಮ್ಯಾನೇಜಮೆಂಟಿಗೆ ಸೇರಿಸಿಕೊಂಡು ಜಹಗೀರ್ ಆದಾಯಗಳನ್ನು ನಡೆಸಬೇಕೆಂದು ಗಾರ್ಡಿಯನ್ ರವರಿಂದ ಪವರ್ ಆಫ್ ಅಟಾರ್ನಿ ಅಧಿಕಾರ ಪತ್ರಿಕೆಯನ್ನು ಒಪ್ಪಿ ಅದು ಈಗ ಅಲ್ಲಿನ ಅಧಿಕಾರಕ್ಕೆ ಒಳಪಟ್ಟು ಇದೆ. ಕೆ. [illegible] ಯುಸ್ಟ್ರಿಟನ ಮ್ಯಾನೇಜರ್ ಬಂದು ಈ ಜಹಗೀರಿನಲ್ಲಿ ಕೆಲಸ ನೋಡುತ್ತಿದ್ದಾರೆ. ನಮ್ಮ ಮೈಸೂರು ಗವರ್ನಮೆಂಟಿನಲ್ಲಿರುವ [illegible] ಗಳಿಗೆ ಇರತಕ್ಕ ಅಧಿಕಾರವು ಈ ಮ್ಯಾನೇಜರಿಗೆ ಇಲ್ಲ. ಇವರಿಗೆ ಮಾಸಿಕಸ್ಥಾನ ಸಂಬಳ ಮಾತ್ರ ೪೦ ರೂಪಾಯಿ ಸಲ್ಲುತ್ತೆ. [illegible] ಈ ಜಹಗೀರಿನ ಕಂದಾಯದ ಬಾಕಿ ಕೊಡಬೇಕಾದ ರೈತರ ಮೇಲೆ ದ್ಯಾವನ್ನು ಹಾಕಿದ ಬಳಿಕ [illegible] ಮೈಸೂರು ಸರ್ಕಾರದಿಂದ ಇತ್ಯರ್ಥವಾಗಬೇಕೇ ವಿನಹ ಅನ್ಯಥಾ ಇವರಿಂದ ಏನೂ ಆಗಲಾರದು. ಮುಖ್ಯ (ತಿಂಗಳು ತಾ ಕೊಡುವದಲ್ಲದೆ [illegible] ಕೊಡಿಸಿದನೆಂಬ ಗಾದೆಗೆ ಸರಿಯಾಗಿ) ಏಜೆಂಟರವರು ಮಾಡಿದ್ದೀ ಜಹಗೀರನ್ನು ಈಗಿನ ಸ್ಥಿತಿಯಲ್ಲಿ ತಂದದ್ದಲ್ಲದೆ ಪ್ರಜೆಗಳನ್ನು ಕಷ್ಟಕ್ಕೆ ಗುರಿಪಡಿಸಿದ್ದಕ್ಕಾಗಿ ತುಂಬಾ ವಿಷಾದಿಸುತ್ತೇನೆ. ಇಲ್ಲಿ ಜಹಗೀರ್ ರವಿನ್ಯೂ ಇನ್ಸ್‌ಪೆಕ್ಟರ್ ಸುಬ್ರಾಯರವರು ಜಹಗೀರ್ ಆದಾಯಗಳನ್ನು ತಿಳಿದವರಾಗಿ ಜಹಗೀರ್‌ದಾರ್‌ರವರ ಉಪ್ಪು ತಿಂದು ದ್ರೋಹ [illegible] ಯಿಂದಲೂ ನದಿಗೆ [illegible] ರಸ್ತೆ ದುರಸ್ತು ಮಾಡಿಸದ್ದರಿಂದಲೂ ಇಲ್ಲಿನ ಪ್ರಜೆಗಳಿಗೆ ಅಸಮಾಧಾನವಾಗಿರುತ್ತೆ. ಇಲ್ಲಿ , — ದಿವಸದ ಲಾಗಾಯತು [illegible] ಮಳೆ ಬರುವದಿಲ್ಲ. [illegible] ಕೆಲವರು [illegible] ಇರುತ್ತಾರೆ, ಕೆಲವರ [illegible] ಬೆಳೆ [illegible] ಹಾಳಾಗಿ ಹೋಗುತ್ತೆ. ಇಲ್ಲಿನ ಸ್ಕೂಲ ಹೆಡ್ ಮಾಸ್ಟರ್ ಶ್ರೀನಿವಾಸಾಚಾರ್‌ರು ಟೀಚರ್ ಅಸಿಸ್ಟೆಂಟ್ ಮಾಸ್ಟರ್ ಚಿಕ್ಕರಾಮಯ್ಯನವರ ಮೇಲೆ ಪದೇ ಪದೇ ಕಲಹ ಮಾಡುವದರಿಂದ ಹುಡುಗರುಗಳಿಗೆ ಸರಿಯಾಗಿ ವಿದ್ಯಾಭ್ಯಾಸಂಗ ನಡೆಯಲು ಅವಕಾಶವಿಲ್ಲ. ಹೆಡ್ಮಾಸ್ಟರನ್ನು ಬೇರೆ ಸ್ಥಳಕ್ಕೆ ವರ್ಗಾಯಿಸಿ ಉಪಾಧ್ಯಾಯ ಪರೀಕ್ಷೆ ಆಗಿರುವ ಬೇರೆ ಹೆಡ್ಮಾಸ್ಟರನ್ನು ದಯಪಾಲಿಸಿದಲ್ಲಿ ಸರಿಯಾದ ವಿದ್ಯಾಭ್ಯಾಸಂಗ ನಡೆಯಲು ಅನುಕೂಲ. ಇಲ್ಲಿ ಜಹಗೀರ್‌ದಾರ್ ಟಿ. ಆನಂದರಾಯ ಮೊದಲ್ಯಾರ್‌ರವರು ೧೯೦೫ ನೇ ಇಸವಿ ಆಗೀಸ್ಟು ೩ ನೇ ತಾರೀಖಿನಲ್ಲಿ ಮೈನರ್ ನಿವೃತ್ತಿ ಹೊಂದುವದರಿಂದ ಮದ್ರಾಸ್ ಕೋರ್ಟ್ ಆಫ್ ವಾರ್ಡ್ಸ್ ರವರಿಂದ ಅಧಿಕಾರ ಹೊಂದುವದರಿಂದ ಜಹಗೀರ್‌ದಾರ್‌ರವರು ಮೇಲಿನ ಈಗಿನ ಸ್ಥಿತಿಯನ್ನು ನಾಶಪಡಿಸಿ ಉತ್ತಮಸ್ಥಿತಿಗೆ ತರುವರೆಂದು ನಂಬಿರುತ್ತೇನೆ. ಈ ಭಾಗವನ್ನೆಲ್ಲಾ ದಯವಿಟ್ಟು ಪ್ರಕಟಿಸಬೇಕೆಂದು ಪ್ರಾರ್ಥನೆ.

ಯಥಾರ್ಥವಾದಿ.

---

## ಇಂಡಿಯಾ ದೇಶದ ವೃತ್ತಾಂತಗಳು.

ಅಲಹಾಬಾದ್ ಫೈಜಾಬಾದ್ ರೈಲ್ವೆಯಲ್ಲಿ ಫಾಫಾಮವ್ ಎಂಬ ಸ್ಟೇಷನ್‌ನಿಂದ ಜಫರಾಬಾದ್ ಸ್ಟೇಷನ್ ವರೆಗೆ ೫೭ ಮೈಲಿ ದೂರ ರೈಲ್ ರಸ್ತೆ ಹಾಕುವುದಕ್ಕೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ೩೦ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ಹಿಂದುಸ್ಥಾನದ ಯಾವ ಪ್ರಾಂತ್ಯದಲ್ಲೂ ಕ್ಷಾಮದ ಹೆಸರೇ ಇಲ್ಲವಾಯಿತು. ಸರ್ಕಾರದವರ ಪೋಷಣೆಯಲ್ಲಿದ್ದ ಕ್ಷಾಮಪೀಡಿತರೆಲ್ಲಾ ಸುಭಿಕ್ಷವನ್ನು ನೋಡಿ ತಮ್ಮ ತಮ್ಮ ಗ್ರಾಮ ಭೂಮಿಗಳಿಗೆ ಹೋಗಿ ವ್ಯವಸಾಯ ಕಾರ್ಯಗಳಲ್ಲಿ ನಿಂತು ಇರುತ್ತಾರೆ.

ಅಗ್ರಾಪಟ್ಟಣದಲ್ಲಿ ಮೆ॥ ವಿಲ್ಲಿಸ್ ಎಂಬೊಬ್ಬ ಸಾಯಿಬರೂ, ಮೆ॥ ಬೆಡ್ಡಿ ಎಂಬೊಬ್ಬ ಬ್ಯಾರಿಸ್ಟರೂ ಒಂದು ಮೊಕದ್ದಮೆಯಲ್ಲಿ ಸುಳ್ಳು [illegible] ಬರೆಸಿದರೆಂದು ಅವರಿಬ್ಬರನ್ನೂ [illegible] ಸೆಷನ್ಸ್ ಜಡ್ಜರು ದರ್ಯಾಫ್ತು ಮಾಡಿದರು. ಪಂಚಾಯತರ ಅಭಿಪ್ರಾಯದಂತೆ ಮೆ॥ ವಿಲ್ಲಿಸ್ ಯವರಿಗೆ ಖುಲಾಸೆ ಆಯಿತು. ಆದರೆ ಮೆ॥ ಬೆಡ್ಡಿ ಎಂಬ ಬ್ಯಾರಿಸ್ಟರಿಗೆ ಆರುತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ.

❖❖❖❖

ಬಂಗಾಳ ಅಧಿಕೃತ್ಯದ ರೆವೆನ್ಯೂ ಇಲಾಖೆಯ ಸೂಪರಿಂಟೆಂಡೆಂಟಾಗಿದ್ದ ಮೆ॥ ವಾರ್ಸ್‌ಫಾಲ್ ಯವರು ಸರ್ಕಾರದ ಹಣವನ್ನು ದುರುಪಯೋಗ ಮಾಡಿದರೆಂದು ಮೊಕದ್ದಮೆ ಆಗಿ ಅವರಿಗೆ ೬ ವರುಷ ಕಠಿಣಸಜಾವೂ, ೧,೦೦೦ರೂ. ಜುಲ್ಮಾನೆಯೂ ಆಗಿತ್ತು. ಈಚೆಗೆ ಅವರು ಲೆಫ್ಟಿನೆಂಟ್ ಗವರ್ನರಿಗೆ ಅರ್ಜಿ ಬರೆದುಕೊಂಡಿದ್ದರು. ಗವರ್ನರವರು ಶಿಕ್ಷೆಯನ್ನು ೩ ವರುಷ ೬ ತಿಂಗಳಿಗೂ ಜುಲ್ಮಾನೆಯನ್ನು ೧೫೦ ರೂ. ಗೂ ಕಡಿಮೆ ಮಾಡಿದರು.

❖❖❖❖

ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರವದಿಂದುಂಟಾದ ಮರಣ ಸಂಖ್ಯೆಯು ಹಿಂದಿನ ವಾರ ೧೮,೧೬೭ ಇದ್ದುದು ಹೋದವಾರ ೧೨,೫೮೩ಕ್ಕೆ ಇಳಿಯಿತು. ಬೊಂಬಾಯಿ ಅಧಿಕೃತ್ಯದಲ್ಲಿ ೧೧,೩೫೬ರಿಂದ ೧೦,೯೭೩ಕ್ಕೆ ಕಮ್ಮಿ ಬಿದ್ದುದೇ ಮುಖ್ಯಕಾರಣ. ಅತ್ತಲಾಗಿ ವಾಯುವ್ಯ ಪ್ರಾಂತ್ಯದಲ್ಲಿ ೫೬೯ ರಿಂದ ೭೭೭ಕ್ಕೂ, ಪಂಜಾಬಿನಲ್ಲಿ ೫೯೩ರಿಂದ ೭೫೧ಕ್ಕೂ, ಮಧ್ಯಪ್ರಾಂತ್ಯಗಳಲ್ಲಿ ೧,೫೭೭ರಿಂದ ೧,೭೬೭ಕ್ಕೂ ಹೆಚ್ಚಿರುತ್ತದೆ.

❖❖❖❖

ಮಹಮ್ಮದೀಯರು ತಮ್ಮ ಜನರಲ್ಲಿ ವಿದ್ಯೆಯನ್ನು ಅಭಿವೃದ್ಧಿಗೆ ತರಬೇಕೆಂದು ಪ್ರತಿ ವರುಷವೂ ಒಂದೊಂದು ಪಟ್ಟಣದಲ್ಲಿ ಸೇರಿ ಸಮಾಜ ಮಾಡುವರು. ಈ ವರುಷ ಈ ಮಹಮ್ಮದೀಯ ಸಮಾಜವು ಬೊಂಬಾಯಿ ಪಟ್ಟಣದಲ್ಲಿ ಕ್ರಿಸ್‌ಮಸ್ ಹಬ್ಬದ ರಜಾ ಕಾಲದಲ್ಲಿ ನಡೆಯಬೇಕೆಂದು ಗೊತ್ತು ಮಾಡಿ, ಅದಕ್ಕಾಗಿ ಸನ್ನಾಹ ಮಾಡುತ್ತಿದಾರೆ. ಈ ಸಮಾಜಕ್ಕೆ ಹಿಂದುಸ್ಥಾನದ ಎಲ್ಲಾ ಪ್ರಾಂತ್ಯಗಳಿಂದಲೂ ಮಹಮ್ಮದೀಯ ದೊಡ್ಡಮನುಷ್ಯರು ಹೋಗಿ ಸೇರುವವರಾಗಿದಾರೆ. ಈ ಸಮಾಜಕ್ಕೆ ಸಂಬಂಧಪಟ್ಟ ಹಾಗೆ ಚಿತ್ರಕೆಲಸಗಳ ಪ್ರದರ್ಶನೋತ್ಸವವೂ ನಡೆವುದು.

❖❖❖❖

೧೯೦೨ನೇ ಇಸವಿ ಪ್ರಾರಂಭದಲ್ಲಿ ಇಂಗ್ಲಿಷ್ ಗವರ್ನಮೆಂಟಿನವರು ಸಿಲೋನ್ ದ್ವೀಪಕ್ಕೆ ೫,೧೯೩ ಮಂದಿ ಬೋಯರ್ ಖೈದಿಗಳನ್ನು ತಂದಿಟ್ಟರು. ಇವರ ಪೈಕಿ ೪,೭೯೦ ಜನರು ಇಂಗ್ಲಿಷರಿಗೆ ಪ್ರಮಾಣಮಾಡಿಕೊಟ್ಟು ದಕ್ಷಿಣ ಆಫ್ರಿಕಕ್ಕೆ ತೆರಳಿದರು. ೯ ಮಂದಿ ಸತ್ತುಹೋದರು. ಈ ಸಾಲ್‌ನಲ್ಲಿ ೫೧ ಜನರನ್ನು ಕಳುಹಿಸಿಕೊಟ್ಟರು. ಇನ್ನೂ ೫೪ ಮಂದಿ ಉಳುಕೊಂಡಿದಾರೆ. ಇವರು ಬೇಕಾದ ಕಡೆಗಳಲ್ಲಿ ಸಂಚಾರ ಮಾಡುವಂತೆ ಅವಕಾಶ ಮಾಡಿಕೊಟ್ಟಿದಾರೆ. ಶರಣಾಗತರಾದೆವೆಂದು ಹೇಳದವರೆ ದಕ್ಷಿಣ ಆಫ್ರಿಕಕ್ಕೆ ಇಲ್ಲವಾದರೆ ಅವರು ಅಪೇಕ್ಷಿಸುವ ಬೇರೆ ಕಡೆಗಳಿಗೆ ಕರೆದುಕೊಂಡು ಹೋಗಿ ಬಿಡುತ್ತೇವೆಂದು ಸರ್ಕಾರದವರು ಆ ೫೪ ಮಂದಿಗೂ ಹೇಳಿದ್ದರೂ ಪ್ರಯೋಜನವಿಲ್ಲವಾಗಿದೆ.

❖❖❖❖

ಸೋನಾನದಿಗೂ [illegible] ಸಮೀಪ ನದಿಗೆ ೬ ಲಕ್ಷ ರೂಪಾಯಿ ಖರ್ಚುಮಾಡಿ ಸೇತುವೆ ಕಟ್ಟಿ ಇಲ್ಲಿಗೆ ಸುಮಾರು ೨೫ ವರುಷಗಳ ಮೇಲೆ ಆಯಿತು. ನದಿಯ ನೀರಿಗಿಂತಲೂ ಸೇತುವೆಯು ಬಹಳ ಎತ್ತರವಾಗಿರಲಿಲ್ಲ. ಪ್ರವಾಹ ಕಾಲಗಳಲ್ಲೆಲ್ಲಾ ಈ ಸೇತುವೆಗೆ ಎಲ್ಲಿ ಅಪಾಯ ಸಂಭವಿಸುವುದೋ ಎಂಬದಾಗಿ ಎಲ್ಲರಿಗೂ ಅನುಮಾನವಾಗಿತ್ತು. ಇದನ್ನು ನೋಡಿ ಸರ್ಕಾರದವರು ಇನ್ನು ೭ ಲಕ್ಷ ರೂಪಾಯಿ ಖರ್ಚುಮಾಡಿ, ಎಂಥಾ ಪ್ರವಾಹ ಬಂದರೂ ಸೇತುವೆಗೆ ಅಪಾಯ ಉಂಟಾಗದಂತೆ ಅದನ್ನು ಎತ್ತರಿಸಿ ಕಟ್ಟಿಸಿದರು. ಈಗಲಾದರೋ ಈ ಸೇತುವೆಯು ಬಹಳ ಶಿಥಿಲವಾಗಿದೆ ಎಂತಲೂ, ಬೇಗನೆ ರಿಪೇರಿ ಮಾಡಿಸದಿದ್ದರೆ ಅಪಾಯ ಸಂಭವಿಸಬಹುದೆಂದು ಕಾಣುವುದೆಂತಲೂ ಪ್ರಕಟವಾಗಿದೆ.

❖❖❖❖

ಕಳೆದ ೧೯೦೧ನೆ ವರುಷದಲ್ಲಿ ಹಿಂದುಸ್ಥಾನದೊಳಗೆ ಕಾಡುಮೃಗಗಳು ಕೊಂದುಹಾಕಿದಷ್ಟು ನರಮನುಷ್ಯರನ್ನು ಅವು ಹಿಂದೆ ಯಾವ ವರುಷದಲ್ಲೂ ಕೊಲ್ಲಲಿಲ್ಲ. ಒಟ್ಟು ೨,೫೫೧ ಜನರು ಕ್ರೂರಜಂತುಗಳಿಂದಲೂ, ೨೩,೧೬೬ ಜನರು ಹಾವು ಕಚ್ಚಿಯೂ ಮೃತರಾದರು. ೧,೦೪೬ ಜನರು ಹುಲಿಗಳಿಂದಲೂ, ೩೩೭ ಜನರು ತೋಳಗಳಿಂದಲೂ ಕೊಲ್ಲಲ್ಪಟ್ಟರು. ೯೧,೫೯೭ ಗೋಕಾಯಿಗಳನ್ನು ಆ ವರುಷ ಕಾಡುಮೃಗಗಳೂ, ೯,೦೧೯ ರಾಸುಗಳನ್ನು ಹಾವುಗಳೂ ಕೊಂದುಹಾಕಿದವು. ಈ ಪೈಕಿ ೩೦,೫೫೫ ರಾಸುಗಳು ಹುಲಿಗಳಿಗೂ, ೩೯,೭೧೧ ರಾಸುಗಳು ಚಿರತೆಗಳಿಗೂ ತುತ್ತಾದವು. ಅತ್ತಲಾಗಿ ಆ ವರುಷ ೧,೩೩೧ ಹುಲಿಗಳನ್ನೂ, ೪,೨೧೩ ಚಿರತೆಗಳನ್ನೂ, ೧,೯೫೯ ಕರಡಿಗಳನ್ನೂ, ೭,೩೩೩ ತೋಳಗಳನ್ನೂ, ೬೦೬ ಕತ್ತೆಕಿರುಬಗಳನ್ನೂ, ೯೭,೫೯೫ ಹಾವುಗಳನ್ನೂ ಕೊಂದುಹಾಕಿದವರಿಗೆ ಸರ್ಕಾರದಿಂದ ೧,೦೦,೬೯೮ರೂ. ಇನಾಮು ಕೊಡಲಾಯಿತು. ಇದಲ್ಲದೆ ಶಿಕಾರಿಗಳು ಬಹುಮಂದಿ ಈ ದುಷ್ಟಪ್ರಾಣಿಗಳನ್ನು ಹೊಡೆದು ಹಾಕಿರುತ್ತಾರೆ. ಅವರು ಜಂತುಗಳಿಗೆ ಇನಾಂ ಕೇಳಲೇ ಇಲ್ಲ.

❖❖❖❖

ಗಯಾ ಡಿಸ್ಟ್ರಿಕ್ಟಿಗೆ ಸೇರಿದ [illegible] ನಗರದಲ್ಲಿ ಅಗ್ನಿಹೋತ್ರಿ ಪಂಡಿತ ದೇವದತ್ತಶರ್ಮ ಎಂಬ ಬ್ರಾಹ್ಮಣನು ಹಿಂದುಸ್ಥಾನದ ಪ್ರಜೆಗಳಿಗೆ ತಿಳಿಯಪಡಿಸಿರುವ ಆಶ್ಚರ್ಯಯುಕ್ತವಾದ ಸಮಾಚಾ-

ಅಪೇಸಿಂಹರಿ :—" ದುಷ್ಕಾಲ ಪ್ರಾಪ್ತವಾಗುತ್ತದೆಂದು ೧೨ ವರುಷಗಳಿಂದಲೂ ಹೇಳುತ್ತಿದ್ದೇನೆ. ಪ್ಲೇಗ್, ಕ್ಷಾಮ, ಯುದ್ಧ, ಭೂಕಂಪ, ಇವುಗಳನ್ನು ನಿವಾರಣೆ ಮಾಡಲು ನನಗೆ ಶಕ್ತಿಯುಂಟೆಂದು ೩೨ ವರುಷಗಳಿಂದಲೂ ಸಾರಿ ಹೇಳುತ್ತಿರುವೆನು. ನನ್ನನ್ನು ದುಷ್ಟನೆಂದು ಭಾವಿಸಿರುತ್ತಾರೆಯೇ ಹೊರತು ಮತ್ಯಾವ ಪ್ರಯೋಜನವೂ ನನಗುಂಟಾಗಿರುವುದಿಲ್ಲ. ಟ್ರಾನ್ಸ್ವಾಲ್ ಯುದ್ಧ ಪ್ರಾಪ್ತವಾಗುವುದೆಂತಲೂ, ವಿಕ್ಟೋರಿಯಾ ಚಕ್ರವರ್ತಿನಿಯವರು ಕಾಲವಾಗುವರೆಂತಲೂ, ಕ್ಷಾಮವೂ ಪ್ಲೇಗ್ ರೋಗವೂ ಹುಟ್ಟಿ ವ್ಯಾಪಕವಾಗುವುವೆಂತಲೂ ಮುಂತಿಳಿಸಿದವನು ನಾನೇ. ಉರಿಬೇಸಿಗೆಯಾದ ಮೇ ತಿಂಗಳಲ್ಲಿ ಕೋರ್ಟಿನೊಳಗೆ ಬಾರ್ ಅಸೋಸಿಯೇಷನ್ ಎಂಬ ವಕೀಲರು ಎಕ್ಸ್ಪ್ರೆಷನ್ ಮಾಡಿದ ಸಮಯಕ್ಕೆ ಸರಿಯಾಗಿ ಮಳೆ ಸುರಿಸುವಂತೆ ಮಾಡಿದವನೂ ನಾನೇ. ಟ್ರಾನ್ಸ್ವಾಲ್ ಯುದ್ಧವು ನಿಂತು ಕರಾರಾಗಲಿ ಎಂದು ನಾನು ಸಂಕಲ್ಪ ಮಾಡಿದ ಕೂಡಲೇ ಕರಾರಾಯಿತು. ಬರಿಕೈಯಲ್ಲಿ ಎಷ್ಟು ದೂರದಲ್ಲಿ ನನ್ನನ್ನು ನಿಲ್ಲಿಸಿದಾಗ್ಯೂ ನಾನು ಅಗ್ನಿಯನ್ನು ಹುಟ್ಟಿಸಬಲ್ಲೆನು. ಮಂತ್ರೋಚ್ಚಾರಣೆಯಿಂದ ಬಂದೂಕು ಮದ್ದುಗಳನ್ನು ಕೆಡುವಂತೆ ಮಾಡಬಲ್ಲೆನು. ನಾನು ಮಾಡಿಕೊಡುವ ಬಳೆಯನ್ನು ಕೈಗೆ ಹಾಕಿಕೊಂಡು ಹೋಗುವಂಥಾ ಯಾವ ಶಿಪಾಯಿಯೂ ಯುದ್ಧದಲ್ಲಿ ಏಟು ತಿಂದು ಮೃತನಾಗುವದಿಲ್ಲ. ಅಷ್ಟಾದರೂ ನನ್ನ ಮಾತನ್ನು ಹಿಂದುಸ್ಥಾನದಲ್ಲಿ ಗವರ್ನಮೆಂಟಿನವರಾಗಲಿ, ದೇಶೀಯ ರಾಜರುಗಳಾಗಲಿ ನಂಬುವುದಿಲ್ಲವಲ್ಲಾ ಎಂಬುದೊಂದೇ ನನ್ನ ಕೊರಗಾಗಿದೆ. ಇದರ ದೆಸೆಯಿಂದ ನಾನು ಹಿಂದುಸ್ಥಾನವನ್ನು ಬಿಟ್ಟು ಲಂಡನ್ ಪಟ್ಟಣಕ್ಕೆ ಹೋಗಿ ಬರಬೇಕೆಂದು ನಿಶ್ಚಯಿಸಿಕೊಂಡಿರುತ್ತೇನೆ. ನನ್ನ ಜೊತೆಯಲ್ಲಿ ೨೪ ಜನರನ್ನು ಕರೆದುಕೊಂಡು ಹೋಗಿ ಬರುವೆನು. ನಾನು ಅಲ್ಲಿ ಚಕ್ರವರ್ತಿಯವರಿಗೂ, ಇಂಗ್ಲಿಷ್ ಪ್ರಜೆಗಳಿಗೂ ನನ್ನ ಅಪಾರವಾದ ಶಕ್ತಿಯನ್ನು ತೋರಿಸುತ್ತೇನೆ. ಅಲ್ಲಿ ನಾನು ನನ್ನ ಬ್ರಾಹ್ಮಣಿಕೆಗೆ ಲೋಪ ಬಾರದಂತೆ ತುಂಬಾ ಎಚ್ಚರಿಕೆಯಿಂದಿರುವೆನು. ಇದಕ್ಕೆ ನನಗೆ ಒಂದೇ ಒಂದು ಲಕ್ಷ ರೂಪಾಯಿ ಬೇಕಾಗುವುದು. ಹಿಂದುಸ್ಥಾನದಲ್ಲಿ ಅನೇಕ ರಾಜರೂ ಮಹಾರಾಜರೂ ಇರುತ್ತಾರೆ. ಇವರೆಲ್ಲಾ ಸಹಾಯ ಮಾಡಿದರೆ ಇಷ್ಟು ಹಣ ಕೂಡುವುದೇನೂ ಆಶ್ಚರ್ಯವಲ್ಲ." ತನಗೆ ಇಷ್ಟೆಲ್ಲಾ ಸಾಮರ್ಥ್ಯವಿದೆ ಎಂದು ಹೇಳಿಕೊಳ್ಳುವ ಈ ಬ್ರಾಹ್ಮಣನು ಹಣ ಬೇಕೆಂದು ಯಾಕೆ ಬೇಡುವನೋ ಆಶ್ಚರ್ಯವೇ ಸರಿ.

◆◆◆◆

ನವೆದು ಹೋಗಿರುವ ನಾಣ್ಯಗಳನ್ನು ವಾಪಸು ತೆಗೆದುಕೊಂಡು ಅದಕ್ಕೆ ಬದಲಾಗಿ ಒಳ್ಳೇ ನಾಣ್ಯಗಳನ್ನು ಕೊಡುವಂತೆ ಆಯಾ ಖಜಾನೆಯ ಅಧಿಕಾರಿಗಳಿಗೆಲ್ಲಾ ಅಪ್ಪಣೆ ಕೊಡಬೇಕೆಂಬದಾಗಿ ಇಂಡಿಯಾ ಗೌವರ್ನಮೆಂಟಿನವರ ಮುಂದೆ ಒಂದು ಸಲಹೆ ಬಂದಿರುತ್ತದೆ. ನವೆದುಹೋದ ನಾಣ್ಯಗಳನ್ನು ಚಲಾಯಿಸಲಾರದೆ ತೊಂದರೆ ಪಡುವವರಿಗೆ ಇದೊಳ್ಳೇ ಸಮಯ.

◆◆◆◆

ಕೊಚ್ಚಿ ತೀರಪಟ್ಟಣಕ್ಕೆ ಸ್ವಲ್ಪ ದೂರದಲ್ಲಿ ಬೆಸ್ತರು ಷಾರ್ಕ್ ಎಂಬದೊಂದು ದೊಡ್ಡ ಮೀನನ್ನು ಹಿಡಿದರು. ಅದನ್ನು ಬೇರೆ ಕೆಲವು ಮಂದಿ ಬೆಸ್ತರು ರೂ ೧೪ ಕೊಟ್ಟುಕೊಂಡು ಕೊಯಿದು ನೋಡುವಾಗ ಅದರ ಹೊಟ್ಟೆಯಲ್ಲಿ ಒಬ್ಬ ಮನುಷ್ಯನ ದೇಹವು ಸಿಕ್ಕಿತು. ಎಡತೋಳು ಒಂದು ವಿನಾ ಬಾಕಿ ಅಂಗಗಳೆಲ್ಲಾ ಸರಿಯಾಗಿದ್ದವು. ಆ ಮನುಷ್ಯನು ಸತ್ತಿರಲಿಲ್ಲ. ಇದಲ್ಲವೇ ಆಶ್ಚರ್ಯ!

◆◆◆◆

ಬಂಗಾಳಕ್ಕೆ ಸೇರಿದ ಖಾಸಿಯಾ ಎಂಬ ಪ್ರಾಂತ್ಯದಲ್ಲಿ ಒಂದು ದೇಶೀಯ ಸಂಸ್ಥಾನದಲ್ಲಿ ಸಂಸ್ಥಾನಾಧಿಪತಿಯ ಚಿತಾವಣೆಯಿಂದ ಎರಡು ಖೂನಿಗಳು ನಡೆದುವೆಂದು ತಿಳಿದು ಬಂದಕಾರಣ ಆ ಪ್ರಾಂತ್ಯದ ಚೀಫ್ ಕಮೀಷನರಾದ ಮೇಜರ್ ಗಾರ್ಡನ್‌ರವರು ಆ ಸಂಸ್ಥಾನದ ರಾಜರನ್ನೂ ಅವರ ಸಹೋದರನನ್ನೂ, ಇನ್ನೂ ಐನ್ನೂರು ಮಂದಿಯನ್ನೂ ದಸ್ತಗಿರಿ ಮಾಡುವಂತೆ ಪೊಲೀಸಿನವರಿಗೆ ಅಪ್ಪಣೆ ಕೊಟ್ಟು ಕಳುಹಿಸಿದರು. ಅದೇ ಪ್ರಕಾರ ಅವರನ್ನೆಲ್ಲಾ ಗುಮಾನಿಯ ಮೇಲೆ ಹಿಡಿದು ಶಿಲ್ಲಾಂಗಿಗೆ ತಂದು ಬಂದೀಖಾನೆಯಲ್ಲಿ ಇರಿಸಿದಾರೆ. ಮುಂದೆ ವಿಚಾರಣೆ ನಡೆಯುವದು.

◆◆◆◆

ಅಮೆರಿಕದಲ್ಲಿ ಬರುವ ವರ್ಷ ನಡೆಯುವದಕ್ಕಿರುವ ಸರ್ವವಸ್ತು ಪ್ರದರ್ಶನದಲ್ಲಿ ನಮ್ಮ ಇಂಡಿಯಾ ದೇಶದ ಟೀಯೆಲೆಯನ್ನು ಪ್ರಸಿದ್ಧಿಗೆ ತರಬೇಕೆಂಬ ಅಭಿಪ್ರಾಯದಿಂದ ಇಲ್ಲಿ ಬಹಳ ಹಣ ಚಂದಾ ವಸೂಲಾಗುತ್ತಿದೆ. ಹೇಗೆಂದರೆ—ಇಂಡಿಯಾ ಗವರ್ನಮೆಂಟಿನವರು ರೂ॥ ೭೫,೦೦೦; ಬಂಗಾಳ ಗವರ್ನಮೆಂಟಿನವರು ರೂ॥ ೧೦,೦೦೦; ಮದ್ರಾಸು ಗವರ್ನಮೆಂಟಿನವರು ರೂ॥ ೭,೦೦೦; ಮೈಸೂರು ರೂ॥ ೫,೦೦೦; ಇಂಡಿಯಾ ಟೀ ಕಮಿಟಿಯವರು ರೂ॥ ೫೦,೦೦೦; ಇಂಡಿಯನ್ ಟೀ ಅಸೋಸಿಯೇಷನ್ ರೂ॥ ೭೦,೦೦೦; ದಕ್ಷಿಣ ಇಂಡಿಯಾ ಪ್ಲಾಂಟರುಗಳ ಅಸೋಸಿಯೇಷನಿನವರು ರೂ॥ ೧೦,೦೦೦.

## ತಾಲ್ಲೋಕು ವರ್ತಮಾನಗಳು

ದೊಡ್ಡಬಳ್ಳಾಪುರ —ಪ್ಲೇಗಿನಿಂದ ನೂರಾರು ಜನ ತೀರಿಹೋದರು. ಪ್ರಜೆಗಳೆಲ್ಲಾ ಮನೆಗಳನ್ನು ಬಿಟ್ಟು ಗುಡಿಸಲುಗಳಲ್ಲಿ ವಾಸಮಾಡುತ್ತಾರೆ. ಇನ್ನು ೫೦—೬೦ ಮನೆಯವರು ಊರಲ್ಲಿ ಇದ್ದಾರೆ. ಪ್ಲೇಗ್ ಕಮ್ಮಿಯಾಗುತ್ತಾ ಬಂದಿದೆ. ಮಳೆ ವಿಶೇಷದಿಂದ ಸಾವಿರಾರು ಮನೆಗಳು ಬಿದ್ದುಹೋಗಿವೆ. ಜನಗಳೆಲ್ಲ ಮನೆಗಳನ್ನು ಕಳೆದುಕೊಂಡು ಬಹಳ ಪಶ್ಚಾತ್ತಾಪ ಪಡುವರು. ಭಗವಂತನು ಎಲ್ಲಾ ಪ್ರಜೆಗಳಿಗೂ ಸೌಖ್ಯವನ್ನು ಯಾವಾಗ ಉಂಟುಮಾಡುವನೋ? ಎಂದು ಎಲ್ಲರೂ ಭಗವಂತನ ಪ್ರಾರ್ಥನೆಯನ್ನು ಮಾಡುತ್ತಾರೆ. ಭಗವಂತನು ಭಕ್ತರ ಪ್ರಾರ್ಥನೆಯನ್ನಂಗೀಕರಿಸಿ ಯಾವಾಗ ಕಾಪಾಡಿ ಪಾರಿ ಸಿಕ್ಕುವಂತೆ ಮಾಡುವನೋ ಅದು ಅವರವರಿಗೂ ಬಿಡುಗಡೆಯ ಕ್ರಮವನ್ನು ಹೇಳಲಿಲ್ಲವಲ್ಲ.

ಮಧುಗಿರಿ:—ಈ ವರ್ಷ ಈ ಊರಲ್ಲಿ ರಾಗಿ ಬೆಳೆ ಉತ್ತಮ ಸ್ಥಿತಿಯಲ್ಲಿತ್ತು. ಈಗ ಹದಿನೈದು ದಿನಗಳ ಲಾಗಾಯಿತು ಸಂತತವಾಗಿ ಸುರಿಯುವ ಮಳೆಯಿಂದ ತೆನೆಗಳಲ್ಲೆಲ್ಲಾ ಮೊಳಕೆ ಬಂದು ಕೊಳೆತು ಹೋಗಿ ಬೇಳೆ ಮಾಲು ದವಸವೂ ಕ್ಷೀಣದಂತಾಯಿತು ಎಂದು ಜನರು ಹೇಳುತ್ತಾರೆ. ಈ ಸಂತತವಾದ ಮಳೆಯಿಂದ ಈ ಊರಲ್ಲಿ ನೂರಾರು ಮನೆಗಳು ಬಿದ್ದುವು. ೩೦—೪೦ ಸಂಸಾರದವರು ಇಲ್ಲಿನ ಉಭಯ ದೇವಸ್ಥಾನಗಳಲ್ಲಿಯೂ ಛತ್ರಗಳಲ್ಲಿಯೂ ಮಕ್ಕಳು ಮರಿ ಕಟ್ಟಿಕೊಂಡು ಛಳಿಗಾಳಿಯಲ್ಲಿ ಒದ್ದಾಡುತ್ತಿರುವರು. ಮತ್ತೆ ಕೆಲವರು ವಾಸಕ್ಕೆ ತಾವಿಲ್ಲದೆ ಇದ್ದಲ್ಲಿಯೇ ಪ್ರಾಣದ ಮೇಲೆ ಆಸೆ ಬಿಟ್ಟು ದೇವರು ಇಂಥ ಅವಸ್ಥೆ ಕೊಟ್ಟನೇ ಎಂದು ಹೇಳುತ್ತಾ ಮಳೆ ಈ ವತ್ತು ನಿಲ್ಲುತ್ತೆ, ನಾಳೆ ನಿಲ್ಲುತ್ತೆ ಎಂಬ ನಿರೀಕ್ಷಣೆಯಿಂದ ಆಕಾಶವನ್ನೇ ಎದುರು ನೋಡುತ್ತಾ ಇದ್ದಾರೆ. ಮತ್ತೆ ಕೆಲವರು ಈ ಊರನ್ನೇ ಬಿಟ್ಟು ಮಳೆಯಲ್ಲೇ ತುಂಕೂರು ನೊಣವಿನಕೆರೆ ಊರನ್ನು ಸೇರಿಕೊಂಡರು. ಆದರೂ ಮಳೆ ನಿಲ್ಲಲಿಲ್ಲ. ಮುಖ್ಯವಾಗಿ ಈ ಮಳೆಯಿಂದ ಈ ಊರಿನವರು ಅನುಭವಿಸಿದ ಕಷ್ಟವನ್ನು ಬರೆಯಲು ಸಾಧ್ಯವಲ್ಲ. ಆದರೆ ಈ ಮನೆಗಳು ಬೀಳುವ ಗಲಾಟೆಯಲ್ಲಿ ಪ್ರಾಣಿಗಳಿಗೆ ಅಪಾಯವೇನೂ ಸಂಭವಿಸಲಿಲ್ಲ.—ಈ ಊರಲ್ಲಿ ಸ್ವಲ್ಪ ದಿನದಿಂದ ಮ್ಯುನಿಸಿಪಾಲಿಟಿ ಏರ್ಪಾಡುಗಳು ತೃಪ್ತಿಕರವಾಗಿವೆ. ಈ ಮ್ಯುನಿಸಿಪಾಲಿಟಿಯವರು ಪ್ಲೇಗು ಇರುವ ಪ್ರದೇಶಗಳಿಂದ ಈ ಊರಿಗೆ ಬಂದಂಥ ಜನರನ್ನೂ ಸರಕುಗಳನ್ನೂ ತಪಾಸು ಶುದ್ಧಿಮಾಡಿ ಊರೊಳಕ್ಕೆ ಬಿಡುವಂತೆ ಮಾಡಿರುವ ಏರ್ಪಾಡೂ ಬಹಳ ಶ್ಲಾಘ್ಯವಾಗಿದೆ.

ಹುಣಸೂರು :—ಈ ಊರಿಗೆ ೯ ಮೈಲಿ ದೂರದಲ್ಲಿರುವ ಹುನ್ನಗನ ಹಳ್ಳಿ ಎಂಬ ಗ್ರಾಮದಲ್ಲಿ ಇದೇ ತಿಂಗಳು ೩ ನೇ ತಾ॥ ಒಂದು ಖೂನಿ ನಡೆಯಿತು. ಕೊಲ್ಲಲ್ಪಟ್ಟವನೂ, ಕೊಂದವರೂ ಮುಸಲ್ಮಾನ್ ಮತಕ್ಕೆ ಸೇರಿದವರು. ಅಪರಾಧಿಗಳು ಕಾಸಿಮ್ ಎಂಬುವನನ್ನು ಕೊಂದು ಎಲ್ಲೋ ಪರಾರಿಯಾಗಿದ್ದರು. ಇವನನ್ನು ಎಸೆದ ಸ್ಥಳಕ್ಕೆ ಅಮಲ್ದಾರರೂ, ಪೊಲೀಸ್ ಇನ್ಸ್ಪೆಕ್ಟರೂ, ಮೈಸೂರಿನ ಪೊಲೀಸ್ ಸೂಪರಿಂಟೆಂಡೆಂಟ್ ಮಿ॥ ಮಹಮದ್ ಜಾಫರ್ ಸಾಹೇಬರೂ ಹೋಗಿದ್ದರು. ಹೆಣವನ್ನು ಪರೀಕ್ಷಿಸಿದ ಡಾಕ್ಟರು ಆದ್ಯಂತ ಪರೀಕ್ಷಿಸಿ, ಇಟ್ಟಿಗೆ ಗುದ್ದಾಟದಿಂದ ಪ್ರಾಣಹೋಗಿರುತ್ತದೆಯೇ ಹೊರತು ಆಯುಧ ಪ್ರಯೋಗಿಸಿಲ್ಲವೆಂದು ತೀರ್ಮಾನ ಕೊಟ್ಟಮೇಲೆ ಹೆಣವನ್ನು ದಫನ್ ಮಾಡಿದರು. ಬಹು ಸಾಹಸದಿಂದ ಪೊಲೀಸಿನವರು ಪರಾರಿಯಾದ ಆಸಾಮಿಗಳನ್ನು ಪತ್ತೆ ಮಾಡಿರುತ್ತಾರೆ. ಈ ಅಪರಾಧಿಗಳು ಯಾವ ಕಡೆ ಕಾಲ್ನಡಿಗೆಯಲ್ಲಿ ಹೋದರೆಂದು ತಿಳಿಯಬಂದಿದೆ.—ಈಗ ೧೦—೧೨ ದಿನಗಳಿಂದಲೂ ಮಳೆ ಬಿಡದೆ ಪ್ರತಿ ದಿನವೂ ಸುರಿಯುತ್ತಲಿದೆ. ೧೧ ನೇ ತಾ॥ ಸಾಯಂಕಾಲ ಸುಮಾರು ೩ ಗಂಟೆಗೆ ಪ್ರಾರಂಭವಾದ ಮಳೆಯು ೧೨ ನೇ ತಾ॥ ಬೆಳಗಿನ ಝಾಮದಲ್ಲಿ ಬಿಟ್ಟಿತು. ಆ ರಾತ್ರಿ ಅನೇಕರ ಮನೆ ಗೋಡೆಗಳೂ, ಹಿತ್ತಲು ಗೋಡೆಗಳೂ ಬಿದ್ದು, ಬಹು ನಷ್ಟವನ್ನು ಉಂಟುಮಾಡಿತು. ಈ ಮಳೆಯು ಮನುಷ್ಯರಿಗೆ ಬಹು ಜಿಗುಪ್ಸೆಯನ್ನು ಮಾಡಿದೆ. ಬೇರೆ ಬೇರೆ ಸ್ಥಳಗಳಲ್ಲಿ ಕೆರೆಗಳು ಕೋಡಿ ಬಿದ್ದುಹೋಗಿವೆ. ಇಂಥಾ ಮಳೆಯು ಬಹು ಕಾಲದಿಂದ ಬರಲಿಲ್ಲವೆಂದು ಜನರು ಹೇಳುತ್ತಾರೆ.—ಈ ತಾಲ್ಲೂಕಿಗೆ ಸೇರಿದ ಕೆಲವು ಗ್ರಾಮಗಳಲ್ಲಿ ಪ್ಲೇಗ್ ಶುರುವಾಗಿರುವ ಹಾಗೆ ವರ್ತಮಾನ ಉಂಟು. ಮೈಸೂರಿಂದ ಡೆಪ್ಯುಟಿ ಕಮೀಷನರ್ ಸಾಹೇಬರು ಒಬ್ಬ ಪ್ಲೇಗ್ ಇನ್ಸ್ಪೆಕ್ಟರನ್ನು ಈ ತಾಲ್ಲೂಕಿಗೆ ಕಳುಹಿಸಿಕೊಟ್ಟಿದಾರೆ.—ಊರಿನಲ್ಲಿ ಗೋಕಾವಳಿಗಳಿಗೆ ಬಹು ತೊಂದರೆಯನ್ನು ಕೊಡುತ್ತಿದ್ದ ಒಂದು ಚಿರತೆಯನ್ನು ಇದೇ ತಿಂಗಳು ೮ ನೇ ತಾರೀಖು ಮಿ॥ ಹೇ ಯವರ ಕಾವಲುದಾರರು ಕೊಂದುಹಾಕಿದರು.

ಹೊಸಪೇಟೆ.—ಇಲ್ಲಿ ಒಂದು ವಾರದಿಂದಲೂ ಹಿಡಿದ ಮಳೆ ಬಿಡಲಿಲ್ಲ. ಅನೇಕ ಮನೆಗಳು ಬಿದ್ದುಹೋದವು. ಭಾವಿಗಳಲ್ಲಿ ಜಲ ಉಕ್ಕಿ ಮೇಲೆ ಬಂದಿದೆ. ೧೨ ತಾರೀಖಿನಲ್ಲಿ ಇಲ್ಲಿನ [illegible] ನದಿಯಲ್ಲಿ ಬಂದ ಪ್ರವಾಹವು ೮—೯ ವರುಷಗಳಿಂದಲೂ ಬರಲಿಲ್ಲವೆಂದು ಜನರು ಹೇಳುತ್ತಾರೆ. ನದಿ ಪಕ್ಕದಲ್ಲಿದ್ದ ಮನೆಗಳಲ್ಲಿ ನೀರು ನುಗ್ಗಿತು. ಸೇತುವೆಯ ಮೇಲೆ ನೀರು ಹರಿಯುತ್ತಾ ಇದ್ದ ಕಾರಣ ೨ ದಿನಗಳ ಪರಿಯಂತರ ಗಾಡಿಗಳಾದರೂ, ಜನರಾದರೂ ಸೇತುವೆಯ ಮೇಲೆ ಹೋಗುವಕ್ಕೆ ಆಗಲಿಲ್ಲ. ರೈಲ್ವೆ ಸೇತುವೆಯಲ್ಲಿ ೧೯ ಅಡಿ ನೀರು ಬಂದಿತ್ತು. ದೈವಕಟಾಕ್ಷದಿಂದ ಇದುವರೆಗೆ ಜೀವದ ಅಪಾಯವೂ ಸಂಭವಿಸಲಿಲ್ಲ.—ಈ ಊರಿನಲ್ಲಿ ಕೆಲವು ದಿನಗಳಿಂದಲೂ ಇಲಿಗಳು ಸಾಯುತ್ತವೆಂಬ ಸಮಾಚಾರವಿತ್ತು. ಕೆಲವರು ಮನೆಗಳನ್ನು ಸಹ ಬಿಟ್ಟಿದ್ದಾರೆ. ಒಬ್ಬ ಮುಸಲ್ಮಾನ್ ಹುಡುಗನಿಗೆ ಗೆಡ್ಡೆ ಬಂದಿದೆಯೆಂದೂ ಆತನು ಸ್ವಲ್ಪ ಕ್ಷೇಮದಲ್ಲಿ ಇರುವನೆಂದೂ ಜನರು ಹೇಳುತ್ತಾರೆ—ಈ ಕಾಲದಲ್ಲಿ ಇಲ್ಲಿ ಪ್ರಜೆಗಳ ದುರಾದೃಷ್ಟದಿಂದ ಅಮಲ್ದಾರರು ಇಲ್ಲದೆ ಇರುವದು ಯಜಮಾನನಿಲ್ಲದ ಮನೆಯಂತಿದೆ. ದಯವಿಟ್ಟು ಸರ್ಕಾರದವರು ಶೀಘ್ರದಲ್ಲಿ ಒಬ್ಬ ಅಮಲ್ದಾರರನ್ನು ಕಳುಹಿಸುವರೆಂದು ಹಾರೈಸುತ್ತೇವೆ.—ಊರಿನ ಶಾನಿಟರಿ ವಿಷಯ ತೃಪ್ತಿಕರವಾಗಿಲ್ಲ. ಕಚೇರಿ ನಗ್ಗೈರೆ ಸಮೀಪವಾಗಿ ಹೊರಗೆ ಹೋದರೆ, ಖಂಡಿತ ಸಾಂಕ್ರಾಮಿಕ ರೋಗಗಳಿಗೆ ತವರಿಯಾದೀತು. ನಮ್ಮ ಡಾಕ್ಟರು ಬಹು ಮುತುವರ್ಜಿಯಿಂದ ಔಷಧಗಳನ್ನು ಕೊಡುತ್ತಾರೆ. ಬೆಳಗ್ಗೆ ೮ ಗಂಟೆಯಿಂದ ೧೦॥ ಗಂಟೆ ವರಿಗೂ, ಸಾಯಂಕಾಲ ೫—೬ ಗಂಟೆ ವರಿಗೂ, ಫುರಸತ್ತು ಇದ್ದಾಗ ಕಾಯಿಲೆಯವರು ಬರುತ್ತಾರೆ.—ಇಲ್ಲಿನ ಆ॥ ಕ॥ ಮಿ॥ ಅಣ್ಣಸ್ವಾಮಿ ಜಾನ್ ಸಾಹೇಬರಿಗೆ ಬೆಂಗಳೂರಿಗೆ ವರ್ಗವಾದ ವಿಷಯ ಎಲ್ಲಾ ಪ್ರಜೆಗಳಿಗೆ ಬಹಳ ವಿಷಾದವನ್ನು ಉಂಟುಮಾಡಿದೆ. ಈ ಸುಶೀಲರು ೧ ವರುಷ ಕಾಲ ಬಹು ನೀತಿ ನ್ಯಾಯದಿಂದ ತಮ್ಮ ಕೆಲಸಗಳನ್ನು ನಡಸಿ ಜನರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರು. ತಾ॥ ೧೧ ಬುಧವಾರ ಎಲ್ಲಾ ದೊಡ್ಡ ಮನುಷ್ಯರು ಸೇರಿ ಅವರಿಗೆ ಪುರಸ್ಕಾರ ಕೊಟ್ಟು ಬಂದ ಜನರಿಗೆಲ್ಲಾ ಹೂವು ಗಂಧ ತಾಂಬೂಲಾದಿಗಳನ್ನು ಹಂಚಿದಮೇಲೆ ಅವರನ್ನು ಬಹು ಗಂಭೀರವಾಗಿ ರೈಲ್ವೆ ಸ್ಟೇಷನ್ನಿಗೆ ಕರೆತಂದುಬಿಟ್ಟರು. ೨ ಗಂಟೆ ಗಾಡಿಯಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡಿದರು. ಇವರ ಸ್ಥಾನಕ್ಕೆ ಆ॥ ಕ॥ ಮಿ॥ ಚಂಗಯ್ಯಶೆಟ್ಟಿ ಬಂದು ಚಾರ್ಜನ್ನು ವಹಿಸಿದ್ದಾರೆ.

ಬೆಳ್ಳೂರು. ಈ ಊರಿನಲ್ಲಿ ಈಗ ೧೫ ದಿವಸಗಳ ಲಾಗಾಯ್ತು ಹಿಡಿದ ಜಡಿ ಮಳೆಯು ಬಿಟ್ಟಿಲ್ಲ. ಬಿಸಿಲು ಎಂಬುವುದರ ದರ್ಶನವೇ ಸ್ವಲ್ಪವಾದರೂ ಇಲ್ಲ. ಹವಾ ಬಹಳ ಶೀತವಾಗಿರುತ್ತೆ. ಅಲ್ಲ ಬೀದಿಗಳ ಪಕ್ಕಗಳಲ್ಲಿರುವ ಕಲ್ಮಷವು ಕೊಳೆತುಹೋಗಿರುತ್ತೆ. ದೆಸೆಯಿಂದ ಈಗ ೮ ದಿವಸದ ಲಾಗಾಯ್ತು ಊರಲ್ಲಿ ಇಲಿಗಳು ಸಾಯುವದು ಶುರುವಾಗಿ ೨ ಹುಡುಗರು ಸಹ ಪ್ಲೇಗ್ ವ್ಯಾಧಿಗೆ ಆಹುತಿಯಾದರು. ಜನಗಳೆಲ್ಲಾ ಕೆಲವರು ಊರು ಬಿಟ್ಟರು, ಇನ್ನು ಕೆಲವರು ಈ ಮಧ್ಯದಲ್ಲಿರುತ್ತಾರೆ. ಹೀಗೆ ಆಗಾಗ್ಯ ಊರು ಬಿಡುವದು, ಬಡವರಿಗೆ ಗುಡಿಸಲು ಮಾಡಿಕೊಳ್ಳುವದು, ಬಹಳ ಕಷ್ಟವಾಗುವದಲ್ಲದೆ ಅವರ ಜೀವನ ಮಾಡುವದು ಬಹಳ ಪ್ರಯಾಸವಾಗಿತ್ತೆ. ಇಂಥಾ ಬಡವರಿಗೆ ಗುಡಿಸಲಿಗಾದರೂ ಸಹಾಯ ಮಾಡುವಂತೆ ಭಗವಂತನು ಈ ಊರು ಶ್ರೀಮಂತರುಗಳಿಗೆ ಯಾವಾಗಲೂ ಮನಸ್ಸು ಕೊಡಲಿಲ್ಲ.—ಪಾಠಶಾಲೆಗಳು ಅಂದರೆ ಹೆಣ್ಣು ಸ್ಕೂಲ್ ಮತ್ತು ಪಂಚಮರ ಸ್ಕೂಲ್ ಸಹ ಊರೊಳಗೇನೇ ನಡೆಯುತ್ತಾ ಇದೆ. ಆದರೆ ಗ್ರಾಮಸ್ಥರು ತಮ್ಮ ಬಾಲಕರುಗಳನ್ನು ಸ್ಕೂಲಿಗೆ ಕಳುಹಲು ಭಯಸ್ಥರಾಗಿರುವದರಿಂದ ಬಾಲಕರ ಸಂಖ್ಯೆಯು ಸ್ಕೂಲಿನಲ್ಲಿ ಬಹಳ ಕಡಮೆಯಾಗಿರುತ್ತೆ. ಸ್ಕೂಲ್ ಮನೆಯು ವಾಸದ ಮನೆಗಳಾಗಿಲ್ಲದೆ ಆರೋಗ್ಯಶಾಸ್ತ್ರಕ್ಕೆ ಅನುಕೂಲವಾದಸ್ಥಳದಲ್ಲಿ ಇರುವದರಿಂದ ಈ ಹುಡುಗರು ಸ್ಕೂಲಿಗೆ ಸೇರಲು ಭಯವೇನೂ ಇರಲಾರದು. ಆದ್ದರಿಂದ ಗ್ರಾಮಸ್ಥರೆಲ್ಲರೂ ಈಗ ಬಿಡಾರಗಳಲ್ಲಿದ್ದರೂ ತಮ್ಮ ಮಕ್ಕಳನ್ನು ಸ್ಕೂಲಿಗೆ ಹೋಗಿ ಬರುವಂತೆ ಏರ್ಪಾಡು ಮಾಡುವದು ಬಹಳ ಉತ್ತಮವಾದದ್ದು. ಈ ಊರು ಪಂಚಾಯತು ತವಾಗೆ ಸ್ಕೂಲು ಮನೆ ಸಂಸ್ಕರಣದವರು ತಹಸಿಲ್ದಾರರ ಕೋಪದಿಂದ ತಮ್ಮಲ್ಲಿ ಹಣದ ವಿಷಯ ೫೦ ರೂಪಾಯಿಗಳನ್ನು ಸಿದ್ಧಪಡಿಸಿ ಇಟ್ಟುಕೊಟ್ಟು ೩ ವರುಷವಾಗುತ್ತಾ ಬಂತು. ಇದುವರೆಗೂ ಡಿಪಾರ್ಟ್ಮೆಂಟಿನವರು ತಮಗಾಗಿ ಬಂದು ಕೊಡಲಿಲ್ಲ. ಈಗ ಬಿದ್ದು ಹೋಗುವ ಸ್ಥಿತಿಯಲ್ಲಿ ಸದರಿ ಮನೆ ಇರುತ್ತೆ. ಮಳೆಗಾಲದಲ್ಲಿ ಈ ಕೋಣೆಯ ವಿಷಯ ಹೇಳಲು ಅಸಾಧ್ಯ. ದೊರೆಗಳವರ ಸರ್ಕಾರದವರು ಈ ಸ್ಕೂಲ್ ಮನೆ ಅನ್ನು ಹೊಸದಾಗಿ ಕಟ್ಟಿಸಿಕೊಟ್ಟರೆಂದು ಹಾರೈಸುತ್ತೇವೆ. ಈ ಊರು ಹಿಂದುಸ್ಥಾನಿ ಸ್ಕೂಲು ಪ್ಲೇಗ್ ಆರಂಭವಾದ ಈಗ ೮ ತಿಂಗಳ ಲಾಗಾಯತು ನಿಂತೇ ಹೋಗಿರುತ್ತೆ. ಸಂಬಂಧಪಟ್ಟವರು ಈ ವಿಷಯವನ್ನು ಗಮನಕ್ಕೆ ತರುವರೆಂದು ನಿರೀಕ್ಷಿಸುತ್ತೇನೆ

ಚಿಕ್ಕಮಗಳೂರು. ಹವೆ ಬಹು ಶೀತವಾಗಿ ಪ್ರಜಾ ಕ್ಷೇಮಕ್ಕೆ ಅಹಿತವಾಗಿದೆ. ಮಳೆ ೪—೫ ದಿವಸಗಳಿಂದ ಬಿಡದೆ ಹಿಡಿದಿದೆ. ಹಸುಕರು ಸಂಖ್ಯೆಯಲ್ಲಿ ಸಾಯುವರೆ ಜಾನುವಾರು ರೋಗಗಳ ಹಾವಳಿ ತಪ್ಪಲಿಲ್ಲ. ಈ ಗ್ರಾಮಕ್ಕೆ ಮತ್ತು ಸಂತೆಗೆ ಪೊಲೀಸ್ ಆಫೀಸರುಗಳು ತುಂಬಾ ಗಮನ ಕೊಟ್ಟರೆ ವಾಸಿ.—ಮಿಸ್ ಪಾಲ್ ಎಂಬುವರು ಬಂದು ಬೇರೆ ಅಮೆರಿಕಾ ಮಿಸ್ ಪಾಲ್ ಪ್ರೊಟೆಸ್ಟಂಟ್ ಮಿಷನ ಮಕ್ಕಳ ಆಸ್ಪತ್ರೆ ಚಾರ್ಜನ್ನು ವಹಿಸಿದರು.—ಈ ಊರಲ್ಲಿ ಕಳೆದ ವರ್ಷ ಪ್ಲೇಗ್ ಕಾಲದಲ್ಲಿದ್ದು ಕೆಲಸ ಮಾಡಿದ ಡಾ॥ ಬಿ. ಕೃಷ್ಣಯ್ಯಂಗಾರ್ಯರೂ ಡಾಕ್ಟರ್ ಟಿ. ಎಚ್. ಸಂಬಂಧಪಟ್ಟವರೂ ತಮ್ಮ ಮುತುವರ್ಜಿಯಿಂದಲೂ ಅಂತಃಕರಣದಿಂದಲೂ ತಮ್ಮ ಕರ್ತವ್ಯವನ್ನು ಮುಗಿಸಿ ಪ್ಲೇಗ್ ಕಾಲದಲ್ಲಿ ಜನರಿಗೆ ಅತ್ಯಂತ ಸಾಧ್ಯವಾದ ಎಲ್ಲಾ ಸಹಾಯವನ್ನು ಕೊಟ್ಟು ಊರನ್ನು ಶುದ್ಧಮಾಡುವ ಹೊಸ ಏರ್ಪಾಡುಗಳನ್ನು ಮಾಡಿದ್ದಾರೆ. ಈ ಹೊಸ ಏರ್ಪಾಡುಗಳನ್ನು ಮಾಡಿದ್ದರಲ್ಲಿ ಕೆಲವರು ಜನಗಳಿಗೆ ಸ್ವಲ್ಪ ನಷ್ಟವಾಯಿತೆಂದು ಕೊಂಡರೂ ಅಂಥ ಏರ್ಪಾಡುಗಳಿಂದ ಊರಿಗೆ ಬಹು ಪ್ರಯೋಜನವಾಯಿತೆಂತ ತಿಳಿದುಕೊಂಡದ್ದು ಅವರ ಅಜ್ಞಾನವನ್ನೂ ಸ್ವಪ್ರಯೋಜನವಾದ ಲೋಭವನ್ನೂ ತೋರಿಸುತ್ತೆ.—ವ್ಯವಸಾಯ ಬ್ಯಾಂಕುಗಳ ಉತ್ಪತ್ತಿಕರವಾದ ವಿಷಯ ಲೋಕಪ್ರಸಿದ್ಧವಾಗಿದೆ. ಮೊದಲನೇದು ಕೆಲವರು ಕಾಫಿ ವ್ಯವಸಾಯಕ್ಕೆಂತ ಬಹು ಭಾರಿ ಮೊಬಲಗನ್ನು ತೆಗೆದುಕೊಂಡು ಅದನ್ನು ವ್ಯವಸಾಯಕ್ಕೇನೇ ಪ್ರಯೋಗಿಸಲಿಲ್ಲವೆಂತಲೂ ಚಮತ್ಕಾರಿಗಳಾದವರು ತಮ್ಮ ಮುಖ್ಯ ಜಮೀನುಗಳನ್ನು ಅಪ್ಪಲ್ ಜಮೀನು ಉಳ್ಳವರೊಂದಿಗೆ ಸೇರಿ ಆಧಾರ ಮಾಡಿ ಬಹು ಹೆಚ್ಚಾದ ಭಾಗವನ್ನು ತಾವೇ ಅನುಭವಿಸಿದರೆಂತಲೂ ಕಡೆಯಲ್ಲಿ ಬ್ಯಾಂಕಿನ ಸಾಲ ತೀರಿಸಲಾಗದಷ್ಟು ತಮ್ಮ ಕಷ್ಟಸ್ಥಿತಿಯನ್ನು ಪ್ರಕಟಿಸುತ್ತಿದ್ದಾರೆಂತಲೂ ಕೇಳಲಾಗಿದೆ. ಕಡೆಯಲ್ಲಿ ಸಾಧುವಾದ ಹಸು ತುಂಟ ಹಸುವಿನೊಂದಿಗೆ ಸೇರಿ ಕೆಟ್ಟಂತೆ ಅಪ್ಪಲ್ ಜಮೀನು ಕಳೆದುಕೊಳ್ಳಬೇಕಾಗಿದೆಯಂತೆ.—ಕೆಲವರು ತಾವೇ ದೊಡ್ಡ ಮನುಷ್ಯರೆಂತ ಭಾವಿಸಿಕೊಂಡು ಸರ್ಕಾರದ ನ್ಯಾಯಸ್ಥಾನಗಳಲ್ಲಿ ನಡೆಯಬೇಕಾದ ವ್ಯಾಜ್ಯಗಳನ್ನು ಪಂಚಾಯ್ತಿ ಮಾಡಿ ಅದರಿಂದ ನಾನಾ ಬಗೆಯಾಗಿ ಹಣ ವಸೂಲ್ಮಾಡಿಕೊಳ್ಳುತ್ತಾ ಕಕ್ಷಿಗಾರರಿಗೂ ಲಾಯರುಗಳಿಗೂ ಕೋರ್ಟುಗಳಿಗೂ ನಷ್ಟ ಉಂಟುಮಾಡುತ್ತಾರೆಂತ ಈಗಲೇ ಸಮಾಚಾರವಿದೆ. ಇದರ ಯಥಾರ್ಥಸ್ಥಿತಿ ಮುಂದೆ ಗೊತ್ತಾಗಬಹುದು.

ಶಿಡ್ಲಘಟ್ಟ.—ಈ ಊರಿನಲ್ಲಿ ಮಳೆ ವಿಪರೀತವಾಗಿದೆ. ೩—೪ ದಿವಸಗಳಿಂದ ಹಿಡಿದ ಮಳೆ ಇನ್ನೂ ಬಿಟ್ಟಿಲ್ಲ. ಊರಿನ ಸುತ್ತುಮುತ್ತಲು ಪೈರುಗಳು ಚೆನ್ನಾಗಿವೆ. ಊರಿನ ಮುಖ್ಯಾಗಳಲ್ಲಿ ಗ

ಪ್ರಕೆರೆಯಿಂದಲೂ ಅಮ್ಮನವರ ಕೆರೆಯಿಂದಲೂ ಎರಡಿವೆ. ಈ ಎರಡು ಕೆರೆಗಳು ತುಂಬಿ ಕೋಡಿಬಿದ್ದಿವೆ. ಇದುವರೆವಿಗೂ ಅಮ್ಮನವರ ಕೆರೆ ತುಂಬಿ ಕೋಡಿಬಿದ್ದಿದ್ದೇ ಕಾಣೆವೆಂದು ಜನರು ಅಂದುಕೊಳ್ಳುವರು. ಅದು ತುಂಬಿ ಕೋಡಿಬಿದ್ದರೆ ಜನಗಳಿಗೆ ಜೀವನಕ್ಕೆ ಕೊರತೆ ಇಲ್ಲವೆಂದೂ ಜನಗಳು ಹೇಳಿಕೊಳ್ಳುತ್ತಾರೆ. ನೂರಾರು ಜನರು ಹೋಗಿ ಕೋಡಿಬಿದ್ದಿರುವ ಸ್ಥಳವನ್ನು ನೋಡಿಕೊಂಡು ಬರುತ್ತಿದ್ದಾರೆ.—ಈ ತಿಂಗಳು ೫ನೇ ತಾರೀಖಿನಲ್ಲಿ ಬಂತ ವಾಯು ಇದುವರೆವಿಗೂ ಒಂದೇ ಸಮನಾಗಿ ಬೀಳುತ್ತಿರುತ್ತದೆ. ಊರಲ್ಲಿ ಸುಮಾರು ೪೦೦ ಚಿಲ್ಲರೆ ಮನೆಗಳು ಬಿದ್ದುಹೋಗಿವೆ ಎಂದು ಸಮಾಚಾರವಿದೆ. ಮುಕ್ಕಾಲುಪಾಲು ಜನರು ಪ್ಲೇಗಿನ ದೆಸೆಯಿಂದ ತಮ್ಮ ಮನೆಗಳನ್ನು ಬಿಟ್ಟು ಊರಿನ ಹೊರಗೆ ಜೋಪಡಿಗಳಲ್ಲಿ ವಾಸಮಾಡಿಕೊಂಡಿದ್ದಾರೆ. ಇನ್ನು ಕಾಲುಪಾಲು ಜನರು ಹೊರಗೆ ಹೋಗದೆ ಊರಿನಲ್ಲಿಯೇ ವಾಸಮಾಡಿಕೊಂಡಿದ್ದಾರೆ. ಹೊರಗೆ ಹೋಗಿದ್ದವರಲ್ಲಿ ಅನೇಕರು ಮಳೆಯ ಕಾಟವನ್ನು ಸಹಿಸಲಾರದೆ ಜೋಪಡಿಗಳನ್ನು ಬಿಟ್ಟು ಸಂಸಾರ ಮಕ್ಕಳ ಸಮೇತ ತಮ್ಮ ತಮ್ಮ ಮನೆಗಳಿಗೆ ಬಂದಿದ್ದಾರೆ. ಮನೆಗಳಿಗೆ ಡಿಸಿಂಫೆಕ್ಷನ್ ಮಾಡದೇನೆ ಅಥವಾ ಮನೆಗಳಿಗೆ ಸುಣ್ಣ ಹಚ್ಚದೆ ಹಾಗೇನೇ ವಾಸಮಾಡುತ್ತಿದ್ದಾರೆ. ಈ ವಿಷಯು ಸರ್ಕಾರದವರಿಗೆ ತಿಳಿದು ಕೊಳ್ಳೇಗಾಲದ ಡೆಪ್ಯುಟಿ ಕಮಿಷನರವರಿಗೆ ತಿಳಿಸಲು ಅವರು ೧೬ನೇ ತಾರೀಖಿನಲ್ಲಿ ಬಂದು ವಿಚಾರಣೆಮಾಡುತ್ತೇವೆಂದು ಬರೆದಿದ್ದ ಹಾಗೆ ವರ್ತಮಾನವಿದೆ.—ಈ ಊರಿನಲ್ಲಿ ದಿನಕ್ಕೆ ೧—೨ ಪ್ಲೇಗ್ ಕೇಸುಗಳು ಆಗುತ್ತಲೇ ಇವೆ ಎಂದೂ, ೧೩ನೇ ತಾರೀಖಿನಲ್ಲಿ ಮಾತ್ರ ಒಂದಾದರೂ ಪ್ಲೇಗ್ ಕೇಸು ಆಗಲಿಲ್ಲವೆಂದೂ ವರ್ತಮಾನವಿದೆ. ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟರು ಬಹು ಮುತುವರ್ಜಿಯಿಂದ ತಮ್ಮ ಕೆಲಸವನ್ನು ಮಾಡುತ್ತಿರುತ್ತಾರೆ. ಬೆಳಿಗ್ಗೆ ಸಾಯಂಕಾಲ ಪ್ಲೇಗಿನವರಿಗೆ ಔಷಧ ಕೊಡುತ್ತಾ ಊರಿನ ಆರೋಗ್ಯವಿಚಾರವನ್ನು ಕ್ರಮವಾಗಿ ನೋಡಿಕೊಳ್ಳುತ್ತಾ ಬರುತ್ತಾರೆ. ಒಂದೊಂದುಸರ್ತಿ ಇವರು ೪ ಘಂಟೆಯ ಲಾಗಾಯಿತು ೬ ಘಂಟೆಯ ವರೆವಿಗೂ ಬೀದಿಯಲ್ಲೆಲ್ಲಾ ಸುತ್ತುತ್ತಿರುತ್ತಾರೆ. ನಮ್ಮ ಅಮಲ್ದಾರರೂ ನಿತ್ಯ ಇವರೂ ಜನಗಳಿಗೋಸ್ಕರ ತೆಗೆದುಕೊಳ್ಳುವ ಪ್ರಯಾಸ ಅಷ್ಟಿಷ್ಟೆಂದು ಹೇಳುವದಕ್ಕಾಗದು. ಇಲ್ಲಿನ ರವಿನ್ಯೂ ಕೆಲಸನೋಡುವ ಶೇಕ್ದಾರನೊಬ್ಬನು ಬಹು ಪ್ರಾಮಾಣಿಕತನದಿಂದ ತನ್ನ ಕೆಲಸವನ್ನು ನೋಡುತ್ತಿರುತ್ತಾನೆ. ಇವನಿಗೆ ೭ ರೂಪಾಯಿನಂತೆ ಸಂಬಳ ಕೊಡುತ್ತಿರುತ್ತಾರೆ. ಇವನು ಪಡುವ ಕಷ್ಟವನ್ನು ಸರ್ಕಾರದವರು ನೋಡಿ ಇವನಿಗೆ ಇನ್ನೂ ೩ ರೂಪಾಯಿ ಹೆಚ್ಚು ಕೊಡುವಂತೆ ಆರ್ಡರ್ ಆಗಿದೆ ಎಂದು ವರ್ತಮಾನ ಕೇಳಿ ಜನರು ಸಂತೋಷಪಡುವರು.

ತೀರ್ಥಹಳ್ಳಿ.—ಅಮಲ್ದಾರರು ಒಂದೆರಡು ತಿಂಗಳಿಂದಲೂ ಜಮಾಬಂದಿಯಲ್ಲಿಯೇ ನಿರತರಾಗಿದ್ದಾರೆ. ತೀರ್ಥಹಳ್ಳಿಯ ಮುನಿಸಿಪಾಲ್ಟಿಯ ಸ್ಥಿತಿಯು ಅನೇಕ ವಿಷಯಗಳಲ್ಲಿ ಹೀನಸ್ಥಿತಿಯಲ್ಲಿದೆ. ಈ ಊರಿಗೆ ಮಾಮೂಲ್ ನಾಲ್ಕೇ ಸಣ್ಣ ಸಣ್ಣ ರಸ್ತೆಗಳಿವೆ ಸ್ವಲ್ಪ ಕಡಿದಾದ ಎತ್ತರಗಳನ್ನು ಬಹು ಶುದ್ಧವಾಗಿಟ್ಟಿರಬಹುದು. ಆದರೆ ಇದಕ್ಕೆ ಬದಲಾಗಿ ಚಿಕ್ಕ ರಸ್ತೆಗಳೆಲ್ಲಾ ಪಾಯಖಾನೆ ಸ್ಥಳಗಳಾಗಿ ಹರಿದ ಹೋಗುವ ಕಕ್ಕಸ್ಸು ನೀರು ನಿಂತು ದುರ್ವಾಸನೆ ಹುಟ್ಟುವದಕ್ಕೂ ಅನುಕೂಲವಾಗಿವೆ. ಲಾಂದ್ರಗಳು ಕ್ರಮವಾಗಿ ಉರಿಯುವದೇ ಅಪರೂಪ, ಅಥವಾ ಉರಿದರೂ ಮಧ್ಯರಾತ್ರಿಯಲ್ಲಿಯೇ ನಂದಿಹೋಗುವವು. ಅಥವಾ ಮಿಂಚುಹುಳುಗಳ ಪ್ರಕಾಶಕ್ಕಿಂತ ಹೀನವಾಗಿ ಬೆಳಕು ತೋರುವವು. ಎಲ್ಲಾ ತಾಲ್ಲೂಕುಗಳಂತೆ ಇಲ್ಲಿ ಕ್ಲಾರ್ಕನೊಬ್ಬ ಇದ್ದರೂ ಉಪಯೋಗವಿಲ್ಲವೆಂದು ಜನರು ಹೇಳಿಕೊಳ್ಳುತ್ತಾರೆ. ಯಾಕೆಂದರೆ ತಪ್ಪಿಹಾರಿ ಎಲ್ಲಾದರು ಬಡಸ್ಪೃತರ ದನಕರುಗಳು ದೊಡ್ಡಿಗೆ ಬಂದರೆ ಮೂರು ಆಣೆ ನಾಲ್ಕಾಣೆ ಹುಟ್ಟುವದೇ ಹೊರ್ತು, ಬಾಕಿ ಸಾಹುಕಾರರ ದನಗಳು ಸರ್ಕಾರಿ ನೌಕರರ ದನಗಳು ದೊಡ್ಡಿಗೆ ಬಂದರೆ ಹುಲ್ಲು ನೀರು ಹಾಕಿದ್ದು ದಂಡವೇ ಹೊರ್ತು ಮತ್ತೇನೂ ಪ್ರಯೋಜನವಿಲ್ಲ. ಇನ್ನೊಂದು ವಿಶೇಷವೇನೆಂದರೆ, ಜನಸಿ ನಮುಂಕಾದ ವ್ಯಾಪಾರದ ಮೇಲೆ ಅಂಗಡಿಯವರಿಂದಲೂ ವ್ಯಾಪಾರಸ್ಥರಿಂದಲೂ ವಿಪರೀತ ತೆರಿಗೆ ವಸೂಲ್ ಆದಾಗ್ಯೂ ಸರ್ಕಾರಕ್ಕೆ ಬರು ಕೊಡುವ ದ್ರವ್ಯ ಸಲ್ಲುತ್ತದೆಂದು ಎಲ್ಲರು ಹೇಳುತ್ತಾರೆ. ಈ ಸಂಗತಿಯ ವಿಷಯು ಅನೇಕ ಅರ್ಜಿಗಳು ಡೆಪ್ಯುಟಿ ಕಮಿಷನರಲ್ಲಿ ಹೋದಾಗ್ಯೂ ನೊಬ್ಬು ವಿಚಾರಿಸದೆ ಇರುವದು ಬಹು ಶೋಚನೀಯವಾಗಿ ಕಾಣುತ್ತದೆ.—ಈ ಊರಿನಲ್ಲಿರುವ ಎ. ವಿ. ಸ್ಕೂಲಿನಲ್ಲಿ ಹೆಡ್ಮಾಸ್ತರು ಮೊದಲುಗೊಂಡು ಎಲ್ಲಾ ಉಪಾಧ್ಯಾಯರು ಸ್ಥಳಿಕರೇ ಆಗಿದ್ದಾರೆ. ಅದ್ದರಿಂದ ಸ್ಕೂಲಿನಲ್ಲಿ ಹುಡುಗರು ಅಭಿವೃದ್ಧಿ ಹೊಂದಲು ಅವಕಾಶವಿಲ್ಲವೆಂದು ಜನರು ಹೇಳುತ್ತಾರೆ. ಇದೇ ಕಾರಣದಿಂದಲೇನೋ ಕಳೆದ ತಿಂಗಳು ಇಬ್ಬರಿಗೆ ಬೇರೆ ಕಡೆಗೆ ವರ್ಗವಾಯಿತು.—ಇಲ್ಲಿ ಹತ್ತು ವರುಷಗಳಿಂದಲೂ ವಾಯಿದಾದಲಾಗಿದ್ದ ಡಾಕ್ಟರು ಈಗ ತಾವೇ ಕಳೆದವಾರ ರಜದಿಂದ ಬಂದು ಚಾರ್ಜ್ ವಹಿಸಿಕೊಂಡಿದ್ದಾರೆ. ಅವರ ಬದಲಿಗೆ ಶಿವಮೊಗ್ಗ ಸಿವಿಲ್ ಆಸ್ಪತ್ರೆಯಿಂದ ಬಂದಿದ್ದ ಡಾಕ್ಟರು ಚಾರ್ಜ್ ವಹಿಸಿಕೊಟ್ಟು ಪ್ರಯಾಣ ಬೆಳಸಿದರು. ಅವರು ವಿನಾಯಿಲ್ಲದೆ ರೋಗಿಗಳನ್ನು ವಿಚಾರಿಸಿ ಔಷಧಿ ಕೊಟ್ಟು, ಎರಡು ತಿಂಗಳಲ್ಲೇ ಬಹು ಜನರ ಪ್ರೀತಿಗೆ ಪಾತ್ರರಾಗಿ ಜನರು ಪಡೆಕೊಂಡರು.—ಕಳೆದವಾರ ತೀರ್ಥಹಳ್ಳಿಗೆ ಸೇರಿದ ನಾಲೂರಿನ ಮಿಷನ್ ಸ್ಕೂಲನ್ನು ಪರೀಕ್ಷಿಸಲು ನೂತನ ಕಟ್ಟಡವನ್ನು ಕಟ್ಟಿಸುವದಕ್ಕೆ ಅಸ್ತಿವಾರ ಕೊಡಲು ಮೈಸೂರು ವೆಸ್ಲಿಯನ್ ಮಿಷನ್ ಸಂಘದ ಅಧ್ಯಕ್ಷರಾದ ರೆವರೆಂಡ್ ಹೆಚ್ ರೀಸ್ ದೊರೆಗಳು ಫಾದರ್ ನೈಟಿಂಗೇಲ್ ದೊರೆಗಳು ದಯಮಾಡಿದ್ದರು. ಹುಡುಗರನ್ನು ಕೆಲವು ವಿಷಯಗಳಲ್ಲಿ ಪರೀಕ್ಷಿಸಿ ಬಾಲಕರ ಅಭಿವೃದ್ಧಿಗಾಗಿ ಬಹಳ ಸಂತೋಷಪಟ್ಟರು. ಬಾಲಕರಿಗೆ ಸಂತೋಷಪಡಿಸಿ ಕಟ್ಟುವ ಸ್ಥಳವನ್ನು ಪರಾಂಬರಿಸಿ ವಾಪಸ್ ದಯಮಾಡಿಸಿದರು. ಈ ದೊರೆಗಳ ಭೇಟಿಯು ನಾಲೂರಿನ ತೀರ್ಥಹಳ್ಳಿಯ ನಿವಾಸಿಗಳಿಗೂ ಬಾಲಕರಿಗೂ ಬಹಳ ಆನಂದಕರವಾಗಿತ್ತು. ಇದಕ್ಕೆ ಎರಡು ವಾರಗಳ ಹಿಂದೆ ಅಸಿಸ್ಟೆಂಟ್ ಡೆಪ್ಯುಟಿ ಇನ್ಸ್ಪೆಕ್ಟರು ನಾಲೂರಿನ ಮಿಷನ್ ಸ್ಕೂಲನ್ನು ಪರೀಕ್ಷಿಸಿ, ಇದು ಒಳ್ಳೇ ಅಭಿವೃದ್ಧಿಯಲ್ಲಿದೆ ಎಂತಲೂ ಬಾಲಕರು ಬಹು ಮುಂದಕ್ಕೆ ಬಂದಿದ್ದಾರೆಂತಲೂ ಒಳ್ಳೇ ಕ್ರಮದಲ್ಲಿದೆ ಎಂತಲೂ ಹೇಳಿಹೋದರು.

ಚನ್ನರಾಯಪಟ್ಣ.—ಈಗ ಬಿಡಬಿಡದೆ ಮಳೆಯು ಸುರಿಯುತ್ತಾ ಇರುವದರಿಂದ ಎಲ್ಲೆಲ್ಲೂ ಜ್ವರ ಕೆಮ್ಮಲು ಕಾಣಿಸಿಕೊಂಡಿದೆ. ರೈತರು ಕೈಗೆ ಬಂದಿರುವ ರಾಗಿ ಫಸಲು ಕೆಟ್ಟುಹೋಗುವ ಹೊತ್ತು ಬಂತಲ್ಲಾ ಎಂದು ಮರುಗುತ್ತಾರೆ. ಇಂಥಾದ್ದರಲ್ಲಿ ಪ್ಲೇಗ್ ಸುರುವಾಗಿ ಎರಡು ಮೂರು ಇಸಂ ಪೌತಿಯಾಗಿ ಇನ್ನು ಮೂರು ನಾಲ್ಕು ಇಸಂಗೆ ಜ್ವರ ಕಾಯುತ್ತಾ ಇದೆ. ಈ ಸಮಯದಲ್ಲಿ ನಮ್ಮ ಆಸ್ಪಟಲ್ ಅಸಿಸ್ಟೆಂಟ್ ಮೆ॥ ಕಾಂತಪ್ಪಶೆಟ್ಟಿಯವರು, ಕಾಂಪೌಂಡರ್ ಸುಬ್ಬರಾಯರು ಪ್ರತಿದಿನ ಹೊತ್ತಾರೆ ಸಾಯಂಕಾಲ ಊರಲ್ಲಿ ಪ್ಲೇಗ್ ತಗಲಿದವರ ಮನೆಗೆ ಹೋಗಿ ರೋಗಿಗಳನ್ನು ಬಹು ಜಾಗ್ರತೆಯಿಂದ ಪರಾಂಬರಿಸಿ, ಔಷಧೋಪಚಾರ ಮಾಡುತ್ತಾ ಬರುತ್ತಾರೆ. ಇವರು ಮೂರು ನಾಲ್ಕು ಪ್ಲೇಗ್ ರೋಗಿಗಳನ್ನು ಗುಣಮಾಡಿದ್ದಾರೆಂದು ಕೇಳುತ್ತೇನೆ. ಈಗ ಎಲ್ಲರೂ ಗುಡಿಸಲು ಹಾಕುತ್ತಾ ಸಾಮಾನ್ ಸಾರಿಗೆ ಸಾಗಿಸುತ್ತ ಇರುತ್ತಾರೆ. ಈ ಕಾಲದಲ್ಲಿ ಬಡವರ ಕಷ್ಟವನ್ನು ಏನೆಂದು ಹೇಳಲಿ! ಈಗ ಮಳೆಗಾಲವಾಗಿದೆ. ಜೋಪಡಿ ಒದ್ದಿಕೊಳ್ಳುವದಕ್ಕೆ ಬೊಂಬು, ಬಾಚ, ಹುಲ್ಲು ಸಿಕ್ಕುವದು ತುಂಬಾ ದುಸ್ತರ. ಇಲ್ಲಿ ಒಂದಕ್ಕೆ ಎರಡರಷ್ಟು ಕೊಟ್ಟರೂ ಸಿಕ್ಕುವದು ಕಷ್ಟ. ಇದಲ್ಲದೆ ಮರಗಳ ಕೊಂಬೆಗಳನ್ನು ಕಡಿಯಬಾರದೆಂದು ಸರ್ಕಾರದ ಅಪ್ಪಣೆಯಾಗಿದೆ. ಅಪ್ಪಣೆ ಕೊಟ್ಟರೆ ಮರಗಳನ್ನೆಲ್ಲಾ ಬೋಳು ಮಾಡಿ ಸರ್ಕಾರಕ್ಕೆ ಲುಕ್ಸಾನು ಮಾಡುವದಲ್ಲದೆ ಅನೇಕರು ಒಂದು ವರ್ಷಕ್ಕೆ ಆಗುವಷ್ಟು ಸೌದೆ ಮಾಡಿಕೊಳ್ಳುತ್ತಾರೆ. ಅಪ್ಪಣೆ ಕೊಡದಿದ್ದರೆ ಸಂಕಟಪಡುತ್ತಾರೆ. ಈ ವಿಷಯಕ್ಕೆ ಎರಡು ಕಡೆಯೂ ಸಮಾಧಾನಪಡುವದಕ್ಕೆ ಆಗುವದಿಲ್ಲ. ಆದರೆ ಒಂದಕ್ಕೆ ಮಾತ್ರ ಸಂತೋಷಪಡಬೇಕಾಗಿದೆ. ಏನೆಂದರೆ ಪ್ಲೇಗ್ ರೋಗವೆಂದು ಜನಗಳಿಗೆ ಗೊತ್ತಾದ ಕೂಡಲೆ ಎಲ್ಲರೂ ಊರುಬಿಟ್ಟರು. ಕೆಲವರು ಮಾತ್ರ ಊರಲ್ಲಿ ಇದ್ದರು. ಅವರೆಲ್ಲರಿಗೆ ನಮ್ಮ ಅಮಲ್ದಾರರು ತಿಳುವಳಿಕೆ ಹೇಳಿದ್ದರಿಂದ ಅವರು ಸಹ ಈ ಹೊತ್ತು ಊರು ಬಿಟ್ಟರೆಂದು ತೋರುತ್ತೆ. ಆದರೆ ಬಾಗೂರಿನವರು ಪ್ಲೇಗ್ ಬಂದಾಗ ಊರು ಬಿಡುವ ದೇವತೆಯನ್ನು ವಿಚಾರಿಸಿದರಂತೆ. ಆ ದೇವತೆಯು—"ನಾನು ಇರುತ್ತೇನೆ, ನೀವು ಭಯಪಡಬೇಡಿರಿ" ಎಂದು ಅಭಯವನ್ನು ಕೊಟ್ಟದ್ದರಿಂದ ಅವರು ಊರುಬಿಡಲಿಲ್ಲ. ಈಚೆಗೆ ಮೂವತ್ತು ನಲವತ್ತು ಜನರು ಮರಣಕ್ಕೆ ತುತ್ತಾದನಂತರ ಪುನಃ ದೇವತೆಯನ್ನು ವಿಚಾರಿಸಲು ಅದು—"ಹನ್ನೆರಡು ಮಂದಿ ಬಲಿಷ್ಠರಾದ ದೇವತೆಗಳು ಬಂದಿದ್ದಾರೆ. ಅವರಲ್ಲಿ ಮೂವರನ್ನು ಬಲವಾಗಿ ಕಟ್ಟಿಕೊಂಡು ಅವರನ್ನು ಓಡಿಸಿಬಿಟ್ಟೆನು. ಬಾಕಿ ಒಂಭತ್ತು ಮಂದಿಯನ್ನು ತಪ್ಪಿಸಿಕೊಳ್ಳುವದಕ್ಕೆ ಆಗಲಿಲ್ಲ. ಈಗ ನಿಮಗೆ ತೋರಿದ ಪ್ರಕಾರ ನೀವು ಮಾಡಿಕೊಳ್ಳಿರಿ" ಎಂದು ಉತ್ತರ ಕೊಟ್ಟಿತಂತೆ. ಅನಂತರ ಸರ್ವರೂ ಊರುಬಿಟ್ಟರು.—ಮಿಷನ್ ಸ್ಕೂಲು ಪೇಟೆಗೆ ಸೇರಿರುವದರಿಂದಲೂ, ಪೇಟೆಯಲ್ಲಿಯೇ ಪ್ಲೇಗ್ ತುಂಬಿರುವದರಿಂದಲೂ ಒಬ್ಬ ವಿದ್ಯಾರ್ಥಿನಿಯಾದರೂ ಸ್ಕೂಲಿಗೆ ಬರಲು ಅನುಕೂಲವಿಲ್ಲದ್ದರಿಂದ ಸ್ಕೂಲು ಮುಚ್ಚಿದೆ ಎಂದು ಹೇಳಬಹುದು. ಸರ್ಕಾರಿ ಸ್ಕೂಲು ಕೋಟೆಗೆ ಸಮೀಪವಾಗಿದೆ. ಒಂಭತ್ತು ಮಾತ್ರ ಸ್ಕೂಲು ಮಾಡುತ್ತಾರೆಂದು ತೋರುತ್ತೆ. ಈ ಹೊತ್ತು ಹೊಸದಾಗಿ ೩ ಪ್ಲೇಗ್ ಕೇಸಾಗಿದೆ. ಈಗ ಬಂದ ಪ್ಲೇಗ್ ಬಹಳ ಭಯಂಕರವಾದದ್ದೆಂದು ತೋರುತ್ತೆ. ಸದ್ಯಕ್ಕೆ ಈ ಕಾಲದಲ್ಲಿ ಕಳ್ಳರ ಉಪಾಂತ್ರ ಜೋರಾಗದಂತೆ ಪೋಲೀಸ್ ಅಧಿಕಾರಿಗಳು ಬಹಳ ಎಚ್ಚರಿಕೆ ತೆಗೆದುಕೊಳ್ಳಬೇಕಾಗಿದೆ.—ನಿನ್ನೆ ಶುಕ್ರವಾರ ರಾತ್ರಿ ಸುಮಾರು ೬ ಗಂಟೆಯಲ್ಲಿ ವೈಶ್ಯರ ಪುಟ್ಟಸ್ವಾಮೈಯ್ಯನ ಮಗಳು ರಂಗಮ್ಮನೆಂಬಾಕೆಯು ಪ್ಲೇಗಿನಿಂದ ಮೃತಪಟ್ಟಳು. ಈಕೆಗೆ ೩—೪ ದಿನಗಳಿಂದ ಜ್ವರ ಬರುತ್ತಾ ಇತ್ತು. ಜಾತ್ತಿಗೆಯಲ್ಲಿ ಬಹಳ ದಪ್ಪನಾದ ಗಡ್ಡೆ ಬಂದಿತ್ತು. ಇದು ಸರ್ಕಾರಕ್ಕೆ ತಿಳಿಸದೆ ಗುಟ್ಟಾಗಿ ಮರೆಮಾಡಿದರು. ಕಳೆದ ಬೃಹಸ್ಪತಿವಾರ ಈ ಊರು ಪಟೇಲ ಸಂಜೆದ್ದಸು ಪತ್ತೆ ಮಾಡಿ ಸರ್ಕಾರಕ್ಕೆ ತಿಳಿಸಿದ್ದರ ಮೇಲೆ ನಮ್ಮ ಅಮಲ್ದಾರ್ರು ಸಹ ಬಂದು ನೋಡಿದಾಗ ಅದು ಗಡ್ಡೆ ಗಟ್ಟಿ ಎಂಬಡಾಗಿ ತಂದೆ ತಾಯಿಗಳಿಬ್ಬರೂ ಹೇಳಿದರು. ಅದೇ ರಾತ್ರಿ ಆಕೆ ಸತ್ತುಹೋದಳು. ಬೆಳಿಗ್ಗೆ ಶವವನ್ನು ತೆಗೆದುಕೊಂಡು ಹೋಗುವದಕ್ಕೆ ವೈಶ್ಯರನ್ನು ಸೇರಿಸುವದು ಬಹು ಪ್ರಯಾಸವಾಯಿತು. ಕಡೆಗೆ ಇಬ್ಬರು ಮಾತ್ರ ಹೆಣವನ್ನು ಹೊರುವದಕ್ಕೆ ಒಪ್ಪಿಕೊಂಡರು. ಹಿಂಭಾಗದಲ್ಲಿ ತಂದೆ ಒಬ್ಬನೇ ಹೊತ್ತುಕೊಂಡನು. ಮುಂಭಾಗದಲ್ಲಿ ಇಬ್ಬರು ಕೈಕೊಟ್ಟರು. ಇವರು ಹೆಣವನ್ನು ತೆಗೆದುಕೊಂಡು ಹೋಗಿ ಊರ ಒಳಗೆ ಇರುವ ಒಕ್ಕಲೆಗರಮ್ಮನ ದೇವಸ್ಥಾನದ ಹತ್ತಿರ ದಸೀ ಸೌದೆ ಹಾಕಿ ಅದರ ಮೇಲೆ ಹೆಣವನ್ನು ಇಟ್ಟು ಒಂದು ಟಿನ್ ಸೀಮೆ ಎಣ್ಣೆ ಹೊಯ್ದು ಯಾರಿಗೂ ಗೊತ್ತಿಲ್ಲದಂತೆ ಸ್ನಾನ ಮಾಡುವದಕ್ಕೆ ಹೊರಟುಹೋದರು. ನಂತರ ಆ ಎಣ್ಣೆ ಎಲ್ಲಾ ಉರಿದು ಊರೆಲ್ಲಾ ಹೊಗೆಯೂ ಹೆಣದ ವಾಸನೆಯೂ ಹತ್ತಿಕೊಂಡಿತು. ವಿಶೇಷವಾಗಿ ಮುಸಲ್ಮಾನರ ಕೇರಿಗೆ ಪಾನೆ ತುಂಬಿದ್ದರಿಂದ ಅನ್ನ ತಿನ್ನುತ್ತಿದ್ದವರೂ ಸಹ ಚೆಲ್ಲಿಬಿಟ್ಟು ಊರೆಲ್ಲಾ ಗೊಂದಲವಾಯಿತು. ಕೂಡಲೆ ಈ ಸಂಗತಿಯನ್ನು ಅಮಲ್ದಾರ್ರಿಗೆ ತಿಳಿಸಿದರು. ಅವರು ಪೋಲೀಸಿನವರನ್ನು ಕಳುಹಿಸಿಕೊಟ್ಟರು. ಜನರೆಲ್ಲರೂ, ವಿಶೇಷವಾಗಿ ಮುಸಲ್ಮಾನರು ಕೋಪೋದ್ರೇಕದಿಂದ ಕೆಟ್ಟಮಾತುಗಳನ್ನು ಬೈಯುತ್ತಾ ವೈಶ್ಯರ ಪಿನ್ನಟ್ಟಿ ಅವರನ್ನೆಲ್ಲಾ ಹಿಂದಕ್ಕೆ ಕರೆತಂದರು. ಅವರು—"ನಮಗೆ ಬುದ್ಧಿ ಬರಲಿಲ್ಲ. ನಾವು ಮಾಡಿದ್ದು ಏನು ಎಂದು ನಮಗೆ ತಿಳಿಯಲಿಲ್ಲ; ಕ್ಷಮಿಸಿರಪ್ಪ" ಎಂಬ ಪ್ರತ್ಯುಕ್ತಿಗಳನ್ನು ತೆಗೆದರು. ಆದರೂ ಜನರು ಬಿಡದೆ ಅವರನ್ನು ಕರೆದುಕೊಂಡು ಹೋಗಿ ಹೆಣದ ಮೇಲೆ ನೀರು ಹಾಕಿಸಿ, ಅರ್ಧಭಾಗ ಸುಟ್ಟಿದ್ದ ಹೆಣವನ್ನು ತಿರಿಗಿ ಗೋಣಿಚೀಲದಲ್ಲಿ ಸುತ್ತಿಸಿ, ಅವರೇ ಕಟ್ಟಿಸಿ ಹೊತ್ತುಕೊಂಡು ಹೋಗುವಂತೆ ಮಾಡಿದರು. ಆ ಬೆಂದ ಹೆಣವನ್ನು ಹೊತ್ತುಕೊಂಡು ಹೋಗುವಂತೆ ಇಬ್ಬರು ಒಡ್ಡರನ್ನು ಕರೆದಿದ್ದರು. ಜನರೆಲ್ಲರೂ ಅವರನ್ನು ಭಯಪಡಿಸಿ ಬೇರೆ ಕಡೆಗೆ ಹೋಗಿ ಬಿಡುವಂತೆ ಮಾಡಿದರು, ಕಡೆಗೆ ವೈಶ್ಯರೇ ಹೊರಬೇಕಾಯಿತು. ಊರೊಳಗೆ ಬರುವದಕ್ಕೆ ಬಿಡಲಿಲ್ಲ. ಆಚೆ ಹೋಗುವದಕ್ಕೆ ಸುತ್ತುಮುತ್ತಲೂ ಗುಡಿಸಲು ಕಟ್ಟಿಕೊಂಡಿರುವವರು ಬಿಡಲಿಲ್ಲ. ಕಡೆಗೆ ಅವರು ಹೆಣವನ್ನು ಹೊಲದಲ್ಲಿ ಅಲ್ಲಲ್ಲಿ ಇಟ್ಟುಕೊಂಡು ಸುಧಾರಿಸಿಕೊಂಡು, ಕೆರೆಯ ದಂಡೆಯಲ್ಲಿ ಹಾಡು ಗುಂಡ್ಯ್ಳ ಕಲ್ಲುಮಟ್ಟದಲ್ಲಿ ಹಾಕಿ ಬರುವಾಗ್ಯ ಸಾಯಂಕಾಲ ೩—೪ ಘಂಟೆ ಆಯಿತು. ಇದೇ ಪುಟ್ಟಸ್ವಾಮೈಯ್ಯನ ಮಗಳು ತೀರಿಹೋದನಂತರ ಆತನ ಹೆಂಡತಿಗೆ ಪ್ಲೇಗ್ ಕಾಣಿಸಿಕೊಂಡು, ನೆನ್ನೆ ಮೃತಪಟ್ಟಳು. ಕಾಲಸ್ಥರು ಯಾರೂ ಹೆಣ ಹೊರುವದಕ್ಕೆ ಬಾರದೆ ಹೋದ್ದರಿಂದ ಮುನಿಸಿಪಲ್ ಕಕ್ಕಸ್ಸು ಗಾಡಿಯಲ್ಲಿ ಸಾಗಿಸಿ, ಜಾಡಮಾಲಿಗಳನ್ನು ಕಳುಹಿಕೊಟ್ಟಿರುತ್ತಾರೆ. ಈಕೆ ತನ್ನ ತಾಯಿ ಮನೆಯಲ್ಲಿ ಸತ್ತದ್ದರಿಂದ ಅದೇ ಮನೆಯಲ್ಲಿ ಇನ್ನು ಇದ್ದರು ಮೂವರಿಗೆ ಪ್ಲೇಗ್ ಕಾಣಿಸಿಕೊಂಡಿದೆ. ಅವರೆಲ್ಲಾ ಒಂದು ಮಂಟಪದಲ್ಲಿರುತ್ತಾರೆ. ಕಷ್ಟಕಾಲಕ್ಕೆ ಕಾಲಸ್ಥರೆಲ್ಲಾ ಸಹಾಯ ಮಾಡುವದು ಧರ್ಮವಾಗಿದೆ. ಈಗ ವೈಶ್ಯರ ಪುಟ್ಟಸ್ವಾಮೈಯ್ಯನ ವ್ಯಸನವನ್ನು ಹೇಳುವದಕ್ಕಾಗದು. ಸುತ್ತಮುತ್ತಲೂ ಗಲಾಟೆ ಇರುವದರಿಂದ ನಮ್ಮ ಅಮಲ್ದಾರ್ರಿಗೆ ಸಹ ಬಹಳ ಕೆಲಸವಿದೆ. ಅವರು ಹಿರಿಸಾವೆ ಪ್ರಾಂತ್ಯ ಸರ್ಕೀಟ್ ಹೋಗಿರುತ್ತಾರೆ. ಈಗ ನಮ್ಮ ಶೇಕ್ದಾರ್ರು ಜಪ್ತದಲ್ಲಿ ಬಿದ್ದಿರುವ ರೋಗಿಗಳಿಗೆ ಹಾಲು ಮೊದಲಾದ ಉಪಚಾರವನ್ನು ಮಾಡುತ್ತ ಇರುವದನ್ನು ನೋಡುವವರು ಅವರ ಪ್ರೀತಿಗಾಗಿಯೂ, ಉಪಕಾರಕ್ಕಾಗಿಯೂ, ಅವರನ್ನು ಬಹಳವಾಗಿ ಹೊಗಳುವರು. ಸಬ್ ರೆಜಿಸ್ಟ್ರಾರ್ ಮೆ॥ ವೆಂಕ್ಟಯಶೆಟ್ಟರು ಸಹ ತಮ್ಮ ಕಾಲಸ್ಥರಾದ ರೋಗಿಗಳ ವಿಷಯ ಹೆಚ್ಚು ಚಿಂತೆಪಟ್ಟು ತಮ್ಮ ಕೈಲಾದಷ್ಟು ಸಹಾಯ ಮಾಡುತ್ತಾರೆ.

---

## ವಿದೇಶ ವರ್ತಮಾನಗಳು.

ಅಮೆರಿಕದಲ್ಲಿ ಅಹೋನಾವೆಂಬ ದ್ವೀಪದಲ್ಲಿ ಸರ್ಕಾರದವರು ಕೂಡಿರಿಸಿದ್ದ ಮದ್ದಿನ ಮನೆ ಸಿಡಿದು ೧೬ ಮಂದಿ ಕೊಲ್ಲಲ್ಪಟ್ಟರು, ಅನೇಕರಿಗೆ ಗಾಯವಾಯಿತು.

****

ಕಳೆದ ತಿಂಗಳ ೧೫ನೆ ತಾರೀಖು ರಾತ್ರಿ ಲಂಡನ್ ಪಟ್ಟಣದ ಒಂದಾನೊಂದು ಜವಾಹಿರಖಾನೆಯಲ್ಲಿ ವಿಕರಿಗಾಗಿ ಇಟ್ಟಿದ್ದ ಒಂದು ವರೆ ಲಕ್ಷ ರೂಪಾಯಿನ ನಗಗಳು ಕಳುವಾದವು. ಇನ್ನೂ ತಪಾಸು ನಡೆಯುತ್ತಿದೆ.

****

ಆಫ್ರಿಕದಲ್ಲಿ ಜರ್ಮನ್ ರಾಜ್ಯದವರಿಗೆ ಸೇರಿದ ನೈಋತ್ಯಭಾಗದ ಪರದೇಶೀಯರು ವಾರ್ಮ್ಬಾದೆಂಬ ಕೋಟೆಯಲ್ಲಿರಲು ಅವರೆಲ್ಲರನ್ನೂ ದೇಶೀಯರಾದ ಬಾಂಡಲ್ಸ್ವಾರ್ಟ್ಸರು ಕೊಂದುಹಾಕಿ, ಬ್ರಿಟಿಷ್ ಪ್ರವಾಸದವರನ್ನು ಮಾತ್ರ ಕೊಲ್ಲದೆ ಬಿಟ್ಟರೆಂದು ವರ್ತಮಾನ ಬಂದಿದೆ.

****

ರಷ್ಯಾ ಚಕ್ರವರ್ತಿಯವರು ಜರ್ಮನಿಗೆ ಭೇಟಿಗಾಗಿ ವೀಸ್ಬಾಡೆನ್ ಎಂಬ ಪಟ್ಟಣಕ್ಕೆ ಹೋಗಿರುವಲ್ಲಿ ಪಟ್ಟಣದೊಳಗೆಲ್ಲಾ ಸಾವಿರಾರು ಮಂದಿ ಸಿಪಾಯಿಗಳನ್ನು ಕಾವಲಿರಿಸಿದ್ದರು. ಅರಮನೆಯ ಬಳಿಯಲ್ಲಿರುವ ಬೀದಿಗಳಲ್ಲಿ ಪುರಜನಗಳನ್ನು ಬಿಡಲಿಲ್ಲ. ಮನೆಗಳ ಬಾಗಿಲಾಗಲಿ ಕಿಟಕಿಗಳಾಗಲಿ ಒಬ್ಬರನ್ನೂ ನಿಲ್ಲಗೊಡಲಿಲ್ಲ.

****

ತುರ್ಕಿಗೆ ಸೇರಿದ ಅರೇಬ್ಯದಲ್ಲಿ ಪ್ರಜೆಗಳು ದಂಗೆಯೆದ್ದು ಅಸ್ಸೀರ್ ಎಂಬಲ್ಲಿ ತುರ್ಕಿ ಸೇನೆಯನ್ನು ಸಂಪೂರ್ಣವಾಗಿ ಸೋಲಿಸಿದರು. ತುರ್ಕಿಯವರು ಐದು ಫಿರಂಗಿಗಳನ್ನು ಕಳಕೊಂಡರು. ಆದಕಾರಣ ದಂಗೆಯನ್ನು ಅಡಗಿಸುವದಕ್ಕಾಗಿ ರಷ್ಯದವರಿಗೆ ಸೇರಿದ ಎರಡು ಹಡಗುಗಳನ್ನು ಬಾಡಿಗೆಗೆ ಗೊತ್ತುಮಾಡಿ ಕೆಂಪುಸಮುದ್ರದ ಬಳಿಯಲ್ಲಿರುವ ಹೊದೈದಾ ಎಂಬ ತೀರಪಟ್ಟಣಕ್ಕೆ ಬೇರೆ ಸೈನ್ಯಗಳನ್ನು ಕಳುಹಿಸಿಕೊಡುವವರಾಗಿದ್ದಾರೆ

****

ಲಂಡನ್ ನಗರದ ರೇವುಗಳಲ್ಲಿ ಹಡಗುಗಳನ್ನೂ ದೋಣಿಗಳನ್ನೂ ತಂದು ನಿಲ್ಲಿಸಿಕೊಂಡು, ಅವುಗಳೊಳಗಿರತಕ್ಕ ಸಾಮಾನು ಧಾನ್ಯ ಮುಂತಾದವುಗಳನ್ನು ದೊಡ್ಡ ದೊಡ್ಡ ಸರ್ಕಾರಿ ಕಟ್ಟಡಗಳಲ್ಲಿ ತುಂಬುತ್ತಾರಷ್ಟೆ. ಈ ಸಾಮಾನಿಗೆ ಇಲಿ ಹೆಗ್ಗಣಗಳು ವ್ಯತ್ಯ ಪ್ರಾಯವಾಗಿ ಎಲ್ಲವನ್ನೂ ನಾಶಪಡಿಸುವವು. ಆದುದರಿಂದ ಸರ್ಕಾರದವರು ಅವುಗಳನ್ನು ಹಿಡಿಸಿ ಕೊಲ್ಲಿಸುವುದಕ್ಕೆ ತುಂಬಾ ಮುತುವರ್ಜಿ ಮಾಡುವರು. ಕಳೆದ ನಾಲ್ಕಾರು ತಿಂಗಳಲ್ಲಿ ಎಂಟುವರೆ ಲಕ್ಷ ಇಲಿ ಹೆಗ್ಗಣಗಳನ್ನು ಅಲ್ಲಿ ಸಂಹಾರಮಾಡಿರುವಂತೆ ಪ್ರಕಟವಾಗಿದೆ.

****

ಕೆಲವು ದಿನಗಳ ಹಿಂದೆ ಪಾಲಸ್ಟೈನ್ ದೇಶದ ಜೆರೂಸಲೇಂ ಪಟ್ಟಣದಿಂದ ಇಬ್ಬರು ಯಹೂದ್ಯರು ತಮ್ಮ ವಶದಲ್ಲಿದ್ದ ಬಹು ಅಮೂಲ್ಯವಾದ ಒಂದು ಕೆತ್ತನೆ ಕೆಲಸದ ವಸ್ತುವನ್ನು ಇಂಗ್ಲೆಂಡಿನ ಮಹಾರಾಜರಿಗೆ ಬಹುಮಾನವಾಗಿ ಸಮರ್ಪಿಸಬೇಕೆಂಬ ಉದ್ದೇಶದಿಂದ ಲಂಡನ್ ನಗರಕ್ಕೆ ತಂದರು. ಇವರನ್ನು ರಾಜೆಪ್ಪಿನಲ್ಲಿ ಗೂಂಮ ಕಂಡಿದ್ದ ಒಬ್ಬಾತನು ಇವರಿಗೆ ಮಹಾರಾಜರ ಸಂದರ್ಶನ ದೊರಕದೆ ಪೇಚಾಟವಾಗಿದ್ದ ವಿಷಯವನ್ನು ಫಾರಿನ್ ಆಫೀಸಿಗೆ ತಿಳಿಯಪಡಿಸಲು, ಕೆಲವೇ ದಿವಸಗಳೊಳಗಾಗಿ ಅವರಿಬ್ಬರನ್ನು ಅರಮನೆಗೆ ಕರೆಯಿಸಿಕೊಳ್ಳುವುದಾಗಿಯೂ ಅವರ ಭಕ್ತಿಪುರಸ್ಸರವಾದ ಬಹುಮಾನವನ್ನು ಆದರದಿಂದ ಸ್ವೀಕರಿಸುವುದಾಗಿಯೂ ಎಡ್ವರ್ಡ್ ಸಾರ್ವಭೌಮರಿಂದ ಜವಾಬು ಬಂತು. ಸಾರ್ವಭೌಮರ ಔದಾರ್ಯಕ್ಕೆ ಇದೊಂದು ಹೊಸ ದೃಷ್ಟಾಂತ.

ಕಾಶ್ಮೀರ ರಾಜ್ಯದ ವೆಷ್ಟ್ ಎಂಬ ಪಟ್ಟಣದಿಂದ ೪೦ ಮೈಲಿ ದೂರದಲ್ಲಿ ತರ್ಖತಿ ಕೈತರಿ ಎಂಬ ಊರು ಇದೆ. ತಸ್ಸೀಜ್ ಎಂಬ ಪಟ್ಟಣವು ಅದರ ಬಳಿ ಇರುತ್ತದೆ. ಈಚೆಗೆ ಈ ಪಟ್ಟಣದಲ್ಲಿ ಅಗ್ನಿ ಭೂಕಂಪನಗಳಾಗುತ್ತಲೇ ಇರುವವೆಂದು ಸಮಾಚಾರ ಬಂದಿದೆ. ಇದುವರೆಗೆ ಈ ಅನಾಹುತದ ದೆಸೆಯಿಂದ ೩೫೦ ಜನರು ಸತ್ತಿರುತ್ತಾರೆ; ದೇವಾಲಯಗಳು ತಯಾರಾಗುವ ಕಾರ್ಖಾನೆಗಳೆಲ್ಲಾ ನಿರ್ಮೂಲವಾಗಿ ಹೋಗಿರುವುದರಿಂದ ಬಹಳ ದ್ರವ್ಯ ನಷ್ಟವಾಯಿತು. ರಾಜ್ಯದ ಅಧಿಕಾರಿಯೂ, ಡಾಕ್ಟರೂ ಆ ಪ್ರಾಂತ್ಯಕ್ಕೆ ಹೋಗಿ ತನಿಖೆ ಮಾಡುತ್ತಿದ್ದಾರೆ.

****

ದಿನವೂ ನಾವು ಮೈಗೆ ಸಾಬೂನು ಹಾಕಿ ತಿಕ್ಕಿಕೊಂಡು ಸ್ನಾನ ಮಾಡುವುದರಿಂದ ಚರ್ಮದ ಮೇಲೆ ಇರಬೇಕಾದ ಜಿಡ್ಡೆಲ್ಲಾ ಹೋಗಿಬಿಡುವುದು. ಈ ಜಿಡ್ಡು ಸ್ವಭಾವವಾಗಿ ಹುಟ್ಟತಕ್ಕ ಚರ್ಮದ ಮೇಲೆ ಇಲ್ಲದೆಹೋದರೆ ನಮಗೆ ಬೇಗನೆ ಶೀತ ಹಿಡಿತಕ್ಕ ಕಾಯಿಲೆಗಳು ಪ್ರಾಪ್ತವಾಗುವುದಕ್ಕೂ ಆಸ್ಪದವಾಗುತ್ತೆ. ನಾವು ಮೈಮೇಲೆ ಹಾಕಿಕೊಳ್ಳುವ ಬಟ್ಟೆಗಳನ್ನು ಚೊಕ್ಕಟವಾಗಿಟ್ಟುಕೊಳ್ಳುತ್ತಾ ಬರಬೇಕೇ ಹೊರತು ದಿನಾಲೂ ಸಾಬೂನು ಹಾಕಿಕೊಂಡು ಮೈ ತೊಳೆದುಕೊಳ್ಳಬಾರದು ಎಂಬುದಾಗಿ ಒಬ್ಬ ವೈದ್ಯನು ಲಂಡನ್ ಪಟ್ಟಣದಲ್ಲಿ ಪ್ರಕಟವಾಗುವ ಟೈಂಸ್ ಪತ್ರಿಕೆಯಲ್ಲಿ ಬರೆದಿರುತ್ತಾನೆ.

****

ವಿಲಾಯತಿಯಲ್ಲಿರುವ ಒಂದು ಸಂಘದವರು ಮಾಂಸಾಹಾರವನ್ನು ವರ್ಜಿಸಮಾಡಿರುತ್ತಾರೆ. ಈ ಸಂಘವು ಸ್ಥಾಪನೆಯಾಗಿ ೫೬ ವರುಷಗಳಾದವು. ಏಮಾರ್ ಎಂಬೊಬ್ಬ ಮೆಂಬರು ಒಂದು ಉಪನ್ಯಾಸವನ್ನು ಬರೆದು ತಂದು ಈ ಸಂಘದಲ್ಲಿ ಓದಿದನು. ಮಾಂಸಾಹಾರ ಮಾಡಿದರೆ ಮದರಾನ್ವಕಗಳನ್ನು ಕುಡಿಯಬೇಕೆಂಬ ಇಚ್ಛೆ ಹುಟ್ಟಿ ಜನರು ಕೆಡುವುದಕ್ಕೆ ಅವಕಾಶವಾಗುವುದೆಂತಲೂ, ಮಾಂಸಾಹಾರವನ್ನು ಬಿಟ್ಟುಬಿಡಬೇಕೆಂತಲೂ ಆತನು ಅಭಿಪ್ರಾಯ ಪಡುತ್ತಾನೆ. ಆದರೆ ಮಾಂಸಾಹಾರ ಮಾಡಿಯೂ ಅನೇಕರು ಕುಡುಕರಾಗದಿರುವುದಕ್ಕೂ ಮಾಂಸಾಹಾರಿಗಳಲ್ಲದವರೂ ಅನೇಕರು ಕುಡುಕರಾಗುತ್ತಿರುವುದಕ್ಕೂ ಈ ಉಪನ್ಯಾಸಕರು ಯಾವ ಕಾರಣವನ್ನು ಹೇಳುವರೋ ಗೊತ್ತಾಗುವುದಿಲ್ಲ.


ಜ್ವರಹರಿ. 3




ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ. ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡ್ರಾಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡ್ರಾಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ಕ್ಕೆ ೪ ಆಣೆ, ೧ ರೂ., ೧—೪ ರೂ., ರೂ ೨—೧೨ ಆ., ೧೧ ರೂ; ಇನ್ನೆರಡು ಸೀಸೆ ತರಿಸಿಕೊಂಡವರ ಪೋಸ್ಟೇಜು ಮಾಫಿ ಬಿಡಲಾಗುವದು.

********

ಓಮಂಕರ್ಪೂರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಎಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕವರನ ಅಸಿಸ್ಟಂಟ್ ಸರ್ಜನ್ ಗೋಟಿಸುಮಲು—ಜೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೇ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:— ಜೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.


ಫ್ರಾನ್ಸ್ ರಾಜ್ಯದಲ್ಲಿ ಪ್ರಜೆಗಳು ೧೨,೬೩,೩೪೯ ಬೈಸಿಕಲ್ ಎಂಬ ಎರಡು ಚಕ್ರದ ಗಾಡಿಗಳನ್ನಿಟ್ಟುಕೊಂಡಿದ್ದಾರೆ. ಇದರಿಂದ ಸರ್ಕಾರದವರು ಸುಂಕ ಹಾಕಿ ಒಟ್ಟು ಒಂದು ವರುಷಕ್ಕೆ ೬೦ ಲಕ್ಷ ದ್ರವ್ಯವನ್ನು ಕೂಡಿಸುವರು.

****

ಸೈನ್ಯಗಳಲ್ಲಿ ಸ್ತ್ರೀಯರನ್ನು ವೈದ್ಯರಾಗಿ ನೇಮಿಸಿಕೊಳ್ಳಬೇಕೆಂತಲೂ, ಅಪೇಕ್ಷೆಯುಳ್ಳ ಸ್ತ್ರೀಯರು ವೈದ್ಯಶಾಲೆಗೆ ಸೇರಿ ವೈದ್ಯವನ್ನು ಕಲಿತು ತಯಾರಾಗಬಹುದೆಂತಲೂ ರಷ್ಯಾ ರಾಜ್ಯದ ಯುದ್ಧದ ಇಲಾಖೆಯ ಮಂತ್ರಿಯವರು ಪ್ರಕಟಿಸಿರುತ್ತಾರೆ.

****

ಲಂಡನ್ ಪಟ್ಟಣದಲ್ಲಿ ಕಳೆದ ಜನವರಿ ೧ ರಿಂದ ಅಕ್ಟೋಬರ್ ೧೦ ರ ತನಕ ೩೨ ಅಂಗುಲ ಮಳೆ ಸುರಿದಿದೆ. ಸುಮಾರು ೭೪ ವರುಷಗಳ ಕೆಳಗೆ ಅಂದರೆ ೧೮೭೯ ನೆ ಇಸವಿಯಲಿ ಇಷ್ಟು ಹೆಚ್ಚು ಮಳೆ ಆಗಿತ್ತು. ಈ ವರುಷವೆಲ್ಲಾ ಮುಗಿಯುವದರೊಳಗಾಗಿ ಮಳೆಯ ಪರಿಮಾಣವು ಇನ್ನೂ ಹೆಚ್ಚುವುದಕ್ಕೆ ಸಂಶಯವಿಲ್ಲ.

****

ಬೆಲ್ಜಿಯಂ ರಾಜ್ಯದ ತೀರ ಪಟ್ಟಣವಾದ ಆಸ್ಟೆಂಡ್ ನಗರದಲ್ಲಿ ಬರುವ ವರುಷ ಬೇಸಿಗೆಯಲ್ಲಿ ಸ್ತ್ರೀಯರ ಉಡುಪುಗಳನ್ನೆಲ್ಲಾ ಪ್ರದರ್ಶನ ಮಾಡುತ್ತಾರೆ. ಯಾವ ಯಾವ ರಾಜ್ಯದಲ್ಲಿ ಸ್ತ್ರೀಯರು ಎಂಥೆಂಥಾ ಉಡಿಗೆ ತೊಡಿಗೆಗಳನ್ನು ಹಾಕಿಕೊಳ್ಳುತ್ತಿರುವರೋ ಅವುಗಳನ್ನೆಲ್ಲಾ ಜಾತಿವಾರು ತಂದಿಟ್ಟು ಪ್ರದರ್ಶನ ಮಾಡುವರು. ರಾಣಿಗಿನಿಂದಲೂ ಈ ಪ್ರದರ್ಶನೋತ್ಸವಕ್ಕೆ ಅಗಾಧವಾದ ಸನ್ನಾಹಗಳನ್ನು ಮಾಡುತ್ತಿದಾರೆ.


ಮಹಾರಾಜರವರ ಫೋಟೋಗ್ರಾಫ್.

ಇವು ವಿಲಾಯತಿಯಿಂದ ಬಂದಿವೆ. ಮುಗಿದುಹೋದಾವು! ಜಾಗ್ರತೆ ನೋಡಿ! ಬಹಳ ಸೊಗಸಾಗಿವೆ, ದೊಡ್ಡ ಸೈಜಿನವು, ಕೆಡತಕ್ಕವುಗಳಲ್ಲ. ಕ್ರಯ ಎರಡೇ ಆಣೆ. ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ಪಟಗಳು; ಸುಂದರವಾದ ಬಣ್ಣಗಳುಳ್ಳದ್ದು. ಕ್ರಯ ದೊಡ್ಡ ಸೈಜಿನವು ೪ ಆಣೆ, ಸಣ್ಣ ಸೈಜಿನವು ೨ ಆಣೆ.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಜೋಮೋಸಿಯಾ.

ತಕ್ಷಣ ಪರಿಹಾರ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಆಫೀಸು, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿದ್ಧತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಇಂದಾಕ್ಷಣ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಆರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಶೂಲವ್ಯಾಧಿ, ಉಬ್ಬಸ, ವಾಯುಗಳು, ನರ ಸೆಳೆಯುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ದದ್ದುಗಳು, ತುರಿಕಜ್ಜಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಪ್ಪರಿಸುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಶಮನಪಡಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೪ ಆ; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೪ ಆಣೆ ಬಾಬ್ತು ಡಬ್ಬಾದಲ್ಲಿ ೧ ರೂ. ಡಬ್ಬಿನಲ್ಲಿರುವದಕ್ಕಿಂತ ೩ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೪ ಆ. ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

********

ಜೋಮೋಸಿಯಾ ಯಂಜಿಬ್ರೇಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಜೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೪ ಆಣೆಗೂ, ೧ ರೂ ಗೂ ಒಂದರಂತೆ ವಿಕ್ರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫು. ಎಲ್ಲಾ ಶಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರವೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ.—ಜೋಮೋಸಿಯಾ ಕಂಪನಿ, ೨೩ ಸೆಕೆಂಡು ಬೀಚ್ ಲೈನ್, ಮದರಾಸ್.


## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

30—10—1903 ರಿಂದ 6—11—1903 ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | 54 | 43 | 87 | 72 |
| ಮೈಸೂರು ,, | 220 | 158 | 224 | 169 |
| ಬೆಂಗಳೂರು ಡಿಸ್ಟ್ರಿಕ್ಟು | 195 | 164 | 164 | 193 |
| ಮೈಸೂರು ,, | 52 | 40 | 109 | 69 |
| ಕೋಲಾರ್ ,, | 48 | 27 | 40 | 31 |
| ಕೋಲಾರ್ ಚಿನ್ನದ ಗಣಿಗಳು | 22 | 17 | 9 | 4 |
| ತುಂಕೂರು ಡಿಸ್ಟ್ರಿಕ್ಟು | 46 | 24 | 56 | 50 |
| ಹಾಸನ ,, | 10 | 10 | 23 | 15 |
| ಚಿತ್ರದುರ್ಗ ,, | 39 | 29 | 48 | 79 |
| ಕಡೂರ್ ,, | 21 | 0 | 12 | 9 |
| ಶಿವಮೊಗ್ಗ ,, | 61 | 37 | 96 | 67 |
| ಮೊತ್ತ. | 766 | 563 | [illegible]05 | 748 |

ಶಾಲಿವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಕಾರ್ತೀಕ ಬಹುಳ ಅಮಾವಾಸ್ಯೆ ಗುರುವಾರದಿಂದ ಮಾರ್ಗಶಿರ ಶುದ್ಧ ಷಷ್ಠಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ನೊವೆಂಬರ್.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ವೃಶ್ಚಿಕ ಮಾಸ ತೇದಿ. |
|---|---|---|---|---|---|---|
| 19 | ಗುರು * | ಅಮಾವಾ | 7 25 | ವಿ | 9 2 | 4 |
| 20 | ಶುಕ್ರ † | ಪಾಡ್ಯಮಿ | 7 28 | ಅ | 10 16 | 5 |
| 21 | ಶನಿವಾರ ‡ | ಬಿದಗೆ | 8 52 | ಜ್ಯೇ | 13 10 | 6 |
| 22 | ರವಿವಾ | ತದಿಗೆ | 11 30 | ಮೂ | 18 38 | 7 |
| 23 | ಚಂದ್ರ | ಚೌತಿ | 15 25 | ಪೂಷಾ | 22 45 | 8 |
| 21 | ಭೌಮ ¶ | ಪಂಚಮಿ | 20 5 | ಉಷಾ | 28 10 | 9 |
| 25 | ಬುಧ | ಷಷ್ಠಿ | 25 16 | ಶ್ರ | 35 10 | 10 |

* ವೃಶ್ಚಿಕ ತ್ರಿಗ್ರಯೋಗ, ಸುಬ್ರಹ್ಮಣ್ಯದಲ್ಲಿ ಲಕ್ಷದೀಪೋತ್ಸವ. † ಚಂದ್ರೋದಯ ‡ ರಂಜಾನ್. ¶ ಶೂನ್ಯತಿಥಿ, ಕುಕ್ಕೆಷಷ್ಠಿ ಪಂಚಮಿ

## ಪೇಟೆ ಧಾರಣೆ.

| ದಿನಸು. | ಮೈಸೂರು. | ಬೆಂಗಳೂರು. |
|---|---|---|
| ಕಳ್ಳೇ ಅಕ್ಕಿ ಪಲ್ಲ ೧ಕ್ಕೆ ರೂ. | ೧೦—೦—೦ | ೧೦—೦—೦ |
| ಕೆಂಬೂತಿ ಅಕ್ಕಿ ಅವಲ್ | ೧೦—೧೨—೦ | ೧೦—೧೨—೦ |
| ,, ಮುಯಂ | ೧೦—೮—೦ | ೧೦—೮—೦ |
| ಜಾಪಾನ್ ಅಕ್ಕಿ | ೯—೧೦—೦ | ೧೧—೦—೦ |
| ಸಣ್ಣಕ್ಕಿ ಅವಲ್ | ೧೨ ೪—೦ | ೧೨—೦—೦ |
| ,, ಮುಯಂ | ೧೨—೦—೦ | ೧೧—೦—೦ |
| ತೊಗರೀ ಬೇಳೆ ಪಲ್ಲ ೧ಕ್ಕೆ | ೧೩—೧೨—೦ | ೧೩—೧೨—೦ |
| ,, ಮುಯಂ | ೧೩ ೪—೦ | ೧೩—೦—೦ |
| ಸೈರ ರಾಗಿ ಪಲ್ಲ ೧ಕ್ಕೆ | ೩ ೧೨—೦ | ೩—೨—೦ |
| ಕಾರಾಗಿ | ೩—೪—೦ | ೨—೫—೦ |
| ಜೋಳ | ೨—೮—೦ | ೪—೪—೦ |
| ಹುಲಸಂದೆ ಪಲ್ಲ ೧ಕ್ಕೆ | ೩—೮—೦ | ೪—೦—೦ |
| ಬಿಳೇ ಅವರೆ | ೪ ೧೨ ೦ | ೩—೩—೦ |
| ಹೆಸರು | ೯—೪—೦ | ೪—೪—೦ |
| ಉದ್ದು | ೪ ೧೨—೦ | ೪—೮—೦ |
| ಕಡಲೆ | ೧೦—೦—೦ | ೪—೪—೦ |
| ಎಳ್ಳು | ೧೨ ೦ ೦ | ೭—೦—೦ |
| ಹುರುಳಿ | ೩—೪ ೦ | ೫—೦—೦ |
| ಹರಳು ೧೨ ಸೇರಿಗೆ | ೯—೪—೦ | ೫—೧೮—೦ |
| ತೆಂಗಿನಕಾಯಿ ಮಣ ೧ಕ್ಕೆ | ೧—೪—೦ | ೨—೨—೦ |
| ಮೆಣಸಿನಕಾಯಿ | ೩—೨—೦ | ೨—೪—೦ |
| ,, ಮುಯಂ | ೩—೦ ೦ | ೨—೦—೦ |
| ಬೆಲ್ಲ ದೊಡ್ಡ ಅಚ್ಚು | ೮—೪—೦ | ೩ ೨—೦—೦ |
| ಒಳ್ಳೆಣ್ಣೆ ಮಣ ೧ಕ್ಕೆ | ೩—೧೮ ೦ | ೩—೧೨—೦ |
| ಹರಳೆಣ್ಣೆ ,, | ೩—೧೨—೦ | ೨—೧೨—೦ |
| ಕೊತ್ತುಂಬರಿ ಪಲ್ಲ ೧ಕ್ಕೆ | ೬—೦—೦ | ೬—೫—೦ |
| ಜೀರಿಗೆ ,, | ೧೦—೦—೦ | ೪—೧೨—೦ |
| ಮೆಣಸು ಹಳ್ಳ | ೦—೧೫—೦ | ೧—೦—೦ |
| ,, ಹಳೇದು | ೦—೧೦—೦ | ೦—೧೫—೦ |
| ಸಕ್ಕರೆ | ೧೦ ೪—೦ | ೧೦—೦—೦ |
| ಸೀಮೆಯಂಜ ಪಟ್ಟೆ ೧ಕ್ಕೆ | ೯—೯—೦ | ೩—೭—೦ |
| ತೆಂಗಿನಕಾಯಿ ೧೦೦ಕ್ಕೆ | ೫—೮—೦ | ೩—೪—೦ |
| ಅಡಕೇಕಾಯಿ ಮಣ ೧ಕ್ಕೆ | ೦—೧೮ ೦ | ೦—೧೮—೦ |
| ಅಂಬ್ಯಕಾಯಿ ಮಣ ೧ಕ್ಕೆ | ೦—೧೫—೦ | ೦—೪—೦ |
| ಚಿನ್ನ (ಅಪರಂಜಿ) ತೊಲ | ೧೫—೫—೦ | ೧೫—೫—೦ |
| ,, ,, ಪವನು | ೧೫—೪—೦ | ೧೫—೩—೦ |
| ,, ,, ಗಟ್ಟಿ ತೊಲ ೧ಕ್ಕೆ | ೨೩—೦—೦ | ೨೫—೮—೦ |
| ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ | ೭೨—೦—೦ | ೭೩—೪—೦ |

Printed and Published by the Rev. E. W. Thompson, M.A., the Proprietor and Manager, Wesleyan Mission Press, Mysore. 19/11/1903.

# ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು —:0:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩ | ಮೈಸೂರು—ಸನ್ ೧೯೦೩ ನೇ ಇಸವಿ ನೋವೆಂಬರ್ ತಾರೀಖು ೨೬ ನೇ ಗುರುವಾರ. | ಸಂಚಿಕೆ ೪೬



ನಿಮ್ಮ ತಲೆಯು ನೋಯುತ್ತಿರುವದೇನು?
ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

12

ಒಳ್ಳೇ ಟೋಪಿಗಳು ಯಾವವು? ಯಾಕೆ? ಬಂಡೇಳುವದೇನು? ಹಾಸನದ ಟೋಪಿಗಳೇ.

ಹಾಸನದ ಟೋಪಿಗಳು ನೋಡಲು ಎಲ್ಲಿ ತಯಾರಾದವೆ? ಎಲ್ಲಿಂದ ಬೇರೆ ಕಡೆಗಳಿಗೆಲ್ಲಾ ಹರಡಿಕೊಂಡವು? ಸಂತೋಷವಾಗಿಯೂ ಹಾಕಿಕೊಂಡರೇ.

ಈಗ ಇತರ ಕಡೆಗಳಲ್ಲಿ ಮಾಡು ಬರೆಯಿ ಆಗುತ್ತಿರುವ ಟೋಪಿ ಗಳಾದರೆಲ್ಲಾ ಬೇಳಾಡನ್ನು. ಅವೇ ಹಾಸನದ ಟೋಪಿಗಳೆಂದು ತಿಳಿದು ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿ ಗಳಾದರೆಲ್ಲಾ ಸಟ್ಟಗೆ ನಿಲುವಿಯಿಂದಲೇ ಬರುವದು. (೨) ಟೋಪಿಗಳನ್ನು ಒಪ್ಪಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ನೆಯ್ದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ಈಗಲೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದವು ಚನ್ನಾಗಿಲ್ಲದವು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ. ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ.



## ಸ್ಟಾಂಡರ್ಡ್ ಲೈಫ್ ಅಷ್ಯೂರೆನ್ಸ್ ಕಂಪನಿ.

19

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಇಂಡಿಯಾ ದೇಶದಲ್ಲಿ ಲೈಫ್ ಇನ್‌ಷ್ಯೂರೆನ್ಸ್ ಎಂಬ ಜೀವ ವಿಮೆಯನ್ನು ಭೀಮಾ ಮಾಡಿಕೊಳ್ಳುವ ಕಂಪನಿಗಳಲ್ಲಿ ಇದು ಬಹು ಹಳೆಯದಾಗಿಯೂ ಹೆಚ್ಚಾದ ಬಂಡವಾಳವುಳ್ಳದ್ದಾಗಿಯೂ ಇದೆ.

ಭೀಮಾದಾರರಾಗತಕ್ಕವರು (ಲೈಫ್ ಎಷ್ಯೂರ್ ಮಾಡತಕ್ಕವರು) ಈ ಕಂಪನಿಯು ಹಂಚಾ ದರ, ಷರತ್ತುಗಳು ಮೊದಲಾದವುಗಳನ್ನು ಇತರ ಕಂಪನಿಯವುಗಳೊಂದಿಗೆ ಹೋಲಿಸಿನೋಡಿದರೆ ಇಲ್ಲಿ ಭೀಮಾವನ್ನು ಭೀಮಾ ಮಾಡುವವರಿಗೆ ಎಷ್ಟು ಸೌಕರ್ಯಗಳಿರುವದು ಗೊತ್ತಾಗುತ್ತದೆ.

ಈ ಕಂಪನಿಯ ಭೀಮಾ ನಿಬಂಧನೆಗಳು ಬಹು ಅನುಕೂಲ ವಾಗಿವೆ. ಭೀಮಾದಾರರುಗಳಿಗೆ ತೊಂದರೆಯನ್ನುಂಟುಮಾಡುವ ನಿಬಂಧನೆಗಳೇನೂ ಇಲ್ಲ.

ಸ್ಥಿರವಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲೇ ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂ ಗಳನ್ನು ಕಂಪನಿಯವರು ಕೊಡುವ ಅನುಕೂಲವಾಗಿ ಪಡೆಯಬೇಕಾದರೆ ಭೀಮಾದಾರನು ಕಂಪನಿಗೆ ಕೊಡಬೇಕಾದ ಹಂಚಾ ದರಗಳ ಪಟ್ಟಿ ಕೆಳಗೆ ಇಲ್ಲಿ ನೋಡಿ.

| ಈಗ ಹೇಳುತ್ತಿರುವ ವಯಸ್ಸು. | ೫೦ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ ಪಡೆಯಬೇಕಾದರೆ ಮಾಸಿಕವಾಗಿ ಕಂಪನಿಗೆ ಕೊಡುವದು. | ೫೫ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಯನ್ನು ಪಡೆಯಬೇಕಾದರೆ ಮಾಸಿಕವಾಗಿ ಕಂಪನಿಗೆ ಕೊಡುವದು. |
|---|---|---|
| ೨೦ | ರೂ. ೩—೧೨—೮ | ರೂ. ೩—೦—೦ |
| ೨೫ | ,, ೩—೧೫—೪ | ,, ೩—೧೪—೧ |
| ೩೦ | ,, ೯—೧೨—೮ | ,, ೮—೨—೦ |
| ೩೫ | ,, ೧೨—೧೪—೮ | ,, ೧೦—೧—೪ |
| ೪೦ | | ,, ೧೩—೪—೮ |

೨,೦೦೦ ರೂ. ಗಿಂತಲೂ ಹೆಚ್ಚು ಕಡಿಮೆಯಾಗಲಿ ಕಡಿಮೆಯಾದ ಇತರ ವಯಸ್ಸಿನಲ್ಲಿ ಹೆಚ್ಚು ಕಡಿಮೆ ಇಷ್ಟರಾಗಲಿ ಹಂಚಾ ದರವೇ ನನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಇನುವರಿಗೆ ಜಾರಿಯಲ್ಲಿದ್ದ ಹಂಚಾ ದರಗಳನ್ನು ಕಡಮೆ ಮಾಡಿದ್ದೇವೆ. ಅಲ್ಲಿ ವರ್ಷಕ್ಕೆ ಕಡಿಮೆಯಾಗಿರುವ ಹೊಸ ಹಂಚಾ ದರವನ್ನು ಭೀಮಾ ಪತ್ರವನ್ನು ಫಾರಂಗಳನ್ನೂ ಇದೇ ವಿಳಾಸ ದಿಂದ ತರಿಸಿಕೊಳ್ಳಿರಿ. ಎಂ. ಸೂರ್ಯನಾರಾಯಣಪ್ಪ,

ಅವಿಭಾಜ್ಯ ಮತ್ತು ಜನರಲ್ ಏಜಂಸು, ಬೆಂಗಳೂರು.



## ಗಣಿತಸಂಜೀವಿನಿ.

13

೧ ರೂ. ೮ ಆ.; ವಿ. ಪಿ. ಚಾರ್ಜ್ ೩ ಆ.

ಕೆ. ಸರಸುಬ್ಬಯ್ಯ ಮತ್ತು ಕಂಪನಿ, ಮೈಸೂರು.



## WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಪುಸ್ತಕ, ಚಿತ್ರ, ಬೈಂಡಿಂಗ್ ಮುಂತಾದ ಸಮಸ್ತ ಪ್ರಿಂಟಿಂಗ್ ಕೆಲಸಗಳನ್ನು ಬಹಳ ಸುಲಭ ಕ್ರಯಕ್ಕೂ, ಜಾಗ್ರತೆಯಿಂದಲೂ, ನೇತ್ರಾನಂದಕರವಾಗಿಯೂ ಮಾಡಿಕೊಡುತ್ತಾರೆ. ಅಪೇಕ್ಷೆಯುಳ್ಳವರು ಕೆಲಸವನ್ನು ಕಳುಹಿಸಿಕೊಟ್ಟು ಪರೀಕ್ಷೆ ಮಾಡಬೇಕು. ಆ ಪುಸ್ತಕಗಳು ಬಹಳ ಗಟ್ಟಿಯಾಗಿಯೂ ಅಂದವಾಗಿಯೂ ಬೈಂಡಾಗುತ್ತವೆ. ಎಲ್ಲಾ ವಿಷಯಗಳನ್ನು ಪ್ರೆಸ್ ಮ್ಯಾನೇಜರಿಗೆ ಬರೆದು ಅಥವಾ ಅವರನ್ನು ಮುಖ್ಯ ಕಂಡು ತಿಳಿದುಕೊಳ್ಳಬಹುದು.

ವಿಳಾಸ:—ಮಿ ಎಂ. ಫಾರ್ಲ್ಸ್, ಮ್ಯಾನೇಜರ್,

ಮೈಸೂರು.



## ROBINSON'S PATENT BARLEY.

## ರಾಬಿನ್‌ಸನ್‌ಯವರ ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಜವೆಗೋಧಿಯಿಂದ ಮಾಡಿದೆ. ಹಸ್ತಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರ ಮಾಡಿ ಬಿಸಿ ನೀರು ಹಾಕಿ ಹಾಲು ಗಂಜಿ ಸಕ್ಕರೆ ಹಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರವಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕರ ನಿದ್ರಾಮಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥವಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾರಾದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.



ಇಗೋ ಅತ್ಯಂತ ಹೊಸ ಪುಸ್ತಕ! ಬೇಗ ನೋಡಿರಿ!!

## ಸ್ವಪ್ನದರ್ಶನ ಫಲದೀಪಿಕೆ.

ಈ ಪುಸ್ತಕವು ಸ್ಕ್ರೈಬ್ಸ್ ಸೆಲ್ಫ್ ಸೆಲ್ಸ್ ಎಂಬ ಲೋಕಪ್ರಸಿದ್ಧವಾದ ಪುಸ್ತಕದ ಆಧಾರದ ಮೇಲೆ, ಕನ್ನಡಿಗರಿಗೆ ಅನುಕೂಲವಾಗಿ ಬರೆಯಲ್ಪಟ್ಟಿದೆ. ಈ ಪುಸ್ತಕವು ವಿಶೇಷವಾದ ಹೆಸರನ್ನೂ ಕೀರ್ತಿಯನ್ನೂ ಪಡೆದಿರುವದರಿಂದ ಲೋಕದ ಅನೇಕ ಭಾಷೆಗಳಲ್ಲಿ ತರ್ಜುಮೆ ಮಾಡಲ್ಪಟ್ಟಿದೆ. ಅನೇಕ ಜಾತಿಯವರು ಈ ಪುಸ್ತಕವನ್ನೇ ಓದಿದ್ದರಿಂದಲೇ ನಾಗರೀಕರಾದರು. ಈ ಪುಸ್ತಕವು ಕೈಸೂಗುಂಡಿದವರಿಗೆ ಧೈರ್ಯವನ್ನೂ ಸಮರ್ಥರಿಗೆ ಮುಟ್ಟು ಸಾಮರ್ಥ್ಯವನ್ನೂ ದಡ್ಡರಿಗೆ ವಿವೇಕವನ್ನೂ ಕೊಡುವದಾಗಿಯೂ ಪ್ರಸಿದ್ಧವಾಗಿದೆ. ಪುಸ್ತಕದ ಕ್ರಯ ನಾಲ್ಕಾಣೆ ಮಾತ್ರ. ವಿ. ಪಿ. ಪಿ. ಯಲ್ಲಿ ತರಿಸಿಕೊಂಡರೆ ಆರು ಆಣೆಗಳಾಗುವವು. ಬೇಗ ತರಿಸಿಕೊಳ್ಳಿ! ವಿಳಾಸ:— ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.



ಜನರಂಜಿತವಾದ ಪುಸ್ತಕಗಳು! ಬೇಗನೋಡಬಾರದೇ

ಮೈಸೂರು ಸರ್ಕಾರದ ವಿದ್ಯಾ ಇಲಾಖೆಯವರು ಈ ಪುಸ್ತಕಗಳ ಅಮೂಲ್ಯತ್ವವನ್ನು ತಿಳಿದು ಸೂರ್ಯನತ್ತು ರೂಪಾಯಿಗಳಿಗಿಂತ ಹೆಚ್ಚಾಗಿಯೇ ತರಿಸಿಕೊಂಡಿದ್ದಾರೆ.

ಪುರಾತನ ಗ್ರೀಕರ ಚರಿತ್ರೆ. ಬಹು ರಸಿಕವಾಗಿದೆ. ಚಿತ್ರಗಳಿಂದ ಕೂಡಿದ್ದು ಕ್ರಯ ೦—೨—೦

ಪ್ರಾಚೀನ ಮೃಗಗಳ ವರ್ಣನೆ. ಚಿತ್ರಗಳಿಂದ ತುಂಬಿದೆ. ೦—೧—೦

ಖಗೋಳ ಶಾಸ್ತ್ರಸಿದ್ಧಾಂತ. ಎಲ್ಲರೂ ಓದತಕ್ಕದ್ದು. ಅನೇಕ ಚಿತ್ರಗಳಿವೆ ೦—೧—೦

ಪಕ್ಷಿಗಳ ವರ್ಣನೆ. ಸ್ಕೂಲ್‌ಹುಡುಗರಿಗೆ ಇನಾಮಾಗಿ ಕೊಡುವದಕ್ಕೆ ಯೋಗ್ಯವಾಗಿದೆ. ಅನೇಕ ಪಕ್ಷಿಗಳ ಪಟಗಳೂ, ಅವುಗಳ ಚರಿತ್ರೆಗಳೂ ಇದರಲ್ಲಿ ಅಡಕವಾಗಿವೆ ೦—೦—೦

ಇಂಡಿಯಾ ಚಕ್ರವರ್ತಿಯವರಾದ ಎಡ್ವರ್ಡ್ ಸಾರ್ವಭೌಮರ ಮತ್ತು ಚಕ್ರವರ್ತಿನಿಯರಾದ ಅಲೆಕ್ಸಾಂಡರಾ ಅಮ್ಮನವರ ಜೀವ ಮಾನಗಳ ಚರಿತ್ರೆ. ಇದರಲ್ಲಿ ಗ್ಲೇಜ್ ಕಾಗದದಮೇಲೆ ಹಾಕಿರುವ ಪಟಗಳು ಅನೇಕವಾಗಿವೆ. ಪ್ರತಿಯೊಬ್ಬರ ಮನೆಯಲ್ಲೂ ಇರತಕ್ಕ ಪುಸ್ತಕ. ಇಂಥಾ ಉತ್ಕೃಷ್ಟವಾದ ಪುಸ್ತಕಕ್ಕೆ ಬೆಲೆಯು ಬಹು ಕಡಿಮೆಯಾಗಿದೆ. ಕ್ರಯ ೦—೪—೦

ಚಕ್ರವರ್ತಿಗಳ ಕಿರೀಟಧಾರಣೆಯ ಪುಸ್ತಕ ಕ್ರಯ ೦—೨—೬

| | |
|---|---|
| ಕ್ರಿಮಿಗಳ ವರ್ಣನೆ (ಸಚಿತ್ರ) | ೦—೧—೦ |
| ದೇಹವೆಂಬ ನನ್ನ ಮನೆ (ಸಚಿತ್ರ) | ೦—೧—೦ |
| ಪ್ರಬೋಧಚಂದ್ರಿಕೆ | ೦—೨—೦ |
| ಚಿಕ್ಕವರಿಗೆ ಹೇಳಿದ ಕಥೆಗಳು | ೦—೧—೦ |
| ಕುಂಬಾರನಾದ ಪಾಲಿಸ್ಸಿಯ ಚರಿತ್ರೆ | ೦—೧—೦ |
| ಗ್ರೀನ್‌ಲಾಂಡಿನ ಚರಿತ್ರೆ | ೦—೨—೬ |
| ಮಾರ್ಟಿನ್ ಲೂಥರನ ಚರಿತ್ರೆ | ೦—೧—೬ |
| ಆರ್ಯರ ಪೂರ್ವೋತ್ತರ ಚರಿತ್ರೆ | ೦—೧—೩ |
| ಘನತೆಯುಳ್ಳ ಸ್ತ್ರೀಯರ ಚರಿತ್ರೆ | ೦—೨—೬ |

(೧) ವೇದಗಳನ್ನು ಬರೆದವರು ಯಾರು? (೨) ಶುದ್ಧವಾದ ನೀರಿನಬಲಿ, (೩) ಸಾಲ ಮತ್ತು ಸಾಲತೀರಿಸುವ ಮಾರ್ಗ, (೪) ಇಂಡಿಯಾದೇಶದ ಬಡತನದ ಕಾರಣಗಳು, (೫) ಬಾಲ್ಯವಿವಾಹ, (೬) ಪ್ರಾಯಶ್ಚಿತ್ತವು, (೭) ಬಯ್ಯುವದು, (೮) ಜನನಮರಣ ಶಾಸ್ತ್ರ. (೯) ಗ್ರಹಣಗಳು, (೧೦) ಮಕ್ಕಳನ್ನು ಬೆಳಸತಕ್ಕವಿಧ, (೧೧) ಶ್ರಾದ್ಧಗಳು, (೧೨) ಎಲ್ಲರೂ ಸಹೋದರರು, (೧೩) ಮಂತ್ರ, ತಂತ್ರ, ಯಂತ್ರಗಳು, (೧೪) ಜ್ಯೋತಿಷಶಾಸ್ತ್ರ (೧೫) ಆರೋಗ್ಯಪ್ರಕಾಶಿಕೆ. ಈ ಪುಸ್ತಕಗಳ ಪ್ರತಿಯೊಂದಕ್ಕೆ ಮೂರು ಕಾಸು ಕ್ರಯವಿದೆ. ಮೇಲ್ಕಂಡ ಹದಿನೈದು ಪುಸ್ತಕಗಳನ್ನು ಒಟ್ಟಾಗಿ ತರಿಸತಕ್ಕದ್ದು. ಬಿಡಿಯಾಗಿ ಮಾರಲಾರೆವು. ಈ ಪುಸ್ತಕಗಳನ್ನು ಓದಿದಮೇಲೆ ಬರುವ ಸಂತೋಷವನ್ನು ವಿವರಿಸಲಾಗದು. ಜಾಗ್ರತೆ ನೋಡಿ. ವಿ. ಪಿ. ಪಿ. ಮೂಲಕವಾಗಿಯಾಗಲಿ ಅಥವಾ ಹಣವನ್ನು ಮುಂಗಡವಾಗಿ ಕಳುಹಿಸೋಣದ್ದರಿಂದಲಾಗಲಿ ಪುಸ್ತಕಗಳನ್ನು ಪಡೆಯಬಹುದು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

## ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ.— ಯಡತೊರೆ ತಾಲ್ಲೂಕು ಮಿರ್ಲೆ ಹೋಬಳಿ ಹೊಸ ಅಗ್ರಹಾರದಲ್ಲಿರುವ ಕೃಷ್ಣಯ್ಯನವರ ಮಕ್ಕಳು ಮೃತಪಟ್ಟ ರಾಮರಂಗಯ್ಯನವರ ಹೆಂಡತಿ ಪಾರ್ವತಮ್ಮನು ತನ್ನ ಗಂಡನ ಪಿತ್ರಾರ್ಜಿತವಾದ ಜಮೀನುಗಳನ್ನು ತಾನು ಅಪುತ್ರವಂತೆಯಾದ್ದರಿಂದ ಮೈದುನಂದಿರಾದ ನನ್ನುಗಳ ಅನುಮತಿ ಇಲ್ಲದೆ ಯಾರಿಗಾಗಲಿ ಆಧಾರ ಭೋಗ್ಯ ಕ್ರಯ ಮಾಡುವುದಕ್ಕೆ ಅಧಿಕಾರವಿರುವುದಿಲ್ಲ. ಹಾಗೆ ನಮ್ಮ ತಿಳುವಳಿಕೆ ತರದೆ ಯಾರು ಹಣ ಕೊಟ್ಟಾಗ್ಯೂ ಅವರ ನೋಬಲು ದೊರೆಯಲಾರದು. ಈಗ ಕೊಟ್ಟಿರತಕ್ಕ ಸಾಲ(ರ) ಯಾರಿದ್ದರೂ ಬಂದು, ನೋಬಲು ನಮ್ಮಿಂದ ತೆಗೆಯಬಹುದು.

ತಾ॥ ೧೭—೧೧—೧೯೦೩.

ಚನ್ನಪ್ಪಯ್ಯ,
ಹೊಸ ಅಗ್ರಹಾರ.

## ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

11

೧೯೦೩ ನೆ ಇಸವಿ ಮೈಸೂರು ಕಂಪನಿ ಆಕ್ಟಿಗೆ ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ಶ್ರೀಮನ್ ಮೈಸೂರು ಮಹಾರಾಜರವರ ಗೌರ್ನಮೆಂಟಿನವರಿಂದ ಸ್ಯಾಂಕ್ಷನ್ ಮಾಡಲ್ಪಟ್ಟ ಸದರಿ ಕಂಪೆನಿಯ ಷೇರು ಒಂದಕ್ಕೆ ೨೫ ರೂಪಾಯಿ ಪ್ರಕಾರ ೨೦,೦೦೦ ಷೇರುಗಳಿಂದ ಆಗುವ ೫,೦೦,೦೦೦ ರೂಪಾಯಿ ಬಂಡವಾಳ. ಷೇರುಗಳು ತೆಗೆದುಕೊಳ್ಳುವವರು ಇದರ ಸ್ಕೀಂ ಮಾಹಿತಿಪತ್ರದಿಂದ ವಿಶಿಷ್ಟ ರೀತಿಯಲ್ಲಿ ತಿಳಿದುಕೊಳ್ಳಬಹುದು. ಅಪ್ಲಿಕೇಷನ್‌ಗಳನ್ನೂ ಮತ್ತು ನೋಟಿಸುಗಳನ್ನೂ ಇವರಲ್ಲಿ ಪಡೆಯಬಹುದು.

ಬಿ. ವಿ. ರಾಮಸ್ವಾಮಿ ಐಯ್ಯ, ಬಿ. ಎ.,
ಅಡ್ವೊಕೇಟ್ ಮತ್ತು ಜನರಲ್ ಮೆನೇಜರ್,
ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ,
ನಗರ್ತಪೇಟೆ, ಬೆಂಗಳೂರು.

## ನಮ್ಮ ಚಂದಾದಾರರಿಗೆ ನೋಟೀಸ್.

“ವೃತ್ತಾಂತ ಪತ್ರಿಕೆ” ಯ ಏಜಂಟರು ಚಂದಾ ವಸೂಲ್ಮಾಡಿಕೊಂಡರೆ ಪತ್ತೆ ರಶೀತಿ ಬರೆದು ಕೊಡತಕ್ಕದ್ದು. ಮುದ್ರಿತ ರಶೀತಿ ಹಣಯಾದ ಮೇಲೆ ಚಂದಾ ಹಣವನ್ನು ಕೊಡತಕ್ಕದ್ದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವದಿಲ್ಲ.

ಮ್ಯಾನೇಜರ್,
ಮೈಸೂರು. “ವೃತ್ತಾಂತ ಪತ್ರಿಕೆ” ಆಫೀಸ್.

## ವೃತ್ತಾಂತ ಪತ್ರಿಕೆ.

ಸೆ ೧೯೦೩ ನೇ ಇಸವಿ ನೊವೆಂಬರ್ ತಾ॥ ೨೬ ನೇ ಗುರುವಾರ.

## ಹಿಂದುಸ್ಥಾನದ ಸಂಘಸುಧಾರಣೆಯ ಸಮಾಜವು.

ಈ ಸಲವೂ ಡಿಸೆಂಬರ್ ತಿಂಗಳ ಕಡೇ ವಾರದಲ್ಲಿ ನ್ಯಾಷನಲ್ ಕಾನ್‌ಗ್ರೆಸ್ಸೆಂಬ ಮಹಾಜನ ಸಭೆಯು ಪ್ರಾರ್ಥಿಸಿದ ತರುವಾಯ ಮದರಾಸ್ ಪಟ್ಟಣದಲ್ಲಿ ಸಂಘಸುಧಾರಣೆಯ ಸಮಾಜವು ಜರುಗುವುದು. ಈ ಸಂಘಸುಧಾರಣೆಯ ಕಾರ್ಯದ ವಿಷಯದಲ್ಲಿ ಈ ಸಲ ಕೆಲವು ಮೆಂಬರುಗಳು ಪರಸ್ಪರ ವಿರೋಧಾಭಿಪ್ರಾಯಗಳುಳ್ಳವರಾಗಿದ್ದಾರೆ. ಪಂಡಿತ ರಂಗಾಚಾರ್ಯರೇ ಮುಂತಾದ ಕೆಲವು ಮಂದಿ ಹಿಂದುಗಳು ಈ ಸಲ ನಡೆವ ಸಂಘಸುಧಾರಣೆಯ ಸಮಾಜಕ್ಕೆ ಬರುವುದಿಲ್ಲವೆಂದು ತಿಳಿಸಿರುವರು. ಅವರ ಅಭಿಪ್ರಾಯವೇನೆಂದರೆ—ಸಂಘಸುಧಾರಣೆಯ ಕಾರ್ಯದಲ್ಲಿ ಆಸಕ್ತರಾಗಿರತಕ್ಕ ಮೆಂಬರುಗಳು ಹಿಂದುಗಳಲ್ಲಿ ಪೂರ್ವಾಚಾರ ಮತ ಪದ್ಧತಿಗಳನ್ನು ಇಟ್ಟುಕೊಂಡಿರತಕ್ಕ ಶಾಸ್ತ್ರಗಳನ್ನೂ ಗುರುಹಿರಿಯರನ್ನೂ ಅಲ್ಲಗಳೆಯುತ್ತಾರೆ. ಇದು ಸಮಂಜಸವಾದುದಲ್ಲ. ಸಂಘದಲ್ಲಿ ಆಚಾರ ಮತ ಪದ್ಧತಿಗಳನ್ನು ಏಕಾಏಕಿ ಬದಲಾಯಿಸುವುದಕ್ಕಾಗದು; ಆಗಬೇಕೆಂದು ಕಂಡುಬರುವ ಬದಲಾವಣೆಗಳನ್ನು ನಿಧಾನವಾಗಿಯೂ, ಶಾಸ್ತ್ರವಿಧಿಗೆ ಅನುಸಾರವಾಗಿಯೂ ಮಾಡಿಕೊಳ್ಳುತ್ತಾ ಬರಬೇಕು ಎಂಬುದೇ.

ಅತ್ತ ಬಾಗಿ ಹಿಂದುಗಳನ್ನು ಪೂರ್ವಸ್ಥಿತಿಗೆ ತಂದಿಡಬೇಕೆಂದು ಕುತೂಹಲಪಟ್ಟು ಬಹಳ ಸಾಹಸಪಡುತ್ತಿರುವ ಮಿಸೆಸ್ ಬಸೆಂಟ್ ಎಂಬ ಆಂಗ್ಲೇಯ ಸ್ತ್ರೀಯು ಹಿಂದುಗಳ ಮತಾಚಾರ ಪದ್ಧತಿಗಳಲ್ಲಿ ಅವರು ಕೆಲವು ಭಾಗವನ್ನು ಕೂಡಲೇ ಬದಲಾಯಿಸಿ ಮಾಡಿಕೊಳ್ಳಬೇಕಾಗಿದೆ ಎಂದು ಅಭಿಪ್ರಾಯ ಪಡುತ್ತಿದ್ದಾಳೆ. ಈ ಅಭಿಪ್ರಾಯವನ್ನು ಸಾರವಾಗಿ ಆಕೆ ಕಾಶೀ ಪಟ್ಟಣದಲ್ಲಿ ಸ್ಥಾಪಿಸಿ ನಡೆಸುತ್ತಾ ಬಂದಿರುವ ಪ್ರಸಿದ್ಧವಾದ ಹಿಂದೂ ಕಾಲೇಜೆಂಬ ವಿದ್ಯಾಶಾಲೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಆಚರಣೆಯಲ್ಲಿ ತಂದಿರುವಳು.

(೧) ಈ ವಿದ್ಯಾಶಾಲೆಯ ಕೆಲವು ತರಗತಿಗಳಿಗೆ ಸೇರಬೇಕೆಂದು ಬರತಕ್ಕ ವಿದ್ಯಾರ್ಥಿಗಳು ವಿವಾಹಿತರಾಗಿರಕೂಡದು. ವಿವಾಹ ಮಾಡಿಕೊಂಡವರನ್ನು ಕೆಲವು ತರಗತಿಗೆ ಸೇರಿಸಿಕೊಳ್ಳುವುದೇ ಇಲ್ಲ. ಅನ್ಯ ಶಾಸ್ತ್ರ ಕಾರಣಗಳಿಗೆ ಆ ಕೆಲ ಬಂದು ಸೇರಿ ವಿದ್ಯಾಭ್ಯಾಸ ಮಾಡಬೇಕೆಂದಿರುವ ಅವರು ಬ್ರಹ್ಮಚಾರಿಗಳಾಗಿಯೇ ಇದ್ದು ವಿದ್ಯೆಯನ್ನು ಕಲಿಯಬೇಕು. ಆಕೆ ಈ ನಿಯಮವನ್ನು ಜಾರಿಗೆ ತಂದಿರುವುದನ್ನು ನೋಡಿದರೆ ಹಿಂದುಗಳಲ್ಲಿ ಬಾಲ್ಯವಿವಾಹವೇ ನಿಂತುಹೋಗಬೇಕೆಂದೂ, ಪ್ರಾಯಪ್ರಬುದ್ಧರಾದ ಮೇಲೆ ವಿವಾಹ ಮಾಡಿಕೊಳ್ಳುವ ಪದ್ಧತಿಯೇ ಜಾರಿಗೆ ಬರಬೇಕೆಂದೂ ಹೇಳಿದಂತಾಯಿತು.

(೨) ಹಿಂದ ಗಳಲ್ಲಿ ಜಾತಿಯ ಬೇಧಗಳನ್ನು ಆಕೆ ಒಪ್ಪಿರುವಳು. ಈ ಭೇದಗಳನ್ನು ಬಿಟ್ಟು ... ಉಪಾಧ್ಯಾಯರಾಗಲಿ, ಭೋಜನ ಪ್ರತಿಭೋಜನವಾಗಲಿ ಇಲ್ಲ. ಅಂಥಾ ಜಾತಿಭೇದಗಳನ್ನು ... ಕಟ್ಟುಗಳನ್ನು ಸಡಿಲಿಸಬೇಕೆಂತಲೂ, ಕೆಲವು ಜಾತಿಗಳೊಳಗೆ ಭೋಜನ ಪ್ರತಿಭೋಜನವೂ ಜರುಗುವಲ್ಲಿ ಬರಬೇಕೆಂತಲೂ ಆಕೆ ಅಭಿಪ್ರಾಯಪಡುವಳು.

(೩) ಹಿಂದುಗಳಲ್ಲಿ ಇರತಕ್ಕ ಪುರೋಹಿತರು ಶಾಸ್ತ್ರ ಪುರಾಣಗಳ ವಿಷಯದಲ್ಲಿ ಆಕೆಯ ಅಭಿಪ್ರಾಯವೇನೆಂದರೆ ಇವರೆಲ್ಲರೂ ವಿದ್ಯಾವಂತರನ್ನಾಗಿ ಮಾಡಬೇಕು. ಅವರಲ್ಲಿ ಬಹು ಮಂದಿ ಮೂಢರಾಗಿಯೂ ದುರಾಚಾರ ಪ್ರವೃತ್ತರಾಗಿಯೂ ಇರುತ್ತಾರೆ. ಇವರು ಬದಲಾವಣೆಯಿಂದರೆ ಹಾನಿಯಾಗಿ ಹೇಳುತ್ತಾರೆ. ಆದಕಾರಣ ಇವರೆಲ್ಲ ವಿದ್ಯಾವಂತರಾಗುವಂತೆ ಮಾಡಬೇಕು.

ನಾವಾದರೋ ಮಿಸೆಸ್ ಬೆಸೆಂಟ್ ಎಂಬೀಕೆ ಮಹಾ ಅಭಿಪ್ರಾಯಗಳು ಸಮಂಜಸವಾದ ವಿಷಯಗಳೆಂತಲೂ ಈಕೆ ಸೂಚಿಸಿರುವ ಬದಲಾವಣೆಗಳು ಅತ್ಯವಶ್ಯವಾದವುಗಳೆಂತಲೂ ಹೇಳುತ್ತೇವೆ. ಆದರೆ ಸಂಘದಲ್ಲಿ ಈ ಪ್ರಕಾರ ಬದಲಾವಣೆಗಳನ್ನು ಮಾಡಿ ರೂಢಿಗೆ ತರುವುದೇನೂ ಸುಲಭವಾದುದಲ್ಲ. ಕೆಲವರಲ್ಲಾದರೂ ಅಸಮಾಧಾನ ಗೊಂದಲಗಳನ್ನೂ ವಿರೋಧಾಭಿಪ್ರಾಯಗಳನ್ನೂ ಹುಟ್ಟಿಸದಂತೆ ಈ ಬದಲಾವಣೆಗಳನ್ನು ರೂಢಿಸಬಲ್ಲಿ ತರಬಹುದೆಂದು ಪಂಡಿತ ರಂಗಾಚಾರ್ಯರೇ ಮೊದಲಾದವರು ಹೇಳುವ ಮಾತನ್ನು ನಾವು ಒಪ್ಪಿಕೊಳ್ಳಬಹುದು. ಇಂಥಾ ಬದಲಾವಣೆಗಳಲ್ಲಿ ಆಸಕ್ತರಾಗಿರತಕ್ಕವರು ಪರರ ಅಸಮಾಧಾನ, ದುರಭಿಮಾನಗಳನ್ನು ಕೆಲವು ಕಾಲದವರೆಗಾದರೂ ತಾಳ್ಮೆಯಿಂದ ಅನುಭವಿಸಿಯೇ ತೀರಬೇಕಾಗಿದೆ. ಇಲ್ಲವಾದರೆ ಸಂಘಸುಧಾರಣೆ ಕಾರ್ಯವು ಜರುಗಲಾರದು.

## ದೇಶಾಂತರದ ವಿಶೇಷ ಸಮಾಚಾರಗಳು.

ಅಫ್ಘಾನಿಸ್ಥಾನದ ಅಮೀರರು ಇಂಡಿಯಾ ವೈಸ್‌ರಾಯರಾದ ಕರ್ಜನ್ ಸಾಹೇಬರ ಭೇಟಿಗೆ ಹಿಂದ್ರದಲ್ಲಿ ಬರುವವರಾಗಿದ್ದಾರೆಂದು ಇಂಗ್ಲೆಂಡಿಗೆ ತಾರೀ ವರ್ತಮಾನ ಮುಟ್ಟಿದೆ ತನ್ನ ದೇಶದಲ್ಲಿ ಪ್ರಖ್ಯಾತರಿರುವ ಕೆಲ ವರ್ಗದಲ್ಲಿ ನಿಂತು ಸಮಾಧಾನವಾದ ಕಾಲದ ಜನರು ಇಂಡಿಯಾಕ್ಕೆ ಬಂದು ವೈಸ್‌ರಾಯರವರನ್ನು ಕಂಡು ಹೋಗುವದು ಪ್ರ ಬಹಳ ಕುತೂಹಲಪಡುತ್ತಿದ್ದಾರೆ.

* * *

ಬೇಸಗೆ ವಿನೋದಾರ್ಥವಾಗಿ ಬೆಟ್ಟಗಳಿಗೆ ಹೋಗುವ ಇಂಡಿಯಾ ದೇಶೀಯರು ಥಿಯೇಟರುಗಳಿಗೂ ಹೋಗಿ ನಿಂತು ಬಹಳ ಕೈಗಳಿಗೆ ಬಿದ್ದಿದ್ದಾರೆಂದು ಗೊತ್ತಾಗಿದೆ. ಹೋಗುವಾಗ ಅಲ್ಲಿ ... ವರ್ಷಗಳವರೆಗಾಗಿ ಮುಂದೆಯೇ ... ಹೋಗುತ್ತಾರೆ. ಅಲ್ಲಿ ... ವರ್ಷಗಳು ... ಬಂಟು. ... ಸರ್ಕಾರದವರ ಖರ್ಚಿನಿಂದಲೆ ... ಬರಬಹುದು. ... ಪ್ರಾರ್ಥನೆಯಲ್ಲ. ... ಸಕ್ಕರೆ ... ಧನವು ದೊರಕುತ್ತದೆ.

* * *

ಫ್ರಾನ್ಸಿನಲ್ಲಿ ಪ್ರಜಾವೃದ್ಧಿಯು ಕಡಿಮೆಯಾಗುತ್ತಾ ಬಂದುದನ್ನು ನೋಡಿ ಆ ಸರ್ಕಾರದವರು ಒಂದು ಕಟ್ಟಳೆಯನ್ನು ಮಾಡಿದ್ದಾರೆ. ಆ ದೇಶದಲ್ಲಿ ಪ್ರತಿಯೊಬ್ಬರೂ ಕೆಲವು ಕಾಲ ಸಿಪಾಯಿಗಳಾಗಿರಬೇಕಷ್ಟೆ. ಸಿಪಾಯಿ ಚಾಕರಿಗೆ ಸೇರಿದರೆ ... ಸಂಸಾರದಿಂದ ದೂರವಾಗಿ ... ಮೂರು ಮಕ್ಕಳಿಗೆ ಜನ್ಮ ಕೊಟ್ಟ ಪ್ರಜೆಗಳು ... ಬಿಟ್ಟುಬಿಡುತ್ತಾರೆ. ಇದರಿಂದ ಪ್ರಜಾವೃದ್ಧಿಯು ಕಡಿಮೆಯಾಗುವುದಕ್ಕೆ ಕಾರಣವಾಗುತ್ತದೆ. ಇದನ್ನು ತಪ್ಪಿಸುವದಕ್ಕೋಸ್ಕರ ಆ ಸರ್ಕಾರದವರು ಮಾಡಿರುವ ಹೊಸ ಕಟ್ಟಳೆಯೇನೆಂದರೆ—ಕ್ರೈಸ್ತರನ್ನು ... ಸಂಸಾರಿಕರಾದರೆ ಅವರ ಕುಟುಂಬಗಳಿರುವ ಪ್ರಾಂತ್ಯದಲ್ಲೇ ಅವರಿಗೆ ಉದ್ಯೋಗ ಮಾಡಿಕೊಂಡಿರುವಂತೆ ಅನುಕೂಲಪಡಿಸಿಕೊಡುತ್ತಾರೆ.

* * *

ಜರ್ಮನಿ ದೇಶದ ಪ್ರಜೆಗಳಲ್ಲಿ ಪರಸ್ಪರ ವಿರೋಧಕ್ಕೆ ಕಾರಣವಾದ ಕಾರ್ಯವೇನಾದರೂ ನಡೆದರೆ ಅದನ್ನು ಇತ್ಯರ್ಥಪಡಿಸಿಕೊಳ್ಳುವುದಕ್ಕೋಸ್ಕರ ದ್ವಂದ್ವ ಯುದ್ಧವನ್ನು ನಡೆಸುವ ಪೂರ್ವ ಪದ್ಧತಿಯನ್ನು ಆಚರಿಸುತ್ತಲಿದ್ದಾರೆ. ಇದು ದುಷ್ಕೃತ್ಯವೆಂದು ಆ ದೇಶದ ಧರ್ಮಕರ್ತರು ತಿಳಿದು ಕೊಟ್ಟ ... ಈ ಮಾದರಿ ಪದ್ಧತಿಗೆ ವಿರೋಧಿಗಳಾಗಿ ಧರ್ಮಾಧಿಕಾರಿಗಳೇ ನಿಂತು ಅದನ್ನು ನಿಲ್ಲಿಸುವದಕ್ಕೆ ಪ್ರಯತ್ನಿಸತಕ್ಕದ್ದೆಂದು ತೀರ್ಮಾನಿಸಿದರು.

* * *

ನೆಪ್ಚ್ಯೂನ್ ಎಂಬಹೊಂದು ಹಡಗವು ಫ್ರಾಂಸಿನ ಬಳಿಯಲ್ಲಿ ಒಡೆದುಹೋಯಿತು. ಅದರ ೩೩ ಮಂದಿ ನಾವಿಕರು ರಕ್ಷಿಸಲ್ಪಟ್ಟರು. ಇವರೊಳಗೆ ಒಂದು ಹೊಸ ಹುಡುಗಿಯು ಇದ್ದ ನಾವಿಕರನ್ನು ಕಾರ್ಯತತ್ಪರಳಾಗಿಯೂ ಧೈರ್ಯದಿಂದ ಹಡಗಿನ ಬಳಿಗೆ ಹೋಗಿ ಎಲ್ಲರನ್ನು ರಕ್ಷಿಸಿದಳು. ಇವಳು ಚಿಕ್ಕವಳು.

* * *

ಕೆಲವು ಕಾಲಕ್ಕೆ ಮುಂಚೆ ಸಿಂಗಪೂರಿನಿಂದ ಎಣ್ಣೆ ತುಂಬಿಕೊಂಡು ಹೊರಟ ಒಂದು ಹಡಗು ತಾನು ಮುಟ್ಟಬೇಕಾದ ಪಟ್ಟಣವನ್ನು ಮುಟ್ಟುವುದಕ್ಕೆ ತಾಮಸವಾದದರಿಂದ ಆ ಹಡಗು ನಷ್ಟವಾಗಿರಬಹುದೆಂದು ಮಾಲೀಕರು ತಿಳಿದಿದ್ದರು. ಈಗ ಅದು ಆ ಪಟ್ಟಣವನ್ನು ಸುರಕ್ಷಿತವಾಗಿ ಮುಟ್ಟಿತು. ತಡವಾದುದಕ್ಕೆ ದಾರಿಯಲ್ಲಿ ಬಹು ಭಯಂಕರವಾದ ಬಿರುಗಾಳಿ ಎದ್ದುದ್ದೇ ಕಾರಣವಾಯಿತು. ಬಿರುಗಾಳಿಯಾದಾಗ ಹಡಗಿನ ಯಜಮಾನನು ಸಮುದ್ರದ ಅಲೆಗಳನ್ನು ಶಾಂತಪಡಿಸುವುದಕ್ಕಾಗಿ ೫೦ ಗ್ಯಾಲನುಗಳ ಎಣ್ಣೆಯನ್ನು ಚೆಲ್ಲುವಮಾಡಿದನು. ಇದನ್ನು ಇನ್ಸೂರ್ ಮಾಡುವದಕ್ಕೆ ಒಪ್ಪಿದ್ದ ಇನ್ಸೂರೆನ್ಸ್ ಕಂಪೆನಿಯವರು ಈಗ ಒಳ್ಳೇ ಲಾಭವನ್ನು ಕಳಕೊಂಡೆವಲ್ಲ ಎಂದು ಪಶ್ಚಾತ್ತಾಪ ಪಡುತ್ತಿದ್ದಾರೆ.


## ಚೇಂಬರ್ಲೇನ್ ಯವರು ಕಂಡುಹಿಡಿದ ಕೆಮ್ಮು ಔಷಧವು.




47

ಶೀತ, ಕೆಮ್ಮು, ಗಂಟಲು ಗೂರೆನ್ನುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿಕೆಗೆ ಈ ಔಷಧವು ಬಹಳ ಶ್ರೇಷ್ಠವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತವಾ ಬಂದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಅಲಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಒಣಗಿಹೋಗುವದು. ಇದರಿಂದಲೇ ಅನೇಕ ಜನರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನ ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಈ ಜೊತೆ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ಒಂದಕ್ಕೆ ೧ ರೂ.; ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇವಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ.—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಕೆಲವು ದಿನಗಳ ಕೆಳಗೆ ಜರ್ಮನಿಯಲ್ಲಿ ಮಾಮ್ಸೆನ್ ಎಂಬೊಬ್ಬ ಪ್ರಖ್ಯಾತ ವಿದ್ವಾಂಸನು ತೀರಿಕೊಂಡನು. ಈತನು ಯೂರೋಪಿನ ಚರಿತ್ರೆಗಳಲ್ಲಾ ಪ್ರಖ್ಯಾತನಾದ ಚರಿತ್ರಕಾರನಾಗಿದ್ದನು. ಆತನು ೧೮೧೭ರಲ್ಲಿ ಹುಟ್ಟಿದನು. ಕಡೆಯವರೆಗೂ ತನ್ನ ಪಾಂಡಿತ್ಯವನ್ನು ಲೋಕಕ್ಕೆ ಪ್ರಕಟಪಡಿಸುತ್ತಲೆ ಇದ್ದನು. ಕೆಲವು ದಿನಗಳ ಹಿಂದೆ ಆತನ ೮೦ನೇ ವರ್ಷ ವರ್ಧಂತಿಯ ದಿವಸ ಸ್ನೇಹಿತರು ಸ್ನೇಹಿತನು ಬರೆದ ಗ್ರಂಥಗಳ ಪಟ್ಟಿಯನ್ನು ಮುದ್ರಿಸಿ ಪ್ರಕಟಪಡಿಸಿದರು. ಆತನು ೧೮೪೩ನೇ ವರ್ಷದ ಲಾಗಾಯತು ೯೨೦ ಪುಸ್ತಕಗಳನ್ನು ಬರೆದನೆಂದು ಗೊತ್ತಾಗುತ್ತೆ. ಆತನು ತನ್ನ ಪಾಂಡಿತ್ಯದಲ್ಲಿ ಮಗ್ನವಾಗಿ ಹೋಗಿದ್ದದರಿಂದ ಅನೇಕ ಸಲ ಬೀದಿಯ ಉರಿಯಲ್ಲಿ ತಲೆ ಕೂದಲನ್ನು ಸುಟ್ಟುಕೊಳ್ಳುತ್ತಿದ್ದನು. ಆತನ ಜ್ಞಾಪಕಶಕ್ತಿಯು ಆಶ್ಚರ್ಯಕರವಾಗಿತ್ತು.

ಸ್ವದೇಶದ ವೃತ್ತಾಂತಗಳು.

ನಾಳೆ ಭಾನುವಾರ ಬೆಳಗ್ಗೆ ನಮ್ಮ ಮಹಾರಾಜರವರು ಸ್ಪೆಷಲ್ ಟ್ರೈನಿನಲ್ಲಿ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಲಿದ್ದಾರೆ.

◆◆◆◆

ಮೈಸೂರು ಸರ್ಕಾರಿ ನೇತ್ರ ವೈದ್ಯರಾದ ಡಾಕ್ಟರ್ ರಾಮಸ್ವಾಮಿ ಐಯಂಗಾರರು ರಜೆಯಿಂದ ಬಂದು ಬೆಂಗಳೂರಿನಲ್ಲಿ ತಮ್ಮ ಕೆಲಸ ಭಾರವನ್ನು ವಹಿಸಿಕೊಂಡರು.

◆◆◆◆

ಕಾರಿಗದ ರೈಲೆ ಸ್ಟೇಷನ್ನಲ್ಲಿ ರೈಲ್ವೆಯವರು ವಿಜೇಗಾಡಿಯು ಕಳೆದ ಬುಧವಾರ ಹಿಂದಕ್ಕೂ ಮುಂದಕ್ಕೂ ಓಡಾಡುತ್ತಿದ್ದಾಗ ಒಬ್ಬ ಹುಡುಗನು ಕಂಬಿಗಳ ಮೇಲೆ ದಾಟ ಹೋಗುತ್ತಾ ಆದರಲ್ಲಿ ಸಿಕ್ಕಿ ಮೃತಪಟ್ಟನು.

◆◆◆◆

ರಾಜಧಾನಿಯಲ್ಲಿ ಅಸಿಸ್ಟೆಂಟ್ ಕಮಿಷನರ್ ಮಿ॥ ಎಂ ಸಾಂಬಯ್ಯ, ಬಿ. ಎ., ಬಿ. ಎಲ್. ಯವರಿಗೆ ಸರ್ಕಾರದವರು ಮೂರು ತಿಂಗಳ ರಜಾ ಕೊಟ್ಟು, ಕೋಲಾರಕ್ಕೆ ವರ್ಗ ಮಾಡಿದಾರೆ. ಇವರು ಮೊನ್ನೆ ಭಾನುವಾರ ಪ್ರಯಾಣ ಮಾಡಿದರು.

◆◆◆◆

ಕೋಲಾರ್ ಚಿನ್ನದ ಗಣಿಗಳ ಪೈಕಿ ಮ್ಯೆಸೂರ್ ಮೈನ್ ಕಂಪೆನಿಯವರು ಭಾಂಡಾರ ಶೇರ್ ಕಂಪೆನಿಯವರಿಗೆ ಸೇರಿದ್ದ ಭೂಮಿಯನ್ನು ತೆಗೆದುಕೊಂಡು, ವರುಷಕ್ಕೆ ೧೩,೨೦೦ ಪೌಂಡು (ಅಂದರೆ, ಸುಮಾರು ೧೯೮,೦೦೦ ರೂ.) ಲಾಭ ಪಡೆಯುತ್ತಿದ್ದಾರೆ.

◆◆◆◆

ಕೋಲಾರ್ ಚಿನ್ನದ ಗಣಿ ಕಂಪೆನಿಗಳವರು ತಮಗೆ ಬೇಕಾಗಿರುವ ಒಂದು ಲಕ್ಷ ಟನ್ ತೂಕವನ್ನು ಕಲ್ಲಿದ್ದಲನ್ನು ಹಿಂದೆ ಆಪ್ರಿಕಾದ ಗಣಿಯಿಂದ ತರಿಸಿಕೊಳ್ಳುತ್ತಿದ್ದರೆಂತೆ ಈಗ ಪ್ರತಿ ವರುಷ ಬಂಗಾಳದ ಕಲ್ಲಿದ್ದಲನ್ನು ಆರ್ಬುತ್ನಾಟ್ ಕಂಪೆನಿಗೆ ವಹಿಸಿರುತ್ತಾರೆ.

◆◆◆◆

ನವರಾತ್ರಿ ಉತ್ಸವಕ್ಕಾಗಿ ಬೆಂಗಳೂರಿನಿಂದ ರಾಜಧಾನಿಗೆ ಹೋಗಿದ್ದ ಬಾರ್ ಸಿಪಾಯಿಗಳನ್ನೂ ಬ್ಯಾಂಡಿನವರನ್ನೂ ಕಳೆದ ಭಾನುವಾರ ಹಿಂತಿರುಗಿಸಿದರು. ಇವರೆಲ್ಲಾ ಸುಮಾರು ಒಂದು ವಾರದ ತನಕ ಮೈದಾನದಲ್ಲಿ ಆಸ್ಪತ್ರೆಯಿಲ್ಲದ ಡೇರೆಗಳಲ್ಲಿ ಈಗ ಬೀಳುತ್ತಿರುವ ಮಳೆ ಗಾಳಿಗಳನ್ನು ತಡೆಯಲಾರದೆ ತುಂಬಾ ಕಷ್ಟಪಡುತ್ತಿದ್ದರು.

◆◆◆◆

ಮಹಾ ಘನತೆ - ಶ್ರೀಯುವರಾಜ ಮಹಾರಾಜರವರಿಗೆ ಕಳೆದ ವಾರ ದೇಹಾಲಸ್ಯವಾಗಿತ್ತು. ೩-೪ ದಿನಗಳ ತನಕ ಅವರು ಕಾಯಿಲೆಯಾಗಿದ್ದರು. ಸೀನಿಯರ್ ಸರ್ಜನ್ ಡಾಕ್ಟರ್ ಸ್ಮಿತ್ ಯವರು ರಾಜಧಾನಿಗೆ ಬಂದು ಔಷಧ ಮುಂತಾದ್ದು ಕೊಟ್ಟು ವಾಸಿ ಮಾಡಿದರು. ಈಗ ಅವರಿಗೆ ಆರೋಗ್ಯವಾಗುತ್ತಿದೆ ಎಂದು ತಿಳಿಸಲು ಸಂತೋಷಪಡುತ್ತೇವೆ.

◆◆◆◆

ಮದರಾಸ್ ಆಧಿಪತ್ಯದಲ್ಲಿ ಅಧಿಕಾರಿಗಳು ಜಮಾಬಂದಿಗೆ ಹೋಗುವ ಸಂಗತಿ ಮೊದಲು ಯಾವ ಯಾವ ತಾರೀಖಿನಲ್ಲಿ ಯಾವ ಯಾವ ಗ್ರಾಮಗಳಿಗೆ ಹೋಗುವರೋ ಅವುಗಳನ್ನೆಲ್ಲಾ ಮೊದಲೇ ತಿಳಿಯಪಡಿಸಬೇಕೆಂಬದಾಗಿ ಹುಕುಂ ಆಗಿದೆ. ನಮ್ಮ ಸಂಸ್ಥಾನದಲ್ಲೂ ಈ ಪ್ರಕಾರವಾಗಿ ಸರ್ಕಾರದವರು ಹುಕುಂ ಕೊಟ್ಟು ಜಾರಿಗೆ ತಂದರೆ ಅನೇಕ ಭಾಗಗಳಲ್ಲಿ ಅದರಿಂದ ಉಪಕಾರವಾದೀತು.

◆◆◆◆

ನಮ್ಮ ಬ್ರಿಟಿಷ್ ರೆಸಿಡೆಂಟ್ ಮಿ॥ ಜೆ. ಎ. ಬೋರ್ಡಿಲಾನ್ ಅವರು ಡಿಸೆಂಬರ್ ಮೊದಲನೇ ವಾರ ಬೆಂಗಳೂರಿನಿಂದ ಹೊರಟು ಮರ್ಕೇರ, ಕೊಡಗು, ಗೆರಸೊಪ್ಪಾ ಜಲಪಾತ, ಇವೇ ಮೊದಲಾದ ಪ್ರಾಂತ್ಯಗಳನ್ನು ನೋಡಿಕೊಂಡು ೧೩ನೇ ತಾ॥ ಬೆಂಗಳೂರಿಗೆ ಹಿಂತಿರುಗುತ್ತಾರೆಂತಲೂ, ಅನಂತರ ಜನವರಿ ತಿಂಗಳಲ್ಲಿ ಕೋಲಾರದ ಕಡೆ ದಯಮಾಡುತ್ತಾರೆಂತಲೂ ತಿಳಿದು ಬಂದಿದೆ.

◆◆◆◆

ಹೆಗ್ಗಡದೇವನ ಕೋಟೆ ತಾಲ್ಲೂಕಿಗೆ ಸೇರಿದ ಮೈಸೂರು ಮಾನಂದವಾಡಿ ರಸ್ತೆಯ ೧೨೬ನೇ ಮೈಲಿ ಕಲ್ಲಿನ ಬಳಿ ಫಾರೆಸ್ಟ್ ಆಫೀಸು ಸಿಪಾಯಿಗಳು ಅಕ್ರಮವಾಗಿ ನಡೆಸುತ್ತಿದ್ದ ಒಂದು ಹೆಣ್ಣಾನೆಯನ್ನು ಹಳ್ಳಕ್ಕೆ ಬೀಳಿಸಿ ಇದೇ ನೊವೆಂಬರ್ ೨ರಲ್ಲಿ ಹಿಡಿದರು. ಇದು ೬ ಅಡಿ ಎತ್ತರವಾಗಿದೆ; ಸುಮಾರು ೫೦-೬ ವರುಷದ ಮರಿ. ಇದಕ್ಕೆ ಮಾರ್ಕೆಟ್ಟಿನಲ್ಲಿ ಎಂಟು ಹೆಸರಿಟ್ಟು, ಸಾಕುತ್ತಿದ್ದಾರೆ. ಅದು ಸ್ವಲ್ಪವೂ ತಂಟೆಮಾಡದೆ ಸುಲಭವಾಗಿ ಸಿಕ್ಕಿತು.

◆◆◆◆

ಕಳೆದ ವಾರ ಛೀಫ್ ಕೋರ್ಟ್ ಜಡ್ಜ್ ಮಿ॥ ಎ. ರಂಗಸ್ವಾಮಿ ಯ್ಯಂಗಾರರು ಬೆಂಗಳೂರಿಂದ ಕೋಲಾರಕ್ಕೂ ಚಿನ್ನದ ಗಣಿಗಳಿಗೂ ಹೋಗಿದ್ದರು. ಬೇತಮಂಗಲದಲ್ಲಿ ಪ್ರವಾಹದಿಂದುಂಟಾದ ಕಷ್ಟನಷ್ಟಗಳನ್ನು ಹೋಗಿ ನೋಡಿಕೊಂಡು ಬಂದು, ಅಲ್ಲಿನ ಕೋರ್ಟುಗಳಿಗೂ ಹೋಗಿ ಲೆಕ್ಕಪತ್ರಗಳನ್ನೆಲ್ಲಾ ತನಿಖೆಮಾಡಿ, ಎಲ್ಲಾ ತೃಪ್ತಿಕರವಾಗಿದೆ ಎಂದು ಹೇಳಿ, ಕಳೆದ ಸೋಮವಾರ ವಾಪಸು ಬೆಂಗಳೂರಿಗೆ ಬಂದುಬಿಟ್ಟರು.

◆◆◆◆

ಹೆಗ್ಗಡದೇವನ ಕೋಟೆ ತಾಲ್ಲೂಕು ವಿಶ್ವನಾಥಪುರವೆಂಬ ಗ್ರಾಮದಲ್ಲಿ ನಡೆದ ಕೊಲೆ ಮೊಕದ್ದಮೆಯಲ್ಲಿ ಮೈಸೂರ್ ಸೆಷನ್ಸ್ ಜಡ್ಜರು ದಾಸಪ್ಪನೆಂಬವನಿಗೆ ಫಾಸೀ ಸಜವನ್ನೂ, ಲಿಂಗಪ್ಪ ನಾಗೇಗೌಡ ಎಂಬವರಿಗೆ ಆಮರಣಾಂತವಾದ ಸಜಾ ಶಿಕ್ಷೆಯನ್ನೂ ವಿಧಿಸಿದ್ದರಷ್ಟೆ. ಅಪರಾಧಿಗಳು ಛೀಫ್ ಕೋರ್ಟಿನಲ್ಲಿ ಅಪ್ಪೀಲ್ ಮಾಡಿಕೊಂಡಿದ್ದರು. ಅಲ್ಲಿ ದಾಸಪ್ಪನಿಗೆ ಮರಣ ದಂಡನೆಯು ಖಾಯಂ ಮಾಡಲ್ಪಟ್ಟಿತೆಂತಲೂ, ಬಾಕಿ ಇಬ್ಬರಿಗೂ ಬಿಡುಗಡೆಯಾಯಿತೆಂತಲೂ ತಿಳಿದುಬಂದಿದೆ.

◆◆◆◆

ಡಿಸೆಂಬರ್ ೨೩ನೆ ತಾರೀಖಿನಲ್ಲಿ ಮದರಾಸ್ ಪಟ್ಟಣದಲ್ಲಿ ನಡೆಯಲಿರುವ ಕೈಗಾರಿಕೆಯ ವಸ್ತುಪ್ರದರ್ಶನಶಾಲೆಯನ್ನು ನಮ್ಮ ಮಹಾರಾಜರವರು ಪ್ರಾರಂಭಿಸುವುದಾಗಿ ಸಮ್ಮತಿಪಟ್ಟಿರುತ್ತಾರೆ. ಕಳೆದ ವರುಷ ನಡೆದ ಇದೇ ಪ್ರದರ್ಶನಶಾಲೆಯನ್ನು ಬರೋಡೆಯ ಮಹಾರಾಜರವರು ಪ್ರಾರಂಭಿಸಿ, ಶ್ರೇಷ್ಠವಾದ ಉಪನ್ಯಾಸವನ್ನು ಮಾಡಿದರು. ನಮ್ಮ ಮಹಾರಾಜರವರೂ ಈ ಉತ್ಸವದಲ್ಲಿ ಮಾಡತಕ್ಕ ಕೈಗಾರಿಕೆ ವಿದ್ಯೆಗಳ ವಿಷಯವಾಗಿ ಉಪನ್ಯಾಸ ಮಾಡಬಹುದೆಂದು ನಿರೀಕ್ಷಿಸುತ್ತೇವೆ.

◆◆◆◆

ಕೋಲಾರ್ ಗಣಿಗಳ ಚಿನ್ನವನ್ನು ಕಳವು ಮಾಡಿದ್ದೆಂದು ತಿಳಿದು ಕೇಸು ಕೊಟ್ಟಿದ್ದ ಕೆಲವು ಬೆಂಗಳೂರು ವರ್ತಕರಿಗೆ ಶಿಕ್ಷೆಯಾಗಿತ್ತು. ಅವರು ಅಪ್ಪೀಲ್ ಮಾಡಿಕೊಂಡಿದ್ದರು. ಅಪ್ಪೀಲ್ ಕೊಟ್ಟಿದ್ದ ಮೊಗಲು ಕಳೆದ ವಾರ ತೀರ್ಮಾನವಾಯಿತು. ಗಿರಿಯಪ್ಪನೆಂಬುವರಿಗೆ ಕೆಳಕೋರ್ಟಿನವರು ವಿಧಿಸಿದ್ದ ೧ ವರುಷ ಕಠಿಣ ಸಜಾ, ೫೦೦ ರೂ. ಜುಲ್ಮಾನೆ ಖಾಯಂ ಮಾಡಲ್ಪಟ್ಟಿದೆ. ನಾರಾಯಣಶೆಟ್ಟಿ, ದಾಸಪ್ಪಶೆಟ್ಟಿ ಎಂಬವರಿಗೆ ಕೆಳಕೋರ್ಟಿನಲ್ಲಿ ವಿಧಿಸಲ್ಪಟ್ಟಿದ್ದ ತಲಾ ೨ ವರುಷ ಕಠಿಣ ಸಜಾ, ೧,೦೦೦ ರೂ. ಜುಲ್ಮಾನೆ ಶಿಕ್ಷೆಯು ಖಾಯಂ ಆಯಿತು.

◆◆◆◆

ಮೈಸೂರು ಸಂಸ್ಥಾನವನ್ನು ಬ್ರಿಟಿಷ್ ಸರ್ಕಾರದವರು ಲೇಟ್ ಮಹಾರಾಜರವರಿಗೆ ಒಪ್ಪಿಸಿಕೊಟ್ಟಾಗ ಅಂದರೆ ೧೮೮೧ನೆ ಇಸವಿಯಲ್ಲಿ ಈ ಸಂಸ್ಥಾನದ ಎಕ್ಸೈಸ್ ಖಾತೆಯ ವರಮಾನವು ೩೦,೬೦,೯೭೬ ರೂ. ಇತ್ತು. ಈಗಲಾದರೋ ೧೯೦೩ನೆ ಮಾರ್ಚಿ ಆಖೈರಿಗೆ ಮುಗಿದ ೧೨ ತಿಂಗಳಲ್ಲಿ ಅದೇ ಖಾತೆಯ ಹುಟ್ಟುವಳಿಯು ೩೬,೫೦,೬೩೩ ರೂ. ಎಂಬದಾಗಿ ನಮ್ಮ ದಿವಾನರವರ ರಿಪೋರ್ಟಿನಲ್ಲಿ ಓದಿದರು. ಬೆಂಗಳೂರು, ಮೈಸೂರು, ಕೋಲಾರ, ಈ ಮೂರು ಕಡೆಗಳಲ್ಲೂ ಇರುವ ೧,೬೩,೦೦೦ ಪ್ರಜೆಗಳು ೧,೨೦,೦೦೦ ಗ್ಯಾಲನ್ ಮದ್ಯವನ್ನು ಪಾನಮಾಡಿರುತ್ತಾರೆ. ಈ ಸಂಸ್ಥಾನಕ್ಕೆ ಸೇರಿದ ಉಳಿದ ಭಾಗಗಳೆಲ್ಲಾ ಒಟ್ಟು ೪೩,೯೬,೦೦೦ ಪ್ರಜೆಗಳು ೧,೪೦,೦೦೦ ಗ್ಯಾಲನ್ ಮದ್ಯವನ್ನು ಮಾತ್ರ ಪಾನಮಾಡಿದರು. ಇದರಿಂದ ಈ ಸಂಸ್ಥಾನದಲ್ಲಿ ಪಾನದೋಷವು ಎಷ್ಟುಮಟ್ಟಿಗೆ ಹೆಚ್ಚುತ್ತಾ ಬಂದಿದೆಯೋ, ಮೈಸೂರು, ಕೋಲಾರ, ಬೆಂಗಳೂರು ಪಟ್ಟಣಗಳಲ್ಲಿರುವ ಜನರು ಕ್ಯಾಗೆ ಪಾನದೋಷದಲ್ಲಿ ನಿಸ್ಸೀಮರಾಗುತ್ತಾ ಬಂದಿರುವರೋ ವಾಚಕರೇ ತಿಳುಕೊಳ್ಳಬಹುದು.

ಮೈಸೂರು ಗೆಜೆಟ್ ಸಂಗ್ರಹ.

ಮಿ॥ ಮಹಮದ್ ಹಸ್ತಗೀರ್ ಸಾಹೇಬರನ್ನು ಚಿತ್ರದುರ್ಗದ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಿದೆ.

ಮುಂದೆ ಹೇಳುವ ಅಸಿಸ್ಟೆಂಟ್ ಸರ್ಜನರುಗಳ ಬಡ್ತಿಗಳು ಅಕ್ಟೋಬರ್ ೧ ರಿಂದ ಜಾರಿಯಲ್ಲಿ ಬರತಕ್ಕದ್ದು —

ಮಿ॥ ಗಳಾದ ಪಟ್ಟಿಯು. ಶ್ರೀನಿವಾಸಯ್ಯಂಗಾರರು, ಬಿ. ಡಿ. ರಾಘವೇಂದ್ರರಾಯರು, ಸಿ. ಜೆ. ಹನುಮಂತಯ್ಯಂಗರು, ಪಿ. ಪಲ್ಲವಯರು—ಇವರಿಗೆ ೨ ರಿಂದ ೧ ನೆ ಕ್ಲಾಸಿಗೆ ಬಡ್ತಿ.

ಮಿ॥ ಜೆ. ಎ. ಕೋಯಿಲ್ಹೋಯವರು, ಮಿ॥ ವಿ. ಅಬ್ಬಾಯಿ ನಾಯ್ಡು ಯವರು—ಇವರಿಗೆ ೩ ರಿಂದ ೨ ನೆ ಕ್ಲಾಸಿಗೆ ಬಡ್ತಿ.

ಸಬ್ ಅ॥ ಸರ್ಜನ್ ಮಿ॥ ಎಸ್. ಹನುಮಂತರಾಯರನ್ನು ೧೯೦೦ ನೆ ಜುಲೈ ೧೬ ರಿಂದ ೨ ನೆ ಕ್ಲಾಸಿಗೂ, ೧೯೦೩ ನೆ ಜುಲೈ ೧೭ ರಿಂದ ೧ ನೆ ಕ್ಲಾಸಿಗೂ ಬಡ್ತಿ ಮಾಡಲಾಗಿದೆ.

ಬೆಂಗಳೂರಿಗೆ ಹಂಗಾಮಿಯಾಗಿ ವರ್ಗಮಾಡಿರುವ ಸೀನಿಯರ್ ಅ॥ ಕಮಿಷನರ್ ಮಿ॥ ಬಿ. ರಾಮಸ್ವಾಮಯ್ಯಂಗಾರ್‌ರಿಗೆ ೧ ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಲ್ಪಟ್ಟಿದೆ.

ಹೆಡ್ ಕ್ವಾರ್ಟರ್ ಎಸ್ಟಾಬ್ಲಿಷ್‌ಮೆಂಟ್ ಭಾರವನ್ನು ವಹಿಸಿರುವ ಅ॥ ಸರ್ಜನ್ ಮಿ॥ ಬಿ. ಡಿ. ರಾಘವೇಂದ್ರರಾಯರಿಗೆ ಜೂನ್ ೧೪ ರಿಂದ ೧೭ ದಿವಸಗಳ ಸಂಬಳವಿಲ್ಲದ ರಜಾ ಕೊಟ್ಟಿತ್ತು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಫೊ. ಅ. ಸೂಪರಿಂಟ್ ಮಿ॥ ಟಿ ಪ್ಪಾ ಸುಲ್ತಾನ್ ಅಲ್ಲಿ ಖಾನ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ಕಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚಿಕ್ಕಾರ್ಪುರದ ತಾಲ್ಲೂಕ್ ಅಮಲ್ದಾರ್ ಮಿ॥ ಹಿ. ಸುಬ್ರಾಯರು ನಾಗಪ್ಪಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿರಸ್ತೆದಾರ್ ಅಣ್ಣಯ್ಯನವರು ತಮ್ಮ ಸ್ವಂತ ಕೆಲಸಗಳ ಸಂಗಡ ತಾಲ್ಲೂಕಿನ ಚಾಲ್ತಿ ಕೆಲಸಗಳ ಭಾರವನ್ನೂ ಪಡೆದಿರತಕ್ಕದ್ದು.

ಬೆಂಗಳೂರ್ ತಾಲ್ಲೂಕು ಕೊಡಿಗೇಹಳ್ಳಿಯನ್ನು ಬಿಡಾವಣೆ ಮಾಡುವುದಕ್ಕೆ ಸರ್ವೆ ನಂಬರು ೧೫೩,೧೫೪ ಇವೆರಡು ಜಮೀನುಗಳಲ್ಲಿ ೧೦ ಎಕರೆ ೭ ಗುಂಟೆ ಆಕಾರ ರೂ. ೧೧—೧೪—೩ ಉಳ್ಳ ಭಾಗವು ಸರ್ಕಾರಕ್ಕೆ ಬೇಕಾಗಿರುತ್ತದೆ.

ಭಾವನಹಳ್ಳಿ ಜೋಡಿದಾರ್ ಮಿ॥ ರಾ॥ ರಾಮಚಂದ್ರ ಸಿಂಗ್‌ರವರನ್ನು ಮಾಗಡಿಯಲ್ಲಿರುವ ಶ್ರೀ ಶಂಕರ ನಾರಾಯಣಸ್ವಾಮಿ ದೇವಸ್ಥಾನದ ಧರ್ಮದರ್ಶಿಯಾಗಿ ನೇಮಿಸಿದೆ.

ಸೂಪರಿಂಟೆಂಡಿಂಗ್ ಇಂಜಿನಿಯರ್ ಮಿ॥ ಜೆ. ಜೆ. ವೈಟ್ಲಿಯವರನ್ನು ಎಗ್ಜಿಕ್ಯುಟಿವ್ ಇಂಜಿನಿಯರ್ ೧ ನೇ ಗ್ರೇಡಿನಲ್ಲಿ ಖಾಯಂ ಮಾಡಿರುವಂತೆ ಇಂಡ್ಯಾ ಸರ್ಕಾರದವರು ಘೋಷಿಸಿ ಮಾಡಿದಾರೆ.

ಸಬ್ ಅ॥ ಇಂಜಿನಿಯರ್ ಮಿ॥ ಸ್ವಿ. ಅಶ್ವತ್ಥನಾರಾಯಣರಾಯರನ್ನು ೩ ರಿಂದ ೨ ನೆ ಕ್ಲಾಸಿಗೆ ಹಂಗಾಮಿಯಾಗಿ ಬಡ್ತಿ ಮಾಡಿದೆ.

ಮೈಸೂರ್ ರಾಯರವರ ದೇಶಸಂಚಾರ.

ಕಳೆದ ೧೬ನೇ ತಾ॥ ಸೋಮವಾರ ಲಾರ್ಡ್ ಕರ್ಜನ್ ಪ್ರಭುಗಳು ಪತ್ನಿ ಪರಿವಾರ ಸಹಿತ ಹಾರ್ಡಿಂಜ್ ಎಂಬ ಹಡಗು ಹತ್ತಿ, ಜಹಜುಗಳನ್ನು ಹಿಂದುಮುಂದೆ ಬಿಟ್ಟುಕೊಂಡು ಪ್ರಯಾಣ ಮಾಡಿ, ೧೮ನೇ ತಾ॥ ಬುಧವಾರ ಬೆಳಗ್ಗೆ ೧೦ ಗಂಟೆಗೆ ಮಸ್ಕತ್ ಪಟ್ಟಣವನ್ನು ತಲುಪಿದರು. ಮಸ್ಕತ್ ಸುಲ್ತಾನರ ಸಹೋದರರೂ, ಕುಮಾರರೂ, ವಜೀರರೂ, ಸೈನ್ಯಾಧಿಪತಿಗಳೂ ಮುಂತಾದ ಗವರ್ನರೂ ಜಹಜಿನೊಳಕ್ಕೆ ಹತ್ತಿಬಂದು ವೈಸ್‌ರಾಯರನ್ನು ಕಂಡು, ಅವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋದರು. ತರುವಾಯ ಮಸ್ಕತ್ ಸುಲ್ತಾನರಿಂದ ಫೈಸಲ್ ತಕ್ಷಣವೇ, ಮಸ್ಕತ್ತಿನಲ್ಲಿರುವ ಬ್ರಿಟಿಷ್ ರೆಸಿಡೆಂಟರಾದ ಮೇಜರ್ ಕಾಕ್ಸ್ ಯವರೂ ಜಹಜುಗಳನ್ನೆಲ್ಲಾ ಸುತ್ತಿಕೊಂಡು, ವೈಸ್‌ರಾಯರು ಇದ್ದ ಜಹಜನ್ನು ಹತ್ತಿಕೊಂಡರು. ವೈಸ್‌ರಾಯರು ಅವರನ್ನು ಕರೆದು ತಮ್ಮ ಕೊಠಡಿಯಲ್ಲಿ ಕೂರಿಸಿಕೊಂಡರು. ಸ್ವಲ್ಪ ಹೊತ್ತು ಮಾತುಕಥೆ ನಡೆದನಂತರ ಸುಲ್ತಾನರ ಕಡೆಯ ಸರ್ದಾರರುಗಳನ್ನೆಲ್ಲಾ ವೈಸ್‌ರಾಯರಿಗೆ ಕಾಣಿಕೆ ಪರಿಚಯ ಮಾಡಿಸಿದರು. ಜಹಜಿನಲ್ಲೇ ಎಲ್ಲರಿಗೂ ಕಾಫಿ ಪಾನಕತ್ತು, ಫಲಾಹಾರ ಬೆಳೆಯಿತು. ಸುಲ್ತಾನರು ಹೊರಟು ಬಂದನಂತರ ಫ್ರಾನ್ಸ್ ಮತ್ತು ಅನೇಕ ರಾಜ್ಯಗಳ ರಾಯಭಾರಿಗಳು ಹೋಗಿ ವೈಸ್‌ರಾಯರನ್ನು ಕಂಡು ಮಾತನಾಡಿಕೊಂಡು ಬಂದರು.

ವೈಸ್‌ರಾಯರು ಮಧ್ಯಾಹ್ನ ೨ ಗಂಟೆಗೆ ಜಹಜಿನಿಂದಿಳಿದು, ಜಂಬೂಸವಾರಿ ಮೂಲಕ ಸಿದ್ಧಪಡಿಸಿದ್ದ ರಾಜವೀಧಿಗಳಲ್ಲಿ ಮೆರವಣಿಗೆಯಾಗಿ ಸಂಚರಿಸಿ, ಬ್ರಿಟಿಷ್ ರಾಯಭಾರಿಯ ಬಂಗಲೆಗೆ ದಯಮಾಡಿ, ಅಲ್ಲಿ ಭೋಜನ ಮಾಡಿದರು. ೩ ಗಂಟೆಯ ಮೇಲೆ ಅಲ್ಲಿರುವ ಬ್ರಿಟಿಷ್ ಪ್ರಜೆಗಳು ವೈಸ್‌ರಾಯರನ್ನು ಕಂಡು, ಅವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ, ಶ್ರೇಷ್ಠವಾದ ಚಿತ್ರಕೆಲಸಗಳಿಂದ ಕೂಡಿದ ಬೆಳ್ಳಿಯ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಅಲ್ಲಿನ ವ್ಯಾಪಾರದ ಬೆಲೆಯು ಬಹಳವಾಗಿ ಹೆಚ್ಚುತ್ತಿರುವದರಿಂದಲೂ, ಜನರ ಪರಸ್ಪರ ಕಲಹ ಒಳದೇಶದ ಗಲಭೆಗಳ ಜೊತೆಯಿಂದಲೂ ತಮ್ಮ ವ್ಯಾಪಾರವ್ಯವಹಾರಗಳು ಸರಾಗವಾಗಿ ನಡೆಯಲು ಅವಕಾಶವಿಲ್ಲದೆ ಇದೆ ಎಂಬದಾಗಿ ಅರಿಕೆಮಾಡಿಕೊಂಡರು. ಅವರಿಗೆ ವೈಸ್‌ರಾಯರು—ನ್ಯಾಯವಾದ ಬದಲಾವಣೆ ವಿಚಾರವನ್ನು ನಾನು ತನಿಖೆ ಮಾಡುತ್ತೇನೆಂತಲೂ ವ್ಯಾಪಾರ ವಿಷಯದಲ್ಲಿ ನಿಮಗೆ ತುಂಬಾ ಹಿಂಸೆ ಕಷ್ಟನಷ್ಟಗಳು ಪ್ರಾಪ್ತವಾಗುತ್ತಿವೆ ಎಂಬ ಸಂಗತಿ ನಮಗೆ ತಿಳಿದುಬಂದರೆ ಮಸ್ಕತ್ ಸುಲ್ತಾನರ ಸಹಾಯದಿಂದ ಬೇಕಾಗುವ ಸಲಕರಣೆಗಳನ್ನು ಒದಗಿಸಿಕೊಟ್ಟು ನಿವಾರಣೆ ಮಾಡಲು ಪ್ರಯತ್ನ ಪಡುವೆವು ಎಂತಲೂ ಅಪ್ಪಣೆ ಕೊಡಿಸಿದರು.

ತರುವಾಯ ವೈಸ್‌ರಾಯರು ಸುಲ್ತಾನರ ಅರಮನೆಗೆ ದಯಮಾಡಿದರು. ಸುಲ್ತಾನರು ಇಂಗ್ಲಿಷ್ ರಾಜ್ಯಭಾರದಲ್ಲಿ ತಮಗಿರುವ ವಿಶೇಷವಾದ ಭಕ್ತಿ ವಿಶ್ವಾಸಗಳನ್ನು ಪ್ರಕಾಶಪಡಿಸುವಂಥಾ ಒಂದು ವಿಜ್ಞಾಪನಾ ಪತ್ರಿಕೆಯನ್ನು ತಮ್ಮ ಮಂತ್ರಿಗಳ ಕೈಲಿ ಓದಿಸಿ ವೈಸ್‌ರಾಯರಿಗೆ ಒಪ್ಪಿಸಿದರು. ರಾತ್ರಿ ಪಟ್ಟಣವನ್ನೆಲ್ಲಾ ದೀಪೋತ್ಸವ ಮಾಡಿ ಪ್ರಕಾಶಗೊಳಿಸಿದ್ದರು. ವೈಸ್‌ರಾಯರಿಗೆ ಜಹಜಿನಲ್ಲೇ ಆ ರಾತ್ರಿ ಔತಣವಾಯಿತು.

ಮರುದಿನ ವೈಸ್‌ರಾಯರು ಆರ್ಗೋನಾಟ್ ಎಂಬ ಜಹಜಿನೊಳಗೆ ಒಂದು ದರ್ಬಾರ್ ನಡಸಿದರು. ಆ ಪ್ರಾಂತ್ಯದಲ್ಲಿರುವ ದೊಡ್ಡ ಮನುಷ್ಯರು ಸುಮಾರು ೩೦೦ ಮಂದಿ ಈ ದರ್ಬಾರಿಗೆ ಕರೆಸಲ್ಪಟ್ಟಿದ್ದರು. ಆಗಲೂ ಮಸ್ಕತ್ ಸುಲ್ತಾನರು ಅಲ್ಲಿ ಸೇರಿದ ದೊಡ್ಡ ಮನುಷ್ಯರ ಪರವಾಗಿ ಒಂದು ಅಡ್ರೆಸ್ಸನ್ನು ಓದಿ ವೈಸ್‌ರಾಯರಿಗೆ ಒಪ್ಪಿಸಿದರು. ವೈಸ್‌ರಾಯರು ಅದರ ಪೂರ್ವಕವಾಗಿ ಅದನ್ನಂಗೀಕರಿಸಿ, ಅವರಿಗೆಲ್ಲಾ ಸಮಯೋಚಿತವಾದ ಕೆಲವು ಮಾತುಗಳನ್ನು ಹೇಳಿದರು. ಅನಂತರ ವೈಸ್‌ರಾಯರು ಸುಲ್ತಾನರಿಗೆ ಜಿ. ಸಿ. ಐ. ಇ. ಎಂಬ ಬಿರುದನ್ನು ವಹಿಸಿಕೊಟ್ಟು, ದರ್ಬಾರನ್ನು ಮುಕ್ತಾಯಕ್ಕೆ ತಂದರು.

ಅದೇ ದಿನ ಮಧ್ಯಾಹ್ನ ವೈಸ್‌ರಾಯರು ಹಾರ್ಡಿಂಜೆಂಬ ಜಹಜು ಹತ್ತಿ ಪ್ರಯಾಣ ಮಾಡಿದರು.

## ಪ್ರಭುವಿನ ಪ್ರಾರ್ಥನೆ.—VII.

"ನಮ್ಮನ್ನು ಪರೀಕ್ಷೆಗೆ ಗುರಿಪಡಿಸದೆ ಕೇಡಿನಿಂದ ನಮ್ಮನ್ನು ತಪ್ಪಿಸು."—ಮತ್ತಾ. ೬ : ೧೩.

ಈ ವಿಜ್ಞಾಪನೆಯ ಅಭಿಪ್ರಾಯವೇನಿರಬಹುದೆಂಬ ವಿಷಯದಲ್ಲಿ ಬಹಳ ತರ್ಕವಿದೆ. ಬೈಬಲಿನಲ್ಲಿ "ಪರೀಕ್ಷೆ" ಯೆಂದು ಉಪಯೋಗಿಸಿರುವ ಮೂಲಪದಕ್ಕೆ ಎರಡು ಅರ್ಥಗಳುಂಟೆಂಬದಾಗಿ ಹೇಳುವರು. ಕೆಲವು ಸಮಯಗಳಲ್ಲಿ ಅದಕ್ಕೆ ಶೋಧನೆ ಅಥವಾ ಪರೀಕ್ಷೆ ಎಂದರ್ಥವಾಗುತ್ತದೆ. "ದೇವರು ಅಬ್ರಹಾಮನನ್ನು ಶೋಧಿಸಿದನು" ಎಂದು ಹೇಳುವಾಗ ಅವನು ವಿಧೇಯನಾಗಿಯೂ ನಂಬಿಕೆಯುಳ್ಳವನಾಗಿಯೂ ಇರುವನೋ ಇಲ್ಲವೋ ನೋಡುವದಕ್ಕೆ ಎಂದು ಪರೀಕ್ಷೆ ಮಾಡಿದನು ಎಂಬರ್ಥವಾಗುತ್ತದೆ. ಬೇರೆ ಸಂದರ್ಭಗಳಲ್ಲಿ ಈ ಪದಕ್ಕೆ ದುಷ್ಪ್ರೇರಣೆ ಎಂದರ್ಥವಾಗುತ್ತದೆ. ಹ್ಯಾಗಂದರೆ—ಕ್ರೀಸ್ತನು ಪಿಶಾಚನಿಂದ ಅರಣ್ಯದಲ್ಲಿ ಪಾಪಕೃತ್ಯವನ್ನು ಮಾಡುವಂತೆ ಪ್ರೇರಿಸಲ್ಪಟ್ಟನು. ಒಳ್ಳೇದು, ಈ ಎರಡು ಅಭಿಪ್ರಾಯಗಳಲ್ಲಿ ಯಾವದೂ ಈ ಸಂದರ್ಭದಲ್ಲಿ ಒಪ್ಪುವದಿಲ್ಲವೆಂಬುದು ಸ್ಪಷ್ಟವಾಗಿದೆಯಷ್ಟೆ. ಹ್ಯಾಗಂದರೆ—ನಮ್ಮ ಗುಣವನ್ನು ಶುದ್ಧಿಮಾಡುವದಕ್ಕೂ ವೃದ್ಧಿಪಡಿಸುವದಕ್ಕೂ ಭಗವಂತನು ಚಿತ್ತಗೊಂಡು ಶೋಧನೆಯನ್ನು ಕಳುಹಿಸಿದಲ್ಲಿ ಅದನ್ನು ಬೇಡವೆಂದು ನಾವು ವಿಜ್ಞಾಪಿಸಿಕೊಳ್ಳುವದು ಉಚಿತವಾಗಿರಲಾರದಷ್ಟೆ. ನಮಗೆ ಈ ವಿಧವಾದ ಕಷ್ಟಗಳು ಬಂದರೆ ಆನಂದಪಡಬೇಕು; ಯಾಕಂದರೆ ಇಂಥ ಪರಿಶೋಧನೆಯಿಂದ ತಾಳ್ಮೆಯುಳ್ಳವರೂ, ಧೈರ್ಯಶಾಲಿಗಳೂ, ಗುಣಸಂಪನ್ನರೂ ಆಗುವದಕ್ಕೆ ಅವಕಾಶವಿದೆಯೆಂದು ಯಾಕೋಬನೆಂಬ ಅಪೊಸ್ತಲನು ಹೇಳುತ್ತಾನೆ. ಮತ್ತೊಂದಭಿಪ್ರಾಯವನ್ನು ನೋಡಿದರೆ ನಮ್ಮಿಂದ ಪಾಪವನ್ನು ಮಾಡಿಸುವದಕ್ಕೆ ಭಗವಂತನೇ ಪ್ರೇರಣೆ ಮಾಡುತ್ತಾನೆಂದು ಊಹಿಸುವದು ಕೇವಲ ಅಸಾಧ್ಯವಾಗಿದೆ. ಇದರ ವಿಷಯದಲ್ಲಿಯೂ ಮೇಲೆ ಉದಾಹರಿಸಿದ ಯಾಕೋಬನು ಹೇಳುವದು ಚನ್ನಾಗಿ ಒಪ್ಪುತ್ತದೆ. ಅದೇನೆಂದರೆ—"ಯಾವನಾದರೂ ದುಷ್ಪ್ರೇರಣೆಗೆ ಗುರಿಯಾಗಿ—ದೇವರಿಂದ ನನಗೆ ದುಷ್ಪ್ರೇರಣೆಯಾಯಿತೆಂದು ಹೇಳಬಾರದು. ದೇವರು ದುಷ್ಪ್ರೇರಣೆಗೆ ಗುರಿಯಾಗತಕ್ಕವನಲ್ಲ; ಆತನು ಯಾರನ್ನೂ ದುಷ್ಪ್ರೇರಣೆಗೆ ಗುರಿಪಡಿಸುವದಿಲ್ಲ. ಆದರೆ ಪ್ರತಿಯೊಬ್ಬನೂ ತನ್ನಲ್ಲಿರುವ ದುರಾಶೆಯಿಂದ ಎಳೆಯಲ್ಪಟ್ಟು ಮರುಳುಗೊಂಡು ದುಷ್ಪ್ರೇರಣೆಗೆ ಗುರಿಯಾಗುತ್ತಾನೆ"—ಯಾಕೋಬ ೧ : ೧೩, ೧೪.

ಈ ವಿಷಯವನ್ನು ನಾವು ವಿಮರ್ಶಿಸಿ ನೋಡಿದರೆ ಇಲ್ಲಿ ಉಪಯೋಗಿಸಿರುವ ಮೂಲಪದಕ್ಕೆ ಶೋಧನೆ ಪರೀಕ್ಷೆ ಎಂಬ ಅರ್ಥವೊಂದೇ ಒಪ್ಪುತ್ತದೆಂದು ಹೇಳಬಹುದು. ಅರ್ಥಭೇದವಾಗುವದಕ್ಕೆ ಪದವು ಕಾರಣವಲ್ಲ. ಆ ಶೋಧನೆಗೆ ಕಾರಣರಾದ ಪುರುಷರ ಉದ್ದೇಶದಿಂದಲೇ ಭೇದವುಂಟಾಗುತ್ತದೆ. ದೇವರು ನಮ್ಮನ್ನು ಶೋಧಿಸಿದರೆ ನಮಗೆ ಕೇಡುಂಟಾಗುವದಕ್ಕಲ್ಲ, ಕ್ಷೇಮವನ್ನೇ ಹೀಗೆ ಮಾಡುತ್ತಾನೆಂದು ತಿಳಿಯತಕ್ಕದ್ದು. ನಮ್ಮ ಆಲೋಚನೆಗೆ ವಿಷಯವಾಗಿರುವ ಈ ಪ್ರಾರ್ಥನೆಯಲ್ಲಿ ಶೋಧನೆಯೆಂದುಪಯೋಗಿಸಿರುವ ಪದವನ್ನು ನೋಡುವಾಗ—ಮನುಷ್ಯನನ್ನು ಪಾಪದಲ್ಲಿ ಕೆಡವಿಬಿಡುವದಕ್ಕೆ ಹೇತುವಾದ ಮಹಾ ಅಪಾಯಕರವಾದ ಸಂದರ್ಭಗಳು ಎಂದಭಿಪ್ರಾಯವಾಗುತ್ತದೆಂದು ಪರಿಷ್ಕಾರವಾಗಿ ಗೊತ್ತಾಗುತ್ತದೆ. ಈ ವಿಜ್ಞಾಪನೆಯಲ್ಲಿ ನಾವು ಹಿಂದೆ ಸೂಚಿಸಿದ ಪಾಪಗಳ ನಿಮಿತ್ತವಾಗಿ ಕ್ಷಮೆಯನ್ನು ಕೇಳಿಕೊಂಡದ್ದಾಯಿತಲ್ಲ. ಈ ಪ್ರಶ್ನೆಯನ್ನು ನಾವು ನೋಡುವಾಗ್ಗೆ ಹಿಂದಿನ ಪಾಪಗಳ ಕ್ಷಮೆಯನ್ನು ಬೇಡಿಕೊಳ್ಳುವದೊಂದೇ ಸಾಲದೆಂದು ನಮಗೆ ಗೊತ್ತಾಗುತ್ತದೆ. ಹಿಂದೆ ಅಪಾಯಕ್ಕೆ ತಪ್ಪಿಸಿಕೊಳ್ಳುವದಕ್ಕಾಗಿ ನಾವು ಭಗವಂತನನ್ನು ಬೇಡಿಕೊಳ್ಳುವದು ಅವಶ್ಯವಾಗಿದೆ. ಲೋಕದಲ್ಲಿ ಬೀಳಕೆಡವತಕ್ಕ ಕಷ್ಟವಾದ ಮಹಾ ಕಷ್ಟಗಳೂ ಅಪಾಯ ಸಂದರ್ಭಗಳೂ ಬಂದೊದಗುವಾಗ ನಮ್ಮನ್ನು ದೇವರೇ ಕಾಪಾಡಬೇಕೆಂದು ವಿಜ್ಞಾಪಿಸಿಕೊಳ್ಳುವದಲ್ಲದೆ ನಮ್ಮ ಶಕ್ತಿಗೆ ಮೀರಿದ ಶೋಧನೆಯನ್ನು ಭಗವಂತನು ಕೊಡಬಾರದೆಂದು ಕೇಳಿಕೊಳ್ಳುವದು ಸ್ವಾಭಾವಿಕವಾಗಿದೆ. ನಮ್ಮ ದೌರ್ಬಲ್ಯವನ್ನು ನಾವೇ ಚನ್ನಾಗಿ ತಿಳಿದಿರುತ್ತೇವೆ. ಆದಕಾರಣ ನಮಗೆ ತಾಳಲಾರದಷ್ಟು ಹಿಂಸೆಯು ಬರಬಾರದೆಂದಾಗಲಿ, ನಮ್ಮಲ್ಲಿರುವ ಅಪರಾಧಗಳು ಪ್ರಕೋಪಗೊಂಡು ನಮ್ಮನ್ನು ಮಹಾ ಪಾಪಕೃತ್ಯಗಳಲ್ಲಿ ಕೆಡವತಕ್ಕಷ್ಟು ಬಲವತ್ತರವಾದ ಅವಸ್ಥೆಯು ಒದಗಬಾರದೆಂದಾಗಲಿ ಅಪೇಕ್ಷಿಸಿ ಭಗವಂತನನ್ನು ಬೇಡಿಕೊಳ್ಳುವದರಲ್ಲಿ ಆಕ್ಷೇಪಣೆ ಏನೂ ಇರುವದಿಲ್ಲ.

ಮುಂದೇನು ನಡೆಯುವದೋ ಎಂದು ಆಲೋಚಿಸಿಕೊಳ್ಳುವಾಗ ನಮ್ಮ ಮನಸ್ಸು ಬೆದರುತ್ತದೆ; ಯಾವ ಅಪಾಯವಾದ ಕಷ್ಟ ಸಂಭವಿಸುವದೋ, ಅದರಲ್ಲಿ ದೇವಭಕ್ತಿಗೆ ಕುಂದುಂಟಾಗದಂತೆ ನಡೆದು ಪಾಪಕ್ಕೆ ತಪ್ಪಿಸಿಕೊಳ್ಳುವದು ಹ್ಯಾಗೋ ಎಂದು ಶಂಕಿಸುವಂಥಾ ಸಂದರ್ಭದಲ್ಲಿ—"ಭಗವಂತನೇ, ನೀನೇ ಕಾಪಾಡಬೇಕು" ಎಂದು ಬೇಡಿಕೊಳ್ಳುವದು ಸ್ವಭಾವವಾಗಿದೆ. ಅದಕ್ಕನುಗುಣವಾಗಿ ಕ್ರೀಸ್ತಸ್ವಾಮಿಯೇ ನಡಕೊಂಡನು. ಆತನು ಗೆತ್ಸೆಮನೆ ಎಂಬ ತೋಟದಲ್ಲಿ ಮಹಾ ಸಂಕಟವನ್ನನುಭವಿಸುತ್ತಿರುವಲ್ಲಿ—ತಂದೆಯೇ, ಈ ಕಷ್ಟವು ನನ್ನನ್ನು ಬಿಟ್ಟು ತೊಲಗಲಿ ಎಂದು ಪ್ರಾರ್ಥಿಸಿದನು. ಮತ್ತು ಆತನು—"ದುಷ್ಪ್ರೇರಣೆಗೆ ಒಳಗಾಗದಂತೆ ಎಚ್ಚರವಾಗಿದ್ದು, ದೇವರನ್ನು ಪ್ರಾರ್ಥಿಸಿರಿ" ಎಂದು ಪೇತ್ರನೆಂಬ ಶಿಷ್ಯನನ್ನು ಎಚ್ಚರಿಸುವಾಗ ಅಪ್ಪಣೆ ಕೊಟ್ಟನು. ಪೇತ್ರನಾದರೋ ಸ್ವಶಕ್ತಿಯಲ್ಲಿ ಅಹಂಕಾರವುಳ್ಳವನಾಗಿದ್ದದರಿಂದ, ಅವನು ಮನುಷ್ಯರಿಗೆ ಭಯಪಟ್ಟು ಆಪತ್ತನ್ನು ಹೊಂದುವಷ್ಟು ಬಲವಾದ ಶೋಧನೆಗೆ ಸಿಕ್ಕಿದನು.

ಈ ವಿಜ್ಞಾಪನೆಯನ್ನು ನಾವು ಆಲೋಚಿಸಿ ನೋಡುವಲ್ಲಿ ನಾವು ಅಲಕ್ಷ್ಯವಾಗಿರಬಾರದೆಂದು ಎಚ್ಚರಿಸುವದಲ್ಲದೆ, ನಮ್ಮಲ್ಲಿರುವ ಅಹಂಭಾವವನ್ನೂ ಖಂಡಿಸುತ್ತದೆ ಎಂದು ತಿಳಿದು ಬರುತ್ತೆ. ನಮ್ಮ ಸುತ್ತಮುತ್ತಲೂ ನಮಗೇ ತಿಳಿಯದ ಹಾಗೆ ಅನೇಕ ಅಪಾಯಗಳು ಆಕಸ್ಮಿಕವಾಗಿ ಬರುವವೆಂದು ಇದರಿಂದ ನಮಗೆ ಗೊತ್ತಾಗುತ್ತದೆ. ನಮ್ಮಲ್ಲಿ ಅಹಂಭಾವವಾದರೂ ಅಪನಂಬಿಕೆಯಾದರೂ ಇರುವದನ್ನು ಸ್ವಾಮಿಯು ನೋಡಿದರೆ, ನಮ್ಮ ಜೀವಿತಕಾಲದ ಸಮಯ ಸಂದರ್ಭಗಳು ನಮಗೆ ಅಪಾಯಕರವಾಗಿ ಸಂಭವಿಸಿ, ಪಾಪಕ್ಕೆ ಒಳಗಾಗುವಂತೆ ದೇವರು ಮಾಡಬಹುದು; ಆಗ ನಾವು ಈ ಪ್ರಾರ್ಥನೆಯನ್ನು ಮಾಡದೆ ಹೋದರೆ,—"ಎಲ್ಲಾ ವಿಷಯಗಳಲ್ಲಿಯೂ ನಮ್ಮ ಹಾಗೇ ದುಷ್ಪ್ರೇರಣೆಗೆ ಗುರಿಯಾಗಿದ್ದರೂ ಪಾಪವನ್ನು ಮಾತ್ರ ಮಾಡದೆ" ಸ್ಥಿರವಾಗಿ ನಿಂತಿದ್ದ ಆ ಯೇಸುಸ್ವಾಮಿಯಂತೆ ನಿಲ್ಲುವದಕ್ಕೆ ಬದಲಾಗಿ ಅಸ್ಥಿರನಾಗಿ ಅಪಜಯವನ್ನು ಹೊಂದಿದ ಪೇತ್ರನ ಗತಿಯೇ ನಮಗೂ ಬಂದೀತು.

ಈ ಪ್ರಶ್ನೆಯನ್ನು ನಾವು ಅರ್ಪಿಸುತ್ತಿರುವಾಗ ನಾವು ಇನ್ನೊಂದು ವಿಷಯವನ್ನು ಮರೆಯಬಾರದು. ನಾವೆಷ್ಟು ಪ್ರಾರ್ಥಿಸಿದರೂ ನಮಗೆ ಆತ್ಮಸಂಬಂಧವಾದ ಅಪಾಯಗಳು ಸಂಭವಿಸಬೇಕೆಂಬುದು ದೇವರ ಚಿತ್ತವಾದರೆ ನಾವು ಯೇಸುಸ್ವಾಮಿ ಮಾಡಿದ ಪ್ರಕಾರ ನಮ್ಮನ್ನು ದೇವರಿಗೆ ಒಪ್ಪಿಸಿಕೊಡಬೇಕು. "ನನ್ನ ಚಿತ್ತದ ಪ್ರಕಾರವಲ್ಲ, ನಿನ್ನ ಚಿತ್ತವಿದ್ದಂತೆಯೇ ಆಗಲಿ" ಎಂಬ ಆತನು ಹೇಳಿದಂತೆಯೇ ನಾವೂ ಹೇಳಬೇಕು. ಮತ್ತು ಬಲವತ್ತರವಾದ ಪರಿಶೋಧನೆಗೆ ಸಿಕ್ಕಿದವರಿಗೆ ಭಗವಂತನು ಬರೆದುಕೊಟ್ಟಿರುವ ವಾಗ್ದಾನವನ್ನು ನಾವು ಉಪಯೋಗಿಸಿಕೊಳ್ಳತಕ್ಕದ್ದು. ಅದು ಯಾವದಂದರೆ

"ಸರ್ವೇಶ್ವರನು ಭಕ್ತರನ್ನು ಕಷ್ಟಗಳೊಳಗಿಂದ ತಪ್ಪಿಸುವದಕ್ಕೆ ಬಲ್ಲವನಾಗಿದ್ದಾನೆ."—೨ ಪೇತ್ರ ೨ : ೯.

"ನಿಮ್ಮ ಶಕ್ತಿಯನ್ನು ಮೀರುವ ದುಷ್ಪ್ರೇರಣೆಯನ್ನು ಆತನು ಬರಗೊಡಿಸುವದಿಲ್ಲ."—೧ ಕೊರಿ. ೧೦ : ೧೩.

ಈ ಪ್ರಕಾರ ಭಗವಂತನ ಸಹಾಯವನ್ನು ಆಶ್ರಯಿಸಿಕೊಂಡು ಪರಿಶೋಧನೆಯಿಂದ ಪ್ರಾಪ್ತವಾಗುವ ಅಲಭ್ಯಲಾಭವನ್ನು ನಾವೂ ಪಡೆಯುವವರಾಗುವೆವು.

"ಕಷ್ಟವನ್ನು (ಪರಿಶೋಧನೆಯನ್ನು) ಸಹಿಸಿಕೊಳ್ಳುವವನು ಧನ್ಯನು."—ಯಾಕೋಬ ೧ : ೧೨.

## ವೈಸ್‌ರಾಯಿಯವರ ದೇಶಸಂಚಾರವು

### ನಭಾ ಸಂಸ್ಥಾನವು

ಕಳೆದ ವಾರ ವೈಸ್‌ರಾಯ ಪ್ರಭುಗಳು ಪಟಿಯಾಲಾ ಸಂಸ್ಥಾನದಿಂದ ನಭಾ ಸಂಸ್ಥಾನಕ್ಕೆ ದಯಮಾಡಿದರು. ಮಹಾರಾಜರೇ ಮೊದಲಾದ ಸರದಾರರುಗಳೆಲ್ಲ ಸ್ಟೇಷನಲ್ಲಿ ವೈಸ್‌ರಾಯರನ್ನು ಎದುರ್ಗೊಂಡು ಮರ್ಯಾದೆಗಳೊಡನೆ [illegible] ಬಂಗಲೆಯಲ್ಲಿ ಇಳಿಸಿ ಸತ್ಕರಿಸಿದರು. ಭೇಟಿ ಪ್ರತಿಭೇಟಿಗಳು ನಡೆದವು. ವೈಸ್‌ರಾಯರು ಮಹಾರಾಜರ ಅರಮನೆ, ಅಶ್ವಶಾಲೆ, ಗಜಶಾಲೆ ಮೊದಲಾದವುಗಳನ್ನು ಸಂದರ್ಶಿಸಿದರು. ರಾತ್ರಿ ಭಾರೀ ಔತಣ ಮಾಡಲ್ಪಟ್ಟಿತು. ಭೋಜನಾನಂತರ ವೈಸ್‌ರಾಯರು ಅಪ್ಪಣೆಕೊಡಿಸಿದ್ದೇನಂದರೆ—ಹಿಂದುಸ್ಥಾನದ ಪ್ರಜಾ ಕೋಟಿಗಳಲ್ಲಿ ವಿದ್ಯಾಭಿವೃದ್ಧಿಯು ನಿರಂತರವಾಗಿ ನಡೆಯುವಂತೆ ಮಾಡಬೇಕೆಂತಲೂ, ಇಂಡಿಯಾ ಗವರ್ನಮೆಂಟಿಗೂ ದೇಶೀಯ ರಾಜರುಗಳಿಗೂ ಇರತಕ್ಕ ಪರಸ್ಪರ ಪ್ರೀತಿ ವಾತ್ಸಲ್ಯಗಳನ್ನು ಬಹುಮಟ್ಟಿಗೆ ವೃದ್ಧಿಪಡಿಸಬೇಕೆಂತಲೂ ಉತ್ಸಾಹಪಟ್ಟು ನಾನು ಇನ್ನು ಕೆಲವು ಕಾಲ ವೈಸ್‌ರಾಯಿ ಪದವಿಯನ್ನು ಅಂಗೀಕರಿಸಿರುತ್ತೇನಲ್ಲದೆ ಮತ್ತೆ ಬೇರೆ ಅಲ್ಲ.

### ಝೀಂದ್ ಸಂಸ್ಥಾನವು.

ಲಾರ್ಡ್ ಕರ್ಜನ್ ಪ್ರಭುಗಳು ಮರುದಿನ ಅಲ್ಲಿಂದ ಪ್ರಯಾಣ ಮಾಡಿ, ಝೀಂದ್ ಸಂಸ್ಥಾನಕ್ಕೆ ದಯಮಾಡಿದರು. ಅಲ್ಲಿನ ರಾಜರು ತಮ್ಮ ಮುಖ್ಯ ಸರದಾರರುಗಳ ಸಮೇತ ವೈಸ್‌ರಾಯರನ್ನು ಸ್ಟೇಷನಲ್ಲಿ ಎದುರ್ಗೊಂಡು, ಅವರಿಗಾಗಿ ಸಿದ್ಧಪಡಿಸಿದ್ದ ದಿವ್ಯವಾದ ಡೇರಾವಿಗೆ ಕರೆದುಕೊಂಡು ಹೋಗಿ ಇಳಿಸಿದರು. ಇದುವರೆಗೆ ಯಾವ ವೈಸ್‌ರಾಯರಾದರೂ ಈ ಸಂಸ್ಥಾನಕ್ಕೆ ದಯಮಾಡಿದ್ದಿಲ್ಲ. ಆದ್ದರಿಂದ ಲಕ್ಷಾಂತರ ಪ್ರಜೆಗಳು ಬಹು ಉತ್ಸಾಹದೊಡನೆ ರಾಜಧಾನಿಗೆ ಬಂದು ವೈಸ್‌ರಾಯರವರನ್ನು ನೋಡಿ ಜಯಘೋಷ ಮಾಡಿದರು. ಪಟ್ಟಣದ ಶೃಂಗಾರವು ಬಹು ನೇತ್ರಾನಂದಕರವಾಗಿತ್ತು. ಚಿಕ್ಕ ಕಾಲದಲ್ಲಿ ರಾಜರಿಗೆ ಜ್ವರ ಬಂದದ್ದರಿಂದ ಅವರು ವೈಸ್‌ರಾಯರನ್ನು ಹೋಗಿ ಕಾಣುವದಕ್ಕಾಗದೆ ಹೋಯಿತು. ಅವರ ಕಡೆಯ ಮುಖ್ಯ ಸರದಾರರು ನಾಲ್ವರು ಹೋಗಿ ವೈಸ್‌ರಾಯರಿಗೆ ಅತ್ತರನ್ನು ಒಪ್ಪಿಸಿ ಬಂದರು. ಆಗ ವೈಸ್‌ರಾಯರು—ರಾಜರು ಸ್ವತಃ ಸಂಸ್ಥಾನದ ಕಾರುಬಾರುಗಳನ್ನು ಶ್ರದ್ಧೆಯಿಂದಲೂ ಪ್ರೀತಿಪೂರ್ವಕವಾಗಿಯೂ ನೋಡಿಕೊಳ್ಳುತ್ತಾ ಬಂದಲ್ಲಿ ಸಂಸ್ಥಾನವು ತುಂಬಾ ಅಭಿವೃದ್ಧಿಗೆ ಬರಲು ಮಾರ್ಗವಾಗುತ್ತೆ ಎಂತಲೂ, ಅಮೃತಸರದಲ್ಲಿರುವ ಸಿಕ್ಕರ ಕಾಲೇಜಿನ ಕಾರ್ಯಗಳು ಅಷ್ಟು ಸಮರ್ಪಕವಾಗಿಲ್ಲವೆಂತಲೂ, ಪರಸ್ಪರ ವೈಷಮ್ಯಗಳಿಂದ ವಿದ್ಯಾಶಾಲೆಯು ಕೆಡುವ ಕಾಲ ಪ್ರಾಪ್ತವಾಗಿರುತ್ತದೆ ಎಂತಲೂ, ಸಿಕ್ಕರ ರಾಜರುಗಳೆಲ್ಲ ಈ ವಿದ್ಯಾಶಾಲೆಯನ್ನು ಅಭಿವೃದ್ಧಿಗೆ ತರಬೇಕೆಂತಲೂ ಅಪ್ಪಣೆ ಕೊಡಿಸಿದರು.

### ಭಾವಲ್‌ಪುರ ಸಂಸ್ಥಾನವು.

ಅಲ್ಲಿಂದ ಮರುದಿನ ಲಾರ್ಡ್ ಕರ್ಜನ್ ಪ್ರಭುಗಳು ಪ್ರಯಾಣ ಮಾಡಿ ಭಾವಲ್‌ಪುರ ಸಂಸ್ಥಾನದ ರಾಜಧಾನಿಯನ್ನು ಸೇರಿದರು. [illegible] ಸ್ಟೇಷನಲ್ಲಿ ಪಂಜಾಬ್ ಲೆಫ್ಟಿನೆಂಟ್ ಗವರ್ನರರೂ, ರೆಸಿಡೆಂಟರೂ, ಆ ಸಂಸ್ಥಾನದ ಮುಖ್ಯ ಸರದಾರರೂ ಕಾದಿದ್ದು ವೈಸ್‌ರಾಯರಿಗೆ ಸುಸ್ವಾಗತವನ್ನು ಬಯಸಿ, ನೇತ್ರಾನಂದಕರವಾಗಿ ಶೃಂಗರಿಸಿದ್ದ ರಾಜಬೀದಿಗಳಲ್ಲಿ ಮೆರವಣಿಗೆಯಾಗಿ ಕರೆದುಕೊಂಡು ಹೋಗಿ, ಅವರನ್ನು ಬಿಡಾರದಲ್ಲಿ ಇಳಿಸಿದರು. ಪ್ರಾಯಪ್ರಾಪ್ತರಾದ ನವಾಬರಿಗೂ ವೈಸ್‌ರಾಯರಿಗೂ ಭೇಟಿ ಮಾಡುವಿಕೆಯಾದ ನಂತರ ವೈಸ್‌ರಾಯರು ನೂರ್ ಮಹಲ್ ಎಂಬ ರಾಜಭವನಕ್ಕೆ ದಯಮಾಡಿ, ಸಭೆಯಲ್ಲಿ ನವಾಬರಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು, ಅವರಿಗೆ ಕೆಲವು ಬುದ್ಧಿಮಾತನ್ನು ತಿಳಿಸಿದರು. ಆ ಸಾಯಂಕಾಲ ವೈಸ್‌ರಾಯರಿಗೆ ಔತಣವಾಯಿತು. ಔತಣವಾದ ಬಳಿಕ, ಮಧ್ಯಾಹ್ನ ನೂರ್ ಮಹಲ್‌ನೊಳಗೆ ನವಾಬರಿಗೆ ಸಂಸ್ಥಾನದ ಪದವಿಯನ್ನು ವಹಿಸಿಕೊಡುವಾಗಲೂ ಲಾರ್ಡ್ ಕರ್ಜನ್ ಪ್ರಭುಗಳು ನವಾಬರನ್ನು ಕುರಿತು ಹೇಳಿದ ವಾಕ್ಯಗಳ ಸಾರಾಂಶವೇನೆಂದರೆ:—

ವಿಕ್ಟೋರಿಯಾ ರಾಣಿಯವರ ರಾಜ್ಯಭಾರ ಕಾಲಕ್ಕೂ ಈ ಸಾರ್ವಭೌಮರ ರಾಜ್ಯಭಾರಕ್ಕೂ ಸ್ವಲ್ಪ ವ್ಯತ್ಯಾಸವಿದೆ. ಆ ಸಾರ್ವಭೌಮರೂ ದೇಶೀಯ ರಾಜರೂ ಪರಸ್ಪರ ಸಂಬಂಧ [illegible] ರಾಜರುಗಳಲ್ಲಿ [illegible] ತಮ್ಮ ಪದವಿಗೆ ಎಲ್ಲಿ ಚ್ಯುತಿಯುಂಟಾದೀತೋ ಎಂದು [illegible]. ಈ ರಾಜರುಗಳಲ್ಲಿ [illegible] ಕಾರ್ಯಗಳಲ್ಲಿ [illegible], ಸಾರ್ವಭೌಮರ ಮೇಲೆ ಅವರಿಗಿರಬೇಕಾದ ಭಕ್ತಿ ಶ್ರದ್ಧೆಗಳ ಅವಜ್ಞತೆ, ಇವೇ ಮೊದಲಾದ ಅನೇಕ ದುರ್ಗುಣಗಳು ಕಾಣಿಸಿಕೊಳ್ಳುತ್ತಿದ್ದವು. [illegible] ಸಾರ್ವಭೌಮರ ವಿಷಯದಲ್ಲಿ ತಮ್ಮ ಸ್ವಂತ ಸಂಸ್ಥಾನಗಳ ವಿಷಯದಲ್ಲೂ ವಿಶೇಷವಾದ ಭಕ್ತಿ ಶ್ರದ್ಧೆಗಳಿಂದ ಕೂಡಿದವರಾಗಿರುತ್ತಾರೆ. ತಮ್ಮ ತಮ್ಮ ಕರ್ತವ್ಯಗಳನ್ನು ಚನ್ನಾಗಿ ತಿಳಿದುಕೊಂಡಿರುತ್ತಾರೆ. [illegible] ಅವರಿಗೂ ಸಾರ್ವಭೌಮರಿಗೂ ಇರತಕ್ಕ ಪ್ರೀತಿ ವಾತ್ಸಲ್ಯಗಳು ಸ್ನೇಹಭಾವವನ್ನು ಹೊಂದಿರುತ್ತವೆ. ರಾಜರುಗಳು ವಿಶೇಷ [illegible] ಅವರು ಬ್ರಿಟಿಷ್ ರಾಜ್ಯಭಾರದ [illegible]ಗಳಾಗಿದ್ದಾರೆ.

ಆದಕಾರಣ ನವಾಬರೇ, ಈ ಪಟ್ಟಾಭಿಷೇಕ ಕಾಲವನ್ನು [illegible] ಸ್ವತಂತ್ರಿಸಿ ರಾಜ್ಯಭಾರ ಮಾಡಲು ನೀವು ತುಂಬಾ ಸಮರ್ಥರಾಗಿರುತ್ತೀರೆಂದು ನಾನು ಬಲ್ಲೆನು. ಈಗ ನಾನು ತಿಳಿಸುವ ಐದು ಸಂಗತಿಗಳನ್ನು ನೀವು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಂಡು ಕೆಲಸ ಮಾಡುತ್ತಾ ಬನ್ನಿ. (೧) ಸಾರ್ವಭೌಮರ ವಿಷಯದಲ್ಲಿ ಪೂರ್ಣ ಭಕ್ತಿ ಶ್ರದ್ಧೆಗಳನ್ನುಳ್ಳವರಾಗಿರಿ; ಅವರು ನಿಮ್ಮ ಅಧಿಕಾರವನ್ನು ನಿಮ್ಮ ಪ್ರಯೋಜನಕ್ಕಾಗಿ ಮಾತ್ರ ಕಾಪಾಡಿರುತ್ತಾರೆ. (೨) ನಿಮ್ಮ ಸಂಸ್ಥಾನವು ಯಾವ ಅಧಿಪತ್ಯಕ್ಕೆ ಸೇರಿರುವದೋ ಆ ಅಧಿಪತ್ಯದ ಸರ್ವಾಧಿಕಾರಿಗಳನ್ನು ನಿಮ್ಮ ಪ್ರಯೋಜಕರೆಂದೂ, ನಿಮ್ಮ ಹಿತಚಿಂತಕರೆಂದೂ ನೋಡುತ್ತಾ ಬನ್ನಿ. (೩) ನಿಮ್ಮ ಸಂಸ್ಥಾನದಲ್ಲಿರುವ ಬ್ರಿಟಿಷ್ ರೆಸಿಡೆಂಟರನ್ನು ನಿಮ್ಮ ಉಪಾಧ್ಯಾಯರೆಂತಲೂ ನಿಮ್ಮನ್ನು ನಡಿಸತಕ್ಕವರೆಂತಲೂ ತಿಳಿಯಕೂಡದು; ಅವರು ನಿಮ್ಮ ಆಪ್ತ ಸ್ನೇಹಿತರಾಗಿಯೂ ನಿಮಗೆ ವಿವೇಕ ಹೇಳತಕ್ಕವರಾಗಿಯೂ ಮಾತ್ರ ಇರುತ್ತಾರೆಂದು ತಿಳಿಸಿಕೊಳ್ಳಿ. (೪) ನಿಮ್ಮ ಸಂಸ್ಥಾನದಲ್ಲಿರುವ ಸರದಾರರು ನಿಮ್ಮ ವಿಷಯದಲ್ಲಿ ನ್ಯಾಯಕ್ಕೆ ಭಯಭಕ್ತಿಗಳನ್ನುಳ್ಳವರಾಗಿರಬೇಕೇ ಹೊರತು ನೀವು [illegible] ಅವರ ವಿಷಯದಲ್ಲಿ ಪ್ರೀತಿ ವಿಶ್ವಾಸಗಳನ್ನಿಟ್ಟು ಕಾಪಾಡುತ್ತಾ ಬರುವವರಾಗಿ. (೫) ಭಗವಂತನು ನಿಮಗೆ ಅಪಾರವಾದ ಅಧಿಕಾರ ಮೊದಲಾದ್ದನ್ನು ದಯಪಾಲಿಸಿರುತ್ತಾನೆ. ನಿಮ್ಮ ಪ್ರಜೆಗಳ ಕೋರಿಕೆಗಳು ಬಹಳವಾಗಿರುತ್ತವೆ. ಅವರನ್ನೂ ಅವರ ಸ್ಥಿತಿಗತಿಗಳನ್ನೂ ಪ್ರತಿದಿನವೂ ನಿಮ್ಮ ಜ್ಞಾಪಕದಲ್ಲಿಟ್ಟುಕೊಂಡಿರಿ; ಅವರಿಗೆ ಏನಾದರೂ ಉಪಕಾರವಾಗುವಂತೆ ನಡೆಸಿರಿ; ಮತ್ತು ಈ ಭಾಗದಲ್ಲಿ ನಿಮಗೆ ತಕ್ಕ ಶಕ್ತಿ ಸಾಮರ್ಥ್ಯ ಭಕ್ತಿ ಶ್ರದ್ಧೆಗಳನ್ನು ದಯಪಾಲಿಸಬೇಕೆಂದು ಸರ್ವೇಶ್ವರನಾದ ಆ ಭಗವಂತನನ್ನು ನಿತ್ಯವೂ ಬೇಡಿಕೊಳ್ಳುತ್ತಾ ಬರುವವರಾಗಿ. ಈ ವಿಷಯಗಳಿಗೆ ನೀವು ಗಮನಕೊಟ್ಟು ಕಾರ್ಯ ನಡಸುತ್ತಾ ಬರುವಿರಾದರೆ ನಿಮ್ಮ ಪ್ರಜೆಗಳೂ, ನಿಮ್ಮ ಆಪ್ತಮಿತ್ರರೂ ಪರಮ ಸಂತೋಷದಿಂದ ಈ ದಿನದ ಉತ್ಸವವನ್ನು ಎಂದೆಂದಿಗೂ ಜ್ಞಾಪಕದಲ್ಲಿಟ್ಟುಕೊಳ್ಳುತ್ತಿರುವರು. ಇಲ್ಲವಾದರೆ ಈ ದಿನದ ಉತ್ಸವವು ಬರೀ ತಮಾಷೆಯಾಗಿ ಪರಿಣಮಿಸಿ, ನಾಳೆ ನಾಡಿದ್ದರಲ್ಲೇ ಮರೆತುಹೋದೀತು. ಹಿಂದುಸ್ಥಾನದ ದೇಶೀಯ ರಾಜರುಗಳಲ್ಲೆಲ್ಲಾ ನೀವೊಬ್ಬರೇ ಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿರುತ್ತೀರಿ. ಸಂಸ್ಥಾನವನ್ನು ಆಳಲು ನಿಮಗೆ ತಕ್ಕ ವಿದ್ಯಾದಿ ಸಾಮರ್ಥ್ಯಗಳಿರುವವು; ನ್ಯಾಯ ಸಮರ್ಥರಾಗಿಯೂ ಇರುತ್ತೀರಿ. ಅಲ್ಪಕಾಲದಲ್ಲಿ ನಿಮಗೆ ಅನುಭವವಿಲ್ಲದೆ ಇಲ್ಲ. ಕಳೆದ ಮೂರು ತಿಂಗಳಿಂದಲೂ ಈ ಸಂಸ್ಥಾನದ ಕಾರ್ಯಗಳನ್ನು ನೀವೇ ನೋಡಿಕೊಳ್ಳುತ್ತಾ ಬಂದಿರುತ್ತೀರಿ. ಎರಡು ಡಿಸ್ಟ್ರಿಕ್ಟುಗಳ ಸೆಟಲ್ಮೆಂಟು ಕಾರ್ಯವನ್ನು ನೀವೇ ಸ್ವತಂತ್ರಿಸಿ ಮಾಡಿ, ಈ ವಿಷಯದಲ್ಲಿ ನೀವೇ ಬರೆದಿರುವ ರಿಪೋರ್ಟನ್ನು ನಾನು ನೋಡಿರುವೆನು.

### ಕರಾಚಿಯವರೆಗೆ ಪ್ರಯಾಣ ಮಾಡಿದ್ದು.

ಈ ಪ್ರಕಾರ ವೈಸ್‌ರಾಯ ಪ್ರಭುಗಳು ನವಾಬರಿಗೆ ಸಾಕ್ಷಾತ್ತಾಗಿಯೂ, ದೇಶೀಯ ರಾಜರುಗಳಿಗೆಲ್ಲಾ ಪರೋಕ್ಷವಾಗಿಯೂ ವಿವೇಕವನ್ನು ಹೇಳಿ, ಭಾವಲ್‌ಪುರದಿಂದ ಹೊರಟು, ದಾರಿಯಲ್ಲಿ ಹೆಸರುಹೊಂದಿದ್ದ ಕ್ಷೇತ್ರಗಳಲ್ಲಿ ಸ್ವಲ್ಪ ತಂಗಿದ್ದು ನೋಡಿಕೊಂಡು, ಸಿಂಧು ದೇಶಕ್ಕೆ ಸೇರಿದ ಶಿಕಾರಪುರಕ್ಕೆ ದಯಮಾಡಿ, ಅಲ್ಲಿ ಕೋರ್ಟು, ಸಾಹುಕಾರರುಗಳ ಗೋರಿ ಮೊದಲಾದವುಗಳನ್ನು ನೋಡಿ ಸಂತೋಷಪಟ್ಟು, ಕರಾಚಿ ಎಂಬ ತೀರಪಟ್ಟಣವನ್ನು ಸೇರಿ, ಅಲ್ಲಿ ಸಮುದ್ರ ತೀರದಲ್ಲಿ ಅವರಿಗಾಗಿ ಕಾದಿದ್ದ [illegible] ಎಂಬ [illegible]

...ಟ್ಟು ಹತ್ತಿ, ಅಲ್ಲಿಗೆ ಆ ಸಮಯಕ್ಕೆ ಸರಿಯಾಗಿ ಬಂದು ತಲಪಿದ ...ಕಲೆಕ್ಟರವರ ಸಹಿತ ಸಮುದ್ರಯಾನ ಮಾಡಿಕೊಂಡು ಪಾರ್ಲಿ ...ಯನ್ನು ಕುರಿತು ತೆರಳಿದರು.

## ಬಾತ್ಮಿದಾರರಿಗೆ ನೋಟಿಸ್.

...ಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ...ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋ ...ಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬ...ಯಬಾರದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

...ಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ...ತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬುದಾರ ...ರಲ್ಲವೆಂಬುದನ್ನು ನಾವು ಮತ್ತೊಮ್ಮೆ ತಿಳಿಸುತ್ತೇವೆ.—ಎಡಿ.

ನಾಗಪ್ಪ, ಕೋಲಾರ—ನಿಮ್ಮ ಬಾತ್ಮಿಯನ್ನು ಪ್ರಕಟಿಸಲಾರೆವು. ...ಈ ವಿಷಯವನ್ನು ನೀವು ಪೊಲೀಸ್ ಅಧಿಕಾರಿಗಳಿಗೆ ತಿಳಿಸಿ ... ...ವು ಸರಿಯಾದ ವಿಚಾರಣೆ ಮಾಡುತ್ತಾರೆಂದು ನಿರೀಕ್ಷಿಸುತ್ತೇವೆ.

...ತೀರ್ಥಹಳ್ಳಿ ತಾಲ್ಲೂಕು ಕನ್ನಮರಡಿ ಗ್ರಾಮದ ಸ್ಕೂಲು ಹೊಡ ...ಬಿಟ್ಟುಹೋಗಿದೆ; ಅದನ್ನು ಈಗ ಕೆಲವು ಮುಖಂಡರುಗಳೆಂಬ ...ವರು ಬಂದು ಜೀರ್ಣೋದ್ಧಾರ ಮಾಡಿ, ಬಹಳ ಒಳ್ಳೇ ಸ್ಥಿತಿಗೆ ...ರುತ್ತೇವೆಂದು, ಆಮುಲ್ದಾರರು ಸ್ಕೂಲನ್ನು ನೋಡಿ ತುಂಬಾ ...ಸಪಟ್ಟುಕೊಂಡರಂತಲೂ, ಈಗ ಸ್ಕೂಲಿನಲ್ಲಿ ಓದುವ ೪೫ ...ಬಾಲಕರಿಗೆ ಅವರೊಬ್ಬರೇ ಪಾಠ ಹೇಳುವುದು ಸಾಧ್ಯವಲ್ಲ ...ಲೂ, ಅವರ ಸಹಾಯಕ್ಕೆ ಇನ್ನೊಬ್ಬ ಉಪಾಧ್ಯಾಯರನ್ನು ... ಬೇಕಾಗಿದೆ ಎಂತಲೂ ಒಬ್ಬ ಬಾತ್ಮಿದಾರರು ಬರೆದಿರುತ್ತಾರೆ. ...ಲ್ಲೂಕಿನ ಇಲಾಖೆಯವರು ಈ ಕೊರತೆಯನ್ನು ನಿವಾರಿಸ ...ಕೊಟ್ಟರೆಂದು ನಿರೀಕ್ಷಿಸುತ್ತೇವೆ.

—ಎಡಿ.]

## ಕರೆಸ್ಪಾಂಡೆನ್ಸ್.

### ಪ್ಲೇಗ್ ಉಪದ್ರಕ್ಕೆ ಔಷಧ.

ಸ್ವಾ

ತಮ್ಮ ...ನೇ ನವಂಬರ್ ಪತ್ರಿಕೆಯಲ್ಲಿ ಪ್ರಕಟವಾಗಿರುವ ಪ್ರಕಾ... ...ರೋಗಕ್ಕೆ ನನ್ನ ಅನುಭವದಲ್ಲಿ ಇರುವ ಔಷಧಗಳನ್ನು ... ಪ್ರಯೋಗಿಸತಕ್ಕ ವಿಧಾನವೆಲ್ಲವು ವಿಶದವಾಗಿ ಬರೆಯುವುದ ... ...ಪ್ರಯೋಜನಕಾರಿಯಾದ ಒಂದು ಔಷಧವ ...ಮಾತ್ರ ಬರೆದಿರುತ್ತೇನೆ.

ಪ್ಲೇಗು ಜ್ವರ ಪ್ರಾರಂಭವಾದ ಕೂಡಲೇ ರೋಗಿಗೆ ಕಸ್ತೂರಿ ಮಾತ್ರೆ ... ನೀರನ್ನು ತಂದು ... ಮುತ್ರದಲ್ಲಿ ಹಾಕಿ, ದಿನವನ್ನು ...ಕೊಡುವ, ಒಂದು ದಿನಸು ಸವರಿ ಒಸದಲ್ಲಿ ಅರ್ಧ ದಿನಸು ... ...ವಿನ ರಸ, ಅರ್ಧ ದಿನಸು ಬಿಳೀ ನುಗ್ಗೆ ಚಕ್ಕೆ ರಸ ...ತೆಗೆದು, ಅರ್ಧ ದಿನಸು ಪ್ರಕಾರ ದಿನಕ್ಕೆ ನಾಲ್ಕು ಸಲ ...ಲ್ಕು ವೇಳೆ ... ... ಕೊಡಬೇಕು. ನಂತರ ಕಾಲು ದಿನಸು ... ಎಲವು ... ಕೊಡಬೇಕು. ಪಥ್ಯ—ಗೋಧಿ ಅನ್ನ, ... ಗಂಜಿ ಮಾತ್ರ ಕೊಡಬಹುದು. ಗಡ್ಡೆಗಳಿಗೆ ಅರ್ಧ ... ...ಪ್ಪಿನ ಬೇರು, ಎರಡು ಅಕ್ಕಿ ತೂಕ ಬಿಳಿ ಬೆಳ್ಳು, ಎರಡು ...ಕ ಹಿಂಗು, ಮೂವರಿ ತೂಕ ಬೆಳ್ಳುಳ್ಳಿ, ಆಡಿನ ಮೂತ್ರದಲ್ಲಿ ..., ಚನ್ನಾಗಿ ಲೇಪನ ಮಾಡಿ, ಸ್ವಲ್ಪ ಬೆಂಕಿ ಕಾಯುವದು ... ... ಬಾರಿ ಲೇಪ ಮಾಡಬೇಕು. ಇದು ಸುಲಭವಾಗಿ ...ವ್ವರೂ ಪರೀಕ್ಷಿಸಬಹುದು.

ಆಗುಂಬೆ ಸೆಂಬಗಿರಿ ದೀಕ್ಷಿತ,

ದೇವನಹಳ್ಳಿ ಪಂಡಿತ

[ಇದಲ್ಲದೆ, ಈ ಪಂಡಿತರು ಇನ್ನು ಬೇರೆ ಔಷಧವನ್ನು ಪ್ಲೇಗಿ...ಟ್ಟಿದ್ದಾರೆಂತಲೂ, ಅದಕ್ಕೆ ದುಬ್ಬು ೧ಕ್ಕೆ ೧ ರೂ. ಕ್ರಯ ...ತಿಳಿಸಿರುತ್ತಾರೆ. ಈ ಔಷಧಗಳಲ್ಲಿ ಉಪಯೋಗವುಂಟೆಂ ...ಳಲು ನಮಗೆ ಸ್ವಲ್ಪವೂ ನಂಬಿಕೆ ಸಾಲದು. ಆದರೂ ಇಷ್ಟ ...ರು ಈ ಔಷಧವನ್ನು ಮಾಡಿ ಪರೀಕ್ಷಿಸಬಹುದು.—ಎಡಿ.]

### ಸ್ಕೂಲ್ ಹುಡುಗರೂ ಪ್ಲೇಗ್ ನಿರ್ಬಂಧವೂ.

ಸ್ವಾ

...ವಿ. ಸ್ಕೂಲ್ ಅಸಿಸ್ಟೆಂಟ್ ಮಾಸ್ಟರೊಬ್ಬರು ಪರೀಕ್ಷೆಗೆ ... ...ಗೆ ಪರೀಕ್ಷೆಗೆ ಹೋಗತಕ್ಕ ಕೆಲವು ಬಾಲಕರನ್ನು ಮತ್ತು ... ...ವಯಸ್ಸಿನ ತಮ್ಮನನ್ನು ಕರೆದುಕೊಂಡು ತರೀಕೆರೆಯಿಂದ ...ಮಾರ್ಗ ಹೋಗುತ್ತಾ, ದಾರಿಯಲ್ಲಿ ಎತ್ತುಗಳು ಸಿಕ್ಕಿಯದೆ ...ರಿಂದ ಕೆಲವರು ಗಾಡಿಯಮೇಲೆ ಕೂತಲೂ, ಕೆಲವರು ...ತ್ತಲೂ, ಈ ತಿಂಗಳು ೧೬ನೇ ತಾ|| ಗುರುವಾರ ಮಧ್ಯಾಹ್ನ ...ಕ್ಕೆ ಹೋಗಿ ತಮ್ಮ ಸ್ನೇಹಿತನ ಮನೆಯಲ್ಲಿ ಇಳಿದು ...ರು. ಆದರೆ ದುರ್ಭಾಗ್ಯದಿಂದ ಸದರಿ ಟೀಚರ್ ತಮ್ಮ... ...ಲು ನೋತವೂ, ಅವರ ದೆಸೆಯಿಂದ ರಾತ್ರಿ ಜ್ವರವೂ ಬಂದ ... ...ಕಾಲ ಎಷ್ಟು ಒಪ್ಪಲೆಯೇ ಆ ಮನೆಯ ಯಜಮಾನ ...ವಯೋವೃದ್ಧರಾಗಿದ್ದೂ ಸ್ವಲ್ಪಮಟ್ಟಿಗೆ ನೇಟಿವ್ ವೈ... ...ರಿತವರಾಗಿರತಕ್ಕ ಬಲ್ಲವರನ್ನು ಕರೆದು, ಅಯ್ಯೋ! ಈ ...ಗೆ ಏನಾದರೂ ಚಿಕಿತ್ಸೆ ಮಾಡಿರೆಂದು ಹೇಳಿದ ಸಂಗತಿಯು ...ಳಿದ ಹೆರವರಿಯು ಮಾಡಿದರು—ಅಯ್ಯೋ! ... ...ಗ್ ಜ್ವರ ಹೋಗಿಲ್ಲ; ಹಿಡಿದ! ಈ ... ... ... ಊರಿನವರೆಲ್ಲರೂ ಕರೆದೊಯ್ಯಲ್ಪಟ್ಟು ಬೇಕಾದಂತೆ...

...ದು ತಿಳಿದು ಕಳ್ಳರು ಕನ್ನ ಕೊರೆಯುವ ಹಾಗೆ ಆ ಊರು ಪಟೇಲ ...ಾಗಿರತಕ್ಕವರ ಮನಸ್ಸನ್ನು ತನ್ನ ಭೀತಿಯೆಂಬ ಶಸ್ತ್ರದಿಂದ ಛೇದಿಸಲು ಮಲ್ಲಪ್ಪನವರು ಮೂರ್ಖರಾಗಿ ಕಣ್ಣೆರದು ಚೇತರಿಸಿಕೊಂಡು ಅರ್ಧಗಟಿಸಿಕೊಳ್ಳುತ್ತಾ ಸದರಿಯವರುಳ್ಳದುಕೊಂಡಿರತಕ್ಕ ಮನೆಗೆ ಬಂದು ಯಾವ ಸಂಗತಿಯನ್ನೂ ತಿಳಿಯದೇ ಕೌರವನ ಸೋದರಮಾವನಂತಿರತಕ್ಕವರ ಮಾತನ್ನೇ ನಂಬಿ,—ನೀವು ಈ ಒದನೆಯೇ ಊರ ಗಡಿಯನ್ನು ದಾಟಿಹೋಗಬೇಕು ಎಂದು ಗರ್ಜಿಸಿ ಅವರ ಮಾತನ್ನು ಲಕ್ಷ್ಯಕ್ಕೆ ತಾರದೆ ನೇರವಾಗಿ ಹೋಗಿ ಪೊಲೀಸ್ ಆಫಿಸರಿಗೂ, ಮೆಡಿಕಲ್ ಆಫಿಸರಿಗೂ ತಿಳಿಸಿ, ಜೊತೆಯಲ್ಲಿಯೇ ಅವರನ್ನು ಕರೆದುಕೊಂಡು ಬಂದರು. ಈ ಟೀಚರಾದರೋ ತನ್ನ ಮನಸ್ಸಿನಲ್ಲಿ ಮೆಡಿಕಲ್ ಆಫೀಸರು ಬಂದರೆಂತಲೂ, ನ್ಯಾಯವಾದ ಸಂಗತಿ ವ್ಯಕ್ತವಾದ ಮಲೇತಲೂ ತಿಳಿದು ಹರ್ಷದಿಂದೊಸಗೊಂಡಿದ್ದರು. ಆದರೆ ಆತನ ದೌರ್ಭಾಗ್ಯದಿಂದ ಅವರು ಕೂಡ ಯಾವದನ್ನೂ ವಿಚಾರಿಸದೆ ಗ್ರಾಮಸ್ಥರ ಮಾತನ್ನೇ ನಂಬಿ,—ಇದು ಪ್ಲೇಗ್ ಜ್ವರ, ಗಡ್ಡೆ ಏಳುವುದಕ್ಕೆ ಮೊದಲನೇ ಪ್ರಾರಂಭವಾಗುತ್ತದೆ ಎಂದು ಹೇಳಿ, ನೀವು ಮನೇ ಬಿಟ್ಟು ಹೋಗುವದಲ್ಲದೆ ಈ ಮನೆಯವರು ಕೂಡ ಊರ ಹೊರಗೆ ಹೋಗಬೇಕೆಂದು ಖಂಡಿತವಾದ ಆರ್ಡರು ಮಾಡಿ, ಜಾಡಿಯಲ್ಲಿ ತಮಗಂತೆ ತಕ್ಕ ಸಿಬ್ಬಂದಿಗಳನ್ನು ಏರ್ಪಾಟು ಮಾಡಿ ಹೊರಟುಹೋದರು. ತರುವಾಯ ಈ ಸಿಬ್ಬಂದಿಗಳು ಯಮದೂತರಂತೆ ಸ್ವಲ್ಪವೂ ಕರುಣವಿಲ್ಲದೆ ಸದರಿ ಮಾಸ್ಟರನ್ನು ಮತ್ತು ಸಂಸಾರಸಹಿತವಾಗಿ ಆ ಮನೆಯ ಯಜಮಾನನನ್ನು ಸಹ ಹೊರಡಿಸಿದರು. ಹೊರಡಿಸಲ್ಪಟ್ಟವರೆಲ್ಲರೂ ಸೀದಾ ತರೀಕೆರೆಗೆ ಹೋಗಿ ಸರ್ಕಾರು ಶುಶ್ರೂಷಾಲಯದಲ್ಲಿ ಬಿಡಾರ ಹಾಕಿಕೊಂಡು ಬಾತ್ಮಿದಾರರಿಂದ ತಿಳಿಯಬರುತ್ತದೆ. ಆದರೆ ಮೊದಲಿನ ಆಫೀಸರುಗಳು ಯುಕ್ತಾಯುಕ್ತ ಪರಿಜ್ಞಾನವಿಲ್ಲದೆ "ಎತ್ತು ಈಯಿತೆಂದರೆ ಕೊಟ್ಟಿಗೆಗೆ ಕಟ್ಟು" ಎಂಬ ಗಾದೆಗನುಸಾರವಾಗಿ ನಡೆಯುವ ಸಂದರ್ಭದಲ್ಲಿ ಬಡ ಜನರ ಪಾಡೇನೋ ಮಹದೇವನೇ ಬಲ್ಲನು.

ಜನಾಭಿಮಾನಿ.

### ಕೋಟೆಬಳ್ಳಿ ಸ್ಕೂಲುಗಳ ಸ್ಥಿತಿಯು.

ಆರ್ಯ,

ಈಗ ನಮ್ಮ ಮೈಸೂರು ಸಂಸ್ಥಾನದಲ್ಲಿ ಅನೇಕ ಕೋಟೆಬಳ್ಳಿ ಸ್ಕೂಲುಗಳು ತುಂಬಾ ಶೋಚನೀಯ ಸ್ಥಿತಿಯಲ್ಲಿರುವವು. ಇವಕ್ಕೆ ಕಾರಣರು ಮಾತ್ರ ಉಪಾಧ್ಯಾಯರೆಂದು ಸರ್ಕಾರದವರು ತಿಳಿದಿರುವರು. ಆದರೆ ಸರ್ಕಾರದವರು ನಮ್ಮ ಅಭಿಪ್ರಾಯವು ಮೂರು ಪಾಲು ಸಹಜವಾದದ್ದೇ. ಯಾತಕ್ಕೆಂದರೆ ಅಂಥಾ ಉಪಾಧ್ಯಾಯರಲ್ಲಿ ಕೆಲವರು ಓದು ಬರಹ ಮಾತ್ರ ಕಲಿತವರು, ಕೆಲವರು ಪ್ರೈಮರೀ ಕಡ... ಅನೇಕರು ಬಹಳ ತಾಪತ್ರಯಗಳಿಗೊಳಗಾದವರು. ಕ್ರಿದ್ಧಿಯಿಂದ ಕೆಲಸ ಮಾಡತಕ್ಕವರು ಎಷ್ಟು ವರ್ಷಗಳ ಸರ್ವೀಸು ಆಗಿದ್ದಾಗ್ಯೂ ೭ ರೂಪಾಯಿಗೆ ಸ್ವಲ್ಪವೂ ಹೆಚ್ಚದಂತೆ ಇದ್ದ ಸ್ಥಿತಿಯಲ್ಲೇ ಇದ್ದುಕೊಂಡು ನರಳುತ್ತಿರುವರು. ಇವರುಗಳ ಸ್ಥಿತಿ ಕಷ್ಟಪಟ್ಟು ಪಾಠ ಹೇಳಬೇಕೆಂಬ ಆಸೆಯುಳ್ಳವರು ತಾವು ಇರತಕ್ಕ ಗ್ರಾಮಗಳಲ್ಲಿ ಗ್ರಾಮಸ್ಥರು ತಮ್ಮ ಮಕ್ಕಳನ್ನು ತಮ್ಮ ಉಪಯೋಗಕ್ಕಾಗಿ ಸರ್ಕಾರದವರು ಸ್ಥಾಪಿಸಿರುವ ಸ್ಕೂಲುಗಳಿಗೆ ಕಳುಹಿಸದೆ, ತಮ್ಮ ಅನುಕೂಲ್ಯಕ್ಕಾಗಿಯೂ, ಕೆಲವು ದನಗಳನ್ನು ಕಾಯುವದಕ್ಕಾಗಿಯೂ ಕಳುಹಿಸಿ ಬಿಡುವರು. ಸ್ಕೂಲಿಗೆ ಕೆಲವು ಬಾಲಕರು ಮಾತ್ರ ಬರುವರು. ಉಪಾಧ್ಯಾಯರು ಆ ಗ್ರಾಮದ ಮುಖ್ಯಸ್ಥರನ್ನು—"ನಿಮ್ಮ ಮಕ್ಕಳನ್ನು ಸ್ಕೂಲಿಗೆ ಕಳುಹಿಸಿಕೊಡಿರಿ. ವಿದ್ಯಾವಂತರಾಗಲಿ" ಎಂದು ಹೇಳಿದಲ್ಲಿ, ಅವರು—"ನಮ್ಮ ಜನಗಳಲ್ಲಿ ತಾತ, ಮುತ್ತಾತ, ತಂದೆ ಮೊದಲಾದವರು ವಿದ್ಯೆಯನ್ನು ಕಲಿತು ಯಾವ ಪ್ರಯೋಜನವನ್ನು ಹೊಂದಿದರು? ಅವರಿಗೆ ಸರ್ಕಾರದವರು ನೌಕರಿ ಕೊಡಲಿಲ್ಲ, ನಾವು ಕಲಿತರೆತಾನೆ ನಮಗೆ ನೌಕರಿ ಕೊಡುತ್ತಾರೆಯೆ? ಹೋಗಯ್ಯ, ನಮ್ಮಲ್ಲಿ ಓದು ಕಲಿಯುವ ಪದ್ಧತಿ ಇಲ್ಲ. ನನ್ನ ಅಣ್ಣನ ಅಳಿಯನು ಬುದ್ಧಿಯಿಲ್ಲದೆ ಓದು ಕಲಿತ ಈಗ ೮ ತಿಂಗಳಿಂದಲೂ ಜ್ವರದಲ್ಲಿ ನರಳುತ್ತಿರುವುದು ಸಾಲದೇ? ವಿದ್ಯೆಗೆ ತಕ್ಕ ಫಲವು ಇದೇ ಅಲ್ಲವೇ? ನನಗೆ ಬುದ್ಧಿ ಇಲ್ಲ" ಎಂದು ಹೇಳುವ ಅವಿವೇಕಿಗಳಿಂದ ಜನರ ಯೋಗ್ಯತೆಯನ್ನು ಎಷ್ಟು ಹೇಳಿದರೂ ತೀರದು. ನಂತರ ಆ ಉಪಾಧ್ಯಾಯನು ಬಾಯಿ ಮುಚ್ಚಿಕೊಂಡು ಸುಮ್ಮನಿರಬೇಕು. ಅವರಿಗೆ ವಿವೇಕವನ್ನು ಹೇಳಲು ಹೋದರೆ ರೈತಾಪಿ ಜನಗಳೆಲ್ಲರೂ ಆ ಉಪಾಧ್ಯಾಯನಿಗೆ ವಿರೋಧಿಗಳಾಗುವರು. ಇನ್ಸ್‌ಪೆಕ್ಟಿಂಗ್ ಆಫೀಸರು ವರ್ಷಕ್ಕೊಂದಾವೃತ್ತಿ ಬಂದು ಸ್ಕೂಲಿನಲ್ಲಿ ಹುಡುಗರಿಲ್ಲದಿದ್ದರೆ ಸ್ಕೂಲ್ ಮಾಸ್ಟರಿಗೆ ಅಯೋಗ್ಯತೆ, ಬುಲ್ಮನೆ ಇಲ್ಲವೆ ಸಸ್ಪೆಂಡ್ ಕಡೆಗೆ ಬೇರೆ ಅಭಿಪ್ರಾಯದಿಂದ ಬಂತರಫ್ ಸಹ ಮಾಡುವರು. ಇದೆಲ್ಲಾ ಶ್ರದ್ಧೆಯಿಂದ ಕೆಲಸ ಮಾಡುವವರ ಪಾಡು. ಅಶ್ರದ್ಧೆಯಾಗಿ ಕೆಲಸಮಾಡುವವರ ಪಾಡಂತೂ ಹೇಳಲು ಅಸಾಧ್ಯ. ಅವರುಗಳು ವರ್ಷಕ್ಕೆ ೬ ತಿಂಗಳು ಸ್ಕೂಲ್ ಮಾಡುವರು. ಹೀಗೆ ಕಷ್ಟಪಡುವವರು, ಕಷ್ಟಪಡದವರು ಸಹ ತಿಳಿಯದೆ ಎಲ್ಲರಿಗೂ ಒಂದೇ ರೀತಿಯಾಗಿ ಅಯೋಗ್ಯತೆ ಬರುವವು. ಹೀಗೆ ಮಾಡದೆ ಧರ್ಮಿಷ್ಠರಾದ ನಮ್ಮ ಸರ್ಕಾರದವರು ಗ್ರಾಮಸ್ಥರು ತಮ್ಮ ಮಕ್ಕಳನ್ನು ಖಂಡಿತವಾಗಿ ಸ್ಕೂಲಿಗೆ ಕಳುಹಿಸಬೇಕೆಂಬ ನಿರ್ಬಂಧವನ್ನು ಮಾಡಿದಲ್ಲಿ ಬಹಳ ಉಪಯೋಗವಿರುವದು. ಅಲ್ಲದೆ ಕೋಟೆಬಳ್ಳಿ ಸ್ಕೂಲ್‌ಗಳಲ್ಲಿ ಫೀ ಎಂಬ ಲಂಚವೇ ಇಲ್ಲ. ಇಂಥಾ ಪ್ರದಲ್ಲಿ ಸರ್ಕಾರದವರು ಈ ವಿಧ ಶಾಸನವನ್ನು ಜಾರಿಗೆ ತಂದರೆ ಸರ್ಕಾರದವರ ಅಭಿಪ್ರಾಯವು ನೆರವೇರಿ ದೇಶವು ತುಂಬಾ ಅಭಿವೃದ್ಧಿಸ್ಥಿತಿಗೆ ಬಂದೀತೆನ್ನುವದರಲ್ಲಿ ಸಂಶಯವಿಲ್ಲ.

ವಿದ್ಯಾಭಿಮಾನಿ.

## ಇಂಡಿಯಾ ದೇಶದ ವೃತ್ತಾಂತಗಳು.

ಕಳೆದ ವರುಷ ಹಿಂದುಸ್ಥಾನದಿಂದ ೭,೪೪೯ ಜನರು ಕೂಲಿ ಮಾಡುವದಕ್ಕಾಗಿ ನಟಾಲಿಗೆ ಪ್ರಯಾಣ ಮಾಡಿದರು. ಈ ಪೈಕಿ ಕಲ್ಕತ್ತಾ ರೇವಿನಲ್ಲಿ ಹಡಗು ಹತ್ತಿ ಹೋದವರು ೨,೧೧೯ ಮಂದಿ.

****

ಗುಜರಾತಿಗೆ ಸೇರಿದ ರಾಜಪಿಪ್ಲ ಸಂಸ್ಥಾನದ ಮಹಾರಾಜ ಶ್ರೀರಾಂಸಿಂಗ್‌ಜಿ ಮಹಾರಾಜರು, ತಮ್ಮ ರಾಣೀರುಗಳನ್ನೂ ಪರಿವಾರದವರನ್ನೂ ಕರೆದುಕೊಂಡು ಕಲ್ಕತ್ತೆಯಿಂದ ಮದರಾಸಿಗೆ ಬಂದಿರುತ್ತಾರೆ.

****

ಕಳೆದ ವಾರ ರಂಗೂನ್ ನಗರದಲ್ಲಿ ಬೆಳಗ್ಗೆ ೩. ಗಂಟೆ ಹೊತ್ತಿನಲ್ಲಿ ಭೂಮಿಯು ಗಡುಗಿತು. ಕೆಲವು ದೊಡ್ಡ ದೊಡ್ಡ ಬಂಗಲೆಗಳೇ ಮುಂತಾದ ಕಟ್ಟಡಗಳು ಅಲ್ಲಾಡಿದ್ದರಿಂದ ಅವುಗಳಿಗೆ ಸ್ವಲ್ಪ ಜಖಾಯವುಂಟಾಯಿತು.

****

ಭಾವಲ್‌ಪುರದ ನವಾಬರಿಗೆ ಕಳೆದವಾರ ಸಂಸ್ಥಾನವನ್ನಾಳುವ ಅಧಿಕಾರ ವಹಿಸಲ್ಪಟ್ಟಿತಷ್ಟೆ. ಈ ಉತ್ಸವದ ಜ್ಞಾಪಕಾರ್ಥವಾಗಿ ನವಾಬರು ತಮ್ಮ ರಾಜಧಾನಿಯ ಪ್ರಜೆಗಳಿಗೆ ಒಳ್ಳೇ ಕುಡಿವ ನೀರನ್ನು ತಂದು ಒದಗಿಸುವುದಕ್ಕೆ ಹಾಮುಗಾಗಿ ಮಾಡಿಸುತ್ತೇನೆಂದು ನಿಶ್ಚಯ ಮಾಡಿರುತ್ತಾರೆ. ವೈಸ್‌ರಾಯ ಯವರು ಈ ವಾರ್ತೆಯನ್ನು ಕೇಳಿ ತುಂಬಾ ಸಂತೋಷಪಟ್ಟರು.

****

ಗುಜರಾತ್, ಕಚ್ಛಿವಾಡ, ಸಿಂಧು, ಈ ಪ್ರಾಂತ್ಯಗಳಲ್ಲಿ ಚಿಟ್ಟೆಗಳ ಅವಾಂತ್ರದಿಂದ ಅನೇಕಾನೇಕ ಫಲಭರಿತವಾದ ಜಮೀನುಗಳು ಹಾಳುಬಿದ್ದವು. ಕೇವಲ ೭೫ ರಷ್ಟು ಬೆಳೆ ನಾಶವಾಯಿತು. ಜಮೀನ್ದಾರರಿಗೂ, ರೈತರಿಗೂ ಇದರಿಂದ ಎಷ್ಟು ನಷ್ಟವಾಗಿರುವುದೋ ಹೇಳಲಿಕ್ಕಾಗುವುದಿಲ್ಲ. ಅಂತು ಈ ಚಿಟ್ಟೆಗಳ ಅವಾಂತ್ರವನ್ನು ನೋಡಿ ಏಕು ಪ್ರಜೆಗಳು ನರಳಾಡುತ್ತಿದ್ದಾರೆ.

****

ಪೂನೆಯಲ್ಲಿ ಕೆಲವು ಮಂದಿ ದುಷ್ಟರು ಒಂದು ಸಾಲಿಮನೆಯೊಳಗೆ ಸೇರಿಕೊಂಡು ಖೋಟಾ ರೂಪಾಯಿಗಳನ್ನು ಅಚ್ಚುಹಾಕುತ್ತಿದ್ದರು. ಚಕ್ರವರ್ತಿಯವರ ಮುಖಭಾವವುಳ್ಳ ಕೆಲವು ಅಚ್ಚುಗಳೂ, ಹೊಸದಾಗಿ ಅವರು ತಯಾರ್ಮಾಡಿದ್ದ ೧೪೦ ಖೋಟಾ ನಾಣ್ಯಗಳೂ ಸಹಿತವಾಗಿ, ಆ ದುಷ್ಟರನ್ನೆಲ್ಲಾ ಕಳೆದವಾರ ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆ.

****

ಬೊಂಬಾಯಿ ಆಧಿಪತ್ಯಕ್ಕೆ ಹೊಸದಾಗಿ ನೇಮಿಸಲ್ಪಟ್ಟಿರುವ ಲಾರ್ಡ್ ಲಾಮಿಂಗ್‌ಟನ್‌ರವರು, ಪತ್ನಿ, ಇಬ್ಬರು ಮಕ್ಕಳು ಸಹಿತರಾಗಿ ಮಾಲ್ಟೇವಿಯಾ ಎಂಬ ಹಡಗಿನಲ್ಲಿ ಪ್ರಯಾಣ ಮಾಡಿಕೊಂಡು ಡಿಸೆಂಬರ್ ೧೧ಕ್ಕೆ ಬೊಂಬಾಯಿಗೆ ಬಂದು ಇಳಿಯುವವರಾಗಿದ್ದಾರೆ. ಇವರ ಪ್ರೈವೇಟ್ ಸೆಕ್ರೆಟರಿ, ಡಾಕ್ಟರು, ಇಬ್ಬರು ಏಡಿಕಾಂಗರುಗಳು—ಎಲ್ಲಾ ಅವರ ಸಂಗಡಲೇ ಬರುವರು.

****

ದರ್ಭಾಂಗದ ಲೇಟ್ ಮಹಾರಾಜಾ ಸರ್ ಲಕ್ಷ್ಮೇಶ್ವರಸಿಂಗ್ ಬಹದೂರ್, ಜಿ. ಸಿ. ಐ. ಇ. ಯವರ ಹೆಸರನ್ನು ಶಾಶ್ವತಪಡಿಸುವದಕ್ಕೆ ಚಂದಾ ಎತ್ತಿ ಅವರ ಪ್ರತಿಮೆಯನ್ನು ವಿಲಾಯತಿಯಲ್ಲಿ ಮಾಡಿಸಿ ತರಿಸಿರುತ್ತಾರೆ ಇದನ್ನು ಕಲ್ಕತ್ತಾ ಪಟ್ಟಣದ ಡಾಲ್‌ಹೌಸಿ ಸ್ಕ್ವೇರ್ ಎಂಬ ಚೌಕದಲ್ಲಿ ನಿಲ್ಲಿಸಬೇಕೆಂದು ಗೊತ್ತಾಗಿದೆ. ಮುನಿಸಿಪಾಲಿಟಿಯವರು ಅದಕ್ಕೆ ಬೇಕಾಗುವಷ್ಟು ಸ್ಥಳವನ್ನು ಕೊಟ್ಟಿದ್ದಾರೆ.

****

ಹಿಂದುಸ್ಥಾನದ ಸೈನ್ಯಾಧಿಪತಿಯವರಾದ ಲಾರ್ಡ್ ಕಿಚ್ನರ್ ಯವರು ಬಂಗಲಿನಲ್ಲಿ ಕಳೆದವಾರ ಕುದುರೆಯ ಮೇಲೆ ಹೋಗುತ್ತಿದ್ದಾಗ್ಯೆ ಆಯ ತಪ್ಪಿ ಒಂದು ಚರಂಡಿಯಲ್ಲಿ ಬಿದ್ದುಕೊಂಡರು. ಅವರ ಕಾಲುಕಂಭವು ಮುರಿದುಹೋಯಿತು. ಈಗ ಸಿಂಲಾ ಪಟ್ಟಣದಲ್ಲಿ ಔಷಧ ಹಾಕಿಸುತ್ತಿದ್ದಾರೆ ಈ ಸಮಾಚಾರವನ್ನು ಕೇಳಿ, ಚಕ್ರವರ್ತಿಯವರೇ ಮುಂತಾದವರೆಲ್ಲಾ ಅನುತಾಪಪಟ್ಟು ಅವರಿಗೆ ಕಾಗದಗಳನ್ನು ಬರೆದಿರುತ್ತಾರೆ.

****

ಹಿಂದುಸ್ಥಾನದಿಂದ ಟಿಬೆಟ್ಟಿಗೆ ವ್ಯಾಪಾರ ಸರಕುಗಳು ಹೋಗಿ ಬರುವಂತೆ ಮಾಡಬೇಕೆಂದು ಇಂಡಿಯಾ ಸರ್ಕಾರದವರು ತಮ್ಮ ಕಡೆಯ ಕೆಲವು ಪ್ರತಿನಿಧಿಗಳನ್ನು ಟಿಬೆಟ್ಟಿನ ಬಳಿಗೆ ಕಳುಹಿಸಿದ್ದಾರೆ. ಇವರು ಟಿಬೆಟ್ಟಿನ ಸರ್ಕಾರೀ ಪ್ರತಿನಿಧಿಗಳನ್ನು ಸಂಧಿಸಿ ವ್ಯಾಪಾರ ವಿಚಾರದಲ್ಲಿ ಅವರ ಸಂಗಡ ಕರಾರು ಮುಂತಾದ್ದು ಮಾಡಿಕೊಳ್ಳಬೇಕಾಗಿದೆ. ಇಂಡಿಯಾ ಗವರ್ನ್‌ಮೆಂಟಿನವರ ಪ್ರತಿನಿಧಿಗಳ ಬೆಂಬಲಕ್ಕೆ ೨,೦೦೦ ಸೈನ್ಯಗಳನ್ನು ಕಳುಹಿಸಿದ್ದಾರೆ. ಕೆಲವು ಬಿರಂಗಿಗಳೂ ಹೋಗಿರುತ್ತವೆ.

****

ಉತ್ತರ ಹಿಂದು ರೈಲ್ವೇ ಕಂಪೆನಿಗಳ ಮ್ಯಾನೇಜರುಗಳೆಲ್ಲಾ ಕಳೆದ ವಾರ ಸಿಂಲಾ ಪಟ್ಟಣದಲ್ಲಿ ಸೇರಿ ಬೊಂಬಾಯಿಗೂ ಕಲ್ಕತ್ತೆಗೂ ಹೋಗಿ ಬರುವ ರೈಲ್ ಗಾಡಿಗಳನ್ನು ಇನ್ನೂ ವೇಗವಾಗಿ ಬಿಡಬೇಕೆಂದು ತೀರ್ಮಾನ ಮಾಡಿದರು. ಬೊಂಬಾಯಿನಿಂದ ಕಲ್ಕತ್ತೆಗೆ ಹೋಗುವುದಕ್ಕೆ ೪೫ ಗಂಟೆ ಹೊತ್ತು ಪ್ರಯಾಣಮಾಡಬೇಕಾಗಿತ್ತು. ಅದನ್ನು ತಪ್ಪಿಸಿ ೩೭ ಗಂಟೆ ಹೊತ್ತಿನಲ್ಲಿ ತಲುಪುವಂತೆ ಮಾಡಿದರು. ಕಲ್ಕತ್ತೆಯಿಂದ ಬೊಂಬಾಯಿಗೂ ಇದ್ದ ನೌಕೆ ೩೭ ಗಂಟೆ ಹೊತ್ತಿನಲ್ಲೇ ಬಂದು ಸೇರುವಂತಾಯಿತು.

ಹೈದರಾಬಾದ್ ನೈಜಾಮರವರು ಕೆಲವು ರಾಜಕೀಯ ವಿಷಯಗಳನ್ನು ಚರ್ಚಿಸುವುದಕ್ಕಾಗಿ ಬೊಂಬಾಯಿಗೆ ದಯಮಾಡಿ, ಅಲ್ಲಿ ವೈಸ್‌ರಾಯ್ ಯವರನ್ನು ಕಾಣುವರಾಗುತ್ತಾರೆಂದು ಪ್ರಕಟವಾಗಿದೆ.

****

ಸಿಲೋನ್ ದ್ವೀಪದಲ್ಲಿ ೨೦ ವರುಷದ ಬೋಅರ್ ಖೈದಿಯೊಬ್ಬನಿದ್ದಾನೆ. ಇಷ್ಟು ದಿವಸಗಳಾಗಿದ್ದರೂ ಇವನು ಬೋಅರರನ್ನು ಇಂಗ್ಲಿಷರು ಗೆದ್ದರೆಂಬುದನ್ನಾಗಲಿ, ಅವರೇ ಈಗ ದಕ್ಷಿಣ ಆಫ್ರಿಕವನ್ನೆಲ್ಲಾ ಆಳುತ್ತಿದ್ದಾರೆಂಬುದನ್ನಾಗಲಿ, ಇಂಗ್ಲಿಷರು ಸೋತುಹೋಗಲಿಲ್ಲವೆಂಬುದನ್ನಾಗಲಿ, ಯುದ್ಧ ಮುಗಿಯಿತೆಂಬುದನ್ನಾಗಲಿ ನಿಜವೆಂದು ನಂಬುವುದಿಲ್ಲ. ಯುದ್ಧ ಮುಗಿಯಿತೆಂದು ಹೇಳುವುದು ಇಂಗ್ಲಿಷರ ಕೃತ್ರಿಮದ ಮಾತೆಂದು ಹೇಳುತ್ತಿದ್ದಾನೆ. ಇವನು ಎಲ್ಲಿದ್ದರೂ ತಲೆಯ ಟೋಪಿಯನ್ನು ತೆಗೆವುದೇ ಇಲ್ಲ. ಜನರೆಲ್ಲಾ ಇವನನ್ನು ನೋಡಿ ಇವನ ಮಾತುಕೇಳಿ ಆಶ್ಚರ್ಯಪಡುತ್ತಿದ್ದಾರೆ.

****

ಕಳೆದ ೧೪ನೆ ತಾರೀಖಿಗೆ ಆಖೈರಾದ ಒಂದು ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೯,೩೬೦ ಜನರು ಪ್ಲೇಗಿನಲ್ಲಿ ಮೃತಪಟ್ಟರು (ಹಿಂದಿನ ವಾರ ೧೭,೦೦೬ ಮಂದಿಯೂ, ಹೋದವರುಷ ಇದೇ ವಾರದಲ್ಲಿ ೩೦,೪೨೦ ಜನರೂ ಈ ರೋಗದಲ್ಲಿ ಸತ್ತರು.) ಈ ಪೈಕಿ ಬೊಂಬಾಯಿ ಪಟ್ಟಣ ೫೩೬, ಅದೇ ಆಧಿಪತ್ಯ ೧೦,೨೯೫, ಕರಾಚಿ ೭, ಮದ್ರಾಸ್ ಆಧಿಪತ್ಯ ೨೪೭, ಕಲ್ಕತ್ತೆ ೧೧, ಬಂಗಾಳಾ ೪೭೯, ವಾಯವ್ಯ ಪ್ರಾಂತ್ಯ ೧,೨೦೬, ಪಂಜಾಬ್ ೧,೬೨೧ ಮಧ್ಯಪ್ರಾಂತ್ಯಗಳು ೨,೪೯೦, ಮೈಸೂರು ಸಂಸ್ಥಾನ ೬೨೨, ಹೈದರಾಬಾದ್ ಸಂಸ್ಥಾನ ೯೬೨, ರಾಜಪುಟಾನಾ ೧೭, ಮಧ್ಯ ಇಂಡಿಯಾ ೯೫೨, ಕಾಶ್ಮೀರ ೧೭, ಈ ಪ್ರಕಾರ ಮರಣಗಳಾಗಿರುತ್ತವೆ.

****

ಮೊದಲು ಮದರಾಸ್ ಪಟ್ಟಣದ ಲಾರೆನ್ಸ್ ಆಸೈಲಂ ಪ್ರೆಸ್ಸಿನಲ್ಲಿ ಉದ್ಯೋಗದಲ್ಲಿದ್ದು, ಈಚೆಗೆ ಅಲ್ಲಿನ ಸ್ಪೆನ್ಸರ್ ಎಂಬ ಕಂಪನಿಯಲ್ಲಿ ಸೂಪರಿಂಟೆಂಡೆಂಟಾಗಿ ಕೆಲಸ ಮಾಡುತ್ತಿರುವ ಮಿ॥ ಜೆ. ವಿಲ್ಲಿಯಂ ಟೇಲರ್ ಎಂಬಾತನು ಮದರಾಸ್ ಪಟ್ಟಣದಲ್ಲೇ ಗಾಜಿನ ಶೀಸೆ, ಔಷಧ ಶೀಸೆ, ಪದಾರ್ಥಗಳನ್ನು ತುಂಬುವ ಶೀಸೆ ಮೊದಲಾದವುಗಳನ್ನು ತಯಾರುಮಾಡುವುದಕ್ಕೆ ಒಂದು ಕಾರ್ಖಾನೆಯನ್ನು ಸ್ಥಾಪಿಸುವವನಾಗಿದ್ದಾನೆ. ತಿಂಗಳಿಗೆ ೭,೦೦೦ ರೂ. ಕ್ರಯವಾಗುವಷ್ಟು ಗಾಜಿನ ಶೀಸೆಗಳನ್ನು ಈ ಕಾರ್ಖಾನೆಯಲ್ಲಿ ಮಾಡುವುದಕ್ಕೆ ಪ್ರಾರಂಭಿಸುತ್ತೇನೆಂದು ಹೇಳುವನು. ಇದಕ್ಕೆ ಬೇಕಾಗುವ ಸಾಮಗ್ರಿಗಳೆಲ್ಲಾ ಅಲ್ಲೇ ಬಹು ಸುಲಭವಾಗಿ ದೊರಕುವವಂತೆ. ಇದರ ಏರ್ಪಾಡಿಗೆ ಮೊದಲು ೨೦,೦೦೦ ರೂ. ಮೂಲಧನ ಬೇಕೆಂದು ಈತ ಪ್ರಕಟಿಸಿರುತ್ತಾನೆ.

****

ಕೊಯಮುತ್ತೂರು ಜಿಲ್ಲೆಗೆ ಸೇರಿದ ಮೇಟುಪಾಳ್ಯದಲ್ಲಿ ಕಳೆದ ಬುಧವಾರ ಪ್ಲೇಗ್ ಮರಣವಾದ ಒಂದು ಮನೆಯನ್ನು, ಸರ್ಕಾರದ ನೌಕರರು ಹೋಗಿ ಶುದ್ಧಿ (ಡಿಸಿನ್‌ಫೆಕ್ಷನ್) ಮಾಡಬೇಕೆಂದು ಪ್ರಯತ್ನಪಟ್ಟರು. ಕೆಲವು ಜನರು ಆ ನೌಕರರನ್ನು ಸುತ್ತಿಕೊಂಡು, ಅವರು ತಂದಿದ್ದ ದೊಣ್ಣೆ ಮುಂತಾದವುಗಳನ್ನೇ ಕಿತ್ತುಕೊಂಡು, ನೌಕರರನ್ನೆಲ್ಲಾ ಚೆನ್ನಾಗಿ ಹೊಡೆದುಬಿಟ್ಟರು. ಇನ್ಸ್‌ಪೆಕ್ಟರಿಗೂ ಒಬ್ಬ ಜವಾನನಿಗೂ ಪೆಟ್ಟು ಬಿದ್ದವು. ಇನ್ನೈದು ಮಂದಿಗೂ ಅಲ್ಪಸ್ವಲ್ಪ ಗಾಯಗಳಾದವು. ಇವರು ದೊಂಬಿಯಿಂದ ತಪ್ಪಿಸಿಕೊಂಡು ಮೇಲಧಿಕಾರಿಗಳಿಗೆ ತಿಳಿಸಿದರು. ಸಾಯಂಕಾಲದೊಳಗಾಗಿ ಸರ್ಕಾರದವರು ಬಂದು, ದೊಂಬಿ ಮಾಡಿದ ಜನರನ್ನೆಲ್ಲಾ ದಸ್ತಗಿರಿ ಮಾಡಿದರು. ಕೊಯಮುತ್ತೂರಿಗೆ ಈ ಸಮಾಚಾರ ತಿಳಿದ ಕೂಡಲೆ ಜಿಲ್ಲಾ ಕಲೆಕ್ಟರೂ ಪೊಲೀಸ್ ಅಧಿಪರೂ ಮೇಟುಪಾಳ್ಯಕ್ಕೆ ಬಂದು ತನಿಖೆ ಮಾಡಿ, ದೊಂಬಿ ಮಾಡಿದ ೨೧ ಮಂದಿ ಖೈದಿಗಳನ್ನು ಕೊಯಮುತ್ತೂರಿಗೆ ಕರೆದುಕೊಂಡು ಹೋಗಿದ್ದಾರೆ.

****

ಹಿಮಾಚಲ ಪರ್ವತದ ಮಂಜು ಸುರಿವ ತಪ್ಪಲುಗಳಲ್ಲಿ ಹಿಂದುಗಳ ಮಹಾ ಯಾತ್ರಾಸ್ಥಳವೆನಿಸಿಕೊಂಡ ಬದರಿನಾಥ ದೇವಸ್ಥಾನವಿರುತ್ತದೆ. ಈ ದೇವಸ್ಥಾನದಲ್ಲಿ ಪ್ರತಿವರುಷವೂ ೬೦—೭೦ ಸಾವಿರ ಯಾತ್ರಾರ್ಥಿಗಳು ಹೋಗಿ ಸೇರುವರು. ಇವರ ಕಾಣಿಕೆಗಳಿಂದಲೇ ದೇವಸ್ಥಾನಕ್ಕೆ ವರುಷೇವರುಷ ಸರಾಸರಿ ೨೦ ಸಾವಿರ ರೂಪಾಯಿ ಉತ್ಪತ್ತಿಯಾಗುತ್ತದೆ. ಪೂಜಾರಿಗೆ ರಾವಳನೆಂಬ ಹೆಸರುಂಟು. ಅವನು ನಂಬೂದ್ರಿಯವನು; ಅಂದರೆ, ಶಂಕರಾಚಾರ್ಯರ ಜಾತಿಯವನು, ದಕ್ಷಿಣ ದೇಶಕ್ಕೆ ಸೇರಿದ ಕೇರಳ (ತಿರುವಾಂಕೂರು) ರಾಜ್ಯದವನು. ಈ ಪೂಜಾರಿ ಕೆಲಸವು ತಂದೆಯಿಂದ ಮಗನಿಗೆ ದೊರಕುವಂಥಾದ್ದಲ್ಲವು. ಒಬ್ಬ ಪೂಜಾರಿ ಕಾಲವಾದ ಕೂಡಲೆ ಆ ಬದರಿನಾಥ ದೇವಸ್ಥಾನದ ಮೇಲ್ವಿಚಾರಣಾ ಕರ್ತರು ತಿರುವಾಂಕೂರು ಸಂಸ್ಥಾನದ ಮಹಾರಾಜರಿಗೆ ಕಾಗದ ಬರೆದು ಒಳ್ಳೇ ವಂಶಕ್ಕೆ ಸೇರಿದ ನಂಬೂದ್ರಿ ಬ್ರಾಹ್ಮಣನನ್ನು ಆರಾಯಿಸಿ ಕಳಿಸಿಕೊಂಡು, ರಾವಳನ ಕೆಲಸಕ್ಕೆ ನೇಮಿಸಿಕೊಳ್ಳುತ್ತಾರೆ. ವಿದ್ಯೆಯು ಅಷ್ಟು ಪ್ರಾಧಾನ್ಯವಲ್ಲ. ಸದ್ವಂಶವೇ ಮುಖ್ಯ. ಈ ರಾವಳನಿಗೆ ದೇವಸ್ಥಾನದಲ್ಲಿ ತಿಂಗಳಿಗೆ ೧೦೦ ರೂ. ತಲಬು ಸಿಕ್ಕುತ್ತಾ ಇದೆ.

****

ಕಳೆದ ವಾರ ಕೊಯಮುತ್ತೂರು ಟವರ್ನಿನಲ್ಲಿ ಪ್ಲೇಗ್ ಉಪದ್ರವದ ದೆಸೆಯಿಂದ ಜನರು ದೊಂಬಿ ಮಾಡಿದರು. ಇದರ ವೃತ್ತಾಂತವೇನೆಂದರೆ —ಒಂದು ಕೇರಿ ಕೆಲವರು ಪ್ಲೇಗ್ ತಗಲಿ ಸತ್ತರು. ಇದಕ್ಕೋಸ್ಕರ ಮ್ಯುನಿಸಿಪಾಲಿಟಿಯವರು ಆ ಮನೆಗಳನ್ನೆಲ್ಲಾ ದ್ರಾವಕಗಳಿಂದ ಚೆನ್ನಾಗಿ ಶುದ್ಧಿ (ಡಿಸಿನ್‌ಫೆಕ್ಷನ್) ಮಾಡಬೇಕೆಂದು ಹೋಗಿ ಸಿಬ್ಬಂದಿಯನ್ನು ಬಿಟ್ಟು ಮನೆಗಳಲ್ಲಿದ್ದ ಕೆಲವು ಕಸರು ಸಾಮಾನು ಹೊರಕ್ಕೆ ತಳ್ಳಿಸಿ ಸುಡಿಸಿದರು. ಇದು ಪ್ರಜೆಗಳಲ್ಲೆಲ್ಲಾ ಗಾಬರಿಯನ್ನುಂಟುಮಾಡಿತು. ವರ್ತಕರೆಲ್ಲಾ ಪ್ರತಿಭಟಿಸಿಕೊಂಡು ಕಳೆದ ಶನಿವಾರ ಅಂಗಡಿಗಳನ್ನು ಮುಚ್ಚಿಬಿಟ್ಟರು. ಕಲೆಕ್ಟರು ಊರೊಳಕ್ಕೆ ಬಂದಾಗ ಅವರಿಗೆ ತಮ್ಮ ಕಷ್ಟ ದುಃಖಗಳನ್ನು ಅರಿಕೆ ಮಾಡಿಕೊಂಡರು. ಅವರಿಗೆಲ್ಲಾ ಕಲೆಕ್ಟರು ಸಮಾಧಾನ ಹೇಳಿ ಒಪ್ಪಿಸಿದರು. ಆದರೂ ಸ್ವಲ್ಪ ಹೊತ್ತಾದಮೇಲೆ ಕೆಲವರು ಪ್ಲೇಗ್ ಕ್ಯಾಂಪಿಗೆ ಬೆಂಕಿ ಹಾಕಬೇಕೆಂದು ಹೋದರು. ರಿಸರ್ವ್ ಪೊಲೀಸಿನವರು ಕಾದಿದ್ದು ಅಷ್ಟಕ್ಕೆ ಅವಕಾಶ ಕೊಡಲಿಲ್ಲ. ಕ್ಯಾಂಪಿನ ಬಳಿ ಇದ್ದ ಹುಲ್ಲುಮನೆ ಮಾತ್ರ ಹತ್ತಿ ಉರಿಯಿತು. ತರುವಾಯ ಡೆಪ್ಯುಟಿ ಕಲೆಕ್ಟರು ಪ್ರಜೆಗಳನ್ನೆಲ್ಲಾ ಕರೆಸಿಕೊಂಡು, ಅವರ ವಾಜ್ಯಗಳನ್ನು ಸಾವಧಾನವಾಗಿ ಕೇಳಿ ಬರೆದುಕೊಂಡರು. ಆಗ ಕೆಲವು ದುಷ್ಟರು ಶನಿವಾರ ರಾತ್ರಿ ಪಟ್ಟಣವನ್ನು ಲೂಟಿ ಮಾಡಿಬಿಡುತ್ತೇವೆಂದೂ ಬೆದರಿಸಿದರು. ಆದರೆ ಅಂಥಾ ಅನಾಹುತವೇನೂ ನಡೆಯಲಿಲ್ಲ. ಸರ್ಕಾರದವರು ತಕ್ಕ ಸಿಬ್ಬಂದಿ ಇಟ್ಟು ಪ್ರಜಾ ಸೌಖ್ಯಕ್ಕೆ ಭಂಗಪ್ರಾಪ್ತವಾಗದಂತೆ ಬಂದೋಬಸ್ತು ಮಾಡಿದರು. ಭಾನುವಾರ ಬೆಳಿಗ್ಗೆ ಕಲೆಕ್ಟರೇ ನಿಂತು ಪ್ರಜೆಗಳನ್ನೆಲ್ಲಾ ಕರೆಸಿಕೊಂಡು ಒಂದು ದೊಡ್ಡ ಸಭೆ ನಡಿಸಿ, ಎಲ್ಲರನ್ನೂ ಸಮಾಧಾನ ಪಡಿಸಿ ಕಳುಹಿಸಿಕೊಟ್ಟರು. ವರ್ತಕರು ಯಥಾಪ್ರಕಾರ ಅಂಗಡಿಗಳನ್ನು ಬಿಚ್ಚಿದರು. ದೇವರ ದಯೆಯಿಂದ ಅಲ್ಲಿಂದೀಚೆಗೆ ಯಾರಿಗೂ ಪ್ಲೇಗ್ ತಗಲಲಿಲ್ಲ. ಸರ್ಕಾರದವರು ಪ್ರಜೆಗಳು ಆಕ್ಷೇಪಿಸಿಕೊಂಡಿರುವ ಕಷ್ಟಗಳನ್ನು ತನಿಖೆಮಾಡಿ ಪರಿಹರಿಸುತ್ತೇವೆಂದು ಮಾತು ಕೊಟ್ಟಿದ್ದಾರೆ.

## ತಾಲ್ಲೂಕು ವರ್ತಮಾನಗಳು

ತಿಪ್ಟೂರು —ತಾರೀಖು ೧೫ನೇ ಸೋಮವಾರ ಬೆಳಿಗ್ಗೆ ಅರಸೀಕೆರೆ ಕಡೆಯಿಂದ ರೈಲಿನಲ್ಲಿ ಮೈಸೂರು ಸಂಸ್ಥಾನದ ಇನ್‌ಸ್ಪೆಕ್ಟರ್ ಜನರಲ್ ಮಿ॥ [illegible] ಸವಾರಿಯು ತಿಪ್ಟೂರು ರೈಲ್‌ಸ್ಟೇಷನಿಗೆ ದಯಮಾಡಿಸಿತು. ಆಗ್ಯೆ ಮುನಿಸಿಪಾಲಿಟಿಯವರು ರೈಲ್‌ಸ್ಟೇಷನ್ ಪ್ಲಾಟ್‌ಫಾರಮನ್ನು ಕದಳಿಗಳಿಂದಲೂ, ತೋರಣಗಳಿಂದಲೂ, ನಾನಾವಿಧ ಬಾವುಟಗಳಿಂದಲೂ, [illegible] ಅಲಂಕರಿಸಿದ್ದರು. ಪೊಲೀಸ್ ಸಲ್ಯೂಟ್ ನಡೆಯಿತು. ಮತ್ತು ನಮ್ಮ ಅಮಲ್ದಾರ್ ಸಾಹೇಬರು [illegible] ಗಳನ್ನು ನಜರ್ ಮಾಡಿದರು. ಬಳಿಕ [illegible] ಮುನಿಸಿಪಲ್ ಕೌನ್ಸಿಲರುಗಳೂ [illegible] ಒಪ್ಪಿಸಿ ತಮ್ಮ ಭಕ್ತಿಯನ್ನು ವಿಜ್ಞಾಪಿಸಿದರು —[illegible] ಇದರಿಂದ ಈ ಊರಿನಲ್ಲಿ [illegible] ಪ್ರಜೆಗಳು ಕೆಂಡು, [illegible]. ಹೀಗೆ ಸಕಲ ಸಂತೋಷಗಳು ನಡೆಯುತ್ತಿರಲು [illegible] ಗಂಟೆ ಅವರೊಡನೆ ರೈಲು ಗಾಡಿಯು ತುಮಕೂರಿನ ಕಡೆ ಹೊರಟು ಹೋಯಿತು —ಈ ಪ್ರಾಂತ್ಯ ಕಳೆದ ವಾರವೆಲ್ಲಾ ಮಳೆ [illegible] ರಿಂದ ಬೆಳೆಗಳು ಸ್ವಲ್ಪ ಕೆಟ್ಟಂತಾಯಿತು.—ನಮ್ಮ ಆಸ್ಪಿಟಲ್ ಅಸಿಸ್ಟೆಂಟ್ ಮಿ॥ ರಾಮಗೋಪಾಲ ಪಿಳ್ಳೆಯವರು ನೊಣವಿನಕೆರೆ ಮುಂತಾದ ಪ್ಲೇಗ್ ಪ್ರಾಂತ್ಯಗಳಿಗೆ ಆಗಾಗ್ಗೆ ಹೋಗಿ ರೋಗಿಗಳನ್ನು ಉಪಚರಿಸುತ್ತಿದ್ದಾರೆಂದು ಕೇಳಿ ಸಂತೋಷಪಡುತ್ತೇವೆ.

ದೇವನಹಳ್ಳಿ:—ಕಾರ್ತೀಕ ೧೦—೧೨ ದಿವಸಗಳಿಂದ ಘೋರವಾದ ಮಳೆಯು ನಿಲ್ಲದೆ ಹಿಡಿದು ಸುರಿಯುತ್ತಿದ್ದುದನ್ನು ನೋಡಿದರೆ ಪ್ರಳಯವೇ ಬಂತೋ ಎಂಬಂತೆ ಇದೆ. ಮಳೆಯಿಂದ ನಡೆದ ಅನಾಹುತಗಳನ್ನು ತಿಳಿಸಲು ಅಶಕ್ಯವಾಗಿದೆ, ಗಿಡಗಳು ನೆಲಕ್ಕೆ ಬಿದ್ದವು; ತೋಟಗಳಲ್ಲಿ ಸುಮಾರು ಒಂದು ಗಜದ ಪರ್ಯಂತರವೂ ನೀರು ನಿಂತಿದೆ. ಹೆಚ್ಚು ಕಡಿಮೆ ೯೦ ಮನೆಗಳು ಬಿದ್ದು, ಮನೆಯಲ್ಲಿದ್ದ ಸಾಮಾನುಗಳೆಲ್ಲಾ ಭೂಮಿದೇವತೆಯ ಪಾಲಾದವು ಅಲ್ಲದೆ, ಮನೆ ಕಟ್ಟಿದ್ದ ಸಾಮಾನುಗಳೂ ಪುನಃ ಮನೆ ಕಟ್ಟುವುದಕ್ಕೆ ಆಗದ ಹಾಗೆ ಮನೆ ಬಿದ್ದ ಮಣ್ಣಿನಲ್ಲೇ ಹೂತುಹೋಗಿವೆ. ಅಲ್ಪಸ್ವಲ್ಪ ಸಾಮಾನುಗಳು ಕಾಣುತ್ತಿದ್ದರೆ ಅವು ನೆರೆಯವರ ಪಾಲಾಗಿವೆ. ಹೀಗಾಗಿರುವುದು "ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣಸಂಕಟ" ಎಂಬ ಗಾದೆಗೆ ಸರಿಯಾಗಿ ಪ್ಲೇಗಿಗೆ ಹೆದರಿ ಹೊರಟುಹೋಗಿರುವವರ ಸಾಮಾನುಗಳನ್ನು ಕದ್ದುಕೊಂಡವರಿಗೆ ಸಂತೋಷವೂ ಸಾಮಾನುಗಳನ್ನು ಕಳೆದುಕೊಂಡವರಿಗೆ ದುಃಖವೂ ಆಗಿರುವುದನ್ನು ತಿಳಿಸಲು ವಿಷಾದಿಸುತ್ತೇನೆ. ಇಷ್ಟಾದರೂ ಊರಲ್ಲಿಯೇ ಆಗಲಿ ಊರ ಹೊರಗೇ ಆಗಲಿ ಪ್ರಾಣಹಾನಿ ಏನೂ ಆಗಲಿಲ್ಲ ಎಂಬುವುದನ್ನು ತಿಳಿಸಲು ಭಗವಂತನನ್ನು ಎಷ್ಟು ಕೊಂಡಾಡಿದರೂ ಸಾಲದು —ಈ ಸಲದ ಬೆಳೆಯು ಚೆನ್ನಾಗಿದೆ. ಮಳೆಯು ಇನ್ನೂ ಕೆಲವು ದಿವಸಗಳು ಬಿಡದೇ ಇದ್ದಿದ್ದರೆ ಈ ಬೆಳೆಯು ಕೈಗೆ ಸಿಕ್ಕುತ್ತಿರಲಿಲ್ಲವೆಂದು ಹೇಳುತ್ತಾರೆ. ಇಂಥಾ ಮಳೆಯು ೧೫—೧೬ ವರುಷಗಳಿಂದ ಬಂದಿರಲಿಲ್ಲವೆಂದು ಹೇಳುತ್ತಾರೆ. ಈಗ ಇಲ್ಲಿಗೆ ಬಂದಿರುವ ಹೊಸ ಅಮಲ್ದಾರರೂ, ಪೊಲೀಸ್ ಇನ್ಸ್‌ಪೆಕ್ಟರೂ ಊರಲ್ಲಿ ಏನ ಒಂದಕ್ಕೆ ಒಂದು ಸಲವಾದರೂ ಬಂದು ಜನರ ಕಷ್ಟ ಸುಖಗಳನ್ನು ವಿಚಾರಿಸುತ್ತಾ ಇರುವುದರಿಂದ ಜನರಿಗೆ ಸುಖವೂ ಸಂತೋಷವೂ ಅಧಿಕವಾಗಿದೆ. ಈಗ ದಿನೇ ದಿನೇ ಪ್ಲೇಗು ಕಡಿಮೆಯಾಗುತ್ತಾ ಇರುವಂತೆ ಕಾಣುತ್ತದೆ. ಊರಿಗೆ ಜನರು ಬಂದು ಸೇರುತ್ತಾ ಇದ್ದಾರೆ. ಆದರೆ ಮುಖ್ಯ ಇವರು ಮಳೆಗೋಸ್ಕರ ಊರಿಗೆ ಬಂದು ಸೇರುತ್ತಾರೆ.—ಇಲ್ಲಿನ ಮಿಡ್‌ವೈಫ್ ಮಿಸ್ ಜ್ಯೂಲಿಯಮ್ಮನವರನ್ನು ಹೊಸಕೋಟೆಗೂ, ಪೋಸ್ಟ್‌ಮಾಸ್ಟರು ಮಿ॥ ಭೀಮರಾಯರಿಗೆ ಕಾನಕಾನಹಳ್ಳಿಗೂ ವರ್ಗಾಯಿಸಿರುವುದನ್ನು ಕೇಳಿ ವಿಷಾದಿಸುತ್ತೇವೆ. ಇವರು ಇಲ್ಲಿಗೆ ಬಂದ ೭—೮ ವರುಷಗಳಿಂದ ಇಲ್ಲಿನ ಜನರ ಅನುರಾಗವನ್ನು ಪಡೆದಿದ್ದರು. ಇವರುಗಳಿಗೆ ದೇವರು ಆಯುರಾರೋಗ್ಯವನ್ನೂ ಸಂಪತ್ತನ್ನೂ ಕೊಟ್ಟು ಕಾಪಾಡಬೇಕೆಂದು ಪ್ರಾರ್ಥಿಸುತ್ತೇವೆ.

ರಬೀಕೆರೆ.—ಈ ವರೆಗೂ ಈ ಪ್ರಾಂತ್ಯದ ಎಲ್ಲಾ ಕಡೆಯು ಒಳ್ಳೇ ಮಳೆ ಆಗಿ ಕೆರೆ ಕುಂಟೆಗಳೆಲ್ಲಾ ತುಂಬಿತುಳುಕುತ್ತಿರುವವು. ಆದರೆ ಯಾವ ವಿಧವಾದ ಅನರ್ಥವೂ ಪ್ರಾಪ್ತವಾಗಲಿಲ್ಲ. ಇಲ್ಲಿ ಆಸ್ಪತ್ರೆ ಬಳಿ ಇದ್ದ ಮಿ॥ ಕುಪ್ಪುಸ್ವಾಮಿ ಪಿಳ್ಳೆಯವರ ಪಾಳುಭೂಮಿಯನ್ನು ಸರ್ಕಾರದವರು ಕಳೆದ ವಾರ ಮುಟ್ಟಿಸಿದ್ದು ಪ್ರಜೆಗಳ ಮಹದುಪಕಾರವಾಯಿತು. [illegible] ಇದೂ ಕೂಡ ಮೂರು ನಾರು ತಲೆಹಾಕಿ ಪ್ರಜೆಗಳಲ್ಲಿ [illegible] ಯನ್ನು ಮೃತ್ಯುವಿಗೆ ತುತ್ತುಮಾಡಿತು.—ಕಳೆದ ತಿಂಗಳು [illegible] ಯಿಂದ ಈ ವರೆಗೂ ಈ ಊರಿನ [illegible] ಕೇರಿಯಲ್ಲಿರುವ [illegible] ನಾಟಿ ವೈದ್ಯರು [illegible] ಗುರುಭಕ್ತರು ಎಂಬ [illegible] ನವ ಮನೆಯವರೆಲ್ಲರೂ (೭ ಜನ) ಏಕಕಾಲದಲ್ಲಿ ಪ್ಲೇಗ್ ರೋಗ ಪೀಡಿತರಾದರು. ಕೂಡಲೆ ಇಲ್ಲಿನ ಉಪಾಧ್ಯಾಯರುಗಳು ಮಿ॥ [illegible] ನಂದಪ್ಪನವರು ಇಲ್ಲಿನ ಆಸ್ಪಿಟಲ್ ಅಸಿಸ್ಟೆಂಟ್ ಮಿ॥ ಅಬ್ದುಲ್ [illegible] ಸಾಹೇಬರುಗಳ ಅನುಮತಿಯನ್ನು ಹೊಂದಿ, ಟಿಪಿಗ್ರಾಮೂಲಕ ಶಿವಮೊಗ್ಗದಿಂದ ಘನಮಾದ್ರಿಗಳಿಂದ ಸ್ಪಿರಿಟ್ ಮುಂತಾದವುಗಳನ್ನು ಬರಮಾಡಿಕೊಂಡು, ರೋಗಿಗಳಿಗೆ ಬೇಕಾದ ಅನುಕೂಲಗಳನ್ನು ಏರ್ಪಡಿಸಿಕೊಟ್ಟು, ಇಲ್ಲಿನ ಉಪಾಧ್ಯಾಯರುಗಳು ತಾವೇ ರೋಗಿಗಳ ಪರಾಂಬರಿಕೆಯ ಜವಾಬುದಾರಿಯನ್ನು ಹೊಂದಿದರು. ಮಿ॥ ಹಂಪಣ್ಣನವರೇ ಮುಂತಾದ ಪ್ಲೇಗ್ ಆಫೀಸರುಗಳು ಈ ರೋಗಿಗಳ ಪೋಷಣೆ ಬಗ್ಗೆ ಸರ್ಕಾರದಿಂದ ಒಬ್ಬ ಸೇವಕನನ್ನು ಕೊಟ್ಟದ್ದಲ್ಲದೆ, ರೋಗಿಗಳ ಪೋಷಣಾ ಖರ್ಚಿನ ಬಗ್ಗೆ ಸ್ವಲ್ಪ ದ್ರವ್ಯ ಸಹಾಯವಾಗಿ ಮೈಸೂರು ನಿಂದ(?) [illegible]. ಈ ಭಾಗದಲ್ಲಿ ಘನಮಾದ್ರಿಗಳಿಂದ ಸ್ಪಿರಿಟ್ ದೊರೆಯುವುದು ರೋಗಿಗಳ [illegible] ಸಹಾಯಕ್ಕೆ ಬೇಕಾದ ದ್ರವ್ಯಸಹಾಯವನ್ನು [illegible] ಆ ಬಡಕ್ರೈಸ್ತ ಕುಟುಂಬದವರನ್ನು ತಕ್ಕ [illegible] ಸಹಾಯಿಸುತ್ತಾ ಬಂದರು. ಅವರು ಈ ಕ್ರೈಸ್ತ ಬಾಂಧವರುಗಳ [illegible] ಯನ್ನು ಎಷ್ಟು ಹೇಳಿದರೂ ಸಾಲದು. ಇದಲ್ಲದೆ ಇಲ್ಲಿನ ಆಸ್ಪಿಟಲ್ ಅಸಿಸ್ಟೆಂಟ್ ಮಿ॥ ಅಬ್ದುಲ್ [illegible] ಅವರು ಪ್ರತಿ ದಿನವೂ ಪ್ಲೇಗ್ ರೋಗಿಗಳ [illegible] ನೋಡುತ್ತಾ, ದಿನಕ್ಕೆ ನಾಲ್ಕೈದಾವರ್ತಿ ಬಂದು ವಿಚಾರಿಸಿಕೊಳ್ಳುತ್ತಾ, ಅನುಗುಣವಾದ ಔಷಧಿಗಳನ್ನು ಕೊಡುತ್ತಾ, ತೋರಿಸಿದ ಅವರ ಸಂತೋಷದ ಪ್ರೀತಿಯನ್ನು ಎಷ್ಟು ವಿವರಿಸಿದರೂ ಕೊಂಡಾಡಿದರೂ [illegible] ರೋಗಿಗಳಲ್ಲಿ [illegible] ಜನರ ಪ್ರಾಣ [illegible] ಸ್ವಲ್ಪ ಕಾಲದಲ್ಲಿ ಈಗ ಪೂರಾ [illegible] ದ್ದಾರೆ.

[illegible]—ಈ ಊರಿನಲ್ಲಿ ೨—೩ ಮನೆಗಳಲ್ಲಿ [illegible] ದ್ದರಿಂದ ಆ ಮನೆಗಳವರು ಮನೆ ಬಿಟ್ಟು ಬೇರೆ ಮನೆಗೆ ಹೋದರು. ಈ ಸೋಂಕಿನಿಂದ [illegible], ಜನರು ಬಹು ಗಾಬರಿಪಡುತ್ತಾರೆ. [illegible] ಜನರು ಊರಿಗೆ ಸೇರಿ ೭—೮ ತಿಂಗಳಾಯಿತು. ಇದಕ್ಕೆ ಕಷ್ಟಪಡುವ [illegible] ಎಂದು ವ್ಯಸನವಾಗಿದ್ದಾರೆ —ಊರಿನ ಹಾದಿಯು [illegible] ಬೆ ಸಂಸಾರಗಳನ್ನು [illegible]. [illegible] ನಾನಾಗಸೆ ಬರುತ್ತವೆ. ಅಲ್ಲಲ್ಲಿ [illegible] ಗುಂಡಿಗಳಲ್ಲಿ ನೀರು ತುಂಬಿ ನಿತ್ಯ [illegible]. ಈ ಕಾಲದಲ್ಲಿ ಮ್ಯುನಿಸಿಪಾಲಿಟಿ [illegible] ಪ್ಲೇಗ್ [illegible] ಸಂದೇಹವಿಲ್ಲವೆಂದು ತೋರುತ್ತದೆ. —ನಾಲ್ಕು [illegible] ಚಂಗಪ್ಪಶೆಟ್ಟರು ಇಲ್ಲಿಗೆ ಒಂದು [illegible] ನಡಿದ್ದರು. ಇವರ ಗಮನಕ್ಕೆ [illegible] ತಿಳಿಯದು. [illegible] ಬಂದಿದ್ದರೆ ಮುಂದೆ ಕಾರ್ಯದಲ್ಲಿ ನೋಡಾಗುತ್ತೆ. ಈಗ ಹೋಟೆಲಿನಲ್ಲಿ ಪೊಲೀಸ್‌ನವರ [illegible] ಚನ್ನಾಗಿದೆ. ದಫೇದಾರರು ನಿಗಾದಿಂದ ನೋಡುತ್ತಾ ಬರುತ್ತಾರೆ. ಈಗ ಹಳೆಯದೂ ಅಧಿಕವಾಗಿದೆ. ರಾತ್ರಿಕಾಲದಲ್ಲಿ [illegible] ಪೊಲೀಸ್‌ನವರಿಗ ಉತ್ತಮವಾದ ಬನಾತ್ ಕೋಟುಗಳನ್ನು ಕೊಟ್ಟರೆ ಇನ್ನು ಕೆಲಸವು ಚನ್ನಾಗಿ ನಡೆಯಬಹುದು —[illegible] ಬೇಟೆಗಿದ್ದ ಹನುಮಂತ್ಯನು ಏನೋ ಕಾರಣದಿಂದ ೭೨ನೇ ತಾ॥ ಸಿಡಿಲು(?) ಭಾವಿಯಲ್ಲಿ ಬಿದ್ದು ಸತ್ತನು.—ಮಂಗನೂರ್ ಹತ್ರ ಸಂತೇ ಮೊರೆನಹಳ್ಳಿಯಲ್ಲಿ ಪ್ರತಿ ಭಾನುವಾರವೂ ಸಂತೆ ನಡಿಯುತ್ತೆ. ಮೊರೆನಹಳ್ಳಿ ಕೆರೆ ಒಂದೆ ನುಣ್ಣು ರಸ್ತೆಯನ್ನು ಮಾಡಿದ್ದರು. ಈ ಮಳೆಯಲ್ಲಿ ೩ ಫರ್ಲಾಂಗ್‌ವರೆಗೆ ರಸ್ತೆ ಕೊಚ್ಚಿಹೋಗಿದೆ. ಸಂತೆ ಬಂಡಿಗಳು ಹೋಗುವುದಕ್ಕೆ ಬಹಳ ತೊಂದರೆಯಾಗಿದೆ. ಎತ್ತುಗಳು ಮೊಣಕಾಲುದ್ದ ಕೆಸರಿನಲ್ಲಿ ಎಳೆಯಲಾರದೆ ಹಿಂಸೆ ಪಡುತ್ತವೆ. ಎತ್ತುಗಳಿಗೆ ಬದಲಾಗಿ ಜನರು ನೊಗ ಹಿಡಿದು ಎಳೆಯುತ್ತಾರೆ. ಕೆಲವು ಬಂಡಿಗಳು ಬಿದ್ದುಹೋದವು. ಈ ಹಿಂಸೆಯನ್ನು ಇದರ ಮೇಲಿನ ಅಧಿಕಾರಿಗಳು ಖುದ್ದು ನೋಡಿದರೆ ವನಿಕರಕಬಹುದು. ಸರ್ಕಾರದವರು ಕೂಡಲೆ ಇದನ್ನು ಗಮನಕ್ಕೆ ತಂದುಕೊಂಡು, ವರ್ತಕರ ಕಷ್ಟವನ್ನು ಪರಿಹರಿಸಬೇಕಾಗಿದೆ. ಈ ರಸ್ತೆಯ ಕಾಮಗಾರಿಯು ಅಲ್ಲಿನ ರೈತರಿಗೆ ಸಹ ಸೇರಿ ಇದೆ ಎಂದು ಹೇಳುತ್ತಾರೆ. ಹೀಗಿದ್ದರೆ ರೈತರನ್ನು ಕರಿಸಿ, ರಸ್ತೆಯನ್ನು ಮಾಡಿಸಿದರೆ ಉಪಕಾರವಾಗುತ್ತೆ. ಕೆಲವು ಕಡೆ ಸಣ್ಣ ಸೇತುವೆ ಕಟ್ಟಿಸಿದ್ದರೆ ಇಷ್ಟು ತೊಂದರೆ ಆಗುತ್ತಿರಲಿಲ್ಲ.—ಈ ನಡುವೆ ತಾ॥ ೯ನೇ ಶನಿವಾರ ರಾತ್ರಿ ಚನ್ನಪಟ್ಟಣದ ಹಾಲ್ಗೋಡು ಮಳೂರು ವಾಸಸ್ಥರಾದ ಗುರುಗಳು ತಿರುಮಲೆ ತಾತಾಚಾರ್ಯ ನಗಗಳು ಸೀರೆಗಳು ಮೊದಲಾದ್ದು ಅವುಗಳನ್ನು ಇಟ್ಟಿದ್ದ ಎರಡು ಪೆಟ್ಟಿಗೆ ಸಹಿತ ಚೋರಿಯಾಗಿರುತ್ತೆ. ಇದನ್ನು ಪತ್ತೆ ಮಾಡಿ ಕೊಟ್ಟವರಿಗೆ ನಗದು ಮುವ್ವತ್ತು ರೂಪಾಯಿಗಳನ್ನು ಬಹುಮಾನವಾಗಿ ಕೊಡುವುದಾಗಿ ಅವರು ತಿಳಿಸುತ್ತಾರೆ —ದೊಡ್ಡ ಮಳೂರಲ್ಲಿ ಬಹು ಪುರಾತನಕಾಲದಿಂದ ಇದ್ದ ಒಂದು ಕಲ್ಲು ಮಂಟಪವೂ, ಅದರ ಮೇಲಿದ್ದ ಗೋಪುರವೂ ಮಳೆಯಿಂದ ಬಹು ರಭಸವಾಗಿ ಬಿದ್ದು ಹೋಯಿತು. ಯಾರಿಗೂ [illegible]

...ವನವು ಪೂರ್ಣವಾದುದರಿಂದ ಹರಿಯಿತು. ಇನ್ನು ಸ್ವಲ್ಪ ಹೆಚ್ಚಾಗಿ ಬಂದು ಇದ್ದರೆ ಪಟ್ಟಣದಲ್ಲಿ ಹರಿದು ನಷ್ಟಮಾಡುತ್ತಿತ್ತು. ಸ್ಟೇಷನ್ ಕಟ್ಟೆಕ್ಕೆ [illegible] ಜಾಯಿತು.

## ಮೈಸೂರು ಸರಕಾರು ಮುಕಾಮುಗಳು.

### ಚಿಕ್ಕ ತಿರುಪತಿಯಲ್ಲಿ ರಥೋತ್ಸವ.

ಮಾಲೂರು ತಾಲ್ಲೂಕು ಚಿಕ್ಕ ತಿರುಪತಿಯಲ್ಲಿ ನಡೆವ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದ ರಥೋತ್ಸವ ಕಾಲದಲ್ಲಿ ಜನರು ಹೇರಳವಾಗಿ ಗೋಕಾಯಿಗಳನ್ನು ತಂದು ಬಿಕರಿ ಮಾಡುತ್ತಾರಂತೆ. ಈ ಪ್ರತಿ ರಾಶಿಗೂ ಸ್ವಲ್ಪ ರಸುಂ ವಸೂಲ್ಮಾಡಬೇಕೆಂದು ಸರ್ಕಾರದವರು ೧೯೦೪ನೇ ಇಸವಿ ಮಾರ್ಚ್ ೩೧ರಲ್ಲಿ ಸ್ಯಾಂಕ್ಷನ್ ಮಾಡಿದರು.

ಈ ದೇವಸ್ಥಾನಕ್ಕೆ ಧರ್ಮಾರ್ಥಗಳಿಂದ ಬರುತ್ತಿರುವ ಆಗುವ ಮುಡಿ ಕಾಣಿಕೆ, ಮಂಡಲ ಕಾಣಿಕೆ, ತಸ್ತಿಕ್ [illegible] ಕಾಣಿಕೆ, ಉತ್ಸವ ಕಾಣಿಕೆ, ಅಭಿಷೇಕದ ಕಾಣಿಕೆ, ಬ್ರಾಹ್ಮಣರ ಕಾಣಿಕೆ, ಅಷ್ಟೋತ್ತರದ ಕಾಣಿಕೆ, [illegible] ಕಾಣಿಕೆ, ಈ ಕಾಣಿಕೆ ಸಲ್ಲಿಸುವ [illegible] ಭಾಗವನ್ನು ದೇವರ ಅರ್ಚಕರಿಗೆ ರುಸುಮಾಗಿ ಕೊಡಬೇಕೆಂತಲೂ, ಕೊಳ್ಳೆ ಕಾಣಿಕೆ ಎಂಬುದಕ್ಕೆ ಸಲ್ಲುವಾಗುವ ಹಣದಲ್ಲಿ ಮೂರನೇ ಒಂದು ಭಾಗವನ್ನು ಒಲಗ [illegible] ಸೇವೆ ಮಾಡುವ [illegible] ಕೊಡಬೇಕೆಂತಲೂ ಚೀಫ್ ಕಮಿಷನರು [illegible] ಮಾಡಿದರು. [illegible] ಸರ್ಕಾರದವರು [illegible] ೧೯೦೩ನೇ ಇಸವಿ [illegible] ಮಾಡಿದರು.

ಈ ನಿಯಮವು [illegible] ತಿಂಗಳಿನಿಂದ [illegible] ಜರುಗುತ್ತಿರುವ [illegible] ೪,೦೦೦ ರೂ. [illegible] ಉಪಯೋಗಿಸಲು [illegible] ೧೯೦೩ನೇ ನವೆಂಬರ್ ೧೦ರಲ್ಲಿ [illegible] ಮಾಡಿದರು.

೧೯೦೩ನೇ ನವೆಂಬರ್ ೧೨ರಲ್ಲಿ ಮೈಸೂರು ಸರಕಾರದವರು [illegible] ೨,೦೦೦ [illegible] ಕೊಟ್ಟಿದ್ದಾರೆ.

### ಜಾತ್ರೆಯಲ್ಲಿ ಸೇರುವ ರಾಸುಗಳಿಗೆ ತಿರುಗೆ ಕೊಡಬೇಕು.

[illegible] ತಾಲ್ಲೂಕು ದೇವರಾಯನದುರ್ಗದಲ್ಲಿ [illegible] ಶ್ರೀ [illegible] ಜಾತ್ರೆ [illegible] ನಡೆಯುತ್ತದೆ. ಇದಕ್ಕೆ ತಿಂಗಳಿಗೆ ರೂ ೧—೩—೩ ಪೈ [illegible] ಈ ಜಾತ್ರೆಯಲ್ಲಿ ಬಿಡುವ [illegible] ಸುಮಾರು ೬೦,೦೦೦ [illegible] ರಾಸುಗಳು [illegible] ಸರ್ಕಾರ [illegible] ಕ್ಯಾಟಲ್ [illegible] ತಮ್ಮ [illegible] ಪ್ರತಿ ವರುಷವು [illegible] ಈ ಪ್ರಕಾರ [illegible] ಕಳೆದ ಎರಡು ವರುಷಗಳಲ್ಲಿ ೨೦೩ ರೂ. [illegible] ಈ ಪ್ರಕಾರ ಕೊಟ್ಟಿದ್ದಾರೆ, ಇದಲ್ಲದೆ [illegible] ಲೋಕಲ್ ಫಂಡ್ [illegible] ಜಾತ್ರೆ ಕಾಲದಲ್ಲಿ ಅಲ್ಲಿಗೆ ಬರುವ [illegible] ಮೇಲೆ [illegible] ವಸೂಲ್ಮಾಡಬಹುದೆಂದು ಹುಕುಂ ಕೊಟ್ಟಿರು. ಜಾತ್ರೆಯಲ್ಲಿ ೧೯೦೦ರಲ್ಲಿ ರೂ. ೩೧೯—೧—೩ ಸ್ಥಂಭ, ೧೯೦೧ರಲ್ಲಿ ರೂ. ೩೩೪—೪—೩ ಪೈ ವಸೂಲಾಗಿರುವುದು. [illegible] ಈ ದೇವಸ್ಥಾನದ ಫಂಡಿನಲ್ಲಿ ರೂ ೬೦೦—೧—೩ ಪೈ [illegible] ಇದು ತಾಲ್ಲೂಕ್ [illegible] ಈ ದಾಸುಗಳಿಗೆ [illegible] ಒಂದು [illegible] ಕೆರೆಗಳಿಗೆ [illegible] ಆದಾಯದಿಂದಲೂ [illegible] ಆಗಬೇಕೆಂದು [illegible] ಚೀಫ್ ಕಮಿಷನರು [illegible] ಮಾಡುತ್ತಾರೆ. ಅದಲ್ಲದೆ ಜಾತ್ರೆಯಲ್ಲಿ ದನಗಳನ್ನು [illegible] ಗಳ [illegible] ತಕ್ಕ [illegible] ಜಾತ್ರೆ [illegible] ಬಿಟ್ಟುಕೊಡುತ್ತೇವೆಂದು ಮುಚ್ಚಳಿಕೆಯನ್ನೂ ಬರೆದುಕೊಡುವವರಾಗಿಯೂ, ಪಟೇಲ್ ಶ್ಯಾನುಭೋಗರುಗಳೆಲ್ಲಾ ಮರ್ಯಾದೆ ಮೇಲ್ಪಂಕ್ತಿ ರುಸುಮನ್ನು ತಪ್ಪದೆ ಜಾಪತಿ ಮಾಡುತ್ತಾ ಬರುವ ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆಂತಲೂ ಕಳೆದ [illegible] ಗಳಲ್ಲಿ ನಡೆದ ಜಾತ್ರೆಯಲ್ಲಿ ಎಲ್ಲಾ ಬಾಬುಗಳಿಂದಲೂ ಒಟ್ಟು [illegible] ರೂ ಉತ್ಪತ್ತಿಯಾಗಿದೆ ಎಂತಲೂ ಡೆಪ್ಯುಟಿ ಕಮಿಷನರ ರಿಪೋರ್ಟಿನಿಂದ ಗೊತ್ತಾಗುತ್ತದೆ.

ಜಾತ್ರೆಯಲ್ಲಿ ನೆರೆವ ಜನಗಳಲ್ಲಿ ದೊಡ್ಡ ರಾಶಿಗೆ [illegible] ಕೆರೆಯನ್ನೂ, ಕೆರೆಗಳಿಗೆ ಆಧಾರವನ್ನು ಮಾಡಿಕೊಟ್ಟಿದ್ದ [illegible] ಪಟೇಲ್ ಶ್ಯಾನುಭೋಗರುಗಳು [illegible], ರಾಸುಗಳ ತೆರಿಗೆಯಲ್ಲಿ ವಸೂಲಾದದ್ದು—ಈ ಆಗಳೆಲ್ಲಾ ದೇವಸ್ಥಾನದ ಫಂಡಿಗೆ ಕೂಡಿಸಬೇಕು. ಕೆಳಗೆ ತೋರಿಸಿದಂತೆ ಪ್ರತಿ ವರುಷವೂ ರೂ ೨೩೩—೬—೩ ಪೈ ದೇವಸ್ಥಾನದ [illegible] ಖರ್ಚನ್ನು ಮಾಡುತ್ತಾ ಬರತಕ್ಕದ್ದು.

| | | |
|---|---|---|
| ೧೨ ತಿಂಗಳ ಪವಿತ್ರ ದೀಪಾರಾಧನೆಗೆ ರೂ. | | ೫೯—೧೦—೦ |
| ರಥೋತ್ಸವದ ಖರ್ಚು ........ | ,, | ೧೨೧—೧೩—೩ |
| ಅರ್ಚಕರ ಸಂಬಳ, ೧೨ ತಿಂಗಳಿಗೆ | ,, | ೩೬—೦—೦ |
| ಪೂಜಾಮಣಿ ಸಂಬಳ, ,, | ,, | ೧೫—೦—೦ |
| | ಜುಮ್ಲಾ ರೂ. | ೨೩೩—೬—೩ |

ರಾಜಾವ ವರುಷದಲ್ಲೂ ಉತ್ಪತ್ತಿಯಾಗುವಷ್ಟಕ್ಕಿಂತಲೂ ಹೆಚ್ಚಾಗದಂತೆ ಖರ್ಚು ಬೀಳದಂತೆ ನೋಡಿಕೊಳ್ಳಬೇಕು. ಫಂಡಿನ ಹಣವನ್ನು ಜಾಲ್ತಿ ಖರ್ಚಿಗೆ ಉಪಯೋಗಿಸದಂತೆಯೂ, ಶಾಶ್ವತವಾದ ಕಾರ್ಯಗಳಿಗೆ ವಿನಿಯೋಗಿಸುವಂತೆಯೂ ನೋಡಿಕೊಳ್ಳತಕ್ಕದ್ದು.

## ಕ್ರೈಸ್ತ ಪಾದರಿಗಳು.

### ಸಮಾಧಾನ.

ಮೈಸೂರು "ವೃತ್ತಾಂತ ಚಿಂತಾಮಣಿ" ಯು ಅಪ್ರಿಯ ಶಬ್ದಗಳನ್ನು ನೋಡಿ, ಮಂಗಳೂರಿನಲ್ಲಿ ಪ್ರಕಟವಾಗುವ "ಸತ್ಯದೀಪಿಕೆ" ಯು ಸಮಾಧಾನ ಹೇಳುತ್ತಿರುವುದೇನೆಂದರೆ:—

"ಮೈಸೂರಿನ ವೃತ್ತಾಂತ ಚಿಂತಾಮಣಿ ಪತ್ರಿಕೆಯು ಅಕ್ಟೋಬರು ೨೮ನೇ ಮತ್ತು ನವಂಬರು ೧ನೇ ಸಂಚಿಕೆಗಳಲ್ಲಿ ಕ್ರೈಸ್ತ ಪಾದ್ರಿಗಳನ್ನು ಕುರಿತು ಹೇಳಿದ ಕೆಲವು ಮಾತುಗಳನ್ನು ಇಲ್ಲಿ ಚರ್ಚಿಸುವುದು ಅಪ್ರಕೃತವಲ್ಲ. ಕ್ರೈಸ್ತ ಪಾದ್ರಿಗಳು ತಮ್ಮ ಮತಪ್ರಚಾರದ ಬಿಸಿಯಿಂದ ಪರರ ಕಷ್ಟ ಚಿಂತೆ ಕೊಡುತ್ತಾರೆಂಬುದೂ, 'ಮತವಿಚಾರಗಳಲ್ಲಿ ತಟಸ್ಥತೆಯನ್ನು ವಹಿಸಿ ಸರ್ವ ಮತಗಳ ವಿಷಯದಲ್ಲಿಯೂ ಒಂದೇ ವಿಧವಾಗಿ ಇರಬೇಕೆಂಬ' ಸರ್ಕಾರದ ಮುಖ್ಯ ಉದ್ದೇಶಕ್ಕೆ ಕುಂದವನ್ನು ತರುತ್ತಾರೆಂದೂ, ಕ್ರೈಸ್ತ ಧರ್ಮವನ್ನು ಅವಲಂಬಿಸಿದ ಹಿಂದೂ ಮಕ್ಕಳಿಗೆ ದಾಯಭಾಗ ಸಿಕ್ಕುವ ಹಾಗೆ ನಾನಾ ಕಾಯಿದೆಗಳನ್ನು ಮಾಡುವರೆಂದೂ ಪತ್ರಿಕೆಯು ರೇಗಿ ಬಿದ್ದು ಗರ್ಜಿಸುತ್ತದೆ. 'ಮತಾಭಿಮಾನವು ದೂಷಕವಾದದ್ದಲ್ಲ. ಸಕಲರೂ ತಮ್ಮ ಮತಗಳಲ್ಲಿ ಅಭಿಮಾನಿಗಳಾಗಿರಬೇಕು. ಎಲ್ಲಾ ಮತಗಳ ಉದ್ದೇಶ 'ಸತ್ಯಪರಬ್ರಹ್ಮನ ಆರಾಧನೆಯಾಗಿರುವುದು' ಎಂಬ ಒಂದು ಬಾಯಿಯಿಂದ ತತ್ವಜ್ಞಾನವನ್ನು ಉಪದೇಶಿಸಿ, ಮತ್ತೊಂದು ಬಾಯಿಯಿಂದ ಈ ಕ್ರೈಸ್ತ ಪಾದ್ರಿಗಳ ದುರ್ನಡತೆಯು, ದೇಶದಲ್ಲಿ ಸುಖವಿಲ್ಲ ಎಂದು ಗೋಳಿಡುವುದು. ಕ್ರೈಸ್ತ ಪಾದ್ರಿಗಳು ದೇಶಕ್ಕೆ ಏಗೆ ಹಾನಿಯನ್ನು ಉಂಟುಮಾಡಿದರು ಎಂದು ನಮಗೆ ತಿಳಿಯಲಾರದು. ಜನಗಳೆಲ್ಲಾ ಅಂಧಕಾರವಾಗಿ ಹಿಂದು ಬಿಳಿಕ ಬಾರದೆ ಮೂಢರಾಗಿರುವಾಗ, ಬನಾನು ದಾರಿ ತೋರಿಸಿದ್ದು ಹಾನಿಯೋ? ಹಳ್ಳಿ ಹಳ್ಳಿಗಳಲ್ಲಿ ಜನರಿಗೆ ಅನುಕೂಲವಾಗುವಂತೆ ಶಾಲೆಗಳನ್ನು ಇಟ್ಟು ಧರ್ಮಾರ್ಥವೆಂಬಂತೆ ವಿದ್ಯೆಯನ್ನು ಕಲಿಸಿಕೊಟ್ಟಿದ್ದು ಹಾನಿಯೋ? ಕೆಲಸ ಮಾಡಲು ಯೋಗ್ಯರಾದವರಿಗೆ ಅನುಕೂಲವಾಗಿ ಅಲ್ಲಲ್ಲಿ ಮುದ್ರಣ ಶಾಲೆ, ಹಂಚಿನ ಕಾರ್ಖಾನೆಗಳನ್ನೂ, ಶಾಸ್ತ್ರ ಶಾಲೆಗಳನ್ನೂ, ಛಾಪಖಾನೆಗಳನ್ನೂ ಸ್ಥಾಪಿಸಿ ನಿರ್ಗತಿಕರಾದ ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟದ್ದು ಹಾನಿಯೋ? ಕ್ರೈಸ್ತ ಪಾದ್ರಿಗಳ ಪ್ರಯತ್ನಗಳು ಇಲ್ಲದಿದ್ದರೆ ಜನಗಳ ಸ್ಥಿತಿ ಏನಾಗುತ್ತಿತ್ತೋ ವೃತ್ತಾಂತ ಚಿಂತಾಮಣಿಯೇ ಆಲೋಚಿಸಿ ನೋಡಬೇಕು. ಅದು ಹೋಗಲಿ! ವೃತ್ತಾಂತ ಚಿಂತಾಮಣಿಯು ಹೇಳುವಂತೆ 'ಎಲ್ಲಾ ಮತಧರ್ಮಗಳಲ್ಲಿಯೂ ಇರುವ ಸಂಪ್ರದಾಯಗಳಿಗೆ ಅನುಕೂಲವಾದವುಗಳು ಎಷ್ಟೋ ಇರುವವು. ಅವುಗಳನ್ನು ಅನುಷ್ಠಾನ ಮಾಡಿದವರೆಲ್ಲಾ ಇಹಪರಗಳನ್ನು ಪಡೆದುಕೊಳ್ಳುವದಕ್ಕೆ ಎಲ್ಲಾ ಮತಸ್ಥರಿಗೂ ಅನುಕೂಲವಿದ್ದಾಗ್ಯೂ, ಇದಕ್ಕೆ ಕೆಲವು ಜಾತಿಗಳ ಪ್ರವರ್ತನವೇ ಪ್ರತಿಬಂಧಕವಾಗಿ ಪರಿಣಮಿಸುವುದು.' ಯಾವ ಪ್ರತಿಬಂಧಕವೋ, ತಿಳಿಯ ಹೇಳಲಿಲ್ಲ. ಹಿಂದೂ ಸ್ಥಾನದಲ್ಲಿ ಬರ ಬಿದ್ದು ಜನಗಳು ಸಾಯುವ ಕಾಲದಲ್ಲಿ, ಕ್ರೈಸ್ತ ಪಾದ್ರಿಗಳು ಸುಸರರಾಗಿ ದುಃಖಿತರಿಗೆ ಅನ್ನ ಕೊಟ್ಟದ್ದು ಅನ್ಯ ಮತಕ್ಕೆ ಪ್ರತಿಬಂಧಕವೋ? ದೇವಸ್ಥಾನಗಳ ಒಳಗಡೆಯೂ ಸಹ [illegible] ನಡೆಯುತ್ತಿರುವಾಗ, ಹೊರಗೆ ಗೊತ್ತಿಗಿಲ್ಲದೆ ಅಂಗಟ್ಟ ಬಿದ್ದ ದರಿದ್ರನಿಗೆ ಅನಿತರ [illegible] ಕೊಟ್ಟದ್ದು ಅನ್ಯ ಮತಕ್ಕೆ ಪ್ರತಿಬಂಧಕವಾಯಿತೋ! ಮತವು ಸತ್ಯದ ಮೇಲೆ ಆಧಾರಸಿದ್ಧರೆ. ಎಷ್ಟೋ ಆಪತ್ತುಗಳು ಅದರ ಮೇಲೆ ಬಿದ್ದರೂ, ಆ ಮತವು ಬಗ್ಗಲಿಕ್ಕಿಲ್ಲ, ಬಾಗಲಿಕ್ಕಿಲ್ಲ. ಮತ್ತು ಸುಳ್ಳ ಮೂಲಮಂತ್ರವೇ ಸುಳ್ಳಾದರೆ, ಆ ಮತವು ಯಾವ ಪ್ರತಿಬಂಧಕವಿಲ್ಲದಿದ್ದರೂ, ಅಲ್ಲಿಯೇ ಅದಾಗಿ ನಿರ್ಮೂಲವಾಗುವದು.

"ಉತ್ತರ ಭಾಗದಲ್ಲಿ ಲೇಖಕರು ಮಕ್ಕಳ ದಾಯಭಾಗವನ್ನು ಕುರಿತು ಚರ್ಚಿಸಿ ಅದರಲ್ಲಿಯೂ ಕ್ರೈಸ್ತ ಪಾದ್ರಿಗಳನ್ನು ಅಲ್ಲಗಳೆದರು. ಇದರಲ್ಲಿ ವಿವಾದಕ್ಕೆ ಆಧಾರ ಉಂಟೋ? ಅಥವಾ ಇದು ಸಹಾ ಪೂರ್ವಭಾಗದಂತೆ ಮರುಳಿನ ಆವೇಶವೋ? ನೋಡುವ! ಕ್ರೈಸ್ತ ಮತಕ್ಕೆ ಸೇರಿದ ಪುತ್ರನಿಗೆ ಹಿಂದೂ ತಂದೆಯ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಸಿಕ್ಕಲಾರದೆಂದು ನೇಟಿವ್ ಸಂಸ್ಥಾನಗಳಲ್ಲಿ ಕಾನೂನು ಇದೆ. ಈ ಕಾನೂನು ಧರ್ಮಸಮ್ಮತವೋ? ಅಲ್ಲವೋ! ಎಂಬುದನ್ನು ಸರಿಯಾಗಿ ವಿಚಾರಿಸದೆ ಪತ್ರಿಕೆಯು ಚಾತ್ರಿದಾರರು—ಕ್ರೈಸ್ತ ಪಾದ್ರಿಗಳು ಈ ಕಾನೂನನ್ನು ಬದಲಿಸುವುದಕ್ಕೆ ನಾನಾ ಸಾಧನವನ್ನು ಸರ್ಕಾರೀ ಸಹಾಯದಿಂದ ಮಾಡುವರೆಂದು ಹೇಳುತ್ತಿದ್ದಾರೆ. ಒಬ್ಬ ತಂದೆಗೆ ಮೂವರು ಮಕ್ಕಳಿದ್ದರೆ, ದಾಯ ಭಾಗವು ಸಮವಾಗಿ ಸಿಕ್ಕಬೇಕೆಂಬುದು ನ್ಯಾಯಸಮ್ಮತವಲ್ಲವೇ? ಮಗನು ದುರ್ವ್ಯಸನಗಳಲ್ಲಿ ಮಗ್ನನಾಗಿದ್ದ ಹಿಂದೂವಾಗಿಯೇ ನಿಂತುಬಿಟ್ಟರೆ, ದಾಯ ಭಾಗವನ್ನು ಕಳೆದುಕೊಳ್ಳಲಾರನು. ಪರಂತು ಕ್ರೈಸ್ತ ದೇವಾಲಯದ ಬಳಿಯಲ್ಲಿ ಅತನ ನೆರಳು ಮಾತ್ರ ಕಂಡರೆ, ಅವನು ಜಾತಿಗೆಟ್ಟನು; ಅವನಿಗೆ ಪಾಲು ಸಿಕ್ಕಲಾರದು. ಇದು ಮನುಷ್ಯ ಸ್ವಭಾವಕ್ಕೆ ಸಹಜವೋ? ನ್ಯಾಯಕ್ಕೆ ಸಮ್ಮತವೋ? ವಾಚಕರೇ ತಿಳಿಯಲಿ. ನವನಾಗರಿಕತೆಯನ್ನು ಕಲಿತ ಹಿಂದುಗಳಲ್ಲಿ ಎಷ್ಟು ಜನರು ತಮ್ಮ ಮತಧರ್ಮವನ್ನು ಮನ್ನಿಸುತ್ತಾರೆ? ಸುಧಾರಿತರಾದ ಈಗಿನ ಜನರ ಆಚಾರ ಚಟಗಳಿಗೂ ಭಾವನೆಗಳಿಗೂ ಕ್ರೈಸ್ತ ಮತದ ಸೂತ್ರಗಳಿಗೂ ಏನು ಭೇದವಿದೆ? ಅಂಥವರು ಕ್ರೈಸ್ತ ಸ್ನಾನವನ್ನು ಹೊಂದದೆ ಇದ್ದದರಿಂದ ಮಾತ್ರವೇ ಅವರನ್ನು ಹಿಂದುಗಳೆಂದು ಕರೆಯುತ್ತೇವಲ್ಲದೆ, ಯಥಾರ್ಥ ಸ್ಥಿತಿಯಲ್ಲಿ ಅವರು ಹಿಂದುಗಳೆಂದು ಪತ್ರಿಕೆಯ ಚಾತ್ರಿದಾರರು ಮನಸ್ಸಾಕ್ಷಿ ಇದ್ದು ಹೇಳುವರೇ? ಮನುಷ್ಯನು ಸುಳ್ಳನ್ನು ಬಿಟ್ಟು ಮನಸ್ಸಾಕ್ಷಿಗೆ ಸರಿಯಾಗಿ ನಡೆಯಲು ಅಪೇಕ್ಷಿಸಿದರೆ, ಅವನು ಕಷ್ಟಕ್ಕೆ ಗುರಿಯಾಗಬೇಕು. ಹೃದಯದ ಸತ್ಯವನ್ನು ಹೇಳಿದ ಸತ್ಪುತ್ರನಿಗೆ ದಾಯಭಾಗವು ನಷ್ಟವಾಗಬೇಕು. ಈ ನ್ಯಾಯವನ್ನು ಚಾತ್ರಿದಾರರು ಮನ್ನಿಸುವರೆಂದು ತೋರುತ್ತದೆ. ಇದು ಸರಿಯೋ? ಅಲ್ಲವೆಂಬುವದನ್ನು ನಾವು ಹೇಳಬೇಕಾಗಿಲ್ಲ; ವಾಚಕರೇ ಆಲೋಚಿಸಲಿ!

"ಅದು ಹೋಗಲಿ! ತಂದೆಯು ದುರಾಚರಣೆಯಿಂದ ಅವನಿಗೆ ಮತ್ತೊಬ್ಬಳಲ್ಲಿ ಸಂತಾನವಾದದ್ದಕ್ಕೆ ಸಾಕಷ್ಟು ದುರುಪಾತು ಇದ್ದರೆ, ತಂದೆಯು ಅಂಥಾ ಮಗನಿಗೆ ದಾಯಭಾಗ ಕೊಡುವದಕ್ಕೆ ಬದ್ಧನಾಗುವನು; ಆ ಮಗನು ತಂದೆಯಿಂದ ಪಾಲು ಹೊಂದಲು ಹಕ್ಕುದಾರನಾಗುವನು. ಆದರೆ ತನ್ನ ಹೆಂಡತಿಯಲ್ಲೇ ಹುಟ್ಟಿದ ಮಗನು ತಂದೆಯ ಮತವು ಕುಧರ್ಮವೆಂದು ತಿಳಿದು ಅದನ್ನು ಬಿಟ್ಟು ಸತ್ಯ ಮತವನ್ನು ಅವಲಂಬಿಸಿದರೆ, ಅವನು ದಾಯಭಾಗಕ್ಕೆ ಅರ್ಹನಾಗಲಿಕ್ಕಿಲ್ಲ. ಓ ನ್ಯಾಯವೇ! ನಿನಗೆ ಎರಡು ಮುಖಗಳೇ? ಮತದಲ್ಲಿದ್ದ ಕುಸಂಸ್ಕಾರಗಳನ್ನು ಸಹಿಸದೆ ಬ್ರಹ್ಮ ಸಮಾಜಕ್ಕೆ ಸೇರಿದ ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲಿಲ್ಲವೇ? ದ್ವೈತವನ್ನು ಬಿಟ್ಟು ಅದ್ವೈತ ಮತಸ್ಥರಾದ ಹಿಂದುಗಳಿಗೆ ತಂದೆಯ ಮನೆಯಲ್ಲಿ ಆಶ್ರಯವಿಲ್ಲವೇ? ಕ್ರೈಸ್ತ ಮತಕ್ಕೆ ಸೇರುವದರಿಂದ ದಾಯಭಾಗ ಕಳೆದುಕೊಳ್ಳುವದಾದರೆ, ಸ್ವಭಾಷೆಯನ್ನು ಬಿಟ್ಟು ಮನೆಯಲ್ಲಿ ಅನ್ಯ ಭಾಷೆಯನ್ನು ಮಾತಾಡಿದ್ದಕ್ಕೋಸ್ಕರ ದಾಯಭಾಗವನ್ನು ಮಕ್ಕಳಿಗೆ ಲೋಪ ಮಾಡಬೇಕಾಗುವದು; ರುಮಾಲನ್ನು ಬಿಟ್ಟು ಟೊಪ್ಪಿಯನ್ನು ಮಕ್ಕಳು ಹೊಟ್ಟುಕೊಂಡದ್ದಕ್ಕೂ ಮಕ್ಕಳಿಗೆ ದಾಯಭಾಗವಿಲ್ಲ ಎಂದು ಹೇಳಬೇಕು."

## ವಿದೇಶ ವರ್ತಮಾನಗಳು.

ದಗಾಂಡಾ ಕ್ಷೇಮಗೆ ಸೇರಿದ ವಾಚ್ಕರ್ ಎಂಬ ಡಿಸ್ಟ್ರಿಕ್ಟಿನಲ್ಲಿ ನಿದ್ರಾರೋಗ ತಗಲಿ ಕಳೆದ ವರುಷ ನಾಲ್ಕು ಸಹಸ್ರ ಪ್ರಜೆಗಳು ಸತ್ತುಹೋಗಿರುವಂತೆ ರಿಪೋರ್ಟು ಬಂದಿದೆ.

✦✦✦✦

ಲಂಡನ್ ಪಟ್ಟಣದಲ್ಲಿ ದರ್ಜಿ ಕೆಲಸ ಮಾಡಿ ಜೀವಿಸುತ್ತಿದ್ದ ಆಲ್ಬರ್ಟ್ ವೆಬ್ ನ್ಯೂಟ್ಸ್ ಎಂಬವನು ಕಳೆದ ವಾರ ಸತ್ತುಹೋದನು. ಅವನು ಸ್ವಸಾಮರ್ಥ್ಯದಿಂದಲೇ ೩,೦೯,೦೦೦ ಪೌಂಡುಗಳನ್ನು ಆರ್ಜಿಸಿ ಕೂಡಿಟ್ಟಿರುತ್ತಾನೆ.

✦✦✦✦

ಪ್ರಷ್ಯಾ ರಾಜ್ಯದಲ್ಲಿ ಮರಿಯೆನ್‌ಫೆಲ್ಡ್ ಎಂಬ ಊರಿನಿಂದ ಜೋಸೆನ್ ಎಂಬ ಊರಿಗೆ ವಿದ್ಯುಚ್ಛಕ್ತಿಯ ರೈಲ್ ಗಾಡಿಗಳು ಹೋಗಿ ಬರುವಂತೆ ಏರ್ಪಾಡು ಮಾಡಿದ್ದಾರೆ. ಈ ರೈಲ್ ಗಾಡಿಯು ೧ ಗಂಟೆಗೆ ೧೩೯ ಮೈಲಿಯ ಪ್ರಕಾರ ಸಂಚಾರ ಮಾಡುವದು.

✦✦✦✦

ಲಾರ್ಡ್ ರಾಬರ್ಟ್ಸ್ ಅವರು ವಿಂಡ್ಸರಿನಲ್ಲಿ ಲೇಟ್ ರಾಜರು ಮಹಾ ಕ್ವೀನ್ ವಿಕ್ಟೋರಿಯಾ ಅವರ ಪ್ರತಿಮೆಯನ್ನು ಪ್ರತಿಷ್ಠೆ ಮಾಡುತ್ತಿದ್ದಕ್ಕೆ ಹೋಗಿದ್ದಾಗ್ಯೆ ಅವರಿಗೆ ಶೀತ ಜ್ವರ ಬಡಿದು ಜ್ವರ ಬಂದು ನರಳುತ್ತಿದ್ದಾರೆಂದು ತಂತೀವರ್ತಮಾನ ಬಂದಿದೆ.

✦✦✦✦

ಮ್ಯಾಸಿಡೋನಿಯಾ ಪ್ರಾಂತ್ಯದಲ್ಲಿ ದಂಗೇಕೋರರಿಂದ ನಾಶ ಮಾಡಲ್ಪಟ್ಟ ಗ್ರಾಮಗಳನ್ನು ಮತ್ತೆ ಕಟ್ಟಿಸಿ, ಪ್ರಜೆಗಳಿಗೆ ಸಹಾಯ ಸಂಕಷ್ಟಗಳನ್ನು ಒದಗಿಸಿಕೊಡುವುದಕ್ಕೆ ಟರ್ಕಿ ಮಂತ್ರಿಗಳ ಸಭೆಯು ೬೦ ಸಹಸ್ರ ದ್ರವ್ಯವನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

✦✦✦✦

ಅಂಟು ರೋಗಗಳ ಗುಣ ಲಕ್ಷಣ ಉತ್ಪತ್ತಿ ಪರಿಹಾರ ಇವೇ ಮೊದಲಾದ ಸಂಗತಿಗಳನ್ನು ಕುರಿತು ಚರ್ಚೆ ಮಾಡುವುದಕ್ಕಾಗಿ ಯೂರೋಪಿನ ರಾಜ್ಯಗಳಲ್ಲಿರತಕ್ಕ ಅನೇಕ ಮಂದಿ ಗಣ್ಯಗರಾದ ವೈದ್ಯರುಗಳೆಲ್ಲಾ ಕಳೆದ ವಾರ ಪ್ಯಾರಿಸ್ ನಗರದಲ್ಲಿ ಸಭೆ ಸೇರಿದ್ದರು.

✦✦✦✦

ಇಟಲಿ ರಾಜ್ಯದ ಖಜಾನಾ ಮಂತ್ರಿಯಾಗಿದ್ದ ಸೇನಾರ್ ರೋಜೆನೋ ಎಂಬುವನೂ, ಈತನ ಮಗನೂ ಒಳ್ಳೆ ನಡತೆಯುಳ್ಳವರಲ್ಲವೆಂತಲೂ, ಬದ್ಧಬಾಳಿನವರೆಂತಲೂ ಕೆಲವರು ದೂಷಿಸುವದಕ್ಕಾರಂಭಿಸಿದ್ದನ್ನು ಆ ಮಂತ್ರಿಯು ಕೇಳಿ, ಅವಮಾನವಾಯಿತಲ್ಲಾ ಎಂದು ಆತ್ಮಹತ್ಯ ಮಾಡಿಕೊಂಡುಬಿಟ್ಟನು.

✦✦✦✦

ಏಡ್ರಿಯಾನೋಪಲ್ ವಿಲಾಯತ್ತಿನಲ್ಲಿ ತುರ್ಕಿ ಸೈನಿಕರು ಪ್ರಜೆಗಳನ್ನು ಬಹಳವಾಗಿ ಹಿಂಸೆ ಕಷ್ಟ ನಷ್ಟಗಳಿಗೆ ಗುರಿ ಮಾಡಿದರು. ತುರ್ಕಿ ಸರ್ಕಾರದವರು ೭೫೦ ಮಂದಿ ಸೈನಿಕರನ್ನು ಹಿಡಿದು ತಯಾರ್ಕಿ ಮಾಡಿ, ೩೬ ಮಂದಿಯನ್ನು ಖುಲಾಸ್ ಮಾಡಿ, ಉಳಿದವರನ್ನೆಲ್ಲಾ ಯೇಮನ್ ಎಂಬಲ್ಲಿಗೆ ಗಡೀಪಾರು ಮಾಡಿರುತ್ತಾರೆ.

✦✦✦✦

ಮ್ಯಾಸಿಡೋನಿಯಾದಲ್ಲಿ ತುರ್ಕಿ ಸುಲ್ತಾನರಿಂದ ಕೆಲವು ಆಲೋಚನೆಯ ಬದಲಾವಣೆಗಳನ್ನು ಮಾಡಿಸಬೇಕೆಂದು ಆಸ್ಟ್ರಿಯಾ, ರಷ್ಯಾ ಮೊದಲಾದ ರಾಜ್ಯಗಳವರು ಸಾಹಸಪಟ್ಟು, ತುರ್ಕಿ ಸುಲ್ತಾನರಿಗೆ ಬರೆಯುತ್ತಲೂ, ಅವರಿಂದ ಜವಾಬು ತರಿಸಿಕೊಳ್ಳುತ್ತಲೂ ಇದ್ದರಷ್ಟೆ. ಈಚೆಗೆ ಈ ಪರರಾಜ್ಯಗಳವರು ಸೂಚಿಸಿದ ಪ್ರಕಾರವೇ ಬದಲಾವಣೆ ಮಾಡುತ್ತೇವೆಂದು ಸುಲ್ತಾನರ ಮಂತ್ರಿಯವರು ತಿಳಿಸಿರುತ್ತಾರೆ.

ಈಚೆಗೆ ಯುರೋಪ್ ಖಂಡದಲ್ಲಿ ವರ್ತಮಾನಗಳನ್ನು ಪೋಸ್ಟ್ ಕಾರ್ಡ್ ಆಕಾರದಲ್ಲಿ ಸಣ್ಣದಾಗಿ ಪ್ರಕಟಿಸುವುದಕ್ಕಾರಂಭಿಸಿದ್ದಾರೆ. ಪ್ಯಾರಿಸ್ ನಗರದಲ್ಲಿ ಕಾರ್ಡ್ ಜರ್ನಲ್ ಎಂಬ ಪತ್ರಿಕೆಯು ದಿನವೂ ಪ್ರಕಟವಾಗುತ್ತೆ. ಇದು ಪೋಸ್ಟ್ ಕಾರ್ಡಿನಷ್ಟೇ ಚಿಕ್ಕದಾಗಿದೆ. ಅತ್ಯಂತ ಮುಖ್ಯವಾಗಿರುವ ಕೆಲವು ಸಮಾಚಾರಗಳನ್ನೂ ೬-೭ ತಂತೀ ವರ್ತಮಾನಗಳನ್ನೂ ಮಾತ್ರ ಈ ಪತ್ರಿಕೆಯು ಪ್ರಕಟಗೊಳಿಸುವುದು.

****

ಆರೆಂಜ್ ನದೀ ಸ್ವಾಸ್ಥ್ಯದ ಮುಖ್ಯ ಪಟ್ಟಣವಾದ ಜೋಹಾನಸ್ ಬರ್ಗಿನಲ್ಲಿ ಕೂಲಿ ಇಲ್ಲದೆ ಕಾರ್ಖಾನೆಗಳಲ್ಲೂ ಗಣಿಗಳಲ್ಲೂ ಕೂಲಿ ಕೆಲಸಕ್ಕೆ ತುಂಬಾ ತೊಂದರೆಯಾಗಿರುವುದರಿಂದ ಮಿ॥ ಪರ್ಸಿ ಎಂಬೊಬ್ಬ ದೊಡ್ಡ ಮನುಷ್ಯನು ಚೀನೆಗೆ ಹೋಗಿ ಚೀನೆಯವರನ್ನು ಜನಾಯಿಸಿ ದಕ್ಷಿಣ ಆಫ್ರಿಕಕ್ಕೆ ಕರೆದು ತರಬೇಕೆಂದು ಅಲ್ಲಿಂದ ಪ್ರಯಾಣ ಮಾಡಿರುತ್ತಾರೆ.

****

ಜರ್ಮನಿ ಚಕ್ರವರ್ತಿಯವರಾದ ಕೈಸರ್ ವಿಲ್ಯಂ ಯವರಿಗೆ ಅವರ ಗಂಟಲೊಳಗೆ ಒಂದು ಹುಣ್ಣು ಹುಟ್ಟಿ ತುಂಬಾ ಬಾಧೆಯಾಗಿತ್ತು. ವೈದ್ಯರುಗಳು ಪರೀಕ್ಷೆ ಮಾಡಿ ಶಸ್ತ್ರ ಹಾಕಿ ಆ ಹುಣ್ಣನ್ನು ಸಂಪೂರ್ಣವಾಗಿ ತೆಗೆದುಬಿಟ್ಟರು. ಚಕ್ರವರ್ತಿಯವರು ೭ ದಿನಗಳ ತನಕ ಮಾತನಾಡದೆ ಇದ್ದರು. ಈಗ ಪಿಸುಮಾತಾಡುವಂತಾಗಿದೆ. ಇನ್ನು ಮುಂದೆ ದಿನೇ ದಿನೇ ವಾಸಿ ಆದಹಾಗೆಲ್ಲಾ ಧ್ವನಿಯು ಸರಿ ಹೋಗುತ್ತಾ ಬರುವದು.

****

ಆಫ್ರಿಕಕ್ಕೆ ಸೇರಿದ ಯುಗಾಂಡಾ ಸೀಮೆಯಲ್ಲಿ ಪ್ರಬಲವಾಗುತ್ತಿರುವ ನಿದ್ರಾ ರೋಗವನ್ನು ಪರೀಕ್ಷೆ ಮಾಡಿದ ಕರ್ನಲ್ ಬ್ರೂಸ್ ಎಂಬ ದೊಡ್ಡ ವೈದ್ಯನು—ಈ ರೋಗವು ಒಂದು ತರಹಾ ಸೊಳ್ಳೆಯು ಕಚ್ಚುವುದರಿಂದ ಉತ್ಪತ್ತಿಯಾಗುತ್ತದೆ; ಕೆಲವು ಗೊತ್ತಾದ ಸ್ಥಳಗಳಲ್ಲೇ ಈ ರೋಗವು ವ್ಯಾಪಿಸಿರುವುದರಿಂದ ಅದು ಇತರ ಭಾಗಗಳಿಗಾಗಲಿ, ಹಿಂದುಸ್ಥಾನವೇ ಮೊದಲಾದ ಪೂರ್ವ ದಿಗ್ದೇಶಗಳಿಗಾಗಲಿ ಕ್ರಮೇಣ ಹರಡಿಕೊಳ್ಳುವುದೆಂಬ ಭೀತಿ ಇರಲಾರದು ಎಂಬದಾಗಿ ರಿಪೋರ್ಟು ಬರೆದಿರುತ್ತಾರೆ.


ಜ್ವರಹರಿ. 4

ಇದು ಸಾಧಾರಣ ಜ್ವರ, ಹಳೇಜ್ವರ, ಮರೇಜ್ವರ, ಪಿತ್ತಜ್ವರ. ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಆ., ೧೧ ರೂ; ಡಜನ್ ಸೀಸೆ ತರಿಸಿಕೊಂಡವರಿಗೆ ಪೋಸ್ಟೇಜು ಮಾಫಿ ಬಿಡಲಾಗುವದು.

*********

ಓ ಮಂ ಕ ರ್ಪೂ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟಂಟ್ ಸರ್ಜನ್ ಗಣಪತಿಯವರು—ಕೆನ್ನಿಯವರ ಓಮಂ ಕರ್ಪೂರವನ್ನು ನಾನೂ ನನ್ನ ಡಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿಸಾರ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—
ಕೆನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕಂಡ್ ಬೀಚ್ ಲೈನ್, ಮದರಾಸ್.


ಜರ್ಮನಿ ಚಕ್ರವರ್ತಿಯವರ ಕುಮಾರರಾದ ಪ್ರಿನ್ಸ್ ಆಡಲ್ ಬರ್ಟ್ ಯವರು ದೇಶಾಟನೆ ಮಾಡಿಕೊಂಡು ಕಳೆದ ವಾರ ಚೀನೆಯನ್ನು ಬಂದು ಸೇರಿದರು. ಚೀನಾ ಚಕ್ರವರ್ತಿಯವರು ಅವರನ್ನು ಮರ್ಯಾದೆಯೊಡನೆ ಎದುರುಗೊಂಡು ಸತ್ಕರಿಸುತ್ತಿದ್ದಾರೆ.

****

ಚೀನಾ ಚಕ್ರಾಧಿಪತ್ಯದ ರಾಜ್ಯಭಾರವನ್ನು ನಡಿಸಿಕೊಂಡಿರುವ ಗ್ರ್ಯಾಂಡ್ ಕೌನ್ಸಿಲ್ ಎಂಬ ಮಂತ್ರಾಲೋಚನಾ ಸಭಿಕರು ಕಳೆದ ವಾರ ರಾಜಧಾನಿಯಾದ ಪೀಕಿಂಗ್ ನಗರದಲ್ಲಿ ಸಭೆ ಸೇರಿ, ಆಲೋಚನೆ ಮಾಡುವುದರಲ್ಲಿ ಚೀನೆಗೂ ರಷ್ಯದವರಿಗೂ ಬೇಗನೆ ಯುದ್ಧ ಪ್ರಮೇಯ ಪ್ರಾಪ್ತವಾಗುವ ಹಾಗಿದೆ ಎಂದು ಕೇಳಬಂದ ಕಾರಣ ಆ ಚಕ್ರಾಧಿಪತ್ಯಕ್ಕೆ ಸೇರಿದ ಸಕಲ ವೈಸರಾಯಿಗಳೂ ಹಣವನ್ನೂ ಸೈನ್ಯವನ್ನೂ ಆಯಾ ಸ್ಥಳಗಳಲ್ಲಿ ಕೂಡಿಸಿಟ್ಟುಕೊಳ್ಳಬೇಕೆಂದು ಹುಕುಂ ಕಳುಹಿಸಿರುತ್ತಾರೆಂಬದಾಗಿ ತಂತೀ ವರ್ತಮಾನ ಬಂದಿದೆ.

****

ಇಟಲಿ ರಾಜ್ಯಕ್ಕೆ ಸೇರಿದ ನೇಪಲ್ಸ್ ಪಟ್ಟಣದ ಬಳಿ ವಿಸ್ಯೂವಿಯಸ್ ಎಂಬ ಭಯಂಕರವಾದ ಅಗ್ನಿಪರ್ವತವಿರುವುದಷ್ಟೆ. ಈ ಪರ್ವತದ ದೊಡ್ಡ ಮುಖದಿಂದ ಅಪರಿಮಿತವಾದಷ್ಟು ಹೊಗೆಯು ಹೊರಡುತ್ತಿರುವುದು ಪ್ರದರ್ಶ್ಯಾರಂಭವಾಗಿದೆ. ಸರ್ವದಾ ಭೂಮಿಯು ಗುಮುಗುಟ್ಟುತ್ತಿರುವುದು. ಮತ್ತು ಆಗಾಗ್ಯ ಭಯಂಕರವಾದ ಶಬ್ದಗಳುಂಟಾಗುತ್ತಿವೆ. ಇದಲ್ಲದೆ ಆ ಪರ್ವತದ ಮುಖದ ಒಂದು ಕಡೆಯಿಂದ ಕಾದ ಕಲ್ಲು ಲೋಹ ಮುಂತಾದವು ದ್ರವರೂಪವಾಗಿ ಹರಿದುಬರುತ್ತಿವೆ ಇದನ್ನೆಲ್ಲಾ ನೋಡಿ ಆ ಪರ್ವತದ ಸಮೀಪದಲ್ಲಿ ವಾಸಮಾಡುತ್ತಿರುವ ಪ್ರಜೆಗಳೆಲ್ಲಾ ಗಾಬರಿ ಬಿದ್ದು ತಲ್ಲಣಿಸುತ್ತಿದ್ದಾರೆ.


ಮಹಾರಾಜರವರ ಫೋಟೋಗಳು.

ಇವು ವಿಲಾಯತಿಯಿಂದ ಬಂದಿವೆ. ಮುಗಿದುಹೋದಾವು! ಜಾಗ್ರತೆ ನೋಡಿ! ಬಹಳ ಸೊಗಸಾಗಿವೆ, ದೊಡ್ಡ ಸೈಜಿನವು, ಕಾಡಕಲ್ಲುಗಳಲ್ಲ. ಕ್ರಯ ಎರಡೇ ಆಣೆ. ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ಛಾಯೆಗಳು; ಸುಂದರವಾದ ಬಣ್ಣಗಳುಳ್ಳದ್ದು. ಕ್ರಯ ದೊಡ್ಡ ಸೈಜಿನವು ೮ ಆಣೆ; ಸಣ್ಣ ಸೈಜಿನವು ೨ ಆಣೆ.
ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೊ, ಮೈಸೂರು.

ಹೋ ಮೋ ಸಿ ಯಾ.

ತಕ್ಷಣ ಪರಿಹಾರ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿದ್ಧವಾದ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಬಂದಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಶಾಖರೋಗವು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಪಟ್ಟಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ ೨—೮ ಆ; ಒಂದೇ ಸಲ ೧೨ ಪಟ್ಟಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಟ್ಲು ಪಟ್ಟಿಯಲ್ಲಿ ೧ ರೂ. ಪಟ್ಟಿಯಲ್ಲಿರುವದಕ್ಕಿಂತ ೩ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ಆ. ಪಟ್ಟಿಯನ್ನು ತರಿಸಿಕೊಳ್ಳುವವರಿಗೆ ಟಪಾಲ್ ಖರ್ಚು ಮಾಫಿ ಬಿಡುತ್ತೆ.

*********

ಹೋಮೋಸಿಯಾ ಎಂಬ್ರೊಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಪಟ್ಟಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಪಟ್ಟಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯುಳ್ಳ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ.—ಹೋಮೋಸಿಯಾ ಕಂಪೆನಿ, ೨೩ ಸೆಕಂಡು ಬೀಚ್ ಲೈನ್, ಮದರಾಸ್.


## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

6—11—1903 ರಿಂದ 13—11—1903 ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | 97 | 51 | 5? | 48 |
| ಮೈಸೂರು ,, | 191 | 188 | 220 | 58 |
| ಬೆಂಗಳೂರು ಡಿಸ್ಟ್ರಿಕ್ಟ್ | 119 | 0 | 105 | 64 |
| ಮೈಸೂರು ,, | 77 | 58 | 12 | 46 |
| ಕೋಲಾರ್ ,, | 18 | 21 | 19 | 27 |
| ಕೋಲಾರ್ ಚಿನ್ನದ ಗಣಿಗಳು | 28 | 17 | 29 | 17 |
| ತುಮಕೂರು ಡಿಸ್ಟ್ರಿಕ್ಟ್ | 55 | 58 | 48 | 29 |
| ಹಾಸನ ,, | 19 | 16 | 10 | 10 |
| ಚಿತ್ರದುರ್ಗ ,, | 98 | 17 | 79 | 29 |
| ಕಡೂರ್ ,, | 31 | 19 | 21 | 9 |
| ಶಿವಮೊಗ್ಗ ,, | 45 | 32 | 61 | 37 |
| ಮೊತ್ತ | 640 | 552 | 788 | 583 |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಮಾರ್ಗಶಿರ ಶುದ್ಧ ಸಪ್ತಮಿ ಗುರುವಾರದಿಂದ ಮಾರ್ಗಶಿರ ಶುದ್ಧ ತ್ರಯೋದಶಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ನೊವೆಂಬರ್ ಮತ್ತು ಡಿಸೆಂಬರ್.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ವೃಶ್ಚಿಕ ಮಾಸ ತೇದಿ. |
|---|---|---|---|---|---|---|
| 26 | ಗುರು | ಸಪ್ತಮಿ | 33 40 | ಧ | 11--44 | 11 |
| 27 | ಶುಕ್ರ | ಅಷ್ಟಮಿ | 35 16 | ಶ | 17--18 | 12 |
| 28 | ಶನಿವಾರ | ನವಮಿ | 40 3 | ಪೂಭಾ | 53 12 | 13 |
| 29 | ರವಿವಾ | ದಶಮಿ | 43 22 | ಉಭಾ | 57 47 | 14 |
| 30 | ಸೋಮ * | ಏಕಾದಶಿ | 45 50 | ರೇ | 60 0 | 15 |
| 1 | ಕುಜ † | ದ್ವಾದಶಿ | 46 32 | ರೇ | 1 25 | 16 |
| 2 | ಬುಧ ‡ | ತ್ರಯೋ | 46 30 | ಅ | 3 28 | 17 |

* ಸರ್ವತ್ರ ಏಕಾದಶಿ. † ಚಾಮರಾಜನಗರದಲ್ಲಿ ಚತ್ರವಾಂಟಿಪ ರಥ.
‡ ಪ್ರದೋಷ, ನಾಗ ಚಲುವನಾರಾಯಣಸ್ವಾಮಿಯವರ ವರ್ಧಂತಿ.

## ಪೇಟೆ ಧಾರಣೆ.

| ದಿನಸಿ. | ಮೈಸೂರು. | ಬೆಂಗಳೂರು. |
|---|---|---|
| ಸಣ್ಣ ಅಕ್ಕಿ ಪಲ್ಲ ೧ಕ್ಕೆ | ರೂ. ೧೦-೮-೦ | ೧೦-೪-೦ |
| ಕೆಂಬೂತಿ ಅಕ್ಕಿ ಅವಲ್ | ೧೪-೧೨-೦ | ೧೦-೮-೦ |
| ,, ಮೂಯಂ | ೧೯-೪-೦ | ೧೦-೪-೦ |
| ಬಾಸ್ರಾಣಿ ಅಕ್ಕಿ | ೯-೧೦-೦ | ೧೧-೮-೦ |
| ಸಣ್ಣಕ್ಕಿ ಅವಲ್ | ೧೩-೦-೦ | ೧೨-೦-೦ |
| ,, ಮೂಯಂ | ೧೨-೦-೦ | ೧೧-೦-೦ |
| ತೊಗರೀ ಬೇಳೆ ಪಲ್ಲ ೧ಕ್ಕೆ | ೧೩ ೧೨-೦ | ೧೪-೮-೦ |
| ,, ಮೂಯಂ | ೧೩-೮-೦ | ೧೩-೦-೦ |
| ಸ್ಯರ್ ರಾಗಿ ಪಲ್ಲ ೧ಕ್ಕೆ | ೩ ೧೨-೦ | ೩-೪-೦ |
| ಕಾರಾಗಿ | ೩-೮-೦ | ೨-೮-೦ |
| ಜೋಳ | ೨-೪-೦ | ೪-೪-೦ |
| ಹಲಸಂದೆ ಪಲ್ಲ ೧ಕ್ಕೆ | ೩-೧೨-೦ | ೮-೦-೦ |
| ಬಿಳೀ ಅವರೆ | ೮ ೧೨ ೦ | ೩-೮-೦ |
| ಹೆಸರು | ೯-೦-೦ | ೮-೪-೦ |
| ಉದ್ದು | ೮ ೧೨ ೦ | ೮-೪-೦ |
| ಕಡಲೆ | ೧೦-೦-೦ | ೮-೮-೦ |
| ಎಳ್ಳು | ೧೨ ೦ ೦ | ೩-೦-೦ |
| ಹುರುಳಿ | ೩-೮ ೦ | ೫-೦-೦ |
| ಹರಳು ೧೨೩ ಸೇರಿಗೆ | ೯-೮-೦ | ೩-೦-೦ |
| ಸೀಗೇಕಾಯಿ ಮಣ ೧ಕ್ಕೆ | ೧-೮-೦ | ೨-೦-೦ |
| ಹುಣಿಸೆಕಾಯಿ | ೩-೦-೦ | ೨-೮-೦ |
| ,, ಮೂಯಂ | ೩-೦ ೦ | ೨-೦-೦ |
| ಬೆಲ್ಲ ದೊಡ್ಡ ಅಚ್ಚು | ೪-೮-೦ | ಮು ೨-೪-೦ |
| ಬೆಳ್ಳುಳ್ಳಿ ಮಣ ೧ಕ್ಕೆ | ೩-೧೪ ೦ | ೩-೧೨-೦ |
| ಹರಳೆಣ್ಣೆ ,, | ೩-೧೨-೦ | ೨-೧೨-೦ |
| ಕೊತ್ತುಂಬರಿ ಪಲ್ಲ ೧ಕ್ಕೆ | ೬-೦-೦ | ೬-೪-೦ |
| ಉಪ್ಪು ,, | ೧೦-೦-೦ | ೮-೧೪-೦ |
| ಹುಣಿಸೇ ಹಣ್ಣು | ೦-೧೪-೦ | ೧-೨-೦ |
| ,, ಹಳೇದು | ೦-೧೦-೦ | ೧-೦-೦ |
| ತುಪ್ಪ | ೧೦ ೮-೦ | ೧೦-೦-೦ |
| ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ | ೪ ೯-೦ | ೩-೮-೦ |
| ತೆಂಗಿನಕಾಯಿ ೧೦೦ಕ್ಕೆ | ೪-೪-೦ | ೩-೧೨-೦ |
| ಅಳಲೇಕಾಯಿ ಮಣ ೧ಕ್ಕೆ | ೦-೧೪ ೦ | ೦-೧೨-೦ |
| ಒಣಮೆಣಸಿನಕಾಯಿ ಮಣ ೧ಕ್ಕೆ | ೦-೧೪-೦ | ೭-೯-೦ |
| ಚಿನ್ನ (ಪೌನ್) ಒಂದು | ೧೫-೪-೦ | ೧೫-೪-೦ |
| ,, ,, ಪವನು | ೧೫-೮-೦ | ೧೫-೩-೦ |
| ,, ,, ಗಟ್ಟಿ ತೊಲ ೧ಕ್ಕೆ | ೨೩-೦-೦ | ೨೪-೫-೦ |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ | ೭೨-೦-೦ | ೩೩-೦-೦ |

Printed and Published by the Rev. B. W. Thompson, M.A., the Proprietor and Manager, Wesleyan Mission Press, Mysore, 26/11/1903.

# ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ರು ೫ ——:o:—— ಕ್ರಯ ೧ ರು ೫

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩ ಮೈಸೂರು—ಸನ್ ೧೯೦೩ ನೇ ಇಸವಿ ಡಿಸೆಂಬರ್ ತಾರೀಖು ೩ ನೇ ಗುರುವಾರ. ಸಂಚಿಕೆ ೨೩

ನಿಮ್ಮ ತಲೆಯಮೇಲಿರುವದೇನು?
ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ
ಬರೆದು ತರಿಸಿಕೊಳ್ಳಿ.

13

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?
ಹಾಸನದ ಟೋಪಿಗಳೇ.

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲೇ ದೇಶದ ಕಡೆಗಳಲ್ಲೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿ ಆಗುತ್ತಿರುವ ಟೋಪಿಗಳು ಹಾಸನದಲ್ಲಿ ಮಾಡಿದ್ದು. ಅವೇ ಹಾಸನದ ಟೋಪಿಗಳೆಂದು ಹೆಸರು ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳು ಹಾಸನದಲ್ಲಿ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಸುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಕೆಡದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನಾಗಿಲ್ಲದ್ದು ಬೇಕಾದವರ ನಮ್ಮಲ್ಲಿ ದೊರೆಯುವದಿಲ್ಲ.
ಮ್ಯಾನೇಜರ್, ಹಾಸನದ ಟೋಪಿ ಫ್ಯಾಕ್ಟರಿ, ಹಾಸನ.

ಪ್ರಾವಿಡೆಂಟ್
ಟ್ರಸ್ಟ್ ಫಂಡ್ ಕಂಪನಿ.

20

ಸನ್ ೧೮೯೩ ರಲ್ಲಿ ಸ್ಥಾಪಿಸಲ್ಪಟ್ಟಿದ್ದು.

ಇಂಡಿಯಾ ದೇಶದಲ್ಲಿ ಲೈಫ್ ಇನ್ಷ್ಯೂರನ್ಸ್ ಮಾಡುವ ಬೇರೆ ಕಂಪನಿಗಳಲ್ಲಿ ಇದು ಬಹು ಜನರಿಂದ ಮೆಚ್ಚಲ್ಪಟ್ಟದ್ದಾಗಿಯೂ ಇದೆ.

ಜೀವವಿಮೆಯ (ಲೈಫ್ ಇನ್ಷ್ಯೂರನ್ಸ್ ಮಾಡತಕ್ಕ) ಈ ಕಂಪನಿಯು ಬಹು ಜನರಿಗೆ ಸಹಾಯವಾಗಿದೆ. ಇಲ್ಲಿ ಇನ್ಷ್ಯೂರನ್ಸ್ ಮಾಡುವವರಿಗೆ ಎಷ್ಟು ಸೌಕರ್ಯಗಳು ದೊರೆಯುವವು.

ಈ ಕಂಪನಿಯ ನಿಬಂಧನೆಗಳು ಬಹು ಅನುಕೂಲವಾದವು. ಇನ್ಷ್ಯೂರನ್ಸ್ ಮಾಡುವವರಿಗೆ ಯಾವ ವಿಧವಾದ ತೊಂದರೆಯೂ ಇಲ್ಲ.

ನಿಷ್ಕರ್ಷವಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲೇ ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂ. ಗಳನ್ನು ಕಂಪನಿಯವರು ಕೊಡುವ ಬಾಬತ್ತಾಗಿ ಪಡೆಯಬೇಕಾದರೆ ಮೆಂಬರರು ಕಂಪನಿಗೆ ಕೊಡಬೇಕಾದ ಚಂದಾ ದರಗಳ ಪಟ್ಟಿಯನ್ನು ಇಲ್ಲಿ ನೋಡಿ.

| ಇನ್ಷೂರ್ ಮಾಡುವಾಗ ವಯಸ್ಸು. | ೫೦ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಪಡೆಯಬೇಕಾದರೆ ಮಾಸಿಕವಾಗಿ ಕಂಪನಿಗೆ ಕೊಡುವದು | ೫೫ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಯನ್ನು ಪಡೆಯಬೇಕಾದರೆ ಮಾಸಿಕವಾಗಿ ಕಂಪನಿಗೆ ಕೊಡುವದು. |
|---|---|---|
| ೨೦ | ರೂ. ೬—೧೨—೮ | ರೂ. ೬—೦—೦ |
| ೨೫ | „ ೭—೧೫—೪ | „ ೬—೧೪—೦ |
| ೩೦ | „ ೯—೧೨—೮ | „ ೮—೨—೦ |
| ೩೫ | „ ೧೨—೧೪—೮ | „ ೧೦—೧—೪ |
| ೪೦ | | „ ೧೩—೪—೮ |

೨,೦೦೦ ರೂ. ಗಿಂತಲೂ ಹೆಚ್ಚಿನದ್ದಕ್ಕಾಗಲಿ ಕಡಮೆಯಾದ್ದಕ್ಕಾಗಲಿ ವಯಸ್ಸಿನಲ್ಲಿ ಹೆಚ್ಚು ಕಡಮೆ ಇದ್ದರಾಗಲಿ ಚಂದಾ ದರವೇನೆಂಬುದನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಇದುವರೆಗೆ ಜಾರಿಯಲ್ಲಿದ್ದ ಚಂದಾ ದರಗಳನ್ನು ಕಡಮೆ ಮಾಡಿದ್ದೇವೆ. ಬಂದ್ದಿ ವರ್ಷಕ್ಕೆ ಜಯಮಾರ್ಗದಿರುವ ಹೊಸ ಚಂದಾ ದರಗಳನ್ನೂ ಭೀಮಾ ದರಖಾಸ್ತು ಫಾರಂಗಳನ್ನೂ ಇದೇ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ. ಎಂ. ಸೂರ್ಯನಾರಾಯಣಪ್ಪ,
ಕಮಿಷನ್ ಮತ್ತು ಜನರಲ್ ಏಜಂಟ್, ಶಿವಮೊಗ್ಗ.

ಗಾತ್ರಸಂಜೀವಿನಿ.

14

೧ ರೂ. ೮ ಆ.; ವಿ. ಪಿ. ಚಾರ್ಜ್ ೩ ಆ.
ಕೆ. ನರಸುಂಬ್ಯ್ರಯ್ಯ ಮತ್ತು ಕಂಪನಿ, ಮೈಸೂರು.

WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಪುಸ್ತಕ, ಚಿತ್ರ, ಬೈಂಡಿಂಗ್ ಮುಂತಾದ ಸಮಸ್ತ ಪ್ರಿಂಟಿಂಗ್ ಕೆಲಸಗಳನ್ನು ಬಹಳ ಸುಲಭ ಧಾರಣೆಗೂ, ಜಾಗ್ರತೆಯಿಂದಲೂ, ನೇತ್ರಾನಂದಕರವಾಗಿಯೂ ಮಾಡಿಕೊಡುತ್ತಾರೆ. ಅಪೇಕ್ಷೆಯುಳ್ಳವರು ಕೆಲಸವನ್ನು ಕಳುಹಿಸಿಕೊಟ್ಟು ಪರೀಕ್ಷೆ ಮಾಡಬೇಕು. ಆ ಪುಸ್ತಕಗಳು ಬಹಳ ಗಟ್ಟಿಯಾಗಿಯೂ ಅಂದವಾಗಿಯೂ ಬೈಂಡಾಗುತ್ತವೆ. ಎಲ್ಲಾ ವಿಷಯಗಳನ್ನು ಪ್ರೆಸ್ ಮ್ಯಾನೇಜರಿಗೆ ಬರೆದು ಅಥವಾ ಅವರನ್ನು ಖುದ್ದಾಗಿ ಕಂಡು ತಿಳಿದುಕೊಳ್ಳಬಹುದು.

ವಿಳಾಸ:—ಮಿ. ಎಂ. ಫಾರ್ಲ್ಸ್, ಮ್ಯಾನೇಜರ್,
ಮೈಸೂರು.

ROBINSON'S
PATENT BARLEY.

ರಾಬಿನ್‌ಸನ್‌ಯವರ
ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಪವಿಗೋಧಿಯಿಂದ ಮಾಡಿದೆ. ಸ್ವಚ್ಛವಾಗಿ ಅದನ್ನ ಬಳಸಿರಿ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮುಂದ ಮಾದ ಸರ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾಡುತ್ತಾರಾದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

ಇಗೋ! ಇನ್ನೊಂದು ಹೊಸ ಪುಸ್ತಕ! ಬೇಗ ನೋಡಿರಿ!!
ಸ್ವಪ್ರಯತ್ನ ಫಲದೀಪಿಕೆ.

ಈ ಪುಸ್ತಕವು ಸ್ಮೈಲ್ಸ್ ಸೆಲ್ಫ್ ಹೆಲ್ಪ್ ಎಂಬ ಲೋಕಪ್ರಸಿದ್ಧವಾದ ಪುಸ್ತಕದ ಆಧಾರದ ಮೇಲೆ, ಕನ್ನಡಿಗರಿಗೆ ಅನುಕೂಲವಾಗಿ ಬರೆಯಲ್ಪಟ್ಟಿದೆ. ಈ ಪುಸ್ತಕವು ವಿಶೇಷವಾದ ಹೆಸರನ್ನೂ ಕೀರ್ತಿಯನ್ನೂ ಪಡೆದಿರುವದರಿಂದ ಲೋಕದ ಅನೇಕ ಭಾಷೆಗಳಲ್ಲಿ ತರ್ಜುಮೆ ಮಾಡಲ್ಪಟ್ಟಿದೆ. ಅನೇಕ ಜನಾಂಗದವರು ಈ ಪುಸ್ತಕವನ್ನೇ ಓದಿದ್ದರಿಂದಲೇ ನಾಗರೀಕರಾದರು. ಈ ಪುಸ್ತಕವು ಧೈರ್ಯಗುಂದಿದವರಿಗೆ ಧೈರ್ಯವನ್ನೂ ಸಮರ್ಥರಿಗೆ ಮತ್ತಷ್ಟು ಸಾಮರ್ಥ್ಯವನ್ನೂ ಬದ್ಧರಿಗೆ ವಿವೇಕವನ್ನೂ ಕೊಡುವದಾಗಿಯೂ ಪ್ರಸಿದ್ಧವಾಗಿದೆ. ಪುಸ್ತಕದ ಕ್ರಯ ನಾಲ್ಕಾಣೆ ಮಾತ್ರ. ವಿ. ಪಿ. ಪಿ. ಯಲ್ಲಿ ತರಿಸಿಕೊಂಡರೆ ಆರು ಆಣೆಗಳಾಗುವವು. ಬೇಗ ತರಿಸಿಕೊಳ್ಳಿ! ವಿಳಾಸ.— ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಜನರಂಜನವಾದ ಪುಸ್ತಕಗಳು! ಬೇಗನೋಡಬಾರದೇ

ಮೈಸೂರು ಸಂಸ್ಥಾನದ ವಿದ್ಯಾ ಇಲಾಖೆಯವರು ಈ ಪುಸ್ತಕಗಳ ಉಪಯುಕ್ತತ್ವವನ್ನು ತಿಳಿದು ಸ್ಕೂಲುಗಳ ಲೈಬ್ರರಿಗಳಿಗೆ ತರಿಸಿ ಇಟ್ಟಿದ್ದಾರೆ.

ಪುರಾತನ ಗ್ರೀಕರ ಚರಿತ್ರೆ. ಬಹು ರಸಿಕವಾಗಿದೆ ಚಿತ್ರಗಳಿಂದ ಕೂಡಿದ್ದು ಕ್ರಯ ೦—೨—೦

ಪ್ರಾಚೀನ ನಗರಗಳ ವರ್ಣನೆ. ಚಿತ್ರಗಳಿಂದ ತುಂಬಿದೆ. ೦—೧—೦

ಖಗೋಳ ಶಾಸ್ತ್ರ ಸಿದ್ಧಾಂತ. ಎಲ್ಲರೂ ಓದತಕ್ಕದ್ದು. ಅನೇಕ ಪಟಗಳಿವೆ ೦—೧—೦

ಪಕ್ಷಿಗಳ ವರ್ಣನೆ. ಸ್ಕೂಲಿನ ಹುಡುಗರಿಗೆ ಬಹುಮಾನ ಕೊಡುವದಕ್ಕೆ ಯೋಗ್ಯವಾಗಿದೆ. ಅನೇಕ ಪಕ್ಷಿಗಳ ಪಟಗಳೂ, ಅವುಗಳ ಚರಿತ್ರೆಗಳೂ ಇದರಲ್ಲಿ ಅಡಕವಾಗಿವೆ ೦—೦—೯

ಇಂಗ್ಲಾಂಡ್ ಚಕ್ರವರ್ತಿಯವರಾದ ಎಡ್ವರ್ಡ್ ಸಾರ್ವಭೌಮರ ಮತ್ತು ಚಕ್ರವರ್ತಿನಿಯವರಾದ ಅಲೆಕ್ಸಾಂಡ್ರಾ ಅಮ್ಮನವರ ಜೀವಮಾನಗಳ ಚರಿತ್ರೆ. ಇದರಲ್ಲಿ ಗ್ಲೇಜ್ ಕಾಗದದಮೇಲೆ ಹಾಕಿರುವ ಪಟಗಳು ಅನೇಕವಾಗಿವೆ. ಪ್ರತಿಯೊಬ್ಬರ ಮನೆಯಲ್ಲೂ ಇರತಕ್ಕ ಪುಸ್ತಕ. ಇಂಥಾ ಉತ್ಕೃಷ್ಟವಾದ ಪುಸ್ತಕಕ್ಕೆ ಬೆಲೆಯು ಬಹು ಕಡಿಮೆಯಾಗಿದೆ. ಕ್ರಯ ೦—೪—೦

ಚಕ್ರವರ್ತಿಗಳ ಕಿರೀಟಧಾರಣೆಯ ಪುಸ್ತಕ ಕ್ರಯ ೦—೨—೬

ಕ್ರಿಮಿಗಳ ವರ್ಣನೆ (ಸಚಿತ್ರ) ೦—೧—೦

ದೇಹವೆಂಬ ಸನ್ನಮನೆ (ಸಚಿತ್ರ) ೦—೧—೦

ಪ್ರಬೋಧಚಂದ್ರ ೦—೨—೦

ಚಿಕ್ಕವರಿಗೆ ಹೇಳುವ ಕಥೆಗಳು ೦—೧—೦

ಕೊಲಂಬಸನ ಪಾಲಿಸಿಯ ಚರಿತ್ರೆ ೦—೧—೦

ಗ್ರೀನ್‌ಲಾಂಡಿನ ಚರಿತ್ರೆ ೦—೯—೬

ಮಾರ್ಟಿನ್ ಲೂಥರನ ಚರಿತ್ರೆ ೦—೧—೬

ಆರ್ಯರ ಪೂರ್ವೋತ್ತರ ಚರಿತ್ರೆ ೦—೧—೬

ಘನತೆಯುಳ್ಳ ಸ್ತ್ರೀಯರ ಚರಿತ್ರೆ ೦—೨—೬

(೧) ವೇದಗಳನ್ನು ಬರೆದವರು ಯಾರು? (೨) ಶುದ್ಧವಾದ ನೀರಿನಬೆಲೆ, (೩) ಸಾಲ ಮತ್ತು ಸಾಲತೀರಿಸುವ ಮಾರ್ಗ, (೪) ಇಂಡಿಯಾದೇಶದ ಬಡತನದ ಕಾರಣಗಳು, (೫) ಬಾಲ್ಯವಿವಾಹ, (೬) ಪ್ರಾಯಶ್ಚಿತ್ತವು, (೭) ಬಯ್ಯುವದು, (೮) ಮಾನವಧರ್ಮಶಾಸ್ತ್ರ, (೯) ಗ್ರಹಣಗಳು, (೧೦) ಮಕ್ಕಳನ್ನು ಬೆಳಸತಕ್ಕವಿಧ. (೧೧) ಶ್ರಾದ್ಧಗಳು, (೧೨) ಎಲ್ಲರೂ ಸಹೋದರರು, (೧೩) ಮಂತ್ರ, ತಂತ್ರ, ಯಂತ್ರಗಳು, (೧೪) ಜ್ಯೋತಿಷಶಾಸ್ತ್ರ (೧೫) ಆರೋಗ್ಯಪ್ರಕಾಶಿಕೆ. ಈ ಪುಸ್ತಕಗಳ ಪ್ರತಿಯೊಂದಕ್ಕೆ ಮೂರು ಕಾಸು ಕ್ರಯವಿದೆ. ಮೇಲ್ಕಂಡ ಹದಿನೈದು ಪುಸ್ತಕಗಳನ್ನು ಒಟ್ಟಾಗಿ ತರಿಸತಕ್ಕದ್ದು. ಬಿಡಿಯಾಗಿ ಮಾರಲಾರೆವು. ಈ ಪುಸ್ತಕಗಳನ್ನು ಓದಿದಮೇಲೆ ಬರುವ ಸಂತೋಷವನ್ನು ವಿವರಿಸಲಾಗದು. ಜಾಗ್ರತೆ ನೋಡಿ. ವಿ. ಪಿ. ಪಿ. ಮೂಲಕವಾಗಿಯಾಗಲಿ ಅಥವಾ ಹಣವನ್ನು ಮುಂಗಡವಾಗಿ ಕಳುಹಿಸೋಣದ್ದರಿಂದಲಾಗಲಿ ಪುಸ್ತಕಗಳನ್ನು ಪಡೆಯಬಹುದು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

## ಬೇಕಾಗಿದೆ!

ಒಳ್ಳೇ ಸಮಯ!

ಮೈಸೂರಿನಲ್ಲಿರುವ ಉತ್ತಮ ಕಾರ್ಖಾನೆಯ ವಿಚಾರವನ್ನು ನೋಡಿಕೊಳ್ಳುವುದಕ್ಕೆ "ಓವರ್ಸಿಯರ್" ಬೇಕಾಗಿದೆ. ೫೦೦ ರೂ. ಕಡಿಮೆ ಇಲ್ಲದೆ ಸರಿಯಾದ ಚರಸ್ವತ್ತನ್ನು ಆಧಾರ ಮಾಡಿದವರ ಲಾಭದಲ್ಲಿ ಪಾಲು ಸಿಕ್ಕುವುದು. ಇಷ್ಟವಿದ್ದವರು

Miss Parsons, Mysore City

ಎಂಬ ವಿಳಾಸಕ್ಕೆ ಬರೆಯಬಹುದು.


## NOTICE.

**THE SOUTHERN MAHRATTA RAILWAY COMPANY LTD.**

It is hereby notified that 9 sugar-cane mill articles booked from Madras to Shimoga under Invoice No. 80 of 11—3—03 will be sold by auction under Section 55 of the Indian Railways Act at 9 A.M., on Wednesday, 9th December, 1903, at the Shimoga Railway Station.

*Bangalore,* S. J. MERCER,
*23-11-03* *District Traffic Superintendent.*

### ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್.

12

೧೮೯೫ ನೆ ಇಸವಿ ಮೈಸೂರು ಕಂಪನಿ ಆಕ್ಟಿಗೆ ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟದೆ.

ಶ್ರೀಮನ್ ಮೈಸೂರು ಮಹಾರಾಜರವರ ಗೌರ್ನಮೆಂಟಿನವರಿಂದ ಗ್ಯಾರಂಟಿ ಮಾಡಲ್ಪಟ್ಟ ಸದರಿ ಕಂಪನಿಯ ಷೇರು ಒಂದಕ್ಕೆ ೨೫ ರೂಪಾಯಿ ಪ್ರಕಾರ ೨೦,೦೦೦ ಷೇರುಗಳಿಂದ ಆಗುವ ೫,೦೦,೦೦೦ ರೂಪಾಯಿ ಬಂಡವಾಳ. ಷೇರುಗಳು ತೆಗೆದುಕೊಳ್ಳುವವರು ಇದರ ಪ್ರಾಸ್ಪೆಕ್ಟಸ್ ಮಾತುವದರಿಂದ ವಿಸ್ತಾರ ತಿಳಿದುಕೊಳ್ಳಬಹುದು. ಅಪ್ಲಿಕೇಷನ್‌ಗಳನ್ನೂ ಮತ್ತು ಹಣಗಳನ್ನೂ ಇವರಲ್ಲೇ ಕಳುಹಿಸಬಹುದು.

ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,
ಅಡ್ವೊಕೇಟ್ ಮತ್ತು ಜನರಲ್ ಏಜೆಂಟ್,
ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ,
ನಗರ್ತಪೇಟೆ, ಬೆಂಗಳೂರು.

### ನಮ್ಮ ಚಂದಾದಾರರಿಗೆ ನೋಟೀಸ್.

"ವೃತ್ತಾಂತ ಪತ್ರಿಕೆ" ಯ ಏಜಂಟರು ಚಂದಾ ವಸೂಲ್ಮಾಡಿಕೊಂಡದ್ದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡತಕ್ಕದ್ದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಬಾಧ್ಯಸ್ಥರಾಗುವುದಿಲ್ಲ.

ಮ್ಯಾನೇಜರ್,
ಮೈಸೂರು. "ವೃತ್ತಾಂತ ಪತ್ರಿಕೆ" ಆಫೀಸ್.

## ವೃತ್ತಾಂತ ಪತ್ರಿಕೆ.

—:o:—

ಸನ್ ೧೯೦೩ ನೇ ಇಸವಿ ಡಿಸೆಂಬರ್ ತಾ ೩ ನೇ ಗುರುವಾರ.

### ಅರಮನೆ ಖಜಾನೆಯು.

ನಮ್ಮ ಶ್ರೀಮನ್ ಮಹಾರಾಜರವರ ಅರಮನೆಯಲ್ಲಿ ಬೇರೆ ಬೇರೆ ಇಲಾಖೆಗಳಿರುವುದೂ, ಪ್ರತಿ ಇಲಾಖೆಯ ಕಾರುಬಾರುಗಳೂ ಕ್ರಮವಾಗಿ ನಡೆಸಂತೆ ಬಹಳ ಬಿಗಿತನದಿಂದ ನೋಡಿಕೊಳ್ಳುವುದಕ್ಕೆ ಕಂಟ್ರೋಲರ್ ಎಂಬೊಬ್ಬ ಮೇಲ್ವಿಚಾರಕರು ನೇಮಿಸಲ್ಪಟ್ಟಿರುವುದೂ ನಮ್ಮ ವಾಚಕರಿಗೆ ತಿಳಿದಿದೆಯಷ್ಟೆ. ಇವುಗಳೆಲ್ಲಾ ಖಜಾನಾ ಇಲಾಖೆಯೇ ಮುಖ್ಯವಾದುದು. ಇದರಲ್ಲಿ ನಡೆವ ಕಾರುಬಾರುಗಳು ತುಂಬಾ ಸಮರ್ಪಕವಾಗಿರಬೇಕೆಂಬ ಉದ್ದೇಶದಿಂದ ಶ್ರೀಮನ್ ಮಹಾರಾಜರವರು ಕೆಲವು ದಿನ ತಮಗೆ ವಿದ್ಯಾ ಹೇಳಿಕೊಡುತ್ತಿದ್ದ ಎಲ್. ಸೇತೂರಾವ್, ಬಿ. ಎ. ಎಂಬವರನ್ನು ಖಜಾನಾ ಶಿರಸ್ತೇದಾರರನ್ನಾಗಿ ನೇಮಿಸಿದರು. ಇವರು ಕಳೆದ ನವರಾತ್ರಿ ಉತ್ಸವಗಳಿಗೆ ಮುಂಚೆ ಅರಮನೆಗೆ ಕೆಲವು ಒಟ್ಟಿಗಳನ್ನು ಕೊಂಡುಕೊಂಡ ಸಂದರ್ಭದಲ್ಲಿ ನಾಲ್ಕೈದುನೂರು ರೂಪಾಯಿನ ತನಕ ಅರಮನೆಗೆ ಮೋಸಮಾಡಬೇಕೆಂದು ಪ್ರಯತ್ನಪಟ್ಟರು. ಈ ಸಂಗತಿಯನ್ನು ವರ್ತಕರು ಮಹಾರಾಜರವರಿಗೆ ಅರಿಕೆಮಾಡಿದಮೇಲೆ ಕಂಟ್ರೋಲರವರ ತನಿಖೆ ಪೂರಾ ನಡೆಯಿತು. ಆ ಹಣವೆಲ್ಲಾ ಸಿಕ್ಕಿತು. ಕಂಟ್ರೋಲರವರು ಅವರ ವಾಜ್ಮೂಲುಗಳನ್ನು ಶ್ರೀಮನ್ ಮಹಾರಾಜರವರಿಗೆ ಒಪ್ಪಿಸಿದರು. ಅವರು ಸೇತೂರಾಯರ ಹಿರಿಯರು ಅರಮನೆಯಲ್ಲಿ ಸಂಬಿಗಸ್ತರಾಗಿ ಕೆಲಸ ಮಾಡಿದ ವಿಷಯವನ್ನು ಜ್ಞಾಪಕಕ್ಕೆ ತಂದುಕೊಂಡು, ಸೇತೂರಾಯರಿಗೆ ಇನ್ನಾವ ವಿಧವಾದ ಶಿಕ್ಷೆಯನ್ನೂ ಮಾಡಿಸದೆ ಅವರನ್ನು ಕೆಲಸದಿಂದ ವಜಾ ಮಾಡಿರುತ್ತಾರೆ; ಅವರ ಕೈಕೆಳಗೆ ಕೆಲಸ ಮಾಡುತ್ತಿದ್ದ ರಾಘವೇಂದ್ರ ರಾಯರನ್ನು ಖಜಾನೆಯಿಂದ ಬೇರೇ ಇಲಾಖೆಗೆ ವರ್ಗಮಾಡಿದರು.

ಈ ಪ್ರಕಾರ ವಿದ್ಯಾವಂತರಾಗಿಯೂ ಗೌರವಸ್ಥರಾಗಿಯೂ ಇರುವವರು ಇಂಥಾ ಅಯೋಗ್ಯವೂ ಹೇಯವೂ ಆದ ಕೃತ್ಯಗಳಲ್ಲಿ ಬೀಳುವುದು ತುಂಬಾ ಶೋಚನೀಯವಾಗಿರುತ್ತದೆ. ಆದರೂ ಈ ಸಂದರ್ಭದಲ್ಲಿ ಶ್ರೀಮನ್ ಮಹಾರಾಜರವರು ಕೊಟ್ಟ ಈ ಶಿಕ್ಷೆಯು ನ್ಯಾಯವಾದದ್ದಾಗಿದೆ ಎಂದು ನೆನಸುತ್ತೇವೆ. ಇತರ ಇಲಾಖೆಗಳಲ್ಲಿ ಕೆಲಸಮಾಡತಕ್ಕವರೆಲ್ಲಾ ಒಳ್ಳೇ ಬುದ್ಧಿ ಕಲಿಯುವಂತಾಯಿತೆಂದು ನಿರೀಕ್ಷಿಸುತ್ತೇವೆ. ಈ ಘಟನೆಯಿಂದ ಶ್ರೀಮನ್ ಮಹಾರಾಜರವರ ವಿವೇಕಜ್ಞಾನವೂ, ಅವರ ದಯಾದ್ರ್ಯಹೃದಯವೂ, ಅವರ ಆಜ್ಞಾ ದರ್ಪವೂ ಪ್ರಕಾಶಕ್ಕೆ ಬಂದಿರುತ್ತವೆ.

### ದೇಶಾಂತರದ ವಿಶೇಷ ಸಮಾಚಾರಗಳು.

ಜರ್ಮನಿ ದೇಶದ ಚಕ್ರವರ್ತಿಯವರು ಗಂಟಲಲ್ಲಿ ಬೆಳೆದಿದ್ದ ದುರ್ಮಾಂಸವನ್ನು ಕೆಲವು ದಿನಗಳ ಹಿಂದೆ ವೈದ್ಯರು ಶಸ್ತ್ರ ಹಾಕಿ ಕತ್ತರಿಸಿ ತೆಗೆದ ವಿಷಯವು ಯುರೋಪು ಖಂಡದಲ್ಲಿ ಎಲ್ಲಾ ರಾಜ್ಯಗಳವರೂ ತಲ್ಲಣಗೊಳ್ಳುವದಕ್ಕೆ ಕಾರಣವಾಯಿತು. ಅವರ ತಂದೆಯವರಾದ ೩ ನೇ ಫ್ರೆಡ್ರಿಕ್ ಎಂಬವರೂ ಗಂಟಲಲ್ಲಿ ಕಾಣಿಸಿಕೊಂಡ ಕ್ಯಾನ್ಸರಿನಿಂದಲೇ ಮೃತರಾದರು. ಇವರಿಗೆ ಚಿಕಿತ್ಸೆ ಮಾಡುವದಕ್ಕಾಗಿ ಇಂಗ್ಲಾಂಡಿನಲ್ಲಿ ಈ ವಿಧ ರೋಗ ಚಿಕಿತ್ಸೆಗೆ ಪ್ರಸಿದ್ಧರಾಗಿದ್ದ ಡಾಕ್ಟರ್ ಮೊರೆಲ್ ಮೆಕ್ಕೆಂಜಿ ಎಂಬವರನ್ನು ವಿಕ್ಟೋರಿಯ ಮಹಾರಾಣಿಯವರು ಕಳುಹಿಸಿಕೊಟ್ಟಿದ್ದರು. ಇವರು ಬೆಳ್ಳಿಯ ಧ್ವನಿ ಕೊಳವೆಯನ್ನು ಗಂಟಲಲ್ಲಿ ಸಿಕ್ಕಿಸಿ ಚಿಕಿತ್ಸೆ ಮಾಡಲು ಕೆಲವು ಕಾಲದ ವರೆವಿಗೂ ಪ್ರಾಣವು ಉಳಿಯುವ ಹಾಗೆ ಮಾಡಿದರೂ ಕಡೆಗೆ ಮರಣವಶರಾದರು. ತರುವಾಯ ಈಗ ರೋಗಪೀಡಿತರಾದ ಚಕ್ರವರ್ತಿಯವರ ತಾಯಿಯವರೂ ಅದೇ ವಿಧ ರೋಗದಿಂದ ಸತ್ತುಹೋದರು. ಹೀಗಿರುವದರಿಂದ ಇವರಿಗೆ ಬಂದಿರುವ ಗಂಟಲ ರೋಗವೂ ತಂದೆ ತಾಯಿಗಳನ್ನು ಕೊಂದ ರೋಗವೋ ಏನೋ ಎಂಬದಾಗಿ ಜನರು ಶಂಕಿಸುವದು ಸ್ವಭಾವವೇ. ಆದರೆ ಇದು ಸಾಧಾರಣ ದುರ್ಮಾಂಸ ಬೆಳೆಕೊಂಡ ವಿಷಯವೇ ಹೊರತು ಪ್ರಾಣವಿಪತ್ತಿಗೆ ಕಾರಣವಾದದ್ದಲ್ಲವೆಂದು ಬರ್ಲಿನ್ ನಗರದ ರಾಜವೈದ್ಯರು ಹೇಳುತ್ತಾರೆ. ಇದನ್ನು ಕತ್ತರಿಸಿ ತೆಗೆದನಂತರ ಅದು ಪುನಃ ಬೆಳೆಯುವಂಥಾದ್ದಲ್ಲವೆಂದು ಸಾಧಿಸುತ್ತಾರೆ. ಜರ್ಮನಿ ಚಕ್ರವರ್ತಿಯವರು ಅಸಾಧಾರಣ ಪುರುಷರು. ಇವರಿಗೆ ಪ್ರಾಣಹಾನಿಯೇನಾದರೂ ಆದ ಪಕ್ಷದಲ್ಲಿ ಪೂರ್ವವಯಸ್ಸಿನಲ್ಲೇ ಇಂಥ ಶಕ್ತರಾದ ಪ್ರಭುಗಳು ಹೋದರಲ್ಲಾ ಎಂದು ಸ್ವದೇಶೀಯರೂ ಇತರ ದೇಶೀಯರೂ ಸಹ ದುಃಖಿಸುವದಕ್ಕೆ ಅವಕಾಶವುಂಟಾಗುವದು. ಆದಕಾರಣ ಬರ್ಲಿನ್ ನಗರದ ವೈದ್ಯರ ಮಾತೇ ನಿಜವಾಗಿ ಪರಿಣಮಿಸಲಿ ಎಂದು ಹಾರೈಸುತ್ತೇವೆ.

* * *

ಮೊರಾಕೊ ಸೀಮೆಯ ಸುಲ್ತಾನರ ಅವಸ್ಥೆಯು ತುಂಬಾ ಶೋಚನೀಯವಾಗಿದೆ. ಅವರು ರಾಜಧಾನಿಗೆ ಹಿಂದಿರುಗಿ ಬಂದಿದ್ದರೂ ಅವರ ಪಯೂರದಯಗಳ ವಿಷಯಗಳಲ್ಲಿ ಪ್ರಜೆಗಳು ಕೇವಲ ಅಲಕ್ಷ್ಯಭಾವವನ್ನು ವಹಿಸಿರುತ್ತಾರೆ. ಸುಲ್ತಾನರು ತಮ್ಮ ಸೇನೆಯ ಸಿಪಾಯಿಗಳಿಗೆ ಸಂಬಳಗಳನ್ನು ಹೆಚ್ಚಾಗಿ ಸವರುತ್ತಿರುವದರಿಂದಲೇ ಅವರೆಲ್ಲರೂ ಉದ್ಯೋಗಿಗಳಾಗಿದ್ದಾರೆಂತಲೂ, ಸುಲ್ತಾನರ ಖಜಾನೆಯು ಬರಿದಾದ ಕೂಡಲೆ ಅವರ ಸ್ವತ್ವವೂ ಅದೃಶ್ಯವಾಗುವದೆಂತಲೂ ಅಲ್ಲಿ ಬಾತ್ಮಿದಾರರು ಇಂಗ್ಲಿಷ್ ವರ್ತಮಾನ ಪತ್ರಗಳಿಗೆ ತಿಳಿಸುತ್ತಿದ್ದಾರೆ. ಸುಲ್ತಾನರು ಇಂಗ್ಲಾಂಡಿನಲ್ಲಿ ಕೆಲವು ಹಣವನ್ನು ಭಾಷಾ ಹಾಕಿಸಿದರು. ಇದರ ಖರ್ಚನ್ನು ಅವರು ಕೊಟ್ಟಿಲ್ಲವಾದ ಕಾರಣ ಆ ಹಣವನ್ನು ಬ್ಯಾಂಕಿಯರ್ ಎಂಬಲ್ಲಿಯೇ ತಡೆದು ನಿಲ್ಲಿಸಿದ್ದಾರೆ. ಇಂಥ ದುರವಸ್ಥೆಗೆ ಸಿಕ್ಕಿರುವ ಸುಲ್ತಾನರು ಕೊಲ್ಲಲ್ಪಟ್ಟು ಅವರ ವಿರೋಧಿಗಳು ಜಯಗೊಳ್ಳುವನಾದರೆ ಏನಾಗುವದೋ ಪ್ರಕೃತದಲ್ಲಿ ಸೂಚಿಸುವದಸಾಧ್ಯವಾಗಿದೆ. ಹೊಸದಾಗಿ ಸುಲ್ತಾನರು ದೇಶವನ್ನು ತಹಬಂದಿಗೆ ತಂದು ಸ್ಥಿರವಾದ ರಾಜ್ಯವನ್ನು ಸ್ಥಾಪಿಸುವದಕ್ಕೆ ಶಕ್ತರಾಗಬಹುದು. ಅವರ ರಾಜ್ಯಭಾರವನ್ನು ಯೂರೋಪಿನ ಬೇರೆ ಬೇರೆ ರಾಜ್ಯದವರು ಅನುಮೋದಿಸಬಹುದು. ಇಲ್ಲದೆ ಹೋದರೆ ಆ ದೇಶದ ಉತ್ತರ ಮೇರೆಯ ಬಳಿಯಲ್ಲಿ ಪ್ರಾಬಲ್ಯಗಳನ್ನು ಸ್ಥಾಪಿಸಿಕೊಂಡಿರುವ ಫ್ರೆಂಚರೇ ಆ ಮೊರಾಕೊ ರಾಜ್ಯವನ್ನು ತಮ್ಮ ಆಶ್ರಯಕ್ಕೆ ತೆಗೆದುಕೊಳ್ಳುವದಕ್ಕೆ ಅಡ್ಡಿಯಿರುವದಿಲ್ಲ. ಫ್ರೆಂಚರ ಇಂಥ ಪ್ರಯತ್ನಕ್ಕೆ ಯೂರೋಪಿನವರ ಸಮ್ಮತಿಯಂತೂ ಅವಶ್ಯವಾಗಿರುವದಷ್ಟೆ. ಈಗ ಇಂಗ್ಲಿಷರಿಗೂ ಫ್ರೆಂಚರಿಗೂ ಬಹಳ ಸ್ನೇಹವಿರುವದರಿಂದ ಫ್ರೆಂಚರ ಸವಲತ್ತನ್ನು ಇಂಗ್ಲಿಷರು ಅನುಮೋದಿಸುವರೆಂಬುವದಕ್ಕೆ ಸಂಶಯವೇನೂ ಇರುವದಿಲ್ಲ. ಫ್ರೆಂಚರಿಗೂ ಇಂಗ್ಲಿಷರಿಗೂ ವಿಶೇಷವಾದ ಸ್ನೇಹವುಂಟಾಗುವದಕ್ಕೆ ಇಂಗ್ಲಾಂಡಿನ ಎಡ್ವರ್ಡ್ ಮಹಾರಾಜರು ಪ್ಯಾರಿಸ್ ನಗರಕ್ಕೆ ಹೋಗಿದ್ದದ್ದೂ ಎರಡು ದೇಶಗಳ ವರ್ತಕರೂ ಯಾವರು, ವಿದ್ವನ್ಮಂಡಲಿಯವರು, ಮಂತ್ರಾಲೋಚನಾ ಸಭಿಕರೂ ನೇರವಾಗಿ ಪರಸ್ಪರವಾಗಿ ಭೇಟಿ ಸಮಾರಂಭಗಳನ್ನು ನಡೆಸಿದ್ದೂ ವಿಶೇಷ ಕಾರಣಗಳಾಗಿವೆ

* * *

ಲಂಡನ್ ಮಹಾ ನಗರಕ್ಕೆ ವರ್ಷಕ್ಕೊಂದುಸಾರಿ ಲಾರ್ಡ್ ಮೇಯರ್ ಎಂಬ ಅಧಿಕಾರಿಯನ್ನು ಆರಿಸಿಕೊಳ್ಳುವದು ಪದ್ಧತಿಯಾಗಿದೆ. ಇದಕ್ಕೋಸ್ಕರ ಸೆಪ್ಟಂಬರ್ ತಿಂಗಳ ೨೯ ರಲ್ಲಿ ಲಂಡನ್ ನಗರದ ವರ್ತಕ ಮಂಡಲಿಗಳ ಮೆಂಬರುಗಳು ಕೂಡಿಬಂದು ತಮ್ಮೊಳಗೊಬ್ಬ ಮಹಾ ವರ್ತಕನನ್ನು ಆರಿಸಿಕೊಳ್ಳುತ್ತಾರೆ. ತರುವಾಯ ನವಂಬರ್ ೯ ರಲ್ಲಿ ಆತನನ್ನು ಮಹಾ ವಿಜೃಂಭಣೆಯಿಂದ ಇಂಗ್ಲಾಂಡ್ ಚೀಫ್ ಜಸ್ಟಿಸ್ ಎಂಬ ಮುಖ್ಯ ನ್ಯಾಯಾಧಿಪತಿಯ ಆಸ್ಥಾನಕ್ಕೆ ಕರೆದುಕೊಂಡು ಹೋಗಿ ಆ ವರ್ಷದ ನಗರಾಧಿಕಾರಿಯಾಗಿರುವಂತೆ ಆತನಿಂದ ಭಾಷೆಮಾಡಿಸಿಕೊಳ್ಳುತ್ತಾರೆ. ಆತನಿಗೆ ಸಾಲಿಯಾನಾ ೧೦,೦೦೦ ಪೌನುಗಳು ಸಂಬಳ ದೊರೆಯುವದು. ಆದರೆ ಆತನ ಖರ್ಚಿಗೆ ಇದು ಎಷ್ಟುಮಾತ್ರವೂ ಸಾಲದು. ಆತನು ಉದ್ಯೋಗ ನಡೆಸುವ ವರ್ಷದಲ್ಲಿ ಪರೋಪಕಾರಾರ್ಥವಾದ ಕೆಲಸ ಕಾರ್ಯಗಳನ್ನು ಮಾಡುವದೇ ಆತನ ಕರ್ತವ್ಯಗಳಲ್ಲೊಂದಾಗಿರುತ್ತದೆ. ಇದಕ್ಕನುಗುಣವಾಗಿ ನಮ್ಮ ಇಂಡಿಯಾ ದೇಶವು ಕ್ಷಾಮಪೀಡಿತವಾಗಿದ್ದ ಕಾಲದಲ್ಲಿ ಕ್ಷಾಮನಿವಾರಣೆಯ ಫಂಡು ಎಂದು ಒಂದು ದ್ರವ್ಯನಿಧಿಯನ್ನು ಆತನು ಸ್ಥಾಪಿಸಿದನು. ಇಂಥಾ ಕಾರ್ಯಗಳನ್ನು ಮಾಡಬೇಕಾದದಲ್ಲದೆ ಇಂಗ್ಲಾಂಡಿಗೆ ಭೇಟಿಗಾಗಿ ಬರುವ ಪರದೇಶದ ದೊಡ್ಡ ಮನುಷ್ಯರಿಗೆ ಆತನು ತನ್ನರಮನೆಯಲ್ಲಿ ಬಹು ವಿಜೃಂಭಣೆಯಿಂದ ಔತಣಗಳನ್ನು ಮಾಡಿಸಿ ಸತ್ಕರಿಸಬೇಕಾಗಿದೆ. ಆತನು ಈ ಉದ್ಯೋಗಕ್ಕೆ ನೇಮಿಸಲ್ಪಟ್ಟ ದಿನದ ಸಾಯಂಕಾಲ ದೇಶದ ಮಹಾ ಜನಗಳಿಗೆ ಆತನು ಭೋಜನ ಮಾಡಿಸಬೇಕು. ಆಗ್ಯೆ ಇಂಗ್ಲಾಂಡಿನ ಪ್ರಧಾನ ಮಂತ್ರಿಯವರೇ ಬರುತ್ತಾರೆ; ಮತ್ತು ಪರದೇಶಗಳ ಸಂಬಂಧದಲ್ಲಿ ತಾವು ವಹಿಸಿರುವ ರಾಜತಂತ್ರ ವಿಧಾನವನ್ನು ಕುರಿತು ವಿಶೇಷವಾದ ಅಭಿಪ್ರಾಯವೇನಾದರೂ ಇದ್ದರೆ ಅದನ್ನು ತಿಳಿಯಪಡಿಸುವದೂ ಉಂಟು. ಅದೇಪ್ರಕಾರ ಈ ವರ್ಷದ ಸಭೆಯಲ್ಲಿ ಪ್ರಧಾನಿಗಳಾದ ಮಿ॥ ಬಾಲ್ಫರ್ ಯವರು ಮ್ಯಾಸಿಡೋನಿಯಾ ದೇಶದ ಅವ್ಯವಸ್ಥೆಗಳನ್ನು ಕುರಿತೂ ರಷ್ಯಾ ಜಪಾನ್ ರಾಜ್ಯಗಳ ಪರಸ್ಪರ ವಾಗ್ವಾದಗಳನ್ನು ಕುರಿತೂ ಪ್ರಸ್ತಾಪಿಸಿದರು. ಅವರು ಮ್ಯಾಸಿಡೋನಿಯಾದ ವಿಷಯದಲ್ಲಿ ಹೇಳಿದ್ದನ್ನು ಇಲ್ಲಿ ಸೂಚಿಸುವೆವು. ಮ್ಯಾಸಿಡೋನಿಯಾದಲ್ಲಿನ ಅನ್ಯಾಯತತ್ವವನ್ನು ತಿದ್ದುಪಡಿ ಮಾಡುವದಕ್ಕೋಸ್ಕರ ರಷ್ಯಾ ಆಸ್ಟ್ರಿಯಾ ರಾಜ್ಯಗಳವರು ಇಂಗ್ಲಾಂಡಿನವರ ಸಮ್ಮತಿಯ ಪ್ರಕಾರ ತುರ್ಕಿ ಸುಲ್ತಾನರವರಿಗೆ ಕೊಟ್ಟಿರುವ ಸಲಹೆಗಳಿಗಿಂತ ಕಡಮೆಯಾಗಿ ಕೇಳುವದಕ್ಕೆ ಆಗಲಾರದು. ಈಗ ಕೇಳಿರುವದಕ್ಕಿಂತಲೂ ಹೆಚ್ಚಾಗಿ ಸಲಹೆಗಳನ್ನು ಸುಲ್ತಾನರ ಮುಂದೆ ಇಡುವದು ಸುಲಭವಾಗಿದ್ದರೂ ಅಷ್ಟನ್ನು ಕೂಡ ಮಾಡಿಕೊಡುವದಕ್ಕೆ ಅವರು ಒಪ್ಪುವದಿಲ್ಲವೆಂದು ಹೇಳುವದಕ್ಕೆ ಏನೇನೂ ಆಧಾರವಿಲ್ಲ. ಈಗ ಯೂರೋಪಿನವರು ಕೇಳಿಕೊಂಡಿರುವದನ್ನು ಸುಲ್ತಾನರು ಮಾಡಿಸಿಕೊಟ್ಟರೇ ತೀರಬೇ


### ಚೇಂಬರ್ಲಿನ್ ಯವರು ಹೊಟ್ಟೆಕಡಿಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

48




ಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಸೆಳೆತ, ಹೊಟ್ಟೆಕಡಿತ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಶಸ್ತವಾದ್ದು ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ:—"ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ಕೊಳೆಸುವಿಕೆ ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಗಲೇ ತಂದಿಟ್ಟುಕೊಂಡು ಕರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ ; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಬಂಡಿಕೆ:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಮೈಸೂರು ಸಂಸ್ಥಾನದ ವರ್ತಮಾನಗಳು.

ಪ್ರವಾಹ ಅನರ್ಥಗಳು.

ಕೋಲಾರ್ ಪ್ರಾಂತ್ಯ.

ಕಡಪಾ ಪ್ರಾಂತ್ಯ.

ಮೈಸೂರು ಸರ್ಕಾರದವರ ಮೇಲೆ ಆಕ್ಷೇಪಣೆ.

## ಕೋಲಾರ್ ಚಿನ್ನದ ಗಣಿಗಳು.

ಯಂತ್ರಗಳು ಒಡೆದು ಘೋರ ಅನಾಹುತವಾದದ್ದು.

ಆರು ಜನರು ಮೃತಪಟ್ಟರು.

ಕಳೆದ ೨೦ನೆ ತಾರೀಖು ಭಾನುವಾರ ಕೋಲಾರ್ ಚಿನ್ನದ ಗಣಿಗಳ ಪೈಕಿ ರಿಬ್ಬಲ್ಸ್‌ಡೇಲ್ ಷಾಫ್ಟ್ ಎಂಬ ಗಣಿಯಲ್ಲಿ ರಾತ್ರಿ ಸುಮಾರು ೧೧ ಗಂಟೆ ಹೊತ್ತಿನಲ್ಲಿ ಬಹು ಭಯಂಕರವಾದ ಅನಾಹುತವಾಯಿತು. ನೀರನ್ನು ಕಾಯಿಸಿ ಹಬೆ ತಯಾರು ಮಾಡುವ ಯಂತ್ರವಿದ್ದ ಕೊಠಡಿಯಲ್ಲಿ ಆ ಯಂತ್ರವು ಇದ್ದಕ್ಕಿದ್ದ ಹಾಗೇ ಮಹಾ ಶಬ್ದದೊಡನೆ ಹಾರಿತು. ನೀಲಿ ಬಣ್ಣದ ಬೆಂಕಿ ಕಿಡಿಗಳೂ, ಕಪ್ಪು ಬಣ್ಣದ ಹೊಗೆಯೂ ವಿಪರೀತವಾಗಿ ಆಕಾಶವನ್ನು ಮುಸುಕಿಕೊಂಡವು. ಮೊದಲನೇ ಸಲ ಧಂ ಎಂದು ಹಾರಿದ ಶಬ್ದ ಕೇಳಬಂದ ಕೂಡಲೆ ಇನ್ನೊಂದಾವರ್ತಿ ದೊಡ್ಡದಾಗಿ ಏನೋ ಒಡೆದಂತೆ ಕೇಳಿಸಿತು. ಆ ಕ್ಷಣವೇ ಆ ಸುತ್ತು ಮುತ್ತಿನಲ್ಲಿರುವ ಮನೆಗಳವರೆಲ್ಲಾ ಏನೋ ಆಗಿರಬಹುದೆಂದು ಗಾಬರಿಬಿದ್ದು ಹೊರಕ್ಕೆ ಬಂದು ಶಬ್ದ ಹುಟ್ಟಿದ ಕಡೆ ನೋಡಿದರು. ಒಡೆದುಹೋದ ಯಂತ್ರಗಳ ಚೂರುಗಳೂ, ಹಬೆಯೂ ಬಹು ರಭಸವಾಗಿ ಯಂತ್ರದ ಮನೆಯಿಂದ ಹಾರಿ ದಿಕ್ಕುಗಳಿಗೆ ಹಾರಿಸಿಕೊಂಡವು. ಆ ಗಣಿಯ ಸೂಪರಿಂಟೆಂಡೆಂಟರು, ಛೀಫ್ ಇಂಜಿನಿಯರು, ಇನ್ನು ಕೆಲವು ಮಂದಿ ಅಧಿಕಾರಿಗಳು ತಕ್ಷಣವೇ ಆ ಯಂತ್ರಗಳ ಮನೆಯ ಬಳಿಗೆ ಹೋಗಿ ಸೇರಿದರು. ಪೊಲೀಸ್ ಮ್ಯಾಜಿಸ್ಟ್ರೇಟರೂ, ಬಹು ಮಂದಿ ಪೊಲೀಸಿನವರೂ ಅಲ್ಲಿಗೆ ಹೋಗಿ ಎಲ್ಲರೂ ಸೇರಿಕೊಂಡು, ಬಹಳ ಶ್ರಮಪಟ್ಟು ಗಲಿಬಿಲಿಯನ್ನೆಲ್ಲಾ ನಿಲ್ಲಿಸಿ ಸಮಾಧಾನಪಡಿಸಿದರು. ಒಡೆಯದೆ ಉಳಿದಿದ್ದ ಯಂತ್ರಗಳನ್ನು ಖಾಲಿ ಮಾಡುವುದಕ್ಕೆ ಎಲ್ಲರೂ ಪ್ರಯತ್ನಪಟ್ಟರು. ಇಲ್ಲವಾದರೆ ಅಷ್ಟರಲ್ಲಿ ಸ್ವಲ್ಪ ಹೊತ್ತಿನಲ್ಲೇ ಒಡೆದು ಹಾರಿ ತುಂಬಾ ಅನಾಹುತವಾಗುತ್ತಿತ್ತು. ಆದ್ದರಿಂದ ಎಲ್ಲರೂ ಸೇರಿ ಆ ಯಂತ್ರಗಳ ಹಬೆಯನ್ನು ನಿಲ್ಲಿಸಿಬಿಟ್ಟರು. ಅನಂತರ ಅಲ್ಲಿದ್ದವರೆಲ್ಲಾ ತಮ್ಮ ಪ್ರಾಣದ ಮೇಲೂ ಆಸೆಯಿಡದೆ ಬಹಳ ಜಾಗ್ರತೆಯಿಂದಲೂ, ಚಟುವಟಿಕೆಯಾಗಿಯೂ ಆ ಅಪಘಾತದ ಬಳಿ ಸಿಕ್ಕಿ ಬಳಲಿದ್ದ ಜನರನ್ನೆಲ್ಲಾ ಹೊರಕ್ಕೆ ಸಾಗಿಸುತ್ತಾ ಬಂದರು. ಗಾಯಪಟ್ಟು ನರಳುತ್ತಾ ಬಿದ್ದಿದ್ದವರು ಹತ್ತು ಮಂದಿ ಸಿಕ್ಕಿದರು. ಇವರನ್ನೆಲ್ಲಾ ಡೋಲಿಗಳಲ್ಲಿ ಮಲಗಿಸಿಕೊಂಡು ಹೋಗಿ ಮೊದಲು ಒಂದು ಬಂಗಲೆಯೊಳಗೂ, ತರುವಾಯ ಅಲ್ಲಿಂದ ಆಸ್ಪತ್ರೆಗೂ ಬಿಟ್ಟರು. ಇನ್ನೂ ವಿಶೇಷವಾಗಿ ಅಪಘಾತದ ಬಳಿಯಲ್ಲೇ ಮಲಗಿ ನಿದ್ರೆಮಾಡುತ್ತಿದ್ದ ಒಬ್ಬನಿಗೆ ಘೋರ ಪೆಟ್ಟಾಗಿ ಮರಣಸಂಕಟಪಡುತ್ತಿದ್ದನು. ಅಪಘಾತ ಕೆಲಸಗಾರರೊಬ್ಬನು ಆ … ಒಡೆಯುವಾಗ್ಗೆ ಅದರ ಸಮೀಪದಲ್ಲೇ ಕಾವಲು ಕಾಯುತ್ತಿದ್ದನು. ಒಡೆದ … ಇವನನ್ನು ಅಂತರಿಕ್ಷಕ್ಕೆ … ಚೂರು ಚೂರು ಮಾಡಿಬಿಟ್ಟಿತು. ಇವನ ಶವವು ಅಲ್ಲಿಂದ ೬೦ ಗಜ ದೂರದಲ್ಲಿ ಹೋಗಿ ಬಿದ್ದಿತ್ತು. ಇವನ ಸಹೋದರನ ಶವವು ಅಸ್ತವ್ಯಸ್ತದಲ್ಲಿ ಚಿಂದಿ ಚೂರಾಗಿ ಬಿದ್ದಿತ್ತು. ಇದು ಮರುದಿವಸ ಬೆಳಗ್ಗೆ ಸಿಕ್ಕಿತು. ಈ ಶವದ ಮೇಲೆಲ್ಲಾ … ವಿಪರೀತವಾಗಿ ಬಿದ್ದಿದ್ದವು. ಆಸ್ಪತ್ರೆಗೆ ಸಾಗಿಸಿದವರಲ್ಲಿ ಕಡೆಗೆ ನಾಲ್ಕು ಮಂದಿ ಮೃತಪಟ್ಟಿರುತ್ತಾರೆ. ಅಂತು ಒಟ್ಟು ಈ ಅನಾಹುತದಲ್ಲಿ ಆರು ಜನರು ಪ್ರಾಣ ಕಳೆದುಕೊಂಡಂತಾಯಿತು.

ಆ ರಾತ್ರಿ ಈ ಅನಾಹುತದಿಂದ ಅಲ್ಲಿ ಪ್ರಾಪ್ತವಾದ ಗಲಾಟೆಯೂ, ಹೆಂಗಸರು ಮಕ್ಕಳ ಗೋಳಾಟವೂ, ಅಗ್ನಿಜ್ವಾಲೆಯೂ, ಹಬೆಯು ಅಪಘಾತದಿಂದ ಹೊರಡುತ್ತಿದ್ದ ಮಹಾ ಶಬ್ದವೂ, ಗೋಡೆಗಳೂ ಯಂತ್ರಗಳೂ ಮೇಲ್ಛಾವಣಿಯ ಕಬ್ಬಿಣದ ತಗಡುಗಳೂ ಒಡೆದು ಚೂರು ಚೂರಾಗಿ ನಾನಾ ಕಡೆಗಳಿಗೆ ಎಗರಿದ ದೃಶ್ಯವೂ, ಅಧಿಕಾರಿಗಳೂ ಪೊಲೀಸಿನವರೂ ನೂರಾರು ಮಂದಿ ಗಣಿ ಕೂಲಿಯವರೂ ಅಪಘಾತಕ್ಕೆ ಸಿಕ್ಕಿದವರನ್ನು ಹೊರಕ್ಕೆ ಸಾಗಿಸುವುದರಲ್ಲೂ ಬೆಂಕಿ ಹೆಚ್ಚಾಗದಂತೆ ಸಮಾಧಾನಪಡಿಸುವುದರಲ್ಲೂ ಮಾಡುತ್ತಿದ್ದ ಸಾಹಸ ಕಾರ್ಯಗಳೂ—ಇದನ್ನೆಲ್ಲಾ ವಿವರಿಸಲಶಕ್ಯವಾಗಿರುತ್ತದೆ. ಈ ಅನಾಹುತವು ಭಾನುವಾರ ರಾತ್ರಿಗೆ ಬದಲಾಗಿ ಸೋಮವಾರ ರಾತ್ರಿ ಪ್ರಾಪ್ತವಾಗಿದ್ದ ಪಕ್ಷದಲ್ಲಿ ಅನಾಹುತವು ಇನ್ನೂ ವಿಪರೀತವಾಗುತ್ತಿತ್ತು; ಇನ್ನೂ ಅನೇಕರು ಪ್ರಾಣಕೊಡುತ್ತಿದ್ದರು. ಒಡೆದು ದೂರದೂರಕ್ಕೆ ಹಾರಿಹೋಗಿ ಬಿದ್ದಿದ್ದ ಸಾಮಾನುಗಳ ಚೂರುಗಳನ್ನೆಲ್ಲಾ ಆ ರಾತ್ರಿ ಆರಿಸಿ ಒಂದು ಕಡೆ ಗುಪ್ಪೆ ಹಾಕಿಸಿದರು. ಕಬ್ಬಿಣದ ತಗಡುಗಳು ವಿಪರೀತ ಭಾರವಾಗಿದ್ದರೂ ಆ ರಭಸಕ್ಕೆ ಹಾರಿಹೋಗಿ ನೂರಾರು ಗಜಗಳ ದೂರದಲ್ಲಿ ಚಪ್ಪಟೆಯಾಗಿ ಒಡೆದು ಎರಚಿದಂತೆ ಪಕ್ಕದ ಬಂಗಲೆಯ ಅಂಗಳದಲ್ಲಿ ಬಿದ್ದಿದ್ದವು. ೧೯ ಚದರಂಗುಲದ ಮತ್ತು ಅರ್ಧ ಅಂಗುಲ ದಪ್ಪವಾಗಿದ್ದ ಒಂದು ಕಬ್ಬಿಣ ತಗಡೂ, ವಿದ್ಯುಚ್ಛಕ್ತಿಯನ್ನು ಸಾಗಿಸುವ ತಾಮ್ರದ ತಂತಿಗಳ ಒಂದು ಸುರುಳಿಯೂ ಆ ಹಬೆ ಹೊರಟ ರಭಸಕ್ಕೆ ಕಿತ್ತು ಒಡೆದು ಬಹಳ ದೂರಕ್ಕೆ ಹಾರಿಹೋಗಿ ಬಿದ್ದಿತ್ತು. ಇಂಜಿನ್ ಮನೆಯೂ ಇನ್ನೊಂದು ಮನೆಯೂ ಸಂಪೂರ್ಣವಾಗಿ ನಾಶವಾಗಿವೆ. ಯಂತ್ರಗಳು ಒಡೆದು ದೊಡ್ಡ ದೊಡ್ಡ ತುಂಡುಗಳಾಗಿ ನಾನಾ ಕಡೆ ಎರಚಲ್ಪಟ್ಟಿದ್ದವು.

ಈ ಅನಾಹುತಕ್ಕೆ ಕಾರಣವೇನೋ ಇನ್ನೂ ಹೊರಪಡಲಿಲ್ಲ. ಗಣಿ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರೂ ವಿಚಾರಣೆ ಮಾಡುತ್ತಿದ್ದಾರೆ. ಇದು ಸರಿಯಾದ ಕಾರಣಗಳನ್ನು ಹೇಳಲಶಕ್ಯವಾಗಿದ್ದರೂ ಅವರಲ್ಲಾ … ಮುಂದೆ ಮ್ಯಾಜಿಸ್ಟ್ರೇಟ್ ಹೇಳಿ ಬರೆಸುವುದಕ್ಕಾಗಿ ಕರೆದುಕೊಂಡರು. ಆದಕಾರಣ ಇದಕ್ಕೆ ಸರಿಯಾದ ಕಾರಣ ಏನೆಂದೂ ಗೊತ್ತಾಗಲಾರದೆಂದು ಹೇಳುವರು.

## ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಮೊನ್ನೆ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮೀಷನರುಗಳು ಟೌನ್‌ಹಾಲಿನಲ್ಲಿ ನವೆಂಬರ್ ತಿಂಗಳು ಕಡೆಯ ಮೀಟಿಂಗ್ ನಡಸಿದರು. ಲೆಕ್ಕಗಳನ್ನು ತನಿಖೆಮಾಡಿದ ಮೆ|| ಪಂಡಿತರು ಎಲ್ಲಾ ಸರಿಯಾಗಿಯೂ, ತೃಪ್ತಿಕರವಾಗಿಯೂ ಇದೆ ಎಂದು ರಿಪೋರ್ಟು ಬರೆದಿದ್ದರು. ಅಕ್ಟೋಬರ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂ ೮,೬೭೩—೬—೭ ವೈ ವರಮಾನ ಆಯಿತು; ಒಟ್ಟು ರೂ ೭,೩೯೮—೧೬—೧೧ ವೈ ಖರ್ಚಾಯಿತು. ಆ ತಿಂಗಳಲ್ಲಿ ಜನನ ೧೭೨; ಮರಣ ಮರಣ—ಪ್ಲೇಗ್ ೪೯೯, ಒಟ್ಟು ೧,೧೦೭.

೨. ಕೃಷ್ಣರಾಜ ಮೊಹಲ್ಲಾ ನಿವಾಸಿಗಳು ಶವಗಳನ್ನು ಸುಡಲೂ, ದಫನ್ ಮಾಡಲೂ ಪಟ್ಟಣಕ್ಕೆ ಉತ್ತರದ ಕಡೆ ಇರುವ ರುದ್ರಭೂಮಿ ಸಾಲದೆಂದು ಅರ್ಜಿ ಬರೆದುಕೊಂಡಿದ್ದರಿಂದ ಹೊಸ ಜಮೀನ್ ಬಿಡಿಸಿಕೊಡುವ ವಿಚಾರದಲ್ಲಿ ಕೆಲವು ಕಮೀಷನರು ಆಲೋಚಿಸಿ ಯಿಂದ ಬೋರ್ಡಿಗೆ ರಿಪೋರ್ಟು ಕಳುಹಿಸಬೇಕೆಂದು ಗೊತ್ತು ಮಾಡಲ್ಪಟ್ಟಿತು. ಈ ಕಮಿಟಿಯವರು ಅಲ್ಲಿರುವ ಎರಡು ಚಿಕ್ಕಮಾನ್ಯ ಜಮೀನುಗಳನ್ನು ರುದ್ರಭೂಮಿಗೆ ಬಿಡಿಸಿಕೊಡಬೇಕೆಂದೂ, ಚಾಮರಾಜ ಮೊಹಲ್ಲೆಯ ನಿವಾಸಿಗಳ ಉಪಯೋಗಕ್ಕೆ ಕನ್ನೇಗೌಡನ ಕೊಪ್ಪಲ ಬಳಿ ವಿಜಯೇಂದ್ರರಾಯರ ತೋಟದ ಸಮೀಪದಲ್ಲಿರುವ ಬಂಜರ್ ಜಮೀನ್ ರುದ್ರಭೂಮಿಗೆ ಬಿಡಿಸಿಕೊಡಬೇಕೆಂತಲೂ ರಿಪೋರ್ಟು ಬರೆದಿದ್ದರು. ಸಿವಿಲ್ ಸರ್ಕಾರು ಒಪ್ಪಿದರೆ ಈ ಜಮೀನುಗಳನ್ನು ಮ್ಯುನಿಸಿಪಾಲಿಟಿಯವರು ಪಡೆದುಕೊಂಡು, ರುದ್ರಭೂಮಿಗೆ ಸೇರಿಸಿಕೊಟ್ಟು, ಆ ಎರಡು ಮೊಹಲ್ಲೆಗಳ ಜನರಿಗೂ ಬಿಟ್ಟುಕೊಡಬೇಕೆಂದು ತೀರ್ಮಾನಿಸಿರುತ್ತಾರೆ.

೩. ಕಂಟ್ರೋಲರವರ ಆಫೀಸ್ ಮೆ|| ರಾಮಣ್ಣನವರು ತಮ್ಮ ಮನೆಯನ್ನು ಮ್ಯುನಿಸಿಪಾಲಿಟಿಯವರು ತೆಗೆದುಕೊಂಡು ಸರಿಯಾದ ಕಂಪೆನ್‌ಸೇಷನ್ ಕೊಡಲಿಲ್ಲವೆಂತಲೂ, ರಸ್ತೆಗೆ ಉಪಯೋಗಿಸಿಕೊಂಡದ್ದು ಹೋಗಲಾಗಿ ತಮ್ಮ ಮನೆ ನಿವೇಶನದಲ್ಲಿ ಉಳಿದ ಭಾಗವನ್ನು ತಮಗೆ ಕೊಡಲಿಲ್ಲವೆಂತಲೂ, ಕೊಡುತ್ತೇನೆಂದು ಮೆ|| ನಂಜುಂಡರಾಜೇ ಅರಸಿನವರು ತಮಗೆ ಮಾತು ಕೊಟ್ಟಿದ್ದರೆಂತಲೂ ಗವರ್ನ್‌ಮೆಂಟಿಗೆ ಅರ್ಜಿ ಬರೆದುಕೊಂಡಿದ್ದರು. ಈಚೆಗೆ ಆ ಖಾಲಿ ನಿವೇಶನವನ್ನು ಮ್ಯುನಿಸಿಪಾಲಿಟಿಯವರು ಇನ್ನೊಬ್ಬರಿಗೆ ಕೊಟ್ಟುಬಿಟ್ಟರು. ಅವರು ಮನೆ ಕಟ್ಟಿಕೊಳ್ಳಲು ಗೋಡೆ ಮುಂತಾದ್ದು ಹಾಕಿ, ಮೇಲ್ಛಾವಣಿ ಹಾಕುವುದೊಂದೇ ಬಾಕಿಯಾಗಿದೆ. ಇವರ ತಕರಾರ್ ಬಂದದ್ದರಿಂದ ಮ್ಯುನಿಸಿಪಾಲಿಟಿಯವರು ಸರ್ಕಾರದವರ ಅನುಮತಿ ಪ್ರಕಾರ ಮನೆ ಕಟ್ಟಕೂಡದೆಂದು ಅವರನ್ನು ಅಪ್ಪಣೆ ನಿಲ್ಲಿಸಿದ್ದರು. ಈಗ ಈ ವಿಷಯಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನೆಲ್ಲಾ ನೋಡಿದಾಗ ಮೆ|| ರಾಮಣ್ಣನವರಿಗೆ ನ್ಯಾಯವಾದ ನಷ್ಟ ಪರಿಹಾರ ಮಾಡಿದೆ ಎಂತಲೂ, ಮೆ|| ನಂಜುಂಡರಾಜೇ ಅರಸಿನವರು ಈ ಖಾಲಿ ಜಾಗ ಕೊಡುವುದಾಗಿ ವಾಗ್ದಾನ ಮಾಡಿಲ್ಲವೆಂತಲೂ ಕಂಡುಬಂದ ಕಾರಣ ಬೋರ್ಡಿನವರು ತೀರ್ಮಾನಿಸಿದ್ದೇನೆಂದರೆ ಈಗ ಮನೆ ಕಟ್ಟುತ್ತಿರುವವರಿಗೆ ಕಟ್ಟಿಕೊಳ್ಳುವಂತೆ ತಿಳಿಸಬೇಕು. ಮೆ|| ರಾಮಣ್ಣನವರಿಗೆ ಸರಿಯಾದ ಪ್ರತಿಫಲ ಕೊಟ್ಟಿದೆ; ಆ ಖಾಲಿ ಜಾಗದ ಮೇಲೆ ಅವರಿಗೆ ಯಾವ ಹಕ್ಕೂ ಇರುವುದಿಲ್ಲ.

೪. ಮನೆ ಕಟ್ಟುವುದಕ್ಕೆ ಮ್ಯುನಿಸಿಪಾಲಿಟಿಯಿಂದ ಲೈಸೆನ್ಸು ಪಡೆದುಕೊಂಡವರು ಇಷ್ಟು ದಿನಗಳೊಳಗಾಗಿ ಕಟ್ಟಿ ಪೂರೈಸಬೇಕೆಂದು ಕಾಲ ವಿಧಿಸುವುದಕ್ಕೂ, ಅಷ್ಟರೊಳಗೆ ಪೂರೈಸದಿದ್ದರೆ ಲೈಸೆನ್ಸನ್ನು ಅವರು ರದ್ದು ಮಾಡುವುದಕ್ಕೂ, ಮತ್ತು ಅಂಥಾ ಅವಧಿಯನ್ನು ಜಾಸ್ತಿ ಮಾಡಿಕೊಡುವುದಕ್ಕೂ ಸರ್ಕಾರದವರು ಬೋರ್ಡಿಗೆ ಅಧಿಕಾರ ಕೊಡಬೇಕೆಂದು ಕೇಳಿಕೊಳ್ಳುವಂತೆ ಮೆಂಬರುಗಳು ತಿಳಿಸಿದರು.

೫. ಪ್ಲೇಗ್ ನಿವಾರಣೆಗಾಗಿ ಪಟ್ಟಣದ ಕೆಲವು ಕಡೆಗಳಲ್ಲಿ ಛಪ್ಪರಗಳನ್ನು ಕಟ್ಟಿಸಬೇಕೆಂದು ಪ್ಲೇಗ್ ಇಲಾಖೆಯಿಂದ ಮೊದಲು ೫,೦೦೦ ರೂ. ಸ್ಯಾಂಕ್ಷನ್ ಆಗಿಬಂತು. ಸಂಸ್ಥಾನದ ಕಂಟ್ರೋಲರವರು ಈ ಹಣದಲ್ಲಿ ೪,೨೩೩ ಚಿಲ್ಲರೆ ರೂಪಾಯನ್ನು ಮ್ಯುನಿಸಿಪಾಲಿಟಿಯವರು ಅದಕ್ಕಾಗಿ ವಿನಿಯೋಗಿಸಿಕೊಂಡ ಹಾಗೆ ತಿಳಿದು, ಈ ಹಣವನ್ನು ಸಾಲ ಕೊಟ್ಟಂತೆ ಲೆಕ್ಕದಲ್ಲಿ ಡಾಕೆಟ್ ಮಾಡಬಹುದೇ ಎಂದು ಬೋರ್ಡಿನವರನ್ನು ಕೇಳಿದರು. ಇದಕ್ಕೆ ಮೆಂಬರುಗಳು—ನಾವು ಸಾಲ ಮಾಡಿಲ್ಲ; ಛಪ್ಪರಗಳ ಕಾಮಗಾರಿಯು ಬೋರ್ಡಿನದೂ ಅಲ್ಲ; ಆದಕಾರಣ ಈ ಸಾಲವನ್ನು ಕಂಟ್ರೋಲರು ಮ್ಯುನಿಸಿಪಾಲಿಟಿಯ ಮೇಲೆ ಹೊರಿಸಬಾರದು ಎಂಬುದಾಗಿ ತಿಳಿಸುವಂತೆ ತೀರ್ಮಾನ ಮಾಡಿದರು.

೬. ದೇವರಾಜ ಮೊಹಲ್ಲೆಯಲ್ಲಿ ಮಹಮದೀಯರಿಗೋಸ್ಕರ ಒಂದು ಮ್ಯುನಿಸಿಪಲ್ ಸ್ಕೂಲ್ ಸ್ಥಾಪಿಸಿಕೊಡಬೇಕು; ಇಲ್ಲವಿದ್ದರೆ ಅಲ್ಲಿರುವ ಅಂಥಾ ಸ್ಕೂಲಿಗೆ ಗ್ರ್ಯಾಂಟು ಕೊಡಬೇಕು ಎಂಬದಾಗಿ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರು ಶಿಫಾರಸು ಮಾಡಿದ್ದರು. ಈ ವಿಷಯವು ಸ್ವಲ್ಪ ಚರ್ಚೆಗೊಳಗಾಯಿತು. ಈಗಲೇ ಮಹಮದೀಯರಿಗೆ ೪—೫ ಸ್ಕೂಲುಗಳು ಇರುತ್ತವೆ ಎಂತಲೂ, ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿರುವ ಸ್ಕೂಲುಗಳಿಗೇ ಗ್ರ್ಯಾಂಟು ಕೊಡಲು ಮ್ಯುನಿಸಿಪಾಲಿಟಿಯಲ್ಲಿ ಹಣವಿಲ್ಲದೆ ಇದೆ ಎಂತಲೂ, ಹೊಸದಾಗಿ ಯಾವ ಖರ್ಚನ್ನೂ ಮಾಡಲಾಗುವುದಿಲ್ಲವೆಂತಲೂ ಚರ್ಚೆಯಾಯಿತು. ಕಡೆಗೆ ಈ ಸಂಗತಿಯನ್ನು ಮ್ಯುನಿಸಿಪಲ್ ಸ್ಕೂಲ್‌ಗಳ ಕಮಿಟಿಗೆ ತಿಳಿಸಿ, ಅವರ ಅಭಿಪ್ರಾಯವನ್ನು ತಿಳಿಯೋಣವೆಂದು ತೆಗೆದಿಟ್ಟರು.

೭. ಮಹಮದೀಯರ ಖಬರಸ್ಥಾನದಲ್ಲಿ ಬಿಸಿಲು ಮಳೆಗಳು ಸ್ಪರ್ಶವಿಲ್ಲದಂಥಾ ಒಂದು ಮಂಟಪವನ್ನು ಕಟ್ಟಿಸಿಕೊಡಬೇಕೆಂದೂ, ಇತರ ಜಾತಿಯವರಿಗೆ ಆಯಾ ಪಂಗಡದ ಸ್ಮಶಾನ ಭೂಮಿಯಲ್ಲಿ ಅಂಥಾ ಮಂಟಪಗಳನ್ನು ಮ್ಯುನಿಸಿಪಾಲಿಟಿಯವರು ಕಟ್ಟಿಸಿಕೊಟ್ಟಿರುತ್ತಾರೆಂತಲೂ ಮಹಮದೀಯರು ಅರ್ಜಿ ಬರೆದುಕೊಂಡರು. ಈ ವಿಷಯವು ಚರ್ಚೆಯಾಗುವಾಗ್ಗೆ ಮೆಂಬರುಗಳು—ಚಿಕ್ಕಕೆರೆ ಬಳಿ ಮೊದಲಿದ್ದ ಸ್ಮಶಾನ ಭೂಮಿಯನ್ನು ಮ್ಯುನಿಸಿಪಾಲಿಟಿಯವರು ತಪ್ಪಿಸಿ, ಬೇರೆ ಕಡೆ ಮಾಡಿಕೊಟ್ಟರು. ಅಲ್ಲಿದ್ದಂತೆ ಒಂದು ಮಂಟಪ ಕಟ್ಟಿಸಿಕೊಡಬೇಕಾಗಿಬಂತು. ಯಾವ ಜಾತಿಯವರಿಗೂ ಮ್ಯುನಿಸಿಪಾಲಿಟಿಯವರು ಮಂಟಪಗಳನ್ನು ಕಟ್ಟಿಸಿಕೊಟ್ಟಿಲ್ಲ ಎಂದು ಮುಂತಾಗಿ ಹೇಳಿದರು. ಅಷ್ಟರಲ್ಲೇ ಮಹಮದೀಯರು ತಮ್ಮಲ್ಲೇ ಒಂದು ಮಂಟಪ ಕಟ್ಟಿಸಿಕೊಳ್ಳುವುದಕ್ಕೆ ೨೦೦ರ ತನಕ ಚಂದಾ ಎತ್ತಿದಾರೆಂದೂ, ಮ್ಯುನಿಸಿಪಾಲಿಟಿಯಿಂದ ಸ್ವಲ್ಪ ದ್ರವ್ಯಸಹಾಯ ಅಪೇಕ್ಷಿಸುತ್ತಾರೆಂದೂ ತಿಳಿದು ಬಂತು. ಆಗ ಮೆಂಬರುಗಳೆಲ್ಲಾ—ಯಾವ ಜಾತಿಯವರೇ ಆಗಲಿ ಈ ವಿಷಯಕ್ಕೆ ಮ್ಯುನಿಸಿಪಾಲಿಟಿಯವರನ್ನು ಹಣ ಕೇಳಿದಲ್ಲಿ ಅಂಥವರಿಗೆ ೨೦೦ ರೂಪಾಯಿಗೆ ಮೀರದಂತೆ ದ್ರವ್ಯಸಹಾಯ ಮಾಡಬಹುದು ಎಂಬುದಾಗಿ ತೀರ್ಮಾನ ಮಾಡಿದರು.

೮. ಮ್ಯುನಿಸಿಪಲ್ ಕಮೀಷನರಾಗಿದ್ದ ಮೆ|| ವೆಂಕಟರಾವ್ ಶೇಷಗಿರಿರಾಯರು ಕಾಲವಾದ್ದರಿಂದ ಅವರ ಸ್ಥಾನಕ್ಕೆ ಇನ್ನೊಬ್ಬರನ್ನು ನೇಮಿಸಬೇಕೆಂದು ವೈಸ್ ಪ್ರೆಸಿಡೆಂಟರು ಸೂಚಿಸಿದರು. ಪ್ರೆಸಿಡೆಂಟರೂ, ವೈಸ್ ಪ್ರೆಸಿಡೆಂಟರೂ, ಸರ್ಕಾರಿ ನೌಕರರಾಗಿರುವ ಮೆಂಬರುಗಳೂ ಮ್ಯುನಿಸಿಪಲ್ ಕಮೀಷನರಲ್ಲವೆಂತಲೂ ಅವರು ಚುನಾಯಿಸುವುದರಲ್ಲಿ ಓಟ್ ಕೊಡಕೂಡದೆಂತಲೂ ಪ್ರೆಸಿಡೆಂಟರು ಅರ್ಥ ವಿವರಣೆ ಮಾಡಿದರು. ಆದರೆ ಈ ಅರ್ಥವು ಸರಿಯಾದದ್ದಲ್ಲವೆಂದು ನಿರ್ಧಾರವಾದದ್ದರಿಂದ ಎಲ್ಲರೂ ಕಮೀಷನರುಗಳೇ ಎಂತಲೂ, ಎಲ್ಲರೂ ಸೇರಿ ಓಟು ಕೊಟ್ಟು ಚುನಾಯಿಸಬೇಕೆಂತಲೂ ಅವರು ಹೇಳಿದರು. ಈ ವಿಷಯವು ಅರ್ಧ ಗಂಟೆ ಚರ್ಚೆಯಾಗುತ್ತಿರುವಾಗ್ಗೆ ವಾಗ್ವಾದ ಅತ್ಯುಗ್ರವಾಯಿತು … ಆ ಮೇಲೆ ಉಳಿದ ಮೆಂಬರುಗಳೆಲ್ಲಾ ಓಟು ಹಾಕಿದರು. ಇದರಲ್ಲಿ ತೀರ್ಮಾನವಾದದ್ದೇನೆಂದರೆ—೧೫ ಮಂದಿ ಕಮೀಷನರುಗಳಲ್ಲಿ ಇವರಲ್ಲಿ ೮ ಮಂದಿ ಮೆ|| ಸುಬ್ಬಣ್ಣನವರಿಗೂ, ೭ ಮಂದಿ ಮೆ|| … ಕೃಷ್ಣರಾಯರಿಗೂ ಓಟು ಹಾಕಿದರು. … ಗವರ್ನ್‌ಮೆಂಟಿಗೆ ರಿಪೋರ್ಟು ಮಾಡತಕ್ಕದ್ದು.

ಇನ್ನೂ ಅನೇಕ ವಿಷಯಗಳು ಉಳಿದುಹೋದವು. ಅಷ್ಟರಲ್ಲಿ ಹೊತ್ತು ಬಹಳವಾದ್ದರಿಂದ ಮೀಟಿಂಗನ್ನು ಮುಕ್ತಾಯ ಮಾಡಿದರು.

## ವ್ಯವಸಾಯ ಸರ್ಕಾರಿ ಹುಕುಮುಗಳು.

ಶೇಂದಿ ವನಗಳನ್ನು ಕಾಪಾಡುವ ವಿಚಾರ.

ಸರ್ಕಾರದವರು ಶೇಂದಿ ಬಾಬಿನ ಉತ್ಪತ್ತಿ ಕಡಿಮೆಯಾಗದಂತೆ ಕಾಪಾಡಿಕೊಳ್ಳುವುದಕ್ಕೆ ಪ್ರಯತ್ನಪಟ್ಟು ಶೇಂದಿ ಗಿಡಗಳಿಗೆ ಕೇಡುಂಟಾಗದಂತೆ ನೋಡಿಕೊಳ್ಳುತ್ತಾರೆ. ಕಳೆದ ೧೮೯೩ ನೆ ಇಸವಿಯಲ್ಲಿ ಸರ್ಕಾರದವರು ಶೇಂದಿ ವನಗಳ ನಡುವೆ ಜಮೀನುಗಳನ್ನು ವ್ಯವಸಾಯಕ್ಕೆ ಕೊಡಕೂಡದೆಂದು ಹುಕುಂ ಮಾಡಿದರು. ಅನಂತರ ಈ ಹುಕುಮನ್ನು ೧೮೯೯ ನೆ ಜನವರಿಯಲ್ಲಿ ರದ್ದುಮಾಡಿ, ಅಂಥಾ ವನಗಳ ಮಧ್ಯೆ ಇರುವ ಜಮೀನುಗಳನ್ನು ಗೇಣಿದಾರರುಗಳ ಮೇಲೆಗೆ ಪೂರಾ ಕಂದಾಯಕ್ಕೆ ಕೊಡಬಹುದೆಂದು ಹುಕುಂ ಕೊಟ್ಟರು. ಇದರಿಂದ ಕೆಲವು ಕಡೆಗಳಲ್ಲಿ ಸಮರ್ಪಕವಾಗಿ ಕೆಲಸ ನಡೆಯುತ್ತಿರಲಿಲ್ಲ. ಆದ್ದರಿಂದ ಆ ಹುಕುಮು ೧೮೯೪ ನೆ ಜುಲೈನಲ್ಲಿ ರದ್ದು ಮಾಡಲಾಯಿತು. ಈಗ ೧೯೦೨ ನೆ ಆಗಸ್ಟ್‌ನಲ್ಲಿ ವನಗಳ ನಡುವೆ ಇರುವ ಜಮೀನುಗಳನ್ನು ಗವರ್ನ್‌ಮೆಂಟ್ ಸ್ಯಾಂಕ್ಷನ್ ಪಡೆಯದೆ ವ್ಯವಸಾಯಕ್ಕೆ ಕೊಡಕೂಡದೆಂತಲೂ, ಶೇಂದಿ ಸಂಬಂಧ … ಕೇಡುಂಟಾಗದಂತೆ ಅಂಥಾ ಜಮೀನುಗಳನ್ನು ಹುಲ್ಲನ್ನು ಬೆಳೆಸಿ ಪ್ರಯೋಜನ ಮಾಡಬೇಕೆಂತಲೂ ಹುಕುಂ ಕೊಟ್ಟರು. ಈಚೆಗೆ ಮಂತ್ರಿಗಳ ಪದ್ಧತಿಯು ಜಾರಿಗೆ ಬಂದದ್ದರಿಂದ ೧೯೦೨ ನೆ ನವೆಂಬರಿನಲ್ಲಿ ಶೇಂದಿ ಗಿಡಗಳು ಆರೋಗ್ಯದಿಂದ ಬೆಳೆದಿರುವ ಪ್ರದೇಶವನ್ನು ಗೇಣಿದಾರರುಗಳ ವಶಕ್ಕೆ ಬಿಟ್ಟುಕೊಡಬಾರದೆಂತಲೂ, ಆದಾಗ್ಯೂ ಅಂಥಾ ಗಿಡಗಳು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕೆಂತಲೂ, ಶೇಂದಿ ವನಗಳಿಂದ ಗೊತ್ತಾದ ಪ್ರದೇಶಗಳನ್ನೆಲ್ಲಾ ಹುಲ್ಲುಬನ್ನಿ ಹರಾಜಿನಿಂದ ಪಡೆಯತಕ್ಕದ್ದೆಂತಲೂ, ಹುಲ್ಲು ಕೊಯ್ದು ಸಾಗಿಸುವುದಕ್ಕೆ ಮಾತ್ರ ಅರ್ಜಿ ತೆಗೆದುಕೊಳ್ಳಬೇಕೆಂತಲೂ ಹುಕುಂ ಕೊಟ್ಟರು. ಆದರೆ ಶೇಂದಿ ವನಗಳ ನಡುವೆ ವ್ಯವಸಾಯಕ್ಕೆ ಅನುಕೂಲವಾದ ಜಮೀನುಗಳು ಗೋಚರವಾದರೆ ಮತ್ತು ವ್ಯವಸಾಯಕ್ಕೆ ಜಮೀನು ಅವಶ್ಯಕವಾಗಿದ್ದರೆ ಅಂಥಾ ಸಂದರ್ಭಗಳಲ್ಲಿ ಆ ಜಮೀನನ್ನು ನ್ಯಾಯವಾಗಿ ಕೊಡತಕ್ಕದ್ದೆಂದು ವಿಧಿಸಿದರು. ಈ ಭಾಗದಲ್ಲಿ ಸರ್ಕಾರದವರು ಇಲಾಖಾ ಅಧಿಕಾರಿಗಳ ಅಭಿಪ್ರಾಯವೇನೆಂದು ಬರೆದು ಕೇಳಿದರು. ಆ ಅಧಿಕಾರಿಗಳೆಲ್ಲಾ ಶೇಂದಿ ವನಗಳನ್ನು ಕಾಪಾಡುವುದು ಅತ್ಯವಶ್ಯವೆಂದು ಸೂಚಿಸಿ, ಅದಕ್ಕೆ ನಾನಾ ಸಲಹೆಗಳನ್ನು ಕೊಟ್ಟಿರುತ್ತಾರೆ.

ಸರ್ವೆ ಸೆಟ್ಲ್‌ಮೆಂಟ್ ಕಮೀಷನರು ಜಮೀನ್ ಹಿಡುವಳಿ ವಿಚಾರದಲ್ಲಿ ಲ್ಯಾಂಡ್ ರೆವಿನ್ಯೂ ಕೋಡನ್ನು ಬದಲಾಯಿಸಿ ಮಾಡಿ, ಹಿಡುವಳಿದಾರರು ರೂಲುಗಳನ್ನು ಸರಿಯಾಗಿ ನಡೆಸಿಕೊಳ್ಳದೆ ತಪ್ಪಿದ ಪಕ್ಷದಲ್ಲಿ ಅವರನ್ನು ಜಮೀನು ಬಿಟ್ಟು ಹೊರಡಿಸುವಂತೆ ಮಾಡಬೇಕೆಂದು ಸೂಚಿಸುತ್ತಾರೆ. ಎಕ್ಸೈಸ್ ಕಮೀಷನರವರೋ ಜಮೀನ್ ಹಿಡುವಳಿದಾರರು ಶೇಂದಿ ಗಿಡಗಳ ವಿಚಾರದಲ್ಲಿ ಸರಿಯಾಗಿ ನಡೆಸಿಕೊಳ್ಳದಿದ್ದ

ರೈತನಿಗೆ ಅಲ್ಪಸ್ವಲ್ಪ ಮುಲ್ಯಾನೆ ವಿಧಿಸುವುದರಿಂದ ಪ್ರಯೋಜನವಿಲ್ಲವೆಂತಲೂ; ಆ ಕೂಡ್ಲೆ ಆ ಜಮೀನು ಅವನಿಂದ ಸರ್ಕಾರದವರು ತೆಗೆದುಕೊಂಡುಬಿಡಬೇಕೆಂತಲೂ ತಿಳಿಸುತ್ತಾರೆ.

ಸರ್ಕಾರದವರಾದರೋ ಬಡವು ಕಡೆ ರೈತನಿಗೆ ಯಾವ ಅತಿ ಕಷ್ಟವೂ ಇಲ್ಲದೆ ವ್ಯವಸಾಯ ಕೆಲಸವು ಸರಾಗವಾಗಿ ನಡೆಯುವುದಕ್ಕೂ, ಇನ್ನೊಂದು ಕಡೆ ಸರ್ಕಾರಕ್ಕೆ ಬರತಕ್ಕ ಕಂದಾಯ ಉತ್ಪತ್ತಿಗೆ ಕುಂದಕ ಉಂಟಾಗದಂತೆಯೂ ನೋಡಿಕೊಳ್ಳಬೇಕಾಗಿದೆ. ಈ ವಿಷಯವನ್ನು ನೋಡಿ ಹುಕುಂ ಕೊಟ್ಟಿರುವುದೇನೆಂದರೆ:— ಕಂದಾಯ ಬಾಕಿ ಗಿದಗಳಿರುವ ಜಮೀನುಗಳನ್ನು ಇನ್ನು ಮೇಲೆ ವ್ಯವಸಾಯಕ್ಕೆ ಕೊಡಬೇಕಾಗಿ ಬಂದರೆ ಅಂಥಾ ಗಿದಗಳನ್ನು ಸರ್ಕಾರಕ್ಕೆ ರಿಜರ್ವ್ ಮಾಡಿಕೊಳ್ಳಕೂಡದು. ವ್ಯವಸಾಯಕ್ಕೆ ಕೊಡುವುದಕ್ಕಿಂತ ಆ ಕಂದಾಯ ಉತ್ಪತ್ತಿಯನ್ನು ಹೆಚ್ಚಾಗಿ ವೃದ್ಧಿ ಮಾಡಬಹುದೆಂದು ತಿಳಿಯಬರುವ ಜಮೀನುಗಳನ್ನು ರೈತರಿಗೆ ವ್ಯವಸಾಯಕ್ಕೆ ಕೊಡಕೂಡದು. ರೈತರ ದರಖಾಸ್ತನ್ನು ವಜಾ ಮಾಡತಕ್ಕದ್ದು. ಇದು ವರೆಗೆ ಸಾಗುವಳಿಗೆ ಕೊಟ್ಟಿರುವ ಜಮೀನುಗಳಲ್ಲಿ ಕಂದಾಯ ಗಿದಗಳ ಉತ್ಪನ್ನದ ವಿಷಯದಲ್ಲಿ ಒಡೆಯರಿಗೂ ರೈತರಿಗೂ ಮುಚ್ಚಳಿಕೆ ತೆಗೆದುಕೊಂಡಿದ್ದ ಪಕ್ಷದಲ್ಲಿ ಅಂಥಾ ಮುಚ್ಚಳಿಕೆಯ ಕರಾರಿನಂತೆಯೇ ನಡೆಸಿಕೊಳ್ಳತಕ್ಕದ್ದು. ಕರಾರಿಗೆ ವ್ಯತಿರಿಕ್ತವಾಗಿ ಉಳುವಳಿದಾರರು ನಡೆದುಕೊಂಡ ಪಕ್ಷದಲ್ಲಿ ಜಮೀನು ಅವನಿಂದ ಸರ್ಕಾರದವರು ಕಿತ್ತುಕೊಳ್ಳತಕ್ಕದ್ದು.

ಕಂದಾಯ ಹುಟ್ಟುವಳಿ ವಿಷಯದಲ್ಲಿ ನಷ್ಟವುಂಟಾಗದಂತೆ ಯಾವ ಯಾವ ಜಮೀನುಗಳನ್ನು ಸರ್ಕಾರದವರು ರಿಜರ್ವ್ ಮಾಡಿಟ್ಟುಕೊಳ್ಳಬೇಕಾಗಿದೆಯೋ ಸಂಸ್ಥಾನದಲ್ಲಿ ಅಂಥಾ ಜಮೀನುಗಳ ಪಟ್ಟಿಯನ್ನು ತಯಾರುಮಾಡಿ ಗವರ್ನಮೆಂಟಿಗೆ ಕಳುಹಿಸಬೇಕೆಂದು ಹುಕುಂ ಕೊಡಲಾಗಿದೆ. ಎಕ್ಸೈಜ್ ಕಮಿಷನರು ಜಾಗ್ರತೆಯಾಗಿ ಆ ಪಟ್ಟಿಯನ್ನು ತಯಾರುಮಾಡಿಸಬೇಕು. ಅದು ತಯಾರಾಗುವವರೆಗೆ ಈ ವಿಧ ಜಮೀನು ವ್ಯವಸಾಯಕ್ಕೆ ಕೊಡುವ ವಿಚಾರದಲ್ಲಿ ಎಕ್ಸೈಜ್ ಕಮಿಷನರ ಅಭಿಪ್ರಾಯವನ್ನು ಕೇಳತಕ್ಕದ್ದು.

ಕಾರ್ಖಾನೆಗಳ ಕಾನೂನು

ಮೈಸೂರು ಸಂಸ್ಥಾನದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಕಾರ್ಖಾನೆಗಳ ಸ್ಥಿತಿಗತಿಗಳನ್ನು ಕುರಿತು ಚೀಫ್ ಇಂಜಿನಿಯರು ವರುಷ ವರುಷಕ್ಕೆ ಒಂದು ರಿಪೋರ್ಟನ್ನು ಕಳುಹಿಸಬೇಕಾಗಿದೆ. ಪ್ರತಿ ಕಾರ್ಖಾನೆಯ ವಿವರವೂ ಈ ರಿಪೋರ್ಟಿನಲ್ಲಿ ಬರಬೇಕು. ಈ ವಿಷಯದಲ್ಲಿ ಮುಂದೆ ಹೇಳುವ ಸಂಗತಿಗಳನ್ನು ಸ್ಪಷ್ಟಪಡಿಸುವಂತೆ ಒಂದು ರಿಪೋರ್ಟು ಬರೆಯಬೇಕು. (೧) ಮಾಲೀಕರು, ಇನ್ಸ್‌ಪೆಕ್ಟರು, ಮ್ಯಾಜಿಸ್ಟ್ರೇಟರು ಇವರುಗಳು ಕಾರ್ಖಾನೆಗಳನ್ನು ತನಿಖೆ ಮಾಡಿದ ವಿವರ; (೨) ಕಾರ್ಖಾನೆಗಳ ಒಳ ಭಾಗಗಳಲ್ಲಿ ಇರುವ ಆರೋಗ್ಯ ವಿಚಾರ; (೩) ಕಾರ್ಖಾನೆಗಳಲ್ಲಿ ಕೂಲಿ ಮಾಡುವ ಹೆಂಗಸರು, ಗಂಡಸರು, ಹುಡುಗರು, ಮಕ್ಕಳುಗಳ ಆಯುಷ್ಯ ಮತ್ತು ಆರೋಗ್ಯಸ್ಥಿತಿ; (೪) ಯಂತ್ರಗಳಿರುವ ಮನೆಗಳ ಸುತ್ತಲೂ ಬೇಲಿ, ಬೇಲಿ, ಗೋಡೆ ಇವುಗಳನ್ನು ಹಾಕಿರುವ ವಿಚಾರ; (೫) ಕಾರ್ಖಾನೆಗಳಲ್ಲಿ ಅನಾಹುತಗಳು ನಡೆದ ಸಂಗತಿ; (೬) ಕಾನೂನ್ ಪ್ರಕಾರ ನಡೆಯದ ತಪ್ಪಿನ ಕಾರ್ಖಾನೆಯವರ ಮೇಲೆ ಫಿರ್ಯಾದು ಮಾಡಿದ ವಿಚಾರ; (೭) ಕಾರ್ಖಾನೆಗಳಲ್ಲಿ ಹೆಂಗಸರು, ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಂಡಿರುವ ವಿಚಾರ. ಕಾರ್ಖಾನೆಗಳ ವಿವರವೇನೆಂದರೆ — ಹತ್ತಿ, ಕಂಬಳಿ, ನಾರು, ಇವುಗಳಿಂದ ಬಟ್ಟೆ ಮುಂತಾದ್ದು ತಯಾರಿಸುವ ಕಾರ್ಖಾನೆ; ಕಾಗದ ಮಾಡುವ ಕಾರ್ಖಾನೆ; ಭತ್ತ ಕುಟ್ಟುವ ಕಾರ್ಖಾನೆ; ಹಿಟ್ಟು ಮಾಡುವ ಕಾರ್ಖಾನೆ; ಹತ್ತಿಯನ್ನು ಶೋಧಿಸುವ ಕಾರ್ಖಾನೆ; ಕಬ್ಬಿಣ, ಸಾಮಾನುಗಳನ್ನು ಎರಕ ಹೊಯ್ದು ಮಾಡುವ ಕಾರ್ಖಾನೆ; ಮರದ ಕಾರ್ಖಾನೆ; ಚಿನ್ನದ ಕೆಲಸದ ಕಾರ್ಖಾನೆ; ಸಕ್ಕರೆ ಕಾರ್ಖಾನೆ, ಅಚ್ಚಿನ ಕಾರ್ಖಾನೆ; ಇವೇ ಮೊದಲಾದವು.

ಸಿಗರೆಟ್ಟಿಗೆ ಚಟ್ಟಿಗಳಿಗೆ ಸುಂಕ.

ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಟಿ ಪ್ರೆಸಿಡೆಂಟರು ಸಿಗರೆಟ್ಟು ಚಟ್ಟಿಗಳನ್ನು "ತಂಬಾಕು" ಎಂಬ ದರ್ಜೆಗೆ ಸೇರಿಸಿ, ಅದರ ಮೇಲೂ ಆಕ್ಟ್ರಾಯ್ ಸುಂಕವನ್ನು ವಸೂಲು ಮಾಡಬಹುದೇ ಎಂಬದಾಗಿ ಸರ್ಕಾರದವರನ್ನು ಪ್ರಶ್ನೆ ಮಾಡಿದರು. ಇದಕ್ಕೆ ಗವರ್ನಮೆಂಟಿನವರು ೧೯೦೩ನೇ ನೊವೆಂಬರ್ ೧೦ ರಲ್ಲಿ ಕೊಟ್ಟಿರುವ ಹುಕುಂ ಏನೆಂದರೆ:—

ತಂಬಾಕು (ಹೊಗೆಸೊಪ್ಪನ್ನು) ಯಾವಾಕಾರ ಮಾಡಿದರೆ ಆಗಲಿ, ಚುಟ್ಟ ಸಿಗರೆಟ್ ಮೊದಲಾಗಿ ಸೇದುವ ರೂಪ ಬದಲು ಮಾಡಿ ಆಗಲಿ ಪಟ್ಟಣಕ್ಕೆ ಆದಕ್ಕೆಲ್ಲಾ ತಂಬಾಕಿನಿಗೆ ದಾಖಲಾಗುವ ಆಕ್ಟ್ರಾಯ್ ಸುಂಕವನ್ನು ಹಾಕಿ ವಸೂಲ್ ಮಾಡತಕ್ಕದ್ದು.

ಪೀರಕ್ಕೆ ಹೊಸ ಗುಡಿಗಳ ನೇಮಕ.

ಬಾಗೇಪಲ್ಲಿ ತಾಲ್ಲೂಕು ಗೂಳೂರಿನಲ್ಲಿ ನಿಜಾಮುದ್ದೀನ್ ಮಸ್ತಾನ್ ಸಾಹೇಬರ ದರ್ಗಾ ಮಸೀದಿ ಇಲಾಖೆಯ ಮೊಜಿಸ್ಟ್ರೇಟರಿಗೆ ಒಳಪಟ್ಟಿದ್ದು. ಇದಕ್ಕೆ ೬೦—೧೩—೪ ಪೈ ಗ್ರಾಂಟು ಸಲ್ಲುತ್ತಿದೆ. ಈ ಮಸೀದಿ ಗುರುಗಳಾದ ಇನ್ನೂ ಕರೀಮುಲ್ಲಾ ಸಾಹೇಬರು ದೇಶಸಂಚಾರ ಸ್ವಾಮಿಯವರು ಆಲಿಪಿದ್ದಾರೆ. ಕಿರ್ಯ ವರ್ಗದವರೆಲ್ಲಾ ಸೇರಿ ಅಭಿಪ್ರಾಯವನ್ನು ಗುರುಪೀರಕ್ಕೆ ಕಳುಹಿಸಿದರು. ಅದರ ಗುರುಗಳಿಗೆ ಮಾಸಿಕವನ್ನು ಕೊಟ್ಟಿದ್ದರಿಂದ ಅವರೂ ಅವರೂ ಸೇರಿ ಮಸೀದಿ ಕಾರುಬಾರುಗಳನ್ನು ನೋಡಿಕೊಂಡು ಹೋಗುತ್ತಿದ್ದರು. ಈಚೆಗೆ ನೂತನ ಗುರುಗಳು ೧೯೦೩ನೇ ಮಾರ್ಚಿ ೧೭ ರಲ್ಲಿ ಕಾಲಾಧೀನರಾದರು. ಅವರ ಪೀಠಕ್ಕೆ ಅರ್ಹರಾದ ಪತಿರಾಜ ಬೇಕೆಂದು ಸ್ವಾಮಿಗಳು ಬಂದಿರುತ್ತಾರೆ ಎಂಬದಾಗಿ ಕೋಲಾರ್ ಡೆಪ್ಯುಟಿ ಕಮಿಷನರು ಗವರ್ನಮೆಂಟಿಗೆ ರಿಪೋರ್ಟು ಮಾಡಿದರು. ಇದರ ಮೇಲೆ ಗವರ್ನಮೆಂಟಿನವರು ಹುಕುಂ ಮಾಡಿರುವುದೇನೆಂದರೆ.—

ಈ ಹೊಸ ಸ್ವಾಮಿಯವರು ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಂಡಿರುತ್ತಾರೆಂದೂ, ಮೊದಲಿದ್ದ ಸ್ವಾಮಿಯವರಿಂದ ನೇಮಕವಾಗಿರುತ್ತಾರೆಂತಲೂ, ಮಠದ ಶಿಷ್ಯರೆಲ್ಲಾ ಇವರನ್ನು ಒಪ್ಪಿಕೊಂಡಿರುತ್ತಾರೆಂತಲೂ ತಿಳಿದುಬಂದಿರುವ ಕಾರಣ ಗವರ್ನಮೆಂಟಿನವರು ಅವರೇ ನಿಜವಾದ ಮಠದ ಸ್ವಾಮಿಗಳೆಂದು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ.

ಬಾಣಹಳ್ಳಿ ಶ್ರೀ ಚನ್ನರಾಯ ಸ್ವಾಮಿ ದೇವಸ್ಥಾನ.

ಚಿಂತಾಮಣಿ ತಾಲ್ಲೂಕು ಬಾಣಹಳ್ಳಿಯಲ್ಲಿರುವ ಶ್ರೀ ಚನ್ನರಾಯ ಸ್ವಾಮಿ ದೇವಸ್ಥಾನಕ್ಕೆ ಕೆಲವು ಇನಾಂ ಜಮೀನು ಇರುತ್ತವೆ. ದೇವಸ್ಥಾನವು ಶಿಥಿಲವಾಗಿರುವುದು. ವಿಗ್ರಹವು ವಿಕಾರವನ್ನು ಹೊಂದಿರುವುದು. ಅನೇಕ ವರುಷಗಳಿಂದಲೂ ಪೂಜೆಯೇ ನಿಂತುಹೋಗಿದೆ. ಅರ್ಚಕನಾದರೋ ಪೂಜೆ ಮೊದಲಾದ ಯಾವ ಸೇವೆಯನ್ನೂ ನಡಸದೆ ಇನಾಂತಿಗಳನ್ನು ಅನುಭವಿಸುತ್ತಿದ್ದಾರೆ. ಡೆಪ್ಯುಟಿ ಕಮಿಷನರು ಅರ್ಚಕನಿಗೂ ಭಕ್ತಾದಿಗಳಿಗೂ ಎರಡು ವರುಷ ಕಾಲ ಗಡುವು ಕೊಟ್ಟು, ಅಷ್ಟರೊಳಗೆ ಅವರು ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿ, ಪೂಜೆ ಮುಂತಾದ್ದನ್ನು ಕ್ರಮಕ್ಕೆ ತರದೆ ತಪ್ಪಿದಲ್ಲಿ ಆ ಇನಾಂತಿ ಜಮೀನುಗಳನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಬೇಕು ಎಂಬದಾಗಿ ಸಲಹೆ ಕೊಟ್ಟಿದ್ದಾರೆ. ಗವರ್ನಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ.—

ಪೂಜಾರಿಯು ಅನೇಕ ವರುಷಗಳಿಂದ ಜಮೀನು ಅನುಭವಿಸುತ್ತಿದ್ದರೂ ಅವನು ಪೂಜೆ ಮುಂತಾದ್ದು ನಡೆಸದೆ ಇರುತ್ತಾನಾದ್ದರಿಂದ ಅವನಿಗೆ ಸ್ವಲ್ಪವೂ ರಿಯಾಯಿತಿ ತೋರಿಸಲಾಗದು. ಇನಾಂ ಜಮೀನುಗಳನ್ನು ಮುಜರಾಯಿ ಬಾಬಿಗೆ ಸೇರಿಸಿಕೊಂಡು, ಅವುಗಳ ಉತ್ಪತ್ತಿಯನ್ನು ಆ ದೇವಸ್ಥಾನದ ಫಂಡಿಗೆ ಹಾಕಿ, ತಾಲ್ಲೂಕ್ ಕಛೇರಿಯಲ್ಲಿ ಇಡಬೇಕು. ದೇವಸ್ಥಾನವು ಜೀರ್ಣೋದ್ಧಾರವಾಗಿ ಪೂಜೆ ಮುಂತಾದ್ದು ಯಥಾಪ್ರಕಾರ ನಡೆಯತಕ್ಕದ್ದು. ಹೀಗೆ ಮಾಡಿದರೆ ಜಮೀನುಗಳು ದೇವಸ್ಥಾನದ ಕೈಬಿಟ್ಟು ಹೋಗುವುದಿಲ್ಲ.

ಶ್ರೀ ಉತ್ತರಾದಿ ಮಠದ ರಿಪೇರಿ ವಿಚಾರವು.

ಹೊಸಕೋಟೆಯಲ್ಲಿರುವ ಶ್ರೀ ಉತ್ತರಾದಿ ಮಠಕ್ಕೆ ಅಮಲ್ದಾರ್ ಮಿ॥ ಸುಬ್ಬರಾಯರು ನಾಲ್ಕು ವರುಷ ರಿಪೇರಿ ಮಾಡಿಸಿದರು. ಇದಕ್ಕಾಗಿ ಅವರು ಕಳುಹಿಸಿದ ಬಿಲ್‌ಗಳನ್ನು ಡೆಪ್ಯುಟಿ ಕಮಿಷನರು ಒಪ್ಪಿಕೊಂಡು, ಆಕ್ಟಿಂಗ್ ಡಿವಿಷನಲ್ ಎಂಜಿನಿಯರ್ ಪಬ್ಲಿಕ್ ವರ್ಕ್ಸ್ ಇಲಾಖಾ ಸಬ್ ಡಿವಿಷನ್ ಆಫೀಸರೂ, ಡಿಸ್ಟ್ರಿಕ್ಟ್ ಮುಜರಾಯಿ ಅಸಿಸ್ಟೆಂಟ್ ಕಮಿಷನರ್ ಮಿ॥ ಇವರ ಕೈಯಲ್ಲಿ ಈ ಕಾಮಗಾರಿಯು ತೃಪ್ತಿಕರವಾಗಿಲ್ಲವೆಂತಲೂ, ಎಸ್ಟಿಮೇಟು ಮಾಡಿರುವುದೇ ತಪ್ಪಾಗಿದೆಯೆಂತಲೂ, ಅದರಂತೆ ಕೆಲಸವನ್ನೂ ಮಾಡಿಲ್ಲವೆಂತಲೂ, ಎಸ್ಟಿಮೇಟಿನಂತೆ ಕೆಲಸ ಮಾಡಿಸಿಲ್ಲವೆ ತಲೆ. ಮೇಲ್ಪಂಕ್ತಿ ಸರಿಯಾಗಿ ನಡೆಯಲಿಲ್ಲವೆಂತಲೂ, ಮಾಡಿರುವ ರಿಪೇರಿ ಕೆಲಸವೂ ಬಹಳ ನಾಶವಾಗಿದೆ ಎಂತಲೂ ರಿಪೋರ್ಟು ಮಾಡಿದ್ದಾರೆ.

ಈಚೆಗೆ ಮಧುಗಿರಿ ತಾಲ್ಲೂಕಿಗೆ ವರ್ಗವಾಗಿರುವ ಮಿ॥ ಸುಬ್ಬರಾಯರು ನಾಗರಿಕರ ವರ್ಗ ತಹಸೀಲ್ ಡೆಪ್ಯುಟಿ ಕಮಿಷನರ ಮುಖಾಂತರ ಈ ವಿಷಯದಲ್ಲಿ ಏನು ಸಮಾಧಾನ ಹೇಳುತ್ತೀರೆಂದು ಕೇಳಲಾಯಿತು. ಅವರು ಹೇಳುವುದೇನೆಂದರೆ —ಅನುಭವಶಾಲಿಯಾದ ಮೇಸ್ತ್ರಿಯು ಕೈಲಿ ಈ ರಿಪೇರಿ ಕೆಲಸ ಮಾಡಿಸಿದೆನು. ನಾನು ಮಠದ ಎಂಜಿನಿಯರು ಮಾಮೂಲಿನಂತೆ ನೋಡಿ ದಸ್ತಖತು ಹಾಕಿದ್ದು ಆದದ್ದು ಎಲ್ಲಾ ಒಪ್ಪಿದ ಕೆಲಸಗಳು. ಇದು ದುರಸ್ತಾಗಿ ಇಲಾಖೆಯವರ ಬಂದು ತನಿಖೆ ಮಾಡುವುದಕ್ಕೆ ಕಾಮಗಾರಿ ಮುಗಿದು ಬಹಳ ಕಾಲವಾಗಿತ್ತು.

ಡೆಪ್ಯುಟಿ ಕಮಿಷನರ್ ಮಿ॥ ದೇವರಾಜೇ ಅರಸಿನವರು ಕಾಮಗಾರಿ ಇಷ್ಟು ತೃಪ್ತಿಕರವಾಗಿರುವ ಭಾಗದಲ್ಲಿ ಮಿ॥ ಸುಬ್ಬರಾಯರು ನ್ಯಾಯವಾಗಿ ಜವಾಬ್ದಾರರಾಗಿರುತ್ತಾರೆಂದು ಅಭಿಪ್ರಾಯಪಟ್ಟು, ಕಂಟ್ರಾಕ್ಟರಿಗೆ ಬಾಕಿ ಸಲ್ಲಬೇಕಾಗಿರುವ ೬೩೪ ರೂಪಾಯಿಯನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ.

ಅಮಲ್ದಾರ್ ಸುಬ್ಬರಾಯರು ನಾಲ್ಕು ವರ್ಷ ಹೇಳುವ ಸಮಾಧಾನವು ತೃಪ್ತಿಕರವಾಗಿಲ್ಲವೆಂದು ತಿಳಿಸಲು ಸರ್ಕಾರದವರು ತುಂಬಾ ವಿಷಾದಿಸುತ್ತಾರೆ. ಟ್ಯಾಂಕ್ ಇನ್ಸ್‌ಪೆಕ್ಟರು, ವರ್ಕ್ಸ್ ಇನ್ಸ್‌ಪೆಕ್ಟರು ಅಳತೆಮಾಡಿ ತಯಾರುಮಾಡಿದ ಬಿಲ್‌ಗಳನ್ನೇ ಸಂಪೂರ್ಣವಾಗಿ ನಂಬಿ, ಅಷ್ಟಕ್ಕೂ ಕೊಡುವಂತೆ ಡೆಪ್ಯುಟಿ ಕಮಿಷನರಿಗೆ ಶಿಫಾರಸು ಮಾಡಬೇಕಾಗಿತ್ತು. ಇದಕಾರಣ ಇವರ ನಡವಳಿಕೆಯ ವಿಷಯದಲ್ಲಿ ಗವರ್ನಮೆಂಟಿನವರು ಅಸಮಾಧಾನಪಟ್ಟವರಾಗಿದ್ದಾರೆ. ಅಂದಾಜು ಬಿಲ್‌ಗಳನ್ನು ಸರ್ಕಾರದವರು ಒಪ್ಪಿ ೬೩೪ ರೂಪ ಬಾಕಿ ಹಣವಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

ಅಮಲ್ದಾರರೇ ಮೊದಲಾದ ಸ್ಥಳೀಯ ಅಧಿಕಾರಿಗಳು ಮುಜರಾಯಿ ಕೆಲಸವನ್ನು ಅಲಕ್ಷ್ಯದಿಂದ ಮಾಡುತ್ತಿರುವುದಕ್ಕೆ ಇದು ದೃಷ್ಟಾಂತವಾಗಿದೆ. ಕಾಮಗಾರಿ ಸಮರ್ಪಕವಾಗಿ ನಡೆದಿದೆ ಎಂಬ ವಿಚಾರವನ್ನು ತಿಳಿದುಕೊಳ್ಳದೇನೇ ಡೆಪ್ಯುಟಿ ಕಮಿಷನರು ಅಷ್ಟು ಭಾರೀ ಹಣವನ್ನು ಸ್ಯಾಂಕ್ಷನ್ ಮಾಡಬಾರದಾಗಿತ್ತು. ಇನ್ನು ಮೇಲೆ ಮುಜರಾಯಿ ಕೆಲಸಗಳ ಮೇಲ್ವಿಚಾರಣೆ ಬಾಬನ್ನು ಸ್ಥಳೀಯ ಅಧಿಕಾರಿಗಳಿಗೆ ವಹಿಸಿದಲ್ಲಿ ಅಂಥಾ ಕೆಲಸಗಳಿಗೆ ಬೇಕಾದ ಬಂದರೆ ಅಥವಾ ಅಕ್ಷರವೇ ತೋರುವುದಕ್ಕೆ ಮಾಡುವುದು ನಡೆದರೆ ಅವುಗಳಿಗೆಲ್ಲಾ ಅವರೇ ಜವಾಬ್ದಾರರಾಗಿರತಕ್ಕದ್ದು.

## ತಾಲ್ಲೂಕು ವರ್ತಮಾನಗಳು

ಕೋಲಾರ.—ಇದೇ ತಾಲ್ಲೂಕು ಮುದುವಾಡಿ ಮತ್ತು ಸೋಂಪಲಿ ಎಂಬ ದೊಡ್ಡ ಕೆರೆಗಳು ಪಾಲಾರ್ ನದಿಯ ಪ್ರವಾಹದಿಂದ ಒಡೆದುಹೋಗಿ ಬಹಳ ಅನರ್ಥವುಂಟಾದ ಸಂಗತಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದಿರಷ್ಟೆ. ಈ ಪಟ್ಟಣದಲ್ಲಿ ಈ ಮಳೆಯಿಂದ ಸುಮಾರು ನೂರಾರು ಮನೆಗಳು ಬಿದ್ದುಹೋದವು. ಕೈಗೆ ಬಂದಿದ್ದ ಪೈರುಗಳು ಮಳೆಯಿಂದ ನನೆದು ಕೊಳೆತವು. ಈ ಊರಿನ ದೊಡ್ಡ ಕೆರೆಯ ಏರಿಯು ತುಂಬಾ ಅಪಾಯವಾಗಿದ್ದದ್ದರಿಂದ ಅಮಲ್ದಾರರೂ, ಡೆಪ್ಯುಟಿ ಕಮಿಷನರ್ ಸಾಹೇಬರೂ ತುಂಬಾ ಮುತುವರ್ಜಿ ವಹಿಸಿ, ಕೆರೆಯನ್ನು ಉಳಿಸಿಕೊಂಡರು. ಹೊಳಲಿಕೆರೆಯು ಒಡೆದು ಹೋದ ಕೂಡಲೆ ಸಮೀಪದಲ್ಲಿದ್ದ ಬಯಲಾಂಬಹಳ್ಳಿಗೆ ನೀರು ನುಗ್ಗಿ ಅನೇಕ ಗೋಕಾಯಿಗಳೂ ದವಸಧಾನ್ಯಗಳೂ ಕೊಚ್ಚಿಕೊಂಡು ಹೋದವು. ಮನೆಗಳೆಲ್ಲಾ ಬಿದ್ದುಹೋದವು. ಜನಗಳು ಅನ್ನೋದಕಗಳಿಲ್ಲದೆ ತುಂಬಾ ಶ್ರಮಪಡುತ್ತಿದ್ದರು. ಈ ಸಂಕಟವನ್ನು ಜನಗಳೂ ಮಕ್ಕಳು ಮರಿಗಳೂ ಛಳಿಯಲ್ಲಿ ಪಡುತ್ತಿದ್ದದ್ದನ್ನು ಈ ತಾಲ್ಲೂಕು ನಂದಂಬಳ್ಳಿಯಲ್ಲಿರುವ ಜೋಯಿಸರಾದ ನಾಗೇ ಮಲ್ಲಪ್ಪಶೆಟ್ಟರವರು ನೋಡಿ, ತುಂಬಾ ಕನಿಕರದಿಂದ ಅವರುಗಳನ್ನು ಸಮೀಪದಲ್ಲಿರುವ ಎತ್ತರವಾದ ಗಟ್ಟಿನ ಮೇಲಕ್ಕೆ ಕರೆತಂದು, ಅವರುಗಳಿಗೆ ಅನ್ನಾಹಾರಗಳಿಗೆ ಇನಾಮರಿಗೂ ತುಂಬಾ ಅನುಕೂಲ್ಯವನ್ನುಂಟುಮಾಡಿ, ಬಹಳವಾಗಿ ಸಹಾಯ ಮಾಡಿದರು. ಈ ವಿಷಯದಲ್ಲಿ ಅವರ ಉಪಕಾರವನ್ನು ಈ ಗ್ರಾಮಸ್ಥರು ಎಷ್ಟು ಕೊಂಡಾಡಿದರೂ ಸ್ವಲ್ಪವೇ ಇದೆ. ಹೊಸ್ತಿ ೫—೬ ದಿವಸಗಳಲ್ಲಿ ತಾಲ್ಲೂಕ್ ಅಮಲ್ದಾರರೂ ಪೊ॥ ಇನ್ಸ್‌ಪೆಕ್ಟರು ಸಹಾ ಹೋಗಿ ನೋಡಿಕೊಂಡು ಬಂದರು. ಈಗ ೨—೩ ದಿವಸಗಳಿಂದ ಸ್ವಲ್ಪ ಬಿಸಿಲು ಕಾಯುತ್ತಿದೆ.

ದೇವನಹಳ್ಳಿ.—ಪ್ಲೇಗ್ ಮರಣಗಳು ದಿನ ಒಂದಕ್ಕೆ ೨—೩ ಕ್ಕೆ ಇಳಿದಿರುತ್ತವೆ. ಪ್ರಜೆಗಳು ಊರಿನಲ್ಲಿ ತಮ್ಮ ಮನೆಗಳಲ್ಲಿ ಪ್ಲೇಗ್ ಮರಣವಾದರೆ ಗುಡಿಸಲುಗಳಿಗೆ ಹೋಗುವುದೂ, ಗುಡಿಸಲುಗಳಲ್ಲಿ ಪ್ಲೇಗ್ ಮರಣವಾದರೆ ಊರಿಗೆ ಬರುವುದೂ. ಈ ರೀತಿಯಾಗಿ ಊರಿನಲ್ಲಿ ಇರುವ ರೋಗದ ನೋಟು ಹೋಗದೆ ಇನ್ನು ದೀರ್ಘಕಾಲ ಕಷ್ಟಕ್ಕೆ ಕಾರಣವಾಯಿತು. ಪ್ರಜೆಗಳು ಅದೃಷ್ಟವೆಂಬ ಸೂತ್ರವನ್ನು ಹಿಡಿದುಕೊಂಡು, ಪ್ಲೇಗ್ ನಮಗೆ ಬರಲಾರದೆನ್ನುತ್ತಾರೆ. ಈ ಮಧ್ಯೆ ಬಿದ್ದ ೧೦—೧೨ ದಿನಗಳ ಜಡಿ ಮಳೆಯಿಂದ ಸುಮಾರು ೪೦೦—೫೦೦ ಮನೆಗಳು ಬಿದ್ದುಹೋದವು ಎಂದು ಹೇಳಿಕೊಳ್ಳುತ್ತಾರೆ. ಕಷ್ಟದಲ್ಲಿ ಸಹಾಯ ಬೇಕಲ್ಲ ಎಂದು ಜನರು ಗೋಳಾಡುತ್ತಾರೆ. ಅಮಲ್ದಾರರೂ ಪೊಲೀಸ್ ಇನ್ಸ್‌ಪೆಕ್ಟರೂ ಮನೆ ಬಳಿಗಾಗಿ ಎಂದು ಒಳಗೆ ಸೇರಿಕೊಂಡು ಬೆಟ್ಟವಿ ನೋಡದೆ, ಊರಿನ ಸಂದುಗೊಂದುಗಳನ್ನೂ ಗುಡಿಸಲುಗಳನ್ನೂ ಸುತ್ತಿ ಪ್ರಜೆಗಳಿಗೆ ಧೈರ್ಯವನ್ನು ಹೇಳುತ್ತಾ ಬಹು ಉಪಕಾರಮಾಡುತ್ತಾರೆ.— ಅಲ್ಲದೆ ಅಮಲ್ದಾರರು ಎಲ್ಲಾ ಕೆಲಸಗಳನ್ನು ಬಹು ಮುತುವರ್ಜಿಯಿಂದ ನೋಡಿ ನಡೆಸುವ ಪರಿವಾರ ದೇವತೆಗಳು ದೊರೆತಂತೆ ಇದು ನಮಗೆ ಕಾಣುತ್ತದೆ. ಇದು ಪ್ರಜೆಗಳ ಪ್ರಯೋಜನ ಎಂದು ಹೇಳಬೇಕಾಗಿದೆ. ಪೊಲೀಸ್ ಇನ್ಸ್‌ಪೆಕ್ಟರು ರಾತ್ರಿ ಹಗಲು ಕೆಲಸದಲ್ಲಿ ಮಾತ ಪಡೆಸಾಗುವದರಿಂದ ಊರಿನಲ್ಲಿ ಪೋಲೀಸಿನವರ ಗಸ್ತು ಕ್ರಮವಾಗಿ ನಡೆಯುವುದಕ್ಕೆ ಕಾರಣವಾಯಿತು. ಕಳ್ಳರ ಕಾಟ ಕಡಿಮೆ. ರುಂಟರು ಸ್ಟೇಷನ್ ಹಾಗೆ ನಡೆಸಿ ಮಾಡುತ್ತಿದ್ದಾರೆ. ಹಿಂದೆ ನಡೆದಿರುವ ಕೇಸುಗಳ ಪೈಕಿ ಕೆಲವು ಈಗ ಪತ್ತೆ ಹಚ್ಚಬಹುದು ಎಂದು ಜನರು ಮಾತನಾಡಿಕೊಳ್ಳುತ್ತಾರೆ. ಕೊಲೆಯಾದವರ ನಂಜಪ್ಪನ ಮೇಲೆ ಕೇಸು ಚಾರ್ಜಾಗಿದೆ ಎಂದು ಹಿಂದೆ ತಿಳಿಸಿದ್ದೆನಷ್ಟೆ. ತಕ್ಕ ರುಜುವಾತು ಇಲ್ಲದೆ ಆ ಕೇಸು ವಜಾ ಆಗುತ್ತದೆ ಎಂದು ಕೇಳುತ್ತೇನೆ.—ಸುಮಾರು ೩—೪ ವರುಷಗಳಿಂದಲೂ ಇಲ್ಲಿ ಪ್ರೊಬೇಷನರಾಗಿದ್ದ ಮಿ॥ ಭೀಮರಾಯರಿಗೆ ನಗರಕ್ಕೆ ಆರ್ಡರು ಬಂದಿದೆ ಎಂದು ಸಮಾಚಾರ ಕೇಳುತ್ತೇನೆ. ಇವರು ತಮ್ಮ ಕೆಲಸದಲ್ಲಿ ಬಹು ಮುತುವರ್ಜಿಯಾಗಿಯೂ ಊರಿನಲ್ಲಿ ಜನದ ಪ್ರೀತಿಪಾತ್ರರಾಗಿಯೂ ಇದ್ದರು. ಅಲ್ಲದೆ ಎಲ್ಲಾ ಜನರನ್ನು ಏಕರೀತಿಯಾಗಿ ನೋಡಿ ಸರ್ಕಾರದಿಂದ ಮಾರಲ್ಪಡುವ ಕ್ವಿನೈನ್ ಎಂಬ ಜ್ವರದ ಔಷಧವನ್ನು ಹೊರಟುರು ಮಾಡಿಗಲು ಸಹ ಯಾವ ಸಮಯದಲ್ಲಿ ಕೇಳಿದರೂ ಬೇಸರವಿಲ್ಲದೆ ಬಹು ಸಂತೋಷದಿಂದ ಕೊಟ್ಟು, ಅನೇಕರಿಗೆ ಬಹು ಮೇಲು ಮಾಡಿದವರಾಗಿರುತ್ತಾರೆ. ಅಂಥಾ ದಯಾಳು ಗುಣಶೀಲರನ್ನು ಕಳೆದುಕೊಳ್ಳುವದು ಬಹು ವ್ಯಸನಕರವಾದ ಕಾರ್ಯವಾಗಿದೆ.

ಕೊಪ್ಪ.—ಇಲ್ಲಿನ ಗೌರ್ನಮೆಂಟ್ ಸ್ಕೂಲಿನಲ್ಲಿ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಇನಾಂ ಕೊಡಲಾಯಿತು. ಪೊಲೀಸ್ ಇನ್ಸ್‌ಪೆಕ್ಟರ್ ಮಿ॥ ಮಹಮ್ಮದ್ ಜಾಫರ್ ಸಾಹೇಬರು ಅಗ್ರಾಸನವನ್ನು ವಹಿಸಿದ್ದರು. ಸೂಪರ್‌ವೈಜರ್ ಮಿ॥ ರಾಮರಾಯರು, ಅತ್ತಿ ಮಿ॥ ಚನ್ನಸ್ವಾಮಿಯವರು, ಮ್ಯುನಿಸಿಪಲ್ ಮೆಂಬರುಗಳು, ಪಟ್ಟಣದ ದೊಡ್ಡ ಮನುಷ್ಯರು ಸಹ ಸಭಾ ಅಲಂಕರಿಸಿದ್ದರು. ಪುಸ್ತಕಗಳು ಇನಾಂ ಕೊಟ್ಟನಂತರ ವಿದ್ಯಾ ವಿಷಯವನ್ನು ಕುರಿತು ಇಲ್ಲಿನ ಹೆಡ್‌ಮಾಸ್ಟರು ಉಪನ್ಯಾಸ ಮಾಡಿದರು. ಇದರ ಮುಖ್ಯಾಂಶ ಅವಶ್ಯವಾಗಿ ಎಲ್ಲರೂ ತಿಳಿದುಕೊಳ್ಳಬೇಕಾದದ್ದು.—ಲೋಕದಲ್ಲಿ ಜಂಗಮ ಪ್ರಾಣಿಗಳಿಗೆ ವಿದ್ಯಾ ಬುದ್ಧಿಯೆಂಬ ವಿಷಯವು ಅತ್ಯಾವಶ್ಯ. ಪಶುಪಕ್ಷಿ ಮುಂತಾದ ಜಂತುಗಳಿಗೆ ಬುದ್ಧಿ ಮಾತ್ರವುಂಟು. ಅವು ಹಸಿವು, ನಿದ್ರೆ, ತನ್ನ ಯಜಮಾನ, ತನ್ನ ಮರಿ, ತಾನು ತಿನ್ನಬಹುದಾದ ಪದಾರ್ಥ, ಇವುಗಳನ್ನು ಚೆನ್ನಾಗಿ ಬುದ್ಧಿಯಿಂದ ತಿಳಿದುಕೊಳ್ಳಬಲ್ಲವು. ವಿದ್ಯೆಯಿಲ್ಲದ್ದರಿಂದ ತಮಗೆ ಇಷ್ಟು ಮಾರಿಕ

ಳೆಂತಲಾಗಲಿ, ಅವುಗಳ ಹೆಚ್ಚು ಕಮ್ಮಿಯಾಗಲಿ ತಿಳಿಯುವ ಶಕ್ತಿಯು ಳ್ಳ ಮನುಷ್ಯಜಾತಿ ಒಂದಕ್ಕೆ ಮಾತ್ರ ವಿದ್ಯಾ ಬುದ್ಧಿ ಸ್ವಂದವಾಗಿ ರುತ್ತೆ. ವಿದ್ಯಾವಿಹೀನರಾದವರು ಕಾಲವ ಹುಟ್ಟು ಮಾಡುವಾಗ ಅದ ಕ ಬರೀದಿ ಎಂಬದು ಲಕ್ಷ್ಯ ಮಾಡಿಕೊಳ್ಳಬಲ್ಲರು. ಇದು ವಿದ್ಯದ ಮೊದಲನೆ ಅಂಶ. ಇದರ ಮೇಲೆ ಕಲಿಯುವ ವಿದ್ಯಕ್ಕೆ ಅಂತ್ಯವಿ ಲ್ಲ. ಎಷ್ಟು ಕ್ರಮಪಟ್ಟು ವಿದ್ಯಾ ಕಲಿತರೂ ಅದಕ್ಕೆ ಸಮಾನವಾದ ಪಾರಿಕಾಮುಷ್ಮಿಕ ಸುಖಗಳನ್ನು ಅನುಭವಿಸಬಹುದು. ಈ ಸಿಹ ಯ ಮಲನಾಡು ಜನಗಳ ಪೈಕಿ ಅನೇಕರು ತಿಳಿದುಕೊಂಡಿರಲಾ ರರು. ಈ ಕಾಡಿನ, ಮಲೆನಾಡು ಪೈಕಿ ತಕ್ಕಮಟ್ಟಿಗೆ ಒಂದು ಕಡೆ ಜನಗಳು ವಾಸಮಾಡುವ ಗ್ರಾಮ. ಇಲ್ಲಿ ೧೮೯೯ ನೆ ಇಸವಿಯಲ್ಲಿ ಸ್ಕೂಲ್ ಸ್ಥಾಪಿತವಾಗಿ ಈಗ್ಯೆ ೧೪ ವರುಷಗಳಾಗುತ್ತಾ ಬಂತು. ಸರಾಸರಿ ೪೦ ಹುಡುಗರು ಸ್ಕೂಲಿಗೆ ಬರುತ್ತಾರೆ. ಅವರಿಗೆ ಒಬ್ಬ ಉಪಾಧ್ಯಾಯರೂ ಲೋಯರ್, ಸೆಕಂಡರಿ ಸ್ಟಾಂಡರ್ಡ್‌ಗೆ ಬಂದಿಲ್ಲ ಆದರಿಂದ ವಿದ್ಯದ ಬೆಲೆ ಇಲ್ಲಿನವರಿಗೆ ಗೊತ್ತಿಲ್ಲವೆಂತ ಹೇಳಬೇಕಾ ಗಿದೆ. ಆದುಕಾರಣವೇ ಈ ಪ್ರಾಂತ್ಯದವರು ದೇಶಸಂಚಾರ ಮಾಡ ದೇಲೂ, ಪ್ರಪಂಚ ವಿಷಯಗಳು ತಿಳಿಯದೇಲೂ ಸ್ವಗ್ರಾಮವಾಸಿಗ ಳಾಗಿದಾರೆ. ಇಲ್ಲಿ ಸೇರಿಂತಕ್ಕ ದೊಡ್ಡಮನುಷ್ಯರೆಲ್ಲರೂ ಜನಗಳಿಗೆ ಪ್ರೋತ್ಸಾಹ ಮಾಡಿ ವಿದ್ಯಾಭಿವೃದ್ಧಿ ಗೊಳಿಸಬೇಕಾಗಿ ವಿಜ್ಞಾಪ ನೆ.—ಮಲನಾಡಿನಲ್ಲಿ ಈ ಸಂವತ್ಸರ ಮಳೆ ಜಾಸ್ತಿಯಾಗಿ ಮುಖ್ಯ ವಾದ ಅಡಿಕೆ ಫಸಲಿಗೆ ೨ ನೆ ದಫಾ ಕೊಳೆ ಬಂದಿದೆ. ಉಳಿದ ಫಸ ಲ್ ಕಟಾವಿಗೆ ಮಾಮೂಲಿಗೆ ಬಿಸಲು ಇಲ್ಲದೆ ಮರದ ಮೇಲೆ ಅಡಿ ಕೆ ನಷ್ಟವು ಆಗುತ್ತಾ ಇದೆ. ಕೊಳೆ ರೋಗ ಬಿಟ್ಟಿಲ್ಲ.—ನಮ್ಮ ಅಮಲ್ದಾರ್ರು ರಜಾದ ಮೇಲೆ ದಯಮಾಡಿದಾರೆ ನಮ್ಮ ಸಬ್ ರಿಜ ಸ್ಟ್ರಾರ್ರು ಕಾಲ ಕಾಲಕ್ಕೆ ರಿಜಿಸ್ಟ್ರಿ ಮಾಡುವದರಲ್ಲಿ ಉದಾಸೀನ ರಾಗಿ ಜನಗಳಿಗೆ ತೊಂದರೆ ಉಂಟಾಗುತ್ತಲಾಗಿಯೂ, ಒಬ್ಬ ನ್ಯ ವ್ಯ ಹೆಂಗಸು ಮೂರು ದಿವಸ ಬಂದು ಮೊಬ್ಬೈರ್‌ನಾಮೆ ಸಬ್‌ರಿಜ ಸ್ಟ್ರಾರ ೨ ಮೈಲಿ ಇರುವ ಆಫೀಸಿಗೆ ಛಂ ೩ ಮಾಡಿಕೊಂಡು ಹೋಗಿ ನೋಟಲ್ ಬರೆದ ಛಾಪಾ ಕಾಗದ ಸರಿಯಾಗಿಲ್ಲವೆಂದು ಕ್ರಮ. ತರುಸಿ ಅವರಿಗೋಸ್ಕರ ಹೋಗಿದ್ದ ದೊಡ್ಡಮನುಷ್ಯರಿಗೆ ತಿರ ಸ್ಕಾರ ಮಾಡಿಯೂ ಹೇಳಿಕೊಳ್ಳುತ್ತಾರೆ. ಇದು ಈಗಿನ ನಾಗ ರೀಕಕ್ಕೆ ಅಸಮಂಜಸವಾಗಿ ತೋರುವದನ್ನು ತಮ್ಮಲ್ಲಿ ತಾವೇ ದುಃಖ ಸ್ತ ಮಾಡಿಕೊಳ್ಳುವರಾಗಿ ನಂಬಿದೇವೆ.—ಈ ಊರಿನವರು ಪ್ಲೇಗ್ ರೋಗದ ಗಲಾಟೆಯಿಂದ ಕೆಲವು ಊರುಬಿಟ್ಟಿದ್ದಾರೆ. ಕೆಲವರು ಬಿಡುವವರಾಗಿದ್ದಾರೆ. ಈ ಊರಲ್ಲಿ ಈ ವರುಷ ಮಾರ್ಕೆಟು ಸ್ಥಾಪಿಸಿಯಾರೆ. ಇದುವರೆಗೆ ಅಷ್ಟು ಗುಡಿಸುವದೇ ಅಗಲಿ, ಪೇ ಟೆಗಳು ಹುಟ್ಟುವದೇ ಆಗಲಿ, ಜನರ ವಿಧವಾದ ಪದಾರ್ಥಗಳೂ ಕ್ರ ಮವಾಗಿ ಸಮಲ್ಲ. ಮಿಂಡ ಲಂಭಗಳು ೨—೩ ತಿಂಗಳ ಲಾಗಾಯ ತು ಬಂದು ತಾಲ್ಲೂಕು ಕಚೇರಿಯಲ್ಲಿ ಬಿದ್ದವೆ

ತುಂಕೂರು.—ಈಗ ನಾಲ್ಕಾರು ದಿವಸಗಳಿಂದ ಮೋಡ ಮುಚ್ಚಿಕೊಂಡು ಸಾಧಾರಣವಾಗಿ ಮಳೆ ಸುರಿಯುವದರಿಂದ ಕಟಾ ವು ಮಾಡುವ ಕುಪ್ಪೆ ಫಸಲಿಗೆ ಬಹಳ ನಷ್ಟವಾಗಿದೆ.—ಪ್ಲೇಗ್ ರೋಗವು ಶಮನವಾಗಿರುವದರಿಂದ ಪ್ಲೇಗ್ ಕ್ಯಾಂಪು ಮಾಡಿದ್ದ ಸರ್ಕಾರದವರು ಗ್ರಾಮಗಳಿಂದ ಜನರ ತೆರಸಿ ಹೊರಡಿಸುವ ಲ್ಲಿಯೂ ಕೋಟೆಯ ಕೆಲವು ಭಾಗಗಳನ್ನು ಬಿದ್ದು ಮಾಡುತ್ತಿದ್ದಾರೆ. ಈಗಾಗಲೇ ಬೇಕೆ ಮಾಡುತ್ತೋಗಿರುವದರಿಂದ ಮಾಲಿಕ್ಕೆ ಬಂದ ಕ್ಷಮೆರೇ ಸ್ವಂತವಾಗಿ ಬೇಕಾದ್ದನ್ನು ತಂದರೆ ಬಿದ್ದುಮಾಡಿಸಿ ಕೊಡು ತ್ತೇವೆಂದು ಹೇಳುತ್ತಿದ್ದಾರೆ. ಸರ್ಕಾರದವರಿಗೇ ಬೇಕು ವಿಚಾರದಲ್ಲಿ ಮಾಲರ್ಭವಾಗಿರುವಲ್ಲಿ ಹೊರಗಡೆ ಈಗ ೭—೬ ತಿಂಗಳಿಂದ ಗುಡಿ ಸಲಿನಲ್ಲಿ ಕಷ್ಟಾ ಮಾಡಿಕೊಳ್ಳುತ್ತಿರುವ ಬಡ ಪ್ರಜೆಗಳು ಕ್ಷಾಮಗಳಿಂ ದ ಬೇಸತ್ತಿರುವರೂ ಸಿಕ್ಕದಿರುವಲ್ಲಿ ಎಲ್ಲಿಯ ತರಲಾರರು ಎಂದು ಸಂಕಟಪಡುತ್ತಿದ್ದಾರೆ. ಸರ್ಕಾರದವರೇ ಈ ವಿಷಯದಲ್ಲಿ ಪ್ರಜೆಗ ಳಿಗೆ ಸಹಾಯ ಮಾಡಿ ಮನೆಗಳನ್ನು ಬಿದ್ದು ಮಾಡಿಸಿ ಜಾಗ್ರತೆ ವಾಸ ಕ್ಕೆ ಅಪ್ಪಣೆ ಕೊಡಬೇಕಾಗಿ ಕೋರುತ್ತೇವೆ.—ಈಗ ಪಟ್ಟಣದಲ್ಲಿ ಅಕ್ಕಪಕ್ಕಗಿರುವ ಭಾಗಗಳಲ್ಲಿ ಮನೆಗಳನ್ನು ಒಡೆಯಿಸಿ, ಆರೋಗ್ಯ ಕ್ಕೆ ಅನುಕೂಲವಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದವ ರ ಗಮನಕ್ಕೆ ತರುವ ಮುಖ್ಯಾಂಶವೇನೆಂದರೆ.—ಕೋಟೆಯಲ್ಲಿ ಸಾಂಕ್ರಾಮಿಕ ರೋಗಗಳಿಗೆ ಬಲವಾದ ಆಸ್ಪದ ಸ್ಥಳಗಳಾದ ಹೊಂಡಗಳಿವೆ, ವಿಷ್ಣು ಕೆರೆಯಲ್ಲಿ ಆರೋಗ್ಯಕ್ಕೆ ಅವಶ್ಯವಾದ ಪ ರ್ಯಾಯ ಮಾಡುವದು ಪ್ರಜಾಸೌಕರ್ಯಕ್ಕೆ ತುಂಬಾ ಸಹಾಯವಾಗು ತ್ತೆ. ಇಷ್ಟು ವಿಸ್ತರಿಸ ಮುಂದ ಇದೇ ರೀತಿಯಾಗಿ ನಿವಾಸಿಗಳು ವಿಶೇ ಷವಾಗಿ ಕಷ್ಟನಷ್ಟಗಳಿಗೆ ಗುರಿಯಾಗುತ್ತಾರೆ. ಅದ್ದರಿಂದ ಬಂಗ ಳೂರು ಮುಂತಾದ ಪಟ್ಟಣಗಳಲ್ಲಿ ಏರ್ಪಾಡು ಮಾಡುವಂತೆ ಮಂ ಡಿ ಪೇಟೆಯನ್ನು ರೈಲ್ವೆ ಸ್ಟೇಷನ್ ಹತ್ತರ ಮಾಡುವದರಿಂದ ಆಗಾಗ್ಯ ವ್ಯಾಪಾರಗಳನ್ನು ಬಿಟ್ಟು ಬಿಕ್ಕಟಾಗಿ ಓಡಿಹೋಗಿ ಕಂಗಾಲಾಗುತ್ತಿ ರುವ ವರ್ತಕರಿಗೂ, ಮಾಮೂಲಿಗಳನ್ನು ಎಳೆಯಲಾರದೆ ಸಂಕಟಪಡು ತ್ತಿರುವ ಎತ್ತುಗಳಿಗೂ ಅನುಕೂಲವಾಗುತ್ತೆ. ದಯಾಳುಗಳಾದ ಸರ್ಕಾರದವರು ಪ್ರಜೆಗಳಿಗೆ ಈ ರೀತಿ ಅನುಕೂಲಮಾಡಿ ಕೊಡ ಬೇಕೆಂದು ಪ್ರಾರ್ಥಿಸುತ್ತೇವೆ. ಈಗ ೫—೬ ತಿಂಗಳಿಂದಲೂ ಮನೆ ಮಾರುಗಳನ್ನು ಬಿಟ್ಟು ಹೊರಗಡೆ ಬೈಲಿನಲ್ಲಿ ಮಕ್ಕಳು ಮರಿಗಳೊಡ ನೆ ಮಳೆ, ಗಾಳಿ, ಛಳಿಗಳಲ್ಲಿ ಸಂಕಟಪಡುತ್ತಿರುವ ಪ್ರಜೆಗಳನ್ನು ಭಗವಂತನು ಕರುಣಿಸಿ ಜಾಗ್ರತೆ ಸೌಖ್ಯವನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಚಿತ್ರದುರ್ಗ.—ಇಲ್ಲಿ ಎರಡು ಮೂರು ದಿನಗಳಿಂದ ಮೋಡಗ ಳು ಮುಸುಕಿಕೊಂಡು ತುಂತುರು ಮಳೆ ಆಗುತ್ತಿರುವದು. ಹೀಗಿರುವದು ತೊಗರಿ, ಅವರೆ, ಕಡ್ಲೆ ವಗೈರೆ ಪೈರಿಗೆ ತುಂಬಾ ಕೇ ಡೆಂದು ಹೇಳುತ್ತಾರೆ. ಕಳೆದ ಸಾಲಿನಲ್ಲಿ ಹೀಗಾದ್ದರಿಂದ ತೊಗರಿ ವಗೈರೆ ಫಸಲಾಗದೆ ಈ ವರುಷದ ಹವಿಸ ಆತರ ತೊಗರಿಬೇಳೆ ೮

ಗಳ್ಕೆ ಅರು ಸೇರು ಕೊಡ ಸಿಕ್ಕುವದು ಅತಿ ದುರ್ಘಟವಾಗಿದೆ. ಈ ಊರಿನಲ್ಲು ಸುತ್ತುಮುತ್ತು ಇರುವ ಗ್ರಾಮಗಳಲ್ಲಿಯೂ ಬಳ್ಳಾರಿ ವಗೈರೆ ಕಾಯಿಲೆಯಿಂದ ಜನರು ನರಳುತ್ತಿರುವದರಿಂದ ಅನೇಕ ಕಡೆ ರಾಗಿ ಜೋಳ ಫಸಲನ್ನು ಇನ್ನಾದರೂ ಕೊಯ್ಯುವದಕ್ಕೆ ಮಾರ್ಗವಿಲ್ಲದಿರುವದು.—ಈ ತಿಂಗಳಲ್ಲಿ ಯಾರೋ ಇಬ್ಬರು ದು ರ್ನಡತೆಯಿಂದ ಬಸುರಾಗಿ ಹುಟ್ಟಿದ ಎರಡು ಕೂಸುಗಳನ್ನು ಮೂ ಗರ್ದ ಬಳಿ ಬಿಸಾಟು ಇದ್ದರು. ಎರಡು ಕೂಸುಗಳೂ ಸತ್ತಿದ್ದವು. ಪೋಲೀಸಿನವರು ತಲಾಷ್ ಮಾಡುವದರಲ್ಲಿದ್ದಾರೆ.—ಇದೇ ತಿಂಗಳಲ್ಲಿ ೫ ತಾ॥ ನಲ್ಲಿ ಸುಮಾರು ೪—೧೦ ಜನರು ನಾನು ಕೆಡಿದು ಸತ್ತರೆಂ ದೂ, ಬಸ್ಮಸಾಗರದಲ್ಲಿ ಒಂದು ಮನೆಯಲ್ಲಿ ಒಂದು ಸಾಗರದಾಸ್ತ್ರಿ ಒಬ್ಬ ಹುಡುಗಿಯನ್ನು ಕಡಿದು ಅಳೆಯು ಸಾಯಲು ಆ ಮನೆಯವ ರು ಸದರಿ ಹಾವನ್ನು ಕಣ್ಣಾರ ನೋಡಿದಾಗ್ಯೂ ಹೊಡೆದು ಕೊಲ್ಲ ದೆ ಅದಕ್ಕೆ ಧೂಪ ವಗೈರೆ ಅರ್ಪಿಸಿ ಪೂಜೆಮಾಡಿ ಹೊರಕ್ಕೆ ಸಾಗ ಕಳುಹಿಸಿದರೆಂದೂ ಕೇಳಿಸಾಗ್ಯೆ ಇಂಥಾ ದುಷ್ಟ ಜಂತುವನ್ನು ಕೊಲ್ಲದೆ ಭಕ್ತಿಯಿಂದ ಸಾಗಕಳುಹಿಸಿದ ಈ ಹುಚ್ಚು ಜನರನ್ನು ಯಾರಾದರೂ ದಂಡಿಸದೆ ಇರುವರೇ.—ಸೀನಿಯರ್ ಸರ್ಜನ್ ಡಾ॥ ಸ್ಮಿತ್ ಸಾಹೇಬರು ಕಳೆದ ೨೫ನೇ ತಾ॥ ನಲ್ಲಿ ಇಲ್ಲಿಗೆ ದಯಮಾ ಡಿ, ಆ ದಿನ ಸಾಯಂಕಾಲ ಬರ್ನಸ್ ಮುಡಿಕೊಂಡು ಹೋಗಿ ಮಾರನೆ ದಿನ ಕೆಂಗಸದ ಆಸ್ಪತ್ರೆ, ಗಂಡಸರ ಆಸ್ಪತ್ರೆ, ಜೈಲ್, ಇವುಗಳನ್ನು ಇನ್ಸ್‌ಪೆಕ್ಷನ್ ಮಾಡಿದರೆಂದೂ, ಹೆಂಗಸರ ಆಸ್ಪತ್ರೆ ಯಲ್ಲಿ ಪುಸ್ತಕಗಳನ್ನು ಬಹು ಶ್ರದ್ಧೆಯಿಂದ ತನಿಖೆಮಾಡಲು ಅವುಗ ಳಲ್ಲಿ ತಪ್ಪು ಸಿಕ್ಕಿತೆಂತಲೂ, ಲೇಡಿ ಅಪಾಥಿಕರಿ ಯವರಿಗೆ ತಕ್ಕಷ್ಟು ಎಚ್ಚರಿಕೆಯನ್ನು ಕೊಟ್ಟು ಕಳೆದುಹೋಗಿರುವ ಕೆಲವು ಸಾಮಾ ನುಗಳನ್ನು ತನ್ನ ಸ್ವಂತ ಖರ್ಚಿನಿಂದ ತರಿಸಬೇಕೆಂದು ಅಪ್ಪಣೆ ಕೊಟ್ಟರೆಂತಲೂ, ನಂತರ ಗಂಡಸರ ಆಸ್ಪತ್ರೆಗೆ ಹೋದಾಗ, ಅಲ್ಲಿದ್ದ ಸ್ಟಾಕ್ ಬುಕ್ ವಗೈರೆ ಪುಸ್ತಕಗಳನ್ನು ಪರೀಕ್ಷೆಮಾಡುತ್ತಾ ಮಾನ್ಯ ಸವರು ಸಾಲದೆ ಹೋದ್ದರಿಂದ ಮತ್ತೊಂದು ಸಾರಿ ಬಂದು ನೋಡುತ್ತೇನೆಂದು ರಿಪೋರ್ಟ್ ಬುಕ್ಕಿನಲ್ಲಿ ಬರೆದು ಹೊರಟರೆ ತ ಲೂ ತಿಳಿದುಬರುತ್ತೆ. ಈ ಸಂದರ್ಭದಲ್ಲಿ ಆ ಗವರ್ನರನ್ನು ಈ ಊರಿನಲ್ಲಿ ಕ್ಷಯರೋಗ ಪೀಡಿತರಾದ ಕಾಯಿಲೆಯವರನ್ನು ಬಿಟ್ಟಿ ರಾ ಎಂದು ಪ್ರಶ್ನಿಸಿದ ಪಕ್ಷದಲ್ಲಿಯೂ, ಆಸ್ಪತ್ರೆಯಲ್ಲಿ ಚಿಕಿತ್ಸೆ ಯಲ್ಲಿರುವ ಒಬ್ಬ ಕಾಯಿಲೆಯವನ ಸಿನಿಕಾ ಬೇರೆ ಯಾರೂ ಇಲ್ಲ ವೆಂದು ಆಗಲು ಸೀನಿಯರ್ ಸರ್ಜನರಿಗೆ ಹೇಳಿದಹಾಗೂ, ನಂತರ ಆ ಆಸ್ಪತ್ರೆಯನ್ನು ವಿಚಾರಿಸಿದರೆಂತಲೂ, ಇವರು ನಿಜ ಆ ಸ ರವರ ಮಾತನ್ನು ಅನುಸರಿಸಿ ಎಲ್ಲವೆಂದು ಹೇಳಿದರೆಂತಲೂ ತಿಳಿದು ಬರುತ್ತೆ. ಈ [illegible] ಬಹು ಪದ್ದ ನಾಗಿದ್ದರು — [illegible] ನೀರು ನಿಂತ ದೆ ಕೊಡ [illegible] ರುವವನ್ನು [illegible] ತುಂಬಾ ಹರಿ ಯುತ್ತಿರುವದರಿಂದ ಊರು ಬಹಳ ಥಂಡಿಯಾಗಿ ಕಾಯಿಲೆ ಜಾಸ್ತಿ ಯಾಗಿರುವದು ವಿ ಇಂಜಿನಿಯರ್ ಮಿ ಡಲಾಲ್ ಸಾಹೇಬರು ತುಂಬಾ ಶ್ರದ್ಧೆಯಿಂದ ಈ ಕೆರೆಯ ಕಾಮಗಾರಿ ನಡೆಸುತ್ತಿರುವರು. ಈ ಕೆರೆಯ ಕಾಮಗಾರಿಯು ಇನ್ನೂ ಎರಡು ಮೂರು ವರುಷಗಳ ಲ್ಲಿ ಮುಗಿಯುವದೆಂದು ಹೇಳುತ್ತಾರೆ. ಈ ಕೆರೆಯು ಕಟ್ಟಿ ಪೂ ರೈಸಿದ ನಂತರ ಈ ನಗರವು ನಂಜಾಗಿನ ಪ್ರವಾಹಕ್ಕೆ ಆಸ್ಪದ ಕೆರೆಯು ಬಗ್ಗದೆ ನಿಂತರೆ ಮಿ ಡಲಾಲ್ ಸಾಹೇಬರಿಗೆ ಈಗ ಬರು ವ ಕೀರ್ತಿಗಿಂತಲೂ ಅಗ ಬರುವ ಕೀರ್ತಿ ಗೌರವಗಳು ಇದ್ದವೆಂದು ದೀತು.—ಫಾರೆಸ್ಟ್ ಬಾಬಿನಲ್ಲಿ ಈ ಪ್ರಾಂತ್ಯ ಆದಾಯ ಕೇವಲ ಸ್ವಲ್ಪವಾಗಿತ್ತೆಂತಲೂ, ಕಳೆದ ಡೆಸೆಂಬರ್ ನೆ ಸಂಚರಣಾಧಿಕಾರಿಗಳು ಇಲ್ಲಿಗೆ ವರ್ಗವಾದ್ದು ಫಾರೆಸ್ಟಿನ ಎಲ್ಲಾ ಬಾಬುಗಳಲ್ಲಿಯೂ ಆದಾಯವನ್ನು ಗಣ್ಯ ಸಂಖ್ಯರನ್ನು ತೋರಿಸಿ ಕೊಟ್ಟರೆಂತಲೂ, ಈ ಬಗೆ ಇವರಿಗೆ ತಿಂಗಳಲ್ಲಿಗೆ ವರ್ಗವಾಗಿರಲು ಡಿ ಕಮಿಷನರು, ಸ್ಪೆ ಕನ್ಸರ್ವೇಟರು ಇವರುಗಳ ಶಿಫಾರಸಿನ ಮೇಲೆ ಇದೇ ೧॥ ನಲ್ಲಿ ಹೊಸ್ತ ರೇಂಜಾದ ಹೊಳಲ್ಕೆರೆಗೆ ವರ್ಗಮಾಡಿ, ತಮ್ಮ ಲ್ಲಿಯೇ ಇಟ್ಟುಕೊಂಡರೆಂದೂ ಕೇಳಿಮಾತ್ರೆ ಇನ್ನು ಕೇವಲ ಶ್ರ ದ್ಧೆಯಿಂದ ಕೆಲಸ ಮಾಡಿ ಸರ್ಕಾರಕ್ಕೆ ಆದಾಯವನ್ನು ಬಂದವರು ವ ಮಹಶಯರ ವಿಷಯದಲ್ಲಿ ಯಾರು ತಾನೇ ಸಂತೋಷಪಡದೇ ಇರುವರು

## ಬಾತ್ಮೀದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬಂದಿಕ್ಕ ಬಾತ್ಮೀಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ತಮ್ಮ ತಿಳುವಳಿಕೆಗೋ ಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ಕಳಿಸತಕ್ಕ ದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬ ರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮೀಗಳನ್ನು ನಾವು ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮೀದಾರರು ಪಡಿಸುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರ ರಾಗುವದಿಲ್ಲವೆಂಬುವದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಂದಿಕೆರೆ ಹೋಬಳಿ ಸ್ಕೂ ಲು ಈಚಿಗೆ ತುಂಬಾ ಹೀನಸ್ಥಿತಿಗೆ ಬಂದಿರುವುದಾಗಿ ಒಬ್ಬ ಬಾತ್ಮೀ ದಾರರು ತಿಳಿಸುತ್ತಾರೆ

ದೇವನಹಳ್ಳಿ ಪಂಡಿತ ನಂದಿಗಿರಿ ದೀಕ್ಷಿತರ ಔಷಧಗಳ ಪಟ್ಟಿ ಯನ್ನು ಪ್ರಕಟಿಸಬೇಕೆಂದು ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ. ಔಷಧಗಳ ಪಟ್ಟಿ ಯಾವಾಗಲೂ ಪ್ರಕಟನೆಯ ಕಾಲಂಗಳಲ್ಲಿ ಬರು ತಿದೆ. ಅವುಗಳಿಗೆ ಛಾರ್ಜು ಕೊಟ್ಟಲ್ಲಿ ಪ್ರಕಟಿಸುತ್ತೇವೆ. ಔಷಧಗ ಳ ಪಟ್ಟಿ ಕಳುಹಿಸಿದರೆ ಅದಕ್ಕೆ ಛಾರ್ಜು ಇಷ್ಟೆಂದು ಗೊತ್ತುಮಾಡಿ ತಿಳಿಸುವೆವು.

ಶ್ರೀಶೈಲೇಶ್ವರದಾಸ ಉಪಾಧ್ಯಾಯರು, ಮಂಗಳೂರು.—ನಿಮ್ಮ ಪುಸ್ತಕದ ಪ್ರಾಪಕರ ಮೇಲೆ ಮಾಡುವ ಆಕ್ಷೇಪಣೆಯನ್ನು ಪೋಸ್ಟ್ ಮಾಲೀಕರಿಗೆ ಬರೆದುಕೊಳ್ಳಬೇಕು.

ಹೊನ್ನಪ್ಪನವರು, ಸೀರ್ಯ; ರಾಮರಾವ್, ಸಾರಹಳ್ಳಿ; ಸಿದ್ದ ಯ್ಯ, ಮಾವಗದ; ಬಡೇಸಾಹೇಬರು, ಬಗಲೂರು:—ಈ ಬಾತ್ಮೀಗಳಿಗೆ ನಮ್ಮ ಪತ್ರಿಕೆಯಲ್ಲಿ ಅವಕಾಶ ದೊರಕಲಾರದೆಂದು ತಿಳಿಸಲು ವಿಷಾ ದಿಸುತ್ತೇವೆ.

## ಮತಸಂಬಂಧವಾದ ಪ್ರಶ್ನೋತ್ತರಗಳು.

ಪ್ರಶ್ನೆ:—ಯೇಸುಕ್ರಿಸ್ತನು ಲೋಕರಕ್ಷಕನಾಗಿ ಹುಟ್ಟಿದಾ ನೆಂತಲೂ, ಪ್ರಪಂಚದ ಸೃಷ್ಟಿಯನಂತರ ಈತನೇ ಲೋಕರಕ್ಷಕನೆಂತಲೂ, ಈತ ನು ಪ್ರಪಂಚದಲ್ಲಿರುವ ಜನರ ಪಾಪಪರಿಹಾರಕ್ಕೋಸ್ಕರ ತನ್ನ ಪ್ರಾ ಣವನ್ನೇ ಬಲಿಯಾಗಿ ಕೊಟ್ಟನೆಂತಲೂ ನಿಮ್ಮ ಸುವಾರ್ತೆಗಳಲ್ಲಿದೆ. ಆದರೆ ಯೆಹೂದ್ಯರ ರೀತಿಯು ನಿರ್ಬಂಧಿಸಿದ ಬೆತ್ಲೆಹೇಮಿನಲ್ಲಿ ಯೇಸು ಕ್ರಿಸ್ತನು ಹುಟ್ಟಿದನೆಂತಲೂ, ಆ ಹುಟ್ಟಿನ ಅರಸನಾದ ಹೆರೋದನು ಈ ಯೇಸುವಂಥ ಕೂಸನ್ನು ಕೊಲ್ಲಲು ಯತ್ನಿಸುತ್ತಾನೆ, ಅದ್ದ ರಿಂದ ನೀನು ಪುನಃ ನಾನು ಹೇಳುವತನಕ ಈಜಿಪ್ಟ್ ದೇಶಕ್ಕೆ ಕೂ ಸನ್ನು ಕರೆದುಕೊಂಡು ಹೋಗು ಎಂದಿದಾಗಿ ಯೋಸೇಫನ ಕನಸಿ ನಲ್ಲಿ ಯೆಹೋವನ ದೂತ ಹೇಳಿದ್ದರಿಂದ ಅದರಂತೆ ಯೋಸೇಫನು ಈಜಿಪ್ಟಿಗೆ ಕೂಸನ್ನು ಅದರ ತಾಯಿಯ ಸಹಿತ ಕರೆದುಕೊಂಡು ರಾತ್ರಿಯಲ್ಲಿ ಹೊರಟು ಹೋಗಿ ಹೆರೋದನು ತೀರಿಹೋಗುವವ ರಿಗೆ ಅಲ್ಲೇ ಇದ್ದನು ಎಂಬುದಾಗಿಯೂ ನಿಮ್ಮ ಮತ್ತಾಯನ ೨ನೆ ಅಧ್ಯಾಯದ ೧೩, ೧೪ನೆ ವಾಕ್ಯಗಳಲ್ಲಿ ಇದೆಯಷ್ಟೆ. ಯೇಸುವು ಲೋಕರಕ್ಷಕನು, ಪರಿಶುದ್ಧವಾದವನು, ಯಾರಿಗೂ ಹೆದರದವನು, ಮತ್ತು ದೇವರೆಂಬ ನಾಮವನ್ನುಳ್ಳ ಈ ನಿಮ್ಮ ಮಹಾ ಪುರುಷನು ಮನುಷ್ಯಮಾತ್ರದವನಾದ ಒಬ್ಬ ಅರಸನಿಗೆ ಹೆದರಿದಂತೆ ವ್ಯಕ್ತವಾ ಗುತ್ತಿಲ್ಲವೇ? ಇದು ಅಂದರೆ ದೇವರೆಂಬ ಹೆಸರನ್ನು ಪಡೆದು ಪ್ರ ಪಂಚವನ್ನು ರಕ್ಷಿಸಲು ಹುಟ್ಟಿದಂಥಾವನಿಗೆ ಮನುಷ್ಯನ ಭಯವಂ ದರೆ ಬಹಳ ನಾಚಿಕೆ ಸಹಜ ಸಹಜ. ಇದರ ನಿಜಾಂಶ ಮತ್ತು ಈ ಶಂಕ್ಯ ಸರಿಯೇ ಎಂಬುದಕ್ಕೆ ದಯವಿಟ್ಟು ತಮ್ಮ ಸಂಬಂಧಿಸಿದ ವಾರದ ಪತ್ರಿಕೆಯಲ್ಲಿ ಈ ನನ್ನ ಪ್ರಶ್ನೆಯನ್ನು ಹಾಕಿ, ಉತ್ತರ ಸಹ ಬರೆ ಸಬೇಕಾಗಿ ಕೋರುತ್ತೇನೆ.

ಸಾಗರ ಜೆ. ಎಸ್. ಲಿಂಗ್ಯಯ್ಯ.

ಉತ್ತರ:—ಯೇಸು ಕ್ರಿಸ್ತನು ಇತರ ಕೂಸುಗಳಂತೆ ಕಾಮ್ಯ ವಿಷಯವಾಗಿ ಆಗಿದ್ದದ್ದು ವಿಷಯದ ಪಕ್ಷದಲ್ಲಿ ಆತನಿಗೆ ಸ್ವಕೀಯ ಸ್ಥಿತಿ ಸ್ವಭಾವಿಕವಾಗಿ ಹೇಳುವ ಈ ಅವಸ್ಥೆಯು ಸಂಭವಿಸಿದ್ದ ರಲ್ಲಿ ಆಶ್ಚರ್ಯವೇನು? ಆತನು ನಿಜವಾಗಿ ಮನು ಷ್ಯನಾಗಿ ಅವತರಿಸಿದನೆಂಬುದರಲ್ಲಿ ಸಂಶಯವೇ ಇಲ್ಲ. ಆ ತನು ಮಾಯಾರೂಪಿಯಾಗಿರಲಿಲ್ಲ ನಿಜವಾಗಿ ನಮ್ಮಂತೆಯೇ ಮ ನುಷ್ಯನಾಗಿದ್ದನು. ಆತನಿಗೂ ನಮಗೂ ಒಂದು ವಿಷಯದಲ್ಲಿ ಮಾತ್ರ ಭೇದವಿದ್ದಿತು. ಆತನಲ್ಲಿ ಪಾಪ ಮಾತ್ರವಿರಲಿಲ್ಲ. ಆತನು ಸಾಮಾನ್ಯರೆಲ್ಲರಂತೆ ಮನುಷ್ಯನಾಗಿಯೂ ನಮಗೆ ಸಹೋದರ ನಾಗಿಯೂ ಇದ್ದನು. ಬಾತ್ಮೀದಾರರು ಇನ್ನೊಂದು ಪ್ರಶ್ನೆಯನ್ನಲ್ಲ ದೆ ಇನ್ನೊಂದು ಪ್ರಶ್ನೆಯನ್ನೂ ಕೇಳಬಹುದಾಗಿದ್ದಿತು. ಯೇಸು ಕ್ರಿಸ್ತನು ಕೂಸಾಗಿರುವಾಗ ಬಿದ್ದುಹೋದದ್ದು ಆತನ ಘನತೆಗೆ ಕಡಮೆಯಾಗಿದ್ದರೆ ಆತನು ಪುರುಷನಾಗಿ ಬೆಳೆದ ತರುವಾಯ ಹಗೆ ಯವರ ಕೈಯಲ್ಲಿ ಸಿಕ್ಕಿ ಕೊಲ್ಲಲ್ಪಟ್ಟನೆಂದು ಬರೆಯುವುದಕ್ಕೆ ಏನು ಹೇಳೋಣ? ನಾವು ಸ್ವಭಾವವನ್ನು ಹೋಲಿಸಿದರೆ ಮಾತ್ರ ದೇ ವರೆಂದು ಹೇಳೋಣವೇ? ಅಥವಾ ಸಾಮಾನ್ಯರಂತೆ ಮನುಷ್ಯರಿಗೋ ಸ್ಕರ ಅನುಭವಿಸಿದ್ದನ್ನು ಪ್ರೀತಿಸಿ ನಮ್ಮ ಪ್ರಾಣವನ್ನು ಗುಣಪಡಿಸುವ ನಂಬುಗೆಯಿಂದ ದೇವರೆಂದು ಗೊತ್ತುಮಾಡುವೆವೋ? ಕೇವಲ ಜ ನರಿಂದ ಕಷ್ಟ ಸಂಕಟಗಳನ್ನು ತಾಳುವಲ್ಲಿ ದೈವ ಸ್ವಭಾವತ್ವ ತೋರುವದೋ? ಮನುಷ್ಯರ ಮೇಲಿನ ಪ್ರೀತಿಯಿಂದ ಪ್ರೇರಿತ ನಾಗಿ ಅನೇಕ ಸಂಕಟಗಳನ್ನು ಅನುಭವಿಸುವವರಲ್ಲೇ ದೇವರ ಅತಿ ಶಯವಾದ ಮಹಿಮೆಯು ಪ್ರಕಟವಾಗುತ್ತದೆಂದು ತಿಳಿಯಲಾರದೆ ಹೋದರೆ ನಮ್ಮ ಬಾತ್ಮೀದಾರರು ಯೇಸುಸ್ವಾಮಿಯ ಸ್ವಭಾವವನ್ನಾ ಗಲಿ ಅವನು ಸ್ಥಾಪಿಸಿದ ಕ್ರಿಸ್ತ ಸದ್ಧರ್ಮದ ಲಕ್ಷಣವನ್ನಾಗಲಿ ಗ್ರಹಿಸಲಾರರು. ಕ್ರಿಸ್ತಸ್ವಾಮಿಯು ತನ್ನನ್ನು ಸಂರಕ್ಷಿಸಿಕೊಳ್ಳು ವದಕ್ಕೋಸ್ಕರ ತನ್ನಲ್ಲಿದ್ದ ದೈವಶಕ್ತಿಯನ್ನು ಉಪಯೋಗಿಸದೆ ಇ ತರರನ್ನು ಸಂರಕ್ಷಿಸುವದಕ್ಕಾಗಿ ಜೀವಿಸಿದ ಕಾರಣ ಆತನ ಭಕ್ತರು ಆತನನ್ನು ಪ್ರೀತಿಸಿ ಪೂಜಿಸುತ್ತಾರೆ. ಆತನು ತನ್ನ ವಿಷಯ ಚಿಂತಿ ಸದೆ ಇತರರ ಕ್ಷೇಮಕ್ಕಾಗಿಯೇ ಜೀವಿಸಿದ್ದರಲ್ಲಿ ಆತನ ದೈವತ್ವವೆ ಪ್ರಕಟವಾಗುತ್ತೆ.—ಎಡಿ.

## ಮೈಸೂರು ಗೆಜೆಟ್ ಸಂಗ್ರಹ.

ಸಿವಿಲ್ ಸರ್ಜನ್ ಮಿ॥ ಟಿ. ಎಚ್. ನಂಜಪ್ಪನವರನ್ನು ಬೆಂಗ ಳೂರು ಸಿಟಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುವಂತೆ ವ ರ್ಗಮಾಡಿದೆ.

ಕೋಲಾರ್ ಡಿಸ್ಟ್ರಿಕ್ಟ್ ಗುಡಿಬಂಡೆ ಸಬ್ ತಾಲ್ಲೂಕಿನ ಆಕ್ಟಿಂ ಗ್ ಡೆಪ್ಯುಟಿ ಅಮಲ್ದಾರ್ ಜಿ. ನಾರಾಯಣರಾಯರಿಗೆ ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಅವರು ಡೆಪ್ಯುಟಿ ಅಮಲ್ದಾರ್ರಾಗಿ ಕೆಲಸ ಮಾಡುವವರೆಗೆ ಮಾತ್ರ ೩ ಅಧಿಕಾರವನ್ನು ಚಲಾಯಿಸತಕ್ಕದ್ದು.

ಮಿ॥ ಸಿ. ಸುಬ್ಬರಾಯರು ರಜಾ ತೆಗೆದಿರುವದರಿಂದ ಕೋಲಾ ರ್ ಮುನಿಸಿಫ್ ಮಿ॥ ಬಿ. ಎಚ್. ಕೃಷ್ಣಸ್ವಾಮ್ಯಯ್ಯಂಗಾರ್ರನ್ನು ಬ್ಯಾ ಂಗಲೋರ್ ಪ್ರಿನ್ಸಿಪಲ್ ಮುನಿಸಿಫರಾಗಿ ವರ್ಗಮಾಡಿದೆ.

ತಂಗಾಮಿಯಾಗಿ ಮೈಸೂರಿಗೆ ವರ್ಗಮಾಡಲ್ಪಟ್ಟಿದ್ದ ಮುನ್ಸಿಫ್ ರವರು ಟಿ. ಕೃಷ್ಣಯ್ಯಂಗಾರ್ಯರು ವಾಪಸ್ ಶ್ರೀರಂಗಪಟ್ಟಣಕ್ಕೆ ಹೋಗತಕ್ಕದ್ದು.

ಮೈಸೂರು ಪಟ್ಟಣದಲ್ಲಿರುವ ಅಡ್ವೋಕೇಟ್ ಮ॥ ಎಂ. ನರಸಿಂಹಯ್ಯ, ಬಿ. ಎ., ಬಿ. ಎಲ್. ಯವರನ್ನು ಕಡೇ ದರ್ಜೆಯ ಮುನ್ಸಿಫರಾಗಿ ನೇಮಿಸಿ ಕೋಲಾರಕ್ಕೆ ವರ್ಗಮಾಡಿದೆ.

ಮೈಸೂರು ಪಟ್ಟಣವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಶ್ರೀಮನ್ಮಹಾರಾಜರವರು ಒಪ್ಪಿ ಪ್ರಕಟಿಸಿರುವಂಥಾ ಶಾಸನವು ಡಿಸೆಂಬರ್ ೧೫ರಿಂದ ಚಲಾವಣೆಯಲ್ಲಿ ಬರತಕ್ಕದ್ದೆಂದು ಪ್ರಕಟಿಸಲ್ಪಟ್ಟಿದೆ.

ಮೈಸೂರು ಪಟ್ಟಣವನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಸ್ಥಾಪಿಸಿದ ಶಾಸನದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಮೈಸೂರು ಡಿಸ್ಟ್ರಿಕ್ಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮ॥ ಟಿ. ಶ್ರೀರಾಮರಾಯರನ್ನು ಟ್ರಸ್ಟ್ ಬೋರ್ಡಿನ ಛೇರ್ಮನ್ನರಾಗಿ ಕೆಲಸಮಾಡುವಂತೆ ನೇಮಿಸಿದೆ.

ಮೈಸೂರು ಗವರ್ನಮೆಂಟ್ ನೇತ್ರವೈದ್ಯರಾದ ಡಾಕ್ಟರ್ ಎಸ್. ವಿ. ರಾಮಸ್ವಾಮೈಯ್ಯಂಗಾರ್ಯರು ಅಕ್ಟೋಬರ್ ೧೩ರಲ್ಲಿ ಕೆಲಸದಮೇಲೆ ಹಾಜರಾದುದರಿಂದ ಅವರು ಉಪಯೋಗಿಸಿಕೊಳ್ಳದಿದ್ದ ರಜವನ್ನು ರದ್ದು ಮಾಡಿದೆ.

ಮೈಸೂರಿನ ಪ್ರಿನ್ಸಿಪಲ್ ಮುನ್ಸಿಫರಾಗಿ ವರ್ಗಮಾಡಲ್ಪಟ್ಟಿರುವ ಚಿಕ್ಕಬಳ್ಳಾಪುರದ ಮುನ್ಸಿಫ್ ಮ॥ ಸಿ. ಸುಬ್ಬರಾಯರಿಗೆ ಅಕ್ಟೋಬರ್ ೨೨ ರಿಂದ ಒಂದು ತಿಂಗಳು ೨೨ ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಡೆಪ್ಯುಟಿ ಕಮಿಷನರ್ ಮ॥ ಬಿ. ಕೆ. ವೆಂಕಟವರದೈಯಂಗಾರ್ಯರಿಗೆ ಕೊಟ್ಟಿದ್ದ ಫರ್ಲೋ ರಜವನ್ನು ಅಕ್ಟೋಬರ್ ೨೫ರ ವರೆಗೆ ಜಾಸ್ತಿ ಮಾಡಿದೆ.

ಗುಬ್ಬಿ ತಾಲ್ಲೂಕ್ ಅಮಲ್ದಾರ್ ಮ॥ ಎಂ. ರಂಗರಾಯರಿಗೆ ಕೊಟ್ಟಿದ್ದ ೩ ತಿಂಗಳು ೨೯ ದಿವಸಗಳ ರಜವನ್ನು ಇನ್ನು ೩ ದಿವಸಗಳಿಗೆ ಜಾಸ್ತಿ ಮಾಡಿದೆ.

ಆ॥ ಡೆಪ್ಯುಟಿ ಕಮಿಷನರಾದ ಮ॥ ಎಂ. ಕಾಂತರಾಜೇ ಅರಸಿನವರು ನವೆಂಬರ್ ೭ರಲ್ಲಿ ಮೈಸೂರು ಡಿಸ್ಟ್ರಿಕ್ಟಿನ ಛಾರ್ಜನ್ನು ಕೊಟ್ಟು, ಮ॥ ಬಿ. ಕೆ. ವೆಂಕಟವರದೈಯಂಗಾರ್ಯರು ಅದನ್ನು ವಹಿಸಿಕೊಂಡಿರುತ್ತಾರೆ.

ಹೊಳೆನರಸೀಪುರದ ತಾಲ್ಲೂಕಿನಲ್ಲಿ ಮುಸಮುದ್ರಿಯ ಬಬರಸ್ವಾಮಿ ಮಠದ ಕಟ್ಟಡಕ್ಕೋಸ್ಕರ ೧೦,೧೨ ನೆ ಸರ್ವೆ ನಂಬರುಗಳಲ್ಲಿ ೨ ಎಕರೆಗಳು ಸರ್ಕಾರಕ್ಕೆ ಬೇಕಾಗಿವೆ.

ಇಂಪೀರಿಯಲ್ ಸರ್ವಿಸ್ ೨ ನೆ ಗ್ರೇಡ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮೇಜರ್ ಎ. ಜೆ. ದಿಲಾಬನಿಯರ್ ಯವರು ನವೆಂಬರ್ ೨೩ರಲ್ಲಿ ರಜದಿಂದ ವಾಪಸು ಬಂದಿರುತ್ತಾರೆ. ಇವರನ್ನು ಪಿ. ಡಬ್ಲ್ಯು. ಸರ್ಕಲ್ ಸೂಪರಿಂಟೆಂಡೆಂಟರಾಗಿ ನೇಮಿಸಿದೆ. ಇದಲ್ಲದೆ ಇವರು ಕಾವೇರಿ ಜಲಪಾತದ ಇಲಾಖೆಯ ಛಾರ್ಜನ್ನು ವಹಿಸಿರುವರು.

ಚಿತ್ರದುರ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಅ॥ ಕನ್ಸರ್ವೇಟರ್ ಮ॥ ರಾಮೈಯಂಗಾರ್ಯರಿಗೆ ಒಂದು ವಾರದ ಪ್ರಿವಿಲೆಜ್ ರಜಾ ಕೊಟ್ಟು ಅಲ್ಲಿನ ಟ್ರೈನಿಂಗ್ ಅ॥ ಕನ್ಸರ್ವೇಟರು ಫಾರೆಸ್ಟ್ ಆಫೀಸ್ ಛಾರ್ಜನ್ನು ವಹಿಸತಕ್ಕದ್ದು.

## ಇಂಡಿಯಾ ದೇಶದ ವೃತ್ತಾಂತಗಳು.

ಕೃಷ್ಣಾ ಡಿಸ್ಟ್ರಿಕ್ಟಿಗೆ ಸೇರಿದ ಗುಂಟೂರು ಪಟ್ಟಣಕ್ಕೆ ಒಳ್ಳೇ ನೀರನ್ನು ತಂದೊದಗಿಸುವ ಕಾಮಗಾರಿಗಾಗಿ ಮದರಾಸ್ ಸರ್ಕಾರದವರು ೨,೪೦,೯೦೦ ರೂ. ಗ್ರ್ಯಾಂಟ್ ಮಾಡಿರುತ್ತಾರೆ.

****

ಕಳೆದ ಹತ್ತು ವರುಷಗಳಲ್ಲಿ ಕಾಶ್ಮೀರ ಸಂಸ್ಥಾನದೊಳಗೆ ಕಳ್ಳತನವೇ ಕಸಬಾಗಿ ಇಟ್ಟುಕೊಂಡಿರತಕ್ಕ ಪ್ರಜೆಗಳ ಸಂಖ್ಯೆಯು ದ್ವಿಗುಣವಾಗಿರುತ್ತೆಂದು ಅಲ್ಲಿನ ಜೈಲ್ ಸೂಪರಿಂಟೆಂಡರು ತಿಳಿಸುತ್ತಾರೆ. ಇದು ಕ್ಷೇಮಕರವಲ್ಲ.

****

ಟುಟಿಕಾರಿನ್ (ತಟ್ಟುಗುಡಿ) ಬಂದರಿನಲ್ಲಿ ಪ್ರಜೆಗಳಿಗೆ ಒಳ್ಳೇ ನೀರನ್ನು ತಂದೊದಗಿಸುವುದಕ್ಕೆ ಮೊದಲು ೧,೯೫,೦೦೦ ರೂ. ಗ್ರ್ಯಾಂಟ್ ಮಾಡಿದ್ದರು. ಈಗ ಈ ಮೊಬಲಗು ಸಾಲದೆ ಬಂದುದರಿಂದ ಇನ್ನೂ ೭,೫೦೦ ರೂ. ಜಾಸ್ತಿ ಖರ್ಚುಮಾಡಬಹುದೆಂದು ಹುಕುಂ ಕೊಟ್ಟಿದ್ದಾರೆ.

****

ಕಲ್ಕತ್ತಾ ಪಟ್ಟಣದ ಹೈಕೋರ್ಟಿನಲ್ಲಿ ಸ್ಥಳವಿಸ್ತಾರವಾಗಿಲ್ಲವು ಎಂದು ಬಂದುದರಿಂದ ಅದರ ಉತ್ತರಪಾರ್ಶ್ವದ ಒಂದು ಗರಡಿಯನ್ನು ಸುಮಾರು ೨ ಲಕ್ಷ ರೂಪಾಯಿಗೆ ಕೊಂಡುಕೊಂಡು ಕೋರ್ಟಿಗೆ ಅನುಕೂಲವಾಗುವಂತೆ ಅದನ್ನು ಹೊಸದಾಗಿ ಕಟ್ಟಬೇಕೆಂದು ಗೊತ್ತು ಮಾಡಿದಾರೆ.

****

ಹಿಂದುಸ್ಥಾನದ ಇಂಗ್ಲಿಷ್ ಸೇನಾಪತಿಯವರಾದ ಲಾರ್ಡ್ ಕಿಚ್ನರ್ ಯವರು ಕಾಲು ಮುರಿದು ಹೋಗಿ ಬಾಧೆಪಡುತ್ತಿದಾರಷ್ಟೆ. ನೋವು ಕಡಿಮೆಯಾಗುತ್ತಿದೆ. ಸ್ವಲ್ಪ ನಿದ್ರೆಯೂ ಬರುತ್ತಿದೆ. ಬೇಗನೇ ಅವರು ಚೇತರಿಸಿಕೊಂಡು ಮುಂದಿನ ತಿಂಗಳ ಹೊತ್ತಿಗೆ ಪ್ರಯಾಣ ಮಾಡಬಹುದೆಂದು ನಿರೀಕ್ಷಿಸುತ್ತಾರೆ.

****

ಸಿಲೋನ್ ದ್ವೀಪದಿಂದ ಬಹು ಬೆಲೆಯುಳ್ಳ ವಜ್ರ ಕೆಂಪು ಮೊದಲಾದ ರತ್ನಗಳನ್ನು ವರ್ತಕರಿಂದ ಸರ್ಕಾರದವರು ತೆಗೆದುಕೊಂಡು ಅಮೇರಿಕ ರಾಜ್ಯದ ಸೇಂಟ್ ಲೂಯಿಸ್ ಪಟ್ಟಣದಲ್ಲಿ ನಡೆವ ಮಹಾ ಪ್ರದರ್ಶನೋತ್ಸವಕ್ಕೆ ಕಳುಹಿಸಿಕೊಡುತ್ತಾರೆ. ಇದರಲ್ಲಿ ಒಂದು ಗೋಮೇಧಿಕವು ೨೦,೦೦೦ ರೂ. ಬರೀದಿ ಬಾಳುವುದಾಗಿದೆ.

****

ಮದರಾಸ್ ಗೌವರ್ನಮೆಂಟ್ ಸ್ಪೆಷಲ್ ಟೆಸ್ಟ್ ಎಂಬ ಸರ್ಕಾರಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳು ಪರೀಕ್ಷೆಗೆ ಮೊದಲೇ ಕಳುವಾಗಿ ಹೋಗುತ್ತಿದ್ದ ಸಂಗತಿ ೨-೩ ವಾರಗಳ ಕೆಳಗೆ ನಮ್ಮ ವಾಚಕರಿಗೆ ತಿಳಿಸಿರುತ್ತೇವಷ್ಟೆ. ಈ ಕಳುವಾಗತಕ್ಕ ಮಾರ್ಗವನ್ನು ಪತ್ತೇಮಾಡಿ ಕೊಟ್ಟವರಿಗೆ ೨,೦೦೦ರೂ ಇನಾಮು ಸಿಕ್ಕುವದೆಂದು ಮದರಾಸ್ ಸರ್ಕಾರದವರು ಪ್ರಾಮಿಸ್ ಮಾಡಿರುತ್ತಾರೆ.

****

ಅಫ್ಘಾನಿಸ್ಥಾನದ ಅಮೀರ್ ಹಬಿಬುಲ್ಲಾಖಾನರವರು ಇಷ್ಟರಲ್ಲೇ ಹಿಂದುಸ್ಥಾನಕ್ಕೆ ದಯಮಾಡಿ, ಲಾರ್ಡ್ ಕರ್ಜನ್ ಪ್ರಭುಗಳನ್ನು ಕಂಡು, ಕೆಲವು ರಾಜಕೀಯ ವಿಚಾರಗಳನ್ನು ಅವರ ಸಂಗಡ ಚರ್ಚೆಮಾಡಿ ಗೊತ್ತುಮಾಡಿಕೊಂಡು ಹೋಗಬೇಕೆಂದಿರುವಹಾಗೂ ಅವರೇ ಸ್ವತಃ ಈ ಅಭಿಪ್ರಾಯವನ್ನು ತಿಳಿಸಿರುತ್ತಾರೆಂತಲೂ, ಅಫ್ಘನಿಸ್ಥಾನದಲ್ಲಿ ಸ್ವಲ್ಪ ನೆಮ್ಮದಿಯಾದ ಕೂಡಲೇ ಅವರು ಅಲ್ಲಿಂದ ಹೊರಟು ಬರುವವರಾಗಿದ್ದಾರೆಂತಲೂ ಪ್ರಕಟವಾಗಿದೆ.

****

ಬಂಗಾಳಾ ಅಧಿಪತ್ಯದಲ್ಲಿ ಸಾಮಾನ್ಯವಾಗಿಯೂ, ಕಲ್ಕತ್ತಾ ಪಟ್ಟಣದಲ್ಲಿ ವಿಶೇಷವಾಗಿಯೂ ಕ್ಷಯರೋಗ ಪೀಡಿತರ ಸಂಖ್ಯೆಯು ಹೆಚ್ಚುತ್ತಾ ಬಂದಿದೆ. ಇದನ್ನು ನಿವಾರಣೆ ಮಾಡುವುದಕ್ಕೆ ಯೂರೋಪಿನಲ್ಲಿ ನಿರ್ಮಿಸಿರುವಂಥಾ ತುಂಬಾ ಅನುಕೂಲವಾದ ಆಸ್ಪತ್ರೆಗಳನ್ನು ಈ ದೇಶದಲ್ಲೂ ಐಶ್ವರ್ಯವಂತರು ದ್ರವ್ಯ ಸಹಾಯ ಮಾಡಿ ಸ್ಥಾಪಿಸಿ ನಡಸುವುದು ಬಹಳ ಅವಶ್ಯವಾಗಿದೆ ಎಂಬದಾಗಿ ಕಲ್ಕತ್ತಾ ಪಟ್ಟಣದಲ್ಲಿರುವ ಪ್ರಸಿದ್ಧರಾದ ಸರತ ಕುಮಾರ ಮಲ್ಲಿಕ್ ಎಂಬ ಡಾಕ್ಟರವರು ತಿಳಿಸುತ್ತಾರೆ.

****

ಹರಿದ್ವಾರದಲ್ಲಿ ಮಹಾ ಮೇಳಾ ಎಂಬ ಜಾತ್ರೆ ಕಾಲದಲ್ಲಿ ಸರ್ಕಾರದವರು ಅಲ್ಲಿಗೆ ಹೋಗುವ ಯಾತ್ರಾರ್ಥಿಗಳಿಗೆಲ್ಲಾ ತಲೆ ತೆರಿಗೆ ಹಾಕಿ ವಸೂಲ್ಮಾಡಿ, ಬಂದ ಹಣದಲ್ಲಿ ಪ್ರಜಾ ಆರೋಗ್ಯಕ್ಕೆ ತಕ್ಕ ಏರ್ಪಾಡುಗಳನ್ನೆಲ್ಲಾ ಮಾಡುವುದು ವಾಡಿಕೆಯಾಗಿದೆಯಷ್ಟೆ. ಇದೇ ಪ್ರಕಾರ ಜಗನ್ನಾಥದ ಮಹಾ ಜಂತ್ರೆಯಲ್ಲೂ ಯಾತ್ರಾರ್ಥಿಗಳಿಂದ ಸ್ವಲ್ಪ ತಲೆ ತೆರಿಗೆ ವಸೂಲ್ಮಾಡಿ, ಯಾತ್ರಾರ್ಥಿಗಳ ಆರೋಗ್ಯಕ್ಕೆ ಬೇಕಾಗುವ ಕೆಲಸಗಳನ್ನೆಲ್ಲಾ ಮಾಡಿಸಬೇಕೆಂದು ಬಂಗಾಳಾ ಗವರ್ನಮೆಂಟಿನವರು ಯೋಚಿಸುತ್ತಿದಾರೆಂತಲೂ, ಇದನ್ನು ಕೇಳಿ ಆ ಪಟ್ಟಣದವರೆಲ್ಲಾ ಗಾಬರಿಪಡುತ್ತಿದಾರೆಂತಲೂ ತಿಳಿದು ಬಂದಿದೆ.

****

ಹಿಂದುಸ್ಥಾನದ ಅಗಮ್ಯ ಗುರು ಪರಮಹಂಸ ಎಂಬೊಬ್ಬ ಸ್ವಾಮಿಯು ಕಳೆದ ವಾರ ಕ್ಯಾಂಪೇನಿಯಾ ಎಂಬ ಹಡಗಿನಲ್ಲಿ ಸಮುದ್ರಯಾನ ಮಾಡಿಕೊಂಡು ಹೋಗಿ ವಿಲಾಯತಿಗೆ ಸೇರಿ ಲಿವರ್‌ಪೂಲ್ ನಗರದಲ್ಲಿ ಇಳಿದರು. ಇವರು ಆಕ್ಸ್‌ಫರ್ಡ್ ನಗರಕ್ಕೆ ಹೋಗಿ ಅಲ್ಲಿರುವ ಕಾರ್ಪೆಂಟರೆಂಬ ಪ್ರಸಿದ್ಧ ಪಂಡಿತನನ್ನು ಕಂಡು, ವೇದಾಂತ ವಿಚಾರದಲ್ಲಿ ಆತನ ಸಂಗಡ ಚರ್ಚೆ ಮಾಡಬೇಕೆಂದು ಬಂದಿರುತ್ತೇನೆ ಎಂಬದಾಗಿ ತಿಳಿಸಿದರು. ಇವರು ಒಂದು ಹೊತ್ತು ಮಾತ್ರ ಊಟಮಾಡುತ್ತಾರೆ. ಹಿಂದುಸ್ಥಾನದ ಕೋಟ್ಯನು ಕೋಟಿ ಪ್ರಜೆಗಳೆಲ್ಲಾ ತಮ್ಮನ್ನು ತತ್ವ ಬೋಧನಾ ಗುರುವೆಂದು ನಂಬಿ ಶಿಷ್ಯರಾಗಿರುತ್ತಾರೆಂದು ಅವರು ಹೇಳಿಕೊಂಡಿದಾರೆ.

****

ಮಾಲ್ಡೈವ್ ದ್ವೀಪಗಳ ಮಾಜಿ ಸುಲ್ತಾನರ ಪ್ರೈವೇಟ್ ಸೆಕ್ರೆಟರಿಯಾಗಿದ್ದ ಮೌ॥ ದಾಧಾಭಾಯಿ ನಸರವಾನ್‌ಜೀ ಯವರು ಆ ಸುಲ್ತಾನರು ತಮ್ಮ ಸಂಬಳದಲ್ಲಿ ೬೦೦ರೂ ಬಾಕಿ ಮಾಡಿದಾರೆಂತಲೂ, ಉಳಿದ ಹಣ ಅಂದರೆ ೩,೩೦೦ರೂ. ಅವರಿಂದ ತನಗೆ ಸಲ್ಲಬೇಕಾಗಿದೆ ಎಂತಲೂ ಸಿಲೋನ್ ದ್ವೀಪದ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ ದಾವಾ ಮಾಡಿ, ಮಾಜಿ ಸುಲ್ತಾನರು ಆ ದ್ವೀಪದಿಂದ ಹೊರಟು ಹೋಗುವವರಾಗಿರುವುದರಿಂದ ಅವರನ್ನು ವಾರಂಟಿನಲ್ಲಿ ಹಿಡಿಯಬೇಕೆಂದೂ ಅರ್ಜಿ ಕೊಟ್ಟರು. ಜಡ್ಜಿಯವರು ದಾವಾ ದಾಖಲ್ ಮಾಡಿಕೊಂಡು, ವಾದಿಯ ಇಷ್ಟಪ್ರಕಾರ ವಾರಂಟು ಕೊಟ್ಟು, ಸುಲ್ತಾನರನ್ನು ಹಿಡಿಯಬೇಕೆಂತಲೂ, ಆದರೆ ಅವರು ೧೦,೦೦೦ರೂ. ಜಾಮೀನ್ ಕೊಟ್ಟರೆ ಅವರನ್ನು ಬಿಡಬಹುದೆಂತಲೂ ಹುಕುಂ ಮಾಡಿರುತ್ತಾರೆ.

****

ಇಂಡಿಯಾ ಗೌವರ್ನಮೆಂಟಿನವರು ಟಿಬೆಟ್ ರಾಜ್ಯದವರ ಸಂಗಡ ವ್ಯಾಪಾರ ವಿಷಯದಲ್ಲಿ ಕರಾರು ಮಾಡಿಕೊಳ್ಳಬೇಕೆಂದು ತಮ್ಮ ಕಡೆಯ ರಾಯಭಾರಿಗಳನ್ನೂ ಸೈನಿಕರನ್ನೂ ಆ ಪ್ರಾಂತ್ಯಕ್ಕೆ ಕಳುಹಿಸಿಕೊಟ್ಟಿದಾರಷ್ಟೆ. ಈ ರಾಯಭಾರಿಗಳು ಚುಂಬಿ ಕಣಿವೆಯನ್ನು ಆಕ್ರಮಿಸಿಕೊಂಡು, ಅಲ್ಲಿಂದ ಗಯಾಂಟ್ಸೆ ಎಂಬ ಊರಿಗೆ ಹೋಗಿರುವಂತೆ ಮಾಡಿಕೊಳ್ಳುವರು. ಅಲ್ಲಿಂದ ಟಿಬೆಟ್ಟಿನ ರಾಜಧಾನಿಯಾದ ಲಾಸ್ಸಾಪಟ್ಟಣಕ್ಕೆ ೧೫೦ ಮೈಲಿ ದೂರವಿರುತ್ತೆ. ಆದ್ದರಿಂದ ಟಿಬೆಟ್ಟಿಗೆ ಪರರಾಜ್ಯಗಳವರ್‍ಯಾರಾದರೂ ನುಗ್ಗಿ ಬರುವಾಗ್ಯೆ ನೇಪಾಳದವರು ಟಿಬೆಟ್ಟಿನವರಿಗೆ ಸಹಾಯ ಮಾಡುವುದಾಗಿ ಕರಾರು ಮಾಡಿಕೊಂಡಿದಾರೆ. ಈಗ ನೇಪಾಳದವರು ಇಂಡಿಯಾ ಗವರ್ನಮೆಂಟಿನವರ ಉದ್ದೇಶವನ್ನು ತಿಳಿದು ಟಿಬೆಟ್ಟಿನವರಿಗೆ ಹೇಳಿಕಳುಹಿಸಿರುವುದೇನೆಂದರೆ:—ಈ ಸಂದರ್ಭದಲ್ಲಿ ನಾವು ನಿಮ್ಮ ಯುದ್ಧ ಮಾತನ್ನು ಮಾತ್ರ ಕೇಳ ಕಳುಹಿಸಬಲ್ಲೆವು; ಸೈನ್ಯ ಮುಂತಾದ್ದು ಕಳುಹಿಸಿ ನಿಮಗೆ ಸಹಾಯ ಮಾಡಲಾರೆವು. ನೀವು ಇಂಗ್ಲೀಷರ ಸಂಗಡ ಕಲೆತು ಕರಾರು ಮಾಡಿಕೊಳ್ಳುವುದೇ ನಿಮಗೆ ಕ್ಷೇಮಕರವಾಗಿರುತ್ತದೆ. ನಾವು ಇಂಗ್ಲೀಷರ ಸ್ನೇಹ ಬೆಳಸಿದ್ದರಿಂದ ನಮಗೆ ತುಂಬಾ ಅನುಕೂಲವುಂಟಾಗಿರುತ್ತದೆ; ಇದರಂತೆ ನೀವು ಸಹ ಅವರ ಸಂಗಡ ಸ್ನೇಹ ಬೆಳಸಿಕೊಂಡಲ್ಲಿ ನಿಮಗೆ ಬಹಳ ಒಳ್ಳೇದಾದೀತು. ನೀವು ರಷ್ಯಾದವರ ಸ್ನೇಹವನ್ನು ಅಪೇಕ್ಷಿಸಿದ್ದೀರೆಂದು ಕೇಳಿ ವಿಷಾದಿಸುತ್ತೇವೆ ಎಂಬುದೇ. ಇನ್ನಾದರೂ ಟಿಬೆಟ್ಟಿನವರು ಇಂಗ್ಲೀಷ್ ರಾಯಭಾರಿಗಳ ಬಳಿಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ, ಸ್ನೇಹ ಬೆಳಸಿಕೊಂಡಾರೆಂದು ನಿರೀಕ್ಷಿಸಲ್ಪಟ್ಟಿದೆ.

## ವಿದೇಶ ವರ್ತಮಾನಗಳು.

ವಿಲಾಯತಿಯ ಒಬ್ಬಾನೊಬ್ಬ ಸ್ತ್ರೀಯು ಬೈಬಲ್ ಸೊಸೈಟಿ ಎಂಬ ಸತ್ಯವೇದಪ್ರಸಾರಕ ಸಂಘಕ್ಕೆ ಒಂದೂವರೆ ಲಕ್ಷ ರೂಪಾಯಿ ಧರ್ಮ ಕೊಟ್ಟಿರುತ್ತಾಳೆ.

****

ಕಳೆದ ಏಪ್ರಿಲ್ ೧೫ ರಿಂದೀಚೆಗೆ ಯೂರೋಪಿಯನ್ ತುರ್ಕಿಯಲ್ಲಿ ೧೫,೦೦೦ ಬಲ್ಗೇರಿಯಾ ಪ್ರಜೆಗಳನ್ನು ಕೊಂದುಹಾಕಿರುತ್ತಾರೆಂದು ಸಲೋನಿಕ ಪಟ್ಟಣದ ಅಧಿಕಾರಿಗಳು ಪ್ರಕಟಿಸಿರುತ್ತಾರೆ.

****

ಹಿಂದುಸ್ಥಾನದಲ್ಲಿ ಜನಾನಾ ಮಿಷನ್ ಸಂಘದವರು ಹಿಂದು ಮಹಮದೀಯ ಸ್ತ್ರೀಯರಿಗಾಗಿ ಅನೇಕ ಆಸ್ಪತ್ರೆಗಳನ್ನೂ ಔಷಧಾಲಯಗಳನ್ನೂ ಕಟ್ಟಿ ನಡಸುತ್ತಿದಾರಷ್ಟೆ. ಈ ಆಸ್ಪತ್ರೆಗಳಲ್ಲಿ ಕಳೆದ ವರುಷ ೨೪,೦೦೦ ಹಿಂದು ಸ್ತ್ರೀಯರೂ ಮಕ್ಕಳೂ ಚಿಕಿತ್ಸೆ ಹೊಂದಿದರು; ೩೪,೦೦೦ ಮಂದಿ ಔಷಧಗಳನ್ನು ಸೇವಿಸಿರುತ್ತಾರೆ.

****

ಕಳೆದ ಏಪ್ರಿಲ್ ತಿಂಗಳಲ್ಲಿ ರಷ್ಯಾ ರಾಜ್ಯಕ್ಕೆ ಸೇರಿದ ಕ್ರೈಸ್ತ ಪ್ರಜೆಗಳು ಜ್ಯೂ ಎಂಬ ಯೆಹೂದ್ಯ ಪ್ರಜೆಗಳನ್ನು ನಿಷ್ಕರುಣವಾಗಿ ಕೊಂದುಹಾಕಿದರಷ್ಟೆ. ಸರ್ಕಾರದವರು ೩೬ ಮಂದಿ ಕ್ರೈಸ್ತರನ್ನೂ ಒಬ್ಬ ಪರ್ಷಿಯಾದವನನ್ನೂ ಹಿಡಿದು ಗುಟ್ಟಾಗಿ ವಿಚಾರಣೆ ಮಾಡುತ್ತಿದಾರೆ. ಈ ಮೊಕದ್ದಮೆಯಲ್ಲಿ ೫೦೯ ಮಂದಿ ಸಾಕ್ಷಿಗಳ ಕೈಫಿಯತ್ತು ಆಗಿ ಪೂರೈಸಬೇಕಾಗಿರುವುದು.

****

ಟ್ರಾನ್ಸ್‌ವಾಲ್ ರಾಜ್ಯದಲ್ಲಿ ಪಯಟರ್ಸ್‌ಬರ್ಗಿಗೂ ನೀಲ್‌ಸ್ಟ್ರೂಮಿಗೂ ನಡುವೆ ರೈಲ್‌ಗಾಡಿಯು ಒಂದು ದಿಣ್ಣೆಯನ್ನು ಹತ್ತಿ ಹೋಗುತ್ತಿದ್ದಾಗ ಕಳ್ಳರಿಬ್ಬರು ಒಂದು ಗಾಡಿಯೊಳಕ್ಕೆ ಹತ್ತಿ ಬಂದು, ಅಲ್ಲಿದ್ದ ಕಾವಲುಗಾರರನ್ನು ಹೊಡೆದು ಕಡವಿ, ಒಂದೂವರೆ ಲಕ್ಷ ರೂಪಾಯಿಯನ್ನು ಕದ್ದುಕೊಂಡು ಹೋದರು. ಈ ಹಣವು ಪ್ರಿಟೋರಿಯಾ ಪಟ್ಟಣದ ಸ್ಟ್ಯಾಂಡರ್ಡ್ ಬ್ಯಾಂಕಿಗೆ ಸಾಗಿ ಹೋಗಬೇಕಾಗಿತ್ತು.

****

ಅಮೇರಿಕಕ್ಕೆ ಸೇರಿದ ಕ್ಯಾನ್ಸಾಸ್ ಡಿಸ್ಟ್ರಿಕ್ಟಿನಲ್ಲಿ ಬೆಟ್ಟ ಕಾಡಿಂದ ಬಹಳ ವೇಗವಾಗಿ ಹೋಗುತ್ತಿದ್ದ ರೈಲ್ ಗಾಡಿಗಳನ್ನು ಕಳ್ಳರು ಕಂಬಿ ಕಿತ್ತುಹಾಕಿ ಕೆಡವಿದ್ದಲ್ಲದೆ ಗಾಡಿಗಳು ಉರುಳಿಕೊಂಡ ಮೇಲೆ ಅವುಗಳೊಳಕ್ಕೆ ನುಗ್ಗಿ ಜನರ ಬಳಿ ಇದ್ದ ಆಸ್ತಿಪಾಸ್ತಿಯನ್ನೆಲ್ಲಾ ಕಿತ್ತುಕೊಂಡು ಓಡಿಹೋದರು. ರೈಲ್ ಗಾಡಿಗಳು ಬಿದ್ದು ಒಡೆದುಹೋದದ್ದರಲ್ಲಿ ೩೦ ಜನಗಳಿಗೆ ಘೋರ ಗಾಯಗಳಾದವು. ಈ ಪೈಕಿ ಬಹುಮಂದಿ ಬದುಕುವುದು ಕಷ್ಟ.

****

ಬಲ್ಗೇರಿಯ ಸರಹದ್ದಿನಲ್ಲಿರುವ ಆ ರಾಜ್ಯದ ಸೈನ್ಯದ ಉದ್ಯೋಗಸ್ಥರುಗಳೆಲ್ಲಾ ಮಸಲತ್ತು ಮಾಡಿಕೊಂಡು, ಹ್ಯಾಗಾದರೂ ತುರ್ಕಿಯವರ ಮೇಲೆ ಯುದ್ಧ ಪ್ರಾರಂಭವಾಗುವಂತೆ ಮಾಡಬೇಕೆಂದು ಪ್ರಯತ್ನಪಡುತ್ತಿದ್ದರು. ಇದು ಹ್ಯಾಗೋ ಹೊರಬಿದ್ದಿತು. ಸೋಫಿಯಾ ಎಂಬ ನಗರದಲ್ಲಿ ಸರ್ಕಾರದವರಿಗೆ ಸೈನಿಕರ ಮೇಲೆ ಅನುಮಾನ ಹುಟ್ಟಿತು. ಆದ್ದರಿಂದ ಸೈನಿಕರಲ್ಲಿ ೧೫೦ ಮಂದಿ ಉದ್ಯೋಗಸ್ಥರನ್ನು ಹಿಡಿದ ತರುವಾಯ ವಿಚಾರಣೆಮಾಡಿ ಅವರನ್ನೆಲ್ಲಾ ಕೆಲಸದಿಂದ ತೆಗೆದುಹಾಕಿರುತ್ತಾರೆ.

****

ರಷ್ಯಾ ರಾಜ್ಯದ ಚಕ್ರವರ್ತಿನಿಯವರಿಗೆ ಕಿವಿಯೊಳಗೆ ಒಂದು ವಿಶೇಷವಾದ ರೋಗ ಉಂಟಾಗಿ ಬಾಧೆಪಡುತ್ತಿದಾರೆ. ಇದರ ದೆಸೆಯಿಂದ ಅವರಿಗೆ ನಿದ್ರೆ ಬರದೆ ಅಸಮಾಧಾನವಾಯಿತು. ಇತ್ತಲಾಗಿ ಜರ್ಮನಿ ಚಕ್ರವರ್ತಿಯವರ ಗಂಟಲ ಹುಣ್ಣು ವಾಸಿಯಾಗುತ್ತಿದೆ. ಈಗ ಅವರು ನಿಧಾನವಾಗಿ ಮಾತನಾಡುವಂತಾಗಿದೆ. ವಿಲಾಯತಿ ರಾಜ್ಯದ ಸೈನ್ಯಾಧಿಪತಿಗಳಾದ ಲಾರ್ಡ್ ರಾಬರ್ಟ್ಸ್ ಯವರಿಗೆ ಇನ್ಫ್ಲುಯೆಂಜ ಜ್ವರ ಬರುತ್ತಿದ್ದರೂ ಮೊದಲಿನಷ್ಟು ಜೋರಾಗಿಲ್ಲ. ಇವರಿಗೆ ದಿನೇ ದಿನೇ ವಾಸಿಯಾಗುತ್ತಿರುವುದು.

****

ಕೆಲವು ದಿನಗಳ ಹಿಂದೆ ಜರ್ಮನಿ ಚಕ್ರವರ್ತಿಯವರು ಸ್ಪ್ರೀವಾರ್ ಎಂಬ ಜಂಗಲಿನಲ್ಲಿ ಶಿಕಾರಿ ಮಾಡುತ್ತಿದ್ದಾಗ ಒಂದು ಜಿಂಕೆಯು ಅವರ ಕಣ್ಣಿಗೆ ಬಿತ್ತು. ಅವರು ಅದನ್ನು ಹೊಡೆಯಬೇಕೆಂದು ಹಿಂಬಾಲಿಸುತ್ತಾ ಹೋಗುತ್ತಿರುವಲ್ಲಿ ಒಂದು ಹೊಂಡದೊಳಗೆ ನುಗ್ಗಿ ಹೋಗಬೇಕಾಯಿತು. ಅದು ಕೆಸರು ಭೂಮಿಯಾದ್ದರಿಂದ ಚಕ್ರವರ್ತಿಯವರು ಆ ಕೆಸರಿನಲ್ಲಿ ಹೂತುಹೋದರು. ಅವರ ಶರೀರವೆಲ್ಲಾ ಭುಜಗಳ ತನಕ ಕೊಚ್ಚೆಯಲ್ಲಿ ಮುಳುಗಿಹೋಯಿತು. ತಲೆ ಮಾತ್ರ ಮೇಲೆ ಕಾಣುತ್ತಿತ್ತು. ಕೂಡಲೇ ಅವರ ಬೆಂಗಾವಲಿನವರು ಅವರನ್ನು ಎತ್ತಿಕೊಂಡರು. ಚಕ್ರವರ್ತಿಯವರು ಮರುದಿನ ನೌಕರುಗಳನ್ನು ಬಿಟ್ಟು ಆ ಕೊಚ್ಚೆಯನ್ನೆಲ್ಲಾ ಸಂಪೂರ್ಣವಾಗಿ ಎತ್ತಿ ಬೇರೆ ಕಡೆ ಹೊಯಿಸಿದರು.

ಬಾಗ್ದಾದ್ ರೈಲ್ವೆಗೆ ಫ್ರಾನ್ಸ್ ಸರ್ಕಾರದವರು ದ್ರವ್ಯ ಸಹಾಯ ಕೊಡುವವರಾಗಿಲ್ಲವೆಂಬುದು ತಿಳಿದುಬಂದ ಕಾರಣ ಫ್ರಾನ್ಸ್, ಜರ್ಮನಿ, ಆಸ್ಟ್ರೇಲಿಯಾ ದೇಶದವರು ತಮ್ಮ ತಮ್ಮಲ್ಲೇ ಷೇರು ಹಾಕಿಕೊಂಡು ಈ ರೈಲ್ವೆಯನ್ನು ಹಾಕಬೇಕೆಂದು ನಿರ್ಧರಿಸಿಕೊಂಡಿದ್ದಾರೆ. ಇದು ಎಷ್ಟು ಮಟ್ಟಿಗೆ ಕೈಗೂಡುವುದೋ ಮುಂದೆ ತಿಳಿಯಬೇಕಾಗಿದೆ.

****

ರಷ್ಯಾ ರಾಜ್ಯದ ಚಕ್ರವರ್ತಿಯವರಾದ ಜಾರ್ ಯವರಿಗೆ ಪುತ್ರ ಸಂತಾನವಿಲ್ಲದೆ ತುಂಬಾ ಕೊರಗುತ್ತಿದ್ದರು. ಅವರು ಡಾರ್ಮಸ್ಟಾಡ್ ಎಂಬ ನಗರದಲ್ಲಿರುವಾಗ್ಯೆ ದಿನವೂ ದೇವಸ್ಥಾನಕ್ಕೆ ಹೋಗಿ ಪ್ರಾರ್ಥನೆ ಮಾಡುತ್ತಿದ್ದರೆಂತಲೂ, ಈಗ ಚಕ್ರವರ್ತಿನಿಯವರು ಗರ್ಭ ಧರಿಸಿರುತ್ತಾರೆಂತಲೂ ಬಹುಶಃ ಪುತ್ರಜನನವೇ ಆದೀತೆಂದು ಸಕಲರೂ ಸಂತೋಷಭರಿತರಾಗಿದ್ದಾರೆಂತಲೂ ವರ್ತಮಾನ ಬಂದಿದೆ.

****

ಇಟಲಿ ರಾಜ್ಯದ ದೊರೆಯವರೂ ರಾಣಿಯವರೂ ಹಿಂದಿನ ವಾರ ವಿಲಾಯತಿಗೆ ದಯಮಾಡಿದ್ದರು. ಪ್ರಿನ್ಸ್ ಆಫ್ ವೇಲ್ಸ್‌ರವರೂ ಸೈನ್ಯದ ಮುಖ್ಯೋದ್ಯೋಗಸ್ಥರೂ ಪೋರ್ಟ್ಸ್‌ಮತ್ ಎಂಬ ತೀರಪಟ್ಟಣದಲ್ಲಿ ಅವರನ್ನು ಎದುರುಗೊಂಡು, ಮರ್ಯಾದೆಗಳೊಡನೆ ಊರೊಳಕ್ಕೆ ಕರೆದುಕೊಂಡು ಹೋದರು. ಅಲ್ಲಿಂದ ದೊರೆಯವರೂ ರಾಣಿಯವರೂ ವಿಂಡ್ಸರ್ ರಾಜಭವನಕ್ಕೆ ದಯಮಾಡಿ, ಎಡ್ವರ್ಡ್ ಚಕ್ರವರ್ತಿಗಳ ಆತಿಥ್ಯವನ್ನು ಸ್ವೀಕರಿಸಿದರು. ಪಟ್ಟಣವೆಲ್ಲಾ ನಾನಾ ಪ್ರಕಾರವಾಗಿ ಶೃಂಗರಿಸಲ್ಪಟ್ಟಿತ್ತು. ಸಾವಿರಾರು ಪ್ರಜೆಗಳು ನಿಂತು ನೋಡಿ ಅವರಿಗೆ ಸುಸ್ವಾಗತವನ್ನು ಜಯಧ್ವನಿಗಳ ಮೂಲಕ ಬಯಸಿದರು. ದೊರೆಯವರು ಪತ್ನೀಸಹಿತ ೩—೪ ದಿನಗಳ ತನಕ ಇಂಗ್ಲೆಂಡ್ ರಾಜ್ಯದಲ್ಲಿದ್ದು ವಾಪಸು ಪ್ರಯಾಣಮಾಡಿದರು.

****

೧೯೦೧ ನೆ ಜನವರಿ ೧ ರಲ್ಲಿ ಪ್ರಪಂಚದಲ್ಲೆಲ್ಲಾ ಒಟ್ಟು ಜನರು ೧೬೦,೩೦,೩೦,೩೦ ಇರುತ್ತಾರೆಂತಲೂ, ಎಲ್ಲಾ ದೇಶಗಳ ಆನುಭಾಗಗಳ [illegible] ಕೋಟಿಗಳ ನೆಲೆ ಬಾಳತಕ್ಕದ್ದೆಂತಲೂ, ರಸ್ತಾಗುವ ಸಾಮಾನುಗಳು [illegible] ಕೋಟಿಗಳ ಬೆಲೆ ಬಾಳುವುವೆಂತಲೂ, ಎಲ್ಲಾ ರಾಜ್ಯಗಳವರೂ ಸಾಲದ

ಜ್ವರಹರಿ.

ಇದು ಸಾಧಾರಣ ಜ್ವರ, ಚಳಿಜ್ವರ, ಮಲೇರಿಯಾ, ಪಿತ್ತಜ್ವರ, ಕಫಜ್ವರ, ವಾತಜ್ವರ, ಚಳಿ ಬಿಡುವುದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವುದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಓವರ್‌ಸಿಯರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನನ್ನ ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಬೀಸಿನ ಸೀಸೆಯು ತೀರಿಹೋಯಿತು. ಇದನ್ನು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಯಿಲೆ ಬಿದ್ದಿರುವುದರಿಂದ ದಯವಿಟ್ಟು ಇನ್ನೊಂದು ೨೦ ಬೀಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ.—ಸೀಸೆ ೧ ಕ್ಕೆ ೪ ಆಣೆ; ೧ ರೂ., ೧—೪ ರೂ., ರೂ ೨—೦ ಆ., ೧೦ ರೂ; ಹನ್ನೆರಡು ಸೀಸೆ ತರಿಸಿಕೊಂಡವರಿಗೆ ಪೋಸ್ಟೇಜು ಮಾಫಿ ಬಿಡಲಾಗುವುದು.

*********

ಪಿ ಮ ೦ ಹ ಪ್ರೂ ಗ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆನೋವು ಮುಂತಾದ ಹೊಟ್ಟೆನೋವುಗಳು—ಮುಂತಾದ್ದೆಲ್ಲಾ ಮಹತ್ತರವಾಗಿ ಪರಿಹರಿಸಿ, ಕೂಡಲೆ ಗುಣಕೊಡುವುದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಅಡಗ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗೋವಿಂದಯ್ಯರವರು—ನೀವು ಒದಗಿಸಿಕೊಟ್ಟ ಔಷಧವನ್ನು ನಾನೂ ನನ್ನ ಕಾಲೇಜಾದರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಗಳ್ಳರಿಗೆ ಕೊಡುತ್ತೇನೆ. ಹೊಟ್ಟೆ ಶೂಲೆ ಅನೇಕ ರೋಗಗಳು ಗುಣವಾಗುತ್ತವೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:— ಚೆನ್ನೈಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೆಕಂಡ್ ಬೀಚ್ ಲೈನ್, ಮದರಾಸ್.

ತಕ್ಕ ಸಾಲವು ೧೯೦೩ ರಲ್ಲಿ [illegible] ಕೋಟಿಯೂ [illegible] ಲಕ್ಷ ಪೌಂಡು ಗಳಿದ್ದದ್ದು ೧೯೦೩ ರಲ್ಲಿ [illegible] ಪೌಂಡಿಗೆ ಹೆಚ್ಚಿರುತ್ತದೆ ಎಂತಲೂ, ಪ್ರಪಂಚದಲ್ಲೆಲ್ಲಾ ಒಟ್ಟು [illegible] ಮೈಲಿ ರೈಲ್ ಪಟ್ಟೆ ಹಾಕಲ್ಪಟ್ಟಿದೆ ಎಂತಲೂ, ಪ್ರಪಂಚದಲ್ಲಿ [illegible] ಸಾಹುಕಾರಿ ಹಡಗುಗಳೂ, [illegible] ಹಡಗುಗಳೂ ವ್ಯಾಪಾರಕ್ಕಾಗಿ ದೇಶದಿಂದ ದೇಶಕ್ಕೆ ಹೋಗಿ ಬರುತ್ತವೆ ಎಂತಲೂ ಅಂಕ್ಕಿ ಜಗತ್ತಿನ ಸರ್ಕಾರಿ ಕಾರ್ಯಾಧಿಕಾರಿಗಳು ಪ್ರಕಟಿಸಿರುತ್ತಾರೆ.

****

ಅಮೇರಿಕದಲ್ಲಿ ಮಿ॥ ವೆಂಟ್ಸ್ ಎಂಬೊಬ್ಬ ಕೋಟ್ಯಾಧೀಶ್ವರನು ಇದ್ದಕ್ಕಿದ್ದ ಹಾಗೇ ಎಲ್ಲೋ ಹೊರಟುಹೋಗಿಬಿಟ್ಟನೆಂತಲೂ, ಅವನನ್ನು ದುಷ್ಟರ್ಯಾರೋ ಹಣದಾಸೆಯಿಂದ ಅಪಹರಿಸಿಕೊಂಡು ಹೋಗಿರಬಹುದೆಂದು ಅನುಮಾನ ಉಂಟಾಗಿದೆ ಎಂತಲೂ, ಅನೇಕ ಜನರು ಆತನನ್ನು ಹುಡುಕುವುದಕ್ಕೋಸ್ಕರ ನಾನಾ ಕಡೆಗಳಿಗೆ ಹೋಗಿರುತ್ತಾರೆಂತಲೂ ೨—೩ ವಾರಗಳ ಕೆಳಗೆ ತಿಳಿಸಿದೆವಷ್ಟೆ. ಆತನ ರಕ್ತಸಂಬಂಧಿಗಳು ಆತನನ್ನು ಜೀವಸಹಿತ ಕರೆದುಕೊಂಡು ಬರುವವರಿಗೆ ೩೫ ಸಾವಿರ ರೂ ಇನಾಮು ಕೊಡುವುದಾಗಿಯೂ, ಆತನನ್ನು ಒಂದು ವೇಳೆ ಕೊಲೆಮಾಡಿದ್ದರೆ ಅಂಥಾ ಕೊಲೆಗಾರರನ್ನು ಪತ್ತೆಮಾಡುವವರಿಗೆ ೧೫,೦೦೦ ರೂ. ಇನಾಮು ಕೊಡುವುದಾಗಿಯೂ ಪ್ರಕಟಿಸಿರುತ್ತಾರೆ. ಇಷ್ಟೇ ಅಲ್ಲ ಆತನಿಗೆ ಸಂಬಂಧಪಟ್ಟ ವರ್ತಮಾನವನ್ನು ಕೊಡುವವರಿಗೆ ಕೂಡ [illegible] ಕೊಡುವವರೆಂದು ಅವನ ವಿಷಯದಲ್ಲಿ ಇನ್ನೂ ೩೭,೦೦೦ ರೂ ಇನಾಮು ಕೊಡುತ್ತೇವೆಂದು ತಿಳಿಸಿದಾರೆ. ಇಷ್ಟೆಲ್ಲಾ ಶ್ರಮಪಡುತ್ತಿದ್ದಾಗ್ಯೂ ಇದುವರೆಗೆ ತಪ್ಪಿಸಿಕೊಂಡು ಹೋದವನ ಸುಳಿಯೇ ಪತ್ತೆಯಿಲ್ಲದೆ ಹೋಗಿದೆ.

## ಮಹಾರಾಜರವರ ಪ್ರೋತ್ಸಾಹಕರು.

ಇದು ವಿಲಾಯತಿಯಿಂದ ಬಂದಿದೆ. ಮುಗಿದುಹೋಯಿತು! ಜಾಗ್ರತೆ ನೋಡಿ! ಬಾಳ ನೋಡತಕ್ಕದಾಗಿಯೂ, ದೊಡ್ಡ ಸೈಜಿನದ್ದು, ಕಡತಕ್ಕ ಪುಸ್ತಕಗಳು, ಕ್ರಯ ಎರಡೇ ಆಣೆ. ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ಪಟ್ಟಗಳು; ಸ್ವಲ್ಪಗಳೂ ಇದ್ದುವು. ಕ್ರಯ ದೊಡ್ಡ ಸೈಜಿನದ್ದು ೪ ಆಣೆ; ಸಣ್ಣ ಸೈಜಿನದ್ದು ೨ ಆಣೆ.

ವ್ಯಾನೇಜರ್, ಪಿ. ಎಲ್. ಎಸ್. ಬುಕ್ ಡಿಪೊ, ಮೈಸೂರು.

## ಹೋಮೋಸಿಯ.

ಶಸ್ತ್ರದ ಪರಿಹಾರ

ಹಾಗಲ ರಸ
ನೋವು ವಾಸಿಯಾಗುತ್ತೆ.

ಈ ದಿನದಲ್ಲಿಯು ಜಪಾನ್ ಆರಸ ನೆ, ಕಾರ್ಬಾರ್ನೆ, ಆಸ್ಪತ್ರೆ, ಪೋಲೀಸ್ ರಾಣಿ, ವಿದ್ಯಾಶಾಲೆ, ಹೋಟೆಲು, ಕಛೇರಿ, ಮುಂತಾದ ಸ್ಥಳಗಳಲ್ಲಿಲ್ಲಾ ಇದ್ದೇ ಇರುವುದು. ಇದಕ್ಕೆ ಸಮಾನವಾದ ಔಷಧವು ಪ್ರಪಂಚದಲ್ಲಿ ಇಲ್ಲವೆಂದು ಬರೆದು ಬೋಧಿಸಿದ ವಾಗಿದೆ

ಈ ತೈಲವ ಪತ್ರಾಕಣವನ್ನಿ ಜೀವರಾಶಿಗಳಿಗೆ ಮುಖ್ಯವಾಗಿ ಸಿಕ್ಕುವ ಸ್ವ ಔಷಧ, ಅವರನ್ನು ಉಂಟುಮಾಡುವ ದೊಡ್ಡ ಮನುಷ್ಯರು, ತಾಯಿಗಳು, ಹೆಂಗಸರು ಅವರ ಗಾಯವನ್ನು ತೋಳ ಪತ್ರ ವೈದ್ಯರುಗಳನ್ನೂ ಪ್ರಶಂಸಿಸಿ ನೋವು ತಿಳಿಸಿ ಇದನ್ನು ಹಚ್ಚಿದರೆ ಬೇಗನೆ ವಾಸಿಯಾಗುವುದು

ಈ ತೈಲವು ಆರೆ ತಲೆನೋವು, ಸೊಂಟನೋವು, ವಾತರೋಗ, ವಾಯು, ಮೂಲವ್ಯಾಧಿ, ಉಬ್ಬಸ, ಪಾದೂಗಳು, ಸರ ಹೊಡೆಯುವದು, ಉಳುಕು, ಕೀಲುನೋವು, ಗಡ್ಡೆಗಳು, ಚಳ್ಳುನೋವು, ಮುಖ ನೋವು, ಊತಗಳು, ನೆತ್ತಿ ಗಾಯಗಳು, ಸುಟ್ಟ ಗಾಯ, ಸುಳುಕು, ಮತ್ತು ಚೇಳು ಕಡಿದದ್ದು, ಚರ್ಮರೋಗ, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಇತ್ಯಾದಿ—ನಾನಾ ಬಾಧೆಗಳನ್ನು ಹುಟ್ಟಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಬೆಳಿಗ್ಗೆ ಆತ್ತರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ ೨—೪ ಆ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡವರಿಗೆ ಡಜನ್‌ಸ್ ಬಿಕ್ಕರ್ ಮಾಫಿ ಬಿಡುತ್ತಾರೆ ರೂ. ೨—೪ ಆಣೆ ಬಾಬ್ತು ಡಬ್ಬಿಗಳನ್ನು ೧ ರೂ. ಡಬ್ಬಿಗಳ ಮೇಲೆ ಕಡಿತವಾಗಿ ೬ ಡಜನ್ ಔಷಧ ತರಿಸಿದರೆ ಆ ರೂ ೨—೪ ಆ. ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಟಪಾಲ್ ಖರ್ಚು ಮಾಫಿ ಬಿಡುತ್ತೆ.

*********

## ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಕುಳೀ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಆದ್ದರಿಂದ ಇದರಲ್ಲಿ ಇನ್ನೆರಡು ಗುಣಗಳುಳ್ಳ ಕೊನೆ ಭಾಗವಿದೆ. ಇದನ್ನು ಚೆನ್ನಾಗಿ ಬಹು ಬೇಗನೆ ಸರಿಕೊಳ್ಳಬೇಕು. ಡಬ್ಬಿಗಳಲ್ಲಿ ತುಂಬಿ ೪ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಡಜನ್‌ಸ್ ಖರ್ಚು ಮಾಫಿ. ಎಲ್ಲಾ ಬಾಜಾರುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ, ಕಾರ್ಡ್ಸ್ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೨೩ ಸೆಕಂಡು ಬೀಚ್ ಲೈನ್, ಮದರಾಸ್.

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

13—11—1903 ರಿಂದ 20—11—1903 ರ ವರೆಗೆ

| ಸ್ಥಳ. | ಪ್ಲೇಗ್ ತಗಲಿದ್ದು. | ಪ್ಲೇಗ್ ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು | |
|---|---|---|---|---|
| ಬೆಂಗಳೂರು ಪಟ್ಟಣ | 102 | 67 | 87 | [illegible] |
| ಮೈಸೂರು ,, | 94 | 66 | 191 | [illegible] |
| ಬೆಂಗಳೂರು ಡಿಸ್ಟ್ರಿಕ್ಟ್ | 124 | 96 | 119 | 0 |
| ಮೈಸೂರು ,, | 77 | 55 | 77 | 5 |
| ಕೋಲಾರ್ ,, | 41 | 31 | [illegible] | 2 |
| ಕೋಲಾರ್ ಚಿನ್ನದ ಗಣಿಗಳು | 21 | 22 | 2 | [illegible] |
| ತುಂಕೂರು ಡಿಸ್ಟ್ರಿಕ್ಟ್ | 85 | 44 | 45 | [illegible] |
| ಹಾಸನ ,, | 20 | 14 | 19 | 1 |
| ಚಿತ್ರದುರ್ಗ ,, | 41 | 27 | 22 | 1 |
| ಕಡೂರ್ ,, | 35 | 25 | 31 | 1 |
| ಶಿವಮೊಗ್ಗ ,, | 68 | 51 | 45 | 3 |
| ಜುಮ್ಲಾ | 690 | 536 | [illegible] | [illegible] |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರ ಮಾರ್ಗಶಿರ ಶುದ್ಧ ಚತುರ್ದಶಿ ಗುರುವಾರದಿಂದ ಮಾರ್ಗಶಿರ ಬಹುಳ ಪಂಚಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಡಿಸೆಂಬರ್.

| ತಾ. | ವಾರ | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ನಾ. ತೇದಿ |
|---|---|---|---|---|---|---|
| 3 | ಗುರು * | ಚತುರ್ದಶಿ | 14 58 | ಭ | 4 30 | [illegible] |
| 4 | ಶುಕ್ರ † | ಪೌರ್ಣಮಿ | 12 20 | ಕೃ | 3 52 | [illegible] |
| 5 | ಶನಿವಾರ | ಪಾಡ್ಯಮಿ | [illegible] | ರೋ | [illegible] | 20 |
| 6 | ರವಿವಾ | ಬಿದಿಗೆ | 31 10 | ಮೃ | 0 5 | 21 |
| 7 | ಸೋಮ | ತದಿಗೆ | 29 11 | ಪು | 58 8 | 22 |
| 8 | ಕುಜ | ಚೌತಿ | [illegible] | ಪು | 49 12 | 23 |
| 9 | ಬುಧ ‡ | ಪಂಚಮಿ | [illegible] | ಪು | 55 2 | 24 |

* ಸ್ಮಾರ್ತ ಏಕಾದಶಿ, ಚಾಮುಂಡೇಶ್ವರಿ ರಥ. † ದತ್ತಾತ್ರೇಯ ಜಯಂತಿ, ಸ್ಮಾರ್ತ ಏಕಾದಶಿ. ‡ ಸಂಕಷ್ಟಹರ ಚತುರ್ಥಿ.

ಪೇಟೆ ಧಾರಣೆ.

| ದಿನಸು. | ಮೈಸೂರು. | ಬೆಂಗಳೂರು. |
|---|---|---|
| ಕಳ್ಳಿ ಅಕ್ಕಿ ಪಲ್ಲಾ ಒಕ್ಕೆ | ರೂ. ೧೦—೪—೦ | ೧೦—೩—೦ |
| ಹೊಂಡಲ ಅಕ್ಕಿ ಅವಲ್ | ೧೦—೦—೦ | ೧೦—೦—೦ |
| ,, ಮಧ್ಯಮ | ೧೧—೩—೦ | ೧೦—೪—೦ |
| ಸಾಧಾರಣ ಅಕ್ಕಿ | ೯—೦—೦ | ೧೦—೩—೦ |
| ಸಣ್ಣಕ್ಕಿ ಅವಲ್ | ೧೩—೦—೦ | ೧೩—೦—೦ |
| ,, ಮಧ್ಯಮ | ೧೨—೦—೦ | ೧೨—೩—೦ |
| ಡಿಂಗರಿ ಗೋಧಿ ಪಲ್ಲಾ ಒಕ್ಕೆ | ೧೩—೦—೦ | ೧೫—೦—೦ |
| ,, ಮಧ್ಯಮ | ೧೨—೪—೦ | [illegible] |
| ಕೆಂಪು ರಾಗಿ ಪಲ್ಲಾ ಒಕ್ಕೆ | ೩—೪—೦ | ೩—೪—೦ |
| ಕಾರುರಾಗಿ | ೩—೪—೦ | ೩—೬—೦ |
| ಜೋಳ | ೩—೪—೦ | ೩—೮—೦ |
| ಹುರುಳಿಕಾಳು ಪಲ್ಲಾ ಒಕ್ಕೆ | ೩—೦—೦ | ೪—೪—೦ |
| ಬಿಳೀ ಅವರೆ | ೪—೦—೦ | ೩—೦—೦ |
| ಹೆಸರು | ೯—೦—೦ | ೯—೩—೦ |
| ಉದ್ದು | ೪—೦—೦ | ೪—೪—೦ |
| ಕಡಲೆ | ೧೦—೦—೦ | ೪—೪—೦ |
| ಎಳ್ಳು | ೧—೦—೦ | ೭—೩—೦ |
| ತೊಗರಿ | ೩—೪—೦ | ೪—೩—೦ |
| ಸರಕು ೧೦೩ ಸೇರಿಗೆ | ೯—೪—೦ | ೭—೩—೦ |
| ಸಿಂಗೇಕಾಯಿ ಮಣ ಒಕ್ಕೆ | ೯—೪—೦ | ೨—೩—೦ |
| ಗೋಟಡಕೆಕಾಯಿ | ೩—೦—೦ | ೩—೩—೦ |
| ,, ಮಧ್ಯಮ | ೩—೦—೦ | ೩—೦—೦ |
| ಬೆಲ್ಲ ದೊಡ್ಡ ಅಚ್ಚು | ೩—೪—೦ | ೩—೦—೦ |
| ಒಳ್ಳೆ ಮಣ ಒಕ್ಕೆ | ೩—೧೨—೦ | ೩—೦—೦ |
| ಸಕ್ಕರೆ ,, | ೩—೦—೦ | ೩—೦—೦ |
| ಕೊತ್ತಂಬರಿ ಪಲ್ಲ ಒಕ್ಕೆ | ೩—೦—೦ | ೬—೦—೦ |
| ಉಪ್ಪು ,, | ೩—೦—೦ | ೧—೬—೦ |
| ಜೀರಿಗೆ ಹಣ್ಣು | ೧೦—೦—೦ | ೧೦—೦—೦ |
| ,, ಕಳಕು | ೧೦—೦—೦ | ೧೦—೦—೦ |
| ಮೆಣಸು | ೧೦—೦—೦ | ೧೦—೩—೦ |
| ,, | ೧೦ ೪—೦ | ೧೦—೩—೦ |
| ಸೀಮೆಯೆಣ್ಣೆ ಪೆಟ್ಟಿಗೆ ಒಕ್ಕೆ | ೫ ೪—೦ | ೩—೪—೦ |
| ತೆಂಗಿನಕಾಯಿ ೧೦೦ ಕ್ಕೆ | ೩—೪—೦ | ೩—೪—೦ |
| ಅಡಕೆಕಾಯಿ ಮಣ ಒಕ್ಕೆ | ೩—೧೦—೦ | ೩—೦—೦ |
| ಬಂಗಾರಸಲಸಕಾಯಿ ಮಣ ಒಕ್ಕೆ | ೩—೦—೦ | ೩—೦—೦ |
| ಚಿನ್ನ (ಪೌ) ತೊಲ | ೧೦—೦—೦ | ೧೦—೦—೦ |
| ,, ಪವನು | ೧೫—೪—೦ | ೧೫—೦—೦ |
| ,, ,, ಗಟ್ಟಿ ತೊಲ ಒಕ್ಕೆ | ೧—೩—೦ | ೧—೩—೦ |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ | ೩—೧೦—೦ | ೩—೧೦—೦ |

Printed and Published by the Rev. E. W. Thompson, M.A., the Proprietor and Manager, Wesleyan Mission Press, Mysore. 3/12/1903.

# ವೃತ್ತಾಂತ ಪತ್ರಿಕೆ.

REGISTERED M. 80

ಕ್ರಯ ೧ ದುಡ್ಡು —:೦:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩. ಮೈಸೂರು—ಸನ್ ೧೯೦೩ ನೇ ಇಸವಿ ಡಿಸೆಂಬರ್ ತಾರೀಖು ೧೦ ನೇ ಗುರುವಾರ. ಸಂಚಿಕೆ ೨೯


## "ಮಹಿಳಾಸಖೀ" ಕ್ರಮಾಂಗವು.

ಈ ಮಾಸಿಕ ಪತ್ರಿಕರ್ತರು ೧೯೦೩ ನೇ ವರ್ಷಕ್ಕೆ ಪ್ರಕಟಿಸತಕ್ಕದಾದ ಒಂದು ಕ್ರಮಾಂಗವನ್ನು (ಪುಸ್ತಕವನ್ನು) ತಯಾರಿಸಿರುತ್ತಾರೆ. ಅದರಲ್ಲಿ ವಿವಿಧ ಚಿತ್ರಗಳು ಬಹು ಸುಂದರವಾಗಿವೆ. ಓದುವುದಕ್ಕೆ ಬಹಳ ಸೊಂಪಾದ ಅನೇಕ ಉಪಯುಕ್ತ ವಿಷಯಗಳೂ ಇವೆ. ಅದನ್ನು ಅಪೇಕ್ಷಿಸುವವರು ಡಿಸೆಂಬರ್ ೩೧ನೇ ತಾರೀಖಿನೊಳಗಾಗಿ ಈ ಮಾಸ ಪತ್ರಿಕೆಗೆ ೬ (ಆರು ಆಣೆ ಹಾಸ ಸೇರಿ ೯ ಆಣೆಯನ್ನು) ಅನುಸರಿಸುವವರಿಗೆ ಈ ಕ್ರಮಾಂಗವನ್ನು ಉಚಿತವಾಗಿ ಕಳುಹಿಸುವುದು. ಕ್ರಮಾಂಗವನ್ನು ಮಾತ್ರ ಅಪೇಕ್ಷಿಸುವವರು ನಾಲ್ಕಾಣೆಯನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಿ ಪಡೆಯಬಹುದು ಈ ವಿಳಾಸಕ್ಕೆ ಬೇಗ ಬರೆಯಿರಿ!

ಮ್ಯಾನೇಜರು,
ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

## ಸ್ಟಾಂಡರ್ಡ್ ಲೈಫ್ ಇನ್ಶೂರೆನ್ಸ್ ಕಂಪೆನಿ.

21

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟಿದ್ದು.

ಇಂಡಿಯಾ ದೇಶದಲ್ಲಿ ಲೈಫ್ ಇನ್ಶೂರೆನ್ಸ್ ಎಂಬ ಜೀವ ವಿಮೆಯನ್ನು ಛೇದಿಸುವ ಮತ್ತು ನಡೆಸುವ ಕಂಪೆನಿಗಳಲ್ಲಿ ಇದು ಬಹು ಹಳೆಯದಾಗಿಯೂ ಬಹು ಸುಭದ್ರವಾದದ್ದಾಗಿಯೂ ಇದೆ.

ವಿಮಾದಾರರು (ಲೈಫ್ ಇನ್ಶ್ಯೂರ್ ಮಾಡತಕ್ಕವರು) ಈ ಕಂಪೆನಿಗೆ ಕಟ್ಟುವ ಹಣ, ಸವಲತ್ತುಗಳು ಮೊದಲಾದವುಗಳು ಇತರ ಕಂಪೆನಿಯವುಗಳಿಗಿಂತ ಕಡಿಮೆಯಾಗಿದ್ದು ಇಲ್ಲಿ ವಿಮೆಯನ್ನು ಛೇದಿಸುವವರಿಗೆ ಎಷ್ಟು ಸೌಕರ್ಯಗಳು ದೊರೆಯುತ್ತವೆ.

ಈ ಕಂಪೆನಿಯ ಛೇದ ನಿಬಂಧನೆಗಳು ಬಹು ಅನುಕೂಲವಾಗಿವೆ. ಛೇದದಾರರುಗಳಿಗೆ ಬೋನಸ್‌ಯನ್ನು ಕೊಡುವ ನಿಬಂಧನೆಗಳೂ ಇವೆ.

ಕ್ರಮವಾದ ವಯಸ್ಸಿನ ಕಳೆದ ಮೇಲೆ ಆ ವಯಸ್ಸಿನ ಮರಣ ಪ್ರಾಪ್ತವಾದ ಪಕ್ಷದಲ್ಲಿ ಮರಣಾನಂತರವಾಗಲಿ ೨,೦೦೦ ರೂ. ಗಳನ್ನು ಕಂತುಗಳಲ್ಲಿ ಕೊಡುವ ಅಭಿಪ್ರಾಯವಾಗಿ ಪ್ರತಿ ವರ್ಷ ಕಂಪೆನಿಗೆ ಕೊಡತಕ್ಕ ಚಂದಾ ಹಣಗಳ ಪಟ್ಟಿ ಕೆಳಗೆ ಇಲ್ಲಿ ನೋಡಿ.

| ಈ ವಯಸ್ಸು ತುಂಬಿದ ವಯಸ್ಸು | ೫೦ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಪಡೆಯ ಬೇಕಾದರೆ ಕೊಡಬೇಕಾದ ಕಂತಿನ ಹಣ. | ೫೫ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಯನ್ನು ಪಡೆಯಬೇಕಾದರೆ ಕೊಡಬೇಕಾದ ಕಂತಿನ ಹಣ. |
|---|---|---|
| ೨೦ | ರೂ. ೩—೧೨—೮ | ರೂ. ೩—೨—೦ |
| ೨೫ | ,, ೩—೧೫—೪ | ,, ೩—೧೪—೦ |
| ೩೦ | ,, ೯—೧೨—೮ | ,, ೮—೨—೦ |
| ೩೫ | ,, ೧೨—೧೪—೮ | ,, ೧೦—೧—೪ |
| ೪೦ | | ,, ೧೩—೪—೮ |

೨,೦೦೦ ರೂ. ಗಿಂತಲೂ ಹೆಚ್ಚಾದದ್ದಕ್ಕಾಗಲಿ ಕಡಮೆಯಾದ್ದಕ್ಕಾಗಲಿ ಹೆಚ್ಚು ಕಡಮೆ ಇದ್ದರಾಗಲಿ ಚಂದಾ ದರವೇನು ಎಂಬುದನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಇದುವರೆಗೆ ಜಾರಿಯಲ್ಲಿದ್ದ ಚಂದಾ ದರಗಳನ್ನು ಕಡಮೆ ಮಾಡಿದೆ. ಬರುವ ವರ್ಷಕ್ಕೆ ಜಾರಿಯಾಗಿರುವ ಹೊಸ ಚಂದಾ ದರಗಳನ್ನೂ ಛೇದದ ಪತ್ರಗಳನ್ನೂ ಇದೇ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ. ಎಂ. ಸೂರ್ಯನಾರಾಯಣಪ್ಪ,

ಏಜೆಂಟ್ ಮತ್ತು ಜನರಲ್ ಏಜೆನ್ಸಿ, ಶಿವಮೊಗ್ಗ.

## ಗೋಘೃತಸಂಜೀವಿನಿ.

15

೧ ರೂ. ೮ ಆ.; ವಿ. ಪಿ. ಚಾರ್ಜ್ ೩ ಆ.

ಕೆ. ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.

## WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಪುಸ್ತಕ, ಚಿತ್ರ, ಬೈಂಡಿಂಗ್ ಮುಂತಾದ ಸಮಸ್ತ ಪ್ರಿಂಟಿಂಗ್ ಕೆಲಸಗಳನ್ನು ಬಹಳ ಸುಲಭ ಛಾರ್ಜಿಗೂ, ಜಾಗ್ರತೆಯಿಂದಲೂ, ನೇತ್ರಾನಂದಕರವಾಗಿಯೂ ಮಾಡಿಕೊಡುತ್ತಾರೆ. ಅಪೇಕ್ಷೆಯುಳ್ಳವರು ಕೆಲಸವನ್ನು ಕಳುಹಿಸಿಕೊಟ್ಟು ಪರೀಕ್ಷೆ ಮಾಡಬೇಕು. ಆ ಪುಸ್ತಕಗಳು ಬಹಳ ಗಟ್ಟಿಯಾಗಿಯೂ ಅಂದವಾಗಿಯೂ ಬೈಂಡಾಗುತ್ತವೆ. ಎಲ್ಲಾ ವಿಷಯಗಳನ್ನೂ ಪ್ರೆಸ್ ಮ್ಯಾನೇಜರಿಗೆ ಬರೆದು ಅಥವಾ ಅವರನ್ನು ನೋಡಿ ಕಂಡು ತಿಳಿದುಕೊಳ್ಳಬಹುದು.

ವಿಳಾಸ:—ಮಿ ಎಂ ಛಾರ್ಲ್ಸ್, ಮ್ಯಾನೇಜರ್,

ಮೈಸೂರು.

## ROBINSON'S PATENT BARLEY.

## ರಾಬಿನ್‌ಸನ್‌ಯವರ ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಎಪೆಗೋಧಿಯಿಂದ ಮಾಡಿದೆ. ಹಸ್ತ ಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮುಂದ ಚಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನಸಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾರುತ್ತಾರಾದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಮೊಹರನ್ನು ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು

## ಮಹಾರಾಜರವರ ಫೋಟೋಗಳು.

ಇದೆ ವಿಲಾಯತಿಯಿಂದ ಬಂದಿವೆ ಮುಗಿದುಹೋದಾವು! ಜಾಗ್ರತೆ ನೋಡಿ! ಬಹಳ ಸೊಗಸಾಗಿವೆ ದೊಡ್ಡ ಸೈಜಿನವು, ಕಡಕಟ್ಟು ಫೋಗಳಲ್ಲ. ಕ್ರಯ ಎರಡೇ ಆಣೆ. ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ಪಟ್ಟಿಗಳು; ಸುಂದರವಾದ ಬಣ್ಣಗಳುಳ್ಳದ್ದು. ಕ್ರಯ ದೊಡ್ಡ ಸೈಜಿನದು ೮ ಆಣೆ; ಸಣ್ಣ ಸೈಜಿನದು ೨ ಆಣೆ.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

## ಜನರಂಜಿತವಾದ ಪುಸ್ತಕಗಳು! ಬೇಗನೋದಬಾರದೇ

ಮೈಸೂರು ಸರ್ಕಾರದ ವಿದ್ಯಾ ಇಲಾಖೆಯವರು ಈ ಪುಸ್ತಕಗಳ ಅಮೂಲ್ಯತ್ವವನ್ನು ತಿಳಿದು ನೂರೈವತ್ತು ರೂಪಾಯಿಗಳಿಗಿಂತ ಹೆಚ್ಚಾಗಿಯೇ ತರಿಸಿಕೊಂಡಿದ್ದಾರೆ.

ಪುರಾತನ ಗ್ರೀಕರ ಚರಿತ್ರೆ. ಬಹು ರಸಿಕವಾಗಿದೆ. ಚಿತ್ರಗಳಿಂದ ಕೂಡಿದ್ದು ಕ್ರಯ ೦—೨—೬

ಪ್ರಾಚೀನ ಮೃಗಗಳ ವರ್ಣನೆ. ಚಿತ್ರಗಳಿಂದ ತುಂಬಿದೆ. ೦—೧—೦

ಖಗೋಳ ಶಾಸ್ತ್ರ ಸಿದ್ಧಾಂತ. ಎಲ್ಲರೂ ಓದತಕ್ಕದ್ದು. ಅನೇಕ ಚಿತ್ರಗಳಿವೆ ೦—೧—೦

ಪಕ್ಷಿಗಳ ವರ್ಣನೆ. ಸ್ಕೂಲ್ ಹುಡುಗರಿಗೆ ಇನಾಮಾಗಿ ಕೊಡುವದಕ್ಕೆ ಯೋಗ್ಯವಾಗಿದೆ. ಅನೇಕ ಪಕ್ಷಿಗಳ ಪಟಗಳೂ, ಅವುಗಳ ಚರಿತ್ರೆಗಳೂ ಇದರಲ್ಲಿ ಅಡಕವಾಗಿವೆ ೦—೧—೦

ಇಂಡಿಯಾ ಚಕ್ರವರ್ತಿಯವರಾದ ಎಡ್ವರ್ಡ್ ಸಾರ್ವಭೌಮರ ಮತ್ತು ಚಕ್ರವರ್ತಿನಿಯರಾದ ಅಲೆಕ್ಸಾಂಡರಾ ಅಮ್ಮನವರ ಜೀವಮಾನಗಳ ಚರಿತ್ರೆ. ಇದರಲ್ಲಿ ಸ್ಟೇಜ್ ಕಾಗದದಮೇಲೆ ಹಾಕಿರುವ ಪಟಗಳು ಅನೇಕವಾಗಿವೆ. ಪ್ರತಿಯೊಬ್ಬರ ಮನೆಯಲ್ಲೂ ಇರತಕ್ಕ ಪುಸ್ತಕ. ಇಂಥಾ ಉತ್ಕೃಷ್ಟವಾದ ಪುಸ್ತಕಕ್ಕೆ ಬೆಲೆಯು ಬಹು ಕಡಿಮೆಯಾಗಿದೆ. ಕ್ರಯ ೦—೪—೦

| | |
|---|---|
| ಚಕ್ರವರ್ತಿಗಳ ಕಿರೀಟಧಾರಣೆಯ ಪುಸ್ತಕ ಕ್ರಯ | ೦—೨—೬ |
| ಕ್ರಿಮಿಗಳ ವರ್ಣನೆ (ಸಚಿತ್ರ) | ೦—೧—೦ |
| ಬೇಹವಂಬ ನನ್ನಮನೆ (ಸಚಿತ್ರ) | ೦—೧—೦ |
| ಪ್ರಬೋಧಚಂದ್ರಿಕೆ | ೦—೨—೦ |
| ಚಿಕ್ಕವರಿಗೆ ಹೇಳುವ ಕಥೆಗಳು | ೦—೧—೦ |
| ಗಾಂಬೀರನಾದ ಪಾಲಿಸಿಯ ಚರಿತ್ರೆ | ೦—೧—೦ |
| ಗ್ರೀನ್‌ಲಾಂಡಿನ ಚರಿತ್ರೆ | ೦—೨—೬ |
| ಮಾರ್ಟಿನ್ ಲೂಥರನ ಚರಿತ್ರೆ | ೦—೧—೬ |
| ಆರ್ಯರ ಪ್ರೊಫೆಸರ್ ಚರಿತ್ರೆ | ೦—೧—೩ |
| ಘನತೆಯುಳ್ಳ ಸ್ತ್ರೀಯರ ಚರಿತ್ರೆ | ೦—೨—೬ |

(೧) ವೇದಗಳನ್ನು ಬರೆದವರು ಯಾರು? (೨) ಶುದ್ಧವಾದ ನೀರಿನಬೆಲೆ, (೩) ಸಾಲ ಮತ್ತು ಸಾಲತೀರಿಸುವ ಮಾರ್ಗ. (೪) ಇಂಡಿಯಾದೇಶದ ಬಡತನದ ಕಾರಣಗಳು, (೫) ಬಾಲ್ಯವಿವಾಹ, (೬) ಪ್ರಾಯಶ್ಚಿತ್ತವು, (೭) ಬಿಡ್ಡುವದು, (೮) ಮಾನವಧರ್ಮಶಾಸ್ತ್ರ (೯) ಗ್ರಹಣಗಳು, (೧೦) ಮಕ್ಕಳನ್ನು ಬೆಳಸತಕ್ಕವಿಧ. (೧೧) ಶ್ರಾದ್ಧಗಳು, (೧೨) ಎಲ್ಲರೂ ಸಹೋದರರು, (೧೩) ಮಂತ್ರ, ತಂತ್ರ, ಯಂತ್ರಗಳು, (೧೪) ಜ್ಯೋತಿಷಶಾಸ್ತ್ರ (೧೫) ಆರೋಗ್ಯಪ್ರಕಾಶಿಕೆ. ಈ ಪುಸ್ತಕಗಳ ಪ್ರತಿಯೊಂದಕ್ಕೆ ಮೂರು ಕಾಸು ಕ್ರಯವಿದೆ. ಮೇಲ್ಕಂಡ ಹದಿನೈದು ಪುಸ್ತಕಗಳನ್ನು ಒಟ್ಟಾಗಿ ತರಿಸತಕ್ಕದ್ದು. ಬಿಡಿಯಾಗಿ ಮಾರಲಾರೆವು. ಈ ಪುಸ್ತಕಗಳನ್ನು ಓದಿದಮೇಲೆ ಬರುವ ಸಂತೋಷವನ್ನು ವಿವರಿಸಲಾಗದು. ಜಾಗ್ರತೆ ನೋಡಿ. ವಿ. ಪಿ. ಪಿ. ಮೂಲಕವಾಗಿಯಾಗಲಿ ಅಥವಾ ಹಣವನ್ನು ಮುಂಗಡವಾಗಿ ಕಳುಹಿಸೋಣವ್ವರಿಂದಲಾಗಲಿ ಪುಸ್ತಕಗಳನ್ನು ಪಡೆಯಬಹುದು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

49

## ಬೇಕಾಗಿದೆ!
### ಒಳ್ಳೇ ಸಮಯ!

ಮೈಸೂರಿನಲ್ಲಿರುವ ಛತ್ರದ ಕಾರ್ಖಾನೆಯ ವಿಚಾರವನ್ನು ನೋಡಿಕೊಳ್ಳುವುದಕ್ಕೆ "ಒವರ್ಸಿಯರ್" ಬೇಕಾಗಿದೆ. ೫೦೦ ರೂ ಕಾವತಿ ಇಲ್ಲವೆ ಸರಿಯಾದ ಚರಸ್ವತ್ತನ್ನು ಆಧಾರ ಮಾಡಿದರೆ ಲಾಭದಲ್ಲಿ ಪಾಲು ಸಿಕ್ಕುವದು. ಇಷ್ಟವಿದ್ದವರು

Miss Patsons, Mysore City

ಎಂಬ ವಿಳಾಸಕ್ಕೆ ಬರೆಯಬಹುದು.

### ನಮ್ಮ ಚಂದಾದಾರರಿಗೆ ನೋಟಿಸ್.

"ವೃತ್ತಾಂತ ಪತ್ರಿಕೆ" ಯ ಏಜಂಟರು ಚಂದಾ ವಸೂಲ್ಮಾಡಿ ಕೊಂಡದ್ದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಚಂದಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲ.

ಮ್ಯಾನೇಜರ್,

ಮೈಸೂರು. "ವೃತ್ತಾಂತ ಪತ್ರಿಕೆ" ಆಫೀಸ್.




### ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ಬಹಳ ಅನುಕೂಲವಾದದ್ದು. ಶರೀರಕ್ಕೆ ಮೂಗು ಏಟು ಬಿದ್ದರೂ ಹೊರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಕಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೇನ್ ನೋವುಹರವೆಂಬೋ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ಒಕ್ಕೆ ೧ ರೂ.; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,

ಮೌಂಟ್ ರೋಡ್,

ಮದರಾಸ್.

## ವೃತ್ತಾಂತ ಪತ್ರಿಕೆ.

ಸ್ಟ ೧೯೦೩ ನೇ ಇಸವಿ ಡಿಸೆಂಬರ್ ತಾ ೧೦ ನೇ ಗುರುವಾರ.

### ರಜಪೂತ್ ಜನರೂ ವಿದ್ಯಾಭ್ಯಾಸವೂ.

ಅಲ್ವಾರ್ ಸಂಸ್ಥಾನದ ಮಹಾರಾಜರವರು ಸಂಸ್ಥಾನ ವನ್ನಾಳುವುದಕ್ಕೆ ಬೇಕಾದ ವಯಸ್ಸು, ವಿದ್ಯೆ, ಸಾಮರ್ಥ್ಯಾದಿಗಳನ್ನು ಸಂಪಾದಿಸಿಕೊಂಡಿರುತ್ತಾರೆ. ಇವರು ಕೆಲವು ದಿನಗಳ ಕೆಳಗೆ ಅಲ್ವಾರ್ ನಗರದಲ್ಲಿರುವ ಸಮಸ್ತ ಜಹಗೀರುದಾರರನ್ನೂ ಸರ್ದಾರರನ್ನೂ ಅರಮನೆಗೆ ಕರೆಸಿಕೊಂಡು, ಅವರಿಗೆಲ್ಲಾ ಸಹಭೋಜನವನ್ನು ಮಾಡಿಸಿ, ಊಟವಾದನಂತರ ಎಲ್ಲರೂ ಸಂತೋಷಚಿತ್ತರಾಗಿರುವುದನ್ನು ನೋಡಿ, ಅವರನ್ನು ಕುರಿತು ಕೆಲವು ಮಾತುಗಳನ್ನಾಡಿದರು. ಅವರ ಮುಖ್ಯಭಿಪ್ರಾಯವೇನೆಂದರೆ:—

"ನಿಮ್ಮಲ್ಲಿ ವಯಸ್ಸು ಕಳೆದು ಹೋದವರಿಗೆ ಈಗ ನಾನು ಹೇಳುವ ವಿಷಯ ಸ್ವಾರಸ್ಯವಾಗಿರಲಾರದು; ಆದರೆ ಪೂರ್ಣ ವಯಸ್ಸಿನವರಿಗೆ ಇದರ ಅರ್ಥವು ಚೆನ್ನಾಗಿ ತಿಳಿಯತಕ್ಕದ್ದಾಗಿದೆ. ನಮ್ಮ ರಜಪೂತ್ ಜನರು ತಮ್ಮ ಮಕ್ಕಳಿಗೆಲ್ಲಾ ತಕ್ಕಹಾಗೆ ವಿದ್ಯೆ ಕಲಿಸಬೇಕು. ಈ ಕೊರತೆಯು ನನ್ನ ಮನಸ್ಸನ್ನು ತುಂಬಾ ಬಾಧಿಸುತ್ತಿರುವುದು. ಪೂರ್ವಕಾಲದಲ್ಲಿ ವಿದ್ಯೆ ಅವಶ್ಯವಾಗಿರಲಿಲ್ಲ; ಬೇರೆಯವರಿಗೆ ಬದಲಾಗಿ ಕತ್ತಿ ಗುರಾಣಿಗಳನ್ನು ಹಿಡಿದು ನಮ್ಮ ಹಿರಿಯರು ರಾಜ್ಯಪರಿಪಾಲನೆ ಮಾಡುತ್ತಿದ್ದರು; ವಿದ್ಯಾಶಕ್ತಿಗಿಂತಲೂ ದೇಹಶಕ್ತಿಯೇ ಪ್ರಾಧಾನ್ಯವಾಗಿದ್ದಿತು. ಈಗಲಾದರೋ ಅದು ವ್ಯತ್ಯಾಸ ಹೊಂದಿರುವುದು. ಭಗವದನುಗ್ರಹದಿಂದ ನಾವು ಬ್ರಿಟಿಷ್ ಪ್ರಭುತ್ವಕ್ಕೊಳಪಟ್ಟಿರುವೆವು. ಪ್ರಜೆಗಳಿಗೆ ಯಾವ ಕಳವಳವೂ ಇರುವುದಿಲ್ಲ. ಶಾಂತಿಯೂ ಸಮಾಧಾನವೂ ಎಲ್ಲೆಲ್ಲೂ ನೆಲೆಗೊಂಡಿರುತ್ತವೆ. ಈಗ ನಾವು ಕಾಲಾನುಗುಣ್ಯವಾಗಿ ಸಾಮರ್ಥ್ಯ, ಬುದ್ಧಿ, ಜ್ಞಾನಗಳನ್ನು ಸಂಪಾದಿಸಿಕೊಳ್ಳದಿದ್ದರೆ ಪ್ರಯೋಜನವಿಲ್ಲ. ಇವುಗಳಿಗೆಲ್ಲಾ ವಿದ್ಯೆಯೇ ಆಧಾರ. ನೀವು ನಿಮ್ಮ ಮಕ್ಕಳನ್ನು ಕಾಯಪುಷ್ಟರನ್ನಾಗಿ ಮಾತ್ರವೇ ಬೆಳೆಸಿಟ್ಟುಕೊಳ್ಳುವುದರಿಂದ ಪ್ರಯೋಜನವಿಲ್ಲ. ಅವರು ಸಕಲರಿಗೂ ಪ್ರಯೋಜಕರಾಗುವಂತೆ ಆಗಬೇಕು. ಅವರು ನಿಮ್ಮ ಹಿರಿಯರ ಶ್ರೇಷ್ಠತರವಾದ ಒಳ್ಳೇ ಹೆಸರನ್ನು ಕಾಪಾಡಿಕೊಳ್ಳುವವರಾಗಬೇಕು. ನೀವೆಲ್ಲಾ ಮನಸ್ಸು ಮಾಡಿದರೆ ಈ ನನ್ನ ಕುತೂಹಲವನ್ನು ಸಫಲಕಪಡಿಸಿದಂತಾಗುವುದು. ನಮ್ಮ ವೈಸರಾಯಿ ಪ್ರಭುಗಳು ಇನ್ನೆರಡು ವರುಷಗಳ ತನಕ ಈ ರಾಷ್ಟ್ರದಲ್ಲೇ ಇರಬೇಕೆಂದು ತೀರ್ಮಾನಿಸಿರುವುದೇಕೆ ಬಲ್ಲಿರಾ? ಅವರು ಪ್ರಾರಂಭಿಸಿರುವ ಬಂದೋಬಸ್ತುಗಳನ್ನು ಪೂರೈಸಬೇಕೆಂತಲೇ ನಿಂತುಬಿಟ್ಟರು. ಹಿಂದೂಸ್ಥಾನದ ವಿದ್ಯಾಭ್ಯಾಸ ಕ್ರಮವನ್ನು ಉತ್ತಮ ಸ್ಥಿತಿಗೆ ತರಬೇಕೆಂದು ಅವರು ನಿಶ್ಚಯಿಸಿಕೊಂಡಿರುತ್ತಾರೆ. ಹೀಗಿರುವಲ್ಲಿ ನಾವು ನಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಬೆಳೆಸುವುದಕ್ಕೆ ತಕ್ಕ ಏರ್ಪಾಡು ಮಾಡಿಕೊಳ್ಳದೆ ಇರಬಹುದೇ? ಅಜ್ಮೀರ್ ನಗರದಲ್ಲಿ ಸರ್ವೋತ್ಕೃಷ್ಟವಾದ ಮೆಯೋ ಕಾಲೇಜೆಂಬ ವಿದ್ಯಾಶಾಲೆ ಇರುವುದು. ಇನ್ನೂರು ಮೈಲಿ ದೂರದಲ್ಲಿದೆ ಅಲ್ಲ; ಅನ್ನು ಹೊರ ಮಕ್ಕಳನ್ನು ಕಳುಹಿಸಿಬಿಟ್ಟು ಬಿಟ್ಟರೇ ಇರುವುದು ಹೇಗೆಂದು ಯೋಚಿಸಬೇಡಿರಿ. ಅವರ ವಿದ್ಯಾಭ್ಯಾಸಕ್ಕೆ ಅಲ್ಪಸ್ವಲ್ಪ ವ್ಯಯ ವಾದಾಗ್ಯೂ ವ್ಯಸನ ಚಿಂತಿಸಬೇಡಿ. ಅವರು ವಿದ್ಯಾವಂತರಾಗಿ ಅಲ್ಲಿಂದ ವಾಪಸು ಬಂದರೆ ಕುಲಕ್ಕೆ ಕೀರ್ತಿ ತರತಕ್ಕವರಾಗಿಯೂ, ನೆರೆಹೊರೆಯವರಿಗೆ ಉಪಕಾರಿಗಳಾಗಿಯೂ, ಅಧಿಕಾರ ನಡೆಸುವುದಕ್ಕೆ ಸಮರ್ಥರಾಗಿಯೂ ಆಗುತ್ತಾರೆ. ಆಗ ಆ ಪರಿಸ್ಥಿತಿಯನ್ನು ನೋಡಿ ನೀವೇ ಸಂತೋಷಪಡುವಿರಿ. ಈ ಸಂಸ್ಥಾನದಲ್ಲಿ ಒಂಭತ್ತು ಲಕ್ಷ ರಜಪೂತ್ ಪ್ರಜೆಗಳಿದ್ದಾರೆ. ಅವರನ್ನಾಳುವ ಭಾರವನ್ನು ರಜಪೂತ್ ಧೊರೆಯವನಾದ ನಾನು ವಹಿಸಿರುತ್ತೇನೆ. ನನ್ನ ಸಂಸ್ಥಾನದಲ್ಲಿ ಅಧಿಕಾರಗಳಿಗೆ ಬರತಕ್ಕವರು ನೀವೂ ನಿಮ್ಮ ವಂಶೀಕರೂ ಆಗಿರುತ್ತೀರಿ. ಆದುದರಿಂದ ಅಧಿಕಾರವನ್ನು ತೃಪ್ತಿಕರವಾಗಿಯೂ ಪ್ರಜಾರಂಜಕವಾಗಿಯೂ ನಡೆಸಲು ನೀವೂ ನಿಮ್ಮ ಕುಮಾರರುಗಳೂ ವಿದ್ಯಾದಿ ಸಾಮರ್ಥ್ಯಗಳನ್ನು ಸಂಪಾದಿಸಿಕೊಳ್ಳಬೇಕಾಗಿದೆ. ನೀವಾಗಿಯೇ ಈ ಭಾಗದಲ್ಲಿ ಕುತೂಹಲಪಟ್ಟು ನಿಮ್ಮ ಮಕ್ಕಳಿಗೆ ವಿದ್ಯೆ ಕಲಿಸುವುದಕ್ಕೆ ಪ್ರಾರಂಭಮಾಡಿದರೆ ಅದಕ್ಕೆ ನಿಮಗೆ ಬೇಕಾಗುವ ಸಹಾಯಸಂಪತ್ತುಗಳನ್ನು ನಾನೂ ಒದಗಿಸಿಕೊಡುವೆನು."

ಈ ಪ್ರಕಾರ ಮಹಾರಾಜರವರು ಪ್ರೌಢಮನುಷ್ಯರಿಗೆ ವಿವೇಕ ಹೇಳಿ, ಅವರ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ಪ್ರಯತ್ನಪಟ್ಟಿರುವುದಕ್ಕಾಗಿ ನಾವು ತುಂಬಾ ಸಂತೋಷಪಡುತ್ತೇವೆ.

### ಸುಳ್ಳು ಹೇಳುವುದು ಪಾಪವಾಗಿದೆ.

ಮದ್ರಾಸ್ ಯೂನಿವರ್ಸಿಟಿಯೆಂಬ ವಿದ್ಯಾಪರೀಕ್ಷಕ ಸಮಾಜದ ರಿಜಿಸ್ಟ್ರಾರವರು ಗವರ್ನಮೆಂಟು ಗೆಜೆಟಿನಲ್ಲಿ ಸುಮಾರು ೧೪೭ ಮಂದಿಯ ಹೆಸರುಗಳನ್ನು ಪ್ರಕಟಿಸಿ, ಇವರು ಕಳೆದ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಹೋಗುವುದಕ್ಕೆ ತಮ್ಮನ್ನು ಯೋಗ್ಯರೆಂದು ತೋರಿಸಿಕೊಳ್ಳುವದಕ್ಕೋಸ್ಕರ ವಯಸ್ಸು ಮುಂತಾದ ವಿಷಯಗಳಲ್ಲಿ ಸುಳ್ಳು ಹೇಳಿದ್ದಾರಾದಕಾರಣ ಅವರವರ ತಪ್ಪಿಗೆ ತಕ್ಕಹಾಗೆ ಒಂದು, ಎರಡು, ಮೂರು ವರ್ಷಗಳ ವರೆಗೂ, ಪುನಃ ಪರೀಕ್ಷೆಗೆ ಸೇರಕೂಡದೆಂದೂ ವಿಧಿಸಿದ್ದಾರೆ. ಕೆಲವರನ್ನು ಪುನಃ ಪರೀಕ್ಷೆಗೇ ಸೇರಿಸಿಕೊಳ್ಳುವುದಿಲ್ಲವೆಂದೂ ಖಂಡಿತವಾಗಿ ತಿಳಿಸಿದ್ದಾರೆ.

ಇಷ್ಟುಮಂದಿ ಹುಡುಗರೂ ಯೌವನಸ್ಥರೂ ಸ್ವಲ್ಪ ಪ್ರಯೋಜನವನ್ನು ಹಿಡಿದು ಕೆಟ್ಟರಲ್ಲಾ! ಇವರಲ್ಲಿ ಮಾನದ ಮೇಲೆ ದೃಷ್ಟಿಯಿಲ್ಲದೆ ಹೋಯಿತಲ್ಲಾ! ನಂಬಿಕೆ ಕೆಡಿಸಿಕೊಳ್ಳಬಾರದೆಂಬ ನೀತಿಗೆ ಇವರು ಬಾಹಿರರಾಗಿ ಹೋದರಲ್ಲಾ! ಎಂದು ಯಾರಾಗಲಿ ವಿಷಾದಿಸದೆ ಇರಲಾರರು. ಇಂಥವರು ಒಂದು ವೇಳೆ ಪರೀಕ್ಷೆಯನ್ನು ಕೊಟ್ಟು ಯೋಗ್ಯರೆನಿಸಿಕೊಂಡು ಸರ್ಕಾರಿ ಉದ್ಯೋಗಗಳನ್ನು ಪಡೆಯುವದಾದ ಕಾಲಕ್ಕೆ ಇವರಿಂದ ಎಷ್ಟು ಅಪಾರವಾದ ನಷ್ಟವಾದೀತ! ಇಂಥವರು ಉದ್ಯೋಗಸ್ಥರಾದರೆ ಲಂಚ ತಿನ್ನುವರೂ, ಸುಳ್ಳುಗಾರರೂ, ಸರ್ಕಾರದ ಹಣವನ್ನು ನುಂಗಿ ನಾಶಮಾಡುವರೂ ಆಗಿ, ದೇಶದ ಸೌಭಾಗ್ಯಕ್ಕೆ ಚ್ಯುತಿ ಬರುವುದಲ್ಲವೇ! ಅನೀತಿಯು ಪ್ರಬಲವಾಗಿ ನೀತಿಯೆಂಬುದು ಕಾಣ ಸಿಗದಲ್ಲವೇ!

ಎಂಥ ವಿಪತ್ತು ಸಂಭವಿಸಿದಾಗ್ಯೂ ಸುಳ್ಳು ಹೇಳುವುದಿಲ್ಲವೆಂದು ದೃಢಮಾಡಿಕೊಂಡಿರುವ ಯೌವನಸ್ಥರು ಎಷ್ಟುಮಂದಿ ಸಿಕ್ಕುವರು? ಎಷ್ಟು ಮರುವಸ್ಥೆಯಲ್ಲಿ ಬಿದ್ದರೂ ಸತ್ಯವನ್ನು ಬಿಡದೆ ನಂಬಿಕೆಗೆ ಯೋಗ್ಯರಾದವರು ಇರುವರು ಎಲ್ಲಿದ್ದಾರೆ? ಎಂದು ಪರೀಕ್ಷಿಸಿದರೆ ಇಂಥವರು ಕೆಲವು ಮಂದಿಯೇ ಸಿಕ್ಕುವರು ಎಂಬುದಾಗಿ ಹೇಳಬೇಕು. ಅಕ್ಕಟ್ಟೀ ಹೇಳೋಣ! ನಮ್ಮ ಹೇಳಿಕೆಯು ಸಂಪೂರ್ಣವಾಗಿ ನಂಬಿಕೆಗೆ ಅರ್ಹರಾಗುವ ಕಾಲವು ಬಾರದಿದ್ದರೆ, ನಮ್ಮ ಈ ಇಂಡಿಯಾ ದೇಶದ ಕೀರ್ತಿಯನ್ನು ಪಡೆಯಲಾರದು. ಅಲ್ಲಿ ಐಕ್ಯಮತ್ಯವಾಗದು; ಶ್ರೇಯಸ್ಸನ್ನು ಹೊಂದಲಾರದು. ಹೀಗಿರುವುದರಿಂದ ದೇಶವನ್ನು ಉನ್ನತಸ್ಥಿತಿಗೆ ತರಬೇಕೆಂದು ಅಪೇಕ್ಷಿಸುವವರೆಲ್ಲರೂ ದೇಶಾಭಿಮಾನಿಗಳಾದ ಯೌವನಸ್ಥರೆಲ್ಲರೂ ತಮ್ಮತಮ್ಮ ಕೆಲಸ ಕಾರ್ಯಗಳಲ್ಲಿ ನೀತಿವಂತರೂ ಸತ್ಯವಂತರೂ ಆಗಿರಲೇ ಬೇಕು.

ಇಂಗ್ಲಾಂಡಿನ ಒಂದಾನೊಂದು ಚಿಕ್ಕ ಊರಿನಲ್ಲಿ ಒಂದು ಕಲ್ಲುಕಂಬವಿದೆ. ಇದನ್ನೇ ಸರಿಸುಮಾರು ೨೦೦—೩೦೦ ವರ್ಷಗಳಾಗಿರ ಬಹುದು. ಇದನ್ನು ಸ್ಥಾಪಿಸುವದಕ್ಕೆ ಕಾರಣವೇನೆಂದರೆ—ಆ ಊರು ಸಂತೆಯಾದ್ದರಿಂದ ಒಬ್ಬ ಹಳ್ಳಿಯ ಹೆಂಗಸು ಮಾರುವುದಕ್ಕೆ ಮೊಟ್ಟೆಗಳನ್ನು ತರುತ್ತಿದ್ದಳು. ಇವಳು ಊರಿನವರಿಂದ ಹಣವನ್ನು ತಕ್ಕೊಂಡಾಗ್ಯೂ ತನಗೆ ಹಣವು ಬರಲೇ ಇಲ್ಲವೆಂದು ಅಬದ್ಧ ಹೇಳುತ್ತಿದ್ದಳು. ಒಂದು ದಿನ ಇವಳು ಮೊಟ್ಟೆ ಮಾರಿದ ಹಣವನ್ನು ಕೈಯಲ್ಲಿಟ್ಟುಕೊಂಡಿದ್ದರೂ—"ನನ್ನಲ್ಲಿ ಆ ಹಣವಿದ್ದರೆ ಆದರೆ ದೇವರು ನನ್ನನ್ನು ಈಗಲೇ ಸಾಯಬಡಿಯಲಿ!" ಎಂದು ಹೇಳಿದಳು. ಆ ಮಾತು ಅವಳ ಬಾಯಿಯಿಂದ ಹೊರಟ ಕೂಡಲೇ ಅವಳು ಸತ್ತೇ ಬಿದ್ದು ಬಿಟ್ಟಳು. ಈ ಭಯಂಕರವಾದ ಕಾರ್ಯವು ಸಕಲರಿಗೂ ಎಚ್ಚರಿಕೆಗೆ ಕಾರಣವಾಗಿರಬೇಕೆಂಬ ಉದ್ದೇಶದಿಂದ ಆ ಊರಿನವರು ಆ ಹೆಂಗಸು ಸತ್ತುಬಿದ್ದ ಸ್ಥಳದಲ್ಲಿ ಈ ಶಾಸನವನ್ನು ಸ್ಥಾಪಿಸಿದರು.

ಈ ವೃತ್ತಾಂತವನ್ನು ಕೇಳುವವರೆಲ್ಲರೂ ಸುಳ್ಳು ಹೇಳುವದು ಮಹಾ ಭಯಂಕರವಾದದ್ದೆಂದು ಹೇಳುವರಷ್ಟೆ. ಸುಳ್ಳು ಹೇಳುವುದರಿಂದ ತಕ್ಷಣವೇ ಒಳ್ಳೇದಾಗಲಿ ಕೆಟ್ಟದ್ದಾಗಲಿ ಆದರೂ ಆಗದಿದ್ದರೂ ಚಿಂತೆಯಿಲ್ಲ; ಸುಳ್ಳು ಹೇಳುವುದೇ ಅಕೃತ್ಯ, ಅದನ್ನು ಮಾಡಬಾರದು. ಇದರಿಂದ ಕಡೆಯಲ್ಲಿ ದೇವರ ಮುಂದೆ ಅಪರಾಧಿಗಳಾಗಿ ನಿಲ್ಲಬೇಕಾಗುವುದು. ಸುಳ್ಳುಗಾರರಾದರೆ ನಾವು ದೇವನ ಸನ್ನಿಧಾನದಲ್ಲಿ ವಿಮುಕ್ತರ ಗುಂಪಿನಲ್ಲಿ ನಿಲ್ಲುವುದಕ್ಕೆ ಯೋಗ್ಯರಾಗಿರುವುದಿಲ್ಲ ಎಂದು ನಿಸ್ಸಂದೇಹವಾಗಿ ತಿಳಿದಿರಬೇಕು.

ಯೌವನಸ್ಥರು ಸ್ವಪ್ರಯೋಜನಾರ್ಥವಾಗಿ ಸುಳ್ಳು ಹೇಳುವುದರ ಮಾತಿರಲಿ. ದೊಡ್ಡವರೇ ಸುಳ್ಳು ಹೇಳುವುದಕ್ಕೆ ನಾಚಿಕೆಪಡುವದಿಲ್ಲ. ಅವರಿಗೆ ಸುಳ್ಳುಹೇಳುವದು ನಾಚಿಕೆಯಿಲ್ಲ. ಸುಳ್ಳು ಹೇಳಿದ್ದು ಬಹಿರಂಗಕ್ಕೆ ಬಂದರೆ ನಾಚಿಕೆ; ತಾವು ಸುಳ್ಳು ಹೇಳಿದ ತಪ್ಪು ಪರರ ಜನ್ಮಗಳೇ ಮುಂತಾದವುಗಳ ಮೂಲಕ ಪ್ರಕಟವಾಗಿ ಇತರ ಜನರಿಗೆ ಗೊತ್ತಾದರೆ ಅವಮಾನವಾಯಿತಲ್ಲಾ ಎಂದು ಬಹಳ ವ್ಯಥೆಪಡುವರೇ ಹೊರತು, ಸುಳ್ಳೆಂಬ ಹೇಯವಾದ ಕಾರ್ಯವನ್ನು ಮಾಡಿದೆವಲ್ಲಾ ಎಂದು ಎಷ್ಟು ಮಾತ್ರವೂ ನಾಚಿಕೊಳ್ಳುವುದಿಲ್ಲ. ಸುಳ್ಳು ಹೇಳಿದರೆ ಅವರ ಮನಸ್ಸು ಸ್ವಲ್ಪವೂ ಬಾಧಿಸುವುದೇ ಇಲ್ಲ. ತಪ್ಪು ಅರಿತ ಮೇಲೆ ಆ ಅಕೃತ್ಯದಿಂದಾದ ನಷ್ಟಕ್ಕೆ ಸರಿಪಡಿಸಿಕೊಳ್ಳಬೇಕೆಂಬ ಮನಸ್ಸೇ ಹುಟ್ಟುವುದಿಲ್ಲ. ಸಾಮಾನ್ಯನಾದವನು ಸುಳ್ಳು ಹೇಳುವದರಿಂದ ಬರುವ ನಷ್ಟಕಷ್ಟಗಳಿಗೆ ಹೆದರುವುದಿಲ್ಲ. ಸುಳ್ಳೇ ಕಾವ್ಯವೇ ನೀಚಕೃತ್ಯವೆಂದು ಹೇಳಿ ಹೆದರುತ್ತಾನೆ. ಆದುದರಿಂದ ತಂದೆತಾಯಿಗಳೂ ಉಪಾಧ್ಯಾಯರೂ ಮಕ್ಕಳನ್ನು ಚಿಕ್ಕಂದಿನಿಂದಲೂ ಸತ್ಯವನ್ನಾಡುವವರಾಗಿ ಬೆಳೆಯಿಸತಕ್ಕದ್ದು. ತಂದೆತಾಯಿಗಳೇ ವಂಚಕರಾಗಿ ನಡೆದರೆ ಅವರ ಮಕ್ಕಳೂ ಅವರನ್ನು ನೋಡಿ ವಂಚಕರಾಗಿ ನಡೆಯುವುದಕ್ಕೆ ಕಾರಣವಾಗುವುದು.

"ಸರ್ವೇಶ್ವರನೇ, ನಿನ್ನ ಮಂದಿರದಲ್ಲಿ ಅತಿಥಿಗಳಾಗಿ
ಸೇರುವುದಕ್ಕೆ ಯಾರು ತಕ್ಕವರು?
ಪರಿಶುದ್ಧವಾಗಿರುವ ನಿನ್ನ ಬೆಟ್ಟದಲ್ಲಿ ಯಾರು ವಾಸ
ಮಾಡಬಹುದು?
ಯಾವನು ನ್ಯಾಯವಾದದ್ದನ್ನು ಮಾಡುತ್ತಾ ಮನಃ
ಪೂರ್ವಕವಾಗಿ ನಿಜವಾದ ಮಾತುಗಳನ್ನಾಡುತ್ತಾ
ನಿರ್ದೋಷಿಯಾಗಿ ನಡೆಯುತ್ತಾನೋ ಅವನೇ ತಕ್ಕವನು."

### ಒಳದೇಶದ ವೃತ್ತಾಂತಗಳು.

ಬೆಂಗಳೂರು ಪಟ್ಟಣದಲ್ಲಿ ಈ ಸಲ ಸುರಿದ ಮಳೆಯು ದೆಸೆಯಿಂದ ೧,೩೦೦ ಮನೆಗಳು ಬಿದ್ದುಹೋದವೆಂದು ಪ್ರಕಟವಾಗಿದೆ.

ನಮ್ಮ ಮಹಾರಾಜರವರು ಸರ್ ಕ್ರಾಸ್ಥ್‌ವೈಟ್ ರವರ ಮೆಮೋರಿಯಲ್ ಫಂಡಿಗೆ ಕೊಡುವುದಾಗಿ ವಾಗ್ದಾನ ಮಾಡಿದ್ದ ೫೦೦

೫,೦೦೦ ರೂಪಾಯಿಯನ್ನು ಕಳೆದವಾರ ಅರಮನೆ ಖಜಾನೆಯಿಂದ ಕಳುಹಿಸಿರುತ್ತಾರೆ.

****

ಕೋಲಾರ್ ಚಿನ್ನದ ಗಣಿಯಲ್ಲಿ ಸೋಮವಾರ ಒಂದು ಅಪಘಾತದ ವಿಷಯವನ್ನು ತಿಳಿಸಿದೆವಷ್ಟೆ. ಮ್ಯಾಜಿಸ್ಟ್ರೇಟರೇ ಸ್ಥಳಕ್ಕೆ ಹೋಗಿ ಸರಿ ತನಿಖೆ ಮಾಡಿದ್ದರಲ್ಲಿ ಈ ಅಪಘಾತಕ್ಕೆ ಗಣಿಯ ಅಧಿಕಾರಿಗಳ್ಯಾರೂ ಕಾರಣರಲ್ಲವೆಂದು ಗೊತ್ತಾಯಿತು.

****

ಕೋಲಾರ್ ಚಿನ್ನದ ಗಣಿಗಳಲ್ಲಿ ಕೂಲಿ ಮಾಡುವವರಿಗೆ ಅಂಥವರು ಕಟ್ಟಿಸಿಕೊಟ್ಟಿರುವ ಜೋಪಡಿ ಮನೆಗಳಲ್ಲಿ ಪ್ಲೇಗ್ ಪ್ರಬಲಿಸಿತೇನೋ ಎಂದು ಸಂಶಯಿಸಿ ಆ ಜನಿಯವರು ಆ ಸ್ಥಳದ ಮನೆಗಳ ನೆಲವನ್ನು ೧—೦ ಅಡಿ ಕೆತ್ತಿಸಿ ಹಾಕಿ, ಹೊಸದು ಮಣ್ಣು ತುಂಬಿಸಿದ್ದಲ್ಲದೆ ಸುಮಾರು ೪,೦೦೦ ಹೆಗ್ಗಣಗಳನ್ನು ಕೊಲ್ಲಿಸಿದ್ದಾರೆ.

****

ಬೆಂಗಳೂರಿನಲ್ಲಿ ಗವರ್ನಮೆಂಟು ನೇತ್ರವೈದ್ಯಶಾಲೆ ಆಸ್ಪತ್ರೆಯನ್ನು ಈಗ ಇಟ್ಟಿರುವ ಕಟ್ಟಡವು ಸರ್ಕಾರದವರು ಬಾಡಿಗೆ ತೆಗೆದುಕೊಂಡಿರುವುದು. ಅಲ್ಲಿನ ವಿಕ್ಟೋರಿಯಾ ಆಸ್ಪತ್ರೆ ಕಾಂಪೌಂಡಿನಲ್ಲಿ ಇದಕ್ಕಾಗಿಯೇ ಒಂದು ಹೊಸ ಕಟ್ಟಡವನ್ನು ಕಟ್ಟಬೇಕೆಂದು ಮೈಸೂರು ಗವರ್ನಮೆಂಟಿನವರು ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

****

ಶಿವಸಮುದ್ರದ ವಿದ್ಯುಚ್ಛಕ್ತಿಯ ಕಾರ್ಖಾನೆಯ ಮೇಲ್ವಿಚಾರಣೆಯ ಚೀಫ್ ಎಲೆಕ್ಟ್ರಿಕಲ್ ಇಂಜಿನಿಯರ್ ಕ್ಯಾಪ್ಟನ್ ಟಿ. ಲೋಬಿಯರ್ ರವರನ್ನು ಮೈಸೂರು ಸಂಸ್ಥಾನದವರು ಆಕ್ಟೋಬರ್ ೧೯೦೨ನೆ ಇಸವಿ ವರೆಗೆ ಮೈಸೂರಿನಲ್ಲಿ ಇಟ್ಟುಕೊಳ್ಳಬಹುದೆಂದು ಇಂಡಿಯಾ ಗವರ್ನಮೆಂಟಿನವರು ಒಪ್ಪಿಕೊಂಡಿದ್ದಾರೆ.

****

ಸೆಂಟ್ರಲ್ ಕಾಲೇಜಿನಲ್ಲಿ ಬೋಧಕರಾಗಿದ್ದ ಮಿ. ಎ. ಜೆ. ಗ್ರೀಯರ್‌ರವರು ಸರ್ಕಾರದ ಸೇವೆಯನ್ನು ಬಿಟ್ಟುಬಿಟ್ಟರು. ಇವರು ಹೊರಗೆ ಹೋಗುವುದು ಶಿಷ್ಯವರ್ಗದವರಿಗೆ ದುಃಖವನ್ನು ಉಂಟುಮಾಡುವಂತಾಗಿದೆ. ಕಳೆದವಾರ ಅವರು ಇಲ್ಲಿಂದ ಹೊರಡಲು ಸರಿ ಅವರನ್ನು ಬೀಳ್ಕೊಡುವುದಕ್ಕೆ ತಮ್ಮ ಭಕ್ತಿ ವಿಶ್ವಾಸಗಳನ್ನು ಪ್ರಕಟಿಸಿದರು.

****

ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಬೇತಮಂಗಲ, ರಾಮಸಾಗರ ಎಂಬ ಎರಡು ಕೆರೆಗಳೂ ಒಡೆದು ಹೋದುದರಿಂದ ಮೂರು ಗ್ರಾಮಗಳ ಪ್ರಜೆಗಳಿಗೆ ವಿಪರೀತ ಕಷ್ಟನಷ್ಟಗಳು ಪ್ರಾಪ್ತವಾದವೆಂಬುದನ್ನು ಮಹಾರಾಜರವರು ಕೇಳಿ ಅವರುಗಳ ಕಷ್ಟನಿವಾರಣೆಗೋಸ್ಕರ ೨೦೦ ರೂ. ಹಣವನ್ನು ದಯಪಾಲಿಸಿರುತ್ತಾರೆಂದು ತಿಳಿಸಲು ಸಂತೋಷಿಸುವೆವು.

****

ಸೀನಿಯರ್ ಕೌನ್ಸಿಲರ್ ಮತ್ತು ರೆವಿನ್ಯೂ ಕಮಿಷನರ್ ಮಿ. ವಿ. ಪಿ. ಮಾಧವರಾಯರು ಕಳೆದ ವಾರ ಕೋಲಾರ, ಬೇತಮಂಗಲ, ಕೆರೆ ಒಡೆದುಹೋದ ಸ್ಥಳಗಳಿಗೆ ಹೋಗಿ, ಆ ಸಮಯದಲ್ಲಿ ಕೆರೆ ಒಡೆದು ಹೋಗಿರುವುದರಿಂದ ಅಲ್ಲಿಗಳ ದೇಶದ ಪ್ರಜೆಗಳಿಗೆ ಸರ್ಕಾರಕ್ಕೂ ಪ್ರಾಪ್ತವಾಗಿರುವ ನಷ್ಟಗಳನ್ನೂ ನೋಡಿಕೊಂಡು ಬಂದರು.

****

ಕಳೆದವಾರವೆಲ್ಲಾ ರಾಜಧಾನಿಯಲ್ಲಿ ವಿಪರೀತವಾದ ಮಳೆ ಸುರಿಯುತ್ತಾ ಇದ್ದುದರಿಂದ ಇಲ್ಲಿನ ದೊಡ್ಡಕೆರೆ ಏರಿ ಒಡೆದು ಹೋಗಿ ಧನಸನ್ನೆಂಬ ತೋಟದಲ್ಲಿ ಭೂಮಿಯು ತುಂಬಾ ಕೊಚ್ಚಿಹೋಗಿದ್ದಿತು. ಆ ಮನೆ ಕಂಟ್ರೋಲರು ಇದನ್ನು ನೋಡಿ ಬಂದು ನೋಡಿ ಮಂಗಳವಾರ ನಡೆಯಬೇಕಾಗಿದ್ದ ವನಭೋಜನದ ಸಮಾರಂಭವನ್ನು ನಿಲ್ಲಿಸಿ ೧೭ನೇ ತಾ ವರೆಗೆ ಮುಂದಕ್ಕೆ ಹಾಕಿರುತ್ತಾರೆ.

****

ಬೆಂಗಳೂರು ದಂಡಿನಲ್ಲಿ ಮೂರು ಮಂದಿ ಸೋಲ್ಜರುಗಳಿಗೆ ಅವರು ೯ ಗಂಟೆಯ ಮೇಲೆ ಮೋಟಾರಿಗೆ ಮಾಡಿದರೆಂದು ತಲಾ ೪೫ ರೂ. ದಂಡವಾಯಿತು. ಇನ್ಸ್‌ಪೆಕ್ಟರ್ ಸೋಲ್ಜರು ತಮ್ಮ ಮಗನ ಮದುವೆ ಮೆರವಣಿಗೆಯನ್ನು ೯ ಗಂಟೆಗೆ ಮುಂಚೆ ಪೂರೈಸುವರು. ಕೆಲವೆಲ್ಲ ಮೆರವಣಿಗೆ ರಾತ್ರಿ ೯ ಗಂಟೆಯ ಮೇಲೆ ಕರೆದು ತಂದದ್ದಕ್ಕೆ ಪೋಲೀಸ್ ಇನ್ಸ್‌ಪೆಕ್ಟರು ಕಾಣಿಸಿದ್ದರಿಂದಲೂ ಮ್ಯಾಜಿಸ್ಟ್ರೇಟರು ಅವರ ಮಾತನ್ನು ಒಪ್ಪದೆಹೋದರು.

****

ಮೈಸೂರು ಸಂಸ್ಥಾನದಲ್ಲಿ ಪ್ರಕಟವಾಗುವ ವರ್ತಮಾನ ಪತ್ರಿಕೆಗಳಲ್ಲಿ ಚಕ್ರವರ್ತಿ ಸುಮಾರು ೩ ತಿಂಗಳು ಕಾಲದಿಂದ ನಿಂತಿದ್ದಿತು. ಇದಲ್ಲದೆ ಬೇರೆ ಯಾವ ಪತ್ರಿಕೆಯವರಾದರೂ ಸಂಸ್ಥಾನದ ಸಂಗತಿಗಳನ್ನು ಪ್ರಕಟಿಸಿದರೆ ಅಂಥವನ್ನು ತಿದ್ದಿ ತಿಳಿಸುವುದಕ್ಕೆ ಮೈಸೂರು ಸರ್ಕಾರದವರು ಒಂದು ಹೊಸ ಕಟ್ಟಳೆಯನ್ನು ಮಾಡಿ ಜಾರಿಯಲ್ಲಿ ತಂದಿರುತ್ತಾರೆಂದಲೂ, ಇಂಥಾ ಕಟ್ಟಳೆಯು ಇತರ ದೇಶೀಯ ಸಂಸ್ಥಾನಗಳಲ್ಲೂ ಜಾರಿಗೆ ಬರುವಂತಾದರೆ ಬಹಳ ಉಪಯುಕ್ತವಾದುದೆಂದಲೂ ಉತ್ತರ ದೇಶದ ಪತ್ರಿಕೆಯೊಂದು ಹೇಳುತ್ತದೆ.

****

ಮದರಾಸ್ ಪಟ್ಟಣದಲ್ಲಿ ಈ ತಿಂಗಳ ೨೭ನೇ ತಾರೀಖಿನಿಂದ ನಡೆಯುವ ಕೈಗಾರಿಕೆಗಳ ಪ್ರದರ್ಶನೋತ್ಸವಕ್ಕೆ ನಮ್ಮ ಸಂಸ್ಥಾನದಿಂದಲೂ ಅನೇಕ ಅಪೂರ್ವವಾದ ನಯವಾದ ಪದಾರ್ಥಗಳೂ, ಗಂಧದ ಪೆಟ್ಟಿಗೆ (ಗಂಧಗಳಲ್ಲಿ) ಕೆತ್ತಿದ ಚಿತ್ರವಸ್ತುಗಳೂ, ಇತರ ಪದಾರ್ಥಗಳೂ ಕಳುಹಿಸಲ್ಪಡುವವು. ಇವನ್ನೆಲ್ಲಾ ಸಂಗ್ರಹ ಮಾಡುವುದಕ್ಕೆ ಸರ್ಕಾರದವರು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಮಿ॥ ಮಾಧವ್ಯಾಸವರನ್ನು ನೇಮಿಸಿ, ೧೦,೦೦೦ ರೂ. ಸ್ಯಾಂಕ್ಷನ್ ಮಾಡಿರುತ್ತಾರೆ. ಅಲ್ಲದೆ ಮಳೀಗೆ ಸೇವೆಯಿಂದ ಉಂಟಾದ ಕೆಲವು ಕೆಲಸಗಳನ್ನು ನೋಡಿ ಕಮಿಟಿ ಮೆಂಬರುಗಳು ಪ್ರದರ್ಶನೋತ್ಸವ ನಡೆವ ತಾರೀಖನ್ನು ೨೩ ರಿಂದ ೨೭ಕ್ಕೆ ಬದಲಾಯಿಸಿರುತ್ತಾರೆ.

****

ಮೊನ್ನೆ ಸೋಮವಾರ ಬೆಳಿಗ್ಗೆ ಇಲ್ಲಿನ ಕರುಣಾಪುರದಲ್ಲಿರುವ ಸಾದಪ್ಪನೆಂಬೊಬ್ಬ ಕ್ರೈಸ್ತನು ಕೆಸರೆ ತೋಟದಲ್ಲಿದ್ದಾಗ ಒಂದು ನಾಗರಹಾವು ಅವನನ್ನು ಕಚ್ಚಿಬಿಟ್ಟಿತು. ಅವನಿಗೆ ಸ್ವಲ್ಪ ಹೊತ್ತಿನಲ್ಲೇ ಪ್ರಜ್ಞೆ ತಪ್ಪಿತ್ತು. ಬಂದುದನ್ನು ಆ ಮಾರ್ಗವಾಗಿ ಹೋಗುತ್ತಿದ್ದ ತೊರೆಯ ಚನ್ನಯ್ಯನೆಂಬವನು ತಿಳಿದು ಅಲ್ಲೇ ನಿಂತು ಅವನ ಕಾಲಿಗೆ ವಿಷದ ಹಾಕಿದ್ದಲ್ಲದೆ ಕಣ್ಣಿಗೆ ಅಂಜನವನ್ನು ಕೊಟ್ಟನು. ಸಾದಪ್ಪನನ್ನು ಅಲ್ಲಿಂದ ಅವನ ಮನೆಗೆ ಕರೆತಂದರು. ಚನ್ನಯ್ಯನು ಅವನ ಮನೆಗೂ ಹೋಗಿ ಒಂದು ಮೂಲಿಕೆಯನ್ನು ಅರೆದು ಅವನಿಗೆ ಕುಡಿಸಿದನು. ಸ್ವಲ್ಪಹೊತ್ತಿನಲ್ಲೇ ಸಾದಪ್ಪನಿಗೆ ಪ್ರಜ್ಞೆ ಬಂತು. ಈವಾಗ ಅವನು ಸುಖವಾಗಿರುತ್ತಾನೆ ಎಂಬುದಾಗಿ ಒಬ್ಬ ಬಾತ್ಮೀದಾರರು ತಿಳಿಸಿದಾರೆ.

****

ನಮ್ಮ ಶಿಮೊಗ್ಗೆ ಶಿಮೊಗ್ಗೆ ಜಿಲ್ಲೆ ಬಳುಸ್ತರಕ್ಕೆ ಮುಂಚೆ ಕಾಲಕ್ಕನ್ನು ವಿಶೇಷವಾಗಿ ರೈತರು ಬೆಳೆದು ಎಣ್ಣೆ ತೆಗೆದು ದೀಪ ಮೊದಲಾದ್ದಕ್ಕೆಲ್ಲಾ ಉಪಯೋಗಿಸಿಕೊಳ್ಳುತ್ತಿದ್ದರು. ಈಗಲಾದರೋ ಶಿಮೊಗ್ಗೆಯೇ ಸಣ್ಣ ಸಣ್ಣ ಹಳ್ಳಿಗಳಲ್ಲಿಯೂ ಕೂಡ ದೀಪಕ್ಕೆ ಉಪಯೋಗಿಸುತ್ತಾರೆ. ಆದಕಾರಣ ರೈತರಿಗೆ ಹರಳನ್ನು ಅಷ್ಟು ಹೆಚ್ಚಾಗಿ ಬೆಳೆಯದರಲ್ಲಿ ಆಸಕ್ತಿ ಕಡಿಮೆಯಾಗಿರುವುದು ಯಾವ ಕಾರಣದಿಂದಲಾದರೂ ಈ ಶಿಮೊಗ್ಗೆ ಬರುವುದು ಕಡಿಮೆಯಾದಲ್ಲಿ ಗ್ರಾಮಾಂತರಗಳ ಪ್ರಜೆಗಳ ಪಾಡೇನೋ. ಆದುದರಿಂದ ನಾನಾ ವಿಷಯಗಳಿಗೆ ಉಪಯೋಗಕರವಾದ ಈ ಹರಳನ್ನು ರೈತರು ಮೊದಲಿನಂತೆಯೇ ಬೆಳೆಯುತ್ತಾ ಬರುವುದು ಒಳ್ಳೇದು ಎಂಬುದಾಗಿ ಒಬ್ಬ ಬಾತ್ಮೀದಾರರು ಮದರಾಸ್ ಪತ್ರಿಕೆಯಲ್ಲಿ ಬರೆದಿದಾರೆ.

## ಮೈಸೂರು ಗೆಜೆಟ್ ಸಂಗ್ರಹ.

ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಸೂಪರಿಂಟೆಂಡೆಂಟ್ ಮಿ॥ ಸಿ. ಎಫ್. ಯಾವರಿಗೆ ಅವರನ್ನು ಕೆಲಸದಿಂದ ಬಿಡುಗಡೆ ಮಾಡುವ ತಾರೀಖಿನಾರಭ್ಯ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಆಕ್ಟಿಂಗ್ ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮಿಷನರ್ ಮಿ॥ ನಾಡಿಗ ಸುಬ್ಬರಾಯರನ್ನು ಪ್ರೊಬೇಷನರ್ ಆಗಿ ನೇಮಿಸಿ ಶಿವಮೊಗ್ಗೆಗೆ ವರ್ಗಮಾಡಿದೆ. ಕೂಡಲೆ ಹೋಗಿ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ನೆಲಮಂಗಲದ ತಾಲ್ಲೂಕ್ ಅವ ಲ್ದಾರ್ ಮಿ॥ ವೇದಾಂತ ದೇಶಿಗಂ ಅಯ್ಯಂಗಾರ್ಯರನ್ನು ಎಕ್ಸ್‌ಟ್ರಾ ಅ. ಕಮಿಷನರಾಗಿ ಕೆಲಸ ನೋಡುವಂತೆ ನೇಮಿಸಿ, ಕಡೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ. ಕೂಡಲೆ ಹೋಗಿ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ಆ. ಸರ್ಜನ್ ಮಿ॥ ಮಹಮದ್ ಉಸ್ಮಾನ್ ರವರಿಗೆ ಅಕ್ಟೋಬರ್ ೨೨ ರಿಂದ ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಹೊಸಕೋಟೆ ತಾಲ್ಲೂಕ್ ಮಿ॥ ಬಿ. ಕೇಶವಯ್ಯನವರಿಗೆ ಕೊಟ್ಟಿದ್ದ ಎಂಟು ದಿನಗಳ ಪ್ರಿವಿಲೆಜ್ ರಜವನ್ನು ರದ್ದುಮಾಡಿದೆ.

ಕೃಷ್ಣರಾಜಪೇಟೆ ನರಸೀಪುರ ತಾಲ್ಲೂಕು ಅಮಲ್ದಾರ್ ಮಿ॥ ಎಂ. ಜಿ. ಕೃಷ್ಣಸ್ವಾಮಿರಾಯರಿಗೆ ಅಕ್ಟೋಬರ್ ೧೯ ರಿಂದ ಒಂದು ತಿಂಗಳು ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹೊಸ ಲೋಪಾವತನಕ ಶಿರಸ್ತೇದಾರ್ ಕೃಷ್ಣಪ್ಪನವರು ತಾಲ್ಲೂಕ್ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕದ್ದು.

ದಾವಣಗೆರೆಗೆ ವರ್ಗಮಾಡಿದ್ದ ಆಕ್ಟಿಂಗ್ ಎಕ್ಸ್‌ಟ್ರಾ ಅ. ಕಮಿಷನರ್ ಮಿ॥ ಬಿ. ರಾಮಸ್ವಾಮಯ್ಯನವರನ್ನು ಕೋಲಾರ್ ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ. ಕೂಡಲೆ ಹೊಸ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯೇಟಿನಲ್ಲಿ ಕೆಲಸ ಮಾಡುತ್ತಿರುವ ಪ್ರೊ॥ ಅಸಿಸ್ಟೆಂಟ್ ಕಮಿಷನರ್ ಮಿ॥ ಹಳದಿಂಗರಾವ್ ಪ್ರಾಣಾಚಾರ್ಯರನ್ನು ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ. ಕೂಡಲೆ ಹೋಗಿ ಡಿಸ್ಟ್ರಿಕ್ಟ್ ಟ್ರೆಜರಿ ಛಾರ್ಜನ್ನು ವಹಿಸತಕ್ಕದ್ದು.

ಮೈಸೂರು ಲೋಕಲ್ ಸರ್ವಿಸ್ ಡಿಪಾರ್ಟ್‌ಮೆಂಟಿನಲ್ಲಿ ಅಕೌಂಟೆಂಟ್ ರಿನಿ(?) ಲಿಂಗೋಜಿ ನೋಹಿತೆಯವರಿಗೂ, ಮಹಬೂಬ್‌ಖಾನರಿಗೂ ದರ್ಜೆಯಿಂದ ಬಡ್ತಿ ಕೊಡಲಾಗಿದೆ.

ಮೈಸೂರು ಇನ್‌ಫೆಂಟ್ರಿ ೧ನೆ ಬೆಟಾಲಿಯನ್ ಜಮಾದಾರ್ ಹನುಮಂತರಾವ್ ಸೌಂಟೆಯವರನ್ನು ಆಗಸ್ಟ್ ೨೧ ರಿಂದ ೨ನೆ ಗ್ರೇಡ್ ಸುಬೇದಾರಿಗೆ ಬಡ್ತಿ ಮಾಡಿದೆ.

## ಇಂಡಿಯಾ ಸರ್ಕಾರದ ಟಿಬೆಟಿನವರಿಗೂ ನಡೆಯುತ್ತಿರುವ ವಾಯುಭಾರವು.

ಕೆಲವು ತಿಂಗಳಿನಿಂದ ಇಂಡಿಯಾ ಸರ್ಕಾರದವರು ಟಿಬೆಟ್ ರಾಜ್ಯದವರೊಡನೆ ರಾಜ್ಯಭಾರದ ಕೆಲವು ವಿಷಯಗಳನ್ನು ಕುರಿತು ವಿರ್ಣಯವಾದ ತೀರ್ಮಾನವನ್ನು ಮಾಡಬೇಕೆಂದು ಉದ್ದೇಶಿಸಿ ತಮ್ಮ ಕಡೆಯ ಕರ್ನಲ್ ಯಂಗ್ ಹಸ್ಬೆಂಡ್ ಎಂಬಾತನನ್ನು ಯೋಗ್ಯವಾದ ಪರಿವಾರದೊಡನೆ ಕಳುಹಿಸಿ ಕೊಟ್ಟಿದ್ದಾರೆ. ಇವರ ಬಳಿಯಲ್ಲಿ ಬಂದು ಅಲ್ಲಿ ಚರ್ಚಿಸುವದಕ್ಕೋಸ್ಕರ ಟಿಬೆಟಿನ ಸರ್ಕಾರದವರು ಕೆಲವು ಅಧಿಕಾರಿಗಳನ್ನು ಕಳುಹಿಸಿಕೊಡುವುದಾಗಿ ವಾಗ್ದಾನ ಕೊಟ್ಟು ಬಹು ದಿನಗಳಾದಾಗ್ಯೂ ಇತ್ತ ಕಡೆ ಬರಲಿಲ್ಲವಾದುದರಿಂದ ಇಂಡಿಯಾ ಸರ್ಕಾರದ ರಾಜ್ಯಭಾರಿಯು ಟಿಬೆಟಿನ ಎಲ್ಲೆಯಿಂದ ಬೇಪದೊಳಕ್ಕೆ ೩೦—೪೦ ಮೈಲುಗಳ ದೂರ ಹೋಗಿ ಮುಂದಕ್ಕೆ ಹೊರಡದೆ ಅಲ್ಲೇ ನಿಲ್ಲಬೇಕಾಗಿ ಬಂದಿದೆ. ವ್ಯಾಪಾರ ಮಾಡುವ ಸೌಲಭ್ಯದ ವಿಷಯದಲ್ಲಿ ಇಂಡಿಯಾ ಸರ್ಕಾರದವರಿಗೂ ಟಿಬೆಟಿನವರಿಗೂ ೧೮೯೦ರಲ್ಲಿಯೂ ೧೮೯೩ರಲ್ಲಿಯೂ ನಡೆದ ಒಡಂಬಡಿಕೆ ಟಿಬೆಟಿನವರು ನಡೆಯದೆ ಹೋದುದರಿಂದಲೂ ತಮ್ಮ ಸೀಮೆಯಲ್ಲಿ ರಷ್ಯಾ ಜನಗಳ ಪ್ರಾಬಲ್ಯಕ್ಕೆ ಎಡೆಕೊಡದಂತೆ ಮಾಡಬೇಕೆಂದು ಈ ಒಡಂಬಡಿಕೆ ನಡೆಯದೆ ಹೋದ ಹಿಂದಲು ಇಂಡಿಯಾ ಸರ್ಕಾರದವರು ಟಿಬೆಟಿನವರಲ್ಲಿ ಈಗ ರಾಜಕಾರ್ಯವನ್ನು ನಡೆಸಬೇಕಾಗಿ ಬಂದಿತು. ಈಗ ನಮ್ಮ ಸರ್ಕಾರದವರ ಅಭಿಪ್ರಾಯವೇನಾಗಿರುವುದೆಂದರೆ—ಸಿಕ್ಕಿಂ ಗೂ ಭೂತಾನಿಗೂ ನಡುವೆ ೭೦ ಮೈಲಿ ಅಗಲವಾಗಿಯೂ ೪೦ ಮೈಲಿ ಉದ್ದವಾಗಿಯೂ ಟಿಬೆಟ್ ದೇಶಕ್ಕೆ ಬಾಗಿಲಂತೆಯೂ ಇರುವ ಚುಂಬಿ ಎಂಬ ಪ್ರದೇಶವನ್ನು ಆಕ್ರಮಿಸಿಕೊಂಡು, ರಾಜಧಾನಿಯಾದ ಲ್ಹಾಸ ಪಟ್ಟಣಕ್ಕೆ ೧೫೦ ಮೈಲು ದೂರದಲ್ಲಿರುವ ಗ್ಯಾಂಗ್‌ಟ್ಸಿ ಎಂಬ ಪಟ್ಟಣದ ವರೆಗೂ ಮುಂದು ವರಿಯಬೇಕೆಂಬುವದೇ.

ಇಂಡಿಯಾ ಸರ್ಕಾರದವರು ದಂಡೆತ್ತಿ ಬರುವದಾದರೆ ರಷ್ಯಾ ರಾಜ್ಯದವರ ಸಹಾಯವೂ, ನೇಪಾಳ ರಾಜ್ಯದವರ ಸಹಾಯವೂ ಒದಗುವುದೆಂದು ಟಿಬೆಟಿನವರು ಸಂಪೂರ್ಣವಾಗಿ ನಂಬಿ ಹೀಗೆ ಯತ್ನಿಸಿದ್ದಾರೆಂದು ತೋರುತ್ತೆ. ಲ್ಹಾಸ ರಾಜಧಾನಿಯಲ್ಲೂ ಇಂಗ್ಲಿಷರು ಆಳುತ್ತಿರುವ ಚುಂಬಿ ಡಾಂಗ್ ಎಂಬಲ್ಲಿ ನಡೆಯುತ್ತ ಎಂದಲೂ ಬರುತ್ತಿರುವ ವರ್ತಮಾನಗಳನ್ನು ನೋಡಿದರೆ, ಟಿಬೆಟ್ ಅಧಿಕಾರಿಗಳು ಇಂಗ್ಲಿಷರೊಡನೆ ಯುದ್ಧಮಾಡುವುದಕ್ಕೆ ಸಿದ್ಧರಾಗಿ ಕೊಳ್ಳುತ್ತಿರುವರೆಂದೂ ಇಂಗ್ಲಿಷರ ರಾಯಭಾರಿಗಳು ಮುಂದು ವರಿದು ಹೋಗದಂತೆ ಸ್ಥಳದ ಅಧಿಕಾರಿಗಳು ತಮ್ಮಿಂದಲಾದಷ್ಟೂ ಅಭ್ಯಂತರಗಳನ್ನು ಕಲ್ಪಿಸುತ್ತಿರುವರೆಂದೂ ಗೊತ್ತಾಗುತ್ತೆ. ಈ ಮಧ್ಯೆ ಟಿಬೆಟಿನವರಿಗೂ ಸ್ವತಂತ್ರ ರಾಜ್ಯವಾದ ನೇಪಾಳ ಸಂಸ್ಥಾನದವರಿಗೂ ಈ ವಿಷಯದಲ್ಲಿ ನಡೆದಿರುವ ಪತ್ರ ವ್ಯವಹಾರವನ್ನು ನೋಡಿದರೆ ಟಿಬೆಟಿನವರು ನೇಪಾಳದವರ ಸಹಾಯವನ್ನು ನಿರೀಕ್ಷಿಸುವುದು ವ್ಯರ್ಥವೆಂದು ತೋರುವುದು. ನೇಪಾಳ ಸಂಸ್ಥಾನದ ಮಂತ್ರಿಯವರು ಟಿಬೆಟಿನ ದಲಾಯಿ ಲಾಮಾ ಎಂಬ ಅಧಿಪತಿಯ ಮಂತ್ರಾಲೋಚನಾ ಸಭಿಕರಿಗೆ ಬರೆದಿರುವ ಕಾಗದದಿಂದ ಇಲ್ಲಿ ನಾವು ಉದ್ಧರಿಸಿ ಬರೆದಿರುವುದನ್ನು ಓದಿದರೆ ಇದು ಸ್ಪಷ್ಟವಾಗುತ್ತದೆ.

"ನಿಮ್ಮ ಸರ್ಕಾರಕ್ಕೂ ಬ್ರಿಟಿಷ್ ಸರ್ಕಾರಕ್ಕೂ ಗಡಿಯ ಕೆಲವು ಸಂಗತಿಗಳು ನಡೆಯುತ್ತಿರುವಾಗ ನಾನು ವರ್ತಮಾನ ಪತ್ರಿಕೆಗಳಿಂದ ನಿಮ್ಮ ವಿವಾದದ ಸಂಗತಿಯನ್ನು ತಿಳಿದು ಆಲೋಚಿಸಿ ಬರೆದುದಕ್ಕೆ ನೀವು ಆ ವರ್ತಮಾನ ಬಳ್ಳಿದೂ ನಿಮಗೂ ನಮಗೂ ಇರುವ ಸ್ನೇಹಕ್ಕೆ ಚ್ಯುತಿಯುಂಟುಮಾಡುವ ಧೈರ್ಯಕ್ಕೋಸ್ಕರ ಕೇಳದು ಮಾತ್ರವಲ್ಲದೆ ಹೀಗೆ ಸುಳ್ಳು ಸುದ್ದಿಯನ್ನು ಹರಡಿದ್ದಾರೆಂದೂ ನೀವು ಉತ್ತರವನ್ನು ಕೊಡಲಾಗಿ ನಾನು ಸುಮ್ಮನಾದೆನು.

"ಈಗಲಾದರೋ ನೀವು ಬ್ರಿಟಿಷ್ ಸರ್ಕಾರದವರು ವ್ಯಾಪಾರ ವಿಷಯಗಳಲ್ಲಿ ನಿಮ್ಮೊಡನೆ ಮಾಡಿದ್ದ ಕರಾರನ್ನು ನೀವು ಅತಿಕ್ರಮಿಸಿದ ಕಾರಣ ಇದರ ವಿಷಯ ಇತ್ಯರ್ಥ ಮಾಡಿಕೊಳ್ಳುವದಕ್ಕೆ ಬಂದು ಬಹು ದಿನಗಳಿಂದ ಕಾದಿದ್ದರೂ ನೀವು ತಟಸ್ಥರಾಗಿರುವುದರಿಂದ ನಿಮ್ಮ ಈ ನಡತೆಯಿಂದ ನಿಮಗೆ ಅಪಾಯವು ಸಂಭವಿಸುವುದೆಂದು ತಿಳಿದು ನನ್ನ ಮನಸ್ಸು ವ್ಯಥೆಪಡುತ್ತಿದೆ.

"ನಿಮ್ಮ ಮೇಲೆ ಬ್ರಿಟಿಷರು ದಂಡೆತ್ತಿ ಬಂದರೆ ನಿಮಗೆ ನಮ್ಮ ಸಂಸ್ಥಾನದವರು ಸಹಾಯ ಮಾಡುವೆವೆಂಬುದಾಗಿ ಒಪ್ಪಂದವೇನೂ ಆಗಿದೆಯಷ್ಟೆ. ಹೀಗಿರುವುದರಿಂದ ನಿಮಗೂ ಇತರ ರಾಜ್ಯದವರಿಗೂ ಯಾವ ವಿಷಯದಲ್ಲಿಯಾದರೂ ಭಿನ್ನಾಭಿಪ್ರಾಯವುಂಟಾಗುವುದಾದರೆ ನಾನು ನಿಮಗೆ ಸಹಾಯವಾದಷ್ಟೂ ನಿಮಗೆ ಯಾವ ತೊಂದರೆಯೂ ಸಂಭವಿಸದಂತೆ ಬುದ್ಧಿವಾದವನ್ನು ಹೇಳುವುದಕ್ಕೆ ಬದ್ಧನಾಗಿದ್ದೇನೆ. ಆದುದರಿಂದ ನೀವಾಗಿ ಬರಮಾಡಿಕೊಂಡಿರುವ ಈ ಇಕ್ಕಟ್ಟಿನಲ್ಲಿ ನಾನು ಹೇಳುವ ಬುದ್ಧಿವಾದವನ್ನು ಮನಸ್ಸಿಗೆ ತಂದುಕೊಳ್ಳಿರಿ. ಏನೆಂದರೆ—ಈ ವಿಷಯದಲ್ಲಿ ಬ್ರಿಟಿಷ್ ಸರ್ಕಾರದವರು ಬಲಾತ್ಕಾರವಾಗಿ ದುರಾಕ್ರಮಿಸುವರೆಂದು ಹೇಳುವುದಕ್ಕೆ ಏನೇನೂ ಆಧಾರವಿರುವುದಿಲ್ಲ. ನಿಮಗೂ ಅವರಿಗೂ ನಡೆದಿರುವ ಒಪ್ಪಂದದ ನಿಬಂಧನೆಗಳ ಪ್ರಕಾರ ನೀವು ನಡೆದುಕೊಳ್ಳುವ ವಿಷಯದಲ್ಲಿ ಮುಂದೆ ಯಾವ ಅಭ್ಯಂತರವೂ ಇರದಂತೆ ಮಾಡಿಕೊಳ್ಳುವುದಕ್ಕೆ ಯತ್ನಿಸಿದ್ದಾರಷ್ಟೆ. ನಾವು ಬ್ರಿಟಿಷ್ ಸರ್ಕಾರದವರಲ್ಲಿ ಸಖ್ಯವನ್ನು ಬೆಳೆಯಿಸಿ ಪಡೆಯುತ್ತಿರುವ ಪ್ರಯೋಜನಗಳು ಅನೇಕವಾಗಿವೆ. ನೀವು ನಮ್ಮಂತೆಯೇ ಸಾಮರ್ಥ್ಯವಿಲ್ಲದವರಾದ ಅವರ ಸ್ನೇಹವನ್ನು ದೂರೀಕರಿಸದೆ ಇರಬೇಕೆಂದು ಅಪೇಕ್ಷಿಸುತ್ತೇನೆ. ಅಲ್ಲದೆ ಈ ಗ್ರಹವನ್ನು ಸುತ್ತಿ ಬಲವಂತವಾಗಿ ತಲೆಹೋಗು ಬರಮಾಡಿಕೊಳ್ಳದಂತೆ ನೀವು ಬ್ರಿಟಿಷರಲ್ಲಿ ಹಗೆತನವನ್ನು ಬಿಟ್ಟುಕೊಂಡು ಸನ್ನದ್ಧರಾಗಿ ಯಾಗಬೇಕು."

ನೇಪಾಳ ಸಂಸ್ಥಾನದ ಮಂತ್ರಿಯು ಬರೆದಿರುವ ಈ ಬುದ್ಧಿವಾದವನ್ನು ಟಿಬೆಟಿನವರು ಮನಸ್ಸಿಗೆ ತಂದು ನಡೆದುಕೊಳ್ಳುವರೆಂದು ನಾವು ಭಯಸುತ್ತೇವೆ.

## ಗತಿಸಿದ ಮೆ|| ಸಿ. ಸುಬ್ಬರಾಯರು.
ಬಿ

### ಚಿಕ್ಕಬಳ್ಳಾಪುರದ ಮುನಸೀಫರು.

ಚಿಕ್ಕಬಳ್ಳಾಪುರದ ಮುನಸೀಫರಾಗಿಯೂ ಮೈಸೂರಿಗೆ ಈಗ ಪ್ರಿನ್ಸಿಪಲ್ ಮುನಸೀಫರಾಗಿ ನೇಮಕವಾಗಿದ್ದ ಮೆ|| ಸಿ. ಸುಬ್ಬರಾಯರವರು ನಿನ್ನೆ ಬುಧವಾರ ಸಾಯಂಕಾಲ ೫-೩೦ ಗಂಟೆಯಲ್ಲಿ ಮೃತರಾದ ವಿಷಯವನ್ನು ಕೇಳಿ ನಾವು ಬಹಳವಾಗಿ ವಿಷಾದಪಡುತ್ತೇವೆ. ಇವರಿಗೆ ಒಬ್ಬ ಚಿಕ್ಕ ಹೆಂಡತಿಯೂ, ನಾಲ್ಕು ಮಕ್ಕಳೂ, ಮತ್ತು ಸುಮಾರು ಐದು ಹೆಣ್ಣುಮಕ್ಕಳೂ ಸಾಯುವ ಕಾಲದಲ್ಲಿ ಹತ್ತಿರವಿದ್ದರು. ಇವರು ಸಾಯುವಾಗ ಸುಮಾರು ನಾಲ್ವತ್ತೈದು ವಯಸ್ಸಾಗಿತ್ತು. ಇವರಲ್ಲಿ ಬಹಳ ಪ್ರೀತಿಯುತ್ತ ಮತ್ತು ಬಹಳ ಧಾರ್ಮಿಕರುಗಳು. ಇವರು ಮೂರು ತಿಂಗಳ ಹಿಂದೆ ಚಿಕ್ಕಬಳ್ಳಾಪುರದಲ್ಲಿ ರಾಜಯಕ್ಷ್ಮವೆಂಬ ಕೆಟ್ಟ ವ್ಯಾಧಿಯಿಂದ ಪೀಡಿತರಾಗಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಬಂದರು. ಮೊದಲು ಬಂದಾಗ ಹೊಟ್ಟೆಯ ಮೇಲೂ, ಕಾಲಿನ ಮೇಲೂ ಎರಡು ಗುಳ್ಳೆಗಳು ಎದ್ದವು. ನಂತರ ಅಂದರೆ ಹದಿನೈದು ದಿವಸಗಳ ಮೇಲೆ, ಅವು ವಾಸಿಯಾಗಿ ಗುಣಕ್ಕೆ ಬರುವ ಸಮಯದಲ್ಲಿ ತಲೆಯಮೇಲೂ ಬೆನ್ನಿನಮೇಲೂ ಕಾಲಿನ ಮೇಲೂ ಎದ್ದು ಮತ್ತೆ ಹದಿನೈದು ದಿವಸವಾದಾಗ ಬಹಳವಾಗಿ ವ್ಯಾಧಿ ಉಲ್ಬಣ ಮಾಡಲು ಹತ್ತಿರ ಇದ್ದ ಅವರ ನೆಂಟರು ಅವರ ಹೆಂಡತಿಯನ್ನು ಚಿಕ್ಕಬಳ್ಳಾಪುರದಿಂದ ಕರೆಸಿದರು. ಇವರು ಬಂದ ಎರಡು ದಿನಗಳನಂತರ ಅವರು ಕಾಲವಾದರು. ಇವರು ಚಿತ್ರದುರ್ಗ, ಚಿಕ್ಕಬಳ್ಳಾಪುರ, ಶ್ರೀರಂಗಪಟ್ಟಣ, ಮುಂತಾದ ಊರುಗಳಲ್ಲಿ ಬಹಳ ಮರ್ಯಾದೆಯಿಂದ ಮುನಸೀಫ್ ಕೆಲಸ ನೋಡುತ್ತಿದ್ದರು. ಇವರು ಬಹಳ ದೊಡ್ಡ ಸಂಸಾರಿಗಳಾಗಿದ್ದರು.

ಎ ೯ ರಾ.

## ಮೂರನೇ ಕ್ಲಾಸ್ ರೈಲ್ವೆ ಪ್ರಯಾಣಿಕರ ಅನುಕೂಲಗಳು.

### ಅಯೋಧ್ಯೆ ರೋಹಿಲ್‌ಖಂಡ್ ರೈಲ್ವೆ.

### ದೊಡ್ಡ ಸಭೆ ನಡೆದದ್ದು.

ಲಕ್ನೋ ಪಟ್ಟಣ, ೧ನೆ ಡಿಸೆಂಬರ್ —ಅಯೋಧ್ಯೆ ರೋಹಿಲ್‌ಖಂಡ್ ರೈಲ್ವೆ ಕಂಪನಿಯ ಅಧಿಕಾರಿಗಳು ಕೆಲವು ದಿನಗಳ ಮುಂಚೆ ತಮ್ಮ ಕಂಪನಿಯ ರೈಲ್ ಗಾಡಿಗಳಲ್ಲಿ ಪ್ರಯಾಣ ಮಾಡುವ ಮೂರನೆ ತರಗತಿಯ ಜನರಿಗೆ ಯಾವ ಯಾವ ತೊಂದರೆಗಳುಂಟಾಗುವವೋ, ಯಾವ ಯಾವ ಹೊಸ ಏರ್ಪಾಡುಗಳನ್ನು ಕಂಪನಿಯವರು ಮಾಡಿಕೊಡಬೇಕೋ ಎಲ್ಲಾ ಕ್ರಮವಾಗಿ ತಿಳಿಸಿದಲ್ಲಿ ಸಾಧ್ಯವಾದಷ್ಟು ಅನುಕೂಲಗಳನ್ನು ಮಾಡಿಕೊಡುತ್ತೇವೆ ಎಂಬದಾಗಿ ಆ ಪ್ರಾಂತ್ಯದ ಪ್ರಜೆಗಳಿಗೆಲ್ಲಾ ತಿಳಿಯಪಡಿಸಿದರು. ರೈಲ್ವೆ ಕಂಪನಿಯವರು ಪ್ರಯಾಣಿಕರಿಗೆ ಸೌಕರ್ಯಗಳನ್ನು ಒದಗಿಸಿಕೊಡುವುದರಲ್ಲಿ ಇಷ್ಟು ಆತುರಪಟ್ಟಿರುವುದನ್ನು ನೋಡಿ, ಪ್ರಜೆಗಳೆಲ್ಲಾ ಕಂಪನಿಯವರ ಅಭಿಪ್ರಾಯಾನುಸಾರವಾಗಿ ತಮ್ಮ ತೊಂದರೆಗಳನ್ನು ಪ್ರಕಾಶಪಡಿಸುವುದಕ್ಕೆ ಪ್ರಯತ್ನಪಟ್ಟರು. ಇದೇ ಡಿಸೆಂಬರ್ ೧ನೇ ತಾರೀಖು ಮುಂಗಳವಾರದ ದಿನ ಅಯೋಧ್ಯಾ ಮುಖ್ಯ ನಗರವಾದ ಲಕ್ನೋ ಪಟ್ಟಣದ ಕ್ಯಾನಿಂಗ್ ಕಾಲೇಜ್ ಎಂಬ ವಿದ್ಯಾಶಾಲೆಯಲ್ಲಿ ಒಂದು ದೊಡ್ಡ ಸಭೆ ನಡೆಯಿತು. ಪ್ರಜೆಗಳ ಪಕ್ಷವನ್ನು ಹಿಡಿದು ಮಾತನಾಡುವಂಥಾ ಪ್ರತಿನಿಧಿಗಳು ಅಯೋಧ್ಯೆಯ ಎಲ್ಲಾ ಜಿಲ್ಲಾಗಳಿಂದಲೂ ಬಂದು ಈ ಸಭೆಯಲ್ಲಿ ಹಾಜರಾದರು. ಮತ್ತು ರೈಲ್ವೆ ಕಂಪನಿಯವರು ಆಯಾ ಪ್ರಾಂತ್ಯ, ಪಂಜಾಬ್ ಬಂಗಾಳಾ, ಈ ಅಧಿಕಾರಗಳಲ್ಲಿರುವ ಅನೇಕ ದೊಡ್ಡಮನುಷ್ಯರನ್ನೂ ದೇಶೀಯ ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳನ್ನೂ ಈ ಸಭೆಗೆ ಕರೆಸಿಕೊಂಡಿದ್ದರು. ಸಭೆಯಲ್ಲಿ ಒಟ್ಟು ೧೦೦ ಮಂದಿ ದೊಡ್ಡಮನುಷ್ಯರು ಸೇರಿದ್ದರು. ಎಲ್ಲರೂ ಅಭಿಪ್ರಾಯ ಕೊಟ್ಟು ವಾಯವ್ಯ ಪ್ರಾಂತ್ಯದ ರೆವೆನ್ಯೂ ಬೋರ್ಡ್ ಮೆಂಬರಾದ ಮೆ|| ಇ. ಜೆ. ಗಾರ್ಡಿನರವರನ್ನು ಸಭಾನಾಯಕರನ್ನಾಗಿ ನೇಮಿಸಿಕೊಂಡರು. ಎಲ್ಲಾ ಸಿದ್ಧವಾದ ಮೇಲೆ ಅಯೋಧ್ಯೆ ರೋಹಿಲ್‌ಖಂಡ್ ರೈಲ್ವೆ ಕಂಪನಿಯ ಮ್ಯಾನೆಜರಾದ ಮೆ|| ಎಚ್. ಬಿ. ಬರ್ಗ ರವರು ಎದ್ದು ನಿಂತು ರೈಲ್ವೆ ಕಂಪನಿಯವರು ಈ ಪ್ರಕಾರ ಪ್ರಜಾಪ್ರತಿನಿಧಿಗಳನ್ನು ಯಾತಕ್ಕೋಸ್ಕರ ಬರಮಾಡಿಕೊಳ್ಳಬೇಕಾಯಿತೋ ಅದರ ವಿಷಯದಲ್ಲಿ ಕಾರಣಗಳನ್ನು ಕುರಿತು ಉಪನ್ಯಾಸ ಮಾಡಿದರು. ಮತ್ತು ಅವರು ಹೇಳಿದ್ದೇನೆಂದರೆ:—ಮೂರನೆ ಕ್ಲಾಸ್ ರೈಲ್ವೆ ಪ್ರಯಾಣಿಕರಿಗೆ ಅನುಕೂಲವೂ ಸೌಕರ್ಯವೂ ಉಂಟುಮಾಡಿ ಕೊಡತಕ್ಕದ್ದು ಇದುವರೆಗೆ ಅವರು ೧೩೦ ಸಲಹೆಗಳನ್ನು ಕಳುಹಿಸಿರುವರು. ಅವುಗಳನ್ನೆಲ್ಲಾ ೫೧ ಭಾಗಗಳಾಗಿ ವಿಂಗಡಿಸಿರುತ್ತೇನೆ. ಅವುಗಳಲ್ಲಿ ಆಕ್ಷೇಪಣೆ ಚರ್ಚೆ ಮಾಡಿ, ಅನುಕೂಲ ಮಾಡಿಕೊಡಬೇಕಾದ ಸಂದರ್ಭ ಇದ್ದಲ್ಲಿ ರೈಲ್ವೆ ಕಂಪನಿಯವರು ಮುಖ್ಯವಾದ ಕೆಲವಂಶಗಳನ್ನು ಮೊದಲು ಕ್ರಮಪಡಿಸುವರು. ಅದ್ದರಿಂದ ಮುಖ್ಯ ವಿಷಯಗಳಾವುವೋ ನಮಗೆ ಪರಿಷ್ಕಾರವಾಗಿ ತಿಳಿಯಬೇಕಾಗಿದೆ. ಇದಕ್ಕೋಸ್ಕರ ಇಲ್ಲಿ ಸೇರಿರತಕ್ಕ ಪ್ರಜಾಪ್ರತಿನಿಧಿಗಳು ಒಂದು ಸಬ್ ಕಮಿಟಿಯನ್ನು ಏರ್ಪಡಿಸಿಕೊಂಡು ನಾಳೆ ಒಂದು ಮುಖ್ಯಾಂಶಗಳನ್ನು ನಮಗೆ ತಿಳಿಯಪಡಿಸಬೇಕೆಂದು ಕೋರುತ್ತೇನೆ.

### ಸಬ್ ಕಮಿಟಿಯ ಏರ್ಪಾಡು.

ಕೂಡಲೇ ಒಂದು ಸಬ್ ಕಮಿಟಿ ಏರ್ಪಾಡಾಯಿತು. ಪ್ರತಿ ಡಿಸ್ಟ್ರಿಕ್ಟಿನಿಂದ ಇಬ್ಬರು ಮೆಂಬರುಗಳು, ಆಗಂತುಕರಲ್ಲಿ ಐದು ಮಂದಿ, ಪತ್ರಿಕಾ ಪ್ರತಿನಿಧಿಗಳಿಬ್ಬರು, ಈ ಪ್ರಕಾರ ಮೆಂಬರುಗಳು ಆ ಸಬ್ ಕಮಿಟಿಗೆ ನೇಮಕವಾದರು. ಇವರು ಮೇಲ್ಕಂಡ ೧೩೦ ಸಲಹೆಗಳನ್ನೂ ಹಿಡಿದು ಚರ್ಚಿಸಿ, ಅವುಗಳ ಪೈಕಿ ಬಹಳ ಮುಖ್ಯವೆಂದೂ ತುಂಬಾ ಅವಶ್ಯವೆಂದೂ ಕಂಡುಬಂದ ಸಲಹೆಗಳನ್ನು ಗುರುತುಮಾಡಿಕೊಂಡರು.

### ಸಬ್ ಕಮಿಟಿಯವರ ಸಲಹೆಗಳು

ಲಕ್ನೋ ಪಟ್ಟಣ, ೭ನೇ ಡಿಸೆಂಬರ್ —ಈ ಸಬ್ ಕಮಿಟಿಯವರು ಮಾರನೆದಿನ ನಡೆದ ಸಭೆಗೆ ಬಂದು ಮೂರನೆ ತರಗತಿಯ ರೈಲ್ ಗಾಡಿಗಳಲ್ಲಿ ಪ್ರಯಾಣಮಾಡತಕ್ಕ ಜನರ ಸೌಕರ್ಯಗಳನ್ನು ಕುರಿತು ಸಭೆಯಲ್ಲಿ ವಿವರಿಸಿದ ಮುಖ್ಯ ವಿಷಯಗಳು ೨೦ ಮಾತ್ರ ಇದ್ದವು. ಅವು ಯಾವವೆಂದರೆ.—ಮೂರನೆ ಕ್ಲಾಸ್ ಪ್ರಯಾಣಿಕರು ಬಂದು ರೈಲನ್ನು ಕಾದು ಕೂತುಕೊಳ್ಳುವುದಕ್ಕೋಸ್ಕರ ಸ್ಟೇಷನ್‌ಗಳಲ್ಲಿ ವೆಯಿಟಿಂಗ್ ರೂಂ ಎಂಬ ಪ್ರತ್ಯೇಕ ಕೊಠಡಿಗಳಾಗಬೇಕು. ಅವರು ರೈಲುಹತ್ತುವಾಗ್ಯೆ ಇಂಥಾ ಕೊಠಡಿಯಲ್ಲಿರುವ ಸ್ಟೇಷನ್‌ನಲ್ಲಿ ತಮಗೆ ಭೋಜನಕ್ಕೆ ಅನುಕೂಲವಾಗಬೇಕೆಂದು ಕಂಪನಿಯವರಿಗೆ ತಿಳಿಸಿದರೆ ಅವರು ತಂತೀ ವರ್ತಮಾನ ಕೊಟ್ಟು ಆ ಹೊಟೇಲಿನಲ್ಲಿ ಊಟಕ್ಕೆ ಸಿದ್ಧಪಡಿಸಬೇಕು. ಪ್ರಯಾಣಿಕರು ತಮ್ಮ ಗಂಟು ಮೂಟೆಗಳನ್ನು ಹಿಂದಿನ ಸ್ಟೇಷನ್‌ಗಳಲ್ಲಿ ಮರೆತು ಬಿಟ್ಟು ಹೋಗಿ ಮುಂದಿನ ಸ್ಟೇಷನ್‌ನಲ್ಲಿ ತಿಳಿಸಿದರೆ ರೈಲ್ವೆಯವರು ಅವರ ಸ್ವಂತ ಖರ್ಚಿನಿಂದ ತಂತೀ ವರ್ತಮಾನ ಕೊಟ್ಟು ತರಿಸಬೇಕು. ಕಾಯಿಲೆಯವರೇ ಮೊದಲಾದವರು ಒಬ್ಬಂಟಿಗರಾಗಿ ರೈಲ್ ಗಾಡಿಯಲ್ಲಿ ಪ್ರಯಾಣ ಮಾಡುವಾಗ್ಯೆ ಅವರ ಇಷ್ಟಸಂಬಂಧಿಗಳಿಗೆ ರೈಲ್ವೆಯವರು ತಂತೀವರ್ತಮಾನ ಕೊಟ್ಟು ತಿಳಿಸಬೇಕು. ಸಾಧಾರಣವಾಗಿ ಒಂದು ಕಂಪಾರ್ಟಮೆಂಟಿನಲ್ಲಿ ಎಂಟು ಜನರಿಗಿಂತ ಹೆಚ್ಚಾಗಿ ಕೂರಿಸಕೂಡದು; ರಿಸರ್ವ್ಡ್ ಕಂಪಾರ್ಟ್‌ಮೆಂಟಿನಲ್ಲಿ ಆರು ಜನರನ್ನು ಮಾತ್ರ ಕೂರಿಸಬೇಕು. ಜನಜಾತ್ರೆ ಭಂಡಿಗಳಲ್ಲಿ ಎಂಥಾ ಸಂದರ್ಭಬಂದರೂ ಪ್ರಯಾಣಿಕರನ್ನು ಕೂರಿಸಲೇ ಕೂಡದು. ರೈಲ್ ಗಾಡಿ ಬರುವುದಕ್ಕೆ ೧೫ ನಿಮಿಷ ಮುಂಚಿತವೂ, ರೈಲ್‌ಗಾಡಿ ಸ್ಟೇಷನ್‌ನಿಂದ ಹೊರಡುವುದಕ್ಕೆ ಅರ್ಧಗಂಟೆ ಮುಂಚೆಯೂ ದೊಡ್ಡ ಊರುಗಳಲ್ಲಿ ಮೂರನೇ ಕ್ಲಾಸ್ ಪ್ರಯಾಣಿಕರನ್ನು ಸ್ಟೇಷನ್‌ಗಳೊಳಕ್ಕೆ ಬಿಡಬೇಕು. ಪ್ರಯಾಣಿಕರಿಗೆ ತೋರುವ ಪ್ರತಿ ಅಡ್ಡೆಗಳನ್ನು ಬರೆದಿರುವುದಕ್ಕೆ ಪ್ರತಿ ರೈಲ್ ಗಾಡಿಯೊಳಗೂ ಪ್ರತಿ ದೊಡ್ಡ ಸ್ಟೇಷನ್ನಲ್ಲೂ ಒಂದೊಂದು ಖಾಲೀ ಪುಸ್ತಕವನ್ನಿಟ್ಟಿರಬೇಕು. ಹೆಂಗಸರಿಗೂ ಮಹಮ್ಮದೀಯರಿಗೂ ಅವರಿಗೆ ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಅನುಕೂಲವಾದ ಪ್ರತ್ಯೇಕ ಪ್ರತ್ಯೇಕವಾದ ಸ್ಥಳಗಳನ್ನು ನಿರ್ಮಾಣ ಮಾಡಿಕೊಡಬೇಕು; ಗಾಡಿಗಳಲ್ಲಿ ಪ್ರಯಾಣ ಮಾಡುವಂಥಾ ಜನರಿಗೆ ಕೇಳಿದಾಗ ನೀರು ಕೊಡುವುದಕ್ಕೋಸ್ಕರ ಪ್ರತಿ ಟ್ರೇನಿನಲ್ಲೂ ಇಬ್ಬರು ಬ್ರಾಹ್ಮಣರನ್ನೂ ಒಬ್ಬ ಭಿಸ್ತಿಯವನನ್ನೂ ನೇಮಿಸಬೇಕು. ಮೂರನೇ ಕ್ಲಾಸ್ ಗಾಡಿಗಳಿಗೆ ಬಾಗಿಲು ಹಾಕಿ ಬೀಗ ಹಾಕಕೂಡದು. ಅಲ್ಲದೆ ರೈಲ್ವೆ ಚಟ್ಟಗಳನ್ನು ದೇಶಭಾಷೆಗಳಲ್ಲಿ ಅಚ್ಚುಹಾಕಿಸಿ ಪ್ರಚಾರ ಮಾಡಿಸಬೇಕು; ಮುಖ್ಯ ಮುಖ್ಯವಾದ ಸ್ಟೇಷನ್‌ಗಳಲ್ಲಿ ಗೋಡೆಗಳಿಗೆ ತಗಲಿಹಾಕಿರಬೇಕು; ಇದಲ್ಲದೆ ದೇಶಭಾಷೆಯಲ್ಲಿ ಅಚ್ಚಾದ ರೈಲ್ವೆ ಕಾನೂನನ್ನು ಪ್ರತಿ ಗಾಡಿಯೊಳಗೂ ಬಿಗಿದಿರಿಸಬೇಕು. ಕೂಲಿ ಜನರಿಗೂ ಅವರವರ (ಪೋರ್ಟರ್) ರಿಗೂ ಭಾಷೆಯ ದರವನ್ನು ಕಟ್ಟಿಮಾಡಿ ಅವರಿಗೋಸ್ಕರವೇ ಪ್ರತ್ಯೇಕವಾದ ನಾಲ್ಕನೇ ತರಗತಿಯನ್ನು ಕಲ್ಪಿಸಬೇಕು.

ದೊಡ್ಡ ದೊಡ್ಡ ರೈಲ್ವೆ ಸ್ಟೇಷನ್‌ಗಳಲ್ಲಿ ಸ್ತ್ರೀಯರು ಸ್ಟೇಷನ್ ಒಳಕ್ಕೂ ಹೊರಕ್ಕೂ ಹೋಗಿಬರಲು ಪ್ರತ್ಯೇಕವಾದ ಮಾರ್ಗಗಳಿರಬೇಕು; ಪ್ರತಿಯೊಂದು ರೈಲ್ ಗಾಡಿಯಲ್ಲೂ ಹೆಂಗಸರು ಗಾಡಿಯಿಂದ ಇಳಿಯುವಾಗಲೂ ಹತ್ತುವಾಗಲೂ ಅವರಿಗೆ ಸಹಾಯಮಾಡುವುದಕ್ಕೋಸ್ಕರ ಒಬ್ಬೊಬ್ಬ ಸ್ತ್ರೀ ಅಧಿಕಾರಿಯನ್ನು ನೇಮಿಸಿರಬೇಕು. ಹೆಂಗಸರು ಕೂತುಕೊಳ್ಳುವ ಗಾಡಿಗಳ ಬಾಗಿಲುಗಳು ಒಳಗಡೆಗೆ ತೆರೆಯುವಂತಿರಬೇಕು. ಗಾಜಿನ ಕಿಟಕಿಗಳೂ, ಗಾಳಿ ಬರುವಂತೆ ಪಟ್ಟಿಗಳು ಹಾಕಿರುವ ಕಿಟಕಿಗಳೂ ಇಟ್ಟಿರಬೇಕು. ಗಾಡಿ ಬರುವುದಕ್ಕೆ ಮೊದಲು ಧೋತಿಗಳನ್ನೂ ಚಾಪೆಗಳನ್ನೂ ಸ್ಟೇಷನ್‌ನೊಳಕ್ಕೆ ಬಿಡಬೇಕು. ಹೆಂಗಸರು ಕೂತುಕೊಳ್ಳುವ ಕೊಠಡಿಗಳಲ್ಲಿ ಕುರ್ಚಿ ಬೆಂಚು ಮೊದಲಾದ ಸಾಮಾನು ಹಾಕಿರಬೇಕು. ಅನಾಥರು ರೈಲ್ ಪ್ರಯಾಣ ಮಾಡಿದರೆ ಅವರಿಂದ ಅರ್ಧ ಛಾರ್ಜು ಮಾತ್ರ ತೆಗೆದುಕೊಳ್ಳಬೇಕು.

ಈ ವಿಷಯಗಳನ್ನೆಲ್ಲಾ ಚರ್ಚಿಸಿ ಅವುಗಳಲ್ಲಿ ಮುಖ್ಯವಾಗಿಯೂ ಅವಶ್ಯವಾಗಿಯೂ ಇರುವ ಸಲಹೆಗಳನ್ನು ಮಾತ್ರ ರೈಲ್ವೆ ಕಂಪನಿಯವರಿಗೆ ತಿಳಿಯಪಡಿಸುವುದಕ್ಕಾಗಿ ಆ ದಿವಸ ದೊಡ್ಡ ಸಭೆಯು ಸೇರಿತ್ತು. ಈ ಸಭೆಯಲ್ಲಿ ನಡೆದ ಸಂಗತಿಗಳು ಇನ್ನೂ ಹೊರಬಿದ್ದಿಲ್ಲ.

## ಮೈಸೂರು ಸರ್ಕಾರಿ ಪ್ರಕಟಣೆಗಳು.

### ಮಾಸಿಕ ರಿಪೋರ್ಟುಗಳು.

ಮೈಸೂರು ಗವರ್ನಮೆಂಟಿಗೆ ಸೇರಿದ ಎಲ್ಲಾ ಇಲಾಖೆಗಳ ಹುದ್ದೇದಾರರೂ ಆಯಾ ಇಲಾಖೆಯ ಮಾಸಿಕ ರಿಪೋರ್ಟನ್ನು ಇನ್ನು ಮೇಲೆ ಬಹಳ ಮಟ್ಟಿಗೆ ಸಂಕ್ಷೇಪವಾಗಿ ಬರೆದು ಕಳುಹಿಸಬೇಕೆಂತಲೂ, ಅವುಗಳಲ್ಲಿ ಮುಖ್ಯವಾದ ವಿಷಯಗಳೆಲ್ಲಾ ಕ್ರೋಢೀಕರಿಸಲ್ಪಟ್ಟಿರಬೇಕೆಂತಲೂ, ಈ ವಿಷಯಗಳು ಒಂದಕ್ಕೊಂದು ಹೊಂದುವಂತೆಯೂ ಅಂಕಗಳಿಂದ ತಕ್ಕಮಟ್ಟಿಗೆ ವಿಷಯಜ್ಞಾನ ಉಂಟಾಗುವಂತೆಯೂ ಇರಬೇಕೆಂತಲೂ, ಬರೀ ಸಂಖ್ಯೆಗಳನ್ನು ಹಾಕಿ ಅವುಗಳಿಂದ ಜ್ಞಾನ ಊಹಿಸಿ ತಿಳಿದುಕೊಳ್ಳುವುದಕ್ಕಾಗದಂತೆ ಇರಕೂಡದೆಂತಲೂ, ಈ ರಿಪೋರ್ಟುಗಳಲ್ಲಿ ಕಂಡ ಸಂಗತಿಗಳನ್ನು ಹಿಡಿದು ಸರ್ಕಾರದವರು ಅವುಗಳಮೇಲೆ ಪ್ರಯೋಗ ಸರಳವಾಗುವ ರೀತಿಯಲ್ಲಿ ಪ್ರಕಟಣೆ ಮಾಡುವಂತಿರಬೇಕೆಂತಲೂ, ಪ್ರತಿ ಇಲಾಖೆಯನ್ನೂ ಇಟ್ಟು ನಡೆಸುವುದಕ್ಕೆ ಕಾರಣ, ಅದರ ಉದ್ದೇಶ, ಅದರಿಂದಾಗುತ್ತಿರುವ ಫಲಗಳು—ಇವೇ ಮುಂತಾದ ಸಂಗತಿಗಳೆಲ್ಲಾ ವಿಶದವಾಗಿಯೂ ರಿಪೋರ್ಟನ್ನು ತಯಾರುಮಾಡಿ ಕಳುಹಿಸಬೇಕಾಗಿದೆ. ದಾಗಿ ಗವರ್ನಮೆಂಟಿನವರು ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೆ ತಿಳಿಯಪಡಿಸಿರುತ್ತಾರೆ.

### ಸರ್ಕಾರಿ ಮುಸಾಫರ್ ಖಾನೆಗಳು.

ಒಬ್ಬನೊಬ್ಬ ಪ್ರಯಾಣಿಕನು ಹೊಸಹಾಸ್ಯದಲ್ಲಿರುವ ಸರ್ಕಾರಿ ಟ್ರಾವಲರ್ಸ್ ಬಂಗಲೆಗೆ ಬಂದು ಸುಮಾರು ಮೂರು ದಿನಗಳ ಹೊತ್ತು ಇಳುಕೊಂಡಿದ್ದು ಮುಂದಕ್ಕೆ ಪ್ರಯಾಣವಾಗದಿದ್ದರೆ ಅವನಿಂದ ಒಂದು ದಿನದ ಬಾಡಿಗೆಯನ್ನು ವಸೂಲ್ಮಾಡಬೇಕಾಗಿದೆ. ಎಂಬದಾಗಿ ಡಪ್ಯೂಟಿ ಕಮಿಷನರು ಪ್ರಸ್ತಾಪಿಸಿದ್ದಕ್ಕೆ ಗವರ್ನಮೆಂಟಿನವರು—ಆಗಂತುಕನು ರಾತ್ರಿಯೆಲ್ಲಾ ಇದ್ದರೂ ಇಲ್ಲವೇ ಕೆಲವು ಗಂಟೆಗಳ ಹೊತ್ತು ಇದ್ದು ಹೊರಟರೂ ನದ ಬಾಡಿಗೆ ಕೊಡಬೇಕೆಂತಲೂ, ಹಿಂದೆ ಜಾರಿಯಲ್ಲಿರುವ ರೂಲನ್ನು ಬದಲಾಯಿಸಬೇಕಾದ ಅಗತ್ಯವೇನೂ ಇಲ್ಲವೆಂತ ತಿಳಿಸಿರುತ್ತಾರೆ.

### ಚಿತ್ರದುರ್ಗದ ಮುರುಗಿ ಮಠ.

ಚಿತ್ರದುರ್ಗದ ಟವರ್‌ನಲ್ಲಿರುವ ಲಿಂಗಾಯತರ ಮುರುಗಿ ಮಠದ ಮುಖ್ಯಾಧಿಪತಿ ಇಲಾಖೆಗೆ ಸಂಬಂಧಪಟ್ಟದ್ದಾಗಿದೆ ತಕರಾರು. ಈ ಮಠಕ್ಕೆ ಅಧಿಪತಿ ವಿಷಯ ನಡೆಯುತ್ತಿದೆ. ಈ ಮಠದ ಗುರುಗಳು ೧೯೦೩ನೆ ಜನವರಿ ೧೯ ರಲ್ಲಿ ಧಾರವಾಡ ಜಿಲ್ಲೆಗೆ ಸೇರಿದ ಹಾವೇರಿ ಎಂಬ ಊರಿನಲ್ಲಿ ಕಾಲಗತಿಯನ್ನೈದಿದರೆಂದೂ ಈ ಮಠದ ಮಾರುವಸ್ತುಗಳೂ ಡೆಪ್ಯುಟಿ ಕಮಿಷನರೂ ಮೊದಲೇ ಸರ್ಕಾರದ ತಿಳುವಳಿಕೆಗೆ ತಂದಿದ್ದಂತೆ ೧೯೦೩ನೆ ನೊವೆಂಬರ್ ೧ರಲ್ಲಿ ಚಿತ್ರದುರ್ಗದಲ್ಲಿ ಲಿಂಗಾಯತರ ಸುಜನರ ಸಭೆಯೊಂದು ನಡೆದಿತೆಂತಲೂ, ಶಾಂತವೀರಸ್ವಾಮಿಯವರೆಂಬ ಬಂದಿದ್ದ ಜಯದೇವ(?) ಎಂಬವರೇ ಇನ್ನು ಮೇಲೆ ಮಠದ ಗುರುಗಳಾಗಿರತಕ್ಕದ್ದೆಂದು ಜನಾಂಗದ ಲಿಂಗಾಯತರು ಸದಸ್ಯರು ಚುನಾಯಿಸಿರುತ್ತಾರೆಂತಲೂ, ಸಿಂಹಾಸನ ಗಂಭೀರವಾಗಿಯೂ ಯಥಾ ವಿಧಿಯಾಗಿಯೂ ಆಯಿತೆಂತಲೂ ತಿಳಿದುಬಂದಿದೆ.

ಈ ಸಂಗತಿಯನ್ನೆಲ್ಲಾ ನೂತನ ಸ್ವಾಮಿಯವರ ಸ್ಥಾನಕ್ಕೆ ಜಯದೇವಸ್ವಾಮಿ ಎಂಬವರನ್ನೇ ಸ್ವಾಮಿಗಳೆಂದು ಒಪ್ಪಿಕೊಳ್ಳುವಂತೆ ಡೆಪ್ಯುಟಿ ಕಮಿಷನರು ಶಿಫಾರಸು ಮಾಡಿದ್ದಾರೆ. ಅದೇ ಪ್ರಕಾರ ಗವರ್ನಮೆಂಟಿನವರು ಅವರ ಶಿಫಾರಸನ್ನೇ ಒಪ್ಪಿಕೊಂಡಿದ್ದಾರೆ.

ಆದರೆ ಮೊದಲಿನ ಸ್ವಾಮಿಯವರು ಅಧಿಕಾರ ಹೊಂದದೇ ಕೆಲವು ಬಿರುದುಗಳನ್ನು ಹಿಡಿಸಿಕೊಂಡು ಮೆರವಣಿಗೆ ಹೋದದ್ದರಿಂದ ಅವರ ಮಠಕ್ಕೆ ಸಂಬಂಧಪಟ್ಟ ಸಲ್ಲುತ್ತಿದ್ದ ರೂ. ೫೬-೬-೦ ನಗದೀಯನ್ನು ಸರ್ಕಾರದವರು ೧೯೦೩ನೆ ನೊವೆಂಬರ್ ೫ರಲ್ಲಿ ನಿಲ್ಲಿಸುವಂತೆ ಹುಕುಂ ಕೊಟ್ಟಿದ್ದರಷ್ಟೆ. ಈ ಹುಕುಮು ಇನ್ನೂ ಜಾರಿಯಲ್ಲೇ ಇರತಕ್ಕದ್ದು.

### ಬಸವನಹಳ್ಳಿ ರಥೋತ್ಸವ.

ಚಿಕ್ಕಮಗಳೂರು ಟವರ್‌ಗೆ ಸೇರಿದ ಬಸವನಹಳ್ಳಿಯಲ್ಲಿ ಶ್ರೀವೇಣು ಗೋಪಾಲಸ್ವಾಮಿ ದೇವಸ್ಥಾನವಿರುವುದು. ಅಲ್ಲಿ ನಾಲ್ಕನೆ ರಥೋತ್ಸವ ಮಾಡಿಸುವುದಕ್ಕೆ ಆಯಾ ಜನಸತ್ರಕ್ಕೆ ಶ್ರೀ ಭೂರಾಯಗಳನ್ನೂ, ತಟೀಕರ ಜನ್ನಕೋಟಿ ದೇವರ ದೇವಸ್ಥಾನದ ತಸ್ತೀಕು ರೂ ೧೦—೦ ಅಡೆಯನ್ನೂ ವಿನಿಯೋಗಿಸಿಕೊಳ್ಳುವಂತೆ ಶ್ರೀಕೃಷ್ಣ ಮಾಡಿಕೊಡಬೇಕೆಂದು ಅಮಲ್ದಾರ ಡಿಪ್ಯುಟಿ ಕಮಿಷನರು ಕೇಳಿದ್ದಾರೆ.

ಈ ಮೊಬಲಗುಗಳು ಬೇರೆಬೇರೆ ರೀತಿಯಲ್ಲಿ ವಿನಿಯೋಗವಾಗುತ್ತಿರುವ ಕಾರಣ ಡೆಪ್ಯುಟಿ ಕಮಿಷನರ ಶಿಫಾರಸಿನಂತೆ ಸ್ಯಾಂಕ್ಷನ್ ಕೊಡಲು ಅವಕಾಶವಿಲ್ಲವೆಂದು ಗವರ್ನಮೆಂಟಿನವರು ನಿರಾಕರಿಸುವರು.

### ಸತ್ರ ದೇವಸ್ಥಾನಗಳಿಗೆ ಬಿಟ್ಟಿರುವ ಇನಾಂ ಜಮೀನುಗಳ ಜಮಾಖರ್ಚು.

ಮೈಸೂರು ಸಂಸ್ಥಾನಕ್ಕೆ ಸೇರಿದ ಕೆಲವು ದೊಡ್ಡದೊಡ್ಡ ಮುಜರಾಯಿ ಸತ್ರ ದೇವಸ್ಥಾನಗಳ ಛಾರಿ ಇನಾಮತಿ ಗ್ರಾಮ ಭೂಮಿಗಳನ್ನು ನೋಡುವ ಮ್ಯಾನೇಜರುಗಳು ಅಂಥಾ ಗ್ರಾಮ ಭೂಮಿಗಳ ಜಮಾಖರ್ಚು ಲೆಕ್ಕಗಳನ್ನು ತಾಲ್ಲೂಕ್ ಅಮಲ್ದಾರರಿಗೆ ಸಾಲೀಯಾನಾ ಕೊಡುತ್ತಾ ಇಲ್ಲವೆಂತಲೂ ಅಮಲ್ದಾರರೂ ಮ್ಯಾನೇಜರುಗಳನ್ನು ಲೆಕ್ಕ ಕೊಡಬೇಕೆಂದು ಒತ್ತಾಯ ಮಾಡುವುದಿಲ್ಲವೆಂತಲೂ ಗವರ್ನಮೆಂಟಿನವರ ತಿಳುವಳಿಕೆಗೆ ಬಂದಿರುತ್ತದೆ. ಆದಕಾರಣ ಗವರ್ನಮೆಂಟಿನವರು ಆಜ್ಞಾಪಿಸುವುದೇನೆಂದರೆ:—ಸ್ಥಳೀಯ ಮುಜರಾಯಿ ಅಧಿಕಾರಿಗಳು ಸರ್ಕಾರದಿಂದ ನಗದೀಯನ್ನು ಪಡೆವ ಮುಜರಾಯಿ ಸತ್ರ ದೇವಾಲಯಗಳ ಜಮಾಖರ್ಚು ಲೆಕ್ಕಗಳನ್ನೂ ಇನಾಂ ಗ್ರಾಮ ಭೂಮಿಗಳನ್ನೂ ಪಡೆದಿರುವ ಮುಜರಾಯಿ ಸತ್ರ ದೇವಾಲಯಗಳ ಜಮಾಖರ್ಚು ಲೆಕ್ಕಗಳನ್ನು ಮ್ಯಾನೇಜರುಗಳಿಂದ ಕ್ರಮವಾಗಿ ತರಿಸಿಕೊಳ್ಳಬೇಕು. ಡೆಪ್ಯುಟಿ ಕಮಿಷನರುಗಳು ತಮ್ಮ ಡಿಸ್ಟ್ರಿಕ್ಟಿನೊಳಗಿರುವ ಅಮಲ್ದಾರರಿಗೆಲ್ಲಾ ಈ ಬಾಬಿನಲ್ಲಿ ಸರಿಯಾದ ಹುಕುಂ ಕೊಟ್ಟು ಲೆಕ್ಕಗಳನ್ನು ತರಿಸಿಕೊಂಡು, ಪ್ರತಿ ವರ್ಷದಲ್ಲಿಯೂ ಗವರ್ನಮೆಂಟಿಗೆ ರಿಪೋರ್ಟು ಮಾಡಬೇಕು.

### ಶಿವಮೊಗ್ಗ ಅರ್ಕೇಶ್ವರಸ್ವಾಮಿ ದೇವಸ್ಥಾನ.

ಡೆಪ್ಯುಟಿ ಕಮಿಷನರ್ ಮೆ|| ಎಂ. ಎಸ್. ನಾರಾಯಣರಾಯರು ತಮ್ಮ ಚಿಕ್ಕಪ್ಪಂದಿರು ಶಿವಮೊಗ್ಗೆ ರೈಲ್ವೆ ಸ್ಟೇಷನ್ ಬಳಿ ಕಟ್ಟಿಸಿದ್ದ

...ಷ್ಟ ಪಡಿಸುವ ಅರ್ಕೇಶ್ವರಸ್ವಾಮಿ ದೇವಸ್ಥಾನವನ್ನು ಮುಜರಾ...ಯಿಗೆ ಸೇರಿಸಿಕೊಂಡು, ಅದಕ್ಕಾಗಿ ಖಾತೆದಾರ ೬,೦೦೦ ...ಹಣವನ್ನು ಸರ್ಕಾರದವರೇ ವಹಿಸಿಕೊಂಡು, ದೇವರ ಅ...ತ್ತೆ ಮುಂತಾದ್ದು ಶಾಶ್ವತವಾಗಿ ನಡೆವಂತೆ ಏರ್ಪಾಡು ಮಾಡಿಸ...ಬೇಕಾಗಿ ಮೆ॥ ನಾರಾಯಣರಾಯರು ಗವರ್ನಮೆಂಟಿಗೆ ಬರೆ...ಕೊಂಡು ಸರ್ಕಾರದವರು ಅವರ ಇಷ್ಟಪ್ರಕಾರ ಅದನ್ನು ವ...ಕೊಂಡು ಹುಕುಂ ಕೊಟ್ಟಿರುವುದೇನೆಂದರೆ:—ಮೆ॥ ಎಂ. ...ಕೆ ನಾರಾಯಣರಾಯರು ಈ ದೇವಸ್ಥಾನದ ಧರ್ಮದರ್ಶಿಯಾ...ನೇಮಿಸಲ್ಪಟ್ಟಿದ್ದಾರೆ. ೬,೦೦೦ ರೂ ಮೂಲಧನಕ್ಕೆ ವರುಷಕ್ಕೆ ...ರೂ. ಬಡ್ಡಿ ಉತ್ಪತ್ತಿಯಾಗುತ್ತದೆ. ಈ ಹಣಕ್ಕೆ ವಿನಿಯೋಗ ...ನೆಂದರೆ:—

ಅರ್ಚಕನ ಸಂಬಳ ೧೨ ತಿಂಗಳಿಗೆ... ರೂ ೩೬
ನೈವೇದ್ಯದ ಖರ್ಚು ,, ,, ... ,, ೧೨
ದೀಪಾರಾಧನೆ ,, ,, ... ,, ೬

ಜುಮ್ಲಾ ರೂ ೫೪

...ಉಳಿದ ೬ ರೂಪಾಯಿಯನ್ನು ಆ ದೇವಸ್ಥಾನದ ರಿಪೇರಿ ಮುಂ...ಕೆಲಸಗಳಿಗೆ ವಿನಿಯೋಗವಾಗುವಂತೆ ಮಾಡಿಸುತ್ತಾ ಬರ...ರು.

...ಬಾರ್ ತಾ॥ ಬೆಳಸೂರಿನಲ್ಲಿರುವ ೭ ದೇವಸ್ಥಾನಗಳು.

...ಬಾರ್ ತಾಲ್ಲೂಕಿಗೆ ಸೇರಿದ ಬೆಳಸೂರಿನಲ್ಲಿ ಚಂದ್ರೇ...ಸ್ವಾಮಿ, ಆಂಜನೇಯಸ್ವಾಮಿ ಎಂಬೀ ಎರಡು ದೇವಸ್ಥಾನಗಳ...ಕೆ, ಡೆಪ್ಯುಟಿ ಕಮಿಷನರ ಶಿಫಾರಸಿನ ಪ್ರಕಾರ ಕಲ್ಯಾಣರಾಯರ ಧರ್ಮದರ್ಶಿಯಾಗಿ ನೇಮಿಸಿದೆ. ಅವರು ದೇವಸ್ಥಾನದ ...ರ್ಚಿನ ಲೆಕ್ಕಗಳನ್ನು ಪ್ರತಿ ತಿಂಗಳಲ್ಲೂ ಕ್ರಮವಾಗಿ ಅಮು...ಒಪ್ಪಿಸುತ್ತಾ ಬರಬೇಕು. ದೇವಸ್ಥಾನಗಳ ಪೂಜೆ, ಉತ್ಸ...ವಗಳೊಳಗಾದ ಖರ್ಚಿಗೆ ವರುಷಕ್ಕೆ ೧೦೦ ರೂ. ...ರ್ ಮಾಡಿದೆ. ದೇವಸ್ಥಾನಗಳ ಹೆಸರಿನಲ್ಲಿ ದೊರೆಯಿದ್ದ ಎರಡು ...ಗಳನ್ನು ಇತರರು ತಮ್ಮ ಸ್ವಾಧೀನಾನುಭವದಲ್ಲಿಟ್ಟುಕೊಂ...ರೆ. ಆ ಜಮೀನುಗಳ ಪತ್ರಗಳನ್ನು ದೇವಸ್ಥಾನದ ಹೆಸರಿನಲ್ಲಿ ...ಬೇಕು. ಸರ್ವಮಾನ್ಯ ಇಲಾಖೆಗೆ ಸರ್ವೆ ಸೆಟ್ಲ್...ದರ ಉತ್ಪತ್ತಿ ಹೆಚ್ಚಾದ್ದೇ ಎಂಬ ಸಂಗತಿಯನ್ನು ಸೆಟ್ಲ್‌ಮೆಂ... ಕಮಿಷನರು ತಿಳಿಸಿದಲ್ಲಿ ಗವರ್ನಮೆಂಟಿನವರು ಪ್ರತ್ಯೇಕವಾ...ಹುಕುಂ ಕೊಡುವರು.

ಮನೆಗಳನ್ನು ಶುದ್ಧಿ ಮಾಡುವ ಕ್ರಮ.

ಪ್ಲೇಗ್ ಉದಿಸ್ಯ ಬಾಧಿತವಾದಂಥಾ ಮನೆಗಳನ್ನು ಆ ರೋಗ...ಉಳಿಯದಂತೆ ಶುದ್ಧ ಮಾಡತಕ್ಕ ಭಾಗದಲ್ಲಿ ಸಂಸ್ಥಾನದ ...ರ್ ಸರ್ಜನ್ ಮತ್ತು ಶ್ಯಾನಿಟರಿ ಕಮಿಷನರರವರು ಕೆಲವು ...ನೆಗಳನ್ನು ಮಾಡಿರುತ್ತಾರೆ. ಸರ್ಕಾರದವರು ಒಪ್ಪಿ ಈ ನಿ...ಗಳಲ್ಲಿ ಹೇಳಿರುವ ಪ್ರಕಾರ ಮನೆಗಳನ್ನು ಶುದ್ಧಿಮಾಡಬೇ...ದು ಹುಕುಂ ಕೊಟ್ಟಿದಾರೆ. ಅದರ ಮುಖ್ಯಾಂಶಗಳೇನೆಂ...

...ಂಕುಳ್ಳ ಮನೆಗಳ ಗೋಡೆಗಳನ್ನು ಕ್ರಿಮಿನಾಶಕ ಪದಾರ್ಥ... ಕ್ಲೋರೈಡ್, ಕಾರ್ಬಾಲಿಕ್ ಆಸಿಡ್, ಸುಣ್ಣ) ಗಳಿಂದ ಶು...ದ್ಧಿಮಾಡಬೇಕು ಕೋಣೆ, ಹಜಾರ ಮುಂತಾದ ಭಾಗಗ...ಕ್ಕೆ ಬೇಕಾದಷ್ಟು ಬೆಂಕಿ ಹೊತ್ತಿಸಿ, ಬಾಗಿಲುಗಳನ್ನು ಮು...ಒಂದು ಗಂಟೆಯ ಹೊತ್ತು ಮುಚ್ಚಿರಬೇಕು. ತರುವಾಯ ...ಬನ್ನು ಕೋಣೆಗಳೆಲ್ಲಾ ಚನ್ನಾಗಿ ಹರಡಬೇಕು. ಸ್ವಲ್ಪ ಕಾ...ಮೇಲೆ ಜೋಕೆಯಾಗಿ ಗುಡಿಸಿ, ಗೋಡೆಗಳಿಗೆ ಹೊಸ ಸುಣ್ಣ...ಚನ್ನಾಗಿ ೬—೭ ದಿನ ಗಾಳಿ ಆಡಿದಮೇಲೆ ವಾಸಕ್ಕೆ ಉ...ಗಿಸಬೇಕು. ಮರಮುಟ್ಟು ಮುಂತಾದ್ದನ್ನೆಲ್ಲಾ ಆ ಬೆಂಕಿ...ಯ ತಗಲುವಂತೆ ಸ್ವಲ್ಪಹೊತ್ತು ಇಟ್ಟಿರತಕ್ಕದ್ದು. ಆದರೆ ಮಾತ್ರ ಮಾಡುವುದರಿಂದ ಪ್ಲೇಗಿನ ಸೂಂಕು ನಿವಾರಣೆಯಾ...ದು ನಂಬಿಕೊಳ್ಳಕೂಡದು. ಸೂಂಕು ತಗಲಿದ ಮನೆಯವರು ...ಬಟ್ಟೆ ಬರೆಗಳನ್ನೆಲ್ಲಾ ಬೆಂಕಿಯ ಶಾಖಕ್ಕೆ ಒಡ್ಡಿ, ದಾಪುಗಳ...ಸ್ವಲ್ಪ ಚನ್ನಾಗಿ ಒಗೆದು ಬಿಸಲಿಗೆ ಹಾಕಿ ಒಣಗಿಸಿಕೊಳ್ಳ... ಮನೆಯವರು ತಮ್ಮ ಶರೀರಗಳನ್ನು ಬ್ರಾಂಕಳವ ನೀರಿನ...ತೊಳೆದುಕೊಂಡು, ಹೊಸ ಬಟ್ಟೆಗಳನ್ನು ಹಾಕಿಕೊಳ್ಳಬೇಕು.

...ಸೂರಿಗೂ ಕಾಂಪೌಂಡ್ ಲೈನಿಗೂ ಸಮಾನ ಇರುವ ಎಲ್ಲಾ ...ಗ್ರಾಮಗಳಲ್ಲಿ ಪ್ಲೇಗ್ ಸೂಪರಿಂಟೆಂಡರುಗಳನ್ನು ನೇಮಿಸಿದೆ. ಈ ಸಂಸ್ಥಾನದ ಗ್ರಾಮಗಳಿಂದ ಕಾಂಪೌಂಡ್ ಲೈನಿಗೆ ಬರತಕ್ಕವರನ್ನೆಲ್ಲಾ ರಿಜಿಸ್ಟರಿಗೆ ದಾಖಲ್ ಮಾಡಿಕೊಂಡು, ...ಪ್ಲೇಗಾದ ಗ್ರಾಮಗಳಲ್ಲಿ ಜನರನ್ನು ಮನೆ ಬಿಡಿಸಿ ಬೈ...ಲುಗಳಲ್ಲಿ ವಾಸಮಾಡುವಂತೆ ಮಾಡಿ, ಅಂಥಾ ಗ್ರಾಮಗಳ...ಲ್ಲಿಂದ ಪ್ರಾಣಿಕರಿಂದಲೂ, ಮನೆಗಳಲ್ಲಿ ನೆಲದ ಸಾಕ...ಸುಡುವುದರಿಂದಲೂ ಚನ್ನಾಗಿ ಶುದ್ಧಿ ಮಾಡಿಸುತ್ತಾ ಬರ...ಮಲೇರು ಇಷ್ಟರವರ ಜನರ ಮರಣದ ರಿಜಿಸ್ಟರನ್ನು ...ಲಿಂದ ಹೋಗಿ ಬರುವಂಥಾ ಜನರ ಮೇಲು ಬಿಡದಿರತಕ್ಕ ...ಕ್ಕೂ ಸೂಪರಿಂಟೆಂಡರುಗಳು ಬಹಳ ಚನ್ನಾಗಿ ತನಿಖೆ ಮಾಡು...ಕು. ಮನೆ ಶುದ್ಧಿಮಾಡುವ ಕೆಲಸವನ್ನು ಸೂಪರಿಂಟೆಂಡರುಗ...ಳಾಗಿ ನಿಂತು ತೃಪ್ತಿಕರವಾಗಿ ಮಾಡಿಸಬೇಕೇ ಹೊರತು ಆ ...ರಿಯನ್ನು ಅನರು ಇನ್ನಾರಿಗೂ ವಹಿಸಿ ಹೊರಟು ಹೋಗ... ಸೂಪರಿಂಟೆಂಡರುಗಳು ಪ್ರತಿದಿನವೂ ಮಾಡಿದ ಕೆಲಸಗಳನ್ನ...ಯಲ್ಲಿ ಬರೆದು ಕೂಡಲೇ ಅಮಲ್ದಾರರುಗಳಿಗೆ ಕಳುಹಿಸು...ಬೇಕು.

ಇಂಡಿಯಾ ದೇಶದ ವೃತ್ತಾಂತಗಳು.

ಭೋಪಾಲ್ ಸಂಸ್ಥಾನದ ಬೇಗಂ ರಾಣಿಯವರು ಕೆಲವು ಮಂದಿ ಅಂಗರಕ್ಷಕರನ್ನು ಕರೆದುಕೊಂಡು ಜೆಡ್ಡಾದಿಂದ ಮದೀನಕ್ಕೆ ಯಾತ್ರಾರ್ಥವಾಗಿ ಹೊರಟರು.

◆◆◆◆

ಮಲಬಾರ್ ಪ್ರಾಂತ್ಯವು ಆಪೋಸಲರಿಗೂ, ಲಾಯರುಗಳಿಗೂ ಸ್ವರ್ಗಲೋಕವಾಗಿದೆ ಎಂದು ಅಲ್ಲಿಗೆ ಹೋದ ಒಬ್ಬ ದೊಡ್ಡ ಮನುಷ್ಯರು ಹೇಳಿದರು. ಅವರು ಹೀಗೆ ಹೇಳಲು ಕಾರಣವೇನೋ ಗೊತ್ತಾಗಲಿಲ್ಲ.

◆◆◆◆

ಸೇಲಂ ಪಟ್ಟಣದ ಹತ್ತಿರ ಟಾಟಯೂಬಾ ಸಂಸ್ಥಾನಕ್ಕೆ ಸೇರಿದ ಒಂದು ಪ್ರದೇಶದಲ್ಲಿ ಕಲ್ಲಿದ್ದಲು ಭೂಮಿಯೊಳಗೆ ಅಪಾರವಾಗಿ ದೊರೆಯುತ್ತದೆ. ಚೀಮಿಯಾಲಾ ಎಂಬ ಕಾಟೆಯು ತುಂಬಾ ಅದು ಬಹಳ ಹೆಚ್ಚಾಗಿ ಸಿಕ್ಕುವುದೆಂದು ಹೇಳುವರು.

◆◆◆◆

ಪ್ಲೇಗಿನ ಹಾವಳಿಯ ದೆಸೆಯಿಂದ ಬೊಂಬಾಯಿಯಲ್ಲಿ ವಿದ್ಯಾಭ್ಯಾಸದ ವಿಚಾರವು ಬಹಳ ಹೀನಸ್ಥಿತಿಗೆ ಬಂತು. ಹೋದ ವರುಷ ೩೭ ಪಾಠಶಾಲೆಗಳು ಮುಚ್ಚಿಹೋದವು; ೪೦,೦೦೦ ಹುಡುಗರು ಕಡಿಮೆಯಾಗಿರುತ್ತಾರೆ ಎಂಬುದಾಗಿ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರವರು ತಿಳಿಸಿದಾರೆ.

◆◆◆◆

ದಕ್ಷಿಣ ಆಫ್ರಿಕಕ್ಕೆ ಸೇರಿದ ಕೇಪ್ ಟವರ್ ಎಂಬ ನಗರದ ಭಾರೀ ವರ್ತಕರು ಮೆ॥ ಹಾಜೀ ಸುಲೈಮಾನ್ ಷಾ ಮಹಮದ್ ಎಂಬುವರು ಬೊಂಬಾಯಿ ಪಟ್ಟಣದ ಅಂಜುಮಾನಿ ಇಸ್ಲಾಂ ಎಂಬ ಮುಸೀತಿಗೆ ೬೦೦ ರೂ ಬಾಳುವ ಒಂದು ಒಳ್ಳೇ ಕಾರ್ಪೆಟನ್ನು ಬಹುಮಾನವಾಗಿ ಕಳುಹಿಸಿಕೊಟ್ಟಿದಾರೆ

◆◆◆◆

ಉತ್ತರ ದೇಶದಲ್ಲಿ ರಾಜಾಸ್ಥಾನದಿಂದ ಕಾಶಿಮಾರಿನ ವರೆಗೆ ಹೋಗಿ ಬರಲು ಅನುಕೂಲಿಸುವಂತೆ ಗೋವರ್ಧನಗಿರಿ ಎಂಬ ಸ್ಥಳದಲ್ಲಿ ಗಂಗಾನದಿಗೆ ಸೇತುವೆ ಕಟ್ಟಬೇಕೆಂದು ಗವರ್ನಮೆಂಟಿನವರು ಯೋಚನೆ ಮಾಡಿರುತ್ತಾರೆ ಈ ಭಾರೀ ಸೇತುವೆಗೆ ೬೦ ಲಕ್ಷ ರೂಪಾಯಿ ಖರ್ಚಾಗುತ್ತದೆಂದು ಅಂದಾಜು ಆಗಿದೆ.

◆◆◆◆

ಸಿಲೋನ್ ದ್ವೀಪದ ಒಂದು ಪತ್ರಿಕೆಯಲ್ಲಿ—ಇಲ್ಲಿನ ಸಮುದ್ರದಲ್ಲಿ ದನಗಳ ದನಗಳು, ಚಾಪೆಗಳು, ಹಾಸಿಗೆ ಬಟ್ಟೆಗಳು, ತೆಂಗಿನ ಕಾಯಿಗಳು, ಸಣ್ಣ ಸಣ್ಣ ತಾಳೇ ಗಿಡಗಳು, ಇವೇ ಮುಂತಾದವುಗಳೆಲ್ಲಾ ಹಿಂದುಸ್ಥಾನದ ಕಡೆಯಿಂದ ಕೊಚ್ಚಿಕೊಂಡು ಬಂದವೆಂಬುದಾಗಿ ತಂತೀ ವರ್ತಮಾನ ಬಂದಿದೆ ಎಂಬುದಾಗಿ ಪ್ರಕಟಿಸಿದೆ

◆◆◆◆

ಭಾವನಗರದ ರಾಣೀ ಸಾಹೇಬರಿಗೆ ಕೆಲವು ಕಾಲದಿಂದ ಕಾರ್ಬಂಕಲ್ ರೋಗ ಪ್ರಾಪ್ತವಾಗಿ ಅವರನ್ನು ತುಂಬಾ ಕಾಡುತ್ತಿತ್ತು. ಅವರು ಅಲ್ಲಿಂದ ಹವಾ ಬದಲಾಯಿಸುವುದಕ್ಕೆಂದು ಹೊರಟು ಲಾನೌಲಿಗೆ ದಯಮಾಡಿದರು. ಅಲ್ಲಿ ರೋಗವು ಜಾಸ್ತಿಯಾಗಿ ಹಿಂದಿನವಾರ ಅವರು ಕಾಲವಾದರೆಂದು ವರ್ತಮಾನಬಂದಿದೆ.

◆◆◆◆

ಸಿಲೋನ್ ದ್ವೀಪದ ಗವರ್ನರಾಗಿದ್ದ ಸರ್ ವೆಸ್ಟ್ ರಿಡ್ಜ್‌ವೇಯವರು ಹಿಂದಿನ ವಾರ ಅಲ್ಲಿಂದ ಇಂಗ್ಲೆಂಡಿಗೆ ಪ್ರಯಾಣಮಾಡಿದರು. ಪ್ರಜೆಗಳೆಲ್ಲಾ ಅವರಿಗೆ ಬಿತ್ತರ ಮುಂತಾದ್ದು ಮಾಡಿ, ವಿಜ್ಞಾಪನಾ ಪತ್ರಿಕೆಯನ್ನೊಪ್ಪಿಸಿ, ಬಹು ಆಟ್ಟಹಾಸವಾಗಿ ಸಾಗಕಳುಹಿಸಿದರು. ಇವರ ಸ್ಥಾನಕ್ಕೆ ಸರ್ ಹೆನ್ರಿ ಬ್ಲೇಕ್ ಯವರು ಬರುವವರಾಗಿದ್ದಾರೆ. ಇವರಿಗೆ ಇದುವರೆಗೆ ಚೀನಾ ರಾಜ್ಯದಲ್ಲಿ ಗವರ್ನರ್ ಅಧಿಕಾರವಿತ್ತು.

◆◆◆◆

ಹಿಮಾಲಯ ಪರ್ವತದಲ್ಲಿರುವ ಮೌಂಟ್ ಎವರೆಸ್ಟ್ ಎಂಬ ಶಿಖರವೇ ಪ್ರಪಂಚದಲ್ಲೆಲ್ಲಾ ಅತ್ಯಂತ ಎತ್ತರವಾದುದೆಂದು ಗೊತ್ತಾಗಿದೆಯಷ್ಟೆ. ಇದಕ್ಕೆ ಗೌರೀಶಂಕರ ಎಂಬ ಹೆಸರೂ ರೂಢಿಯಾಗಿದೆ. ಈಗ ಇವೆರಡು ಶಿಖರಗಳೂ ಬೇರೆ ಬೇರೆಯೋ, ಎರಡೂ ಒಂದೇ ಶಿಖರದ ಹೆಸರೋ ಎಂಬುದನ್ನು ಗೊತ್ತುಮಾಡುವುದಕ್ಕಾಗಿ ಕ್ಯಾಪ್ಟನ್ ವುಡ್ ಯವರು ನೇಪಾಳಕ್ಕೆ ಹೋಗಿ ಅನ್ವೇಷಣೆ ಮಾಡುತ್ತಿರುವರು.

◆◆◆◆

ಯೂರೋಪ್ ಖಂಡದಲ್ಲಿ ದೇಶಾಟನೆ ಮಾಡಿಕೊಂಡು ಸ್ವರಾಷ್ಟ್ರಕ್ಕಾಗಿ ಪ್ರಯಾಣ ಮಾಡಿದ್ದ ಪುದುಕೋಟೆಯ ರಾಜರು ಹಳದಿನ ಹಿಂತಿರುಗಿ ಬಂದು ಕೊಲಂಬೋ (ಸಿಲೋನ್ ದ್ವೀಪ) ಪಟ್ಟಣದಲ್ಲಿ ಇಳಿದರು. ಅವರ ದಿವಾನರವರು ಅಲ್ಲಿಗೆ ಹೋಗಿ ಕಾದಿದ್ದು ಅವರಿಗೆ ಸುಸ್ವಾಗತವನ್ನು ಬಯಸಿದರು. ಮತ್ತು ಅಲ್ಲಿನ ವರ್ತಕರೇ ಮುಂತಾದವರು ರಾಜರನ್ನು ದೇವಸ್ಥಾನದಲ್ಲಿ ಇಳಿಸಿ ತುಂಬಾ ಸತ್ಕಾರೋಪಚಾರ ಮಾಡಿದರು.

◆◆◆◆

ಬೊಂಬಾಯಿ ಪಟ್ಟಣದಲ್ಲಿ ಹೊರಗಿನವರು ಬಂದು ವಾಸಮಾಡುವುದಕ್ಕೆ ಅನುಕೂಲವಾದ ಬಾಡಿಗೆ ಮನೆಗಳನ್ನು ಯಾವ ರೀತಿಯಲ್ಲಿ ಕಟ್ಟಬೇಕೋ ಅಂಥಾ ನಕ್ಷೆಯನ್ನು ಬರೆದು ಕಳುಹಿಸಬೇಕೆಂತಲೂ, ಅಂಥಾ ನಕ್ಷೆಗಳಲ್ಲೆಲ್ಲಾ ಉತ್ಕೃಷ್ಟವಾಗಿರುವಂಥಾ ಮೊದಲನೆ ನಕ್ಷೆಗೆ ೧,೫೦೦ ರೂ, ಎರಡನೇದಕ್ಕೆ ೫೦೦ ರೂ ಈ ಪ್ರಕಾರ ಇನಾಂ ಕೊಡುತ್ತೇವೆಂತಲೂ ಮ್ಯುನಿಸಿಪಾಲಿಟಿಯವರು ಪ್ರಕಟಿಸಿದ್ದರು. ಅದರಂತೆ ಇಬ್ಬರಿಗೆ ಹಳದ ವಾರ ಬಹುಮಾನ ಕೊಡಲಾಯಿತು.

ಮದರಾಸ್ ಪಟ್ಟಣದ ಬಳಿ ಇರುವ ಪೆರಂಬೂರು ರೈಲ್ವೆ ಕಾರ್ಖಾನೆಯನ್ನು ಬದಲಾವಣೆ ಮಾಡುವುದಕ್ಕೆ ೩೫,೩೩,೦೧೯ ರೂ. ಆಗಬೇಕೆಂತಲೂ, ಈ ಹಣವನ್ನು ಖರ್ಚುಮಾಡಿ ಐದು ವರುಷಗಳಿಗೆ ಅಂದಾಜಾದಷ್ಟು ಪ್ರಕಾರ ಕಾಮಗಾರಿಯೆಲ್ಲಾ ಪೂರೈಸಬೇಕೆಂತಲೂ ಮದರಾಸ್ ರೈಲ್ವೆ ಕಂಪನಿಯವರು ಇಂಡಿಯಾ ಗವರ್ನಮೆಂಟಿಗೆ ತಿಳಿಸಿದರು. ಗವರ್ನಮೆಂಟಿನವರು ಚಾಲ್ತಿ ವರುಷದಲ್ಲಿ ಆ ಕಾರ್ಖಾನೆಯ ಬದಲಾವಣೆ ಕಾಮಗಾರಿಗೆ ೩,೩೩,೬೯೦ ರೂ ಮಾತ್ರ ಸ್ಯಾಂಕ್ಷನ್ ಮಾಡಿದಾರೆ.

◆◆◆◆

ಹಿಂದೂಸ್ಥಾನದ ವಿಷಯದಲ್ಲಿ ವಿಶೇಷವಾದ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸುತ್ತಿದ್ದ ಕಾಲವಾದ ಪ್ರೊಫೆಸರ್ ಮ್ಯಾಕ್ಸ್‌ಮುಲ್ಲರ್ ಎಂಬ ದೊಡ್ಡ ಮನುಷ್ಯನ ಹೆಸರನ್ನು ಶಾಶ್ವತಪಡಿಸಬೇಕೆಂದು ಬೊಂಬಾಯಿ ಪಟ್ಟಣದಲ್ಲಿ ಸುಮಾರು ಮೂರು ವರುಷಗಳ ಕೆಳಗೆ ಒಂದು ಸಲಹೆ ಹುಟ್ಟಿ ಫಂಡು ಎತ್ತುವುದಕ್ಕೆ ಪ್ರಾರಂಭವಾಯಿತು. ಇದಕ್ಕೆ ಸಾವಿರಾರು ರೂಪಾಯಿ ತಕ್ಕ ಚಂದಾ ಹಣವೂ ಕೂಡಿತು. ಇದುವರೆಗೆ ಆತನ ಹೆಸರು ಶಾಶ್ವತಪಡಿಸುವುದಕ್ಕೆ ಕಮಿಟಿಯವರು ಯಾವದೊಂದು ಏರ್ಪಾಡನ್ನೂ ಮಾಡದೆ ಇರುತ್ತಾರೆಂದು ಕೆಲವರು ಆಕ್ಷೇಪಿಸುತ್ತಾರೆ,

◆◆◆◆

ಲೇಟ್ ಮಹಾರಾಜ್ಞಿ ಚಕ್ರವರ್ತಿನಿಯವರ ಡೈಮಂಡ್ ಜೂಬಿಲಿ ಮಹೋತ್ಸವದ ಜ್ಞಾಪಕಾರ್ಥವಾಗಿ ಕಲ್ಲಿಕೋಟೆಯಲ್ಲಿ ಹೆಂಗಸರ ಆಸ್ಪತ್ರೆಯೊಂದನ್ನು ಕಟ್ಟುತ್ತಿದ್ದದ್ದು ಪೂರೈಸಿತು. ಕಳೆದ ವಾರ ಈ ಕಟ್ಟಡವನ್ನು ಪ್ರತಿಷ್ಠೆ ಮಾಡಿದರು. ಆಗ್ಗೆ ಬಹುಮಂದಿ ಯೂರೋಪಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರು ಹಾಜರಾಗಿ ಪ್ರವೇಶೋತ್ಸವವನ್ನು ನೆರವೇರಿಸಿದರು. ಈ ಕಟ್ಟಡಕ್ಕೆ ಒಟ್ಟು ೬೧,೦೦೦ ರೂ ಖರ್ಚಾಗಿರುವುದು. ಮದರಾಸ್ ಪಟ್ಟಣದ ಪ್ರಸಿದ್ಧರಾದ ಸರ್ ಸಾವಳೆ ರಾಮಸ್ವಾಮಿ ಮೊದಲಿಯಾರರು, ಆ ಆಸ್ಪತ್ರೆಗೆ ತಮ್ಮ ಹೆಸರು ಇಡುವುದಾದರೆ ತಾವು ೧೦,೦೦೦ ರೂ. ಕೊಡುತ್ತೇನೆಂದು ಹೇಳಿದರು. ಅದರಂತೆ ಒಪ್ಪಿದ್ದರಿಂದ ಅವರು ಹಣವನ್ನು ಕಳುಹಿಸಿದ್ದಾರೆ.

◆◆◆◆

ಉತ್ತರದೇಶದ ಒಂದೂರಿನಲ್ಲಿ ಗಡಿಯಾರಗಳನ್ನು ಸರಿಮಾಡುವ ಒಬ್ಬ ಮಹಮ್ಮದೀಯನು ಒಂದು ಕೋರ್ಟಿನಲ್ಲಿ ಸಾಕ್ಷಿ ಕೊಡುವುದಕ್ಕೆ ಹೋಗಿದ್ದನು. ಮ್ಯಾಜಿಸ್ಟ್ರೇಟರು ಅವನ ಕಾಲಿನಲ್ಲಿ ಜೋಡು ಇದ್ದದ್ದನ್ನು ನೋಡಿ, ಜವಾನನನ್ನು ಕರೆದು—ಅವನನ್ನು ಹೊರಕ್ಕೆ ಕರೆದುಕೊಂಡು ಹೋಗಿ, ಜೋಡು ಕಾಲಿನಿಂದ ತೆಗೆಸಿ, ಅವನ ಕುತ್ತಿಗೆಗೆ ನೂಲಿ ಹಾಕಿ ಕರೆತರುವಂತೆ ಹೇಳಿದರು. ಜವಾನನು ಹಾಗೇ ಮಾಡಿದನು. ಆ ಮಹಮ್ಮದೀಯನು ಕೊರಳಿನಲ್ಲಿ ಜೋಡು ಹಾಕಿಕೊಂಡು ಮ್ಯಾಜಿಸ್ಟ್ರೇಟರ ಮುಂದೆ ನಿಂತು ಸಾಕ್ಷಿ ಹೇಳಿದನು. ಸುಮಾರು ಅರ್ಧ ಗಂಟೆ ಹೊತ್ತು ಅವನು ಈ ಅವಸ್ಥೆಯಲ್ಲಿರಬೇಕಾಯಿತು. ತರುವಾಯ ತನಗೆ ಈ ಮ್ಯಾಜಿಸ್ಟ್ರೇಟರು ಹೀಗೆ ಅವಮಾನಪಡಿಸಿದರೆಂಬುದಾಗಿ ಆ ಮಹಮ್ಮದೀಯನು ಅರ್ಜಿ ಕೊಟ್ಟನು. ಅದರ ಮೇಲೆ—ಇವನ್ನು ತನಿಖೆ ಮಾಡಬಾರದು; ಇವನು ಕೋರ್ಟಿಗೆ ಅವಮಾನ ಮಾಡಿರುತ್ತಾನೆ ಎಂಬ ಹುಕುಂ ಬರೆದು ವಾಪಸು ಕೊಟ್ಟುಬಿಟ್ಟರು.

◆◆◆◆

ಹಿಂದೂಸ್ಥಾನದ ಒಬ್ಬ ಹೊಸ್ಸ ರಾಜನು ತನ್ನ ಸ್ವಂತ ಅರಮನೆ ಕೊಠಡಿ ಕಪಾಟ್ಟಿನಲ್ಲಿಟ್ಟುಕೊಂಡಿದ್ದ ವಜ್ರಗಳನ್ನು ಯಾರೋ ಕಳುವುಮಾಡುತ್ತಾರೆಂದು ತಿಳಿದು, ಅದನ್ನು ತಪ್ಪಿಸುವುದಕ್ಕಾಗಿ ವಿಲಾಯಿತಿಯಲ್ಲಿ ಬೀಗಗಳನ್ನು ತಯಾರಿಸುವ ಒಂದು ಕಾರ್ಖಾನೆಯವರಿಗೆ ಬರೆದು ಒಂದು ವಿಚಿತ್ರವಾದ ಬೀಗವನ್ನು ಮಾಡಿಸಿ ತರಿಸಿರುತ್ತಾನೆ. ಈ ಬೀಗಕ್ಕೆ ಐದು ಬೀಗದಕೈಗಳಿರುವುವು. ರಾಜನು ಒಂದನ್ನು ತನ್ನ ಹತ್ತಿರದಲ್ಲಿಟ್ಟುಕೊಂಡು, ಉಳಿದ ನಾಲ್ಕನ್ನೂ ಅವು ಮಂದಿ ನೌಕರರಿಗೆ ಕೊಟ್ಟಿರುವನು. ಒಬ್ಬ ಹೋಗಿ ಆ ಕಪಾಟಿನ ಪೆಟ್ಟಿಗೇ ಬೀಗವನ್ನು ತೆರೆವುದಕ್ಕೆ ಬೀಗದಕೈ ಒಳಗಿಟ್ಟ ಕೂಡಲೇ ಆ ಪೆಟ್ಟಿಗೆಯೊಳಗೇ ನಿಂತಿರುವ ಒಂದು ಕನ್ನಡಿಯ ಮೇಲೆ ಅವನ ಆಕೃತಿಯು (ಫೋಟೋ) ಬೀಳುವುದು. ಅನೇಕ ಸಲ ಬಂದು ತೆರೆಯುವ ತನಕ ಈ ಆಕೃತಿಯು ಕಾಣುತ್ತಿದ್ದು, ತರುವಾಯ ಅದು ಹೋಗಿ ಎರಡನೆಯವನ ಆಕೃತಿ ಅದರ ಮೇಲೆ ಬೀಳುವುದು. ಇದು ವಿಚಿತ್ರವಾದ ಬೀಗವೇ ಸರಿ.

◆◆◆◆

ಹಿಂದೂಸ್ಥಾನದಲ್ಲಿ ೧೯೦೧—೧೯೦೨ ರ ತನಕ ಗವರ್ನಮೆಂಟಿನವರು ಟೆಲಿಗ್ರಾಫ್ ತಂತಿಗಳನ್ನು ಹಾಕುವುದಕ್ಕೆ ೫೭೩ ಲಕ್ಷ ರೂಪಾಯಿ ಮೂಲಧನವನ್ನು ಖರ್ಚುಮಾಡಿದ್ದರು; ಆಗ್ಗೆ ೧,೬೬,೬೫೧ ಮೈಲಿ ದೂರ ತಂತೀ ಕಂಭಗಳನ್ನು ನಾಟಿಸಿದ್ದರು. ಈಗಲಾದರೋ ೬ ಕೋಟಿ ಮೈಲಿಗಳ ದೂರ ತಂತಿಗಳನ್ನು ಹಾಕಿರುತ್ತಾರೆ. ಅದಕ್ಕೆಲ್ಲಾ ೭೯೫ ಲಕ್ಷ ದ್ರವ್ಯ ಖರ್ಚಾಗಿದೆ. ೧೯೦೧—೧೯೦೨ ರಲ್ಲಿ ಆ ವಾಣಿಯಾದ ತಂತೀವರ್ತಮಾನಗಳಿಗಿಂತಲೂ ಈ ವರುಷದ ತಂತೀವರ್ತಮಾನಗಳ ಸಂಖ್ಯೆಯು ದ್ವಿಗುಣವಾಗಿರುತ್ತದೆ. ಮೊದಲು ಗವರ್ನಮೆಂಟಿನವರು ಹಾಕಿದ್ದ ಮೂಲಧನಕ್ಕೆ ಶೇಕಡ ೫೬ ರ ಬಡ್ಡಿ ಉತ್ಪತ್ತಿಯಾಗುತ್ತಿದ್ದು ಈ ವರುಷ ಶೇಕಡ ೬ ಕ್ಕೆ ಇಳಿದು ಹೋಗಿದ್ದರೂ ಇಂಡಿಯಾ ಗವರ್ನಮೆಂಟಿನವರು ಲಕ್ಷ್ಯಕ್ಕೆ ತಂದುಕೊಳ್ಳದೆ ಪ್ರಜೆಗಳಿಗೆ ಉಪಕಾರಮಾಡಬೇಕೆಂಬ ಉದ್ದೇಶದಿಂದಲೇ ತಂತೀವರ್ತಮಾನಗಳ ಛಾರ್ಜುಗಳನ್ನು ೪ ಆಣೆ ಇದ್ದ ಕಡೆ ೩ ಆಣೆಗೆ ಇಳಿಸಿರುತ್ತಾರೆ. ಹಿಂದೂಸ್ಥಾನದಿಂದ ೫,೦೦೦ ಮೈಲಿ ದೂರದಲ್ಲಿರುವ ವಿಲಾಯಿತಿಗೆ ಒಂದು ಕಾಗದ ತೆಗೆದುಕೊಂಡು ಹೋಗಿ ವಿಳಾಸದಾರರಿಗೆ ತಲಪಿಸುವುದಕ್ಕೆ ಅಂಚೆ ಹಾಸಲನ್ನು ಒಂದೇ ಒಂದಾಣೆಗೆ ಇಳಿಸಿಬಿಟ್ಟಿರುತ್ತಾರೆ.

ದೇಶದ ಪಟ್ಟಣದ ಮ್ಯುನಿಸಿಪಾಲಿಟಿಯವರು ಕೆರೆದಿರುವಂಥ ಚಿಕ್ಕ ಬಾಗಿಲುಗಳನ್ನು ಊರಿನಲ್ಲಿ ಕಟ್ಟಿಸುತ್ತದಕ್ಕೆ ಅಭ್ಯಾಕ್ಷ ಪಟ್ಟಿದ್ದಾರೆ. ಈ ಕಾಮಗಾರಿ ಮಾಗಿಸುವದಕ್ಕೆ ಅವರು ೫॥ ಲಕ್ಷ ರೂಪಾಯಿ ಸಾಲ ಮಾಡುವವರಾಗಿದ್ದಾರೆ. ಅದನ್ನು ಪಟ್ಟಣದ ರೈತ ಸಂಘದವರು ನೋಡಿ, ಈ ಕಾಮಗಾರಿ ಉಪಯೋಗಕರವಾದುದಲ್ಲವೆಂತಲೂ, ಹ್ಯಾಗೂ ಮ್ಯುನಿಸಿಪಾಲಿಟಿಯವರು ಒಡೆತನದಿಂದ ಖರ್ಚು ಮಾಡುವ ಪಕ್ಷದಲ್ಲಿ ಈಗ ಸಾಲ ಮಾಡಬೇಕಾದ ಅಗತ್ಯವೇ ಕಂಡುಬರುವದಿಲ್ಲ ಎಂತಲೂ, ಈಗ ಸಾಲ ಮಾಡುವದನ್ನು ನಿಲ್ಲಿಸಬೇಕೆಂತಲೂ ಗವರ್ನಮೆಂಟಿಗೆ ಅರ್ಜಿ ಬರೆದುಕೊಂಡಿದ್ದಾರೆ.

****

ಕಳೆದ ಏಪ್ರಿಲ್ ತಿಂಗಳಿಂದ ಹಿಂದುಸ್ಥಾನದಲ್ಲಿ ಉಪ್ಪಿನ ಸುಂಕವನ್ನು ಅರ್ಧ ರೂಪಾಯಿ (ಅಥವಾ, ಸೇರಿಗೆ ೨॥ ಕಾಸು) ಕಡಿಮೆ ಮಾಡಿದರಷ್ಟೆ. ಇದರಿಂದ ಬಡವರಿಗೆ ಎಷ್ಟುಮಟ್ಟಿಗೆ ಪ್ರಯೋಜನವಾಗಿದೆ ಎಂಬ ಸಂಗತಿಯನ್ನು ಸರಕಾರದವರು ಹಿಂದುಸ್ಥಾನದಲ್ಲೆಲ್ಲಾ ತನಿಖೆ ಮಾಡಿಸುತ್ತಿರುವರು. ಮೊದಲಿದ್ದದ್ದಕ್ಕೂ ಈಗಿರುವದಕ್ಕೂ ಉಪ್ಪಿನ ಧಾರಣೆ ಕೆಲವು ಪೇಟೆಗಳಲ್ಲಿ ಹ್ಯಾಗೆ ಬದಲಾಯಿಸಿದೆ ಎಂಬ ಸಂಗತಿ ಮುಂದಿನ ಕೋಷ್ಟಕದಿಂದ ಗೊತ್ತಾಗುತ್ತದೆ. ಧಾರಣೆ ರೂಪಾಯಿ ೧ಕ್ಕೆ:—

| | ಮಾರ್ಚಿ ೧೫ರಲ್ಲಿ. | | ಅಕ್ಟೋಬರ್ ೧೫ರಲ್ಲಿ. | |
|---|---|---|---|---|
| | ಸೇರು. | ಚಟಾಕು. | ಸೇರು. | ಚಟಾಕು. |
| ಕಾನ್ಪುರ | ೧೧ | ೪ | ೧೩ | ೪ |
| ಗೋರಖಪುರ | ೧೧ | ● | ೧೩ | ೪ |
| ಫೈಜಾಬಾದ್ | ೧೧ | ೪ | ೧೨ | ೦ |
| ಬಸ್ತಿ | ೧೧ | ೦ | ೧೩ | ೦ |
| ಘಾಜೀಪುರ | ೯ | ೭ | ೯ | ೧೭ |

****

ಕಳೆದ ವರುಷ ಮುಂಬಯಿ ಆಬ್ಕಾರಿ ಇಲಾಖೆಯಲ್ಲಿ ಖರ್ಚು ಹೋಗಿ ೧೫೦॥ ಲಕ್ಷ ರೂಪಾಯಿ ಗವರ್ನಮೆಂಟಿಗೆ ವರಮಾನ ಉತ್ಪತ್ತಿ ಆಗಿದೆ; ಅಂದರೆ, ಹಿಂದಿನ ವರುಷದ ಹುಟ್ಟುವಳಿಗಿಂತ ೧೩॥ ಲಕ್ಷ ರೂಪಾಯಿ ಹೆಚ್ಚು. [illegible] ಗ್ಯಾಲನ್ [illegible] ಬಿಕರಿ ಆಗಿರುತ್ತದೆ. [illegible] ಉತ್ತರ ಕಾನಡಾ, ದಕ್ಷಿಣ ಕಾನಡಾ, ಈ ಮೂರು ಕಲೆಕ್ಟರಿಗಳಲ್ಲೇ ಹೆಚ್ಚಾಗಿ ಮದ್ಯಗಳು ಬಿಕರಿ ಆಗಿರುತ್ತವೆ. [illegible]

****

ಮುಂಬಯಿ ಗವರ್ನಮೆಂಟಿನವರು ಮುಂಬಯಿ ಪಟ್ಟಣದ ಹೆಲ್ತ್ ಆಫೀಸರ್ ಡಾಕ್ಟರ್ ಟರ್ನರ್ ಎಂಬವರ [illegible] ಪ್ಲೇಗ್ ವಿಚಾರದಲ್ಲಿ [illegible] ಇಲಿಗಳ [illegible]

## ಹಾವೇರಿ ಕಡೆಯ ವರ್ತಮಾನಗಳು.

ಬನ್ನಿಕಟ್ಟಿ.—ಇಲ್ಲಿ ಆಗಾಗ್ಗೆ ಮಳೆ ಸುರಿಯುತ್ತಾ ಇದೆ. [illegible]

ವಾಗಿದೆ. ಪ್ರಯಾಣಿಕರು ಕೂಡ [illegible] ಪ್ಲೇಗಿನಿಂದ [illegible] ಹೆಚ್ಚಾಗಿದೆ [illegible]

ಚಾಮರಾಜನಗರ.—ಹಿಂದೆ ನವೆಂಬರಿಗೆ ೫ನೇ ತಾರೀಖಿಗೆ ಇಲ್ಲಿ ಕಳ್ಳರು ಪ್ರಯಾಣಿಕರನ್ನು [illegible] ಪೋಲೀಸಿನವರು [illegible]

ಶಿಡ್ಲಘಟ್ಟ.—ಇಲ್ಲಿನ [illegible]

ಚಿಕ್ಕಮಗಳೂರು.—[illegible]

ಕಳೆಯೂ, ಗಾಳಿಯೂ [illegible] ಹುಲ್ಲು [illegible]

ತೀರ್ಥಹಳ್ಳಿ.—ಕಳೆದ ವಾರದಿಂದ ಈ ಪ್ರಾಂತ್ಯದಲ್ಲೆಲ್ಲಾ [illegible]

...ಲಾದ ಕಂಥ ಬನ್ನೂರ ಭಾರೀ ಆಕಳು ಒಬ್ಬ ಮುದುಕನ ನ್ನು ಕೊಲ್ಲಿಸಿತು. ಈ ಆಕಳು ಬಹು ಆಚಾರ್ಯಕಂತೆ. ಇದು ಯಾ ವಾಗ ಬೀದಿಯಲ್ಲಿ ಸುತ್ತುತ್ತಾ ಅಂಗಡಿಗಳಲ್ಲಿ ಜನರಿಗೆ ಹಿಂಸೆ ಕೊಡುತ್ತಾ ಇದೆ. ಮಕ್ಕಳು ಮರಿಗಳು ತಿರುಗಾಡುವ ಜಾಗದಲ್ಲಿ ಇಂಥಾ ಆಕಳುಗಳಿಂದ ಅಪಾಯವೇ ಸರಿ. ಬೇರೆ ಊರುಗಳಲ್ಲಿ ಇಂಥಾ ದನಗಳಿಗೆ ದೊಡ್ಡಿಯೇ ಆಶ್ರಯವು.

ಹಾಸನ—ಇದೇ ಡಿಸೆಂಬರ್ ೨ನೇ ತಾರೀಖು ಬುಧವಾರ ಮಿಸ್ಟರ್ ಕಾರ್ಂತಿನವರಿರುವ ಗರಲ್ಸ್ ಬೋರ್ಡಿಂಗ್ ಸ್ಕೂಲಿನ ಹಾಲ್ ನಲ್ಲಿ ಈ ಊರಿನ ಮಿಷನ್ ಬಾಲಿಕಾ ಪಾಠಶಾಲೆಗಳಿಗೆ ಬಹು ಮಾನಗಳನ್ನು ಕೊಡುವದಕ್ಕಾಗಿ ಒಂದು ಸಭೆ ನೆರದು ಬಂದಿತ್ತು. ಸ್ಥಳದ ಸಹ ನ್ಯಾಯಾಧಿಪತಿಗಳವರ ಧರ್ಮಪತ್ನಿಯವರು ಅಗ್ರಾಸನಾಧಿಪತಿಗಳಾಗಿದ್ದು ಬಹುಮಾನಗಳನ್ನು ಕೊಟ್ಟರು. ಊರಿನ ಪ್ರಮುಖರಾದ ದೊಡ್ಡ ಮನುಷ್ಯರು ಹಲವರು ಮತ್ತು ಸರ್ಕಾರದ ಮುಖ್ಯಸ್ಥರಲ್ಲಿ ಸಬ್ ಡಿವಿಜನ್ ಆಫೀಸರರು, ಜನರಲ್ ಆಸ್ಪತ್ರೆ ಆಫೀಸರವರು, ಸ್ಕೂಲ್ ಇನ್ಸ್‌ಪೆಕ್ಟರವರು, ಗವರ್ನಮೆಂಟ್ ಸ್ಕೂಲ್ ಪ್ರಿನ್ಸಿಪಲ್ ರು, ಪ್ರಸಿದ್ಧರಾದ ಆಂಗ್ಲ ಸಾಹೇಬರವರ ಧರ್ಮಪತ್ನಿಯವರು, ವಿಸ್ಸುಯವರು, ಕೆಲವು ಪ್ರಾಯಸ್ಥ ಹೆಂಗಸರುಗಳು ಸಹ ಹಾಜರಾಗಿದ್ದರು. ಬೆಳಿಗ್ಗೆ ೧೧ ಘಂಟೆಗೆ ಸರಿಯಾಗಿ ಸಹ ನ್ಯಾಯಾಧಿಪತಿಯವರು ಸಭೆಗೆ ಬಂದು ಸಭಿಕರಿಗೆ ಪ್ರಾರಂಭದ ಸಂತೋಷಕರವಾದ ಕೆಲವು ಸಂಗತಿಗಳನ್ನು ತಿಳಿಸಿದರು. ತರುವಾಯ ಬಾಲಿಕೆಯರು ವಿವಿಧವಾದ ನಾಟಕದ ಮಟ್ಟುಗಳಲ್ಲಿ ಕಲ್ಪಿಸಿದ್ದ ಸಂಭಾಷಣೆಯನ್ನು ಮಾಡಿ ಕೀರ್ತಿ ನೆಗಳನ್ನು ಹಾಡಿದರು. ತರುವಾಯ ಸ್ಕೂಲುಗಳ ರಿಪೋರ್ಟನ್ನು ಇಲ್ಲಿರುವ ದೇಶೀಯ ಪಾದ್ರಿಯವರಾದ ಸ್ಯಾಮುಯೇಲ್ ಲಾಯೀಶ್‌ಚಾರ್ಯರವರು ಓದಿ, ಸದರಿ ಸ್ಕೂಲುಗಳು ಸ್ಥಾಪಿತವಾಗಿ ಹಿಂದಿನ ವರ್ಷಗಳಲ್ಲಿಗಿಂತ ಬಾಲಿಕೆಯರ ಸಂಖ್ಯೆಯು ಹೆಚ್ಚಿ ಸ್ಕೂಲಿನಲ್ಲಿಯೂ ಸೇರಿಸಲ್ಪಟ್ಟ ಬಾಲಿಕೆಯರ ಸಂಖ್ಯೆ ಏರುವದನ್ನೂ ಬ್ರಾಹ್ಮಣ ಮಕ್ಕಳ ಸಂಖ್ಯೆಯು ಬಹಳ ಹೆಚ್ಚಿಗೆ ಬಂದಿರುವದನ್ನೂ ಸ್ಟೇಟ್ಮೆಂಟ್ ಮೂಲಕ ತೋರಿಸಿದರು. ಸದರಿ ಸ್ಕೂಲುಗಳಿಗೆ ಸಹ ನ್ಯಾಯಾಧಿಪತಿಯವರು ವಿಶೇಷ ಸಹಾಯ ಮಾಡುತ್ತಿದ್ದುದಕ್ಕೆ ಕೃತಜ್ಞತೆಯನ್ನು ತಿಳಿಸಿದರು. ತರುವಾಯ ಇಲ್ಲಿನ ಮಿಷನ್ ಹೈಸ್ಕೂಲು ಹೆಡ್ ಮಾಸ್ಟರ್ ಸ್ಕೂಲ್ ಇವೆಲ್ಲ ಎಲ್ಲಿಯೂ ಸ್ಥಳ ಸಿಕ್ಕದೆ ಇದ್ದ ಕಾಲದಲ್ಲಿ ಇಲ್ಲಿನ ಪ್ರಸಿದ್ಧರಾದ ಮೇಗರವರು ಒಂದು ದೊಡ್ಡ ಮನೆಯನ್ನು ಧರ್ಮಾರ್ಥವಾಗಿ ಒಂದು ಸ್ಕೂಲಿಗೆ ಕೊಟ್ಟದ್ದನ್ನೂ, ಅವರ ಉದಾರತ್ವವನ್ನೂ, ಕುರಿತು ಹೇಳಿದ್ದು ಸಹ ಸಬ್‌ಡಿವಿಜನ್ ಆಫೀಸರರಿಗೆ ವಿಲಾಯಿತಿಯ ಲೇಡಿ ಇನ್ಸ್‌ಪೆಕ್ಟರವರಿಗೆ ತಿಳಿಸಿದ್ದನ್ನೂ, ಸದರಿ ಲೇಡಿ ಇನ್ಸ್‌ಪೆಕ್ಟರು ಬಹಳ ಸಂತೋಷಪಟ್ಟು, ಸದರಿ ಮೇಗರವರ ದಾನದಿಂದ ಕಟ್ಟಲ್ಪಟ್ಟ ದೊಡ್ಡ ಭಂಗಾರದ ಬಳೆ ಸಮಾಪನಾಗಿ ಕೊಡುವಂತೆ ಸಹ ನ್ಯಾಯಾಧಿಪತಿಗಳವರ ಪತ್ನಿಗೆ ಅಪ್ಪಣೆ ಕೊಟ್ಟದ್ದನ್ನೂ, ಈ ಸಭೆ ಎಲ್ಲರ ಮುಂದೆ ಆ ಬಂಗಾರದ ಬಳೆಯನ್ನು ಸದರಿ ಹೆಡ್ಮಾಸ್ಟರರಿಗೆ ತೊಡಿಸುವುದಾಗಿ ಸಹ ನ್ಯಾಯಾಧಿಪತಿಗಳು ಇಂಗ್ಲೀಷಿನಲ್ಲಿ ತಿಳಿಸಿದ್ದನ್ನು ದೇಶೀಯ ಪಾದ್ರಿಯವರು ಕನ್ನಡದಲ್ಲಿ ಎಲ್ಲ ಸಭಿಕರಿಗೂ ತಿಳಿಸಿದರು. ತರುವಾಯ ಮೇಗರವರು ತಮ್ಮ ಸ್ವಂತ ಅಗ್ರಾಸನಾಧಿಪತಿಗಳು ಕರೆದು ಬಹುಮಾನದ ವಾಕ್ಯಗಳಿಂದಲೂ ಮಹಾ ಸಂತೋಷದೊಡನೆ ಆ ಬಂಗಾರದ ಬಳೆಯನ್ನು ತೊಡಿಸಿ ಬಹುಕಾಲ ಬಾಳಿರಿ ಎಂದು ಹರಸಿದರು. ಸದರಿ ಬಳೆಯ ಮೇಲೆ ಆಂಗ್ಲಭಾಷೆಯಲ್ಲಿ ಕೆತ್ತಿದ ಕೀರ್ತಿಯನ್ನು ಅಲ್ಲಿದ್ದ ಸರ್ಕಾರಿ ನೌಕರರಾದ ಹಲವರು ಅಭಿನಂದಿಸಿದರು. ತರುವಾಯ ಎಲ್ಲ ಹುಡುಗಿಯರಿಗೂ ಅವರವರ ಯೋಗ್ಯತಾನುಸಾರವಾಗಿ ವಿಲಾಯಿತಿ ಪೆಟ್ಟಿಗೆ, ಪ್ಲೇಟ್ ಗಳು, ಗೊಂಬೆಗಳು, ವಿವಿಧವಾದ ಕಾಂಡಿಗಳು, ಸೀರೆಗಳು, ತಾಮ್ರ ದ ಪಾತ್ರೆಗಳು, ಬಟ್ಟೆಗೆ ಕಿರುಗೆಗಳು, ಮೊದಲಾದವುಗಳು ಅಗ್ರಾಸನದವರಿಂದ ಕೊಡಲ್ಪಟ್ಟವು. ಅಷ್ಟರಲ್ಲಿ ಆ ಸಭಿಕರಲ್ಲೊಬ್ಬರಾದ ಮಿ ರಾಮಸ್ವಾಮಿ ಅಯ್ಯನವರು ನೀತಿಯೊಂದು ಸಭಿಕರನ್ನು ಕುರಿತು ಒಂದು ಉಪನ್ಯಾಸವನ್ನು ಮಾಡಿ, ಅದರಲ್ಲಿ ಈ ಸ್ತ್ರೀ ಧರ್ಮಗಳ ಔದಾರ್ಯ, ದಯೆ, ಪ್ರೀತಿ, ಮೊದಲಾದವುಗಳನ್ನು ತಿಳಿಸಿ ಸಭಿಕರನ್ನು ಸಂತೋಷಪಡಿಸಿದರು. ತರುವಾಯ ದೊಡ್ಡವರು ಸ್ತ್ರೀಯರಿಗೆ ಹೂವಿನ ಹಾರಗಳನ್ನು ಹಾಕಿದ್ದಾಯಿತು. ಬಾಲಿಕೆಯರು ಕೈ ಮುಗಿದು ಸ್ತೋತ್ರಗಳು ಎಲ್ಲಾ ಬಾಲಿಕೆಯರಿಗೆ ಹಂಚಿದರು. ಪುಸ್ತಕ, ಸೀರೆ ಮೊದಲಾದವುಗಳನ್ನು ಹಂಚಿದರು. ಸಭೆ ನೆರೆದಿದ್ದ ಸ್ಕೂಲ್ ಕಟ್ಟಡ ವು ವಿವಿಧವರ್ಣದ ತೋರಣ, ಎಲೆ, ಬಳ್ಳಿ, ಹೂಮಾಲೆಗಳಿಂದ ಅಲಂಕೃತ ವಾಗಿ ನೋಡತಕ್ಕವರ ಕಣ್ಣಿಗೆ ಮಹದಾನಂದವನ್ನುಂಟುಮಾಡುತ್ತಿತ್ತು. ಎಲ್ಲಾ ಕಾರ್ಯಗಳು ಮುಗಿದ ಮೇಲೆ ಕೊನೆಯಲ್ಲಿ ಬಂದವರಿಗೆ ಸಹ ನ್ಯಾಯಾಧಿಪತಿಯವರು ಕೆಲವು ಬಾಲಿಕೆಯರ ತಾಂಬೂಲಗಳ ನ್ನು (ಪ್ರೈಜುಗಳು) ತೆಗೆದುಕೊಂಡರು.

## ವಿದೇಶ ವರ್ತಮಾನಗಳು.

ಅಮೇರಿಕ ಸರ್ಕಾರದವರು ಯುದ್ಧದ ನಾವೆಗಳನ್ನು ಕಟ್ಟುವುದಕ್ಕಾಗಿ ಪಡೆಯಬೇಕೆಂದು ಈ ವರುಷ ೬೦ ಲಕ್ಷ ದ್ರವ್ಯ ಸ್ವೀಕಾರ ಮಾಡಿದಾರೆ.

❀❀❀❀

ಸ್ಕಾಟ್ಲೆಂಡಿನಲ್ಲಿರುವ ಗ್ಲಾಸ್ಗೋ ಪಟ್ಟಣದಲ್ಲಿ ಉಪಯೋಗ ವಿಲ್ಲ ಜನಗಳಿಗೆ ಕಟ್ಟಿ ಮಾಡುವ ವಿಷಯ ದೊಡ್ಡ ಪಾಠಗಳು ನಡೆಯುವುದು ಉಚಿತವೋ ಅದು. ವಾರ್ಷಿಕರಿಗೆ ೫೩,೯೦,೦೦೦ ರೂ. ಹಣ ಬೇಕಾಗುತ್ತದೆ.

❀❀❀❀

ಫ್ರೆಂಚ್ ಸರ್ಕಾರದವರು ಯುದ್ಧದ ಹಡಗುಗಳನ್ನು ಹೊಸ ಡಾಗಿ ಕಟ್ಟಬೇಕೆಂದು ತಯಾರಿಸಬೇಕೆಂದು ೩೦ ಕೋಟಿ ದ್ರವ್ಯವನ್ನು ಸ್ವೀಕಾರ ಮಾಡಿದಾರೆ. ಆದ್ದರಿಂದ ಇಂಗ್ಲೀಷರ ಹಡಗುಗಳು ಫ್ರೆಂಚಿಗಿಂತಲೂ ನಾಲ್ಕರಷ್ಟು ಅಧಿಕವಾಗಿವೆ.

❀❀❀❀

ಫಿಲಿಪೈನ್ ದ್ವೀಪಗಳಲ್ಲಿ ಒಂದಾದ ಜೋಲೋ ಎಂಬಲ್ಲಿ ಅಮೇರಿಕದ ಸೈನಿಕರು ೫,೦೦೦ ಮಂದಿ ಮೊರೊ ಎಂಬ ಜನರಮೇಲೆ ಯುದ್ಧಮಾಡಿ, ೩೦೦ ಜನರನ್ನು ಕೊಂದು, ಉಳಿದವರನ್ನೆಲ್ಲಾ ಚ ಲ್ಲಾಪಿಲ್ಲಿಯಾಗಿ ಓಡಿಸಿಬಿಟ್ಟರು. ಅಮೇರಿಕದವರ ಕಡೆ ೬ ಜನರಿಗೆ ಮಾತ್ರ ಗಾಯವಾಯಿತು.

❀❀❀❀

ರಷ್ಯಾ ಚಕ್ರವರ್ತಿಯವರ ಪತ್ನಿಯವರಿಗೆ ಕಿವಿಯಲ್ಲಿ ಏನೋ ಒಂದು ಬಾಧೆಯುಂಟಾಗಿದೆ ಎಂತಲೂ, ಅದರ ನೋವಿನ ದೆಸೆಯಿಂ ದ ಅವರಿಗೆ ನಿದ್ದೆ ಹತ್ತುವುದೇ ಕಷ್ಟವಾಗಿದೆ ಎಂತಲೂ ತಿಳಿಸಿದ್ದವ ಷ್ಟೆ. ಈಗ ಡಾಕ್ಟರುಗಳು ಚಿಕಿತ್ಸೆ ಮಾಡಿದ್ದರಿಂದ ಅವರಿಗೆ ಬಹಳ ಮಟ್ಟಿಗೆ ವಾಸಿಯಾಗಿದೆ ಎಂದು ಸಮಾಚಾರ ಬಂದಿರುವುದು.

❀❀❀❀

ಸೋಮಾಲಿಲ್ಯಾಂಡಿನಲ್ಲಿ ಜನರಲ್ ಮ್ಯಾನಿಂಗ್‌ಯವರು ಸೈನ್ಯ ಸಹಿತ ಬೊಹೋಟಲ್ಲಿಗೆ ಹೋಗುತ್ತಿದ್ದಾಗ ಮುಲ್ಲಾ ವಿನ ಕಡೆಯ ೫೦೦ ಮಂದಿ ದರ್ವೇಶರೆಂಬ ಸೈನಿಕರನ್ನು ಸಂಧಿಸಿ ಯುದ್ಧಮಾಡಿ ೬ ಮಂದಿಯನ್ನು ಕೊಂದುದಾಕಿ, ೩,೦೦೦ ಗೋವುಗಳನ್ನು ಸ್ವಾಧೀನಪಡಿಸಿಕೊಂಡರೆಂದು ತಂತೀ ವರ್ತಮಾನ ಬಂದಿದೆ.

❀❀❀❀

ಚೀನಾ ಚಕ್ರಾಧಿಪತ್ಯಕ್ಕೆ ಸೇರಿದ ೧೭ ಮಂದಿ ವೈಸ್‌ರಾಯರುಗಳೂ ಗವರ್ನರುಗಳೂ ತಮಗೋಸ್ಕರ ೯೯,೦೦೦ ಸಂಖ್ಯೆಯ ಸೈನಿಕರನ್ನು ರಷ್ಯಾದವರಮೇಲೆ ಯುದ್ಧಮಾಡಿ ಅವರಿಂದ ಮ್ಯಾಂಚೂರಿಯಾ ದೇಶವನ್ನು ಬಿಡಿಸಿಕೊಳ್ಳುವುದಕ್ಕೆ ಒದಗಿಸಿ ಕೊಡಲು ಸಿದ್ಧರಾಗಿದೆವೆಂದು ಚೀನಾ ಚಕ್ರವರ್ತಿಯವರಿಗೆ ಮಹ ತು ಕೊಟ್ಟಿದಾರೆ.

❀❀❀❀

ಮನಾಚೂರಿಯಾ ದೇಶದಲ್ಲಿ ರಷ್ಯಾದವರು ತುಂಬಾ ಕ್ರೂರ ಗಳಾಗಿ ಕಾರ್ಯಗಳನ್ನು ನಡೆಸುತ್ತಿರುವಂತೆ ಕಾಣುವುದು. ಅವರು ಒಬ್ಬಿಗೂ ಪರರನ್ನೇ ಚೀನಾಯವರ ಅಧಿಕಾರಗಳಿಗೆ ನೇಮಿಸುತ್ತಿ ಕಾಗಿದೆ. ಚೀನಾಯವರಿಗೆ ಯುದ್ಧಸಾಮಗ್ರಿಗಳು ಬೇಕಾದಲ್ಲಿ ರ ಷ್ಯಾದವರಿಗೆ ತಿಳಿಸಿ ಅವರ ಒಪ್ಪಿಗೆಯನ್ನು ಪಡೆಯಬೇಕು. ಚೀನ ಯವರು ಏನೂ ಮಾಡಲಾರದೆ ಅಳಿಯುತ್ತಿದ್ದಾರೆ.

❀❀❀❀

ಚೀನಾ ಚಕ್ರವರ್ತಿನಿಯವರು ರಷ್ಯಾದವರಿಗೂ ಜಪಾನಿನವರಿ ಗೂ ಯುದ್ಧವು ಪ್ರಾರಂಭವಾಗುವುದೆಂದು ನಿರೀಕ್ಷಿಸಿಕೊಂಡು, ತಾವು ತ ಮ್ಮ ಸ್ಥಾನ ಸಹಿತವಾಗಿ ಪೀಕಿಂಗಿಂದ ತಮ್ಮ ರಾಜಧಾನಿಯನ್ನು ಬಿಟ್ಟು ಇನ್ನೊಂದು ಕಡೆಗೆ ಹೋಗಿರಬೇಕೆಂದು ಯೋಚಿಸಿಕೊಂಡಿದಾರೆ. ಅವರ ೬ನೆ ಪರುವದ ನಂತರ ಉತ್ಪನ್ನ ನಡೆದನೋಲೆ ರಾಜರು ನಿಮಿತ್ತ ನಿಮಿತ್ತರಾಗಿದಾರೆಂದು ವರ್ತಮಾನವಿದೆ.

❀❀❀❀

ಅರೇಬಿಯದಲ್ಲಿ ತರ್ಕಿ ರಾಜ್ಯಕ್ಕೆ ಸೇರಿರುವ ಭಾಗಕ್ಕೋಸ್ಕರ ನಿವಾಸಿ ಇಮಾಮ್ ಎಂಬ ಉಭಯ ಪಕ್ಷದ ಸೈನ್ಯಗಳು ದಂಗೆ ಎದ್ದು ಬರುತ್ತಾರೆ. ದಂಗೆಯೆದ್ದವರಿಗೂ ತುರ್ಕಿ ಸೈನಿಕರಿಗೂ ಕೆಳದ ವಾರ ಬಹು ಭಯಂಕರವಾದ ಯುದ್ಧ ನಡೆಯಿತು. ತುರ್ಕಿ ಸೈನಿ ಕರ ಕಡೆ ೩೦ ಮಂದಿ ಕೊಲ್ಲಲ್ಪಟ್ಟರು; ೪೭ ಜನರಿಗೆ ಗಾಯುಗ ಳಾಗಿವೆ. ಅಲ್ಲದರೊಳಗೆ ಹೊಸ ಸೈನ್ಯ ಹೋಗಿ ದಂಗೆಯೆದ್ದವರ ನ್ನು ಓಡಿಸಿ ನಮ್ಮ ಊರನ್ನು ಸ್ವಾಧೀನಪಡಿಸಿಕೊಂಡರು.

❀❀❀❀

ಸೋಮಾಲಿ ದೇಶದಲ್ಲಿ ಇಂಗ್ಲೀಷರು ಮುಲ್ಲಾವಿನ ಮೇಲೆ ಯು ದ್ಧ ಮಾಡಲು ಸೈನ್ಯವನ್ನು ಬಲಪಡಿಸುತ್ತಿದ್ದಾರೆ. ಜನರಲ್ ಮ್ಯಾನಿಂಗ್ ಯವರು ಸೈನ್ಯ ಸಮೇತ ಕಳೆದ ವಾರ ಗಾಲಡಿ ಎಂಬ ಪಟ್ಟಣದ ಮೇಲೆ ನುಗ್ಗಿ ಅದನ್ನು ಆಕ್ರಮಿಸಿಕೊಂಡರು. ಅಲ್ಲಿಗೆ ಕೋಹಮೇಲ ಕರ್ನಲ್ ಕಾಬ್ ಯವರೂ ಹೇಳಿ ನ ಸೈನ್ಯವನ್ನು ಅಲ್ಲೇ ಬಿಟ್ಟು ಹಿಂದಕ್ಕೆ ಹೋದರು. ಅವರು ಯುದ್ಧ ಪ್ರಯಾಣವು ಈ ತಿಂಗಳ ೨೦ ರಿಂದಾಚೆಗೆ ಪ್ರಾರಂಭವಾಗು ವದು.

❀❀❀❀

ಟ್ರಾನ್ಸ್‌ವಾಲಿಗೆ ೨,೬೧,೦೦೦ ಜನ ಕೂಲಿಯವರು ಬೇಕಾಗಿರು ವರು. ಮಧ್ಯ ಆಫ್ರಿಕಾ, ದಕ್ಷಿಣ ಆಫ್ರಿಕಾ ಪ್ರಾಂತ್ಯಗಳಿಂದ ಕರಸಲ್ಪ ಟ್ಟವರ ಜನರು ಸಾಲದು. ಚೀನಾಯಿಂದ ಕೂಲಿ ಜನರನ್ನು ಕರ ತರಬೇಕೆಂದು ಪ್ರಯತ್ನ ಪಟ್ಟದಾರೆ. ಈ ವಿಷಯವನ್ನು ಚೀನಾ ಸರ್ಕಾರದವರು ಕೇಳಿ, ತಮ್ಮ ಚಕ್ರಾಧಿಪತ್ಯದಿಂದ ಯಾರೂ ಅಲ್ಲಿ ಕೂಲಿ ಮಾಡುವದಕ್ಕೆ ಹೋಗಕೂಡದೆಂತಲೂ, ದಕ್ಷಿಣ ಆಫ್ರಿಕದ ವರು ಬಂದು ಯಾರನ್ನೂ ಕರೆದುಕೊಂಡು ಹೋಗಕೂಡದೆಂತಲೂ ಶಾಸನಿಸಿದ್ದಾರೆಂದು ಪ್ರಕಟವಾಗಿದೆ.

❀❀❀❀

ಸಿಂಗಪುರದಲ್ಲಿ ತರ್ಕಿ ರಾಜ್ಯದ ರಾಯಭಾರಿಯಾಗಿದ್ದ ಅಹಮ ದ್ ಅತ್ತಾ ಉಲ್ಲಾಬೇಗ್ ಎಂಬವರು ಗವರ್ನರ ಬಂಗಲೆಯಲ್ಲಿ ಔತ ಣದ ಭೋಜನಮಾಡಿಕೊಂಡು, ಕುದುರೆ ಗಾಡಿಯಲ್ಲಿ ಕುಳಿತು ತಮ್ಮ ಬಂಗಲೆಗೆ ಬರುತ್ತಿರುವಾಗ್ಗೆ ಕುದುರೆಯು ಬಾಯಿಕಾಯಿಸಿ ಗಾಡಿ ಯನ್ನು ಸ್ವಲ್ಪದೂರದ ಎಳೆದುಕೊಂಡು ಹೋಗುತ್ತಿತ್ತು. ಆಗ ಬಳ ಗಿದ್ದ ರಾಯಭಾರಿಯು ಗಾಬರಿಯಿಂದ ಕೆಳಕ್ಕೆ ಹಾರಿದರು. ನೆಲದ ಮೇಲೆ ಬಿದ್ದ ಏಟಿಗೆ ಅವರ ತಲೆ ಒಡೆದು ಕತ್ತು ಮುರಿದುಹೋ ಯಿತು. ಕೆಲವು ನಿಮಿಷಗಳಲ್ಲೇ ಅವರು ಮೃತರಾದರು.

❀❀❀❀

ಚೀನಾ ಚಕ್ರವರ್ತಿನಿಯವರಿಗೆ ಮ್ಯಾಂಚೂರಿಯಾ ವಿಷಯವೂ, ಕೊರಿಯಾ ವಿಷಯವೂ ತುಂಬಾ ಚಿಂತೆಯನ್ನುಂಟುಮಾಡಿರುವು ದೆ ಕೇಳುತ್ತದೆ. ಮುಂದಿನ ನೋವೆಂಬರ್ ತಿಂಗಳೊಳಗಾಗಿ ಇವೆ ರಡು ವಿಷಯಗಳೂ ಸಂಪೂರ್ಣವಾಗಿ ನಿವಾರಣವಾಗಿ ಸಮಾಧಾನಕ್ಕೆ ಬಂದರೆ, ಆ ಚಕ್ರವರ್ತಿನಿಯವರು ತಮ್ಮ ವರ್ಧಂತಿ ಮಹೋತ್ಸವದ ಖರ್ಚಿಗಾಗಿ ಅಧಿಪತಿಗಳಿಂದ ಕಳುಹಿಸಲ್ಪಡುವ ೪೦ ಲಕ್ಷ ದ್ರವ್ಯವನ್ನೂ ಯುದ್ಧ ಸೇವರಿಗೆ ಕಾಣಿಕೆಯಾಗಿ ಒಪ್ಪಿಸುತ್ತೇನೆಂತಲೂ, ಹೊಸ ದೇವಸ್ಥಾನ ಗಳನ್ನು ಕಟ್ಟಿಸಿ, ಅಳಿದುಹೋದವುಗಳಿಗೆ ರಿಪೇರಿ ಮಾಡಿಸುತ್ತೇನೆಂತ ಲೂ ಹರಕೆ ಕಟ್ಟಿಕೊಂಡಿದಾರೆ.

❀❀❀❀

ಚೀನಾ ರಾಜ್ಯದಲ್ಲಿ ಜನರು ತಮ್ಮ ಮನೆಯೊಳಗೆ ಹೆಂಗಸರ ಪಾದಗಳಿಗೆ ಪಟ್ಟಿಗಳನ್ನು ಕಟ್ಟಿ ಅಗಲವಾಗಿ ಬೆಳೆಯದಂತೆ ಮಾಡು ವದೂ, ಇದು ಒಂದು ಅಲಂಕಾರವೆಂದು ಎಣಿಸುವುದೂ ನಮ್ಮ ವಾಚಕರಿಗೆ ಗೊತ್ತಿದೆಯಷ್ಟೆ. ಈಗ ಹೊನಾನ್ ಎಂಬ ಅಧಿಪತ್ಯದ ಗವರ್ನರಾದ ಚಾವೋ ಏರ್‌ಸನ್ ಎಂಬಾತನು ಈ ದುಷ್ಟಪದ್ಧತಿಯ ನ್ನು ನಿಲ್ಲಿಸಬೇಕೆಂದು ತನ್ನ ಅಧಿಪತ್ಯಕ್ಕೊಳಪಟ್ಟ ಊರುಗಳಲ್ಲೆಲ್ಲಾ ಸಾರಿಸಿರುವುದೇನೆಂದರೆ—"ಚಕ್ರವರ್ತಿನಿಯವರು ಯಾವ ಪ್ರಜೆ ಯಾದರೂ ತನ್ನ ಹೆಣ್ಣು ಮಕ್ಕಳಿಗೆ ಪಾದಗಳನ್ನು ಕಟ್ಟಕೂಡದೆಂ ದು ಆಜ್ಞೆ ಮಾಡಿರುತ್ತಾರೆ. ಆದಕಾರಣ ಈ ಅಪ್ಪಣೆಗೆ ವಿರೋಧ ವಾಗಿ ಯಾರಾದರೂ ನಡೆದುಕೊಂಡರೆಂದು ತಿಳಿದುಬಂದ ಪಕ್ಷದಲ್ಲಿ ಅಂಥವರಿಗೆ ಉಗ್ರವಾದ ಶಿಕ್ಷೆಗಳನ್ನು ವಿಧಿಸುತ್ತೇವೆ. ಯಾರೂ ಇನ್ನುಮೇಲೆ ಹೆಣ್ಣು ಮಕ್ಕಳ ಪಾದಗಳನ್ನು ಬೆಳೆಯದ ಹಾಗೆ ಕಟ್ಟಲೇ ಕೂಡದು." ಇಂಥಾ ಅಧಿಪತಿಗಳು ಚೀನಾದಲ್ಲಿ ಹೆ ಚ್ಚಿದರಾಗಲ್ಲ ಜನರ ಮೌಢ್ಯವೂ ದುಷ್ಟಪದ್ಧತಿಗಳೂ ನಿವಾರಣೆ ಯಾಗುತ್ತಾ ಬಂದುವೆನ್ನುವದಕ್ಕೆ ಸಂಶಯವಿಲ್ಲ.

❀❀❀❀

ವಿಲಾಯಿತಿ ಮತ್ತು ಅಮೇರಿಕದ ನಾಲ್ಕು ವರ್ತಮಾನ ಪತ್ರಿ ಕಾ ಮುಖಂಡರುಗಳು ೪ ವರುಷಗಳೊಳಗಾಗಿ ಯಾವನಾದರೂ ಕಾಲುನಡೆಯಲ್ಲೇ ಪ್ರಪಂಚವನ್ನೆಲ್ಲಾ ಸುತ್ತಿಕೊಂಡು ಬರುವುದಾದರೆ (ಅಂದರೆ, ೩೨,೦೦೦ ಮೈಲಿ ದೂರ) ಅಂಥವನಿಗೆ ೧೫,೦೦೦ ಪೌಂ ಡು (ಅಂದರೆ, ೨,೨೫,೦೦೦ ರೂ) ಇನಾಮು ಕೊಡುತ್ತೇನೆಂ ದು ಪ್ರಕಟಿಸಿದರು. ಮಿ ಟನುಫ್ಲೇ ಎಂಬೊಬ್ಬ ಅಮೇರಿಕದವ ನು ಈ ಸಂಗತಿಗೆ ಒಪ್ಪಿ, ತಾನು ಪ್ರತಿಸುತ್ತಿದ್ದ ಒಬ್ಬ ಯುವತಿಯ ನ್ನು ಹಾದಿಯಲ್ಲೇ ಮದುವೆಮಾಡಿಕೊಂಡು, ೧೯೦೧ನೇ ಅಕ್ಟೋಬರಿ ನಲ್ಲಿ ಪ್ರಯಾಣ ಹೊರಟನು. ಇದುವರೆಗೆ ಇವನು ಪತ್ನೀ ಸಮೇ ತನಾಗಿ ಸುತ್ತಿಕೊಂಡು ಬಂದಿರುವ ದೇಶಗಳಾವುವೆಂದರೆ:—ಅಮೇರಿ ಕ, ಕನಡಾ, ವಿಲಾಯಿತಿ, ಫ್ರಾನ್ಸ್, ಬೆಲ್ಜಿಯಂ, ಜರ್ಮನಿ, ಆ ಸ್ಟ್ರಿಯಾ, ಅಲ್ಸಸ್ ಲೋರೇನ್, ಅಲ್ಜೀರಿಯಾ, ಪಲ್ಲಾ, ಈಜ ಪ್ಟ್, ಸಿರಿಯಾ, ಏಷ್ಯಾ ಮತ್ತು ಯೂರೋಪ್ಗಳಲ್ಲಿರುವ ತುರ್ಕಿ, ಇಟಲಿ, ಸಿಸಿಲಿ, ಅರೇಬಿಯಾ. ಈ ದೇಶಗಳಿಂದ ಬೊಂಬಾಯಿಗೆ ಬರಲು ಹಡಗಿನಲ್ಲಿ ಬರಬೇಕೆಂದು ಪ್ರಯತ್ನ ಪಟ್ಟರು. ಅಲ್ಲಿನ ಪ್ಲೇಗ್ ನಿಬಂಧ ನೆಗಳ ದೆಸೆಯಿಂದ ಅದು ಸಾಧ್ಯವಾಗಲಿಲ್ಲ. ಈ ದಂಪತಿಗಳು ಅ ಲ್ಲಿಂದ ವಾಪಸು ಇಟಲಿಗೆ ಹೋಗಿ, ಬ್ರಿಂಡಿಸಿ ನಗರದಲ್ಲಿ ಹಡಗು ಹತ್ತಿ ಬೊಂಬಾಯಿಗೆ ಬಂದು, ಅಲ್ಲಿಂದ ಸಿಲೋನ್ ದ್ವೀಪಕ್ಕೆ ಹೋ ಗಿದಾರೆ. ಅಲ್ಲಿಂದ ಇವರು ಚೀನಾ ಆಸ್ಟ್ರೇಲಿಯಾ ರಾಜ್ಯಗಳನ್ನು ಸುತ್ತಿಕೊಂಡು, ಯಥಾಪ್ರಕಾರ ಅಮೇರಿಕದಲ್ಲಿರುವ ನ್ಯೂಯಾರ್ಕ್ ಪಟ್ಟಣಕ್ಕೆ ಹೋಗುವರು. ಅಲ್ಲಿಗೆ ಇವರ ಪ್ರಯಾಣ ತೀರುವುದು. ಇವರು ಇದುವರೆಗೆ ಸಂಚಾರ ಮಾಡಿದ ಊರುಗಳಲ್ಲಿ ಉಪನ್ಯಾಸಗಳನ್ನು ಮಾಡಿ, ಜನರು ಕೊಡುವ ಸಹಾಯ ದ್ರವ್ಯದಿಂ ದಲೇ ತಮ್ಮ ಜೀವನ, ಪ್ರಯಾಣದ ಖರ್ಚು, ಒಪ್ಪಂದಿಗಳ ವೆಚ್ಚ ಮುಂತಾದವುಗಳನ್ನೆಲ್ಲಾ ಮಾಡಿಕೊಳ್ಳುತ್ತಾ ಬಂದಿರುವರು.

❀❀❀❀

ಕಳೆದ ತಿಂಗಳಲ್ಲಿ ಲಂಡನ್ ನಗರದಲ್ಲಿ ಲಾರ್ಡ್ ಕ್ಲೀನ್ ಟೋಟ್ ಬ್ರಿಮಂತನು ತೀರಿಹೋದನು. ಈತನು ಗತಿಸಿದ ವಿಕ್ಟೋ ರಿಯಾ ಮಹಾರಾಣಿಯವರಿಗೂ ಮುಖ್ಯ ಮಂತ್ರಿಯಾಗಿದ್ದ ಲಾರ್ಡ್ ಬೆ ಕನ್ಸ್‌ಫೀಲ್ಡ್ ಎಂಬುವರಿಗೂ ಬಹು ಪ್ರೇಮಪಾತ್ರನಾಗಿದ್ದನು. ಆ ತನನ್ನು ವಿಶೇಷ ಕೀರ್ತಿಗೆ ಪಾತ್ರನಾಗಮಾಡಿದ್ದ ವಿಷಯದ—ರೌಟ ನ್ ಮನೆಗಳು ಎಂಬ ನಾವ ಧೇಯದಿಂದ ಲೋಕ ವಿಖ್ಯಾತವಾಗಿರು ವ ಮನೆಗಳನ್ನು ಕಟ್ಟಿಸಿಕೊಟ್ಟದ್ದೇ. ಈತನ ಈ ಲೋಕೋಪಕಾರ ವು ಹ್ಯಾಗೆ ಉತ್ಪನ್ನವಾಯಿತೆಂದರೆ—ಲಂಡನ್ ನಗರದಲ್ಲಿ ಅನೇಕ ರು ಬಾಡಿಗೆ ಕೊಟ್ಟರೂ ಅನುಕೂಲವಾದ ಮನೆಗಳಿಲ್ಲದೆ ಕಷ್ಟಪಡು ವುದನ್ನು ನೋಡಿ ಈತನು ಸ್ವಂತ ಖರ್ಚಿನಿಂದ ೩,೩೦,೦೦೦ ರೂಪಾ ಯಿ ಖರ್ಚುಮಾಡಿ ಮಕ್ಕಳಿಗೆ ಸುಖವಾದ ಕ್ಲಬ್ ಇನ್ನೊಂದು ಪಡಗಳ ಗಿಂದ ಒಂದು ಮನೆಯನ್ನು ಕಟ್ಟಿಸಿದನು. ಇದರಲ್ಲಿ ಒಬ್ಬೊಬ್ಬ ಮನುಷ್ಯನಿಗೆ ತಕ್ಕಷ್ಟು ವಿಸ್ತಾರವಾದ ಸಣ್ಣ ಕೊಠಡಿಗಳನ್ನೂ, ಊಟವನ್ನೂ, ಸ್ನಾನಕ್ಕೂ ಇನ್ನೂ ಬೇಕಾದ ಎಲ್ಲಾ ವಿಷಯಗಳಿಗೂ ಅನುಕೂಲವಾದ ಮನೆಗಳನ್ನು ಮಾಡಿಸಿದೆ. ಒಬ್ಬನು ಒಂದು ರಾ ತ್ರಿ ನಿಂತು ಇದಕ್ಕೆ ೬ ಆಣೆಯನ್ನು ಕೊಟ್ಟರೆ ಅವರ ಜೀವಿತ ಕ್ಕೆಂದು ಸಾಲದಿದ್ದರೂ ಆ ಮನೆಯ ಯಾವ ಭಾಗದಲ್ಲಿ ಬೇಕಾದರೂ ಉಪಯೋಗವಾಗಿ ವಿಶ್ರಮಿಸಿಕೊಳ್ಳಬಹುದು. ಇದಲ್ಲದೆ ಇವರು ತ್ತ ಸಿದ್ಧ ಊಟವೂ ಬಹು ಸುಲಭವಾದ ಕ್ರಯಕ್ಕೆ ಸಿಕ್ಕುವದು. ಈ ಪ್ರ ಕಾರ ಕಷ್ಟ ಪಡುವವರಿಗೆ ಅನುಕೂಲವೂ ಆಗುವದಲ್ಲದೆ, ಈತನ ನ್ನು ಈ ವಿಧವಾದ ಕಾರ್ಯಗಳಲ್ಲಿ ಬಂಡವಾಳವಾಗಿ ಹಾಕುವವರಿ ಗೂ ಲಾಭದ ಆದಾಯವು ದೊರೆಯುವದೆಂದು ತಿಳಿಯಬಂತು. ಇಷ್ಟ ಪ್ಪ ಕಷ್ಟದ ವೇಳೆಯಾದರಿಗೆ ಮೊದಲನೇ ವರ್ಷ ಶೇಕಡ ೭ ಆದ ಲಾಭ ಬಂತು. ಈಗ ಇವರ ಕಂಪನಿಯವರು ೭,೫೦,೦೦೦ ಪೌ ಂಡುಗಳ ಬಂಡವಾಳ ಹಾಕಿದ್ದಾರೆ. ಮೇಲ್ಕಂಡ ಪ್ರಕಾರ ಒಂದಾ ಕ್ಕಲ್ಲದಲ್ಲಿ ಮನೆಯನ್ನು ಕಟ್ಟಿ, ಕರ್ನಲ್ ಸರ್ಕಾರದವರ ಮೇಲ್ ನೋಟಕ್ಕೆ ಆರಾಮ ದ ಮನೆಗಳನ್ನು ಅನೇಕವಾಗಿ ಕಟ್ಟಿಸಿ ಬಿಟ್ಟಿದ್ದಾರೆ. ಇದರಲ್ಲಿ ಆ ದೇಶದವರಿಗೂ ತಮ್ಮ ಲಾಭವೂ ಅನುವಾದದರಿಂದ ಈ ವಿಧವಾದ ವಿ ಚಾರಗಳು ಭೂಮಿ ಕಡೆಗೇ ವ್ಯಾಪಿಸಿಕೊಳ್ಳುವದೆಂಬುದಕ್ಕೆ ಸಂಶಯವಿಲ್ಲ.

ಜೆನೋವಾ ಪಟ್ಟಣದಲ್ಲಿ ಇದ್ದಿರು ಇಟಾಲಿಯರ್‌ರು ಮುಚ್ಚಿರುವ ಪಟವು ನಾಲ್ಕು ಜನರನ್ನು ಕೊಂದು, ಐವತ್ತೈದು ಜನರನ್ನು ಗಾಯಪಡಿಸಿದರು. ಕಡೆಗೆ ಪೋಲೀಸಿನವರು ಗುಂಡು ಹೊಡೆದು ಅವರ ಪ್ರಾಣವನ್ನೂ ಕೊಂದು ಕೆಡವಿದರು. ಅವರ ಜೇಬಿನಲ್ಲಿ ಸಿಕ್ಕಿದ ಕೆಲವು ಕಾಗದಗಳನ್ನು ಓದಿ ನೋಡಲಾಗಿ ಅವರು ಹಿಂದೆ ಅನೇಕ ಘೋರ ಕೃತ್ಯಗಳನ್ನು ಮಾಡಿದವರೆಂತಲೂ, ಪೋಲೀಸಿನವರು ಇವರನ್ನು ಹಲವು ದಿನಗಳಿಂದ ಹುಡುಕುತ್ತಿದ್ದರೆಂತಲೂ ತಿಳಿದು ಬಂತು.

## ಹರಾಜು ನೋಟೀಸು.

ಮೈಸೂರು ಪಟ್ಟಣದಲ್ಲಿರುವ ಗವರ್ನಮೆಂಟ್ ಇಂಡಸ್ಟ್ರಿಯಲ್ ಸ್ಕೂಲ್ ವಿದ್ಯಾರ್ಥಿಗಳಿಂದ ತಯಾರಾಗಿ ಸಲ್ಪಟ್ಟಿರುವ ಎಲ್ಲಾ ತರದ ಸಾಮಾನುಗಳೂ— ಅಂದರೆ, ಪ್ರಯಾಣಕ್ಕೆ ಅನುಕೂಲಿಸುವ ತರಹಾವಾರು ಮರದ ಸಾಮಾನುಗಳು, ಚಿತ್ರವಾಗಿ ನೇಯಲ್ಪಟ್ಟ ಕಾಲ್ಚೀಲಗಳು, ಪೆಟ್ಟಿಗೆಗಳು, ತಟ್ಟೆಗಳು, ಮೂಲೆಗಳಲ್ಲಿ ನಿಲ್ಲಿಸುವ ಮರದ ಸಾಮಾನುಗಳು, ಮಣ್ಣಿನ ಪಾತ್ರೆಗಳು, ಇನ್ನೂ ಅನೇಕ ತರದ ನಾನಾ ಉಪಯೋಗಕ್ಕೆ ಬರುವಂಥಾ ಸಾಮಾನುಗಳು ಪಬ್ಲಿಕ್ಕಾಗಿ ಹರಾಜು ಮಾಡಲ್ಪಡುತ್ತವೆ.

ಹರಾಜು ಮಾಡುವವರು:—ಮೆ॥ ಫಿಷರ್‌ರಾಬರ್ಟ್ಸನ್ ಸಹೋದರರು.

ಹರಾಜು ತಾರೀಖು:—೧೯೦೩ನೇ ಡಿಸೆಂಬರ್ ೧೩ನೇ ತಾರೀಖು ಭಾನುವಾರ ಬೆಳಗ್ಗೆ ೮ ಗಂಟೆಗೆ ಪ್ರಾರಂಭ.

ಹರಾಜಾಗುವ ಸ್ಥಳ: ಮೈಸೂರಿನಲ್ಲಿರುವ ಸರ್ಕಾರಿ ಇಂಡಸ್ಟ್ರಿಯಲ್ ಸ್ಕೂಲಿನ ಮೈದಾನಿನಲ್ಲಿ.

ಬೇಕಾದ ವ್ಯಾಪಾರದ ಕಾಲದಲ್ಲೇ ಹಣವನ್ನು ಸಲ್ಲಿಸತಕ್ಕ ದ್ದ ಕ್ಕದ್ದೇಕು.

## ಜ್ವರಹರಿ.



ಇದು ಸಾಧಾರಣ ಜ್ವರ, ಸನ್ನಿಜ್ವರ, ಮಲೇರಿಯಾ ಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಾನ್ಯರಾದ ಅಸಿಸ್ಟೆಂಟ್ ಮೆಡಿಕಲ್ ಆಫೀಸರ್ ಎಸ್. ವಿ. ವೆಂಕಟಪತಿ ಅಯ್ಯರವರು—ನಿಮ್ಮ ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ಜ್ವರಹರಿ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಇದನ್ನೇ ಬಯಸಿರುವುದರಿಂದ ದಯವಿಟ್ಟು ಇನ್ನೊಂದು ೧೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿರುತ್ತಾರೆ.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬರಲಾಗುವದು.

### ಹಿಮಾಂಶುಪ್ರಭಾಕರ.

ಈ ಔಷಧವು ಅಜೀರ್ಣ, ಬೇಧಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾ ತರದ ಹೊಟ್ಟೆನೋವುಗಳು—ಮುಂತಾದ್ದೆಲ್ಲಾ ಮಾತ್ರದಷ್ಟಾಗಿ ವಾಸಿಮಾಡಿ, ಶೀಘ್ರ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಹಿಂದಾಗುವ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸತಕ್ಕದ್ದು. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕವರಟ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ನಿಮ್ಮ ಹಿಮಾಂಶುಪ್ರಭಾಕರವನ್ನು ನಾನೂ ನನ್ನ ಕಂಪೌಂಡರೂ ಮೈಸೂರಿನ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ, ಬೇಧಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿರುತ್ತಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಹೊಸ್ತು ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಪಿಸ್ಟ್ರಿಯಾಪರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ನೆಕಂತ್ ಬೀಟ್ ಲೈನ್, ಮದರಾಸ್.

### ಇದೊಂದು ಹೊಸ ಪುಸ್ತಕ ಬೇಗನೋಡಿ.

"ಸ್ವಪ್ರಯೋಜಕ ಫಲದೀಪಿಕೆ" ಎಂಬ ಈ ಪುಸ್ತಕದ ಪ್ರಸಿದ್ಧವಾದದ್ದೇನು. ಮೈಸೂರು ಸಂಸ್ಥಾನದಲ್ಲಿ ಮಹಾ ಪ್ರಸಿದ್ಧರಾಗಿಯೂ, ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಸೀನಿಯರ್ ಕರ್ಣಾಟಕ ಪಂಡಿತರಾಗಿಯೂ ಇರುವ ಪಿ. ಆರ್. ಕರಿಬಸವಶಾಸ್ತ್ರಿಗಳು ಈ ಪುಸ್ತಕದ ವಿಷಯದಲ್ಲಿ ಕೊಟ್ಟಿರುವ ಅಭಿಪ್ರಾಯವನ್ನು ಸ್ವಲ್ಪ ನೋಡಿ. "ಸ್ವಪ್ರಯೋಜಕ ಫಲದೀಪಿಕೆಯೆಂಬ ಗ್ರಂಥವನ್ನು ನಾನು ಆದ್ಯಂತವಾಗಿ ಓದಿದೆನು. ಅದರಲ್ಲಿ ಪ್ರತಿ ಮನುಷ್ಯನು ತನಗಿರುವ ಬುದ್ಧಿಗೆ ಅನುಸಾರವಾಗಿ ಸ್ವಂತ ಪ್ರಯೋಜನವಾದ ಕಾರ್ಯದಲ್ಲಿ ಪ್ರವರ್ತಿಸಿ ಬಿಡದೆ ಪ್ರಯತ್ನ ಮಾಡುವನಾದರೆ ತಕ್ಕ ಫಲವು ಸಿದ್ಧಿಸುವದೆಂಬ ಅಂಶಗಳು ಪ್ರಸಿದ್ಧೋದಾಹರಣೆಗಳಿಂದ ಸಮರ್ಥಿಸಲ್ಪಟ್ಟಿರುವವು. ಕನ್ನಡದಲ್ಲಿ ಈ ವಿಷಯವಾಗಿ ಯಾವದೊಂದು ಪುಸ್ತಕವೂ ಇದುವರೆಗೆ ಯಾರಿಂದಲೂ ರಚಿಸಲ್ಪಟ್ಟಿಲ್ಲ. ಈ ಗ್ರಂಥದಲ್ಲಿ ನಿರೂಪಿಸಲ್ಪಟ್ಟಿರುವ ವಿಷಯಗಳು ಓದುವವರಿಗೆ ಬಹು ಉಪಯೋಗಿಗಳಾಗಿಯೂ, ಲಲಿತವಾದ ಭಾಷಾ ಸರಣಿಯುಳ್ಳವುಗಳಾಗಿಯೂ, ವ್ಯಾಕರಣ ಶುದ್ಧಗಳಾಗಿಯೂ ಇರುವುದರಿಂದ ಈ ಗ್ರಂಥವು ಲೋಯರ್ ಸೆಕೆಂಡರಿ ಕ್ಲಾಸ್ ವಿದ್ಯಾರ್ಥಿಗಳು ಓದುವದಕ್ಕೆ ಯೋಗ್ಯವಾಗಿದೆ ಎಂದು ನಂಬುತ್ತೇನೆ."

೭—೧೦—೧೯೦೩. ಪಿ. ಆರ್. ಕರಿಬಸವಶಾಸ್ತ್ರಿ.

ಮೈಸೂರು.

ಈ ಪುಸ್ತಕವನ್ನು ಗ್ರಂಥಕರ್ತರಾದ ಮ॥ ರಾ॥ ಕೃ. ವೆಂಕಟಸುಬ್ಬಯ್ಯನವರು ಬರೆದಿದ್ದಾರೆ. ಇದರ ಕ್ರಯ ನಾಲ್ಕು ಆಣೆಗಳು ವಿ. ಪಿ. ಪಿ. ಯಲ್ಲಿ ತರಿಸಿಕೊಂಡರೆ ಆರು ಆಣೆಗಳಾಗುವವು. ಜಾಗ್ರತೆ ನೋಡಿ.

ಮ್ಯಾನೇಜರ್,

ಪಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

### ಮೋಹನ ತೈಲ.

ತಕ್ಷಣ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ವಾತ, ಉಬ್ಬಸ, ರಾಜಯಕ್ಷ್ಮ, ಆಸ್ಪತ್ರೆ ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಜೈಲು, ಮುಂತಾದ ಸ್ಥಳಗಳಲ್ಲೆಲ್ಲಾ ಉಪಯೋಗಿಸುತ್ತಾರೆ. ಇದಕ್ಕೆ ಸಮಾನವಾದ ಔಷಧವು ಮತ್ಯಾವದೂ ಇಲ್ಲವೆಂಬುದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಬೇನೆಗಳಿಗೆ ಮಹತ್ತಾಗಿ ಸಿದ್ಧವಾದ ಔಷಧ, ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ಗುಣವಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಕೀಲುವಾಯು, ವಾಯುವ್ಯಾಧಿ, ಉಬ್ಬಸ, ಹುಣ್ಣುಗಳು, ಸರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮೂಲವ್ಯಾಧಿ ನೋವು, ಗಾಯಗಳು, ಗಜ್ಜುಗಳು, ರಣಗಳು, ಹುಳುಕಡ್ಡಿ, ನೊಣ ಮತ್ತು ಚೇಳು ಕಚ್ಚಿದ್ದು, ಬಿದ್ದಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ನೊಣ್ಣೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬರುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ಪಟ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬರುತ್ತೆ.

### ಹೋಮಿಯೋಪತಿಯ ಯುಕ್ತಿಪ್ರೀಜೇಷನ್.

ಈ ತೈಲವೆ ಚಳೀ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಪತಿಯ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೊಂದು ಗುಣಗಳುಳ್ಳ ಕೊಂಚ ಭಾಗವಿರುತ್ತೆ. ಇದನ್ನು ಚರ್ಮದ ಮೇಲೆ ಬಹು ಬೇಗನೆ ಸೇರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತಲಾ ೮ ಆಣೆಗೂ, ೧ ರೂ. ಗೂ ಹಿಂದಿನಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಪ್ರಾಂತ್ಯಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರವೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಪತಿಯ ಕಂಪನಿ, ೨೭ ನೆಕಂತ್ ಬೀಟ್ ಲೈನ್, ಮದರಾಸ್.

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೦—೧೧—೧೯೦೩ ರಿಂದ ೨೭—೧೧—೧೯೦೩ ರ ವರೆಗೆ.

| ಸ್ಥಳ. | ಪ್ಲೇಗ್ | | ಹಿಂದಿನವಾರ ಸಂಖ್ಯೆಗಳು | |
|---|---|---|---|---|
| | ತಗಲಿದ್ದು. | ಸತ್ತದ್ದು. | | |
| ಬೆಂಗಳೂರು ಪಟ್ಟಣ | 86 | 67 | 102 | 67 |
| ಮೈಸೂರು ,, | 19 | 94 | 84 | 86 |
| ಬೆಂಗಳೂರು ಡಿಸ್ಟ್ರಿಕ್ಟ್ | 114 | 94 | 124 | 96 |
| ಮೈಸೂರು ,, | 63 | 61 | 72 | 55 |
| ಕೋಲಾರ್ ,, | 85 | 54 | 41 | 21 |
| ಕೋಲಾರ್ ಚಿನ್ನದ ಗಣಿಗಳು | 20 | 10 | 23 | 22 |
| ತುಮಕೂರು ಡಿಸ್ಟ್ರಿಕ್ಟ್ | 33 | 21 | 65 | 44 |
| ಹಾಸನ ,, | 23 | 17 | 20 | 14 |
| ಚಿತ್ರದುರ್ಗ ,, | 15 | 15 | 43 | 27 |
| ಕಡೂರ್ ,, | 14 | 31 | 85 | 25 |
| ಶಿವಮೊಗ್ಗ ,, | 17 | 37 | 65 | 51 |
| ಒಟ್ಟು. | 498 | 514 | 690 | 535 |

ಕಾರ್ತೀಕ ಬಹುಳ ೧೮೨೫ನೇ ಶೋಭಕೃತ್ನಾಮ ಸಂವತ್ಸರ ಮಾರ್ಗಶಿರ ಬಹುಳ ಷಷ್ಠಿ ಗುರುವಾರದಿಂದ ಮಾರ್ಗಶಿರ ಬಹುಳ ತ್ರಯೋದಶೀ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಡಿಸೆಂಬರ್.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ವೃಶ್ಚಿಕ ಮಾಸ ತೇದಿ |
|---|---|---|---|---|---|---|
| 10 | ಗುರು | ಷಷ್ಠಿ | 11 55 | ಮ | 40 0 | 25 |
| 11 | ಶುಕ್ರ * | ಸಪ್ತಮಿ | 6 10 | ಪುಬ್ಬ | 37 16 | 26 |
| 12 | ಶನಿವಾರ | ಅಷ್ಟಮಿ | 0 16 | ಉತ್ತರ | 55 32 | 27 |
| 13 | ಭಾನು | ದಶಮಿ | 52 2 | ಹಸ್ತ | 31 8 | 28 |
| 14 | ಚಂದ್ರ † | ಏಕಾದಶಿ | 48 18 | ಚಿತ್ತ | 29 16 | 29 |
| 15 | ಕುಜ | ದ್ವಾದಶಿ | 46 21 | ಸ್ವಾತಿ | 28 2 | 1 |
| 16 | ಬುಧ ‡ | ತ್ರಯೋ | 45 26 | ವಿ | 25 6 | 2 |

* ಕಾಲಭೈರವಾಷ್ಟಮಿ. † ಸರ್ವತ್ರ ಏಕಾದಶಿ. ‡ ಸಮಸ್ತ ಧನ್ಯಾರಂಭ, ಪ್ರದೋಷ, ಧನುರ್ಮಾಸಪೂಜಾರಂಭ.

## ಪೇಟೆ ಧಾರಣೆ.

| ದಿನಸು. | ಮೈಸೂರು. | ಬೆಂಗಳೂರು. |
|---|---|---|
| ಕಿಡ್ಡೀ ಅಕ್ಕಿ ಪಲ್ಲ ೧ಕ್ಕೆ ರೂ. | ೧೦–೪–೦ | [illegible] |
| ಕಂಬಳಿ ಅಕ್ಕಿ ಅವಲ್ | [illegible] | [illegible] |
| ,, ಮಾಯಂ | [illegible] | [illegible] |
| ಬಾಸುಮತಿ ಅಕ್ಕಿ | [illegible] | [illegible] |
| ಸಣ್ಣಕ್ಕಿ ಅವಲ್ | [illegible] | [illegible] |
| ,, ಮಾಯಂ | [illegible] | [illegible] |
| ತೊಗರೀ ಬೇಳೆ ಪಲ್ಲ ೧ಕ್ಕೆ | [illegible] | [illegible] |
| ,, ಮಾಯಂ | [illegible] | [illegible] |
| [illegible] ಪಲ್ಲ ೧ಕ್ಕೆ | [illegible] | [illegible] |
| [illegible] | [illegible] | [illegible] |
| ಜೋಳ | [illegible] | [illegible] |
| [illegible] ಪಲ್ಲ ೧ಕ್ಕೆ | [illegible] | [illegible] |
| ಬಿಳೀ ಅವರೆ | [illegible] | [illegible] |
| ಹೆಸರು | [illegible] | [illegible] |
| ಉದ್ದು | [illegible] | [illegible] |
| ಕಡಲೆ | [illegible] | [illegible] |
| ಎಳ್ಳು | [illegible] | [illegible] |
| ಹುರುಳಿ | [illegible] | [illegible] |
| ಕರಡು ೧೨೮ ಸೇರಿಗೆ | [illegible] | [illegible] |
| ಹೊಗೆಸೊಪ್ಪು ಮಣ ೧ಕ್ಕೆ | [illegible] | [illegible] |
| ಮೆಣಸಿನಕಾಯಿ | [illegible] | [illegible] |
| ,, ಮಾಯಂ | [illegible] | [illegible] |
| ಬೆಲ್ಲ ದೊಡ್ಡ ಅಚ್ಚು | [illegible] | [illegible] |
| ಒಳ್ಳೆಣ್ಣೆ ಮಣ ೧ಕ್ಕೆ | [illegible] | [illegible] |
| ಹರಳೆಣ್ಣೆ ,, | [illegible] | [illegible] |
| ಕೊಬ್ಬರಿ ಪಲ್ಲ ೧ಕ್ಕೆ | [illegible] | [illegible] |
| ಉಪ್ಪು ,, | [illegible] | [illegible] |
| ಹುಣಸೇ ಹಣ್ಣು | [illegible] | [illegible] |
| ,, ಕಳೇದು | [illegible] | [illegible] |
| ತುಪ್ಪ | [illegible] | [illegible] |
| ಸೀಮೆಯೆಣ್ಣೆ ಟಿನ್ನು ೧ಕ್ಕೆ | [illegible] | [illegible] |
| ತೆಂಗಿನಕಾಯಿ ೧೦೦ ಕ್ಕೆ | [illegible] | [illegible] |
| ಬೆಳ್ಳುಳ್ಳಿ ಮಣ ೧ಕ್ಕೆ | [illegible] | [illegible] |
| ಬೆಂಡೆಕಾಯಿ ಮಣ ೧ಕ್ಕೆ | [illegible] | [illegible] |
| ಚಿನ್ನ (ಪವನ್) ಕಂಠ | [illegible] | [illegible] |
| ,, ,, ಹಸಿಮಿ | [illegible] | [illegible] |
| ,, ,, ಗಟ್ಟಿ ತೊಲ ೧ಕ್ಕೆ | [illegible] | [illegible] |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ | [illegible] | [illegible] |

Printed and Published by the Rev. E. W. Thompson, M.A., the Proprietor and Manager, Wesleyan Mission Press, Mysore. 10/12/1903.

# ವೃತ್ತಾಂತ ಪತ್ರಿಕೆ.

REGISTERED M. 20

[illegible] ——o—— [illegible]

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

[illegible]

## ಪಂಚಾಂಗ [illegible]

[illegible]

ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪ್ರೋ,

ಮೈಸೂರು

## ಸ್ಟಾಂಡರ್ಡ್

## ಲೈಫ್ ಅಶ್ಯೂರೆನ್ಸ್ ಕಂಪೆನಿ

22

[illegible]

## [illegible]

16

[illegible]

## WESLEYAN MISSION PRESS, MYSORE.

ಮೈಸೂರು ವೆಸ್ಲೀಯನ್ ಮಿಷನ್ ಪ್ರೆಸ್ಸಿನಲ್ಲಿ ಪುಸ್ತಕ, ಚಿತ್ರ, ಪ್ರಿಂಟಿಂಗ್ ಮುಂತಾದ ಸಮಸ್ತ ಪ್ರಿಂಟಿಂಗ್ ಕೆಲಸಗಳನ್ನು [illegible]

[illegible]

ಮೈಸೂರು

## ROBINSON'S

## PATENT BARLEY.

## ರಾಬಿನ್‌ಸನ್‌ಯವರ

## ಬಾರ್ಲಿ ಹಿಟ್ಟು.

[illegible]

## [illegible]

[illegible]




[illegible]

# ಬೇಕಾಗಿದೆ!

3

ಒಳ್ಳೇ ಸಮಯ!

ಮೈಸೂರಿನಲ್ಲಿರುವ ಉತ್ತಮ ಕಾರ್ಯಾಲಯ ವಿಚಾರವನ್ನು ನೋಡಿಕೊಳ್ಳುವುದಕ್ಕೆ "ಓವರ್ಸಿಯರ್" ಬೇಕಾಗಿದೆ ೫೦೦ ರೂ. ಕಡಿಮೆ ಇಲ್ಲದ ಸರಿಯಾದ ಜವಾಬ್ದಾರಿಯನ್ನು ಅಧಾರ ಮಾಡಿದರೆ ಕಾಗದದಲ್ಲಿ ತಿಳಿಸಬೇಕು. ಇಷ್ಟವಿದ್ದವರು

Miss Parsons, Mysore City

ಎಂಬ ವಿಳಾಸಕ್ಕೆ ಬರೆಯಬಹುದು.


## ಸಾಲಕ್ಕೆ ಹೊಣೆಗಾರನಲ್ಲ.—ನೋಟೀಸ್.

ಇದರಿಂದ ಸಕಲರಿಗೂ ತಿಳಿಸುವುದೇನೆಂದರೆ ವೀರಣ್ಣಗೌಡರ ಮಗನೂ ನನ್ನ ಸೋದರಳಿಯನೂ ಆದ ಸಿ. ಬಸವೇಗೌಡನು ಅಧಿಕಾರಗಳಿಲ್ಲದೇ ಗುಪ್ತವಾಗಿ ಸಾಲಗಳನ್ನು ಮಾಡುತ್ತಿರುವುದಾಗಿ ತಿಳಿದು ಬಂದಿರುವುದರಿಂದ ಆತನ ತಮ್ಮ ವೀರಣ್ಣಗೌಡನ ಪೋಷಕ ಗಾರ್ಡಿಯನ್ ಆಗಿರುವ ನಾನು ತಿಳಿಸುವುದೇನೆಂದರೆ—ಅಂಥ ಲೇವಾದೇವಿಗಳನ್ನಾಗಲಿ ನನ್ನ ಸಮ್ಮತಿಯಿಲ್ಲದ ಮತ್ಯಾವ ಲೇವಾದೇವಿಗಳನ್ನಾಗಲಿ ಬಂಧಕವಾಗಿ ಒಪ್ಪುವದಿಲ್ಲ. ಮತ್ತು ಅವುಗಳಿಗೆ ನಾನು ಜವಾಬ್ದಾರನೂ ಅಲ್ಲವೆಂದು ಪ್ರಸಿದ್ಧಪಡಿಸುತ್ತೇನೆ. ಅಸ್ತಿಗಳು ವಿಭಾಗವಾಗಿರುವುದಿಲ್ಲ.

| | |
|---|---|
| ಚಿಕ್ಕಮಗಳೂರು, ೯—೧೨—೧೯೦೩ | ಸಿ. ಬಿ. ಹಲಗ್ಗೆಯಗೌಡ ಲೇಟ್ ಅಸಿಸ್ಟೆಂಟ್ ಇಂಜನಿಯರ್, |

## ನಮ್ಮ ಚಂದಾದಾರರಿಗೆ ನೋಟೀಸ್.

"ವೃತ್ತಾಂತ ಪತ್ರಿಕೆ" ಯ ಚಂದಾ ಬಾಕಿ ಇರುವವರು ಚಂದಾ ಹಣವನ್ನು ಬೇಗ ಕಳುಹಿಸಿಕೊಡಬೇಕು. ಮತ್ತು ಚಂದಾ ಹಣವನ್ನು ಮುಂಗಡವಾಗಿ ಕೊಡಬೇಕು. ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲ.

ಮ್ಯಾನೇಜರ್,

ಮೈಸೂರು. "ವೃತ್ತಾಂತ ಪತ್ರಿಕೆ" ಆಫೀಸ್.

# ವೃತ್ತಾಂತ ಪತ್ರಿಕೆ.

ಸನ್ ೧೯೦೩ ನೇ ಇಸವಿ ಡಿಸೆಂಬರ್ ತಾ ೧೭ ನೇ ಗುರುವಾರ.

## ಇಂಗ್ಲಿಷ್ ವಿದ್ಯಾಭ್ಯಾಸವು.

ಮೈಸೂರು ಸಂಸ್ಥಾನದಲ್ಲಿ ಕನ್ನಡ ಭಾಷೆಯಲ್ಲಿ ಎರಡನೇ ಸ್ಟಾಂಡರ್ಡ್ ಪರೀಕ್ಷೆಯನ್ನು ಕೊಟ್ಟಹೊರತು ಯಾವ ಹುಡುಗನೂ ಇಂಗ್ಲಿಷ್ ವಿದ್ಯೆಯನ್ನು ಆರಂಭಿಸುವುದಕ್ಕೆ ಸರ್ಕಾರದವರಿಂದ ಸಹಾಯವನ್ನು ಪಡೆಯುವ ಯಾವ ಸ್ಕೂಲಿನವರಾದರೂ ಅವಕಾಶಕೊಡಬಾರದೆಂಬುದಾಗಿ ನಮ್ಮ ವಿದ್ಯಾಭ್ಯಾಸದ ಇಲಾಖೆಯವರು ವಿಧಿಸಿರುವ ಕಟ್ಟಳೆಯ ವಿಷಯದಲ್ಲಿ ನಮ್ಮ ಸಂಸ್ಥಾನದ ಪತ್ರಿಕಾಕಾರರು ಚರ್ಚಿಸಲು ಉಪಕ್ರಮಿಸಿದ್ದಾರೆ. ಈ ಕಟ್ಟಳೆಯಾದರೋ ಹೊಸದಾಗಿ ವಿಧಿಸಲ್ಪಟ್ಟುದಲ್ಲ; ಇದು ಹತ್ತು ವರ್ಷಗಳಿಂದಲೂ ಈ ಸಂಸ್ಥಾನದಲ್ಲಿ ಜಾರಿಯಲ್ಲಿದೆ ಆದರೂ ಎಲ್ಲಾ ಕಡೆಗಳಲ್ಲೂ ಈ ಕಟ್ಟಳೆಯನ್ನು ಸ್ಕೂಲುಗಳವರು ಆಚರಣೆಗೆ ತಾರದೆ ಇರುವುದರಿಂದ ಇದನ್ನು ಸಕಲರೂ ಪಾಲಿಸುವಂತೆ ಸರ್ಕಾರದವರು ಪ್ರಯತ್ನಿಸಿರುವ ಕಾರಣ ಈ ಚರ್ಚೆಯು ಹುಟ್ಟಿರುತ್ತದೆ

ಈ ಕಟ್ಟಳೆಯು ಹುಟ್ಟುವುದಕ್ಕೆ ಸರ್ಕಾರದವರ ಯಾವ ಉದ್ದೇಶವು ಕಾರಣವಾಯಿತೆಂಬುದನ್ನು ಸಕಲರೂ ತಿಳಿದುಕೊಳ್ಳುವುದು ಅವಶ್ಯವೇ ಸರಿ. ಸರ್ಕಾರದವರ ಉದ್ದೇಶಗಳಲ್ಲೊಂದು ಯಾವುದೆಂದರೆ—ದೇಶಭಾಷೆಯನ್ನು ವಿದ್ಯಾರ್ಥಿಗಳು ತಿರಸ್ಕರಿಸಬಾರದೆಂಬುದೇ. ತನ್ನ ತನ್ನ ಮಾತೃಭಾಷೆಯ ಮೂಲಕ ವಿದ್ಯೆಯನ್ನಾರ್ಜಿಸುವುದಕ್ಕೆ ಪ್ರಯತ್ನಿಸುವುದು ಪ್ರತಿಯೊಬ್ಬ ಮನುಷ್ಯನಿಗೂ ಸ್ವಭಾವವಾಗಿದೆ. ಅನ್ಯಭಾಷೆಯನ್ನು ಕಲಿಯಲುಪಕ್ರಮಿಸುವುದಕ್ಕೆ ಮುಂಚಿತವಾಗಿಯೇ ತನ್ನ ಸ್ವಭಾಷೆಯಲ್ಲಿ ವ್ಯಾಕರಣವನ್ನು ಚೆನ್ನಾಗಿ ಕಲಿತು ಮಾತೃಭಾಷೆಯನ್ನು ತಕ್ಕಮಟ್ಟಿಗೆ ತಿಳಿದಿರುವುದು ಪ್ರತಿಯೊಬ್ಬ ವಿದ್ಯಾರ್ಥಿಗೂ ಅವಶ್ಯವೆಂಬುದನ್ನು ಯಾರೂ ಆಕ್ಷೇಪಿಸಲಾರರು. ದೇಶ ಭಾಷೆಗಳನ್ನು ಅಲಕ್ಷ್ಯಮಾಡುವ ವಿಷಯದಲ್ಲಿ ನಮ್ಮ ರಾಜಧಾನಿಯ ಒಬ್ಬ ಸೊಬಗು ಪಂಡಿತರು ಶ್ಲಾಘನೀಯವಾದ ಒಂದು ಉಪನ್ಯಾಸವನ್ನು ಮಾಡಿದರು. ಈ ಕಾಲದ ಹುಡುಗರು ಸ್ವಭಾಷೆಯನ್ನು ಚೆನ್ನಾಗಿ ಮಾತಾಡುವುದಕ್ಕಾದರೂ ಅದರಲ್ಲಿ ಕಟ್ಟಗೆ ಬರೆಯುವದಕ್ಕಾದರೂ ಬಾರದವರಾಗಿ ಬೆಳೆಯುತ್ತಿರುವುದು ವಿಷಾದಕರವೆಂದೂ, ಈ ಕಾಲದಲ್ಲಿ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕೆ ಇಂಗ್ಲಿಷನ್ನೇ ಅಧಿಕವಾಗಿ ಉಪಯೋಗಿಸಿ ದೇಶ ಭಾಷೆಯನ್ನು ಅಲಕ್ಷ್ಯ ಮಾಡಿರುವುದರಿಂದ ವಿದ್ಯಾಭ್ಯಾಸಕ್ಕೆ ತಕ್ಕ ಆಸ್ತಿವಾರವಿಲ್ಲದೆ ಹಾನಿಕರವಾಗಿದೆಯೆಂದೂ ಉಪನ್ಯಾಸಕರು ಹೇಳಿದರು. ಇವರು ತಿಳಿಸಿದ ಅಭಿಪ್ರಾಯವು ಸರ್ವಸಮ್ಮತವಾದುದೆಂದು ನಾವು ಹೇಳುವುದರಲ್ಲಿ ಆಕ್ಷೇಪವಿಲ್ಲ. ಹೀಗಿರಲಾಗಿ ಈಗ ಸಂಸ್ಥಾನದಲ್ಲಿ ರೂಢಿಯಾಗಿರುವ ಕಟ್ಟಳೆಯನ್ನು ಸ್ಕೂಲುಗಳಲ್ಲಿ ಆಚರಣೆಗೆ ತಂದಪಕ್ಷದಲ್ಲಿ, ಯಾವ ವಿದ್ಯಾರ್ಥಿಯಾದರೂ ಸ್ವಭಾಷೆಯಲ್ಲಿ ತಕ್ಕಮಟ್ಟಿಗೆ ಅಭ್ಯಾಸಿತನಾಗುವ ಪರಿಯಂತರ ಅನ್ಯಭಾಷೆಯಾದ ಇಂಗ್ಲಿಷನ್ನು ಕಲಿಯಲುಪಕ್ರಮಿಸುವುದಕ್ಕೆ ಅವಕಾಶವೇ ದೊರೆಯಲಾರದು ಆದಕಾರಣ ದೇಶಾಭಿಮಾನಿಗಳಾದವರೆಲ್ಲರೂ ಸರ್ಕಾರದವರ ಉದ್ದೇಶವನ್ನು ಅನುಮೋದಿಸಿ, ಈ ಕಟ್ಟಳೆಯನ್ನು ಆಚರಣೆಗೆ ತರುವ ಭಾಗದಲ್ಲಿ ಸಹಾಯಮಾಡತಕ್ಕವರಾಗುವರೆಂದು ನಂಬಿದ್ದೇವೆ

ದೇಶಭಾಷೆಯನ್ನೇ ಮೊದಲು ಅಭ್ಯಾಸಮಾಡಿಸಬೇಕೆಂಬುದರಲ್ಲಿ ಸರ್ಕಾರದವರ ಮತ್ತೊಂದು ಉದ್ದೇಶವೇನೆಂದರೆ—ಎಳೇ ವಯಸ್ಸಿನವರಾದ ವಿದ್ಯಾರ್ಥಿಗಳ ಬೋಧಶಕ್ತಿಗೆ ಮಿಸರಿದ ಕಷ್ಟವನ್ನು ಕೊಡದಂತೆ ಮಾಡಬೇಕೆಂಬುದು ಈಗ ಹುಡುಗರೋ ಹುಡುಗಿಯರೂ ಆರೇಳು ವರ್ಷದವರಾಗಿರುವಾಗಲೆ ಸ್ಕೂಲಿಗೆ ಹೋಗುತ್ತಾರೆ ಇಷ್ಟು ಚಿಕ್ಕ ವಯಸ್ಸಿನವರು ಶಕ್ತಿಗೆ ಮಿರಿದಷ್ಟು ಪಾಠಗಳನ್ನು ಕಲಿಯುವಂತೆ ನಿರ್ಬಂಧಪಡಿಸುವುದರಿಂದ ಅವರಿಗೆ ಉತ್ತರೋತ್ತರ ಹಾನಿಯೇ ಹೊರತು ಸುಖವಿಲ್ಲ ಸ್ವಭಾಷೆಯಲ್ಲಿ ಸಾಧಾರಣವಾಗಿ ಓದು ಬರಹವನ್ನೂ, ಸ್ವಲ್ಪ ಲೆಕ್ಕ ಭೂಗೋಳ ಇತ್ಯಾದಿಗಳನ್ನೂ ಮಾತ್ರ ಕಲಿತ ಮೇಲೆ ಅನ್ಯಭಾಷೆಯನ್ನೂ ಕಲಿಯಬೇಕೆಂಬುದು ತಂದೆತಾಯಿಗಳ ಅಪೇಕ್ಷೆಯಾಗಿದ್ದರೆ ಇಂಗ್ಲಿಷನ್ನೋ ಬೇರೆ ಯಾವ ಭಾಷೆಯನ್ನೋ ಕಲಿಯಲುಪಕ್ರಮಿಸಬಹುದು. ಇದರಿಂದ ಮಕ್ಕಳಿಗೆ ಒಳ್ಳೇದಾಗುವುದು.

ಈ ಕಟ್ಟಳೆಯನ್ನು ಆಚರಣೆಗೆ ತರುವುದರಿಂದುಂಟಾಗುವ ಮೂರನೇ ಫಲವೇನೆಂದರೆ—ಸ್ವಭಾಷೆಯಲ್ಲಿ ಮತ್ತು ಅನ್ಯಭಾಷೆಯಲ್ಲಿ ಜ್ಞಾನವು ವಿದ್ಯಾರ್ಥಿಗಳಿಗೆ ಉತ್ತಮವಾಗಿಯೂ ಮೊದಲಿಗಿಂತ ತೀವ್ರವಾಗಿಯೂ ಲಭಿಸುವುದು. ಆದರೆ ಈ ಕಟ್ಟಳೆಯು ದೆಸೆಯಿಂದ ವಿದ್ಯಾರ್ಥಿಗಳು ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಕೊಡುವುದರೊಳಗೆ ಬಹು ಕಾಲವು ಅನವಶ್ಯಕವಾಗಿ ಕಳೆದುಹೋಗುವದೆಂತಲೂ ಲೋವರ್ ಸೆಕೆಂಡರಿ ಪರೀಕ್ಷೆಯನ್ನು ಕೊಡುವುದರೊಳಗೇ ಹುಡುಗರಿಗೆ ಪ್ರಾಯವು ಮೀರಿಹೋಗುವುದೆಂತಲೂ ಕೆಲವರು ಆಕ್ಷೇಪಿಸುವರು. ಇದಕ್ಕೆ ನಾವು ಹೇಳುವುದೇನೆಂದರೆ—ಒಂದೇ ಸಮಯದಲ್ಲಿ ಒಂದು ಕೆಲಸವನ್ನು ಮಾಡಿದರೆ ತೀವ್ರವಾಗಿ ನಡೆಯುವುದೇ ಹೊರತು, ಒಂದೇ ಸಮಯದಲ್ಲಿ ಎರಡು ಕೆಲಸಗಳಲ್ಲಿ ಕೈಹಚ್ಚಿದರೆ ಎಂದಿಗೂ ಆಗಲಾರದು. ಇದರ ವಿಷಯದಲ್ಲಿ ಒಬ್ಬ ಪ್ರೌಢ ಮನುಷ್ಯರು ಕೊಟ್ಟಿರುವ ಅನುಭವಪೂರ್ವಕವಾದ ಅಭಿಪ್ರಾಯವು ಗ್ರಹಿಸತಕ್ಕದ್ದಾಗಿದೆ ಅವರು ಏಳು ವರ್ಷ ವಯಸ್ಸಿನಲ್ಲೇ ಇಂಗ್ಲಿಷ್ ಮತ್ತು ದೇಶಭಾಷೆಗಳನ್ನು ಅಭ್ಯಾಸ ಮಾಡಲುಪಕ್ರಮಿಸಿದುದರಿಂದ, ದೇಶಭಾಷೆಯಲ್ಲಿ ಬಹುಕಾಲದ ವರೆಗೂ ಹಿಂದೆಬೀಳಬೇಕಾಗಿತ್ತೆಂತಲೂ, ಮೊದಲು ದೇಶಭಾಷೆಯನ್ನು ಕಲಿತು ತರುವಾಯ ಇಂಗ್ಲಿಷನ್ನು ಉಪಕ್ರಮಿಸಿದ್ದರೆ ತೀವ್ರವಾಗಿ ಕಲಿಯಬಹುದಾಗಿತ್ತೆಂತಲೂ ಹೇಳುತ್ತಾರೆ. ಈಗ ರೂಢಿಗೆ ತರುವುದಕ್ಕಿರುವ ವಿಧಾಯಕವನ್ನು ಪರೀಕ್ಷಿಸುವಲ್ಲಿ ಹುಡುಗರು ಇಂಗ್ಲಿಷನ್ನು ಓದುವುದಕ್ಕೆ ಆರಂಭಿಸುವಾಗ ೯—೧೦ ವರ್ಷ ವಯಸ್ಸುಳ್ಳವರಾಗಿಯೂ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗುವ ವೇಳೆಗೆ ೧೪, ೧೫ ವಯಸ್ಸಿನವರಾಗಿಯೂ, ಮೆಟ್ರಿಕ್ಯುಲೇಷನಿಗೆ ಹೋಗುವಾಗ್ಯೆ ೧೬, ೧೭ ವರ್ಷದವರಾಗಿಯೂ ಇರಬಹುದಾದಕಾರಣ ಆಯಾ ಪರೀಕ್ಷೆಗಳ ಕಾಲದಲ್ಲಿ ಈ ವಯಸ್ಸು ಬಹು ಹೆಚ್ಚಾಯಿತೆಂದು ಹೇಳಲಾರೆವು

ನಮ್ಮ ಮೈಸೂರು ಸಂಸ್ಥಾನದಲ್ಲಿ ರೂಢಿಸಲ್ಪಡುವ ಈ ಕಟ್ಟಳೆಯೂ ಬ್ರಿಟಿಷ್ ಇಂಡಿಯದಲ್ಲಿ ಜಾರಿಗೆ ಬರುವ ಕಟ್ಟಳೆಗಳೂ ಹಿಂದಕ್ಕೊ ಕಿರು ಬಸ್ಸತಕ್ಕವುಗಳಾಗಿವೆ ಮತ್ತು ಬ್ರಿಟಿಷ್ ಇಂಡಿಯದಲ್ಲಿಯೂ ಜಾರಿಗೆ ಬಂದಿರುವ ಮತ್ತು ಈ ದೇಶದವನಾದ ಪ್ರತಿಯೊಬ್ಬನೂ ಸ್ವಭಾಷೆಯನ್ನು ಮೊದಲು ತಿಳಿದಿರಬೇಕೆಂಬುವ ಕಟ್ಟಳೆಯು ಒಳ್ಳೇದೆಂದು ಎಲ್ಲರೂ ಒಪ್ಪುವರು ಇಂಗ್ಲೆಂಡಿನಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಮೊದಲು ಚೆನ್ನಾಗಿ ಅಭ್ಯಾಸಿತರಾದ ಬಳಿಕ ಫ್ರೆಂಚ್ ಜರ್ಮನ್ ಮೊದಲಾದ ಅನ್ಯ ಭಾಷೆಗಳನ್ನು ಕಲಿಯಲುಪಕ್ರಮಿಸಬೇಕೆಂದು ಗ್ರೇಟ್ ಬ್ರಿಟನಿನಲ್ಲಿ ರೂಢಿಯಾಗಿರುವ ಕಟ್ಟಳೆಗೆ ನಮ್ಮ ಸಂಸ್ಥಾನದ ಈ ಕಟ್ಟಳೆಯೂ ಒಪ್ಪುವುದಾಗಿದೆ.

ವಿದ್ಯಾಭ್ಯಾಸದ ವಿಷಯದಲ್ಲಿ ತಂದೆತಾಯಿಗಳಾದವರು ಮಕ್ಕಳ ಕ್ಷೇಮವನ್ನು ನೋಡಬೇಕೇ ಹೊರತು ಅದರ ನಷ್ಟವನ್ನು ಬಯಸುವರೇ? ಆದುದರಿಂದ ಈ ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ವಿಷಯ ಸ್ಥಾಪಿಸಲ್ಪಟ್ಟಿರುವ ಈ ಕಟ್ಟಳೆಯ ಕೆಲವು ಭಾಗಗಳನ್ನು ತಿದ್ದುಪಡಿ ಮಾಡುವುದು ಅವಶ್ಯವೆಂಬುದೇನೋ ಸರಿಯೇ. ಆದರೆ ಈ ವಿಷಯದಲ್ಲಿ ತಿದ್ದುಪಾಟು ಮಾಡಬೇಕಾದರೆ ಇದಕ್ಕೆ ಸಂಬಂಧಪಟ್ಟ ಎಲ್ಲಾ ಅಂಶಗಳನ್ನು ನಿಷ್ಪಕ್ಷಪಾತವಾಗಿ ಚರ್ಚಿಸಿ ತಿಳಿಯುವುದು ಅವಶ್ಯವಾಗಿದೆ.

## ತಂದೆಯು ಮಗನಿಗೆ ಹೇಳಿದ ಬುದ್ಧಿವಾದ.

ಇಂಗ್ಲೆಂಡ್ ಸೀಮೆಯ ಮಂತ್ರಿಶ್ರೇಷ್ಠರೊಳಗೆ ಪ್ರಸಿದ್ಧರಾದ ಮಿ॥ ಗ್ಲಾಡ್ಸ್ಟನ್ ಶ್ರೀಮಂತರು ಆಕ್ಸ್‌ಫರ್ಡ್ ವಿದ್ಯಾನಿಲಯದಲ್ಲಿ ಪಾಠಕನಾಗಿದ್ದ ಮಗನಿಗೆ ಬರೆದರು.

೧ ಪ್ರತಿಯೊಂದು ದಿವಸದಲ್ಲಿ ಇಂಥಿಂಥಾ ಕೆಲಸವನ್ನು ಮಾಡಬೇಕೆಂಬುದಾಗಿ ಸಂಕ್ಷೇಪವಾದ ದಿನಚರಿಯನ್ನು ಬರೆದಿಟ್ಟುಕೊಳ್ಳತಕ್ಕದ್ದು. ಅಯ್ಯನ್ಯರುಗಳ ಪಟ್ಟಿಯು ಚೀಲವಂತನಿಗೆ ಎಷ್ಟು ಮುಖ್ಯವೋ, ಕಾಲವೆಂಬ ವಿಶೇಷವಾದ ದ್ರವ್ಯಕ್ಕೆ ಅಂಥ ದಿನಚರಿಯ ಪುಸ್ತಕವು ಅಷ್ಟು ಮುಖ್ಯವಾದದ್ದಾಗಿದೆ.

೨. ಆದಾಯ ವ್ಯಯಗಳನ್ನು ಬರೆದಿಟ್ಟುಕೊಳ್ಳತಕ್ಕದ್ದು. ಇದು ತೋಡಿದರೆಯ ಕೆಲಸವೆಂದು ತಿಳಿಯಬಾರದು ಪ್ರಾಗಿನಿಂದಲೂ ಯೋಗ್ಯ ಮಾಡತಕ್ಕ ಬಂದರೆ ಕಡೆಗೆ ಬಹು ಸುಲಭವಾದ ಕೆಲಸವಾಗಿ ಪರಿಣಮಿಸುವುದು ಚಿಕ್ಕ ವಯಸ್ಸಿನಲ್ಲಿ ಇದನ್ನು ಅಭ್ಯಾಸಿಸುತ್ತ ಬಂದರೆ ಆ ಚಾರ ಬಾಬನ್ನು ನಮ್ಮ ಆದಾಯಕ್ಕೆ ವಿಚಾರವಂತೆ ಮಾಡಿಕೊಳ್ಳಲು ಸಹಾಯವಾಗುತ್ತದೆ ಖರ್ಚು ಆದಾಯಕ್ಕೆ ವಿಚಾರವಂತೆ ಮಾಡಿಕೊಳ್ಳುವ ಅಭ್ಯಾಸದಿಂದ ನಮ್ಮ ಆಸೆಗಳನ್ನೂ ನಮ್ಮ ಅಧೀನದಲ್ಲಿಟ್ಟುಕೊಳ್ಳುವ ಅಭ್ಯಾಸವು ಜೊತೆಗೆ ಬರುತ್ತೆ

೩. ನಿತ್ಯವೂ ವಿದ್ಯಾಭ್ಯಾಸಕ್ಕೆ ಎಷ್ಟು ಗಂಟೆಯ ಕಾಲವನ್ನು ಕೊಡಬೇಕು. ಆಯಾ ಕಾಲಗಳಲ್ಲಿಯೂ ಸ್ವಲ್ಪ ಕಾಲವನ್ನು ಹೀಗೇ ನಿರ್ಣಯ ಮಾಡಿಕೊಳ್ಳಬೇಕು. ಇದಕ್ಕೆ ತಪ್ಪಿದ ದಿವಸವನ್ನು ಬರೆದಿಟ್ಟುಕೊಳ್ಳತಕ್ಕದ್ದು.


## ಚೇಂಬರ್ಲೈನ್ ಯವರು ಕಂಡುಹಿಡಿದ ಕೆಮ್ಮು ಔಷಧವು.

50




ಶೀತ, ಕೆಮ್ಮು, ಗಂಟ್ಲು ಗೂರಿಕ್ಕು ಮತ್ತು, ಇದೇ ಮೊದಲಾದ ಎದೆಯ ಮತ್ತು ಗಂಟಲಿನ ಬಾಧೆಗಳಿಗೆ ಈ ಔಷಧವು ಬಹು ಶ್ರೇಷ್ಠವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವುದು ಶೀತವು ಬಿಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಲಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಒಣಗಿಹೋಗುವದು. ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನೌಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಈ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ ಕ್ರಯ ಶೀಸೆ ೧ಕ್ಕೆ ೧ ರೂ.; ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚೆನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇಲ್ಲದಿದ್ದರೆ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುತ್ತೆ.—

ಹೆಚ್ಚ್. ಇ. ಸ್ಮಿತ್ ಅಂಡ್ ಕಂಪೆನಿ,

ಮೌಂಟ್ ರೋಡ್,

ಮದರಾಸ್.

೪. ಭಾನುವಾರಗಳನ್ನು ಹೇಗೆ ಕಳೆಯಬೇಕೆಂಬ ಮುಖ್ಯವಾದ ವಿಷಯ ಬರುವಲ್ಲಿ—ಆ ದಿನ ನಮ್ಮಿಂದಾದ ಮಟ್ಟಿಗೂ ಲೌಕಿಕ ಕಾರ್ಯಗಳಿಗೆ ಕೈಹಾಕದೆ ಇರಬೇಕು. ಆದರೂ ಕೂಡ ನಮ್ಮ ಅಭಿವೃದ್ಧಿಗೆ ಕಾರಣಗಳಾಗಿಯೂ ಪರರಕ್ಷಣೆಗಳಿಗೆ ಸಂಬಂಧಗಳಾಗಿಯೂ ಇರುವ ಜ್ಞಾನವನ್ನು ಅಧಿಕ ಪಡಿಸ್ಕೊ ಭಾನುವಾರವನ್ನು ವಿನಿಯೋಗಿಸುವದರಲ್ಲಿ ಆಕ್ಷೇಪವೇನೂ ಇಲ್ಲ. ನಾಸ್ತಿಕತ್ವಕ್ಕೆ ಹೇತುವಾಗಿರುವ ನಮ್ಮ ಕಾಲೇಜಿನ ಶಿಕ್ಷಣವನ್ನು ನೋಡುವಲ್ಲಿ ಹುಟ್ಟಿರುವ ಆಸ್ತಿಕವಾದಕ್ಕೆ ಆಕ್ಷೇಪಕರಾದವರಿಗೆ ತಕ್ಕ ಉತ್ತರವನ್ನು ಕೊಡಲು ಸಮರ್ಥರಾಗಿರುವದು ಅವಶ್ಯವಾಗಿದೆ

೫ ದಿನಂಪ್ರತಿ ಸಾಯಂಪ್ರಾತಃಕಾಲಗಳಲ್ಲಿ ದೇವರ ಪ್ರಾರ್ಥನೆ ಮಾಡುವದು, ಸತ್ಯವೇದವನ್ನು ಓದುವದು ಮೊದಲಾದ ವ್ರತಕರ್ತವ್ಯಗಳನ್ನು ತಪ್ಪದೆ ಆಚರಿಸಬೇಕೆಂದು ತಿಳಿಸಬೇಕಾದುದಿಲ್ಲ. ಆದರೆ ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ—ಎಷ್ಟು ಅವಸರದ ಕೆಲಸವಿದ್ದರೂ ನಿಮಿಷಮಾತ್ರವಾದರೂ ದೇವರ ಧ್ಯಾನಕ್ಕೆ ಪದೇ ಪದೇ ನಮ್ಮ ಮನಸ್ಸನ್ನು ಕೊಡುವದು ಸುಲಭವಾಗಿಯೂ ಅತ್ಯಂತ ಫಲದಾಯಕವಾಗಿಯೂ ಇದೆ. ನಮ್ಮ ಕೆಲಸ ಕಾರ್ಯಕ್ಕೆ ದೇವರ ಸಹಾಯವೂ ನಮಗೆ ವಿಶೇಷವೂ ಅವಶ್ಯವಾಗಿರುವಲ್ಲಿ ಅದಕ್ಕಾಗಿ ಆತನನ್ನು ಪದೇ ಪದೇ ಪ್ರಾರ್ಥಿಸುತ್ತಿರುವದು ಅತ್ಯವಶ್ಯಕವು ಹೇಳಲಗತ್ಯವಿಲ್ಲ

೬ ಸಾಧಾರಣವಾದ ಕೆಲಸ ಕಾರ್ಯಗಳ ವಿಷಯದಲ್ಲಿ ನಾನು ಕೊಡುವ ಅತ್ಯಮೂಲ್ಯವಾದ ಸೂತ್ರವೇನಂದರೆ—ಸ್ವಪ್ರಯತ್ನವೆಂಬುದನ್ನು ಅಭ್ಯಸಿಸು. ನೀನೇ ಸ್ವತಃ ಮಾಡಬಹುದಾದ ಯಾವ ಕಾರ್ಯವನ್ನು ಮಾಡುವದಕ್ಕಾದರೂ ಇತರರ ಸಹಾಯಕ್ಕೆ ನಿರೀಕ್ಷಿಸಬೇಡ. ಮತ್ತು ನಿನ್ನ ಕೈಲಾದಮಟ್ಟಿಗೂ ಮಿತಜೀವನವನ್ನು ಅಭ್ಯಸಿಸು. ಮಿತಜೀವನವಾಗಿರುವದರಲ್ಲೇ ನಿಜವಾದ ಪೌರುಷವುಂಟು. ಅದರಿಂದಲೆ ನಿಜವಾದ ಸುಖವುಂಟು. ಇದನ್ನು ಬಿಟ್ಟು ನಮ್ಮ ಕೋರಿಕೆಗಳನ್ನು ಹೆಚ್ಚಿಸಿಕೊಂಡರೆ—ಎಂದರೆ ನಮಗೆ ಬೇಕಾದುದು ಬಹಳ ಬೇಕೆಂದು ಆಶಿಸಿದರೆ ಅದು ನಮ್ಮನ್ನು ಸ್ವಾರ್ಥಪರರನ್ನಾಗಿ ಮಾಡುವದಲ್ಲದೆ ನಮ್ಮಲ್ಲಿರುವ ಪೌರುಷವನ್ನು ನಾಶಮಾಡಿ ನಮ್ಮನ್ನು ನೀಚರನ್ನಾಗಿ ಮಾಡುವದು

೭ ಕಾಲವನ್ನು ಕ್ರಮಪ್ರಕಾರ ವಿನಿಯೋಗಿಸುವಂತೆ ಹಣವನ್ನು ಕ್ರಮವಾಗಿ ವ್ಯಯಮಾಡತಕ್ಕದ್ದು ವಿವೇಕವಾಗಿದೆ. ನಮ್ಮ ಆದಾಯದಲ್ಲಿ ನಿರ್ಣಯವಾದ ಭಾಗವನ್ನು ಧರ್ಮಾರ್ಥವಾಗಿ ತೆಗೆದಿಡುವದು ಅವಶ್ಯವಾಗಿದೆ. ಈ ಅಭ್ಯಾಸವನ್ನು ಪ್ರಾಪ್ತವಯಸ್ಸಿನವರಾಗಿರುವಾಗಲೆ ಆರಂಭಿಸುವದುತ್ತಮ. ಧರ್ಮಾರ್ಥವಾಗಿ ಕೊಡಲ್ಪಡುವ ಹಣವನ್ನು ವಿನಿಯೋಗಿಸುವಾಗ್ಯೆ, ಹಣ ವ್ಯಯಕ್ಕೆಷ್ಟು, ಧರ್ಮಾರ್ಥಕ್ಕೆಷ್ಟು ಎಂದು ತರ್ಕಿಸುವದಕ್ಕಿಂತ ಇಂಥಿಂಥ ಧರ್ಮಕಾರ್ಯಕ್ಕೆ ಇಷ್ಟಿಷ್ಟು ಕೊಡಬೇಕು ! ಎಂದು ನಿರ್ಧರಿಸಬೇಕು. ಈ ಸಂದರ್ಭದಲ್ಲಿ ಈ ನಿರ್ಣಯವು ದೊಡ್ಡ ಸಹಾಯವಾಗಿ ಒದಗುವದು. ಧರ್ಮ ಕೆಲಸಗಳಿಗಾಗಿ ಪ್ರತಿಷ್ಠಿಸಲ್ಪಡುವ ಹಣವು ಆದಾಯದ ಹತ್ತರಲ್ಲೊಂದು ಭಾಗಕ್ಕಿಂತ ಕಡಮೆಯಾಗಿರುವದು ತರವಲ್ಲ. ಹತ್ತರಲ್ಲೊಂದು ಭಾಗವನ್ನು ಧರ್ಮ ಕೆಲಸಕ್ಕೆ ಕೊಟ್ಟರೆ ಅದರಿಂದುಳಿದ ಒಂಬತ್ತು ಭಾಗಗಳ ಆಧಿಕ್ಯಕ್ಕೆ ಚ್ಯುತಿಯುಂಟಾಗುವದಿಲ್ಲ. ಧರ್ಮಾರ್ಥವಾಗಿ ಹಣವನ್ನು ಕೂಡಿಸಿಡುವದು ಅವಶ್ಯವಾಗಿರುವದಲ್ಲದೆ, ಮುಂದೆ ಕಷ್ಟಕಾಲಕ್ಕೆ ಒದಗುವಂತೆಯೂ ಕೂಡಿಸಿಡುವದು ಯುಕ್ತವಾಗಿದೆ.

## ಒಳದೇಶದ ವೃತ್ತಾಂತಗಳು.

ಕೋಲಾರ್ ಚಿನ್ನದ ಗಣಿಗಳಲ್ಲಿ ತೆಗೆದ ೧೮,೯೬,೦೦೦ ರೂಪಾಯಷ್ಟು ಬಂಗಾರವನ್ನು ಕಂಪನಿಯವರು ಕಳೆದವಾರ ಬೊಂಬಾಯಿ ಮಾರ್ಗವಾಗಿ ವಿಲಾಯತಿಗೆ ರವಾನೆಮಾಡಿದರು.

✤✤✤✤

ಮಡಿಕೇರಿಯಲ್ಲಿ ದೇಶೀಯ ಶಾಲೆಯ ವಿದ್ಯಾರ್ಥಿಗಳಿಗೆ ಛತ್ರ ಮನೆಯ ಕಟ್ಟುವದಕ್ಕೆ ೧ ಲಕ್ಷ ರೂಪಾಯಿ, ಹಾಸ್ಟೆಲಿನ ವಾಸಕ್ಕಿರುವ ಬಂಗಲೆಗಳನ್ನು ಕಟ್ಟುವದಕ್ಕೆ ೨೫ ಸಾವಿರ ರೂಪಾಯಿಗಳು ಇಂಡಿಯಾ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿರುತ್ತಾರೆ.

✤✤✤✤

ಕಲ್ಕತ್ತಾ ಪಟ್ಟಣದ ಕಾಲೀಘಾಟಿನಲ್ಲಿ ಮೈಸೂರು ಗವರ್ನಮೆಂಟಿನ ಲೇಟ್ ಮಹಾರಾಜಾ ಚಾಮರಾಜ ಒಡೆಯರವರ ಹೆಸರನ್ನು ಸ್ಥಾಪಿಸುವದಕ್ಕೆ ಒಂದು ಬೃಂದಾವನ, ಸ್ನಾನಘಟ್ಟ, ದೇವಸ್ಥಾನ, ಧನಾಳಿ ಸ್ನಾನಘಟ್ಟ, ಉದ್ಯಾನವನ ಮೊದಲಾದವುಗಳನ್ನು ಕಟ್ಟುತ್ತಿದಾರಂತೆ. ಇವಕ್ಕೆಲ್ಲಾ ಒಂದೂವರೆ ಲಕ್ಷ ರೂಪಾಯಿ ಖರ್ಚು ಆಗಿರುವದು.

✤✤✤✤

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಪ್ರೊಫೆಸರಾಗಿದ್ದ ಮಿ॥ ಜೆ. ಗ್ರೀವ್, ಬಿ. ಎ. ಯವರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಕಳೆದ ವಾರ ಸೀಮೆಗೆ ಪ್ರಯಾಣ ಮಾಡಿದರು. ಇವರು ಇಂಡಿಯಲ್ಲಿ ಕ್ರೈಸ್ತಮತ ಪ್ರಸಾರಕ ಕೆಲಸವನ್ನು ಮಾಡುವ ಹಾಗೆ ಹೊಂದಿ ನಾಯಕ ಮೈಸೂರು ಸೀಮೆಗೇ ಬಂದು ನಿಲ್ಲಬೇಕಾಗಿದ್ದಾರೆ.

✤✤✤✤

ಕಳೆದ ಗುರುವಾರ ಬೆಳಗ್ಗೆ ಬೆಂಗಳೂರಿನಲ್ಲಿ ಸುಮಾರು ೮೫ ನೇ ವಯಸ್ಸಿನವರಾಗಿದ್ದ ಮಿಸ್ ಎ ಎಂ. ಬ್ಲೇಕ್ ಎಂಬಾಕೆಯು ಮರಣಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಈಕೆ ಕಳೆದ [illegible] ವರುಷಗಳ ಕಾಲ ಹೆಂಗಸರ ತನಕ ನಮ್ಮ ಮಹಾರಾಣಿಯವರಿಗೆ ವಿದ್ಯೆ ಹೇಳಿಕೊಡುತ್ತಿದ್ದರು. ಮಹಾರಾಣಿಯವರ ಆಳಿಕೆಯಲ್ಲಿ ವಿಶೇಷ ಪ್ರೀತಿ ವಿಶ್ವಾಸಗಳನ್ನಿಟ್ಟುಕೊಂಡು [illegible] ಬಹಳ ಗೌರವ ಕೊಡುತ್ತಿದ್ದರು.

ಶ್ರೀನಿವಾಸಪುರದಲ್ಲಿ ಹಂಪಾಂಡನೆಂಬ ಅಸ್ಪೃಶ್ಯನು ಒಬ್ಬ ಬ್ರಾಹ್ಮಣ ಹುಡುಗಿಯನ್ನು ಅಪಹರಿಸಬೇಕೆಂದು ಪ್ರಯತ್ನಪಟ್ಟುದಕ್ಕಾಗಿ ಅವನಿಗೆ ಮ್ಯಾಜಿಸ್ಟ್ರೇಟರು ವಿಚಾರಣೆಯಿಂದ ೧೫ ದಿನ ಕಠಿಣ ಸಜಾವನ್ನೂ ೨೦ ರೂ. ಜುಲ್ಮಾನೆಯನ್ನೂ ವಿಧಿಸಿದರೆಂದು ಒಬ್ಬ ಬಾತ್ಮಿದಾರರು ಬರೆದಿರುತ್ತಾರೆ.

✤✤✤✤

ಮೈಸೂರು ಮಹಾರಾಣಿಯವರ ಕಾಲೇಜಿನಲ್ಲಿ ಉಪಾಧ್ಯಾಯರಾಗಿದ್ದುಕೊಂಡು ಬಿ. ಎ. ಪರೀಕ್ಷೆಗೆ ಓದುತ್ತಿರುವ ಸೌ॥ ಸುಬ್ಬಮ್ಮನವರೂ, ಸೌ॥ ಶ್ರೀರಂಗಮ್ಮನವರೂ ಈಗ ಮದರಾಸಿಗೆ ಹೋಗಿರುತ್ತಾರೆ. ಇವರಿಬ್ಬರೂ ಬಿ. ಎ. ಪರೀಕ್ಷೆ ಕನ್ನಡ ಭಾಗದಲ್ಲಿ ಪರೀಕ್ಷೆ ಕೊಡಲೋಸುಗ ಪ್ರಯಾಣ ಮಾಡಿರುವರು. ಹೋದವರುಷ ಸೌ॥ ಶ್ರೀರಂಗಮ್ಮನವರು ಆ ಪರೀಕ್ಷೆಯ ಇಂಗ್ಲಿಷ್ ಭಾಗದಲ್ಲಿ ಬಹಳ ಹೆಚ್ಚಾಗಿ ಮಾರ್ಕುಗಳನ್ನು ಪಡೆದು ತೇರ್ಗಡೆ ಹೊಂದಿದರು. ಇದೇ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಕಾಳಮ್ಮ ಹೀಪಥರ್ ಎಂಬಾಕೆ ಈ ಸಲ ಎಫ್. ಎ. ಪರೀಕ್ಷೆಗೆ ಹಣ ಕಟ್ಟಿದ್ದಾರೆ. ತೇರ್ಗಡೆಯಾದ ಸಂಗತಿ ಬರುವ ತಿಂಗಳಲ್ಲಿ ಗೊತ್ತಾಗುವುದು.

✤✤✤✤

ನಮ್ಮ ಸಂಸ್ಥಾನದ ಹುಟ್ಟುವಳಿಯಲ್ಲಿ ಅರಮನೆ ಖರ್ಚಿಗೆ ವರುಷಕ್ಕೆ ೧೪ ಲಕ್ಷ ರೂಪಾಯಿ ಕೊಡುವಂತೆ ಮೊದಲು ಇಂಡಿಯಾ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದರಷ್ಟೆ. ಈಚೆಗೆ ಬ್ರಿಟಿಷ್ ರೆಸಿಡೆಂಟ್ ಸರ್ ಡಿ. ರಾಬರ್ಟ್‌ಸನ್ನರವರು ಈ ಹಣ ಅರಮನೆ ಖರ್ಚಿಗೆ ಸಾಕಾಗುವುದಿಲ್ಲವೆಂದೂ ಇನ್ನೆರಡು ಲಕ್ಷ ರೂಪಾಯಿಗಳನ್ನು ಕೊಡಿಸಬೇಕೆಂತಲೂ ಮೈಸೂರು ದೊರೆಗೆ ಶಿಫಾರಸು ಮಾಡಿದರು. ಅದರಂತೆ ಇಂಡಿಯಾ ಗವರ್ನಮೆಂಟಿನವರು ೧೬ ಲಕ್ಷ ರೂಪಾಯಿ ಅರಮನೆಗೆ ಕೊಡಬಹುದೆಂದು ಸ್ಯಾಂಕ್ಷನ್ ಮಾಡಿರುತ್ತಾರೆ. ಅರಮನೆಯ ಪಾರ್, ಬ್ಯಾಂಡ್, ಬಾಡಿಗಾರ್ಡ್ ಎಂಬೀ ಮೂರು ಬಾಬುಗಳ ಸಿಬ್ಬಂದಿ ಮುಂತಾದ ಖರ್ಚನ್ನು ಸಂಸ್ಥಾನದ ಹುಟ್ಟುವಳಿಯಿಂದಲೇ ಕೊಡುತ್ತಿದಾರೆ

✤✤✤✤

ತೆಂಗಿನ ಸಸಿಗಳು ಎಷ್ಟು ಜಾಗರೂಕತೆಯಿಂದ ಬೆಳೆಸಿ ಸಾಕಿದಾಗ್ಯೂ ಬಂದರೂ ಅವುಗಳಿಗೆ ಗದ್ದಲು, ಕಟ್ಟರುಳಿ ಮೊದಲಾದ ಕ್ರಿಮಿಗಳು ಹಿಡಿದು ನಾಶ ಮಾಡುವವು. ಇದನ್ನು ಹೇಗೆ ನಿವಾರಣೆ ಮಾಡಬಹುದೋ ತಿಳಿಯದೇ ಬಹುಮಂದಿ ತೋಟಗಾರರು ಕಷ್ಟ ಹೊಂದಿ ವ್ಯಸನಪಡುತ್ತಿದಾರೆ. ಮಿ॥ ಮುದ್ದುಕೃಷ್ಣಸ್ವಾಮಿ ಎಂಬವರು ಈ ಕ್ರಿಮಿಗಳ ನಾಶಕ್ಕೆ ಒಂದು ಉಪಾಯವನ್ನು ಮಾಡಬೇಕೆಂದು ತಿಳಿಸುವರು. ಸಸಿಗಳ ಸುತ್ತಲೂ ಬುಡದಲ್ಲೇ ಒಂದು ಅಡಿ ಆಳವಾಗಿ ಪಾತಿಮಾಡಿ, ಸ್ವಲ್ಪ ಕೆರೋಸಿನ್ ಎಣ್ಣೆ (ಸೀಮೆಎಣ್ಣೆ) ಯನ್ನು ಸುರಿದು, ಅದರ ಮೇಲೆ ಪಾತಿಯು ತುಂಬಾ ಮಣ್ಣು ಸುರಿದು ಮುಚ್ಚಿದರೆ ಯಾವ ಕ್ರಿಮಿಯೂ ಸಸಿಗಳನ್ನು ಹಿಡಿಯುವದಿಲ್ಲ, ಇದಲ್ಲದೆ ಹೀಗೆ ಮಾಡುವದರಿಂದ ಸಸಿಯು ಬಹಳ ಚೆನ್ನಾಗಿ ಬೆಳೆಯುವದು ಎಂಬದಾಗಿ ತಿಳಿಸಿದಾರೆ. ನಮ್ಮ ದೇಶದಲ್ಲಿ ತೋಟಗಾರರು ಈ ಪ್ರಕಾರ ಮಾಡಿ ಪರೀಕ್ಷೆ ಮಾಡುವರೆಂದು ನಿರೀಕ್ಷಿಸುವೆವು

## ರಾಜಧಾನಿಯು ಪ್ರಜಾಭಿವೃದ್ಧಿ ಕಾರ್ಯವು.

ಮೈಸೂರು ಪಟ್ಟಣದ ಪ್ರಜೆಗಳಿಗಾಗಿ ಬರೆದಿರುವದು.

ಮೈಸೂರು ಸರ್ಕಾರದವರು ರಾಜಧಾನಿಯಾದ ಮೈಸೂರು ಪಟ್ಟಣವನ್ನು ಅಭಿವೃದ್ಧಿಮಾಡುವುದಕ್ಕಾಗಿ ಇನ್ನು ಕೆಲವು ದಿವಸಗಳಲ್ಲೇ ಇಂಪ್ರೂವ್‌ಮೆಂಟ್ ಟ್ರಸ್ಟ್ ಎಂಬ ಸಂಘವನ್ನು ನೇಮಿಸುವರೆಂತಲೂ, ಈ ಟ್ರಸ್ಟಿನ ಮೆಂಬರುಗಳು ಪುರಾಭಿವೃದ್ಧಿಯ ಕಾರ್ಯಗಳನ್ನು ಶೀಘ್ರದಲ್ಲೇ ಪ್ರಾರಂಭಮಾಡುವರೆಂತಲೂ ನಿರೀಕ್ಷಿಸುತ್ತೇವೆ. ಗವರ್ನಮೆಂಟಿನವರು ನೇಮಕಮಾಡಿದ ಕಮಿಟಿ ಮೆಂಬರುಗಳು ಒಂದು ವರುಷದಿಂದ ಪಟ್ಟಣದ ಎಲ್ಲಾ ಮೊಹಲ್ಲೆಗಳನ್ನೂ ಬಹಳ ಚನ್ನಾಗಿ ಅವಲೋಕಿಸಿ ನೋಡಿ, ಯಾವ ಯಾವ ಭಾಗಗಳಲ್ಲಿ ಯಾವಯಾವ ತರಹ ಅಭಿವೃದ್ಧಿಕಾರ್ಯಗಳು ನಡೆಯಬೇಕೋ ಅವನ್ನೆಲ್ಲಾ ಸಂಪೂರ್ಣವಾಗಿ ಬರೆದು ಗವರ್ನಮೆಂಟಿಗೆ ಕಳುಹಿಸಿಕೊಟ್ಟಿದ್ದಾರೆ. ಇವರು ಸೂಚಿಸಿರುವಂಥಾ ಅಭಿವೃದ್ಧಿಕಾರ್ಯಗಳನ್ನೆಲ್ಲಾ ಮಾಡಿ ಪೂರೈಸಲು ಕೆಲವು ಸಂವತ್ಸರಗಳೇ ಹಿಡಿಯುವವು; ಇದಕ್ಕೆಲ್ಲಾ ತಗಲುವ ಖರ್ಚು ೭೦ ಲಕ್ಷ ರೂಪಾಯಿಗಿಂತ ಕಡಮೆಯಾಗಲಾರದು. ಕಮಿಟಿಯವರು ಸೂಚಿಸಿರುವ ಅಭಿವೃದ್ಧಿಕಾರ್ಯಗಳನ್ನು ಮಾಡಿಸುವದಕ್ಕೋಸ್ಕರ ಸರ್ಕಾರದವರು ಮಿ॥ ಸೀತಾರಾಮರಾಯರನ್ನು ನೇಮಿಸಿರುತ್ತಾರೆ. ಮತ್ತು ಇವರಿಗೆ ಸಂಪೂರ್ಣ ಸಹಾಯ ಮುಂತಾದವುಗಳನ್ನು ಕೊಡುವುದಕ್ಕಾಗಿ " ಇಂಪ್ರೂವ್‌ಮೆಂಟ್ ಟ್ರಸ್ಟ್ " ಎಂಬೊಂದು ಸಂಘವನ್ನು ಏರ್ಪಡಿಸಿಕೊಡುವರು. ಹಾಲಿ ಸಾಲಿನಲ್ಲಿ ನಡೆಯುವ ಕಾರ್ಯಗಳಿಗೋಸ್ಕರ ಶ್ರೀಮನ್ಮಹಾರಾಜರವರು ೩ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ. ಪಟ್ಟಣದ ಉತ್ತರ ಭಾಗಗಳಾದ ಲಷ್ಕರ್ ಮತ್ತು ಮಂಡಿ ಮೊಹಲ್ಲೆಗಳಲ್ಲಿ ಅಭಿವೃದ್ಧಿಯ ಕಾರ್ಯಗಳನ್ನು ಮಾಡಬೇಕಾದದ್ದು ತುಂಬಾ ಅವಶ್ಯವಾಗಿರುವುದರಿಂದ ಈ ಸಂಘದವರು ಮೊದಲು ಈ ಭಾಗಗಳಲ್ಲೇ ಕಾರ್ಯಾರಂಭ ಮಾಡುವರು. ಮೈಸೂರು ಪ್ರಜೆಗಳ ಪ್ರಯೋಜನಾರ್ಥವಾಗಿ ಆರೋಗ್ಯವಿಚಾರವನ್ನು ಕುರಿತು ನಾವು ೩—೪ ವಾರ ಕೆಲವು ಸಂಗತಿಗಳನ್ನು ಬರೆದು ತಿಳಿಸಬೇಕೆಂದು ಪ್ರಯತ್ನಪಟ್ಟಿದ್ದೇವೆ. ಈ ಸಂಗತಿಗಳು ಅತಿ ಸುಲಭವಾದುವು; ಸುಲಭವಾಗಿ ಎಲ್ಲರೂ ಗ್ರಹಿಸಿಕೊಳ್ಳುವಂತೆ ಬರೆಯುವೆವು. ನಾವು ತಿಳಿಸುವ ವಿಷಯಗಳು ಮೈಸೂರು ಪಟ್ಟಣದಲ್ಲಿರುವ ಗೃಹಸ್ಥರಿಗೆ ಮಾತ್ರವೇ ಅಲ್ಲ, ಈ ಸಂಸ್ಥಾನದ ಸಮಸ್ತ ಊರು ಗ್ರಾಮಗಳಲ್ಲೂ ಇರತಕ್ಕವರಿಗೆಲ್ಲಾ ಬಹಳ ಉಪಯುಕ್ತಗಳಾಗಿರುವುವು. ಸಕಲರೂ ಈ ವಿಷಯಗಳನ್ನು ಸಾವಧಾನವಾಗಿ ಓದಿ ಗ್ರಹಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ನಾವು ತಿಳಿಸಬೇಕೆಂದು ಉದ್ದೇಶಪಟ್ಟಿರುವ ಸಂಗತಿಗಳನ್ನು ಹೇಳುವುದಕ್ಕಿಂತ ಮೊದಲು ಸರ್ಕಾರದವರು ಮಾಡುವ ಅಭಿವೃದ್ಧಿ ಕಾರ್ಯಗಳು ಶೀಘ್ರವಾಗಿಯೂ, ಸಾರ್ಥಕವಾಗಿಯೂ, ಸರ್ವಸಾರ್ಥಕವಾಗಿಯೂ ನಡೆಯುವಂತೆ ಮೈಸೂರು ಪಟ್ಟಣದ ಪ್ರಜೆಗಳು ತಮ್ಮ ಕೈಲಾದ ಮಟ್ಟಿಗೂ ಅವರಿಗೆ ಸಹಾಯ ಮಾಡುವವರಾಗಲಿ ಎಂಬುದಾಗಿ ಈ ಮೂಲಕ ಅವರನ್ನು ಕೇಳಿಕೊಳ್ಳುವೆವು. ಗವರ್ನಮೆಂಟಿನವರ ಉದ್ದೇಶವು ಬಹಳ ಒಳ್ಳೆಯದಾಗಿರುತ್ತದೆ. ಈಚೆಗೆ ಕೆಲವು ವರುಷಗಳಿಂದ ಪ್ಲೇಗಿನ ದೆಸೆಯಿಂದ ತುಂಬಾ ಹೀನಸ್ಥಿತಿಗೆ ಬಂದಿರುವ ಈ ರಾಜಧಾನಿಯನ್ನು ಅವರು [illegible] ಆರೋಗ್ಯಕರವಾದುದನ್ನಾಗಿಯೂ, ಜನಭರಿತವಾದುದನ್ನಾಗಿಯೂ ಮಾಡಬೇಕೆಂಬುದೇ ಅವರ ಮುಖ್ಯೋದ್ದೇಶವಾಗಿರುವುದು. ಪ್ರಜೆಗಳು ರೋಗಜನ್ಯವಾದ ಪ್ರದೇಶಗಳಲ್ಲಿ ಮನೆಗಳನ್ನು ಅನಾರೋಗ್ಯಕರವಾದ ರೀತಿಯಲ್ಲಿ ಕಟ್ಟಿಕೊಂಡು ಎಂದಿನವರೆಗೆ ವಾಸಮಾಡುತ್ತಿರುವರೋ ಅಂದಿನವರೆಗೂ ಅವರು ಎಂಥಾ ವಿಶಿಷ್ಟ ಪ್ರಯೋಗಮಾಡಿದರೂ, ಎಷ್ಟೇ ಶುದ್ಧಿ ಕಾರ್ಯಗಳನ್ನು (ಡಿಸಿನ್ಫೆಕ್ಷನ್) ಮಾಡಿಸಿದರೂ ಅಂಟುರೋಗೋತ್ಪತ್ತಿಯಾಗುವುದು ಸಂಶಯವೇ ಸರಿ. ಅನಾರೋಗ್ಯಕರವಾದ ಕೊಳಕು ಮನೆಗಳನ್ನು ನಿರ್ಮೂಲಮಾಡುವುದು, ಆರೋಗ್ಯಸೂತ್ರಗಳಿಗನುಸಾರವಾದ ರೀತಿಯಲ್ಲಿ ಹೊಸ ಮನೆಗಳನ್ನು ಕಟ್ಟಿಕೊಳ್ಳುವುದು, ಜನಭರಿತವಾಗಿ ಒತ್ತೊತ್ತಾಗಿರುವ ಮನೆಗಳನ್ನು ಒಡೆದು ಕಡಿಮೆಮಾಡುವುದು, ಅಲ್ಲಲ್ಲಿ ಬೈಲಾದ ಮೈದಾನಗಳು ಇರುವಂತೆ ಕಲ್ಪಿಸುವುದು, ತಗ್ಗಾಗಿಯೂ ಸೈತ್ಯವಾಗಿಯೂ ಇರುವಂಥಾ ಪ್ರದೇಶಗಳಲ್ಲಿ ನೀರು ಕೊಚ್ಚೆ ನಿಂತುಕೊಳ್ಳದಂತೆ ಮಾಡುವುದು—ಈ ರೀತಿಯಾದ ಕಾರ್ಯಗಳನ್ನು ಮಾಡಿದಲ್ಲಿ ತುಂಬಾ ಪ್ರಯೋಜನವಾಗುವುದೆಂದು ನಾವು ನಂಬುತ್ತೇವೆ. ಈ ಕಾರ್ಯಗಳ ಪ್ರಯೋಜನವನ್ನು ಈಗಿನ ಪ್ರಜೆಗಳು ಮಾತ್ರವೇ ಅಲ್ಲ; ಇವರ ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳೇ ಆದಿಯಾಗಿ ತಲೆತಲಾಂತ್ರದ ತನಕ ಎಲ್ಲರೂ ಅನುಭವಿಸುತ್ತಾರೆಂಬುದಕ್ಕೆ ಸಂಶಯವಿಲ್ಲ. ಅಲ್ಲದೆ ಈ ವಿಧವಾದ ಕಾರ್ಯದಿಂದ ಪ್ಲೇಗ್ ಎಂಬ ಒಂದು ಉಪದ್ರವ ಮಾತ್ರ ನಿಂತುಹೋಗುವದೆಂದು ತಿಳಿಯಬೇಡಿ. ಈ ಉಪದ್ರವಕ್ಕಿಂತಲೂ ವಿಶೇಷ ಪ್ರಾಣನಷ್ಟವನ್ನುಂಟುಮಾಡುವ ಇನ್ನು ಕೆಲವು ಅಂಟು ಜಾಡ್ಯಗಳನ್ನು ಕೂಡ ಬಹಳ ಮಟ್ಟಿಗೆ ಅಡಗಿಸಿ ಬಿಡಬಹುದಾಗಿದೆ. ವಿಷಮಶೀತಜ್ವರ, ಆಳಜ್ವರ, ವಾಯುರೋಗ, ಶೀತಗೆಡ್ಡೆ ರೋಗ, ಸಿದುಬು, ಕ್ಷಯ—ಇವೆಲ್ಲಾ ಬಹು ಕಠಿಣವಾದ ಜಾಡ್ಯಗಳು. ಇವು ನಮಗೆ ತುಂಬಾ ಬಳಕೆಯಾಗಿರುತ್ತವೆ; ಮತ್ತು ಬಹುಕಾಲದಿಂದ ನಮ್ಮ ಮಧ್ಯ ಇರುವವು. ಆದಕಾರಣ ಇವುಗಳ ವಿಷಯದಲ್ಲಿ ನಾವು ಅಷ್ಟೇನೂ ವಿಶೇಷವಾಗಿ ಯೋಚಿಸುವುದಿಲ್ಲ. ಮೇಲ್ಕಂಡ ಕಾರ್ಯಗಳನ್ನು ಮಾಡುವುದರಿಂದ ಈ ರೋಗಗಳು ಕೂಡ ಬಹಳ ಮಟ್ಟಿಗೆ ಕಡಿಮೆಯಾಗುತ್ತವೆ. " ಜಾತಸ್ಯ ಮರಣಂ ಧ್ರುವಂ. " ಹುಟ್ಟಿದವನು ಒಂದಲ್ಲ ಒಂದು ದಿನ ಸಾಯಲೇಬೇಕು. ಆದರೆ ಈ ಪಟ್ಟಣದಲ್ಲಿ ನೂರಾರು ಮಂದಿ ಆಯುಃಪರಿಮಿತಿ ತೀರುವದಕ್ಕೆ ಮೊದಲೇ ಇನ್ನೂ ಅಲ್ಪವಯಸ್ಸಿನವರಾಗಿರುವಾಗಲೇ ಸತ್ತುಹೋಗುತ್ತಿರುವುದೂ, ಮನುಷ್ಯ ಪ್ರಯತ್ನದಿಂದಲೂ ಅವನ ಬುದ್ಧಿ ವಿವೇಕಗಳ ಪ್ರಯೋಗದಿಂದಲೂ ನಿವಾರಣೆಮಾಡಿಕೊಳ್ಳಬಹುದಾದಂಥಾ ಅನೇಕಾನೇಕ ರೋಗಗಳು ನೂರಾರು ಮಂದಿಯನ್ನು ಹಿಡಿದು ಕಾಡಿಸುತ್ತಿರುವುದೂ ಯಾರಿಗೆ ತಾನೇ ತಿಳಿಯದು ? ವಾಂತಿಭೇದಿ ಉಪದ್ರವವು ಒಂದೊಂದು ಕಾಲದಲ್ಲಿ ಮೈಸೂರು ಪಟ್ಟಣವನ್ನು ಎಷ್ಟು ಮಟ್ಟಿಗೆ ತಳಮಳಿಸುತ್ತಿತ್ತೋ ಅದನ್ನು ಜನರು ಸ್ವಲ್ಪ ಮಟ್ಟಿಗೆ ಜ್ಞಾಪಿಸಿಕೊಂಡರೆ ಸಾಕಾಗಿದೆ. ಈಗಲಾದರೋ ಅನೇಕ ಸಂವತ್ಸರಗಳಿಂದಲೂ ನಮ್ಮೂರಿನ ಬೀದಿಗಳಲ್ಲಿ ಅದರ ಹೆಸರೇ ಅಪರೂಪವಾಯಿತು. ಪ್ರಜೆಗಳ ಮನಸ್ಸಿಗೆ ಸರ್ಕಾರದವರು ನಿರ್ಮಲೋದಕವನ್ನು ಒದಗಿಸಿಕೊಟ್ಟಿರುವುದರಿಂದ ಈ ವಾಂತಿಭೇದಿ ಉಪದ್ರವವು ಮಾಯವಾಯಿತೆಂದು ಹೇಳಬಹುದಾಗಿದೆ. ಈ ನಿರ್ಮಲೋದಕವು ಮುಚ್ಚಲ್ಪಟ್ಟ ಲೋಹ ಕೊಳವೆಗಳಲ್ಲಿ ಬರುವುದು. ಇದರಿಂದ ಅದರೊಳಗಿರತಕ್ಕ ನೀರಿಗೆ ವಿಷಕ್ರಿಮಿ ಸೇರಲು ಸ್ವಲ್ಪವೂ ಅವಕಾಶವಿಲ್ಲ.

ಇಂಪ್ರೂವ್‌ಮೆಂಟ್ ಬೋರ್ಡಿನವರಿಗೆ ಪ್ರಜೆಗಳು ಯಾವ ರೀತಿಯಲ್ಲಿ ಸಹಾಯ ಮಾಡಬಹುದೆಂದು ಪ್ರಶ್ನೆ ಹುಟ್ಟಬಹುದು. ಈ ಬೋರ್ಡಿನವರು ಅಭಿವೃದ್ಧಿಕಾರ್ಯಗಳನ್ನು ಪ್ರಾರಂಭಿಸುವರಷ್ಟೆ. ಆಗ್ಯೆ ಅವರು ಕೊಳಕಾದ ಮನೆಗಳನ್ನು ಒಡೆದುದಕ್ಕೂ, ನೆರೆಹೊರೆ ಸ್ಥಳಗಳನ್ನು ಆರೋಗ್ಯಕರವಾದ ಸ್ಥಿತಿಗೆ ತಂದುದಕ್ಕೂ, ಇತರ ಮನೆಗಳ ಆರೋಗ್ಯವಿಚಾರವನ್ನು ಕ್ರಮಪಡಿಸುವುದಕ್ಕೂ ಅವುಗಳ ಮಾಲೀಕರ ಸಂಗಡ ಹೋರಾಡಬೇಕಾಗುವುದು. ಅಂಥಾ ಸಂದರ್ಭಗಳಲ್ಲಿ ಪ್ರತಿ ಒಬ್ಬ ಮಾಲೀಕನೂ ಬೋರ್ಡಿನ ಮೆಂಬರುಗಳಿಗೆ ಅಡ್ಡಿಮಾಡುತ್ತಾ, ಹೆಚ್ಚು ಹೆಚ್ಚಾಗಿ ಕಾಂಪೆನ್ಸೇಷನ್ ಹಣ (ಪ್ರತಿಫಲ) ಕೊಡಬೇಕೆಂದು ಕೇಳುತ್ತಾ, ಅವರ ಕೆಲಸಗಳನ್ನು ತಿರಸ್ಕರಿಸುತ್ತಾ ಇರುವುದಾದರೆ ಬೋರ್ಡಿನವರು ಆಗಾಗ್ಯೆ ಕೋರ್ಟಿಗೆ ಹೋಗಿ ವ್ಯವಹಾರ ನಡೆಸಬೇಕಾಗುವುದು. ಇದರಿಂದ ಸರ್ಕಾರದ ಅಧಿಕಾರಿಗಳ ಸಮಯವೂ, ಗವರ್ನಮೆಂಟಿನವರ ದ್ರವ್ಯವೂ ವ್ಯರ್ಥವಾಗಿ ಖರ್ಚಾಗಿಹೋಗುತ್ತವೆ; ಮತ್ತು ರಾಜಧಾನಿಯ ಪುರಾಭಿವೃದ್ಧಿಕಾರ್ಯಗಳು ತುಂಬಾ ಸಾವಕಾಶಕ್ಕೆ ಬೀಳುವವು. ಹೀಗಿಲ್ಲದಿರುವುದಕ್ಕೆ ಪ್ರಜೆಗಳು ಅವರಿಗೆ ಸಹಾಯ ಕೊಡಬಹುದು. ಬೋರ್ಡಿನ ಮೆಂಬರುಗಳನ್ನು ಪ್ರಜೆಗಳು ಸ್ನೇಹಿತರಂತೆಯೂ ಹಿತಕಾರಿಗಳಂತೆಯೂ ಪರಿಗಣಿಸಬೇಕು; ಪ್ರಜೆಗಳು ತಮ್ಮ ಮನೆಮಾರುಗಳಿಗೆ ನ್ಯಾಯವಾದಷ್ಟು ಪ್ರತಿಫಲವನ್ನು ಕೊಟ್ಟರೆ ಸಾಕೆಂದು ಬೋರ್ಡಿನವರಿಗೆ ಹೇಳಬೇಕು; ಬೋರ್ಡಿನವರು ಹೇಳುವ ಪ್ರಕಾರ ಪ್ರಜೆಗಳು ಸಂತೋಷದಿಂದ ನಡೆದುಕೊಳ್ಳಬೇಕು. ಜನರು ಈ ರೀತಿಯಾಗಿ ನಡೆದುಕೊಳ್ಳುತ್ತಾ ಬಂದಲ್ಲಿ ಪುರಾಭಿವೃದ್ಧಿಕಾರ್ಯಗಳೆಲ್ಲಾ ಶೀಘ್ರದಿಂದಲೂ, ಸಂತೋಷಪ್ರದವಾಗಿಯೂ, ತೃಪ್ತಿಕರವಾಗಿಯೂ ವಿಶೇಷ ಪ್ರತ್ಯೇಕವಿಲ್ಲದಂತೆಯೂ ನಡೆಯುವವು.

ರಾಜಧಾನಿಯ ನಿವಾಸಿ.

## ಮುಂಬಯಿನ ಕ್ಲಾಸ್ ರೈಲ್ವೆ ಪ್ರಯಾಣಿಕರ ಅನುಕೂಲಗಳು.

### ಅಯೋಧ್ಯಾ ರೋಹಿಲ್‌ಖಂಡ್ ರೈಲ್ವೆ.

### ಸಭೆಯ ತೀರ್ಮಾನಗಳು.

ಉತ್ತರ ದೇಶದಲ್ಲಿರುವ ಅಯೋಧ್ಯಾ ರೋಹಿಲ್ ಖಂಡದ ರೈಲ್ವೆ ಕಂಪೆನಿಯವರು ೩ ನೆ ತರಗತಿಯ ಪ್ರಯಾಣಿಕರಿಂದಲೇ ಕಂಪೆನಿಗೆ ಹೆಚ್ಚು ಉತ್ಪತ್ತಿ ಇದೆ ಎಂಬ ಸಂಗತಿಯನ್ನು ತಿಳಿದುಕೊಂಡು, ಆ ಪ್ರಯಾಣಿಕರಿಗೋಸ್ಕರ ರೈಲ್ ಗಾಡಿಗಳಲ್ಲಿ ಬೇಕಾಗುವ ಸೌಕರ್ಯಗಳನ್ನೆಲ್ಲಾ ಸಾಧ್ಯವಾದಷ್ಟುಗೂ ಮಾಡಿಕೊಡಬೇಕೆಂದು ತೀರ್ಮಾನಿಸಿ, ಪ್ರಜೆಗಳ ಅಭಿಪ್ರಾಯ ತಿಳಿಯಬೇಕೆಂದು ಆಕ್ಟೋಬರ್ ಪಟ್ಟಣದಲ್ಲಿ ಒಂದು ಸಭೆ ನಡಿಸಿದರಷ್ಟೆ. ಆ ಸಭೆಯಲ್ಲಿ ಪ್ರಜಾಪ್ರತಿನಿಧಿಗಳು ಕಂಪೆನಿಯವರಿಗೆ ತಿಳಿಸಿದ ವಿಷಯಗಳನ್ನು ಹಿಂದೆಯೇ ಪ್ರಕಟಿಸಿದ್ದೇವೆ. ಪ್ರಜೆಗಳು ಕೇಳಿಕೊಂಡ ಕೆಲವು ಸೌಕರ್ಯಗಳನ್ನು ಕಂಪೆನಿಯವರು ಕಲ್ಪಿಸಿಕೊಡುತ್ತೇವೆಂದು ವಾಗ್ದಾನಮಾಡಿದರು. ಇನ್ನು ಕೆಲವು ವಿಷಯಗಳನ್ನು ಶೀಘ್ರದಲ್ಲಿ ನಿರ್ಧರಿಸಿ ಕೊಡುವುದಾಗಿ ತಿಳಿಸಿದರು. ಮಾರನೆ ದಿನ ನಡೆದ ಸಭೆಯಲ್ಲಿ ತೀರ್ಮಾನವಾದ ಸಂಗತಿಗಳೇನೆಂದರೆ :—

ಲಕ್ನೋ ಪಟ್ಟಣ, ೩ ನೆ ಡಿಸೆಂಬರ್.—ರೈಲ್ವೆ ಕಂಪೆನಿಯವರು ತರಗತಿಗಳನ್ನು ಅಷ್ಟು ಕಡಿಮೆಮಾಡಬೇಕೆಂದು ಯೋಚಿಸುತ್ತಿದ್ದಾರೆ. ಪ್ರಜೆಗಳು ಅಪೇಕ್ಷಿಸುವಂತೆ ಕೂಲಿ ಜನರಿಗಾಗಿಯೇ ಕಡಿಮೆ ದರವನ್ನಿಟ್ಟು ಪ್ರತ್ಯೇಕ ತರಗತಿಯನ್ನು ಹೊಸದಾಗಿ ಮಾಡಲು ಸಾಧ್ಯವಿಲ್ಲವೆಂದು ಹೇಳಿದರು. ಸಾಧ್ಯವಾದಷ್ಟುಗೂ ಪ್ರಯಾಣಿಕರನ್ನು ಸಾಮಾನು ಸಾಗಿಸುವ ವಾಗನ್ ಬಂಡಿಗಳಲ್ಲಿ ಕೂರಿಸುವುದಿಲ್ಲ ; ಆದರೆ ವಿಶೇಷ ಸಂದರ್ಭಗಳಲ್ಲಿ ಅಂದರೆ ದೊಡ್ಡ ದೊಡ್ಡ ಮೇಳ (ಜಾತ್ರೆಯ ದಿನ) ಗಳಲ್ಲಿ ಮಾತ್ರ ಈ ವಾಗನ್ ಬಂಡಿಗಳನ್ನು ಪ್ರಯಾಣಿಕರಿಗಾಗಿ ಉಪಯೋಗಿಸಬೇಕಾದೀತು. ಸ್ಟೇಷನ್‌ಗಳಲ್ಲಿ ಕೂತುಕೊಳ್ಳುವುದಕ್ಕೆ ಅನುಕೂಲವಾದ ಕೊಠಡಿ (ವೇಯಿಟಿಂಗ್ ರೂಂ) ಗಳನ್ನು ಕಲ್ಪಿಸಿಕೊಡುವೆವು ; ಸಣ್ಣ ಸಣ್ಣ ಫಲಾಹಾರ ಪದಾರ್ಥಗಳು ಸ್ಟೇಷನ್‌ಗಳಲ್ಲಿ ವಿಶೇಷವಾಗಿ ಸಿಗುವಂತೆ ಏರ್ಪಾಡು ಮಾಡಿಕೊಡುವೆವು. ಪ್ರಯಾಣಿಕರಿಗೆ ಗಾಡಿಗಳಲ್ಲಿ ಅಡಿಗೆ ಮಾಡಿಕೊಳ್ಳುವುದಕ್ಕೆ ಏರ್ಪಾಡು ಮಾಡಿಕೊಟ್ಟರೆ ಬಹು ಅಪಾಯ ಸಂಭವಿಸುವುದರಿಂದ ಅಲ್ಲಿ ಬೆಂಕಿ ಹೊತ್ತಿಕೊಂಡು ಅನಾಹುತವಾದೀತೋ ಎಂಬ ಭೀತಿಯುಂಟಾಗಿರುವ ಕಾರಣ ಅದಕ್ಕೆ ಅವಕಾಶ ದೊರಕಲಾರದು ; ಆದರೂ ಬಹು ಭೋಜನ ಪದಾರ್ಥಗಳನ್ನು ಗಾಡಿಗಳಲ್ಲೇ ಪ್ರತ್ಯೇಕವಾಗಿ ಇಟ್ಟು ತೆಗೆದುಕೊಂಡು ಹೋಗುವುದಕ್ಕೆ ಅನುಕೂಲಿಸುವಂತೆ ಹೊಸ ಏರ್ಪಾಡು ಮಾಡುತ್ತೇವೆ. ಸ್ತ್ರೀ ಪ್ರಯಾಣಿಕರ ವಿಷಯದಲ್ಲಿ ಪ್ರಜಾಪ್ರತಿನಿಧಿಗಳು ಕೇಳಿಕೊಂಡಿರುವ ಸೌಲಭ್ಯಗಳನ್ನೆಲ್ಲಾ ಕೊಡಲೇ ಒದಗಿಸಿಕೊಡುತ್ತೇವೆ.

ಈ ಪ್ರಕಾರ ರೈಲ್ವೆ ಕಂಪೆನಿಯ ಮುಖ್ಯಾಧಿಕಾರಿಯು ಸಭಿಕರಿಗೆ ಹೇಳಿ ಸಮಾಧಾನಪಡಿಸಿದರು. ಎಲ್ಲರೂ ಸಂತೋಷಪಟ್ಟು ಕಂಪೆನಿಯವರನ್ನು ಕೃತಜ್ಞತಾ ಪೂರ್ವಕವಾಗಿ ವಂದನೆ ಮಾಡಿದರು. ಸಭೆಯು ಮುಕ್ತಾಯವಾಯಿತು. ಈಗ ರೈಲ್ವೆ ಕಂಪೆನಿಯವರು ಈ ಸಭೆಯಲ್ಲಿ ನಡೆದಿರುವ ಸಂಗತಿಗಳನ್ನೆಲ್ಲಾ ಕುರಿತು ಒಂದು ದೊಡ್ಡ ರಿಪೋರ್ಟನ್ನು ತಯಾರುಮಾಡುತ್ತಿದ್ದಾರೆ. ಅದು ಸಿದ್ಧವಾದ ಕೂಡಲೇ ಅದರ ಪ್ರತಿಯನ್ನು ಇಂಡಿಯಾ ಗವರ್ನ್‌ಮೆಂಟಿಗೆ ಕಳುಹಿಸಿಕೊಟ್ಟು, ಅವರ ಅನುಮತಿಯನ್ನು ಪಡೆದುಕೊಳ್ಳುವರು.

## ಗತಿಸಿದ ಮೆ|| ಎಸ್. ಶ್ರೀನಿವಾಸರಾಘವೈಯ್ಯಂಗಾರ್ಯರು.

ದಕ್ಷಿಣ ದೇಶದಲ್ಲೆಲ್ಲಾ ಬಹಳ ಪ್ರಖ್ಯಾತಿಯನ್ನು ಪಡೆದಿದ್ದ ದಿವಾನ್ ಬಹದೂರ್ ಎಸ್. ಶ್ರೀನಿವಾಸರಾಘವೈಯಂಗಾರ್, ಸಿ. ಐ. ಇ. ಯವರು ಕಳೆದ ೧೧ ನೆ ತಾರೀಖು ಪ್ರಾತಃಕಾಲ ಮದರಾಸ್ ಪಟ್ಟಣದಲ್ಲಿರುವ ಸ್ವಗೃಹದಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಮರಣಕಾಲದಲ್ಲಿ ೫೪ ವಯಸ್ಸು ವಯಸ್ಸಾಗಿದ್ದಿತು. ಇವರು ಹಿಂದುಸ್ಥಾನದ ಪೊಲೀಸ್ ಕಮಿಷನ್‌ಗಾಗಿ ಏರ್ಪಟ್ಟ ಕಮಿಟಿಗೆ ಮೆಂಬರಾಗಿದ್ದು, ಸಿಂಲಾ ಪಟ್ಟಣಕ್ಕೆ ಹೋಗಬೇಕಾಯಿತು. ಅಲ್ಲಿಂದ ವಾಪಸು ಬಂದಾರಭ್ಯ—ಕೆಲವು ತಿಂಗಳಿಂದಲೂ ಕಾಯಿಲೆಯಲ್ಲಿ ಬಿದ್ದುಕೊಂಡರು ಅಂದಿನಿಂದ ನರಳುತ್ತಲೇ ಇದ್ದು ಕಾಲವಾದರು.

ಇವರು ತಂಜಾವೂರು ಡಿಸ್ಟ್ರಿಕ್ಟಿನವರು ; ೧೮೪೯ ನೆ ಮಾರ್ಚಿ ತಿಂಗಳಲ್ಲಿ ಜನಿಸಿದರು. ೧೮೭೩ ರಲ್ಲಿ ಬಿ. ಎ. ಪರೀಕ್ಷೆ ಕೊಟ್ಟು ಮೊದಲು ತಂಜಾವೂರು ಕಲೆಕ್ಟರ್ ಆಫೀಸಿನಲ್ಲಿ ಗುಮಾಸ್ತರಾಗಿ ಸೇರಿಕೊಂಡರು. ತರುವಾಯ ೧೮೮೫ ರಲ್ಲಿ ಇವರಿಗೆ ಮದರಾಸ್ ರೆವಿನ್ಯೂ ಬೋರ್ಡಿನಲ್ಲಿ ಕೆಲಸವಾಯಿತು. ಸರ್ ಚಾರ್ಲ್ಸ್ ಸ್ಟುವರ್ಟ್ಸ್ ಇವರು ಇವರ ಸಾಮರ್ಥ್ಯವನ್ನು ನೋಡಿ ಬಹಳ ಸಂತೋಷಪಟ್ಟು, ಇವರಿಗೆ ೧೮೯೯ ರಲ್ಲಿ ರಿಜಿಸ್ಟ್ರೇಷನ್ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಕೆಲಸ ದಯಪಾಲಿಸಿದರು. ಆಗ ಮೆ|| ಶ್ರೀನಿವಾಸರಾಘವೈಯಂಗಾರ್ಯರು ಮದರಾಸ್ ಅಧ್ಯಕ್ಷತೆ ಕಳೆದ ನಾಲ್ವತ್ತು ವರುಷಗಳಲ್ಲಿ ಎಷ್ಟರಮಟ್ಟಿಗೆ ಅಭಿವೃದ್ಧಿಯಾಯಿತು ಎಂಬ ವಿಷಯವಾಗಿ ಒಂದು ಪುಸ್ತಕವನ್ನು ಬರೆದು ಪ್ರಕಟಿಸಿದರು. ಅದನ್ನು ನೋಡಿ ಸರ್ಕಾರದವರೂ ಪ್ರಜೆಗಳೂ ಬಹಳ ಸಂತೋಷಪಟ್ಟರು. ಇವರಿಗೆ ೧೮೯೭ ರಲ್ಲಿ ಸಿ. ಐ. ಇ. ಎಂಬ ಘನತೆಯಾದ ಬಿರುದು ಕೊಡಲಾಯಿತು. ತರುವಾಯ ಇವರನ್ನು ಮಂತ್ರಾಲೋಚನಾ ಸಭೆಯ ಮೆಂಬರಾಗಿ ನೇಮಿಸಿದರು. ೧೮೯೮ ರಲ್ಲಿ ಬರೋಡಾ ಸಂಸ್ಥಾನದ ಮಹಾರಾಜರವರಿಗೆ ತಮ್ಮ ಸಂಸ್ಥಾನದ ದಿವಾನ ಕೆಲಸಕ್ಕೆ ಒಬ್ಬ ಯೋಗ್ಯರು ಬೇಕಾಯಿತು. ಆಗ ಮೆ|| ಶ್ರೀನಿವಾಸರಾಘವೈಯಂಗಾರ್ಯರನ್ನು ಕರೆಸಿಕೊಂಡು ತಮ್ಮ ದಿವಾನರನ್ನಾಗಿ ನೇಮಿಸಿಕೊಂಡರು. ಇವರು ಅಲ್ಲಿ ಮೂರು ವರುಷಗಳ ಕಾಲ ದಿವಾನಗಿರಿ ಮಾಡಿ, ಬಹಳ ಒಳ್ಳೇ ಹೆಸರು ಸಂಪಾದಿಸಿಕೊಂಡು ವಾಪಸು ಮದರಾಸಿಗೆ ಬಂದುಬಿಟ್ಟರು. ಆಗಿನ ಮದರಾಸ್ ಗವರ್ನ್‌ಮೆಂಟಿನವರು ಇವರನ್ನು ೧೯೦೧ ರಲ್ಲಿ ಮಂತ್ರಾಲೋಚನಾ ಸಭೆಗೆ ಮೆಂಬರಾಗಿ ನೇಮಿಸಿಕೊಂಡರು. ತರುವಾಯ ಲಾರ್ಡ್ ಕರ್ಜನ್ ಪ್ರಭುಗಳು ಹಿಂದುಸ್ಥಾನದ ಪೊಲೀಸ್ ಇಲಾಖೆಯನ್ನು ಪ್ರಮುಖಪಡಿಸುವುದಕ್ಕೋಸ್ಕರ ಮೆ|| ಶ್ರೀನಿವಾಸರಾಘವೈಯಂಗಾರ್ಯರನ್ನು ಒಬ್ಬ ಕಮಿಷನರಾಗಿ ನೇಮಿಸಿದರು. ಇದರಲ್ಲಿ ಇವರು ಮೆಂಬರಾಗಿದ್ದುಕೊಂಡು ಗವರ್ನ್‌ಮೆಂಟಿಗೂ ಪ್ರಜೆಗಳಿಗೂ ಅನುಕೂಲವಾದ ಅನೇಕ ಒಳ್ಳೊಳ್ಳೇ ಸಲಹೆಗಳನ್ನು ಕೊಟ್ಟರುತ್ತಾರೆಂದು ಗವರ್ನರಾದ ಲಾರ್ಡ್ ಆಂಪ್ಟಿಲ್ ಯವರು ತಿಳಿಸಿದ್ದಾರೆ.

ಮೊದಲಿಂದಲೂ ಇವರು ಅಷ್ಟೇನೂ ದೃಢಾಂಗಿಗಳಾಗಿರಲಿಲ್ಲ. ಹೊಸದಿ ದರ್ಬಾರಿಗೆ ಹೋಗಿ ಬಂದರು ; ಪೊಲೀಸ್ ಕಮಿಷನ್ ವಿಚಾರಣೆಗೋಸ್ಕರ ಹಿಂದುಸ್ಥಾನದಲ್ಲೆಲ್ಲಾ ಸುತ್ತಿಕೊಂಡು ಬಂದರು. ಇದೆಲ್ಲಾ ಸೇರಿ ಅವರ ಆರೋಗ್ಯ ಸ್ಥಿತಿಯನ್ನು ಕೆಡಿಸಿಬಿಟ್ಟಿತು. ಈಚೆಗೆ ಅವರು ಮನೆ ಬಿಟ್ಟು ಹೊರಗೆ ಬರಲೇ ಇಲ್ಲ. ಇವರು ಬಹಳ ವಿದ್ಯಾವಂತರು, ವಿಶೇಷ ಅನುಭವಶಾಲಿಗಳು, ತುಂಬಾ ಸಭ್ಯರು, ಸದ್ಗುಣ ಸಂಪನ್ನರು, ರೆವಿನ್ಯೂ ವಿಚಾರಗಳನ್ನೆಲ್ಲಾ ಬಹಳ ಚೆನ್ನಾಗಿ ತಿಳಿದವರು. ಇಂಥಾ ದೊಡ್ಡ ಮನುಷ್ಯರನ್ನು ಕಳೆದುಕೊಂಡುದಕ್ಕಾಗಿ ಇಂಡಿಯಾ ಗವರ್ನ್‌ಮೆಂಟಿನವರೂ, ಸರ್ವ ಪ್ರಜೆಗಳೂ ತುಂಬಾ ದುಃಖಪಡುತ್ತಾರೆನ್ನುವುದಕ್ಕೆ ಸಂದೇಹವಿಲ್ಲ.

## ಮಾಸಿಂಬಾಣಿಯ ಅನಾಹುತವು.

### ಮೈಸೂರು ಸರ್ಕಾರದವರಮೇಲೆ ದೂರು.

ಮೈಸೂರು ಸರ್ಕಾರದವರು ಕೋಲಾರ್ ಡಿಸ್ಟ್ರಿಕ್ಟಿನಲ್ಲಿರುವ ಕೆರೆಗಳಲ್ಲಿ ಬಹಳವಾಗಿ ನೀರನ್ನು ಕೂಡಿಸಿಟ್ಟುಕೊಂಡದ್ದರಿಂದ ಮಳೆ ನೀರು ಇನ್ನೂ ಹೆಚ್ಚಾಗಿ ಬಂದು ಆ ಕೆರೆಗಳನ್ನು ಒಡೆದುಬಿಟ್ಟು ದಲ್ಲದೆ, ಆ ನೀರೆಲ್ಲಾ ಪಾಲಾರ್ ನದಿಯಲ್ಲಿ ಬಿದ್ದು ಹೋಗಿ ವಾಸಿಂಬಾಡಿಯನ್ನು ಮುಳುಗಿಸಿ ನಾನಾ ಕಷ್ಟನಷ್ಟಗಳನ್ನುಂಟು ಮಾಡಿತೆಂದೂ, ಈ ನಷ್ಟದಲ್ಲಿ ಒಂದಂಶವನ್ನಾದರೂ ಮೈಸೂರು ಸರ್ಕಾರದವರು ಕೊಡುವಂತೆ ಮದರಾಸ್ ಗವರ್ನ್‌ಮೆಂಟಿನವರು ಒತ್ತಾಯ ಮಾಡಬೇಕೆಂದೂ ಒಬ್ಬ ಬಾತ್ಮೀದಾರರು ಮದರಾಸ್ ಪತ್ರಿಕೆಯಲ್ಲಿ ಬರೆದಿದ್ದರು. ಇದನ್ನು ನೋಡಿ ಮೈಸೂರಿನ ಒಬ್ಬ ಬಾತ್ಮೀದಾರರು ಅದೇ ಪತ್ರಿಕೆಯಲ್ಲಿ ಜವಾಬಾಗಿ—ಅಷ್ಟು ಅಪಾರವಾದ ಮಳೆ ಬರುವುದೆಂದು ಯಾರಿಗೂ ತಿಳಿಯಲು ಸಾಧ್ಯವಾಗಿದೆ ಎಂತಲೂ, ಅದು ದೈವಿಕವಾದದ್ದೇ ಹೊರತು ಮನುಷ್ಯನಿಂದ ಬೇಕೆಂದು ಮಾಡಿದ ಕಾರ್ಯವಲ್ಲವೆಂತಲೂ, ಆದುದರಿಂದ ಈ ಅನಾಹುತಕ್ಕೆ ಮೈಸೂರು ಸರ್ಕಾರದವರು ಕಾರಣರೆಂದು ದೂರುವುದೂ, ಅವರಿಂದ ನಷ್ಟಪರಿಹಾರ ಪಡೆಯಬೇಕೆಂದು ಕೇಳುವುದೂ ನ್ಯಾಯವಲ್ಲವೆಂತಲೂ ಸಮಾಧಾನವನ್ನು ಬರೆದು ಪ್ರಕಟಿಸಿದರು. ಈಚೆಗೆ ಬ್ಯಾಂಗಲೂರಿನ “ಡಕ್ಷಿಣವೃತ್ತ” ಎಂಬ ವರ್ತಮಾನಪತ್ರಿಕೆಯ ಎಡಿಟರಾದ ಮೆ|| ಡಿ. ವಿ. ಗುಂಡಪ್ಪನವರು ಮೈಸೂರಿನ ಬಾತ್ಮೀದಾರರ ವಾದಗಳನ್ನು ನೋಡಿ, ಕಾವೇರಿ ಒಂದು ಬಾತ್ಮಿಯನ್ನು ಬರೆದು ಮದರಾಸ್ ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ. ಈ ಬಾತ್ಮಿಯಲ್ಲಿರುವ ಮುಖ್ಯಾಭಿಪ್ರಾಯವನ್ನು ನಮ್ಮ ವಾಚಕರಿಗೋಸ್ಕರ ಇಲ್ಲಿ ವಿವರಿಸುವೆವು.

ಈ ಅನಾಹುತವು ಅನಿರೀಕ್ಷ್ಯವೂ ದೈವಿಕವೂ ಆದದ್ದೆಂದು ಹೇಳಿಬಿಟ್ಟು ಸುಮ್ಮನಾಗುವುದಕ್ಕೆ ಕೆಲವು ವಿಷಯಗಳು ಹ್ಯಾಗೆ ಹ್ಯಾಗಿದ್ದವೆಂಬುದನ್ನು ಪರಿಷ್ಕಾರವಾಗಿ ತಿಳಿದುಕೊಳ್ಳಬೇಕಾಗಿದೆಯಷ್ಟೆ. ಕೆರೆಗಳಲ್ಲಿ ನೀರು ತುಂಬಿಸಿಟ್ಟುಕೊಳ್ಳುವುದು ಅಕೃತ್ಯವಲ್ಲ. ಮೈಸೂರು ಗವರ್ನ್‌ಮೆಂಟಿನವರು ಕೆರೆಗಳಲ್ಲಿ ನೀರು ಕೂಡಿಸಿಕೊಂಡರೆಂದು ಅವರನ್ನು ದೂರಬಾರದು. ಯಾಕೆಂದರೆ ಈ ಕೆರೆಗಳ ನೀರೇ ಪಾಲಾರ್ ನದಿಗೆ ಮೂಲಾಧಾರವಾಗಿರುವುದು. ಆದರೆ ಮೈಸೂರು ಗವರ್ನ್‌ಮೆಂಟಿನವರು ಕೆರೆಗಳಲ್ಲಿ ನೀರು ಕೂಡಿಸಿಟ್ಟುಕೊಳ್ಳುವಾಗ್ಗೆ ಆ ಕೆರೆಗಳು ಒಡೆಯದಂತೆ ತಕ್ಕಷ್ಟು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದರೇ ವಿಚಾರವಾದ ಸಂಗತಿ. ನೋವೆಂಬರ್ ೧ ನೇ ತಾರೀಖಿನೊಳಗಾಗಿ ಆ ಪ್ರಾಂತ್ಯ ವಿಪರೀತ ಮಳೆಗಳು ಸುರಿದು ಕೋಲಾರು, ಬೌರಿಂಗಪೇಟೆ, ಮಾಲೂರು ತಾಲ್ಲೂಕುಗಳಲ್ಲಿ ಕೆರೆ ಕಟ್ಟೆಗಳು ತುಂಬಿಕೊಂಡಿದ್ದವು ಆದರೂ ಮಳೆಯು ಬಿಡದೆ ದಿನಾ ಸುರಿಯುತ್ತಲೇ ಇದ್ದಿತು. ೧೦—೧೧ನೆ ತಾರೀಖುಗಳಲ್ಲಿ ಕೋಲಾರು ಡಿಸ್ಟ್ರಿಕ್ಟಿನ ಸುಮಾರು ೩೬ ಗಂಟೆಗಳಲ್ಲಿ ಅಪೂರ್ವವಾಗಿ ೧೯ ಅಂಗುಲ ಮಳೆ ಸುರಿಯಿತು ಎಂದು ತಿಳಿದು ಬರುತ್ತದೆ. ಇದಲ್ಲದೆ ಪಾಲಾರ್ ನದಿಯ ಉದ್ಗಮಕ್ಕೆ ಇರುವ ಕೆರೆಗಳ ಪೈಕಿ ಬೇತಮಂಗಲದ ಕೆರೆಯೇ ಆ ನದಿಯ ಮೇಲ್ಭಾಗದಲ್ಲಿರುವುದು. ಈ ಕೆರೆಯೂ ಅದರ ಮೇಲಿರುವ ಅನೇಕ ಕೆರೆಗಳೂ ೧೧ನೆ ತಾರೀಖು ಪ್ರಾತಃಕಾಲ ೪ ಗಂಟೆಗೆ ಒಡೆದುಹೋದವು. ತರುವಾಯ ವಿಶೇಷವಾಗಿ ಸೋರಿಕೆಯಿಂದ, ಮುಖ್ಯವಾಗಿ, ಕೋಲಾರು ಕೆರೆಗಳು ಒಡೆದು, ಆ ನೀರೆಲ್ಲಾ ಭಾರೀ ಪ್ರವಾಹದ ಬೇತಮಂಗಲ ಕೆರೆಗೆ ಬಂದು ಬೀಳುತ್ತಿದ್ದಲ್ಲಿ ಸಾಯಂಕಾಲ ೪ ಗಂಟೆ ಹೊತ್ತಾಯಿತು. ಅದೇ ರಾತ್ರಿ ೭ ಗಂಟೆಗೆ ಬೇತಮಂಗಲದ ಕೆರೆ ಒಡೆದು ಹೋಯಿತು. ತರುವಾಯ ಸಮುದ್ರಾತ್ರಿಯಲ್ಲಿ ಅದೇ ರೀತಿಯಲ್ಲಿ ಮೊದಲನೇ ಭಾರೀ ಕೆರೆಯಾದ ರಾಮಸಾಗರ ತಲಾವಿನ ಏರಿ ಕಿತ್ತುಹೋಯಿತು. ಈ ಪ್ರಕಾರ ಕೆರೆಗಳು ಒಡೆದು ಹುಗ್ಗದ ನೀರಿನಿಂದ ಉತ್ಕಟವಾಗಿ ಎಷ್ಟು ಅನರ್ಥಉಂಟಾಯಿತೋ ಅದನ್ನು ಸರ್ವರಿಗೂ ತಿಳಿದಿರುವುದು. ಈ ಕೆರೆಗಳಿಗೆ ಒಂದರಿಂದೊಂದಕ್ಕೆ ಬೇಗನೆ ಹೋಗಿ ಬರಲು ಮಾರ್ಗಗಳಿದ್ದಿದ್ದರೆ ಬೇಕಾದಷ್ಟು ಸಂಬಂಧವಿದೆ. ಒಂದು ಪಕ್ಷ ಮಾರ್ಗಗಳಲ್ಲಿದ್ದರೂ ಇಂಥಾ ವಿಶೇಷ ಸಂದರ್ಭಗಳಲ್ಲಿ ಅವು ಕಾಲು ನಡಿಗೆಗೆ ಅನುಕೂಲವಾಗಿರುವಂತೆಯೂ, ಮೇಲಿರುವ ಕೆರೆಗಳು ಒಡೆದು ಹೋಗಿರುವ ವರ್ತಮಾನ ತಿಳಿಸಿಕೊಂಡು ಇತರ ಕೆರೆಗಳಿಗೆ ತಿಳಿಸಿ ಜನರನ್ನು ಎಚ್ಚರಿಸುವಂತೆಯೂ ಏರ್ಪಾಡು ಮಾಡಬೇಕಾಗಿತ್ತು. ಅಥವಾ ಹೆಚ್ಚು ಏರಿದ ನೀರಿನ ಸಾಮರ್ಥ್ಯವನ್ನು ಕಡಿಮೆಮಾಡುವುದಕ್ಕೆ ಕೆರೆಗಳ ತೂಬು ಎತ್ತುವುದು, ಕೋಡಿ ತಗ್ಗಿಸುವುದು, ಕಾಲುವೆಗಳ ಮೂಲಕ ನೀರು ಬಿಡುವುದು, ಇವೇ ಮುಂತಾದ ಮುಂಜಾಗ್ರತೆಯ ಕಾರ್ಯಗಳನ್ನು ಮಾಡಬೇಕಾಗಿತ್ತು. ಮುಖ್ಯವಾಗಿ ಇವರು ದೊಡ್ಡ ಕೆರೆಗಳಲ್ಲಾದರೂ ನೀರು ಅಷ್ಟೊಂದು ನಿಲ್ಲದಂತೆ ಏರ್ಪಾಡು ಮಾಡಿದ್ದರೆ ಸಾಕಾಗಿತ್ತು. ಮೈಸೂರು ಸರ್ಕಾರದವರು ಇನ್ನು ಪಾರು ಇರಿಸಿದ್ದರೆ ಬೆಳಗಿನ ೪ ಘಂಟೆ (ರಾಮಸಾಗರದ ಕೆರೆ ಒಡೆದ ಹೊತ್ತು) ಯಿಂದ ಸಾಯಂಕಾಲ ೯ ಗಂಟೆಯೊಳಗಾಗಿ ಸಾಕಷ್ಟು ಕಾಲಾವಕಾಶ ಇರುವುದರಿಂದ ಪೇಟೆ ಮಾರ್ಗವಾಗಿ ಒಂದು ಕಾಗದ ಬರೆದು ಬೇತಮಂಗಲದ ಕೆರೆಯನ್ನು, ಅಲ್ಲಿಂದ ವಾಣಿಯಂಬಾಡಿಯ ರಾಮಸಾಗರ ತಲಾವನ್ನೂ ಒಡೆದು ಹೋಗದಂತೆ ಕಾಪಾಡಿಕೊಳ್ಳಬಹುದಾಗಿತ್ತು.

ಮೈಸೂರು ಗವರ್ನ್‌ಮೆಂಟಿನವರು ಈ ಅನಾಹುತಕ್ಕೆ ಕಾರಣರೆಂಬುದಕ್ಕೆ ಇನ್ನೊಂದು ಕಾರಣವನ್ನು ಹೇಳುವೆನು. ಕಳೆದ ಸೆಪ್ಟಂಬರ್ ಕಡೇ ವಾರದಲ್ಲಿ ವಾಣಿಯಂಬಾಡಿಯ ಮ್ಯುನಿಸಿಪಲ್ ಛೇರ್‌ಮನ್ ಮೆ|| ವಿಟ್ಟಯವರು—ಪಾಲಾರ್ ನದಿಯ ಉದ್ಗಮಕ್ಕೆ ಇರುವ ಕೆರೆಗಳು ಒಡೆಯುವ ಸ್ಥಿತಿಗೆ ಬಂದಾಗ ಆ ಸಂಗತಿಯನ್ನು ಸರ್ಕಾರದವರು ತಮಗೆ ಬರೆದು ತಿಳಿಸಬೇಕು ಎಂಬದಾಗಿ ಮೈಸೂರು ಅಧಿಕಾರಿಗಳಿಗೆ ಕಾಗದ ಬರೆದಿದ್ದರು. ಇದಕ್ಕೆ ಅನುಸಾರವಾಗಿ ಕೋಲಾರದ ಡೆಪ್ಯುಟಿ ಕಮಿಷನರ್ (ಅಮಲ್ದಾರು) ನೋವೆಂಬರ್ ೩ ರಲ್ಲಿ ಆ ವರೆಗೆ ತಂತೀ ವರ್ತಮಾನ ಕೊಟ್ಟು, ಕೆಲವು ಕೆರೆಗಳು ಒಡೆಯುವ ಅಪಾಯದ ಸ್ಥಿತಿಯಲ್ಲಿವೆ ಎಂದು ತಿಳಿಸಿದರು. ಇದರ ಹಿಂದೆ ಒಂದು ಕಾಗದವೂ ಬಂತು. ಮೆ|| ವಿಟ್ಟಯವರು ಇದನ್ನು ನೋಡಿದ ಕೂಡಲೇ ವಾಣಿಯಂಬಾಡಿಯ ಊರಿನಲ್ಲೆಲ್ಲಾ ಟಾಂಟಾಂ ಹೊಡಿಸಿ ಜನರಿಗೆ ಎಚ್ಚರಿಕೆ ಕೊಟ್ಟರು. ಅಲ್ಲಿಂದೀಚೆಗೆ ಬೇತಮಂಗಲದ ಕೆರೆ ಒಡೆಯುವ ತನಕ (೧೧ನೇ ತಾರೀಖು ರಾತ್ರಿ ೭ ಗಂಟೆ ತನಕ) ಇನ್ನಾವ ಸಮಾಚಾರವೂ ಬರಲಿಲ್ಲ. ಆಗ ತಿಳಿಸಿದ್ದು ಅಕಾಲವಾಯಿತು. ಪ್ರವಾಹವೆಲ್ಲಾ ಊರನ್ನು ಮುಳುಗಿಸಿದ ತರುವಾಯ ಕೆರೆ ಒಡೆಯಿತೆಂಬ ತಂತೀ ಕಾಗದವು ೧೨ನೇ ತಾರೀಖು ಪ್ರಾತಃಕಾಲ ಮೆ|| ವಿಟ್ಟಯವರಿಗೆ ತಲುಪಿತು. ಆದುದರಿಂದ ಈ ಸಂದರ್ಭದಲ್ಲಿ ದೂರು ಮೈಸೂರು ಅಧಿಕಾರಿಗಳ ಮೇಲೆ ಹೊರುತ್ತದೆ. ರಾಮಸಾಗರದ ಕೆರೆ ಒಡೆದ ಕೂಡಲೇ ಬೆಳಿಗ್ಗೆಯೇ ಇವರು ತಂತೀ ವರ್ತಮಾನ ಕೊಟ್ಟಿದ್ದರೆ ವಾಣಿಯಂಬಾಡಿಯವರಿಗೆ ಇಷ್ಟೊಂದು ನಷ್ಟವೂ ಕಷ್ಟವೂ ಪ್ರಾಪ್ತವಾಗುತ್ತಿರಲಿಲ್ಲ. ಪ್ರಾಣನಷ್ಟವಾಗುತ್ತಿರಲಿಲ್ಲವೆಂಬುದು ಖಂಡಿತ. ಪದಾರ್ಥಗಳನ್ನು ಉಳಿಸಿಕೊಳ್ಳಬಹುದಾಗಿತ್ತು. ಈ ಕಾರಣಗಳ ದೆಸೆಯಿಂದ ಕಷ್ಟನಷ್ಟಕ್ಕೆ ಸಿಕ್ಕಿ ನಿರ್ಗತಿಕರಾಗಿರುವ ವಾಣಿಯಂಬಾಡಿಯ ಪ್ರಜೆಗಳಿಗೆ ಮೈಸೂರು ಗವರ್ನ್‌ಮೆಂಟಿನವರು ಸಹಾಯ ಸಂಪತ್ತನ್ನು ಒದಗಿಸಿಕೊಡಬೇಕೆಂದು ಬೇಡುತ್ತೇವೆ.

## ಇಂಡಿಯಾ ದೇಶದ ವೃತ್ತಾಂತಗಳು.

ಅಸ್ಸಾಮಿಗೆ ಸೇರಿದ ಚಿರಾಪುಂಜಿಯಲ್ಲಿ ಇದುವರೆಗೆ ೪೦೦ ಅಂಗುಲ ಮಳೆ ಸುರಿದಿದೆ.

****

ಮೊರಾದಾಬಾದಿನ ರಾಣಿ ಕಿಷೋರಿ ಎಂಬಾಕೆಯು ಬಾರೀಲಿ ಪಟ್ಟಣದಲ್ಲಿರುವ ಹಿಂದೂ ವಿದ್ಯಾಶಾಲೆಯ ಮೂಲಧನಕ್ಕೆ ೫,೦೦೦ ರೂ. ಧರ್ಮ ಕೊಟ್ಟಿರುತ್ತಾರೆ.

****

ನೇಪಾಳ ಸಂಸ್ಥಾನದ ಪ್ರತಿನಿಧಿಯಾದ ರಾಜಾ ಪೃಥ್ವಿಪತಿ ಬಹದೂರ್ ಎಂಬ ದೊಡ್ಡ ಮನುಷ್ಯರು ಕೆಲವು ರಾಜಕೀಯ ವಿಷಯಗಳನ್ನು ಆಲೋಚಿಸುವುದಕ್ಕಾಗಿ ಕಳೆದ ವಾರ ಕಲ್ಕತ್ತಾ ಪಟ್ಟಣಕ್ಕೆ ಬಂದಿರುತ್ತಾರೆ.

****

ಹೈದರಾಬಾದ್ ಸಂಸ್ಥಾನದ ಸೈನ್ಯ ಇಲಾಖೆಯ ಮಂತ್ರಿಯಾಗಿರುವ ನವಾಬ್ ಅಫ್ಸರ್ ಜಂಗ್ ಬಹದೂರ್ ಯವರನ್ನು ವಿಲಾಯತಿಯಲ್ಲಿರುವ ಚಕ್ರವರ್ತಿ ಅಂಗರಕ್ಷಕ ಮಂದಿರಿಗೆ ಒಬ್ಬ ಮೆಂಬರಾಗಿ ನೇಮಿಸಿರುತ್ತಾರೆ.

****

ಸಿಲೋನ್ ದ್ವೀಪದಲ್ಲಿರುವ ಕೆಲವು ಭಾರೀ ತೋಟಗಾರರು ಆಸ್ಟ್ರೇಲಿಯಾ ದ್ವೀಪದಿಂದ ತಿನಸುವಾರಿ ಫಲವೃಕ್ಷಗಳನ್ನು ತರಿಸಿ ತಮ್ಮ ತೋಟಗಳಲ್ಲಿ ಹಾಕಿ ಬೆಳೆಸುತ್ತಿದ್ದಾರೆ. ಇತ್ತಲೆ ಗಿಡಗಳಲ್ಲೇ ೧೦ ಜಾತಿಯವು ಬಂದಿರುತ್ತವೆ.

****

ಮೈಸೂರು ಸಂಸ್ಥಾನದ ರಾಜರು ಕಾಲವಾದಾರಭ್ಯ ಆ ಸಂಸ್ಥಾನದಲ್ಲಿ ಯಾವದೂ ಸಂತೋಷೋತ್ಸವಗಳನ್ನು ಆಚರಿಸಕೂಡದೆಂದು ತಿಳಿಸಿದ್ದರು. ಈಗ ಹೊಸ ರಾಜರಿಗೆ ಪಟ್ಟವಾಗಿದೆ. ಆದಕಾರಣ ಅದರ ಆ ನಿರ್ಬಂಧವನ್ನು ತೆಗೆದುಹಾಕಿರುತ್ತಾರೆ.

****

ಬಸ್ತಿ ಪ್ರಾಂತ್ಯದಲ್ಲಿ ಕಳೆದ ವಾರ ೭೦ ಪ್ಲೇಗುಗಳು ಮುಟ್ಟಿಹೋದವು ; ೧,೭೬೩ ಮಂದಿ ಜನಗಳು ಸತ್ತುಹೋದರು ; ಆದಾಗ್ಯೂ ವಿದ್ಯಾಭ್ಯಾಸವು ಪ್ರತಿವರ್ಷವಾಗಿ ವೃದ್ಧಿ ಹೊಂದುತ್ತಿದೆ ಎಂಬದಾಗಿ ಸರ್ಕಾರಿ ರಿಪೋರ್ಟಿನಲ್ಲಿ ಪ್ರಕಟವಾಗಿದೆ.

[illegible] ಪ್ರಾಂತದ ಮುನ್ಸಿಪಾಲಿಟಿಗೆ ಮುಂಡಿನ ವರುಷ [illegible] ರೂಪಾಯಿ ಉತ್ಪತ್ತಿ ಯಾಗುವುದೆಂದೂ, ಆ ವೈಕಿ [illegible] ರೂ ಖರ್ಚಾಗುವುದೆಂದೂ, ಆ ಊರಿಗೆ ಹೋಗುವ [illegible] ಸುಂಕವು ೧೬,೧೦೦೦ರೂ. ಹಣ ಹುಟ್ಟುವದು ಆ [illegible] ಪ್ರಕಟವಾಗಿದೆ.

◆◆◆◆

[illegible]ಸ್ಥಾನದಲ್ಲಿ ಈ ವರುಷದ ಆದಿಯಿಂದ ಇದುವರೆಗೆ [illegible] ಸುಂಕದಿಂದ ೫,೧೯,೨೦,೫೭೫ರೂ. ಹುಟ್ಟುವದು ಆಗಿದೆ [illegible] ಸರಕಾರದವರು ೧೨ ತಿಂಗಳಿಗೆ ಎಷ್ಟು ಉತ್ಪತ್ತಿ ಬರುವ [illegible] ಅಂದಾಜು ಕಟ್ಟಿದ್ದರೋ ೮ ತಿಂಗಳಲ್ಲೇ ಅದಕ್ಕಿಂತಲೂ [illegible] ಹೆಚ್ಚು ಜಾಸ್ತಿ ಆಗಿರುವುದು.

◆◆◆◆

ವಾಯವ್ಯ ಪ್ರಾಂತ್ಯಗಳಿಗೆ ಸೇರಿದ ಗವರ್ನರ್ [illegible] [illegible] ಸರ್ವೆ ಕಾಲೇಜು ಭೂಗರ್ಭ ಶಾಸ್ತ್ರ [illegible] ಕಂಡುಹಿಡಿದಿದ್ದಾರೆ. ಅದನ್ನು ತೋಡಿ ಅಲ್ಲಿ [illegible] ತೆಗೆಯಬೇಕೆಂದು ಕೆಲವು ಮಂದಿ ವರ್ತಕರು [illegible] ಒಂದು ಕಂಪನಿ ಮಾಡಿಕೊಂಡಿದಾರೆ.

◆◆◆◆

[illegible] ಪಟ್ಟಣದ [illegible] ಬೀದಿಯಲ್ಲಿ [illegible] ಅಲ್ಫೋನ್ಸ್ ಮತ್ತು [illegible] ಮೂರು [illegible] ಬೆಂಕಿ ಬಿದ್ದು ಸುಮಾರು ಒಂದು [illegible] ಸುಟ್ಟುಹೋದವು.

◆◆◆◆

[illegible] ಸಂಸ್ಥಾನದ ಮಹಾರಾಜರವರು ಶರೀರಾರೋಗ್ಯ [illegible] ದೇಶಾಟನೆ ಮಾಡುತ್ತಿದಾರಷ್ಟೆ. ಅವರು [illegible] ರಾಜಧಾನಿಯಾದ [illegible] ಪ್ರಕಟವಾಗಿದೆ.

◆◆◆◆

[illegible]

◆◆◆◆

ಕಲ್ಕತ್ತೆಯಲ್ಲಿ [illegible] ಕಲ್ಕತ್ತೆ ವಿಶ್ವವಿದ್ಯಾಲಯದ [illegible] ಕೊಟ್ಟವರಾಗಿದ್ದ [illegible] ತೆಗೆಯಬೇಕೆಂಬುದು [illegible] ಶಾಲೆಗಳು ಬಂದಿರುವುವು. ಈ ಮೆಮೋರಿಯಲ್ ಫಂಡಿಗೆ [illegible] ಸಂಸ್ಥಾನದ ಮಹಾರಾಜರವರು ಒಂದು ಲಕ್ಷ ರೂಪಾಯಿ [illegible] ಕೊಟ್ಟಿದ್ದರು. ಈಗ ಮತ್ತೆ ಅವರು [illegible] ಲಕ್ಷ ರೂಪಾಯಿ [illegible] ಪತ್ರಿಕೆಯು ತಿಳಿಸುತ್ತದೆ.

◆◆◆◆

ಆರೋಗ್ಯ ವಿಚಾರದಲ್ಲಿ ವಿಶೇಷ [illegible] [illegible] ವೈದ್ಯರು ಹೇಳುವ [illegible] [illegible]

◆◆◆◆

[illegible]

◆◆◆◆

[illegible]

◆◆◆◆

[illegible]

## [illegible]

[illegible]

ವಿಷಯವು ಹಾಗೇ ನಿಂತುಕೊಂಡಿತು. ಈಗ ಈ ಮಠದ ಶಿಷ್ಯ ಕುಟುಂಬಸ್ಥರುಗಳಿಂದ ಪಡೆಯಲಾದ ಈ ಭೂಮಿಯಲ್ಲಿ ಮಠದ ಕಿವೇರಿಯನ್ನು ಮಾಡಿಕೊಳ್ಳುತ್ತಿದ್ದನೆಂತಲೂ, ಈ ತೋಟದ ಅಮೂಲ್ಯ ಪ್ರದೇಶವನ್ನು ಚೊಕ್ಕಟವಾಗಿಯೂ ಆರೋಗ್ಯಕರವಾಗಿಯೂ ಇಟ್ಟುಕೊಳ್ಳುವದಕ್ಕೂ ಈ ಹಣವನ್ನು ಖರ್ಚುಮಾಡುತ್ತಿದ್ದನೆಂತಲೂ, ಆದಕಾರಣ ಈಗ ಮಾತ್ತ ಆ ಭೂಮಿಯನ್ನು ತಾವು ಪಡೆದುಕೊಳ್ಳುವದಕ್ಕೆ ನಮಗೆ ಅಪ್ಪಣೆ ಕೊಡಬೇಕೆಂತಲೂ ತಿಳಿಸುತ್ತಾರೆ.

ಈ ವಿಷಯಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನೆಲ್ಲಾ ನೋಡಲಾಗಿ ಮಠದವರು ಅನೇಕ ವರುಷಗಳಿಂದಲೂ ಈ ಭೂಮಿಯನ್ನು ಅನುಭವಿಸುತ್ತಿದ್ದರೆಂತಲೂ, ತೋಟವನ್ನು ಅವರ ಅಮೂಲ್ಯವನ್ನು ನಿರ್ಮಲವಾಗಿಯೂ ಇಟ್ಟುಕೊಳ್ಳಬೇಕಾದ ಭಾರವು ಮಠದವರ ಮೇಲೆ ಬಿದ್ದಿರುವುದೆಂತಲೂ ತಿಳಿದು ಬರುತ್ತೆ. ಆದಕಾರಣ ಮಠದವರು ಈ ಭೂಮಿಯನ್ನು ೧೯೦೪ ನೇ ಡಿಸೆಂಬರ್ ೧ ನೇ ತಾರೀಖು ಶಿಷ್ಯ ಕುಟುಂಬಸ್ಥರಿಂದ ಪಡೆದುಕೊಳ್ಳಬಹುದೆಂದು ಗವರ್ನಮೆಂಟಿನವರು ಅವರಿಗೆ ಅಪ್ಪಣೆ ಕೊಟ್ಟಿರುತ್ತಾರೆ. ಮಠದವರು ಅದಿಗೆ ೭ ವರುಷಗಳಿಂದಲೂ ಜಾಸ್ತಿ ಭೂಮಿ ಪಡೆದುಕೊಂಡವರಾಗಿಯೂ, ಮತ್ತು ಮಠದವರು ಆ ತೋಟವನ್ನು ಒಂದು ಸಾರ್ವಜನಿಕ ಪ್ರದೇಶವನ್ನಾಗಿ ಕಾಪಾಡಬೇಕು.

ಬೆಂಗಳೂರು ತಾಲ್ಲೂಕಿನ ಹರದೇವರ ದೇವಸ್ಥಾನ

ಮೆ॥ ಬಿ ಅಪ್ಪಾಜಿರಾಯರು ಮೊದಲಾದವರು ತಾಲ್ಲೂಕಿಗೆ ಸೇರಿದ ಬೆಂಗಳೂರು ಪೇಟೆಯಲ್ಲಿ ಕಟ್ಟಿಸಿರುವ ಹರದೇವರ ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಸೇರಿಸಿಕೊಳ್ಳಬೇಕೆಂದು ಕೇಳುತ್ತಾರೆ ಇದನ್ನು ಸ್ಯಾಂಕ್ಷನ್ ಮಾಡಿದೆ ಅದಕ್ಕೆ ಅವರು ಕಾಣಿಕೆ ೨,೦೦೦ ರೂ ಭೂವಸ್ತುವನ್ನು ಕಂಟ್ರೋಲಿನವರು ವಹಿಸಿಕೊಳ್ಳತಕ್ಕದ್ದು ಈ ಹಣದಲ್ಲಿ ವರುಷಕ್ಕೆ ೬೦ ರೂ. ಬಡ್ಡಿ ಉತ್ಪತ್ತಿಯಾಗುವುದು ಇದರ ವಿನಿಯೋಗ ಪ್ಯಾಗಂಪರ —

| | |
|---|---|
| ಅರ್ಚಕ (ಮಧ್ವಬ್ರಾಹ್ಮಣ) ವಗೆ | ರೂ ೩೦ |
| ದೀಪಕ್ಕೆ | ,, ೧೮ |
| ಗುಡಿಸುವವನಿಗೆ | ,, ೭ |
| ನೈವೇದ್ಯಕ್ಕೆ | ,, ೧೫ |
| ಒಟ್ಟು | ರೂ ೬೦ |

ಸಿಬ್ಬಂದಿ ಕಡೇ ಪಕ್ಷ ಕೆಲಸಗಳನ್ನೂ ಒಬ್ಬ ಬ್ರಾಹ್ಮಣ ಸ್ತ್ರೀಯು ತೃಪ್ತಿಕರವಾಗಿ ನಡೆಸಿಕೊಳ್ಳುತ್ತಿರುವದರಿಂದ ಅವರಿಗೇ ಆ ಮೂರು ಬಾಬುಗಳ ಸಂಬಳವನ್ನೂ ಕೊಡುತ್ತಾ ಬರಬೇಕು. ಬೆಂಗಳೂರು ಪೇಟೆಯ ಸರ್ಕಾರಿ ಸತ್ರದ ಪಾಕಶಾಲೆಯ ಮಧ್ವ ಬ್ರಾಹ್ಮಣನಿಗೇ ಅರ್ಚಕನ ತಲಬೂ ಸಂದಾಯವಾಗಬೇಕು. ಅವನು ಸತ್ರದ ಕೆಲಸವನ್ನೂ ಈ ದೇವಸ್ಥಾನದ ಅರ್ಚನಾ ಕೆಲಸವನ್ನೂ ತೃಪ್ತಿಕರವಾಗಿ ನೋಡಿಕೊಂಡುಬರುವ ವಿಚಾರದಲ್ಲಿ ಅಮಲ್ದಾರರು ಆಗ್ಗಾಗ್ಗೆ ತನಿಖೆಮಾಡುತ್ತಿರಬೇಕು ಇನ್ನು ಮುಂದೆ ಅರ್ಚಕನ ಕೆಲಸ ಖಾಲಿಬಿದ್ದು ಹೊಸಬನನ್ನು ನೇಮಿಸುವಾಗ್ಗೆ ಮೆ॥ ಅಪ್ಪಾಜಿರಾಯರ ಅಭಿಪ್ರಾಯವನ್ನೂ ತೆಗೆದುಕೊಳ್ಳಬೇಕು.

ಗಡಗಿಹಳ್ಳಿ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ

ತುಮಕೂರ್ ತಾಲ್ಲೂಕ್ ಗಡಗದ ಹಳ್ಳಿ ಶ್ರೀ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಲೇಟ್ ಕೃಷ್ಣರಾಜ ಒಡೆಯರ್ ಬಹದೂರ್ ಅವರು ೧೮೧೫ ರಲ್ಲಿ ಗಡಗದಹಳ್ಳಿ, ತಿಮ್ಮಸಂದ್ರ ಎಂಬೀ ಎರಡು ಗ್ರಾಮಗಳನ್ನು ಜೋಡಿ ಬಿಟ್ಟುಕೊಟ್ಟರು. ಈಗ ಮೆ॥ ಎಚ್. ರಾಮಸ್ವಾಮಯ್ಯಂಗಾರರು ದೇವಸ್ಥಾನದ ಆದಾಯಗಳನ್ನು ನೋಡಿಕೊಳ್ಳುತ್ತಿದ್ದಾರೆ ಹಿಂದಿನ ಹಿರೀಸಾವೇ ರಾಮಯ್ಯ ನೆಂಬವರು ದೇವಸ್ಥಾನದ ಕಾರುಬಾರುಗಳು ಸಮರ್ಪಕವಾಗಿಲ್ಲ ವೆಂಬುದಕ್ಕೆ ಅನೇಕ ಅರ್ಜಿಗಳನ್ನು ಶ್ರೀಮನ್ ಮಹಾರಾಜರವರಿಗೂ ಬರೆದುಕೊಂಡರು ಈ ವಿಷಯವನ್ನು ಡೆಪ್ಯುಟಿ ಕಮಿಷನರಿಂದ ಅನ್ನಾಗಿ ತನಿಖೆ ಮಾಡಿಸಲಾಯಿತು ಧರ್ಮದರ್ಶಿಗಳಾದ ಮೆ॥ ಎಚ್. ರಾಮಸ್ವಾಮಯ್ಯಂಗಾರರ ವಂಶೀಕರು ೧೯೭೫ ರ ಲಾಗಾಯ್ತು ಆ ಗ್ರಾಮಗಳನ್ನು ಉಂಬಳಿಯಾಗಿ ದೇವಸ್ಥಾನದ ಕಾರುಬಾರುಗಳನ್ನು ನೋಡಿಕೊಳ್ಳುತ್ತಾ ಬಂದಿದ್ದಾರೆ ಅನುಭವಮಾಡಿದ್ದರಲ್ಲಿ ದೇವಸ್ಥಾನದ ಹಣ ಕಾಸು ದುರ್ವಿನಿಯೋಗವಾಗಿಲ್ಲವೆಂದು ತಿಳಿದು ಬರುತ್ತೆ. ಅದಕಾರಣ ಅವರೇ ದೇವಸ್ಥಾನದ ಮ್ಯಾನೇಜರಾಗಿದ್ದುಕೊಂಡಿರಬೇಕು ಅವರು ಕ್ರಮವಾಗಿ ಪೂಜಾದಿಗಳನ್ನು ನಡೆಸುತ್ತಿದ್ದು ಲೆಕ್ಕವನ್ನು ಅಮಲ್ದಾರರಿಗೆ ಒಪ್ಪಿಸುತ್ತಾ ಬರಬೇಕು ಹಿರೀಸಾವೆ ರಾಮಯ್ಯನವರ ಅರ್ಜಿಯನ್ನು ವಜಾಮಾಡಿದೆ.

## ಮೈಸೂರು ಗೆಜೆಟ್ ಸಂಗ್ರಹ.

ಮುಂದೆ ಹೇಳುವ ಅಮಲ್ದಾರರುಗಳಿಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿವೆ — ಬೇಲೂರ್ ತಾಲ್ಲೂಕು ಅಮಲ್ದಾರ್ ಮೆ॥ ಎಸ್ ಕೃಷ್ಣ ರಾಯರು, ದೊಡ್ಡಬಳ್ಳಾಪುರ ತಾಲ್ಲೂಕ್ ಅಮಲ್ದಾರ್ ಮೆ॥ ಜೆ ಬಾಲ್ ಯವರು, ಶಿರಾ ತಾಲ್ಲೂಕ್ ಅಮಲ್ದಾರ್ ಮೆ॥ ಬಿ ಸಿ ಕೃಷ್ಣಶಾಸ್ತ್ರಿಯವರು.

ದಾವಣಗೆರೆ ಅಸಿಸ್ಟೆಂಟ್ ಕಮಿಷನರ್ ಮೆ॥ ಸಿ. ಶ್ರೀಕಂಠೇಶ್ವರ ಅಯ್ಯರವರನ್ನು ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿದೆ.

ಮೆ॥ ಎಚ್ ವೆಂಕಟರಮಣ ಅಯ್ಯಂಗಾರ್ಯರನ್ನು ನವೆಂಬರ್ ೧೮ ಲಾಗಾಯ್ತು ಮ್ಯಾಜಿಸ್ಟ್ರೇಟ್ ಮತ್ತು ಕಲೆಕ್ಟರ್ ಅಧಿಕಾರ ೭ನೇ ಆ... ಬಾಬಿಯಲ್ಲಿ ... [illegible]

ಡಿಸೆಂಬರ್ ೨೦ನೇ ... [illegible] ... [illegible] ... ಕೃಷ್ಣ ... [illegible] ... [illegible]

ಟಕೂರಿ ಕೆಲಸಗಳು ನಡೆಯಲು ಇಲಾಖಾ ಮುಖ್ಯಸ್ಥರು ಏರ್ಪಾಡು ಮಾಡತಕ್ಕದ್ದು. ಈ ರಜಾ ತಾಲ್ಲೂಕ್ ಬೋರ್ಡರಿಗೂ, ಅರಣ್ಯಇಲಾಖೆ ಮತ್ತು ಪ್ಲೇಗ್ ಡ್ಯೂಟಿಗಳಮೇಲೆ ಇರುವ ಅಧಿಕಾರಿಗಳಿಗೂ ನೌಕರರಿಗೂ ಅನ್ವಯಿಸುವದಿಲ್ಲ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿರುವ ಸಿವಿಲ್ ಸರ್ಜನ್ ಮೆ॥ ಟಿ ಎಚ್. ಹಂಜಸ್ವಾಮಿರವರನ್ನು ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರವರ ಪರ್ಸನಲ್ ಅಸಿಸ್ಟೆಂಟಾಗಿ ನೇಮಿಸಿರುತ್ತೆ.

ಬೆಂಗಳೂರ್ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿರುವ ಸಬ್ ಅಸಿಸ್ಟೆಂಟ್ ಸರ್ಜನ್ ಮೆ॥ ಎ ಕೋದಂಡರಾಮರೆಡ್ಡಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಚಿಕ್ಕಮಗಳೂರು ಸಬ್ ಜಡ್ಜ್ ಮೆ॥ ಟಿ ಶಾಮಾಶಾಸ್ತ್ರಿ ಯವರಿಗೆ ಡಿಸೆಂಬರ್ ೨೩ ನೇ ತಾರೀಖು ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ

ಶಿವಮೊಗ್ಗ ಮುನಸೀಫ್ ಮೆ॥ ಜೆ ಕೋಂಟ್ಸ್ ಯವರು ಚಿಕ್ಕಮಗಳೂರಿನ ಸಬ್ ಜಡ್ಜರಾಗಿ ಕೆಲಸ ನೋಡತಕ್ಕದ್ದು

ಅಡ್ವೊಕೇಟ್ ಮೆ॥ ಸಿ ಸುಬ್ಬರಾವ್, ಬಿ. ಎ, ಬಿ ಎಲ್. ಯವರನ್ನು ಕಡೇ ದರ್ಜೆಯ ಮುನಸೀಫರನ್ನಾಗಿ ನೇಮಿಸಿ ಶಿವಮೊಗ್ಗೆಗೆ ವರ್ಗಮಾಡಿದೆ

ಮೈಸೂರ್ ಗವರ್ನಮೆಂಟ್ ಮಿಲಿಟರಿ ಅಸಿಸ್ಟೆಂಟ್ ಲೆಫ್ಟಿನೆಂಟ್ ಕರ್ನಲ್ ಆರ್ ಜೆ ಜೋನ್ಸ್ ಯವರಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಇವರು ನೊವೆಂಬರ್ ೪ ರಲ್ಲಿ ಕೆಲಸದ ಮೇಲೆ ಹಾಜರಾದಕಾರಣ ಉಳಿದ ರಜವನ್ನು ರದ್ದುಮಾಡಿದೆ

ಅಕೌಂಟ್ ಪ್ರೊಫೆಸರ್ ಮೆ॥ ಟಿ ಸತ್ಯರಾವ ಪಟ್ಟಯವರಿಗೆ ಕೊಟ್ಟಿದ್ದ ಎರಡು ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೂ ೧೦ ದಿನ ಜಾಸ್ತಿ ಮಾಡಿದೆ

ಎಕ್ಸೈಜ್ ಇಲಾಖಾ ಅ॥ ಕಮಿಷನರ್ ಮೆ॥ ಟಿ ಎ ವಿಜಯರಾಘವಾಚಾರ್ಯರ್ ಅಲಿ ಖಾನ್ ಯವರಿಗೆ ಕೊಟ್ಟಿದ್ದ ಪ್ರಿವಿಲೆಜ್ ರಜವನ್ನು ಅವರ ಇಷ್ಟಪ್ರಕಾರ ರದ್ದುಮಾಡಿದೆ

ತೀರ್ಥಹಳ್ಳಿ ತಾಲ್ಲೂಕ್ ಅಮಲ್ದಾರ್ ಮೆ॥ ಎಸ್ ವೆಂಕಟರಮಣ ಶಾಸ್ತ್ರಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೨೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ನುಗ್ಗೇಹಳ್ಳಿ ಹೋಬಳಿ ಶಾನುಭೋಗ ಡೆಪ್ಯುಟಿ ಶ್ರೀನಿವಾಸಯ್ಯಂಗಾರ್ಯರು ತಮ್ಮ ಲೆಕ್ಕಗಳೊಂದಿಗೆ ತಾಲ್ಲೂಕ್ ಖಜಾನೆಯನ್ನು ವಹಿಸಿಕೊಂಡು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಚಲಾಯಿಸತಕ್ಕದ್ದು

ಜನರಲ್ ಮತ್ತು ರೆವಿನ್ಯು ಸೆಕ್ರೆಟೇರಿಯಟ್ಟಿನಲ್ಲಿ ಕೆಲಸಮಾಡುವ ಪ್ರೊಬೆಷನರಿ ಅ॥ ಕಮಿಷನರ್ ಮೆ॥ ಎಚ ರಾಮಸ್ವಾಮಿವರಿಗೆ ಒಂದು ತಿಂಗಳು ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ತಾಲ್ಲೂಕ್ ಅಮಲ್ದಾರ್ ಮೆ॥ ಆರ್ ವಾಸುದೇವರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನ ಲಾಗಾಯ್ತು ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಟಿ. ನರಸೀಪುರದ ಅಮಲ್ದಾರ್ ಮೆ॥ ಕೃಷ್ಣಸ್ವಾಮಿ ರಾಯರನ್ನು ಬೆಂಗಳೂರು ತಾಲ್ಲೂಕಿಗೆ ವರ್ಗಮಾಡಿದೆ. ಅವರು ತಾಲ್ಲೂಕ್ ಖಜಾನೆಯನ್ನು ಶಿರಸ್ತೇದಾರರಿಗೆ ವಹಿಸಿ, ಕೂಡಲೆ ಬೆಂಗಳೂರಿಗೆ ಬರತಕ್ಕದ್ದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮೆ॥ ಸಿ ಶ್ರೀಕಂಠೇಶ್ವರ ಅಯ್ಯರಿಗೆ ಕೊಟ್ಟಿದ್ದ ಮೂರು ತಿಂಗಳ ಕಾಯಿಲೆ ರಜವನ್ನು ನೊವೆಂಬರ್ ೪ನೆ ತಾರೀಖು ವರೆಗೆ ಜಾಸ್ತಿ ಮಾಡಿದೆ

ಮಾಗಡಿ ತಾಲ್ಲೂಕ್ ಅಮಲ್ದಾರ್ ಮೆ॥ ಅಬ್ದುಲ್ ಕರೀಮ್ ಯವರಿಗೆ ಕೊಟ್ಟಿದ್ದ ಮೂರು ತಿಂಗಳ ರಜವನ್ನು ಇನ್ನು ಮೂರು ತಿಂಗಳು ಜಾಸ್ತಿ ಮಾಡಿದೆ

ಮತ್ತೊಂದು ಹುಕುಂ ಆಗುವವರೆಗೆ ಮೆ॥ ಗುಲಾಂ ಮುಹಮ್ಮದ್ ಮೊಕ್ತಿಯವರು ಹಿರಿಯೂರ್ ತಾಲ್ಲೂಕ್ ಅಮಲ್ದಾರರಾಗಿ ಕೆಲಸ ನೋಡತಕ್ಕದ್ದು

ಮುಂದೆ ಹೇಳುವ ಅಮಲ್ದಾರರುಗಳ ವರ್ಗಾವರ್ಗಿ ಹುಕುಂ ಮಾಡಲ್ಪಟ್ಟಿದೆ — ಮೆ॥ ಬಿ. ಎಂ. ವೆಂಕಟೇಶಯ್ಯನವರು ಕೊಳ್ಳೇಗಾಲದಿಂದ ದೊಡ್ಡಬಳ್ಳಾಪುರಕ್ಕೆ ಮೆ॥ ಜೆ ಬಾಲ್ ಯವರು ದೊಡ್ಡಬಳ್ಳಾಪುರದಿಂದ ಕೊಳ್ಳೇಗಾಲ ತಾಲ್ಲೂಕಿಗೆ.

ಅಸಿಸ್ಟೆಂಟ್ ಕೆಮಿಸ್ಟ್ರ ಮೆ॥ ಎಚ್ ವಿ ಕೃಷ್ಣಯ್ಯನವರನ್ನೂ ಮೆ॥ ಬಿ ವೆಂಕಟರಾಯರನ್ನೂ ಡಿಸೆಂಬರ್ ೧ರಿಂದ ೨ನೆ ತರಗತಿಯಿಂದ ೧ನೆ ಕ್ಲಾಸಿಗೆ ಬಡ್ತಿ ಮಾಡಿದೆ.

ಎಕ್ಸಿಕ್ಯುಟಿವ್ ಇಂಜಿನಿಯರ್ ಮೆ॥ ಎ ಎಸ್ ನಾಗಯ್ಯಾರ್ ಯವರಿಗೆ ನೊವೆಂಬರ್ ೨೮ರಿಂದ ೨ ತಿಂಗಳು ೨೦ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ರಜಾ ಮುಗಿದನಂತರ ಅವರು ಕೆಲಸದಿಂದ ನಿವೃತ್ತರಾಗಿ ಪೆನ್ಷನ್ ಪಡೆಯತಕ್ಕದ್ದು.

೨ ನೆ ರಾಜಪ್ರತಿನಿಧಿಯ ಭರತವನ್ನು ಕಟ್ಟುತ್ತಿರುವ ಮೈಸೂರು ಅರಮನೆ ಡಿವಿಜನ್ ಅ॥ ಇಂಜನಿಯರ್ ಮೆ॥ ಸಿ ಮಾಧವರಾಯರನ್ನು ಆ॥ ಎಕ್ಸಿಕ್ಯುಟಿವ್ ಇಂಜಿನಿಯರ್ ದರ್ಜೆಗೆ ಬಡ್ತಿಮಾಡಿ, ಮೆ॥ ಬಿ. ಸೀತಾರಾಮರಾಯರಿಗೆ ಬದಲಾಗಿ ತುಮಕೂರು ಡಿವಿಜನ್‌ಗೆ ವರ್ಗಮಾಡಿದೆ

ಮೈಸೂರ್ ಸ್ಟೇಟ್ ಟ್ರೂಪ್ಸ್ ಚೀಫ್ ಕಮ್ಯಾಂಡೆಂಟರ ಲೆಫ್ಟಿನೆಂಟ್ ಕರ್ನಲ್ ಜೆ ದೇಸರಾಜೇ ಅರಸಿನವರಿಗೆ ನೊವೆಂಬರ್ ೨೫ ರಿಂದ ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರು ರಜದಮೇಲಿರುವ ಕಾಲದಲ್ಲಿ ಅವರ ಜನರಲ್ ಅಸಿಸ್ಟೆಂಟ್ ಮೆ॥ ಆರ್. ಕೃಷ್ಣಸ್ವಾಮಿ ಅವರು ಆಫೀಸ್ ಬರ್ತ್ ಕೆಲಸಗಳನ್ನು ನೋಡಿಕೊಳ್ಳತಕ್ಕದ್ದು. ಅವರಿಗೆ ಜೊತೆ ಸಂಬಂಧಪಟ್ಟ ಸಿಬ್ಬಂದಿ ಕಮಾಂಡರ್ ಆ ಸಂಗತಿಯನ್ನು ಮಿಲಿಟರಿ ಅಸಿಸ್ಟೆಂಟರಿಗೆ ತಿಳಿಸಿ ಗವರ್ನಮೆಂಟಿನ ಹುಕುಮಿನಂತೆ ನಡೆಯತಕ್ಕದ್ದು.

## ದೇಶಾಂತರದ ವಿಶೇಷ ಸಮಾಚಾರಗಳು.

ಬಲ್ಗೇರಿಯಾ ದೇಶದಲ್ಲಿ ಹಿಂಗೆ ಎದ್ದಿರುವವರಿಗೆ ಮುಖಂಡ ಬೋರಿಸ್ ಸಾರಫಾಫ್ ಎಂಬಾತನು ತನ್ನ ದೇಶವನ್ನು ಬಿಟ್ಟು ಭಯದಿಂದ ಎಂಬಲ್ಲಿಗೆ ಹೋಗಲು ಆ ಪಟ್ಟಣದ ಜನಗಳು ಸಮೂಹವಾಗಿ ಕೂಡಿ ರೇಲ್ವೆ ಸ್ಟೇಷನಿಗೆ ಬಂದು ಆತನಿಗೆ ಕೋಲಾಹಲದ ಶಬ್ದದಿಂದ ಅಂಗೀಕರಿಸಿ, ಮೆರವಣಿಗೆ ಮಾಡುತ್ತ ಜನ ಬಿಡಾರಕ್ಕೆ ಕರೆದುಕೊಂಡು ಹೋದರು. ಅಲ್ಲಿಗೆ ಸೇರಿದ್ದ ಇತರ ಅನೇಕ ಪ್ರಜೆಗಳನ್ನು ಕುರಿತು — ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕುವ ಪರ್ಯಂತರವೂ ನಂತ ಹೋರಾಡುವುದನ್ನು ಬಿಡುವದಿಲ್ಲ, ಮುಂದಿನ ಬೇಸಗೆಯೊಳಗಾಗಿ ಯೂರೋಪಿನ ರಾಜ್ಯದವರು ತುರ್ಕಿ ಸುಲ್ತಾನರವರಿಗೆ ಒಪ್ಪಿಸಿರುವ ಸಲಹೆಗಳಿಗೆ ಸಮ್ಮತಿಸದೆ ಹೋದರೆ ಪುನಃ ಯುದ್ಧಕಾರ್ಯಗಳನ್ನು ನಡಸದೆ ಬಿಡುವದಿಲ್ಲವೆಂದು ಹೇಳಿದನು.

* * *

ಉತ್ತರ ಅಮೇರಿಕದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಒಂದು ಸಮುದ್ರದಿಂದ ಬೇರೊಂದು ಸಮುದ್ರವನ್ನು ಮುಟ್ಟುವ ಹಾಗೆ ಮೂರು ಸಾವಿರ ಮೈಲು ದೂರವಾಗಿರುವ ಒಂದು ರೈಲನ್ನು ಹಾಕಿದ್ದಾರೆ. ಅದೇ ಪ್ರಕಾರ ದಕ್ಷಿಣ ಅಮೇರಿಕದಲ್ಲೂ ಒಂದು ರೈಲು ಮಾರ್ಗವನ್ನು ಹಾಕಬೇಕೆಂಬುದಾಗಿ ಸಲಹೆ ಹುಟ್ಟಿ ಕೆಲಸವು ಪ್ರಾರಂಭವಾಗಿದೆ ಈ ಉದ್ದೇಶವು ೨೦ ವರ್ಷಗಳ ಹಿಂದೆ ಹುಟ್ಟಿದ್ದರೂ ಕೂಡ ಮಧ್ಯಾಹ್ನ ಬಿಳಿಯರು ಪರ್ವತವನ್ನು ಅದನ್ನು ನಿರಾಕರಿಸುತ್ತಾ ಬಂದು ಈಗ ಒಪ್ಪಿದ್ದಾರೆ ಈ ರೈಲನ್ನು ಆಂಡೀಸ್ ಪರ್ವತಗಳ ಮೇಲೆ ಹಾಕಬೇಕಾಗುತ್ತೆ. ಒಂದು ಕಡೆ ಬ್ಯೂನೋಸ್ ಆಯ್ರಿಸ್ ಎಂಬುದೂ, ಮತ್ತೊಂದು ಕಡೆ ನ್ಯೂಯಾರ್ಕ್ ಮತ್ತು ವಾಲ್ಪರೈಸೋ ಎಂಬೀ ಪಟ್ಟಣಗಳೂ ಇರುವವು.

* * *

ಚೀನಾ ರಷ್ಯರಾಜ್ಯದೊಂದಿಗೆ ಯುದ್ಧವಾದ ಪಕ್ಷದಲ್ಲಿ ಅದು ಜಪಾನು ಸಾಧ್ಯವಾದ ಮಟ್ಟಿಗೂ ಚೀನಾದ ಸೈನ್ಯ ಬಲವು ಕಡಮೆಯಾದ್ದಾಗಿಯೂ ರಷ್ಯದವರೊಡನೆ ಕಾದಾಡುವುದಕ್ಕೆ ಸಾಲದಾಗಿಯೂ ಇರುವದರಿಂದ ಅವರು ಯುದ್ಧಮಾಡುವ ಧೈರ್ಯಗೊಳ್ಳಲಾರೆಂಬುದು ಸಕಲರಿಗೂ ತಿಳಿದೇ ಇದೆಯೆಂಬುದಾಗಿ ಫೋಟ್ ಆರ್ಥರ್ ಎಂಬಲ್ಲಿಂದ ಬಂದ ತಂತೀ ವರ್ತಮಾನವು ಬರ್ಲಿನ್ ನಗರದಲ್ಲಿ ಪ್ರಕಟಿಸಲ್ಪಟ್ಟಿದೆ.

* * *

ಜರ್ಮನಿಯವರಿಗೂ ಗ್ರೇಟ್‌ಬ್ರಿಟನಿನವರಿಗೂ ವ್ಯಾಪಾರ ಸಂಬಂಧವಾಗಿ ಒಂದು ಒಡಂಬಡಿಕೆಯಾಗತಕ್ಕ ವಿಷಯದಲ್ಲಿ ಜರ್ಮನ್ ಮಂತ್ರಾಲೋಚನಾ ಸಭೆಯಲ್ಲಿ ಚರ್ಚೆ ನಡೆದು, ಇಂಗ್ಲೆಂಡಿನ ಗವರ್ನಮೆಂಟಿನವರು ಸಕ್ಕರೆಯ ಮೇಲೆ ಹಾಕಿದ್ದ ತೆರಿಗೆಯನ್ನು ಪೂರಾ ಮನ್ನಾಮಾಡುವದಾಗಿ ಡಿಸೆಂಬರ್ ೨ನೇ ತಾರೀಖಿನಲ್ಲಿ ತಮಗೆ ಮುಟ್ಟಿದ ತಂತೀ ವರ್ತಮಾನದಿಂದ ತಿಳಿದು ಬಂದಿರುವದರಿಂದ ಈ ಒಡಂಬಡಿಕೆಯು ನಿರ್ಣಯವಾದ ಕಾಲವನ್ನು ಎರಡು ವರ್ಷಗಳ ವರೆಗೂ ಹೆಚ್ಚು ಮಾಡಬಹುದೆಂದು ಒಂದು ವಿಧಾಯಕವನ್ನು ನಿರ್ಣಯಿಸುವದಕ್ಕೆ ಒಪ್ಪಿದರು

* * *

ಜರ್ಮನಿಯ ಚಕ್ರವರ್ತಿಯವರಿಗೆ ಗಂಟಲ ರೋಗದಿಂದ ವೈದ್ಯರ ಶಸ್ತ್ರ ಚಿಕಿತ್ಸೆಯೂ ಅವಶ್ಯಕವಾಗಿತ್ತಷ್ಟೆ. ಈಚೆಗೆ ಅವರು ಸಂಪೂರ್ಣ ಸ್ವಸ್ಥರಾಗಿ ಪತ್ನೀಸಮೇತರಾಗಿ ರಾಜಧಾನಿಯಾದ ಬರ್ಲಿನ್ ನಗರಕ್ಕೆ ಅಕಸ್ಮಾತ್ತಾಗಿ ಬರಲು ಪ್ರಜೆಗಳೆಲ್ಲರೂ ಆನಂದಭರಿತರಾಗಿ ಹರ್ಷಧ್ವನಿ ಮಾಡಿದರು ತರುವಾಯ ಅದೇ ಸಾಯಂಕಾಲ ಇಷ್ಟರೂ ನಾಟಕಶಾಲೆಗೆ ಬರಲು ನೆರದು ಬಂದಿದ್ದವರೆಲ್ಲರೂ ಎದ್ದು ನಿಂತು ಸಾಮ್ರಾಟರ ಪರವಾಗಿ ಮೂರು ಸಾರಿ ಅವರ ಆಯುರಾರೋಗ್ಯವನ್ನು ಬಯಸಿ ಜಯಧ್ವನಿ ಮಾಡಿದರು

## ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಬೆಲೆ ಕೊಡಲಾರೆವು ಅದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಬೆಲೆ ಕೊಡಲಾರೆವು

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು

ಬಾತ್ಮಿದಾರರು ತಮ್ಮ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು — ಎಡಿ

## ಕರೆಸ್ಪಾಂಡೆನ್ಸ್.

### ಮೈಸೂರು ಪೋಲೀಸ್.

ಅಯ್ಯಾ,

ಮೈಸೂರು ಶೀಮೆಯ ಪೋಲೀಸಿನವರಿಗೆ ಇರತಕ್ಕ ಕಷ್ಟವನ್ನೂ ವಿಚಾರವನ್ನೂ ಈ ಕೆಳಗೆ ವಾಕ್ಯಗಳ ಮೂಲಕ ಸರ್ಕಾರದವರ ಸಮಾಚಾರಕ್ಕೆ ಒಂದು ಅವರು ಅದರಂತೆ ಏರ್ಪಾಡು ಮಾಡುವರೆಂದು ನಂಬುತ್ತೇನೆ.

ಈ ಪೋಲೀಸು ಇಲಾಖೆಯಲ್ಲಿ ಇನ್ಸ್‌ಪೆಕ್ಟರಿಗೆ ೪೦ ರೂ., ಜಮೇದಾರ್ರಿಗೆ ೨೦ ರೂ, ದಫೇದಾರ್ರಿಗೆ ೧೨ ರೂ. ಈ ರೀತಿ ಸಂಬಳ ಇರುತ್ತದೆ. ದಫೇದಾರ್ರಿಗೆ ೧೨ ರೂ. ಸಂಬಳ ಸಾಲದು ಬಂದಿದ್ದು ಕೆಲಸದ ಜವಾಬ್ದಾರಿಯು ಬಹಳವಾಗಿದೆ. ಇವರು ಎಷ್ಟೋ ಇನ್ವೆಸ್ಟಿಗೇಷನ್‌ಗಳ ಸಂಬಂಧವಾಗಿ ... [illegible] ... ಸಮಯದಲ್ಲಿ ಒಬ್ಬ ಮ್ಯಾಜಿಸ್ಟ್ರೇಟನ ... [illegible] ... [illegible]

…ವೇಳೆ ಮೊಕದ್ದಮೆ ಇತ್ಯರ್ಥವಾಗುವ ಕೋರ್ಟುಗಳಲ್ಲಿ …—೨೦೦—೧,೦೦೦ ಈ ರೀತಿ ಸಂಬಳಗಳನ್ನು ಹೊಂದುವ … ಬರೆಯುವ ರಿಮಾರ್ಕ್ಸ್‌ಗಳಿಗೆ ತಕ್ಕ ಶಿಕ್ಷೆಗಿಂತ … ಮೇಲ್ಪಟ್ಟ ಶಿಕ್ಷೆಗಳನ್ನು ಹೊಂದಬೇಕಾಗುತ್ತೆ. ಇಂಥಾ … ತಪ್ಪುಗಳನ್ನು ಹೊಂದಿ, ತನ್ನ ಅಧಿಕಾರದಲ್ಲಿರುವ ಕೋರ್ಟಿನ … ಬುದ್ಧಿಯನ್ನೇ ೧೨ ರೂಪಾಯಿ ಸಂಬಳ ಮಾತ್ರ ಹೊಂದುವ … ಉಪಯೋಗಿಸದ್ದಕ್ಕಾಗಿ ಸಸ್ಪೆಂಡ್, ರಿಡ್ಯೂಸ್, ಡಿಸ್ಮಿಸ್ ವಗೈರೆ ಭಾರಿ ಶಿಕ್ಷೆಗಳನ್ನು ಹೊಂದಬೇಕು. ಒಂದು … ಅದೇ ಬುದ್ಧಿಯನ್ನು ಪ್ರಯೋಗಿಸಿ ಯಾವ ರಿಮಾರ್ಕ್ಸ್‌ಗಳ … ಅವಕಾಶವಿಲ್ಲದಂತೆ ಕೇಸ್ ಡಿಸ್ಪೋಸ್ ಮಾಡಿಸಿದರೆ ಬರತಕ್ಕ … ಹೆಸರು ಸಾಧಾರಣವಾಗಿಯೇ ಇರುತ್ತೆ. ಒಬ್ಬ ದಫೇದಾರ … ವರ್ಷಗಳ ಬಾಬಾಯತು ಮೊಕದ್ದಮೆಗಳಲ್ಲಿ … ನೋಡಿ, ಮೇಲ್ಪಟ್ಟ ಆಫೀಸರವರ ವಿಶ್ವಾಸಕ್ಕೆ ಪಾತ್ರನಾದರೆ … ಮಾತ್ರ ಪ್ರಮೋಷನ್ ದೊರೆಯುತ್ತೆ. ಇದಕ್ಕೆ ಎಷ್ಟು ಕಷ್ಟ … ದೇವರಿಗೇ ಗೊತ್ತು. ರೆವೆನ್ಯೂ ಮೊದಲಾದ ಇತರ … ಅಮಲ್ದಾರರೋ ಗುಮಾಸ್ತೆ ಮುನಷಿ ವಗೈರೆ ನೌಕರರಿಗೆ ೧೫ … ಮೊದಲ್ಗೊಂಡು ೧೦೦ ರೂಪಾಯಿವರಿಗೂ ಸಂಬಳ ಇರುವದಲ್ಲ … ಯಾವ ಮಹತ್ತೂ ಇಲ್ಲದೆ ಒಂದಾಸಲಕ್ಕೆ ೫—೧೦—೧೫ ರೂಪಾಯಿಗಳು ಪ್ರಮೋಷನ್ ಆಗುತ್ತೆ. ಪ್ರತಿಯೊಬ್ಬ ನೌಕರನಿಗೂ … ಒಪ್ಪಿಸಿದ ಕೆಲಸದಲ್ಲಿ ಕೆಲವು ಭಾಗವನ್ನು ಮಾತ್ರ … ಕೆಲಸ ಮಾಡಿಸುತ್ತಾರಲ್ಲದೆ, ಡಿಸ್ಟ್ರಿಕ್ಟ್ … ಯಾವ ಬಾಬಿನ ಗುಮಾಸ್ತೆ, ಮುನಷಿ ಕೆಲಸ ಮಾಡಿದ್ದರೂ …ತ್ತಾರೆ. ಪೊಲೀಸಿನವರಿಗೆ ಆ ರೀತಿ ಪ್ರಮೋಷನ್ ಸಿಕ್ಕದು … ಒಬ್ಬ ದಫೇದಾರನಿಗೆ ಪ್ರಮೋಷನ್ ದೊರೆಯಬೇಕಾದರೆ … ದಫೇದಾರರೋ ಸತ್ತು ಜಾಗ ಖಾಲಿ ಬೀಳಬೇಕಾಗುತ್ತೆ. ಒಬ್ಬ ದಫೇದಾರನಿಗೆ ಒಂದು ತಾಲ್ಲೂಕು ಕಚೇರಿ ನೌಕರನಷ್ಟು ಬರವಣಿಗೆ … ಇರುವದಲ್ಲದೆ, ತನಗೆ ಸೇರಿರುವ ೫೦—೬೦—೧೦೦ ಗ್ರಾಮಗಳನ್ನು ಗಸ್ತುಮಾಡಿ, ಅಲ್ಲಿ ನಡೆಯುವ ಎಲ್ಲಾ ವಿಷಯಗಳಿಗೂ ಜವಾಬ್ದಾರನಾಗಿರಬೇಕು. ಅಮಲ್ದಾರರಿಗೆ ಒಬ್ಬ ಗುಮಾಸ್ತೆಯಂತೆ … ತಲಬಿದ್ದಾಗ್ಯೂ ಒಂದು ಪೂರಾ ತಾಲ್ಲೂಕಿನ ಕೆಲಸವನ್ನು ಮಾಡಬೇಕು. ಪೊಲೀಸಿನವರಿಗೆ ಮಾತ್ರ ಸರ್ಕಾರದವರು ಸಂಬಳಕ್ಕೆ … ಕೆಲಸವನ್ನು ಹೆಚ್ಚುಮಾಡುತ್ತಾ ಬರುತ್ತಾರೆ. ಪ್ಲೇಗ್ … ಪ್ರದೇಶಗಳಲ್ಲಿ ಆ ಕೆಲಸವನ್ನು ಪೊಲೀಸಿನವರೇ ಮಾಡಬೇಕು. ಒಂದು ಗ್ರಾಮಕ್ಕೆ ಪ್ಲೇಗ್ ವ್ಯಾಪಿಸಿದರೆ ಜನರೆಲ್ಲ ಊರು ಬಿಟ್ಟು, ಬೇರೆ ಬೇರೆ ವಾಸಮಾಡುತ್ತಾರೆ. ಪೊಲೀಸಿನವರಾದರೆ … ಜನಗಳ ಜೀವ ಮತ್ತು ಆಸ್ತಿಗಳನ್ನು ಕಾಪಾಡಲು ತಮ್ಮ … ಮೇಲಿನ ಆಸೆಯನ್ನು ಸಹ ಬಿಟ್ಟು ರೋಗಕ್ಕೆ ಭಯಪಡದೆ … ಎಲ್ಲಾ ಸುತ್ತಿಕೊಂಡು ಇರಬೇಕು. ಈ ರೀತಿಯಾದ ಕಷ್ಟ … ೫೦—೩೦—೫೦ ರೂ ಸಂಬಳಗಾರರಿಗೆ ಇರುವದಿಲ್ಲ. … ನೌಕರರು ಕ್ಲಿಷ್ಟಕಾಲ ವಿನಹ ಬಾಕಿ ಕಾಲದಲ್ಲಿ ಸುಖವಾಗಿರುತ್ತಾರೆ. ಈ ಹಾಳು ಪೊಲೀಸಿನವರ ಕೆಲಸಕ್ಕೆ ಕಾಲವೇ ಇಲ್ಲ … ಎಲ್ಲಾ ಇಲಾಖೆಯವರ ಕಷ್ಟಸುಖಗಳೂ ಗವರ್ನಮೆಂಟಿನ … ಗೆ ತಿಳಿಸುವಂತೆ ಈ ಪೊಲೀಸಿನವರ ಕಷ್ಟಸುಖಗಳೂ … ತಕ್ಕ ಸಂಬಳಗಳನ್ನು ಹೆಚ್ಚುಮಾಡಬಾರದೇ? … ಸರ್ವೆ ಡಿಪಾರ್ಟ್ಮೆಂಟಿಗೆ ೧೫—೨೦, … ೩೦—೩೫ … ಸಂಬಳ ಮಾಡಿದೆ ಸರ್ಕಾರಕ್ಕೆ ಇಷ್ಟೆಷ್ಟು ಉಪಕಾರ … ಹೆಡ್ ಕಾನಿಸ್ಟೇಬಲ್ … ಎಲ್ಲಿಗೆ ವರ್ಗಮಾಡಿದರೆ ಹೋಗಿ ಈ ಅಲ್ಪ ಸಂಬಳದಲ್ಲಿ ಯಾವ ರೀತಿ ಜೀವನ ಮಾಡಬೇಕು? ಇದೆಲ್ಲಾ ಗವರ್ನಮೆಂಟಿನವರು ಯಾತಕ್ಕೆ ಯೋಚಿಸಬಾರದು?

ಈ ಮೈಸೂರು ಸೀಮೆಯಲ್ಲಿ ಪೊಲೀಸಿನವರ ಬುದ್ಧಿಯನ್ನು ವೃದ್ಧಿಪಡಿಸುವದಕ್ಕಾಗಿ ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಪೊಲೀಸ್ ಟ್ರೈನಿಂಗ್ ಸ್ಕೂಲ್‌ನಲ್ಲಿ ಅನೇಕ ಮಂದಿ ಇಂಗ್ಲಿಷ್ ಕ್ಲಾಸ್ … ವಿದ್ಯಾರ್ಥಿಗಳೂ ಓದಿ ತೇರ್ಗಡೆ ಹೊಂದುತ್ತಾರೆ. ಈ … ಎಲ್ಲಾ ಭಾಗದಲ್ಲಿ ಕ್ರಿಮಿನಲ್ ಪರೀಕ್ಷೆಗೆ ಸಮಾನವಾಗಿ … ಅವಶ್ಯಕತೆಯೂ ಒಂದೆರಡು ಬಾರಿಗಳು ಹೆಚ್ಚಾಗಿದ್ದಾಗ್ಯೂ … ಈ ರೀತಿ ಕಷ್ಟಪಟ್ಟು ಓದಿ ಲಾ, ಸರ್ವೆ, ಡ್ರಾಯಿಂಗ್, … ವಗೈರೆ ಭಾಗಗಳಲ್ಲಿ ಪ್ಯಾಸ್ ಮಾಡಿಕೊಂಡು ಏನಾದರೂ ದೊಡ್ಡ … ಸಿಕ್ಕೀತೆಂಬ ಆಸೆಯಿಂದ ತಮ್ಮ … ನೌಕರಿ ಸ್ಥಳಕ್ಕೆ … ಹೋದರೆ ಇವರ ಯೋಗ್ಯತೆಯನ್ನು ಡಿಸ್ಟ್ರಿಕ್ಟ್ ಅಧಿಕಾರಿಗಳು ಸ್ವಲ್ಪವೂ ಗಮನಿಸುವದಿಲ್ಲ. ಚಿಕ್ಕ ವಯಸ್ಸಿನವರಾಗಿಯೂ, … ಮಾಡಿಕೊಂಡು … ಮೆಟ್ರಿಕ್ಯುಲೇಷನ್ … ಅರಿಯುಳ್ಳವರಾಗಿಯೂ ಇರುವವರಿಗೆ ನೌಕರಿ ಎಲ್ಲಿ ಸಿಕ್ಕೀತು? ಇಷ್ಟಲ್ಲದೆ ಪ್ಯಾಸ್ ಮಾಡಿರತಕ್ಕವರ … ಸರ್ವೀಸಾಗಿರುವವರನ್ನು ಅಧಿಕಾರಿಗಳನ್ನಾಗಿ ನೇಮಿಸಿದ … ವರಿಗೆ ಐಕ್ಯವಿದ್ದೀತೇ? ಮುಖ್ಯ ಈ ಇಲಾಖೆಯಲ್ಲಿ ನೌಕರರಿಗೆ ಇರತಕ್ಕ ಕಷ್ಟಗಳನ್ನು ಎಷ್ಟು ವರ್ಣಿಸಿದರೂ ತೀರದು.

ಮೈ… ಮಹಾರಾಜಾ ಸಾಹೇಬ್ ಬಹದ್ದೂರವರೂ … ಇನ್ಸ್ಪೆಕ್ಟರ್ ಜನರಲ್ ರವರೂ ಈ ವಿಷಯವನ್ನೆಲ್ಲಾ ಘನ … ಅಂತಃಕರಣದಲ್ಲಿ ಆಲೋಚಿಸಿ, ಪೊಲೀಸಿನವರಿಗೆ ಇರತಕ್ಕ ಕಷ್ಟದ … ತಂದು, ಅವರ ಸಂಬಳ ಹೆಚ್ಚುಮಾಡಬೇಕು, … ಸರ್ವೀಸ್ ಆರ್ಡರನ್ನು ಪರೀಕ್ಷೆಗೆ ತೆಗೆದು, ಅವರ ಸ್ಥಾನ … ಮಾಡಿ, ಚಿಕ್ಕ ವಯಸ್ಸಿನವರಾಗಿ, ದೊಡ್ಡ ಅಧಿಕಾರವ … ಮಾಡಬೇಕೆಂಬ ಆಸೆ ಇಟ್ಟುಕೊಂಡು … ತಕ್ಕ ಪ್ರೋತ್ಸಾಹವನ್ನು ಕೊಟ್ಟು ಮಾಡುತ್ತಾ ಬರಬೇಕೆಂದು … ವಿನಯಪೂರ್ವಕವಾಗಿ ಬೇಡಿಕೊಂಡು ಇರುತ್ತೇನೆ.

ಪ್ಯಾಸ್ ಮಾಡಿ ತಕ್ಕ ನೌಕರಿ ದೊರೆಯದೆ ಕಷ್ಟ
ಪಡುತ್ತಿರುವ ಒಬ್ಬ ಪೊಲೀಸು ನೌಕರ.

## ಸ್ಥಳೀಯ ವರ್ತಮಾನಗಳು.

ಮಂಡ್ಯ.—ಹೋದ ಶುಕ್ರವಾರ ಇಲ್ಲಿನ ಇಂಗ್ಲಿಷ್ ಸ್ಕೂಲಿನಲ್ಲಿ ಒಂದು ಕೂಟ ನಡೆಯಿತು. ಆಗ್ಯೆ ಇಲ್ಲಿನ ಸರ್ಕಾರಿ ಉದ್ಯೋಗಸ್ಥರೂ ವರ್ತಕರೂ ವಕೀಲರೇ ಮುಂತಾದವರೆಲ್ಲಾ ಸೇರಿದ್ದರು. ಆ ಸಭೆಗೆ ಹುಚ್ಚ ಅಮಲ್ದಾರರನ್ನು ಅಗ್ರಾಸನಾಧಿಪತಿಗಳಾಗಿ ಆರಿಸಿಕೊಂಡರು. ಈ ಸಭೆಯ ಮುಖ್ಯ ಉದ್ದೇಶವೇನೆಂದರೆ—ಈ ಸ್ಥಳದಲ್ಲಿ ಒಂದು ವಾಚನಾಲಯ ಸ್ಥಾಪಿಸಬೇಕೆಂಬುದೇ. ಇದನ್ನು ಕುರಿತು ಇಲ್ಲಿನ ಮೇಷ್ಟರು ಅಪ್ರಮೇಯಂಗಾರ್ಯ ಕೃಷ್ಣಸ್ವಾಮಿಯೂ ನಂಜಪ್ಪಶೆಟ್ಟರೂ ತಾವು ಬರೆದ ಉಪನ್ಯಾಸಗಳನ್ನು ಓದಿ ತಿಳಿಸಿ ಬಂದ ಸಭಿಕರನ್ನು ಪ್ರೋತ್ಸಾಹಪಡಿಸಿದರು. ಅನಂತರ ಅಮಲ್ದಾರರು ಸಹ ಈ ಕಾರ್ಯವು ಒಳ್ಳೇದೆಂದು ಕೆಲವು ಮಾತುಗಳನ್ನೂ ಸಭಿಕರಿಗೆ ಹೇಳಿದರು. ಕೆಲವರು ಆ ವಾಚನಾಲಯಕ್ಕಾಗಿ ಚಂದಾ ಹಾಕಿದ್ದಾರೆ. ಮುಂದೆ ಇದರ ಅಭಿವೃದ್ಧಿಯನ್ನು ಕುರಿತು ಎಲ್ಲರೂ ಪ್ರಯತ್ನಪಟ್ಟು ಸಹಾಯ ಕೊಡುವರೆಂದು ನಂಬುತ್ತೇವೆ.—೧೧ನೇ ತಾರೀಖು ಮಂಡ್ಯಕ್ಕೆ ಅರ್ಧಮೈಲಿ ದೂರದಲ್ಲಿ ಯಾರೋ ರೈಲ್ವೆ ಕಂಬಿಯನ್ನು ಮೇಲಕ್ಕೆ ಎತ್ತಿ ಕೆಳಗೆ ಕಲ್ಲುಗಳನ್ನು ಇಟ್ಟಿದ್ದರು. ಅದಕ್ಕೆ ಮುಂಚಿತವಾಗಿ ಮೈಸೂರು ಗಾಡಿ ಹಾದುಹೋಗಿತ್ತು. ಇಲ್ಲವಾದರೆ ಅನೇಕರಿಗೆ ನಷ್ಟವಾಗುತ್ತಿತ್ತು. ಬೆಳಗ್ಗೆ ಈ ಸಂಗತಿ ಗೊತ್ತಾಗಿ … ಈ ಕಾರ್ಯಕ್ಕಾಗಿ ಬೆಂಗಳೂರಿಂದ ಇಂಜಿನೀರ್ ಸಾಹೇಬರು ಬಂದು ತನಿಖೆ ಮಾಡಿ ಪೊಲೀಸಿಗೆ ತಿಳಿಸಿದ್ದಾರೆ. ಆಸಾಮಿಗಳನ್ನು ಪತ್ತೇಮಾಡಿ ತಕ್ಕ ಶಿಕ್ಷೆ ಮಾಡಿದರೆ ಸಕಲರಿಗೂ ಕ್ಷೇಮವಾಗುತ್ತೆ.

ಚಿಕ್ಕಮಗಳೂರು.—ಇವರು ಬಹು ಅತ್ಯಾಶ್ಚರ್ಯವಾಗಿ ಊರೆಲ್ಲಾ ಮುಮ್ಮಾರಿಯಿಂದ ಬಾಯಿಲೆ ಇದ್ದಾರೆ. ಬೇಸಿಗೆಯಲ್ಲೂ … ಗಳಲ್ಲೂ ನಾಯಿಗಳ ಮತ್ತು ಕತ್ತೆಗಳ ಪ್ರಾಬಲ್ಯವು ಅಧಿಕವಾಗಿದೆ. ಗ್ರಾಮದ ಪಾಕೀಜಾ ಕೇವಲ ಅತ್ಯಾಶ್ಚರ್ಯಕರವಾದ ಸ್ಥಿತಿಗೆ ಬರುತ್ತಿದೆ. ಚಿಕ್ಕಮಗಳೂರಿನ ಮುನಿಸಿಪಾಲಿಟಿ ಬಜಾರ್ ಮಾತ್ರ ಯಥಾಪ್ರಕಾರವಿದೆ. ಆದರೆ ಬರಬರ ರಸ್ತೆಗಳೂ ಗಲ್ಲಿಗಳೂ ಇತರ ಗ್ರಾಮಾಭಿವೃದ್ಧಿ ಕೆಲಸಗಳೂ ಕ್ಷೀಣಸ್ಥಿತಿಯನ್ನು ಅನುಭವಿಸುತ್ತವೆ. ಕಾಫಿಧಾರಣೆ ಬಿದ್ದುಹೋದ್ದರಿಂದಲೂ ಇನ್ನು ವಿಪರೀತ ಸಾಲಗಳನ್ನು ಮಾಡಿಕೊಂಡಿರುವದರಿಂದಲೂ ವಿಶೇಷವಾದ ಸುಖವನ್ನು ಹೊಂದಲಾರದೆ ಇದ್ದಾರೆ. ಸರ್ಕಾರ ಆಫೀಸುಗಳಲ್ಲಿ ಕೆಲವು ಜನರಿಗೆ ಅನುಕೂಲವಿದ್ದರೂ ಅನೇಕರು ಅವರಿಗೆ … ಕೊಡುವದು ತಪ್ಪಿಲ್ಲ. ಕಂಪನಿಯಗಳನ್ನು ತಿಂದುಹಾಕಿದ್ದ ವ್ಯಾಸುಭೋಗಿಗಳಿಗೂ … ಅರಿಗೂ ಸಜಾ ಅನುಭವಿಸಲು ಬಂತು — … ವರ್ತಕರು ಬಹು … ಮಾಡುತ್ತಾರೆ. ಅವರನ್ನು ಬಿಟ್ಟರೆ ಗತಿಯಿಲ್ಲ. ಇವರಲ್ಲಿ ಬಹುಮಂದಿ ಒಂದು ರೂಪಾಯಿ ಕ್ರಯ ಬಾಳತಕ್ಕ ಒಸ್ತುಗೆ ಎರಡು ರೂಪಾಯಿ ತಾಕುತ್ತಾರೆ. ಇವರು ಮಾಡುವ ಅನ್ಯಾಯ ಬಹು ಜಾಸ್ತಿ - ಇಂಜನಿಯರ್ ಮಿ॥ ಮುಲಾಯ ಸಾಹೇಬರು ಇರುವ … ಕೆಲಸ ಮಾಡುವಂತೆ ತೋರುತ್ತೆ. ಎಲ್ಲಾ ಮುಖ್ಯ ಕೆಲಸಗಳನ್ನು ಯೂರೋಪಿಯನ್ ಆಫೀಸರುಗಳಂತೆ ಆಸಕ್ತಿಯಾಗಿ ಮಾಡಿ ಜನರಿಗೆ ಅನುಕೂಲ ಕಲ್ಪಿಸಿ ತಾವು ಸುಖಪಡುವದು ಮಾತ್ರ — … ಸಾರಿ ಕೆರೆ ಕಟ್ಟೆಗಳೆಲ್ಲಾ ತುಂಬಿವೆ. ಕೆಲವು … ಬೆಲೆ ಮಾತ್ರ ಬಹು … ಆಗಿದೆ. … ಸ್ವಭಾವವೆಲ್ಲ ಆಫೀಸರುಗಳು ಲೌಕೀಕ ವ್ಯವಹಾರಗಳಲ್ಲಿ ಆಸಕ್ತಿ ತೋರಿಸುವದು ಅವರಿಗೆ ಉಚಿತವಾಗಿರದು. ಯಥಾ ರಾಜಾ ತಥಾ ಪ್ರಜಾ ಎಂಬ ಲೋಕೋಕ್ತಿಯನ್ನು ಅನುಸರಿಸಿ ಕೈಕೆಳಗಿನವರು ಕೆಲಸ ಮಾಡುತ್ತಾರೆ. ರೋಗದಲ್ಲಿರುವ ಕಷ್ಟಗಳನ್ನೂ ಜನರಲ್ಲಿರುವ ಕೊರತೆಗಳನ್ನೂ ಅದರ ಕಾರಣಗಳನ್ನೂ ಕಂಡುಹಿಡಿದು ಅವುಗಳನ್ನು ಹೋಗಲಾಡಿಸುವಂತೆ ಸರ್ವಪ್ರಯತ್ನ ಮಾಡಿ ಎಲ್ಲಾ ಮನುಷ್ಯ ವರ್ಗಕ್ಕೂ ಸುಖವನ್ನುಂಟುಮಾಡುವಂತೆ ತಮ್ಮ ತಿಳುವಳಿಕೆ ಬುದ್ಧಿಬಲಗಳನ್ನು ಉಪಯೋಗಿಸುವದೇ ಕರ್ತವ್ಯವಾಗಿರಬೇಕು. … ಓದಿ ಮನುಷ್ಯರಿಗೆ ಬಂದಂತೆ ನಡೆಯುತ್ತಾ ದೇವರ ದಯಕ್ಕೆ ಪಾತ್ರರಾಗುತ್ತಾ … ಗಳನ್ನು ಎದುರು ನೋಡುವದು ಸಾಲದು. ಸ್ವಾರ್ಥಪರತೆಯನ್ನು … ಬಿಟ್ಟು ಪ್ರಜೆಗಳ ಕಷ್ಟವೇ ತನ್ನ ಕಷ್ಟವೆಂತ ತಿಳಿದು ಅವರಿಗಾಗಿ ತನ್ನನ್ನೂ ತನ್ನ ಸುಖಗಳನ್ನೂ ಸಂಪೂರ್ಣವಾಗಿ ಕೊಟ್ಟುಬಿಡಲು ಅಪೇಕ್ಷಿಸುವನೇ ಅಧಿಕಾರ ಮಾಡಲು ತಕ್ಕವನಾಗಿರುವನು. ತಾಲ್ಲೂಕು ಕಚೇರಿಯಲ್ಲೂ ಪೊಲೀಸ್ ಆಫೀಸಿನಲ್ಲೂ ಮಾಮೂಲ್ ಕೆಲಸಗಳು ಮಾತ್ರ ನಡೆಯುತ್ತಿವೆ. ಸ್ಕೂಲಿಗೆ … ವರಿಗೆ ರಜವಾಗಿದೆ. ವರ್ತಕರಲ್ಲಿರುವ … ಗುಣಗಳನ್ನೂ ಕಾಫಿ ಶೇರುಗಳನ್ನೂ ಕೇಳುವವರೇ ಇಲ್ಲ. ಇಲ್ಲಿ ಕೆಲವು … ಎಲ್ಲಾ ಇರುವವರಿಗೂ ಮಲೆನಾಡಿನ ಅಲೋವೆನ್ಸ್ ಬರುತ್ತೆ. ಅಮಲ್ದಾರ್ರಿಗೆ ತಿಂಗಳಿಗೆ ೨೫ ರೂ ಬರುತ್ತೆ. ಡಾಕ್ಟರ್ ಸಾಹೇಬರಿಗೆ ೫೦ ರೂ ಬರುತ್ತೆ. ಹೀಗೆ ಭಾರಿ ಸಂಬಳಗಾರ್ರಿಗೆ ಹೆಚ್ಚಾಗಿ ಸಹಾಯ ಮಾಡಿದರೂ ಬಡ ಸ್ಕೂಲ್ ಮಾಸ್ಟರುಗಳಿಗೆ ಕೊಂಚವಾದರೂ ಕೊಡಬಾರದೇ? ಪೊಲೀಸಿನವರಿಗೂ ಮುನಾಸಬು ಶಿಕ್ಕೆ.

## ವಿದೇಶ ವರ್ತಮಾನಗಳು

ಇಂಗ್ಲಿಷ್ ಜನರು ಫ್ರಾನ್ಸಿನಲ್ಲಿ ಪ್ರತಿ ವರುಷವೂ ಹೋಗಿ ೩೦ ಕೋಟಿ ರೂಪಾಯಿ ಖರ್ಚುಮಾಡಿ ಬರುವರು.

****

ಗಾರ್ಡನ್ ಬೆನೆಟ್ ಎಂಬ ಕೋಟ್ಯಾಧೀಶ್ವರನು ತನ್ನ ಮರಣಶಾಸನದಲ್ಲಿ ಹಾರ್ವರ್ಡ್ ಪಟ್ಟಣದ ವಿದ್ಯಾಶಾಲೆಯ ಸಹಾಯಕ್ಕೆ ತನ್ನ ಆಸ್ತಿಯಲ್ಲಿ ೫೦ ಲಕ್ಷ ಪೌಂಡುಗಳನ್ನು ಕೊಡಬೇಕೆಂದು ಬರೆದಿಟ್ಟು ಸತ್ತುಹೋದನು.

… ಸರ್ಕಾರದವರು ಈ ವರುಷ ರಾಜ್ಯದ ಉತ್ಪತ್ತಿಗಿಂತ ಖರ್ಚು ಹೆಚ್ಚಾಗುವುದರಿಂದ ೫ ಕೋಟಿ ದ್ರವ್ಯವನ್ನು ಸಾಲ ಮಾಡುವವರಾಗಿದ್ದಾರೆ.

****

ಇಟಲಿ ರಾಜ್ಯದಲ್ಲಿ ಈ ಸಲ ಖರ್ಚು ಹೋಗಿ ೬ ಕೋಟಿ ದ್ರವ್ಯ ಸರ್ಕಾರಿ ಖಜಾನೆಯಲ್ಲಿ ಉಳಿತಾಯ ದೊರೆಯುವದೆಂದು ಅಧಿಕಾರಿಗಳೂ ಸೂಚಿಸುತ್ತಾರೆ.

****

ಸ್ಕಾಟ್ಲೆಂಡಿನಲ್ಲಿ ದೊಡ್ಡ ಪಟ್ಟಣವೆನಿಸಿರುವ ಗ್ಲಾಸ್ಗೋ ನಗರದಲ್ಲಿ ಬಡವರ್ಗದ ಮಕ್ಕಳೆಲ್ಲಾ … ಮ್ಯುನಿಸಿಪಾಲಿಟಿಯವರು ಹಾಲನ್ನು ಕೊಂಡು ಮನೆ ಮನೆಗೆ ಧರ್ಮಾರ್ಥವಾಗಿ ಹಂಚಿಕೊಡುವಂತೆ ಏರ್ಪಾಡು ಮಾಡುತ್ತಿದ್ದಾರೆ.

****

ಅಮೇರಿಕಾ ರಾಜ್ಯದ ನೌಕಾಬಲವು ೧೮೯೭ನೆ ಇಸವಿಯಲ್ಲಿ ಜರ್ಮನಿಗಿಂತ ಕಡಿಮೆಯಾಗುತ್ತಿತ್ತು, ಅದಕ್ಕೋಸ್ಕರ ಸರ್ಕಾರದವರು ೬೬ ಕೋಟಿಯೂ, ೨೫ ಲಕ್ಷ ರೂಪಾಯಿ ಖರ್ಚು ಮಾಡುವರೆಂದು ಗೊತ್ತಾಗಿದೆ ಎಂದೂ ಪ್ರಕಟವಾಗಿದೆ.

****

ಅಮೇರಿಕ ಖಂಡಕ್ಕೆ ಉತ್ತರದಲ್ಲಿರುವ ಕೆನಡಾ ರಾಜ್ಯದ ಮುಖ್ಯ ಪಟ್ಟಣವಾದ ಒಟ್ಟಾವಾ ನಗರದಲ್ಲಿ ಕಳೆದ ವಾರ ಒಂದು ದೊಡ್ಡ ವಿದ್ಯಾಶಾಲೆಯು ಉರಿದು ಬಿದ್ದುಹೋಯಿತು, ಒಳಗಿದ್ದ ವಿದ್ಯಾರ್ಥಿಗಳು ಸಿಕ್ಕಿಯಿಲ್ಲವೆಂದು ತಂತೀ ವರ್ತಮಾನ ಬಂದಿದೆ.

****

ಚೀನಾ ರಾಜ್ಯಕ್ಕೆ ಸೇರಿದ ಟೀಂಟ್ಸಿನ್ ನಗರದಲ್ಲಿ ದರೋಡೆ ಕಳ್ಳರವು ಬಹಳ ಹೆಚ್ಚಾಗಿರುವುದರಿಂದ ಪ್ರಜಾ … ಅಧಿಕಾರಿಗಳ … ಕಾಪಾಡಿಕೊಳ್ಳುವುದಕ್ಕೆ ೨—೩ ತಿಂಗಳಲ್ಲಿ ೨,೦೦೦ ಜನ ಕಳ್ಳರನ್ನು ಸರ್ಕಾರದವರು ಶಿರಚ್ಛೇದನ ಮಾಡಿಸಿದಾರೆ.

****

ಚೀನಾ ಚಕ್ರವರ್ತಿಯವರು ಒಂದು ಕಟ್ಟಪ್ಪಣೆ ಹೊರಡಿಸಿದ್ದಾರೆ, ತಮ್ಮ ರಾಜ್ಯಕ್ಕೆ ಸೇರಿದ ಸಕಲ ಸೈನಿಕರನ್ನೂ ಬಹಳ ಚೆನ್ನಾಗಿ ತರಬೇತು ಮಾಡಿ, ಎಲ್ಲರಿಗೂ ಒಂದೇ ತರದ ಉಡುಪು, ಕೋವಿ, ಗುಂಡು ಮುಂತಾದವುಗಳನ್ನು ಸಿದ್ಧಪಡಿಸಿಕೊಡಬೇಕೆಂದು ಅಪ್ಪಣೆ ಕೊಟ್ಟಿದಾರೆ.

****

ಅಮೇರಿಕಕ್ಕೆ ಸೇರಿದ ಪೆನ್ಸಿಲ್ವೇನಿಯಾ ಡಿಸ್ಟ್ರಿಕ್ಟಿನಲ್ಲಿ ಎರಡು ರೈಲ್ ಗಾಡಿಗಳು ಪ್ರಿಂಟರ್ ಎಂಬ ಊರಿನ ಬಳಿ ಎದುರುಬದುರಾಗಿ ಬಂದು ಒಂದಕ್ಕೊಂದು ತಗುಲಿದ್ದರಿಂದ ಗಾಡಿಗಳು ಒಡೆದು ಅನಾಹುತವಾಯಿತು. ಪ್ರಯಾಣಿಕರಲ್ಲಿ ೬೦ ಮಂದಿ ಸತ್ತರು, ೪೦ ಜನರಿಗೆ ಗಾಯಗಳಾಗಿವೆ. ಅವರಲ್ಲಿ ಕೆಲವರು … ಎಲ್ಲಿಗೋ ಹೋಗುತ್ತಿದ್ದರು.

****

ಅಮೇರಿಕಕ್ಕೆ ರಾಜಧಾನಿಯಾದ ನ್ಯೂಯಾರ್ಕ್ ನಗರದಲ್ಲಿ ಒಬ್ಬ ಹೆಂಗಸು ಕಾಯಿಲೆ ಬಿದ್ದು ಆಸ್ಪತ್ರೆಯಲ್ಲಿ ಇದ್ದುಕೊಂಡು ಗುಣಪಡುತ್ತಿದ್ದಳು. ಅವಳನ್ನು ಮಲಗಿಸಿದ್ದ ಕೊಠಡಿಯೊಳಕ್ಕೆ ಆಕಸ್ಮಾತ್ತಾಗಿ ಒಂದು ಗೂಬೆ ಹಾರಿಬಂದು ಅವಳ ಹಾಸಿಗೆಯ ಮೇಲೆ ಕೂತುಕೊಂಡಿತು. ಅದನ್ನು ನೋಡಿ ಆ ರೋಗಿಗೆ ಭೀತಿ ಹುಟ್ಟಿ ಕೂಡಲೇ ಪ್ರಾಣಹೋಯಿತು.

****

ಜರ್ಮನಿ ರಾಜ್ಯದವರು ವಿಲಾಯಿತಿಯಲ್ಲಿ ಎರಡು ಯುದ್ಧದ ಹಡಗುಗಳನ್ನು ತಯಾರುಮಾಡಿಸಿದರು. ಈಚೆಗೆ ಅವರು ಯಾಕೋ ಅವುಗಳನ್ನು ಬಿಕರಿ ಮಾಡುವದಾಗಿ ಪ್ರಕಟಿಸಿ, ೨೨ ಲಕ್ಷ ಪೌಂಡು ಕ್ರಯ ಬರುವದಾದರೆ ಕೊಟ್ಟುಬಿಡುತ್ತೇವೆಂದು ತಿಳಿಸಿದರು. ಆಗ ಇಂಗ್ಲೆಂಡಿನವರೇ ಅವೆರಡನ್ನೂ ೧,೭೫೦,೦೦೦ ಪೌಂಡು ಕ್ರಯಕ್ಕೆ ಖರೀದಿ ಮಾಡಿ ಕೊಂಡುಕೊಂಡಿರುತ್ತಾರೆ.

****

ಆಸ್ಟ್ರಿಯಾ ರಾಜ್ಯಕ್ಕೆ ಸೇರಿದ ಕ್ರಾಕೋ ಪಟ್ಟಣದಲ್ಲಿ … ಎಂಬೊಬ್ಬ ಐಶ್ವರ್ಯವಂತನು ವಿವಾಹ ಮಾಡಿಕೊಂಡಿಲ್ಲ, ಬಹಳ ಜಿಪುಣತನದಿಂದ ಇದ್ದು ೫ ಲಕ್ಷ ರೂಪಾಯಿಗಳನ್ನು ಕೂಡಿಸಿಟ್ಟನು. ಈಗ ಅವನು ಆ ಪಟ್ಟಣದಲ್ಲಿರುವ ಬಡ ಹುಡುಗರಿಗೆಲ್ಲಾ ವೇತನ ಕೊಟ್ಟು ವಿದ್ಯೆ ಕಲಿಸುವದಕ್ಕಾಗಿಯೇ ತನ್ನ ಆಸ್ತಿಯನ್ನೆಲ್ಲಾ ವಿನಿಯೋಗಿಸಿರುತ್ತಾನೆ.

****

ಫ್ರಾನ್ಸ್ ರಾಜ್ಯದ ಅನೇಕ ಹಾದಿಗಳಲ್ಲಿ ಜನರು ನಾಯಿಗಳನ್ನು ಗಾಡಿಗೆ ಕಟ್ಟುತ್ತಾರೆ, ಅವುಗಳ ಮೇಲೆ ಭಾರವನ್ನು ಹೇರಿಕೊಂಡು ಹೋಗುವದೂ ಬಹಳ. ಸರ್ಕಾರದವರು ಇದನ್ನು ನೋಡಿ, ಆ ಪ್ರಾಣಿಗಳ ವಿಷಯದಲ್ಲಿ ಕನಿಕರ ಪಟ್ಟು, ಇನ್ನು ಮೇಲೆ ಯಾರೂ ಯಾವ ಪಟ್ಟಣದಲ್ಲೂ ಈ ಪ್ರಾಣಿ … ಕೆಲಸ ಮಾಡಿಸಿಕೊಳ್ಳಕೂಡದೆಂದೂ, ಶಿಕ್ಷೆ ವಿಧಿಸುವುದಾಗಿಯೂ ಕಾನೂನು ಮಾಡಿ ಪ್ರಕಟಿಸಿದ್ದಾರೆ.

****

ಆಸ್ಟ್ರಿಯಾ ರಾಜ್ಯದ ರಾಜಧಾನಿಯಾದ ವಿಯನ್ನಾ ನಗರದಲ್ಲಿ ಒಬ್ಬ ಹೆಂಗಸಿಗೆ ಅನ್ನಕೋಶದಲ್ಲಿ (ಹೊಟ್ಟೆಯಲ್ಲಿ) ಒಂದು ಗೆಡ್ಡೆ ಬಹಳ ಬೆಳೆಯುತ್ತಿತ್ತು. ಆಕೆ ಆಸ್ಪತ್ರೆಗೆ ಹೋಗಿ ತೋರಿಸಿದಾಗ ಡಾಕ್ಟರ್ … ಎಂಬವರು ಅನ್ನಕೋಶವನ್ನೆಲ್ಲಾ ಸಂಪೂರ್ಣವಾಗಿ ಶಸ್ತ್ರ ಹಾಕಿ ತೆಗೆದುಬಿಟ್ಟರು. ಆಸ್ಪತ್ರೆಯಲ್ಲೇ ಆಕೆಯನ್ನಿಟ್ಟುಕೊಂಡು ಆರೈಕೆ ಮಾಡುತ್ತಿದ್ದಾರೆ. … ತೆಗೆದುಕೊಳ್ಳುವ ಆಹಾರವನ್ನು … ಹೊಸದಾಗಿ ಅನ್ನಕೋಶವು ಹುಟ್ಟುತ್ತಿದೆ ಎಂದೂ, ಇದು ಲೋಕದಲ್ಲಿ ಆಶ್ಚರ್ಯವಾದ ಸಂಗತಿ ಎಂದೂ ಪ್ರಕಟಿಸಿರುತ್ತಾರೆ.

ಅಸ್ಸೀರಿಯಾ ದೇಶಕ್ಕೆ ಸೇರಿದ ಸಿನ್ನಾ ಪರ್ವತದಲ್ಲಿ ಒಂದು ಪ್ರದೇಶವನ್ನು ಒಟ್ಟು ೬೭ ಪೌಂಡು ಕೊಟ್ಟು ಕೊಂಡುಕೊಂಡರು. ಈಗ ೯೦ ಜನಾಂಗಗಳಾದವು. ಅದೇ ಪ್ರದೇಶವನ್ನು ಪರ್ಷಿಯಾ ಈಗ ೭,೫೦,೦೦೦ ಪೌಂಡುಗಳಿಗೆ ಕೊಂಡುಕೊಳ್ಳಬೇಕೆಂದು ಪ್ರಯತ್ನಪಡುತ್ತಿದ್ದಾರೆ.

****

ಅಮೇರಿಕದ ರಾಜಧಾನಿಯಾದ ವಾಷಿಂಗ್ಟನ್ ಪಟ್ಟಣದಲ್ಲಿ ಪುರಾಧ್ಯಕ್ಷನಿಗೆ ವರುಷಕ್ಕೆ ೧೫ ಸಾವಿರ ದ್ರವ್ಯ ಸಂಬಳವಿರುತ್ತೆ. ಅವನ ಕೈಕೆಳಗೆ ೧೭೦ ಅಧಿಕಾರಿಗಳು ಕೆಲಸಮಾಡುವರು. ಈ ಅಧಿಕಾರಿಗಳಿಗೆಲ್ಲಾ ಅವರು ತಮ್ಮ ಸ್ನೇಹಿತರನ್ನೂ, ತಮ್ಮ ಸಂಬಂಧಿಗಳನ್ನೂ, ತಮ್ಮ ಸಹಾಯಕರನ್ನೂ ನೇಮಿಸಿಕೊಳ್ಳುವರು. ಪುರಾಧ್ಯಕ್ಷರಿಗೆ ವಿಚಾರಣೆಯಲ್ಲಿ ಕೂಡ ಅಷ್ಟು ಅಧಿಕಾರವಿರುವುದಿಲ್ಲ. ಆದರೆ ಈ ಪುರಾಧ್ಯಕ್ಷನನ್ನು ಪ್ರಜೆಗಳೇ ನಿಂತು ಚುನಾಯಿಸಿಕೊಳ್ಳುವರು.

****

ಉತ್ತರ ದಿಕ್ಕಿಗೆ ಸೇರಿದ ಮಿಲ್ವಾರ್ ಪಟ್ಟಣದಿಂದ ಹೋದ ತಿಂಗಳು ಒಬ್ಬ ಯಾತ್ರಿಕನು ಬರೆದು ಕಳುಹಿಸಿರುವುದೇನೆಂದರೆ:— ಸ್ವಲ್ಪವೂ ಕಡಿಮೆಯಿಲ್ಲದೆ ಕಳೆದ ಆರುದಿನಗಳಿಂದಲೂ ಇಲ್ಲಿ ವಿಪರೀತ ಮಳೆ ಸುರಿಯುತ್ತಿದೆ. ನದಿ, ಹೊಳೆ, ಕೆರೆಗಳೆಲ್ಲಾ ತುಂಬಿ ದಡಗಳ ಮೇಲೆ ಹರಿಯುತ್ತಿರುವವು. ಸೇತುವೆಗಳು, ರಸ್ತೆಗಳು, ಬೆಳ್ಳ ಬೆಳೆಗಳು—ಎಲ್ಲಾ ಕೊಚ್ಚಿಕೊಂಡುಹೋಗಿವೆ. ಸುಮಾರು ೬೦,೦೦೦ ಎಕರೆಗಳಷ್ಟು ಹೊಲಗದ್ದೆಗಳಲ್ಲಿ ಪ್ರವಾಹದ ನೀರು ನಿಂತಿದೆ. ಕಲ್ಲಿನ ಸೇತುವೆಗಳು ನೂರಾರು ವರುಷಗಳಿಂದಲೂ ಇದ್ದವು ಕೊಚ್ಚಿಹೋದವು. ಕಳೆದ ೧೯೪೦ ರಲ್ಲಿ ಬಂದಿದ್ದ ಅಪೂರ್ವ ಪ್ರವಾಹಕ್ಕಿಂತಲೂ ಈ ಸಲದ ಪ್ರವಾಹವು ಮೀರಿ ಹೋಗಿದೆ. ಸರ್ಕಾರದವರು ತಗ್ಗಾದ ಪ್ರದೇಶಗಳಲ್ಲಿದ್ದ ಗ್ರಾಮಸ್ಥರ ಕುಟುಂಬಗಳನ್ನು ವಿಚಾರಿಸಿ ಅವರಿಗೆ ಅನ್ನಾಶ್ರಯಗಳನ್ನು ಕೊಡಿಸುತ್ತಿರುವರು. ಸಾವಿರಾರು ಗೋವುಗಳೂ, ವಿಪರೀತ ಫಸಲು ಬೆಳೆದಿದ್ದ ಜಮೀನುಗಳೂ ನಾಶಹೊಂದಿದವು. ಈ ಅಪಾಯದಲ್ಲಿ ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ಜನರು ಸಿಕ್ಕಿ ಮೃತಪಟ್ಟಿರುವರೋ ಗೊತ್ತುಮಾಡಲು ಇನ್ನೂ ಅವಕಾಶವೇ ಇಲ್ಲ.

ಜ್ವರ ಹರಿ.. ?

ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುನಿಸಿಪಲ್ ಅಲಾಯಿ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು. ಇನ್ನೂ ಜನಗಳು ಕಾಟಲೇ ಬಿಳುತ್ತಿರು ವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೪ ಆಣೆ. ೧ ರೂ., ೧—೪ ರೂ., ರೂ. ೭—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಕೇಸ್ಬೇಡು ಮುಫ಼ ಬಟವಾಡೆ ಆಗುವದು.

********

ಪಿ ಮ೦ ಕ ಪ್ರಾ ರ ರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಶೂಲೆ ಯುವದು, ವಾಂತಿಭೇದಿ, ನಾನಾ ರೀತಿಯ ಹೊಟ್ಟೆನೋವುಗಳು—ಮುಂತಾದ್ದೆಲ್ಲಾ ಮಾಯವಾಗಿ ಗುಣವಾಗಿ, ಕೂಡಲೇ ಗುಣಕೊಡು ವದು. ಇದು ಬೆಂಗಳೂರು ಡಿಸ್ಟ್ರಿಕ್ಟ್ ಬಂಧಾವಧಿ ಹೋರ್ ಆಗುವಾಗ್ಯ ಹೊಟ್ಟೆನೋವಿನ ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರ ಪ್ರತಿದಿನ ಎಂಬ ಔಷಧವಂತೆಯೇ. ಸೀಸೆಗಳಲ್ಲಿ ದೊರಕುವದು.

ಕವಡದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯವರ ಔಷಧವನ್ನು ನಾನು ನನ್ನ ತಾಯೀದಾಗಲೂ ಮೈಸೂರಿನ ಆಸ್ಪತ್ರೆಯಲ್ಲಿ ಅನೇಕ ರೋಗಿಗಳಿಗೂ ಕೊಟ್ಟೆನು, ಅದೇ ರೀತಿ, ಅದರಿಂದ ರೋಗಿಷ್ಟರಿಗೆ ಗುಣವಾಗುತ್ತೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.— ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ನೆಂಬರ್ ಬೀಚ್ ಲೈನ್, ಮದರಾಸ್.

## ಇದೊಂದು ಹೊಸ ಪುಸ್ತಕ. ಬೇಗನೋಡಿ.

"ಸ್ವಪ್ರಯಾಸ ಫಲದೀಪಿಕೆ" ಎಂಬ ಈ ಪುಸ್ತಕವು ಪ್ರಸಿದ್ಧವಾದದ್ದೇ ಸರಿ. ಮೈಸೂರು ಸಂಸ್ಥಾನದಲ್ಲಿ ಮಹಾ ಪ್ರಸಿದ್ಧರಾಗಿಯೂ, ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಸೀನಿಯರ್ ಕರ್ನಾಟಕ ಪಂಡಿತರಾಗಿಯೂ ಇರುವ ಪಿ. ಆರ್ ಕರಿಬಸವಶಾಸ್ತ್ರಿಗಳು ಈ ಪುಸ್ತಕದ ವಿಷಯದಲ್ಲಿ ಕೊಟ್ಟಿರುವ ಅಭಿಪ್ರಾಯವನ್ನು ಸ್ವಲ್ಪ ನೋಡಿ. "ಸ್ವಪ್ರಯಾಸ ಫಲದೀಪಿಕೆಯೆಂಬ ಗ್ರಂಥವನ್ನು ನಾನು ಆದ್ಯಂತವಾಗಿ ಓದಿದೆನು. ಇದರಲ್ಲಿ ಪ್ರತಿ ಮನುಷ್ಯನು ತನಗಿರುವ ಬುದ್ಧಿಗೆ ಅನುಸಾರವಾಗಿ ಸ್ವಂತ ಪ್ರಯೋಜನವಾದ ಕಾರ್ಯದಲ್ಲಿ ಪ್ರವರ್ತಿಸಿ ಬಿಡದೆ ಪ್ರಯಾಸ ಪಡುವನಾದರೆ ತಕ್ಕ ಫಲವು ಸಿದ್ಧಿಸುವದೆಂಬ ಅಂಶಗಳು ಪ್ರಸಿದ್ಧೋದಾಹರಣೆಗಳೊಡನೆ ಸಮರ್ಥಿಸಲ್ಪಟ್ಟಿರುವವು. ಕನ್ನಡದಲ್ಲಿ ಈ ವಿಷಯವಾಗಿ ಯಾವದೊಂದು ಪುಸ್ತಕವೂ ಇದುವರೆಗೆ ಯಾರಿಂದಲೂ ರಚಿಸಲ್ಪಟ್ಟಿಲ್ಲ. ಈ ಗ್ರಂಥದಲ್ಲಿ ವಿರುವ ಹಲವು ವಿಷಯಗಳು ಓದುವವರಿಗೆ ಬಹು ಉಪಯೋಗಿಗಳಾಗಿಯೂ, ಉಚಿತವಾದ ಭಾಷಾ ಶೈಲಿಯುಳ್ಳವುಗಳಾಗಿಯೂ, ವಾಕ್ಯರಚನೆಗಳಾಗಿಯೂ ಇರುವದರಿಂದ ಈ ಗ್ರಂಥವು ಲೋವರ್ ಸೆಕೆಂಡರಿ ಕ್ಲಾಸ್ ವಿದ್ಯಾರ್ಥಿಗಳು ಓದುವದಕ್ಕೆ ಯೋಗ್ಯವಾಗಿದೆ ಎಂದು ನಂಬುತ್ತೇನೆ."

೭—೧೦—೧೯೦೩ ಪಿ. ಆರ್. ಕರಿಬಸವಶಾಸ್ತ್ರಿ.

ಮೈಸೂರು.

ಈ ಪುಸ್ತಕವನ್ನು ಗ್ರಂಥಕರ್ತರಾದ ಮಾ॥ ರಾ॥ ಪು. ವೇದಮೂರ್ತಿಯವರು ಬರೆದಿದ್ದಾರೆ. ಇದರ ಕ್ರಯ ಮೂರು ಆಣೆಗಳು ವಿ. ಪಿ. ಪಿ. ಯಲ್ಲಿ ತರಿಸಿಕೊಂಡರೆ ಆರು ಆಣೆಗಳಾಗುವವು. ಜಾಗ್ರತೆ ನೋಡಿ.

ಮ್ಯಾನೇಜರ್,

ಪಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

ಹೊ ೯ ಮೊ ೯ ಸಿ ಯಾ.

ತಕ್ಷಣ ಪರಿಹಾರ.



ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಕ್ಯಾಪಿಟೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ದೇವರಾಜಿಗಳಿಗೆ ಮಹತ್ತಾಗಿ ನಿಶ್ಚಿತ ವಾದ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಚಾಕುಗಾಯ, ಸುಟ್ಟಗಾಯ, ಮೂಲವ್ಯಾಧಿ, ಉಬ್ಬಸ, ಗಾಯಗಳು, ಜರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ಕಜ್ಜಿಗಳು, ಮೂಳೆಕಡಿತ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪುಲಿಯುವದು, ಬೆಂಕಿಯಲ್ಲಿ ಸುಟ್ಟು ಕೊಂಡದ್ದು, ಇತ್ಯಾದಿ—ಇನ್ನೇ ಮೊದಲಾದ ನಾನಾ ಬಾಧೆಗಳನ್ನು ಶಮನಪಡಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೭—೮ ಆ; ಒಂದೇ ಸಲ ೬ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಚಾರ್ಜು ಮಾಫಿ ಮಾಡುತ್ತೇವೆ. ರೂ. ೭—೮ ಆಣೆ ಬಾಟ್ಲು ಡಬ್ಬಿನಲ್ಲಿ ೧ ರೂ. ಡಬ್ಬಿನಲ್ಲಿರುವದಕ್ಕಿಂತ ೭ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೭—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಚಾರ್ಜು ಮಾಫಿ ಇರುತ್ತೆ.

********

ಹೊರ್ಮೊಸಿಯಾ ಯೂಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಜನರ್ ಬಗೆದ ಕಡೆ ಇದನ್ನು ಹಚ್ಚಿಕೊಳ್ಳುವರು. ಇದರಲ್ಲಿ ನೋವಿನೋಡುವ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳಷ್ಟು ಹೆಚ್ಚು ಭಾಗವಿರುತ್ತೆ. ಇದನ್ನು ಜನಾಂಗ್ಯ ಬಹು ಬೇಗನೆ ಸ್ವೀಕರಿಸಿಕೊಳ್ಳುತ್ತಾರೆ. ಡಬ್ಬಿಗಳಲ್ಲಿ ತುಂಬಿ ೪ ಡಜನ್ ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಚಾರ್ಜು ಮಾಫಿ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರವಿಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಉಚಿತವಾಗಿ ಕಳುಹಿಸುವೆವು.

ವಿಳಾಸ.—ಹೊರ್ಮೊಸಿಯಾ ಕಂಪೆನಿ, ೭೭ ನೆಂಬರ್ ಬೀಚ್ ಲೈನ್, ಮದರಾಸ್.

## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

27—11—1903 ರಿಂದ 4—12—1903 ರ ವರೆಗೆ.

| ಸ್ಥಳ. | ಪ್ಲೇಗ್ ಹಿಡಿದ ಜನ್ಮ. | ಪ್ಲೇಗ್ ಸತ್ತ ಜನ್ಮ. | ಇಂದಿನ ಸಂಖ್ಯೆ | |
|---|---|---|---|---|
| ಬೆಂಗಳೂರು ಪಟ್ಟಣ | 83 | 67 | 86 | 4 |
| ಮೈಸೂರು ,, | 76 | 64 | 119 | [illegible] |
| ಬೆಂಗಳೂರು ಡಿಸ್ಟ್ರಿಕ್ಟ್ | 92 | 57 | 114 | [illegible] |
| ಮೈಸೂರು ,, | 135 | 74 | 103 | [illegible] |
| ಕೋಲಾರ್ ,, | 89 | 55 | 85 | [illegible] |
| ಕೋಲಾರ್ ಚಿನ್ನದ ಗಣಿಗಳು | 28 | 18 | 20 | [illegible] |
| ತುಮಕೂರು ಡಿಸ್ಟ್ರಿಕ್ಟ್ | 40 | 20 | 78 | [illegible] |
| ಹಾಸನ ,, | 7 | 5 | 23 | 1 |
| ಚಿತ್ರದುರ್ಗ ,, | 14 | 9 | 15 | [illegible] |
| ಕಡೂರ್ ,, | 44 | 24 | 44 | [illegible] |
| ಶಿವಮೊಗ್ಗ ,, | 34 | 24 | 47 | [illegible] |
| ಒಟ್ಟು. | 653 | 427 | [illegible] | [illegible] |

ಬರೀಕಾರಣ ಈ ೧೯—೨೩ನೇ ತಾರೀಖಿನ್ನಾವು ಸರ್ವ ಸ್ವಾಗತಿಸಿ ಬರುವ ಅತ್ಯಂತ ಗುರುವಾರದಿಂದ ಪುಷ್ಯ ಬಹುಳ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಡಿಸೆಂಬರ್.

| ತಾ. | ವಾರ. | ತಿಥಿ. | ಘಳಿಗೆ. | ನಕ್ಷತ್ರ. | ಘಳಿಗೆ. | ಘಂ. |
|---|---|---|---|---|---|---|
| 17 | ಗುರು * | ಚತುರ್ದಶಿ | 45 32 | ಜ್ಯೇ | 29 -38 | 3 |
| 18 | ಶುಕ್ರ † | ಅಮಾವಾ | 47 12 | ಮೂ | 32 -2 | 4 |
| 19 | ಶನಿವಾರ ‡ | ಪಾಡ್ಯಮಿ | 49 50 | ಪೂ.ಷಾ | 35 57 | 4 |
| 20 | ರವಿವಾ | ಬಿದಿಗೆ | 53 52 | ಉ.ಷಾ | 40-11 | 5 |
| 21 | ಸೋಮ | ತದಿಗೆ | 58 28 | ಶ್ರವಣ | 46 31 | 6 |
| 22 | ಮಂಗಳ ¶ | ಚೌತಿ | 60-0 | ಧ | 52 46 | 7 |
| 23 | ಬುಧ | ಚೌತಿ | 3 58 | ಶ | 59 1 | 8 |

* ನರಕಚತುರ್ದಶಿ. † ಸರ್ವತ್ರ ಅಮಾವಾಸ್ಯ. ‡ ಕಾರ್ತಿಕ ಸ್ನಾನಾರಂಭ. ¶ ಗೌರ್ವಾಗಣಪತಿ ವ್ರತ.

## ಪೇಟೆ ಧಾರಣೆ.

| ಜಿನಸು. | ಮೈಸೂರು. | ಬೆಂಗಳೂರು |
|---|---|---|
| ಕಲ್ಲಿ ಅಕ್ಕಿ ಪಲ್ಲ ೧ಕ್ಕೆ ರೂ. | ೧೧ ೪—೦ | ೧೦—೦ |
| ಕಂಬಳಿ ಅಕ್ಕಿ ಅವಲ್ .. .. | ೧೦-೯-೭-೦ | ೧೦—೪—೦ |
| ,, ಪುಡಿಯಂ .. | ೧೦—೨—೦ | ೧೧—೦ |
| ಜಾವಾಗಿ ಅಕ್ಕಿ .. .. | ೯—೧೦—೦ | ೧೭—೦ |
| ಸಣ್ಣಕ್ಕಿ ಅವಲ್ .. .. | ೧೩ ೦—೦ | ೧೩—೦ |
| ,, ಪುಡಿಯಂ .. .. | ೧೭ ೦-೦ | ೧೧—೦ |
| ಕೊಡಗಿನ ಬೇಳೆ ಭತ್ತ ೧ಕ್ಕೆ .. | ೯೩ ೧೭-೦ | ೧೭—೦ |
| ,, ಪುಡಿಯಂ .. .. | ೧೩—೪—೦ | ೧೨—೦ |
| ಜ್ವರ ರಾಗಿ ಪಲ್ಲ ೧ಕ್ಕೆ .. .. | ೩ ೧೭—೦ | ೩—೭—೦ |
| ಸಾದಾ ರಾಗಿ .. .. | ೩—೪—೦ | ೭—೧೦—೦ |
| ಜೋಳ .. .. | ೭—೨—೦ | ೬—೦ |
| ಹಲಸಂದೆ ಪಲ್ಲ ೧ಕ್ಕೆ .. .. | ೩—೧೭—೦ | ೪—೪—೦ |
| ಬಿಳೀ ಅವರೆ .. .. | ೪—೧೭ ೦ | ೪—೦ |
| ಹೆಸರು .. .. | ೯ ೦—೦ | ೯—೪—೦ |
| ಉದ್ದು .. .. | ೪ ೧೭-೦ | ೯—೦ |
| ಕಡಲೆ .. .. | ೧೦ ೯—೦ | ೪—೯—೦ |
| ಎಳ್ಳು .. .. | ೯೭ ೧—೦ | ೭—೦ |
| ಹುರುಳಿ .. .. | ೩—೪ ೦ | ೨—೧೭—೦ |
| ಕೆಂಪು ೧೭೩ ಸೇರಿಗೆ .. .. | ೯—೭—೦ | ೭—೨—೦ |
| ಸಿಗೇಕಾಯಿ ಮೂಟೆ ೧ಕ್ಕೆ .. | ೧—೪—೦ | ೭—೦ |
| ರೊಂಗಿನಕಾಯಿ .. .. | ೩—೦—೦ | ೭—೦ |
| ,, ಪುಡಿಯಂ .. .. | ೩—೦ ೦ | ೦—೪—೦ |
| ಬೆಲ್ಲ ದೊಡ್ಡ ಅಚ್ಚು .. .. | ೩—೪—೦ | ೫—೭—೩—೦ |
| ಒಳ್ಳೆಣ್ಣೆ ಮಣ ೧ಕ್ಕೆ .. .. | ೩—೧೨ ೦ | ೩—೭—೦ |
| ಹರಳೆಣ್ಣೆ ,, .. .. | ೩—೯—೭—೦ | ೩—೭—೦ |
| ಕೊಬ್ಬರಿ ಪಲ್ಲ ೧ಕ್ಕೆ .. .. | ೭—೦—೦ | ೭—೨—೦ |
| ಬಿಳಿ ,, .. .. | ೧೦—೦—೦ | ೪—೧೦—೦ |
| ಹುರುಳಿ ಹಾಲು .. .. | ೦-೧೨—೦ | ೧—೦ |
| ,, ಹಳೇದು .. .. | ೦—೧೦—೦ | ೦—೯—೦ |
| ತುಪ್ಪ .. .. | ೧೦ ೪—೦ | ೧೦—೦ |
| ಸೀಮೆಯೆಣ್ಣೆ ಡಬ್ಬಿ ೧ಕ್ಕೆ .. | ೪ ೯—೦ | ೩—೪—೦ |
| ತೆಂಗಿನಕಾಯಿ ೧೦೦ ಕ್ಕೆ .. | ೪—೨-೦ | ೩—೧೭—೦ |
| ಅಡಕೆಯಾಲೆ ಮೂಟೆ ೧ಕ್ಕೆ .. | ೦—೧೪ ೦ | ೦—೧೦—೦ |
| ಅರಿಶಿನದ ಬೇರು ಮಣ ೧ಕ್ಕೆ .. | ೦—೧೨—೦ | ೦—೪—೦ |
| ಸಕ್ಕರೆ (ಬಿಳಿ) ಮೂಟೆ .. | ೦೫—೪—೦ | ೦೫—೦ |
| ,, ಹಸಿರು .. | ೧೨—೪—೦ | ೧೨—೪—೦ |
| ,, ಸಣ್ಣ ತುರು ೧ಕ್ಕೆ .. | ೭೩—೧—೦ | ೭೩—೦ |
| ನೀರ್ ಗಟ್ಟಿ ತೊಲ ೧೦೦ ಕ್ಕೆ .. | ೭—೦—೧ | ೭೦—೦ |

Printed and Published by the Rev. E. W. Thompson, B.A. the Proprietor and Manager, Wesleyan Mission Press, Mysore. 17/12/1903.

# ವೃತ್ತಾಂತ ಪತ್ರಿಕೆ.

REGISTERED M. 20

೧ಯ ೧ ದು ಡ್ಡು —:0:— ಕ್ರ ೨ಯ ೧ ದು ಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩. ಮೈಸೂರು—ಸನ್ ೧೯೦೩ ನೇ ಇಸವಿ ಡಿಸೆಂಬರ್ ತಾರೀಖು ೨೪ ನೇ ಗುರುವಾರ. ಸಂಚಿಕೆ ೫೦



"ಮಹಿಳಾಸಖೀ" ಪ್ರಯಾಂಗ ಪು.

ಈ ಮಾಸಿಕ ಪತ್ರಿಕರ್ತರು ೧೯೦೪ ನೆಯ ವರ್ಷಕ್ಕೆ ಉಪಯೋಗಕರವಾದ ಒಂದು ಪ್ರಯಾಂಗವನ್ನು (ಕ್ಯಾಲೆಂಡರನ್ನು) ತಯಾರ್ಮಾಡಿರುತ್ತಾರೆ. ಇದರಲ್ಲಿ ವಿವಿಧ ಚಿತ್ರಗಳು ಬಹು ಸುಂದರವಾಗಿವೆ. ಟಿಪ್ಪಣಿ ದರ ಮುಂತಾದ ಅನೇಕ ಉಪಯುಕ್ತ ವಿಷಯಗಳೂ ಇವೆ. ಅದನ್ನು ಅಪೇಕ್ಷಿಸುವವರು ಡಿಸೆಂಬರ್ ೩೧ನೇ ತಾರೀಖಿನೊಳಗಾಗಿ ಈ ಮಾಸ ಪತ್ರಿಕೆಗೆ ೬ (ಅಥವಾ ಅಂಚೆ ಹಾಸಲು ಸೇರಿ ೯ ಆಣೆಯನ್ನು) ಆಣೆಯನ್ನು ವಾರ್ಷಿಕ ಚಂದಾ ಜೊತೆ ಕಳುಹಿಸಿ ಪಡೆಯಬಹುದು ಪ್ರಯಾಂಗವನ್ನು ಉಚಿತವಾಗಿ ಪಡೆಯಬಹುದು. ಪ್ರಯಾಂಗವನ್ನು ಮಾತ್ರ ಅಪೇಕ್ಷಿಸುವವರು ನಾಲ್ಕಾಣೆಯನ್ನು ಕೆಳಗಣ ವಿಳಾಸಕ್ಕೆ ಕಳುಹಿಸಿ ಪಡೆಯಬಹುದು. ಈ ವಿಳಾಸಕ್ಕೆ ಬೇಗ ಬರೆಯಿರಿ!

ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

## ಸ್ಟಾಂಡರ್ಡ್ ಲೈಫ್ ಅಷ್ಯೂರೆನ್ಸ್ ಕಂಪೆನಿ.

23

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಇಂಡಿಯಾ ದೇಶದಲ್ಲಿ ಲೈಫ್ ಅಷ್ಯೂರೆನ್ಸ್ ಯಾನೆ ಜೀವವನ್ನು ಭೀಮಾ ಮಾಡಿಕೊಳ್ಳುವ ಕಂಪೆನಿಗಳಲ್ಲಿ ಇದು ಬಹು ಹಳೆಯದಾಗಿಯೂ ಹೆಚ್ಚಾದ ಬಂಡವಾಳವುಳ್ಳದ್ದಾಗಿಯೂ ಇದೆ.

ಭೀಮಾದಾರರುಗಳಾದವರು (ಲೈಫ್ ಅಷ್ಯೂರ್ ಮಾಡಿಕೊಳ್ಳುವವರು) ಈ ಕಂಪೆನಿಯು ಬಂದಾ ಹರ, ಪರಸ್ಪರ ಗಳು ಕೊಡಲಾಗುವ [illegible] ಇತರ ಕಂಪೆನಿಯವರುಗಳೊಡನೆ ಹೋಲಿಸಿನೋಡಿದರೆ ಇಲ್ಲಿ ಭೀಮಾ ಮಾಡುವವರಿಗೆ ಎಷ್ಟು ಸೌಕರ್ಯಗಳುಂಟಾಗುವುವು.

ಈ ಕಂಪೆನಿಯ ಭೀಮಾ ನಿಬಂಧನೆಗಳು ಬಹು ಅನುಕೂಲವಾದುವು. ಭೀಮಾದಾರರುಗಳಿಗೆ ತೊಂದರೆಯನ್ನುಂಟುಮಾಡುವ ನಿಬಂಧನೆಗಳೇನೂ ಇಲ್ಲ.

ನಿಶ್ಚಯವಾದ ವಯಸ್ಸು ಕಳೆದ ಮೇಲಾಗಲಿ ಆ ವಯಸ್ಸಿಗೆ ಮೊದಲು ಮೃತನಾದ ಪಕ್ಷದಲ್ಲಿ ಮರಣಾನಂತರವಾಗಲಿ ೫,೦೦೦ ರೂ ಗಳನ್ನು ಕಂಪೆನಿಯವರು ಕೊಡುವ ಬಾಧ್ಯಸ್ಥರಾಗಿ ಪಡೆಯಬೇಕಾದರೆ ಭೀಮಾದಾರನು ಕಂಪೆನಿಗೆ ಕೊಡಬೇಕಾದ ಚಂದಾ [illegible] ಪಟ್ಟಿ ಕೆಳಗೆ ಇಲ್ಲಿ ನೋಡಿ.

| ಭೀಮೆಯಾದ ವಯಸ್ಸು | ೫೦ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೫,೦೦೦ ರೂ. ಪಡೆಯಬೇಕಾದರೆ ವಾರ್ಷಿಕವಾಗಿ ಕಂಪೆನಿಗೆ ಕೊಡತಕ್ಕದು. | ೫೫ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೫,೦೦೦ ರೂ. ಯನ್ನು ಪಡೆಯಬೇಕಾದರೆ ವಾರ್ಷಿಕವಾಗಿ ಕಂಪೆನಿಗೆ ಕೊಡತಕ್ಕದು. |
|---|---|---|
| ೨೦ | ರೂ. ೬—೧೨—೪ | ರೂ. ೬—೦—೦ |
| ೨೫ | ,, ೩—೧೫—೩ | ,, ೬—೧೩—೦ |
| ೩೦ | ,, ೯—೧೨—೪ | ,, ೪—೨—೦ |
| ೩೫ | ,, ೧೨—೧೩—೪ | ,, ೧೦—೧—೩ |
| ೪೦ | | ,, ೧೩—೩—೪ |

೫,೦೦೦ ರೂ. ಗಿಂತಲೂ ಹೆಚ್ಚಾಗಲಿ ಕಡಿಮೆಯಾಗಲಿ [illegible] ವಯಸ್ಸಿನಲ್ಲಿ ಹಣ [illegible] ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು. [illegible] ಎಂ. ಸ್ವಾಮಿರಾಯರವರು [illegible]

[illegible], ಶಿವಮೊಗ್ಗ.

## ಗರ್ಭಸಂಜೀವಿನಿ.

17

೧ ರೂ. ೮ ಆ.; ವಿ. ಪಿ. ಚಾರ್ಜ್ ೩ ಆ.

ಕೆ. ನರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.

## WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಪುಸ್ತಕ, ಚಿತ್ರ, ಬೈಂಡಿಂಗ್ ಮುಂತಾದ ಸಮಸ್ತ ಪ್ರಿಂಟಿಂಗ್ ಕೆಲಸಗಳನ್ನೂ ಬಹಳ ಸುಲಭ ಛಾರ್ಜಿಗೂ, ಜಾಗ್ರತೆಯಿಂದಲೂ, ನೇತ್ರಾನಂದಕರವಾಗಿಯೂ ಮಾಡಿಕೊಡುತ್ತಾರೆ. ಅಪೇಕ್ಷೆಯುಳ್ಳವರು ಕೆಲಸವನ್ನು ಕಳುಹಿಸಿಕೊಟ್ಟು ಪರೀಕ್ಷೆ ಮಾಡಬೇಕು. ಆ ಪುಸ್ತಕಗಳು ಬಹಳ ಗಟ್ಟಿಯಾಗಿಯೂ ಅಂದವಾಗಿಯೂ ಬೈಂಡಾಗುತ್ತವೆ. ಎಲ್ಲಾ ವಿಷಯಗಳನ್ನೂ ಪ್ರೆಸ್ ಮ್ಯಾನೇಜರಿಗೆ ಬರೆದು ಅಥವಾ ಅವರನ್ನು ಮೊಖ್ತಾ ಕಂಡು ತಿಳಿದುಕೊಳ್ಳಬಹುದು.

ವಿಳಾಸ :—ಮೆ|| ಎಂ. ಛಾರ್ಲ್ಸ್, ಮಾನೇಜರ್,

ಮೈಸೂರು.

## ROBINSON'S PATENT BARLEY.

## ರಾಬಿನ್ಸನ್‌ಯವರ ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಎಂಬ ಧಾನ್ಯದಿಂದ ಹೊಸ ವಿಧಾನದಿಂದ ಮಾಡಿದೆ. ಹಸ್ತ ಸ್ಪರ್ಶದಿಂದ ಆದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರಿ ಮಾಡಿ ಬಿಸಿ ನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ರೋಗದ ವಸ್ತುವನ್ನು ಕೆಲವರು ಮಾರುತ್ತಾರಾದ್ದರಿಂದ ಖರೀದಿ ಮಾಡುವ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಹೆಸರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.




2

೧. ಐಯರ ಕಾರ್ಬಾಲಿಕ್ ಹಲ್ಲು ಪುಡಿ.—ಇದರಿಂದುಂಟಾಗುವ ಗುಣಗಳನ್ನು ಅಷ್ಟಿಷ್ಟೆಂದು ವಿವರಿಸಲಾಗದು. ಮೈಸೂರು ಗವರ್ನಮೆಂಟಿನ ಡಾಕ್ಟರಾದ ಎಸ್. ವಿ. ರಾಮಸ್ವಾಮಿ ಮೊದಲಿಯಾರ್, ಎಂ. ಡಿ., ಎಲ್. ಆರ್. ಸಿ. ಪಿ. ಯವರು ಈ ಹಲ್ಲು ಪುಡಿಯ ವಿಷಯದಲ್ಲಿ ಬರೆದಿರುವದೇನು ಸ್ವಲ್ಪ ಓದಿ —" ಈ ಹಲ್ಲು ಪುಡಿಗಳ ಪಟ್ಟಿಯುಳ್ಳಲ್ಲಾ ಮೆ|| ಐಯರವರ ಹಲ್ಲು ಪುಡಿಗೆ ಸರಿಸಮಾನವಾದದ್ದು ಸಿಕ್ಕುವದು ಕಷ್ಟ. ಈ ಹಲ್ಲು ಪುಡಿಯು ಅಗ್ಗವಾಗಿದೆ, ನಿರ್ಮಲವಾಗಿದೆ, ಸುವಾಸನೆಯುಳ್ಳದ್ದಾಗಿದೆ, ಇಂಪಾಗಿಯೂ ಮಧುರವಾಗಿಯೂ ಇದೆ. ಇದರ ಇಂಪಾದ ಮಾಧುರ್ಯವು ಬಾಯಿನೊಳಗೆಲ್ಲಾ ವ್ಯಾಪಿಸಿಕೊಂಡು, ಶರೀರಾದ್ಯಂತಕ್ಕೂ ಒಂದು ತರಹ ಸಂತೋಷಕರವಾದ ಅನುಭವವನ್ನುಂಟುಮಾಡುವುದು. ಈ ಸುಗುಣಗಳೆಲ್ಲಾ ಈ ಹಲ್ಲು ಪುಡಿಯ ವಿಶೇಷಣಗಳಾಗಿರುತ್ತವೆ.

ಈ ಪುಡಿಯನ್ನು ಪ್ರತಿ ಒಬ್ಬರೂ ತರಿಸಿ ಉಪಯೋಗಿಸತಕ್ಕದ್ದಾಗಿದೆ. ಇದರಿಂದ ಹಲ್ಲು ನೋವು ಬಗ್ಗೆ ವಾಸಿಮಾಡುತ್ತೆ. ಈ ಹಲ್ಲು ಪುಡಿಯ ಕ್ರಯ—ಒಬ್ಬನಿಗೆ ಒಂದು ವರ್ಷಕ್ಕೆ ಸಾಕಾಗುವಷ್ಟು, ವಾಸನೆ ಕಟ್ಟದೆ ಇರುವ ೬ ಟಿನ್ ಡಬ್ಬಾಗಳಿಗೆ ರೂ. ೧—೨—೦. ಇದೇ ತರಹ ಪುಡಿ ಇರುವ ಒಂದು ಡಬ್ಬಿಗೆ ೩ ಆಣೆ ಮಾತ್ರ.

ರೋಜಾ ಅತ್ತರಿನಿಂದ ಸುವಾಸನೆ ಕಟ್ಟಿರುವ ಮತ್ತು ಒಬ್ಬನಿಗೆ ಒಂದು ವರ್ಷಕ್ಕೆ ಸಾಕಾಗುವಷ್ಟು ಪುಡಿ ಇರುವ ೬ ಟಿನ್ ಡಬ್ಬಾಗಳಿಗೆ ರೂ ೨—೪—೦. ಇದೇ ತರಹ ಪುಡಿ ಇರುವ ಒಂದು ಡಬ್ಬಿಗೆ ೬ ಆಣೆ ಮಾತ್ರ.

೨. ಐಯರ್ಸ್ಲೈನ್ ಮತ್ತು ಸ್ವರ್ಣಕಾಂತಿ ತೈಲಂ:—ಕೂದಲು ಬೆಳಸುವದಕ್ಕೆ ಸರ್ವಶ್ರೇಷ್ಠವಾದ ತೈಲಗಳು. ಇವು ಶರೀರದ ನರಗಳ ದೌರ್ಬಲ್ಯವನ್ನು ನಿರ್ಮೂಲಮಾಡುವುವು. ಇವನ್ನು ಉಪಯೋಗಿಸುವುದರಿಂದ ಮೇಧಾಶಕ್ತಿ, ಹೀನತೆ, ಆಲಸ್ಯ, ತಲೆಸುತ್ತುವುದು, ದೃಷ್ಟಿಮಾಂದ್ಯ, ಸ್ವಪ್ನನಷ್ಟ—ಇವೆಲ್ಲಾ ವಾಸಿಯಾಗುವವು. ಈ ತೈಲಗಳನ್ನು ನಿತ್ಯವೂ ಕೂದಲಿಗೆ ಹಚ್ಚಿ ಬಾಚಿಕೊಳ್ಳುತ್ತಾ ಬಂದರೆ ಅವರ ಅದ್ಭುತವಾದ ಪ್ರಯೋಜನಗಳನ್ನು ಅನುಭವಪೂರ್ವಕವಾಗಿ ತಿಳಿದುಕೊಳ್ಳಬಹುದಾಗಿದೆ. ದೇಶೀಯ ಪ್ರಜೆಗಳು ವಾರಕ್ಕೊಂದಾವರ್ತಿ ಅಭ್ಯಂಜನಸ್ನಾನಮಾಡುವಾಗ್ಯ ಉಪಯೋಗಿಸುವುದಕ್ಕೆ ಅನುಕೂಲಿಸಬೇಕೆಂತಲೇ ಸ್ವರ್ಣಕಾಂತಿ ತೈಲವನ್ನೂ ತಲೆಗೆ ದಿನವೂ ಹಚ್ಚಿಕೊಳ್ಳುವದಕ್ಕೆ ಐಯರ್ಸ್ಲೈನ್ ತೈಲವನ್ನೂ ತಯಾರ್ಮಾಡಿರುತ್ತಾರೆ

ಸ್ವರ್ಣಕಾಂತಿ ತೈಲ—ಕ್ರಯ ೬ ಔನ್ಸ್ ಶೀಸೆಗೆ ೧ ರೂ.

ಐಯರ್ಸ್ಲೈನ್—ಕ್ರಯ ೩ ಔನ್ಸ್ ಶೀಸೆಗೆ ೧ ರೂ.

೩. ಯೂಕಲಿಪ್ಟಸ್ ಆಯಿಲ್ :—ಈ ಎಣ್ಣೆಯು ಸಕಲ ವಿಧವಾದ ಜ್ವರಗಳು, ಶೀತ, ಕೆಮ್ಮು, ತಲೆನೋವು, ಇನ್ನೂ ಅನೇಕ ವ್ಯಾಧಿಗಳಿಗೆ ಮಹೌಷಧವಾಯವಾಗಿರುವುದು. ಪ್ರತಿ ಒಂದು ಮನೆಯಲ್ಲೂ ಇರಬೇಕಾದ ಎಣ್ಣೆ.

ಕ್ರಯ —೩ ಔನ್ಸುಳ್ಳ ೧ ಬಾಟ್ಲಿಗೆ ರೂ. ೧—೨—೦ ಮಾತ್ರ.

ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಇನ್ನೂ ಹಸನು ಕಸ್ತೂರಿಯಿಂದ ಮಾಡಿದ ಕಸ್ತೂರಿ ಮಾತ್ರೆಗಳು.—ಶೀಸೆ ೧ ಕ್ಕೆ ರೂ. ೧.

ಅನೇಕ ವಿಧ ಫಲಗಳಿಂದ ತಯಾರು ಮಾಡಿದ ಮಾದಳಗಳ [illegible] ರಸಾಯನ — ಸೇರಿನ ಡಬ್ಬಿ ೧ ಕ್ಕೆ ರೂ. ೦—೪—೦

ಇವುಗಳಲ್ಲದೆ ಅನೇಕ ವಿಧ ಔಷಧಿಗಳಿವೆ. ಮುದ್ರಿತ ಔಷಧಿಗಳನ್ನು ತೆಗೆದುಕೊಳ್ಳುವವರು ಪಡೆಯಬಹುದಾದ [illegible] ರೆಯನ್ನು ಬರೆದು ತಿಳಿದುಕೊಳ್ಳಬಹುದು.

ಸಿ. ಐಯರ್ ಬ್ರದರ್ಸ್,

ಕಂಟೋನ್ಮೆಂಟ್ (ದಂಡು), ಬೆಂಗಳೂರು.

## ಮಹಾರಾಜರವರ ಫೋಟೋಗಳು.

ಅತ್ತಿ ವಿಲಾಯತಿಯಿಂದ ಬಂದಿವೆ. ಮುಗಿದುಹೋದಾವು! ಜಾಗ್ರತೆ ನೋಡಿ! ಬಹಳ ಸೊಗಸಾಗಿವೆ, ದೊಡ್ಡ ಸೈಜಿನವು, ಕಡಿಮೆ ಕ್ರಯಗಳಲ್ಲ. ಕ್ರಯ ಏನೇ ಅಣೆ. ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ಚಿತ್ರಗಳು; ಸುಂದರವಾದ ಬಣ್ಣಗಳುಳ್ಳವು. ಕ್ರಯ ದೊಡ್ಡ ಸೈಜಿನವು ೮ ಅಣೆ; ಸಣ್ಣ ಸೈಜಿನವು ೪ ಅಣೆ

ಮ್ಯಾನೇಜರ್, ಸಿ. ಎಲ್. ಎನ್. ಬುಕ್ ಡಿಪೋ, ಮೈಸೂರು.

## ಶ್ರೀಕೃಷ್ಣರಾಜ ವಾಣೀವಿಲಾಸವೆಂಬ

### ಮಹಾಭಾರತ! ರಾಮಾಯಣ!! ಭಾಗವತ!!!

### ಕನ್ನಡ ಟೀಕು.

ಭಾರತ—ಆದಿಪರ್ವ ೩ ರೂ. ವಿರಾಟಪರ್ವ ೧ ರೂ. ಭೀಷ್ಮಪರ್ವ ೨ ರೂ. ದ್ರೋಣಪರ್ವ ೨—೮—೦. ಸ್ತ್ರೀಪರ್ವ ೬ ಅಣೆ. ಅನುಶಾಸನೀಕಪರ್ವ ೩—೧೨—೦.

ರಾಮಾಯಣ.—ಬಾಲಕಾಂಡ, ಅರಣ್ಯಕಾಂಡ, ಕಿಷ್ಕಿಂಧಾಕಾಂಡ, ಸುಂದರಕಾಂಡ, ಒಂದೊಂದಕ್ಕೆ ೧ ರೂ. ಅಯೋಧ್ಯಾಕಾಂಡ—೧ರೂ. ಯುದ್ಧಕಾಂಡ ೪—೮—೦ ಉತ್ತರಕಾಂಡ ೧—೮—೦.

ಭಾಗವತ ಪ್ರಥಮ ದ್ವಿತೀಯ ತೃತೀಯಸ್ಕಂಧಗಳು ೨ ರೂ. ಚತುರ್ಥ ಪಂಚಮಸ್ಕಂಧಗಳು ೧—೧೨—೦. ಷಷ್ಠ ಸಪ್ತಮ ಅಷ್ಟಮ ನವಮಸ್ಕಂಧಗಳು ೨—೮—೦ ದಶಮಸ್ಕಂಧ ೭—೮—೦, ಏಕಾದಶ ದ್ವಾದಶಸ್ಕಂಧಗಳು ೯—೧೨—೦.

ಬೇಕಾದವರು ವಿ. ಪಿ. ಮೂಲಕ ತರಿಸಿಕೊಳ್ಳಬಹುದು.

ಕಮಿಷನ್ ಗಳು ಮುಂತಾದ ವಿವರಗಳ ಮತ್ತು ಬೀಜಗಳ ಕ್ಯಾಟಲಾಗಿಗೋಸ್ಕರ ಬರೆಯಬಹುದು.

ಎಂ. ರುದ್ರಪ್ಪ ಅಂಡ್ ಸನ್ಸ್,
ಲಾಲ್ ಬಾಗ್ ರೋಡ್, ಬೆಂಗಳೂರು ಸಿಟಿ.

## ನಮ್ಮ ಚಂದಾದಾರರಿಗೆ ನೋಟಿಸ್.

"ವೃತ್ತಾಂತ ಪತ್ರಿಕೆ" ಯ ಏಜಂಟರು ಅಂಥಾ ಪಟ್ಟಣದ ಹೆಸರು ಕೊಂಡದ್ದಕ್ಕೆ ರಶೀತಿ ಬರೆದು ಕೊಡತಕ್ಕದ್ದು. ಮತ್ತು ರಶೀತಿ ಪಡೆಯದೆ ಯಾರೂ ಅಂಥಾ ಹಣವನ್ನು ಕೊಡಕೂಡದು. ಹಾಗೆ ಕೊಟ್ಟಲ್ಲಿ ಅಂಥಾ ಹಣಕ್ಕೆ ನಾವು ಜವಾಬ್ದಾರರಾಗುವುದಿಲ್ಲ.

ಮ್ಯಾನೇಜರ್,
ಮೈಸೂರು. "ವೃತ್ತಾಂತ ಪತ್ರಿಕೆ" ಆಫೀಸ್.

## ವೃತ್ತಾಂತ ಪತ್ರಿಕೆ.

ಸನ್ ೧೯೦೩ ನೇ ಇಸವಿ ಡಿಸೆಂಬರ್ ತಾ॥ ೨೪ ನೇ ಗುರುವಾರ.

## ಯುದ್ಧಸಂಭವ.

ಏಷ್ಯಾಖಂಡದ ಪೂರ್ವದಿಗ್ಭಾಗದಲ್ಲಿ ರಷ್ಯಾ ರಾಜ್ಯದವರಿಗೂ ಜಪಾನ್ ರಾಜ್ಯದವರಿಗೂ ಮಂಚೂರಿಯಾ ಕೊರಿಯಾ ವಿಚಾರದಲ್ಲಿ ಕೊರಿಯಾ ರಾಜ್ಯದ ವಿಷಯವಾಗಿಯೂ ಕಾಗದ ಪತ್ರಗಳು ನಡೆಯುತ್ತಿವೆ. ಜಪಾನಿನವರು ಒಪ್ಪಲಾರದಂಥಾ ವಿಷಯಗಳನ್ನು ರಷ್ಯಾದವರು ಬರೆದು ಕಳುಹಿಸಿರುವುದಾಗಿಯೂ, ಎರಡು ರಾಜ್ಯಗಳವರೂ ಪರಸ್ಪರ ಯುದ್ಧಸನ್ನಾಹ ಮಾಡುತ್ತಿರುವುದಾಗಿಯೂ ತಂತೀ ವರ್ತಮಾನ ಬಂದಿದೆ. ಜಪಾನಿನವರು ಇನ್ನೂ ತಮ್ಮ ಕಡೇ ಮಾತನ್ನು ಹೇಳಿಕಳುಹಿಸಿಲ್ಲ. ಯುದ್ಧದ ಖರ್ಚಿಗಾಗಿಯೇ ಉಭಯ ರಾಜ್ಯಗಳವರೂ ಅಮೇರಿಕದಲ್ಲಿ ಸಾಲಮಾಡಬೇಕೆಂದು ಪ್ರಯತ್ನಪಟ್ಟರು. ಅದು ಸಾಫಲ್ಯವಾಗಲಿಲ್ಲ. ಹ್ಯಾಗೂ ಯುದ್ಧವೆಂಬೀ ಅಂಧಕಾರವು ತೊಲಗಿಹೋಗಲೆಂದು ಹಾರೈಸುತ್ತೇವೆ.

## ಪಾಠಶಾಲೆಗಳೂ ಭಕ್ತಿಮಾರ್ಗಬೋಧನೆಯೂ

ಮದ್ರಾಸ್ ಅಧಿಪತ್ಯದ ಗವರ್ನರ್ ಲಾರ್ಡ್ ಅಮ್'ಟ್ಹಿಲ್ ಪ್ರಭುಗಳು ರಾಜಮಹೇಂದ್ರ ನಗರದ ಒಂದು ಪಾಠಶಾಲಾ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಹಂಚುವ ಸಂದರ್ಭದಲ್ಲಿ ಅಗ್ರಾಸನವನ್ನು ವಹಿಸಿದ್ದರು. ಆಗ್ಯೆ ಅವರು ಮೇಲ್ಕಂಡ ವಿಷಯವನ್ನು ಕುರಿತು ಹೇಳಿದ ಅಭಿಪ್ರಾಯವನ್ನು ಇಲ್ಲಿ ನಮ್ಮ ವಾಚಕರಿಗೆ ತಿಳಿಸುವೆವು.

ಸರ್ಕಾರಿ ಪಾಠಶಾಲೆಗಳಲ್ಲಿ ಭಕ್ತಿಮಾರ್ಗವನ್ನು ವಿದ್ಯಾರ್ಥಿಗಳಿಗೆ ಬೋಧಿಸದೆ ಇರುವುದು ಅನುಚಿತವೆಂಬ ಅಪವಾದವನ್ನು ಸರ್ಕಾರದವರ ಮೇಲೆ ಪ್ರಜೆಗಳು ಆಗಾಗ್ಯೆ ಹೊರಿಸುತ್ತಾರೆ. ಈ ಅಪವಾದಕ್ಕೆ ಹಿಂದುಗಳೇ ಕಾರಣರೆಂದು ಹೇಳಬೇಕು. ಯಾಕೆಂದರೆ ಸರ್ಕಾರಿ ಪಾಠಶಾಲೆಗಳಲ್ಲಿ ಭಕ್ತಿಮಾರ್ಗ ಬೋಧನೆಯನ್ನೂ ಮಾಡಬೇಕೆಂದು ಪ್ರಜೆಗಳು ಕುತೂಹಲಪಟ್ಟು ಸರ್ಕಾರಕ್ಕೆ ತಿಳಿಸಿದಲ್ಲಿ ಅವರು ಆ ರೀತಿ ಏರ್ಪಾಡುಮಾಡಿಕೊಡದೆ ಬಿಡುತ್ತಿರಲಿಲ್ಲ. ಇದಲ್ಲದೆ ಅಂಥಾ ಬೋಧನೆಯನ್ನು ಯಾವರೀತಿಯಲ್ಲಿ ಮಾಡಬೇಕೆಂಬ ವಿಷಯದಲ್ಲೂ ಪ್ರಜೆಗಳಲ್ಲಿ ಐಕಮತ್ಯವು ಇಲ್ಲದಿರುವದು ಒಂದು ಕಾರಣವೆಂಬುದಕ್ಕೆ ಸಂಶಯವಿಲ್ಲ.

ಪ್ರಕೃತ ಕಾಲಸ್ಥಿತಿಯನ್ನು ನೋಡುವಲ್ಲಿ—ಮತಸಂಬಂಧವಾದ ವಿಷಯಗಳನ್ನು ಕುರಿತು ಹಿಂದೂ ಜನಗಳೊಳಗೇ ಭಿನ್ನಾಭಿಪ್ರಾಯಗಳು ಉಂಟು. ಈ ದೇಶಕ್ಕೆ ನವನಾಗರಿಕತೆಯು ಬಂದು ಪುರಾತನವಾದ ಭಕ್ತಿಯೂ ಆಚರಣೆಯೂ ಅನೇಕ ವಿಷಯಗಳಲ್ಲಿ ತಪ್ಪಾಗಿಯೂ ಹಾನಿಕರವಾಗಿಯೂ ಇವೆ ಎಂದು ಜನಗಳಿಗೆ ತಿಳಿದು ಬಂದಿದೆ. ಮತ್ತು ಜನಗಳ ತಿಳುವಳಿಕೆಯೂ ಹೆಚ್ಚಿದ ಹಾಗೆಲ್ಲಾ ಅದಕ್ಕೆ ತಕ್ಕಂತೆ ಮತ ವಿಷಯದಲ್ಲಿ ಉತ್ತಮಾಭಿಪ್ರಾಯಗಳು ತೋರಿ ಬರುವದಕ್ಕೆ ಬದಲಾಗಿ ಮೊದಲಿನಂತೆಯೇ ಇದೆ ಇದೆಲ್ಲವನ್ನು ನೋಡಲಾಗಿ ನಮಗೆ ತೋರುವದೇನೆಂದರೆ—ನಮ್ಮ ಕಾಲದಲ್ಲಿ ಅತ್ಯಂತಾವಶ್ಯಕವಾಗಿ ನಡೆಯಬೇಕಾದ ಪರಿಷ್ಕರಣವು ಮತ ವಿಷಯದಲ್ಲೇ ಆಗಬೇಕಾಗಿದೆ. ಹಿಂದೂ ಜನಗಳೊಳಗೆ ಬಳಕೆಯಾಗಿರುವ ಅನೇಕ ಆಚರಣೆಗಳು ಅನುಚಿತವಾದವುಗಳೆಂಬುದಾಗಿ ವಿದ್ಯಾವಂತರಾದ ಹಿಂದೂಜನಗಳಲ್ಲನೇಕರು ಹೃದಯಪೂರ್ವಕವಾಗಿ ತಿಳಿದಿದ್ದಾರೆ ಆದರೂ ಕೂಡ ತಮಗೆ ನಿಜವೆಂದು ತಿಳಿದಿರುವದನ್ನು ಇತರರಿಗೆ ಬೋಧಿಸುವದಕ್ಕೆ ಅವರು ಮುಂದಾಳುಗಳಾಗಿ ನಿಂತಿಲ್ಲ. ನಮ್ಮ ನವವಳಿಕೆಗಳು ಪೂರ್ವಾಚಾರಕ್ಕೆ ತಪ್ಪಬಾರದೆಂದಾಗಲಿ, ನಾವೇನು ಮಾಡಬೇಕೆಂದಪೇಕ್ಷಿಸಿದರು ಮನೆಯ ಹೆಂಗಸರು ಅತ್ಯಂತವಾಗಿ ಪ್ರತಿಬಂಧಿಸಲಿ ಇನ್ನು ಇದರಂಥಾ ಅನೇಕ ನೆವಗಳನ್ನು ಹೇಳಿ ಕಾಲಹರಣ ಮಾಡುವದರಲ್ಲಿ ಅವರು ನಿಸ್ಸೀಮರಾಗಿದ್ದಾರೆಂದು ಹೇಳುವದಕ್ಕೆ ಅಡ್ಡಿ ಇಲ್ಲ. ಇದಂತಿರಲಿ

ಪಾಠಶಾಲೆಗಳಲ್ಲಿ ಮತಸಂಬಂಧವಾದ ಬೋಧನೆಯನ್ನೂ ಮಾಡುವಂತೆ ಒಂದುವೇಳೆ ಸರ್ಕಾರದವರು ಅಪ್ಪಣೆ ಕೊಟ್ಟರೆ ನಡುವೆ ಹಲವು ವಿಧ ವಿಚಾರಣೀಯವಾದ ಅಂಶಗಳು ಹುಟ್ಟುವವು. ಮತಸಂಬಂಧವಾದ ವಿಷಯವೆಂದರೆ ತತ್ವಶಾಸ್ತ್ರವೇ? ತತ್ವಶಾಸ್ತ್ರವೆಂದೇ ಒಪ್ಪಿದರೆ ಯಾವ ಸಿದ್ಧಾಂತವನ್ನು ಬೋಧಿಸಬೇಕೆಂಬ ಅಗಾಧವಾದ ವಿಚಾರವು ಚರ್ಚೆಗೆ ಬರುವದು. ಈ ಚರ್ಚೆಗೆ ಕೊನೆಮೊದಲೇ ಇಲ್ಲದೆ ಹೋಗುವುದು. ಒಳ್ಳೇದು, ಚರ್ಚಾಸ್ಪದವಾದ ತತ್ವಶಾಸ್ತ್ರ ಸಿದ್ಧಾಂತವೇ ಬೇಡ, ಪುರಾಣೇತಿಹಾಸಗಳನ್ನು ಬೋಧಿಸೋಣವೆಂದರೆ ಇದರಲ್ಲಿಯೂ ಆಕ್ಷೇಪವುಂಟು. ಇವುಗಳಲ್ಲಿ ಅನೇಕವು ಚರಿತ್ರಾಂಶಗಳಲ್ಲವೆಂದೂ, ಕೆಲವು ನೀತಿಬೋಧಕಗಳಾಗಿರುವದಕ್ಕೆ ಬದಲಾಗಿ ದುರ್ಮಾರ್ಗಕ್ಕೆಳೆಯುವವುಗಳಾಗಿಯೂ ಇವೆಯೆಂದೂ ವಿದ್ಯಾವಂತರಲ್ಲನೇಕರು ಹೇಳುವರು. ಇಂಥ ಅಪ್ರಯೋಜಕವಾದ ಭಾಗಗಳನ್ನು ನಮ್ಮ ಮಕ್ಕಳಿಗೆ ಬೋಧನೆಮಾಡಲು ನಾವೆಂದಿಗೂ ಒಪ್ಪಲಾರೆವೆಂದು ಅನೇಕರು ವಾದಿಸುವರು. ಇಂಥ ಸಂದರ್ಭದಲ್ಲಿ ಮಾಡತಕ್ಕದ್ದೇನು?

ಇದರ ವಿಷಯ ನಮ್ಮ ಅಭಿಪ್ರಾಯವೇನೆಂದರೆ—ಏಕೋ ಭಗವಂತನನ್ನಾರಾಧಿಸುವದನ್ನೇ ಬೋಧಿಸುವುದಾಗಿಯೂ, ನಮ್ಮ ಸದಸದ್ವಿವೇಕ ಯೋಗ್ಯತಾಯೋಗ್ಯತೆಗಳನ್ನು ವಿಚಾರಿಸುವದಕ್ಕೆ ಭಗವಂತನೊಬ್ಬನೇ ಒಡೆಯನೆಂದು ತಿಳಿಸುವುದಾಗಿಯೂ, ನೀತಿ ಪವಿತ್ರತ್ವ ಸತ್ಯ ಅಪ್ರಾರ್ಥತೆಯೆಂಬ ದಿವ್ಯಗುಣಪ್ರದವಾಗಿಯೂ ಇರುವಂಥ ಸಾಮಾನ್ಯವಾದ ಒಂದು ಮತವನ್ನೇ ಎಲ್ಲರೂ ಹಿಡಿಯಬೇಕಾದುದೇ ನಮ್ಮ ದೇಶಕ್ಕೆ ಅವಶ್ಯವಾಗಿದೆ ಎಂದು ನಾವು ನಿಸ್ಸಂದೇಹವಾಗಿ ಹೇಳಬಲ್ಲೆವು. ಇಂಥ ಮತಸಿದ್ಧಾಂತವೊಂದನ್ನು ನಮ್ಮ ಹಿಂದೂ ಜನಗಳು ಕಲ್ಪಿಸುವದಾದರೆ ಅದನ್ನು ಸರ್ಕಾರದ ಪಾಠಶಾಲೆಗಳಲ್ಲಾಗಲಿ ಮತ್ತಾವ ಪಾಠಶಾಲೆಗಳಲ್ಲಾಗಲಿ ಬೋಧಿಸುವುದಕ್ಕೆ ವಿರೋಧಿಸಲು ಯಾವ ಅಭ್ಯಂತರವೂ ಇರಲಾರದಷ್ಟೆ.

ಅಮ್'ಟ್ಹಿಲ್ ಪ್ರಭುಗಳು ತಮ್ಮ ಉಪನ್ಯಾಸದ ಕೊನೆಯಲ್ಲಿ ಹೇಳಿದುದನ್ನು ಇಲ್ಲಿ ತಿಳಿಸಿ ಮುಗಿಸುತ್ತೇವೆ—"ಭೂಲೋಕದ ಸಕಲ ಭಾಗಗಳಲ್ಲೂ ಕ್ರೈಸ್ತಮತವೇ ಪ್ರಬಲವಾಗಲೆಂದು ಬಯಸುವವನಾಗಿದ್ದೇನೆಂಬಂಶವನ್ನು ನಿಮ್ಮಿಂದ ಮರೆಮಾಡಲೇಕೆ? ಅದಿರಲಿ, ನೀವು ಯಾವ ಮತದಲ್ಲಿಯೂ ನಂಬಿಕೆಯನ್ನಿಡದ ನಾಸ್ತಿಕರಾಗುವದನ್ನು ನೋಡುವದಕ್ಕಿಂತ ಹಿಂದೂ ಮತವನ್ನು ನಿಜವಾಗಿ ನಂಬುವ ಆಸ್ತಿಕರಾಗುವದನ್ನು ನೋಡುವದಕ್ಕೆ ನನಗೆ ಹೆಚ್ಚಾಗಿ ಇಷ್ಟವುಂಟು ಯಾಕೆಂದರೆ—ದೇವನೊಬ್ಬನೇ ಸಂಬಂಧ ಶಾಸ್ತ್ರಜ್ಞನಿಗಿಂತ ಸರ್ವರಕ್ಷಕನೂ ಸರ್ವಜ್ಞನೂ ಆದ ಜಗನ್ನಿಯಾಮಕನೊಬ್ಬನಿದ್ದಾನೆಂದು ನಂಬುವ ಆಸ್ತಿಕನನ್ನು ನನ್ನ ಗುಣಾವಲಂಬಿಯಾಗುವಂತೆ ಮಾಡಿಕೊಳ್ಳಲು ಹೆಚ್ಚು ನಿರೀಕ್ಷೆಯುಳ್ಳವನು. ಜಗದ್ರಕ್ಷಕ ದಯಾಮಯನು ಮುಕ್ತಿಯೆಂಬ ವರಪ್ರಸಾದವು ನಮ್ಮ ಜನಗಳಿಗೆ ಮಾತ್ರವೇ ಅಲ್ಲ, ಭೂಮಂಡಲದ ಸಕಲ ಜಾತಿಯವರಿಗೂ ಬಾಧ್ಯವಾದದ್ದು ಎಂದು ತಿಳಿದಿರುತ್ತೇನೆ."

## ಮದರಾಸ್ ಕೈಗಾರಿಕೆ ವಸ್ತುಪ್ರದರ್ಶನೋತ್ಸವವು.

### ನೋಟಕರು ಕೊಡಬೇಕಾದ ರುಸುಮುಗಳು.

ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ ಸಮಾಜಕ್ಕೆ ಸಂಬಂಧಪಟ್ಟಂತೆ ಈಚೆಗೆ ಕೈಗಾರಿಕೆ ವಸ್ತುಪ್ರದರ್ಶನೋತ್ಸವವು ನಡೆಯುವುದು ಈ ಸಲ ಈ ಸಮಾಜವು ಮದರಾಸ್ ಪಟ್ಟಣದಲ್ಲಿ ಕೂಡುವುದರಿಂದ ಈ ಪ್ರದರ್ಶನೋತ್ಸವವೂ ಅಲ್ಲೇ ನಡೆಯುತ್ತದೆ. ಈ ಪ್ರದರ್ಶನಶಾಲೆಯನ್ನು ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರವರು ನಾಳೆ ೨೬ನೇ ತಾರೀಖು ಶನಿವಾರ ಉಪನ್ಯಾಸಪೂರ್ವಕವಾಗಿ ಪ್ರಾರಂಭಿಸುವರು. ಈ ಶಾಲೆಯು ಜನವರಿ ೧೪ನೇ ತಾರೀಖು ವರೆಗೆ (ಅಂದರೆ, ೨೦ ದಿನಗಳ ವರೆಗೆ) ಪ್ರತಿ ನಿತ್ಯವೂ ಬೆಳಗ್ಗೆ ೭॥ ಗಂಟೆಯಿಂದ ಸಾಯಂಕಾಲ ೬ ಗಂಟೆಯ ತನಕ ತೆರೆಯಲ್ಪಡುವುದು. ಕಂಟ್ರಾಕ್ಟರು ಟಿಕೇಟುಗಳನ್ನು ಬಿಕರಿಮಾಡುತ್ತಾರೆ. ಪ್ರದರ್ಶನಶಾಲೆಯೊಳಕ್ಕೆ ಹೋಗಿ ಎಲ್ಲಾ ನೋಡಿಕೊಂಡು ಬರುವುದಕ್ಕೆ ಮೊದಲನೇ ದಿನ ಟಿಕೆಟ್ ೧ಕ್ಕೆ ೨ರೂ ನಂತೆಯೂ, ೨ನೆ ೩ನೆ ೪ನೆಯ ದಿನಗಳಲ್ಲಿ ೧ರೂ, ತಾಲೆಯೂ, ೫ ರಿಂದ ೯ನೆಯ ದಿನದತನಕ ೮ ಅಣೆಯಂತೆಯೂ, ೧೦ ರಿಂದ ೧೫ನೆಯ ದಿನದ ವರೆಗೆ ೪ ಅಣೆಯಂತೆಯೂ, ೧೬ರಿಂದ ೨೦ನೆಯ ದಿನದತನಕ ೨ ಅಣೆಯಂತೆಯೂ ಛಾರ್ಜು ಕೊಟ್ಟು ಹೋಗಬೇಕೆಂದು ಕಮಿಟಿಯವರು ನಿಶ್ಚಯಮಾಡಿರುತ್ತಾರೆ.

ಸ್ತ್ರೀಯರು ಹೋಗಿ ಪ್ರದರ್ಶನೋತ್ಸವವನ್ನು ನೋಡಿಕೊಂಡು ಬರುವುದಕ್ಕೋಸ್ಕರ ಒಂದು ದಿನವನ್ನು ಗೊತ್ತುಮಾಡಿ, ಆ ದಿವಸ ಹೆಂಗಸರುಮಕ್ಕಳಿಗೆ ಮಾತ್ರ ಟಿಕೆಟ್ ಕೊಟ್ಟುಬಿಡುವರು. ೧೨ ವರುಷ ವಯಸ್ಸಿನೊಳಗಿರುವವರಿಗೆ ಅರ್ಧ ಛಾರ್ಜು ಎಂದು ವಿಧಿಸಿರುವರು. ಜನವರಿ ೧ನೆ ೨ನೆ ೩ನೆಯ ತಾರೀಖುಗಳಲ್ಲಿ ಮಾತ್ರ ಹೆಡ್ ಮಾಸ್ಟರುಗಳಿಂದ ಸರ್ಟಿಫಿಕೇಟ್ ತಂದು ತೋರಿಸುವ ಸ್ಕೂಲ್ ಹುಡುಗರು ಅರ್ಧ ಛಾರ್ಜು ಕೊಟ್ಟರೆ ಪ್ರದರ್ಶನಶಾಲೆಗೆ ಹೋಗಿ ನೋಡಬಹುದು. ಯಥಾರ್ಥ ವ್ಯವಸಾಯಗಾರರಾಗಿಯೂ, ಕೈಗಾರಿಕೆ ಉದ್ಯೋಗಗಳಿಂದಲೇ ಜೀವನಮಾಡತಕ್ಕವರಾಗಿಯೂ ಇರುವಂಥಾ ಜನರ ಮೊದಲನೆಯ ದಿನ ವಿನಹಾ ಉಳಿದ ಯಾವ ದಿವಸ ಬೇಕಾದರೂ ಅರ್ಧ ಛಾರ್ಜು ಕೊಟ್ಟು ಪ್ರದರ್ಶನೋತ್ಸವವನ್ನು ನೋಡಿಕೊಂಡು ಬರಬಹುದೆಂಬುದಾಗಿ ಕಮಿಟಿಯವರು ರಿಯಾಯತಿ ತೋರಿಸಿರುತ್ತಾರೆ. ಮದರಾಸಿನಲ್ಲಿರುವ ಅಥವಾ ಇತರ ಕಡೆಗಳಲ್ಲಿರುವ ಸರ್ಕಾರಿ ಇಲ್ಲವೇ ಸಾಹುಕಾರಿ ಕೈಗಾರಿಕೆ ಪಾಠಶಾಲೆಗಳ ವಿದ್ಯಾರ್ಥಿಗಳನ್ನು ಹೆಡ್ ಮಾಸ್ಟರಿಂದ ಸರ್ಟಿಫಿಕೇಟ್ ತಂದು ತೋರಿಸಿದಲ್ಲಿ ಛಾರ್ಜು ಕೇಳದೇನೇ ಕೊನೇ ಮೂರು ದಿನಗಳಲ್ಲಿ ಪ್ರದರ್ಶನಶಾಲೆಯೊಳಕ್ಕೆ ಬಿಟ್ಟು ತೋರಿಸುವರು.

## ಮೈಸೂರು ಮಹಾರಾಜರವರು.

### ಮದರಾಸ್ ಪಟ್ಟಣದವರು ಮಾಡುವ ಸನ್ಮಾನವು.

ಮದರಾಸ್ ಪಟ್ಟಣದಲ್ಲಿರುವ ಕಾಸ್ಮಾಪಾಲಿಟನ್ ಕ್ಲಬ್ ಎಂಬ ವಿಹಾರಾಲಯದಲ್ಲಿ ಹಿಂದಿನ ಬುಧವಾರ ದೇಶೀಯ ದೊಡ್ಡ ಮನುಷ್ಯರ ಸಭೆಯೊಂದು ನಡೆಯಿತು. ಮದರಾಸ್ ಹೈಕೋರ್ಟ್ ಜಡ್ಜಿಗಳಾದ ಜಸ್ಟಿಸ್ ಸರ್ ಎಸ್ ಸುಬ್ರಹ್ಮಣ್ಯ ಅಯ್ಯರವರು, ಜಸ್ಟಿಸ್ ಸರ್ ವಿ ಭಾಷ್ಯಂ ಐಯಂಗಾರ್ಯರು, ರಾಜಾ ಸರ್ ಸಾವಳೆ ರಾಮಸ್ವಾಮಿ ಮೊದಲಿಯಾರ್ರು, ಮೆ॥ ಹಾಜಿ ಮಹಮದ್ ಅಬ್ದುಲ್ ಹಾದಿ ಬಾಷಾ ಸಾಹೇಬರು, ಆನರೆಬಲ್ ದಿವಾನ ಬಹದೂರ್ ಆರ್. ವಿ ಶ್ರೀನಿವಾಸ ಐಯರವರು, ಮೆ॥ ಕೆ. ನಾರಾಯಣರಾಯರು, ದಿವಾನ ಬಹದೂರ್ ವಿ ಕೃಷ್ಣಮಾಚಾರ್ಯರು, ದಿವಾನ ಬಹದೂರ್ ಸಿ. ರಾಜರತ್ನ ಮೊದಲಿಯಾರ್ರು, ಮೆ॥ ವಿ. ಸಿ. ಶೇಷಾಚಾರ್ಯರು, ಮೆ॥ ಟಿ. ವಿ. ಶೇಷಗಿರಿ ಐಯರವರು, ರಾವ್ ಬಹದೂರ್ ಸಿ. ಜಂಬುಲಿಂಗ ಮೊದಲಿಯಾರ್ರು. ಇವರೇ ಮೊದಲಾದ ಬಹುಮಂದಿ ದೊಡ್ಡ ಮನುಷ್ಯರು ಸೇರಿದ್ದರು. ಆನರೆಬಲ್ ಸರ್ ಎಸ್. ಸುಬ್ರಹ್ಮಣ್ಯ ಐಯರನ್ನು ಆ ದಿನದ ಸಭೆಯ ಪ್ರಸಿಡೆಂಟಾಗಿ ಚುನಾಯಿಸಿ ಕಮಾಡಿದರು. ಕೂಡಲೇ ಸರ್ ವಿ ಭಾಷ್ಯಂ ಐಯಂಗಾರ್ಯರು ಸೂಚಿಸಿದ್ದೇನೆಂದರೆ—"ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರು ಸಂಸ್ಥಾನಾಧಿಪತ್ಯವನ್ನು ಕಾರ್ಯತಃ ಸ್ವೀಕರಿಸಿದ ಮೇಲೆ ಅವರು ಈ ಪಟ್ಟಣಕ್ಕೆ ದಯಮಾಡುವುದು ಇದೇ ಮೊದಲನೇ ಸಾರಿ ಆದಕಾರಣ ಅವರು ಇಲ್ಲಿಗೆ ಬಂದು ಇಳಿದುಕೊಂಡರೇ ರೈಲ್ವೇ ಸ್ಟೇಷನ್ನಿನಲ್ಲಿ ಅವರನ್ನು ಎದುರುಗೊಂಡು, ಅವರಿಗೆ ಅಡ್ರೆಸ್ ಒಪ್ಪಿಸಿ, ಸುಖಾಗಮನವನ್ನು ಬಯಸಬೇಕು. ಇದೇ ನನ್ನ ಅಭಿಪ್ರಾಯ. ಇಲ್ಲಿ ಸೇರಿರುವ ದೊಡ್ಡ ಮನುಷ್ಯರೆಲ್ಲಾ ಅಭಿಪ್ರಾಯವನ್ನು ಅನುಮೋದಿಸುತ್ತಾರೆಂದು ಹಾರೈಸುವೆನು." ಅನಂತರ

## ಚೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

48




ಕೆಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಕೆಂಡಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬರೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ.—"ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ, ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ನಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವುದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಗಲೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಬಂದಿತ —

ಡಬ್ಲ್ಯೂ. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

...ಸರ್ ಶಾನಭೋಗ ರಾಮಸ್ವಾಮಿ ಮೊದಲಿಯಾರು ಎದ್ದು ಉಪನ್ಯಾಸ ಮಾಡಿದರು. ಸಭಾಸದರೆಲ್ಲಾ ಆದರಂತೆ ಒಪ್ಪಿಕೊಂಡದ್ದಲ್ಲದೆ ... ಯೋಗ್ಯವಾದ ಒಂದು ಸ್ಮಾರಕ ... ಸಬೇಕೆಂದೂ ತೀರ್ಮಾನಿಸಿದರು. ಅಸ್ಪತ್ರೆ ಬರೆದು ತಯಾರಿಸುವುದನ್ನು ಡಾಕ್ಟರ್ ಟಿ ಎಂ ನಾಯರ್ ... ದ್ರವ್ಯಾನುಕೂಲವಾಗಿ ಒಂದು ಕಮಿಟಿ ಏರ್ಪಡಿಸಿರುತ್ತಾರೆ. ... ಚಂದಾಪಟ್ಟಿ ತಯಾರಾಯಿತು; ಅಲ್ಲಿ ಸೇರಿದ್ದವರು ... ಪೂರ್ಣವಾಗಿ ಚಂದಾ ಹಣ ಕೊಟ್ಟರು.

ಮೈಸೂರ್ ಮಹಾರಾಜರವರ ಆತಿಥ್ಯತೆ.

ಮೈಸೂರು ಪ್ರಜೆಗಳು ಮದರಾಸ್ ನಗರದಲ್ಲಿ ಬೇರೆ ಬೇರೆ ಉದ್ಯೋಗಗಳನ್ನು ಹಿಡಿದು ಅಲ್ಲೇ ನೆಲಸಿರುತ್ತಾರಷ್ಟೆ. ಇಂಥಾ ಮನುಷ್ಯರೆಲ್ಲಾ ಮೊನ್ನೆ ... ದಿನ ತಿರುವಲಕ್ಕೇಣಿಯಲ್ಲಿರುವ ರಾವ್ ಬಹದೂರ್ ಎಂ ಎ ಶಿಂಗ್ರಾಚಾರ್ಯರ ಮನೆಯಲ್ಲಿ ಸಭೆ ಸೇರಿ, ತಾವು ಈಗ ಶ್ರೀಮನ್ ಮಹಾರಾಜರವರಿಗೆ ಅಡ್ರೆಸ್ ಒಪ್ಪಿಸಬೇಕೆಂತಲೂ, ಸುಸ್ವಾಗತವನ್ನು ಬಯಸಬೇಕೆಂತಲೂ, ಅಡ್ರೆಸ್ಸನ್ನು ನವೀನವಾದ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಬೇಕೆಂತಲೂ ತೀರ್ಮಾನ ಮಾಡಿದ್ದಾರೆ. ಇದಕ್ಕೋಸ್ಕರ ಅಲ್ಲಿ ಸೇರಿದ್ದವರು ಚಂದಾ ಹಾಕಿದರು. ಡಾಕ್ಟರ್ ಸಿ. ಬಿ. ರಾಮರಾಯರೂ, ಹೈಕೋರ್ಟ್ ವಕೀಲ್ ಮೆ॥ ಎಸ್. ಟಿ. ರಾಮಣ್ಣನವರೂ ಸೆಕ್ರೆಟರಿಗಳು, ಚಂದಾ ಕೂಡಿಸುವವರಾಗಿ ನೇಮಕವಾದರು. ರಾವ್ ಬಹದೂರ್ ಎಂ ಎ ಶಿಂಗ್ರಾಚಾರ್ಯರು, ರಾವ್ ಬಹದೂರ್ ಮೆ॥ ರಂಗಾಚಾರ್ಯರು, ಬ್ಯಾರಿಸ್ಟರ್ ಮೆ॥ ಜೆ. ಕೃಷ್ಣರಾಯರು— ಈ ಮೂರು ಮಂದಿಯೂ ಸೇರಿ ಅಡ್ರೆಸ್ಸನ್ನು ಬರೆದು ತರಬೇಕೆಂದು ನಿಶ್ಚಯವಾಗಿದೆ.

---

ಮೈಸೂರು ಗೆಜೆಟ್ ಸಂಗ್ರಹ.

ಮದರಾಸ್ ಪಟ್ಟಣದ ಪೀಪಲ್ಸ್ ಪಾರ್ಕಿನಲ್ಲಿ ನಡೆಯುವ ಕ್ರಿಸ್ಮಸ್ ಫೇರ್ ಎಂಬ ತಮಾಷೆಯನ್ನು ನೋಡುವುದಕ್ಕೆ ಮೈಸೂರು ಸ್ಥಾನದ ಜನರನ್ನು ಡಿಸೆಂಬರ್ ೨೪ರ ಭಾಗಾಯಿತು ೩೧ರ ವರೆಗೆ ಬಿಡಲಾಗಿದೆಂದು ಆ ಸರ್ಕಾರದವರು ಪ್ರಕಟಿಸಿರುತ್ತಾರೆ.

ಬೆಂಗಳೂರು ... ನೆಯ ತರಗಿನ ಮಂಡಿಯಲ್ಲಿ ... ಸೇರಿರುವ ಸತ್ರದ ... ದಲ್ಲಿ ... ಸ್ಥಳ ಸರ್ಕಾರಕ್ಕೆ ಬೇಕಾಗಿರುವುದು.

ಮೈಸೂರು ಮಂಡಿ ಮೊಹಲ್ಲಾ ಈಗ್ಗೆ ಬಡಾವಣೆಗೆ ದಕ್ಷಿಣ ಭಾಗದಲ್ಲಿ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಯೊಂದನ್ನು ಕಟ್ಟಿಸುವುದಕ್ಕೆ ಹದಿನೈದು ನಂಬರುಗಳ ಜಮೀನು ಮತ್ತು ಮನೆಗಳು ಸರ್ಕಾರಕ್ಕೆ ಬೇಕಾಗಿವೆ.

ಕಾರ್ಕಾಳಸೆಕ್ಕೆ ತಾಲ್ಲೂಕ್ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮೆ॥ ಸಿ ಕೃಷ್ಣಮಾಸಾಯ್ಡು ಯವರು ಘೋರ ಮೊಕದ್ದಮೆಗಳನ್ನು ದರ್ಯಾಫ್ತು ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದಾರೆ.

ದಾವಣಗೆರೆ ಅಸಿಸ್ಟೆಂಟ್ ಕಮಿಷನರ್ ಮೆ॥ ಸಿ. ಶ್ರೀಕಂಠೇಶ್ವರಯ್ಯರಿಗೆ ಅವರು ದರ್ಯಾಫ್ತು ಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಹೈಫಿಯತ್ತನ್ನು ಸ್ವಹಸ್ತಾಕ್ಷರದಲ್ಲೇ ಇಂಗ್ಲೀಷಿನಲ್ಲಿ ಬರೆದುಕೊಳ್ಳುವಂತೆ ಅಧಿಕಾರ ವಹಿಸಿದೆ.

ಹುಳವಳ್ಳಿ ತಾಲ್ಲೂಕು ಪೂರೀಗಾಲದ ಹೋಬಳಿಯಲ್ಲಿರುವ ... ಸ್ವಾಮಿ ನಾಲೆಯನ್ನು ಬಡಾವಣೆ ಮಾಡುವದಕ್ಕಾಗಿ ೨೯ ಜನ ಖಾತೆದಾರರಿಗೆ ಸೇರಿದ ತರೀ ಜಮೀನುಗಳಲ್ಲಿ ಕೆಲವು ಭಾಗ ಸರ್ಕಾರಕ್ಕೆ ಬೇಕಾಗಿದೆ.

ಎಕ್ಸೈಸ್ ಇಲಾಖೆಯ ಎಕ್ಸ್ಟ್ರಾ ಅ॥ ಕಮಿಷನರ್ ಮೆ॥ ಹೆಚ್. ವಿಲ್ಸನ್ ನಿಜಾಮುದ್ದೀನ್ ಅಲಿಖಾನ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೩ ತಿಂಗಳು ೨೯ ದಿನಗಳ ಪ್ರಿವಿಲೆಜ್ ರಜವೂ, ತರುವಾಯ ಎರಡು ವರುಷ ಪೂರ್ತಿಯಾಗುವ ವರೆಗೆ ಫರಲೋ ರಜವೂ ಕೊಟ್ಟಿದೆ.

'೨ನೇ ರಾಜಪುತ್ರಿಯರ ಭವನ' ಎನ್ನುವುದಕ್ಕೆ ಬದಲಾಗಿ 'ಶ್ರೀ ಮಹಾರಾಜ ಕುಮಾರಿಯರ ಭವನ' ಎಂದು ಕರೆಯಬೇಕು.

ಮೈಸೂರ್ ಸ್ಟೇಟ್ ಟ್ರೂಪ್ಸ್ ಛೀಫ್ ಕಮ್ಯಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ ದೇಸರಾಜೇ ಅರಸಿನವರಿಗೆ ಕೊಟ್ಟಿದ್ದ ... ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಮೂರು ದಿನಗಳು ವಿಸ್ತರಿಸಿದೆ.

---

ರಾಜಧಾನಿಯ ಪ್ರಜಾಜೀವನ ಪರಿಕಾರ್ಯಕ್ರಮ.

೨ ನೆ

---

ಎರಡನೆಯ ಭಾಗ—ಗಾಳಿಯೂ ಬೆಳಕೂ.

ಪ್ರತಿ ಮನೆಗೂ ಬೇಕಾಗುವಷ್ಟು ನಿರ್ಮಲವಾದ ಗಾಳಿ ಬೆಳಕುಗಳ ವಿಚಾರವನ್ನು ಕುರಿತು ಈ ಸಾರ ಪ್ರಸ್ತಾಪಿಸುವೆವು. ಮನುಷ್ಯನು ಉಸಿರುಬಿಡುವಾಗಲೂ, ಅವನ ಚರ್ಮದಿಂದಲೂ, ಇನ್ನೂ ನಾನಾ ರೀತಿಗಳಲ್ಲೂ ದುರ್ಗಂಧ ಹೊರಕ್ಕೆ ಬರುವುದು, ವಿಷಕರವಾದ ಆವಿಗಳೂ ಹೊರಡುವುವು. ಇದನ್ನು ಸಕಲರೂ ತಿಳಿದೇ ಇರುವರು. ಇಂಥಾ ದುರ್ಗಂಧಗಳನ್ನೂ ಆವಿಗಳನ್ನೂ ಕೊಠಡಿಗಳಿಂದ ತಪ್ಪುವಂತೆ ಬೇಗಬೇಗನೆ ಹೊರಕ್ಕೆ ಸಾಗಿಸಬಿಡಬೇಕು. ಕಿಟಕಿ, ಬಾಗಿಲು, ಗವಾಕ್ಷ, ಇವುಗಳ ಮೂಲಕವೇ ಈ ದುರ್ಗಂಧಗಳು ನಿರ್ಮೂಲವಾಗಬೇಕಲ್ಲದೆ ಮತ್ತೆ ಬೇರೆ ಉಪಾಯವಿಲ್ಲ. ಇವುಗಳ ಮೂಲಕ ಸಂಚರಿಸತಕ್ಕ ಗಾಳಿಯು ಈ ದುರ್ಗಂಧಗಳನ್ನು ನೀಗಿಸಿಕೊಂಡು ಹೋಗಿ, ಒಳ್ಳೇ ಗಾಳಿಯನ್ನು ತಂದುಬಿಡುತ್ತಲೇ ಇರುವುದು. ರಾತ್ರಿಹೊತ್ತು ಬಾಗಿಲು ಕಿಟಕಿಗಳನ್ನೆಲ್ಲಾ ಬಿಗಿಯಾಗಿ ಮುಚ್ಚಿಕೊಂಡು ಚಿಲಕ ಹಾಕಿಕೊಂಡು ಮಲಗಿ ನಿದ್ದೆ ಮಾಡುವುದು ಸಕಲರಲ್ಲೂ ರೂಢಿಯಾಗಿದೆ. ಗಾಳಿಯು ಸಂಚಾರಕ್ಕೆ ಅವಕಾಶವಿಲ್ಲದಂಥಾ ಸಣ್ಣ ಕೊಠಡಿಗಳೊಳಗೆ ಬಹುಮಂದಿ ಒದ್ದೊತ್ತಾಗಿ ಮಲಗಿಕೊಳ್ಳುತ್ತಾರೆ. ಅಂಥಾ ಕೊಠಡಿಗಳೊಳಗಿರತಕ್ಕ ವಾಯುಗುಣವು ತುಂಬಾ ಕೆಟ್ಟುಹೋಗಿರುವುದು. ಇದನ್ನು ಪರಿಕ್ಷಿಸುವುದು ಹೇಗೆಂದರೆ ಯಾವನಾದರೂ ಪ್ರಾತಃಕಾಲದಲ್ಲೇ ಎದ್ದು ಬೈಲುಗದ್ದೆಯಲ್ಲಿ ಸ್ವಲ್ಪಹೊತ್ತು ಸಂಚರಿಸುತ್ತಾ ಇದ್ದು ತರುವಾಯ ಹಿಂತಿರಿಗಿ ಮೊದಲಿನ ಕೊಠಡಿಯೊಳಕ್ಕೆ ಬಂದು ನಿಂತುಕೊಳ್ಳಲಿ ಆ ಕೊಠಡಿಯೊಳಗೆ ಎಷ್ಟು ದುರ್ವಾಸನೆ ಬಡಿಯುವುದು! ಹೊರಗಿನಿಂದ ಬಂದಮೇಲೆ ಒಳಗೆ ನಿಂತುಕೊಂಡು ಉಸಿರುಕೊಳ್ಳುವುದೇ ಕಷ್ಟವೆಂದು ಕಾಣುತ್ತೆ. ಇಂಥಾ ದುಷ್ಟಪದ್ಧತಿಯು ಜನರಲ್ಲಿರುವುದಕ್ಕೆ ಎರಡು ಕಾರಣಗಳುಂಟೆಂದು ಹೇಳುತ್ತಾರೆ ಕಳ್ಳರ ಹೆದರಿಕೆಯೇ ಮೊದಲನೇ ಕಾರಣ. ಒಳ್ಳೇದು, ಹೊರಗಿನ ಕಳ್ಳರು ಬರುವುದೇ ಅಪೂರ್ವ, ಬರುವುದೇ ಇಲ್ಲವೆಂದೂ ಹೇಳಬಹುದು ಅವರಿಗೋಸ್ಕರ ಹೆದರಿಕೊಂಡು ಎಲ್ಲಾ ಬಾಗಿಲುಗಳನ್ನೂ ಭದ್ರವಾಗಿ ಹಾಕಿಕೊಳ್ಳುತ್ತಾರಷ್ಟೆ. ಹೀಗೆ ಭದ್ರಪಡಿಸಿಕೊಳ್ಳುವುದರಲ್ಲಿ ಕೊಠಡಿಗಳ ತುಂಬಾ ನಿಶ್ಚಬ್ದವಾಗಿ ದುರ್ಗಂಧವೆಂಬ ಕಳ್ಳನನ್ನು ತುಂಬಿಟ್ಟುಕೊಳ್ಳುವರು ಒಳಗೆ ಮಲಗಿಕೊಳ್ಳುವವರ ದೇಹದಿಂದ ಹೊರಡುವ ದುರ್ವಾಸನೆಗಳೂ. ವಿಷಕರವಾದ ಹವೆಗಳೂ, ರೋಗಜನಕಗಳಾದ ಅತಿಸೂಕ್ಷ್ಮಕ್ರಿಮಿಗಳೂ ಮಹಾ ಕಳ್ಳರಾಗಿ ಪ್ರವೇಶಿಸಿ, ಮಲಗಿರುವವರ ಆರೋಗ್ಯವನ್ನು ದಿನಕ್ರಮೇಣ ಸ್ವಲ್ಪ ಸ್ವಲ್ಪವಾಗಿ ಹೀರಿಕೊಂಡು, ಕಡೆಗೆ ಪ್ರಾಣವನ್ನೂ ಅಪಹರಿಸುವುವು. ಬಾಗಿಲು ಕಿಟಕಿಗಳನ್ನು ಭದ್ರವಾಗಿ ಮುಚ್ಚಿಕೊಳ್ಳುವುದಕ್ಕೆ ಹೇಳುವ ಎರಡನೆಯ ಕಾರಣವೇನೆಂದರೆ—ರಾತ್ರಿಹೊತ್ತು ಬಾಗಿಲುಗಳನ್ನು ತೆರೆದು ಮಲಗಿಕೊಂಡರೆ ಶೀತಗಾಳಿಯು ನಿದ್ದೆಮಾಡುವವರ ಶರೀರದ ಮೇಲೆ ಬೀಸುವುದರಿಂದ ಶೀತವಾಗುವುದು, ನೆಗಡಿ ಹಿಡಿಯುವುದು, ಜ್ವರ ಬರುವುದು ಎಂಬುದೇ. ಶೀತಪ್ರದೇಶದಲ್ಲಿ ಈ ಕಾರಣ ನಿಜವಾದುದೆಂದು ಹೇಳಿದರೂ ಹೇಳಬಹುದು. ಆದರೆ ಅಂಥಾ ಶೈತ್ಯವಾದ ಗಾಳಿಯು ಮಲಗಿರುವವರ ಶರೀರಕ್ಕೆ ಸೋಕದಂತೆಯೂ, ಎತ್ತರವಾದ ಗವಾಕ್ಷಗಳ ಮೂಲಕ ನಿಧಾನವಾಗಿ ಸಂಚರಿಸುವಂತೆಯೂ ಏರ್ಪಾಡು ಮಾಡಿಕೊಳ್ಳಬಹುದಾಗಿದೆ ವಾಯುವಿನ ಸಂಚಾರಕ್ಕೆ ಅವಕಾಶವಿಲ್ಲದಂಥಾ ಕೊಠಡಿಗಳಲ್ಲಿ ಮಲಗಿಕೊಳ್ಳುವುದರಿಂದ ಶೀತ ನೆಗಡಿಗಳು ಬರುವುದಿಲ್ಲವೆಂದು ಹೇಳುವುದು ಶುದ್ಧ ತಪ್ಪು, ಇದರಿಂದ ಶೀತವಾಗುವುದಕ್ಕೆ ವಿಶೇಷ ಕಾರಣವುಂಟು ರಾತ್ರಿ ಕೊಠಡಿಯೊಳಗೆಲ್ಲಾ ತುಂಬಾ ಕಾವೇರುತ್ತದೆ ಮಲಗಿದ್ದವನು ಬೆಳಗ್ಗೆ ಎಚ್ಚೆತ್ತ ಮೇಲೆ ಬೆಚ್ಚಗಿರುವ ಕೊಠಡಿಯಿಂದ ಶೀತವಾದ ಬೈಲುಗಾಳಿಗೆ ಬರಬೇಕಾಗುತ್ತೆ. ಹೀಗೆ ಬರುವಾಗ್ಯೆ ಅವನಿಗೆ ಶೀತವಾಗುವುದು ಖಂಡಿತ. ಇದಲ್ಲದೆ ಕೊಠಡಿಯೊಳಗಿನ ಕಾವಾದ ಗಾಳಿಯನ್ನೇ ಹೀರಿಕೊಳ್ಳುತ್ತಾ ಇರುವುದರಿಂದ ತಲೆ ನೋವು, ಸುಸ್ತು, ಬಳಲಿಕೆ, ರಕ್ತ ಕೆಡುವುದು ಇವೇ ಮುಂತಾದ ದುಷ್ಫಲಗಳೂ ಪ್ರಾಪ್ತವಾಗುವವು.

ನಿರ್ಮಲ ವಾಯುವಿನ ವಿಚಾರದಲ್ಲಿ ಜನರಿಗಿರುವಷ್ಟು ಪರಿಜ್ಞಾನವೂ ತಿಳುವಳಿಕೆಯೂ ಬೆಳಕಿನ ವಿಷಯದಲ್ಲಿ ಇರುವುದಿಲ್ಲ. ಮನೆಯಲ್ಲಿ ಬೆಳಕು ಬಹು ಮುಖ್ಯವಾಗಿ ಇರಲೇಬೇಕು. ಕತ್ತಲಾಗಿರುವ ಕೊಠಡಿಯೊಳಗೆ ಕೂತುಕೊಂಡು ಓದುವುದು, ಹೊಲಿಯುವುದು, ಚಿತ್ರನೆ ಮೊದಲಾದ ಸಣ್ಣ ಕೆಲಸ ಮಾಡುವುದು ಕಣ್ಣಿಗೆ ತುಂಬ ಕೆಟ್ಟದೆಂದು ಎಲ್ಲರಿಗೂ ತಿಳಿದಿದೆ. ಬೆನ್ನಿನ ಕಡೆಯಿಂದ (ಇ ದಕ್ಷಿಣ ಎಡಪಾರ್ಶ್ವದಿಂದ) ಬೆಳಕು ಬೀಳುವಂತೆ ಕೂತುಕೊಂಡು ಓದುವುದೂ, ಕೆಲಸ ಮಾಡುವುದೂ ಬಹಳ ಒಳ್ಳೆಯದು. ಇಷ್ಟು ಸಣ್ಣ ವಿಷಯವನ್ನು ಜನರು ಗ್ರಹಿಸದೆ ಅಲಕ್ಷ್ಯಮಾಡುವುದರಿಂದ ಅವರ ಕಣ್ಣು ಬಹುಕಾಲದ ವರೆಗೆ ಚೆನ್ನಾಗಿರುವುದಕ್ಕೆ ಬದಲಾಗಿ ಜಾಗ್ರತೆಯಲ್ಲೇ ಕೆಟ್ಟುಹೋಗುವುದು, ದೃಷ್ಟಿ ಮಾಂದ್ಯವಾಗುವುದು, ಕಣ್ಣಿನ ಶಕ್ತಿಯು ಕುಂದಿಹೋಗುವುದು.

ಕಣ್ಣನ್ನು ಕಾಪಾಡಿಕೊಳ್ಳುವುದಕ್ಕೋಸ್ಕರವೇ ಬೆಳಕು ಅವಶ್ಯಕ, ಇನ್ನಾವ ವಿಷಯಕ್ಕೂ ಅದು ಬೇಡವೆಂದು ತಿಳಿದುಕೊಳ್ಳಬಾರದು. ಎಲ್ಲರಿಗೂ ತಿಳಿದಿರುವಂತೆ ಅಂಟುಜಾಡ್ಯಗಳೆನಿಸಿಕೊಂಡಿರುವ ಸಿಡುಬು, ವಾಂತಿಭೇದಿ, ಪ್ಲೇಗ್ ಮೊದಲಾದ ರೋಗಗಳೆಲ್ಲಾ ಕಣ್ಣಿಗೆ ಕಾಣದಂಥಾ ಅಣುರೂಪಗಳಾದ ಸಜೀವ ಕ್ರಿಮಿಗಳಿಂದ ಉತ್ಪತ್ತಿಯಾಗುವವಷ್ಟೆ. ಈ ಪರಮಾಣು ಕ್ರಿಮಿಗಳು ಗಾಳಿಯಲ್ಲಿ ತೇಲಾಡುತ್ತಿರುವವು, ... ಮೇಲೂ ಗೋಡೆಗಳಿಗೂ ಅಂಟಿಕೊಂಡಿರುವವು; ಕಣ್ಣಿಗೆ ಕಾಣದ ರೀತಿಯಲ್ಲಿ ನಮ್ಮ ಆಹಾರ ಪದಾರ್ಥಗಳಲ್ಲೂ ಪಾನೀಯ ವಸ್ತುಗಳಲ್ಲೂ ಸೇರಿಕೊಂಡಿರುವವು, ನಾವು ಉಟ್ಟು ಕೊಟ್ಟು ಹೊದಿಯುವ ಬಟ್ಟೆಬರೆಗಳಲ್ಲಿ ಅಂಟಿಕೊಂಡಿರುವವು ಈ ಪ್ರಕಾರ ಇರುವಂಥಾ ಈ ಪರಮಾಣುಗಳು ನಮ್ಮ ಮೂಗು, ಬಾಯಿ, ಇಲ್ಲವೇ ಚರ್ಮದ ಮುಖಾಂತರ ರಕ್ತದೊಳಕ್ಕೆ ಪ್ರವೇಶಿಸುತ್ತವೆ. ಅನಂತರ ಮರಣವನ್ನೇ ಮೊದಲಾದ ಸಂಕಟವನ್ನೇ ಹುಟ್ಟಿಸುವವು. ಇಗೋ ನೋಡಿ! ಚನ್ನಾಗಿ ತಿಳಿಕೊಳ್ಳಿ —ಇಂಥಾ ಅನೇಕಾನೇಕ ಕ್ರಿಮಿಗಳಿಗೆ ಬೆಳಕು (ಬಿಸಿಲು) ಶತ್ರುವಾಗಿರುವುದು ಈ ಕ್ರಿಮಿಗಳು ದುಷ್ಟಸ್ವಭಾವವುಳ್ಳವು; ಕತ್ತಲೆಯಲ್ಲೇ ಇದ್ದು ಕತ್ತಲೆಯಲ್ಲೇ ಕೋಟ್ಯನುಕೋಟಿಯಾಗಿ ವೃದ್ಧಿಹೊಂದತಕ್ಕವು. ಸೂರ್ಯರಶ್ಮಿಯು ಸೋಕಿದ ಕೂಡಲೇ ಅವು ಶಕ್ತಿಕುಂದಿ ನಾಶಹೊಂದುವವು. ಇದನ್ನು ದೃಷ್ಟಾಂತಪಡಿಸುವುದಕ್ಕೆ ಹಳಗಾಲದಲ್ಲಿ ಎಲ್ಲರ ಅನುಭವಕ್ಕೂ ಬಂದಿರುವಂಥಾ ಒಂದು ಸಾಧಾರಣವಾದ ಸಂಗತಿಯನ್ನು ಇಲ್ಲಿ ಹೇಳುತ್ತೇವೆ. ಆಹಾರಪದಾರ್ಥವನ್ನಾಗಲಿ ಬಟ್ಟೆಯನ್ನಾಗಲಿ ಉಪಯೋಗಿಸದೆ ಕೆಲವು ದಿನಗಳ ತನಕ ಮನೆಯಲ್ಲಿ ಒಂದು ಕಡೆ ಹಾಕಿಬಿಟ್ಟಿದ್ದರೆ ಅದರ ಮೇಲೆಲ್ಲಾ ಒಂದು ತರಹ ಬೂದು ಕಟ್ಟಿಕೊಳ್ಳುತ್ತದಲ್ಲವೋ? ಹೀಗೆ ಬೂದು ಕಟ್ಟಿಕೊಳ್ಳುವುದಕ್ಕೆ ಕಾರಣವೇನು? ವಾಯುಮಂಡಲದಲ್ಲಿ ಅಣುರೂಪವಾದ ಸಸ್ಯ ಬೀಜಗಳು ತೇಲಾಡುತ್ತಿರುವವು. ಇವು ಸಾವಿಟ್ಟಿರುವ ಆಹಾರ ಪದಾರ್ಥದಲ್ಲೋ ಬಟ್ಟೆಯಲ್ಲೋ ಸೇರಿ, ಕತ್ತಲಲ್ಲೇ ಕಾವಿದು ಮೊಳೆಯುವವು ಇದನ್ನು ಹೋಗಲಾಡಿಸುವುದಕ್ಕೆ ನಾವು ಅದನ್ನು ಸ್ವಲ್ಪಹೊತ್ತು ಬಿಸಿಲಿಗಿಟ್ಟು ಕಂಡಿಟ್ಟರೆ ಸಾಕು; ಇನ್ನೇನೂ ಶ್ರಮಪಡಬೇಕಾಗಿರುವುದಿಲ್ಲ. ಬಿಸಿಲಿನ ವೇಗಕ್ಕೆ ಅದು ಅಲ್ಲೇ ಬಾಡಿ, ಅದೃಶ್ಯವಾಗುವುದು. ಇಂಥಾ ಸಸ್ಯಬೀಜಗಳಿಗೂ ರೋಗಜನಕಗಳಾದ ಸಜೀವ ಕ್ರಿಮಿಗಳಿಗೂ ತುಂಬಾ ವ್ಯತ್ಯಾಸವಿರುವುದೇನೋ ನಿಜ. ಇದೊಂದು ಭಾಗದಲ್ಲಿ ಮಾತ್ರ ಇವೆರಡೂ ಒಂದೇ ಎಂದು ಹೇಳಬಹುದು ಇವೆರಡೂ ಕತ್ತಲಲ್ಲಿ ವೃದ್ಧಿಹೊಂದುವವು; ಇವೆರಡೂ ಸೂರ್ಯರಶ್ಮಿಯಲ್ಲಿ ನಾಶಹೊಂದುವವು. ಒಂದಾನೊಂದು ಮನೆಯಲ್ಲಿ ಎರಡು ಕೊಠಡಿಗಳಿವೆ ಎಂದು ಇಟ್ಟುಕೊಳ್ಳೋಣ. ಒಂದು ಕೊಠಡಿಗೆ ಚೆನ್ನಾಗಿ ಬೆಳಕು ಬೀಳುತ್ತದೆ, ಬಿಸಿಲು ಸ್ವಲ್ಪಹೊತ್ತಾದರೂ ನೆಲಗೋಡೆಗಳ ಮೇಲೆ ಬೀಳುವಂತೆ ಬಾಗಿಲು ಕಿಟಕಿಗಳನ್ನು ತೆರೆದಿಡುತ್ತಾರೆ. ಇಂಥಾ ಕೊಠಡಿಯಿಂದಾಗುವ ಪ್ರಯೋಜನವೇನು? ನಾವು ನಮ್ಮ ಅಂಗಾಲುಗಳಲ್ಲಿ ಪ್ಲೇಗ್ ಕ್ರಿಮಿಗಳನ್ನು ಹತ್ತಿಸಿಕೊಂಡು ಕೊಠಡಿಯೊಳಕ್ಕೆ ಹೋಗಿದ್ದರೂ ಅವು ಕೊಠಡಿಯ ನೆಲಕ್ಕೆ ಅಂಟಿಕೊಂಡಿರಬಹುದು. ಅಲ್ಲಿಗೆ ಬೆಳಕೂ ಬಿಸಿಲೂ ಬೀಳುವುದರಿಂದ ಆ ಕ್ರಿಮಿಗಳು ಬಹಳಹೊತ್ತು ಬದುಕಿರಲಾರವು ಬಿಸಿಲು ಬೀಳುತ್ತಲೇ ಅವು ನಾಶಹೊಂದುತ್ತವೆ ಎರಡನೇ ಕೊಠಡಿಯು ಕತ್ತಲಾಗಿದೆ; ಗಾಳಿಯು ಸಂಚಾರವಿಲ್ಲ. ಇಂಥಾ ಕೊಠಡಿಯೊಳಕ್ಕೆ ಹ್ಯಾಗೋ ಪ್ಲೇಗ್ ಕ್ರಿಮಿಗಳು ಬಂದುಬಿಟ್ಟವೆಂದು ಊಹಿಸೋಣ. ಅಲ್ಲಿ ಏನಾಗುವುದು? ಆ ಕತ್ತಲಲ್ಲಿ ಕ್ರಿಮಿಗಳು ಸುಖವಾಗಿ ಜೀವಿಸಿಕೊಂಡು ಧಾರಾಳವಾಗಿ ವೃದ್ಧಿಹೊಂದುತ್ತವೆ ಇಷ್ಟೇ ಅಲ್ಲ; ಸ್ವಲ್ಪ ಹೊತ್ತಿನೊಳಗಾಗಿ ಕ್ರಿಮಿಗಳು ಕೋಟ್ಯನುಕೋಟಿಯಾಗಿ ಹೆಚ್ಚಿ ಆ ಕೊಠಡಿಯನ್ನೆಲ್ಲಾ ... ಸುವವು. ತರುವಾಯ ಈ ಕೊಠಡಿಯೊಳಗೆ ಕೂತು, ಮಲಗಿ, ನಿದ್ದೆಮಾಡುವವರ ದೇಹವನ್ನು ಹಿಡಿಯುತ್ತವೆ. ಅನಂತರ ಏನಾಗುವದೋ ನಾವು ಹೇಳಬೇಕಾಗಿಲ್ಲ. ಪ್ಲೇಗ್ ಕಾಯಿಲೆಯು ಕತ್ತಲೆಯಿಂದ ಉತ್ಪತ್ತಿಯಾಗುವ ರೋಗವೆಂದು ಒಬ್ಬನೊಬ್ಬನು ಹೇಳುತ್ತಾನೆ. ಯೂರೋಪಿಯನ್ ಜನರಿಗೆ ಪ್ಲೇಗ್ ತಗುಲದೆ ಇರುವುದಕ್ಕೆ ಅವರ ರಕ್ತವೇ ಬೇರೆ, ಅವರ ವಂಶವೇ ಪ್ರತ್ಯೇಕ ಎಂಬುದಾಗಿ ಕಾರಣ ಹೇಳುವರು. ಈ ಕಾರಣವು ಸಹಜವಾದುದಲ್ಲ ಯಾಕೆಂದರೆ, ಪೂರ್ವಕಾಲದಲ್ಲಿ ಪ್ಲೇಗ್ ಉಪದ್ರವು ಯೂರೋಪಿಯನ್ ರಾಜ್ಯಗಳಲ್ಲಿ ವಿಶೇಷ ಪ್ರಬಲವಾಗಿದ್ದಿತು. ಸುಮಾರು ೨೫೦ ವರುಷಗಳ ಹಿಂದೆ ಲಂಡನ್ ಪಟ್ಟಣದಲ್ಲಿ ದಿನ ಒಂದಕ್ಕೆ ೧೦,೦೦೦ ಪ್ರಜೆಗಳಂತೆ ಈ ಉಪದ್ರದಲ್ಲಿ ಮೃತಪಡುತ್ತಿದ್ದರು. ಈಗ ಆ ಜನರಿಗೆ ಪ್ಲೇಗ್ ತಗಲದೇ ಇರುವುದಕ್ಕೆ ಮುಖ್ಯ ಕಾರಣವೇನೆಂದರೆ—ಅವರು ವಾಸಮಾಡುವ ಬಂಗಲೆಗಳು ವಿಸ್ತಾರವಾಗಿರುತ್ತವೆ, ಒಳಗೆಲ್ಲಾ ಬಿಸಿಲೂ ಬೆಳಕೂ ಬೀಳುವವು, ಮತ್ತು ಗಾಳಿಯು ಸರ್ವದಾ ಧಾರಾಳವಾಗಿ ಸಂಚರಿಸುವಂತೆ ಬಾಗಿಲು ಕಿಟಕಿಗಳನ್ನು ತೆರೆದೇ ಇರುತ್ತಾರೆ. ಇದರಿಂದಲೇ ಅವರಿಗೆ ಅಂಟುಜಾಡ್ಯ ಯಾವುದೂ ತಗಲುವುದಿಲ್ಲ.

ಇಷ್ಟೇ ಅಲ್ಲ ಶರೀರವು ಕೋಮಲವಾಗಿಯೂ ದೃಢವಾಗಿಯೂ ಬೆಳವಣಿಗೆ ಹೊಂದುವುದಕ್ಕೂ ಬೆಳಕೂ ಬಿಸಿಲೂ ತುಂಬಾ ಅವಶ್ಯವಾಗಿವೆ. ಇದಕ್ಕೆ ದೃಷ್ಟಾಂತವೇನೆಂದರೆ—ಕೋಮಲವಾಗಿ ಬೆಳೆದಿರುವ ಗಿಡವನ್ನು ಅಂಗಳ ತಪ್ಪಿಸಿ ಕತ್ತಲಾದ ಕೊಠಡಿಯೊಳಕ್ಕೆ ತಂದಿಟ್ಟುಕೊಂಡರೆ ಸ್ವಲ್ಪ ಹೊತ್ತಿನೊಳಗಾಗಿ ಅದು ಬಾಡುವುದು, ಅದರ ಎಲೆಗಳ ಹಚ್ಚೆಯೆಲ್ಲಾ ಹೋಗಿಬಿಡುವುದು; ಗಿಡವಾದ್ಯಂತವೂ ಬಿಳಿಚಿಕೊಂಡು ಕಡೆಗೆ ಸತ್ತುಹೋಗುತ್ತೆ. ಬೆಳಕೂ ಬಿಸಿಲೂ ಇಲ್ಲವಿದ್ದರೆ ಸಸ್ಯಾದಿಗಳ ಬೆಳವಣಿಗೆಯು ವೃದ್ಧಿಹೊಂದಲಾರದು. ಮನುಷ್ಯನ ಸ್ಥಿತಿಯೂ ಹೀಗೆಯೇ ಸರಿ ನಂತ ಕಂಡ ಹಾಗೆ ಅನೇಕಾನೇಕ ಗಂಡಸರು ಹೆಂಗಸರು ಕತ್ತಲುಮನೆ ಕೊಠಡಿಗಳಲ್ಲೇ ವಿಶೇಷವಾಗಿ ಇರುತ್ತಾ ನಿರ್ಮಲವಾದ ಗಾಳಿ ಬಿಸಿಲು ಬೆಳಕುಗಳನ್ನು ಅನುಭೋಗಿಸದೆ ಇರುವುದರಿಂದ ಅವರ ರಕ್ತವು ಬಿಳಚಾಗಿ ಕ್ಷಯರೋಗಪೀಡಿತರಂತೆ ಆಗಿರುತ್ತಾರೆ. ಇದು ಅನುಭವಸಿದ್ಧವಾದ ವಿಷಯ. ಹೆಂಗಸರೂ ಹೆಣ್ಣು ಮಕ್ಕಳೂ ಹೀಗಾಗಿರುವುದೇ ವಿಶೇಷ ಇವರು ಸರ್ವದಾ ಮನೆಗಳಲ್ಲೇ ಇದ್ದುಕೊಂಡು ಕೆಲಸಮಾಡುತ್ತಾರಾದಕಾರಣ ಮನೆಯೂ ಕೊಠಡಿಗಳೂ ವಿಶಾಲವಾಗಿಯೂ ಎತ್ತರವಾಗಿಯೂ ಬೆಳಕು ಬಿಸಿಲು ಗಾಳಿ ಧಾರಾಳವಾಗಿ ಬರುವಂತೆಯೂ ಇರಬೇಕು.

ಆದಕಾರಣ ಎಲ್ಲರಿಗೂ ತಿಳಿಯುವ ಹಾಗೆ ಬಹು ಸುಲಭವಾದ ಒಂದೇ ಒಂದು ವಿಧಿಯನ್ನು ಹೇಳುವೆವು

"ಮನೆಯಲ್ಲಿ ಪ್ರತಿ ಒಂದು ಕೊಠಡಿಗೂ ಬೆಳಕೂ ಗಾಳಿಯೂ ಧಾರಾಳವಾಗಿ ಬೀಸುವಂತಿರಲಿ."

ಯಾವ ಕೊಠಡಿ ಈ ರೀತಿ ಇರುವುದಿಲ್ಲವೋ ಅದು ಖಂಡಿತವಾಗಿಯೂ ಅನಾರೋಗ್ಯಕರವಾದುದೆಂದು ತಿಳಿಕೊಳ್ಳಬೇಕು.

ರಾಜಧಾನಿಯಲ್ಲಿರುವ ಮನೆಮಠಗಳ ಈಗಿನ ಸ್ಥಿತಿಗತಿಗಳನ್ನು ಕುರಿತು ಬರುವವಾರ ಪ್ರಸ್ತಾಪಿಸುವೆವು

ರಾಜಧಾನಿಯ ನಿವಾಸಿ.

## ಬೊಂಬಾಯಿ ಅಧಿಪತ್ಯದ ಹೊಸ ಗವರ್ನರವರು.

ಬೊಂಬಾಯಿ ಅಧಿಪತ್ಯಕ್ಕೆ ಹೊಸ ಗವರ್ನರಾಗಿ ನೇಮಿಸಲ್ಪಟ್ಟಿರುವ ಲಾರ್ಡ್ ಲೇಮಿಂಗ್ಟನ್ ಪ್ರಭುಗಳು ಪತ್ನೀ ಮತ್ತು ಇಬ್ಬರು ಮಕ್ಕಳು ಇವರ ಸಮೇತರಾಗಿ ಕಳೆದ ೧೨ ನೇ ತಾರೀಖಿನಲ್ಲಿ ಬೊಂಬಾಯಿ ನಗರದಲ್ಲಿಳಿದರು. ಇವರು ಹತ್ತಿದ್ದ ಜಹಜು ಬೆಳಿಗ್ಗೆ ಬಂದು ಸೇರುವದೆಂದು ತಿಳಿದಿದ್ದಕಾರಣ ಗವರ್ನರವರನ್ನು ಅಂಗೀಕರಿಸುವದಕ್ಕೆ ಪ್ರಾತಃಕಾಲ ೮ ಗಂಟೆಯನ್ನು ನೇಮಿಸಿತ್ತು. ಆದರೆ ಜಹಜು ತೀರವನ್ನು ಮುಟ್ಟುವಾಗ್ಗೆ ೯ ಗಂಟೆಯಾಯಿತು. ತರುವಾಯ ಆಕ್ಟಿಂಗ್ ಗವರ್ನರಾದ ಮಾಂಟೀತ್ ಸಾಹೇಬರು ತಮ್ಮ ಕೌನ್ಸಿಲ್ ಮೆಂಬರುಗಳು, ಡಿಪಾರ್ಟುಮೆಂಟುಗಳ ಮುಖ್ಯ ಹುದ್ದೇದಾರರು, ಮ್ಯುನಿಸಿಪಲ್ ಮೆಂಬರುಗಳು ಮೊದಲಾದ ದೊಡ್ಡ ದೊಡ್ಡ ಹುದ್ದೇದಾರರನ್ನೊಡಗೊಂಡು ಬಂದು ಗವರ್ನರವರನ್ನು ಆಗತಮಾಡಿಕೊಂಡರು. ಗವರ್ನರವರು ಜಹಜನ್ನು ಬಿಟ್ಟಿಳಿದಾಗಲೇ ಗೌರವಾರ್ಥವಾದ ೧೭ ತೋಪುಗಳು ಹಾರಿದವು. ತರುವಾಯ ಮ್ಯುನಿಸಿಪಲನವರು ಒಪ್ಪಿಸಿದ ಅಡ್ರೆಸ್ಸನ್ನು ಅಂಗೀಕರಿಸಿ ಉಚಿತಪ್ರಕಾರವಾದ ಉತ್ತರವನ್ನು ದಯಪಾಲಿಸಿ ಸೆಕ್ರೆಟೇರಿಯಟ್ ಬಂಗಲೆಗೆ ಸವಾರಿ ದಯಮಾಡಿದರು. ಅಲ್ಲಿ ಅವರ ಉದ್ಯೋಗ ನಿಯಾಮಕಪತ್ರ ಸಕಲ ಪ್ರಜೆಗಳಿಗೂ ತಿಳಿಸಲ್ಪಟ್ಟಿತು. ಅನಂತರ ಅವರು ಗವರ್ನ್ಮೆಂಟ್ ಬಂಗಲೆಗೆ ಚಿತ್ತೈಸಿದರು. ಗವರ್ನರವರಿಗೆ ಜಿ. ಸಿ. ಐ. ಇ. ಎಂಬ ದೊಡ್ಡ ಬಿರುದನ್ನು ಕೊಟ್ಟಿರುವದಾಗಿ ಇಂಡಿಯಾ ಗವರ್ನ್ಮೆಂಟು ಗೆಜೆಟ್ಟಿನ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸಿದೆ

## ಲಂಡನ್ ಪಟ್ಟಣದ ವಿದ್ಯಾ ವಿಷಯಕವಾದ ವಿಧಾಯಕ.

ಮಕ್ಕಳನ್ನು ಸ್ಕೂಲಿನಲ್ಲಿ ಓದಿಸಬೇಕೆಂಬ ವಿಷಯ ಲಂಡನ್ ಪಟ್ಟಣದ ಸರ್ಕಾರದವರು ಮಾಡಿರುವ ಹೊಸ ಕಟ್ಟಳೆಯನ್ನು ನಡವಳಿಕೆಗೆ ತರುವ ಭಾಗದಲ್ಲಿ ಅನೇಕ ತೊಂದರೆಗಳುಂಟಾಗುತ್ತವೆಂಬುದನ್ನು ದೃಷ್ಟಾಂತ ಪಡಿಸುವದಕ್ಕೆ ಒಬ್ಬಾತನು ಒಂದು ವರ್ತಮಾನ ಪತ್ರಿಕೆಗೆ ಬರೆದಿರುವನು. ಇದು ಬಹು ವಿನೋದಕರವಾಗಿದೆ. ಹ್ಯಾಗೆಂದರೆ—

ಯಾವುದೋ ಒಂದು ಬೀದಿಯಲ್ಲಿರುವ ಜಾರ್ಜ್ ಟಾಮಸ್ ಎಂಬ ಹುಡುಗನು ಬಹು ಗಾತ್ರ ದೇಹಿಯಾಗಿರುವದರಿಂದ ಸ್ಕೂಲಿಗೆ ಹಾಜರಾಗುವದಕ್ಕೆ ಆಗದಿಲ್ಲವಾದದರಿಂದ ಡಾಕ್ಟರು ಹೋಗಿ ಪರೀಕ್ಷಿಸಿ ರಿಪೋರ್ಟು ಬರೆದಿರುವದು.—ಹುಡುಗನಿಗೆ ಆರು ವರ್ಷ ವಯಸ್ಸು. ವಯಸ್ಸಿಗೆ ಮೀರಿದ ಗಾತ್ರ ದೇಹವುಳ್ಳವನು. ಕೊಬ್ಬಿರುವದರಿಂದ ಮಾತ್ರವಲ್ಲದೆ ಅಂಗಸಾಧನೆಯು ದೆಸೆಯಿಂದಲೂ ದೇಹವು ಗಾತ್ರವಾಗಿದೆ. ಇವನು ಸಾಧಾರಣವಾಗಿ ಬಲಶಾಲಿಯಾದ ಗಂಡಸನ್ನು ಎತ್ತಬಲ್ಲವನಾಗಿದ್ದಾನೆ. ಕಾಲುಗಳಿಗೆ ಬಾಹ್ಯವಾಯು ಹಿಡಿದಿರುವದರಿಂದ ಸ್ಕೂಲಿಗೆ ಹೋಗಲಾರನೆಂದು ಹೇಳುವದು ನಿಜವಲ್ಲ. ದೇಹವು ಗುಂಡಾಗಿರುವದರಿಂದ ದೂರ ನಡೆಯಲಾರನೇ ಹೊರತು ರೋಗ ವಿಶೇಷದಿಂದ ನಡೆಯಲಾರನೆಂದು ಹೇಳುವದು ಅಸಂಬದ್ಧವಾಗಿದ್ದು. ಬುದ್ಧಿಶಕ್ತಿ ಸಾಧಾರಣ ಮನುಷ್ಯನ ಮೀರಿದ್ದಾಗಿಯೇ ಇದೆ ಇವನು ವಿದ್ಯಾರ್ಥಿವೆಲ್ಲಾ ನಿದ್ದೆ ಮಾಡಬಲ್ಲನು. ಒಬ್ಬ ಬರೆ ಹೆಂಗಸು ಜನಸಂದಣಿಗೆ ತಳ್ಳಿಕೊಂಡು ಹೋಗಿ ನಿಲ್ಲಿಸಿ ಇವನ ಅಸಾಧಾರಣವಾದ ಗಾತ್ರವನ್ನು ಜನರಿಗೆ ತೋರಿಸಿ ಹಣ ಸಂಪಾದನೆ ಮಾಡುತ್ತಾರೆ. ಇವನ ದೇಹಸ್ಥಿತಿಯೂ ಅಭ್ಯಾಸವೂ ಈ ಪ್ರಕಾರವಿರುವದರಿಂದ ಸ್ಕೂಲಿಗೆ ಹೋಗುವದಕ್ಕೆ ಇವನು ಯೋಗ್ಯನಾಗಿದ್ದಾನೆಂದು ಹೇಳುವದಕ್ಕೆ ನನಗೆ ಧೈರ್ಯ ಸಾಲದು. ಇವನನ್ನು ಚಿಕ್ಕ ಮಕ್ಕಳ ಜೊತೆಗೆ ಪಾಠ ಕಲಿಯಲು ಬಿಡುವದು ಸಾಧ್ಯವೆಂದು ನನಗೆ ಲವಲೇಶವೂ ಇಲ್ಲ; ಯಾಕೆಂದರೆ ಇವನ ಗಾತ್ರ ದೇಹವನ್ನು ನೋಡಿ ಇತರ ಮಕ್ಕಳು ಪಾಠದ ಮೇಲೆ ಲಕ್ಷ್ಯವಿಡುವದಕ್ಕೆ ಅಭ್ಯಂತರವುಂಟಾಗುವದಲ್ಲದೆ ಇವನಿಗೆ ಕೂತುಕೊಳ್ಳುವದಕ್ಕೂ ತಕ್ಕಷ್ಟು ಸ್ಥಳವಿರಲಾರದು. ಆದರೆ ಇಂಥವರಿಗೋಸ್ಕರವೇ ನೇಮಿಸಲ್ಪಟ್ಟಿರುವ ಪಾಠಶಾಲೆಗೆ ಕರೆದುಕೊಂಡು ಹೋಗೋಣವೆಂದರೆ, ಗಾಡಿಯಲ್ಲಿ ಅರ್ಧಭಾಗವೆಲ್ಲಾ ಇವನೊಬ್ಬನು ಕುಳಿತುಕೊಳ್ಳುವದಕ್ಕೆ ಸಾಲದೆ ಹೋಗುವದು. ಆದಕಾರಣ ಇವನು ಸ್ಕೂಲಿಗೆ ಹೋಗಲೇಬೇಕೆಂಬ ನಿರ್ಬಂಧವನ್ನು ತಪ್ಪಿಸುವದು ಉತ್ತಮವೆಂದು ಅಭಿಪ್ರಾಯಪಡುತ್ತೇನೆ.

ಡಾಕ್ಟರು ಕೊಟ್ಟ ಈ ಅಭಿಪ್ರಾಯದಂತೆಯೇ ಕಮಿಟಿಯವರು ಒಪ್ಪಿದರು.

ಜನೋಪಕಾರವಾದ ಎಂಥ ಒಳ್ಳೇ ಏರ್ಪಾಡು ಮಾಡಿದರೂ ಸರಿಯೇ ಅದಕ್ಕೆ ಯಾವದಾದರೂ ಒಂದು ವಿಧ ಅಭ್ಯಂತರವು ಇದ್ದೇ ಇರುವದು.

## ಚಕ್ರವರ್ತಿನಿಯವರು ಅಪಾಯದಿಂದ ಬಿಡುಗಡೆಯಾದದ್ದು.

### ಅರಮನೆ ಹತ್ತಿಕೊಂಡಿತು.

ಇಂಗ್ಲಾಂಡಿನಲ್ಲಿ ನಾರ್‌ಫಕ್ ಎಂಬುದು ಒಂದು ಡಿಸ್ಟ್ರಿಕ್ಟು. ಇದರಲ್ಲಿ ಇಂಗ್ಲಾಂಡಿನ ಚಕ್ರವರ್ತಿಯವರು ವಾಸಮಾಡುವದಕ್ಕೆ ಒಂದು ಅರಮನೆಯನ್ನು ಕಟ್ಟಿಕೊಂಡಿರುವರು. ಈ ರಾಜಭವನಕ್ಕೆ ಸ್ಯಾಂಡ್ರಿಂಗ್ಹಾಂ ಎಂದು ಹೆಸರು. ಈ ಅರಮನೆಯಲ್ಲಿ ಕಳೆದ ೧೦ ನೆ ತಾರೀಖು ಗುರುವಾರ ಅಲೆಕ್ಸಾಂಡ್ರಾ ಚಕ್ರವರ್ತಿನಿಯವರು ಉಪ್ಪರಿಗೆಯ ಮೇಲೆ ಮಲಗಿ ನಿದ್ರೆ ಮಾಡುತ್ತಿದ್ದರು. ಇವರ ಪಕ್ಕದಲ್ಲಿ ಇಬ್ಬರು ದಾಸಿಯರು ಮಲಗಿದ್ದರು. ಅದಕ್ಕಿಂತಲೂ ಕೆಳಗೆ ಒಂದು ಅಂತಸ್ತಿನ ಕೋಣೆಯಲ್ಲಿ ಮಿಸ್ ನಾಲಿಸ್ ಎಂಬ ಗೋಸಾನಿಯು ಮಲಗಿದ್ದಳು. ಆ ದಿನ ಬೆಳಿಗ್ಗಿನ ಝಾಮದ ೫ ಗಂಟೆ ಹೊತ್ತಿಗೆ ಮಿಸ್ ನಾಲಿಸ್ ಎಂಬಾಕೆಗೆ ಉಸುರುಕಟ್ಟಿದಂತಾಗಿ ಆಕೆ ನಿದ್ದೆಯಿಂದೆದ್ದು ನೋಡುವಲ್ಲಿ ತನ್ನ ಕೋಣೆಯೊಳಗೆಲ್ಲಾ ಹೊಗೆ ವಿಪರೀತವಾಗಿ ತುಂಬಿಕೊಂಡಿದ್ದಿತು. ಕೂಡಲೇ ಆಕೆಗೆ ವಿಪರೀತ ಗಾಬರಿಯಾಯಿತು. ಆಕೆ ಅತಿ ಜಾಗ್ರತೆಯಾಗಿ ಮೆಟ್ಲು ಹತ್ತಿ ಮೇಲಣಂತಸ್ತಿಗೆ ಹೋಗಿ ಚಕ್ರವರ್ತಿನಿಯವರು ಮಲಗಿದ್ದ ಶಯ್ಯಾಗೃಹದೊಳಕ್ಕೆ ನುಗ್ಗಿ ಗಾಢನಿದ್ರೆಯಲ್ಲಿ ಮಲಗಿದ್ದ ಅಲೆಕ್ಸಾಂಡ್ರಾ ಮಹಾರಾಣಿಯವರನ್ನೂ ಅವರ ಅಕ್ಕ ಪಕ್ಕಗಳಲ್ಲಿ ಮಲಗಿದ್ದ ಇಬ್ಬರು ದೊರೆಸಾನಿಯರನ್ನೂ ಬೇಗನೆ ಕೂಗಿ ಎಬ್ಬಿಸಿದಳು. ಅವರು ಇದ್ದದ್ದು ಇದ್ದಹಾಗೇ ಬಿಟ್ಟು, ಶಯ್ಯಾ ಬಟ್ಟೆಗಳಲ್ಲೇ ಗಾಬರಿಯಿಂದ ಅತಿ ರಭಸದೊಡನೆ ಹೊರಟು ಮೆಟ್ಲುಗಳಿಂದ ಇಳಿದು ಬರುವಷ್ಟರಲ್ಲೇ ಆ ಮೇಲಣಂತಸ್ತು ಧಡಾರ್ ಎಂಬ ಶಬ್ದದೊಡನೆ ಬಿದ್ದುಹೋಯಿತು. ಮಹಾರಾಜ್ಞೀಯವರು ಮಲಗಿದ್ದ ಶಯ್ಯಾಗೃಹವೆಲ್ಲಾ ಸಂಪೂರ್ಣವಾಗಿ ಕಳಚಿ ಬಿದ್ದುಹೋಯಿತು. ಈ ರಾಜಭವನದೊಳಗೆ ವಿದ್ಯುಚ್ಛಕ್ತಿಯ ದೀಪವನ್ನು ಇಟ್ಟಿರುವರು. ಇದು ಆ ರಾತ್ರಿ ಎಲ್ಲೋ ಒಂದು ತೊಲೆಗೆ ಸಿಕ್ಕಿ ಅದನ್ನು ಹತ್ತಿಸಿಬಿಟ್ಟಿತೆಂದೂ, ಅಲ್ಲಿಂದ ರಾಜಭವನಕ್ಕೆಲ್ಲಾ ಬೆಂಕಿ ಹರಡಿಕೊಂಡು ಈ ಅನಾಹುತವನ್ನುಂಟುಮಾಡಿತೆಂದೂ ಹೇಳುತ್ತಾರೆ. ಹ್ಯಾಗೂ, ಬ್ರಿಟಿಷ್ ರಾಜ್ಯಕ್ಕೆಲ್ಲಾ ಮಾತೃಪ್ರಾಯರಾದ ಮಹಾರಾಜ್ಞೀಯವರಿಗೆ ಈ ಅಕಾಲಮರಣವು ತಪ್ಪಿಹೋದುದಕ್ಕಾಗಿ ಸಮಸ್ತ ಪ್ರಜೆಗಳೂ ಸಂತೋಷಪಟ್ಟು, ಭಗವಂತನನ್ನು ಕುರಿತು ಸ್ತೋತ್ರಮಾಡುವರು. ಇಂಥಾ ಅಪಾಯದಿಂದ ಆಕೆಯವರು ಬಿಡುಗಡೆಹೊಂದಿದುದಕ್ಕೆ ಆ ಸರ್ವಜ್ಞನ ಆಶೀರ್ವಾದವೇ ಕಾರಣವಲ್ಲದೆ ಬೇರೇನೂ ಅಲ್ಲ.

ಸ್ಯಾಂಡ್ರಿಂಗ್ಹಾಂ ಎಂಬೀ ರಾಜಭವನವು ಕಳೆದ ೧೮೭೦ ರಲ್ಲಿ ನಿರ್ಮಾಣವಾಯಿತು. ಇದರ ಸುತ್ತಲೂ ಸುಮಾರು ೬೦೦ ಎಕರೆಗಳ ವಿಸ್ತಾರವುಳ್ಳ ಜಮೀನು ಮನೋಹರವಾದ ಮತ್ತು ನೇತ್ರಾನಂದಕರವಾದ ಉದ್ಯಾನವನವಾಗಿ ರಚಿಸಲ್ಪಟ್ಟಿರುವುದು. ಮಹಾರಾಜ್ಞೀಯವರಿಗೆ ಈ ರಾಜಭವನದಮೇಲೆ ತುಂಬಾ ಪ್ರೀತಿ. ಅವರು ಅಲ್ಲಿರುವಾಗ್ಗೆ ಸಂತೋಷಪಡುವುದೇ ಹೆಚ್ಚು. ಅನೇಕ ಗ್ರಾಮಗಳನ್ನು ಕಲ್ಪಿಸಿರುತ್ತಾರೆ. ಈ ಗ್ರಾಮಗಳಲ್ಲಿ ವಾಸಿಸುವ ಪ್ರಜೆಗಳಿಗೆ ಮನೆ ಮಠಗಳನ್ನೂ, ಉದ್ಯಾನಾರಾಮಗಳನ್ನೂ, ಪಾಠಶಾಲೆ ವೈದ್ಯಶಾಲೆ ಮುಂತಾದವುಗಳನ್ನೂ ಕಲ್ಪಿಸಿಕೊಟ್ಟಿರುವರು. ಆಕೆಯವರು ಸ್ವತಃ ಅವರ ಮನೆಗಳಿಗೆ ಹೋಗಿ ಅವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬರುತ್ತಾರೆ; ಸ್ಕೂಲುಗಳಿಗೆ ಹೋಗಿ ಸ್ವಲ್ಪ ಹೊತ್ತು ವಿದ್ಯೆ ಹೇಳಿಕೊಟ್ಟು ಬರುವುದೂ ಉಂಟು. ಕಷ್ಟನಷ್ಟಗಳಿಗೆ ಸಿಕ್ಕಿ ಬಾಧೆಪಡುವವರನ್ನೂ ರೋಗಿಷ್ಟರನ್ನೂ ಕಂಡು ಸಮಾಧಾನ ಹೇಳಿ ಪ್ರತ್ಯುಪಕಾರ ಮಾಡಿ ಬರುತ್ತಾರೆ. ಆ ಗ್ರಾಮಸ್ಥರ ಆಟಪಾಟ ವಿನೋದಗಳಲ್ಲಿ ಆಕೆಯವರು ಕೆಲವು ವೇಳೆ ಸೇರಿಕೊಂಡು ಸಂತೋಷಪಡುವುದೂ ಉಂಟು. ಇಂಥಾ ಮಹಾರಾಜ್ಞೀಯವರಲ್ಲಿ ಆ ಗ್ರಾಮಸ್ಥರು ಎಷ್ಟು ಮಟ್ಟಿನ ಪ್ರೀತಿ ಗೌರವಗಳನ್ನಿಟ್ಟುಕೊಂಡಿರುವರೋ ವಿವರಿಸಲಾರೆವು

## ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಮೊನ್ನೆ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರುಗಳು ಟೌನ್ ಹಾಲ್ ಬಂಗಲೆಯಲ್ಲಿ ನವೆಂಬರ ತಿಂಗಳ ಕಡೆಯ ಮ್ಯುನಿಸಿಪಲ್ ಮೀಟಿಂಗ್ ನಡಸಿದರು. ೧. ನವೆಂಬರ್ ತಿಂಗಳ ಜಮಾ ಖರ್ಚು ಮುಂತಾದ ಲೆಕ್ಕಗಳು ಒಪ್ಪಿಸಲ್ಪಟ್ಟವು. ನವೆಂಬರ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂ ೩,೮೨೩—೨—೦ ಮೈ ಜಮಾ, ರೂ. ೮,೮೯೯—೧೨—೧೦ ಮೈ ಖರ್ಚು ಆಯಿತೆಂದು ತಿಳಿಯಬಂದಿದೆ ಆ ತಿಂಗಳಲ್ಲಿ ಹುಟ್ಟಿದವರು ೮೩ ಮರಣ ೭೨, ಈ ಪೈಕಿ ಪ್ಲೇಗಿನಲ್ಲಿ ೫೦, ಜ್ವರದಲ್ಲಿ ೨೨

೨. ಮೈಸೂರು ಪಟ್ಟಣವನ್ನು ಅಭಿವೃದ್ಧಿ ಮಾಡುವದಕ್ಕೆ ಸರ್ಕಾರದವರು ಟ್ರಸ್ಟ್ ಕಮಿಟಿ ಎಂಬೊಂದು ಸಂಘವನ್ನು ಏರ್ಪಡಿಸಬೇಕಷ್ಟೆ. ಈ ಟ್ರಸ್ಟ್ ಕಮಿಟಿಗೆ ಪ್ರಜೆಗಳ ಪಕ್ಷವಾಗಿ ಅವರಿಂದ ಚುನಾಯಿಸಲ್ಪಟ್ಟಿರುವ ಮ್ಯುನಿಸಿಪಲ್ ಮೆಂಬರುಗಳ ಪೈಕಿ ಇಬ್ಬರನ್ನು ಮ್ಯುನಿಸಿಪಲ್ ಬೋರ್ಡಿನವರು ಕೂಡಲೇ ಚುನಾಯಿಸಬೇಕೆಂಬದಾಗಿ ಗವರ್ನಮೆಂಟಿನವರು ಬೋರ್ಡಿಗೆ ಕಾಗದ ಬರೆದು ಅದರ ಮೇಲೆ ತಾತ್ಪರ್ಯವನ್ನೂ ಕೊಟ್ಟರು. ಆದ್ದರಿಂದ ಮೆಂಬರುಗಳು ಈ ವಿಷಯವನ್ನು ಚರ್ಚಿಸಿ, ತಮಗೆ ಇಷ್ಟಬಂದಂತೆ ಇಬ್ಬರಿಬ್ಬರು ಮೆಂಬರುಗಳ ಹೆಸರುಗಳನ್ನು ಚೀಟಿಗಳಲ್ಲಿ ಬರೆದು ಪ್ರೆಸಿಡೆಂಟರಿಗೆ ಕೊಟ್ಟರು. ಪ್ರೆಸಿಡೆಂಟರು ಎಲ್ಲರ ಹೆಸರನ್ನೂ ಬರೆದುಕೊಂಡು ಅವರವರಿಗೆ ಎಷ್ಟೆಷ್ಟು ಜನ ಸಮ್ಮತಿ ಹಾಕಿದ್ದರೋ ಲೆಕ್ಕ ಮಾಡಿದರು. ಕಡೆಯಲ್ಲಿ ಅಡ್ವೊಕೇಟ್ ಮಿ॥ ಎಂ. ಸಿ. ರಂಗಯ್ಯಂಗಾರ್ಯರಿಗೆ ೯ ಓಟುಗಳೂ, ಹೆಡ್ ಮಾಸ್ಟರ್ ಮಿ॥ ಎಂ. ವೆಂಕಟಕೃಷ್ಣಯ್ಯನವರಿಗೆ ೮ ಓಟುಗಳೂ ಬಂದದ್ದರಿಂದ ಇವರಿಬ್ಬರೂ ಇಂಪ್ರೂವ್‌ಮೆಂಟ್ ಟ್ರಸ್ಟಿಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟದ್ದಾರೆಂದು ಗೊತ್ತಾಯಿತು. ಆದರಂತೆ ಇತರ ಮೆಂಬರುಗಳೂ ಒಪ್ಪಿಕೊಂಡರು

೩. ರಾಜಧಾನಿಗೆ ಕುಡಿಯುವ ನೀರು ಸರಬರಾಯಿ ಆಗುವ ಬೆಳಗೊಳದ ವಾಟರ್ ವರ್ಕ್ಸಿನಲ್ಲಿ ನೀರನ್ನು ಎತ್ತಿ ಸುರಿಯುವಂಥಾ ಹಳೇ ಯಂತ್ರಗಳಿಗೆ ಏನೋ ರಿಪೇರಿ ಮಾಡಬೇಕಾಗಿದೆ ಎಂತಲೂ ಇದಕ್ಕೆ ಮ್ಯುನಿಸಿಪಾಲಿಟಿಯವರು ೧,೫೦೦ ರೂ. ಕೊಡಬೇಕೆಂತಲೂ ಹೆಸರುಗಟ್ಟಿದ ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರವರು ಒಂದು ಅಂದಾಜು ಪಟ್ಟಿಯನ್ನು ಕಳುಹಿಸಿದರು. ಮೆಂಬರುಗಳು ಬೋರ್ಡಿನಿಂದ ಈ ಹಣ ಕೊಡಬೇಕೆಂದು ಸ್ಯಾಂಕ್ಷನ್ ಮಾಡಿ, ಖರ್ಚು ಪಟ್ಟಿಯನ್ನು ಇಂಜನಿಯರವರು ಬೋರ್ಡಿಗೆ ಕಳುಹಿಸಿ ತಿಳಿಸಬೇಕೆಂದು ಗೊತ್ತುಮಾಡಿದರು.

೪, ೫. ಮೇಲ್ಕಂಡ ಜಲಯಂತ್ರಗಳ ಕೆಲವು ಭಾಗಗಳು ಆಗಾಗ್ಯೆ ಮುರಿಯುವದು, ಸಡಿಲವಾಗುವುದು, ಕೆಲಸ ನಡೆಯದೆ ಅಡ್ಡಿಯಾಗುವುದೇ ಮುಂತಾದ ಅಸಂದರ್ಭಗಳು ಇನ್ನು ಮುಂದೆ ಪ್ರಾಪ್ತವಾಗದ ಹಾಗೆ ಮಾಡಬೇಕೆಂದು ವೈಸ್ ಪ್ರೆಸಿಡೆಂಟರು ಅಂಥಾ ಪ್ರತಿಭಾಗಗಳೂ ಎರಡೆರಡನ್ನು ಮಾಡಿಸಿ ಸಿದ್ಧಪಡಿಸಿಟ್ಟಿರಬೇಕಾಗಿದೆ ಎಂತಲೂ, ಇದಕ್ಕಾಗಿ ಸ್ವಲ್ಪ ಹಣ ಬೋರ್ಡಿನಲ್ಲಿ ಸ್ಯಾಂಕ್ಷನ್ ಆಗಬೇಕೆಂತಲೂ ತಿಳಿಸಿದರು. ಈ ವಿಷಯವನ್ನು ಮೆಂಬರುಗಳು ಚರ್ಚೆಮಾಡಿ, ಆ ಜಲಯಂತ್ರಗಳ ಭಾರವನ್ನು ವಹಿಸಿರುವ ಇಂಜನಿಯರಿಗೆ ತಿಳಿಸಬೇಕೆಂತಲೂ, ಅವರು ಯಾವ ಪ್ರಕಾರ ಸಲಹೆ ಕೊಡುತ್ತಾರೋ ವೈಸ್ ಪ್ರೆಸಿಡೆಂಟರು ಹಣ ಖರ್ಚುಮಾಡಿ, ಸಾಮಾನು ತಯಾರುಮಾಡಿಸಬಹುದೆಂತಲೂ ತೀರ್ಮಾನಿಸಿರುತ್ತಾರೆ.

೬. ಮೈಸೂರು ರೈಲ್ವೆ ಸ್ಟೇಷನ್ ಬಳಿ ಮ್ಯುನಿಸಿಪಾಲಿಟಿಯವರು ಒಂದು ಒಳ್ಳೇ ಉದ್ಯಾನವನ್ನು ದೊಡ್ಡದಾಗಿ ಕಟ್ಟಿಸಬೇಕೆಂದು ಗೊತ್ತುಮಾಡಿದ್ದರು. ಇದಕ್ಕಾಗಿ ಸರ್ಕಾರದವರು ೨,೦೦೦ ರೂ ಸ್ಯಾಂಕ್ಷನ್ ಮಾಡಿದ್ದರೂ ಮ್ಯುನಿಸಿಪಾಲಿಟಿಯವರು ಕಾರಣಾಂತರದಿಂದ ಕಟ್ಟದೆ ಹಾಗೇ ಬಿಟ್ಟುಕೊಂಡು ಬಂದಿರುತ್ತಾರೆ. ಈಗ ಇದು ಸ್ಟೇಷನ್ ಕಂಪೌಂಡು ಗೋಡೆ ನೈರುತ್ಯಪಾರ್ಶ್ವದಲ್ಲಿರುವ ಒಂದು ಬಿಲ್ಡಿಂಗ ಕಟ್ಟುವದು ೪೦೯ ರೂಪಾಯಿ ಬಿಡಿಗೆ ಬಂದಿರುವುದೆಂತಲೂ ಇದನ್ನು ರೈಲ್ವೇನವರು ಕೊಂಡುಕೊಳ್ಳುವದಕ್ಕೆ ಇಷ್ಟಪಡುತ್ತಾರೆಯೇ ಎಂತಲೂ ಗವರ್ನಮೆಂಟಿನವರು ಪ್ರಶ್ನೆ ಮಾಡಿದರು. ಮೆಂಬರುಗಳೆಲ್ಲಾ ಅದು ಅತ್ಯಗತ್ಯ ಆಗಬಹುದು ಎಂಬದಾಗಿ ಅಭಿಪ್ರಾಯ ಕೊಟ್ಟಿದ್ದಾರೆ.

೭. ಕೃಷ್ಣರಾಜಪೇಟೆಯಲ್ಲಿ ಸೊಪ್ಪಿನಕೇರಿಯಲ್ಲಿ ಜನರು ಮನೆ ಕಟ್ಟಿಕೊಂಡು ವಾಸಮಾಡುವುದು ಅನಾರೋಗ್ಯಕರವಾಗಿದೆ ಎಂದು ಹೇಳಿ ಮ್ಯುನಿಸಿಪಾಲಿಟಿಯವರು ಅಲ್ಲಿರುವ ನಿವೇಶನಗಳನ್ನು ಪ್ರತಿಫಲ ಕೊಟ್ಟು ಕೊಂಡುಕೊಂಡರು. ಈಗ ವೆಂಕಟರಾಮಯ್ಯ ವೆಂಕಟರಾವ್ ಎಂಬವರು ಇಲ್ಲಿ ನಿವೇಶನಗಳನ್ನು ಪಡೆದು, ಕಟ್ಟುವುದಕ್ಕೆ ಲೈಸೆನ್ಸ್ ಕೊಡಿ ಎಂಬದಾಗಿ ಮ್ಯುನಿಸಿಪಾಲಿಟಿಯವರನ್ನು ಕೇಳಿದರು. ಮೆಂಬರುಗಳು ಈ ವಿಷಯವನ್ನು ಚರ್ಚಿಸಿ, ಇವರ ನಿವೇಶನಗಳನ್ನೂ ಬೋರ್ಡಿನವರು ಪ್ರತಿಫಲ ಕೊಟ್ಟು ಕೊಂಡುಕೊಳ್ಳಬೇಕೆಂತಲೂ, ಇವರಿಗೆ ಲೈಸೆನ್ಸು ಕೊಡಕೂಡದೆಂತಲೂ ತೀರ್ಮಾನ ಮಾಡಿರುತ್ತಾರೆ.

೮. ರಾಜಧಾನಿಯಲ್ಲಿ ಕುರುಡರಿಗೂ ಕಿವುಡ ಮೂಗರಿಗೂ ಒಂದು ತರಗತಿ ಸ್ಕೂಲನ್ನು ನಡಿಸುತ್ತಿದಾರಷ್ಟೆ. ಈ ಸ್ಕೂಲಿಗೆ ಗವರ್ನಮೆಂಟಿನಿಂದ ೨೫೦ರೂ ಮಾಸಾಶನವಿದೆ. ಸರ್ಕಾರದವರೇ ಇಷ್ಟು ಉಪಕಾರವನ್ನು ಮಾಡುತ್ತಾ ಇರುವಾಗ ಈ ಸಹಾಯವು ಸಾಕಾಗುವದಿಲ್ಲವೆಂತಲೂ, ಆದ್ದರಿಂದ ಮ್ಯುನಿಸಿಪಾಲಿಟಿಯಿಂದ ತಿಂಗಳಿಗೆ ೩೦ ರೂ ಕೊಡಬೇಕೆಂತಲೂ ಸ್ಕೂಲಿನ ಸೆಕ್ರೆಟರಿಯವರು ಬೋರ್ಡಿಗೆ ಬರೆದರು. ಮೆಂಬರುಗಳು ಈ ವಿಷಯದಲ್ಲಿರುವ ಕಾಗದ ಪತ್ರಗಳನ್ನೂ ಗವರ್ನಮೆಂಟಿನ ಅಭಿಪ್ರಾಯಗಳನ್ನೂ ನೋಡಿ, ಮುಂದಿನ ೩ ವರ್ಷ ಸಂವತ್ಸರಗಳ ಪರ್ಯಂತರ ಈ ಸಂಗತಿಯನ್ನು ಚರ್ಚಿಸಬೇಕಾದದ್ದಿಲ್ಲವೆಂದು ಗೊತ್ತುಮಾಡಿದರು

೯. ಕಳೆದ ೧೯೦೦ನೆ ವರುಷದಲ್ಲಿ ರಾಜಧಾನಿಯಲ್ಲಿ ಪ್ಲೇಗು ಉಪದ್ರವ ಬಹಳ ಜೋರಾಗಿದ್ದಾಗ ಶೇಖ್ ಅಬ್ದುಲ್ಲಾ ಎಂಬ ಯುನಾನಿ ಪಂಡಿತರು ಬೆಂಗಳೂರಿಂದ ಬಂದು ಪ್ಲೇಗ ಪೀಡಿತರು ಅನೇಕರಿಗೆ ಔಷಧ ಕೊಟ್ಟು ಗುಣಮಾಡಿದರು. ಇದಕ್ಕಾಗಿ ಇವರು ತಮಗೇನಾದರೂ ಸರ್ಕಾರದಿಂದ ಸಹಾಯವಾಗಬೇಕೆಂದು ಗವರ್ನ್ಮೆಂಟಿಗೆ ಅರ್ಜಿ ಬರೆದುಕೊಳ್ಳುತ್ತಾ ಬಂದರು. ಸರ್ಕಾರದವರು ಇವರಿಗೆ ಏನು ಕೊಡಬಹುದೆಂದು ಬೋರ್ಡಿನವರನ್ನು ಕೇಳಿದರು. ಡಾಕ್ಟರ್ ಅಚ್ಯುತರಾಯರು ಈ ಹಕೀಮರು ನಡಿಸಿದ ಕಾರ್ಯಗಳನ್ನು ಮೆಚ್ಚಿ ಒಳ್ಳೇ ಅಭಿಪ್ರಾಯ ಕೊಟ್ಟಿರುವುದರಿಂದ ಮೆಂಬರುಗಳೆಲ್ಲಾ ಒಪ್ಪಿ, ಈ ಹಕೀಮರಿಗೆ ಪ್ಲೇಗ್ ಫಂಡಿನಿಂದ ೧೦೦ ರೂ ಬಹುಮಾನ ಕೊಡಬಹುದೆಂದು ಗವರ್ನಮೆಂಟಿಗೆ ಶಿಫಾರಸು ಮಾಡಿರುತ್ತಾರೆ

೧೦. ದೇವರಾಜ ಮೊಹಲ್ಲಾ ಮ್ಯುನಿಸಿಪಲ್ ಕಮಿಷನರಾಗಿದ್ದ ಮಿ॥ ಬಿ. ವೆಂಕೋಬರಾಯರು ಕಾಲವಾದ ಕಾರಣ ಅವರ ಸ್ಥಾನಕ್ಕೆ ಮಿ॥ ಎ. ಸುಬ್ಬಣ್ಣನವರನ್ನು ನೇಮಿಸಿಕೊಳ್ಳುವಂತೆ ಹೋದ ತಿಂಗಳ ಮ್ಯುನಿಸಿಪಲ್ ಬೋರ್ಡ್ ಮೀಟಿಂಗಿನಲ್ಲಿ ತೀರ್ಮಾನವಾಗಿತ್ತಷ್ಟೆ. ಆದರೆ ಮಿ॥ ಸುಬ್ಬಣ್ಣನವರು ಆ ಮೊಹಲ್ಲೆಯಲ್ಲಿ ವಾಸವಾಗಿಲ್ಲವೆಂದು ತಿಳಿದುಬಂದಕಾರಣ ಅವರ ಹೆಸರನ್ನು ವಜಾಮಾಡಿ, ಅಡ್ವೊಕೇಟ್ ಮಿ॥ ಎಚ್. ಕೃಷ್ಣರಾಯರನ್ನು ನೇಮಿಸಬೇಕೆಂದು ಮೆಂಬರುಗಳೆಲ್ಲಾ ಅಭಿಪ್ರಾಯಪಟ್ಟು ತೀರ್ಮಾನ ಮಾಡಿರುತ್ತಾರೆ.

೧೧. ಮನೆಗಳಿಗೆ ನೀರಿನ ನಲ್ಲಿ ಇಡಿಸಿಕೊಂಡಿರುವವರು ವರುಷದ ತೆರಿಗೆಯನ್ನು ಮೊದಲು ಮೂರು ತಿಂಗಳಿಗೊಂದಾವರ್ತಿಯಂತೆ ಕೊಡುತ್ತಿದ್ದರು. ಈಚೆಗೆ ಸರ್ಕಾರದ ಹುಕುಂ ಪ್ರಕಾರ ವರುಷಕ್ಕೊಂದಾವರ್ತಿ ವಸೂಲ್ಮಾಡುತ್ತಿದ್ದಾರೆ. ಇದು ಪ್ರಜೆಗಳಿಗೆ ಕಷ್ಟವಾಗಿದೆ ಎಂತಲೂ, ಮೊದಲಿನಂತೆ ಮೂರು ತಿಂಗಳಿಗೊಂದಾವರ್ತಿ ವಸೂಲ್ಮಾಡುವಂತೆ ಏರ್ಪಾಡು ಮಾಡಿಕೊಡಬೇಕೆಂತಲೂ ಮಿ॥ ನರಸಿಂಹಸ್ವಾಮಿಯವರು ಸೂಚಿಸಿದರು. ಉಳಿದ ಮೆಂಬರುಗಳೂ ಇದೇ ರೀತಿ ಅಭಿಪ್ರಾಯಪಟ್ಟಿರುವದರಿಂದ ಮೊದಲಿದ್ದ ಕ್ರಮವನ್ನೇ ಮತ್ತೆ ಜಾರಿಗೆ ತರತಕ್ಕದ್ದೆಂದು ತೀರ್ಮಾನಿಸಿರುತ್ತಾರೆ.

## ವಾನಂಬಾಡಿಯ ಅನಾಹುತವು.

ಮೈಸೂರು ಸರ್ಕಾರದವರ ಮೇಲೆ ದೂರು ಹೊರುವುದಿಲ್ಲ.

ಪಾಲಾರ್ ನದಿಯ ಉದ್ದಕ್ಕೂ ಇರುವ ಕೆರೆಗಳು ಒಡೆದು ಹೋಗಿ ನೀರು ನುಗ್ಗಿ ವಾನಂಬಾಡಿ ಪಟ್ಟಣವನ್ನು ಕೊಚ್ಚಿಬಿಟ್ಟು ವಿಪರೀತ ಅನಾಹುತವಾದುದಕ್ಕೆ ಮೈಸೂರು ಸರ್ಕಾರದವರೇ ಕಾರಣರೆಂತಲೂ, ಅದಕ್ಕಾಗಿ ಅವರಿಂದ ನಷ್ಟಕ್ಕೆ ಗುರಿಯಾದ ಪ್ರಜೆಗಳಿಗೆ ಪ್ರತಿಫಲವನ್ನು ಕೊಡಿಸುವುದು ನ್ಯಾಯವಾಗಿದೆ ಎಂತಲೂ ಕಾಟ್ಪಾಡಿ "ದಕ್ಷಿಣ ದೀಪಂ" ಎಂಬ ವರ್ತಮಾನ ಪತ್ರಿಕೆಯ ಎಡಿಟರಾದ ಮೆ॥ ಡಿ. ವಿಲ್ಸನ್ ಯವರು ಮದರಾಸ್ ಪತ್ರಿಕೆಗೆ ಬರೆದಿದ್ದುದನ್ನು ಕಳೆದ ವಾರ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದೆವಷ್ಟೆ. ಈಚೆಗೆ ಇನ್ನೊಬ್ಬ ಬಾತ್ಮೀದಾರರು—ಈ ವಿಷಯದಲ್ಲಿ ಮೈಸೂರು ಸರ್ಕಾರದವರನ್ನು ದೂರುವುದು ತರವಲ್ಲವೆಂದು ಮೊದಲಾಗಿ ಅನೇಕ ಸಂಗತಿಗಳನ್ನು ಬಹಳ ಸ್ವಾರಸ್ಯವಾಗಿ ಬರೆದಿರುತ್ತಾರೆ. ಇದನ್ನು ಸಹ ಈ ವಾರ ಪ್ರಕಟಿಸಿ ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡುವೆವು.

ವಾನಂಬಾಡಿಯ ಮ್ಯುನಿಸಿಪಲ್ ಛೇರ್‌ಮನ್ ಮೆ॥ ಪ್ರೈಸ್ಲಿಯವರು ಆಕ್ಷೇಪಿಸಿದ ಪ್ರಕಾರ ಕೋಲಾರ್ ಅಮಲ್ದಾರ್ರು ನೊವೆಂಬರ್ ೭ ರಲ್ಲಿ (ಪ್ರವಾಹ ಬರುವುದಕ್ಕೆ ನಾಲ್ಕು ದಿನ ಮುಂಚೆ) ತಂತಿ ವರ್ತಮಾನ ಕೊಟ್ಟಿದ್ದಲ್ಲದೆ ಆ ಮೂರು ದಿನವೇ ಕೆಲವು ಕೆರೆಗಳು ಒಡೆದುಹೋಗುವಹಾಗಿವೆ ಎಂಬದಾಗಿ ಒಂದು ಕಾಗದವನ್ನೂ ಬರೆದುಹಾಕಿದರು ಎಂಬ ಮಾತನ್ನು ಮೆ॥ ವಿಲ್ಸನ್ ಯವರೇ ಒಪ್ಪಿಕೊಳ್ಳುತ್ತಾರೆ. ಮೆ॥ ಪ್ರೈಸ್ಲಿಯವರು ಈ ಸಮಾಚಾರವು ಬಹಳ ಮುಖ್ಯವಾದುದೆಂದು ಎಣಿಸಿ, ವಾನಂಬಾಡಿ ಪಟ್ಟಣದವರಿಗೆಲ್ಲಾ ಟಾಂಟಾಂ ಹೊಡಿಸಿ ಸಾರಿಸಿದರು. ಆದರ ಮೇಲೆ ವಾನಂಬಾಡಿಯ ಪ್ರಜೆಗಳು ತಮ್ಮ ಆಸ್ತಿಪಾಸ್ತಿಗಳನ್ನು ಉಳಿಸಿಕೊಳ್ಳುವುದಕ್ಕೆ ಏನು ಮಾಡಿದರು? ಅವರು ಈ ಭಯಂಕರವಾದ ವಿಷಯವನ್ನು ಅಲಕ್ಷ್ಯಮಾಡಿಬಿಟ್ಟರು. ಹಾಗಿಲ್ಲದೆ ಅವರೆಲ್ಲಾ ಮುಂಜಾಗ್ರತೆ ಮಾಡಿಕೊಂಡಿದ್ದ ಪಕ್ಷದಲ್ಲಿ ಪ್ರಾಣನಷ್ಟವಾಗುತ್ತಿರಲಿಲ್ಲ; ಆಸ್ತಿಪಾಸ್ತಿಗಳು ಪೋಲಾಗುತ್ತಲೂ ಇರಲಿಲ್ಲ. ಟಾಂಟಾಂ ಮೂಲಕ ಸಾರಿಸಿದರೂ ಪ್ರಜೆಗಳು ಈ ಸುದ್ದಿಯನ್ನು ನಿರ್ಲಕ್ಷ್ಯವಾಗಿ ಕಂಡು ಸುಮ್ಮನಿದ್ದುಬಿಟ್ಟರು.

೧೧ನೇ ತಾರೀಖಿನ ದಿನ ಬೇತಮಂಗಲದ ಕೆರೆ ಒಡೆದುಹೋದ ಕೂಡಲೇ ಸಾಯಂಕಾಲ ೫ ಗಂಟೆ ಹೊತ್ತಿನಲ್ಲಿ ಕೋಲಾರ್ ಅಧಿಕಾರಿಗಳು ವಾನಂಬಾಡಿಯ ಪುರಾಧ್ಯಕ್ಷನಿಗೆ ತಂತೀ ವರ್ತಮಾನ ಕೊಟ್ಟು ತಿಳಿಸಿದರು ಎಂಬುದನ್ನು ಮೆ॥ ವಿಲ್ಸನ್ ಯವರು ಒಪ್ಪಿಕೊಳ್ಳುತ್ತಾರೆ. ಆದರೆ ವಾನಂಬಾಡಿ ಪಟ್ಟಣವು ತಂತೀ ಕಂಭಗಳಿಂದ ಕಡಿದುಹೋದುದರಿಂದ ಆ ವರ್ತಮಾನವು ೧೩ನೇ ತಾರೀಖಿನ ತನಕ ಅಲ್ಲಿನವರಿಗೆ ತಲಪದೆ ಹೋಯಿತೆಂತಲೂ, ಇದರಿಂದಲೇ ಮೈಸೂರು ಗವರ್ನಮೆಂಟಿನವರು ಈ ಅನಾಹುತಕ್ಕೆ ಕಾರಣರಾದರೆಂತಲೂ ಅವರು ಆಕ್ಷೇಪಿಸಿ ಮಾಡುವರು. ಇದರ ಅರ್ಥವೇನೆಂದು ತಿಳಿಯೋಣ! ಏಕೆಂದರೆ ಸಾಮಾನ ಆಕ್ಷೇಪಣೆಯಲ್ಲದೆ ಬೇರೇನೂ ಕಾಣುವುದಿಲ್ಲ. ಮೈಸೂರು ಅಧಿಕಾರಿಗಳು ತಮಗೆ ಸಾಧ್ಯವಿದ್ದಷ್ಟೂ ಮೊದಲೇ ಸಮಾಚಾರ ಕೊಟ್ಟರು. ತಂತೀ ಕಂಭಗಳು ಬಿದ್ದುಹೋಗಿ ಅದು ಸಕಾಲದಲ್ಲಿ ತಲಪದೆಹೋಯಿತು. ಬ್ಯಾಂಗ್ ಪೇಟೆ ಇಲ್ಲವೇ ಕೋಲಾರದಿಂದ ಸಾಯಂಕಾಲ ೬—೭ ಗಂಟೆಗೆ ಕಳುಹಿಸಿದ ತಂತೀ ವರ್ತಮಾನವು ರಾತ್ರಿ ೯ ಗಂಟೆಯೊಳಗಾಗಿ ವಾನಂಬಾಡಿಗೆ ತಲಪಬೇಕು. ಅದು ಹಾಗೆ ತಲಪದೆ ಇದ್ದುದಕ್ಕೆ ಕಾರಣವೇನೋ ನನಗೆ ಗೊತ್ತಾಗುವುದಿಲ್ಲ. ಪ್ರವಾಹದ ದೆಸೆಯಿಂದ ತಂತೀ ಕಂಭಗಳು ಬಿದ್ದುಹೋಗುವುದಕ್ಕೂ, ಪ್ರವಾಹವು ವಾನಂಬಾಡಿಯ ವರೆಗೆ ಬರುವುದಕ್ಕೂ ತಂತೀ ವರ್ತಮಾನ ಕೊಟ್ಟುದಕ್ಕೂ ೬—೭ ಗಂಟೆಗಳ ಹೊತ್ತು ಅವಕಾಶವಿತ್ತು. ಆದಕಾರಣ ಆ ತಂತೀ ವರ್ತಮಾನವು ವಾನಂಬಾಡಿಯವರಿಗೆ ೬—೭ ಗಂಟೆಗೆ ಮುಂಚೆಯೇ ತಲಪಬೇಕು. ಈ ಆರೇಳು ಗಂಟೆ ಹೊತ್ತಿನ ತನಕ ಅಲ್ಲಿನ ಜನರು ಏನುಮಾಡಿದರು!

ಈ ಸಂದರ್ಭದಲ್ಲಿ ಇನ್ನು ಕೆಲವು ಯಥಾರ್ಥವಾದ ಸಂಗತಿಗಳನ್ನು ತಿಳಿಸುವೆನು. ಕೋಲಾರ್ ಅಮಲ್ದಾರ್ರು ವಾನಂಬಾಡಿ ಮ್ಯುನಿಸಿಪಲ್ ಪ್ರೆಸಿಡೆಂಟರಿಗೆ ನೊವೆಂಬರ್ ೭ ರಲ್ಲಿ—ಸೋಮಾಂಬುಧಿ ಕೆರೆಯು ಒಡೆದುಹೋಗುವಹಾಗಿದೆ ಎಂತಲೂ, ಆ ಸಾಲಿನಲ್ಲಿ ಉದ್ದಕ್ಕೂ ಇರುವ ಕೆರೆಗಳೆಲ್ಲಾ ತುಂಬ ತುಳುಕಾಡುತ್ತಿವೆ ಎಂತಲೂ ತಂತೀ ವರ್ತಮಾನ ಕೊಟ್ಟರು. ಮಾರನೇ ದಿನವೇ ಅಮಲ್ದಾರ್ರು ಕಾಗದ ಬರೆದು ತಿಳಿಸಿದ್ದೇನೆಂದರೆ—ನೆನ್ನೆ ಕಳುಹಿಸಿದ ತಂತೀ ವರ್ತಮಾನವು ಯಥಾರ್ಥವಾದುದು. ಇನ್ನೂ ಮಳೆಯು ಜೋರಾಗಿ ಸುರಿಯುತ್ತಲೇ ಇರುವುದು. ಈ ಭಾಗದಲ್ಲಿ ನೀವುಗಳೆಲ್ಲಾ ಬಹಳ ಎಚ್ಚರಿಕೆಯಾಗಿರಬೇಕು ಎಂಬುವದೇ. ಅನಂತರ ೧೧ನೇ ತಾರೀಖಿನ ದಿನ ಸಾಯಂಕಾಲ ೫ ಗಂಟೆಗೆ ಕೋಲಾರ್ ಅಮಲ್ದಾರರು ಮತ್ತು ಪ್ರೆಸಿಡೆಂಟರಿಗೆ ಕೋಲಾರದಿಂದ ತಂತೀ ವರ್ತಮಾನ ಕಳುಹಿಸಿದರು. ಅವರು ತಿಳಿಸಿದ್ದೇನೆಂದರೆ.—ಸೋಮಾಂಬುಧಿ ಕೆರೆಯು ಒಡೆದುಹೋಯಿತು. ಪಾಲಾರ್ ನದಿಯ ಉದ್ದಕ್ಕೂ ಇರುವ ಇತರ ಕೆರೆಗಳು ಕೂಡ ಒಡೆಯುವಹಾಗಿರುತ್ತವೆ ಎಂಬುವದೇ. ಅದೇ ದಿನ ಸಾಯಂಕಾಲ ೭ ಗಂಟೆಗೆ ಅಸಿಸ್ಟೆಂಟ್ ಇಂಜನಿಯರವರು ಬ್ಯಾಂಗ್ ಪೇಟೆಯಿಂದ ಪ್ರೆಸಿಡೆಂಟರಿಗೆ ತಂತೀ ವರ್ತಮಾನ ಕೊಟ್ಟು ತಿಳಿಸಿದ್ದೇನೆಂದರೆ—ಪಾಲಾರ್ ನದಿಯಲ್ಲಿ ಪೂರ್ಣ ಪ್ರವಾಹ ಬಂದಿರುವುದು, ರಾಮಸಾಗರ ತಲಾವ್ ಇನ್ನೂ ಒಡೆದುಹೋಗಿಲ್ಲ ಎಂಬುದೆ. ಪಾಲಾರ್ ನದಿಯ ಉದ್ದಕ್ಕೂ ಇರುವ ಕೆರೆಗಳ ಒಟ್ಟು ಮೈಲಿ ವಿಸ್ತಾರವಾಗುವವು. ಕೋಲಾರದಿಂದ ಅವು ವಿಪರೀತ ದೂರ ಫಾಸಲೆಯಲ್ಲಿರುತ್ತವೆ. ಮಳೆಯಾದರೋ ಅನೇಕ ದಿನಗಳ ತನಕ ಬಿಡದೆ ಸುರಿಯುತ್ತಲೇ ಇದ್ದಿತು. ನಾಲ್ಕೂ ಕಡೆಗಳಲ್ಲೂ ರಸ್ತೆಗಳು ಕಿತ್ತುಹೋಗಿ ಜನರ ಸಂಚಾರವೇ ನಿಂತುಹೋಗಿದ್ದಿತು. ನರಸಾಪುರದ ಕೆರೆ ಒಡೆದ ಸಮಾಚಾರವು ಕೋಲಾರದಲ್ಲಿದ್ದ ಎಕ್ಸಿಕ್ಯೂಟಿವ್ ಇಂಜನಿಯರಿಗೆ ೧೧ ನೇ ತಾರೀಖು ಮಧ್ಯಾಹ್ನದ ತನಕ ತಿಳಿಯಲೇ ಇಲ್ಲ. ಮತ್ತು ಸೋಮಾಂಬುಧಿ, ಮುದುವಾಡಿ ಕೆರೆಗಳು ಒಡೆದುಹೋದುವೆಂದು ಸಾಯಂಕಾಲ ೫ ಗಂಟೆ ಹೊತ್ತಿಗೆ ತಿಳಿಯಿತು. ಈ ಸಮಾಚಾರವನ್ನು ಕೇಳಿದ ಕೂಡಲೇ ಅಮಲ್ದಾರ್ರು ವಾನಂಬಾಡಿಯ ಪ್ರೆಸಿಡೆಂಟರಿಗೆ ತಂತೀ ವರ್ತಮಾನ ಕೊಟ್ಟರು. ಅಮಲ್ದಾರ್ರು ತಮ್ಮ ತಾಲ್ಲೂಕಿನಲ್ಲೆಲ್ಲಾ ಇಷ್ಟೊಂದು ಕೆರೆಗಳು ಒಡೆದು ವಿಪರೀತ ಅನಾಹುತವಾಗಿ ತುಂಬಾ ಗಲಾಟೆಯಲ್ಲಿ ಬಿದ್ದಿದ್ದರೂ ಆ ಮಧ್ಯೆ ವಾನಂಬಾಡಿಯ ಪ್ರಜೆಗಳ ಯೋಗಕ್ಷೇಮವನ್ನು ಮರೆಯದೆ ಜ್ಞಾಪಿಸಿಕೊಂಡು ಕೂಡಲೇ ತಂತೀವರ್ತಮಾನ ಕಳುಹಿಸಿದ್ದು ತುಂಬಾ ಸ್ತೋತ್ರಾರ್ಹವಾದುದೆಂದು ಎಣಿಸುತ್ತೇನೆ. ಇಷ್ಟಾದರೂ ಶಾಶ್ವತವಾದ ಕಟ್ಟಡಗಳೆಂದು ಪ್ರಖ್ಯಾತಿಪಡೆದಿದ್ದ ಬೇತಮಂಗಲದ ಮತ್ತು ರಾಮಸಾಗರದ ಕೆರೆಗಳು ಒಡೆದುಹೋಗುತ್ತವೆಂದು ಯಾರೂ ಕನಸಿನಲ್ಲೂ ಊಹಿಸಿರಲಿಲ್ಲವು. ಡಿಸ್ಟ್ರಿಕ್ಟಿನಲ್ಲೆಲ್ಲಾ ಎಷ್ಟುಮಟ್ಟಿಗೆ ಅನಾಹುತವಾಯಿತೋ ೧೬ನೇ ತಾರೀಖು ಬೆಳಗಿನ ವೇಳೆಯೇ ಅಧಿಕಾರಿಗಳಿಗೆ ತಿಳಿದುಬಂದಿತು. ಪ್ರವಾಹವು ಅಪೂರ್ವವಾದುದೆಂತಲೂ, ಪಾಲಾರಿನ ಉದ್ದಕ್ಕೂ ಇರುವ ಕೆರೆಗಳನ್ನೆಲ್ಲಾ ಒಟ್ಟಿಗೆ ಕೊಚ್ಚಿಬಿಟ್ಟಿತೆಂತಲೂ ಪಕಾಲದಲ್ಲಿ ೧೦-೧೫ ಅಡಿ ಪ್ರಮಾಣದ ನೀರಿನ ಅಲೆಯು ಆ ಪ್ರಾಂತ್ಯದಲ್ಲೆಲ್ಲಾ ವ್ಯಾಪಿಸಿ ಸಮಸ್ತ ತೋಟಗಳನ್ನೂ, ಕೋಡಿಗಳನ್ನೂ, ಏರಿಗಳನ್ನೂ ಮುಳುಗಿಸಿ ಕೊಚ್ಚಿಕೊಂಡು ಹೋಯಿತೆಂತಲೂ ಆಗ ಗೊತ್ತಾಯಿತು. ಹೀಗಿರುವಲ್ಲಿ ಮೊದಲೇ ತಿಳಿಸಲಿಲ್ಲವೆಂದು ಆಕ್ಷೇಪಣೆ ಮಾಡುತ್ತಾರೆ. ಹಾಗೆ ತಿಳಿಸಬೇಕೆಂಬುದಕ್ಕೆ ಆಧಾರವೇನೋ ಕಂಡು ಬರುವುದಿಲ್ಲ. ಈ ಪ್ರವಾಹ ಬರುವುದಕ್ಕೆ ಮೊದಲೇ ಕೆರೆಗಳೆಲ್ಲಾ ಕೋಡಿಬಿದ್ದು ಹರಿಯುತ್ತಿದ್ದವು. ನೀರನ್ನು ಸಾಗಿಸುವುದಕ್ಕೆ ಕೋಡಿಗಳನ್ನು ಆಗ ಹೇಗೆ ಕಡಿದು ಇಳಿಸಬಹುದಾಗಿತ್ತೋ ತಿಳಿಯದು. ಮೂರು ಗಂಟೆ ಹೊತ್ತು ಅವಕಾಶವಿದ್ದಿತು. ಇಷ್ಟು ಸ್ವಲ್ಪ ಕಾಲದಲ್ಲಿ ಸಮಸ್ತ ಕೆರೆಗಳ ತೂಬುಗಳನ್ನೂ ಎತ್ತುವುದು ಸಾಧ್ಯವೇ? ಇದು ಒಂದು ವೇಳೆ ಸಾಧ್ಯವಾಗಿದ್ದರೂ ಅಷ್ಟು ನೀರೂ ಸಾಗಿಹೋಗುವುದಕ್ಕೆ ಕಡೇಪಕ್ಷ ಮೂರು ತಿಂಗಳಾದರೂ ಬೇಕು. ಆದರೂ ಮುದುವಾಡಿಯ ಕೆರೆ ಒಡೆಯುವ ತನಕ ಪಾಲಾರ್ ನದಿಯ ಉದ್ದಕ್ಕೂ ೫೦—೬೦ ಮೈಲಿ ದೂರದಲ್ಲಿರುವ ಊರು ಗ್ರಾಮಗಳಿಗೆ ವಿಪರೀತ ಅಪಾಯ ಸಂಭವಿಸುವುದೆಂಬ ಯೋಚನೆ ಇರಲಿಲ್ಲವು. ಈ ಭಾರಿ ಭಾರೀ ಕೆರೆಗಳು ನೂರಾರು ವರುಷಗಳಿಂದ ಹಾಗೇ ಇರುತ್ತವೆ. ಅವನ್ನೆಲ್ಲಾ ಬಹಳ ಪರಿಷ್ಕಾರವಾಗಿ ದುರಸ್ತು ಮಾಡಿ ಇಲ್ಲಿಗೆ ಸುಮಾರು ೩೦ ವರುಷಗಳಾದವು. ಬೇತಮಂಗಲದ ಮತ್ತು ರಾಮಸಾಗರದ ಕೆರೆಗಳ ಏರಿಗಳೂ ಕೋಡಿಗಳೂ ಮೊದಲಿದ್ದ ಸ್ಥಿತಿಯಲ್ಲೇ ಇರುವವು. ಇವನ್ನು ಈಚೆಗೆ ಸ್ವಲ್ಪವೂ ಹೆಚ್ಚಿಸಲಿಲ್ಲ. ಕೋಲಾರ್ ಜಿಲ್ಲೆಯ ಗಳಿಗೆ ನೀರು ತುಂಬುವುದಕ್ಕೆ ಈ ಕೆರೆಗಳ ಏರಿಯನ್ನಾಗಲಿ ತೂಬನ್ನಾಗಲಿ ಒಂದು ಅಂಗುಲ ಪ್ರಮಾಣವೂ ಜಾಸ್ತಿಮಾಡಿ ಇಲ್ಲ. ಪ್ರವಾಹ ಬರುವುದಕ್ಕೆ ಮೊದಲು ಈ ದೊಡ್ಡ ಕೆರೆಗಳೆಲ್ಲಾ ಬಹಳ ಗಟ್ಟಿಯಾಗಿದ್ದವು.

ಕೋಲಾರದ ಅಧಿಕಾರಿಗಳು ೧೧ನೇ ತಾರೀಖಿನ ತನಕ ವಾನಂಬಾಡಿಯವರಿಗೆ ಎಷ್ಟುಮಟ್ಟಿಗೆ ಈ ಪ್ರವಾಹದ ವಿಷಯ ತಿಳಿಸಿದಾಗ್ಯೂ ಅದನ್ನೆಲ್ಲಾ ಅವರು ಅಲಕ್ಷ್ಯ ಮಾಡಿಬಿಟ್ಟರು. ಅಪಾಯ ಸಂಭವಿಸೀತೆಂಬ ಭೀತಿಯು ಅವರಿಗೆ ಇರಲೇ ಇಲ್ಲ. ಇದಕ್ಕೆ ಮೈಸೂರು ಗವರ್ನಮೆಂಟಿನವರೇನು ಮಾಡಬೇಕು! ವಾನಂಬಾಡಿಯವರು ಯಾಕೆ ಸುಮ್ಮನಿದ್ದರೋ. ಅಲ್ಲಿನ ಅಧಿಕಾರಿಗಳು ವರ್ತಮಾನ ತಿಳಿದೂ ಯಾಕೆ ಮುಂಜಾಗ್ರತೆಯ ಕಾರ್ಯಗಳನ್ನು ಮಾಡಿಸಲಿಲ್ಲವೋ ಮದರಾಸ್ ಗವರ್ನಮೆಂಟಿನವರು ಚನ್ನಾಗಿ ತನಿಖೆಮಾಡಬೇಕಾಗಿದೆ.

ಮೇಲ್ಕಂಡ ಸಂಗತಿಗಳನ್ನೆಲ್ಲಾ ನೋಡಲಾಗಿ ವಾನಂಬಾಡಿಯ ಪ್ರಜೆಗಳಿಗೆ ಸಂಭವಿಸಿದ ಈ ದುಃಖಕರವಾದ ಅನಾಹುತಕ್ಕೆ ಮೈಸೂರು ಗವರ್ನಮೆಂಟಿನವರು ಸ್ವಲ್ಪವೂ ಕಾರಣರಲ್ಲವೆಂಬುದು ಪರಿಷ್ಕಾರವಾಗಿದೆ.

## ಬಾತ್ಮೀದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮೀಗಳಿಗೆ ನಾವು ಬೆಲೆ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಬೆಲೆ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮೀಗಳನ್ನು ನಾವು ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮೀದಾರರು ಬರೆವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಎ. ವಿ. ಸು., ಹನುಮನಹಳ್ಳಿ—ನಿಮ್ಮ ಬಾತ್ಮಿಯನ್ನು ಪ್ರಕಟಿಸಲಾಗದೆಂದು ವಿಷಾದಪಡುತ್ತೇವೆ.

ದೇವನಹಳ್ಳಿಯ ಒಬ್ಬ ಬಾತ್ಮೀದಾರರು ಅಲ್ಲಿನ ಮ್ಯುನಿಸಿಪಲ್ ಮುತ್ಸದ್ದಿ ನಾಗೇಶರಾವ್ ಎಂಬಾತನು ಹೊಸ ಕುಂದಾಗಳನ್ನು ಪರಾರಿಮಾಡಿದಹಾಗೂ, ಈ ವಿಷಯವನ್ನು ಸರ್ಕಾರದವರು ಸಮರ್ಪಕವಾಗಿ ತನಿಖೆಮಾಡದೆ ಹತ್ತಿಸಿಬಿಟ್ಟರೆಂತಲೂ, ಮೇಲ್ಪಟ್ಟ ಹುದ್ದೆದಾರರು ವಿಚಾರಣೆಮಾಡಬೇಕಾಗಿದೆ ಎಂತಲೂ ಬರೆದಿರುತ್ತಾರೆ. ಇವರು ಬರೆದಿರುವುದನ್ನೆಲ್ಲಾ ಪ್ರಕಟಿಸಬೇಕಾದ ಅವಶ್ಯ ಕಂಡುಬರುವುದಿಲ್ಲ.—ಎಡಿ.]

## ಕರೆಸ್ಪಾಂಡೆನ್ಸ್.

ಬೆಂಗಳೂರು ಕಡ್ಲೇಕಾಯಿ ಜಾತ್ರೆಯು.

ಅಯ್ಯಾ,

ಬೆಂಗಳೂರಿನಲ್ಲಿ ಒಂದು ತಿಂಗಳ ಹಿಂದೆ ಬಸವೇಶ್ವರ ದೇವರ ಜಾತ್ರೆ ಆಯಿತು. ಈ ಜಾತ್ರೆಗೆ ಕಡಲೇಕಾಯಿ ಜಾತ್ರೆ ಎಂದು ಹೆಸರು. ಈ ಹೆಸರು ಬರುವುದಕ್ಕೆ ಕಾರಣವು ಏನೆಂದರೆ.—ಈ ಬಸವೇಶ್ವರ ಸ್ವಾಮಿಯು ಮೊದಲು ಅಂದರೆ ೨,೦೦೦ ವರ್ಷಗಳ ಹಿಂದೆ ಒಂದು ದೊಡ್ಡ ದೇವವೃಳ ವೃಷಭವಾಗಿ ಇತ್ತು. ಹೀಗೆ ಇರುವಾಗ ಈ ವೃಷಭವು ಒಬ್ಬ ರೈತನ ಹೊಲದಲ್ಲಿ ಬಹಳವಾಗಿ ಕಡಲೇಕಾಯಿ (ನೆಲಕಡಲೇಕಾಯಿ ಎಂದೂ ಕೆಲವರು ಹೇಳುತ್ತಾರೆ.) ಇದನ್ನು ದಿನವೂ ರಾತ್ರಿ ನುಗ್ಗಿ ತಿನ್ನುತ್ತಿತ್ತು. ಹೀಗಿರಲು ಆ ಬಡರೈತನು ಇದು ತಿನ್ನುವುದೆಂದು ತಿಳಿಯದೇ ರಾತ್ರಿಯೆಲ್ಲಾ ನೋಡಲು, ಸುಮಾರು ಅರ್ಧರಾತ್ರಿಯ ಸಮಯದಲ್ಲಿ ಅದು ಬರಲು, ಅದರ ಆಕಾರವನ್ನು ನೋಡಿ, ಇದು ದೇವರಿರಬಹುದೆಂದು ತಿಳಿದು, ಬೆಳಗ್ಗೆ ಬಸವೇಶ್ವರನ ಗುಡಿಗೆ ಹೋಗಿ, ಹೇಳಿದ್ದು ಏನೆಂದರೆ.—ಸ್ವಾಮಿ ಬಸವೇಶ್ವರ ಸ್ವಾಮಿ, ನೀನು ಬಡರೈತನಾದ ನನ್ನ ಗದ್ದೆಯಲ್ಲಿ ಬೆಳೆದಿರುವ ನನ್ನ ಕಡಲೇ ಗಿಡವನ್ನು ತಿನ್ನದಿದ್ದರೆ "ಕಡಲೇಕಾಯಿ ಜಾತ್ರೆ" ಎಂಬ ದೊಡ್ಡ ಪರುಷೆಯನ್ನು ಮಾಡುತ್ತೇನೆ ಎಂದು ಹೇಳಿದ್ದರಿಂದ ಇದರಂತೆಯೇ ಈಗಲೂ ನಡೆಸುತ್ತಾರೆಂದು ನಮ್ಮ ಹಿರಿಯರು ಹೇಳುವರು. ಆದ್ದರಿಂದ ಈಗಲೂ, ಬಹಳ ವಿಜೃಂಭಣೆಯಿಂದ (ಜಾತ್ರೆಯು) ಜರುಗಿತು. ನೆಲಗಡಲೇ ಕಾಯನ್ನು ಈ ಜಾತ್ರೆಯಲ್ಲಿ ಅನೇಕ ದೊಡ್ಡ ಹಣವಂತರು ನಾಲ್ಕು, ಐದು, ಆರು ಸೇರು ತೆಗೆದುಕೊಂಡು ಒಟ್ಟಿಗೆ ಒಂದು ಮರದ ಬುಡದಲ್ಲಿ ಸುರಿದು ತಿನ್ನುತ್ತಾರೆ. ನಂತರ ರಾತ್ರಿ ೮ ಗಂಟೆಯ ವರೆಗೂ ಅಲ್ಲಲ್ಲಿ ತಿರುಗಾಡಿ ಮನೆಗೆ ಹೋಗುತ್ತಾರೆ. ಇದೇ ಅಲ್ಲಿ ವಿಶೇಷ.

ಸ. ಓ. ರಾ.

[ದೇವರು ಬಸವನ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆಂಬ ಮಾತು ನಂಬತಕ್ಕದ್ದೆಂದು ನಾವು ಊಹಿಸಲಾರೆವು. ಇಂಥಾ ಕಥೆಗಳು ದೇವರ ಹೆಸರಿಗೆ ಅಗೌರವವಾಗಿರುವುವೇ ಹೊರತು ಬೇರೇನೂ ಅಲ್ಲವೆಂದು ನಮಗೆ ತೋರುವುದು.—ಎಡಿ.]

## ಇಂಡಿಯಾ ದೇಶದ ವೃತ್ತಾಂತಗಳು.

ಸಿಖಿಂ ಪ್ರಾಂತ್ಯಕ್ಕೆ ಹೋಗಿರುವ ಇಂಗ್ಲಿಷ್ ಸಿಪಾಯಿರಿಗೆ ೨,೫೦೦ ಜೊತೆ ಬೆಚ್ಚಗಿರುವಂಥಾ ದಿರಸುಗಳನ್ನು ತಯಾರುಮಾಡಿ ಕಳುಹಿಸಬೇಕೆಂದು ಗವರ್ನಮೆಂಟಿನವರು ಹುಕುಂ ಕೊಟ್ಟರು.

****

ಬೊಂಬಾಯಿ ಸೆರ್ವರ್ಸ್ ಜಡ್ಜರು ಬೋಟು ನಾಟ್ಯದ ತಯಾರಿ ಮೊಕದ್ದಮೆಯೊಂದನ್ನು ಕಳೆದ ವಾರ ದರ್ಯಾಫ್ತು ಮಾಡಿ, ಅಪರಾಧಿಗಳ ಪೈಕಿ ಇಬ್ಬರಿಗೆ ತಲಾ ಹನ್ನೆರಡು ವರುಷ, ಮೂರನೆಯವನಿಗೆ ಐದು ವರುಷ ಕಾರಾಗೃಹವಾಸ ವಿಧಿಸಿದರು.

****

ಮಧ್ಯಪ್ರಾಂತ್ಯಗಳಿಗೆ ಸೇರಿದ ವಾರ್ಧಾ ಎಂಬ ಊರಿನಲ್ಲಿ ಐದು ವರುಷಗಳ ಕೆಳಗೆ ಪ್ಲೇಗ್ ಬಂದು ನಿಂತುಹೋಯಿತು. ಅಲ್ಲಿಂದೀಚೆಗೆ ಅದರ ಹೆಸರೇ ಇರಲಿಲ್ಲ. ಈಗ ಐದು ವರುಷಗಳ ಮೇಲೆ ಮತ್ತೆ ಈ ಉಪದ್ರ ಕಾಣಿಸಿಕೊಂಡಿದೆ.

****

ತಲಚೇರಿಗೂ ಕೊಡಗಿಗೂ ಹೋಗಿರುವ ದೊಡ್ಡ ರಸ್ತೆಯ ಒಂದು ಭಾಗವನ್ನು ದುರಸ್ತುಮಾಡುವುದಕ್ಕೆ ಮದರಾಸ್ ಸರ್ಕಾರದವರು ಈಚೆಗೆ ೧ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದರಷ್ಟೆ. ಈ ಅಂದಾಜು ಪಟ್ಟಿಯನ್ನು ಅವರು ಕಳೆದ ವಾರ ತಳ್ಳಿಮಾಡಿ ಆ ರಸ್ತೆಯನ್ನೆಲ್ಲಾ ಹೊಸದಾಗಿ ತಯಾರುಮಾಡಿಸಬೇಕೆಂದು ಹುಕುಂ ಕೊಟ್ಟು, ಅದಕ್ಕಾಗಿ ೩,೩೩,೮೦೦ರೂ ಸ್ಯಾಂಕ್ಷನ್ ಮಾಡಿದಾರೆ.

****

ಬಂಗಾಳಾ ಲೆಫ್ಟಿನೆಂಟ್ ಗವರ್ನರ್ ಸರ್ ಆಂಡ್ರ್ಯೂ ಫ್ರೇಸರವರು ಕಳೆದ ಸೋಮವಾರ ಬೆಳಗ್ಗೆ ಮೈಮನ್‌ಸಿಂಗ್ ಮಹಾರಾಜರನ್ನೂ ಕಲೆಕ್ಟರನ್ನೂ ಕೂರಿಸಿಕೊಂಡು ಕೆರೆ ಏರಿಯ ಮೇಲೆ ಗಾಳಿಸವಾರಿ ಹೋಗುತ್ತಿದ್ದಾಗ ಕುದುರೆಗಳು ಹತೋಟಿ ತಪ್ಪಿ ಗಾಡಿಯನ್ನು ಅನಾಮತ್ತಾಗಿ ಕೆಡವಿಬಿಟ್ಟಿತು. ಗಾಡಿಯು ಮುರಿದುಹೋಯಿತು. ದೈವದತ್ತು ಆ ಮೂವರಲ್ಲಿ ಒಬ್ಬರಿಗಾದರೂ ಅಪಾಯವೇನೂ ಆಗಲಿಲ್ಲ.

****

ಇಂಡಿಯಾ ಗವರ್ನಮೆಂಟಿನವರು ಅಫೀಂ ಸಂಬಂಧಪಟ್ಟ ಬಾಬಿನಲ್ಲಿ ಈ ಸಾಲಿಗೆ ಎಷ್ಟು ಉತ್ಪತ್ತಿಯಾಗಬಹುದೆಂದು ಮೊದಲೇ ಅಂದಾಜು ಕಟ್ಟಿದ್ದರೋ ಅದಕ್ಕಿಂತಲೂ ೮ ತಿಂಗಳಲ್ಲೇ ಒಂದು ಕೋಟಿಯೂ ಮೂವತ್ತು ಲಕ್ಷ ರೂಪಾಯಿ ಹೆಚ್ಚಾಗಿಯೂ, ಇದೇ ೮ ತಿಂಗಳಿಗೆ ರೈಲ್ವೆ ಹುಟ್ಟುವಳಿಯು ಹೋದ ವರುಷದ ಹುಟ್ಟುವಳಿಗಿಂತಲೂ ಒಂದುವರೆ ಕೋಟಿ ರೂಪಾಯಿ ಹೆಚ್ಚಾಗಿಯೂ ಉತ್ಪತ್ತಿಯಾಗಿರುವುದು.

****

ಈಸಲ ಮದರಾಸ್ ಪಟ್ಟಣದಲ್ಲಿ ಹಿಂದುಸ್ಥಾನದ ಸಾರ್ವಜನಿಕ ಸಭೆ ನಡೆವುದಷ್ಟೆ. ಅದು ಪೂರೈಸಿದ ಮಾರುದಿನವೇ ಹಿಂದುಸ್ಥಾನದ ಸಂಘಪರಿಷ್ಕರಣ ಸಮಾಜವು ಜರುಗುವುದು. ಈ ಸಮಾಜಕ್ಕೆ ಬೊಂಬಾಯಿಯ ಮೆ॥ ಕೆ. ವೆ. ಕಟಿದಾಯರು ಪ್ರೆಸಿಡೆಂಟರಾಗಿ ನೇಮಿಸಲ್ಪಟ್ಟಿರುತ್ತಾರೆಂದು ಆ ಸಂಘದ ಸೆಕ್ರೆಟರಿ ಮೆ॥ ಚಂದ್ರಾವರ್ಕರವರು ತಿಳಿಸಿರುವರು. ಮೆ॥ ನೇಕಟದಾಯರು ಮದರಾಸ್ ಗವರ್ನರವರ ಮಂತ್ರಾಲೋಚನಾ ಸಭೆಯಲ್ಲಿ ಒಬ್ಬ ಮೆಂಬರಾಗಿರುತ್ತಾರೆ.

ಸ್ಯೆಯದ್ ಬಾಕರ್ ಬಿರಾಜಿ ಎಂಬೊಬ್ಬ ಸಾಹುಕಾರನು ಕಲ್ಕತ್ತಾಪಟ್ಟಣಕ್ಕೆ ಹೋಗಿ ಅಲ್ಲಿನ ಹಾಬ್ಸ್ ಎಂಬ ಕಂಪನಿ ಷಾಪಿನಲ್ಲಿ ತಾನು ಹೈದರಾಬಾದ್ ನೈಜಾಮರ ಕಡೆಯ ವ್ಯಾಪಾರಿಯೆಂತಲೂ ಅವರಿಗೆ ೬ ಪಿಯಾನೋ ಎಂಬ ವಾದ್ಯದ ಪೆಟ್ಟಿಗೆಗಳು ಬೇಕಾಗಿರುತ್ತವೆಂತಲೂ ಹೇಳಿ, ಅದನ್ನು ತೆಗೆದುಕೊಂಡು ಹೋಗಿ ಬಿಕರಿ ಮಾಡುತ್ತಿದ್ದನು. ಪೋಲೀಸಿನವರು ಈ ಮೋಸಗಾರನನ್ನು ಹಿಡಿದು ಕೋರ್ಟಿನಲ್ಲಿ ಮೊಕದ್ದಮೆ ನಡಸುತ್ತಿದ್ದಾರೆ.

****

ವಾನಂಬಾಡಿಯಲ್ಲಿ ಜನರಿಗೆ ಪ್ರವಾಹಗಳಿಂದುಂಟಾದ ಕಷ್ಟವನ್ನು ಪರಿಹರಿಸುವುದಕ್ಕಾಗಿ ಮಿ॥ ಎಂ. ಎ. ಹಯಾತ್ ಬಾಟ್ಚಾ ಸಾಹೇಬ್ ಎಂಬುವರು ೧,೦೦೦ ರೂಪಾಯಿನಷ್ಟು ಆಹಾರ ಸಾಮಗ್ರಿಗಳನ್ನೂ, ೧,೫೦೦ ರೂಪಾಯಿನಷ್ಟು ಬಟ್ಟೆಬರೆಗಳನ್ನೂ ಹಂಚಿಸಿದ್ದಲ್ಲದೆ, ಈಗ ಮತ್ತೆ ಅವರಿಗೆ ಮನೆ ಮುಂತಾದ್ದು ಕಟ್ಟಿಸಿಕೊಳ್ಳುವುದಕ್ಕೆ ೨,೫೦೦ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟಿದ್ದಾರೆ. ಇವರ ಧರ್ಮಬುದ್ಧಿಯನ್ನು ಬಹಳವಾಗಿ ಕೊಂಡಾಡುತ್ತಿರುವರು.

****

ಬೊಂಬಾಯಿ ಗವರ್ನಮೆಂಟ್ ಸೆಂಟ್ರಲ್ ಪ್ರೆಸ್ಸಿನಲ್ಲಿ ಗುಮಾಸ್ತೆಯಾಗಿದ್ದ ಬಾಬಾಜಿ ವಿನಾಯಕನೆಂಬೊಬ್ಬ ಹಿಂದಾವು ಆ ಪ್ರೆಸ್ಸಿನಲ್ಲಿ ಅಚ್ಚಾದ ಕೆಲವು ಸರ್ಕಾರಿ ಪರೀಕ್ಷೆಯ ಪ್ರಶ್ನಪತ್ರಿಕೆಗಳನ್ನು ಧಾರವಾಡದಲ್ಲಿರುವ ಆತ್ಮಸ್ನೇಹಿತನಿಗೆ ಗುಟ್ಟಾಗಿ ಕಳುಹಿಸಿದ್ದು ಹಾಗೇ ರಟ್ಟಾಯಿತು. ಬೊಂಬಾಯಿ ಪೋಲೀಸಿನವರು ಅವನನ್ನು ಹಿಡಿದು ಮೊಕದ್ದಮೆ ಮಾಡಿದರು. ಅವನು ಪತ್ರಿಕೆಗಳನ್ನು ತನ್ನ ಸ್ನೇಹಿತನಿಗೆ ಕೊಟ್ಟಿದ್ದುಂಟೆಂದು ಒಪ್ಪಿಕೊಂಡನು. ಇದಕ್ಕಾಗಿ ಪೂನೆಯ ಸೆಷನ್ಸ್ ಜಡ್ಜರು ವಿನಾಯಕನಿಗೆ ಮೂರು ತಿಂಗಳ ಕಠಿಣ ಸಜಾ ವಿಧಿಸಿದರು.

****

ಕಾಶೀ ಪಟ್ಟಣದಲ್ಲಿ ಮಿಸೆಸ್ ಬೆಸೆಂಟ್ ಎಂಬಾಕೆ ಸ್ಥಾಪಿಸಿ ನಡಸುತ್ತಿರುವ ಹಿಂದೂ ಕಾಲೇಜಿನ ಒಳ ಆವರಣದಲ್ಲಿ ಕಳೆದವಾರ ಮುಧೋಳ ಸಂಸ್ಥಾನದ ವೃದ್ಧ ಮಹಾರಾಣಿಯವರು ಸರಸ್ವತೀ ದೇವಸ್ಥಾನವನ್ನು ಕಟ್ಟಿಸಿಕೊಡುವುದಾಗಿ ವಾಗ್ದಾನ ಮಾಡಿದರು. ಆಕೆಯವರು ಆ ದೇವಸ್ಥಾನಕ್ಕೆ ಕಳೆದ [illegible]ಗಳ ಶಾಸ್ತ್ರವಿಧಿಗನುಸಾರವಾಗಿ ಅಸ್ತಿಭಾರ ಹಾಕಿ [illegible] ಮಾಡಿ ಬಂದಿರುತ್ತಾರೆ. ಈ ದೇವಸ್ಥಾನದ [illegible] ಚಕಲ್ಲಿನಲ್ಲೇ ತಯಾರಾಗುವುದು. ಆ ಮಹಾರಾಣಿಯವರೇ ಸರಸ್ವತಿ ಪ್ರತಿಮೆಯನ್ನು ಮಾಡಿಸಿ ಕಳುಹಿಸಿಕೊಡುವವರಾಗಿದ್ದಾರೆ.

****

ಹೋದವಾರ ಹಿಂದುಸ್ಥಾನದಲ್ಲಿ ೧೮,೪೨೨ ಜನರು ಪ್ಲೇಗಿನಲ್ಲಿ ಮೃತಪಟ್ಟರು. ಅದರ ಹಿಂದಿನ ವಾರ ೧೬,೪೩೨ ಮಂದಿಯೂ, ಹೋದವರುಷ ಈ ವಾರದಲ್ಲಿ ೧೩,೪೭೯ ಮಂದಿಯೂ ತೀರಿಹೋದರು. ಮೇಲ್ಕಂಡ ೧೮,೪೨೨ ಮರಣಗಳಲ್ಲಿ ಬೊಂಬಾಯಿ ಪಟ್ಟಣ ೫೯, ಅದೇ ಆಧಿಪತ್ಯ ೭,೩೩೨, ಕರಾಚಿ ೩, ಮದರಾಸ್ ಆಧಿಪತ್ಯ ೪೭೩, ಕಲ್ಕತ್ತೆ ೧೩, ಬಂಗಾಳಾ ೮೪೭, ವಾಯವ್ಯ ಪ್ರಾಂತ್ಯಗಳು ೨,೦೭೬, ಪಂಜಾಬ್ ೧,೫೪೭, ಬರ್ಮಾ ೧, ಮಧ್ಯಪ್ರಾಂತ್ಯಗಳು ೧,೯೭೬, ಮೈಸೂರು ೬೯೮, ಹೈದರಾಬಾದ್ ೧೨೨೨, ರಾಜಪುಟಾನಾ ೧೫೮, ಮಧ್ಯ ಇಂಡಿಯಾ ೧,೦೨೮, ಕಾಶ್ಮೀರ ೨೦—ಈ ಪ್ರಕಾರ ಮರಣಗಳಾಗಿರುತ್ತವೆ.

****

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಬೇಕರ್ ಗಂಜಿನಲ್ಲಿ ನಾಲ್ಕು ಜನ ಹೆಂಗಸರು ಸಾಕ್ಷಿ ಹೇಳಿದ್ದನ್ನು ನಂಬಿ ಸೆಷನ್ಸ್ ಜಡ್ಜರು ಮೂರು ಮಂದಿಗೆ ಆಮರಣಾಂತರವಾದ ಸಜಾ ಶಿಕ್ಷೆಯನ್ನು ವಿಧಿಸಿದರು. ಅವರು ಕಲ್ಕತ್ತೆಯ ಹೈಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಾಗ ಇಬ್ಬರು ಜಡ್ಜಿಗಳು ಈ ಮೊಕದ್ದಮೆಯ ಕಟ್ಟನ್ನೆಲ್ಲಾ ಪರಿಶೋಧನೆ ಮಾಡಿ, ಪೋಲೀಸಿನವರು ಆ ಹೆಂಗಸರನ್ನು ಹಿಂಸೆ ಅಪಮಾನಗಳಿಗೆ ಗುರಿಮಾಡಿದ್ದರಿಂದಲೇ ಅವರು ಹೀಗೆ ಸಾಕ್ಷಿ ಕೊಟ್ಟಿರುತ್ತಾರೆಂದು ಗೊತ್ತುಮಾಡಿ, ಆ ಮೂರು ಮಂದಿ ಅಪರಾಧಿಗಳನ್ನು ಖುಲಾಸ್ ಮಾಡಿದ್ದಲ್ಲದೆ, ಪೋಲೀಸಿನವರ ನಡವಳಿಕೆಯನ್ನು ಇಲಾಖಾ ಅಧಿಕಾರಿಗಳು ಸರಿಯಾಗಿ ಗಮನಕ್ಕೆ ತಂದುಕೊಳ್ಳಬೇಕಾಗಿದೆ ಎಂಬುದಾಗಿ ಜಡ್ಜ್‌ಮೆಂಟಿನಲ್ಲಿ ಬರೆದಿರುತ್ತಾರೆ.

****

ಮಲಬಾರ್ ಪ್ರಾಂತ್ಯದಲ್ಲಿ ದಾಯಭಾಗದ ಕಾನೂನು ಸಮರ್ಪಕವಾಗಿರುವುದಿಲ್ಲ. ಆದಕಾರಣ ಅನೇಕಾನೇಕ ಸಂಸಾರಗಳಲ್ಲಿ ಮನಃಕ್ಲೇಶಗಳೂ ಜಗಳ ಹೊಡೆದಾಟ ಕೊಲೆಗಳೂ ವಿಪರೀತವಾಗಿರುತ್ತವೆ. ಕಳೆದವಾರ ಅಪ್ಪು ನಂಬಿಯಾರೆಂಬವನನ್ನು ಅವನ ಮೂರು ಮಂದಿ ದಾಯಾದಿಗಳು ಸೇರಿ ತುಂಡು ತುಂಡಾಗಿ ಕತ್ತರಿಸಿ ಹಾಕಿದ್ದರು. ಅವರನ್ನು ದಸ್ತಗಿರಿ ಮಾಡಿ, ಯಾಕೆ ಇಂಥಾ ಘೋರಕೃತ್ಯ ಮಾಡಿದಿರಿ ಎಂದು ಕೇಳಿದ್ದಕ್ಕೆ ಅವರು—ಇವನು ಆಸ್ತಿಯನ್ನೆಲ್ಲಾ ದಾಯಾದಿಗಳಿಗೆ ಸರಿಯಾಗಿ ಪಾಲುಮಾಡದೆ ಎಲ್ಲಾ ತನ್ನ ಹೆಂಡತಿಯ ಹೆಸರಿಗೆ ಬರೆದಿರುತ್ತಾನೆ. ಅದೆಲ್ಲಾ ಪಿತ್ರಾರ್ಜಿತವಾದ ಆಸ್ತಿ. ನಮಗೆ ಜೀವನಕ್ಕೆ ಮಾರ್ಗವಿಲ್ಲದಂತೆ ಮಾಡಿಬಿಟ್ಟನಾದಕಾರಣ ಅವನನ್ನು ಕೊಂದುಹಾಕಿದೆವು ಎಂಬುದಾಗಿ ಹೇಳಿರುತ್ತಾರೆ.

****

ಪೂನಾ ಪಟ್ಟಣದಲ್ಲಿ ಪ್ಲೇಗಿನ ದೆಸೆಯಿಂದ ಬಹುಮಂದಿ ಪ್ರಜೆಗಳು ಕಷ್ಟನಷ್ಟಗಳಿಗೆ ಗುರಿಯಾಗಿ ವಿಶೇಷವಾಗಿ ಗೋಳಾಡುತ್ತಿರುವುದನ್ನು ಅಲ್ಲಿನ ವರ್ತಕರೆಲ್ಲಾ ನೋಡಿ ತುಂಬಾ ಕನಿಕರಪಟ್ಟು, ಅಂಥಾ ಜನರಿಗೆ ಸಹಾಯಮಾಡುವುದಕ್ಕೋಸ್ಕರ ಒಂದು ಉಪಾಯ ಮಾಡಿರುತ್ತಾರೆ. ವರ್ತಕರು ದಿನಸುಗಳನ್ನು ಬಿಕರಿ ಮಾಡುವಾಗ್ಗೆ ಪ್ರತಿ ಪಲ್ಲಕ್ಕೆ ಮೂರುಕಾಸು ಜಾಸ್ತಿ ಕ್ರಯ ವಸೂಲ್ಮಾಡುವರು. ಇಂಥಾ ಮೂರು ಕಾಸನ್ನು ಪ್ರತಿ ಒಬ್ಬನೂ ತನ್ನ ಅಂಗಡಿಯಲ್ಲಿ ಕೂಡಿಟ್ಟು, ತಿಂಗಳಿಗೊಂದಾವರ್ತಿ ಕಮಿಟಿಯವರ ವಶಕ್ಕೆ ಕೊಡುವನು. ಈ ಹಣದಲ್ಲಿ ಕಮಿಟಿಯವರು ಬಡಬಗ್ಗರಿಗೆ ಬೇಕಾದ ಸಹಾಯಗಳನ್ನು ಮಾಡುತ್ತಾರೆ. ಈ ಏರ್ಪಾಡಿನಿಂದ ವರ್ತಕರೆಲ್ಲಾ ತಿಂಗಳಿಗೆ ಒಟ್ಟು ಒಂದು ಸಾವಿರ ರೂಪಾಯಿ ಕೂಡಿಸಿಕೊಡುತ್ತಿರುವರು.

****

ಪ್ರಯಾಗದಲ್ಲಿ ನಾಲ್ಕು ಮಂದಿ ಸೇರಿ ಒಂದು ಮನೆಯೊಳಗೆ ಗುಟ್ಟಾಗಿ ಖೋಟಾ ನಾಣ್ಯಗಳನ್ನು ತಯಾರ್ಮಾಡುತ್ತಿದ್ದಾರೆಂದು ಗಾರುಮಿಸ್ತ್ರ್ ಎಂಬವನು ಹೋಗಿ ಪೋಲೀಸ್ ಅಧಿಕಾರಿಗೆ ತಿಳಿಸಿದನು. ಅಮ್ಜದಲ್ಲಿ ಎಂಬ ಪೋಲೀಸ್ ಅಧಿಕಾರಿಯು ಕೆಲವು ಮಂದಿ ಜೊತೆ ಮನುಷ್ಯರನ್ನು ಸಂಗಡ ಕರೆದುಕೊಂಡು, ಆ ಮನೆಗೆ ಹೋಗಿ ಬಾಗಿಲು ಕಾಯ್ದನು. ಒಳಗಿದ್ದವರು ತಪ್ಪಿಸಿಕೊಂಡು ಹೋಗಲು ಅವಕಾಶವಿಲ್ಲದೆ ಬಾಗಿಲು ತೆರೆದರು. ಒಳಗೆ ನುಗ್ಗಿ ತನಿಖೆ ಮಾಡಿದಾಗ ೧೨೦ ಖೋಟಾ ರೂಪಾಯಿಗಳೂ, ಎರಕ ಹೊಯ್ಯುವ ೫ ಅಚ್ಚುಗಳೂ, ಚಿನ್ನ ಕೆಲಸ ಮಾಡುವವರು ಇಟ್ಟುಕೊಂಡಿರುವಂಥಾ ಅನೇಕ ವಸ್ತುಗಳೂ ಸಿಕ್ಕಿದವು. ಕೂಡಲೇ ಅವುಗಳನ್ನೆಲ್ಲಾ ತೆಗೆದುಕೊಂಡು, ಒಳಗಿದ್ದ ನಾಲ್ಕು ಮಂದಿಯನ್ನೂ ದಸ್ತಗಿರಿ ಮಾಡಿ ಹಿಡಿದು ತಂದು, ಸೆಷನ್ ವಿಚಾರಣೆಗೆ ಗುರಿಮಾಡಿದರು. ಜಡ್ಜರಾದ ಮಿ॥ ಮಾರ್ಷಲ್ ಯವರು ಆ ಮನೆಯ ಮಾಲೀಕನಿಗೂ ಇನ್ನೊಬ್ಬನಿಗೂ ಐದೈದು ವರುಷದಂತೆಯೂ, ಇನ್ನಿಬ್ಬರಿಗೆ ನಾಲ್ಕು ನಾಲ್ಕು ವರುಷದಂತೆಯೂ ಕಠಿಣ ಸಜಾ ವಿಧಿಸಿರುತ್ತಾರೆ.

****

ಗಂಜಾಂ ಡಿಸ್ಟ್ರಿಕ್ಟಿನಲ್ಲಿ ಕೆಲವು ಮಂದಿ ಹಿಂದುಗಳಿರುತ್ತಾರೆ. ಇವರಲ್ಲಿ ಹೆಣ್ಣು ತರುವ ಪದ್ಧತಿಯು ಬಹು ಆಶ್ಚರ್ಯಕರವಾಗಿದೆ. ಹುಡುಗನು ಏಕಾಂಗಿಯಾಗಿ ಹೋಗಿ ತನಗೆ ಬೇಕಾದ ಹುಡುಗಿಯನ್ನು ಎತ್ತಿಹಾಕಿಕೊಂಡು ಬರುವುದೇ ಮದುವೆ ಎನಿಸಿಕೊಳ್ಳುತ್ತದೆ. ಆದಕ್ಕೆ ಮೊದಲು ಅವನು ಹುಡುಗಿಯ ತಾಯಿತಂದೆಗಳಿಗೆ ಉಚಿತ ಮಾಡಿಯೇ ತೀರಬೇಕು. ಇದಾಗಿಬಿಟ್ಟರೆ ತಾಯಿತಂದೆಗಳು ಸ್ವಲ್ಪವೂ ಯೋಚಿಸದೆ ತಮ್ಮ ಹುಡುಗಿಯನ್ನು ಅವನ ಸಂಗಡ ಕಳುಹಿಸಿಬಿಡುತ್ತಾರೆ. ಕೆಲವು ದಿನಗಳ ಕೆಳಗೆ ಈ ಜನರಲ್ಲಿ ಒಂದು ಕೊಲೆಯ ಮೊಕದ್ದಮೆ [illegible] ಒಬ್ಬನು ತಾನು ಗೊತ್ತುಮಾಡಿಕೊಂಡಿದ್ದ ಹುಡುಗಿ[illegible] ಬಂದನು. ಆದಕ್ಕೆ ಮುಂಚೆ ಅವನು ಅತ್ತೆಮಾವಂದಿರಿಗೆ ಉಚಿತ ಮಾಡಲಿಲ್ಲ. ಆದಕಾರಣ ಅವರು ಕೋಪಿಸಿ[illegible] ಕಡೆಯವರನ್ನು ಕಳುಹಿಸಿ, ತಮ್ಮ ಹುಡುಗಿಯನ್ನು ಬಿಡಿಸಿಕೊಂಡು ಬರುವಂತೆ ಹೇಳಿದರು. ಅವರೂ ಇನ್ನೊಬ್ಬರ ಸೇರಿ ಒಬ್ಬನನ್ನು ಕೊಂದೇ ಬಿಟ್ಟರು. ಸೆಷನ್ಸ್ ಜಡ್ಜಿಯವರು ದರ್ಯಾಫ್ತು ಮಾಡಿ ಒಬ್ಬನಿಗೆ ೪, ಇನ್ನೊಬ್ಬನಿಗೆ ೨ ವರುಷಗಳಂತೆ ಕಠಿಣ ಸಜಾ ವಿಧಿಸಿದರು. ಆದರ ಮೇಲೆ ಅವರಿಬ್ಬರೂ ಮದರಾಸ್ ಹೈಕೋರ್ಟಿನಲ್ಲಿ ಅಪ್ಪೀಲ್ ಮಾಡಿದರು. ಇಬ್ಬರು ಜಡ್ಜಿಗಳು ಈ ಮೊಕದ್ದಮೆಯನ್ನೆಲ್ಲಾ ಸಾಂಗೋಪಾಂಗವಾಗಿ ತಿಳಿದು ಕೆಳಕೋರ್ಟಿನವರು ಕೊಟ್ಟ ಶಿಕ್ಷೆಯನ್ನೇ ಖಾಯಂ ಮಾಡಿರುತ್ತಾರೆ.

****

ಹಿಂದುಸ್ಥಾನದ ವೈಸರಾಯಿ ಪ್ರಭುಗಳು ಊರಿಂದೂರಿಗೆ ಸಂಚಾರ ಮಾಡುವುದಕ್ಕೆ ಅನುಕೂಲಿಸುವಂತೆ ಈಗಿನ ಕಾಲಕ್ಕೆ ತಕ್ಕ ಹಾಗೆ ಕಲ್ಕತ್ತಾ ಪಟ್ಟಣದ ಬಳಿ ಲಿಲ್ಲೂವಾ ಎಂಬ ಊರಿನ ರೈಲ್ವೆ ಕಾರ್ಖಾನೆಯಲ್ಲಿ ಎಂಟು ಸೆಲೂನ್ ಎಂಬ ರೈಲ್ ಗಾಡಿಗಳನ್ನು ಈಗತಾನೇ ತಯಾರ್ಮಾಡಿಸಿರುತ್ತಾರೆ. ೮ ಗಾಡಿಗಳಲ್ಲಿ ೬ ಗಾಡಿಗಳು ೭೨ ಅಡಿ ಉದ್ದವಾಗಿಯೂ, ಇವುಗಳ ಹಿಂದೆಯೂ ಮುಂದೆ ತಗಲಿಸಲ್ಪಡುವ ಉಳಿದ ೨ ಗಾಡಿಗಳು ೬೨ ಅಡಿ ಉದ್ದವಾಗಿಯೂ, ಎಂಟನ್ನೂ ಉದ್ದಕ್ಕೆ ಕಂಬಿಗಳ ಮೇಲೆ ತಗಲಿಸಿ ನಿಲ್ಲಿಸಿದರೆ ಎಲ್ಲಾ ೫೫೭ ಅಡಿ ಉದ್ದವಾಗಿಯೂ, ಈ ಗಾಡಿಗಳೆಲ್ಲಾ ಒಟ್ಟು ೩೦೦ ಟನ್ನುಗಳ ಭಾರವುಳ್ಳದ್ದಾಗಿಯೂ ಇರುತ್ತವೆ. ಈ ಗಾಡಿಗಳಿಗೆ ಉಪಯೋಗಿಸಿರುವ ಸಾಮಾನುಗಳೆಲ್ಲಾ ಹಿಂದುಸ್ಥಾನದಲ್ಲೇ ತಯಾರಾದವು. ಇವುಗಳಲ್ಲಿ ವಿದ್ಯುಚ್ಛಕ್ತಿಯ ದೀಪ ಉರಿಯುವಂತೆ ಏರ್ಪಾಡು ಮಾಡಿದಾರೆ. ವಿದ್ಯುಚ್ಛಕ್ತಿಯ ಸಹಾಯದಿಂದ ಬೀಸಣಿಗೆಗಳು ಗಾಡಿಗಳೊಳಗೆ ಬೀಸುತ್ತಿರುವವು. ಈ ೮ ಗಾಡಿಗಳಿಗೂ ಮೂರು ಲಕ್ಷ ರೂಪಾಯಿ ಖರ್ಚಾಗಿದೆ. ಇದೆಲ್ಲಾ ಇಂಡಿಯಾ ಸರ್ಕಾರದಿಂದ ಕೊಡುವರು. ಮುಂದಿನ ವರುಷ ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್ ರವರು ಪತ್ನಿಸಮೇತರಾಗಿ ಹಿಂದುಸ್ಥಾನಕ್ಕೆ ಭೇಟಿ ಕೊಡಲು ದಯಮಾಡುವವರಾಗಿದ್ದಾರಷ್ಟೆ. ಅವರು ಹಿಂದುಸ್ಥಾನದಲ್ಲಿ ಊರಿಂದೂರಿಗೆ ಸಂಚರಿಸುವಾಗ್ಯೆ ಈ ೮ ರೈಲ್ ಗಾಡಿಗಳನ್ನೂ ಉಪಯೋಗಿಸಿಕೊಳ್ಳುತ್ತಾರೆಂದು ತಿಳಿದುಬಂ[illegible]

****

ಟ್ರಾನ್ಸ್‌ವಾಲ್ ಯುದ್ಧದಲ್ಲಿ ಇಂಗ್ಲೀಷರು ಕೈಸೆರೆ ಹಿಡಿದ ಬೋಯರ್ ಖೈದಿಗಳಲ್ಲಿ ಇನ್ನೂ ೯೦೦ ಮಂದಿಯು ತನಕ ಅಹಮದ್ ನಗರದ ಜೈಲ್ ಕ್ಯಾಂಪಿನಲ್ಲೇ ಇರುತ್ತಾರೆ. ಇವರು ಇಂಗ್ಲೀಷರಿಗೆ ಶರಣಾಗತರಾದೆವೆಂದು ಹೇಳಿ ಒಪ್ಪಿಕೊಂಡು ಪತ್ರಕ್ಕೆ ರುಜುಹಾಕಿ ಕೊಡುವವನಕ ಇಂಗ್ಲೀಷರು ಇವರನ್ನು ವಾಪಸು ಟ್ರಾನ್ಸ್‌ವಾಲಿಗೆ ಕಳುಹಿಸಿಕೊಡುವುದಿಲ್ಲವೆಂದು ಖಂಡಿತ ಮಾಡಿಕೊಂಡಿದಾರೆ. ಅವರು ಹಟ ಹಿಡಿದು ರುಜುಹಾಕಿ ಕೊಟ್ಟಿಲ್ಲ. ಇಂಥವರಿಗೆ ವಿವೇಕ ಹೇಳಿ ಒಪ್ಪಿಸುವುದಕ್ಕೋಸ್ಕರ ಅವರ ದಳಪತಿಯಾದ ಜನರಲ್ ಡಿಲಾರೆಯವರು ಕಳೆದ ವಾರ ಬಂಡಗ್ರಾಫ್ ಎಂಬ ಹಡಗಿನಲ್ಲಿ ಬಂದು, ಬೊಂಬಾಯಿ ಪಟ್ಟಣದಲ್ಲಿ ಇಳಿದರು. ಇವರು ಸಂಗಡ ತಮ್ಮ ಕುಮಾರನನ್ನೂ ಕರೆದು ತಂದಿದಾರೆ. ಇವರಿಬ್ಬರೂ ೨—೩ ದಿವಸ ತನಕ ಬೊಂಬಾಯಿ ಪಟ್ಟಣದ ಭಾರೀ ಹೋಟೇಲಿನಲ್ಲಿ ಇಳುಕೊಂಡಿದ್ದು, ಅಹಮದ್ ನಗರಕ್ಕೆ ಪ್ರಯಾಣ ಮಾಡಿದರು. ಇವರ ಸಂಗಡ ಹೋಗುವುದಕ್ಕಾಗಿ ಇಂಡಿಯಾ ಗವರ್ನಮೆಂಟಿನವರು ಗ್ರೀನ್‌ಫೀಲ್ಡ್, ಗಬ್ರಿಯಲ್ ಎಂಬಿಬ್ಬರು ಉದ್ಯೋಗಸ್ಥರನ್ನು ನೇಮಿಸಿ ಕಳುಹಿಸಿದಾರೆ. ಜನರಲ್ ಡಿಲಾರೆಯವರು ಬೊಂಬಾಯಿಗೆ ಬಂದಿರುವುದನ್ನು ಕೇಳಿ, ಅಲ್ಲಿನ ವರ್ತಮಾನ ಪತ್ರಿಕೆಯ ಪ್ರತಿನಿಧಿಯೊಬ್ಬನು ಅವರ ಬಳಿಗೆ ಹೋಗಿ ಅವರಿಂದ ವಿಷಯಗಳನ್ನು ತಿಳಿದು ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಎಷ್ಟೋ ವಿಧವಾಗಿ ನಾನಾ ಪ್ರಶ್ನೆಗಳನ್ನು ಕೇಳಿದನು. ಆದರೆ ಜನರಲ್ ಡಿಲಾರೆಯವರು ಯಾವ ಪ್ರಶ್ನೆಗೂ ಸರಿಯಾದ ಉತ್ತರ ಕೊಡದೆ ಹೋದರು.

****

ಇಂಡಿಯಾ ಗವರ್ನಮೆಂಟಿನವರು ತಮ್ಮ ಸೈನ್ಯಗಳನ್ನು ಇಟ್ಟಿರುವ ಪ್ರತಿ ಒಂದು ಪಟ್ಟಣದಲ್ಲೂ ಕರೋಹಟ್ಟಿಯನ್ನು ನಿರ್ಮಾಣಮಾಡಿ ಸೈನಿಕರಿಗೆ ಹಾಲು ಬೆಣ್ಣೆ ಮುಂತಾದ್ದನ್ನು ಒದಗಿಸಿಕೊಡುತ್ತಿದಾರಷ್ಟೆ. ಆದರೂ ಸೈನಿಕರಿಗೆ ಬೇಕಾಗುವಾಗಲೆಲ್ಲಾ ಬೇಕಾದಷ್ಟು ಹಾಲು ಒದಗದೆ ತೊಂದರೆಯುಂಟಾಗಿದೆ. ಈ ಕೊರತೆಯನ್ನು ಹೋಗಲಾಡಿಸುವುದಕ್ಕೆ ಅವರು ಹಾಲಿನ ಪುಡಿಯನ್ನು ತಯಾರ್ಮಾಡಿಸಬೇಕೆಂದು ಪ್ರಯತ್ನಪಡುತ್ತಿರುವರು. ಹಾಲನ್ನು ಆಕಳಿಂದ ಕರೆದ ಮೇಲೆ ಯಂತ್ರಗಳಿಗೆ ಕೊಟ್ಟರೆ ಅದು ಗಟ್ಟಿಯಾಗುವುದು; ತರುವಾಯ ಅದನ್ನು ಹದವಾಗಿ ಒಣಗಿಸಿ ಪುಡಿಯನ್ನು ಡಬ್ಬಿಗಳಲ್ಲಿ ಹಾಕಿ ಭದ್ರಪಡಿಸುವರು. ಬೇಕಾದಾಗ ಈ ಡಬ್ಬಿಗಳನ್ನು ಒಡೆದು ಕಾದಿಯುವ ನೀರಿಗೆ ಸ್ವಲ್ಪ ಪುಡಿ ಹಾಕಿಬಿಟ್ಟರೆ ಅಪೇಕ್ಷಿತ್ತ[illegible]ದ ಹಾಲು ಇಳಿಯುತ್ತದೆ. ಅದನ್ನು ಬೇಕಾದ ಕೆಲಸಗಳಿಗೆಲ್ಲಾ ಉಪಯೋಗಿಸಿಕೊಳ್ಳಬಹುದು. ಅದು ಆಗತಾನೇ ಕರೆದ ಹಾಲಿನಂತೆ ರುಚಿಯಾಗಿಯೂ, ತುಂಬಾ ಆರೋಗ್ಯಕರವಾಗಿಯೂ ಇರುವುದು. ಅತ್ತಲಾಗಿ ಸ್ವಿಟ್ಜರ್ ರಾಜ್ಯದಲ್ಲಿ ೫೦ ಲಕ್ಷ ಪ್ರಜಾಸಂಖ್ಯೆ ಇದ್ದರೂ ಅಲ್ಲಿ ತಯಾರಾಗುವ ಹಾಲು ಅಲ್ಲಿನ ಜನರಿಗೆ ಸಾಕಾಗಿ ಮಿಗುವ ಮೂರು ಕೋಟಿ ರೂಪಾಯಿನಷ್ಟು ಹಾಲನ್ನು ಇತರ ದೇಶಗಳಿಗೆ ರಫ್ತು ಮಾಡಿ ಲಾಭ ಸಂಪಾದಿಸುತ್ತಿದಾರೆ. ಹಿಂದುಸ್ಥಾನವು ವಿಶೇಷವಾಗಿ ವ್ಯವಸಾಯ ಕ್ಷೇತ್ರವಲ್ಲದೆ ಬೇರೇನೂ ಅಲ್ಲ. ಈ ಕ್ಷೇತ್ರದಲ್ಲಿ ಜನರು ಮಿಗುವ ಹಾಲನ್ನು ಈ ಪ್ರಕಾರ ಯಂತ್ರಗಳಿಗೆ ಕೊಟ್ಟು ಪುಡಿ ತಯಾರ್ಮಾಡಿ [illegible] ರಫ್ತು ಮಾಡಬಹುದಾಗಿದೆ. ಅನೇಕರು ಹಾಲನ್ನು ಅನುಪಯೋಗವಾದ ನಾನಾ ಕೆಲಸಗಳಿಗೆ ಹಾಕಿ [illegible] ಮಾಡುವರು.

---

## ತಾಲ್ಲೋಕು ವರ್ತಮಾನಗಳು.

[illegible] ತಿಪಟೂರ ಈ ಬಾಣಾವಾರದಲ್ಲಿ ಈ ವರ್ಷದ ಕಡೇಭಾಗದಲ್ಲಿ ಪ್ಲೇಗ್ ರೋಗ ತಗಲಿ, ೧೦ ಜನ ಸದರಿ ಉಪದ್ರ[illegible]ತ್ತಾದರು. ಈ ಊರಲ್ಲಿ ೨ ಭಾಗ ಉಂಟು. ಒಂದು ಭಾಗ ಕೋಟೆ ಎಂತಲೂ, ಮತ್ತೊಂದು ಭಾಗ ಪೇಟೆ ಎಂತಲೂ ಉಂಟು. ಈಗ ಕೋಟೆಯಲ್ಲಿಯೇ ಮೊದಲು ಪ್ರಾರಂಭವಾಯಿತು. ಕಳೆದ ವರ್ಷದಲ್ಲಿ ಪೇಟೆಯಲ್ಲಿ ಪ್ರಾರಂಭವಾಗಿತ್ತು. ಕೋಟೆಯಲ್ಲಿನ ಜನರೆಲ್ಲಾ ಗುಡಿಸಲುಗಳಲ್ಲಿ ಈಗ ವಾಸಮಾಡುತ್ತಾರೆ. ಪೇಟೆಯವರು ಕಾಕೋತ್ತು, ನಾಳೆ, ಊರಾಚೆಬಿಟ್ಟು ಹೊರಡುವ ತಯಾರಿನಲ್ಲಿರುತ್ತಾರೆ. ಗುಡಿಸಲುಗಳನ್ನು ಕಟ್ಟುವದಕ್ಕಾಗಿ ಗಳ, ಹುಲ್ಲು, ಗರಿ, ಬಾಚಿಗಳನ್ನು ಸಂಪಾದಿಸುವದು ಬಡವರಿಗೆ ತುಂಬಾ ಶ್ರಮವಾಗಿದೆ. ಸರ್ವೇಶ್ವರನು ಇಂಥವರಿಗೆಲ್ಲಾ ಅನುಕೂಲಪಡಿಸಿ, ಕಾಡಿನಲ್ಲಿರುವಾಗ ಎಲ್ಲರನ್ನೂ ಕ್ಷೇಮದಲ್ಲಿ ಕಾಪಾಡಲು ಪ್ರಾರ್ಥಿಸುತ್ತೇನೆ.

ದೇವನಹಳ್ಳಿ:—ಮೈಸೂರು ಸಂಸ್ಥಾನದ ರೆವಿನ್ಯೂ ಕಮಿಷನರ್ ಮೆ॥ ವಿ. ಪಿ. ಮಾಧವರಾಯರವರು ಕೋಲಾರದ ಮಾರ್ಗವಾಗಿ ಚಿಕ್ಕಬಳ್ಳಾಪುರಕ್ಕೆ ದಯಮಾಡಿಸಿ, ಅಲ್ಲಿನ ಕಾರ್ಯಗಳನ್ನು ಪರಾಂಬರಿಸಿ, ದೇವನಹಳ್ಳಿಗೆ ಡಿಸೆಂಬರ್ ೧೬ನೇ ತಾರೀಖು ಬುಧವಾರ ಪ್ರಾತಃಕಾಲ ೮ ಗಂಟೆಗೆ ಊರು ಮುಂದಿನ ಬಂಗಲೆಯ ಬಳಿ ಚಿತ್ರವಿಚಿತ್ರವಾದ ಅಲಂಕಾರಗಳಿಂದಲೂ, ನೂತನತರಹವಾಗಿಯೂ ಕಟ್ಟಿದ್ದ ಮಂಟಪಕ್ಕೆ ದಯಮಾಡಿಸಿ, ಅಮಲ್ದಾರರೇ ಮುಂತಾದ ಅಧಿಕಾರಸ್ಥರಿಂದಲೂ, ದೊಡ್ಡಮನುಷ್ಯರಿಂದಲೂ ಮಾಡಲ್ಪಟ್ಟ ಮರ್ಯಾದೆಗಳನ್ನು ಸ್ವೀಕರಿಸಿ, ಬಂಗ್ಲೆಗೆ ಬಿಡಮಾಡಿಸಿದರು. ತರುವಾಯ ಮಧ್ಯಾಹ್ನ ೪ ಘಂಟೆಯ ವೇಳೆಯಲ್ಲಿ ಗ್ರಾಮವನ್ನು ಪ್ರವೇಶಮಾಡಿ, ಕೋಟೆಯಲ್ಲಿರುವ ಗೋಪಾಲಸ್ವಾಮಿಯ ದೇವಸ್ಥಾನದ ಬಳಿ ರಥ ನಿಲ್ಲಿಸುವ ಕಟ್ಟಡವನ್ನು ಪರಾಂಬರಿಸಿ, ದೇವಸ್ಥಾನದ ಮರ್ಯಾದೆಗಳನ್ನು ಸ್ವೀಕರಿಸಿ, ಕಛೇರಿಗೆ ದಯಮಾಡಿಸಿದರು. ಅಲ್ಲಿನ ರಾಜಕಾರ್ಯಗಳೆಲ್ಲವನ್ನೂ ನೆರವೇರಿಸಿಕೊಂಡು, ಸಮಸ್ತ ಮಂಗಳವಾ

ನೆ ಹೊರಟು, ಮುಸಲ್ಮಾನರಿಂದ ಕಟ್ಟಲ್ಪಟ್ಟಿದ್ದ ಮಂಟಪವನ್ನು ಪ್ರವೇಶಿಸಿ, ಅಲ್ಲಿ ಮರ್ಯಾದೆಗಳನ್ನು ಹೊಂದಿ, ದೇವಾಂಗದ ಪೇಟೆಯ ಮಾರ್ಗವಾಗಿ ಹೋಗಿ, ಹಿಂದೂ ಪಂಡಿತ ಬ್ರಹ್ಮಶ್ರೀ ನಂದಿಗಿರಿ ದೀಕ್ಷಿತರಿಂದ ಸ್ಥಾಪಿಸಲ್ಪಟ್ಟ ಕರ್ಣಾಟಕ ವೈದ್ಯಶಾಲಾ ಬಳಿ ಹಾಕಿದ್ದ ಚಿತ್ರವಿಚಿತ್ರವಾದ ಅಲಂಕಾರಗಳಿಂದ ಶೃಂಗರಿಸಲ್ಪಟ್ಟ ಮಂಟಪವನ್ನು ಈಕ್ಷಿಸಿ, ವೈದ್ಯಶಾಲೆಯೊಳಗೆ ಪ್ರವೇಶಿಸಿ, ಪಂಡಿತರೇ ಮುಂತಾದ ಶಾಸ್ತ್ರಜ್ಞರಿಂದ ಮಾಡಲ್ಪಟ್ಟ ವೇದೋಕ್ತ ಆಶೀರ್ವಾದ ಪೂರ್ವಕ ಫಲ ಮಂತ್ರಾಕ್ಷತೆಗಳನ್ನೂ, ಪುಷ್ಪಮಾಲಿಕಾ ಮರ್ಯಾದೆಗಳನ್ನೂ ಅಂಗೀಕರಿಸಿ, ॥ ಘಂಟೆ ಹೊತ್ತು ಅಲ್ಲಿರುವ ಸಕಲ ಔಷಧಾದಿಗಳನ್ನೂ ಅನೇಕ ವೈದ್ಯ ಗ್ರಂಥಗಳನ್ನು ಚನ್ನಾಗಿ ವಿಚಾರಿಸಿ, ವೈದ್ಯಶಾಲೆಯನ್ನು ವೃದ್ಧಿಪಡಿಸುವಂತೆಯೂ, ಸರ್ಕಾರದಿಂದ ತಕ್ಕ ಸಹಾಯ ಕೊಡುವಂತೆಯೂ ಮಾತುಕೊಟ್ಟು, ಸಕಲ ಪುರಜನರ ಮನಸ್ಸನ್ನೂ ಆನಂದಗೊಳಿಸಿ, ತಮ್ಮ ಬಿಡಾರಕ್ಕೆ ಹೊರ

...ಕ್ಕೇರಿದರು. ಅಲ್ಲಿ ರಾತ್ರಿ ಆಯಾಸ ಪರಿಹರಿಸಿಕೊಂಡು ಪ್ರಾತಃ ... ಘಂಟೆಗೆ ಮುಂದಕ್ಕೆ ಪ್ರಯಾಣಮಾಡಿದರು.

ನೆಲಮಂಗಲ ತಾ॥ ತ್ಯಾಮಗೊಂಡ್ಲು.—೨-೩ ತಿಂಗಳಿಂ ದೀಚೆ ಬಿದ್ದ ಮಳೆಗಳನ್ನೆಲ್ಲಾ ಹಾಳುಮಾಡಿದ್ದಲ್ಲದೆ ಅನೇಕ ಬಡವರ ಮನೆಗಳನ್ನು ಕೆಡವಿ ಜನಗಳನ್ನು ಕಷ್ಟನಷ್ಟಗಳಿಗೆ ಗುರಿ ಮಾಡಿತು. ಇದರ ಹಾವಳಿಯು ಎಂದಿಗೆ ತಪ್ಪುತ್ತೋ ಎಂದು ಜನ ಗಳೆಲ್ಲಾ ಹಾರೈಸುತ್ತಾ ಇದ್ದಹಾಗೇ ಅದು ಈಗ ೧೫ ದಿನಗಳಿಂದ ನಿಂತಿತು.—ಪ್ರತಿ ವರುಷವೂ ಇಷ್ಟು ಹೊತ್ತಿಗೆ ಪ್ಲೇಗಿನ ಹಾವಳಿ ಯಿಂದ ಜನರು ಊರು ಬಿಡಬೇಕಾಗುತ್ತು. ಆದರೆ ಈಗಲೂ ಅಲ್ಲಲ್ಲಿ ಇಲಿ ಬೀಳುತ್ತಿದೆ ಎಂದು ವರ್ತಮಾನವಿದೆ. ಜನಗಳೆಲ್ಲಾ ತುಂಬ ಗಾಬರಿಯಾಗಿರುತ್ತಾರೆ — ಈ ಟವನಿಗೆ ಹೋದಾಗ ಮುನಿಸಿಪಲ್ ಅಭಿವೃದ್ಧಿ ಕೆಲಸಕ್ಕೆ ಬಂದಿರುವ ಪುಟ್ಟಯ್ಯನವರ ಸಾಹಸದಿಂದ ಬೀದಿಗಳೆಲ್ಲಾ ಸ್ವಲ್ಪವೂ ಗಲೀಜು ಇಲ್ಲದೆ ಚೊಕ್ಕಟಯಾಗಿವೆ. ಜನಗ ಳು ತಮ್ಮ ಮನೆ ಹಿತ್ತಲುಗಳಲ್ಲಿ ಬತಕ್ಕ ತಿಪ್ಪೆಯನ್ನು ಹಾಕುವಾಡಿ ಕೊಳ್ಳುತ್ತಾರೆ. ಈ ಮುತ್ಸದ್ದಿಯು ಹಗಲು ರೂಪಾಯಿಗಳಿಂದ ಚಾಗಿ ಕೆಲಸ ತೆಗೆದುಕೊಳ್ಳುತ್ತಾರೆ. ರಾತ್ರಿ ಲಾಂದ್ರ ದೀಪಗ ಳ ಉಸ್ತುವಾರಿ ಮಾಡುತ್ತಾರೆ. ಆದ್ದರಿಂದ ಇವರು ಅಂಶಗ ಳ ತೃಪ್ತಿಕರವಾಗಿರ ತ್ತವೆ. ಈ ರೀತಿ ಇವರು ಮಾಡುವ ಕೆಲಸಗ ಳು ಗ್ರಾಮದ ಕೆಲವು ಜನಗಳಿಗೆ ಸರಿಬೀಳದೆ, ಈ ಟವನಿಗೆ ಮು ನಿಸಿಪಲ್ ಮುತ್ಸದ್ದಿಯೇ ಅವಶ್ಯಕವಿಲ್ಲವೆಂತಲೂ, ಇವರನ್ನು ವಜಾ ಮಾಡಿದರೆ ಸರ್ಕಾರಕ್ಕೆ ಸಾಲೀಯಾನಾ ನೂರು ರೂಪಾಯಿ ಆದಾಯ ವಾಗುತ್ತೇತಲೂ, ಇದಕ್ಕಾಗಿ ಇಲ್ಲಿ ಜಾರಿಯಲಿರುವ ಸುಂಕದ ಬಾಬು ವಜಾ ಮಾಡಬೇಕೆಂತಲೂ ಅರ್ಜಿ ಕೊಟ್ಟಿರುತ್ತಾರೆ. ಆದರೆ ಈ ಸುಂಕದ ಬಾಬಿನಲ್ಲಿ ವರುಷಕ್ಕೆ ಸುಮಾರು ೭೦೦—೮೦೦ ರೂ ಪಾಯಿ ಉತ್ಪತ್ತಿ ಆಗುತ್ತಾ ಇದೆ. ಆಕ್ಟ್ರಾಯಿಬಾಬಿಗೂ ಈ ಮು ತ್ಸದ್ದಿಯು ಗಮನ ಕೊಟ್ಟದ್ದೇ ಆದರೆ ಸಾಲೀಯಾನಾ ಸಾವಿರ ರೂ ಪಾಯಿ ಹುಟ್ಟುವಳಿ ಆಗುವದಕ್ಕೆ ಯೇನೇನೂ ಸಂದೇಹವಿಲ್ಲ. ಆದರೆ ಈ ಮುತ್ಸದ್ದಿಯೊಬ್ಬರನ್ನು ತೆಗೆದರೆ ಇಷ್ಟು ಹಣ ಉತ್ಪತ್ತಿ ಯವಿಲ್ಲವಾದ್ದರಿಂದ ಇವರ ಜೊತೆಗೆ ಈ ಟವನಿಗೆ ಇಟತಕ್ಕ ಜವಾನಿಗಳನ್ನು, ಲಾಂದ್ರಗಳನ್ನೂ ತೆಗೆದರೆ ಇವರುಗಳ ಕೋರಿಕೆ ಯಂತೆ ಸುಂಕದ ಬಾಬು ವಜಾ ಆಗಬಹುದಾಗಿರುತ್ತೆ. ಸರ್ಕಾ ರವರು ಇದನ್ನು ಅಂಗೀಕರಿಸಲಾರರೆಂದು ತೋರುತ್ತೆ. ಇದಲ್ಲ ದೆ ಈ ಮುತ್ಸದ್ದಿಯು ಜನಗಳಿಗೆ ಅವರವರ ಹಿತ್ತಲುಗಳಲ್ಲಿ ತಿಪ್ಪೆ ಗಳನ್ನು ತೆಗೆದು ಹಾಕಬೇಕೆಂದು ಹೇಳುತ್ತಾರಾದ್ದ ರಿಂದ ಇವರಲ್ಲಿ ಇದೊಂದು ದೋಷಾರೋಪಣೆ ಇರುತ್ತೆ.

ತೀರ್ಥಹಳ್ಳಿ. ಈಗ ಮಳೆಯು ಸಂಪೂರ್ಣವಾಗಿ ನಿಂತು ಹೋದ್ದರಿಂದ ಜನರೆಲ್ಲರೂ ಉತ್ಸಾಹದಿಂದ ಗದ್ದೆಗಳನ್ನು ಕೊ ಯ್ಯುವ ಕೆಲಸಗಳಲ್ಲಿ ತೊಡಗಿದ್ದಾರೆ. ಈ ವರ್ಷ ಭತ್ತದ ಬೆಳೆಯು ...ಯೇ ಆಯಿತೆಂದು ಹೇಳಬೇಕು.—...ಕದಲ್ಲಿ ಇದ್ದಿರು ... ಮ ... ನವರ ಹಾಗೆ ಕುದುರೆ ಸವಾರಿ ಮಾ ಡ ಬಂದರೆಂದೂ ಅದ ... ಅನೇಕರಿಗೆ ನಷ್ಟವಾಗುವದೆಂದೂ ... ಅವರನ್ನು ವಿಚಾರಿಸುತ್ತಿದ್ದಾರೆಂದ. ತಿಳಿಸಿತ್ತು ಈಗ ಅವರಲ್ಲಿ ... ಆಯಿತೆಂದು ತಿಳಿಯಿತು. ಇನ್ನು ಮೇಲೆ ... ದಿನಸಂಚಾ ... ದಿಂದ ಸವಾರಿ ಮಾಡ್ಯ ... —೧೬ನೇ ಗುರುವಾರ ಸಾಯಂಕಾಲ ಹೊಳೆ ... ದಲ್ಲಿ ಒಬ್ಬ ಕೊಂಕಣ ಬ್ರಾಹ್ಮಣರ ಮನೆಯ ಮುಂದೆ ... ಅವರ ಹುಡುಗನ ತಲೆಯ ಮೇಲೆ ... ಆ ಹುಡುಗನ ತಲೆಯಮೇಲಿನ ಚರ್ಮ ... ಸಹಿತ ... ಕಿತ್ತು ... ದೈವವಶಾತ್ ತಲೆ ಒ ಡೆಯಲಿಲ್ಲ. ಚರ್ಮ ... ರಕ್ತ ಸುರಿದು ... ಬಹು ಸಂಕಟವಾಗಿತ್ತು. ಆಸ್ಪತ್ರೆಗೆ ತೆಗೆದುಕೊಂಡು ಹೋದರು. ...ರಿಗೆ ವರ್ತಮಾನ ಕಳುಹಿಸಿದನಂತರ ಅವರು ... ನ ... ಕೂದಲನ್ನು ಕತ್ತರಿಸಿ, ಹರಿದುಹೋದ ಎರಡು ಕಡೆಯ ... ಗಳನ್ನು ಸೇರಿಸಿ ಹೊಲಿದು, ಚಿಕಿತ್ಸೆ ಮಾಡುತ್ತಿದ್ದಾರೆ. ಈ ... ಶೀಘ್ರದಲ್ಲಿ ಗುಣವಾದೀತೆಂದು ಹಾರೈಸುತ್ತೇವೆ.—ಇಲ್ಲಿ ... ಅಮಾವಾಸ್ಯೆಯ ಜಾತ್ರೆಯು ಪ್ರಾರಂಭವಾಯಿತು. ನಾನಾ ...ಗಳಿಂದ ಜನರು ಗುಂಪಾಗಿ ಬಂದಿದ್ದಾರೆ. ಎಲ್ಲಾ ಜನರು ವ್ಯಾ ಪಾರ ಲಾಭ ಸಂಪಾದಿಸುವದರಲ್ಲಿದ್ದಾರೆ. ಸ್ವಲ್ಪ ಕಾಡಿಮೆ ... ಮನೆಮಠಗಳನ್ನು ನಾನಾ ವಿಧವಾಗಿ ಅಲಂಕರಿಸಿ ... ಇದ್ದರು ಮೂವರು ಗುರುಗಳು ಬಂದು ಜನರಿಗೆ ಪುಣ್ಯ ... ತೋರುತ್ತದೆ. ರಾಮತೀರ್ಥವೆನ್ನುವ ಕೊಳದ ... ಲು ಎನ್ನದೆ ಜನರು ಒಬ್ಬರಮೇಲೊಬ್ಬರು ಬಿದ್ದು ... ಮಾಡುತ್ತಿದ್ದಾರೆ. ಕೆಲವರು ತಮ್ಮ ಭುಜಗಳ ಮೇಲೆ ಸುಡಿ ...ಕೊಳ್ಳುತ್ತಾರೆ. ಇನ್ನು ಕೆಲವರು ಕುಲಗುರುಗಳಿಗೆ ಅಡ್ಡಬಿದ್ದು ... ಹಾಕಿಸಿಕೊಂಡು ಹೋಗುತ್ತಾರೆ. ಪುಣ್ಯಬೇರೆ ದೊರಕುವ ... ಇಲ್ಲವಂತೆ.—ಅಬ್ಕಾರಿ ಅಸಿಸ್ಟಂಟರೂ, ಎಕ್ಸಿಕ್ಯೂಟಿವ್ ... ಜಾತ್ರೆ ಕಾಲದಲ್ಲಿ ಇನ್ಸ್‌ಪೆಕ್ಷನ್‌ಗೆ ಬಂದಿದ್ದಾರೆ. ... ದುಕಾನ್‌ದಾರರಲ್ಲಿ ಅನೇಕರು ನೀರೇ ಬೆರೆಸಿದ ಸರಾಬ್ ... ದ್ದಾರಂತೆ. ಇದರಿಂದಾದರು ಕುಡುಕರ ನಿಂತೀತೇ? ...ಗಳಿಗೆ ಜಾತ್ರೆ ನೋಡಿದ ಹಾಗೂ ಇನ್ಸ್‌ಪೆಕ್ಷನ್ ಮಾಡಿದ ...ಯಿತು. ರಾಮತೀರ್ಥದ ಪುಣ್ಯಕ್ಕೆ ಬೇರೆ ಖರ್ಚಿಟ್ಟು ...ದೇ?

...ಕೂರು.—ಒಂದು ತಿಂಗಳಿಂದ ಹವ ಬದಲಾವಣೆಯಾಗಿ ...ಲ್ಲಿ ಅನೇಕರು ಛಳಿಜ್ವರ, ಕೆಮ್ಮಲು, ನೆಗಡಿಗಳಿಂದ ನರ ...ದ್ದಾರೆ. ತಂಗಾಳಿ ವಿಪರೀತವಾಗಿ ಬೀಸುತ್ತದೆ – ಸರ್ಕಾರದ ವರು ಪ್ರಜೆಗಳ ಪ್ರಯೋಜನಕ್ಕಾಗಿ ಹಣ ವ್ಯಯಮಾಡಿ ಪ್ರತಿ ಯೊಂದು ತಾಲ್ಲೂಕಿನಲ್ಲಿಯೂ ಒಬ್ಬೊಬ್ಬ ಸೂಲಗಿತ್ತಿಯನ್ನು ನೇ ಮಕಮಾಡಿರುತ್ತಾರಷ್ಟೆ. ಅಂಥಾ ಸೂಲಗಿತ್ತಿಯು ಒಂದೆರಡು ತಿಂ ಗಳು ಆಡದಮೇಲೆ ಹೋಗುವಾಗ್ಯೆ ಬದಲಿ ಸೂಲಗಿತ್ತಿಯನ್ನು ನೇ ಮಕಮಾಡಿ ಕಳುಹಿಸಿಕೊಡುವದು ಅತ್ಯವಶ್ಯಕವಾಗಿದೆ. ಇದಕ್ಕಾಗಿ ಯೇ ರಿಲೀವಿಂಗ್ ಮಿಡ್ವೈಫ್ ಎಂಬ ಕೆಲವರು ಇದ್ದರೆ ಬಹು ಉ ತ್ತಮ. ಇಂಥಾ ಏರ್ಪಾಡು ಮಾಡದಿದ್ದರೆ ರಜ ಪಡೆದು ಹೋಗಿರುವ ಸೂಲಗಿತ್ತಿ ವಾಪಸು ಬರುವ ತನಕ ಅನೇಕ ಸ್ತ್ರೀಯರಿಗೆ ತುಂಬಾ ಅನಾನುಕೂಲವಾಗುವದೆಂಬುವದರಲ್ಲಿ ಯಾವ ಸಂಶಯವಿರಲಾರ ದು. ಸರ್ಕಾರದವರು ಹಣ ಮುಟ್ಟಿಸಿದರೂ ಪ್ರಜೆಗಳಿಗೆ ಸಮಯ ಕ್ಕೆ ಇಲ್ಲದೆಹೋದರೆ ಪ್ರಯೋಜನವೇನು?—ಇದೇ ರೀತಿಯಾಗಿ ಪ್ರತಿ ತಾಲ್ಲೂಕಿನಲ್ಲಿಯೂ ಒಬ್ಬೊಬ್ಬ ವ್ಯಾಕ್ಸಿನೇಟರನ್ನು ಸರ್ಕಾರ ದವರು ನೇಮಕಮಾಡಿರುತ್ತಾರಷ್ಟೆ. ಇಂಥಾ ವ್ಯಾಕ್ಸಿನೇಟರ್ ಈ ತಾಲ್ಲೂಕಿನಲ್ಲಿರುತ್ತಾರೆಯೋ ಇಲ್ಲವೋ ಅನೇಕರಿಗೆ ಇನ್ನೂ ಸಂ ಶಯವಾಗಿದೆ. ಈತನ ಮುಖವನ್ನು ಕಾಣುವದೇ ಅಪರೂಪ. ಇನ್ನುಮೇಲೆ ಮಕ್ಕಳಿಗೆ ಸಿಡುಬು ಏಳುವದು ಜಾಸ್ತಿ. ಅದು ಈಗಾ ಗಲೇ ತಲೆ ಹಾಕಿರುತ್ತದೆ. ಆದ್ದರಿಂದ ಮೇಲ್ಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ತನಿಖೆಮಾಡಿ, ವ್ಯಾಕ್ಸಿನೇಟರು ತನ್ನ ಕೆಲಸದಲ್ಲಿ ತುಂ ಬಾ ಜಾಗ್ರತೆಯುಳ್ಳವನಾಗಿರುವಂತೆ ಮಾಡಿದರೆ ಮಕ್ಕಳಿಗೆ ಕ್ಷೇಮ ಉಂಟಾದೀತು ಮೇಲ್ಪಟ್ಟವರಿಗೆ ಯಶಸ್ಸೂ ಬಂದೀತು.—ಇಲ್ಲಿರು ವ ಮುಸಲ್ಮಾನರ ಮಸೀತಿಯ ಕಟ್ಟಿನ ವಿಷಯದಲ್ಲಿ ಈಗ ಒಂದು ವರ್ಷದಿಂದಲೂ ಮೈಸೂರು ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋ ರ್ಟಿನಲ್ಲಿ ಮೊಕದ್ದಮೆ ನಡೆಯುತ್ತಿದ್ದು, ಇದೇ ತಿಂಗಳು ೨ನೇ ತಾ॥ ಮೇಲಿನ ಕೋರ್ಟಿನಿಂದ ಸಿವಿಲ್ ಕೋರ್ಟಿಗೆ ಹಾಕಿದರೆಂದು ತಿಳಿಯಲಾಯಿತು. ಇದೇ ತಿಂಗಳು ೧೪ನೇ ತಾ॥ ಗಂಧದ ಹರಾ ಜು ಹಾಕಿಸುವದಕ್ಕಾಗಿ ಡಿಸ್ಟ್ರಿಕ್ಟ್ ಫಾರೆಸ್ಟರಾದ ಮೆ॥ ಸಿ. ಅಪ್ಪ ಯ್ಯನವರೂ, ಡೆಪ್ಟಿ ಕಮಿಷನರಾದ ಮೆ॥ ವೆಂಕಟವರದೈಯಂಗಾ ರರೂ ಇಲ್ಲಿಗೆ ದಯಮಾಡಿದ್ದರು —೧೭ನೇ ತಾ॥ ಹಳೆಯ ಡೆಪ್ಟಿ ಕ ಮಿಷನರರೂ, ನಮ್ಮ ಅಮಲ್ದಾರರೂ ಅಪ್ಪಾಜೀರಾಗಿ ಊರಿನ ಎಲ್ಲಾ ಭಾಗಗಳನ್ನೂ ನೋಡಿ, ಮ್ಯುನಿಸಿಪಾಲಿಟಿಯವರು ತಕ್ಕಮ ಟ್ಟಿಗೂ ಊರನ್ನು ಶುಚಿಯಾಗಿ ಇಟ್ಟುಕೊಂಡಿದಾರೆಂದು ಸಂತೋ ಷಪಟ್ಟರು. ಈ ಊರು ಮುಜೇಗಾರನು ಊರಿನ ಶಾಕೀಜಾ ವಿಷ ಯದಲ್ಲಿ ಬಹು ಪ್ರಯಾಸಪಡುತ್ತಿದಾನೆ. ಇಂಥವರನ್ನು ಇಲ್ಲಿಂದ ವರ್ಗಮಾಡಬೇಕೆಂಬ ಸಮಾಚಾರ ಹುಟ್ಟುತ್ತದೆ. ಹೀಗೆ ಪ್ರಯಾ ಸ ಪಡುತ್ತಿರುವವರನ್ನು ವರ್ಗಮಾಡುವದರಲ್ಲಿ ನಷ್ಟವೇ ಹೊರ್ತು ಪ್ರಯೋಜನವಿಲ್ಲ.

---

## ವಿಶೇಷ ವರ್ತಮಾನಗಳು.

ರಷ್ಯಾರಾಜ್ಯದ ಸಾಲವು ಈ ವರುಷ ಕಡಿಮೆ; ಖರ್ಚು ಬಹು ಹೆಚ್ಚು. ಆದಕಾರಣ ಅವರು ಸುಮಾರು ನಾಲ್ಕು ಕೋಟಿ ದ್ರವ್ಯವನ್ನು ಸಾಲಮಾಡಬೇಕಾಗುವದು.

◆◆◆◆

...ರಲ್ ದಳಪತಿ ಎಂದು ಪ್ರಸಿದ್ಧಿಗೊಂಡಿರುವ ಜನರಲ್ ... ಕಳೆದ ೧೯ ನೆ ತಾರೀಖಿನ ದಿನ ಪತ್ನೀ ವಿಯೋಗ ವನ್ನು ...ಂದಿದರೆಂದು ಸಮಾಚಾರ ಬಂದಿದೆ.

◆◆◆◆

ಸ್ಪೆಯಿನ್ ರಾಜ್ಯದ ದೊರೆಯು ಪೋರ್ಚುಗಲ್ ರಾಜ್ಯದ ರಾಜಧಾ ನಿಯಾದ ಲಿಸ್‌ಬನ್ ಪಟ್ಟಣಕ್ಕೆ ಬಂದಿದಾರೆ. ಪರರಾಜ್ಯಗಳ ದೊರೆಗ ಳಾರೂ ಇದುವರೆಗೆ ಪೋರ್ಚುಗಲ್ ರಾಜ್ಯಕ್ಕೆ ಬಂದುದೇ ಇಲ್ಲ.

◆◆◆◆

ಜರ್ಮನಿ ಚಕ್ರವರ್ತಿಯವರ ಗಂಟ್ಲಿನಲ್ಲಿ ಶಸ್ತ್ರ ಹಾಕಿ ತೆಗೆದದ್ದಾಯಿತಷ್ಟೆ. ಅದು ಈಗ ಪೂರ್ತಿಯಾಗಿ ವಾಸಿಯಾಗಿಲ್ಲವೆಂತಲೂ, ಇ ನ್ನೊಂದಾವರ್ತಿ ಶಸ್ತ್ರ ಚಿಕಿತ್ಸೆ ಆಗಬೇಕಾಗಿದೆ ಎಂತಲೂ ಪ್ರಕಟ ವಾಗಿರುವುದು.

◆◆◆◆

ಯೂರೋಪ್ ಖಂಡದಲ್ಲಿರುವ ಉತ್ತರ (ಜರ್ಮನ್) ಸಮುದ್ರ ದೊಳಗೆ ಸಂಚಾರ ಮಾಡುತ್ತಿದ್ದ ಹಡಗುಗಳಲ್ಲಿ ಐದು ನೀರಿನ ಪಾ ಲಾದವೆಂತಲೂ, ಸುಮಾರು ನೂರು ಜನರು ಮೃತಪಟ್ಟರೆಂತಲೂ ಸ ಮಾಚಾರ ಬಂದಿರುವುದು

◆◆◆◆

ಸೋಮಾಲಿಲಾಂಡಿನಲ್ಲಿ ಕಳೆದವಾರ ಇಂಗ್ಲಿಷ್ ಸೈನ್ಯಕ್ಕೂ ಮುಸಲ್ಮಾನರ ಸೈನ್ಯಕ್ಕೂ ಯುದ್ಧ ಪ್ರಾಪ್ತವಾಗಿ ಇಂಗ್ಲಿಷರು ೨೦೦ ಮಂದಿ ಸೋಮಾಲಿಯವರನ್ನು ಕೊಂದು ಸೋಲಿಸಿದರು. ಇಂಗ್ಲಿಷ ರ ಒಬ್ಬ ಸುಬೇದಾರನಿಗೆ ಗಾಯವಾಗಿದೆ

◆◆◆◆

ರಷ್ಯಾರಾಜ್ಯದ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನ ಲ್ಲಿ ಈಗ ಪ್ರವಾಹಗಳು ವಿಪರೀತವಾಗಿ ಬಂದಿರುವ ಕಾರಣ ಬಹು ಮಂದಿ ಪ್ರಜೆಗಳ ಮನೆಮಠಗಳೂ ಆಸ್ತಿಪಾಸ್ತಿಗಳೂ ಕೊಚ್ಚಿಕೊಂ ಡವು. ಅಪಾರ ನಷ್ಟ ಸಿಂಭವಿಸಿ ಕೊಂಡುತ್ತದೆ

◆◆◆◆

ಪರ್ಷಿಯಾ ರಾಜ್ಯದ ದೊರೆಯನ್ನೂ ...ಯನ್ನೂ ಕೊಲ್ಲುವ ದಿ ನಗಳ ಕೆಳಗೆ ಕೊಂದ ಹಾಕಿಬಿಟ್ಟರಷ್ಟೆ. ಆ ರಾಣಿಯವರಿಗೆ ಸೇರಿದ ಎರಡು ಆರಮನೆಗಳನ್ನು ಆಳೆಯ ದಾಯಾದಿಗಳು ೧೫ ಲಕ್ಷ ರೂ ಪಾಯಿಗೆ ಈಗಿನ ರಾಜರಿಗೆ ಬಿಕರಿ ಮಾಡಲು ಪ್ರಯತ್ನಪಟ್ಟರು. ಈ ವಿಷಯದಲ್ಲಿ ಜಿಜ್ಞಾಸೆ ನಡೆಯುತ್ತಿದೆ.

ಜರ್ಮನ್ ರಾಜ್ಯಕ್ಕೆ ಸೇರಿದ ನಾಗಸಾಕಿ ಪಟ್ಟಣದ ಕಲ್ಲಿದ್ದಲು ವ್ಯಾಪಾರಸ್ಥರು ಕಳೆದವಾರ ಸಭೆಸೇರಿ, ಯುದ್ಧಪ್ರಮೇಯವೇನೂ ಪ್ರಾಪ್ತವಾಗಲಾರದೆಂದು ಕಂಡುಬರುವ ತನಕ ತನ್ನ ರಾಜ್ಯದಲ್ಲಿ ಉತ್ಪತ್ತಿಯಾಗುವ ಕಲ್ಲಿದ್ದಲನ್ನೆಲ್ಲಾ ಅಲ್ಲೇ ಕೂಡಿಸಿಡುತ್ತಾ ಬರಬೇ ಕೆಂತಲೂ, ಪರರಾಜ್ಯಗಳವರಿಗೆ ಸ್ವಲ್ಪವೂ ಬಿಕರಿಮಾಡಕೂಡದೆಂತಲೂ ಒಪ್ಪಂದಮಾಡಿಕೊಂಡಿರುತ್ತಾರೆ.

◆◆◆◆

ಉಷ್ಣರಾಜ್ಯಗಳಲ್ಲಿ ಪ್ರಬಲವಾಗಿರುವಂಥಾ ರೋಗಗಳಿಗೆ ಔ ಷಧ ಚಿಕಿತ್ಸೆಗಳನ್ನು ಕಂಡು ಹಿಡಿಯುವುದಕ್ಕೆ ವಿಲಾಯಿತಿಯೊಳಗೆ ಒಂದು ಪಾಠಶಾಲೆಯು ಏರ್ಪಾಡಾಗಿರುವುದು. ಈ ವಿಷಯವನ್ನು ಪ್ರಕಟಿಸುವುದಕ್ಕೆ ಒಂದು ವರ್ತಮಾನ ಪತ್ರಿಕೆಯೂ ಹೊರಡುತ್ತಿದೆ. ಇಂಥಾ ಸ್ಕೂಲಿನ ಮೂಲಧನಕ್ಕೆ ಬೊಂಬಾಯಿ ಪಟ್ಟಣದ ಮೆ॥ ಬೊ ಮಾಂಜಿ ಪೆಟಿಟ್ಟರು ೧ ಲಕ್ಷ ರೂಪಾಯಿ ಕೊಟ್ಟಿದ್ದಾರೆ.

◆◆◆◆

ವಿಲಾಯಿತಿ ರಾಜ್ಯದಲ್ಲಿರುವ ವೆಲ್ವರ್ ಹಾಂಪ್ಟನ್ ಎಂಬ ಪ್ರಾ ಪ್ತ ಪಟ್ಟಣದಿಂದ ಸ್ವಲ್ಪದೂರದಲ್ಲಿ ಬ್ರೌಡ್ ಎಂಬೊಂದು ಗ್ರಾಮ ವಿರುವುದು. ಈ ಗ್ರಾಮದಲ್ಲಿ ಸುಮಾರು ೫೦ ಜನರು ಒಂದು ಹೊ ಸ ಧಾನ್ಯವನ್ನು ತಿಂದು, ವಿಷಪಾನಮಾಡಿದವರಂತೆ ಜ್ಞಾನತಪ್ಪಿ ಬಿ ದ್ದುಕೊಂಡಿದಾರೆ. ಇವರಲ್ಲಿ ೪—೬ ಮಂದಿ ಬದುಕುವುದೇ ಕಷ್ಟ ವೆಂದು ಹೇಳುವರು. ಸರ್ಕಾರದವರು ತನಿಖೆ ಮಾಡಿಸುತ್ತಿದಾರ.

◆◆◆◆

ಟ್ರಾನ್ಸ್‌ವಾಲ್ ರಾಜ್ಯದಲ್ಲಿ ಕೂಲಿ ಮುಂತಾದ ಕೆಲಸ ಮಾಡುವು ದಕ್ಕೆ ಒಂದು ಲಕ್ಷ ಯೆಹೂದ್ಯರು ಅಲ್ಲಿಗೆ ಹೋಗಲು ಸಿದ್ಧರಾಗಿರು ವರು. ಅವರು ಕೇಳುವ ಕೂಲಿ ದರ ಹ್ಯಾಗೆಂದರೆ—ಕೂಲಿ ಮಾಡಿ ಸಿಕೊಳ್ಳುವವರು ಎಲ್ಲರಿಗೂ ವಾಸಕ್ಕೂ ಊಟಕ್ಕೂ ಏರ್ಪಾಡು ಮಾ ಡಿಕೊಟ್ಟು ತಿಂಗಳಿಗೆ ತಲಾ ೩೦ ರೂ. ಕೂಲಿಯನ್ನೂ ಕೊಡಬೇ ಕೆಂಬುದು. ಈ ವಿಷಯವನ್ನು ಕೇಳಿ ಟ್ರಾನ್ಸ್‌ವಾಲಿನವರೆಲ್ಲಾ ಗಾ ಬರಿಪಡಲಾರಂಭಿಸಿದರು.

◆◆◆◆

ಮಾಂಚೂರಿಯಾ ಸೀಮೆಯಲ್ಲಿ ರಷ್ಯಾದವರ ಹಿಂಸೆಯು ಜೋ ರಾಗುತ್ತಿರುವುದನ್ನು ಕಂಡು ಅಲ್ಲಿ ವ್ಯಾಪಾರ ಮುಂತಾದ ಕಸಬು ಗಳಲ್ಲಿ ನಿಂತು ಇರುವ ಚೀನಿಯ ವರ್ತಕರೇ ಮೊದಲಾದವರು ರ ಷ್ಯಾದವರಿಗೂ ಚೀನಿಯವರಿಗೂ ಯುದ್ಧಪ್ರಾಪ್ತವಾಗುವುದರಲ್ಲಿ ಸಂಶಯವಿಲ್ಲವೆಂದು ಹೇಳುತ್ತಾ ತಮ್ಮ ಸರ್ವಸ್ವವನ್ನು ಸಾಗಿಸಿ ಕೊಂಡು ಮಾಂಚೂರಿಯಾ ಸೀಮೆಯಿಂದ ಗುಂಪುಗುಂಪಾಗಿ ಹೊರ ಟುಬರುತ್ತಿದಾರೆ. ಚೀನಾ ರಷ್ಯಾ ರಾಜ್ಯಗಳಿಗೋ ಇಲ್ಲವೇ ಜರ್ಮನ್ ರಷ್ಯಾರಾಜ್ಯಗಳಿಗೋ ಯುದ್ಧ ಸಂಭವಿಸುವುದರಲ್ಲಿ ಅನುಮಾನವೇ ಇಲ್ಲವೆಂದು ಈ ವರ್ತಕರು ಹೇಳುವರು.

◆◆◆◆

ಸೋಮಾಲಿಲಾಂಡಿನಲ್ಲಿ ಮುಲ್ಲಾವಿನ ಸೈನಿಕರು ಮುಡುಗ್ ಎಂಬ ಊರನ್ನು ಆಕ್ರಮಿಸಿಕೊಂಡಿದಾರೆ. ಆ ಮುಲ್ಲಾವಿನ ಮುಖ್ಯ ಸಾರಥಿಯಂತಿದ್ದ ಅಬ್ದುಲ್ಲಾ ಷರಿ ಎಂಬಾತನು ಇಂಗ್ಲಿಷರ ಕೈವಶ ವಾದನೆಂತಲೂ, ಅವನನ್ನು ಇಂಗ್ಲಿಷ್ ಸೈನ್ಯಾಧಿಪತಿಯಾದ ಜನರಲ್ ಎಗರ್ಟನ್ ಯವರ ಬಳಿಗೆ ಕರೆತಂದಿದಾರೆಂತಲೂ, ಇವರಿಬ್ಬರೂ ಕಲೆತು ಸಹೃದಯದಿಂದ ಮಾತನಾಡಿ, ಯುದ್ಧ ನಡೆಯದಂತೆ ಏ ರ್ಪಾಡು ಮಾಡುತ್ತಿದಾರೆಂತಲೂ ತಿಳಿದು ಬಂದಿದೆ. ಮುಲ್ಲಾ ಎಂಬ ಅಧಿಪತಿಯು ಈ ಅಬ್ದುಲ್ಲಾ ಎಂಬಾತನ ಮಾತಿನಲ್ಲಿ ತುಂಬಾ ಪ್ರೀತಿ ವಿಶ್ವಾಸಗಳನ್ನಿಟ್ಟುಕೊಂಡಿರುವಂತೆ ವರ್ತಮಾನವಿದೆ.

◆◆◆◆

ವಿಲಾಯಿತಿ ರಾಜ್ಯದ ವ್ಯವಸಾಯ ವಿಚಾರವನ್ನು ಚೆನ್ನಾಗಿ ಬಲ್ಲಂಥಾ ಮೆ॥ ಗ್ರೀನ್ ಯವರು ತಿಳಿಸುವುದೇನೆಂದರೆ.—ವಿಲಾ ಯಿತಿ ಮತ್ತು ವೇಲ್ಸ್‌ಗಳಲ್ಲಿ ರೈತರ ಮತ್ತು ವ್ಯವಸಾಯ ಕೂಲಿಕಾ ರರ ಸಂಖ್ಯೆಯು ೧೮೫೧ ನೆ ಇಸವಿಯಲ್ಲಿ ೧೬ ಲಕ್ಷವೂ ೬೦ ಸಾವಿರ ವಾಗಿದ್ದಿತು; ಈ ಜನರು ೧೯೦೧ ನೆ ಇಸವಿಯಲ್ಲಿ ೯,೮೧,೦೪೪ ಮಂದಿ ಮಾತ್ರಕ್ಕೆ ಇಳಿದರು. ಇದಲ್ಲದೆ ೧೮೭೪ ನೆ ಇಸವಿಯಲ್ಲಿ ಈ ರಾಜ್ಯದಲ್ಲಿ ೩೪,೫೦,೭೯೦ ಎಕರೆ ಜಮೀನಿನಲ್ಲಿ ಗೋಧಿ ಬೆಳೆ ಯಾಗುತ್ತಿತ್ತು, ೧೯೦೩ ನೆ ಇಸವಿಯಲ್ಲಾದರೋ ೧೫ ೮೧,೫೮೩ ಎಕರೆ ಜಮೀನಿನಲ್ಲಿ ಮಾತ್ರ ಗೋಧಿ ಬೆಳೆ ಮಾಡಿದ್ದಾರೆ.

◆◆◆◆

ಪ್ಯಾರಿಸ್ ಪಟ್ಟಣದಲ್ಲಿ ವಿಪರೀತ ಹಣವನ್ನು ಸಂಪಾದಿಸಿ ಕೆಲಸ ಕಾಣದೇ ಇದ್ದ ಒಬ್ಬ ಸೋಮಾರಿಯು ೪ ಸೇರು ಹಿಡಿಯುವ ಒಂದು ಸೀಸೆಯ ತುಂಬ ಗೋಧೀ ಕಾಳನ್ನು ತುಂಬಿದರೆ ಅದು ಎಷ್ಟು ತೂ ಕವಿರುವದು ಮತ್ತು ಎಷ್ಟು ಕಾಳುಗಳು ಇರುವವು ಎಂಬದನ್ನು ಸಾಧ್ಯವಾದಷ್ಟು ಸರಿಯಾಗಿ ಹೇಳಿದವನಿಗೆ ೧೫,೦೦೦ ರೂಪಾಯಿ ಬಹುಮಾನ ಕೊಡುವೆನೆಂದು ದೇಶದಲ್ಲೆಲ್ಲಾ ಸಾರಿದನು. ಈ ಹಣ ವನ್ನು ಸಂಪಾದಿಸಬೇಕೆಂದು ಇದ್ದ ಅನೇಕವೊಂದು ಸೋಮಾರಿಗಳು ಇವನಿಗೆ ತಮ್ಮ ತಮ್ಮ ಉತ್ತರವನ್ನು ಬರೆದು ಕಳುಹಿಸಿದರು. ಈ ರೀತಿಯಲ್ಲಿ ಸುಮಾರು ೧೪ ಲಕ್ಷ ಜನರು ತಮ್ಮ ಅಂಬಾದನ್ನು ಹೇ ಳಕಳುಹಿಸಿದರು. ಅನಂತರ ಗೊತ್ತುಮಾಡಲ್ಪಟ್ಟ ದಿನದಲ್ಲಿ ಸೀಸೆಯ ಗೋಧೀ ಕಾಳನ್ನು ಒಂದು ಸಭೆಯಲ್ಲಿ ಎಣಿಸಿ, ತೂಕಮಾಡಿ, ಲೆಕ್ಕ ಮಾಡಲು ಅದರಲ್ಲಿ ಸರಿಯಾಗಿ ೩೯,೫೮೮ ಕಾಳುಗಳಿದ್ದವು. ಈ ಸಂಖ್ಯೆಯನ್ನು ಆಲ್ಬರ್ಟ್ ಮವೀನ್ ಎಂಬ ಒಬ್ಬ ಕಮ್ಮಾರನು ಹೇಳಿ ದನಾದ್ದರಿಂದ ಬಹುಮಾನ ದ್ರವ್ಯವು ಅವನಿಗೆ ಕೊಡಲ್ಪಟ್ಟಿ ತು.

ಯುರೋಪ್ ಖಂಡದಲ್ಲಿರುವ ಡೆನ್ಮಾರ್ಕಿನಲ್ಲಿ ಕೇಟಗಾಟ್ ಎಂಬ ಸಮುದ್ರತೀರಕ್ಕೆ ಒಂದು ಶೀಸೆಯು ಸಮುದ್ರದಲ್ಲಿ ತೇಲಿಕೊಂಡು ಬಂದಿದೆ. ಈ ಶೀಸೆಯ ಬಿರಡೆ ತೆರೆದು ನೋಡುವಲ್ಲಿ ಒಂದು ಕಾಗದವಿದ್ದಿತು. ಈ ಕಾಗದವನ್ನು ಬರೆದವನು ಹಲ್ ಎಂಬ ಊರಿನಿಂದ ಸೆಪ್ಟಂಬರ್ ೯ ರಲ್ಲಿ ಹೊರಟ ಹಡಗು ಸಮುದ್ರದೊಳಗೆ ಮುಳುಗಿ ಹೋಯಿತೆಂದು ಮುಂಚಾಗಿ ತನ್ನ ಸಹೋದರರಿಗೆ ವಿಳಾಸ ಬರೆದು ಹಾಕಿರುತ್ತಾನೆ. ಆ ಹಡಗೂ, ಅದರಲ್ಲಿದ್ದ ಪ್ರಯಾಣಸ್ಥರೂ ಎಲ್ಲಾ ಸಮುದ್ರದ ಪಾಲಾಗಿರಬೇಕು.

****

ಅಮೇರಿಕ ಸಂಸ್ಥಾನದ ರಾಜಧಾನಿಯಾದ ನ್ಯೂಯಾರ್ಕ್ ನಗರದಲ್ಲಿ ಪೋಲೀಸಿನವರು ಬಹು ಪರಿಶ್ರಮದಿಂದ ಒಂದು ಕಳ್ಳರ ಗುಂಪನ್ನು ಪತ್ತೆಮಾಡಿ ಹಿಡಿದಿರುತ್ತಾರೆ. ಈ ಗುಂಪಿನವರು ಬಹು ಕಾಲದಿಂದ ಗುಟ್ಟಿನಲ್ಲೇ ಕಳ್ಳ ನೋಟುಗಳನ್ನು ತಯಾರುಮಾಡುತ್ತಿದ್ದರು. ಇವರ ಮುಖಂಡನಾದ ಡೇವಿಸ್ ಬಿರ್ಫಿಲ್ಡ್ ಎಂಬುವನೂ ಸಿಕ್ಕಿಬಿದ್ದನು. ಇವನು ಕಳ್ಳ ನೋಟುಗಳನ್ನು ತಯಾರುಮಾಡುವುದರಲ್ಲಿ ಲೋಕದಲ್ಲೆಲ್ಲಾ ಅದ್ಭುತಮನೆಂಬ ಹೆಸರು ಪಡೆದಿರುವನು. ಇಂಥಾ ಮುಖಂಡನನ್ನೂ ಅವನ ಕೈಕೆಳಗಿದ್ದ ಗುಂಪಿನವರನ್ನೂ ಹಿಡಿದುದಕ್ಕಾಗಿ ಆ ಪೋಲೀಸಿನವರನ್ನು ಸಕಲ ರಾಜ್ಯಗಳವರೂ ಕೊಂಡಾಡುತ್ತಾರೆ.

****

ರಾಧಿಕಾ, ಮಾಲಿಕಾ ಎಂಬಿಬ್ಬರು ಹೆಣ್ಣು ಮಕ್ಕಳು ಪ್ಯಾರಿಸ್ ನಗರದಲ್ಲಿ ಏಕದೇಹಗಳಾಗಿ ಹುಟ್ಟಿದರೆಂತಲೂ, ಆ ಇಬ್ಬರ ಪೈಕಿ ಮಾಲಿಕಾ ಎಂಬುವಳಿಗೆ ಕ್ಷಯರೋಗ ಪ್ರಾಪ್ತವಾಯಿತೆಂತಲೂ, ಇವರನ್ನು ಆಸ್ಪತ್ರೆಗೆ ಸಾಗಿಸಿ ಡಾಕ್ಟರಿಂದ ಎರಡು ದೇಹಗಳನ್ನೂ ಕತ್ತರಿಸಿ ಪ್ರತ್ಯೇಕ ಮಾಡಿಸಿದರೆಂತಲೂ, ಕೂಡಲೇ ಮಾಲಿಕಾ ಎಂಬ ಹುಡುಗಿ ಬದುಕದೆ ಸತ್ತುಹೋಯಿತೆಂತಲೂ ತಿಳಿಸಿದ್ದೆವಷ್ಟೆ. ರಾಧಿಕಾ ಎಂಬ ಹುಡುಗಿಯನ್ನು ಆಸ್ಪತ್ರೆಯಲ್ಲೇ ಇಟ್ಟು ಸಾಕುತ್ತಾ ಬಂದರು. ಈಚೆಗೆ ಅದಕ್ಕೂ ಕ್ಷಯರೋಗ ಹಿಡಿಯಿತು. ಅದನ್ನು ಬದುಕಿಸಿಕೊಳ್ಳಬೇಕೆಂದು ಡಾಕ್ಟರುಗಳು ನಾನಾ ಚಿಕಿತ್ಸೆಗಳನ್ನು ಮಾಡಿದರು. ಆದಾಗ್ಯೂ ಆ ಹುಡುಗಿಯು ಕಳೆದ ವಾರ ಸತ್ತುಹೋಯಿತೆಂದು ಸಮಾಚಾರ ಬಂದಿದೆ.

---


ಜ್ವರಹರಿ.

ಇದು ಸಾಧಾರಣ ಜ್ವರ, ಚಳಿಜ್ವರ, ಮೋರೇಜ್ವರ, ಪಿತ್ತಜ್ವರ, ವಿಷಜ್ವರ, ವಾತಜ್ವರ ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಬಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೬ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕೇಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೬ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ ಕ್ಕೆ ೪ ಆಣೆ, ೧ ರೂ., ೧—೪ ರೂ., ರೂ ೨—೧೨ ಆ., ೧೧ ರೂ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

*********

ಓಮುಂ ಕರ್ಪೂರ.

**Omum Carpoor**

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು. ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಮೊತ್ತ ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪ್ರಿಯ ಓಮುಂ ಕರ್ಪೂರವನ್ನು ನಾನೂ ನನ್ನ ಜವಾಬ್ದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ—ಹಪ್ರಿಯುವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕಂಡ್ ಬೀಚ್ ಲೈನ್, ಮದರಾಸ್.


## ಇದೊಂದು ಹೊಸ ಪುಸ್ತಕ. ಬೇಗನೋಡಿ.

'ಸ್ವಪ್ರಯಾಸ ಫಲದೀಪಿಕೆ'' ಎಂಬ ಈ ಪುಸ್ತಕವು ಪ್ರಸಿದ್ಧವಾದದ್ದೇ ಸರಿ. ಮೈಸೂರು ಸಂಸ್ಥಾನದಲ್ಲಿ ಮಹಾ ಪ್ರಸಿದ್ಧರಾಗಿಯೂ, ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಸೀನಿಯರ್ ಕರ್ಣಾಟಕ ಪಂಡಿತರಾಗಿಯೂ ಇರುವ ಸಿ. ಆರ್. ಕರಿಬಸವಶಾಸ್ತ್ರಿಗಳು ಈ ಪುಸ್ತಕದ ವಿಷಯದಲ್ಲಿ ಕೊಟ್ಟಿರುವ ಅಭಿಪ್ರಾಯವನ್ನು ಸ್ವಲ್ಪ ನೋಡಿ. "ಸ್ವಪ್ರಯಾಸ ಫಲದೀಪಿಕೆಯೆಂಬ ಗ್ರಂಥವನ್ನು ನಾನು ಆದ್ಯಂತವಾಗಿ ಓದಿದೆನು. ಇದರಲ್ಲಿ ಪ್ರತಿ ಮನುಷ್ಯನು ತನಗಿರುವ ಬುದ್ಧಿಗೆ ಅನುಸಾರವಾಗಿ ಸ್ವಂತ ಪ್ರಯೋಜನವಾದ ಕಾರ್ಯದಲ್ಲಿ ಪ್ರವರ್ತಿಸಿ ಬಿಡದೆ ಪ್ರಯಾಸ ಪಡುವನಾದರೆ ತಕ್ಕ ಫಲವು ಸಿದ್ಧಿಸುವದೆಂಬ ಅಂಶಗಳು ಪ್ರಸಿದ್ಧೋದಾಹರಣೆಗಳೊಡನೆ ಸಮರ್ಥಿಸಲ್ಪಟ್ಟಿರುವವು. ಕನ್ನಡದಲ್ಲಿ ಈ ವಿಷಯವಾಗಿ ಯಾವದೊಂದು ಪುಸ್ತಕವೂ ಇದುವರೆಗೆ ಯಾರಿಂದಲೂ ರಚಿಸಲ್ಪಟ್ಟಿಲ್ಲ. ಈ ಗ್ರಂಥದಲ್ಲಿ ನಿರೂಪಿಸಲ್ಪಟ್ಟಿರುವ ವಿಷಯಗಳು ಓದುವವರಿಗೆ ಬಹು ಉಪಯೋಗಿಗಳಾಗಿಯೂ, ಲಲಿತವಾದ ಭಾಷಾ ಸರಣಿಯುಳ್ಳವುಗಳಾಗಿಯೂ, ವ್ಯಾಕರಣ ಬದ್ಧಗಳಾಗಿಯೂ ಇರುವುದರಿಂದ ಈ ಗ್ರಂಥವು ಲೋವರ್ ಸೆಕೆಂಡರಿ ಕ್ಲಾಸ್ ವಿದ್ಯಾರ್ಥಿಗಳು ಓದುವದಕ್ಕೆ ಯೋಗ್ಯವಾಗಿದೆ ಎಂದು ನಂಬುತ್ತೇನೆ.''

೨—೧೦—೧೯೦೩  ಸಿ. ಆರ್. ಕರಿಬಸವಶಾಸ್ತ್ರಿ.

ಮೈಸೂರು.

ಈ ಪುಸ್ತಕವನ್ನು ಗ್ರಂಥಕರ್ತರಾದ ಮ॥ ರಾ॥ ಶ್ರೀ. ವೇದಮಿತ್ರರು ಬರೆದಿದ್ದಾರೆ. ಇದರ ಕ್ರಯ ನಾಲ್ಕು ಆಣೆಗಳು ವಿ. ಪಿ. ಪಿ. ಯಲ್ಲಿ ತರಿಸಿಕೊಂಡರೆ ಆರು ಆಣೆಗಳಾಗುವವು. ಜಾಗ್ರತೆ ನೋಡಿ.

ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

---


ಹೋಮಿಯೋಸಿಯಾ.

ತಕ್ಷಣ ಪರಿಹಾರ

ತಗಲುತ್ತಲೇ ನೋವು ಮಾಯವಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಚೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿದ್ಧಿಸಿತ ಸ್ಟ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಬಂದಾಕ್ಷಣ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಚರ್ಮವಾಯು, ಮೂಲವ್ಯಾಧಿ, ಉಬ್ಬಸ, ಗಾಯಗಳು, ನರ ಹಿಡಿದುಕೊಳ್ಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ ನೋವು, ಊತಗಳು, ಗಡ್ಡೆಗಳು, ಏಟುಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಳಿ ಬರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ—ಸಣ್ಣ ಪೆಟ್ಟಿಗೆ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ ೨—೪ ಆ, ಒಂದೇ ಸಲ ೧೨ ಪೆಟ್ಟಿಗೆ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೪ ಆಣೆ ಬಾಬ್ತು ಪೆಟ್ಟಿಗೆಯಲ್ಲಿ ೧ ರೂ. ಪೆಟ್ಟಿಗೆಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೪ ಆ. ಪೆಟ್ಟಿಗೆಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

*********

ಹೋಮಿಯೋಸಿಯಾ ಯುಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಹೀರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೪ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ—ಹೋಮಿಯೋಸಿಯಾ ಕಂಪೆನಿ, ೨೭ ಸೆಕೆಂಡು ಬೀಚ್ ಲೈನ್, ಮದರಾಸ್.


## ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

4—12—1903 ರಿಂದ 11—12—1903 ರ ವರೆಗೆ.

| ಸ್ಥಳ. | ಪ್ಲೇಗ್ ತಗಲಿದ್ದು. | ಸತ್ತದ್ದು. | ಹಿಂದಿನವಾರದ ಸಂಖ್ಯೆಗಳು. | |
|---|---|---|---|---|
| ಬೆಂಗಳೂರು ಪಟ್ಟಣ | 124 | 97 | 83 | 97 |
| ಮೈಸೂರು ,, | 75 | 68 | 74 | 64 |
| ಬೆಂಗಳೂರು ಡಿಸ್ಟ್ರಿಕ್ಟ್ | 111 | 77 | 92 | 57 |
| ಮೈಸೂರು ,, | 119 | 91 | 135 | 74 |
| ಕೋಲಾರ್ ,, | 63 | 51 | 89 | 55 |
| ಕೋಲಾರ್ ಚಿನ್ನದ ಗಣಿಗಳು | 45 | 29 | 29 | 16 |
| ತುಂಕೂರು ಡಿಸ್ಟ್ರಿಕ್ಟ್ | 21 | 12 | 30 | 20 |
| ಹಾಸನ ,, | 24 | 15 | 7 | 5 |
| ಚಿತ್ರದುರ್ಗ ,, | 76 | 12 | 14 | 9 |
| ಕಡೂರ್ ,, | 33 | 24 | 44 | 26 |
| ಶಿವಮೊಗ್ಗ ,, | 14 | 13 | 34 | 21 |
| ಮೊತ್ತ. | 705 | 549 | 633 | 427 |

ಶಾಲೀವಾಹನ ಶಕ ೧೮೨೫ನೇ ಶೋಭಕೃನ್ನಾಮ ಸಂವತ್ಸರದ ಪುಷ್ಯ ಶುದ್ಧ ಪಂಚಮಿ ಗುರುವಾರದಿಂದ ಪುಷ್ಯ ಶುದ್ಧ ಏಕಾದಶಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ ಡಿಸೆಂಬರ್.

| ತಾ. | ವಾರ. | ತಿಥಿ. | ಘಳಿಗೆ | ನಕ್ಷತ್ರ. | ಘಳಿಗೆ. | ವಾ... |
|---|---|---|---|---|---|---|
| 24 | ಗುರು * | ಪಂಚಮಿ | 9 18 | ಧ | 60-0 | |
| 25 | ಶುಕ್ರ † | ಷಷ್ಠಿ | 11 26 | ಶ | 5-18 | 1 |
| 26 | ಶನಿವಾರ ‡ | ಸಪ್ತಮಿ | 18 18 | ಪೂಭಾ | 1 20 | 1 |
| 27 | ರವಿವಾ | ಅಷ್ಟಮಿ | 22 12 | ಉಭಾ | [illegible] | 1 |
| 28 | ಚಂದ್ರ | ನವಮಿ | 21-22 | ರೇ | 19 3- | 1 |
| 29 | ಕುಜ | ದಶಮಿ | [illegible] 16 | ಅ | 21 36 | 1 |
| 30 | ಬುಧ ¶ | ಏಕಾದಶಿ | 21 1[illegible] | ಭ | 21 12 | 1 |

* ಮಾರ್ಗಶಿರಲಕ್ಷ್ಮೀವ್ರತ † ತುಳಸಿಷಷ್ಠಿ ‡ [illegible]
ಅಮೃತಸಿದ್ಧಿಯೋಗ ¶ [illegible] ಸ್ಮಾರ್ತೈಕಾದಶಿ

## ಪೇಟೆ ಧಾರಣೆ.

| ದಿನಸು. | ಮೈಸೂರು. | ಬೆಂಗಳೂರು. |
|---|---|---|
| ಕಡ್ಡೀ ಅಕ್ಕಿ ಪಲ್ಲ ೧ಕ್ಕೆ | ರೂ. ೧೧—೪—೦ | ೧೦-೪-[illegible] |
| ಕೆಂಬೂತಿ ಅಕ್ಕಿ ಅವಲ್ .. | .. ೧೦—೨—೦ | ೧೦-೪-[illegible] |
| ,, ಮಾಯಂ | .. ೧೬—೮—೦ | ೧೦-೦-[illegible] |
| ಜಾಪಾಳ್ ಅಕ್ಕಿ .. | .. ೯—೧೦—೦ | ೧೨-೦-[illegible] |
| ಸಣ್ಣಕ್ಕಿ ಅವಲ್ .. | .. ೧೩—೦—೦ | ೧೩-೦-[illegible] |
| ,, ಮಾಯಂ .. | .. ೧೨—೦—೦ | ೧೧-೦-[illegible] |
| ತೊಗರೀ ಬೇಳೆ ಪಲ್ಲ ೧ಕ್ಕೆ | .. ೧೧—೧೨—೦ | ೧೬-೪-[illegible] |
| ,, ಮಾಯಂ .. | . ೧೩—೪—೦ | ೧೪-[illegible] |
| ಸೇರ್ ರಾಗಿ ಪಲ್ಲ ೧ಕ್ಕೆ .. | ೩—೧೨—೦ | ೩-[illegible] |
| ಕಾರಾಗಿ .. | . ೩—೪—೦ | ೨-೧೩-[illegible] |
| ಜೋಳ .. | . ೨—೮—೦ | ೪-೧೨-[illegible] |
| ಅಲಸಂದೆ ಪಲ್ಲ ೧ಕ್ಕೆ .. | .. ೫—೧೨—೦ | ೫-೪-[illegible] |
| ಬಿಳೀ ಅವರೆ .. | . ೪—೧೨—೦ | ೯-೦-[illegible] |
| ಹೆಸರು .. .. | .. ೯—೦—೦ | ೯-೦-[illegible] |
| ಉದ್ದು .. .. | .. ೪—೧೨—೦ | ೯-೦-[illegible] |
| ಕಡಲೆ .. .. | .. ೧೦—೦—೦ | ೪-೪-[illegible] |
| ಎಳ್ಳು .. .. | .. ೧೨—೧—೦ | ೩-೧೩-[illegible] |
| ಹುರುಳಿ .. .. | .. ೩—೪—೦ | ೪-೧೨-[illegible] |
| ಹತ್ತಿ ೧—೦೩ ಸೇರಿಗೆ .. | .. ೯—೪—೦ | ೬-೪-[illegible] |
| ಸೀಗೇಕಾಯಿ ಮಣ ೧ಕ್ಕೆ | .. ೧—೪—೦ | ೨-೧೨-[illegible] |
| ಮೆಣಸಿನಕಾಯಿ .. | .. ೩—೦—೦ | ೨-೪-[illegible] |
| ,, ಮಾಯಂ .. | .. ೩—೧—೦ | ೨-[illegible] |
| ಬೆಲ್ಲ ದೊಡ್ಡ ಅಚ್ಚು .. | .. ೪—೪—೦ | ಮಾ.೧-೧೨-[illegible] |
| ಒಳ್ಳೆಣ್ಣೆ ಮಣ ೧ಕ್ಕೆ .. | .. ೩—೧೪—೦ | ೩-೦-[illegible] |
| ಹರಳೆಣ್ಣೆ ,, .. | .. ೩—೧೨—೦ | ೩-[illegible] |
| ಕೊತ್ತಂಬರಿ ಪಲ್ಲ ೧ಕ್ಕೆ .. | .. ೬—೦—೦ | ೫-೧೩-[illegible] |
| ಉಪ್ಪು ,, .. | .. ೧೦—೦—೦ | ೪-೧೧-[illegible] |
| ಹುಣಸೇ ಹಣ್ಣು .. | .. ೬—೧೪—೦ | ೧-[illegible] |
| ,, ಹಳೇದು .. | .. ೬—೧೦—೦ | ೩-[illegible] |
| [illegible] .. .. | .. ೧೦—೪—೦ | ೧೦-[illegible] |
| ಬೇಮಯಿಂಜ ಹಿಟ್ಟು ೧ಕ್ಕೆ | .. ೪—೯—೦ | ೪-೪-[illegible] |
| ತೆಂಗಿನಕಾಯಿ ೧೦೦ ಕ್ಕೆ | .. ೪—೪—೦ | ೩-೦-[illegible] |
| ಅಳಲೇಕಾಯಿ ಮಣ ೧ಕ್ಕೆ | .. ೦—೧೪—೦ | ೬-೧-[illegible] |
| ಅಂಟ್ವಾಳದಕಾಯಿ ಮಣ ೧ಕ್ಕೆ | .. ೦—೧೪—೦ | ೬-೪-[illegible] |
| ಚಿನ್ನ (ಪವನ್) ಕೆಂಪು | .. ೧೫—೪—೦ | ೧೫-೩-[illegible] |
| ,, ,, ಹಸಿರು | .. ೧೫—೪—೦ | ೧೫-೯-[illegible] |
| ,, ,, ಗಟ್ಟಿ ತೊಲ ೧ಕ್ಕೆ .. | ೨೬—೦—೦ | ೨೪-೫-[illegible] |
| ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ .. | ೭೨—೦—೦ | ೭೦-[illegible] |


Printed and Published by the Rev. E. W. Thompson, M.A. the Proprietor and Manager, Wesleyan Mission Press, Mysore. 24/12/1903.

# ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು — o — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೬. ಮೈಸೂರು—ಸನ್ ೧೮೯೧ ನೇ ಇಸವಿ ಡಿಸೆಂಬರ್ ತಾರೀಖು ೩೧ ನೇ ಗುರುವಾರ. ಸಂಚಿಕೆ ೩೧


"ಹರಿಂಗಾನಬೀ" ಪ್ರಯಾಂಗವು.

ಈ ವಾಸಿಕ ಪತ್ರಿಕಕರ್ತರು ೧೮೯೨ ನೇ ವರ್ಷಕ್ಕೆ ಉಪಯೋಗಕರವಾದ ಒಂದು ಪ್ರಯಾಂಗವನ್ನು (ಕಾಲೆಂಡರನ್ನು) ತಯಾರು ಮಾಡಿರುತ್ತಾರೆ. ಅದರಲ್ಲಿ ವಿವಿಧ ಚಿತ್ರವು ಬಹು ಸುಂದರವಾಗಿವೆ. ಪತ್ರ್ಕೆಲ ನಿರ ಸಂಬಂಧ ಅನೇಕ ಉಪಯುಕ್ತ ವಿಷಯಗಳು ಇವೆ. ಇದ ಅಪೇಕ್ಷಿಸುವವರು ಡಿಸೆಂಬರ್ ೩೧ನೇ ತಾರೀಖಿನೊಳಗಾಗಿ ಈ ವಾಸ ಪತ್ರಿಕೆಗೆ ೬ (ಅಥವಾ ಅಂಚೆ ಹಾಸಲು ೭ ಆಣೆಯನ್ನು) ಆಣೆಯನ್ನು ವಾರ್ಷಿಕ ಚಂದಾ ಕೊಟ್ಟು ಪ್ರಯಾಂಗವನ್ನು ಉಚಿತವಾಗಿ ಪಡೆಯಬಹುದು. ಪ್ರಯಾಂಗವನ್ನು ಮಾತ್ರ ಅಪೇಕ್ಷಿಸುವವರು ನಾಲ್ಕಾಣೆಯನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಿ ಪಡೆಯಬಹುದು. ಈ ವಿಳಾಸಕ್ಕೆ ಬೇಗ ಬರೆಯಿರಿ!

ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

## ಸ್ಟಾಂಡರ್ಡ್ ಲೈಫ್ ಅಶ್ಯೂರನ್ಸ್ ಕಂಪನಿ.

ಸನ್ ೧೮೨೫ ರಲ್ಲಿ ಸ್ಥಾಪಿಸಲ್ಪಟ್ಟಿದ್ದು.

ಇಂಡಿಯಾ ದೇಶದಲ್ಲಿ ಬ್ರಿಟಿಷ್ ಇನ್ಸ್ಯೂರೆನ್ಸ್ ಯೋಜನೆ [illegible] ಜೀವವಿಮೆ ಮಾಡಿಸಿಕೊಳ್ಳುವ ಕಂಪನಿಗಳಲ್ಲಿ ಇದು ಬಹಳ ಹಳೆಯದೂ ಶ್ರೇಷ್ಠವೂ ಆದ [illegible] ಇದೆ. [illegible] (ಸ್ಟ್ಯಾಂಡರ್ಡ್ ಲೈಫ್) [illegible] ಈ ಕಂಪನಿಯು [illegible] ಈ ಕಂಪನಿಯವರಿಗೆ [illegible] ಜೀವವಿಮೆ ಮಾಡಿಸಿದವರಿಗೆ [illegible]

ಈ ಕಂಪನಿಯು ಜೀವವಿಮೆ [illegible] ಬಹು ಅನುಕೂಲ [illegible] ಜೀವವಿಮೆದಾರರುಗಳಿಗೆ [illegible]

[illegible] ವಯಸ್ಸು [illegible] ೨,೦೦೦ ರೂ [illegible] ಕಂಪನಿಯವರು [illegible] ಜೀವವಿಮೆದಾರರು ಕಂಪನಿಗೆ [illegible] ಪ್ರತಿ [illegible]

| ವಯಸ್ಸು | ೫೦ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಪಡೆಯಲು ಜೀವವಿಮೆ ಮಾಡಿಸಿದವನ ಕಂಪನಿಗೆ ಕೊಡತಕ್ಕದ್ದು | ೫೫ ವಯಸ್ಸಿನಲ್ಲಾಗಲಿ ಅದಕ್ಕೆ ಮೊದಲೇ ಮೃತನಾದರೆ ಆಗ್ಗಾಗಲಿ ೨,೦೦೦ ರೂ. ಯನ್ನು ಪಡೆಯಲು ಜೀವವಿಮೆ ಮಾಡಿಸಿದವ ಕಂಪನಿಗೆ ಕೊಡತಕ್ಕದ್ದು. |
|---|---|---|
| ೨೦ | ರೂ. ೬—೧೨—೮ | ರೂ. ೬—೦—೦ |
| ೨೫ | ,, ೭—೧೫—೪ | ,, ೬—೧೪—೦ |
| ೩೦ | ,, ೯—೧೨—೮ | ,, ೮—೨—೧ |
| ೩೫ | ,, ೧೨—೧೪—೮ | ,, ೧೦—೧—೪ |
| ೪೦ | | ,, ೧೩—೪—೮ |

೨,೦೦೦ ರೂ. ಗಿಂತಲೂ ಹೆಚ್ಚು ಹಣಕ್ಕಾಗಲಿ ಕಡಮೆಯಾದದ್ದಕ್ಕಾಗಲಿ [illegible] ಹೆಚ್ಚು ಕಡಮೆ ಇದ್ದರಾಗಲಿ ಅಂದಾ ಜರವೇ [illegible] ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು. [illegible] ಹಾರಿದುಲ್ಲಿಖಿತ ಅಂದಾ ದರಗಳನ್ನು ಕಡಮೆ ಮಾಡಿ. [illegible] ಅಂದಾ [illegible] ಇದೇ ವಿಳಾಸ [illegible] ಎಂ. ಸುಬ್ರಹ್ಮಣ್ಯಯ್ಯ,
[illegible] ಮತ್ತು [illegible], ಬೆಂಗಳೂರ್ಗ್.

## ಗ್ರಹತಸಂಜೀವಿನಿ.

18

೧ ರೂ. ೮ ಆ.; ವಿ. ಪಿ. ಚಾರ್ಜ್ ೩ ಆ.
ಕೆ. ಪರಸುರಾಮಯ್ಯ ಮತ್ತು ಕಂಪನಿ, ಮೈಸೂರು.

## WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಪುಸ್ತಕ, ಚಿತ್ರ, ಪ್ರಿಂಟಿಂಗ್ ಮುಂತಾದ ಸಮಸ್ತ ಪ್ರಿಂಟಿಂಗ್ ಕೆಲಸಗಳನ್ನೂ ಬಹಳ ಸುಲಭ ಛಾರ್ಜಿಗೂ, ಜಾಗ್ರತೆಯಿಂದಲೂ, ನೇತ್ರಾನಂದಕರವಾಗಿಯೂ ಮಾಡಿಕೊಡುತ್ತಾರೆ. ಅಪೇಕ್ಷೆಯುಳ್ಳವರು ಕೆಲಸವನ್ನು ಕಳುಹಿಸಿಕೊಟ್ಟು ಪರೀಕ್ಷೆ ಮಾಡಬೇಕು. ಆ ಪುಸ್ತಕಗಳು ಬಹಳ ಗಟ್ಟಿಯಾಗಿಯೂ ಅಂದವಾಗಿಯೂ ಬೈಂಡಾಗುತ್ತವೆ. ಎಲ್ಲಾ ವಿಷಯಗಳನ್ನೂ ಪ್ರೆಸ್ ಮ್ಯಾನೇಜರಿಗೆ ಬರೆದು ಆ ಥವಾ ಅವರನ್ನು ನೋಡಿ ಮಾತಾಡಿ ತಿಳಿದುಕೊಳ್ಳಬಹುದು.

ವಿಳಾಸ: ಜೆ. ಎ. ಫಾರ್ಲ್ಸ್, ಮ್ಯಾನೇಜರ್,
ಮೈಸೂರು.

## ROBINSON'S PATENT BARLEY.

## ರಾಬಿನ್ಸನ್‌ರವರ ಬಾರ್ಲಿ ಹಿಟ್ಟು.

ಸರ್ವತ್ರದಲ್ಲಿ ಶಿಫಾರಸುಗೊಂಡ,

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಎಳೆಗೋಧಿಯಿಂದ ಮಾಡಿದೆ. ಹಸ್ತಸ್ಪರ್ಶವಿಲ್ಲದೆ [illegible]

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ಸರ ಮಾಡಿ ಬಿಸಿ ನೀರು ಹಾಕಿ ಕಾಯಿಸಿ [illegible] ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದಂಥ ಮತ್ತು ತಾಪಶಾಂತಿಯನ್ನು ಕೊಡುವಂಥ ಪಾನವಾಗಿರುತ್ತದೆ.

ಇದಕ್ಕೆ ಸಲ್ಪ ನಿಂಬೇ ಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ಕೋಗದ ವಸ್ತುವನ್ನು ಕೆಲವರು ಮಾರುತ್ತಾರಾದ್ದರಿಂದ ಖಾತ್ರಿಯಾದ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ ಚೊಹರನ್ನೂ ಕೆಳಗೆ ನಮ್ಮ ಹೆಸರನ್ನೂ ನೋಡಿ ತೆಗೆದುಕೊಳ್ಳಬೇಕು

## ಮುದ್ರಾಪಕಜರವರ ಪ್ರೋಟೋಗ್ರಾಫ್‌ಗಳು.

ಇವು ವಿಲಾಯಿತಿಯಿಂದ ಬಂದಿವೆ. ಮಾರಿಹೋಗಿಹೋದಾವು! ಈಗ ನೋಡಿ! ಬಹಳ ಸೊಗಸಾಗಿವೆ ದೊಡ್ಡ ಸೈಜಿನವು, ಚಿಕ್ಕವುಗಳಲ್ಲ. ಕ್ರಯ ಎಂಟೇ ಆಣೆ. ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ಚಿತ್ರಗಳು; ಸುಂದರವಾದ ಬಣ್ಣಗಳುಳ್ಳವು. ಕ್ರಯ ದೊಡ್ಡ ಸೈಜಿನವು ೮ ಆಣೆ, ಸಣ್ಣ ಸೈಜಿನವು ೨ ಆಣೆ.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

## ಜನರಂಜಿತವಾದ ಪುಸ್ತಕಗಳು! ಬೇಗನೋಡಬಾರದೇ

ಮೈಸೂರು ಸರ್ಕಾರದ ವಿದ್ಯಾ ಇಲಾಖೆಯವರು ಈ ಪುಸ್ತಕಗಳ ಅಮೂಲ್ಯತ್ವವನ್ನು ತಿಳಿದು ನೂರೈವತ್ತು ರೂಪಾಯಿಗಳಿಗಿಂತ ಹೆಚ್ಚಾಗಿಯೇ ಖರೀದಿಸಿಕೊಂಡಿದ್ದಾರೆ.

ಪುರಾತನ ಗ್ರೀಕರ ಚರಿತ್ರೆ. ಬಹು ರಸಿಕವಾಗಿದೆ. ಚಿತ್ರಗಳಿಂದ ಕೂಡಿದ್ದು ಕ್ರಯ ೦—೨—೦

ಪ್ರಾಚೀನ ಮೃಗಗಳ ವರ್ಣನೆ. ಚಿತ್ರಗಳಿಂದ ತುಂಬಿದೆ. ೦—೧—೦

ಖಗೋಳ ಶಾಸ್ತ್ರ ಸಿದ್ಧಾಂತ. ಎಲ್ಲರೂ ಓದತಕ್ಕದ್ದು. ಅನೇಕ ಚಿತ್ರಗಳಿವೆ ೦—೧—೦

ಪಕ್ಷಿಗಳ ವರ್ಣನೆ. ಸ್ಕೂಲ್ ಹುಡುಗರಿಗೆ ಇನಾಮಾಗಿ ಕೊಡುವದಕ್ಕೆ ಯೋಗ್ಯವಾಗಿದೆ. ಅನೇಕ ಪಕ್ಷಿಗಳ ಪಟಗಳೂ, ಅವುಗಳ ಚರಿತ್ರೆಗಳೂ ಇದರಲ್ಲಿ ಅಡಕವಾಗಿವೆ ೦—೧—೦

ಇಂಡಿಯಾ ಚಕ್ರವರ್ತಿಯವರಾದ ಎಡ್ವರ್ಡ್ ಸಾರ್ವಭೌಮರ ಮತ್ತು ಚಕ್ರವರ್ತಿನಿಯರಾದ ಅಲೆಕ್ಸಾಂದರಾ ಅಮ್ಮನವರ ಜೀವಮಾನಗಳ ಚರಿತ್ರೆ. ಇದರಲ್ಲಿ ಗ್ಲೇಜ್ ಕಾಗದದಮೇಲೆ ಹಾಕಿರುವ ಪಟಗಳು ಅನೇಕವಾಗಿವೆ. ಪ್ರತಿಯೊಬ್ಬರ ಮನೆಯಲ್ಲೂ ಇರತಕ್ಕ ಪುಸ್ತಕ. ಇಂಥಾ ಉತ್ಕೃಷ್ಟವಾದ ಪುಸ್ತಕಕ್ಕೆ ಬೆಲೆಯು ಬಹು ಕಡಿಮೆಯಾಗಿದೆ. ಕ್ರಯ ೦—೪—೦

ಚಕ್ರವರ್ತಿಗಳ ಪಟ್ಟಾಭಿಷೇಕದ ಪುಸ್ತಕ ಕ್ರಯ ೦—೨—೦

ಕ್ರಿಮಿಗಳ ವರ್ಣನೆ (ಸಚಿತ್ರ) ೦—೧—೦

ದೇಹವೆಂಬ ನನ್ನ ಮನೆ (ಸಚಿತ್ರ) ೦—೧—೦

ಪ್ರಾರ್ಥನಾಮಂಡಲಿ ೦—೨—೦

ಚಿಕ್ಕವರಿಗೆ ಹೇಳಿದ ಕಥೆಗಳು ೦—೧—೦

ಕಾಂಬ್ರಿಯನಾದ ಪಾಲಿಸಿಯ ಚರಿತ್ರೆ ೦—೧—೦

ಗ್ರೀನ್‌ಲ್ಯಾಂಡಿನ ಚರಿತ್ರೆ ೦—೨—೬

ಮಾರ್ಟಿನ್ ಲೂಥರನ ಚರಿತ್ರೆ ೦—೧—೬

ಆರ್ಥರ್ ಪ್ರಾರ್ತೆರ್ನಬರ ಚರಿತ್ರೆ ೦—೧—೬

ಘನತೆಯುಳ್ಳ ಸ್ತ್ರೀಯರ ಚರಿತ್ರೆ ೦—೨—೬

(೧) ವೇದಗಳನ್ನು ಬರೆದವರು ಯಾರು? (೨) ಶಾಕ್ಯಮುನಿ ತೀರ್ಥಂಕರ, (೩) ಪಾಪ ಮತ್ತು ಪಾಪತೀರಿಸುವ ಮಾರ್ಗ, (೪) ಇಂಡಿಯಾದೇಶದ ಬಡತನದ ಕಾರಣಗಳು, (೫) ಬಾಲ್ಯವಿವಾಹ, (೬) ಪ್ರಾಯಶ್ಚಿತ್ತವು, (೭) ಬಿಡುಗಡೆ, (೮) ಮಾನವಧರ್ಮಶಾಸ್ತ್ರ, (೯) ಗ್ರಹಗಳು, (೧೦) ಮಕ್ಕಳನ್ನು ಬೆಳೆಸತಕ್ಕವಿಧ. (೧೧) ಸ್ವಪ್ನಗಳು, (೧೨) ಎಲ್ಲರೂ ಸಹೋದರರು, (೧೩) ಮಂತ್ರ, ತಂತ್ರ, ಯಂತ್ರಗಳು, (೧೪) ಜ್ಯೋತಿಷಶಾಸ್ತ್ರ (೧೫) ಆರೋಗ್ಯಪ್ರಕಾಶಿಕೆ. ಈ ಪುಸ್ತಕಗಳ ಪ್ರತಿಯೊಂದಕ್ಕೆ ಮೂರು ಕಾಸು ಕ್ರಯವಿದೆ. ಮೇಲ್ಕಂಡ ಹದಿನೈದು ಪುಸ್ತಕಗಳನ್ನು ಒಟ್ಟಾಗಿ ಕರಿಸತಕ್ಕದ್ದು. ಬಿಡಿಯಾಗಿ ಮಾರಲಾರೆವು. ಈ ಪುಸ್ತಕಗಳನ್ನು ಓದಿದಮೇಲೆ ಬರುವ ಸಂತೋಷವನ್ನು ವಿವರಿಸಲಾಗದು. ಜಾಗ್ರತೆ ನೋಡಿ. ವಿ. ಪಿ. ಪಿ. ಮೂಲಕವಾಗಿಯಾಗಲಿ ಅಥವಾ ಹಣವನ್ನು ಮುಂಗಡವಾಗಿ ಕಳುಹಿಸೋಣದ್ದರಿಂದಾಗಲಿ ಪುಸ್ತಕಗಳನ್ನು ಪಡೆಯಬಹುದು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ನಾವು ಉದಾಹರಿಸಿರುವ ಇವೆರಡು ವೃತ್ತಾಂತಗಳನ್ನು ವಿಮರ್ಶಿಸುವಲ್ಲಿ ಕಂಡುಬರುವುದೇನೆಂದರೆ- ಮಾನವನು ಭಗವಂತನ ಇಚ್ಛೆಯೆಂದು ನಾವು ತಿಳಿಯುತ್ತೇವೆ ಅದರಂತೆ ನಡೆಯುವುದು, ನಮ್ಮ ಪ್ರಾಣಾತ್ಮದ ಮಮತಾಕಾರವನ್ನು ಪ್ರೀತಿಸಿ ಸಲಹಬೇಕೆಂಬ ಆ ಮಾತಾಪಿತೃಗಳ ಆಜ್ಞೆಯನ್ನು ವಿಧೇಯಿಸುವುದಕ್ಕಿಂತಲೂ ವಿಶೇಷವಾದುದು. ಮಾತಾಪಿತೃಗಳಲ್ಲಿ ನಾವಿಟ್ಟಿರುವ ಮಮತೆಯು ದೊಡ್ಡದಲ್ಲ, ಮುಖ್ಯವೂ ಅಲ್ಲ; ಭಗವಂತನಲ್ಲಿ ಇಡಬೇಕಾದ ಪ್ರೀತಿಯು ಕರ್ತವ್ಯವೇ ಮಹಾ ಪವಿತ್ರವಾದುದಾಗಿಯೂ ಅತ್ಯವಶ್ಯವಾಗಿ ನೆರವೇರಿಸತಕ್ಕದಾಗಿಯೂ ಇದೆಯೆಂದು ತಿಳಿಯತಕ್ಕದು. ಯೇಸುಸ್ವಾಮಿಯೂ ಕೂಡ "ನನಗಿಂತ ಹೆಚ್ಚಾಗಿ ತಂದೆತಾಯಿಗಳನ್ನಾಗಲಿ ತಮ್ಮಂದಿರನ್ನಾಗಲಿ ಪ್ರೀತಿಸುವವನು ನನ್ನ ಸೇವೆಗೆ ಯೋಗ್ಯನಲ್ಲ" ಎಂದು ಘೋಷಿಸಿದ್ದಾನೆ.

ಹೀಗಿರುವುದರಿಂದ ಈ ವಿಶೇಷವಾದ ಸತ್ಯವನ್ನು ಯಾರು ಪರಿಗ್ರಹಿಸುವುದಿಲ್ಲವೋ ಅವರ ಮತಾಚಾರವು ಭಕ್ತಿಪೂರ್ವಕವಾದುದೂ ಅಲ್ಲ, ಭಕ್ತಿಪೂರ್ವಕವಾದುದಲ್ಲ ಎಂದು ಹೇಳುವಲ್ಲಿ ದೋಷವೇನು? ಅಂಥ ಮತಾಚಾರವು ಬರಿಯ ಆಸಿ ಸಂಜರನೇ ಹೊರತು ಜೀವಪ್ರದವಲ್ಲ; ಅಂಥ ಮತಾಚಾರವನ್ನು ಹಿಡಿದಿರುವವರು ಅನೇಕ ಕಟ್ಟಳೆಗಳೆಂಬ ಸರಪಣಿಗೆ ಕಟ್ಟುಬಿದ್ದು ದಾಸರಾಗಿ ಹೋಗಿದ್ದಾರೆ. ಅವರ ನಿಜವಾದ ಮತವು ಇಂಥಾದುದಲ್ಲವೇ. ಬುದ್ಧಿ ಭಕ್ತಿ ಪ್ರೀತಿಯೆಂಬ ದಿವ್ಯಗುಣಗಳಿಂದ ಯುಕ್ತವಾದ ಮತವೇ ಸತ್ಯವೆಂಬುದು ಸರ್ವಸಮ್ಮತವಾಗಿರುವಲ್ಲಿ ವಿವೇಕಿಗಳಾದ ಮಾತಾಪಿತೃಗಳು ಮಾಡತಕ್ಕದೇನು? ಹಿರಣ್ಯಕಶಿಪುವು ಪ್ರಹ್ಲಾದನಿಗೆ ಮಾಡಿದಹಾಗೆ ಮಾಡುವರೇ? ತಮ್ಮ ಮಕ್ಕಳು ಯಾವ ಮತವನ್ನೇ ಅವಲಂಬಿಸಲಿ, ಅದರಿಂದ ತಮ್ಮ ಮನಸ್ಸಿಗೆ ಎಷ್ಟೇ ವ್ಯಥೆಯುಂಟಾಗಲಿ, ಅವರೊಳಗೆ ಹುಟ್ಟುವ ದೇವಭಕ್ತಿಯನ್ನು ನಿರೋಧಿಸುವುದು ಅನುಚಿತವೆಂದು ತಿಳಿದು, ಅವರ ಇಷ್ಟಾನುಸಾರವಾಗಿ ಬಿಡುವುದೇ ಲೇಸು.

## ಜಪಾನ್ ರಷ್ಯಾ ರಾಜ್ಯಗಳು.

ಈ ಎರಡು ರಾಜ್ಯಗಳಿಗೂ ಯುದ್ಧ ಪ್ರಾಪ್ತವಾಗಬಹುದೆಂಬ ವಿಷಯದಲ್ಲಿ ಈಚೆಗೆ ತಿಳಿದುಬಂದಿರುವುದೇನೆಂದರೆ.—ಜಪಾನಿನವರು ರಷ್ಯಕ್ಕೆ ಬರೆದಿರುವ ಜವಾಬು ಗಾಬರಿಹುಟ್ಟಿಸುವಂಥದಾಗಿಲ್ಲ; ಸಮಾಧಾನ ಭಾವದಿಂದ ಕೂಡಿದೆ. ಅವರೀಗ ಪರಸ್ಪರ ಒಪ್ಪಂದ ಮಾಡಿಕೊಳ್ಳುವುದಕ್ಕೆ ಸನ್ನಾಹ ಮಾಡುತ್ತಿದ್ದಾರೆ. ಆದ್ಯಾಗಿ ಹರ್ಬರ್ಟ್ ಎಂಬ ಪಟ್ಟಣದಲ್ಲಿ ಪ್ರಜಾಕಂಟಕರಾಗುತ್ತಿರುವರು. ಇವರು ಊರೂರುಗಳ ಮೇಲೆ ನುಗ್ಗಿ ಕೊಳ್ಳೆಹೊಡೆಯುತ್ತಿದ್ದಾರೆ. ಇವರ ಹಾವಳಿಯನ್ನು ಅಡಗಿಸುವದಕ್ಕೆ ರಷ್ಯಾ ಸೈನಿಕರು ಕುಂಬಾ ಶ್ರಮಪಟ್ಟು ನಷ್ಟ ಹೊಂದುತ್ತಿದ್ದಾರೆ. ಕೊರಿಯಾ ದೇಶದ ಕೆಲವು ತೀರಪ್ರದೇಶಗಳಲ್ಲಿ ದಂಗೆಯನ್ನು ಅಡಗಿಸುವುದಕ್ಕೆ ಜಪಾನಿನವರು ರಷ್ಯದವರ ಅನುಮತಿ ಪಡೆದು, ತಮ್ಮ ಸೈನ್ಯವನ್ನು ಆ ಪ್ರಾಂತ್ಯಕ್ಕೆ ರವಾನೆಮಾಡಿದರು. ಚೀನಿಯವರು ತಮ್ಮ ಕೃತ್ಯಗಳನ್ನು ತಡೆಯುತ್ತಿರುವದನ್ನು ನೋಡಿ ರಷ್ಯದವರು ಸ್ವಲ್ಪ ಸಂಕೋಚಪಡಲಾರಂಭಿಸಿರುವರು.

## ಸ್ವದೇಶದ ವೃತ್ತಾಂತಗಳು.

ಲೇಟ್ ದಿವಾನ್ ಸರ್ ಶೇಷಾದ್ರಿ ಐಯರವರ ಮೆಮೋರಿಯಲ್ ಫಂಡಿಗೆ ಇದುವರೆಗೆ ಒಂದು ಲಕ್ಷ ರೂಪಾಯಿ ಚಂದಾ ಕೂಡಿದೆ.

❖❖❖❖

ನಮ್ಮ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮೊ॥ ಜೆ. ಎ. ಬೋರ್ಡಿಲನ್ ಯವರು ತಮ್ಮ ಪರಿವಾರ ಸಹಿತ ಜನವರಿ ೪ನೇ ತಾರೀಖು ಬೆಂಗಳೂರು ಬಿಟ್ಟು ಮದರಾಸಿಗೆ ಪ್ರಯಾಣಮಾಡಿ, ಗವರ್ನರವರ ಆತಿಥ್ಯವನ್ನು ಸ್ವೀಕರಿಸುವವರಾಗಿದ್ದಾರೆ. ರೆಸಿಡೆಂಟರ ಪತ್ನೀಯವರು ಬರುವ ಮಾರ್ಚಿ ತಿಂಗಳಲ್ಲಿ ಮಕ್ಕಳ ಸಹಿತ ಸೀಮೆಗೆ ಹೋಗಿ ಅಲ್ಲಿಯೇ ಇರುತ್ತಾರೆಂದು ವರ್ತಮಾನವಿದೆ.

❖❖❖❖

ಬೆಂಗಳೂರು ದಂಡಿನಲ್ಲಿ ಟ್ಯಾನರಿ ರೋಡಿನಲ್ಲಿರುವ ಈದ್ಗಾ ಮಸೀದಿಯು ಪ್ರಾರ್ಥನಾ ಸ್ಥಳಕ್ಕೆ ಕಳೆದ ಏಳು ವರುಷಗಳಿಂದ ಅಲ್ಲಿಯವರು ಹೋಗದಂತೆ ಮುಚ್ಚಿದ್ದುದರಲ್ಲಿ ಮುಸಲ್ಮಾನರಿಗೆ ಕೋಪವಿತ್ತು. ಕಳೆದ ವಾರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಎರಡು ಪಂಗಡದವರಿಗೂ ಸಮಾಧಾನ ಮಾಡಿಸಿದರು. ೬,೦೦೦ ಮಂದಿ ಮುಸಲ್ಮಾನರು ಆ ಸ್ಥಳಕ್ಕೆ ಹೋಗಿ ಪ್ರಾರ್ಥನೆಮಾಡಿ ಬಂದರು.

❖❖❖❖

ಕೊಟ್ಟಾಯದಿಂದ ಬಂದಿರುವ ಆನರೆಬಲ್ ಮೊ॥ ಜಸ್ಟಿಸ್ ಚಂದಾವರ್ಕರ್ ಅವರು ಮದರಾಸ್ ಪಟ್ಟಣದ ಆಂಡರ್ಸನ್ ಹಾಲ್ ಎಂಬ ಸ್ಥಳದಲ್ಲಿ ಹಿಂದೂ ಸಂಘಸಂಸ್ಕರಣಕಾರ್ಯವನ್ನು ಕುರಿತು ಒಂದು ಸಾಯಂಕಾಲ ಉಪನ್ಯಾಸಮಾಡಿದರು. ಅಗ್ರಾಸನದಲ್ಲಿ ರಾವ್ ಬಹದ್ದೂರ್ ದಿವಾನ್ ಮೊ॥ ವಿ. ಪಿ. ಮಾಧವರಾವ್, ಸಿ. ಐ. ಇ. ಯವರು ಸಭೆಯ ಅಗ್ರಾಸನವನ್ನು ವಹಿಸಿದ್ದರು.

ಮೈಸೂರು ಸಂಸ್ಥಾನದಲ್ಲಿ ಈ ಸಲ ಪ್ರವಾಹಗಳ ನಿಮಿತ್ತದಿಂದ ೪೮ ದೊಡ್ಡ ಕೆರೆಗಳೂ, ೪೮ ಚಿಕ್ಕ ಕೆರೆಗಳೂ ಒಡೆದು ಹೋದವು. ಸರ್ಕಾರಕ್ಕೆ ಉತ್ಪತ್ತಿಯಾಗುತ್ತಿದ್ದ ಐವಿರ್ ಕಂದಾಯವು ಈ ದೆಸೆಯಿಂದ ಕಡಿಮೆಯಾದೀತೆನ್ನುವುದಕ್ಕೆ ಸಂಶಯವಿಲ್ಲ. ಆದರೆ ಗವರ್ನಮೆಂಟಿನವರು ಈ ಕೆರೆಗಳನ್ನು ಬೇಗನೆ ದುರಸ್ತು ಮಾಡಿಸಬೇಕೆಂದು ಸದ್ಯದಲ್ಲಿ ೩ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

❖❖❖❖

ಮೈಸೂರಿಗೂ ಬೆಂಗಳೂರಿಗೂ ಹೋಗಿಬರುವ ರೈಲ್‌ಗಾಡಿಗಳ ಕಾಲವನ್ನು ನಾಳೆಯಿಂದ ಕಂಪನಿಯವರು ಬದಲಾಯಿಸುತ್ತಾರೆ. ಮೈಸೂರಿಂದ ಗಾಡಿಗಳು ಬೆಳಿಗ್ಗೆ ೧೦. ೩೦ ಘಂಟೆ, ಮಧ್ಯಾಹ್ನ ೧-೩ ಘಂಟೆ, ರಾತ್ರಿ ೯. ೩೦ ಘಂಟೆ ಹೀಗೆ ಮೂರು ಸಲ ಬೆಂಗಳೂರಿಗೆ ಹೋಗುವವು; ಬೆಂಗಳೂರಿಂದ ಗಾಡಿಗಳು ಬೆಳಿಗ್ಗೆ ೬ ಘಂಟೆ, ಮಧ್ಯಾಹ್ನ ೨. ೨೦ ಘಂಟೆ, ರಾತ್ರಿ ೯. ೨೦ ಘಂಟೆ ಮೈಸೂರನ್ನು ಬಂದು ಸೇರುವವು ಎಂಬುದಾಗಿ ಪ್ರಕಟವಾಗಿದೆ.

❖❖❖❖

ಮೈಸೂರು ಸಂಸ್ಥಾನದಲ್ಲಿರುವ ಒಬ್ಬ ದೊಡ್ಡ ವಂಶೀಕರ ಮಗನು ಸೀಮೆಯ ವಿದ್ಯಾರ್ಥಿಯು ಜಪಾನಿಗೆ ಹೋಗಿ ಕಸಬುದಾರಿ ವಿದ್ಯೆಯನ್ನು ಕಲಿತುಕೊಂಡು ಬರುವವನಾಗಿದ್ದಾನೆಂತಲೂ, ನಮ್ಮ ರೆಸಿಡೆಂಟರು ಅವನಿಗೆ ಸರ್ಟಿಫಿಕೇಟನ್ನು ಕೊಟ್ಟಿರುತ್ತಾರೆಂತಲೂ ಪ್ರಕಟವಾಗಿದೆ. ಈ ಹುಡುಗನಿಗೆ ೧೮ ವರುಷ ವಯಸ್ಸಾಗಿರುವುದಂತೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಈ ರೀತಿ ಧೈರ್ಯ ಮಾಡಿ ಹೊರಟಿರುವುದು ಸ್ತೋತ್ರಾರ್ಹವಾಗಿದೆ; ಇದರಿಂದ ಇತರರಿಗೂ ತುಂಬಾ ಪ್ರೋತ್ಸಾಹವಾಗುವುದು.

❖❖❖❖

ಬೆಂಗಳೂರು ದಂಡಿನಲ್ಲಿ ಅಡ್ವೊಕೇಟರಾಗಿರುವ ಮೊ॥ ಎಚ್. ಬೂಟೆಲ್ ರವರು ತಮ್ಮ ಕಕ್ಷಿಗಾರರು ಕೋರಿಸಿದ ಪತ್ರಗಳು ಯಥಾರ್ಥವಾದವುಗಳಲ್ಲವೆಂದು ತಿಳಿದಿದ್ದರೂ ಅವುಗಳಿಗೆ ತಮ್ಮ ರುಜು ಹಾಕಿ ಕೋರ್ಟಿಗೆ ದಾಖಲುಮಾಡಿದರು. ಇದಕ್ಕಾಗಿ ಈ ಅಡ್ವೊಕೇಟು ಮೇಲೆ ಮೊಕದ್ದಮೆ ನಡೆಸಬೇಕೆಂದು ಲೇಟ್ ರೆಸಿಡೆಂಟ್ ಸರ್ ರಾಬರ್ಟ್‌ಸನ್ ಯವರು ಹುಕುಂ ಮಾಡಿ ಹೋದರು. ಈಗಿನ ರೆಸಿಡೆಂಟರು ಅವರನ್ನು ಪರ್ಯಾಲೋಚಿಸಿ, ಆ ಅಡ್ವೊಕೇಟರಿಗೆ ೪ ತಿಂಗಳು ಲಾಯರ್ ಕೆಲಸ ನಡಸಕೂಡದೆಂಬ ಶಿಕ್ಷೆಯನ್ನು ವಿಧಿಸಿದ್ದಾರೆ.

❖❖❖❖

ಬೆಂಗಳೂರು ಚೀಫ್ ಕೋರ್ಟ್ ಜಡ್ಜಿಗಳಾಗಿದ್ದ ಮೊ॥ ಜೆ. ಎಫ್. ವಿಕಾರ್‌ಜಾನ್ ಯವರು ಕಳೆದ ೨೭ನೇ ತಾರೀಖು ಶುಕ್ರವಾರ ರಾತ್ರಿ ಅಲ್ಲಿನ ವೆಸ್ಟ್ ಎಂಡ್ ಹೋಟೇಲಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ೫೩ ವರುಷ ವಯಸ್ಸಾಗಿದ್ದಿತು. ಇವರು ಮೊದಲು ೧೮೭೦ನೇ ಇಸವಿಯಲ್ಲಿ ಮೈಸೂರು ಸರ್ವೆ ಇಲಾಖೆಯಲ್ಲಿ ಅ॥ ಸೂಪರೆಂಟೆಂಡರಾಗಿ ಕೆಲಸಕ್ಕೆ ಬಂದು, ತರುವಾಯ ಜಿಲ್ಲಾ ಕಮಿಷನರಾಗಿಯೂ ಬಹುಕಾಲ ಇದ್ದು, ೧೮೯೦ರಲ್ಲಿ ಕೊಡಗಿಗೆ ಕಮಿಷನರಾಗಿ ನೇಮಿಸಲ್ಪಟ್ಟರು. ೧೨ ವರುಷಗಳ ಕಾಲ ಕೊಡಗಿನಲ್ಲಿದ್ದು, ೧೯೦೨ನೇ ಸೆಪ್ಟೆಂಬರ್ ತಿಂಗಳಲ್ಲಿ ಮೈಸೂರು ಚೀಫ್ ಕೋರ್ಟಿಗೆ ಜಡ್ಜಿಗಳಾಗಿ ಬಂದರು. ಈ ೧೫ ತಿಂಗಳಲ್ಲಿ ಇವರು ಲಾಯರುಗಳಲ್ಲೂ ಕಕ್ಷಿಗಾರರಲ್ಲೂ ತುಂಬ ಪ್ರೀತಿಗೌರವಗಳನ್ನು ಸಂಪಾದಿಸಿಕೊಂಡರು. ಮಾರನೆ ಸಾಯಂಕಾಲ ಅವರ ಶವವನ್ನು ದಫನ್ ಮಾಡುವಾಗ್ಯೆ, ರೆಸಿಡೆಂಟರೇ ಮೊದಲಾದ ಯುರೋಪಿಯನ್ ಸರ್ದಾರರೂ, ಕೌನ್ಸಲ್ ಮೊ॥ ಶ್ರೀನಿವಾಸಯ್ಯಂಗಾರ್ರೇ ಮೊದಲಾದ ದೇಶೀಯ ದೊಡ್ಡಮನುಷ್ಯರೂ ಹೋಗಿದ್ದರು.

## ರಾಜಧಾನಿಯು ಪ್ರರಾಭಿವೃದ್ಧಿ ಕಾರ್ಯವು.

### ೨ನೆಯ ಭಾಗ—ಮನೆಗಳ ಈಗಿನ ಸ್ಥಿತಿ.

'ಯಾವ ಮನೆಯಲ್ಲಿ ಪ್ರತಿ ಒಂದು ಕೊಠಡಿಗೂ ಬೆಳಕೂ ಗಾಳಿಯೂ ಧಾರಾಳವಾಗಿ ಬೀಸುವಂತೆ ಅವಕಾಶವಿಲ್ಲವೋ ಅಂಥಾ ಮನೆಯು ಖಂಡಿತವಾಗಿಯೂ ಅನಾರೋಗ್ಯಕರವಾದುದು' ಎಂಬೀ ವಿಷಯವನ್ನು ಕಳೆದ ವಾರ ದೃಷ್ಟಾಂತ ಪೂರ್ವಕವಾಗಿ ವಿವರಿಸಿದೆವಷ್ಟೆ. ರಾಜಧಾನಿಯಲ್ಲಿ ಹಾಲಿ ಇರುವ ಮನೆಗಳು ಈ ವಿಧಿಗೆ ಅನುಸಾರವಾಗಿವೆಯೋ ಇಲ್ಲವೋ ಎಂಬಂಶವನ್ನು ಕುರಿತು ಈ ವಾರ ಸ್ವಲ್ಪ ಮಟ್ಟಿಗೆ ಪ್ರಸ್ತಾಪಮಾಡುವೆವು. ಈಗಿರುವ ಮನೆಗಳು ಆರೋಗ್ಯಪ್ರದವಾಗಿರುವುವೋ, ಇಲ್ಲವೋ?

ದೊಡ್ಡ ದೊಡ್ಡ ಬೀದಿಗಳಲ್ಲಿರುವಂಥಾ ಮನೆಗಳನ್ನು ನೋಡೋಣ. ಜನರು ರಸ್ತೆಯ ಉಭಯ ಪಾರ್ಶ್ವಗಳಲ್ಲೂ ಒಂದೇ ತರದ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಬೀದಿಮಾಡಿಕ್ಕೆ ಒಂದು ಬಾಗಿಲಿರುವುದು; ಈ ತಲೆಬಾಗಿಲಲ್ಲಿ ನುಗ್ಗಿ ಒಳಕ್ಕೆ ಹೋದರೆ ಉದ್ದಕ್ಕೂ ಎಡಬಲಗಡೆಗಳಲ್ಲಿ ಕೊಠಡಿಗಳಿರುವವು. ಈ ಕೊಠಡಿಗಳಲ್ಲಿ ಬೇರೆ ಬೇರೆ ಸಂಸಾರಗಳು ವಾಸಮಾಡುತ್ತಿರುವವು. ಇಂಥಾ ಮನೆಗೆ ಹೊರಬಾಗಿಲಲ್ಲಿರುವ ಒಂದು ಕೊಠಡಿ ವಿನಹಾ ಅದರ ಹಿಂದಿರತಕ್ಕ ಕೊಠಡಿಗಳಿಗೆ ಗಾಳಿ ಬೆಳಕುಗಳ ಹೆಸರೇ ಅಪೂರ್ವ. ರಾಜಧಾನಿಯಲ್ಲಿ ನೂರಾರು ಮನೆಗಳು ಈ ಸ್ಥಿತಿಯಲ್ಲಿರುವವು. ಮನೆಯ ಮುಂಭಾಗವು ಚಿಕ್ಕದು; ಒಳಗಡೆ ಉದ್ದಕ್ಕೂ ೫೦—೬೦ ಮನೆಗಳು ಹಂಚಿಹೋಗಿರುತ್ತವೆ. ಬಾಗಿಲು ಎಡಬಲ ಪಾರ್ಶ್ವಗಳಲ್ಲಿ ಕಿಟಕಿಗಳಿಲ್ಲ. ಹಿಂದುಗಡೆ ಇರುವ ಮನೆಗೆ ಏನೂ ಹಿತ್ತಲು ಬೆಳಕು ಬೀಳಬಹುದು. ಈ ಹಿತ್ತಲು ಬಾಗಿಲಾದರೋ ಬಹಳ ಚಿಕ್ಕದು; ತಲೆ ಬೊಗ್ಗಿಸಿಕೊಂಡು ಹಿತ್ತಲಿಗೆ ಹೋಗುವಹಾಗಿದೆ. ಈ ತರದ ಮನೆಗಳು ದೊಡ್ಡ ಪೇಟೆಯಲ್ಲಿ ಅನೇಕವಾಗಿರುತ್ತವೆ. ಅಲ್ಲಿ ಐವಿರ್ ಶ್ರಮವು ಬಹಳ ಹೆಚ್ಚಾಗಿರುವುದು. ಪ್ರತಿ ಮನೆಯ ಮಾಲೀಕನೂ ವಿನಾಹದೂ ಮಾಡಿ ಬೀದಿಯ ಮಾಟಕ್ಕೆ ಒಂದು ಅಂಗಡಿ ಮಳಿಗೆಯನ್ನು ಕಟ್ಟಿಕೊಳ್ಳಬೇಕೆಂದು ಹಾತೊರೆಯುತ್ತಾನೆ. ದೊಡ್ಡ ಪೇಟೆಯಲ್ಲಿರುವ ಒಂದೊಂದು ಸಾಲು ಮನೆಗಳನ್ನು ನೋಡುವಲ್ಲಿ ಮುಂಭಾಗವು ೧೨ ಅಡಿ ಸ್ಥಲಾ ಅಗಲವಿಲ್ಲ; ಆ ತರದ ಮನೆಗಳು ಹಿಂದುಗಡೆ ಉದ್ದಕ್ಕೂ ೬೦ ಅಡಿ ಬಹಳ ದ್ಯಾಂಗ ಹೋಗಿರುತ್ತವೆ. ಅಂಥಾ ಮನೆಗಳ ಒಳಗಿನ ಕತ್ತಲೆಗಿಯೂ ಪ್ರತ್ಯಕ್ಷವಾಗಿಯೂ ಇರುವುದಕ್ಕೆ ಸಂಶಯವಿಲ್ಲ. ಈ ಮನೆಗಳನ್ನು ಆರೋಗ್ಯಕರವಾದವುಗಳೆಂದು ಯಾರಾದರೂ ಹೇಳಲು ಸಾಧ್ಯವೋ? ಅತಿ ಮನೆಗಳಲ್ಲಿ ಕೊಳ್ಳುತ್ತಿಲ್ಲ; ಗುಹಾಪ್ರದೇಶಗಳೆಂದೇ ಹೆಸರಿಡಬೇಕಾಗಿದೆ. ಈ ಮನೆಗಳಲ್ಲಿ ದೊಡ್ಡ ಸಂಸಾರಸ್ಥರು ಒಟ್ಟಿಗಮೇಲೂ ಸ್ಟುರು ಕಾದಾಡಿ ಜಗಳವಾಡಿ ಕಾಲವಾಡಿಕೊಳ್ಳುತ್ತಾರೆ. ಉದ್ದಕ್ಕೂ ಅಂಗೈ ಅಗಲ ಮಾಡಿಕೊಂಡು ಗೋಡೆಗಳನ್ನು ಹಾಕಿಕೊಳ್ಳುತ್ತಾರೆ. ಒಂದಾನೊಂದು ಕಾಲದಲ್ಲಿ ಈ ಮನೆಗಳು ವಿಶಾಲವಾಗಿಯೂ ಸಂಸಾರಕ್ಕೆ ಎಲ್ಲಾ ಭಾಗಗಳಲ್ಲೂ ಅನುಕೂಲವಾಗಿಯೂ ಇದ್ದಿರಬಹುದು. ಈಗ ಹಾಯಾಗಿ ಭಾಗದ ವ್ಯಾಜ್ಯಗಳಿಂದ ಗೋಡೆಗಳು ಎದ್ದು ಮನೆಗಳನ್ನು ಕಿರಿದು ಮಾಡಿ, ಗಾಳಿ ಬೆಳಕಿಗೆ ಅವಕಾಶವಿಲ್ಲದಂತೆಯೂ ಕೈಗಳಿಗೂ ಕತ್ತಲೆಗೂ ಕೌರುಮನೆಯಂತೆಯೂ ಮಾಡಿಬಿಟ್ಟವೆ. ದೃಷ್ಟಾಂತಕ್ಕೆ ಈಗ ಅವೇ ಬೀದಿಯಲ್ಲಿರುವ ಇಂಥಾ ಒಂದು ಮನೆಯನ್ನು ಯಾರುಬೇಕಾದರೂ ಹೋಗಿ ನೋಡಬಹುದು. ಮ್ಯುನಿಸಿಪಾಲಿಟಿ ವೈಸ್ ಪ್ರೆಸಿಡೆಂಟರು ಮನೆಗಳು ವಾಸಕ್ಕೆ ಆರೋಗ್ಯವಾಗುವಂತೆ ಮಾಡುವುದಕ್ಕೆ ಈ ಗೋಡೆಗಳನ್ನು ತಾತ್ಕಾಲಿಕವಾಗಿ ತೆಗೆಯಿಸಲು ಜನರಿಗೆ ಯಾಕೆ ಅವಕಾಶ ಕೊಡುವರೋ ಎಂದು ಆಶ್ಚರ್ಯಪಡಬೇಕಾಗಿದೆ. ಇಂಥಾ ಸಂಗತಿ ಅವರ ತಿಳುವಳಿಕೆಗೆ ಬಂದ ಕೂಡಲೇ ಅವರು ನ್ಯಾಯ ಪ್ರಕಾರ ಗೋಡೆ ಹಾಕುವುದನ್ನು ತಡೆದು ಬಿಡಬೇಕು. ಹೀಗೆ ಮಾಡದೆ ಅಲಕ್ಷ್ಯಮಾಡಿದ್ದರಿಂದ ಮನೆಗಳು ವಾಸಕ್ಕೆ ಅಯೋಗ್ಯವಾಗಿಯೂ, ರೋಗಜನಕಗಳಾಗಿಯೂ ಆಗುತ್ತಿರುವವು. ಒಂದು ಮನೆಯಲ್ಲಿ ತಮ್ಮ ಭಾಗದ ಅಗಲವಾಗಿ ಗೋಡೆಗಳನ್ನು ಹಾಕಿಕೊಂಡು, ತಮ್ಮೊಳಗೆ ತಮ್ಮ ಮಕ್ಕಳು ಮರಿಗಳ ಯೋಗಕ್ಷೇಮಕ್ಕೇ ಹಾನಿಯನ್ನುಂಟುಮಾಡಿಕೊಳ್ಳುವುದು ಎಂಥಾ ಮೂರ್ಖತನವೋ ತಿಳಿಯಲಿಲ್ಲ. ಇದು ಬಟ್ಟೆ ಮೇಲಣ ಕೋಪಕ್ಕೆ ತನ್ನ ಮೂಗನ್ನೇ ಕತ್ತರಿಸಿಕೊಳ್ಳುವಂಥಾದ್ದು.

ಇಂಥಾ ಅಯೋಗ್ಯವಾದ ಮನೆಗಳಿರುವುದು ಪೇಟೆ ಸ್ಥಳಗಳಲ್ಲೇ ಅಲ್ಲ. ಹಳೇ ಅಗ್ರಹಾರಗಳೆಂದು ಕರೆಯಲ್ಪಡುವ ಮನೆಗಳನ್ನು ಇದೇ ರೀತಿಯಲ್ಲಿ ಕಟ್ಟಿಕೊಂಡಿದ್ದಾರೆ. ಈಚಿಗೆ ಹೊಸದಾಗಿ ಕೃಷ್ಣರಾಜಭಿವೃದ್ಧಿಯ ಕೋರ್ಟುಗಳ ಎದುರು ಪಾರ್ಶ್ವದಲ್ಲಿ ಕಟ್ಟಿಸಿರುವ ಅಗ್ರಹಾರಮನೆಗಳೂ ಇದೇ ರೀತಿ ಇರುವವು. ಈ ಮನೆಗಳಲ್ಲಿ ಮಧ್ಯೆ ಮಾಡಿರುವ ಕೊಠಡಿಗಳಿಗೆ ಬೆಳಕು ಗಾಳಿ ಬರಲು ಅವಕಾಶವೇ ಇಲ್ಲ. ಮನೆಗಳನ್ನು ಹೊಸದಾಗಿ ಕಟ್ಟುವಾಗಲೂ ಈ ರೀತಿ ಕಟ್ಟಬಿಟ್ಟು, ಪುರಾಭಿವೃದ್ಧಿ ಮಾಡಿದೆವೆಂದು ಹೇಳುವರಲ್ಲಾ! ಇದಕ್ಕೆ ಏನು ಹೇಳೋಣ? ಅವು ಆರೋಗ್ಯಕರವಾದ ಮನೆಗಳೆಂದು ಹೇಳುವವರಾರಾದರೇ?

ಕರ್ಜನ್ ಪಾರ್ಕಿನ ಪಕ್ಕದ ಪಾರ್ಶ್ವದಲ್ಲಿ ಉದ್ದಕ್ಕೂ ಸಾವಿರಾರು ರೂಪಾಯಿ ಮುಟ್ಟಿಸಿ ಕಟ್ಟುವ ಲ್ಯಾನ್ಸ್‌ಡೌನ್ ಬಜಾರ್ ಎಂಬ ಲೈನ್ ಅಂಗಡಿ ಮಳಿಗೆಗಳನ್ನು ನೋಡಿ. ಇವುಗಳಲ್ಲಿ ಉದ್ದಕ್ಕೂ ಇರುವ ಒಳಕೊಠಡಿಗಳಿಗೆ ಕಿಟಕಿಗಳನ್ನು ಇಟ್ಟೇ ಇಲ್ಲ. ಇದರಿಂದ ವಾಯುಸಂಚಾರಕ್ಕೆ ಅವಕಾಶವಿಲ್ಲದೆ, ವಾಸಮಾಡುವುದಕ್ಕಾಗಲಿ ವ್ಯಾಪಾರಾದಿಗಳನ್ನು ನಡೆಸುವುದಕ್ಕಾಗಲಿ ಸ್ವಲ್ಪವೂ ಸಾಧ್ಯವಿರುವುದಿಲ್ಲ.

ಸ್ವಲ್ಪ ನೆಮ್ಮದಸ್ಥರಾದ ಜನರು ಕಟ್ಟಿಕೊಂಡಿರುವ ಮನೆಗಳೂ ಇದೇ ರೀತಿ ಇದ್ದಾಗ್ಯೂ ಅವರು ಮನೆಯ ನಡುವೆ ಅಂಗಳವನ್ನು ಬಿಟ್ಟುಕೊಂಡಿರುವುದರಿಂದ ಗಾಳಿ ಬೆಳಕಿಗೆ ಅವಕಾಶ ಉಂಟಾಗಿದೆ. ಈ ಪ್ರಕಾರ ಮನೆಯ ಮಧ್ಯೆ ಅಂಗಳವನ್ನು ಬಿಟ್ಟು ಸುತ್ತಲೂ ಮನೆ ಕಟ್ಟಿಕೊಂಡಿರೋಣದರಿಂದ ಪ್ರತಿ ಒಂದು ಕೊಠಡಿಗೂ ಬೆಳಕು ಗಾಳಿ ಬರಲು ಸಹಾಯವಾಗಿದೆ. ಇಂಥಾ ಅನೇಕ ಮನೆಗಳಲ್ಲಿ ಬಾಗಿಲುಗಳೆಲ್ಲಾ ಈ ಅಂಗಳಕ್ಕೇ ಬರುವಂತೆ ಇಟ್ಟಿದ್ದಾರೆ. ಈ ಅಂಗಳದಲ್ಲಿ ನೀರು ನಿಂತು ಶೀತವಾಗದಂತೆಯೂ, ಕಸ ಮುಂತಾದ ಕೊಳಚೆ ಸೇರದಂತೆಯೂ ಮನೆಯವರು ಬಹು ಎಚ್ಚರಿಕೆಯಾಗಿ ನೋಡಿಕೊಳ್ಳುತ್ತಾ ಬಂದಲ್ಲಿ ಅದರಿಂದ ಮನೆಯವರ ಆರೋಗ್ಯಕ್ಕೆ ತುಂಬಾ ಉಪಕಾರವೇ ಆದೀತು. ಈ ತರದ ಮನೆ ಕಟ್ಟುವುದು ಒಳ್ಳೇದೆಂತಲೇ ಹೇಳಬಹುದು. ಆದರೆ ಇಂಥಾ ಮನೆಗಳು ಕೂಡ ಅನಾರೋಗ್ಯಕರವಾಗಿರುವವು; ಯಾಕೆಂದರೆ ಮನೆಯವರು ಅಂಗಳದಲ್ಲೇ ಕಸಕಡ್ಡಿಗಳನ್ನೆಲ್ಲಾ ತುಂಬಿಕೊಳ್ಳುತ್ತಾರೆ; ನಾನಾ ಸಸಿಗಳು ಬೆಳೆದಿರುತ್ತವೆ; ಅಂಗಳದಿಂದ ನೀರು ಹೊರಕ್ಕೆ ಸಾಗಿಹೋಗಲು ಮಾರ್ಗವೇ ಇಲ್ಲದೆ ಅಲ್ಲೇ ನಿಂತು ಕೊಚ್ಚೆ ಗುಂಡಿಯಾಗಿದೆ. ಇದರಿಂದ ನಾನಾ ತರದ ನಾತ ಬಡಿಯುವುದಲ್ಲದೆ ಸೊಳ್ಳೆ ಮೊದಲಾದ ಹುಳು ಹುಪ್ಪಟೆಗಳು ಹುಟ್ಟಿ ಹೆಚ್ಚುವುದಕ್ಕೂ ತುಂಬಾ ಸಹಾಯವಾಗುವುದು.

ಮನೆಯ ಮಧ್ಯೆ ಅಂಗಳವನ್ನು ಬಿಟ್ಟು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲದಿದ್ದರೆ ಮನೆಯ ಮೇಲ್ಭಾಗದಿಂದ ಮನೆಯೊಳಕ್ಕೆ ಬಹಳ ಚನ್ನಾಗಿ ಬೆಳಕು ಬಿದ್ದು ಗಾಳಿ ನುಗ್ಗುವಂತೆ ಮಾಡಿಕೊಳ್ಳಬೇಕು. ಅಥವಾ ಮೊದಲನೇ ಗೋಡೆಗಳನ್ನು ಎತ್ತರವಾಗಿಯೂ, ಹಿಂದೆಯೂ ಮುಂದೆಯೂ ಇರುವ ಗೋಡೆಗಳನ್ನು ಸ್ವಲ್ಪ ಚಿಕ್ಕದಾಗಿಯೂ ಹಾಕಿ ಮನೆಕಟ್ಟಿದಲ್ಲಿ ಮೊದಲನೇ ಗೋಡೆಯ ಮೇಲ್ಭಾಗಗಳಿಂದ ಮನೆಯೊಳಕ್ಕೆ ಬೆಳಕು ಬಿದ್ದು ಗಾಳಿ ನುಗ್ಗುವಂತೆ ಅವಕಾಶವಾಗುವುದು.

ಈಗ ಸರ್ಕಾರದವರು ರಾಜಧಾನಿಯನ್ನು ಅಭಿವೃದ್ಧಿಪಡಿಸುವುದಕ್ಕೆ ಬಡಾವಣೆಗಳಲ್ಲಿ ಮನೆಗಳನ್ನು ಕಟ್ಟಿಸುವರಷ್ಟೆ. ಈ ಮನೆಗಳು ಎಲ್ಲಾ ಭಾಗಗಳಲ್ಲೂ ತೃಪ್ತಿಕರವಾಗಿರುತ್ತವೆನ್ನುವುದಕ್ಕೆ ಸಂಶಯವಿಲ್ಲ. ಹೊಸ ಮನೆಗಳ ಪ್ಲಾನ್ (ನಕ್ಷೆ)ಗಳು ನಿರ್ದೋಷವಾದವುಗಳಾಗಿರುವವು. ಈ ಹೊಸ ಮನೆಗಳಲ್ಲಿ ಮೇಲ್ಕಂಡ ದೋಷಗಳಾವುವೂ ಇರುವುದಿಲ್ಲ. ರಾಜಧಾನಿಯ ನಿವಾಸಿ.

## ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ವಿಶಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸಬೇಕು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಬಾರದು; ಇಂಥವುಗಳಿಗೆ ನಾವು ವಿಶಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಬರೆವ ಅಭಿಪ್ರಾಯಗಳಿಗೆ ನಾವು ಜೋಖೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

## ಕರೆಸ್ಪಾಂಡೆನ್ಸ್.

### ಹೊಳೇನರಸೀಪುರದ ವಿಷಯಗಳು.

ಅಯ್ಯಾ,

ಈ ಊರಿನಲ್ಲಿ ೬ ನೆ ಸಲ ಪ್ಲೇಗ್ ಆರಂಭವಾಗಿ ೬ ತಿಂಗಳು ಮೀರಿಹೋಗುತ್ತಾ ಬಂತು. ಜನರೆಲ್ಲಾ ೬ ತಿಂಗಳ ಮುಂಚೆಯೇ ಊರು ಬಿಟ್ಟು ಗುಡಿಸಲುಗಳಲ್ಲಿ ವಾಸಮಾಡಿಕೊಂಡಿದ್ದರೆ ಈಪೂರಿಯೂ ಅತಿವೃಷ್ಟಿಯು ಜೊತೆಸೇರಿ ಅನೇಕರಿಗೆ ಉಂಟಾದ ವ್ಯಥೆಯನ್ನು ವರ್ಣಿಸಲಾಗದು. ಈ ತಿಂಗಳ ಆದಿ ಭಾಗದಲ್ಲಿ ೬ ನೆಯ ಕೌನ್ಸಿಲರ್ ಸಿರಿಸ್ತೆ ಮೆ॥ ಶ್ರೀನಿವಾಸಯ್ಯಂಗಾರರೂ, ಡಾಕ್ಟರ್ ಸ್ಮಿತ್ ಸಾಹೇಬರೂ ಈ ಊರಿಗೆ ದಯಮಾಡಿಸಿದ್ದರು. ಆಗ್ಗೆ ಈ ಊರಿನ ಯೋಗಕ್ಷೇಮವನ್ನೆಲ್ಲಾ ಚನ್ನಾಗಿ ವಿಚಾರಿಸಿ ಎಲ್ಲರೂ ಜಾಗ್ರತೆ ಊರು ಸೇರುವ ಹಾಗೆ ತಕ್ಕಹಾಗೆ ಮನೆಗಳನ್ನು ಶುದ್ಧಿಮಾಡಿಸುವದಕ್ಕೆ ಏರ್ಪಾಟುಗಳು ಹಿಡಿಯುವದಾಗಿ ಅಪ್ಪಣೆ ಕೊಡಿಸಿದರು. ಆದರೆ ಪ್ಲೇಗ್ ಸ್ಪೆಷಲ್ ಆಫೀಸರು ಮಾತ್ರ ಇನ್ನೂ ೬ ತಿಂಗಳ ವರೆಗೆ ಯಾರೂ ಊರು ಸೇರಕೂಡದೆಂತ ಹುಕುಂ ಮಾಡಿದ್ದಾರೆ. ನಾಳೆ ಪೇಟೆ ಜನರು ೧೦ ಕ್ಕೆ ಕಷ್ಟಬರುತ್ತಾರೆ. ಅನಂತರ ಜನರಿಗೆ ನೀರಿಗೆ ಬಹಳ ತೊಂದರೆಯಾಗುವದರಲ್ಲಿ ಸಂಶಯವಿಲ್ಲ. ೮—೧೦ ವರುಷಗಳ ಹಿಂದೆ ಒಬ್ಬ ಪಕ್ಕೀರನ ಗುಮ್ಮಟ ಬಿದ್ದು ಹೋಯಿತು. ಆತನ ಕಷ್ಟವನ್ನು ನೋಡಿ ರೆಸಿಡೆಂಟ್ ಮೆ॥ ಜೀವಣ್ಣರಾಯರು [illegible] ತಮ್ಮ ದಯೆಯನ್ನೂ ಔದಾರ್ಯವನ್ನೂ ತೋರಿಸಿದರು.

ಈ ತಾಲ್ಲೋಕಿಗೆ ಸೇರಿದ [illegible] ಎಂಬ ಸ್ಥಳದಲ್ಲಿ ಪ್ಲೇಗಿಗೋಸ್ಕರ ಅನೇಕರು ಗುಡಿಸಲುಗಳನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದಾರೆ. [illegible] ಗುಡಿಸಲ್ ಬಿಟ್ಟು [illegible] ರೂಪಾಯಿ ಬೆಲೆ ಬಾಳುವ [illegible] ಸಾಮಾನುಗಳನ್ನು ಕಳುವು ಮಾಡಿದರು. ಅಲ್ಲದೆ ಅನೇಕ ಬಹಳ [illegible] ಆಗಿರುತ್ತವೆ. [illegible] ಇಲ್ಲಿನ ಪೋಲಿಸ್ ಮತ್ತು [illegible] ತಮ್ಮ ಮನೆಯಲ್ಲಿ ನಡೆದ ಕಳ್ಳತನ [illegible] ಮೆ॥ [illegible] ಸ್ವಾಮಿಯಂಗಾರ್ಯರಿಗೆ [illegible] ತಕ್ಕ ಶಿಕ್ಷೆ ಮಾಡುವ ಸಾಮರ್ಥ್ಯವಿಲ್ಲವೇ? ನಿನ್ನೆ ದಿವಸ ಈ ತಾಲ್ಲೋಕ್ ಮೇಜಸ್ಟ್ರೇಟರಾದ ಮೆ॥ [illegible] ಅವರ ಕೋರ್ಟಿನಲ್ಲಿ ಒಂದಾನೊಂದು ಮೊಕದ್ದಮೆಯಲ್ಲಿ [illegible] ಓದಿದರು. ಅದು ಇಂಗ್ಲಿಷಿನಲ್ಲಿ ಬರೆದಿತ್ತು. ಮೇಜಸ್ಟ್ರೇಟರು ಅದನ್ನು ಓದುವದು, ಗುಮಾಸ್ತರು ಅದನ್ನು ತರ್ಜುಮೆ ಮಾಡಿ ಅಪರಾಧಿಗಳಿಗೆ ಹೇಳುವದು, ಈ ರೀತಿ ಬಹಳ ಚಂದವಾಗಿತ್ತು. ಈ ಜಡ್ಜಮೆಂಟು ಈ ಊರಲ್ಲಿ ಒಬ್ಬ ಪ್ರಖ್ಯಾತನಾದ [illegible] ವಗೈರೆಯ ಮೇಲೆ ತರಲ್ಪಟ್ಟಿದ್ದ [illegible] ಮೊಕದ್ದಮೆಯು [illegible] ತನ್ನ ತೀರ್ಪಿನಲ್ಲಿ ಅಪರಾಧಿಯು [illegible] ಕೋರ್ಟಿಗೆ ಬಂದಿದ್ದರೂ ಅಪರಾಧಿಯು [illegible] ಈ ತಾಲ್ಲೋಕು ಆಸ್ಪತ್ರೆ ತಮ್ಮ ಗುಡಿಸಲಿಗೋಸ್ಕರ ಅಪರಾಧಿಯಲ್ಲಿದ್ದ [illegible] ಅಪರಾಧಿಯ ಮೇಲೆ ಫಿರ್ಯಾದು ಬಂದಿದ್ದಾಗಿ ಅಪರಾಧಿಯು ತಿಳಿಸಿರುತ್ತಾರೆ. ಈ ಮೊಕದ್ದಮೆಯಲ್ಲಿ [illegible] ವಿರೋಧವಾಗಿ ಅಪರಾಧಿಗೆ ಜುಲ್ಮಾನೆ ವಿಧಿಸಲ್ಪಟ್ಟಿತು. ಅಪ್ಪೀಲ್ ಮಾಡಲು ಕಾಲವನ್ನು ಕೊಟ್ಟಿದ್ದಾರೆ.

ಉ.ಘಾಟ್ರಾವಾಡಿ.

### ನಮ್ಮ ಜಾತಿಯವರಿಗೆ ಬಿನ್ನೈಪ.

ಅಯ್ಯಾ,

ಈ ಶಿಕಾರಪುರ ಟವುನ್ನಿನಲ್ಲಿ [illegible] ಬಹಳ ಅವಮಾನ್ಯ [illegible] ನವರಿಗೂ ತಿಳಿದಿಯಷ್ಟೆ. ಈ [illegible] ಉತ್ಸವ [illegible] ೧೯ನೇ ತಾರೀಖು ಜರುಗಿತು. ಅನೇಕ ಜನರು ಬೇರೆ ಬೇರೆ ಊರುಗಳಿಂದ ಬಂದಿದ್ದರು. ಬೀದಿಯಲ್ಲೆಲ್ಲಾ ಜನರ ಗುಂಪು ಗುಂಪೇ ಕಾಣುತ್ತಿತ್ತು. ಹೀಗೆಲ್ಲಾ ವಿನೋದ ನಡೆಯುತ್ತಿರುವಾಗ [illegible] ಜನರ ಸಮೂಹದ ನಡುವೆ [illegible] ೧೯ನೇ ರವಿವಾರ [illegible] ರಥ [illegible] ಗೌಡರ ಮನೆ ಒಬ್ಬ [illegible] ಗುಂಪಿನಲ್ಲಿ [illegible]—ಅವರು 'ನಮ್ಮ [illegible]; [illegible] ಬ್ರಾಹ್ಮಣರ [illegible]

ಬಂಧ' ಎಂತಲೂ ಕಾವೇರಿ ಕಡೆಯವರು ಎಂತಲೂ ಅಹಂಭಾವದಿಂದಿರುವ [illegible] ಉಡುಪು ಬಿಚ್ಚಿ ಬಡನೆ ಪೋಲೀಸರು ಈ ಆಳನ್ನು ಹಿಡಿದು, ಚನ್ನಾಗಿ ಮೈ ಒಡೆಯುವಂತೆ ಏಟುಗಳಿಂದ ಹೊಡೆದರು.

ಪ॥ ಜಾತಿಗಳೊಳುಂ [illegible] ಮಾತ್ರ ಸಂತೆ ಯದು॥
[illegible]
ಶಾಸನದೊಳ್ ಸಿಕ್ಕಿದ [illegible] ಮರೆಯಂತೆ ಹಲುಗಿ
ಕತ್ತಲೆಯೊಳಿರ್ದ॥
[illegible]
ಜಾತಿಯದೊಳಗಿಹ ಅವಿವೇಕ [illegible]
ದೂತರೆಳೆದೊಯ್ಯು [illegible] ಮಧ್ಯದೊಳಂ
ದುಃಖಿತ॥

ಅಷ್ಟಕ್ಕೇ ಬಿಡದೆ ಅವನನ್ನು ಪ್ರಾಣ ರಾಕ್ಷಸನಿಲ್ಲಿಟ್ಟರು. ಈ ವರ್ತಮಾನವು ಸದರಿ ಆಳಿನ ಯಜಮಾನರು ದೇವಂಗಿ ರಾಮಣ್ಣಗೌಡರು ತಿಳಿದು, ಅನಂತರ ಮ॥ ರಾ॥ ಗಿರಿಯಪ್ಪ ಗೌಡರೂ, ಗೌಡರ ಸಮೀಪದ ರಂಗಪ್ಪಗೌಡರೂ ಪೋಲೀಸ್ ಇನ್ಸ್‌ಪೆಕ್ಟರನ್ನು ಕಂಡು ಕೇಳುವಲ್ಲಿ, ಗೌಡರ ಆಳೆನ್ನುವದು ತಿಳಿದು, ಅವರು ಒಡನೆ ಅಪ್ಪಣೆ ಮಾಡಿದ ಪ್ರಕಾರ ಆ ಆಳು ಸುಬ್ಬ ಎಂಬುವನು ಲಾಕಪ್ಪಿನಿಂದ ಬಿಡುಗಡೆಯಾಗಿ ಯಜಮಾನರ ಒಡನೆ ಅದೇ ಬೀದಿಯಲ್ಲಿ ಬ್ರಾಹ್ಮಣರ ಅಗ್ರ ಇಲ್ಲದೆ ಬಿಡಾರಕ್ಕೆ ಹೋದನು.

ಇದೆಲ್ಲಾ ನೋಡಲಾಗಿ ಯಾರಾದರೂ ವ್ಯಸನಪಡದಿರಲಾರರು? ಈ ಬಡ ಆಳು ರಥದಲ್ಲಿದ್ದ ದೇವರಿಗೆ ಹಣ್ಣು ಕಾಯಿ ಕೊಟ್ಟಿದ್ದಾನೆ ಕಾಣಿಕೆ ಕೊಟ್ಟಿದ್ದಾನೆ, ಮತ್ತು ಈ ಬಳೆ ನೆಪವಿಟ್ಟು ಹಿಂದು ಬಾರಿಪ್ಪಿನಲ್ಲಿ ಸೇರಿಯಾದನಲ್ಲ! ಇದ್ಯಾರ ತಪ್ಪು! ಮುನಿಸಿಪಾಲಿಟಿಯದೋ? ಇನ್ಸ್‌ಪೆಕ್ಟರದೋ? ಪೋಲೀಸ್ ಜವಾನರದೋ? ಇಲ್ಲವೇ ಪಟ್ಟಿ ತಂದ ಸುಬ್ಬನದೋ? ಈ ದೂರು ಅಧಿಕಾರಿಗಳಿಗೆ ತಿಳಿಯದೇ? ಈ ಕಾಲದಲ್ಲಿ ಇಲ್ಲಿನ ಸ್ಥಿತಿಯು ಹೀಗಿದೆ? ಉತ್ಸವದ ಗಲಾಟೆ.

ಪ॥ ಅರಸು ರಾಜ್ಯಸ ಮಂತ್ರಿಯುಂಬವ ನಿರನ ಹುಲಿ ಹರಿವಾರಿ
ಹದ್ದಿನ ಬಳಿಗ ಬಿಡಲು ಒನ್ನ ಜನ ಇನ್ನಾರು ಕಾಯ್ವರು ಮನುಜನೀತಿಯೊಳ್॥

ಅಮಲ್‌ದಾರ್ರ ಮನೆ ಮುಂದೆ ಪಲ್ಲಕ್ಕಿಯಿಂದ ಮಾತ್ರಕ್ಕೇ ಈ ಆಳನ್ನು ಹೊಡೆಯುವದಕ್ಕೆ ಅವರು ಒಪ್ಪುವರೇ? ಇಲ್ಲ ಪಲ್ಲಾ ಇನ್ಸ್‌ಪೆಕ್ಟರು ಒಪ್ಪುವರೇ? ಹೀಗಿರಲಾರದು. ಈ ಆಳಿನವರೂ ದೇವರ ಮುಂದೆ ಸುತ್ತು ತಿನ್ನುವದಕ್ಕೆ ಒಂದಿಷ್ಟು [illegible] ಕೇಳಿದರೆ ಇಲ್ಲವೆಂಬರು ಹಾಗಾದರೆ ಈ ಅನ್ಯಾಯಕ್ಕೆ ಯಾರು ಕಾರಣರು?

ಈ ಆಳು ಜಾತಿಯಲ್ಲಿ ಹೀನನೆಂಬುದರಲ್ಲಿ ಕೆಟ್ಟವನು ಇವನು ಕಷ್ಟತರ [illegible] ಕೀಳು ಜಾತಿಯವನೆಂದು, [illegible] ಬಂದಂತಾ ನುಡಿದಿರಬಹುದು [illegible] ಬಂದ, ರಥ ನಡೆಯಲಾರದೆಂತ ಹೇಳಿದ ಬಳಿಕ ಅವರನ್ನು ಮುಟ್ಟಿಸುವಗಿ [illegible] ಈ ರೀತಿ ಈ ಆಳಿಗೆ ಬಹು ಮಾರ್ಗದ ಮೇಲೆ ಕಾಟ ಪಟ್ಟರು.

ಈ ಆಳು ಸ್ವಲ್ಪ ಗಟ್ಟಿ ಬಿಟ್ಟು ಪ ಸೀಗೆಗೆ [illegible] ಆಗಲಿ ಅವನ ಸ್ಪರ್ಶವಾಗಲಿ ಆಗಿದ್ದಲ್ಲಿ ಅವನನ್ನು ಯಾರೂ ಮುಟ್ಟುತ್ತಿರಲಿಲ್ಲ ಈ ಬಡ ಜಾತಿಗೆ [illegible] ಹೀಗೂ ಮತವೇ ವಿನಹ ಬೇರೆ ಯಾರೂ ಅಲ್ಲ. ತಪ್ಪು ಗುಂಡಿಯಲ್ಲಿ [illegible] ಮನೆ ಗುಡಿಯಲ್ಲಿ ಸ್ನಾನ [illegible] ಆಗುವದೋ ಹಾಗೆ ಇಂದಿನಿಂದ [illegible] ಕಳೆಯುವ ಈ ಬಗ್ಗೆ [illegible] ಗುರುಗಳು— [illegible] ಎನಿಸಿಕೊಂಡು ಇರುವವರು—ಹೀಗೆ ಮಾಡುತ್ತಾರೆ. ಈ ಆಳು ಕ್ಷೇತ್ರ ವಿಶೇಷವಾಗಿ ಇನ್ನು ಇಂಥಾ ದು [illegible] ಗುರಿಯಾಗದೆ ಇರಲಿ ಇಂಥಾ [illegible] ಗುರಿಯಾಗುವದಿಲ್ಲವೆಂದು ತಮ್ಮ ಗುರುಗಳು ಮನಸ್ಸಾಕ್ಷಿ ಮೂಲಕ ತಿಳಿಸಿರುವ ಶಿಕ್ಷೆ ಅನುಸರಿಸಿ ಕ್ಷೇತ್ರ ಮತಾಂತರವನ್ನು ಹೊಂದಿ ಹೀಗೆ ತಪ್ಪಿಸಿಕೊಳ್ಳಲಿ.

ಚಂಡಾಲ

## ಇಂಡಿಯಾ ದೇಶದ ವೃತ್ತಾಂತಗಳು.

ಪ್ರತಿವರುಷವೂ ಹಿಂದುಸ್ಥಾನಕ್ಕೆ ವಿಲಾಯತಿಯಿಂದ ೩೦ ಕೋಟಿ ರೂಪಾಯಿನ ಹತ್ತಿ ಬಟ್ಟೆಗಳು ಬಂದು ಬಿಕರಿ ಆಗುತ್ತಿವೆ.

◆◆◆◆

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಅಂಗೂಲ್ ಡಿಸ್ಟ್ರಿಕ್ಟಿನಲ್ಲಿ ಫಾರೆಸ್ಟಿನವರು ೩೦ ಭಾರಿ ಆನೆಗಳನ್ನು ಹಿಡಿದರೆಂದು ಪೂರ್ವ ಕೋಟೆಯಿಂದ ತಂತೀ ವರ್ತಮಾನ ಬಂದಿದೆ.

◆◆◆◆

ಹೈದರಾಬಾದ್ ಸಂಸ್ಥಾನದ ನೈಜಾಮರವರು ಅಫ್ರಿಕ ಸಮಾರಿಗೂ, ಬಿರಂಗಿ ಸೈನ್ಯಕ್ಕೂ ಕುದುರೆಗಳನ್ನು ಕೊಂಡು ಕೊಳ್ಳಬೇಕೆಂದು ೫೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

◆◆◆◆

ಹಿಂದುಸ್ಥಾನದಲ್ಲಿ ೩ ಕೋಟಿ ರೂಪಾಯಿ ವಿಶೇಷ ಆದಾಯದಿಂದ ವರ್ತಮಾನಪತ್ರಿಕೆಗಳನ್ನೆಲ್ಲಾ ೩ ಪೈ ಸ್ಟಾಂಪಿಗೆ ಕಳುಹಿಸುವುದು ಬೇಕಾದರಿಂದ [illegible] ಸ್ಯಾಂಕ್ಷನ್ ಮಾಡಿದಂತೆ.

ಮಾಯಾವರ್ಮ ರಾಜ್ಯದಲ್ಲಿ ಜಾಮದಾರ್ ಸ್ಟೇಷನಿಂದ [illegible] ಗೋರಖಪುರ ಸ್ಟೇಷನ್ ವರೆಗೆ ೩೬ ಮೈಲಿ ಚೂಡ ರೈಲ್ ಹಾಕುವದಕ್ಕೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ೩೦,೫೫,೬೦೦ ರೂಪಾಯಿ ಸ್ಯಾಂಕ್ಷನ್ ಮಾಡಿರುವರು.

◆◆◆◆

ಅಲ್ವಾರ್ ಸಂಸ್ಥಾನದ ರಾಜರು ತಮ್ಮ ಪಟ್ಟಾಭಿಷೇಕದ [illegible] ವಿಚಾರವನ್ನು ಜ್ಞಾಪಕಾರ್ಥವಾಗಿ ಉದ್ದೇಶಿಸಿ ೫೦,೦೦೦ ರೂಪಾಯಿಗಳನ್ನೂ, ಒಂದು ಧರ್ಮಾರ್ಥ ಆಸ್ಪತ್ರೆ ಮೂಲಧನಕ್ಕೆ ೭,೫೦೦ ರೂಪಾಯಿಗಳನ್ನೂ ಕೊಟ್ಟಿದ್ದಾರೆ.

◆◆◆◆

ಬೊಂಬಾಯಿ ಪಟ್ಟಣದಲ್ಲಿ ಮಹಮ್ಮದೀಯರ ವಿದ್ಯಾಭಿವೃದ್ಧಿ ಸಭೆ ಬಹಳ ವೈಭವದಿಂದ ಈ ವಾರ ನಡೆಯಿತಷ್ಟೆ. ಈ ಸಭೆಗೆ ಹೈದರಾಬಾದ್ ಸಂಸ್ಥಾನದ ಮಂತ್ರಿವರ್ಯರಾದ [illegible] ರಾಜಾ ಕೃಷ್ಣಪ್ರಸಾದರವರು ೫೦೦ ರೂ ಕಳುಹಿಸಿರುತ್ತಾರೆ.

◆◆◆◆

ಮಾಲಬಾರಿನ ವಿಕ್ಟೋರಿಯಾ ಕಾಲೇಜಿನಲ್ಲಿ ಓದುವ ಹುಡುಗರು ವಾಸಮಾಡುವದಕ್ಕೆ ಅನುಕೂಲವಾಗಿರುವಂಥಾ ಒಂದು ವಿದ್ಯಾರ್ಥಿ ನಿಲಯವನ್ನು ಕಟ್ಟಿಸಬೇಕೆಂದು ಮ್ಯುನಿಸಿಪಾಲಿಟಿಯವರು ೧೫,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ.

◆◆◆◆

ಕಳೆದ ಶನಿವಾರ ಸಾಯಂಕಾಲ ಸೂರತ್ತಿನಲ್ಲಿ ಸಮುದ್ರದ ಬಳಿ ಇದ್ದ ಅಂಗಡಿ ಬೀದಿಗೆ ಬೆಂಕಿ ಬಿದ್ದು ೪೦ ಅಂಗಡಿಗಳು ಸುಟ್ಟು ಹೋದವು. ಇದರಿಂದ ಜನರಿಗೆ ಲಕ್ಷಾಂತರ ರೂಪಾಯಿ ನಷ್ಟವಾಗಿರುವುದು.

◆◆◆◆

ಅಂಬಾಲಾ ಪ್ರದೇಶದಲ್ಲಿ ಸೊಳ್ಳೆಗಳ ಕಾಟದಿಂದ ಜನರು ಜ್ವರ ಬರುತ್ತಿತ್ತು. ಸರಕಾರದವರು ಈ ಸೊಳ್ಳೆಗಳ ಕಾಟವನ್ನು ತಪ್ಪಿಸಿರುತ್ತಾರೆ. ಈಗ ಜನರು ಕೆರೆ ಕಟ್ಟೆಗಳಲ್ಲೇನೇ ಸ್ನಾನ ಮಾಡಬೇಕಾಗಿಲ್ಲ. ಸೊಳ್ಳೆಗಳು ಇಲ್ಲ. ಸೊಳ್ಳೆಗಳೆಲ್ಲಾ ದ್ರಾವಕಗಳ ನೆರವಿಯಿಂದ ನಾಶವಾಗಿಬಿಟ್ಟವು.

◆◆◆◆

ವಿಲಾಯತಿಗೆ ಹಿಂದುಸ್ಥಾನದಿಂದ ಪದಾರ್ಥಗಳನ್ನು ಕಳುಹಿಸುವವರಿಗೆ [illegible] ಕೆಲವು ರಿಯಾಯಿತಿಗಳನ್ನು ತೋರಿಸಿರುತ್ತಾರೆ. ಬರುವ ೧ನೇ ತಾರೀಖಿನಿಂದ ೬ ಪವನಿಗೆ ೬ ಆಣೆಯೂ, ಪೌಂಡಿಗೆ ೧೨ ಆಣೆಯೂ, ೧ ರಿಂದ ೧೧ ಪೌಂಡಿಗೆ ರೂ. ೧೫—೬— ಯೂ ಕೊಡತಕ್ಕದ್ದೆಂದು ವಿಧಿಸಿರುವರು.

◆◆◆◆

ನಾಗಪುರ ನಾಗಪಟ್ಟಣದಿಂದ [illegible] ಸಿಲೋನ್ ದ್ವೀಪದ ಬಳಿಗೆ ಹೊರಟು ಹೋಗುತ್ತಿದ್ದ ಒಂದು ಹಡಗು ಸಮುದ್ರದಲ್ಲಿ ಬಂಡೆಗೆ ಬಡಿದು ಒಡೆದುಹೋಯಿತು. ಈ ಹಡಗಿನಲ್ಲಿ ೧೦,೮೦೦ ಮಂದಿ ಭಕ್ತರು [illegible] ಸಿಕ್ಕಿಕೊಂಡಿದ್ದರು. ಸಿಂಹಳಕ್ಕೆ [illegible] ಇದರಿಂದ ೫೦,೦೦೦ ರೂಪಾಯಿ ನಷ್ಟವಾಗಿರುವುದು.

◆◆◆◆

ಮುಂಗಡ ಪತ್ರಕ್ಕಾಗಿ [illegible] ಮಾಡುವವರನ್ನು ಶಿಕ್ಷಿಸಬೇಕೆಂದು [illegible] ತಂದಿದ್ದ ಅಸಲುಗಳನ್ನು ಒಂದು ಕಡೆ ಇಟ್ಟು ಹೋಗಿ [illegible] ಬಿಟ್ಟಿದ್ದಲ್ಲಿ ಒಂದು [illegible] ಈ ಸಂಘದವರ [illegible] ಸಹಾಯವಾಗುವಂತೆ ಮದರಾಸ್ ಗವರ್ನರವರು ೫,೫೦೦ ರೂಪಾಯಿ ಗ್ರಾಂಟು ಕೊಟ್ಟಿದ್ದಾರೆ.

◆◆◆◆

ಕಳೆದ ಸೋಮವಾರ ಮಧ್ಯಾಹ್ನ ಕಲ್ಕತ್ತಾ ಪಟ್ಟಣದ ಸ್ಟ್ರೀಟ್ ರೋಡಿನಲ್ಲಿದ್ದ ಒಂದು ಮಿಠಾಯಿ ಅಂಗಡಿಗೆ ಬೆಂಕಿ ಬಿದ್ದು ಉರಿಯು ಬೇಗನೆ ಸುತ್ತುಮುತ್ತಲೂ ವ್ಯಾಪಿಸಿಕೊಂಡು, ವ್ಯಾಪಾರಗಾರರ ನಾಲ್ಕು ಅಂಗಡಿಗಳು ಸಾಮಾನು ಸಹಿತ ಉರಿದುಹೋದವು. ಸುಮಾರು ಒಂದು ಲಕ್ಷ ರೂಪಾಯಿ ವರೆಗೆ ನಷ್ಟವಾಗಿರುತ್ತದೆ.

◆◆◆◆

ಕಲ್ಕತ್ತಾ ಪಟ್ಟಣದ ಹೈಕೋರ್ಟಿನಲ್ಲಿ ಒಬ್ಬ ಜಡ್ಜ್ ಆಗಿರುವ ಮೆ॥ ಜಸ್ಟಿಸ್ ಗುಪ್ತ ಎಂಬುವವರು ತಮ್ಮ ಕೆಲಸಕ್ಕೆ ಅನುಕೂಲವಾಗಿಲ್ಲವೆಂದು ಹೇಳಿ ಆ ಕೆಲಸಕ್ಕೆ ರಾಜೀನಾಮೆ ಕೊಡುವರೆಂತಲೂ, ಅವರ ಸ್ಥಾನಕ್ಕೆ ಅದೇ ಕೋರ್ಟಿನಲ್ಲಿ ವಕೀಲರಾಗಿ ನಡೆಯುತ್ತಿರುವ ಬಾಬೂ ಹರಿ ಚರಣ ಮಿತ್ರ ಎಂಬುವರು ನೇಮಿಸಲ್ಪಡುವರೆಂತಲೂ ವರ್ತಮಾನ ಹುಟ್ಟಿದೆ.

◆◆◆◆

ಈ ಪುರದಲ್ಲಿ ಎಂಪ್ರೆಸ್ ಮಿಲ್ಸ್ ಎಂಬ ಬಟ್ಟೆ ಕಾರ್ಖಾನೆ ಯಜಮಾನರು ಕೂಲಿ ಮಾಡುವವರಿಗೆಲ್ಲಾ ಸುಮಾರು ವರ್ಷ ಹಣವನ್ನು ಕಟ್ಟಿಸಿಕೊಟ್ಟಿದ್ದರು. ಕಳೆದ ವಾರ ಈ ಮನೆಗಳಿಗೆ ಬೆಂಕಿ ಬಿದ್ದು ಕೆಲವು ಜೋಪಡಿಗಳು ಹತ್ತಿಕೊಂಡು ಆ ಪೈಕಿ ಒಂದು [illegible] ಸುಟ್ಟು ಹೋದವು. ದೈವವಶಾತ್ ಪ್ರಾಣನಷ್ಟವೇನೂ ಆಗಲಿಲ್ಲ.

◆◆◆◆

ಕೊಚ್ಚಿ ಸಂಸ್ಥಾನದ ರಾಜರೂ, ಅವರ ರಾಣಿಯವರೂ ಮದರಾಸಿಗೆ ಬಂದಿರುತ್ತಾರೆ. ಇವರನ್ನು ಮದರಾಸ್ ಗವರ್ನರವರು [illegible], ತಮ್ಮ ಸಂಗಡ ಕರೆದುಕೊಂಡುಹೋಗಿ ಮದರಾಸಿನಲ್ಲಿ

ಮುಖ್ಯ ಕಟ್ಟಡಗಳನ್ನೂ ಅಲ್ಲಿನ ಸ್ಥಳವು ಕೋರ್ಟು ಮುಂತಾದವುಗಳನ್ನೂ ತೋರಿಸುತ್ತಾ ಬಂದರು. ಈ ಪ್ರಕಾರ ಸರ್ಕಾರದವರು ಸತ್ಕಾರ ಮಾಡಿದ್ದಕ್ಕಾಗಿ ರಾಜರಿಗೆ ಪರಮಾನಂದ ಉಂಟಾಗಿದೆ.

❖❖❖❖

ಕಳೆದ ತಿಂಗಳಲ್ಲಿ ಹಿಂದುಸ್ಥಾನದ ಸೈನ್ಯಾಧಿಪತಿಯಾದ ಲಾರ್ಡ್ ಕಿಚ್ನರ್‌ರವರು ಶಿಕಾರಿ ಮಾಡುವುದಕ್ಕೆ ಹೋಗಿ ಒಂದು ಕಡೆ ಬಿದ್ದು ಕಾಲು ಮುರಿದುಕೊಂಡು ಶಿಮ್ಲಾ ಪಟ್ಟಣದ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಾರೆಂದು ತಿಳಿಸಿದ್ದೆವಷ್ಟೆ. ಈಗ ಅವರಿಗೆ ವಾಸಿಯಾಗಿದೆ. ಕಳೆದ ವಾರ ಅವರು ರೈಲಿನಲ್ಲಿ ಪ್ರಯಾಣ ಮಾಡಿಕೊಂಡು ಕಲ್ಕತ್ತಾ ಪಟ್ಟಣವನ್ನು ಸುಖವಾಗಿ ಸೇರಿದರು.

❖❖❖❖

ಬಂಗಾಳಾ ಅಧಿಪತ್ಯಕ್ಕೆ ಸೇರಿರುವ ಢಾಕಾ, ಮೈಮನಸಿಂಗ್ ಎಂಬೀ ಎರಡು ಡಿಸ್ಟ್ರಿಕ್ಟುಗಳನ್ನೂ ಅಸಾಂ ಚೀಫ್ ಕಮಿಷನರ ಅಧಿಕಾರಕ್ಕೆ ಸೇರಿಸಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿ ಯವರಿಂದ ಹುಕುಂ ಬಂದಿದೆ. ಅಲ್ಲಿನ ಜನರು ಇದಕ್ಕೆ ಒಪ್ಪದೆ ದೊಡ್ಡ ಸಮೂಹ ಸೇರಿ ತಮ್ಮ ತೀರ್ಮಾನವನ್ನು ಬಂಗಾಳಾ ಗವರ್ನಮೆಂಟಿಗೆ ಒಪ್ಪಿಸಿರುತ್ತಾರೆ. ಈ ಭಾಗದಲ್ಲಿ ಜನರಿಗೆ ತುಂಬಾ ಅಸಮಾಧಾನ ಉಂಟಾಗಿರುವುದು.

❖❖❖❖

ಮದರಾಸ್ ಅಧಿಪತ್ಯದಲ್ಲಿ ರೈತರು ತಮ್ಮ ಜಮೀನುಗಳಲ್ಲಿ ಎರಡು ಫಸಲು ಬೆಳೆಯುತ್ತಾರೆ. ಕಲೆಕ್ಟರೆಂಬ ಅಧಿಕಾರಿಗೆ ತಿಳಿಸಿ ರೈತರು ತಮ್ಮ ಜಮೀನುಗಳಲ್ಲಿ ಭಾವಿಗಳನ್ನು ತೋಡಿಸಿಕೊಂಡು, ಆ ನೀರಿನಿಂದ ಎರಡನೆಯ ಫಸಲು ತೆಗೆಯಬಹುದೆಂತಲೂ, ಇದಕ್ಕೆ ಅಧಿಕಾರಿಗಳು ಅಡ್ಡಿ ಮಾಡಬಾರದೆಂತಲೂ, ರೈತರಿಗೆ ತುಂಬಾ ಪ್ರೋತ್ಸಾಹ ಕೊಟ್ಟು, ಅವರೇ ಜಾಸ್ತಿ ಬೆಳೆ ತೆಗೆಯುವಂತೆ ಮಾಡಬೇಕೆಂತಲೂ ಗವರ್ನಮೆಂಟಿನವರು ಅಧಿಕಾರಿಗಳಿಗೆಲ್ಲಾ ತಿಳಿಸಿರುತ್ತಾರೆ.

❖❖❖❖

ಶೃಂಗೇರಿಯ ಸಂಸ್ಥಾನದ ರಾಜಾಸಾಹೇಬರವರು ತಮ್ಮ ಸಂಸ್ಥಾನದಲ್ಲಿ ಉಪ್ಪನ್ನು ಖರೀದಿ ಮಾಡುವುದಕ್ಕೆ ಒಂದು ಕಾರ್ಖಾನೆಯ ಬಳಿಗೆ ಬಂದರೆ ಕೆಲವು ಪತಾಕೆಗಳಿಗೆ ಮಾತ್ರ ಉಪ್ಪು ಕೊಟ್ಟು ಖರೀದಿ ಮಾಡುವ ಅಧಿಕಾರ ಕೊಡಲ್ಪಟ್ಟಿದೆ. ಇದಲ್ಲದೆ ಕೋಟಾ ಎಂಬ ಸ್ಥಳದಲ್ಲಿ ತಯಾರಾಗುವ ಉಪ್ಪನ್ನೇ ತಮ್ಮ ಸಂಸ್ಥಾನದವರು ತರಿಸಿ ಖರೀದಿ ಮಾಡಬೇಕೆಂತಲೂ, ಇತರ ದೇಶಗಳಿಂದ ಯಾರಾದರೂ ಉಪ್ಪು ತರಿಸಿ ಖರೀದಿ ಮಾಡಿದರೆ ಅಂಥಾವರನ್ನು ಶಿಕ್ಷೆಗೆ ಗುರಿಮಾಡುತ್ತೇವೆಂತಲೂ, ಆ ಉಪ್ಪನ್ನು ಜಪ್ತು ಮಾಡಿ ಹರಾಜು ಮಾಡುತ್ತೇವೆಂತಲೂ ಪ್ರಕಟಿಸಿರುತ್ತಾರೆ.

❖❖❖❖

ಕೊಯಮತ್ತೂರಿನಿಂದ ಉದಕಮಂಡಲದ ತನಕ ಸುಮಾರು ೧೬ ಮೈಲಿ ದೂರ ನೀಲಗಿರಿ ರೈಲ್ ರಸ್ತೆಯನ್ನು ಹಾಕಬೇಕೆಂತ ಮಾಡುವುದಕ್ಕೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ೬೧,೪೪ ೯೧೦ ರೂಪಾಯಿ ಮಂಜೂರು ಮಾಡಿರುತ್ತಾರೆ. ಈ ರೈಲ್ ಲೈನಿನಲ್ಲಿ ರೈಲ್ ಗಾಡಿಗಳನ್ನು ವಿದ್ಯುಚ್ಛಕ್ತಿಯಿಂದ ಓಡಿಸಬೇಕೆಂತಲೂ, ಅದೇ ವಿದ್ಯುಚ್ಛಕ್ತಿಯಿಂದ ಕೂನೂರು, ವೆಲ್ಲಿಂಗ್‌ಟನ್, ಉದಕಮಂಡಲ, ಈ ಮೂರು ಸ್ಥಳಗಳಲ್ಲೂ ರಾತ್ರಿ ಹೊತ್ತು ದೀಪ ಹಚ್ಚುವಂತೆ ಏರ್ಪಾಡು ಮಾಡಬೇಕೆಂತಲೂ ಒಂದು ಸಲಹೆ ನಡೆಯುತ್ತಿದೆ. ಈ ಪಟ್ಟಣದ ಒಂದು ಕಂಪೆನಿಯವರು ಈ ಕೆಲಸದ ಕಂಟ್ರಾಕ್ಟನ್ನು ವಹಿಸಿಕೊಳ್ಳುವವರಾಗಿದ್ದಾರೆ.

❖❖❖❖

ಉತ್ತರ ದೇಶಕ್ಕೆ ಸೇರಿದ ಕಸೌಲಿ ಪಟ್ಟಣದಲ್ಲಿ ಇಂಡಿಯಾ ಗವರ್ನಮೆಂಟಿನವರು ನಾಯಿ ನರಿ ಮುಂತಾದ ಪ್ರಾಣಿಗಳಿಂದ ಕಚ್ಚಿಸಿಕೊಂಡಂಥಾ ರೋಗಿಗಳಿಗೆ ಚಿಕಿತ್ಸೆ ಮಾಡುವುದಕ್ಕೆ ಒಂದು ಪ್ರತ್ಯೇಕವಾದ ಆಸ್ಪತ್ರೆಯನ್ನಿಟ್ಟು ಕಳೆದ ಅಗೋಸ್ಟಿಗೆ ೩ ಸಂವತ್ಸರಗಳಾದುವು. ಈ ಮೂರನೇ ಸಂವತ್ಸರದಲ್ಲಿ ೧೪೯೭ ಮಂದಿ ರೋಗಿಗಳು ಚಿಕಿತ್ಸೆ ಹೊಂದಿದರೆಂತಲೂ, ಈ ಪೈಕಿ ಯೂರೋಪಿಯನ್ನರು ೩೬೯ ಮಂದಿ, ದೇಶೀಯರು ೩೦೧ ಮಂದಿ ಎಂತಲೂ, ಚಿಕಿತ್ಸೆ ಹೊಂದಿದವರಲ್ಲಿ ೬ ಮಂದಿಗೆ ಮಾತ್ರ ವಾಸಿಯಾಗಲಿಲ್ಲವೆಂತಲೂ, ಉಳಿದವರೆಲ್ಲಾ ಗುಣವಾಗಿ ತಮ್ಮ ತಮ್ಮ ಊರುಗಳನ್ನು ಹೋಗಿ ಸೇರಿದ್ದಾರೆಂತಲೂ ಅಲ್ಲಿನ ಡಾಕ್ಟರ್ ಸೆಂಪಲ್ ಎಂಬುವರು ರಿಪೋರ್ಟು ಪ್ರಕಟಿಸಿರುತ್ತಾರೆ.

❖❖❖❖

ಉತ್ತರ ದೇಶದಲ್ಲಿ ೧೬ ವಯಸ್ಸಿನ ಒಬ್ಬ ಹುಡುಗಿಯು ಆತ್ಮಹತ್ಯ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿಕೊಂಡಳು. ೯ ದಿವಸಗಳ ಮೇಲೆ ಅವಳ ನೆಂಟರಿಷ್ಟರಿಗೆ ಈ ಸಂಗತಿ ಗೊತ್ತಾಯಿತು. ಅವರು ಹೋಗಿ ಬಾಗಿಲನ್ನು ಒಡೆದು ಅವಳನ್ನು ಕೆಳಕ್ಕೆ ಇಳಿಸಿ ಮಲಗಿಸಿದರು. ಸ್ವಲ್ಪ ಉಸಿರಾಡುತ್ತಿದ್ದ ಹಾಗೆ ತೋರಿತು. ಕೂಡಲೇ ಆ ನೆಂಟರು ಅವಳನ್ನು ಎತ್ತಿ ಕೂರಿಸಿಕೊಂಡು, ಎದೆ ಬೊಗ್ಗಿಸಿ ಒರಗಿಸಿಕೊಂಡರು. ಸ್ವಲ್ಪ ಹೊತ್ತಿನೊಳಗೇ ಆ ಹುಡುಗಿಗೆ ಉಸಿರು ಹೊರಡಲಾರಂಭವಾಯಿತು. ಅವರ ೧೦ ನಿಮಿಷಗಳ ತನಕ ಮಾತ್ರ ಉಳಿದಿದ್ದು ನಿಂತುಹೋಯಿತು. ಅವಳಿಗೆ ಪ್ರಜ್ಞೆ ಬರಲೇ ಇಲ್ಲ. ಹಾಗೇ ಸತ್ತುಹೋದಳು. ಹೀಗೆ ಅವಳಿಗೆ ೯ ದಿನಗಳ ಮೇಲೆ ಪ್ರಾಣ ಹೋದದ್ದು ತುಂಬಾ ಆಶ್ಚರ್ಯವೆಂದು ಒಬ್ಬ ವೈದ್ಯನು ಪ್ರಕಟಿಸಿರುತ್ತಾನೆ.

❖❖❖❖

ಕ್ಷಯ (ಪ್ಲೇಗ್ ಕೊಡುವ ಜ್ವರ) ರೋಗವನ್ನು ಪರೀಕ್ಷೆ ಮಾಡುವುದಕ್ಕೆ ಈ ರೋಗಿಯನ್ನು ಹೆಚ್ಚು ಬರಿಸುವುದಿಲ್ಲ.

ಹುಡುಗರಿಗೆ ೫ ಘಂಟೆಯ ಕಾಲದ ಹೊರತು ಹೆಚ್ಚು ಕಾಲ ಓದಿಸಿ ಬಿಡಬಾರದೆಂದು ಒಂದು ಪುಸ್ತಕಕ್ಕೆ ಹಾಕಿದ ಲೆಕ್ಕ ಹಿಂದೆ ಬಹಳ ಹಿಂದೆ ಇರಬೇಕು ಎಂದು ಪುಸ್ತಕಗಳ ಮೂಲಕ ಬೀದಿ ಹಾಕುತ್ತಿದ್ದರಷ್ಟೆ. ಇವನ್ನು ನೋಡಿ ಪ್ರತಿ ಹುಡುಗನಿಗೂ ೭ ಘಂಟೆಯ ಕಾಲದ ಓದನ್ನು ಪೂರೈಸಿ ಕೊಟ್ಟು ಅದೇ ೩ ಕಾಸಿಗೆ ಒಂದು ಘಂಟೆಯಂತೆ ಬೀದಿ ಮಾಡಬೇಕೆಂತಲೂ, ಇಂಥಾ ೪ ಘಂಟೆಗಳನ್ನು ಹಾಕಿ ಒಂದು ದೊಡ್ಡ ಘಂಟೆಯಾಗಿ ಕಟ್ಟಿ ೬ ಆಣೆಗೆ ಬಂದಂತೆ ವಿಕ್ರಯಿಸಬೇಕೆಂತಲೂ, ಜನರು ತಾವೇ ಈ ಪುಸ್ತಕಗಳನ್ನು ಹ್ಯಾಗೆ ಉಪಯೋಗಿಸಬೇಕು, ಅದು ಮಾಡಬೇಕು ಎಂಬೀ ವಿಷಯಗಳನ್ನು ತಿಳಿಸುವುದಕ್ಕೆ ಪೋಸ್ಟ್ ಆಫೀಸಿನವರು ನೋಟೀಸುಗಳನ್ನು ಎಲ್ಲಾ ಭಾಷೆಗಳಲ್ಲೂ ತರ್ಜುಮೆ ಮಾಡಿಸಿ ಜನರಿಗೆ ಹಂಚಬೇಕೆಂತಲೂ ಗವರ್ನಮೆಂಟಿನವರು ಹುಕುಂ ಮಾಡಿರುತ್ತಾರೆ.

❖❖❖❖

ಮದರಾಸ್ ಅಧಿಪತ್ಯದಿಂದ ೧೯೦೩ನೆ ಇಸವಿಯಲ್ಲಿ ೧೧೯ ಮಂದಿ ಮುಸಲ್ಮಾನ ದೊಡ್ಡ ಮನುಷ್ಯರು ಮಕ್ಕಾ ಮದೀನಾ ಮುಂತಾದ ಕಡೆಗಳಿಗೆ ಹೋಗಿ ಯಾತ್ರೆ ಮಾಡಿಕೊಂಡು ಬಂದರು. ಆದರೆ ೧೯೦೩ನೆ ಇಸವಿ ಸೆಪ್ಟಂಬರ್ ಆಖೈರು ವರೆಗೆ ಯಾತ್ರೆ ಹೋಗಿ ಬಂದವರು ಐದೇ ಐದು ಮಂದಿ. ಈ ಐದು ಮಂದಿಯೂ ಕರ್ನೂಲ್ ಡಿಸ್ಟ್ರಿಕ್ಟಿಗೆ ಸೇರಿದವರು. ಈ ಪೈಕಿ ಒಬ್ಬ ಅರ್ಧದಾರಿಯಲ್ಲೇ ಸತ್ತುಹೋದನು. ಇನ್ನೊಬ್ಬ ಸ್ವಲ್ಪದೂರ ಹೋಗಿದ್ದು ವಾಪಸು ಬಂದುಬಿಟ್ಟನು. ಉಳಿದ ಮೂರು ಮಂದಿ ಯಾತ್ರೆ ಮಾಡಿಕೊಂಡು ಬಂದಿದ್ದಾರೆ. ಇವರೆಲ್ಲಾ—ನಮ್ಮ ಪ್ರಯಾಣವು ತುಂಬಾ ಸುಖವಾಗಿದ್ದಿತೆಂತಲೂ, ದಾರಿಯಲ್ಲಿ ಯಾವ ವಿಧವಾದ ಬಂಡೆ ತೊಂದರೆಯೂ ಇದ್ದಿಲ್ಲವೆಂತಲೂ, ಟರ್ಕೀ ಅಧಿಕಾರಿಗಳೂ ಷರೀಫ್ ಎಂಬ ಮುಲ್ಲಾಗಳೂ ತಮ್ಮನ್ನು ಬಹಳ ಕರುಣೆಯಿಂದ ಕಂಡು, ತಮಗೆ ಬೇಕಾದ ಸೌಕರ್ಯಗಳನ್ನೆಲ್ಲಾ ಸರಫರಾಯಿ ಮಾಡಿ ಕಾಪಾಡಿದರೆಂತಲೂ ಹೇಳುತ್ತಾರೆ.

❖❖❖❖

ಪಾರ್ಲಿಮೆಂಟಿನ ಸ್ವಾತಂತ್ರ್ಯ ಸಹಕಾರ ಜಯವಾದನ್ನ ನಮ್ಮ ವೈಸರಾಯ ಲಾರ್ಡ್ ಕರ್ಜನ್ ಪ್ರಭುಗಳು ಕಳೆದ ವಾರ ವಾಪಸು ಕಲ್ಕತ್ತೆಗೆ ಬಂದು ಸೇರಿದರು. ಅಲ್ಲಿಗೆ ಹೋಗಿದ್ದ ವೈಸರಾಯವರು ಬುಷೈರಿನಲ್ಲಿ ತಂಗಲೇ ಇಲ್ಲ. ಪರ್ಷಿಯಾ ರಾಜ್ಯದ ಒಂದ ಭಾರಿಯು ಕಾದಿದ್ದ ವೈಸರಾಯರನ್ನು ಜಹಜಿನಿಂದ ಇಳಿಸಿ ಕರೆದುಕೊಂಡು ಹೋಗಬೇಕೆಂತಿದ್ದ. ಅವರ ಕರೆಯ ಮರ್ಯಾದೆಯೂ ಬೀಳದೆ ಇದ್ದುದರಿಂದ ವೈಸರಾಯರು ತಮ್ಮ ಜಹಜಿನಲ್ಲೇ ಇದ್ದು ಮುಂದ ಪ್ರಯಾಣ ಮಾಡಿದರು. ಈ ವಿಷಯದಲ್ಲಿ ಬುಷೈರಿನವರಿಗೆ ವೈಸರಾಯರಮೇಲೆ ಅಸಮಾಧಾನ ಉಂಟಾಗಿದೆ. ಅಲ್ಲಿಯೇ ಬೇಲಾ ಎಂಬಲ್ಲಿ ಖಾನ್ ಮುದ್ದೀನರು ವೈಸರಾಯರನ್ನು ಕಂಡು ಮಾತನಾಡಬೇಕೆಂದಿದ್ದರೂ, ಅವರ ದರ್ಶನ ದೊರಕಲಿಲ್ಲವೆಂತಲೂ ಅಸಮಾಧಾನ ಪಟ್ಟುಕೊಂಡರು. ಇದಲ್ಲದೆ ಆ ಪ್ರಾಂತ್ಯದಲ್ಲಿ ಆ ಜನರೆಲ್ಲಾ ಇಂಗ್ಲೀಷರನ್ನು ನಂಬಬಾರದೆಂದೂ, ವೈಸರಾಯರು ತಮಗೆ ಅವಮಾನ ಮಾಡಿದರೆಂದೂ ಹೇಳಿಕೊಳ್ಳುತ್ತಿದ್ದಾರೆ.

---

## ಮೈಸೂರು ಸಂಸ್ಥಾನದ ಮಹಾರಾಜರವರು.

## ಮದರಾಸ್ ರೈಲ್ವೆ ಸ್ಟೇಷನ್.

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರು, ಮಹಾರಾಣಿ ವಾಣೀವಿಲಾಸ ಸನ್ನಿಧಾನದವರು, ಯುವರಾಜರು ಸ್ಪೆಷಲ್ ರೈಲಿನಲ್ಲಿ ಬೆಂಗಳೂರಿನಿಂದ ಹೊರಟು, ಕಳೆದ ೬ನೆ ತಾರೀಖು ಮಂಗಳವಾರ ಬೆಳಗ್ಗೆ ಮದರಾಸ್ ಪಟ್ಟಣವನ್ನು ತಲುಪಿದರು. ಇವರ ಸಂಗಡ ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿ, ಕೆ. ಸಿ. ಐ. ಇ. ಯವರು, ಪ್ರೈವೇಟ್ ಸೆಕ್ರೆಟರಿ ಮೆ॥ ಇ. ಮೆಕನಟಿಯವರು, ದರ್ಬಾರ್ ಭಕ್ಷಿ ಮೆ॥ ಎಚ್. ಲಿಂಗರಾಜೇ ಅರಸಿನವರು, ಹುಜೂರ್ ಮೆ॥ ಆಗಾಬಾಗ ಯವರು, ಮೆ॥ ಲಕ್ಷ್ಮೀಕಾಂತರಾಜೇ ಅರಸಿನವರು, ಶ್ರೀಮನ್ ಸರ್ದಾರರಾದ ಲೆಫ್ಟಿನೆಂಟ್ ಕರ್ನಲ್ ಜೆ. ಸ್ಮಿತ್ ಯವರು, ಇವರೇ ಮುಂತಾದ ಪರಿವಾರದವರು ಎಲ್ಲಾ ಗಾಡಿ ಇಳಿದರು. ಮದರಾಸಿನವರು ಸೆಂಟ್ರಲ್ ಸ್ಟೇಷನ್ ಒಳಗೆಲ್ಲಾ ಚಪ್ಪರವಾಕಿ ನಾನಾ ಪ್ರಕಾರ ಅಲಂಕರಿಸಿದ್ದರು. ಅಲ್ಲಿನ ದೊಡ್ಡ ಮನುಷ್ಯರು ಸ್ಟೇಷನ್ನಿನಲ್ಲಿ ಕಾದಿದ್ದರು. ಇವರಲ್ಲಿ ಮುಖ್ಯರಾದವರ್ಯಾರೆಂದರೆ :-ಬೊಬ್ಬಿಲಿ ಸಂಸ್ಥಾನದ ಆನರೆಬಲ್ ಮಹಾರಾಜರವರು, ಸರ್ ಎಸ್. ಸುಬ್ರಹ್ಮಣ್ಯ ಅಯ್ಯರ್, ರಾಜಾ ಸರ್ ಸಾವಳಿ ರಾಮಸ್ವಾಮಿ ಮೊದಲಿಯಾರ್, ಆನರೆಬಲ್ ಸರ್ ವಿ. ಭಾಷ್ಯಂ ಅಯ್ಯಂಗಾರ್, ಆನರೆಬಲ್ ಮೆ॥ ಸಿ. ಶಂಕರನ್ ನಾಯರ್, ದಿವಾನ್ ಬಹದೂರ್ ಎಸ್. ಸುಬ್ರಹ್ಮಣ್ಯಂ, ಮೆ॥ ಎಂ. ಒ. ಪಾರ್ಥಸಾರಥಿ ಅಯ್ಯಂಗಾರ್, ದಿವಾನ್ ಬಹದೂರ್ ಪಿ. ರಾಜರತ್ನ ಮೊದಲಿಯಾರ್, ರಾಯಬಹದೂರ್ ಎಂ. ರಂಗಾಚಾರ್ಯರ್, ರಾಯಬಹದೂರ್ ಎಂ. ಆದಿನಾರಾಯಣ ಅಯ್ಯರ್, ಮೆ॥ ಬಿ ಕೃಷ್ಣರ್, ಮೆ॥ ಟಿ. ರಿಚ್‌ಮಂಡ್ ಡಾಕ್ಟರ್ ಟಿ. ಎಂ. ನಾಯರ್, ಮೆ॥ ಎ. ಕೃಷ್ಣಸ್ವಾಮಿಅಯ್ಯರ್, ರಾಯಬಹದೂರ್ ಪಿ. ಪಾಲಯಲಿಂಗ ಮೊದಲಿಯಾರ್, ಸಿ. ಐ. ಇ., ಮೆ॥ ಜೋಸೆಫ್ ಸತ್ಯನಾಥನ್, ಮೆ॥ ಕರುಣಾಕರ ಮೆನನ್, ಮೆ॥ ಟಿ. ಫರ್ಗ್ಯುಸನ್, ಮೆ॥ ಕೆ. ನಾಗರಾಜರಾವ್, ಮೆ॥ ಎಂ. ವೀರರಾಘವಾಚಾರ್ಯರ್, ಮೆ॥ ವಿಜಯ ರಂಗಮುದ್ದು ಅಪ್ಪಾಜಿ ಮುಂತಾದವರು. ಗವರ್ನರವರ ಪ್ರತಿನಿಧಿಯಾಗಿ ಅವರ ಏಡಿಕಾಂಗ್ ಕ್ಯಾಪ್ಟನ್ ವೇರ್ ಯವರು ಸ್ಟೇಷನ್ನಿನಲ್ಲಿ ಕಾದಿದ್ದರು.

## ಅಡ್ರೆಸ್ ಸಮರ್ಪಣೆ.

ಶ್ರೀಮನ್ಮಹಾರಾಜರವರು ಗಾಡಿ ಇಳಿದು ಅಡ್ಡಣ್ಣೆತ್ತೂ ಕಂಡು ಯೋಗಕ್ಷೇಮ ವಿಚಾರಿಸಿದರು. ತರುವಾಯ ಮೆ॥ ಪಿ. ಎಸ್. ಶಿವಸ್ವಾಮಿ ಅಯ್ಯರವರು ಮದರಾಸ್ ಪಟ್ಟಣದವರ ಪರವಾಗಿ ಮಹಾರಾಜರವರಿಗೆ ಸುಸ್ವಾಗತವನ್ನು ಬಯಸಿ, ಅಡ್ರೆಸ್ಸನ್ನು ಓದಿದರು. ಅವರು ತಿಳಿಸಿದ ಮುಖ್ಯಾಭಿಪ್ರಾಯವೇನೆಂದರೆ :—

"ಘನವನ್ನು ಪಡೆದ ತಾವು ಮೈಸೂರು ಸಂಸ್ಥಾನದ ರಾಜ್ಯಪದವಿಯನ್ನು ಸ್ವೀಕರಿಸಿದನಂತರ ಮದರಾಸ್ ಪಟ್ಟಣಕ್ಕೆ ದಯಮಾಡಿದ್ದು ಇದೇ ಮೊದಲು. ತಾವುಗಳೆಲ್ಲಾ ತಮಗೆ ಸುಸ್ವಾಗತವನ್ನು ಬಯಸುತ್ತೇವೆ. ಯಾಕೆಂದರೆ ತಮ್ಮ ತಂದೆಯವರು ಲೋಕಾಂತರವನ್ನೈದಿ, ತಮಗೆ ಪಟ್ಟಾಭಿಷೇಕವಾದ ಮೇಲೆ ತಾವು ವಿದ್ಯಾಭ್ಯಾಸದಲ್ಲಿ ಪ್ರವೃತ್ತರಾಗುತ್ತಿದ್ದಾಗಲೂ, ಈಚೆಗೆ ತಾವು ರಾಜ್ಯಾಧಿಕಾರವನ್ನು ಅಂಗೀಕರಿಸಿದಂದಿನಿಂದಲೂ ಮದರಾಸ್ ಪುರವಾಸಿಗಳಾದ ನಾವು ತಮ್ಮ ಶ್ರೇಯೋಭಿವೃದ್ಧಿಯನ್ನೇ ಬಯಸುತ್ತಾ ಬಂದಿರುವೆವು. ತಮ್ಮ ವಿದ್ಯಾಭಿವೃದ್ಧಿಯನ್ನೂ ರಾಜ್ಯಭಾರದಕ್ಷತೆಯನ್ನೂ ನಾವು ನೋಡಿ ಆಹ್ಲಾದಪಡುತ್ತಿದ್ದೇವೆ. ಇನ್ನು ಮುಂದೆ ತಾವು ತುಂಬಾ ಯಶೋವಂತರಾಗಬೇಕೆಂದು ನಮಗೆ ಹಂಬಲವುಂಟಾಗಿದೆ. ದೇಶೀಯ ಸಂಸ್ಥಾನಗಳು ಯಾವ ರೀತಿಯಲ್ಲಿ ಎಷ್ಟುಮಟ್ಟಿಗೂ ಅಭಿವೃದ್ಧಿಗೆ ಬರಬಹುದೆಂದು ಪರೀಕ್ಷೆ ಮಾಡಬಹುದೋ ಅಂಥಾ ಪರೀಕ್ಷೆಗೆ ಮೈಸೂರು ಸಂಸ್ಥಾನವೇ ದೃಷ್ಟಾಂತವಾಗಿರುವುದು. ಹಿಂದುಸ್ಥಾನದಲ್ಲಿರತಕ್ಕ ದೊಡ್ಡ ದೊಡ್ಡ ದೇಶೀಯ ಸಂಸ್ಥಾನಗಳಲ್ಲೆಲ್ಲಾ ಮೈಸೂರು ಸಂಸ್ಥಾನವು ವಿಶೇಷ ಗೌರವವನ್ನು ಸಂಪಾದಿಸಿಕೊಂಡು, ಸ್ವದೇಶೀಯರ ಬುದ್ಧಿ ಕುಶಲತೆ ಕಾರ್ಯದಕ್ಷತೆಗಳಿಂದಲೇ ದಿನೇ ದಿನೇ ವೃದ್ಧಿಯನ್ನೈದುತ್ತಾ ಬರುತ್ತಿರುವುದು. ಈ ಘನತೆ ಯಿಂದಲ್ಲಿ ವಿಶೇಷಪೂರ್ವಕವಾಗಿ ಆಳಲ್ಪಡುವ ಉಳಿದ ಎಲ್ಲಾ ಸಂಸ್ಥಾನಗಳನ್ನೂ ಬಿಟ್ಟು ನಾವು ನಿಮ್ಮ ಸಂಸ್ಥಾನವನ್ನೇ ಹೆಚ್ಚಾಗಿ ನೋಡುತ್ತಿರುವೆವು ಯಾಕೆಂದರೆ ತಮ್ಮ ಸಂಸ್ಥಾನದಲ್ಲಿ ಪ್ರಜೆಗಳು ರಾಜಕೀಯ ವಿಷಯಗಳನ್ನು ಕಲಿತುಕೊಂಡು ಗವರ್ನಮೆಂಟಿನವರಿಗೆ ಒಳ್ಳೊಳ್ಳೇ ಸಲಹೆಗಳನ್ನು ಕೊಡುತ್ತಾ ಬರುವಂತಾಗಬೇಕೆಂದು ಪ್ರಜಾಪ್ರತಿನಿಧಿ ಸಭೆಯನ್ನೂ, ಅವರು ಕೈಗಾರಿಕೆ ಶಾಸ್ತ್ರ ವಿದ್ಯೆಗಳಲ್ಲಿ ಪ್ರವೀಣರಾಗಿ ಸ್ವಯಂ ಪರ್ಯಾಪ್ತರಾಗಬೇಕೆಂದು ಅನೇಕ ತರದ ಕಸಬುವಾರಿ ವಿದ್ಯಾಬೋಧಕ ಆಲಯಗಳನ್ನೂ, ಅವರು ಶ್ರೀಮಂತರಾಗಿಯೂ ದೀರ್ಘಾಯುಗಳಾಗಿಯೂ ಆಗಬೇಕೆಂದು ಬಾಲ್ಯವಿವಾಹ ನಿರೋಧಕ ಶಾಸನವನ್ನೂ ಏರ್ಪಡಿಸಿ ಮಾಡಿಕೊಟ್ಟರುತ್ತೀರಿ. ಆದಕಾರಣ ಬಹುಕಾಲದಿಂದಲೂ ಇತರ ಸಂಸ್ಥಾನಗಳಿಗೆ ಮೈಸೂರು ಮಾದರಿ ತೋರಿಸಿಕೊಡತಕ್ಕ ಸಂಸ್ಥಾನವೆಂಬ ಶ್ರೇಷ್ಠತರವಾದ ಯಶಸ್ಸನ್ನು ಸಂಪಾದಿಸಿಕೊಂಡಿರುವುದು. ಹಿಂದುಸ್ಥಾನದ ಪ್ರಜೆಗಳು ತಮ್ಮ ಏಳಿಗೆಗೆ ಸಹಾಯಕಗಳಾದ ಮಾರ್ಗಗಳಾವುವೆಂದು ನಿಮ್ಮ ಸಂಸ್ಥಾನವನ್ನು ನೋಡಿ ಕಲಿತುಕೊಳ್ಳುತ್ತಿರುವರು. ಸದ್ಯ ಹಿಂದುಸ್ಥಾನದವರ ದೃಷ್ಟಿಯೆಲ್ಲಾ ಯಾವ ವಿಷಯದ ಮೇಲೆ ನೆಲಸಿರುವುದೋ ಅಂಥಾ ಕೈಗಾರಿಕೆ ಕಸಬುದಾರಿ ಕಾಲವಿದ್ಯಾಭಿವೃದ್ಧಿಗೂ, ತನ್ಮೂಲಕ ದೇಶೋನ್ನತಿಗೂ ಕಾರಣವಾಗಿರುವಂಥಾ ಈ ಕಾರ್ಯವನ್ನು ಪ್ರದರ್ಶನಾಲಯವನ್ನು ಪ್ರಾರಂಭಿಸುವುದಕ್ಕಾಗಿ ತಾವು ಒಪ್ಪಿಕೊಂಡು ದಯಮಾಡಿದುದು ವಿಶೇಷವಾದ ಸಂತೋಷ ಕಾರಣವಾಗಿರುತ್ತದೆ."

ಮೇಲ್ಕಂಡ ಅಡ್ರೆಸ್ಸನ್ನು ಬಹು ಸುಂದರವಾಗಿ ಕೆತ್ತಲ್ಪಟ್ಟ ಬೆಳ್ಳಿ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಈ ಪೆಟ್ಟಿಗೆಯ ಮೇಲೆ ಕೆತ್ತಿರುವ ಮಾತುಗಳಾವುವೆಂದರೆ —"೧೯೦೩ನೆ ಡಿಸೆಂಬರ್ ೬ರಲ್ಲಿ ಮದರಾಸ್ ಪ್ರಜೆಗಳು ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್ ಯವರಿಗೆ ಒಪ್ಪಿಸಿದುದು."

## ಮಹಾರಾಜರವರ ಉತ್ತರ.

ಈ ಅಡ್ರೆಸ್ಸನ್ನು ಬಹು ಸಂತೋಷದಿಂದ ಸ್ವೀಕರಿಸಿ ಶ್ರೀಮನ್ಮಹಾರಾಜರವರು ಅದನ್ನು ಕುರಿತು ಪ್ರತ್ಯುತ್ತರ ಕೊಟ್ಟದ್ದೇನೆಂದರೆ —

"ಈ ಮಹಾ ನಗರದ ಮುಖ್ಯಸ್ಥರಾದ ನಿಮ್ಮಂಥಾ ದೊಡ್ಡ ಮನುಷ್ಯರುಗಳನ್ನೆಲ್ಲಾ ನಾನು ಸಂಧಿಸಿ, ನಿಮ್ಮ ಗುರುತು ಪರಿಚಯಗಳನ್ನು ಮಾಡಿಕೊಂಡುದಕ್ಕಾಗಿ ನನಗೆ ಪರಮಸಂತೋಷವಾಗಿದೆ. ನೀವುಗಳೆಲ್ಲಾ ಈ ಪ್ರಕಾರ ನನ್ನನ್ನು ಸತ್ಕರಿಸಿ ನನಗೆ ಸುಸ್ವಾಗತವನ್ನು ಬಯಸಿದ ವಿಷಯದಲ್ಲಿ ನಿಮ್ಮಗಳನ್ನು ಮನಃಪೂರ್ವಕವಾಗಿ ವಂದಿಸುವೆನು. ಮೈಸೂರು ಸಂಸ್ಥಾನದ ಅಭಿವೃದ್ಧಿ ಹೊಂದುವ ಭಾಗದಲ್ಲಿ ನೀವುಗಳೆಲ್ಲಾ ನಮ್ಮ ಶ್ರೇಯಃಪ್ರಕಾರದಾಗಿದ್ದುಕೊಂಡು ಇಷ್ಟು ವಿಶ್ವಾಸಕುತೂಹಲತೆಗಳನ್ನು ಪ್ರಕಾಶಪಡಿಸಿರುವುದನ್ನು ನೋಡಿ ಆನಂದಪಡುವೆನು ಪೂರ್ವದಿಂದಲೂ ನಮ್ಮ ಸಂಸ್ಥಾನಕ್ಕೆ ಬಂದಿರುವ ಒಳ್ಳೇ ಹೆಸರನ್ನು ಕಾಪಾಡಿಕೊಳ್ಳಬೇಕೆಂಬುದೇ ನನ್ನ ಕುತೂಹಲವು; ನನ್ನ ರಾಜ್ಯಭಾರಕ್ರಮಗಳು ಇನ್ನೂ ಉತ್ತಮಸ್ಥಿತಿಯಲ್ಲಿರುತ್ತವೆ ಎಂದು ನೀವು ಮೆಚ್ಚಿಕೊಳ್ಳುತ್ತಾ ಬಂದಿರುವುದಕ್ಕಾಗಿ ನಾನು ಸಂತೋಷಪಡುತ್ತೇನೆ. ನಾವು ದಾರಿಯಲ್ಲಿ ಬಂದಿರುತ್ತೇನೆಂದು ನೀವು ಸೂಚಿಸಿ ಕೊಳ್ಳುವಂಥಾ ದೇಶೋನ್ನತಿ ಕಾರ್ಯಗಳು ಶಾಶ್ವತವಾಗಿ ನಡೆಯುತ್ತಾ ಬರಲೆಂದೂ, ಇನ್ನೂ ಒಳ್ಳೊಳ್ಳೇ ಕಾರ್ಯಗಳನ್ನು ಮಾಡುತ್ತಾ ಬರಲು ನನಗೆ ಪ್ರೋತ್ಸಾಹವಾಗಲೆಂದೂ ಹಾರೈಸುತ್ತೇನೆ. ನೀವು ನನಗೋಸ್ಕರ ಬಹು ಶ್ರಮಪಟ್ಟಿರುತ್ತೀರಿ; ಇಷ್ಟು ಪ್ರೀತಿಪೂರ್ವಕವಾಗಿ ನನಗೆ ಸುಸ್ವಾಗತವನ್ನು ಬಯಸಿರುತ್ತೀರಿ; ಇದಕ್ಕಾಗಿ ನಿಮ್ಮೆಲ್ಲರಿಗೂ ಮತ್ತೊಂದಾವೃತ್ತಿ ವಂದಿಸುತ್ತೇನೆ."

ತರುವಾಯ ಶ್ರೀಮನ್ಮಹಾರಾಜರವರು ಕಾರಿನ ಹೊರಾಂಗಣದಲ್ಲಿ ಕಾಯುತ್ತಿದ್ದ ತಮ್ಮ ಬಿಡಾರವಾದ ಅಮೀರ್ ಗಾರ್ಡನ

ಸ್ ಎಂಬ ಬಂಗಲೆಯನ್ನು ಕಾಲಿಯು ಮಾಡುವಿದ್ದಾರು. ಹಿಂದೆ ಮುಂದೆ ಮದರಾಸ್ ಗವರ್ನರವರ ಬಾಡಿಗಾರ್ಡ್ ಸವಾರರು ಹೋಗಿದ್ದರು

### ಗವರ್ನರವರನ್ನು ಭೇಟಿ ಮಾಡಿದ್ದು.

ಕಳೆದ ಗುರುವಾರ ಮಧ್ಯಾಹ್ನ ೧ ಗಂಟೆಗೆ ಶ್ರೀಮನ್ಮಹಾರಾಜರವರು ಮದರಾಸ್ ಗವರ್ನರ್ ಲಾರ್ಡ್ ಅಮ್ಟಿಲ್ ರವರ ಭೇಟಿ ಮಾಡಿಕೊಂಡು ಬಂದರು. ಅವರ ಸಂಗಡ ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರು, ಪ್ರೈವೇಟ್ ಸೆಕ್ರೆಟರಿ ಮಿ॥ ಆ. ಮುಕಾಸಿಯವರು, ಇನ್ನು ಕೆಲವು ಸರ್ದಾರರು ಹೋಗಿದ್ದರು. ಮದರಾಸ್ ಗವರ್ನಮೆಂಟ್ ಛೀಫ್ ಸೆಕ್ರೆಟರಿ ಮಿ॥ ಮರ್ರ್ಯಾಮಿ ರವರೂ, ಗವರ್ನರವರ ಒಬ್ಬ ಏಡಿಕಾಂಗರವರೂ ಕುದುರೆ ಸ್ವಾರರ ಜೊತೆಯ ಬಂದು ಶ್ರೀಮನ್ಮಹಾರಾಜರವರನ್ನು ಲಾಂಗ್ಸ್ ಗಾರ್ಡನ್ಸ್‌ನಿಂದ ಉತ್ಸವದ ಸಹಿತವಾಗಿ ಕರೆದುಕೊಂಡು ಹೋದರು. ಗವರ್ನರವರು ದರ್ಬಾರ್ ಹಾಲ್‌ನಲ್ಲಿ ಮಹಾರಾಜರವರನ್ನು ಎದುರುಗೊಂಡು, ಅವರ ಸಂಗಡ ಸ್ವಲ್ಪಹೊತ್ತು ಯೋಗಕ್ಷೇಮಗಳನ್ನು ವಿಚಾರಿಸಿ ಅತ್ತರ್ ಪಾನ್ ಒಪ್ಪಿಸಿ ಸನ್ಮಾನದಿಂದ ಕಳುಹಿಸಿಕೊಟ್ಟರು. ಮಹಾರಾಜರವರು ಗವರ್ನಮೆಂಟ್ ಹೌಸ್‌ನಲ್ಲಿ ಇಳಿದಾಗಲೂ, ಅಲ್ಲಿಂದ ವಾಪಸು ಹೊರಟಾಗಲೂ ಗೌರವಾರ್ಥವಾಗಿ ೨೧ ತೋಪುಗಳು ಹಾರಿಸಲ್ಪಟ್ಟವು. ಅನಂತರ ೪॥ ಗಂಟೆಗೆ ಗವರ್ನರವರು ಪರಿವಾರಸಹಿತ ಲಾಂಡರ್ಸ್ ಗಾರ್ಡನ್ಸೆಂಬ ಬಂಗಲೆಗೆ ಹೋಗುವರಾಗಿ, ಶ್ರೀಮನ್ಮಹಾರಾಜರವರಿಗೆ ಮರುಭೇಟಿ ಕೊಟ್ಟು, ಅವರಿಂದ ಸನ್ಮಾನ ಹೊಂದಿ ವಾಪಸು ಹೋದರು

### ಮದರಾಸ್ ಕೈಗಾರಿಕೆ ವಸ್ತುಗಳ ಪ್ರದರ್ಶನೋತ್ಸವವು.
### ಮಹಾರಾಜರವರು ಪ್ರಾರಂಭಿಸಿದ್ದು.

ಕಳೆದ ೨೬ ನೆ ತಾರೀಖು ಶನಿವಾರ ಬೆಳಗ್ಗೆ ಮದರಾಸ್ ಪಟ್ಟಣದ "ಹಾರ್ಟಿಕಲ್ಚರಲ್ ಗಾರ್ಡನ್ಸ್" ಎಂಬ ಮೈದಾನಿನಲ್ಲಿ ಕೈಗಾರಿಕೆ ಮತ್ತು ವ್ಯವಸಾಯದ ವಸ್ತುಗಳ ಪ್ರದರ್ಶನಶಾಲೆಯ ಬಾಗಿಲನ್ನು ನಮ್ಮ ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ರವರು ಉಪನ್ಯಾಸಪೂರ್ವಕವಾಗಿ ತೆರೆದರು. ಪ್ರದರ್ಶನಶಾಲೆಯ ಮುಂಭಾಗದಲ್ಲಿ ನೇತ್ರಾನಂದಕರವಾದ ಚಪ್ಪರವನ್ನು ಹಾಕಿ ಅಲಂಕರಿಸಿದ್ದರು. ಮದರಾಸ್ ಪಟ್ಟಣದಲ್ಲೂ ಅಧಿಕಪ್ಪದಲ್ಲೂ ಮುಖಂತರನಿಸಿಕೊಂಡಿರುವ ಸಕಲ ದೊಡ್ಡಮನುಷ್ಯರೂ ಆ ದಿನ ಬೆಳಗ್ಗೆ ಆ ಮಂಟಪದಲ್ಲಿ ಸೇರಿದ್ದರು. ೮ ಗಂಟೆಗೆ ಸರಿಯಾಗಿ ಮೈಸೂರು ಮಹಾರಾಜರವರು ತಮ್ಮ ಸಂಗಡ ಯುವರಾಜರು, ಮಿ॥ ಬಿಗಾಬಾರ್ ರವರು, ಸರ್ ಪಿ. ಎನ್. ಕೃಷ್ಣಮೂರ್ತಿಯವರು, ಮಿ॥ ಆ. ಮುಕಾಸಿಯವರು, ಮಿ॥ ಎಂ. ಕಾಂತರಾಜೇ ಅರಸಿನವರು, ಮಿ॥ ಎಂ. ಲಕ್ಷ್ಮೀಕಾಂತರಾಜೇ ಅರಸಿನವರು, ಮಿ॥ ಟಿ. ರಾಘವೇಂದ್ರರಾವ್ ರು ಮೊದಲಾದವರನ್ನು ಕರೆದುಕೊಂಡು ಮಂಟಪಕ್ಕೆ ದಯಮಾಡಿದರು. ಪ್ರದರ್ಶನಶಾಲೆಯ ಕಮಿಟಿ ಮೆಂಬರುಗಳು ಹೋಗಿ ಮಹಾರಾಜರನ್ನು ಎದುರುಗೊಂಡು ಕರೆದುಕೊಂಡು ಹೋಗಿ ಕೂರಿಸಿದರು. ಎತ್ತರವಾದ ಆಸನಗಳಲ್ಲಿ ಶ್ರೀಮನ್ಮಹಾರಾಜರವರು, ಯುವರಾಜರು, ಕೊಚ್ಚಿ ಸಂಸ್ಥಾನದ ರಾಜರು, ಈ ಮೂರು ಮಂದಿ ಮಾತ್ರ ಕುಳಿತುಕೊಂಡರು. ತರುವಾಯ ಕಮಿಟಿ ಪ್ರೆಸಿಡೆಂಟರಾದ ಆನರಬಲ್ ಮಿ॥ ಶಂಕರನಾಯರ್ ರವರು ಎದ್ದು ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರವರನ್ನು ಕುರಿತು, ಈ ಪ್ರದರ್ಶನಶಾಲೆಯನ್ನು ಪ್ರಾರಂಭಿಸಬೇಕೆಂದು ಉಪನ್ಯಾಸಪೂರ್ವಕವಾಗಿ ಬೇಡಿಕೊಂಡರು.

### ಮಹಾರಾಜರವರು ಆಡಿದ ಮಾತು.

ಅನಂತರ ಶ್ರೀಮನ್ಮಹಾರಾಜರವರು ಆಡಿದ ಮಾತುಗಳ ಮುಖ್ಯಾಭಿಪ್ರಾಯವೇನೆಂದರೆ —

ಈ ಪ್ರದರ್ಶನ ಶಾಲೆಯನ್ನು ನಾನು ಬಂದು ತೆರೆಯಬೇಕೆಂದು ಕಮಿಟಿಯವರು ನನ್ನನ್ನು ಕೇಳಿದರು. ಆಶ್ಚರ್ಯಪಡದೆ ನಾನು ಈ ಕೆಲಸವನ್ನು ಒಪ್ಪಿಕೊಳ್ಳಲಿಲ್ಲ. ಇಂಥಾ ಕಾರ್ಯವನ್ನು ಸಾರ್ಥಕವಾಗಿ ನೆರವೇರಿಸಲು ನನಗಿಂತಲೂ ತಕ್ಕ ಯೋಗ್ಯತಾ ಪ್ರಸಿದ್ಧಿ ಪಡೆದಿರುವ ಮಹನೀಯರು ಅನೇಕರಿರುತ್ತಾರೆ. ಕೈಗಾರಿಕೆ ಕೆಲಸಗಳಲ್ಲಿ ಪ್ರವೀಣರೆನಿಸಿಕೊಂಡಿರುವವರು, ವಿಶೇಷ ಅನುಭವಶಾಲಿಗಳಾದ ಪ್ರಜಾಪಾಲಕರು, ಪ್ರಜೆಗಳ ಪಕ್ಷದಲ್ಲಿ ನಿಂತು ಅವರ ಕಷ್ಟ ಸುಖಾದಿಗಳನ್ನೆಲ್ಲಾ ಪ್ರಕಾಶಪಡಿಸತಕ್ಕವರು,—ಇಂಥವರು ಈ ಕಾರ್ಯಕ್ಕೆ ಬರುವುದು ನ್ಯಾಯವಾಗಿದೆ. ಆದರೆ ಈ ವಿಷಯಕ್ಕೆ ನನ್ನನ್ನು ಕಮಿಟಿಯವರು ಯಾಕೆ ಕೇಳಿದರೋ ಎಂದು ಮನಸ್ಸಿನಲ್ಲಿ ನಾನೇ ಯೋಚಿಸುವಲ್ಲಿ ಕೈಗಾರಿಕೆ ವಿದ್ಯೆಗಳಲ್ಲಿ ಪ್ರವೀಣನೆಂಬುದರಿಂದ ಈ ಕಮಿಟಿಯವರು ತಿಳಿದು ಕರೆಯಬೇಕೆಂಬ ಉದ್ದೇಶವುಳ್ಳವರಾಗಿಲ್ಲವೆಂತಲೂ, ನಮ್ಮಂಥಾ ಸಂಸ್ಥಾನಾಧಿಪತಿಗಳ್ಯಾರಾದರೂ ಬಂದು ಈ ಪ್ರದರ್ಶನ ಶಾಲೆಯನ್ನು ಪ್ರಾರಂಭಮಾಡುವುದರ ಮೂಲಕ ಈ ರಾಷ್ಟ್ರದ ಕಸಬುದಾರಿ ಕೈಗಾರಿಕೆ ಕುಶಲ ವಿದ್ಯೆಗಳನ್ನು ಪ್ರೋತ್ಸಾಹಪಡಿಸಬೇಕೆಂದು ಕಮಿಟಿಯವರು ಕುತೂಹಲಪಟ್ಟಿರುತ್ತಾರೆಂತಲೂ ನಾನು ತಿಳಿದುಕೊಂಡೆನು. ಇಂಥಾ ವಿಷಯಕ್ಕೆ ನಾನು ಬಹಳ ಪ್ರೋತ್ಸಾಹಪಡಿಸುತ್ತೇನೆಂಬುದನ್ನು ನಮ್ಮ ಸಂಸ್ಥಾನದಿಂದ ಈ ಪ್ರದರ್ಶನ ಶಾಲೆಗೆ ಕಳುಹಿಸಿಕೊಟ್ಟಿರುವ ತರಹಾವರಿ ವಸ್ತುಗಳೇ ದೃಷ್ಟಾಂತಪಡಿಸುತ್ತವೆ. ಈಗಿನ ಕಾಲದಲ್ಲಿ ಸಕಲ ದೇಶಗಳಲ್ಲೂ ವ್ಯಾಪಾರಾಭಿವೃದ್ಧಿಯಾಗಬೇಕೆಂತಲೂ, ಕಸಬುಗಳನ್ನು ಹೆಚ್ಚಿಸಬೇಕೆಂತಲೂ ಎಲ್ಲರೂ ಕೂಗುತ್ತಿದ್ದಾರೆ, ಇವೆರಡೂ ಅವಶ್ಯವೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಇತ್ತಲಾಗಿ ನಮ್ಮ ಭರತಖಂಡದಲ್ಲಿ ವ್ಯಾಪಾರಾಭಿವೃದ್ಧಿಯೇನೋ ಹೆಚ್ಚಿನೇ ಆಗುತ್ತಿದೆ. ಆದರೆ ಪೂರ್ವಕಾಲದಲ್ಲಿ ನಮ್ಮ ರಾಷ್ಟ್ರದಲ್ಲಿ ನಮ್ಮ ಜನರು ಅವಲಂಬಿಸಿಕೊಂಡಿದ್ದ ಕೈಗಾರಿಕೆ ಕಸಬುಗಳು ದಿನೇ ದಿನೇ ಕ್ಷೀಣಗತಿಗೆ ಬರುತ್ತಿರುವವು. ವ್ಯವಸಾಯ ಪ್ರಮಾಣವೋ ದೈವಗತಿಗೆ ಅವರ ಸಂಖ್ಯಾ ಹೆಚ್ಚುತ್ತಿರುವುದಕ್ಕೆ ಸಾಕಾಗುವಷ್ಟು ಉತ್ಪತ್ತಿಯಾಗುತ್ತದೇ ದುರ್ಲಭವಾಗಿದೆ. ವಿದ್ಯಾವಂತರಾದವರು ಸರ್ಕಾರಿ ನೌಕರಿಗಳನ್ನು ಹುಡುಕಿಕೊಂಡು ಹೋಗುತ್ತಾರೆ; ಅದು ಸಾಧ್ಯವಿಲ್ಲದಿದ್ದರೆ ಲಾಯರುಗಳಾಗುತ್ತಾರೆ. ಕಾರೇಗಾರನು ತನ್ನ ಹಿರಿಯರಿಂದ ಬಂದಿರುವಂಥಾ ಕ್ರಮವನ್ನು ಬಿಟ್ಟು ಹೊಸ ಕ್ರಮಗಳನ್ನು ಕಲಿಯತಕ್ಕವನಾಗಿಲ್ಲವಾದಕಾರಣ ಅವನ ಉದ್ಯೋಗದಲ್ಲಿ ಅವನ ಹೊಟ್ಟೆ ತುಂಬುವುದೇ ಪ್ರಯಾಸವಾಗುತ್ತಾ ಬಂದಿದೆ. ಕೆಲವರು ಹಿಂದುಸ್ಥಾನವು ಯಾವಾಗಲೂ ವ್ಯವಸಾಯದಲ್ಲೇ ಮುಂದಕ್ಕೆ ಬರಬೇಕೆಂದು ಹೇಳುತ್ತಾರೆ. ಈ ಮಾತು ನಿಜವಿದ್ದರೂ ಇರಬಹುದು. ಆದರೆ ಆಗಾಗ್ಗೆ ಪ್ರಾಪ್ತವಾಗತಕ್ಕ ಕ್ಷಾಮಗಳು ತಪ್ಪಬೇಕಾದರೆ ಹಿಂದುಸ್ಥಾನದ ಪ್ರಜೆಗಳು ವ್ಯವಸಾಯವನ್ನು ಮಾತ್ರವೇ ವೃದ್ಧಿಮಾಡಿಕೊಳ್ಳುವುದು ಸಾಲದು, ಸುಲಭವಾದ ಬಡ್ಡಿಗೆ ಸಾಲ ದೊರಕುವಂತೆ ಮಾಡುವುದು ಸಾಲದು, ಕಂದಾಯದ ದರವನ್ನು ಕಡಿಮೆಮಾಡುವುದೂ ಸಾಲದು. ಇದಕ್ಕಿಂತಲೂ ಬಹು ಬೇಗನೆ ಕ್ಷಾಮಪೀಡಿತರಾಗುವಂಥಾ ಅನೇಕಾನೇಕ ಪ್ರಜೆಗಳನ್ನು ವ್ಯವಸಾಯ ಬಿಡಿಸಿ, ಅವರಿಗೆ ಕಸಬುದಾರಿ ವಿದ್ಯೆಗಳನ್ನು ಕಲಿಸಿ, ಅವರು ಅವುಗಳಿಂದ ಜೀವನಮಾಡಿಕೊಳ್ಳುವಂತೆ ಏರ್ಪಾಡು ಮಾಡಬೇಕಾದದ್ದೇ ಅತ್ಯಂತ ಫಲದಾಯಕವೆಂದು ಕಾಣುತ್ತದೆ. ವಿದ್ಯಾವಂತರೂ ವಿದ್ಯಾಹೀನರೂ ಕಸಬುಗಳನ್ನು ಕಲಿಯಬೇಕು. ಈ ಪ್ರದರ್ಶನೋತ್ಸವದಿಂದ ಇಂಥಾ ಅಭಿಪ್ರಾಯವು ಜನಗಳಲ್ಲಿ ಹುಟ್ಟಿ, ಕಸಬುದಾರಿಗಳು ವೃದ್ಧಿಗೆ ಬಂದರೆ ಅಲ್ಲಿಗೆ ಇದರ ಉದ್ದೇಶವು ಸಾರ್ಥಕವೆನಿಸುವುದು —ಇತ್ಯಾದಿ

### ಪ್ರದರ್ಶನಶಾಲೆಯು.

ಶ್ರೀಮನ್ಮಹಾರಾಜರವರು ಈ ಪ್ರಕಾರ ಮಾತನಾಡಿ ಕುಳಿತುಕೊಂಡರು. ಹಾರ ತುರಾಯಿಗಳು ಒಪ್ಪಿಸಲ್ಪಟ್ಟವು. ತರುವಾಯ ಕಮಿಟಿಯವರು ಮಹಾರಾಜರನ್ನು ಕರೆದುಕೊಂಡು ಹೋಗಿ, ಅವರಿಂದ ಪ್ರದರ್ಶನಶಾಲೆಯ ಬಾಗಿಲನ್ನು ತೆರೆಯಿಸಿದರು. ಮಹಾರಾಜರೇ ಮೊದಲಾದವರೆಲ್ಲಾ ಒಳಕ್ಕೆ ಹೋಗಿ ಅಲ್ಲಿ ಕ್ರಮವಾಗಿಯೂ ವಿಂಗಡವಾಗಿಯೂ ಸಾಲು ಸಾಲಾಗಿಯೂ ಜೋಡಿಸಿಟ್ಟಿರುವ ಚಿತ್ರವಸ್ತುಗಳನ್ನೂ ಕಸಬುದಾರಿ ಪದಾರ್ಥಗಳನ್ನೂ [illegible] ಬಾಗಾಯತು ಜಮೀನುಗಳಲ್ಲಿ ಬೆಳೆಯತಕ್ಕ ನಾನಾತರದ ಧಾನ್ಯಗಳನ್ನೂ ಅವಲೋಕಿಸುತ್ತಾ ಸುಮಾರು ೧೦ ಗಂಟೆಯವರೆಗೆ ಅಲ್ಲೇ ಇದ್ದರು. ಅಲ್ಲಿ ಇಟ್ಟ ತಕ್ಕ ವಸ್ತುಗಳ ಪೈಕಿ ಮೈಸೂರು ಸಂಸ್ಥಾನದಿಂದ ಕಳುಹಿಸಲ್ಪಟ್ಟಿರುವುಗಳಿಗೆ ಪ್ರದರ್ಶನಶಾಲೆಯ ಮಧ್ಯದಲ್ಲೇ ಒಂದು ಭಾಗ ಸ್ಥಳವನ್ನು ಆಕ್ರಮಿಸಿಕೊಂಡಿರುತ್ತವೆ. ಮೈಸೂರು ಹೊಸ ಅರಮನೆಗಾಗಿ ತಯಾರು ಮಾಡಲ್ಪಟ್ಟಿರುವ ದಂತದ ಕೆತ್ತನೆ ಕೆಲಸ ಮಾಡಿರುವ ನಿಲುವುಗಳು, ಬಾಗಿಲುಗಳು, ವಿಗ್ರಹಗಳೇ ಮುಂತಾದವು, ಗಂಧದ ಚಿತ್ರವಸ್ತುಗಳೂ, ಕಲ್ಲು ಕೆತ್ತನೆಗಳೂ, ಕರೀಮರದ ಸಣ್ಣ ಕೆಲಸಗಳೂ ನೋಟಕರಿಗೆ ವಿಚಿತ್ರವಾಗಿಯೂ ಆಶ್ಚರ್ಯಕರವಾಗಿಯೂ ಇರುತ್ತವೆ. ಬೆಳ್ಳಿತಗಡು ಬಡಿಯಿಸಿ ಅದರ ಮೇಲೆ ಚಿತ್ರಗಳನ್ನು ಬಿಡಿಸಿ ಬಹು ನೇತ್ರಾನಂದಕರವಾಗಿ ಮಾಡಿರುವ ಬಾಗಿಲು ಚೌಕಟ್ಟು ನಿಲುವುಗಳು, ಕಂಬಗಳು, ಜೋಡಿಗೆಗಳು ಪ್ರದರ್ಶನಶಾಲೆಗೆ ಆಭರಣಪ್ರಾಯಗಳಾಗಿರುವವು. ಕೈಯಲ್ಲಿ ಕೆತ್ತಿರುವ ಚಾಮುಂಡೇಶ್ವರಿ ವಿಗ್ರಹವು ಬಹು ಸುಂದರವಾಗಿರುತ್ತದೆ. ಕಾರೇಗಾರನನ್ನು ಸಕಲರೂ ಕೊಂಡಾಡುವರು. ಮೈಸೂರಿನ ಕೃಷ್ಣಶೆಟ್ಟರ ಕಂಪನಿಯವರು ಬೆಳ್ಳಿ ಸಾಮಾನುಗಳನ್ನು ಕಳುಹಿಸಿರುತ್ತಾರೆ. ಆಶ್ಚರ್ಯ ಹುಟ್ಟಿಸುವಂಥಾ ಬೆಳ್ಳಿ ಪಾತ್ರೆಗಳೆರಡು ಬಹಳ ಚೆನ್ನಾಗಿರುವುವು. ಇವುಗಳ ಮೇಲೂ ಒಳಗೂ ನಾನಾ ವಿಗ್ರಹಗಳನ್ನು ಬಿಡಿಸಿ ನಗಿಸು ಮಾಡಿದಾರೆ. ಶ್ರೇಷ್ಠವಾದ ಕಂಚು ಮುಟ್ಟುಗಳು ನಾನಾ ಬಗೆಯಾಗಿರುತ್ತವೆ. ದಂತದಲ್ಲಿ ಕೆತ್ತಿಟ್ಟು ವಿಗ್ರಹ ಎಲೆ ಹೂವು ಕಾಯಿ ಇವೇ ಮುಂತಾದವುಗಳನ್ನು ವಿಚಿತ್ರವಾಗಿ ಬಿಡಿಸಿರುವ ನಾನಾ ಪದಾರ್ಥಗಳನ್ನು ದಂಗಿಟ್ಟಿವೆ. ಸಮಸ್ತ ನೋಟಕರಿಗೂ ಈ ವಸ್ತುಗಳು ಮಹದಾಶ್ಚರ್ಯವನ್ನುಂಟುಮಾಡತಕ್ಕವುಗಳಾಗಿರುವವು

ಮರದ ಕೆಲಸ —ಬೆಂಗಳೂರು, ಮೈಸೂರು, ಶಿವಮೊಗ್ಗ ಡಿಸ್ಟ್ರಿಕ್ಟುಗಳ ಕಡೆಯಿಂದ ಅತ್ಯಾಶ್ಚರ್ಯಕರವಾಗಿ ಕೆತ್ತಲ್ಪಟ್ಟಿರುವ ಶ್ರೀಗಂಧದ ಮತ್ತು ಮರದ ಸಾಮಾನುಗಳು ಅನೇಕವಾಗಿ ಸಾಲು ಸಾಲಾಗಿ ಇಟ್ಟಿರುತ್ತವೆ. ಶ್ರೀಗಂಧದಲ್ಲೂ ದೇವರುಗಳನ್ನೂ ಎಲೆ ಹೂವು, ಹಣ್ಣು, ಹಕ್ಕಿ ಮೊದಲಾದವುಗಳನ್ನೂ ಬಹು ಸುಂದರವಾಗಿ ಬಿಡಿಸಿ ರಚಿಸಿರುವ ವಸ್ತುಗಳು ಅನೇಕವಾಗಿಯೂ ಆಶ್ಚರ್ಯಕರವಾಗಿಯೂ ಇರುವವು. ಮೈಸೂರು ಅರಮನೆ ಡಿವಿಜನ್ ಇಲಾಖೆಯವರೂ, ಶಿವಮೊಗ್ಗೆಯ ಸುಬ್ಬಣ್ಣನವರೂ ಶ್ರೀಗಂಧದಲ್ಲಿ ಎರಡು ಪೆಟ್ಟಿಗೆಗಳನ್ನು ತಯಾರ್ಮಾಡಿಸಿ ಕಳುಹಿಸಿರುತ್ತಾರೆ. ಇವೆರಡನ್ನೂ ನೋಡಲಾಗಿ ಕಾರೇಗಾರರ ಕೈಚಳಕವು ಸ್ತೋತ್ರಾರ್ಹವಾದುದೆಂದು ಯಾರೂ ಹೇಳುವರು

ನೂಲುಗಳು —ಮೈಸೂರು ಮಿಲ್ಲುಗಳಿಂದ ಬಂದಿರುವ ಹತ್ತಿ ಬಟ್ಟೆಗಳು ಬಹಳ ನಯವಾಗಿ ನೆಯ್ಯಲ್ಪಟ್ಟು ನೋಟಕರ ಕಣ್ಣುಗಳನ್ನು ಸೆಳೆಯುತ್ತಿರುವವು. ರೇಷ್ಮೆಯನ್ನು ತಯಾರ್ಮಾಡುವುದರಲ್ಲಿ ಅನುಸರಿಸಬೇಕಾದ ಪ್ರತಿ ಒಂದು ಕ್ರಮವೂ ಬಹಳ ಚೆನ್ನಾಗಿ ದೃಷ್ಟಾಂತಪಡಿಸಲ್ಪಟ್ಟಿದೆ. ರೇಷ್ಮೆ ಸಾಡಿಗಳು, ಸೀರೆಗಳು, ಕಿಂಕಾಬ್ ಸಾಡಿಗಳು, ಧೋತ್ರ ವಸ್ತ್ರಗಳು, ಇವೆಲ್ಲಾ ಕಾರೇಗಾರರ ಬುದ್ಧಿಶಾಲಿತೆಯನ್ನು ಬಹಳ ಚೆನ್ನಾಗಿ ಪ್ರಕಾಶಕ್ಕೆ ತರುವವು. ಮೈಸೂರು ಸಂಸ್ಥಾನದಲ್ಲಿ ನೆಯ್ಗೆಯವರು ತರಹಾವರಿ ರೇಷ್ಮೆ ಬಟ್ಟೆ ಬರೆಗಳನ್ನು ಅತ್ಯಂತ ನೇತ್ರಾನಂದಕರವಾಗಿ ತಯಾರ್ಮಾಡಲು ಶಕ್ತರೆನಿಸಿಕೊಂಡಿರುತ್ತಾರೆಂಬುದನ್ನು ಈ ಪ್ರದರ್ಶನದ ಮಾಡಲ್ಪಟ್ಟಿರುವ ವಸ್ತುಗಳೇ ದೃಷ್ಟಾಂತಪಡಿಸುತ್ತವೆ.

ಜಂಗಲ್ ಉತ್ಪತ್ತಿ.—ಒಂದು ಪಕ್ಕದಲ್ಲಿ ಫಾರೆಸ್ಟ್ ಇಲಾಖೆಯವರು ನಾನಾ ವಸ್ತುಗಳನ್ನು ತಂದಿಟ್ಟು ಪ್ರದರ್ಶನಮಾಡಿರುತ್ತಾರೆ. ಬೀಜಗಳು, ಬೇರುಗಳು, ಗಿಡಮೂಲಿಕೆಗಳು—ಇವೆಲ್ಲಾ ಪೆಟ್ಟಿಗೆಗಳೊಳಗೆ ಇಡಲ್ಪಟ್ಟಿವೆ. ನಾರು ತೆಗೆಯುವುದಕ್ಕೆ ಅನುಕೂಲವಾದಂಥಾ ತರಹಾವರಿ ಜಂಗಲ್ ಉತ್ಪತ್ತಿಗಳನ್ನು ೧೦೦ ಜಾತಿಯ ವರೆಗೆ ತಂದಿಟ್ಟಿರುವರು. ಕೈಚಳಕವಿರತಕ್ಕವರು ಇವುಗಳಲ್ಲಿ ನಾರನ್ನು ತೆಗೆದು ಬಟ್ಟೆ ಬರೆ ಹಗ್ಗ ದಾರ ಮುಂತಾದ ಪದಾರ್ಥಗಳನ್ನು ಮಾಡಬಹುದೆಂದು ಅನೇಕವೇಳೆ ಸೂಚಿಸಿರುತ್ತೇವಷ್ಟೆ. ನಾರು ತೆಗೆವ ಕ್ರಮವನ್ನು ಈ ಪ್ರದರ್ಶನಶಾಲೆಯಲ್ಲಿ ಪರಿಷ್ಕಾರವಾಗಿ ಪ್ರಕಾಶಪಡಿಸಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಬೆಳೆಯುವಂಥಾ ಸಕಲ ವಿಧವಾದ ಧಾನ್ಯಗಳೂ ಆಹಾರ ಪದಾರ್ಥಗಳೂ ಪ್ರದರ್ಶನಮಾಡಲ್ಪಟ್ಟಿರುವವು. ಇತ್ತಲಾಗಿ ಒಂದು ಪ್ರತ್ಯೇಕವಾದ ಚಪ್ಪರದಲ್ಲಿ ಮೈಸೂರು ಸಂಸ್ಥಾನಕ್ಕೆ ಸೇರಿದ ಪ್ಲಾಂಟರುಗಳು ನಾನಾವಿಧ ಕಾಫೀ ಬೀಜಗಳನ್ನು ತಂದಿಟ್ಟಿರುವರು

### ಇತರ ಕಡೆಗಳ ವಸ್ತು ವಿಶೇಷಗಳು

ದಕ್ಷಿಣ ದೇಶದಲ್ಲೂ, ಬರೋಡ ಮೊದಲಾದ ಉತ್ತರದೇಶದಲ್ಲೂ ಅನೇಕ ದೇಶೀಯ ಸಂಸ್ಥಾನಗಳಿಂದಲೂ ಇತರ ಕಡೆಗಳಿಂದಲೂ ನಾನಾ ಚಿತ್ರವಸ್ತುಗಳನ್ನು ಈ ಪ್ರದರ್ಶನಶಾಲೆಯಲ್ಲಿ ತಂದಿಟ್ಟಿದ್ದಾರೆ. ಮದರಾಸ್ ಪಟ್ಟಣದಲ್ಲಿರುವ ಕಲಾ ಶಾಲೆಯ ವಿದ್ಯಾರ್ಥಿಗಳೂ, ಇತರ ಕಡೆಗಳ ಕೈಗಾರಿಕೆ ಪಾಠಶಾಲೆಗಳ ವಿದ್ಯಾರ್ಥಿಗಳೂ ತಯಾರ್ಮಾಡಿರುವ ಅನೇಕ ಪದಾರ್ಥಗಳನ್ನು ಪ್ರದರ್ಶನಮಾಡಿರುತ್ತಾರೆ. ಈ ವಸ್ತುಗಳನ್ನು ವಿವರಿಸಲು ಅಶಕ್ಯವಾಗಿರುವುದು. ಜಮಖಾನಗಳು, ರತ್ನಕಂಬಳಿಗಳು, ನ್ಯಾಯಶಾಸ್ತ್ರ ಪದಾರ್ಥಗಳು, ಲೋಹ ವಸ್ತುಗಳು, ನಾರ ರೇಷ್ಮೆ ಕಂಬಳಿಯ ಬಟ್ಟೆ ಬರೆಗಳು, ಗೃಹಕೃತ್ಯ ಸಾಮಾನುಗಳು, ದೇವಸ್ಥಾನ ವಿಗ್ರಹಗಳನ್ನು ಮರದಲ್ಲಿ ಕೆತ್ತಿರುವ ಚಿತ್ರವಸ್ತುಗಳು, ಇನ್ನೂ ಅನೇಕ ತರದ ನಾನಾ ದಿನಸಿನ ಪದಾರ್ಥಗಳು ಬಹಳ ಕ್ರಮವಾಗಿ ಜೋಡಿಸಿ ಇಡಲ್ಪಟ್ಟಿವೆ.

### ಚಂದಾ ಹಣ ವಸೂಲಾಗಿರುವುದು

ಇಂಥಾ ಉತ್ಕೃಷ್ಟವಾದದ್ದೂ ಸರ್ವಜನೋಪಯುಕ್ತವಾದದ್ದೂ ಆದ ಪ್ರದರ್ಶನವನ್ನು ಸಾರ್ಥಕವಾಗಿ ನಡಸುವುದಕ್ಕೆ ಧನಸಹಾಯವಿಲ್ಲದಿದ್ದರೆ ಆಗಲಾರದೆಂಬುದು ಸ್ಪಷ್ಟವಾಗಿಯೇ ಇರುತ್ತದೆ. ಆದಕಾರಣ ಕಮಿಟಿಯವರು ಹಿಂದುಸ್ಥಾನದಲ್ಲೆಲ್ಲಾ ಈ ಕಾರ್ಯಕ್ಕೆ ಚಂದಾ ಎತ್ತಿದರು. ಇದುವರೆಗೆ ೩೫,೦೦೦ ರೂಪಾಯಿಗಿಂತಲೂ ಹೆಚ್ಚಾಗಿಯೇ ವಸೂಲಾಗಿರುತ್ತದೆ. ಇದಕ್ಕೆ ಮಹಾರಾಜರುಗಳು, ರಾಜರುಗಳು, ನವಾಬರುಗಳು, ಸರ್ಕಾರಿ ಅಧಿಕಾರಿಗಳು, ಗವರ್ನಮೆಂಟುಗಳು, ನಾನಾ ಜಮೀನ್ದಾರುಗಳು, ಸಾಹುಕಾರರು, ಮುನಿಸಿಪಲ್ [illegible] ಮನುಷ್ಯರು ಮೊದಲಾದ ಸಕಲ ವರ್ಗದವರೂ ಚಂದಾ ಕೊಟ್ಟು ಸಹಾಯಮಾಡಿರುತ್ತಾರೆ

---

### ಸ್ಥಳೀಕ ವರ್ತಮಾನಗಳು.

ಬೆಂಗಳೂರು — ಈ ಊರಿನಲ್ಲಿ ೨೪ ನೇ ತಾರೀಖು ಗುರುವಾರ ಬೌರಿಂಗ್ ಇನ್‌ಸ್ಟಿಟ್ಯೂಟ್ ಎಂಬ ಗೃಹದ ಮುಂಭಾಗದಲ್ಲಿ ಹಾಕಿದ್ದ ಚಪ್ಪರಗಳಲ್ಲಿ ನಾನಾತರದ ಹೂಗಳೂ, ಹಣ್ಣುಗಳೂ, ಮಿಠಾಯಿಗಳೂ, ಗೊಂಬೆಗಳೂ, ಜನರ ಗುಂಪು, ಇವುಗಳು ಕಣ್ಣಿಗೆ ಆನಂದವನ್ನು ಉಂಟುಮಾಡಿದವು. ಇದು ನಿಮಿತ್ತ [illegible] ಇಂಗ್ಲೀಷ್ [illegible] ಉದ್ದೇಶಿಸಿತು. ಇದನ್ನೆಲ್ಲಾ ನೋಡುವುದಕ್ಕೆ ಇಂಗ್ಲೀಷ್ [illegible] ತಮ್ಮ ಸ್ವದೇಶದ ಸಂಪ್ರದಾಯದ ಉಡುಪುಗಳನ್ನು ಧರಿಸಿಕೊಂಡು ಬಂದಿದ್ದರು. ಇಲ್ಲಿ ರಾಜಬಾಳ್ವೆಂಟ್ [illegible] ಬಂದಿತ್ತು. [illegible] ಗಳನ್ನು ಎಂಬಿಸಿದ್ದರು. ಒಂದು ಭಾಗದಲ್ಲಿ ಮಿಠಾಯಿ ಮುಂತಾದ ಸಾಮಾನುಗಳೂ, ಮತ್ತೊಂದು ಭಾಗದಲ್ಲಿ ಹೂವು, ನಾನಾಜಾತಿ [illegible] ಮುಂತಾದ ಸ್ಥಳಗಳನ್ನು ಒಂದಾಗಿ ಸಾಲಿನ ಚಪ್ಪರಗಳಲ್ಲಿ ತಂದು ಇಟ್ಟಿದ್ದರು. ಒಂದು ಭಾಗದಲ್ಲಿ ಅನೇಕ ಆಟಕ್ಕೆ ಅನುಕೂಲವಾದ ಗೊಂಬೆಗಳೂ, ಗಂಧದಲ್ಲಿ ವಿಚಿತ್ರವಾಗಿ ಸಾಮಾನುಗಳನ್ನು ಮಾಡಿ ತಂದು ಇಲ್ಲಿ ಇಟ್ಟಿದ್ದರು. ಇದೇ ಕ್ರಿಸ್ಮಸ್ ಹಬ್ಬದ ಮೊದಲನೇ ದಿವಸದ ಸಂತೋಷಾರ್ಥವಾಗಿ ಮಾಡಿದ್ದ ವಸ್ತುಪ್ರದರ್ಶನಶಾಲೆಯು [illegible], ಮದ್ರಾಸಿನಲ್ಲಿ ಆಗುವ ವಸ್ತುಪ್ರದರ್ಶನಶಾಲೆ ಎಷ್ಟೋ ಚೆನ್ನಾಗಿರಬಹುದೆಂದು ಊಹೆ ಮಾಡಬಹುದು. ಇದೆಲ್ಲಾ ಕ್ರಿಸ್ಮಸ್ ಹಬ್ಬದ ಸಂತೋಷಕ್ಕೆ ಮಾಡಿದ್ದರು

ಚನ್ನಪಟ್ಟಣ.—ಪ್ಲೇಗ್ ಪ್ರಾರಂಭವಾದ ಲಾಗಾಯತು ೫೦—೬೦ ಜನರು ಪ್ಲೇಗಿನಿಂದ ಸತ್ತರು. ಮುಕ್ಕಾಲು ಭಾಗದ ಜನರು ಊರುಬಿಟ್ಟು ಬೋಳಮಗಳಲ್ಲಿದ್ದಾರೆ. ಜೋಪಡಿಗಳಲ್ಲಿ ಸದ ೩—೪ ದಿನ ಸತ್ತರು. ಜನರು ಗುಡಿಸಲಿಗೆ ಹೋಗುವಾಗ ನೆಂಟರುಗಳನ್ನು ಕೆಲವುಕಾಲ ಬಸಲಿಗಾಗಿ ತೆಗೆಯದೆ ಬಿಟ್ಟು ಹೋಗಿದ್ದಾರೆ. ಮುಚ್ಚಿರುವ ಮನೆಗಳಲ್ಲಿ ಇಲಿ ಸತ್ತು ನಾರುವದರಿಂದ ಪಕ್ಕದ ಮನೆಗೂ ವ್ಯಾಪಿಸಿ ರೋಗವು ಊರೆಲ್ಲಾ ಹಬ್ಬುವದಕ್ಕೆ ಅಸ್ಪದವಾಗುತ್ತದೆ ಮತ್ತು ರೋಗವು ಜಾಗ್ರತೆಯಾಗಿ ಶಮನವಾಗುವದಿಲ್ಲ. ಆದ್ದರಿಂದ ಸರ್ಕಾರದವರಾದರೂ ಜನನ್ನು ಬಲವಂತಮಾಡಿ ಬಾಗಿಲುಗಳನ್ನು ಸ್ವಲ್ಪ ತೆಗಿಸಿದರೆ ಒಳ್ಳೇದು. ಜನರು ಊರು ಬಿಟ್ಟಿರುವ ಕಾಲದಲ್ಲಿ ಪೋಲೀಸ್‌ನವರ ಬೀಟು ಚನ್ನಾಗಿ ನಡೆಯುತ್ತದೆ. ಇಲ್ಲಿನ ಮುಸಾಫರ್ ಬಂಗ್ಲೆಯಲ್ಲಿ ಇಲಿಗಳು ಸತ್ತಕಾರಣ ಇನ್ನು ೫—೬ ದಿನದಲ್ಲಿ ಬರುವ ಡೆಪ್ಯುಟಿ ಕಮಿಷನರ್ ಸಾಹೇಬರು ತಾಲ್ಲೂಕ್ ಕಚೇರಿಯಲ್ಲಿ ಇಳಿಯುತ್ತಾರೆಂದು ವರ್ತಮಾನ ಉಂಟು. ಸತ್ತ ಇಲಿಗಳನ್ನು ಕೊತ್ವಾಲರು ತೆಗಿಸಿ ಕ್ಲೀನ್ ಮಾಡಿಸಿ, ಅಲ್ಲಿನ ಕೆಲಸದವರಿಗೆ ಬೇರೆ ಗುಡಿಸಲಿಗೆ ಅನುಕೂಲ ಮಾಡಿ, ತಮ್ಮ ಕೆಲಸವನ್ನು ಚನ್ನಾಗಿ ಮಾಡುತ್ತಾರೆ. ಈ ಪ್ಲೇಗ್ ಸಮಯದಲ್ಲಿ ಅಲ್ಲಿನ ಡಾಕ್ಟರ್ ಕಚೇರಿಯಲ್ಲಿ ಒಂದು ಬೋರ್ಡೂ ಇಲ್ಲ. ಅಲ್ಲಿನ

...ಮುಕ್ತಿಯವರು ಸ್ಟೇಟ್ ಕಂಟ್ರ್ಯಾಕ್ಟ್‌ದಾರನಿಗೆ ಎಷ್ಟು ಸರ್ತಿ ಬರೆದರೂ ಕಳುಹಿಸಲಿಲ್ಲವಂತೆ. ಇಂಥ ಸಮಯದಲ್ಲಿ ಸರಿಯಾಗಿ ಸರಬರಾಜು ಮಾಡುವಂತೆ ಕಂಟ್ರ್ಯಾಕ್ಟ್‌ದಾರನನ್ನು ಎಚ್ಚರಿಸಬೇಕು.

ಬೇಲೂರು.—ಈ ಊರು ಕೋಟೆಯವರೆಲ್ಲರೂ ಪ್ಲೇಗಿಗಾಗಿ ಷೆಡ್ಡಿನಲ್ಲಿ ವಾಸಿಸುತ್ತಿರುವಾಗ ಕಳ್ಳರು ಗಲ್ಲಿಸ್ಕೂಲ್ ಆದಿಯಾಗಿ ೩–೪ ಮನೆಗಳನ್ನು ಬೀಗ ಮುರಿದು ಒಳಕ್ಕೆ ಸಾಮಾನುಗಳನ್ನು ತೆಗೆದುಕೊಂಡು ಹೋದರು. ಈ ವಿಷಯವನ್ನು ಪೋಲೀಸಿನವರ ಮೂಲಕ ಕೇಳಿ ಹೋಗಿ ಬಾಗಿಲುಗಳಿಗೆ ಬೇರೆ ಬೀಗವನ್ನು ಹಾಕಿಕೊಂಡು ಬಂದದ್ದಾಯಿತು. ಕಳೆದ ವರುಷವೂ ಹೀಗೆಯೇ ಅನೇಕ ಮನೆ ಬಾಗಿಲುಗಳನ್ನು ಒಡೆದರಲ್ಲದೆ, ಬಹಳ ಬೆಲೆ ಬಾಳತಕ್ಕ ಬೀಟೆ ಮರಗಳನ್ನು ಕದ್ದದ್ದು ಇದ್ದು ಪತ್ತೆಯೇ ಇಲ್ಲ.—ಈ ತಾಲ್ಲೂಕಿನಲ್ಲಿಯೂ ಗವರ್ನಮೆಂಟಿನವರು ಸೇವಿಂಗ್ಸ್ ಬ್ಯಾಂಕ್ ಪದ್ಧತಿಯನ್ನು ವಿಸ್ತರಿಸಿರುವರಷ್ಟೆ. ಇದರಿಂದ ಬಹು ಮಂದಿಗೆ ಈ ಪ್ಲೇಗು ಕಾಲದಲ್ಲಿ ತಮ್ಮ ನಗದುಗಳನ್ನು ಇಡುತ್ತಲೂ ತೆಗೆದುಕೊಳ್ಳುತ್ತಲೂ ಇರುವುದಕ್ಕೆ ಬಹು ಅನುಕೂಲ. ಆದರೆ ಇದಕ್ಕಾಗಿ ಬರುವವರನ್ನು ಅಧಿಕಾರಿಗಳು ಬಹು ಉಗ್ರತೆಯಿಂದ ನೋಡುತ್ತಲೂ, ಈಗ ವಿರಾಮವಿಲ್ಲ, ನಾಳೆ ಬನ್ನಿ, ನಾಡಿದ್ದು ಬನ್ನಿ, ಹೋಗಿರಿ ಎಂದು ಸುತ್ತಿಸುತ್ತಲೂ ಇದ್ದಾರೆ. ಈ ಡಿಸೆಂಬರ್ ೩ರಲ್ಲಿ ಈ ಊರು ಆಸ್ಪತ್ರೆ ಡಾಕ್ಟರವರು ಸಂಬಳಕ್ಕಾಗಿ ಹೋಗಿ ಪತ್ರವನ್ನು ಕೊಟ್ಟದ್ದಕ್ಕೆ ಬಿಲ್ಲನ್ನು ಹಣ ಕೊಡಿಸಬೇಕೆಂದು ಕೊಟ್ಟರೆ ಆಗ ಅವರು ಈಗ ಬಾ ಆಗ ಬಾ ಎಂದು ಅಲೆದಾಡಿಸಿದರು.—ಈ ತಾಲ್ಲೂಕಿನಲ್ಲಿ ಇಲ್ಲಿನ ವರೆಗೆ ೨೦—೨೫ ಮಂದಿ ಪ್ಲೇಗಿನಿಂದ ಸತ್ತರು. ಇವರನ್ನು ಸುಡಲು ಸರ್ಕಾರ ಅಮಲ್ದಾರರು ಕಟ್ಟಿಗೆ, ಸೌದೆ ಕೊಡಿಸದ್ದು ಆದರೆ ಕೊಂಡು ಮಾಡಿಸಿ ಕೊಡಲಿಲ್ಲವೆಂತಲೂ, ಪ್ರಜೆಗಳು ಬಹು ತೊಂದರೆಯನ್ನು ಅನುಭವಿಸಿದರೆಂತಲೂ ಕೇಳುತ್ತೇವೆ.—ಪ್ಲೇಗಿನಿಂದ ಹೋಗುತ್ತಿರುವ ಪ್ರತಿಯೊಬ್ಬರ ಮನೆಗೂ ನಮ್ಮ ಡಾಕ್ಟರ್ ಮ್ಯಾಕಕ್ಷಯರು ಹೋಗಿ, ವಿವೇಕದಿಂದ ಔಷಧೋಪಚಾರ ಮಾಡುತ್ತಿದ್ದುದರಿಂದ ಬಹು ಮಂದಿ ಗುಣವಾದರು. ಇವರಿಗೆ ತಿಳಿದರೆ ಏನು ಮಾಡುವರೋ ಎಂದು ಪಾಲಿಸಬೇಕಾದ ಗೌರವ ತೀರಿಸಿದರು.— ನಮ್ಮ ಊರಿನಲ್ಲಿರುವ ಸರ್ಕಾರಿ ಸ್ಕೂಲಿಗಿದ್ದಿಯು ಬಡವರಿಗೆ ಸುಲಭವಲ್ಲವೆಂತಲೂ, ಈ ಪ್ರಜೆಗಳಿಗೆ ಸಹಾಯಕವಾಗಿ ಇರಬೇಕೆಂತಲೂ ಬಹು ಮಂದಿ ಅಪೇಕ್ಷೆ ಮಾಡುತ್ತಾರೆ. ಮುಂದಾದರೂ ಪ್ರಜೆಗಳ ಪ್ರೀತಿ ಗೌರವಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳುವರೆಂದು ಹಾರೈಸುತ್ತೇವೆ.

## ಮೈಸೂರು ಗೆಜೆಟ್ ಸಂಗ್ರಹ.

ಸಕಲೇಶಪುರದ ಡಿಸ್ಟ್ರಿಕ್ಟ್ ಸರ್ವೆ ಛಾರ್ಜನ್ನು ವಹಿಸಿರುವ ಸಬ್ ಅ॥ ಸರ್ಜನ್ ಮೆ॥ ಜಿ. ಅಹ್ಮದ್‌ಖಾನರವರಿಗೆ ಜನವರಿ ೭ ರಿಂದ ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ಸಬ್ ಅಸಿಸ್ಟೆಂಟ್ ಸರ್ಜನ್ ಮೆ॥ ಎ. ರಂಗಾಚಾರ್ಯರನ್ನು ಸಕಲೇಶಪುರದ ಡಿಸ್ಪೆನ್ಸರಿಯಲ್ಲಿ ಕೆಲಸ ಮಾಡುವಂತೆ ವರ್ಗಮಾಡಿದೆ.

ಮೈಸೂರ್ ಇನ್ಫೆಕ್ಟರ್ ಜನರಲ್‌ರ ದಫ್ತರಿನ ಮೆ॥ ಎ. ರಂಗಸ್ವಾಮಿ ಅಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪ್ರೊಬೇಷನರಿ ಸಬ್ ಇನ್ಸ್‌ಪೆಕ್ಟರ್ ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ಜಿ. ಕೃಷ್ಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲ್ಗೊಂಡು ಎರಡೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪೋಲೀಸ್ ಇನ್ಸ್‌ಪೆಕ್ಟರ್ ಮೆ॥ ಟಿ. ಎಫ್. ಸಿಲ್ವೆಸ್ಟರ್‌ರವರು ಪ್ರೊಬೇಷನರ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟಾಗಿ ಕೆಲಸ ನೋಡತಕ್ಕದ್ದು.

ಕೃಷ್ಣರಾಜಪೇಟೆ ತಾಲ್ಲೂಕ್ ಅಮಲ್ದಾರ್ ಮೆ॥ ಕೃಷ್ಣರಾವ್ ರಾಯರವರಿಗೆ ಹತ್ತು ದಿನಗಳ ರಜಾ ಕೊಟ್ಟಿತ್ತು. ಶಿರಸ್ತೇದಾರರು ತಾಲ್ಲೂಕ್ ಛಾರ್ಜನ್ನು ವಹಿಸಿದ್ದರು.

ಸ್ಪೆಷಲ್ ಸಬ್ ರಿಜಿಸ್ಟ್ರಾರ್ ಆಫೀಸರ್ ಮೆ॥ ಎಂ. ಶಾಂತರಾಜ್ ಅರಸರವರಿಗೆ ನೊವೆಂಬರ್ ೨ ರಿಂದ ೧ ತಿಂಗಳು ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಆಕ್ಟಿಂಗ್ ಎಕ್ಸಿಕ್ಯೂಟಿವ್ ಅ॥ ಕಮಿಷನರ್ ಮೆ॥ ನಾಡಿಗ ಸುಬ್ಬರಾಯರಿಗೆ ಹಲವು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಇವರು ರಜಾ ಹೋಗಿದ್ದ ಕಾಲದಲ್ಲಿ ಮೊದಲನೇ ಅ॥ ಕಮಿಷನರ್ ೨ನೆ ಅ॥ ಕಮಿಷನರ ಆಫೀಸಿನ ಛಾರ್ಜನ್ನೂ ಟ್ರೆಜರಿಯ ಛಾರ್ಜನ್ನೂ ವಹಿಸಿದ್ದರು.

ಅರ್ಕಲಗೂಡು ಡಿಸ್ಟ್ರಿಕ್ಟ್ ಟ್ರೆಜರಿ ಛಾರ್ಜನ್ನು ವಹಿಸಿರುವ ಅ॥ ಕಮಿಷನರ್ ಮೆ॥ ಕೆ. ವೆಂಕೋಬರಾಯರಿಗೆ ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಇವರು ರಜಾ ಹೋಗಿದ್ದ ಕಾಲದಲ್ಲಿ ಅ॥ ಕಮಿಷನರ್ ಮೆ॥ ಎ. ಸುಬ್ರಹ್ಮಣ್ಯಯ್ಯನವರು ಡಿಸ್ಟ್ರಿಕ್ಟ್ ಟ್ರೆಜರಿ ಛಾರ್ಜನ್ನು ವಹಿಸಿದ್ದರು.

ಸ್ಪೆಷಲ್ ಡ್ಯೂಟಿ ಮೇಲಿರುವ ಎಕ್ಸಿಕ್ಯೂಟಿವ್ ಅ॥ ಕಮಿಷನರ್ ಮೆ॥ ಬಿ. ರಾಮಕೃಷ್ಣರಾಯರಿಗೆ ಡಿಸೆಂಬರ್ ೧೯ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

೧ನೆ ಕ್ಲಾಸ್ ಡೆಪ್ಯುಟಿ ಕಮಿಷನರ್ ಮೆ॥ ಬಿ. ಕೆ. ವೆಂಕಟವರದಯ್ಯಂಗಾರ್ಯರು ಫರ್ಲೋ ರಜಾ ಮೇಲಿದ್ದಾಗ ಮುಂದೆ ಹೇಳುವ ಡೆಪ್ಯುಟಿ ಕಮಿಷನರುಗಳಿಗೆ ಹಂಗಾಮಿಯಾಗಿ ಬಡ್ತಿ ಕೊಟ್ಟಿದೆ:—ಮೆ॥ ಸಿ. ಶ್ರೀನಿವಾಸರಾಯರು—೨ರಿಂದ ೩ನೆ ಕ್ಲಾಸಿಗೆ; ಮೆ॥ ಡಿ. ಚಾಮರಾಜೇ ಅರಸಿನವರು—೩ರಿಂದ ೨ನೆ ಕ್ಲಾಸಿಗೆ.

ನಾರ್ತ ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರ್ ಮೆ॥ ಸಿ. ಎ. ಮುಡಲಿಯರವರಿಗೆ ಕ್ರಿಸ್ಮಸ್ ರಜಾ ಅನುಸರಿಸಿ ಒಂದು ವಾರದ ಪ್ರಿವಿಲೆಜ್ ರಜಾ ಕೊಟ್ಟಿದೆ.

ನಾರ್ತ ಡಿವಿಜನ್ ಸಬ್ ಅ॥ ಇಂಜನಿಯರ್ ಮೆ॥ ಎಂ. ಎ. ಅನಂತಾಳ್ವಾರ್‌ಯವರಿಗೆ ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಡಿಟ್ಟೋ ಮೆ॥ ಎಂ. ಎ. ಆನಂದಾಳ್ವಾರ್‌ಯವರಿಗೆ ಕ್ರಿಸ್ಮಸ್ ರಜಾ ಅನುಸರಿಸಿ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರ್ ಸ್ಟೇಟ್ ಟ್ರೂಪ್ಸ್ ಕೇವಲ್ ಕಮ್ಯಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ. ದೇಸರಾಜ್ ಅರಸಿನವರಿಗೆ ಕೊಟ್ಟಿದ್ದ ರಜವನ್ನು ಅವರು ಉಪಯೋಗಿಸಿಕೊಂಡು ೧೫ನೆ ತಾರೀಖಿನಲ್ಲಿ ತಮ್ಮ ಕೆಲಸದ ಮೇಲೆ ಹಾಜರಾಗುತ್ತಾರೆ.

## ವಿದೇಶ ವರ್ತಮಾನಗಳು.

ರಷ್ಯಾರಾಜ್ಯದವರು ಯುದ್ಧದ ಖರ್ಚಿಗೆ ಜರ್ಮಾನಿ ರಾಜ್ಯದ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ೩೦ ಕೋಟಿ ರೂಪಾಯಿ ಸಾಲಮಾಡಬೇಕೆಂದು ಪ್ರಯತ್ನ ಪಡುತ್ತಿದ್ದಾರೆ.

◆◆◆◆

ಟ್ರಾನ್ಸ್‌ವಾಲ್ ಸರ್ಕಾರದವರು ಅಮೇರಿಕದಿಂದ ೧೨,೦೦೦ ಗೋವಿಂಜಗಳನ್ನು ಕೊಂಡು ತರಿಸಬೇಕೆಂದು ಪ್ರಯತ್ನ ಪಟ್ಟದನ್ನು ಕೇಳಿ, ಜನರು ಸ್ವಾಸ್ಥ್ಯದವರು ಆಗ್ರಹಪಡುತ್ತಿದ್ದಾರೆ.

◆◆◆◆

೧೮೮೬ನೆ ಇಸವಿಯ ಚಕ್ರೀಸ ನಿಷ್ಪಕ್ಷಪಾತ ಪರಿಶೋಧನೆ ಕಾಲದಲ್ಲಿ ಪ್ರಕಟಿಸುತ್ತ ಬರುವುದಕ್ಕೆ ವಿಲಾಯತಿಯ ಆಕ್ಸ್‌ಫರ್ಡ್ ಕಾಲೇಜಿನ ವಿದ್ಯಾರ್ಥಿಯವರು ಚಂದಾ ಎತ್ತಿ ೨,೪೦೦ ಪೌಂಡುಗಳನ್ನು ಕೂಡಿಸಿರುತ್ತಾರೆ.

◆◆◆◆

ಪೋರ್ಚುಗಲ್ ರಾಜ್ಯದ ಯುವರಾಜರು ಬರುವ ವರುಷ ದೇಶ ಸಂಚಾರ ಹೊರಟು, ತಮ್ಮ ರಾಜ್ಯಕ್ಕೆ ಸೇರಿರುವ ಸ್ವಾಸ್ಥ್ಯಗಳಿಗೆಲ್ಲಾ ಹೋಗಿ ನೋಡಿಕೊಂಡು ಬರುವವರಾಗಿದ್ದಾರೆ. ಇವರು ೩೦ ದಿವಸಕ್ಕೊಂದು ಬಂದು ಹೋಗುವರು.

◆◆◆◆

ಇಟಲಿ ರಾಜ್ಯದ ದೊರೆಯವರು ವಿಲಾಯತಿಯಿಂದ ವಾಪಸು ಬರುವುದಕ್ಕಿಂತ ಮುಂಚೆ ಲಂಡನ್ ಪಟ್ಟಣದ ರಾಯಲ್ ಕಾಲೇಜಿನಲ್ಲಿರುವ ಇಟಾಲಿಯನ್ ಆಸ್ಪತ್ರೆಯ ಮೂಲಧನಕ್ಕೆ ೧೫,೦೦೦ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ.

◆◆◆◆

ಆಸ್ಟ್ರೇಲಿಯಾ ಪಾರ್ಲಿಮೆಂಟಿನವರು ಪ್ರಜಾಪ್ರತಿನಿಧಿಗಳನ್ನು ಹೊಸದಾಗಿ ನೇಮಿಸಿರುತ್ತಾರೆ. ಈ ಮೆಂಬರುಗಳೆಲ್ಲಾ ತಮ್ಮ ದೇಶಕ್ಕೆ ಬರತಕ್ಕ ಅನ್ಯ ದೇಶಗಳ ಮೇಲೆ ಸುಂಕ ಹಾಕಿ ಸರ್ಕಾರಕ್ಕೆ ಬಲಪಡಿಸಬೇಕೆಂದು ಒಪ್ಪಿಕೊಳ್ಳತಕ್ಕವರಾಗಿರುತ್ತಾರೆ.

◆◆◆◆

ಜಪಾನ್ ರಾಜ್ಯದವರು ಬಹಳ ಅಗಾಧವಾಗಿ ಯುದ್ಧಸನ್ನಾಹ ಮಾಡುತ್ತಿದ್ದಾರೆ. ಸೈನ್ಯಗಳನ್ನೆಲ್ಲಾ ದಿನಾಲೂ ನಾನಾ ರೀತಿಯಲ್ಲಿ ತರಪೇತು ಮಾಡುತ್ತಿರುವರು. ಆಹಾರ ಸಾಮಗ್ರಿಗಳನ್ನು ವಿಶೇಷವಾಗಿ ಎಲ್ಲಾ ಕಡೆಗಳಿಂದಲೂ ತರಿಸಿ ತುಂಬುತ್ತಿದ್ದಾರೆ.

◆◆◆◆

ಅಮೇರಿಕ ರಾಜ್ಯಕ್ಕೆ ಸೇರಿದ ವಾಷಿಂಗ್‌ಟನ್ ಪಟ್ಟಣದಲ್ಲಿ ಸಾವಿರಾರು ದಿಕ್ಕುಗಳಿಂದ ರೈಲ್ ಗಾಡಿಗಳು ಬಂದು ಸೇರುವುವು. ಇದಕ್ಕಾಗಿ ಅಲ್ಲಿ ಒಂದು ಭಾರೀ ರೈಲ್ ಸ್ಟೇಷನ್ ಕಟ್ಟಬೇಕೆಂದು ಎಲ್ಲಾ ಕಂಪನಿಗಳವರೂ ಸೇರಿ ಹಾಕಿ ೪॥ ಕೋಟಿ ದ್ರವ್ಯವನ್ನು ಕೂಡಿಸಿ, ಕಾಮಗಾರಿ ಪ್ರಾರಂಭಿಸಿರುತ್ತಾರೆ.

◆◆◆◆

ಗ್ರೀಸ್ ರಾಜ್ಯದ ದೊರೆಯವರು ಡೆನ್ಮಾರ್ಕ್ ರಾಜ್ಯದ ರಾಜಧಾನಿಯಾದ ಕೋಪನ್‌ಹೇಗನ್ ಪಟ್ಟಣದಲ್ಲಿ ಒಂದು ದೊಡ್ಡ ಬಂಗಲೆಯನ್ನು ಕೊಂಡುಕೊಂಡರು. ಗ್ರೀಸಿನ ಪ್ರಜೆಗಳು ಈ ವಿಷಯವನ್ನು ಕೇಳಿ, ದೊರೆಯವರು ರಾಜ್ಯಪದವಿಯನ್ನು ಬಿಟ್ಟುಬಿಡುತ್ತಾರೆಂಬುದಾಗಿ ಗುಸುಗುಸು ಪಡುತ್ತಿದ್ದಾರೆ.

◆◆◆◆

ಅಮೇರಿಕ ರಾಜ್ಯಕ್ಕೆ ಸೇರಿದ ಪೆನ್ಸಿಲ್ವೇನಿಯಾ ಡಿಸ್ಟ್ರಿಕ್ಟಿನಲ್ಲಿ ಬಹು ವೇಗವಾಗಿ ಹೋಗುತ್ತಿದ್ದ ಎಕ್ಸ್‌ಪ್ರೆಸ್ ಎಂಬ ರೈಲ್ ಗಾಡಿಯು ಕಳೆದ ವಾರ ಕೊನ್ನೇಲವಿಲ್ಲೆ ಎಂಬ ಸ್ಟೇಷನ್ ಹತ್ತಿರ ಕಂಬಿಗಳನ್ನು ಬಿಟ್ಟು ನೆಲದಮೇಲೆ ಬಿದ್ದು ಅನಾಹುತವಾಯಿತು. ಗಾಡಿಗಳಲ್ಲಿ ಕುಳಿತಿದ್ದ ಪ್ರಯಾಣಿಕರ ಪೈಕಿ ೩೦ ಮಂದಿಗೆ ಹಾನಿಯಿಲ್ಲದೆ ಮೃತಪಟ್ಟಿರುತ್ತಾರೆ.

◆◆◆◆

ವಿಲಾಯತಿ ರಾಜ್ಯಕ್ಕೆ ಸೇರಿದ ಸ್ಟೇಲ್ ಕೆನ್ನಿ ಎಂಬೊಬ್ಬ ದೊಡ್ಡ ಮನುಷ್ಯನು ಬಹು ಕಾಲ ಅಲ್ಲಿನ ಪಾರ್ಲಿಮೆಂಟ್ ಮೆಂಬರಾಗಿದ್ದು ಈಚೆಗೆ ಪಟ್ಟಣದಲ್ಲಿ ಕಾಲವಾದನು. ಈತನು ತನ್ನ ಆಸ್ತಿಯಲ್ಲಿ ಹಲವಾರು ಲಕ್ಷ ದ್ರವ್ಯವನ್ನು ಉಚಿತವಾಗಿ ಕೊಟ್ಟು, ಆ ಪಟ್ಟಣದಲ್ಲಿ ಒಂದು ದೊಡ್ಡ ವಿದ್ಯಾಶಾಲೆಯನ್ನು ಸ್ಥಾಪಿಸಬೇಕೆಂದು ಉಯಿಲು ಬರೆದಿರುತ್ತಾನೆ.

◆◆◆◆

ರಷ್ಯಾ ರಾಜ್ಯದಲ್ಲಿ ದಾಂಪಾಟ ತುಂಬಾ ಪ್ರಬಲವಾಗಿರಬೇಕೆ ತೋರುತ್ತದೆ. ಮಾಸ್ಕೋ ನಗರದ ವರ್ತಕರು ಸೇರಿ ಒಂದು ಸಂಘ ಮಾಡಿಕೊಂಡಿದ್ದಾರೆ. ಈ ಸಂಘದವರು ಕಳೆದ ವರುಷ ೧೪,೫೪,೦೦೦ ರೂಪಾಯಿನ ಇಸ್ಪೀಟುಗಳನ್ನು ಕೊಂಡು ತರಿಸಿ ಆಟಕ್ಕೆ ಉಪಯೋಗಿಸಿದರು. ಇಸ್ಪೀಟು ತಯಾರುಮಾಡುವ ಕಾರ್ಖಾನೆಯವರಿಗೆ ಈ ಒಂದು ಸಂಘದವರಿಂದಲೇ ೨,೨೪,೫೦೦ ರೂಪಾಯಿ ಲಾಭ ಉತ್ಪತ್ತಿಯಾಗಿರುತ್ತದೆ.

ವಿಲಾಯತಿಯಲ್ಲಿರುವ ಡ್ಯೂಕ್ ಆಫ್ ವೆಸ್ಟ್‌ಮಿನ್‌ಸ್ಟರ್ ಅವರು ದಕ್ಷಿಣ ಆಫ್ರಿಕಕ್ಕೆ ಸೇರಿದ ಆರೆಂಜ್ ನದೀ ಸ್ವಾಸ್ಥ್ಯದಲ್ಲಿ ೧೬,೦೦೦ ಎಕರೆ ಜಮೀನು ಕೊಂಡುಕೊಂಡು, ಅದನ್ನು ನೋಡಿಕೊಂಡುಬರುವುದಕ್ಕಾಗಿ ಅಲ್ಲಿಗೆ ಹೋಗಿದ್ದರು. ಈಗ ಅವರು ಆ ಜಮೀನನ್ನೆಲ್ಲಾ ೩೦ ಮಂದಿ ಒಳ್ಳೇ ಇಂಗ್ಲಿಷ್ ವ್ಯವಸಾಯಗಾರರಿಗೆ ಹಂಚಿಕೊಡಬೇಕೆಂತಲೂ, ೩೦ ಸ್ಥಳಗಳಲ್ಲಿ ಬಂಗಲೆ ಮುಂತಾಗಿ ವಾಸಕ್ಕೆ ಯೋಗ್ಯವಾದ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂತಲೂ ತೀರ್ಮಾನಮಾಡಿರುತ್ತಾರೆ.

◆◆◆◆

ಕನಡಾ ಸ್ವಾಸ್ಥ್ಯವು ಇಂಗ್ಲಿಷ್ ರಾಜ್ಯಾಂಗವಾಗಿದೆಯಷ್ಟೆ. ಆ ಸ್ವಾಸ್ಥ್ಯದವರು ಸೈನ್ಯವನ್ನು ಇಟ್ಟುಕೊಂಡಿದ್ದಾರೆ. ಇವರಿಗೆ ಯುದ್ಧದಲ್ಲಿ ಸೇರುವುದೂ, ಯುದ್ಧಾಭ್ಯಾಸವಾಗುವುದೂ ಅಪರೂಪವಾಗಿದೆ. ಇದನ್ನು ನೋಡಿ ಕನಡಾ ಗವರ್ನಮೆಂಟಿನವರು ಒಂದು ಪಟಾಲಂ ಸೈನ್ಯವನ್ನು ಹಿಂದುಸ್ಥಾನಕ್ಕೆ ಕಳುಹಿಸಿ, ಇಂಡಿಯಾ ಸರ್ಕಾರದವರ ಕೈಕೆಳಗಿಟ್ಟರೆ, ಹಿಂದುಸ್ಥಾನದ ಸರಹದ್ದು ಪ್ರಾಂತ್ಯಗಳಲ್ಲಿ ಅವರು ಯುದ್ಧಾಭ್ಯಾಸಮಾಡಿ ತರಪೇತಾಗುತ್ತಾರೆಂದು ತೀರ್ಮಾನಿಸಿಕೊಂಡಿರುತ್ತಾರೆ.

◆◆◆◆

ಇಟಲಿ ರಾಜ್ಯದ ರಾಜಧಾನಿಯಾದ ರೋಮ್ ನಗರದಲ್ಲಿ ಒಂದು ಮೋಟಾರ್ ಗಾಡಿಯನ್ನು ವಿದ್ಯಾರ್ಥಿಯು ತನಿಖೆಮಾಡುತ್ತಿರುವಾಗ ಎರಡು ಪಕ್ಷಗಳ ಪಕ್ಕದಲ್ಲೂ ಒಬ್ಬರನ್ನೊಬ್ಬರು ದೂಷಿಸಿ ಜಗಳವಾಡಿ ಗುದ್ದಾಟ ಮಾಡಿ ಕಾಯಿದೆಗಳನ್ನು ಒಬ್ಬರಮೇಲೊಬ್ಬರು ಎಸೆದಾಡಿದರು. ಹಲವರು ಮೇಜುಗಳನ್ನು ಹಿಡಿದು ಹೊಡೆದಾಡಿದರು. ಕೋರ್ಟಿನಲ್ಲಿದ್ದ ಪತ್ರಿಕಾಲೇಖಕರ ಪೈಕಿ ಎಲ್ಲರಿಗೂ ಗಾಯವಾಯಿತು. ಅಧ್ಯಕ್ಷರು ಎಷ್ಟು ಪ್ರಯತ್ನಪಟ್ಟರೂ ಈ ಕಲಹವನ್ನು ನಿಲ್ಲಿಸುವುದಕ್ಕಾಗಲಿಲ್ಲ. ಕಡೆಗೆ ಅವರೇ ಜಗಳವಾಡಿ ಸಾಕಾಗಿ ಸುಮ್ಮನಾದರು.

◆◆◆◆

ಫ್ರಾನ್ಸ್, ಸ್ಪೇಯಿನ್ ರಾಜ್ಯಗಳ ನಡುವೆ ಪಿರನೀಸ್ ಎಂಬ ಪರ್ವತಪಂಕ್ತಿ ಇರುವುದು. ಈ ಪರ್ವತಗಳ ಮಧ್ಯೆ ಆಂಡೋರಾ ಎಂಬ ಸಣ್ಣ ಸ್ವತಂತ್ರರಾಜ್ಯವಿರುತ್ತದೆ. ಈ ರಾಜ್ಯವನ್ನು ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪ್ರೆಸಿಡೆಂಟೇ ಅಧಿಕಾರಿಯಾಗಿ ಆಳುತ್ತಾನೆ. ಆತನಿಗೆ ಗವರ್ನಮೆಂಟಿನಿಂದ ಸಲ್ಲುವ ಸಂಬಳವು ವರುಷಕ್ಕೆ ೩೫ ರೂಪಾಯಿ! ಇಷ್ಟು ಕಡಿಮೆ ಸಂಬಳದ ಇಂಥಾ ಪ್ರಜಾಪಾಲಕನು ಅನ್ಯಾವ ರಾಜ್ಯದಲ್ಲೂ ಇರುವುದಿಲ್ಲವೆಂದು ಹೇಳುತ್ತಾರೆ. ಈ ರಾಜ್ಯವು ಸಣ್ಣದಾದರೂ ಈಗಿನ ಕಾಲಕ್ಕೆ ಯೋಗ್ಯವಾದಂಥ ಸಕಲ ರಾಜಕೀಯ ಏರ್ಪಾಡುಗಳೂ ಅಲ್ಲಿ ಜಾರಿಯಲ್ಲಿರುತ್ತವೆ. ಪ್ರಜೆಗಳು ತುಂಬಾ ನಾಗರಿಕರಾಗಿರುತ್ತಾರೆ.

◆◆◆◆

ಚಿಲ್ಲಿ ರಾಜ್ಯದವರು ತಯಾರುಮಾಡಿಸಿದ್ದ ಎರಡು ಯುದ್ಧದ ಹಡಗುಗಳನ್ನು ಇಂಗ್ಲಿಷ್ ಗವರ್ನಮೆಂಟಿನವರು ಕೊಂಡುಕೊಂಡರಷ್ಟೆ. ಇದು ಹ್ಯಾಗೆ ಆಯಿತೆಂದರೆ—ಜಪಾನಿನವರು ಅವೆರಡನ್ನೂ ಕೊಂಡುಕೊಳ್ಳುವಂತೆ ಗೊತ್ತುಮಾಡಿ, ಬರೀ ಮೊಬಲಗನ್ನು ಸಮ್ಮತಿಸಿ ಪಾವತಿ ಮಾಡುತ್ತೇವೆಂದು ಹೇಳಿದರು. ಅಷ್ಟರಲ್ಲೇ ರಷ್ಯಾದವರು ೧೯ ಲಕ್ಷ ಪೌಂಡಿಗೆ ಅವೆರಡನ್ನೂ ಗೊತ್ತುಮಾಡಿ, ೨೪ ಗಂಟೆಯೊಳಗಾಗಿ ಈ ಮೊಬಲಗು ಪಾವತಿ ಮಾಡುತ್ತೇವೆಂದು ಮಾತು ಕೊಟ್ಟರು. ಈ ಸಂಗತಿಯನ್ನು ಇಂಗ್ಲಿಷ್ ಗವರ್ನಮೆಂಟಿನವರು ಕೇಳಿ ಆ ದಿವಸವೇ ಅವೆರಡನ್ನೂ ತಾವೇ ಕೊಂಡುಕೊಂಡುಬಿಟ್ಟರು. ಇದರಿಂದ ಜಪಾನಿನವರಿಗೆ ಮನಸ್ಸಮಾಧಾನವಾಯಿತು.

◆◆◆◆

ಸೋಮಾಲಿಲ್ಯಾಂಡಿನ ಮುಲ್ಲಾನ ಮೇಲೆ ಇಂಗ್ಲಿಷರು ಯುದ್ಧಕ್ಕಾಗಿ ಸೈನ್ಯಗಳನ್ನು ಕಳುಹಿಸಿದ್ದಾರಷ್ಟೆ. ಕಳೆದ ೧೯ನೆ ತಾರೀಖು ಬ್ರಿಗೇಡಿಯರ್ ಜನರಲ್ ಕೆನ್ನಾಯವರು ಕೆಲವು ಸೈನ್ಯವನ್ನು ತೆಗೆದುಕೊಂಡು ಬೋಹೋಟ್ಲೆ ಎಂಬ ತಮ್ಮ ರಾಜ್ಯದಿಂದ ಹೊರಟು ೩೯ ಮೈಲಿ ದೂರದಲ್ಲಿರುವ ಜಿದ್‌ಬಲ್ಲಿ ಎಂಬ ಸ್ಥಳಕ್ಕೆ ಮುತ್ತಿಗೆ ಹಾಕಿದರು. ಅಲ್ಲಿದ್ದ ೨,೦೦೦ ಮಂದಿ ಡರ್ವಿಷರಿಗೂ ಇವರಿಗೂ ಮೂರು ಘಂಟೆಗಳ ಹೊತ್ತು ಯುದ್ಧ ನಡೆಯಿತು. ಡರ್ವಿಷರಲ್ಲಿ ೯೦ ಮಂದಿ ಕೊಲ್ಲಲ್ಪಟ್ಟರು; ೧೦೦ ಮಂದಿಗೆ ಗಾಯಗಳಾದವು. ಇಂಗ್ಲಿಷರ ಕಡೆಯಲ್ಲಾದರೋ ಇಬ್ಬರಿಗೆ ಗಾಯವಾಯಿತು; ಒಬ್ಬ ಸೈನಿಕನು ಸಿಕ್ಕಿ ಇಲ್ಲ ಎಂಬುದಾಗಿ ತಂತೀ ವರ್ತಮಾನ ಬಂದಿದೆ.

◆◆◆◆

ಕ್ಯೂಬಾದ್ವೀಪದಲ್ಲಿ ಬಹು ಒಳ್ಳೆಯ ಹೊಗೆಸೊಪ್ಪು ಬೆಳೆಯುತ್ತದೆ. ಅಲ್ಲೇ ಒಂದು ಭಾರೀ ಕಾರ್ಖಾನೆಯೊಳಗೆ ಸರ್ವೋತ್ಕೃಷ್ಟವಾದ ಚುಟ್ಟಾಗಳನ್ನು ತಯಾರುಮಾಡುವರು. ಹೊಗೆಸೊಪ್ಪಿನ ರಾಶಿಯಲ್ಲಿ ಬಹಳ ಒಳ್ಳೇದಾಗಿರುವಂಥದ್ದನ್ನೇ ವಿಶೇಷವಾಗಿ ಆರಿಸಿ, ಅದರಲ್ಲಿ ಚುಟ್ಟಾ ಮಾಡುತ್ತಾರೆ. ಇಂಥಾ ಚುಟ್ಟಾ ತುಂಬಾ ಅನುಭವಶಾಲಿಯಾದ ಒಬ್ಬ ಮನುಷ್ಯನು ಒಂದು ದಿನಕ್ಕೆ ಎಂಟು ಹತ್ತಕ್ಕಿಂತ ಹೆಚ್ಚಾಗಿ ಮಾಡಲಾರನು. ಪ್ರತಿ ಚುಟ್ಟಾವನ್ನು ಸರ್ವೋತ್ಕೃಷ್ಟವಾದ ಪೆಟ್ಟಿಗೆಯಲ್ಲಿ ಇಟ್ಟಿರುವರು. ಈ ಚುಟ್ಟಾಗಳನ್ನು ಬಹು ಸುವಾಸನೆಯುಳ್ಳ ಸಣ್ಣ ಪೆಟ್ಟಿಗೆಗಳಲ್ಲಿಟ್ಟು, ಗಾಳಿ ಆಡದಂತೆ ಬಿಗಿಯಾಗಿ ಮುಚ್ಚಿ ಕಳುಹಿಸುತ್ತಾರೆ. ಇಂಥಾ ಪ್ರತಿ ಒಂದು ಚುಟ್ಟಾ ಕ್ರಯ ರೂ. ೧೩—೧೪—೦ ಬೀಳುತ್ತದೆ. ಅಮೇರಿಕ ಖಂಡಕ್ಕೆ ಸೇರಿದ ನ್ಯೂಯಾರ್ಕ್ ನಗರದಲ್ಲಿ ಅನೇಕ ಕೋಟಿ ದ್ರವ್ಯವನ್ನು ಸಂಪಾದಿಸಿ ಪ್ರಸಿದ್ಧಿಗೆ ಬಂದಿರುವ ಒಬ್ಬ ಶ್ರೀಮಂತನು ಈ ಶ್ರೇಷ್ಠವಾದ ಚುಟ್ಟಾಗಳನ್ನೇ ಸೇದುತ್ತಾನೆ. ಆ ಕಾರ್ಖಾನೆಯವರು ೨ ವಾರಗಳ ಕೆಳಗೆ ಆತನಿಗೆ ೧,೫೦೦ ಚುಟ್ಟಾಗಳನ್ನು ಅನುಪಿಸಿ ಕಳುಹಿಸಿಕೊಟ್ಟರು.

ಲೋಕದಲ್ಲೆಲ್ಲಾ ಮಹಾ ದೊಡ್ಡ ತತ್ವಜ್ಞಾನಿಯೆಂಬ ಪ್ರಖ್ಯಾತಿ ಯನ್ನು ಪಡೆದು ಅನೇಕ ಶ್ರೇಷ್ಠತರವಾದ ಗ್ರಂಥಗಳನ್ನು ರಚಿಸಿದ ಮಿ॥ ಹರ್ಬರ್ಟ್ ಸ್ಪೆನ್ಸರ್ ಎಂಬ ಮಹಾಪುರುಷನು ಈ ತಿಂಗಳ ೮ ನೇ ತಾರೀಖಿನಲ್ಲಿ ಇಂಗ್ಲಾಂಡಿನಲ್ಲಿ ಕಾಲವಾದನೆಂದು ತಿಳಿಸಲು ವಿಷಾದಿಸುತ್ತೇವೆ. ಈತನು ೧೮೨೦ ನೇ ಏಪ್ರಿಲ್ ೨೭ ರಲ್ಲಿ ಡಾರ್ಬಿ ಎಂಬ ನಗರದಲ್ಲಿ ಜನಿಸಿದನಾದುದರಿಂದ ಮರಣಕಾಲದಲ್ಲಿ ಆತನಿಗೆ ೮೩ ವರುಷ ವಯಸ್ಸಾಗಿದ್ದಿತು. ಈತನು ಸ್ವಲ್ಪ ಹೆಚ್ಚು ಕಡಮೆ ೨೭ ವರುಷಗಳಿಂದಲೂ ಕಾಯಿಲೆಯಾಗಿಯೇ ಇದ್ದನು. ಈತನ ಶವ ವನ್ನು ಕಳೆದ ೧೪ ನೆ ತಾರೀಖಿನ ಮಧ್ಯಾಹ್ನ ದಹನ ಮಾಡಿದರು ಹಿಂದುಸ್ಥಾನದ ಒಬ್ಬ ಐಶ್ವರ್ಯವಂತನು ಆ ಮಹಾಪುರುಷನ ಹೆಸ ರನ್ನು ಶಾಶ್ವತವಾಗಿಡುವದಕ್ಕೆ ೧೫,೦೦೦ ರೂಪಾಯಿಯನ್ನು ವಿದ್ಯಾ ಶಾಲೆಗೆ ಕೊಟ್ಟಿರುತ್ತಾನೆ.

****

ಸರ್ವಿಯಾ ರಾಜ್ಯದಲ್ಲಿ ರಾಜನನ್ನೂ ರಾಣಿಯನ್ನೂ ಸೈನಿಕರೇ ಮುಂತಾದವರು ಸೇರಿ ಕೊಂದುಹಾಕಿದ ಬಾಗುಯಾತು ವಿಚಾರಮಾಡಿ ಗವರ್ನಮೆಂಟಿನವರು ಅಲ್ಲಿಗೆ ತಮ್ಮ ಕಡೆಯ ರಾಯಭಾರಿಯನ್ನು ಕಳುಹಿಸಿಲ್ಲ. ಈ ಘೋರ ಕೃತ್ಯವನ್ನು ನಡಿಸಿದರಲ್ಲಾ ಎಂದು ಆಗ್ರ ಹಯುಳ್ಳರಾಗಿದ್ದಾರೆ. ಇತರ ರಾಜ್ಯಗಳವರೂ ಇಂಗ್ಲೆಂಡಿನಂತೆಯೇ ತ ಮ್ಮ ರಾಯಭಾರಿಗಳನ್ನು ಸರ್ವಿಯಾದಿಂದ ವಾಪಸು ಕರೆಸಿಕೊಂಡು ಇನ್ನುವರೆಗೂ ಕಳುಹಿಸಿಕೊಡದೆ ಇರುತ್ತಾರೆ. ರಾಜದರ್ಗದವನನ್ನು ಕೊಂದುಹಾಕಿದಂಥಾ ದೊಡ್ಡಮನುಷ್ಯರೆಲ್ಲಾ ಈಗಲೂ ಸೋಕ ದೊ ರೆಯ ಆಸ್ಥಾನದಲ್ಲಿ ಅಧಿಕಾರಿಗಳನ್ನು ಪಡೆದು ಇರುತ್ತಾರೆ. ದೊರೆ ಯು ಇವರನ್ನು ಶಿಕ್ಷಿಸುವ ತನಕ ಪರರಾಜ್ಯಗಳವರೂ ತಮ್ಮ ಕಡೆ ಯ ರಾಯಭಾರಿಗಳನ್ನು ಸರ್ವಿಯಾಕ್ಕೆ ಕಳುಹಿಸಬಾರದೆಂದು ತೀ ರ್ಮಾನಿಸಿಕೊಂಡಿದ್ದಾರೆ. ಅತ್ತಲಾಗಿ ಸರ್ವಿಯಾ ರಾಜ್ಯದಲ್ಲೂ ದುಂ ಡು ಅರಸಾಧಾನ ಉಂಟಾಗಿರುವದು ಅಧಿಕಾರಿಗಳು ತಾವೇ ಪಾ ಟಾಯಿಸಿ ಕರೆಸಿ ನೇಮಿಸಿಕೊಂಡಿರುವ ಪೀಟರ್ ಕರಾಜಾರ್ಜೊವಿ ಚ್‌ ದೊರೆಯನ್ನು ಕೂಡಲೆ ಆತನನ್ನು ಸಿಂಹಾಸನದಿಂದ ತಳ್ಳಿಬಿಡ ಬೇಕೆಂತಲೂ, ಆತನ ಮಗನಿಗೆ ಪಟ್ಟ ಕಟ್ಟಬೇಕೆಂತಲೂ ಮಸಲತ್ತು ನಡಿಸುತ್ತಿದ್ದಾರೆ. ಅಂತು ಸರ್ವಿಯಾ ರಾಜ್ಯಕ್ಕೆ ಇನ್ನೂ ತಹಬಂದಿಗೆ ಬಂದಿಲ್ಲ.

ಜ್ವರಹರಿ. 9



ಇದು ಸಾಧಾರಣ ಜ್ವರ, ಚಳೀಜ್ವರ, ಮರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಬಿಡುಯುವದು, ಎಂಬ ಸಕಲವಿದವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಡಿಪಾರ್ಟ್‌ಮೆಂಟ್ ಸಬ್ ಡಿವಿಷನ್ ಆಫೀಸರ್ ಎಸ್. ಟಿ ವೆಂಕಟಪತಿ ಅ ಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರು ವದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, ಡ. ೨—೧೨ ಆ, ೧೧ ರೂ, ಡಜನ್ ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

********

ಬಿಮಂಕಪೂರ್ರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡು ವದು ಇದು ಹೆಂಗಸರು ತಿಂಗಳಿಗೆ ಬಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿ ಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀ ಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜೆನ್ರಿಯ ಬಿಮಂಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪ ಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತೀ ಸಾರ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗ ಳಲ್ಲೂ, ದೊಡ್ಡ ಡಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ಕ್ಕೆ ಸಿಕ್ಕುತ್ತವೆ. ಇವ್ವುಗಳ ಕೆಳಗಿನ ವಿಳಾಸದಾರರಲ್ಲಿ ವಿಶೇಷ— ಕಿರ್ಕ್ರಿ [illegible] ಗ್ರೇಟ್ ಇಂಡಿಯನ್ ಔಷಧಗಳ ಕಾರಖಾನೆ,

ನಂಬರ್ ಬೀಬ್ ಲೈನ್, ಮದರಾಸ್.

ಇದೊಂದು ಹೊಸ ಪುಸ್ತಕ ಬೇಗನೋಡಿ.

"ಸ್ವಪ್ರಯೋಗ ಫಲದೀಪಿಕೆ" ಎಂಬ ಈ ಪುಸ್ತಕವ ಪ್ರಸಿದ್ಧನಾ ದರ್ಬಾರಿ ಮೈಸೂರು ಸಂಸ್ಥಾನದಲ್ಲಿ ಮಹಾ ಪ್ರಸಿದ್ಧರಾಗಿಯೂ, ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಸೀನಿಯರ್ ಕರ್ನಾಟಕ ಪಂಡಿತರಾಗಿಯೂ ಇರುವ ಬಿ ಆರ್ ಕರಿಬಸವಶಾಸ್ತ್ರಿಗಳು ಈ ಪು ಸ್ತಕದ ವಿಷಯದಲ್ಲಿ ಕೊಟ್ಟಿರುವ ಅಭಿಪ್ರಾಯವನ್ನು ಸ್ವಲ್ಪ ನೋಡಿ. "ಸ್ವಪ್ರಯೋಗ ಫಲದೀಪಿಕೆಯೆಂಬ ಗ್ರಂಥವನ್ನು ನಾನು ಲಕ್ಷ್ಯ ವಾಗಿ ಓದಿದೆನು ಇದರಲ್ಲಿ ಪ್ರತಿ ಮನುಷ್ಯನು ತನಗಿರುವ ಬುದ್ಧಿ ಗೆ ಅನುಸಾರವಾಗಿ ಸ್ವಪರ ಪ್ರಯೋಜನವಾದ ಕಾರ್ಯದಲ್ಲಿ ಪ್ರವರ್ತಿ ಸಿ ಬಿಡದೆ ಪ್ರಯತ್ನ ಪಡುವನಾದರೆ ತಕ್ಕ ಫಲವು ಸಿದ್ಧಿಸುವದೆಂಬ ಅಂಶಗಳು ಪ್ರತಿದೃಷ್ಟಾಂತಗಳೊಡನೆ ಸಮರ್ಥಿಸಲ್ಪಟ್ಟಿರುವ ವು. ಕನ್ನಡದಲ್ಲಿ ಈ ವಿಷಯವಾಗಿ ಹಾವದೊಂದು ಪುಸ್ತಕವೂ ಇ ದುವರೆಗೆ ಯಾರಿಂದಲೂ ರಚಿಸಲ್ಪಟ್ಟಿಲ್ಲ. ಈ ಗ್ರಂಥದಲ್ಲಿ ನಿರೂಪಿ ಸಲ್ಪಟ್ಟಿರುವ ವಿಷಯಗಳು ಓದುವವರಿಗೆ ಬಹು ಉಪಯೋಗಿಗಳಾ ಗಿಯೂ, ಉಚಿತವಾದ ಭಾಷಾ ಸರಣಿಯುಳ್ಳವುಗಳಾಗಿಯೂ, ವ್ಯಾಕ ರಣ ಬದ್ಧಗಳಾಗಿಯೂ ಇರುವುದರಿಂದ ಈ ಗ್ರಂಥವು ಲೋಯರ್ ಸೆ ಕೆಂಡರಿ ಕ್ಲಾಸ್ ವಿದ್ಯಾರ್ಥಿಗಳು ಓದುವದಕ್ಕೆ ಯೋಗ್ಯವಾಗಿದೆ ಎಂದು ನಂಬುತ್ತೇನೆ."

೨—೧೦—೧೯೦೩ ಬಿ. ಆರ್. ಕರಿಬಸವಶಾಸ್ತ್ರಿ.

ಮೈಸೂರು.

ಈ ಪುಸ್ತಕವನ್ನು ಗ್ರಂಥಕರ್ತರಾದ ಮ॥ ರಾ॥ ಶ್ರೀ ನೇದವಿ ಶ್ರೀರು ಬರೆದಿದ್ದಾರೆ ಇದರ ಕ್ರಯ ನಾಲ್ಕು ಆಣೆಗಳು ವಿ ಪಿ. ಪಿ ಯಲ್ಲಿ ತರಿಸಿಕೊಂಡರೆ ಆರು ಆಣೆಗಳಾಗುವವು ಜಾಗ್ರತೆ ನೋಡಿ.

ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು

ಹೋಮಿಯೋಸಿಯಾ

ಈ ಔಷಧಿಯು ವಾಣಿ, ಅರಮನೆ, ಕಾರ್ಖಾನೆ, ಆಸ್ಪತ್ರೆ ಪೊ ಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಚೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷದವು ಕ್ಯಾದರೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವದಾತೃಗಳಿಗೆ ಮಾಡತಕ್ಕಾಗಿ ನಿಶ್ಚಿತ ಕ್ಕೆ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾ ಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿ ಕೇಟುಗಳನ್ನು ಕೊಟ್ಟಿರುತ್ತಾರೆ ನೋವು ಇದ್ದಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ನೆಪ್ಪೆಂಟನೋವು, ಕಾರ್ನೋವು ಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊಡಗಾವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ ನೋವು, ಊದುಗಳು, ಗೆಡ್ಡೆಗಳು, ರಣಗಳು, ಉಳುಕಿದ್ದು, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಪ್ಪಿರುವದು, ಬೆಂಕಿಯಲ್ಲಿ ಸುಟ್ಟು ಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳ ನ್ನು ಉಪಶಮನಗೊಳಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ—ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ ೨—೮ ಆ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಬ್ತು ಡಬ್ಬಿಯ ಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರು ತ್ತೆ. ಈ ರೂ ೨—೮ ಆ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟ ಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

*********

ಹೋಮಿಯೋಸಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋ ಮಿಯೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂ ತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇ ದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳ ಲ್ಲಿ ತುಂಬಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡ ಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಡಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ—ಹೋಮಿಯೋಸಿಯಾ ಕಂಪನಿ, ೨೭ ನಂಬರು ಬೀಬ್ ಲೈನ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

11—12—1909 ರಿಂದ 18—12—1909 ರ ವರೆಗೆ.

| ಸ್ಥಳ. | ಪ್ಲೇಗ್ ಜಗಲಿ ಬಿದ್ದ. | ಪ್ಲೇಗ್ ಸತ್ತ ಬಿದ್ದ. | ಹಿಂದಿನವಾರದ ಸಂಖ್ಯೆಗಳು | |
|---|---|---|---|---|
| ಬೆಂಗಳೂರು ಪಟ್ಟಣ | 10[illegible] | 74 | 12[illegible] | [illegible]7 |
| ಮೈಸೂರು ,, | 67 | 60 | 75 | 68 |
| ಬೆಂಗಳೂರು ಡಿಸ್ಟ್ರಿಕ್ಟ್ | [illegible]21 | [illegible]95 | 111 | 77 |
| ಮೈಸೂರು ,, | 182 | 129 | 119 | 91 |
| ಕೋಲಾರ್ ,, | 63 | 64 | 68 | 31 |
| ಕೋಲಾರ್ ಚಿನ್ನದ ಗಣಿಗಳು | [illegible] | [illegible] | 45 | 29 |
| ತುಂಕೂರು ಡಿಸ್ಟ್ರಿಕ್ಟ್ | [illegible] | 25 | 21 | 12 |
| ಹಾಸನ ,, | 17 | 19 | 14 | 15 |
| ಚಿತ್ರದುರ್ಗ ,, | 30 | 20 | 78 | 42 |
| ಕಡೂರ್ ,, | 43 | 27 | 33 | 24 |
| ಶಿವಮೊಗ್ಗ ,, | [illegible] | [illegible] | [illegible] | 13 |
| ಜುಮ್ಲಾ | 7[illegible]4 | [illegible]58 | [illegible]0[illegible] | 51[illegible] |

ತಾರೀಖಿನ ಶಕ ೧೮೩೧ನೇ ಸೌಮ್ಯನಾಮ ಸಂವತ್ಸರ ಪುಷ್ಯ ಶುದ್ಧ ದ್ವಾದಶಿ ಗುರುವಾರದಿಂದ ಪುಷ್ಯ ಬಹುಳ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೯ ನೇ ಇಸವಿ ಡಿಸೆಂಬರ್ ಮತ್ತು ೧೯೧೦ ನೇ ಜನವರಿ.

| ತಾ. | ವಾರ | ತಿಥಿ. | ಘಳಿಗೆ | ನಕ್ಷತ್ರ. | ಘಳಿಗೆ. | ಧನು ಮಾಸ ತೇದಿ |
|---|---|---|---|---|---|---|
| 31 | ಗುರು * | ದ್ವಾದಶಿ | 23 1[illegible] | [illegible] | 21 0 | 16 |
| 1 | ಶುಕ್ರ | ತ್ರಯೋದ | 20 [illegible] | ರೋ | 21 51 | 17 |
| 2 | ಶನಿವಾರ ‡ | ಚತುರ್ದಶಿ | 16 [illegible] | ಮೃ | 19 [illegible] | 18 |
| 3 | ರವಿವಾ † | ಪೌರ್ಣಮಿ | [illegible] | ಆ | [illegible] | 19 |
| 4 | ಸೋಮ | ಪಾಡ್ಯಮಿ | 7[illegible] | ಪು | 13 22 | 20 |
| 5 | ಮಂಗಳ | ಬಿದಿಗೆ | 1 5 | ಪುಷ್ಯ | 51 12 | 21 |
| 6 | ಬುಧ ¶ | ಚೌತಿ | [illegible]0 0 | ಶ್ಲೇ | 5 25 | 22 |

* ಮುಕ್ಕೋಟಿ ದ್ವಾದಶಿ, ‡ ಪ್ರದೋಷ ವ್ರತ, ಅಂದಿನ ಸ್ನಾನಾದಿ, ಮಾರ್ಗಶಿರ ವಂದೀವ್ರತ್ಸವ † ಅರಿದ್ರೋತ್ಸವ, ಬನದ ಹುಣ್ಣಿಮೆ, ಕೋಟಿತ್ಯಾಗೋತ್ಸವ. ¶ ಸಂಕಷ್ಟಹರ ಚತುರ್ಥಿ.

ಪೇಟೆ ಧಾರಣೆ.

| ವಿವರ. | ಮೈಸೂರು | ಬೆಂಗಳೂರು |
|---|---|---|
| ಕಡ್ಲೇ ಬೇಳೆ ಪಲ್ಲಾ ೧ಕ್ಕೆ | [illegible] | [illegible] |
| ಕೆಂಪುಜೋಳ ಅಕ್ಕಿ ಅವಲ್ | [illegible] | [illegible] |
| ,, ಮಾಯಿ | [illegible] | [illegible] |
| ದೊಡ್ಡ ಭತ್ತ ಅಕ್ಕಿ | [illegible] | [illegible] |
| ಬಿಳ್ಳಿ ಅವಲ್ | [illegible] | [illegible] |
| ,, ಮಾಯಿ | [illegible] | [illegible] |
| ತೊಗರೀ ಬೇಳೆ ಪಲ್ಲಾ ೧ಕ್ಕೆ | [illegible] | [illegible] |
| ,, ಮಾಯಿ | [illegible] | [illegible] |
| ಸ್ಟಾರ್ ರಾಗಿ ಪಲ್ಲಾ ೧ಕ್ಕೆ | [illegible] | [illegible] |
| ಜೋಳ | [illegible] | [illegible] |
| ಜೋಳ | [illegible] | [illegible] |
| ಹುರುಳಿ ಪಲ್ಲಾ ೧ಕ್ಕೆ | [illegible] | [illegible] |
| ಬಿಳೀ ಅವರೆ | [illegible] | [illegible] |
| ಹೆಸರು | [illegible] | [illegible] |
| ಉದ್ದು | [illegible] | [illegible] |
| ಕಡಲೆ | [illegible] | [illegible] |
| ಎಳ್ಳು | [illegible] | [illegible] |
| ಹುರುಳಿ | [illegible] | [illegible] |
| ಹರಳು ೧೨ ಸೇರಿಗೆ | [illegible] | [illegible] |
| ತೆಂಗಿನಕಾಯಿ ಮಣ ೧ಕ್ಕೆ | [illegible] | [illegible] |
| ಮೆಣಸಿನಕಾಯಿ | [illegible] | [illegible] |
| ,, ಮಾಯಿ | [illegible] | [illegible] |
| ನೆಲ್ಲು ದೊಡ್ಡ ಬತ್ತ | [illegible] | [illegible] |
| ಬೆಳ್ಳುಳ್ಳಿ ಮಣ ೧ಕ್ಕೆ | [illegible] | [illegible] |
| ಈರುಳ್ಳಿ ,, | [illegible] | [illegible] |
| ಕೊತ್ತುಂಬರಿ ಪಲ್ಲ ೧ಕ್ಕೆ | [illegible] | [illegible] |
| ಜೀರಿಗೆ ,, | [illegible] | [illegible] |
| ಮೆಂತ್ಯೆ ಹಿಟ್ಟು | [illegible] | [illegible] |
| ,, ಹಳೇದು | [illegible] | [illegible] |
| ಉಪ್ಪು | [illegible] | [illegible] |
| ಸೀಮೆಯೆಣ್ಣೆ ಡಬ್ಬ ೧ಕ್ಕೆ | [illegible] | [illegible] |
| ತೆಂಗಿನಕಾಯಿ ೧೦೦ಕ್ಕೆ | [illegible] | [illegible] |
| ಅಡಿಕೆಲೆಕಾಯಿ ಮಣ ೧ಕ್ಕೆ | [illegible] | [illegible] |
| ಅಂಬ್ಯಾಡಿಕಾಯಿ ಮಣ ೧ಕ್ಕೆ | [illegible] | [illegible] |
| ಚಿನ್ನ (ಪವನ್) ತೊಲ | [illegible] | [illegible] |
| ,, ,, ಪವನು | [illegible] | [illegible] |
| ,, ,, ಗಟ್ಟಿ ತೊಲ ೧ಕ್ಕೆ | [illegible] | [illegible] |
| ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ | [illegible] | [illegible] |

Printed and Published by the Rev. R. W Thompson, M.A. the Proprietor and Manager, Wesleyan Mission Press, Mysore. 31/12/1909.